# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

## ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning.**

ಪ್ರಕಾಶನವಿವಿಧಸ್ವನೃತ್ಯಸಗವಾರ್ತ್ಥಕರ್ಣಾಟಕಪ್ರಕಾಶನವರಾಭಿಧಾಪ್ರಥಿತಸಾಹಿತೀಶೋಭಿತಾ ॥ ಮೃಗಾಂಕಹಿತವಾಸರೇನಿಹಿತಮುದ್ರಣಾಸಜ್ಜನೈರ್ಧ್ವಿಶಾನುಪರಿಪೋಷಿತಾದಿಶತಿಮಾನಸಂಸುಮುದಂ ॥

Vol. XX] BANGALORE:—MONDAY, JANUARY 9, 1893. [No. 1.

ಸಂಪುಟ ೨೦.] ಬೆಂಗಳೂರು:—ಸನ್ ೧೮೯೩ ನೇ ಇಸವಿ ಜನವರಿ ೯ ನೇ ತಾರೀಖ್ ಸೋಮವಾರ. [ಸಂಚಿಕೆ ೧.

## ಕರ್ಣಾಟಕ ಪ್ರಕಾಶಿಕಾ.

### ಪತ್ರಿಕೆಯ ಚಂದಾ ದರಗಳು,

#### ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

| ಸಾಲ್ ಒಕ್ಕೆ | ಸ್ಥಳದವರಿಗೆ. | ಪರಸ್ಥಳದವರಿಗೆ. |
|---|---|---|
| | ಟಪಾಲಿಲ್ಲದೆ. | ಟಪಾಲ್‌ಸಹಿತ. |
| ಮುಂಗಡಕೊಡತಕ್ಕವರಿಗೆ | 6—0—0 | 8—0—0 |

#### ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

| | | |
|---|---|---|
| ಮುಂಗಡಕೊಡತಕ್ಕವರಿಗೆ | 3—0—0 | 4—0—0 |

ಈ ಪತ್ರಿಕೆಗೆ ಚಂದಾದಾರರು [illegible] ತಾರೀಖಿನ ಮೊದಲು ಒಂದು [illegible] ಚಂದಾ [illegible] ಸವಂತರವರಿಗೆ ಮಾತ್ರ [illegible] ಪತ್ರಿಕೆ [illegible]. [illegible] ಇಂಗ್ಲಿಷ್ [illegible] ಕನ್ನಡ [illegible] ಅಥವಾ ಎರಡನ್ನಾಗಲಿ [illegible]

### ಪ್ರಕಟನೆಯ ರಿವಾಜ.

| | | |
|---|---|---|
| [illegible] | ಒಂದಕ್ಕೆ | ೦—೨—೦ |
| [illegible] | ಒಂದಕ್ಕೆ | ೦—೧—೦ |

[illegible]

*ADVERTISEMENTS.*

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

*Price including Postage Rs 5 0 0*

ವೈದ್ಯಸಾರ ಸಂಗ್ರಹ.

ಈ ಗ್ರಂಥ [illegible] ರೂಪಾಯಿ [illegible] ಕನ್ನಡ [illegible] ಮೊದಲನು [illegible]

ಇದರ ಕ್ರಯ — ಪೋಸ್ಟೇಜ್ ಮತ್ತು ಅಂಚೇ ಹಾಸಲ್ [illegible] ಪ್ರತಿ ಒಂದಕ್ಕೆ ರೂ ೫—೦—೦

ಟಿ. ಬಿ. ವೆಂಕಟಾಚಾರ್.

ಬೆಂಗಳೂರು, [illegible] ೨೮ ನೇ ನವಂಬರ್

ನೋಟೀಸ್.

ಬೆಂಗಳೂರು ಕರ್ಣಾಟಕ ಪ್ರೆಸ್.

೧೮೬೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ, ಸಕಲವಿಧ ಕೆಲಸಗಳು ಸುಲಭಬೆಲೆಗೆ ತೀವ್ರ ವಾಗಿಯೂ ಶ್ಲಾಘ್ಯವಾಗಿಯೂ, ನಡೆಯಲ್ಪಡುವವು.

ಇದರಲ್ಲಿ ಸಧ್ಯಃ ಇಂಗ್ಲಿಷ್ ಕನ್ನಡ ಕೆಲಸವು ಮಾತ್ರವೇ ನಡೆಸುತ್ತಿವೆ. ಇತರ [illegible] ಸರಿಯೇ [illegible] ತಿಳಿದುಕೊಳ್ಳಬಹುದು.

ನೋಟೀಸ್.

ನಂಜಪ್ಪನವರ ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು.

[illegible] ಉಪ್ಪಾರಪೇಟೆಯಲ್ಲಿರುವ ಮೇಲೆ ತಿಳಿಸಲ್ಪಟ್ಟವರಿಂದ ತಯಾರಿಸಲ್ಪಟ್ಟ ಇದರಡಿಯಲ್ಲಿ ಶ್ಲಾಘ್ಯಗಳಾದ ಔಷಧಗಳು ಬೆಲೆಗೆ ತಯಾರಾಗಿರುತ್ತವೆಯಾಗಿ ಬೇಕಾದವರು ಅವರಿಗೆ ಬರೆದು ತರಿಸಿಕೊಳ್ಳಬಹುದು. ಈ ಔಷಧಗಳು ಶಾಸ್ತ್ರೋಕ್ತವಾದ [illegible] ತಯಾರಾದವಾಗಿಯೂ, ಅನುಭವಸಿದ್ಧವಾಗಿಯೂ, ಅನೇಕರಿಗೆ ಗುಣವನ್ನುಂಟುಮಾಡಿದವಾಗಿಯೂ ಇರುತ್ತವೆ. ತಮ್ಮ ರೋಗಸ್ವರೂಪವನ್ನೂ [illegible] ವಯಸ್ಸು [illegible] ಕ್ರಮವನ್ನೂ ಸರಿಯೇ ವಿವರಿಸಿ ಬರೆದು ತರಿಸಿಕೊಳ್ಳಬಹುದು. ಹಾಗೆ ಬರೆದ [illegible] ಅವರಿಂದಪೇಕ್ಷಿಸಲ್ಪಡುವ ಪ್ರತ್ಯುತ್ತರಕ್ಕೆ ಸಹ ತಮ್ಮ ಕಾಗದದಲ್ಲಿ ಅರ್ಧಾಣೆ ಲೇಬಲ್ ಮುಚ್ಚಿಕೆ ಮಾಡಿ ಕಳುಹಿಸಬೇಕು. ವ್ಯಾಲ್ಯೂಪೇಯಬಲ್ ಮೂಲಕ ಸಹ ಪದಾರ್ಥಗಳು ಕಳುಹಿಸಲ್ಪಡುವವು. ಕಳುಹಿಸಲ್ಪಟ್ಟ ಪದಾರ್ಥಗಳನ್ನು ತರಿಸಿಕೊಳ್ಳದೆ ನಿರಾಕರಿಸಿದರೆ ಆ ಬಾಬತು ವ್ಯಾಲ್ಯೂ ಪೇಯಬಲ್ ಕಮಿಷನ್ ಅವರೇ ಕೊಡಬೇಕಾಗುವುದು.

ಕೃಷಿ.—[illegible], ಇದು [illegible] ಗೂ, ಶಾರೀರಕ ಸಂಬಂಧಗಳಾದ ಮತ್ತು ವಾತಸಂಬಂಧಗಳಾದ ಸಂಧಿವಾತಗಳಿಗೂ, ಮೂಗಿನಲ್ಲಿ ರಕ್ತ ಬೀಳತಕ್ಕದ್ದಕ್ಕೂ, ಅನೇಕವಿಧ [illegible] ವೇದನೆಗಳಿಗೂ ಬಹಳ ಶ್ಲಾಘ್ಯವಾದ [illegible], ಸಣ್ಣ ಸೀಸೆ ಒಂದಕ್ಕೆ ೧ ರೂ. ದೊಡ್ಡ ಸೀಸೆ ೧ಕ್ಕೆ ೫ ರೂ.

ಜ್ವರದ ಗುಳಿಗೆಗಳು.—ಇದು ಜ್ವರಾದಿಗಳಿಗೆ ಸಕಲವಿಧ ಜ್ವರಗಳಿಗೂ ಪ್ರಸಿದ್ಧ ಔಷಧವಾಗಿರುತ್ತದೆ. ರೂ. ೧ ಕ್ಕೆ ೨೦ ಗುಳಿಗೆಗಳು.

ಮೇಹ ರೋಗ ನಿವಾರಕವಾದ [illegible].—ಈ [illegible] ೨೦ ದಿವಸಗಳವರೆಗೆ ಉಪಯೋಗಿಸುತ್ತಾ ಬಂದರೆ ಹೊಟ್ಟೆಗೆ ತೆಗೆದುಕೊಂಡವರ ಸಕಲವಿಧ ಮೇಹರೋಗಗಳೂ, ಪ್ರಮೇಹ, ಸ್ತ್ರೀಯರುಗಳಿಗೆ ಉಂಟಾಗುವ ಉಷ್ಣ ಸಂಬಂಧವಾದ ರೋಗಗಳೂ, ನಿವಾರಣೆಯಾಗುವವು. ಸೀಸೆ ೧ ಕ್ಕೆ ೨—೮—೦

ದಂತರೋಗಕ್ಕೆ ಚೂರ್ಣ.—ಹುಳುಕುಹಲ್ಲುಗಳು, ಸಡಿಲಬಿದ್ದಿರುವ ಹಲ್ಲುಗಳು, ಇವುಗಳನ್ನು ಬಾಯಿ ಮಾಡಿ ಗಟ್ಟಿಪಡಿಸಿ ಕ [illegible] ಉಂಟುಮಾಡುವುದು. ಇದು ಮುಂದಿವಿದತ್ತು. ಪೊಟ್ಟಣ ೧ ಕ್ಕೆ ೧ ರೂ. ಇದು ೨೦ ದಿನಗಳಿಗೆ ಆಗುವುದು.

ನೇತ್ರರೋಗಕ್ಕೆ ಮಾತ್ರೆ.—ಪೊರೆಗಳು, ಶುಕ್ಲಿಕ [illegible], ಕಣ್ಣುರಿ, ತಲೆನೋವು, ಕಣ್ಣಲ್ಲಿ ನೀರು ಸುರಿಯುವದು, ಮೊದಲಾದ ಸಕಲರೋಗಗಳಿಗೂ ಶ್ರೇಷ್ಠವಾದುದು. ಮೂಲಿಕಾ ಪ್ರಯೋಗದಿಂದ ಮಾಡಲ್ಪಟ್ಟ ಉತ್ತಮವಾದ ಮಾತ್ರೆ ೧ ಕ್ಕೆ ೪ ಆಣೆ. ಇದು ೧೦ ದಿನಗಳವರೆಗೆ ಒಂದು ಹೊತ್ತು ಹಾಕಿಕೊಳ್ಳಬಹುದು.

ಮೂಲವ್ಯಾಧಿಗೆ.—ಇದು ಲೇಹವು ತಯಾರಾಗಿದೆ. ಇದರಿಂದ ದೀರ್ಘಕಾಲಿಕವಾದ ಮೂಲೋಪದ್ರವಗಳೆಲ್ಲವು ವಾಸಿಯಾಗುತ್ತವೆ. ಲೇಹ ೧ ಕ್ಕೆ ೧ ರೂಪಾಯಿ. ಇದನ್ನು ಪಥ್ಯದಲ್ಲಿ ನಿಯಮವಾಗಿ ಉಪಯೋಗಿಸತಕ್ಕದ್ದು. ಇದರ ಸ್ಪರ್ಶದಿಂದ ಮೂಲೋಪದ್ರವವು ನಿವೃತ್ತಿಯಾಗುತ್ತದೆ.

ಭಸ್ಮಗಳು.—ತಾಮ್ರ, ರಜಿತ, ನಾಗ, ಸೀಸ, ಪ್ರವಾಳ, ಶೃಂಗ, ಅಭ್ರಕ, ಲೋಹ, ಕಾಂತ ವಗೈರೆ ಭಸ್ಮಗಳೂ ಸಿಂಧೂರಗಳೂ ಸಿದ್ಧ ಕ್ರಿಯೆಯಿಂದ ತಯಾರಾದವು. ಇವು [illegible] ಸಕಲ ಪ್ರಬಲ ರೋಗಗಳಿಗೂ ಪ್ರಸಿದ್ಧವಾದವಾಗಿರುತ್ತವೆ. ರೋಗ ಸ್ವರೂಪವನ್ನು ಅನುಸರಿಸಿ ಔಷಧವು ಕೊಡಲ್ಪಡುವದಾದುದರಿಂದ ಅವರವರಿಗೆ ಕ್ರಯವು ನಿಷ್ಕರ್ಷಿಸಲ್ಪಡಬೇಕಾಗಿದೆ.

ಲೇಹ್ಯಗಳು.—[illegible], [illegible], ಕೂಷ್ಮಾಂಡ ವಗೈರೆ ಧಾತು ವೃದ್ಧಿಕರಗಳಾದ ಲೇಹ್ಯಗಳು ಸಿದ್ಧವಾಗಿವೆ. ಸೇರು ೧ ಕ್ಕೆ ೩ ರೂ.

ಷರಬತ್ತುಗಳು.—ಗಂಧ, ಬಾಳೇಹಣ್ಣು, ದಾಳಿಂಬೆಹಣ್ಣು, ಅಂಜೂರ, ದ್ರಾಕ್ಷೇಹಣ್ಣು, ನೇರಳೆ ಮೊದಲಾದ ಷರಬತ್ತುಗಳು ತಯಾರಾಗಿವೆ. ಇವು ಸೀಸೆ ೧ ಕ್ಕೆ ೨ ರೂ.

ಚೂರ್ಣಗಳು.—[illegible] ಚೂರ್ಣ, [illegible] ವಗೈರೆ ಚೂರ್ಣಗಳು ಅಜೀರ್ಣ ಪಿತ್ತ ವಾತೋಪದ್ರವಗಳಿಗೆ ಹಾಕತಕ್ಕವು. ಇದು ೧೦ ದಿನಗಳಿಗೆ ತೆಗೆದುಕೊಳ್ಳುವುದು, ಡಬಿ ೧ಕ್ಕೆ ೧ ರೂ.

ನೋಟೀಸ್.

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪೆನಿ.

ಕಮಿಷನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯೊಡನೆ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ತಕ್ಕ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರಹ ಔಷಧಗಳು, ಪುಸ್ತಕಗಳು, ಮುತ್ತುಗಳು, ಚಪ್ಪಿ ಮುತ್ತುಗಳು, ಘಡಿಯಾರಗಳು, ಹಾರಗಳು, ಟ್ರಂಕ್ಸ್, ಪೀಸಗಳು, ಕಾಶ್ಮೀರ ಶಾಲುಗಳು, ಪಕ್ಷೀಕರಗಳು, ಜರತಾರಿ ಕಳಗಳು, ಚಂದ್ರಕಾಂತ ಬಿಳಿಯ ಕನ್ನಡಕಗಳು, ಮಹಿಳೆಯರಿಗೆ ತಕ್ಕ ಜರತಾರಿ ಉಡುಪುಗಳು, ಜರತಾರಿ ಟೋಪಿಗಳು, ಆಫೀಸ ಡ್ರೆಸ್‌ಗಳು, ಪಟಗಳು, ಅತ್ತರಗಳು, ಅತ್ಯುತ್ತಮವಾದ ರತ್ನಗಳು, ಭಂಗಾರದಿಂದ ಕಟ್ಟಲ್ಪಟ್ಟ ಉಂಗುರಗಳು, ಬೆಳ್ಳಿ ಪಾತ್ರೆಗಳು, ಜರ್ಮನ್ ಬೆಳ್ಳಿ ಪಾತ್ರೆಗಳು, ಕೇಸರಿ, ಕಸ್ತೂರಿ ವಗೈರೆ ಇತರ ಸಾಮಾನುಗಳು.

ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟ್ಯಾಂಪ್ ಕಳುಹಿಸಿದ ಹೊರತು ಜವಾಬ್ ಕೊಡಲಾಗದು.

ವಿಳಾಸ.—ಗಣೇಶ ರಾಮಚಂದ್ರ ಕರ್ಕಿ,

ಮತ್ತು ಕಂಪೆನಿ, ಕಮಿಷನ್ ಏಜಂಟ್ಸ್,

ಶಾಕೂರ್ ಬ್ಯಾರ್, ಮಾರ್ಕೆಟ್ ಪೋಸ್ಟ್, ಮುಂಬೈ

ನೋಟೀಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ನಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕರೀಗೆ ಸಿದ್ಧವಾಗಿವೆ. ಬೇಕಾದವರು ಮುಂಬಲಗು ಕಳುಹಿಸಿ ತರಿಸಿಕೊಳ್ಳಬಹುದು.

ಸಂಸ್ಕೃತ ಗ್ರಂಥಗಳು.

| | | ಪೋಸ್ಟೇಜ್ ಸಹಿತ ರೂ | ಅ. | ಪೈ |
|---|---|---|---|---|
| ಸಟೀಕಾ ವೈದ್ಯಸಾರ ಸಂಗ್ರಹ | ... | ೫ | ೦ | ೦ |
| ,, ಶಿವಗೀತೆ | ... | ೧ | ೨ | ೦ |
| ,, ಶಿವಾನಂದಲಹರಿ | ... | ೦ | ೮ | ೦ |
| ,, ಕಾಲಾಮೃತ | ... | ೧ | ೦ | ೦ |
| ,, ಟೀ॥ ಬಾಲರಾಮಾಯಣ | .. | ೦ | ೩ | ೦ |
| ,, ಟೀ॥ ಗೋಪಿಕಾ ಗೀತೆ | ... | ೦ | ೧ | ೦ |
| ,, ಟೀ॥ ಚಾಣಕ್ಯನೀತಿ (ಸುಭಾಷಿತ) | | ೦ | ೪ | [illegible] |
| ವಿಷ್ಣುಸಹಸ್ರನಾಮ ಪತ್ರಿಕೆ | ... | ೧ | ೩ | ೦ |
| ಸೂರ್ಯಸಹಸ್ರನಾಮ | ... | ೦ | ೬ | ೦ |
| ಕೃಷ್ಣಕರ್ಣಾಮೃತ | ... | ೦ | ೬ | ೦ |
| ಪ್ರಸಾದ ಅಮರ ಮೂಲ | ... | ೦ | ೬ | ೦ |
| ೧ ಕಾಂಡ | ... | ೦ | ೧ | ೦ |

ಕನ್ನಡ ಗ್ರಂಥಗಳು.

| | | | | |
|---|---|---|---|---|
| [illegible] | ... | ೩ | ೦ | [illegible] |
| [illegible] | ... | ೧ | ೬ | ೦ |
| ವೃಷಭೇಂದ್ರವಿಜಯ | ... | ೧ | ೮ | ೦ |
| ಪಂಚತಂತ್ರ [illegible] | ... | ೦ | [illegible] | ೦ |
| ಹನುಮದ್ವಿಲಾಸ | ... | ೦ | [illegible] | ೦ |
| ಕಾಳಿಯಮರ್ದನ | ... | ೦ | ೨ | ೦ |
| [illegible] | ... | ೦ | ೬ | ೦ |
| [illegible] | ... | ೦ | ೬ | [illegible] |
| ಸುದಾಮಚರಿತ್ರೆ | ... | ೦ | ೧ | ೦ |
| ಪ್ರೌರಾಣಿಕ ಚರಿತ್ರೆ | ... | ೦ | ೧ | ೦ |
| [illegible] | ... | ೦ | ೧ | ೦ |
| ಮಕನ್ನಡ [illegible] | .. | ೦ | ೧೨ | ೦ |
| [illegible] | .. | ೦ | ೧೬ | [illegible] |

ನೋಟೀಸ್.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ :—

ಹಿಂದೆ ಬರ್ಮಾ ದೇಶದಲ್ಲಿ ಸಿವಿಲ್ ಸರ್ಜಿಯನ್ ರಾಗಿದ್ದ ಡಾಕ್ಟರ್ ನೆಯಿಲರ್ ಯವರು ಬೆಂಗಳೂರು ಪೇಟೆ ಸಿದ್ದೀಕಟ್ಟೆಯಲ್ಲಿರುವ ಗುಂಡೋಪಂತರವರ ಮನೆಯ ಪಕ್ಕದಲ್ಲಿ ರೋಗಿಗಳ ಸ್ವರೂಪವನ್ನರಿತು ಚಿಕಿತ್ಸೆಮಾಡುವದಕ್ಕೆ ಒಂದು ಸ್ಥಳವನ್ನು ಗೊತ್ತು [illegible]ತ್ತಾರೆ.

ಸದರೀಯವರು ಪ್ರತಿದಿನದಲ್ಲೂ ಬೆಳಗ್ಗೆ ೭ ಘಂಟೆಯ ಮೊದಲು ೧೦ ಘಂಟೆಯ ವರಿವಿಗೂ ಆಸ್ಥಳದಲ್ಲಿದ್ದು ವಿಶಿಷ್ಟ ರೋಗಿಗಳಿಗೂ, ಮುಖ್ಯವಾಗಿ ಕಣ್ಣಿನ ಮತ್ತು ಕಿವಿ ರೋಗಗಳಿಗೆ ಚಿಕಿತ್ಸೆ ಮಾ[illegible].

ರೋಗಸ್ವರೂಪವನ್ನು ಅರಿತು ಹೇಳುವದಕ್ಕೆ ೨ ರೂ ರುಸುಂ ಕೊಡಬೇಕು. ರೋಗಿಗಳ ಮನೆಗಳಿಗೆ ಹೋಗಿ ನೋಡುವದಕ್ಕೆ ೪ ರೂಪಾಯಿಗಳ ರುಸುಂ ಕೊಡಬೇಕು.

C. G. R. Naylor,
M. R. C. S., England,
*Surgeon.*

## ಕರ್ಣಾಟಕ ಪ್ರಕಾಶಿಕಾ.

### THE KARNATAKA PRAKASIKA.

MONDAY, JANUARY 9, 1893.

೧೮೯೩ನೇ ಇಸವಿ ಜನವರಿ ತಾ॥ ೯ನೇ ಸೋಮವಾರ.

### ಸರ್. ಕೆ. ಶೇಷಾದ್ರಿ ಅಯ್ಯರ್, ಕೆ. ಸಿ. ಎಸ್. ಐ.

ಈ ಸಂಸ್ಥಾನದ ದಿವಾನರಾದ ಸರ್. ಕೆ. ಶೇಷಾದ್ರಿ ಅಯ್ಯರವರಿಗೆ ಈಚೆಗೆ ಮಹಾರಾಜ್ಞೀಯವರ ಸರ್ಕಾರದಿಂದ ಕೆ. ಸಿ. ಎಸ್. ಐ. ಎಂಬ ಸನ್ನಿಹಿತವಾದ ಪ್ರಶಸ್ತಿ ಕೊಡಲ್ಪಟ್ಟ ವಿಷಯದಲ್ಲಿ ನಮ್ಮ ಶುಭವಾದವನ್ನು ಅವರಿಗೆ ಅರ್ಪಿಸುತ್ತೇವೆ. ಇಂಡ್ಯಾ ರಾಜ್ಯದ ವೈಸ್‌ರಾಯ್‌ಯವರಾದ ಲಾರ್ಡ್ ಲ್ಯಾನ್ಸ್‌ಡೌನ್ ಯವರು ಈಚೆಗೆ ಈ ದೇಶಕ್ಕೆ ದಯಮಾಡಿ ಇಲ್ಲಿನ ರಾಜ್ಯಾಡಳಿತಕ್ರಮವನ್ನೂ, ಪೂರ್ವಾಪೇಕ್ಷೆಯಾ ದೇಶದ ಮತ್ತು ಪ್ರಜೆಗಳ ಪ್ರಕೃತ ಸ್ಥಿತಿಯನ್ನೂ ಸ್ವಯಂ ಕಟಾಕ್ಷಿಸಿ, ತನ್ಮೂಲಕ ತಮಗುಂಟಾದ ಭಾವವನ್ನು ಇಲ್ಲಿರುವ ಕಾಲದಲ್ಲೇ ಕೆಲವು ಸಂದರ್ಭಗಳೊಳು ವ್ಯಕ್ತಪಡಿಸಿದರಾಗಿ, ಅದಾದೊಡನೆ, ಇಲ್ಲಿನ ದಿವಾನರವರು ಈ ಸಂಸ್ಥಾನದ ಪುರೋವೃದ್ಧಿ ವಿಷಯದಲ್ಲಿ ಅನಿಚ್ಛಿನ್ನವಾಗಿ ವ್ಯಕ್ತಗೊಳಿಸುತ ಬಂದ ಶಾರೀರಕ ಮಾನಸಿಕ ಶ್ರಮವು ಇಂಡ್ಯಾ ಗವರ್ನಮೆಂಟಿನವರು ಪರಿಭಾವಿಸಿ, ಶೀಘ್ರದಲ್ಲಿ ಉಚಿತರೀತಿಯಿಂದ ಅವರು ಗೌರವಿಸುವರೆಂದು ಸಾಮಾನ್ಯವಾಗಿ ಎಲ್ಲರೂ, ವಿಶೇಷತಃ ಈ ದೇಶದ ಪ್ರಜೆಗಳೂ ನಿರೀಕ್ಷಿಸುತಲಿದ್ದರು. ಸರ್. ಶೇಷಾದ್ರಿ ಅಯ್ಯರವರು ಇಲ್ಲಿನ ದಿವಾನಗಿರಿಯಂ ವಹಿಸಿ ಹತ್ತು ವರ್ಷಗಳ ಕಾಲವಾಗುತಬಂತು. ಇದರಲ್ಲಿ ಅವರು ಮಾಡಿದ ಬಹುವಿಧ ನೂತನ ಯೋಜನೆಗಳ ದೆಸೆಯಿಂದ ಸಂಸ್ಥಾನದ ಆದಾಯವು ದಿನೇದಿನೇ ಅಭಿವೃದ್ಧಿಯನ್ನೈದುತಬಂದು, ಸಾಚಿಕ ದಿವಾನ್ ಶ್ರೀ ರಂಗಾಚಾರ್ಲು ಯವರ ಕಾಲಾಪೇಕ್ಷೆಯಾ

ಈಗ ಮುನ್ನೂರ್ ನಾಲ್ಕು ಲಕ್ಷ ರೂಪಾಯಿಗಳಿಗೆ ಜಾಸ್ತಿಯಾಗಿಯುಟ್ಟುವಳಿಯಾಗುತ್ತ, ಸಂಸ್ಥಾನದ ಖರ್ಚು ಜಾತಾ ಭಾರೀ ಶಿಲ್ಕು ಸಹ ಉಳಿಯುತಲಿದೆ. ಸಂಸ್ಥಾನದ ಖಜಾನೆಯಲ್ಲೂ ಅನ್ಯತ್ರವೂ ನಾನಾರೂಪವಾಗಿ ಮುನ್ನೂರು ಒಂಬತ್ತುಕೋಟಿ ರೂಪಾಯಿಗಳ ತನಕ ಜಮೆ ಇರುತಿವೆ. ಸಂಸ್ಥಾನಕ್ಕೆ ಉಂಟಾಗಿರುವ ಸಾಲಗಳಂ ನಿವೃತ್ತಿ ಮಾಡುವ ವಿಷಯದಲ್ಲಿ ತಕ್ಕ ಯೋಚನೆಗಳು ಮಾಡಲ್ಪಟ್ಟಿರುತಿವೆ. ವ್ಯವಸಾಯೋದ್ಯೋಗಿಗಳಾದ ಬಹುವಿಧ ಯೋಚನೆಗಳು ಇದುವರೆವಿಗೆ ಮಾಡಲ್ಪಟ್ಟಿರುವದಲ್ಲದೆ ಮುಂದೆ ವಿಶೇಷತ್ತ ಮಾಡಬೇಕೆಂಬ ಸಂಕಲ್ಪವೂ ಉಂಟಾಗಿದೆ. ಪ್ರಜಾಪ್ರತಿನಿಧಿ ಸಮಾಜವು ಪೂರ್ವಾಪೇಕ್ಷೆಯ ಒಳ್ಳೆಯ ಸ್ಥಿತಿಗೆ ಬಂದಿರುವದಲ್ಲದೆ ಅದರ ಪ್ರತಿನಿಧಿಗಳಂ ಚುನಾಯಿಸುವ ಸ್ವಾತಂತ್ರ್ಯವು ಪ್ರಜೆಗಳಿಗೇನೇ ಉಂಟುಮಾಡಲ್ಪಟ್ಟಿತು. ಷಹರ್ ಜಾಗಾಗಳಲ್ಲಿ ಮ್ಯುನಿಸಿಪಾಲಿಟಿಗಳು ಯೋಗ್ಯವಾಗಿ ಅವರ ಅಧಿಕಾರಗಳಿಗೆ ವಿಶೇಷ ನಿಗೆ ಕೊಡಲ್ಪಡುತಬರುತಲಿದೆ. ಬಹುಕಾಲದ ಮೊದಲು ಕೇವಲ ಹೀನಸ್ಥಿತಿಗೆ ಬಿದ್ದ ಸತ್ರ ದೇವಾಲಯಗಳ ವಿಚಾರಣೆಯ ಬಗ್ಗೆ ಸರ್ವಾಂಶದಲ್ಲೂ ಅರ್ಹನೆನಿಸಿಕೊಂಡಿರ್ಪ ಒಬ್ಬ ಅಧಿಕಾರಿಯು ನಿಯಮಿಸಲ್ಪಟ್ಟು ಅವೆಲ್ಲವು ಒಂದು ಕ್ರಮಕ್ಕೆ ತರಲ್ಪಡುತಲಿವೆ. ರೈಯಿತ್ ರಸ್ತೆಗಳು ದಿನೇದಿನೆ ವೃದ್ಧಿಯಾಗುತ ಪ್ರಜೆಗಳಿಗೂ ವ್ಯಾಪಾರಕ್ಕೂ ಅನುಕೂಲ್ಯಗಳು ಕಲ್ಪಿಸಲ್ಪಡುತಲಿವೆ. ಬೆಂಗಳೂರಲ್ಲಿ ಪ್ರಜಾಸಂಖ್ಯೆಯು ದಿನೇದಿನೆ ವೃದ್ಧಿಯಾಗುತ ಬರುವದರಿಂದ ಅದಕ್ಕೆ ಅನುಗುಣವಾಗಿ ಷಹರನ್ನೂ ವಿಸ್ತರಿಸುವಣ್ತು ಅವಶ್ಯ ಕರ್ತವ್ಯವೆಂದು ಭಾವಿಸಿ, ಈ ಷಹರಿನ ದಕ್ಷಿಣ ಭಾಗದಲ್ಲೂ ಉತ್ತರದಲ್ಲೂ ಖಾಲೀಯಾಗಿರುವ ವಿಸ್ತಾರವಾದ ಜಮೀನನ್ನು ಮನೆಗಳು ಕಟ್ಟಿಕೊಳ್ಳುವದಕ್ಕೆ ಅನುಕೂಲಿಸುವಂತೆ ನಿವೇಶನಗಳಾಗಿ ವಿಂಗಡಿಸಿ ಅಲ್ಪಕ್ರಯಕ್ಕೆ ಕೊಡಲ್ಪಡುತಬರುತಲಿವೆ. ಸಂಸ್ಥಾನದ ಅಭಿವೃದ್ಧಿಯ ವಿಷಯದಲ್ಲೂ, ಪ್ರಜೆಗಳ ಸುಸ್ಥಿತಿವಿಷಯದಲ್ಲೂ ಬಹುವಿಧ ಏರ್ಪಾಡುಗಳಂ ಮಾಡಿ ಅವರ ಸುಖಸಂತೋಷಗಳೇ ಈಶ್ವರಕೃಪಾಲಬ್ಧನಾದ ತಮ್ಮ ಅಧಿಕಾರಕ್ಕೆ ಮುಖ್ಯಲಕ್ಷಣವೆಂದು ಭಾವಿಸಿ ಅಹರ್ನಿಶಿ ಶ್ರಮಿಸುತಬರುವ ಈ ದೊಡ್ಡಮನುಷ್ಯರ ವಿಷಯದಲ್ಲಿ ಮಹಾರಾಣೀ ಸರ್ಕಾರದವರು ವ್ಯಕ್ತಗೊಳಿಸಿದ ಗೌರವ ಪುರಸ್ಕಾರಗಳು ಅತ್ಯಂತ ಶ್ಲಾಘನೀಯವಾಗಿರುತಿದೆ. ಸರ್ ಶೇಷಾದ್ರಿ ಅಯ್ಯರವರು ಕಳೆದ ಸಂವತ್ಸರದೊಳು ಇಲ್ಲಿ ಪ್ರಾಪ್ತವಾದ ದುರ್ಭಿಕ್ಷ ನಿವಾರಣೆಯ ಬಗ್ಗೆ ಮಾಡಿದ ಶ್ಲಾಘ್ಯಗಳಾದ ಕೆಲವು ಏರ್ಪಾಡುಗಳಂ ಇಂಡ್ಯ ಗವರ್ನಮೆಂಟನವರರಿತು, ತದ್ವತ್ ಮುಂಬೈ ಮತ್ತು ಮದರಾಸ್ ಪ್ರಸಿಡೆನ್ಸಿಗಳೊಳು ಮಾಡುವಂತೆ ಹುಕುಂ ಕೊಟ್ಟರೆಂದು ಸಹ ನಮ್ಮ ಕೇಳ್ವಿಕೆಗೆ ಬಂದಿರುತಿದೆ. ಈ ದೊಡ್ಡಮನುಷ್ಯರು ಆರೋಗ್ಯದೃಢಗಾತ್ರರಾಗಿ ಈಗ ಉಂಟುಮಾಡಲ್ಪಟ್ಟ ಪ್ರಶಸ್ತಿಯನ್ನನುಭವಿಸುತ, ಇಲ್ಲಿನ ಪ್ರಜೆಗಳಂ ಬಹುಕಾಲ ಪಾಲಿಸುವಂತೆ, ಶ್ರೀಹರಿಯು ಅವರಿಗೆ ದೀರ್ಘಾಯುಷ್ಯವಂ ಕೃಪೆಗೈಯಬೇಕೆಂದು ಪ್ರಾರ್ಥಿಸುತ್ತೇವೆ.

## ದೇವಸ್ಥಾನಗಳ ಜೀರ್ಣೋದ್ಧಾರ.

ಈ ದೇಶದೊಳು ಪೂರ್ವರಾಜರುಗಳು ಅನೇಕ ಲಕ್ಷ ರೂಪಾಯಿಗಳ ವ್ಯಯದಿಂ ಕಟ್ಟಿಸಿದ್ದ ದೇವಸ್ಥಾನಗಳ ಪೈಕಿ ಅನೇಕ ರಿಪೇರಿ ಇಲ್ಲದೆ, ಕೇವಲ ಹೀನಸ್ಥಿತಿಗೆ ಬಂದಿರುತಿವೆಯೆಂತಲೂ, ಅವುಗಳ ರಿಪೇರಿಗೆ ಮುನ್ನೂರು ನಾಲ್ಕು ಲಕ್ಷ ರೂಪಾಯಿಗಳು ಹಿಡಿಯಬಹುದೆಂತಲೂ, ಅವುಗಳಿಗೆ ಸ್ವಂತದಲ್ಲಿ ದ್ರವ್ಯಾನುಕೂಲ್ಯ ವಿಲ್ಲದ್ದರಿಂದ ಸರ್ಕಾರದಿಂದ ಸಾಲೀಯಾನಾ ೧೫,೦೦೦ ರೂಪಾಯಿಗಳಂತೆ ಹತ್ತು ವರ್ಷಗಳ ಕಾಲ ಸಹಾಯ ದ್ರವ್ಯ ಕೊಡಬೇಕೆಂತಲೂ ನಮೂದಿಸಿ ಮುಜರಾಯಿ ಸೂಪರಿಂಟೆಂಡೆಂಟರವರು ಕಳೆದ ಅಕ್ಟೋಬರ್ ೧೫ನೇ ತಾರೀಖಿನಲ್ಲಿ ಗವರ್ನಮೆಂಟಿಗೆ ಬರೆದ ಯಾದಿಯಮೇಲೆ ಅದೇ ಇಸವಿ ಡಿಸೆಂಬರ್ ೧೫ನೇ ತಾರೀಖಿನಲ್ಲಿ ಗವರ್ನಮೆಂಟನವರು ಇದರಡಿ ತಿಳಿಸಲ್ಪಡುವಂತೆ ಪ್ರೊಸೀಡಿಂಗ್ಸ್ ಮಾಡಿರುತ್ತಾರೆ:—

ಈ ಸಂಸ್ಥಾನದೊಳು ಮುಖ್ಯಗಳಾದ ದೇವಸ್ಥಾನಗಳು ಕೂಡಲೆ ರಿಪೇರಿ ಮಾಡಬೇಕಾದ ಸ್ಥಿತಿಯೊಳಿರುತಿವೆ ಎಂಬ ಅಂಶವಂ ಗವರ್ನಮೆಂಟಿನವರು ಚೆನ್ನಾಗಿ ಯೋಚಿಸಿ, ಸದ್ಯಃ ಸನ್ ೧೮೯೩-೯೪ನೇ ಸಾಲಿಗೆ ೫,೦೦೦ ರೂಪಾಯಿಗಳು ಕೊಡುವಂತೆ ಹುಕುಂ ಮಾಡಿರುತ್ತಾರೆ. ಮುಜರಾಯ್ ಸೂಪರಿಂಟೆಂಡೆಂಟರವರು ಸನ್ ೯೩-೯೪ನೇ ಇಸವಿಯ ಮುಜರಾಯ್ ಬಜೆಟಿನಲ್ಲಿ ಇದೇ ಕಾರ್ಯಕ್ಕಾಗಿ ೧೫,೦೦೦ ರೂಪಾಯಿ ದಾಖಲ್ಮಾಡಬಹುದು. ಆ ರೀತಿ ಮಂಜೂರ್ಮಾಡಲ್ಪಟ್ಟ ದ್ರವ್ಯದಿಂದ ಮುಜರಾಯಿ ಸೂಪರಿಂಟೆಂಡೆಂಟರವರು ಕೇವಲ ಆವಶ್ಯಕವಾಗಿ ಕಂಡುಬರುವ ದೇವಸ್ಥಾನಗಳ ರಿಪೇರಿಗಳನ್ನು ಪ್ರಾರಂಭಿಸತಕ್ಕದ್ದು.

ಸ್ವಂತ ಆಯತಿಯಿಲ್ಲದೆ ಪರಂತು ರಿಪೇರೀ ಮೂಲಕ ರಕ್ಷಣೆಗೆ ಗುರಿಯಾಗಿರುವ ದೇವಸ್ಥಾನಗಳ ವಿಷಯದಲ್ಲಿ ರಿಪೇರೀ ಖರ್ಚನ್ನು ಪೂರಾ ಗವರ್ನಮೆಂಟನವರು ವಹಿಸುವರು. ಪರಂತು ರಿಪೇರಿಗೆ ಗುರಿಯಾಗಿರುವ ಯಾವ ದೇವಸ್ಥಾನಗಳಿಗೆ ಬೇಕಾದಷ್ಟು ಫಂಡಿರುತಿದೆಯೊ ಅಂತಾ ಫಂಡಿನಿಂದ ವಿಶಿಷ್ಟ ಖರ್ಚನ್ನೂ ಮಾಡತಕ್ಕದ್ದು. ರಿಪೇರಿ ಅಂದಾಜ್ ಮೊತ್ತದ ಪೈಕಿ ಅರ್ಧ ಭಾಗವನ್ನು ಸಹ ದೇವಸ್ಥಾನದ ಫಂಡಿನಿಂದ ಕೊಡುವದಸಾಧ್ಯವಾಗಿರುವ ಸಂದರ್ಭದಲ್ಲೂ, ಭಕ್ತಾದಿಗಳಿಂದಲೂ ಸಾಮಾನ್ಯವಾಗಿ ಅದಕ್ಕೆ ಸಂಬಂಧಪಟ್ಟ ಜನರಿಂದಲೂ ಸಹಾಯದ್ರವ್ಯವು ಕೇಳುತಮಾಡುವ ವಿಷಯದಲ್ಲಿ ದೇವಸ್ಥಾನಗಳ ಮ್ಯಾನೇಜರುಗಳು ಮಾಡುವ ಪ್ರಯತ್ನಗಳು ನಿಷ್ಫಲಗಳಾಗುವ ಸಂದರ್ಭದಲ್ಲೂ ಉಳಿದ ಮೊಬಲಗನ್ನು ಸಹ ಗವರ್ನಮೆಂಟ್ ಲೆಕ್ಕಕ್ಕೆ ಸೇರಿಸಬಹುದು, ಎಂಬದು.

## ತೂಕದ ಮತ್ತು ಅಳತೇ ಸಾಧನಗಳು.

ಒಂದು ದೇಶದೊಳು ಸರ್ವತ್ರ ತೂಕದ ಗುಂಡುಗಳೂ ಅಳತೇಸೇರು ಮತ್ತು ಕೊಳಗಗಳೂ ಒಂದೇ ತೂಕ ಮತ್ತು ಅಳತೆಯುಳ್ಳವುಗಳಾಗಿರಬೇಕಾದ್ದು ನ್ಯಾಯ್ಯವಾಗಿದ್ದಾಗ್ಯೂ ಈ ಮೈಸೂರು ದೇಶದಲ್ಲಿಮಾತ್ರ ಸದರೀ ವಿಷಯದೊಳು ವರ್ತಕರ ಮನಸ್ವೀ ವರ್ತನಕ್ಕೆ ಸರ್ಕಾರದವರು ಸಂಪೂರ್ಣಾವಕಾಶವಂ ಕೊಟ್ಟಿರುತ್ತಾರೆಂದು ಧಾರಾಳವಾಗಿ ಹೇಳಬಹುದಾಗಿದೆ, ಹ್ಯಾಗೆಂದರೆ— ಬೆಂಗಳೂರು ಕೊಳಗ ೧ಕ್ಕೆ ೪ ಸೇರಿನಂತೆ ೨೦ ಕೊಳಗಕ್ಕೆ ಒಂದು ಖಂಡುಗವೆಂದು ಲೆಕ್ಕ ಮಾಡಲ್ಪಡುತಲಿದೆ. ಕೋಲಾರ ಡಿಸ್ಟ್ರಿಕ್ಟಿನಲ್ಲಿ ಕೊಳಗಕ್ಕೆ ೯ ಸೇರಿನಂತೆ ೨೦ ಕೊಳಗಕ್ಕೆ ಒಂದು ಖಂಡುಗದಂತೆ ಬಹುಕಾಲದಮೊದಲು ವಾಡಿಕೆಯಲ್ಲಿದೆ. ಮೇಲಿನ ಯೆರಡುವಿಧ ವಾಡಿಕೆಯಂ ಬಿಟ್ಟು, ಧಾನ್ಯಗಳ ಮಾಲಿಷ ಕಾಲದಲ್ಲಿ ಗ್ರಾಮಾಂತರಗಳ ಮೇಲೆ ಧಾನ್ಯಗಳಂ ಖರೀದಿ ಮಾಡುವದಕ್ಕಾಗಿ ತಿರುಗಾಡುವ ವರ್ತಕರು ೧೦½, ೧೧ ಸೇರು ಅಳತೆಯುಳ್ಳ ಕೊಳಗಗಳಂ ಸ್ವಂತದಲ್ಲಿ ಮಾಡಿಸಿ ಇಟ್ಟುಕೊಂಡು ಜ್ಞಾನ ಶೂನ್ಯರಾದ ರೈತರಂ ಮೋಸಮಾಡುವ ಉದ್ದೇಶದಿಂ ಬಾಜಾರ್ ನಿರಖಿಗಿಂತಲೂ ಖಂಡುಗಕ್ಕೆ ಯೆರಡಾಣೆ ಜಾಸ್ತಿ ಮಾಡಿ ಅವರಲ್ಲಿರುವ ಧಾನ್ಯಗಳಂ ದೋಚಿಕೊಂಡು ಹೋಗುತಲಿದ್ದಾರೆ. ಬುದ್ಧಿಶಾಲಿಯಾದವನ್ಯಾರಾದಗೊಬ್ಬನು ಈ ಮೋಸವಂ ಕಂಡು ಹಿಡಿದು ಸರ್ಕಾರಕ್ಕೆ ತಿಳಿಸಿದರೆ ಅವರು ತಾವು ಪ್ರವೇಶಿಸುವದಿಲ್ಲವೆಂದು ಜವಾಬ ಕೊಡುವದಾಗಿ ಸಹ ನಮ್ಮ ಕೇಳ್ವಿಕೆಗೆ ಬರುತಲಿದೆ. ಬ್ರಿಟಿಷ್ ರಾಜ್ಯದಲ್ಲಿ ತೂಕದ ಗುಂಡುಗಳೂ ಅಳತೆಯುಪಡಿಗಳೂ ಮರಕ್ಕಾಲ್ ಯೆಂಬ ಕೊಳಗಗಳೂ ಒಂದೇವಿಧವಾಗಿರಬೇಕೆಂದು ಯೋಚಿಸಿ ಆ ಬಗ್ಗೆ ಒಂದು ಆಕ್ಟನ್ನು ಸಹ ರಚಿಸಿ ಜಾರೀಯೊಳು ತಂದು ಅಥವಾ ತರುಣ ತರವರೀ ನಡೆಯುತಲಿರುವಂತೆ ಕೇಳುತ್ತೇವೆ. ಬ್ರಿಟಿಷನವರ ಅಧಿಕಾರಕ್ಕೆ ಒಳಪಟ್ಟಿರುವ ರಾಜ್ಯದಲ್ಲಿ ಜಾರೀಯೊಳಿರುವ ಕಾನೂನುಗಳ ಪೈಕಿ ನ್ಯಾಯಾತಿ ಯೆಲ್ಲವು ಆಗಿಂದಗ್ಯೆ ಈ ದೇಶದಲ್ಲಿ ಜಾರೀಯೊಳು ತರಲ್ಪಡುತಿರುವಲ್ಲಿ, ತೂಕದ ಗುಂಡುಗಳು ಮತ್ತು ಅಳತೆ ಸೇರು ವಗೈರೆ ವಿಷಯದೊಳು, ಗ್ರಾಮಾಂತರಗಳಲ್ಲಿರುವ ಕಷ್ಟಜೀವಿಗಳಾದ ಬಡರೈತರು, ತ[illegible]ಗಳು ಯೆಲ್ಲಿ ಸಿಕ್ಕೀತೆಂದು ಊರೂರು ತಿರುಗುವ ತೋಳಗಳಂತೆ, ಹಗಲಿನಮೇಲೆ ಗೋಣಿಚೀಲಗಳ ನಾಕಿಕೊಂಡು ಗ್ರಾಮ ಗ್ರಾಮಕ್ಕೂ ತಿರುಗಾಡುವ ವರ್ತಕರಿಂದ ಅನುಭವಿಸುವ ನಷ್ಟವಂ ಗವರ್ನಮೆಂಟನವರು ಕಣ್ತೆರದು ನೋಡದೆಯಿರುವಣವು ಕೇವಲ ದುಃಖಕರವಾಗಿಯೂ ಆಶ್ಚರ್ಯಕರವಾಗಿಯೂ ಇರುತಿದೆ.

## Occasional Notes
## ನೈಮಿತ್ತಿಕ ವಿಷಯನ್ಯಾಸ.

ತಿರುವಾಂಕೂರಲ್ಲಿ ಈಚೆಗೆ ವಾಂತಿಭೇದಿ ರೋಗ ವ್ಯಾಪಿಸಿ ಅದರಿಂದ ಇದುವರೆವಿಗೆ ನಾಲ್ವರು ಮೃತಪಟ್ಟರೆಂದು ತಿಳಿಯಬರುತಿದೆ.

ಇಂದಿರಮಾಗೋಪ್ ಮತ್ತು ಪ್ರಿಯಂವದಬಾಗ್ಚಿ ಎಂಬ ಇಬ್ಬರು ಹುಡುಗಿಯರು ಈಚೆಗೆ ನಡೆದ ಕಲ್ಕತ್ತೇ ಯೂನಿವರ್ಸಿಟಿ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಯಾಗಿರುತ್ತಾರೆ.

ಉತ್ತರ ಅಮೆರಿಕಾ ಖಂಡದೊಳಗಣ ಯುನೈಟೆಡ್ ಸ್ಟೇಟಿಸಿನಲ್ಲಿ ರೆಯಿಲ್ ಗಾಡಿಯಂ ಒಂದು ಘಂಟೆಗೆ ೯೩½ ಮೈಲಿಗಳ ದೂರದ ವರವಿಗೆ ಬಿಡುತಲಿದ್ದಾರೆಂದು ಆ ಪ್ರಾಂತದ ಪತ್ರಿಕೆಯೊಂದು ತಿಳಿಸುತಿದೆ.

ಮಲಬಾರ್ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಲೆಕ್ಟರಾದ ಮಿ ರಾಜಗೋಪಾಲಾಚಾರ್ಯರವರು, ಕೊಚ್ಚಿ ದೇಶದ ಸರಹದ್ದು ತಕರಾರ್ ವ್ಯವಸ್ಥೆಯ ಬಗ್ಗೆ ಬ್ರಿಟಿಷಗವರ್ನಮೆಂಟ್ ತರಫ್ ಕಮಿಷನರಾಗಿ ಮುಕರರ್ಮಾಡಲ್ಪಟ್ಟಿರುತ್ತಾರೆ.

ಬ್ರಿಟಿಷ್ ಸರ್ಕಾರದ ನೌಕರಿಯ ಬಗ್ಗೆ ಬರಿಷ್ಟವಾದ ೨೦೦ ಒಂಟೆಗಳ ಫೌಜನ್ನು ಸಿದ್ಧಪಡಿಸುವದಾಗಿ ಕೋಟಾ ಸಂಸ್ಥಾನದವರು ತಿಳಿಸಲು ಅದನ್ನು ಇಂಡ್ಯ ಗವರ್ನಮೆಂಟನವರು ಅಂಗೀಕರಿಸಿರುತ್ತಾರೆ.

ಇಂಡ್ಯದೇಶದ ಸರ್ವೆ ಇಲಾಖೆಯವರು ಇಂಡ್ಯದೇಶದೊಳಗಣ ಧಾತುಗಳ ನಕ್ಷೆಯೊಂದನ್ನು ಶೀಘ್ರದಲ್ಲಿ ತಯಾರ್ಮಾಡಿ ಪ್ರಕಟಿಸುವರು. ಇದು ಸಾಮಾನ್ಯವಾಗಿ ಯೆಲ್ಲರಿಗೂ ಅತ್ಯಂತೋಪಯೋಗಿಯಾಗಿರುವದೆಂದು ನಂಬುತ್ತೇವೆ.

ಕಪುರ್ತಲಾ ಸಂಸ್ಥಾನದ ಅರಸರವರು ಯೂರೋಪ್ ಅಮೆರಿಕಾ ದೇಶಗಳಂ ನೋಡಿಕೊಂಡು ಬರಬೇಕೆಂಬ ಅಭಿಲಾಷೆಯಿಂದ ಮುಂದಿನ ಬೇಸಿಗೆಯ ಪ್ರಾರಂಭದಲ್ಲಿ ಇಂಡ್ಯ ದೇಶದಿಂದ ಹೊರಡುವವರಾಗಿದ್ದಾರೆಂದು ತಿಳಿಯಬರುತಿದೆ.

ತಿರುವಾಂಕೂರ್ ರೆಸಿಡೆನ್ಸಿ ಟ್ರಜರಿಯಲ್ಲಿ ಖುರ್ದ್ ಫರ್ದ್ ನಡೆದಿರುವಂತೆ ತಿಳಿಯಬರುವದಾಗಿ ಅಲ್ಲಿನ ರೆಸಿಡೆಂಟರಾದ ಮಿ॥ ಗ್ರಿಗ್ ಯವರು ಮದರಾಸ್ ಗವರ್ನಮೆಂಟಿಗೆ ರಿಪೋರ್ಟ್ ಮಾಡಲು ಅದರ ತನಿಖೆಯಬಗ್ಗೆ ಪ್ರಾವೀಣಿಕರಾದ ಒಬ್ಬ ಅಧಿಕಾರಿಯಂ ಅಲ್ಲಿಗೆ ಕಳುಹಿಸಿಕೊಡುವಂತೆ ಸದರೀ ಗವರ್ನಮೆಂಟನವರು ಹುಕುಂ ಮಾಡಿರುತ್ತಾರೆ.

ತಿರುವಾಂಕೂರಲ್ಲಿ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರೊಬ್ಬರು ಒಂದು ಮೊಕದ್ದಮೆಯಲ್ಲಿ ಮೊದಲು ಅದನ್ನು ದರ್ಯಾಫ್ತು ಮಾಡಿದ ಪೋಲೀಸ್ ಇನ್ಸ್ಪೆಕ್ಟರ ಅಭಿಪ್ರಾಯವಂ ತಿಳಕೊಳ್ಳಬೇಕೆಂಬ ಉದ್ದೇಶದೊಡನೆ ಸಾಕ್ಷಿತ್ವೇನ ಅವರಂ ದರ್ಯಾಫ್ತುಮಾಡಿ, ಸದರೀ ಮೊಕದ್ದಮೆಯಲ್ಲಿ ತಮ್ಮ ನಿರ್ಣಯಕ್ಕೆ ಸದರೀ ಇನ್ಸ್ಪೆಕ್ಟರ ಸಾಕ್ಷ್ಯವನ್ನೊಂದು ಕಾರಣವೆಂದು ನಮೂದು ಮಾಡಲು, ಅಂತಾನಡವಳಿಕೆಯು ಅಕ್ರಮವೆಂದು ಹೈಕೋರ್ಟಿನವರು ನಿರ್ಣಯಿಸಿದರು.

ಬರ್ಮಾ ಸಂಸ್ಥಾನವು ರಾಜರ ಆಳ್ವಿಕೆಗೆ ಒಳಪಟ್ಟಿದ್ದ ಕಾಲದವರಿವಿಗೆ ಚೀನಾ ಸರ್ಕಾರಕ್ಕೆ ೧೦ ವರ್ಷಗಳಿಗೊಂದಾವರ್ತಿ ಅವರು ಪಗಡಿ ಕೊಡುವ ವಾಡಿಕೆ ನೆಲಗೊಂಡಿತ್ತು. ಸದರೀ ರಾಜ್ಯವು ಈಚೆಗೆ ಬ್ರಿಟಿಷ ಸರ್ಕಾರದ ವಶವಾಗಿ ಹೋದದರಿಂದ ಪೂರ್ವಪದ್ಧತಿಯನ್ನನುಸರಿಸಿ ಇವರೂ ಚೀನಾ ಸರ್ಕಾರಕ್ಕೆ ಪಗಡಿ ಕೊಡಲು ಒಪ್ಪಿಕೊಂಡು ಶೀಘ್ರ [illegible] ಕಳುಹಿಸಲು ತಕ್ಕ ಯೇರ್ಪಾಡುಗಳು ಮಾಡಲ್ಪಡುವದಾಗಿದೆಯೆಂದು ಒಂದಾನೊಂದು ಪತ್ರಿಕೆ ತಿಳಿಸುತಿದೆ.

ಕಳೆದ ತಿಂಗಳ ೩೧ನೇ ತಾರೀಖಿಗೆ ಪೂರ್ತಿಯಾದ ಅರ್ಧವರ್ಷಕ್ಕೆ ಮದರಾಸ್ ಬ್ಯಾಂಕಿನಲ್ಲಿ ಷೇರುದಾರರಿಗೆ ಸಾಲೀಯಾನಾ ಸೇಕಡ ೯ ರೂಪಾಯಿಗಳಂತೆ ನಫೆ ಕೊಟ್ಟು ಮುಂದಿನ ಸಂವತ್ಸರದ ಲೆಕ್ಕಕ್ಕೆ ೨೦,೫೪೮ ರೂಪಾಯಿಗಳು ದಾಖಲ್ಮಾಡಿದರು. ೯೧ನೇ ಇಸವಿಯ ಲೆಕ್ಕದಿಂದ ಸನ್ ೯೨ನೇ ಇಸವಿಯ ಲೆಕ್ಕಕ್ಕೆ ೧,೩೬,೧೦೪ ರೂಪಾಯಿಗಳು ತರಲ್ಪಟ್ಟವು. ಆದುದರಿಂದ ೯೨ನೇ ಇಸವಿಯಲ್ಲಿ ಶುದ್ಧ ನಫೆಯು ೧,೬೩,೧೩೦ ರೂಪಾಯಿಗಳು ರಿಸರ್ವ್ ಫಂಡಿನಲ್ಲಿ ೧೪ ಲಕ್ಷ ರೂಪಾಯಿಗಳಿರುತಿವೆ.

ಮೈಸೂರ್ ಸಂಸ್ಥಾನದ ದಿವಾನರವರಾದ ಮೆ॥ ಶೇಷಾದ್ರಿ ಅಯ್ಯರವರಿಗೆ ಮಹಾರಾಣೀಯವರ ಸರ್ಕಾರದಿಂದ ಈಚೆಗೆ ಕೊಡಲ್ಪಟ್ಟ ಕೆ. ಸಿ. ಎಸ್. ಐ. ಎಂಬ ಪ್ರಶಸ್ತಿಯು, ದೇಶದ ಉತ್ಪತ್ತಿಯನ್ನು ಅಭಿವೃದ್ಧಿ ಪಡಿಸುವ ವಿಷಯದಲ್ಲಿ, ನೇಟಿವ್ ಸಂಸ್ಥಾನಗಳೊಳು ಪ್ರಾಯಶಃ ಇಲ್ಲದಷ್ಟು ಶಕ್ತಿಯನ್ನು ಅವರು ವ್ಯಕ್ತಪಡಿಸಿದ ಅಂಶವನ್ನು ಆಲೋಚಿಸಿ, ಸದರೀ ದೊಡ್ಡ ಮನುಷ್ಯರು ಅಂತಾ ಅತಿಶಯವಾದ ಪ್ರಶಸ್ತಿಯು ಹೊಂದುವಕ್ಕೆ ಅರ್ಹರೆಂಬ ಪರಿಭಾವನೆಯಿಂದ ಕೊಡಲ್ಪಟ್ಟದ್ದೆಂದು ಅಲಹಾಬಾದ್ ಪಯೋನಿಯರ್ ಪತ್ರಿಕೆ ತಿಳಿಸುತಿದೆ.

ಮಧುರೆ ಸಬ್ ಕಲೆಕ್ಟರವರಾದ ಮೆ॥ ರಾಮಚಂದ್ರ ರಾಯರವರಮೇಲೆ ತರಲ್ಪಟ್ಟ ರುಷುವತ್ ಮೊಕದ್ದಮೆಯ ವಿಚಾರಣೆಯು ಗವರ್ನಮೆಂಟನವರಿಂದ ಯೇರ್ಪಡಿಸಲ್ಪಟ್ಟ ಒಂದು ಪಂಚಾಯಿತಿ ಸಭೆಯ ಮುಂದೆ ತಂಜಾವೂರಲ್ಲಿ ವಿಚಾರಣೆಯಾಗುತಲಿರುವಂತೆ ಹಿಂದಿನ ಪತ್ರಿಕೆಯಮೂಲಕ ತಿಳಿಸಿ ಇರುತ್ತೇವೆಯಷ್ಟೆ. ಸದರೀ ವಿಚಾರಣೆಯು ಕಳೆದ ತಿಂಗಳ ೨೮ನೇ ತಾರೀಖಿನಲ್ಲಿ ಪೂರ್ತಿಯಾಯಿತು, ಈ ಬಗ್ಗೆ ಯೇರ್ಪಟ್ಟ ಕಮಿಷನರುಗಳು ತಮ್ಮ ರಿಪೋರ್ಟನ್ನು ಗವರ್ನಮೆಂಟಿಗೆ ಕಳುಹಿಸಿರಬಹುದೆಂದು ಕಾಣುತಿದೆ. ಇದರ ಫಲಿತಾಂಶವಂ ಮುಂದೆ ತಿಳಿಯಬೇಕಾಗಿದೆ.

ಅರ್ಕಾಟ್ ನವಾಬರವರು ತಮ್ಮ ಹಿರಿಯರಾದ ಪ್ರಿನ್ಸ್ ಅಜೀಂಜಾ ಬಹದೂರರವರಿಗೆ ನಡೆಸಲ್ಪಟ್ಟಂತೆ ತಮಗೂ ತೋಪ್ ಮರ್ಯಾದೆಯನ್ನು ನಡೆಸಬೇಕೆಂದು ಮದರಾಸ್ ಗವರ್ನಮೆಂಟಿಗೂ ಇಂಡ್ಯ ಗವರ್ನಮೆಂಟಿಗೂ ಕೆಲವು ಕಾಲದಮೊದಲು ಅರ್ಜಿ ಬರೆದುಕೊಳ್ಳುತಬರಲು ಆ ರೀತಿ ನಡೆಸುವದಕ್ಕಾಗುವದಿಲ್ಲವು, ಪರಂತು ಮರ್ಯಾದಾರೂಪವಾಗಿ ಕೊಡಲ್ಪಟ್ಟಿರುವ ನವಾಬ್ ಎಂಬ ಪ್ರಶಸ್ತಿಯನ್ನು ಅಮೀರ್ ಎಂಬ ಪ್ರಶಸ್ತಿಗೆ ಬದಲಾಯಿಸಬೇಕೆಂದು ತಾವು ಯೋಚಿಸುತಲಿರುವದಾಗಿ ಇಂಡ್ಯ ಗವರ್ನಮೆಂಟನವರು ಈಚೆಗೆ ನವಾಬರಿಗೆ ಜವಾಬು ಕೊಟ್ಟಿರುವಂತೆ ಕೇಳುತ್ತೇವೆ.

ಮದರಾಸ್ ರೆಯಿಲಿನಲ್ಲಿ ಗಾಡಿಗಳ ವೇಗಗಳು ಮನಸ್ವೀ ಮಾರ್ಪಟ್ಟು ಮೂರನೇ ತರಗತಿ ಪ್ರಯಾಣಸ್ಥರು, ಟಿಕೆಟುಗಳು ಅಜಮಾಯಿಷಿ ಆಗಿ ವೇಗಗಳು ಒಕ್ಕಲ್ಪಟ್ಟಮೇಲೆ ಸ್ವಂತ ಬೀಗದ ಕೈಗಳನ್ನಿಟ್ಟುಕೊಂಡು ಕದಗಳಂ ತೆರದು ಗಾಡಿಗಳಲ್ಲಿ ಪ್ರವೇಶಿಸುತ್ತಾರೆಂದು ಟ್ರಾಫಿಕ್ ಮ್ಯಾನೇಜರವರು ಏಜಂಟರವರಿಗೆ ರಿಪೋರ್ಟ್ ಮಾಡಲು, ಸದರೀ ವಿಷಯದಲ್ಲಿ ಸದ್ಯಃ ನಿಬಂಧನೆ ಇಲ್ಲವಾಗಿ, ಏಜಂಟರವರು ಇದರ ಬಗ್ಗೆ ಬರುವಂತೆ ಒಂದು ನಿಬಂಧನೆಯಂ ಮಾಡಿ ಮಂಜೂರಾತಿಯ ಬಗ್ಗೆ ಇಂಡ್ಯ ಗವರ್ನಮೆಂಟಿಗೆ ಕಳುಹಿಸಿರುತ್ತಾರೆ. ಏನೆಂದರೆ —ಬೀಗ ಹಾಕಲ್ಪಟ್ಟಿರುವ ರೆಯಿಲ್ ಗಾಡಿ

ನಳ ಬಾಗಿಲನ್ನು ಕಂಪನಿಯ ನೌಕರರು ತೆರವ ಹೊರ್ತು ವೇರೆ ಯಾರೇ ಆಗಲಿ ತೆರದು ಒಳಗೆ ಹೋದಾಗ್ಯೂ ಗಾಡಿಯಿಂದ ಇಳದಾಗ್ಯೂ ಅಂಥವರು ೫೦ ರೂಪಾಯಿಗಳಿಗೆ ಮೀರದ ಒಂದು ಜುಲ್ಮಾನೆಗೆ ಗುರಿಯಾಗುವರು, ಎಂಬದು

ನೋಟಿಸ್.

ಇದರಿಂದ ಗಿರೀವೇಲಿ ಯಾತ್ರೆಗೆ ಬರುವ ಶ್ರೀಮಂತರಿಗೂ ಬಹಳ ವಿನಯಪೂರ್ವಕವಾಗಿ ಮಾಡುವ ವಿಜ್ಞಾಪನೆ.

ಶ್ರೀ ಗಿರಿಯಮೇಲಿರುವ ಮೈಸೂರ್ ಶ್ರೀಮನ್ಮಹಾ ಪ್ರಭುಗಳವರ ಧರ್ಮಛತ್ರದ ಮಾರೀಫತ್ ಪ್ರತಿದಿನವಲ್ಲೂ ಶ್ರೀಯವರ ದೇವಸ್ಥಾನದಲ್ಲಿ ಅಂಕಾಲ, ಅಂದರೆ ಅನ್ನ, ತೊವ್ವೆ, ಹುಳಿ, ತುಪ್ಪ, ಮೊಸರು, ತಾಂಬೂಲ, ಪತ್ರಾವಳಿ ಈವೇರಿಗೆ ಮೊದಲು ಘಂಟೆಯಲ್ಲಿ ನಿವೇದನವಾಗುವದು, ಐವತ್ತು ಜನಗಳು ಶ್ರೀಮಂತರಿಗೂ, ಧರ್ಮಛತ್ರದಲ್ಲಿ ದಿನಂಪ್ರತಿ ಹತ್ತು ಜನಗಳು ಪೂಜ್ಯ ನಿಷ್ಠರ ಮತಸ್ಥರಿಗೂ, ಈ ಮೇರಿಗೆ ಪ್ರತಿದಿನವೂ ಅರುವತ್ತು ಜನಗಳಿಗೆ ಅನ್ನಸಂತರ್ಪಣೆ ಜರಿಗಿಸಲ್ಪಡುತದೆ

ಇದಕ್ಕೆ ಜಾಸ್ತೀಯಾಗಿ ಜನಗಳು ಬರುವದಾದರೆ ಮುಂದಾಗಿ ಛತ್ರದ ಕೆಲಸ ನೋಡುವ ಗುಮಾಸ್ತೇರಿಗೆ ಎಚ್ಚರಿಕೆ ಮಾಡಿದರೆ ಯುಕ್ತರೀತಿಯುಳ್ಳ ಏರ್ಪಾಡು ಮಾಡಲ್ಪಡುವದು.

ದಕ್ಷಿಣಾದಿಕ್ಕಿನ ಮುಖಾಂತರವಸಕ್ಕೆ ಮೇಲ್ಪಟ್ಟು ಇದ್ದು ಬರುವವರ ವಿಷಯದಲ್ಲಿ ಸ್ವಲ್ಪ ಆಲೋಚನೆ ಮಾಡಬೇಕಾಗಿರುತಿದೆ

ಸರ್ವರೂ ಪ್ರೀತಿಯಿಂದ ದಯಮಾಡಿ ಅಂಗೀಕರಿಸಿ ಶ್ರೀ ಮಹಾಪ್ರಭುಗಳವರ ಶ್ರೇಯ ಅಭಿವೃದ್ಧಿಯನ್ನು ಪ್ರಾರ್ಥಿಸಬೇಕೆಂದು ಬಹಳ ವಿನಯಪೂರ್ವಕವಾಗಿ ವಿಜ್ಞಾಪನೆ ಮಾಡಿಕೊಳ್ಳುವ,

ತಮ್ಮ ವಿಧೇಯ,

| | |
|---|---|
| ಮೆ|| ತಿರುಗಿರಿ ಮೇಲು ಕ್ಯಾಂಪು, ೩೦—೧೨—೯೩ | ಸೂ|| ಶ್ರೀನಿವಾಸಾಚಾರ್ಯರು ಚಾರ್ಜ, ಶೆಹೆ ಪೇಷ್ಕಾರ್. |

ನೋಟಿಸ್.

## ನಮ್ಮ ಚಂದಾದಾರರಿಗೆ.

ಕಳೆದ ತಿಂಗಳ ೨೬ನೇ ತಾರೀಖಿನ ಉಪಪತ್ರಿಕೆಯಲ್ಲಿ ನಾವು ಪ್ರಕಟಿಸಿದ ನಿಬಂಧನೆಯನ್ನನುಸರಿಸಿ ಗತಸಾಲಿನ ಚಂದಾ ಬಾಕಿಗಳನ್ನು ಕಳುಹಿಸದೆ ಇರುವಂತವರಿಗೆಲ್ಲ ಈ ವಾರದಲ್ಲಿ ಪತ್ರಿಕೆಯನ್ನು ನಿಲ್ಲಿಸಿರುತ್ತೇವೆ. ಪರಂತು ಬಹುಕಾಲದ ಮೊದಲು ಈ ಪತ್ರಿಕೆಗೆ ಮುಖ್ಯ ಪೋಷಕರೆನಿಸಿರ್ಪ ದೊಡ್ಡ ಮನುಷ್ಯರ ಪೈಕಿ ಕೆಲವರು ಗತಸಾಲಿನ ಚಂದಾಬಾಕಿಗಳನ್ನು ಇದುವರಿವಿಗೆ ಕಳುಹಿಸದೆ ಇರುತ್ತಾರಾಗಿ ಅಂತವರೆಲ್ಲರು ಇದಕ್ಕೆ ಸಿಗೇ ಕೊಟ್ಟು ಬಾಕಿಯನ್ನು ಕಳುಹಿಸುವದಕ್ಕೆ ಸೈಸಲ್ಪಡಬೇಕೆಂದು ಕೋರುವೆವು.

ಟಿ. ಸಿ. ಶ್ರೀನಿವಾಸಾಚಾರ್ಯ,

ಪ್ರೊಪ್ರೈಟರ್

## LOCAL AND PROVINCIAL NEWS.

### ಸ್ವಳದೇಶಮತ್ತುತಾಲ್ಲೂಕ್‌ಜಾತಿವೃತ್ತಾಂತಗಳು.

ಬರುವ ಗುರು ಶುಕ್ರವಾರಗಳಲ್ಲಿ ಪೊಂಗಲ್ ಮತ್ತು ಪುಷ್ಯ ಸಂಕ್ರಮಣದ ಬಗ್ಗೆ ವಿಶಿಷ್ಟ ಸರ್ಕಾರಿ ಇಲಾಖೆಗಳಿಗೂ ರಜಾ ಕೊಡಲ್ಪಡುವುದು.

ಈ ಸಂಸ್ಥಾನದ ರೆಸಿಡೆಂಟರಾದ ಕರ್ನಲ್ ಪಿ. ಡಿ. ಹೆಂಡರ್ಸನ್ ಸಾಹೇಬರವರು ಶ್ರೀಮನ್ಮಹಾರಾಜರವರ ಸವಾರಿಯೊಡನೆ ಕಲ್ಕತ್ತೆಗೆ ಹೋಗಿದ್ದರಷ್ಟೆ, ಸದರೀಯವರು ಕಳೆದ ಶುಕ್ರವಾರದ ದಿನ ಮಧ್ಯಾಹ್ನ ಇಲ್ಲಿಗೆ ವಾಪಸ್ ಬಂದು ಸೇರಿದರು.

ಕಳೆದ ವಾರದಲ್ಲಿ ಮ|| ರಾ|| ವಿ. ಪಿ. ಮಾಧವರಾಯರು, ಮ|| ರಾ|| ಟಿ. ನರಹರಿರಾಯರು, ಮ|| ರಾ|| ಸಿ. ಶ್ರೀನಿವಾಸಯ್ಯಂಗಾರ್ಯರು, ಈ ಮೂವರು ಅಧಿಕಾರಿಗಳೂ ರಾಜಧಾನಿಗೆ ದಯಮಾಡಿ, ಈಚೆಗೆ ವೈಸರಾಯವರು ದಯಮಾಡಿದ್ದಾಗ ವೆಚ್ಚವಾದ ಹಣದ ತಪ್ಸೀಲುಗಳನ್ನು ಗೊತ್ತುಮಾಡಿ ಲೆಕ್ಕವನ್ನು ಫೈಸಲ್ ಮಾಡಿದರು. ಚಂ.

ಕ್ರಿಸ್ಮಸ್ ರಜಾ ಬಗ್ಗೆ ಇಲ್ಲಿನ ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳೂ ಇತರ ವಿಶಿಷ್ಟ ಕಚೇರಿಗಳೂ ಕಳೆದ ತಿಂಗಳ ೨೫ನೇ ತಾರೀಖ್ ಮೊದಲು ಮುಚ್ಚಲ್ಪಟ್ಟದ್ದಷ್ಟೆ ಸರಿಯಷ್ಟೆ. ಸದರೀ ರಜಾ ನಿನ್ನೆಯ ದಿನ ಪೂರ್ತಿಯಾಗಿ ಕ್ರಿಮಿನಲ್ ಕೋರ್ಟುಗಳೂ ಇತರ ಇಲಾಖೆಗಳೂ ಈ ದಿನ ತೆರೆಯಲ್ಪಟ್ಟು ಮರಳಿ ಕೆಲಸಗಳಿಗೆ ಪ್ರಾರಂಭವಾಗುವದು.

ಶ್ರೀಮನ್ಮಹಾರಾಜಾ ಚಾಮರಾಜೇಂದ್ರ ಒಡೆಯರ್ ಬಹದೂರ್ ಜಿ. ಸಿ. ಎಸ್. ಐ. ಯವರು ತಮ್ಮ ದಿವಾನರು ಮೊದಲಾದ ಪರಿಜನರೊಡನೆ ಈ ತಿಂಗಳ ೬ ನೇ ತಾರೀಖ್ ಶುಕ್ರವಾರದ ದಿನ ಡಾರ್ಜೀಲಿಂಗ್ ಎಂಬ ಪಟ್ಟಣಕ್ಕೆ ಪ್ರಯಾಣವಾದರು. ಇದೇ ತಿಂಗಳ ೯ ನೇತಾರೀಖಿನಲ್ಲಿ ಕಲ್ಕತ್ತೆಗೆ ವಾಪಸ್ ದಯಮಾಡಿ, ಉತ್ತರ ಇಂಡಿಯಾ ದೇಶ ಸಂಚಾರದ ಬಗ್ಗೆ ಅಲ್ಲಿಂದ ೧೮ ನೇ ತಾರೀಖಿನಲ್ಲಿ ಪ್ರಯಾಣಮಾಡಿ, ಆ ಪ್ರಾಂತದಲ್ಲಿ ನೋಡತಕ್ಕ ಭಾಗಗಳನ್ನೆಲ್ಲ ನೋಡಿಕೊಂಡು ಮುಂಬೈ ಮಾರ್ಗವಾಗಿ ಈ ತಿಂಗಳ ಆಖೈರೊಳಗಾಗಿ ತಮ್ಮ ರಾಜಧಾನಿಯಂ ಸೇರುವರೆಂಬ ಸುದ್ದಿ ವೃತ್ತಾಂತದ ಮೂಲಕ ತಿಳಿಯಬರುತಿದೆ.

ಅಳಲುಕಟ್ಟೆಯಿಂದ ಮೈಸೂರಿಗೆ ಕಾವೇರಿ ನಾಲೆಯನ್ನು ಹೊಸದಾಗಿ ತೆರುವದಕ್ಕಾಗಿ ನಡೆಸುತ್ತಲಿರುವ ಪ್ರಯತ್ನವನ್ನು ಕಳೆದ ವಾರದಲ್ಲಿ ಸೂಚಿಸಿದ್ದೆವಷ್ಟೆ. ಈಚೆಗೆ ಉಪಕ್ರಮವಾದ ಮತ್ತೊಂದು ಪ್ರಯತ್ನವನ್ನು ಇಲ್ಲಿ ಸ್ವಲ್ಪಮಟ್ಟಿಗೆ ತಿಳಿಸಬೇಕಾಗಿದೆ. ಕೆಲವು ಜನ ದೊಡ್ಡ ಮನುಷ್ಯರುಗಳು ನಾಲಾ ಕಳಗೆ ತರೀ ಸಾಗುವಳಿಗೆ ಬರಬಹುದಾದ ಸಮಸ್ತ ಜಮೀನನ್ನೂ ತಾವು ತಾವೇ ಕೊಂಡುಕೊಂಡು ಮುಂದೆ ಕೋಟೀಶ್ವರ ಪದವಿಗೆ ಬರಲನುಕೂಲವಾಗುವಂತೆ ಮಸಲತ್ ಮಾಡುತ್ತಲಿರುವ ಸಮಾಚಾರವು ಈಗ ನಮ್ಮ ಸ್ಮೃತಿಪಥಕ್ಕೆ ಬಂದಿರುವುದು. ಇಂತಾ ದೊಡ್ಡ ಮನುಷ್ಯರುಗಳು ಇನ್ನೇನು ಮಾಡಬೇಕೆಂದಿರುವರೆಂಬುದನ್ನು ಕೊಂಚ ನಿಧಾನಿಸಿ ನೋಡುವೆವು.—ಚಂ.

ಹವಾ ವಿಷಯದಲ್ಲಿ ವಿಶೇಷ ತಿಳಿಸತಕ್ಕದ್ದೇನೂ ಇಲ್ಲವು. ರಾತ್ರಿಕಾಲದಲ್ಲಿ ಚಳಿಯೂ ಮಂಜೂ ಬಲವಾಗಿದೆ. ಸೆಂಟ್ರಲ್ ಕೆರೆಯಿಂದ ದರ್ಬಾಂಬುಧಿ ಕೆರೆಗೆ ಬಿಡಲ್ಪಟ್ಟ ನೀರಿನ ಪೈಕಿ ಇದುವರಿವಿಗೆ ಒಂದಡಿ ನೀರು ಬತ್ತಿಹೋಯಿತು ಈಗ ಹಾಜರಿರುವ ನೀರು ಮುಂಗಾರಿಯ ವರಿವಿಗೆ ಬರುವ ಹಾಗಿದೆ. ಮರಳಿ ಮಿಲಿಟರಿ ಸ್ಟೇಷನ್ ಅಧಿಕಾರಿಗಳಲ್ಲಿ ಭಿಕ್ಷೆ ಬೇಡಬೇಕಾದ ಕಾಲ ಕೇವಲ ಸನ್ನಿಹಿತವಾಗಿರುವದು. ವಾಸಗೃಹಗಳ ಬಾವಿಗಳಲ್ಲಿ ಜಲಾಭಾವದಿಂ ಜನರು ಅನುಭವಿಸುವ ಕಷ್ಟವು ಹೇಳಲಶಕ್ಯವಾಗಿದೆ ಆಹಾರ ಪದಾರ್ಥಗಳ ಧಾರಣೆಗಳು ಇಳಿಯುವಂತಿಲ್ಲವು. ಪರಂತು ಹೆಚ್ಚುತಲಿವೆ. ಇದು ಹೀಗಿರುವಲ್ಲಿ ವರ್ತಕರಿಗಳ ಧಾರಣೆಗಳು ಒಂದಕ್ಕೆ ನಾಲ್ಕರಷ್ಟು ಜಾಸ್ತಿಯಾಗಿವೆ. ಇಂತಾ ದುರ್ದೆಶೆಗೆ ಬಡವರಲ್ಲವೆ ಗುರಿಯಾದವರು ?

ಮ್ಯುನಿಸಿಪಲ್ ಬೋರ್ಡಿನಲ್ಲಿ ಪ್ರತಿ ತಿಂಗಳಲ್ಲಿಯೂ ಮೆಂಬರುಗಳು ಸಭೆ ಸೇರಿ, ಎಲ್ಲರೂ ಒಪ್ಪಿ ರೆಜಲ್ಯೂಷನ್‌ಗಳನ್ನು ಮಾಡುತ್ತಲಿದ್ದರೆ, ಕೆಲವು ಜನ ಪ್ರೆಸಿಡೆಂಟರುಗಳು ತಮ್ಮ ಅಧಿಕಾರಬಲವನ್ನು ತೋರ್ಪಡಿಸುವದಕ್ಕಾಗಿ, ಅನಂತರ ಇಂತಾ ರೆಜಲ್ಯೂಷನ್‌ಗಳಲ್ಲಿ ತಮಗೆ ತೋರಿದಂತೆ ಬದಲಾವಣೆಗಳನ್ನು ಮಾಡಿಕೊಂಡು ಅನಂತರ ಗವರ್ನ್‌ಮೆಂಟಿಗೆ ಅದರ ಕಾಪಿಯನ್ನು ಕಳುಹಿಸುತ್ತಲಿದ್ದರು. ಈಗ ಗವರ್ನಮೆಂಟಿನವರು ಇದನ್ನು ತಿಳಿದು, ಬೋರ್ಡಿನ ಮೆಂಬರುಗಳು ಮೀಟಿಂಗಿನಲ್ಲಿ ಮಾಡಿಸಿದ ರೆಜಲ್ಯೂಷನ್‌ಗಳ ಮೇಲೆ ಪ್ರೆಸಿಡೆಂಟರಿಗೆ ಕೈಹಾಕುವದಕ್ಕೆ ಅಧಿಕಾರವಿಲ್ಲವೆಂತಲೂ, ಹಾಗೆ ಯಾವ ವಿಷಯವಾದರೂ ತಮಗೆ ಅಸಮರ್ಪಕವಾಗಿ ಕಂಡುಬಂದದ್ದಾದರೆ ಮತ್ತೊಂದು ಮೀಟಿಂಗಿನಲ್ಲಿ ಆ ವಿಷಯವನ್ನು ಚರ್ಚೆಗೆ ತರಬೇಕೆಂತಲೂ ವಿಧಾಯಕ ಮಾಡಿರುತ್ತಾರೆ.—ಚಂ.

## ಮೈಸೂರ್ ಶ್ರೀಮನ್ಮಹಾರಾಜಾ ಸರ್ಕಾರದ ಮುಜರಾಯ್ ಇಲಾಖಾ.

ಸನ್ ೧೮೯೩ನೇ ಇಸವಿ ಡಿಸೆಂಬರ್ ೧೮ ನೇ ಮಕಾಂ ಮುಜರಾಯ್ ೨೩೩—೮೨ನೇ ನಂಬರ್ ಪ್ರೊಸೀಡಿಂಗ್ಸ್

ಹುಕುಂ.—ಈ ಸಂಸ್ಥಾನದೊಳಗಣ ಮತ ಸಂಬಂಧವಾದ ಮಠಾಧಿಪತ್ಯಕ್ಕೆ ಇಸುಮನ್ನು ನಿಯಾಮಕ ಮಾಡುವ ವಿಷಯದಲ್ಲಿ ಘನವಂ ಹೊಂದಿರುವ ಶ್ರೀಮನ್ಮಹಾರಾಜರವರ ಅನುಮತಿಯಂ ಪೂರ್ವಭಾವಿಯಾಗಿ ಪಡೆಯುವ ಪುರಾತನ ವಾಡಿಕೆಯಂತೆ ಈಚೆಗೆ ಕೆಲವು ಸಂವತ್ಸರಗಳಿಂದ ಕೆಲವು ಸಂದರ್ಭಗಳೊಳು ನಡೆಸಲ್ಪಡಲಿಲ್ಲವೆಂದು ತಿಳಿಯಬರುತಿದೆ.

೨. ಪುರಾತನವಾದ ಈ ವಾಡಿಕೆಯು, ಬ್ರಿಟಿಷಿನವರ ರಾಜ್ಯಭಾರ ಕಾಲದಲ್ಲಿ ಸಹ, ಮಠಾಧಿಪತ್ಯಕ್ಕೆ ಜನರನ್ನು ಚುನಾಯಿಸುವ ಸಂದರ್ಭದೊಳು ಚೀಫ್ ಕಮಿಷನರವರ ಹುಕುಂಬಲ್ಯ ರಿಪೋರ್ಟ್ ಮಾಡುವವರ ಮೂಲಕ ಅನುಸರಿಸಲ್ಪಡುತ ಬಂತು.

೩. ಕೆಲವು ಸಂದರ್ಭಗಳಲ್ಲಿ ಆರೀತಿ ರಿಪೋರ್ಟ್ ಮಾಡದೆ ಹೋದದರಿಂದ, ಹಿಂದಿನ ನಡತೆಗಳಿಂದಲಾಗಲಿ, ವಿದ್ಯಾಹೀನತೆ ಮತ್ತು ಇತರ ಯೋಗ್ಯತೆಗಳಿಂದಲಾಗಲಿ ಜನರ ಪ್ರೀತಿ ಗೌರವಗಳಿಗೆ ಪಾತ್ರರಲ್ಲದೆ ಇರುವ ಜನರು ಗುರು ಪೀಠವಂ ಪಡೆಯುವದಕ್ಕೆ ಕಾರಣವಾಯಿತು,

೪. ಸರ್ಕಾರ್ ಸಹಾಯವಂ ಪಡೆಯುತಲಿರುವ ಮಠಗಳ ವಿಷಯದಲ್ಲಿ ಸದರೀ ವಾಡಿಕೆಯಂ ಆಚರಣೆಯಲ್ಲಿ ತರುವಣವು ಪ್ರಜೆಗಳ ಕ್ಷೇಮಾಭಿವೃದ್ಧಿಗೆ ಕಾರಣವಾಗಿರುವದೆಂದು ಶ್ರೀಮನ್ಮಹಾರಾಜಾ ಸರ್ಕಾರದವರು ಅಭಿಪ್ರಾಯಪಡುತ್ತಾರೆ.

೫. ಆದುದರಿಂದ ಈ ವಿಷಯವಂ ಕುರಿತು ಇದರಡಿ ಬರುವ ನಿಬಂಧನೆಗಳು ಈ ಸಂಸ್ಥಾನದೊಳಗಣ ವಿಶಿಷ್ಟ ಮಠಗಳಿಗೂ ತಿಳಿಸಲ್ಪಡತಕ್ಕದ್ದೆಂದು ಹುಕುಂ ಮಾಡಲ್ಪಟ್ಟಿರುತಿದೆ—

ನಿಬಂಧನೆಗಳು.

೧. ಭೂರೂಪವಾಗಿ ಯಾಗಲಿ ಅಥವಾ ದ್ರವ್ಯರೂಪವಾಗಿ ಯಾಗಲಿ ಸರ್ಕಾರದಿಂದ ಸಹಾಯವನ್ನು ಅಥವಾ ಅರಸರವರಿಂದ ಕೊಡಲ್ಪಟ್ಟ ಮರ್ಯಾದೆಗಳನ್ನು ಅನುಭವಿಸುತಲಿರುವ ಮಠಗಳಿಗೆ ಉತ್ತರಾಧಿಕಾರಿಯಂ ಚುನಾಯಿಸುವ ಪ್ರತಿ ಒಂದು ಸಂದರ್ಭದಲ್ಲೂ ಶ್ರೀಮನ್ಮಹಾರಾಜರವರ ಮಂಜೂರಾತಿಯಂ ಮುಜರಾಯ್ ಇಲಾಖೆ ಮೂಲಕ ಲಿಖಿತಮೂಲಕ ಪೂರ್ವಭಾವಿಯಾಗಿ ಪಡೆಯತಕ್ಕದ್ದಾಗಿರುತಿದೆ.

೨. ಯಾರಾದರೊಬ್ಬ ಗುರುವು ಆಕಸ್ಮಿಕ ಕಾಲಗತಿಯನ್ನೈದುವ ಸಂಭವ ಕಂಡುಬರುವಲ್ಲಿ ಸಾಧ್ಯವಾದ ಮಟ್ಟಿಗೆ ಒಂದು ಏರ್ಪಾಡಂ ಮಾಡುವದಕ್ಕಾಗಿ, ತನ್ನ ಕಾಲಾನಂತರ ತನ್ನ ಸ್ಥಾನಾಪನ್ನರಾಗುವದಕ್ಕೆ ಅರ್ಹರೆಂದು ಕಂಡುಬರುವ ಒಬ್ಬಿಬ್ಬರನ್ನು ಚುನಾಯಿಸಿ, ಅಂತವರ ಅರ್ಹತೆಯ ವಿಷಯದಲ್ಲಿ ಶ್ರೀಮನ್ಮಹಾರಾಜರವರ ಅಭಿಪ್ರಾಯವಂ ಪಡೆಯತಕ್ಕದ್ದು. ಗುರುಗಳವರು ಆಗ ಅವರ ಪೈಕಿ ಯೊಬ್ಬರನ್ನು ತಕ್ಕ ಕಾಲದಲ್ಲಿ ತಮ್ಮ ಸ್ಥಾನಕ್ಕೆ ಚುನಾಯಿಸಬಹುದು.

೩. ಗುರುಗಳವರು ಅರ್ಹರಾದ ಒಬ್ಬರ ಅಥವಾ ಜಾಸ್ತೀ ಜನರ ವಿಷಯದಲ್ಲಿ ಶ್ರೀಮನ್ಮಹಾರಾಜರವರ ಮಂಜೂರಾತಿಯಂ ಪಡೆಯದೆ ಹೋದಾಗ್ಯೂ, ಮತ್ತು ಅಕಸ್ಮಾತ್ ಮೃತಪಡುವಾಗ ಅಥವಾ ಮರಣಭಯ ಉಂಟಾದಾಗ, ತನ್ನ ಸ್ಥಾನಕ್ಕೆ ಒಬ್ಬರನ್ನು ಚುನಾಯಿಸಿ ಆಶ್ರಮವಂ ಕೊಡುವರಾದರೆ, ಅಂತಾ ನಿಯಾಮಕವು, ಸರ್ಕಾರದಿಂದ ಕೊಡಲ್ಪಡುವ ಭೂರೂಪವಾದ ಅಥವಾ ದ್ರವ್ಯರೂಪವಾದ ಸಹಾಯವಂ ಅನುಭವಿಸುವದಕ್ಕಾಗಿ, ಶ್ರೀಮನ್ಮಹಾರಾಜರವರ ಅಂಗೀಕಾರಕ್ಕೆ ವಿಷಯವಾಗಿರುವದಲ್ಲದೆ, ಸದರೀ ವಿಷಯದೊಳು ಯುಕ್ತಾಯುಕ್ತತೆಯಂ ಕುರಿತು ಯೋಚಿಸುವಲ್ಲಿ ಪ್ರಜೆಗಳ ಅಭಿಪ್ರಾಯಕ್ಕೂ ಚುನಾಯಿಸಲ್ಪಡತಕ್ಕವರ ಯೋಗ್ಯತೆಗೂ ಅನುಗುಣವಾಗಿ ನಡೆಸುವರು.

೪. ಉತ್ತರಾಧಿಕಾರಿಯಾಗಿ ಚುನಾಯಿಸಲ್ಪಡತಕ್ಕವರನ್ನು ಮಹಾರಾಜರವರು ಒಪ್ಪದೆ ಹೋಗುವಪಕ್ಷಕ್ಕೆ ಭೂರೂಪವಾಗಿ ಅದಾ ಗಸ್ತ್ಯವಾಗಿ ಕೊಡಲ್ಪಡುವ ಸರ್ಕಾರ್ ಸಹಾಯಕ್ಕೆ ನ್ನೂ ಮತ್ತು ಅರಸರವರ ಹುಕುಮಿನಮೇರೆ ಕೊಡಲ್ಪಟ್ಟಿರುವ ಅಥವಾ ಅನುಭವಿಸುವವರು ವ ಮಾಮೂಲ್ ಮರ್ಯಾದೆಗಳೂ ಬಿರಿದುಗಳೂ ವಾಪಸ್ ತೆಗದುಕೊಳ್ಳಲ್ಪಡುವವು.

ಎ. ಶ್ರೀನಿವಾಸಾಚಾರ್ಯ,

ಸೆಕ್ರೆಟರಿ.

### ಶ್ರೀ ವಿಷ್ಣು ಸದ್ಧರ್ಮ ಸಂವರ್ಧಿನೀ ಸಭಾ.

ಬೇಲೂಕೋಟೆ, ೩೦—೧೨—೯೩.

ಸನ್ ೧೮೯೩ ನೇ ಇಸವಿ ಡಿಸೆಂಬರ್ ೨೦ ನೇ ಬುಧವಾರ ಮಧ್ಯಾಹ್ನ ೨ ಘಂಟೆಯ ಲಾಗಾಯಿತು ೩ ಘಂಟೆಯ ವರಿವಿಗೂ ಮ್ಯುನಿಸಿಪಲ್ ಇಂಗ್ಲಿಷ್ ಸ್ಕೂಲಿನಲ್ಲಿ ಈ ಸಭಾ ಮೆಂಬರಿಗಳೂ ಮ|| ರಾ|| ಮುಜರಾಯ್‌ಸೂಪರಿನ್‌ಟೆಂಡೆಂಟರು ಮೊದಲಾದ ಅನೇಕ ದೊಡ್ಡ ಮನುಷ್ಯರೂ ಮೀಟಿಂಗ್ ಸೇರಿದ್ದರು.

೨. ಸಭಾ ಸೆಕ್ರೆಟರಿಯವರು ಮೀಟಿಂಗಿನ ಉದ್ದೇಶಗಳನ್ನು ತಿಳಿಸಿ ಮ|| ರಾ|| ಎ. ಶ್ರೀನಿವಾಸಾಚಾರ್ಯರವರು ಈದಿನ ಸಭೆಯಲ್ಲಿ ಅಗ್ರಾಸನಾಧಿಪತಿಗಳಾಗಿರಬೇಕೆಂದು ಎಲ್ಲರೂ ಪ್ರಾರ್ಥಿಸುವದಾಗಿ ಹೇಳಿದರು. ಮ|| ರಾ|| ಶ್ರೀನಿವಾಸಾಚಾರ್ಯರವರು ದಯೆಯೊಡನೆ ಅಗ್ರಾಸನವನ್ನಲಂಕರಿಸಿದರು, ಎಲ್ಲರೂ ಆನಂದಘೋಷವಂ ಮಾಡಿದರು.

೩. ಶ್ರೀಮಾನ್ ಸಂ|| ಪಾ|| ಅಸಿಸ್ಟೆಂಟ್ ಪ್ರಿಸಿಪಲ್ ಅಕ್ಕಾರಕನ್ನಿ ರಾಮಾನುಜಯ್ಯಂಗಾರ್ಯರು ಜ್ಞಾನವನ್ನೂ ಮತ್ತು ದೇವಾಲಯದ ಏರ್ಪಾಡನ್ನೂ ಕುರಿತು ಕನ್ನಡ ಭಾಷೆಯಲ್ಲಿ ಉಪನ್ಯಾಸ ಮಾಡಿದರು.

೪. ಅನಂತರ ಮೆ|| ಶಾಮಯ್ಯಂಗಾರ್ಯರು ಈ ಸಭೆಯು ಸ್ಥಾಪಿಸಲ್ಪಟ್ಟಿರುವ ಉದ್ದೇಶವನ್ನೂ ಆಲಾಗಾಯಿತು ಅಂದರೆ ೪—೧೦ ವರುಷಗಳಿಂದ ಸಭೆಯವರು ಮಾಡಿರುವ ಅಭಿವೃದ್ಧಿಯನ್ನೂ, ಈಗ, ಮುಜರಾಯ್ ಇಲಾಖೆಯಿಂದ ಸಭೆಗೆ ಆಗಬೇಕಾದ ಸಹಾಯಗಳನ್ನೂ ಕುರಿತು ಪ್ರಸ್ತಾಪಿಸಿ ಮ|| ರಾ|| ಮುಜರಾಯ್ ಸೂಪರಿಂಟೆಂಡೆಂಟರವರಿಗೆ ಸಭೆಯವರ ಪರಫ ಒಂದು ವಿಜ್ಞಾಪನಪತ್ರಿಕೆಯನ್ನು ಒಪ್ಪಿಸಿದರು,

೫. ಅದಕ್ಕೆ ಸಭಾನಾಯಕರು, ಪ್ರಸಿದ್ಧರಾದ ಲಕ್ಕಾರಕನ್ನಿ ನರಸಿಂಹಾಚಾರ್ಯರ ಮಕ್ಕಳು ಮಾಡಿದ ಉಪನ್ಯಾಸವು ಬಹು ಶ್ರಾವ್ಯ ಮತ್ತು ಪ್ರಯೋಜನಕರವಾಗಿದೆಯೆಂತಲೂ, ಇಂತಾ ಸಭೆಯು ಬಹುಪ್ರಾಮುಖ್ಯವಾದ್ದೆಂತಲೂ, ಪೂರ್ವಾಚಾರ್ಯರುಗಳ ಕಾಲದಲ್ಲಿ ಸಹ ನಮ್ಮವರು ಇಂತಾ ಸಭೆಗಳನ್ನು ಮಾಡಿಕೊಂಡು ನಾನಾವಿಧ ಪ್ರಯೋಜನಗಳನ್ನು ಹೊಂದುತಿದ್ದರೆಂಬದಕ್ಕೆ ದಾಖಲೆಯಾಗಿ ಈಗಲೂ ಶ್ರೀರಂಗದಲ್ಲಿ ನಂಬಿಳ್ಳೈ ಗೋಷ್ಠಿಯೆಂತಲೂ, ಕಂಚಿಯಲ್ಲಿ ಅಮ್ಮಾಳ್ ಗೋಷ್ಠಿಯೆಂತಲೂ ಪ್ರಸಿದ್ಧವಾಗಿರುತ್ತೆ. ಆದಕಾರಣ ಇಂತಾ ಸಭೆಗಳನ್ನು ಅಭಿವೃದ್ಧಿ ಪಡಿಸತಕ್ಕದ್ದು ಬಹು ಮುಖ್ಯವಾಗಿರುತ್ತೆ. ಈ ಸದಾನಂದವರ್ಧನೀ ಸಭೆಗೆ ಇಲ್ಲಿ ಇರುವವರಲ್ಲಿ ಇದುವರಿವಿಗೆ ಸೇರದೆ ಇರುವವರೆಲ್ಲರೂ ಮೆಂಬರುಗಳಾಗಿ ಸೇರಬೇಕೆಂದು ಸೂಚಿಸಿದರಲ್ಲದೆ ತಾವು ಸಹ ಸಂಘದ ಪ್ರೋತ್ಸಾಹಕರಾಗಿರುತ್ತೇವೆಂದು ಅಪ್ಪಣೆ ಕೊಟ್ಟು ಒಂದು ನೂರು ರೂಪಾಯಿ ದೊನೇಷನ್ ಯೆಂಬ ಸಹಾಯ ದ್ರವ್ಯವನ್ನು ಕೊಡುವದಾಗಿ ವಾಗ್ದಾನವಂ ಲೇಖನಗೊಳಿಸಿದರು, ಮತ್ತು ಸಭಿಕರ ಪರದ ಸೆಕ್ರೆಟರಿಯವರು ಒಪ್ಪಿಸಿದ ವಿಜ್ಞಾಪನ ಪತ್ರಿಕೆಯೊಳು ಕೇಳಿಕೊಂಡಿರುವ ಸಹಾಯಗಳ ಪೈಕಿ ಸಾಧ್ಯವಾದಷ್ಟು ಮಟ್ಟಿಗೆ ಕೊಡುವ ವಿಷಯದಲ್ಲಿ ಗವರ್ನಮೆಂಟಿಗೆ ಶಿಫಾರಸ್ಸು ಮಾಡುತ್ತೇವೆ ಯೆಂದು ಅಪ್ಪಣೆ ಕೊಟ್ಟರು.

೬. ಕಾತ್ವೆಲ್ಲ ಮ|| ರಾ|| ಸೀತಾರಾಮರಾಯರವರು ಈ ಸಭಾಭಿವೃದ್ಧಿ ವಿಷಯದಲ್ಲಿ ತಾವು ಸದಾ ಪ್ರೋತ್ಸಾಹಕರಾಗಿರುವೆವೆಂತಲೂ, ಪ

ವಿನ್ಮಿಂದಾಗಬಹುದಾದ ಸಹಾಯಗಳನ್ನು ಮಾಡುವದಾಗಿಯೂ, ತಾವು ಸದ ಸಭಾ ಮೆಂಬರಾಗಿರುವ ಬಗ್ಗೆ ಕೂಡಲೆ ಲಿಖಿತ ಬರೆಯುವಂತೆಯೂ, ಈದಿನದ ಸನ್ನಿವೇಶವು ಕೇವಲ ಮನೋಹರವಾಗಿದೆಯೆಂತಲೂ ಹರ್ಷಗೊಂಡರು.

೬ ಆಮೇಲೆ ಮ|| ರಾ|| ಅಮಲ್ದಾರ್ ಎಂ. ಕೃಷ್ಣಯ್ಯಂಗಾರ್ರವರು ಸಹ ಬಹಳವಾಗಿ ಅಭಿಮಾನಿಸಿ ತಾವು ಮೆಂಬರಾಗಿರುವಂತೆಯೂ, ಮಾಹೆಯಾನಾ ೧ ರೂಪಾಯಿ ಚಂದಾ ಮೂಲಕ ದ್ರವ್ಯ ಸಹಾಯ ಮಾಡುವದಲ್ಲದೆ ಸಾಧ್ಯವಾದಷ್ಟು ಸಭೆಯಾಭಿವೃದ್ಧಿಯ ವಿಷಯದಲ್ಲಿ ಅಭಿಮಾನಿಗಳಾಗಿರುವಂತೆಯೂ ಅಪ್ಪಣೆಕೊಟ್ಟರು. ಹಾಗೆಯೇ ಫ್ರಿಂ ಸ್ಕೂ ತುಪ್ಪನ್ನಯ್ಯಂಗಾರ್ರವರು ತಾವು ಮೆಂಬರಾಗಿರುವ ಬಗ್ಗೆ ತಮ್ಮ ಅಭಿಮತ ಸ್ಥೈರ್ಯ ಮಾಡುವದರ ದ್ವಾರಾ ಎಲ್ಲರ ಮನಸ್ಸನ್ನೂ ಸಂತೋಷಪಡಿಸಿದರು.

೮. ಅನಂತರ ಸಭಾನಾಯಕರು ಅತ್ಯಂತ ಕೃಪೆಯಿಂದ ಅಗ್ರಾಸನವನ್ನಲಂಕರಿಸಿ ಈ ಸ್ಥಳಿಕರೆಲ್ಲರ ಮನಸ್ಸನ್ನೂ ಸಂತೋಷಪಡಿಸಿದ್ದಕ್ಕೋಸ್ಕರವೂ, ಸರ್ವವಿಧದಲ್ಲೂ ಅವರ ಪಾಲನೆಗೆ ಒಳಪಟ್ಟು ಅವರನ್ನೇ ನಂಬಿ ಜೀವಿಸತಕ್ಕವರಾದಾಗ್ಯೂ ತಾವು ಮಾಡುವ ಸರ್ವವಿಧ ಏರ್ಪಾಡುಗಳಿಗೂ ಪೂರ್ಣಸಹಾಯಕರಾಗಿಯೂ ಸಲಹಾದಾರರಾಗಿಯೂ ಇರಬೇಕೆಂಬದೇ ಮೊದಲಾದ ಗಂಭೀರ ವಾಕ್ಯಗಳಾದ ರತ್ನಗಳಲ್ಲಿ ಕೋರ್ಪಡಿಸಿದ ಆಂತರವಾದ ಪ್ರೀತ್ಯಭಿಮಾನಗಳಗೋಸ್ಕರವೂ ಸಭೆಯಲ್ಲಿ ನೆರೆದಿದ್ದವರೆಲ್ಲರೂ ಸಭಾನಾಯಕರಾದ ಮ|| ರಾ ಎ ಶ್ರೀನಿವಾಸಾಚಾರ್ಯರವರಿಗೆ ವಂದಿಸುತ್ತಾರೆಂದು ವಿಜ್ಞಾಪಿಸಿ ಸಭಾ ಸೆಕ್ರಟರಿ ಮ|| ಶ್ಯಾಮಯ್ಯಂಗಾರ್ರವರು ಅಗ್ರಾಸನಾಧಿಪತಿಗಳಿಗೂ ಮ|| ಸೀತಾರಾಮರಾಯರವರಿಗೂ ಮ|| ಅ. ಕೃಷ್ಣಯ್ಯಂಗಾರ್ರವರಿಗೂ ಪುಷ್ಪಹಾರಗಳನ್ನು ಹಾಕಿದರು. ಕೂಡಲೆ ಕರಸ್ತಾಳನಾದ ಜಯನಿನಾದದೊಡನೆ ಯೆಲ್ಲರೂ ಹೊರಡಲು ರಾಜಾಶೀರ್ವಾದಪೂರ್ವಕ ಸಭೆ ಬರಖಾಸ್ತಾಯಿತು.

ಅಗ್ರಾಸನಾಧಿಪತಿಗಳ ಅಪ್ಪಣೆಮೇರೆ,
ಎಂ. ಜಿ. ಶಾಮಯ್ಯಂಗಾರ್,
ಸಭಾ ಸೆಕ್ರೆಟರಿ.

## THE MYSORE GAZETTE.
## ಮೈಸೂರು ಗಜೆಟ.

ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದ್ದೂರವರ ಸರ್ಕಾರದಿಂದ ಹೊರಡಿಸಿದ ಇಷ್ತಿಹಾರ ನಾಮೆಗಳು

ತಾ|| ೨೬ನೇ ಡಿಸಂಬರ್ ೧೮೯೨

ನಂ|| ೯೦೮೩. ಡಿ. ೨೦೧೩-೯೨—ಚಿತ್ರದುರ್ಗ ತಾಲ್ಲೂಕು ಅಮಲ್ದಾರರು ಗುಂಡಪ್ಪನವರು ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು ಒಂದು ತಿಂಗಳು ೨೮ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

೨. ಹೊಸದುರ್ಗದ ಡೆಪ್ಯುಟಿ ಅಮಲ್ದಾರ್ ರಾಮಣ್ಣನವರು, ಗುಂಡಪ್ಪನವರು ಪ್ರಿವಿಲೇಜ್ ರಜಾಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಚಿತ್ರದುರ್ಗ ತಾಲ್ಲೂಕು ಅಮಲ್ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲೀ ನೋಡುವಂತೆ ನೇಮಕರಮಾಡಲ್ಪಟ್ಟಿರುತ್ತಾರೆ.

೩ ಚಿತ್ರದುರ್ಗ ಡಿಸ್ಟ್ರಿಕ್ಟು ಆಫೀಸ್ ಜನರಲ್ ಹೆಡ್ ಮುನಿಷಿ ಕೇಶವಯ್ಯನವರು, ರಾಮಣ್ಣನವರು ಬೇರೆ ಕೆಲಸದಮೇಲೆ ಗೈರ್ಹಾಜರಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವವರೆನಕ ಹೊಸದುರ್ಗದ ಡೆಪ್ಯುಟಿ ಅಮಲ್ ದಾರ್ ಮತ್ತು ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡುವಂತೆ ನೇಮಕರಮಾಡಲ್ಪಟ್ಟಿರುತ್ತಾರೆ.

ನಂ|| ೯೦೮೯. ಡಿ. ೨೧೯೯-೯೨—ಕೋಲಾರ ಡಿಸ್ಟ್ರಿಕ್ಟು ಜನರಲ್ ಅಸಿಸ್ಟೆಂಟ್ ಕಮಿಷನರ್ ಮ|| ಕೆ ಎಸ್. ದೊರೆಸಾಮಿ ಅಯ್ಯರವರು, ಕ್ರಿಮಿನಲ್ ಪ್ರೊಸೆಡ್ಯೂರ್ ಕೋಡ್ ೧೨ನೇ ಸೆಕ್ಷನ್ ಅನುಸರಿಸಿ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳೂ, ಸದರೀ ಕೋಡ್ ೩೫೭ನೇ ಸೆಕ್ಷನ್ ಅನುಸರಿಸಿ ಸಾಕ್ಷಿಗಳ ಸಾಕ್ಷ್ಯವನ್ನು ಸ್ವಹಸ್ತೂರ್ ಇಂಗ್ಲಿಷ್ ಭಾಷೆಯಲ್ಲಿ ತೆಗೆದುಕೊಳ್ಳುವ ಅಧಿಕಾರವೂ ಕೊಡಲ್ಪಟ್ಟಿರುತ್ತಾರೆ

ನಂ|| ೯೦೯೧. ಡಿ. ೩೦೮-೯೨—ಬೆಂಗಳೂರು ಸಬಾರ್ಡಿನೇಟ್ ಜಡ್ಜಿಯವರಾದ ಮ|| ಎಚ್ ವಿ ನಂಜುಂಡಯ್ಯ, ಎಂ ಎ. ಬಿ. ಎಲ್. ಯವರು, ಸನ್ ೧೮೯೨ನೇ ಇಸವಿ ನವಂಬರ್ ೨೬ನೇ ಮುರ್ಕುಂ ೬೧೬೯—೧ ೧೫೧೨ ನೇ ನಂಬರ್ ಇಷ್ತಿಹಾರನಾಮೆಯ ಮೂಲಕ ಕೊಡಲ್ಪಟ್ಟ ರಜೆ ಪೈಕಿ ೪೬ ದಿನಗಳು ಮಾತ್ರ ಉಪಯೋಗಿಸಿಕೊಂಡಿರುತ್ತಾರಾಗಿ, ಅದರ ಪೈಕಿ ಉಳಿದ ಅಂದರೆ ೧೪ ದಿನಗಳು ಇದರಿಂದ ರದ್ದು ಮಾಡಲ್ಪಟ್ಟಿರುತ್ತದೆ.

೨೩ನೇ ಡಿಸೆಂಬರ್, ೧೮೯೨.

ನಂ|| ೯೩೫೪ ಡಿ. ೮೬-೯೨—ಕಡೂರ್ ಡಿಸ್ಟ್ರಿಕ್ಟು ಜನರಲ್ ಅಸಿಸ್ಟೆಂಟ್ ಕಮಿಷನರ್ ಮ|| ಆರ್ ಬಿ. ಕೃಷ್ಣಮುರವರು ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ ೧೨ ನೇ ಸೆಕ್ಷನ್ ಅನುಸರಿಸಿ, ಹುಂಗಾಮಿ ತರೀಕ್ ಮೂರು ತಿಂಗಳ ಕಾಲ, ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ

ನಂ ೯೩೫೫ ಡಿ. ೮೬-೯೨—ಅಸಿಸ್ಟೆಂಟ್ ಕಮಿಷನರ್ ಮ ಕೆ ರಾಮಸ್ವಾಮಯ್ಯಂಗಾರ್ರವರು, ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ ೧೨ನೇ ಸೆಕ್ಷನ್ ಅನುಸರಿಸಿ ಹುಂಗಾಮಿ ತರೀಕ್ ಮೂರು ತಿಂಗಳ ಕಾಲ ೧ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ

೨೪ನೇ ಡಿಸೆಂಬರ್, ೧೮೯೨

ನಂ|| ೯೩೩೦ ಡಿ. ೨೬-೯೨—ಮೈಸೂರು ಅಡಿಷನಲ್ ಮುನಸಿಫ್ ಮ|| ಎ. ವೆಂಕಟರಾಯರವರು, ೪ನೇ ಕ್ಲಾಸ್ ಅಸಿಸ್ಟೆಂಟ್ ಕಮಿಷನರಾಗಿ ನೇಮಕರಮಾಡಲ್ಪಟ್ಟು, ಮ|| ನಂಜನರಾಯರವರ ಗೈರ್ಹಾಜರೀ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ಜನರಲ್ ಡ್ಯೂಟಿಯ ಬಗ್ಗೆ ಹಾಸನ ಡಿಸ್ಟ್ರಿಕ್ಟಿಗೆ ನಿಯಮಿಸಲ್ಪಟ್ಟಿರುತ್ತಾರೆ. ಕೂಡಲೇ ಕೆಲಸದಮೇಲೆ ಹಾಜರಾಗತಕ್ಕದ್ದು.

೨೬ನೇ ಡಿಸೆಂಬರ್, ೧೮೯೨

ನಂ ೯೪೩೩ ಡಿ. ೨೪೯೯—ಹಾಸನ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮಿಷನರ್ ಮ|| ಪಿ. ವೆಂಕಟರಾಯರವರು, ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ ೧೨ ನೇ ಸೆಕ್ಷನ್ ಅನುಸರಿಸಿ, ೧ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುವದಲ್ಲದೆ, ಐದನೇ ಕೋಡ ೪ನೇ ಷೆಡ್ಯೂಲಿನಲ್ಲಿ ನಿರ್ದೇಶಿಸಲ್ಪಟ್ಟಿರುವ ಜಾಸ್ತೀ ಅಧಿಕಾರಗಳ ಪೈಕಿ ಇದರಡಿ ತಿಳಿಸಲ್ಪಡುವವು ವಿನಾ ಉಳಿದ ಅಧಿಕಾರಗಳೆಲ್ಲವು ಕೊಡಲ್ಪಟ್ಟಿರುತ್ತಾರೆ.

(೧೦) ಪೂರ್ವ ವಿಚಾರಣೆ ಮಾಡುವ ಅಧಿಕಾರ (ಸೆಕ್ಷನ್ ೨೬೦).

(೧೧) ೨ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರುಗಳು ವಿಧಿಸುವ ದಂಡನೆಯ, ಮೇಲೆ ಅಪೀಲ್ ಹಿಡಿಯುವ ಅಧಿಕಾರ (ಸೆಕ್ಷನ್ ೪೦೭).

೨ ಮೇಲ್ಕಂಡ ವೆಂಕಟರಾಯರವರು ಐದನೇ ಕೋಡ ೩೫೭ನೇ ಸೆಕ್ಷನ್ ಅನುಸರಿಸಿ, ಸಾಕ್ಷಿಗಳ ಸಾಕ್ಷ್ಯವನ್ನು ಸ್ವಹಸ್ತೂರ್ ಇಂಗ್ಲಿಷ್ ಭಾಷೆಯಲ್ಲಿ ತೆಗೆದುಕೊಳ್ಳುವ ಅಧಿಕಾರಗಳು ಸಹ ಕೊಡಲ್ಪಟ್ಟಿರುತ್ತಾರೆ.

ನಂ|| ೯೪೦೧. ಡಿ. ೧೬೨-೯೨—ಹಾಸನ ಡಿಸ್ಟ್ರಿಕ್ಟು ಪೋಲೀಸ್ ಸೂಪರಿಂಟೆಂಡೆಂಟರಾದ ಮ|| ಜೆ ಡಬ್ಲ್ಯು ಸ್ಮಿತ್ ಯವರು ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು ೩ ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

೨೯ನೇ ಡಿಸಂಬರ್, ೧೮೯೨

ನಂ|| ೯೨೦೧. ಡಿ. ೫೮೩—ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ ೧೨ನೇ ಸೆಕ್ಷನ್ ಅನುಸರಿಸಿ ಮಧುಗಿರಿ ಮುನ್ಸಿಫ್ ಮ|| ಬಸವಾರಾಧ್ಯರವರು, ಇದರಿಂದ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

## SUMMARY OF NEWS.
## ವೃತ್ತಾಂತ ಸಂಗ್ರಹವು.

ಫ್ರೆಡರ್ ಕ್ಲಿ ಸಾಹಿಬ ಕೊಂಬಾ ಕಾಳೆ ಎಂಬವನೊಬ್ಬನು ಜೆಸ್ಸಲೆ ಹೆಂಗಸರ ಚಿತ್ರವನ್ನು ಗೇಟಿನಲ್ಲಿ ಮಾರಿದ್ದರಿಂದ ಅವನಿಗೆ ಮ್ಯಾಜಿಸ್ಟ್ರೇಟರು ೨೦ ರೂಪಾಯಿ ದಂಡ ಹಾಕಿದರು —ಕೆನಾಡಿಯನ ವೃತ್ತ

ಚಿಕ್ಕವರ ಹೆಂಗ್ ರಾಜಾರ ಮಿಸಿಂಗ್ ಎಂಬವನು ಆತನು ಹಾದರಿಸಿದ್ದಿರುವ ಲಂಡನ್ ಕಾಲೋನಿಯಲ್ಲಿ ... ರ ಸುಮಾರು ೨೦೦ ರೂಪಾಯಿ ಬೆಲೆಯ ಒಂದು ರತ್ನವನ್ನು ... ಪ್ರದರ್ಶನಕ್ಕೆ ಕಳುಹಿಸುವದಕ್ಕೋಸ್ಕರ ಮುಂಬಯಿಗೆ ತಂದಿರುತ್ತಾನೆ ಆದರ ಬೆಲೆ ಅದರ ಸುತ್ತಲೂ ... ಒಂದು ಸಂಗಜವನ್ನು ಬಹು ಚಮತ್ಕಾರವಾಗಿ ರಚಿಸಿರುತ್ತಾನೆ

ವಿಚಿತ್ರವಿವಾಹವು—ಒಬ್ಬ ೬೦ವರ್ಷದ ವೃದ್ಧ ಪುರುಷನು ಒಬ್ಬ ೧೮ ವರ್ಷದ ತರುಣ ಸ್ತ್ರೀಯಳ ಕೂಡೆ ವಿವಾಹವಾಗಿಕೊಳ್ಳುವದರಲ್ಲಿ ಪ್ರವರ್ತಕನಾಗಿದ್ದನು ಈ ವಿವಾಹದ ಸಂಗತಿಯು ಬಹಳ ವಿಲಕ್ಷಣವಾದದ್ದು ಈ ಹುಡುಗಿಯು ... ಆ ಸ್ತ್ರೀಯು ... ಒಂದು ದಿವಸ ಅವನು ಈ ಹುಡುಗಿಯ ... ಒಂದು ಸಂರಕ್ಷಣೆ ಮಾಡಿದನು ಮುಂದೆ ಆ ಹುಡುಗಿಗೆ ... ಅವನ ... ವಿಷಯ ... ಸತ್ಯವೃತ್ತ

ಬರೋಡೆಯ ಮಹಾರಾಜ ಸಯಾಜಿರಾವ್ ಗಾಯಕವಾಡ ... ಅವರ ಈಗ ಅವರ ವಾಕ್ಯ ... ಅನೇಕ ... ದಿನದಿನಕ್ಕೆ ಕೆಡುತ್ತ ... ಅವರ ಪ್ರಕೃತಿಯನ್ನು ... ಅನೇಕ ಡಾಕ್ಟರರ ಸಮಾಲೋಚನೆ ಗತ್ತು, ಮತ್ತು ... ಸಂಸ್ಥಾನಿಕರು ಅವರ ಸಮಾಚಾರ ... ಸಮಾಚಾರವು ಕಳುಹಿಸಲ್ಪಟ್ಟಿರುತ್ತದೆ ... ದಿನದ ... ವರ್ತಮಾನವು ಹುಟ್ಟುತ್ತದೆ ... ಸ್ವಾಗತಕ್ಕೋಸ್ಕರ ... ಜನಸಮುದಾಯವು ಕೂಡುವದು.—ಸತ್ಯವೃತ್ತ.

ಘೋರ ಪಲ್ಲಿಯ ಒಬ್ಬ ಕಳ್ಳನು ೫ ರೂಪಾಯಿ ಕೊಟ್ಟು ಒಂದು ಆಕಳನ್ನು ಕೊಂಡುಕೊಂಡು ಅದು ... ಹೆಚ್ಚು ಬೆಲೆಗೆ ಮಾರಲು ... ಕಟುಕನು ಮುಂದೆ ಆಕಳು ಹಿಂದೆ ಈ ಪ್ರಕಾರ ಹೋಗುತ್ತಿರಲು ಕಟುಕನಿಗೆ ... ಅಗ್ಗ ಆ ಗೋವು ... ಓಡಿಹೋಗಿ ... ಅನಂತರ ಆ ಕಟುಕನು ಅದನ್ನು ... ಕಮಿಷನರ ಕಡೆಗೆ ಅರ್ಜಿ ಮಾಡಿದನು. ... ಈ ಗೋವು ... ಪೋಸ್ಟ್ ಮಾಸ್ತರರು ... ಆಕಳು ... ತಿಂದು ... ತಿಳಿದೆ. ... ಧ್ಯಾನದಲ್ಲಿರುವ ... —ರಾಜಹಂಸ

## ರಾಷ್ಟ್ರೀಯ ಸಭೆಯನ್ನು ಸ್ಥಾಪಿತ ಪಡಿಸುವ ಬಗೆ ಯೇನ ?

ಈ ವರುಷದ ರಾಷ್ಟ್ರೀಯ ಸಭೆಯ ಮುಂದೆ ಅನೇಕ ಮಹತ್ವದ ವಿಷಯಗಳು ಚರ್ಚಿಸಲ್ಪಡತಕ್ಕವಾಗಿರುತ್ತವೆ. ಇವುಗಳಲ್ಲಿ ರಾಷ್ಟ್ರೀಯಸಭೆಯನ್ನು ಸ್ಥಿರವಾಗಿ ಪಡಿಸಲಿಕ್ಕೆ ಏನು ಉಪಾಯ ಮಾಡಬೇಕೆಂಬದು ಮುಖ್ಯವಾಗಿದೆ. ಈ ಮಹಾಸಭೆಯನ್ನು ಪ್ರತಿವರುಷ ಕೂಡಿಸಲಿಕ್ಕೆ ಅಡ್ಡಬರುವ ಆತಂಕಗಳಲ್ಲ ಅದಕ್ಕೆ ತಗಲುವ ಅದ್ಭುತ ಖರ್ಚು ಒಂದಾಗಿದೆ ಯಾವ ಪ್ರಾಂತದವರು ಈ ಸಭೆಯನ್ನು ಕೂಡಿಸುವ ಜವಾಬ್ದಾರಿಯನ್ನು ಅಂಗೀಕರಿಸುತ್ತಾರೋ ಅವರಿಗೆ ಈ ಅದ್ಭುತ ಖರ್ಚು ಬಹಳ ಹೊರೆಯಾಗಿ ಕಾಣುತ್ತದೆ ... ರಾಷ್ಟ್ರೀಯ ಸಭೆಯನ್ನು ಕೂಡಿಸುವದೆಂದರೆ ಜನರು ನಿಜವಾಗಿ ದೊಡ್ಡ ಬಹುಮಾನವೆಂದೆಣಿಸುತ್ತಾರೆ. ಮತ್ತು ಈ ಬಹುಮಾನವನ್ನು ಪಡೆಯಲಿಕ್ಕೆ ಮನಃಪೂರ್ವಕವಾದ ಉತ್ಸುಕತೆಯುಳ್ಳವರಾಗಿಯೂ ಇರುತ್ತಾರೆ ಆದರೆ ಈ ಅದ್ಭುತ ಖರ್ಚು ನೋಡಿದರೆ ರಾಷ್ಟ್ರೀಯ ಸಭೆಯಂತಹ ... ಅಲ್ಲಿವರೆಗೆ ... ರಾಷ್ಟ್ರೀಯ ಸಭೆಯು ... ಜನರು ಪ್ರತಿನಿಧಿಗಳನ್ನು ಆರಿಸಲಿಕ್ಕೂ ಪ್ರತಿನಿಧಿಗಳು ರಾಷ್ಟ್ರೀಯಸಭೆಗೆ ಹೋಗಲಿಕ್ಕೂ ಬಹಳ ಸಂತೋಷಪಡುತ್ತಾರೆ ಆದರೆ ಯಾವ ಪ್ರಾಂತದವರು ... ರಾಷ್ಟ್ರೀಯ ಸಭೆಯ ಖರ್ಚಿನ ಬಗ್ಗೆ ... ಲಕ್ಷ ರೂಪಾಯಿ ಎತ್ತುವಳಿ ಮಾಡಲಿಕ್ಕೆ ... ಈ ಖರ್ಚು ... ಅನೇಕರು ಇದ್ದಾರೆ ... ರಾಷ್ಟ್ರೀಯ ಸಭೆಯ ... ಆತಂಕವು ಖರ್ಚಿನ ... ರಾಷ್ಟ್ರೀಯ ಸಭೆಯ ... ಈ ಸಭೆಯ ... ಸಂಸ್ಕೃತ ... ವರುಷ ... ಜನರು ... ಪ್ರತಿನಿಧಿಗಳನ್ನು ... ಪ್ರತಿನಿಧಿಗಳು ... ಮಾಡಿದರು. ಮುಂದಿನ ವರುಷ ಮದ್ರಾಸಿನವರು ಪ್ರತಿನಿಧಿಗಳು ... ಸಭಾಮಂಟಪವನ್ನು ... ಈ ಪ್ರಕಾರ ಒಂದು ಪ್ರಾಂತದವರಿಗಿಂತಲೂ ಇನ್ನೊಂದು ಪ್ರಾಂತದವರು ... ವಿಷಯದಲ್ಲಿ ತಮ್ಮ ತಮ್ಮೊಳಗೆ ಸ್ಪರ್ಧಿಸಿಕೊಂಡಂತೆ ವರುಷ ವರುಷ ... ರಾಷ್ಟ್ರೀಯ ಸಭೆಯನ್ನು ತಮ್ಮ ಪ್ರಾಂತದಲ್ಲಿ ಕೂಡಿಸು ... ಅದ್ಭುತ ಖರ್ಚಿನ ... ಸಭಾಮಂಟಪವೇ ... ಮುಂದೆ ಯಾವ ಪ್ರಾಂತದಲ್ಲಿ ಸಭೆ ಕೂಡಿಸುವದು ... ಖರ್ಚಿನ ವಿಷಯದಲ್ಲಿ ... ಗುಣವಾಯಿತು, ಮತ್ತು ಸಭೆ ಕೂಡಿಸುವ ಜವಾಬ್ದಾರಿ ... ದ ಮಂಟಪದ ... ಹೀಗೆ ಸಹಿಸಿದರೆ ಯಾವ ಪ್ರಾಂತದವರು ಸಭೆ ಕೂಡಿಸುವದು ... ಈ ಬಾಗದಲ್ಲಿ ಕಲಕತ್ತೆಯ ಒಂದು ವರ್ತಮಾನ ಪತ್ರವು ... ಸಭೆ ಕೂಡಿಸುವ ... ಇನ್ನು ಮುಂದೆ ಈ ಸಭೆಯನ್ನು ... ಮುಖ್ಯ ಪಟ್ಟಣವಾದ ಕಲಕತ್ತೆಯಲ್ಲಿಯೇ ... ಕೂಡಿಸುವ ... ಯಾಕಂದರೆ ... ಈ ಸಭೆಯ ... ರಾಷ್ಟ್ರೀಯ ಸಭೆಯು ... ಪ್ರತಿನಿಧಿಗಳು ಕೊಡತಕ್ಕ ... ರೂಪಾಯಿ ... ಅಗತ್ಯ ... ಮತ್ತು ಸಭೆಯು ಸುಲಭವಾಗಿ ... ಸಭೆಗೆ ಹೋಗತಕ್ಕ ... ಸಂಖ್ಯೆಯನ್ನು ... ಮಾಡುವದು ಉಚಿತವು. ಈ ಸೂಚನೆಗಳು ... ಜನರೂ ರಾಷ್ಟ್ರೀಯ ಸಭೆಯ ... ವಿಚಾರ ಮಾಡತಕ್ಕದ್ದು ... ಸು

BANGALORE—Printed and published at the KARNATIC PRESS, No 40, HOSPITAL ROAD, PETTA—1893

# ಕರ್ಣಾಟಕ ಪ್ರಕಾಶಿಕಾ

# THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning.**

ಪ್ರಜಾನುವಿವಿಧಪ್ರವೃತ್ತ್ಯುದಗಮಾರ್ಥಂ ಕರ್ಣಾಟಕಪ್ರಕಾಶನವರಾಭಿದಾಪ್ರಥಿತಸಾಹಿತೀಕೋಭಿಕಾ ||ಮ್ಯಗಾಂತಹಿತವಾಸರನಿಹಿತಮುದ್ರಣಾಸಜ್ಜನ್ಯೈರ್ದ್ವಿಪಾಸುಗರಿಷ್ಠಾಪ್ರಕಾಶಿತತಿಮಾನಸಂಸುಮುದಂ ||

Vol. XX.] BANGALORE:—MONDAY, JANUARY 16, 1893. [No. 2.

ಸಂಪುಟ ೨೦.] ಬೆಂಗಳೂರು:—ಸರ್ ೧೮೯೩ ನೇ ಇಸವಿ ಜನವರಿ ೧೬ ನೇ ತಾರೀಖ್ ಸೋಮವಾರ. [ಸಂಚಿಕೆ ೨.


## ಕರ್ಣಾಟಕ ಪ್ರಕಾಶಿಕಾ.

### ಪತ್ರಿಕೆಯ ಚಂದಾ ದರಗಳು.

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

| | ಸ್ಥಳದವರಿಗೆ. | ಪರಸ್ಥಳದವರಿಗೆ. |
|---|---|---|
| ಸಾಲ್ ೧ಕ್ಕೆ ... | ...6—0—0 | 8—0—0 |
| 6 ತಿಂಗಳಿಗೆ .. | ...3—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

| | ಸ್ಥಳದವರಿಗೆ. | ಪರಸ್ಥಳದವರಿಗೆ. |
|---|---|---|
| ಸಾಲ್ಗೆ ... ... | 3—0—0 | 4—0—0 |
| 6 ತಿಂಗಳಿಗೆ ... .. | 1—12—0 | 2—8—0 |

ಈ ಪತ್ರಿಕೆಗೆ ದರಖಾಸ್ತು ಮಾಡಿದ ತಾರೀಖ್ ನೋಡಲು ಒಂದು ತಿಂಗಳೊಳಗಾಗಿ ಚಂದಾ ಕೊಡಬೇಕು. ಕಳುಹಿಸುವವರಿಗೆ ಮಾತ್ರವೆ ಅಡ್ವಾನ್ಸ್ ದರದಂತೆ ಪತ್ರಿಕೆಯು ಕಳುಹಿಸಲ್ಪಡುವದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. ಮೂರು ತಿಂಗಳಿಗಿಂತ ಕಡಮೆಯಾಗಿ ಚಂದಾ ಕೊಡುವುದು ಅಂಗೀಕರಿಸಲ್ಪಡಲಾರದು.

### ಪ್ರಕಟನೆಯ ರಿವಾಜ್.

ಮೊದಲನೆಯದಫಾ ಪಙ್ಕ್ತಿ ಒಂದಕ್ಕೆ ೦—೨—೦

ಎರಡನೆಯದಫಾ ಪಙ್ಕ್ತಿ ಒಂದಕ್ಕೆ ೦—೧—೦

ದರಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟು ಸಲ ಹಾಕಿಸಬೇಕೆಂಬುದನ್ನು ಪಙ್ಕ್ತಿ ಒಂದಕ್ಕೆ ಗೊತ್ತುಮಾಡಿ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಹಾಕುವ ಜಾಹೀರಾತುಗಳಿಗೆ ಪ್ರಕಟನೆಗಳು ಕಳುಹಿಸುವವರು ಅವು ಎಷ್ಟುಸಾರಿ ಹಾಕಬೇಕೋ ಅದನ್ನು ಸ್ಪಷ್ಟವಾಗಿ ಬರೆಯಬೇಕು. ಇಲ್ಲದಿದ್ದರೆ ಅವರು ತಿಳಿಸುವವರೆಗೂ ಹಾಕಿ ಅವರಿಂದ ಹಣವನ್ನು ವಸೂಲುಮಾಡಲಾಗುವದು. ಪ್ರಕಟನೆಯ ವಿಷಯದಲ್ಲಿ ಬೇರೆ ಒಪ್ಪಂದವನ್ನು ಮಾಡಿಕೊಳ್ಳಬೇಕಾದರೆ ಮ್ಯಾನೇಜರಿಗೆ ಬರೆಯಬೇಕು. ಪ್ರಕಟನೆಗಳು ಸೋಮವಾರದ ಪತ್ರಿಕೆಯಲ್ಲಿ ಬರಬೇಕಾದರೆ ಶನಿವಾರ ಮಧ್ಯಾಹ್ನ ೧ ಘಂಟೆಯೊಳಗೆ ಕಳುಹಿಸಬೇಕು. ಪ್ರಕಟನೆಯ ಹಣವನ್ನು ಮುಂಗಡವಾಗಿ ಕಳುಹಿಸದಿದ್ದರೆ ಪತ್ರಿಕೆಯಲ್ಲಿ ಹಾಕಲ್ಪಡುವುದಿಲ್ಲ. ಪ್ರಕಟನೆಯ ಮೇಲೆ ನಮ್ಮ ಜವಾಬ್ದಾರಿಯಿಲ್ಲ.


### ADVERTISEMENTS.

## NOTICE.

VAIDYASARA SANGRAHA
A TREATISE ON THE PRINCIPLES OF
HINDU MEDICINE.
Price including Postage Rs 5 0 0

ವೈದ್ಯಸಾರ ಸಂಗ್ರಹ.

ಈ ಗ್ರಂಥವು ಬೇಕಾದವರು ಹೊಲಬೇಕಾದರೆ ಈ ಕೆಳಗೆ ಬರೆದ ವಿಳಾಸಕ್ಕೆ ಬರೆದರೆ ಕಳುಹಿಸಲ್ಪಡುವದು. ಬೆಲೆಯನ್ನು ಮುಂಗಡವಾಗಿ ಕಳುಹಿಸದಿದ್ದರೆ ಕಳುಹಿಸಲ್ಪಡಲಾರದು.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಹಾಸಿಲ್ ಸೇರಿ ಒಂದಕ್ಕೆ ರೂ 5—0—0

ಟಿ. ಎ. ವೆಂಕಟಾಚಾರ್.

ಬೆಂಗಳೂರ್, ಪ್ರಿಂಟಿಂಗ್ ಪ್ರೆಸ್ ರೋಡ್, ೩ನೇ ನಂಬರ್.

## ನೋಟಿಸ್.

### ಬೆಂಗಳೂರು ಕರ್ಣಾಟಕ್ ಪ್ರೆಸ್.

೧೮೭೩ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ ಸಕಲವಿಧ ಕೆಲಸಗಳು ಸುಲಭವಾಗಿಯೂ ಶೀಘ್ರವಾಗಿಯೂ ಸ್ವಚ್ಛವಾಗಿಯೂ ಮಾಡಲ್ಪಡುವವು. ಇದರಲ್ಲಿ ಸಕಲ ಇಂಗ್ಲಿಷ್ ಕನ್ನಡ ಕೆಲಸಗಳು ಮಾಡಲ್ಪಡುವವು. ಇತರ ತರಗತಿಗಳನ್ನು ಸದರಿ ಕಾರ್ಖಾನೆ ಮ್ಯಾನೇಜರ್ ಬಳಿ ಕೇಳಿ ತಿಳಿದುಕೊಳ್ಳಬಹುದು.

## ನೋಟಿಸ್.

### ನಂಜಪ್ಪನವರ ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು.

ಕಾಲೂರು ಉಪ್ಪಾರಪೇಟೆಯಲ್ಲಿರುವ ಮೇಲೆ ತಿಳಿಸಲ್ಪಟ್ಟವರಿಂದ ಮಾಡಲ್ಪಟ್ಟ ಇದರಡಿಕಂಡ ಖ್ಯಾತಿಗಳುಳ್ಳ ಔಷಧಗಳು ಬೇಕಾಗಿ ತಯಾರಾಗಿರುತ್ತದೆಯಾಗಿ ಬೇಕಾದವರು ಅವರಿಗೆ ಬರೆದು ತರಿಸಿಕೊಳ್ಳಬಹುದು. ಈ ಔಷಧಗಳು ಶಾಸ್ತ್ರೋಕ್ತವಾದ ಕೆಲವು ಸಿದ್ಧಕ್ರಿಯೆಗಳ ಮೇಲೆ ತಯಾರಾದವಾಗಿಯೂ, ಅನುಭವ ಸಿದ್ಧವಾಗಿಯೂ, ಅನೇಕರಿಗೆ ಗುಣವನ್ನುಂಟುಮಾಡಿದವಾಗಿಯೂ ಇರುವವೆ. ತಮ್ಮ ರೋಗಸ್ವರೂಪವನ್ನೂ ಔಷಧವಾದಾಗಿನ ಪಥ್ಯಾದಿಗಳ ಕ್ರಮವನ್ನೂ ಸದರೀ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು. ಹೀಗೆ ಕಾಗದ ಬರೆಯತಕ್ಕವರು ಅವರಿಂದ ಅಪೇಕ್ಷಿಸಲ್ಪಡುವ ಪ್ರತ್ಯುತ್ತರಕ್ಕೆ ಸಹ ತಮ್ಮ ಕಾಗದದಲ್ಲಿ ಅರ್ಧಾಣೆ ಲೇಬಲ್ ಮುಖಾಂತರ ಹಾಕಿ ಕಳುಹಿಸಬೇಕು. ಪಾಟ್ಯುಪೆಯಬಲ್ ಮೂಲಕ ಸಹ ಪದಾರ್ಥಗಳು ಕಳುಹಿಸಲ್ಪಡುವವು. ಕಳುಹಿಸಲ್ಪಟ್ಟ ಪದಾರ್ಥಗಳನ್ನು ತರುವಾಯ ಸ್ವೀಕರಿಸದೆ ಆ ಬಾಬತು ವ್ಯಾಲ್ಯು ಪೇಯಬಲ್ ಕಮಿಷನ್ ಅವರೇ ಕೊಡಬೇಕಾಗುವದು.

ತೈಲ.—ಮಹಾತಕ್ರತೈಲ, ಇದು ಶರೀರ ವಾಯುಗಳಿಗೂ, ಕಾಲಕೈ ಸಂಧಿಗಳ ಮತ್ತು ವಾತಸಂಬಂಧಗಳಾದ ಸಂಧಿಬಂಧನಗಳಿಗೂ, ಮೂಗಿನಲ್ಲಿ ರಕ್ತ ಬೀಳತಕ್ಕದ್ದಕ್ಕೂ, ಅನೇಕವಿಧ ಶಿರೋವ್ಯಾಧಿ ವೇದನೆಗಳಿಗೂ ಬಹಳ ಶ್ಲಾಘ್ಯವಾದ ನಿವಾರಕವಾಗುದಾಗಿದೆ. ಸಣ್ಣ ಸೀಸೆ ಒಂದಕ್ಕೆ ೧ ರೂ. ದೊಡ್ಡ ಸೀಸೆ ೧ಕ್ಕೆ ೫ ರೂ.

ಜ್ವರದ ಗುಳಿಗೆಗಳು.—ಇದು ಆ ಕಫವಾತಾದಿ ಸಕಲವಿಧ ಜ್ವರಗಳಿಗೂ ಪ್ರಸಿದ್ಧ ಔಷಧವಾಗಿರುತ್ತದೆ. ರೂ. ೧ಕ್ಕೆ ೨೦ ಗುಳಿಗೆಗಳು.

ಮೇಹ ರೋಗ ನಿವಾರಕವಾದ ಎಣ್ಣೆ.—ಈ ಎಣ್ಣೆಯು ೨೦ ದಿನಗಳವರೆಗೆ ಬರುತ್ತಿದ್ದು ಹೊಟ್ಟೆಗೆ ತೆಗೆದುಕೊಂಡರೆ ಸಕಲವಿಧ ಮೇಹಗಳೂ, ಪ್ರಮೇಹವೂ, ಸ್ತ್ರೀಯರಿಗೂ ಬಿಳುಪು ಮುಂತಾದ ಸಂಬಂಧವಾದ ರೋಗಗಳೂ, ನಿವಾರಣೆಯಾಗುವವು. ಸೀಸೆ ೧ಕ್ಕೆ ೨—೮—೦

ದಂತರೋಗಕ್ಕೆ ಪುಡಿ.—ಹುಳುಕುಹಲ್ಲುಗಳು, ಸಡಲ ಬಿದ್ದಿರುವ ಹಲ್ಲುಗಳು, ಇವುಗಳನ್ನು ಗಟ್ಟಿಮಾಡಿ ಹಲ್ಲುಗಳಿಗೆ ಕಾಂತಿಯನ್ನುಂಟುಮಾಡುವುದು. ಇದು ಪುಡಿರೂಪವಾಗಿ ಪೆಟ್ಟಿಗೆ ೧ಕ್ಕೆ ೧ ರೂ. ಇದು ೨೦ ದಿನಗಳಿಗೆ ಆಗುವುದು.

ನೇತ್ರರೋಗಕ್ಕೆ ಅಂಜನ.—ಪೊರೆಗಳು, ದೃಷ್ಟಿಮಾಂದ್ಯ, ಕಣ್ಣುರಿ, ತಲೆನೋವು, ಕಣ್ಣಲ್ಲಿ ನೀರು ಸುರಿಯುವುದು ಮುಂತಾದ ಸಕಲ ರೋಗಗಳಿಗೂ ಪ್ರಶಸ್ತವಾದದ್ದು. ಮೂಲಿಕಾ ಪ್ರಯೋಗದಿಂದ ಮಾಡಲ್ಪಟ್ಟ ಉತ್ತಮವಾದ ಮಾತ್ರೆ ೧ಕ್ಕೆ ೪ ಆಣೆ. ಇದು ೩೦ ದಿನಗಳವರೆಗೆ ಒಂದು ಹೊತ್ತು ಹಾಕಿಕೊಳ್ಳಬಹುದು.

ಮೂಲವ್ಯಾಧಿಗೆ—ಒಂದು ಉಂಗುರವು ತಯಾರಾಗಿದೆ. ಇದರಿಂದ ದೀರ್ಘಕಾಲಿಕವಾದ ಮೂಲವ್ಯಾಧಿಗಳೆಲ್ಲವೂ ವಾಸಿಯಾಗುತ್ತವೆ. ಉಂಗುರ ೧ಕ್ಕೆ ೧ ರೂಪಾಯಿ ಇದನ್ನು ಬೆರಳಿನಲ್ಲಿ ನಿಯತವಾಗಿ ಧರಿಸಿಕೊಂಡಿರತಕ್ಕದ್ದು. ಇದರ ಸ್ಪರ್ಶದಿಂದ ಮೂಲವ್ಯಾಧಿಯು ನಿವೃತ್ತಿಯಾಗುತ್ತದೆ.

ಭಸ್ಮಗಳು.—ತಾಂಬ್ರ, ರಜತ, ವಂಗ, ಸೀಸ, ಪ್ರವಾಳ, ಶೃಂಗ, ಅಭ್ರಕ, ಲೋಹ, ಕಾಂತ ಮತ್ತೆ ಭಸ್ಮಗಳೂ ಸಿಂಧೂರಗಳೂ ಸಿದ್ಧ ಕ್ರಿಯೆಯಿಂದ ತಯಾರಾದವು. ಇವು ಮಂಡು ಕಾಮಿಲೆ ಸನ್ನಿಪಾತ ಸಕಲ ಪ್ರಬಲ ರೋಗಗಳಿಗೂ ಪ್ರಶಸ್ತವಾದವಾಗಿರುತ್ತವೆ. ರೋಗ ಸ್ವರೂಪವನ್ನು ಸೂಚಿಸಿದರೆ ಔಷಧವು ಕೊಡಲ್ಪಡುವುದಾಗುವುದು ಅವರವರಿಗೆ ಕ್ರಯವು ನಿಶ್ಚಯಿಸಲ್ಪಡುತ್ತದೆ.

ಲೇಹ್ಯಗಳು.—ಮದನಾನಂದ, ಚ್ಯವನ, ಕೂಷ್ಮಾಂಡ ಮತ್ತೆ ಧಾತು ವೃದ್ಧಿಕರಗಳಾದ ಲೇಹ್ಯಗಳು ಸಿದ್ಧವಾಗಿವೆ. ಸೇರು ೧ಕ್ಕೆ ೪ ರೂ.

ಪರಿಮಳ ದ್ರವ್ಯಗಳು.—ಗಂಧ, ಬಾಳೆಹಣ್ಣು, ಪುನುಗು ಮುಂತಾದ ಎಣ್ಣೆಗಳು, ಊದುಬತ್ತಿಗಳು, ವ್ಯಾಪಾರ ಮಾಡಲು ಅನುಕೂಲವಾದ ಎಣ್ಣೆಗಳು ತಯಾರಾಗಿವೆ. ಇವು ಸೀಸೆ ೧ಕ್ಕೆ ೨ ರೂ.

ಚೂರ್ಣಗಳು.—ಮಹಾ ಮೂಲವ್ಯಾಧಿ ಚೂರ್ಣ, ದಂತ ಚೂರ್ಣ, ತಾಳೀಸಾದಿ ಮತ್ತೆ ಚೂರ್ಣಗಳು ಅಜೀರ್ಣ ಪಿತ್ತ ಮುಂತಾದವುಗಳಿಗೆ ಶಾಮಕಗಳಾದವು. ಇವು ೩೦ ದಿನಗಳಿಗೆ ತೆಗೆದುಕೊಳ್ಳುವದು. ಸೀಸೆ ೧ಕ್ಕೆ ೧ ರೂ.

## ನೋಟಿಸ್.

### ಗಣೇಶ ರಾಮಚಂದ್ರ ಕರ್ಕರೆ ಮತ್ತು ಕಂಪೆನಿ. ಕಮಿಷನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯೊಡನೆ ವ್ಯಾಲ್ಯು ಪೇಯಬಲ್ ಪೋಸ್ಟ್ ಮೂಲಕ ತಕ್ಕ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರಹ ಔಷಧಗಳು, ಪುಸ್ತಕಗಳು, ಮುತ್ತುಗಳು, ಚಿಪ್ಪು ಮುತ್ತುಗಳು, ಘಡಿಯಾರಗಳು, ವಾಚ್‌ಗಳು, ಟ್ರಿಂಕೆಟ್‌ಗಳು, ಕಾಶ್ಮೀರ ಶಾಲುಗಳು, ಪಿತಾಂಬರಗಳು, ಜರತಾರಿ ಶಾಲುಗಳು, ಚಂದ್ರಕಾಂತ ಶಿಲೆಯ ಕನ್ನಡಕಗಳು, ಹಾಡುವ ಗಿತಕ್ಕ ಜರತಾರಿ ಉಡುಪುಗಳು, ಜರತಾರಿ ಟೋಪಿಗಳು, ಅಪಸ್ವರಗಳು, ಪಟಗಳು, ಅತ್ತರಗಳು, ಅತ್ಯುತ್ತಮಗಳಾದ ರತ್ನಗಳು, ಭಂಗಾರದಿಂದ ಕಟ್ಟಲ್ಪಟ್ಟ ಉಂಗುರಗಳು, ಪಾತ್ರೆಗಳು, ಜರ್ಮನ್ ಬೆಳ್ಳಿ ಪಾತ್ರೆಗಳು, ಕೇಸರಿ, ಕಸ್ತೂರಿ ಮತ್ತೆ ಇತರ ಸಾಮಾನುಗಳು.

ಜವಾಬ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟಾಂಪ್ ಕಳುಹಿಸಿದ ಹೊರತು ಜವಾಬ್ ದೊರೆಯಲಾರದು.

ವಿಳಾಸ.—ಗಣೇಶ ರಾಮಚಂದ್ರ ಕರ್ಕರೆ,
ಮತ್ತು ಕಂಪೆನಿ, ಕಮಿಷನ್ ಏಜಂಟ್ಸ್,
ಕಾಳಬಾದೇವಿ, ಮಾರ್ಕೆಟ್ ಪೋಸ್ಟ್, ಮುಂಬೈ

## ನೋಟಿಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕರಿಗೆ ಸಿದ್ಧವಾಗಿವೆ. ಬೇಕಾದವರು ಬೆಲೆಗಳನ್ನು ಕಳುಹಿಸಿ ತರಿಸಿಕೊಳ್ಳಬಹುದು.

### ಸಂಸ್ಕೃತ ಗ್ರಂಥಗಳು.

| | | ಹಾಸಲ್ ಸೇರಿ ರೂ | ಆ. | ಪೈ. |
|---|---|---|---|---|
| ಸಟೀಕಾ ವೈದ್ಯಸಾರ ಸಂಗ್ರಹ | ... | ೫ | ೦ | ೦ |
| ,, ಶಿವಗೀತೆ | ... | ೧ | ೨ | ೦ |
| ,, ಶಿವಾನಂದಲಹರಿ | ... | ೦ | ೮ | ೦ |
| ,, ಕಾಲಾಮೃತ | ... | ೧ | ೦ | ೦ |
| ,, ಟಿ॥ ಬಾಲರಾಮಾಯಣ | .. | ೦ | ೩ | ೦ |
| ,, ಟೀ॥ ಗೋಪಿಕಾ ಗೀತೆ | ... | ೦ | ೧ | ೦ |
| ,, ಟೀ॥ ಚಾಣಕ್ಯನೀತಿ (ಸುಭಾಷಿತ) | | ೦ | ೪ | ೦ |
| ವಿಷ್ಣುಸಹಸ್ರನಾಮ ಪಕ್ಸೆರೆ | ... | ೦ | ೩ | ೦ |
| ಸೂರ್ಯಸಹಸ್ರನಾಮ | ... | ೦ | ೨ | ೦ |
| ಕೃಷ್ಣಕರ್ಣಾಮೃತ | ... | ೦ | ೭ | ೦ |
| ತ್ರಿಕಾಂಡ ಅಮರ ಮೂಲ | .. | ೦ | ೯ | ೦ |
| ೧ ಕಾಂಡ | ... | ೦ | ೧ | ೦ |

### ಕನ್ನಡ ಗ್ರಂಥಗಳು.

| | | ರೂ | ಆ. | ಪೈ. |
|---|---|---|---|---|
| ಶುಕಸಪ್ತತಿ ಅವ್ವಲ್ | .. | ೩ | ೦ | ೬ |
| ಟಿಪ್ಪೂ ದುಯ್ಯಂ | ... | ೧ | ೨ | ೦ |
| ವೃಷಭೇಂದ್ರವಿಜಯ | ... | ೧ | ೮ | ೦ |
| ಪಂಚತಂತ್ರ ಬಾಲಬೋಧೆ | ... | ೦ | ೬ | ೦ |
| ಸತಿ ಮನ್ಮಥಾಂಸ | ... | ೦ | ೬ | ೦ |
| ಕಾಳೀಯಮರ್ದನ | ... | ೦ | ೨ | ೦ |
| ಸುಭದ್ರಾಪರಿಣಯ | .. | ೦ | ೨ | ೦ |
| ಕರಕೇಪಾಟರಿವಾಜು | ... | ೦ | ೨ | ೬ |
| ಸುದಾಮಚರಿತ್ರೆ | ... | ೦ | ೧ | ೦ |
| ಪ್ರಭಾವತಿ ಚರಿತ್ರೆ | ... | ೦ | ೧ | ೦ |
| ಬಾಲಗ್ರಹಚಿಕಿತ್ಸೆ | ... | ೦ | ೧ | ೦ |
| ಮುಕುಂದ ಮಾಲಾ | . | ೦ | ೧೨ | ೦ |
| ಭ್ರಾಂತಿವಿಲಾಸ | .. | ೦ | ೧೬ | |

## ನೋಟಿಸ್.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ :—

ಹಿಂದೆ ಬರ್ಮಾ ದೇಶದಲ್ಲಿ ಸಿವಿಲ್ ಸರ್ಜನ್ ಆಗಿದ್ದ ಡಾಕ್ಟರ್ ನೆಯಿಲರ್ ಯವರು ಬೆಂಗಳೂರು ಪೇಟೆ ಸಿದ್ದೀಕಟ್ಟೆಯಲ್ಲಿರುವ ಗುಂಡೋಪಂತರವರ ಮನೆಯ ಪಕ್ಕದಲ್ಲಿ ರೋಗಿಗಳ ಸ್ವರೂಪವನ್ನರಿತು ಚಿಕಿತ್ಸೆಮಾಡುವದಕ್ಕೆ ಒಂದು ಸ್ಥಳವನ್ನು ಗೊತ್ತುಮಾಡಿರುತ್ತಾರೆ.

ಸದರೀಯವರು ಪ್ರತಿದಿನದಲ್ಲೂ ಬೆಳಗ್ಗೆ ೮ ಘಂಟೆಯು ಮೊದಲು ೧೦ ಘಂಟೆಯು ವರಿವಿಗೂ ಆಸ್ಥಳದಲ್ಲಿದ್ದು ವಿಶಿಷ್ಟ ರೋಗಿಗಳಿಗೂ, ಮುಖ್ಯವಾಗಿ ಕಣ್ಣಿನ ಮತ್ತು ಕಿವಿ ರೋಗಗಳಿಗೆ ಚಿಕಿತ್ಸೆ ಮಾಡುವರು.

ರೋಗಸ್ವರೂಪವನ್ನು ಅರಿತು ಹೇಳುವದಕ್ಕೆ ೨ ರೂ. ರುಸುಂ ಕೊಡಬೇಕು. ರೋಗಿಗಳ ಮನೆಗಳಿಗೆ ಹೋಗಿ ನೋಡುವದಕ್ಕೆ ೪ ರೂಪಾಯಿಗಳ ರುಸುಂ ಕೊಡಬೇಕು.

C. G. R. Naylor,
M. R. C. S., England,
Surgeon.


## Bangalore City Municipality.

### ಬೆಂಗಳೂರ್ ಸಿಟಿ ಮ್ಯುನಿಸಿಪಾಲಿಟಿ.

ಸರ್ ೧೮೯೩ನೇ ಇಸವಿ ಜನವರಿ ೨೩ನೇ ತಾರೀಖ್ ಸೋಮವಾರದ ದಿನ ಬೆಳಗ್ಗೆ ೮ ಘಂಟೆಗೆ, ಬೆಂಗಳೂರ್ ಸಿಟಿ ಮ್ಯುನಿಸಿಪಲ್ ಕಮಿಷನರಿಗಳು ಕಚೇರಿಯಲ್ಲಿರುವ ಮ್ಯುನಿಸಿಪಲ್ ಆಫೀಸಿನಲ್ಲಿ ಸಾಧಾರಣ ಸಭೆ ಸೇರುವದಾಗಿ ಇದರಡಿ ಕಂಡ ಅಂಶಗಳು ಆ ಸಭೆಯ ಪರ್ಯಾಲೋಚನೆಗೆ ಒಪ್ಪಿಸಲ್ಪಡುವವು, ಅವು ಯಾವುವೆಂದರೆ:—

೧. ಸರ್ ೧೮೯೨ನೇ ಇಸವಿ ಡಿಸೆಂಬರ್ ತಿಂಗಳ ಜಮಾ ಖರ್ಚು, ನಗದು ಖಜಾನೆ ಲೆಕ್ಕ ಮತ್ತು ಮನೆ ಮನೆಗೆ ಹೋಗಿ ಚಿಕಿತ್ಸೆ ಮಾಡತಕ್ಕ ಮೆಡಿಕಲ್ ಆಫೀಸರ ಲೆಕ್ಕ, ಕಾಯಿಲೆಗಳ ಅಭಿವೃದ್ಧಿಯನ್ನು ಕುರಿತ ರಿಪೋರ್ಟ್ ಮತ್ತು ಪ್ರೆಸಿಡೆಂಟರವರ ಟಿಪ್ಪಣಿಗಳು ಮುಂತಾದವುಗಳು.

೨. ವಿ. ನಂಜುಂಡಯ್ಯನವರು ತಮ್ಮ ಕಂಪೌಂಡಿನಲ್ಲಿ ಹೋಗುವ ಚರಂಡಿಯ ನೀರನ್ನು ಹರಿಯುವಂತೆ ಮಾಡಬೇಕೆಂದು ವಿವರವಾಗಿ ಬರೆದ ೧೮೯೨ನೇ ಇಸವಿ ಅಕ್ಟೋಬರ್ ೨೨ನೇ ತಾರೀಖಿನ ಅರ್ಜಿ.

೩. ಅಕ್ಕಪ್ಪಸ್ವಾಮಿ ಸ್ವಾರ್ಥರಾವಂತೆ ಬರೆದ ಅಕ್ಕಪ್ಪಯ್ಯ ಜಾಗೆಯ ಸಂಬಂಧವಾಗಿ ಬಂದ ಅರ್ಜಿ ಹಾಗೂ ಪಾಸಿನಾಮೆ ಪ್ರೆಸಿಡೆಂಟರಿಗೆ ಹಾಕಲು ತಾವು ಅರ್ಜಿ ಬರೆದುಕೊಂಡ ೧೮೯೨ನೇ ಇಸವಿ ನವೆಂಬರ್ ೨೫ನೇ ತಾರೀಖಿನ ಅರ್ಜಿ ಸಂಬಂಧಪಟ್ಟ ಕಾಗದಪತ್ರಗಳು.

೪. ಪ್ಲಾಟ್ ಫಾರ್ಮ ಕಟ್ಟಲು ಪಕ್ಕದಲ್ಲಿ ೩ ಅಡಿ ಉತ್ತರದಲ್ಲಿ ಒಂದು ಅಡ್ಡ ಕಟ್ಟೆಯನ್ನು ಕಟ್ಟಿಸುವದಕ್ಕಾಗಿ ೧೦೦ ರೂಪಾಯಿಗಳ ಖರ್ಚು ಬೀಳುವದೆಂದು ಮ್ಯುನಿಸಿಪಲ್ ಎಂಜಿನಿಯರ್ ಅವರು ಕಳುಹಿಸಿದ ಅಂದಾಜ್ ಪಟ್ಟಿ.

೫. ಮೆಸರ್ಸ್ ಪಿಸ್ಟೆ ಅಂಡ್ ಕಂಪೆನಿಯವರು, ಮ್ಯುನಿಸಿಪಲ್ ಸರಹದ್ದಿನೊಳಗೆ (ಸ್ಟೋರ್) ಅಂದರೆ ಜಾಗೆಯಲ್ಲಿ ಉತ್ಪತ್ತಿಯಾದ ಸರಕನ್ನು ಇಡುವದಕ್ಕೆ ಒಂದು ಕಟ್ಟಡವನ್ನು ಕಟ್ಟಲು ಪರವಾನಗಿ ಕೊಡಬೇಕೆಂದು ೧೮೯೩ನೇ ಇಸವಿ ಜನವರಿ ೫ನೇ ತಾರೀಖಿನಲ್ಲಿ ಬರೆದ ಅರ್ಜಿ.

೬. ಪ್ಲೇಗುಪಾಸು ಮತ್ತು ಜೆಕ್ ಇಲಾಖೆಯ ಕೆಲಸಗಳಿಗೆ ನೀರು ಒದಗಿಸುವದಕ್ಕೆ ಮರಗಳಿಗೆ ೫ ಪೈಪ್ ಸಹಿತ ಕಟ್ಟುವದಕ್ಕೆ ಅಂದಾಜ್ ೩ ರೂ. ಮೇಲೆ ತಿಂಗಳೊಂದಕ್ಕೆ ಕೂಲಿಯಾಗಿ ಖರ್ಚಾಗುವದನ್ನು ಮಂಜೂರು ಮಾಡಬೇಕೆಂದು ಕೋರಿದ ೧೮೯೩ನೇ

ಇಸವಿ ಡಿಸಂಬರ ೧೪ ನೇ ತಾರೀಖಿನಲ್ಲಿ ಕೊಟ್ಟ ಹುಕುಂ.

ಕೋಟೆಯ ಉತ್ತರ ದಿಕ್ಕಿನ ಬಾಗಿಲನ್ನು ಕಿತ್ತು ಹಾಕಲಿಕ್ಕೆ ಹಿಡಿದ ೧,೫೧೮ ರೂಪಾಯಿಗಳ ಬಾಬತು ಪ್ಲ್ಯಾನ್ಸು ವರ್ಗೈರೆ ಮಾಡ ಅಂದಾಜ್‌ಪಟ್ಟಿ ಮತ್ತು ಅದಕ್ಕೆ ಸಂಬಂಧಪಟ್ಟ ಕಾಗದಪತ್ರಗಳು.

ರಾಜಕಾರ್ಯವನ್ನು ೪೦,೦೨೦—೧೨—೩ ರೂಪಾಯಿಗಳಿಗಾಗುವದರಲ್ಲಿ ಕಟ್ಟತಕ್ಕ ಬಗ್ಗೆ ಪ್ಲ್ಯಾನ್ಸು ವರ್ಗೈರೆ ವಗೈರೆ ಕಳುಹಿಸಲ್ಪಟ್ಟ ಎಸ್ಟಿಮೆಟ್ ಪಟ್ಟಿ ಮತ್ತು ಅದಕ್ಕೆ ಸಂಬಂಧಪಟ್ಟ ಕಾಗದಪತ್ರಗಳು. ಚರಂ ಡಿ ಕಂಟ್ರ್ಯಾಕ್ಟರ ತರಫಿನಲ್ಲಿ ಅಡ್ವೊಕೇಟ್ ಮ|| ನರಸಿಮ್ಹಯ್ಯಂಗಾರ್ಯರವರು ಇನ್ನೂ ಬಾಕಿಯಾಗಿ ೫೫೯—೫—೯ ರೂಪಾಯಿಗಳು ಕೊಡಿಸಬೇಕೆಂಬ ದಾಗಿ ೧೮೯೨ನೇ ಇಸವಿ ನವಂಬರ ೩ನೇ ತಾರೀಖಿನಲ್ಲಿ ಬರೆದ ಕಾಗದ.

ಕೊಲ್ಹಾಪುರದ ಮಹಾರಾಜರವರು ಬರವಾಗಿ ಕೊಳ್ಳುವದಕ್ಕಾಗಿ ಮಾಡಲ್ಪಟ್ಟ ಯೇರ್ಪಾಡುಗಳೊಳು ಸರಬರಾಯಿ ಮಾಡಲ್ಪಟ್ಟ ಕುರ್ಚಿ ವಗೈರೆ ಫರ್ನಿಚರ್‌ಗಳ ಬಗ್ಗೆ ಕೆಲವರು ಅಸಾಮಿಗಳಿಗೆ ಸಲ್ಲಬೇಕಾಗಿರುವ ೨೮೧—೧೧—೦ ರೂಪಾಯಿಗಳಿಗೆ ಯಗ್ಸಿಕ್ಯೂಟಿವ್ ಇಂಜನಿಯರರವರು ಕಳುಹಿಸಿದ ಬಿಲ್ ಮತ್ತು ಅದಕ್ಕೆ ಸಂಬಂಧಿಸಿದ ಕಾಗದ ಪತ್ರಗಳು.

ಮಹರ್‌ನಲ್ಲಿರುವ ಸರ್ಕಾರ್ ಅನ್ನ ಛತ್ರಕ್ಕೆ ಸಂಬಂಧಿಸಿದ ಯಾದಾಸ್ತು.

ಕನ್ಸರ್ವನ್ಸಿ ಗಾಡಿಯವರಿಗೆ ಕೊಡಬೇಕಾದ ಜಾಸ್ತಿ ತಲಬ್ ಮತ್ತು ಅವರ ಕೆಲಸ ಮೊದಲಾದ ವಿಷಯದಲ್ಲಿ ೧೮೯೨ನೇ ಇಸವಿ ಡಿಸಂಬರ್ ೨೧ ನೇ ಮರ್ಕೂಂ ಪ್ರಕ್ಷ ಸಬ್ ಕಮಿಟಿಯವರ ರಿಪೋರ್ಟ್.

ಸೀನಿಯರ್ ಸರ್ಜನ್ ರವರು ಇನ್ನು ಮೇಲೆ ಪ್ರತಿ ಸಂವತ್ಸರದಲ್ಲಿಯೂ ಅವಶ್ಯಕವಾಗಿರುವ ಮೆಡಿಕಲ್ ಚಾರ್ಜಗಳ ಅಂದಾಜ್ ಪಟ್ಟಿಯನ್ನು ತಯಾರ್ಮಾಡಿ ಬೋರ್ಡಿನವರಿಗೆ ಕಳುಹಿಸತಕ್ಕದ್ದೆಂಬದಾಗಿ ತಿಳಿಸಿ, ೧೮೯೨ನೇ ಇಸವಿ ಡಿಸಂಬರ್ ೧೩ ನೇ ತಾರೀಖಿನಲ್ಲಿ ಗವರ್ನಮೆಂಟಿನವರು ಮಾಡಿದ ನಂ. ೮೨೩೬—೭ L. F. ೪೩—೯೨ನೇ ನಂಬರುಳ್ಳ ಪ್ರೊಸೀಡಿಂಗ್ಸ್.

ಮ|| ವಿ. ಎಸ್ ನರಸಿಮ್ಹಯ್ಯಂಗಾರ್ಯರವರು, ೧೮೯೦ ನೇ ಇಸವಿ ಡಿಸಂಬರ್ ೧೩ ನೇ ತಾರೀಖಿನಲ್ಲಿ ಇದರಡಿ ಕಂಡ ವಿಷಯಗಳಂ ಕುರಿತು ಬರೆದ ಕಾಗದ:—

(೧) ಯಲಹಂಕ ಅಥವಾ ಹಲಸೂರ್ ಬಾಗಲಲ್ಲಿ ತೊಂಡು ಜಾನರ್ ದೊಡ್ಡಿ.
(೨) ಮಿಷನ್ ರೋಡಿನ ಅಭಿವೃದ್ಧಿ.
(೩) ಡಿಸ್ಟ್ರಿಕ್ಟ್ ಆಫಿಸ್‌ರೋಡ್ ಅಭಿವೃದ್ಧಿ.
(೪) ಸ್ಟೀಟ್‌ ನಕ್ಷೆಯ ಸರಬರಾಯಿ
(೫) ಬೀದಿಗಳಿಗೆ ಹಾಕಲ್ಪಟ್ಟಿರುವ ಲ್ಯಾಂಟಾನಾ ಅಂದರೆ ಮುಳ್ಳು ಗಿಡಗಳು ಅತಿಯಾಗಿ ಹಾಗೆ ಬೆಳೆಯುವಿಕೆ.
(೬) ಸಂಪಂಗಿ ಮತ್ತು ಧರ್ಮಾಂಬುಧಿ ಕೆರೆಗಳಲ್ಲಿ ಇಟ್ಟಿಗೆಗಳನ್ನು ಕುಯ್ಯುವಿಕೆ ಮತ್ತು ಸುಡುವಿಕೆ
(೭) ಮಿಷನ್ ರೋಡಿನ ಅಭಿವೃದ್ಧಿಯ ವಿಷಯದಲ್ಲಿ ಮ್ಯುನಿಸಿಪಲ್ ಎಗ್ಸಿಕ್ಯೂಟಿವ್ ಇಂಜಿನಿಯರವರ ಯಾದಾಸ್ತು.

ಘನವೆತ್ತ ವೈಸ್‌ರಾಯಿ ಮತ್ತು ಇಂಡಿಯಾ ಗವರ್ನರ್ ಜನರಲ್ಲವರನ್ನು ಬರಮಾಡಿಕೊಂಡ ಬಗ್ಗೆ ಹಿಡಿದ ಖರ್ಚಿನಲ್ಲಿ ಮ್ಯೂನಿಸಿಪಲ್ ಫಂಡ್‌ಗಳಿಂದ ಸಹಾಯದ್ರವ್ಯ ಕೊಡಬೇಕಾದ ವಿಷಯದೊಳು ಗವರ್ನಮೆಂಟಿನವರು ೧೮೯೦ ನೇ ಇಸವಿ ಡಿಸಂಬರ್ ೩೧ ನೇ ತಾರೀಖಿನಲ್ಲಿ ಮಾಡಿದ ೯೫೫೦—೧—L. F. ೨೦೫—೯೦ ನೇ ನಂಬರುಳ್ಳ ಪ್ರೊಸೀಡಿಂಗ್ಸ್.

೨ ರ ಮೊದಲು ೧೧ ನೇ ಕಲಂಗಳ ವರಿವಿಗೆ ತಿಳಿಸಲ್ಪಟ್ಟಿರುವ ಬಜೆಟ್ ಕಮ್ಮಿಟಿಯವರ ಪ್ರೊಸೀಡಿಂಗ್ಸ್.

ಚಿಕ್ಕಮಾವಳ್ಳಿ ವೆಂಕಟರಮಣಸ್ವಾಮ್ಯವರ ದೇವಸ್ಥಾನಕ್ಕೆ ಸೇರಿದಂತೆ ಒಂದು ಮಂಟಪವಂ ಕಟ್ಟತಕ್ಕ ಬಗ್ಗೆ (೧೦+೨೦ ಅಡಿಗಳುಳ್ಳ) ಒಂದು ತುಂಡು ಜಮೀನನ್ನು ಮುಫತ್ತಾಗಿ ಕೊಡಬೇಕೆಂದು ಬಾಯಿಸ್ ಮಾಡಿ ಬರೆದುಕೊಂಡ ಅರ್ಜಿ.

ಸನ್ ೧೮೯೩—೯೪ ನೇ ಇಸವಿಯ ಬಾಬತು ಬಜೆಟ್ ಅಂದಾಜ್ ಲೆಕ್ಕಗಳು.

ಷಹರ ಮಾರ್ಕೆಟಿನಲ್ಲಿ ನಡೆಯುವ ಫಲ ಪುಷ್ಪ ಪ್ರದರ್ಶಕ ಸಭೆಯಲ್ಲಿ ಕೊಡಲ್ಪಡಬೇಕಾದ ಇನಾಂಗಳ ಪಟ್ಟಿ ಮತ್ತು ಅದಕ್ಕೆ ಸಂಬಂಧಪಟ್ಟ ಇತರ ತಫ್ಸೀಲುಗಳು.

ಬೆಂಗಳೂರ್ ಷಹರ ಮ್ಯುನಿಸಿಪಲ್ ಆಫಿಸ್,
ತಾ|| ೧೨-೧-೯೩ ಇಸವಿ.

K. SRINIVASA RAO,
*Vice-President,*
*City Muni. Commission.*


# ಕರ್ಣಾಟಕ ಪ್ರಕಾಶಿಕಾ.

## THE KARNATAKA PRAKACIKA.

MONDAY, JANUARY 16, 1893.

೧೮೯೩ನೇ ಇಸವಿ ಜನವರಿ ತಾ|| ೧೬ನೇ ಸೋಮವಾರ.


## ಹಿಂದೂ ಸಮಯಾಚಾರ ಪರಿಷ್ಕರಣ ಸಭಾ.

ಈಚೆಗೆ ಕೆಲವು ಸಂವತ್ಸರಗಳ ಮೊದಲು ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಎಂಬ ಅಭಿಧಾನದಿಂ ದೊಡ್ಡ ದೊಡ್ಡ ಪಟ್ಟಣಗಳೊಳು ಸಾರ್ವಜನಿಕ ಸಭೆಯೊಂದು ನಡೆಯುತಲಿರುವುದು ಪ್ರಸಿದ್ಧ ವಿಷಯವಾಗಿರುತಿದೆಯಷ್ಟೆ. ಇದೇ ಸಂದರ್ಭದಲ್ಲಿ ಹಿಂದೂ ಸಮಯಾಚಾರ ಪರಿಷ್ಕರಣ ಪ್ರವರ್ತಕರು ಸಭೆ ಸೇರಿ, ಪುರಾತನಗಳಾದ ಹಿಂದೂ ಮತಾಚಾರಗಳಲ್ಲಿ ತಾತ್ಕಾಲಿಕ ಸ್ಥಿತಿಗೆ ಅನುಕೂಲವಾಗಿರುವಂತೆ ನೂತನಗಳಾದ ಕೆಲವು ಯೇರ್ಪಾಡುಗಳು ಮಾಡಬೇಕೆಂಬ ಉದ್ದೇಶವೊಡನೆ ಅಗಿಂದಾಗ್ಯೆ ಸಭೆ ಸೇರುವಂತೆ, ಕಳೆದ ಡಿಸಂಬರ್ ತಿಂಗಳ ೩೦ನೇ ತಾರೀಖ್‌ನಲ್ಲಿ ಅಲಹಾಬಾದ್‌ನೊಳು ೬ನೇ ಆವರ್ತಿ ಸಭೆ ಸೇರಿ ಮಾಡಿದ ನಿರ್ಣಯಗಳು ಈ ಪತ್ರಿಕೆಯ ಮತ್ತೊಂದು ಭಾಗದಲ್ಲಿ ಪ್ರಕಟಿಸಲ್ಪಟ್ಟಿರುವದರಿಂದ ಸದರೀ ಸಾಮಾಜಿಕರ ಉದ್ದೇಶ ಪ್ರಯತ್ನಗಳು ಯೇತದ್ರೂಪವಾದವೆಂದು ಸಾಮಾನ್ಯವಾಗಿ ಎಲ್ಲರೂ ಅರಿಯಬಹುದು.

ವಿವಾಹ ಮೊದಲಾದ ವಿಶೇಷ ಸಂದರ್ಭಗಳಲ್ಲಿ ಮಾಡಲ್ಪಡುವ ವ್ಯಯವಂ ಒಂದು ನಿರ್ಬಂಧಪೂರ್ವಕ ಮಿತಪಡಿಸಬೇಕೆಂದು ಮಾಡಲ್ಪಟ್ಟಿರುವ ೧ ನೇ ನಂಬರ್ ನಿರ್ಣಯವಂ ಕುರಿತು ಯೋಚಿಸುವಲ್ಲಿ, ಜನರು ಅದಕ್ಕೆ ಸ್ವಲ್ಪವಾದರು ನಿಗೇ ಕೊಟ್ಟು ಅದನ್ನು ಸಾಧ್ಯವಾದ ಮಟ್ಟಿಗೆ ಆಚರಣೆಯೊಳು ತರಬೇಕೆಂಬ ಉದ್ದೇಶದಿಂ ಮಾಡಿರುವಂತೆ ಕಾಣಿಸಲಿಲ್ಲವು. ಏತಕ್ಕೆಂದರೆ, ಲೋಕದಲ್ಲಿ ಯಾರೇ ಆಗಲಿ, ಅವರವರ ಕುಟುಂಬದೊಳು ನಡೆಯುವ ಶುಭಾಶುಭಗಳಿಗೆ ಅವರವರ ಉಪಪತ್ಯನುಗುಣವಾಗಿ ವ್ಯಯಮಾಡುವ ಪದ್ಧತಿ ವಾಡಿಕೆಯಾಗಿರುತಿದೆ. ಕದಾಚಿತ್ ವಿವೇಕಶೂನ್ಯನಾದ ಯಾವನಾದ ಡಾಂಭಿಕನೊಬ್ಬನು ಮುಣ ಮೂಲಕ ಮಾಡುವ ಅಮಿತವ್ಯಯವಂ ನಿದರ್ಶನತ್ವೇನ ಉದಹರಿಸುವಣತೆ ಸುತರಾಂ ಅಂಗೀಕಾರಾರ್ಹವಾಗಲಾರದು. ವೈಸರಾಯ್ ಯವರು, ಪ್ರೆಸಿಡೆನ್ಸಿ ಗವರ್ನರುಗಳು, ಲೆಫ್ಟಿನೆಂಟ್ ಗವರ್ನರುಗಳು ಮೊದಲಾದವರು ನೇಟಿವ್ ಸಂಸ್ಥಾನಗಳಿಗೆ ಹೋಗುವ ಸಂದರ್ಭಗಳಲ್ಲಿ ಅಲ್ಲಿ ಮಾಡಲ್ಪಡುವ ಅಮಿತವ್ಯಯಗಳು ಪ್ರಜೆಗಳಿಗೆ ಯಾವ ಭಾಗದಲ್ಲಿ ಪ್ರಯೋಜನಕಾರಿಯಾದವು, ಅವು ಪ್ರಜೆಗಳಿಗೆ ಉಪಯುಕ್ತವಾಗಿರುವ ಮತ್ತು ಆವಶ್ಯಕವಾಗಿರುವ ಒಂದು ಕಾರ್ಯದಲ್ಲುಪಯೋಗಿಸಲ್ಪಡುವವಾದರೆ ಯೆಷ್ಟು ಕೀರ್ತಿಕರವಾಗಿಯೂ ಶ್ರೇಯಸ್ಕರವಾಗಿಯೂ ಪ್ರಜಾರಂಜಕವಾಗಿಯೂ ಇರುವುದು. ಇಂತಾ ಅನಾವಶ್ಯಕಗಳಾದ ಬಹುವಿಧ ವ್ಯಯಗಳಂ ತಪ್ಪಿಸಬೇಕಾದ್ದಾವಶ್ಯಕವೆಂದು ಸದರೀ ಸಾಮಾಜಿಕರಿಗೆ ತೋಚದೆ ಹೋದಬಗ್ಗೆ ಬಹಳ ವಿಷಾದಿಸಬೇಕಾಗಿರುತಿದೆ.

೨ನೇ—ಸಮುದ್ರಯಾನ ಮತ್ತು ಅನ್ಯದೇಶವಾಸಮಾಡುವಣದರಿಂದಲೇ ಜಾತಿಭ್ರಷ್ಟತ್ವ ಪ್ರಾಪ್ತವಾದಂತೆ ಭಾವಿಸಲ್ಪಡತಕೂಡದೆಂದು ಸದರೀ ಸಾಮಾಜಿಕರು ಅಭಿಪ್ರಾಯಪಡುತ್ತಾರೆ. ಈ ವಿಷಯದಲ್ಲಿ ದೇಶಭೇದವನ್ನನುಸರಿಸಿ, ಪಂಡಿತರಾದವರ ಅಭಿಪ್ರಾಯಗಳೂ ಭಿನ್ನಭಿನ್ನಗಳಾಗಿ ಕಕ್ಷಿದ್ವಯದವರ ವಾದಗಳಿಗೆ ಪೋಷಕಗಳಾಗಿ ಶಾಸ್ತ್ರಗಳೂ ಪ್ರವರ್ತಿಸಿರುತಿವೆ. ಸಮುದ್ರಯಾನ ಮತ್ತು ಮ್ಲೇಚ್ಛದೇಶ ವಾಸವು ನಿಷಿದ್ಧವಾದವೆಂದು ವಾದಿಸತಕ್ಕವರ ವಾದವು ಲೋಕವಿರುದ್ಧನಾರ್ಹವಾದವೆಂದು ಭಾವಿಸಲ್ಪಡಲಿಕ್ಕೆ ಸಂಪೂರ್ಣಾವಕಾಶವನ್ನುಂಟುಮಾಡದೆಹೋಗಲಿಲ್ಲವು. ಏತಕ್ಕೆಂದರೆ, ಸಮುದ್ರಯಾನಪೂರ್ವಕ ಮ್ಲೇಚ್ಛದೇಶಸಂಚಾರಮಾಡಿಬಂದವರ ವಿಷಯದಲ್ಲಿ ಶಾಸ್ತ್ರಾಧಾರಪೂರ್ವಕ ತಮ್ಮ ಕರ್ತವ್ಯವಂ ಮರೆತು ಮೌನಧಾರಿಗಳಾಗುತ್ತಾರಾಗಿ, ಸ್ವಪ್ರಯೋಜನದೃಷ್ಟಿಯಿಂದ ಸಂದರ್ಭಾನುಗುಣವಾಗಿ ವರ್ತಿಸತಕ್ಕವರೆಂದು ಯೇರ್ಪಡುತಿದೆ. ಹಿಂದೂ ವಾದವನು ತನ್ನ ನಿತ್ಯನೈಮಿತ್ತಿಕ ಕರ್ಮಗಳಿಗೆ ಯಾವ ಭಾಗದಲ್ಲೂ ಲೋಪವಿಲ್ಲದೆ ಮ್ಲೇಚ್ಛದೇಶಗಳಲ್ಲಿ ವಸಿಸುವದರಿಂದ ಶಾಸ್ತ್ರಾತಃ ಬಾಧಕವಿಲ್ಲವೆಂದು ಸಮಯಾಚಾರ ಪರಿಷ್ಕರಣ ಪ್ರವರ್ತಕರು ವಾದಿಸುವದಲ್ಲದೆ, ಅದಕ್ಕೆ ಪೋಷಕವಾಗಿ, ಪೂರ್ವಕಾಲದೊಳು ಹಿಂದೂ ಅರಸುಗಳು ನಾವಾರೋಹಣಪೂರ್ವಕ ಅನ್ಯದೇಶ ಸಂಚಾರ ಮಾಡುತಲಿದ್ದರೆಂಬವಕ್ಕೆ ಬಹುವಿಧ ನಿದರ್ಶನಗಳಂ ಉದಹರಿಸುತ್ತಾರೆ. ಈ ವಾದವು ಆಧಾರಶೂನ್ಯವಾದುದೆಂದು ಹೇಳುವದಕ್ಕಾಗುವದಿಲ್ಲವು. ಹಿಂದೂಗಳಲ್ಲಿ ಸಮುದ್ರಯಾನಪೂರ್ವಕ ಅನ್ಯದೇಶವಾಸವು ಕಾಲಕ್ರಮೇಣ ಸಾಮಾನ್ಯವಾಗಿ ಆಚರಣೆಯೊಳು ಬರುವದಕ್ಕೆ ಬಹುವಿಧ ಹೇತ್ವಗಳು ಕಂಡುಬರುವದರಿಂದ ಈ ನ್ನಿರೋಧಕಗಳಾದ ವಾದಗಳೂ ಪ್ರಯತ್ನಗಳೂ ಕಾರ್ಯಕಾರಿಯಾಗಲಾರವು. ಎಲ್ಲವೂ ತಾತ್ಕಾಲಿಕ ಸ್ಥಿತಿಗಳಿಗೂ ಪ್ರಜೆಗಳ ಅಭಿರುಚಿಗೂ ಅನುಗುಣವಾಗಿ ನಡೆಯತಕ್ಕದ್ದಾಗಿರುತಿದೆ.

೩ ನೇ—ಹಿಂದೂಸ್ತ್ರೀಯರ ವಿದ್ಯಾಭ್ಯಾಸದ ವಿಷಯದೊಳು ಅಲ್ಲಿಯಲ್ಲಿ ಬಹುವಿಧ ಪ್ರಯತ್ನಗಳು ನಡೆದೂ ನಡೆಯುತಲೂ ಇರುವದಲ್ಲದೆ, ಕುಲಬಾಲಿಕೆಯರನೇಕರು ವಿದ್ಯಾವತಿಯರಾಗಿ, ದೊಡ್ಡದೊಡ್ಡ ಸಭೆಗಳಲ್ಲಿ ಸ್ತ್ರೀವಿದ್ಯಾಭ್ಯಾಸದ ಆವಶ್ಯಕತೆಯನ್ನೂ ಅದರಿಂದುಂಟಾಗುವ ಪ್ರಯೋಜನವನ್ನೂ ಕುರಿತು ವಿಸ್ತಾರವಾದ ಉಪನ್ಯಾಸಪೂರ್ವಕ ತಮ್ಮ ವಿದ್ಯಾವೈಶಿಷ್ಟ್ಯವಂ ಪ್ರಕಟಪಡಿಸುತ ಬರುವದರಿಂದ ಸ್ತ್ರೀವಿದ್ಯಾಭ್ಯಾಸಂಗವು ಸಾಮಾನ್ಯವಾಗಿ ಯೆಲ್ಲ ಪ್ರದೇಶಗಳಲ್ಲೂ, ಪ್ರಾಧಾನ್ಯೇನ ಮೈಸೂರು ದೇಶದೊಳಗೂ ಕೇವಲ ಉನ್ನತಸ್ಥಿತಿಯೊಳಿರುವದರಿಂದ ಈ ವಿಷಯದೊಳು ನೂತನ ಪ್ರಯತ್ನಗಳು ಅನಾವಶ್ಯಕವಾದವು. ಸ್ತ್ರೀವಿದ್ಯಾಭ್ಯಾಸದಿಂದುಂಟಾಗುತಲಿರುವ ಪ್ರಯೋಜನವು ಭಾವನಾನುಗುಣವಾಗಿರುವುದು.

೪ ನೇ—ಬಾಲಕರ ಮತ್ತು ಬಾಲಿಯರ ವಿವಾಹಕಾಲವು ಅವರವರ ಸ್ಥಿತಿಗನುಗುಣವಾಗಿ ಹೆಚ್ಚಿಸಬೇಕಾದ್ದಲ್ಲದೆ, ವಿವಾಹಕ್ಕೆ ಮುಖ್ಯಾಂಗಗಳೆನಿಸಿರ್ಪ ಸಪ್ತಪದಿ, ಮತ್ತು ಲಾಜಹೋಮವೆಂಬ ವಿಧಿಚೋದಿತಕರ್ಮಗಳಂ ವಧುವಿಗೆ ಹದಿನಾಲ್ಕು ವರ್ಷಗಳ ವಯಸ್ಸು ಪೂರ್ತಿಯಾಗುವತನಕ ನಿಲ್ಲಿಸಬೇಕೆಂದು ಸಭಾಸದರು ವ್ಯಕ್ತಪಡಿಸಿದ ಅಭಿಪ್ರಾಯವು ನಮ್ಮಂತೆ ಅನೇಕರಿಗೆ ಆಶ್ಚರ್ಯವನ್ನುಂಟುಮಾಡದೆಹೋಗಲಾರದು. ಏಕೇನ ವಿವಾಹವೆಂಬದು ಜನಗಳ ಐಚ್ಛಿಕಪ್ರವೃತ್ತಿಗೆ ವಿಷಯವಾಗಿ, ಕ್ರಿಶ್ಚಿಯನ್‌ಗಳ ವಿವಾಹದಂತೆ ನಡೆಯಬೇಕೆಂಬ ಭಾವ ಜನಗಳ ಹೃದಯದೊಳಂಕುರಿಸಲಾರಂಭಿಸಿದ ಬಗ್ಗೆ ಯೆಷ್ಟು ದುಃಖಿಸಿದಾಗ್ಯೂ ಸ್ವಲ್ಪವಾಗಿರುವುದು.

೫ ನೇ—ಹಿಂದೂಗಳಲ್ಲಿ ಒಳಭೇದಗಳಂ ದೂರಪಡಿಸಿ, ಪರಸ್ಪರ ವಿವಾಹಪೂರ್ವಕ ಭೋಜನಪ್ರತಿಭೋಜನವಂ ಮಾಡುವ ಪದ್ಧತಿಯನ್ನಾಚರಣೆಯೊಳು ತರಬೇಕೆಂದು ಸದರೀ ಸಾಮಾಜಿಕರು ಅಭಿಪ್ರಾಯಪಡುತ್ತಾರೆ. ಸದರೀ ವಾಡಿಕೆಯು ಇದುವರಿವಿಗೇನೇ ಸ್ವಲ್ಪಮಟ್ಟಿಗೆ ಆಚರಣೆಯೊಳು ಬಂದೂ ಮುಂದೆ ಪೂರ್ಣವಾಗಿ ಬರುವದಕ್ಕೂ ಬಹುವಿಧ ನಿದರ್ಶನಗಳು ಕಂಡುಬರುವದರಿಂದ ಆ ಭಾಗದೊಳು ನೂತನ ಪ್ರಯತ್ನಗಳನಾವಶ್ಯಕವಾದವು.

೬ ನೇ—ಬಹುಭಾರ್ಯಾಪರಿಗ್ರಹವು ಭೋಗಾರ್ಥವಾಗಿ ನಿಷಿದ್ಧವಾದ ಕೃತ್ಯವೆಂಬ ವಾದವಂ ನಮ್ಮಂತೆ ಸಾಮಾನ್ಯವಾಗಿ ವಿವೇಕಿಗಳಾದವರೆಲ್ಲರು ಒಪ್ಪದೆ ಹೋಗಲಾರರು.

೭ನೇ—ಬಾಲ ವಿಧವೆಯರಿಗೆ, ಲೇಖನ ಮೂಲಕವಾದ ಅವರ ಸಮ್ಮತಿಯಂ ಪಡೆಯದೆ ಮುಂಡನ ಮಾಡಿಸಕೂಡದೆಂತಲೂ, ಅಂತಾ ಕೃತ್ಯಕ್ಕೆ ಸಹಕರಿಸುವಂತವರು ದಂಡನೀಯರಾಗತಕ್ಕದ್ದೆಂತಲೂ ಪ್ರಸಕ್ತ ಸಾಮಾಜಿಕರು ಅಭಿಪ್ರಾಯಪಡುತ್ತಾರೆ. ವಿಧವೆಯರ ಮುಂಡನ ವಿಷಯದಲ್ಲಿ ಪ್ರವರ್ತಿಸಿರುವ ಶಾಸ್ತ್ರಪಕ್ತಿಗೆ ಅರ್ಥಕಲ್ಪನೆವುನಾನಾರೂಪವಾಗಿರುವದಲ್ಲದೆ ವ್ಯಾಖ್ಯಾತರುಗಳ ಐಚ್ಛಿಕಪ್ರವೃತ್ತಿಯಂ ಸಹ ಸ್ವಲ್ಪಮಟ್ಟಿಗೆ ತೋರಪಡಿಸದೆ ಹೋಗಲಿಲ್ಲವು. ಬ್ರಾಹ್ಮಣರಲ್ಲಿ ಶೈವರೆನಿಸಿಕೊಳ್ಳುವವರು ವಿನಾ ವಡಗಲೈಯವರೂ, ಮಾಧ್ವರೂ, ಸ್ಮಾರ್ತರೂ ವಿಧವೆಯರಿಗೆ ಮುಂಡನವಂ ಮಾಡಿಸುವ ವಾಡಿಕೆಯಂ ವಯಃಪರಿಮಾಣವಂ ಸಹ ಆಲೋಚಿಸದೆ ಆಚರಣೆಯೊಳು ತರುತಲಿದಾರೆ. ಸದರೀ ಘೋರಕೃತ್ಯವು ನೋಡಲಾರದೆ ಮಾತಾಪಿತೃಗಳೂ ಅತ್ತೆ ಮಾವಂದರೂ ಸ್ವಲ್ಪಕಾಲದವರಿವಿಗಾದರೂ ಮುಂಡನವಂ ಮಾಡಿಸದೆ ಇರುವರಾದರೆ ಅವರ ಬಂಧುವರ್ಗದವರು ಅವರಂ ಪತಿತರೆಂದು ಭಾವಿಸಿ ತಿರಸ್ಕರಿಸುತ್ತಾರೆ. ಈ ಘೋರಕೃತ್ಯವಂ ತಪ್ಪಿಸುವಣವು ಅತ್ಯಾವಶ್ಯಕವೆಂದು ನಮಗೆ ತೋರಿದಾಗ್ಯೂ ಇದು ಸಾಧ್ಯವೆಂದು ನಾವೆಣಿಸಲಾರೆವು. ಇದು ಕಾಲಕ್ರಮೇಣ ಅನುಷ್ಠಾನದಲ್ಲಿ ಬರಬಹುದು.

೮ನೇ—ವಿವಾಹ ಕಾಲದಲ್ಲಿ ಕನ್ಯೆಯ ತಾಯಿತಂದೆಗಳು ವರನ ಕಡೆಯಿಂದ ಕನ್ಯಾ ಶುಲ್ಕವೆಂಬ ನೆಪದಿಂ ದ್ರವ್ಯವು ಪಡೆಯುವ ದುರಾಚಾರವಂ ತಪ್ಪಿಸಬೇಕೆಂಬ ಅಭಿಪ್ರಾಯವು ಶ್ಲಾಘನೀಯವಾದುದೆಂಬದರಲ್ಲಿ ಸಂಶಯವಿಲ್ಲವು, ಪರಂತು ಬೈತ್ರರೇಯರು ಕೆಲವರಲ್ಲಿ ವಧುವಿನ ತಾಯಿತಂದೆಗಳಿಂದ ಭಾರೀ ಮೊತ್ತವನ್ನಪೇಕ್ಷಿಸುವ ಪದ್ಧತಿಯೂ ತಪ್ಪಿದರೆ ಉಚಿತವಾಗಿರುವುದು.

೯ನೇ—ಸಮಯಾಚಾರ ಪರಿಷ್ಕರಣ ವಿಷಯದಲ್ಲಿ ಆಸಕ್ತಿಯುಳ್ಳವರೆಲ್ಲರು ಜನರಿಗೆ ತಿಳುವಳಿಕೆಯನ್ನುಂಟುಮಾಡಿ ಅವರಂ ತಮ್ಮ ಪ್ರಯತ್ನಕ್ಕೆ ಅನುಕೂಲರನ್ನಾಗಿ ಮಾಡಿಕೊಳ್ಳಬೇಕಾದವಿಷಯದಲ್ಲಿ ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲೂ ಸದರೀ ಕಾರ್ಯದಬಗ್ಗೆ ಒಂದು ಕಮಿಟಿಯನ್ನೇರ್ಪಡಿಸಬೇಕಾದ್ದು, ಅಥವಾ ಪೂರಾ ಅದೇ ಕೆಲಸವಂ ಮಾಡತಕ್ಕವನೊಬ್ಬನು ಯೇರ್ಪಡಿಸಬೇಕಾದ್ದಾವಶ್ಯಕವೆಂದು ಸದರೀ ಸಾಮಾಜಿಕರು ಅಭಿಪ್ರಾಯಪಡುತ್ತಾರೆ. ಇದರಿಂದ ವಿಶೇಷ ಪ್ರಯೋಜನ ವುಂಟಾಗುವದೆಂದು ನಾವ್ಭಾವಿಸಲಾರೆವು.

೧೦ ನೇ—ಬಾಲ ವಿಧವೆಯರ ವಿವಾಹ ವಿಷಯದಲ್ಲೂ, ವಿವಾಹ ಸಂಬಂಧವಾದ ಬಾಧ್ಯತೆಯಂ ಸ್ಥಿರಪಡಿಸಿಕೊಳ್ಳುವದಕ್ಕಾಗಿ ತರಲ್ಪಡುವ ವ್ಯಾಜ್ಯಗಳ ಡಿಕ್ರಿ ಅಮಲ್‌ಜಾರಿಯಲ್ಲಿ ಜೇಲಿನೊಳು ಇಡಿಸುವ ವಾಡಿಕೆಯಂ ತಪ್ಪಿಸಬೇಕಾದ ವಿಷಯದಲ್ಲೂ ಹಿಂದಿನ ನಿರ್ಣಯಗಳನ್ನು ಕಾಯಂ ಮಾಡುತ್ತಾರೆ. ಬಾಲ ವಿಧವೆಯರ ವಿವಾಹವು, ಹಿಂದೂಗಳು ಕ್ರಿಸ್ಚಿಯನ್‌ಮತಕ್ಕೆ ಸೇರುವಂತೆ, ಸಕೃತ್ ಅಲ್ಲಿಯಲ್ಲಿ ಒಂದೊಂದು ನಡೆಯುವದೇ ಹೊರತು ಅದು ಸಾಮಾನ್ಯವಾಗಿ ಆಚರಣೆಯೊಳ ಬರುವದಕ್ಕೆ ಜನರಿಗೆ ಅಧುನಿಕ ವೈಲಕ್ಷಣ್ಯಾಭಿಲಾಷೆಯು ಉನ್ನಮಸ್ತಕವಾಗಬೇಕು. ವಿವಾಹ ಸಂಬಂಧವಿರಿತ್ಯಾಗದಿಂ ಕಾರಾಗೃಹವಾಸವು ಪ್ರಾಪ್ತವಾಗುವದೆಂಬ ಭೀತಿಯು ಸದ್ಯಃ ಜನರಿಗುಂಟಾಗಿರುವದರಿಂದ ಸ್ವೇಚ್ಛಾಪ್ರವೃತ್ತಿಗೆ ಅದೊಂದು ನಿರ್ಬಂಧ ರೂಪವಾಗಿದೆ. ಇದು ತಪ್ಪುವದಾದರೆ ಹುಚ್ಚನಿಗೆಹೆಂಡ ಹುಯಿದಂತೆ, ಜನಗಳು ಪಚ್ಛಿಕಪ್ರವೃತ್ತಿಗೆ ಸಂಪೂರ್ಣಾವಕಾಶವುಂಟಾಗುವದರೊಳೆಷ್ಟುಮಾತ್ರವೂ ಸಂಶಯವಿರಲಾರದು.

## Occasional Notes.

## ನೈಮಿತ್ತಿಕ ವಿಷಯನ್ಯಾಸ.

ಅಲ್ವಾರ್ ಸಂಸ್ಥಾನದ ದಿವಾನರನ್ನು ಖೂನ್ ಮಾಡಿದ ಮೇಜರ್ ರಾಮಚಂದ್ರ ಯೆಂಬವರು ಮರಣ ದಂಡನೆ ವಿಧಿಸಲ್ಪಟ್ಟಿರುತ್ತಾರೆಯಷ್ಟೆ. ಸದರೀ ದಂಡನೆಯು ಈದಿನ ಜಾಸೀಯೊಳು ತರಲ್ಪಡುವುದು.

ಮುಂಬೈಯಲ್ಲಿನ ಮಿಷನರಿ ಸಾಮಾಜಿಕರು, ಕುಷ್ಠರೋಗ ಪೀಡಿತರಾದವರು ಮನಸ್ಸಿಗೆ ತಿರು

ಗಾಡಲು ಅವಕಾಶವಿಲ್ಲದಂತೆ, ಅವರ ವಾಸಕ್ಕೆ ಬೇರೆಯೊಂದು ಸ್ಥಳ ನಿಯಾಮಕ ಮಾಡಬೇಕಾದ ವಿಷಯವಂ ಕುರಿತು ಆಲೋಚಿಸುವಂತೆ ಗವರ್ನಮೆಂಟನವರು ಪ್ರಾರ್ಥಿಸಬೇಕೆಂದು ನಿರ್ಣಯಿಸಿರುತ್ತಾರೆ.

ಕೊಚ್ಚಿ ಸಂಸ್ಥಾನದ ದಿವಾನ್ ಪೇಷ್ಕಾರರಾದ ವೆಂ|| ಶಂಕರಯ್ಯರವರು ಕ್ಷಿಪ್ರದಲ್ಲಿ ತಮ್ಮ ಅಧಿಕಾರದಿಂ ನಿವೃತ್ತರಾಗಿ ಅವರ ಸ್ಥಾನಕ್ಕೆ ಅಪೀಲ್ ಕೋರ್ಟ್ ಎರಡನೆಯ ಜಡ್ಜಿಯವರಾದ ವೆಂ|| ಸಿ. ಕೃಷ್ಣಮೇನನ್, ಬಿ. ಎ., ಬಿ. ಎಲ್ ಯವರು ನಿಯಮಿಸಲ್ಪಡುವರೆಂಬ ಪ್ರವಾದವುಂಟಾಗಿದೆ.

ತಿರುವಾಂಕೂರ್ ಮಹಾರಾಜರವರು ಈ ತಿಂಗಳ ೧೯ನೇ ತಾರೀಖಿನಲ್ಲಿ ರಾಜಧಾನಿಯಿಂದ ಹೊರಟು ತಿರುನಲ್ವೇಲಿ, ಹಿರೋಡ್ ಮಾರ್ಗವಾಗಿ ಜನವರಿ ೩೦ನೇ ತಾರೀಖಿನಲ್ಲಿ ಮದರಾಸಿಗೆ ದಯಮಾಡಿ, ಅಲ್ಲಿಂದ ಫೆಬ್ರುವರಿ ೪ನೇ ತಾರೀಖಿನಲ್ಲಿ ಪ್ರಯಾಣವಾಗಿ ಚಿದಂಬರಂ, ತಿರುಚಿನಾಪಳ್ಳಿ, ತಿರುನಲ್ವೇಲಿ ಮಾರ್ಗವಾಗಿ ಫೆಬ್ರುವರಿ ೧೯ನೇ ತಾರೀಖಿನಲ್ಲಿ ತಮ್ಮ ರಾಜಧಾನಿಯಂ ಸೇರುವರು.

ಕಾಬೂಲ್ ಅಮೀರರವರು ಮರಳ ವಾತರೋಗದಿಂ ಪೀಡಿತರಾಗಿ ಅನಾರೋಗ್ಯಸ್ಥಿತಿಯಲ್ಲಿರುವಂತೆ ಈಚೆಗೆ ಬಂದ ತಂತಿ ವೃತ್ತಾಂತದ ಮೂಲಕ ತಿಳಿಯಬರುತಿದೆ. ಕಾಬೂಲ್ ರಾಜ್ಯದ ಪ್ರಕೃತ ಸ್ಥಿತಿಯಂ ಕುರಿತು ಯೋಚಿಸಲಾಗಿ ಅಮೀರರವರು ವಾತರೋಗ ಮಾತ್ರವಲ್ಲದೆ ಮನೋರೋಗವು ವಿಶೇಷತಃ ಬಾಧಿಸುತಲಿರಬಹುದೆಂದು ಊಹಿಸಲಿಕ್ಕೆ ಸಂಪೂರ್ಣಾವಕಾಶವುಂಟೆಂದು ಹೇಳಬಹುದಾಗಿದೆ

ಪಾಮಿಯರ್ ಎಂಬ ಪ್ರದೇಶದ ಸ್ವಾಮಿತ್ವ ವಿಷಯದಲ್ಲಿ ತಕರಾರುಂಟಾಗಿ ಅದ್ಯಾಪಿ ಅವ್ಯವಸ್ಥೆಯಾಗಿರುವಲ್ಲಿ ಕಾಬೂಲ್ ರಾಜ್ಯದ ಅಮೀರರವರು, ಅದೇ ವಿಷಯದೊಳು, ರಷ್ಯಾ ಸರ್ಕಾರದವರೊಡನೆ ರಹಸ್ಯ ಪತ್ರಗಳು ನಡೆಸುತಲಿರುವಂತೆಯೂ, ಅವರಕಡೆ ಯೋಜಾಂಬರು ರಷಿಯಾದೇಶೀಯರ ಪಕ್ಷಾಂತಸ್ಥಿತರಂತೆಯೂ ಇಂಡ್ಯಾ ಗವರ್ನಮೆಂಟಿಗೆ ವರ್ತಮಾನ ಬಂದಿರುವಂತೆ ಕಲ್ಕತ್ತಾಪತ್ರಿಕೆಯೊಂದು ತಿಳಿಸುತಲಿದೆ.

ರಾಜ್ಯತಂತ್ರಕ್ಕೆ ಸಂಬಂಧಪಟ್ಟ ಕೆಲವು ಅಂಶಗಳಂ ಕುರಿತು ಕಾಬೂಲ್ ಅಮೀರರವರೊಡನೆ ಆಲೋಚಿಸುವದಕ್ಕಾಗಿ ಇಂಡ್ಯಾರಾಜ್ಯದ ಕಮಾಂಡರ್ ಇನ್ ಚೀಫರವರಾದ ಲಾರ್ಡ್ ರಾಬರ್ಟ್ಸ್‌ಯವರು ಕೆಲವರೊಡನೆ ಕಾಬೂಲಿಗೆ ಹೋಗುವ ಪ್ರಯತ್ನಗಳು ನಡೆಯುತಲಿವೆಯಷ್ಟೆ. ಲಾರ್ಡ್ ರಾಬರ್ಟ್ಸ್‌ಯವರನ್ನು ಜಲಾಲಾಬಾದಿನಲ್ಲಿ ಸಂಧಿಸುವದಕ್ಕೆ ಅಮೀರರವರು ಒಪ್ಪಿರುತ್ತಾರಾಗಿ ಸದರೀ ಇಬ್ಬರಿಗೂ ಮುಂದಿನ ತಿಂಗಳಲ್ಲಿ ಜಲಾಲಾಬಾದಿನೊಳು ಸಮಾಗಮ ಉಂಟಾಗುವದೆಂದು ಅಲಹಾಬಾದ್ ಪತ್ರಿಕೆಯೊಂದು ತಿಳಿಸುತಿದೆ.

ಆಸ್ಟ್ರಿಯಾ ಸಂಸ್ಥಾನದ ಯುವರಾಜರಾದ ಆರ್ಚ್‌ಡ್ಯೂಕ್ ಫರ್ಡಿನಾಂಡ್ ಎಂಬವರು ಭೂಪ್ರದಕ್ಷಿಣ ಮಾಡಿಕೊಂಡು ನಾಳೆಯ ದಿನ ಮುಂಬೈ ಬಂದರದಲ್ಲಿ ಹಡಗು ಇಳಿದು, ಮೈಸೂರು, ಹೈದರಾಬಾದ್, ಗ್ವಾಲಿಯರ್ ಮೊದಲಾದ ಪ್ರಸಿದ್ಧಪಟ್ಟಣಗಳಂ ನೋಡಿಕೊಂಡು ಬರುವ ಫೆಬ್ರುವರಿ ೧೮ನೇ ತಾರೀಖಿನಲ್ಲಿ ಕಲ್ಕತ್ತೆಯಂ ಸೇರಿ, ಅಲ್ಲಿಂದ ಅದೇ ತಿಂಗಳ ೬ನೇ ತಾರೀಖಿನಲ್ಲಿ ಹೊರಟು ರಾಜಪುಟಾನಾ, ನೇಪಾಳ ಮೊದಲಾದ ದೇಶಗಳಂ ನೋಡಿಕೊಂಡು ಮಾರ್ಚಿ ತಿಂಗಳಲ್ಲಿ ಇಂಡ್ಯಾ ದೇಶವಂ ಬಿಟ್ಟು ಮುಂದಕ್ಕೆ ಪ್ರಯಾಣವಾಗುವರು.

ವೆಂ|| ದಾದಾಬಾಯಿ ನವರೋಜಿಯೆಂಬ ಪಾರಸೀ ದೊಡ್ಡಮನುಷ್ಯರು ಕೆಲವು ದಿನಗಳ ಹಿಂದೆ ಮಹಾರಾಜ್ಞೀಯವರ ಪಾರ್ಲಿಯಮೆಂಟ್ ಸಮಾಜದಲ್ಲಿ ಸೆಂಟ್ರಲ್ ಫಿನ್ಸ್‌ಬರಿ ಯೆಂಬ ತುಕಡಿಯ ಪ್ರಜೆಗಳ ತರಫ ಮೆಂಬರಾಗಿ ಚುನಾಯಿಸಲ್ಪಟ್ಟಿರುತ್ತಾರೆಯಷ್ಟೆ. ಸದರೀಯವರು ಈ ತಿಂಗಳ ಆಖೈರಿನಲ್ಲಿ ಪಾರ್ಲಿಯಮೆಂಟ್ ಮರಳ ಸೇರುವ ಸಂದರ್ಭದೊಳು ಸ್ಟೇಟ್ ಸೆಕ್ರಟೆರಿಯವರ ತಲಬಿನ ವಿಷಯವಂ ಕುರಿತು ಖಂಡಿತವಾಗಿ ಆಕ್ಷೇಪಿಸಿ ಚರ್ಚೆಗೆ ತರುವರೆಂದು ಹೇಳಿಕೊಳ್ಳುತ್ತಾರೆ.

ವೆಂಕಟಗಿರಿ ಸಂಸ್ಥಾನದ ಗತಿಸಿದ ಅರಸರವರು ಉಯಿಲ್ ಮೂಲಕ ಏರಡುಲಕ್ಷ ರೂಪಾಯಿಗಳು ಮೂಲಧನ ಏರ್ಪಡಿಸಿ ಅದರಲ್ಲಿ ಉತ್ಪತ್ತಿಯಾಗುವ ಬಡ್ಡಿಯಲ್ಲಿ ಸಂವತ್ಸರಕ್ಕೊಂದಾವರ್ತಿ ಹಿಂದೂ ವೇದಾಂತ ಶಾಸ್ತ್ರದಲ್ಲಿ ಪ್ರಸಿದ್ಧರಾದ ಪಂಡಿತರುಗಳಿಗೆ ಇನಾಂಗಳು ಕೊಡತಕ್ಕದ್ದೆಂದು ವ್ಯವಸ್ಥೆ ಮಾಡಿರುವದಲ್ಲದೆ ಅಂತಾ ತಮ್ಮ ಉದ್ದೇಶವಂ ಈಡೇರಿಸತಕ್ಕ ಬಗ್ಗೆ ದಿವಾನ್ ಬಹದೂರ್ ರಘುನಾಥರಾವ್ ಮೊದಲಾದ ಮೂವರು ದೊಡ್ಡ ಮನುಷ್ಯರನ್ನು ಟ್ರಸ್ಟಿಗಳಾಗಿ ಏರ್ಪಡಿಸಿರುತ್ತಾರೆಂದು ಮದರಾಸ್ ಪತ್ರಿಕೆಯೊಂದು ತಿಳಿಸುತಿದೆ.

ಮದರಾಸ್ ರೈಲ್ವೇ ಕಂಪೆನಿಯವರು, ಅರಕ್ಕೋಣಂ, ಜೋಲಾರ್‌ಪೇಟೆ, ಬೆಂಗಳೂರು, ಪೋದನೂರು, ಹಿರೋಡ್ ಮತ್ತು ಕಳ್ಳಿಕೋಟೆ, ಈ ಸ್ಟೇಷನ್ನುಗಳಲ್ಲಿ ಟಿಕೆಟ್ ಕೊಡುವ ಕೆಲಸಕ್ಕೆ ಯೂರೋಪಿಯನ್ ಅಥವಾ ಯುರೇಷಿಯನ್ ಹೆಡ್ ಬುಕ್ಕಿಂಗ್ ಕ್ಲರ್ಕುಗಳಂ ಮೊಕರರ್ಮಾಡಬೇಕೆಂದು ನಿಶ್ಚಯಿಸಿರುವದಾಗಿ ಮದರಾಸ್ ಮೆಯಿಲ್ ಪತ್ರಿಕೆ ತಿಳಿಸುತಿದೆ. ಸದರೀ ಕೆಲಸವನ್ನು ಇದುವರೆವಿಗೆ ನೇಟಿವ್‌ಗಳು ನಡೆಸುತ ಬರುತಲಿ, ಈಚೆಗೆ ರೈಲ್ವೆ ಅಧಿಕಾರಿಗಳಿಗೆ ಅವರಲ್ಲಿ ಯಾವ ಭಾಗದೊಳು ಅನರ್ಹತೆ ಕಂಡುಬಂದಿತೊ ಅದುಮಾತ್ರ ವ್ಯಕ್ತವಾಗಲಿಲ್ಲವು.

ವಿಶಾಖಪಟ್ಣ ಡಿಸ್ಟ್ರಿಕ್ಟಿನಲ್ಲಿ ಯೊಬ್ಬರು ಮತ್ತು ಕಡಪೆ ಡಿಸ್ಟ್ರಿಕ್ಟಿನಲ್ಲಿ ಒಬ್ಬರು ಸ್ಟೇಷನರಿ ಮ್ಯಾಜಿಸ್ಟ್ರೇಟರು, ಕೆಲವರು ಅಪರಾಧಿಗಳಿಗೆ ಬೇರೆ ಬೇರೆ ಅಪರಾಧಗಳಿಗೆ ಪ್ರತ್ಯೇಕ ಪ್ರತ್ಯೇಕ ದಂಡನೆ ವಿಧಿಸಿ, ಸದರೀ ಶಿಕ್ಷೆಯು ಒಂದೇ ಕಾಲದಲ್ಲಿ ಪ್ರಾರಂಭವಾಗತಕ್ಕದ್ದೆಂದು ಹುಕುಂ ಮಾಡಿರುವದು ಅಕ್ರಮವಾಗಿರುತಿದೆಯೆಂದು ಗವರ್ನಮೆಂಟ್ ತರಫ ಪ್ಲೀಡರಾದ ವೆಂ|| ಸುಬ್ರಹ್ಮಣ್ಯ ಅಯ್ಯರವರು ಕಳೆದ ಸೋಮವಾರದಿನ ಮದರಾಸ್ ಹೈಕೋರ್ಟಿನಲ್ಲಿ ಚೀಫ್ ಜಸ್ಟಿಸ್ ಮತ್ತು ಜಸ್ಟಿಸ್ ವೆಂ|| ಪಾರ್ಕರವರ ಮುಂದೆ ಪ್ರಸ್ತಾಪಿಸಲು, ಸದರೀ ಅಕ್ರಮವನ್ನು ಕ್ರಮಪಡಿಸುವ ವಿಷಯದಲ್ಲಿ ಆಕ್ಷೇಪಣೆ ಯಾವದಾದರಿದ್ದರೆ ತಿಳಿಸಬೇಕೆಂದು ಅಪರಾಧಿಗಳಿಗೆ ನೋಟೀಸ್ ಕೊಡತಕ್ಕದ್ದೆಂದು ಹುಕುಂ ಮಾಡಿದರು.

ಇಂಡ್ಯಾರಾಜ್ಯದ ಚಲಾವಣೆ ನಾಣ್ಯಗಳ ವಿಮರ್ಶೆಯ ಬಗ್ಗೆ ಏರ್ಪಟ್ಟ ಕಮಿಟಿಯವರು ಈ ತಿಂಗಳ ೧೨ನೇ ತಾರೀಖಿನಲ್ಲಿ ಮರಳ ಸಭೆ ಸೇರುವ ಪ್ರಯತ್ನಗಳು ನಡೆಯುತಲಿತ್ತು. ಈ ಕಮಿಟಿಯವರು ತಮ್ಮ ರಿಪೋರ್ಟನ್ನು ಬ್ರಿಟಿಷ್ ಪಾರ್ಲಿಯಮೆಂಟ್ ಸೇರುವದರೊಳಗಾಗಿ ಕಳುಹಿಸಿಕೊಡುವ ಸಂಭವವಿಲ್ಲವು. ಕಟ್ಟ ಶೃಂಗರಿಸಿಕೊಳ್ಳುವದರೊಳಗಾಗಿ ಪಟ್ಟಣವು ಕೊಳ್ಳೆಹೋಯಿತು" ಎಂಬ ಗಾದೆಗೆ ಅನುಗುಣವಾಗಿ, ಕಮಿಟಿಗಳ ಮೊಕರರಾತಿ, ಅವರು ಮಾಡುವ ತನಿಖೆಗಳು, ಅದರಮೇಲೆ ಬರುವ ಬಹುವಿಧ ಆಕ್ಷೇಪಣಗಳು, ಅದಕ್ಕೆ ಅವರು ಹೇಳುವ ಸಮಾಧಾನಗಳು, ಇತ್ಯಾದಿಗಳು ಪೂರ್ತಿಯನ್ನೈದುವದರೊಳಗಾಗಿ, ಇಂಡ್ಯಾ ರಾಜ್ಯದ ಐಶ್ವರ್ಯವು ಸಹ ಇನ್ನೆಷ್ಟು ಹಾನಿಯಂ ಹೊಂದಬೇಕೋ ನಾವರಿಯೆವು.

ಮದರಾಸ್ ಯೂನಿವರ್ಸಿಟಿಗೆ ಸೇರಿದ ಈ ಸಂದ ಬಿ. ಎ. ಬಿ. ಎಲ್, ಎಂ. ಎ, ಮತ್ತು ಎಂ. ಎಲ್. ಪರೀಕ್ಷೆಗಳು ಈ ದಿನ ಪ್ರಾರಂಭವಾಗುವದಲ್ಲದೆ ಬಿ. ಎ. ಪರೀಕ್ಷೆಯ ಪೈಕಿ ಎರಡನೆಯ ಭಾಗವು ಇದೇ ತಿಂಗಳ ೨೩ನೇ ತಾರೀಖಿನಲ್ಲಿ ಪ್ರಾರಂಭವಾಗುವದು. ಬಿ. ಎ. ಪರೀಕ್ಷೆಯ ವಿಷಯದಲ್ಲಿ ಈಚೆಗೆ ಮಾಡಲ್ಪಟ್ಟಿರುವ ನಿಬಂಧನೆಗಳ ದೆಸೆಯಿಂದ ಉಮೇದ್‌ವಾರರಿಗೆ ಒಂದು ಭಾಗದೊಳು ಸ್ವಲ್ಪ ಅನುಕೂಲ್ಯಗಳು ಕಲ್ಪಿಸಲ್ಪಟ್ಟದ್ದಾಗ್ಯೂ ಈ ಪರಿಕ್ಷೆಯೊಳು ತೇರ್ಗಡೆಯಾಗದೆ ಹೋಗುವಂತವರಿಗೆ ಮುಂದಿನ ವರ್ಷದಲ್ಲಿ ನಡೆಯುವ ಅದೇಪರೀಕ್ಷೆಗೆ ಹೋಗಬೇಕೆಂಬ ಉದ್ದೇಶವಿರುವಪಕ್ಷಕ್ಕೆ ಯಾವದಾದರೊಂದು ಕಾಲೇಜಿನಲ್ಲಿ ಓದಿದ ಹೊರತು ಅವರ ದರಖಾಸ್ತುಗಳು ಮಂಜೂರ್ಮಾಡಲ್ಪಡಲಾರವೆಂದು ಮಾಡಿರುವ ನಿರ್ಬಂಧವು ಕೇವಲ ಕಠಿಣವಾದುದು.

ಕಳೆದ ತಿಂಗಳ ೧೫ನೇ ತಾರೀಖಿನಲ್ಲಿ ಹೈದರಾಬಾದ್ ಸಿಟಿ ಹೈಕೋರ್ಟಿನಲ್ಲಿ ಜಡ್ಜಿಗೂ ಲಾಯರುಗಳಿಗೂ ಪ್ರಬಲವಾದ ವಾಕ್ಕಲಹಕ್ಕೆ ಕಾರಣವುಂಟಾಯಿತು ಹ್ಯಾಗಂದರೆ, ಸದರೀ ಕೋರ್ಟಿನ ವಕೀಲನೊಬ್ಬನು ಒಂದು ಮೊಕದ್ದಮೆಯಲ್ಲಿ ತನಗೆ ಸಾಧಕವಾಗಿರುವ ಅಂಶಗಳು ಹಿಡಿದು ವಾದಿಸುತ್ತಿರುವಲ್ಲಿ ಜಡ್ಜಿಯವರು ಅದಕ್ಕೆ ನಿಗೆ ಕೊಡದೆ ಬೇರೆ ಕೆಲಸಕ್ಕೆ ನಿಗೆ ಕೊಡುತಲಿದ್ದಾರೆಂದು ತಿಳಿದು ತನ್ನ ವಾದಕ್ಕೆ ಅವಧಾನ ಕೊಡಬೇಕೆಂದು ಕೇಳಿಕೊಂಡನು, ಪರಂತು ಜಡ್ಜಿಯವರು ಅದಕ್ಕಾಗಿ ಕೋಪಗೊಂಡು ಅವರಿಗೂ ಲಾಯರಿಗೂ ಕಠಿಣವಾದ ವಾಕ್ಕಲಹಕ್ಕೆ ಪ್ರಾರಂಭವಾಗಿ ಕಡೆಗೆ ಜಡ್ಜಿಯವರು ಒಬ್ಬ ಜವಾನನನ್ನು ಕರೆದು ಸದರೀ ವಕೀಲನನ್ನು ಕೋರ್ಟಿನಿಂದ ಆಚೆ ನೂಕಿಬಿಡುವಂತೆ ಹುಕುಂಮಾಡಿದರು. ಆಗ ಅಲ್ಲಿದ್ದ ವಕೀಲರೆಲ್ಲರು ಒಗ್ಗಟ್ಟಾಗಿ, ಚೀಫ್ ಜಡ್ಜಿಯವರ ಬಳಿಗೆ ಹೋಗಿ ನಡೆದ ಸಂಗತಿಯನ್ನೆಲ್ಲ ಅವರಿಗೆ ರಿಪೋರ್ಟ್ ಮಾಡಲು ಅವರು ಗವರ್ನಮೆಂಟಿನವರ ವ್ಯವಸ್ಥೆಯ ಬಗ್ಗೆ ಅಲ್ಲಿಗೆ ರಿಪೋರ್ಟ್ ಮಾಡಿರುತ್ತಾರೆಂದು ಆ ಪ್ರಾಂತದ ಪತ್ರಿಕೆಯೊಂದು ತಿಳಿಸುತಿದೆ.

ಹಿಂದೂ ವಿಧವೆಯಾದವಳು ಕ್ರಿಸ್ಚಿಯನ್ ಅಥವಾ ಬ್ರಹ್ಮೋಮತಕ್ಕೆ ಸೇರಿ ಆ ಮತದಾಚಾರಗಳನುಸಾರವಾಗಿ ವಿವಾಹ ಮಾಡಿಕೊಂಡರೆ ಮೃತಪಟ್ಟ ತನ್ನ ಹಿಂದೂಪತಿಯ ಆಸ್ತಿಯಂ ಪಡೆಯಲಿಕ್ಕೆ ಅರ್ಹಳಾಗುತ್ತಾಳೆಯೋ ಯೆಂಬ ಜಿಜ್ಞಾಸೆಯುಂಟಾಗಲು ಕಲ್ಕತ್ತಾ ಹೈಕೋರ್ಟ್ ಜಡ್ಜಿಗಳ ಪೈಕಿಯೊಬ್ಬರಾದ ವೆಂ|| ಪ್ರಿನ್ಸೆಪ್ ಎಂಬವರು ಮಾತ್ರ ಆಕೆ ಪಡೆಯಲಿಕ್ಕೆ ಬಾಧ್ಯತೆಯುಂಟೆಂತಲೂ, ಉಳಿದವರು ಇಲ್ಲವೆಂತಲೂ ಅಭಿಪ್ರಾಯ ಪಟ್ಟಿರುತ್ತಾರೆ ಹಿಂದೂ ವಿಧವೆಯಾಗಿದ್ದು ಬ್ರಹ್ಮೋ ಮತಕ್ಕೆ ಸೇರಿ ವಿವಾಹಮಾಡಿಕೊಂಡಮೇಲೆ ಮೃತಪಟ್ಟ ತನ್ನ ಹಿಂದೂ ಪತಿಯ ಜಿಂದಗಿಗಳು ತನಗೆ ಸೇರಬೇಕೆಂದು ತರಲ್ಪಟ್ಟ ಮೊಕದ್ದಮೆಯಲ್ಲಿ ಅವಳಿಗೆ ಪ್ರತಿಕೂಲವಾಗಿ ಫೈಸಲಾಯಿತು. ಪರಂತು ಆಕೆಯು ಆ ಫೈಸಲ್ ವ್ಯವಸ್ಥೆಯಬಗ್ಗೆ ಮಹಾರಾಜ್ಞೀಯವರ ಪ್ರಿವೀ ಕೌನ್ಸಿಲಿಗೆ ಅಪೀಲ್ ಮಾಡಬೇಕೆಂದು ನಿರ್ಣಯಿಸಿರುವದರಿಂದ ಸದರೀ ಕೋರ್ಟಿನವ್ಯವಸ್ಥೆಯನ್ನು ದಕ್ಷಿಣ ಬಂಗಾಳ್ ದೇಶದ ಪ್ರಜೆಗಳು ಕೇವಲ ಆತುರದೊಡನೆ ನಿರೀಕ್ಷಿಸುತಲಿದಾರೆ. ಪ್ರಿವೀಕೌನ್ಸಿಲ್ ಕೋರ್ಟಿನ ಮುಂದೆ ಹಿಂದೂಗಳ ತರಫ ಸದರೀ ಮೊಕದ್ದಮೆಯನ್ನು ಹಿಡಿದು ಚೆನ್ನಾಗಿ ವಾದಿಸುವದಕ್ಕೆ ಅಲ್ಲಿ ಸಮರ್ಥರಾದ ಒಬ್ಬ ಲಾಯರಂ ನಿಯಮಿಸಬೇಕೆಂದು ಕೊಡಲ್ಪಟ್ಟ ಸಲಹೆಯು ಕೇವಲ ಉಚಿತವಾದದ್ದಾಗಿಯೂ ಆವಶ್ಯಕವಾದದ್ದಾಗಿಯೂ ಇರುತಿದೆ.

## LOCAL AND PROVINCIAL NEWS.

### ಒಳದೇಶ ಮತ್ತು ತಾಲ್ಲೂಕ್ ಜಾತ ವೃತ್ತಾಂತಗಳು.

ಇಲ್ಲಿನ ಬ್ರಿಟಿಷ್ ರೆಸಿಡೆಂಟರವರು ಕ್ಷಿಪ್ರದಲ್ಲಿ ಕೊಡಗಿಗೆ ಹೋಗಿ ಅಲ್ಲಿನ ಕೆಲಸಗಳಂ ವ್ಯವಸ್ಥೆಪಡಿಸಿಕೊಂಡು ಬರುವರೆಂದು ತಿಳಿಯಲಾದೆವು.

ಈ ಸಂಸ್ಥಾನದ ರೆಸಿಡೆಂಟರಾದ ಕರ್ನಲ್ ಹೆಂಡರ್ಸನ್ ಸಾಹೇಬರವರು ರೈಲ್‌ರಸ್ತೆಯಂ ನೋಡುವದಕ್ಕಾಗಿ ಕಳೆದ ಶುಕ್ರವಾರದ ದಿನ ಪ್ರಾತಃಕಾಲ ದೊಡ್ಡಬಳ್ಳಾಪುರಕ್ಕೆ ಹೋಗಿ ಅದೇದಿನ ಸಾಯಂಕಾಲ ವಾಪಸ್ ಬಂದರು.

ಮೈಸೂರು ಮಹಾರಾಜ್ಞೀಯವರ ಕುಲಬಾಲಿಕಾ ಪಾಠಶಾಲೆಯಲ್ಲಿ ಒಬ್ಬ ಉಪಾಧ್ಯಾಯಿನಿಯಾದ ರುಕ್ಮಮ್ಮನೆಂಬುವಳು ಈಚೆಗೆ ಡಕೊಗೆ ಬಾಲಿಕಾಪಾಠಶಾಲೆಯ ಸೌಧದಲ್ಲಿ ಸ್ತ್ರೀವಿದ್ಯಾಭ್ಯಾಸವಂ ಕುರಿತು ಉಪನ್ಯಾಸವಂ ಮಾಡಿದಳೆಂದು ಮೈಸೂರು ಹೆರಾಲ್ಡ್ ಪತ್ರಿಕೆಯ ಮೂಲಕ ತಿಳಿದು ಸಂತೋಷಪಡುತ್ತೇವೆ.

ಶ್ರೀಮನ್ ಮಹಾರಾಜರವರು ಕಳೆದ ಶನಿವಾರದ ದಿನ ಕಲ್ಕತ್ತೆಯಿಂದ ಪ್ರಯಾಣವಾದರೆಂದು ನಿನ್ನೆಯದಿನ ಬಂದ ತಂತಿ ವೃತ್ತಾಂತದ ಮೂಲಕ ತಿಳಿಯಬರುತಿದೆ. ಅಲ್ಲಿಂದ ಶ್ರೀಮನ್ ಮಹಾರಾಜರವರ ಸಂಚಾರಕ್ರಮವಂ ಮುಂದೆ ತಿಳಿಯಬೇಕಾಗಿರುತಿದೆ. ಪ್ರಾಯಶಃ ಫೆಬ್ರುವರಿ ಮಧ್ಯಭಾಗದಲ್ಲಿ ಈ ಪುರಿಗೆ ವಾಪಸ್ ದಯಮಾಡಬಹುದೆಂದು ಕಾಣುತಿದೆ

ಈಗ ಈದೇಶದೊಳು ಜಾರಿಯಲ್ಲಿರುವ ಎಕ್ಸೈಸ್ ಆಕ್ಟು ತೃಪ್ತಿಕರವಾಗಿಲ್ಲವೆಂದು ಕಂಡು ಬಂದದರಿಂದ ಮದರಾಸ್‌ನಲ್ಲಿ ಜಾರೀಯೊಳಿರುವ ಅಬ್‌ಕಾರಿ ಆಕ್ಟನ್ನು ಈ ದೇಶದೊಳು ಜಾರೀಯಲ್ಲಿ ತರುವ ವಿಷಯದಲ್ಲಿ ಇಂಡ್ಯಾ ಗವರ್ನಮೆಂಟಿನವರ ಮಂಜೂರಾತಿಯಂ ಪಡೆಯಬೇಕೆಂದು ಇಲ್ಲಿನ ಅಧಿಕಾರಿಗಳು ರೆಸಿಡೆಂಟರಂ ಕೇಳಿಕೊಂಡಿರುವದಾಗಿ ಕೇಳುತ್ತೇವೆ.

ರೈಲ್ ಗಾಡಿಗಳು ಹೊರಡುವ ಸಂದರ್ಭಗಳೊಳು ಕಾರ್ಯಾರ್ಥ ಪ್ಲ್ಯಾಟ್‌ಫಾರಮಿಗೆ ಹೋಗಬೇಕಾದವರು ಅರ್ಧ ಆಣೆ ಕೊಟ್ಟು ಟಿಕೆಟುಗಳಂ ಪಡೆಯಬೇಕೆಂಬ ನಿಬಂಧನೆಯು ದಕ್ಷಿಣ ಮಹರಾಷ್ಟ್ರ ರೈಲ್ವೆ ಪೈಕಿ ಮೈಸೂರು ಮೊದಲಾದ ಕೆಲವು ಸ್ಟೇಷನ್ನುಗಳಲ್ಲಿ ಆಚರಣೆಯೊಳು ತರಲ್ಪಟ್ಟು ನಡೆಯುಬರುತಲಿತ್ತಷ್ಟೆ. ರೈಲ್ವೆ ಅಧಿಕಾರಿಗಳು ಸದರೀನಿರ್ಬಂಧವಂ ಈಚೆಗೆ ತಪ್ಪಿಸಿದರೆಂದು ತಿಳಿಯಬರುತಿದೆ.

ನಿನ್ನೆಯದಿನ ಮೊದಲು, ಈಗ ಬೆಳಿಗ್ಗೆ ೪½ ಘಂಟೆಗೆ ಈ ಪುರಿಂದ ಹೊರಡುವ ಗಾಡಿಯಲ್ಲದೆ, ಹಿಂದೆ ಇದ್ದಂತೆ ಪುನೆಯಿಂದ ಮಧ್ಯಾನ್ಹ ಸುಮಾರು ೧| ಘಂಟೆಗೆ ಈ ಪುರಿಗೆ ಬರುವ ಮೆಯಿಲ್ ಗಾಡಿಯು ಇಲ್ಲಿಂದ ಮೈಸೂರು ವರಿವಿಗೆ ಹೋಗುವಂತೆಯೂ, ಮೈಸೂರಿಂದ ಒಂದು ಗಾಡಿ ಬೆಳಿಗ್ಗೆ ಹೊರಟು ಮಧ್ಯಾನ್ಹ ೧ ಘಂಟೆಗೆ ಇಲ್ಲಿಗೆ ಬಂದು ಅದು ಇಲ್ಲಿಂದ ನೆಟ್ಟಗೆ ಪುನೇಗೆ ಹೋಗುವಂತೆಯೂ ಏರ್ಪಾಡಾಗಿರುವಂತೆ ಕೇಳುತ್ತೇವೆ.

ಈ ಸಂಸ್ಥಾನದ ದಿವಾನರಿಗೆ ಅಸಿಸ್ಟೆಂಟರಾಗಿ ಒಬ್ಬರಂ ನಿಯಮಿಸಿಕೊಳ್ಳುವದಕ್ಕೆ ಮಹಾರಾಜ್ಞೀಸರ್ಕಾರದವರು ಅಪ್ಪಣೆ ಕೊಟ್ಟಿರುವಂತೆಯೂ, ಸದರೀ ಅಧಿಕಾರವು ಇಲ್ಲಿನ ಪೋಲೀಸ್ ಇನ್ಸ್‌ಪೆಕ್ಟರ್ ಜನರಲವರಾದ ಮ|| ವಿ. ಪಿ. ಮಾಧವರಾಯರವರಿಗೆ ಕೊಡಲ್ಪಡುವದೆಂತಲೂ ಈಚೆಗೆ ಒಂದು ಪ್ರವಾದ ಹುಟ್ಟಿರುವದಾಗಿ ಒಳದೇಶದ ಸ್ಪೆಕ್ಟೇಟರ್ ಪತ್ರಿಕೆ ಹೇಳುತಿದೆ ಈ ಪ್ರವಾದವು ಸುತರಾಂ ಆಧಾರ ಶೂನ್ಯವಾದುದೆಂದು ನಾವೆಣಿಸಲಾರೆವು.

ಹವಾ ವಿಷಯದಲ್ಲಿ ಅಧಿಕಾಂಶವೇನೂ ಇಲ್ಲವು. ಯೆಲ್ಲವೂ ಹಿಂದಿನ ವಾರದ ಪತ್ರಿಕೆಯ ಮೂಲಕ ತಿಳಿಸಿದಂತೆಯೇ ಇರುತಿವೆ. ಜಲದೌರ್ಲಭ್ಯವು ದಿನೇ ದಿನೇ ವೃದ್ಧಿಯಾಗುತಲಿದೆ. ತತ್ಪರಿಹಾರ ವಿಷಯದಲ್ಲಿ ವಿಶೇಷ ಪ್ರಯತ್ನಗಳು ನಡೆಸಲ್ಪಡುವಂತೆ ನಮ್ಮ ಕೇಳ್ವಿಕೆಗೆ ಬರಲಿಲ್ಲವು. ಯೆಲ್ಲ ಪ್ರಯತ್ನವೂ ಶಬ್ದದಿಂದಲ್ಲದೆ ಕಾರ್ಯತಃ ಯಾವದನ್ನೂ ಕಾಣೆವು. ಶ್ರೀಮನ್ ಮಹಾರಾಜರವರ ಸವಾರಿಯು ವಾಪಸ್ ಬಂದಮೇಲೆ ದಿವಾನರವರು ಸರ್ವಪ್ರಯತ್ನದಿಂದಲೂ ಆವಶ್ಯಕಗಳಾದ ಏರ್ಪಾಡುಗಳಂ ಮಾಡುವರೆಂದು ನಂಬಿಯಿದೇವೆ.

## ಖೂನಿ ಮತ್ತು ಆತ್ಮಹತ್ಯೆ

ಈ ತಿಂಗಳ ೧೦ನೇ ತಾರೀಖು ಮಂಗಳವಾರದ ದಿನ ಮಧ್ಯಾಹ್ನ ಸುಮಾರು ಮೂರುಘಂಟೆಯ ಸಮಯದಲ್ಲಿ ಈ ಪುರದ ಚಿಕ್ಕಪೇಟೆಗೆ ಸೇರಿದ ರಾವುತ್ತಾವಿಡಿಗರ ಸಂದಿನಲ್ಲಿ ಒಂದು ಮನೆಯೊಳು ಕೇವಲ ಕ್ರೂರವಾದ ಮತ್ತು ಘೋರತರವಾದ

ಎರಡು ಖೂನಿಗಳೂ ಒಂದು ಆತ್ಮಹತ್ಯೆಯೂ ನಡೆದವು ಹ್ಯಾಗೆಂದರೆ, ಸದರೀ ಸಂದಿನಲ್ಲಿ ಒಂದು ಬಾಡಿಗೆ ಮನೆಯೊಳು ಪುತ್ತಿಗೆರೆ ನರಸರಾಜು ಎಂಬ ಆರುವೇಲ ಬ್ರಾಹ್ಮಣನೊಬ್ಬನು ತನ್ನ ಭಾರ್ಯೆಯೊಡನೆ ಕೆಲವು ಕಾಲದ ಮೊದಲು ವಾಸಮಾಡುತ್ತ, ತನ್ನ ಜೀವನೋಪಾಯಂ ಹುಡಿಕಿಕೊಂಡು ಕಚ್ಚೇರಿಗಳಿಗೆ ಹೋಗಿಬರುತಲಿದ್ದನು. ಹೀಗಿರುವಲ್ಲಿ ಕಳೆದಮಂಗಳವಾರದ ದಿನ ಸುಮಾರು ೧೦ ಘಂಟೆಗೆ, ತಾನು ಒಂದುಕಾರ್ಯಾರ್ಥ ಇಲ್ಲಿನ ದಂಡಿಗೆ ಹೋಗಿಬರಬೇಕೆಂತಲೂ ತಾನು ಬರುವದಕ್ಕೆ ಸಾಯಂಕಾಲ ವಾಗುವದೆಂತಲೂ ತನ್ನ ಭಾರ್ಯೆಗೆ ಹೇಳಿಯೊರಟು ಹೋದವನು ಮೂರು ಘಂಟೆಗೇನೆವಾಪಸುಬಂದುಮನೆಗೆಹೋಗಿ ನೋಡುವಲ್ಲಿ ತನ್ನ ಕೊಠಡಿಗೆ ಒಳಗಡೆ ಚಿಲಕ ಹಾಕಿರುವದಂ ಕಂಡು ಅದರೊಳಗೆ ಆಡುತಿದ್ದ ತನ್ನ ಗಂಡುಮಗುವಿಗೆ ಸನ್ನೆಮಾಡಲು ಅದು ಚಿಲಕವಂ ತೆಗೆದುಬಿಟ್ಟಿತು. ಒಳಗೆ ಹೋಗಿ ನೋಡುವಲ್ಲಿ ತನ್ನ ಹೆಂಡತಿಯು ಪರಪುರುಷನಂ ಕರೆಯಿಸಿಕೊಂಡು ಸುಖಾನುಭವದಿಂದುಂಟಾದ ಆಯಾಸ ಪರಿಹಾರಾರ್ಥ ಏಕಶಯ್ಯೆಯಲ್ಲಿ ನಿದ್ರಾಪರವಶರಾಗಿದ್ದುದಂ ಕಂಡು ಅಮಿತವಾದ ದುಃಖ ಮತ್ತು ಕೋಪದಿಂ ಪ್ರೇರಿತನಾಗಿ ತತ್ಕಾಲದೇಳು ಅಲ್ಲಿ ಸಿಕ್ಕಿದ ಸುಮಾರು ಅರ್ಧ ಅಡಿ ಉದ್ದವುಳ್ಳ ಒಂದು ಚೂರಿಯಂ ತೆಗದುಕೊಂಡು ಮೊದಲು ತನ್ನ ಹೆಂಡತಿಯೆನ್ನಿಸಿಕೊಂಡಿರ್ದ ದುರಾತ್ಮಳ ಕುತ್ತಿಗೆಯಂ ಕುಯಿದು ಹಾಕುವಲ್ಲಿ ಅವಳು ಕಿರಿಚಿಕೊಳ್ಳಲು, ಅವಳ ಪಕ್ಕದಲ್ಲಿ ಮಲಗಿರ್ದ ವಿಟಪುರುಷನು ಗಾಬರಿಗೊಂಡು ಯೇಳುವ ಪ್ರಯತ್ನ ಮಾಡುವದಂ ಕಂಡು ಅವನನ್ನು ಬಲಾತ್ಕಾರದಿಂದ ಹೆಂಡತಿಯ ಮುರ್ದೆಯ ಪಕ್ಕದಲ್ಲೇ ಮಲಗಿಸಿ ಅವನ ಕುತ್ತಿಗೆಯಂ ಸಹ ಕುಯಿದು ಇಬ್ಬರನ್ನೂ ಯಮಪುರಕ್ಕೆ ಸಾಗಿಸಿದಮೇಲೆ ಅದೇ ಕೊಠಡಿಯಲ್ಲಿ ಒಂದುಕಡೆ ಕುಳತುಕೊಂಡು ಅದೇ ಚೂರಿಯಿಂದ ತನ್ನ ಕುತ್ತಿಗೆಯಂ ಕುಯಿದುಕೊಂಡು ಆತ್ಮಹತ್ಯೆ ಮಾಡಿಕೊಂಡನು. ಈ ಘೋರಕೃತ್ಯವು ನೋಡುತಲಿದ್ದ ಆತನ ಮಗು ಅಳುತ ಬೀದಿಗೆ ಬರಲು ಅದಂ ಕಂಡು ಜನರು ಗುಂಪುಗೂಡಿ ನೋಡುವಲ್ಲಿ ಕೊಠಡಿಯೊಳಗಿನ ಸ್ಥಿತಿಯು ತಿಳಿಯಬಂದುಕೂಡಲೆ ಪೋಲೀಸ್ ಸ್ಟೇಷನಿಗೆ ರಿಪೋರ್ಟ್ ಮಾಡಲು, ಇನ್ಸ್‌ಪೆಕ್ಟರು, ಸೂಪರಿಂಟೆಂಡೆಂಟರು, ಟೌನ್ ಮ್ಯಾಜಿಸ್ಟ್ರೇಟರು ಮೆಡಿಕಲ್ ಆಫಿಸರ್ ಮೊದಲಾದವರು ಬಂದು ವಿಚಾರಣೆ ಮಾಡಿದರು. ವಾರಸುದಾರರು ಕಾಣರಲಿಲ್ಲವು. ಆ ದಿನ ರಾತ್ರಿಯೆಲ್ಲ ಮೂರು ಪ್ರೇತಗಳೂ ಹಾಗೆಯೇ ಬಿದ್ದಿದ್ದವು. ಮರುದಿನ ಪ್ರಾತಃಕಾಲ ೭ ಘಂಟೆಗೆ ಮರಳಿ ಅಧಿಕಾರಿಗಳೆಲ್ಲರು ಬಂದು ಸೇರಿ, ಮುರ್ದೆಗಳಂ ಒಂಟಿಯೆತ್ತಿನ ಗಾಡಿಗಳ ಮೇಲೆ ಹಾಕಿಸಿ ಶವಪರೀಕ್ಷೆಬಗ್ಗೆ ಆಸ್ಪತ್ರೆಗೆ ಸಾಗಿಸಿಕೊಂಡು ಹೋದರು. ಅಲ್ಲಿ ನಡೆಯಬೇಕಾದ ಕ್ರಮಗಳೆಲ್ಲ ಸಾಂಗವಾಗಿ ನೆರವೇರಿದಮೇಲೆ ಮುರ್ದೆಗಳು ರುದ್ರಭೂಮಿಗೆ ಕಳುಹಿಸಲ್ಪಟ್ಟವು ಇದು ಹೀಗಿರಲಿ.

ಇಂತಾ ದುಷ್ಕೃತ್ಯಕ್ಕೆ ಕಾರಣಭೂತನಾದ ವಿಟಪುರುಷನು ಯಾರಾಗಿರುವನೆಂಬುದು ಅರಿಯಲು ಈ ಪತ್ರಿಕೆಯನ್ನೋದುವಂತವರು ಅಪೇಕ್ಷೆಪಡುದಾಗಿ ಸದರೀ ಮಹಾಪುರುಷನ ಚರಿತ್ರವಂ ಸಂಗ್ರಹವಾಗಿ ಇಲ್ಲಿ ತಿಳಿಸುವೆವು. ಈತನು ಜಾತಿಯಲ್ಲಿ ಆರುವೇಲಬ್ರಾಹ್ಮಣನು, ಮಾಚಲೀಬಂದರ್ ನಿವಾಸಿ, ಖೂನ್ ಮಾಡಿದವನಿಗೆ ಬಂಧುವಾಗಿಯೂ ಆತನ ಹೆಂಡತಿಗೆ ಚಿಕ್ಕಪ್ಪನೆನಿಸಿಕೊಂಡೂ ಇರುತಿದ್ದನು. ಈತನು ತಾನು ದೇವೀ ಉಪಾಸಕನೆಂದು ಹೇಳಿಕೊಂಡು ಊರೂರಿಗೆ ತಿರುಗಾಡುತ, ತನ್ನ ಮುಖದಲ್ಲಿನ ಕುಂಕುಮಬೊಟ್ಟಿನಿಂದಲೂ ಮೊಳಉದ್ದ ಬೆಳೆಸಿಕೊಂಡಿರ್ದ ತಲೆಯ ಕೂದಲಿನಿಂದಲೂ, ಗಡ್ಡದಿಂದಲೂ ಜನಗಳಂ ಮರುಳುಮಾಡಿ, ನಾನಾವಿಧೋಪಾಯಗಳಂ ಭಿಕ್ಷಬೇಡುತಲಿದ್ದವನು ಈ ಪುರಿಗೆ ಬಂದು ಕೆಲವು ದಿನಗಳಾದವು. ಅದುಮೊದಲು ಸದರೀ ಕಪಟವೇಷಧಾರಿಯು ತನ್ನ ಸಹೋದರನ ಮಗಳೆಂಬ ನೆವವನ್ನಿಟ್ಟುಕೊಂಡು ಅವಳಮನೆಗೆ ಹೋಗಿ ಬರುತಲಿದ್ದು ಕಡೆಗೆ ಮಗಳಂ ಭಾರ್ಯೆಯನ್ನಾಗಿ ಸ್ವೀಕರಿಸಿದ ಸಂಗತಿ ಆಳಿಯನಿಗೆ ತಿಳಿಯಬಂದು, ಆತನು ಕಠಿಣಶಬ್ದಗಳಿಂದ ಮುಂದೆ ತನ್ನ ಮನೆಗೆ ಬರಬೇಡವೆಂದು ಅನೇಕಾವರ್ತಿ ಹೇಳಿದ್ದಾಗ್ಯೂ ಮನೆಯೊಳು ಆತನ ಗೈರುಹಾಜರೀ ಕಾಲವಂ ಅತ್ಯಾತುರದೊಡನೆನಿರೀಕ್ಷಿಸುತಲಿದ್ದು ಕಡೆಗೆ ಈ ತಿಂಗಳ ೧೦ ನೇ ತಾರೀಖ್ ಮಂಗಳವಾರದ ದಿನ ಮಧ್ಯಾಹ್ನ ಎರಡು ಘಂಟೆಗೆ ಭೋಜನಾನಂತರ ತಾಂಬೂಲಚರ್ವಣಕ್ಕೇನೆ ಅಲ್ಲಿಗೆ ಹೋಗಿ ತನ್ನ ಆಶಾಸ್ಫೂರ್ತಿಯಾದ ಕೆಲವು ನಿಮಿಷಗಳೊಳಗಾಗಿ ತನ್ನ ಮಗಳೊಡನೆ ಯಮಪುರಿಯಂ ಸೇರಿದನು. ಇದೇ ವಿಷಯದಲ್ಲಿ ಬಹುವಿಧ ವರ್ತಮಾನಗಳು ನಮ್ಮ ಕೇಳ್ವಿಕೆಗೆ ಬಂದೂ ಬರುತಲೂ ಇದ್ದಾಗ್ಯೂ ಅದರ ಔಚಿತ್ಯವಂ ಪರ್ಯಾಲೋಚಿಸಿ ಅದರ ಪ್ರಸ್ತಾಪವಂ ಇಲ್ಲಿಗೆ ವಿರಮಿಸುತ್ತೇವೆ. ಪರಂತು ನರಸರಾಜು ಎಂಬಾತನ ಸುಗುಣಗಳಂ ಯೋಚಿಸಲಾಗಿ ಆತನಿಗೀಗ ಪ್ರಾಪ್ತವಾದ ಅಕಾಲಮರಣಕ್ಕಾಗಿ ಬಹಳ ಚಿಂತಿಸುತ್ತೇವೆ. ಪರಂತು ಆತನು ನಡೆಸಿದಕೃತ್ಯವು ಉಚಿತವಾದದ್ದೆಂದು ನಾವು ಹೇಳಲಾರೆವು.

## ವೃತ್ತಾಂತಖತ್.

ಜನವರಿ ೧—೨ ರಲ್ಲು ಮುಕ್ಕೋಟಿ ಉತ್ಸವಪ್ರಯುಕ್ತ ಮೈಸೂರು ಶ್ರೀ ಮಹಾಪ್ರಭುಗಳವರ ಧರ್ಮ ಛತ್ರದಲ್ಲಿ ನಡೆದ ಬ್ರಾಹ್ಮಣ ಸಂತರ್ಪಣೆ ಕಾಲದಲ್ಲಿ ಶ್ರದ್ಧಾಪೂರ್ವಕ ಉಪವಾಸದೊಡನೆ ಪಙ್ಕ್ತಿಗಳಮೇಲೆ ನಿಂತು ವಿಚಾರಣೆ ಮಾಡಿ ಮತ್ತು ಬಡಿಸಿ ಮೆಹನತ್ ಮಾಡಿದ ಈ ಕೆಳಗೆ ವಿವರಿಸುವ ದೊಡ್ಡ ಮನುಷ್ಯರುಗಳ ಗುಣಾತಿಶಯಗಳನ್ನು ಯೆಷ್ಟು ಕೊಂಡಾಡಿದರೂ ತೃಪ್ತಿಯಾಗದೆ ತಮ್ಮ ಪತ್ರಿಕಾದ್ವಾರಾ ಪ್ರಕಾಶಮಾಡಿ ಸಂತೋಷಿಸಬೇಕೆಂದು ಕುತೂಹಲದಿಂದ ಬೇಡುತ್ತೇನೆ.

ಮ||ರಾ|| ಪ್ರಿಸಆಫಿಸ ಮ್ಯಾನೇಜರ್ ಮೇಲಿ ಕೃಷ್ಣರಾಯರು.
" ಕಂಟ್ರೋಲರ್ ಆಫಿಸ ಆ|| ರೆಡ್ಡಿ ಕೃಷ್ಣರಾಯರು
" ಡಿಟ್ಟೋ ರಘುನಾಥರಾಯರವರು
" ದಿವಾನ್ ಆಫಿಸ ಶೇಷಗಿರಿರಾಯರವರು
" ಮುಜರಾಯಿಕಮಿಷನರ್ ಪಾ. ರಾಘವೇಂದ್ರರಾಯರು
" ಸಂದಲ್ ಕಾಳಿಂಗರಾಯರು.
" ಶ್ರೀರಂಗಪಟ್ಣ ಮು ಕೋ. ಗು. ದ ಸಪ್ಪನವರು
" ವಕೀಲ್ ಸುಬ್ರಾಯರವರು
" ಮಿಲಿಟೆರಿ ಸ್ಟೇಷನ್ ಹೆಡ್‌ಕ್ವಾರ್ಟರ್ ಇನ್ಸ್‌ಪೆಕ್ಟರ್ ವಾಸುದೇವರಾಯರವರು.

ಈ ದೊಡ್ಡಮನುಷ್ಯರುಗಳಿಗೆ ಶ್ರೀಮನ್ ಮಹಾರಾಜರವರ ಶ್ರೇಯೋಭಿವೃದ್ಧಿ ಪ್ರಾರ್ಥನೆಯ ವಿಷಯದಲ್ಲಿರತಕ್ಕ ಶ್ರದ್ಧಾ ಪೂರ್ವಕವಾದ ಕೃತಜ್ಞತೆಯು ಮೇಲ್ಕಂಡ ಕಾರ್ಯಗಳಿಂದ ಸ್ಪಷ್ಟವಡುತ್ತೆ. ೨೧೩೧ ಜನಗಳ ಸಂತರ್ಪಣೆ ಸಾಯಂಕಾಲ ೪-೫ ಘಂಟೆ ಮಾವರಿವಿಗೆ ೬-೭ ಪಙ್ಕ್ತಿಗಳಾಗಿ ಬಂದವರಿಗೆಲ್ಲ ನತ ಕಟ್ಟಿಕೊಂಡು ಬಡಿಸೋಣ ಈ ದೊಡ್ಡಮನುಷ್ಯರ ಸಹಾಯದಿಂದಲೇ ಈ ಸಂತರ್ಪಣೆಯುಂ ನಡೆಸಿರುತ್ತೇನೆ.

ತಮ್ಮ ವಿಧೇಯನಾದ,

ಮೊ|| ಶ್ರೀಗರೀಮಠ, ೧೧—೧—೯೩ | ಶ್ರೀ|| ಶ್ರೀನಿವಾಸನರಸಿಂಹಾಚಾರ್, ಪೆತ್ತಾ ಪೇಷ್ಕಾರ್.

## ಹಿಂದೂ ಸಮಯಾಚಾರ ಪರಿಷ್ಕರಣ ಸಭಾ.

ಕಳೆದ ತಿಂಗಳ ೩೧ ನೇ ತಾರೀಖಿನೊಳು, ಅಲಹಾಬಾದಿನಲ್ಲಿ ೬ ನೇ ಆವರ್ತಿ ಸೇರಿದ ಹಿಂದೂ ಸಮಯಾಚಾರ ಪರಿಷ್ಕರಣ ಸಭೆಯೊಳು ಇದರಡಿ ತಿಳಿಸಲ್ಪಡುವ ನಿರ್ಣಯಗಳು ಮಾಡಲ್ಪಟ್ಟವು —

೧. ಹಿಂದೂಗಳಲ್ಲಿ ವಿವಾಹ ಮೊದಲಾದ ವಿಶೇಷ ಸಂದರ್ಭಗಳೊಳು ಮಾಡುವ ವ್ಯಯವಂ ಮಿತಿಪಡಿಸಬೇಕಾದ್ದಾವಶ್ಯಕವೆಂದು ಸಭಾಸದರು ಅಭಿಪ್ರಾಯಪಡುವದರಿಂದ, ಪ್ರತಿ ಕುಲದವರೂ ಅಂತಾ ಖರ್ಚುಗಳಿಗೆ ಒಂದು ಪರಿಮಿತಿಯನ್ನೇರ್ಪಡಿಸಿ, ಆ ಬಗ್ಗೆ ತಾವು ಮಾಡುವ ನಿಯಮಗಳು ಜಾರೀಯೊಳು ತರಲ್ಪಡತಕ್ಕ ಏರ್ಪಾಡುಗಳಂ ಮಾಡತಕ್ಕದ್ದು.

೨. ಸಮುದ್ರ ಮಾರ್ಗವಾಗಿ ದೂರದೇಶ ಸಂಚಾರ ಮತ್ತು ಅನ್ಯ ದೇಶಗಳಲ್ಲಿ ನಿವಾಸ, ಇವುಗಳಿಂದಲೇ ಜಾತಿಭ್ರಷ್ಟತ್ವ ವುಂಟಾಯಿತೆಂದು ಹೇಳಕೂಡದು.

೩. ಸಾಧ್ಯವಾದಮಟ್ಟಿಗೆ ಸ್ತ್ರೀವಿದ್ಯಾಭ್ಯಾಸವಂ ಮಾಡಿಸತಕ್ಕದ್ದಾವಶ್ಯಕವೆಂತಲೂ, ಆ ವಿಷಯದಲ್ಲಿ ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲೂ ಪ್ರತಿಯೊಂದು ದೇಶದಲ್ಲೂ ಏಕಮತ್ಯದೊಡನೆ ಪ್ರಯತ್ನ ಪಡತಕ್ಕದ್ದೆಂತಲೂ ಅಭಿಪ್ರಾಯಪಡುತ್ತಾರೆ.

೪. ವಿವಾಹ ಕಾಲವನ್ನು ಅವರವರ ಉಪವತ್ಯನುಗುಣವಾಗಿ, ಗಂಡುಸರವಿಷಯದಲ್ಲಿ ೧೮ರ ಮೊದಲು ೨೧ ವರ್ಷಗಳ ವರಿವಿಗೂ, ಹೆಂಗುಸರ ವಿಷಯದಲ್ಲಿ ೧೨ ರ ಮೊದಲು ೧೪ ವರ್ಷಗಳ ವರಿವಿಗೂ ಹೆಚ್ಚಿಸಿ, ವಿವಾಹಾಂಗವಾದ ಸದ್ಮಪಡಿಕರ್ಮವನ್ನು ೧೪ ವರ್ಷಗಳ ವಯಸ್ಸಿನವರಿಗೂ ನಿಲ್ಲಿಸಿಡತಕ್ಕದ್ದು ಆವಶ್ಯಕವಾಗಿಕಂಡುಬರುತಿದೆ.

೫ ಆಯಾ ಜಾತಿಗಳಲ್ಲಿನ ಒಳಭೇದಗಳಂ ಬಿಟ್ಟು ಒಂದಾಗಿ ಸೇರಿಕೊಂಡು ಪರಸ್ಪರ ಸಂಬಂಧಪೂರ್ವಕ ಸಹಭೋಜನಪ್ರತಿಭೋಜನಗಳಂ ಮಾಡತಕ್ಕದ್ದು.

೬. ಬಹು ಭಾರ್ಯಾಪರಿಗ್ರಹ ವಿಷಯದಲ್ಲಿ ಕಳೆದ ವರ್ಷದ ಸಭೆಯೊಳು ಮಾಡಲ್ಪಟ್ಟ ನಿರ್ಣಯವನ್ನು ಮರಳಿ ಸ್ಥಿರಪಡಿಸುತ್ತಾರೆ.

೭. ಬಾಲ್ಯದಲ್ಲಿ ವೈಧವ್ಯವಂ ಹೊಂದುವವರಿಗೆ, ೧೮ ವರ್ಷಗಳ ವಯಸ್ಸಂ ಪಡೆಯುವದಕ್ಕೆ ಮುಂದೆಯಾಗಲಿ ಅಥವಾ ತರುವಾಯವಾಗಲಿ, ಒಂದು ಪಂಚಾಯತಿ ಸಭೆಯು ಮತ್ತು ಮ್ಯಾಜಿಸ್ಟ್ರೇಟರ ಮುಂದೆ ಲಿಖಿತಮೂಲಕವಾದ ಅವರ ಸಮ್ಮತಿಯಂ ಪಡೆಯದೆ ಮುಂಡನ ಮಾಡಿಸುವ ವಾಡಿಕೆಯಂ ತಪ್ಪಿಸಿ, ಹಾಗೆ ಅವರ ಸಮ್ಮತಿಯಿಲ್ಲದೆ ಮುಂಡನ ಮಾಡಿಸುವ ವಿಷಯದಲ್ಲಿ ಸಹಾಯಕರಾಗುವಂತವರನ್ನು ಬಹಿಷ್ಕಾರಾದಿಗಳಿಂದ ದಂಡಿಸಬೇಕಾದ ವಿಷಯದಲ್ಲಿ ಜಾತಿ ಕಟ್ಟುಮಾಡು ಮಾಡತಕ್ಕದ್ದು.

೮. ಸನ್ ೧೮೬೦ ನೇ ಇಸವಿಯ ೨೧ನೇ ನಂಬರ್ ಆಕ್ಟನ್ನನುಸರಿಸಿ ಪರೋಪಕಾರಾರ್ಥವಾಗಿಯೂ, ವಿದ್ಯಾಭಿವೃದ್ಧಿಯ ಬಗ್ಗೆಯೂ ಯೇರ್ಪಡುವ ಸಂಘಗಳು ರಿಜಿಸ್ಟರ್ ಮಾಡುವದರಿಂದ, ಸದರೀ ಆಕ್ಟು ಸಮಯಾಚಾರ ಪರಿಷ್ಕರಣ ಸಂಘಗಳಿಗೆ ಸಹ ಅನ್ವಯಿಸುವಂತೆ, ಮಾಡಲ್ಪಡುವುವು ಅನುಕೂಲವಾಗಿರುವದಲ್ಲದೆ, ಸನ್ ೧೮೮೨ನೇ ಇಸವಿಯ ೬ ನೇ ನಂಬರ್ ಆಕ್ಟಿನ ೨೬ ನೇ ಸೆಕ್ಷನ್ ಅನುಸರಿಸಿ ಒಂದು ಪ್ರಯೋಜನಾಪೇಕ್ಷೆಯಿಂದಲ್ಲದೆ ಯೇರ್ಪಡಿಸಲ್ಪಡುವ ಸಂಘಗಳು ಸ್ಥಳಿಕ ಸರ್ಕಾರದಿಂದ ಹುಕುಂ ಕೊಡಲ್ಪಟ್ಟು ರಿಜಿಸ್ಟರ್ ಮಾಡಲ್ಪಡುತಿದೆಯಾಗಿ, ಸದರೀ ಆಕ್ಟಿನ ದೆಸೆಯಿಂದ ವ್ಯಾಪಾರ ಸಂಘಗಳ ಮೇಲೆ ಯಾವವಿಧ ನಿಬಂಧನೆಗಳುಂಟುಮಾಡಲ್ಪಟ್ಟಿರುತಿದೆಯೊ ಅಂತೆ ನಿಬಂಧಗಳ ದೆಸೆಯಿಂದ ಈ ಸಂಘವಂ ವಿನಾಯಿಸುವದಕ್ಕೆ ಗವರ್ನಮೆಂಟಿಗೆ ಅಧಿಕಾರವಿರುವಂತೆ ಸದರೀ ಆಕ್ಟನ್ನು ತಿದ್ದುಪಡಿ ಮಾಡಬೇಕು, ಮತ್ತು ಮೇಲ್ಕಂಡ ೨೧ನೇ ನಂಬರ್ ಆಕ್ಟಿನ ಪ್ರಕಾರ ರಿಜಿಸ್ಟರ್ ಮಾಡಲ್ಪಡುವ ಸಂಘಗಳಿಂದ ರುಸುಂ ವಗೈರೆ ತೆಗದುಕೊಳ್ಳಕೂಡದೆಂದು ಸಂಘದ ಸೆಕ್ರೆಟರಿ ಯವರು ಗವರ್ನಮೆಂಟಿಗೆ ತಿಳಿಸತಕ್ಕದ್ದು.

೯. ವಿವಾಹವನ್ನು ಅರ್ಥಲೋಭವಾದ ಒಂದು ವ್ಯಾಪಾರವೋಪಾದಿಯಲ್ಲಿ ಭಾವಿಸಿ, ಆ ವಿಷಯದಲ್ಲಿ ಹಣವಂ ತೆಗದುಕೊಳ್ಳುವ ವಾಡಿಕೆಯಂ ತಪ್ಪಿಸತಕ್ಕದ್ದು.

೧೦. ಸಮಯಾಚಾರ ಪರಿಷ್ಕರಣದಲ್ಲಿ ಆಸಕ್ತಿಯುಳ್ಳವರೆಲ್ಲರು ಎಲ್ಲಾ ಡಿಸ್ಟ್ರಿಕ್ಟುಗಳಲ್ಲೂ ಒಂದು ಸಂಘವನ್ನೇರ್ಪಡಿಸಿಕೊಂಡು, ಈ ಸಂಘದ ಉದ್ದೇಶವಂ ಪ್ರಜೆಗಳಿಗೆ ತಿಳಿಸಿ ಅವರಂ ತಮಗೆ ಅನುಕೂಲರಾಗಿ ಮಾಡಿಕೊಳ್ಳತಕ್ಕ ಬಗ್ಗೆ ಅದೇ ಕೆಲಸಕ್ಕಾಗಿ ಒಬ್ಬನು ನಿಯಾಮಕ ಮಾಡತಕ್ಕದ್ದು.

೧೧. ಬಾಲ ವಿಧವೆಯರ ಪುನರ್ವಿವಾಹ ವಿಷಯದಲ್ಲೂ, ವಿವಾಹದಿಂದುಂಟಾಗುವ ಬಾಧ್ಯತೆಯಂ ಪಡೆಯಲಿಕ್ಕಾಗ್ಯತರಲ್ಪಡುವ ಮೊಕದ್ದಮೆಗಳ ಅಮಲ್‌ಜಾರಿಯಲ್ಲಿ ಖೈದ್ ಮಾಡಿಸುವ ವಾಡಿಕೆಯಂ ತಪ್ಪಿಸಬೇಕಾದ ವಿಷಯದಲ್ಲೂ ಕಳೆದ ವರ್ಷದಲ್ಲಿ ಸೇರಿದ ಸಭೆಯೊಳು ಮಾಡಲ್ಪಟ್ಟ ನಿರ್ಣಯಗಳು ಮರಳಿ ಸ್ಥಿರಪಡಿಸಲ್ಪಟ್ಟಿರುತಿವೆ, ಯೆಂಬದು.

## SUMMARY OF NEWS
## ವೃತ್ತಾಂತ ಸಂಗ್ರಹವು.

ಜರ್ಮನಿ ದೇಶದಲ್ಲಿ ಒಬ್ಬ ಮನುಷ್ಯನು ತನ್ನ ಇಬ್ಬರು ಮಕ್ಕಳನ್ನೂ ಕೊಂದು ಅವುಗಳ ದೇಹಗಳನ್ನು ತುಂಡಾಗಿ ಕತ್ತರಿಸಿ ಕೊನೆಗೆ ನ್ಯಾಯಾಧಿಪತಿಗಳಿಂದ ಪರ್ಯಾಪ್ತಿ ಪಡಿಸಲ್ಪಟ್ಟನು, ನ್ಯಾಯಾಧಿಪತಿಯು ಅವನಿಗೆ ೨೪ ವರ್ಷಗಳ ಕಠಿಣ ಸಜಾ ವಿಧಿಸಿದ್ದಲ್ಲದೆ ಆ ಸಜಾ ಶಿಕ್ಷೆಯು ಪೂರೈಸಿದ ಮರುದಿವಸವೇ ಕೈದಿಯನ್ನು ಶಿರಚ್ಛೇದನ ಮಾಡತಕ್ಕದ್ದೆಂತಲೂ ವಿಧಿಸಿರುತ್ತಾನೆ.—ಕ. ವೃ.

ಲಕ್ನೋ ಪಟ್ಟಣದಲ್ಲಿದ್ದ ಒಬ್ಬ ಬ್ರಿಟಿಷ ಸೋಲ್ಜರನು ಕುಡಿದು ಪ್ರಜ್ಞೆ ತಪ್ಪಿ ತಮಾಷೆಗೋಸ್ಕರ ಒಬ್ಬ ಹಿಂದು ಹುಡುಗಿಯನ್ನು ಒಂದು ಕಂದಕದೊಳಕ್ಕೆ ತಳ್ಳಿಬಿಟ್ಟನು. ಅವನ ಜೊತೆಯವರು ಈ ಕುಡಿದವನ ಮೇಲೆ ಬಿದ್ದು ಹೊಡೆಯಲು, ತಿರುಗಾಗ್ಯೆ ಅವನ ಕಡೆಯವರು ಸೋಲ್ಜರುಗಳು ಬಂದು ಸಿಪಾಯಿಗಳ ಮೇಲೆ ಸಣ್ಣ ಯುದ್ಧ ಮಾಡಿದರು ಅಧಿಕಾರಿಗಳು ಜಾಗ್ರತೆಯಲ್ಲಿ ಹೋಗಿ ಆ ಕಲಹವನ್ನು ಅಡಗಿಸದೆ ಇದ್ದರೆ ಹುಡುಗಾಟವು ಕಾಗಿ ದೊಡ್ಡಾಟ ವಾಗುತಿತ್ತೆಂದು ಒಬ್ಬ ಬಾತಮೀದಾರನು ಬರೆಯುತ್ತಾನೆ.—ವೃ. ಪ.

ಪೂನೆಯಲ್ಲಿರುವ ವಿಟ್ಟುಬಾಯಿ ಎಂಬ ಸ್ತ್ರೀಯಳು ತನ್ನ ತರುವಾಯ ತನ್ನಂತೆ ಉಪಜೀವನವನ್ನು ನಡಸಲಿಕ್ಕೆ ಯಾರೂ ತನ್ನ ವಂಶದಲ್ಲಿ ಇಲ್ಲವೆಂದು ಬಹಳ ಚಿಂತಾ ಪರವಶಳಾಗಿರುತ್ತಿದ್ದಳು. ಇವಳಿಗೆ ಅಕಸ್ಮಾತ್ತಾಗಿ ಒಂದು ಹುಡುಗಿಯು ವಿಕ್ರಯಕ್ಕಾಗಿ ಸಿಕ್ಕಲು ಈ ಹುಡುಗಿಯನ್ನು ಕೆಟ್ಟ ಕೆಲಸಕ್ಕೆ ಪಡಿಸುತ್ತಾಳೆಂಬ ಆರೋಪವನ್ನು ಹೊರಿಸಿ ಸಿಟಿ ಮ್ಯಾಜಿಸ್ಟ್ರೇಟರಾದ ಮಿ|| ಪ್ಲೌಡನ್ ಧೊರೆಗಳವರು ಸೆಷನ್ ಕಮಿಟ್ ಮಾಡಿದಹಾಗೆ ವರ್ತಮಾನ ಉಂಟು ಇದು ಒಳ್ಳೆ ಸ್ತುತ್ಯ ಕೆಲಸವಾಗಿದೆ, ಆ ನೀತಿಯ ಪ್ರಸರಣವು ಕಡಮೆಯಾಗಬೇಕಾದರೆ ಎಲ್ಲ ಮ್ಯಾಜಿಸ್ಟ್ರೇಟರೂ, ಪೋಲೀಸಿನವರೂ, ಹೀಗೆ ಹೀಗೆ ಲಕ್ಷ್ಯ ತೆಗದು ಕೊಳ್ಳಬೇಕು ಪಡೆದವರು ವೇಶ್ಯಾಸ್ತ್ರೀಯರು ಅನ್ಯರ ಮಕ್ಕಳನ್ನು ವಿಕ್ರಯಕ್ಕೆ ತೆಗದುಕೊಳ್ಳದೆ ಇದ್ದರೆ ಇವರ ವಾರ್ಧಿಕ ವ್ಯವಸ್ಥೆಯಲ್ಲಿ ದೇಶಕ್ಕೆ ಭೂಷಣವಾದವಳು ವಿಕ್ರಯಸ್ತ್ರೀಯುಳ್ಳವೊ? ಇವನ್ನೆಲ್ಲ ಅಲ್ಲಲ್ಲಿಯ ಅಧಿಕಾರಿಗಳು ವಿಚಾರ ಮಾಡಲಾಗಿ ಎಷ್ಟೋ ವೇಶ್ಯಾಂಗನೆಯರು ಎಷ್ಟೋ ಹುಡುಗಿಯರನ್ನು ಕೆಟ್ಟ ಕೆಲಸಕ್ಕಾಗಿ ವಿಕ್ರಯಕ್ಕೆ ತೆಗದುಕೊಳ್ಳುತ್ತಾರೆಂದು ಸಿದ್ಧವಾಗುತ್ತದೆ. ಇಂಡಿಯನ್ ಪಿನಲ್‌ಕೋಡಿನಲ್ಲಿ ಈ ಬಗ್ಗೆ ಸ್ಪಷ್ಟವಾಗಿಹೇಳಿದ್ದೂ ಇಂಥ ಅಪರಾಧ ಮಾಡಿದವರ ಶೋಧವನ್ನು ಮಾಡಿ ಶಿಕ್ಷೆ ಕೊಡಿಸದೆ ಇದ್ದರೆ ಈ ಕಲಂ ವ್ಯರ್ಥವಾಗಿ ಹೋಗುವವಲ್ಲದೆ ಆ ಕಲಮಿನ ಉದ್ದೇಶವೇ ಪೂರ್ಣವಾಗದೆ ಅನೀತಿಯ ಪ್ರಸಾರವು ದಿನೇ ದಿನೇ ವೃದ್ಧಿಯಾಗುವುದು —ಕ. ವೃ.

ಬಳ್ಳಾರಿಯಲ್ಲಿ ಒಬ್ಬ ಬ್ರಾಹ್ಮಣನು ಕಾವೇಕ್ಷಮ್ಮನೆಂಬ ತನ್ನ ಐದು ವರುಷದ ಹೆಣ್ಣುಮಗುವನ್ನು ಕೊಟ್ಟು ಒಬ್ಬ ಯುವ್ವನಸ್ಥನಿಗೆ ಮದುವೆ ಮಾಡಿದ್ದನು ಆವನ ಅಳಿಯನು ಮದುವೆಯಾದ ೩—೪ ವರುಷಗಳಲ್ಲಿ ದೈವಾಧೀನವನ್ನು ಹೊಂದಿದನು. ಆದಾಗ್ಯೂ ಕಾವೇಕ್ಷಮ್ಮನು ತನ್ನ ಅತ್ತೆಯ ಮನೆಯಲ್ಲಿ ೩—೪ ವರುಷಗಳ ವರಿಗೂ ಇದ್ದು ಅಲ್ಲಿನ ಕಷ್ಟಗಳನ್ನು ಸಹಿಸಲಾರದೆ ಅಲ್ಲಿಂದ ತಂದೆ ಮನೆಗೆ ಬಂದಳು. ಅಷ್ಟರಲ್ಲಿ ತಾಯಿಯು ಕಾಲವಾಗಿದ್ದರು ತಂದೆಯು ಅತಿ ಬಡವನಾಗಿದ್ದದರಿಂದ ಭಿಕ್ಷಾಟನೆಯಿಂದ ತನ್ನ ಮನೆ ತಪ್ಪಿದ ಮಗಳನ್ನು ಸಾಕುತ್ತಿದ್ದನು ಕೆಲವು ವರುಷಗಳ ಕೆಳಗೆ ಪೆನುಕೊಂಡೆಯ ಕೃಷ್ಣಮ್ಮನೆಂಬ ಬಾಲವಿಧವೆಯು ಧೈರ್ಯವಾಗಿ ಪುನಃ ಸ್ವಯಂವರವನ್ನು ಮಾಡಿಕೊಂಡದ್ದನ್ನು ನೋಡಿ ಸುಮಾರು ೨೦ ವರುಷದ ಕಾವೇಕ್ಷಮ್ಮನು ಪುನರ್ವಿವಾಹ ಮಾಡಿಕೊಂಡು ಸಂಸಾರ ಮಾಡಬೇಕೆಂದು ಕುತೂಹಲ ಭರಿತಳಾಗಿದ್ದಳು ಅವಳ ನೆರೆಮನೆಯಲ್ಲಿ ಚಿತ್ತೂರು ಸುಬ್ಬರಾಯ ಲೆಂಬುವರಿದ್ದರು. ಆತನು ಪೆನುಕೊಂಡೆಯ ಮುನ್ಸಿಪ್ ಕೋರ್ಟಿನಲ್ಲಿ ಒಬ್ಬ ನೌಕರನಾಗಿಯೂ ೩೫ ವರುಷಗಳ ವಯಸ್ಸುಳ್ಳವನಾಗಿಯೂ ಮೊದಲನೇ ಹೆಂಡತಿಯನ್ನು ಕಳೆದುಕೊಂಡವನಾಗಿಯೂ, ಈಗ ಪುನರ್ವಿವಾಹ ಮಾಡಿಕೊಳ್ಳಬೇಕೆಂಬ ಇಚ್ಛೆಯುಳ್ಳವನಾಗಿಯೂ ಇದ್ದನು ಇವರಿಬ್ಬರಿಗೂ ಪರಸ್ಪರ ಮಾತುಗಳು ನಡೆದು ಕೊನೆಗೆ ಅಲ್ಲಿನ ಕೆಲವುಮಂದಿ ದೊಡ್ಡ ಮನುಷ್ಯರುಗಳು ಮಧ್ಯಸ್ಥರಿಂದಲೂ, ಸಹಾಯ ಸಂಪತ್ತುಗಳಿಂದಲೂ ಇವರಿಬ್ಬರಿಗೂ ಮದುವೆಯು ನಿಷ್ಕರ್ಷೆಯಾಗಿ ಕಳೆದ ಭಾನುವಾರ ಅಂದರೆ ಜನವರಿ ೮ನೇ ತಾರೀಖಿನ ದಿವಸ ಮುಹೂರ್ತ ಬೆಳೆಯಿತು.—ವೃ. ಪ.

BANGALORE—Printed and published at the Karnatic Press, No 40, Hospital Road, Petta.—1893

# ಕರ್ಣಾಟಕ ಪ್ರಕಾಶಿಕಾ

# THE KARNATAKA PRAKASIKA.

## ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning.**

[illegible]

Vol XX ] BANGALORE—MONDAY, JANUARY 23, 1893. [No. 3.

ಸಂಪುಟ ೨೦. ] ಬೆಂಗಳೂರು:—ಸನ್ ೧೮೯೩ ನೇ ಇಸವಿ ಜನವರಿ ೨೩ ನೇ ತಾರೀಖು ಸೋಮವಾರ. [ಸಂಚಿಕೆ ೩.

### ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

| | ಸ್ಥಳದವರಿಗೆ. | ಪರಸ್ಥಳದವರಿಗೆ |
|---|---|---|
| ವರುಷಕ್ಕೆ ... | 6—0—0 | 8—0—0 |
| ೬ ತಿಂಗಳಿಗೆ | 3—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

| | ಸ್ಥಳದವರಿಗೆ. | ಪರಸ್ಥಳದವರಿಗೆ |
|---|---|---|
| ವರುಷಕ್ಕೆ ... | 3—0—0 | 4—0—0 |
| ೬ ತಿಂಗಳಿಗೆ | 1—12—0 | 2—8—0 |

ಈ ಪತ್ರಿಕೆ [illegible]

ಪ್ರಕಟನೆಯ ದರಗಳು.

[illegible] ೦—೨—೦

[illegible] ೦—೧—೦

[illegible]

*ADVERTISEMENTS.*

## NOTICE.

VAIDYASARA SANGRAHA

A [illegible] OF

HINDU MEDICINE

*Price including Postage Rs. 5 0 0*

ವೈದ್ಯಸಾರ ಸಂಗ್ರಹ.

[illegible]

ಇದರ ಕ್ರಯ—[illegible] ರೂ ೫—೦—೦

ಕೆ. ಬಿ. [illegible]ಚಾರ್.

ಬೆಂಗಳೂರು, [illegible] ನವಂಬರ್

### ನೋಟೀಸ್.

ಬೆಂಗಳೂರು ಕರ್ಣಾಟಕ್ ಪ್ರೆಸ್.

೧೮[illegible]ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು

ಇದರಲ್ಲಿ, ಸಕಲವಿಧ ಕೆಲಸಗಳು ಸುಲಭಬೆಲೆಗೆ ನೀಟಾಗಿಯೂ ಶೀಘ್ರವಾಗಿಯೂ ಮಾಡಿಕೊಡಲ್ಪಡುವವು. ಇದರಲ್ಲಿ ಸದ್ಯ ಇಂಗ್ಲಿಷ್ ಕನ್ನಡ ಕೆಲಸಗಳು ಮಾತ್ರವೇ ನಡೆಯುತ್ತವೆ. ಇದರ ಮಾಲೀಕರನ್ನು ಸದರೀ ಕಾರ್ಖಾನೆಯಲ್ಲಿ ಕಂಡು ತಿಳಿದುಕೊಳ್ಳಬಹುದು.

### ನೋಟೀಸ್.

ಸಂಜಪ್ಪನವರ ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು.

ಈಚೆಗೆ ಉಪ್ಪಾರ [illegible] ಔಷಧಗಳು [illegible] ಅವರಿಗೆ [illegible] ಈ ಔಷಧಗಳು [illegible] ಗುಣವನ್ನು [illegible] ತಮ್ಮ [illegible] ಕಳುಹಿಸ [illegible] ಪಾಲ್ಯ [illegible] ಕೊಡಲ್ಪಡುವವು,

ತೈಲ.—ಮಹಾತಿಕ್ತ ತೈಲ, ಇದು [illegible] ವಾತಸಂಬಂಧಗಳಾದ [illegible] ದೇಹಕ್ಕೆ [illegible] ವೇದನೆಗಳಿಗೂ ಬಹಳ [illegible] ನಿವಾರಕವಾಗಿದೆ ಸಣ್ಣ ಸೀಸೆ ಒಂದಕ್ಕೆ ೧ ರೂ ದೊಡ್ಡ ಸೀಸೆ ೧ಕ್ಕೆ ೩ ರೂ

ಜ್ವರದ ಗುಳಿಗೆಗಳು— ಇದು [illegible] ಜ್ವರಗಳಿಗೆ ಪ್ರಸಿದ್ಧ ಔಷಧವಾಗಿರುತ್ತದೆ. ರೂ. ೧ ಕ್ಕೆ ೨೦ ಗುಳಿಗೆಗಳು.

ಮೇಹ ರೋಗ ನಿವಾರಕವಾದ ಮಾತ್ರೆ —ಈ ಮಾತ್ರೆಯು ೨೦ ದಿವಸಗಳವರೆಗೆ [illegible] ಸೇವಿಸಿದರೆ [illegible] ಸೀಸೆ ೧ ಕ್ಕೆ ೨—೮—೦

ಪಾಂಡುರೋಗಕ್ಕೆ ಚೂರ್ಣ —[illegible] ಇದು [illegible] ಸೀಸೆ ೧ ಕ್ಕೆ ೧ ರೂ. ಇದು ೨೦ ದಿನಗಳಿಗೆ ಆಗುವುದು.

ನೇತ್ರರೋಗಕ್ಕೆ ಅಂಜನ —[illegible] ಕಣ್ಣು ನೋವು [illegible] ಪ್ರಶಸ್ತವಾದದ್ದು. [illegible] ಉತ್ತಮವಾದ ಪಾತ್ರೆ ೧ ಕ್ಕೆ ೪ ಆಣೆ. ಇದು [illegible] ದಿನಗಳವರೆಗೆ ಬರುವ [illegible].

ಮೂಲವ್ಯಾಧಿಗೆ—ಇದು [illegible] ತಯಾರಾಗಿದೆ. [illegible] ರೂಪಾಯಿ. ಇದನ್ನು [illegible] ನಿಯಮವಾಗಿ [illegible] ನಿವೃತ್ತಿಯಾಗುತ್ತದೆ.

ಭಸ್ಮಗಳು —ತಾಮ್ರ, ವಂಗ, ಸೀಸ, [illegible], ಅಭ್ರಕ, ಲೋಹ, [illegible] ವಗೈರೆ ಭಸ್ಮಗಳೂ ಸಿಂಧೂರಗಳೂ ಸಿದ್ಧ [illegible] ತಯಾರಾಗಿವೆ. [illegible] ಸಕಲ [illegible] ರೋಗಗಳಿಗೂ ಪ್ರಶಸ್ತವಾದವುಗಳಾಗಿವೆ. [illegible] ಕೊಡಲ್ಪಡುವವು [illegible] ಸಿದ್ಧಪಡಿಸಲ್ಪಡುತ್ತವೆ.

ಲೇಹ್ಯಗಳು —ಚ್ಯವನಪ್ರಾಶ, [illegible] ವಗೈರೆ [illegible] ಲೇಹ್ಯಗಳು ಸಿದ್ಧವಾಗಿವೆ. ಸೇರು ೧ ಕ್ಕೆ ೩ ರೂ.

[illegible]—ಗಂಧ, [illegible] ಎಣ್ಣೆ [illegible] ತಯಾರಾಗಿವೆ ಅಷ್ಟ ಸೀಸೆ ೧ ಕ್ಕೆ ೨ ರೂ.

ಚೂರ್ಣಗಳು.—[illegible], [illegible] ವಗೈರೆ ಚೂರ್ಣಗಳು [illegible] ಇದು [illegible] ನಾಳಿಗೆ ತೆಗೆದುಕೊಳ್ಳುವುದು. ತಪ್ಪ ೧ಕ್ಕೆ ೨ಆಣೆ.

### ನೋಟೀಸ್.

ಗಣೇಶ ರಾಮಚಂದ್ರ ಶರ್ಮ ಮತ್ತು ಕಂಪೆನಿ. ಕಮಿಷನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯೊಡನೆ ವ್ಯಾಲ್ಯೂ ಪೇಯಬಿಲ್ ಪೋಸ್ಟಿನ ಮೂಲಕ ತಕ್ಕ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸಿದ್ಧರಾಗಿರುತ್ತೇವೆ.

ಎಲ್ಲಾ ತರಹ ಔಷಧಗಳು, ಪುಸ್ತಕಗಳು, ಮುತ್ತುಗಳು, ಚಿಪ್ಪಿ ಮುತ್ತುಗಳು, ಘಡಿಯಾರಗಳು, ವಾಚುಗಳು, [illegible]ಗಳು, [illegible]ಗಳು, [illegible]ಗಳು, ಚಂದ್ರಕಾಂತ [illegible] ಕನ್ನಡಕಗಳು, [illegible] ಉಡುಪುಗಳು, [illegible]ಗಳು, [illegible]ಗಳು, ಅತ್ತರುಗಳು, ಅತ್ಯುತ್ತಮಗಳಾದ ರತ್ನಗಳು, ಭಂಗಾರದಿಂದ ಕಟ್ಟಲ್ಪಟ್ಟ [illegible], [illegible] ಪಾತ್ರಗಳು, [illegible] ಪಾತ್ರಗಳು, [illegible], [illegible] ವಗೈರೆ ಇತರ ಸಾಮಾನುಗಳು

ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟ್ಯಾಂಪ್ ಕಳುಹಿಸಿದ ಹೊರತು ಜವಾಬು ದೊರೆಯಲಾರದು

ವಿಳಾಸ.—ಗಣೇಶ ರಾಮಚಂದ್ರ ಶರ್ಮ,
ಮತ್ತು ಕಂಪೆನಿ, ಕಮಿಷನ್ ಏಜಂಟ್ಸ್,
ಹರಿದ್ವಾರ, ಸಹಾರನ್‌ಪುರ ಡಿಸ್ಟ್ರಿಕ್ಟ್.

### ನೋಟೀಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ಬಿಕರಿಗೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

### ಸಂಸ್ಕೃತ ಗ್ರಂಥಗಳು.

| | ರೂ | ಆ | ಪೈ |
|---|---|---|---|
| ಸಟೀಕಾ ವೈದ್ಯಸಾರ ಸಂಗ್ರಹ ... | ೪ | ೦ | ೦ |
| ,, ಶಿವಗೀತೆ ... | ೧ | ೧ | ೦ |
| ,, ಶಿವಾನಂದಲಹರಿ ... | ೦ | ೮ | ೦ |
| ,, ಕಾಲಾಮೃತ .. | ೧ | ೦ | ೦ |
| ,, ಟೀಕ ಬಾಲರಾಮಾಯಣ .. | ೦ | ೩ | ೦ |
| ,, ಟೀಕ ಗೋಪಿಕಾ ಗೀತ . | ೦ | ೧ | ೦ |
| ,, ಟೀಕ ಚಾಣಕ್ಯನೀತಿ (ಸುಭಾಷಿತ) | ೦ | ೪ | ೦ |
| ವಿಷ್ಣುಸಹಸ್ರನಾಮ ಪತ್ರಿಕೆ ... | ೦ | ೩ | ೬ |
| ಸೂರ್ಯಸ್ತವ .. | ೦ | ೨ | ೦ |
| ಕೃಷ್ಣಕರ್ಣಾಮೃತ ... | ೦ | ೨ | ೦ |
| ತ್ರಿಕಾಂಡ ಅಮರ ಮೂಲ . | ೦ | ೭ | ೬ |
| ೧ ಕಾಂಡ .. | ೦ | ೧ | ೦ |

### ಕನ್ನಡ ಗ್ರಂಥಗಳು.

| | ರೂ | ಆ | ಪೈ |
|---|---|---|---|
| ಶುಕಸಪ್ತತಿ [illegible] .. | ೩ | ೦ | ೦ |
| [illegible] ... | ೧ | ೨ | ೦ |
| ವೃಷಭೇಂದ್ರವಿಜಯ .. | ೧ | ೮ | ೦ |
| ಪಂಚತಂತ್ರ ಬಾಲಬೋಧೆ ... | ೦ | ೬ | ೦ |
| ಹನುಮದ್ವಿಲಾಸ ... | ೦ | ೬ | ೦ |
| ಕಾಳಿಂಗಮರ್ದನ ... | ೦ | ೨ | ೦ |
| ಸುಭದ್ರಾಪರಿಣಯ ... | ೦ | ೨ | ೦ |
| [illegible] .. | ೦ | ೨ | ೬ |
| ಸಾವಿತ್ರೀಚರಿತ್ರೆ ... | ೦ | ೧ | ೦ |
| [illegible] ಚರಿತ್ರೆ .. | ೦ | ೧ | ೬ |
| ಬಾಲಗ್ರಹಚಿಕಿತ್ಸೆ .. | ೦ | ೧ | ೦ |
| [illegible] .. | ೦ | ೧೨ | ೦ |
| [illegible] .. | ೦ | ೧೨ | ೦ |

### ಹರಾಜ್.

ನಗರ ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ಸನ್ ೧೮೯೦ ನೇ ಇಸವಿ ಅಸಲ್ ನಂಬರ್ ೨೬.

ಸನ್ ೧೮೯೨ ನೇ ಇಸವಿ ಜಾರಿ ನಂಬರ್ ೬೦.

| ವಾದಿ | ಪ್ರತಿವಾದಿಗಳು. |
|---|---|
| ಪಣ್ಯ ಚಿಕ್ಕಬಸಪ್ಪ, ಬೆಂಗಳೂರುವಾಸ್ತವ್ಯರು | ೧ನೇ [illegible], [illegible] ವಾಸಸ್ಥರು. ೨ನೇ [illegible] ತಾಲೂಕು ವಾಸಸ್ಥರು. |

ಮೇಲ್ಕಂಡ ಅಸಲ್ ಮೊಕದ್ದಮೆಯಲ್ಲಿ ವಾದಿಗೆ ಪರವಾಗಿ ಕೊಡಲ್ಪಟ್ಟ ೨೦,೪೯೧—೮—೧ ರೂಪಾಯಿಗಳ ಡಿಕರಿಯು ಅಮಲ್‌ಜಾರಿಯಲ್ಲಿ ತರೀಕೆರೆ ತಾಲ್ಲೂಕ್ ಲಿಂಗದಹಳ್ಳಿ ಹೋಬಳಿ ನಂದಿ ಬಟ್ಲು ಗ್ರಾಮಕ್ಕೆ ಸೇರಿದ ಕೆಸವಿನಮೃತ್ತಿ ಎಂಬ ಸರ್ವೆ ನಂಬರು ೨೮ನೇ ಯೆಕರೆ ೧೬೮, ಗುಂಟೆ ೨೧, ಅಕಾರ ರೂಪಾಯಿ ೨೮೬—೧೨—೦ ವುಳ್ಳ ಕಾಫಿ ತೋಟವು ತಿ. ವೆಂಕಪ್ಪನವರು ಈ ಕೋರ್ಟಿನ ಸನ್ ೧೮೯೦ ನೇ ಇಸವಿ ಅಸಲ್ ನಂಬರ್ [illegible] ನ ವಲ್ಲಿ ಸದರೀ ಆಸ್ತಿಯಮೇಲೆ ಪಡೆದಿರುವ ಡಿಕರಿ ಮೊಬಲಗು ೧೨,೦೩೩—೧೫—೨ ಮತ್ತು ಆ ಈಚೆಗಿನ ಬಡ್ಡಿ ಸಹ ಗುರಿಮಾಡಲ್ಪಟ್ಟು ಬರುವ ಸನ್ ೧೮೯೩ ನೇ ಇಸವಿ ಫೆಬ್ರವರಿ ಮಾಹೆ ೧೦ ನೇ ತಾರೀಖಿನಲ್ಲು ತರೀಕೆರೆಯಲ್ಲಿ ಬಹಿರಂಗವಾದ ಹರಾಜಿನಲ್ಲಿ ವಿಕ್ರಯಿಸಲ್ಪಡುವದು.

ಅಂದರೆ ಈ ರೀತಿ ಆಗುವ ಹರಾಜು ಮೊಬಲಗಿನ ಉತ್ಪತ್ತಿಯಲ್ಲಿ ಸದರೀ ವೆಂಕಪ್ಪನವರ ಡಿಕ್ರಿ ಮೊಬಲಗಿಗೆ ಮೊದಲು ಉತ್ತಾರ ಕೊಡಲ್ಪಡುತ್ತದೆ.

ವಿಕ್ರಯವಾಗುವ ಸೊತ್ತು ೨೦,೦೦೦—೦—೦ ದ [illegible] ಬಾಳುವದೆಂದು ನಮೂದಾಗಿರುತ್ತೆ. ಸದರೀ ಹರಾಜು ತರೀಕೆರೆ ತಾಲ್ಲೂಕ್ ಅಮಲ್ದಾರರವರ ಮೂಲಕ ಅವರ ಕಚೇರಿ ಹತ್ತಿರ [illegible] ಈ ಕೋರ್ಟಿನ ಒಬ್ಬ ಅಮೀನನ ಮುಖಾಂತರ ನಡೆಸಲ್ಪಡುವದು.

ಸನ್ ೧೮೯೨ ನೇ ಇಸವಿ ಡಿಸಂಬರ್ ಮಾಹೆ ೨೩ ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ ಮತ್ತು ನನ್ನ ದಸ್ತಕತ್ತು ಸಹಿತ ಕೊಡಲ್ಪಟ್ಟಿದೆ.

ಇದು:—

ಬಿಡ್ಡಿಗೆ ಅಂದರೇನಾದರು ಆವಶ್ಯಕವಿದ್ದ ಪಕ್ಷದಲ್ಲಿ ಅಂಥವರು ಈ ಕೋರ್ಟಿನ ನಾಜರ್ ಮುಖಾಂತರ ತಿಳಿಕೊಳ್ಳಬಹುದು.

(Signed) B. TIRUMALA CHAR,
*District Judge,*
*Nagar Division*

" By order"
RAM PRASAD TIVARI,
*For Sheristadar,*

### THE MONEY MARKET.

ಮದರಾಸ್, ಶನಿವಾರ, ತಾರೀಖ್ 21 ನೇ ಜನವರಿ 1893

ಸೇಕಡ ೪ರೂ. ಬಡ್ಡಿ ಗವರ್ನಮೆಂಟ್ ಪತ್ರಗಳ ಕ್ರಯ, 104—0—0 ಇಂದ 106—4—0 ವರವಿಗೆ,

ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳ, ಬಾಬತು 920 ಇಂದ [illegible] ವರವಿಗೆ.

[illegible] ಬ್ಯಾಂಕ್ ಷೇರುಗಳು, (100) ಬಾಬತು 160 ರಿಂದ 165 ವರವಿಗೆ.

ಸವರನ್ನುಗಳು, 16—3—0 ಇಂದ 16—5—0 ವರವಿಗೆ.

ಬ್ಯಾಂಕ್ ಬಿಲ್ಲುಗಳು ಯುನೈಟೆಡ್ ಕಿಂಗ್ಡಂಗಳು, ದಿಮಾಂಡ್ 1s. 2 15/16d.

ನಾಲ್ಕು ತಿಂಗಳ ಮುದ್ದತು, 1s. 2 1/4 d.

[illegible], 1s. 2 25/32 d.

# ಕರ್ಣಾಟಕ ಪ್ರಕಾಶಿಕಾ.

## THE KARNATAKA PRAKASIKA.

MONDAY, JANUARY 23, 1893.

೧೮೯೩ನೇ ಇಸವಿ ಜನವರಿ ತಾ|| ೨೩ನೇ ಸೋಮವಾರ.


### ಚಿಕಾಗೋ ಪಟ್ಟಣದ ವಿವಿಧವಸ್ತುಪ್ರದರ್ಶನ.

ಅಮೇರಿಕಾ ಖಂಡಕ್ಕೆ ಸೇರಿದ ಯುನೈಟೆಡ್ ಸ್ಟೇಟ್ಸ್ ಯೆಂಬ ದೇಶದಲ್ಲಿನ ಚಿಕಾಗೋ ಎಂಬ ಷಹರಿನಲ್ಲಿ ಬರುವ ಮೇ ತಿಂಗಳ ಗುರ್ರೀತಾರೀಖ್ನಲ್ಲಿ ವಿವಿಧ ವಸ್ತುಪ್ರದರ್ಶನ ಕಾರ್ಯವು ಪ್ರಾರಂಭವಾಗಿ ಕೆಲವು ಕಾಲದ ವರಿವಿಗ ನಡೆಯುವದು ಈ ಪ್ರಪಂಚದೊಳು ಇದುವರಿವಿಗೆ ಆಯಾ ಷಹರಗಳೊಳು ನಡೆಸಲ್ಪಟ್ಟ ವಸ್ತುಪ್ರದರ್ಶನಗಳನ್ನಪೇಕ್ಷಿಸಿ ಈಗ ನಡೆಯತಕ್ಕದ್ದು ಬಹು ಭಾಗದೊಳು ಪ್ರಬಲತರವಾದುದು. ಇದಕ್ಕಾಗಿ ಅನೇಕಕೋಟಿ ರೂಪಾಯಿಗಳು ವ್ಯಯವಾಗುವವು. ಈ ವಿಶೇಷ ಸಂದರ್ಭವು ನೋಡುವದಕ್ಕಾಗಿ ಯೂರೋಪ್, ಆಫ್ರಿಕಾ, ಆಸ್ಟ್ರೇಲಿಯಾ ಮೊದಲಾದ ಖಂಡಗಳಿಂದ ಕೋಟ್ಯಂತರ ಪ್ರಜೆಗಳು ಹೋಗುವವರಾಗಿರುತ್ತಾರೆ. ಇಂತಾ ವಿಶೇಷ ಸಂದರ್ಭವು ನೋಡುವವರಿಂದುಂಟಾಗಬಹುದಾದ ಸುಖಸಂತೋಷಾನುಭವಕ್ಕೆ ಈ ಇಂಡ್ಯಾದೇಶೀಯರನ್ನೂ ಭಾಗಿಗಳನ್ನಾಗ ಮಾಡಿಸಬೇಕೆಂಬ ಕುತೂಹಲದಿಂ ಮುಂಬೈಯಲ್ಲಿ ಪ್ರಸಿದ್ಧ ಕೋರೀದಾರರಾಗಿರುವ ಮೆಸ್ಸರ್ಸ್ ಕರ್ಸನಜಿ ಸೊರಾಬ್ಜಿ ಕಂಪೆನಿಯವರು ಒಂದು ಸ್ಟೀಮರನ್ನು ಗೊತ್ತುಮಾಡಿ, ಅದರಲ್ಲಿ ಹಿಂದೂಗಳ ಪೈಕಿ ಬ್ರಹ್ಮ ಕ್ಷತ್ರಿಯ ವೈಶ್ಯ ಶೂದ್ರ ಜಾತಿಯವರ ಸಂಚಾರಕ್ಕೆ ಮಾತ್ರವೇ ಅವಕಾಶವನ್ನುಂಟು ಮಾಡಿ, ಅದರಲ್ಲಿ ಆಹಾರಾರ್ಥ ಮೃಗ ವಧೆ ಕೂಡದೆಂದು ನಿರ್ಬಂಧಿಸಿ, ಬ್ರಾಹ್ಮಣರಾದವರ ಆಚಾರಗಳಿಗೆ ಯಾವ ಭಾಗದಲ್ಲಾ ಲೋಪವುಂಟಾಗದಂತೆ ಬ್ರಾಹ್ಮಣ ಪಾಚಕರಂ ಸಹ ಯೇರ್ಪಡಿಸಿರುತ್ತಾರೆ. ಮತ್ತು ಇಲ್ಲಿಂದ ಹೊರಡುವ ಕಾಲದ ಮೊದಲು ಮರಳ ಇಲ್ಲಿಗೆ ಬಂದು ಸೇರುವ ತನಕ ಪ್ರಯಾಣಸ್ಥರ ಸುಖಸಂಚಾರಕ್ಕೆ ಯಾವ ಭಾಗದಲ್ಲೂ ಕೊರತೆಯುಂಟಾಗದಂತೆ ನೋಡಿಕೊಳ್ಳುವದಕ್ಕೆ ತಕ್ಕ ಜನರು ನೌಕರರನ್ನಾಡಿರುತ್ತಾರೆ. ಚಿಕಿತ್ಸೆಯ ಬಗ್ಯೆ ಹಿಂದೂ ಮತ್ತು ಯೂರೋಪಿಯನ್ ಕ್ರಮವನ್ನರಿತ ಹಿಂದೂ ಡಾಕ್ಟರುಗಳಂ ನಿಯಮಿಸಿರುತ್ತಾರೆ. ಆಹಾರ ಪದಾರ್ಥಗಳೆಲ್ಲವು ಮುಂಬೈಯಿಂದ ಅದೇ ಜಹಜಿನಲ್ಲಿ ಕಳುಹಿಸಲ್ಪಡುವವು. ಸ್ನಾನಪಾನಗಳಿಗೆ ಬೇಕಾದಷ್ಟು ನೀರೂ ಉಚಿತರೀತಿಯಿಂದ ಒದಗಿಸಲ್ಪಡುವುದು.

ಬ್ರಾಹ್ಮಣರು ನಾವಾರೋಹಣ ಪೂರ್ವಕ ಅನ್ಯದೇಶಗಳಿಗೆ ಹೋಗಿ ಬರುವಣವು ಶಾಸ್ತ್ರನಿಷಿದ್ಧ ಕಾರ್ಯವಲ್ಲವೆಂದು ಪ್ರಸಿದ್ಧರಾದ ಪಂಡಿತರನೇಕರು ಅಭಿಪ್ರಾಯ ಕೊಟ್ಟಿರುತ್ತಾರೆ. ಮೇಲೆ ತಿಳಿಸಲ್ಪಟ್ಟಿರುವ ಕಂಪೆನಿಯವರು ಮಾಡಿರುವ ಪ್ರಕೃತ ಪ್ರಯತ್ನಕ್ಕೆ ಬಹುಮಂದಿ ನೇಟಿವ್ ಪ್ರಮುಖರು ಅನುಮೋದಕರಾಗಿಯೂ ಪ್ರೋತ್ಸಹಕರಾಗಿಯೂ ಯೇರ್ಪಟ್ಟಿರುತ್ತಾರೆ ಬರುವ ಮಾರ್ಚ್ ತಿಂಗಳ ೧೫ ನೇ ತಾರೀಖ್ನಲ್ಲಿ ಇಂಡ್ಯಾ ದೇಶದಿಂದ ಹೊರಟು, ಪ್ರಸಿದ್ಧಗಳಾದ ಲಂಡನ್ ಮತ್ತು ನ್ಯೂಯಾರ್ಕ್ ಪಟ್ಟಣಗಳ ಮಾರ್ಗವಾಗಿ ಪ್ರದರ್ಶನ ನಡೆಯುವ ಚಿಕಾಗೋ ಪಟ್ಟಣಕ್ಕೆ ಹೋಗಿ ಜೂಲೈ ತಿಂಗಳೊಳು ಇಂಡ್ಯಾ ದೇಶಕ್ಕೆ ವಾಪಸ್ ಬಂದು ಸೇರುವುದು.

ಈ ಸ್ಟೀಮರ್‌ನಲ್ಲಿ ಹೋಗಿಬರುವಂತವರ ಪೈಕಿ ಅವ್ವಲ್ ತರಗತಿ ಪ್ರಯಾಣಸ್ಥರಿಗೆ ಇಸಂ ೧ಕ್ಕೆ ೩,೦೦೦ ರೂಪಾಯಿಗಳು, ೨ ನೇ ತರಗತಿಯವರಿಗೆ ೨,೫೦೦ ರೂಪಾಯಿಗಳು, ನೌಕರಜನರಿಗೆ ಇಸಂ ೧ಕ್ಕೆ ೧,೫೦೦ ರೂಪಾಯಿಗಳು ಕೊಡಬೇಕೆಂದು ನಿಷ್ಕರ್ಷೆಯಾಗಿರುತಿದೆ. ಈ ಮೊತ್ತದಲ್ಲಿ ಪ್ರಯಾಣಸ್ಥರ ಮನೋವೃತ್ತಿ ಖರ್ಚ್ ವಿನಾ ಮಿಕ್ಕ ವಿಶಿಷ್ಟ ಖರ್ಚೂ ಸೇರಿರುತಿದೆ. ಅಂದರೆ ಸ್ಟೀಮರ್ ಬಾಡಿಗೆ ಖರ್ಚು, ರೈಲ್ ಖರ್ಚು, ಭೋಜನಖರ್ಚು, ಮನೆ ಬಾಡಿಗೆ ವಗೈರೆ ಸೇರಿರುತಿದೆ. ಪ್ರಯಾಣಸ್ಥರು ನ್ಯೂಯಾರ್ಕ್ ಷಹರಿನಿಂದ ಚಿಕಾಗೋ ಷಹರ್ ವರಿವಿಗೆ ೮೦೦ ಮೈಲ್ ದೂರ ರೈಲಿನಲ್ಲಿ ಯೋಗಬೇಕಾಗಿರುತಿದೆ. ನ್ಯೂಯಾರ್ಕಿನಲ್ಲೂ ಅಲ್ಲಿಂದ ಮಧ್ಯಮಾರ್ಗದಲ್ಲೂ ಪ್ರಯಾಣಸ್ಥರಿಗೆ ಆಹಾರಾದಿಗಳಂ ಸಿದ್ಧಪಡಿಸಿಟ್ಟಿರತಕ್ಕ ಬಗ್ಯೆ ಹದಿನೈದು ದಿನಗಳಿಗೆ ಮುಂದಾಗಿ ಬ್ರಾಹ್ಮಣಜಾತಿ ಅಡಿಗೆಯವರ್ಳು ಕಳುಹಿಸಲ್ಪಡುವರು. ಚಿಕಾಗೋ ಷಹರಿನಲ್ಲಿ ಪ್ರದರ್ಶನಶಾಲೆಗೆ ಸೇರಿದಂತೆ, ಹಿಂದೂ ಪ್ರಯಾಣಸ್ಥರಿಗೆ ಅವರವರ ಪದ್ಧತಿಗಳಿಗನುಗುಣವಾಗಿ ವಸತಿ ಕಲ್ಪಿಸಲ್ಪಡುವವು, ಎಂದು ವಗೈರೆ ಸದರೀ ಕಂಪೆನಿಯವರು ಈವಿಷಯದಲ್ಲಿ ಕೊಟ್ಟಿರುವ ಪ್ರಕಟನೆಯಲ್ಲಿ ನಮೂದ್ ಮಾಡಿರುತ್ತಾರೆ.

ಸಮುದ್ರಯಾನವೂ, ದನುತ್ತಮಲಕ ಮೇಚ್ಛದೇಶವಾಸವೂ ಶಾಸ್ತ್ರನಿಷಿದ್ಧವಾದ ಕಾರ್ಯವಲ್ಲವೆಂತಲೂ, ಪ್ರಬಲಗಳಾದ ಪಾತಕಗಳಲ್ಲವೆಂತಲೂ ಪಂಡಿತೋತ್ತಮರಾದವರನೇಕರು ಅಭಿಪ್ರಾಯ ಕೊಟ್ಟಿರುವದಲ್ಲದೆ, ಪೂರ್ವಕಾಲದೊಳು ಹಿಂದೂ ಅರಸರು ಮೊದಲಾದವರನೇಕರು ಸಮುದ್ರಯಾನ ಪೂರ್ವಕ ಅನ್ಯ ಖಂಡಗಳಿಗೆ ಹೋಗಿ ಬರುತಲಿದ್ದರೆಂಬ ಅಂಶವು ಅನೇಕ ನಿದರ್ಶನಗಳಿಂದ ನಿರೂಪಿಸುತ್ತಾರಾಗಿ ಸದರೀ ಪಂಡಿತರುಗಳಲ್ಲಿರುವ ವೃದ್ಧತರವಾದ ಗೌರವ ಮತ್ತು ಪ್ರಮಾಣಿಕತಾಜ್ಞಾನದಿಂ ಈ ಸಂದರ್ಭದೊಳು ಬ್ರಾಹ್ಮಣರು ಮೊದಲಾದವರನೇಕರು ನಾವಾರೋಹಣ ಪೂರ್ವಕ ಅನ್ಯದೇಶ ಸಂಚಾರಕಾರ್ಯವಂ ಕೈಗೊಳ್ಳುವರೆಂದು ನಂಬುತ್ತೇವೆ. ದಾಕ್ಷಿಣಾತ್ಯರಲ್ಲಿ ಪ್ರಬುದ್ಧಜಾತ್ಯವು ಇನ್ನು ಸ್ವಲ್ಪ ಉಳಿದಿರುವದರಿಂದ ಔತ್ತರೇಯರಷ್ಟು ಸ್ವಾತಂತ್ರ್ಯವಂ ವಹಿಸಿ ಹೊರಡುವರೆಂದು ನಾವೆಣಿಸಲಾರೆವು, ಪರಂತು ಕೆಲವರು ಹೊರಡಬಹುದು. ಈ ಸಂದರ್ಭದೊಳು ಬಹುಕಾಲದ ಮೊದಲು ಅನೇಕರ ವಿಚಾರಕ್ಕೆ ವಿಷಯವಾಗಿರುತಲಿರುವ ಬ್ರಾಹ್ಮಣರ ಸಮುದ್ರಯಾನ ವಿಷಯವು ಪ್ರಾಯಶಃ ವ್ಯತಸ್ಥೆಯಾಗಬಹುದೆಂದು ತೋರುತಿದೆ.

ವಿಷಯ ಸ್ವರೂಪ ವಿವೇಚನಾಶಕ್ತಿ ಸಾಲದ ಮೈಸೂರ್ ದೇಶಾಭಿಮಾನಿಪತ್ರಿಕೆಯು ಈ ತಿಂಗಳ ೧೪ ನೇ ತಾರೀಖಿನ ಸಂಚಿಕೆಯೊಳು ಪದರಿಕೆಯಿಂದು ದೋಷವನ್ನಾರೋಪಿಸಿ ಅದನ್ನುದ್ಘಾಟನವು ಮಾಡಲುಜ್ಜುಗಿಸಿ ಆತ್ಮದೋಷವು ಮರೆಸಿದೆ, ವಿವೇಕಿಗಳ ಹೇಳನಕ್ಕೆ ಒಳಗಾದದಕ್ಕಾಗಿ ನಾವು ಬಹಳ ಅನುತಪಿಸುತ್ತೇವೆ. ಈ ಸಂಸ್ಥಾನದ ದಿವಾನರಿಗೆ, ಶ್ರೀಮನ್ ಮಹಾರಾಜ್ಞೀ ಸರ್ಕಾರದವರು ಕೃಪೆಗೈದ ಅಸಾಧಾರಣವಾದ ಘನತರ ಪ್ರಶಸ್ತಿಯು ಅವರ ಕೀರ್ತಿ ಪ್ರಶಸ್ತಿಗಳಿಗನುಗುಣವಾದುದೆಂದು ನುಡಿದು, ಗವರ್ನಮೆಂಟನವರ ವಿಶೇಷ ಪರಿಭಾವನೆಗೆ ದಿವಾನರವರು ತಮ್ಮ ಅಧಿಕಾರ ಕಾಲದಲ್ಲಿ ಮಾಡಿದ ಅನೇಕವಿಧ ಯೇರ್ಪಾಡುಗಳು ಕಾರಣಗಳಾದವೆಂತಲೂ, ಅವುಗಳೇ ಅವರು ಇಷ್ಟರ ಪ್ರತಿಷ್ಠೆಗೆ ಗುರಿ ಮಾಡಿದವೆಂತಲೂ ತಿಳಿಸಿ, ಒಬ್ಬ ಹಿಂದೂ ದೊಡ್ಡಮನುಷ್ಯರಿಗಿಂತಾ ಪ್ರಶಸ್ತಿಯು ಪ್ರಾಪ್ತವಾದದಂ ಕೇಳಿ, ನಿಷ್ಕಲ್ಮಷ ಹೃದಯದೊಡನೆಯೆಲ್ಲರಂತೆ ನಾವೂ ಸಂತೋಷಿಸಿ, ಅಭಿವಾದನವಂ ಮಾಡಿದೆವು. ಈ ಸಂದರ್ಭದಲ್ಲಿ ಪ್ರಸಕ್ತ ವಿಷಯವಂ ಕುರಿತು, ನಾವು ಬರೆದಿದ್ದದಕ್ಕಿಂತಲು ಅನ್ಯಥಾ ಯಾರೂ ನುಡಿಯಲಾರರು. ಇಂತಾ ನಮ್ಮ ಅಪರಾಧವು ದೇಶಾಭಿಮಾನಿ ಪತ್ರಿಕೆಗೆ ಆಗ್ರಹವನ್ನುಂಟುಮಾಡಿದಂತೆ ಕಾಣುತಿದೆ. ನಾವೇನೊ ಒಂದು ಪ್ರಯೋಜನಾಪೇಕ್ಷೆಯೊಡನೆ ದಿವಾನರವರಂ ಸ್ತೋತ್ರಮಾಡಿ, ಅವರ ದಯೆಯಂ ಸಂಪಾದಿಸಿಕೊಳ್ಳಲಿಕ್ಕೆ ಪ್ರಯತ್ನಪಡುವಂತೆಯೂ, ನಾವೊಂದುಕಾಲವಿಶೇಷದಲ್ಲಿ ದಿವಾನರವರ ವಿಷಯದೊಳು ಸಾಪರಾಧಿಗಳಾಗಿದ್ದಂತೆಯೂ, ಆದುಮೊದಲು ಅವರ ಪ್ರಸ್ತಾಪವಕ್ಕೇ ನಮ್ಮ ಪತ್ರಿಕೆಯಲ್ಲಿ ಯತ್ತದೆ ಮಾನಸೀಮಾಡಿಟ್ಟಿವೆಂತಲೂ, ಈಗ ಅವರಂ ವಿಶೇಷತಾ ಕೊಂಡಾಡುವದಕ್ಕೆ ಉಪಕ್ರಮಿಸಿರುತ್ತೇವೆಂತಲೂ ಆಕ್ಷೇಪಿಸಿ ನಾವು ನಮ್ಮ ಪ್ರಜೆಗಳ ಕೋಳನ್ನು ಕುಟ್ಟಲಿಕ್ಕೆಳಸದವರೆಂತಲೂ ತಿಳಿಸುತಿದೆ. ಅನೇಕ ಹಿಮಾಚಲದ ವರಿವಿಗೆ ಇರುವ ವೃತ್ತಾಂತ ಪತ್ರಿಕೆಗಳೂ, ಅನ್ಯಖಂಡಗಳಲ್ಲಿರುವ ಪತ್ರಿಕೆಗಳೂ ದಿವಾನರವರ ಪ್ರಶಸ್ತಿಯಂ ಕುರಿತು ಅಭಿನಂದಿಸಿ ಬರೆದ ಲೇಖನಗಳಿಗೆಲ್ಲ, ದಿವಾನರವರ ಕೃಪಾನುರಾಗ ಪಾತ್ರರಾಗಬೇಕೆಂಬ ಉದ್ದೇಶವೂ, ಪ್ರಯೋಜನಾಪೇಕ್ಷೆಯೂ ಅವುಗಳಿಗುಂಟಾಗಿರಬಹುದೆಂದು ಅನುಮೋದಿಸುವ ಪಕ್ಷಕ್ಕೆ, ದೇಶಾಭಿಮಾನಿಯು ಲಕ್ಷೇಪಣೆಗೆ ನಾವೊಬ್ಬರು ಮಾತ್ರ ಗುರಿಯಾಗಬೇಕಾಯಿತಲ್ಲಾ ಎಂಬ ಚಿಂತೆಗೆ ಅವಕಾಶವಿರಲಾರದು ಇಷ್ಟು ಪತ್ರಿಕೆಗಳಿಗೆ ಅಭಿಮತವಾದ ವಿಷಯವು ದೇಶಾಭಿಮಾನಿಗೆ ಮಾತ್ರ ಅತೃಪ್ತಿಕರವಾದುದಾಗಿದ್ದರೆ ಅದು ಆತ್ಮದೋಷವೆಂತಲೇ ಭಾವಿಸಬೇಕಾಗಿದೆ.

### Occasional Notes
### ನೈಮಿತ್ತಿಕ ವಿಷಯನ್ಯಾಸ.

ಕಾಬೂಲ್ ಅಮೀರರವರು ತಮ್ಮ ರಾಜ್ಯದಿಂದ ಅನ್ಯದೇಶಗಳಿಗೆ ಧಾನ್ಯಗಳು ರಫ್ತು ಮಾಡಕೂಡದೆಂದು ನಿಷೇಧಿಸಿರುವಂತೆ ತಿಳಿಯಲಾದೆವು.

ಕೂಚ್ ಬಿಹಾರ್ ಸಂಸ್ಥಾನದ ಮಹಾರಾಜರವರು ಈ ಸಂವತ್ಸರದೊಳು ಆಸ್ಟ್ರೇಲಿಯಾ ದ್ವೀಪಕ್ಕೆ ಹೋಗುವ ಸಂಭವ ಕಾಣಬರುತಲಿದೆ.

ಕಾಬೂಲ್ ಅಮೀರರವರು ಮರಳ ವಾತರೋಗ ಪೀಡಿತರಾಗಿ ಅಸ್ವಸ್ಥ ಸ್ಥಿತಿಯಲ್ಲಿರುವಂತೆ ತಿಳಿಯಬರುತಿದೆ ಇದು ಮನೋರೋಗದಿಂದುಂಟಾದ ವಾತರೋಗವಾಗಿರಬಹುದು

ತಿರುವಾಂಕೂರು ಜಿಲ್ಲಾಕೋರ್ಟ್ ಯೆರಡನೆಯ ಜಡ್ಜಿಯವರಾದ ಮ॥ ಮಾರ್ತಾಂಡಂ ಪಿಳ್ಳೆಯವರು ಈ ತಿಂಗಳ ೬ನೇ ತಾರೀಖಿನೊಳು ಅಕಸ್ಮಾತ್ತಾಗಿ ಮೃತಪಟ್ಟರೆಂದು ಮದರಾಸ್ ಪತ್ರಿಕೆಯೊಂದು ತಿಳಿಸುತದೆ.

ಈತಿಂಗಳ ೧೭ನೇ ತಾರೀಖಿನೊಳು ಲಾಹೋರಿನಲ್ಲಿ ಪ್ರಬಲ ಭೂಕಂಪ ವುಂಟಾಗಿ ಅನೇಕ ವಾಸಗೃಹಗಳು ಕದಲಿಹೋದವು, ಪರಂತು ಇದರಿಂದ ಪ್ರಾಣಹಾನಿಗಳು ಯೇನಾದರುಂಟಾಯಿತೋ ಎಂಬ ಅಂಶ ಅದ್ಯಾಪಿ ತಿಳಿಯಬರಲಿಲ್ಲವು.

ತಿರುಪತಿ ಮಹಂತರ ಮೇಲೆ ತರಲ್ಪಟ್ಟ ವ್ಯಭಿಚಾರ ಮೊದಲಾದ ಮೊಕದ್ದಮೆಗಳು, ಉತ್ತರ ಆರ್ಕಾಡು ಡಿಸ್ಟ್ರಿಕ್ಟ್ ಯೆಡಿ ಅಸಿಸ್ಟೆಂಟ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ದರ್ಯಾಪ್ತಾಗಿ, ಸದರೀ ಡಿಸ್ಟ್ರಿಕ್ಟ್ ಸೆಷನ್ ವಿಚಾರಣೆಯ ಬಗ್ಯೆ ಕಮ್ಮಿಟ್ ಮಾಡಲ್ಪಟ್ಟಿರುತಿದೆ.

ಚೆಂಗಲ್‌ಪಟ್ಟು ಡಿಸ್ಟ್ರಿಕ್ಟಿನಲ್ಲಿ ಕಾಲ ಮಳೆ ಇಲ್ಲದೆ ಕ್ಷಾಮಸ್ಥಿತಿ ಅತ್ಯಂತ ಕಷ್ಟವಾಗಿರುವದಂ ಅಲ್ಲಿನ ಕಲೆಕ್ಟರವರು ಯೋಚಿಸಿ, ಸಾಮಾನ್ಯವಾಗಿ ಬಡವರಾದವರ ಮುಖ್ಯವಾಗಿ ಹೊಲೆಯರು ಮಾದಿಗರ ಸಹಾಯಾರ್ಥ ಕೆಲವು ರಸ್ತೇ ಕಾಮಗಾರಿಗಳಂ ಮಾಡಿಸಬೇಕೆಂದು ಮೇಲಕ್ಕೆ ಬರೆದಿರುತ್ತಾರಂತೆ.

ಶ್ರೀಮನ್ಮಹಾರಾಜ್ಞೀ ಯವರು ತಮ್ಮ ಆಳ್ವಿಕೆಗೂ ಮತ್ತು ಪ್ರೀತಿಗೂ ಪಾತ್ರವಾದ ಈ ಭರತಖಂಡವನ್ನು ನೋಡಿಕೊಂಡು ಹೋಗಬೇಕೆಂದು ಇಚ್ಛೆಪಟ್ಟಿರುವಂತೆಯೂ, ಬಹುಶಃ ಅಲ್ಲಿ ಛಳಿಗಾಲ ಪ್ರಾರಂಭಿಸುವಾಗ್ಯೆ ಪ್ರಯಾಣ ಮಾಡಬಹುದೆಂತಲೂ ಇಂಗ್ಲಿಷ್ ಪತ್ರಿಕೆಗಳು ತಿಳಿಸುತಿವೆ.

ಕೊಚ್ಚಿ ಸಂಸ್ಥಾನದ ದಿವಾನ್ ಪೇಷ್ಕಾರರಾಗಿದ್ದು ಈಚೆಗೆ ಕೆಲಸಬಿಟ್ಟ ಮೆ॥ಶಂಕರಯ್ಯರವರು ಸದರೀ ಸಂಸ್ಥಾನದಲ್ಲಿ ಮಾಡಿದ ಶ್ಲಾಘ್ಯವಾದ ನೌಕರಿಯಂ ಪರಿಭಾವಿಸಿ, ಅವರ ಜ್ಞಾಪಕಾರ್ಥ ಅಲ್ಲಿ ಯಾವದಾದರೊಂದು ಕಾರ್ಯವಂ ಮಾಡಬೇಕೆಂಬ ಉದ್ದೇಶದೊಡನೆ ಅದಕ್ಕೆ ಆವಶ್ಯಕಗಳಾದ ಪ್ರಯತ್ನಗಳು ನಡೆಯುತಲಿರುವಂತೆ ತಿಳಿಯಬರುತಿದೆ.

ತಿರುವಾಂಕೂರು ದಿವಾನರಾಗಿದ್ದು ಕೆಲವು ವರ್ಷಗಳ ಹಿಂದೆ ಮೃತಪಟ್ಟ ಆನರೆಬಲ್ ಮೆ॥ ರಾಮಯ್ಯಂಗಾರ್ಯರವರು ಪುತ್ರಸಂತಾನ ಶೂನ್ಯರಾಗಿ ಮೃತಪಟ್ಟದ್ದರಿಂದ ಅವರ ಹೆಣ್ಣು ಮಕ್ಕಳಲ್ಲಿ ಪರಸ್ಪರ ಕಲಹ ಪ್ರಾಪ್ತವಾಗಿ ತನ್ಮೂಲಕ ಮದರಾಸ್ ಹೈಕೋರ್ಟಿನಲ್ಲಿ ದಾವೆಗಳು ದಾಖಲಾದುದರಿಂದ ಮೆ॥ ರಾಮಯ್ಯಂಗಾರ್ಯರವರ ವಿಸ್ತಾರವಾದ ಜೀವಧನವು ಕ್ಷೇತ್ರದಲ್ಲಿ ಖಲರಾಗುವಕಾಲ ಪ್ರಾಪ್ತವಾಗುವದೆಂದು ಯೆಣಿಸಬೇಕಾಗಿದೆ.

ತಂತಿ ಮೂಲಕ ದೂರದೇಶಗಳಿಗೆ ವರ್ತಮಾನಗಳಂ ಕಳುಹಿಸತಕ್ಕ ವಿಷಯದಲ್ಲಿ ಇದುವರಿವಿಗೆ ಕಲ್ಪಿಸಲ್ಪಟ್ಟಿರುವ ಅನುಕೂಲ್ಯಗಳಲ್ಲದೆ ಇನ್ನು ವಿಶೇಷತಃ ಅನುಭವನ್ನರಾದವರಿಗೆ ಉಪಯುಕ್ತವಾಗಿರಬೇಕೆಂದು ಯೋಚಿಸಿ, ಸ್ವಲ್ಪವಿರಾಮದಿ ಕಳುಹಿಸಲ್ಪಡುವ ವರ್ತಮಾನಗಳ ವಿಷಯದಲ್ಲಿ ಈಗ ನಿಷ್ಕರ್ಷೆಯಾಗಿರುವ ಎಂಟಾಣೆ ದರವನ್ನು ನಾಲ್ಕಾಣೆಗೆ ತಗ್ಗಿಸಬೇಕೆಂಬ ಯೋಚನೆ ಯಂಟಾಗಿರುವಂತೆ ಒಂದಾನೊಂದು ಪತ್ರಿಕೆ ಹೇಳುತಿದೆ

ಅಲ್ವಾರ್ ಸಂಸ್ಥಾನದ ಮಂತ್ರಿಯವರನ್ನು ಖೂನ್ ಮಾಡಿದ ಕೆಪ್ಟನ್ ರಾಮಚಂದ್ರ ಯೆಂಬಾತನು ಪಂಚಾಯತಿ ಕೋರ್ಟಿನಿಂದ ಮರಣ ದಂಡನೆ ವಿಧಿಸಲ್ಪಟ್ಟ ಸಂಗತಿಯನ್ನು ಹಿಂದಿನ ವಾರದ ಪತ್ರಿಕೆಯ ಮೂಲಕ ತಿಳಿಸಿರುತ್ತೇವೆ ಯಷ್ಟೆ ಸದರೀ ಮೊಕದ್ದಮೆಯಲ್ಲಿ ಕೆಲವು ಅಂಶಗಳ ವ್ಯವಸ್ಥೆಯ ಬಗ್ಯೆ ಸ್ಟೇಟ್ ಸೆಕ್ರೆಟರಿಯವರ ಅಭಿಪ್ರಾಯವು ಕೇಳಲಾಗಿ ಅವರು ಅದರಲ್ಲಿ ತಾವು ಪ್ರವೇಶಿಸುವದಿಲ್ಲವೆಂದು ಜವಾಬ್ ಕೊಟ್ಟಂತೆ ತಿಳಿಯಬರುತಿದೆ.

ಇಂಡ್ಯಾರಾಜ್ಯದ ಛಮಾ ಪ್ರೆಸಿಡೆನ್ಸಿಯ ನ್ಯಾಯವಿಧಾಯಕ ಸಭೆಯ ವಿಮರ್ಶೆಯ ವಿಷಯದಲ್ಲಿ ಯೆಗ್ಜಿಕ್ಯೂಟಿವ್ ಕೌನ್ಸಿಲ್ ಎಂಬ ಕಾರ್ಯನಿರ್ವಾಹಕ ಸಭೆಯ ಮೆಂಬರುಗಳ ಅಭಿಪ್ರಾಯವನ್ನು ತಿಳಿಸಿ ಇಂಡ್ಯಾ ಗವರ್ನಮೆಂಟಿನವರು ಬರೆದ ಕಾಗದಕ್ಕೆ ಸ್ಟೇಟ್ ಸೆಕ್ರೆಟರಿಯವರ ಪ್ರತ್ಯುತ್ತರ ಬರುವ ತನಕ, ಪ್ರಕೃತ ಸ್ಥಿತಿಯಂ ಯೋಚಿಸಿ, ವೈಸರಾಯ್‌ರವರು ನ್ಯಾಯವಿಧಾಯಕ ಸಭೆ ಸೇರಲಾರರೆಂದು ಕಲ್ಕತ್ತಾ ಸ್ಟೇಟ್ಸ್‌ಮನ್ ಪತ್ರಿಕೆ ತಿಳಿಸುತಿದೆ.

ಜರ್ಮನೀ ರಾಜ್ಯದ ರಾಜಧಾನಿಯಾದ ಬರ್ಲಿನ್ ಪಟ್ಟಣದೊಳು ರೈಲ್ವೆ ಕಂಪೆನಿಯವರು ಪ್ರಯಾಣಸ್ಥರಿಗೆ ಟಿಕೆಟ್ ಕೊಡುವ ವಿಷಯದಲ್ಲಿ ಬಹು ಸುಲಭೋಪಾಯವಂ ಕಲ್ಪಿಸಿಕೊಂಡಿರುತ್ತಾರೆ ಹ್ಯಾಗಂದರೆ, ಒಂದು ವಿಧ ಯಂತ್ರವಂ ಮಾಡಿಟ್ಟಿರುತ್ತಾರೆ, ಟಿಕೆಟ್ ಬೇಕಾದವರು ಅದರ ಕ್ರಯದ ಮೌಲ್ಯವಂ ಸದರೀ ಯಂತ್ರದೊಳು ಹಾಕಿದ ಕೂಡಲೆ ಅದಕ್ಕೆ ತಕ್ಕಂತೆ ಒಂದು ಟಿಕೆಟ್ ಯಂತ್ರದಿಂದ ಹೊರಗೆ ಬಂದು ಬೀಳುತಿದೆಂದು ಇಂಗ್ಲಿಷ್ ಪತ್ರಿಕೆಯೊಂದು ತಿಳಿಸುತಿದೆ.

ಈ ಹೊಸ ಸಂವತ್ಸರ ಆರಂಭದಲ್ಲಿ, ಈ ಜನವರಿ ಗುರ್ರೀ ತಾರೀಖ್ನಲ್ಲಿ ಪದ್ಧತಿ ಮೇರೆ, ಮಹಾರಾಜ್ಞೀ ಸರ್ಕಾರದವರು ಇಂಡ್ಯಾದೇಶೀಯರು ಕೆಲವರಿಗೆ ಬಹುವಿಧ ಪ್ರಶಸ್ತಿಗಳಂ ಕೊಟ್ಟ ಸಂದರ್ಭದೊಳು ಮಧುರೆ ಪಂಡಾರಂ ಎಂಬವರಿಗೆ ರಾಯ ಬಹದೂರ್ ಎಂಬ ಪ್ರಶಸ್ತಿಯಂ ಕೊಟ್ಟ ವಿಷಯದಲ್ಲಿ, ಸದರೀ ಪಂಡಾರಂ ಎಂಬವರು ಸನ್ಯಾಸಿಯಾಗಿಯೂ ಐಹಿಕ ಸುಖ ಸಂತೋಷಗಳಂ ತ್ಯಜಿಸಿದವರಾಗಿಯೂ ಇರುವಲ್ಲಿ ಅಂತವರಿಗೆ ಸದರೀ ಪ್ರಶಸ್ತಿಯಂ ಕೊಟ್ಟದ್ದು, ಮದರಾಸ್ ಗವರ್ನರಾದ ಲಾರ್ಡ್ ವೆನ್‌ಲಾಕ್ ಎಂಬವರಿಗೆ "ಮಹಾಮಹೋಪಾಧ್ಯಾಯ" ಎಂಬ ಪ್ರಶಸ್ತಿಯಂ ಕೊಟ್ಟರೆ ಯೆಷ್ಟು ಹಾಸ್ಯಾಸ್ಪದವಾಗಿರುವುದೊ ಅಷ್ಟು ಹೇಳನಾಸ್ಪದವಾಗಿರುತದೆ ಯೆಂದು ಮದರಾಸ್ ಹಿಂದೂ ಪತ್ರಿಕೆ ತಿಳಿಸುತಿದೆ

### LOCAL AND PROVINCIAL NEWS.
### ಒಳದೇಶಮತ್ತುತಾಲ್ಲೂಕ್‌ಜಾತಿವೃತ್ತಾಂತಗಳು.

ಇಲ್ಲಿನ ಬ್ರಿಟಿಷ್ ರೆಸಿಡೆಂಟರವರು ದೊಡ್ಡಬಳ್ಳಾಪುರದ ಬಳಿ ನಡೆಯುವ ಕ್ಯಾಂಪ್ ಆಫ್ ಎಕ್ಸರ್

ಸ್ಟ್ರೈಕ್ ಎಂಬ ಸೈನಿಕ ಸಾಧಕಗಳಂ ನೋಡುವದಕ್ಕಾಗಿ ಅಲ್ಲಿಗೆ ಹೋಗಿದ್ದವರು ಕಳೆದ ಶುಕ್ರವಾರದ ದಿನ ವಾಪಸ್ ಬಂದರು.

---

ಮೈಸೂರಲ್ಲಿ ಬ್ರಾಹ್ಮಣ ವಿಧವೆಯೊಬ್ಬಳು ೧೬ ವರುಷ ಪ್ರಾಯದ ಮಗನನ್ನು ಕೂಡ ಬಿಟ್ಟು ಉಪಕಾಂತನೊಡನೆ ಓಡಿಹೋದಂತೆ ತಿಳಿಯುತ್ತೇವೆ. ಇದೆಲ್ಲಾ ವಿಧವಾವಿವಾಹನಿರೋಧದಿಂದುಂಟಾಗುವ ಶುಭಫಲಗಳು —ಮೈ. ದೇ.

---

ಈ ದೇಶದ ಗವರ್ನಮೆಂಟ ಸ್ಕೂಲುಗಳಲ್ಲಿ ಓದಿ ಡಿಗ್ರೀಗಳಂ ಪಡೆದ ಮ|| ರಾಮರಾವ್ ಮತ್ತು ಶೇಷಯ್ಯರಾವ್ ಎಂಬ ಇಬ್ಬರು ವೈದ್ಯ ವಿದ್ಯಾಸಂಪಾದನಾರ್ಥ ಬರುವ ಏಪ್ರಿಲ್ ತಿಂಗಳಲ್ಲಿ ಇಂಗ್ಲೆಂಡಿಗೆ ಹೋಗಬೇಕೆಂದು ಪ್ರಯತ್ನ ಪಡುತಲಿರುವಂತೆ ಕೇಳುವದಕ್ಕೆ ಸಂತೋಷಿಸುತ್ತೇವೆ.

---

ಇಲ್ಲಿ ಶ್ರೀಮತ್ ಮಹಾರಾಜರವರ ಪ್ರೈವೇಟ ಸೆಕ್ರೆಟರಿಯಾಗಿದ್ದ ಮೇಜರ್ ಮಾರ್ಟಿನ್ ಸಾಹೇಬರ ಕೊಪಾರರೂ ಮತ್ತು ಮ|| ಲೀ ಸಾಹೇಬರ ಮೊದಲನೆಯ ಕೊಮಾರರೂ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಪೋಲೀಸ ಪ್ರೊಬೇಷನರಾಗಿ ದಾಖಲ್ ಮಾಡಲ್ಪಟ್ಟರೆಂದು ಮೈಸೂರು ಪತ್ರಿಕೆಯೊಂದು ಹೇಳುತದೆ.

---

ಈಗ ಆದ ಸಮುದ್ರಯಾನವು ಶ್ರೀಮನ್ಮಹಾರಾಜರವರಿಗೆಪ್ರಿಯವಾಗಲಿಲ್ಲವೆಂದಲೂ, ಸೀಸಿಕ್ ಎಂಬ ಹೊಟ್ಟೆ ತೊಳೆಸುವಿಕೆಯು ಇವರನ್ನು ಬಾಧಿಸುತ್ತೆಂತಲೂ ಅದರಿಂದ ೩ ದಿವಸ ಹೊರಗೆ ಹೊರಡಲಿಲ್ಲವಾತಲೂ ವರ್ತಮಾನವಿದೆ. ಇದು ನಿಜವಾಗಿದ್ದ ಪಕ್ಷದಲ್ಲಿ ಈ ಕಾರಣದಿಂದಲೇ ಬರ್ಮ ಪ್ರಯಾಣ ನಿಂತಿರಬಹುದೆಂದು ತೋರುತದೆ—ಹಿಂ.

---

ಕಳೆದ ವಾರದೊಳು ಸಿಟಿ ಮ್ಯೂನಿಸಿಪಾಲಿಟಿಯವರು ಪದ್ಧತಿಮೀರಿ ಮಹಾಜ್ಞಾವಿ ಮೀಟಿಂಗ ನಾಡಿ ಇತರ ಕೆಲಸಗಳಂ ಪೂರ್ತಿಮಾಡಿ ತರುವಾಯ ಈ ಸಂಸ್ಥಾನದ ದಿವಾನರವರಿಗೆ ಈಚೆಗೆ ಮಹಾರಾಜ್ಞೀ ಸರ್ಕಾರದಿಂದ ಕೆ. ಸಿ. ಎಸ್. ಐ. ಎಂಬ ಪ್ರಶಸ್ತಿ ಕೊಡಲ್ಪಟ್ಟ ವಿಷಯದಲ್ಲಿ ತಮ್ಮ ಶುಭವಾದನವು ಅವರಿಗೆ ತಂತಿ ಮೂಲಕ ತಿಳಿಸಬೇಕೆಂದು ಮೆಂಬರ್‌ಗಳೆಲ್ಲರು ಐಕಮತ್ಯದೊಡನೆ ನಿರ್ಣಯಿಸಿದರು

---

ಈಚೆಗೆ ಮೈಸೂರಲ್ಲಿ ಸಣ್ಣ ವಯಸ್ಸಿನ ಶ್ರೀವೈಷ್ಣವ ಬ್ರಾಹ್ಮಣ ವಿಧವೆ ಒಬ್ಬಳು ಓರ್ವ ವ್ಯಭಿಚಾರ ಹುಡುಗನೊಬ್ಬನು ಸೇರಿಕೊಂಡು ಓಡಿಹೋದಂತೆ ಅಲ್ಲಿನ ಪತ್ರಿಕೆಯೊಂದು ತಿಳಿಸುತದೆ ಇಂತಹ ಅತಿಶಯಗಳಾದ ವಿಷಯಗಳು ಮುಂದೆ ನಾವು ಕೇಳುವದಕ್ಕೆ ಕಾರಣಗಳು ಅನೇಕವಾಗಿ ಉಂಟಾಗುತಿರುವಲ್ಲಿ ಮೇಲಿನ ವರ್ತಮಾನಕ್ಕಾಗಿ ನಾವು ಆಶ್ಚರ್ಯಪಡಬೇಕಾಗಿಲ್ಲವು.

---

ಇಲ್ಲಿನ ದಿವಾನರಾದ ಸರ್. ಕೆ. ಶೇಷಾದ್ರಿ ಅಯ್ಯರವರು ಹೈದರಾಬಾದ್ ಸಂಸ್ಥಾನದ ದಿವಾನ್‌ಗಿರಿಗೆ ಹೋಗುವರೆಂತಲೂ, ಇಲ್ಲಿನ ದಿವಾನ್‌ಗಿರಿಗೆ ಕಾಯುವವರಾಗಿ ಮ|| ಟಿ. ಆರ್. ಎ. ತಂಬುಚೆಟ್ಟರವರೂ, ನಾಯಬ್‌ದಿವಾನ್ ಅಧಿಕಾರವೊಂದು ನೂತನವಾಗಿ ಕಲ್ಪಿಸಲ್ಪಟ್ಟು ಅದಕ್ಕೆ ಮ|| ವಿ. ಪಿ. ಮಾಧವರಾಯರವರೂ ನಿಯಮಿಸಲ್ಪಡುವರೆಂತಲೂ ಈಚೆಗೆ ಒಂದು ಪ್ರವಾದ ಈ ಪೂರಲ್ಲಿ ಪ್ರಬಲಗೊಂಡಿರುವದಲ್ಲದೆ ಈ ದೇಶದಲ್ಲಿನ ವೃತ್ತಾಂತ ಪತ್ರಿಕೆಗಳ ಲೇಖನಗಳೂ ಅದಕ್ಕೆ ಪೋಷಕವಾಗಿರುತಿವೆ.

---

ಹವಾ ವಿಷಯದಲ್ಲಿ ಈ ವಾರದೊಳು ತಿಳಿಸುವದಕ್ಕೆ ಅರ್ಹವಾದ ಅಧಿಕಾಂಶ ಯಾವದೂ ಇಲ್ಲವು. ಬಿಸಿಲು ದಿನೇ ದಿನೆ ಚುರುಕಾಗುತಲಿದೆ ರಾತ್ರಿಕಾಲದಲ್ಲಿ ಚಳಿಯೂ, ಬೆಳಗಿನ ಝಾಮದಲ್ಲಿ ಮಂಜೂ ಅಧಿಕವಾಗಿವೆ. ಆಹಾರ ಪದಾರ್ಥಗಳ ಧಾರಣೆಗಳು ಯೇಕರೂಪವಾಗಿವೆ. ಜಲಾಭಾವದಿಂ ಜನರು ಪಡುವ ಶ್ರಮವು ಸದ್ಯಃ ಪರಿಹರವಾಗುವಂತ ತೋಚಲಿಲ್ಲವು. ಪರಂತು ಸರ್ಕಾರದವರು ಆ ವಿಷಯದಲ್ಲಿ ಪ್ರಯತ್ನ ಪಡಲಿಲ್ಲವೆಂದು ನಾವು ಹೇಳಲಾರೆವು. ಅವರ ಪ್ರಯತ್ನದ ಫಲಿತಾಂಶವಂ ಮುಂದೆ ತಿಳಿಸುವೆವು, ಮುಂಗಾರೆ ಮಳೆ ಬರುವವರೊಳಗಾಗಿ ನೀರಿನ ಕಷ್ಟ ದುಸ್ಸಹವಾಗಿರುವದೆಂದು ತೋರುತಿದೆ.

---

ಮೈಸೂರ್ ಗವರ್ನಮೆಂಟ ಆಬ್ಕಾರಿ ಇಲಾಖಾ ಅಸಿಸ್ಟೆಂಟ ಕಮ್ಮಿಷನರ್ ಮ|| ಮೆಗಡಾನಲ್ ಯವರಿಗೆ ಬಧಿರತೆಯು ದಿನೇ ದಿನೆ ಅಧಿಕವಾಗಿ ಅದು ಅದರ ಸರ್ಕಾರ್ ಕೆಲಸ ನಿರ್ವಹಣೆಗೆ ಪ್ರತಿಬಂಧಕವಾಗಿರಲು ಅವರ ಚಿಕಿತ್ಸೆಯ ಬಗ್ಯೆ ಮೂರು ತಿಂಗಳ ರಜಾ ಪಡೆದು ಮದರಾಸಿಗೆ ಹೋಗಿದ್ದಾರೆಯಷ್ಟೆ. ಈಗ ಅವರಿಗದು ಕೆಲಸ್ವಮಟ್ಟಿಗೆ ಕಡಮೆಯಾಗಿದೆಯೆಂತಲೂ ಕ್ಷಿಪ್ರದೊಳಗೆ ಬಂದು ತಮ್ಮ ಕೆಲಸದ ಚಾರ್ಜನ್ನು ವಹಿಸುವರೆಂತಲೂ ತಿಳಿಯಬರುತಿದೆ.

---

ಪ್ರತಿ ಡೆಪ್ಯುಟಿ ಕಮ್ಮಿಷನರೇ ಆಗಲಿ ಅಥವಾ ಅವರ ಅಸಿಸ್ಟೆಂಟರಾಗಲಿ ತಮ್ಮ ಡಿಸ್ಟ್ರಿಕ್ಟಿಗೊಳಪಟ್ಟ ಎಲ್ಲಾ ತಾಲ್ಲೂಕ್ ಟ್ರಿಜರಿಗಳಲ್ಲೂ ೬ ತಿಂಗಳಿಗೊಂದಾವರ್ತಿ ಹೋಗಿ ಬ್ಯಾಲೆನ್ಸ್ ಮಾಡತಕ್ಕದ್ದೆಂತಲೂ, ಕಂಟ್ರೋಲರವರು ಎರಡು ವರುಷಗಳಿಗೆ ಒಂದಾವರ್ತಿ ಡಿಸ್ಟ್ರಿಕ್ಟು ಟ್ರಿಜರಿಗಳನ್ನು ತನಿಖೆ ಮಾಡಬೇಕೆಂತಲೂ, ಆಯಾ ಕಾಲದಲ್ಲಿ ಅವರಿಗೆ ಕಂಡು ಬರುವ ನ್ಯೂನಾತಿರಿಕ್ತಗಳನ್ನು ಗವರ್ನಮೆಂಟನವರಿಗೆ ತಿಳಿಯಪಡಿಸಬೇಕೆಂತಲೂ ಆರ್ಡರ್ ಮಾಡಿರುತ್ತಾರೆ.

---

ದಕ್ಷಿಣ ಇಂಡಿಯಾ ರೈಲ್ವೇ ಕಂಪೆನಿಯವರಲ್ಲಿರತಕ್ಕ ರೈಲು ಗಾಡಿಗಳು ಬೇಕಾದಂಗ ಸಾಲದೆ ಹೋಗಿರುವವರಿಂದಲೂ, ವಿಶೇಷ ಸಂದರ್ಭಗಳಲ್ಲಿ ಗಾಡಿಗಳೊಳು ಸ್ಥಳ ಸಾಲದೆ ಪ್ರಯಾಣಸ್ಥರು ಬಹುಮಂದಿ ದೊಡ್ಡ ಸ್ಟೇಷನ್‌ಗಳಲ್ಲಿ ನಿಂತು ಹೋಗುವದರಿಂದಲೂ, ಅವರಿಗೆ ಬೇಕಾದ ಸ್ಥಳಾನುಕೂಲ್ಯವಂ ಕಲ್ಪಿಸಲಿಕ್ಕೆ ಕಂಪೆನಿಯವರಿಗೆ ಬೇಕಾದಷ್ಟು ಗಾಡಿಗಳು ಇಲ್ಲದ್ದರಿಂದಲೂ, ಗವರ್ನಮೆಂಟನವರು ನೂತನವಾಗಿ ಗಾಡಿಗಳ ತಯಾರಿ ಬಗ್ಯೆ ೧೩ ಲಕ್ಷ ರೂಪಾಯಿಗಳು ಮಂಜೂರ್ಮಾಡಿ ದರೆಂದು ತಿಳಿಯಬರುತಿದೆ.

---

ಕಳೆದ ಶುಕ್ರವಾರದ ದಿನ ಈ ಪೂರಲ್ಲಿ ಕೆಲವರು ಪ್ರೇತಕರ್ಮವ ಮಾಡುವದಕ್ಕಾಗಿ ಗವೀಪುರಕ್ಕೆ ಹೋಗಿ ಅಲ್ಲಿನ ಸತ್ರದ ಒಂದು ಕೊಠಡಿಯಲ್ಲಿ ತಮ್ಮ ಸಾಮಾನುಗಳೊಡನೆ ಮಲಗಿರಲು ರಾತ್ರಿ ಸುಮಾರು ೧೨ ಘಂಟೆಗೆ ಕಳ್ಳನು ಸದರೀ ಕೊಠಡಿಯ ಕಲ್ಲು ಗೋಡೆಗಳಿಗೆ ಕನ್ನಹಾಕಿ ಒಳಗೆ ನುಗ್ಗಿ ಅಲ್ಲಿ ಮಲಗಿದ್ದ ಒಬ್ಬ ಹೆಂಗಸಿನ ಕೊರಳಲ್ಲಿದ್ದ ಅಡ್ಡಿಕೆಯಂ ಕಿತ್ತುಕೊಂಡನು. ಅಷ್ಟರಲ್ಲಿ ಸ್ವಲ್ಪ ಸಂದಡಿ ಯುಂಟಾಗಲು ಪಕ್ಕದಲ್ಲಿ ಮಲಗಿದ್ದವರೆಲ್ಲರು ಎದ್ದು ಅವರ ಪೈಕಿ ಧೈರ್ಯಶಾಲಿಯಾದ ಒಬ್ಬಾತನು ಕಳ್ಳನಂಹಿಡಿಯಬೇಕೆಂದು ಪ್ರಯತ್ನ ಪಡುವಲ್ಲಿ ಕಳ್ಳನು ಕೈಯಲ್ಲಿದ್ದ ದೊಣ್ಣೆಯಿಂದ ಆತನು ಬಲವಾಗಿ ಹೊಡೆದುಬಿಟ್ಟು ಕೊಠಡಿಯ ಬಾಗಿಲ ಚಿಲುಕವಂ ತೆಗದುಕೊಂಡು ಪರಾರಿಯಾದನು. ಕಳವು ನಡೆದ ಸ್ಥಳಕ್ಕೂ ಪೋಲೀಸ್ ಸ್ಟೇಷನಿಗೂ ೫೦ ಗಜ ಫಾಸಲೆ ಯುಂಟು. ಕಳವು ನಡೆದ ಕಾಲದಲ್ಲಿ ಸದರೀ ಕೊಠಡಿಯೊಳು ದೀಪವಿತ್ತು. ಕಳ್ಳನು ಕರೀ ದುಸ್ತುಗಳು ಹಾಕಿಕೊಂಡಿದ್ದನು. ತನ್ನ ಗುರ್ತು ಹಿಡಿಯಲಿಕ್ಕೆ ಅವಕಾಶವಿಲ್ಲದಂತೆ ಮುಖವು ಓರೆ ಮಾಡಿಕೊಂಡುಸದರೀ ಕೃತ್ಯ ನಡೆಸಿರುತ್ತಾನೆ ಕಳ್ಳನು ಯಾವನಾಗಿರುವನೋ ಅದನ್ನು ಈ ಪತ್ರಿಕೆಯನ್ನೋದತಕ್ಕವರೇ ಊಹಿಸಿ ತಿಳಿದುಕೊಳ್ಳಬಹುದು.

## CORRESPONDENCE.

[ಇವರಡಿ ಪ್ರಕಟಿಸಲ್ಪಟ್ಟಿರುವ ಲೇಖನದಲ್ಲಿ ಕಂಡ ಅಭಿಪ್ರಾಯಗಳ ಗುಣದೋಷಗಳಿಗೆ ಏತತ್ಪತ್ರಿಕಾ ಲೇಖಕರು ಜವಾಬ್ದಾರರಲ್ಲವು.—ಎಡಿಟರ್ ಕ. ಪ್ರ.]

ಮ|| ರಾ|| ಕರ್ಣಾಟಕ ಪ್ರಕಾಶಿಕಾ ಎಡಿಟರವರ ಸ|| ಕ್ಕೆ.

ಅಯ್ಯಾ,—ಮೊನ್ನೆಯದಿನ ನಾನು ಜನಮಾನ್ಯರಾದ ಪಂಡಿತರೊಬ್ಬರೊಡನೆ ಅವರ ಮತವಿಚಾರವು ಕುರಿತು ಮಾತನಾಡುತಲಿರುವಾಗ್ಯೆ ಅವರ ಅಭಿವೇದದಲ್ಲಿ ಅನುಮಾನಾಸ್ಪದಗಳಾದ ಕೆಲವು ಅಂಶಗಳಂ ಕುರಿತು ನಾನು ಕೇಳಿದ ಕೆಲವು ಪ್ರಶ್ನೆಗಳಿಗೆ ಉತ್ತರಗಳಂ ಹೇಳಿ ಇಂತಹ ಅನುಮಾನಗಳಿಗೆ ನಿಮ್ಮಲ್ಲಿಯೂ ಅವಕಾಶ ಪ್ರುಟ್ಟುದು ಹೇಳಿ, ತಮ್ಮ ಪ್ರಶ್ನೆಗಳಿಗೆ ಸಮಾಧಾನ ಹೇಳಬೇಕೆಂದು ಅಪೇಕ್ಷಿಸಿದರು. ಆದರೆ ನನ್ನ ಉತ್ತರಕ್ಕೆಂತಲೂ ಪಂಡಿತರಾದ ಆಸ್ತಿಕರ ಸಿದ್ಧಾಂತವು ಆದರಣೀಯವಾಗಿರಬಹುದಾದುದರಿಂದ ಸದರೀ ಪಂಡಿತರ ಪ್ರಶ್ನೆಯನ್ನಿವರಡಿ ತಿಳಿಸುತ್ತೇನೇನೆಂದರೆ—

“ಮಿತ್ರರೆ, ನನ್ನ ಉತ್ತರವು ನಿಮ್ಮ ಆಕ್ಷೇಪಣೆಗಳಿಗೆಲ್ಲ ಸಮಾಧಾನ ರೂಪವಾಗಿರ ಬಹುದೆಂದೆಣಿಸುತ್ತೇನೆ. ಇದಕ್ಕೆ ತಾವೇನು ಗತಿ ಕಲ್ಪನ ಮಾಡುವಿರೋ ಅದಂ ಕೇಳಲಪೇಕ್ಷಿಸುತ್ತೇನೆ. ತಮ್ಮಲ್ಲಿ ವೇದವೆಂಬುವದು, ಪರಮೇಶ್ವರನಂತೆ ಅನಾದಿಸಿದ್ಧವೆಂತಲೂ, ಶಬ್ದಬ್ರಹ್ಮವೆಂತಲೂ, ಅಕೃತಕವೆಂತಲೂ, ಅಪೌರುಷೇಯವೆಂತಲೂ, ಸ್ವಯಂವ್ಯಕ್ತವೆಂತಲೂ, ಮೀಮಾಂಸಾಶಾಸ್ತ್ರವೂ ವೇದವೂ ಕೆಲವುಪುರಾಣಗಳೂ ಹೇಳುತಿವೆ. ವೇದವು ಜಗದೀಶ್ವರನು ಹೇಳಿದನೆಂದು ಕೆಲವುಕಡೆ ಹೇಳಿದೆ. ಸೃಷ್ಟಿಕರ್ತನಾದ ಚತುರ್ಮುಖಬ್ರಹ್ಮನು ಹೇಳಿದನೆಂದು ಕೆಲವುಕಡೆ ತಿಳಿಸಲ್ಪಟ್ಟಿದೆ, ಪರಮೇಶ್ವರನು ತನ್ನ ಸದ್ಯೋಜಾತ ಮುಖದಿಂದ ವೇದಗಳನ್ನೂ, ತತ್ಪುರುಷ ಮುಖದಿಂದ ಸ್ಮೃತಿಗಳನ್ನೂ, ವಾಮದೇವ ಮುಖದಿಂದ ಪುರಾಣಗಳನ್ನೂ, ಅಘೋರ ಮುಖದಿಂದ ಶಾಸ್ತ್ರಗಳನ್ನೂ, ಈಶಾನ ಮುಖದಿಂದ ಉಪನಿಷತ್ತುಗಳನ್ನೂ ಹೇಳಿದ್ದಾಗಿ ಸ್ಕಾಂದ ಪುರಾಣವು ಸೂಚಿಸುತಿದೆ. ಪೂರ್ವಕಲ್ಪದಲ್ಲಿದ್ದ ವೇದವೇ ಈ ಕಲ್ಪದಲ್ಲಿ ಅಭಿವ್ಯಕ್ತವಾಯಿತೆಂದು ಯಜುರ್ವೇದದ ಒಂದು ಭಾಗದಲ್ಲಿಯೂ, ಮೂರುವೇದಗಳು ಹುಟ್ಟಿದವೆಂತಲೇ ಮತ್ತೊಂದು ಭಾಗದಲ್ಲಿಯೂ, ವೇದಗಳು ಅನಂತಗಳಾದುದರಿಂದ ಅಂತಾ ವೇದ ಪರ್ವತಗಳ ದೆಸೆಯಿಂದ ಭರದ್ವಾಜ ಋಷಿಗಳು ಮೂರು ಹಿಡಿಗಳಂ ತುಂಬಿಕೊಂಡದಾಗಿ ಪರಾಣಿತದಲ್ಲಿಯೂ ಹೇಳಲ್ಪಟ್ಟಿವೆ ವೇದವು ಅನಾದಿ ನಿಧನವಾದದ್ದೆಂದು ಭಾರತದಲ್ಲಿಯೂ ಸ್ಮೃತಿಗಳಲ್ಲಿಯೂ ತಿಳಿಸಲ್ಪಟ್ಟಿದೆ. ವೇದವು ಸ್ವಯಂ ವ್ಯಕ್ತವೆಂದು ನಿಮ್ಮಂತಾ ಆಸ್ತಿಕರನೇಕರು ಅಂಗೀಕರಿಸಿರುತ್ತಾರೆ. ಅಪೌರುಷೇಯವೆಂದು ಕೆಲವರು ವ್ಯಾಖ್ಯಾತೃಗಳಿಂದ ವ್ಯವಸ್ಥೆ ಮಾಡಲ್ಪಟ್ಟಿದೆ. ಜಗತ್ಸತ್ಯತ್ವವಂ ಹೇಳುವ ದ್ವೈತಿಗಳೂ, ಶ್ರೀವೈಷ್ಣವರೂ, ಶೈವರು ಸಹ ವೇದವು ಅಕೃತಕವೆಂತಲೂ, ನಿತ್ಯವೆಂತಲೂ ನಂಬಿದಾಗ ನೈಯಾಯಿಕರು ಮಾತ್ರ ಈಶ್ವರೋಕ್ತವಾದಾಗ್ಯೂ ಹುಟ್ಟಿದ್ದಾದುದರಿಂದ ಭಾವ ಪದಾರ್ಥಗಳೆಲ್ಲವೂ ಅನಿತ್ಯಗಳೆಂಬ ವ್ಯಾಪ್ತಿಯಿಂದ ವೇದಗಳಿಗೆ ಅನಿತ್ಯವಂ ಹೇಳುತ್ತಾರೆ. ಅದ್ವೈತಿಗಳು ಆಕಾಶಾದಿವತ್ ವ್ಯಾವಹಾರಿಕ ಸತ್ಯತ್ವವನ್ನೂ ಬ್ರಹ್ಮಜ್ಞಾನದಿಂದ ಅನಿತ್ಯತ್ವವನ್ನೂ ಹೇಳುತ್ತಾರೆ. ಮೀಮಾಂಸಕರಲ್ಲಿ ಗುರುಮತಾನುಯಾಯಿಗಳಾದ ಪ್ರಾಭಾಕರರೂ, ಮುರಾರಿಮಿಶ್ರಮತೀಯರೂ,ಭಾಟ್ಟರು ಸಹ ವೇದಗಳು ಅಕೃತಕವೆಂತಲೂ ಅಪೌರುಷೇಯವೆಂತಲೂ ಅಂಗೀಕರಿಸಿ ವೇದಗಳಿಗೆ ಉತ್ಪತ್ತಿಯಂ ತಿಳಿಸುವ ವೇದವಾಕ್ಯಗಳಿಗೂ ಸ್ಮೃತಿವಾಕ್ಯಗಳಿಗೂ ಅಭಿವ್ಯಕ್ತಿಯಲ್ಲಿ ತಾತ್ಪರ್ಯವೆಂತಲೂ ಪುರುಷಪ್ರಣೀತ ವಾಕ್ಯಗಳಂತೆ ಜನ್ಯಗಳಲ್ಲವೆಂತಲೂ ಹೇಳುತ್ತಾರೆ. ತತ್ರಾಪಿ ಭಾಟ್ಟರು ಈಶ್ವರನಿಗೂ ವೇದಕ್ಕೂ ಜೀವನಿಗೂ ಆದಿ ಇಲ್ಲವೆಂದು ನುಡಿದಿರುತ್ತಾರೆ. ವ್ಯಾಸ, ಜೈಮಿನಿ, ಆಪಸ್ತಂಭ, ಆಶ್ವಲಾಯನ, ಯಾಜ್ಞವಲ್ಕ್ಯ, ಜನಕ, ಬೋಧಾಯನ, ವಿಶ್ವಾಮಿತ್ರಾದಿಗಳು ಹೇಳಿರುವ ಕೆಲವು ವಾಕ್ಯಗಳು ವೇದದಲ್ಲಿ ಸೇರಿರುವವೆಂತಲೂ, ಆ ವಾಕ್ಯಗಳು ಖಿಲ ವೇದದಲ್ಲಿ ಸೇರಿವೆಯೆಂತಲೂ, ಖಿಲವೇದವನ್ನು ಋಷಿಗಳು ತಮ್ಮ ತಪಶ್ಶಕ್ತಿಯಿಂದಲೂ ಜ್ಞಾನದೃಷ್ಟಿಯಿಂದಲೂ ತಿಳಿದು ಪೂರ್ವಕಲ್ಪದಲ್ಲಿದ್ದದನ್ನೇ ಈ ಕಲ್ಪದಲ್ಲಿ ಹೇಳಿದರೆಂತಲೂ, ಸೃಷ್ಟಿಯಿಂದ ಈಚೆಗೆ ಜರಿಗಿದ ವೃತ್ತಾಂತಗಳನ್ನು ತಿಳಿಸುವ ವೇದವಾಕ್ಯಗಳು ಪೂರ್ವಕಲ್ಪದ ಅನುಭವವನ್ನೇ ತಿಳಿಸುತಿವೆಯೆಂತಲೂ ಹೇಳಲ್ಪಟ್ಟಿವೆ. ಇವುಗಳ ಪೈಕಿ ಯಾವದು ನಿಶ್ಚಯವು, ಸ್ಮೃತಿ ವಾಕ್ಯಗಳಿಗೆ ಯಾವರೀತಿ ಅರ್ಥಕಲ್ಪನೆ ಮಾಡತಕ್ಕದ್ದು, ಉಪನಿಷದ್ವ್ಯಾಖ್ಯಾತೃಗಳಿಗೇನು ಗತಿ ಕಲ್ಪನವು, ಇದಂ ಹ್ಯಾಗೆ ಸಮನ್ವಯ ಮಾಡಬೇಕು? ಹೀಗೆಯೇ ಬೈಬಲನ್ನು ಕ್ರಿಶ್ಚಿಯನ್ನರೂ, ಖುರಾನನ್ನು ಮುಸಲ್ಮಾನರೂ, ಭಗವತ್ಪ್ರೋಕ್ತಗಳೆಂದು ಭಾವಿಸಿದಾರೆ. ಇಂತಾ ಪರಸ್ಪರ ವಿರುದ್ಧಗಳು ಅವರಲ್ಲಿ ಇನ್ನೂ ಅನೇಕವಾಗಿ ಕಂಡು ಬರುತಿವೆ. ಅವರು ಅನ್ಯರುಗಳಿಗೆ ಮಾಡುವ ಗತಿಕಲ್ಪನಗಳು ಕೂಡ ತೃಪ್ತಿಕರವಾಗಿಲ್ಲವು. ಹೀಗಿರುವಲ್ಲಿ ಯಾರದು ನಿಜವೆಂದು ಹ್ಯಾಗೆ ನಿರೂಪಿಸಲಿಕ್ಕೆ ಸಾಧ್ಯವಾದೀತು. ಮುಖ್ಯವಾಗಿ ಈ ಕಾಲದಲ್ಲಿ ನಿಮ್ಮಂತಾ ವಿಚಾರವರರು ಏರ್ಪಡುವ ಅಂಶ ಪೂರ್ವಿಕರಿಗೆ ತಿಳಿದಿದ್ದರೆ ಅವರು ನಿಮ್ಮ ಆಕ್ಷೇಪಣೆಗಳಿಗೆ ಗತಿ ಕಲ್ಪಿಸಿರುವರು. ಏತೇನ ಇಂತಾ ವಿಷಯಗಳಲ್ಲಿ ವಿಶ್ವಾಸವೂ, ಭಕ್ತಿಯೂ ಆಪ್ತವಾಕ್ಯ ಪ್ರಾಮಾಣ್ಯಜ್ಞಾನವೂ, ಶ್ರದ್ಧೆಯೂ ಪ್ರಬಲವಾಗಿದ್ದ ಹೊರ್ತು ಅವು ನಿರೂಢವಾಗಿ ನಿಲ್ಲಲಾರವು. ಹೀಗೆ ಕಾರ್ಯ ಕಾರಣಗಳಂ ಹುಡುಕುತ ಹೋಗುವಾಗ್ಯೆ ಕಡೆಗೆ ಯಾವದೂ ಕಾರದೆ ನಿರಾಲಂಬವಾಗಿ ನಿಲ್ಲತಕ್ಕ ಮನುಷ್ಯನ ಬುದ್ಧಿಗೆ ನಿಯಾಮಕವಾದುದು ಯಾವದೂ ಇಲ್ಲದೆ ಹೋಗುವದಾದುದರಿಂದ ತರಳವಾದ ಮತ್ತು ಸ್ವಚ್ಛಂದ ಪ್ರವೃತ್ತಿಯುಳ್ಳ ಅದು ಯಾವವಿಧದಿಂದಲಾದರೂ ಒಂದುಬಗೆ ನಿರ್ಬಂಧಕ್ಕೊಳಪಡಿಸಿ ವರ್ತಿಸುವದು ಶ್ರೇಯಸ್ಕರವೆಂದು ಸಕಲರು ತಸ್ತರೂ ಭಾವಿಸಿರುತ್ತಾರೆ.” ಮೇಲೆ ಕಂಡ ಪ್ರಶ್ನೆಯು ಕೇವಲ ಸಮಾಧಾನಾಪೇಕ್ಷಿತವಾಗಿರುವದರಿಂದ ಅದಕ್ಕೆ ಪಂಡಿತರ ಅಭಿಪ್ರಾಯವು ತಿಳಿಯಪೇಕ್ಷಿಸುವ ತಮ್ಮ ವಿಧೇಯನಾದ,

ಶ್ರೀಶೈಲನಾಥನು.

## THE MYSORE GAZETTE.

## ಮೈಸೂರು ಗೆಜೆಟ.

ಶ್ರೀಮತ್ ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡಲ್ಪಡದ ಇಸ್ತಿಹಾರ್‌ನಾಮೆಗಳು

ನಂ|| ೧೦೬೮೩. ೮ ೯. ೧೩—೯೨—ತುಮಕೂರು ಡಿಸ್ಟ್ರಿಕ್ಟು ಅಸಿಸ್ಟೆಂಟ ಸರ್ಜನ್ ಎ. ಆರ್. ವೈದ್ಯನಾಥಶಾಸ್ತ್ರಿಯವರು ೧೮೯೨ನೇ ಇಸವಿ ಜನ್ ೨೫ನೇ ಮಹರ್ ೧೬೩ನೇ ನಂಬರ್ ಇಸ್ತಿಹಾರ್‌ನಾಮೆಯ ಮೂಲಕ ಕೊಡಲ್ಪಟ್ಟ ೧೪ ದಿನಗಳ ರಜಾಕ್ಕೆ ಜಾಸ್ತೀಯಾಗಿ ಅದೇತರಹದಿಂದ ದಿನರಜಾಕೊಡಲ್ಪಟ್ಟಿರುತಾರೆ.

ನಂ|| ೧೦೯೮೧ ೮. ಎರ್‌೩—೯೨ ಮೈಸೂರು ಸರ್ವಿಸ್ ರೆಗ್ಯುಲೇಷನ್ ೧೨೦ನೇ ಆರ್ಟಿಕಲ್ ಅನುಸರಿಸಿ, ತುಮಕೂರ್ ಆಕ್ಟಿಂಗ್ ಅಮಲ್‌ದಾರ್ ಬಿ. ರಾಮಸ್ವಾಮಯ್ಯನವರು ೧೮೯೩ನೇ ಇಸವಿ ಜನವರಿ ೫ನೇ ತಾರೀಖ್ ಮೊದಲು ೩ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿದ್ದರು,

ನಂ|| ೧೧೪೮೯. ೮. ಎರ್‌೩—೯೨—೧ ಕ್ಲೋಸಪೇಟೆ ಸಬ್‌ತಾಲ್ಲೂಕ. ಡೆಪ್ಯುಟಿ ಅಮಲ್‌ದಾರ್ ಡಿ. ನರಸಿಂಗ ರಾಯರವರು ಹೊಸದುರ್ಗ ಸಬ್ ತಾಲ್ಲೂಕಿಗೆ ವರ್ಗಮಾಡಲ್ಪಟ್ಟಿರುತ್ತಾರೆ ಬಿಡುಗಡೆ ಆದ ಕೂಡ್ಲೆ ಹೋಗಿ ಸೇರತಕ್ಕದ್ದು.

೨ ಹೊಸದುರ್ಗ ಸಬ್‌ತಾಲ್ಲೂಕು ಡೆಪ್ಯುಟ ಅಮಲ್‌ದಾರ್ ಕೆ. ಜೆ. ರಾಮಣ್ಣ, ಬಿ. ಎ. ಯವರು ಕ್ಲೋಸಪೇಟೆ ಸಬ್‌ತಾಲ್ಲೂಕಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ.

೩ (ಎ) ಚಾಮರಾಜನಗರ ತಾಲ್ಲೂಕು ಅಮಲ್‌ದಾರ್ ಬಿ. ಲಕ್ಷ್ಮೀನಾರಣಪ್ಪನವರು ನಡೆಸಿದ ಕೆಲವು ಅಕ್ರಮಗಳ ವಿಷಯದಲ್ಲಿ ಮತ್ತು ವಿಚಾರಣೆ ಮಾಡಬೇಕಾಗಿರುವದರಿಂದ ಅವರು ಕೆಲಸದಿಂದ ಸಸ್ಪೆಂಡ್ ಮಾಡಲ್ಪಟ್ಟಿರುತ್ತಾರೆ.

(ಬಿ) ಕ್ಲೋಸಪೇಟೆ ಡೆಪ್ಯುಟ ಅಮಲ್‌ದಾರ್ ಕ. ಜೆ ರಾಮಣ್ಣ, ಬಿ ಎ ಯವರು ಸಸ್ಪೆಂಡ್ ಮಾಡಲ್ಪಟ್ಟ ಬಿ. ಲಕ್ಷ್ಮೀ ನಾರಣಪ್ಪನವರಿಗೆ ಬದಲಾಗಿ, ಚಾಮರಾಜನಗರದ ಆಕ್ಟಿಂಗ್ ಅಮಲ್‌ದಾರ್ ಪ ೩ ನೇ ಕ್ಲಾಸ್ ಪ್ರ್ಯಾಬೇಷ್ನರಾಗಿ ನೇಮಕ ಮಾಡಲ್ಪಟ್ಟಿರುತ್ತಾರೆ.

೪. ಇದರಡಿ ಬರುವ ಅಮಲ್ದಾರರ ವರ್ಗಾವರ್ಗಿಗಳು ಮತ್ತು ಸ್ಥಳನಿಯಾಮಕಗಳು ಹುಕುಂ ಮಾಡಲ್ಪಟ್ಟಿರುತ್ತವೆ. ಪ್ರತಿಯೊಬ್ಬ ಆಫಿಸರರೂ ತನ್ನ ಶಿರಸ್ತೇದಾರರಿಗೆ ಚಾರ್ಜ ಕೊಟ್ಟು ಕೂಡಲೆ ತನಗೆ ನಿಯಾಮಕವಾಗಿರುವ ಸ್ಥಳಕ್ಕೆ ಹೋಗಿ ಸೇರತಕ್ಕದ್ದು :—

ಎಚ್. ಆರ್. ಶ್ರೀನಿವಾಸರಾಯರು ತರೀಕೆರೆಯಿಂದ ದೇವನಹಳ್ಳಿಗೆ.

ಟಿ. ಬಾಪೂರಾಯರು ದೇವನಹಳ್ಳಿಯಿಂದ ತರೀಕೆರೆಗೆ.

ಸೈಜಾಮುದ್ದೀನ್ ಅಲ್ಲೀಖಾನರು ಚೆನ್ನಪಟ್ಟಣದಿಂದ ಚಾಮರಾಜನಗರಕ್ಕೆ.

ಎಸ್. ವೆಂಕಟರಾಯರು ಚಿಂತಾಮಣಿಯಿಂದ ಚೆನ್ನಪಟ್ಟಣಕ್ಕೆ.

ಎ. ವೀರ್ಘಸಾರಥಿ ಅಯ್ಯಂಗಾರ್ರು ಹಾಸನದಿಂದ ಚಿಂತಾಮಣಿಗೆ.

ಶ್ರೀ ಜಿ ಶಾಮಣ್ಣ ಬಿ. ಎ ಯವರು ಹಾಸನಕ್ಕೆ.

೫ ಮೇಲೆ ಕಂಡಂತೆ ವರ್ಗ ಮಾಡಲ್ಪಟ್ಟ ಅಮಲ್ದಾರ್ ಟಿ. ಬಾಪೂರಾಯರವರು ಎಕ್ಸ್ ಸ ಮ್ಯಾಜಿಸ್ಟ್ರೇಟಿ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

ನಂ|| ೧೧೮೦೫ ಪ. F. ೪೩-೯೨—ಹಾಸನ ಡಿಸ್ಟ್ರಿಕ್ಟ್ ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮ||ಬಿ ಕೃಷ್ಣರಾವ್ ನಾಯಕರವರು ಅವರುಪಯೋಗಿಸಿಕೊಳ್ಳುವ ತಾರೀಖ್ ಲಾಗಾಯತು ಆರು ವಾರಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

೨. ರೆಯಿಲ್ವೆ ಪೋಲೀಸ್ ಇನ್‌ಚಾರ್ಜಿನಲ್ಲಿರುವ ಮ||ಎಂ. ಚಂಗಯ್ಯ ಶೆಟ್ಟರವರು ಮೈ||ಜೆ. ಡಬ್ಬೆಯು ನೈಟ್ ಯವರು ರಜಾಮೇಲೆ ಗೈರುಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ಹಾಸನ ಡಿಸ್ಟ್ರಿಕ್ಟ್ ಪೋಲೀಸ್ ಅ||ಸೂಪರಿಂಟೆಂಡೆಂಟರಾಗಿ ಬದಲೀ ನೋಡುವಂತೆ ನೇಮಕ ಮಾಡಲ್ಪಟ್ಟಿರುತ್ತಾರೆ.

ಮ|| ಎಂ. ಚಂಗಯ್ಯ ಶೆಟ್ಟರವರು ಬೇರೆ ಕೆಲಸದಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ಹೆಡ್‌ಕ್ವಾರ್ಟರ್‌ನಲ್ಲಿ ಪೋಲೀಸ್ ಸೂಪರಿಂಟೆಂಡೆಂಟರಾಗಿರುವ ಮ|| ಕೆ. ಪಿ. ಕೃಷ್ಣಣ್ಣ ಶೆಟ್ಟರವರು ಹಂಗಾಮಿ ತನಿಖೆ ರೆಯಿಲ್ವೆ ಪೋಲೀಸ್ ಇನ್‌ಚಾರ್ಜಿನಲ್ಲಿರತಕ್ಕದ್ದು.

ನಂ||೧೧೮೦೭. ಪ. ೨೮೩೪-೯೨—ತುಮಕೂರು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರಾದ ಮ|| ಡಿ ದೇವರಾಜೇ ಅರಸಿನವರು ಮುಂದಿನ ಫೆಬ್ರವರಿ ೪ನೇ ತಾರೀಖ್ ಮೊದಲು ೧ ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

೨. ತುಮಕೂರು ಡಿಸ್ಟ್ರಿಕ್ಟ್ ಯ ಕಸ್ಟ್ರ ಅಸಿಸ್ಟೆಂಟ್ ಕಮಿಷನರಾದ ಮ|ಅಬ್ದುಲ್‌ಲತೀಫ್ ಯವರು, ಮ|| ಡಿ. ದೇವರಾಜೇ ಅರಸಿನವರು ರಜಾಮೇಲೆ ಗೈರುಹಾಜರಾಗಿರುವ ಕಾಲದಲ್ಲಿ, ಪೋಲೀಸ್ ಸೂಪರಿಂಟೆಂಡೆಂಟರಾಗಿ ಕೆಲಸನೋಡುವಂತೆ ನೇಮಕ ಮಾಡಲ್ಪಟ್ಟಿರುತ್ತಾರೆ.

ನಂ| ೧೧೮೯೩, ೧ ೬ ೩೩೭ ೯೨ —ಸನ್ ೧೮೭೦ನೇ ಇಸವಿ ೧೬ನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ಆಕ್ಟ ೪ನೇ ಸೆಕ್ಷನ್ ಅನುಸರಿಸಿ, ಬೆಟ್ಟಹಳ್ಳಿ ಕೆರೆಗೂ ಸಾಕಿ ಕೆರೆಗೂ ಮಧ್ಯೆ ನಲ್ಲಿಗಳು ಇಡುವದಕ್ಕಾಗಿ, ಸ್ವಲ್ಪ ಜಮೀನ್ ಬೇಕಾಗಿರುವದೆಂದು ಇದರಿಂದ ಸರ್ವರಿಗೂ ತಿಳಿಸಲ್ಪಟ್ಟಿರುತ್ತದೆ.

ನಂ|| ೧೨೦೨೧. ಪ. F ೩೮೫-೯೨—೧೮೯೨ನೇ ಇಸವಿ ಡಿಸಂಬರ್ ೧೪ನೇ ಮಕರ್ರಂ ಮಧ್ಯಾಹ್ನಾತ್ಪರ, ಮೈಸೂರು ಗವರ್ನಮೆಂಟ್ ಸೀನಿಯರ್ ಸರ್ಜನ್ ಯ ಸಾನಿಟರಿ ಕಮಿಷನರ ಆಫಿಸ್ ಚಾರ್ಜನ್ನು ಬ್ರಿಗೇಡ್ ಸರ್ಜನ್ ಲೆಫ್ಟಿನೆಂಟ್ ಕರ್ನಲ್ ಟಿ. ಜೆ. ಮಗ್ಗ್ರಿಜ್ ಯವರಿಂದ ಸರ್ಜನ್ ಮೇಜರ್ ಪಿ ಎಚ್. ಬೆನ್ಸನ್ ಯವರು ತೆಗೆದುಕೊಂಡಿರುತ್ತಾರೆ.

## LATEST TELEGRAMS.

ರಂತಿ ವೃತ್ತಾಂತ ಸಂಗ್ರಹ

ಅಲಹಾಬಾದ್, ೧೫ ನೇ ಜನವರಿ.— ಬರುವ ವರ್ಷದಲ್ಲಿ ಬರೇಲಿಯಿಂದಾಚೆ, ಲಕ್ನೋಪಟ್ಟಣದಿಂದ ಬನಾರಸ್ ವರೆವಿಗೆ ರೆಯಿಲ್ ರಸ್ತೆ ಹಾಕುವದಕ್ಕೆ ದ್ರವ್ಯಾನುಕೂಲ್ಯ ಸಾಲದೆ ಇರುವದರಿಂದ ಸದರೀ ಪ್ರಯತ್ನ ನಡೆಯುವ ಸಂಭವ ಕಾಣಿಸಲಿಲ್ಲವು

ಇಂಡಿಯಾ ಸ್ಟೇಟ್ ಸೆಕ್ರೆಟರಿ ಯವರ ಹುಕುಂ ಯೊಂದು ಬರುತಲಿರುವದರಿಂದ ಅದು ಬಂದು ಸೇರುವವರೆಗೂ ನ್ಯಾಯವಿಧಾಯಕ ಸಭೆಗಳಂ ಬಾಬಾಯತು ವಿಷಯದಲ್ಲಿ ಯಾವ ಪ್ರಯತ್ನವೂ ನಡೆಸಲ್ಪಡಲಾರದು.

ಪಬ್ಲಿಕ್ ಸರ್ವಿಸ್ ಕಮಿಷನ್ ಅಧಿಕಾರಿಗಳು ಮಾಡಿದ ಯೋಚನೆಯನ್ನನುಸರಿಸಿ, ಉದ್ಯೋಗದೊಳು ಯೇಳು ದೊಡ್ಡ ಅಧಿಕಾರಗಳು ನೇಟಿವ್ಸ್‌ಗಳಿಗೆ ಕೊಡಲ್ಪಡುವವು, ಯಾವವೆಂದರೆ— ಒಂದು ಡಿಸ್ಟ್ರಿಕ್ಟ್ ಜಡ್ಜು, ಇಬ್ಬರು ಸ್ಮಾಲ್‌ಕಾಸ್ ಕೋರ್ಟ್ ಜಡ್ಜಿಗಳು, ಜಾಯಿಂಟ್ ಕಮಿಷನರ ಕೋರ್ಟ್ ರಿಜಿಸ್ಟ್ರಾರ್, ಸೆಟಲ್‌ಮೆಂಟ್ ಕಮಿಷನರ ಅಸಿಸ್ಟೆಂಟ್, ಈ ರೀತಿ ಯೇಳು ಅಧಿಕಾರಗಳು.

ಲಂಡನ್, ೧೬ ನೇ ಜನವರಿ —ಇಂಡ್ಯಾ ರಾಜ್ಯದ ಕಮಾಂಡರ್ ಇನ್ ಚೀಫರಾಗಿ ನೇಮಕ ಮಾಡಲ್ಪಟ್ಟ ಸರ್ ಜಾರ್ಜ್ ವೈಟ್ ಯವರು ಒಂದು ಮಾರ್ಚಿ ತಿಂಗಳ ಆರಂಭದಲ್ಲಿ ಇಂಡ್ಯಾ ದೇಶಕ್ಕಾಗಿ ಪ್ರಯಾಣ ಮಾಡುವರು.

ಅಲಹಾಬಾದ್, ೧೬ ನೇ ಜನವರಿ.—ಬರ್ಮಾ ದೇಶದೊಳು ಹೊಸಲ ಪತ್ರದ ಪಠಿಸು ಬರುವ ಸಂವತ್ಸರಕ್ಕೆ ವೆಚ್ಚಕ್ಕಾಗಿ ೧೩ ೭೭,೦೦೦ ರೂಗಳ ಅಷ್ಟು ಹೊಸಲ ಅನ್ಯಾಪ್ರೇಪ್ರಗಳಿಗೆ ರಫ್ತು ಮಾಡುವಿಕ್ಕೆ ನಿಶ್ಚಯಿಸಿದರು.

ಕಲ್ಕತ್ತಾ ೧೭ ನೇ ಜನವರಿ —ಪ್ರಾಕ್ ಸಪ್ತ ವ್ರದೇಶದ ರೆಯಿಲ್ ರಸ್ತೆಯ ಮ್ಯಾನೆಜರ್ ಕೃಷ್ಣಗಳ ಬಾಸಲ್‌ಗೆ ಕ್ರಿಷ್ಣು ಗೋದಾವರಿ ಹಾದಿಯಲ್ಲಿ, ಒಂದು (ನಿಂ) ೧೦ ತಿಂಗಳ ಗುತ್ತು ತಾರೀಖ್‌ನಲ್ಲಿ ಗಾಡಿಗಳು ಬಿಡುವದಕ್ಕೆ ಏರ್ಪಡು ಮಾಡುವರು, ಮತ್ತು ಗಾಡಿಗಳು ಬೇಗನೆ ನಡೆಸಲ್ಪಡಲಾರವು ರಸ್ತೆಯು ಪ್ರಾರಂಭವಾಗುವ ತನಕ ಜಾರಿಯಾಗಿರುವದಕ್ಕೆ ಮೊದಲು ಯಾವದಾದರೊಂದು ವಿಧ ಗಾಡಿಗಳು ನಡೆಸುತಲಿರುವದು ಯೋಚಿಸಲ್ಪಟ್ಟಿತು

ಗೋದಾವರಿಯಿಂದ ವಿಜಯನಗರದವರೆವಿಗೆ, ೧೫೦ ಮೈಲಿಗಳ ದೂರದಲ್ಲಿ ರಸ್ತೆಯಲ್ಲಿ ಬರುವ ಜೂನ್ ತಿಂಗಳೊಳು ಗಾಡಿ ಬಿಡಬೇಕೆಂದು ಯೋಚಿಸುತಲಿದಾರೆ.

ಮುಂಬೈ, ೧೮ ನೇ ಜನವರಿ —ಆಸ್ಟ್ರಿಯಾ ಸಂಸ್ಥಾನದ ಯುವರಾಜರವರು ನಿನ್ನೆ ದಿನ ಸಾಯಂಕಾಲ ೫ ಘಂಟೆಗೆ ಸರಿಯಾಗಿ, ಬ್ಲೇಶೆಂಹೈಮ್ ಎಂಬ ಹಡಗಿನ್ನಿಂದ ಇಳಿದರು. ಅವರು ಬಂದುದನ್ನು ಗುರುತಿಸಲಾಗಿ ಗವರ್ನರವರು, ಕಮಾಂಡರ್ ಇನ್ ಚೀಫರವರು, ಮತ್ತು ಇದರ ಪರಿವಾರದ ಅವರ ಪರಿವಾರ ಅವರಸರಿಗಳೆಲ್ಲರು ಅಲ್ಲಿ ಹಾಜರಿದ್ದರು. ಯುವರಾಜರವರು ಇಳಿದ ಕೂಡಲೇ ಮುಂಚಿತವಾಗಿ ಗವರ್ನರವರು ಯುವರಾಜರು ಬರುವ ಸ್ಥಳಕ್ಕೆ ಹೋಗಿ ಸ್ವಾಗತವಚನ ಹೇಳಿದರು. ಆ ಸಮಯದ ಸಂದರ್ಭದಲ್ಲಿ ನೋಡುವದಕ್ಕಾಗಿ ಸಮುದ್ರತೀರದಲ್ಲಿ ಅನೇಕ ಸಹಸ್ರ ಪ್ರಜೆಗಳು ಗುಂಪುಗೂಡಿದ್ದರು. ಯುವರಾಜರವರು ಹಡಗು ಇಳಿದ ಕೂಡಲೆ ಮುಂಬೈ ಗವರ್ನರರೊಡನೆ ಸಾರೋಟು ಗಾಡಿಯಲ್ಲಿ ಕುಳಿತು ಗವರ್ನಮೆಂಟ್ ಹೌಸ್‌ಗೆ ಹೋದರು.

ಯುವರಾಜರವರ ಮರ್ಯಾದೆಗೋಸ್ಕರ ಈ ದಿನ ಗವರ್ನಮೆಂಟ್ ಹೌಸ್‌ನಲ್ಲಿ ಬಾಲ ನಡೆಯುವುದು.

ಕಲ್ಕತ್ತಾ, ೧೯ ನೇ ಜನವರಿ —ಮೈಸೂರು ಮಹಾರಾಜರವರು ತಮ್ಮ ಪರಿವಾರದೊಡನೆ ನಿನ್ನೆಯ ದಿನ ಗಯೆಯಿಂದ ಕಾಶಿಗೆಬಂದು ಸೇರಿದರು. ವಿಜಯನಗರದ ಮಹಾರಾಜರವರ ಆತಿಥ್ಯವನ್ನು ಕೈಗೊಂಡು ಈ ದಿನ ಅಯೋಧ್ಯಾಪುರಕ್ಕೆ ಪ್ರಯಾಣವಾದರು. ಅಲ್ಲಿಂದ ಶ್ರೀಮನ್ಮಹಾರಾಜರವರು ಕಾನ್‌ಪುರಕ್ಕೆ ಹೊರಡುತ್ತಾರೆ

ಲಾಹೋರ್, ೧೯ನೇ ಜನವರಿ—ಈಚೆಗೆ ಆಗುತ್ತಿರುವ ಭೂಕಂಪದ ದೆಸೆಯಿಂದ ಅನೇಕವಾಸಸ್ಥಳಗಳು ಬಿದ್ದುಹೋದವು, ಪರಂತು ಪ್ರಾಣಹಾನಿಗಳ್ಯಾವವೂ ಉಂಟಾಗಲಿಲ್ಲವು.

ಕಲ್ಕತ್ತಾ, ೨೦ನೇ ಜನವರಿ—ನಿನ್ನೆಯ ದಿನ ಹಗಲು ಮತ್ತು ರಾತ್ರಿ ಕಲ್ಕತ್ತೆಯೊಳಗೂ ಅದರ ಆಜುಬಾಜು ಪ್ರಾಂತಗಳಲ್ಲೂ ಮಳೆ ಬಿತ್ತು.

## SUMMARY OF NEWS

ವೃತ್ತಾಂತ ಸಂಗ್ರಹವು.

ಮ| ರಾ|| ಧರ್ಮಪ್ರವರ್ತ ಗುಂಜಾಳ ನರಸಿಂಹಯ್ಯನವರು ಸರ್ವರಹಿತಾರ್ಥವಾಗಿ ರೈಲ್ವೆ ಕಂಪೆನಿಯಲ್ಲಿ ೧ ಲಕ್ಷ ರೂಪಾಯಿಗಳ ಬೆಲೆಯುಳ್ಳ ೪೦,೦೦೦ ಸ್ಲೀಪರುಗಳನ್ನು ಕೊಡುವದಾಗಿ ಕಂಟ್ರಾಕ್ಟು ಮಾಡಿದ್ದರ ಲಾಭವನ್ನು ಮತ್ತೊಬ್ಬರ ರೈಲ್ವೆ ಕಟ್ಟಿಸುವದು ಮೈಸೂರಿನಿಂದ ಬೆಂಗಳೂರು ವರೆಗೆ ಛತ್ರವನ್ನು ಮ| ಗ. ಶಾ ನರಸಿಂಹಯ್ಯನವರು ಸೆಕೆಂಡ್‌ಕ್ಲಾಸ್ ಗಾಡಿಯಲ್ಲಿಯೂ, ಅವರ ಕಡೆ ಮೂರು ಜನಗಳು ೩ನೇ ಕ್ಲಾಸಿನ ಗಾಡಿಯಲ್ಲಿಯೂ ಹೋಗಿ ಯಾವ ಟಿಕ್ಕೆಟ್ ಬಿಡುವುದನ್ನು ಕೊಡಿಸುತ್ತಾರೆ

ಪ್ಯಾರಿಸ್ ಎಂಬ ಪಟ್ಟಣದಲ್ಲಿ ಭಿಕ್ಷುಕರಿಗೋಸ್ಕರ ಒಂದು ವರ್ತಮಾನ ಪತ್ರಿಕೆಯನ್ನು ಸ್ಥಾಪಿಸಬೇಕೆಂದು ಪ್ರಯತ್ನ ಮಾಡುತಲಿದಾರೆ. ಇದರಲ್ಲಿ ಭಿಕ್ಷುಗಳಿಗೆ ವಿವಾಹ, ಮರಣ, ನಾಮಕರಣ, ಉತ್ಸವ, ಕೋರ್ಟಿನ ಮೊದಲಾದ ಸಂಗತಿಗಳನ್ನು ಮತ್ತು ದಾನ ಧರ್ಮ ಮಾಡತಕ್ಕ ಶ್ರೀಮಂತರ ಬಿಡಾರಗಳನ್ನು ತಿಳಿಸುವದಕ್ಕೋಸ್ಕರವಂತೆ. ಇದಕ್ಕೆ ಚಂದಾಗಾರರು ಬರುವಂಥಾ ಪತ್ರಿಕೆಯೊಂದಕ್ಕೆ ಹಣಕೊಡುವರು ಹಣಕ್ಕಾಗಿಯೇ ಭಿಕ್ಷುಕರೆನಿಸುವರೋ ಏನೋ ! ಚಿಂ

ಯುರೋಪ ಖಂಡದಲ್ಲಿ ಇಂಗ್ಲೆಂಡಿನ ದೇಶಗಳಲ್ಲಿನ ಮುಂದಿನವರೆಲ್ಲರೂ ಸೇರಿ ನಿರ್ಣಯಿಸಿ ಅದರಲ್ಲಿ ಹುಡಿಗಿಯರಿಗೆ ೧೬ ವರುಷ ವಯಸ್ಸಾಗುವ ವರೆಗೂ ವಿವಾಹ ಮಾಡಕೂಡದೆಂತಲೂ ಹುಡುಗರಿಗೆ ವಿವಾಹ ಕಾಲದಲ್ಲಿ ಹುಡುಗಿಯ ವಯಸ್ಸಿಗಿಂತಲೂ ಅಧಿಕವಾಗಿರಬೇಕೆಂತಲೂ ಕಟ್ಟಳೆಗಳನ್ನು ಮಾಡಿ ಈ ಕಟ್ಟಳೆಗಳನ್ನು ಉಲ್ಲಂಘಿಸುವವರಿಗೆ ಬಹಿಷ್ಕಾರ ವಿಧಿಸುವದಲ್ಲದೆ ಬಹಿಷ್ಕಾರದಿಂದ ನಿವರ್ತಿಸಲ್ಪಡಬೇಕಾಗಿದ್ದರೆ ಅಪರಾಧ ವಿಧಿಸಬೇಕೆಂದು ಪರ್ಯಾಯ ಮಾಡಿ; ಜೊತೆ ವಿಷಯದ ಸ್ವರ್ಗ ವರ್ಗ ಬಗ್ಗೆ ಅನ್ನಸತ್ರಕ್ಕಾರರೂ ವಿಜ್ಞಾಪಿಸಿಕೊಂಡಿದ್ದಾರೆ. ಚಿಂ

ಚೀನಾ ದೇಶದಲ್ಲಿ ಹಣ್ಣು ಮಾರುಗಿಯರು ಗಿಡವನ್ನು ಪರಮಾಡಿಕೊಳ್ಳುವದಕ್ಕಾಗಿ ಒಂದು ವಿಚಿತ್ರವಾದ ಸಂಗತಿಯನ್ನು ನಡೆಸುತ್ತಿದ್ದರು. ಯಾವುದೆಂದರೆ, ಪಕ್ಷಿಗಳ ಮುಂದೆ ಕಣ್ಣು ಗುಡ್ಡೆಗಳನ್ನು ಕಿತ್ತು ಅವುಗಳನ್ನು ಸುಟ್ಟು ಬೂದಿಮಾಡಿ ಇಟ್ಟುಕೊಂಡಿದ್ದು ಮಾನವಾದತಕ್ಕ ಪದಾರ್ಥಗಳಲ್ಲಿ ಸೇರಿಸಿ ಗಿರಾಕಿಗೆ ಕೊಡುತ್ತಿದ್ದರು. ಈ ರಹಸ್ಯವನ್ನು ತಿಳಿದ ೧೬ ವರುಷದ ಯುವತಿಯು ೨೦ ಪಕ್ಷಿಯ ಗುಡ್ಡೆಗಳನ್ನು ಕಿತ್ತುಕೊಂಡು ಪಕ್ಷಿಗಳನ್ನು ಅವೆಗೆ ಬಿಟ್ಟಳು. ತಮ್ಮ ಕೆಲಸದಲ್ಲಿ ನಿರತರಾಗಿರಲು, ಚೀನಾ ಸರಕಾರದವರು ಈ ಪ್ರಕರಣವನ್ನು ಮಾಡಿದ ಆ ಯುವತಿಯನ್ನು ವಿಚಾರಣೆ ಮಾಡಿ ಒಪ್ಪೊಟ್ಟಿಗೆ ಆರಾರು ತಿಂಗಳು ಕಠಿಣ ಶಿಕ್ಷೆ ವಿಧಿಸಿದರು. ಪಕ್ಷಿಗಳ ಮೇಲೆ ಕೃಪೆ ಇಟ್ಟಿದ್ದು ಇವರಿಗೆ ಒಂದು ಒಗೆ ಘಟವಾದರೆ ಆತರೆಗೂ ಬಾಯೊಂದು ಒಗೆದಾಗಿ ಫಲವಾಗುತ್ತಲೇ ಇರುತ್ತದೆ.—ಚಿಂ

ಇಂಗ್ಲಂಡಿನಲ್ಲಿ ಬರ್ನ್ಹಿಕ್ಸ್‌ಲರ್ ಎಂಬ ಶೋಧಕನು ೮೦ ತಿಂಗಳಲ್ಲಿ ಪಕ್ಷಿಗಳು ಹಾರಿಹೋಗುವದನ್ನು ನೋಡಿ, ಅದರ ಹಾಗೆ ಮನುಷ್ಯರು ಆಂತರಿಕ್ಷಕ್ಕೆ ಹಾರಿ ಹೋಗುವದಕ್ಕೆ ಒಂದು ಯಂತ್ರವನ್ನು ನಿರ್ಮಾಣ ಮಾಡಬೇಕೆಂದು ಯೋಚಿಸಿ ಪಕ್ಷಿಜಾತಿ ಪ್ರಕೃತಿ ಯಾವದು ಚನ್ನಾಗಿ ಹಾರುತಲಿರುವದು ಎಂಬದನ್ನು ಮೊದಲು ಅಭ್ಯಾಸಮಾಡಿ ಪರಮಾದಲ್ಲಿ ಹಾಕ ಎಂಬ ಜಾತಿಗೆ ಸೇರಿದ ಪಕ್ಷಿಯು ಸಾಧನವಾಗಿ ತೋರುತ್ತದೆಂದು ಸೂಚಿಸಿಕೊಂಡು ಅದರ ಗರಿಗಳಂ ರೆಕ್ಕೆಗಳನ್ನು ಮಾಡಿ ಅವುಗಳನ್ನು ಸೇರಿಸಿ ಒಂದು ಯಂತ್ರವನ್ನು ನಿರ್ಮಾಣ ಮಾಡಿದ್ದಾನೆ. ಅದನ್ನು ಹಸ್ತಗಳ ವಿನಾ ಬೇರೊಂದು ಸಾಧನದಲ್ಲಿ ಕಾಲಿನ ಮರಿಗಳ ಧರಿಸಿಕೊಂಡು ರೆಕ್ಕೆಗಳನ್ನು ನೆಲದ ಕಡೆಗೆ ಅದರಿಸಿ, ನೆಟ್ಟಗೆ ಮೇಲಕ್ಕೆ ತಗಲಿಕೊಂಡು ಹೋಗುತ್ತದೆ. ಅಂತರಿಕ್ಷಕ್ಕೆ ಹೋದಮೇಲೆ ಯಾವ ಕಡೆಗೆ ಬೇಕಾದರೂ ಹೋಗಬಹುದು. ಅದರ ಅದನ್ನು ಹಾಕಿಕೊಂಡು ಮೇಲಕ್ಕೆ ಹೋಗುವಾಗ ಪಕ್ಷಿಗಳು ಭೂಮಿಯ ಮೇಲೆ ಮೇಲಕ್ಕೆ ಹೋಗುವಂತೆ ಹೋಗುವದಕ್ಕಾಗುವದಿಲ್ಲವೆಂದು ಪಿಟ್ಸ್‌ಬರ್ಗ್ ಕಮರ್ಷಿಯಲ್ ಗೆಜೆಟ್ ಯೆಂಬ ಇಂಗ್ಲಿಷ್ ಪತ್ರಿಕೆ ಬರೆದಿದೆ —ವೃ ದೇ.

ಈ ವಾರದಲ್ಲಿ ಬೊಂಬಾಯಿ ಪಟ್ಟಣಕ್ಕೆ ದಯಮಾಡಿಸುವ ಆಸ್ಟ್ರಿಯಾ ಮತ್ತು ಹಂಗೇರಿ ರಾಜ್ಯದ ಯುವರಾಜರಾದ ಆರ್ಚ್‌ಡ್ಯೂಕ್ ಫ್ರಾಂಜ್‌ಫರ್ಡಿನಾಂಡ್ ಎಂಬುವರು ಚಿಕ್ಕವಯಸ್ಸಿನವರಾಗಿದ್ದಾಗ್ಯೂ ವಿಶೇಷ ವಿದ್ವಾಂಸರಾಗಿಯೂ ಶಿಕಾರಿಯಲ್ಲಿ ಗಟ್ಟಿಗರಾಗಿಯೂ ಇರುವರು. ಇವರು ವರುಷಕ್ಕೆ ೧೨—೧೩ ಸಾವಿರ ಮೃಗಗಳನ್ನು ಶಿಕಾರಿಮಾಡುವರು. ಇಂಡ್ಯಾ ದೇಶದಲ್ಲಿ ವರ್ಣನೀಯವಾದವುಗಳನ್ನೆಲ್ಲ ನೋಡಿಕೊಂಡು ಬರ್ಮಾ, ಸಿಲೋನ್, ಚೀನಾ, ಅಮೆರಿಕಾ ಖಂಡಗಳನ್ನು ನೋಡಿಕೊಂಡು ತಮ್ಮ ರಾಜ್ಯಕ್ಕೆ ದಯಮಾಡಿಸುವರು. ಆದರೆ ಇವರು ಹೊರಡುವಾಗ ಇವರ ಸ್ವದೇಶೀಯರು ಒಂದು ಉಪದೇಶವನ್ನು ಮಾಡಿದರು. ಯಾವದೆಂದರೆ, ನೀವು ಇಂಡ್ಯಾದೇಶದ ನೇಟಿವ್ ರಾಜ್ಯಗಳಿಗೆ ಹೋದರೆ ಅವರು ತಮ್ಮಲ್ಲಿನ ವಸ್ತು ವಿಶೇಷಗಳನ್ನೆಲ್ಲಾ ತೋರಿಸಿ ಬಹುಮಾನ ಮಾಡುವರು. ನೀವು ಭಾರಿಯಾದವನ್ನು ಕೊಡುವದಕ್ಕೆ ಹೋದರೆ ಅವರು ಅದಕ್ಕಿಂತಲೂ ಬೆಲೆಯಾದವನ್ನು ಕೊಡುವದಕ್ಕೆ ಪ್ರಯತ್ನಪಟ್ಟು ತೊಂದರೆ ಪಡುವರು. ಆದುದರಿಂದ ಕಡಿಮೆಯಾದ ಬೆಲೆಯುಳ್ಳ ವಸ್ತುಗಳನ್ನು ಕೊಡುವದಕ್ಕೆ ಯತ್ನಪಟ್ಟರೆ ಅವರೂ ಸಮವಾಗಿ ಬಹುಮಾನ ಮಾಡುವದರಲ್ಲಿ ತೊಂದರೆಯಾಗದೆ ಇರುವದು ಎಂದು. ಹೀಗಿದ್ದಾಗ್ಯೂ ಆ ರಾಜ ಕುಮಾರರು ಲಕ್ಷಾಂತರದ ದ್ರವ್ಯದ ಬಹುಮಾನಗಳನ್ನು ಪಡೆದಾರೆ, ಚಿಂ.

ಲಿಬರಲ್ ಪಕ್ಷದವರಾಗಿಯೂ ಹಿಂದೆ ನಮ್ಮ ಭರತಖಂಡಕ್ಕೆ ಗೌರ್ನರ್ ಜನರಲರಾಗಿಯೂ ಇದ್ದ ಲಾರ್ಡ್ ರಿಪನ್ ಯವರು ನ್ಯೂಕ್ಯಾಸಲ್ ಎಂಬ ಪಟ್ಟಣದಲ್ಲಿ ಮಾಡಿದ ಉಪನ್ಯಾಸ ಕಾಲದಲ್ಲಿ ಹೇಳಿದ್ದೇನೆಂದರೆ, ಐರ್ಲಂಡಿನವರು ವಿರೋಧವಿಲ್ಲದೆ ಡಬ್ಲಿನ್ ಪಟ್ಟಣದಲ್ಲಿ ಪಾರ್ಲಿಮೆಂಟ್ ಸಭೆಯನ್ನು ಕೂಡಿಸಿಕೊಳ್ಳಬೇಕೆಂದು ಕೋರುತ್ತಿರುವ ಸಂಗತಿಯಲ್ಲಿ ಈಗ ಮಂತ್ರಿಗಳಾಗಿರುವ ಮ|| ಗ್ಲಾಡ್‌ಸ್ಟನ್ ರವರೂ ಅವರ ಪಕ್ಷದವರೂ ಐರ್ಲಂಡಿನ ನಿವಾಸಿಗಳಿಗೆ ಒಂದು ಪಾರ್ಲಿಮೆಂಟನ್ನು ಕೊಡುವ ಭಾಗದಲ್ಲಿ ಇಷ್ಟು ಬಂದು ವಿಷಯವನ್ನು ಹೌಸ್ ಆಫ್ ಕಾಮನ್ಸ್ ಸಭೆಯಲ್ಲಿ ಒಪ್ಪಿದ್ದರೂ ಅದನ್ನು ಲಾರ್ಡ್ ಸಭೆಯವರ ಅನುಮತಿಯ ಬಗ್ಗೆ ತೆಗೆದುಕೊಂಡು ಹೋಗಿರಲು ಅನೇಕ ಸಲ ತಿರಸ್ಕರಿಸಿದರು. ಹೀಗಾದ ಗಲಭೆ ಮತ್ತು ಜರ್ಮನರವರು ತಮ್ಮ ಮಂತ್ರಿತ್ವಕ್ಕೆ ರಾಜೀನಾಮೆಯನ್ನು ಒಪ್ಪಿಸಿದರು. ಅನಂತರ ಮತ್ತೆ ಎಲೆಕ್ಷನ್‌ನಲ್ಲಿ ಪ್ರತಿ ಪಕ್ಷಗಳಿಗೆ ಕನ್ಸರ್ವೆಟಿವ್ ಸಭೆಯ ಅವರವರ ಲಾರ್ಡ್ ಸ್ಯಾಲಿಸ್ಬರಿ ಯವರು ಅಮಾತ್ಯ ಪದವಿಗೆ ಸೇರಿದವರು. ಈ ಸಲ ಐರ್ಲಂಡಿಗೆ ಪ್ರತಿ ಪಾರ್ಲಿಮೆಂಟ್ ಕೊಡುವ ವಿಷಯದಲ್ಲಿ ಹೀಗೆ ಸಂಭವಿಸಿದಂತೆ ಅವರ ಯಾರು ಮಾಡುವರೆಂದು ಯಾರಾದರು ಪ್ರಶ್ನೆ ಮಾಡುವರು. ಅಂದಾ ಕಾಲ ಪ್ರಸ್ತಾಪವಾಗಿ ತಮ್ಮ ಪ್ರತಿಪಕ್ಷಿಗಳು ಮತ್ತೆ ಎಲೆಕ್ಷನ್ ಆಗಬೇಕೆಂದು ಹೀಗೆ ಪಡಿಸಿದರ "ಪಾರ್ಲಿಮೆಂಟಿನ ಸ್ವರ ಕೇಳುವರು ? ಬೇರೆ ಎಲೆಕ್ಷನ್ ಆಗಬೇಕೆಂದು ಹೇಳುವದಕ್ಕೆ ನಿಮಗೇನು ಅಧಿಕಾರದಿಂದು ನಾವು ಕೇಳುವದು ಒಂದೇ ಎಂದಾಗಿ ಉತ್ತರ ಕೊಡಿಸಿದರು.—ವೃ. ಚಿಂ.

ರಷಿಯಾ ದೇಶದಲ್ಲಿ ಇಸಮೈಲ್ ಎಂಬ ಪಟ್ಟಣಕ್ಕೆ ಸೇರಿದ ಸನ್ನಿಕ ಎಂಬ ಗ್ರಾಮದಲ್ಲಿ ಒಬ್ಬ ವರ್ತಕ ವಾಸವಾಗಿದ್ದಾನೆ. ಆತನ ಹೆಂಡತಿಯು ಕೆಲವು ದಿವಸಗಳ ಕೆಳಗೆ ಸಾಯಂಕಾಲದ ಹೊತ್ತಿನಲ್ಲಿ ಒಬ್ಬ ಸಹಾಯಕಿಗೆ ಹೋಗಿ, ಆ ಮನೆಯ ಮನುಷ್ಯರ ಸಂಗಡ ಸ್ವಲ್ಪ ಹೊತ್ತು ಕಳೆದ ನಂತರ ತನಗೆ ಸ್ವಲ್ಪ ಸಾರಾಯಿ ಯನ್ನು ಕೊಡು ಎಂದು ಕೇಳಿದಳು, ಆ ಮನೆಯವಳು ತನ್ನಲ್ಲಿದ್ದ ಸ್ವಲ್ಪ ಸಾರಾಯಿಯನ್ನು ಅವಳಿಗೆ ಕೊಟ್ಟಳು. ಆ ವರ್ತಕನ ಹೆಂಡತಿಯು ಅದನ್ನು ಕುಡಿದು ಇನ್ನೂ ಸ್ವಲ್ಪ ಬೇಕೆಂದು ಕೇಳಿ ಮನೆ ಯಲ್ಲಿಲ್ಲವೆಂದು ಹೇಳಿದರು ಅವಳಿಗೆ ಹಣವನ್ನು ಕೊಟ್ಟು ಕೊಂಡುತರುವಂತೆ ಅಂಗಡಿಗೆ ಕಳುಹಿಸಿದಳು. ಆ ಮನೆಯವಳು ತನ್ನ ಮಕ್ಕಳನ್ನು ಇವಳ ಬಳಿ ಬಿಟ್ಟು ಹೋದಳು. ಈ ವರ್ತಕನ ಹೆಂಡತಿಯು ತೊಟ್ಟಿಲಿನಲ್ಲಿ ಮಲಗಿದ್ದ ಎಳೇ ಮಗುವನ್ನು ಎತ್ತಿಕೊಂಡು ಅದರ ರಕ್ತವನ್ನು ಹೀರಿ ಮಾಡಿದ ಗೂಡಲ್ಲಿ ಹಿಡಿದು ಬೆಂಕಿಯಲ್ಲಿ ಹಾಕಿಬಿಟ್ಟು, ಅನಂತರ ಅವಳ ಹೆಣ್ಣುಮಗುವನ್ನು ಹಿಡಿದುಕೊಂಡು ಬಂದು ತನ್ನ ತೊಡೆಯಮೇಲೆ ಮಲಗಿಸಿಕೊಂಡು ಅದರ ಬಾಯನ್ನು ಮುಚ್ಚಿ ಕತ್ತು ಕೊಯ್ದಳು. ಅಷ್ಟರಲ್ಲಿ ಹೋಗಿದ್ದ ಆ ತಾಯಿಯು ತಿರುಗಿ ಬಂದು ನೋಡಲಾಗಿ, ಈ ರಾಕ್ಷಸಿಯು ಮಾಡುತ್ತಿದ್ದ ಕೆಲಸಗಳನ್ನು ನೋಡಿ ಕೂಡಲೆ ಅವಳನ್ನು ಹಿಡಿದು ಅವಳಿಗೆ ತಿಳಿಸುವಂತೆ ಅವಳ ಕೈಯಿಂದ ಚೂರಿಯನ್ನು ಕಿತ್ತುಕೊಂಡು ಮಗುವನ್ನು ಬಿಡಿಸಿಕೊಂಡಳು. ಇಷ್ಟೆಲ್ಲಾ ಆಗುವದರೊಳಗೆ ಬೆಂಕಿಗೆ ಹಾಕಲ್ಪಟ್ಟ ಆ ಮಗುವು ಸತ್ತು, ಚೂರಿಯಿಂದ ಕೊಯ್ಯಲ್ಪಟ್ಟ ಮಕ್ಕಳನ್ನು ಕಳೆದುಕೊಂಡ ದುಃಖದಿಂದ ಆಕೆಯು ಬಹಳವಾಗಿ ದುಃಖಪಟ್ಟಳು. ಸಂಕಟದವರು ಆ ರಾಕ್ಷಸಿಯನ್ನು ಹಿಡಿದುಕೊಂಡು ಹೋಗುತ್ತಿರುವಾಗ್ಯೂ ಅವಳು ಇದು ಮಾಡಿ ಗಂಡುಸರನ್ನಾದರೂ ಒಂದೇ ಹಿಡಿದು ಕೊಂದುಬಿಟ್ಟೇನು, ನನ್ನ ಕೈಗಳು ಕಟ್ಟಲ್ಪಟ್ಟಿವೆ, ಏನು ಮಾಡಲಿ ! ಎಂದು ರೌದ್ರಾಕಾರವನ್ನು ಧರಿಸಿ ಕೂಗುತ್ತಾ ಇದ್ದಳು. ಅವಳು ನಿರ್ದಯಳಾಗಿಯೂ ನಾಲ್ಕೈದು ಮಂದಿಯನ್ನು ಬಲಿಷ್ಠರಾಗಿಯೂ ಘೋರವಾದ ಆಕಾರವನ್ನು ಪಡೆದಿದ್ದಳಂತೆ ಅವಳ ಗಂಡನು ಇವಳು ಮಾಡಿದ ಸ್ತ್ರೀ ಹತ್ಯೆಗಳೆಲ್ಲ ತನ್ನ ಮನೆಯಲ್ಲಿ ಆಶ್ಚರ್ಯಕರವಾದ ಕೆಲಸಗಳನ್ನು ಆಗಾಗ್ಯೆ ಮಾಡುತ್ತಿದ್ದಳೆಂದು ಹೇಳುತ್ತಾನೆ. ಅಲ್ಲಿಯ ಜನಗಳೆಲ್ಲಾ ಇವಳು ಮಂತ್ರವಾದಿಯೆಂದು ಭಾವಿಸಿ ಇವಳ ವಿಷಯದಲ್ಲಿ ಬಹಳವಾಗಿ ಹೆದರುತ್ತಾರೆ. ಇವಳೆಂಥಾ ರಾಕ್ಷಸಿ ! !—ವೈಭವ.

BANGALORE —Printed and published at the KARNATIC PRESS, No. 40, HOSPITAL ROAD, PETTA.—1893.

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning.**

ಶ್ರೀಮದ್ವಿವಿಧವಿದ್ಯಾವಿದ್ವನ್ನಗರಮಾರ್ಗಕರ್ಣಾಟಕಪ್ರಕಾಶನವರಾಭಿಧಾಪ್ರಥಿತಸಾಹಿತ್ಯೀಶೋಭಿತಾ॥ ಮೃಗಾಕಹಿತವಾಸರೆನಿಹಿತಮುದ್ರಣಾಸಜ್ಜನ್ನೈರ್ನಿತ್ಯಾಸುಪರಿಶೋಭಿತಾದಿಕತಮಾನಸಂಮುದಂ॥

Vol. XX ] BANGALORE —MONDAY, JANUARY 30, 1893. [No 4.

ಸಂಪುಟ ೨೦. ] ಬೆಂಗಳೂರು — ಸನ್ ೧೮೯೩ ನೇ ಇಸವಿ ಜನವರಿ ೩೦ ನೇ ತಾರೀಖು ಸೋಮವಾರ. [ಸಂಚಿಕೆ ೪.


## ಕರ್ಣಾಟಕ ಪ್ರಕಾಶಿಕಾ

### ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ಸಾಲಿಗೆ | 6—0—0 | 8 0 0 |
| ೬ ತಿಂಗಳಿಗೆ | 3—8—0 | 4—8 0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ಸಾಲಿಗೆ | 3—0 0 | 4—0 0 |
| ೬ ತಿಂಗಳಿಗೆ | 1—12 0 | 2—8 0 |

ಈ ಪತ್ರಿಕೆಗೆ ದಯಮಾಡಿ ಚಂದಾ ಕೊಡುವವರು ಒಂದು ತಿಂಗಳೊಳಗಾಗಿ ಚಂದಾ ಹಣ ಕಳುಹಿಸುವವರಿಗೆ ನಾಲ್ಕು ಆಣೆ ರಿಯಾಯತಿ ಕೊಡುತ್ತೇವೆ. ಪತ್ರಿಕೆ ಕಳುಹಿಸಲ್ಪಡುವದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡ ಭಾಗವನ್ನಾಗಲಿ ಅಥವಾ ಎರಡನ್ನೂ ತೆಗೆದುಕೊಳ್ಳಬಹುದು. ಮೂರು ತಿಂಗಳಿಗಿಂತ ಕಡಿಮೆ ಅವಧಿಗೆ ಚಂದಾ ಮೊಬಲಗು ಅಂಗೀಕರಿಸಲ್ಪಡುವದಿಲ್ಲ.

### ಪ್ರಕಟನೆಯ ರಿವಾಜ್.

ಮೊದಲನೆಯದಫಾ ಪಙ್ಕ್ತಿ ಒಂದಕ್ಕೆ ೦—೨ ೦

ಎರಡನೆಯದಫಾ ಪಙ್ಕ್ತಿ ಒಂದಕ್ಕೆ ೦—೧— ೦

ಬೆಲೆ —ಎಂಟು ಪಙ್ಕ್ತಿಗಿಂತ ಕಡಿಮೆಯಾಗಿ ಎಷ್ಟು ಕಡಿಮೆ ಇದ್ದಾಗ್ಯೂ ಎಂಟು ಪಙ್ಕ್ತಿ ಒಂದಕ್ಕೆ ಇರುವಂತೆ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಪ್ರಕಟಿಸಲು ಕಳುಹಿಸುವವರು ಅವು ಎಷ್ಟು ಸಲ ಪ್ರಕಟವಾಗಬೇಕೋ ಅದನ್ನು ಸ್ಪಷ್ಟವಾಗಿ ಬರೆಯತಕ್ಕದ್ದು. ಇಲ್ಲದಿದ್ದರೆ ಅವರು ನಿಲ್ಲಿಸುವಂತೆ ಬರೆಯುವವರೆಗೆ ಅವು ಪ್ರಕಟಿಸಲ್ಪಡುವವು. ಹಾಗೆ ಎಷ್ಟು ಸಲ ಪ್ರಕಟಿಸಲ್ಪಟ್ಟರೂ ಅದಕ್ಕೆ ಮೇಲೆ ಹೇಳಿದಂತೆ ದರದಂತೆ ಕ್ರಯ ವಸೂಲು ಮಾಡಲ್ಪಡುವದು. ಪ್ರಕಟನೆಗಾಗಿ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಮೊದಲು ವಿಚಾರಿಸಿ ಯುಕ್ತವಾಗಿ ತೋರಿದರೆ ಮಾತ್ರ ಪ್ರಕಟಿಸುವೆವು. ಈ ಪತ್ರಿಕೆಗೆ ಕಳುಹಿಸತಕ್ಕ ಕಾಗದಗಳಿಗೆ ಸಲ್ಲತಕ್ಕ ಅಂಚೆ ಖರ್ಚನ್ನು ಕಳುಹಿಸುವವರೇ ಕೊಡತಕ್ಕದ್ದು. ಮುಂಗಡವಾಗಿ ಹಣ ಕೊಡದಿದ್ದರೆ ಪ್ರಕಟನೆಗಳು ಅಂಗೀಕರಿಸಲ್ಪಡುವದಿಲ್ಲ.


*ADVERTISEMENTS*

**NOTICE.**

VAIDYASARA SANGRAHA

A TREATISE ON THE PRINCIPLES OF

HINDU MEDICINE

*Price including Postage Rs 5 0 0*

ವೈದ್ಯಸಾರ ಸಂಗ್ರಹ

ಈ ಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಈಗಲೇ ರುಜು ಮಾಡಿರತಕ್ಕವರ ಲೇಖರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. [illegible] ಮೊದಲು ಇದ್ದರ ಕ್ರಯವನ್ನು ನಗದಿ ಕೊಡಲ್ಪಡತಕ್ಕದ್ದು.

ಇದರ ಕ್ರಯ —ಪ್ಯಾಕಿಂಗ್ ಮತ್ತು ಅಂಚೆ ಹಾಸಲ್ ಚೇರಿಸಿ ಪ್ರತಿ ಒಂದಕ್ಕೆ ರೂ 5 -0 -0

ಟಿ. ಬಿ. ವೆಂಕಟಾಚಾರ್

ಬೆಂಗಳೂರ್, ಮಹಲ್ ಆಸ್ಪತ್ರೆ ರೋಡ್ ೪೮ ನಂಬರ್

**ನೋಟೀಸ್.**

ಬೆಂಗಳೂರು ಕರ್ಣಾಟಕ ಪ್ರೆಸ್.

೧೮೬೩ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು

ಇದರಲ್ಲಿ, ಸಕಲವಿಧ ಕೆಲಸಗಳು ಸುಲಭಬೆಲೆಗೆ ಶೀಘ್ರವಾಗಿಯೂ ಶುದ್ಧವಾಗಿಯೂ, ಮಾಡಲ್ಪಡುವವು. ಇದರಲ್ಲಿ ಇದ್ದೀ ಇಂಗ್ಲಿಷ್ ಕನ್ನಡ ಕೆಲಸ ಮಾತ್ರವೇ ನಡೆಯುತಿವೆ. ಇತರ ತಪಶೀಲುಗಳನ್ನು ಸದರೀ ಕಂಪೆನಿ ಮ್ಯಾನೇಜರ ಕುರಿತು ತಿಳಿದುಕೊಳ್ಳಬಹುದು

## ನೋಟೀಸ್.

### ನಂಜಪ್ಪನವರ ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು.

ಈಊರು ಉಪ್ಪಾರಪೇಟೆಯಲ್ಲಿರುವ ಮೇಲೆ ತೋರಿಸಲ್ಪಟ್ಟವರಿಂದ ಮಾಡಲ್ಪಟ್ಟ ಇದರಡಿಕಂಡ ಪ್ರಖ್ಯಾತವಾದ ಔಷಧಗಳು ಬಹಳ ತಯಾರಾಗಿರುತ್ತದೆಯಾಗಿ ಬೇಕಾದವರು ಅವರಿಗೆ ಬರೆದು ತರಿಸಿಕೊಳ್ಳಬಹುದು. ಈ ಔಷಧಗಳು ಆಯುರ್ವೇದಶಾಸ್ತ್ರಪ್ರಕಾರವಾದ ಕೆಲವು ಸಿದ್ಧಕ್ರಿಯೆಗಳಿಂದ ತಯಾರಾದವುಗಳಾಗಿಯೂ, ಅನುಭವಸಿದ್ಧಗಳಾಗಿಯೂ ಅನೇಕರಿಗೆ ಗುಣವನ್ನುಂಟುಮಾಡಿದವುಗಳಾಗಿಯೂ ಇರುತ್ತವೆ. ತಮ್ಮ ರೋಗಸ್ವರೂಪವನ್ನೂ ಔಷಧಗಳ ಪಥ್ಯಾದಿಗಳ ಕ್ರಮವನ್ನೂ ಸದರೀ ಪಂಡಿತರಿಗೆ ಬರೆದು ತಿಳಿದುಕೊಳ್ಳಬಹುದು. ಹಾಗೆ ಬೇಕಾದವರು ಅವರಿಂದ ಸ್ಥಾಪಿಸಲ್ಪಟ್ಟ ಪ್ರತ್ಯುತ್ತರಕ್ಕೆ ಸಹ ತಮ್ಮ ಕಾಗದದಲ್ಲಿ ಅರ್ಧಾಣೆ ಲೇಬಲ್ ಸ್ಟಾಂಪ್ ಹಾಕಿ ಕಳುಹಿಸಬೇಕು. ವ್ಯಾಲ್ಯೂಪೇಯಬಲ್ ಮೂಲಕ ಸಹ ಪದಾರ್ಥಗಳು ಕಳುಹಿಸಲ್ಪಡುವವು. ಕಳುಹಿಸಲ್ಪಟ್ಟ ಪದಾರ್ಥಗಳನ್ನು ತರಿಸಿಕೊಳ್ಳದೆ ಹಿಂತಿರುಗಿಸಿದರೆ ಆ ಬಾಬತು ವ್ಯಾಲ್ಯೂ ಪೇಯಬಲ್ ಖರ್ಚು ಅವರೇ ಕೊಡಬೇಕಾಗುವದು.

ತೈಲ ಮಹಾತ್ಮ್ಯತೈಲ, ಇದು ಶಿರೋವಾಯುಗಳಿಗೂ, ಕಾರಕ ಸಂಬಂಧಗಳಾದ ಮತ್ತು ವಾತಸಂಬಂಧಗಳಾದ ಸಂಧಿವಾತಗಳಿಗೂ, ಮೂಗಿನಲ್ಲಿ ರಕ್ತ ಬೀಳತಕ್ಕದ್ದಕ್ಕೂ, ಅನೇಕವಿಧ ಶಿರೋಜನ್ಯವಾದ ವೇದನೆಗಳಿಗೂ ಬಹಳ ಶ್ಲಾಘ್ಯವಾದ ನಿವಾರಕವಾಗಿದೆ. ಸಣ್ಣ ಸೀಸೆ ಒಂದಕ್ಕೆ ೧ ರೂ ದೊಡ್ಡ ಸೀಸೆ ೧ಕ್ಕೆ ೫ ರೂ

ಜ್ವರದ ಗುಳಿಗೆಗಳು —ಇವು ಚಾತುರ್ಥಿಕಾದಿ ಸಕಲವಿಧ ಜ್ವರಗಳಿಗೂ ಶ್ರೇಷ್ಠ ಔಷಧವಾಗಿರುತ್ತದೆ, ರೂ ೧ಕ್ಕೆ ೧೨ ಗುಳಿಗೆಗಳು

ಮೇಹ ರೋಗ ನಿವಾರಕವಾದ ಎಣ್ಣೆ —ಈ ಎಣ್ಣೆಯು ೧೨ ದಿವಸ ತನಕ ಉಪಯೋಗಿಸುತ್ತಾ ಹೊಟ್ಟೆಗೆ ತೆಗೆದುಕೊಂಡರೆ ಸಕಲವಿಧ ಮೇಹಗಳೂ ಪರಂಗಿ, ಸ್ತ್ರೀಯರಿಗುಂಟಾಗುವ ಉಷ್ಣ ಸಂಬಂಧವಾದ ರೋಗಗಳೂ, ನಿವಾರಣೆಯಾಗುವವು. ಸೀಸೆ ೧ಕ್ಕೆ ೨—೮—೦

ದಂತರೋಗಕ್ಕೆ ಚೂರ್ಣ —ಹುಳುಕುಹಲ್ಲುಗಳು, ಸಡಿಲ ಬಿದ್ದಿರುವ ಹಲ್ಲುಗಳು ಇವುಗಳನ್ನು ಈ ಪುಡಿ ಭದ್ರಪಡಿಸಿ ಶಕ್ತಿಯನ್ನುಂಟುಮಾಡುವದು. ಇದು ಮೂರುವಿಧವು ಡಬ್ಬಿ ೧ಕ್ಕೆ ೧ ರೂ ಇದು ೧೨ ದಿನಗಳಿಗೆ ಆಗುವದು,

ನೇತ್ರರೋಗಕ್ಕೆ ಮಾತ್ರೆ —ಪೊರೆಗಳು, ದೃಷ್ಟಿಮಾಂದ್ಯ, ಕಣ್ಣುರಿ, ತಲೆನೋವು, ಕಣ್ಣಲ್ಲಿ ನೀರು ಸುರಿಯುವದು, ಇವು ಮೊದಲಾದ ಸಕಲರೋಗಗಳಿಗೂ ಪ್ರಶಸ್ತವಾದವು ಮೂಲಿಕಾ ಪ್ರಯೋಗದಿಂದ ಮಾಡಲ್ಪಟ್ಟ ಉತ್ತಮವಾದ ಮಾತ್ರೆ ೧ಕ್ಕೆ ೬ ಆಣೆ ಇದು ೬೦ ದಿನಗಳವರೆಗೆ ಒಂದು ಹೊತ್ತು ಹಾಕಿಕೊಳ್ಳಬಹುದು

ಮೂಲವ್ಯಾಧಿಗೆ —ಒಂದು ಉಂಗುರವು ತಯಾರಾಗಿದೆ. ಇದರಿಂದ ದೀರ್ಘಕಾಲಿಕವಾದ ಮೂಲರೋಗವು ಶೀಘ್ರವು ವಾಸಿಯಾಗುತಿದೆ ಉಂಗುರ ೧ಕ್ಕೆ ೧ ರೂಪಾಯಿ ಇದನ್ನು ಬೆರಳಿನಲ್ಲಿ ನಿಯತವಾಗಿ ಧರಿಸಿಕೊಂಡಿರತಕ್ಕದ್ದು ಇದರ ಸ್ಪರ್ಶದಿಂ ಮೂಲರೋಗವು ನಿವೃತ್ತಿಯಾಗುತಿದೆ

ಭಸ್ಮಗಳು —ತಾಮ್ರ, ರಜತ, ವಂಗ, ಸೀಸ, ಪ್ರವಾಳ, ಶೃಂಗ, ಅಭ್ರಕ, ಲೋಹ, ಕಾಂತ ವಗೈರೆ ಭಸ್ಮಗಳೂ ಸಿಂಧೂರಗಳೂ ಸಿದ್ಧ ಕ್ರಿಯೆಯಿಂದ ತಯಾರಾದವು. ಇವು ಪಾಂಡು ಕ್ಷಯಾದಿ ಸಕಲ ಪ್ರಬಲ ರೋಗಗಳಿಗೂ ಪ್ರಶಸ್ತವಾದವಾಗಿರುತಿವೆ. ರೋಗ ಸ್ವರೂಪವನ್ನು ಗುಣವಾಗಿ ಔಷಧವು ಕೊಡಲ್ಪಡುವದಾದುದರಿಂದ ಅದರಮೇಲೆ ಕ್ರಯವು ನಿಷ್ಕರ್ಷಿಸಲ್ಪಡಬೇಕಾಗಿದೆ

ಲೇಹ್ಯಗಳು —ಮಹಾಬಿಲ್ವಾದಿ, ಚಂದ್ರಾದಿ, ಕೂಷ್ಮಾಂಡ ವಗೈರೆ ಧಾತು ವೃದ್ಧಿಕರಗಳಾದ ಲೇಹ್ಯಗಳು ಸಿದ್ಧವಾಗಿವೆ ಸೇರು ೧ಕ್ಕೆ ೩ ರೂ

ಷರಬತ್ತುಗಳು —ಗಂಧ, ಬಾಳೇಹಣ್ಣು, ದಾಳಿಂಬರ ಹಣ್ಣು, ಲಿಂಬೆ, ದ್ರಾಕ್ಷೇಹಣ್ಣು ಸೇಬು ಮೊದಲಾದ ಷರಬತ್ತುಗಳು ತಯಾರಾಗಿವೆ. ಇವು ಸೀಸೆ ೧ಕ್ಕೆ ೨ ರೂ

ಚೂರ್ಣಗಳು —ಮಹಾ ಯೋಗರಾಜಚೂರ್ಣ, ಪಂಚಾಗ್ನಿ ಚೂರ್ಣ, ಹಿಂಗ್ವಾದಿ ವಗೈರೆ ಚೂರ್ಣಗಳು ಅಜೀರ್ಣ ಪಿತ್ತ ವಾತೋದ್ರೇಕಗಳಿಗೆ ಶಾಮಕವಾದವು. ಇದು ೪೦ ದಿನಗಳಿಗೆ ತೆಗೆದುಕೊಳ್ಳುವದು ಡಬ್ಬಿ ೧ಕ್ಕೆ ೨ರೂ


## ನೋಟೀಸ್.

### ಗಣೇಶ ರಾಮಚಂದ್ರ ಕಳೀಕ ಮತ್ತು ಕಂಪೆನಿ ಕಮಿಷನ್ ಏಜೆಂಟ್ಸ್.


ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯಿಂದ ವ್ಯಾಲ್ಯೂ ಪೇಯಬಲ್ ಪೋಸ್ಟಿನ ಮೂಲಕ ಸ್ವಲ್ಪ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿದ್ದೇವೆ

ಎಲ್ಲಾ ತರಹ ಔಷಧಗಳು, ಪುಸ್ತಕಗಳು, ಮುತ್ತುಗಳು, ಚಿಪ್ಪು ಮುತ್ತುಗಳು, ಛತ್ರಿಯಾರಗಳು, ವಾಚುಗಳು, ಟ್ರಿಂಕೆಟ್ಸ್‌ಗಳು, ಕಾಶ್ಮೀರ ಶಾಲುಗಳು, ಪಟ್ಟೇರಗಳು, ಜರತಾರಿ ಕಣಗಳು, ಚಂದ್ರಕಾಂತ ಕಲ್ಲಿನ ಪಾತ್ರೆಗಳು, ಹುಬ್ಬಳ್ಳಿ ಜರತಾರಿ ಉಡುಪುಗಳು, ಜರತಾರಿ ಟೋಪಿಗಳು, ಆಫೀಸ್ ಡ್ರೆಸ್ಸಗಳು, ಪಟ್ಟಿಗಳು, ಅತ್ತರಗಳು, ಅತ್ಯುತ್ತಮವಾದ ರತ್ನಗಳು, ಬಂಗಾರದಿಂದ ಕಟ್ಟಲ್ಪಟ್ಟ ಉಂಗುರಗಳು, ಬೆಳ್ಳಿ ಪಾತ್ರೆಗಳು, ಜರ್ಮನ್ ಬೆಳ್ಳಿ ಪಾತ್ರೆಗಳು, ಕೇಸರಿ, ಕಸ್ತೂರಿ ವಗೈರೆ ಇತರ ಸಾಮಾನುಗಳು

ಜವಾಬ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟಾಂಪ್ ಕಳುಹಿಸಿದ ಹೊರತು ಜವಾಬ ದೊರೆಯಲಾರದು

ವಿಳಾಸ, —ಗಣೇಶ ರಾಮಚಂದ್ರ ಕಳೀಕ,

ಮತ್ತು ಕಂಪೆನಿ, ಕಮಿಷನ್ ಏಜೆಂಟ್ಸ್,

ಠಾಕೂರ ದ್ವಾರ, ಮಾರ್ಕೆಟ್ ಪೋಸ್ಟ್, ಮುಂಬಯಿ


## ನೋಟೀಸ್,

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ಮಾರಾಟಕ್ಕೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು

### ಸಂಸ್ಕೃತ ಗ್ರಂಥಗಳು.

| ಡಾಕಲ್ ಸೇರಿ | ರೂ | ಆ | ಪೈ |
|---|---|---|---|
| ಸಟೀಕಾ ವೈದ್ಯಸಾರ ಸಂಗ್ರಹ .. | ೫ | ೦ | ೦ |
| ,, ಶಿವಗೀತೆ . | ೧ | ೭ | ೦ |
| ,, ಶಿವಾನಂದಲಹರಿ .. | ೦ | ೪ | ೦ |
| ,, ಶಾಲಾಮೃತ . | ೧ | ೦ | ೦ |
| ,, ಟಿ॥ ಬಾಲರಾಮಾಯಣ | ೦ | ೩ | ೦ |
| ,, ಟೀ॥ ಗೋಪಿಕಾ ಗೀತೆ . | ೦ | ೧ | ೦ |
| ,, ಟೀ॥ ಚಾಣಕ್ಯನೀತಿ (ಸುಭಾಷಿತ) | ೦ | ೮ | ೦ |
| ವಿಷ್ಣುಸಹಸ್ರನಾಮ ವಗೈರೆ | ೦ | ೩ | ೦ |
| ಸೂರ್ಯಸಹಸ್ರನಾಮ | ೦ | ೨ | ೦ |
| ಕೃಷ್ಣಕರ್ಣಾಮೃತ . | ೦ | ೨ | ೦ |
| ತ್ರಿಕಾಂಡ ಅಮರ ಮೂಲ | ೦ | ೨ | ೦ |
| ೧ ಕಾಂಡ . | ೦ | ೧ | ೦ |

### ಕನ್ನಡ ಗ್ರಂಥಗಳು.

| | ರೂ | ಆ | ಪೈ |
|---|---|---|---|
| ಜಗದ್ಗುರು ಅವ್ವಲ್ | ೩ | ೦ | ೬ |
| ಬಿಟಿಷ್ ದುರ್ಯ್ಯಾಂ . | ೧ | ೨ | ೦ |
| ವೃಷಭೇಂದ್ರವಿಜಯ . | ೧ | ೪ | ೦ |
| ಪಂಚತಂತ್ರ ಬಾಲಬೋಧಿನಿ ... | ೧ | ೬ | ೦ |
| ಹನುಮದ್ವಿಲಾಸ | ೦ | ೬ | ೦ |
| ಕಾಳೀಯಮರ್ದನ | ೦ | ೨ | ೦ |
| ಸುಧನ್ವಾವಿಜಯ . | ೦ | ೨ | ೦ |
| ಶಶಿರೇಖಾಪರಿಣಯ . | ೦ | ೨ | ೬ |
| ಸುದಾಮಚರಿತ್ರೆ . | ೦ | ೧ | ೦ |
| ಮೈರಾವಣ ಚರಿತ್ರೆ .. | ೦ | ೧ | ೦ |
| ಬಾಲಕ್ರೀಡೆ | ೦ | ೧ | ೦ |
| ಮಹಮ್ಮದನ್ ಲಾ | ೦ | ೧೨ | ೦ |
| ಭಕ್ತಿವಿಲಾಸ ... | ೦ | ೧೨ | ೦ |

## ಹರಾಜ್.

### ನಗರ ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ಸನ್ ೧೮೯೦ ನೇ ಇಸವಿ ಅಸಲ್ ನಂಬರ್ ೨.

ಸನ್ ೧೮೯೨ ನೇ ಇಸವಿ ಜಾರಿ ನಂಬರ್ ೪೦.

| ವಾದಿ | | ಪ್ರತಿವಾದಿಗಳು |
|---|---|---|
| ಜತ್ತಿ ಚಿಕ್ಕಬಸಪ್ಪ, ಬೆಂಗಳೂರುವಾಸ್ತವ್ಯರು | } | ೧ನೇ ಅಜ್ಜಂಪುರದ ಕೃಷ್ಣಯ್ಯನವರು, ಶಿವಮೊಗ್ಗಾ ವಾಸಸ್ಥರು; ೨ನೇ ಅಜ್ಜಂಪುರದ ಮಹಾದೇವರಸು ಕಡೂರು ವಾಸಸ್ಥರು |

ಮೇಲ್ಕಂಡ ಅಸಲ್ ಮೊಕದ್ದಮೆಯಲ್ಲಿ ವಾದಿಯ ಪರವಾಗಿ ಕೊಡಲ್ಪಟ್ಟ ೨೦,೪೯೦—೪—೧ ರೂಪಾಯಿಗಳ ಡಿಕ್ರಿಯ ಅಮಲ್‌ಜಾರಿಯಲ್ಲಿ ತರೀಕೆರೆ ತಾಲ್ಲೂಕ್ ಲಿಂಗದಹಳ್ಳಿ ಮಾಗಣಿ ನಂದಿಬಟ್ಲಗ್ರಾಮಕ್ಕೆ ಸೇರಿದ ಕೆಸವಿನಕಟ್ಟೆ ಎಂಬ ಸರ್ವೆ ನಂಬರು ೨೪ನೇ ಯ ಕರೆ ೧೩೪, ಗುಂಟೆ ೨೧, ಅಕರ ರೂಪಾಯಿ ೨೪೬—೧೨—೦ ವೃತ್ತಿ ಕಾಫಿ ತೋಟವು 1 ಮೆಳಬಪ್ಪನವರು ಈ ಕೋರ್ಟಿನ ಸನ್ ೧೮೯೦ ನೇ ಇಸವಿ ಅಸಲ್ ನಂಬರ್ ೫೦ ರಲ್ಲಿ ಸದರೀ ಆಸ್ತಿಯಮೇಲೆ ಪಡೆದಿರುವ ಡಿಕ್ರಿ ಮೊಬಲಗು ೧೨,೦೨೨—೧೫—೨ ಮತ್ತು ಆ ಈವರೆಗಿನ ಬಡ್ಡಿಗೆ ಸಹ ಗುರಿಮಾಡಲ್ಪಟ್ಟು ಬರುವ ಸನ್ ೧೮೯೩ ನೇ ಇಸವಿ ಫೆಬ್ರವರಿ ಮಾಹೆ ೨೦ ನೇ ತಾರೀಖಿನಲ್ಲು ತರೀಕೆರೆಯಲ್ಲಿ ಬಹಿರಂಗವಾದ ಹರಾಜಿನಲ್ಲಿ ವಿಕ್ರಯಿಸಲ್ಪಡುವದು.

ಆದರೆ ಈ ರೀತಿ ಆಗುವ ಹರಾಜು ಮೊಬಲಗಿನ ಉತ್ಪತ್ತಿಯಲ್ಲಿ ಸದರೀ ಮೆಳಬಪ್ಪನವರ ಡಿಕ್ರಿ ಮೊಬಲಗಿಗೆ ಮೊದಲು ಉತ್ತಾರ ಕೊಡಲ್ಪಡುವದು

ವಿಕ್ರಯವಾಗುವ ತೋಟವು ೨೦,೦೦೦—೦—೦ ರೂ॥ ಬೆಲೆ ಬಾಳುವದೆಂದು ನಮೂದಾಗಿದೆ. ಸದರೀ ಹರಾಜು ತರೀಕೆರೆ ತಾಲ್ಲೂಕ್ ಅಮಲ್‌ದಾರರ ಮುಖಾಂತ್ರ ಅವರ ಮೇಲೆ ತನಿಖೆಗೆ ಒಳಪಟ್ಟು ಈ ಕೋರ್ಟಿನ ಒಬ್ಬ ಅಮೀನನ ಮಾರಿಫತ್ತು ನಡೆಸಲ್ಪಡುವದು.

ಸನ್ ೧೮೯೨ ನೇ ಇಸವಿ ಡಿಸೆಂಬರ್ ಮಾಹೆ ೨೩ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ ಮತ್ತು ನನ್ನ ದಸ್ತಖತ್ತಿನೊಡನೆ ಕೊಡಲ್ಪಟ್ಟಿದೆ

ಷರಾ —

ಹೆಚ್ಚಿಗೆ ಅಂತಹವೇನಾದರು ಆವಶ್ಯಕವಿದ್ದ ಪಕ್ಷದಲ್ಲಿ ಅಂಥವನ್ನು ಈ ಕೋರ್ಟ್ ನಾಜರ್ ಮುಖಾಂತರ ತಿಳಿಯಬಹುದು.

(Signed) B TIRUMALA CHAR,

*District Judge,*
*Nagar Division*

" By order"
RAM PRASAD TIVARI,
*For Sheristadar.*

## THE MONEY MARKET

ಮದರಾಸ್, ಶನಿವಾರ, ತಾರೀಖು 28 ನೇ ಜನವರಿ 1893

ನೂರಕ್ಕೆ ೪ರೂ ಬಾಬತು ಗವರ್ನಮೆಂಟ್ ಪತ್ರಗಳು ಕೊ ಪಾಲು, 104-8—0 ಇಂದ 104—14—0ವರೆಗೆ,

ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳ, ಬಾಬತು 925 ಇಂದ [illegible]ವರೆಗೆ,

ಕಮರ್ಷಿಯಲ್ ವ ಬ್ಯಾಂಕ್ ಮದ್ರಾಸ್ ಬ್ಯಾಂಕ್ ಷೇರುಗಳು (100) ಬಾಬತು 160 ಇಂದ 165 ವರೆಗೆ

ಸವರನ್‌ಗಳು, 16—3—0 ಇಂದ 16—6—0 ವರೆಗೆ

ಬ್ಯಾಂಕ್‌ಬಿಲ್‌ಗಳು ಲಂಡನ್ನ ಮೇಲಿನವುಗಳು, ರೂ ೧ಕ್ಕೆ ೬ತಿಂಗಳವಾಯಿದೆಗೆ, 1s. 2 29/32 d

ಡಿಮಾಂಡ್ 4 ತಿಂಗಳವಾಯಿದೆಗೆ, 1s 2 27/32d

ಡಿಮಾಂಡ್ ಕೇಬಲ್, 1s 2 ¾ d.

## ಪ್ರಕಟನೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ:—

ನಮ್ಮ ವೊಮ್ಮಗನಾದ, ಕಾಳಪ್ಪನು ನಮ್ಮಗಳ ಪ್ರೋಟೆಕ್ಷನಿನಲ್ಲಿ ಇಲ್ಲದೆಯೂ ಮತ್ತು ಹಠೋಟ ತಪ್ಪಿಯೂ, ಪ್ರಂತ ಕೆಲಸಗಳು ನಾಡಿದುಸ್ಸ್ವೇ ಇರುತ್ತನಾಗಿ ಅವನು ಮಾಡುವ ದೇಣೆಗಳಿಗೆ ಸಾಲ್ವಗಳಿಗಾಗಲಿ ಅಥವಾ ನಮ್ಮ ಸ್ವತ್ತುಗಳಿಗಾಗಲಿ, ಜವಾಬದಾರಿಯಾಗಲು ಕಾರಣವಿಲ್ಲ. ಇದರ ಮೇಲೆ ಸಾಲಾ ವಗೈರೆ ಅವನಿಗೆ ಯಾರಾದರು ಕೊಟ್ಟಲ್ಲಿ ಅದರಿಂದ ಪ್ರಾಪ್ತಿಗಾಗುವ ನಷ್ಟಗಳಿಗೆಲ್ಲಾ ಅವನ ಲೇಣೆದಾರರೇ ಗುರಿಯಾಗುತ್ತಾರೆ. ಈ ವಿವರ ಸಮಸ್ತರಿಗೂ ತಿಳುವಳಿಕೆ ಬಗ್ಗೆ ಇದರಿಂದ ದೃಢೀಕರಿಸಿರುತ್ತೆ.

ತಾ|| ೨೩ ನೇ ಜನವರಿ ೧೮೯೩. ಬೆಂಗಳೂರ್. | ಸಹಿ ಮರಿಯಪ್ಪ ದೊಡ್ಡಲಿಂಗಪ್ಪ


# ಕರ್ಣಾಟಕ ಪ್ರಕಾಶಿಕಾ.

## THE KARNATAKA PRAKASIKA.

MONDAY, JANUARY 30, 1893.
೧೮೯೩ನೇ ಇಸವಿ ಜನವರಿ ತಾ|| ೩೦ನೇ ಸೋಮವಾರ.


ಗತ ಮಂಗಳವಾರದ ದಿನ ನಮಗೆ ತಿಳಿಯಬಂದ ಇದರಿಂ ಕಂಡ ಅತಿ ದುಃಖಕರವಾದ ವೃತ್ತಾಂತವನ್ನೀಪತ್ರಿಕಾ ಮೂಲಕ ಏತದ್ದೇಶೀಯರಿಗೆ ತಿಳಿಸಲಿಕ್ಕೆ ನಾವು ಬಹಳ ವಿಷಾದಿಸುತ್ತೇವೆ. ಕಳೆದ ಸಂವತ್ಸರದ ಜೂಲೈ ತಿಂಗಳ ೨೧ ನೇ ತಾರೀಖಿನಲ್ಲುದ್ಭವಿಸಿದ, ಶ್ರೀಮನ್ ಮಹಾರಾಜರವರ ತೃತೀಯಪುತ್ರರಾದ ರಾಜ ಒಡೆಯರವರು, ಕಾಲಗತಿಯನ್ನೈದಿದರೆಂದು, ಮೈಸೂರಿಂದ ಬಂದ ತಂತಿ ವೃತ್ತಾಂತವು ಎಲ್ಲರಿಗೂ ಅಮಿತವಾದವ್ಯಾಕುಲವನ್ನುಂಟುಮಾಡಿತು. ಶ್ರೀಮನ್ಮಹಾರಾಜರವರ ಮನೋಲ್ಲಾಸಕ್ಕೆ ನ್ಯೂನತೆಯನ್ನುಂಟುಮಾಡುವಂಥ ಏವಮಾದಿ ಸಂಸೃತಿ ಕ್ಲೇಶಗಳು ಆಗಿಂದಾಗ್ಯೆ ಪ್ರಾಪ್ತವಾಗುತ್ತಲಿರುವದನ್ನು ನೋಡಿದರೆ ಅಪ್ರತೀಕಾರವಾದ ಕಾಲಗತಿಯು ಬಲಿಷ್ಠವಾದುದಾಗಿಯೂ, ತಾರತಮ್ಯ ಪರಿಜ್ಞಾನ ಶೂನ್ಯವಾದುದಾಗಿಯೂ, ...ಯಾ ದಾಕ್ಷಿಣ್ಯ ವಿಹೀನವಾದುದಾಗಿಯೂ, ಇರುವಂತೆ ಪರಿಭಾವಿಸಬೇಕಾಗಿದೆ. ವಿಧಿವಶದಿಂ ಪ್ರಾಪ್ತವಾದ ಇಂತಾ ಪುತ್ರವಿಶ್ಲೇಷದ ಕಾಲದಲ್ಲಿ ಶ್ರೀಮನ್ಮಹಾರಾಣಿಯವರು ದುಃಖೋಪಶಾಮಕಗಳಾದ ಸ್ವಾದುವಚನಗಳಿಂ ಸಮಾಧಾನಗೊಳಿಸಲಿಕ್ಕೆ ಮಹಾರಾಜರವರು ತತ್ಕಾಲದಲ್ಲಿ ಸವಿಸಾಪದೊಳರದೆ ಅನ್ಯದೇಶಕ್ಕೆ ದಯಮಾಡಿದ್ದದ್ದು ಆಕೆಯವರ ದುಃಖವು ಇಮ್ಮಡಿಸಲಿಕ್ಕೆ ಕಾರಣವಾಗಿ ಯೇರ್ಪಟ್ಟಿತು. ಪ್ರಕೃತ ರಾಜಕುಮಾರರ ಜನನಪ್ರಯುಕ್ತವಾದ ಸಂತೋಷಾನುಭವಕ್ಕೆ ಪ್ರವಿಷ್ಟರಾಗಿಯೇ, ಅಂದರೆ ೬ ತಿಂಗಳ ಕಾಲದಲ್ಲಿಯೇ ಉಪಹತಿ ಪ್ರಾಪ್ತವಾದುದು ಕಂಡು ಯೆಲ್ಲರೂ ಅಮಿತವಾಗಿ ವಿಷಾದಿಸುತ್ತಾರೆ. ಅನುಲ್ಲಂಘನೀಯವಾದ ದೈವ ಸಂಕಲ್ಪವು ಹೀಗೆ ಅನ್ಯಥಾವನ್ನಾಗಿ ಪರಿಣಮಿಸುವದೆಂದು ಒಬ್ಬರೂ ಅರಿಯದೆ ಹೋದರು. ಮುಖ್ಯವಾಗಿ ಶ್ರೀಮನ್ ಮಹಾರಾಜರವರೂ ಮಹಾರಾಣಿಯವರೂ, ಪ್ರಿಯತಮರಾದ ಶಿಶು ಯಿಬ್ಬರು ಪುತ್ರರನ್ನೂ ಪುತ್ರಿಯರನ್ನೂ ನೋಡಿ ಆನಂದಿಸುತ, ತಮ್ಮಾಲಯ ತಮ್ಮ ಸಂತಾಪಹೇತುವಾದ ವಿಷಯವಂ ಮರೆತು ಧೈರ್ಯೋತ್ಸಾಹಗಳಂ ಪಡೆದು ಸುಖಸಮಾಧಾನಗಳೊಡನೆ ಚಿರಕಾಲ ತಮ್ಮ ಪ್ರಜೆಗಳಂ ಪಾಲಿಸುತಲಿರಬೇಕೆಂದು ಪ್ರಾರ್ಥಿಸುತ್ತೇವೆ. ಶ್ರೀಮನ್ಮಹಾರಾಜರವರಿಗೆ ಈ ಮರಣ ವೃತ್ತಾಂತವು ಕೂಡಲೇ ತಿಳಿಸಲ್ಪಡಲು ಭಗ್ನೋತ್ಸಾಹಿಗಳಾಗಿ ಗ್ವಾಲಿಯರ್ ಪಟ್ಟಣದಿ ಪ ಮುಂದಕ್ಕೆಲ್ಲಿಯೂ ದಯಮಾಡದೆ, ಮೊನ್ನೆಯ ದಿನ ಬೆಳಗ್ಗೆ ಈ ಪೂರು ಮಾರ್ಗವಾಗಿ, ಸ್ಪೆಷಿಯಲ್ ಟ್ರೈನಿನೊಳು ರಾಜಧಾನಿಗೆ ದಯಮಾಡಿದರು. ಶ್ರೀಮನ್ ಮಹಾರಾಣಿಯವರ ಸಂದರ್ಶನಾರ್ಥ ಆಫಿಷಿಯೇಟಿಂಗ್ ದಿವಾನರವರು ಮೊದಲಾದ ಕೆಲವರು ದೊಡ್ಡ ಮನುಷ್ಯರು, ಮೈಸೂರಿಗೆ ದಯಮಾಡಿದ್ದರೆಂದು ತಿಳಿಯಬರುತಿದೆ.

ವಿದ್ಯಾವಂತರಾಗಿಯೂ, ಲೋಕಪ್ರಸಿದ್ಧರಾಗಿಯೂ, ಗುಣಾಢ್ಯರಾಗಿಯೂ, ಇರತಕ್ಕ ದೊಡ್ಡ ಮನುಷ್ಯರು ಚಿರಕಾಲ ಜೀವಿಸಿರುವಹಾಗೆ ಪ್ರಾಯಶಃ ನಮ್ಮ ದೇಶದಲ್ಲಿ ಬಹಳ ದುರ್ಲಭವೆಂದು ಭಾವಿಸಬೇಕಾಗಿದೆ. ಜಯಪುರದ ಸಂಸ್ಥಾನದಲ್ಲಿ ವಿದ್ಯಾಭ್ಯಾಸದ ಇಲಾಖಾ ಡೈರೆಕ್ಟರಾಗಿಯೂ, ಸದರೀ ಸಂಸ್ಥಾನದ ಕಾಲೇಜಿನಲ್ಲಿ ಮುಖ್ಯಾಧಿಕಾರಿಯಾಗಿಯೂ ಇದ್ದ ಪಂಡಿತ ಹರಿದಾಸಶಾಸ್ತ್ರಿ ಎಂ. ಎ. ಯವರು ಮಾಹೇ ಡಿಸೆಂಬರ್ ೧೪ ನೇ ತಾರೀಖು ಭಾನುವಾರದಿನ ಜಯಪುರದಲ್ಲಿ ಸ್ವರ್ಗಸ್ಥರಾದ ವೃತ್ತಾಂತವು ಮದರಾಸ್ ಮೆಯಿಲ್ ಪತ್ರಿಕೆಯ ಮೂಲಕ ತಿಳಿದು ಬಹಳ ವಿಷಾದಿಸುತ್ತೇವೆ. ಈ ದೊಡ್ಡ ಮನುಷ್ಯರು ಗತಿಸುವಾಗ್ಯೆ ೩೩ ವರುಷಗಳ ವಯಸ್ಸೆಂದು ತಿಳಿಯಬರುತಿದೆ. ಈ ಚಿಕ್ಕ ಪ್ರಾಯಸ್ಸಿನಲ್ಲಿಯೇ ನಿರುಪಮಗಳಾದ ವಿದ್ಯಾಸಮೃದ್ಧಿಯಿಂದ ಪ್ರಖ್ಯಾತರಾಗಿದ್ದರಲ್ಲದೆ, ಅನ್ಯ ಮತಗಳಲ್ಲಿ ಪ್ರಸಿದ್ಧಿಯನ್ನೈದಿ ಅನೇಕ ಪ್ರಶಸ್ತಿಗಳಂ ಸಂಪಾದಿಸಿದ್ದರು. ಈ ಪಂಡಿತರವರು ವಿದ್ಯಾಭ್ಯಾಸದ ಇಲಾಖಾ ಡೈರೆಕ್ಟರಾಗಿ ನಿಯಮಿಸಲ್ಪಟ್ಟ ಬಳಿಕ ಜಯಪುರದ ಸಂಸ್ಥಾನದಲ್ಲಿ ವಿದ್ಯಾಭಿವೃದ್ಧಿ ವಿಷಯದೊಳು ಅವರು ಮಾಡಿದ ಬಹುವಿಧ ನವೀನ ಯೋಜನೆಗಳು ಬಹುಜನಾಭಿಮತನಾಗಿ ಸಂಸ್ಥಾನಕ್ಕೂ ಪ್ರಜೆಗಳಿಗೂ ಕೀರ್ತಿ ಸಂಪಾದಕವಾಗಿದ್ದವು. ಗೀರ್ವಾಣ ಭಾಷೆಯಲ್ಲಿ ಅವರು ಪಡೆದಿದ್ದ ಪಾಂಡಿತ್ಯವು ಅನ್ಯಾದೃಶವೆಂತಲೂ, ಸ್ವತಃ ಅನೇಕ ಗ್ರಂಥಗಳಂ ರಚಿಸಿದ್ದರೆಂತಲೂ, ಇದಲ್ಲದೆ ವಿಶೇಷ ಪ್ರಚಾರ ರಹಿತವಾದವೆನ್ನ ಬೌದ್ಧಮತ ಸಂಬಂಧಗಳಾದ ಅನೇಕ ಅಪೂರ್ವ ಗ್ರಂಥಗಳಂ ಶೇಖರಿಸಿ ಅವುಗಳನ್ನೆಲ್ಲ ಕ್ರಮೇಣ ಮುದ್ರಿಸಬೇಕೆಂಬ ಉತ್ಸಾಹವುಳ್ಳವರಾಗಿದ್ದರು. ಪ್ರಸಕ್ತ ಪಂಡಿತರವರ ಸಾರಸ್ವತ ಸಂಗ್ರಹಣವು ಕೇವಲ ಅಮೂಲ್ಯವಾದದ್ದಾಗಿಯೂ, ಅಪೂರ್ವವಾದದ್ದಾಗಿಯೂ, ನಿಕ್ಷೇಪರೂಪವಾಗಿಯೂ ಇರುವಂತೆ ಕೇಳುತ್ತೇವೆ. ಗತಿಸಿದ ಹರಿದಾಸ ಶಾಸ್ತ್ರಿಗಳವರು, ತಮ್ಮ ಜ್ಞಾತಿಕರನ್ನಗಲಿ, ಅನೇಕರ ಉತ್ಸಾಹವು ಭಂಗವಾಗುವಂತೆ ಅತಿ ಪೂರ್ವವಯಸ್ಸಿನಲ್ಲಿ ಗತಿಸಿದ್ದಕ್ಕಾಗಿ ಅಮಿತವಾಗಿ ವಿಷಾದಿಸುತ್ತೇವೆ. ಇವರ ಶಾಸ್ತ್ರಜ್ಞಾನ ಮೊದಲಾದ ಶುಭ ಗುಣಗಳಿಗಾಗಿ ವಿದೇಶೀಯರಾದ ಪಂಡಿತರು ಸಹ ವಿಶೇಷ ಗೌರವಿಸುತಲಿದ್ದರು. ಇಂತಾ ಸುಪ್ರಸಿದ್ಧರ ನಾಮವು ಸ್ಮರಣಮಾತ್ರ ಪರ್ಯವಸಾಯಿಯಾಗಿ, ಗತಿಸಿದವರನೇಕರ ನಾಮಾವಳಿಯಲ್ಲೊಂದಾಗಿ ಸೇರಿಹೋದ ಬಗ್ಗೆ ಚಿಂತಿಸುತ್ತೇವೆ.

---

ಮನುಷ್ಯನು ತನ್ನ ಆರೋಗ್ಯಕ್ಕಾಗಿಯೂ ಚಿತ್ತರಂಜನೆಗಾಗಿಯೂ ದೇಹವನ್ನೂ ತನ್ನ ಗೇಹವನ್ನೂ ನಿರ್ಮಲವಾಗಿಟ್ಟುಕೊಳ್ಳುತ್ತಾನೆ, ಹಾಗೆಯೇ ತಾನು ವಾಸ ಮಾಡುವ ಗ್ರಾಮವನ್ನೂ ಪ್ರದೇಶವನ್ನೂ ನಿರ್ಮಲವಾಗಿಟ್ಟುಕೊಳ್ಳದೆ ಹೋದರೆ ಅಲ್ಲಿ ವಾಸಮಾಡುವವರನೇಕರಿಗೆ ಆರೋಗ್ಯವೂ, ಮನೋಲ್ಲಾಸವೂ ಸಿದ್ಧಿಸಲಾರದು. ಆದುದರಿಂದ ಈ ವಿಷಯವು ನಗರವಾಸಿಗಳಿಗೆ ಅವಶ್ಯಕವಾದುದಾಗಿರುತಿದೆ. ಲೋಕದೊಳೊಂದು ನ್ಯಾಯ ಪ್ರಾಟಿನುವದೆ —ದೇಹವಿಚಾರಣೆಯು ಸರ್ವೇಂದ್ರಿಯಗಳ ಮೂಲಕವಾಗಿ ದೇಹಾಭಿಮಾನಿಯೊಬ್ಬನನ್ನು ಸೇರಿದ್ದಾಗಿಯೂ, ಗೇಹವಿಚಾರಣೆಯು ಅದರೊಳಗಿರುವ ಎಲ್ಲರ ಮೂಲಕವಾಗಿ ಮನೆಯ ಯಜಮಾನನನ್ನು ಸೇರಿದ್ದಾಗಿಯೂ ನಗರವಿಚಾರಣೆಯು ನಾಗರಿಕರ ಮೂಲಕ ನಗರಾಧ್ಯಕ್ಷನಾದ ಅಧಿಕಾರಿಯನ್ನು ಸೇರಿದ್ದಾಗಿಯೂ, ಅದೇರೀತಿ ದೇಶ ವಿಚಾರಣೆಯು ಪ್ರತೀಯರ ಮೂಲಕ ದೇಶಾಧಿಪತಿಯಾದ ಅರಸನನ್ನು ಸೇರಿದ್ದಾಗಿಯೂ, ಈ ಪ್ರಪಂಚವೆಲ್ಲ ಅದರವಿಚಾರಣೆಯು ಪ್ರಾಣಿಗಳ ಮೂಲಕವಾಗಿ ದೇವರನ್ನು ಸೇರಿದ್ದಾಗಿಯೂ ಇರುವದಲ್ಲದೆ ಇವುಗಳೊಳಗೆ ಪರಸ್ಪರ ಪ್ರೇರ್ಯ ಪ್ರೇರಕ ಭಾವಸ್ತಕೂಡ ನ್ಯಾಯಸಮ್ಮತವಾಗಿರುತಿದೆ. ಆದುದರಿಂದ ಮನುಷ್ಯರ ಜ್ಞಾನಾಭಿವೃದ್ಧಿಯಲ್ಲಿ ತತ್ತ್ವ ಅಪೇಕ್ಷೆಯು ಅನ್ಯರಿಗೆ ತಿಳಿ... ಸೂರತು ಅವು ಪ್ರಕಟವಾಗುವದು ಅಸಾಧ್ಯವಾದುದರಿಂದ ಒಬ್ಬನಿಂದ ಪ್ರಯೋಜನವ ಹೊಂದಬೇಕಾದ ಸ್ಥಿತಿಯಲ್ಲಿರುವವರು ತಮಗೆ ಹಾನಿಕರಗಳಾದ ಅಂಶಗಳಂ ನಿವೃತ್ತಿಸುವ ವಿಷಯಗಳನ್ನು ಮೇಲಂ ಪಡೆಯಲಿಕ್ಕೆ ಸಾಧಕಗಳಾದ ಯಿತರ ವಿಷಯಗಳನ್ನು ತಿಳಿಸಬೇಕಾದುದು ಅವಶ್ಯಕವಾಗಿರುತಿದೆ. ಈಚೆಗೆ ಕೆಲವು ಸಂವತ್ಸರಗಳ ಮೊದಲು ಹಾಗೆ ತಿಳಿಸತಕ್ಕವರಲ್ಲಿ ಯಾವ ಭೇದವಿಲ್ಲದಿದ್ದಾಗ್ಯೂ ಕೇಳತಕ್ಕವರು ಮಾತ್ರ ಫಲ ನೆಯದರೆಂದು ನಿರ್ಣಯವಾಗಿಲ್ಲದೆ ಹೋಗುವದರಿಂದ ಅನಾಭಿಪ್ರೇತವಾದ ಗಗನ ಕುಸುಮದಂತೆ ಪ್ರಯೋಜನ ಶೂನ್ಯವಾಗುತಿದೆ. ಕ್ರಿಯಾಶಕ್ತಿಯುಳ್ಳ ಕರ್ತನೊಬ್ಬನು ಶಾಶ್ವತವಾಗಿರುವದಕ್ಕೆ ಅಪೇಕ್ಷಿತಾಂಶಗಳಂ ಸಹ ಕಳ್ಳಿತ ಹೊಂದಬಹುದು. ಹಾಗಿಲ್ಲದೆ ಕರ್ತೃ ಭೇದ ಉಂಟಾದಹಾಗೆಲ್ಲ ಕ್ರಿಯಾಭೇದವೂ ಕ್ರಿಯಾ ಭೇದವುಳ್ಳ, ಫಲಭೇದವೂ ಫಲಾನುಗುಣವಾಗಿ ಅದಂ ಅನುಭವಿಸತಕ್ಕವರ ಸ್ಥಿತಿಭೇದವೂ ತಪ್ಪದೆ ಉಂಟಾಗುತಿವೆ. ಈಚೆಗೆ ಕೆಲವುಕಾಲದ ಮೊದಲು ಈ ಬೆಂಗಳೂರು ನಗರದ ವಿಚಾರಣೆಯೊಳುಂಟಾದ ನ್ಯೂನತೆಯಂ ಪೂರ್ತಿಮಾಡಿಕೊಳ್ಳಲಿಕ್ಕೆ ನಾಗರಿಕರಾದವರು ಸಹ ಕೆಲವರು ಸರ್ಕಾರದವರೊಡನೆ ಪ್ರವರ್ತಿಸಿದರು. ನಗರ ಪಾರಿಶುದ್ಧ್ಯ ವಿಷಯ ವಿಚಾರಗಳೊಳು ಕೇವಲ ರಸ್ತಾ ಡ್ರೈನುಗಳಮೇಲೆ ನಾನಾ ಫ್ಯಾನ್ಸಿಗಳೂ ನಡೆಸಲ್ಪಡುತಲಿವೆ. ಏತದರ್ಥ ಧನವು ಆಯತಿಗಿಂತ ವಿಶಾರಿಯೇ ವ್ಯಯವಾಗುತಿದೆ. ಆದಾಗ್ಯೂ ಈ ಬೆಂಗಳೂರು ಮಾತ್ರ ಪೂರ್ವದೊಳಗಿದ್ದದಕ್ಕಿಂತ ಆರೋಗ್ಯಾನುಕೂಲ್ಯಗಳಲ್ಲಿ ಕಡಿಮೆಯಾಗಿರುವ ಹಲ್ಲದೆ ನಗರಾಲಂಕಾರವು ಸಹ ವಿಚಾರಣಕರ್ತರ ಇಚ್ಛೆಯಂತೆ ಬದಲಾಯಿಸುತಲಿದೆ. ಇದಕ್ಕೆ ಕಾರಣವೇನು? ಅದು ಕಾಲಕಾಲಕ್ಕುಂಟಾಗುವ ಅಧಿಕಾರಭೇದದಿಂದಲೇ ಪ್ರಾಪ್ತವಾಗುತ್ತದೆ ಎಂದು ಭಾವಿಸುತ್ತೇವೆ. ಅಧಿಕಾರಿಯು ಸ್ವರೂಪಾನುಗುಣವಾಗಿ ಅಧಿಕಾರ ಬದಲಾಯಿಸುವನು ಸಹಜವಾದುದರಿಂದ ಅದರ ಬದಲಾವಣೆಯು ಸಂದೇಹವಿಲ್ಲದೆ ಮಹದನರ್ಥಸೇತು ಭೂತವಾಗತಿದೆ. ಈ ಬೆಂಗಳೂರು ಮ್ಯುನಿಸಿಪಲ್ ವಿಚಾರಣೆ ಕೆಲಸಕ್ಕೆ ಇದುವರೆವಿಗೆ ಅನೇಕರು ... ಒಬ್ಬರಿಗಾದರೂ ತಮ್ಮ ಅಧಿಕಾರ ... ವಿಸ್ತಾರವೆಂತಲೂ ತಮ್ಮ ಅಧಿಕಾರಾರ್ಹತೆ ... ತಲೂ ತಿಳಿಯದೆಯೇ ಅವರ ಅಧಿಕಾರಗಳೇನೋ ನಡೆದು ಹೋದವು ಇನ್ನೂ ಸದರೀ ಕೆಲಸಕ್ಕೆ ಫಲಾನಿಯಮವರೇ ಅರ್ಹರೆಂಬದೂ, ಇಂತವರಿಂದಲೇ ಸದರೀ ಕೆಲಸ ನಿರ್ವಹಿಸಲ್ಪಡುವದೆಂಬದೂ, ಇವರೇ ಇಷ್ಟುಕಾಲ ಸದರೀ ಅಧಿಕಾರದೊಳಿರಬೇಕೆಂಬದೂ ನಿಷ್ಕರ್ಷೆಯಾದಂತೆ ಕಾಣಿಸಲಿಲ್ಲವು. ಈಚೆಗೆ ವೈಸ್ ಪ್ರಸಿಡೆಂಟರಾಗಿ ಮೊಕರರಾದ ಮಿ|| ಕೆ. ಶ್ರೀನಿವಾಸಯರವರು ಇಲ್ಲಿಂದ ನಿವೃತ್ತಿಸಲ್ಪಟ್ಟ ಮತ್ತೊಂದು ಕೆಲಸಕ್ಕೆ ಕಳುಹಿಸಲ್ಪಡುವವರಾಗಿದಾರೆಂತಲೂ, ಆವರ ಕೆಲಸಕ್ಕೆ ಬೇರೆಯೊಬ್ಬ ದೊಡ್ಡಮನುಷ್ಯರು ನಿಯಮಿಸಲ್ಪಡುವರೆಂತಲೂ ಕೇಳುತ್ತೇವೆ. ಬರತಕ್ಕವರು ಎಷ್ಟುಕಾಲ ಪ್ರಸಕ್ತ ಕೆಲಸದೊಳಿರಬೇಕೋ ತಿಳಿಯಲಿಲ್ಲವು. ಇವರಿಂದ ಇದುವರೆವಿಗೆ ತಿಳಿಸಬೇಕಾದ್ದು ಫಲಾನೆ ವಿಷಯವೆಂತಲೂ, ಬರತಕ್ಕವರ ವಿಮರ್ಶೆಗೊಳಪಡಿಸಬೇಕಾದ ವಿಷಯಗಳು ಫಲಾನೇವೆಂತಲೂ ಅವರ ಮುಂದೆ ಬರುವವರಿಗೆ ನಿಲ್ಲಿಸತಕ್ಕಾದವು ಫಲಾನೆವೆಂತಲೂ, ಸದ್ಯ ವ್ಯವಸ್ಥೆಯಾಗತಕ್ಕವು ಇಂತವುಗಳೆಂತಲೂ, ಕಾಲಾಂತರದಲ್ಲಿ ವಿಮರ್ಶೆಯಾಗತಕ್ಕವು ಇಂತವುಗಳೆಂತಲೂ ಜನಗಳು ತಿಳಿದುಕೊಳ್ಳಲಾರದೆ ಹೋದುದರಿಂದ ತಿಳಿಸತಕ್ಕ ಮಪಡಿಸಿಕೊಂಡು ಸೂಚಿಸಬೇಕಾದ ಮಾರ್ಗವೇ ಅವರಿಗೆ ಗೊತ್ತಿಲ್ಲದೆಹೋಗಿದೆ. ಇದಕ್ಕೆ ತಕ್ಕಂತೆ ಬರತಕ್ಕ ಅಧಿಕಾರಿಗಳಿಗೆ ಕೆಲಸದಲ್ಲಿ ಶ್ರದ್ಧೆಯೆಂಬದು ಕೊಂಚವೂ ಇರುವದಿಲ್ಲವು. ಇದಂ ನಾವು ಒಪ್ಪೆಂದು ನುಡಿಯಲಾರೆವು, ಏತಕ್ಕೆಂದರೆ, ಕೆಲಸ ಸ್ವಭಾವ ತಿಳಿಯುವ ಪರ್ಯಂತ ಅದರ್ಯೊಂದವನಿಗೂ ಶ್ರದ್ಧೆ ಉಂಟಾಗಲಾರದು, ಅನುಭವ ಉಂಟಾಗುವವರೆವಿಗೂ ತಾತ್ಕಾಲಿಕ ಕೆಲಸದಲ್ಲಿ ದೇವೆಂಬ ನಂಬಿಕೆ ಯಿರುವದಿಲ್ಲವು. ಆದಕಾರಣ, ಹುಚ್ಚು ಬಿಟ್ಟಹೊರತು ಮದುವೆಯಿಲ್ಲವು, ಮದುವೆಯಾದಹೊರತು ಹುಚ್ಚು ಬಿಡದೆಂಬ, ಲೋಕೋಕ್ತಿಯಂತೆ ಮ್ಯುನಿಸಿಪಲ್ ವಿಚಾರಣಾಧಿಕಾರವೇರ್ಪಟ್ಟ ಜನಗಳಿಗೆ ಸುಖಸಂತೋಷಗಳುಂಟಾಗುವವು ಶುದ್ಧಾಂಗ ತಪ್ಪಿಹೋಗಲಿಕ್ಕೆ ಇದರ ಪರಿವರ್ತನೆಯೆಂಬ ಪ್ರಬಲ ಕಾರಣ ಒಂದು ವಿನಾ ಬೇರೆ ಯಾವದೂ ಇದ್ದಿತೆ ನಮ್ಮ ಹೃದಯದಲ್ಲಿ ಸ್ಫುರಿಸಲಿಲ್ಲವು. ಇಂತಾ ಪ್ರಜಾಸಮುದಾಯಕ ದೌರ್ಭಾಗ್ಯವೆಂಬುದು ಯಾವಾಗ ನಿವೃತ್ತಿಯಾಗುವದೋ ಆದುಪೇರೆ ಗೊತ್ತಿಲ್ಲವು.

## Occasional Notes.
## ನೈಮಿತ್ತಿಕ ವಿಷಯನ್ಯಾಸ.

ಘನವಂ ಹೊಂದಿದ ಕೊಚ್ಚಿ ಮಹಾರಾಜರವರು ಬರುವ ಫೆಬ್ರವರಿ ತಿಂಗಳ ೧೪ನೇ ತಾರೀಖಿನಲ್ಲಿ ಕಾಶೀಕ್ಷೇತ್ರ ಸೇರುವರು.

---

ತಿರುವಾಂಕೂರ್ ಮಹಾರಾಜರವರು ಈ ತಿಂಗಳ ೧೮ ನೇ ತಾರೀಖಿನಲ್ಲಿ ತಿರುವನಂತಪುರದಿಂದ ತಮ್ಮ ದಿವಾನರೊಡನೆ ಮದರಾಸಿಗೆ ಪ್ರಯಾಣವಾದರು.

---

೧೮೯೧—೯೨ ನೇ ಇಸವಿಯೊಳು ಮದರಾಸ್ ಗವರ್ನಮೆಂಟ್ ಒಟ್ಟು ಹುಟ್ಟುವಳಿಯು 10 70,37,295-7-7 ರೂಪಾಯಿಗಳು ಸದರೀ ಸಾಲಿನಲ್ಲಿ ಒಟ್ಟು ಖರ್ಚು 4,24,72,520 10 6 ರೂಪಾಯಿಗಳು

---

ಧರ್ಮವರದಿಂದ ಮೈಸೂರು ಸರಹದ್ದಿನವರಿಗೆ ರೈಲ್ವೆ ರಸ್ತೆ ಹಾಕುವ ವಿಷಯದಲ್ಲಿ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ೩೦,೦೫,೧೪೭ ರೂಪಾಯಿಗಳಿಗೆ ವಿಮರ್ಶೆ ಮಾಡಲ್ಪಟ್ಟ ಅಂದಾಜಿಪಟ್ಟಿಯಂತೆ ಮಂಜೂರ್ ಮಾಡಿರುತ್ತಾರೆ.

---

ಕೊಚ್ಚಿ ಸಂಸ್ಥಾನದ ರಾಜಮನೆತನಕ್ಕೆ ಸೇರಿದವರ ವೈಕಿ ಯಾನೆಯವರು ಮದರಾಸ್ ಪ್ರಸಿಡೆನ್ಸಿ ಕಾಲೇಜಿನಲ್ಲಿ ಇದುವರೆವಿಗೆ ಓದುತಲಿದ್ದು ಈ ಸಂವತ್ಸರದಲ್ಲಿ ಮದರಾಸ್ ಯೂನಿವರ್ಸಿಟಿ ಬಿ. ಎ. ಪರೀಕ್ಷೆಗೆ ಹೋಗಿರುತ್ತಾರೆ.

---

ಮದರಾಸ್ ಗವರ್ನಮೆಂಟ್ ತೆಲುಗು ಟ್ರಾನ್ಸ್‌ಲೇಟರ್ ಆಗಿದ್ದ ಡಾಕ್ಟರ್ ಆಪರ್ಟಿಯವರು ಶೀಘ್ರದಲ್ಲಿ ತಮ್ಮ ಕೆಲಸದಿಂದ ನಿವೃತ್ತರಾಗುವರಾಗಿರುವದರಿಂದ ಸದರೀ ಕೆಲಸಕ್ಕೆ ತಂಜಾವೂರ್ ಡಿಸ್ಟ್ರಿಕ್ಟ್ ಮುನ್ಸಿಫರಾಗಿರುವ ಮಿ|| ಬಿ. ರಾಮಸ್ವಾಮಿ ನಾಯುಡರನ್ನು ಮದರಾಸ್ ಹೈಕೋರ್ಟಿನವರು ಶಿಫಾರಸ್ ಮಾಡಿರುವುದಾಗಿ ಕೇಳುತ್ತೇವೆ.

---

ಮದರಾಸ್ ಯೂನಿವರ್ಸಿಟಿಗೆ ಫೆಲೋಗಳಂ, ಅಂದರೆ ಮೆಂಬರ್‌ಗಳನ್ನು ಆರಿಸುವ ವಿಧದಲ್ಲಿ ಒಂದು ಸ್ಕೀಂ ತಯಾರುಮಾಡುವ ಬಗ್ಗೆ ಕಮಿಟಿ ಯೇರ್ಪಾಡಾಗಿ, ಅದಕ್ಕೆ ಸರ್ ಟಿ. ಮುತ್ತುಸ್ವಾಮಿ ಅಯ್ಯರವರೂ, ಡಾಕ್ಟರ್ ಡಂಕನ್, ಡಾಕ್ಟರ್ ಮಿಲ್ಲರ್, ರಾಯಬಹದೂರ್ ರಂಗನಾಥ ಮುದಲಿಯಾರವರೂ ಮೆಂಬರುಗಳಾಗಿ ಮೊಕರರಾಗಿದಾರೆಂದು ಕೇಳುತ್ತೇವೆ.

---

ಮದರಾಸ್ ಲಾ ಕಾಲೇಜಿನಲ್ಲಿ ಅಸಿಸ್ಟೆಂಟ್ ಪ್ರೊಫೆಸರಾಗಿದ್ದ ಮಿ|| ಟಿ. ಆರ್. ರಾಮಚಂದ್ರಯ್ಯನವರು ಕೊಚ್ಚಿ ಸಂಸ್ಥಾನದಲ್ಲೊಬ್ಬ ಜಡ್ಜಿಯಾಗಿ ಮೊಕರರಾದವರಿಂದ ಅವರ ಕೆಲಸಕ್ಕೆ ಹೈಕೋರ್ಟ್ ವಕೀಲ್ ಮಿ|| ಶಿವಸ್ವಾಮಿ ಅಯ್ಯರ್ ಯೆಂಬವರೂ, ಪ್ರೈವೇಟ್ ಪ್ರಾಕ್ಟಿಸರ್ ಮಿ|| ಗೋವಿಂದಮೇನನ್, ಬಿ. ಎ. ಬಿ. ಎಲ್. ಯೆಂಬವರೂ ಅಸಿಸ್ಟೆಂಟ್ ಲಾ ಪ್ರೊಫೆಸರಗಳಾಗಿ ಮೊಕರರಾದರೆಂದು ತಿಳಿಯಬರುತಿದೆ.

---

ಈ ಸಲದ ಕಾನ್ವೊಕೇಷನ್ ಮೀಟಿಂಗ್ ಕಾಲದಲ್ಲಿ ಒಂದು ಅಡ್ರೆಸ್ ಕೊಡಬೇಕೆಂದು ಹೈಕೋರ್ಟ್ ವಕೀಲ್ ಆನರೆಬಲ್ ಮಿಸ್ಟರ್ ಭಾಷ್ಯಂ ಅಯ್ಯಂಗಾರ್ಯರವರನ್ನು ಯೂನಿವರ್ಸಿಟಿ ಚಾನ್ಸಲರಾದ ಮದರಾಸ್ ಗವರ್ನರವರು ಕೇಳಿರುವಂತೆ

ಮದ್ರಾಸ್ ಪತ್ರಿಕೆಯ ಮೂಲಕ ತಿಳಿಯಬರುತಿದೆ. ಇದುವರಿವಿಗೆ ಕರ್ನಪ್ರೋಶೀರ್ಷ ಆಫಿಸ ಕೆಲ್ಪ್ಯವರಲ್ಲಿ ಮೆ|| ಬಾಶ್ಯಂ ಅಯ್ಯಂಗಾರ್ರವರು ಶಾಶ್ವತನೆಯವರಾಗಿರುತ್ತಾರೆ.

ರುಸಿಯಾ ಸರ್ಕಾರದವರು ತಮ್ಮ ದೇಶದಲ್ಲಿ ಸ್ತ್ರೀ ವಿದ್ಯಾಭ್ಯಾಸಕ್ಕೆ ವಿಶೇಷತಃ ಪ್ರೋತ್ಸಾಹವನ್ನುಂಟುಮಾಡುವವರಲ್ಲದೆ, ದೊಡ್ಡ ದೊಡ್ಡ ಉದ್ಯೋಗಗಳಲ್ಲಿ ಅವರಿಗೆ ಬಾರೀ ನೌಕರಿಯಂ ಕೊಡುವವರಲ್ಲದೆ ಯೂರೋಪ್ ಖಂಡದ ಇತರ ಸಂಸ್ಥಾನಾಪೇಕ್ಷೆಯಾ ವಿಶೇಷ ಆದರವುಳ್ಳವರಾಗಿರುತ್ತಾರೆ. ಇದುವರಿವಿಗೆ ಹೊಸ ದೇಶ ದ ಶಾಶ್ತ್ರಗಳಾಗಿಯೂ, ಡಾಯ್‌ರ್‌ಗಳ ಗಿಯೂ ಈ ಸರಕಾರದಲ್ಲಿ ಕೆಲಸಗಳು ಮಾಡುತಲಿದಾರೆ.

ಜೂರಿಗಳ ವಿಷಯದಲ್ಲಿ ಇಂಡ್ಯಾ ಗವರ್ನಮೆಂಟಿನವರು ಕೊಟ್ಟ ಇಸ್ತಿಹಾರನ್ನು ಇಂಡಿಯಾ ಸ್ಟೇಟ್ ಸೆಕ್ರಟರಿಯವರು ರದ್ದು ಮಾಡಿದರೆಂದು ಇಂಡಿಯನ್ ಮಿರರೆಂಬ ಪತ್ರಿಕೆ ಪ್ರಕಟಿಸಿದ್ದನ್ನು ನೋಡಿದ ಕೂಡಲೆ ಕಲ್ಕತ್ತ ಶಹರ್ ನಿವಾಸಿಗಳೆಲ್ಲರು ಸಂತೋಷ ಪ್ರೇರಿತ ಮನಸ್ಕರಾದರೆಂತಲೂ, ಸದರೀ ವರ್ತಮಾನ ಯಾವ ಪ್ರಮಾಣದಿಂದ ಬಂದದ್ದರಲ್ಲಿ ಸಂಶಯ ಲೇಶವೂ ಇರಲಾರದೆಂತಲೂ ಅಮೃತಬಜಾರ್ ಪತ್ರಿಕೆ ತಿಳಿಸುತಿದೆ.

ವಿದ್ಯಾವ್ಯಾಸಂಗಕ್ಕಾಗಿ ಇಂಡ್ಯಾದೇಶದಿಂದ ಇಂಗ್ಲಾಂಡಿಗೆ ಹೋಗಿ ಅಲ್ಲಿಯೊಂದು ನ್ಯಾಯಶಾಸ್ತ್ರ ಪಾಠಶಾಲೆಯಲ್ಲಿ ಓದುತಲಿದ್ದ ವಿದ್ಯಾರ್ಥಿಯೊಬ್ಬನು ಧ್ರವ್ಯಾನುಕೂಲ್ಯ ಸಾಲದೆ ಪ್ರಾಣಹಾನಿಗೆ ಗುರಿಯಾಗಬೇಕಾದ ಸಂದರ್ಭವನ್ನುಂಟಿತು, ಇಂಡ್ಯಾ ದೇಶದಿಂದ ಇಂಗ್ಲಾಂಡಿಗೆ ಹೋಗಿ ಅಲ್ಲಿ ವಾಸವಾಗಿರುವಂತವರು, ಈ ದೇಶದಿಂದ ಅಲ್ಲಿಗೆ ಹೋಗತಕ್ಕವರ ಪ್ರಯೋಜನಾರ್ಥ ಯೆ ರಡು ಸಂಘಗಳನ್ನೇರ್ಪಡಿಸಬೇಕಾದವರಾದರು.

ಜೂರಿ ವಿಷಯದಲ್ಲಿ ಬಂಗಾಳೆ ಗವರ್ನಮೆಂಟಿನವರು ಕೊಟ್ಟರುವ ಹುಕುಮನ್ನು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಕಾರ್ಯತಃ ರದ್ದು ಮಾಡಿದರೆಂದು ಇಂಗ್ಲಾಂಡಿನಿಂದ ಖಂಡಿತವಾದ ವರ್ತಮಾನವು ಕ್ಷಿಪ್ರದಲ್ಲಿ ಬಾರದೆ ಹೋಗುವದಾದರೆ, ಸದರೀ ಜೂರಿ ನೋಟಿಫಿಕೇಷನ್ ಬಹಳ ಅಕ್ರಮವಾದದ್ದೆಂದು ಆಕ್ಷೇಪಿಸುವದಕ್ಕಾಗಿ ಬಂಗಾಳದೊಳು ಒಂದು ಪ್ರಬಲ ಸಮಾಜ ಸೇರಿಸಬೇಕೆಂದು ರಾಜಕೀಯ ವಿಷಯ ವಿಚಾರಕ್ಕಾಗಿ ಸ್ಥಾಪಿಸಲ್ಪಟ್ಟಿರುವ ಪ್ರಬಲರಾದ ನೇಟಿವ್ ಸಂಘದವರು ಯೋಚಿಸುತಲಿದಾರೆಂದು ಆ ಪ್ರಾಂತದ ಪತ್ರಿಕೆಯೊಂದು ತಿಳಿಸುತಲಿದೆ.

ಮದರಾಸ್ ಹೈಕೋರ್ಟ್ ವಕೀಲರಾದ ಆನರೆಬಲ್ ಮೆ|| ಭಾಷ್ಯಮಯ್ಯಂಗಾರ್ರವರ ಕುಮಾರರಾದ ಮೆ|| ವಿ ರಂಗಸ್ವಾಮಯ್ಯಂಗಾರ್ರವರು, ಇಂಜಿನಿಯರಿಂಗ್ ಕಾಲೇಜಿನಲ್ಲಿ ಓದಿ ಗ್ರಾಜ್ಯುಯೇಟ್ ಯೆಂಬ ಪ್ರಶಸ್ತಿಯಂ ಪಡೆದು ಬುದ್ಧಿಶಾಲಿ ಯೆನ್ನಿಸಿಕೊಂಡಿದ್ದುದರಿಂದ, ಸಮುದ್ರ ತೀರ ಮಾರ್ಗದಲ್ಲಿ ಹಾಕಲ್ಪಡುತಲಿರುವ ಈಸ್ಟ್ ಕೋಸ್ಟ್ ರೈಲ್ವೆಯಲ್ಲಿ ಅಸಿಸ್ಟೆಂಟ್ ಇಂಜಿನಿಯರಾಗಿ ನೇಮಕರಾಗಲ್ಪಟ್ಟು, ಬಿ ಎಮ್ ಶಾಲೆ ಕಡೆಯ ಕಾಮಗಾರಿಗೆ ನಿಯಮಿಸಲ್ಪಟ್ಟ ಕೆಲಸ ನೋಡುತಲಿದಾರೆ. ಈ ಇಲಾಖೆಯಲ್ಲಿ ಕೆಲಸ ನಿರ್ವಹಣೆಕ್ಕೆ ಆವಶ್ಯಕವಾದ ಅನುಭವಪೂರ್ವಕವಾದ ಜ್ಞಾನವಂ ಇವರು ಪೂರ್ವಭಾವಿಯಾಗಿಯೇ ಸಂಪಾದಿಸಿಕೊಂಡಿದ್ದುದರಿಂದ, ಪ್ರಕೃತ ಕೆಲಸವು ಕಷ್ಟ ಲೇಶವೂ ಇಲ್ಲದೆ ನಿರ್ವಹಿಸುವದಕ್ಕೆ ಸಮರ್ಥರಾದರು.

ಮದರಾಸಿನಲ್ಲಿ ಬಿಯರ್ ವ ವರ್ತಕ ವ್ಯಾಪಾರ ಮಾಡತಕ್ಕ ಪ್ರಸಿದ್ಧರಾದ ಎಂ. ಸಭಾಪತಿ ಶೆಟ್ಟಿ ರವರು ೧೫|| ಸಾವಿರ ರೂಪಾಯಿಗಳ ಜರೆ ಬೆಳಕ್ಕೆ ನವಂತ್ನ ಖಚಿತವಾದ ಒಂದು ವೈರಮುಡಿಯನ್ನು ತಯಾರ್‍ಮಾಡಿಸಿ ಚೇನಾ ಬಜಾರಿನಲ್ಲಿರುವ ಶ್ರೀ ಶಿವಸುಬ್ರಹ್ಮಣ್ಯಸ್ವಾಮಿ ಯವರಿಗೆ ಸಮರ್ಪಿಸಿದರೆಂತಲೂ, ಈ ವಿಶೇಷ ಸಂದರ್ಭಕ್ಕಾಗಿ ಹುಣ್ಣಿಮೆಯದಿನ ರಾತ್ರಿ ದೇವರಿಗೆ ಪ್ರಬಲ ಉತ್ಸವವು ನಡೆದಂತೆಯೂ, ಇದಲ್ಲದೆ ಆ ಕಾಲದಲ್ಲಿ ಅನೇಕ ಮಂದಿ ಬಡವರಿಗೆ ಅನ್ನದಾನ ಮಾಡಿದರೆಂತಲೂ, ತಿಳಿದು ಸಂತೋಷಿಸುತ್ತೇವೆ. ಇದಲ್ಲದೆ ಸದರೀ ಶೆಟ್ಟರವರು ಮೇಲೆ ಕಂಡ ಸುಬ್ರಹ್ಮಣ್ಯಸ್ವಾಮಿಯವರಿಗೆ ೨೫,೦೦೦ ರೂಪಾಯಿಗಳ ಬೆಲೆಬಾಳುವ ಅನರ್ಘ್ಯಗಳಾದ ರತ್ನಗಳು ಸಾವಿಗಳೂ ಕರ್ಣಪತ್ರಗಳೂ ಮಾಡಿ ಒಪ್ಪಿಸಿದಾರೆಂದು ತಿಳಿಯಬರುತಿದೆ.

ಸಂಭೋಗಾನುಮತಿ ವಿಷಯದಲ್ಲಿ ಹುಟ್ಟಿದ ಕಾನೂನಿಗೆ ವ್ಯತಿರಿಕ್ತವಾಗಿ ಈಚೆಗೆ ದೆಹಲಿಯಲ್ಲಿ ನಡೆದ ಒಂದು ಮೊಕದ್ದಮೆಯು ವ್ಯವಸ್ಥೆ ಮಾಡಿತು. ಹುಡಿಗಿಯು ತಾಯಿಯಾದವಳು, ತನ್ನ ಮಗಳು ಅಪ್ರಾಪ್ತವಯಸ್ಕಳಾಗಿದ್ದರೂ, ಬಲಾತ್ಕಾರ ಪೂರ್ವಕ ಅವಳನ್ನು ಕೆಡಿಸಿದನೆಂದು ಅಳಿಯನಮೇಲೆ ದಾವಾ ತಂದಳು. ಸದರೀ ಮೊಕದ್ದಮೆಯಲ್ಲಿ ಮ್ಯಾಜಿಸ್ಟ್ರೇಟರು ಅಪರಾಧಿಯಾದ ಅಳಿಯನಿಗೆ ಮೂರು ತಿಂಗಳ ಕಠಿಣ ಕೈದ್ ಸಜಾ ವಿಧಿಸಿದರು. ಅಳಿಯನಾದವನು ನಡೆಸಿದ ಕೃತ್ಯವು ಅಕ್ರಮವಾದುದೆಂದು ನಾವು ಒಪ್ಪುತ್ತೇವೆ. ಪರಂತು ಅಳಿಯನಮೇಲೆ ಕ್ರಿಮಿನಲ್ ಕೋರ್ಟಿನಲ್ಲಿ ದಾವಾ ಮಾಡಿ ಆತನಿಗೆ ಕಠಿಣ ಶಿಕ್ಷೆಯಾದುದು ನೋಡಿ ಸಂತೋಷಿಸಿದ ಆತನ ಅತ್ತೆಯು ಮತ್ತು ಹೆಂಡತಿಯು ಚರ್ಯೆಗಳು ವಿಶ್ವಾಸಾಪೇಕ್ಷಿಯಾದುದೆಂಬದರಲ್ಲಿ ಸಂಶಯ ತೋರಲಿಲ್ಲವು

ಮಹಾರಾಜಶ್ರೀ ಸಾಹೇಬ್ ಮೂಜಕೂರ್ ೨೪ ನೇ ತಾರೀಖ್ ಮಂಗಳ ವಾರದ ದಿನ ಬೆಳಗ್ಗೆ ೧೧ ಘಂಟೆಯ ವೇಳೆಯಲ್ಲಿ ಮದ[redacted]ವರು ತಮ್ಮ ಯೆಡೀಕಾಂಗ್ ಅಂದರೆ ಮುಸಾಹೆಬರೊಡನೆ ನುಂಗಂಬಾಕ್ಕದಲ್ಲಿರುವ ವಿಶಾಖಪಟ್ಟಣದ ವಾಸಸ್ಥರಾದ ಶ್ರೀ ರಾಜಾಗೋಡೆ ನಾರಾಯಣ ಗಜಪತಿರಾವ್ ಸಿ. ಐ. ಇ ಯವರ ಭವನಕ್ಕೆ ದಯಮಾಡಿದ್ದರು. ಗವರ್ನರ ಆಗಮನಾರ್ಥ ಸದರೀ ಭವನವು ವಿಶೇಷತಃ ಅಲಂಕೃತವಾಗಿ ನೇತ್ರಾನಂದಕರವಾಗಿತ್ತು. ಗವರ್ನರವರ ಪ್ರವೇಶಕಾಲದಲ್ಲಿ ಸದರೀ ರಾಜಭವನದ ಮುಖದ್ವಾರದ್ವ " ಮದರಾಸ್ ಗವರ್ನರವರಿಗೆ ಸ್ವಾಗತವು " ಎಂಬ ವಚನ ಶೋಭಿತವಾಗಿ ಕಾಣಿಸಿಕೊಳ್ಳುತಲಿತ್ತು. ಅನಂತರ ಅವರು ಹಿಂದಿರುಗಿ ಹೋಗುವದರಲ್ಲಿಯೇ ತಕ್ಷಣವೇ ಆ ಸ್ಥಾನದಲ್ಲಿ ಆತನ ಶ್ರೀರಾಗಿಯೂ ಪ್ರಜಾರಕ್ಷಕರಾಗಿಯೂ ಇರುವ ಲಾರ್ಡ್ ವೆನ್‌ಲಾಕ್ ಯವರ ಪುನರ್ದರ್ಶನವು ಆಗಬೇಕೆಂಬ ಅಪೇಕ್ಷಾ ಪೂರ್ವಕವಾದ ವಿರೋಧಿ ವಾಕ್ಯ ಮುದ್ರಿತವಾಗಿ, ಗವರ್ನರವರಿಗೆ ಅತ್ಯಾನಂದವನ್ನುಂಟು ಮಾಡಿತಂತೆ.

ಇಂಡ್ಯಾ ರಾಜ್ಯದ ವೈಸ್‌ರಾಯ್ ಯವರಾದ ಲಾರ್ಡ್ ಲ್ಯಾನ್ಸ್‌ಡೌನ್ ಸಾಹೇಬರವರೂ, ಬಂಗಾಳೆ ದೇಶದ ಲೆಪ್ಟಿನೆಂಟ್ ಗವರ್ನರವರೂ ತಮ್ಮ ಕೆಲಸಗಳಿಗೆ ರಾಜೀನಾಮೆ ಕೊಡುವದಾಗಿ ಹರಡಿರುವ ವಿಷಯವಂ ಕುರಿತು ಬರೆಯುವ ಸಂದರ್ಭದೊಳು ಅಮೃತಬಜಾರ್ ಪತ್ರಿಕೆ ತಿಳಿಸುವ ಅಭಿಪ್ರಾಯವೇನೆಂದರೆ.—

ಇಂಡ್ಯಾದೇಶವನ್ನಾಳತಕ್ಕವರೊಬ್ಬರು, ಇಂಡಿಯಾ ಸ್ಟೇಟ್ ಸೆಕ್ರೆಟರಿ ಯವರನ್ನು ಈ ರೀತಿ ಬಲಾತ್ಕರಿಸುವುದಕ್ಕೆ ವಾಸ್ತವವಾಗಿ ಅವರೇ ಆಧಾರವಾಗಿ ಹೋಗುತ್ತಾರೆ ಇಂಡ್ಯಾ ದೇಶದೊಳು ಒಂದು ತರಹ ಭಿಕ್ಷುಕರುಂಟು. ಅವರು ಯಾರಾದರೂ ಭಿಕ್ಷೆ ಕೊಡದೆ ಹೋದರೆ ಜುಲುಂನಿಂದ ಅದು ಪಡೆಯುವದಕ್ಕಾಗಿ ತಮ್ಮ ಮೈಮೇಲೆ ಚೂರಿಯಿಂದ ಘಾಯಗಳು ಮಾಡಿಕೊಳ್ಳುವದುಂಟು ಅವರೇನು ಮಾಡುವ ವಾಡಿಕೆ ಯಂದರೆ, ಕೈಯಲ್ಲಿ ಒಂದು ಚೂರಿಯನ್ನು ಹಿಡಿದುಕೊಂಡು ಧನಿಕರಾದವರ ಮನೆಗಳ ಬಾಗಿಲುಗಳಲ್ಲಿ ಕುಳಿತು ಕೂಡಲೆ ತಮಗೆ ದುಡ್ಡು ಕೊಡಬೇಕೆಂದು ಕೇಳಿ ಅವರು ಕೊಡದೆ ಹೋದರೆ ಕೈಯಲ್ಲಿರುವ ಚೂರಿಯಿಂದ ತಮ್ಮ ಮೇಲೆ ಘಾಯ ಮಾಡಿಕೊಳ್ಳುವದುಂಟು. ರಾಜ್ಯವನ್ನಾಳುವಂತವರು ತಾವು ಮಾಡುವ ಕಾರ್ಯಗಳಿಗೆ ಮೇಲ್ಪಟ್ಟವರು ಸಹಾಯಕರಾಗಬೇಕೆಂದು ಕೇಳುವರು ಆ ರೀತಿ ಮಾಡದೆ ಹೋದರೆ ತಾವು ಕೆಲಸಕ್ಕೆ ರಾಜೀನಾಮೆ ಕೊಡುವದಾಗಿ ಹೇಳುವದು ಕೇವಲ ಹೇಯಕೃತ್ಯವಾಗಿರುವುದು.

## ನಮ್ಮ ಚಂದಾದಾರರಿಗೆ

ಇದರಿಂದ ನಾವು ಪ್ರಕಟಿಸಬಯಸುವದೇನೆಂದರೆ,—

ಕಳೆದ ತಿಂಗಳ ೨೬ ನೇ ತಾರೀಖು ೪ ಉಪಪತ್ರಿಕೆಯ ಮೂಲಕ, ಈ ನೋಟಿಸಿನೊಳು, ಈ ಪತ್ರಿಕೆಯ ಚಂದಾ ದರಗಳ ವಿಷಯದಲ್ಲಿ ನಾವು ಪ್ರಕಟಿಸಿರುವ ಹೊಸ ಯೇರ್ಪಾಡುಗಳು ನಮ್ಮ ಚಂದಾದಾರರ ಜ್ಞಾಪಕದೊಳಿರಬಹುದೆಂದು ನಂಬುತ್ತೇವೆ. ಅದನ್ನನುಸರಿಸಿ, ಅದರಿಂದ ಉಂಟುಮಾಡಲ್ಪಟ್ಟಿರುವ ಸೌಲಭ್ಯವು ತಾನೂ ಹೊಂದಿ, ಚಂದಾ ಮೊಬಲಗನ್ನು ಅಡ್ವಾನ್ಸ್ ಕಳುಹಿಸುವವರ ಮೂಲಕ ನಮಗೂ ಸಹಾಯ ಮಾಡಿದಂತವರಾಗಬೇಕೆಂದು ಕೋರುತ್ತೇವೆ ಈವಾರದೊಡನೆ ಸದರೀ ಉಪಪತ್ರಿಕೆಯಲ್ಲಿ ತಿಳಿಸಿರುವ ವಾಯಿದೆಯು ಪೂರ್ತಿಯಾಗುತಿದೆಯಾಗಿ ಚಂದಾದಾರರೆಲ್ಲರು ಈನೋಟೀಸಿಗೆ ಸಂಪೂರ್ಣ ಲಕ್ಷ್ಯವಿಧಾನ ಕೊಡಬೇಕೆಂದು ಕೋರುತ್ತೇವೆ. ಹೊಸದಾಗಿ ಚಂದಾದಾರರಾಗತಕ್ಕವರು ಚಂದಾ ಮೊಬಲಗನ್ನು ಖಂಡಿತವಾಗಿ ಮುಂಗಡ ಕಳುಹಿಸಿದ ಹೊರತು ಪತ್ರಿಕೆ ರವಾನಿಸಲ್ಪಡಲಾರದು.

೩೦—೧—೯೩. ಪ್ರೊಪ್ರೈಟರ್, ಕ. ಪ್ರ.

## LOCAL AND PROVINCIAL NEWS

### ಒಳದೇಶಮತ್ತು ತಾಲ್ಲೂಕ್‌ಜಾತಿವೃತ್ತಾಂತಗಳು.

ಶಿವಮೊಗ್ಗ ಕಾಲೇಜ್ ಅಸಿಸ್ಟೆಂಟ್ ಮಾಸ್ಟರಾದ ಮೆ|| ಎ. ರಾಮಸ್ವಾಮಯ್ಯ, ಬಿ ಎ ಯವರು, ೩ ನೇ ಗ್ರೇಡಿನಲ್ಲಿ ತಾತ್ಕಾಲಿಕವಾಗಿ, ಸ್ಕೂಲ್‌ಗಳ ಡೆಪ್ಯುಟಿ ಇನ್ಸ್‌ಪೆಕ್ಟರಾಗಿ ನೇಮಕರಾಗಲ್ಪಟ್ಟಿರುತ್ತಾರೆ.

ಚಿತ್ರದುರ್ಗ ಡಿಸ್ಟ್ರಿಕ್ಟ್ ಸ್ಕೂಲ್‌ಗಳ ಡೆಪ್ಯುಟಿ ಇನ್ಸ್‌ಪೆಕ್ಟರ್ ಮೆ|| ಕೆ. ರಂಗಪ್ಪನವರು, ವ್ಯತಿರಿಕ್ತ ಮೆ|| ಎಂ. ಸಿ. ಸುಬ್ಬರಾವ್, ಬಿ ಎ ಯವರ ಸ್ಥಾನದೊಳು ೨ ನೇ ಗ್ರೇಡಿನಲ್ಲಿ ಸ್ಕೂಲ್‌ಗಳ ಡೆಪ್ಯುಟಿ ಇನ್ಸ್‌ಪೆಕ್ಟರಾಗಿ ನೇಮಕರಾಗಲ್ಪಟ್ಟಿರುತ್ತಾರೆ.

ಈ ತಿಂಗಳ ೧೦ ನೇ ತಾರೀಖ್ ಮಧ್ಯಾಹ್ನ ತಪ್ಪಿರ್‍ಪ ತುಮಕೂರು ಡಿಸ್ಟ್ರಿಕ್ಟ್ ಟ್ರೆಜರೀ ಚಾರ್ಜನ್ನು ಪ್ರೊಬೇಷನರಿ ಅ. ಕಮಿಷನರ್ ಮೆ. ಲೆಯಿಂಗ್ ವಿಸಾರ್ಡ್ ಯೆಂಬವರಿಂದ ಅಸಿಸ್ಟೆಂಟ್ ಕಮಿಷನರ್ ಮೆ|| ಎ ರಾಘವೇಂದ್ರರಾಯರವರು ತೆಗದುಕೊಂಡಿರುತ್ತಾರೆ.

ಈ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಕರ್ನಲ್ ಪಿ. ಡಿ. ಹೆಂಡರ್‌ಸನ್ ಸಾಹೇಬರವರು ಬರುವ ತಿಂಗಳ ಆದಿಭಾಗದಲ್ಲಿ ಕೊಡಗುದೇಶವು ನೋಡಿಬರುವ ಉದ್ದೇಶದೊಡನೆ ಹೊರಡುವವರಾಗಿದಾರೆಂತಲೂ, ಅವರು ವಾಪಸ್ ಬರುವದಕ್ಕೆ ಎರಡುವಾರಗಳ ಕಾಲ ಹಿಡಿಯಬಹುದೆಂತಲೂ ಒಳದೇಶಪೈಸ್ಟೇಟ್‌ಪತ್ರಿಕೆಯ ಮೂಲಕ ತಿಳಿಯಬರುತಿದೆ.

ದಕ್ಷಿಣ ಮಹಾರಾಷ್ಟ್ರ ರೈಲ್ ರಸ್ತೆಯಲ್ಲಿ ಪ್ರಯಾಣಿಕರ ಗಾಡಿಯನ್ನು ಘಂಟೆಯೊಂದಕ್ಕೆ ೧೫ ಮೈಲಿಗಳಂತೆ ಬಿಡುತಲಿದ್ದರಷ್ಟೆ. ಕಳೆದ ವಾರದ ಮೊದಲು ಘಂಟೆಯೊಂದಕ್ಕೆ ೨೦ ಮೈಲ್‌ಗಳಂತೆ ಗಾಡಿಯ ವೇಗವು ಜಾಸ್ತೀ ಮಾಡಿರುವುದಾಗಿ ಕೇಳುತ್ತೇವೆ ಈ ಹೊಸ ಯೇರ್ಪಾಡು ಕೇವಲ ಆವಶ್ಯಕವಾದದ್ದು.

ಹಿಂದೆ ಈ ಶಹರ್ ಮ್ಯುನಿಸಿಪಲ್ ಆಫೀಸ್ ಮ್ಯಾನೇಜರಾಗಿಯೂ ಈಚೆಗೆ ಕೆಲವು ತಿಂಗಳ ಕಾಲದ ಮೊದಲು ಆಕ್ಟಿಂಗ್ ಇಲಾಖಾ ಸೂಪರಿಂಟೆಂಡೆಂಟರಾಗಿಯೂ ಇದ್ದ ಮೆ|| ಪಿ ಸ್ವಾಮಿ ದಾಸ್ ಪಿಳ್ಳೆಯವರು, ಸದರೀ ಬೋರ್ಡ್ ಪ್ರಸಿಡೆಂಟರವರ ಶಿಫಾರಸ್ಸಿನ ಮೇಲೆ, ಸಿಟಿ ಮ್ಯುನಿಸಿಪಲ್ ಕಾಂಡಾಯದ ಕಲೆಕ್ಟರಾಗಿ ಮಾರಳ ವೂ ನೇಮಕರಾಗಲ್ಪಟ್ಟಂತೆ ತಿಳಿಯಬರುತಿದೆ.

ಈ ಶಹರ್ ಮ್ಯುನಿಸಿಪಲ್ ವೈಸ್ ಪ್ರಸಿಡೆಂಟರಾಗಿ ಈಚೆಗೆ ನೇಮಕರಾಗಲ್ಪಟ್ಟ ಮೆ|| ಶ್ರೀ. ಶ್ರೀನಿವಾಸರಾಯರವರು ಮೈಸೂರು ಶಹರ್ ಮ್ಯುನಿಸಿಪಲ್ ವೈಸ್ ಪ್ರಸಿಡೆಂಟ್ ಕೆಲಸಕ್ಕೆ ಹಿಂತಿರುಗಿ ವರ್ಗಾಯಿಸಲ್ಪಡುವರೆಂದು ಅಧಿಕಾರಸ್ಥಾನದ ಮೂಲಕ ತನಗೆ ತಿಳಿಯ ಬರುವದಾಗಿ ಒಳದೇಶದ ಸ್ಪೆಕ್ಟೇಟರ್ ಪತ್ರಿಕೆಯು ಬಾತಮಿದಾರರೊಬ್ಬನು ಸದರೀಪತ್ರಿಕೆಗೆ ಬರೆದಿರುತ್ತಾನೆ. ಇದರ ಯಾಥಾರ್ಥ್ಯವು ಮುಂದೆ ತಿಳಿಯಬೇಕಾದದ್ದಾಗಿರುತಿದೆ

ಕ್ಯಾಂಟೋನ್ಮೆಂಟ್ ಡೆಪ್ಯುಟಿ ಅಮಲ್ದಾರರಾಗಿ ನೇಮಕರಾಗಲ್ಪಟ್ಟ ಮೆ|| ಕೆ ಡಿ ಕಾಮಣ್ಣನವರು ಬೇರೆ ಸ್ಥಳದಲ್ಲಿ ಕೆಲಸ ನೋಡುತಲಿರುವ ತನಕ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ಮೈಸೂರು ರೆವಿನ್ಯು ಸರ್ವೆ ಸೂಪರಿಂಟೆಂಡೆಂಟರ ಆಫೀಸ್ ಹೆಡ್‌ಕ್ಲರ್ಕ್ ಮೆ|| ಯರೆಹಳ್ಳಿ ಶ್ರೀನಿವಾಸ ಎಂಬವರು ಕ್ಯಾಂಟೋನ್ಮೆಂಟ್ ಡೆಪ್ಯುಟಿ ಅಮಲ್ದಾರರಾಗಿ ನೇಮಕರಾಗಲ್ಪಟ್ಟು ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಸಹ ಕೊಡಲ್ಪಟ್ಟಿರುತ್ತಾರೆ.

ಈ ತಿಂಗಳ ೧೯ ನೇ ತಾರೀಖ್ ಬೃಹಸ್ಪತಿವಾರದ ದಿನ ರಾತ್ರಿ ವೆಂಕಟಾಚಾರಿ ಯೆಂಬ ಬ್ರಾಹ್ಮಣನೊಬ್ಬನು ಮಾಲೂರು ರೈಲ್ವೇಸ್ಟೇಷನಿಂದ ಮೂರು ಕಬ್ಬಿಣದ ತಾವೆಳಿಗಳಂ ಕದ್ದ ಬಗ್ಗೆ ಇದನ ವಿಲಿಟರಿ ಸ್ಟೇಷನ್ ಯೆರಡನೇ ಮ್ಯಾಜಿಸ್ಟ್ರೇಟರಿಂದ ಅರ್ಧ ವರ್ಷ ಕಠಿನ ಸಜಾ ವಿಧಿಸಲ್ಪಟ್ಟಂತೆ ಕೇಳುತ್ತೇವೆ, ದುರಂತು ಈ ದುಷ್ಕೃತ್ಯವಂ ನಡೆಸಿ ಇಂತಾ ದಂಡನೆಗೆ ಗುರಿಯಾದ ವೇದಮೂರ್ತಿಗಳು ಶಾಸ್ತ್ರೀಯವರೆಂಬದು ಗೊತ್ತಾಗಲಿಲ್ಲವು.

ಕಳೆದ ಸಂವತ್ಸರದ ಆಖೈರ್ ಭಾಗದಲ್ಲಿ, ರಿಜಿಸ್ಟ್ರಾರ್ ಜನರಲ್‌ರವರು, ಶಿವನೂರ್, ಆನೇಕಲ್, ಅರಕಲಗೂಡು, ಚೆನ್ನಪಟ್ಟ, ಈ ನಾಲ್ಕು ಸ್ಥಳಗಳಲ್ಲಿ ರಿಜಿಸ್ಟ್ರೇಷನ್ ಕೆಲಸವು ಜಾಸ್ತೀಯಾಗಿ ತನ್ಮೂಲಕ ಹುಟ್ಟುವಳಿಯು ಅಭಿವೃದ್ಧಿಯಾಗುತ ಬಂದುದರಿಂದ ಸದರೀ ನಾಲ್ಕು ಪ್ರದೇಶಗಳಲ್ಲೂ ಸಬ್ ರಿಜಿಸ್ಟ್ರೀ ಆಫೀಸಗಳನ್ನಿಡಬೇಕೆಂದು ಸರ್ಕಾರ ಗವರ್ನಮೆಂಟಿಗೆ ಬರೆದಿದ್ದದು ಆಫೀಷಿಯೇಟಿಂಗ್ ದಿವಾನರವರು ಪರ್ಯಾಲೋಚಿಸಿ, ಸದ್ಯ ಶಿವನೂರು ಒಂದರಲ್ಲಿ ಮಾತ್ರ ಬರುವ ಮಾರ್ಚ್ ಗುರ್ರೀ ತಾರೀಖ್ ಮೊದಲು ಮೂರನೇ ಕ್ಲಾಸ್ ಸಬ್ ರಿಜಿಸ್ಟ್ರೀ ಆಫೀಸ್ ಒಂದನ್ನು ಇಡುವಂತೆ ಮಂಜೂರ್‍ಮಾಡಿದರೆಂದು ಕೇಳುತ್ತೇವೆ.

ಹವಾ ಹಿಂದಿನ ವಾರದಲ್ಲಿ ತಿಳಿಸಲ್ಪಟ್ಟಂತೆಯೇ ಇದೆ. ಜಿನಿಸಿಗಳ ದಾರಣೆಗಳೂ ಒಂದೇ ವಿಧವಾಗಿವೆ. ತೆರಿಗೆ ಕೊಡಬೇಕಾದ ಜಿನಿಸಿಗಳು ಬಂದ ಉತ್ತರ ಕ್ಷಣಕ್ಕೆ ಪದಸ್ಥಳಗಳಿಗೆ ಭಾರೀ ಮಾಡಲ್ಪಡುವದರಿಂದ ದಾರಣೆಗಳು ಇಳಿಯುವ ಪಕ್ಷ ಅವಕಾಶವಿಲ್ಲವಾಯಿತು. ಈ ಸಂವತ್ಸರದೊಳು, ಹಿಂದೆ ಯಾವಾಗಲು ಕೇಳದ ಒಂದು ವಿಶೇಷ ವೃತ್ತಾಂತವಂ ಈ ವಾರದೊಳು ನಮ್ಮ ಚಂದಾದಾರರಿಗೆ ತಿಳಿಸಲು ನಾವು ಬಹಳ ವಿಷಾದಿಸುತ್ತೇವೆ ಏನೆಂದರೆ, ಕೋಲಾರ ಡಿಸ್ಟ್ರಿಕ್ಟ್ ಮಾಲೂರು ತಾಲ್ಲೂಕಿಗೆ ಸೇರಿದ ಕೆಲವು ಗ್ರಾಮಗಳಲ್ಲಿ ಕುಯಿದು ಕಟ್ಟಿರುವ ರಾಗಿ ಮೆದೆಗಳಿಗೆ ಒಂದು ತರಹ ಹುಳ ತಗಲಿ ಕೆಟ್ಟು ಹೋದದಲ್ಲದೆ, ಸದರೀ ರಾಗಿಯನ್ನು ತಿಂದು ಕೆಲವರು ಪ್ರಾಣಗಳು ಸಹ ಕಳಕೊಂಡರೆಂದು ಕೇಳುತ್ತೇವೆ. ಇದು ಒಂದು ಪ್ರಜೆಗಳ ಭಾಗ್ಯ ವಿಶೇಷವೆಂದು ಭಾವಿಸುವೆವು.

ಸ್ತ್ರೀ ಸ್ವಾಭಿಮಾನಿಗಳಿಗೆಲ್ಲ ಇದರಿಂದ ತಿಳಿಸಲ್ಪಡುವ ಅಂಶವು ನಿರತಿಶಯಾನಂದವನ್ನುಂಟುಮಾಡತಕ್ಕದ್ದಾಗಿರುವದರಿಂದ ಅದು ನಾವು ಅವರ ಕೃಪಾರ್ಥ ಪ್ರಕಟಿಸುತ್ತೇವೇನೆಂದರೆ, ಕಳೆದ ತಿಂಗಳ ಆದಿಭಾಗದಲ್ಲಿ ನಡೆದ ಮೈಸೂರು ಲೋವರ್ ಸೆಕಂಡರಿ ಪರೀಕ್ಷೆಗೆ ಹೋಗಿದ್ದ ವಿದ್ಯಾರ್ಥಿನಿಯರ ಪೈಕಿ ಇದರಿಂದ ತಿಳಿಸಲ್ಪಡುವ ೩ ಮಂದಿ ಮಾತ್ರ ತೇರ್ಗಡೆಯಾದರೆಂದು ಗೆಜೆಟ್

ದ ಮೈಸೂರ್ ಗೆಜೆಟ್ಟಿನ ಮೂಲಕ ಸ್ಪಷ್ಟವಾಯಿತು, ಅವರುಗಳ್ಯಾರೆಂದರೆ,

| | | |
|---|---|---|
| ೧ ನೇತರಗತಿ-೪ ಎಸ್ ಸುಬ್ಬಮ್ಮ, | | ಮೈಸೂರ್ ಮಹಾರಾಣಿ ಸ್ಕೂಲ್. |
| ೨ನೇತರಗತಿ-೯ ಎಂ ತಿಪ್ಪಮ್ಮ | ಡಿಟೋ | ಅನುಸಾಲಾಬಾ. |
| ,, | ೨೨ ಪುಟ್ಟುಸುಬ್ಬಮ್ಮ | ಡಿಟೋ ,, |
| ,, | ೩೪ ಜೀವನಮ್ಮ | ಡಿಟೋ ,, |
| ,, | ೧೧೦ ಚಿನ್ನಮ್ಮ | ಮೈಸೂರ್ ಮಹಾರಾಣಿ ಸ್ಕೂಲ್. |
| ,, | ೧ ಎಂ ಶೇಷಮ್ಮ | ಡಿಟೋ ,, |
| ,, | ೯೩ ಕೆ. ಬಸಮ್ಮ | ತುಮಕೂರ್ ವೆಸ್ಲಿಯನ್ ಮಿಷನ್ ಗರಲ್‌ಸ್ಕೂಲ್ |

## LATEST TELEGRAMS.

### ತಂತಿ ವೃತ್ತಾಂತಸಂಗ್ರಹ.

ಹೈದರಾಬಾದ್, ೨೮ ನೇ ಜನವರಿ.—ಆಸ್ಟ್ರಿಯಾ ದೇಶದ ಯುವರಾಜರಾದ ಆರ್ಚ್ ಡ್ಯೂಕ್ ಫರ್ಡಿನಾಂಡ್ ಯವರು ಈದಿನ ಬೆಳಗ್ಗೆ ಹೈದರಾಬಾದಿಗೆ ಬಂದು ಸೇರಿದರು. ಕಳೆದ ಮೂರು ದಿನಗಳಿಂದ ಕಾಂಡೂರ್ ಎಂಬ ಪ್ರದೇಶದೊಳು ಬೇಟೆಯಾಡುತಿದ್ದರು. ನಿಜಾಮರವರು ತಮ್ಮ ಮಂತ್ರಿ ಮೊದಲಾದವರೊಡನೆಯೂ, ಅಲ್ಲಿನ ಬ್ರಿಟಿಷ್ ರೆಸಿಡೆಂಟರೂ ರೆಯಿಲ್ವೇ ಸ್ಟೇಷನಿಗೆ ಹೋಗಿ ಯುವರಾಜರವರನ್ನು ಉಚಿತ ಮರ್ಯಾದಾಪುರಸ್ಸರವಾಗಿ ಕರೆದುಕೊಂಡು ಬಂದರು. ಯುವರಾಜರವರು ಬಷೀರ್‌ಬಾಗ್ ಎಂಬ ತೋಟದಲ್ಲಿ ಇಳಿದಿರುತ್ತಾರೆ ಈ ದಿನ ಮಧ್ಯಾಹ್ನಕ್ಕೆ ನಿಜಾಮರವರು ಯುವರಾಜರವರ ದರ್ಶನಕ್ಕೆ ಹೋಗಿ ಬಂದರು. ಯುವರಾಜರವರು ಸಾಯಂಕಾಲದ ಮೇಲೆ ನಿಜಾಮರವರ ಬೇಟೆಯ ಬಗ್ಗೆ ಅರಮನೆಗೆ ಹೋಗಿ ಬಂದರು. ಈಸಂದರ್ಭದೊಳು ಯುವರಾಜರವರ ವಿನೋದಾರ್ಥ ಆನೆಗಳ ಮೆರವಣಿಗೆಯೊಂದು ನಡೆಯಿತು. ಈ ದಿನ ರಾತ್ರಿ ಯುವರಾಜರವರು ನಿಜಾಮರೊಡನೆ ಭೋಜನ ಮಾಡಿದರು. ಈ ಸಂದರ್ಭದಲ್ಲಿ ಇನ್ನು ಯೆಪ್ಪತ್ತು ಮಂದಿ ಭೋಜನಕ್ಕೆ ಬಂದಿದ್ದರು.

ಲಂಡನ್, ೨೮ ನೇ ಜನವರಿ.—ಈಗ ಈಜಿಪ್ಟ್ ದೇಶದೊಳಿರುವ ಬ್ರಿಟಿಷ್ ಸೇನೆಯನ್ನು ಸ್ವಲ್ಪ ಜಾಸ್ತೀ ಮಾಡಬೇಕೆಂದು ನಿರ್ಣಯಿಸಿರುವದಲ್ಲದೆ, ಆವಶ್ಯಕತೆ ಕಂಡು ಬರುವಲ್ಲಿ ಸದರೀ ಸೈನ್ಯವನ್ನು ಬಹಳವಾಗಿ ಜಾಸ್ತೀ ಮಾಡುವದಕ್ಕೆ ಸನ್ನಾಹಗಳು ಪೂರ್ತಿಯಾಗಿ ನಡೆದಿರುವಂತೆ ನಂಬಲ್ಪಟ್ಟಿದೆ. ಈ ಪ್ರಯತ್ನವು ಯೂರೋಪಿಯನ್ನರ ರಕ್ಷಣೆಯ ಬಗ್ಯೆ ಆವಶ್ಯಕವಾಗಿರುತಿದೆಯೆಂದು ಈಜಿಪ್ಟ್ ಅರಸರಾದ ಖುಡೈವ್ ಯವರಿಗೆ ತಿಳಿಸುವಂತೆ ಲಾರ್ಡ್ ಕ್ರೋಮರ್‌ಯವರಿಗೆ ಬರೆಯಲ್ಪಟ್ಟಿದೆ.

ಇಂಡ್ಯಾ ದೇಶದಿಂದ ಬರುವ ಸೇನೆಯನ್ನು ತಡೆದು ಬಿಡುವಂತೆ ಮಾಲ್ಟ ಮತ್ತು ಸೈಪ್ರಸ್ ದ್ವೀಪಗಳಲ್ಲಿನ ಅಧಿಕಾರಿಗಳಿಗೆ ಯುದ್ಧ ಇಲಾಖೆಯಿಂದ ತಂತಿ ವರ್ತಮಾನ ಕಳುಹಿಸಲ್ಪಟ್ಟು, ಪೋರ್ಟ್ ಸೆಡ್ ಎಂಬ ಪ್ರದೇಶದೊಳು, ೬೦ ಘಂಟೆಯ ಕಾಲದೊಳಗಾಗಿ ಬೇಕಾದಷ್ಟು ಸೈನ್ಯವನ್ನು ಜಹಜಿನಿಂದ ಇಳಿಸುವದಕ್ಕೆ ಸಾಧ್ಯವಾಗುವದೆಂದು ಜವಾಬ್ ಕೊಟ್ಟಿರುತ್ತಾರೆ.

ಕೈರೊ ಪಟ್ಟಣದೊಳು ಈಚೆಗೆ ನಡೆದ ವರಸ್ಪರ ಸವಾಧ ನವನ್ನು ತುರ್ಕಿ ಯವರು ಕೇಳಿ ಅನುಮೋದಿಸಿದರೆ ಹೊರ್ತು ಅವರಮೇಲೆ ಆಕ್ಷೇಪಣೆ ಮಾಡುವ ಯೋಚನೆ ಇಲ್ಲವು

ಲಂಡನ್, ೨೮ ನೇ ಜನವರಿ.—ಜಿಬ್ರಾಲ್ಟರಿಂದ ಮಾರಿಷಸ್ ಎಂಬ ದ್ವೀಪಕ್ಕೆ ಹೋಗುತಲಿದ್ದ ಬ್ಲ್ಯಾಕ್ ವಾಚ್ ಎಂಬ ೧ ನೇ ನಂಬರ್ ಪಟಾಳವು ಸಹ ಈಜಿಪ್ಟಿಗೆ ಹೋಗುವಂತೆ ಹುಕುಂ ಆಯಿತು. ಈಗ ಮಾಲ್ಟ ದ್ವೀಪದಲ್ಲಿರುವ ೨ ನೇ ನಂಬರ್ ಸೌತ್ ಲ್ಯಾಂಕಾಷೈರ್ ರಿಜಿಮೆಂಟಿ ಕೂಡಲೆ ಈಜಿಪ್ಟ್ ದೇಶಕ್ಕೆ ಹೋಗುವಂತೆ ಹುಕುಂ ಆಗಿದೆ. ಬರ್ಮ ದೇಶದಿಂದ ಇಂಗ್ಲಾಂಡಿಗೆ ಬರುತಲಿದ್ದ ಡೆವನ್‌ಷೈರ್ ರಿಜಿಮೆಂಟ್ ಇಸ್ಮೇಲಿಯಾ ಎಂಬ ಪ್ರದೇಶದೊಳು ಹಡಗು ಇಳಿಯುತಿದೆ

ಲಂಡನ್, ೨೮ ನೇ ಜನವರಿ —ಈಜಿಪ್ಟ್ ದೇಶದ ಪ್ರಕೃತ ಸ್ಥಿತಿಯಂ ಯೋಚಿಸಿ, ಗವರ್ನಮೆಂಟಿನವರು ಮಾಡಿದ ನಿರ್ಣಯವು ನ್ಯಾಯವಾದದ್ದೆಂದು ವೃತ್ತಾಂತ ಪತ್ರಿಕೆಗಳೆಲ್ಲವು ಏಕಕಂಠ್ಯದೊಡನೆ ಅನುಮೋದಿಸುತ್ತ ಪ್ರಸಕ್ತ ಪ್ರಯತ್ನಕ್ಕೆ ಖಂಡ್ಸನವರು ವಿನಾ ಬೇರೆ ಯಾರೂ ಕಾರಣರಲ್ಲವೆಂದು ಅಭಿಪ್ರಾಯ ಪಡುತಿವೆ

ಕೈರೊ ಪಟ್ಟಣಕ್ಕೆ ಅಪಾಯ ಪ್ರಾಪ್ತವಾಗುವ ಸಂದರ್ಭದಲ್ಲಿ ಪ್ರಜೆಗಳ ಪ್ರಾಣಮಾನ ಧನಗಳ ಸಂರಕ್ಷಣಾರ್ಥ ನಾವು ಪ್ರವರ್ತಿಸುವದಕ್ಕೆ ಬದ್ಧರಾಗಿರುತ್ತೇವೆ ಯೆಂತಲೂ, ಗ್ರೇಟಬ್ರಿಟನ್ ಸರ್ಕಾರದವರು, ಈಜಿಪ್ಟ್ ದೇಶೀಯರ ಮತ್ತು ಇತರ ದೊಡ್ಡ ಸಂಸ್ಥಾನಾಧಿಪತಿಗಳ ವಿಷಯದಲ್ಲಿ ಮಾಡಬೇಕಾದ ಕರ್ತವ್ಯವೆಂತಲೂ ಡಯಿಲೀನ್ಯೂಸ್ ಎಂಬ ಪತ್ರಿಕೆ ತಿಳಿಸುತಿದೆ.

ಲಂಡನ್, ೨೯ ನೇ ಜನವರಿ.—ಈಜಿಪ್ಟ್ ರಾಜ್ಯದ ವಿಷಯದಲ್ಲಿ ಗ್ರೇಟ್ ಬ್ರಿಟನ್ ಸರ್ಕಾರದವರು ಅವಲಂಬಿಸಿದ ಮಾರ್ಗವು ಯುಕ್ತವಾದದ್ದೆಂದು ಆಸ್ಟ್ರಿಯಾ ದೇಶದ ವೃತ್ತಾಂತ ಪತ್ರಿಕೆಗಳು ಅಂಗೀಕರಿಸುವದಲ್ಲದೆ, ಖಡೈವರವರೂ ತುರ್ಕಿ ಸುಲ್ತಾನರವರೂ ಇಂಗ್ಲಾಂಡ್ ಸಂಸ್ಥಾನಕ್ಕೆ ವಿರೋಧಿಗಳಾದವರ ಸಲಹೆಗೆ ಕಿವಿಕೊಟ್ಟ ಬಗ್ಗೆ ದೂಷಿಸುವವೆಂದು ಸಹ ತಿಳಿಸುತಿವೆ. ಬೇರ್ಲಿನುತೆಯೇ ಜರ್ಮನೀ ದೇಶದ ಪತ್ರಿಕೆಗಳು ಸಹ ಅಭಿಪ್ರಾಯಪಡುತಿವೆ

ಕಲ್ಕತ್ತಾ, ೨೯ ನೇ ಜನವರಿ.— ಬೆಳ್ಳಿ ನಾಣ್ಯಗಳು ಭಾವಾ ಹಾಕದಿರುವಂತೆ ಟಂಕಸಾಲೆಗಳಂ ಬಂದು ಮಾಡಬೇಕೆಂದು ಗವರ್ನಮೆಂಟಿನವರನ್ನು ಪ್ರಾರ್ಥಿಸುವದಕ್ಕಾಗಿ ಬರುವ ಶುಕ್ರವಾರದ ದಿನ ಒಂದು ದೊಡ್ಡ ಸಭೆ ಸೇರಬೇಕೆಂದು ನಿಷ್ಕರ್ಷೆಯಾಗಿದೆ.

ಗತವಾರದ ನಮ್ಮ ಪತ್ರಿಕೆಯಲ್ಲಿ ಬ್ರಾಹ್ಮಣರು ತಮ್ಮ ನಿತ್ಯ ಕರ್ಮಾನುಷ್ಠಾನಕ್ಕೆ ಲೋಪವಿಲ್ಲದಂತೆ ದೂರದೇಶಗಳಿಗೆ ಸಮುದ್ರಯಾನ ಮಾಡುವದಕ್ಕೆ ಅನುಕೂಲವಿರುವಂತೆ ಮುಂಬೈಯಲ್ಲಿ ಒಬ್ಬ ದೊಡ್ಡ ವರ್ತಕರು ಮಾಡಿರುವ ಏರ್ಪಾಡನ್ನನುಸರಿಸಿ ಬರುವ ಜೂನ್ ತಿಂಗಳಲ್ಲಿ ಅಮೇರಿಕಾ ಖಂಡದೊಳು ನಡೆಯುತಕ್ಕ ವಿವಿಧವಸ್ತು ಪ್ರದರ್ಶನಕ್ಕೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯಮೊದಲಾದವರಲ್ಲಿ ಅನೇಕಜನ ಹಿಂದೂ ದೊಡ್ಡಮನುಷ್ಯರು ಹೋಗಿಬರುವ ಸಂಭವವಿರುವಂತೆ ತಿಳಿಸಿ ಇರುತ್ತೇವೆಯಷ್ಟೆ ಆವಾರದಲ್ಲಿ ಈ ಸಮುದ್ರಯಾತ್ರೆಗೆ ಪೋಷಕರಾಗಿಯೂ, ಪ್ರೋತ್ಸಾಹಕರಾಗಿಯೂ ಏರ್ಪಟ್ಟಿರುವ ದೊಡ್ಡ ಮನುಷ್ಯರ ಹೆಸರುಗಳನ್ನು, ಈಮೇರಿಗೆ ಖಂಡಾಂತರಗಳಿಗೆ ಹಡಗೇರಿ ಹೋಗಿ ಸೇರುವುದು ಶಾಸ್ತ್ರತಃ ದೋಷಾವಹವಲ್ಲವೆಂದು ಅಭಿಪ್ರಾಯ ಕೊಟ್ಟಿರುವ ಉತ್ತರದೇಶದ ಪಂಡಿತರುಗಳ ಹೆಸರುಗಳನ್ನು ನಮ್ಮ ವಾಚಕರ ತಿಳುವಳಿಕೆಗಾಗಿ ಈ ಕೆಳಗೆ ವಿವರಿಸುತ್ತೇವೆ.

ಪೋಷಕರು.

ಆನರಬಲ್ ರಾಜಾ ವೇಲುಗೋಟಿ ಶ್ರೀರಾಜ ಸರ್. ಗೋಪಾಲ ಕೃಷ್ಣ ಯಾಚೇಂದ್ರ ಬಹದೂರ್, ಕೆ ಸಿ, ಐ ಇ.

ರಾಜಾ ಸರ್. ಸುರೇಂದ್ರ ಮೋಹನ ಠಾಗೂರ್, ಸಿ.ಐ ಇ, ಕೆ, ಟಿ, ಸಿ.

ಮಹಾ ಮಹೋಪಾಧ್ಯಾಯ ಪ್ರಧಾನ ಪಂಡಿತ ಮಹೇಶಚಂದ್ರ ನ್ಯಾಯರತ್ನ ಸಿ. ಐ. ಇ.

ಮಹಾರಾಜಾ ಕುಮಾರವಿನಯ ಕೃಷ್ಣದೇವಬಹದೂರ್.

ಆನರಬಲ್ ಪಿ. ಚೆಂತಲರಾವ್ ಪಂತುಲುಗಾರು ಸಿ, ಐ ಇ

ದಿವಾನ್ ಸರ್. ಕುಮಾರಪುರಂ ಶೇಷಾದ್ರಿ ಅಯ್ಯರ್, ಕೆ. ಸಿ. ಎಸ್, ಐ.

ದಿವಾನ್ ರಾಮದಾಸ್, ಸಿ. ಎಸ್. ಐ.

ದಿವಾನ್ ರಾಮರಾವ್, ಸಿ. ಐ. ಇ.

ಆನರಬಲ್ ರಂಛೋರಲಾಲ್ ಛೋಟಾಲಾಲ್ ಸಿ. ಐ. ಇ.

ದಿವಾನ್ ಮಧುರಾದಾಸ್ ಬಹದೂರ್.

ರಾಯಬೋಜ ನಾರಾಯಣಸಿಂಗ್ ಬಹದೂರ್.

ರಾವ್ ಬಹದೂರ್ ಕೈಲಾಸಚಂದ್ರ ಮುಖರ್ಜಿ.

ಪಂಡಿತರುಗಳು.

ಪ್ರಧಾನ ಪಂಡಿತ ಮಹಾಮಹೋಪಾಧ್ಯಾಯ ಮಹೇಶಚಂದ್ರ ನ್ಯಾಯರತ್ನ ಸಿ. ಐ. ಇ.

ನವದ್ವೀಪದ ಪಂಡಿತ ಮಧುಸೂದನ ಸ್ಮೃತಿರತ್ನ.

ಭಟ್ಪರಾವಿನ ಪಂಡಿತ ಮಧುಸೂದನ ಸ್ಮೃತಿರತ್ನ.

ನವದ್ವೀಪದ ಪಂಡಿತ ಕಾಮಾಖ್ಯಾನಾಥ ತರ್ಕವಾಗೀಶ.

ಕಲ್ಕತ್ತೆಯ ಪಂಡಿತ ಚಂದ್ರಶೇಖರ ಚೂಡಾಮಣಿ.

ಪಂಡಿತ ಶ್ರೀನಾರಾಯಣ ವಿದ್ಯಾರತ್ನ.

ಮಹಾರಾಣಿ ಸ್ವರ್ಣಮಯಿ ಸಭಾಪಂಡಿತ ಶಶಿಭೂಷಣ ಶರ್ಮ ಸಿ. ಐ. ಇ.

ಮಹಾರಾಜಾ ಬಹದೂರ್ ಸರ್. ಜ್ಯೋತೀಂದ್ರ ಮೋಹನ ಠಾಗೂರ್ ಸಿ. ಎಸ್. ಐ. ಯವರ ಸಭಾ ಪಂಡಿತ ಮಾರ್ಗಬದರಣತರ್ಕ ತೀರ್ಥ.

ಪಂಡಿತ ಕೇದಾರಪಾಲ ಸ್ಮೃತಿರತ್ನ.

,, ಮಹಾಮಹೋಪಾಧ್ಯಾಯದೀನಬಂಧುನ್ಯಾಯರತ್ನ

,, ಕಾಳಾಚಂದ್ರ ನ್ಯಾಯರತ್ನ.

,, ವಿಶ್ವಂಭರ ಚೂಡಾಮಣಿ.

,, ಶ್ರೀರಾಮ ನ್ಯಾಯಭೂಷಣ.

,, ಕಾಶೀನಾಥ ಸಾರ್ವಭೌಮ.

,, ದಕ್ಷಿಣಚರಣ ಸ್ಮೃತಿರತ್ನ.

,, ಜಗಚ್ಚಂದ್ರ ವಿದ್ಯಾರತ್ನ.

,, ಕಾಶೀಕಾಂತ ತರ್ಕಸಿದ್ಧಾಂತ.

,, ಶಶಿಭೂಷಣ ವಿದ್ಯಾರತ್ನ.

,, ಕಾಳಿಪ್ರಸಾದ ನ್ಯಾಯಾಲಂಕಾರ.

,, ಹರಮೋಹನ ವಿದ್ಯಾವಾಗೀಶ.

,, ಭಗವತೀಚರಣ ನ್ಯಾಯಪಂಚಾನನ.

,, ದೀನನಾಥ ನ್ಯಾಯಪಂಚಾನನ.

,, ಗೋವಿಂದಮೋಹನ ಶಿರೋಮಣಿ.

,, ನವೀನಚಂದ್ರ ಚೂಡಾಮಣಿ.

,, ನವೀನಚಂದ್ರ ತರ್ಕವಾಗೀಶ.

,, ಗೋಕುಲಕೃಷ್ಣ ಗೋಸ್ವಾಮಿ.

,, ಗೋಪಾಲಚಂದ್ರ ಶರ್ಮ.

,, ರಾಮಮೋಹನ ಭಟ್ಟಾಚಾರ್ಯ.

,, ಗೋಪಾಲಚಂದ್ರ ಶರ್ಮ.

,, ರುದ್ರನಾರಾಯಣ ಜ್ಯೋತಿರ್ಭೂಷಣ.

,, ಯೋಗೀಶ ಚಂದ್ರ ವಿದ್ಯಾರತ್ನ.

,, ಉಮಾಚರಣ ತರ್ಕಸಿದ್ಧಾಂತ.

,, ಹರನಾಥ ಸರಸ್ವತಿ.

,, ನೇಮಿಚಂದ್ರ ಭಟ್ಟಾಚಾರ್ಯ.

,, ಸೀತಾನಾಥ ಚೂಡಾಮಣಿ.

,, ಶಾರದ ಚರಣ ವಿದ್ಯಾರತ್ನ.

,, ನವೀನಚಂದ್ರ ಚೂಡಾಮಣಿ.

,, ಕೈಲಾಸಚಂದ್ರ ದೇವಶರ್ಮ.

,, ಕಾಳಿದಾಸ ವಿದ್ಯಾರತ್ನ.

,, ಗೋಪೀನಾಥ ಶಿರೋಮಣಿ.

,, ಕಾಳಿದಾಸ ನ್ಯಾಯರತ್ನ.

,, ಸುಧಾರಾಮ ವಾಚಸ್ಪತಿ.

,, ಯೋಗೀಂದ್ರನಾಥ ಸ್ಮೃತಿಭೂಷಣ

,, ವೇಣೀಮಾಧವ ತರ್ಕಾಲಂಕಾರ.

,, ಈಶ್ವರಚಂದ್ರ ವಿದ್ಯಾರತ್ನ.

,, ಪ್ರಸನ್ನ ಕುಮಾರ ನ್ಯಾಯರತ್ನ.

,, ರಾಮಸರ್ವೇಶ್ವರ ವಿದ್ಯಾರತ್ನ.

,, ಗಿರೀಶಚಂದ್ರ ವಿದ್ಯಾರತ್ನ.

,, ಯದುನಾಥ ತರ್ಕರತ್ನ.

,, ಶ್ರೀನಾಥ ತರ್ಕರತ್ನ.

,, ಗಂಗೇಶ್ವರ ವಿದ್ಯಾರತ್ನ

,, ರಾಮ ತರ್ಕಚೂಡಾಮಣಿ.

,, ಶರ್ಮದಾಸ ಶಿರೋಮಣಿ.

,, ಪಂಡಿತ ವೀರೇಶ್ವರ ವಿದ್ಯಾರತ್ನ

,, ಉಮಾಚರಣ ವಿದ್ಯಾರತ್ನ.

,, ಕಾಳೀಪ್ರಸನ್ನ ಶರ್ಮ

,, ಕೇದಾರಮೋಹನ ನ್ಯಾಯರತ್ನ.

,, ರಜನೀಕಾಂತ ವಿದ್ಯಾರತ್ನ.

,, ವೈಕುಂಠನಾಥ ಶರ್ಮ

,, ಅಕ್ಷಯ ಕುಮಾರ ಶರ್ಮ

,, ಕೇದಾರನಾಥ ಚೂಡಾಮಣಿ

,, ಮಹೇಂದ್ರನಾಥ ತರ್ಕಪಂಚಾನನ

,, ಶ್ರೀನಾಥ ತರ್ಕಾಲಂಕಾರ.

,, ದುರ್ಗಾಚರಣ ದೇವಶರ್ಮ.

,, ಯೋಗೀಶ್ವರ ಶರ್ಮ

,, ಹರಚರಣ ದೇವಶರ್ಮ.

,, ಉಮಾಚರಣ ತರ್ಕರತ್ನ.

,, ಕಾಂತಿಚರಣ ನ್ಯಾಯರತ್ನ

,, ಯಮುನಾಥ ಸಾರ್ವಭೌಮ.

,, ಈಶಾನಚಂದ್ರ ತರ್ಕರತ್ನ.

,, ರಾಕೂಪ ಶಿರೋಮಣಿ

,, ಮಧವಚಂದ್ರ ಸಾರ್ವಭೌಮ.

,, ರಾಮಮೋಹನ ಶಿರೋಮಣಿ

,, ಕಾಳೀಕೇಶ್ವರ ನ್ಯಾಯರತ್ನ.

,, ಚಂದ್ರಶೇಖರ ತರ್ಕತೀರ್ಥ.

,, ಕೇದಾರನಾಥ ಶರ್ಮ.

,, ತ್ರೈಲೋಕ್ಯನಾಥ ವಿದ್ಯಾಭೂಷಣ

,, ರಾಮಹರಿ ವಿದ್ಯಾಭೂಷಣ

,, ಶ್ಯಾಮಾಚರಣ ವಿದ್ಯಾರತ್ನ.

,, ಮಧುಸೂದನ ತರ್ಕರತ್ನ

,, ಉಮಾನಾಥ ಶಿರೋಮಣಿ.

,, ರಾಮನಾಥ ವಿದ್ಯಾಭೂಷಣ.

,, ಯಮುನಾಥ ತರ್ಕರತ್ನ

,, ಶ್ರೀನಾಥ ಶಿರೋಮಣಿ

,, ಶ್ರೀನಾಥ ತರ್ಕಶಿರೋಮಣಿ.

,, ಮಹಿಮಚಂದ್ರ ಶಿರೋಮಣಿ

,, ರಾಜಕೃಷ್ಣ ತರ್ಕರತ್ನ.

## SUMMARY OF NEWS.

### ವೃತ್ತಾಂತ ಸಂಗ್ರಹವು.

ಮಹಮದೀಯಳಾದ ಒಬ್ಬ ಹೆಂಗಸು ಈಚೆಗೆ ಕ್ರಿಸ್ತಮತವನ್ನು ಅವಲಂಬಿಸಿ ಮೇರಿ ಪ್ರಿನ್ಸ್ ಎಂಬ ಹೆಸರಿನಲ್ಲಿ ಮೈಮನ್‌ಸಿಂಗಿನ ನವಾಬ್ ಮಹಮ್ಮದ್ ಅಲಿಖಾನ್ ಬಹದ್ದೂರ್ ಎಂಬ ಸಹೋದರನಿಂದ ತನ್ನ ಪಾಲಿನ ಹಣವನ್ನು ಅಂದರೆ ೧೨ ಲಕ್ಷ ರೂಪಾಯಿಗಳನ್ನು ಕೊಡಿಸಿಕೊಡಬೇಕೆಂದು ಅಲಿಪುರದ ಸಬ್ ಜಡ್ಜಿ ಕೋರ್ಟಿನಲ್ಲಿ ದಾವೇ ತಂದಿರುತ್ತಾಳೆ.

ಪ್ರತಿ ವರುಷವೂ ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಉತ್ಪತ್ತಿಯಾಗುವ ಚಿನ್ನವು ೨೦೬ ಟನ್‌ಗಳೆಂತಲೂ, ಬೆಳ್ಳಿಯು ೧,೮೭೬ ಟನ್‌ಗಳೆಂತಲೂ, ಟೈಂಸ್ ಪತ್ರಿಕೆಯುತಿಳಿಸುತ್ತದೆ ಟನ್ ಒಂದಕ್ಕೆ ೧೧ ರೂಪಾಯಿನಂತೆ ಲೆಕ್ಕ ಚಿನ್ನದ ಬೆಲೆಯು ೫೯,೩೬,೧೯,೬೦೦ ರೂಪಾಯಿಯೂ, ಬೆಳ್ಳಿಯ ಬೆಲೆಯು ೩೩,೩೬,೧೯,೦೦೦ ರೂಪಾಯಿಯೂ ಆಗುತ್ತದೆ ವೈ ಪ.

ಇಲ್ಲಿನ ಸರ್ಟಿಫಿಕೇಟ್‌ದಾರ ಮ|| ರಾಘವಾಚಾರ್ಯರವರು ಚಿಕಾಗೋ ಪಟ್ಟಣದಲ್ಲಿ ನಡೆಯುವ ಪ್ರದರ್ಶನ ಮಹೋತ್ಸವವನ್ನು ನೋಡಿಕೊಂಡು ಬರುವದಕ್ಕೆ ಇಷ್ಟಪಟ್ಟಿರುವಾತೆಯೂ, ಆದರೆ ಅವರು ವಾಪಸು ಬಂದನಂತರ ಬ್ರಾಹ್ಮಣರಲ್ಲಿ ಯಾವ ದಂಗಡದವರಾದರೂ ಅವರನ್ನು ಸ್ವೀಕರಿಸಿಕೊಳ್ಳುವ ರಾವರೆ ಪ್ರಮಾಣ ಮಾಡುವವರಲ್ಲಿ ಸಿದ್ಧರಾಗಿರುವಂತೆಯೂ ಕೇಳಿದಂತೆ ಕೇಳುತ್ತೇವೆ.—ವೃ ಪ.

ಅಮೇರಿಕಾ ದೇಶದಿಂದ ಇಂಡಿಯಾ ರಾಜ್ಯಕ್ಕೆ ಬಂದು ಮಹಮ್ಮದೀಯ ಮತವನ್ನವಲಂಬಿಸಿರುವ ಮ|| ಅಲೆಗ್ಝಾಂಡರ್ ರಸ್ಸಲ್ ವೆಬ್‌ರವರು ಪುನಃ ಅಮೇರಿಕಾಕ್ಕೆ ಹೋಗಿ ಅಲ್ಲಿನ ಜನಗಳನ್ನು ಮಹಮ್ಮದೀಯರನ್ನಾಗಿ ತಿರುಗಿಸುವದಕ್ಕೆ ಅವರಿಗೆ ಸಹಾಯ ಮಾಡುವದಕ್ಕಾಗಿ ಬೊಂಬಾಯಿ ಹೈದರಾಬಾದುಗಳಲ್ಲಿರುವ ಮಹಮ್ಮದೀಯರೆಲ್ಲರೂ ಸೇರಿ ಅವರಿಗೆ ೯,೦೦೦ ರೂಪಾಯಿಗಳನ್ನು ಕೊಟ್ಟಿರುತ್ತಾರೆ —ವೃ ದ.

ಡಿಲ್ಲಿಯಲ್ಲಿ ದೊಡ್ಡ ನಗರ ಸಂಭಾವಿತನೊಬ್ಬನ ಅರಮನೆ ಪುರೋಹಿತರ ಮನೆಯಲ್ಲಿ ಕಳೆದ ಭಾನುವಾರ ರಾತ್ರಿಯ ಜ್ವಾಲೇಶ್ವರನು ಪ್ರಸನ್ನನಾಗಿ ಆ ಮನೆಯ ಕೆಲವು ಭಾಗಗಳನ್ನು ಆಹುತಿಗೊಂಡನು ಅಷ್ಟರಲ್ಲಿ ಆ ಮನೆಯ ಸುತ್ತುಮುತ್ತಲಿದ್ದ ಇರುವ ಚಿಕ್ಕರಮನೆ, ಮತ್ತು ಚಿಕ್ಕೇ ಅಂಗಡಿವರ ಮನೆಗಳ ಜನಗಳೂ ಮತ್ತು ಇತರರೂ ಸುಮಾರು ಅರ್ಧರಾತ್ರಿಯಲ್ಲಿ ಬಹಳ ಶ್ರಮಪಟ್ಟು ಯಜ್ಞೇಶ್ವರನ ಕೋಪವನ್ನು ಶಾಂತಪಡಿಸಿದರೆಂದು ಕೇಳುತ್ತೇವೆ

ಬರ್ಲಿನ್ ಪಟ್ಟಣದಲ್ಲಿ ಒಬ್ಬ ಪಕ್ಕಾ ಕಳ್ಳನು ತಾನು ಕದ್ದ ಪದಾರ್ಥಗಳನ್ನು ತನ್ನ ಸ್ವಾಧೀನ ಪಡಿಸಿಕೊಂಡ ತರುವಾಯ ಕಳವುನಡೆದ ವರ್ತಮಾನವನ್ನು ಸಾಂಗವಾಗಿ ವಿವರಿಸಲ್ಪಟ್ಟ ಒಂದು ಪತ್ರಿಕೆಗೆ ಕೊಡುತ್ತಿದ್ದನು ಅದಕ್ಕೆ ಇದರಿಂದಲೂ ಸ್ವಲ್ಪ ದುಡ್ಡು ಸಂಪಾದನೆಯಾಗುತ್ತಿತ್ತು. ಪೋಲೀಸಿನವರಿಗೆ ಕಳವಿನ ವರ್ತಮಾನ ತಿಳಿಯುವದಕ್ಕಿಂತ ಮುಂಚೆಯೇ ಇವನು ಪತ್ರಿಕೆಯಲ್ಲಿ ಬರೆಯುತ್ತಿದ್ದನಾದ್ದರಿಂದ ಒಂದಾನೊಂದುವೇಳೆ ಆ ಪತ್ರಿಕೆಯ ಎಡಿಟರವರಿಗೆ ಈ ತಮ್ಮ ಬಾತ್ಮೀದಾರನಲ್ಲಿ ಅನುಮಾನಪಟ್ಟು ಈ ಸಂಗತಿಯನ್ನು ಪೋಲೀಸಿನವರಿಗೆ ತಿಳಿಸಿದರು ಅವರು ಬಂದು ಈ ಬಾತ್ಮೀದಾರನನ್ನು ಹಿಡಿದು ತನಿಖೆ ಮಾಡಿದಾಗ ಇದ್ದ ಸಂಗತಿ ಬೆಳಕಿಗೆ ಬಂದುಬಿಟ್ಟಿತು. ಲೋಕದಲ್ಲಿ ಎಂಥೆಂಥಾ ಜನಗಳಿರುತ್ತಾರೆ!

ನಮ್ಮ ಜಿಲ್ಲೆಗೆ ಮುಖ್ಯಸ್ಥಾನವಾಗಿರುವ ಧಾರವಾಡದಲ್ಲಿ "ಸ್ವದೇಶಪ್ರಸಾರಕ" ಎಂಬ ಸಂಘದವರು ಒಂದಾಗಿ "ಗೋರಕ್ಷಕ" ಎಂಬ ಸಭೆಯನ್ನು ಇಂಗ್ಲಿಷ್ ವರ್ಷದ ಅಂತ್ಯದಲ್ಲಿ ಸ್ಥಾಪಿಸ ಮಾಡಿದರು. ಕಟುಕರಿಂದ ಪ್ರತಿ ದಿನವಲ್ಲೂ ಕೊಲ್ಲಲ್ಪಡುವ ಆಕಳುಗಳನ್ನು ಕಾಪಾಡುವದೇ ಈ ಸಭೆಯ ಮುಖ್ಯೋದ್ದೇಶವಾಗಿರುತಿದೆ ನ್ಯಾಯಿಗೂ ಶರೀರ ಪೋಷಣೆಗೂ ಕಾರಣಭೂತವಾಗಿರುವ ಗೋವುಗಳು ಹಿಂದೂಸ್ಥಾನದಲ್ಲಿ ಪ್ರತಿವರುಷದಲ್ಲೂ ಸಾವಿರಾರು ಕೊಲ್ಲಲ್ಪಡುತ್ತಿರುವದನ್ನು ನೋಡಿ ಆಯಾ ಸ್ಥಳಗಳಲ್ಲಿ ಆಕಳು ಪವಿತ್ರವಾದದೆಂದು ತಿಳಿದವರು ಈ ದುಷ್ಕೃತ್ಯವನ್ನು ಪೂರ್ಣವಾಗಿ ನಿಲ್ಲಿಸಿಬಿಡಬೇಕೆಂದು ನಿಶ್ಚಯಿಸಿ ಅಲ್ಲಲ್ಲಿ ಈ ಹೆಸರುಳ್ಳ ಸಭೆಗಳನ್ನು ಸ್ಥಾಪಿಸಿ, ಇದುವರಿವಿಗೆ, ಅಸಂಖ್ಯಾತಗಳಾದ ಗೋವುಗಳನ್ನು ಸಂರಕ್ಷಿಸಿದರು, ಮುಂದೂ ಕಾಪಾಡುವರು. ಇಂಥಾ ಉತ್ಕೃಷ್ಟವಾದ ಕಾರ್ಯದ ಅವಶ್ಯಕತೆ ದಿನೇದಿನೇ ವಿಶದವಾಗುತಿದೆ. ಹಿಂದೂಜನರಿಗೆ ಈ ಕಾರ್ಯವು ಆವಶ್ಯಕವಾಗಿರುವದರಿಂದ ನಮ್ಮ ದೇಶಬಾಂಧವರಾದವರು ತಮ್ಮತಮ್ಮ ಸ್ಥಾನಗಳಲ್ಲಿ ಈಸಭೆಗಳನ್ನು ನಡೆಸಿದರೆ ಚೆನ್ನಾಗಿರುವದು. ಹಾಗಿಲ್ಲದಿದ್ದರೆ ಧಾರವಾಡದಲ್ಲಿ ಸ್ಥಾಪಿಸಲ್ಪಟ್ಟಿರುವ ಸಮಾಜಕ್ಕೆ ತಮ್ಮತಮ್ಮ ಶಕ್ತ್ಯನುಗುಣವಾಗಿ ದ್ರವ್ಯ, ಧಾನ್ಯ, ತೃಣಮೊದಲಾದವುಗಳನ್ನು ಕಳುಹಿಸುವದರಿಂದ ಸಹಾಯ ಮಾಡುತಬರಬೇಕೆಂತಲೂ, ತಮ್ಮ ತಮ್ಮ ಸ್ಥಳಗಳಲ್ಲಿರತಕ್ಕ ಜನರಿಗೆ, ಕಟುಕರ ಕೈಗೆ ಆಕಳುಗಳು ಸಿಕ್ಕದಂತೆ ಮಾಡುವ ವಿಷಯದಲ್ಲಿ ಆಗಿಂದಾಗ್ಯೆ ಯೋಗ್ಯವಾದ ಉಪನ್ಯಾಸಗಳಂ ಮಾಡುವದರ ಮೂಲಕ ಜನರಂ ಪ್ರೇರಿಸಬೇಕೆಂತಲೂ ನಾವು ನಮ್ಮ ದೇಶ ಬಾಂಧವರಿಗೆಲ್ಲ ಸೂಚಿಸುತ್ತೇವೆ.-ಸತ್ಯವೃತ್ತ.

BANGALORE—Printed and published at the KARNATIC PRESS, No 40, HOSPITAL ROAD, PETTA.—1893

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA

## ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning.**

ಪ್ರಾಣಮವಿವಿಧಪ್ರವೃತ್ತ್ಯವಗಮಾರ್ಥಕರ್ಣಾಟಕಪ್ರಕಾಶಕನವರಾಭಿಧಾಪ್ರಥಿತಸಾಹಿತೀಕೋಬಿಕಾ॥ವ್ಯಗ್ರಾಂಕಹಿತಪಾಸರಣಿಹಿತಮುದ್ರಣಾಸಜ್ಜಸ್ವೈರ್ಭಾಸುವರಿಪೋಬ್ಬಾಡಿಕತಿಮಾನಸಂನುಡುದಂ॥

Vol. XX ] BANGALORE—MONDAY, FEBRUARY 6, 1893 [No. 5.

ಸಂಪುಟ ೨೦.] ಬೆಂಗಳೂರು:— ಸನ್ ೧೮೯೩ ನೇ ಇಸವಿ ಫೆಬ್ರವರಿ ೬ ನೇ ತಾರೀಖು ಸೋಮವಾರ. [ಸಂಖ್ಯೆ ೫.


### ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ,

| | ಸ್ಥಳದವರಿಗೆ. | ಪರಸ್ಥಳದವರಿಗೆ. |
|---|---|---|
| ವರ್ಷ ೧ಕ್ಕೆ ... | 6—0—0 | 8—0—0 |
| 6 ತಿಂಗಳಿಗೆ... | 3—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

| | ಸ್ಥಳದವರಿಗೆ. | ಪರಸ್ಥಳದವರಿಗೆ |
|---|---|---|
| ವರ್ಷ ೧ಕ್ಕೆ ... ... | 3—0—0 | 4—0—0 |
| 6 ತಿಂಗಳಿಗೆ .. ... | 1—12—0 | 2—8—0 |

ಈ ಪತ್ರಿಕೆಗೆ ದಯಮಾಡಿ ಕಳುಹಿದ ತಾರೀಖು ಮೊದಲು ಒಂದು ತಿಂಗಳೊಳಗಾಗಿ ಚಂದಾ ಮೊಬಲಗು ಕಳುಹಿಸುವಂತವರಿಗೆ ಮಾತ್ರನೆ ಅಡ್ವಾನ್ಸ್ ದರದಂತೆ ಪತ್ರಿಕೆ ಕಳುಹಿಸಲ್ಪಡುವದು. ಚಂದಾದಾರರು ಇಂಗ್ಲಿಷ್ ಒಂದನ್ನಾಗಲಿ ಕನ್ನಡ ಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು ಮೂರು ತಿಂಗಳಿಗಿಂತ ಕಡಮೆಯಾಗಿ ಚಂದಾ ಮೊಬಲಗು ಅಂಗೀಕರಿಸಲ್ಪಡಲಾರದು.

### ಪ್ರಕಟನೆಯ ರಿವಾಜ್.

ಮೊದಲನೆಯದಫಾ ಸಾಲ್ಗೆ ಒಂದಕ್ಕೆ ೦—೨—೦

ಎರಡನೆಯದಫಾ ಸಾಲ್ಗೆ ಒಂದಕ್ಕೆ ೦—೧—೦

ಷರ:—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟು ಸಲ ಪ್ರಕಟನೆ ಆಗಬೇಕೆಂದು ಖಾಯಮ್ ಮಾಡಿದಾಗಕ್ಕೆ ಸಾಲ್ಗೆ ಒಂದಕ್ಕೆ ರಿಯಾಯಿತಿ ಲೆಕ್ಕ ಮಾಡಲ್ಪಡುವದು ಈ ಪತ್ರಿಕೆಯಲ್ಲಿ ಖಾಯಮ್ ಮಾಡುವುದಕ್ಕೆ ಪ್ರಕಟನೆಗಳ ಕಳುಹಿಸುವವರು ಅವು ಎಷ್ಟಾವರ್ತಿ ಖಾಯಮ್ ಮಾಡಲ್ಪಡಬೇಕೋ ಆ ಅಂಶವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಪಕ್ಷಕ್ಕೆ ಅವರು ಸಹಾ ನಿಲ್ಲಿಸುವಂತೆ ಬರೆಯುವತನಕ ಅವು ಪ್ರಕಟಿಸುತ್ತಿದ್ದು ಹಾಗೆ ಎಷ್ಟಾವರ್ತಿ ಪ್ರಕಟಿಸಲ್ಪಟ್ಟವೋ ಅಷ್ಟಕ್ಕೆ ಮೇಲೆ ಕಂಡ ದರದಂತೆ ಕಿಮ್ಮತ್ತು ವಸೂಲ್ ಮಾಡಲ್ಪಡುವದು ಪ್ರಕಟನೆಯ ಜೊತೆಗೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಆ ದರಾ ಲೆಕ್ಕಾಚಾರದ ಮಧ್ಯಕ್ಕೆ ಒಪ್ಪುಂಟೆಯೊಳಗಾಗಿ ಕಳುಹಿಸಬೇಕು ಪ್ರಕಟನೆಯಲ್ಲಿ ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳಲ್ಲಿ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಲಾರೆವು ಕೃಪೆಮಾಡಿ ರುಜುಮಾಡಿದ ಹೆಸರಿಲ್ಲದ ಯಾವ ಕಾಗದವನ್ನು ಪ್ರಕಟಿಸಲಾರೆವು ಸಿರಿಕೆ ಟಿಕೆಟ್ಟಿಲ್ಲದ ಕಾಗದಗಳು ಅಂಗೀಕರಿಸಲ್ಪಡಲಾರದು.


*ADVERTISEMENTS.*

**NOTICE.**

VAIDYASARA SANGRAHA

A TREATISE ON THE PRINCIPLES OF

HINDU MEDICINE.

*Price including Postage Rs 5 0-0*

ವೈದ್ಯಸಾರ ಸಂಗ್ರಹ.

ಈ ಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಪ್ರತಿಗೆ ರುಜು ಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೆ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ಕಾಗದಗಳಿಗೆ ಸಿಗೆ ಕೊಡಲ್ಪಡಲಾರದು.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೇ ಹಾಸಲ್ ಡೆಲಿವರಿ ಪ್ರತಿ ಒಂದಕ್ಕೆ ರೂ 5—0—0

ಟಿ. ಬಿ. ವೆಂಕಟಾಚಾರ್.

ಬೆಂಗಳೂರ್, ಷಹರ್ ಆಸ್ಪತ್ರೆ ರೋಡ್ ೪೮ ನೆಂಬರ್.

### ನೋಟಿಸ್.

### ಬೆಂಗಳೂರು ಕರ್ಣಾಟಿಕ್ ಪ್ರೆಸ್.

೧೮೬೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ ಸಕಲವಿಧ ಕೆಲಸಗಳು ಸುಲಭಬಾಡಿಗೆಗೆ ತೀವ್ರವಾಗಿಯೂ ಶ್ಲಾಘ್ಯವಾಗಿಯೂ, ಮಾಡ್ಲಡುವವು.

ಇದರಲ್ಲಿ ಸದ್ಯ ಇಂಗ್ಲಿಷ್ ಕನ್ನಡ ಕೆಲಸ ಮಾತ್ರನೇ ನಡೆಯುತ್ತಿದೆ. ಇತರ ತಪಸೀಲ್‌ಗಳನ್ನು ಸದರೀ ಕಾರ್ಖಾನೆ ಮ್ಯಾನೇಜರ್ ಬಳಿ ಕೇಳಿದು ತಿಳಿದುಕೊಳ್ಳಬಹುದು.

### ನೋಟಿಸ್.

ನಂಜಪ್ಪನವರ ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು.

ಈಳೂರು ಉಪ್ಪಾರಪೇಟೆಯಲ್ಲಿರುವ ಮೇಲೆ ತಿಳಿಸಲ್ಪಟ್ಟವರಿಂದ ಮಾಡಲ್ಪಟ್ಟ ಇದರಡಿಯಲ್ಲಿ ಕಂಡ ಶ್ಲಾಘ್ಯಗಳಾದ ಔಷಧಗಳು ಬೇಕಾದವರಿಗೆ ತಯಾರಾಗಿರುತ್ತದೆಯಾಗಿ ಬೇಕಾದವರು ಅವರಿಗೆ ಬರೆದು ತರಿಸಿಕೊಳ್ಳಬಹುದು. ( ) ಔಷಧಗಳು ಶಾಸ್ತ್ರೋಕ್ತವಾದ ಕೆಲವು ಸಿದ್ಧಕ್ರಿಯೆಗಳ ಮೇಲೆ ತಯಾರಾದವಾಗಿಯೂ, ಅನುಭವ ಸಿದ್ಧವಾಗಿಯೂ, ಅನೇಕರಿಗೆ ಗುಣವನ್ನು ಉಂಟುಮಾಡಿದವಾಗಿಯೂ ಇರುತ್ತವೆ. ತಮ್ಮ ರೋಗಸ್ವರೂಪವನ್ನೂ ಔಷಧದಾಯೂ ಪಥ್ಯಾದಿಗಳ ಕ್ರಮವನ್ನೂ ಸದರೀ ಪಂಡಿತರಿಗೆ ಬರೆದು ತಿಳಿದುಕೊಳ್ಳಬಹುದು. ಹಾಗೆ ಕಾಗದ ಬರೆಯತಕ್ಕವರು ಅಪೇಕ್ಷಿಸಲ್ಪಡುವ ಪ್ರತ್ಯುತ್ತರಕ್ಕೆ ಸಹ ತಮ್ಮ ಕಾಗದದಲ್ಲಿ ಅರ್ಧಾಣೆ ಲೇಬಲ್ ಮಾಲ್ಪತ್ತೆ ಮಾಡಿ ಕಳುಹಿಸಬೇಕು. ವ್ಯಾಲ್ಯೂಪೇಯಬಲ್ ಮೂಲಕ ಸಹ ಪದಾರ್ಥಗಳು ಕಳುಹಿಸಲ್ಪಡುವವು. ಕಳುಹಿಸಲ್ಪಟ್ಟ ಪದಾರ್ಥಗಳನ್ನು ತರಿಸಾದು ನಿರಾಕರಿಸಿದರೆ ಆ ಬಾಬತು ವ್ಯಾಲ್ಯೂ ಪೇಯಬಲ್ ಕಮಿಷನ್ ಅವರೇ ಕೊಡಬೇಕಾಗುವುದು

ತೈಲ.—ಮಹಾತಕ್ರತೈಲ, ಇದು ಶಿರೋವಾಯುಗಳಿಗೂ, ಕಾರಕ ಸಂಬಂಧಗಳಾದ ಮತ್ತು ವಾತಸಂಬಂಧಗಳಾದ ಸಂಧಿಬಂಧಗಳಿಗೂ, ಮೂಗಿನಲ್ಲಿ ರಕ್ತ ಬೀಳತಕ್ಕದ್ದಕ್ಕೂ, ಅನೇಕವಿಧ ಶರೀರಜನ್ಯವಾದ ವೇದನೆಗಳಿಗೂ ಬಹಳ ಶ್ಲಾಘ್ಯವಾದ ನಿವಾರಕವಾಗುದಾಗಿದೆ. ಸಣ್ಣ ಸೀಸೆ ಒಂದಕ್ಕೆ ೧ ರೂ. ದೊಡ್ಡ ಸೀಸೆ ೧ಕ್ಕೆ ೫ ರೂ.

ಜ್ವರದ ಗುಳಿಗೆಗಳು.—ಇದು ಚಾತುರ್ಥಿಕಾದಿ ಸಕಲವಿಧ ಜ್ವರಗಳಿಗೂ ಪ್ರಸಿದ್ಧ ಔಷಧವಾಗಿರುತ್ತದೆ. ರೂ. ೧ಕ್ಕೆ ೨೦ ಗುಳಿಗೆಗಳು,

ಮೇಹ ರೋಗ ನಿವಾರಕವಾದ ಎಣ್ಣೆ.—ಈ ಎಣ್ಣೆಯು ೨೦ ನಿಮಿಷತನಕ ಬಿಸಿಮಾಡುತ್ತಾ ಹೊಟ್ಟೆಗೆ ತೆಗೆದುಕೊಂಡರ ಸಕಲವಿಧ ಮೇಹಗಳೂ, ಪಡಗಳೂ, ಸ್ತ್ರೀಯರಿಗುಂಟಾಗುವ ಉಷ್ಣ ಸಂಬಂಧವಾದ ರೋಗಗಳೂ, ನಿವಾರಣೆಯಾಗುವವು, ಸೀಸೆ ೧ಕ್ಕೆ ೨—೮—೦

ದಂತರೋಗಕ್ಕೆ ಚೂರ್ಣ.—ಹುಳುಕುಹಲ್ಲುಗಳು, ಸಡಲಬಿದ್ದಿರುವ ಹಲ್ಲುಗಳು, ಇವುಗಳನ್ನು ಪಾಟಮಾಡಿ ಭದ್ರಪಡಿಸಿ ಕಾಂತಿಯನ್ನುಂಟುಮಾಡುವುದು, ಇದು ಮೂರುವಿಧವು. ಪೆಟ್ಟಿಗೆ ೧ಕ್ಕೆ ೧ ರೂ. ಇದು ೨೦ ದಿನಗಳಿಗೆ ಆಗುವುದು.

ನೇತ್ರರೋಗಕ್ಕೆ ಮಾತ್ರೆ—ಪೊರೆಗಳು, ದೃಷ್ಟಿಮಾಂದ್ಯ, ಕಣ್ಣುರಿ, ತಲೆನೋವು, ಕಣ್ಣಲ್ಲಿ ನೀರು ಸುರಿಯುವುದು, ಚಳುಕುಮೊದಲಾದ ಸಕಲರೋಗಗಳಿಗೂ ಪ್ರಶಸ್ತವಾದುವು. ಮೂಲಿಕಾ ಪ್ರಯೋಗದಿಂದ ಮಾಡಲ್ಪಟ್ಟ ಉತ್ತಮವಾದ ಮಾತ್ರೆ ೧ಕ್ಕೆ ೪ ಆಣೆ. ಇದು ೪೦ ದಿನಗಳವರೆಗೆ ಬಂದು ಹೊತ್ತು ಹಾಕಿಕೊಳ್ಳಬಹುದು,

ಮೂಲವ್ಯಾಧಿಗೆ—ಇದು ಉಂಗರವು ತಯಾರಾಗಿದೆ. ಇದರಿಂದ ದೀರ್ಘಕಾಲಿಕವಾದ ಮೂಲರೋಗಗಳೆಲ್ಲವು ವಾಸಿಯಾಗುತ್ತವೆ. ಉಂಗರ ೧ಕ್ಕೆ ೧ ರೂಪಾಯಿ, ಇದನ್ನು ಬೆರಳಿನಲ್ಲಿ ನಿಯತವಾಗಿ ಧರಿಸಿಕೊಂಡಿರತಕ್ಕದ್ದು, ಇದರ ಸ್ಪರ್ಶದಿಂ ಮೂಲರೋಗವು ನಿವೃತ್ತಿಯಾಗುತ್ತದೆ.

ಭಸ್ಮಗಳು.—ತಾಂಬ್ರ, ರಜತ, ವಂಗ, ಸೀಸ, ಪ್ರವಾಳ, ಶೃಂಗ, ಅಭ್ರಕ, ಲೋಹ, ಕಾಂತ ವಗೈರೆ ಭಸ್ಮಗಳೂ ಸಿಂಧೂರಗಳೂ ಸಿದ್ಧ ಕ್ರಿಯೆಯಿಂದ ತಯಾರಾದವು. ಇವು ಪಾಂಡು ಕಾಮಿಲಾಕ್ಷಯಾದಿ ಸಕಲ ಪ್ರಬಲ ರೋಗಗಳಿಗೂ ಪ್ರಶಸ್ತವಾದವಾಗಿರುತ್ತವೆ. ರೋಗ ಸ್ವರೂಪವನ್ನು ಗುಣವಾಗಿ ಔಷಧವು ಕೊಡಲ್ಪಡುವದಾದುದರಿಂದ ಅದರಮೇಲೆ ಕ್ರಯವು ನಿಷ್ಕರ್ಷಿಸಲ್ಪಡಬೇಕಾಗಿದೆ.

ಲೇಹ್ಯಗಳು.—ಮಹಾಬಿಲ್ವಾದಿ, ಶುಂಠ್ಯಾದಿ, ಕೂಷ್ಮಾಂಡ ವಗೈರೆ ಧಾತು ವೃದ್ಧಿಕರಗಳಾದ ಲೇಹ್ಯಗಳು ಸಿದ್ಧವಾಗಿವೆ, ಸೇರು ೧ಕ್ಕೆ ೩ ರೂ.

ಷರಬತ್ತುಗಳು—ಗಂಧ, ಬಾಳೇಹಣ್ಣು, ದಾಳಿಂಬದ ಹಣ್ಣು, ಅಂಜೂರು, ದ್ರಾಕ್ಷೇಹಣ್ಣು, ಸೇಬು ಮೊದಲಾದ ಷರಬತ್ತುಗಳು ತಯಾರಾಗಿವೆ ಇವು ಸೀಸೆ ೧ಕ್ಕೆ ೨ ರೂ.

ಚೂರ್ಣಗಳು.—ಮಹಾ ಯೋಗರಾಜಚೂರ್ಣ, ವಡವಾಗ್ನಿ ಚೂರ್ಣ, ತಾಳೀಸಾದಿ ವಗೈರೆ ಚೂರ್ಣಗಳು ಅಜೀರ್ಣ ಪಿತ್ತ ವಾತೋದ್ರವಗಳಿಗೆ ಶಾಮಕವಾದವು. ಇದು ೪೦ ದಿನಗಳಿಗೆ ತೆಗೆದುಕೊಳ್ಳುವುದು. ಡಬ್ಬಿ ೧ಕ್ಕೆ ೧ ರೂ.

### ನೋಟಿಸ್.

ಗಣೇಶ ರಾಮಚಂದ್ರ ಶರ್ಮ ಮತ್ತು ಕಂಪನಿ.

ಕಮಿಷನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯೊಡನೆ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ತಕ್ಕ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರಹ ಔಷಧಗಳು, ಪುಸ್ತಕಗಳು, ಮುತ್ತುಗಳು, ಚಿಪ್ಪಿ ಮುತ್ತುಗಳು, ಘಡಿಯಾರಗಳು, ವಾಚ್‌ಗಳು, ಟೈಂಪೀಸ್‌ಗಳು, ಕಾಟ್ರೇಜ್ ಕಾಗದಗಳು, ಪೆಟ್ಟಿಗೆಗಳು, ಜರತಾರಿ ಕಣಗಳು, ಚಂದ್ರಕಾಂತ ಶಿಲೆಯ ಕನ್ನಡಕಗಳು, ಹುಡುಗರಿಗೆ ತಕ್ಕ ಜರತಾರಿ ಉಡುಪುಗಳು, ಜರತಾರಿ ಟೋಪಿಗಳು, ಆಫೀಸ್ ಕುರ್ಚಿಗಳು, ಷರ್ಟುಗಳು, ಅತ್ತರುಗಳು, ಅತ್ಯುತ್ತಮಗಳಾದ ರತ್ನಗಳು, ಬಂಗಾರದಿಂದ ಕಟ್ಟಲ್ಪಟ್ಟ ಉಂಗುರಗಳು, ಪ್ಲೇಟ್ ಪಾತ್ರೆಗಳು, ಜರ್ಮನ್ ಸಿಲ್ವರ್ ಪಾತ್ರೆಗಳು, ಕೇಸರಿ, ಕಸ್ತೂರಿ ವಗೈರೆ ಇತರ ಸಾಮಾನುಗಳು

ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಲೇಬಲ್ ಕಳುಹಿಸಿದ ಹೊರತು ಜವಾಬ್ ದೊರೆಯಲಾರದು.

ವಿಳಾಸ.—ಗಣೇಶ ರಾಮಚಂದ್ರ ಶರ್ಮ,
ಮತ್ತು ಕಂಪನಿ, ಕಮಿಷನ್ ಏಜಂಟ್ಸ್,
ಜಾಕೂಬ್ ದ್ಯಾರ್, ಮಾರ್ಕೆಟ್ ಪೋಸ್ಟ್, ಮುಂಬೈ

### ನೋಟಿಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

### ಸಂಸ್ಕೃತ ಗ್ರಂಥಗಳು.

| ಹಾಸಲ್ ಸಹಿ | | ರೂ | ಆ | ಪೈ |
|---|---|---|---|---|
| ಸಟೀಕಾ ವೈದ್ಯಸಾರ ಸಂಗ್ರಹ | ... | ೫ | ೦ | ೦ |
| ,, ಶಿವಗೀತೆ | ... | ೧ | ೧ | ೦ |
| ,, ಶಿವಾನಂದಲಹರಿ | ... | ೦ | ೮ | ೦ |
| ,, ಶಾಲಾಮೃತ | ... | ೧ | ೦ | ೦ |
| ,, ಟೀ॥ ಬಾಲರಾಮಾಯಣ .. | | ೦ | ೩ | ೦ |
| ,, ಟೀ॥ ಗೋಪಿಕಾ ಗೀತೆ ... | | ೦ | ೧ | ೦ |
| ,, ಟೀ॥ ಚಾಣಕ್ಯನೀತಿ (ಸುಭಾಷಿತ) | | ೦ | ೪ | ೦ |
| ವಿಷ್ಣುಸಹಸ್ರನಾಮ ವಗೈರೆ | ... | ೦ | ೩ | ೦ |
| ಸೂರ್ಯಸಹಸ್ರನಾಮ | ... | ೦ | ೨ | ೦ |
| ಕೃಷ್ಣಕರ್ಣಾಮೃತ | ... | ೦ | ೨ | ೦ |
| ತ್ರಿಕಾಂಡ ಅಮರ ಮೂಲ | ... | ೦ | ೨ | ೦ |
| ೧ ಕಾಂಡ | ... | ೦ | ೧ | ೦ |

### ಕನ್ನಡ ಗ್ರಂಥಗಳು.

| | | | | |
|---|---|---|---|---|
| ಕ.ಕನ್ನಡ ತಿ ಅವ್ವಲ್ | ... | ೩ | ೦ | ೬ |
| ದಿಟೋ ದುವ್ವಂ | ... | ೧ | ೨ | ೦ |
| ವೃಷಭೇಂದ್ರವಿಜಯ | ... | ೧ | ೮ | ೦ |
| ಪಂಚತಂತ್ರ ಚಾಲೀಲೆ | ... | ೦ | ೬ | ೦ |
| ಹನುಮದ್ವಿಲಾಸ | ... | ೦ | ೬ | ೦ |
| ಕಾಳೀಯಮರ್ದನ | ... | ೦ | ೨ | ೦ |
| ಸುಧನ್ವಾಪರಿಣಯ | ... | ೦ | ೨ | ೦ |
| ಶರೀರೋಪಚರಣೆಯು | ... | ೦ | ೨ | ೬ |
| ಸುದಾಮಚರಿತ್ರೆ | ... | ೦ | ೧ | ೦ |
| ಮೈರಾವಣ ಚರಿತ್ರೆ | ... | ೦ | ೧ | ೦ |
| ಬಾಲಗ್ರಹ ಚಿಕಿತ್ಸೆ | ... | ೦ | ೦ | ೦ |
| ಮಹಮ್ಮದ್ ಲಾ | .. | ೦ | ೧೦ | ೦ |
| ಭ್ರಾಂತಿವಿಲಾಸ | .. | ೦ | ೧೨ | ೦ |

### ಪ್ರಕಟನೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ:—

ನಮ್ಮ ಮೊಮ್ಮಗನಾದ, ಕಾಳಪ್ಪನು ನಮ್ಮಗಳ ಪ್ರೋಪರ್ಟಿಯಲ್ಲಿ ಇಲ್ಲದೆಯೂ ಮತ್ತು ಹಠ ಕೋಟಿ ತಪ್ಪಿಯೂ, ಪುಂಡ ಕೆಲಸಗಳು ಮಾಡಿ ಮನಸ್ವೀ ಇರುತ್ತಾನಾಗಿ ಅವನು ಮಾಡುವ ದೇಣೆಗಳಿಗೆ ನಾವುಗಳಾಗಲಿ ಅಥವಾ ನಮ್ಮ ಸ್ವತ್ತುಗಳಾಗಲಿ, ಜವಾಬ್ದಾರಿಯಾಗಲು ಕಾರಣವಿಲ್ಲ, ಇದರ ಮೇಲೆ ಸಾಲಾ ವಗೈರೆ ಅವನಿಗೆ ಯಾರಾದರು ಕೊಟ್ಟಲ್ಲಿ ಅದರಿಂದ ಉಂಟಾಗುವ ನಷ್ಟಗಳಿಗೆಲ್ಲಾ ಅವನ ಲೇಣಿದಾರರೇ ಗುರಿಯಾಗುತ್ತಾರೆ. ಈ ವಿವರ ಸಮಸ್ತರಿಗೂ ತಿಳಿಯಲಿಕೆ ಬಗ್ಗೆ ಇದರಿಂದ ದೃಢೀಕರಿಸಿರುತ್ತೇ.

ತಾ॥ ೨೬ ನೇ ಜನವರಿ ೧೮೯೩ ಬೆಂಗಳೂರು. } ದಾಂಡಿ ಮರಿಯಪ್ಪ, ದೊಡ್ಡ ಲಿಂಗಪ್ಪ

### ಕೊಡಗು ಫಾರೆಸ್ಟ್ ಇಲಾಖಾ.

ನೋಟಿಸ್.

೧೮೯೩ ನೇ ಇಸವಿ ಜನವರಿ ತಾರೀಖು ೨೫.

ಇದರಡಿ ನಮೂದಿಸಿದ ಸಾಮಾನುಗಳು ಹುಣಸೂರು ತಿಪ್ಪೋಹಳ್ಳಿ ಸನ್ ೧೮೯೩ ನೇ ಇಸವಿ ಫೆಬ್ರವರಿ ತಾರೀಖ್ ೧೯ ರಲ್ಲು ಹರಾಜ್ ಹಾಕಲ್ಪಡುತ್ತವೆ.

| | | | |
|---|---|---|---|
| ತ್ಯಾಗದ ತೊಲೆಗಳು, | ೧೦೦ | ೩೮೦೦ | ಅಡಿ, |
| ಹೊನ್ನೆ ವಗೈರೆ. | ೪೬೨ | ೯೩೦೦ | ಅಡಿ, |

ಷರತು:—೧೮೮೯ ನೇ ಇಸವಿ ಡಿಸೆಂಬರ್ ತಾರೀಖ್ ೧೯ ನಂಬರ್ ೫೩ ರ ಚೀಫ್ ಕಮಿಷನರ್ ಸಾಹೇಬರವರ ನೋಟಿಫಿಕೇಷನ್ ಮೇರೆ ಮರದ ಕ್ರಯದ ವೈಕಿ ಶೇಕಡ ಹತ್ತರಷ್ಟು ಮೊಬಲಗನ್ನು ಹರಾಜು ಕಾಲದಲ್ಲಿ ಪಾವತಿ ಮಾಡಿ ಬಾಕಿ ಮೊಬಲಗನ್ನು ಹರಾಜು ತಾರೀಖ್ ಲಾಗಾಯತು ೩೦ ದಿನಗಳೊಳಗೆ ಪಾವತಿ ಮಾಡತಕ್ಕದ್ದು.

G. H. FOSTER,
ಡಿಪ್ಟಿ ಕನ್ಸರ್ವೇಟರ್,
ಕೊಡಗು ಫಾರೆಸ್ಟ್.

### ನಮ್ಮ ಚಂದಾದಾರರಿಗೆ

ಇದರಿಂದ ನಾವುಕೃತಜ್ಞತೆ ಪಡಿಸುವದೇನೆಂದರೆ,—

ಕಳೆದ ತಿಂಗಳ ೨೩ ನೇ ತಾರೀಖಿನಲ್ಲಿ ಉಪಪತ್ರಿಕೆಯ ಮೂಲಕ, ಈ ನೋಟಿಸಿನೊಳು, ಈ ಪತ್ರಿಕೆಯ ಚಂದಾ ದರಗಳ ವಿಷಯದಲ್ಲಿ ನಾವು ಪ್ರಕಟಿಸಿರುವ ಹೊಸ ಯೋಜನೆಗಳು ನಮ್ಮ ಚಂದಾದಾರರಿಗೆಲ್ಲಾ ಪಸಂದಾಗಬಹುದೆಂದು ನಂಬುತ್ತೇವೆ. ಅದನ್ನನುಸರಿಸಿ, ಅದರಿಂದ ಉಂಟುಮಾಡಲ್ಪಟ್ಟಿರುವ ಸೌಲಭ್ಯವು ತಾವೂ ಹೊಂದಿ, ಚಂದಾ ಮೊಬಲಗನ್ನು ಅಡ್ವಾನ್ಸ್ ಕಳುಹಿಸುವದರ ಮೂಲಕ ನಮಗೂ ಸಹಾಯ ಮಾಡಿದಂತವರಾಗಬೇಕೆಂದು ಕೋರುತ್ತೇವೆ. ಆವಾರದೊಡನೆ ಸದರೀ ಉಪಪತ್ರಿಕೆಯಲ್ಲಿ ತಿಳಿಸಿರುವ ವಾಯಿದೆಯು ಪೂರ್ತಿಯಾಗುತಿದೆಯಾಗಿ ಚಂದಾದಾರರೆಲ್ಲರು ಅನುಕೂಲಿಸಿಗೆ ಸುಪ್ರಭಾತ ಪ್ರಥಾನ ಕೊಡಬೇಕೆಂದು ಕೋರುತ್ತೇವೆ. ಹೊಸದಾಗಿ ಚಂದಾದಾರರಾಗತಕ್ಕವರು ಚಂದಾ ಮೊಬಲಗನ್ನು ಮುಂಗಡವಾಗಿ ಮುಂಗಡ ಕಳುಹಿಸಿದ ಹೊರತು ಪತ್ರಿಕೆ ರವಾನಿಸಲ್ಪಡಲಾರದು.

೩೦—೧—೯೩. ಪ್ರೊಪ್ರೈಟರ್, ಕ. ಪ್ರ

## THE MONEY MARKET.

ಮದರಾಸ್, ಶನಿವಾರ, ತಾರೀಖ್ 4 ನೇ ಫೆಬ್ರುವರಿ 1899

ಸೇಕಡ ೩ರೂ. ಬಾಬತು ಗವರ್ನಮೆಂಟ್ ಪತ್ರಗಳು ರೂಪಾಯಿ, 105-0-0 ಇಂದ 105-6-0 ವರಿವಿಗೆ.

ಮದರಾಸ್ ಬ್ಯಾಂಕ್ ಷೇರ್‌ಗಳು, (500) ರೂಪಾಯಿಗಳ, ಬಾಬತು 925 ಲಾಗಾಯಿತು 930 ವರಿವಿಗೆ.

ಕಮರ್ಷಿಯಲ್ ಪ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಷೇರಗಳು, (100) ಬಾಬತು 160 ರಿಂದ 165 ವರಿವಿಗೆ

ಸವರನ್‌ಗಳು, 16-3-0 ಇಂದ 16-6-0 ವರಿವಿಗೆ

ಬ್ಯಾಂಕ್‌ಬಿಲ್‌ಗಳು ಯಾನೆ ದರ್ಶನಹುಂಡಿಗಳು, ರೂ ೧ಕ್ಕೆ 6 ತಿಂಗಳವಾಯಿದೆಗೆ, 1s. 2 27/32 d.

ಟಿಟೋ 4 ತಿಂಗಳವಾಯಿದೆಗೆ, 1s. 2 25/32 d.

ಟಿಟೋ ಕೇಳಿದಾಗ, 1s. 2 11/16 d.


# ಕರ್ಣಾಟಕ ಪ್ರಕಾಶಿಕಾ.

## THE KARNATAKA PRAKASIKA

MONDAY, FEBRUARY 6, 1893

೧೮೯೩ನೇ ಇಸವಿ ಫೆಬ್ರುವರಿ ತಾ|| ೬ ನೇ ಸೋಮವಾರ.


ಕಳೆದ ಡಿಸೆಂಬರ್ ತಿಂಗಳ ೧೫ ನೇ ತಾರೀಖಿನಲ್ಲಿ ನಡೆದ ಮದರಾಸು ಯೂನಿವರ್ಸಿಟಿಯ ಎಫ್. ಎ. ಮತ್ತು ಮೆಟ್ರಿಕ್ಯುಲೇಷನ್ ಪರೀಕ್ಷೆಗಳ ಫಲಿತಾಂಶವು ಈ ವಾರದಲ್ಲಿ ಹೊರಗಾಗಿ, ಬೆಂಗಳೂರು ಸರ್ಕಲಿನಲ್ಲಿ ತೇರ್ಗಡೆಯಾಗಿರುವವರ ಹೆಸರುಗಳನ್ನು ಈ ಪತ್ರಿಕೆಯ ಇಂಗ್ಲಿಷ್ ಭಾಗದಲ್ಲಿ ಪ್ರಕಟಿಸಿರುತ್ತೇವೆ. ಸದರೀ ಪರೀಕ್ಷೆಗಳ ಫಲಿತಾಂಶವಂ ನಾವೆಷ್ಟರ ಉತ್ಸಾಹದೊಡನೆ ನಿರೀಕ್ಷಿಸುತಲಿದ್ದೆವೋ ಅದು ಅಷ್ಟರ ಅಸಮಾಧಾನವನ್ನುಂಟುಮಾಡುವಂತಾದ್ದಾಗಿರುವದಕ್ಕೋಸ್ಕರ ನಾವು ಬಹಳ ವಿಷಾದಿಸುತ್ತೇವೆ. ತತ್ರಾಪಿ ಈ ಸಲದ ಮೆಟ್ರಿಕ್ಯುಲೇಷನ್ ಪರೀಕ್ಷೆಯ ಪರಿಣಾಮವು ಕೇವಲ ಚಿಂತಿಸತಕ್ಕದ್ದಾಗಿರುತಿದೆ. ಪ್ರಸಕ್ತ ಪರೀಕ್ಷೆಯಂ ಕ್ರಮಪಡಿಸುವ ಬಗ್ಯೆ ಯೂನಿವರ್ಸಿಟಿಯವರು ಅನೇಕ ನವೀನಕ್ರಮಗಳನ್ನೇರ್ಪಡಿಸಿದಾಗ್ಯೂ ಅವು ಬಹಳ ಅತೃಪ್ತಿಕರವಾದ ಸ್ಥಿತಿಯಲ್ಲಿರುವಂತೆ ಭಾವಿಸಬೇಕಾಗಿದೆ. ಈ ಸಲ ಈ ಪರೀಕ್ಷೆಯಲ್ಲಿ ತೇರ್ಗಡೆಯಾದವರ ಸಂಖ್ಯೆಯು ಸೇಕಡ ೧೫ ಕ್ಕಿಂತ ಅಧಿಕವಾಗಿಲ್ಲವು. ಇದು ಕೇವಲ ಅಲ್ಪವಾಗಿಯೂ ಅತೃಪ್ತಿಕರವಾದುದಾಗಿಯೂ ಇರುತಿದೆ. ಗತ ಸಂವತ್ಸರದಲ್ಲಿ ಕಲ್ಕತ್ತಾ ಯೂನಿವರ್ಸಿಟಿ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಹೋಗಿದ್ದ ೫೦೦೪ ಮಂದಿಯ ಪೈಕಿ ೨೦೩೮ ಜನ ಉಮೇದುವಾರರು ತೇರ್ಗಡೆಯಾಗಿರುತ್ತಾರೆ. ಮದರಾಸ್ ಪ್ರೆಸಿಡೆನ್ಸಿಯಲ್ಲಿ ಸದರೀ ಪರೀಕ್ಷೆಗೆ ಹೋಗಿದ್ದ ೩೦೪೧ ಮಂದಿಯಲ್ಲಿ ೫೧೫ ಜನ ತೇರ್ಗಡೆಯಾಗುವದು ಬಹಳ ಪ್ರಯಾಸವಾಗಿ ಯೇರ್ಪಟ್ಟಿತು. ಇಂತಾ ಹಾಸ್ಯಾಸ್ಪದವಾದ ಪ್ರತಿಫಲವು ಯೇತರಿಂದುಂಟಾಯಿತೋ ಅದಂ ನಮ್ಮ ಬುದ್ಧಿ ಊಹಿಸಲಿಕ್ಕೆ ಅಶಕ್ತವಾಗಿದೆ. ವಿದ್ಯಾರ್ಥಿಗಳ ಅಜಾಗರೂಕತೆಯನ್ನೂ ಉಪಾಧ್ಯಾಯರ ಔದಾಸೀನ್ಯವನ್ನೂ ಮೇಲೆ ಕಂಡ ಫಲಕ್ಕೆ ಕಾರಣವೆಂದು ನುಡಿಯಲಿಕ್ಕೆ ನಮ್ಮ ಮನವು ಒಡಂಬಡಲೊಲ್ಲದು. ಇದಕ್ಕೆ ಕಾರಣವು ಯೂನಿವರ್ಸಿಟಿಯವರು ಈಚೆಗೆ ಮಾಡಿದ ಕೆಲವು ನೂತನ ಬದಲಾವಣೆಗಳಿಂದುಂಟಾದುದಾಗಿರಬಹುದೆಂದು ನಂಬುತ್ತೇವೆ. ವಿದ್ಯಾವಂತರ ಸಂಖ್ಯೆಯು ಕ್ರಮೇಣ ಅಭಿವೃದ್ಧಿಯಾಗುತ ಬರುವದರಿಂದಲೂ ಅವರ ಪ್ರಾಬಲ್ಯವು ದೇಶದ ಆಳ್ವಿಕೆಯ ವಿಷಯದಲ್ಲಿ ಒಂದು ಬಗೆ ಪ್ರತಿಬಂಧಕ ರೂಪವಾಗಿರುವದರಿಂದಲೂ ಅವರ ಸಂಖ್ಯೆಯಂ ತಗ್ಗಿಸಬೇಕೆಂಬ ಗೂಢವಾದ ಅಭಿಪ್ರಾಯವು ಗವರ್ನಮೆಂಟಿನವರಿಗುಂಟಾಗಿದ್ದು ಒಂದು ವೇಳೆ ಅದಂ ಪ್ರೋತ್ಸಾಹಿಸಿ ಅವರಂ ತೃಪ್ತಿಗೊಳಿಸುವದಕ್ಕೋಸ್ಕರವೇನಾದರ್ರೂ ಯೂನಿವರ್ಸಿಟಿಯವರು ಹೀಗೆ ಬಾಲಕರ ಪರಿಶ್ರಮವಂ ವ್ಯರ್ಥಗೊಳಿಸಿ ಅನೇಕರಂ ತೇರ್ಗಡೆಮಾಡಿಸದೆ ಹೋಗಿರಬಹುದೆಂದು ತೋರುತಿದೆ. ಇಂತಾ ಉದ್ದೇಶವಂ ಈ ರೀತಿ ಕ್ರಮಪಟ್ಟು ಕಾರ್ಯತಃ ನೆರವೇರಿಸಿಕೊಳ್ಳಲಿಕ್ಕೆ ಪ್ರಯತ್ನಪಡುವದಕ್ಕಿಂತಲೂ ಅವರು ತಮ್ಮ ಮನೋಗತಾಭಿಪ್ರಾಯವಂ ಕಂಠೋಕ್ತವಾಗಿ ಮುಂದೆ ತಿಳಿಸಿದ್ದರೆ ಅನುಕೂಲವಾಗಿತ್ತು. ಈಗ್ಯೆ ಯೆರಡು ಮೂರು ದಿವಸಗಳ ಹಿಂದೆ ಹೊರಗಾದ ಘೋಷಣಾಪತ್ರದಿಂದ ತೇರ್ಗಡೆಯಾಗಲಿಕ್ಕೆ ಕನಿಷ್ಠಪಕ್ಷ ತೆಗೆಯಬೇಕಾದ ಮಾರ್ಕುಗಳನ್ನು ಕ್ಲುಪ್ತಪಡಿಸಿದವರ ಅವಿಮರ್ಶಕತೆಯು ಸ್ಪಷ್ಟವಾಗದಿರಲಿಲ್ಲವು. ಯೂನಿವರ್ಸಿಟಿಯವರು ಈಚೆಗೆ ಮಾಡಿದ ಉಪನಿಬಂಧನೆಯಲ್ಲಿ ಇಂಗ್ಲಿಷ್ ಭಾಗಕ್ಕೆ ಕ್ಲುಪ್ತವಾಗಿರುವ ಮಾರ್ಕುಗಳಲ್ಲಿ ಸೇಕಡ ೪೦ ರಂತೆಯೂ, ಇತರ ಭಾಗಗಳಿಗೆ ನಿಷ್ಕೃಷ್ಟವಾಗಿರುವ ಮಾರ್ಕುಗಳ ಪೈಕಿ ಪ್ರತಿ ಭಾಗದಲ್ಲಿ ಸೇಕಡ ೩೫ ರಂತೆಯೂ ಯಾವ ಉಮೇದುವಾರನು ತೆಗೆಯುವದಿಲ್ಲವೋ, ಆವನು ತೇರ್ಗಡೆಯಾದಾತನೆಂದು ಗಣಿಸಲ್ಪಡತಕ್ಕದ್ದಲ್ಲವು, ಎಂಬದಾಗಿ ಸಮಾಧಿಸಲ್ಪಟ್ಟಿರುತಿದೆ. ಎಫ್. ಏ. ಮತ್ತು ಬಿ ಎ ಪರೀಕ್ಷೆಗಳಲ್ಲಿ ತೇರ್ಗಡೆಯಾಗಲಿಕ್ಕೆ ತೆಗೆಯಬೇಕಾದ ಮಾರ್ಕುಗಳ ಸಂಖ್ಯೆಯು ಕಡಮೆಯಾಗಿರುತಿದೆ. ಎಫ್. ಎ. ಪರೀಕ್ಷೆಯ ವಿಷಯದಲ್ಲಿ ಯೇರ್ಪಟ್ಟಿರುವ ವಿಧಿಯು ಮೇಲೆ ತಿಳಿಸಲ್ಪಟ್ಟವಕ್ಕಿಂತಲೂ ಸ್ವಲ್ಪ ಸೌಕರ್ಯವುಳ್ಳದ್ದಾಗಿರುತಿದೆ. ಅದು ಹ್ಯಾಗೆಂದರೆ, ಇಂಗ್ಲಿಷಿಗೆ ಗೊತ್ತಾಗಿರುವ ಒಟ್ಟು ಮಾರ್ಕುಗಳಲ್ಲಿ ಸೇಕಡ ೩೫ ರಂತೆಯೂ, ಯೆರಡನೆಯದಾದ ಐಚ್ಛಿಕಭಾಷೆಯಲ್ಲಿ ಸೇಕಡ ೩೫ ರಂತೆಯೂ, ಇತರ ಭಾಗಗಳ ಪೈಕಿ ಯಾವದಾದರು ಯೆರಡರಲ್ಲಿ ಸೇಕಡ ೩೦ ರ ಪ್ರಕಾರವಾಗಿಯೂ, ಒಟ್ಟು ಮಾರ್ಕುಗಳಲ್ಲಿ ಸೇಕಡ ೩೫ ರಂತೆಯೂ ಪಡೆಯತಕ್ಕ ಉಮೇದುವಾರನು ತೇರ್ಗಡೆಯಾದವನೆಂದೆಣಿಸಲ್ಪಡುಕಲಿರುವುದು. ಇದರಿಂದ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಹೋಗತಕ್ಕವರಿಗಿಲ್ಲದಂತಾ ಯೆರಡುವಿಧ ಅನುಕೂಲ್ಯಗಳು ಎಫ್. ಎ. ಪರೀಕ್ಷೆಗೆ ಹೋಗತಕ್ಕವರಿಗುಂಟುಮಾಡಲ್ಪಟ್ಟಿರುತಿವೆ. ಇಂಗ್ಲಿಷಿನಲ್ಲಿ ಎಫ್. ಎ ಪರೀಕ್ಷೆಯಲ್ಲಿ ತೆಗೆಯಬೇಕಾದ ಮಾರ್ಕುಗಳು ಕಡಮೆಯಾಗಿರುತಿವೆ. ಇದಲ್ಲದೆ ಇನ್ಯಾವದಾದರು ಭಾಗದಲ್ಲಿ ಸೇಕಡ ೩೦ ರ ಪ್ರಕಾರ ತೆಗೆದರೆ ಸಾಕಾಗಿರುತಿದೆ. ಇದರಿಂದ ಸೋಲದಿರುವ ಮಾರ್ಕುಗಳನ್ನು ಇತರ ಭಾಗಗಳಿಂದ ಭರ್ತಿ ಮಾಡಿಕೊಳ್ಳಬಹುದಾದ ಅನುಕೂಲ್ಯ ವುಂಟುಮಾಡಲ್ಪಟ್ಟಿರುತಿದೆ. ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಉಮೇದುವಾರರು ಸೇಕಡಾ ೩೫ ಮಾರ್ಕುಗಳು ಜಾಸ್ತಿ ಪಡೆದು ಒಟ್ಟಿನಲ್ಲಿ ತೇರ್ಗಡೆಯಾಗಲಿಕ್ಕೆ ೩೫ ಮಾರ್ಕುಗಳು ತೆಗೆಯಬೇಕಾಗಿರುತಿದೆ. ಬಿ. ಎ. ಪರೀಕ್ಷೆಯಲ್ಲೀಚೆಗೆ ಉಂಟುಮಾಡಿರುವ ಅನುಕೂಲ್ಯವು ಪ್ರಸಿದ್ಧವಾಗಿರುವದರಿಂದ ಸದರೀ ಪರೀಕ್ಷೆಗೆ ಹೋಗುವವರು ಒಂದು ವರುಷ ಇಂಗ್ಲಿಷ್ ಭಾಷೆಯಲ್ಲಿಯೂ, ಯೆರಡನೆಯ ವರುಷ ಐಚ್ಛಿಕ ಭಾಷೆಯಲ್ಲಿಯೂ, ಮೂರನೆಯ ಸಂವತ್ಸರ ಶಾಸ್ತ್ರದಲ್ಲಿಯೂ ಪರೀಕ್ಷಿಸಲ್ಪಡಬಹುದೆಂಬ ನಿಯಮವಿರುವದರಿಂದ, ಸಮರ್ಥನಾದವನು ಮೂರು ಭಾಗಗಳಂ ಒಂದೇ ಆವರ್ತಿಯಲ್ಲಿಯೂ, ಸಾಮಾನ್ಯ ಪ್ರಜ್ಞೆಯುಳ್ಳವನು ಯೆರಡು ಅಥವಾ ಮೂರನೆಯ ಸಂವತ್ಸರದಲ್ಲಿಯೂ ತೇರ್ಗಡೆಯಾಗುತ್ತಾನೆ. ಇದಲ್ಲದೆ ಈ ಪರೀಕ್ಷೆಯಲ್ಲಿ ಅಧಮಪಕ್ಷ ತೆಗೆಯಬೇಕಾಗಿರುವದು ತ್ರಿಸ್ಥಾನಿಕಭಾಗವು, ಅಂದರೆ ಸೇಕಡಾ ೩೩⅓ ಮಾರ್ಕುಗಳು, ಮತ್ತು ಶಾಸ್ತ್ರಭಾಗದ ಪೈಕಿ ಪ್ರತಿ ಉಪಭಾಗದಲ್ಲಿಯೂ ನಾಲ್ಕರಲ್ಲಿ ಒಂದು ಭಾಗ ತೆಗೆದರೆ ಸಾಕಾಗಿರುತಿದೆ. ಈ ವಿಧವಾದ ಅನುಕೂಲ್ಯಗಳ್ಯಾವದೂ ಮೆಟ್ರಿಕ್ಯುಲೇಷನ್ ವಿದ್ಯಾರ್ಥಿಗಳಿಗಿರುವಂತೆ ಕಾಣಿಸಲಿಲ್ಲವು. ಈಗಿನ ಹೊಸ ನಿಬಂಧನೆಗಳು ಜಾರಿಯಲ್ಲಿ ಬರುವದಕ್ಕೆ ಪೂರ್ವದಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯು ವಿರುದ್ಧಫಲದಾಯಕವಾಗಿರುವಂತೆ ಅನೇಕರು ಅಭಿಪ್ರಾಯಪಟ್ಟಿದ್ದರು. ಈಗ ಅಂತಾ ದೋಷವು ನಿವೃತ್ತಿಗೊಂಡು ಹ್ಯಾಗೆ ಕ್ರಮಪಡಿಸಲ್ಪಟ್ಟಿದೆಯೋ ತಿಳಿಯಲಿಲ್ಲವು. ಯೂನಿವರ್ಸಿಟಿಯವರು ಮಾಡಿದ ಮತ್ತೊಂದು ಯೇರ್ಪಾಡು ಬಹಳ ಆಕ್ಷೇಪಣೀಯವಾಗಿಯೂ ಚಿಂತನೀಯವಾಗಿಯೂ ಇರುತಿದೇನೆಂದರೆ,— ಪರೀಕ್ಷೆಗೆ ಕ್ಲುಪ್ತವಾದ ಗ್ರಂಥವನ್ನು ವಜಾ ಮಾಡಿ, ಅಶಾಸ್ತ್ರಪ್ರಮಾಣದಂತೆ ಪರೀಕ್ಷಕರ ಚಿತ್ತವೃತ್ತಿಗೆ ಬಾಲಕರಂ ಗುರಿಮಾಡುವದು ಬಹಳ ಅನ್ಯಾಯವೆಂದು ಹೇಳಬಹುದಾಗಿದೆ. ಬಿ ಎ. ಮತ್ತು ಎಫ್ ಎ ಪರೀಕ್ಷೆಗಳಿಗೆ ಹೋಗತಕ್ಕ ಉಮೇದುವಾರರನ್ನು ನಿಷ್ಕೃಷ್ಟವಾದ ಪರಿಷ್ಕಾರ ಗ್ರಂಥವಿಲ್ಲದೆ ಪರೀಕ್ಷಿಸಲಿಕ್ಕೆ ಅಸಾಧ್ಯವೆಂದು ಭಾವಿಸುವ ಪಕ್ಷಕ್ಕೆ ಯೂನಿವರ್ಸಿಟಿಯು ಪ್ರವೇಶ ಪರೀಕ್ಷೆಗೆ ಹೋಗುವವರು, ಗ್ರಂಥನಿರ್ಣಯವಿಲ್ಲದೆ, ಪೃಚ್ಛಕರ ಐಚ್ಛಿಕ ಪ್ರಶ್ನೆಗಳಿಗೆಲ್ಲ ತೃಪ್ತಿಕರವಾಗಿ ಉತ್ತರ ಹೇಳಿ ಸಂತೋಷಪಡಿಸುವಷ್ಟರ ಶಕ್ತರಾಗಿರುವರೆಂದು ಹ್ಯಾಗೆ ನಿರೀಕ್ಷಿಸಬಹುದೋ ನಾವರಿಯೆವು. ಬಾಲಕರು ವ್ಯುತ್ಪಾದಕವಾದ ಯಾವದಾದರೊಂದು ಗ್ರಂಥವನ್ನಭ್ಯಸಿಸಿ ಅದರಲ್ಲಿ ವ್ಯಾಕರಣಾಲಂಕಾರಾದಿ ಲಕ್ಷ್ಯಲಕ್ಷಣಗಳಂ ಗುರುಮುಖವಾಗಿ ಅರಿತು ಅವುಗಳ ಅನ್ವಯ ವಿಧಾನವು ಅನುಭವದೊಳು ತಂದುಕೊಂಡು ತಾತ್ಪರ್ಯ ಅನುಭವವಂ ಲೌಕಿಕ ವ್ಯವಹಾರದಲ್ಲಿ ವಿನಿಯೋಗಿಸಿದರೆ ಅವರ ವ್ಯುತ್ಪತ್ತಿಯ ಸ್ವರೂಪವಿಷ್ಟರದೆಂದು ನಿರ್ಧರಿಸಬಹುದು. ಅದೊಂದೂ ಇಲ್ಲದೆ, ಓದಬೇಕಾದ ಪ್ರಕರಣವು ಫಲಾನೇದೆಂದು ಗೊತ್ತಿಲ್ಲದೆ, ಕೇಳಲ್ಪಡುವ ಪ್ರಶ್ನೆಗಳು ಯಿತಸ್ವರೂಪವಾದವೆಂದು ತಿಳಿಯಲು ಸಾಧ್ಯವಿಲ್ಲದೆ ಇರುವ ಬಾಲಕರಂ ಬಂದೊಂದಾನರ್ಥ ಒಬ್ಬೊಬ್ಬರು ತಮ್ಮ ಮನೋಧರ್ಮದಂತೆ ಪ್ರಶ್ನೆಗಳಂ ಕೇಳಿದರೆ ಅವರು ಸರಿಯಾದ ಉತ್ತರಗಳಂ ತೃಪ್ತಿಪಡಿಸುವರೆಂದು ಹುಡ್ಗಾಂಗ ನಿರೀಕ್ಷಿಸುವದಕ್ಕಾಗುವದಿಲ್ಲವು. ಈಗ ಇಂಡ್ಯ ದೇಶದಲ್ಲಿ ಜನಗಳ ಜೀವನವು ಸರ್ಕಾರ್ ನೌಕರಿಯ ಮೂಲಕವಾಗಿ ಯೇರ್ಪಟ್ಟದ್ದಾಗಿ ನಡೆದು ಬಂದಿರುವದರಿಂದ ಅಂತಾ ನೌಕರಿಯು ಪರೀಕ್ಷೆಗಳ ತೇರ್ಗಡೆಯನ್ನನುಸರಿಸಿದ್ದಾಗಿಯೂ, ಅಂತಾ ತೇರ್ಗಡೆಯೆಂಬದು ಯೂನಿವರ್ಸಿಟಿಯಲ್ಲಿ ಸೇರಿಕೊಂಡಿರುವ ಕೆಲವರ ಇಷ್ಟಾನುಗುಣವಾದುದಾಗಿರುವದರಿಂದಲೂ, ಏರ್ಪಟ್ಟ ಅಂತಾ ಹಿಂದೂಗಳು ಯಾವಾಗಲು ಕರ್ತೃತ್ವ ಶಕ್ತಿಯುಳ್ಳವರಂತ ನರಾಗಿಯೂ, ಸಹಚರರಾದ ಯೂರೋಪಿಯರ್ನಗಳ ಅಭಿಪ್ರಾಯಕ್ಕೆ ಬದ್ಧರಾಗಿ ಅವರ ಇಷ್ಟಾನುಸಾರ ಕಿವಿಹ್ಯಾಳವರಂ ಮಾಡತಕ್ಕವರಾಗಿಯೂ ಇರುತ್ತಾರೆ. ಮುಂದೆ ಬಾಲಕರು ಆಶಾತಪ್ಪುರಾಣದಂ ಓದಿ ಅಂತರಿಕ್ಷದಲ್ಲಿ ಗಡಿಕಟ್ಟಿ ಆದಿ ನಿಕೇಪನಾಃ ಶ್ಲಾಘನೆಗೆ ಗುರಿಯಾಗುವರೆಂಬದು ಅನುಮಾನಾಸ್ಪದವಾದ ಅಂಶವಾಗಿರುತಿದೆ. ಮುಖ್ಯವಾಗಿ ಈ ಸಲದ ಮೆಟ್ರಿಕ್ಯುಲೇಷನ್ ಪರೀಕ್ಷೆಯ ಫಲಿತಾಂಶವು, ಮುಂದಿನ ವರುಷದ ಎಫ್. ಎ., ಬಿ. ಎ. ಪರೀಕ್ಷೆಗಳಿಗೆ ಬಹಳ ಮಟ್ಟಿಗೆ ಬಾಧಕವಾಗಬಹುದೆಂದೆಣಿಸುತ್ತೇವೆ. ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ತರಬೇತಿ ಮಾಡಿ ಕಳುಹಿಸಿದಂತಾ ಪಾಠಶಾಲಾಧಿಕಾರಿಗಳೆಲ್ಲರೂ ಏಕಮತ್ಯದೊಡನೆ ಯೂನಿವರ್ಸಿಟಿಯವರಿಗೆ ತಿಳಿಸಿ, ಬೇರೊಂದು ಯೋಗ್ಯವಾದ ಕ್ರಮವು ನೆಲೆಗೊಳಿಸುವಂತೆ ಮಾಡದಿದ್ದರೆ ತಮ್ಮ ಪಾಠಶಾಲೆಗಳಿಗೆ ಯೆಂದಿಗೂ ಪ್ರತಿಷ್ಠೆ ಯುಂಟಾಗಲಾರದು. ಆದಕಾರಣ ಈ ವಿಷಯವು ತಕ್ಕವರ ಅವಧಾನವನ್ನು ಪಡೆ ಹೋಗಲಾರದೆಂದು ನಂಬುತ್ತೇವೆ. ಬಾಲಕರು ವಿದ್ಯಾವಂತರಾಗಿ ಪ್ರತಿಷ್ಠಾಪರರಾಗಬೇಕೆಂಬ ಕೋರಿಕೆಯು ಗವರ್ನಮೆಂಟಿನವರಿಗೆ ಅಂತಃ ಇರುವದು ನಿಜವಾಗಿರುವ ಪಕ್ಷಕ್ಕೆ ಅವರು ಯೂನಿವರ್ಸಿಟಿಯವರ ಮನಸ್ವೀ ಯೇರ್ಪಾಡುಗಳನ್ನೆಲ್ಲವಂ ಅನುಮೋದಿಸುತಲಿರಲಾರರು. ಮೊದಲೇ ದುರ್ಗುಣಿ ಅದರ ಮೇಲೆ ಗರ್ಭಿಣಿ ಯೆಂಬಂತೆ ಯೂನಿವರ್ಸಿಟಿಯವರ ಪ್ರಯತ್ನೋದ್ದೇಶಗಳಿಗೆ ತಕ್ಕಂತೆ ಪರೀಕ್ಷಕರಾಗಿ ನಿಯಮಿಸಲ್ಪಡತಕ್ಕವರು ಸ್ವಪರಜ್ಞಾನ ತಾರತಮ್ಯವಂ ಪರಿಗಣಿಸದೆ ತಾವು ಗುರುಮುಖವಾಗಿ ಕಲಿತ ಪಾಂಡಿತ್ಯ ಪ್ರದರ್ಶನಕ್ಕೆ ಅದು ಯುಕ್ತಸಮಯವೆಂತಲೂ, ಆತ್ಮಪ್ರಾಗಲ್ಭ್ಯವಂ ನೋಡಿ ಸಂತೋಷಿಸಲಿಕ್ಕೆ ಅಜ್ಞರಾದ ಬಾಲಕರೇ ಅರ್ಹರೆಂತಲೂ ಭಾವಿಸಿ ಕೇಳತಕ್ಕವರಿಗೂ ಕೇಳಲ್ಪಡುವವರಿಗೂ, ಕೇಳಲ್ಪಡುವ ವಿಷಯಸ್ವರೂಪವಕ್ಕೂ, ಜನಗಳು ನಿರೀಕ್ಷಿಸಬಹುದಾದ ಪ್ರತಿಫಲಕ್ಕೂ ನೆಲೆಗೊಂಡಿರುವ ತಾರತಮ್ಯಗಳಂ ಅವರು ಸ್ವಲ್ಪವೂ ಚಿಂತಿಸದೆ ಬಾಲಕರ ಆಶಾಭಂಗಕ್ಕೆ ಮತ್ತಷ್ಟು ಸಹಕಾರಿಗಳಾಗಿ ಯೇರ್ಪಡುತ್ತಾರೆ. ಇವುಗಳನ್ನೆಲ್ಲ ನೋಡಲಾಗಿ, ಗವರ್ನಮೆಂಟಿನವರ ಉದ್ದೇಶವು ಅವರವರ್ಣದಂತೆಯೂ, ಸದರೀ ವರ್ಣನವು ಬಹುಜನರ ವ್ರತ್ಯಗಳಂ ವಿಫಲಗೊಳಿಸಿ ಅವರಿಗೆ ಅಸಂತೃಪ್ತಿಯ ನ್ನುಂಟುಮಾಡುವಂತಾದ್ದಾಗಿಯೂ ಇರುವಂತೆ ಸ್ಪಷ್ಟವಾಗುತಿದೆ.

ಇಂಡ್ಯಾದೇಶದ ನೇಟೀವ್ ಸಂಸ್ಥಾನಗಳ ಪೈಕಿ ವಿಸ್ತೀರ್ಣದಲ್ಲೂ, ಐಶ್ವರ್ಯದಲ್ಲೂ ಮೊದಲನೆಯದೆನ್ನಿಸಿದ ಹೈದರಾಬಾದ್ ಸಂಸ್ಥಾನದ ಪ್ರಕೃತಸ್ಥಿತಿಯು ಕೇವಲ ಗೌರವ ಹಾನಿಕರವಾಗಿಯೂ ಅಸಂತುಷ್ಟಿಕರವಾಗಿಯೂ ಇರುವ ಬಗ್ಗೆ ಬಹಳ ಚಿಂತಿಸುತ್ತೇವೆ. ಈಚೆಗೆ ಕೆಲವು ವರ್ಷಗಳ ಮೊದಲು ಸದರೀ ಸಂಸ್ಥಾನದೊಳು ಪ್ರಬಲರಾದವರು ಕೆಲವರು ಸೇರಿ ಘಿತೂರಿಗಳು ನಡೆಸಲು ಪ್ರಾರಂಭಿಸಿ, ತನ್ಮೂಲಕ ಬಹುವಿಧ ಅನರ್ಥಗಳಿಗೂ ದುರ್ವ್ಯವಸ್ಥೆಗೂ ಅವಕಾಶವುಂಟಾಯಿತು. ಅದರಿಂದೀಚೆಗೆ ಪಾಪನಷ್ಟ ಹೊಕ್ಕದ್ದಿನಯೊಂದು ಯೇರ್ಪಟ್ಟು, ಅನವಧಿಕಾರಣೆಯ ಕಾಲದಲ್ಲಿ ಗೌರವ ಪ್ರಭುತ್ವಗಳುಳ್ಳ ಅನೇಕರಿಗೆ ಮಾನಭ್ರಷ್ಟಕರಗಳಾದ ಎಷ್ಟೋ ಸಂಗತಿಗಳು ನಡೆದು ಹೋಗಿರುವವು. ಹೈದರಾಬಾದ್ ನಿಜಾಮರವರು ಸಮರ್ಥರೆಂದು ಯೋಚಿಸಿದಾಗ್ಯೂ, ರಾಜ್ಯದಳಿತದಲ್ಲಿ ತಮ್ಮ ಇಷ್ಟಾನುಸಾರ ಕಾರ್ಯಗಳಂ ನೆರವೇರಿಸುವುದಕ್ಕೆ ಅಶಕ್ತರಾಗಿರುವಂತೆ ಕಾಣುತಿದೆ. ಸಾವಿರಾರು ಸಂವತ್ಸರಗಳ ಹಿಂದೆ ಯೂರೋಪ್ ದೇಶದೊಳು ನೆಲಗೊಂಡಿದ್ದಂತೆ ಹೈದರಾಬಾದ್ ಸಂಸ್ಥಾನದಲ್ಲಿ ಕಟ್ಟುಬದ್ಧ ಪದ್ಧತಿಯು ನೆಲಗೊಂಡು, ಅಲ್ಲಿನ ನವಾಬರುಗಳೂ ಇತರ ಪ್ರಮುಖರೂ ತಮ್ಮತಮ್ಮ ಜಹಗೀರುಗಳಲ್ಲಿ ಸಾರ್ವಭೌಮತ್ವ, ಸ್ವತಂತ್ರಾಧಿಕಾರವಂ ನಡೆಸುತಲಿರುತ್ತಾರೆ. ಅಂತವರ ಜಹಗೀರುಗಳಲ್ಲಿ ನಿಜಾಮರವರಿಗೆ ಯಾವವಿಧ ಅಧಿಕಾರವೂ ಇರುವದಿಲ್ಲವು. ಸದರೀ ಪ್ರಮುಖರು ತಮ್ಮತಮ್ಮ ಜಹಗೀರುಗಳಲ್ಲಿ ನ್ಯಾಯವಿಮರ್ಶೆಯ ಬಗ್ಗೆ ನ್ಯಾಯಾಧಿಪತಿಗಳನ್ನೇರ್ಪಡಿಸಿಕೊಂಡು, ಅವರ ಪೈಕಿ ಅನೇಕರಿಗೆ ಮರಣದಂಡನೆ ವಿಧಿಸುವ ಅಧಿಕಾರವಂ ನೇಮಕೊಟ್ಟಿರುವದಲ್ಲದೆ, ತಮ್ಮ ಇಷ್ಟಾನುಸಾರ ಅಪರಾಧಿಯಂ ದಂಡಿಸುವಂತೆ ನ್ಯಾಯಾಧಿಪತಿಗೆ ವಿಧಿಸುವ ಸ್ವಾತಂತ್ರ್ಯವಂ ವಹಿಸಿರುವದರಿಂದ ನ್ಯಾಯವಿಮರ್ಶೆಯು ಯೆಷ್ಟು ವಿಲಕ್ಷಣವಾದ ನಡೆಯುವದೋ ಅದಂ ಪ್ರಜೆಗಳೇ ಯೋಚಿಸಬಹುದು. ಸದರೀ ಪ್ರಮುಖರು ಸ್ವತಂತ್ರಾಧಿಕಾರವು ವಹಿಸಿ, ತಮಗೆ ಬೇಕಾದಷ್ಟು ಸೈನ್ಯಗಳನ್ನಿಟ್ಟುಕೊಂಡು, ಪ್ರಜೆಗಳಿಂದ ತಮ್ಮ ಇಷ್ಟಾನುಸಾರ ಕಂದಾಯಗಳಂ ವಸೂಲ್ಮಾಡುತ, ಸ್ವತಂತ್ರಾಧಿಕಾರವಂ ನಡೆಸುತಲಿದಾರೆ. ತಮಗೆ ನಿಯಮಿಸಲ್ಪಡುವ ಕಾರ್ಯಗಳಲ್ಲಿ ಸಹ ಅದೇ ಸ್ವಾತಂತ್ರ್ಯವಂ ವಹಿಸಿ, ನಡೆಸುವದಲ್ಲದೆ, ಸಂಸ್ಥಾನದ ನ್ಯಾಯ ನಿಬಂಧನೆಗಳು ತಮ್ಮ ಇಷ್ಟಕ್ಕೆ ಅನುಗುಣವಾಗಿರುವ ಸಂದರ್ಭದಲ್ಲಿ ಮಾತ್ರ ಅದನ್ನನುಸರಿಸಿ ಕೆಲಸ ನಡೆಸುತ್ತಾರೆ. ಈ ಪ್ರಮುಖರು, ಅನ್ಯದೇಶದವರನ್ನು, ತತ್ರಾಪಿ, ಮುಸಲ್ಮಾನ್ ಜಾತಿಗೆ ಸೇರದವರ್ಯ್ಯಾರಾದರು ಸಂಸ್ಥಾನದ ನೌಕರಿಯಲ್ಲಿಟ್ಟರೆ ಬಹಳ ಆಗ್ರಹಗೊಳ್ಳುತ್ತಾರಾಗಿ, ಅಲ್ಲಿನ ದೊಡ್ಡ ದೊಡ್ಡ ಅಧಿಕಾರಗಳೆಲ್ಲವು ಸ್ಥಳದವರಿಗೇನೆ ಕೊಡಲ್ಪಡುತಲಿವೆ. ಪರಂತು ಸದರೀಯವರ ಪೈಕಿ ಅನೇಕರು ತಮಗೆ ನಿಯಮಿಸಲ್ಪಡುವ ಕೆಲಸಗಳಂ ನಿರ್ವಹಿಸುವದಕ್ಕೆ ಶಕ್ತಿಸಾಲದವರಾಗಿರುತ್ತಾರೆ. ಇಂತಾ ಸ್ಥಿತಿಯಲ್ಲಿ ಸದರೀ ಸಂಸ್ಥಾನದ ಅತಳಿತವನ್ನು ಕ್ರಮಪಡಿಸುವದಕ್ಕೆ ಹ್ಯಾಗೆ ಸಾಧ್ಯವಾದೀತೆಂಬ ಯೋಚನೆಗೆ ಸಂಪ್ರಾಪ್ತವಾಗುವ ಕಷ್ಟವುಂಟಾಗಿ ಬಹಳ ಚಿಂತೆಗೆ ಕಾರಣವಾಗಿರುತಿದೆ. ಹೈದರಾಬಾದ್ ಸಂಸ್ಥಾನವು ವಿಸ್ತೀರ್ಣದಲ್ಲೂ ಐಶ್ವರ್ಯದಲ್ಲೂ ಇಂಡ್ಯದೇಶದ ಇತರ ನೇಟಿವ್ ಸಂಸ್ಥಾನಗಳಿಗಿಂತಲೂ ಅಧಿಕವಾದದ್ದೆನಿಸಿಕೊಂಡಿ

ತ್ಸಾಗಸ್ಯ, ರಾಜ್ಯಾಡಳಿತಕ್ರಮದಲ್ಲಿ ಮೈಸೂರು ಮತ್ತು ಬರೋಡೆ ಸಂಸ್ಥಾನಗಳ ಪಕ್ಕತಸ್ಥಿತಿಯಂ ಹೋಲಿಸಿ ನೋಡುವಲ್ಲಿ, ಕೇವಲ ಹೀನಸ್ಥಿತಿಯಲ್ಲಿದೆಯೆಂದು ಹೇಳಬೇಕಾಗಿರುತಿದೆ. ಈ ಸಂಸ್ಥಾನದ ಆಡಳಿತೆಗಳು ಒಂದು ವ್ಯವಸ್ಥೆಗೆ ತಪ್ಪದಬೇಕಾದರೆ, ನಿಜಾಮರವರ ಅಧಿಕಾರಕ್ಕೆ ಎಲ್ಲರು ಒಳಪಟ್ಟರಬೇಕು. ಪ್ರಮುಖರಾದವರು ಈಗ ಚಲಾಯಿಸುವ ಸ್ವತಂತ್ರಾಧಿಕಾರವು ತಪ್ಪಿಸಲ್ಪಡಬೇಕಾದ್ದಲ್ಲದೆ ಅಲ್ಲಿನ ನವಾಬರುಗಳ ಕಾರ್ಯಕಾರಿಗಳು, ಬ್ರಿಟಿಷ್ ಅಥವಾ ಇತರ ನೇಟಿವ್ ಸಂಸ್ಥಾನಗಳಲ್ಲಿರುವಂತೆ, ಕರವು ಮಾಡಲ್ಪಡಬೇಕು. ಮತ್ತು ಅನ್ಯತ್ರ ನೆಲೆಗೊಂಡಿರುವ ನ್ಯಾಯನಿಬಂಧನೆಗಳು ಸಹ ಹೈದರಾಬಾದಿನಲ್ಲಿ ಜಾರಿಗೆ ತರಲ್ಪಡಬೇಕು. ಪ್ರಮುಖರಾದವರು ತಮ್ಮ ತಮ್ಮ ಜಹಗೀರುಗಳಲ್ಲಿ ಸ್ಥಾಪಿಸಿಕೊಂಡಿರುವ ಕೋರ್ಟುಗಳನ್ನೆಲ್ಲ ತೆಗದುಹಾಕಿ ಪ್ರತಿಯೊಂದು ಸ್ಥಳದಲ್ಲೂ ನಿಜಾಂ ಸರ್ಕಾರದ ಕೋರ್ಟುಗಳಂ ನೆಲೆಗೊಳಿಸಬೇಕಾದ್ದಲ್ಲದೆ, ಪೂರ್ವಕಾಲದೊಳು ಅನ್ಯತ್ರ ನೆಲೆಗೊಂಡಿದ್ದ ಕಟ್ಟುಬಡಿ ಪದ್ಧತಿಯಂ ರದ್ದುಮಾಡಿ, ಇವರ ಮತ ಪ್ರಮುಖರು ಸರ್ಕಾರಕ್ಕೆ ತೆರಿಗೆಯ ಕೊಡಬೇಕಾದವರಾಗಬೇಕು. ಈಗ ನವಾಬ ಪ್ರಮುಖರು ಸರ್ಕಾರಕ್ಕೆ ಕಂದಾಯರೂಪವಾಗಿ ಒಂದು ಕಾಸನ್ನರು ಕೊಡುವದಿಲ್ಲವು, ಅದಕ್ಕೆ ಬದಲು ಅನುಪಯುಕ್ತವಾದ ಜೀತಗಾರಿ ಪೌಜುಗಳನ್ನಿಟ್ಟುಕೊಂಡಿರುತ್ತಾರೆ. ನವರೀ ಸೇನೆಯು ಒಂದು ಸಂದರ್ಭದೊಳು ಸಂಸ್ಥಾನಕ್ಕೆ ಅಪಾಯಕರವಾಗಿ ಪರಿಣಮಿಸಬಹುದು. ಅತಿಶಯವಾಗಿ ಜೀತಗಾರೀ ಸೇನೆಗಳನ್ನಿಟ್ಟುಕೊಂಡು ಅವರ ಪೋಷಣೆಯ ಬಗ್ಗೆ ವ್ಯರ್ಥವಾಗಿ ಖರ್ಚು ಮಾಡುವದಕ್ಕಿಂತಲೂ ಸ್ವಲ್ಪವಾಗಿ ಪೂರಾ ತಯಾರೀ ಸೈನ್ಯವನ್ನಿಟ್ಟುಕೊಂಡಿದ್ದರೆ ಅದು ಉಪಯುಕ್ತವಾಗಿರುವುದು. ಸಂಸ್ಥಾನದ ಬಹಳ ಕಡೆಯಲ್ಲೂ ಪಾಠಶಾಲೆಗಳಂ ಸ್ಥಾಪಿಸಿ, ಪ್ರಜೆಗಳಿಗೆ ವಿದ್ಯಾಭ್ಯಾಸವಂ ಮಾಡಿಸಬೇಕು, ಅಲ್ಲದೆ ಯಾವವಿಧ ಪ್ರಯೋಜನವೂ ಉಂಟಾಗಲಾರದು. ಸ್ವದೇಶೀಯರು ರಾಜ್ಯಕಾರ್ಯ ನಿರ್ವಹಣಕ್ಕೆ ಅರ್ಹರಾಗುವ ತನಕ ಯೋಗ್ಯರಾದ ಕೆಲವರನ್ನು ಅನ್ಯದೇಶಗಳಿಂದ ಕರೆಯಿಸಿ ದೊಡ್ಡ ದೊಡ್ಡ ಅಧಿಕಾರಗಳಂ ಕೊಟ್ಟು ಅವರ ಮೂಲಕ ರಾಜ್ಯತಂತ್ರಗಳಂ ಒಳ್ಳೆ ಸ್ಥಿತಿಗೆ ತರಬೇಕು. ಮೇಲೆ ತಿಳಿಸಲ್ಪಟ್ಟ ಕ್ರಮಗಳು ಅನುಸರಿಸಲ್ಪಡುವತನಕ ಹೈದರಾಬಾದ್ ಸಂಸ್ಥಾನದ ಆಡಳಿತೆಗಳು ಯಾವಭಾಗದಲ್ಲೂ ಕ್ರಮಪಡಲಾರವು. ಈ ಸಂಸ್ಥಾನವು ಪ್ರಕೃತಸ್ಥಿತಿಯಲ್ಲೇ ಇನ್ನು ಕೆಲವು ಕಾಲವಿರುವಪಕ್ಷಕ್ಕೆ ಮುಂದೆ ಬಹುವಿಧ ಅನರ್ಥಗಳಿಗೆ ಕಾರಣಗಳುಂಟಾಗದೆ ಹೋಗಲಾರವು. ಅನುತರ ಮಾಡಿಸುವದಕ್ಕಿಂತಲೂ ಈಗಲೇ ಪ್ರಯತ್ನಪಟ್ಟು ಸರಿಮಾಡಿಕೊಳ್ಳುವಣವು ವಿವೇಕಿಗಳ ಕಾರ್ಯವಾಗಿರುವುದು.

---

ಈ ಕಾಲದಲ್ಲಿ ಪ್ರಜೆಗಳಿಗೆ ಉಂಟಾಗಿರುವ ಸಂಕಟಗಳಂ ಕುರಿತು ನಮ್ಮ ಮಿತ್ರರೊಬ್ಬರು ತಿಳಿಸುತ್ತಾರೇನಂದರೆ:—

ಈ ಕಾಲದಲ್ಲಿ ಜನಗಳಿಗುಂಟಾಗಿರುವ ಕ್ರಮವು ಅನಿರ್ವಚನೀಯವಾದುದಾಗಿರುತಿದೆ. ಬಹುಮಂದಿ ಜ್ವರ ಪೀಡಿತರಾಗಿ ಕ್ಲೇಶ ಪಡುತಲಿದ್ದಾರೆ. ಇದರಿಂದ ಅವರ ವಿಚಾರವು ದಿನೇದಿನೆ ವೃದ್ಧಿಯನ್ನೈದುತ ಬರುತಲಿದೆ. ಅಂತಾ ಸಾಂಕ್ರಾಮಿಕ ಜ್ವರವಾವುದೆನ್ನುವಿರೋ, ಅದು ಧಾರಾಳವಾಗಿ ತಿನ್ನುವದಕ್ಕಿಲ್ಲದ್ದರಿಂದ ಉಂಟಾದ ಮನೋಜ್ವರವಾಗಿಯೂ, ನೀಗಲಂತಾ ಪ್ರಬಲ ವಿಚಾರಉಳ್ಳದ್ದಾಗಿಯೂ ಇರುತಿದೆ. ಬೇಕಾದ ಪದಾರ್ಥಗಳೇನೋ ದೊರೆಯುತಿವೆ. ಪರಂತು ಅವು ಬಡವರ ಶಕ್ತಿಗೆ ದೂರವಾದುದಾಗಿ ಕೈಗೆ ದೊರೆಯಲೊಲ್ಲವು, ಪದಾರ್ಥಾಕರ್ಷಕ ಶಕ್ತಿಯುಕ್ತವಾದ ದ್ರವ್ಯಸಾಧನವು ಅಲಭ್ಯವಾಗಿ ಅಥವಾ ಅತ್ಯಲ್ಪವಾಗಿರುವದರಿಂದ ಸುಖವೆಂಬುದು ಯಾತ್ರೆಹೋದಂತೆ ದೃಷ್ಟಿಗೆ ಬೀಳುವದಾಗಿಲ್ಲವು. ಪ್ರಾಣವಾಹಕ್ಕೆ ಮುಖ್ಯವಾದ ವಸ್ತುಗಳಲ್ಲಿ ಮೊದಲನೆಯದು ಉದಕವು, ಅದು ಅನ್ಯತ್ರ ಅಲಭ್ಯವಾಗಿರುವದರಿಂದ ತಲ್ಲೀನವು ಹೃದಯ ಸಂತಾಪಜನ್ಯವಾದ ಶೋಕೋದ್ರೇಕದಿಂದಲೇ ನಿವೃತ್ತಿಯಾಗಬೇಕಾದುದಾಗಿರುತಿದೆ. ದೊರೆಯದ ಪದಾರ್ಥಗಳನ್ನಾಶಿಸುವದು ಮನುಷ್ಯನಬುದ್ಧಿಕೃತದೋಷವಾಗಿರುತಿದೆ. ತದ್ದೋಷವು ಆಶೆಯೆಂಬುದರಿಂದುಂಟಾಗುತಿದೆ. ಮಾಯಾರೂಪವಾದ ಆಶೆಯೆಂಬದು ಮನುಷ್ಯನ ಅಉತ್ಪತ್ತಿಯಿಂದುಂಟಾಗತಕ್ಕದ್ದಾಗಿರುತಿದೆ, ತಥಾಪಿ ಅಶನ ವಸನ ರಹಿತವಾದ ದಾರಿದ್ರ್ಯವು ಬಹಳ ಅನುತಾಪಕರವಾದುದಾಗಿರುತಿದೆ. ಮೇಲೆ ಕಂಡ ಅನುತ್ಪತ್ತಿಯೆಂಬ ದುಃಖವು ಶರೀರ ಪರಿಗ್ರಹದಿಂದುಂಟಾದುದೆಂದು ತೋರುತಿದೆಯಾಗಿ ತನ್ನಿವೃತ್ತಿಯೇ ದುಃಖ ನಿವೃತ್ತಿಯಾಗಿ ಭಾವಿಸಿ ಉಪಾಯವಂ ಹುಡುಕಬೇಕಾಗಿದೆ ದರಿದ್ರನಿಗೆ ಮಕ್ಕಳು ನಿಧಿಗಳೆಂಬ ಗಾದಿಯಂತೆ ಸುದಾರಿಸುವದಕ್ಕಿಂತ ಅಧಿಕವಾಗಿ ಪ್ರಜಾವೃದ್ಧಿಯಾಗುತಬರುವದರಿಂದ ಅಪೇಕ್ಷಾನುಗುಣವಾಗಿ ಪದಾರ್ಥಗಳನ್ನೆಲ್ಲ ವಿಳಂಬವಾದರೆ ಒದಗಿಸಿ ಕೊಡುತಲಿದ್ದರೇನೆ ತಮ್ಮ ಮಾತಾಪಿತೃಗಳು ನಿಲ್ಲಲು ಕೂರಲು ಬಿಡದೆ ತೂಗುತಲೂ ಮಕ್ಕಳು ಪೀಳಿತೆಯನು ಗೌರವಿಸುತ್ತಾರೆ ಇಲ್ಲದಿದ್ದರೆ ಮಕ್ಕಳು ವ್ಯಾಕರಣಿಗಳಲ್ಲಿ ಅರಣ್ಯಕ ರಾತಿಯೊಳು ಸಂಚರಿಸಿಬಿಡುತ್ತಾರೆ. ಬುದ್ಧಿ ಶೀಘ್ರಗಾಗಿಯಾದರೂ ಉತ್ಪತ್ತಿಯಂ ಹಿಡಿದು ಅವರು ತಮ್ಮ ಮಕ್ಕಳಂ ತೃಪ್ತಿಪಡಿಸಬೇಕಾಗಿದೆ. ಕರ್ಜುಬಾಬುಗಳೇನೂ ಈ ರೀತಿ ನಿರ್ವಾಹವಿಲ್ಲದೆ ಯೋಚಿಸುತಿವೆ. ಆ ಯತಿಯು ಸ್ಮರಿಸಬೇಕಾದು ಪೇಯಿಲ್ಲವು. ಅರ್ಥದಿಂದಾಗಬೇಕಾದ ಪ್ರಯೋಜನವನ್ನು ಅಪೇಕ್ಷಿಸದಿದ್ದರೆ ವಿಕ್ಕ ಸಕಲ ಸೌಖ್ಯಗಳಂ ಕೊರತೆಯಿಲ್ಲದೆ ಹೊಂದಬಹುದು. ಈಗ ಬೇಕಾದಕಡೆಗೆ ಧಾರಾಳವಾಗಿ ಹೋಗಲಿಕ್ಕೆ ವಿಶಾಲವಾದ ರಸ್ತೆಗಳೇರ್ಪಟ್ಟಿವೆ. ಇಷ್ಟಬಂದ ದೇಶಕ್ಕೆ ಹೋಗಿ ಬರಲಿಕ್ಕೆ ರೈಲ್ವೆ ಕಾದಿರಿವೆ, ಕ್ಷಣಮಾತ್ರದಲ್ಲಿ ಪರಸ್ಪರ ಯೋಗಕ್ಷೇಮಗಳಂ ತಿಳಿದುಕೊಳ್ಳಲಿಕ್ಕೆ ತಂತಿ ಟೆಲಿಗ್ರಾಫ್ ವಗೈರೆ ಸಾಧನಗಳು ಕಲ್ಪಿಸಲ್ಪಟ್ಟಿವೆ. ಸ್ಕೂಲುಗಳೂ ಆಸ್ಪತ್ರೆಗಳೂ, ನಾಟ್ಯರಂಗಗಳೂ, ವಿನೋದ ಸ್ಥಾನಗಳೂ, ವಿನೋದ ಸಾಮಗ್ರಿಗಳೂ, ಸುಖಾನುಭವ ಪಿಧಾನಗಳೂ ಬೇಕಾದಂತೆ ಕಲ್ಪಿಸಲ್ಪಟ್ಟಿವೆ ಆದರೆ ಜನರಿಗೆ ಕಷ್ಟವೂ ಪ್ರಯಾಸವೂ ನಿಯತವಾಗಿಯೂ, ಸುಖವೂ ಲಾಭವೂ ಕೇವಲ ಮಾನಸಿಕವಾಗಿಯೂ ತೋರಿಪಟ್ಟದರಿಂದ ಜನರು ಸುಖವಾಗಿದಾರೆಂದು ನಾನು ಭಾವಿಸಲಾರೆನು. ಪ್ರಜೆಗಳಿಗೆ ಸುಖವು ಕೊಡ್ಡದೆ ಜಮೀಲ ಯಾವದಿದ್ದರೇನು ಪ್ರಯೋಜನವು

## Occasional Notes.
## ನೈಮಿತ್ತಿಕ ವಿಷಯನ್ಯಾಸ.

ಮುಂದಿನ ಸರ್ಕಾರ್ ಸಾಲಿನಲ್ಲಿ ಇಂಡ್ಯ ದೇಶದ ನೀರಾವರೀ ಕಾಮಗಾರಿಯ ಬಗ್ಗೆ ಇಂಡಿಯಾ ಸರ್ಕಾರದಿಂದ ೭೫ ಲಕ್ಷ ರೂಪಾಯಿಗಳು ಕೊಡಲ್ಪಡುವವು.

---

ಕೊಚ್ಚಿ ಸಂಸ್ಥಾನದ ಪನೆಕ್ಕಂಡನೆಯ ರಾಜಕುಮಾರರು ಮದರಾಸ್ ಪ್ರಸಿಡೆನ್ಸಿ ಕಾಲೇಜಿನಲ್ಲಿ ವಿದ್ಯಾಭ್ಯಾಸಂಗಮಾಡುತ ಈಸಲ ಎಫ್. ಏ. ಪರೀಕ್ಷೆಯಲ್ಲಿ ತೇರ್ಗಡೆಯಾದರೆಂದು ಕೇಳಿ ಸಂತೋಷಿಸುತ್ತೇವೆ.

---

ಕಾಬೂಲ್ ಅಮೀರರವರು ಮುಂದಿನ ಮಾರ್ಚ್ ತಿಂಗಳಲ್ಲಿ ಇಂಗ್ಲೀಷಿನವರ ಮೇಲೆ ಯುದ್ಧಮಾಡುವ ಉದ್ದೇಶದಿಂದ, ಮತ ಸಂರಕ್ಷಣಾರ್ಥವೆಲ್ಲರು ತಮ್ಮ ಪಕ್ಷವನ್ನವಲಂಬಿಸಿ ಬರಬೇಕೆಂದು ಪ್ರಾರ್ಥಿಸಿ ಮುಲ್ಲಾಜಾತಿಯ ಜನರನ್ನು ಗುಂಪುಗೂಡಿಸುತಲಿದ್ದಾರೆಂದು ಸಿವಿಲ್ ಮಿಲಿಟರಿ ಗಜೆಟ್ ಪತ್ರಿಕೆಯ ಸರಹದ್ದು ಪ್ರಾಂತದ ಬಾತ್ಮೀದಾರನು ಬರೆಯುತ್ತಾನೆ.

---

ಈ ಸಲ ಕಲಕತ್ತೆ ಯೂನಿವರ್ಸಿಟಿ ಪರೀಕ್ಷೆಗೆ ಹೋಗಿದ್ದವರ ಪೈಕಿ ೨೬ ಮಂದಿ ಎಂ.ಏ. ಪರೀಕ್ಷೆಯಲ್ಲೂ, ೩೦೩ ಮಂದಿ ಬಿ. ಏ. ಪರೀಕ್ಷೆಯಲ್ಲೂ, ೧೫೭ ಮಂದಿ ಬಿ ಎಲ್. ಪರೀಕ್ಷೆಯಲ್ಲೂ, ೬೦ ಮಂದಿ ವೈದ್ಯ ಮತ್ತು ಶಸ್ತ್ರಚಿಕಿತ್ಸೆಯಲ್ಲೂ, ೫ ಮಂದಿ ಇಂಜಿನಿಯರ್ ಪರೀಕ್ಷೆಯಲ್ಲೂ ತೇರ್ಗಡೆಯಾಗಿ, ಡಿಗ್ರಿಗಳೆಂಬ ಪ್ರಶಸ್ತಿಗಳು ಕೊಡಲ್ಪಟ್ಟರು.

---

ಈ ತಿಂಗಳ ೩ ನೇ ತಾರೀಖಿನಲ್ಲಿ ಸೇರಿದ ಹೌಸ್ ಆಫ್ ಕಾಮನ್ಸ್ ಸಮಾಜದೊಳು ಸದರೀ ಸಭೆಯ ಮೆಂಬರೊಬ್ಬರು ಕೇಳಿದ ಪ್ರಶ್ನೆಗೆ ಉತ್ತರರೂಪವಾಗಿ, ಇಂಡ್ಯದೇಶದೊಳು ಜನರು ಅಫೀಮ್ ತಿನ್ನುವ ವಾಡಿಕೆಯನ್ನು ಮತ್ತಷ್ಟು ನಿರ್ಬಂಧಕ್ಕೊಳಪಡಿಸಬೇಕಾದ ವಿಷಯದಲ್ಲಿ ಯಾವ ಪ್ರಯತ್ನ ಮಾಡಬೇಕೋ ಅದಂ ಕುರಿತು ಗವರ್ನಮೆಂಟಿನವರು ಯೋಚಿಸುತಲಿದಾರೆಂದು ಇಂಡಿಯಾ ಅಂಡರ್ ಸೆಕ್ರೆಟರಿಯವರು ತಿಳಿಸಿದರು.

---

ಗ್ವಾಲಿಯರ್ ಸಂಸ್ಥಾನದ ಮಹಾರಾಜರವರು ಶೀಘ್ರದಲ್ಲಿ, ತಮ್ಮ ಸಂಸ್ಥಾನದ ಉದ್ಯೋಗಸ್ಥರನೇಕರೊಡನೆಯೂ, ಇತರ ಪರಿಜನ ಪರಿಚಾರಕರೊಡನೆಯೂ ಪ್ರಯಾಗೆ ಮತ್ತು ಕಾಶಿಯಾತ್ರೆ ಹೊರಡುವವರಾಗಿರುತ್ತಾರೆ. ಕೊಚ್ಚಿ ಅರಸರವರು ಈತಿಂಗಳು ೯ನೇ ತಾರೀಖಿನಲ್ಲಿ ಪ್ರಯಾಗೆ ಸೇರುತ್ತಾರೆ ಈ ಕಾಲದಲ್ಲಿ ನೇಟಿವ್ ಸಂಸ್ಥಾನಾಧಿಪತಿಗಳಿಗೆ ತೀರ್ಥಯಾತ್ರೆಯಲ್ಲಿ ಆದರವುಂಟಾದದ್ದು ಸಂತೋಷಕಾರಿಯಾಗಿರುತಿದೆ.

## LOCAL AND PROVINCIAL NEWS
## ಒಳದೇಶ ಮತ್ತು ತಾಲ್ಲೂಕ ಜಾತಿ ವೃತ್ತಾಂತಗಳು.

ಈ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಕರ್ನಲ್ ಪಿ. ಡಿ. ಹೆಂಡರ್ಸನ್ ಸಾಹೇಬರವರು ನಿನ್ನೆಯದಿನ ಮಧ್ಯಾಹ್ನತ್ತರ ರಯಿಲುಮಾರ್ಗವಾಗಿ ಕೋಡಗಿಗೆ ಪ್ರಯಾಣಮಾಡಿದರು.

---

ಈ ಸಂಸ್ಥಾನದ ಚಿಲ್ಲರೆ ನೌಕರಮಾಡೋಕರಸ್ಥರಿಗೆ ಅಮಲ್ದಾರರಿಗೂ, ದೆಪ್ಯುಟಿ ಅಮಲ್ದಾರರಿಗೂ ದಾಯಾದಿಗಳಾಗಿರುವಂತೆವರ ಹೆಸರುಗಳನ್ನು ಜಾಗ್ರತೆಯಲ್ಲಿ ತಿಳಿಸಬೇಕೆಂದು ಎಲ್ಲಾ ಡಿಪ್ಯುಟಿ ಕಮಿಷನರನ್ನೂ ಮತ್ತು ಡಿಪಾರ್ಟ್ಮೆಂಟುಗಳ ಹೆಡ್ ಆಫೀಸರನ್ನೂ ಕೇಳಿರುತ್ತಾನೆ.

---

ಮೈಸೂರು ಸಂಸ್ಥಾನದ ಕೆಂಪಿ ಇಜಾರೇದಾರರಿಂದ ಯಳಂದೂರು ಜಹಗೀರ್ ದಾರರಿಗೆ ೧೮೮೧ನೇ ಇಸವಿ ಎಪ್ರೈಲ್ ಗುರ್ರೀ ಆಗಾಯಿತು ೧೮೯೧ ನೇ ಇಸವಿ ಮಾರ್ಚಿ ೩೧ ರ ವರಿಗೆ ಮಾಪೆ ೧೫೦೦ ರೂಪಾಯಿನಂತೆ ಇಜಾರೇಹಣವು ಪಾವತಿ ಮಾಡತಕ್ಕದೆಂದು ಗವರ್ನಮೆಂಟಿನವರು ತೀರ್ಮಾನಿಸಿರುತ್ತಾರೆ.—ವೃ ಪ

---

ಈ ಸಂಸ್ಥಾನದ ದಿವಾನರಾದ ಸರ್. ಕೆ. ಶೇಷಾದ್ರಿ ಅಯ್ಯರ್ ಕೆ. ಸಿ. ಎಸ್ ಐ. ಯವರು ಈದಿನ ಅರಸೀಕೆರೆಪ್ರಾಂತಕ್ಕೆ ಸರ್ಕ್ಯೂಟ್ ದಯಮಾಡುತ್ತಾರೆ. ಪ್ರಾಯಶಃ ಈತಿಂಗಳ ೨ನೇ ತಾರೀಖು ದುಮಾರಿಗೆ ಇಲ್ಲಿಗೆವಾಪಸುಬಂದು ಕೂಡಲೇ ಶ್ರೀಮನ್ಮಹಾರಾಜರವರ ವರ್ಷವರ್ಧಂತೀ ಮಹೋತ್ಸವಕ್ಕೆ ಮೈಸೂರಿಗೆ ದಯಮಾಡಬಹುದೆಂದು ಕಾಣುತಿದೆ.

---

ಈಚೆಗೆ ಕಾಕನಕೋಟೆ ಕಾಡಿನಲ್ಲಿ ಹಿಡಿಯಲ್ಪಟ್ಟ ಮುವತ್ತೊಂಬರು ಆನೆಗಳು ಈ ಪ್ರಾಂತಿಗೆ ತರಲ್ಪಟ್ಟು, ತತ್ಕಾಲದೊಳು ಇಲ್ಲಿ ಉಂಟಾಗಿರುವ ತೃಣಪಾಪವನಂ ಯೋಚಿಸಿ, ಕಾಡುಗುಡಿ ಪ್ರಾಂತಕ್ಕೆ ಸಾಗಿಸಲ್ಪಟ್ಟವು. ಅಲ್ಲಿಂದ ಈ ತಿಂಗಳ ೧೧ನೇ ತಾರೀಖಿನಲ್ಲಿ ಮದರಾಸ್ ರೈಲ್ವೇ ಮಾರ್ಗವಾಗಿ ಪಾಲಘಾಟಿಗೆ ಕಳುಹಿಸಲ್ಪಟ್ಟು ಅಲ್ಲಿ ಹರಾಜ್ ಮೂಲಕ ವಿಕ್ರಯಿಸಲ್ಪಡುವವು.

---

ಮದರಾಸ್ ಹಿಂದೂ ಎಂಬ ಪತ್ರಿಕೆಯಲ್ಲಿ, ಈ ಪ್ರಾಂತೊಳಿರುವ ಮಹಾರಾಜರವರ ಅರಳಿ ಯಂತ್ರದ ಕಾರ್ಖಾನೆಯ ವಿಷಯದಲ್ಲಿ ಗೌರವಹಾನಿಕರವಾದ ಕೆಲವು ಬರವಣಿಗೆಗಳು ಪ್ರಕಟಿಸಲ್ಪಟ್ಟಂತೆಯೂ, ಅದಕ್ಕಾಗಿ ಸದರೀ ಕಾರ್ಖಾನೇದಾರರು ಹಿಂದೂ ಪತ್ರಿಕೆಯಮೇಲೆ ಯೆರಡು ಲಕ್ಷ ರೂಪಾಯಿಗಳಿಗೆ ಮದರಾಸ್ ಹೈಕೋರ್ಟಿನಲ್ಲಿ ಮಾನನಷ್ಟ ದಾವೆ ದಾಖಲುಮಾಡಿರುವಂತೆಯೂ ಮದರಾಸ್ ಮೇಯಿಲ್ ಪತ್ರಿಕೆ ತಿಳಿಸುತಿದೆ.

ಚಿಕ್ಕಮಗಳೂರು ಆಸ್ಪತ್ರೆಯ ಕಂಪೌಂಡಿನಲ್ಲೇ ಯೂರೋಪಿಯನ್ ಪ್ಲಾಂಟರುಗಳ ಉಪಯೋಗಕ್ಕೋಸ್ಕರವಾಗಿಯೇ ಒಂದು ವಾರ್ಡಬಂಗಲೆಯನ್ನು ಕಟ್ಟಿಸಿಕೊಡುವದಾಗಿ ಮೈಸೂರು ಸರಕಾರದವರು ಒಪ್ಪಿ, ಅದಕ್ಕೆ ಬೇಕಾಗುವ ಸ್ಥಳವನ್ನು ಕೊಂಡುಕೊಳ್ಳುವದಕ್ಕೂ, ಕಟ್ಟಡವನ್ನು ತಯಾರುಮಾಡುವದಕ್ಕೂ ಪ್ಲಾಂಟರುಗಳು ಚಂದಾಹಾಕಿರುವ ೬೦೦ ರೂಪಾಯಿಗಳನ್ನು ಅಂಗೀಕರಿಸಿರುತ್ತಾರೆ; ಮತ್ತು ಈ ವಿಷಯಕ್ಕಾಗಿ ಅಲ್ಲಿನ ಡೆಪ್ಯುಟಿಕಮಿಷನರವರಿಗೆ ಹುಕುಂ ಸಹ ಕೊಟ್ಟಿರುತ್ತಾರೆ.

---

ಈಚೆಗೆ ದಿನೇದಿನೆ ಚಳಿಕಡಮೆಯಾಗುತ ಬಿಸಿಲು ಜೋರುಕಾಗುತ ಬರುತಲಿದೆ. ಈವೇಳೆಗೆ ಮುಖ್ಯಾಧಾರವಾಗಿರುವ ಧರ್ಮಾಂಬುಧಿಕೆರೆಯಲ್ಲಿ ನೀರು ಇನ್ನು ಹದಿನೈದುದಿನಗಳತನಕ ಸ್ವಲ್ಪ ಸಿಕ್ಕಬಹುದು. ತರುವಾಯ ನೀರಿನವಿಷಯದಲ್ಲಿ ಪ್ರಜೆಗಳು ಯಾತಾಕಷ್ಟಕ್ಕೆ ಗುರಿಯಾಗಬೇಕೋ ತಿಳಿಯಲಿಲ್ಲವು. ಮುಂಗಾರೆಯ ಮಳೆಯೆಂಬದು ಮೂರುತಿಂಗಳ ಆಚೆಯಿದೆ, ಜಲಕ್ಷಾಮವೆಂಬದು ಕೇವಲ ಸಮೀಪದಲ್ಲಿದೆ. ದೈವಯೋಗವೆಂಬದು ಹ್ಯಾಗಿರುವುದೋ ಹೇಳುವದಕ್ಕಾಗುವದಿಲ್ಲವು. ಆಹಾರ ಪದಾರ್ಥಗಳ ದಾರಣೆಗಳು ಪ್ರಾಯಶಃ ಒಂದೇವಿಧವಾಗಿವೆ ಕಲ್ಮಲಪೂರಿತವಾದ ಕರೆನೀರಿನಪಾನದಿಂದ ಜ್ವರಾದ್ಯುಪದ್ರವಗಳು ಅಲ್ಲಿಯಲ್ಲಿ ವ್ಯಾಪಿಸಿವೆ. ದನಗಳಿಗೆ ನೀರೂ ಮೇವೂ ದಿನೇದಿನೆ ದುರ್ಲಭವಾಗುತ ಬರುತಲಿವೆ. ಮುಂಗಾರೆಯೊಳಗಾಗಿ ಜನಗಳಿಗೂ ದನಗಳಿಗೂ ಕಷ್ಟ ಪ್ರಾಪ್ತವಾಗುವದೆಂಬದಕ್ಕೆ ಈಗಲೇ ಬಹುವಿಧ ಸೂಚನೆಗಳು ಕಾಣಬರುತಲಿವೆ.

---

ಕಳೆದ ತಿಂಗಳ ೩೧ ನೇ ತಾರೀಖಿನೊಳು ಮೈಸೂರು ಷಹರ್ ಮ್ಯುನಿಸಿಪಲ್ ಮೆಂಬರುಗಳು ಮೀಟಿಂಗ್ ಸೇರಿದ ಕಾಲದಲ್ಲಿ, ಸದರೀ ಷಹರ್ ಮ್ಯುನಿಸಿಪಲ್ ಸರಹದ್ದಿನೊಳಗೆ ಗೋವುಗಳನ್ನೂ ಯೆತ್ತುಗಳನ್ನೂ ವಧಿಸಕೂಡದೆಂಬ ನಿರ್ಬಂಧನನ್ನುಂಟುಮಾಡಬೇಕೆಂದು ಒಂದು ನಿರ್ಣಯವು ಮಾಡಲ್ಪಟ್ಟಿತೆಂದು ಪ್ರಸ್ತಾಪವಶಾತ್ ತಿಳಿಸುವ ಸಂದರ್ಭದೊಳು ಸದರೀ ಮೀಟಿಂಗಿನಲ್ಲಿ ಹನ್ನೆರಡುಮಂದಿ ನೇಟಿವ್ ಮೆಂಬರುಗಳಿದ್ದರೆಂತಲೂ, ಸಿವಿಲ್ ಸರ್ಜನ್ರು, ಮಹಾರಾಜರವರ ಕಾಲೇಜ್ ಪ್ರಿನ್ಸಿಪಾಲರು ಮತ್ತು ಮೆಜಿಸ್ಟ್ರೇಟ್ ಡಿಷಲೀಯವರು ಹಾಜರಿರಲಿಲ್ಲವೆಂದು ಒಳದೇಶದ ಸ್ಪೆಕ್ಟೇಟರ್ ಪತ್ರಿಕೆ ತಿಳಿಸುವ ಅಭಿಪ್ರಾಯವಂ ಯೋಚಿಸಲಾಗಿ, ಹನ್ನೆರಡು ಮಂದಿ ನೇಟಿವ್ ಮೆಂಬರುಗಳ ಅಭಿಪ್ರಾಯಕ್ಕಿಂತಲೂ ಮೂವರು ಯೂರೋಪಿಯನ್ ಮೆಂಬರುಗಳ ಅಭಿಪ್ರಾಯವು ಬಲಿಷ್ಠವಾದದ್ದೆಂಬತಾತ್ಪರ್ಯವೋ ಅಥವಾ ಯೂರೋಪಿಯನ್ನರ ಅಭಿಪ್ರಾಯಾನುಗುಣವಾಗಿನೇಟಿವ್‌ಗಳು ನಡೆದುಕೊಳ್ಳುವದಕ್ಕೆ ಬದ್ಧರಾಗಿರುತ್ತಾರೆಂಬ ಭಾವವೋ ಸ್ಪಷ್ಟವಾಗಲಿಲ್ಲವು. ಒಂದು ವೇಳೆ ಅಂತಾ ಭಾವವಿರುವ ಪಕ್ಷಕ್ಕೆ ಆಯಾ ಮೆಂಬರುಗಳಂ ಚುನಾಯಿಸಿಕೊಳ್ಳುವ ಅಧಿಕಾರವು ಗವರ್ನಮೆಂಟಿನವರು ಪ್ರಜೆಗಳಿಗೆ ಉಂಟುಮಾಡುವದಕ್ಕೆ ಪೂರ್ವ ಒಂದು ವೇಳೆ ಒಪ್ಪತಕ್ಕದ್ದಾಗಿದ್ದಾಗ್ಯೂ ಇರಬಹುದೇಹೊರತು ಈ ಕಾಲದಲ್ಲಿ ಸಲ್ಲಲಾರದು.

## THE MYSORE GAZETTE.
## ಮೈಸೂರು ಗೆಜೆಟ್.

ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಷ್ತಿಹಾರ್‌ನಾಮೆಗಳು

ನಂ. ೧೩೭೯—೮೬೩ ತಾ|| ೧ ನೇ ಫೆಬ್ರುವರಿ, ೧೮೯೩ — ಸರ್. ಕೆ. ಶೇಷಾದ್ರಿ ಅಯ್ಯರ್ ಕೆ. ಸಿ. ಎಸ್. ಐ. ಯವರು ಘನವನ್ನೈದಿದ ಶ್ರೀಮನ್ ಮಹಾರಾಜರೊಡನೆ ಕಲ್ಕತ್ತೆಯಿಂದ ವಾಪಸ್ ದಯಮಾಡಿದರಾದಕಾರಣ, ಅವರು ಮೈಸೂರು ಸಂಸ್ಥಾನದ ದಿವಾನಗಿರಿಯ ಚಾರ್ಜನ್ನು, ೧೮೯೩ ನೇ ಇಸವಿ ಜನವರಿ ೩೦ ನೇ ತಾರೀಖಿನ ಪೂರ್ವಾಹ್ನದಲ್ಲಿ ತೆಗೆದುಕೊಂಡಿರುತ್ತಾರೆ.

ನಂ. ೧೬೩೦೩ G. ೬೬೩೮ ತಾ|| ೬ನೇ ಫೆ

ಜನವರಿ, ೧೮೯೩.—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೮೮ನೇ ಆರ್ಟಿಕಲಿನ ಪ್ರಕಾರಗಳನ್ನನುಸರಿಸಿ, ಚಿಕ್ಕಮಗಳೂರು ಸಬ್ ಅಸಿಸ್ಟೆಂಟ್ ಸರ್ಜನ್ ಮ॥ ಸಿ. ಎ. ಸುಬ್ಬಣ್ಣನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯಿತು ಹತ್ತು ದಿವಸಗಳ ರಜಾ ಕೊಡಲ್ಪಟ್ಟಿರುತ್ತದೆ.

ನಂ. ೧೨೭೦೫ G. ೨೩೩೬.—ಮುಚ್ಚೂರ ಆಸ್ಪತ್ರೆಯಲ್ಲಿ ಕೆಲಸ ನೋಡುತಲಿರುವ ಅಸಿಸ್ಟೆಂಟ್ ಸರ್ಜನ್ ಮ॥ ಬಿ. ಕೆ. ರಾಘವೇಂದ್ರರಾಯರವರಿಗೆ ೧೮೯೨ನೇ ಇಸವಿ ಡಿಸಂಬರ್ ೨೭ನೇ ಮಹಜರ್ ೧೧೯೬೬-G. ೨೪೦೨ ನೇ ನಂಬರ್ ಆಸ್ಪತ್ರೆಯ ಮೂಲಕ ಕೊಡಲ್ಪಟ್ಟಿದ್ದ ೩೦ ದಿವಸಗಳ ಪ್ರಿವಿಲೇಜ್ ರಜಾ ಇನ್ನೂ ೧೫ ದಿನಗಳ ತನಕ ಜಾಸ್ತಿ ಮಾಡಲ್ಪಟ್ಟಿರುತ್ತದೆ.

ನಂ. ೧೨೭೦೩-G. ೨೩೩೮.—ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್ ೧೨ ನೇ ಸೆಕ್ಷನ್ ಅನುಸರಿಸಿ ಯಳಂದೂರು ಮುನಸಬ್ ಮ॥ ಮಂಜಯ್ಯ ಬಿ. ಎ. ಬಿ. ಎಲ್. ಯವರಿಗೆ ಯೆರಡನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತವೆ.

ನಂ. ೧೨೭೮೮-G. ೨೩೦೧.—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೩೧ ನೇ ಆರ್ಟಿಕಲ್ ಅನುಸರಿಸಿ ಕೃಷ್ಣರಾಜಪೇಟೆ ತಾಲ್ಲೂಕ್ ಅಮಲ್ದಾರ್ ಕೃಷ್ಣಮೂರ್ತಿ ರಾಯರವರಿಗೆ ೧೮೯೩ ನೇ ಇಸವಿ ಜನವರಿ ೧೮ ನೇ ತಾರೀಖ್ ಮೊದಲು ೩ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ನಂ. ೧೨೭೮೬-G. ೨೩೦೩.—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೩೧ ನೇ ಆರ್ಟಿಕಲ್ ಅನುಸರಿಸಿ, ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಅಸಿಸ್ಟೆಂಟ್ ಕನಸರ್ವೇಟರ್ ಮ॥ ವೈ. ಸೀತಾರಾಮಯ್ಯಂಗಾರವರಿಗೆ ೧೮೯೨ ನೇ ಇಸವಿ ಡಿಸಂಬರ್ ೫ ನೇ ತಾರೀಖ್ ಲಾಗಾಯಿತು ೩ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತದೆ.

ನಂ. ೧೩೦೧೩-G. ೨೩೩೩ ತಾ॥ ೨೬ ನೇ ಜನವರಿ ೧೮೯೩.—ಇದರಡಿ ತಿಳಿಸಲ್ಪಟ್ಟ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್‌ಗಳು ೧ ವರುಷ ಕಾಲ ಸಮರ್ಪಕವಾಗಿ ನೌಕರಿ ಮಾಡಿದ್ದರಿಂದ ಅವರು, ಅವರವರ ಹೆಸರಿಗೆ ಬಾಜೂನಲ್ಲಿ ತಿಳಿಸಿರುವ ತಾರೀಖ್ ಲಾಗಾಯಿತು ೪ ನೇ ಕ್ಲಾಸ್ ಅಸಿಸ್ಟೆಂಟ್ ಕಮಿಷನರ್‌ಗಳಾಗಿ ಇದರಿಂದ ಕಾಯಂ ಮಾಡಲ್ಪಟ್ಟಿರುತ್ತಾರೆ.

| | | |
|---|---|---|
| ಮ॥ ರಾಮಸ್ವಾಮಯ್ಯಂಗಾರ್, | ತಾ॥ ೧೬ನೇ ಡಿಸಂಬರ್, ೯೨ | |
| „ ರಾಮರಾವ್, | ೪೦ ನೇ | „ |
| „ ಸಿ. ಶ್ರೀಕಂಠೇಶ್ವರಅಯ್ಯರ್, ಬಿ. ಎ. ಬಿ. ಎಲ್. | ೨೪ನೇ | „ |
| „ ಟಿ. ಪರಮಶಿವಯ್ಯರ್, ಬಿ. ಎ. | ೧೯ ನೇ | „ |

ನಂ. ೧೩೦೪೨-G. ೨೯೦೮-ತಾರೀಖ್ ೨೭ನೇ ಜನವರಿ ೧೮೯೩.—ಇದರಡಿ ಕಂಡ ನೌಕರರಾತಿಗಳೂ ಬದಲಾವಣೆಗಳೂ ಹುಕುಂ ಮಾಡಲ್ಪಟ್ಟಿರುತ್ತವೆ.

೧. ಕೋಲಾರ್ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ಮ॥ಎ. ಕಾಳಪ್ಪಸ್ವಾಮಿ ಮುದಲಿಯಾರ್‌ರವರು, ಮೈಸೂರ್ ಟೌನ್ ಮ್ಯಾಜಿಸ್ಟ್ರೇಟರಾಗಿ ನಿಯಮಿಸಲ್ಪಟ್ಟಿರುತ್ತಾರೆ. ಬಿಡುಗಡೆ ಮಾಡಲ್ಪಟ್ಟ ಕೂಡಲೆ ಕೆಲಸದಮೇಲೆ ಹೋಗಿ ಹಾಜರಾಗತಕ್ಕದ್ದು.

೨. ಬೆಂಗಳೂರು ಮ್ಯುನಿಸಿಪಲ್ ವೈಸ್ ಪ್ರಸಿಡೆಂಟ್ ಮ॥ ಕೆ. ಶ್ರೀನಿವಾಸರಾಯರವರು ಮೈಸೂರು ಮ್ಯುನಿಸಿಪಲ್ ಕಾಮೆಟಿಯ ಅಂದರೆ ಅದೇ ಕೆಲಸವುಳ್ಳ, ವೈಸ್ ಪ್ರಸಿಡೆಂಟರಾಗಿ ನೌಕರರ್ರಾಗಿಲ್ಪಟ್ಟಿರುತ್ತಾರೆ. ಬಿಡುಗಡೆ ಮಾಡಲ್ಪಟ್ಟ ಕೂಡಲೆ ಕೆಲಸದ ಮೇಲೆ ಹೋಗಿ ಹಾಜರಾಗತಕ್ಕದ್ದು.

೩. ಪಬ್ಲಿಕ್‌ವರ್ಕ್ಸ್ ಇಲಾಖಾ ಅಪ್ರೆಂಟಿಸ್ ಇಂಜನಿಯರ್ ಮ॥ ಸುಂದರಂ ಅಯ್ಯರವರು ಮೈಸೂರು ಮ್ಯುನಿಸಿಪಲ್ ಇಂಜನಿಯರಾಗಿ ನೌಕರರಾಗಲ್ಪಟ್ಟಿರುತ್ತಾರೆ. ಇವರು ಕೂಡಲೆ ಹೋಗಿ ಹಾಜರಾಗತಕ್ಕದ್ದು.

೪. ಕಡೂರ್ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ಮ॥ ಕೆ. ರಾಮಸ್ವಾಮಯ್ಯಂಗಾರ್ ಎಂ. ಎ. ಯವರು ಬೆಂಗಳೂರ್ ಮ್ಯುನಿಸಿಪಲ್ ವೈಸ್ ಪ್ರಸಿಡೆಂಟರಾಗಿ ನೌಕರರ್ರಾಗಲ್ಪಟ್ಟಿರುತ್ತಾರೆ. ಮ॥ ನಾರಣಯ್ಯಂಗಾರ್‌ರವರು ರಜಾವಿನಿಂದ ವಾಪಸ್ ಬಂದು ಬಿಡುಗಡೆ ಮಾಡಿದ ಕೂಡಲೇ ಕೆಲಸದಮೇಲೆಹೋಗಿ ಹಾಜರಾಗತಕ್ಕದು.

೫. ಮೈಸೂರು ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ಮ॥ ಎಸ್. ನರಸಿಹ್ಮಯ್ಯಂಗಾರ್‌ರವರು ಜನರಲ್ ಡ್ಯೂಟಿ ಬಗ್ಗೆ ಕೋಲಾರ್ ಡಿಸ್ಟ್ರಿಕ್ಟಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ. ಇವರು ಮ॥ ಕೆ. ಶ್ರೀನಿವಾಸ ರಾಯರಿಂದ ಬಿಡುಗಡೆಯಾದ ಕೂಡಲೆ ಕೆಲಸದಮೇಲೆ ಹೋಗಿ ಹಾಜರಾಗತಕ್ಕದ್ದು.

ನಂ ೧೩೧೮೦-G. ೨೯೧೮.—ನಾಗಮಂಗಲ ತಾಲ್ಲೂಕ್ ಅಮಲ್ದಾರ್ ಖಾದರ್ ಅಲ್ಲಿ ಯವರಿಗೆ ೧೮೯೩ ನೇ ಇಸವಿ ಜನವರಿ ೧೨ ನೇ ತಾರೀಖ್ ಮೊದಲು ೬ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತದೆ.

---

ಇದರಡಿಕಂಡರೆಗ್ಯುಲೇಷನ್‌ಗಳು ಸನ್೧೮೯೨ ನೇ ಇಸವಿ ಡಿಸೆಂಬರ್ ೧೧ ನೇ ಮಹಜರ್‌ನಲ್ಲಿ ಘನವನ್ನೈದಿದ ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದೂರವರ ಮಂಜೂರಾತಿಯನ್ನು ಪಡೆದು ಸಕಲ ಜನಗಳ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಕಟಿಸಲ್ಪಟ್ಟಿರುತ್ತೆ:—

## ಸನ್೧೮೯೨ನೇ ಇಸವಿಯ IIIನೇನಂಬರ್ ರೆಗ್ಯುಲೇಷನ್.

ಸನ್ ೧೮೯೧ ನೇ ಇಸವಿಯ ೧ ನೇ ನಂಬರ್ ರೆಗ್ಯುಲೇಷನಿಂದ ತಿದ್ದುಪಡಿಯಾದ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡ್, ೧೮೮೮ ನೇ ಇಸವಿಯ IV ನೇ ನಂಬರ್ ರೆಗ್ಯುಲೇಷನನ್ನು ಪುನಃ ತಿದ್ದುಪಡಿ ಮಾಡುವ ಬಗ್ಯೆ ಹುಟ್ಟಿದ ರೆಗ್ಯುಲೇಷನ್.

| | |
|---|---|
| ಪೀಠಿಕೆ. | ಸನ್೧೮೮೮ನೇ ಇಸವಿಯ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡನ್ನು ಪುನಃ ತಿದ್ದುಪಡಿ ಮಾಡುವದು ಯುಕ್ತವಾಗಿರುವದರಿಂದ, |

ಘನವನ್ನೈದಿದ ಶ್ರೀಮನ್ ಮಹಾರಾಜ ರಾಜಾ ಸಾಹೆಬ್ ಬಹದೂರವರು ಇದರಡಿ ಕಂಡಂತೆ ನಿಬಂಧಿಸಿರುತ್ತಾರೆ:—

| | |
|---|---|
| "ಮುಲ್ಕಿ ಸಾಲಿನ" ಅರ್ಥವಿವರಣೆ ಕಲಂಗೆ ಬದಲಾಗಿ ಹೊಸ ಅರ್ಥ ವಿವರಣೆ ಕಲಂ. | ೧ ಸದರೀ ಕೋಡಿನ ೩ ನೇ ಸೆಕ್ಷನ್ನಲ್ಲಿ ಮುಲ್ಕೀ ಸಾಲಿನ ಅರ್ಥವಿವರಣೆ ಕಲಮಿಗೆ ಬದಲಾಗಿ, ಇದರಡಿ ಕಂಡದ್ದನ್ನು ಸೇರಿಸತಕ್ಕದ್ದು. |

"ಮುಲ್ಕೀಸಾಲ್ ಎಂಬ ಮಾತುಗಳಿಗೆ ಒಂದು ಸಾಲಿನ ಜೂನ್ ೩೦ ನೇ ತಾರೀಖ್ ಲಾಗಾಯಿತು ಅಂದರೆ ಆ ತಾರೀಖ್ ಸಹಾ ಯಿ ಆ ಮಾರನೆ ಸಾಲಿನ ಜೂನ್ ೩೦ ನೇ ತಾರೀಖ್ ವರಿಗೆ ಅಂದರೆ ಆ ತಾರೀಖ್ ದೇಖಿಲ್ ಆಗುವ ಪರಿಮಾಣವೆಂದರ್ಥವು"

"ಸನ್ ೧೮೯೧—೯೨ ನೇ ಮುಲ್ಕೀಸಾಲು ೧೮೯೧ ನೇ ಇಸವಿ ಏಪ್ರಿಲ್ ಗುರ್ರೇ ಲಾಗಾಯಿತು ೧೮೯೨ ನೇ ಇಸವಿ ಜೂನ್ ೩೦ ರ ವರಿಗೆ, ಅಂದರೆ, ಸದರೀ ಎರಡು ದಿವಸಗಳು ದೇಖಿಲ್, ಹದಿನೈದು ತಿಂಗಳುಗಳುಳ್ಳದ್ದಾಗಿರತಕ್ಕದ್ದು"

## ಸನ್೧೮೯೨ ನೇ ಇಸವಿಯ V ನೇ ನಂಬರ್ ರೆಗ್ಯುಲೇಷನ್.

ಸನ್೧೮೮೩ನೇ ಇಸವಿಯ I ನೇ ನಂಬರ್ ಮೈಸೂರ್ ಸಿವಿಲ್ ಕೋರ್ಟುಗಳ ರೆಗ್ಯುಲೇಷನನ್ನು ತಿದ್ದುಪಡಿ ಮಾಡುವ ಬಗ್ಗೆ ಹುಟ್ಟಿದ ರೆಗ್ಯುಲೇಷನ್.

| | |
|---|---|
| ಪೀಠಿಕೆ. | ಸನ್೧೮೮೩ ನೇ ಇಸವಿಯ ೧ ನೇ ನಂಬರ್ ಮೈಸೂರು ಸಿವಿಲ್ ಕೋರ್ಟುಗಳ ರೆಗ್ಯುಲೇಷನನ್ನು ತಿದ್ದುಪಡಿ ಮಾಡಬೇಕಾದ್ದು ಯುಕ್ತವಾದ್ದರಿಂದ; |

ಘನವನ್ನೈದಿದ ಶ್ರೀಮನ್ ಮಹಾರಾಜ ರಾಜಾಸಾಹೆಬ ಬಹದೂರವರು ಇದರಡಿ ಕಂಡಂತೆ ನಿಬಂಧಿಸಿರುತ್ತಾರೆ:—

| | |
|---|---|
| ಸನ್೧೮೮೩ ನೇ ಇಸವಿಯ I ನೇ ನಂಬರ್ ರೆಗ್ಯುಲೇಷನ್ನಿನ ೧೬ ನೇ ಸೆಕ್ಷನ್ನಿನ ತಿದ್ದುಪಾಟು. | ೧. ಸದರೀ ರೆಗ್ಯುಲೇಷನ್ನಿನ ೧೬ನೇ ಸೆಕ್ಷನ್ನಿನಲ್ಲಿ, "ಸಬಾರ್ಡಿನೇಟ್ ಜಡ್ಜಿಗಳಿಗೆ" ಎಂಬ ಮಾತುಗಳಿಗೆ ಮುಂಚೆ "ಡಿಸ್ಟ್ರಿಕ್ಟ್ ಜಡ್ಜಿಗಳಿಗೆ ಅಥವಾ" ಎಂಬ ಮಾತುಗಳಂ ಸೇರಿಸತಕ್ಕದ್ದು. |

## ಸನ್ ೧೮೯೨ ನೇ ಇಸವಿಯ VI ನೇ ನಂಬರ್ ರೆಗ್ಯುಲೇಷನ್.

ಸನ್೧೮೬೫ ನೇ ಇಸವಿ ಮೇ ೨೭ ನೇ ಮಹಜರ್ ೪೨—J. ನೇ ನಂಬರುಳ್ಳ ಇಂಡಿಯಾ ಗವರ್ನಮೆಂಟಿನವರ ಇಸ್ತಿಹಾರಿನಾಮೆಯ ಮೂಲಕ ಮೈಸೂರ್ ಸೀಮೆಯಲ್ಲಿ ಜಾರಿಯೊಳು ತರಲ್ಪಟ್ಟ ಸನ್೧೮೭೨ ನೇ ಇಸವಿಯ ಇಂಡಿಯನ್ ಕಂಟ್ರ್ಯಾಕ್ಟ್ ಆಕ್ಟಿನ ೨೬೫ ನೇ ಸೆಕ್ಷನನ್ನು ತಿದ್ದುಪಡಿಮಾಡುವಬಗ್ಯೆ ಹುಟ್ಟಿದರೆಗ್ಯುಲೇಷನ್.

ಸನ್ ೧೮೭೨ ನೇ ಇಸವಿಯ ಇಂಡಿಯನ್ ಕಂಟ್ರ್ಯಾಕ್ಟ್ ಆಕ್ಟಿನ ೨೬೫ ನೇ ಸೆಕ್ಷನನ್ನು ತಿದ್ದುಪಡಿ ಮಾಡಬೇಕಾದ್ದು ಯುಕ್ತವಾಗಿರುವದರಿಂದ ಶ್ರೀಮನ್ ಮಹಾರಾಜ ರಾಜಾಸಾಹೆಬ ಬಹದೂರವರು ಇದರಡಿಕಂಡಂತೆ ನಿಬಂಧಿಸಿರುತ್ತಾರೆ

| | |
|---|---|
| ಇಂಡಿಯನ್‌ಕಂಟ್ರ್ಯಾಕ್ಟ್ ಆಕ್ಟಿನ ೨೬೫ ನೇ ಸೆಕ್ಷನ್ನಿಗೆ ಬದಲಾಗಿ ಸೇರಿಸಲ್ಪಟ್ಟಹೊಸ ಸೆಕ್ಷನ್. | ೧. ಸದರೀ ಆಕ್ಟಿನ ೨೬೫ ನೇ ಸೆಕ್ಷನ್ನಿಗೆ ಬದಲಾಗಿ ಇದರಡಿ ಕಂಡದ್ದನ್ನು ಸೇರಿಸತಕ್ಕದ್ದು: |

"೨೬೫ ಒಬ್ಬ ಪಾಲುದಾರನು ತನ್ನ ಪಾಲುಗಾರಿಕೆಯನ್ನು ನಿವೃತ್ತಿಸಿಕೊಳ್ಳಲಿಕ್ಕೆ ಬಾಧ್ಯನಾದಾಗಲೂ ಅಥವಾ ಒಂದು ಪಾಲುಗಾರಿಕೆಯು ಮುಗಿದಾಗಲೂ ಅದಕ್ಕೆ ವಿರುದ್ಧವಾದ ಪಾಲುಗಾರಿಕೆ ಒಡಂಬಡಿಕೆ ಇಲ್ಲದ ಪಕ್ಷದಲ್ಲಿ ಕೋರ್ಟಿನವರು ಆ ಪಾಲುಗಾರಿಕೆಯ ಕೆಲಸವನ್ನು ಮುಕ್ತಾಯಮಾಡಲೂ, ಸದರೀ ಪಾಲುಗಾರಿಕೆಯ ಸಾಲಗಳು ಬಿಡತಿಯಾಗಲಿಕ್ಕೆ ಏರ್ಪಾಡುಮಾಡಿ ಆ ದೇಣಿ ಜಾತಾ ಉಳಿಯುವದನ್ನು ಆಯಾ ಪಾಲುದಾರರ ಹಿಸ್ಸೆಗಳ ಪ್ರಕಾರ ಬಟವಾಡೆ ಮಾಡಲೂ ಬಹುದು

(ನಿವೃತ್ತಿ ಮಾಡ ಯಾ ಮುಗಿದು ಹೋದ ಪಾಲುಗಾರಿಕೆಯನ್ನು ಕೋರ್ಟಿನವರು ಪೈಸಲ್ ಮಾಡುವದು.)

---

## SUMMARY OF NEWS.

## ವೃತ್ತಾಂತ ಸಂಗ್ರಹವು.

ಯುರೋಪ್ ಖಂಡದಲ್ಲಿ ಪ್ರತಿ ವರುಷಕ್ಕೆ ಸರಾಸರಿ ೫,೪೦,೯೦,೦೦,೦೦೦ಗ್ಯಾಲನ್‌ಸಾರಾಯಿ ಖರ್ಚಾಗುತ್ತದೆ !! ರಾ.

---

ಸಯಾಮದ ಹಿಂದಿನ ಅರಸನು ಹೆಂಗಸರದೊಂದು ಸಣ್ಣ ಪಲ್ಟನ್ ತೊಡಿಸಿ ಅವರಿಗೆ ಕೆಂಪು ಬಣ್ಣವನ್ನು ಹಚ್ಚಿದ್ದನು ಈಗಿನ ಅರಸನು ಆಸ್ತ್ರೀಯರನ್ನೆಲ್ಲರನ್ನು ಪೋಲೀಸ್ ಕೆಲಸಕ್ಕೆ ನೇಮಿಸಿರುವನಂತೆ !! ರಾಜಹಂಸ.

---

ಯೂನಿವರ್ಸಿಟಿ ಪದವಿದಾನದ ಸಮಾರಂಭವು ಇವತ್ತಿರವರೀ ಜನವರಿ ತಿಂಗಳ ಮೂರನೇ ಮಂಗಳವಾರದ ದಿವಸ ಆಗುತ್ತಿದ್ದದ್ದು ಇನ್ನು ಮುಂದೆ ಫೆಬ್ರವರಿ ತಿಂಗಳ ಮೂರನೇ ಮಂಗಳವಾರದ ದಿವಸ ಆಗುವದೆಂದು ಯೂನಿವರ್ಸಿಟಿಯವರು ನಿರ್ಣಯಿಸಿದಾರೆ. ರಾಜ.

---

ಪಾಸಿ ಮೋರ್ ಎಡ್ವರ್ಡ್ಸ್ ಎಂಬ ಧರ್ಮಿಷ್ಟನು ಲಂಡನ್ ಪಟ್ಟಣದಲ್ಲಿ ಜನಗಳ ಉಪಯೋಗಾರ್ಥವಾಗಿ ಅನೇಕ ಧರ್ಮಕಾರ್ಯಗಳನ್ನು ನಡೆಸಿ ಖ್ಯಾತಿಗೊಳಿಸಿರುತ್ತಾರೆ. ಅವುಗಳ ಬೈಕಿ ಎರಡು ಕಡೆಗಳಲ್ಲಿ ಸ್ಥಾಪಿಸಿರುವ ಎರಡು ಪುಸ್ತಕ ಭಂಡಾರಗಳಿಗೇ ಸುಮಾರು ೪೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿರುತ್ತಾರೆ.

---

ಮಾಂಚೆಸ್ಟರ್ ಎಂಬ ಊರಿನಲ್ಲಿ ಕೆಲವು ದಿವಸಗಳ ಹಿಂದೆ ಒಬ್ಬ ಯಾವನಸ್ಥನು ತನ್ನ ತಾಯಿಯು ಮತ್ತು ಅಕ್ಕನ ಹೆಂಡಗಿಯನ್ನೆಲ್ಲಾ ಅಂದರೆ ಸುಮಾರು ೮೦ ಲಕ್ಷ ರೂಪಾಯಿಗಳನ್ನು ಮೂರು ದಿವಸಗಳಲ್ಲಿ ಜೂಜಾಡಿ ಸೋತುಬಿಟ್ಟನು, ಸರ್ವಸ್ವವನ್ನೂ ಕಳೆದುಕೊಂಡು ಮಾಪಸು ಮನೆಗೆ ಹೋಗಬೇಕಲ್ಲಾ ಎಂಬದಾಗಿ ಮುಖದಿಂದ ಹೊರಟು ರೈಲ್ ಮಾರ್ಗದಲ್ಲಿ ಮಲಗಿಕೊಂಡು ಆತ್ಮಹತ್ಯ ಮಾಡಿಕೊಂಡನು.

---

ಆಸ್ಟ್ರೇಲಿಯದಲ್ಲಿರುವ ವಿಷವುಳ್ಳ ಎಲ್ಲಾ ಜಾತಿ ಹಾವುಗಳ ಮತ್ತು ವಿಷವಿಲ್ಲದ ಹಾವುಗಳ ಬಣ್ಣ ಆಕಾರ ಮೊದಲಾದವುಗಳನ್ನು ಅಲ್ಲಿನ ಪ್ರತಿ ಒಂದು ಪಾಠಶಾಲೆಯ ಗೋಡೆಯ ಮೇಲೂ ಚಿತ್ರಿಸಿರಬೇಕಾಗಿ ಇಂಥವು ವಿಷವುಳ್ಳವು; ಇವುಗಳ ವಿಷಯದಲ್ಲಿ ಹೀಗೆ ಇರಬೇಕು; ಇವು ಕಚ್ಚಿದಾಗ್ಯೂ ಬಾಧೆ ಯಾಗದು ಎಂಬುದಾಗಿ ಉಪಾಧ್ಯರು ಬೋಧಿಸುತ್ತಾರಂತೆ, ಇಂಥಾ ಏರ್ಪಾಡನ್ನು ಇಲ್ಲಿನ ಸ್ಕೂಲುಗಳಲ್ಲಿಯೂ ಮಾಡಿದರೆ ಅನೇಕ ಪ್ರಾಣಗಳು ಉಳಿಯಬಹುದೆಂದೂ ಟೀಚರ್ಸ್ ಎಜ್ಯುಕೇಷನಲ್ ರೆಕಾರ್ಡ್ ಎಂಬ ಪತ್ರಿಕಾಕಾರರು ಬರೆಯುತ್ತಾರೆ.—ವೃ. ಪ.

---

ಡೆಲ್ಲಿ ಪಟ್ಟಣದಲ್ಲಿದ್ದ ರಘುನಾಥರಾವ್ ಪಂಡಿತ್ ಎಂಬ ಶ್ರೇಷ್ಠ ಮನುಷ್ಯರಿಂದ ಜತಮಾಯಿಸಲ್ಪಟ್ಟಿದ್ದ ಈ ಭರತಖಂಡದ ಬೇರೆ ಬೇರೆ ತರದ ಮತ್ತು ಪೂರ್ವಕಾಲದ ಅನೇಕ ಚಿನ್ನದ ನಾಣ್ಯಗಳನ್ನು ಕೆಲವು ದಿವಸಗಳ ಕೆಳಗೆ ಒಬ್ಬ ಕಳ್ಳನು ಕದ್ದುಕೊಂಡು ಹೋದನು. ಅದರಲ್ಲಿ ಮಹಮದ್, ಅಕ್ಬರ್, ಅಲ್ಲಾವುದ್ದೀನ್, ಶಹಜಹಾನ್, ಮೊದಲಾದ ಅನೇಕ ದೊಡ್ಡ ಚಕ್ರವರ್ತಿಗಳ ಕಾಲದಲ್ಲಿ ಅವರವರು ಅಚ್ಚು ಹಾಕಿಸಿದ್ದ ಚಿನ್ನದ ಮೊಹರುಗಳು ಇದ್ದುವು. ಮತ್ತು ಸನ್ ೨೯೮೦-೧೯೦೦-೯೩-೯೩ ನೇ ಇಸವಿಗಳಲ್ಲಿ ಇಂಡಿಯಾ ದೇಶದ ನಾನಾ ಭಾಗಗಳಲ್ಲಿಯೂ ಚಲಾವಣೆಯಲ್ಲಿದ್ದ ನಾಣ್ಯಗಳನ್ನೆಲ್ಲಾ ಆ ಪಂಡಿತರವರು ಕೂಡಿಸಿ ಇಟ್ಟಿದ್ದರು. ಅಲ್ಲಿನ ಚರಿತ್ರೆಗಳ ವಿಷಯದಲ್ಲಿ ಇವೆಲ್ಲಾ ಉಪಯುಕ್ತವಾದ ಸಾಧನಗಳಾಗಿದ್ದವು. ಇಂಥವುಗಳನ್ನು ಕಳೆದುಕೊಂಡದ್ದಕ್ಕಾಗಿ ಬಹಳ ವಿಷಾದಿಸಬೇಕಾಗಿದೆ.—ವೃ. ಪ.

---

ಸ್ವಲ್ಪ ದಿವಸದ ಹಿಂದೆ ಒಂದು ದಿನ ಬೆಳಿಗ್ಗೆ ತುಮಕೂರಿಗೆ ಒಬ್ಬ ಬೈರಾಗಿ ಹೋದನು. ಆ ಊರಲ್ಲಿ ಮೈಸೂರ್ ಸಂಸ್ಥಾನಕ್ಕೆ ಸೇರಿದ ಬ್ರಾಹ್ಮಣ ಜಾತಿಯ ಎಗ್ಸಿಕ್ಯೂಟಿವ್ ಇಂಜನಿಯರು ಇರುತ್ತಿದ್ದನು. ಈ ಗೃಹಸ್ಥನು ಬಹಳ ಧಾರ್ಮಿಕ ವೃತ್ತಿಯವನಾಗಿರುತ್ತಿದ್ದದರಿಂದ ಬಂದ ಬೈರಾಗಿಗಳಿಗೆ ಬೋಜನದ ಸೀದಾ ಸಾಮಗ್ರಿಗಳನ್ನು ಕೊಡುತ್ತಿದ್ದನು. ಸದರಿ ಬೈರಾಗಿಯು ಇಂಜನಿಯರ ಬಾಗಿಲಿಗೆ ಹೋಗಲು ಬಾಗಿಲಲ್ಲಿರುವ ಜವಾನರುಗಳು ನಿನಗೆ ಬೇಕಾದ ಸಾಹಿತ್ಯವನ್ನು ತೆಗೆದುಕೊಂಡು ಹೋಗೆಂದು ಹೇಳಿದರು. ಆದರೆ ಅವನು ಅದಕ್ಕೆ ಸಮ್ಮತಿಸಲಿಲ್ಲ. ಯಜಮಾನನ ದರ್ಶನಕ್ಕೆ ನಾನು ಬಂದಿದ್ದೇನೆ, ಅವನ ದರ್ಶನವು ಆಗಲಿಕ್ಕೇ ಬೇಕೆಂದು ಹಟ ಹಿಡಿದು ಬೈರಾಗಿಯು ಬಾಗಿಲಲ್ಲಿ ಕೂತು, ತನಾಯಿ ಮನಸ್ಸಿನಲ್ಲಿ ನಡೆದ ವಿಚಾರಗಳನ್ನು ಅವರ ಮೋರೆ ನೋಡಿ ಹೇಳಿದನು. ಆ ಪಕ್ಕದ ಜವಾನುಗಳು ಒಡನೆ ಒಳಗೆ ಹೋಗಿ ಯಜಮಾನನಿಗೆ ಬೈರಾಗಿಯ ವರ್ತಮಾನವನ್ನು ತಿಳಿಸಿದರು. ಕೂಡಲೆ ಇಂಜನಿಯರು ಹೊರಗೆ ಬಂದು ಬೈರಾಗಿಯನ್ನು ತನ್ನ ಕೋಣೆಯೊಳಗೆ ಕರೆದುಕೊಂಡು ಹೋಗಿ ಅವನ ಕೊಟ್ಟ ಕನ್ನಡಿಯ, ತನ್ನ ಮುಷ್ಟಿಯೊಳಗೆ ಏನೋ ಒಂದು ಪದಾರ್ಥವನ್ನು ಮುಚ್ಚಿ ಹಿಡಿದು ಇದೇನೆಂದು ಬೈರಾಗಿಗೆ ಕೇಳಿದನು. ಬೈರಾಗಿಯು ಆ ಪದಾರ್ಥದ ಹೆಸರು ಯಥಾರ್ಥವಾಗಿ ಹೇಳಿದ್ದರಿಂದ ಅವನು ಆಶ್ಚರ್ಯಪಟ್ಟು ತನ್ನ ಕೈಯೊಳಗಿನ ಪದಾರ್ಥಗಳನ್ನು ಕೇಳಿದನು. ಬೈರಾಗಿ ಕೂಡಲೆ ಅವನ್ನೂ ಸರಿಯಾಗಿ ಹೇಳಿದನು. ಆದರಿಂದ ಇಂಜನಿಯರ ವಿಶ್ವಾಸವು ಬೈರಾಗಿಯಲ್ಲಿ ಪೂರಾ ನೆಲೆಗೊಂಡಿತು. ತರುವಾಯ ಬೈರಾಗಿಯು ಇಂಜನಿಯರ ಮೋರೆಯನ್ನು ಹತ್ತುಯಿಸು ನಿಮಿಷ ದಿಟ್ಟಿಸಿನೋಡಿ, ಸ್ವಲ್ಪ ದಿವಸಗಳೊಳಗೆ ನಿನ್ನ ಕಣ್ಣುಗಳು ಹೋಗುತ್ತವೆಂದು ಒದರಿದನು. ಅದಕ್ಕೆ ಇಂಜನಿಯರು ಗಾಬರಿಯಾಗಿ ಬಹಳ ವ್ಯಸನಪಟ್ಟು ಅದಕ್ಕೇನಾದರೂ ಉಪಾಯವಿದ್ದರೆ ಹೇಳೆಂದು ಕೇಳಿಕೊಂಡನು. ಬೈರಾಗಿಯ ಬಳಿಯಲ್ಲಿ ಉಪಾಯವು ಸಿದ್ಧವೇ ಇತ್ತು. ಅದನ್ನು ಮಾಡುವ ಉದ್ದೇಶದಿಂದಲೇ ಅವನು ಇಂಜನಿಯರ ಮನೆಗೆ ಹೋಗಿದ್ದನು. ಆದ್ದರಿಂದ ಇಂಜನಿಯರ ಪ್ರಾರ್ಥನೆಗೆ ಒಡಂಬಟ್ಟು, ಅವನು ನಿನ್ನ ಮನೆಯಲ್ಲಿ ಒಂದು ದೇವತೆಯ ಪೂಜೆಯನ್ನು ನಾನು ಮಾಡಲಿಕ್ಕೆ ಬೇಕೆಂದು ಹೇಳಿದನು. ಯಜಮಾನನು ಪೂಜೆಯ ಸಾಹಿತ್ಯಗಳನ್ನು ಸಿದ್ಧ ಮಾಡಿ ಕೊಟ್ಟ ಒಳಕ ಬೈರಾಗಿಯು ತಾನು ಪೂಜೆ ಮಾಡುತ್ತ ಕೂತುಕೊಂಡು ಬಳಿಯಲ್ಲಿ ಇಂಜನಿಯರನ್ನು ಕುಳ್ಳಿರಿಸಿಕೊಂಡು, ಅವನ ಚಾಕರನೊಬ್ಬನನ್ನು ಕರೆದು, ಇಂಜನಿಯರ ಪೆಟ್ಟಿಗೆಯಿಂದ ತಾನು ಹೇಳಿದ ಹಾಗೆ ಕೈಚೊಟ್ಟುಗಳನ್ನು ಇಳಿಸಿ ಎಂದು ಹೇಳಿದನು. ಇದು ಪಾಶ್ಚಾತ್ಯಶೋಧಕರೆಂಬ ಗಾರುಡಿಗರು "ಹಿಪ್ನೋಟಿಕ್ ಟ್ರಾನ್ಸ್" ಎಂಬ ಮೋರ್ಛನೆಯನ್ನು ತರಲಿಕ್ಕೆ ಮಾಡುವ ಕೃತಿಯೋ ಏನು ನಾವು ಹೇಳುವ ಪ್ರಯೋಜನವಿಲ್ಲ. ಆ ಚಾಕರನು ೧೫೦ ಸಾರಿ ಪದಗಳನ್ನು ಹೇಳಿದ ಹಾಗೆ ಇಳಿದೆಗೆಯುವಷ್ಟರೊಳಗೆ ಸೋತು ಬೆವತು ನಡುಗ ಹತ್ತಿದನು. ಆದರಿಂದ ಬೈರಾಗಿಯು ತಾನೇ ಆ ಚಾಕರನ ಕೆಲಸವನ್ನು ಮಾಡಲಿಕ್ಕೆ ಕೂತು ಅವನಿಗೆ ಮನೆಗೆ ಹೋಗಲಿಕ್ಕೆ ಹೇಳಿದನು. ಬೈರಾಗಿಯು ಕೆಲವು ವೇಳೆ ಈ ಪ್ರಯೋಗವನ್ನು ನಡಿಸಿ ಇಂಜನಿಯರನ್ನು ಮರುಳು ಮಾಡಿದನು. ಬೈರಾಗಿಯು ನಿನ್ನ ಪೆಟ್ಟಿಗೇ ತೆರೆದು ಅದರೊಳಗಿದ್ದ ಹಣವನ್ನೆಲ್ಲ ತಾ ಎಂದು ಕೇಳಲು, ಇಂಜನಿಯರು ಕ್ಷಣಮಾತ್ರದೊಳಗೆ ಪೆಟ್ಟಿಗೆಯೊಳಗಿದ್ದ ರೂಪಾಯಿಗಳನ್ನೆಲ್ಲ ಅವನಿಗೆ ಕೊಟ್ಟನು. ತರುವಾಯ ನಿನ್ನ ಹೆಂಡತಿಯ ಬಳಿಯಲ್ಲಿ ಇದ್ದಷ್ಟು ರೂಪಾಯಿಗಳನ್ನು ತೆಗೆದುಕೊಂಡು ಬಾರೆಂದು ಹೇಳಿ ಬೈರಾಗಿಯು ಅವಳ ಬಳಿಯಲ್ಲಿಯ ರೂಪಾಯಿಗಳನ್ನೂ ತಾನುಕೊಂಡನು. ಈ ಪ್ರಕಾರ ಸುಮಾರು ೧೪೦ ರೂಪಾಯಿಗಳನ್ನು ಕಟ್ಟಿಕೊಂಡು ಬೈರಾಗಿಯು ಮನೆಯೊಳಗಿಂದ ಹೊರಟನು. ಇಂಜನಿಯರು ಬಾಗಿಲ ವರೆಗೆ ಹೋಗಿ ಅವನನ್ನು ಕಳಿಸಿ ಬಂದ ಬಳಿಕ ಬಹು ಹೊತ್ತಿನಮೇಲೆ ಎಚ್ಚತ್ತು ಬೈರಾಗಿಯನ್ನು ಹುಡುಕಿದನು. ಆದರೆ ಅಷ್ಟರೊಳಗೆ ಅವನು ಪಾರಾಗಿ ಹೋಗಿದ್ದನು.

---

BANGALORE—Printed and published at the KARNATIC PRESS, No 40, HOSPITAL ROAD, PETTA—1893.

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

## ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning.**

ಶ್ರೀಮದ್ವಿವಿಧವೃತ್ತ್ಯಾಗಮಾರ್ಥಕರ್ಣಾಟಕಪ್ರಕಾಶನಪರಾಭಿಧಾಪ್ರಥಿತಸಾಹಿತೀಶೋಭಿತಾ। ವ್ಯಾಗಾಂಕಹಿತನಾಸರೆನಿಹಿತಮುದ್ರಣಾಸಜ್ಜನೈರ್ನಿಶಾಸುವರಿಪೂಜಿತಾಜಕತಿವಾನಸಂಸುಮುದಂ॥

Vol. XX ] BANGALORE—MONDAY, FEBRUARY 13, 1893 [No. 6.

ಸಂಪುಟ ೨೦. ] ಬೆಂಗಳೂರು:—ಸನ್ ೧೮೯೩ ನೇ ಇಸವಿ ಫೆಬ್ರುವರಿ ೧೩ ನೇ ತಾರೀಖ್ ಸೋಮವಾರ. [ಸಂಖ್ಯೆ ೬.


## ಕರ್ಣಾಟಕ ಪ್ರಕಾಶಿಕಾ.

### ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

| | ಸ್ಥಳದವರಿಗೆ. | ಪರಸ್ಥಳದವರಿಗೆ. |
|---|---|---|
| ವರ್ಷ ೧ಕ್ಕೆ ... | ...6—0—0 | 8—0—0 |
| 6 ತಿಂಗಳಿಗೆ .. | ....3—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

| | ಸ್ಥಳದವರಿಗೆ, | ಪರಸ್ಥಳದವರಿಗೆ, |
|---|---|---|
| ವರ್ಷ ೧ಕ್ಕೆ .. .. | 3—0—0 | 4—0—0 |
| 6 ತಿಂಗಳಿಗೆ ... ... | 1—12—0 | 2—6—0 |

ಈ ಪತ್ರಿಕೆಗೆ ದರಖಾಸ್ತು ಮಾಡಿದ ತಾರೀಖ್ ಮೊದಲು ಒಂದು ತಿಂಗಳೊಳಗಾಗಿ ಚಂದಾ ಹಣವನ್ನು ಕಳುಹಿಸದವರಿಗೆ ಮಾತ್ರವೆ ಅಡ್ವಾನ್ಸ್ ದರದಂತೆ ಪತ್ರಿಕೆ ಕಳುಹಿಸಲ್ಪಡುವದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. ಮೂರು ತಿಂಗಳಿಗಿಂತ ಕಡಮೆಯಾಗಿ ಚಂದಾ ಹಣವು ಅಂಗೀಕರಿಸಲ್ಪಡಲಾರದು.

### ಪ್ರಕಟನೆಯ ರಿವಾಜ್.

ಮೊದಲನೆಯದಫಾ ಪಙ್ಕ್ತಿ ಒಂದಕ್ಕೆ ೦—೨—೦

ಎರಡನೆಯದಫಾ ಪಙ್ಕ್ತಿ ಒಂದಕ್ಕೆ ೦—೧—೦

ದರಾ—ಎರಡುವರ್ಷಗಿಂತ ಜಾಸ್ತಿಯಾಗಿ ಎಷ್ಟುಕಡರ್ ಕಾಮನ್ ಮಾಡಿದಾಗ್ಯೂ ಪಙ್ಕ್ತಿ ಒಂದಕ್ಕೆ ಗಿಡಣೆಯಂತೆಯೇ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಕಾಮಿಲ್ ಮಾಡುವಬಗ್ಗೆ ಪ್ರಕಟನೆಗಳು ಕಳುಹಿಸುವವರು ಅವು ಎಷ್ಟುವರ್ಷ ಕಾಮನ್ ಮಾಡಲ್ಪಡಬೇಕೋ ಆ ಅಂಕವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಪಕ್ಷಕ್ಕೆ ಅವರು ನಮಗೆ ನಿಲ್ಲಿಸಬೇಕೆಂತ ಬರೆಯುವವರೆಗೆ ಅವು ಪ್ರಕಟಿಸುತ್ತಿದ್ದು ಹಾಗೆ ಎಷ್ಟುವರ್ಷ ಪ್ರಕಟಿಸಲ್ಪಟ್ಟಿದ್ದಾವೋ ಅದರಂತೆ ಕಿಮ್ಮತ್ ವಸೂಲ್ಮಾಡಲ್ಪಡುವದು. ಪ್ರಕಟನೆಯಬಗ್ಗೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಆ ಹಾ ಸೋಮವಾರದದಿನ ಮಧ್ಯಾಹ್ನ ೨ ಘಂಟೆಯೊಳಗಾಗಿ ಕಳುಹಿಸಬೇಕು. ಪ್ರಕಟನೆಯಬಗ್ಗೆ ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳಲ್ಲಿ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಲಾರೆವು. ಕ್ರಮವಾಗಿ ರುಜುವಾತಿ ದಸ್ತೈರನ್ನು ಯಾವ ಕಾಗದವನ್ನು ಪ್ರಕಟಿಸಲಾರೆವು. ನಿರಾಕರಿಸಲ್ಪಟ್ಟ ಕಾಗದಗಳು ಮರಳಿ ವಾಪಸು ಕಳುಹಿಸಲ್ಪಡಲಾರವು.


*ADVERTISEMENTS.*

**NOTICE.**

VAIDYASARA SANGRAHA

A TREATISE ON THE PRINCIPLES OF

HINDU MEDICINE.

*Price including Postage Rs 5-0-0*

ವೈದ್ಯಸಾರ ಸಂಗ್ರಹ.

ಈ ಗ್ರಂಥವೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಕಾಗದ ಬರೆದು ಪಡಕೊಳ್ಳಬಹುದು. ರುಜು ಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೊಡಲಿ ಕಳುಹಿಸಲ್ಪಡುವದು. ಮೊದಲಿಗೆ ಇಲ್ಲದ ದರಖಾಸ್ತುಗಳಿಗೆ ಸಿಗೇ ಕೊಡಲ್ಪಡಲಾರದು.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೇ ಹಾಲ್ ಬೇಬಲ್ ಪ್ರತಿ ಒಂದಕ್ಕೆ ರೂ 5—0—0

ಟಿ. ಬಿ. ವೆಂಕಟಾಚಾರ್.

ಬೆಂಗಳೂರ್, ಪುಹರ್ ಆಸ್ಪತ್ರಿ ರೋಡ್ ೪೮ ನಂಬರ್.

## ನೋಟೀಸ್.

### ಬೆಂಗಳೂರು ಕರ್ಣಾಟಿಕ್ ಪ್ರೆಸ್.

೧೮೬೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ, ಸಕಲವಿಧ ಕೆಲಸಗಳು ಸುಲಭಚಾರ್ಜಿಗೆ ಶೀಘ್ರವಾಗಿಯೂ ಕ್ಲಪ್ತವಾಗಿಯೂ ಮಾಡಲ್ಪಡುವವು.

ಇದರಲ್ಲಿ ಸಹ್ಯ ಇಂಗ್ಲಿಷ್ ಕನ್ನಡ ಕೆಲಸ ಮಾತ್ರವೇ ನಡೆಯುತಿವೆ. ಇತರ ತರಜುಮೆಗಳನ್ನು ನವರೀ ಕಾರ್ಖಾನೆ ಮ್ಯಾನೇಜರ್ ಬರೆದು ತಿಳಿದುಕೊಳ್ಳಬಹುದು.

## ನೋಟೀಸ್.

### ನಂಜಪ್ಪನವರ ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು.

ಕಾಲೂರು ಉಪ್ಪಾರ ಪೇಟೆಯ ಮೇಲೆ ಸಿದ್ಧಪಡಿಸಲ್ಪಟ್ಟವುಗಳ ಪಟ್ಟಿ ಇವರಿಂದ ಕಳುಹಿಸಲ್ಪಡುವವು. ಔಷಧಗಳು ಬೇಕಾದವರು ಅವರಿಗೆ ಬರೆದು ತರಿಸಿಕೊಳ್ಳಬಹುದು. ಈ ಔಷಧಗಳು ಶಾಸ್ತ್ರೋಕ್ತವಾದ ಕೆಲವು ಸಿದ್ಧಕ್ರಿಯೆಗಳಮೇಲೆ ತಯಾರಾದವಾಗಿಯೂ, ಜನರ ಸಿದ್ಧವಾಗಿಯೂ, ಅನೇಕರಿಗೆ ಗುಣವನ್ನುಂಟುಮಾಡಿದವಾಗಿಯೂ ಇರುತ್ತವೆ. ತಮ್ಮ ರೋಗಸ್ವರೂಪವನ್ನು ಔಷಧದ ಪಥ್ಯಾದಿಗಳ ಕ್ರಮವನ್ನು ನವರೀ ಪಂಡಿತರಿಗೆ ಬರೆದು ತಿಳಿದುಕೊಳ್ಳಬಹುದು. ಹಾಗೆ ಕಾಗದ ಬರೆಯತಕ್ಕವರು ಅಪೇಕ್ಷಿಸಲ್ಪಡುವ ಪ್ರತ್ಯುತ್ತರಕ್ಕೆ ಸಹ ತಮ್ಮ ಕಾಗದದಲ್ಲಿ ಅರ್ಧಾಣೆ ಲೇಬಲ್ ಹಾಕಿ ಕಳುಹಿಸಬೇಕು. ವ್ಯಾಲ್ಯೂಪೇಯಬಲ್ ಮೂಲಕ ಸಹ ಪದಾರ್ಥಗಳು ಕಳುಹಿಸಲ್ಪಡುವವು. ಕಳುಹಿಸಲ್ಪಟ್ಟ ಪದಾರ್ಥಗಳನ್ನು ತರಿಸಿಕೊಳ್ಳದೆ ಹಿಂದಕ್ಕೆ ಕಳುಹಿಸಿದರೆ ಆ ಬಾಬತು ವ್ಯಾಲ್ಯೂ ಪೇಯಬಲ್ ಖರ್ಚು ಅವರೇ ಕೊಡಬೇಕಾಗುವದು.

ತೈಲ.—ದುಷ್ಟಕಫತೈಲ, ಇದು ತಲೆ ಕಾಯಿಲೆಗಳಿಗೂ, ಶರೀರ ಸಂಬಂಧವಾದ ಮತ್ತು ವಾತಸಂಬಂಧವಾದ ಸಂಧಿನೋವುಗಳಿಗೂ, ದಾರಿಗಳಲ್ಲಿ ರಕ್ತ ನಿಲ್ಲತಕ್ಕದ್ದಕ್ಕೂ, ಅನೇಕವಿಧ ಕಾರಣಜನ್ಯವಾದ ವೇದನೆಗಳಿಗೂ ಬಹಳ ಶ್ಲಾಘ್ಯವಾದ ನಿವಾರಕವಾದುದಾಗಿದೆ. ಸಣ್ಣ ಸೀಸೆ ಒಂದಕ್ಕೆ ೧ ರೂ. ದೊಡ್ಡ ಸೀಸೆ ೧ಕ್ಕೆ ೫ ರೂ.

ಜ್ವರದ ಗುಳಿಗೆಗಳು—ಇವು ಚಾತುರ್ಥಿಕಾದಿ ಸಕಲವಿಧ ಜ್ವರಗಳಿಗೂ ಪ್ರಸಿದ್ಧ ಔಷಧವಾಗಿರುತ್ತವೆ. ರೂ. ೧ಕ್ಕೆ ೨೦ ಗುಳಿಗೆಗಳು.

ಮೇಹ ರೋಗ ನಿವಾರಕವಾದ ಎಣ್ಣೆ—ಈ ಎಣ್ಣೆಯು ೧೨ ದಿನಗಳತನಕ ಉಪಯೋಗಿಸುತ್ತಾ ಬಂದರೆ ತೆಗೆದುಕೊಂಡವರ ಸಕಲವಿಧ ಮೇಹಗಳೂ, ಪರಂಗಿಯೂ, ಸ್ತ್ರೀಯರಿಗುಂಟಾಗುವ ಉಷ್ಣ ಸಂಬಂಧವಾದ ರೋಗಗಳೂ, ನಿವಾರಣೆಯಾಗುವವು. ಸೀಸೆ ೧ಕ್ಕೆ ೨—೮—೦

ದಂತರೋಗಕ್ಕೆ ಚೂರ್ಣ.—ಹುಳುಕುಹಲ್ಲುಗಳು, ಸಡಲವಿದ್ದಿರುವ ಹಲ್ಲುಗಳು, ಇವುಗಳನ್ನು ಮಾಡಿಮಾಡಿ ಘಟ್ಟಿಪಡಿಸಿ ಕಾಂತಿಯನ್ನುಂಟುಮಾಡುತ್ತದೆ. ಇದು ಮೂರುವಿಧವು. ಪೊಟ್ಟಣ ೧ಕ್ಕೆ ೧ ರೂ. ಇದು ೧೨ ದಿನಗಳಿಗೆ ಆಗುವುದು.

ನೇತ್ರರೋಗಕ್ಕೆ ಮಾತ್ರೆ.—ಪೊರೆಗಳು, ದೃಷ್ಟಿಮಾಂದ್ಯ ಕಣ್ಣುರಿ, ತಲೆನೋವು, ಕಣ್ಣಲ್ಲಿ ನೀರು ಸುರಿಯುವುದು ಇವುಗಳು ಮೊದಲಾದ ಸಕಲರೋಗಗಳಿಗೂ ಪ್ರಶಸ್ತವಾದವು. ಮೂಲಿಕಾ ಪ್ರಯೋಗದಿಂದ ಮಾಡಲ್ಪಟ್ಟ ಉತ್ತಮವಾದ ಮಾತ್ರೆ ೧ಕ್ಕೆ ೪ ಆಣೆ. ಇದು ೪೦ ದಿನಗಳವರಿಗೆ ಬರುವ ಹೊತ್ತು ಹಾಕಿಕೊಳ್ಳಬಹುದು.

ಮೂಲವ್ಯಾಧಿಗೆ—ಒಂದು ಉಂಗರವು ತಯಾರಾಗಿದೆ. ಇದರಿಂದ ದೀರ್ಘಕಾಲಿಕವಾದ ಮೂಲರೋಗಗಳಿಲ್ಲವು ವಾಸಿಯಾಗುತ್ತವೆ. ಉಂಗರ ೧ಕ್ಕೆ ೧ ರೂಪಾಯಿ. ಇದನ್ನು ಎಡಗೈಯಲ್ಲಿ ನಿಯತವಾಗಿ ಧರಿಸಿಕೊಂಡಿರತಕ್ಕದ್ದು. ಇದರ ಸ್ಪರ್ಶದಿಂದ ಮೂಲರೋಗವು ನಿವೃತ್ತಿಯಾಗುತ್ತದೆ.

ಭಸ್ಮಗಳು.—ತಾಂಬ್ರ, ರಜತ, ನಾಗ, ಸೀಸ, ಪ್ರವಾಳ, ಶೃಂಗ, ಅಭ್ರಕ, ಲೋಹ, ಕಾಂತ ವಗೈರೆ ಭಸ್ಮಗಳೂ ಸಿಂಧೂರಗಳೂ ಸಿದ್ಧ ಕ್ರಿಯೆಯಿಂದ ತಯಾರಾದವು. ಇವು ಪಾಂಡು ಕಾಮಿಲಾಕ್ಷಯಾದಿ ಸಕಲ ಪ್ರಬಲ ರೋಗಗಳಿಗೂ ಪ್ರಶಸ್ತವಾದವಾಗಿರುತ್ತವೆ. ರೋಗ ಸ್ವರೂಪವು ಗುಣವಾಗಿ ಔಷಧವು ಕೊಡಲ್ಪಡಬೇಕಾದುದರಿಂದ ಅವರಮೇಲೆ ಕ್ರಯವು ನಿಷ್ಕರ್ಷಿಸಲ್ಪಡಬೇಕಾಗಿದೆ.

ಲೇಹ್ಯಗಳು—ಮದನವಿಲ್ವಾದಿ, ಚ್ಯವನಪ್ರಾಶ, ಕೂಷ್ಮಾಂಡ ವಗೈರೆ ಧಾತು ವೃದ್ಧಿಕರಗಳಾದ ಲೇಹ್ಯಗಳು ಸಿದ್ಧವಾಗಿವೆ. ಸೇರು ೧ಕ್ಕೆ ೩ ರೂ.

ಘೃತಗಳು.—ಗಂಧ, ಬಾಳೆದಿಣ್ಣಿ, ದಶಮೂಲದ ಬಲ, ಅಂಗಾರು, ದ್ರಾಕ್ಷಾದಿ, ಸೇವು ಮೊದಲಾದ ಘೃತಗಳು ತಯಾರಾಗಿವೆ. ಇವು ಸೀಸೆ ೧ಕ್ಕೆ ೨ ರೂ.

ಚೂರ್ಣಗಳು—ಮಹಾ ಯೋಗರಾಜಗುಗ್ಗುಲು, ಪಂಚಾಗ್ನಿ ಚೂರ್ಣ, ತಾಳೀಸಾದಿ ವಗೈರೆ ಚೂರ್ಣಗಳು ಅಜೀರ್ಣ ಪಿತ್ತ ವಾತೋದ್ರೇಕಗಳಿಗೆ ಶಮನಕರವಾದವು. ಇವು ೪೦ ದಿನಗಳಿಗೆ ತೆಗೆದುಕೊಳ್ಳುವುದು. ಡಬ್ಬಿ ೧ಕ್ಕೆ ೧ ರೂ.

## ನೋಟೀಸ್.

### ಗಣೇಶ ರಾಮಚಂದ್ರ ಕರ್ಶಿ ಮತ್ತು ಕಂಪೆನಿ. ಕಮಿಷನ್ ಏಜಂಟ್ಸ್.

ಅಡಿಯಲ್ಲಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಶೀಘ್ರವಾಗಿ ಕಳುಹಿಸುವುದಲ್ಲದೆ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ತಕ್ಕ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರಹ ಔಷಧಗಳು, ಪುಸ್ತಕಗಳು, ಮುತ್ತುಗಳು, ಚಿಪ್ಪು ಮುತ್ತುಗಳು, ಘಡಿಯಾರಗಳು, ಪಾರ್ಸಿಗಳು, ಟೈಂಪೀಸುಗಳು, ಕಾಶ್ಮೀರ ಶಾಲುಗಳು, ಪಟ್ಟೇದಗಳು, ಜರತಾರಿ ಕಣಗಳು, ಚಂದ್ರಕಾಂತ ಶಿಲೆ ಕನ್ನಡಕಗಳು, ಪುಸ್ತಕಗಳ ಸಹಿತ ಕವಡೆ ಪೆಟ್ಟಿಗೆಗಳು, ಜರತಾರಿ ಟೋಪಿಗಳು, ಆಫೀಸ್ ಛತ್ರಿಗಳು, ಪದಕಗಳು, ಅತ್ತರುಗಳು, ಅತ್ಯುತ್ತಮವಾದ ವಸ್ತ್ರಗಳು, ಭಂಗಾರದಿಂದ ಕಟ್ಟಲ್ಪಟ್ಟ ಉಂಗುರಗಳು, ಬೆಳ್ಳಿ ಪಾತ್ರೆಗಳು, ಜರ್ಮನ್ ಬೆಳ್ಳಿ ಪಾತ್ರೆಗಳು, ಕೇಸರಿ, ಕಸ್ತೂರಿ ವಗೈರೆ ಇತರ ಸಾಮಾನುಗಳು.

ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಟಿಕೆಟ್ ಕಳುಹಿಸದ ಹೊರತು ಜವಾಬ್ ದೊರೆಯಲಾರದು.

ವಿಳಾಸ,—ಗಣೇಶ ರಾಮಚಂದ್ರ ಕರ್ಶಿ,
ಮತ್ತು ಕಂಪನಿ, ಕಮಿಷನ್ ಏಜಂಟ್ಸ್,
ಶಾಹಾಪುರ ದ್ವಾರ, ಬೆಳಗಾವ್ ಪೋಸ್ಟ್, ಮುಂಬೈ.

## ನೋಟೀಸ್.

ಅಡಿಯಲ್ಲಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕರಿಕ್ಕೆ ಸಿದ್ಧವಾಗಿವೆ. ಬೇಕಾದವರು ಮುಂಚಿತವಾಗಿ ಕಳುಹಿಸಿ ತರಿಸಿಕೊಳ್ಳಬಹುದು.

### ಸಂಸ್ಕೃತ ಗ್ರಂಥಗಳು.

| | | ರೂ | ಆ | ಪೈ |
|---|---|---|---|---|
| | ಪೋಸ್ಟಲ್ ಸಹಿತ | | | |
| ಸಟೀಕಾ ವೈದ್ಯಸಾರ ಸಂಗ್ರಹ | ... | ೫ | ೦ | ೦ |
| ,, ಶಿವಗೀತೆ | ... | ೧ | ೨ | ೦ |
| ,, ಶಿವಾನಂದಲಹರಿ | ... | ೦ | ೮ | ೦ |
| ,, ಕಾಲಾಮೃತ | ... | ೧ | ೦ | ೦ |
| ,, ಟೀ॥ ಬಾಲರಾಮಾಯಣ .. | | ೦ | ೩ | ೦ |
| ,, ಟೀ॥ ಗೋಪಿಕಾ ಗೀತೆ ... | | ೦ | ೧ | ೦ |
| ,, ಟೀ॥ ಚಾಣಕ್ಯನೀತಿ (ಸುಭಾಷಿತ) | | ೦ | ೪ | ೦ |
| ವಿಷ್ಣುಸಹಸ್ರನಾಮ ವಗೈರೆ | ... | ೦ | ೩ | ೦ |
| ಸೂರ್ಯಶತಕ್ರಮ | .. | ೦ | ೨ | ೦ |
| ಕೃಷ್ಣಕರ್ಣಾಮೃತ | ... | ೦ | ೨ | ೦ |
| ತ್ರಿಕಾಂಡ ಅಮರ ಮಾಲಾ | ... | ೦ | ೨ | ೦ |
| ೧ ಕಾಂಡ | ... | ೦ | ೧ | ೦ |

### ಕನ್ನಡ ಗ್ರಂಥಗಳು.

| | | | | |
|---|---|---|---|---|
| ಕುಶಲವತ್ತಿ ಅಪ್ಪಲ್ | ... | ೩ | ೦ | ೬ |
| ಚಿಟ್ಟೋ ದುಶ್ಯಂ | ... | ೧ | ೨ | ೦ |
| ಕೃಷ್ಣಕರ್ಣಾಮೃತಪ್ರವಿಜಯ | ... | ೧ | ೮ | ೦ |
| ಪಂಚಭಾಷೆ ಬಾಲಲೀಲೆ | ... | ೦ | ೬ | ೦ |
| ಹನುಮದ್ವಿಲಾಸ | ... | ೦ | ೬ | ೦ |
| ಕಾಳೀಯಮರ್ದನ | ... | ೦ | ೨ | ೦ |
| ಸುಭದ್ರಾಪರಿಣಯ | ... | ೦ | ೨ | ೦ |
| ಶಶಿರೇಖಾಪರಿಣಯ | ... | ೦ | ೨ | ೬ |
| ಸುದಾಮಚರಿತ್ರೆ | ... | ೦ | ೧ | ೦ |
| ಮೈರಾವಣ ಚರಿತ್ರೆ | ... | ೦ | ೧ | ೦ |
| ಬಾಲಗ್ರಹಚಿಕಿತ್ಸೆ | ... | ೦ | ೧ | ೦ |
| ಮುಕುಂದಮಾಲಾ | .. | ೦ | ೧೨ | ೦ |
| ಭ್ರಾಂತಿವಿಲಾಸ | ... | ೦ | ೧೨ | ೦ |

## ಪ್ರಕಟನೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ:—

ನಮ್ಮ ಮೊಮ್ಮಗನಾದ, ಕಾಳಪ್ಪನು ನಮ್ಮಗಳ ಪೋಷಣೆಯಲ್ಲಿ ಇಲ್ಲದೆಯೂ ಮತ್ತು ಹೊಟೆ ತಪ್ಪಿಯೂ, ಭ್ರಾಂತ ಕೆಲಸಗಳು ಮಾಡಿ ಮನಸ್ವೀ ಇರುತ್ತಾನಾಗಿ ಅವನು ಮಾಡುವ ದೇಣೆಗಳಿಗೆ ನಾವುಗಳಾಗಲಿ ಅಥವಾ ನಮ್ಮ ಸ್ವತ್ತುಗಳಾಗಲಿ, ಜವಾಬದಾರಿಯಾಗಲು ಕಾರಣವಿಲ್ಲ. ಇದರ ಮೇಲೆ ಸಾಲ ವಗೈರೆ ಅವನಿಗೆ ಯಾರಾದರು ಕೊಟ್ಟಲ್ಲಿ ಅದರಿಂದ ವುಂಟಾಗುವ ನಷ್ಟಗಳಿಗೆಲ್ಲಾ ಅವನ ಲೇಣೆದಾರರೇ ಗುರಿಯಾಗುತ್ತಾರೆ. ಈ ವಿವರ ಸಮಸ್ತರಿಗೂ ತಿಳುವಳಿಕೆ ಬಗ್ಗೆ ಇದರಿಂದ ಪ್ರಸಿದ್ಧೀಕರಿಸಿರುತ್ತೆ.

| | |
|---|---|
| ತಾ॥ ೨೬ ನೇ ಜನವರಿ ೧೮೯೩ ಬೆಂಗಳೂರು. | ಮಂಡಿ ಮರಿಯಪ್ಪ. ದೊಡ್ಡ ಲಿಂಗಪ್ಪ. |

## ಕೊಡಗು ಫಾರೆಸ್ಟ್ ಇಲಾಖಾ.

### ನೋಟಿಸ್.

೧೮೯೩ ನೇ ಇಸವಿ ಜನವರಿ ತಾರೀಖ್ ೨೪.

ಅಡಿಯಲ್ಲಿ ನಮೂದಿಸಿದ ಸಾಮಾನುಗಳು ಹುಣಸೂರು ಡಿಪೋದಲ್ಲಿ ಸನ್ ೧೮೯೩ ನೇ ಇಸವಿ ಫೆಬ್ರುವರಿ ತಾರೀಖ್ ೧೯ ರಲ್ಲು ಹರಾಜ್ ಹಾಕಲ್ಪಡುತ್ತವೆ.

| | | | |
|---|---|---|---|
| ತ್ಯಾಗದ ತೊಲೆಗಳು, | ೧೦೦ | ೩೦೦೦ | ಅಡಿ. |
| ಹೊನ್ನೆ ವಗೈರೆ, | ೪೬ | ೯೩೦೦ | ಅಡಿ. |

ಷರತ್ತು.—೧೮೮೯ ನೇ ಇಸವಿ ಡಿಸಂಬರ್ ತಾರೀಖ್ ೧೯ ನಂಬರ್ ೫೩ ರ ಚೀಫ್ ಕಮಿಷನರ್ ಸಾಹೇಬರವರ ನೋಟಿಫಿಕೇಷನ್ ಮೇರೆ ಮರದ ಕ್ರಯದ ಪ್ರಕಿ ಶೇಕಡ ಹತ್ತರಷ್ಟು ಮೊಬಲಗನ್ನು ಹರಾಜು ಕಾಲದಲ್ಲಿ ಪಾವತಿ ಮಾಡಿ ಬಾಕಿ ಮೊಬಲಗನ್ನ ಹರಾಜು ತಾರೀಖ್ ಲಾಗಾಯಿತು ೩೦ ದಿನಗಳೊಳಗೆ ಪಾವತಿ ಮಾಡತಕ್ಕದ್ದು.

G. H. FOSTER,
ಡಿಪ್ಟಿ ಕನ್ಸರ್ವೇಟರ್,
ಕೊಡಗು ಫಾರೆಸ್ಟ್.

## ನೋಟಿಸ್.

ಸೌದೆ ಕಂಟ್ರಾಕ್ಟುದಾರರಿಗೆ ಇದರಿಂದ ತಿಳಿಸಲ್ಪಡುವದೇನೆಂದರೆ:—

ಬೆಂಗಳೂರಲ್ಲಿರುವ ಡಿಸ್ಟಿಲರಿಗೆ ಸೌದೆ ಸರಬರಾಯಿ ಬಗ್ಗೆ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿವೆ. ಅದರ ತಪಸೀಲ್ ತಿಳಿದುಕೊಳ್ಳಬೇಕಾದವರು ನವರೀ ಡಿಸ್ಟಿಲರಿಯಲ್ಲಿ ಕೇಳಿ ತಿಳಿದುಕೊಳ್ಳಬಹುದು.

## ಜಪ್ತಿ ಇಷ್ತಿಹಾರ್‌ನಾಮ.

ನಗರ್ ಡಿವಿಜನ್ ಡಿಸ್ಟ್ರಿಕ್ಟ್ ಕೋರ್ಟ್
೧೮೯೦ ನೇ ಇಸವಿ ಅಸಲ್ ನಂ. ೨೬.

ಸನ್ ೧೮೯೨ ನೇ ಇಸವಿ ಅಪೀಲ್ ಜಾರಿ
ನಂಬರ್ ೪೦.

ವಾದಿ—ಬೆಂಗಳೂರಲ್ಲಿರುವ ಪತ್ರಿ ಚಿಕ್ಕಬಸಪ್ಪ.

ಪ್ರತಿವಾದಿಗಳು—೧. ಶಿವಮೊಗ್ಗ ವಾಸಸ್ಥರಾದ
ಎ ಸೀತಾರಾಮಪ್ಪ.
೨. ಹರೀಕೆರೆ ವಾಸಸ್ಥರಾದ
ಎ. ಸಣ್ಣದೇವರಪ್ಪ.

ಹರೀಕೆರೆ ತಾಲ್ಲೂಕ್ ಲಿಂಗದಹಳ್ಳಿ ಮಾಗಣಿ

ನಂದಿಬೆಟ್ಟದ ಗ್ರಾಮಕ್ಕೆ ಸೇರಿದ ಕಸವಿನಮ್ಮತ್ತಿ ಯೆಂಬ ಹೆಸರುಳ್ಳ ಕಾಫೀಯೆಸ್ಟೇಟಿನ ಹರಾಜ್ ಬಗ್ಗೆ ೧೮೯೩ ನೇ ಇಸವಿ ಫೆಬ್ರವರಿ ೧೦ ನೇ ತಾರೀಖನ್ನು ಗೊತ್ತುಮಾಡಿ ಈ ಕೋರ್ಟಿನಿಂದ ಸೈಸಿಬೀಸಲ್ಪಟ್ಟ ಸಿ. ೧೮೯೨ ನೇ ಇಸವಿ ಡಿಸೆಂಬರ್ ೨೩ ನೇ ಮಾಹೆವಾರಿನ ಹರಾಜ್ ನೋಟಿಸನ್ನು ರದ್ದುಮಾಡಿ ಅದಕ್ಕೆ ಬದಲಾಗಿ ಇದರಿಂದ ಪ್ರಕಟಿಸಲ್ಪಡುವದೇನೆಂದರೆ— ಮೇಲೆ ತಿಳಿಸಲ್ಪಟ್ಟ ಕಾಫೀಯೆಸ್ಟೇಟ್, ಈ ತಿಂಗಳ ೧೦ ನೇ ತಾರೀಖಿಗೆ ಬದಲಾಗಿ, ಸಿ. ೧೮೯೩ ನೇ ಇಸವಿ ಮಾರ್ಚ್ ೨೩ ನೇ ತಾರೀಖ್‌ನಲ್ಲಿ ತರೀಕೆರೆಯಲ್ಲಿ ಹರಾಜ್ ಹಾಕಲ್ಪಡುವುದು.

೧೮೯೩ ನೇ ಇಸವಿ ಫೆಬ್ರವರಿ ತಾರೀಖ್ ೪ ರಲ್ಲಿ ನಮ್ಮ ದಸ್ತಖತ್ ಮೊಹರಿನಿಂದ ಕೊಡಲ್ಪಟ್ಟಿತು.

B TIRUMALACHAR,
*District Judge,*
*Nagar Division*

## THE MONEY MARKET.

ಮದರಾಸ್, ಶನಿವಾರ, ತಾರೀಖ್ 11ನೇ ಫೆಬ್ರವರಿ 1893
ಸೇಕಡ ೩ರೂ ಬಾಬತು ಗವರ್ನಮೆಂಟ್ ಪತ್ರಗಳು ರೂಪಾಯಿಗಳು, 105–4–0 ಇಂದ 105–10–0ವರೆಗೆ
ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳ, ಬಾಬತು 930 ಆಗಾ ಯಿತು 935ವರೆಗೆ.
ಕಮರ್ಷಿಯಲ್ ವ ಲ್ಯಾಂಡ್ ಮರ್ಟ್ಗೇಜ್ ಬ್ಯಾಂಕ್ ಷೇರುಗಳು, (100) ಬಾಬತು 160 ರಿಂದ 165 ವರೆಗೆ
ಸವರಿನ್‌ಗಳು, 16–6–6 ಇಂದ 16–9–0 ವರೆಗೆ.
ಬ್ಯಾಂಕ್‌ಬಿಲ್‌ಗಳು ಯೂನಿ ವರ್ತಕಹುಂಡಿಗಳು, ರೂಪಾಯಿಗೆ 6ತಿಂಗಳವಾಯಿದೆಗೆ, 1s 2 29/32d.
ಡಿಟೋ 4 ತಿಂಗಳವಾಯಿದೆಗೆ, 1s 2 27/32d.
ಡಿಟೋ ಕೇಳಿದಾಗ, 1s. 2¾d.

# ಕರ್ಣಾಟಕ ಪ್ರಕಾಶಿಕಾ.

## THE KARNATAKA PRAKASIKA.

MONDAY, FEBRUARY 13, 1893
೧೮೯೩ನೇ ಇಸವಿ ಫೆಬ್ರವರಿ ತಾ॥ ೧೩ ನೇ ಸೋಮವಾರ.

ಪ್ರಪಂಚದಲ್ಲಿ ಮನುಷ್ಯನಿಗೆ ಸುಖಕರಗಳಾದ ವಿಷಯಗಳಲ್ಲಿ ಧನವು ಪ್ರಧಾನವಾದುದಾಗಿಯೂ ವಿದ್ಯೆಯು ತತ್ಸಂಪಾದನಕ್ಕೆ ಸಹಕಾರಿಯಾಗಿರುವದರಿಂದ ಎರಡನೆಯದಾಗಿಯೂ ಇರುತಿವೆ. ಪ್ರಾಯಶಃ ಇವುಗಳಿಂದಲೇ ಅಧಿಕಾರ ಬುದ್ಧಿಬಲ ಚಾತುರ್ಯ ಪ್ರಾಕಸಿತ್ಯಾದಿ ಸಕಲ ಗುಣಗಳೂ ಮನುಷ್ಯನಿಗೆ ಉಂಟಾಗುತಿವೆ. ಪ್ರಧಾನಗಳಾದ ಮೇಲೆ ಕಂಡವುಗಳೆರಡೂ ಪರಸ್ಪರ ಸನ್ನಿಹಿತ ಸಂಬಂಧವುಳ್ಳವಾಗಿರುವದರಿಂದಲೂ, ವಿದ್ಯಾಪ್ರಯುಕ್ತವಾದ ಜ್ಞಾನಪ್ರದರ್ಶನಮೂಲಕ ಅರ್ಥ ಸಂಪಾದನೆಗೆ ಯೋಗ್ಯಗಳಾಗಿಯೂ ಪ್ರಯೋಜನಕರಗಳಾಗಿಯೂ ಇರುವ ವೃತ್ತಿಗಳು ಲೋಕದಲ್ಲಿ ಅನಂತಗಳಾಗಿ ಯೇರ್ಪಟ್ಟಿರುವದರಿಂದಲೂ ಜನಗಳು ತಮ್ಮ ಅಭಿರುಚಿಗೆ ತಕ್ಕಂತಾದ್ದನ್ನು ಆರಿಸಿ ಅಂಗೀಕರಿಸುತ್ತಾರೆ. ಇಂತಾ ಪದ್ಧತಿಯು ಸಾರ್ವದೇಶಿಕ ಸಾರ್ವಜನೀನವಾದುದಾಗಿ ಯೇರ್ಪಟ್ಟಿರುತಿದೆ. ಇಂತಾ ವೃತ್ತಿ ಸಮುದಾಯದಲ್ಲಿ ವೃತ್ತಾಂತಪತ್ರಿಕಾ ಲೇಖನೋದ್ಯೋಗವನ್ನೊಂದಾಗಿ ಪರಿಗಣಿಸುವದಕ್ಕೆ ಸಾಧ್ಯವಾಗುವದೇ, ಅಂತಾ ವೃತ್ತಿಯು ಇತರ ವೃತ್ತಿಗಳಂತೆ ಫಲದಾಯಕವೂ ಆಗಿರುವುದೇ, ಪ್ರಜೆಗಳ ಮನಸ್ಸಿಗೆ ವಿಶೇಷನಂಬಿಕೆಯಂ ಹುಟ್ಟಿಸುವದಕ್ಕೆ ಅವಶ್ಯಕಗಳಾಗಿರುವ ತಾದೃಕ ವೃತ್ತಿ ಪ್ರಯುಕ್ತವಾದ ವಿದ್ಯಾಭ್ಯಾಸವೂ ವ್ಯವಸ್ಥಿತವಾದ ಶಿಕ್ಷೆಯೂ ದೃಢತರವಾದ ಅಭಿರುಚಿಯೂ ಪ್ರಕೃಂತಾ ಕೆಲವರು ಪತ್ರಿಕಾಲೇಖಕರಂ ಪಡೆಯುವದಕ್ಕೆ ಸಾಧ್ಯವಾಗುವದೇ, ಎಂಬ ಜಿಜ್ಞಾಸೆಕಾಜೆಗವುಂಟಾಗಲು, ಅದಂಕುರಿತು, ಲಂಡನ್ ಟೈಮ್ಸ್ ಪತ್ರಿಕೆಯ ಪ್ಯಾರಿಸ್ ಬಾತಮಿದಾರರಾದ ಮಾರ್ಷಿಯರ್ ಡಿ ಬ್ಲೋವಿಟಿಜ್ ಯೆಂಬವರು ವಿಚಾರಮಾಡುತ, ಇದೂ ಇತರವೃತ್ತಿಗಳಂತೆ ದರಿಗ್ರಹಾರ್ಹವಾದ್ದೆಂತಲೂ, ಮೇಲೆ ತಿಳಿಸಲ್ಪಟ್ಟಂತಾ ಲಕ್ಷಣಯುಕ್ತರಾದ ಜನರಂ ಸಂಪಾದಿಸುವದು ಸಾಧ್ಯವಲ್ಲವೆಂತಲೂ ತಿಳಿಸಿ ವೃತ್ತಾಂತಪತ್ರಿಕಾ ಲೇಖಕನಾಗಬೇಕಾದವನೊಳಪಡಬೇಕಾಗಿರುವ ಒಂದು ಬಗೆ ಶಿಕ್ಷಾವಿಧಾನವನ್ನೇರ್ಪಡಿಸಿ ತಿಳಿಸಿರುತ್ತಾರೆ. ತತ್ಕಾಲದಲ್ಲಿ ಎಂತಾಗುಣವುಳ್ಳವರು ಪತ್ರಿಕಾ ಲೇಖಕರಾಗಿರಬೇಕೋ, ಅವರವರ್ತನವು ಯಾವ ವಿಧವಾಗಿರತಕ್ಕದ್ದೋ, ಅವರ ಸಿದ್ಧಾಂತವು ಯಾವತೆರನಾಗಿರಬೇಕೋ, ಏನಮಾದಿ ವಿಷಯಗಳಲ್ಲಿ ವ್ಯವಸ್ಥಿತವಾದ ನಿಬಂಧನೆಗಳ್ಯಾವವೂ ಇರುನಂತೆ ಕಾಣಿಸಲಿಲ್ಲವಾದಕಾರಣ ಅವರಿಗೆ ಯಾವ ನಿರ್ಬಂಧನವೂ ಇರುವದಿಲ್ಲವು. ಹೀಗೆ ವ್ಯಕ್ತಿ ನಿರ್ಣಯವೂ, ವ್ಯಕ್ತಿ ನಿಷ್ಠವಾದ ಗುಣವಿವೇಚನೆಯೂ ಮಾಡಲ್ಪಡಲಿಕ್ಕೆ ಯೋಗ್ಯಗಳಾದ ನಿಬಂಧನೆಗಳಿಲ್ಲದೆಹೋಗುವದರಿಂದಲೇ ಅಸಮರ್ಥರಾದವರೆಲ್ಲರೂ ಪ್ರಸಕ್ತ ವೃತ್ತಿಯಲ್ಲಿ ಪ್ರವೇಶಿಸಿ, ಅದರ ಗೌರವವಂ ಹೋಗಲಾಡಿಸಿ, ತಾವೂ ಅಪಯಶಸ್ಸನ್ನು ಸಂಪಾದಿಸುತ್ತಾರೆ. ಮತ್ತು ವೃತ್ತ್ಯಂತರದಲ್ಲಿ ಸಂಪೂರ್ಣ ವಿಫಲತೆಯಂ ಪಡೆದು ಜೀವನೋಪಾಯವಂ ಸಂಪಾದಿಸಲಾರದವರೆಲ್ಲರು ಇದರಲ್ಲಿ ಪ್ರವೇಶಿಸುವದರಿಂದ ಇದು ಅಭಿವೃದ್ಧಿಯಾಗುತ ಬರಲಿಕ್ಕೆ ಬದಲಾಗಿ ಪ್ರಯೋಜನಶೂನ್ಯವಾದುದಾಗಿದೆ. ಅನುಭವಶೂನ್ಯರಾದವರೀವೃತ್ತಿಯಲ್ಲಿ ಪ್ರವೇಶಿಸಿದಕೂಡಲೇ, ವಿಷಯಸ್ವರೂಪವನ್ನೂ, ಕಾಲದೇಶಸ್ಥಿತಿಯನ್ನೂ, ಅದರ ಪ್ರಯೋಜನಾಪ್ರಯೋಜನವನ್ನೂ, ಅದರ ಫಲಪರ್ಯವಸಾನವನ್ನೂ ವಿವೇಚನೆಮಾಡಿ ತಿಳಿದುಕೊಳ್ಳದೆಯೇ ಮನದೊಳು ತೋರಿದಂತೆ ವಿಷಯ ವಿಮರ್ಶೆಮಾಡಿ ಬರೆಯತಕ್ಕವರಾಗಿಯೂ, ನಿಶ್ಯೈಮಿತ್ರಿಕ ವಿನಯ ವಿಚಾರಪರರಾಗಿಯೂ, ಶಾಸ್ತ್ರೀಯಗಳಾದ ಅಥವಾ ಗ್ರಾಂಥಿಕಗಳಾದ ವಿಷಯಗಳ ಗುಣದೋಷ ವಿಮರ್ಶಕರಾಗಿಯೂ ಪ್ರವರ್ತಿಸುತ್ತಾರೆ. ಇಂತಾ ದೋಷಗಳು ನಿವಾರಣವಾದ ಹೊರತು ವೃತ್ತಿಗೌರವವುಂಟಾಗಲಾರದೆಂದು ಮಾರ್ಷಿಯರ್ ಡಿಬ್ಲೋವಿಟಿಜ್ ಯವರು ಅಭಿಪ್ರಾಯ ಪಡುತ್ತಾರೆ. ಇದಕ್ಕೆ ತಕ್ಕ ಪ್ರತಿಕ್ರಿಯೆಯು ತಿಳಿಸಲಿಕ್ಕೆ ಪೂರ್ವಭಾವಿಯಾಗಿ ಸದರೀ ದೊಡ್ಡ ಮನುಷ್ಯರು ವೃತ್ತಾಂತಪತ್ರಿಕಾ ಲೇಖಕರ ಲಕ್ಷಣವಂ ವಿವರಿಸುತ್ತಾರೆಂತೆಂದರೆ,—ಯಾವಾತನು, ಕ್ರಮವಾಗಿ ಮುದ್ರಿಸಲ್ಪಡುತಲಿರುವ ಪತ್ರಿಕೆಗೆ ಅವಿಚ್ಛಿನ್ನವಾಗಿ ಬರೆಯುತ ಜೀವಿಸುವನೋ, ತನ್ನ ಬರವಣಿಗೆಯು ಎತ್ತೆವರೂಪ ಸ್ಪಷ್ಟವಾಗಿದ್ದಾಗ್ಯೂ ತಾತ್ಕಾಲಿಕವಿಷಯ ಸ್ವರೂಪಾನುಗುಣವಾಗಿ ವಿಚಾರವಂ ಮಾಡುವನೋ, ಅಂತವನನ್ನು ಪತ್ರಿಕಾಲೇಖಕನೆಂದು ಭಾವಿಸತಕ್ಕದ್ದು. ಮೇಲೆ ಕಂಡ ಗುಣರಹಿತರಾದ ಇತರರಂ ಪತ್ರಿಕಾ ಲೇಖಕ ಸಮೂಹದಲ್ಲಿ ಸೇರಿಸಲಿಕ್ಕೆ ಅರ್ಹರಾಗಲಾರರೆಂದು ಮಾರ್ಷಿಯರ್ ಡಿಬ್ಲೋವಿಟಿಜ್ ಯವರು ಸೂಚಿಸಿ, ಕೆಲವರಂ ತತ್ಸಮೂಹದಿಂ ಪ್ರತ್ಯೇಕಿಸುತ್ತಾರೆಂತೆಂದರೆ—ಆಯಾ ವಸ್ತುಗಳ ಗುಣದೋಷ ವಿಚಾರಾರ್ಥ ಪ್ರವರ್ತಿಸಿರುವಂತಾ "ರಿವ್ಯೂ" ಗಳೆಂಬ ಪತ್ರಿಕೆಗೆ ಬರೆಯತಕ್ಕವರೂ, ಯಾವದಾದರು ವೃತ್ತಾಂತವಂ ತಿಳಿಸುತ ಒಂದು ಪತ್ರಿಕೆಯ ಸಂಬಂಧವಂ ಪಡೆದ ಮಾತ್ರಕ್ಕೆ ತಾವೂ ದೊಡ್ಡ ಲೇಖಕರೆಂದು ಸ್ವತಃ ಭಾವಿಸತಕ್ಕವರೂ ಮೇಲೆಕಂಡ ಲೇಖಕರ ಸಮೂಹಕ್ಕೆ ಬಾಹ್ಯರೆಂದೆಣಿಸತಕ್ಕದ್ದು. ಪತ್ರಿಕಾ ಲೇಖಕರಯೋಗ್ಯತಾ ನಿರ್ಧಾರಣಾರ್ಥ ಮೇಲೆ ಕಂಡ ದೊಡ್ಡಮನುಷ್ಯರು ಯುಕ್ತವಾದ ಒಂದು ವಿದ್ಯಾಭ್ಯಾಸ ಕ್ರಮವಂ ಕಲ್ಪಿಸಿ ಸೂಚಿಸುತ್ತಾರೆ. ಸಕಲರೂ ವೃತ್ತಾಂತ ಪತ್ರಿಕಾ ಲೇಖನೋದ್ಯೋಗವನ್ನಪೇಕ್ಷಿಸುವದಕ್ಕೆ ಸಾಧ್ಯವಲ್ಲವಾಗಿ ಈ ವಿಷಯದಲ್ಲಿ ಕೆಲವು ನಿಯಮಗಳು ಅಪೇಕ್ಷಿತಗಳಾಗಿರುತಿವೆ. ಅವು ಯಾವವೆಂದರೆ,— ಪ್ರಸಕ್ತ ವೃತ್ತಿಯನ್ನವಲಂಬಿಸಬೇಕೆಂಬ ಕೋರಿಕೆಯುಳ್ಳ ತರುಣನು ೧೮ ವರುಷಗಳಿಗೆ ಮೇಲ್ಪಟ್ಟ ವಯಸ್ಸುಳ್ಳವನಾಗಿಯೂ, ಯೂನಿವರ್ಸಿಟಿ ಡಿಗ್ರಿಯಂ ಪಡೆದು ಶರೀರ ದಾರ್ಢ್ಯವುಳ್ಳವನಾಗಿಯೂ ಇರತಕ್ಕದ್ದು. ಆತನಿಗೆ ಸ್ವಭಾಷೆಯಲ್ಲದೆ ಇನ್ನು ಯಾವದಾದರು ಇತರ ಯೆರಡು ಭಾಷೆಗಳು ಚೆನ್ನಾಗಿಬಂದಿರತಕ್ಕದ್ದು. ಈ ಅರ್ಹತೆಯಂ ಪಡೆದಿರುವನಾದರೆ ಬಳಿಕ ಯೆರಡು ಸಂವತ್ಸರಗಳ ಕಾಲದವರಿವಿಗೆ ಆತನು ಚರಿತ್ರೆ ಮತ್ತು ಭಾಷಾಪ್ರಯುಕ್ತವಾದ ಪ್ರಶಸ್ತ್ಯವಂ ಪಡೆದಿರುವ ಪ್ರಸಿದ್ಧವಾದ ಯಾವದಾದರು ದೇಶದ ಪೂರ್ವ ವೃತ್ತಾಂತಗಳನ್ನೂ, ಭಾಷಾ ಭಿವೃದ್ಧಿಯಂ ಬೋಧಿಸುವ ಉದ್ಗ್ರಂಥಗಳನ್ನೂ ಅಭ್ಯಸಿಸತಕ್ಕದ್ದಲ್ಲದೆ, ವಿಶೇಷ ಪ್ರಾಚುರ್ಯವುಳ್ಳ ವೃತ್ತಾಂತ ಪತ್ರಿಕಾ ಲೇಖಕರ ಅಭಿಪ್ರಾಯಗಳನ್ನೂ, ಅವರು ಅವಂ ವ್ಯಕ್ತಪಡಿಸುವಂತಾ ರೀತಿಯನ್ನೂ, ಅವರು ತಮ್ಮ ಸ್ವಾತಂತ್ರ್ಯವಂ ಕಾಪಾಡಿಕೊಳ್ಳುವ ಬಗೆಯನ್ನೂ, ಅಂತಾ ಪತ್ರಿಕಾ ವಿಷಯದಲ್ಲಿ ಪ್ರಜೆಗಳು ಪಡೆದಿರುವ ತಾತ್ಪರ್ಯವನ್ನೂ, ಅವು ನಿರ್ವಹಿಸಲ್ಪಡುವ ಕ್ರಮವನ್ನೂ ಅನುಭವಪೂರ್ವಕ ತಿಳಿದುಕೊಳ್ಳತಕ್ಕದ್ದು. ಇದಲ್ಲದೆ ಪತ್ರಿಕಾ ಲೇಖಕನಾಗಿ ಪ್ರವರ್ತಿಸತಕ್ಕವನು, ಸೃಷ್ಟಿ ವೈಚಿತ್ರ್ಯಗಳಂ ಕುರಿತು ವರ್ಣಿಸಬೇಕಾದ ಸಂದರ್ಭದಲ್ಲಿ ಅದಕ್ಕೆ ಅನುಕೂಲಿಸುವಂತೆ ಸ್ವಾಭಾವಿಕ ಸೌಂದರ್ಯವಂ ತೋರ್ಪಡಿಸುವಂತಾ ವಿಶೇಷ ಪ್ರದೇಶಗಳನ್ನು ನೋಡಿದ ಕೂಡಲೇ ಬರೆಯುವ ವಿಧಾನವನ್ನೂ, ಮನುಷ್ಯನ ಮುಖಾವಲೋಕನ ಮಾತ್ರದಿಂ ಆತನ ಗುಣ ಚೇಷ್ಟಾದಿಗಳಂ ತಿಳಿದುಕೊಳ್ಳಲಿಕ್ಕೆ ಶಕ್ತನಾಗುವಂತೆ, ಮುಖಭಾವಂ ಮನೋಭಾವವಂ ನಿವೇದಿಸುವಂತಾ ಶಾಸ್ತ್ರವನ್ನೂ, ತಿಳಿಯತಕ್ಕದ್ದು. ಆತನು ಮುಖ್ಯ ಯುದ್ಧದಲ್ಲಿಯೂ ಪ್ರಾಣರಕ್ಷಕಗಳಾದ ಆಯುಧಗಳಂ ಧರಿಸುವದರಲ್ಲಿಯೂ ಸಾಕಾದ ಜ್ಞಾನವಂ ಸಂಪಾದಿಸಬೇಕು. ಕಡೆಗೆ ಅವನು ಅನ್ಯದೇಶಸಂಚಾರವಂ ಮಾಡಿ ಅಲ್ಲಿನ ವೃತ್ತಾಂತಪತ್ರಿಕಾ ನಿರ್ವಹಣಕ್ರಮಗಳನ್ನರಿತು ಆ ದೇಶಜನಮರ್ಯಾದೆಗಳಂ ತಿಳಿದತರುವಾಯ ಪತ್ರಿಕಾಲೇಖಕನಾಗಿ ಪ್ರವರ್ತಿಸತಕ್ಕದ್ದು ಯೋಗ್ಯವಾಗಿರುತಿದೆ. ಮಾರ್ಷಿಯರ್ ಡಿಬ್ಲೋವಿಟಿಜ್ ಯೆಂಬವರ ಮನೋಜ್ಞವಾದ ಗುಣಗಳನ್ನು ಪಡೆದು ಅವರ ಭಾವನಾನುಸಾರ ಅರ್ಹತೆ ನಿಸಿಕೊಂಡಿರುವ ವೃತ್ತಾಂತ ಪತ್ರಿಕಾಲೇಖಕರು ಯೆಷ್ಟುಜನ ಇಂಗ್ಲೆಂಡಿನಲ್ಲಾಗಲಿ, ಅವರ ಸ್ವದೇಶವಾದ ಫ್ರಾನ್ಸಿನಲ್ಲಾಗಲಿ ದೊರೆಯುವರೋ ನಮಗೆ ತಿಳಿಯದು. ಪೂರ್ವೋಕ್ತ ಲಕ್ಷಣಯುಕ್ತರಾದ ಪುರುಷರಾಗಲಿ ತಾದೃಶಗುಣ ಸಮುದಾಯವಾಗಲಿ ಇಂಡ್ಯದೇಶದಲ್ಲಿ ದೊರೆಯುವುದು ಪ್ರಯಾಸವಾದುದರಿಂದ ಅನರುದ್ದೇಶವು ಇಲ್ಲಿ ಎಂದಿಗೂ ಸಫಲವಾಗಲಾರದು. ಯೂನಿವರ್ಸಿಟಿ ಪ್ರಾಶಸ್ತ್ಯವಂ ಪಡೆದು ದೃಢಾಂಗರಾಗಿರುವಂತಾ ಪೂರ್ವವಯಸ್ಕರಾದವರನೇಕರು ಇಂಡ್ಯ ದೇಶದಲ್ಲಿ ದೊರೆಯುವರೆಂಬುದರೊಳೇನೂ ಸಂಶಯ ವಿಲ್ಲವು. ಸ್ವಭಾಷೆಯಲ್ಲದೆ ಇತರ ಯೆರಡು ಮೂರು ಭಾಷೆಗಳಲ್ಲಿ ಒಳ್ಳೆಯಜ್ಞಾನವಂ ಸಂಪಾದಿಸಿರತಕ್ಕವರು ಸಹ ಸ್ವಲ್ಪಮಟ್ಟಿಗೆ ದೊರೆಯಬಹುದು. ಪರಂತು ಮೇಲೆಕಂಡ ಫ್ರೆಂಚ್ ಉಪದೇಶಕರು ತಿಳಿಸುವಂತೆ, ಯೂರೋಪ್ ಖಂಡದ ಚರಿತ್ರೆ ಸಂಬಂಧವಾದ ಪ್ರದೇಶಗಳ ಪುರಾತನ ವೃತ್ತಾಂತಗಳನ್ನೂ, ಭಾಷಾವಿಚಾರವನ್ನೂ, ಆಯಾ ದೇಶಗಳ ರಾಜಕೀಯ ಯೇರ್ಪಾಡುಗಳ ಸಾಮಾನ್ಯ ಜ್ಞಾನವನ್ನೂ, ತತ್ತದ್ದೇಶ ಕಾಲ ಜನಸ್ಥಿತಿ ಗುಣ ಭೇದಗಳನ್ನೂ, ಭೂಗೋಳಶಾಸ್ತ್ರಜ್ಞಾನವನ್ನೂ, ಅವುಗಳ ಪರಸ್ಪರ ಸಂಬಂಧ ಸ್ವರೂಪವನ್ನೂ ಆಯಾ ದೇಶಗಳ ಸೈನಿಕ ಬಲವನ್ನೂ, ಅವರವರ ಆದಾಯವೆಚ್ಚಗಳನ್ನೂ ತಿಳಿದಿರುವಂತವರು ಯೆಷ್ಟುಮಂದಿ ಇರುವರು? ಈ ದೇಶದಲ್ಲಿ ಇಷ್ಟರ ಜ್ಞಾನವುಳ್ಳವರು ಒಬ್ಬರಿಬ್ಬರು ಇದಾರೆಯೋ ಇಲ್ಲವೋ ಉಪನೇತ್ರ ಸಹಾಯದಿಂ ಹುಡುಕಿ ನೋಡಬೇಕಾಗಿದೆ. ಆದರೆ ಮಾರ್ಷಿಯರ್ ಡಿಬ್ಲೋವಿಟಿಜ್ ಯವರು ತಿಳಿಸತಕ್ಕ ನಿಯಮಗಳು ಮಾತ್ರ ಪತ್ರಿಕಾ ಲೇಖಕರ ವೃತ್ತಿಯು ಸಾಮಾನ್ಯೇನ ಅಭಿವೃದ್ಧಿಗೊಳಿಸತಕ್ಕವಾಗಿರುತಿವೆಂದು ಭಾವಿಸುವೆವು. ಪತ್ರಿಕಾ ಲೇಖಕರಿಗೆ ಚಿತ್ರಲೇಖನ ಕೌಶಲ್ಯವು ಅಪೇಕ್ಷಿತವೆಂದು ಸದರೀ ದೊಡ್ಡ ಮನುಷ್ಯರು ತಾತ್ಪರ್ಯಪಡುವದು ಅಯುಕ್ತವೆಂದು ನುಡಿಯಲಾಗದು. ಕೆಲವು ಪ್ರಕರಣಗಳಲ್ಲಿ ಮನುಷ್ಯನ ಗುಣವಿವೇಚನೆಯಂ ಮಾಡಬೇಕಾಗಿ ಬರುವದರಿಂದಲೂ, ಮತ್ತು ಕೆಲವು ಸಂದರ್ಭಗಳಲ್ಲಿ ವಸ್ತುಸ್ವರೂಪ ವರ್ಣನೆಯಂ ಮಾಡಬೇಕಾಗಿರುವದರಿಂದಲೂ ಲೇಖಕನಿಗೆ ತಾದೃಕ ಪರಿಜ್ಞಾನವು ಬೇಕಾಗಿರುತಿದೆ. ಶಸ್ತ್ರಧಾರಣಾದಿ ಕ್ರಮಗಳನ್ನರಿಯಬೇಕಾದ ಆವಶ್ಯಕತೆ ಮಾತ್ರ ನಮಗೆ ಕಂಡುಬರಲಿಲ್ಲವು. ಪ್ರಾಯಶಃ ಲೇಖಕರಿಗೆ ಶತ್ರುಬಾಹುಳ್ಯವು ಅಧಿಕವಾಗಿ ಅವರಿಂದೇನಾದರೂ ಅಪಾಯ ಸಂಭವಿಸುವ ಸಂದರ್ಭದಲ್ಲಿ ಆತ್ಮರಕ್ಷಣೆಯ ಬಗ್ಗೆ ಸದರೀ ವಿದ್ಯೆ ಸಹ ತಿಳಿದಿರಬೇಕೆಂಬದೇನಾದರು ಏತದ್ವಿಷಯ ವಿಚಾರಕರ ತಾತ್ಪರ್ಯವಾಗಿರಬಹುದು. ಅಂತಾ ಅಪಾಯವು ಇಂಡ್ಯ ದೇಶದಲ್ಲಿ ಕೆಲವು ಕಾಲದ ಹಿಂದೆ ಅಲಹಾಬಾದಿನೊಳೊಂದುಕಡೆ ಮಾತ್ರ ನಡೆದಂತೆ ನಮ್ಮ ಕೇಳ್ವಿಗೆ ಬಂದಿತ್ತೇಹೊರ್ತು ಬೇರೆಯೆಲ್ಲಿಯೂ ನಡೆದಂತೆ ನಮಗೆ ತಿಳಿಯಬರಲಿಲ್ಲವು ಆದಕಾರಣ ಇದು ಶುದ್ಧ ಅನಾವಶ್ಯಕ ವಿಷಯವೆಂದು ತೋರುತಿದೆ. ಮಾರ್ಷಿಯರ್ ಡಿಬ್ಲೋವಿಟಿಜ್ ಯವರು ಈ ನಿಯಮಗಳೊಡನೆ ಬೇರೆಯೊಂದು ಏರ್ಪಾಡನ್ನು ಮಾಡಬೇಕೆಂದು ಸೂಚಿಸಿರುತ್ತಾರೇನೆಂದರೆ,— ವಿಲಕ್ಷಣವಾದ ದೇಶಗಳಲ್ಲೆಲ್ಲ ವೃತ್ತಾಂತ ಪತ್ರಿಕಾ ಲೇಖನಕ್ರಮವಂ ಬೋಧಿಸುವದಕ್ಕೆ ಪಾಠಶಾಲೆಗಳಂ ಸ್ಥಾಪಿಸಬೇಕೆಂತಲೂ, ಅವುಗಳಗೊಂದು ಸಮಾಖ್ಯೆಯಂ ಕಲ್ಪಿಸಬೇಕೆಂತಲೂ, ಒಂದು ಪಾಠಶಾಲೆಯ ವಿದ್ಯಾರ್ಥಿಗಳು ವಿಶೇಷ ಖರ್ಚಿಲ್ಲದೆ ಇತರ ಯಾವ ಪಾಠಶಾಲೆಗಳಲ್ಲಾದರೂ ಸೇರಬಹುದೆಂತಲೂ, ಪ್ರತಿ ಪಾಠಶಾಲೆಯವರು, ತಮ್ಮ ಪಾಠಶಾಲೆಯಲ್ಲಿ ವಿದ್ಯಾಭ್ಯಾಸಮಾಡಿ ಪರೀಕ್ಷೆಗಳಲ್ಲಿ ತೇರ್ಗಡೆಯನ್ನೈದಿ, ಪಟ್ಟಗಳು ಪಡೆಯತಕ್ಕ ವಿದ್ಯಾರ್ಥಿಗಳನ್ನು ನೌಕರಿಯಲ್ಲಿಟ್ಟುಕೊಳ್ಳುವಂತೆ ಸಮಾಖ್ಯೆಯೊಳಿರುವ ಪ್ರಮುಖರಾದ ವೃತ್ತಾಂತಪತ್ರಿಕಾಧಿಪರಿಂದ ಭರವಸೆಯಂ ತೆಗೆದುಕೊಳ್ಳಬೇಕೆಂತಲೂ ತಿಳಿಸುತ್ತಾರೆ. ಇಂತಾ ಕ್ರಮವನ್ನನುಸರಿಸುವವರ ಮೂಲಕ, ಮಾಡಲ್ಪಡುವ ಕಾರ್ಯಗೌರವದಿಂ ಮಾತ್ರವಲ್ಲದೆ ಕರ್ತೃಗೌರವದಿಂದಲು ಸಹ ಈವೃತ್ತಿಗೆ ವಿಶೇಷಗೌರವವುಂಟಾಗಬಹುದೆಂದು ಸದರೀ ಫ್ರೆಂಚ್ ದೊಡ್ಡಮನುಷ್ಯರು ದೃಢವಾಗಿ ನಂಬಿರುತ್ತಾರೆ. ಇವರ ಕೋರಿಕೆಯು ಏತನ್ಮಾತ್ರದಿಂದಲೇ ಪರ್ಯವಸಾನವನ್ನೈದಿಲ್ಲವು. ಈ ಪಾಠಶಾಲೆಗಳಲ್ಲದೆ ಪ್ರತಿ ರಾಜಧಾನಿಯಲ್ಲಿಯೂ ಪ್ರಜಾ ಸಂರಕ್ಷಣಾರ್ಥ ಅವರ ಅಭಿಪ್ರಾಯ ಪ್ರದರ್ಶಕವಾದ "ನ್ಯಾಯ ವಿಮರ್ಶ" ವೆಂಬ ಒಂದು ಪತ್ರಿಕೆಯಂ ಸ್ಥಾಪಿಸಬೇಕೆನ್ನುತ್ತಾರೆ. ಈ ಪತ್ರಿಕೆಯ ಉದ್ದೇಶವು, ಸಕಲ ದೋಷಗಳನ್ನೂ ನಿವಾರಣಮಾಡಿ ದುರಾಲೋಚನೆಗಳನ್ನು ಖಂಡಿಸಿ, ಪ್ರಜಾಭಿಪ್ರಾಯಗಳು ಅನುಕೂಲವಾಗಿಯೂ ವಿವೇಕಯುಕ್ತವಾಗಿಯೂ ಇರುವಂತೆ ಮಾಡುವದಾಗಿರುತಿದೆ. ಮುಖ್ಯವಾಗಿ ಮೇಲೆ ಕಂಡ ಪತ್ರಿಕೆಯು ಸರ್ವವಿಧದಿಂದಲೂ ಇತರ ಪತ್ರಿಕೆಗಳಿಗೆಲ್ಲ ವಿಧಾಯಕವಾಗಿರಬೇಕೆಂಬದು ಅವರ ಸಂಕಲ್ಪವಾಗಿರುತಿದೆ. ಆದರೆ ಏತತ್ಪತ್ರಿಕಾ ಸಂಬಂಧವುಳ್ಳವರು ಮಾರ್ಷಿಯರ್ ಡಿಬ್ಲೋವಿಟಿಜ್ ಯವರ ಮನೋರಾಜ್ಯದಲ್ಲಿ ವ್ಯವಸ್ಥಿತವಾದ ಭಾವನಾಪಾಠಶಾಲೆಯಲ್ಲಿ ಶಿಕ್ಷಿತರಾಗಿ, ಇತರ ಪತ್ರಿಕಾ ಲೇಖಕರಿಗಿಂತ ವಿಶೇಷ ಚತುರರಾಗಿರಬಹುದೆಂದು ನಂಬುತ್ತೇವೆ. ಮುಖ್ಯವಾಗಿ ಇವರ ಅಭಿಪ್ರಾಯವು ಕಾರ್ಯತಃ ಅಸಾಧ್ಯವಾಗಿ ಕಂಡುಬಂದಾಗ್ಯೂ ಶಬ್ದತಃ ಸ್ವಾರಸ್ಯವಾದುದಾಗಿಯೂ ಸದ್ಭಾವವುಳ್ಳದ್ದಾಗಿಯೂ ಇರುತಿದೆ. ಈ ವೃತ್ತಿಯಲ್ಲೀಗ ಅನೇಕ ಬಾಧಕಗಳು ನೆಲೆಗೊಂಡಿವೆಯೆಂಬದಂ ನಾವು ಅಂಗೀಕರಿಸುತ್ತೇವೆ. ಆದರೆ ಅವುಗಳ ಪ್ರತಿಕ್ರಿಯೆ ಮಾತ್ರ ತೃಪ್ತಿಕರವಾಗಿಲ್ಲವು. ಅನೇಕರು ಅನೇಕವೃತ್ತಿಗಳಲ್ಲಿ ಪ್ರವೇಶಿಸಲಿಕ್ಕೆ ಸ್ವತಃ ಅರ್ಹರೆನಿಸಿಕೊಂಡಿದ್ದಾಗ್ಯೂ ಅವರು ಅವುಗಳಲ್ಲಿ ಜಯಶೀಲರೆನಿಸಿಕೊಳ್ಳುವದಿಲ್ಲವು. ಹಾಗೆಯೇ ವೃತ್ತಾಂತಪತ್ರಿಕಾ ಲೇಖಕರು ಕೂಡ, ಮಾರ್ಷಿಯರ್ ಬ್ಲೋವಿಟಿಜ್ ಯವರು ತಿಳಿಸುವಂತಾ ಮನೋಹರವಾದ ವ್ಯವಸ್ಥಿತ ಶಿಕ್ಷಾಕ್ರಮಕ್ಕೊಳಗಾದಾಗ್ಯೂ ಅವರು ಪತ್ರಿಕಾ ಪ್ರಪಂಚದಿಂ ಉತ್ತೀರ್ಣರಾಗುವದು ಪ್ರಯಾಸವೆಂದೆಣಿಸುತ್ತೇವೆ.

## Occasional Notes.
### ನೈಮಿತ್ತಿಕ ವಿಷಯನ್ಯಾಸ.

ಬಹುಕಾಲದ ಮೊದಲು ಯೂರೋಪ್ ದೇಶದಲ್ಲಿ ಸಂಚಾರ ಮಾಡುತಲಿದ್ದ ಗೊಂಡಲ್ ಸಂಸ್ಥಾನದ ಠಾಕೂರ್ ಸಾಹೇಬರವರು ಆಚೆ ಸೋಮವಾರದ ದಿನ ತಮ್ಮ ರಾಣಿಯವರೊಡನೆ ತಮ್ಮ ಸಂಸ್ಥಾನಕ್ಕೆ ವಾಪಸ್ ಬಂದು ಸೇರಿದರು.

ಘನವಂ ಪಡೆದ ಸಿಂಧಿಯಾ ಮಹಾರಾಜರವರು ಕೆಲವು ದಿನಗಳಿಂದ ಕಲ್ಕತ್ತೆಯೊಳಿರುತಲಿದ್ದರಷ್ಟೆ. ಸದರೀ ಯವರು ಈಚೆಗೆ ಅಲ್ಲಿಂದ ಹೊರಡುವ ಸಂದರ್ಭದೊಳು ಅಲ್ಲಿನ ಒಂದು ಧರ್ಮಸ್ಥಾಪನೆಗೆ ಧರ್ಮಾರ್ಥ ಒಂದು ಸಾವಿರ ರೂಪಾಯಿಗಳು ಕೊಟ್ಟುಬಂದರು

ಭೋಲ್ ಪುರದ ಅರಸರವರು ಮೃಗಯಾ ವಿನೋದಾರ್ಥ ಕುದುರೆಯ ಮೇಲೆ ಸವಾರಿ ಹೋಗುತ್ತಿರುವಲ್ಲಿ ಪುರಾವಶಾತ್ ಬಿದ್ದು ಬಲವಾದ ಘಾಯ ತಗಲಿ ಯೆರಡುವಾರಗಳ ಮೊದಲು ಖಾಹಿಲೆಯಾಗಿರುತಲಿದ್ದರಷ್ಟೆ, ಪರಂತು ಪ್ರಾಣಾಪಾಯ ಶಂಕೆ ಯಿಲ್ಲವೆ, ಕ್ಷಿಪ್ರದಲ್ಲಿ ಆರೋಗ್ಯ ಪ್ರಾಪ್ತವಾಗುವದೆಂದು ನಿರೀಕ್ಷಿಸಲ್ಪಟ್ಟಿದೆ.

ಗ್ವಾಲಿಯರ್‌ಸಂಸ್ಥಾನದಮಹಾರಾಣಿಯವರು ಯೂರೋಪಿಯನ್ ಹೆಂಗಸರಂತೆ ಧಾರಾಳವಾಗಿ ಇಂಗ್ಲಿಷಿನವರ ಮಾತಕಚೇರಿಗಳಿಗೆ ಹೋಗಿ ವ್ಯಾಪಾರ ವ್ಯವಹಾರವನು ನೋಡಿ ಪ್ರಾಚೀನ ಸಂಪ್ರದಾಯ ಕರಣ್ಯರಾದ ಹಿಂದೂಗಳು ಸದರೀ ಮಹಾರಾಣಿಯವರ ಚರ್ಯೆಯಂ ಕುರಿತು ಕೇವಲ ಅಸಂತುಷ್ಟಮನಸ್ಕರಾದರೆಂದು ಸಿವಿಲ್ ವ ಮಿಲಿಟರಿ ಗೆಜೆಟ್ ಪತ್ರಿಕೆ ಹೇಳುತ್ತದೆ.

ಅಮೇರಿಕಾ ದೇಶದ ಚಿಕಾಗೋ ಎಂಬ ಪಟ್ಟಣದಲ್ಲಿ ನಡೆಯುವದಾಗಿರುವ ವಿವಿಧವಸ್ತುಪ್ರದರ್ಶನಕ್ಕೆ ತಾವೂ ಜೊತೆ ಇಬ್ಬರೂ ದೊಡ್ಡಮನುಷ್ಯರೂ ಹೋಗಿಬರುವಣುಚಿತವೆಂದುಕೊಚ್ಚಿ ಸಂಸ್ಥಾನದ ದಿವಾನ್ ಪೆಷ್ಕಾರ್ರವರಾದ ಮ|| ಶಂಕರಯ್ಯನವರು ತಮ್ಮ ಅರಸಿನವರಿಗೆ ತಿಳಿಸಲು ಅವರು ಆ ವಿಷಯವಂ ಕುರಿತು ಆಲೋಚಿಸುತಲಿದ್ದಾರೆಂದು ಹಿಂದೂನೆಂಬ ಪತ್ರಿಕೆ ತಿಳಿಸುತ್ತಿದೆ.

ಹೈದರಾಬಾದ್ ಸಂಸ್ಥಾನದ ಹೊಸ ರಾಜಕೀಯ ಯೇರ್ಪಾಡುಗಳೆಲ್ಲ ಪೂರ್ತಿಯಾಗಿ, ಅದರಂತೆ ಈ ತಿಂಗಳ ೭ ನೇ ತಾರೀಖಿನಲ್ಲಿ ಸರ್ಕಾರ್ ಆಫೀಸುಗಳಿಗೆ ಪ್ರಾರಂಭವಾಗಿ, ಸಂಸ್ಥಾನದ ಮಂತ್ರಿಗಳು ಹವಾಲಿಮಹಲ್ ಎಂಬ ಅರಮನೆಯಲ್ಲಿ ಸಭೆ ಸೇರಿದರು. ಘನವಂ ಹೊಂದಿದ ನಿಜಾಮರವರು ಸದರೀ ಸಭೆಯೊಳು ಅಗ್ರಾಸನವಂ ವಹಿಸಿದರು. ಪೇಷ್ಕಾರ್ ರಾಜಾಕೃಷ್ಣಪ್ರಸಾದ್ ಎಂಬವರು ನವಾಬ್ ವೈಕಾರುಲ್ ಉಮರಾ ಎಂಬವರಿಂದ ಮಿಲಿಟರಿ ಇಲಾಖಾ ಚಾರ್ಜಂ ವಹಿಸಿದರು.

ಮದರಾಸ್ ಪ್ರೆಸಿಡೆನ್ಸಿಯಲ್ಲಿ ಕೆಲವು ಡಿಸ್ಟ್ರಿಕ್ಟುಗಳಿಗೆ ನೇಟಿವ್‌ಗಳು ಕಲೆಕ್ಟರ್‌ಗಳಾಗಿ ನಿಯಮಿಸಲ್ಪಡುವರೆಂಬ ಪ್ರವಾದವೊಂದು ಈಚೆಗೆ ಪ್ರಚುರಗೊಂಡಿದೆಯಷ್ಟೆ. ಇದು ಕಾರ್ಯಕ್ಕೆ ಪರಿಣಮಿಸಲ್ಪಡುವ ಪಕ್ಷಕ್ಕೆ ಈಗ ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲವರಾಗಿರುವ ದಿವಾನ್ ಬಹದೂರ್ ಎಸ್. ಶ್ರೀನಿವಾಸರಾಘವಾಚಾರ್ರವರು ಒಂದು ಡಿಸ್ಟ್ರಿಕ್ಟ್ ಕಲೆಕ್ಟರಾಗಿ ನಿಯಮಿಸಲ್ಪಡುವರಂತಲೂ, ಅವರ ಕೆಲಸಕ್ಕೆ ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಾದ ಮ|| ಮಿರ್ ಹುಮಾಯೂನ್ ಅಲ್ಲೀಖಾನರವರು ನಿಯಮಿಸ್ಯಪಡುವರೆಂದು ತಿಳಿಯಬರುವಂತೆಯೂ ಮದರಾಸ್ ಮೆಯಿಲ್ ಪತ್ರಿಕೆ ತಿಳಿಸುತ್ತಿದೆ.

ಇಂಗ್ಲಾಂಡಿಗೆಹೋಗಿ ಅಲ್ಲಿ ಬ್ಯಾರಿಸ್ಟರ್‌ಪದವಿಯಂ ಹೊಂದಿ ತಕ್ಕ ಕೀರ್ತಿಯಾಗಿ ಈಚೆಗೆ ಸ್ವದೇಶಕ್ಕೆ ವಾಪಸ್ ಬಂದ ಬಂಗಾಳೀ ದೇಶದಬಾಲಗಂಗಾಧರನು ತನ್ನಕುಲಕ್ಕೆ ಸೇರುವದಕ್ಕಾಗಿ, ಅನುಭವಿ ಪಂಡಿತರ ಮತ್ತು ಮುಖ್ಯಸ್ಥರಾದ ಹಲವು ದೊಡ್ಡ ಮನುಷ್ಯರ ಸಮಕ್ಷಮದಲ್ಲಿ ಪ್ರಾಯಶ್ಚಿತ್ತವಂ ಮಾಡಿಕೊಂಡನೆಂದು ಸಿವಿಲ್ ವ ಮಿಲಿಟರಿ ಗೆಜೆಟ್ ಪತ್ರಿಕೆ ಹೇಳುತ್ತಿದೆ. ಸಮುದ್ರಯಾನ ಪೂರ್ವಕ ಅಮೇರಿಕಾಖಂಡಕ್ಕೆ ಹೋಗುವಣವು ಶಾಸ್ತ್ರನಿಷಿದ್ಧವಾದಕೃತ್ಯವಲ್ಲವೆಂದು ಕೈಬರಹ ಕೊಟ್ಟವರ ಗುಂಪಿಗೆ ಈ ಪಂಡಿತರು ಸೇರಿದವರೆ ಅಥವಾ ಇವರು ಪ್ರತ್ಯರ್ಥಿಗಳೊ ಗೊತ್ತಾಗಲಿಲ್ಲವು.

ಮದರಾಸು ಗವರ್ನಮೆಂಟ್ ಇನಾಂ ಕಮಿಷನರ ಆಫೀಸು ಮ್ಯಾನೇಜರಾದ ಮ|| ಜೆ ವೆಂಕಟ್ರಾಮಯ್ಯನವರ ತರಫಿನಲ್ಲಿ ವಕೀಲ್ ಮ|| ಕೃಷ್ಣಸ್ವಾಮಯ್ಯರವರು ಈಚೆಗೆ ಮರಳ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಹಾಜರಾಗಿ, ಬಾಲಬ್ರಹ್ಮಾನಾಯಡು ಯೆಂಬಾತನಮೇಲೆ ಹಿಂದೆ ನಡೆಸಿದ ಅಕ್ರಮ ವಿಷಯದಲ್ಲಿ ಸಮ್ಮನ್ ಕೊಡಬೇಕೆಂದು ಕೇಳಲು ಮ್ಯಾಜಿಸ್ಟ್ರೇಟರು ಅದೇ ಪ್ರಕಾರ ಸಮ್ಮನ್ ಕೊಟ್ಟರುತ್ತಾರೆ. ಈ ಮೊಕದ್ದಮೆಯು ಸ್ವರೂಪವಂವಿಚಾರಿಸಿ ಯೋಚಿಸಲಾಗಿ, ಯೂರೋಪಿಯನ್ ಮ್ಯಾಜಿಸ್ಟ್ರೇಟರಿಂದ ಪಿರ್ಯಾದಿಗೆ ಯೆಂದಿಗೂ ನ್ಯಾಯ ದೊರೆಯಲಾರದೆಂದು ಯೆಣಿಸಬೇಕಾಗಿದೆ.

ದೆಹಲೀ ಪ್ರಾಂತದಲ್ಲಿ ಬ್ರಾಹ್ಮಣಜಾತಿ ಸಂಧಿತರು ಮೂವರು ಮೆಸ್ಸರ್ಸ್ ವೆಲ್ಲಸಿ ಅಕೋಯೆಂಬ ಕಂಪೆನಿಯವರ ನೌಕರಿಯಲ್ಲಿ ಅಮೇರಿಕಾ ದೇಶಕ್ಕೆಹೋಗುವದಾಗಿ ಕರಾರ್ಮಾಡಿಕೊಂಡ ಅಂಕ ಪೆಂಗಾಗಲು ಬ್ರಾಹ್ಮಣ ಸಮೂಹದಲ್ಲಿ ಗದ್ದಲ ಹತ್ತಿ, ಅಮೇರಿಕಾ ದೇಶಕ್ಕೆ ಪ್ರಯಾಣೋನ್ಮುಖರಾದ ಇಬ್ಬರು ಬಾಲಕರ ಬಂಧುವರ್ಗಕ್ಕೆ ಸೇರಿದ ಹೆಂಗಸರನೇಕರು ಸೇರಿ ಚಿಕಾಗೋವಿಗೆ ಹೋಗುವ ಗುಂಪಿನ ಯಜಮಾನನಲ್ಲಿ ಹೋಗಿಮೊರೆಯಿಡಲುಸದರೀ ಇಬ್ಬರನ್ನುಬಿಟ್ಟುಬಿಟ್ಟು ಬೇರೆ ಜನರನ್ನು ಗೊತ್ತು ಮಾಡಿಕೊಂಡರು. ಮೂವರುಪಂಡಿತರುಗಳ ಪೈಕಿ ಜ್ಯೇಷ್ಠನಾದವನು ಅಮೇರಿಕಾ ದೇಶಕ್ಕೆ ಪ್ರಯಾಣ ಮಾಡುವದರಲ್ಲಿ ಪುರಸ್ಕರಿಸಿ ಹಿತದಿದಾನೆ. ದೆಹಲಿ ಬ್ರಾಹ್ಮಣರಲ್ಲಿ ಬಹಳ ಕಳವಳ ಹುಟ್ಟಾಗಿವೆ ಎಂದು ತಿಳಿಯಬರುತ್ತಿದೆ.

ಮಲಬಾರ್ ಡಿಸ್ಟ್ರಿಕ್ಟ್ ಮಲ್ಲಾಪುರವೆಂಬ ಗ್ರಾಮದಲ್ಲಿ ಮಹಾಪ್ಪಜಾತಿಯೊಬ್ಬನ ಮಗನು ತನ್ನ ತಂದೆಯ ಬಂದೂಖನ್ನು ತೆಗೆದುಕೊಂಡು ಹೋಗಿ ಒಂದು ಹುಲಿಯನ್ನು ಹೊಡೆದು, ಅದರ ಚರ್ಮವನ್ನು ತೆಗೆದುಕೊಂಡು ಇನಾಂ ಪಡೆಯುವದಕ್ಕಾಗಿ ಸದರೀ ಡಿಸ್ಟ್ರಿಕ್ಟ್ ಹೆಡ್ ಅಸಿಸ್ಟೆಂಟ್ ಕಲೆಕ್ಟರವರ ಆಫೀಸಿಗೆ ಹೋದನು, ಪರಂತು ಸದರೀ ಸಾಹೆಬರು ಹುಲಿಯಂ ಹೊಡೆದವನು ಬಂದೂಖ್ ಇಡುವದಕ್ಕೆ ಲೈಸೆನ್ಸ್ ಪಡೆದುಕೊಂಡಿಲ್ಲವೆಂದು ತಿಳಿದು, ಅವನಿಗೆ ಇನಾಂ ಕೊಡುವದಕ್ಕೆ ಬದಲಾಗಿ, ಆಯುಧಗಳ ವಿಷಯದಲ್ಲಿ ಹುಟ್ಟಿರುವ ಕಾನೂನಿಗೆ ವ್ಯತಿರಿಕ್ತವಾಗಿ ನಡೆದುಕೊಂಡನೆಂಬ ನೆವದಮೇಲೆ, ಅವನಿಗೆ ೫ ರೂಪಾಯಿಗಳ ಜುರ್ಮಾನೆ ವಿಧಿಸಿದರಂತೆ. ಇಂತಾ ಕರುಣಾಶಾಲಿಗಳು ಪ್ರತಿ ಡಿಸ್ಟ್ರಿಕ್ಟಿನಲ್ಲೂ ಒಬ್ಬರಿರುವರಾದರೆ ಪ್ರಜೆಗಳು ಚೆನ್ನಾಗಿ ಸುಖಪಡುವರು.

ಇಂಡಿಯಾ ಕಮಾಂಡರ್ ಇನ್ ಚೀಫರವರಾದ ಸರ್ ಫ್ರೆಡರಿಕ್ ರಾಬರ್ಟ್ಸ್ ಯವರೂ ಕಾಬೂಲ್ ಅಮೀರರವರ ಜಲಾಲಾಬಾದ್‌ನಲ್ಲಿ ಸಂಧಿಸಿ, ಕೆಲವು ರಾಜಕೀಯ ವಿಷಯಗಳಂಕುರಿತು ಮಾತನಾಡತಕ್ಕದ್ದೆಂದು ಏರ್ಪಾಡಾಗಿ, ಆ ವಿಷಯವಂ ಕುರಿತು ಕಾಬೂಲ್‌ಅಮೀರರು ಇದುವರಿವಿಗೆಜವಾಬ್ ಕೊಡದೆಇರುವದಂ ಯೋಚಿಸಿ, ಇಂಡ್ಯದರಾಜ್ಯ ವೈಸ್‌ರಾಯ್‌ಯವರಾದ ಲಾರ್ಡ್ ಲ್ಯಾನ್ಸ್‌ಡೌನ್ ಸಾಹೇಬರವರು ಅವರಿಗೆಕಾಗದಬರೆದು, ಅದರಲ್ಲಿ ಕಂಡ ಅಂಶಗಳಿಗೆ ೧೫ ದಿನಗಳೊಳಗಾಗಿ ಜವಾಬ್ ಕೊಡದಪಕ್ಷಕ್ಕೆಅದಕ್ಕೆಸಮರ್ಪಕವಾದ ಕಾರಣವಂ ತಿಳಿಸತಕ್ಕದ್ದು, ಆ ರೀತಿ ಮಾಡಲು ತಪ್ಪುವ ಪಕ್ಷದಲ್ಲಿ ಕಾಬೂಲ್ ಅಮೀರರನ್ನು ಮಿತ್ರರಾಗಿ ಅಥವಾ ಶತ್ರುವಾಗಿ ಯೆಣಿಸಬೇಕಾದ ವಿಷಯದಲ್ಲಿ ಇಂಡ್ಯ ಗವರ್ನಮೆಂಟಗೆ ನಿರ್ಬಂಧ ಹುಟ್ಟಾಗುವುದು, ಎಂಬದು.

ಕಾಶಿಯಲ್ಲಿ ಬಿ.ಎ. ಪರೀಕ್ಷೆಕೊಟ್ಟು ತೇರ್ಗಡೆಯಾದಮೇಲೆ ಕ್ವೀನ್ಸ್ ಕಾಲೇಜಿನಲ್ಲಿ ಓದುತಲಿದ್ದವನ ಕ್ಟರ್‌ಗಳಿಗೆ ಯೆರಡು ವರ್ಷಗಳು ಹೋಗುತಲಿದ್ದು, ಲಕ್ನೋಕಾಲೇಜಿನಲ್ಲಿ ಒಂದು ವರ್ಷದಕಾಲ ಓದುತಲಿದ್ದಂತೆ ತನಗೆ ಸರ್ಟಫಿಕೇಟ್ ಕೊಡಬೇಕೆಂದು, ಸದರೀ ಕಾಲೇಜ್ ಪ್ರಿನ್ಸಿಪಲ್‌ರಾದ ಮೆ|| ವೈಟ್ ಯೆಂಬವರನ್ನು ಕೇಳಿದನು. ಹೀಗಿರುವಲ್ಲಿ ಸದರೀ ಯವರು ಕೊಟ್ಟಂತೆ ಆವರ ಸೈನ್ ನಿಂದ ಒಂದು ಸರ್ಟಫಿಕೇಟನ್ನು ಹಾಜರ್ಮಾಡಿದನು. ಅದರೊಳು ಒಂದು ವರ್ಷಕಾಲ ಲಕ್ನೋಕಾಲೇಜಿನಲ್ಲಿ ಓದುತಲಿದ್ದಂತೆ ನಮೂದಾಗಿತ್ತು. ಬನಾರಿಸ್ ಕಾಲೇಜ್ ಪ್ರಿನ್ಸಿಪಲ್‌ರಾದ ಮೆ|| ಗ್ರಿಫ್ ಯೆಂಬವರಿಗೆ ಸದರೀ ಸರ್ಟಫಿಕೇಟ್ ವಿಷಯದಲ್ಲಿ ಸಂಶಯ ಹುಟ್ಟಾಗಿ, ಲಕ್ನೋಕಾಲೇಜ್ ಪ್ರಿನ್ಸಿಪಲರಿಗೆ ಬರೆಯಲು ಅದು ಬನಾವಟ್ ಯೆಂದು ಯೇರ್ಪಟ್ಟು ಸದರೀ ವಿದ್ಯಾರ್ಥಿಯ ಮೇಲೆ ಕ್ರಿಮಿನಲ್ ಚಾರ್ಜಾಗಿ ಸೆಷನ್ ಜಡ್ಜಿಯ ಬಗ್ಗೆ ಕಮಿಟ್ ಮಾಡಲ್ಪಟ್ಟಿರುವಂತೆ ಆ ಪ್ರಾಂತದ ಪತ್ರಿಕೆಯೊಂದು ತಿಳಿಸುತ್ತಿದೆ.

## LOCAL AND PROVINCIAL NEWS
### ಒಳದೇಶಮತ್ತುತಾಲ್ಲೂಕ್‌ಜಾತಿವೃತ್ತಾಂತಗಳು.

ಸುಧೀದುರ್ಗ ಡಿಸ್ಟ್ರಿಕ್ಟ್ ಕೋರ್ಟ್‌ಶಿರಸ್ತೇದಾರರಾದ ಮೆ|| ವೈದ್ಯಲಿಂಗ ಮುದಲಿಯಾರವರು ರಜಾಮೇಲಿರುವ ಮ||ಬಸವಾರಾಧ್ಯರಿಗೆ ಬದಲು, ಮಧ್ದಿಗಿರಿ ಮುನಸಿಫರಾಗಿ ನೌಕರರ್ಮಾಡಲ್ಪಟ್ಟಂತೆ ಒಳದೇಶದ ಸ್ಪೆಕ್ಟೇಟರ್ ಪತ್ರಿಕೆ ತಿಳಿಸುತಿದೆ.

ಇಲ್ಲಿನ ಸ್ಟೇಷನ್ ಮ್ಯಾಸ್ಟರಾದ ಮೆ|| ಗೆಸ್ಸಾಲ್ಪ್ಸ್ ಎಂಬುವರಿಗೆ ಬಳ್ಳಾರಿ ರೈಲ್ವೆ ಸ್ಟೇಷನ್‌ಗೂ, ಬಳ್ಳಾರಿ ರೈಲ್ವೆ ಸ್ಟೇಷನ್‌ಮ್ಯಾಸ್ಟರಾದ ಮೆ|| ಬ್ರೌನ್ ಯವರಿಗೆ ಇಲ್ಲಿನ ಸ್ಟೇಷನಿಗೂ ವರ್ಗಾವರ್ಗಿಯಾಗಿದೆ ಎಂದು ಕೇಳುತ್ತೇವೆ.

ಈಚೆಗೆ ಮೈಸೂರು ಷಹರಿನಲ್ಲಿ ಇನ್‌ಫ್ಲ್ಯುಯೆಂಜಾ ಯೆಂಬ ಸಾಂಕ್ರಾಮಿಕಜ್ವರ ತಲೆದೋರಿ ಪ್ರಾಯಶಃ ಪ್ರತಿಮನೆಯಲ್ಲೂ ಒಬ್ಬರಿಬ್ಬರು ಸದರೀ ಜ್ವರದಿಂಪೀಡಿತರಾಗಿರುವಂತೆ ಅಲ್ಲಿನ ಪತ್ರಿಕೆಯೊಂದರಮೂಲಕ ತಿಳಿಯಲಾದೆವು.

ಈ ತಿಂಗಳ ೧೪ನೇ ತಾರೀಖ್ ಮಂಗಳವಾರ ಶಿವರಾತ್ರಿಯಾದುದರಿಂದಲೂ ೧೫ ನೇ ತಾರೀಖ್ ಬುಧವಾರ ಆಷ್‌ವೆಡ್ನ್‌ಸ್‌ಡೆ ಯೆಂಬ ಕ್ರಿಶ್ಚಿಯನ್ನರ ಹಬ್ಬವಾದುದರಿಂದಲೂ ಸದರೀ ಯೆರಡು ದಿನಗಳೂ ಪಬ್ಲಿಕ್‌ಸರ್ಕಾರ್ ಇಲಾಖೆಗಳಿಗೂ ರಜಾ ಕೊಡಲ್ಪಡುವವು.

ಮೈಸೂರು ವೃದ್ಧ ಮಹಾರಾಣೀ ಸೀತಾ ವಿಲಾಸದ ಅಮ್ಮಣ್ಣಿಯವರಿಗೆ ಸ್ವಲ್ಪಶರೀರಾಲಸ್ಯ ಉಂಟಾಗಿರುವದರಿಂದ ಶ್ರೀಮ|| ಮಹಾರಾಜರವರು ಸದ್ಯಃ ತಮ್ಮ ಮುಂಬೈಪ್ರಯಾಣವನ್ನುದಿನ್ನಾಹಿರುತ್ತಾರೆಂದು ಮೈಸೂರು ಪತ್ರಿಕೆಯೊಂದರಮೂಲಕ ತಿಳಿಯಲಾದೆವು ಇದು ಉಚಿತವಾದ ಕಾರ್ಯವೆ.

ಶ್ರೀಮನ್ಮಹಾರಾಜರು ಕಲ್ಕತ್ತೆಯ ಪ್ರಾಂತಕ್ಕೆ ದಯಮಾಡಿಸಿದ್ದಾಗ ೧,೦೦೦ ರೂಪಾಯಿಯನ್ನು ಕೊಟ್ಟು, ಪಮೋರಿಯನ್ಎಂಬ ಒಂದು ತರಹ ಪಿಟಲನ್ನು ತೆಗೆದುಕೊಂಡಿದ್ದರು. ಕಲ್ಕತ್ತೆಯಿಂದ ಮದರಾಸಿಗೆ ಸಾಮಾನು ಸಾಗಿಸುವದರಲ್ಲಿ ಇದುಮಾತ್ರ ಪಾಯವಾಗಿದೆ. ಎಂದುಸ್ಪೆಕ್ಟೇಟರ್ ಪತ್ರಿಕೆ ಹೇಳುತ್ತದೆ.

ಮೈಸೂರು ಗವರ್ನಮೆಂಟ್ ಸೀನಿಯರ್ ಸರ್ಜಿಯನ್ ಮತ್ತು ಸಾನಿಟರಿ ಕಮಿಷನರಾದ ಡಾಕ್ಟರ್ ಮೆಗ್ಗಾನ್‌ಸಾಹೇಬರವರು ಬಡ್ತಿಯಮೇಲೆ ಮದರಾಸ್ ಗವರ್ನಮೆಂಟ್ ನೌಕರಿಯ ಬಗ್ಗೆ ಹೋಗುವವರಾಗಿರುತ್ತಾರೆಂದು ಈ ಪ್ರಾಂತದಲ್ಲಿ ಈಚೆಗೆ ಹಿಂದುಪ್ರವಾದ ಉಂಟಾಗಿ ವೃತ್ತಾಂತ ಪತ್ರಿಕೆಗಳಲ್ಲಿ ಸಹ ಪ್ರಕಟಿಸಲ್ಪಟ್ಟಿರುತ್ತಿದೆ.

ಬೆಂಗಳೂರು ಸ್ಟೇಷನ್ನಿಂದ ಕೋಲಾರ್ ಸ್ಟೇಷನವರಿಗೆ ಪ್ರಯಾಣಸ್ಥರ ಸಂಚಾರ ದಿನೇ ದಿನೆ ವೃದ್ಧಿಯಾಗುತಬರುವದಂ ಯೋಚಿಸಿ, ಪ್ರತಿ ದಿನವಲ್ಲೂ ಬೆಳಗ್ಗೆ ೯ ಘಂಟೆಗೆ ಬೆಂಗಳೂರು ಕಂಟೋನ್ಮೆಂಟ್ ಸ್ಟೇಷನ್ನಿಂದ ಕೋಲಾರ್ ಸ್ಟೇಷನ್‌ವರಿವಿಗೆ ಈ ತಿಂಗಳ ಗುರ್ರೀತಾರೀಕ್‌ಮೊದಲು ಒಂದು ಗಾಡಿ ಬಿಡಲ್ಪಡುತಲಿರುವಂತೆ ತಿಳಿಯ ಬರುತ್ತಿದೆ

ಬೆಂಗಳೂರಲ್ಲಿ ಐಶ್ವರ್ಯವಂತನಾಗಿಯೂ, ಉತ್ಸಾಹಶೀಲನೂ ಯುಕ್ತವನಾಗಿಯೂ ಇರುವ ಒಬ್ಬನೊಬ್ಬ ಸಾಹುಕಾರನು ಬೆಂಗಳೂರು ಪಟ್ಟಣಕ್ಕೆಲ್ಲಾ ತನ್ನ ಸ್ವಂತ ಖರ್ಚಿನಿಂದಲೇ ಅಂದರೆ ಸುಮಾರು ೬೫ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ನೀರು ಸರಭರಾಜುಮಾಡಿಸುವದಾಗಿಯೂ, ಇದಕ್ಕೆ ಅಪ್ಪಣೆ ಕೊಡಿಸಿ ಕೊಡಬೇಕೆಂಬದಾಗಿಯೂ ಇಲ್ಲಿನ ಬ್ರಿಟಿಷ್ ರೆಸಿಡೆಂಟ ರವರಿಗೆ ಬರೆದು ಕೊಂಡಿರುತ್ತಾನೆಂಬದಾಗಿ ಕೇಳುತ್ತೇವೆ. ಈ ಕಾಲದಲ್ಲಿ ಇಂತಾ ಪುಣ್ಯಪುರುಷರನ್ನು ಪಡೆದಿರುವದಕ್ಕಾಗಿ ಈ ಸಂಸ್ಥಾನದವರು ಅಹಂಕಾರಪಡಬಹುದಾಗಿದೆ ಮೈಸೂರು ಸೀಮೆಯಲ್ಲಿಯೂ ಇಷ್ಟರ ಧನಿಕರಿದ್ದಾರೆಯೆ! ಸಂಶಯವು.-ಸ್ಪ.ಪ.

ಈಸಲದ ಎಫ್. ಎ ಪರೀಕ್ಷೆಗೆ ಶಿವಮೊಗ್ಗ ಕಾಲೇಜ್ ನಿಂದ ಹೋಗಿದ್ದ ೧೭ ಮಂದಿ ಉಮೇದುವಾರರಪೈಕಿ ಇವರಡಿ ತಿಳಿಸಲ್ಪಡುವ ಏಳವರು ತೇರ್ಗಡೆಯಾಗಿರುತ್ತಾರೆ.

**೧ನೇ ತರಗತಿ.**

೮. ನಾರಾಯಣಸ್ವಾಮಯ್ಯಂಗಾರ್.

**೨ನೇ ತರಗತಿ.**

೧. ಶ್ರೀನಿವಾಸರಾವ್.
೨. ದುಗ್ಗಪ್ಪಯ್ಯ.
೩. ಶ್ರೀನಿವಾಸಯ್ಯಂಗಾರ್.
೪. ಅನಂತಯ್ಯ.
೫. ಎಸ್. ವರದಯ್ಯಂಗಾರ್.
೬. ರಾಜಗೋಪಾಲ್.
೭. ನಾರಾಯಣರಾವ್.

ಕಡೆಗೆ ಬೆಂಗಳೂರು ಪೇಟೆಗೂ, ಸಿವಿಲ್ ವ ಮಿಲಿಟರಿ ಸ್ಟೇಷನ್‌ಗೂ ಜಲ ದೌರ್ಲಭ್ಯ ನಿವಾರಣೆಯಾಗುವ ಕಾಲ ಹಿಂದೆರಡು ವರ್ಷಗಳ ಕಾಲದೊಳಗಾಗಿ ಪ್ರಾಪ್ತವಾಗಬಹುದೆಂದು ಕಾಣುತ್ತಿದೆ. ಹಾಗಿದ್ದರೆ, ಹೆಬ್ಬಾಳ ಮೊದಲಾದ ಜಲಾಧಾರವುಳ್ಳ ಪ್ರದೇಶಗಳಿಂದ ಈ ಪೇಟೆಗೂ ಮಿಲಿಟರಿ ಸ್ಟೇಷನಿಗೂ ಜಲವಸತಿಯನ್ನುಂಟು ಮಾಡಬೇಕೆಂಬ ಯೋಚನೆ ತಪ್ಪಿ, ಈ ಪ್ರಾಂತಕ್ಕೆ ೧೫ಮೈಲಿ ದೂರದಲ್ಲಿರುವ ಅರ್ಕಾವತಿ ನದಿಯಿಂದ ತರಬೇಕೆಂದು ಯೇರ್ಪಾಡಾಗಿ ಆಬಗ್ಗೆ ಹಿಡಿಯಬಹುದಾದ ಸುಮಾರು ಮೂವತ್ತೆರಡುಲಕ್ಷ ರೂಪಾಯಿಗಳ ಭಾಗವದನ್ನು ಮೈಸೂರು ಸರ್ಕಾರದವರೂ ಮಿಲಿಟರಿ ಸ್ಟೇಷನ್ ಅಧಿಕಾರಿಗಳೂ ಸಮವಾಗಿ ವಹಿಸತಕ್ಕದ್ದೆಂತಲೂ ವ್ಯವಸ್ಥೆಯಾದಂತೆ ತಿಳಿಯಬರುತ್ತಿದೆ. ಇದರ ತಪ್ಸೀಲನ್ನು ಮುಂದೆ ತಿಳಿಸುವೆವು

ವೈಸ್‌ರಾಯ್ ಸಾಹೇಬರವರು ಈ ದೇಶಕ್ಕೆ ದಯಮಾಡಿ ಕೋಲಾರಕೋಟೆ ಚಿನ್ನದ ಗಣಿಯನ್ನು ನೋಡುವದಕ್ಕಾಗಿ ಅಲ್ಲಿಗೆ ಹೋಗಿದ್ದ ಸಂದರ್ಭದಲ್ಲಿ ಚಿತ್ತಾ ಸೂಪರಿಂಟೆಂಡೆಂಟರಾದ ಮ. ಶ್ರೀನಿವಾಸಮಯ್ಯಂಗಾರ್ರವರು ಸಕಲ ವಿಷಯದಲ್ಲಿಯೂ ಮಾಡಿದ್ದ ಯೇರ್ಪಾಡುಗಳಬಗ್ಗೆ ವೈಸ್‌ರಾಯ್‌ಸಾಹೇಬರವರು ಅತ್ಯಂತ ಸಂತುಷ್ಟ ಮನಸ್ಕರಾಗಿ ಅಂತಾ ತಮ್ಮ ಸುಕೃಪ್ತಿಯನ್ನು ತತ್ಕಾಲದೊಳು ತಬ್ಧಶಃ ವ್ಯಕ್ತಗೊಳಿಸಿ, ಕಲ್ಕತ್ತ ಸೇರಿದಮೇಲೆ ಮೆ|| ಶಾಮಯ್ಯಂಗಾರ್ರ ವಿಷಯದಲ್ಲಿ ತಮಗುಂಟಾದ ಭಾವವಂ ಕಾರ್ಯತಃ ಪ್ರಕಟಿಸುವುದಕ್ಕೆ, ಚಿನ್ನದ ಹಿಡಿಹಾಕಿದಮಲಾಕಾದೇಶದ ಒಂದು ಬೆತ್ತವನ್ನು ಕಳುಹಿಸಿಕೊಟ್ಟರು. ಅದರಲ್ಲಿ ೧೮೯೨ನೇ ಇಸವಿಯಲ್ಲಿ ಲಾರ್ಡ್ ಲ್ಯಾನ್ಸ್ ಡೌನ್ ಸಾಹೇಬರಿಂದ ಮೆ|| ಶಾಮಯ್ಯಂಗಾರ್ರವರಿಗೆಕೊಡಲ್ಪಟ್ಟಿತೆಂಬ ಅರ್ಥ ದ್ಯೋತಕವಾದ ಕೆಲವು ಶಬ್ದಗಳು ಕೆತ್ತಲ್ಪಟ್ಟಿವೆ.

ಕೆಲವು ತಿಂಗಳ ಕೆಳಗೆ ಶಿರ್‍ಯದ ಅಮಲ್ದಾರರಾದ ವೆಂಕಟಾಚಲಯ್ಯನವರು ತುಮಕೂರು ಡೆಪ್ಯುಟಿ ಕಮ್ಮಿಷನರವರ ಮುಂದೆ ಇನ್ನೊಬ್ಬ ದೊಡ್ಡ ಉದ್ಯೋಗಸ್ಥರಿಗೆ ಒಂದು ವಿಶೇಷವಾದ ಮಾತನ್ನು ಹೇಳಿದರು. ಆ ಮಾತು ಏನಂದರೆ,— "ಸರ್ಕಾರದವರು ಇದರ ಎಲ್ಲಾ ಉದ್ಯೋಗಸ್ಥರಿಗೂ ಭತ್ಯ ಕೊಟ್ಟರೂ ಅಮಲ್ದಾರರಿಗೆ ಮಾತ್ರ ಏನೂ ಕೊಡುವದಿಲ್ಲವಾದ್ದರಿಂದ ಅಮಲ್ದಾರರು ತಮ್ಮ ಇಷ್ಟ ಬಂದಂತೆ ರೈತರ ಎತ್ತುಗಳನ್ನು ಬಿಟ್ಟಿ ಹಿಡಿಸಿ, ಮಜೂರಿ ಕೊಡದೆ ತಮ್ಮ ಪ್ರಯಾಣಗಳಿಗೆ ಧಾರಾಳವಾಗಿ ಉಪಯೋಗಿಸಬಹುದು" ಎಂಬುವದೇ. ತುಮಕೂರು ಡೆಪ್ಯುಟಿ ಕಮ್ಮಿಷನರವರು ಈ ಮಾತನ್ನು ಸರ್ಕಾರಕ್ಕೆ ತಿಳಿಸಿ ಈ ಅಮಲ್ದಾರರ ತಾತ್ಪರ್ಯವು ಸರಿಯಾದದ್ದೋ, ತಪ್ಪಾದದ್ದೋ ಎಂಬದಾಗಿ ಗವರ್ನಮೆಂಟನವರ ಇರಾದೆಯನ್ನು ಪ್ರಾರ್ಥಿಸಿದರು. ಇದರಮೇಲೆ ಗವರ್ನಮೆಂಟಿನ ಚೀಫ್ ಸೆಕ್ರೆಟರಿಯವರು, ಅಮಲ್ದಾರರಿಗೆ ಭತ್ಯ ಸಿಕ್ಕದೆ ಇದ್ದಾಗ್ಯೂ ಅವರು ತಮ್ಮ ಸ್ವಂತ ಸಂಬಳದಿಂದ ತಾವು ಉಪಯೋಗಿಸುವ ಎತ್ತುಗಳಿಗಾಗಲಿ, ಆಳುಗಳಿಗಾಗಲಿ ಸರಿಯಾದ ಮಜೂರಿಯನ್ನು ಅಗತ್ಯವಾಗಿ ಕೊಡತಕ್ಕದ್ದು. ಈ ವಿಷಯದಲ್ಲಿ ಯಾವ ಅಮಲ್ದಾರರಾಗಲಿ ತಪ್ಪಿ ನಡೆದರೆ ಅವರು ಸರ್ಕಾರದವರ ನಿಂದೆಗೂ ದಂಡನೆಗೂ ಗುರಿಯಾಗುವರೆಂಬದಾಗಿ ಬಹು ಪರಿಷ್ಕಾರವಾದ ಅಪ್ಪಣೆಯನ್ನು ಕೊಟ್ಟಿರುತ್ತಾರೆ. ಸರ್ಕಾರದವರು ಇಂತಾ ಹುಕುಮನ್ನು ಪ್ರಕಟಪಡಿಸಿದ್ದಕ್ಕಾಗಿ ನಾವು ತುಂಬಾ ಸಂತೋಷಪಡುತ್ತೇವೆ. ಅನೇಕ ತಾಲ್ಲೂಕುಗಳಲ್ಲಿ ಅಮಲ್ದಾರರು ನಾನಾ ರೀತಿಯಾಗಿ ತಕ್ಕ ಪ್ರತಿಫಲವನ್ನು ಕೊಡದೆ ರೈತರಿಂದ ಸಹಾಯವನ್ನು ಪಡೆಯುತ್ತಾ ಬರುವದು ಪದ್ಧತಿಯಾಗಿದೆ, ಎಂದು ನಾವು ಕೇಳಿದ್ದೇವೆ. ಅಮಲ್ದಾರರು ಯಾವದಾದರೂ ಒಂದು ಹಳ್ಳಿಗೆಹೋಗಿ ಅಲ್ಲಿ ೧—೨ ದಿವಸಗಳು ಇರಬೇಕಾದರೆ ರೈತರು ಹುಲ್ಲನ್ನಾಗಲಿ ಹಾಲನ್ನಾಗಲಿ, ಅನ್ನ, ಬೇರೆಬೇರೆ ಪದಾರ್ಥಗಳನ್ನಾಗಲಿ ಅಮಲ್ದಾರರಿಗೆ ಬಿಟ್ಟಿಯಾಗಿ ಸರಬರಾಜು ಮಾಡಬೇಕು. ಇದು ಬಹಳ ದೊಡ್ಡ ತಪ್ಪೇಸರಿ. ಇಲ್ಲಿಂದ ಮುಂದೆ ಯಾರಾದರು ರೈತರುಗಳು ಗವರ್ನಮೆಂಟಿನವರ ಮೇಲ್ಕಂಡ ಹುಕುಮನ್ನು ತಿಳಿದು ತಕ್ಕ ಮಜೂರಿಯನ್ನು ತೆಗೆದುಕೊಳ್ಳದೆ ಸರ್ಕಾರದ ಯಾವ ನೌಕರರಿಗಾದರು ಯಾವ ವಿಧವಾದ ಬಿಟ್ಟೀ ಚಾಕರಿಯನ್ನೂ ಮಾಡದಿರುವರೆಂದು ನಂಬಿದ್ದೇವೆ —ಪ್ರ ಪ

## THE MYSORE GAZETTE.
## ಮೈಸೂರು ಗೆಜೆಟ್.

ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದೂರವರ ಸರ್ಕಾರದಿಂದ ಹೊರಟಾದ ಇಸ್ತಿಹಾರ್‌ನಾಮೆಗಳು.

ನಂ. ೧೩೪೮೫, G. ೨೯೯೩ —ತಾರೀಖ್ ೧೬ ನೇ ಡಿಸೆಂಬರ್, ೧೮೯೨.— ಅಸಿಸ್ಟೆಂಟ್ ವ ಸಬ್ ಅಸಿಸ್ಟೆಂಟ್ ಸರ್ಜನ್‌ಗಳ ಗ್ರೇಡುಗಳಲ್ಲಿ ಇದರ ಕೆಳಕಂಡ ಖಾಯರಾತಿಗಳೂ ಬಡ್ತಿಗಳೂ ಹುಕುಂ ಮಾಡಲ್ಪಟ್ಟಿರುತ್ತವೆ —

ಖಾಯರಾತಿಗಳು —(೧) ೧೮೯೦ ನೇ ಇಸವಿ ಅಕ್ಟೋಬರ್ ೨೬ ನೇ ತಾರೀಖು ಲಾಗಾಯಿತು, ಮೆ|| ಎಸ್. ವಿ. ರಾಮಸ್ವಾಮಯ್ಯಂಗಾರ್, ಎಂ. ಬಿ., ಸಿ. ಎಂ; ಎಲ್. ಆರ್ ಸಿ. ಪಿ, ಮತ್ತು ಎಸ್. (ಎಡಿಂಬರೊ), ಎಲ್. ಎಫ್. ಪಿ. ಮತ್ತು ಎಸ್. (ಗ್ಲಾಸ್ಗೊ), ಯವರು ೨ ನೇ ಕ್ಲಾಸ್ ಅಸಿಸ್ಟೆಂಟ್ ಸರ್ಜನ್‌ರಾಗಿತಕ್ಕದ್ದು.

(೨) ಮೆ|| ಎಸ್. ಕೆ ಹನುಮಂತರಾವ್ ಎಂ ಬಿ. ಸಿ. ಎಂ. ಯವರು ಅಜಮಾಯಿಷೀ ತರೀಕ್ ಆರು ತಿಂಗಳ ಕಾಲ ೨ ನೇ ಕ್ಲಾಸ್ ಸಬ್ ಅಸಿಸ್ಟೆಂಟ್ ಸರ್ಜನ್‌ರಾಗಿರತಕ್ಕದ್ದು.

(೩) ಮೆ|| ಟಿ. ವಿ. ಕುಪ್ಪುಸ್ವಾಮಿ ಮುದಲಿಯಾರ್ ಎಲ್. ಎಂ ಎಸ್, ಯವರು ಅಜಮಾಯಿಷೀ ತರೀಕ್ ಆರು ತಿಂಗಳ ಕಾಲ ೨ನೇ ಕ್ಲಾಸ್ ಸಬ್ ಅಸಿಸ್ಟೆಂಟ್ ಸರ್ಜನ್‌ರಾಗಿರತಕ್ಕದ್ದು. (ಕೊಪ್ಪಕ್ಕೆ ಜಾಸ್ತೀ ಯಿಸುಂ)

ಬಡ್ತಿಗಳು.—(೧) ೧ ನೇ ಕ್ಲಾಸ್ ಸಬ್ ಅಸಿಸ್ಟೆಂಟ್ ಸರ್ಜನ್ ಮೆ|| ಟಿ ಎಸ್. ನಂಜಪ್ಪ, ಎಂ. ಬಿ ಸಿ ಎಂ, ಯವರು ೩ ನೇ ಕ್ಲಾಸ್ ಅಸಿಸ್ಟೆಂಟ್ ಸರ್ಜನ್‌ರಾಗಿತಕ್ಕದ್ದು.

(೨) ಒಂದನೇ ಕ್ಲಾಸ್ ಸಬ್ ಅಸಿಸ್ಟೆಂಟ್ ಸರ್ಜನ್ ಮೆ|| ಡಬ್ಲ್ಯು ಶ್ರೀನಿವಾಸಯ್ಯಂಗಾರ್ ಎಂ ಬಿ ಸಿ ಎಂ ಯವರು ಮೂರನೆ ಕ್ಲಾಸ್ ಅಸಿಸ್ಟೆಂಟ್ ಸರ್ಜನ್‌ರಾಗಿರತಕ್ಕದ್ದು

(೩) ಒಂದನೇ ಕ್ಲಾಸ್ ಸಬ್ ಅಸಿಸ್ಟೆಂಟ್ ಸರ್ಜನ್ ಮೆ|| ಬಿ ಡಿ ರಾಘುವೇಂದ್ರರಾವ್ ಎಲ್ ಎಂ ಎಸ್ ಯವರು ಮೂರನೇ ಕ್ಲಾಸ್ ಅಸಿಸ್ಟೆಂಟ್ ಸರ್ಜನ್‌ರಾಗಿರತಕ್ಕದ್ದು

(೪) ಒಂದನೇ ಕ್ಲಾಸ್ ಸಬ್ ಅಸಿಸ್ಟೆಂಟ್ ಸರ್ಜನ್ ಮೆ|| ಸಿ ಜಿ ಹನುಮಂತಸಿಂಗರವರು ೩ ನೇ ಕ್ಲಾಸ್ ಅಸಿಸ್ಟೆಂಟ್ ಸರ್ಜನ್‌ರಾಗಿರತಕ್ಕದ್ದು

(೫) ಯೆರಡನೇ ಕ್ಲಾಸ್ ಸಬ್ ಅಸಿಸ್ಟೆಂಟ್ ಸರ್ಜನ್ ಮೆ|| ಸಿ ಎ ನಂಜಪ್ಪನವರು ಒಂದನೇ ಕ್ಲಾಸ್ ಸಬ್ ಅಸಿಸ್ಟೆಂಟ್ ಸರ್ಜನ್‌ರಾಗಿರತಕ್ಕದ್ದು.

(೬) ಮೆ|| ಪೊಲ್ಪು, ಎಲ್. ಎಂ. ಎಸ್ ಯವರು ಎರಡನೇ ಕ್ಲಾಸ್ ಸಬ್ ಅಸಿಸ್ಟೆಂಟ್ ಸರ್ಜನ್‌ರಾಗಿರತಕ್ಕದ್ದು. (ವಾಕ್ಸಿನೇಷನ್ ಬಗ್ಗೆ ಜಾಸ್ತಿ ಯಿಸುಂ)

ನಂ ೧೩೩೫೭ G ೨೯೬೮—ತಾ|| ೩೧ ನೇ ಜನವರಿ, ೧೮೯೩ —ಚಿಂತಾಮಣಿ ತಾಲ್ಲೂಕ್ ಅಮಲ್ದಾರ್ ಎಸ್ ವೆಂಕಟಪ್ಪಯರವರಿಗೆ ೧೮೯೩ ನೆ ಇಸವಿ ಜನವರಿ ೨೧ ನೇ ತಾರೀಖ್ ಲಾಗಾಯಿತು ನಾಲ್ಕು ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತದೆ

ನಂ, ೧೩೭೨೬ G ೩೦೩೦ ತಾ|| ೬ ನೇ ಫೆಬ್ರುವರಿ, ೧೮೯೩.—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೩೭ನೇ ಆರ್ಟಿಕಲ್ ಅನುಸರಿಸಿ, ಮೈಸೂರು ಸೀಮೆಯ ಪೊಲೀಸ್ ಇನ್ಸ್ಪೆಕ್ಟರ್ ಜನರಲ್ ಮೆ|| ವಿ. ಪಿ ಮಾಧವರಾವ್ ಬಿ ಎ ಯವರಿಗೆ, ೧೮೯೩ನೇ ಇಸವಿ ಫೆಬ್ರುವರಿ ೬ನೇ ತಾರೀಖ್ ಲಾಗಾಯಿತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು ೧೫ ದಿವಸಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ

ಮೊಕ್ಕಾಂ ನಂ, ೪೦. ತಾರೀಖ್ ೨೭ ನೇ ಜನವರಿ, ೧೮೯೩ —ಶ್ರೀರಂಗಪಟ್ಟಣ ತಾಲ್ಲೂಕಿಗೆ ಸೇರಿದ ಶ್ರೀರಂಗಪಟ್ಟಣ ಮತ್ತು ಕರಿಘಟ್ಟಗಳಲ್ಲಿರುವ ದೇವಸ್ಥಾನಗಳಿಗೆ ಧರ್ಮದರ್ಶಿಯಾಗಿದ್ದ ಕುಮಾರಯ್ಯನೆಂಬವರು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟದ್ದರಿಂದ ಅವರಿಗೆ ಬದಲಾಗಿ ಮ|| ರಾ|| ರಾ|| ಶೊಂಗತ್ತೈ ರಾಮಸ್ವಾಮಿ ಶಾಸ್ತ್ರಿ ಯೆಂಬವರು ಧರ್ಮದರ್ಶಿಯಾಗಿ ನಿಯಮಿಸಲ್ಪಟ್ಟಿರುತ್ತಾರೆ

ನಂ ೪೪೨-೫೯, ತಾರೀಖ್ ೬ ನೇ ಫೆಬ್ರುವರಿ ೧೮೯೩.—ನಾಲ್ಕನೇ ಗ್ರೇಡ್ ಯೆಗ್ಜಿಕ್ಯುಟಿವ್ ಎಂಜನಿಯರ್ ಮೆ|| ಡಿ, ಸೀತಾರಾಮಯ್ಯರವರ ನೌಕರಿಯು ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಚಾರ್ಜನ್ನು ಮೆ|| ವಿ ಅರುಣಾಚಲ ಮುದಲಿಯಾರ್ರವರು ಕೂಡಲೇ ಹೋಗಿ ತೆಗೆದುಕೊಂಡ ತಾರೀಖ್ ಲಾಗಾಯಿತು ಅರಮನೆ ಇಲಾಖೆಯವರ ಸುಪರ್ದಿಯಲ್ಲಿಡಲ್ಪಟ್ಟಿರುತ್ತದೆ ಅವರು ಬಿಡುಗಡೆಯಾದ ತಾರೀಖ್ ಮೊದಲು, ಮರಮತ್ ಇಲಾಖೆಯ ಮುಂಜಾರ್ ಪಟ್ಟಿಯಲ್ಲಿ ದಾಖಲಾಗಿರುತ್ತಾರೆ

ನಂ ೪೫೦-೬೧-ಸರ್ಕಾರ್ ನೌಕರಿಯ ಪ್ರಯೋಜನಕ್ಕಾಗಿ ಇದರಡಿ ತಿಳಿಸಲ್ಪಡುವ ಬದಲಾವಣೆಯು ಮಾಡಲ್ಪಟ್ಟಿರುತ್ತದೇನಂದರೆ —ಫ್ರೆಂಚ್‌ರಾಕ್ಸ್ ಸಬ್ ಡಿವಿಜನಿಗೆ ವರ್ಗ ಮಾಡಲ್ಪಟ್ಟ ಮೆ|| ವಿ. ಅರುಣಾಚಲ ಮುದಲಿಯಾರ್ರವರಿಗೆ ಬದಲಾಗಿ ಹಂಗಾಮಿ ತರೀಕ್, ೨ ನೇ ಗ್ರೇಡ್ ಅಸಿಸ್ಟೆಂಟ್ ಇಂಜನಿಯರ್ ಮೆ|| ಓ ವಿ ನಾರಿಸ್ ಬಿ ಸಿ. ಇ ಯವರು, ಮೈಸೂರ್ ಡಿವಿಜನ್ನಿಂದ ಬೆಂಗಳೂರು ಡಿವಿಜನ್ ಬೆಂಗಳೂರ್ ರೇಂಜಿನ ಇನ್‌ಚಾರ್ಜಿಗೆ

ಮನುಷ್ಯನಿಗೆ ಮರಣವು ಸನ್ನಿಹಿತವಾಗುವಲ್ಲಿ ಗುಣವಿಪರ್ಯಯವು ಉಂಟಾಗುವುದು ಸ್ವಾಭಾವಿಕವಾದುದರಿಂದ ಅಂತಾ ವಿನಾಶ ಕಾಲದಲ್ಲಿ ಅವನ ಮನಸ್ಸೊಳ್ ಅಕಾರ್ಯಗಳೆಲ್ಲವು ನ್ಯಾಯ್ಯಗಳಾಗಿ ತೋರುವವೆಂಬದಕ್ಕೆ ಮದರಾಸ್ ಹೈಕೋರ್ಟಿನಲ್ಲೀಗ ವಿಚಾರಣೆಯಾಗಿರುವ ಇದರಡಿ ತಿಳಿಸಲ್ಪಡುವ ಅತಿ ಘೋರವಾದ ಒಂದು ವಿಷಯವು ನಿದರ್ಶನವಾಗಿರುತ್ತದೆ:— ಕಳೆದ ಸೆಪ್ಟಂಬರ್ ತಿಂಗಳಲ್ಲಿ ವೇಲೂರೊಳು ಅತಿ ಕ್ರೂರವಾದ ಒಂದು ಖೂನಿ ಜರಿಗಿತು ಅದರ ತಪಸೀಲು ಹ್ಯಾಗಂದರೆ —ವೇಲೂರ್ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ ಸ್ಟಾಂಪ್ ವೆಂಡರಾಗಿದ್ದ ಸೀತಾರಾಮಯ್ಯನೆಂಬವನೂ ಗರುಡಾಪಸಿಂಗ್ ಯೆಂಬ ಒಬ್ಬ ರಜಪುತ್ರನೂ, ರಘುವೀರದಾಸ್ ಎಂಬ ಒಬ್ಬ ವೈರಾಗಿಯೂ, ಸೇರಿ ೭—೮ ವರುಷಗಳ ವಯಸ್ಸುಳ್ಳ ಒಬ್ಬ ಹುಡುಗಿಯನ್ನು, ದ್ರವ್ಯಕ್ಕೋಸ್ಕರ ಭೂಗತವಾದ ಒಂದು ನಿಕ್ಷೇಪವು ಸ್ವಾಧೀನಮಾಡಿಕೊಳ್ಳುವದಕ್ಕಾಗಿ ಕೊಂದುಹಾಕಿದರು ಈ ಕೃತ್ಯವು ಕೇವಲ ಸಾಧಾರಣವಾದುದೆಂದು ನುಡಿಯಲಾಗದು. ಮಡಿಸಲ್ಪಟ್ಟಂತಾ ಮೇಲೆ ಕಂಡ ಕನ್ಯೆಯು, ವೇಲೂರಲ್ಲಿರುವ ಮುನಸೀಫ್ ಕೋರ್ಟಿನ ವಕೀಲರಾದ ಆಕೆಯ ಚಿಕ್ಕಪ್ಪನ ಮನೆಯಲ್ಲಿರುತ್ತ, ಅಲ್ಲಿನ ಬಾಲಿಕಾ ಪಾಠಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ ಪ್ರತಿದಿನವೂ ಸ್ಕೂಲಿಗೆ ಹೋಗಿಬರುತಲಿದ್ದಳು ಕಳೆದ ಸೆಪ್ಟಂಬರ್ ತಿಂಗಳ ೮ ನೇ ತಾರೀಖಿನ ದಿನ ಮಧ್ಯಾಹ್ನ ಸದರೀ ಹುಡುಗಿಯು ಪದ್ಧತಿ ಪ್ರಕಾರ ಮಧ್ಯಾಹ್ನ ಸ್ಕೂಲಿನಿಂದ ತನ್ನ ಮನೆಗೆ ಬಂದು ಭೋಜನವು ತೀರಿಸಿಕೊಂಡು ಮರಳಿ ಹೊರಟುಹೋದವಳು ಸಾಯಂಕಾಲ ೪ ಘಂಟೆ ಯಾದರೂ ಹಿಂದಿರುಗಿ ಬರಲಿಲ್ಲವು ಆಕೆಯ ಚಿಕ್ಕಪ್ಪನು, ಬೀದನಾಗಿ ಸೇವಕರು ಕಳುಹಿಸಿ ತನ್ನ ಮಗಳನ್ನು ಊರೆಲ್ಲ ಹುಡಿಕಿಸಿದಾಗ್ಯೂ ದೊರೆಯದೆ ಹೋಗಲು ಮರ್ನೂರ್ ರಾತ್ರಿ ೮ ಘಂಟೆಗೆ ಸರಿಯಾಗಿ ಸದರೀ ವೃತ್ತಾಂತವನ್ನು ಗ್ರಾಮಮುನಸೀಫರಿಗೆ ತಿಳಿಸಿ ಡಂಗೂರ ಹೊಡಿಸಿ ಪ್ರಸಿದ್ಧಿಪಡಿಸಿದನು. ಕಣ್ಮರೆಯಾದ ಹುಡುಗಿಯ ವಿಚಾರವು ಆದೇ ತಿಂಗಳ ೧೬ ನೇ ತಾರೀಖು ವರಿವಿಗೆ ಯೇನೂ ತಿಳಿಯಬರಲಿಲ್ಲವು ಹೀಗಿರುವಲ್ಲಿ ಸದರೀ ಹುಡುಗಿಯ ಮುರ್ದೆಯು ಒಂದು ಬಾವಿಯಲ್ಲಿ ಬಿದ್ದಿರುವಂತೆಯೂ ಆಕೆಯಂ ಒಬ್ಬ ಮುಸಲ್ಮಾನನು ಖೂನ್ ಮಾಡಿದನೆಂದೂ ನಮೂದಿದ್ದ ಹೆಸರಿಲ್ಲದ ಕಾಗದವೊಂದು ಟಪಾಲ್ ಮೂಲಕ ಮೃತಪಟ್ಟವಳ ಚಿಕ್ಕಪ್ಪನಿಗೆ ಕಳುಹಿಸಲ್ಪಟ್ಟಿತು. ಅದಂ ಆತನು ಬಿಚ್ಚಿ ನೋಡಿಕೊಂಡು ಕೂಡಲೇ ಪೋಲೀಸಿನವರ ವಶಕ್ಕೊಪ್ಪಿಸಿದನು ಪೋಲೀಸಿನವರು ಕಾಗದದಲ್ಲಿ ತಿಳಿಸಲ್ಪಟ್ಟದ್ದ ಭಾವಿಯಲ್ಲಿ ಮನುಷ್ಯರನ್ನಿಳಿಸಿ ಅಜಮಾಯಿಷಿ ಮಾಡಿಸಲು, ಶವವನ್ನು ಒಂದು ಗೋಣಿಯ ಚೀಲದಲ್ಲಿ ಹಾಕಿ ಅದಂ ಮುಚ್ಚಿ [illegible] ಚಾಪೆಯೊಳು ಕಟ್ಟಿ ಕೆಡಹಲ್ಪಟ್ಟದ್ದ ಒಂದು ದೊಡ್ಡ ಮೂಟೆ ದೊರೆಯಿತು ಅದಂ ಬಿಚ್ಚಿನೋಡುವಾಗ್ಯೆ ಒಳಗೆ ಹುಡುಗಿಯ ಶರೀರವು ಕೊಳೆತು ಗುರುತು ಹಿಡಿಯಲಾಗದ ಸ್ಥಿತಿಯಲ್ಲಿ ಕಂಡುಬಂತು. ಪರಂತು ಅವಳುಡಿಸಿದ್ದ ವಸ್ತ್ರದ ಗುರುತಿನಿಂದಲೂ, ಅವಳ ಮೈಮೇಲಿದ್ದ ಬೆಳ್ಳಿ ಭಂಗಾರದ ಒಡವೆಗಳ ಗುರುತಿನಿಂದಲೂ ಮೃತಪಟ್ಟವಳಂ ನಿರ್ದೇಶಿಸಿದರು. ಆಕೆಯ ಕಿವಿಯಲ್ಲಿದ್ದ ಒಲೆಯು ಮಾತ್ರ ಅಪಹರಿಸಲ್ಪಟ್ಟದ್ದರಿಂದ ಅಲ್ಲ ಕಾಣಬರಲಿಲ್ಲವು. ಈ ಭಾವಿಯು ಅಪರಾಧಿಗಳಲ್ಲಿ ಒಬ್ಬನಾದ ರಜಪುತ್ರನ ಮನೆಗೂ ಬೇರೊಬ್ಬನ ಮನೆಗೂ ಮಧ್ಯಸಾಲೀ ನಿವೇಶನದಲ್ಲಿರುತದೆ ಅಕ್ಟೋಬರ್ ೧೫ ನೇ ತಾರೀಖಿನಲ್ಲಿ ಅಪರಾಧಿಯಾದ ರಜಪುತ್ರನು ದಸ್ತಗಿರಿ ಮಾಡಲ್ಪಟ್ಟನಲ್ಲದೆ ಅವನ ಮನೆಯು ಶೋಧನೆ ಮಾಡಲ್ಪಟ್ಟಿತು. ಅವನ ಮನೆಯಲ್ಲಿ ಪೂಜಾಗೃಹವೆಂಬ ಒಂದು ಕೊಠಡಿಯಲ್ಲಿ ಮೃತಪಟ್ಟ ಹುಡುಗಿಯ ಪುಸ್ತಕಗಳೂ ಸ್ಲೇಟೂ ದೊರೆತವು ಅವರ ಆಧಾರದಮೇಲೆ ಮಾರನೆಯ ದಿನ ಮಿಕ್ಕ ಯಿಬ್ಬರು ಅಪರಾಧಿಗಳು ದಸ್ತಗಿರಿ ಮಾಡಲ್ಪಟ್ಟರು ೧೭ ನೇ ತಾರೀಖಿನ ದಿನ ರಜಪುತ್ರನ ಭಾರ್ಯೆಯಾದ ಚಂದಾಬಾಯಿ ಯೆಂಬವಳನ್ನು ಹಿಡಿದು ದರ್ಯಾಪ್ತು ಮಾಡಲಾಗಿ ಅವಳು ನಡೆದ ವಿಷಯಗಳನ್ನೆಲ್ಲ ಮರೆಮಾಚದೆ ತಿಳಿಸಿ ತನ್ನ ಮನೆಯ ಹಿತ್ತಿಲಿನೊಳಿದ್ದ ದಾಳಿಂಬರ ಗಿಡದ ಕೆಳಗೆ ಹೂಳಲ್ಪಟ್ಟದ್ದ ಓಲೆ ಜೋಡೆಯನ್ನು ತೆಗೆದು ಕೊಟ್ಟುಬಿಟ್ಟಳು. ಈ ಕೃತ್ಯವಂ ನಡೆಸಲಿಕ್ಕೆ ಉದ್ದೇಶವೇನಂದರೆ —ರಜಪುತ್ರನ ಮನೆಯಲ್ಲಿ ನಿಕ್ಷೇಪವಿರುವಂತೆಯೂ, ಅದಂ ತಾನು ತೆಗೆದುಕೊಡುವಾತೆಯೂ ವೈರಾಗಿಯು ಮಿಕ್ಕ ಉಭಯರಿಗೂ ಸಂಪೂರ್ಣನಂಬಿಕೆ ಹುಟ್ಟುವಂತೆ ಬೋಧಿಸಿ, ಅವರಿಗೆ ಪ್ರವೃತ್ತಿಯನ್ನುಂಟುಮಾಡಿ, ಧನದೇವತೆಯು ನರಬಲಿಯನ್ನಪೇಕ್ಷಿಸುವದರಿಂದ ಅದಿಲ್ಲದೆ ವಶ್ಯವಾಗಲಾರಳೆಂದು ನುಡಿಯೆ, ಸದರೀ ಹುಡುಗಿಯು ಮನೆಗೆ ಬರುವಾಗ್ಯೆ ದಾರಿಯಲ್ಲಿ ಅವಳಂ ಅಡ್ಡಹಾಕಿ ಬಲಾತ್ಕಾರದಿಂ ಕರೆದುಕೊಂಡು ಹೋಗಿ ಆಕೆಗೆ ನಿಶಾ ಬರುವಂತೆ ಮಾಡಿ ಕೂಡಲೇ ಬ್ರಾಹ್ಮಣನು ಕತ್ತಿಯಿಂದ ಶಿರಚ್ಛೇದನ ಮಾಡಿದನು. ನಿಕ್ಷೇಪವಿರುವಂತೆ ಊಹಿಸಿದ ಪ್ರದೇಶವು ಅಗೆದು ನೋಡುವಲ್ಲಿ ಅಲ್ಲಿ ಘಟ್ಟಮಣ್ಣು ಸಹ ದೊರೆಯಲಿಲ್ಲವು ಕಡೆಗೆ ಕೊಂದು ಹಾಕಿದ ಹುಡುಗಿಯ ಮುರ್ದೆಯನ್ನು ಚೀಲದಲ್ಲಿ ಹಾಕಿ ಚಾಪೆಯಲ್ಲಿ ಸುತ್ತಿ ಸಮೀಪದೊಳಿದ್ದ ಭಾವಿಯಲ್ಲಿ ಎಸೆದುಬಿಟ್ಟರು ರಜಪುತ್ರನ ಕೈಭೀರುತ್ವದಿಂದ ಬ್ರಾಹ್ಮಣನು ಕೊಲ್ಲಲಿಲ್ಲವೆಂತಲೂ, ವೈರಾಗಿಯು ತನ್ನಲ್ಲಿದ್ದ ಬೆಂಗ್ಗದ್ದ ಒಂದು ಕತ್ತಿಯಿಂದ ಹುಡುಗಿಯ ತಲೆಯಂ ಕತ್ತರಿಸಲಿಕ್ಕೆ ಪ್ರಯತ್ನಪಟ್ಟಿತೆಯೂ, ಆದರೆ ಅದು ಮೊಂಡಾಗಿದ್ದುದರಿಂದ ಅವಳಂ ಕೆಳಗೆ ಮಲಗಿಸಿ ತನ್ನ ಕಾಲುಗಳಿಂದ ನಲುಗಿ ಕೊಂದನೆಂತಲೂ ಸ್ಪಷ್ಟವಾಗುತ್ತದೆ. ಈ ಮೊಕದ್ದಮೆಯು ವೇಲೂರ್ ೨ ನೇ ಕ್ಲಾಸ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಪ್ರಥಮ ವಿಚಾರಣೆಯು ಜರಿಗಿ ಸೆಷನ್ ಕಮ್ಮಿಟ್ ಮಾಡಲ್ಪಟ್ಟಿತು. ಕಳೆದ ನವಂಬರ್ ತಿಂಗಳಲ್ಲಿ ನಡೆದ ಉತ್ತರ ಆರ್ಕಾಟ್ ಡಿಸ್ಟ್ರಿಕ್ಟ್ ಸೆಷನ್ಸಿನಲ್ಲಿ ವಿಚಾರಣೆಗೆ ಬಂದು ಸೆಷನ್ ಜಡ್ಜಿಯವರಾದ ಮೆ|| ಇ ಜೆ ಸೆವೆಲ್ ಎಂಬವರು ವೈರಾಗಿಗೆ ಮರಣದಂಡನೆಯನ್ನು, ಮಿಕ್ಕ ಇಬ್ಬರಿಗೆ ಯಾವಜ್ಜೀವದ್ವೀಪಾಂತರವಾಸದ ದಂಡನೆಯನ್ನೂ ವಿಧಿಸಿದರು. ಸೆಷನ್ ಜಡ್ಜಿಯವರು ಫಾಶೀ ಸಜಾ ವಿಧಿಸಿಕೊಟ್ಟ ಫೈಸಲ್, ಪದ್ಧತಿ ಪ್ರಕಾರ ಹೈಕೋರ್ಟಿನವರಿಂದ ಕಾಯಂ ಮಾಡಲ್ಪಡತಕ್ಕ ಬಗ್ಗೆ ಅದರ ಬಳಿಗೆ ಕಳುಹಿಸಲ್ಪಟ್ಟದ್ದರಿಂದಲೂ, ಇನ್ನಿಬ್ಬರು ಅಪರಾಧಿಗಳು ಸದರೀ ಹೈಕೋರ್ಟಿಗೆ ಅಪೀಲ್ ಮಾಡಿಕೊಂಡದ್ದರಿಂದಲೂ, ಈ ಮೊಕದ್ದಮೆಯು ಮಾಹೇ ಜನವರಿ ೮ ನೇ ತಾರೀಖಿನಲ್ಲಿ ಜಸ್ಟಿಸ್ ಮೆ|| ಪಾರ್ಕರ್ ಮತ್ತು ಜಸ್ಟಿಸ್ ಮೆ|| ಷೆಫರ್ಡ್ ಎಂಬವರ ಮುಂದೆ ದರ್ಯಾಪ್ತಿಯಾಗಿ ವ್ಯವಸ್ಥೆಯನ್ನೈದಿತು ಬ್ರಾಹ್ಮಣನ ತರಫ್ ಮೆ|| ರಾಬರ್ಟ್ ಎಫ್ ಗ್ರಾಂಟ್ ಎಂಬವರೂ, ವಕೀಲ್, ಮೆ|| ಟಿ ವಿ ನರಸಿಂಹಾಚಾರ್ಯರೆಂಬವರೂ, ವೈರಾಗಿಯ ತರಫ್ ಮೆ|| ಎಂ ಓ. ಪಾರ್ಥಸಾರಥಿ ಅಯ್ಯಂಗಾರ್ ಎಂ.ಎ ಬಿ ಎಲ್ ಯವರೂ ಹಾಜರಾಗಿದ್ದರು. ಗವರ್ನಮೆಂಟ್ ಪ್ಲೀಡರ್ ಮೆ|| ದಿವಾನ್ ಬಹದೂರ್ ಸುಬ್ರಮ್ಮಣ್ಯಯ್ಯರ್, ಸಿ ಐ ಇ ಯವರು ಗವರ್ನಮೆಂಟ್ ತರಫ್ ಹಾಜರಾಗಿ ಅಪೀಲ್‌ವಾದಿಗಳಿಗೆ ವಿಧಿಸಲ್ಪಟ್ಟ ದ್ವೀಪಾಂತರ ದಂಡನೆಯನ್ನು ಮರಣದಂಡನೆಗೆ ಬದಲಾಯಿಸಿ ಶಿಕ್ಷೆಯಂ ಜಾಸ್ತೀ ಮಾಡಬೇಕಾದುದು ನ್ಯಾಯ್ಯವೆಂಬದಾಗಿ ವಾದಿಸಿದರು. ಈ ಮೊಕದ್ದಮೆಯಲ್ಲಿ ೧ ನೇ ಅಪರಾಧಿ ಗುರು ರಾಜಸಿಂಗಿಗೆ ಕೆಳಕೋರ್ಟಿನವರು ವಿಧಿಸಿದ ದ್ವೀಪಾಂತರವಾಸದಂಡನೆಯಂ ಖಾಯಂ ಮಾಡಿ ಮಿಕ್ಕ ಇಬ್ಬರು ಅಪರಾಧಿಗಳ ಮೇಲೆ ಚಾರ್ಜ್ ರುಜುವಾತುಗಳಿಲ್ಲವೆಂದು ತಿಳಿಸಿ ಅವರಂ ಬಿಡುಗಡೆ ಮಾಡಿರುತ್ತಾರೆ.

BANGALORE —Printed and published at the KARNATIC PRESS, No 40, HOSPITAL ROAD, PETTA —1893

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

## ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning**


[illegible]

Vol. XX | BANGALORE—MONDAY, FEBRUARY 20 1893 | [No 7

ಸಂಪುಟ ೨೦ | ಬೆಂಗಳೂರು — ಸನ್ ೧೮೯೩ ನೇ ಇಸವಿ ಫೆಬ್ರವರಿ ೨೦ ನೇ ತಾರೀಖ್ ಸೋಮವಾರ | [ಸಂಚಿಕೆ ೭


### ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ವರ್ಷಕ್ಕೆ | 6—0—0 | 8—0—0 |
| 6 ತಿಂಗಳಿಗೆ | 3—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ವರ್ಷಕ್ಕೆ | 3—0—0 | 4—0—0 |
| 6 ತಿಂಗಳಿಗೆ | 1—12—0 | 2—8—0 |

[illegible]

### ಪ್ರಕಟನೆಯ ದರ

[illegible]

*ADVERTISEMENTS*

**NOTICE**

VAIDYASARA SANGRAHA

[illegible]

HINDU MEDICINE

*Price ... Postage R 0 0*

ವೈದ್ಯಸಾರ ಸಂಗ್ರಹ

[illegible]

ಬಿ ಬಿ ವೆಂಕಟಾಚಾರ್

[illegible]

### ನೋಟೀಸ್

**ಬೆಂಗಳೂರು ಕರ್ನಾಟಕ ಪ್ರೆಸ್**

೧೮೯೩ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು

[illegible]

### ನೋಟೀಸ್

ನಂಜುಂಡಸ್ವರದ ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು

[illegible]

### ನೋಟೀಸ್.

**ಗಣೇಶ ರಾಮಚಂದ್ರ ಕರ್ಕ ಮತ್ತು ಕಂಪನಿ ಕಮಿಷನ್ ಏಜಂಟ್ಸ್.**

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯೊಡನೆ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ತಕ್ಕ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ

ಎಲ್ಲಾ ತರಹ ವಿಷಯಗಳು, ಪುಸ್ತಕಗಳು, ಮುತ್ತುಗಳು, [illegible] ಅತ್ಯುತ್ತಮಗಳಾದ [illegible]

[illegible]

### ನೋಟೀಸ್

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ನಾಟಕ ಮುದ್ರಾಕ್ಷರ ಶಾಲೆಯಲ್ಲಿ ಬಿಕರಿಗೆ ಸಿದ್ಧವಾಗಿವೆ ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು

### ಸಂಸ್ಕೃತ ಗ್ರಂಥಗಳು

| | ರೂ | ಆ | ಪೈ |
|---|---|---|---|
| ಸಟೀಕಾ [illegible] | ೪ | ೦ | ೦ |
| ,, ಶಿವಗೀತೆ | ೧ | ೧ | ೦ |
| ,, [illegible] | ೦ | ೮ | ೦ |
| ,, [illegible] | ೧ | ೦ | ೦ |
| ,, ಟಿ॥ [illegible] ರಾಮಾಯಣ | ೦ | ೩ | ೦ |
| ,, ಓಟಿ॥ [illegible] ಗೀತೆ | ೦ | ೧ | ೦ |
| ,, ಟೀ॥ [illegible] (ಸುಭಾಷಿತ) | ೦ | ೮ | ೦ |
| [illegible] | ೦ | ೩ | ೦ |
| [illegible] | ೦ | ೨ | ೦ |
| [illegible] | ೦ | ೨ | ೦ |
| [illegible] | ೦ | ೨ | ೦ |
| ೧ [illegible] | ೦ | ೦ | ೦ |

### ಕನ್ನಡ ಗ್ರಂಥಗಳು

| | ರೂ | ಆ | ಪೈ |
|---|---|---|---|
| [illegible] | ೩ | ೦ | ೦ |
| [illegible] | ೧ | ೨ | ೦ |
| [illegible] | ೧ | ೮ | ೦ |
| [illegible] | ೦ | ೩ | ೦ |
| [illegible] | ೦ | ೭ | ೦ |
| [illegible] | ೦ | ೨ | ೦ |
| [illegible] | ೦ | ೨ | ೦ |
| [illegible] | ೦ | ೨ | ೬ |
| [illegible] | ೦ | ೧ | ೦ |
| [illegible] | ೦ | ೧ | ೦ |
| [illegible] | ೦ | ೧ | ೦ |
| [illegible] | ೦ | ೧೨ | ೦ |
| [illegible] | ೦ | ೧ | — |

### ನೋಟೀಸ್.

**ಸೌದೆ ಕಂಟ್ರಾಕ್ಟುದಾರರಿಗೆ ಇದರಿಂದ ತಿಳಿಸಲ್ಪಡುವದೇನೆಂದರೆ —**

ಬೆಂಗಳೂರಲ್ಲಿರುವ ಡಿಸ್ಟಿಲರಿಗೆ ಸೌದೆ ಸರಬರಾಯಿ ಬಗ್ಗೆ ಟೆಂಡರುಗಳು ಅಪೇಕ್ಷಿಸಲ್ಪಟ್ಟಿವೆ ಅದರ ತಪಸೀಲ್ ತಿಳಿದುಕೊಳ್ಳಬೇಕಾದವರು ಸದರೀ ಡಿಸ್ಟಿಲರಿಯಲ್ಲಿ ಕೇಳಿ ತಿಳಿದುಕೊಳ್ಳಬಹುದು

### ಹರಾಜ್ ಇಸ್ತಿಹಾರ್‌ನಾಮೆ

ನಗರ್ ಡಿವಿಜನ್ ಡಿಸ್ಟ್ರಿಕ್ಟು ಕೋರ್ಟು

೧೮೯೦ ನೇ ಇಸವಿ ಅಸಲ್ ನಂ ೨೬

ಸನ್ ೧೮೯೦ ನೇ ಇಸವಿ ಅಮಲ್‌ಜಾರಿ ನಂಬರ್ ೮೦.

ವಾದಿ—ಬೆಂಗಳೂರಲ್ಲಿರುವ ಪಳ್ಳಿ ಚಿಕ್ಕಬಸಪ್ಪ

ಪ್ರತಿವಾದಿಗಳು—೧ ಶಿವಮೊಗ್ಗ ವಾಸಸ್ಥರಾದ ಎ ಕೀತಾರಾಮಪ್ಪ

೨ ತರೀಕೆರೆ ವಾಸಸ್ಥರಾದ ಎ ಸಣ್ಣದೇವರಪ್ಪ

ತರೀಕೆರೆ ತಾಲ್ಲೂಕ್ ಲಿಂಗದಹಳ್ಳಿ ಹೋಬಳಿ ನಂದಿಪುರದ ಗ್ರಾಮಕ್ಕೆ ಸೇರಿದ ಕೆಸವಿನಕಟ್ಟೆ ಯೆಂಬ ಹೆಸರುಳ್ಳ ಕಾಫೀಯೆಸ್ಟೇಟಿನ ಹರಾಜ್ ಬಗ್ಗೆ ೧೮೯೩ ನೇ ಇಸವಿ ಫೆಬ್ರವರಿ ೧೦ ನೇ ತಾರೀಖನ್ನು ಗೊತ್ತುಮಾಡಿ ಈ ಮೊಕದ್ದಮೆಯಲ್ಲಿ ಸಾದರ್ ಮಾಡಲ್ಪಟ್ಟ ಸನ್ ೧೮೯೨ ನೇ ಇಸವಿ ಡಿಸಂಬರ್ ೨೩ ನೇ ತಾರೀಖಿನ ಈ ಕೋರ್ಟಿನ ನೋಟೀಸನ್ನು ರದ್ದುಮಾಡಿ ಅದಕ್ಕೆ ಬದಲಾಗಿ ಇದರಿಂದ ಪ್ರಕಟಸಲ್ಪಡುವದೇನಂದರೆ— ಮೇಲೆ ತಿಳಿಸಲ್ಪಟ್ಟ ಕಾಫೀಯೆಸ್ಟೇಟು, ಈ ತಿಂಗಳ ೧೦ ನೇ ತಾರೀಖಿಗೆ ಬದಲಾಗಿ, ಸನ್ ೧೮೯೩ ನೇ ಇಸವಿ ಮಾರ್ಚಿ ೨೩ ನೇ ತಾರೀಖಿನಲ್ಲಿ ತರೀಕೆರೆಯಲ್ಲಿ ಹರಾಜ್ ಹಾಕಲ್ಪಡುವುದು

ಸನ್ ೧೮೯೩ ನೇ ಇಸವಿ ಫೆಬ್ರವರಿ ತಾರೀಖ್ ೭ ರಲ್ಲಿ ನಮ್ಮ ದಸ್ತಖತ್ ಮೊಹರಿನಿಂದ ಕೊಡಲ್ಪಟ್ಟಿತು

D TIRUMALACHAR

*Dist rict Judge*

*Nagar Division*

### Bangalore City Municipality

ಬೆಂಗಳೂರ್ ಸಿಟಿ ಮ್ಯುನಿಸಿಪಾಲಿಟಿ

[illegible]

೬. ಮಾರ್ಕೆಟ್ ಬಿಲ್ಡಿಂಗಿನಲ್ಲಿರುವ ಅಸ್ಸಿಸ್ಟೆಂಟ್ ಆಸಿಸ್ಟೆಂಟರ ತಲೆ ಜಾಸ್ತಿಯಾಗುವದರ ಕುರಿತು ಸ್ಯಾನಿಟರಿ ಸ ಪರ್ಡಿಂಟೆಂಡೆಂಟರವರು ಬರೆದ ೧೮೯೩ ನೇ ಇಸವಿ ಜನವರಿ ೯ ನೇ ಮಾರ್ಚಿ ವೃಳ್ಳ ೩೯೦೩ ನೇ ನಂಬರುಳ್ಳ ವಾಕೆಟ್.

೪. ತೆಂಗಿನ ಕಾಯಿಗಳ ಮೇಲಿನ ತೆರಿಗೆ ಬಿಲ್ಲಿ, ಆದಾ ಯ್ಯಸ್ಟರಲ್ಲಿ, ಕೊಬ್ಬರಿ ಯಣ್ಣೆ ಯಮೇಲೆ ತೆರಿಗೆ ಹಾಕಲ್ಪಡಕೂಡದ ವೆಂಬ ನಿಷ್ಕರ್ಷೆಯಂ ಪರ್ಯಾಲೋಚಿಸಬೇಕೆಂಬದಾಗಿ ಗವರ್ನಮೆಂಟಿನವರು ಕಳುಹಿಸಿರುವ, ೧೮೯೨ ನೇ ಇಸವಿ ಡಿಸೆಂಬರ್ ೨೮ ನೇ ಮಾರ್ಚಿ ವೃಳ್ಳ ೯೧೧೨—೧೪—L. F. ೩೩೨—೯೨ ನೇ ನಂಬರುಳ್ಳ ಪ್ರೊಸೀಡಿಂಗ್ಸ್.

೫. ಅಮುದಾರ್ಯವಾದ ರೋಗಗಳಿಂದ ಪೀಡಿತರಾದ ಅನಾಥರಂ ಕುರಿತು, ೧೮೯೩ ನೇ ಇಸವಿ ಜನವರಿ ೨ ನೇ ಮಾರ್ಚಿ ೧೨೯೩ ನೇ ನಂಬರುಳ್ಳ ಪ್ರೈವೇಟ್ ಸೆಕ್ರೆಟರಿ ಸಾಹೆಬರವರ ಆದರಿ ಸೆಕ್ರೆಟರಿಯವರು ಬರೆದ ಕಾಗದ ಮತ್ತು ಅದೇ ತಿಂಗಳ ೧೩ ನೇ ತಾರೀಖಿನಲ್ಲಿ ರಿಸೀಡೆಂಟರವರಿಂದ ಬಂದ ೧೨೫—೩೪೫—೯೨ ನೆ ನಂಬರುಳ್ಳ ಲೆಟರ್.

೬. ಕೇಟೆಯ ಕೆಲವು ಪ್ರದೇಶಗಳಲ್ಲಿ ಯಿರುವ ಛಾವಿಗಳನ್ನು ಅಗೆಸತಕ್ಕ ವಿಷಯದಲ್ಲಿ ೧೮೯೩ ನೇ ಇಸವಿ ಜನವರಿ ೧೧ ನೇ ಮಾರ್ಚಿ ೧ ನೇ ನಂಬರುಳ್ಳ ಮೆ|| ಸುಪ್ಪರಾವ ರವರ ಲೆಟರ್,

೭. ಕಾರಂಜೀಕೆರೆಯ ಬಯಲಿನಲ್ಲಿ ಒಂದು ಕುಂಟೆಯನ್ನು ತೆಗೆಸುವದಕ್ಕೆ ೫೦೦೦ ರೂಪಾಯಿಗಳ ಬಾಬನನ್ನು ಹಿಡಿಯುವದೆಂದು ಅಂದಾಜ್ ಮಾಡಿ ಮ್ಯುನಿಸಿಪಲ್ ಎಗ್ಸಿಕ್ಯುಟಿವ್ ಇಂಜನಿಯರವರು ಕಳುಹಿಸಿದ ಅಂದಾಜ್ ಪಟ್ಟಿ,

೮. ೫ ನೇ ಡಿವಿಷನ ಮೆಂಬರನಿಗೆ ಮೆ|| ಸಾಂಬಶಿವ ಅಯ್ಯರವರು, ಚುನಾಯಿಸಲ್ಪಟ್ಟ ಮೆಂಬರಾಗಿರುವಂತೆ ಪ್ರಕಟಿಸಿ, ಮೆ|| ಬಸವ್ವಶೆಟ್ಟರನ್ನು ಒಬ್ಬ ಜಾಸ್ತಿ ಮೆಂಬರಾಗಿ ಬೋರ್ಡಿನವರು ಶಿಫಾರಸ್ಸು ಮಾಡಬಹುದೆಂದು ತಿಳಿಸಿ, ಗವರ್ನಮೆಂಟಿನವರು ಮಾಡಿದ, ೧೮೯೩ ನೇ ಇಸವಿ ಜನವರಿ ೧೧ ನೇ ಮಾರ್ಚಿ ವೃಳ್ಳ, ೧೦೦೬೭—೫—L. F. ೩೩೬—೯೨ನೇ ನಂಬರ್ ಪ್ರೊಸೀಡಿಂಗ್ಸ್,

೯. ಮ್ಯುನಿಸಿಪಲ್ ಪ್ರಕಟನೆಗಳನ್ನು ಪ್ರಕಟಿಸುವ ವಿಷಯದಲ್ಲಿ ಕರ್ಣಾಟಕ ಪ್ರಕಾಶಿಕಾ ಪತ್ರಿಕೆಯ ಪ್ರೊಪ್ರೈಟರವರು ಬರೆದುಕೊಂಡ ೧೮೯೩ ನೇ ಇಸವಿ ಜನವರಿ ೧೬ನೇ ಮಾರ್ಚಿ ವೃಳ್ಳ ಲೆಟರ್.

೧೦. ಬಾಳೆತೋಟದ ಬಗ್ಯೆ ರಂಗಾಮಿನಾದ ಕಾಲಿನ ಮೇಲೆ ಕೋಟೆಯ ಕಂದಕವನ್ನು ಕೊಡುವ ವಿಷಯವಂ ಕುರಿತ ೧೮೯೩ ನೇ ಇಸವಿ ಜನವರಿ ೨೪ ನೇ ಮಾರ್ಚಿ ವೃಳ್ಳ ಯಾದಿ,

ಕಾರಂಜೀಕೆರೆಯ ಕಾವಲುಗಾರನಾದ ವೆಂಕಟಸ್ವಾಮಿನ ತಲೆ ಜಾಸ್ತಿ ಮಾಡಬೇಕೆಂಬದಾಗಿ ಶಿಫಾರಸ್ಸು ಮಾಡಿ ವೈಸ್ ಪ್ರೆಸಿಡೆಂಟರವರು ಬರೆದ ಮೆಮೊ.

೧೨. ಸಾಬಿಕ ಮ್ಯುನಿಸಿಪಲ್ ಜವಾನನಾದ ಲಕ್ಕಸೆಂಬುವನು ತನಗೆ ಪೆಂಷನ್ ಯಾ ಗ್ರಾಚ್ಯುಟಿ ಕೊಡಿಸಬೇಕೆಂಬದಾಗಿ ಬರೆದುಕೊಂಡ ಅರ್ಜಿ.

೧೩. ಸ್ಟ್ಯಾಂಡಿಂಗ್ ಕಮಿಟಿಯವರ ರಿಪೋರ್ಟ್.

(೧) ೧೮೯೨—೯೩ ನೇ ಇಸವಿಯ ಬಾಬತು ಬಜೆಟ್ ಅಂದಾಜ್ ಲೆಕ್ಕ.

(೨) ತಾಲ್ಲೂಕ್ ಕಚ್ಚೇರಿ ರಸ್ತೆಯನ್ನು ಬಲಾಯಿಸುವ ಬಗ್ಯೆ ತೆಗೆದುಕೊಳ್ಳಲ್ಪಟ್ಟ ಜಮೀನಿಗಾಗಿ ಸಲ್ಲಬೇಕಾಗಿರುವ ಈಡು ಮೊಬಲಗಿಗೆ ವೆಂಕಟಪ್ಪ ಚಟ್ಟಿರವರಿಗಿರುವ ಹಕ್ಕುದಾರಿ ವಿಚಾರ,

(೩) ಮ್ಯುನಿಸಿಪಲ್ ಆಫೀಸ ಕಟ್ಟಡವನ್ನು ಅಭಿವೃದ್ಧಿಗೊಳಿಸುವ ಬಗ್ಯೆ ತಗಲುವ ೧೦೩೦ ರೂಪಾಯಿಗಳ ಒಳಗಿನ ಡು ಅಂದಾಜ್ ಪಟ್ಟಿ.

| | |
|---|---|
| ಬೆಂಗಳೂರಿ ಸಿಟಿ ಮ್ಯುನಿಸಿಪಲ್ ಆಫೀಸ ತಾ|| ೧೬—೨ ೯೩ಇಸವಿ. | K. SRINIVASA RAO Vice-President, City Munl. Commission. |

# ಕರ್ಣಾಟಕ ಪ್ರಕಾಶಿಕಾ.

## THE KARNATAKA PRAKASIKA.

**MONDAY, FEBRUARY 20, 1893**

೧೮೯೩ನೇ ಇಸವಿ ಫೆಬ್ರವರಿ ತಾ|| ೨೦ ನೇ ಸೋಮವಾರ.

### ಹೊಳೆಯುವದೆಲ್ಲ ಭಂಗಾರವಾಗುತಿದೆಯೆ?

ಲೋಕದಲ್ಲಿ ಧನ ಮೊದಲಾದ ಸರ್ವವಿಷಯಗಳಲ್ಲಿಯೂ, ದಾರಿದ್ರ್ಯವೆಂಬುವದು ಸಾಮಾನ್ಯವಾಗಿ ಜನರಿಗೆಈಶ್ವರದತ್ತವಾದ ಪ್ರಜ್ಞೆಯಂ ಕೆಡಿಸಿ, ಧೈರ್ಯವಂತಗ್ಗಿಸಿ, ವಿವೇಕವಂದೂರಗೊಳಿಸಿ ಗೌರವವಂತಗ್ಗಿಸಿ, ಹೇಳನಸ್ಥಿತಿಗೆ ಗುರಿಮಾಡತಕ್ಕದ್ದಾಗಿರುತಿದೆ. ಇದಲ್ಲದೆ ಅದು ಅವರಂ ನಿರಂತರ ದುಃಖಭಾಜನರನ್ನಾಗಿಮಾಡಿ ಸಾಧ್ಯಾಸಾಧ್ಯ ವಿವೇಚನೆಯಂ ಸಹ 'ಮಾಡಗೊಳಿಸದೆ ಕೇವಲ ಫಲಪ್ರಾಪ್ತ್ಯುಪಾಯಾನ್ವೇಷಣೆಯಲ್ಲಿ ನಿರತರಾಗಿರುವಂತೆ ಪ್ರೇರಿಸುವುದು. ಹೀಗೆ ದುಃಖ ನಿಮಿತ್ತಕವಾದ ಅನುಪಪತ್ತಿ ಸ್ಥಿತಿಯನ್ನಿಗೆ ಹೃದಯಸುಂದರರವಾಸ್ಥಿತಿಯಂ ಸಂಪಾದಿಸಿಕೊಳ್ಳುವದಕ್ಕಾಗಿ ಅವರು ಅನೇಕರನ್ನಾಶ್ರಯಿಸುತ್ತಾರೆ. ಹಾಗೆ ಆಶ್ರಯಿಸತಕ್ಕವರಿಗೆ ಧನ ಪ್ರಾಪ್ತಿಯೇ ಮುಖ್ಯವಾದುದರಿಂದ, ಅವರು ತಾವು ಆಶ್ರಯಿಸುವಂತವರ ಜಾತಿ ಕುಲಗಳ ಸಾಮಿಗಳ್ಯವನನ್ನು ಸರ್ಯಾಲೋಚಿಸದೆ ಅವರು ಕೇವಲ ತಮ್ಮ ಕುಲದೈವದಂತೆ ಭಾವಿಸುತ್ತಾರೆ. ಮನುಷ್ಯನಿಗೆ ಅನುಪಪತ್ತಿ ನಿವಾರಕವಾದುದು ಧನವೇ; ಅಂತಾ ಧನವನ್ನಾರ್ಜಿಸುವತಕ್ಕಾಗಿ ನಾನಾವರು ಯೋಗ್ಯಗಳಾಗಿ ಹಾಡತಕ್ಕವುಗಳಾಗಿಯೂ, ಮಾಡಿದರೆ ಫಲಿಸತಕ್ಕವಾಗಿಯೂ ಇರುವ ಕೃಷಿ, ವಾಣಿಜ್ಯ, ಶಿಲ್ಪ, ರಾಜಸೇವೆ ಮೊದಲಾದ ಅನೇಕ ಉಪಾಯಗಳು ಸಾರ್ಥಕಗಳಾದು ಸರ್ವದೇಶ ಕಾಲಗಳಲ್ಲಿ ಅನುಭವಸಿದ್ಧಗಳಾಗಿಯೂ, ವೈಲಕ್ಷಣ್ಯವುಳ್ಳ ಜನಗಳಿಂದ ಕೊಂಡಾಡಲ್ಪಡತಕ್ಕವಾಗಿಯೂ, ಸಂಸ್ಥಾತ್ಯಾಗಿ ಆಧಾರದರಂಪರೆಯಾಗಿ ಬರುವದ ಸುಖಕಾರಿಗಳಾಗಿಯೂ ಇರುತಿವೆ. ಇದಂ ಅರಿಯದೆಯೂ ಸರ್ವವಿಷಯವೂ ಪುರುಷ ಪ್ರಯತ್ನದಿಂದಲೇ ಸಾಧ್ಯವಾಗತಕ್ಕವೆಂಬದನ್ನೂ, ತಾವ್ಯತ ಪುರುಷಯತ್ನವು ಅದೃಷ್ಟಾನುಗುಣವಾಗಿ ಸಫಲವಾಗುವದೆಂಬದನ್ನೂ ಸ್ವಲ್ಪವೂ ಚಿಂತಿಸದೆಯೂ, ತಮ್ಮ ಇಚ್ಛೆಗೆ ಅನುಕೂಲಗಳಾದ ವಿಷಯಗಳಂ ಹುಡುಕುತಿರುವರು. ಈ ಬಗೆಯಾದ ಚಿಂತೆಯೂ ಪ್ರಯತ್ನವೂ ಸಕೃತ್ತಾದರೆ ಅವುಗಳಿಂದ ಸಾರ್ವಜನೀನವಾದ ಅನರ್ಥ ನುಂಟಾಗಲಾರದು, ಅವು ಸಾಮಾನ್ಯವಾದವಾಗಿ ಪೋಣಬಟ್ಟರೆ ರನ್ನಮ್ಮ ಲಕ ಸಂಭಾಗರಂತಾ ಅನರ್ಥಗಳು ಈ ಜಗತ್ತಿನಲ್ಲಿ ಬಹಳ ಕಡಮೆಯಾಗಿರುವವು. ಇದಕ್ಕಿಂತ ಪುಣ್ಯವಿಶೇಷದಿಂದ ಕರ್ಮಾನುಗುಣವಾಗಿ ಲಭಿಸುವ ಭಾಗ್ಯವಂ ಪಡೆದು ಅದಂ ಸನ್ಮಾರ್ಗದಿಂ ವ್ಯಯಿಸಿಗೊಳಿಸಿ, ಸನ್ಮಾನಿಯೋಗಮಾಡಿ ಸ್ವಪರನಸ್ಪೃಹಗಳಂ ತಳ್ಳಿಸಿಕೊಳ್ಳುವದು ಕ್ಷೇಮಕರವು. ಇವುಗಳಂಬಿಟ್ಟು ಅನಿಶ್ಚಿತವಾಗಿಯೂ ಪ್ರಾಯಶಃ ನಷ್ಟಕರವಾಗಿಯೂ ಇರುವ ಉಪಾಯಂದಿಂದ ಮಹದೈಶ್ವರ್ಯವಂತರಾಗಬೇಕೆಂಬಕುರದೊಡನೆ ಸ್ವಲ್ಪ ದಿವಸಗಳಲ್ಲಿಯೇ ಅನೇಕರು ನಷ್ಟಧನರಾಗಿ ಭಗ್ನೋತ್ಸಾಹಿಗಳಾಗುವುದನ್ನೂ, ತನ್ಮೂಲಕ ಅಂತವರು ತಮ್ಮ ವಿವೇಕವಂ ಬೋಗಲಾಡಿಸಿಕೊಂಡು ವಿಶೇಷವಾಗಿ, ದುಃಖಿಸುವದನ್ನೂ ನೋಡಿ ಬಹಳ ಅನುತಾಪಪಡಬೇಕಾಗಿದೆ. ಇಂತಾ ಬಹುವಿಧ ಮಾರ್ಗಗಳಲ್ಲಿ ಯಕ್ಷಿಣಿ ಮೊದಲಾದ ಪ್ರಾಪ್ತ ದೇವತೆಗಳನ್ನುಪಾಸನೆಮಾಡಿ, ಅವುಗಳ ಪ್ರಸಾದ ಸಿದ್ಧರ್ಥ ಮಾಡತಕ್ಕದ ಅಕೃತ್ಯಗಳಂ ದುರುತ, ಕೊಡೆ ನಿಸ್ಸಿ ರದ ದೃಷ್ಟತ್ವಗಳಿಗೆ ಸ್ವಲ್ಪವೂ ಎಳಸದೆ ಘಾತುಕರಾಗಿ ಪರ್ತಿಸಿ ನಷ್ಟಗಾಗುವದು ಒಂದು ಮಾರ್ಗವು. ರಸವಾದವೆಂಬದು ಎರಡನೆಯ ಮಾರ್ಗವು. ಇದು ಅನೇಕ ಸಹಸ್ರ ಜನಗಳಿಗೆ ಒಂದೇ ಬಗೆಯಾದ ಮೋಹವನ್ನುಂಟುಮಾಡತಕ್ಕ ಅಲಭ್ಯವಾದ ಅರ್ಥವಾಗಿಯೂ ಅಸಾಧ್ಯ ವಿಷಯವಾಗಿರುವದರಿಂದ ಇದಂ ಕುರಿತು ಸ್ವಾನುಭವದಿಂದಲೂ, ಇತರ ನಿದರ್ಶನಗಳಿಂದಲೂ ಬರೆಯಲ್ಪಟ್ಟಿರುವ ಈ ಲೇಖನವು ಈ ಪತ್ರಿಕೆಯನ್ನೋದುವಂತವರನೇಕರ ಮುಖ್ಯಾವಧಾನಕ್ಕೆ ಅರ್ಹವಾಗದೆ ಹೋಗಲಾರದೆಂದು ನಂಬುತ್ತೇವೆ.

ರಸವಾದವೆಂಬುವದಂ ಕುರಿತು ವಿಚಾರಿಸಿದರೆ ಇದೊಂದು ಗೂಢವಾದ್ದೊಸಿದ್ಧಕ್ರಿಯೆಯಾಗಿರುತಿದೆ. ಇಂತಾ ಸಿದ್ಧಕ್ರಿಯೆಯಂ ಬಲ್ಲವರು ಬ್ರಹ್ಮಚಾರಿ ಜಿತೇಂದ್ರಿಯರಾಗಿಯೂ, ತೃಷ್ಣಾದಿ ಗುಣರಹಿತರಾಗಿಯೂ, ಕೇವಲ ಮುಮುಕ್ಷುಗಳಾಗಿಯೂ, ಅನ್ಯರಸಂಪರ್ಕವಿಲ್ಲದಂತೆ ಅತಿ ರಹಸ್ಯಗಳಾದ ಪ್ರದೇಶಗಳಲ್ಲಿ ತಪಸ್ಸು ಮಾಡತಕ್ಕವರಾಗಿಯೂ ಇರುತ್ತಾರೆ. ಅಂತವರೆಂದಿಗೂ ಪುರವಾಸವಂ ಮಾಡುವದಿಲ್ಲವು. ಮತ್ತು ಅವರಿಗೆ ಅನ್ಯರಂ ಆಶಿಸಿ ಪಡೆಯಬೇಕಾದ ವಿಷಯವ್ಯಾವದೂ ಯಿರಲಾರದು. ಅಂತವರು ಸಾಮಾನ್ಯವಾಗಿ ಅಗೋಚರರಾದುದರಿಂದ ಪ್ರಕೃತ ಉದ್ದೇಶಕ್ಕೆ ಅವರು ನಮ್ಮ ಬಾಲಿಗೆ ಯಿಲ್ಲವೆಂತಲೇ ಧಾರಾಳವಾಗಿ ಎಣಿಸಬಹುದಾಗಿರುತಿದೆ. ಇವರ ವಿಷಯವು ಅಂತಿರಲಿ, ಪ್ರಕೃತ ಪ್ರಾತುರಾಸ್ತವನ್ನು ಒಂದೊಂದು ಕೇಳಿದವರು ಒಂದೊಂದು ಬಗೆಯಾಗಿ ಪರಿಭಾವಿಸುತ್ತಾರೆ. ಇಂಗ್ಲಿಷಿನವರ ರಸವಾದ ಶಾಸ್ತ್ರದೊಳು ಕೇವಲ ಅನುಭವಸಿದ್ಧಗಳಾಗಿಯೂ, ಮನುಷ್ಯನ ಬುದ್ಧಿ ಚಾತುರ್ಯವರ್ಧಕಗಳಾಗಿಯೂ, ಇರುವ ವಿಷಯಗಳು ಬಹಳವಾಗಿರುವವೆ. ಇದರಲ್ಲಿಯೂ ಭೌತಿಕಶಾಸ್ತ್ರದಲ್ಲಿಯೂ ಇರುವ ಯಾವತ್ಸಾರಾಂಶಗಳನ್ನವರು ಗ್ರಹಿಸಿ ಸ್ವಾಧೀನಪಡಿಸಿಕೊಂಡಿರುವದರಿಂದ ಅವರು ಅನೇಕ ಅದ್ಭುತಕಾರ್ಯಗಳಂ ಮಾಡಲಿಕ್ಕೆ ಶಕ್ತರಾಗಿರುತ್ತಾರೆ. ಇತರರಲ್ಲಿರುವ ರಸವಾದಶಾಸ್ತ್ರದಲ್ಲಿ ಮೇಲೆ ತಿಳಿಸಲ್ಪಟ್ಟಂತಾ ವಿಷಯಗಳು ಅಲ್ಪವಾಗಿಯೂ ನಿಷ್ಕಲ್ಪವೆಲ್ಲವು ಬಹುಶಃ ಮನುಷ್ಯನ ಅನುಭವಕ್ಕೆ ಬಾರದ ನಿಷ್ಪ್ರಯೋಜಕ ವಿಷಯಗಳಾಗಿಯೂ ಇರುತಿವೆ. ಕೆಲವು ವೇಳೆ ಒಂದೊಂದು ವಿಷಯವು ಜನಗಳಿಗೆ ಮೋಹಕಗಳಾಗಿಯೂ ಇರುವದುಂಟು. ಅವುಗಳಲ್ಲಿ ಚಿನ್ನ ಮಾಡತಕ್ಕ ವಿಧಾನವು ಬಗೆಬಗೆಯಾಗಿ ಹೇಳಲ್ಪಟ್ಟಿರುವದರಿಂದ ಅದನ್ನು ನೋಡಿದವರಿಗೆ ಭ್ರಮೆ ಹುಟ್ಟದೆ ಹೋಗುವದಿಲ್ಲವು. ಆದರೆ ಅವುಗಳಂ ಚೆನ್ನಾಗಿಪರೀಕ್ಷಿಸಿ ಅಸಂಗತಗಳೆಂತಲೂ ಫಲಿಸದಕ್ಕವಲ್ಲವೆಂತಲೂ ಅನೇಕರು ಅನುಭವಪೂರ್ವಕ ಹೇಳಿದಾಗ್ಯೂ ಆ ಮಾತುಗಳನ್ನು ನಂಬದೆ ಬಹುಜನ ಭ್ರಾಂತರಾಗಿ ಕೆಟ್ಟುಹೋಗುತ್ತಾರೆ. ಇವರಿಗೆ ಕಣ್ಣಿಗೆ ಕಾಣಿಸುವವರೆಲ್ಲರು ಸಿದ್ಧರು, ಅವರಬಳಿ ಇರತಕ್ಕವೆಲ್ಲವು, ಸಿದ್ಧಗುಳಿಕೆಗಳು, ಗುರುಭಸ್ಮಗಳು, ರಸವೇದಿ, ಪಾಷಾಣಕಟ್ಟು, ತಾಂಬ್ರ ತಾಳಕ ಸಿಂದೂರಗಳು, ಅವರು ಪ್ರತಿದಿನವು ಉಪಯೋಗಿಸತಕ್ಕ ಗಾಂಜಾ, ಯೋಗಸೊಪ್ಪು ಮೊದಲಾದವೆಲ್ಲವು, ಮದ್ದು ಮೂಲಿಕೆಗಳು. ಅದಂ ಯಾವ ಲೋಹದಮೇಲೆ ಪ್ರಯೋಗಿಸಿದಾಗ್ಯೂ ಕೂಡಲೆ ಚಿನ್ನ ಭಂಗಾರವಾಗುವದೆಂಬ ಭ್ರಾಂತ್ಯಾನ್ಯಜ್ಞಾನವು ಅವರಿಗೆ ಬಲವಾಗಿರುತಿದೆ. ಭಂಗಾರವನ್ನು ಮಾಡುವ ತಕ್ತಿ ಪಮ್ಮೋಳಿಯುವದುಮೂ, ಸಂಪಾರವಂ ತೊರೆದು ಆಸೆಯನ್ನಗಿ, ಸಂಚಾರಿ ಸತಕ್ಕ ರಮಗೆ ತಮ್ಮ ವಿದ್ಯೆಯಿಂದೇನೂ ಪ್ರಯೋಜನವಿಲ್ಲವೆಂದೂ, ಹಾಗೆ ಮಾಡಿದಾಗ್ಯೂ ತಾವು ಅದಂ ಸ್ವಾರ್ಥವಾಗಿ ವಿನಿಯೋಗಿಸಿಕೊಳ್ಳಲಿಕ್ಕೆ ಗುರು ಆಜ್ಞೆ ಯಿಲ್ಲವೆಂತಲೂ, ಅನರ್ಹರಿಗೆ ಕೊಡಬಾರದೆಂತಲೂ, ಯೋಗ್ಯರಿಗೆ ತಮ್ಮ ವಿದ್ಯೆ ಸಿದ್ಧಿಸದೆ ಹೋಗುವದೆಂತಲೂ ಅಂತಾ ಗಂಡವಿದ್ಯೆಯನ್ನು ಸಾಧಾರಣವಾಗಿ ಯೆಲ್ಲರಿಗೂ ಹೇಳುವದಕ್ಕೆ ಗುರು ಆಜ್ಞೆ ಯಿಲ್ಲವೆಂತಲೂ, ಗುರು ಸೇವೆಯಂ ಬಹಳ ಮಾಡಿ ಅವರ ಕಟಾಕ್ಷವಂ ಸಂಪಾದಿಸಿದವರಿಗೆ ಅಂತಾ ವಿದ್ಯೆ ಲಭಿಸುವದು...

ರೆಂತಲೂ ಯೋಗಕಿಟ್ಟಿತ ಮಹಾ ನಿರಕ್ತರಾಗಿ ನಡೆಸುವ ಜರಚರಕ್ಕವಲ್ಲವೆಂದಲೂ ಸದರಿ ಕಾರ್ಯವು ಸಾಧ್ಯವಾಗುವದಾಗಿದ್ದರೆ ಲೋಕದಲ್ಲಿ ಧನವೆಂಬದು ಇಷ್ಟರ ದುರ್ಲಭವಾಗುವದಾಗಿಯೂ ಅತಿ ಪ್ರಯಾಸದಿಂ ಸಂಪಾದಿಸತಕ್ಕದ್ದಾಗಿಯೂ ಇರಲಾರದು. ಧನಹೀನರಾಗಿ ದಿಃಖಪಡುವಂತಲ್ಲಿ ಬಹುಜನ ಕಷ್ಟಪಡಲೇಕೆ? ದಾರಿದ್ರ್ಯವೆಂಬದ್ದು ಪ್ರಯೋಗಕ್ಕೆ ಅವಕಾಶವೆತ್ತಣದು? ಅರಸನಿಗೂ ಇತರರಿಗೂ ತಾರತಮ್ಯವೇನು? ನಿಜವಾದ ಶಕ್ತಿ ರಹಿತರಾದ ಈ ವೇಷಗಾರರು ಬಂಗಿಯ ಸೊಪ್ಪಿಗೆ ಸಿದ್ಧಪತ್ರ ವೆಂದು ಹೆಸರಿಟ್ಟು ಅದು ಅನವರತ ಮೆಲ್ಲುತ ಕಣ್ಣುಗಳ ಮುಚ್ಚಿಕೊಂಡು ರಾಮಸ್ಮರಣೆ ಮಾಡುತ ತಮ್ಮನ್ನು ನೋಡುವ ಭ್ರಾಂತರಿಗಲ್ಲ ನಿಷ್ಕಾಮರು, ಮಹಾತ್ಮರು, ಸಿದ್ಧರು, ಕ್ರಿಯೆಯುಳ್ಳವರು, ಎಂಬ ವ್ಯರ್ಥ ನಂಬಿಕೆಯನ್ನುಂಟುಮಾಡುತ ಊರೂರಾಗಿ ತಿರುಗುತಿರುತ್ತಾರೆ. ಮೇಲೆ ತಿಳಿಸಲ್ಪಟ್ಟ ಸಿದ್ಧರೆಂಬುವತನ ಅವರು ರಸಗುಂಡಕ, ತಾಳಕ, ಪಾಷಾಣಗಳಿಂದನ್ನೂ ಮುಟ್ಟದೆ ಕೆಲವು ಮೂಲಿಕೆಗಳಿಂದಲೇ ಸ್ವರ್ಣವಂ ಮಾಡುತ್ತೇವೆಂದು ವೇಷ ಹಾಕಿಕೊಂಡು ಬಗೆಬಗೆಯಾಗಿ ಮೋಸಗೊಳಿಸುತ್ತಾರೆ. ಇಂತವರು ಮಹಾ ಸಿದ್ಧರೆಂದು ಮೂಢರಿಂದ ಕರೆಯಲ್ಪಡುವರು. ಮತ್ತು ಕೆಲವರು ಇಂತಾ ಪದಾರ್ಥವೊಂದನ್ನೂ ಮುಟ್ಟದೆ ಕೇವಲ ತಮ್ಮ ಮಂತ್ರಸಿದ್ಧಿಯಿಂದಲೂ ಇಚ್ಛಾಮಾತ್ರದಿಂದಲೂ ಯಾವಲೋಹವನ್ನಾದರೂ ಭಂಗಾರವಾಗಿ ಮಾಡುವೆವೆಂದು ವಂಚಿಸುತ ತಿರುಗುವದಾಗಿ ಅವರು ಬಯಸುವ ಅನೇಕರು ದೇವತೆಗಳೆಂತಲೇ ಭಾವಿಸಿರಬಹುದು. ಈ ಸಿದ್ಧರಿಗೆ ಮತ್ತೇನೂ ಸಿದ್ಧಿಸದಿದ್ದರೂ, ಪರರಂ ವಂಚಿಸುವ ವಿಷಯದಲ್ಲಿ ತಕ್ಕ ಉಪಾಯಗಳೂ, ಅಸ್ತ್ರಗಳೂ, ಕಾಪಟ್ಯವೂ ಚೆನ್ನಾಗಿ ಸಿದ್ಧಿಸಿರುತಿವೆ. ಇತರರು ಕೆಲವರು ಮಾನದಿಂ ಬುದ್ಧಿಕಲ್ಪಷ್ಟವರಾಗಿ, ತಮ್ಮನ್ನು ರಸವಾದಿಗಳೆಂದು ಅಭಿಜ್ಞರು ತಿಳಿದರೆ ತಮ್ಮನ್ನು ಗೌರವಿಸಲಾರರೆಂಬದಾಗಿ ನೆನೆಸಿ ವೈದ್ಯರೆಂದು ಹೆಸರಿಟ್ಟುಕೊಂಡು ಅಂತರಂಗದಲ್ಲಿ ಅವಿಧಿಯಾಗಿ ರೋಗಿಗಳಂ ಸುರುತ ಅದಂ ರೋಗಿಗಳಿಗೆ ಕೊಟ್ಟು ಪರೀಕ್ಷಿಸುತ ಅನ್ಯರಂ ವಂಚಿಸುತ್ತಾರೆ. ಇಂತವರು ತಮ್ಮಲ್ಲಿ ವಿದ್ಯಾಗ್ರಹಣವಂ ಮಾಡಲಿಚ್ಛೆಗೊಂಡವರಿಗೆ ಹೇಳುವ ಮಾತುಗಳೆಂತೆಂದರೆ,— ರಸವಾದ ವಿದ್ಯೆಯು ಮಾನವರಿಗೆ ಪುಣ್ಯವಶದಿಂದ ಲಭಿಸಬೇಕೇ ಹೊರ್ತು ಕೇವಲ ಪ್ರಯತ್ನದಿಂ ಸಾಧ್ಯವಾಗಲಾರದು, ಗುರುಕಟಾಕ್ಷವೂ ಪುಣ್ಯವೂ ಪ್ರಾಪ್ತವಾದರೆ ಅದು ಲಭಿಸಬಹುದು. ಆದರೆ ಮಾಡತಕ್ಕ ಪ್ರಯತ್ನಗಳನ್ನು ಮಾತ್ರ ಚೆನ್ನಾಗಿ ಮಾಡಿದರೆ ಅದು ಒಂದುವೇಳೆ ಸಿದ್ಧಿಸದೆ ಹೋದಾಗ್ಯೂ (ವಾದಭ್ರಷ್ಟೋವೈದ್ಯಃಶ್ರೇಷ್ಠಃ) ಯೆಂಬಂತೆ ಸಕಲ ಪ್ರಾಣಿಗಳಿಗೂ ಆವಶ್ಯಕವಾದ ವೈದ್ಯವೊಳಾದರೂ ಒಳ್ಳೆಯ ಜ್ಞಾನ ವುಂಟಾಗದೆ ಹೋಗಲಾರದೆಂಬದಾಗಿ ಹೇಳಿ ಸಮಾಧಾನಪಡಿಸುತ್ತಾರೆ. ಆದಕ್ಕೆ ಮೋಸಹೋಗಿ ಅನೇಕರು ರಮ್ಮ ಸರ್ವಸ್ವವಂ ಕಳೆದುಕೊಂಡು, ರಿಕ್ತರಾಗಿ ಹೋಗುತ್ತಾರೆ. ಅಷ್ಟಕ್ಕೂ ತೀರದ ಭ್ರಾಂತಿಯುಳ್ಳವರಾದರೆ ರಮ್ಮ ಮನೆ ಬಾಗಿಲುಗಳಂ ಬಿಟ್ಟು ಕಾಡುಗಳಗಾದರೂ ಚಿಟ್ಟ ಗುಪ್ತಗಳಗಾದರೂ ಹೋಗುವರು. ಇಂತಾ ರಸವಾದಿಗಳಲ್ಲೊಂದು ವಿಶೇಷವಂ ತಿಳಿಸಲಿಕ್ಕೆ ಮರೆತ್ತೆ. ಅದೇನೆಂದರೆ—ಕೆಲವರು ಪರವಂಚನೆಗೆ ಬದ್ಧಕಂಕಣರಾಗಿ ಗಡ್ಡವಂ ಬೆಳಸಿ, ಜಡೆಗಳಂ ಬಿಟ್ಟು ವ್ಯಾಘ್ರಚರ್ಮವಂ ಧರಿಸಿ ಯೆರಡುಬಿಟ್ಟು ಬಗಲಬಕ್ಕೆ ಲಂಗೋಟಿಯಂ ಹಾಕಿಕೊಂಡು ಪಾ ದಿನಗಳಂ ಮೆಟ್ಟಿ ಊರು ಪುರವಂ ಪ್ರವೇಶಿಸಿ ಅಲ್ಲಿ ಯಾವದಾದರೂ ಒಂದು ಸ್ಥಳವಂ ಮಾಡಿಕೊಂಡು ಕಣ್ಣು ಮುಚ್ಚಿಕೊಂಡು ಯೋಗೋದ್ಯುಕ್ತನಂತೆ ನಟಿಸುವರು. ಅದಂ ನೋಡಿದವರು ಅವರಲ್ಲಿ ಯೇನೋ ಮಹಾತ್ಮ್ಯವಿದೆಯೆಂದು ನೆನಸಿ ಅವರಬಳಿ ಸೇರಿ ಆಶ್ರಯಿಸುವರು. ಇದರಿಂದ ಅವರನ್ನು ಕೆಲವು ದಿವಸಗಳವರಿಗೂ ಕಣ್ಣು ತೆರೆದು ನೋಡಲೊಲ್ಲರು. ಹಾಗೆಯೂ ಕೆಲವು ದಿವಸಗಳ ವರಿವಿಗೆ ಅವರು ಯೆಡೆಬಿಡದೆ ಬೋಗುತಿಪ್ಪಗೆ ಏನು, ಏತಕ್ಕೆ ಬಂದಿರಿ ನಮ್ಮಲ್ಲಿ ಹೇಳಿರಿ, ನಾವು ಸನ್ಯಾಸಿಗಳು, ಸಾಧುಗಳೆಂದು ಹೇಳಿ ನಿಷೇಧಪೂರ್ವಕವಾದ ಕನವೃತ್ತಿಯನ್ನು ಪ್ರದರ್ಶಿಸುವರು. ಹಾಗೆ ಮಾಡುವದರಿಂದಲೇ ಅವರಲ್ಲಿ ವಿಶೇಷ ಯೋಗ್ಯತೆಯನ್ನೂ ಮಾಹಾತ್ಮ್ಯವನ್ನೂ ಗ್ರಹಿಸಿ ಸದರೀ ಆಶ್ರಿತರು ಅವರ ಸವಿಸಾಪದಲ್ಲಿಯೇ ಅನವರತ ಇರಲಿಕ್ಕೆ ಪ್ರಯತ್ನಿಸುವರು ಅನಂತರ ಆ ಕಪಟಸಾಧುಗಳು ಸ್ವಲ್ಪಆದರದಿಂ ನೋಡುವಂತೆ ನಟಿಸುವರು. ಅಷ್ಟಕ್ಕೆ ತೃಪ್ತರಾಗಿ, ಅವರು ಸೇವೆಯಂ ಮಾಡುವದಕ್ಕೆ ಪ್ರಾರಂಭಿಸುತ್ತಾರೆ. ಈ ಸಾಧುಗಳು ತಮಗೆ ಅಭಿಸದನ್ನೇ ತಾವು ಭುಜಿಸದೇ ಕಂಬನಿಯಮವಿ ಸಿ ತೆ ಬಾಯಿಯೊಳುನುಡಿದಾಗ್ಯಾಕೋರುವಂತವು ಮಾತ್ರ ರಾಜಯೋಗ್ಯವಾದ ಪದಾರ್ಥಗಳಾಗಿರುತಿವೆ. ಇವರಿಗೆ ಅನ್ನವು ನೆಸಿದಲ್ಲಲ್ಲದು, ಮಾಧುರ್ಯ ಪದಾರ್ಥಗಳು ವಿನಾ ಮಿಕ್ಕವು ಪರಿಗ್ರಹಾರ್ಹವಲ್ಲವು. ಹಾಲನ್ನು ವಿನಾ ಮೊಸರನ್ನು ಅವರು ಕೈಯಿಂದ ಸಹ ಮುಟ್ಟಲಾರರು. ಗೋಧುಮೆ ವಿನಾ ಮಿಕ್ಕ ಧಾನ್ಯಗಳು ತ್ಯಾಜ್ಯಗಳು. ಇಂತಾ ರಾಜೋಪಚಾರ

ಗಳನ್ನಪೇಕ್ಷಿಸುವಂತೆ ಸದರೀ ವೇಷಧಾರಿಗಳ ಶಿಷ್ಯರು ತಮ್ಮ ಮನೆಗಳಂ ಬಿಟ್ಟು ಸಾಲುಮಾಡಿಕೊಂಡು ತಿಂಗಳುಗಟ್ಟಲೆ ಸೇವೆ ಮಾಡಿದಾಗ್ಯೂ ಅವರು ಸಾಕೆನ್ನುವ ಹಾದಿಗೆ ಹೋಗತಕ್ಕವರಲ್ಲವು. ಹೀಗೆ ಅನೇಕ ತಿಂಗಳು ಗತಿಸಿದಮೇಲೆ ಸದರೀ ಸಾಧುಗಳಿಗೆ ಬೇರೊಂದು ಊರಿಗೆ ಹೋಗಬೇಕಾದ ಆವಶ್ಯಕತೆಯು ತೋರಿಬಂದು, ಸೇವೆ ಮಾಡತಕ್ಕವರು ನಿರಾಶರಾಗುವ ಸಂದರ್ಭ ಉಂಟಾಗುವಾಗ್ಯೂ ಆಕಾಲದಲ್ಲಿ ಸುವರ್ಣಕಾರಿಗಳಾಗಬೇಕೆಂಬ ನಿರೀಕ್ಷೆಯುಳ್ಳ ಸದರೀ ಶಿಷ್ಯರು ತಮ್ಮ ಅಪೇಕ್ಷೆಯನ್ನು ಹೇಳಿಕೊಳ್ಳುವರು. ಅದಕ್ಕೆ ಅವರು ತಕ್ಕ ಮೂಲಿಕೆಗಳು ಇಲ್ಲಿ ದೊರೆಯುವದಿಲ್ಲವೆಂದು ನುಡಿದು ತಾವು ಅತ್ತ ಇರುವ ಸ್ಥಳಗಳಿಗೆ ಹೋಗಿ ತರುವಂತೆ ಹೇಳಿ ಕಾಲಕ್ಷೇಪ ಪ್ರಿಯಂಮಾಡಿಕೊಂಡು ಅಭಯಗಳನ್ನಿತ್ತು ಪ್ರಮಾಣಗಳಂ ಮಾಡಿ ದಾರಿ ಖರ್ಚಿಗೆ ಸಹ ಯೋಚಿತ ಧನವಂ ತೆಗೆದುಕೊಂಡು ಹಿಂದು ಸಹ ಕೇಳಲಿಕ್ಕಿಲ್ಲದಹಾಗೆ ಹೊರಟು ಹೋಗುವರು. ಇನ್ನು ಕೆಲವರು ಕೃತ್ರಿಮಗಳು ಪರರಂ ವಂಚಿಸುವದಕ್ಕಾಗಿ ದಿವ್ಯರೂಪ ಧನವು ಖರ್ಚುಮಾಡಿ ಬರಹಕ್ಕೆ ಅನ್ನಪಾನಾದಿ ತಾವು ಚೆನ್ನಾಗಿ ಜಪ್ತಿಸುತ ತಮ್ಮ ವೇಷಕ್ಕೆ ಯೋಗ್ಯ ಯುಂತಾ ದರಿದ್ರರಾದವರಿಗೆ ಪಾಡುಗಾರದ ರು ತಮ್ಮ ಬಳಿಗೆ ಬರುತಿದ್ದರೆ ಅವರಿಗೂ ಧನ ವಸ್ತ್ರಯ್ಯರ ಪ್ರಮಾಣ ಮಾಡುವರು. ಇದಂ ನೋಡಿ ಸಾಮಾನ್ಯರಾದ ಇಂತಾ ವಿರಕ್ತರಿಗೆ ಹಣವೆಲ್ಲಿಸಿಕ್ಕುವದು, ಇವರು ಒಬ್ಬರನ್ನೂ ಯಾಚಿಸುವದಿಲ್ಲವಲ್ಲಾ! ಆದುದರಿಂದ ಇವರಲ್ಲೇನೋ ವಿಶೇಷ ನಿರುತಿಕಂಡು, ದಿವ್ಯತ್ವಗಳಿಗೆ ತಾವೆ ಆರೋಪಿಸಿಕೊಂಡು ಆ ಮಂಚಕನಲ್ಲಿದ್ದ ದಮಾಸಾಕ್ಷ್ಯವನ್ನಾರೋಪಿಸಿ ತಮ್ಮ ಪರಿಚಯದಿಂದ ವಶಿಕರಣವೆ ಅವರ ಮಹಿಮೆಗಳಂ ವರ್ಣಿಸಲು ಕ್ರಮಿಸಲು ಅವರು ಬೇಗನೆ ಆ ಮೋಸಗಾರರಂ ಹುಡುಕಿಕೊಂಡು ಹೋಗುವರು. ಆಗ ಅವರು ಅಂತವರಂ ನೋಡುವದೇ ಇಲ್ಲವು. ಬಳಿಕ ಅವರಿಬ್ಬರಿಗೂ ವ್ಯಾಗಾದರೂ ಸಹಾಯವು ನ್ಯಾಯಾಗಿ ಅವರ ಕಷ್ಟವಾಗ್ಯಗಳಿಗೆ ಮರುಳಾಗಿ ಕನಸು ಯು ಮಾಡುತ್ತ, ಎಲ್ಲರೂ ಕಸುಕೊಂಡು ಆ ಮೋಸಗಾರರು ಕಣ್ಣುಮುಚ್ಚಿದಾದ ಬಳಿಕ ತಾವೂ ತಮ್ಮ ಕಣ್ಣುಗಳಂ ಬಿಡುವರು. ಇದಕ್ಕೆ ಪ್ರತ್ಯಕ್ಷ ತಲೆಯಿಂದಾ ನಿದರ್ಶನವು ಈಚೆಗೆ ಮೈಸೂರಲ್ಲಿ ನಡೆದಂತೆ ಈ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟದ್ದು ಆಲ್ಲದೆ ಒಬ್ಬ ಎಗ್ಜಿಕ್ಯೂಟಿವ್ ಇಂಜಿನಿಯರ ಸ್ಥಿತಿಯೇ ಸಾಕ್ಷಿಯಾಗಿರುತಿದೆ. ಇಂತಾ ಮೋಸಗಾರರ ಮೋಸಪ್ರಕಾರಗಳನ್ನೆಲ್ಲ ಕೇಳಿದರೆ ಬಹಳ ಆಶ್ಚರ್ಯವಾಗುತಿದೆ. ಕೇವಲ ಸುಳ್ಳುಮಾತ್ರದಿಂದಲೇ ಸುವರ್ಣವು ಮಾಡುತ್ತೇವೆಂದು ಬೆಸರಿಸ್ಕೊಂಡು ಒಂದು ಸ್ಥಳವಂ ಪ್ರವೇಶಿಸಿ ಅಲ್ಲಿ ಕೆಲವರು ದಮನೆ ಸಹಾಯಕರಾಗಿಟ್ಟುಕೊಂಡು ಭ್ರಾಂತರಿಗೆ ಬಗೆಬಗೆಯಾಗಿ ಮಾಯೆಗಳಂ ತೋರಿಸುತ ತಾವು ಯಾವದನ್ನು ಕೈಯಲ್ಲಿ ಮುಟ್ಟಿದರೂ ಅದ್ಯಾವುದು ರಂಡುಕಟ್ಟಿ ಪದಾರ್ಥಗಳಿಂದಲೇ ಚಿನ್ನವಾಗಿ ಯಾರನ್ನೆಯುಲ್ಲಾ ದರೂ ಮಾಡಿಸಿಬಿಡುತ್ತೇವೆಂದು ಹೇಳಿ ನಂಬಿಕೆ ಹುಟ್ಟುವಂಟುಮಾಡುತ್ತಾರೆ. ಇನ್ನು ಕೆಲವರು ದೇವೀ ಉಪಾಸಕರೆಂತಲೂ ತಮ್ಮ ದೇವತೆಯ ಪ್ರಭಾವದಿಂದ ಬಾಗಕವಾದ ಮಹಾನಿಧಿಗಳೆಲ್ಲವೂ ದೃಶ್ಯಗಳಾಗಿ ವಶ್ಯಗಳಾಗುವವೆಂತಲೂ ದೇವತಾರಾಧನದಿಂದಲೇ ಆಕೆ ಪ್ರಸನ್ನಳಾಗಬೇಕೆಂತಲೂ, ಅದಕ್ಕೆ ಸುರಾಭಾಂಡಾದಿ ಪದಾರ್ಥಗಳು ಆವಶ್ಯಕವೆಂತಲೂ ಹೇಳಿ ಬೇಕಾದವು ತರಿಸಿಕೊಂಡು ಅವು ತಾವು ಸ್ವತಃ ಉಪಯೋಗಿಸಿಕೊಂಡು, ಅದರ ಮತ್ತತೆಯಿಂದ ಆವೇಶ ಬಂದವರಂತೆ ನಟಿಸುತ ಇನ್ನೂ ವಿಶೇಷ ಪದಾರ್ಥಗಳಿಗೆ ಅಸ್ತಿಭಾರ ಹಾಕುತ, ನರಬಲಿ ಮೊದಲಾದವು ಕೇಳುವಂತೆ ನುಡಿದು ಮೋಹಗೊಳಿಸುತ್ತಾರೆ. ಅರ್ಥಾತುರರಾದವರು ಅವರ ಸಹಾಯದಿಂ ಕೊಲೆ ಮೊದಲಾದವು ಮಾಡಲುಪಕ್ರಮಿಸುತ್ತಾರೆ. ಇಂತವುಗಳಿಗೆ ಅನೇಕ ದೃಷ್ಟಾಂತಗಳಿವೆ ಕೆಲವರು ಧನಿಕರಾಗಿಯೂ ರಸವಾದದ ಹಲರಾಗಿಯೂ ಇರುವವರ ಬಳಿಕೇರಿ ಅವರಿಗೆ ತಮ್ಮಲು ಪ್ರತ್ಯಯವಂ ಹುಟ್ಟಿಸಿಕೊಳ್ಳುವದಕ್ಕೆ ತಕ್ಕಂತೆಲ್ಲ ವೇಷ ಹಾಕಿಕೊಂಡು ಒಂದಕ್ಕೆ ಹತ್ತರಷ್ಟು ಧನವು ಸಂಪಾದಿಸಿ ಕೊಡುತ್ತೇವೆಂದು ನುಡಿದು ಅದರಿಂದ ಮೊದಲು ಒಂದೆರಡು ರೂಪಾಯಿಗಳಂ ತೆಗೆದುಕೊಂಡು ಅದಕ್ಕೆ ಪ್ರತಿಯಾಗಿ ೨೦–೩೦ ರೂಪಾಯಿಗಳಂ ಅವರಿಗೆ ತೋರಿಸುತ ನಂಬಿಕೆಯನ್ನುಂಟುಮಾಡುತ್ತಾರೆ. ಇದಕ್ಕೆ ಭ್ರಾಂತರಾಗಿ ಕೆಲವರು ನೂರಾರು ರೂಪಾಯಿಗಳನ್ನು ಕೊಡಲುಪಕ್ರಮಿಸಲು ಅವರು ಎಲ್ಲವಂ ಸುಲಿದುಕೊಂಡು ಪತ್ತೆಯಿಲ್ಲದೆ ಹೇಳದೆ ಕೇಳದೆ ಹೊರಟುಹೋಗುತ್ತಾರೆ. ಈಗ್ಗೆ ಕೆಲವು ವರುಷಗಳ ಹಿಂದೆ ಇಲ್ಲಿನ ಸರ್ಕಾರ್ ಛತ್ರದಲ್ಲಿ ಬಂದು ಇದ್ದು ಲಕ್ಷೆಕರಿಗೆ ಮೋಸವಾದದ್ದು ಓದಿದವರೆಲ್ಲರ ಜ್ಞಾಪಕದೊಳಿರಬಹುದು. ಈ ಮೇರೆ ಎಷ್ಟೋ ಬಗೆಯಾದ ಮೋಸಗಳಿಂದ ಭ್ರಾಂತರಂ ಕೆಡಿಸಿ ಅನೇಕರು ಜೀವನ ಮಾಡುವದಕ್ಕಾಗಿ ಉಪಜೀವನಕಾರಿಗಳಾಗಿ ಗುಂಪು ಕಟ್ಟಿಕೊಂಡು ದೇಶದೇಶದಲ್ಲಿಯೂ ಸಂಚರಿಸುತ್ತಾರೆ. ಈ ಪ್ರಾಂತ್ಯದಲ್ಲಿ ಇಂತವರ ಗುಂಪು ಅಗಿಂದಾಗ್ಯೆ ಬಹಳವಾಗಿ ಬರುತಲಿರುತಿವೆ. ಲೋಕದಲ್ಲಿ ನಾವು ಪದಾರ್ಥದೊಳು ಎಂತಾ ಶಕ್ತಿ ಇರುವದೋ ಅದಂ ಹೇಳುವದಕ್ಕಾಗುವದಿಲ್ಲವು ಅಂತಾ ಪದಾರ್ಥ ತತ್ವವಿವೇಚಕರು ಹೇಳುವ ಮಾತು ಅತಿದುರ್ಲಭವು ಅಂತಾ ಶಕ್ತಿಯುಕ್ತನಾದ ಪುರುಷನು ತನ್ನ ವಿದ್ಯೆಯಂ ಅನ್ಯರಿಗೆ ಪ್ರಯೋಜನಪಡುವಂತೆ ಉಪಯೋಗಿಸದೆ ಸ್ವಾರ್ಥ ಪ್ರಯೋಜನಕ್ಕಾಗಿ ಹೀನಾಯದ ಮಾಡುತ ನಾನಾ ಕಷ್ಟಗಳಿಗೆ ಗುರಿಯಾಗಿ ಸಂಕಟಪಡುವ ಲೋಕದೊಳಗೆಲ್ಲರಿಗಿಂತ ಹೀನಾದರೂ ಏಕೆ ಭಾಗ್ಯವಂತನಾಗಬಾರದು? ಆ ವಿದ್ಯೆಯಂ ತಿಳಿದವರು ಸ್ವೇಚ್ಛೆಯಾಗಿ ಬೇಕಾದಷ್ಟು ಸುವರ್ಣ ಮಾಡಲು ಶಕ್ತರಾಗಿದ್ದರೂ ಜೀವನೋಪಯುಕ್ತವಾಗಿ ಸ್ವಲ್ಪವೇ ಮಾಡಿಕೊಳ್ಳುವೆವೆಂದರೂ ಬಂದು ನಿಮ್ಮ ನಿದ್ದರೆ ಇತರ ಉಪಾಯಗಳಿಂದ ಹಣಸಂಪಾದಿಸುವದಕ್ಕೆ ಪ್ರಯತ್ನಿಸಬೇಕಿಲ್ಲ. ಆ ವಿಷಯವನ್ನು ತಿಳಿಸದೆ ಇರುವದರಿಂದ ಅವರು ನಿರ್ಭಾಗ್ಯರಾಗಿ ಪ್ರತ್ಯಕ್ಷವಾಗಿ ಅನೇಕರಿಗೆ ಮೋಸಮಾಡುವವರಾಗಿರುವರು. ಆದುದರಿಂದ ನಮ್ಮ ಅಭಿಪ್ರಾಯವೇನೆಂದರೆ ಅಂತಾ ವಿದ್ಯೆಯು ಈ ಲೋಕದಲ್ಲಿ ಇದ್ದರೂ ಇದ್ದಿರಬಹುದು. ಅದನ್ನು ಅರಿತವರಿಗೆ ಅದು ಅನ್ಯರಿಗೆ ತಿಳಿಸಬೇಕೆಂಬ ಆವಶ್ಯಕತೆ ಇರುವದಿಲ್ಲವು, ಮತ್ತು ಅಂಥವರು ಉಪಕಾರಿಗಳೂ ಆಗಿರುವದಿಲ್ಲವು. ಭ್ರಾಂತರಾದವರು ಲೋಭಗುಣವಾಗಿ ಎಲ್ಲರೂ ಅಂತಾ ವಿದ್ಯೆಯನ್ನು ತಿಳಿದಿರುವರೆಂದು ಭ್ರಮಿಸಿ ಅವರು ಅನ್ಯರ ವಶಕ್ಕೆ ಸಿಕ್ಕಿ ಸರ್ವ ನಾಶವನ್ನೂ ಹೊಂದುವರಾಗುವರು ಹೋಗುವರು. ಹೀಗಿರುವದರಿಂದ ಜನಗಳು ಹೊಳೆಯುವವನ್ನೆಲ್ಲ ಬಂಗಾರವೆಂದು ಭ್ರಾಂತಿಗೊಳ್ಳದೆ ಜಾಗರೂಕರಾಗಿರುತ, ಹೊಟ್ಟೆಪಾಡಿಗಾಗಿ ತಿರುಗುವ ವೈರಾಗಿಗಳು ಯಾವ ಮಾತುಗಳನ್ನಾಡಿದರೂ, ಯಾವ ಬಗೆಯ ಮಾಯೆಗಳನ್ನೂ, ಎಷ್ಟು ನಿದರ್ಶನಗಳಂ ತೋರಿಸಿದರೂ, ಹೊಸ್ಸು ಅನುಭವವನ್ನುಂಟುಮಾಡಿದರೂ, ಅವುಗಳೆಲ್ಲವು ನಿಜವೆಂದು ನಂಬಿ ಮೋಸಹೋಗದೇ ಎಚ್ಚರಿಕೆಯಾಗಿರಬೇಕೆಂದು ಕೋರುತ್ತೇವೆ. ಮುಖ್ಯವಾಗಿ ಮನುಷ್ಯನಿಗೆ ಲಭಿಸುವ ಫಲಾಫಲಗಳೂ ಸುಖದುಃಖಗಳೂ ಅವನವನ ಕರ್ಮಾನುಗುಣವಾದವಾಗಿರುವವೇ ಹೊರ್ತು ಜನನ ಕಾಲದಲ್ಲಿ ಸಂಕಲ್ಪಿತವಾದುದಕ್ಕಿಂತ ಅನ್ಯತರವಾಗಿ ಅಣುಮಾತ್ರವೂ ಲಭಿಸಲಾರದು. ಸಕಲ ಪುರುಷಪ್ರಯತ್ನಗಳೂ ಸಕಲರ ಬುದ್ಧಿ ಯುಕ್ತಿ ಸಾಮರ್ಥ್ಯಗಳೂ ದುರೂಹವಾದ ಅಂತಾ ಕರ್ಮವನ್ನನುಸರಿಸಿರುವವಲ್ಲದೆ ಅನ್ಯಥಾ ಮೀರಲಾರವು. ಸದರೀ ಕರ್ಮವು ಅವಶ್ಯಮನುಭೋಕ್ತವ್ಯವಾಗಿಯೂ ಅನಿವಾರ್ಯವಾಗಿಯೂ ಪ್ರಯಾಸಸಾಧ್ಯವಾದುದಾಗಿಯೂ ಇರುತಿದೆ.

# Occasional Notes
## ನೈಮಿತ್ತಿಕ ವಿಷಯನ್ಯಾಸ.

ಘನವಂ ಹೊಂದಿದ ಕೊಚ್ಚಿ ಅರಸರವರು ಕಳೆದ ಶನಿವಾರದ ದಿನ ಕಲ್ಕತ್ತೆ ಸೇರಿದರು.

ಕಾಶ್ಮೀರ ಮಹಾರಾಜರವರು ತಮ್ಮ ಸಂಸ್ಥಾನದಲ್ಲಿರುವ ಬ್ರಾಹ್ಮಣರಿಂದ ಬಿಟ್ಟ ಕೆಲಸಗಳು ಮಾಡಿಸಕೂಡದೆಂದು ಹುಕುಂಕೊಟ್ಟಿರುತ್ತಾರೆ. ಈ ಕಾಲದಲ್ಲಿ ಬ್ರಾಹ್ಮಣಾಭಿಮಾನವಿರುವವನ್ನೂ ಅದಂ ಉಚಿತ ಸಮಯಗಳಲ್ಲಿ ವ್ಯಕ್ತಪಡಿಸುವವನ್ನೂ ಬಹಳ ಆಶ್ಚರ್ಯಪಡತಕ್ಕವಾಗಿರುತಿವೆ.

ಪಟಿಯಾಲ ಸಂಸ್ಥಾನದ ಸಾಹೇಬ ಮಹಾರಾಜರವರ ಸಹೋದರರಾದ ಕೇಸರಜಿತ್ ಸಿಂಗ್ ಮತ್ತು ಪಕ್ತಾಸಿಂಗ್ ಎಂಬವರಿಬ್ಬರು ಇದುವರೆವಿಗೆ ಕ್ಯಾಕ್ತಯೊಳಗಿದ್ದರಷ್ಟೆ. ಈಚೆಗೆ ಇಂಡಿಯಾ ಗವರ್ನಮೆಂಟಿನಿಂದ ಕೊಡಲ್ಪಟ್ಟ ಹುಕುಂ ಅನುಸರಿಸಿ, ಸದರೀ ಇಬ್ಬರೂ ಮಾಹೆಯಾನಾ ಒಬ್ಬೊಬ್ಬರಿಗೆ ೧೦೦ ರೂಪಾಯಿಗಳ ಉಂಬಳಿಯೊಡನೆ ಬೃಂದಾವನದಲ್ಲಿ ವಾಸ ಮಾಡುವಂತೆ ಅಲ್ಲಿಗೆ ಕಳುಹಿಸಲ್ಪಟ್ಟಿರುತ್ತಾರೆ.

ರೈತರ ಸಾಲಕ್ಕಾಗಿ ಅವರಿಗೆ ಸಂಬಂಧಪಟ್ಟ ಗೊಬ್ಬರ, ಕರೆಯುವ ಹಸುಗಳು, ಮರಿಗಳು ಕೊಡುವದಕ್ಕೆ ಲಾಯಕ್ಕಾದ ಹೆಣ್ಣು ಕುದುರೆಗಳು, ಇವುಗಳನ್ನು ಜಪ್ತಿ ಮೂಲಕ ಡಿಕ್ರಿ ಜಾರಿ ಮಾಡುವದರಿಂದ ಪರಿಹರಿಸಬೇಕಾದ ವಿಷಯದಲ್ಲಿ ಆ ಬಗ್ಗೆ ಒಂದು ಕಾನೂನನ್ನು ಮದರಾಸ್ ಪ್ರೆಸಿಡೆನ್ಸಿಗೆ ಮಾಡಬೇಕಾದ ಆವಶ್ಯಕತೆಯು ಇರುವದಿಲ್ಲವೆಂದು ಅಲ್ಲಿನ ರೆವಿನ್ಯೂ ಬೋರ್ಡ್ ಅಗ್ರಿಕಲ್ಚರಲ್ ಇಲಾಖೆಯವರು ಕೊಟ್ಟ ಅಭಿಪ್ರಾಯವನ್ನು ಮದರಾಸ್ ಗವರ್ನಮೆಂಟಿನವರು ಒಪ್ಪಿರುತ್ತಾರೆ.

ಪೂರ್ವಸಮುದ್ರತೀರ ಮಾರ್ಗದಲ್ಲಿ ಹಾಕಲ್ಪಡುತಿರುವ ರೈಲ್ ರಸ್ತೆಯು ಪ್ರಕೃತ ಬೆಜವಾಡಾ ಗೋದಾವರೀ ನಡುವಣ ಕಾಮಗಾರಿ ಪೂರ್ತಿಯಾಗಿ ಬರುವ ಮಾರ್ಚಿ ೧೪ ನೇ ತಾರೀಖಿನಲ್ಲಿ ಜನಗಳ ಸಂಚಾರಕ್ಕೂ ಸರಕುಗಳ ಆಮದು ರಪ್ತುಗಳಿಗೂ ಗಾಡಿಗಳಂ ನಡೆಸುವದಕ್ಕೆ ಸಿದ್ಧವಾಗಿರುವದರಿಂದ ಆದಿನ ಮದರಾಸ್ ಗವರ್ನರ್ ಪ್ರಭುಗಳಾದವರು ಅಲ್ಲಿಗೆ ಹೋಗುತ್ತಾರಾಗಿ ಸದರೀ ವಿಶೇಷ ಸಂದರ್ಭದ ಖರ್ಚಿನ ಬಗ್ಗೆ ೭೦೦೦ ರೂಪಾಯಿಗಳು ಖರ್ಚು ಮಾಡುವ ವಿಷಯದಲ್ಲಿ ಇಂಡಿಯಾ ಗವರ್ನಮೆಂಟಿನವರು ಮಂಜೂರ್ ಮಾಡಿರುತ್ತಾರೆ.

ಕಾನ್ಪುರದಲ್ಲಿ ಸ್ಥಾಪಿಸಲ್ಪಟ್ಟಿರುವ ದಮೋ ನಿಯಸ್ ಬ್ರುಷ್ ಫ್ಯಾಕ್ಟರಿ ಎಂಬ ಕಾರ್ಖಾನೆಯಲ್ಲಿ ರೆಡಿಮಾಡಲ್ಪಟ್ಟ ಅನೇಕ ತರಹ ಬ್ರಷುಗಳಂ ಆಪರೀಕ್ಷೆ ಮಾಡಿದ್ದರಲ್ಲಿ ಅವು ಇಂಗ್ಲಾಂಡ್ ದೇಶದಿಂದ ಬರುವ ಸಾಮಾನುಗಳಿಗೆ ಸರಿಯಾಗುವ ಬ್ರಷುಗಳಿಗೆ ಯಲ್ಲ ಭಾಗದಲ್ಲೂ ಸಮಾನವಾಗಿರುವದಲ್ಲದೆ ಬೆಲೆಯು ಸುಲಭವಾಗಿರುವಂತೆ ಲಿಕ್ಷಿಟೆನಂಟ್ ಗವರ್ನರ್‌ರು, ಆವಶ್ಯಕವಾದ ಸಂದರ್ಭಗಳಲ್ಲಿ ಸದರಿ ಕಾರ್ಖಾನೆಯಿಂದಲೇ ಬ್ರಷುಗಳನ್ನು ಕೊಂಡು ಕೊಳ್ಳತಕ್ಕದ್ದೆಂದು ಬ್ರಿಟಿಷ್ ಸೈನ್ಯಗಳ ಕಮಾಂಡಿಂಗ್ ಆಫೀಸರ್‌ಗಳಿಗೆ ಗವರ್ನಮೆಂಟಿನವರು ಶಿಫಾರಸ್ಸು ಮಾಡಿರುತ್ತಾರೆ.

ಇಂಡ್ಯಾರಾಜ್ಯದ ಈಗಿನ ವೈಸ್‌ರಾಯ್ ಯವರಾದ ಲಾರ್ಡ್ ಲ್ಯಾನ್ಸ್‌ಡೌನ್ ಸಾಹೇಬರವರ ಅಧಿಕಾರ ಕಾಲವು ಪೂರ್ತಿಯಾಗಿ ಅವರ ಸ್ಥಾನಕ್ಕೆ ಬೇರೊಬ್ಬರನ್ನು ನಿಯಮಿಸಬೇಕಾದ ಕಾಲ ಪ್ರಾಪ್ತವಾಗುವ ತನಕ ಮಿ॥ ಗ್ಲಾಡ್‌ಸ್ಟನ್ ಯವರು ಪ್ರಕೃತ ಪದವಿಯಲ್ಲಿರುವ ಪಕ್ಷಕ್ಕೆ ಮಹಾರಾಜ್ಞೀಯವರ ಮೂರನೇ ಕುಮಾರರಾದ ಡ್ಯೂಕ್ ಆಫ್ ಕನಾಟ್ ರವರನ್ನು ಇಂಡ್ಯಾ ರಾಜ್ಯದ ವೈಸ್‌ರಾಯ್‌ರವರಾಗಿ ನೇಮಿಸಲ್ಪಡುವರೆಂದು ಇಂಗ್ಲಾಂಡ್ ದೇಶದ ಸರ್ಕಾರೀ ಆವರಣಗಳಲ್ಲಿ ಪ್ರವೇಶವುಳ್ಳ ಒಬ್ಬ ದೊಡ್ಡಮನುಷ್ಯರು ಅಭಿಪ್ರಾಯಪಡುತ್ತಾರೆಂದು ವೃತ್ತಾಂತ ಪತ್ರಿಕೆಗಳು ಪ್ರಕಟಿಸುತಿವೆ

# LOCAL AND PROVINCIAL NEWS.
## ಒಳದೇಶಮತ್ತುತಾಲ್ಲೂಕ್‌ಜಾತಿವೃತ್ತಾಂತಗಳು.

ನಾಳೆಮುದಿರ ಶ್ರೀಮನ್ಮಹಾರಾಜರವರ ವರ್ಷವರ್ಧಂತಿ ಉತ್ಸವದ ಬಗ್ಗೆ ಈ ಸಂಸ್ಥಾನದ ವಿಶಿಷ್ಟ ಇಲಾಖೆಗಳಿಗೂ ರಜಾ ಕೊಡಲ್ಪಡುತ್ತದೆ.

ಈ ಸಂಸ್ಥಾನದ ದಿವಾನರವರು ತಮ್ಮ ಸರ್ಕ್ಯೂಟಿನಿಂದ ಕಳೆದ ಬೃಹಸ್ಪತಿ ವಾರ ಈ ಪ್ರಾಂತಿಗೆ ಬಂದು ಶ್ರೀಮನ್ಮಹಾರಾಜರವರ ವರ್ಷವರ್ಧಂತಿ ಮಹೋತ್ಸವಾರ್ಥ ನಿನ್ನೆಯ ದಿನ ಮಧ್ಯಾಹ್ನೋತ್ತರ ಮೈಸೂರಿಗೆ ದಯಮಾಡಿದರು.

ಇಲ್ಲಿನ ರೆಸಿಡೆಂಟರಾದ ಕರ್ನಲ್ ಹೆಂಡರ್ಸನ್ ಸಾಹೇಬರವರು ಈಗ ಕೊಡಗು ಪ್ರಾಂತದಲ್ಲಿ ಸರ್ಕ್ಯೂಟಿನಲ್ಲಿರುತ್ತಾರೆ ಯಷ್ಟೆ. ಸದರೀ ಯವರು ಇನ್ನು ಸ್ವಲ್ಪ ದಿನಗಳಲ್ಲಿ ಇಲ್ಲಿಗೆ ವಾಪಸ್ ಬಂದು ಸೇರುವರೆಂದು ಕೇಳುತ್ತೇವೆ.

ಬರುವ ಮಂಗಳವಾರ ಶ್ರೀಮನ್ಮಹಾರಾಜ ರಾಜಾಸಾಹೇಬ ಬಹದೂರವರ ವರ್ಷವರ್ಧಂತಿ ಉತ್ಸವವಾದುದರಿಂದ ಆ ಬಗ್ಗೆ ಚೀಫ್‌ಕೋರ್ಟ್ ಜಡ್ಜಿಗಳು, ಆಯಾ ಇಲಾಖಾ ಸೆಕ್ರೆಟರಿಗಳು, ಇನ್‌ಸ್ಪೆಕ್ಟರ್ ಜನರಲ್‌ಗಳು ಮೊದಲಾದವರು ನಿನ್ನೆಯದಿನ ರಾಜಧಾನಿಗೆ ಪ್ರಯಾಣಮಾಡಿದರು.

ಈ ಸಂವತ್ಸರದಲ್ಲಿ ಶ್ರೀಮನ್ಮಹಾರಾಜ ರಾಜಾ ಸಾಹೇಬ ಬಹದೂರವರು ಇಂಗ್ಲಾಂಡಿಗೆ ದಯಮಾಡುವರೆಂದು ಮಹಾರಾಜ್ಞೀ ಇಂಡ್ಯಾ ಚಕ್ರವರ್ತಿನೀಯವರ ಅರಮನೆಯ ವೃತ್ತಾಂತಪತ್ರಿಕೆ ತಿಳಿಸುತಿದೆ. ಈ ವರ್ತಮಾನವು ಸುತರಾಂ ಅಪ್ರಕೃತವೆನ್ನಬಹುದೆಂದು ಹೇಳುವದಕ್ಕಾಗುವದಿಲ್ಲವು.

ಇಲ್ಲಿನ ಚೀಫ್‌ಕೋರ್ಟ್ ಮೂರನೇ ಜಡ್ಜಿಯವರಾದ ಮಿ॥ ಪಿ. ಎನ್. ಕೃಷ್ಣಮೂರ್ತಿಯವರು ಶೀಘ್ರದಲ್ಲಿ ಮೂರು ತಿಂಗಳ ರಜಾ ಪಡೆದುಕೊಂಡು ತಮ್ಮ ಜಹಗೀರ್ ವಿಚಾರಣೆಗೆ ಹೋಗುವರೆಂತಲೂ, ಅವರ ಕೆಲಸವು ಬದಲೀ ನೋಡುವಂತೆ ಮಿ॥ ಮೀನಾಕ್ಷಿ ಅಯ್ಯರವರು ನಿಯಮಿಸಲ್ಪಡುವರೆಂತಲೂ ಕೇಳುತ್ತೇವೆ.

ಹವಾವಿಷಯದಲ್ಲಿ ಗತವಾರಕ್ಕಿಂತ ಅಧಿಕಾಂಶ ವಿಲ್ಲದಿದ್ದಾಗ್ಯೂ ರಾತ್ರಿ ಕಾಲದಲ್ಲಿ ಚಳಿ ಕಡಮೆಯಾಗುತಲಿರಲು ದಿನೇದಿನೆ ಚುರುಕಾಗುತಲಿದೆ. ಆಹಾರ ಪದಾರ್ಥಗಳ ಧಾರಣೆಗಳು ಬಹಳಾಗಿ ಏರಿದ್ದೇ ವಿಧವಾಗಿವೆ. ಇದು ಸುಗ್ಗಿ ಕಾಲವಾಗಿರುವದರಿಂದ ಸಾಧಾರಣವಾಗಿ ಈ ಕಾಲದೊಳಗೆ ಏರಾದ ಧಾರಣೆಗಳಿಗಿಂತಲೂ ಸೇಕಡ ನಾಲ್ಕೈದು ರೂಪಾಯಿಗಳಿಗಿಂತಲು ಜಾಸ್ತಿಯಾಗಿವೆಯೆಂದು ಹೇಳಬೇಕಾಗಿದೆ. ಜಲಾಭಾವವು ದಿನೇದಿನೆ ಅಧಿಕವಾಗುವ ಪ್ರಜೆಗಳು ಬಹಳ ಕಷ್ಟಕ್ಕೆ ಗುರಿಯಾಗಿರುತ್ತಾರೆ. ಈ ಸಂಕಟ ಪರಿಹಾರದ ಬಗ್ಗೆ ದಾಕ್ಷಿಣ್ಯರಹಿತವಾದ ಯೋಚನೆಗಳಿಲ್ಲದೆ ಶಾಶ್ವತವಾಗಿ ಈ ಪಟ್ಟಣ ನಿವಾಸಿಗಳಿಗೆ ಜಲಸೌಖ್ಯವನ್ನುಂಟುಮಾಡುವದರಲ್ಲಿ ದಿವಾನರವರು ಒಳ್ಳೆಸಂಕಲ್ಪ ನಿಷ್ಠರಾಗಿ ಕ್ರಮಿಸುತಲಿರುವಂತೆ ಕೇಳುವದಕ್ಕೆ ಸಂತೋಷಪಡುತ್ತೇವೆ.

ಮುಜರಾಯಿ ಇಲಾಖಾ ಸೂಪರಿಂಟೆಂಡೆಂಟರವರ ಇನ್ಸ್‌ಪೆಕ್ಷನ್ ರಿಪೋರ್ಟ್.

೧೮೯೩ನೇ ಇಸವಿ ಫೆಬ್ರವರಿ ತಿಂಗಳು ೭–೮ ಈ ಎರಡು ತಾರೀಖುಗಳಲ್ಲಿ ಬೆಂಗಳೂರು ಡಿಸ್ಟ್ರಿಕ್ಟಿಗೆ ಸೇರಿದ ಕಸಬಾ ದೊಡ್ಡಬಳ್ಳಾಪುರದಲ್ಲಿರುವ ಈ ಕೆಳಗೆ ನಮೂದಿಸುವ ದೇವಸ್ಥಾನಗಳು ಮತ್ತು ಘಾಟಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನವು ಸಹ ದರ್ಶಿಸಲ್ಪಟ್ಟವು.

ಚಂದ್ರಮೌಳೀಶ್ವರ ಸ್ವಾಮಿ.
ವೆಂಕಟರಮಣಸ್ವಾಮಿ.
ಜನಾರ್ದನ ಸ್ವಾಮಿ.
ಸ್ವಯಂಭೂಶ್ವರ ಸ್ವಾಮಿ.
ಕಸಬಾ ಆಂಜನೇಯಸ್ವಾಮಿ.
ಕಸಬಾ ಗೋಪಾಲಸ್ವಾಮಿ.
ಕಿಲ್ಲೇ ಗೋಪಾಲಸ್ವಾಮಿ.
ಕಿಲ್ಲೇಬಾಗಲು ಆಂಜನೇಯ ಸ್ವಾಮಿ.

೧. ಚಂದ್ರಮೌಳೀಶ್ವರಸ್ವಾಮಿ ಮತ್ತು ವೆಂಕಟರಮಣಸ್ವಾಮಿ ಈ ದೇವಸ್ಥಾನಗಳ ಧರ್ಮಕರ್ತರಾದ ಶ್ರೀನಿವಾಸಮೂರ್ತಿಯೆಂಬವರು, ಸದರೀ ದೇವಸ್ಥಾನಗಳಿಗೆ ಸರ್ಕಾರದಿಂದ ಸಲ್ಲತಕ್ಕ ನಗದು ತೊಬಲಗನ್ನೂ ಭೂ ಮೂಲಕವಾಗಿ ಆಗುವ ಹುಟ್ಟುವಳಿಯನ್ನೂ ದುರ್ವಿನಿಯೋಗ ಪಡಿಸುತ್ತಾರೆಂತಲೂ, ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಪೂರ್ವದಲ್ಲಿದ್ದ ಒಂದು ಪರಿಚಾರಕ ಇನಂ ಖಾತಿಯಾಗಿ ಅನೇಕ ಸಂವತ್ಸರಗಳಾದಾಗ್ಯೂ ಸದರೀ ಖಾತಿ ಇನಮಿನ ತಲಬು ಆ ಲಾಗಾಯಿತು ಕ್ರಮವಾಗಿ ವಿನಿಯೋಗವಾಗುವದಿಲ್ಲವೆಂತಲೂ,

ಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನದ ಧರ್ಮಕರ್ತರಾಗಿರುವ ಸದಾಶಿವರಾಯರು, ಸುಬ್ರಹ್ಮಣ್ಯ ಷಷ್ಠೀ ಮಹೋತ್ಸವ ಕಾಲದಲ್ಲಿ ದೇವಸ್ಥಾನದೊಳು ಸಂತರ್ಪಣೆ ನಡೆಸತಕ್ಕದ್ದಕ್ಕಾಗಿ ಸಾಲೀಯಾನಾ ಸರ್ಕಾರದಿಂದ ಕೊಡಲ್ಪಡುವ ಮುನ್ನೂರು ರೂಪಾಯಿಗಳನ್ನು ಸಂತರ್ಪಣೆಗೆ ಸರಿಯಾಗಿ ವಿನಿಯೋಗಿಸುವದಿಲ್ಲವೆಂತಲೂ,

ಜನಾರ್ದನಸ್ವಾಮಿ ದೇವಸ್ಥಾನದಲ್ಲಿ ಹಾಲಿ ಧರ್ಮಕರ್ತನಾಗಿರುವ ವೈದ್ಯ ವೆಂಕಟಸುಬ್ಬಯ್ಯ, ಸದರಿ ಗ್ರಾಮಸ್ಥರಾದ ವೈಶ್ಯರಲ್ಲಿ ಈಚೆಗೆ ಉಂಟಾಗಿರುವ ಎರಡು ಸಂಘಗಳಲ್ಲೊಂದಿಂದು ಸಂಘದವರಲ್ಲಿ ಸೇರಿಕೊಂಡು ಇತರ ಸಂಘದವರಿಗೆ ವಿರುದ್ಧವಾದ ಕಾರ್ಯಗಳನು ಆಚರಿಸುತಲಿರುವದಾಗಿಯೂ, ಜನಗಳ ಫಿರ್ಯಾದಿನಿಂದ ತಿಳಿಯಬಂತು. ಮೇಲ್ಕಂಡ ದೇವಸ್ಥಾನಗಳಲ್ಲಿ ಒಬ್ಬೊಬ್ಬನೇ ಧರ್ಮಕರ್ತನಾಗಿರುವದರಿಂದ ಈ ದೋಷಗಳಿಗೂ ಮತ್ತು ಅವರಿಂದ ಜನಗಳ ಫಿರ್ಯಾದುಗಳಿಗೂ, ಅವಕಾಶ ಉಂಟಾದ ಹಾಗೆ ತೋರುತಿದೆ. ಇದನ್ನು ತಪ್ಪಿಸಬೇಕಾಗಿದ್ದರೆ ಮೈಸೂರು, ಮೇಲುಕೋಟೆ, ಶ್ರೀರಂಗಪಟ್ಟಣ ಈ ಸ್ಥಳಗಳಲ್ಲಿ ಏರ್ಪಟ್ಟಂತೆ, ಸ್ಥಳವಾಸಿಗಳಾಗಿಯೂ, ಪ್ರಾಮಾಣಿಕರಾಗಿಯೂ, ಇರುವ ಬೇರೆ ಕೆಲವರನ್ನು ಇವರ ಜೊತೆಗೆ ಸೇರಿಸಿ ಒಟ್ಟಾಗಿ ಇವರೆಲ್ಲರನ್ನು ಧರ್ಮದರ್ಶಿಗಳನ್ನಾಗಿ ಏರ್ಪಡಿಸಿದರೆ ದೇವಸ್ಥಾನದ ಸೇವಾದಿ ಕಾರ್ಯಗಳು ನಿರಾಕ್ಷೇಪಣೀಯವಾಗಿ ನಡೆಯುವವೆಂದು ಆಲೋಚಿಸಿ, ಸ್ಥಳವಾಸಿಗಳ ವಿಚಾರಪೂರ್ವಕವಾಗಿ ಈ ಕೆಳಗೆ ನಮೂದಿಸಲ್ಪಡುವವರನ್ನು ಧರ್ಮದರ್ಶಿಗಳನ್ನಾಗಿ ಏರ್ಪಡಿಸುವ ವಿಷಯದಲ್ಲಿ ಡೆಪ್ಯುಟಿಕಮಿಷನರಿಗೆ ಆಲೋಚಿಸಿ ಬರೆಸಿರುತ್ತೆ.

(೧) ಸದಾಶಿವ ರಾಯರು.
(೨) ಶ್ರೀನಿವಾಸ ಮೂರ್ತಿಗಳು.
(೩) ವೈದ್ಯ ವೆಂಕಟಸುಬ್ಬಯ್ಯನವರು.
(೪) ರುಮಾಲೆ ರುದ್ರಪ್ಪನವರು.
(೫) ಕೃಷ್ಣಣ್ಣಶೆಟ್ಟರು.
(೬) ಕೆಂಪಾಡಿಯಪ್ಪನವರು.

೨ ಮೇಲೆಕಂಡ ದೇವಸ್ಥಾನಗಳಲ್ಲಿ ಅನೇಕ ಕಡೆ ಬಹಳ ಗಲೀಜಾಗಿಯೂ, ಒಳಭಾಗದಲ್ಲಿ ಪ್ರಾಯಶಃ ಕತ್ತಲೆಯಾಗಿಯೂ ಇದ್ದದ್ದರಿಂದ, ಮುಂದೆ ಪೇಕ್ ಮಾಡುವ ವಿಷಯವಲ್ಲಿಯೂ, ಮತ್ತು ಕತ್ತಲೆಯಾಗಿರುವ ಜಾಗಾಗಳಲ್ಲಿ ಕಿಟಕಿಗಳನ್ನು ಇಡುವ ವಿಷಯದಲ್ಲಿಯೂ, ಆ ಕಾಲದಲ್ಲಿ ಹಾಜರಿದ್ದ ತಾಲ್ಲೂಕ್ ಶಿರಸ್ತೇದಾರರಿಗೂ ಮತ್ತು ಅಸಿಸ್ಟೆಂಟ್ ಕಮಿಷನರ್ ಮ|| ಕುಪ್ಪುಸಾಮಿ ನಾಯುಡು ಯವರಿಗೂ ರೂಬರೂಬು ತಿಳಿಸಿ ಇದೆ. ಈ ಕೆಲಸಗಳನ್ನು ಕ್ಷಿಪ್ರದಲ್ಲಿಯೇ ನೆರವೇರಿಸುವದಕ್ಕೆ ತಕ್ಕ ಏರ್ಪಾಟು ಮಾಡುವ ವಿಷಯದಲ್ಲಿ ಡೆಪ್ಯುಟಿಕಮಿಷನರವರಿಗೆ ಆಲೋಚಿಸಿ ಬರೆಸಲ್ಪಡುತ್ತೆ.

೩. ದೇವಸ್ಥಾನಗಳಲ್ಲಿ ದೇವರ ಸನ್ನಿಧಿಯಲ್ಲಿ ವಾಹನಗಳೂ, ಅನಾವಶ್ಯಕವಾದ ಕೆಲವು ಸಾಮಾನುಗಳೂ ಹಾಕಲ್ಪಟ್ಟಿರುವದನ್ನ ತೆಗಿಸಿ, ದೇವಸ್ಥಾನದ ಹೊರಗಿನ ಪ್ರಾಕಾರಕ್ಕೆ ಒಳಪಟ್ಟ ಪ್ರತ್ಯೇಕ ಸ್ಥಳದಲ್ಲಿ ಇಡಿಸಬೇಕು.

೪. ಸ್ವಯಂಭೂಶ್ವರಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿರುವ ಮಣ್ಣು ಮಾಳಿಗೆಗಳಿಂದಲೂ ಈಚೆಗೆ ಹೊಸದಾಗಿ ಕಟ್ಟಲ್ಪಟ್ಟ ಮಂಟಪಗಳಿಂದಲೂ ದೇವಸ್ಥಾನದ ಸೌಂದರ್ಯವೇ ಕೆಟ್ಟು ಹೋಗಿರುತ್ತೆ. ಸದರೀ ಮಂಟಪಗಳನ್ನ ಕೂಡ್ಲೇ ತೆಗಿಸಿ, ನಿರ್ದೇಶಿಸಲ್ಪಟ್ಟ ಬೇರೆ ಸ್ಥಳದಲ್ಲಿ ಕಟ್ಟಬೇಕೆಂದು ಸದರೀ ಮಂಟಪಗಳನ್ನು ಕಟ್ಟಿಸಿದ ರುದ್ರಪ್ಪನವರಿಗೆ ಹೇಳಿದ್ದರಲ್ಲಿ ಆ ಪ್ರಕಾರ ನಡಿಸುವದಾಗಿ ಅವರು ಒಪ್ಪಿಕೊಂಡಿರುತ್ತಾರೆ ಈ ಕೆಲಸವನ್ನ ಕೂಡ್ಲೇ ನೆರವೇರಿಸಬೇಕಾಗಿದೆ.

೫ ಕಿಲ್ಲೇಬಾಗಲು ಆಂಜನೇಯ ಸ್ವಾಮಿ ದೇವಸ್ಥಾನವಿರುವ ಜಾಗಾವಿನಸುತ್ತಮುತ್ತಲೂ ಹಾಳುಬಿದ್ದು ಜನಸಂಚಾರವಿಲ್ಲದೆ, ಕಸ,ಮುಳ್ಳು ಮೊದಲಾದ್ದರಿಂದ ತುಂಬಾ ಗಲೀಜಾಗಿರುವದ್ದರಿಂದ ಆಸ್ಥಳವನ್ನ ತಪ್ಪಿಸಿ, ಆಂಜನೇಯಮೂರ್ತಿಯನ್ನ, ರೂಬರೂಬು ತೋರಿಸಿದಂತೆ, ಗೋಪಾಲಸ್ವಾಮಿ ದೇವಸ್ಥಾನದ ಮಹಾದ್ವಾರದ ಬಾಗಲಿನ ಪುರೋಭಾಗದಲ್ಲಿ ಇಡಿಸಬೇಕು.

೬. ಮೇಲೆಕಂಡ ಹಿಂದೂ ದೇವಾಲಯಗಳಲ್ಲದೆ ಆ ಸ್ಥಳದಲ್ಲಿರುವ ಆಸೂರ್‌ಖಾನೆಯು ಸಹ ನೋಡಲ್ಪಟ್ಟಿತು. ಈ ಸ್ಥಳವು ಬಹಳ ಗಲೀಜಾಗಿದೆ ಮತ್ತು ಅನೇಕ ಗಿಡಗಳು ಹುಟ್ಟಿ ಅದರಿಂದ ಕಟ್ಟಡವು ಅಪಾಯಸ್ಥಿತಿಗೆ ಬರುವಹಾಗೆ ಇದೆ. ಇದನ್ನು ಸರಿಪಡಿಸುವ ವಿಷಯದಲ್ಲಿ ಆಸೂರ್‌ಖಾನೆಯ ಮ್ಯಾನೇಜರಿಗೂ ರೂಬರೂಬು ಹೇಳಿದು ಮಾಡಿದೆ.

೧೨ನೇ ಫೆಬ್ರುವರಿ, ೧೮೯೩ನೇ ಇಸವಿ
ದರಬಾರು ಬೆಂಗಳೂರು,

A. SRINIVASA CHARLU,
*Muzrai Superintendent.*

# THE MYSORE GAZETTE.
## ಮೈಸೂರು ಗಜೆಟ.

ಶ್ರೀಮನ್ಮಹಾರಾಜ ರಾಜಶ್ರೀ ಬಹದೂರವರ ಸರ್ಕಾರದಿಂದ ಹೊರಡಿಸಲ್ಪಟ್ಟ ಇಷ್ತಿಹಾರ್‌ನಾಮೆಗಳು

ನಂ ೧೩೦೧೪-ಜಿ. F.-೧೮೯೨-೯೩-ತಾ ೩ನೇ ಫೆಬ್ರುವರಿ ೧೮೯೩-೧೮೯೦ನೇ ಇಸವಿ ಜುಲೈ ೧೧ ನೇ ತಾರೀಖು ೧೮೩ನೇನಂಬರುಳ್ಳ ಇಷ್ತಿಹಾರ್‌ನಾಮೆಯನ್ನನುಸರಿಸಿ ಪ್ರಕಟಿಸಲ್ಪಟ್ಟಿರುವ ನೀರಾವರಿ ಕೆಲಸಗಳ ಉದ್ದೇಶ್ಯ ಕಟ್ಟಲ್ಪಡುವ ಭಾವಿಗಳಿಗೆ ಸಾಲಗಳು ಕೊಡತಕ್ಕ ವಿಷಯದಲ್ಲಿ ಏರ್ಪಾತಾಗಿರುವ ವಿಶೇಷ ನಿಬಂಧನೆಗಳ ೧ನೇ ಸೆಕ್ಷನ್ ಪ್ರಕಾರ ಸದರೀ ನಿಬಂಧನೆಗಳು ೧೮೯೨ನೇ ಇಸವಿ ಏಪ್ರಿಲ್ ಗುರ್ರೇ ಲಾಗಾಯತು ಶಿವಮೊಗ್ಗ ಡಿಸ್ಟ್ರಿಕ್ಟಿಗೆ ಸೇರಿದ ಚೆನ್ನಗಿರಿ ಮತ್ತು ಹೊನ್ನಾಳಿ ತಾಲ್ಲೂಕುಗಳಿಗೆ ಅಗವಾಗತಕ್ಕವೆಂದು ಇದರಿಂದ ಪ್ರಕಟಿಸಲ್ಪಟ್ಟಿರುತಿದೆ.

ನಂ||೧೩೬೫೫ ಜಿ. ೩೦೨೮-ತ || ೬ನೇ ಫೆಬ್ರುವರಿ ೧೮೯೩—ರೆವಿನ್ಯೂ ಪೋಲೀಸ್ ಅಸಿಸ್ಟೆಂಟ್ ಸುಪರಿಂಟೆಂಡೆಂಟ್ ಮ|| ಚೆಂಗಯ್ಯ ಶೆಟ್ಟರವರು ರೆವಿನ್ಯೂ ಪೋಲೀಸ್‌ಆಫೀಸು ಚಾರ್ಜನ್ನು ೯೩ ನೇ ಇಸವಿ ಜನವರಿ ೨೩ನೇ ತಾರೀಖಿನವರೆಗೂ ನ್ನದಲ್ಲಿ ಹೆಡ್‌ಕ್ವಾರ್ಟರ್ಸ್‌ಪೋಲೀಸ್‌ಸುಪರಿಂಟೆಂಡೆಂಟ್ ಮ|| ಕೆ. ಪಿ. ಕೃಷ್ಣಣ್ಣ ಶೆಟ್ಟರವರಿಗೆ ಒಪ್ಪಿಸಲು ಅವರು ವಹಿಸಿಕೊಂಡಿರುತ್ತಾರೆ.

ನಂ|| ೧೩೪೪೮. ಜಿ. ೩೦೯೦—ತಾ||೯ನೇ ಫೆಬ್ರುವರಿ ೧೮೯೩—ಚಿಕ್ಕಬಳ್ಳಾಪುರ ತಾಲ್ಲೂಕ್ ಅವಲ್‌ದಾರ್ ಪಿ ಶ್ರೀನಿವಾಸ ರಾಯರವರಿಗೆ ೯೨ನೇ ಇಸವಿ ಡಿಸೆಂಬರ್ ೧೬ನೇ ತಾರೀಖು, ೪೬೧೮ ಜಿ. ೨೧೯೮—೯೨ನೇ ನಂಬರುಳ್ಳ ಇಷ್ತಿಹಾರ್‌ನಾಮೆಯ ಮೂಲಕ ಕೊಡಲ್ಪಟ್ಟಿದ್ದ ೧೫ ದಿನಗಳ ಕ್ಯಾಜುಯಲ್ ರಜಾ ಪ್ರಕಾರ ಅವರು ೯೨ನೇ ಇಸವಿ ಡಿಸೆಂಬರ್ ೨೯ನೇ ತಾರೀಖು ಮೊದಲು ೯೩ನೇ ಇಸವಿ ಜನವರಿ ೮ನೇ ತಾರೀಖು ವರೆವಿಗೆ ೧೧ ದಿನಗಳ ರಜಾವನ್ನ ಮಾತ್ರ ಉಪಯೋಗಿಸಿಕೊಂಡಿರುತ್ತಾರಾದುದರಿಂದ ಉಪಯೋಗಿಸಿ ಕೊಳ್ಳದೆ ಉಳಿದಿರುವ ದಿನಗಳ ರಜಾ ಇದರಿಂದ ರದ್ದು ಮಾಡಲ್ಪಟ್ಟಿರುತಿದೆ.

ನಂ||೧೩೪೦೭ ಜಿ. ೩೧೮೭ ತಾ||೧೦ನೇ ಫೆಬ್ರುವರಿ ೧೮೯೩—೧೮೯೩ನೇ ಇಸವಿ ಜನವರಿ ೨೩ನೇ ತಾರೀಖು ೬೩೦೮. ಜಿ. ೨೯೦೮ನೇ ನಂಬರುಳ್ಳ ಇಷ್ತಿಹಾರ್‌ನಾಮೆಯಲ್ಲಿ ಅಡಗಿರುವ ಹುಕುಂಗಳನ್ನು ತಿದ್ದುಪಡಿಮಾಡಿ ಶ್ರೀಮನ್ಮಹಾರಾಜಾ ಸರ್ಕಾರದವರು, ಹುಗಾಮಿ ತರೀಕಿಯಾ ಮತ್ತೊಂದು ಹುಕುಂ ಕೊಡಲ್ಪಡುವವರೆಗೂ ಇದರಡಿ ಕಂಡಂತೆ ಹುಕುಂ ಮಾಡಿರುತ್ತಾರೆ,

೧. ಕಡೂರ್ ಡಿಸ್ಟ್ರಿಕ್ಟಿನೊಳು ಜನರಲ್ ಡ್ಯೂಟಿ ಮೇಲಿರುವ ಮ|| ಎಸ್, ನಾರಣಯ್ಯಂಗಾರ್ರವರು, ಅವರ ರಜಾ ಪೂರೈಸಿದ ಕೂಡಲೇ ಕೋಲಾರ್ ಡಿಸ್ಟ್ರಿಕ್ಟಿಗೆ ಜನರಲ್ ಡ್ಯೂಟಿಯಬಗ್ಗೆ ವರ್ಗ ಮಾಡಲ್ಪಟ್ಟು ಮೈಸೂರು ಡಿಸ್ಟ್ರಿಕ್ಟಿಗೆ ವರ್ಗವಾಗಿರುವ ಮ|| ಕುಪ್ಪುಸಾಮಿ ಮುದಲಿಯಾರ್ರವರನ್ನು ಬಿಡುಗಡೆ ಮಾಡತಕ್ಕದ್ದಲ್ಲವೆ. ಸದರೀ ಮ||ಕುಪ್ಪುಸಾಮಿ ಮೊದಲಿಯಾರ್ರವರು ಮೈಸೂರಲ್ಲಿ ಮ್ಯುನಿಸಿಪಲ್‌ಬೋರ್ಡ್ ವೈಸ್ ಪ್ರಸಿಡೆಂಟರಾಗಿ ಇದರಿಂದ ನೇಮಕರನ್ನಾದಲ್ಪಟ್ಟಿರುತ್ತಾರೆ.

೨. ಮ|| ಕೆ. ರಾಮಸ್ವಾಮಯ್ಯಂಗಾರ್ರವರು ಕಡೂರ್ ಡಿಸ್ಟ್ರಿಕ್ಟಿನಲ್ಲಿ ಜನರಲ್ ಡ್ಯೂಟಿಯ ಮೇಲೆ ಅಸಿಸ್ಟೆಂಟ್ ಕಮಿಷನರಾಗಿಯೇ ಇರುತಲಿರುವರು. ಮತ್ತು

೩ ಮ|| ಕೆ. ಶ್ರೀನಿವಾಸರಾಯರವರು ಬೆಂಗಳೂರಲ್ಲಿ ಮ್ಯುನಿಸಿಪಲ್ ಬೋರ್ಡ್ ವೈಸ್ ಪ್ರಸಿಡೆಂಟರಾಗಿಯುತಲಿರುವರು.

ನಂ||೧೩೬೬೦ — ಜಿ ೩೦೦೧— ಕಡ ೯ ದಿ ಸ್ಟ್ರಿಕ್ಟ್ ಜನರಲ್‌ಅಸಿಸ್ಟೆಂಟ್ ಕಮಿಷನರ್ ಮ|| ನಾರಣಯ್ಯಂಗಾರ್ರವರಿಗೆ ೧೮೯೨ನೇಇಸವಿ ಆಗಸ್ಟ್ ೧೩ ನೇ ತಾರೀಖು ೨೨೦೦ ಜಿ. ೫೭೩೪—೯೨ನೇ ನಂಬರುಳ್ಳ ಇಷ್ತಿಹಾರ್‌ನಾಮೆಯ ಮೂಲಕ ಕೊಡಲ್ಪಟ್ಟಿದ್ದ ೩ ತಿಂಗಳ ರಜಾ ಪ್ರಕಾರ, ೧೮೯೨ ನೇ ಇಸವಿ ಆಗಸ್ಟ್ ೨೫ರ ಮೊದಲು ಸೆಪ್ಟೆಂಬರ್ ೨೬ ನೇ ತಾರೀಖು ವರೆವಿಗೆ ಒಂದು ತಿಂಗಳಕಾಲ ರಜಾ ಪೂರೈಸಿದ ಬಳಿಕ ಮರಳಿ ಅವರು ಕೆಲಸದಮೇಲೆ ಕರೆಯಿಸಲ್ಪಟ್ಟು ೧೮೯೨ನೇ ಇಸವಿ ಡಿಸೆಂಬರ್ ೧೦ನೇ ತಾರೀಖಿನವರೆವಿಗೆ ಸ್ಪೆಷಲ್ ಡ್ಯೂಟಿಯಮೇಲೆ ನಿಯಮಿಸಲ್ಪಟ್ಟಿದ್ದದ್ದರಿಂದ ೯೨ನೇ ಇಸವಿ ಡಿಸೆಂಬರ್ ೧೧ನೇ ತಾರೀಖು ಮೊದಲು ಸದರೀ ಪ್ರಿವಿಲೇಜ್ ರಜಾದಿನದಲ್ಲಿ ಉಳಿದಿರುವ ಭಾಗವು ಅಂದರೆ ಬಾಕ್ಕಿ ೨ ತಿಂಗಳರಜಾವನ್ನು ಉಪಯೋಗಿಸಿಕೊಳ್ಳಲಿಕ್ಕೆ ಹುಕುಂ ಕೊಡಲ್ಪಟ್ಟಿರುತಿದೆ.

ನಂ ೧೩೪೮೫ —ಜಿ ೩೦೬೦—ಮಧುಗಿರಿ ಮುನಸಫ್ ಮ||ಬ ಬಸವಾರಾಧ್ಯರ್ ಬಿ ಎ ಬಿ ಎಲ್ ಯವರಿಗೆ ಮಾರ್ಚಿ ಮಾಹೆ ೧೧ನೇತಾರೀಖ್ ಲಾಗಾಯತು ಅಥವಾ ಅವರುಪಯೋಗಿಸಿಕೊಳ್ಳುವ ತಾರೀಖ್ ಮೊದಲು ಅರ್ಧ ಸಂಬಳದಮೇಲೆ ೧೫ ದಿವಸಗಳ ರಜಾ ಕೊಡಲ್ಪಟ್ಟಿರುತಿದೆ ನಂದೀದುರ್ಗ ಡಿವಿಜನ್ ಡಿಸ್ಟ್ರಿಕ್ಟ್‌ನ ಸೆರಿಸ್ತ ಕೋರ್ಟಿ ಶಿರಸ್ತೇದಾರ್ ಮ|| ಸಿ. ವೀರಪ್ಪಲಿಂಗ ಮೊದಲಿಯಾರ್ರವರು, ಮ|| ಬಸವಾರಾಧ್ಯರು ಪ್ರಿವಿಲೇಜ್ ರಜಾ ಮೇಲೆ ಗೈರಿಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಕಡೇ ಗ್ರೇಡಿನಲ್ಲಿ ಮಧುಗಿರಿ ಮುನಸಫರಾಗಿ ಆಕ್ಟಿಂಗ್ ಪರೀಕ್ಷೆ, ನೇಮಕರನ್ನಾದಲ್ಪಟ್ಟಿರುತ್ತಾರೆ.

ನಂ. ೧೩೫೦೪. ಜಿ ೨೮೩—೯೨ತಾ ೧೦ನೇ ಫೆಬ್ರುವರಿ, ೧೮೯೩ —ಮೈಸೂರುಸರ್ವೀಸ್ ರೆಗ್ಯುಲೇಷನ್‌ಗಳ ೨೦೮ ನೇ ಸೆಕ್ಷನ್ ಅನುಸರಿಸಿ. ಮ|| ಹಾಜೀ ಸೈಯದ್ ನಸೀರುದ್ದೀನ್ ಯವರಿಗೆ, ೯೩ ನೇ ಇಸವಿ ಫೆಬ್ರುವರಿ ೬ ನೇ ತಾರೀಖ್ ಮೊದಲು ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ೩ ತಿಂಗಳ ರಜಾ ಕೊಡಲ್ಪಟ್ಟಿರುತಿದೆ.

# SUMMARY OF NEWS.
## ವೃತ್ತಾಂತ ಸಂಗ್ರಹವು.

ಬಿಲ್ಲಿ ಚೇಸು ಗ್ರಿಫಿಸ್ಸನು ಒಂದು ಅಕ್ಕಿಯ ಕಾಳಿನಮೇಲೆ, ೩೩ ಅಕ್ಷರಗಳುಳ್ಳ ಒಂದು ಕವಿತ್ವವನ್ನು ಮಾಡಿ ಕೆತ್ತಿರುತ್ತಾನಂತೆ. ಈಅಕ್ಷರಗಳು ಬರೀ ಕಣ್ಣಿಗೆ ಕಾಣುವದಿಲ್ಲ, ಮೈಕ್ರಾಸ್ಕೋಪ್ ಎಂಬ ಸೂಕ್ಷ್ಮದರ್ಶನ ಕನ್ನಡಿಗಳಿಂದಲೇ ನೋಡಬಹುದಂತೆ, ಇಂತಾ ವಿಚಿತ್ರವಾದ ಕಾರ್ಯವನ್ನು ಮಾಡಿದಿತನು ಅಷ್ಟನೆ ಬಿಲ್ಲಿ ಆರನುಮಾಸದಿಗೆ ನಡಿಸಿದಾತನಾಗಿದ್ದಾನಂತೆ.

ಬ್ರಿಟಿಷ್ ದ್ವೀಪಗಳಿಗೂ ಯೂರೋಪ್ ಖಂಡಕ್ಕೂ ಮಧ್ಯೆ ಸುಮಾರು ೨೦ ಮೈಲುಗಳ ವಿಸ್ತೀರ್ಣವುಳ್ಳ ಇಂಗ್ಲಿಷು ಕಿಡಲು ಕಾಲುವೆ ಎಂಬ ಒಂದು ಸಮುದ್ರದ ಕಾಲುವೆಯಿದೆ. ಇದರಮೇಲೆ ಒಂದು ಸೇತುವೆಯನ್ನು ಕಟ್ಟಬೇಕೆಂದು ಈಗ ಲಂಡ ಪಾರ್ಲಿಯಮೆಂಟ್ ಸಭೆಯಲ್ಲಿ ಪ್ರಶ್ನೆ ಮಾಡುತ್ತಲಿದ್ದಾರೆ. ಇದಕ್ಕೆ ೩ ಕೋಟಿ ೫೫ ಲಕ್ಷ ಪೌನ್ ಅಥವಾ ೫೩ ಕೋಟಿ ೨೫ ಲಕ್ಷ ರೂಪಾಯಿ ವೆಚ್ಚ ಹಿಡಿಯುವದೆಂದು ಅಂದಾಜಾಗಿದೆ.—ವ್ಯ. ಚಿಂ

ಬಂಗಾಳಾ ಪ್ರಾಂತದಲ್ಲಿ ಇಬ್ಬರು ಅಣ್ಣ ತಮ್ಮಂದಿರು ತಮ್ಮ ಜಿಂದಗಿಗಳನ್ನು ಪಾಲು ಮಾಡಿಕೊಳ್ಳುವದರಲ್ಲಿ ಧೇಕಾಚಾರನೆಯ ವಿಗ್ರಹ ಸಾಲಿಗ್ರಾಮ ಮೊದಲಾದುಗಳನ್ನೂ ಪಾಲು ಮಾಡಬೇಕಾಗಿ ಬಂದಾಗ, ಆವರಿಬ್ಬರಲ್ಲಿ ಒಬ್ಬನು ವಿಲಾಯಿತಿಗೆ ಹೋಗಿ ಬಂದವನಾದ್ದರಿಂದ, ಎರಡನೆಯವನು ವಿಗ್ರಹಗಳನ್ನೆಲ್ಲಾ ತಾನೇ ಇಟ್ಟುಕೊಳ್ಳುವದಾಗಿ ವ್ಯಾಜ್ಯ ಮಾಡಿದನು. ಕೊನೆಗೆ ಆಫೀಸಿನಲ್ಲಿ ಫೈಸಲಾಗದೆ ಅಣ್ಣ ತಮ್ಮಂದಿರಿಬ್ಬರೂ ಈ ವಿಗ್ರಹಗಳಿಗಾಗಿ ಅಪೀಲು ಮಾಡಿದರು. ಈ ಮೊಕದ್ದಮೆಯನ್ನು ಫೈಸಲ್ ಮಾಡುವದಕ್ಕೆ ಹೈಕೋರ್ಟ್ ಜಡ್ಜಿಯವರು ಕೂಡ ಕಷ್ಟಪಟ್ಟರು ನಿಜವು, ತೀರ್ಮಾನವನ್ನು ಹೇಳುವದಕ್ಕೆ ೧೫ ದಿನಗಳ ವಾಯಿದೆ ತೆಗೆದುಕೊಂಡಿರುತ್ತಾರಂತೆ.—ವ್ಯ. ಚ,

ಬೆಂಗಾಲಿಗೆ ರೋಗಬಂದರೆ ಈ ರೀತಿ ಚಿಕಿತ್ಸೆ ಮಾಡಿದ್ದು ಗುಣವಾಗುವದೆಂದು ಒಂದು ಇಂಗ್ಲಿಷ್ ಪತ್ರಿಕೆಯು ತಿಳಿಸುವದು. ಬೇನ ದಿಕಿ—ಹೇನಿನಾದ ಒಂದು ಏಳುವದಕ್ಕೆ ಆ ... ... ... ೧೨ ಜಿ ತಿಕ್ತ ಬೇಳೆಗಳನ್ನು ತಂದು ಕೊಡ ... ... ... ವಾಸಿಯಾಗಿನದೇ ಇದ್ದರೆ ಒಂದು ದೊಡ್ಡ ... ... ... ಒಪ್ಪಿಸಬೇಕು ... ... ... ತಪ್ಪ ಅವರ ... ... ... ಬೊಗಳು ... ... ... ಬೆಂಗಾಲಿಗೆ ... ... ... ಸಾರಿ ... ... ... ಬೇಕು. ಬೇಕಲಿ ... ... ... ರೋಗ ... ... ... ನಿವಾರಣೆಯಾಗುವದು —ವೇ

ಪುರುದ್ದೇಶದಲ್ಲಿ ಕಳೆದ ಸಪ್ತಂಬರ್ ತಾರೀಖಿನ ದಿವಸ ೧೬ ವರುಷದ ಒಬ್ಬ ಹುಡುಗನು ಒಂದು ಎತ್ತನ್ನು ಕೊಂಡುಕೊಂಡು ಬರಬೇಕೆಂದು ಮನೆಯಿಂದ ೫೦ ರೂಪಾಯಿಗಳನ್ನು ತೆಗೆದುಕೊಂಡು ಹೊರಟನು ಇವನ ಗುರುತಿಗಿಂತ ಒಬ್ಬ ಕೂಲಿಯವನು ಇವನ ಸಹಾಯಾರ್ಥವಾಗಿ ಜೊತೆಯಲ್ಲಿ ಹೋದನು. ಸಾಯಂಕಾಲದ ವರಿಗೂ ಕಡೆ ಮನೆಗೆ ಬರಲಿಲ್ಲ ... ... ... ಇಬ್ಬರು ... ... ... ದುಡ್ಡು ... ... ... ಸಿಕ್ಕಿದ್ದು ... ... ... ಕೈಲಿದ್ದ ಬಂಗಾರದ ಬಳೆಗಳನ್ನು ಅಪಹರಿಸಿಕೊಂಡು, ಶವವನ್ನು ಸಮೀಪದಲ್ಲಿದ್ದ ಒಂದು ಕೆರೆಯಲ್ಲಿ ಎಸೆದಿದ್ದರು. ಈಗ ಕಳವು ... ... ... ಅವರ ಬಳಿ ... ... ... ಸಿಕ್ಕ ನ್ಯಾಯಾಧಿಕಾರಿಗಳ ಎದುರು ನೋಡುತ್ತಲಿದ್ದಾರೆ —ವ್ಯ ಸ.

ವಿಲಾಯಿತಿಯಲ್ಲಿ ... ... ... ಒಬ್ಬ ಮುದಿ ವಿಧವೆಗೆ ಮೂರುವರ ... ... ... ಇಬ್ಬರು ಹೆಣ್ಣುಮಕ್ಕಳು ಇದ್ದರು ... ... ... ಆಕೆಗೆ ಅಸಾಧ್ಯ ... ... ... ಮಕ್ಕಳೆಲ್ಲ ಒಟ್ಟಿಗೆ ... ... ... ಉಪಚಾರ ಮಾಡುವದು ... ... ... ಮಾಡಿಕೊಂಡು ಆ ಪ್ರಕಾರ ನಡೆಸುತ್ತಿದ್ದರು ಹೀಗಿರಲು ಕಳೆದ ವಾರದಲ್ಲಿ ಒಂದು ದಿನ ಅರ್ಧ ರಾತ್ರಿ ಸಮಯದಲ್ಲಿ ತಮ್ಮನು ಅಣ್ಣನನ್ನ ಸಾಸಿವೆಯಿಂದ ಬಡಿಸಿ ತಾನು ಕಾಯು ... ... ... ಸದ್ದು ಆಯಿತು. ಒಡನೆ ಸದರಿ ... ... ... ಬತ್ತಿಯನ್ನು ಹತ್ತಿಸಿಕೊಂಡು ಕೋಣೆಯೊಳಕ್ಕೆ ಹೋಗಲು, ಒಳಗಿದ್ದವನು ದೀಪವನ್ನು ... ... ... ನು. ಒಳಕ್ಕೆ ಹೋಗಿದ್ದವನು ಆ ಪೆಟ್ಟನ್ನು ತಪ್ಪಿಸಿಕೊಂಡು ... ... ... ಬಿದ್ದನು. ... ... ... ತಲೆಬಾಗಿಲಿಗೆ ... ... ... ಮಲಗಿದ್ದ ... ... ... ಬೀ ... ... ... ಒಬ್ಬ ... ... ... ದುಷ್ಕೃತ್ಯ ತಮ್ಮನಾದವನು ಮಾಡಿದ್ದನು. ... ... ... ಈ ಕೃತ್ಯವನ್ನು ನಡೆಸಿದವನು ... ... ... ವಿಷಮ ; ಇವನಿಗೆ ... ... ... ಅವನು ... ... ... —ಸ್ವ. ದೇ.

BANGALORE—Printed and published at the KARNATIC PRESS, No 40, HOSPITAL ROAD, PETTA—1893

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

## ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning.**

ಪ್ರಾಮಾಣಿಕವಿದನ್ಮನ್ಯತ್ವಸಗದಾರ್ಥ್ಯಕರ್ಣಾಟಕಪ್ರಕಾಶನವರಾಭಧಾಪ್ರಥಿತಸಾಹಿತೀಶೋಭಿತಾ ॥ ವ್ಯಾಗಾಂಕಹಿತವಾಸರೆನಿಹಿತಮುದ್ರಣಾಸಜ್ಜನೈರ್ದ್ಧಿಕಾನುವರಿವೊಟಿತಾವಿಕಶಿತಮಾನಸಂಸಂಮದಂ ॥

Vol. XX | BANGALORE—MONDAY, FEBRUARY 27, 1893 [No. 8.

ಸಂಪುಟ ೨೦. | ಬೆಂಗಳೂರು:—ಸನ್ ೧೮೯೩ ನೇ ಇಸವಿ ಫೆಬ್ರವರಿ ೨೭ ನೇ ತಾರೀಖ್ ಸೋಮವಾರ. [ಸಂಚಿಕೆ ೮.


### ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ ಮತ್ತು ಕನ್ನಡಭಾಗಗಳಿಗೆ.

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ಸಾಲ್ ೧ಕ್ಕೆ ... | 6—0—0 | 8—0—0 |
| 6 ತಿಂಗಳಿಗೆ ... | 3—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ಸಾಲಿಂಕ್ಕೆ ... | 3—0—0 | 4—0—0 |
| 6 ತಿಂಗಳಿಗೆ ... | 1—12—0 | 2—8—0 |

ಈ ಪತ್ರಿಕೆಗೆ ಚಂದಾದಾರರು ನಿಗದಿತ ತಾರೀಖಿನ ಮೊದಲು ಒಂದು ತಿಂಗಳೊಳಗಾಗಿ ಚಂದಾ ಹಣವನ್ನು ಕಳುಹಿಸದಿದ್ದರೆ ಆ ಮೇಲೆ ದರ್ಜೆ ಪತ್ರಿಕೆ ಕಳುಹಿಸಲ್ಪಡುವದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. ಮೂರು ತಿಂಗಳಿಗಿಂತ ಕಡಿಮೆಯಾಗಿ ಚಂದಾ ಹಣವು ಅಂಗೀಕರಿಸಲ್ಪಡಲಾರದು.

### ಪ್ರಕಟನೆಯ ರಿವಾಜು.

| | |
|---|---|
| ಮೊದಲನೆಯದಾಗಿ ಸಾಲೊಂದಕ್ಕೆ | ೦—೨—೦ |
| ಎರಡನೆಯದಾಗಿ ಸಾಲೊಂದಕ್ಕೆ | ೦—೧—೦ |

ಗುರುತು—ಎರಡನೆಯದಕ್ಕಿಂತ ಜಾಸ್ತಿ ಸಾರಿ ಪ್ರಕಟಿಸತಕ್ಕ ಪ್ರಕಟನೆಗಳಿಗೆ ಸಾಲೊಂದಕ್ಕೆ ರಿಯಾಯಿತಿ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಪ್ರಕಟನೆಗಳನ್ನು ಪ್ರಕಟಿಸಬೇಕೆಂದು ಕಳುಹಿಸುವವರು ಅವುಗಳ ಕೆಳಗೆ ತಮ್ಮ ಹೆಸರು ವಿಳಾಸ ಸ್ಪಷ್ಟವಾಗಿ ತಿಳಿಸತಕ್ಕದ್ದು. ಒಂದು ಸಾರಿ ಬರೆದಿದ್ದನ್ನು ಅವರು ಹಿಂತೆಗೆದುಕೊಳ್ಳಬೇಕೆಂದು ತಿಳಿಸುವವರೆಗೆ ಅದು ಪ್ರಕಟಿಸಲ್ಪಡುವದು. ಯಾವ ಪ್ರಕಟನೆಯೂ ಪ್ರಕಟನೆಗೆ ಮುಂಚಿತವಾಗಿ ಹಣ ಕಳುಹಿಸದೆ ಪ್ರಕಟಿಸಲ್ಪಡುವದಿಲ್ಲ. ಪ್ರಕಟನೆಗಳನ್ನು ಒಂದು ಸಾರಿ ಹೊರತಾಗಿ ಬರೆದು ಕಳುಹಿಸತಕ್ಕದ್ದು. ಪ್ರಕಟನೆಗಳು ಈ ಪತ್ರಿಕೆಗೆ ಕಳುಹಿಸುವದಕ್ಕೆ ಕಾಗದಗಳಲ್ಲಿ ಒಂದೇ ಪುಟದಲ್ಲಿ ಬರೆದು ಕಳುಹಿಸತಕ್ಕದ್ದು. ಪ್ರಕಟನೆಗಳನ್ನು ಪ್ರಕಟಿಸಲು ಸಿದ್ಧವಾಗಿ ತಿಳಿಸಲ್ಪಟ್ಟ ಕಾಗದಗಳು ಪುನಃ ಹಿಂತಿರುಗಿ ಕಳುಹಿಸಲ್ಪಡಲಾರವು.


*ADVERTISEMENTS*

### NOTICE.

**VAIDYASARA SANGRAHA**

A TREATISE ON THE PRINCIPLES OF

**HINDU MEDICINE**

*Price including Postage Rs 5 0 0*

ವೈದ್ಯಸಾರ ಸಂಗ್ರಹ.

ಈ ಗ್ರಂಥಬೇಕಾದವರು ಮೊಬಲಗಿನೊಡನೆ ಕಾಗದ ಬರೆದರೆ ಅವರ ಹೆಸರಿಗೆ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ಕಾಗದಗಳಿಗೆ ಸಿಗ್ರ ಕೊಡಲ್ಪಡಲಾರದು.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೇ ಹಾಸಲ್ ಬೇಸಿಲ್ ಪ್ರತಿ ಒಂದಕ್ಕೆ ರೂ 5—0—0

ಟಿ. ಏ. ವೆಂಕಟಾಚಾರ್.

ಬೆಂಗಳೂರ್, ಮದರ್ ಆಸ್ಪತ್ರಿ ರೋಡ್ ಡೋರ್ ನಂಬರ್

### ನೋಟಿಸ್.

ಬೆಂಗಳೂರು ಕರ್ಣಾಟಕ್ ಪ್ರೆಸ್.

೧೮೬೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ, ಸಕಲವಿಧ ಕೆಲಸಗಳು ಸುಲಭಬಾಬಿಗೆ ಶೀಘ್ರವಾಗಿಯೂ ಅಚ್ಚುಕಟ್ಟಾಗಿಯೂ, ಮಾಡಲ್ಪಡುವವು.

ಇದರಲ್ಲಿ ಸದ್ಯಕ್ಕೆ ಇಂಗ್ಲೀಷ್ ಕನ್ನಡ ಕೆಲಸ ಮಾತ್ರವೇ ನಡೆಯುತ್ತಿದೆ. ಇತರ ತಪಶೀಲುಗಳನ್ನು ಸದರೀ ಕಾರ್ಖಾನೆ ಮ್ಯಾನೇಜರ್ ಬಳಿ ಕೇಳಿ ತಿಳಕೊಳ್ಳಬಹುದು.

### ನೋಟೀಸ್.

ಸಂಜಪ್ಪನವರ ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು.

ಈ ಕೆಳಗೆ ಉಕ್ತವಾಗಿರುವ ಪರೀಕ್ಷಿಸಲ್ಪಟ್ಟದ್ದರಿಂದ ಹೊಗಳಲ್ಪಟ್ಟ ಎಲ್ಲಾ ಕಡೆಗಳಲ್ಲಿಯೂ ಪ್ರಖ್ಯಾತವಾದ ಔಷಧಗಳು ಬೇಕಾದವರು ಅವುಗಳನ್ನು ಪಡೆದುಕೊಳ್ಳಬಹುದು. ಈ ಔಷಧಗಳು ರಸಾಯನಿಕವಾದ ಕೆಲವು ನಿಷ್ಕೃಷ್ಟಯೋಗಗಳಿಂದ ತಯಾರಾದವುಗಳಾಗಿಯೂ, ಅನುಭವ ಸಿದ್ಧವಾಗಿಯೂ, ಅನೇಕರಿಗೆ ಗುಣವನ್ನುಂಟುಮಾಡಿದವುಗಳಾಗಿಯೂ ಇರುತ್ತವೆ. ತಮ್ಮ ರೋಗಸ್ವರೂಪವನ್ನು ವಿವರವಾಗಿ ವ್ಯಾಧಿಗಳ ಕ್ರಮವನ್ನೂ ಸರಿಯಾಗಿ ಬರೆದು ತಿಳಿಸಿಕೊಳ್ಳಬಹುದು. ಹಾಗೆ ಕಾಗದ ಬರೆಯತಕ್ಕವರು ಉತ್ತರಕ್ಕೋಸ್ಕರ ಸ್ಟಾಂಪನ್ನು ಸಹ ತಮ್ಮ ಕಾಗದದಲ್ಲಿ ಅರ್ಧಾಣೆ ಸ್ಟಾಂಪು ಮುಖಾಂತರ ಹಾಕಿ ಕಳುಹಿಸಬೇಕು. ವಾಲ್ಯೂಪೇಯಬಲ್ ಮೂಲಕ ಸಹ ಪದಾರ್ಥಗಳು ಕಳುಹಿಸಲ್ಪಡುವವು. ಕಳುಹಿಸಲ್ಪಟ್ಟ ಪದಾರ್ಥಗಳನ್ನು ತರಿಸುವವರು ನಿರಾಕರಿಸಿದರೆ ಆ ಖರ್ಚು ವಾಲ್ಯು ಪೇಯಬಲ್ ಕಮೀಷನ್ ಅವರೇ ಕೊಡತಕ್ಕದ್ದು.

ತೈಲ.—ವಾತಕ್ರೈಲ, ಇದು ರೋಗಗಳಿಗೂ, ಶರೀರ ಸಂಬಂಧಗಳಾದ ಮತ್ತು ವಾತಸಂಬಂಧಗಳಾದ ಸಂಧಿರೋಗಗಳಿಗೂ, ಮೂಗಿನ ರಕ್ತ ಬೀಳತಕ್ಕದ್ದಕ್ಕೂ, ಅನೇಕವಿಧ ಚರ್ಮರೋಗವಾದ ಹೇನುಗಳಿಗೂ ಬಹಳ ಶ್ಲಾಘ್ಯವಾದ ನಿವಾರಕವಾಗಿದೆ, ಸಣ್ಣ ಸೀಸೆ ಒಂದಕ್ಕೆ ೧ ರೂ. ದೊಡ್ಡ ಸೀಸೆ ೧ ಕ್ಕೆ ೩ ರೂ.

ಜ್ವರದ ಗುಳಿಗೆಗಳು—ಇದು ಚಾತುರ್ಥಿಕಾದಿ ಸಕಲವಿಧ ಜ್ವರಗಳಿಗೂ ಸ್ಪಷ್ಟ ಔಷಧವಾಗಿದೆ. ರೂ. ೧ಕ್ಕೆ ೨೦ ಗುಳಿಗೆಗಳು.

ಮೂತ್ರರೋಗ ನಿವಾರಕವಾದ ಎಸೆನ್ಸ್—ಈ ಎಸೆನ್ಸ್ ೨೦ ದಿನಗಳವರೆಗೆ ಬಿಡದೆ ಹೊತ್ತಿಗೆ ತೆಗೆದುಕೊಂಡರೆ ಸಕಲವಿಧ ಮೇಹಗಳೂ, ಪ್ರಮೇಹಗಳೂ, ಸ್ತ್ರೀಯರ ಮುಟ್ಟಿನ ದೋಷಗಳೂ ಉಷ್ಣ ಸಂಬಂಧವಾದ ರೋಗಗಳೂ ನಿವಾರಣೆಯಾಗುವವು. ಸೀಸೆ ೧ ಕ್ಕೆ ೨—೮—೦

ದಂತರೋಗಕ್ಕೆ ಚೂರ್ಣ—ಹುಳುಕು ಹಲ್ಲುಗಳು, ಸಡಲವಾಗಿರುವ ಹಲ್ಲುಗಳು, ಇವುಗಳನ್ನು ಸರಿಮಾಡಿ ಗಟ್ಟಿಪಡಿಸಿ ಕಾಪಾಡುವುದುಂಟುಮಾಡುವದು. ಇದು ಪೂರಾವಿಧವು. ಡಬ್ಬಿ ೧ ಕ್ಕೆ ೧ ರೂ. ಇದು ೨೦ ದಿನಗಳಿಗೆ ಆಗುವದು.

ನೇತ್ರರೋಗಕ್ಕೆ ಮಾತ್ರೆ—ಪೊರೆಗಳು, ದೃಷ್ಟಿಮಾಂದ್ಯ, ಕಣ್ಣುರಿ, ತಲೆನೋವು, ಕಣ್ಣಲ್ಲಿ ನೀರು ಸುರಿಯುವದು. ಚಳುಕುವೊದಲಾದ ಸಕಲರೋಗಗಳಿಗೂ ಪ್ರಶಸ್ತವಾದವು. ಮೂಲಿಕಾ ಪ್ರಯೋಗದಿಂದ ಮಾಡಲ್ಪಟ್ಟ ಉತ್ತಮವಾದ ಮಾತ್ರೆ ೧ ಕ್ಕೆ ೪ ಆಣೆ. ಇದು ೨೦ ದಿನಗಳವರೆಗೆ ಬರುವ ಹೊತ್ತು ಹಾಕಿಕೊಳ್ಳಬಹುದು.

ಮೂಲವ್ಯಾಧಿಗೆ—ಇದು ಉಂಗರವು ತಯಾರಾಗಿದೆ, ಇದರಿಂದ ಬಹಳ ಕಾಲದಿಂದಿರುವ ಮೂಲರೋಗವು ವಾಸಿಯಾಗುತ್ತದೆ. ಉಂಗರ ೧ಕ್ಕೆ ೧ ರೂಪಾಯಿ. ಇದನ್ನು ಬೆರಳಿನಲ್ಲಿ ನಿಯತವಾಗಿ ಧರಿಸಿಕೊಂಡಿರತಕ್ಕದ್ದು. ಇದರ ಸ್ಪರ್ಶದಿಂದ ಮೂಲರೋಗವು ನಿವೃತ್ತಿಯಾಗುತ್ತದೆ.

ಭಸ್ಮಗಳು.—ತಾಮ್ರ, ರಜತ, ವಂಗ, ಸೀಸ, ಪ್ರವಾಳ, ಶೃಂಗ, ಅಭ್ರಕ, ಲೋಹ, ಕಾಂತ ಮೊದಲಾದ ಭಸ್ಮಗಳು ಸಿಂದೂರಗಳೂ ಸಿದ್ಧ ಕ್ರಿಯೆಯಿಂದ ತಯಾರಾದವು. ಇವು ಪಾಂಡು ಕಾಮಿಲಾ ಕ್ಷಯ ಸಕಲ ಪ್ರಬಲ ರೋಗಗಳಿಗೂ ಪ್ರಶಸ್ತವಾದವುಗಳಾಗಿರುತ್ತವೆ. ರೋಗ ಸ್ವರೂಪವನ್ನು ಗೊತ್ತಾಗಿ ವಿವರವನ್ನು ಕೊಡಲ್ಪಡುವದಾದರೆ ಅದರಮೇಲೆ ಕ್ರಯವು ನಿಷ್ಕರ್ಷಿಸಲ್ಪಡಬೇಕಾಗಿದೆ.

ಲೇಹ್ಯಗಳು—ಸೌಭಾಗ್ಯ, ಚ್ಯವನಪ್ರಾಶ, ಕೂಷ್ಮಾಂಡ ಮೊದಲಾದ ಧಾತುವೃದ್ಧಿಕರಗಳಾದ ಲೇಹ್ಯಗಳು ಸಿದ್ಧವಾಗಿವೆ. ಸೇರು ೧ ಕ್ಕೆ ೪ ರೂ.

ಸುಗಂಧವಸ್ತುಗಳು.—ಗಂಧ, ಪಾಳೆದೆಣ್ಣೆ, ನಾಗಸಂಪಿಗೆ ಎಣ್ಣೆ, ಅಂಬರು, ದ್ರಾಕ್ಷೇಎಣ್ಣೆ, ಸಿವು ಮೊದಲಾದ ಪರಿಮಳಗಳು ತಯಾರಾಗಿವೆ. ಅತ್ತರ್ ಸೀಸೆ ೧ ಕ್ಕೆ ೨ ರೂ.

ಚೂರ್ಣಗಳು.—ಮಹಾ ಯೋಗರಾಜ ಗುಗ್ಗುಳ, ಚಂದ್ರಪ್ರಭಾ ಚೂರ್ಣ, ತಾಳೀಸಾದಿ ಮೊದಲಾದ ಚೂರ್ಣಗಳು ಅಜೀರ್ಣ ಪಿತ್ತ ವಾತಾದಿರೋಗಗಳಿಗೆ ಸಾಧಕವಾದವು. ಇವು ೨೦ ದಿನಗಳಿಗೆ ತೆಗೆದುಕೊಳ್ಳುವವು, ಡಬ್ಬಿ ೧ಕ್ಕೆ ೧ರೂ.

### ನೋಟಿಸ್.

ಗಣೇಶ ರಾಮಚಂದ್ರ ಕಶೀರ ಮತ್ತು ಕಂಪೆನಿ. ಕಮಿಷನ್ ಏಜಂಟ್ಸ.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯೊಡನೆ ವ್ಯಾಲ್ಯೂ ಪೇಯಬಲ್ ಪೋಸ್ಟಿನ ಮೂಲಕ ತಕ್ಕ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರದ ಔಷಧಗಳು, ಪುಸ್ತಕಗಳು, ಮುತ್ತುಗಳು, ಬಟ್ಟೆ ಮುತ್ತುಗಳು, ಘಡಿಯಾರಗಳು, ವಾಚುಗಳು, ಟ್ರೇಂಕುಗಳು, ಕಾಪ್ಸ್ ಟಾಲುಗಳು, ಪೆಟ್ಟಿಗೆಗಳು, ಜರತಾರಿ ಕಾಗದಗಳು, ಚಂದ್ರಕಾಂತ ಬಿಳಿಯ ಕನ್ನಡಕಗಳು, ಹುಡುಗರಿಗೆ ತಕ್ಕ ಜರತಾರಿ ಅಂಗಿಗಳು, ಜರತಾರಿ ಟೋಪಿಗಳು, ಆಫೀಸ್ ಡ್ರೆಸ್ಸುಗಳು, ಪಟಗಳು, ಅತ್ತರುಗಳು, ಅತ್ಯುತ್ತಮವಾದ ರತ್ನಗಳು, ಭಂಗಾರದ ಕಟ್ಟಲ್ಪಟ್ಟ ಉಂಗುರಗಳು, ಬೆಳ್ಳಿ ಪಾತ್ರೆಗಳು, ಜರ್ಮನ್ ಬೆಳ್ಳಿ ಪಾತ್ರೆಗಳು, ಕೇಸರಿ, ಕಸ್ತೂರಿ ಮೊದಲಾದ ಇತರ ಸಾಮಾನುಗಳು.

ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟ್ಯಾಂಪ್ ಕಳುಹಿಸಿದ ಹೊರತು ಜವಾಬ್ ಕೊಡಲ್ಪಡಲಾರದು.

ವಿಳಾಸ. —ಗಣೇಶ ರಾಮಚಂದ್ರ ಕಶೀರ,
ಮತ್ತು ಕಂಪೆನಿ, ಕಮಿಷನ್ ಏಜಂಟ್ಸ್,
ಠಾಕೂರ್ ದ್ವಾರ, ಮಾರ್ಕೆಟ್ ಪೋಸ್ಟು, ಮುಂಬೈ

### ನೋಟಿಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕರೀಗೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

### ಸಂಸ್ಕೃತ ಗ್ರಂಥಗಳು.

| ಹೆಸರು | | ರೂ | ಆ | ಪೈ |
|---|---|---|---|---|
| ಸಟೀಕಾ ವೈದ್ಯಸಾರ ಸಂಗ್ರಹ | .. | ೫ | ೦ | ೦ |
| „ ಶಿವಗೀತೆ | ... | ೧ | ೧ | ೦ |
| „ ಶಿವಾನಂದಲಹರಿ | ... | ೦ | ೮ | ೦ |
| „ ಕಾಲಾಮೃತ | ... | ೧ | ೦ | ೦ |
| „ ಟಿ॥ ಬಾಲರಾಮಾಯಣ .. | | ೦ | ೩ | ೦ |
| „ ಟೀ॥ ಗೋಪಿಕಾ ಗೀತೆ ... | | ೦ | ೧ | ೦ |
| „ ಟೀ॥ ಚಾಣಕ್ಯನೀತಿ (ಸುಭಾಷಿತ) | | ೦ | ೮ | ೦ |
| ವಿಷ್ಣುಸಹಸ್ರನಾಮ ಪತ್ರಿಕೆ | ... | ೦ | ೩ | ೦ |
| ಸೂರ್ಯನಮಸ್ಕಾರ | ... | ೦ | ೬ | ೦ |
| ಕೃಷ್ಣಕರ್ಣಾಮೃತ | ... | ೦ | ೨ | ೦ |
| ತ್ರಿಕಾಂಡ ಅಮರ ಕೋಶ | .. | ೦ | ೨ | ೦ |
| ೧ ಕಾಂಡ | ... | ೦ | ೧ | ೦ |

### ಕನ್ನಡ ಗ್ರಂಥಗಳು.

| | | | | |
|---|---|---|---|---|
| ಸುಕೆಸಪ್ರತಿ ಅವ್ವಲ್ | .. | ೩ | ೦ | ೦ |
| ಟಿಪ್ಪೂ ದುಯ್ಯಂ | ... | ೧ | ೭ | ೦ |
| ನೃಪಶೇಂದ್ರವಿಜಯ | .. | ೧ | ೮ | ೦ |
| ಪಂಚಪಾಂಡವ ಬಾಲಲೀಲೆ | ... | ೦ | ೪ | ೦ |
| ಸತ ಪತ್ನಿಲೀಲ | ... | ೦ | ೬ | ೦ |
| ಕಾಳೀಯಮರ್ದನ | ... | ೦ | ೨ | ೦ |
| ಸುಭದ್ರಾಪರಿಣಯ | ... | ೦ | ೨ | ೦ |
| ಕಲಿಕೈವಾಪರಿಣಯ | ... | ೦ | ೨ | ೬ |
| ಸುದಾಮಚರಿತ್ರೆ | ... | ೦ | ೧ | ೦ |
| ಶೈಬ್ಯರಾಮಾ ಚರಿತ್ರೆ | ... | ೮ | ೧ | ೦ |
| ಬಾಲಗ್ರಹಚಿಕಿತ್ಸೆ | ... | ೩ | ೧ | ೦ |
| ಮಹದ್ವೈರ್ಗಭಾ | ... | ೦ | ೧೨ | ೦ |
| ಬಪ್ರಂತಿಪಿಠಾಕ | .. | ೦ | ೧೨ | ೬ |

### ನೋಟಿಸ್.

ಸೋಡ ಕಂಟ್ರ್ಯಾಕ್ಟದಾರರಿಗೆ ಇದರಿಂದ ತಿಳಿಸಲ್ಪಡುವದೇನೆಂದರೆ:—

ಬೆಂಗಳೂರಲ್ಲಿರುವ ಡಿಸ್ಟಿಲರಿಗೆ ಸೋಡ ಸರಬರಾಯಿ ಬಗ್ಗೆ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿವೆ. ಅದರ ತಪಸೀಲು ತಿಳಿದುಕೊಳ್ಳಬೇಕಾದವರು ಸದರೀ ಡಿಸ್ಟಿಲರಿಯಲ್ಲಿ ಕೇಳಿ ತಿಳಿದುಕೊಳ್ಳಬಹುದು.


### THE MONEY MARKET.

ಮದರಾಸ್, ಶನಿವಾರ, ತಾರೀಖ್ 25ನೇ ಫೆಬ್ರವರಿ 1893.

ನೇಕಡ ೪ರೂ, ಬಾಬತು ಗವರ್ನಮೆಂಟ್ ಪತ್ರಗಳು ರೂಪಾಯಿ, 105-2-0 ಇಂದ 105-8-0ವರೆಗೆ,

ಮದರಾಸ್ ಬ್ಯಾಂಕ್ ಷೇರಗಳು, (500) ರೂಪಾಯಿಗಳ ಬಾಬತು 935 ಆದಿ ಯಿಂದ 940ವರೆಗೆ,

ಕರ್ನಾಟಿಕ್ ದುಲ್ ವ ಬ್ಯಾಂಕ್ ಮರ್ಚೆಂಟ್ ಬ್ಯಾಂಕ್ ಷೇರುಗಳು, (100) ಬಾಬತು 160 ರಿಂದ 165 ವರೆಗೆ,

ಸವರನ್ಗಳು, 16-8-0 ಇಂದ 16-11-0ವರೆಗೆ.

ಬ್ಯಾಂಕ್ ಬಿಲ್‌ಗಳು ದರ್ಶನೆ ದ್ಯಾನಪಾಂಡಿಗಳು, ರೂ ೧ಕ್ಕೆ 6ತಿಂಗಳವಾಯಿದೆಗೆ, 1s. 2 27/32 *d.*

ಡಿಟೋ 4 ತಿಂಗಳವಾಯಿದೆಗೆ, 1s 2 25/32*d.*

ಡಿಟೋ ಕೇಳಿದಾಗ, 1s. 2 11/16*d.*


## ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, FEBRUARY 27, 1893.

೧೮೯೩ನೇ ಇಸವಿ ಫೆಬ್ರವರಿ ತಾ|| ೨೭ ನೇ ಸೋಮವಾರ.


### ಹೋಳಿ ಹುಣ್ಣಿಮೆ ಮತ್ತು ಕಾಮನ ಹಬ್ಬವು ಕುರಿತು.

ಬರುವ ಗುರುವಾರ ಕಾಮನಹಬ್ಬವಾದುದರಿಂದ ಅದು ಇಂಡ್ಯದೇಶದಲ್ಲೊಂದು ವಿಶೇಷದಿನವಾಗಿ ಕೊಂಡಾಡಲ್ಪಡುವ ಪವಾಡಿಕೆಯು ಈಗ್ಯೆ ಬಹುಕಾಲದಿಂದಲು ನೆಲೆಗೊಂಡಿರುತ್ತದೆ. ಇದು ಇತರ ರಜಾ ದಿವಸಗಳಲ್ಲೊಂದಾಗಿ ಗಣಿಸಲ್ಪಟ್ಟಿರುವದರಿಂದ ಆದಿನ ಪ್ರಾಯಿಕ ವಿಶಿಷ್ಟ ಸರ್ಕಾರ್ ಇಲಾಖೆಗಳಿಗೂ ರಜಾಕೊಡಲ್ಪಡುವಂತೆ ಪದ್ಧತಿಯಾಗಿರುತ್ತದೆ. ಪ್ರಕೃತ ಪ್ರಸಕ್ತವಾಗಿರುವ ಹೋಳಿ ಕಾಮನ ಹಬ್ಬಗಳನ್ನು ಕುರಿತು ಯೋಚಿಸಿದರೆ ಇವು ಇಂಡ್ಯ ದೇಶದಲ್ಲಿ ಪುರಾಣ ಪ್ರಸಿದ್ಧಗಳಾಗಿವೆಯೆಂಬ ಕಾರಣದಿಂದಲೇ ಬ್ರಹ್ಮ ಕ್ಷತ್ರಿಯ ವೈಶ್ಯ ಶೂದ್ರರೆಂಬ ನಾಲ್ಕು ಜಾತಿಯವರಿಂದ ಬಹಳ ಆಚರಿಸಲ್ಪಡುತ್ತವೆ. ಕಾಣುತಿದೆಯೇ ಹೊರತು ಇವುಗಳಿಗೆ ಬೇರೆ ನಿಮಿತ್ತವು ತೋರುವದಿಲ್ಲವು. ಈ ಹೋಳಿಕೋತ್ಸವವೆಂಬುದು ಫಾಲ್ಗುಣಮಾಸ ಶುಕ್ಲಪಕ್ಷದಲ್ಲಿ ಆಚರಿಸತಕ್ಕ ಹುಣ್ಣಿಮೆ ಹಬ್ಬವಾಗಿದ್ದು ವಿಶೇಷವಾಗಿರುತ್ತದೆ. ಅದೇ ಕಾಲದಲ್ಲಿಯೇ ಕಾಮನ ಹಬ್ಬವೆಂಬುವದು ಸಹ ಆಚರಿಸಲ್ಪಡುತ್ತದೆ. ಇದಕ್ಕೆ ಮೂಲವಂ ವಿಚಾರಿಸುವಲ್ಲಿ ಪೂರ್ವಕಾಲದೊಳು ಹೋಳಿಕೆ ಎಂಬವಳೊಬ್ಬ ರಕ್ಕಸಿಯು ಫಾಲ್ಗುಣಮಾಸದಲ್ಲಿ ಬಂದು ದೇಶದೊಳಿದ್ದ ಶಿಶುಗಳನ್ನು ಬಾಲಕರನ್ನು ಕೊಂದು ತಿನ್ನುತ ಪಟ್ಟಣಗಳಲ್ಲಿಯೂ ಗ್ರಾಮಗಳಲ್ಲಿಯೂ ಜನಗಳ ಕಣ್ಣುಗಳಿಗೆ ಕಾಣದೆ ತಿರುಗುತಲಿದ್ದದನ್ನು ತಪಸ್ವಿಗಳಾದ ದೊಡ್ಡವರ್ಯರೋ ಅರಿತು ಆ ರಕ್ಕಸಿಯು ಈ ದೇಶವು ಬಿಟ್ಟು ಹೊರಟುಹೋಗುವದಕ್ಕೆ ತಕ್ಕ ಉಪಾಯವಂ

ಹುಡುಕುತ್ತಿರುವಲ್ಲಿ ಅವರಿಗೆ ತೋರಿದ ಒಂದು ಉಪಾಯವನ್ನೆಲ್ಲರಿಗೂ ಹೇಳಿದರಂತೆ. ಅದು ಏನೆಂದರೆ, ಸ್ತ್ರೀ ಪುರುಷರ ರಹಸ್ಯಗಳಾದ ಅಂಗಗಳ ಹೆಸರುಗಳನ್ನೂ ಅವುಗಳ ವ್ಯಾಪಾರಗಳನ್ನೂ ಬಹಿರಂಗವಾಗಿ ನಾನಾವಿಧದಿಂ ಬಣ್ಣಿಸುತ್ತಾಗುವದರಿಂದ ಹೆಂಗಸಾದ ರಕ್ಕಸಿಯು ನಾಚಿಕೊಂಡು ಊರು ಕೇರಿಗಳಂ ಬಿಟ್ಟು ಓಡಿಹೋಗುವಳೆಂಬದು. ಈಮೇರೆ ಅವಳ ಲಕ್ಷಣವಿಲ್ಲದ ಆಕಾರದ ದೊಡ್ಡವರ ಮಾತುಗಳನ್ನು ಜನಗಳು ನಂಬಿ ಚಿಕ್ಕಬಾಲ ಸಾಕಗಳಂ ತಪ್ಪಿಸುವದಕ್ಕಾಗಿ ಪ್ರತಿ ವರ್ಷವೂ ಆರೀತಿ ಮಾಡುತಬಂದರಂತೆ. ಆ ರಾಕ್ಷಸಿಯು ದೇಶದೊಳು ಸುಚರಿಸುವ ಕಾಲವು ಫಾಲ್ಗುಣ ಶುಕ್ಲಪಕ್ಷವೆಂದು ಭವಿಷ್ಯದಲ್ಲಿಯೇ ತಿಳಿಸಲ್ಪಟ್ಟದರಿಂದ ಆಕಾಲದಲ್ಲಿ ಸರೀ ಮೇರೆ ಮಾಡುತಲಿದ್ದರು. ಈ ಸಂಪ್ರದಾಯವೇ ಈಗಲೂ ಪರಂಪರಾಗತವಾಗಿದೆ. ಇದೇಕಾಲದಲ್ಲಿ ಕಾಮನ ಹಬ್ಬಕ್ಕೇನು ಪ್ರಸಕ್ತಿಯೆಂದರೆ, ಪೂರ್ವಕಾಲದಲ್ಲಿ ಹಿಮವತ್ಪರ್ವತದೊಳು ಪರಮೇಶ್ವರನು ಪುತ್ರಾರ್ಥಿಯಾಗಿ ಪಾರ್ವತಿಯೊಡನೆ ವಿಹರಿಸುತಲಿರುವಲ್ಲಿ ಬಹುಕಾಲದ ಪರಿವಿಗೂ ಆತನ ಉದ್ದೇಶವು ಸಫಲವನ್ನೈದದ್ದರಿಂದ ಮನ್ಮಥನು ದೇವತೆಗಳಿಂದ ಪ್ರೇರಿತನಾಗಿ ತನ್ನ ಶಕ್ತಿಯನ್ನಾತನಮೇಲೆ ತೋರಿಸಲು ಆತನಿಗೆ ಆಗ್ರಹ ವುಂಟಾಗಿ ತನ್ನ ಫಾಲಲೋಚನವಂ ತೆರೆದು ನೋಡಲು ಆಗ ಮನ್ಮಥನು ಭಸ್ಮವಾಗಿ ಹೋದನು. ಇಂತಾ ಅಂಗದೇಶಾಧಿಪನಾದ ಮದನನ ವಿಜಯವೂ ಆತನ ಸಂಹಾರವೂ ಫಾಲ್ಗುಣ ಶುಕ್ಲ ಪೌರ್ಣಿಮಿಯಲ್ಲಿ ನಡೆದವಾಗಿ ಆದಿವಸದ ಸ್ಮರಣಾರ್ಥ ಕಟ್ಟಿಗೆ ಬೆರಣಿಗಳನ್ನು ಜೋಡಿಸಿ ಚತುಷ್ಪಥದಲ್ಲಿ ಮಾಡಿ ಅದರ ಮೇಲೆ ಮನ್ಮಥಾಕೃತಿಯುಳ್ಳ ಚಿತ್ರಪಟವನ್ನಿಟ್ಟು ಅವನಧನುಸ್ಸಂಬಭಾವನೆಯೊಡನೆ ಕಬ್ಬಿನ ಜಲ್ಲೆಕಟ್ಟಿ ಒಂದುಬಗೆಯಾದಪೂಜೆಯಂಮಾಡಿ ಸುಟ್ಟಲೂ ಬಾಯಿಬಡಿದುಕೊಳ್ಳುತ್ತಾರೆ. ಇದೇ ಈಗಿನವರು ಮಾಡುವ ಕಾಮದಹನವೆಂಬದು. ಆ ಮಾರನೆಯದಿನ ಅದರ ಬೂದಿಯಂ ಜನಗಳು ಮೈಗಚ್ಚಿಕೊಳ್ಳುವದಕ್ಕೆ ಕಾರಣವೇನೆಂದರೆ, ಮುಕ್ಕಣ್ಣನು ಮನಸಿಜನಮೇಲಿನ ಕೋಪದಿಂ ಅವನಂ ಬೂದಿ ಮಾಡಿದ್ದಲ್ಲದೆ ಆ ಭಸ್ಮವನ್ನು ತನ್ನ ದೇಹಕ್ಕೆ ಲೇಪನಂ ಮಾಡಿಕೊಂಡನಾಗಿ ತತ್ಸೂಚನಾರ್ಥ ಜನಗಳೂ ತಮ್ಮಿಂದ ಸುಡಲ್ಪಡುವ ಕಟ್ಟಿಗೆ ಪುಳ್ಳೆಗಳ ಬೂದಿಯನ್ನು ತಮ್ಮ ಮೈಮೇಲೆ ಧರಿಚಿಕೊಳ್ಳುತ್ತಾರೆ. ಬುತ್ತು ಮನ್ಮಥನು ಸುಡಲ್ಪಟ್ಟದರಿಂದ ಅವನ ಭಾರ್ಯೆಯಾದ ರತೀದೇವಿಯು ಮಹಾ ದುಃಖಸಂತಪ್ತೆಯಾಗಿ ಈಶ್ವರನ ಬಳಿಗೆ ಹೋಗಿ ಪತಿಭಿಕ್ಷೆಯಂ ಬೇಡಿ ಪ್ರಲಪಿಸಿದಳಾಗಿ ಸಕಲ ಜನಗಳ ಸಂತೋಷಕ್ಕೆ ಕಾರಣಭೂತನಾದ ಮನ್ಮಥನ ನಾಶನಕ್ಕಾಗಿ ಯೆಲ್ಲರೂ ದುಃಖಸೂಚಕಗಳಾದ ಚೇಷ್ಟೆಗಳಂ ಮಾಡುತ್ತಾರೆ ಬಳಿಕ ಅವರು ಸಂತೋಷವಂ ಪ್ರದರ್ಶಿಸಲಿಕ್ಕೆ ನಿಮಿತ್ತವೇನೆಂದರೆ, ಪತಿ ಭಿಕ್ಷೆಯಂ ಬೇಡಿ ಕೇವಲ ಕಾತರಳಾಗಿ ರತಿದೇವಿ ಮಾಡಿದ ಪ್ರಾರ್ಥನೆಯ ದೆಸೆಯಿಂದ ಅಂಗಜವಿರೋಧಿಯಾದ ಈಶ್ವರನು ಪ್ರಸನ್ನನಾಗಿ ಆಕೆಯಮೇಲೆ ಅನುರಾಗದಿಂ ನಿನ್ನ ಪತಿಯು ಇನ್ನುಮೇಲೆ ನಿರಾಕಾರನಾಗಿ ಮನದಲ್ಲಿಯೇ ನೆಲೆಗೊಂಡಿರುವನೆಂದು ವರವನ್ನಿತ್ತನು. ಆಗ ರತೀದೇವಿಯು ಮೃತಭರ್ತೃಕೆಯಾಗಿದ್ದರೂ ಪಾರ್ವತೀಶನವರಪ್ರಭಾವದಿಂ ಪತಿಯಂಮರಳೆ ಹೊಂದಿ ಮಹದಾನಂದವನ್ನೈದಿದಳೆಂದು ಪುರಾಣ ಗ್ರಂಥಗಳಲ್ಲಿ ತಿಳಿಸಲ್ಪಟ್ಟಿರುತಿವೆ. ಇದನ್ನೆಲ್ಲರೂ ಆಚರಿಸಬೇಕೆಂದು ವಿಧಿಸಿದ ಶಾಸ್ತ್ರಕ್ಕೇನು ಲಕ್ಷ್ಯವೆಂದಾಲೋಚಿಸಿದರೆ ಏನೋ ಒಂದುಬಗೆಯಾದ ಭ್ರಾಂತಿಯೆಂದು ತೋರುತಿದೆ. ಅದಕ್ಕೆ ವಿಶೇಷವಾದ ವಿಧಿಗಳ್ಯಾವವೂ ಹುಟ್ಟಿರುವುದು ಕಾಣಿಸಲಿಲ್ಲವು. ಈ ಹಬ್ಬವು ಮಹಾರಾಷ್ಟ್ರದೇಶದಲ್ಲಿ ಬಹಳ ವಿಜೃಂಭಣೆಯಾಗಿ ನಡೆಸಲ್ಪಡುತ್ತದೆ ನಮ್ಮ ಕೇಳ್ವಿಗೆ ಬಂದಿರುತಿದೆ. ಆದರೆ ಈಗ ಮೇಲೆ ತಿಳಿಸಲ್ಪಟ್ಟ ಇತಿಹಾಸಗಳಿಂದ ಫಾಲ್ಗುಣ ಶುದ್ಧ ಪೌರ್ಣಮಿಯಲ್ಲಿ ಕಾಮ ದಹನವೆಂಬ ಕೃತ್ಯವನ್ನು ಮಾತ್ರ ಒಂದು ಹೇಳಿದ ವಿಷಯದ ಜ್ಞಾಪಕಾರ್ಥ ಮಾಡಬೇಕೆಂದು ಸುಚಿದಾಗ್ಯೂ ಆದರ ಹಿಂದಿನ ೧೫ ದಿನಗಳ ಮೊದಲು ಕಾಮನೆಂತಲೂ ರತಿಯೆಂತಲೂ ಪ್ರತಿಮೆಗಳನ್ನಿಟ್ಟು ಅವುಗಳಿಗೆ ಅಲಂಕಾರಗಳಂ ಮಾಡಿ ರಾತ್ರಿ ಹಗಲೂ ಇಷ್ಟ ಮಿತ್ರರೊಡನೆ ಭ್ರಾಂತರಂತೆ ವಿನೋದಿಸುತಲಿರಬೇಕೆಂಬದಕ್ಕೇನೂ ಆಧಾರವಿರುವದಿಲ್ಲವಂ. ಪ್ರಸಕ್ತ ಕಾಮನ ಹಬ್ಬದ ವಿಷಯದಲ್ಲಿ ಕೆಲವರು ಪ್ರಕಾರಾಂತರವಾಗಿ ಅರ್ಥ ಕಲ್ಪನೆಮಾಡಿ ತದ್ವತ್ ಆಚರಿಸುತ್ತಾರೆಂತೆಂದರೆ—ಷಡ್ರುತುಗಳ ಪೈಕಿ ವಸಂತವು ಕೇವಲ ಆಹ್ಲಾದಕಾರಿಯಾಗಿಯೂ, ಶ್ರೇಷ್ಠವಾದುದಾಗಿಯೂ, ಸಕಲ ಸಂತೋಷಾನುಭವಗಳಿಗೆ ಉಚಿತ ಸಮಯವಾಗಿಯೂ, ಕವಿವರ್ಣನೆಗೆ ಸಹ ಅರ್ಹವಾದುದಾಗಿಯೂ, ಹೇಮಂತ ಮೊದಲಾದ ಋತುಪ್ರಯುಕ್ತ ತೊಂದರೆಗಳೆಲ್ಲವು ನಿವಾರಣವಾಗಿ ಮನೋಜ್ಞವಾದ ಸಮಯವು ಸಂಪ್ರಾಪ್ತವಾಗುವದೆಂಬದಕ್ಕೆ ವೃಕ್ಷಗಳು ಚಿಗುರಿ, ಪಲ್ಲವಗಳಿಂದ ಮನೋಜ್ಞವಾಗಿ ಕಂಗೊಳಿಸುವ ಕಾಲವಾಗಿರುವದರಿಂದಲೂ, ಈಗ ನೂತನ ಧಾನ್ಯವು ಬೆಳೆದು ಗ್ರಾಮಗಳಿಗೆ ಬಂದು ಸೇರುವ ಕಾಲವಾಗಿರುವದರಿಂದಲೂ, ಜನಗಳ ಉತ್ಸಾಹ ಪ್ರವರ್ತಕವಾದ ಈ ಉತ್ಸವವು ವಸಂತಾಗಮನ ಸೂಚಕವಾಗಿ ಕೊಂಡಾಡಲ್ಪಡುವಂತೆ ಭಾವಿಸಿ ಕೆಲವರು ಆಚರಿಸುತ್ತಾರೆ ಮುಖ್ಯವಾಗಿ ಈ ಕಾಮನಹಬ್ಬವು ಪೂರ್ವದೆ ಈ ದೇಶದಲ್ಲಿ ಬಹಳ ಪ್ರಬಲವಾಗಿ ಕೊಂಡಾಡಲ್ಪಡುತಲಿತ್ತು. ಈಗ ಪ್ರಜಾಸಾಮಾನ್ಯಕ್ಕೆ ನಾಗರಕ ವೈಲಕ್ಷಣ್ಯಾದಿಗಳು ವೃದ್ಧಿಯಾಗುತ ಬಂದಿರುವದರಿಂದಲೂ, ಪ್ರತ್ಯದ ಮಾಲ್ಯವನ್ನು ವಿಶೇಷತಃ ಅರಿತು ಅದರ ಆದಾಯ ವ್ಯಯದಲ್ಲಿ ತುಂಬಾ ಜಾಗರೂಕರಾಗುತ ಬಂದದರಿಂದಲೂ, ತಾವು ಮಾಡತಕ್ಕ ಪ್ರತಿಕಾರ್ಯಕ್ಕೂ ಕಾರ್ಯಕಾರಣಗಳನ್ನಾಲೋಚಿಸಿ ಪ್ರತಿಫಲವಂ ತೋರುವಂತಾವರಾಗಿರುವದರಿಂದಲೂ, ನಿಷ್ಕಾರಣಗಳಾದವನ್ನೇ ಅನಾವಶ್ಯಕವೆಂದು ನುಡಿಯುತ, ಅವಂ ತೊರೆಯುವರಲ್ಲಭಿಮುಖರಾಗಿರುವದಲ್ಲದೆ ಇಂತವುಗಳಲ್ಲಿ ಉತ್ಸಾಹವಂ ತೊರೆದು ವಿಷಯಾಂತರಗಳಲ್ಲನುರಕ್ತರಾಗುತ ಬರುವದರಿಂದಲೂ, ಈ ಹಬ್ಬದ ವಿನೋದಗಳೆಲ್ಲವು ದಿನೇದಿನೆ ಕಡಮೆಯಾಗುತ ಬಂದು ಈಗ ಕೇವಲ ನಾಮಮಾತ್ರ ವಶಿಷ್ಟವಾಗಿರುತಿದೆ. ಪ್ರಜೆಗಳ ತಾತ್ಪರ್ಯವೂ ಅಭಿರುಚಿಯೂ ಭಿನ್ನಿಸಿದ್ದು ಮಾತ್ರ ಕಾರಣವಲ್ಲದೆ ಇದರ ಹ್ರಾಸಕ್ಕೆ ಸರ್ಕಾರದವರ ನಿರ್ಬಂಧವೂ ಬಹಳಮಟ್ಟಿಗೆ ಸಹಾಯಕವಾಗಿ ಯೇರ್ಪಟ್ಟಿತು. ಹೀಗೆಯೇ(ಕಾಲಕ್ರಮೇಣ, ಸಕಲ ಪದ್ಧತಿಗಳೂ, ಸನ್ನಿಯಮಗಳೂ, ವಿಶಿಷ್ಟ ಆಚಾರಗಳೂ, ಜನರ ಅಭಿಪ್ರಾಯಾನುಗುಣವಾಗಿಯೂ ಇತರ ಕಾರ್ಯಕಾರಣಗಳನ್ನನುಸರಿಸಿಯೂ ರೂಪಾಂತರಗಳನ್ನೈದಬೇಕಾದುದು ಸ್ವಾಭಾವಿಕವಾಗಿರುತಿದೆ ಜನರ ಸಕಲವಿಧ ಉತ್ಸಾಹಗಳಿಗೂ ಆಧಾರಭೂತವಾದ ಧನವೂ, ತತ್ಸಂಪಾದನಸೌಲಭ್ಯವೂ ಯಾವಾಗ ಅವರಿಗೆ ದೂರವಾದವೋ, ದಾರಿದ್ರ್ಯಪೀಡಿತರಾದ ಅವರಿಗೆ ಸಕಲವಿಷಯದೊಳಗನ್ಯರಾಸ್ಯವೂ, ಜಿಗುಪ್ಸೆಯೂ ಉಂಟಾಗುವದೇನೂ ಆಶ್ಚರ್ಯವಲ್ಲವು

## ಸಬ್‌ರಿಜಿಸ್ಟ್ರರಗಳಿಗೆ ಜಾಸ್ತೀ ಅಧಿಕಾರಗಳಂ ಕೊಡುವ ವಿಷಯ.

ಬ್ರಿಟಿಷ್ ಗವರ್ನಮೆಂಟಿನವರು ಈ ರಾಜ್ಯವು ಸ್ವಾಧೀನ ಪಡಿಸಿಕೊಂಡ ಕಾಲದ ಮೊದಲು ಅನಂತರದಂ ಮರಳಿ ಶ್ರೀಮನ್ ಮಹಾರಾಜರವರಿಗೊಪ್ಪಿಸುವ ತನಕ, ದೇಶ ಜನ ಕ್ಷೇಮಾಭಿವೃದ್ಧಿಗಾಗಿ ಮಾಡಿದ ನಾನಾವಿಧ ಯೋಜನೆಗಳೆಲ್ಲವು ಈಗ ವಿಶೇಷ ಫಲದಾಯಕಗಳಾಗುತಬರುವದರಿಂದ ಅವುಗಳ ಪ್ರಯೋಜನಗಳಂ ಮಹಾರಾಜರವರು ಅತಿಶಯವಾಗಿ ಅನುಭವಿಸುತಲಿದಾರೆ. ಈ ಸಂಸ್ಥಾನದ ಉತ್ಪತ್ತಿಯು ಈಗ್ಯೆ ಕೆಲವು ವರುಷಗಳ ಕಾಲದ ಮೊದಲು ಅಸಾಧಾರಣವಾಗಿ ಅಭಿವೃದ್ಧಿಯನ್ನೈದುತ ಬರಲಿಕ್ಕೂ, ಇಲ್ಲಿನ ರಾಜ್ಯಭಾರ ಸಿರ್ವಹಣ ಕ್ರಮವು ಬಹಳವಾಗಿ ಪ್ರಶಂಸಿಸಲ್ಪಡಲಿಕ್ಕೂ ಪೂರ್ವ ವ್ಯವಸ್ಥೆಗಳೇ ಕಾರಣಗಳೆಂಬದಂ ಒಬ್ಬರೂ ನಿರಾಕರಿಸಲಾರರೆಂದು ನಂಬುತ್ತೇವೆ. ದೇಶದ ಹುಟ್ಟುವಳಿ ಜಾಸ್ತಿಯಾಗುವದಕ್ಕೆ ಪ್ರತಿಯೊಂದು ಒಂದು ಬೂ ಕಾರಣವಾಗಿ, ಅದರಲ್ಲಿ ಪ್ರತಿವರುಷವೂ ಸರ್ಕಾರಕ್ಕೆ ವಿಶೇಷ ಆದಾಯವು ಕಂಡುಬರುತಲಿದೆ. ಇಂತಾ ಅನೇಕ ಬಾಬಿಗಳಲ್ಲಿ ರಿಜಿಸ್ಟ್ರೇಷನ್ ಒಂದೆಂದೆಣಿಸತಕ್ಕದ್ದು. ರಿಜಿಸ್ಟ್ರೇಷನ್ ಆಕ್ಟ್ ಈ ದೇಶದಲ್ಲಿ ಪ್ರಥಮತಃ ಜಾರೀಯಲ್ಲಿ ತರಲ್ಪಟ್ಟ ಕಾಲದ ಮೊದಲು, ಅಂದರೆ ೧೮೬೬ ನೇ ಇಸವಿ ಲಾಗಾಯಿತು ಪ್ರತಕ್ಷಣ ಪರ್ಯಂತ ೨೬ ವರುಷಗಳ ಕಾಲದೊಳೇ ಬಾಬಿನಲ್ಲಿ ಹುಟ್ಟುವಳಿಯು ಕ್ರಮವಾಗಿ ವೃದ್ಧಿಯಾಗುತ, ಸುಲೀಯಾನಾ ಖರ್ಚ್ ಜಾತಾ ಅನೇಕ ಸಹಸ್ರ ರೂಪಾಯಿಗಳು ಉಳಿಯುತಿವೆ. ಗತ ಸಾಲಿನ ಹುಟ್ಟುವಳಿಯನ್ನು ನೋಡಲಾಗಿ ಮುಂದಿನ ವರುಷದಲ್ಲಿ ಅಥವಾ ಇನ್ನು ಒಂದೆರಡು ವರುಷಗಳೊಳಗಾಗಿ ರಿಜಿಸ್ಟ್ರೇಷನ್ ಹುಟ್ಟುವಳಿಯು ಲಕ್ಷ ರೂಪಾಯಿಗಳ ತನಕ ಬರಬಹುದೆಂದು ತೋರುತಿದೆ, ಪ್ರಸಕ್ತ ವಿಷಯದೊಳು ಅನ್ಯತ್ರ ಉಂಟುಮಾಡಲ್ಪಟ್ಟಿರುವ ಸೌಕರ್ಯಗಳಲ್ಲಿ ಕಾಲುಪಾಲು ಕೂಡ ಇಲ್ಲಿ ಇಲ್ಲದೆ ಇದ್ದಾಗ್ಯೂ ಪ್ರಜೆಗಳು ರಿಜಿಸ್ಟ್ರೇಷನಿನ ಪ್ರಯೋಜನವನ್ನು ಚೆನ್ನಾಗಿ ತಿಳಿದುಕೊಂಡದರಿಂದ ಅವರು ಸಕಲ ನಿರ್ಬಂದಗಳನ್ನೂ ಸಹಿಸಿಕೊಂಡು, ಪತ್ರಗಳ ರಿಜಿಸ್ಟರ್ ವಿಷಯದಲ್ಲಿ ವಿಶೇಷ ಶ್ರದ್ಧೆಯುಳ್ಳವರಾಗಿದಾರೆ. ಅವರಿಗೆ ಬೇಕಾದ ಅನುಕೂಲ್ಯಗಳು ಪೂರ್ಣವಾಗಿ ಕಲ್ಪಿಸಲ್ಪಟ್ಟರೆ "ಆಫೀಸನಲ್ಲಿ ರಿಜಿಸ್ಟ್ರೇಷನ್" ಅಂದರೆ ಇಷ್ಟವಿದ್ದರೆ ರಿಜಿಸ್ಟರ್ ಮಾಡಿಸಬಹುದೆಂಬ ನಿಯಮವೇ ನಿವೃತ್ತಿಯಾಗಿ, ಎಲ್ಲವೂ ರಿಜಿಸ್ಟ್ರೇಷನ್ ಬಗ್ಗೆ ತರಲ್ಪಡಬಹುದಲ್ಲದೆ ನಾವು ಮೇಲೆ ತಿಳಿಸಿದಂತೆ ಹುಟ್ಟುವಳಿಯು ಸಹ ಅಧಿಕವಾಗಬಹುದು. ಈಗ ನೆಲೆಗೊಂಡಿರುವ ಮುಖ್ಯವಾದ ಅನಾನುಕೂಲಗಳು ಯಾವವೆಂದರೆ— ರಿಜಿಸ್ಟ್ರೇಷನ್ ಕಾರ್ಯವು, ಪ್ರಾಯೇಣ ಅನೇಕಕಡೆಗಳಲ್ಲಿ ಇತರಕೆಲಸಗಳೊಡನೆ ಒಬ್ಬರಿಗೆ ಒಪ್ಪಿಸಲ್ಪಟ್ಟಿರುವದರಿಂದ ಕಕ್ಷಿಗಾರರು ಅವರ ಸಮಯವಂ ನಿರೀಕ್ಷಿಸಬೇಕಾಗಿರುವದರಿಂದಲೂ, ಆಂತಾ ಅಧಿಕಾರಿಗಳು ಬಹುಕಾರ್ಯನಿರತರಾಗಿ, ಜಿಗುಪ್ಸೆಯೊಡನೆ ವಿರಾಮವುಂಟಾದಾಗ ರಿಜಿಸ್ಟ್ರೇಷನ್ ಕೆಲಸಕ್ಕೆ ಬರುವದರಿಂದಲೂ, ತಾವತ್ಪರ್ಯಂತ ಜನಗಳು ಬೇಸತ್ತು ಕಾಯುದು ಬದ್ಧರವೇಕಾಗಿರುತದೆ. ಇದು ಸ್ಥಳದವರಿಗೆ ವಿಶೇಷ ಬಾಧಕವಲ್ಲವೆ ಹೋದಾಗ್ಯೂ ಪರಸ್ಥಳಗಳಿಂದ ಬರತಕ್ಕವರಿಗೆ ಬಹಳ ಅಡಚಣೆಯನ್ನುಂಟುಮಾಡದೆ ಹೋಗುವದಿಲ್ಲವು. ಕೆಲವರು ತಿರಸ್ತೇದಾರ್-ಸಬ್ ರಿಜಿಸ್ಟ್ರರಗಳು ತಮ್ಮ ಬಳಿಗೆ ಬರತಕ್ಕಂತ ಪ್ರಜೆಗಳ ವಿಷಯದಲ್ಲಿ ಪ್ರಸನ್ನರಾಗಿರದೆ, ಬಹಳ ಕಠಿಣಚಿತ್ತರಾಗಿರುತ್ತಾರೆಂದು ಅಲ್ಲಿಯಲ್ಲಿ ಫಿರ್ಯಾದಿಗಳು ತಲೆಯೆತ್ತುತಲಿವೆ. ಇಂತಾ ಅನಾನುಕೂಲಗಳು ಯಾವವೂ ಇರಕೂಡದೆಂಬ ಭಾವದೊಡನೆ ಮದರಾಸ್ ಪ್ರಸಿಡೆನ್ಸಿಯಲ್ಲಿ ಸರ್ವತ್ರ ಸ್ಪೆಷಿಯಲ್ ಸಬ್ ರಿಜಿಸ್ಟ್ರರಗಳು ನಿಯಮಿತರಾಗಿ ಅವರಕೆಲಸವು ಪ್ರಾಯೇಣ ಗ್ರಾಜ್ಯುಯೇಟಿಗಳಿಗೆ ಕೊಡಲ್ಪಡುತಲಿವೆ ಇವರ ಸಂಬಳಗಳು ಐದಾರು ಗ್ರೇಡಗಳಾಗಿ ವಿಭಜಿಸಲ್ಪಟ್ಟವೆ ಯಲ್ಲದೆ, ಸಂಬಳವಲ್ಲದೆ ಪ್ರತ್ಯೇಕವಾಗಿ ಹುಟ್ಟುವಳಿಯಲ್ಲಿ ಸೇಕಡ ಇಷ್ಟೆಂದು ರುಸುಂ ಸಹ ಕೊಡಲ್ಪಡುತಿದೆ. ಇಂತಾ ಸಬ್ ರಿಜಿಸ್ಟ್ರರಗಳಿಗೆ ರಿಜಿಸ್ಟ್ರೇಷನ್ ಕೆಲಸಗಳು ಸಾಕಾಗಿದ್ದರೂ ಯಥೋಚಿತ ವಿರಾಮ ವುಂಟಾದ ಕಾಲಗಳಲ್ಲಿ ಅವರ ನೌಕರಿಯು ಅನ್ಯತರವಾಗಿ ಉಪಯೋಗಿಸಿಕೊಳ್ಳಲ್ಪಡುತಿವೆ. ಅನೇಕರಿಗೆ ಮ್ಯಾಜಿಸ್ಟ್ರೇಟಿ ಅಧಿಕಾರಗಳು ಕೊಡಲ್ಪಟ್ಟು, ಮೊಕದ್ದಮೆಗಳು ರಿಫರ್ ಮಾಡುತಬರುವದರಿಂದ ಆ ಬಾಬಿನಲ್ಲಿ ಕೂಡ ಅವರ ಯೋಗ್ಯತೆಯು ಹೊರಬೀಳುತಲಿರುತಿದೆ. ಅಲ್ಲಾಹಿದಾ ಸಬ್ ರಿಜಿಸ್ಟ್ರರಗಳ ಏರ್ಪಾಡಿನಿಂದ ಉತ್ಪತ್ತಿ ಅಧಿಕವಾಗುವದೆಂಬ ನಂಬಿಕೆಯೊಡನೆ, ಇಲ್ಲಿನ ಇನ್ಸ್‌ಪೆಕ್ಟರ್ ಜನರಲ್ಲವರಾದ ಮ|| ವಿರೂಪಾಕ್ಷ ಅಯ್ಯರವರು, ಕೆಲವು ತಾಲ್ಲೂಕ್‌ಗಳಲ್ಲಿ ಸ್ಪೆಷಿಯಲ್ ಸಬ್ ರಿಜಿಸ್ಟ್ರರಗಳನ್ನು ನಿಯಮಿಸಬೇಕೆಂದು ಗವರ್ನಮೆಂಟಿಗೆ ಸಿಫಾರಸ್ಸು ಮಾಡಿದ್ದರಮೇಲೆ ಅವರು ಕಳೆದ ಸಂವತ್ಸರ ಜನವರಿ ತಿಂ* ಗಳಲ್ಲಿ ಹೊಸದಾಗಿ ಸ್ಪೆಷಿಯಲ್ ಆಫೀಸ್ ಗಳನ್ನು ಸ್ಥಾಪಿಸಲಿಕ್ಕೆ ಹುಕುಂ ಕೊಟ್ಟರು. ಅದೇ ರೀತಿ ಏಪ್ರಿಲ್ ಮೊದಲು ವ್ಯವಸ್ಥೆಯಾಗಿ, ಅಲ್ಲಿ ಹುಟ್ಟುವಳಿ ಹೆಚ್ಚುತ ಬರುವ ಹಾಗೆ ತಿಳಿಯಬರುತಿದೆ. ಪ್ರಸಕ್ತ ರಿಜಿಸ್ಟ್ರೇಷನ್ ಇಲಾಖೆಯು ಇತರ ವಿಷಯಗಳಂತೆ ಮದರಾಸ್ ಪ್ರಸಿಡೆನ್ಸೀ ಕ್ರಮವನ್ನನುಸರಿಸಿದ್ದಾಗಿರಬೇಕೆಂದು ಭಾವಿಸಿ ಇನ್ಸ್‌ಪೆಕ್ಟರ್ ಜನರಲ್ಲವರು, ಪ್ರಾಯಶಃ ವಿದ್ಯಾವಂತರಾಗಿಯೂ ವಿಶೇಷ ಜವಾಬ್ದಾರಿಯನ್ನು ವಹಿಸಲಿಕ್ಕೆ ಶಕ್ತರಾಗಿಯೂ, ಯೂನಿವರ್ಸಿಟಿ ಗ್ರಾಜ್ಯುಯೇಟಿ ಗಳಾಗಿಯೂ ಇರುವವರನ್ನೇ ಆರಿಸಿ ಮೊಕರರ್ ಮಾಡಿದರು. ಅವರವರ ಮಹಗೌರವವನ್ನೂ, ವಿದ್ಯಾ ವೈದುಷ್ಯವನ್ನೂ ಪರಿಭಾವಿಸಿ, ಗುಣ ಪಕ್ಷಪಾತದೊಡನೆ ಮಾಡಿದ ಮ|| ವಿರೂಪಾಕ್ಷ ಅಯ್ಯರವರ ಯೋಗ್ಯತೆಗಳಿಗೆ ಅವರೆಲ್ಲರು ವಿಶೇಷ ಕೀರ್ತಿ ಸಂಪಾದಕರಾಗಿದಾರೆಂಬದು ಕೇಳಿ ಸಂತೋಷಿಸುತ್ತೇವೆ. ಈ ರಿಜಿಸ್ಟ್ರೇಷನ್ ಇಲಾಖೆಯು ಪ್ರವೆ ಶಾರ್ಟಕ ಯನ್ನು ಗ್ರಾಜ್ಯುಯೇಟಿಗಳಿಗೆ ಮಾತ್ರವೇ ನಿಬಂಧಿಸಬೇಕೆಂಬ ಅಭಿಪ್ರಾಯವು ಇನ್ಸ್‌ಪೆಕ್ಟರ್ ಜನರಲ್ಲವರಿಗೆ ಅಧಿಕವಾಗಿರುವಂತೆ ತಿಳಿಯಬರುತಿದೆ ಇದರಿಂದ ಸದರೀ ಇಲಾಖೆಯಲ್ಲಿ ಬಹುಕಾಲದ ಮೊದಲು ಯಾವ ಘನತೆ ಇಲ್ಲದೆ ಕೆಲಸ ಮಾಡುತಲಿರತಕ್ಕವರು ಅನರ್ಹರೆಂದೇರ್ಪಟ್ಟು ಗ್ರಾಜ್ಯುಯೇಟಿಗಳಿಗಾದರು ವಿಶೇಷ ಪ್ರಯೋಜನ ವುಂಟಾಗುವದು ಸಂತೋಷಿಸತಕ್ಕದ್ದಾಗಿರುತಿದೆ. ಮುಂದೆ ಹಳಬರು ಖಾಲಿಯಾಗುತ ಬರುವಂತೆಲ್ಲ ಆಕ್ಷರಾಸ್ಯರಾದ ದೊಡ್ಡವರ ಸಂತತಿಯವರು ಪ್ರಬಲಿಸುವದಕ್ಕೆ ಅವಕಾಶವುಂಟಾಗುವದು. ಇದೂ ಒಂದುಬಗೆ ಪ್ರೋತ್ಸಾಹವೆಂತಲೇ ಭಾವಿಸತಕ್ಕದ್ದಾಗಿದೆ ಮದರಾಸ್ ಗವರ್ನಮೆಂಟಿನವರಂತೆ ಇವಕ್ಕೆ ಗ್ರಾಜ್ಯುಯೇಟಿಗಳೇ ಬೇಕೆಂಬ ಕೋರಿಕೆ ಮಾತ್ರ ಇಲ್ಲಿನವರಿಗೆ ಅಧಿಕವಾಗಿದೆಯೇ ಹೊರ್ತು ಅವರಿಗೆ ತಕ್ಕ ಕಾರ್ಯ ಗೌರವವನ್ನುಂಟುಮಾಡುವದರಲ್ಲಿ ದೃಷ್ಟಿ ಇರುವಂತೆ ಕಾಣಿಸಲಿಲ್ಲವು. ಇಲ್ಲಿನ ಸಬ್ ರಿಜಿಸ್ಟ್ರರಗಳಿಗೆ ಕೆಲಸವು ಬಹಳ ಕಡಮೆಯಾಗಿರುವದರಿಂದ ಅನೇಕರು ತಮಗೆ ಇಷ್ಟಬಂದಾಗ ಆಫೀಸಿಗೆ ಹೋಗಲಿಕ್ಕೆ ಕಾರಣವಾಗಿರುತಿವೆ. ಇತರ ಕಾಲಗಳಲ್ಲಿ ಇವರ ನೌಕರಿಯನ್ನು ಗವರ್ನಮೆಂಟಿನವರು ಬೇರೆ ವಿಷಯದಲ್ಲಿ ಉಪಯೋಗಿಸಿಕೊಳ್ಳಬಹುದಾಗಿರುತಿದೆ. ಇವರೆಲ್ಲರು ವಿದ್ಯಾವಂತರಾಗಿಯೂ ವಿಶೇಷ ಪರಿಭಾವನೆಯೊಡನೆ ನಿಯಮಿತರಾದವರಾಗಿಯೂ ಇರುವದರಿಂದ ಇವರಿಗೆ ಯಾವ ಕೆಲಸ ಕೊಟ್ಟಾಗ್ಯೂ ನಿರ್ವಹಿಸಲಿಕ್ಕೆ ಶಕ್ತರಾಗಿದಾರೆಂತಲೇ ಭಾವಿಸಬೇಕಾಗಿರುತಲಿದೆ ಇವರ ನೌಕರಿಯನ್ನುಪಯೋಗಿಸಿಕೊಳ್ಳಲಿಕ್ಕೆ ಅನೇಕ ಬಾಬಿಗಳಿರುತಲಿವೆ. ತಾಲ್ಲೂಕ್‌ಗಳಲ್ಲಿ ಅಮಲ್ದಾರರಿಗೆ ಮ್ಯಾಜಿಸ್ಟೀರಿಯಲ್ ಮುಜರಾಯಿ ವಗೈರೆ ಚಿಲ್ಲರೆ ವಿಚಾರಣೆಗಳು ಅನೇಕವಾಗಿರುವದರಿಂದಲೂ, ಕಾರ್ಯಬಾಹುಳ್ಯದಿಂದವರು ಸಹಾಯ ರಹಿತರಾಗಿ ಶ್ರಮಪಡುವದರಿಂದಲೂ, ಯೋಗ್ಯಗಳಾದ ಯಾವದಾದರು ಕೆಲಸಗಳನ್ನೊಪ್ಪಿಸಿ, ಪ್ರಾತಃಕಾಲಗಳಲ್ಲಿಯೂ ರಿಜಿಸ್ಟ್ರೇಷನ್ ಕೆಲಸಗಳು ವಿಶೇಷವಾಗಿಲ್ಲದ ಕಾಲದಲ್ಲೂ ಅವುಗಳನ್ನು ನಿರ್ವಹಿಸತಕ್ಕದ್ದೆಂದು ಹುಕುಂ ಮಾಡಬಹುದು. ಇಂತಾ ಏರ್ಪಾಟಿನಿಂದ ಸಕಲಕೆಲಸಗಳೂ ತೀವ್ರವಾಗಿ ಜರುಗುವದಲ್ಲದೆ ಅಮಲ್ದಾರರು ತಮಗೆ ಬಹಳ ಸಹಾಯವೆಂತು ಪುಕಾರ ಮಾಡದಿರಲಿಕ್ಕೂ, ಮುಖ್ಯ ವಿಷಯಗಳನ್ನೆಲ್ಲ ಉದಾಸೀನ ಮಾಡದಿರಲಿಕ್ಕೂ, ಸಬ್‌ರಿಜಿಸ್ಟ್ರರವರ ಉಪಯುಕ್ತತೆಯು ಅಧಿಕವಾಗಿ, ಗೌರವವು ಹೆಚ್ಚಲಿಕ್ಕೂ ಕಾರಣಭೂತವಾಗಿರುವವು.

* 1 ನಂಜನಗೂಡು,
2 ಅರಕಲಗೂಡು,
3 ಚಾಮರಾಜನಗರ,
4 ಚಿಕ್ಕಮಗಳೂರು,

...ಗೆ ಜವಾಬ್ದಾರಿಯುಳ್ಳ ದೊಡ್ಡ ಕೆಲಸಗಳನ್ನೊಪ್ಪಿಸುವದು ಪ್ರಾರಂಭ ದಶೆಯಲ್ಲಿ ಅಪಾಯಕರವೆಂದು ಭಾವಿಸಲ್ಪಡಬಹುದು. ಆದಾಗ್ಯೂ ತರೀಕ್ ಸಾಮಾನ್ಯ ಕೆಲಸಗಳನ್ನು ಕೊಟ್ಟು ಅವರು ಅವುಗಳನ್ನು ತೃಪ್ತಿಕರವಾಗಿ ನಿರ್ವಹಿಸುವಂತೆ ತಿಳಿಯಬಂದ ಬಳಿಕ ಇತರ ಕೆಲಸಗಳನ್ನೊಪ್ಪಿಸಬಹುದು. ಮೊದಲು ಮ್ಯುನಿಸಿಪಲ್ ಆಡಳಿತದಲ್ಲಿ ಅಮಲ್‌ದಾರರಿಗೆ ಬದಲು ಪ್ರೆಸಿಡೆಂಟ್ ಪ್ರವರ್ತಿಸಿ ಚಿಲ್ಲರೆ ತಕರಾರುಗಳನ್ನು ಫೈಸಲ್ಮಾಡಲಿಕ್ಕೂ, ಮ್ಯುನಿಸಿಪಲ್ ಲೆಕ್ಕಗಳನ್ನು ತನಿಖೀಮಾಡಲಿಕ್ಕೂ ಛತ್ರದೇವಸ್ಥಾನಗಳ ಆಡಳಿತಗಳನ್ನು ವಿಚಾರಿಸಲಿಕ್ಕೂ ಶಕ್ತರಲ್ಲದೆ ಹೋಗಲಾರರು. ಹೀಗೆಯೇ ಅನೇಕ ವಿಷಯಗಳಲ್ಲಿ ಅಮಲ್‌ದಾರರಿಗೆ ಇವರು ಮುಖ್ಯಸಹಾಯಕರಾಗಬಹುದೆಂದು ತೋರುತಿದೆ. ಇದರ ಔಚಿತ್ಯವಂ ಇನ್ಸ್‌ಪೆಕ್ಟರ್ ಜನರಲ್ಲವರೂ, ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಿಗಳೂ ಪರ್ಯಾಲೋಚಿಸಿ ಗವರ್ನಮೆಂಟಿನವರಿಗೆ ತಿಳಿಯಪಡಿಸಿದರೆ ಅವರು ಬಹುಶಃ ಮಂಜೂರ್ಮಾಡದಿರಲಾರರೆಂದು ನಂಬುತ್ತೇವೆ. ರಿಜಿಸ್ಟ್ರೇಷನ್ ಇಲಾಖೆಯನ್ನು ಪ್ರಬಲಪಡಿಸುವ ಉದ್ದೇಶದಿಂದ ಗವರ್ನಮೆಂಟಿನವರು ಅದಕ್ಕಾಗಿ ಪ್ರತ್ಯೇಕ ಪರೀಕ್ಷೆಯಂ ಸಹ ಈ ಸಾಲ್ ಮೊದಲು ಏರ್ಪಡಿಸಿದ್ದಾರೆ. ಈ ಪರೀಕ್ಷೆಗೆ ಹೋಗಲಿಕ್ಕೆ ಗ್ರಾಜ್ಯುಯೇಟುಗಳು ಮಾತ್ರವೇ ಅರ್ಹರೆಂದು ವಿಧಿಸಿದಾಗ್ಯೂ ವಿಧಿಸಬಹುದು. ಅಂತಾ ವಿಧಿ ಇಲ್ಲದಿರುವಾಗ ಸದರೀ ಎಲ್ಲಾ ಕಡೆಯಿಂದ ತದಿತರರಿಗೆ ಪ್ರಬಲಗುವ ಪ್ರಯೋಜನವು ಅಲ್ಪವಾಗಿರುವದರಿಂದ ಶನಿಮ್ಮಲ್ಲಿ ಬಾಧಕವೇನೂ ಕಾಣಿಸಲಿಲ್ಲ. ಮೈಸೂರ್ ಸೀಮೆಯಲ್ಲಿ ಸರ್ವತ್ರ ಸ್ಪೆಷಿಯಲ್ ಸಬ್ ರಿಜಿಸ್ಟ್ರಾರುಗಳೆ, ಡಿಗ್ರಿ ಅಂತರ್ಗತರೆಲ್ಲರೂ ಯೂನಿವರ್ಸಿಟಿ ಪ್ರಶಸ್ತ್ಯಂಡಲಂಕೃತರಾಗಿ ಪ್ರತಿಷ್ಠಾ ಸಂಪಾದಕರಾಗುವಾಗ್ಯೆ ಸದರೀ ಇಲಾಖೆ ಗೌರವವು ಬಹಳ ಕೊಂಡಾಡಲ್ಪಡತಕ್ಕದ್ದಾಗಿರಬಹುದು. ಅಂತಾ ಸಮರ್ಥರ ಉಪಯುಕ್ತತೆಯಂ ಬಳಸಿಕೊಳ್ಳಲಿಕ್ಕೆ ಗವರ್ನಮೆಂಟಿನವರು ಈಗಿನಿಂದ ಸ್ವಲ್ಪಸ್ವಲ್ಪವಾಗಿ ಪ್ರಯತ್ನಪಟ್ಟರೆ ಇನ್ಸ್‌ಪೆಕ್ಟರ್‌ಜನರಲ್ಲವರ ಉದ್ದೇಶವು ಸಫಲವಾಗುವದು.

## Occasional Notes.
## ನೈಮಿತ್ತಿಕ ವಿಷಯವ್ಯಾಸ.

ತಿರುಪತಿ ಈಗಿನ ಮಹಂತರಾದ ಮಹಾವೀರದಾಸ್ ಯೆಂಬವರ ಮೇಲೆ ತರಲ್ಪಟ್ಟ ವ್ಯಭಿಚಾರ ಮೊಕದ್ದಮೆಯಲ್ಲಿ ತಕ್ಸೀರ್ ರುಜುವಾತ್ತಾಗಲಿಲ್ಲವೆಂದು ಅವರು ಬಿಡುಗಡೆ ಮಾಡಲ್ಪಟ್ಟರು.

ನೇಪಾಳ ಸಂಸ್ಥಾನದ ರಾಯಭಾರಿಯಾದ ಜನರಲ್ ಬೀರ್ ಷಂಷಿಯರ್ ಜಂಗ್ ಬಹದೂರವರು ಈಗ ಕಲ್ಕತ್ತೆಗೆ ಬಂದಿರುತ್ತಾರೆಯಷ್ಟೆ. ಆದೇ ಬುಧವಾರವದಿನ ಸದರೀ ರಾಯಭಾರಿಯವರ ಭೇಟಿಯಬಗ್ಗೆ ವೈಸ್‌ರಾಯ್‌ಸಾಹೇಬರವರು ಅವರಬಂಗ್ಲೆಗೆ ದಯಮಾಡಿದ್ದರು.

ಲಂಡನ್ ಪಟ್ಟಣದೊಳು ಮ್ಯಾಕ್ಸ್‌ಮ್ಯಾಲೆಸ್ಸಿಸಿ(?)ಯೆಂಬವರಿಂದ ಸ್ಥಾಪಿಸಲ್ಪಟ್ಟಿರುವ ಥಿಯೋಸಾಫಿಕಲ್ ಸಮಾಜದಲ್ಲಿ ಭಗವದ್ಗೀತೆಯನ್ನು ಅದರ ವ್ಯಾಖ್ಯಾನಗಳು ಮತ್ತು ಶರ್ಜುಮೆಗಳೊಡನೆ ಓದಿ ವಿಚಾರ ಮಾಡುತಲಿರುತ್ತಾರೆಂದು ಕೇಳಲಿಕ್ಕೆ ಸಂತೋಷಿಸುತ್ತೇವೆ.

ಪಂಜಾಬ್‌ದೇಶದೊಳು ನೇಟಿವ್‌ಗಳಿಗಾಗಿಯೂ ಕ್ರಿಶ್ಚ್ಯನರಿ ನೇಟಿವ್‌ಗಳಿಗಾಗಿಯೂ ಮಾತ್ರ ಹಾಲೀ ತಬಲ್ಲಿ ಕೆಲವು ಅಧಿಕಾರಗಳಂ ಯೋಗ್ಯತೆಯಿಲ್ಲದ ಜತೆ ಇಚ್ಛೆ ಯಿಂದಾಗಲು ಯೂರೋಪಿಯನ್ ಉದ್ಯೋಗಸ್ಥರಲ್ಲಿ ಬಹಳ ಅಸಮಾಧಾನ ಹುಟ್ಟಾಗಲಿಕ್ಕೆ ಕಾರಣ ಕೂಡಿರಿತು.

ತಿರುಪತಿ ನಾಬಕ್ ಮಹಂತರಾದ ಭಗವಾನ್‌ದಾಸ್ ಯೆಂಬವರು ದೊಂಬಿ ಪಗ್ಗರೆ ನಡೆಸಿದ್ದಾಗಿ ಅವರಮೇಲೆ ತರಲ್ಪಟ್ಟ ಮೊಕದ್ದಮೆಯಲ್ಲಿ ತಕ್ಸೀರ್ ರುಜುವಾತಾಗಿ ಅವರಿಗೆ ಮ್ಯಾಜಿಸ್ಟ್ರೇಟರು ಆರು ತಿಂಗಳ ಸಜಾ ವಿಧಿಸಿಅದರ ಪೈಕಿ ಕಡೆ ನಾಲ್ಕು ತಿಂಗಳ ಕಾಲ ಕಠಿಣಮೈದ್ ಸಜಾ ಅನುಭವಿಸತಕ್ಕದ್ದೆಂದು ವಿಧಿಸಿದರು.

ಹಿಂದೆ ಕಲ್ಕತ್ತಾ ಹೈಕೋರ್ಟ ಜಡ್ಜಿಯಾಗಿದ್ದ ಮೆ|ವಿಲಿಸರ್ಯವರ ಜ್ಯೇಷ್ಠಪುತ್ರರು ಮಹಮದ್ದ ಮತವನ್ನವಲಂಬಿಸಿ, ದಕ್ಷಿಣ ಬಂಗಾಳ ದೇಶದೊಳು ಫಾಕಿರಿಯಂತೆ ಬೀದಿಬೀದಿ ತಿರುಗುತ ತಮ್ಮ ನೂತನ ಮತದ ಔತ್ಕೃಷ್ಟ್ಯವನು ಕುರಿತು ವಿದ್ಯಾವಂತರಾದ ಜನರಿಗೆ ಇಂಗ್ಲಿಷ್ ಭಾಷೆಯಲ್ಲಿ ಉಪದೇಶ ಮಾಡುತಲಿರುತ್ತಾರೆಂದು ಆ ಪ್ರಾಂತದ ಪತ್ರಿಕೆಯೊಂದು ತಿಳಿಸುತಿದೆ.

ಕಾಶ್ಮೀರ ದೇಶದ ಮಹಾರಾಜರವರು ಕೆಲವು ಕಾಲದ ಮೊದಲು ಸಂಸ್ಥಾನದ ಸರಂಜಾಂ ಕೋಠಿಯಾಗಿ ಉಪಯೋಗಿಸಲ್ಪಡುತಲಿದ್ದ ಒಂದು ಮಸ್‌ಜಿದ್ದನ್ನು ಅಲ್ಲಿನ ಮುಸಲ್ಮಾನ ಜನರಿಗೆ ವಾಪಸ್‌ಕೊಡತಕ್ಕದ್ದೆಂದು ಸಂಸ್ಥಾನದಕವರ್ನರ್ ದರ್ ಇರಬಾಷೆರವರಿಗೆ ಹುಕುಂ ಕೊಡಲು ಜಮ್ಮು ಪಟ್ಟಣದ ಮುಸಲ್ಮಾನ ಜನರು ಆಬಗ್ಗೆ ಕೃತಜ್ಞತಾಪೂರ್ವಕವಾದ ಸಂತೋಷವಂ ಬಹುಮುಖವಾಗಿ ವ್ಯಕ್ತಗೊಳಿಸುತಲಿದಾರೆ.

ಅಮೆರಿಕಾ ದೇಶದಲ್ಲಿ ಕೋರ್ದಾರರು ತಮ್ಮ ಕೋಠಿಗಳಲ್ಲಿರುವ ಸರುಕುಗಳು ಜನರಿಗೆ ತಿಳಿಸುವದಕ್ಕಾಗಿ ವೃತ್ತಾಂತ ಪತ್ರಿಕೆಗಳಲ್ಲಿ ಪ್ರಕಟಿಸುವದು ಮಾತ್ರವಲ್ಲದೆ, ಸದರೀ ಸರುಕುಗಳ ಪಟ್ಟಿಯಂ ಛಾಪಿಸಿ,ಬೀದಿಗಳಲ್ಲಿತಿರುಗಾಡುವ ಗಾಡಿಗಳ ಪಕ್ಕಗಳಲ್ಲೂ, ಜನರಮನೆಗಳ ಮತ್ತು ಬೆನ್ನಿನಮೇಲೂ, ಛತ್ರಿಗಳಮೇಲೂ ಅಂಟಿಸಿ ಶುಹಿಸಿಕೊಡ ಬಲ್ಲದೆ ಮೇಯುವದಕ್ಕೆ ಹೋಗುವ ದನಗಳ ಮೈಮೇಲೂ ಅಂಟಿಸಿ ಬೀದಿಗಳಲ್ಲಿ ಬಿಡುತ್ತಾರೆ.

ಕಲ್ಕತ್ತೆಯೊಳು ಇಂಗ್ಲಿಷ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪ್ರಸಿದ್ಧ ಪಂಡಿತರೆನ್ನಿಸಿದ್ದ ಈಚೆಗೆ ಸುಮಾರು ಎರಡು ವರ್ಷಗಳ ಹಿಂದೆ ಮೃತಪಟ್ಟ ರಾಜೇಂದ್ರಲಾಲಾಮಿತ್ರ ಯೆಂಬವರ ಜ್ಞಾಪಕಾರ್ಥ ಭಾರತಿ ಲೈಬ್ರರಿ ಯೆಂಬ ಸರಸ್ವತಿ ಭಂಡಾರದ ಕಮಿಟಿಯವರಿಂದ, ಹಿಂದೂಮತದ ಪ್ರಾಕೃತಸ್ಥಿತಿಯಂ ಕುರಿತು ಅದರಲ್ಲಿನ ಸಾಧಕ ಬಾಧಕಗಳೊಡನೆ ಬಂಗಾಳಿ ಭಾಷೆಯಲ್ಲಿ ಒಂದು ಗ್ರಂಥವಂ ಬರೆಯುವಾತನಿಗೆ ಬೆಳ್ಳಿಯಲ್ಲಿ ಮಾಡಲ್ಪಟ್ಟ ಒಂದು ಬಿರುದಿನ ಬಿಲ್ಲೆಯು ಕೊಡಲ್ಪಡುವುದು.

ಸಿವಿಲ್ ವ್ಯವಹಾರಗಳಲ್ಲಿ ಕಕ್ಷಿಗಾರರು ತಮ್ಮ ಮೊಕದ್ದಮೆಗೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ಸಿವಿಲ್‌ಕೋರ್ಟನಿಂದಪಡೆಯಬೇಕಾದ ಸಂದರ್ಭಗಳಲ್ಲಿ ಖುದ್ದು ಹಾಜರಾಗಿ ಅಥವಾ ಒಬ್ಬ ಯೋಜಂಟನ ಮೂಲಕ ಪಡೆಯಬೇಕಾಗಿರುವದರಿಂದ ಅದು ಕಕ್ಷಿಗಾರರಿಗೆ ವ್ಯರ್ಥವಾದ ಖರ್ಚಿಗೂ ಅನಾನುಕೂಲಕ್ಕೂ ಕಾರಣವಾಗುತಿದೆ ಎಂದು ಹೈಕೋರ್ಟಿನವರು ಯೋಚಿಸಿ, ಕಕ್ಷಿಗಾರರು ತಪಾಲ್ ಮೂಲಕ ಕೋರ್ಟುಗಳಿಗೆ ಬರೆದು ಕೊಂಡು ಪಡೆಯಬಹುದೆಂದು ಈಚೆಗೆ ನಿಬಂಧನೆ ಮಾಡಿರುತ್ತಾರೆ.

ಈ ತಿಂಗಳ ಗುರ್ಬ್ರೋ ತಾರೀಖಿನಲ್ಲಿ ಭಾವನಗರದೊಳು ವಿಲಕ್ಷಣವಾದ ಒಂದು ವಿವಾಹ ನಡೆಯಿತು. ಇದರಲ್ಲಿ ಸದರೀ ಸಂಸ್ಥಾನದ ಮಹಾರಾಜರವರ ಕುಮಾರ್ತೆಯಾದ ಕುಮುದಕುಂವರಬಾ ಎಂಬ ಕನ್ಯೆಯನ್ನು ಧ್ರೋರಿಬಂಧರ್ ಸಂಸ್ಥಾನದ ರಾಜಕುಮಾರರಾದ ಕುಮಾರ ಭಾರಸಿಂಗಜಿಯವರಿಗೆ ಕೊಟ್ಟು ಪ್ರಸ್ತುತ ನಡೆಯಿತು. ಈ ವಿವಾಹದಲ್ಲಿ ವರನು ಖುದ್ದು ಬರಲಿಲ್ಲವು, ವರಂತು ತನ್ನ ಕತ್ತಿಯನ್ನು ಕಳುಹಿಸಿಕೊಟ್ಟರು. ಅದನ್ನಿಟ್ಟುಕೊಂಡು ವಿವಾಹಕಾರ್ಯಗಳಂ ನೆರವೇರಿಸಿದರು.

ಲಂಡನ್ ಪಟ್ಟಣದೊಳು ಸ್ಥಾಪಿಸಲ್ಪಡುತಲಿರುವ ಇಂಪೀರಿಯಲ್ ಇನ್ಸ್ಟಿಟ್ಯೂಟ್ ಯೆಂಬ ಶಾಲೆಯು ಕಟ್ಟಣ ಕೆಲಸ ಪೂರ್ತಿಯಾಗಿ, ಅದರೊಳು ಪ್ರಥಮಪ್ರವೇಶ ಕಾರ್ಯವನ್ನು ಶ್ರೀಮನ್ಮಹಾರಾಜ್ಞೀ ಚಕ್ರವರ್ತಿನೀಯವರು ಸ್ವಯಂ ವಹಿಸಿರುವದರಿಂದ ಇಂಡ್ಯಾದೇಶದ ಸಂಸ್ಥಾನಾಧಿಪತಿಗಳೂ ಪ್ರಮುಖರೂ ಬಹುದುಂದಿ ಆ ದಿನ ಅಲ್ಲಿ ಹಾಜರಿರಬೇಕೆಂಬ ತಮ್ಮ ಕೋರಿಕೆಯಂ ಮಹಾರಾಜ್ಞೀ ಸರ್ಕಾರಕ್ಕೆ ತಿಳಿಸಿರುತ್ತಾರೆಂದು ಲಂಡನ್ ಪಟ್ಟಣದ ವೃತ್ತಾಂತ ಪತ್ರಿಕೆಗಳು ಪ್ರಕಟಿಸಿರುತಿವೆ.

ಕಾಬೂಲ್ ಅಮೀರರವರಿಗೆ ಈಚೆಗೆ ಉಂಟಾಗಿದ್ದ ಶರೀರಾಲಸ್ಯವು ನಿವೃತ್ತಿಯಾದುದರಿಂದ, ಸರಹದ್ದು ಪ್ರಾಂತದ ವಿಷಯದಲ್ಲಿ ಇಂಡ್ಯಾ ಗವರ್ನಮೆಂಟಿನವರು ಅವರಿಗೆ ಹಿಂದೆ ಬರೆದಿದ್ದ ಅಂಶಗಳಿಗೆ ಅವರು ಜವಾಬ್ ಕೊಡಲು ಸನ್ನದ್ಧರಾಗಿರುವಂತೆ ಕಾಬೂಲಿನಲ್ಲಿರುವ ಬ್ರಿಟಿಷ್ ಏಜಂಟರವರಿಗೆ ಅಮೀರರವರು ತಿಳಿಸಿದರು. ಅಮೀರರವರು ಅನೇಕ ತಿಂಗಳ ಕಾಲದ ಮೊದಲು ಜವಾಬ್ ಕೊಡದೆ ಹೋದದರಿಂದ ಅವರ ವಿಷಯದಲ್ಲಿ ಬಹಳ ಸಂಶಯ ಹುಟ್ಟಾಗಿರುವದಲ್ಲದೆ ಅವರು ಈಗ ಕೋರಿದಾಗ್ಯೂ ಅದರಂತೆ, ಲಾರ್ಡ್ ರಾಬರ್ಟ್ಸ್‌ರವರು ಜಲಾಲಾ ಬಾದಿನಲ್ಲಿ ಅಮೀರರವರಂ ಸಂಧಿಸುವದಕ್ಕೆ ಸಾಧ್ಯವಾಗಲಾರದು.

ಪ್ರಾಚ್ಯ ಸಮುದ್ರತೀರದಲ್ಲಿ ಹಾಕಲ್ಪಡುತಲಿರುವ ರೆಯಿಲ್ ರಸ್ತೆಯ ಪೈಕಿ ಕೆಲವು ಶಾಖೆಗಳಲ್ಲಿ ಗಾಡಿಗಳು ನಡೆಸಲ್ಪಡುವದಕ್ಕೆ ಯಾವಾಗ ಪ್ರಾರಂಭವಾಗುವದೆಂದು ಇಂಡ್ಯಾ ಗವರ್ನಮೆಂಟಿನವರು ಮಾಡಿದ ಪ್ರಶ್ನೆಗೆ ಮದರಾಸ್ ಗವರ್ನಮೆಂಟಿನವರು ಕೊಟ್ಟ ಜವಾಬಿನಲ್ಲಿ ಸನ್ ೧೮೯೩ನೇ ಇಸವಿ ಜೂನ್ ೧೫ನೇ ತಾರೀಖಿನಲ್ಲಿ ರಾಜಮಹೇಂದ್ರವರದಿಂದ ಕಾಕಿನಾಡಾವಿಗೂ ಪಿಠಾಪುರಕ್ಕೂ, ೯೩ನೇ ಸೆಪ್ಟಂಬರ್ ೩೦ ನೇ ತಾರೀಖಿನಲ್ಲಿ ವಿಶಾಖಪಟ್ಟಣದಿಂದ ವಿಜಯನಗರಕ್ಕೂ, ಸನ್ ೧೮೯೪ನೇ ಇಸವಿ ಜೂನ್ ೧೫ನೇ ತಾರೀಖಿನಲ್ಲಿ ವಿಜಯನಗರದಿಂದ ನರಾಜ್ ಯೆಂಬ ಪ್ರದೇಶಕ್ಕೂ ಗಾಡಿಗಳು ಬಿಡಲ್ಪಡುವವೆಂದು ನಮೂದ್ ಮಾಡಿರುತ್ತಾರೆ.

ಕುಚ್ ಬಿಹಾರ್ ಸಂಸ್ಥಾನದ ಮಹಾರಾಣಿಯವರು ಇಂಡ್ಯಾ ರಾಜ್ಯದ ವೈಸ್‌ರಾಯ್ ಯವರಭಾರ್ಯೆಯವರಾದಲೇಡಿ ಲ್ಯಾನ್ಸ್‌ಡೌನ್ ಸಾಹೇಬಾಯವರಿಗೆ ಆಚೆ ಶುಕ್ರವಾರದದಿನ, ಅಲಿಪುರದಲ್ಲಿರುವ ತಮ್ಮ ಅರಮನೆಯೊಳು, ಅಲ್ಲಿನ ನೇಟಿವ್‌ಗಳ ಸಂಪ್ರದಾಯಾನುಸಾರವಾಗಿ ಔತಣವಂ ಮಾಡಿಸಲು, ಸದರೀಲೇಡೀಸಾಹೇಬಾಯವರು ಆಬಗ್ಗೆ ಬಹಳ ಸಂತೋಷಪಟ್ಟರಂತೆ. ಭೋಜನಾನಂತರ ಮಹಾರಾಣಿಯವರಕುಟುಂಬಕ್ಕೆ ಸೇರಿದ ಹೆಂಗಸರುಮತ್ತು ಹುಡುಗರು ಸೇರಿ ನೇಟಿವ್ ಸಂಗೀತವಂಹಾಡಲು ಲೇಡೀ ಲ್ಯಾನ್ಸ್‌ಡೌನ್ ಸಾಹೇಬಾಯವರು ಕೇಳಿ ಅತ್ಯಂತ ಸಂತೋಷಪಟ್ಟರು ತರುವಾಯ ಮಹಾರಾಣಿಯವರು ಕುಚ್ ಬಿಹಾರಿಗೆಪ್ರಯಾಣವಾದರು.

ಬಂಗಾಳೀ ಗವರ್ನಮೆಂಟಿನಲ್ಲಿ ಜಾರಿಗಳ ಪರ್ಯಾಯದ ವಿಷಯದೊಳು ಈಚೆಗೆ ಉಂಟಾಗಿರುವ ಜಿಜ್ಞಾಸೆಯನ್ನು ವ್ಯವಸ್ಥೆ ಮಾಡುವದಕ್ಕಾಗಿ ಯೇರ್ಪಾಡು ಮಾಡಲ್ಪಡುವದಾಗಿರುವ ಕಮಿಷನ್ ಯೆಂಬ ಪಂಚಾಯತಿ ಸಭೆಗೆ ಐದುಮಂದಿ ಸ್ಥಳಮಂಕರಾದ ದೊಡ್ಡಮನುಷ್ಯರು ನಿಯಮಿಸಲ್ಪಡುವರು. ನೇಟಿವ್‌ಗಳ ತರಫಿನಲ್ಲಿ ಸರ್ ಜೋತೀಂದ್ರಮೋಹನ್ ಠಾಗೋರ್ ಯವರೂ, ಸರ್ ರೋಮೇಶಚಂದ್ರಮಿತ್ರ್ ಯವರೂ ನಿಯಮಿಸಲ್ಪಡುವರು. ಲಾಯರಿಗಳ ತರಫ ಸರ್ ಗ್ರಿಫಿತ್ ಇವಾನ್ಸ್‌ಯವರು ಬಹುತರವಾಗಿ ನಿಯಮಿಸಲ್ಪಡಬಹುದು. ಉಳಿದ ಇಬ್ಬರು ಮೆಂಬರಿಗಳ ಪೈಕಿ ಕಲ್ಕತ್ತಾ ಹೈಕೋರ್ಟ ಜಡ್ಜಿಯೊಬ್ಬರನ್ನೂ ಡಿಸ್ಟ್ರಿಕ್ಟು ಸೆಷನ್ ಜಡ್ಜಿಯೊಬ್ಬರನ್ನೂ ಬಂಗಾಳೀ ಗವರ್ನಮೆಂಟಿನವರು ನಿಯಮಿಸುವರು.

ಲಂಡನ್ ಪಟ್ಟಣದೊಳು ಸ್ಥಾಪಿಸಲ್ಪಟ್ಟಿರುವ ವಾಣಿಕೋಟ ಪ್ರದರ್ಶನ ಶಾಲೆಯಲ್ಲಿ ಹದಿನಾರು ವರ್ಷಗಳ ವಯಸ್ಸುಳ್ಳ ಒಬ್ಬ ಹುಡುಗಿಯನ್ನು ಕಂಡಿಟ್ಟಿರುತ್ತಾರೆ. ಸದರೀ ಬಾಲೆಯು ಇಪ್ಪತ್ತು ಅಂಗುಲಗಳ ಯೆತ್ತರವುಳ್ಳ ವಳಂತು ಅದಕ್ಕೆ ಅನುಗುಣವಾದ ಅಂಗಸೌಷ್ಠವವೂ ಉಳ್ಳವಳಾಗಿರುತ್ತಾಳೆ. ಅವಳ ಮಣಿಕಟ್ಟಿನ ಸುತ್ತಳತೆಯು ಯೆರಡೂವರೆ ಅಂಗುಲಗಳುಳ್ಳದ್ದಾಗಿದೆ. ಇವಳು ಈರೀತಿ ಇರುವಲ್ಲಿ ಅದೇ ಶಾಲೆಯೊಳು ಬೇರೆಹೊಬ್ಬ ಹುಡುಗಿಯನ್ನಿಟ್ಟಿರುತ್ತಾರೆ. ಅವಳ ವಯಸ್ಸು ಹದಿನಾರು ವರ್ಷಗಳು. ಅವಳ ಕೈಯ ಮೂರನೇ ಬೆರಳಿನಲ್ಲಿ ಒಂದು ಉಂಗರವನ್ನು ಹಾಕಿಕೊಂಡಿರುತ್ತಾಳೆ. ಅದರ ಸುತ್ತಳತೆಯು ನಾಲ್ಕು ಅಂಗುಲಗಳವೆ. ಏಳಡಿ ಯೆಂಟು ಅಂಗುಲಗಳ ಯೆತ್ತರವಿರುತ್ತಾಳೆ. ಹದಿನಾರು ವರ್ಷಗಳ ವಯಸ್ಸಿನಲ್ಲಿ ಸುಮಾರು ಹೋಳೂಮುಕ್ಕಾಲು ಅಡಿಗಳ ಯೆತ್ತರವಿದ್ದ ಮೇಲೆ ಮೂವತ್ತು ವರ್ಷಗಳ ವಯಸ್ಸಿಗೆ ಯೆಷ್ಟು ಯೆತ್ತರವಾಗಬಹುದೊ ಅದಂ ವಾಚಕರೇ ಊಹಿಸಿ ತಿಳಿದುಕೊಳ್ಳಬಹುದು. ಮೇಲಿನ ಇಬ್ಬರಿಗೂ ಆಕೃತಿಯಲ್ಲಿ ಅನುರೂಪರಾದ ವರರನ್ನು ಸದರೀ ಶಾಲೆಯುಲ್ಲೇ ಕೂಡಿರಿಸಿದರೆ ಅವರ ಸಂತತಿ ವೃದ್ಧಿಯಾಗುವದು.

## LOCAL AND PROVINCIAL NEWS.
## ಒಳದೇಶಮತ್ತುತಾಲ್ಲೂಕ್‌ಜಾಕ್‌ವೃತ್ತಾಂತಗಳು

ಬರುವ ಬೃಹಸ್ಪತಿವಾರವದಿನ ಕಾಮನಹಬ್ಬವಾದುದರಿಂದ ಆಬಗ್ಗೆ ಈ ಸಂಸ್ಥಾನದ ಪಿಶಿಪ್ಟ ಇಲಾಖೆಗಳಿಗೂ ರಜಾ ಕೊಡಲ್ಪಡುವುದು

ಶ್ರೀಮನ್ಮಹಾರಾಜರವರ ವರ್ಷವರ್ಧಂತಿ ಉತ್ಸವಕ್ಕಾಗಿ ಮೈಸೂರಿಗೆ ಹೋಗಿದ್ದ ಚೀಫ್ ಕೋರ್ಟ ಜಡ್ಜಿಗಳೂ, ನಾಬಕ್ ಕೌನ್ಸಿಲರ್ ರಾವ್ ಬಹದೂರ್ ಸಭಾಪತಿ ಮುದಲಿಯಾರ್ರವರೂ ಕಳೆದ ಶನಿವಾರವದಿನ ವಾಪಸ್ ಬಂದರು.

ಮಹಾರಾಜರವರು ೧೯ನೇ ಸಿಂಹಾಸನಾರೋಹಣಾದಿನದವರು ಈ ವಂಶಂಗಿರುವ ಕಾಲದಲ್ಲಿಯೇ ಪುತ್ರೀರತ್ನಗಳಿಗೆ ವಿವಾಹ ಮಹೋತ್ಸವವಂ ಬೆಳಸಿ, ವೃದ್ಧರಿಂದ ಆ ಮಾಡಿದವಂ ಮಾಡಿ, ಅವರಿಗೂ ಮನಸ್ಸಂತೋಷಪಡಿಸಬೇಕೆಂದು ಯೋಚಿಸಿ, ಜ್ಯೇಷ್ಠಮಾಸದಲ್ಲಿ ವಿವಾಹ ಮಹೋತ್ಸವವಂ ಬೆಳಸಬೇಕೆಂಬ ಅಭಿಪ್ರಾಯ ಉಳ್ಳವರಾಗಿರುವಂತೆ ತಿಳಿಯಬಹುದಾಗುವದು.—ದೇಶಾ

ಕಳೆದ ಮಂಗಳವಾರದ ದಿನ ರಾತ್ರಿ ಈ ಪಟ್ಟಣದಲ್ಲಿ ಸ್ವಲ್ಪ ಮೋಡ ಮುಚ್ಚಿ ಭೂಮಿ ನನೆಯುವಷ್ಟು ಮಳೆ ಬಿತ್ತು. ಅದೇದಿನ ರಾತ್ರಿ ಮೂರು ಘಂಟೆಯಮೇಲೆ ಮರಳಿ ಸುಮಾರು ಅರ್ಧ ಘಂಟೆ ವರೆಗೆ ಪಿರಪಿರದಷ್ಟು ಮಳೆ ಬಿತ್ತು. ಇನ್ನು ಆಗಿಂದಾಗ್ಗೆ ವರ್ಷಸೂಚನೆಗಳು ಕಾಣಬರುತಲಿವೆ. ಇತರ ವಿಷಯಗಳು ಒಂದೇ ವಿಧವಾಗಿವೆ.

ಶ್ರೀಮನ್ಮಹಾರಾಜರವರ ವರ್ಧಂತಿ ಉತ್ಸವವು ಈಸಲ ವಿಶೇಷ ವಿಜೃಂಭಣೆಗಳ್ಯಾವದೂ ಇಲ್ಲದೆ ಸಾಮಾನ್ಯವಾಗಿ ನಡೆಯಿತೆಂದು ಕೇಳುತ್ತೇವೆ. ಮಹಾರಾಣೀಸೀತಾ ವಿಲಾಸದ ಅಮ್ಮಣ್ಣಿಯವರ ಶಾಹಿಲೆಯೂ ಶ್ರೀಮನ್ಮಹಾರಾಜರವರಿಗೆ ಈಚೆಗೆ ಉಂಟಾದ ಪುತ್ರವಿಯೋಗ ಜನ್ಯವಾದ ಶೋಕವೂ ಕಾರಣಗಳಾಗಿರಬಹುದೆಂದು ಯೆಣಿಸುತ್ತೇವೆ.

ಚೀಫ್‌ಕೋರ್ಟ ಜಡ್ಜಿಯರಪೈಕಿ ಒಬ್ಬರಾದ ಮೆ|ಪಿ. ಎನ್. ಕೃಷ್ಣಮೂರ್ತಿಯವರು ಒಂದು ತಿಂಗಳ ರಜಾ ಪಡಕೊಂಡು ಅವರ ಜಹಗೀರಿಗೆ ಹೊರಟುಹೋದದರಿಂದ ಅವರ ಕೆಲಸಕ್ಕೆ ಪದ್ಧತಿಪ್ರಕಾರ ಲೆಜಿಸ್ಲೇಟಿವ್ ಸೆಕ್ರಿಟೆರಿಯಾದ ಮೆ|| ವಿಷನಾಕ್ಷಿ ಅಯ್ಯರವರು ನಿಯಮಿಸಲ್ಪಟ್ಟು ಈ ದಿನ ಚಾರ್ಜ್ ತೆಗದುಕೊಳ್ಳುತ್ತಾರೆಂದು ಕೇಳುತ್ತೇವೆ. ಅವರ ಕೆಲಸಗಳು ಹಿಂದಿನಂತೆ ಏರ್ಪಾಡು ಮಾಡಲ್ಪಡುವವು.

ಈಪಟ್ಟಣದಲ್ಲಿರುವ ಧ್ವಾರ್ಯ್ಯನವರ ಸಕ್ರಿ ಹಿಂದಿನ ಸರ್ಕಾರ್ ಸರ್ವತ್ರ ವಿಚಾರಣಾದಿಕಾರವನ್ನು ಮುಜರಾಯಿ ಇಲಾಖೆಯ ವಿಚಾರಣೆಗೆ ಒಳಪಡಿಸಿ, ಮ್ಯುನಿಸಿಪಾಲಿಟಿಯಿಂದ ಸಾಲೀಯಾನಾ ೭೦೦ ರೂಪಾಯಿಗಳು ಅದರ ಖರ್ಚಿನ ಬಗ್ಗೆ ಕೊಡತಕ್ಕದ್ದೆಂದು ಹುಕುಂ ಆದಂತೆ ಒಳದೇಶದ ಸ್ಪೆಕ್ಟೇಟರ್ ಪತ್ರಿಕೆಯ ಮೂಲಕ ತಿಳಿದಿವು. ಸದರೀ ಮೊಬಲಗು ಮುಜರಾಯಿ ಇಲಾಖೆಯಿಂದ ಮ್ಯುನಿಸಿಪಾಲಿಟಿಗೆಕೊಡಲ್ಪಡುತಲಿದ್ದದ್ದೇಹೊರತು ಮ್ಯುನಿಸಿಪಲಿಟಿಯಿಂದಲ್ಲವು.

## THE MYSORE GAZETTE
### ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದೂರವರ ಸರ್ಕಾರದಿಂದ ಹೊರೋಣಾದ ಇಸ್ತಿಹಾರ ನಾಮೆ.

ನಂ|| ೧೩೫೨೦. ೮ ೪. ೨೮೫–೯೩ ತಾ|| ೧೧ ನೇ ಫೆಬ್ರವರಿ, ೧೮೯೩.— ಚಿಕ್ಕಮಗಳೂರಲ್ಲಿ ತಾತ್ಕಾಲದೊಳು, ಸಿವಿಲ್ ಸರ್ಜನ್ಯರ್ ರಾಗಿರುವ ಡಾಕ್ಟರ್, ಎ. ಎಸ್. ಫರ್ನಾಂಡೆಜ್ ಯವರು, ೧೮೯೧ ನೇ ಇಸವಿ ಡಿಸೆಂಬರ್ ೧೯ ನೇ ವಾರ್ಚಿ೦ ಲಾಗಾಯಿತು ೩ ನೇ ಗ್ರೇಡ್ ಸಿವಿಲ್ ಸರ್ಜನ್ಯರ್ ರಾಗಿ ಕಾಯಂ ಮಾಡಲ್ಪಟ್ಟಿರುತ್ತಾರೆ

ನಂ|| ೧೩೫೮೨–೮ ೩೧೩೭—ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ ೧೨ನೇ ಸೆಕ್ಷನ್ ಅನುಸರಿಸಿ, ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಜನರಲ್ ಡ್ಯೂಟಿಯ ಮೇಲಿರುವ ಅಸಿಸ್ಟೆಂಟ್ ಕಮಿಷನರ್ ಮೆ|| ಸಿ. ರಾಮಾಚಾರ್ಯರವರಿಗೆ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತವೆ

ನಂ|| ೧೩೫೮೮. ೮. ೯೨–೯೨—ಬೆಂಗಳೂರು ಸೆಂಟ್ರಲ್ ಜೆಯಿಲ್ ಆಕ್ಟಿಂಗ್ ಸೂಪರಿಂಟೆಂಡೆಂಟ್ ಮೆ|| ಡಿ. ಎ. ಫೋಕ್ಸ್ ಎಲ್. ಎಂ. ಎಸ್ ಯವರು, ಸದರೀ ಸೆಂಟ್ರಲ್ ಜೆಯಿಲ್ ಸೂಪರಿಂಟೆಂಡೆಂಟರಾಗಿ ಕಾಯಂ ಮಾಡಲ್ಪಟ್ಟಿರುತ್ತಾರೆ

ನಂ|| ೧೩೫೮೬–೮ ೪೮—೯೨—೧೮೯೩ ನೇ ಇಸವಿ ಫೆಬ್ರವರಿ ೭ ನೇ ತಾರೀಖಿನಲ್ಲಿ ಚಿತ್ರದುರ್ಗದೊಳು ಮೂರನೇ ಕ್ಲಾಸ್ ಪೋಸ್ಟ್ ಮತ್ತು ಟೆಲಿಗ್ರಾಫ್ ಆಫೀಸ್ ಸೇರಿದಂತೆ ಸ್ಥಾಪಿಸಲ್ಪಟ್ಟಿರುತ್ತದೆ.

ನಂ|| ೧೩೫೮೪–೮ ೩೧೩೩–ತಾ|| ೧೫ ನೇ ಫೆಬ್ರವರಿ, ೧೮೯೩—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೩೨ ನೇ ಆರ್ಟಿಕಲ್ ಅನುಸರಿಸಿ, ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಅಸಿಸ್ಟೆಂಟ್ ಕನ್ಸರ್ವೇಟರ್ ಮೆ|| ಸೀತಾರಾಮಯ್ಯನವರಿಗೆ, ೧೮೯೩ ನೇ ಇಸವಿ ಜನವರಿ ೧೦ ನೇ ತಾರೀಖು ಮೊದಲು ಹತ್ತು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತದೆ.

ನಂ|| ೧೩೬೮೨–೮ ೪. ೩೬–೯೨—ಹಾಸನ ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮಿಷನರ್ ಮೆ|| ಪಿ. ವಂಚೆನರಾಯರವರಿಗೆ, ೧೮೯೩ ನೇ ಇಸವಿ ಫೆಬ್ರವರಿ ಗುರ್ರೇ ಲಾಗಾಯಿತು ಸ್ವಂತ ಕೆಲಸದ ಬಗ್ಗೆ ೩ ತಿಂಗಳ ರಜಾ ಕೊಡಲ್ಪಟ್ಟಿರುತ್ತದೆ. ಮೆ|| ಪಿ. ವಂಚೆದನರಾಯರವರು, ಹಾಸನ ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮಿಷನರರವರ ಕೋರ್ಟ್ ವ ಆಫೀಸ್ ಚಾರ್ಜನ್ನು ೧೮೯೩ ನೇ ಇಸವಿ ಫೆಬ್ರವರಿ ಗುರ್ರೇ ತಾರೀಖಿನ ಪೂರ್ವಾಹ್ಣದಲ್ಲಿ ಮೆ|| ಪಿ. ವೆಂಕಟರಾಯರವರಿಗೊಪ್ಪಿಸಲು ಅವರದಂ ತೆಗೆದುಕೊಂಡಿರುತ್ತಾರೆ

ನಂ|| ೧೩೫೯೮–೦ ೩೧೮೨—ಬೆಂಗಳೂರ್ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮೆ|| ಮಿಯರ್ ಷಜಾಯತ್ ಅಲ್ಲೀಖಾನರವರಿಗೆ, ಮಾಹೇ ಮಜಕೂರ್ ೪ ನೇ ತಾರೀಖ್ ಮೊದಲು ೧೦ ನೇ ತಾರೀಖ್ ವರಿವಿಗೆ ಉಭಯದಿನಗಳೂ ಸೇರಿ ೭ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತದೆ ಕ್ಲೋಸ್‌ಪೇಟೆ ಸಬ್ ಡಿವಿಜನ್ ಇನ್‌ಚಾರ್ಜನಲ್ಲಿರುವ ಅಸಿಸ್ಟೆಂಟ್ ಕಮಿಷನರ್ ಮೆ|| ಜೆ ರಘುನಾಥ ರಾಯರವರು ಸದರೀ ಕಾಲದಲ್ಲಿ ಅವರ ಸ್ವಂತ ಕೆಲಸಗಳೊಡನೆ ಡೆಪ್ಯುಟಿಕಮಿಷನರವರ ಆಫೀಸ್ ಇನ್‌ಚಾರ್ಜನಲ್ಲಿದ್ದರು.

ನಂ|| ೧೩೮೧೦–೮ ೩೧—೯೫—ತಾ|| ೧೬ನೇ ಫೆಬ್ರವರಿ, ೧೮೯೩—ಬೇಲೂರ್ ತಾಲ್ಲೂಕ್ ಅಮಲ್ದಾರ್ ಚೌಡಯ್ಯನವರಿಗೆ, ಮುಂದಿನ ೩೫ ದಿವಸಗಳೊಳಗಾಗಿ ಅವರುಪಯೋಗಿಸಿಕೊಳ್ಳಬಹುದಾದ ತಾರೀಖ್ ಮೊದಲು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ. ಗ್ರಾಮದ ಸಬ್ ತಾಲ್ಲೂಕ್ ಡೆಪ್ಯುಟಿ ಅಮಲ್ದಾರ್ ವೆಂಕಟ್ರಮಣಯ್ಯನವರು, ಅಮಲ್ದಾರ್ ಚೌಡಯ್ಯನವರು ರಜಾ ಮೇಲೆ ಗೈರಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಬೇಲೂರ್ ತಾಲ್ಲೂಕ್ ಅಮಲ್ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಮೊಕರರ್ ಮಾಡಲ್ಪಟ್ಟಿರುತ್ತಾರೆ. ಹಾಸನ ತಾಲ್ಲೂಕ್ ಆಕ್ಟಿಂಗ್ ಅಮಲ್ದಾರ್, ಕೆ. ಜೆ ರಾಮಣ್ಣನವರು ತಮ್ಮ ಸ್ವಂತ ಕೆಲಸಗಳೊಡನೆ, ಸದರೀ ವೆಂಕಟ್ರಮಣಯ್ಯನವರ ಗೈರಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ಗ್ರಾಮದ ಸಬ್ ತಾಲ್ಲೂಕ್ ಇನ್‌ಚಾರ್ಜನಲ್ಲಿ ರತಕ್ಕದ್ದು.

ನಂ|| ೧೩೮೭೧ ೮. ೪. ೧೨೫೯೨ ತಾ ೧೭ನೇ ಫೆಬ್ರವರಿ, ೧೮೯೩—ತರೀಕೆರೆ ತಾಲ್ಲೂಕ್ ಶಿರಸ್ತೇದಾರ್ ಮೆ|| ಘಂಟೆ ಹಿರಣ್ಯಪ್ಪನವರು, ಕಡೂರ್ ತಾಲ್ಲೂಕಿಗೆ ವರ್ಗವಾದ ಮೆ|| ಸುಬ್ಬಣ್ಣನವರಿಗೆ ಬದಲಾಗಿ ತರೀಕೆರೆ ಮ್ಯುನಿಸಿಪಾಲಿಟಿಯಲ್ಲಿ ಒಬ್ಬ ಮೆಂಬರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ

ನಂ|| ೧೩೭೩೩. ೮, ೩೧೯೦—ಇದರಡಿ ತಿಳಿಸಲ್ಪಡುವ ಪೊಲೀಸ್ ಸೂಪರಿಂಟೆಂಡೆಂಟುಗಳ ಮತ್ತು ಅಸಿಸ್ಟೆಂಟ್ ಸೂಪರಿಂಟೆಂಡೆಂಟುಗಳ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತ್ತವೆ

೧ ಪೊಲೀಸ್ ಸೂಪರಿಂಟೆಂಡೆಂಟ್ ಮೆ|| ದಳವಾಯಿ ದೇವರಾಜೇ ಅರಸಿನವರು ತುಮಕೂರಿಂದ ಬೆಂಗಳೂರು ಡಿಸ್ಟ್ರಿಕ್ಟಿಗೆ.

೨. ಪೊಲೀಸ್ ಸೂಪರಿಂಟೆಂಡೆಂಟ್ ಮೆ|| ಜೆ. ದಬ್ಲ್ಯು ಸೈಬಿಯವರು ಹಾಸನದಿಂದ ತುಮಕೂರ್ ಡಿಸ್ಟ್ರಿಕ್ಟಿಗೆ.

೩ ಶಿವಮೊಗ್ಗ ಡಿಸ್ಟ್ರಿಕ್ಟ್ ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮೆ|| ವಿ. ಎಂ ಗೋಪಾಲಯ್ಯಂಗಾರ್ರವರು ರೆಯಿಲ್ವೆ ಪೊಲೀಸ್ ಇನ್‌ಚಾರ್ಜನಲ್ಲಿರತಕ್ಕದ್ದು

೪ ಪೊಲೀಸ್ ಅ|| ಸೂಪರಿಂಟೆಂಡೆಂಟ್ ಮೆ|| ಸಿ ಹಾರ್ಡಿಯವರು ಬೆಂಗಳೂರಿಂದ ಶಿವಮೊಗ್ಗ ಡಿಸ್ಟ್ರಿಕ್ಟಿಗೆ.

೫ ಈಗ ರೆಯಿಲ್ವೆ ಪೊಲೀಸ್ ಇನ್‌ಚಾರ್ಜನಲ್ಲಿರುವ ಪೊಲೀಸ್ ಸೂಪರಿಂಟೆಂಡೆಂಟ್ ಮ ಕೆ ಪಿ ಕೃಷ್ಣಣ್ಣ ಶೆಟ್ಟರವರು ಹೆಡ್‌ಕ್ವಾರ್ಟರ್ ಆಫೀಸಿಗೆ ವಾಪಸ್ ಹೋಗುವರು

ನಂ|| ೧೩೮೯೯. ೮ ೪ ೩೧೭—೯೨—ಮೆ|| ಎ ರಾಮಚಂದ್ರಯ್ಯನವರು, ಟೇಪೆಕೋರ್ಟಿನ ಚಾಜನ್ನೂ ಚೀಫೆಟ್ಟ ಮತ್ತು ಬುಧೀಬಾನೆಗಳ ಇನ್ಸ್‌ಪೆಕ್ಟರ್ ಜನರಲ್ಲವರ ಕೆಲಸಗಳ ಚಾರ್ಜನ್ನು ೧೮೯೩ನೇ ಇಸವಿ ಜನವರಿ ೩೦ನೇ ತಾರೀಖಿನ ಪೂರ್ವಾಹ್ಣದಲ್ಲಿ ಮೆ|| ಟಿ ಆರ್ ಎ. ತಂಬುಶೆಟ್ಟಿರವರಿಗೆ ಒಪ್ಪಿಸಲು ಅವರದು ತೆಗೆದುಕೊಂಡಿರುತ್ತಾರೆ

ನಂ|| ೧೩೮೯೫ ೮ ೪ ೩೪೫ ೯೨—ಸರ್ಜನ್ಯರ್ ಮೇಜರ್ ಪಿ. ಹೆಚ್ ಬೆನ್ಸನ್ ಎಂ. ಬಿ. ಯವರು, ಮೈಸೂರು ಗವರ್ನಮೆಂಟಿನ ಸೀನಿಯರ್ ಸರ್ಜನ್ಯರ್ ಮತ್ತು ಸಾನಿಟರಿ ಕಮಿಷನರ ಆಫೀಸ್ ಚಾರ್ಜನ್ನು ೧೮೯೩ನೇ ಇಸವಿ ಜನವರಿ ೨೮ನೇ ತಾರೀಖಿನ ಪೂರ್ವಾಹ್ಣದಲ್ಲಿ ಬ್ರಿಗೇಡ್ ಸರ್ಜನ್ ಲೆಫ್ಟಿನೆಂಟ್ ಕರ್ನಲ್ ಟಿ. ಜೆ ಮಗ್ಗ್ರ್ ಯವರಿಗೆ ಒಪ್ಪಿಸಲು ಅವರದು ತೆಗೆದುಕೊಂಡಿರುತ್ತಾರೆ

ನಂ|| ೧೩೮೯೮ ೮ ೪ ೩೨೯–೯೨—ಮೆ|| ಸಿ ವಿ ಮೀನಾಕ್ಷಿ ಅಯ್ಯರವರು, ಲೆಜಿಸ್ಲೇಟಿವ್ ಸೆಕ್ರೆಟರಿ, ಗವರ್ನಮೆಂಟ್ ಅಡ್ವೋಕೇಟ್, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ ಮತ್ತು ಕಂಪೆನಿಗಳ ರಿಜಿಸ್ಟ್ರಾರ್ ಕೆಲಸಗಳ ಚಾರ್ಜನ್ನು ೯೩ನೇ ಇಸವಿ ಜನವರಿ ೩೦ನೇ ತಾರೀಖಿನ ಪೂರ್ವಾಹ್ಣದಲ್ಲಿ ತೆಗೆದುಕೊಂಡಿರುತ್ತಾರೆ

ನಂ|| ೧೩೯೬ ೮ ೧ ೩೨೨೭—ಜೆ ಸ್ನಾಳ್ ರಾ|| ಅಮಲ್ದಾರ್ ಲಾಜರ್ಸ್ ಡ ಮಿಂಗೋ ಯವರು, ೧೮೯೨ನೇ ಇಸವಿ ಸೆಪ್ಟೆಂಬರ್ ೨೩ನೇ ಮಧ್ಯಾಂ ಮೊದಲು ಅಕ್ಟೋಬರ್ ೧೨ನೇ ತಾರೀಖ್ ವರಿವಿಗೆ ೧೭ ದಿನಗಳ ಪ್ರಿವಿಲೇಜ್ ರಜಾ ಪಡೆದಿದ್ದರು

ನಂ ೧೩೯೧೬ ೮ ೯ ೩೧೮–೯೨–ನಗರ ತಾ|| ಕಚೇರಿಯೂ, ಖಜಾನೆ ಮತ್ತು ಪೊಲೀಸ್ ಸ್ಟೇಷನೊಡನೆ ೧೮೯೩ ನೇ ಇಸವಿ ಜನವರಿ ೧೯ನೇ ತಾರೀಖಿನಲ್ಲಿ ಕಲ್ಲೂರ್ ಕಟ್ಟೆಗೆ ವರ್ಗ ಮಾಡಲ್ಪಟ್ಟಿರುತ್ತದೆ

ನಂ|| ೧೩೯೨೮. ೦. ೩೨೮೦–ತಾ|| ೧೯ನೇ ಫೆಬ್ರವರಿ ೧೮೯೩—ಕಡೂರ್ ಡಿಸ್ಟ್ರಿಕ್ಟ್ ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮಿಸ್ಟರ್ ಜೆ ಡನ್ನಿಂಗ್ ಯವರಿಗೆ ಅವರುಪಯೋಗಿಸಿಕೊಳ್ಳುವ ತಾರೀಖ್ ಲಾಗಾಯಿತು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ ಕೋಲಾರ್ ಗೋಲ್ಡ್ ಫೀಲ್ಡ್‌ಗಳಲ್ಲಿ ಸ್ಪೆಷಿಯಲ್ ಪೊಲೀಸ್ ಇನ್ಸ್‌ಪೆಕ್ಟರಾಗಿರುವ ಮೆ|| ಡಿ. ಎ ಬೋಯಾರ್ಡ್ ಯವರು ಮೆ|| ಡನ್ನಿಂಗ್ ಯವರು ರಜಾಮೇಲೆ ಗೈರಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಕಡೂರ್ ಡಿಸ್ಟ್ರಿಕ್ಟ್ ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡತಕ್ಕದ್ದು.

ನಂ|| ೧೩೯೦೨೮. ೦ ೪ ೧೨೨–೯೨—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೩೧ನೇ ಆರ್ಟಿಕಲ್ ಅನುಸರಿಸಿ, ಸೀರಾ ತಾಲ್ಲೂಕ್ ಅಮಲ್ದಾರ್ ವೆಂಕಟಾಚಲಯ್ಯನವರಿಗೆ ೧೮೯೩ನೇ ಇಸವಿ ಫೆಬ್ರವರಿ ೩ನೇ ತಾರೀಖ್ ಲಾಗಾಯಿತು ೪ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತದೆ

ನಂ|| ೧೩೯೦೦೬–೮ ೩೧೬೦—ಬೆಂಗಳೂರ್ ಆಕ್ಟಿಂಗ್ ಸಿಟಿ ಮ್ಯಾಜಿಸ್ಟ್ರೇಟ್ ಮೆ|| ಜೆ ರಘುನಾಥರಾಯರವರು, ಮೆ|| ಹಾಜಿ ಸ್ಟೇಂಡ್ ನಸೀರುದ್ದೀನ್‌ಯವರು ಇತರ ಕೆಲಸದಮೇಲೆ ಗೈರಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಕ್ಲೋಸ್‌ಪೇಟೆಯಲ್ಲಿ ಸಬ್‌ಡಿವಿಜನ್ ಆಫೀಸರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತಾರೆ ಅಸಿಸ್ಟೆಂಟ್ ಕಮಿಷನರ್ ಮೆ|| ಎಸ್ ವೈದ್ಯನಾಥಯ್ಯರವರು ಮೆ|| ಜೆ ರಘುನಾಥರಾಯರವರ ಇತರ ಕೆಲಸದಮೇಲೆ ಗೈರಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಸಿಟಿ ಮ್ಯಾಜಿಸ್ಟ್ರೇಟರಾಗಿ ತಾತ್ಕಾಲಿಕವಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ

ನಂ ೧೩೯೦೦೯ ೮ ೩೨೬೩–ತಾ ೨೦ನೇ ಫೆಬ್ರವರಿ, ೧೮೯೩—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೩೨ನೇ ಆರ್ಟಿಕಲ್ ಅನುಸರಿಸಿ, ಹೊಸಕೋಟೆ ತಾಲ್ಲೂಕ್ ಅಮಲ್ದಾರ್ ಡಿ. ವೆ ಕಟ್ರಮಣಯ್ಯನವರಿಗೆ ಅವರುಪಯೋಗಿಸಿಕೊಳ್ಳುವ ತಾರೀಖ್ ಲಾಗಾಯಿತು ೧೫ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತದೆ

ನಂ|| ೧೩೯೦೬೩ ೮ ೪ ೬೪ ೯೨—ಬೆಂಗಳೂರ್ ಸಿಟಿ ಮ್ಯುನಿಸಿಪಾಲಿಟಿಯ ಆಯಾ ಡಿವಿಜನ್‌ಗಳಿಗೆ ನಿಯಮಿಸಲ್ಪಟ್ಟ ಅಥವಾ ಚುನಾಯಿಸಲ್ಪಟ್ಟಿರುವ ಇದರಡಿ ಕಂಡ ಮ್ಯುನಿಸಿಪಲ್ ಕಮಿಷನರ್‌ಗಳ ಪಟ್ಟಿಯು ಸಕಲ ಜನಗಳ ತಿಳುವಳಿಕೆಯ ಬಗ್ಗೆ ಪ್ರಚುರ ಮಾಡಲ್ಪಟ್ಟಿರುತ್ತದೆ

ಎಕ್ಸ್ ಅಫಿಷಿಯೊ ಮೆಂಬರ್‌ಗಳು

೧ ಬೆಂಗಳೂರ್ ಡಿ|| ಡೆಪ್ಯುಟಿಕಮಿಷನರ್, ಪ್ರೆಸಿಡೆಂಟ್
೨ ಮೈಸೂರ್ ಗವರ್ನಮೆಂಟ್ ಸೀನಿಯರ್ ಸರ್ಜನ್ಯರ್ ವ ಸಾನಿಟರಿ ಕಮಿಷನರ್ } ಮೆಂಬರ್
೩ ಬೆಂಗಳೂರ್ ಡಿವಿಜನ್ ಎಕ್ಸಿಕ್ಯೂಟಿವ್ ಇಂಜಿನಿಯರ್ ,,
೪ ಬೆಂಗಳೂರ್ ತಾಲ್ಲೂಕ್ ಅಮಲ್ದಾರ್
೫ ಬೆಂಗಳೂರ್ ಸೆಂಟ್ರಲ್ ಜೆಯಿಲ್ ಸೂಪರಿಂಟೆಂಡೆಂಟರವರು ,,

ಇತರ ಮೆಂಬರ್‌ಗಳು.

೬ ಮೆ|| ಕೆ ಶ್ರೀನಿವಾಸರಾಯರು, ವೈಸ್ ಪ್ರೆಸಿಡೆಂಟ್

ನಾನ್ ಅಫಿಷಿಯಲ್ ಮೆಂಬರ್‌ಗಳು.

೧ ಅರಮನೆ ಡಿವಿಜನ್

೧ ಸೇ ಮು|| ಟಿ. ಲೆನ ಡ್ ಯವರು *
೨ ಖಾಲಿ

೨ ಪೈಗಾಂಬರ ಡಿವಿಜನ್.

೩ ವಾಕ್ಸರ್ ಎಫ್ ಎಫ್ ಎಲ್ ವೆಸ್ಲೋ ಯವರು *
೪ ಹ್ಯೂರ್ ಸಹ್ ಫೋಕ್ಸ್ ಯವರು §

೩ ಎಳೇಪೇಟೆ ಡಿವಿಜನ್.

೫ ಮೆ|| ಬಿ ಗಂಗಪ್ಪನವರು *
೬ ,, ಬಿ ವೆಂಕಟ್ರಾಮಯ್ಯನವರು *

೪ ಮನವಾರ್ಪೇಟೆ ಡಿವಿಜನ್

೭ ಮೆ|| ಎಸ್ ಸುಬ್ಬರಾಯರು *
೮ ,, ಕೆವ್. ಬಿ.ಮಯ್ಯನವರು *

೫ ಹಲಸೂರು ಪೇಟೆ ಡಿವಿಜನ್.

೯ ,, ಅಣ್ಣಯ್ಯಪ್ಪ ಶೆಟ್ಟರು *
೧೦ ,, ಪಿ ಸ.ಬ್ಬಯ್ಯನವರು *

೬ ನಗರ್ತರಪೇಟೆ ಡಿವಿಜನ್.

೧೧ ,, ಪಿ ಎನ್ ನರಸಿಂಹಯ್ಯಂಗಾರ್ರವರು
೧೨ ,, ಕಪುವಾಲ್ಲಾ ಖಾನರು §

೭ ಲಾಲ್‌ಬಾಗ್ ಡಿವಿಜನ್.

೧೩ ,, ಟಿ ಆರ್ ವೆಂಕಟಸ್ವಾಮಿನಾಯುಡರವರು,
೧೪ ,, ಜೆ ಕ್ಸ್ಯಾವಿಯರ್ ಯವರು §

೮ ಕೋಟೆ ಡಿವಿಜನ್

೧೫ ,, ಎ ಜೆ ಶಿಂಗಾರವೇಲುಮುದಲಿಯಾರವರು
೧೬ ,, ಟಿ ಅಬ್ದುಲ್ ಕರೀಂಯವರು §

ಐ ನಂ|| ೪೫ ತಾ|| ೯ನೇ ಫೆಬ್ರವರಿ ೧೮೯೩.— ಬೆಂಗಳೂರು ಗವರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋ ಕ್ಯುರೇಟರ್ ಮೆ|| ಪಿ ನಾಥಮುನಿ ನಾಯುಡರವರಿಗೆ ೧೮೯೩ ನೇ ಇಸವಿ ಜನವರಿ ೩೦ ನೇ ತಾರೀಖ್ ಲಾಗಾಯಿತು, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೮೮ ನೇ ಆರ್ಟಿಕಲ್ ಅನುಸರಿಸಿ ೨ ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

* ಈ ಸಂಜ್ಞೆಯುಳ್ಳ ಹೆಸರುಳ್ಳವರು, ಪ್ರಜೆಗಳಿಂದ ಚುನಾಯಿಸಲ್ಪಟ್ಟವರು

§ ಈ ಸಂಜ್ಞೆಯುಳ್ಳ ಹೆಸರುಳ್ಳವರು ಗವರ್ನಮೆಂಟಿನವರಿಂದ ನಿಯಮಿಸಲ್ಪಟ್ಟವರು

## SUMMARY OF NEWS
### ವೃತ್ತಾಂತ ಸಂಗ್ರಹವು

ಶ್ರೀಮನ್ಮಹಾರಾಜಾ ಸರ್ಕಾರ್ ಮೈಸೂರ್ ಇವರ ಸ್ವಾರಿ ಕೋಲಾರ ಕಡೆಗೆ ಹೋಗಿ ಮುಂತೆ ಗದಾಡ ಕಡೆಗೆ ಹೋದ್ದಾಗ ಅಲ್ಲಿಯ ಜನಕ್ಕೆ ಅಂದರೆ ಗಯಾವಾಳಿಗೆ ೫೦ ಸಾವಿರ ರೂಪಾಯಿಗಳನ್ನು ದಾನ ಧರ್ಮವಾಗಿ ಕೊಟ್ಟರು ಅವರೂ ಗವಾಡಾವಾಳರು ತಮಗೆ ಇನ್ನೂ ಸ್ವಲ್ಪ ನವಾಗತಕ್ಕದ್ದೆಂದು ಹೇಳಿಕೊಳ್ಳಲು, ಮಹಾರಾಜರವರು ಅವರಿಗೆ ಪ್ರತ್ಯೇಕಸಂಪಾದನವಾಗ ನಮ್ಮ ಗವರ್ನಮೆಂಟಿನ ಮುಖಾಂತರ ೫೦ ಸಾವಿರ ರೂಪಾಯಿ ... ಕೊಟ್ಟಿರುವನಿಲ್ಲಿಂದು ಹೇಳಿದರು ... ಲೋ, ಬಂ

ಎಂ ಮರಿಯಲ್ಲಿ ಮಹಾಪ್ರಸ್ತುತದ ಕೂಟ ದ ನಾ ರ ಎಂ ಬ ದು ವರ್ತಮಾನ ಪತ್ರಿಕೆಯಲ್ಲಿ ನಮ್ಮ ಶ್ರೀ ಮನ್ಮಹಾರಾಜರವರು ಈ ವರ್ತ ... ರಾಜರುಗಳಲ್ಲಿ ವಿಶೇಷ ಸುಗುಣಕತೆಯುಳ್ಳವರೆಂದಾಗಿಯೂ, ವಿದ್ಯಾ ಬುದ್ಧಿ ... ಸ್ಥಾಯಿ ... ಭೂಷಣ ... ಮೂರನೇ ಎ ... ದಿನ ... ಪ್ರಸಂಗ ... ಸವನ್ನು ... ಪ್ರಜಾರಕ್ಷಣೆಯು ... ಅವನ್ನು ಪರಿಕ್ಷಿಸಿ ತಮ್ಮ ... ಸ್ಥಾನದಲ್ಲಿ ನಡೆಯತಕ್ಕ ... ವಿಶೇಷ ... ಸ್ವಂತ ... ವಾಗಿ ... ಇರುವ ... ತಮ್ಮ ... ಶ್ಲಾಘ್ಯವಾದದ್ದು ... ರಾಯರವರು ... ನೋಡಿಕೊಂಡು ... ತಮ್ಮ ದೇಶದ ಪ್ರಜೆಗಳನ್ನು ಉನ್ನತಸ್ಥಿತಿಯ ವಿದ್ಯೆಯ ಮಾರ್ಗದಲ್ಲಿ ವೃದ್ಧಿ ತರುತ್ತಲಿದ್ದಾರೆ ಅದಕ್ಕಿಂತಲೂ ವಿಶೇಷವಾದ ಕಾರ್ಯ ನಮ್ಮ ಮಹಾರಾಜರ ವೇದಾಂತದಿಂದ ನಮ್ಮ ... ನಾವು ಕೋರುತ್ತೇವೆ ಶ್ರೀಮನ್ಮಹಾರಾಜರವರು ಇತರ ಖಂಡಗಳಿಗೆ ಪ್ರಯಾಣ ಮಾಡುವುದಕ್ಕೆ ಸಮುದ್ರಯಾನ ... ಜನರ ... ಪ್ರತಿಬಂಧಕವಾಗಿತ್ತು ಈಗ ಶಾಸ್ತ್ರಜ್ಞರಾದ ಬಡಾಜರ ಪಂಡಿತರು ಸಮುದ್ರಯಾನವು ... ದೇಶಾಂತರ ಸಂಚಾರ ಮಾಡಿದ ... ತಮ್ಮ ತಮ್ಮ ... ಕರ್ಮಗಳನ್ನು ಅನುಸರಿಸಿ ನಡೆಯ ... ಸಮುದ್ರಯಾನದಿಂದ ಯಾವ ಬಾಧಕವಿಲ್ಲವೆಂದು ... ಇದಲ್ಲದೆ ಪ್ರಜೆಗಳ ಯೋಗಕ್ಷೇಮವನ್ನು ವೃದ್ಧಿ ಮಾಡುವ ಚಿಂತೆಯಿಂದ ಸಮುದ್ರಯಾನವನ್ನು ಮಾಡತಕ್ಕದ್ದು ಎಂದಿಗೂ ... ಮಾಡತಕ್ಕ ... ಪ್ರಯಾಣವನ್ನು ಪ್ರಜೆಗಳ ಯೋಗಕ್ಷೇಮದ ವಿಷಯದಲ್ಲಿ ಮಾಡಿದ್ದೇ ಆದರೆ ಪ್ರಜೆಗಳ ಕೃತಜ್ಞತೆಗೂ ಗೌರವಕ್ಕೂ ಪಾತ್ರರಾಗುವದರಲ್ಲಿ ಸಂಶಯವಿಲ್ಲ. ಮೊದಲೇ ನಮ್ಮ ಕೃತಜ್ಞತೆಗೆ ವಿಶೇಷ ಪಾತ್ರರಾಗಿತಕ್ಕ ನಮ್ಮ ಶ್ರೀಮನ್ಮಹಾರಾಜರವರು ದೇಶಾಟನೆಯನ್ನು ಮಾಡಿ ಅವರಿಂದ ... ಪ್ರಯೋಜನಗಳಿಗೆ ನಮ್ಮನ್ನು ಭಾಗಿಗಳಾಗಿ ಮಾಡಿದ ಪಕ್ಷದಲ್ಲಿ ಅವರ ವಿಷಯದಲ್ಲಿ ನಮ್ಮ ಕೃತಜ್ಞತೆಗೆ ಪಾರವೇ ಇರುವದಿಲ್ಲ —ವೃ ಚಿಂ

BANGALORE —Printed and published at the KARNATAKA PRESS, No 40, HOSPITAL ROAD, CITY —1893

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

## ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

## Published Every Monday Morning.

ಶ್ರೀಮದ್ವಿವಿಧಪ್ರವೃತ್ತ್ಯುಪಗಮಾರ್ಥಂ ಕರ್ಣಾಟಕಪ್ರಕಾಶನಪರಾಭಿಧಾಪ್ರಥಿತಸಾಹಿತೀಶೋಭಿತಾ ॥ ವ್ಯಗಾಂಕಹಿತವಾಸರೇನಿಹಿತಮುದ್ರಣಾಸಜ್ಜನೈರ್ನಿಶಾಸುಪರಿಪೇಯಿತಾದಿಕತಿಮಾನಸಂಸುಮುದಂ

Vol. XX ] BANGALORE—MONDAY MARCH 6, 1893 [No. 9.

ಸಂಪುಟ ೨೦. } ಬೆಂಗಳೂರು:—ಸನ್ ೧೮೯೩ನೇ ಇಸವಿ ಮಾರ್ಚ್ ೬ ನೇ ತಾರೀಖು ಸೋಮವಾರ. {ಸಂಚಿಕೆ ೯.



## ಕರ್ಣಾಟಕ ಪ್ರಕಾಶಿಕಾ.

### ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

| | ಸ್ಥಳದವರಿಗೆ. | ಪರಸ್ಥಳದವರಿಗೆ |
|---|---|---|
| ಸಾಲ್ ೧ಕ್ಕೆ ... | ...6—0—0 | 8—0—0 |
| 6 ತಿಂಗಳಿಗೆ . | 3—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ,

| | ಸ್ಥಳದವರಿಗೆ, | ಪರಸ್ಥಳದವರಿಗೆ, |
|---|---|---|
| ಸಾಲ್ ೧ಕ್ಕೆ ... ... | 3—0—0 | 4—0—0 |
| 6 ತಿಂಗಳಿಗೆ .. ... | 1—12—0 | 2—8—0 |

ಈ ಪತ್ರಿಕೆಗೆ ದರಗಳನ್ನು, ನಾಪಿದ ತಾರೀಖು ಮೊದಲು ಒಂದು ತಿಂಗಳಿನೊಳಗಾಗಿ [illegible] ಕೊಡುವುದು [illegible] ಆರ್ಡರ್ ಮೂಲಕ ಪತ್ರಿಕೆ [illegible]. [illegible] ಇಂಗ್ಲಿಷ್ [illegible] ಕನ್ನಡ [illegible] ಎರಡನ್ನಾಗಲಿ [illegible] ತಿಂಗಳಿಗಿಂತ ಕಡಿಮೆಯಾಗಿ [illegible].

### ಪ್ರಕಟನೆಯ [illegible].

ಒಂದು ಸಲಕ್ಕೆ ಪಂಕ್ತಿ ಒಂದಕ್ಕೆ ೦—೨—೦
ಎರಡನೇ ಸಲ [illegible] ಒಂದಕ್ಕೆ ೦—೧—೦

[illegible] ಪತ್ರಿಕೆಯಲ್ಲಿ ಪ್ರಕಟಿಸಲು [illegible] ಪ್ರಕಟನೆಗಳು [illegible] ಈ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟವುಗಳು [illegible] ಇರುವ [illegible] ಕ್ರಮವಾಗಿ [illegible].

*ADVERTISEMENTS*



## NOTICE.

### VAIDYASARA SANGRAHA

A TREATISE ON THE PRINCIPLES OF

### HINDU MEDICINE

*Price including Postage Rs 5 0 0*

ವೈದ್ಯಸಾರ ಸಂಗ್ರಹ.

ಈ ಗ್ರಂಥವು ಬೇಕಾದವರು [illegible] ಬರೆದುಕೊಂಡರೆ ಪುಸ್ತಕ ಕೊಡಲ್ಪಡುವುದು. [illegible] ಸಿಗಲಾರದು.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೇ ಹಾಸಲ್ ಸಹಿತ ಪ್ರತಿ ಒಂದಕ್ಕೆ ರೂ 5—0—0

ಟಿ. ಬಿ. ವೆಂಕಟಾಚಾರ್.

ಬೆಂಗಳೂರ್, ಚಿಕ್‌ಪೇಟೆ [illegible] ನಂಬರ್

## ನೋಟೀಸ್.

### ಬೆಂಗಳೂರು ಕರ್ಣಾಟಿಕ್ ಪ್ರೆಸ್.

೧೮೬೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ ಸಕಲವಿಧ ಕೆಲಸಗಳು ಸುಲಭವಾಗಿ ತ್ವರಿತವಾಗಿಯೂ ಶ್ಲಾಘ್ಯವಾಗಿಯೂ ಮುದ್ರಿಸಲ್ಪಡುವುವು.

ಇದರಲ್ಲಿ ಸದ್ಯ ಇಂಗ್ಲಿಷ್ ಕನ್ನಡ ಕೆಲಸಗಳು ಮಾತ್ರ [illegible], ಇತರ ತರಹಗಳನ್ನು ಸರ್ಕಾರ [illegible] ತೀರುಮಾನಿಸಿಕೊಳ್ಳಬಹುದು.

## ನೋಟೀಸ್.

### ನಂಜಪ್ಪನವರ ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು.

ಕೆಳಗೆ ಕಾಣಿಸಿರುವ ಔಷಧಗಳು [illegible] ಈ ಔಷಧಗಳು [illegible] ತಯಾರಾಗಿರುತ್ತವೆ [illegible] ಗುಣವನ್ನು ಕೊಡುವುದಾಗಿಯೂ [illegible] ರೋಗಸ್ಥರೆಲ್ಲರೂ [illegible] ಔಷಧಗಳ [illegible] ಪ್ರತ್ಯಕ್ಷಕ್ಕೆ [illegible].

[illegible]—ಮಹಾಶಕ್ತಿ [illegible] ರಕ್ತ [illegible] ಸೀಸೆ ಒಂದಕ್ಕೆ ೫ ರೂ.

[illegible] ಗುಳಿಗೆಗಳು—[illegible].

[illegible]

ಮೂಲವ್ಯಾಧಿಗೆ—[illegible].

ಭಸ್ಮಗಳು—[illegible] ರಜಿತ, ವಂಗ, ಸೀಸ, ಪ್ರವಾಳ, [illegible] ಅಭ್ರಕ, ಲೋಹ, ಕಾಂತ [illegible] ಭಸ್ಮಗಳು [illegible].

ಲೇಹ್ಯಗಳು—[illegible] ಕೂಷ್ಮಾಂಡ [illegible] ಸೀಸೆ ೧ಕ್ಕೆ ೩ ರೂ.

ಪರಿಮಳ [illegible]—ಗಂಧ, [illegible] ಸೀಸೆ ೧ಕ್ಕೆ ೩ ರೂ.

ಚೂರ್ಣಗಳು—[illegible].

## ನೋಟೀಸ್.

### ಗಣೇಶ ರಾಮಚಂದ್ರ ಕರ್ಕರೆ ಮತ್ತು ಕಂಪೆನಿ.

ಕಮಿಷನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯೊಡನೆ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ತಕ್ಕ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರಹ ಔಷಧಗಳು, ಪುಸ್ತಕಗಳು, ಮುತ್ತುಗಳು, ಚಿಪ್ಪಿ ಮುತ್ತುಗಳು, [illegible], [illegible]ಗಳು, [illegible]ಗಳು, ಕಾಶ್ಮೀರ ಶಾಲುಗಳು, ಪಟ್ಟೆಸೀರೆಗಳು, ಜರತಾರಿ [illegible]ಗಳು, ಚಂದ್ರಕಾಂತ [illegible] ಪುಸ್ತಕಗಳು, [illegible] ಜರತಾರಿ [illegible]ಗಳು, ಆಭರಣಗಳು, ಪಟಗಳು, ಅತ್ತರುಗಳು, ಅತ್ಯುತ್ತಮವಾಗಿರುವ ರತ್ನಗಳು, [illegible] ಕಟ್ಟಲ್ಪಟ್ಟ [illegible]ಗಳು, [illegible] ಪಾತ್ರೆಗಳು, ಜರ್ಮನ್ ಬೆಳ್ಳಿ ಪಾತ್ರೆಗಳು, ಕೇಸರಿ, ಕಸ್ತೂರಿ ಮೊದಲಾದ ಇತರ ಸಾಮಾನುಗಳು

ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟ್ಯಾಂಪ್ ಕಳುಹಿಸಿದ ಹೊರತು ಜವಾಬ್ ದೊರೆಯಲಾರದು.

ವಿಳಾಸ.—ಗಣೇಶ ರಾಮಚಂದ್ರ ಕರ್ಕರೆ,
ಮತ್ತು ಕಂಪೆನಿ, ಕಮಿಷನ್ ಏಜಂಟ್ಸ್,
ಕಾಕರ್‌ದ್ವಾರ್, ಮಾರ್ಕೆಟ್ ಪೋಸ್ಟ್, ಮುಂಬೈ.

## ನೋಟೀಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕರೀಗೆ ಸಿದ್ಧವಾಗಿವೆ. ಬೇಕಾದವರು ಹಣ ಕಳುಹಿಸಿ ತರಿಸಿಕೊಳ್ಳಬಹುದು.

### ಸಂಸ್ಕೃತ ಗ್ರಂಥಗಳು.

| | ಪೋಸ್ಟ್ ಸಹಿ | ರೂ | ಅ. ಪೈ |
|---|---|---|---|
| ಸಟೀಕಾ [illegible] ... | ೫ | ೦ | ೦ |
| ,, ಶಿವಗೀತೆ ... | ೧ | ೦ | ೦ |
| ,, [illegible] ... | ೦ | ೮ | ೦ |
| ,, ಕಾಲಾಮೃತ ... | ೧ | ೦ | ೦ |
| ,, ಟಿ॥ ಬಾಲರಾಮಾಯಣ .. | ೦ | ೩ | ೦ |
| ,, ಟೀ॥ [illegible] ಗೀತೆ ... | ೦ | ೧ | ೦ |
| ,, ಟೀ॥ [illegible] (ಸುಭಾಷಿತ) | ೦ | ೪ | ೦ |
| ವಿಷ್ಣುಸಹಸ್ರನಾಮ ಪತ್ರಿಕೆ ... | ೦ | ೩ | ೦ |
| ಸೂರ್ಯಸಹಸ್ರನಾಮ ... | ೦ | ೨ | ೦ |
| ಕೃಷ್ಣಕರ್ಣಾಮೃತ ... | ೦ | ೨ | ೦ |
| ತ್ರಿಶತಿ ಅಮರ [illegible] ... | ೦ | ೨ | ೦ |
| ೧ ಕಾಂಡ ... | ೦ | ೧ | ೦ |

### ಕನ್ನಡ ಗ್ರಂಥಗಳು.

| | | | |
|---|---|---|---|
| [illegible] ... | ೩ | ೦ | ೦ |
| [illegible] ... | ೧ | ೨ | ೦ |
| [illegible] ... | ೧ | ೮ | ೦ |
| [illegible] ... | ೦ | ೪ | ೦ |
| [illegible] ... | ೦ | ೪ | ೦ |
| [illegible] ... | ೦ | ೨ | ೦ |
| [illegible] ... | ೦ | ೨ | ೦ |
| [illegible] ... | ೦ | ೨ | ೬ |
| ಸುದಾಮಚರಿತ್ರ ... | ೦ | ೧ | ೬ |
| [illegible] ಚರಿತ್ರೆ ... | ೦ | ೧ | ೦ |
| ಬಾಲಪ್ರಹ[illegible] ... | ೦ | ೧ | ೦ |
| [illegible] ... | ೦ | ೧೨ | ೦ |
| [illegible] ... | ೦ | ೧೨ | ೦ |



## THE MONEY MARKET.

ಮದರಾಸ್, ಶನಿವಾರ, ತಾರೀಖ್ ಮಾರ್ಚಿ 4ನೇ 1893.

ಸೇಕಡ 4ರೂ. ಬಡ್ಡಿ ಗವರ್ನಮೆಂಟ್ ಪತ್ರಗಳು ರೂಪಾಯಿ, 105—2—0 ಇಂದ 105—6—0ವರೆಗೆ.

ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತು 935 ಲಾಗಾಯಿತು 940ವರೆಗೆ.

ಕಮರ್ಷಿಯಲ್ ಪ ಬ್ಯಾಂಕ್ ಮದ್ರಾಸ್ ಬ್ಯಾಂಕ್ ಷೇರುಗಳು, (100) ಬಾಬತು 160 ರಿಂದ 165 ವರೆಗೆ

ಸವರಿನ್‌ಗಳು, 16—7—0 ಇಂದ 16—10—0ವರೆಗೆ.

ಬ್ಯಾಂಕ್‌ಬಿಲ್‌ಗಳು ಯೂನಿಯನ್ ಮುದ್ದತ್ತಿಗಳು, ರೂ ೧ಕ್ಕೆ 6ತಿಂಗಳ ಮುದ್ದತ್ತಿಗೆ, 1s. 2 27/32 d.

ಡಿಟ್ಟೋ 4 ತಿಂಗಳ ಮುದ್ದತ್ತಿಗೆ, 1s 2 25/32d

ಡಿಟ್ಟೋ ಕೇಳಿದಾಗ, 1s. 2 11/16d.

## ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, MARCH 6, 1893

೧೮೯೩ನೇ ಇಸವಿ ಮಾರ್ಚ್ ತಾ॥ ೬ ನೇ ಸೋಮವಾರ

### ಲೆಪ್ಟಿನೆಂಟ್ ಸ್ಥಳ ಬದಲಾವಣೆ.

ಕಳೆದ ಬೃಹಸ್ಪತಿವಾರದ ಮೈಸೂರ್ ಗೆಜೆಟ್ಟಿನಲ್ಲಿ ಘೋಷಿಸ್ ಮಾಡಲ್ಪಟ್ಟಿರುವ ಪ್ರೊಬೇಷ [illegible] ಬರುವ ಏಪ್ರಿಲ್ ಗುರ್ರು ತಾರೀಖಿನಲ್ಲಿ ಮೈಸೂರಿಗೆ ವರ್ಗ ಮಾಡಲ್ಪಡುತ್ತದೆಂದು ಸ್ಪಷ್ಟವಾಗುತ್ತಿದೆಯಷ್ಟೆ. ಇನ್ನು ಸ್ವಲ್ಪ ದಿನಗಳಲ್ಲಿ ವಿದ್ಯಾಭ್ಯಾಸದ ಇಲಾಖೆ, ಪೊಲೀಸ್ ಸೆಕ್ರೆಟರಿ ಆಫೀಸ್, ಸೀನಿಯರ್ ಸರ್ಜನ್ ಆಫೀಸ್, ಇವೆಲ್ಲವು ಮೈಸೂರಿಗೆ ವರ್ಗ ಮಾಡಲ್ಪಡಬೇಕೆಂದ ವಿಷಯದಲ್ಲಿ ಪ್ರಯತ್ನಗಳು ನಡೆಯುತ್ತಿರುವಂತೆ ಕೇಳುತ್ತೇವೆ. ಆದ್ದರಿಂದ ದಿವಾನರ ಆಫೀಸು ಸಹ ಇಲ್ಲಿಂದ ಹೊರಡುವವರಲ್ಲಿ ಸುಮ್ಮನೆ ಹೇಳಿದ್ದೇವೆ. ಇದರಿಂದ ಬೆಂಗಳೂರು ಪಟ್ಟಣದ [illegible] ಪ್ರಜಾ [illegible] ಕಡಮೆಯಾಗುವದೆಂದು ಭಾವಿಸಿ ಕೆಲವರು ಈ ವಿಚಾರದ ವಿಷಯ ಅನ್ಯಥಾ ಅಭಿಪ್ರಾಯಪಟ್ಟಿರುವಂತೆ ತಿಳಿಯಬರುತ್ತದೆ. ಬ್ರಿಟಿಷ್ ಆಧಿಪತ್ಯವು ಈ ರಾಜ್ಯದಲ್ಲಿ ನೆಲೆಗೊಂಡ ಕಾಲದಿಂದಲು ಈ ಪಟ್ಟಣವು ಬ್ರಿಟಿಷ್ ಸರ್ಕಾರದವರಿಗೆ ಆನುಕೂಲ್ಯಗಳನ್ನು ಪರಿಭಾವಿಸಿ ಪೆಂಟ್ಟಿ [illegible], ಅಂದರೆ ಮುಖ್ಯಸ್ಥಳವನ್ನಾಗಿ ಇಲ್ಲಿ ನೆಲೆಗೊಳಿಸಲ್ಪಟ್ಟಿತು. ಆದು ಮೊದಲು ಇಲ್ಲಿ ಪ್ರತಿ ಸಂವತ್ಸರದಲ್ಲಿಯೂ ಅನ್ಯದೇಶಕರಿಂದ ಬಂದು ನೆಲೆಸಿದವರ ಸಂಖ್ಯೆಯು ವೃದ್ಧಿಯಾಗುತ್ತ ಬಂದುದು ಮಾತ್ರವಲ್ಲದೆ ಕಾಲೇಜುಗಳು ವೇತನಾಧಾರಗಳು ಕಸಬೆಗಳು ವಿಶೇಷ [illegible] ಬಂದುದು. ಇದಲ್ಲದೆ ಇದಕ್ಕೆ ಸೇರಿದಂತೆ ಬ್ರಿಟಿಷ್ ಕಂಟೋನ್‌ಮೆಂಟ್ ಇರುವದರಿಂದಲೂ, ಬ್ರಿಟಿಷ್ ರೆಸಿಡೆಂಟರು ಹಮೇಷಾ ಇಲ್ಲಿಯೇ ಇರುವದರಿಂದಲೂ, ನಾನಾ ಕಡೆಗಳಿಗೆ ಹೋಗತಕ್ಕ ರೈಲ್ವೆ ದಸ್ತೆಗಳು ಇಲ್ಲಿ ಸಂಧಿಸುವದರಿಂದಲೂ, ಮಹಾ ಬಹಳ ಅಭಿವೃದ್ಧಿಯಾದದ್ದಲ್ಲದೆ ಅನೇಕರಿಗೆ ವಾಸವಾಗಲಿಕ್ಕೆ ಮನೆಗಳು ದೊರೆಯುವದು ಸಹ ಅತಿ ಪ್ರಯಾಸವಾಗಿ ಪರಿಣಮಿಸಿತು. ಇದಕ್ಕಾಗಿ ಊರನ್ನು ಕೆಲವು ಕಡೆಗಳಲ್ಲಿ ವಿಸ್ತಾರಪಡಿಸಲು [illegible] ಇಳಿದು ಸ್ವಲ್ಪ ದಿವಸಗಳಲ್ಲಿ ತಾಯಿಸುಕರಿಸಿದ್ದಾರೆ. ಹೀಗಿರುವಲ್ಲಿ ಕೆಲವು ಹೆಡ್ ಆಫೀಸ್ ಅಧಿಕಾರಿಗಳ ಉದ್ಯೋಗಸ್ಥರು ಇಲ್ಲಿಂದ

ಹೊರಟುಹೋಗುವ ದೆಸಾತ್ರದಿಂದಲೇ ಪಟ್ಟಣದ ಜನಸಂಖ್ಯೆ ಕಡಮೆಯಾಗುವದೆಂದು ನಾವು ಹೇಳಲಾರೆವು. ದಿನೇ ದಿನೆ ರೆಯಿಲ್ವೇ ಗಲಾಟೆಯು ಇಲ್ಲಿ ಅಧಿಕವಾಗುತ ಬರುವದರಿಂದ ಮುಂದೆ ಅನೇಕ ಕುಟುಂಬಗಳಲ್ಲಿ ಬಂದು ನೆಲೆಸುವದರಲ್ಲಿ ಲೇಶವೂ ಸಂಶಯವಿಲ್ಲವು. ಇಲ್ಲಿ ಹೆಡ್ ಕ್ವಾರ್ಟರ್ ಆಫೀಸುಗಳು ಇರುವದರಿಂದ, ಶ್ರೀಮನ್ಮಹಾರಾಜರವರು ಇಲ್ಲಿಗೆ ದಯಮಾಡಿದರೆ ಅವರ ಸ್ವಂತ ರಾಜ್ಯದಲ್ಲಿರುವಂತೆ ಅಲಂಕಾರವಾಗಿರುವದು. ಮುಂದೆ ಅವರು ಇಲ್ಲಿಗೆ ದಯಮಾಡಿದರೆ ಅವರಿಗೆ ಬ್ರಿಟಿಷ ರಾಜ್ಯದಲ್ಲಿರುವದಕ್ಕೂ ಯೇನೂ ವ್ಯತ್ಯಾಸವಿರಲಾರದು. ರಾಜಧಾನಿಯು ಮೈಸೂರಾಗಿದ್ದಾಗ್ಯೂ ಗವರ್ನಮೆಂಟ್ ಆಫೀಸುಗಳು ಇಲ್ಲಿರುವದರಿಂದ ಬಾಧಕ ವುಂಟಾದುದೇನೂ ಕಾಣಿಸಲಿಲ್ಲವು. ಸ್ವಾಧೀನವು ಸ್ವಾಮ್ಯವು ಅಧಿಕವಾದುದರಿಂದ ಇಲ್ಲಿನ ಸಂಬಂಧವನ್ನು ತಗ್ಗಿಸಿ ಇದನ್ನು ಇತರ ಡಿಸ್ಟ್ರಿಕ್ಟ ಹೆಡ್‌ಕ್ವಾರ್ಟರುಗಳಂತೆ ಸಾಮಾನ್ಯವಾಗಿ ಮಾಡುವದು ಯುಕ್ತವಾಗಿ ತೋರಲಿಲ್ಲವು. ಈ ಊರು ಕೋಟೆಯನ್ನು ಹರ್ ಮ್ಯಾಜಸ್ಟೀಸ್ ಸರಕಾರದವರು ಶ್ರೀಮನ್ಮಹಾರಾಜರವರಿಗೆ ಕೊಟ್ಟ ಕಾಲದಲ್ಲಿ ಈ ಸಂಸ್ಥಾನದ ಮಿಲಿಟರಿ ಹೆಡ್‌ಕ್ವಾರ್ಟರ್ ಆಫೀಸ ಕೋಟೆಯಲ್ಲಿ ಇಡಲ್ಪಡುವದೆಂತಲೂ, ಅಲ್ಲಿದ್ದ ಸವಾರ್ ಕಚ್ಚೇರಿ ಕಟ್ಟಡವು ಶ್ರೀಮನ್ಮಹಾರಾಜರವರ ಜನಾನಾ ಮಹಲಿಗಳಿಗೋಸ್ಕರವಾಗಿ ಮಾಡಲ್ಪಡುವದೆಂತಲೂ ಪ್ರವಾದ ವುಂಟಾಗಿತ್ತು. ಕ್ರಮೇಣ ಕೋಟೆ ಒಡೆಯಲ್ಪಟ್ಟು ಅದರ ಕಲ್ಲುಗಳು ಕಂಡವರ ಪಾಲಾಗಿ ಕಂದಕವು ಮುಚ್ಚಲ್ಪಟ್ಟು ಬಾಳೆ ತೋಟಗಳಿಗೆ ವಿನಿಯೋಗಿಸಲ್ಪಡುವಂತೇರ್ಪಟ್ಟಿತು. ಈ ಕ್ರಮವನ್ನನುಸರಿಸಿ ನೋಡಿದರೆ ಇಲ್ಲಿನ ಅಠಾರಾ ಕಚ್ಚೇರಿಗಳು ಮೈಸೂರಿಗೆ ಹೋದಮೇಲೆ ಸದರೀ ಕಟ್ಟಡಗಳು ಕೋಟೆಯ ಸ್ಥಿತಿಯನ್ನನುಕರಿಸಬಾರದೆಂದು ಕೋರುತ್ತೇವೆ.

## Occasional Notes.
## ನೈಮಿತ್ತಿಕ ವಿಷಯನ್ಯಾಸ.

ಕಾಶಿ ಪ್ರಾಂತದಲ್ಲಿ ಅತಿವೃಷ್ಟಿಯು ದೆಸೆಯಿಂದ ದಹಸರಿಗಳು ಕೆತ್ತುತಲಿರುವಂತೆ ತಿಳಿಯಬರುತದೆ

ಬರುವ ಏಪ್ರಿಲ್ ತಿಂಗಳ ೩ನೇ ತಾರೀಖಿನಲ್ಲಿ ವೈಸ್ರಾಯ್ ಸಾಹೇಬರವರು ಕಲ್ಕತ್ತೆಯಿಂದ ಹೊರಟು ಮಾರ್ಗವಶಾತ್ ರೀವಾ ಸಂಸ್ಥಾನವಂನೋಡಿಕೊಂಡು ಸಿಂಲಾವಿಗೆ ಹೋಗುತ್ತಾರೆ.

ಅಮೇರಿಕಾ ದೇಶದೊಳಗಣ ಚಿಕಾಗೊ ಪಟ್ಟಣದಲ್ಲಿ ಈಗ ಹೊಸದಾಗಿ ಒಂದು ಹೋಟೆಲ್ ಕಟ್ಟಲ್ಪಡುತಲಿದೆ ಅದು ಹತ್ತು ಯೆಕ್ರೆಗಳ ವಿಸ್ತೀರ್ಣ ವುಳ್ಳದ್ದಾಗಿಯೂ ೬,೪೦೦ ಕೋಣೆಗಳುಳ್ಳದ್ದಾಗಿಯೂ ಇರುತಿದೆ.

ಮುಂಬೈಯಲ್ಲಿ ಕಮಾಂಡರ್ ಇನ್ ಚೀಫರವರಾಗಿ ನೇಮಕರಾಗಿಸಲ್ಪಟ್ಟ ಸರ್ ಜಾರ್ಜ್ ಹಟ್ವರ್ ಸಾಹೇಬರವರು ಈತಿಂಗಳ ೨೬ನೇ ತಾರೀಖಿನಲ್ಲಿ ಇಂಡ್ಯಾ ದೇಶಕ್ಕೆ ಬಂದು ಸೇರುವರೆಂದು ನಿರೀಕ್ಷಿಸಲ್ಪಟ್ಟಿದೆ.

ಅಮೇರಿಕಾ ಖಂಡಕ್ಕೆ ಸೇರಿದ ಚಿಕಾಗೊ ಎಂಬ ಪಟ್ಟಣದಲ್ಲಿ ಮುಂದೆ ನಡೆಯುವದಾಗಿರುವ ಪ್ರದರ್ಶನಕ್ಕೆ ಹೋಗಬಹುದಾದ ಹಿಂದೂಗಳ ಸಂಖ್ಯೆಯು ನೂರಕ್ಕೆ ಕಡಮೆಯಾಗಿರಲಾರದೆಂದು ಲಕ್ನೋ ಅಡ್ವೊಕೇಟ ಯೆಂಬ ಪತ್ರಿಕೆ ತಿಳಸುತಿದೆ.

ಕಪುರ್ತಲಾ ಸಂಸ್ಥಾನದ ಮಹಾರಾಜರವರು ಈಗ ಯೂರೋಪ್ ಮತ್ತು ಅಮೇರಿಕಾ ದೇಶಗಳಿಗೆ ಹೋಗುತ್ತಾರಾಗಿ ತಮ್ಮ ಸವಾರಿಯೊಡನೆ ಪಂಜಾಬ್ ದೇಶದ ಜಟ್ಟಿಗರು ಕೆಲವರನ್ನು ಕರೆದುಕೊಂಡು ಹೋಗುತ್ತಾರೆ. ಈ ಜಟ್ಟಿಗರಿಗೂ ಯೂರೋಪ್‌ದೇಶದ ಜಟ್ಟಿಗರಿಗೂ ಪ್ರಯೋಗ ಕಾಳಗಗಳು ನಡೆಯಬಹುದು.

ಇಂಡ್ಯಾರಾಜ್ಯದ ಕಮಾಂಡರ್ ಇನ್ ಚೀಫರವರಾದ ಲಾರ್ಡ್ ರಾಬರ್ಟ್ಸ್‌ಯವರು ತಮ್ಮ ಅಧಿಕಾರವು ಬಿಟ್ಟು ಸ್ವದೇಶ ಗಮನೋದ್ಯುಕ್ತರಾಗಿರುವದರಿಂದ ಸದರೀಯವರಿಗೆ ಮರ್ಯಾದಾರ್ಥ ಒಂದುದಿನ ರಾತ್ರಿ ಔತನವಂಮಾಡಿ, ಅವರ ಫೋಟೋಗ್ರಾಫ್ ತಸ್ವೀರು ತೆಗೆಯಿಸಿ ಕಲ್ಕತ್ತಾ ಟೌನ್ ಹಾಲ್ ಯೆಂಬ ಕಟ್ಟಡದಲ್ಲಿಡಬೇಕೆಂದು ಯೋಚಿಸುತಲಿದಾರೆ.

ಮಧುರೆಯಲ್ಲಿ ಸಬ್ ಕಲೆಕ್ಟರಾಗಿದ್ದ ಮೆ॥ ರಾ ಮಚೆಂಪ್ರರಾಯರವರಮೇಲೆ ತರಲ್ಪಟ್ಟ ರುಷವತ್ ಮೊಕದ್ದಮೆಯ ವಿಚಾರಣೆಯಬಗ್ಗೆ ಯೇರ್ಪಟ್ಟ ಕಮಿಟಿಯವರು ತಮ್ಮ ರಿಪೋರ್ಟನ್ನು ಕಳೆದ ಡಿಸಂಬರ್ ಆಖೈರಿನಲ್ಲಿ ಗವರ್ನಮೆಂಟಿಗೆ ಕಳುಹಿಸಿಕೊಟ್ಟಿದ್ದಾಗ್ಯೂ ಗವರ್ನಮೆಂಟಿನವರು ಆ ವಿಷಯದಲ್ಲಿ ಇದುವರಿವಿಗೆ ಯಾವ ನಿರ್ಣಯವನನ್ನೂ ಮಾಡಿದಂತೆ ಕಾಣಿಸಲಿಲ್ಲವು.

ಈಸ್ಟಿಂಡಿಯಾ ರೆಯಿಲ್ ಮಾರ್ಗವಾಗಿ ಕಲ್ಕತ್ತೆಯಿಂದ ಘಿರೋಜಪುರಕ್ಕೆ ಇನ್ಶೂರ್ಡ ಪೆಟ್ಟಿಗೆಗಳಲ್ಲಿ ನೋಟುಗಳು ರವಾನಿಸಲ್ಪಟ್ಟು ರೆಯಿಲ್‌ಗಾಡಿಯು ಅಲಹಾಬಾದಬಳಿ ಹೋಗುತ್ತಿರುವಲ್ಲಿ ಸದರೀ ಪೆಟ್ಟಿಗೆಗಳು ಯಾವ ರೀತಿಯಲ್ಲೋ ಕಳವಾಗಿರುತಿವೆ. ಇದುವರಿವಿಗೆ ಪತ್ತೆ ಇಲ್ಲವೆಂದು ಆ ಪ್ರಾಂತದ ಪತ್ರಿಕೆಯೊಂದು ತಿಳಸುತಿದೆ.

ಸರ್ಕಾರ ಉದ್ಯೋಗಸ್ಥನು ವಾರ್ಧಕ್ಯದಿಂದಲಾಗಲಿ, ಶರೀರಾಲಸ್ಯದಿಂದಲಾಗಲಿ, ತನ್ನ ಕೆಲಸವು ಬಿಡಬೇಕಾಗಿ ಬರುವ ಸಂದರ್ಭದೊಳು ತನ್ನ ಮಗನಿಗೆ ಅಥವಾ ಬಂಧುವಾದವನೊಬ್ಬನಿಗೆ ತನ್ನ ಕೆಲಸವು ಕೊಡುವ ಷರತ್ತಿನಮೇಲೆ ತಾನು ರಾಜೀನಾಮೆ ಕೊಡುವದಾಗಿ ತಿಳಿಸಿದರೆ ಅಂತಾ ಷರತ್ತುಗಳಿಗೆ ಯಾವ ವಿಧ್ಯಮಾನದಲ್ಲೂ ಖಂಡಿತವಾಗಿ ಅವಕಾಶ ಕೊಡಕೂಡದೆಂದು ಗವರ್ನಮೆಂಟಿನವರು ಹುಕುಂ ಮಾಡಿರುತ್ತಾರೆ.

ಕೊಚ್ಚಿ ಸಂಸ್ಥಾನದ ಅರಸರವರು ಕಲ್ಕತ್ತೆಗೆ ಹೋದ ಕಾಲದಲ್ಲಿ ತಮ್ಮನ್ನು ಬಹುಮಾನಿಸಿಕೊಳ್ಳುವ ವಿಷಯದಲ್ಲಿ ಬಾಬೂ ಮನ್ಮಥನಾಥ ದತ್, ಎಂ ಎ ಯವರು ಮಾಡಿದ ಶ್ಲೋಕಗಳಾದ ಪದ್ಯಗಳ ಬಗ್ಗೆ ಬಹಳ ಸಂತೋಷಗೊಂಡು, ಅಲ್ಲಿಂದ ಪ್ರಯಾಣವಾಗುವ ಸಂದರ್ಭದಲ್ಲಿ ಸದರೀ ದೊಡ್ಡ ಮನುಷ್ಯರಿಗೆ "ವೀರಶೃಂಖಲ"ವೆಂಬ ಅಂಕಿತ ಕೆತ್ತಲ್ಪಟ್ಟ ಬಿರುದು ರೂಪವಾದ ಒಂದು ಭಂಗಾರದ ಬಳೆಯನ್ನು ಕೊಟ್ಟರು.

ಹೂಗ್ಲೀ ಪ್ರಾಂತದಲ್ಲಿ ಒಂದು ದೊಡ್ಡ ಬೇವಿನ ಮರದ ಬುಡದಿಂದ ಹಾಲಿನೋಪಾದಿಯಲ್ಲಿ ರಸ ಸುರಿಯಲು, ಅದು ಕುಷ್ಠ ಮೊದಲಾದ ಪ್ರಬಲ ರೋಗ ನಿವಾರಕ ವಸ್ತುವೆಂಬ ನಂಬಿಕೆಯಿಂದಲೂ, ಅನುಭವದಿಂದಲೂ ಬಹು ದೂರಪ್ರದೇಶಗಳಿಂದ ಜನರು ಬಂದು ಸದರೀ ರಸವು ಶೀಸೆಗಳಲ್ಲಿ ತೆಗೆದುಕೊಂಡು ಹೋಗಿ ಮನೆಗಳಲ್ಲಿ ಇಟ್ಟುಕೊಂಡು ಅಪೇಕ್ಷೆಯುಳ್ಳವರಿಗೆ ಮಾರಿ ತನ್ಮೂಲಕ ದ್ರವ್ಯ ಸಂಪಾದನೆ ಮಾಡುತ್ತಾರೆಂದು ಒಂದಾನೊಂದು ಪತ್ರಿಕೆಯು ಸದರೀ ಸ್ಥಳದ ಬಾತಮೀದಾರನು ಬರೆಯುತ್ತಾನೆ. ಪುರಾತನವಾದ ಬೇವಿನಗಿಡದಲ್ಲಿ ರೋಗ ನಿವಾರಕ ಶಕ್ತಿ ಇರುತಿದೆ ಯೆಂಬವರಲ್ಲಿ ಸ್ವಲ್ಪಮಾತ್ರವೂ ಸಂಶಯವಿಲ್ಲವು, ಪರಂತು ಅರ್ಥಾತುರತ್ವದಿಂದ ಸದರೀ ರಸದಲ್ಲಿ ಇತರ ಪದಾರ್ಥವು ಬೆರಸಿ ಕಲಸಿ ಮಾರದೇ ಇದ್ದರೆ ಪ್ರಯೋಜನ ವುಂಟು.

ಭರದ್ವಾನ್ನಲ್ಲಿ ವಿಧುಭೂಷಣ ಮುಕರ್ಜಿ ಎಂಬ ಒಬ್ಬ ಬ್ರಾಹ್ಮಣನಿಗೆ ಸುಂದರೀಯರಾದ ಇಬ್ಬರು ಹೆಣ್ಣುಮಕ್ಕಳು ವಿವಾಹಕ್ಕೆ ಉಚಿತವಾದ ವಯಸ್ಸುಳ್ಳವರಾಗಿದ್ದರು. ಅವರಂ ಮದುವೆ ಮಾಡಿಕೊಳ್ಳುವದಕ್ಕೆ ಅನೇಕರು ಇಚ್ಛಿಸಿ ಕಾಗದಗಳು ಬರೆಯಲುಪಕ್ರಮಿಸಿದರು. ಅವರ ಪೈಕಿ ಯಾರಿಗೆ ಆವಶ್ಯಕತೆ ಅಧಿಕವಾಗಿ ಕಂಡು ಬಂತೊ ಅವರಿಗೆ ಕನ್ಯೆಯರ ತಂದೆಯಾದವನು ಕಾಗದಗಳು ಬರೆದು ಜ್ಯೇಷ್ಠ ಪುತ್ರಿಯನ್ನು ಮೂವರಿಗೂ, ಕನಿಷ್ಠ ಪುತ್ರಿಯನ್ನು ಇಬ್ಬರಿಗೂ ಕೊಡುವದಾಗಿ ನಿಷ್ಕರ್ಷೆ ಮಾಡಿ ಎಲ್ಲರಿಂದಲು ಹಣ ತೆಗೆದುಕೊಂಡನು. ಈ ಮೋಸಕೃತ್ಯವು ಮೊದಲುಯಾರಿಗೂ ತಿಳಿಯಲಿಲ್ಲವು. ಕ್ರಮೇಣ ಎಲ್ಲರಿಗೂ ತಿಳಿಯ ಬಂದು ವರನ ಕಡೆಯವರಿಗೂ ಕನ್ಯೆಯರ ತಂದೆಗೂ ಜಗಳ ವುಂಟಾಗಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ವಿಚಾರಣೆಯಾಗಿ ಮುಕರ್ಜಿ ಯೆಂಬ ಬ್ರಾಹ್ಮಣನು ಒಂಭತ್ತು ತಿಂಗಳ ಕಠಿಣ ಕೈದ್ ಸಜಾ ಮತ್ತು [illegible] ರೂಪಾಯಿಗಳ ಜುರ್ಮಾನೆ ವಿಧಿಸಲ್ಪಟ್ಟನು. ಅದರ ಮೇಲೆ ಆತನು ಬಂಗಾಳ ಹೈಕೋರ್ಟಿನಲ್ಲಿ ಅಪೀಲ್ಮಾಡಲು ಅಲ್ಲಿಯೂ ಮ್ಯಾಜಿಸ್ಟ್ರೇಟರು ವಿಧಿಸಿದ ದಂಡನೆಯು ಕಾಯಮಾಗಿ ಅಪೀಲ್ ತಿರಸ್ಕರಿಸಲ್ಪಟ್ಟಿತು

## LOCAL AND PROVINCIAL NEWS
## ಒಳದೇಶಮತ್ತುತಾಲ್ಲೂಕ್ ಪ್ರಾಂತವೃತ್ತಾಂತಗಳು

ಕಳೆದ ಭಾನುವಾರದ ದಿವಸ ಶ್ರೀಮನ್ಮಹಾರಾಜರವರ ಜ್ಯೇಷ್ಠ ಪುತ್ರಿಯರ ವರ್ಷ ವರ್ಧಂತಿ ಮಹೋತ್ಸವವು ಬಹಳವಿಭವದೊಡನೆ ಜರುಗಿತು.

ಈ ಸಂಸ್ಥಾನದ ಬ್ರಿಟಿಷ ರೆಸಿಡೆಂಟರಾದ ಮೆ॥ ಪಿ ಡಿ ಹೆಂಡರ್ಸನ್ ಸಾಹೇಬರವರು ಕೊಡಗು ಪ್ರಾಂತದ ಸಂಚಾರದಿಂದ ಕಳೆದ ಶುಕ್ರವಾರದಿನ ಇಲ್ಲಿಗೆ ವಾಪಸು ಬಂದು ಸೇರಿದರು.

ಇಲ್ಲಿನ ಮಿಲಿಟರಿ ಸ್ಟೇಷನ್ನಲ್ಲಿ ಇನ್‌ಫ್ಲುಯೆಂಜಾ ಯೆಂಬ ಜ್ವರರೋಗ ತಲೆದೋರಿ ಅನೇಕರು ಅದಕ್ಕೆ ಯೆರೆಯಾದರೆಂದು ಕೇಳುವದಕ್ಕೆ ವಿಷಾದಿಸುತ್ತೇವೆ.

ಈ ಊರು ಕೋಟೆ ಬಾಗಿಲ ಬಳಿ ಇರುವ ಕಲ್ಯಾಣಿ ಯೆಂಬ ಕೊಳವನ್ನು ಮುಚ್ಚಿಬಿಡಬೇಕೆಂದು ಈ ಪಟ್ಟಣದ ಮ್ಯುನಿಸಿಪಾಲಿಟಿಯವರು ಆಲೋಚಿಸುತಲಿರುವದಾಗಿ ಒಳದೇಶದ ಈವಿನಿಂಗ್ ಮೆಯಿಲ್ ಪತ್ರಿಕೆ ತಿಳಿಸುತಿದೆ. ಇವರ ನಿಶ್ಚಯವನ್ನರಿಯುವದಕ್ಕೆ ಮುಂಚಿತವಾಗಿ ಆ ವಿಷಯದಲ್ಲಿ ನಮ್ಮ ಅಭಿಪ್ರಾಯವು ತಿಳಿಸಲಾರೆವು, ಪರಂತು ಸದರೀ ಆಲೋಚನೆಯು ಕಾರ್ಯಕ್ಕೆ ನೆರವೇರಿಸಲ್ಪಡುವದಾದರೆ ಅದರಿಂದ ಬಹುವಿಧ ಅನರ್ಥಗಳಿಗೆ ಅವಕಾಶ ವುಂಟಾಗದೆ ಹೋಗಲಾರದು.

ಈಗ ಗುಂಟಕಲ್ ಜಂಕ್ಷನ್ನಿಂದ ದರ್ಮಾವರದ ವರಿವಿಗೆ ರೆಯಿಲ್ ಲೈನು ನಡೆಯುತಲಿರುವದು ಸರಿಯಷ್ಟೆ. ಬರುವ ಏಪ್ರಿಲ್ ತಿಂಗಳ ೧ನೇ ತಾರೀಖಿನಲ್ಲಿ ದರ್ಮಾವರದಿಂದ ಹಿಂದೂಪುರದ ವರಿವಿಗೆ ಗಾಡಿಗಳು ಬಿಡಲ್ಪಡುವವಲ್ಲದೆ, ಬರುವ ಜೂನ್ ೧ನೇ ತಾರೀಖಿನಲ್ಲಿ ಹಿಂದೂಪುರದಿಂದ ದೊಡ್ಡಬಳ್ಳಾಪುರದ ವರಿವಿಗೆ ಗಾಡಿಗಳು ಬಿಡಲ್ಪಡುವವು. ಇದರಿಂದ ಬರುವ ಜೂನ್ ೧ನೇ ತಾರೀಖ್ ಮೊದಲು ಬೆಂಗಳೂರಿಂದ ಗುಂಟಕಲ್ ಜಂಕ್ಷನ್ ವರಿವಿಗೆ ರೆಯಿಲ್ ಮಾರ್ಗವಾಗಿ ವಿಚ್ಛಿತ್ತಿಯಿಲ್ಲದೆ ಪ್ರಯಾಣಸ್ಥರ ಸಂಚಾರಕ್ಕೆ ಅವಕಾಶ ವುಂಟಾಯಿತೆಂದು ಭಾವಿಸಬೇಕಾಗಿದೆ.

ಈ ಸಲದ ಮದರಾಸ್ ಯೂನಿವರ್ಸಿಟಿಯ ಎಂ ಏ. ಪರೀಕ್ಷೆಯಲ್ಲಿ ಮೆ॥ ವಿ. ರಾಮಸ್ವಾಮಯ್ಯರ್, ಬಿ ಎ ಯವರೂ, ಈ ಸಂಸ್ಥಾನದ ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಪ್ರೊಬೆಷನರಿ ಅಸಿಸ್ಟೆಂಟ್ ಕಮಿಷನರಾಗಿ ನೇಮಕರಾಗಿಸಲ್ಪಟ್ಟಿರುವ ಮೆ॥ ಕೆ. ಆರ್. ಶ್ರೀನಿವಾಸಯ್ಯಂಗಾರ್, ಬಿ ಎ. ಯವರೂ ತೇರ್ಗಡೆಯಾಗಿರುತ್ತಾರೆ. ಎಂ ಎಲ್ ಪರೀಕ್ಷೆಯಲ್ಲಿ ಮೆ॥ ಜೋಸಫ್ ಸತ್ಯನಾಥನ್ ಎಂಬವರೂ, ಇಲ್ಲಿನ ಸಬ್ ಜಡ್ಜಿಯವರಾದ ಮೆ॥ ಎಚ್, ವಿ ನಂಜುಂಡಯ್ಯ, ಎಂ ಏ. ಯವರೂ ತೇರ್ಗಡೆಯಾಗಿರುತ್ತಾರೆ.

ಶ್ರೀಮನ್ಮಹಾರಾಜರವರು ಮುಂದಿನ ತಿಂಗಳ ೧೫ನೇ ತಾರೀಖ್ ಸುಮಾರಿಗೆ ಬೇಸಿಗೆಯಬಗ್ಗೆ ಪದ್ಧತಿ ಮೇರೆ ನೀಲಗಿರಿಗೆ ಪ್ರಯಾಣ ಮಾಡುವದಕ್ಕೆ ಆವಶ್ಯಕತೆಗಳಾದ ಸನ್ನಾಹಗಳು ಈಗಿನಿಂದಲೆ ನಡೆಯುತಲಿರುವಂತೆ ಒಳದೇಶದ ಪತ್ರಿಕೆಯೊಂದು ತಿಳಸುತಿದೆ ಈ ಸಂವತ್ಸರದ ಮೊದಲು ಶ್ರೀಮನ್ಮಹಾರಾಜರವರು ಬೇಸಿಗೆಯಲ್ಲಿ ನಂದೀ ಬೆಟ್ಟದೊಳು ವಾಸ ಮಾಡುವ ಆಲೋಚನೆ ಯುಂಟಾಗಿ, ಅದಕ್ಕಾಗಿ ಬೆಟ್ಟದಮೇಲಿರುವ ಒಂದು ದೊಡ್ಡ ಬಂಗ್ಲೆಯನ್ನು ಮೈಸೂರು ಸರ್ಕಾರದವರು ಕೊಂಡುಕೊಂಡಿರುವಲ್ಲಿ ಸದರೀ ಆಲೋಚನೆಯು ಈಚೆಗೆ ಅನ್ಯಥಾ ಆಗುವದಕ್ಕೆ ಕಾರಣವೇನೋ ನಾವರಿಯೆವು.

ಈ ಊರು ಹಲಸೂರು ಬಾಗಿಲ ಬಳಿ ಇರುವ ಸಂಪಂಗಿ ಕೆರೆಯ ಒಳಭಾಗದಲ್ಲಿ ಇಟಿಗೆಗಳ ತಯಾರೀ ಬಗ್ಗೆ ಮಣ್ಣು ತೆಗೆದು ಕೊಳ್ಳುವದಕ್ಕೆ ಹುಕುಂ ಕೊಡಲ್ಪಟ್ಟಿರುವದರಿಂದ ಸದರೀ ಕೆರೆಯು ಆಳವಾಗಿ ಮತ್ತಷ್ಟು ನೀರು ನಿಲ್ಲುವದಕ್ಕೆ ಅವಕಾಶವುಂಟಾಗಬಹುದು, ಪರಂತು ಸದರೀ ಕೆರೆಯಲ್ಲಿ ಅಡ್ಡರಸ್ತೆಗಳು ಹಾಕಿದ್ದರಿಂದಲೂ ಇತರ ಕಾರಣಗಳಿಂದಲೂ, ಅದಕ್ಕೆ ನೀರು ಬರುವ ವಿಷಯದಲ್ಲುಂಟಾಗುತಲ್ಲಿರುವ ಪ್ರತಿಬಂಧಕ ಸಾಮಗ್ರಿಗಳ ನಿವೃತ್ತಿ ವಿಷಯದಲ್ಲಿ ಯಾವ ಪ್ರಯತ್ನವೂ ನಡೆಸಲ್ಪಟ್ಟಂತೆ ತೋರಲಿಲ್ಲವು. ಇದು ನಡೆಸಲ್ಪಡದ ಹೊರತು ಇತರ ಪ್ರಯತ್ನಗಳು ವಿಶೇಷಪ್ರಯೋಜನಕಾರಿಗಳಾಗಲಾರವು.

ಈಚೆಗೆ ವರ್ಷ ಸೂಚನೆಗಳು ಯಾವದೂ ಇಲ್ಲವು. ಬಿಸಿಲು ದಿನೇ ದಿನೆ ಜೋರಾಗುತಿದೆ. ಜಲ ದೌರ್ಲಭ್ಯವು ಅಧಿಕವಾಗುತಲಿದೆ. ಪದಾರ್ಥಗಳ ಧಾರಣೆಗಳು ಪ್ರಾಯಶಃ ಒಂದೇ ವಿಧವಾಗಿವೆ. ಈ ಪೇಟೆಗೆ ಬರುವ ಜಿನಿಸಿಗಳು ಕೂಡಲೆ ಪರಸ್ಥಳಗಳಿಗೆ ಹೊರಟು ಹೋಗುವದರಿಂದ ಧಾರಣೆಗಳು ಇಳಿಯುವದಕ್ಕೆ ಅವಕಾಶ ಕಾಣದಾಯಿತು. ರೋಗಾದಿ ಪೀಡೆಗಳು ವಿಶೇಷವೇನೂ ಇಲ್ಲವು. ಪರಂತು ಇನ್‌ಫ್ಲುಯೆಂಜಾ ಯೆಂಬ ರೋಗವು ಇಲ್ಲಿಗೆ ಬಹಳ ಸಮೀಪವಾಗಿರುವ ಮಿಲಿಟರಿ ಸ್ಟೇಷನ್ನಲ್ಲಿ ವ್ಯಾಪಿಸಿರುವದರಿಂದ ಅದು ಯಾವಾಗ ಪೇಟೆಯವರ ಶರೀರದಾರ್ಢ್ಯವು ಪರೀಕ್ಷಿಸುವದಕ್ಕಾಗೀ ಷಹರ್ ಪ್ರವೇಶ ಮಾಡುವದೋಯೆಂಬ ಭೀತಿ ತಪ್ಪಲಿಲ್ಲವು.

ಇಲ್ಲಿನ ಡೆಯಿಲೀ ಪೋಸ್ಟ್ ಎಂಬ ಪತ್ರಿಕೆಯ ಬಾತಮೀದಾರನೊಬ್ಬನು ಸದರೀ ಪತ್ರಿಕೆಗೆ ಬರೆಯುತ್ತಾನೇನಂದರೆ:—ಇಲ್ಲಿನ ದಿವಾನರಿಗೆ ದಿನೇ ದಿನೇ ಕೆಲಸಗಳು ಜಾಸ್ತಿಯಾಗುತ, ಯಾವ ಸಹಾಯಕರೊಬ್ಬರಿಲ್ಲದೆ ಅವು ನಿರ್ವಹಿಸುವದಕ್ಕೆ ಸಾಧ್ಯವಾಗಲಾರದೆಂಬ ಯೋಚನೆಯಿಂದ ಮಾಹೆಯಾನಾ ೩,೫೦೦ ರೂಪಾಯಿಗಳ ತಾಬಿನಲ್ಲಿ ನಯಬ್ ದಿವಾನ್ ಇಸಂ ಒಬ್ಬರನ್ನು ನೇಮಕರಾಗಿ ಮಾಡುವದಕ್ಕೆ ಅಪ್ಪಣೆ ಕೊಡಬೇಕೆಂದು ಮಹಾರಾಜಾ ಸರ್ಕಾರದವರು ಇಲ್ಲಿನ ರೆಸಿಡೆಂಟರ ಮೂಲಕ ಇಂಡ್ಯಾ ಗವರ್ನಮೆಂಟಿಗೆ ಬರೆದುಕೊಂಡಿರುತ್ತಾರೆಂದು ಅಧಿಕಾರಸ್ಥಾನಗಳಲ್ಲಿ ಬಲು ಪ್ರವಾದ ವುಂಟಾಗಿರುವದಲ್ಲದೆ ಇಲ್ಲಿನ ಪೋಲೀಸ್ ಇನ್ಸ್‌ಪೆಕ್ಟರ್ ಜನರಲವರಾದ ಮೆ॥ ವಿ ಪಿ ಮಾಧವರಾಯರವರಿಗೆ ಸದರೀ ಅಧಿಕಾರ ಕೊಡಲ್ಪಡುವದೆಂದು ನಂಬಿಕೆ ಯುಂಟಾಗಿದೆ, ಎಂಬದು.

ಕ್ಲೋಸ್‌ಪೇಟೆ ಸಬ್‌ಡಿವಿಜನ್ ಆಫೀಸರಾಗಿದ್ದ ಮೆ॥ ಹಾಜೀ ಸೈಯದ್ ನೂರುದ್ದೀನ್ ಸಾಹೇಬರು ಈಚೆಗೆ ಎರಡು ಮೂರು ತಿಂಗಳ ಕಾಲದ ಮೊದಲು ಪಾಂಡುರೋಗ ಪೀಡಿತರಾಗಿ ಅಸ್ವಸ್ಥ ಸ್ಥಿತಿಯಲ್ಲಿರುತಲಿದ್ದರಷ್ಟೆ. ಅದರ ನಿವೃತ್ತಿಯಬಗ್ಗೆ ಮಾಡಲ್ಪಟ್ಟ ಚಿಕಿತ್ಸೆಗಳೆಲ್ಲವೂ ನಿಷ್ಪ್ರಯೋಜಕಗಳಾಗಿ, ಕಳೆದ ಶುಕ್ರವಾರದದಿನ ಪ್ರಾತಃಕಾಲ ಈಪಟ್ಟಣದೊಳಗಿರುವ ಅವರ ಸ್ವಂತ ಮನೆಯಲ್ಲಿ ಮೃತಪಟ್ಟರು. ಇವರ ವಯಸ್ಸು ೪೦ ವರ್ಷಗಳು. ಇವರು ದೊಡ್ಡ ಖಾನ್ದಾನಿನಲ್ಲಿ ಹುಟ್ಟಿದವರೆಂದು ತಿಳಿವ ಬಾರದೆ ಹೋದಾಗ್ಯೂ ಒಳ್ಳೆಯ ನಡತೆಯಿಂದ ಪ್ರಸಿದ್ಧಿಗೆ ಬಂದರು. ತಾಲ್ಲೂಕು ಪೇಷ್ಕಾರಿ ಮೊದಲುಗೊಂಡು ಡೆಪ್ಯುಟಿ ಕಮಿಷನರ್ ಅಧಿಕಾರದ ವರಿವಿಗೆ ಬಡ್ತಿಗೆ ಬಂದರು. ಇವರು ಈಊರಲ್ಲಿ ಕೆಲಸ ನೋಡುತ್ತಿರುವಲ್ಲಿ ಬಡಬಾಗಿ ಜನರಮೇಲೆ ಕೃಪಾ ದೃಷ್ಟಿ ಇಟ್ಟು ಸಾಧ್ಯವಾದ ಮಟ್ಟಿಗೆ ಅವರ ಕುಂದನ್ನು ತಗಿಸಿದರು. ಇಲ್ಲಿನ ಮುಸಲ್ಮಾನ್ ಜನರಲ್ಲಿ ಪ್ರಸಿದ್ಧರಾಗಿದ್ದ ಈ ದೊಡ್ಡ ಮನುಷ್ಯರು ಗತಿಸಿದಬಗ್ಗೆ ಬಹಳ ವಿಷಾದಿಸುತ್ತೇವೆ.

...ಸ್ಥಾನದಲ್ಲಿ ಅಸಿಸ್ಟೆಂಟ್ ದಿವಾನಗಿರಿಯನ್ನು ಹೊಸದಾಗಿ ಸೃಷ್ಟಿಸಿದರಾಗೂ, ನಾಳೆ ಏಪ್ರಿಲ್ ಗುರ್ರ್ದಾಗಾಯಿತು ಈ ...ಯನ್ನು ಮ|| ವಿ. ಪಿ. ಮಾಧವರಾಯರಿಗೆ ಕೊಡುವ ... ಕೇಳುತ್ತೇವೆ.—ವೃ. ಪ

...ದ ತಿಂಗಳು ೧೨ ಮತ್ತು ೧೯ ನೇ ತಾರೀಖುಗಳಲ್ಲಿ ...ದಲ್ಲಿ ವಿಕ್ರಯಿಸಿದ ಈ ಸಂಸ್ಥಾನದ ಬಾಬತು ೬೯ ...ದಿಂದ ೬೪೦೦೦ ರೂಪಾಯಿಗಳ ಮೇಲೆ ನೆಟ್ ಉತ್ಪತ್ತಿ ...ಯಿತೆಂದು ತಿಳಿಯಬರುತ್ತೆ.

---

...ದಲ್ಲಿ ಸ್ತ್ರೀಯರನ್ನು ಘೋಷಾದಲ್ಲಿಡುತ್ತಿದ್ದರಷ್ಟೆ ...ದ ಯಾವ ಪ್ರಯೋಜನವೂ ಇರುತಕ್ಕದ್ದಲ್ಲವೆಂದು ಭಾವಿಸಿ ...ರಾಜರವರು ಅದನ್ನು ವಿರೋಧಿಸಿರುತ್ತಾರೆ ಎಂದು ...ತ್ತೇವೆ ಕಾಲಕ್ರಮೇಣವಾಗಿ ಇಂಥಾ ತಾತ್ಪರ್ಯಗಳು ಹುಟ್ಟಬೇಕಾದ್ದು ಸ್ವಾಭಾವಿಕವೆ.

---

ನಮ್ಮ ಸಂಸ್ಥಾನದ ವೀಣೆ ವಿದ್ವಾಂಸರಾದ ಮ|| ವೀಣೆ ಶೇಷಣ್ಣನವರು ತಮ್ಮ ಪಾಂಡಿತ್ಯವನ್ನು ಪ್ರಕಾಶ ಮಾಡ ...ಬೇಕೆಂದು ದೇಶಯಾತ್ರೆ ಹೊರಟಿದ್ದರಲ್ಲಿ ಅನಂತಶಯನ, ಮಧುರೆ ... ಮೊದಲಾದ ಸಂಸ್ಥಾನಗಳಿಗೂ ಮತ್ತು ಇತರ ಸ್ಥಳಗಳಿಗೂ ಹೋಗಿ ಅಲ್ಲಲ್ಲಿ ಪಾಂಡಿತ್ಯಕ್ಕೆ ಅನುಸಾರವಾಗಿರುವ ...ಮೊದಲಾದ ಬಹುಮಾನವನ್ನು ಹೊಂದಿದ್ದಲ್ಲದೆ, ...ಸಂಸ್ಥಾನದಲ್ಲಿ ಇವರು ಹೋಗಿದ್ದಾಗ ಅಲ್ಲಿನ ದೊರೆ ಇವರ ಗಾನವಿದ್ಯಾ ಕೌಶಲ್ಯಕ್ಕೆ ಬಹಳವಾಗಿ ಮೆಚ್ಚಿ ...ತೋಡ ಎಂಬ ಬಿರುದು ಛಾಪು ಬಹುಮಾನವನ್ನು ಕೊಟ್ಟರು ತರುವಾಯ ಪುದುಕೋಟೆಸಂಸ್ಥಾನಕ್ಕೆ ಹೋದಾಗ ಅಲ್ಲಿ ಈವರೆಗೆ ರಾಜರಾಗಿರುವ ಬಾಲಸುಬ್ರಹ್ಮಣ್ಯ ...ನಾಥ ರಾಜರು ಇವರ ಸಂಗೀತ ಮತ್ತು ಗಾನಕೌಶಲ್ಯಗಳಿಗೆ ಬಹಳ ಸಂತುಷ್ಟಿಯನ್ನು ಹೊಂದಿ ಕೆಂಪುಹರಳುಗಳಿಂದ ಕೆತ್ತಿದ್ದ ಭುಜಕೀರ್ತಿಗಳನ್ನು ... ಒಂದು ಜೊತೆ ತೋಡಾ ಮತ್ತು ಚಿನ್ನದ ತಟ್ಟೆ ಫಲಗಳನ್ನು ಬಹುಮಾನವಾಗಿ ...ತಿಂಗಳಿಗೆ ಇವರು ಎಲ್ಲಿದ್ದಾಗ್ಯೂ ೬೦ ರೂಪಾಯಿ ...ತನ್ನ ಸಂಸ್ಥಾನದಿಂದ ಸಲ್ಲುವಂತೆ ಅಪ್ಪಣೆ ...ಸಿದರು. ನಮ್ಮ ಸಂಸ್ಥಾನಕ್ಕೆ ಸೇರಿರತಕ್ಕ ಅನೇಕ ...ವಿದ್ವಾಂಸರು ಈ ಪರಿಗೂ ಒಂದು ಬಹುಮಾನ ಹೊಂದಿ ...ತ್ತಿದ್ದರು. ಆದರೆ ಮ|| ವೀಣೆ ಶೇಷಣ್ಣನವರು ...ಗಳಿಗೆ ಹೋಗಿ ಬಹುಮಾನ ಪಡೆದುಕೊಂಡು ...ದ ಈ ದೇಶದಲ್ಲಿಯೂ ಸಂಗೀತ ವಿದ್ಯೆಯಲ್ಲಿ ಬಹಳ ...ಎಂಬ ಹೆಸರನ್ನು ತಮ್ಮದಕ್ಕಾಗಿ ಎಲ್ಲರೂ ...ಪಡಿಸಿದ ಮಹಾಶಯರು.—ವೃ. ಚಿಂತಾಮಣಿ.

---

## THE MYSORE GAZETTE.

## ಮೈಸೂರು ಗೆಜೆಟ್.

ಶ್ರೀ ಮಹಾರಾಜ ರಾಜಾಸಾಹೇಬ್ ಬಹದೂರವರ ಸನ್ನಿಧಿಯಿಂದ ಹೊರಡೋಣವಾದ ಇಸ್ತಿಹಾರನಾಮೆಗಳು.

---

ನಂ ೧೮೩೪—G. F. ೬೩೫—೯೩—ತಾ|| ೧೯ ನೇ ಫೆಬ್ರವರಿ ೧೮೯೩—ಮೈಸೂರು ಸರ್ವಿಸ್ ರೆಗ್ಯುಲೇಷನ್ನುಗಳ ೧೨೧ ನೇ ಆರ್ಟಿಕಲ್ ಅನುಸರಿಸಿ ರೆಮೌಂಟ್ ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮ|| ಚೆಂಗಯ್ಯಶೆಟ್ಟಿಯವರು, ೧೮೯೩ ನೇ ಇಸವಿ ಜನವರಿ ೧೬ ನೇ ತಾರೀಖ್ ಮೊದಲು ೩ ದಿನಗಳ ಕ್ಯಾಜುಯಲ್ ರಜಾ ತೊಂದಲ್ಪಟ್ಟಿದ್ದರು.

ನಂ|| ೧೮೧೬೯—G. F. ೬೩೫—೯೨ ತಾರೀಖ್ ೧೯ ನೇ ಫೆಬ್ರವರಿ ೧೮೯೩—ಪ್ರೊಬೇಷನರಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮ|| ವಿ. ಎನ್. ಗೋಪಾಲಯ್ಯಂಗಾರ್ಯರವರಿಗೆ, ಸನ್ ೧೮೯೨ ನೇ ಇಸವಿ ಸೆಪ್ಟೆಂಬರ್ ೧೫ ನೇ ಮಾರ್ಚ್ ೮೧೨೯-G. F. ೧೦೮೯—೯೨ ನೇ ನಂಬರ್ ಇಸ್ತಿಹಾರನಾಮೆಯ ಮೂಲಕ ಕೊಡಲ್ಪಟ್ಟ ಮೂರು ತಿಂಗಳ ಪ್ರಿವಿಲೇಜ್ ರಜಾ ಪೈಕಿ ೬ ತಿಂಗಳು ೬೩ ದಿನಗಳು ಉಪಯೋಗಿಸಿಕೊಂಡಿರುವದು ಜಾತಾ ಉಳಿದ ಭಾಗವು, ಅಂದರೆ ೭ ದಿನಗಳಿಗೆ ಶಿವರಿಂದ ರದ್ದು ಮಾಡಲ್ಪಟ್ಟಿರುತ್ತವೆ.

ನಂ|| ೧೮೧೩೧—G. F. ೩೧೩—೯೨—ನೆಲಮಂಗಲ ತಾಲ್ಲೂಕ್ ಆಕ್ಟಿಂಗ್ ಅಮಲ್ದಾರ್ ಮ|| ಕೃಷ್ಣ ಅರಸಿನವರು, ಸದರೀ ತಾಲ್ಲೂಕ್ ಚಾರ್ಜಿನಿಂದ ಬಿಡುಗಡೆ ಮಾಡಲ್ಪಟ್ಟ ತಾರೀಖ್ ಲಾಗಾಯತು ೬ ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ ೧೮೧೬೭—L. F. ೩೭೦-೯೨, ತಾರೀಖ್ ೬ ನೇ ಫೆಬ್ರವರಿ ೧೮೯೩.—ಮೇಲುಕೋಟೆ ಮ|| ಶೇಷಾಚಾರ್ಯರವರು ೬ ತಿಂಗಳ ಬೋರ್ಡಿನ ಮೂಕು ವಿನಾಟಿಂಗಗಳಿಗೆ ಗೈರ್ಹಾಜರಾದದರಿಂದ ಆ ಹಿರಿಸ್ಥಾನದಲ್ಲಿ ಜೋಡೀದಾರ್ ಮ|| ಕೇಶವಾಚಾರ್ಯ ಚಿತ್ರದುರ್ಗ ಡಿಸ್ಟ್ರಿಕ್ಟ್ ಹೊಸದುರ್ಗ ತಾಲ್ಲೂಕ್ ಮ್ಯುನಿಸಿಪಲ್ ಬೋರ್ಡ್ ಮೆಂಬರಾಗಿ ನೇಮಕರಾಗ್ಮಡಲ್ಪಟ್ಟಿರುತ್ತಾರೆ.

ನಂ|| ೧೮೩೧೨—G. ೩೩೦೧—೯೨ ೧೮೯೩ ನೇ ಇಸವಿ ಫೆಬ್ರವರಿ ೧೫ ನೇ ಮಾರ್ಚ್ ೧೩೫೮ರ ೩ ೩೧೩೩ ನೇ ನಂ ಇಸ್ತಿಹಾರನಾಮೆಯ ಮೂಲಕ ೧೦ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಅಸಿಸ್ಟೆಂಟ್ ಕನ್ಸರ್ವೇಟರ್ ಮ|| ವೈ. ಶೀತಾರಾಮಯ್ಯನವರು ಸದರೀ ರಜಾ ಪೈಕಿ ಸನ್ ೧೮೯೩ ನೇ ಇಸವಿ ಜನವರಿ ೯ ನೇ ತಾರೀಖ್ ಮೊದಲು ೧೮ ನೇ ತಾರೀಖ್ ವರಿವಿಗೆ ಉಪಯೋಗಿಸಿಕೊಂಡರಾಗಿ ಉಳಿದ ಭಾಗ, ಅಂದರೆ ೭ ದಿನಗಳು ಇದರಿಂದ ರದ್ದು ಮಾಡಲ್ಪಟ್ಟವೆ.

ನಂ ೧೮೬೦೬—G. F. ೩೬೮-೯೨—ಕೋಲಾರುಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂಟರಾದ ಮ|| ದಳವಾಯಿ ದೇವರಾಜೇ ಅರಸಿನವರಿಗೆ ಒಂದು ತಿಂಗಳ ರಜಾ ಕೊಡುವದಕ್ಕಾಗಿ ಹುಟ್ಟಿದ ಸನ್ ೧೮೯೩ ನೇ ಇಸವಿ ಜನವರಿ ೧೬ ನೇ ಮಾರ್ಚ್ ೧೧೮೧೨ —G. ೬೮೭೮—೯೨ ನೇ ನಂಬರ್ ಇಸ್ತಿಹಾರನಾಮೆಯು ಅವರು ಕೇಳಿಕೊಂಡ ಮೇರೆ ರದ್ದು ಮಾಡಲ್ಪಟ್ಟಿದೆ

ನಂ ೧೮೬೭೯-G. F. ೩೬೮-೯೨— ೧೮೯೩ ನೇ ಇಸವಿ ಫೆಬ್ರವರಿ ೧೫ ನೇ ತಾರೀಖು ನಂದ್ಯಾನ್ಯೇಶ್ವರ ತಾಮುಕೂರಲ್ಲಿ ಪೊಲೀಸ್ ಆಫೀಸ್ ಚಾರ್ಜನ್ನು ಮ|| ದಳವಾಯಿ ದೇವರಾಜ ಅರಸಿನವರು ಕೊಟ್ಟ ಮೇಲೆ ಕನ್ನಾ ಅಸಿಸ್ಟೆಂಟ್ ಕಮಿಷನರ್ ಮ|| ಅಬ್ದುಲ್ ಅಜೀಜ್ ಯವರು ತೆಗದುಕೊಂಡಿರುತ್ತಾರೆ.

ನಂ|| ೧೮೩೫೯ G ೩೩೨೬—ಮಾಗಡಿ ತಾಲ್ಲೂಕ್ ಅಮಲ್ದಾರ್ ಆರ್. ರಾಘವೇಂದ್ರರಾಯರವರು ಸನ್ ೧೮೯೩ ನೇ ಇಸವಿ ಫೆಬ್ರವರಿ ೬ ನೇ ತಾರೀಖ್ ಮೊದಲು ೧೫ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದ್ದರು.

ಮೇಕಾಲ್ಕಂ ನಂ ೬೫೮—ಕನ್ಸೋಲಿಡೇಟೆಡ್ ಆಕ್ಟಿಂಗ್ ಸಬ್‌ಡಿವಿಷನ್ ಆಫೀಸರಾದ ಮ|| ಜಿ. ರಘುನಾಥರಾಯರವರು ಸನ್ ೧೮೯೩ ನೇ ಇಸವಿ ಮಾರ್ಚಿ ೧ ನೇ ತಾರೀಖ್ ಮೊದಲು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು ೬ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

ಶಿಕಾರಿ ನಂ|| ೬೫೩೨—ಚಿತ್ರದುರ್ಗ ಡಿಸ್ಟ್ರಿಕ್ಟ್ ಟ್ರೆಜರಿ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರ್ ಮ|| ಪಿ. ಯರ್. ಕನಸಾಲುದ್ದೀನ್ ಅಲ್ಲಿ ಖಾನರು ಅವರು ಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯತು ಒಂದು ತಿಂಗಳು ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ

ಮೇಕಾಲ ನಂ|| ೬೭೬, ತಾ ೬೫ನೇ ಫೆಬ್ರವರಿ, ೧೮೯೩—ಮೈಸೂರು ಸರ್ವಿಸ್ ರೆಗ್ಯುಲೇಷನ್ ೩೦೭ (c) ಸೆಕ್ಷನ್ ಅನುಸರಿಸಿ, ಜನರಲ್ ಕೋರ್ಟಿ ದಫ್ತರ್‌ದಾರರಾದ ಮ|| ಪಿ. ಎನ್. ಕೃಷ್ಣಮೂರ್ತಿಯವರು ಈ ತಿಂಗಳ ೬೬ನೇ ತಾರೀಖ್ ಮೊದಲು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

ರಿಜಿಸ್ಟ್ರೇಷನ್ ಸೆಕ್ರೆಟರಿ, ಗವರ್ನಮೆಂಟ್ ಅಡ್ವೊಕೇಟ್ ಮತ್ತು ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲರಾದ ಬ್ಯಾರಿಸ್ಟರ್ ಮ||ಸಿ. ಮೀನಾಕ್ಷಿ ಅಯ್ಯರವರು, ಮ|| ಕೃಷ್ಣಮೂರ್ತಿಯವರ ಗೈರ್ಹಾಜರೀ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಜಿ ಫೆಕೋರ್ಟ ಜಡ್ಜಿ ಕೆಲಸವನ್ನು ಬದಲಿ ನೋಡುವಂತೆ ನೇಮಕರಾಗ್ಮಡಲ್ಪಟ್ಟಿರುತ್ತಾರೆ.

ಮ|| ಮೀನಾಕ್ಷಿ ಅಯ್ಯರವರು ಬೇರೆ ಕೆಲಸದ ಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಮ|| ಆರ್. ವಿಜಯೇಂದ್ರ ರಾಯರವರು ತಮ್ಮ ಸ್ವಂತ ಡ್ಯೂಟಿಯೊಂದಿಗೆ, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲಾಗಿಯೂ, ಕಂಪನಿಗಳ ಎಕ್ಸ್ ಆಫಿಷಿಯೋ ರಿಜಿಸ್ಟ್ರಾರ್ ರವರಾಗಿಯೂ ನೇಮಕರಾಗ್ಮಡಲ್ಪಟ್ಟಿರುತ್ತಾರೆ.

ಮೇಕಾಲ ನಂ||೬೬೬, ೬೬ ನೇ ಫೆಬ್ರವರಿ ೧೮೯೩-ಪ್ರೈವೇಟ್ ಸೆಕ್ರೆಟರಿ ಮ|| ಪಿ. ಆರ್. ಸುಬ್ಬರಾಯಯ್ಯನವರು ಮೈಸೂರ್ ಗವರ್ನಮೆಂಟ್ ಕಂಟ್ರೋಲರಾಗಿ ನೇಮಕರಾಗ್ಮಡಲ್ಪಟ್ಟಿರುತ್ತಾರೆ

ಪ್ರೆಂಚ್‌ರಾಕ್ಸ್ ಸಬ್‌ಡಿವಿಷನ್ ಎಗ್ಜಿಕ್ಯುಟಿವ್ ಇಂಜಿನಿಯರಾದ ಮ|| ಡಿ. ಸೀತಾರಾಮರಾಯರವರು ಆರುಮನೆ ಕಂಟ್ರೋಲರಾಗಿ ನೇಮಕರಾಗ್ಮಡಲ್ಪಟ್ಟಿರುತ್ತಾರೆ.

ನಂ ೧೮೮೩೮- G. ೩೩೫೩—ಮೈಸೂರ್ ಸರ್ವಿಸ್ ರೆಗ್ಯುಲೇಷನ್ ೧೮೮ ನೇ ಆರ್ಟಿಕಲ್ ಅನುಸರಿಸಿ, ಕೊಪ್ಪ ತಾಲ್ಲೂಕು ಅಮಲ್ದಾರ್ ಸಿ ಕೃಷ್ಣರಾಯರವರು ಅವರುಪಯೋಗಿಸಿಕೊಳ್ಳುವ ತಾರೀಖ್ ಲಾಗಾಯತು ಮೂರು ವಾರಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

ಎ. ಯೆಪಹಳ್ಳಿ ಡೆಪ್ಯುಟಿ ಅಮಲ್ದಾರ ರ ಅಳಿಂಗರ್ಯಯ್ಯಂಗಾರ್ಯರವರು ಅಮಲ್ದಾರ್ ಕೃಷ್ಣರಾಯರವರ ಗೈರ್ಹಾಜರೀ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ತಮ್ಮ ಸ್ವಂತ ಕೆಲಸದೊಡನೆ, ಕೊಪ್ಪ ತಾಲ್ಲೂಕ್ ಅಮಲ್ದಾರಾಗಿ ಬದಲೀ ನೋಡುವಂತೆ ನೇಮಕರಾಗ್ಮಡಲ್ಪಟ್ಟಿರುತ್ತಾರೆ.

ನಂ|| ೧೮೮೮೧. G F ೬೮೩ ೬೩ನೇ ಫೆಬ್ರವರಿ ೧೮೯೩—ಸನ್ ೧೮೯೩ನೇ ಇಸವಿ ಫೆಬ್ರವರಿ ೧೩ನೇ ತಾರೀಖಿನ ಪೂರ್ವಾಹ್ನದಲ್ಲಿ, ಬೆಂಗಳೂರು ಡಿಸ್ಟ್ರಿಕ್ಟ್ ಪೊಲೀಸ ಚಾರ್ಜನ್ನು ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮ|| ಹಾರ್ಡಿಯವರು ಕೊಟ್ಟ ಪೊಲೀಸ್ ಸೂಪರಿಂಟೆಂಡೆಂಟರಾದ ಮ|| ದಳವಾಯಿ ದೇವರಾಜೇ ಅರಸಿನವರು ತೆಗದುಕೊಂಡಿರುತ್ತಾರೆ.

ನಂ||೬೫೧೨, V೬-ತಾ|| ೬೩ ನೇ ಫೆಬ್ರವರಿ ೯೩—ಮೈಸೂರ್ ಗವರ್ನಮೆಂಟಿನವರ ಹುಕುಂ ಅನುಸಾರ, ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ಲವರ ಆಫೀಸ್ ಮತ್ತು ಸ್ಟೋರುಗಳು ೧೮೯೩ನೇ ಇಸವಿ ಏಪ್ರಿಲ್ ಗುರ್ರ್ದೀ ತಾರೀಖಿನಲ್ಲಿ ಬೆಂಗಳೂರು ಜಿಡೆ ಕ್ವಾರ್ಟರ್ಸಿನಿಂದ ಮೈಸೂರಿಗೆ ವರ್ಗ ಮಾಡಲ್ಪಡುವದೆಂದು ಇದರಿಂದ ಪ್ರಕಟಿಸಲ್ಪಟ್ಟಿರುತಿದೆ.

---

### ಜ್ಯುಡಿಷಿಯಲ್ ಇಲಾಖಾ ಇಸ್ತಿಹಾರನಾಮೆಗಳು.

---

### ಅಡ್ವೊಕೇಟುಗಳಿಗೂ ಪ್ಲೀಡರ್‌ಗಳಿಗೂ ಸಂಬಂಧಿಸಿದ ನಿಬಂಧನೆಗಳು.

---

ಈ ವಿಷಯದಲ್ಲಿ ಹುಟ್ಟತಕ್ಕ ವಿಶಿಷ್ಟ ಹಿಂದಿನ ನಿಬಂಧನೆಗಳನ್ನು ರದ್ದುಮಾಡಿ ೧೮೮೭ ನೇ ಇಸವಿಯ ಮೈಸೂರ್ ಲೀಗಲ್ ಪ್ರಾಕ್ಟೀಷನರ್ಸ್ ರೆಗ್ಯುಲೇಷನಿನ ೧೦ ನೇ ಸೆಕ್ಷನ್ ಅನುಸರಿಸಿ ಮಾಡೋಣಾಗಿರುವ ಇದರಡಿ ಕಂಡ ನಿಬಂಧನೆಗಳು ಘನವನ್ನೆಯ್ದಿದ ಶ್ರೀಮನ್ ಮಹಾರಾಜಾ ಸರ್ಕಾರದವರ ಮಂಜೂರಾತಿಯಿಂ ಪಡೆದು ಸಕಲಜನರಿಗಳ ತಿಳುವಳಿಕೆಯಬಗ್ಗೆ ಇದರಡಿ ಪ್ರಕಟಿಸಲ್ಪಟ್ಟಿರುತಿವೆ.—

೬ ವ ೩ ನೇ ನಿಬಂಧನೆಗಳ c ಕ್ಲಾಜ್ ೧೮೯೩ ನೇ ಇಸವಿ ಆಗಸ್ಟ್ ಗುರ್ರ್ದೀ ತಾರೀಖಿಗೆ ಪೂರ್ವದಲ್ಲಿ ಜಾರೀಯಲ್ಲಿ ಬರತಕ್ಕದ್ದಲ್ಲವು.

I. ಮೈಸೂರು ಚೀಫ್ ಕೋರ್ಟಿನಲ್ಲಿ ಅಡ್ವೊಕೇಟುಗಳಾಗಿ ದಾಖಲಾಗಲಿಕ್ಕೆ ಇದರಡಿ ತಿಳಿಸಲ್ಪಡತಕ್ಕವರು ಅರ್ಹರಾಗಿರುತ್ತಾರೆ.

(a) ಸನ್ ೧೮೮೭ ನೇ ಇಸವಿಯ ಫೆಬ್ರವರಿ ೧೬ ನೇ ತಾರೀಖುಳ್ಳ ಮತ್ತು ೧೮೮೭ನೇ ಇಸವಿ ಡಿಸೆಂಬರ್ ೧೬ ನೇ ತಾರೀಖುಳ್ಳ ಅಡ್ವೊಕೇಟುಗಳ ವ ಪ್ಲೀಡರುಗಳ ನಿಬಂಧನೆಗಳನ್ನನುಸರಿಸಿ ಅಡ್ವೊಕೇಟಾಗಿ ದಾಖಲಾಗಿರತಕ್ಕ ಯಾವ ಮನುಷ್ಯನಾದರು;

(b) ಇಂಗ್ಲಾಂಡ್ ಯಾ ಐರ್ಲ್ಯಾಂಡ್ ರಾಜ್ಯಗಳಲ್ಲಿರುವ ಯಾವದಾದರೂ ಇನ್ಸ್ ಆಫ್ ಕೋರ್ಟ್ ಯಾನೆ ನ್ಯಾಯಶಾಸ್ತ್ರ ಪಾಠಶಾಲೆಗಳಿಗೆ ಸಂಬಂಧಿಸಿದಾತಾ ಅಥವಾ ಸ್ಕಾಟ್ಲ್ಯಾಂಡಿನಲ್ಲಿ ರಕ್ಕ ಫ್ಯಾಕಲ್ಟಿ ಆಫ್ ಅಡ್ವೊಕೇಟ್ ಯಾನೆ ಅಡ್ವೊಕೇಟುಗಳ ಸಂಘಕ್ಕೆ ಸೇರಿದಾತಾ ಯಾವ ಬ್ಯಾರಿಸ್ಟರಾದರು;

(c) ಬ್ರಿಟಿಷ್ ಇಂಡ್ಯ ದೇಶದಲ್ಲಿ ಸ್ಥಾಪಿತವಾಗಿರುವ ಯಾವದಾದರು ಹೈಕೋರ್ಟಿನ ಅಧಿಕಾರಕ್ಕೊಳಪಟ್ಟರತಕ್ಕ ಹುದ್ದೆ ಅಡ್ವೊಕೇಟ್, ವಕೀಲ್ ಯಾ ಅಟರ್ನಿ, ಬ್ರಿಟಿಷ್ ಇಂಡ್ಯ ದೇಶದಲ್ಲಿರುವ ಯಾವದಾದರೂ ಯೂನಿವರ್ಸಿಟಿಯಲ್ಲಿ ಎಂ. ಎಲ್. ಯಾ ಬಿ ಎಲ್ ಗಳೆಂಬ ಡಿಗ್ರಿಗಳನ್ನು ಪಡೆದು ತಮ್ಮ ಗಣ್ಯತೆ, ಒಳ್ಳೆಯ ನಡತೆ ಮೊದಲಾದ ವಿಷಯಗಳಲ್ಲಿ ಒಂದು ಯೋಗ್ಯತಾ ಪತ್ರಿಕೆಯನ್ನು ಹಾಜರ್ಮಾಡುವಂತಾ ಯಾವ ಮನುಷ್ಯನಾದರು;

(d) ಇಂಡಿಯನ್ ಯೂನಿವರ್ಸಿಟಿಗಳ ಪೈಕಿ ಯಾವದಾದರೊಂದರಲ್ಲಿ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಯನ್ನೈದಿ, ಐದು ಸಂವತ್ಸರಗಳಿಗೆ ಕಡಮೆ ಯಿಲ್ಲದಂತೆ ತೃಪ್ತಿಕರವಾಗಿಯೂ, ವಿವೇಕದೊಡನೆಯೂ, ಪ್ರಾಕ್ಟೀಸ್ ಅಂದರೆ ವಕೀಲಿ ಕಸಬ ಮಾಡುತಲಿರುವಂತಾ ಯಾವನಾದರೊಬ್ಬ ಫಸ್ಟ್ ಗ್ರೇಡ್ ಪ್ಲೀಡರ್;

(e) ಮೈಸೂರು ಗವರ್ನಮೆಂಟಿನಲ್ಲಿ ೫ ವರುಷಗಳಿಗೆ ಕಡಮೆ ಯಿಲ್ಲದ ಕಾಲದ ತನಕ ಒಂದನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ಚಲಾಯಿಸಿದ್ದಂತವನಾಗಲಿ, ಅಥವಾ ಮುನ್ಸಫ್, ಸಬ್‌ಜಡ್ಜ್ ಯಾ ಡಿಸ್ಟ್ರಿಕ್ಟ್ ಜಡ್ಜ್ ಉದ್ಯೋಗವನ್ನು ಕೀರ್ತಿಕರವಾಗಿ ನಿರ್ವಹಿಸಿ ಸರಕಾರೀ ಕೆಲಸದಿಂದ ನಿವೃತ್ತನಾಗಿರುವ ಯಾವ ಆಫೀಸರಾದರು.

II. ಒಂದನೇ ಗ್ರೇಡ್ ಪ್ಲೀಡರುಗಳಾಗಲಿಕ್ಕೆ ಇದರಡಿ ತಿಳಿಸಲ್ಪಟ್ಟರತಕ್ಕವರು ಅರ್ಹರಾಗಿರುತ್ತಾರೆ:—

(a) ಸನ್ ೧೮೬೯ ನೇ ಇಸವಿ ಫೆಬ್ರವರಿ ೧೮ ನೇ ಮಾರ್ಚ್ ಪತ್ರ ಮತ್ತು ೧೮೮೭ ನೇ ಇಸವಿ ಡಿಸೆಂಬರ್ ೧೬ನೇ ಮಾರ್ಚ್ ಪತ್ರ ಅಡ್ವೊಕೇಟುಗಳ ಮತ್ತು ಪ್ಲೀಡರ್‌ಗಳ ನಿಬಂಧನೆಗಳನ್ನನುಸರಿಸಿ ೧ ನೇ ಗ್ರೇಡ್ ಪ್ಲೀಡರಾಗಿ ದಾಖಲಾದ ಯಾ ಬಡ್ತಿಯಾದ ಯಾವ ಮನುಷ್ಯನಾದರು;

(b) ೧೮೮೭ ನೇ ಇಸವಿ ಡಿಸೆಂಬರ್ ೧೬ನೇ ಮಾರ್ಚ್ ೧೮೩ ನೇ ನಂಬರುಳ್ಳ ಗವರ್ನಮೆಂಟ್ ಇಸ್ತಿಹಾರನಾಮೆಯಲ್ಲಿ ಪ್ರಕಟಿಸಲ್ಪಟ್ಟಿರುವ ನಿಬಂಧನೆಗಳದ್ದನುಸರಿಸಿ ೧ ನೇ ಗ್ರೇಡ್ ಪ್ಲೀಡರುಗಳಿಗಾಗಿ ಚೀಫ್ ಕೋರ್ಟಿನವರು ಏರ್ಪಡಿಸಿದ ಪರೀಕ್ಷೆಯಲ್ಲಿ ತೇರ್ಗಡೆಯಾದ ಯಾವ ಮನುಷ್ಯನಾದರು;

(c) ಸನ್ ೧೮೯೨ ನೇ ಇಸವಿ ಡಿಸೆಂಬರ್ ೧೧ ನೇ ಮಾರ್ಚ್ ೯೬೯೯ G F ೩೮೯-೯೨ ನೇ ನಂಬರುಳ್ಳ ಗವರ್ನಮೆಂಟ್ ಇಸ್ತಿಹಾರ್ ನಾಮೆಯಲ್ಲಿ ಪ್ರಕಟಿಸಲ್ಪಟ್ಟಿರುವ ನಿಬಂಧನೆಗಳನ್ನನುಸರಿಸಿ, ಸಿವಿಲ್ ವ ಕ್ರಿಮಿನಲ್ ಪರೀಕ್ಷೆಗಳಲ್ಲಿ ಮೊದಲನೇ ತರಗತಿಯೊಳು ತೇರ್ಗಡೆಯಾಗಬಹುದಾದ ಮತ್ತು,

(೧) ಯಾವದಾದರು ಇಂಡಿಯನ್ ಯೂನಿವರ್ಸಿಟಿಯಲ್ಲಿ ಫಸ್ಟ್ ಯೆಗ್ಜಾಮಿನೇಷನ್ ಇನ್ ಆರ್ಟ್ಸ್ ಅಂದರೆ ಶಾಸ್ತ್ರ ಪ್ರಥಮ ಪರೀಕ್ಷೆಯಲ್ಲಿ ಅಥವಾ ಶಾಸ್ತ್ರ ಸಂಬಂಧವಾದ ಇನ್ನು ಯಾವದಾದರು ದೊಡ್ಡ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವದಾಗಿ ಒಂದು ಸರ್ಟಿಫಿಕೇಟನ್ನೂ,

(೨) ಗಣ್ಯತೆ ಮತ್ತು ಒಳ್ಳೆಯ ನಡತೆ ಇವುಗಳ ವಿಷಯವಾದ ಒಂದು ಸರ್ಟಿಫಿಕೇಟನ್ನೂ ಹಾಜರ್ಮಾಡತಕ್ಕಂತಾ ಯಾವ ಮನುಷ್ಯನಾದರು;

(d.) ಬ್ರಿಟಿಷ್ ಇಂಡ್ಯ ದೇಶದಲ್ಲಿರುವ ಹೈಕೋರ್ಟ್ ಜ್ಯುಡಿಕೇಚರುಗಳ ಪೈಕಿ ಯಾವದರಿಂದಲಾದರು, ೧ ನೇ ಗ್ರೇಡ್ ಪ್ಲೀಡರುಗಳಿಗಾಗಿ ಯೇರ್ಪಡಿಸಲ್ಪಟ್ಟರತಕ್ಕ ಪರೀಕ್ಷೆಗಳಲ್ಲಿ ತೇರ್ಗಡೆಯಾದಂತಾ ಯಾವ ಮನುಷ್ಯನಾದರು;

(e) ಇಂಡ್ಯ ದೇಶದ ಯಾವದಾದರು ಯೂನಿವರ್ಸಿಟಿಯಲ್ಲಿ ಫಸ್ಟ್ ಯೆಗ್ಜಾಮಿನೇಷನ್ ಇನ್ ಆರ್ಟ್ಸ್ ಯೆಂಬ ಶಾಸ್ತ್ರ ಪ್ರಥಮಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದು ಐದು ಸಂವತ್ಸರಗಳ ಕಾಲಕ್ಕೆ ಕಡಮೆ ಯಿಲ್ಲದಂತೆ ಮೈಸೂರು ಸೀಮೆಯ ಯಾವದಾದರೊಂದು ಕೋರ್ಟಿನಲ್ಲಿ ತೃಪ್ತಿಕರವಾಗಿಯೂ ವಿವೇಕದೊಡನೆಯೂ ಪ್ರಾಕ್ಟೀಸ್ ಮಾಡುತಲಿದ್ದಂತಾ ೬ ನೇ ಗ್ರೇಡ್ ಪ್ಲೀಡರಾದವನ್ಯಾವನಾದರು.

III. ಎರಡನೇ ಗ್ರೇಡ್ ಪ್ಲೀಡರುಗಳಾಗಿ ದಾಖಲಾಗಲಿಕ್ಕೆ ಇದರಡಿ ತಿಳಿಸಲ್ಪಟ್ಟರತಕ್ಕವರು ಅರ್ಹರಾಗಿರುತ್ತಾರೆ:—

(a.) ೧೮೭೭ನೇ ಇಸವಿ ಫೆಬ್ರವರಿ ೧೮ನೇ ಮುಕ್ಕಾಂ ವೃಕ್ತ ಮತ್ತು ೧೮೮೪ ನೇ ಇಸವಿ ಡಿಸೆಂಬರ್ ೧೨ ನೇ ಮುಕ್ಕಾಂ ನ್ಯಕ್ತ ಅಡ್ವೋಕೇಟುಗಳ ಮತ್ತು ಪ್ಲೀಡರುಗಳ ನಿಬಂಧನೆಗಳನ್ನನುಸರಿಸಿ, ೨ ನೇ ಗ್ರೇಡ್ ಪ್ಲೀಡರುಗಳಾಗಿ ದಾಖಲು ಮಾಡಿ ದರೋಬಸ್ತು ಮನುಷ್ಯರು;

(b.) ೧೮೮೪ ನೇ ಇಸವಿ ಡಿಸೆಂಬರ್ ೧೨ ನೇ ಮುಕ್ಕಾಂ ೧೮೭೩ ನೇ ನಂಬರಿನ ಗವರ್ನಮೆಂಟ್ ಇಸ್ತಿಹಾರ್ನಾಮೆಯಲ್ಲಿ ಪ್ರಕಟಿಸಲ್ಪಟ್ಟಿರುವ ನಿಬಂಧನೆಗಳನ್ನನುಸರಿಸಿ, ೨ ನೇ ಗ್ರೇಡ್ ಪ್ಲೀಡರುಗಳಿಗಾಗಿ ಚೀಫ್‌ಕೋರ್ಟಿನವರು ಏರ್ಪಡಿಸಿದ ಪರೀಕ್ಷೆಯಲ್ಲಿ ತೇರ್ಗಡೆಯಾದ ಯಾವ ಮನುಷ್ಯನಾದರು,

(c.) ೧೮೮೨ ನೇ ಇಸವಿ ಡಿಸೆಂಬರ್ ೧೧ ನೇ ಮುಕ್ಕಾಂ ೯೬೯೯-೬೯ ೩೯೮-೯೨ ನೇ ನಂಬರಿನ ಗವರ್ನಮೆಂಟ್ ಇಸ್ತಿಹಾರ್ನಾಮೆಯಲ್ಲಿ ಪ್ರಕಟಿಸಲ್ಪಟ್ಟಿರುವ ನಿಬಂಧನೆಗಳನ್ನನುಸರಿಸಿ ರೆವಿನ್ಯೂ ಕ್ರಿಮಿನಲ್ ವ ಸಿವಿಲ್ ಪರೀಕ್ಷೆಗಳಲ್ಲಿ ಎರಡನೇ ತರಗತಿಯೊಳು ತೇರ್ಗಡೆಯಾಗಬಹುದಾದ ಮತ್ತು,

(೧) ಯಾವದಾದರೊಂದು ಇಂಡಿಯನ್ ಯೂನಿವರ್ಸಿಟಿಯಲ್ಲಿ ಮೆಟ್ರಿಕ್ಯುಲೇಷನ್ ಅಥವಾ ಶಾಸ್ತ್ರೀಯವಾದ ಇನ್ನು ಯಾವದಾದರು ದೊಡ್ಡ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವದಾಗಿಯೂ ಸರ್ಟಿಫಿಕೇಟನ್ನು,

(೨.) ಗಣ್ಯತೆ ಮತ್ತು ಒಳ್ಳೆಯ ನಡತೆ ಇವುಗಳ ವಿಷಯವಾದ ಒಂದು ಸರ್ಟಿಫಿಕೇಟನ್ನು ಹಾಜರ್ಪಡಿಸತಕ್ಕಂತಾ ಯಾವ ಮನುಷ್ಯನಾದರು;

೨ ಮತ್ತು ೩ ನೇ ನಿಬಂಧನೆಗಳ ೩ ಕ್ಲಾಜಿನ ನಿಯಮಗಳು ಯಾವದಾದರು ಪರೀಕ್ಷೆಯಲ್ಲಿ ತೇರ್ಗಡೆಯಾಗುವ ಷರತ್ತಿನ ಮೇಲೆ ದಾಖಲಾಗಿರುವಂತಾ ಯಾವ ಮನುಷ್ಯನಿಗಾದರು ಅನ್ವಯಿಸಲ್ಪಡತಕ್ಕದ್ದಲ್ಲವು.

IV. ಒಂದು ಯಾ ಎರಡನೇ ಗ್ರೇಡ್ ಪ್ಲೀಡರಾಗಿ ದಾಖಲಾಗತಕ್ಕ ಬಗ್ಗೆ ಕಳುಹಿಸಲ್ಪಡತಕ್ಕ ದರಖಾಸ್ತಿನೊಡನೆ ೨ ಅಥವಾ ೩ ನೇ ನಿಬಂಧನೆಗಳಲ್ಲಿ ವಿಧಿಸಲ್ಪಟ್ಟಿರುವ ಯೋಗ್ಯತಾ ಪತ್ರಿಕೆಗಳು ಅವಶ್ಯ ಕಳುಹಿಸಲ್ಪಡತಕ್ಕದ್ದು.

V. ೧೮೮೪ ನೇ ಇಸವಿಯ ಮೈಸೂರ್ ಲೀಗಲ್ ಪ್ರಾಕ್ಟಿಷನರುಗಳ ರೆಗ್ಯುಲೇಷನಿನ ೧೧ ಯಾ ೧೨ ನೇ ಸೆಕ್ಷನುಗಳ ಪ್ರಕಾರ ಕೊಡಲ್ಪಡತಕ್ಕ ನಿಶಿಷ್ಟ ಸರ್ಟಿಫಿಕೇಟುಗಳೂ ಇದರಡಿ ನಮೂದಾಗ ವ ಮೈನರುಗಳಲ್ಲ ಮೈಸೂರ್ ಕೋರ್ಟ್ ಫಿ ಸ್ಟ್ಯಾಂಪ್ ಕಾಗದಗಳಲ್ಲಿ ಬರೆಯಲ್ಪಡತಕ್ಕದ್ದು.

(೧) ಒಬ್ಬ ವಕೀಲ್ ಅಡ್ವೋಕೇಟಿಗೆ ೩೦೦ ರೂ||

(೨) ಒಬ್ಬ ಫಸ್ಟ್ ಗ್ರೇಡ್ ಪ್ಲೀಡರಿಗೆ ೧೫ ರೂ||

(೩) ಒಬ್ಬ ಸೆಕೆಂಡ್ ಗ್ರೇಡ್ ಪ್ಲೀಡರಿಗೆ ೧೦ ರೂ||

ಪರಂತು ೧ ನೇ ನಿಬಂಧನೆಯ ೬ ಕ್ಲಾಜಿನ ಅನುಸರಿಸಿ ಅಪ್ಲಿಕೇಷನ್ ಕೊಡುವಂಥವರಿಗೆ ಕೊಡಲ್ಪಡತಕ್ಕ ಸರ್ಟಿಫಿಕೇಟಿಗೆ ಸ್ಟ್ಯಾಂಪ್ ಫೀ ಅವಶ್ಯಕವಾಗಿರುವದಿಲ್ಲವು.

ಟಿ. ಆರ್. ಎ. ತಂಬುಚೆಟ್ಟಿಯರು, ಚೀಫ್ ಜಡ್ಜಿ

ಪಿ. ರಾಮಚಂದ್ರಯ್ಯರ್, } ಜಡ್ಜಿಗಳು.
ಪಿ. ಎನ್. ಕೃಷ್ಣಮೂರ್ತಿ, }

---

೨೩ನೇ ಫೆಬ್ರವರಿ ಸನ್ ೧೮೯೩ನೇ ಇಸವಿ.

ಇದರಿಂದ ಸಕಲರಿಗೂ ತಿಳಿಯಪಡಿಸುವದೇನೆಂದರೆ.—ಮೈಸೂರು ಗೆಜೆಟ್ ೧ನೇ ಭಾಗದ ೩೨ನೇ ಪುಟದಲ್ಲಿ ೧೮೯೨ನೇ ಇಸವಿ ಡಿಸೆಂಬರ್ ೧೫ನೇ ಮುಕ್ಕಾಂ F&FF-G. F. ೩೯೮-೯೨ನೇ ನಂಬರ್ ಗವರ್ನಮೆಂಟ್ ಇಸ್ತಿಹಾರಿನೊಡನೆ ಪ್ರಚುರವಾದ ನಿಬಂಧನೆಗಳ ಪ್ರಕಾರ ಮುಂದೆ ಬರುವ ಮೈಸೂರು ಲೋಕಲ್ ಸರ್ವಿಸ್ ಎಂಬ ದೇಶೀಯ ಉದ್ಯೋಗಸ್ಥರ ಮತ್ತು ಪ್ಲೀಡರುಗಳ ಪರೀಕ್ಷೆಗಳು ಸನ್ ೧೮೯೩ನೇ ಇಸವಿ ಆಗಸ್ಟ್ ೭ನೇ ತಾರೀಖು ಸೋಮವಾರ ಮತ್ತು ಅಲ್ಲಿಂದ ಮುಂದೆ ಬರುವ ತಾರೀಖುಗಳಲ್ಲಿಯೂ ಈ ಪಕ್ಕದಲ್ಲಿ ನಮೂದಿಸುವ ಸ್ಥಳಗಳಲ್ಲಿ ಇನ್ನು ಮೇಲೆ ಪ್ರಕಟಿಸುವ ಕಾಲಗಳಲ್ಲಿ ಜರಗುವವು.

| | | |
|---|---|---|
| ಬೆಂಗಳೂರು | ಕೋಲಾರ | |
| ತುಮಕೂರು | ಮೈಸೂರು | |
| ಹಾಸನ | ಶಿವಮೊಗ್ಗ | |
| ಚಿತ್ರದುರ್ಗ | ಚಿಕ್ಕಮಗಳೂರು | |

2. ಪರೀಕ್ಷಾರ್ಥಿಗಳು ತಮ್ಮ ಅಪ್ಲಿಕೇಷನುಗಳನ್ನು ಅಚ್ಚಾದ ಫಾರಂಗಳ ಮೇಲೆ ಇಂಗ್ಲಿಷ್ ಭಾಷೆಯಲ್ಲಿ ತಯಾರುಮಾಡಿ, ಈ ಕೆಳಗೆ ರುಜು ಮಾಡಿರತಕ್ಕವರಿಗೆ ೧೮೯೩ ನೇ ಇಸವಿ ಮೇ ೩೧ ನೇ ತಾರೀಖಿನೊಳಗಾಗಲಿ ಅಥವಾ ಅದಕ್ಕೆ ಮುಂಚಿತವಾಗಿಯಾಗಲಿ ಸೇರುವಂತೆ ಕಳುಹಿಸತಕ್ಕದ್ದು. ಆ ಮೇಲೆ ಯಾವ ಅಪ್ಲಿಕೇಷನನ್ನೂ ಹಿಡಿಯುವದಿಲ್ಲ. ಅಚ್ಚಾದ ಅಪ್ಲಿಕೇಷನ್ ಫಾರಂಗಳನ್ನು ಈ ಕೆಳಗೆ ರುಜು ಮಾಡಿರತಕ್ಕವರಿಂದ ಪಡೆಯಬಹುದು

3. ಈ ಕೆಳಗಿನ ಸೀಷಾದರವು ಮಂಜೂರಾಗಿದೆ.

| | | | ಗುರು |
|---|---|---|---|
| I ರೆವಿನ್ಯೂ ಪರೀಕ್ಷೆ | .. | ... | 7 |
| II ಸಿವಿಲ್ | .. | ... | 12 |
| III ಕ್ರಿಮಿನಲ್ | ... | .. | 7 |
| IV ಎಕ್ಸೈಜ್ | ... | ... | 5 |
| V ಅಕೌಂಟ್ | ... | ... | 5 |
| VII ಫಾರೆಸ್ಟ್ | ... | .. | 5 |
| VIII ಪ್ಲೀಡರುಗಳು | ... | ... | 26 |

4. ಮೈಸೂರು ಲೋಕಲ್ ಸರ್ವಿಸ್ ಎಂಬ ದೇಶೀಯ ಉದ್ಯೋಗಸ್ಥರ ಮತ್ತು ಪ್ಲೀಡರುಗಳ ಪರೀಕ್ಷೆಗಳಿಗೆ ನಿಯಮಿತವಾಗಿರುವ ಫೀಯನ್ನು ಡಿಸ್ಟ್ರಿಕ್ಟ್ ಅಥವಾ ತಾಲ್ಲೂಕು ಖಜಾನೆಗೆ ಪಾವತಿ ಮಾಡತಕ್ಕದ್ದು. ಖಜಾನೆ ಆಫೀಸರವರ ರಸೀತಿಯನ್ನು ಅಪ್ಲಿಕೇಷನಿಗೆ ಲಗತ್ತು ಮಾಡತಕ್ಕದ್ದು.

ಮೈಸೂರ್ ಲೋಕಲ್ ಸರ್ವಿಸಿಗೆ ಸಂಬಂಧಿಸಿದ, ರೆವಿನ್ಯೂ, ಸಿವಿಲ್, ಕ್ರಿಮಿನಲ್, ಎಕ್ಸೈಜ್, ಅಕೌಂಟ್, ರಿಜಿಸ್ಟ್ರೇಷನ್ ಮತ್ತು ಫಾರೆಸ್ಟ್ ಪರೀಕ್ಷೆಗಳಿಗೂ ತಮ್ಮ ಪ್ಲೀಡರುಗಳ ಪರೀಕ್ಷೆಗೂ ನಿಷ್ಕೃಷ್ಟವಾಗಿರುವ ಪ್ರತಿ ಗ್ರಂಥಕ್ಕೂ ನಿರ್ಣಯವಾಗಿರುವ ಒಟ್ಟು ಮಾರ್ಕುಗಳನ್ನೂ ಕಾಲವನ್ನೂ ತೋರಿಸತಕ್ಕ ಇದರಡಿ ಕಂಡ ಪಟ್ಟಿಯು ಸಕಲ ಜನಗಳ ತಿಳುವಳಿಕೆಯ ಬಗ್ಗೆ ಪ್ರಕಟಿಸಲ್ಪಟ್ಟಿರುತ್ತದೆ. ಅದಾ ಪರೀಕ್ಷೆಗಳು ಅಕ್ಷರ ಸಂಜ್ಞೆಯಂತೆ ಇದರಡಿ ತಿಳಿಸಲ್ಪಟ್ಟಿರುತ್ತದೆ.

| | | | | | | | |
|---|---|---|---|---|---|---|---|
| ರೆವಿನ್ಯೂ ಪರೀಕ್ಷೆ | A | ಕ್ರಿಮಿನಲ್ ಪರೀಕ್ಷೆ | C | ಅಕೌಂಟ್ ಪರೀಕ್ಷೆ | E | ಫಾರೆಸ್ಟ್ ಪರೀಕ್ಷೆ | G |
| ಸಿವಿಲ್ ಪರೀಕ್ಷೆ | B | ಎಕ್ಸೈಜ್ ಪರೀಕ್ಷೆ | D | ರಿಜಿಸ್ಟ್ರೇಷನ್ ಪರೀಕ್ಷೆ | F | ಪ್ಲೀಡರುಗಳ ಪರೀಕ್ಷೆ | H |

| ದಿನಗಳು. | ಕಾಲ. | ಗ್ರಂಥಗಳು. | ಪರೀಕ್ಷೆಗಳು. | ಒಟ್ಟು ಮಾರ್ಕು |
|---|---|---|---|---|
| 1893ನೇ ಇಸವಿ ಆಗಸ್ಟ್ 7ನೇ ತಾರೀಖು ಸೋಮವಾರ, ಮೊದಲನೆಯ ದಿನ, | 11 ಮೊದಲು 2 ರವರೆಗೆ. | ಮೈಸೂರ್ ಲ್ಯಾಂಡ್ ರೆವಿನ್ಯೂ ಲಾ. ... | A. H. | 150 |
| | 2½ ಮೊದಲು 5 ರವರೆಗೆ. | ಮೈಸೂರ್ ರೆವಿನ್ಯೂ ರೂಲ್ಸ್. .. | H. A. | 100 |
| 1893ನೇ ಇಸವಿ ಆಗಸ್ಟ್ 8 ನೇ ತಾರೀಖು ಮಂಗಳವಾರ, ಎರಡನೇ ದಿನ, | 11 ರಮೊದಲು 1 ರವರೆಗೆ. | ಎವಿಡೆನ್ಸ್ ಆಕ್ಟ್. .. | B. C. H. | 80 |
| | 1½ ಮೊದಲು 5 ರವರೆಗೆ. | ಕಂಟ್ರಾಕ್ಟ್, ಟ್ರಾನ್ಸ್‌ಫರ್ ಆಫ್ ಪ್ರಾಪರ್ಟಿ ಮತ್ತು ಸ್ಪೆಸಿಫಿಕ್ ರಿಲೀಫ್ ಆಕ್ಟುಗಳು. .. | B. H | 200 |
| 1893ನೇ ಇಸವಿ ಆಗಸ್ಟ್ 9ನೇ ತಾರೀಖು ಬುಧವಾರ ಮೂರನೇ ದಿನ, | 11 ರಮೊದಲು 2 ರವರೆಗೆ. | ಹಿಂದೂಲಾ ಮತ್ತು ಮಹಮ್ಮದನ್ ಲಾ. ... | B. H. | 150 |
| | 2½ ಯಿಂದ 5½ ವರೆಗೆ. | ಟಾರ್ಟ್ಸ್ ವ ಈಸಮೆಂಟ್ ಆಕ್ಟುಗಳು. ... | B. H. | 100 |
| 1893 ನೇ ಇಸವಿ ಆಗಸ್ಟ್ 10ನೇ ತಾರೀಖು ಗುರುವಾರ, ನಾಲ್ಕನೇ ದಿನ. | 11 ರಮೊದಲು 2 ರ ವರೆಗೆ. | ಸಿವಿಲ್ ಪ್ರೊಸೀಜರ್ ಕೋಡ್ ಮತ್ತು ಲಿಮಿಟೇಷನ್ ಆಕ್ಟ್. ... | B. H | 150 |
| | 2½ ಮೊದಲು 5½ ವರೆಗೆ. | ಇಂಡಿಯನ್ ಪೀನಲ್ ಕೋಡ್ ... | C. H. | 100 |
| 1893 ನೇ ಇಸವಿ ಆಗಸ್ಟ್ 12ನೇ ತಾರೀಖು ಶುಕ್ರವಾರ, ಐದನೇ ದಿನ, | 11 ರ ಮೊದಲು 2 ರ ವರೆಗೆ. | ಕ್ರಿಮಿನಲ್ ಪ್ರೊಸೀಜರ್ ಕೋಡ್ ಮತ್ತು ಪೊಲೀಸ್ ರೂಲ್ಸ್ ... | C. H. | 100 |
| | 12½ ಮೊದಲು 4½ ವರೆಗೆ. | ಎಕ್ಸೈಜ್ ಆಕ್ಟ್ ಮತ್ತು ಓಪಿಯಂ ಆಕ್ಟ್ ... | D. | 100 |
| 1893ನೇ ಇಸವಿ ಆಗಸ್ಟ್ 12ನೇ ತಾರೀಖು ಶನಿವಾರ, ಆರನೆಯ ದಿನ, | 11 ರಮೊದಲು 12 ರ ವರೆಗೆ. | ಸಿವಿಲ್ ಅಕೌಂಟ್ ಕೋಡ್ ಮೈಸೂರ್ ಸರ್ವಿಸ್ ರೆಗ್ಯುಲೇಷನುಗಳು ... | E. | 100 |
| | 1 ರ ಮೊದಲು 2½ ವರೆಗೆ. | ರಿಜಿಸ್ಟ್ರೇಷನ್ ಆಕ್ಟ್ ಸ್ಟ್ಯಾಂಪ್ ವ ಕೋರ್ಟ್ ಫೀಸ್ ಆಕ್ಟುಗಳು ... | F. | 100 |
| | 2½ ರಮೊದಲು 4½ ವರೆಗೆ. | ಫಾರೆಸ್ಟ್. ... | G | 100 |

ಜೆ. ಕಾಕ್ಸ್‌ವಾಂ,
ಪರೀಕ್ಷಕರ ಕಛೇರಿ ಸೆಕ್ರೆಟರಿ.

## SUMMARY OF NEWS.
## ವೃತ್ತಾಂತ ಸಂಗ್ರಹವು.

ತುರ್ಕಿಸ್ಥಾನದಲ್ಲಿ ನ ಕಾರಣ ೧೦ ಜನ ಬೆಂಗಳೂರಿಗೆ ಗಡೀಪಾರಾಗಿದ್ದಾರೆಂದು ಹೇಳುತ್ತಾರೆ—ಚಂ

ಫಾರ್ಮೋಸಾ ನಮೂನಿನ್ನೊಂದು ಜಾಲವನ್ನ ಮನುಷ್ಯರು, ತುರ್ಕಿಸ್ಥಾನದಲ್ಲೊಬ್ಬ ಕಪಟೀ ಸ್ತ್ರೀಯನ್ನ ಮಾರಾಟ ಬಾಣವಿದ್ದದ್ದು ನೋಡಿದವರು ಹೇಳುತ್ತಾರೆ ಚಂ

ನಿಷ್ಕಾಳಜಿಯ ಸಹಾಯವಿಲ್ಲದೆ ೫೦ ಅಡಿಗಳೆತ್ತರದ ಮೇಲೆ ಪ್ರಕಾಶಿಸಿದಂಥ ಒಂದು ಯಂತ್ರವು ಹೊಸದಾಗಿ ಕಂಡುಹಿಡಿಯಲ್ಪಟ್ಟಿದೆ—ಚಂ

ನಾಲ್ಕು ತಾಸುಗಳಲ್ಲಿ ೨| ಲಕ್ಷ ಪತ್ರಿಕೆಗಳನ್ನು ಛಾಪಿಸಿ, ಮಡಿಚಿ, ಅಂಟಿಸಿ ಮತ್ತು ಹೊದಿಕೆ ಕೊಡುವಂಥಾ ಒಂದು ಛಾಪಿಸುವ ಯಂತ್ರವು ವಿಲಾಯಿತಿಯಲ್ಲಿ ಚಲಿಸುತ್ತಿದೆ.—ಚಂ.

ವಿಲಾಯಿತಿಯಲ್ಲಿ ಸ್ಟ್ಯಾಫರ್ಡ್‌ಶೈರ್ ಜಿಲ್ಲೆಯ ಒಂದು ಹೊಸ ರೈಲು ಮಾರ್ಗದ ಮೇಲೆ ಒಂದು ದೊಡ್ಡ ಅಪಘಾತವಾಗಿದೆ. ಅದರ ಮೇಲೆ ಅಲ್ಲಿನ ಜನರು ಬಂದು ನೋಡುತ್ತಾರೆ, ಪತ್ರಿಕೆಗಳಲ್ಲಿ ಸರಿಯಾದ ಸಂಗತಿ ಬರುತ್ತದೆ ಚಂ.

ಕೊಲಂಬೋದಲ್ಲಿ ಡಿಸೆಂಬರ್ ೩೦ ನೇ ತಾರೀಖು ೧೮೯೨ ವರ್ಷದವರೆಗೆ ಮೃತಪಟ್ಟವರು ೨ ಸಾವಿರದ ಹತ್ತು ಜನ ಗಂಡಸರು, ೩ ಸಾವಿರ ಹೆಂಗಸರು, ೫೨ ಜನ ಮಕ್ಕಳು ಮತ್ತು ೧೮ ಜನ ಪರದೇಶಿಗಳು ಸೇರಿ ೬೦ ಜನರು ಅವರ ಕುಟುಂಬದವರಾಗಿದ್ದಾರೆ—ಚಂ.

ಬೊಂಬಾಯಿನಲ್ಲಿ ಧಾಮಸ್ ಕುಕ್ ಎಂಬ ಭಾರಿ ವರ್ತಕರಿರುತ್ತಾರೆ ಅವರು ತುಂಬಾ ಐಶ್ವರ್ಯವಂತರು. ಕಳೆದ ಬುಧವಾರ ರಾತ್ರಿ ಅವರು ಕಬ್ಬಿಣದ ಪೆಟ್ಟಿಗೆಗಳಲ್ಲಿಟ್ಟಿದ್ದ ಹಣ ಮತ್ತು ನೋಟುಗಳು ೧೫,೦೦೦ ರೂಪಾಯಿಗಳು ಕಳ್ಳರು ಅಪಹರಿಸಿಬಿಟ್ಟಿರುತ್ತಾರೆ.

ಉತ್ತರ ಹಿಂದುಸ್ಥಾನದಲ್ಲಿ ಒಬ್ಬ ಹೆಂಗಸು ತನ್ನ ಮನೆಗೆ ಹಾಲು ಕೊಡುತ ಹೊಲದಲ್ಲಿ ನಿಲ್ಲಿ ಹಾಡುತ್ತಿದ್ದಳು. ಒಂದು ಸರ್ಪವು ಬಂದು ಮಗುವಿನ ಬಾಯನ್ನು ಬಿಡಿಸಿ ಅದರ ಬಾಯಿಗೆ ತನ್ನ ಬಾಲವನ್ನು ಕೊಟ್ಟು ತಾನು ತನ್ನ ಬಾಯಿಂದ ಹಾಲನ್ನು ಕುಡಿಯುತ್ತಿತ್ತು. ಅವಳಿಗೆ ಎಚ್ಚರವಾಗಲು ವಾಸುಕಿ ಕುಡಿಯುವದನ್ನು ಬಿಟ್ಟು ದೂರ ಹೋಗಿ ಹೊರಟು ಹೋಯಿತು. ಇದೆಂಥಾ ಆಶ್ಚರ್ಯ!

ನ್ಯೂಕ್ಯಾಸಲ್ ನೊಳಗೊಬ್ಬ ಕಾರಿಗೆಯವನು ಗುಂಡಿನಂಥ ಒಂದು ಘಡಿಯಾರವನ್ನು ಮಾಡಿದ್ದಾನೆ ಅದರ ಆಕೃತಿಯು ತೋರಿಸಲೇಬೇಕಾದ್ದು ಕೊಳವೆಗಳಿಂದ ಜಾರಿಬಿಡುತ್ತದೆ. ನೆಮಲಿನ ಗುಂಡಿಯಲ್ಲಿ ಹೊತ್ತು ತಿಳಿಯುತ್ತದೆ. ಮೇಲಿನ ಗುಂಡಿಯಲ್ಲಿ ಕೀಲಿಯೂ, ಕೆಳಗಿನ ಗುಂಡಿಯಲ್ಲಿ ಮಾಸಗಳನ್ನು ತಿಳಿಸುವ ಯಂತ್ರವಿದೆ

ವಿಲಾಯಿತಿಯಲ್ಲಿ ಮದುವೆ ಯಾದಕೂಡಲೆ ವಧೂವರರ ಮೇಲೆ ಜನಗಳು ಜೋಡುಗಳನ್ನು ಎಸೆಯುವ ಪದ್ಧತಿ ಇದೆಯಷ್ಟೆ. ಹಿಂದುಗಳಲ್ಲಿ ಅದಕ್ಕೆ ಬದಲಾಗಿ ಅಕ್ಕಿಯನ್ನು ಎರಚುತ್ತಾರೆ. ಈ ಪದ್ಧತಿಗನುಸಾರವಾಗಿ ಮೊನ್ನೆ ಉತ್ತರ ಹಿಂದುಸ್ಥಾನದಲ್ಲಿ ನಡೆದ ಒಂದು ಮದುವೆಯಲ್ಲಿ ಜನರು ವಧುವಿನ ಮೇಲೆ ತಣ್ಣೀರು ಚೆಲ್ಲಿದರು, ಅವಳಿಗೆ ಆ ಕೂಡಲೆ ಛಳಿ ಹಿಡಿದು ಸತ್ತು ಹೋದಳು. ಅದಕ್ಕೆ ಮದುವೆಗಂಡನನ್ನು ಕೋರ್ಟಿಗೆ ಎಳೆದು ದಸ್ತಾವೇಜು ಮಾಡಿ ನೀರು ಎರಚಿದವ ರು ವಧುವಿನ ತಂದೆತಾಯಿಗಳಿಗೆ ಹಣ ಕೊಡಬೇಕೆಂತಲೂ ವರನ ಮದುವೆಯಾದವನ್ನು ಸಲ್ಲಿಸಬೇಕೆಂತಲೂ ತೀರ್ಮಾನಿಸಿದರಂತೆ.

ಧಾರ್ವಾಡದಲ್ಲಿರುವ ರೈಲ್ವೆ ಆಫೀಸಿನಲ್ಲಿರುವ ೨೫-೩೦ ಜನ ಕ್ಲಾರ್ಕುಗಳು ತಾವು ೫-೬ ವರುಷಗಳಿಂದ ಮೊದಲು ಮಾಡಿ ಮೊದಲೂ ತೃಪ್ತಿಕರವಾಗಿಯೂ ಕೆಲಸಮಾಡಿದಾಗ್ಯೂ ತಮಗೆ ಯಾವದೊಂದು ಪ್ರಮೋಷನನ್ನು ಕೊಡಿಸಲಿಲ್ಲ ಈಗಲಾದರು ದಯವಿಟ್ಟು ಮಾಡಿಕೊಡಬೇಕೆಂದು ಕೇಳಿಕೊಂಡ ಮುದ್ದೆಯವರಲ್ಲಿ ವಿಜ್ಞಾಪನೆ ಮಾಡಿಕೊಳ್ಳಲು ಹೋಗಿದ್ದಕ್ಕೆ ಅಧಿಕಾರಿಗಳು ಕೋಪದಿಂದ ಈಗ ನಿಮಗೆ ಕೊಡತಕ್ಕ ಸಂಬಳ ಹೊಟ್ಟೆಗೆ ಸಾಲದೆ ಹೋದರೆ ಬಿಟ್ಟು ಹೋಗಿ ಎಂಬದಾಗಿ ಅಪ್ಪಣೆ ಕೊಡಿಸಿದರಂತೆ, ವೃ. ಚಿ

ನಿಜಾಮರ ಇಲಾಖೆಗೆ ಸೇರಿದ ಇಂದರಾಸಿಂದ ಹೈದರಾಬಾದ್ ಕಡೆ ಹೋಗುತ್ತಲಿದ್ದ ೨|| ಲಕ್ಷ ರೂಪಾಯಿಗಳ, ಕ್ಕೆ ಖಜಾನೆಯನ್ನು ಮಾರ್ಗದಲ್ಲಿ ಕಳ್ಳರು ಹಿಡಿದು, ಕಾವಲಿನವರಲ್ಲಿ ೪-೫ ಜನರನ್ನು ಕೊಂದು, ಹಣವನ್ನು ಹೊತ್ತುಕೊಂಡು ಹೋದರು. ಕಾವಲುಗಾರರು ಸಾಲ್ಕಾರು ಹೆಚ್ಚು ಜನರಿದ್ದರೂ, ಆದರೆಕಳ್ಳರು ಬಹಳ ಜನರಿದ್ದದರಿಂದ, ಕಾವಲುಗಾರರ ಪ್ರತಿಬಂಧಕವು ವ್ಯರ್ಥವಾಯಿತು ಈ ಸುದ್ದಿಯು ತಿಳಿದ ಕೂಡಲೇ ಹೈದರಾಬಾದ್ ಸರಕಾರದ ಬಾರಿ ಸಿಪಾಯಿಗಳು ಮತ್ತು ಎರಡನೇ ಜನ ೨ ಕೋಟಿ ೧೦೦೦ ಕಾಲಾಳುಗಳನ್ನು ಕೊಟ್ಟು ಕಳ್ಳರ ಹಿಂದೆಯೇ ಕಳ್ಳರ ಹಿಂಡನ್ನು ಹಿಡಿಯುವದಕ್ಕೆ ಕಳುಹಿಸಿದರು. ಆ ಸರಕಾರದ ಸಂಬಂಧವಾದ ಪ್ಲೈಲ್ ಸಾಹೇಬರು ಭಾರಾಸೀದ ಜಿಲ್ಲೆಯ ಪೊಲೀಸ್ ಸೂಪರಿಂಟೆಂಡೆಂಟರ ಕೂಡ ಹೋಗಿದ್ದಾರೆ—ಚಂ.

ಪಾಮೋಪಿ ದಾಕ್ಷ್ಯದಲ್ಲಿ ಸ್ತ್ರೀಯರು ಸಹ ಯೋಧರಾಗಿದ್ದಾರೆ. ವೀರಶಕ್ತಿಯು ತಮಗೆ ಮೆಚ್ಚಿ ಇನೇ ಎಂಥ ಆ ನಗರಕ್ಕೆ ಜನರು ಅನ್ನುತ್ತಿದ್ದರು ಅಲ್ಲಿಯ ರಾಜ ಮಂತ್ರಿ ಮೊದಲಾದವರೂ, ದಂಡಿನವರೂ ಗಂಡಸರೇ ಇದ್ದರೆ, ಹೀಗಿದ್ದಾಗ್ಯೂ, ಅಲ್ಲಿಯ ಕುಮಾರಿಯರು ತಮ್ಮ ರಾಷ್ಟ್ರದ ಸಂರಕ್ಷಣೆಗಾಗಿ ಯುದ್ಧ ಕಲೆಯನ್ನು ಕಲಿತು, ಸಮರಾಂಗಣದಲ್ಲಿ ಶಸ್ತ್ರಧಾರಿಗಳಾಗಿ ಶತ್ರುಗಳ ಶಿರಗಳನ್ನು ಚೆಂಡಾಡುವದಕ್ಕೆ ಸ್ವತಃ ಸಿದ್ಧರಾಗಿರುವವನ್ನು ಕೇಳಿ ಯಾರು ಬೆರಗಾಗದೆ ಇರುವರು: ಈ ಸ್ತ್ರೀಯರು ಸ್ವದೇಶದ ಸಂರಕ್ಷಣೆಯ ಸಲುವಾಗಿ ಮದುವೆಯಾಗದೆ ಐಹಿಕ ಸುಖೋಪಭೋಗಗಳ ಮೇಲೆ ನೀರನ್ನು ಹೊಯಿದು, ಕುಮಾರಿಕಾವ್ರತದಿಂದಲೇ ತಮ್ಮ ಆಯುಷ್ಯವನ್ನು ಕಳೆಯುತ್ತಾರೆ! ಪಾಶ್ಚಾತ್ಯ ರಾಷ್ಟ್ರಗಳಲ್ಲಿ ತಮ್ಮ ಸ್ವದೇಶದ ನಿಮಿತ್ತ ಹೆಂಗಸರು ನಾನಾ ಶಸ್ತ್ರಗಳನ್ನು ಹಿಡಿದು, ಕಾಳಗದ ಮಾರ್ಗವನ್ನು ನೋಡುತ ಕೂತ್ರಪೆಕ್ಕು ಮತ್ತು ಅತಿಶಯ ಮಹಾರಥಿಗಳ ಜನ್ಮಸ್ಥಾನವೆಂದು ಹೊಗಳಿಸಿಕೊಳ್ಳುತ್ತಿದ್ದ ಹಿಂದುಸ್ಥಾನವಲ್ಲಿ ಬ್ರಿಟಿಷರು ಆಳುತ್ತಿದ ಮೇಲೆಯಂತು, ಶಸ್ತ್ರವನ್ನು ಧರಿಸಿ ಕಾಳಗಕ್ಕೆ ನಿಲ್ಲಬೇಕೆಂಬ ಆಲೋಚನೆಯು ಸಹ ಇಲ್ಲದಂತೆ ಆಗ ಹೋಗಬೇಕೇ! ಹಿಂದುಸ್ಥಾನದೊಳಗೆ ಹೆಸರಾಗಿ ಹೋದ ಮಹಾನ್ ಶೂರ ವೀರರ ಹೆಸರನ್ನು ಕೇಳದಾಯಿತು, ಪರರಾಯರ ತಲೆಗಳ ತರ ತರನೆ ಗದಗುಟ್ಟ ನಡುಗುತ್ತಿದ್ದವು! ಈಗಿನ ಪರದೇಶದ ಸಾಮಾನ್ಯ ಶೂರನ ಹೆಸರು ಕಿವಿಗೆ ಬಿದ್ದಕೂಡಲೇ ವೀರವಂಶದವರಿಗೆ ಸೇರಿದ ಪುರುಷರು ಜಕ್ಕನೆ ಜಪವು, ದೇವತಾ ಉಪಾಸನೆಯನ್ನು ಕೈಕೊಳ್ಳುವ ಪ್ರಸಂಗವೇ ಬರುತ್ತದೆ! ಎಲ್ಲರೂ ಸೇವಾವೃತ್ತಿಯನ್ನೇ ಹಿಂಬಾಲಿಸಿ, ರಾಜ್ಯಮಾನ್ಯದ ಜಪಗಳನ್ನು ಮಾಡುತ ಕೂತುಕೊಳ್ಳುವದೇ ಒಳ್ಳೇದೆಂದು ನಿಶ್ಚಯಿಸಿದ್ದರ ಪರಿಣಾಮವೇ ಇದೆಂದು ಕೆಲವರು ಅನ್ನುತ್ತಾರೆ, ಆದರೆ ಅದು ಸಮರ್ಪಕವಾದದ್ದಲ್ಲವು. ಪ್ರದೇಶವನ್ನು ಯುದ್ಧಕಲಾನಿಪುಣರಾಗಿ ಮಾಡುವದು ರಾಜರ ಕೆಲಸ ವಿಪತ್ತಿನಲ್ಲಿ, ಹಿಂದು ದೇಶದವರನ್ನು ದಂಡಿನೊಳಗಿನ ದೊಡ್ಡ ದೊಡ್ಡ ಅಧಿಕಾರದ ಕೆಲಸಗಳಿಗಾಗಿ ತೆಗೆದುಕೊಳ್ಳದೆ ಬಿಟ್ಟಿದ್ದರಿಂದ, ನಮ್ಮ ದೇಶದಲ್ಲಿ ವೀರಪುರುಷರ ಹೊಳಪೇ ಮಾಸಿತು ಜಿಸದಿರಲಾಗದೆ! ಯುದ್ಧ ಕಲಿಯುವದಕ್ಕೂ, ಸೇರ "ವಾಲಂಟಿಯರ್ ಕೋರ್ಸ್" ಎಂಬ ದಂಡಿನ ಗುಂಪನ್ನು ಸ್ಥಾಪಿಸುವದಕ್ಕೆ ಅಪ್ಪಣೆಯನ್ನು ಬೇಡಿದರೆ, ನಮ್ಮ ಸರ್ಕಾರವು ವಿರುದ್ಧ ಅಪ್ಪಣೆಯನ್ನೇ ಕೊಟ್ಟು ಬಿಟ್ಟಿತು! ಆತ್ಮ ಹಾಗು ಆತ್ಮರಕ್ಷಣೆಗಾಗಿ, ಒಂದು ಶಸ್ತ್ರವನ್ನು ಸತ್ರ ಇಟ್ಟು ಕೊಳ್ಳಬೇಕಾದರೆ, ಸರಕಾರದ ಅಪ್ಪಣೆಯನ್ನು ಪಡೆಕೊಳ್ಳಲಿಕ್ಕೇ ಬೇಕು! ಈ ಮೇರೆಗೆ ಪ್ರತಿಬಂಧಕವನ್ನಿಟ್ಟದ್ದು ಬಿಟ್ಟು ಕೂರರಾಗತಕ್ಕದ್ದು ಹ್ಯಾಗೆ! —ಕರ್ನಾಟಕವೃತ್ತ.

BANGALORE.—Printed and published at the KARNATAKA PRESS, No. 40, HOSPITAL ROAD, CITY.—1893

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

## ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning.**

[illegible]

Vol. XX ] BANGALORE—MONDAY MARCH 13, 1893 [No 10

ಸಂಪುಟ ೨೦ ] ಬೆಂಗಳೂರು — ಸನ್ ೧೮೯೩ ನೇ ಇಸವಿ ಮಾರ್ಚಿ ೧೩ ನೇ ತಾರೀಖು ಸೋಮವಾರ [ಸಂಚಿಕೆ ೧೦.


### ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ವರ್ಷ ೧ಕ್ಕೆ | 6—0—0 | 8—0—0 |
| 6 ತಿಂಗಳಿಗೆ | 3—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ವರ್ಷ ೧ಕ್ಕೆ | 3—0—0 | 4—0—0 |
| 6 ತಿಂಗಳಿಗೆ | 1—12—0 | 2—8—0 |

ಈ ಪತ್ರಿಕೆಗೆ ದರುಖಾಸ್ತು [illegible] ಚಂದಾ [illegible] ಪತ್ರಿಕೆ [illegible] ಇಂಗ್ಲಿಷ್ [illegible] ಕನ್ನಡ [illegible] ಚಂದಾ [illegible]

### ಪ್ರಕಟನೆಯ ರಿವಾಜ್

ಮೊದಲನೆಯಸಾರಿ ಪಂಕ್ತಿ ಒಂದಕ್ಕೆ ೦—೨—೦

ಎರಡನೆಯದರ ಪಂಕ್ತಿ ಒಂದಕ್ಕೆ ೦—೧—೦

[illegible]

*ADVERTISEMENTS*

**NOTICE**

VAIDYASARA SANGRAHA

A TREATISE ON THE PRINCIPLES OF

HINDU MEDICINE

*Price including Postage Rs 5 0 0*

ವೈದ್ಯಸಾರ ಸಂಗ್ರಹ

ಈ ಗ್ರಂಥಾಪೇಕ್ಷೆಯುಳ್ಳವರು [illegible] ಕೊಡಲ್ಪಡಲಾರದು

ಇದರ ಕ್ರಯ — [illegible] ಪ್ರತಿ ಒಂದಕ್ಕೆ ರೂ 5 0—0

[illegible]

### ನೋಟಿಸ್.

ಬೆಂಗಳೂರು ಕರ್ಣಾಟಕ ಪ್ರೆಸ್.

೧೮[illegible]ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು

ಇದರಲ್ಲಿ, ಸಕಲವಿಧ ಕೆಲಸಗಳು ಸುಲಭಬೆಲೆಗೆ ತೀವ್ರವಾಗಿಯೂ [illegible] ಇಂಗ್ಲಿಷ್ ಕನ್ನಡ [illegible] ಇತರ [illegible] ಮಾಡಿಕೊಳ್ಳಬಹುದು

### ನೋಟೀಸ್.

ನಂಜಪ್ಪನವರ ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು

[illegible]

ತೈಲ — [illegible] ರೂ

ಜ್ವರದ ಗುಳಿಗೆಗಳು — [illegible] ಸಕಲವಿಧ ಜ್ವರಗಳಿಗೂ [illegible] ಔಷಧವಾಗಿರುತ್ತದೆ ರೂ ೧ಕ್ಕೆ [illegible] ಗುಳಿಗೆಗಳು

[illegible]

ನೇತ್ರರೋಗಕ್ಕೆ ಮಾತ್ರೆ — [illegible] ಮೂಲಿಕಾ ಪ್ರಯೋಗದಿಂದ ಮಾಡಲ್ಪಟ್ಟ ಉತ್ತಮವಾದ ಮಾತ್ರೆ ೧ಕ್ಕೆ [illegible]

ಮೂಲವ್ಯಾಧಿಗೆ — [illegible]

ಭಸ್ಮಗಳು — ತಾಮ್ರ, ರಜತ, ಸಿಂಗ, ಸೀಸ, ಪ್ರವಾಳ, ಶೃಂಗ, ಅಭ್ರಕ, ಲೋಹ, ಕಾಂತ ವಗೈರೆ ಭಸ್ಮಗಳೂ [illegible]

ಲೇಹ್ಯಗಳು — [illegible] ರೂ

ಷರಬತ್ತುಗಳು — [illegible] ರೂ

ಚೂರ್ಣಗಳು — [illegible]

### ನೋಟಿಸ್.

ಗಣೇಶ ರಾಮಚಂದ್ರ ಕರ್ಕ ಮತ್ತು ಕಂಪೆನಿ ಕಮಿಶ್ಯನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯೊಡನೆ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ತಕ್ಕ ಕಮಿಶ್ಯನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ

ಎಲ್ಲಾ ತರಹೆ ಔಷಧಗಳು ಪುಸ್ತಕಗಳು, ಮುತ್ತುಗಳು, [illegible] ಗಡಿಯಾರಗಳು, [illegible] ರತ್ನಗಳು, ಬಂಗಾರದಿಂದ ಕಟ್ಟಲ್ಪಟ್ಟ ಉಂಗುರಗಳು, [illegible] ಪಾತ್ರಗಳು, ಜರ್ಮನ್ [illegible] ಪಾತ್ರಗಳು, ಕೇಸರಿ, ಕಸ್ತೂರಿ ವಗೈರೆ ಇತರ ಸಾಮಾನುಗಳು

ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ [illegible] ಕಳುಹಿಸಿದ ಹೊರತು ಜವಾಬ್ ದೊರೆಯಲಾರದು

ವಿಳಾಸ — ಗಣೇಶ ರಾಮಚಂದ್ರ ಕರ್ಕ,
ಮತ್ತು ಕಂಪೆನಿ ಕಮಿಶ್ಯನ್ ಏಜಂಟ್ಸ್
ಠಾಕೂರ್ ದ್ವಾರ, ಮಾರ್ಕೆಟ್ ಪೋಸ್ಟ್, ಮುಂಬೈ

### ನೋಟಿಸ್

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿವೆ ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು

### ಸಂಸ್ಕೃತ ಗ್ರಂಥಗಳು

| | ರೂ | ಆ | ಪೈ |
|---|---|---|---|
| ಸಟೀಕಾ ವೈದ್ಯಸಾರ ಸಂಗ್ರಹ | ೫ | ೦ | ೦ |
| „ ಶಿವಗೀತೆ | ೧ | ೦ | ೦ |
| „ ಶಿವಾನಂದಲಹರಿ | ೦ | ೮ | ೦ |
| „ ಕಾಲಾಮೃತ | ೧ | ೦ | ೦ |
| „ ಟಿ॥ [illegible]ರಾಮಾಯಣ | ೦ | ೩ | ೦ |
| „ ಟಿ॥ ಗೋಪಿಕಾ ಗೀತೆ | ೦ | ೧ | ೦ |
| „ ಟಿ॥ ಚಾಣಕ್ಯನೀತಿ (ಸುಭಾಷಿತ) | ೦ | ೪ | ೦ |
| ವಿಷ್ಣುಸಹಸ್ರನಾಮ [illegible] | ೦ | ೩ | ೦ |
| ಸೂರ್ಯಸಹಸ್ರನಾಮ | ೦ | ೨ | ೦ |
| ಕೃಷ್ಣಕರ್ಣಾಮೃತ | ೦ | ೨ | ೦ |
| ತ್ರಿಕಾಂಡ ಅಮರ ಮಾಲ | ೦ | ೨ | ೦ |
| ೧ ಕಾಂಡ | ೦ | ೧ | ೦ |

### ಕನ್ನಡ ಗ್ರಂಥಗಳು

| | | | |
|---|---|---|---|
| [illegible] | ೩ | ೦ | [illegible] |
| [illegible] | ೧ | ೨ | ೦ |
| [illegible] | ೧ | ೮ | ೦ |
| [illegible] | ೦ | ೬ | ೦ |
| [illegible] | ೦ | ೬ | ೦ |
| [illegible] | ೦ | ೨ | ೦ |
| [illegible] | ೦ | ೨ | ೦ |
| [illegible] | ೦ | ೨ | ೬ |
| [illegible] | ೦ | ೧ | ೦ |
| [illegible] | ೦ | ೧ | ೦ |
| [illegible] | ೦ | ೧ | ೦ |
| [illegible] | ೦ | ೧೦ | ೦ |
| [illegible] | ೦ | ೧೨ | ೦ |

### THE MONEY MARKET

ಮದರಾಸ್, ಶನಿವಾರ, ತಾರೀಖು ಮಾರ್ಚಿ 11ನೇ 1893

ಸೇಕಡ 4ರೂ ಬಡ್ಡಿ ಗವರ್ನಮೆಂಟ್ ಪತ್ರಗಳು ದರ [illegible], 10[illegible] 4—0 ರಿಂದ 105—10—0ವರೆಗೆ

ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳು [illegible] 955 [illegible] 965ವರೆಗೆ

[illegible] ಬ್ಯಾಂಕ್ ಷೇರುಗಳು (100) [illegible] 160 ರಿಂದ 165 ವರೆಗೆ

[illegible], 16—7—0 ರಿಂದ 16—10—0ವರೆಗೆ

[illegible], 6 ತಿಂಗಳವಾಯಿದೆಗೆ, 1s 2 13/16d

[illegible] 4 ತಿಂಗಳವಾಯಿದೆಗೆ, 1s 2⅞d

[illegible], 1s 2 21/32d


## ಕರ್ಣಾಟಕ ಪ್ರಕಾಶಿಕಾ.

## THE KARNATAKA PRAKASIKA


MONDAY, MARCH 13 1893

೧೮೯೩ನೇ ಇಸವಿ ಮಾರ್ಚಿ ತಾ॥ ೧೩ ನೇ ಸೋಮವಾರ

### ಮ್ಯೂನಿಸಿಪಲ್ ಮೀಟಿಂಗ್ ಮತ್ತು ರಿಪೋರ್ಟರ್‌ಗಳಂ ಕುರಿತದ್ದು.

ಮ್ಯೂನಿಸಿಪಲ್ ಬೋರ್ಡೆಂಬದು, ಅದು ಸ್ಥಾಪಿಸಲ್ಪಟ್ಟಿರುವ ಪಟ್ಟಣಗಳ ಜನರ ಸುಖಸಿ[illegible] ಅವಶ್ಯಕಗಳಾದ [illegible] ಸರ್ಕಾರದಿಂದ ಏರ್ಪಡಿಸಲ್ಪಟ್ಟ ಒಂದು ಸಂಘವಾಗಿರುತಲಿದ್ದು, ಈಚೆಗೆ ಸುಮಾರು ಹತ್ತು ವರ್ಷಗಳ ಹಿಂದೆ, ಲಾರ್ಡ್ ರಿಪನ್ ಸಾಹೇಬರವರು ಇಂಡ್ಯಾ ರಾಜ್ಯದ ವೈಸ್‌ರಾಯಿಯವರಾಗಿದ್ದ ಕಾಲದಲ್ಲಿ, ಸದರೀ ಸಂಘದ ಮೆಂಬರ್‌ಗಳಂ ಚುನಾಯಿಸುವ ಬಾಧ್ಯತೆಯು ಪ್ರಜೆಗಳಿಗೆ ಒಪ್ಪಿಸುವದುಚಿತವೆಂದು ಭಾವಿಸಿ, ಅದಕ್ಕೆ ಒಂದು ಆಕ್ಟ್ ಸಹ ರಚಿಸಲ್ಪಟ್ಟು ಹಿಂದೂಸ್ಥಾನದ ಎಲ್ಲಾ ಪಟ್ಟಣಗಳಲ್ಲೂ ಜಾರೀಗೆ ತರಲ್ಪಟ್ಟು ಅದರಂತೆ ಅದ್ಯಾಪಿ ನಡೆಯುತ್ತಲಿದೆ. ಈಚೆಗೆ ಒಂದು ವರ್ಷದ ಹಿಂದೆ ಮೈಸೂರು ಸರ್ಕಾರದವರು ಇಲ್ಲಿನ ಮ್ಯೂನಿಸಿಪಲ್ ಬೋರ್ಡ್ ಮೆಂಬರ್‌ಗಳ ಚುನಾವಣೆ ಬಾಧ್ಯತೆಯಂ ಪ್ರಜೆಗಳಿಗೆ ಉಂಟುಮಾಡಲು, ಅದರಂತೆ ಬೆಂಗಳೂರ್, ಮತ್ತು ಮೈಸೂರು ಬೋರ್ಡ್‌ಗಳ ಮೆಂಬರ್‌ಗಳಂ ಪ್ರಜೆಗಳೇ ಚುನಾಯಿಸಿಕೊಂಡಿರುತ್ತಾರೆ ಈಚೆಗೆ ಮೈಸೂರ್ ಮ್ಯೂನಿಸಿಪಲ್ ಬೋರ್ಡಿನವರು ಮೀಟಿಂಗ್ ಸೇರಿದ ಕಾಲದಲ್ಲಿ ಅಲ್ಲಿನ ವೃತ್ತಾಂತ ಪತ್ರಿಕೆಯ ರಿಪೋರ್ಟರೊಬ್ಬರು ಸದರೀ ಮೀಟಿಂಗಿನಲ್ಲಿ ನಡೆಯುವ ಅತಳತವನ್ನರಿತು ಅದಂ ತಮ್ಮ ಪತ್ರಿಕೆಯಮೂಲಕ ಪ್ರಜೆಗಳಿಗೆ ತಿಳಿಸುವ ಉದ್ದೇಶದೊಡನೆ ಮೀಟಿಂಗಿಗೆ ಹೋದ ಕಾಲದಲ್ಲಿ, ಅದು ಪಬ್ಲಿಕ್ ಮೀಟಿಂಗೆ ಅಥವಾ ಪ್ರೈವೇಟ್ ಮೀಟಿಂಗೆ, ಅದರಲ್ಲಿ ವೃತ್ತಾಂತ ಪತ್ರಿಕೆಗಳ ರಿಪೋರ್ಟರ್‌ಗಳಿಗೆ ಅವಕಾಶ ಕೊಡಬಹುದೆ ಅಥವಾ ಕೂಡದೆ ಎಂಬ ಜಿಜ್ಞಾಸೆ ಉಂಟಾಗಿ, ಹಾಜರಿದ್ದ ಮೆಂಬರ್‌ಗಳು ಅವರವರಿಗೆ ತೋರಿದಂತೆ ಅಭಿಪ್ರಾಯಗಳಂ ಕೊಟ್ಟು ಈ ಮೀಟಿಂಗಿಗೆ ರಿಪೋರ್ಟರ್ ಬರಬೇಕಾದರೆ ಮುಂದು ತಿಳಿಸಿ ಅಪ್ಪಣೆಯಂ ಪಡೆದು ಬರಬೇಕಾಗಿತ್ತೆಂತಲೂ, ಸದರೀ ವಿಚಾರವು ಚರ್ಚೆಯಾಗಿ ನಿಷ್ಕರ್ಷೆಯಾಗುವ ವರಿವಿಗೆ ರಿಪೋರ್ಟರು ಹೊರಗೆ ಹೋಗಬೇಕೆಂದು ಸಹ ಹುಕುಂ ಮಾ

ಪುದರಿಂದು ಕಳೆದವಾರದ ಮೈಸೂರ್ ಚಿಂತಾಮಣಿ ಎಂಬ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿದ್ದುದು ನೋಡಿ ನಮಗುಂಟಾದ ಆಶ್ಚರ್ಯಕ್ಕೆ ಮಿತಿ ಇಲ್ಲದಿರುತಿದೆ. ಈ ಬೆಂಗಳೂರು ಷಹರ್ ವಿಸ್ತೀರ್ಣದಲ್ಲೂ, ಪ್ರಜಾ ಸಂಖ್ಯೆಯಲ್ಲೂ, ಪ್ರಜೆಗಳ ಬುದ್ಧಿ ಕೌಶಲ್ಯ ಮತ್ತು ನಾಗರಕತೆಯಲ್ಲೂ ಇನ್ನು ಇತರ ವಿಷಯಗಳಲ್ಲೂ ಮೈಸೂರಿಗಿಂತ ಅಧಿಕವಾದುದೆನ್ನಿಸಿಕೊಂಡಿರುತಿದೆ. ಇಲ್ಲಿಯೂ ಬಹುಕಾಲದಮೊದಲು ಮ್ಯುನಿಸಿಪಲ್ ಬೋರ್ಡ್ ಏರ್ಪಟ್ಟು ನಡೆಯುತಲಿದೆ. ಇಲ್ಲಿ ನಾಲ್ಕರು ವೃತ್ತಾಂತ ಪತ್ರಿಕೆಗಳು ಪ್ರಕಟಿಸಲ್ಪಡುತವುಗಳ ರಿಪೋರ್ಟರ್‌ಗಳು ಬೋರ್ಡ್‌ಮೀಟಿಂಗ್ ಕಾಲದಲ್ಲಿ ಹಾಜರಾಗಿ ಅದರಲ್ಲಿ ನಡೆಯುವ ಆತಳತಗಳಂ ಗುರ್ತುಹಾಕಿಕೊಂಡು ಹೋಗಿ ಅದರ ಪೈಕಿ ಪ್ರಜೆಗಳಿಗೆ ಅವಶ್ಯ ತಿಳಿಯಬರಬೇಕಾದ ಉಪಯುಕ್ತಾಂಶಗಳನ್ನೆಲ್ಲ ಅವರವರ ಪತ್ರಿಕೆಗಳಲ್ಲಿ ಪ್ರಕಟಿಸುವ ವಾಡಿಕೆ ನಡೆಗೊಂಡಿರುತಿದೆ. ಸದರೀ ರಿಪೋರ್ಟರ್‌ಗಳಿಗಾಗಿ ಬೋರ್ಡ್ ಮೀಟಿಂಗ್‌ಹಾಲಿನೊಳು ಒಂದು ಕಡೆ ಒಂದು ಮೇಜಾ ನಾಲ್ಕಾರು ಖುರ್ಚಿಗಳೂ ಹಾಕಲ್ಪಟ್ಟಿರುತಿವೆ. ಇಲ್ಲಿನ ಮ್ಯುನಿಸಿಪಾಲಿಟಿಯ ಆತಳತವು ಮೇಲ್ನಕ್ರಮವನ್ನನುಸರಿಸಿ ನಡೆಯುವಲ್ಲಿ ಮೈಸೂರು ಮ್ಯುನಿಸಿಪಾಲಿಟಿಯ ಆತಳತವು ಒಂದು ವಿಲಕ್ಷಣ ಮಾರ್ಗವನ್ನವಲಂಬಿಸಿದ ಬಗ್ಗೆ ಚಿಂತಿಸುತ್ತೇವೆ. ಬೋರ್ಡ್ ಮೆಂಬರ್‌ಗಳ ಸಂಖ್ಯೆಯು ಪೈಕಿ ಅರ್ಧಭಾಗ ಪ್ರಜೆಗಳಿಂದ ಚುನಾಯಿಸಲ್ಪಟ್ಟವರಾಗಿರುವದರಿಂದ ಅವರು ಪ್ರಜಾಪ್ರತಿನಿಧಿಗಳೆಂಬವರಲ್ಲಿ ಅನುಮಾನ ಲೇಶವೂ ಇರುವದಿಲ್ಲವು. ವೃತ್ತಾಂತ ಪತ್ರಿಕೆಗಳು ಪ್ರಜೆಗಳಿಗೂ ಸರ್ಕಾರಕ್ಕೂ ಮಧ್ಯವರ್ತಿಯಾಗಿರುತ, ಪ್ರಜೆಗಳ ಅಪೇಕ್ಷಿತಾಂಶಗಳನ್ನು ಗವರ್ನಮೆಂಟಿನವರಿಗೂ, ಗವರ್ನಮೆಂಟಿನವರ ಆತಳತ ಕ್ರಮವನ್ನು ಪ್ರಜೆಗಳಿಗೂ ತಿಳಿಸುತ, ಅದರಲ್ಲಿನ ಗುಣದೋಷಗಳಂ ಹೊರಪಡಿಸುವ ಕರ್ತವ್ಯವಂ ವಹಿಸಿದ್ದಾಗಿರುತಿವೆ. ಅಂತಾ ವೃತ್ತಾಂತ ಪತ್ರಿಕಾ ಪ್ರತಿನಿಧಿಗಳಿಗೆ, ಪ್ರಜೆಗಳಿಂದ ಚುನಾಯಿಸಲ್ಪಟ್ಟ ಮೆಂಬರಗಳ ಸಭೆಯಲ್ಲಿ ಅವಕಾಶ ಕೊಡಬೇಕಾದ ಅಂಶದೊಳು ಚರ್ಚೆಯುಂಟಾದುದು ಕೇವಲ ಹೇಳನಾಸ್ಪದವಾದ ಕಾರ್ಯವಾಗಿರುತಿದೆ. ಬ್ರಿಟಿಷ್ ಸರ್ಕಾರದವರು ಪೊಲಿಟಿಕಲ್ ವಿಷಯಗಳಂ ಕುರಿತ ಮೀಟಿಂಗ್ ಕಾಲಗಳಲ್ಲಿ ವಿನಾ ಸಾಮಾನ್ಯವಾದ ಇತರ ಮೀಟಿಂಗ್ ಕಾಲಗಳಲ್ಲಿ ಪತ್ರಿಕಾ ಲೇಖಕರ ಪ್ರತಿನಿಧಿಗಳಿಗೆ ಅವಕಾಶ ಕೊಡದೆ ಅವರಂ ಹೊರಪಡಿಸಿದರೆಂಬ ವಾರ್ತೆಯು ಇದುವರಿವಿಗೆ ನಮ್ಮ ಕೇಳ್ವಿಕೆಗೆ ಬಂದಿರುವದಿಲ್ಲವು. ಬೋರ್ಡ್ ಮೆಂಬರ್‌ಗಳಂ ಚುನಾಯಿಸಿಕೊಳ್ಳುವ ಬಾಧ್ಯತೆಯಂ ಗವರ್ನಮೆಂಟಿನವರು ದಯಮಾಡಿ ಪ್ರಜೆಗಳಿಗೊಪ್ಪಿಸಿರುವಲ್ಲಿ ಹಾಗೆ ಚುನಾಯಿಲ್ಪಟ್ಟ ಮೆಂಬರಗಳು ಇಂತಾ ಸಂದರ್ಭಗಳಲ್ಲಿ ತಮ್ಮ ಕರ್ತವ್ಯವಂ ಯಾವರೀತಿಯಲ್ಲಿ ನೆರವೇರಿಸಬೇಕೆಂಬವನ್ನರಿಯದೆ ವ್ಯರ್ಥವಾದ ವಿಚಾರಕ್ಕೆ ಅವಕಾಶ ಕೊಟ್ಟದಕ್ಕಾಗಿ ವಿಷಾದಿಸುತ್ತೇವೆ.

## Occasional Notes.
## ನೈಮಿತ್ತಿಕ ವಿಷಯನ್ಯಾಸ.

ಬೊಬ್ಬಿಲಿ ಸಂಸ್ಥಾನದ ಅರಸರವರು ಬರುವ ಏಪ್ರಿಲ್‌ತಿಂಗಳ ೯ನೇ ತಾರೀಖಿನಲ್ಲಿ ಮುಂಬೈ ದಡದೊಳು ಸ್ಟೀಮರ್ ಹತ್ತಿ ಯೂರೋಪ್ ದೇಶಕ್ಕೆ ಹೋಗಿ ಅಲ್ಲಿಂದ ಇಂಗ್ಲೆಂಡಿಗೆ ಹೋಗುತ್ತಾರೆ

ದೆಹಲೀ ಪ್ರಾಂತದೊಳು ಕಳೆದ ಸಂವತ್ಸರದಲ್ಲಿ ಕ್ರಿಶ್ಚಿಯನ್ ಮತವಂ ಸೇರಿದ್ದ ಮಹಮದ್ ಜಾತಿ ಮೌಲ್ವಿ ಯೊಬ್ಬನು ಈಚೆಗೆ ಮರಳಿ ಮಹಮದ್ ಮತವಂ ಸೇರಿದನು. ಆತನನ್ನು ಕೂಡಲೆ ಭೂಮಾಳಕ್ಕೆ ಕಳುಹಿಸಿಬಿಟ್ಟರು.

ಈ ತಿಂಗಳ ೬ನೇ ತಾರೀಖಿನಲ್ಲಿ ಜಾರಿ ವಿಷಯದ ವ್ಯವಸ್ಥೆಯಬಗ್ಗೆ ಯೋಗ್ಯರಾದ ಕಮಿಟಿಯವರು ಸಭೆ ಸೇರಿ ವಿಚಾರ ಮಾಡಿದರು. ಇದು ಕೇವಲ ಅಂತರಂಗದಲ್ಲಿ ನಡೆಯುವದರಿಂದ ಸದರೀ ಸಭೆಯಲ್ಲಿ ವೃತ್ತಾಂತ ಪತ್ರಿಕೆಗಳ ಬಾತಮೀದಾರರಿಗೆ ಸಹ ಅವಕಾಶ ವಿಲ್ಲವಾಯಿತು.

ಮಣಿಪುರ ಸಂಸ್ಥಾನದ ರಾಜ ಕುಟುಂಬಕ್ಕೆ ಸೇರಿದ ಹೆಂಗುಸರು ಕೆಲವರು ಕಲ್ಕತ್ತೆಯೊಳು ಈಗ ಆಡುತಲಿರುವ ನಾಟಕ ಕಂಪೆನಿಗೆ ಸೇರಿರುತ್ತಾರೆಂದು ಮಾರ್ನಿಂಗ್ ಪೋಸ್ಟ್ ಎಂಬ ಪತ್ರಿಕೆ ಹೇಳುತಿದೆ. ಇದು ಯೆಷ್ಟರ ಮಟ್ಟಿಗೆ ವಾಸ್ತವವೊ ನಾವರಿಯೆವು

ಬರೋಡೆ ಗಾಯಕವಾಡ ಮಹಾರಾಜರವರು ತಮ್ಮ ದೇಶದೊಳು ಸಂಚಾರ ಮಾಡುವ ಕಾಲದಲ್ಲಿ, ಫಿರ್ಯಾದುದಾರರೂ ಅರ್ಜೀದಾರರೂ ತಮ್ಮ ಅಹವಾಲುಗಳನ್ನು ಪ್ರತ್ಯಕ್ಷದಲ್ಲಿ ಹೇಳಿಕೊಂಡು ಪರಿಹಾರವಂ ಪಡೆಯುವದಕ್ಕೆ ಅನುಕೂಲವಾಗಿರುವಂತೆ, ತಮ್ಮ ಡೇರೆಗೆ ರಹಬರೂ ಅವರಿಗೂ ಪ್ರತ್ಯೇಕವಾಗಿ ಡೇರೆಗಳಂ ಹಾಕಿಸಬೇಕೆಂದು ಹುಕುಂ ಮಾಡಿರುತ್ತಾರೆಂದು ಗುಜರಾತಿ ದರ್ಪಣವೆಂಬ ಪತ್ರಿಕೆ ತಿಳಿಸುತಿದೆ.

ಹೈದರಾಬಾದ್ ಸಂಸ್ಥಾನದ ಪ್ರಧಾನ ಮಂತ್ರಿಯವರಾದ ಸರ್ ಅಸ್ಮಾನ್‌ಜಾ ಯವರು ಈಚೆಗೆ ಒಂದುದಿನ ತಮ್ಮ ಮನೆಯೊಳು ಶಿಳ್ಳೆಯ ನಾದದಲ್ಲಿ ಗಾನವಂ ಮಾಡಿದ ಯೂರೋಪಿಯನ್ ಲೇಡಿ ಒಬ್ಬಳ ಚತುರತೆಗಾಗಿ ಸಂತೋಷಪಟ್ಟು ಸುಮಾರು ಒಂದು ಲಕ್ಷ ರೂಪಾಯಿಗಳ ಕ್ರಯ ಬಾಳಬಹುದಾದ ವಜ್ರಕಂಠಾಭರಣ ವೊಂದನ್ನು ಆಕೆಗೆ ಇನಾಂ ಕೊಟ್ಟರೆಂದು ತಿಳಿಯಲಾದೆವು

ಬಾಡಲ್ ಖುಪ್ ವಾಸಸ್ಥರಾದ ಚೆನ್ನಿಲಾಲ್ ಪಾಂಡೆ ಮತ್ತು ಮುಕುಂದಶಾಸ್ತ್ರಿ ಯೆಂಬವರು ಕಾಶಿಯ ಪಂಡಿತರುಗಳನ್ನೆಲ್ಲ ಕರೆಯಿಸಿ ಗಯಾಘಾಟ್ ಯೆಂಬ ಪ್ರದೇಶದೊಳು ಸಭೆ ಮಾಡಿಸಿ, ಬುಂದೇಲ್‌ಖಂಡ್, ರಾಜಪುಟಾಣಾ, ಕಾಟೇವಾಡ, ಈ ಪ್ರಾಂತಗಳಲ್ಲಿರುವ ಆಯಾ ರಜಪುತ್ ಜಾತಿಯವರು ಪರಸ್ಪರ ವಿವಾಹ ಮೂಲಕ ಸಂಬಂಧವಂ ಮಾಡಿಕೊಳ್ಳಬಹುದೆ ಎಂಬ ಅಂಶವಂ ಕುರಿತು ವಿಚಾರ ಮಾಡಿಸಲು, ಸದರೀ ಸಭೆಯೊಳಿದ್ದ ಪಂಡಿತರೆಲ್ಲ ಏಕಕಂಠ್ಯವಾಗಿ ಆಗಬಹುದೆಂದು ನಿರ್ಣಯಿಸಿ, ಸದರೀ ಕಾರ್ಯವು ಶಾಸ್ತ್ರ ಸಮ್ಮತವಾದುದೆಂದು ಲೇಖನ ಪೂರ್ವಕ ತಮ್ಮ ತಮ್ಮ ಒಪ್ಪಿತವಂ ಕೊಟ್ಟರು.

ಪೂರ್ವ ಸಮುದ್ರ ತೀರ ಮಾರ್ಗವಾಗಿ ಹಾಕಲ್ಪಡುತಲಿರುವ ರೈಲ್ವೆ ರಸ್ತೆಯ ಪೈಕಿ ಬೆಜವಾಡದಿಂದ ಗೋದಾವರಿ ವರಿವಿಗೆ ಹಾಕಲ್ಪಟ್ಟಿರುವ ಕಾಲುವೆಯೊಳು ಜನರ ಮತ್ತು ಸರುಕುಗಳ ಆಮದ್ ರಫ್ತು, ರೈಲ್ವೆ ಅಧಿಕಾರಿಗಳು ಮೊದಲು ನಿರೀಕ್ಷಿಸಿದ್ದದಕ್ಕಿಂತಲು ಅತ್ಯಧಿಕವಾಗಿ, ಪ್ರಯಾಣಸ್ಥರ ಮತ್ತು ಸರುಕುಗಳ ಗಾಡಿಗಳು ಸುತರಾಂ ಸಾಲದೆ ಹೋಗಲು, ಸದರೀ ರೈಲ್ವೆ ಇಲಾಖಾ ಚೀಫ್ ಇಂಜನಿಯರವರು ಮೂವತ್ತು ನಂ ೩ನೇ ತರಗತಿ ಪ್ರಯಾಣಸ್ಥರ ಗಾಡಿಗಳೂ, ಇಪ್ಪತ್ತು ಸೆಟ್ಟು ಸರುಕುಗಳ ಗಾಡಿಗೂ ಬೇಕಾದ ಕಬ್ಬಿಣದ ಸಾಮಾನುಗಳು ಕೂಡಲೇ ಬೇಕೆಂದು ಇಂಡ್ಯಾ ಗವರ್ನಮೆಂಟಿಗೆ ತಂತಿ ಮೂಲಕ ತಿಳಿಸಲು ಅವರು ಅನಂಜರೂರ್ ರವಾನಿಸಬೇಕೆಂದು ಸ್ಟೇಟ್ ಸೆಕ್ರೆಟರಿಯವರಿಗೆ ತಿಳಿಸಿರುತ್ತಾರೆ

ಈ ಮೈಸೂರು ದೇಶದ ಅಂಚೇ ಇಲಾಖೆಯು ವಜಾ ಮಾಡಲ್ಪಟ್ಟು ಅದಕ್ಕೆ ಬದಲಾಗಿ, ಹರ್ ಮ್ಯಾಜಸ್ಟೀ ಸರ್ಕಾರದ ಪೋಸ್ಟಾಫೀಸುಗಳು ಸ್ಥಾಪಿಸಲ್ಪಟ್ಟು ನಡೆದು ಬರುತಲಿದೆಯಷ್ಟೆ. ಈಚೆಗೆ ತಿರುವಾಂಕೂರ್ ಸಂಸ್ಥಾನದ ಅಂಚೆ ಇಲಾಖೆಯನ್ನು ತಮಗೆ ಒಪ್ಪಿಸಿಬಿಡಬೇಕೆಂದು ಸರ್ವೋನ್ನತಾಧಿಕಾರಿಗಳಾದ ಬ್ರಿಟಿಷ್ ಸರ್ಕಾರದವರು ಅಪೇಕ್ಷಿಸಲು, ಅಂಚೇ ಇಲಾಖೆಯೆಂಬದು ಸಂಸ್ಥಾನದ ಗೌರವಕ್ಕೆ ಮುಖ್ಯಾಂಗವಾಗಿರುತಿದೆಯಾಗಿ ಅದನ್ನು ಕೊಡುವದರಿಂದ ಪ್ರಜೆಗಳಲ್ಲಿ ಅರಸರ ಗೌರವಕ್ಕೆ ಲೋಪ ಉಂಟಾಗುವದಾಗಿ ಹಾಗೆ ಕೊಡುವದಕ್ಕಾಗುವದಿಲ್ಲವೆಂದು ಅಲ್ಲಿನ ದಿವಾನರವರು ಜವಾಬ್ ಕೊಟ್ಟರೆಂತಲೂ, ಈ ವಿಷಯದಲ್ಲಿ ದಿವಾನರವರು ವಹಿಸಿದ ಧೈರ್ಯಕ್ಕಾಗಿ ಅಲ್ಲಿನ ಪ್ರಜೆಗಳು ಅವರನ್ನು ಬಹಳ ಕೊಂಡಾಡುತಲಿದ್ದಾರೆಂತಲೂ ವೆಸ್ಟರ್ನ್ ಸ್ಟಾರ್ ಎಂಬ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿದೆ.

ಮೆ॥ ದಾದಾಭಾಯ್ ನೌರೋಜಿ ಯೆಂಬ ಪಾರ್ಸಿಜಾತಿ ದೇಶಸ್ಥ ಮನುಷ್ಯರೊಬ್ಬರು ಈಗ ಮಹಾರಾಜ್ಞೀಯವರ ಪಾರ್ಲಿಮೆಂಟ್ ಸಭೆಯಲ್ಲಿ ಒಬ್ಬ ಮೆಂಬರಾಗಿ ಚುನಾಯಿಸಲ್ಪಟ್ಟಿರುತ್ತಾರೆಯಷ್ಟೆ. ಸದರೀ ದೊಡ್ಡ ಮನುಷ್ಯರು ಕವೆನಂಟೆಡ್ ಸಿವಿಲ್ ಸರ್ವಿಸ್ ಉದ್ಯೋಗವಂ ಪಡೆಯುವ ವಿಷಯದಲ್ಲಿ ಇಂಡ್ಯಾ ದೇಶೀಯರು ಇಂಗ್ಲಾಂಡಿಗೆ ಹೋಗಿ ಅಲ್ಲಿ ಕೆಲ ಕಾಲವಿದ್ದು ಅಲ್ಲಿ ಏವಿ ಪರೀಕ್ಷೆ ಕೊಟ್ಟು ತೇರ್ಗಡೆಯಾಗಿ ಬರಬೇಕೆಂಬ ನಿರ್ಬಂಧವಂ ತಪ್ಪಿಸಬೇಕೆಂಬ ಉದ್ದೇಶದೊಡನೆ, ವಿಲಾಯತಿಯಲ್ಲಿ ನಡೆಯುವಂತೆ ಸದರಿ ಪರೀಕ್ಷೆಯಂ ಇಂಡ್ಯಾದೇಶದಲ್ಲಿ ಸಹ ಯೇರ್ಪಡಿಸಿ ಅಲ್ಲಿ ಕೊಡಲ್ಪಡುವ ಪ್ರಶ್ನ ಪತ್ರಿಕೆಗಳಂ ತರಿ?, ಆ ನೇ ದಿನ ಇಂಡ್ಯಾ ದೇಶದೊಳು ಪರೀಕ್ಷೆಯುಂ ನಡಿಸಬೇಕೆಂಬ ಅಭಿಪ್ರಾಯವುಳ್ಳ ಒಂದು ಮಸವಿದಾ ಆಕ್ಟನ್ನು ರಚಿಯಿಸಿ ಪಾರ್ಲಿಯಮೆಂಟ್ ಮುಂದೆ ಇಟ್ಟಿರುತ್ತಾರೆ ಇದು ಮುಂದೆ ಸದರೀ ಸಭೆಯಲ್ಲಿ ಚರ್ಚಿಸಲ್ಪಟ್ಟು ವ್ಯವಸ್ಥೆಯಾಗಬೇಕಾಗಿದೆ.

ಮದರಾಸ್ ಪ್ರೆಸಿಡೆನ್ಸಿಯಲ್ಲಿ ರಾಜ್ಯವನ್ನಾಳುತ್ತಿರುವ ಒಬ್ಬ ಅರಸರಾಗಲಿ, ಪ್ರಮುಖರಾಗಲಿ ರೈಲ್ವೆ ಮಾರ್ಗವಾಗಿ ಇಂಡ್ಯಾ ದೇಶದೊಳು ಸಂಚರಿಸುತ ಯಾವ ಸ್ಟೇಷನ್ನಲ್ಲಿ ಯಾದರು ಬಂದು ಇಳಿಯುವ ಕಾಲದೊಳು ಸದರೀ ಯವರು ಸರ್ಕಾರೀಯಾಗಿ ಬರಮಾಡಿಕೊಳ್ಳಲ್ಪಡುವದಕ್ಕೆ ಅರ್ಹರಾಗಿರುವ ಸಂದರ್ಭದಲ್ಲಿ ಅವರ ಪರಿವಾರಕ್ಕೆ ಸೇರಿದ ಗೌರವ್ಯರಾದವರೊಬ್ಬರು ಗಾಡಿಯಿಂದ ಇಳಿದು ಬಾಪವರನ್ನು ಬರಮಾಡಿಕೊಳ್ಳುವದಕ್ಕಾಗಿ ನಿಯಮಿಸಲ್ಪಟ್ಟ ಆಫೀಸರನ್ನು ಕಂಡು ಅವರನ್ನು ಕರೆದುಕೊಂಡು ಹೋಗಿ ಗಾಡಿಯಲ್ಲಿರುವ ಅರಸರ ಅಥವಾ ಪ್ರಮುಖರ ಭೇಟಿಯಂ ಮಾಡಿಸಬೇಕಾದ್ದಲ್ಲದೆ, ಮೇಲಿನ ಯೇರ್ಪಾಡು ಕ್ರಮವಾಗಿ ಜಾರಿಯೊಳು ಬರತಕ್ಕಬಗ್ಗೆ, ಸರ್ಕಾರೀಯಾದ ಗೌರವ ಪುರಸ್ಕಾರಗಳು ನಡೆಸಲ್ಪಡುವೆಂದು ಅರಸರಿಗಾಗಲಿ ಅಥವಾ ಅವರ ಸಂಗಡ ಬರುವ ಪೊಲಿಟಿಕಲ್ ಆಫೀಸರಿಗಾಗಲಿ ತಿಳಿಸತಕ್ಕದ್ದೆಂದು ಇಂಡ್ಯಾ ಗವರ್ನಮೆಂಟಿನವರು ಮದರಾಸ್ ಗವರ್ನಮೆಂಟಿನವರನ್ನು ಅಪೇಕ್ಷಿಸಿರುತ್ತಾರೆ.

## ನೋಟಿಸ್.

ಇನಮೇಲಿಂದ ನಮ್ಮ ಚಂದಾದಾರರಿಗೆ ನಾವು ಪ್ರಕಟಿಸುವದೇನೆಂದರೆ.— ಈ ಸಾಲಿನಲ್ಲಿ ಪತ್ರಿಕೆಯ ಚಂದಾದರವಂ ಕಡಮೆ ಮಾಡಿ, ಅದಂ ಪಾವತೀ ಮಾಡುವದಕ್ಕೆ ನಾವು ಕೊಟ್ಟಿದ್ದ ಒಂದು ತಿಂಗಳ ಮಾಯಿದೆ ಗತಿಸಿ ಮೇಲೆ ಎರಡು ತಿಂಗಳಾಗುತಬರುತಲಿರುವದರಿಂದ ಈ ತಿಂಗಳು ಪೂರ್ತಿಯಾಗುವದರೊಳಗಾಗಿ ಚಂದಾಮೊಬಲಗನ್ನು ಕಳುಹಿಸಿಕೊಡಬೇಕೋರಿದೆವು. ಕಳೆದ ಸಾಲಿನಲ್ಲಿ ಜಾರೀಯೊಳಿದ್ದದರ ಪ್ರಕಾರ ಚಂದಾ ಮೊಬಲಗನ್ನು ಕಳುಹಿಸಿಕೊಡಬೇಕಾಗಿರುವದಲ್ಲದೆ ಈ ತಿಂಗಳ ಆಖ್ಯೇರೊಡನೆ ಹೊಸದರವು ರದ್ದಾದಂತೆ ತಿಳಿಯಬೇಕು)

## LOCAL AND PROVINCIAL NEWS
## ಒಳದೇಶ ಮತ್ತು ತಾಲ್ಲೂಕ್‌ಜಾತಿನ್ವೃತ್ತಾಂತಗಳು

ಈ ಸಂಸ್ಥಾನದ ಮುಜರಾಯಿ ಸೂಪರಿಂಟೆಂಡೆಂಟರಾದ ಮೆ॥ ಎ. ಶ್ರೀನಿವಾಸಾಚಾರ್ಲುಯವರು ಮೈಸೂರು, ನಂಜನಗೂಡು, ಮೇಲುಕೋಟೆ, ಶ್ರೀರಂಗಪಟ್ಟಣ, ಈ ಸ್ಥಳಗಳಲ್ಲಿರುವ ಸತ್ರ ದೇವಾಲಯಗಳ ಆಡಳಿತಕ್ರಮವಂ ವಿಚಾರಿಸಿಕೊಂಡು ಕಳೆದ ಶನಿವಾರದದಿನ ಸಾಯಂಕಾಲ ಬೆಂಗಳೂರಿಗೆ ವಾಪಸ್ ಬಂದರು.

ಕಳೆದ ಮಂಗಳವಾರದ ದಿನ ಈ ಸಂಸ್ಥಾನದ ದಿವಾನರಾದ ಸರ್ ಕೆ. ಶೇಷಾದ್ರಿ ಅಯ್ಯರ್, ಕೆ. ಸಿ. ಎಸ್. ಐ. ಯವರು ಮೈಸೂರಿಂದ ಇಲ್ಲಿಗೆ ದಯಮಾಡಿದರು. ಈ ಪ್ರಾಂತಿಗೆ ಜಲವಸತಿಯಂ ಕಲ್ಪಿಸುವ ವಿಷಯದಲ್ಲಿ ಉಂತರವಾದ ಸಂಕಲ್ಪವುಳ್ಳವರಾಗಿರುವದರಿಂದ ಆ ಬಗ್ಗೆ ಅವಶ್ಯಕಗಳಾದ ಯೇರ್ಪಾಡುಗಳಂ ಪೂರ್ತಿಮಾಡುವದಕ್ಕಾಗಿ ಇನ್ನು ಒಂದುವಾರದ ಕಾಲ ಇಲ್ಲಿರುವರೆಂದು ಕೇಳುತ್ತೇವೆ.

ಗತಿಸಿದ ಪ್ರಿನ್ಸ್ ಸುಬ್ರಹ್ಮಣ್ಯರಾಜೆ ಅರಸಿನವರ ಮನೆಗೆ ಅವರ ಕುಟುಂಬದ ಅಕ್ಕಂದಿರ ಮಕ್ಕಳಾದ ೧೪ ವರುಷ ವಯಸ್ಸುಳ್ಳ ಗೋವಿಂದರಾಜೆ ಅರಸಿನವರೆಂಬವರನ್ನು ದತ್ತು ಕೊಡಿಸುವಂತೆ ಏರ್ಪಾಡಾಗಿದ್ದ ಪ್ರಕಾರ, ಅರಮನೆಯಲ್ಲಿ ನಿನ್ನೆ ಶನಿವಾರದದಿವಸ ದತ್ತಸ್ವೀಕಾರಮಹೋತ್ಸವವು ಜರಿಯಿತು. ಇವರಿಗೆ ಸುಬ್ರಹ್ಮಣ್ಯರಾಜೆ ಅರಸಿನವರೆಂದು ನಾಮಕರಣಮಾಡಿಸಿದರು.

ಬೆಂಗಳೂರಿನ ಲಾಲ್‌ಬಾಗಿನಲ್ಲಿ ಕಾಡುಮನುಷ್ಯನೆಂದು ಕರೆಯುವ ಒರಾಂಗ್‌ಉಟ್ಯಾಂಗೆಂಬ ಕಾಡು ಕಪಿಯ ಮುಂದಕ್ಕೆ ಹೊಗೇಬತ್ತಿ ದೀಪದಕಡ್ಡಿ ಪೆಟ್ಟಿಗೆಯನ್ನು ಎಸೆದರೆ ಅದು ಮನುಷ್ಯರಂತೆ ಬತ್ತಿಯನ್ನು ಕಚ್ಚಿಕೊಂಡು ದೀಪದಕಡ್ಡಿಯಿಂದ ಹತ್ತಿಸಿಕೊಂಡು ಒಂದೆರಡುಬತ್ತಿಗಳನ್ನು ಸೇದಿ ಆಮೇಲೆ ಸ್ವಲ್ಪ ಕಾದುಕೊಳ್ಳುತ್ತದೆ ಇದು ಯಾ[illegible] ಇದ್ದದ್ದರಿಂದ ಈ ಅಭ್ಯಾಸವಾಗಿರಬಹುದೆಂದು ತೋರುತ್ತದೆ.—ವೃ. ಚಿ.

ಕಳೆದ ಬ್ರಹಸ್ಪತಿವಾರದ ದಿವಸ ಪ್ರಿನ್ಸ್ ಸುಬ್ರಹ್ಮಣ್ಯ ರಾಜೆಅರಸಿನವರ ದತ್ತಪುತ್ರರಾದ ಮ॥ ಸುಬ್ರಹ್ಮಣ್ಯ ರಾಜೆ ಅರಸಿನವರಿಗೆ ಮ॥ ಒಕ್ಕಿ ಬಸಪ್ಪಾಜಿಯವರ ಹಿರಿಯ ಮಗಳನ್ನು ಕೊಟ್ಟು ಅರಮನೇಲಿ ಮಹಾಸನ್ನಿಧಿಯಲ್ಲೇ ಲಗ್ನ ಜೆಳೆಯುವಂತೆ ನಿಷ್ಕರ್ಷೆಯಾಗಿದೆ ಆ ಬಾಲೆಗೆ ೧೩ ವರುಷ. ಈ ಲಗ್ನದ ಜೊತೆಯಲ್ಲೇ ಮ॥ ಸಂಜೀವರಾಜೆ ಅರಸಿನವರ ಮಕ್ಕಳು ೧೪ ವರುಷ ವಯಸ್ಸುಳ್ಳ ವರನಿಗೆ ಮಾಳ್ಯದ ದೇವರಾಜೆಅರಸಿನವರ ಪುತ್ರಿಯರಾದ ೧೧ ವರುಷದ ಹುಡಿಗಿಗೂ ವಿವಾಹ ಜೆಳೆಯುವಂತೆ ಗೊತ್ತಾಗಿದೆ. ಅಂತು ಈವರುಷ ಅರಮನೆಯಲ್ಲಿ ನಾಲ್ಕು ಜನ ರಾಜಸಂತತಿಯವರಿಗೆ ಮದುವೆಗಳು ಜೆಳೆದಹಾಗೆ ಆಯಿತು.—ವೃ. ಚಿ.

ಶ್ರೀಮನ್ಮಹಾರಾಣಿಯವರ ಬಾಲಿಕಾಪಾಠಶಾಲೆಯಲ್ಲಿ ಹೊಳೇನರಸೀಪುರದ ನಾರಣಪ್ಪನವರ ಯೆಂಡತಿ ಕೃಷ್ಣಮ್ಮ ನೆಂಬಾಕೆಯನ್ನು ಸೇರಿಸಿಕೊಳ್ಳತಕ್ಕ ಭಾಗಕ್ಕಾಗಿ ಒಂದು ಸಬ್ ಕಮಿಟಿಯನ್ನು ಏರ್ಪಡಿಸಿದ್ದಾರೆಂದು ಕಳೆದ ವಾರದಲ್ಲಿ ತಿಳಿಸಿದ್ದೇವಷ್ಟೆ. ಈ ಸಂಗತಿ ಚರ್ಚೆಯಾಗಿ ಆಕೆಯನ್ನು ಸೇರಿಸಿಕೊಳ್ಳಬಹುದೆಂದು ಏರ್ಪಡುಮಾಡಿರುವದಾಗಿ ತಿಳಿದು ಬರುತ್ತದೆ. ಇದಕ್ಕಾಗಿ ನಾವು ಆಕ್ಷೇಪಿಸುವರಲ್ಲ. ಆದರೆ ಗಂಡುದರ ಅನುಮತಿ ಇಲ್ಲದೆ ವಯಸ್ಕರಾದ ಹೆಂಗಸರನ್ನು ಸೇರಿಸಿಕೊಳ್ಳುವದಿಲ್ಲವೆಂದು ಹಿಂದೆ ಒಂದು ರೂಲ್ಸಾಗಿರುವಹಾಗೆ ಜ್ಞಾಪಕವಿದೆ. ಹಾಗಿರುವ ಪಕ್ಷದಲ್ಲಿ ಈಗ ಇವರು ಮಾಡಿರುವದು ಸಮಂಜಸವಾಗಿ ತೋರುವದಿಲ್ಲ.—ವೃ. ಚಿ

ಈ ತಿಂಗಳ ೯ ನೇ ತಾರೀಖಿನಲ್ಲಿ ಪ್ರಕಟಿಸಲ್ಪಟ್ಟ ಸರ್ಕಾರೀ ಕಾಲಸ್ಥಿತಿ ರಿಪೋರ್ಟನ್ನು ನೋಡಲಾಗಿ, ತಿಳಿಯಬರುವದೇನೆಂದರೆ.—

ಇದೇ ತಿಂಗಳ ೮ ನೇ ತಾರೀಖಿಗೆ ಪೂರ್ತಿಯಾದ ವಾರದೊಳು ಬೆಂಗಳೂರು ಡಿಸ್ಟ್ರಿಕ್ಟ್ ಪೈಕಿ ಹೊಸಕೋಟೆ, ಕಾರ್ಬಾವುಹಳ್ಳಿ ತಾಲ್ಲೂಕುಗಳಲ್ಲಿ ಹದಗಟ್ಟಿಯೂ ಇನ್ನು ಕೆಲವು ತಾಲ್ಲೂಕುಗಳಲ್ಲಿ ಅಲ್ಪವರ್ಷವೂ ಬಿತ್ತು. ಕೋಲಾರ ಡಿಸ್ಟ್ರಿಕ್ಟಿನಲ್ಲಿ ಮಾಲೂರು, ಚಿಂತಾಮಣಿ, ಈ ಯೆರಡು ಪ್ರದೇಶಗಳಲ್ಲಿ ಮಾತ್ರ ಸ್ವಲ್ಪ ಮಳೆಬಿತ್ತು, ಅನ್ಯತ್ರ ಯಿಲ್ಲ. ತುಮಕೂರು ಡಿಸ್ಟ್ರಿಕ್ಟು ಪೈಕಿ ಒಂದು ಕಡೆಯಲ್ಲಾದರು ವರ್ಷಸೂಚನೆಯೇ ಇಲ್ಲವು. ಮೈಸೂರು ಡಿಸ್ಟ್ರಿಕ್ಟು ಪೈಕಿ ಹೆಗ್ಗಡದೇವನಕೋಟೆ, ಮಳವಳ್ಳಿ, ನಾಗಮಂಗಲ, ಈ ಮೂರು ತಾಲ್ಲೂಕುಗಳಲ್ಲೂ ಹದಗಟ್ಟ ಮಳೆ ಆಗಿರುತಿದೆ, ಇತರ ತಾಲ್ಲೂಕುಗಳಲ್ಲಿ ಕೆಲವು ಸೋನೆಗಳು ಬಿದ್ದಿರುತಿವೆ. ಹಾಸನ, ಶಿವಮೊಗ್ಗ ಈ ಯೆರಡು ಡಿಸ್ಟ್ರಿಕ್ಟುಗಳಲ್ಲಿ ಸುತರಾಂ ಮಳೆಯಿಲ್ಲವು ಕಡೂರು ಡಿಸ್ಟ್ರಿಕ್ಟು ಪೈಕಿ ಮೂಡುಗೆರೆಯಲ್ಲಿ ಒಂದು ಇಂಚೆ ಮಳೆ, ಅನ್ಯತ್ರ ಸ್ವಲ್ಪವೂ ಇಲ್ಲವು. ಚಿತ್ರದುರ್ಗ ಡಿಸ್ಟ್ರಿಕ್ಟು ಪೈಕಿ, ಹೊಳಲಕೆರೆ, ಹೊಸದುರ್ಗ, ಹರಿಹರ, ಈ ಮೂರು ತಾಲ್ಲೂಕುಗಳಲ್ಲಿ ವಿನಾ ಉಳಿದವುಗಳಲ್ಲಿ ಅಲ್ಪ ಮಳೆ ಆಗಿದೆ.

ವರ್ಷಾಕಾಲವಲ್ಲವಾದುದರಿಂದ ಮಳೆ ಯಿಲ್ಲದ್ದಕ್ಕೆಯೂ ಜನರು ಅದಕ್ಕಾಗಿ ಚಿಂತಿಸುವದಕ್ಕೆ ಅವಕಾಶವಿಲ್ಲವು. ಪ್ರಾಯಶಃ ಸರ್ವತ್ರ ಬೆಳೆಯುಳ್ಳಿರುವ ಫಸಲ್‌ಗಳು ಒಳ್ಳೆಯ ಸ್ಥಿತಿಯಲ್ಲಿವೆ ಯೆಂತಲೂ ಒಂದೆರಡು ಪ್ರದೇಶಗಳು ವಿನಾ ವಿಶ್ವ ಪ್ರದೇಶಗಳೊಳು ಮೇವು ನೀರು ದುರ್ಲಭವಾಗಿಲ್ಲವೆಂತಲೂ ತಿಳಿಸಲ್ಪಟ್ಟಿದೆ. ಈ ಷಹರ್‌ನಲ್ಲಿನ ಜಲವಸತಿಯನ್ನು ಕುರಿತು ಹಿಂದಿನ ವಾರದಲ್ಲಿ ತಿಳಿಸಿದ್ದದಕ್ಕಿಂತಲೂ ಅಧಿಕಾಂಶವೇನು ಮಿಲ್ಲವು, ಪರಂತು ಜಲದೌರ್ಲಭ್ಯವು ದಿನೇ ದಿನೇ ವೃದ್ಧಿಯಲ್ಲಿದೆ ಯೆಂದು ಹೇಳುವೆವು. ಆಹಾರ ಧಾನ್ಯಗಳ ಧಾರಣೆಗಳು ಒಂದೇವಿಧವಾಗಿವೆ. ಈ ಷಹರ್‌ನಲ್ಲಿ ಒಂದುವಿಧ ಜ್ವರರೋಗವು ವ್ಯಾಪಿಸಿ ಅನೇಕರು ಅದರ ಬಾಧೆಗೆ ಗುರಿಯಾಗಿರುತ್ತಾರೆ. ಇತರ ವಿಷಯದಲ್ಲಿ ಅಧಿಕಾಂಶವೇನೂ ಇಲ್ಲವು. ಇಲ್ಲಿನ ಸ್ಥಿತಿ ಹೀಗಿರುವಲ್ಲಿ ನೀಲಗಿರಿ ಪ್ರಾಂತದೊಳು ಅತಿವೃಷ್ಟಿಯು ದೆಸೆಯಿಂದ ಉಂಟಾದ ಪ್ರವಾಹಗಳಿಂದಲೂ, ಬೆಟ್ಟಗಳ ಪಕ್ಕಗಳು ಮುರಿದು ಬಿದ್ದು ರಸ್ತೆಗಳು ಬಂದಾಗಿಹೋಗಿ ತಪಾಲಿಗಳು ಅತ್ತಿತ್ತ ಹಬ್ಬ ಕಾಲಾತೀತವಾಗಿ ವಿಪತ್ತಿಯಾಗುತ್ತಿವೆಯೆಂದು ತಿಳಿಯಬರುತಿದೆ. ಈ ಕಾಲದಲ್ಲಿ ಇಂತಾ ಪ್ರಬಲವರ್ಷವು ಹಿಂದೆ ಯಾವಾಗಲು ಅದರುತೆ ನಮ್ಮ ಕೇಳ್ವಿಕೆಗೆ ಬಂದಿರುವದಿಲ್ಲವು. ಅಕಾಲದೊಳು ಮಳೆ ಬಿದ್ದದರಿಂದ ಉಚಿತಕಾಲದಲ್ಲಿ ಇಲ್ಲದೆ ಹೋಗಿ ಯೆಂತಾ ಕಷ್ಟ ಪ್ರಾಪ್ತವಾಗುವದೋ ಯೆಂದು ಜನರು ಈಗಿನಿಂದಲೇ ಚಿಂತಿಸುವದಕ್ಕೆ ಉಪಕ್ರಮಿಸಿರುತ್ತಾರೆ.

## CORRESPONDENCE

[ಇದರಲ್ಲಿ ಪ್ರಕಟಿಸಲ್ಪಟ್ಟಿರುವ ಲೇಖನದಲ್ಲಿ ಕಂಡ ಅಭಿಪ್ರಾಯಗಳ ಗುಣದೋಷಗಳಿಗೆ ಪತ್ರಿಕಾ ಲೇಖಕರು ಜವಾಬ್ದಾರರಲ್ಲ —ಎಡಿಟರ್ ಕ. ಪ್ರ.]

No. 1.

ಮ|| ರಾ|| ಕರ್ಣಾಟಕ ಪ್ರಕಾಶಿಕಾ ಎಡಿಟರವರ ಸ|| ಕ್ಕೆ||

ವಿದ್ಯೆಯು ಸಕಲ ವಿಷಯಗಳಲ್ಲಿಯೂ ಮನುಷ್ಯರ ಬುದ್ಧಿಯಂ ವಿಕಾಸಗೊಳಿಸಿ ಸ್ವಾಭಾವಿಕ ಗುಣವಂ ವೃದ್ಧಿ ಪಡಿಸುತಿದೆಂಬುದು ಅಭಿಜ್ಞರ ಮತವಾಗಿರುತಿದೆ. ಇದರಿಂದ ವಿದ್ಯಾವಂತರು ಮಾಡುವ ಕೆಲಸಗಳೆಲ್ಲವೂ ಲೋಕ ಸಮ್ಮತಗಳಾಗಿಯೂ ಪ್ರಜೋಪಜನಕರಗಳಾಗಿಯೂ ಇರುವಿಕೆಯನ್ನು ನಾನು ಅನೇಕ ನಿದರ್ಶನಗಳಿಂದ ತಿಳಿದಿರುತ್ತೇನೆ. ಇಲ್ಲಿ ವಿದ್ಯೆಯೆಂದರೆ ಯಥಾರ್ಥಜ್ಞಾನ ಸಾಧಕವಾದುದೆಂಬುದು ನನ್ನ ತಾತ್ಪರ್ಯವಾಗಿರುತಿದೆ. ವಿದ್ಯೆಯು ಸಾಮಾನ್ಯವಾಗಿ ಮನುಷ್ಯರ ಮನವು ಪರಿಶುದ್ಧಗೊಳಿಸಿ, ದುರ್ವಿಷಯಗಳಲ್ಲಿ ಅನಾದರವನ್ನೂ ಅಪ್ರವೃತ್ತಿಯನ್ನೂ ಉಂಟುಮಾಡತಕ್ಕದ್ದಾಗಿರುತಿದೆ. ಈ ಕಾರಣದಿಂದ ವಿದ್ಯಾವಂತರು ಇಹಪರ ಲೋಕ ಭೀತರಾಗಿ, ತಮ್ಮ ಗೌರವ ಮಾನ ರಕ್ಷಣೆಯಲ್ಲಿ ಅನವರತ ದೃಷ್ಟಿಯನ್ನಿಟ್ಟು ಮನಸ್ಸೋ ವರ್ತಿಸದೆ ಶಾಸ್ತ್ರ ಲೋಕನ್ಯಾಯ ಮರ್ಯಾದೆಗಳಿಗೆ ವಶ್ಯರಾಗಿ ವರ್ತಿಸುವದರಿಂದ ಅವರಿಗೆ ಅಧಿ ಪ್ರತಿಷ್ಠೆಯುಂಟಾಗಿರುತಿದೆ. ಇಂತವರ ವರ್ತನಗಳು ಲೋಕಕ್ಕೆ ಅನುವರ್ತನೀಯವಾಗಿಯೂ, ಅವರ ಅಭಿಪ್ರಾಯಗಳು ಗೌರವಿಸಲ್ಪಡತಕ್ಕವಾಗಿಯೂ, ಅವರಿಂದ ಮಾಡಲ್ಪಡುವ ವಿಧಿ ನಿಷೇಧಗಳು ಅನುಸಂಧಾನೀಯಗಳಾಗಿಯೂ ಇರುತಿವೆ. ಇಂತಾ ವಿದ್ಯಾವಂತರನೇಕರು ಪೂರ್ವಕಾಲದಲ್ಲಿ ಪ್ರಬಲಿಸಿ ಏಕದೇಶವಾಗಿಯೂ, ಸಮುದಾಯವಾಗಿಯೂ ಅನೇಕ ನಿಯಮಗಳನ್ನೇರ್ಪಡಿಸಿ ಅನ್ಯ ಸತಲದಿರುವಬಗ್ಗೆ ಬೇಕಾದ ಯೇರ್ಪಡುಗಳಂ ಮಾಡಿಟ್ಟು ಹೋದರು. ಈಗ ಕಾಲಗತಿಯಿಂದ ಸಕಲ ನಿಯಮಗಳೂ ವ್ಯತ್ಯಸ್ತಗಳಾಗುತ ಬಂದಾಗ್ಯೂ ಪೂರ್ವಿಕರು ಮಾಡಿದ ಕಟ್ಟುಪಾಡೆಂಬುದು ಅದ್ಯಾಪಿ ಶುದ್ಧಾಂಗ ನಿವೃತ್ತಿಯಾಗದೆ ಅಂಟಿಕೊಂಡಿದೆ. ಪೂರ್ವಿಕರು ಯಾವ ಕೆಲಸಗಳಂ ಮಾಡಿದಾಗ್ಯೂ ಮುಂದೆ ಕವಾಗಿ ಅವುಗಳ ಸ್ವರೂಪಗಳನ್ನೂ, ಅವುಗಳ ಸಾಧಕ ಬಾಧಕಗಳನ್ನೂ, ತನ್ಮೂಲಕ ಸಿದ್ಧಿಸಬಹುದಾದ ಸದಸತ್ಪ್ರಯೋಜನಗಳನ್ನೂ ತಮ್ಮ ವಿದ್ಯಾ ಬುದ್ಧಿ ಬಲದಿಂ ವಿಮರ್ಶಿಸಿ ಉಚಿತವಾದವುಗಳಂ ಪರಿಗ್ರಹಿಸುತಲಿದ್ದರಲ್ಲದೆ ಅವರ ಅಭಿಪ್ರಾಯಾನುಸಾರವಾಗಿಯೇ ವರ್ತನವು ಸಹ ಕೌಟಿಲ್ಯ ರಹಿತವಾದುದಾಗಿರುತಲಿತ್ತು. ಈ ಕಾಲದಲ್ಲಿ ಪೂರ್ವಿಕರಂತಾ ವಿದ್ಯಾವಂತರನೇಕರಿದ್ದಾಗ್ಯೂ, ಅವರ ಜ್ಞಾನವೂ, ಬೋಧಕತಾಶಕ್ತಿಯೂ, ತಾತ್ಪರ್ಯವೂ, ಅನುಷ್ಠಾನವೂ ಸಾಕ್ಷಾದ್ಭಿನ್ನಗಳಾಗಿಯೂ, ವಿರುದ್ಧಗಳಾಗಿಯೂ ಇರುವದರಿಂದ ಅವುಗಳಲ್ಲಿ ಇದಿತರರಿಗೆ ವಿಶ್ವಾಸ ಗೌರವಗಳು ಕಡಮೆಯಾಗಿ ಹೋಗುತಿವೆ. ಸಾಮಾನ್ಯವಾಗಿ ಸ್ತ್ರೀಪುರುಷರು ಪರಿಶುದ್ಧರಾಗಿಯೂ ಪಾಪಭೀತರಾಗಿಯೂ ಇರಬೇಕೆಂತಲೂ, ಮದ್ಯಪಾನ, ಅನೃತ, ಪರಸ್ತ್ರೀಗಮನ, ಏವಮಾದಿ ಕೆಲವು ಕೃತ್ಯಗಳು ಅತಿ ದೂಷ್ಯಗಳೆಂತಲೂ, ಪಾಪಹೇತುವೆಂತಲೂ, ಇವಂ ತ್ಯಜಿಸಬೇಕಾದುದು ಪ್ರಥಮ ಕರ್ತವ್ಯವೆಂತಲೂ, ಸಕಲ ಸಿದ್ಧಾಂತಗಳೂ, ಸಕಲಸ್ಮೃತಿಗಳೂ ಬೋಧಿಸುತಿವೆ. ಸ್ತ್ರೀಯರಿಗಾಗಲಿ ಪುರುಷರಿಗಾಗಲಿ ಗುಣದೋಷ ವಿಚಾರಪರತೆಯು ವಿದ್ಯಾಭಿವೃದ್ಧಿಯಿಂದುಂಟಾಗುವಂತೆಯೂ, ಅವರು ವಿದ್ಯಾವಂತರಾದರೆ ಸಕಲ ದುರ್ಗುಣಗಳೂ ನಶಿಸಿ ಸುಸಂಸ್ಕೃತರಾಗುವರೆಂದೂ ಭಾವಿಸಿ ಈಗ ಜಾತಿ ಕಾಲ ವಯೋವಸ್ಥಾ ಭೇದಗಳ್ಯಾವವೂ ಪರಿಗಣಿಸಲ್ಪಡದೆ ಯೆಲ್ಲರಿಗೂ ವಿದ್ಯಾಪ್ರದಾನವು ಪ್ರಾರಂಭವಾದಲ್ಲದಾಗುತಿದೆ. ಪ್ರಜೆಗಳ ಉತ್ಸಾಹವಂ ನೋಡಿ ಪ್ರಭುತ್ವ ಮಾಡತಕ್ಕವರೂ ಶಕ್ಯಗಳಾದ ಸಹಾಯಗಳಂ ಮಾಡುತಲಿರುತ್ತಾರೆ. ಆದರೆ ಪ್ರಪಂಚದಲ್ಲಿ ಮನುಷ್ಯರ ದೇಹವೂ, ಸ್ವಭಾವವೂ, ಗುಣಗಳೂ, ಬುದ್ಧಿಗಳೂ, ಅಭಿಪ್ರಾಯಗಳೂ, ಅಪೇಕ್ಷೆಗಳೂ, ಅಭಿರುಚಿಗಳೂ ಭಿನ್ನಗಳಾಗಿರುವಾಗ್ಯೆ ಇವು ವಿದ್ಯೆಯ ಮನುಷ್ಯರೊಳಿಲ್ಲ, ಒಂದು ಸ್ಯಾನಸ್ಥಿತಿ ಸ್ಥಿತಿಗೆ ತರುವದಿದು ನಿರೀಕ್ಷಿಸುವದು ಹ್ಯಾಗೋ ತಿಳಿಯಲಿಲ್ಲವು. ಪೂರ್ವಕಾಲದಲ್ಲಿ ಪ್ರಜೆಗಳ ಪಾರಿಶುದ್ಧ್ಯವಂ ಕಾಪಾಡುವದಕ್ಕಾಗಿಯೂ, ಕಾಮುಕರಾದ ಪುರುಷರಿಂದ ಪತಿವ್ರತಾ ಸ್ತ್ರೀಯರಿಗೆ ಯಾವವಿಧ ಬಾಧಕವೂ ಉಂಟಾಗದಿರುವದಕ್ಕಾಗಿಯೂ, ಶುಭ ಸಂತೆ, ಜಾತ್ರಾ ಕಾಲಗಳಲ್ಲಿ, ಸಾಮಾನ್ಯವಾಗಿ ಪರಸ್ಪರ ನಿರ್ಬಂಧಗಳೊಂದೂ ಇಲ್ಲದೆ ಕರೆಯಲ್ಪಡುವದಕ್ಕೆ ಸಾಧಕವಾಗಿಯೂ ಇರುವಂತೆ, ಸ್ತ್ರೀವರ್ಗದಲ್ಲಿ ಒಂದು ಪ್ರತ್ಯೇಕವರ್ಗ ಕಲ್ಪಿಸಿ, ಅವರಿಗೆ ಯೋಗ್ಯಗಳಾದ ವೃತ್ತಿಗಳನ್ನೂ ಧರ್ಮಗಳನ್ನೂ ಕಲ್ಪಿಸಿದಂತೆ ಅನೇಕ ನಿದರ್ಶನಗಳಿಂದ ಸ್ಪಷ್ಟವಾಗುತಿದೆ. ಇಂತಾ ಸ್ತ್ರೀಯರು ನಿಘಂಟುಗಳಲ್ಲಿ ನಾನಾರ್ಥಗಳುಳ್ಳ ಶಬ್ದಗಳಿಂದ ವ್ಯವಹರಿಸಲ್ಪಟ್ಟಿರುತ್ತಾರೆ ಹೇಗೆಂದರೆ:– "ವಾರಸ್ತ್ರೀಗಣಿಕಾ ವೇಶ್ಯಾ ರೂಪಾಜೀವಾ ಥನಾಜನ್ಯಿಕಿ" ಎಂಬವು ಮುಂತಾದವು ವಾರಸ್ತ್ರೀ ಅಂದರೆ ಎಲ್ಲರಿಗೂ ಸ್ವಾಧೀನಳಾಗಿರತಕ್ಕವಳು. ಗಣಿಕಾ ಅಂದರೆ ವಿಟ ಸಮೂಹ ವೃತ್ತಿಯವಳು, ಅಥವಾ ಗಣಯತಿ ಧನಿಕಾ ನಿತಿ ಗಣಿಕಾ ಅಂದರೆ ಧನಿಕರ ಸಂಖ್ಯೆಯನ್ನಾದಾಗಲು ಗುಣಿಸತಕ್ಕವಳು; ವೇಶನುದರೆ ವೇಶ್ಯಾವಾಟಿಕೆ, ಅದರಲ್ಲಿರತಕ್ಕವಳು, ಅಥವಾ ವೇಶೋನ್ಮಸಭ್ಯಂತಶೋಭತೆ ವೇಶ್ಯಾ ಅಂದರೆ ಅಲಂಕಾರಾದಿಗಳಿಂದ ಪ್ರಕಾಶಿಸತಕ್ಕವಳು. ರೂಪಾಜೀವಾ ಅಂದರೆ ರೂಪವೇ ಜೀವನೋಪಾಯವಾಗಿ ವುಳ್ಳವಳು. ವಾರಮುಖ್ಯ ಅಂದರೆ ಗುಣಾತಿಶಯಗಳಿಂದ ಸತ್ಕರಿಸಲ್ಪಡತಕ್ಕವಳು. ಮೇಲೆ ಕಂಡ ಶಬ್ದಾರ್ಥಗಳಂ ನೋಡಲಾಗಿ ಇಂಡ್ಯಾ ದೇಶದೊಳು ಪ್ರತ್ಯೇಕವಾದ ಇಂತಾ ವೃತ್ತಿಯುಳ್ಳವರು ಏರ್ಪಡಲಿಕ್ಕೆ ಕಾರಣವು ಬಹಳ ಸ್ಪಷ್ಟವಾಗುತಿದೆ. ಈ ವ್ಯಭೇದವು, ಜಾರತ್ವವು ದೂಷ್ಯವೆಂದು ಪರಿಗಣಿಸಿ ಅದಕ್ಕಾಗಿ ನಾನಾವಿಧ ದೋಷಗಳಂ ಹೇಳಿರುವರಿಗೆ ಜನ್ಮಭೂಮಿ ಯಾದ ಈ ಇಂಡ್ಯಾ ದೇಶದೊಳು ಮಾತ್ರ ನೆಲೆಗೊಂಡಿರುತಿದೆ. ಹಿಂದೂ ಸಂಪ್ರದಾಯಗಳಿಗೆ ಸಾಕ್ಷಾದ್ವಿರುದ್ಧಾಚಾರಗಳುಳ್ಳ ಮುಸಲ್ಮಾನರಲ್ಲಿಯೂ, ನರ್ತಕಿ ಯೆಂಬ ತತ್ಸಮಶಬ್ದದಿಂದ ವಿಕೃತಿಯನ್ನೈದಿದ ನಾಚ್ನಿಯೆಂದು ಕರೆಯಲ್ಪಡುವ ಸ್ತ್ರೀಯರು ಪ್ರತ್ಯೇಕವಾಗಿರುತ್ತಾರೆ. ಪೂರ್ವದಿಂದ ಶೂದ್ರ ವರ್ಣದವರಲ್ಲಿ ಸುಂದರಿಯರಾಗಿರತಕ್ಕವರಿಗೆ ಸಂಗೀತ ಅಭಿನಯಾದಿ ವಿದ್ಯೆಗಳಂ ಕಲಿಸಿ ಅವರು ರಾಜಸಭೆಗಳಲ್ಲಿಯೂ, ಶುಭ ಶೋಭನಾದಿ ಕಾಲಗಳಲ್ಲಿಯೂ ಬಂದು ನರ್ತನ ಮಾಡುವದೂ ಗಾನ ಮಾಡುವದೂ ವಾಡಿಕೆಯಾಗಿರುತಿದೆ. ದೇವಸ್ಥಾನಗಳಲ್ಲಿ ಅವರಿಗೆ ಮುದ್ರೆ ಹಾಕಿಸಿ ಕುಂಭಾರತಿ ಮೊದಲಾದ ದೇವರ ಸೇವೆಗಳಂ ಅವರಿಂದ ನಡೆಸುವ ಸಂಪ್ರದಾಯವೂ ಅದ್ಯಾಪಿ ಅನೇಕ ಕಡೆಗಳಲ್ಲಿ ನಡೆದುಬರುತಲಿವೆ.

ಇವರು ಯಾವಾಗಲು ಅವಿವಾಹಿತರಾದುದರಿಂದ ವೈಧವ್ಯವೆಂಬದಿಲ್ಲವು ಮತ್ತು ಇವರು ಲಕ್ಷಣಯಾ ನಿತ್ಯಸುಮಂಗಲಿಯರೆಂಬ ತಾತ್ಪರ್ಯದೊಡನೆ ಕೆಲವರು ವಿವಾಹಾದಿ ಕಾಲಗಳಲ್ಲಿ ಮಾಂಗಲ್ಯವಂ ಅವರಕೈಯಲ್ಲಿ ಕೊಟ್ಟು ಬಳಿಕ ಆ ವಧುವಿನ ಕೊರಳಲ್ಲಿ ಕಟ್ಟಿಸುತ್ತಾರೆ. ಈವಾಡಿಕೆಯು ಕೂಡ ಅಲ್ಲಲ್ಲಿ ನಡೆಯುತಿದೆ. ಇಂತಾ ಆಚಾರಗಳೂ, ಜಾತಿಭೇದಗಳೂ ಇಲ್ಲದಂತವರ ಸಹವಾಸ ಬಲದಿಂದ ನಮ್ಮವರನೇಕರು ಇವರವೃತ್ತಿಯನ್ನೇ ನಾಶಪಡಿಸಬೇಕೆಂಬ ಕೋರಿಕೆಯುಳ್ಳವರಾಗಿ ಅವರಿಂದ ನಮ್ಮ ಹಿಂದೂ ಸಮುದಾಯಕ್ಕೆ ಮೂಲತೋಹಾನಿಯುಂಟಾಗುವಂತೆ ತಿಳಿದು ಅವರನ್ನು ಶುಭಶೋಭನಾದಿ ಕಾಲಗಳಲ್ಲಿ ಮನೆಗಳಿಗೆ ಕರೆಯಿಸಕೂಡದೆಂತಲೂ, ಅವರ ರೂಪವೇಷ ಭಾಷಾಭಿನಯಗಳಂ ನೋಡಿ ವರ್ಧಿಷ್ಣುಗಳಾದ ಬಾಲಕರು ದುರ್ವಿಷಯಾಸಕ್ತರಾಗಿ ಭ್ರಷ್ಟರಾಗುವರೆಂತಲೂ, ಅವರಿಗೆ ಮಾಡಲ್ಪಡುವ ಸನ್ಮಾನವು ನೀಚವಾದುದೆಂತಲೂ, ಅಂತವರನ್ನು ದೇವಾಲಯಾದಿಗಳಲ್ಲಿ ಸೇರಿಸುವದರಿಂದ ಪರಿಶುದ್ಧವಾದ ತಾದೃಶ ದೈವಸಾನ್ನಿಧ್ಯಕ್ಕೆ ಲೋಪವುಂಟಾಗುವದೆಂತಲೂ, ಇವುಗಳಲ್ಲದೆ ಅವರು ನೋಡುವ ದುರಭಿಪ್ರಾಯದಿಂದಲೇ ಅನೇಕರು ದೇವಾಲಯಾದಿಗಳಿಗೆ ಬರಲಿಕ್ಕೂ ಉತ್ಸವಾದಿಗಳಲ್ಲಿ ಶ್ರದ್ಧೆಯಂ ವಹಿಸಲಿಕ್ಕೂ ಕಾರಣವಾಗಿದೆಯೆಂತಲೂ ವಾದಿಸುತ್ತಾರೆ. ಇದೇ ವಿಷಯವಂ ಕುರಿತು ಮರಳಿ ವಿಜ್ಞಾಪಿಸಿಕೊಳ್ಳುತ್ತೇನೆ.

ತಮ್ಮ ವಿಧೇಯನಾದ,

ಪಕ್ಷಾವಲಂಬಿ.

## THE MYSORE GAZETTE.
## ಮೈಸೂರು ಗೆಜೆಟು.

ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದೂರವರ ಸರ್ಕಾರದಿಂದ ಕೊಡೋಣವಾದ ಇಸ್ತಿಹಾರನಾಮೆಗಳು.

ನಂ|| ೧೮೬೦೩ ಜಿ. F. ೧೪೫–೯೨—ತುಮಕೂರ್ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮ|| ಬಿ. ಕೆ. ವೆಂಕಟವರದಯ್ಯಂಗಾರ್ಯರವರಿಗೆ ಮಾರ್ಚಿ ಮಾಹೆ ೬ನೇ ತಾರೀಖ್ ಮೊದಲು ಮೂರು ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತದೆ.

ನಂ ೧೮೫೬೫ ಜಿ. ೩೩೪೪—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೨೦ನೇ ಆರ್ಟಿಕಲ್ ಅನುಸರಿಸಿ ಗುಬ್ಬಿ ತಾಲ್ಲೂಕು ಅಮಲ್ದಾರ್ ಶ್ರೀಕಂಠಯ್ಯನವರಿಗೆ ೯೩ನೇ ಇಸವಿ ಫೆಬ್ರವರಿ ೨೩ನೇ ಮರ್ಕಂ ಲಾಗಾಯತು ೩ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ನಂ|| ೧೮೫೯೧. ಜಿ. ೩೮೧೧–ತಾ|| ೭ನೇ ಮಾರ್ಚಿ ೧೮೯೩—ಮಾಲೂರ್ ತಾಲ್ಲೂಕ್ ಅಮಲ್ದಾರ್ ವಿ ಎನ್. ಗೋಪಾಲರಾಯರವರಿಗೆ ೧೮೯೩ನೇ ಇಸವಿ ಮಾರ್ಚಿ ೭ನೇ ತಾರೀಖ್ ಲಾಗಾಯತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು ೧೫ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ. ವೈ. ನರಸಿಂಹಯ್ಯನವರು ಅಮಲ್ದಾರ್ ಗೋಪಾಲರಾಯರವರು ರಜಾಮೇಲೆ ಗೈರ್ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ ಮಾಲೂರ್ ತಾಲ್ಲೂಕ್ ಅಮಲ್ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡುವಂತೆ ನೇಮಕರಾಗಲ್ಪಟ್ಟಿರುತ್ತಾರೆ.

ನಂ. ೧೮೭೩೬ ೦. ೩೮೮೯೯–ತಾ|| ೩ನೇ ಮಾರ್ಚಿ ೧೮೯೩—ಬೇಲೂರು ತಾಲ್ಲೂಕು ಅಮಲ್ದಾರ್ ಸಿ. ಎನ್. ಚೌಡಯ್ಯನವರಿಗೆ ೧೮೯೩ನೇ ಇಸವಿ ಫೆಬ್ರವರಿ ೧೬ನೇ ಮರ್ಕಂ ೧೩೪೧೦–೦. ೩೧೯೫ನೇ ನಂಬರುಳ್ಳ ಗವರ್ನಮೆಂಟ್ ನೋಟಿಫಿಕೇಷನ್ನಲ್ಲಿ ಕೊಡಲ್ಪಟ್ಟಿದ್ದ ಒಂದುತಿಂಗಳ ಪ್ರಿವಿಲೇಜ್ ರಜಾ ಅವರ ಕೋರಿಕೆಯಂತೆ ಇದರಿಂದ ರದ್ದು ಮಾಡಲ್ಪಟ್ಟಿರುತಿದೆ.

ನಂ|| ೧೮೪೮೬. ೮ ೩೮–೯೭–ತಾ|| ೪ನೇ ಮಾರ್ಚಿ ೧೮೯೩–ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೨೦ನೇ ಆರ್ಟಿಕಲ್ ಅನುಸರಿಸಿ ಸಿಟಿ ಮ್ಯಾಜಿಸ್ಟ್ರೇಟ್ ಮ|| ವೆಂಕಟನಾಥಯ್ಯರವರಿಗೆ ೯೩ನೇ ಇಸವಿ ಮಾರ್ಚಿ ೧೩ನೇ ತಾರೀಖಿನಲ್ಲಿ ಒಂದು ದಿನ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತಿತು.

ನಂ||೧೮೭೩೮. ಜಿ. ೩೮೮೭–ತಾ||೬ನೇ ಮಾರ್ಚಿ ೧೮೯೩—ಮ|| ಸಿ. ವಿಶ್ವನಾಥಯ್ಯ, ಬ್ಯಾರಿಸ್ಟರ್ ಅಟ್ ಲಾ ಇವರು ೧೮೯೩ನೇ ಇಸವಿ ಫೆಬ್ರವರಿ ೨೫ನೇ ಮರ್ಕಂ ಅಪರಾಹ್ನದಲ್ಲಿ ಚೀಫ್ ಕೋರ್ಟ್ ಆಕ್ಟಿಂಗ್ ಜಡ್ಜಿಯಾಗಿ ತಮ್ಮ ಕೆಲಸದಲ್ಲಿ ಪ್ರವೇಶಿಸಿದರು.

ನಂ. ೧೮೭೩೫ ಜಿ. ೩೮೮೪—ಮ|| ವಿಶ್ವನಾಥಯ್ಯನವರು, ಇನ್‌ಸ್ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷನ್ ವ ರಿಜಿಸ್ಟ್ರಾರ್ ಆಫ್ ಕಂಪೆನೀಸ್ ಕೆಲಸಗಳ ಚಾರ್ಜನ್ನು ೧೮೯೩ನೇ ಇಸವಿ ಫೆಬ್ರವರಿ ೨೫ನೇ ಮರ್ಕಮಿನ ಅಪರಾಹ್ನದಲ್ಲಿ ಪಿ|| ಆರ್. ವಿಜಯೇಂದ್ರರಾಯರವರಿಗೊಪ್ಪಿಸಿರುತ್ತಾರೆ.

ನಂ. ೪೨೫–೧೭೪–ತಾ ೧ನೇ ಮಾರ್ಚಿ ೯೩—ಮೈಸೂರ್ ಗವರ್ನಮೆಂಟ್ ಪಬ್ಲಿಕ್ ವರ್ಕ್ಸ್ ಇಲಾಖಾ ಸೆಕ್ರೆಟರಿ ವ ಚೀಫ್ ಇಂಜನಿಯರಾದ ಲೆಫ್ಟಿನೆಂಟ್ ಕರ್ನಲ್ ಡಿ. ಮೆಕ್‌ನೀಲ್ ಕೇಂಬಲ್ ಯವರಿಗೆ ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೯೧ನೇ ಆರ್ಟಿಕಲ್ ಅನುಸರಿಸಿ ೧೮೯೩ನೇ ಇಸವಿ ಏಪ್ರಿಲ್ ೫ನೇ ತಾರೀಖ್ ಲಾಗಾಯತು ಅಥವಾ ಅವರು ಹೊರಡುವ ತಾರೀಖ್ ಮೊದಲು ೩ ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ.

ನಂ| ೪೫೪–೧೭೯—ಮ|| ಡಬ್ಲ್ಯು ಮುಕ್ಕೋಡಿಯವರು, ಕರ್ನಲ್‌ಕ್ಯಾಂಬಲ್‌ಯವರು ರಜಾಮೇಲೆ ಗೈರ್ಹಾಜರಾಗಿರುವಕಾಲದಲ್ಲಿ ಮೈಸೂರ್ ಗವರ್ನಮೆಂಟ್ ಪಬ್ಲಿಕ್‌ವರ್ಕ್ಸ್ ಇಲಾಖಾಸೆಕ್ರೆಟರಿ ಮತ್ತು ಚೀಫ್ ಇಂಜನಿಯರಾಗಿ ನೇಮಕರಾಗಲ್ಪಟ್ಟಿರುತ್ತಾರೆ.

ಇ. ನ ೩೫೦ ತಾ|| ೨೮ನೇ ಫೆಬ್ರವರಿ ೧೮೯೩—ಮೈಸೂರ್ ಸಿವಿಲ್ ಸರ್ವಿಸ್‌ಗೆ ದಾಖಲಾಗುವಬಗ್ಗೆ ಮುಂದಿನ ಪರೀಕ್ಷೆಯು ೧೮೯೮ನೇ ಇಸವಿಯಲ್ಲಿ ಇನ್ನುಮೇಲೆ ನಿಷ್ಕರ್ಷೆಯಾಗತಕ್ಕ ಒಂದು ತಾರೀಖಿನಲ್ಲಿ ಜರುಗುವದೆಂದು ಸಮಸ್ತ ಜನಗಳಿಗೂ ಇದರಿಂದ ತಿಳಿಸಲ್ಪಟ್ಟಿರುತಿದೆ.

ಇ. ನಂ||೮೪, ತಾ||೨೩ನೇ ಫೆಬ್ರವರಿ ೧೮೯೩–ಚಿಕ್ಕಮಗಳೂರು ಗವರ್ನಮೆಂಟ್ ಹೈಸ್ಕೂಲ್ ಹೆಡ್‌ಮಾಸ್ಟರ್ ಮ|| ಸಿ. ಕೃಷ್ಣರಾಯರವರಿಗೆ ೧೮೯೩ನೇ ಇಸವಿ ಫೆಬ್ರವರಿ ೬ನೇ ತಾರೀಖ್ ಲಾಗಾಯತು ೪ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ಇ. ನಂ ೮೯, ತಾ ೧ನೇ ಮಾರ್ಚಿ ೧೮೯೩—ಬೆಂಗಳೂರು ಗವರ್ನಮೆಂಟ್ ಸೆಂಟ್ರಲ್ ಬುಕ್ ಡಿಪೊ ಕ್ಯುರೇಟರ್ ಮ ವಿ ನಾಥಮುನಿ ನಾಯುಡುರವರಿಗೆ ೧೮೯೩ನೇ ಇಸವಿ ಫೆಬ್ರವರಿ ೯ನೇ ಮರ್ಕಂ ಇ. ೮೫ನೇ ನಂಬರುಳ್ಳ ಇಸ್ತಿಹಾರ್‌ನಾಮೆಯ ಮೂಲಕ ಕೊಡಲ್ಪಟ್ಟಿದ್ದ ಒಂದು ತಿಂಗಳ ಪ್ರಿವಿಲೇಜ್ ರಜಾ ಪೈಕಿ, ೩೦ನೇ ಜನವರಿ ಲಾಗಾಯತು ೧೨ನೇ ಫೆಬ್ರವರಿ ತನಕ ೧೯ ದಿನಗಳ ರಜಾವನ್ನು ಉಪಯೋಗಿಸಿಕೊಂಡಿರುವದರಿಂದ ಮಿಕ್ಕ ಭಾಗ ಅಂದರೆ ೧೧ ದಿವಸಗಳು ಇದರಿಂದ ರದ್ದು ಮಾಡಲ್ಪಟ್ಟಿರುತಿದೆ.

ಇ. ನಂ| ೫೧. ತಾ|೮ನೇ ಮಾರ್ಚಿ ೧೮೯೩—ಕೋಲಾರ್ ಡಿಸ್ಟ್ರಿಕ್ಟ್ ಸ್ಕೂಲುಗಳ ಡೆಪ್ಯುಟಿ ಇನ್‌ಸ್ಪೆಕ್ಟರ್ ಮ. ಬಿ. ಸುಬ್ಬಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು ೪ ದಿನಗಳ ಕ್ಯಾಜುಯಲ್‌ರಜಾ ಕೊಡಲ್ಪಟ್ಟಿರುತಿದೆ.

**ಸನ್ ೧೮೯೨ನೇ ಇಸವಿಯ VIII ನೇ ನಂಬರ್ ರೆಗ್ಯುಲೇಷನ್ನಿಂದ ತಿದ್ದುಪಡಿಯಾದ ೧೮೭೧ನೇ ಇಸವಿಯ ರಾಸುಗಳ ಅತಿಕ್ರಮ ಪ್ರವೇಶಕ್ಕೆ ಸಂಬಂಧಪಟ್ಟ ಕಾನೂನನ್ನು ಪ್ರೊಟ್ಟುಪಡಿಸಿ ದುರಸ್ತು ಮಾಡುವದಕ್ಕೆ ಹುಟ್ಟಿದ ೧ನೇ ನಂಬರ್ ಆಕ್ಟು.**

---

*ಪೀಠಿಕೆ.* ರಾಸುಗಳ ಅತಿಕ್ರಮ ಪ್ರವೇಶಕ್ಕೆ ಸಂಬಂಧಪಟ್ಟ ಕಾನೂನನ್ನು ಪ್ರೊಟ್ಟುಪಡಿಸಿ ದುರಸ್ತು ಮಾಡುವದು ಯುಕ್ತವಾಗಿರುವದರಿಂದ ಇದರಿಂದ ನಿರ್ಣಯಿಸುವದೇನಂದರೆ :—

**೧ನೇ ಅಧ್ಯಾಯ—ವಿಷಯಸೂಚನೆ.**

೧. (೧) ಈ ಆಕ್ಟಿಗೆ ೧೮೯೩ನೇ ಇಸವಿಯ "ರಾಸುಗಳ ಅತಿಕ್ರಮ ಪ್ರವೇಶದ ಆಕ್ಟು" ಯೆಂಬ ಹೆಸರಿರಬಹುದು. *ಚಿಕ್ಕ ಹೆಸರು ಮತ್ತು ವ್ಯಾಪ್ತಿ.*

(೨) ಆಗಿಂದಾಗ್ಯೆ ಸರ್ಕಾರೀ ಗೆಜೆಟ್ಟನಲ್ಲಿ ಘೋಷಿಸಲ್ಪಡುವ ಇಸ್ತಿಹಾರ್ ಮೂಲಕ ಮೈಸೂರು ಗವರ್ನ್ಮೆಂಟನವರು ಈ ಆಕ್ಟು ಲಗಾವಾಗುವದಿಲ್ಲವೆಂದು ನಿರ್ಣಯಿಸಬಹುದಾದ ಸ್ಥಳಿಕ ಪ್ರದೇಶಗಳಲ್ಲಿ ಹೊರ್ತು ಈ ಆಕ್ಟು ಮೈಸೂರು ಸೀಮೆಗೆಲ್ಲ ವ್ಯಾಪಿಸತಕ್ಕದ್ದು.

(೩) ಮೈಸೂರು ಗವರ್ನ್ಮೆಂಟನವರು ಸರ್ಕಾರೀ ಗೆಜೆಟ್ಟನಲ್ಲಿ ಇಸ್ತಿಹಾರ್ ಮೂಲಕ ಯಾವಾಗಲಾದರೂ (೨)ನೇ ಸಬ್ ಸೆಕ್ಷನಿನಲ್ಲಿ ಕಂಡ ಇಸ್ತಿಹಾರನ್ನು ರದ್ದು ಮಾಡಬಹುದು ಯಾ ತಬ್ದಿಲ್ ಮಾಡಬಹುದು.

(೪) ಈ ರೆಗ್ಯುಲೇಷನ್ ೧೮೯೩ನೇ ಇಸವಿ ಜನವರಿ ೧ನೇ ತಾರೀಖಿನಿಂದ ಜಾರೀಯಲ್ಲಿ ಬರತಕ್ಕದ್ದು. *ಅಮಲ್ದಾರು.*

**ದಾಖಲೆಗಳ ವಿನಾಯಿತಿ.**

(೫) ೧೮೭೧ನೇ ಇಸವಿಯ, ರಾಸುಗಳ ಅತಿಕ್ರಮಪ್ರವೇಶಕ್ಕೆ ಸಂಬಂಧಿಸಿದ ಕಾನೂನಿಗೆ "ಯಾವದಾದರೂ ಆಕ್ಟಿನಿಂದ ಯಾ ಕಾಗದಪತ್ರದಿಂದ ಕೊಡೋಣಾದ ದಾಖಲೆಗಳು" ಈ ರೆಗ್ಯುಲೇಷನಿನಿಂದ ತಿದ್ದುಪಡಿಯಾಗಿರುವ ೧೮೭೧ನೇ ಇಸವಿಯ ರಾಸುಗಳ ಅತಿಕ್ರಮ ಪ್ರವೇಶಕ್ಕೆ ಸಂಬಂಧಿಸಿದ ಕಾನೂನಿಗೆ ಅನ್ವಯಿಸಿರುವಂತೆ ಅರ್ಥ ಮಾಡಿಕೊಳ್ಳತಕ್ಕದ್ದು.

೨. ಇದರ ಸಂಗಡ ಸೇರಿಸಿ ಇರತಕ್ಕ ಷೆಡ್ಯೂಲಿನಲ್ಲಿ ನಮೂದಿಸಿರುವ ಆಕ್ಟುಗಳು ರದ್ದು ಮಾಡಲ್ಪಟ್ಟಿವೆ. *ಆಕ್ಟುಗಳ ರದ್ದಿಯಾತಿ.*

ಸದರೀ ಆಕ್ಟುಗಳ ಪೈಕಿ ಯಾವದಕ್ಕಾದರೂ, ಅವುಗಳ ತರುವಾಯ ನಿರ್ಣಯಿಸಲ್ಪಟ್ಟ ಆಕ್ಟುಗಳಿಂದ ಕೊಡೋಣಾದ ದಾಖಲೆಗಳು ಈ ಆಕ್ಟಿಗೆ ಕೊಟ್ಟಂತೆಯೇ ಓದಿಕೊಳ್ಳತಕ್ಕದ್ದು. *ರದ್ದಾದ ಆಕ್ಟುಗಳ ದಾಖಲೆಗಳು.*

(ರಾಸುಗಳ ಅತಿಕ್ರಮ ಪ್ರವೇಶಗಳಿಗೆ ಸಂಬಂಧಪಟ್ಟ) ೧೮೫೭ನೇ ಇಸವಿ ೩ನೇ ನಂಬರ್ ಆಕ್ಟಿನ ಪ್ರಕಾರ ಸ್ಥಾಪಿಸಲ್ಪಟ್ಟ ದೊಡ್ಡಿಗಳು, ಮೊಕರರ್ಮಾಡಲ್ಪಟ್ಟ ದೊಡ್ಡೀದಾರರೂ, ನಿಷ್ಕರ್ಷೆಸಲ್ಪಟ್ಟ ಹಳ್ಳಿಗಳೂ, ಈ ಆಕ್ಟಿಗನುಗುಣವಾಗಿ ಆಯಾ ಪ್ರಕಾರ ಸ್ಥಾಪಿಸಲ್ಪಟ್ಟು, ಮೊಕರರ್ಮಾಡಲ್ಪಟ್ಟು, ನಿಷ್ಕರ್ಷೆಸಲ್ಪಟ್ಟು ಇರುವ ಹಾಗೆ ಗ್ರಹಿಸತಕ್ಕದ್ದು.

೩. ಈ ಆಕ್ಟಿನಲ್ಲಿ—"ಪೋಲೀಸ್ ಉದ್ಯೋಗಸ್ಥನು" ಯೆಂಬುವ ಮಾತು ಗ್ರಾಮದ ತಳವಾರಿಯನ್ನು ಸಹ ಅಡಗಿಸಿಕೊಂಡಿರುತ್ತದೆ, ಮತ್ತು "ರಾಸುಗಳು" ಯೆಂಬುವದರಲ್ಲಿ ಆನೆಗಳು, ಒಂಟೆಗಳು, ಎಮ್ಮೆಗಳು, ಕುದುರೆಗಳು, ಮಾದವಾರ್ಗಳು, ಆಷ್ಟ ಕುದುರೆಗಳು, ಟಾಕಣಿ ಕುದುರೆಗಳು, ಕುದುರೇಮರಿಗಳು, ಬಚೇರಿಗಳು, ಹೇಸರಕತ್ತೆಗಳು, ಕತ್ತೆಗಳು, ಹಂದಿಗಳು, ಟಗರುಗಳು, ಹೆಣ್ಣು ಕುರಿಗಳು, ಕುರಿಗಳು, ಕುರೀಮರಿಗಳು, ಮೇಕೆಗಳು ಮತ್ತು ಮೇಕೆ ಮರಿಗಳು ಅಡಗಿ ಇರುತ್ತದೆ; ಮತ್ತು *ಅರ್ಥವಿವರಣೆಯ ಕಲಂ.*

"ಸ್ಥಳಿಕ ಅಧಿಕಾರಸ್ಥಾನ" ವೆಂದರೆ ನಿರ್ದೇಶಿಸಲ್ಪಟ್ಟ ಒಂದು ಸ್ಥಳಿಕ ಪ್ರದೇಶದೊಳಗೆ ಯಾವ ಸಂಗತಿಗಳ ಮೇಲ್ವಿಚಾರಣೆ ಮತ್ತು ಆಡಳಿತದ ಬಗ್ಯಾಗಿ ಕಾನೂನ್ ಮೇರಿಗೆ ತಾತ್ಕಾಲಿಕವಾಗಿ ಅಧಿಕಾರ ವಹಿಸಲ್ಪಟ್ಟಿರುವ ಜನಗಳ ಯಾವದಾದರೂ ಸಂಘವೆಂದರ್ಥವು, ಮತ್ತು

"ಲೋಕಲ್‌ಫಂಡ್" ಅಂದರೆ ಒಂದು ಸ್ಥಳಿಕ ಅಧಿಕಾರಸ್ಥಾನದ ಮೇಲ್ವಿಚಾರಣೆ ಯಾ ಆಡಳಿತದಲ್ಲಿರುವ ಯಾವದಾದರೂ ಫಂಡು ಎಂದರ್ಥವು.

**೨ನೇ ಅಧ್ಯಾಯ—ದೊಡ್ಡಿಗಳು ಮತ್ತು ದೊಡ್ಡೀದಾರರು.**

---

೪. ದೊಡ್ಡಿಗಳು, ಸ್ಥಳಿಕ ಗವರ್ನ್ಮೆಂಟಿನವರ ಸಾಮಾನ್ಯಾಧಿಕಾರಕ್ಕೆ ಒಳಪಟ್ಟು ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟು ಆಗಿಂದಾಗ್ಯೆ ಹುಕುಂ ಮಾಡುವ ಪ್ರಕಾರ ಆಯಾ ಸ್ಥಳಗಳಲ್ಲಿ ಸ್ಥಾಪಿಸಲ್ಪಡತಕ್ಕದ್ದು. *ದೊಡ್ಡಿಗಳ ಸ್ಥಾಪನೆ.*

ಪ್ರತಿ ದೊಡ್ಡಿಯನ್ನೂ ಉಪಯೋಗಿಸಿಕೊಳ್ಳುವ ಗ್ರಾಮ, ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟನಿಂದ ನಿಷ್ಕರ್ಷೆಸಲ್ಪಡತಕ್ಕದ್ದು.

೫. ದೊಡ್ಡಿಗಳು ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟನ ಅಧಿಕಾರಕ್ಕೊಳಪಟ್ಟಿರತಕ್ಕದ್ದು; ಮತ್ತು ದೊಡ್ಡಿಯಲ್ಲಿ ಸೇರಿಸಿರತಕ್ಕ ರಾಸುಗಳ ಮೇವಿಗೂ ನೀರು ಕುಡಿಸಲಿಕ್ಕೂ ಆಗುವ ಖರ್ಚುಗಳ ದರಗಳನ್ನೂ ಆತನು ಗೊತ್ತುಮಾಡತಕ್ಕದ್ದು; ಮತ್ತು ಆತನು ಅವನ್ನು ಬದಲಾಯಿಸಬಹುದು. *ದೊಡ್ಡಿಗಳ ಮೇಲಿನ ಅಧಿಕಾರ ದೊಡ್ಡಿಗಳೊಳಗೆ ಸೇರಿಸಲ್ಪಟ್ಟ ದನಗಳ ಆಹಾರದ ಪ್ರಯುಕ್ತ ತಗಲುವ ಖರ್ಚುಗಳ ದರಗಳು.*

೬. ಗ್ರಾಮಗಳ ಮುಖಂಡರು ಅವರ ಉದ್ಯೋಗ ಧರ್ಮದಿಂದ ಹಳ್ಳಿಗಳಲ್ಲಿರುವ ದೊಡ್ಡಿಗಳ ದೊಡ್ಡೀದಾರರಾಗಿರತಕ್ಕದ್ದು. *ದೊಡ್ಡಿದಾರರ ಮೊಕರರಾತಿ.*

ಪರಂತು, ಅಗತ್ಯ ತೋರಿದ ಸಂದರ್ಭದಲ್ಲಿ, ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರು ಒಂದು ಗ್ರಾಮದ ಮುಖಂಡನನ್ನು ಅವನ ದೊಡ್ಡೀ ಚಾರ್ಜಿನಿಂದ ತಪ್ಪಿಸಿ ಅವನಿಗೆ ಬದಲು ಬೇರೊಬ್ಬನನ್ನು ಮೊಕರರ್ಮಾಡಲು ಅಧಿಕಾರವುಳ್ಳವರಾಗಿರತಕ್ಕದ್ದು.

ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟನಿಂದ ನೇಮಕಮಾಡಲ್ಪಟ್ಟ ಪ್ರತಿ ದೊಡ್ಡಿದಾರನನ್ನೂ ಅಂಥಾ ಮ್ಯಾಜಿಸ್ಟ್ರೇಟು ಸಸ್ಪೆಂಡಾಗಲಿ, ಬರತರಫ್ ಆದರೂ ಮಾಡಬಹುದು. *ದೊಡ್ಡೀದಾರನನ್ನು ಬರತರ್ಫ್ ಮಾಡುವಿಕೆ ಯಾ ಅಮಾನತಿನಲ್ಲಿ ಇಡುವಿಕೆ.*

ಯಾವ ದೊಡ್ಡಿ ಅಧಿಕಾರಿಯಾದರೂ ಸರ್ಕಾರದಲ್ಲಿ ಇತರ ಯಾವ ಉದ್ಯೋಗದಲ್ಲಾಗಲಿ ಒಂದೇ ಕಾಲದಲ್ಲಿ ಇರಬಹುದು. *ದೊಡ್ಡೀದಾರರು ಇತರ ಉದ್ಯೋಗಗಳನ್ನು ವಹಿಸಬಹುದು.*

ಪ್ರತಿ ದೊಡ್ಡಿ ಅಧಿಕಾರಿಯನ್ನೂ ಇಂಡಿಯನ್ ಪೀನಲ್‌ಕೋಡಿನ ಅರ್ಥದ ಪ್ರಕಾರ ಸರ್ಕಾರಿ ನೌಕರನೆಂದು ಭಾವಿಸತಕ್ಕದ್ದು. *ದೊಡ್ಡೀದಾರರು "ಸರ್ಕಾರಿ ನೌಕರ" ರಾಗಿರಬೇಕು.*

**ದೊಡ್ಡೀದಾರರ ಕೆಲಸಗಳು.**

೭. ಯಾವ ಪ್ರಕಾರವಾಗಿ ಸ್ಥಳಿಕ ಗವರ್ನ್ಮೆಂಟನವರು ಆಗಿಂದಾಗ್ಯೆ ಹುಕುಂ ಮಾಡುತ್ತಾರೋ ಆ ಪ್ರಕಾರ ಪ್ರತಿ ದೊಡ್ಡೀದಾರನೂ ರಿಜಿಸ್ಟರುಗಳನ್ನು ಇಡಬೇಕು, ರಿಟರ್ನುಗಳನ್ನು ಕಳುಹಿಸಬೇಕು. *ರಿಜಿಸ್ಟರುಗಳು ಇಡುವಿಕೆ ವ ರಿಟರ್ನುಗಳು ಕಳುಹಿಸುವಿಕೆ.*

೮. ರಾಸುಗಳು ದೊಡ್ಡಿಗೆ ತರಲ್ಪಟ್ಟಾಗ ದೊಡ್ಡೀದಾರನು :— *ಹಿಡಿಯಲ್ಪಟ್ಟವುಗಳನ್ನು ರಿಜಿಸ್ಟರ್ ಮಾಡುವಿಕೆ.*

(a) ರಾಸುಗಳ ಸಂಖ್ಯೆಯನ್ನೂ ವಿವರವನ್ನೂ,

(b) ಅವುಗಳು ಆ ಪ್ರಕಾರವಾಗಿ ತರಲ್ಪಟ್ಟ ದಿನವನ್ನೂ, ಹೊತ್ತನ್ನೂ,

(c) ಹಿಡಿದಂಥಾವನ ಹೆಸರನ್ನೂ ವಾಸಸ್ಥಾನವನ್ನೂ,

(d) ತಿಳಿದಿರುವ ಪಕ್ಷದಲ್ಲಿ ಮಾಲೀಕನ ಹೆಸರನ್ನೂ ವಾಸಸ್ಥಾನವನ್ನೂ,

ತನ್ನ ರಿಜಿಸ್ಟರಿನಲ್ಲಿ ದಾಖಲುಮಾಡಿಕೊಳ್ಳತಕ್ಕದ್ದು. ಮತ್ತು ಅದರ ನಕಲನ್ನು ಹಿಡಿದಂಥಾವನಿಗೆ ಯಾ ಅವನ ಮುತಾಲೀಕನಿಗೆ ಕೊಡತಕ್ಕದ್ದು.

೯. ಜನ್ನು ವೇಳೆ ತೋರಿಸುವ ರೀತಿಯಾಗಿ ವಿನಿಯೋಗಪಡಿಸುವವರಿವಿಗೂ ರಾಸುಗಳನ್ನು ದೊಡ್ಡೀದಾರನು ತನ್ನ ಜವಾಬ್ದಾರಿಗೆ ತೆಗೆದುಕೊಂಡು ಮೇವು ಹಾಕಿ ನೀರು ಕುಡಿಸತಕ್ಕದ್ದು. *ರಾಸುಗಳನ್ನು ಜವಾಬ್ದಾರಿಗೆ ತೆಗೆದುಕೊಳ್ಳುವ ಮೇವು ಹಾಕುವಿಕೆ.*

**೩ನೇ ಅಧ್ಯಾಯ.**

**ರಾಸುಗಳನ್ನು ದೊಡ್ಡಿಯಲ್ಲಿ ಸೇರಿಸೋಣ.**

೧೦. ಯಾವ ಜಮೀನಿನ ಸಾಗುವಳೀದಾರನಾದರೂ ಹಿಡುವಳಿದಾರನಾದರೂ, *ಜಮೀನಿಗೆ ಲುಕ್ಸಾನ್ ಪಡಿಸುವ ರಾಸುಗಳು.*

ಯಾವ ಜಮೀನಿನಲ್ಲಾದರೂ ಪೈರಿಡುವದಕ್ಕಾಗಲಿ, ಫಲ ಅನುಭವಿಸುವದಕ್ಕಾಗಲಿ ಮುಂಗಡವಾಗಿ ಹಣ ಕೊಟ್ಟಿರುವ ಯಾವ ಮನುಷ್ಯನಾದರೂ,

ಅಥವಾ ಅಂಥಾ ಪೈರನ್ನಾದರೂ, ಫಲವನ್ನಾದರೂ ಅದರ ಯಾವ ಭಾಗವನ್ನಾದರೂ ಕ್ರಯಕ್ಕೆ ಕೊಂಡವನು ಯಾ ಅಡವಿಟ್ಟುಕೊಂಡವನು,

ಅಂಥಾ ಜಮೀನಿನಲ್ಲಿ ಅತಿಕ್ರಮಪ್ರವೇಶ ಮಾಡಿ ಅದಕ್ಕಾದರೂ, ಅದರಲ್ಲಿರತಕ್ಕ ಫಸಲಿಗಾದರೂ, ಫಲಕ್ಕಾದರೂ ನಷ್ಟಪಡಿಸುವ ಯಾವ ರಾಸನ್ನಾಗಲಿ ಹಿಡಿಯಬಹುದು, ಯಾ ಹಿಡಿಸಬಹುದು. ಮತ್ತು ಅವುಗಳನ್ನು ಸದರೀ ಜಮೀನಿರುವ ಗ್ರಾಮದಲ್ಲಿ ಸ್ಥಾಪಿಸಲ್ಪಟ್ಟಿರುವ ದೊಡ್ಡಿಗೆ ಇಪ್ಪತ್ತನಾಲ್ಕು ಘಂಟೆಗಳೊಳಗಾಗಿ ಕಳುಹಿಸಬಹುದು ಯಾ ಕಳುಹಿಸುವಂತೆ ಮಾಡಿಸಬಹುದು.

ಎಲ್ಲಾ ಪೋಲೀಸು ಆಫೀಸರುಗಳೂ (a) ಅವುಗಳನ್ನು ಹಿಡಿಯುವಾಗ್ಯೆ ಯೆದುರಿಸುವವನ್ನು (b) ಅವುಗಳನ್ನು ಹಿಡಿಯುವದರಿಂದ ತಪ್ಪಿಸುವಂಥಾದ್ದನ್ನು ಅಡ್ಡಿ ಮಾಡಲಿಕ್ಕೆ, ಬೇಕಾದಾಗ್ಯೆ, ಸಹಾಯಮಾಡಬೇಕು. *ಅವುಗಳನ್ನು ಹಿಡಿಯುವದಕ್ಕೆ ಪೋಲೀಸಿನವರು ಸಹಾಯ ಕೊಡಬೇಕು.*

೧೧. ಪಬ್ಲಿಕ್ ರಸ್ತೆಗಳು, ಉದ್ಯಾನವನಗಳು, ತೋಟಗಳು, ಕಾಲುವೆಗಳು, ಚರಂಡಿಗಳು, ಅಣೆಕಟ್ಟೆಗಳು, ಈ ವಗ್ಯೆರೆಗಳ ಜವಾಬ್ದಾರಿಯನ್ನುಳ್ಳವರೂ, ಪೋಲೀಸ್ ಆಫೀಸರುಗಳೂ, ಅಂಥಾ ರಸ್ತೆಗಳಿಗೆ, ವನಗಳಿಗೆ, ತೋಟಗಳಿಗೆ, ಕಾಲುವೆಗಳಿಗೆ, ಚರಂಡಿಗಳಿಗೆ ಕಟ್ಟೆಗಳಿಗೆ ವ ಅಂಥಾವುಗಳಿಗೆ ಅಥವಾ ಅಂಥಾ ರಸ್ತೆಗಳ ಕಾಲುವೆಗಳ, ಚರಂಡಿಗಳ ಯಾ ಕಟ್ಟೆಗಳ ಪಾರ್ಶ್ವಗಳಿಗೆ ನಷ್ಟಪಡಿಸುವಂಥಾ ಯಾ ಅವುಗಳಮೇಲೆ ಮೇಯುವಂಥಾ ಯಾವ ರಾಸನ್ನಾದರೂ ಹಿಡಿಯಬಹುದು ಯಾ ಹಿಡಿಯಗೊಡಿಸಬಹುದು. *ಸರ್ಕಾರ ರಸ್ತೆಗಳನ್ನೂ, ಕಾಲುವೆಗಳನ್ನೂ, ಕಟ್ಟೆಗಳನ್ನು ಕೆಡಿಸುವ ರಾಸುಗಳು.*

ಮತ್ತು ಅವುಗಳನ್ನು ಇಪ್ಪತ್ತನಾಲ್ಕು ಘಂಟೆಗಳೊಳಗಾಗಿ ಸಮೀಪದಲ್ಲಿ ಯಿರತಕ್ಕ ದೊಡ್ಡಿಗೆ ಕಳುಹಿಸತಕ್ಕದ್ದು ಯಾ ಕಳುಹಿಸುವಂತೆ ಮಾಡಿಸತಕ್ಕದ್ದು.

೧೨. ಮೇಲ್ಕಂಡ ಪ್ರಕಾರ ದೊಡ್ಡಿಗೆ ಸೇರಿಸಲ್ಪಡುವ ರಾಸುಗಳ ಪೈಕಿ ಪ್ರತಿ ಒಂದಕ್ಕೆ ದೊಡ್ಡೀದಾರನು ಈ ಕೆಳಗಿನ ದರಗಳ ಪ್ರಕಾರ ಜುರ್ಮಾನೆ ವಿಧಿಸತಕ್ಕದ್ದು:— *ದೊಡ್ಡಿಗೆ ಸೇರಿದ ರಾಸುಗಳಿಗೋಸ್ಕರ ಜುರ್ಮಾನೆಗಳು.*

| | |
|---|---|
| ಆನೆ ... | ಯೆರಡು ರೂಪಾಯಿ |
| ಒಂಟೆ ಯಾ ಎಮ್ಮೆ | ಯೆಂಟಾಣೆ |
| ಕುದುರೆ, ಮಾದವಾರ್, ಆಷ್ಟ ಕುದುರೆ, ಟಾಕಣಿ, ಕುದುರೇಮರಿ, ಬಚೇರಿ, ಹೇಸರಕತ್ತೆ, ಗೂಳಿ, ಎತ್ತು, ಹಸು, ಯೆಮ್ಮೆ ಕರು | ನಾಲ್ಕಾಣೆ |
| ಕರು, ಕತ್ತೆ ಯಾ ಹಂದಿ | ಯೆರಡಾಣೆ |
| ಟಗರು, ಹೆಣ್ಣು ಕುರಿ, ಕುರೀಮರಿ, ಮೇಕೆ ಯಾ, ಮೇಕೆಮರಿ | ಒಂದಾಣೆ |

(ಸಶೇಷ.)

---

## SUMMARY OF NEWS.

## ವೃತ್ತಾಂತ ಸಂಗ್ರಹವು.

ವೈಸರಾಯಿ ಸಾಹೇಬರವರೂ ಅವರ ಭಾರ್ಯೆಯವರೂ ಸೆಂ ಕಳೆದ ಮಂಗಳವಾರದ ದಿನ ಕಲ್ಕತ್ತೆಯೊಳಗಿನ ಗವರ್ನ್ಮೆಂಟ್ ಹೌಸಿನಲ್ಲಿ ಸ್ಟೇಟ್ ಸಮುದಾಯಿಕ ದಿತನ ಮಾಡಿಸಿದರು.

ಈ ತಿಂಗಳ ೯ ನೇ ತಾರೀಖಿನಲ್ಲಿ ಹೈದರಾಬಾದ್ ನಿಜಾಮರವರಿಗಾಗಿ ಸಿಂಗಪೂರಿನಿಂದ ಯೆರಡು ಆನೆಗಳು ಹೊಗೆ ಹಡಗಿನಲ್ಲಿ ಹೊರಲ್ಪಟ್ಟವು. ಅವುಗಳ ಪೈಕಿ ಒಂದು ಬೇಟೆಯಲ್ಲಿ ಪ್ರಸಿದ್ಧ.

---

ಈಸ್ಟರ್ ಯೆಂಬ ಹಬ್ಬದ ಬಗ್ಗೆ ಈ ತಿಂಗಳ ೩೦ ನೇ ತಾರೀಖ್ ಮೊದಲು ಏಪ್ರಿಲ್ ೪ ನೇ ತಾರೀಖ್ ಮಂಗಳವಾರದ ತನಕ ಉಭಯ ದಿನಗಳೂ ಸೇರಿ, ಮದರಾಸ್ ಹೈಕೋರ್ಟು ಮುಚ್ಚಲ್ಪಡುವವು.

---

ಪಚಯಪ್ಪ ಕಾಲೇಜ್ ೨೮ನೇ ತಾರೀಖ್ ಮಂಗಳವಾರದ ಮಧ್ಯಾಹ್ನ ೪ ೩೦ ಘಂಟೆಗೆ ಮದರಾಸ್ ಸೆನೆಟ್ ಹೌಸಿನಲ್ಲಿ ನಡೆಯುವ ಕಾನ್ವಕೇಷನ್ ಸಭೆಯಲ್ಲಿ ಈ ಸಲದ ಯೂನಿವರ್ಸಿಟಿ ಪರೀಕ್ಷೆಯಲ್ಲಿ ತೇರ್ಗಡೆ ಯಾದ ಉಮೇದುವಾರರಿಗೆಲ್ಲ ಡಿಗ್ರೀಗಳು ಕೊಡಲ್ಪಡುವವು.

---

ಬರ್ಮಾ ದೇಶದಲ್ಲಿ ಕರೆನ್ಸಿ ನೋಟುಗಳನ್ನು ಚಲಾವಣೆಗೆ ತರುವದಕ್ಕಾಗಿ ಅಲ್ಲಿಗೆ ಮುಖ್ಯಪಟ್ಟಣವಾದ ರಂಗೂನ್ ನಲ್ಲಿ ನೋಟುಗಳನ್ನ ಛಾಪಾ ಹಾಕಬೇಕೆಂತಲೂ, ಸದರಿ ಕೆಲಸಕ್ಕೆ ಅಲ್ಲಿನ ಕಂಟ್ರೋಲರವರೇ ಪೇಪರ್ ಕರೆನ್ಸಿಗೂ ಕಮಿಷನರಾಗಿರತಕ್ಕದೆಂತಲೂ ತೀರ್ಮಾನಿಸುತ್ತಾರೆ.

---

ಗಾಯಕವಾಡ ಸರಕಾರದವರು ತಮ್ಮ ಸಂಸ್ಥಾನದಲ್ಲಿ ಕಾಗದ ಮಾಡುವ ಕಾರ್ಖಾನೆಯನ್ನು ಇಡಬೇಕೆಂದು ಆಲೋಚಿಸಿ ತಮ್ಮ ಸಂಸ್ಥಾನದಲ್ಲಿ ಯಾವತರದ ಕಾಗದವು ಹೆಚ್ಚಾಗಿ ಖರ್ಚಾಗುತದೆಂಬವನ್ನು ವಿಚಾರಿಸುತಲಿರುತ್ತಾರೆಂದು ತಿಳಿಯಬರುತದೆ—ವಾ. ಹಂ.

---

ಗಾರ್ವರ್ನರ್ ಜನರಲರವರಾದ ಲಾರ್ಡ್ ಲ್ಯಾನ್ಸ್‌ಡೌನರವರು ವರ್ಷಂಪ್ರತಿ ಬೇಸಿಗೇಕಾಲದ ಹವಾ ಕ್ಷೋಣ್ಯಕ್ಕೆ ಸಿಮ್ಲಾಕ್ಕೆ ದಯಮಾಡಿಸುತ್ತಾ ಇದ್ದದ್ದು ಸರಿಯಷ್ಟೆ ಈ ವರುಷ ಬೇಸಿಗೇಕಾಲದ ಹವಾಕ್ಷೋಣ್ಯತ ನೀಲಗಿರಿಗೆ ದಯಮಾಡಿಸುತ್ತಾರೆಂದು ತಿಳಿಯಬರುತ್ತ—ಚಿಂ

---

ಬಂಗಾರದ ಉತ್ಪತ್ತಿಯ ವಿಷಯದಲ್ಲಿ ಇಂಡಿಯಾ ದೇಶದ ಪ್ರಸಿದ್ಧಿಯು ದಿನೇದಿನೆ ವೃದ್ಧಿಯಾಗುತಿದೆ. ಇಲ್ಲಿ ಸರ್ಕಾರ್ ಸೇಲ್ ಪೂರ್ತಿಯಾಗುವದರೊಳಗಾಗಿ ಇಂಗ್ಲೆಂಡು ಅನ್ಯರಾಜ್ಯಗಳಿಗೆ ಕಳುಹಿಸಲ್ಪಡುವ ಬಂಗಾರದ ಕ್ರಯವು ೩೦ ಲಕ್ಷ ರೂಪಾಯಿಗಳಿಗೆ ಅಧಿಕವಾಗಬಹುದೆಂದು ಅಂದಾಜ್ ಮಾಡಲ್ಪಟ್ಟಿದೆ.

---

ತುರ್ಕೀ ದೇಶದೊಳು ಯಾವನೊಬ್ಬನು ಕ್ರೈಸ್ತ ಧರ್ಮ ಹಿಡಿದು ಯೊಬ್ಬಳನ್ನು ಮದುವೆ ಮಾಡಿಕೊಂಡು ಹೋಗಿ, ಅವಳು ಮಹಮ್ಮದ್ ಮತಕ್ಕೆ ಸೇರಬೇಕೆಂದು ಅವಳಿಗೆ ಅವಕಾಶ ಉಂಟಾಗುವ ತನಕ ಅವಳಂ ತನ್ನ ಮನೆಯೊಳಿಟ್ಟುಕೊಂಡಿರುವನೋ ಅಂತವನನ್ನು ವಿಲಾಯತಿ ನೌಕರಿಯಿಂದ ವಿಸರ್ಜಿಸುವ ವಾಡಿಕೆ ನಡೆಯುತ್ತಿರುತದೆ.

---

ಹಿಮಾಚಲ ಸಮೀಪ ಪ್ರದೇಶವಾದ ಡಲಹೌಸಿ ಎಂಬ ಪಟ್ಟಣದೊಳು ಈಚೆಗೆ ಒಂದು ವರ್ಷದ ಹಿಂದೆ ಕಟ್ಟಲ್ಪಟ್ಟ ಟೌನ್‌ಹಾಲ್ ಎಂಬ ಕಟ್ಟಡದಮೇಲೆ ಮಂಜುಗಡ್ಡೆಗಳು ಬಿದ್ದು ಅದರ ಭಾರವಂ ತಡೆಯಲಾರದೆ ಸದರೀ ಕಟ್ಟಡವು ಕೂಲಿ ಹೋಯಿತೆಂದು ಅಲ್ಲಿನ ವಾತಮಿದಾರನೊಬ್ಬನು ಒಂದು ಪತ್ರಿಕೆಗೆ ಬರೆದಿರುತ್ತಾನೆ.

---

ಜರ್ಮನೀ ದೇಶದಲ್ಲಿ ಈಚೆಗೆ ಆದ ಖಾನೇಷುಮಾರಿ ಲೆಕ್ಕದಿಂದ ಗೊತ್ತಾಗುವದೇನೆಂದರೆ — ಆ ದೇಶದಲ್ಲಿ ೩೩,೦೦,೦೦೦ ಜನ ಮಧ್ಯಮ ವರ್ಗದವರೆಂತಲೂ ಆ ಪೈಕಿ ೧೯,೦೦,೦೦೦ ವಿಧವೆಯರೆಂತಲೂ ಗೊತ್ತಾಗಿದೆ ಆ ವಿಧವೆಯರಲ್ಲಿ ೮೬,೦೦೦ ಜನಗಳು ಸರ್ಕಾರಕ್ಕೆ ಕೊಟ್ಟ ಹಣದಿಂದ ಬರುವ ಬಡ್ಡಿಯ ಮೂಲಕ ಜೀವಿಸುತ್ತಾರೆಂತಲೂ; ೮,೫೧,೪೦೦ ಜನ ವಿಧವೆಯರು ಕಸಬುದಾರರೆಂತಲೂ; ೧೦,೪೧,೦೦೦ ಜನರು ನಿರ್ಗತಿಕರಾಗಿ ಕೂಲಿ ಮೊದಲಾದವುಗಳಿಂದ ಜೀವಿಸುತ್ತಾರೆಂತಲೂ ಗೊತ್ತಾಗಿದೆ.—ವೃ. ಚಿಂ.

---

ಮುಂಬಯಿಯಲ್ಲಿ ಒಬ್ಬ ಸಾಹೇಬನು ಒಂದು ಕಳ್ಳಿಕಂಪೆನಿಯನ್ನು ಇಟ್ಟು ಆಫೀಸು ಪ್ರಾರಂಭ ಮಾಡಿ, ಪರದೇಶದಿಂದ ಮಾಲು ತರಿಸುವ ವ ಕಳಿಸುವ ವ್ಯವಹಾರವನ್ನು ಮಾಡುವದು ತನ್ನ ವ್ಯವಸಾಯವದೆ ಎಂದು ಪ್ರಸಿದ್ಧಪಡಿಸಿ ಎಲ್ಲ ಕಡೆಗೂ ತನಗೆ ಏಜಂಟರು ಬೇಕೆಂಬ ಪ್ರಕಟನೆಗಳನ್ನು ಕೊಟ್ಟನು. ಏಜಂಟರಾಗಲಿಚ್ಛಿಸುವವರ ಕಡೆಯಿಂದ ಪ್ರಾಮಾಣಿಕತೆಯಿಂದ ಕೆಲಸ ಮಾಡುವ ಬಗ್ಗೆ ಡಿಪಾಜಿಟ್ ಇಡಿಸಿಕೊಳ್ಳಲಿಕ್ಕೆ ಪ್ರಾರಂಭಮಾಡಿದನು. ಮುಂದೆ ಈ ಎಲ್ಲ ಕೃತ್ರಿಮ ತನವು ಬೆಳಕಿಗೆ ಬಂದದರಿಂದ ಈಗ ಅವನಮೇಲೆ ಫಿರ್ಯಾದ ಆಗಿರುತ್ತದೆ.—ರಾ. ಹಂ.

---

ಕೈಗಳಿಗೂ ಕಾಲುಗಳಿಗೂ ಹಾಕಿಕೊಳ್ಳುವ ಚೀಲಗಳನ್ನು ವಿಲಾಯತಿಯಿಂದ ಇಂಡಿಯಕ್ಕೆ ತರಿಸುತ್ತಾರಷ್ಟೆ, ಈಗ ಈ ಪದಾರ್ಥವನ್ನು ಇಂಡಿಯದಲ್ಲೇ ತಯಾರ್ಮಾಡಬೇಕೆಂದು ಕಲ್ಕತ್ತಾ ಪಟ್ಟಣದಲ್ಲಿ ಒಂದು ಕಾರ್ಖಾನೆಯನ್ನು ಸ್ಥಾಪಿಸುವದರಲ್ಲಿದಾರೆ. ಇದಕ್ಕೆ ಯೆರಡು ಲಕ್ಷ ರೂಪಾಯಿಗಳು ಬೇಕಾಗಿದೆ. ಹತ್ತು ರೂಪಾಯಿಗಳ ಷೇರುಗಳಾಗಿ ಮಾಡಿದ್ದಾರೆ. ಮುಕ್ಕಾಲುಪಾಲು ಷೇರುಗಳೆಲ್ಲ ಆಗಲೆ ಮಾರಾಟ ಹೋದವು. ಇಂಡಿಯಾದಲ್ಲಿ ಇಂತಾ ಕಾರ್ಖಾನೆಗಳು ಹೆಚ್ಚಿದಷ್ಟು ಇಲ್ಲಿನ ಐಶ್ವರ್ಯ ಹೆಚ್ಚುವದರಲ್ಲಿ ಸಂಶಯವಿಲ್ಲವು.—ವೃ. ಪ.

---

Bangalore.—Printed and published at the Karnataka Press, No. 40, Hospital Road, City —1893.

# ಕರ್ಣಾಟಕ ಪ್ರಕಾಶಿಕಾ

# THE KARNATAKA PRAKASIKA.

## ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning.**

ಶ್ರೀಮದ್ವಿವಿಧವೃತ್ತ್ಯಾವಗಮಾರ್ಥ ಕರ್ಣಾಟಕಪ್ರಕಾಶಿಕಾನಾಮಾಭಿಧಾ ಪ್ರಥಿತಾ ಹಿತಶೋಭಿತಾ | ಮೃಗಾಂಕಪತ್ರವಾಸರನಿಹಿತಮುದ್ರಣಾ ಸಜ್ಜನೈರ್ದ್ರಷ್ಟವ್ಯಾ ಸುವರ್ಣೋಪಮಾ ಕಾದಿಕಾ ಮಾನಸಸುಮದಾ ||

Vol. XX.] BANGALORE—MONDAY, MARCH 20, 1893. [No. 11.

ಸಂಪುಟ ೨೦.] ಬೆಂಗಳೂರು:—ಸನ್ ೧೮೯೩ ನೇ ಇಸವಿ ಮಾರ್ಚ್ ೨೦ ನೇ ತಾರೀಖ್ ಸೋಮವಾರ. |ಸಂಚಿಕೆ ೧೧.


### ಕರ್ಣಾಟಕ ಪ್ರಕಾಶಿಕಾ.

#### ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

| | ಸ್ಥಳದವರಿಗೆ. | ಪರಸ್ಥಳದವರಿಗೆ. |
|---|---|---|
| ವರ್ಷ ೧ಕ್ಕೆ ... | 6—0—0 | 8—9—0 |
| ೬ ತಿಂಗಳಿಗೆ .. | 3—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

| | ಸ್ಥಳದವರಿಗೆ. | ಪರಸ್ಥಳದವರಿಗೆ. |
|---|---|---|
| ವರ್ಷಕ್ಕೆ ... ... | 3—0—0 | 1—0—0 |
| ೬ ತಿಂಗಳಿಗೆ ... | 1—12—0 | 2—8—0 |

ಈ ಪತ್ರಿಕೆಗೆ ದರಖಾಸ್ತು ಮಾಡಿದ ತಾರೀಖ್ ಮೊದಲು ಒಂದು ತಿಂಗಳೊಳಗಾಗಿ ಚಂದಾ ಮೊಬಲಗು ಕಳುಹಿಸದವರಿಗೆ ಪೋಸ್ಟಲ್ ಅಡ್ವಾನ್ಸ್ ದಂತೆ ಪತ್ರಿಕೆ ಕಳುಹಿಸಲ್ಪಡುವದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. ಮೂರು ತಿಂಗಳಿಗಿಂತ ಕಡಿಮೆಯಾಗಿ ಚಂದಾ ಮೊಬಲಗು ಅಂಗೀಕರಿಸಲ್ಪಡಲಾರದು.

#### ಪ್ರಕಟನೆಯ ವಿವಾಹ.

ಮೊದಲನೆಯದಕ್ಕಾ ಪಙ್ಕ್ತಿ ಒಂದಕ್ಕೆ ೦—೨—೦

ಎರಡನೆಯದಕ್ಕಾ ಪಙ್ಕ್ತಿ ೭ ವರ್ಕೆ ೦—೧—೬

ಬಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟು ಕೇಳು ಬಯಸ್ ಮಾಡಿದಾಗ್ಯೂ ಪಙ್ಕ್ತಿ ಒಂದಕ್ಕೆ ೧ ಅಣೆಯಂತೆ ಲೆಕ್ಕ ಮಾಡಲ್ಪಡುವದು ಈ ಪತ್ರಿಕೆಯಲ್ಲಿ ಖಾಯಂ ಇಟ್ಟುಕೊಳ್ಳುವದಕ್ಕೆ ಪ್ರಕಟನೆಗಳು ಕಳುಹಿಸುವವರು ಅವು ಎಷ್ಟಾವರ್ತಿ ಪ್ರಕಟ ಮಾಡಲ್ಪಡಬೇಕೋ ಆ ಸಂಖ್ಯೆಯನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಿದ್ದಲ್ಲಿ ಅವರು ನಮಗೆ ನಿಲ್ಲಿಸುವಂತೆ ಬರೆಯುವವರೆಗೆ ಅವು ಪ್ರಕಟಿಸುತ್ತಿದ್ದು ಹಾಗೆ ಎಷ್ಟಾವರ್ತಿ ಪ್ರಕಟಿಸಲ್ಪಟ್ಟವಾಗ್ಯೂ ಮೇಲ್ಕಂಡ ದರದಂತೆ ಕಿಮ್ಮತ್ ವಸೂಲ್ಮಾಡಲ್ಪಡುವದು ಪ್ರಕಟನೆಗಳ ಬಗ್ಗೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಆಯಾ ಕಾರಣಗಳ ಮುಖ್ಯಾಂಶ ಮುಂಚಿತವಾಗಿ ಕಳುಹಿಸಬೇಕು ವರ್ತಮಾನಗಳಿಗೆ ಈ ಪತ್ರಿಕೆಗೆ ಕಳುಹಿಸತಕ್ಕ ಕಾಗದಗಳಲ್ಲಿ ಬರೆಯಲ್ಪಡುವ ಅಂಶಗಳು ನಾವು ಜವಾಬ್ದಾರರಾಗಲಾರೆವು. ಕ್ರಮವಾಗಿ ರುಜುವಾತಿ ಕೊಡದೆ ಯಾವ ಕಾಗದವನ್ನೂ ಪ್ರಕಟಿಸಲಾರೆವು. ನಿರಾಕರಿಸಲ್ಪಟ್ಟ ಕಾಗದಗಳು ವಾಪಸ್ ಕಳುಹಿಸಲ್ಪಡಲಾರವು.


*ADVERTISEMENTS.*

**NOTICE.**

VAIDYASARA SANGRAHA

A TREATISE ON THE PRINCIPLES OF

HINDU MEDICINE

*Price including Postage Rs 5 0-0*

ವೈದ್ಯಸಾರ ಸಂಗ್ರಹ.

ಈ ಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಕಾಗದ ಬರೆದು ಪೋಷ್ಟಿಕರಗತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ಕಾಗದಗಳಿಗೆ ಪುಸ್ತಕ ಕೊಡಲ್ಪಡಲಾರದು.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೇ ಹಾಸಲ್ ಸಹಿತ ಪ್ರತಿ ಒಂದಕ್ಕೆ ರೂ ೫—೦—೦

ಟಿ. ಬಿ. ವೆಂಕಟಾಚಾರ್.

ಬೆಂಗಳೂರ್, ಮಸೂರ್ ಆಸ್ಪತ್ರೆ ರೋಡ್ ೮೯ ನೇನಂಬರ್.

### ನೋಟಿಸ್.

ಬೆಂಗಳೂರು ಕರ್ಣಾಟಕ್ ಪ್ರೆಸ್.

೧೮೯೩ ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ ಸಕಲವಿಧ ಕೆಲಸಗಳು ಸುಲಭಚಾರ್ಜಿಗೆ ಶೀಘ್ರವಾಗಿಯೂ ಅಚ್ಚುಕಟ್ಟಾಗಿಯೂ ಮಾಡಲ್ಪಡುವವು.

ಇದರಲ್ಲಿ ಸದ್ಯಃ ಇಂಗ್ಲಿಷ್ ಕನ್ನಡ ಕೆಲಸಗಳು ಮಾತ್ರ ನಡೆಯುತ್ತಿವೆ. ಇತರ ತಪಶೀಲುಗಳನ್ನು ಸದರೀ ಕಚೇರಿ ಮ್ಯಾನೇಜರ್ ಗೆ ಬರೆದು ತಿಳಿದುಕೊಳ್ಳಬಹುದು.

### ನೋಟಿಸ್.

ನಂಜಪ್ಪನವರ ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು.

ಈಬೂರು ಉಪ್ಪಾರ ಪ್ಲೇಗು ರೋಗ ಮೇಲೆ ತಿಳಿಸಲ್ಪಟ್ಟವರಿಂದ ಮಾಡಲ್ಪಟ್ಟ ಅನೇಕವಿಧ ಪ್ರಖ್ಯಾತಿಗಳಾದ ಔಷಧಗಳು ಚಿಕಿತ್ಸೆಗೆ ಬೇಕಾದವರೆಲ್ಲರೂ ಬೇಕಾದವರು ಅವರಿಗೆ ಬರೆದು ತರಿಸಿಕೊಳ್ಳಬಹುದು ಈ ಔಷಧಗಳು ಬಹು ಶ್ರೇಷ್ಠವಾದ ಕೆಲವು ಸಿದ್ಧಕ್ರಿಯೆಗಳಿಂದ ತಯಾರಾದವುಗಳೂ, ಅನುಭವ ಸಿದ್ಧವಾಗಿಯೂ, ಅನೇಕರಿಗೆ ಗುಣವನ್ನುಂಟುಮಾಡಿದವಾಗಿಯೂ ಇರುತ್ತವೆ, ತಮ್ಮ ರೋಗಸ್ವರೂಪವನ್ನೂ ಔಷಧಾನಂತರದ ಪಥ್ಯಾದಿಗಳ ಕ್ರಮವನ್ನೂ ಸದರೀ ಪಂಡಿತರಿಗೆ ಬರೆದು ತರಿಸಿಕೊಳ್ಳಬಹುದು. ಹಾಗೆ ಕಾಗದ ಬರೆಯತಕ್ಕವರು ಅವರಿಂದಪೇಕ್ಷಿಸಲ್ಪಡುವ ಪ್ರತ್ಯುತ್ತರಕ್ಕೆ ಸಹ ತಮ್ಮ ಕಾಗದದಲ್ಲಿ ಅರ್ಧಾಣೆ ಲೇಬಲ್ ಮುಚ್ಚಿ ಕಳುಹಿಸಬೇಕು. ವ್ಯಾಲ್ಯೂಪೇಯಬಿಲ್ ಮೂಲಕ ಸಹ ಪದಾರ್ಥಗಳು ಕಳುಹಿಸಲ್ಪಡುವವು. ಕಳುಹಿಸಲ್ಪಟ್ಟ ಪದಾರ್ಥಗಳನ್ನು ತರಿಸಿಕೊಳ್ಳದೆ ವಾಪಸ್ ಬಂದರೆ ಆ ಖರ್ಚು ವ್ಯಾಲ್ಯೂ ಪೇಯಬಿಲ್ ಖರ್ಚು ಅವರೇ ಕೊಡಬೇಕಾಗುವದು.

ತೈಲ.—ಮಹಾತಕ್ರತೈಲ, ಇದು ಶಿರೋ ವಾಯುಗಳಿಗೂ, ಕಾರಕ ಸಂಬಂಧಗಳಾದ ಮತ್ತು ವಾತಸಂಬಂಧಗಳಾದ ಸಂಧಿಬಂಧಗಳಿಗೂ, ಮೂಗಿನಲ್ಲಿ ರಕ್ತ ಬೀಳತಕ್ಕದ್ದಕ್ಕೂ, ಅನೇಕವಿಧ ದೌರ್ಬಲ್ಯವಾದ ವೇದನೆಗಳಿಗೂ ಬಹಳ ಪ್ರಖ್ಯಾತವಾದ ನಿವಾರಕವಾದುದಾಗಿದೆ, ಸಣ್ಣ ಸೀಸೆ ಒಂದಕ್ಕೆ ೧ ರೂ, ದೊಡ್ಡ ಸೀಸೆ ೧ಕ್ಕೆ ೫ ರೂ.

ಜ್ವರದ ಗುಳಿಗೆಗಳು.—ಇದು ಚಾತುರ್ಥಿಕಾದಿ ಸಕಲವಿಧ ಜ್ವರಗಳಿಗೂ ಪ್ರಸಿದ್ಧ ಔಷಧವಾಗಿರುತ್ತದೆ. ರೂ. ೧ ಕ್ಕೆ ೨೦ ಗುಳಿಗೆಗಳು.

ಮೇಹ ರೋಗ ನಿವಾರಕವಾದ ಎಣ್ಣೆ.—ಈ ಎಣ್ಣೆಯು ೨೦ ದಿನಗಳವರೆಗೂ ಬಿಡದೆ ಹೊತ್ತು ಹೊಟ್ಟೆಗೆ ತೆಗೆದುಕೊಂಡರೆ ಸಕಲವಿಧ ಮೇಹಗಳೂ, ಪಡಿಗಳೂ, ಸ್ತ್ರೀಯರಿಗುಂಟಾಗುವ ಉಷ್ಣ ಸಂಬಂಧವಾದ ರೋಗಗಳೂ, ನಿವಾರಣೆಯಾಗುವದು. ಸೀಸೆ ೧ ಕ್ಕೆ ೨—೦—೦

ದಂತರೋಗಕ್ಕೆ ಚೂರ್ಣ.—ಹುಳುಕಿನಹಲ್ಲುಗಳು, ಸಡಿಲಬಿದ್ದಿರುವ ಹಲ್ಲುಗಳು, ಇವುಗಳನ್ನು ಗಟ್ಟಿಯಾಗಿ ಪಟ್ಟಿಯಾಗಿಸಿ ಕಾಂತಿಯನ್ನುಂಟುಮಾಡುತ್ತದೆ, ಇದು ಮೂರುವಿಧವು, ಪೆಟ್ಟಿಗೆ ೧ ಕ್ಕೆ ೧ ರೂ. ಇದು ೨೦ ದಿನಗಳಿಗೆ ಆಗುವದು.

ನೇತ್ರರೋಗಕ್ಕೆ ಮಾತ್ರೆ.—ಪೊರೆಗಳು, ದೃಷ್ಟಿಮಾಂದ್ಯ, ಕಣ್ಣುರಿ, ತಲೆನೋವು, ಕಣ್ಣಲ್ಲಿ ನೀರು ಸುರಿಯುವದು ಮೊದಲಾದ ಸಕಲರೋಗಗಳಿಗೂ ಪ್ರಶಸ್ತವಾದದ್ದು, ಮೂಲಿಕಾ ಪ್ರಯೋಗದಿಂದ ಮಾಡಲ್ಪಟ್ಟ ಉತ್ತಮವಾದ ಮಾತ್ರೆ ೧ ಕ್ಕೆ ೪ ಆಣೆ. ಇದು ೩೦ ದಿನಗಳವರೆಗೆ ಬರುವ ಮೊತ್ತ ಹಾಕಿಕೊಳ್ಳಬಹುದು.

ಮೂಲವ್ಯಾಧಿಗೆ—ಇದು ಉಂಗುರವು ತಯಾರಾಗಿದೆ, ಇದರಿಂದ ದೀರ್ಘಕಾಲಿಕವಾದ ಮೂಲರೋಗಗಳೆಲ್ಲವೂ ವಾಸಿಯಾಗುತ್ತವೆ, ಉಂಗುರ ೧ಕ್ಕೆ ೧ ರೂಪಾಯಿ, ಇದನ್ನು ಬೆರಳಲ್ಲಿ ನಿಯತವಾಗಿ ಧರಿಸಿಕೊಂಡಿರತಕ್ಕದ್ದು, ಇದರ ಸ್ಪರ್ಶದಿಂದ ಮೂಲರೋಗವು ನಿವೃತ್ತಿಯಾಗುತ್ತದೆ.

ಭಸ್ಮಗಳು—ತಾಂಬ್ರ, ರಜತ, ವಂಗ, ಸೀಸ, ಪ್ರವಾಳ, ಶೃಂಗ, ಅಭ್ರಕ, ಲೋಹ, ಕಾಂತ ಮುಂತಾದ ಭಸ್ಮಗಳೂ ಸಿಂಧೂರಗಳೂ ಸಿದ್ಧ ಕ್ರಿಯೆಯಿಂದ ತಯಾರಾದವು ಇವು ಪಾಂಡು ಕಾಮಿಲಾಕ್ಷಯಾದಿ ಸಕಲ ಪ್ರಬಲ ರೋಗಗಳಿಗೂ ಪ್ರಶಸ್ತವಾದವಾಗಿರುತ್ತವೆ. ರೋಗ ಸ್ವರೂಪವನ್ನು ಗುಣವಾಗಿ ಔಷಧವು ಕೊಡಲ್ಪಡುವದರಿಂದ ಅವರವರಿಗೆ ಕ್ರಯವು ನಿಷ್ಕರ್ಷಿಸಲ್ಪಡಬೇಕಾಗಿದೆ.

ಲೇಹ್ಯಗಳು.—ಮಹಾಬಿಲ್ವಾದಿ, ಚ್ಯವನಪ್ರಾಶ, ಕೂಷ್ಮಾಂಡ ಮುಂತಾದ ಧಾತು ವೃದ್ಧಿಕರಗಳಾದ ಲೇಹ್ಯಗಳು ಸಿದ್ಧವಾಗಿವೆ, ಸೇರು ೧ ಕ್ಕೆ ೩ ರೂ.

ಸುಗಂಧದ್ರವ್ಯಗಳು.—ಗಂಧ, ಬಾಳೇಹಣ್ಣು, ವಾಸನೆಯ ರಸ ಕಡ್ಡಿ, ಅಂಜೂರು, ದ್ರಾಕ್ಷೇಹಣ್ಣು, ಸೇಬು ಮೊದಲಾದ ಷರಬತ್ತುಗಳು ತಯಾರಾಗಿವೆ, ಇವು ಸೀಸೆ ೧ ಕ್ಕೆ ೨ ರೂ.

ಚೂರ್ಣಗಳು.—ಮಹಾ ಪಂಚಲವಣಚೂರ್ಣ, ಪಂಚಾಗ್ನಿ ಚೂರ್ಣ, ತಾಳೀಶಾದಿ ಮುಂತಾದ ಚೂರ್ಣಗಳು ಅಜೀರ್ಣ ಪಿತ್ತ ವಾತರೋಗಗಳಿಗೆ ಉಪಯುಕ್ತವಾದವು. ಇದು ೨೦ ದಿನಗಳಿಗೆ ತೆಗೆದುಕೊಳ್ಳತಕ್ಕವು, ಡಬ್ಬಿ ೧ಕ್ಕೆ ೧ ರೂ.

### ನೋಟಿಸ್.

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪೆನಿ.

ಕಮಿಷನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯೊಡನೆ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ತಕ್ಕ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರಹ ಔಷಧಗಳು, ಪುಸ್ತಕಗಳು, ಮುತ್ತುಗಳು, ಚಿಪ್ಪು ಮುತ್ತುಗಳು, ಘಡಿಯಾರಗಳು, ವಾಚ್ ಗಳು, ಟೈಂಪೀಸ್ ಗಳು, ಕಾಶ್ಮೀರ ಶಾಲುಗಳು, ಪಟ್ಟೆವಸ್ತ್ರಗಳು, ಜರತಾರಿ ಕಣಗಳು, ಚಂದ್ರಕಾಂತ ಲೆನ್ಸು ಕನ್ನಡಕಗಳು, ಹುಡುಗರ ಚಿತ್ರ ಜರತಾರಿ ಉಡುಪುಗಳು, ಜರತಾರಿ ಟೋಪಿಗಳು, ಆಫೀಸ್ ಡ್ರೆಸ್ ಗಳು, ಷರ್ಟುಗಳು, ಅತ್ತರುಗಳು, ಅತ್ಯುತ್ತಮವಾದ ರತ್ನಗಳು, ಚಿನ್ನದಿಂದ ಕಟ್ಟಲ್ಪಟ್ಟ ಉಂಗುರಗಳು, ಬೆಳ್ಳಿ ಪಾತ್ರೆಗಳು, ಜರ್ಮನ್ ಬೆಳ್ಳಿ ಪಾತ್ರೆಗಳು, ಕೇಸರಿ, ಕಸ್ತೂರಿ ಮುಂತಾದ ಇತರ ಸಾಮಾನುಗಳು

ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಲೇಬಲ್ ಕಳುಹಿಸಿದ ಕೂಡಲೆ ಜವಾಬ್ ಕೊಡಲಾಗುವದು.

ವಿಳಾಸ.—ಗಣೇಶ ರಾಮಚಂದ್ರ ಕರ್ಕಿ,

ಮತ್ತು ಕಂಪೆನಿ, ಕಮಿಷನ್ ಏಜಂಟ್ಸ್,

ಠಾಕೂರ್ ದ್ವಾರ್, ಮಾರ್ಕೆಟ್ ಪೋಸ್ಟ್, ಮುಂಬೈ.

### ನೋಟಿಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ನಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕರೀಗೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

#### ಸಂಸ್ಕೃತ ಗ್ರಂಥಗಳು.

| | | ರೂ | ಆ | ಪೈ |
|---|---|---|---|---|
| ಸಟೀಕಾ ವೈದ್ಯಸಾರ ಸಂಗ್ರಹ | ... | ೫ | ೦ | ೦ |
| „ ಶಿವಗೀತೆ | ... | ೧ | ೯ | ೦ |
| „ ಶಿವಾನಂದಲಹರಿ | ... | ೦ | ೮ | ೦ |
| „ ಕಾಲಾಮೃತ | ... | ೧ | ೦ | ೦ |
| „ ಟಿ॥ ಬಾಲರಾಮಾಯಣ .. | | ೦ | ೩ | ೦ |
| „ ಟಿ॥ ಗೋಪಿಕಾ ಗೀತೆ .. | | ೦ | ೧ | ೦ |
| „ ಟಿ॥ ಚಾಣಕ್ಯನೀತಿ (ಸುಭಾಷಿತ) | | ೦ | ೪ | ೦ |
| ವಿಷ್ಣುಸಹಸ್ರನಾಮ ಪಕ್ಕರೆ | ... | ೦ | ೩ | ೦ |
| ಸೂರ್ಯಸಹಸ್ರನಾಮ | ... | ೦ | ೨ | ೦ |
| ಕೃಷ್ಣಕರ್ಣಾಮೃತ | ... | ೦ | ೨ | ೦ |
| ತ್ರಿಕಾಂಡ ಅಮರ ಮೂಲ | .. | ೧ | ೨ | ೦ |
| ೧ ಕಾಂಡ | ... | ೦ | ೧ | ೦ |

#### ಕನ್ನಡ ಗ್ರಂಥಗಳು.

| | | ರೂ | ಆ | ಪೈ |
|---|---|---|---|---|
| ಶುಕಸಪ್ತತಿ ಅಪ್ಪೆಲ್ | ... | ೩ | ೦ | ೬ |
| ದಿಟಿಟಿ ದುಮ್ಮಿಂ | ... | ೧ | ೨ | ೦ |
| ವೃಷಭೇಂದ್ರವಿಜಯ | ... | ೧ | ೮ | ೦ |
| ಪಂಚವಾಪ ಚಾರಲೀಲೆ | ... | ೦ | ೬ | ೦ |
| ಹನುಮದ್ವಿಲಾಸ | ... | ೦ | ೬ | ೦ |
| ಕಾಳೀಯಮರ್ದನ | ... | ೦ | ೨ | ೦ |
| ಸುಭದ್ರಾಪರಿಣಯ | ... | ೦ | ೨ | ೦ |
| ಶಶಿರೇಖಾಪರಿಣಯ | ... | ೦ | ೨ | ೬ |
| ಸುದಾಮಚರಿತ್ರೆ | ... | ೦ | ೧ | ೦ |
| ಮೈರಾವಣ ಚರಿತ್ರೆ | ... | ೦ | ೧ | ೦ |
| ಬಾಲವ್ರತಚಿಕಿತ್ಸೆ | ... | ೦ | ೧ | ೦ |
| ಮಕರಧ್ವಜ ಲಾ | ... | ೦ | ೧೨ | ೦ |
| ಭ್ರಾಂತಿವಿಲಾಸ | .. | ೦ | ೧೨ | ೦ |

### ನೋಟಿಸ್.

"ಜಮಖಾರತಿ ಕಟ್ಟಿಗೆ."

ಇದರಮೂಲಕ ಕೊಡುವದೇನೆಂದರೆ:—

ಹುಬ್ಬಳ್ಳಿ ರೈಲ್ವೆ ಸ್ಟೇಷನ್ ಹತ್ತರ ಇರುವ ಹುಬ್ಬಳ್ಳಿ ಡಿಪೋದಲ್ಲಿಯ ಕಟ್ಟಿಗೆಯ ಲಿಲಾವ ಸನ್ 1893ನೇ ಇಸವಿ ಏಪ್ರಿಲ್ 10 ನೇಗೆ ಆಗುವದು.

2 ಲಿಲಾವ ಆಗತಕ್ಕ ಕಟ್ಟಿಗೆಯ ಜಮಾಖರ್ಚು ಕೆಳಗೆ ತೋರಿಸಿದಂತೆ ಅದೆ.

| ಜಾತಿ. | ನಾಟು ಸಂಖ್ಯೆ. | ದರ 50 ಕ್ಯೂಬಿಕ್ ಫೀಟುಗಳು. |
|---|---|---|
| ಸಾಗವಾನಿ, | 1420. | 580. |
| ಹೀಸು, | 25. | 10. |
| ಜಂಗಲಿ, | 320. | 166, |

3. ಕಟ್ಟಿಗೆಯು ಲಾಟವಾರ ಮಾಡಲ್ಪಟ್ಟು ಯೋಗ್ಯ ಸರ್ಕಾರಿ ಸವಾಲ್ ಇಟ್ಟು ಲಿಲಾವ ಮಾಡಲ್ಪಡುವದು.

4. ಸವಾಲಿನ ಹಣದಲ್ಲಿ ಶೇಕಡಾ 25 ರೂಪಾಯಿ ಮುಂಚೆ ಅಂಶವನ್ನು 'ಸವಾಲ್ ಮುಂಜೂರ್ ಮಾಡಿದ ಕೂಡಲೇ ವಸೂಲ್ ಕೊಡಬೇಕು, ಬಾಕಿ ಹಣವನ್ನು ಸನ್ 1893ನೇ ಇಸವಿ ಮೇ 31ನೇ ಒಳಗೆ ವಸೂಲ್ ಕೊಡಬೇಕು,

6. ಲಿಲಾವಿನ ಷರತ್ತುಗಳು ಲಿಲಾವ ಕಾಲದಲ್ಲಿ ಕೊಡಲಾಗುವವು. ಅಗತ್ಯ ಕೆಳಗೆ ಸಹಿ ಮಾಡಿದವರ ಕಡೆಗೆ ಬರೆದು ತಿಳಿಕೊಳ್ಳಬಹುದು.

ಮೊ॥ ಕಲಘಟಗಿ ತಾ॥23ನೇ ಫೆಬ್ರುವರಿ, 1893 } **W. R. WOODROW.** ಡಿವಿಜನಲ್ ಫಾರೆಸ್ಟ್ ಆಫೀಸರ್, ಧಾರವಾಡ.

### ನೋಟಿಸ್.

ಇಂಗ್ಲಿಷ್ ಮತ್ತು ಕನ್ನಡ ಚೆನ್ನಾಗಿ ತಿಳಿದವರಾಗಿಯೂ, ಕಾಗದ ಪತ್ರಗಳು ನಡೆಸುವದಕ್ಕೂ, ಇಂಗ್ಲೀಷನ್ನು ಕನ್ನಡದಲ್ಲೂ ಕನ್ನಡವನ್ನು ಇಂಗ್ಲೀಷಿನಲ್ಲೂ ತರ್ಜುಮೆ ಮಾಡುವದಕ್ಕೆ ಶಕ್ತರಾಗಿಯೂ ಇರುವ ಒಬ್ಬ ರೈಟರು ಬೇಕಾಗಿದೆ, ಪ್ರಾರಂಭದಲ್ಲಿ ಮಾಹೆಯಾನಾ ೧೫ ರೂಪಾಯಿಗಳ ಸಂಬಳ ತರುವಾಯ ಸಾಲೀಯಾನಾ ೫ ರೂಪಾಯಿಗಳಂತೆ ೩೦ ರೂಪಾಯಿಗಳು ಭರ್ತಿಯಾಗುವ ತನಕ ಇಜಾಫೆಯೂ ಕೊಡಲ್ಪಡುವದು ದರಖಾಸ್ತುದಾರನು ಮುಚ್ಚಳಿಕೆ ಜಾಮೀನನ್ನು ತಪಶೀಲು ಕೊಳ್ಳುವಷ್ಟು ದೇಹದಾರ್ಢ್ಯ ಸ್ವಸ್ಥನಾಗಿರಬೇಕು,

ಯೋಗ್ಯತಾ ಪತ್ರಿಕೆಗಳೊಡನೆ ಕೆಳಕಂಡವರ ಇದರಡಿ ರುಜು ಮಾಡಿರುವವರಿಗೆ ಬರೆದುಕೊಳ್ಳಬೇಕು.

ಎ ರಂಗಯ್ಯ ಚೆಟ್ಟಿಯಾರ್,
ಕಾಂಟ್ರಾಕ್ಟರ್,
ಮುನಿಸಿಪಲ್ ಕಮಿಟಿ,
ವೇಲೂರು ಫೋರ್ಟ್ ಹೌಸ್.

### ನೋಟಿಸ್.

ಇದರಿಂದ ನಮ್ಮ ಚಂದಾದಾರರಿಗೆ ನಾವು ಪ್ರಾರ್ಥಿಸುವದೇನೆಂದರೆ,—

ಈ ಸಾಲಿನಲ್ಲಿ ಈ ಪತ್ರಿಕೆಯ ಚಂದಾಹಣವು ಕಳೆದು ಹೋದ ಅವಧಿ ಪೂರ್ತಿ ಮಾಡುವದಕ್ಕೆ ನಾವು ಕೊಟ್ಟಿದ್ದ ಒಂದು ತಿಂಗಳ ಮಾಸಿಕ ಗಡುವು ಮೀರಿ ಎರಡು ತಿಂಗಳಾಗುತ ಬರುತ್ತಲಿರುವದರಿಂದ ಈ ತಿಂಗಳು ಪೂರ್ತಿಯಾಗುವದರೊಳಗಾಗಿ ಚಂದಾಮೊಬಲಗನ್ನು ಕಳುಹಿಸಿಕೊಡದೆಹೋದವರು ಕಳೆದ ಸಾಲಿನಲ್ಲಿ ಜಾರಿಯಲ್ಲಿದ್ದದರ ಪ್ರಕಾರ ಚಂದಾ ಮೊಬಲಗನ್ನು ಕಳುಹಿಸಿಕೊಡಬೇಕಾಗಿರುವದಲ್ಲದೆ ಈ ತಿಂಗಳ ಆಖೈರು ಹೊಸದರವು ರದ್ದಾದಂತೆ ತಿಳಿಯಬೇಕು.

ಬೆಂಗಳೂರ್, ತಾರೀಖ್ ೨೦ ನೇ ಮಾರ್ಚ್ ೧೮೯೩. } ಪ್ರೊಪ್ರೈಟರ್, ಕ. ಪ್ರ.

## Bangalore City Municipality.
ಬೆಂಗಳೂರ್ ಸಿಟಿ ಮ್ಯುನಿಸಿಪಾಲಿಟಿ.

ಸನ್ ೧೮೯೩ನೇ ಇಸವಿ ಮಾರ್ಚಿ ೨೩ನೇ ತಾರೀಖ್ ಬೃಹಸ್ಪತಿವಾರದ ದಿನ ಪ್ರಾತಃಕಾಲ ೮ ಘಂಟೆಗೆ ಬೆಂಗಳೂರು ಸಿಟಿ ಮ್ಯುನಿಸಿಪಲ್ ಕಮಿಷನರ್‌ಗಳು ಕೋಟೆಯೊಳಗಿರುವ ಮ್ಯುನಿಸಿಪಲ್ ಆಫೀಸಿನಲ್ಲಿ ಸಾಮಾನ್ಯ ಸಭೆ ಸೇರುವರು.

ಇದರಡಿ ತಿಳಿಸಲ್ಪಡುವ ವಿಷಯಗಳು ಮೀಟಿಂಗಿನ ಮುಂದೆ ಇಡಲ್ಪಡುವವು.

೧. ಸನ್ ೧೮೯೩ನೇ ಇಸವಿ ಫೆಬ್ರವರಿ ಮಾಹೆ ಬಾಬತು ಚಾಲತಿ ನಗದು ಜಮಾಖರ್ಚು ಲೆಕ್ಕ, ತಗಾದೆ, ವಸೂಲಿ, ಮತ್ತು ಬಾಕಿ ಪಟ್ಟಿ, ಮನೆಗಳಿಗೆ ಹೋಗಿ ಚಿಕಿತ್ಸೆ ಮಾಡುವ ಮೆಡಿಕಲ್ ಆಫಿಸರ ಲೆಕ್ಕ, ಕಾಮಗಾರಿಗಳ ಅಭಿವೃದ್ಧಿಯನ್ನು ಕುರಿತ ರಿಪೋರ್ಟ್, ಸನ್ ೧೮೯೩ನೇ ಇಸವಿ ಫೆಬ್ರವರಿ ತಿಂಗಳಲ್ಲಿ ಶ್ರೀನಿವಾಸ ಮಂದಿರದ ಛತ್ರಿರಿಗೆ ಹೋಗಿದ್ದ ಜನರ ಲೆಕ್ಕ.

೨. ಕಬ್ಬನ್‌ಪಾರ್ಕ್, ಮಾರ್ಟ್ ಮಾರ್ಕೆಟ್, ಪೂರ್ಣಯ್ಯನವರ ಸತ್ರ ಮತ್ತು ಮಾರ್ಟ್ರ್ಯಾಫ್ರೆ ಸೇತುವೆಯ ಬಳಿ ದೀಪಗಳು ಹಾಕುವ ಬಗ್ಗೆ ತಮಗೆ ಜಾಸ್ತಿ ಚಾರ್ಜ್ ಬರಬೇಕೆಂದು ಲೈಟಿಂಗ್ ಕಂಟ್ರ್ಯಾಕ್ಟರು ೧೮೯೩ನೇ ಇಸವಿ ಜನವರಿ ೧೬ನೇ ತಾರೀಖಿನಲ್ಲಿ ಬರೆದುಕೊಂಡ ಅರ್ಜಿ.

೩. ಮ್ಯುನಿಸಿಪಲ್ ಪ್ರಕಟನೆಗಳನ್ನು ಪ್ರಕಟಿಸುವ ವಿಷಯವನ್ನು ಕುರಿತು ಕಾಸಿಮುಲ್ ಅಕಬಾರ್ ಪತ್ರಿಕೆಯ ಪ್ರೊಪ್ರೈಟರು, ಸನ್ ೧೮೯೩ನೇ ಇಸವಿ ಮಾರ್ಚಿ ೧೪ನೇ ತಾರೀಖಿನಲ್ಲಿ ಬರೆದುಕೊಂಡ ಲೆಟರ್.

೪. ಕ್ಯಾಪಿಟಲ್ ಫಂಡಿಗೆ ಕಾಯಮಾಗಿ ಒಬ್ಬ ಕಾವಲಿಗಾರನನ್ನು ಇಡಬೇಕಾದ ವಿಷಯವನ್ನು ಕುರಿತು, ೧೮೯೩ನೇ ಇಸವಿ ಫೆಬ್ರವರಿ ೨೪ನೇ ತಾರೀಖಿನ ಆಡಿಟ್ ಕಮಿಟಿಯವರ ರಿಪೋರ್ಟಿನ ಎಕ್ಸ್‌ಟ್ರ್ಯಾಕ್ಟ್.

೫. ಕೋಟೆಯ ನಾಬಕ್ ಹುಲ್ಲುಗಾವಲಿ ಕಂಟ್ರ್ಯಾಕ್ಟರ್ ಮಾವಣ್ಣನಿಂದ ಬರಬೇಕಾದ ಬಾಕಿ ೧೨೫ ರೂಪಾಯಿಗಳನ್ನು ಮುಜರೆ ಕೊಡಬೇಕಾದ ವಿಷಯದಲ್ಲಿ ಸಿಟಿ ಅಮಲ್ದಾರರು ಕೊಟ್ಟ ಸನ್ ೧೮೯೩ನೇ ಇಸವಿ ಮಾರ್ಚಿ ೬ನೇ ಮರ್ಕಂ ೨೫೯ನೇ ನಂಬರ್ ರಿಪೋರ್ಟ್.

೬. ಕಾರಂಜಿ ಕೆರೆಯ ಒಳಭಾಗದಲ್ಲಿ ಒಂದು ಕುಂಟೆಯನ್ನು ಅಗೆಯಿಸುವದಕ್ಕಾಗಿ ಮ್ಯುನಿಸಿಪಲ್ ಎಗ್ಸಿಕ್ಯೂಟಿವ್ ಇಂಜಿನಿಯರವರು ಕೊಟ್ಟ ೫೬೪ ರೂಪಾಯಿಗಳ ಅಂದಾಜ್ ಪಟ್ಟಿ.

೭. ಮೆಸರ್ಸ್ ಬೆಸ್ಟ್ ಅಂಡ್ ಕಂಪೆನಿಯವರು ಕಟ್ಟುವದಾಗಿರುವ ಪೆಟ್ರೋಲಿಯಂ ಟ್ಯಾಂಕ್ಸ್ ಎಂಬ ಎಣ್ಣೆ ಕೊಟ್ಟಗಳ ಬಗ್ಗೆ ಅವರಿಂದ ವಸೂಲಾಗಬೇಕಾಗಿರುವ ರುಸುಮನ್ನು ಕುರಿತ ಕಾಗದ ಪತ್ರಗಳು.

ಬೆಂಗಳೂರ್ ಷಹರ್ ಮ್ಯುನಿಸಿಪಲ್ ಆಫೀಸ್, ತಾ|| ೧೬-೩-೧೮೯೩. — K. SRINIVASA RAO, *Vice President, City Muni Commission*

## THE MONEY MARKET.

ಮದರಾಸ್, ಶನಿವಾರ, ತಾರೀಖ್ ಮಾರ್ಚಿ 18ನೇ 1893

ಸೇಕಡ 4ರೂ, ಬಾಬತು ಗವರ್ನಮೆಂಟ್ ಪತ್ರಗಳು ರೂಪಾಳು, 105-6-0 ಇಂದ 105-12-0ವರವಿಗೆ.

ಮದರಾಸ್ ಬ್ಯಾಂಕ್ ಷೇರಗಳು, (500) ರೂಪಾಯಿಗಳ ಬಾಬತು 955 ಲಾಗಾಯಿತು 965ವರವಿಗೆ.

ಕಮರ್ಷಿಯಲ್ ಅಂಡ್ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಷೇರಗಳು, (100) ಬಾಬತು 160 ರಿಂದ 165 ವರವಿಗೆ.

ಸವರನ್‌ಗಳು, 16-5-0 ಇಂದ 16-8-0ವರವಿಗೆ.

ಬ್ಯಾಂಕ್‌ಬಿಲ್‌ಗಳು ಯಾನೆ ದರ್ಶನಹುಂಡಿಗಳು, ರೂಪಾಯಿಕ್ಕೆ 6 ತಿಂಗಳವಾಯಿದೆಗೆ, 1s. 2 1/8d.

ಡಿಟೋ 4 ತಿಂಗಳವಾಯಿದೆಗೆ, 1s. 2 11/16d.

ಡಿಟೋ ಕೇಳಿದಾಗ, 1s. 2 19/32d.

## NOTICE.

ನಿನ್ನೆಯ ದಿನ ಯುಗಾದಿ ಹಬ್ಬವಾದಕಾರಣ ತನ್ನಿಮಿತ್ತ ಈ ಕಚೇರಿಯ ನೌಕರರುಗಳಿಗೆಲ್ಲ ಮಾಮೂಲಿ ಮೇರೆ ರಜಾ ಕೊಡಲ್ಪಟ್ಟದರಿಂದ ಈ ಪತ್ರಿಕೆಯು ಸ್ವಲ್ಪ ಕಾಲ ವಿಳಂಬದಿಂ ಪ್ರಕಟಿಸಲ್ಪಟ್ಟ ಬಗ್ಗೆ ನಮ್ಮ ಚಂದಾದಾರರೆಲ್ಲರು ಮನ್ನಿಸಬೇಕೆಂದು ಪ್ರಾರ್ಥಿಸುತ್ತೇವೆ.

# ಕರ್ಣಾಟಕ ಪ್ರಕಾಶಿಕಾ.
THE KARNATAKA PRAKASIKA.
MONDAY, MARCH 20, 1893
೧೮೯೩ನೇ ಇಸವಿ ಮಾರ್ಚಿ ತಾ|| ೨೦ ನೇ ಸೋಮವಾರ

## ಅಥ ವಿಜಯನಾಮಸಂವತ್ಸರ ಫಲಂ.

ಆದಿತ್ಯಂಚಂದ್ರಭೌಮೌ ಬುಧಗುರುಭೃಗುಜಾ ಭಾನುಜಂರಾಹುಕೇತೂ ನಿತ್ಯಾನಿತ್ಯಂತ್ರಿಸಂಧ್ಯಂ ಜಗದುದಯಲಯಸ್ಥಿತ್ಯಸಂಪತ್ತಿಹೇತೂನ್ | ಜ್ಯೋತಿಶ್ಚಕ್ರೇರವೀಂದ್ವಾದ್ಯುಡುಗಣಸಹಿತಾನ್ ಮೇಷರಾಶ್ಯಾದಿಕಾನ್ ಸ್ತಾನ್ ನೇತ್ರಾನಾಸಕ್ತಮೂರ್ತೀನ್ ಶತಸುರವರಾನ್ ಭಕ್ತಿ ಶುಭಾರ್ಥಯಾಮಃ ||

ಸಕಲ ಶ್ರೌತಸ್ಮಾರ್ತ ನಿತ್ಯ ನೈಮಿತ್ತಿಕ ಕರ್ಮಾನುಷ್ಠಾನ ತತ್ವಜ್ಞಾನ ವ್ಯವಹಾರ ಮುಖ್ಯಹೇತು ಭೂತವಾದ, ನೂತನಸಂವತ್ಸರವು ಗತಾಬ್ದಗಳಲೆಲ್ಲಂದಾಗಿ ಸೇರಲು ವರ್ತಮಾನ ವಿಜಯನಾಮ ಸಂವತ್ಸರವು ಚಾಂದ್ರಮಾನರೀತ್ಯಾ ನಿನ್ನೆಯದಿನ ಪ್ರಾರಂಭವಾಯಿತು. ಈ ವಿಜಯನಾಮ ಸಂವತ್ಸರಾತ್ಪ್ರಾಗ್ವಂ ಬ್ರಹ್ಮಣಃಕಲ್ಪಾದಿಗತಾಬ್ದಾಃ ೧೯೭೨೯೪೯೦೯೪; ಸೃಷ್ಟ್ಯಾದಿಗತಾಬ್ದಾಃ ೧೯೫೫೮೮೪೯೯೪; ಸ್ವಾಯಂಭುವಮನೋರ್ಗತಾಬ್ದಾಃ ೧೬೬೪೪೫೦೦೯೩; ವೈವಸ್ವತ ಮನ್ವಂತರ ಗತಾಬ್ದಾಃ ೧೨೦೫೩೨೯೯೪; ಕಲ್ಯಬ್ದಗಣಃ ೪೯೯೪; ವಿಕ್ರಮಶಕಾಬ್ದಾಃ ೧೯೫೦; ಶಾಲೀವಾಹನ ಶಕಃ ೧೮೧೫; ಕೊಲ್ಲಮಾಂಡು ೧೦೬೮-೬೯; ಪ್ರಭವಾದಿ ೨೭; ಕ್ರಿಸ್ತಶಕ ೧೮೯೩-೯೪; ಹಿಜರಿ ೧೩೧೦--೧೧; ಫಸಲಿ ೧೩೦೨--೩೦೩; ಅಸ್ಯ ವಿಜಯಸಂವತ್ಸರ ಫಲಂ—ವಿಜಯಾಬ್ದೇ ಸುವೃಷ್ಟಿಃ ಸ್ಯಾತ್ ಭುವಿ ಸರ್ವತ್ರ ಜಾಯತೇ | ಫಲಂತಿ ಸರ್ವಸಸ್ಯಾನಿ ರಾಜಾನೋ ಜಯಶಾಲಿನಃ || ಅಂದರೆ ಈ ವರುಷದಲ್ಲಿ ಭರತಖಂಡದೊಳು ಸರ್ವತ್ರ ಕಾಲಕಾಲದಲ್ಲಿ ಒಳ್ಳೇ ಮಳೆಯಾಗಿ ಸಕಲ ಧಾನ್ಯಗಳೂ ಚೆನ್ನಾಗಿ ಬೆಳೆದು ಅರಸರು ಜಯಶಾಲಿಗಳಾಗಿರುವರೆಂದು ಭಾವವು.

ನವನಾಯಕರ್ಯಾರಂದರೆ,—ರಾಜಾ ರಸಾಧಿಪತಿಃ ರವಿಃ, ಮಂತ್ರಿ ಅರ್ಘಾಧಿಪತಿಃ, ಮೇಘಾಧಿಪತಿಃ, ಕುಜಃ, ಸೇನಾಧಿಪತಿಶ್ಚಂದ್ರಃ, ಸಸ್ಯಾಧಿಪತಿಃ, ನೀರಸಾಧಿಪತಿಃ ಶುಕ್ರಃ, ಧಾನ್ಯಾಧಿಪತಿಃ ಬುಧಃ. ಮಿಥ್ಯಾಕ್ಷೇತ್ರದೇಶದಲ್ಲಿ ಬಾರ್ಹಸ್ಪತ್ಯಮಾನರೀತಿಯಾಗಿ ಈಗ ವಿಶ್ವಾವಸು ಸಂವತ್ಸರವಾದುದರಿಂದ ಅದರಫಲವೇನೆಂದರೆ—"ವಿಶ್ವಾವಸೌ ವತ್ಸರೇಸ್ಮಿನ್ ಸಸ್ಯಾನ್ಯರ್ಘ್ಯಂ ಚ ವರ್ಷಣಂ | ಚೌರ್ಯಂ ರೋಗಶ್ಚ ಲೋಭಶ್ಚ ವಸುಧಾಯಾಂ ಪ್ರಜಾಯತೇ || ಅಂದರೆ ಮೇಲೆ ತಿಳಿಸಲ್ಪಟ್ಟಂತೆ ಸಸ್ಯಾರ್ಘ ವರ್ಷ ಸಮೃದ್ಧಿಯುಳ್ಳದ್ದಾಗಿರುವವಲ್ಲದೆ ಪ್ರಜೆಗಳಲ್ಲಿ ಚೌರ್ಯವೂ ರೋಗಾದ್ಯುಪದ್ರವಗಳೂ ಲೌಭ್ಯವೂ ಪ್ರಬಲಿಸಿರುವವು.

ಸೂರ್ಯಸ್ಯ ರಾಜತ್ವ ಫಲಂ—(ರಾಜ್ಞಾಮನ್ಯೋನ್ಯಕಲಹಃ ಬಾಹ್ಯಾಗ್ನಿಜನಿತಂ ಭಯಂ | ಪ್ರಜಾನಾಂ ಭುವಿ ಜಾಯೇತ ಮಾರ್ತಾಂಡೇ ರಾಜನಿ ಸ್ಥಿತೇ) ಸೂರ್ಯನು ರಾಜಸ್ಥಾನವನ್ನೈದಿದರಿಂದ ಭೂಪಾಲಕರು ಅನ್ಯೋನ್ಯ ಕಲಹಪ್ರವೃತ್ತರಾಗಿಯೂ ಪ್ರಜೆಗಳು ಕಳ್ಳಾಗ್ನಿ ಭೀತರಾಗಿಯೂ ಇರುವರು.

ಕುಜಸ್ಯ ಮಂತ್ರಿತ್ವ ಫಲಂ—ಗ್ರಾಮಾಶ್ಚ ಬಹವೋ ಭೂಮೌ ವನಾನಿ ವಿವಿಧಾನಿ ಚ | ಪ್ರದಹ್ಯಂತೇಗ್ನಿನಾ ನಿತ್ಯಂ ಅಮಾತ್ಯೇ ಭೂಮಿನಂದನೇ || ಕುಜನ ಸಚಿವತ್ವದೊಳು ಅನೇಕ ಗ್ರಾಮಗಳೂ, ವನಗಳೂ ಅಗ್ನಿಪಾಲಾಗಿ ನಷ್ಟವನ್ನೈದುವವು.

ಚಂದ್ರಸ್ಯ ಸೇನಾಧಿಪತ್ಯ ಫಲಂ—ವಸುಧಾಯಾಂ ಮಹಾವೃಷ್ಟಿಃ ಜನಾನಾಂ ರೋಗಪೀಡನಂ | ಗಾವಃ ಕ್ಷೀರಪ್ರದಾಃ ಪುಷ್ಟಾಃ ಚಂದ್ರೇ ಸೇನಾಧಿಪೇ ಸತಿ || ಚಂದ್ರನು ಸೇನಾಧಿಪತಿತ್ವವಂ ಕೈಗೊಂಡದರಿಂದ ಕೆಲವು ಕಡೆಗಳಲ್ಲಿ ಅತಿವೃಷ್ಟಿಯೂ, ಜನಗಳಿಗೆ ಅನಾರೋಗ್ಯವೂ ಉಂಟಾಗಿರುವವಲ್ಲದೆ ಗೋವುಗಳು ಕ್ಷೀರಪ್ರದವಾದವಾಗಿರುವವು.

ಶುಕ್ರಸ್ಯ ಸಸ್ಯಾಧಿಪತ್ಯ ಫಲ—ಬಹೂನಿ ಜಲಧಾನ್ಯಾನಿ ಭೂಮಿಧಾನ್ಯಾನಿ ಯಾನಿ ಚ | ಫಲಂತಿ ತಾನಿ ಸರ್ವಾಣಿ ಶುಕ್ರೇ ಸಸ್ಯಾಧಿಪೇ ಸತಿ || ಶುಕ್ರನು ಸಸ್ಯಾಧಿಪತಿತ್ವವಂ ಪಡೆದದರಿಂದ ಆರೀ ಮುಖ್ಯ ಫಲಗಳು ಚೆನ್ನಾಗಿ ಫಲಿಸುವವು.

ಕುಜಸ್ಯ ಅರ್ಘಾಧಿಪತ್ಯ ಫಲಂ—ಅಲ್ಪವೃಷ್ಟಿಸ್ತ್ವಲ್ಪವಾತಃ ಸ್ವಲ್ಪಸಸ್ಯಾ ವಸುಂಧರಾ | ರಾಜಾನೋ ವಿಸದಾನ್ಯೋನ್ಯ ಸಮರಪ್ರೀತಿಸಂಯುತಾಃ || ನರಾಣಾಂ ಸ್ವಲ್ಪಮಾರೋಗ್ಯಂ ಭೂಸುತೇರ್ಘಾಧಿಪೇ ಸತಿ || ಕುಜನಿಗೆ ಅರ್ಘಾಧಿಪತಿತ್ವವು ಸಹ ಉಂಟಾಗಿರುವದರಿಂದ ಕೆಲವು ಕಡೆಗಳಲ್ಲಿ ಅಲ್ಪವೃಷ್ಟಿಯೂ ಸ್ವಲ್ಪವಾತವೂ ಪರಿಮಿತ ಸಸ್ಯವೂ ಉಂಟಾಗಿರುವವಲ್ಲದೆ ರಾಜರು ಸದಾ ಅನ್ಯೋನ್ಯ ಸಮರೋತ್ಸಾಹಿಗಳಾಗಿ ಜನಗಳು ಅಲ್ಪಾರೋಗ್ಯವುಳ್ಳವರಾಗಿ ಸಹ ಇರುವರು.

ಕುಜಸ್ಯಮೇಘಾಧಿಪತ್ಯಫಲಂ— ಮಹಾವಾತಃ ಸ್ವಲ್ಪವೃಷ್ಟಿಃ ಅರ್ಘಹಾನಿರ್ವಿಶೇಷತಃ ಫಲಂತಿ ರಕ್ತಧಾನ್ಯಾನಿ ಕುಜೇ ಮೇಘಾಧಿಪೇ ಸತಿ || ಕುಜನು ಮೇಘಾಧಿಪತಿಯಾಗಿರುವದರಿಂದ ವಾತಾಧಿಕ್ಯವೂ ಸ್ವಲ್ಪವೃಷ್ಟಿಯೂ ವಿಶೇಷತಃ ಅರ್ಘಹಾನಿಯೂ, ರಕ್ತಧಾನ್ಯಗಳ ಸಮೃದ್ಧಿಯೂ ಉಂಟಾಗುವವು

ಸೂರ್ಯಸ್ಯ ರಸಾಧಿಪತ್ಯ ಫಲಂ—ಘೃತತೈಲಂ ಚೇಕ್ಷುರಸಂ ಅನ್ಯದ್ವಸ್ತು ರಸಾನ್ವಿತಂ | ಸರ್ವಸ್ಯ ತಸ್ಯ ಹಾನಿಸ್ಸ್ಯಾತ್ ಸೂರ್ಯೇ ಪತಿ ರಸಾಧಿಪೇ || ರಸಗ್ರಾಹಿಯಾದ ರವಿಯ ಆಧಿಪತ್ಯದಲ್ಲಿ ತುಪ್ಪ ತೈಲ, ಇಕ್ಷುರಸ ಮೊದಲಾದ ರಸವರ್ಗಗಳೆಲ್ಲವು ಕಡಿಮೆಯಾಗಿ ಅವುಗಳ ಕ್ರಯವು ಹೆಚ್ಚುವುದು

ಶುಕ್ರಸ್ಯ ನೀರಸಾಧಿಪತ್ಯ ಫಲಂ—ವಜ್ರಂ ಮುಕ್ತಾ ರಜತಂ ಚ ತಾಮ್ರಂ ಸ್ಫಟಿಕ ಚಂದನೇ | ಭವತ್ಯೇತಾನಿ ವೃದ್ಧಾನಿ ಭಾರ್ಗವೇ ನೀರಸಾಧಿಪೇ || ವಜ್ರ, ರಜತ, ಸ್ಫಟಿಕ, ಚಂದನಾದಿ ಪದಾರ್ಥಗಳು ವಿಶೇಷವಾಗಿರುವವು.

ಯಮಸ್ಯ ಪಶುನಾಯಕತ್ವಫಲಂ—ಅಲ್ಪಾರ್ಘತ್ವಂ ಚಾಲ್ಪವೃಷ್ಟಿಸ್ತೃಣಮಲ್ಪಂ ಪಯೋಪಿ ಚ || ವಾತಾತಪೌ ಪ್ರಕೋಪೌ ಯಮೇತ್ರ ಪಶುನಾಯಕೇ | ಯಮನು ಪಶುನಾಯಕನಾಗಿರುವದರಿಂದ ಅಲ್ಪಾರ್ಘ, ಅಲ್ಪವೃಷ್ಟಿ, ತೃಣಗಳು ಅಲ್ಪವಾಗಿರುವವು.

ಮೇಲೆ ಕಂಡ ನವನಾಯಕಾಧಿಪತ್ಯದಲ್ಲಿ ಫಲಗಳು ಸ್ವಲ್ಪಭಿನ್ನಗಳಾಗಿದ್ದಾಗ್ಯೂ ಅವರವರ ಬಲಾಬಲಗಳನ್ನನುಸರಿಸಿಯೂ, ಗತಿಗಳನ್ನನುಸರಿಸಿಯೂ ಫಲಗಳು ಒಂದೇಬಗೆಯಾಗಿರುವವು.

ಸಂಕ್ರಾಂತಿ ಪುರುಷನು ತ್ರಿಶಿರಸ್ಸುಗಳು, ದ್ವಿಮುಖಗಳು, ತ್ರಿನೇತ್ರಗಳು, ಲಂಬಭ್ರೂಗಳು, ರಕ್ತದಂತಗಳು, ದೀರ್ಘ ಕರ್ಣಗಳು, ಅಷ್ಟಭುಜಗಳು, ದ್ವಿಪಾದಗಳುಳ್ಳವನಾಗಿಯೂ, ವರಾಹಾಧಿರೂಢನಾಗಿಯೂ, ರಕ್ತಛತ್ರ ಮುಕ್ತಾಭರಣ ರಕ್ತ ವಸ್ತ್ರಾದಿಗಳಂ ಧರಿಸಿಕೊಂಡು ಪಾಯಸಾಹಾರಿಯಾಗಿ ಅತಿ ಗಂಭೀರಾತಿಭಯಂಕರರೂಪವುಳ್ಳವನಾಗಿಯೂ, ಉತ್ತರಾಭಿಮುಖನಾಗಿ ಬರುತ್ತಾನಾಗಿ ಉತ್ತರದೇಶದೊಳು ದುರ್ಭಿಕ್ಷವು ಅಧಿಕವಾಗಿರುವುದು. ಈಸಲ ಜನರಿಗೆ ಸಾಮಾನ್ಯವಾಗಿ ವ್ಯಯಕ್ಕಿಂತಲೂ ಆದಾಯವು ಹೆಚ್ಚಾಗಿ ಅಧಿಕವಾಗಿರುವುದು. ಶೀತೋಷ್ಣಗಳು ಸಮಾನವಾಗಿಯೂ, ಪ್ರಜಾವೃದ್ಧಿಗಿಂತ ಕ್ಷಯವು ಅಧಿಕವಾಗಿಯೂ, ಪ್ರಾಣಿ ಸೌಖ್ಯವು ಮಧ್ಯಮವಾಗಿಯೂ, ಇತರ ವಿಷಯಗಳು ಸಾಮಾನ್ಯವಾಗಿಯೂ ಇರುವವು. ಗ್ರಹಣಗಳು— ಈ ಸಂವತ್ಸರದಲ್ಲಿ ಒಂದು ಪೂರ್ಣ ಸೂರ್ಯಗ್ರಹಣವೂ, ೨ ಕಂಕಣ ಸೂರ್ಯಗ್ರಹಣಗಳೂ, ಒಂದು ಪಾರ್ಶ್ವ ಚಂದ್ರಗ್ರಹಣವೂ ಪ್ರಾಪ್ತವಾಗುವವು. ಈ ಭರತ ಖಂಡದಲ್ಲಿ ಎರಡು ಮಾತ್ರವೇ ಕಾಣಿಸುವವು. ಮೊದಲನೆಯದು ಬರುವ ಏಪ್ರಿಲ್ ತಿಂಗಳ ೧೬ನೇ ತಾರೀಖ್ ಭಾನುವಾರದದಿನ ಕಂಕಣ ಸೂರ್ಯಗ್ರಹಣವು. ಇದು ಭರತಖಂಡದಲ್ಲಿ ದೃಶ್ಯವಲ್ಲವು. ಇದರ ಮಧ್ಯರೇಖೆಯಾದುದು ಆಫ್ರಿಕಾ ಖಂಡದ ಮಧ್ಯಭಾಗದಲ್ಲಿ ಸ್ಪರ್ಶವಾಗಿ ನಿಋತಿದಿಕ್ಕಿನ ಮಾರ್ಗವಾಗಿ ದಕ್ಷಿಣ ಅಮೆರಿಕಾ ಖಂಡದ ಮಧ್ಯಭಾಗಕ್ಕೆ ಹೋಗಿ ಪೆಸಿಫಿಕ್ ಓಷನ್ ಯೆಂಬ ಶಾಂತಮಹಾರ್ಣವದೊಳು ಮೋಕ್ಷವನ್ನೈದುವದು. ೨ನೆಯದು—ಬರುವ ಅಕ್ಟೋಬರ್ ತಿಂಗಳ ೯ನೇ ತಾರೀಖ್ ಸೋಮವಾರದ ದಿನ ಪ್ರಾಪ್ತವಾಗುವ ಕಂಕಣ ಸೂರ್ಯಗ್ರಹಣವು ಮೇಲೆ ಕಂಡಂತೆಯೇ ಭರತಖಂಡದಲ್ಲಿ ತಿಳಿಯಲಾರದು. ಇದು ಕಾಮಸ್ಕ್ಯಾಟ್ಕ ಎಂಬ ಪರ್ಯಾಯ ದ್ವೀಪದ ಆಗ್ನೇಯ ದಿಕ್ಕಿನಲ್ಲಿ ಸ್ಪರ್ಶವಾಗಿ ದಕ್ಷಿಣ ಅಮೆರಿಕಾ ಖಂಡದ ಮಧ್ಯದಲ್ಲಿ ಮೋಕ್ಷ ಉಂಟಾಗುವುದು. ಇನ್ನು ೧೮೯೪ನೇ ಇಸವಿ ಮಾರ್ಚಿ ೨೧ನೇ ತಾರೀಖ್ ಬುಧವಾರದದಿನ ಧೂಮ್ರವರ್ಣವುಳ್ಳ ಒಂದು ಪಾರ್ಶ್ವ ಚಂದ್ರಗ್ರಹಣವು ಈ ಭರತ ಖಂಡದಲ್ಲಿ ಸ್ಪಷ್ಟವಾಗಿ ತಿಳಿಯಬರುವುದು. ಏಪ್ರಿಲ್ ತಿಂಗಳ ೬ನೇ ತಾರೀಖ್ ಶುಕ್ರವಾರದದಿನ ಕಂಕಣ ಸೂರ್ಯಗ್ರಹಣ ಒಂದು ಪ್ರಾಪ್ತವಾಗಿ ಈ ಖಂಡದಲ್ಲಿ ದೃಶ್ಯವು. ಈ ಗ್ರಹಣದ ಕಂಕಣ ಮಧ್ಯರೇಖೆಯು ಸೈಬೀರಿಯಾ, ಮಂಗೋಲಿಯಾ, ಮಂಚೂರಿಯಾ ಮಾರ್ಗವಾಗಿಯೂ, ಬಂಗಾಳ ಸಮುದ್ರ ದಡದಿಂ ಬಂಗೋಲ್ ಮಾರ್ಗವಾಗಿ ಮೈಸೂರು ಷಹರಿಗೆ ಹತ್ತು ಯೋಜನಗಳುಳ್ಳ ಪ್ರಾಂತಗಳಲ್ಲಿಯೂ ಅರಬೀ ಸಮುದ್ರ ತೀರದಿಂದ ಕನ್ನಾನೂರ್ ಅನುತ್ರೈ ಬುಕ್ಕಪಟ್ಟಣ ಮಾರ್ಗವಾಗಿಯೂ ಹೋಗುವವು. ಇವುಗಳ ಕಾಲನಿರ್ಣಯಾದಿಗಳು ತತ್ತತ್ಕಾಲಗಳಲ್ಲಿ ವಿವರವಾಗಿ ತಿಳಿಸಲ್ಪಡುವವು. ಮುಖ್ಯವಾಗಿ ಸಮಷ್ಟಿಯಲ್ಲಿ ಈಗ ಜನಿಸಿದ ನೂತನ ಸಂವತ್ಸರವು ಅನೇಕ ವಿಷಯಗಳೊಳು ಜನಗಳಿಗೆ ಅಪರಿಂದಿನ ವರುಷಕ್ಕಿಂತಲೂ ಸುಖಪ್ರದವಾದುದಾಗಿರುವದೆಂದು ನೂತನ ಪಂಚಾಂಗದಿಂದ ವ್ಯಕ್ತವಾಗುತಿದೆ. ಇದಕ್ಕೆ ನಿದರ್ಶನವಾಗಿ ಸಂವತ್ಸರಾದಿಗೆ ಪೂರ್ವದಲ್ಲಿಯೇ ಅಲ್ಲಿಯಲ್ಲಿ ಒಳ್ಳೆಯ ಮಳೆಬಿದ್ದು ಕೆಲವು ಪ್ರದೇಶಗಳಲ್ಲಿ ಸೇತುವೆ ಮೊದಲಾದವುಗಳಿಗೆ ನಷ್ಟವುಂಟಾದಂತೆಯೂ, ಹೈದರಾಬಾದ್ ವಗೈರೆ ಕೆಲವು ಕಡೆಗಳಲ್ಲಿ ಶಿಲಾ ವೃಷ್ಟಿಯಿಂದ ಅನೇಕ ಲಕ್ಷ ರೂಪಾಯಿಗಳ ಪದಾರ್ಥಗಳು ನಷ್ಟವಾದಂತೆಯೂ ತಿಳಿಯಬರುತಿದೆ. ಮುಖ್ಯವಾಗಿ ವಿಜಯಾಂಕಿತವುಳ್ಳ ಈ ನೂತನ ವರ್ಷವು ಸರ್ವಜನಗಳಿಗೂ ಕ್ಷಿತೀಶರಿಗೂ ಸುಖ ಸಂತೋಷಗಳನ್ನುಂಟುಮಾಡಿ ಎಲ್ಲರೂ ಮಂಗಳ ಪರಂಪರೆಯನ್ನನುಭವಿಸುವಂತೆ ಅನುಗ್ರಹಿಸಬೇಕೆಂದು ಆದಿತ್ಯಾದಿ ನವಗ್ರಹಗಳನ್ನೂ ಅಂತಾ ಗ್ರಹಗಳು ಯಾರ ಸಂಕಲ್ಪ ಮತ್ತು ಆಜ್ಞಾನುಸಾರವಾಗಿ ವರ್ತಿಸುತಿವೆಯೋ ಅಂತಾ ಜಗದಾಧಾರ ರೂಪವಾದ ಪರಬ್ರಹ್ಮವನ್ನೂ ಪ್ರಾರ್ಥಿಸುವದೇ ಈ ಯುಗಾದಿಯಲ್ಲಿ ನಾವು ಮಾಡಬೇಕಾದ ಶ್ರೇಯಃಪ್ರಾರ್ಥನಾ ರೂಪವಾದ ಮಂಗಳಾಚರಣೆಯಾಗಿರುತಿದೆ.

---

ಕಾಮನ ಹಬ್ಬದ ವಿಷಯದಲ್ಲಿ ಪುರಾಣ ಪ್ರೋಕ್ತವಾದ ಒಂದು ಐತಿಹ್ಯವನ್ನು ಹಿಂದಿನ ಸಂಚಿಕೆಯಲ್ಲಿ ತಿಳಿಸಿದ್ದೆವಷ್ಟೆ. ಇದಕ್ಕೆ ಬೇರೆ ಒಂದು ಗೂಢಾರ್ಥವು ವಕ್ಷ್ಯಮಾಣ ಪ್ರಕಾರವಾಗಿರುವದರಿಂದ ಆ ರೀತಿ ಜನಗಳು ಗ್ರಹಿಸತಕ್ಕದ್ದು. ಇಲ್ಲಿ ಮದನ ವಿರೋಧಿಯಾದ ಪರಮೇಶ್ವರನು ಜೀವಾತ್ಮನು, ಕಾಮನೆಂದರೆ ಇಚ್ಛೆ, ಆ ಇಚ್ಛೆಯೇ ಕಾಮನು, ಅಥವಾ ಮನ್ಮಥನು, ತದ್ಯೋಗದಿಂ ಜೀವನಿಗೆ ವಿಕಾರ ಉಂಟಾಗುವಾಗ ಆತನು ಜ್ಞಾನದೃಷ್ಟಿಯೆಂಬ ಅಗ್ನಿಯಿಂ ಆ ಕಾಮವಂ ದಹಿಸಿ ನಿಷ್ಕಾಮನಾಗುತ್ತಾನೆ, ಅಂದರೆ ಆಕಾರರಹಿತನಾಗುತ್ತಾನೆ. ಜ್ಞಾನಾಧಿಷ್ಠಾನವಾದ ಬುದ್ಧಿಯೇ ಶಕ್ತಿರೂಪವಾದ ಪಾರ್ವತಿಯು. ಇದೇ ತತ್ವಾರ್ಥವು. ಇದರಲ್ಲಿ ಅಕ್ಷರಶೋ ವ್ಯಾಖ್ಯಾನರೀತ್ಯಾ ಮತ್ತೊಂದು ಬಗೆ ವಿಶೇಷಾರ್ಥವುಂಟೇನೆಂದರೆ—ಚೈತ್ರಾದಿಯಾಗಿ ಗಣಿಸಲಾಗಿ ಫಾಲ್ಗುಣ ಮಾಸವು ೧೨ನೇಯ ತಿಂಗಳಾಗುತಿದೆ. ಪೌರ್ಣಮಿ ೧೫ನೇ ತಿಥಿಯಾಗುತಿದೆ. ೧೨=ವರಶು, ೧೫=[illegible]ಯು, ದಕ್ಕಿಂತ ಅನ್ಯನಾದವನು ಪರಮೇಶ್ವರನು. ೧೫=ಕಾಮವು. ಕಾಮವು ಮಾಯ[illegible]ಯಾದುದು, ಮಾಯಾಪರನೆಂದರೂ ಮಾಯಾ[illegible]ಸಕ್ತನೆಂದರೂ ಕಾಮಾಸಕ್ತನೆಂದರ್ಥವು. ಪ[illegible]ಶಬ್ದಕ್ಕೆ [illegible]ವೆಂಬದಾಗಿ ಅರ್ಥವುಂಟು, [illegible]

ಥರನೇ ಜ್ಞಾನದೃಷ್ಟಿಯಿಂದ ಕಾಮವೈರಿಯಾಗುವನು. ಕಾಮಪೂರ್ಣನೇ ಕಾಮಶೂನ್ಯನೆಂದು ಫಲಿತಾರ್ಥವು ಸಿದ್ಧಿಸುತ್ತಿದೆ. ಕಾಮವಿಜಯವು ಮಾಡಿದವನು ಶಿವನಾದುದರಿಂದ ಕಾಮವಿರೋಧಿಯಾದ ೧೪ನೇ ಪರಬ್ರಹ್ಮಕ್ಕೆ ಉದ್ದಿಷ್ಟನಾದವನು. ಇದು ಪ್ರಸಿದ್ಧಾರ್ಥವು. ಇನ್ನು ಇದರ ವಿಶೇಷಾರ್ಥವೇನೆಂದರೆ.— ೧೨೧, ಆದಕಾರಣ ೧೨೦. ೧೨, ೧೫೨ ಶಂಕರನೆಂತಲೂ, ೧೨೧೫೨ನಾರಾಯಣನೆಂತಲೂ ಅರ್ಥವಾಗುತ್ತಿದೆ. ೧+೨+೧+೫=೯ಓಂಕಾರವು. "ಓಮಿತ್ಯೇಕಾಕ್ಷರಂಬ್ರಹ್ಮ" ಎಂಬ ಶ್ರುತಿಪ್ರಮಾಣವಚನರೀತ್ಯಾ ಓಂಕಾರವೇ ಪರಬ್ರಹ್ಮವೆಂದೇರ್ಪಡುತ್ತಿದೆ. ಅಂತಾ ಓಂಕಾರವಾಚ್ಯನಾದ ಪರಬ್ರಹ್ಮ ಸ್ವರೂಪವನ್ನರಿತಂತಾ ಜ್ಞಾನಿಯ ಸಕಲ ಕೋರಿಕೆಗಳೂ ನಷ್ಟವಾಗಿ ಮನಸ್ಸು ನಿಷ್ಕಾಮವಾಗಿ ಬಂಧವಿಮೋಚನೆಯುಂಟಾಗುವುದು. ಇದೇ ಕಾಮಪೂರ್ತಿಮಿಯ ರಹಸ್ಯವು.

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯರಾದ ಶ್ರೀಮಚ್ಛಂಕರ ಜಗತ್ಪಾದರಿಂದ ಉಪದಿಷ್ಟವಾದ ಭವಗೋವಿಂದವೆಂಬ ದ್ವಾದಶಮಂಜರೀಸ್ತೋತ್ರವು ತತ್ವಾರ್ಥ ಬೋಧಕವಾಗಿಯೂ ನೀತಿಪ್ರಧಾನವಾಗಿಯೂ ಇರುವದರಿಂದ ವಿದ್ಯಾರ್ಥಿಗಳ ವಿಷಯದಲ್ಲಿ ಅವು ಎಲ್ಲರಿಂದಲೂ ಪಠಿಸಲ್ಪಡುತ್ತಿವೆ. ಸದರೀ ಸ್ತೋತ್ರವು ಸಂಸ್ಕೃತ ಭಾಷಾನಿಬದ್ಧವಾದುದಾಗಿರುವದರಿಂದ ತತ್ವಾರ್ಥವು ಸಾಮಾನ್ಯವಾಗಿ ಎಲ್ಲರಿಗೂ ತಿಳಿಯಲಾರದು, ಪರಂತು ಅದರ ಅರ್ಥವನ್ನೆಲ್ಲರೂ ಅವಶ್ಯ ತಿಳಿದುಕೊಳ್ಳಬೇಕಾಗಿರುವದರಿಂದ, ಇದಕ್ಕೊಂದು ಸೌಲಭ್ಯವನ್ನು ಇದುವರೆವಿಗೆ ಕರ್ಣಾಟ ಭಾಷೆಯಲ್ಲಿ ಯಾರಿಂದಲೂ ಕಲ್ಪಿಸಲ್ಪಟ್ಟಂತೆನಮ್ಮ ಕೇಳ್ವಿಕೆಗೆ ಬಂದಿಲ್ಲವು. ಈಚೆಗೆ ಮೈಸೂರ್ ಸಂಸ್ಕೃತಕಾಲೇಜು ಅಸಿಸ್ಟೆಂಟ್ ವ್ಯಾಕರಣ ಪಂಡಿತರಾದ ಬ್ರಹ್ಮಶ್ರೀ ಸೀತಾರಾಮಶಾಸ್ತ್ರಿಗಳೆಂಬವರು ಶ್ರೀಕಂಠಂ ರಂಗಪ್ಪನೇಕಗಳಾದ ಸದರೀ ದ್ವಾದಶ ಚತುರ್ದಶಮಂಜರೀ ಸ್ತೋತ್ರಗಳಿಗೆ ಆಯಾ ಶ್ಲೋಕಗಳ ಮುಖ್ಯ ತಾತ್ಪರ್ಯವನ್ನು, ಸುಲಭವಾಗಿ ಬೋಧೆಯಾಗುವಂತೆ,ವ್ಯಾಕರಣವಾಗಿ ಬರೆದಿರುವದಲ್ಲದೆ ಆಯಾ ಶ್ಲೋಕಾರ್ಥವನ್ನು ಆಕೃತಿಯನ್ನೇ ಅನುಸರಿಸಿ ಪದ್ಯರೂಪವಾಗಿಯು ಸಹ ರಚಿಸಿ ಮುದ್ರಿಸಿರುತ್ತಾರೆ. ಕೆಲವರು ದೊಡ್ಡ ಮನುಷ್ಯರ ಪ್ರೇರಣೆ ಪ್ರೋತ್ಸಾಹ ಈ ಸಣ್ಣ ಗ್ರಂಥವನ್ನು ಬಾಷಾಂತರದೊಡನೆ ಮುದ್ರಿಸಿ ಪ್ರಕಟಿಸಿದ್ದು ಶ್ಲಾಘ್ಯವಾದ ಉದ್ದೇಶ ಪ್ರಯತ್ನಗಳೆಂದು ಭಾವಿಸಿರಲಾರೆವು. ಇದು ಸ್ಫುಟವಾದ ಅಕ್ಷರದಲ್ಲಿ ಒಳ್ಳೆ ಕಾಗದದೊಳು ಮೈಸೂರ್ ಶಂಕರ ವಿಲಾಸ ಮುದ್ರಾಕ್ಷರ ಶಾಲೆಯಲ್ಲಿ ಮುದ್ರಿಸಲ್ಪಟ್ಟಿರುತ್ತಿದೆ. ಇದರ ಕ್ರಯವು ಎರಡಾಣೆ ಚಾರ್ಜಿನೊಡನೆ ೨ ಆಣೆ. ಪುಸ್ತಕ ದ್ವಾದಶಮಂಜರೀ ಸ್ತೋತ್ರವಂ ಭಾಷಾಂತರ ಮಾಡಿದ್ದರಲ್ಲಿ ಸದರೀ ಸೀತಾರಾಮ ಶಾಸ್ತ್ರಿಗಳವರು ಸಾಧ್ಯವಾದ ಮಟ್ಟಿಗೆ ಮೂಲಗ್ರಂಥವನ್ನನುಸರಿಸುತ್ತ ಅದರ ಅರ್ಥಸ್ವಾರಸ್ಯವು ಕಾಪಾಡುತ, ಮಾಧುರ್ಯವಂ ಪೋಷಿಸಿಕೊಂಡು, ಸೌಲಭ್ಯಕ್ಕೆ ನ್ಯೂನತೆ ಬಾರದಂತೆ ಲಕ್ಷಣಕ್ಕೆ ಅವಿರುದ್ಧವಾಗಿ ರಚಿಸಿರುವ ಪದ್ಯಗಳು ನಮಗೆ ಸಂತೋಷವನ್ನುಂಟುಮಾಡತಕ್ಕವ್ವಾಗಿರುತ್ತಿವೆ.

## Occasional Notes.
## ನೈಮಿತ್ತಿಕ ವಿಷಯನ್ಯಾಸ.

ಬಾಲಕರಾದ ರಂಪುರದ ನವಾಬರವರು ತಮ್ಮ ಗಾರ್ಡಿಯನ್ನರಾದ ಕೆಪ್ಟೆನ್‌ಕಾರ್ವಿನ್ ಮತ್ತು ತಮ್ಮ ಯೂರೋಪಿಯನ್ ವಿದ್ಯಾಗುರು ಮೊದಲಾದವರೊಡನೆ, ಈಚೆ ಸೋಮವಾರದ ದಿನ ಬೇರೆ ೩ ಎಂಬ ಪ್ರದೇಶದಿಂದ ಪ್ರಯಾಣವಾದರು. ಇವರು ಮುಂಬೈದಡದಲ್ಲಿ ಹಡಗು ಹತ್ತಿ, ಈಭೂಮಂಡಲವನ್ನು ಸುತ್ತಿ ನೋಡಿಕೊಂಡು ಬರಬೇಕೆಂಬ ಉದ್ದೇಶದೊಡನೆ ಹೋಗುತ್ತಾರೆ.

ಸರ್ಕಾರದಲ್ಲಿ ನೌಕರಿಮಾಡಿ ಪೆನ್ಷನ್ ಮೇಲೆ ನಿವೃತ್ತರಾದವರನ್ನು ಮರಳಿ ಗವರ್ನಮೆಂಟ್ ನೌಕರಿಯಲ್ಲಿಡಕೂಡದೆಂದು ಮದರಾಸ್ ಗವರ್ನಮೆಂಟಿನವರು ನಿರ್ಣಯಿಸಿರುವದರಿಂದ ಅದನ್ನನುಸರಿಸಿ ಈಗ ಮಿ|| ಎಲ್ ಗಾರ್ಥ್ ವೈಟ್ ಯೆಂಬವರು ನೋಡುತ್ತಲಿರುವ ಸದರೀ ಗವರ್ನಮೆಂಟ್ ಮಳೆಯಾಳಂ ಟ್ರಾನ್ಸ್ಲೇಟರ್ ಕೆಲಸ ವಿಜ್ಞಾಪನೆ ಖಾಲಿಯಾಗಬಹುದಾಗಿ ಕಾಣುತ್ತಿದೆ.

ಇಂಡ್ಯದೇಶದ ಆಯಾ ಪ್ರೆಸಿಡೆನ್ಸಿ ಕವರ್ನಮೆಂಟ್ ಚೀಫ್ ಅಧಿಕಾರಗಳು ಅನಾವಶ್ಯಕವೆಂದು ತೋರಿರುವು, ಮುಂದೆ ಅವುಗಳಿಗೆ ಮಾತ್ರ ಅಧಿಕಾರಕ್ಕೆ ಪ್ರಾರಂಭವನ್ನು ಉತ್ತಮರಾಗಿ ಅವರ ವಿಷಯದಲ್ಲಿ ಒಂದು ಮಸವಿದಾ ಆಕ್ಟು ರಚಿಸಲ್ಪಟ್ಟು ಪಾರ್ಲಿಯಮೆಂಟ್ ಸಭೆಯ ಮುಂದೆ ಹಾಕಿದರೆಂದು ಸೆಕ್ರಿಟೆರಿ ಆಫ್ ಸ್ಟೇಟ್ ರಾಜ ಪಕ್ಷದ ಅಪಾಯಗಳ ಸಮಾಜವಾದ ಚಾರ್ಜಿಯಲ್ಲಿ ಮಂಜೂರಾಗುವುದಿದೆ.

ಇಂಡ್ಯರಾಜ್ಯದ ಕವರ್ನರ್ ಜನರಲ್‌ರವರಾದ ಲಾರ್ಡ್ ಲ್ಯಾನ್ಸ್‌ಡೌನ್ ಯವರು ಈ ದೇಶಕ್ಕೆ ಬಂದ ಪ್ರಾರಂಭದಲ್ಲಿ ಉತ್ತಮವಾದ ನೌಕರಿಯಜ್ಞನ ಸಕಾರ್ಯ, ಸದರೀ ಗಾಡಿಗಳಿಗೆ ರಸ್ತೆಯ ಮೇಲೆ ಕುಳಿತಿರುವಂತೆ ಒಂದು ಪ್ರತಿಮೆಯ ಮಾಡಿಸಿಡಬೇಕೆಂದು ಕಲ್ಕತ್ತಾ ಮೈದಾನದಲ್ಲಿ ಸ್ಥಾಪಿಸಬೇಕೆಂದು ಖಂಡಿತವಾಗಿ ನಿರ್ಣಯಿಸಲ್ಪಟ್ಟು, ಮೊದಲು ಸದರೀ ಸಾಹೇಬರಂತೆ ಒಂದು ತಸ್ವೀರನ್ನು ತಯಾರು ಮಾಡಿಸುವ ಪ್ರಯತ್ನಕ್ಕಾಗಿ ಚಂದಾ ಮಾಡಿದವರನ್ನೆಲ್ಲ ಅವರ ಚಂದಾವೆಂಬ ಹಣವನ್ನು ಮೇಲೆ ತಿಳಿಸಲ್ಪಟ್ಟ ಪ್ರತಿಮೆಗೆ ಉಪಯೋಗಿಸಿಕೊಳ್ಳುವದಕ್ಕೆ ಅವರ ಸಮ್ಮತಿಯಂ ಕೋರತಕ್ಕೊಂದು ವ್ಯವಸ್ಥೆಯಾಯಿತು. ಈ ಕಾರ್ಯಕ್ಕಾಗಿ ಇದುವರೆವಿಗೆ ಸಾಲ್ವತ್ತರಿಂದ ಅಧಿಕ ಹಣ ಚಂದಾ ಮಾಡಿದವರಿಂದ ಇದುವರೆಗೆ ಸ್ವೀಕರಿಸಲ್ಪಟ್ಟಿದೆ. ಅಷ್ಟ ಆದಾಗ್ಯೂ ಲಾರ್ಡ್ ರಾಬರ್ಟ್ಸ್ ಸಾಹೇಬರವರು ಇಂಡಿಯಾದೇಶೀಯರ ವಿಷಯದಲ್ಲಿ ಮಾಡಿದ ಉಪಕೃತಿಯ ಸ್ಮರಣಾರ್ಥವಾಗಿ ಒಂದು ಯಾವಪತ್ರಿಕೆಯ ಮೂಲಕವಾಗಿಯೂ ಇದು ವರೆವಿಗೆ ಹೊರಬಿದ್ದಂತೆ ತಿಳಿಯಬರಲಿಲ್ಲವು.

ತುಪ್ಪವು ಎಣ್ಣೆಗಿಂತಲೂ ರುಚಿಕರವಾದ ಮತ್ತು ರಕ್ತವೃದ್ಧಿಕಾರಿಯಾದ ಪದಾರ್ಥವೆಂದು ಸಾಮಾನ್ಯವಾಗಿ ಯೆಲ್ಲರ ಅಭಿಪ್ರಾಯವಾಗಿರುತ್ತಿದೆ. ಇದಕ್ಕೆ ಅನುಸಾರವಾಗಿ ಒಬ್ಬ ಡಾಕ್ಟರು, ಜಾಜ್ಜರಿಗೆ ಆಹಾರವಂ ತಯಾರ್ಮಾಡುವದರಲ್ಲಿ ಅಚ್ಚೆಳ್ಳೆಣ್ಣೆಯ ಉಪಯೋಗವು ಕೆಟ್ಟದ್ದೆಂದು ಖಂಡಿಸಿ, ಅದಕ್ಕೆ ಬದಲು ತುಪ್ಪವನ್ನು ಉಪಯೋಗಿಸಬೇಕೆಂದು ಗವರ್ನಮೆಂಟಿಗೆ ಶಿಫಾರಸ್ಸು ಮಾಡಲು ಅವರು ಅದರಂತೆ ಮಂಜೂರ್ಮಾಡಿದರು. ಜೆಯಿಲ್‌ಗಳ ಇನ್ಸ್‌ಪೆಕ್ಟರ್ ಜನರಲ್‌ರವರಾದ ಮಿ|| ಕಾರ್ಟ್ಯು ಎಂಬವರು ತಮ್ಮ ಅಧಿಕಾರಕ್ಕೊಳಪಟ್ಟಿರುವ ಜೆಯಿಲ್‌ಗಳಲ್ಲಿನ ಖೈದಿಯರ ಆಹಾರಗಳಿಗೆ ಅಚ್ಚೆಳ್ಳೆಣ್ಣೆಯನ್ನೇ ಉಪಯೋಗಿಸಬೇಕೆಂದು ಮುಖ್ಯರ ಹುಕುಮಿರುತ್ತಾರೆ, ಪರಂತು ಸದರೀ ಜೆಯಿಲ್‌ಗಳಲ್ಲಿರುವ ಖೈದಿಯರಿಗೆ ಇದುವರೆವಿಗೆ ತುಪ್ಪವೇ ಅಭ್ಯಾಸವಾಗಿದೆ. ಸ್ವತಂತ್ರರಾದ ಇಬ್ಬರು ಅಧಿಕಾರಿಗಳ ಅಭಿಪ್ರಾಯಗಳು ಭಿನ್ನವಾದಮೇಲೆ ಇದು ವ್ಯವಸ್ಥೆಯಾಗಬೇಕಾದ ಬಗೆ ಹ್ಯಾಗೋ ತಿಳಿಯದು.

ಇಂಡ್ಯಾ ದೇಶದ ಅಭಿವೃದ್ಧಿ ವಿಷಯದಲ್ಲಿ ಸರ್ ವಿಲ್ಲಿಯಂ ಹಂಟರವರು ಬರೆದ ಒಂದು ಉಪನ್ಯಾಸವಂ ಕುರಿತು ವಿಚಾರ ಮಾಡುವ ಸಂದರ್ಭದೊಳು ಡೆಯಿಲೀ ಕ್ರಾನಿಕಿಲ್ ಎಂಬ ಪತ್ರಿಕೆ ತಿಳಿಸುವ ಅಭಿಪ್ರಾಯವೇನೆಂದರೆ:—ರಷ್ಯಾ ದೇಶೀಯರಿಂದ ನಮಗೆ ಉಂಟಾಗಿರುವ ಭೀತಿಯು ಅತಿಶಯೋಕ್ತಿಯಾಗಿ ತಿಳಿಸಲ್ಪಟ್ಟಿದೆ. ನೇಟಿವ್ ಸಂಸ್ಥಾನಾಧಿಪತಿಗಳು ಚಕ್ರವರ್ತಿನೀಯವರಿಗೆ ಬದಲು ರಷಿಯಾ ಚಕ್ರವರ್ತಿಯನ್ನು ಕೋರುವದಿಲ್ಲವು. ಇಂಡ್ಯದೇಶದಲ್ಲಿ ನಮಗೆ ನಿಜವಾದ ಬಂದೋಬಸ್ತಿಯು ಪ್ರಜೆಗಳ ನಂಬಿಕೆಯು ಮತ್ತು ರಾಜಭಕ್ತಿಯಾಗಿರುತ್ತಿದೆ. ಅವು ನಮಗೆ ಲಭಿಸದೆ ಹೋದಮೇಲೆ ನಾವು ಅಲ್ಲಿಗೆ ಹೋಗುತಲೇ ಇರಲಿಲ್ಲವು. ಇಂಡ್ಯ ರಾಜ್ಯವನ್ನು ನೇಟಿವ್ ಶಿಪಾಯಿಗಳು ಗೆದ್ದು ನಮಗಾಗಿ ಇಟ್ಟುಕೊಂಡಿರುತ್ತಾರೆ. ಕೇವಲ ಹಿಂಸೆಗೆ ಗುರಿಮಾಡಲ್ಪಟ್ಟ ಜನರು ಮಾಡುವ ವಾದಿಕೆಯಂತೆ ಆ ಕ್ಷಿನ ಪ್ರಜೆಗಳು ನಮ್ಮಮೇಲೆ ತಿರುಗಿಬೀಳುವ ದಕ್ಕೆ ಯತ್ನ ಪಡುವ ಪಕ್ಷದಲ್ಲಿ ಇಂಡ್ಯ ದೇಶದೊಳಿರುವ ಪ್ರತಿಯೊಬ್ಬ ಯೂರೋಪಿಯನನ್ನು ಒಂದು ತಿಂಗಳ ಕಾಲದೊಳಗಾಗಿ ಸಮುದ್ರದೊಳು ಬೀಸದೆ ಬಿಡುವರು. ಈ ಕಾರಣದಿಂದಲೇ ಇಂಡ್ಯದೇಶದಲ್ಲಿರುವ ದೊಡ್ಡ ಅಧಿಕಾರಿಗಳು ನೇಟಿವರ ವಿಷಯದಲ್ಲಿ ಆಲೋಚನಾ ಪೂರ್ವಕವಾಗಿಯೂ ಜಾಗರೂಕತೆಯೊಡನೆಯೂ ನಡೆಸತಕ್ಕ, ಯಾವಾದರೊಂದು ಬದಲಾವಣೆಯನ್ನು ಮಾಡಬೇಕಾಗಿದ್ದರೆ ಅದು ನೇಟಿವರಿಗಳ ಅಭಿಪ್ರಾಯಕ್ಕೆ ಯೆಷ್ಟರಮಟ್ಟಿಗೆ ಒಪ್ಪಿತವಾಗಿರುವದೆಂದು ತಿಳಿದುಕೊಳ್ಳುವದಕ್ಕಾಗಿ ಬಹುಕಾಲ ಯೋಚಿಸುತಲೂ, ಸದರೀ ಕೆಲಸವು ಪ್ರಾರಂಭ ಮಾಡಲಾರದೆ ಶಂಕಿಸುತ್ತಾರೆ, ಎಂಬದು.

## LOCAL AND PROVINCIAL NEWS.
## ಒಳದೇಶಮತ್ತು ತಾಲ್ಲೋಕ್‌ಜಾತಿವೃತ್ತಾಂತಗಳು.

ಪದ್ಧತಿ ಮೇರೆಗೆ ಶ್ರೀಮನ್ಮಹಾರಾಜರವರ ಉದಕಮಂಡಲ ಪ್ರಯಾಣಕ್ಕಾಗಿ ಮೈಸೂರಲ್ಲಿ ಸನ್ನಾಹಗಳು ನಡೆಯುತಲಿರುವಂತೆ ತಿಳಿಯಬರುತ್ತಿದೆ.

ಬರುವ ಶುಕ್ರವಾರದದಿನ ಶ್ರೀಮನ್ಮಹಾರಾಜಾ ಚಾಮರಾಜೇಂದ್ರ ಒಡೆಯರ್ ಬಹದೂರ್, ಜಿ. ಸಿ. ಎಸ್. ಐ. ಯವರ ವರ್ಷವರ್ಧಂತಿಯಾದುದರಿಂದ ಆಬ್ಬ್ಯ ವಿಶಿಷ್ಟ ಆಫೀಸುಗಳಿಗೂ ರಜಾ ಕೊಡಲ್ಪಡುವುದು.

ಮೈಸೂರ್ ಕೂಕರಹಳ್ಳಿ ಕೆರೆಯಲ್ಲಿ ನೀರು ಬತ್ತಿರ ಬಂದದರಿಂದ ರಾಜಧಾನಿಗೆ ಪಕ್ಕದ ಮೈಲಿಗಳ ಫಾಸಲೆಯಲ್ಲಿರುವ ಕಾವೇರೀ ನಾಲೆಯಿಂದ ನಲ್ಲಿಗಳಿಟ್ಟು ಮೈಸೂರಿಗೆ ನೀರು ತೆಗೆದುಕೊಂಡು ಹೋಗುವ ಪ್ರಯತ್ನ ನಡೆಸಲ್ಪಡುವಂತೆ ಕೇಳುತ್ತೇವೆ.

ಶ್ರೀಮನ್ಮಹಾರಾಜರವರ ವರ್ಷವರ್ಧಂತಿ ಮಹೋತ್ಸವದ ಬಗ್ಗೆ ಸರ್. ಕೆ. ಶೇಷಾದ್ರಿಅಯ್ಯರ್, ಕೆ. ಸಿ. ಎಸ್. ಐ ಯವರು ನಾಳೆಯ ದಿನ ಮಧ್ಯಾಹ್ನಾತ್ಪರ ಮೈಲ್ ಗಾಡಿಯಲ್ಲಿ ಮೈಸೂರಿಗೆ ದಯಮಾಡಿ ಸ್ವಲ್ಪದಿನಗಳಲ್ಲಿ ಇಲ್ಲಿಗೆ ವಾಪಸ್ ಬರುವರೆಂದು ಕೇಳುತ್ತೇವೆ.

ಕಳೆದ ವಾರದೊಳು ಈವೂರಲ್ಲಿರುವ ದಕ್ಷಿಣ ಮಹಾರಾಷ್ಟ್ರ ರೆಯಿಲ್ವೆ ಸರುಕುಗಳ ಆಫೀಸಿನಿಂದ ೧೫೦೦ ಚಲ್ಲರೆ ರೂಗಳ ನೋಟುಗಳು ಪದ್ಧತಿ ಮೇರೆ ಕೊಗಳಿನ ಚೀಲದಲ್ಲಿ ಹಾಕಿ ರೆಯಿಲ್ ಮಾರ್ಗದಲ್ಲಿ ಧಾರ್ವಾಡಕ್ಕೆ ರವಾನಿಸಲ್ಪಟ್ಟದ್ದು ಮಧ್ಯ ಮಾರ್ಗದಲ್ಲಿ ಕಳವಾಗಿ ಇದುವರೆವಿಗೆ ಪತ್ತೆ ಆಗಲಿಲ್ಲವೆಂದು ತಿಳಿಯಬರುತ್ತಿದೆ. ಇಲ್ಲಿನ ಸ್ಟೇಷನ್ ನೌಕರರ ಮನೆಗಳಲ್ಲಿಯೂ ಝಡ್ತಿ ಮಾಡಲ್ಪಟ್ಟಿತು. ಇನ್ನೂ ಪತ್ತೆಯ ಬಗ್ಗೆ ಬಹುವಿಧ ಪ್ರಯತ್ನಗಳು ನಡೆಸಲ್ಪಡುತ್ತಿವೆ.

ಕಳೆದ ಬೃಹಸ್ಪತಿವಾರದ ದಿನ ಪ್ರಾತಃಕಾಲ ಸ್ವಲ್ಪವಾಗಿಯೂ, ಮಧ್ಯಾಹ್ನಾತ್ಪರ ಸುಮಾರು ಮೂರು ಘಂಟೆಗೆ ಒಲವಾಗಿ ಮೋಡವುಂಟಾಗಿ ಅರ್ಧಘಂಟೆ ಕಾಲದೊಳಗಾಗಿ ಒಂದುವರೆ ಅಂಗುಳದಷ್ಟು ಮಳೆಬಿತ್ತು. ಕೆಲವುಕೆರೆಕುಂಟೆಗಳಿಗೆ ಸುಮಾರು ಒಂದು ತಿಂಗಳುಗಳಿಗಾಗುವಷ್ಟು ನೀರು ಬಂದಿದೆ. ನೈಋತ್ಯ ದಿಕ್ಕಿನಿಂದ ಅಂತಾ ಮಳೆ ಇನ್ನೊಂದೆರಡು ಹೆಚ್ಚು ಬಿದ್ದರೆ ಸದ್ಯಕ್ಕೆ ಜನರಿಗೆ ಕ್ಷಾಮವು ಸ್ವಲ್ಪ ಪರಿಹಾರವಾಗುವುದು, ಬಿಸಿಲಿನ ಜ್ವರದ ತಾಪವನ್ನು ನೋಡಲಾಗಿ ಕ್ಷಿಪ್ರದಲ್ಲಿ ಮಳೆಬರಬಹುದೆಂದು ತೋರುತ್ತಿದೆ. ಆಹಾರಧಾನ್ಯಗಳ ಧಾರಣೆಗಳು ಒಂದೇವಿಧವಾಗಿವೆ. ಜ್ವರರೋಗವು ಜನರನ್ನು ಬಹಳಬಾಧಿಸುತ್ತಿದೆ.

ಮೈಸೂರು ಗವರ್ನಮೆಂಟ್ ಸೀನಿಯರ್ ಸರ್ಜನ್ ಮತ್ತು ಸಾನಿಟರಿ ಇನ್ಸ್‌ಪೆಕ್ಟರಾದ ಡಾಕ್ಟರ್ ಮೆಗ್ಗಾನ್ ಸಾಹೇಬರವರು ಈ ಸಂಸ್ಥಾನದ ನೌಕರಿಯಿಂ ಬಿಟ್ಟು ಬ್ರಿಟಿಷ್ ಸರ್ಕಾರ್ ನೌಕರಿಯಲ್ಲಿ ಬರ್ಮಾರಾಜ್ಯಕ್ಕೆ ಹೋಗುತ್ತಾರೆಂದು ಒಳದೇಶದ ಡೆಯಿಲೀಪೋಸ್ಟೆಂಬ ಪತ್ರಿಕೆಯು ಪ್ರಕಟಿಸಿದ ವರ್ತಮಾನವು ಸುತರಾಂ ನಿರಾಧಾರವಾದುದೆಂತಲೂ, ಸದರೀ ಡಾಕ್ಟರವರು ಇನ್ನು ನಾಲ್ಕು ವರ್ಷಗಳ ಕಾಲ ಮೈಸೂರ್ ಸರ್ಕಾರ್ ನೌಕರಿಯಲ್ಲಿರುವರೆಂತಲೂ ಒಳದೇಶದ ಸ್ಪೆಕ್ಟೇಟರ್ ಪತ್ರಿಕೆ ತಿಳಿಸುತ್ತಿದೆ. ಯೂರೋಪಿಯನ್ ಅಧಿಕಾರಿಗಳು ಮೈಸೂರ್ ಸರ್ಕಾರದಲ್ಲಿ ನೌಕರಿಮಾಡುವ ಕಾಲವು ಇಷ್ಟೇ ಯೆಂದು ನಿರ್ಧರಿಸಿ ಹೇಳುವದನ್ನು ಯಾವಾಗಲೂ ಅಪ್ರಯೋಜಕವಾದುದೆಂಬದಕ್ಕೆ ಮಿ|| ರಿಕೆಟ್ಸ್ ಸಾಹೇಬರವರ ವಿಷಯವನ್ನು ನಿದರ್ಶನಕ್ಕೋಸ್ಕರ ಅಂಗೀಕರಿಸಬಹುದು.

## THE MYSORE GAZETTE.
## ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜ ರಾಜಾ ಸಾಹೇಬ್ ಬಹದೂರವರ ಸನ್ನಿಧಿಯಿಂದ ಕೊಡೋಣವಾದ ಅಪ್ಪಣೆ ಹುಕುಮಿನಾಮೆಗಳು.

ನಂ|| ೧೯೯೯೯–೮ ಡಿ.ಕೆ೧೬, ತಾ|| ೭ನೇ ಮಾರ್ಚಿ ೧೮೯೩.—ಸರ್ ೧೮೯೩ನೇ ಇಸವಿ ಫಿಬ್ರವರಿ ೧೪ನೇ ತಾರೀಖ್ ಮಧ್ಯಾಹ್ನಾತ್ಪರ, ಶಿವಮೊಗ್ಗಾ ಡಿಸ್ಟ್ರಿಕ್ಟ್ ಪೋಲೀಸ್ ಆಫ್ ಚಾರ್ಜನ್ನು ಮಿ|| ಡಿ. ಎ. ಬಾಲ್ಟರ್‌ಯವರು ಡೆಪ್ಯುಟಿ ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮಿ|| ಸಿ. ಹಾಡ್ಗಿನ್‌ಯವರು ಕೆಗರುಕೊಂಡಿರುತ್ತಾರೆ.

ನಂ|| ೧೮೯೮೬೩–೮ ಡಿ.ಕೆ೧೬, ತಾ|| V ನೇ ಮಾರ್ಚ ೧೮೯೩.—ಅಫಿಷಿಯೇಟಿಂಗ್ ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮಿ|| ಡಿ. ಎ. ಬಾಲ್ಟರ್ ಯವರು ಸರ್೧೮೯೩ ನೇ ಇಸವಿ ಫಿಬ್ರವರಿ ೨೩ ನೇ ತಾರೀಖ್ ಮಧ್ಯಾಹ್ನಾತ್ಪರ ತುಮಕೂರು ಡಿಸ್ಟ್ರಿಕ್ಟ್ ಪೋಲೀಸ್ ಚಾರ್ಜನ್ನು ವಹಿಸಿರುತ್ತಾರೆ.

ನಂ|| ೧೮೯೯೦–೮ ೯ ೧೫–೯ ತಾ|| ೯ನೇ ಮಾರ್ಚ ೧೮೯೩.—ಮೈಸೂರು ಸರ್ವಿಸ್ ರೆಗ್ಯುಲೇಷನ್ ೧೭೦ ನೇ ಆರ್ಟಿಕಿಲ್ ಅನುಸರಿಸಿ, ಕೋಲಾರ ಡಿಸ್ಟ್ರಿಕ್ಟು ಜನರಲ್ ಅಸಿಸ್ಟೆಂಟ್ ಕಮಿಷನರ್ ಮಿ|| ಕೆ. ಎಸ್. ದೊರೆಸ್ವಾಮಿ ಅಯ್ಯರವರು, ಸರ್ ೧೮೯೩ ನೇ ಇಸವಿ ಫಿಬ್ರವರಿ ೨೦ ನೇ ತಾರೀಖ್ ಮೊದಲು ೫ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದ್ದರು.

ನಂ|| ೧೯೫೦೭–೮ ಡಿ.ಕೆ೨೩, ತಾ|| ೧೧ ನೇ ಮಾರ್ಚ ೧೮೯೩.—ಸರ್ ೧೮೯೨ ನೇ ಇಸವಿ ಡಿಸಂಬರ್ ೧೬ ನೇ ಮಕ್ಕಾಂ V೬೪೮೦–೮. ೯. ೨೪೫–೯೦ ನೇ ನಂಬರಿನಲ್ಲಿ ಇಸ್ತಿಹಾರ್‌ನಾಮೆಯ ಮೂಲಕ, ಮೂರು ತಿಂಗಳ ರಜಾ ಕೊಡಲ್ಪಟ್ಟದ್ದ ಪ್ರೊಬೇಷನರಿ ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ರಾದ ಮ|| ಅಬ್ದುಲ್ ರಹಿಮ ಮೆಕ್ರಿ ಯವರು ಸದರೀ ರಜಾವನ್ನು ಸರ್ ೧೮೯೩ ನೇ ಇಸವಿ ಆಗಸ್ಟು ೩ನೇ ತಾರೀಖಿನ ಮಧ್ಯಾಹ್ನಾತ್ಪರ್ಯ ಉಪಯೋಗಿಸಿಕೊಂಡು ಸರ್೧೮೯೩ ನೇ ಇಸವಿ ಜನವರಿ ೨೩ ನೇ ತಾರೀಖಿನ ಮಧ್ಯಾಹ್ನಾತ್ಪೂರ್ವ ನೌಕರಿಗೆ ವಾಪಸ್ ಬಂದದರಿಂದ ಸದರೀ ರಜಾ ಪೈಕಿ ಉಳಿದ ಭಾಗ, ಅಂದರೆ ೧೨ ದಿನಗಳು ಇದರಿಂದ ರದ್ದು ಮಾಡಲ್ಪಟ್ಟಿರುತ್ತಿದೆ.

ನಂ|| ೧೯೫೦೯–೮ ಡಿ.ಕೆ೨೩, ತಾ|| ೧೩ ನೇ ಮಾರ್ಚ ೧೮೯೩.—ಮೈಸೂರು ಸರ್ವಿಸ್ ರೆಗ್ಯುಲೇಷನ್ ೧೭೭ ನೇ ಆರ್ಟಿಕಿಲ್ ಅನುಸರಿಸಿ, ಈ ತಿಂಗಳ ೧೪ ನೇ ತಾರೀಖ್ ಮೊದಲು ಉಪಯೋಗಿಸಿಕೊಳ್ಳುವಂತೆ, ಚಿತ್ರದುರ್ಗ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ಮಿ|| ಎಗ್. ವೆಂಕಟ್ಟಯ್ಯರವರಿಗೆ ೨೦ ದಿನಗಳ ಪ್ರಿವಿಲೇಜ್ ರಜಾ ಮಂಜೂರ್ಮಾಡಲ್ಪಟ್ಟಿರುತ್ತಿದೆ.

ಆಕ್ಟಿಂಗ್ ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ರಾದ ಮಿ|| ಬಿ. ಜಿ. ಕುಮಾರಸ್ವಾಮಿ ನಾಯಕರವರು ಮಿ|| ಎಸ್. ವೆಂಕಟ್ಟಯ್ಯರವರು ರಜಾ ಮೇಲೆ ಗೈರ್ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ, ಹುಗಾಮಿ ತಾತ್ಕಾಲಿಕ ಚಿತ್ರದುರ್ಗ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟಾಗಿ ನೇಮಕರಾಗ್ಯಲ್ಪಟ್ಟಿರುತ್ತಾರೆ.

**ಸನ್ ೧೮೯೩ನೇ ಇಸವಿಯ VIII ನೇ ನಂಬರ್ ರೆಗ್ಯುಲೇಷನ್ನಿಂದ ತಿದ್ದುಪಡಿಯಾದ ೧೮೭೧ನೇ ಇಸವಿಯ ರಾಸುಗಳ ಅತಿಕ್ರಮ ಪ್ರವೇಶಕ್ಕೆ ಸಂಬಂಧಪಟ್ಟ ಕಾನೂನನ್ನು ಪ್ರೊಯುಕ್ತಪಡಿಸಿ ದುರಸ್ತು ಮಾಡುವದಕ್ಕೆ ಹುಟ್ಟಿದ ೧ನೇ ನಂಬರ್ ಆಕ್ಟು.**

(ಕಳೆದ ವಾರದ ಶೇಷ)

ಪರಂತು, ಒಬ್ಬ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರ ರಿಪೋರ್ಟಿನಿಂದ ಯಾ ಒಬ್ಬ ಸ್ಥಳಕ ಅಧಿಕಾರಿಯು ತಿಳಿಸಿದ್ದರಮೇಲೆ, ಅಂಥಾ ಮಾಜಿಸ್ಟ್ರೇಟರ ಯಾ ಅಧಿಕಾರಿಯ ಸರಹದ್ದು ಯಾ ಮೇಲ್ವಿಚಾರಣೆಗೆ ಒಳಪಟ್ಟ ಯಾವದಾದರೂ ಸ್ಥಳಕ ಪ್ರದೇಶದಲ್ಲಿ, ಕಾಲ್ನಡೆಗಳು ಜಮೀನಿನಲ್ಲಿ ಅತಿಕ್ರಮಿಸಿಬಂದು ಅದರಲ್ಲಿರುವ ಫಸಲುಗಳನ್ನು ಯಾ ಇತರ ಉತ್ಪತ್ತಿಗಳನ್ನು ನಷ್ಟಪಡಿಸಲಿಕ್ಕೆ ವಾಡಿಕೆಯಾಗಿ ಆಸ್ಪದ ಕೊಡುತ್ತದೆಂದು ಮೈಸೂರು ಗವರ್ನಮೆಂಟಿನವರಿಗೆ ಕಾಣಬಂದರೆ ಸದರೀ ಗವರ್ನಮೆಂಟಿನವರು, ಸರ್ಕಾರೀ ಗೆಜೆಟ್ಟಿನಲ್ಲಿ ಇಸ್ತಿಹಾರು ಮೂಲಕ, ಅಂಥಾ ಸ್ಥಳಕ ಪ್ರದೇಶದಲ್ಲಿ ಹಿಡಿಯಲ್ಪಟ್ಟು ಮೇಲೆ ಕಂಡಂತೆ ದೊಡ್ಡಿಗೆ ಸೇರಿಸಲ್ಪಟ್ಟಿರಬಹುದಾದ ಸದರೀ ಇಸ್ತಿಹಾರಿನಲ್ಲಿ ಕಾಣಿಸಲ್ಪಟ್ಟ ಯಾವತರಹ ಕಾಲ್ನಡೆಯಾದರೂ ಅಂಥಾ ಕಾಲ್ನಡೆ ಒಂದಕ್ಕೆ ಮೇಲೆ ಕಂಡ ದರದ ಜುರ್ಮಾನೆಗೆ ಎರಡರಷ್ಟಕ್ಕೆ ಹೆಚ್ಚದೆ ಸದರೀ ಇಸ್ತಿಹಾರಿನಲ್ಲಿ ವಿಧಿಸಲ್ಪಡಬಹುದಾದ ಜುರ್ಮಾನೆಯನ್ನು ದೊಡ್ಡಿದಾರನು ವಸೂಲ್ಮಾಡತಕ್ಕದ್ದು ಎಂದು ಹುಕುಂ ಮಾಡಬಹುದು.

ಸ್ಥಳಕ ಗವರ್ನಮೆಂಟಿನವರು ಆಗಿಂದಾಗ್ಯೆ ಹುಕುಂ ಮಾಡುವ ಆಫಿಸರ್ ಮುಖಾಂತ್ರ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟಿಗೆ ವಸೂಲ್ಮಾಡಲ್ಪಟ್ಟ ಎಲ್ಲಾ ಜುರ್ಮಾನೆಗಳನ್ನೂ ಕಳುಹಿಸತಕ್ಕದ್ದು.

*ಜುರ್ಮಾನೆಗಳ ಮತ್ತು ಮೇವುಹಾಕಿದ ಖರ್ಚುಗಳ ಫೀರಸ್ತು.*

ಜುರ್ಮಾನೆಗಳ ಮತ್ತು ರಾಸುಗಳಿಗೆ ಮೇವು ಹಾಕುವ ಯಾ ನೀರು ಕುಡಿಸುವ ಖರ್ಚಿನ ದರಗಳ ಪಟ್ಟಿಯನ್ನು ಪ್ರತಿ ದೊಡ್ಡಿ ಯಾ ಅದರ ಸಮೀಪದಲ್ಲಿರತಕ್ಕ ಬಹಿರಂಗ ಸ್ಥಳಕ್ಕೆ ಚಿಕಟಾಯಿಸತಕ್ಕದ್ದು.

ಮೈಸೂರ್ ಗವರ್ನಮೆಂಟಿನವರು ಯಾವಕಾಲದಲ್ಲಾದರೂ, ಸರ್ಕಾರೀ ಗೆಜೆಟ್ಟಿನಲ್ಲಿ ಇಸ್ತಿಹಾರ್ ಮೂಲಕ, ಈ ಸೆಕ್ಷನಿನ ಎರಡನೇ ಕಲಮಿನಲ್ಲಿ ಕಂಡ ಇಸ್ತಿಹಾರನ್ನು ರದ್ದು ಮಾಡಬಹುದು ಯಾ ವ್ಯತ್ಯಾಸ ಪಡಿಸಬಹುದು.

೪ನೇ ಅಧ್ಯಾಯ.

ರಾಸುಗಳನ್ನು ಒಪ್ಪಿಸುವದು ಯಾ ವಿಕ್ರಯಿಸುವದು.

*ರಾಸುಗಳ ಮಾಲೀಕನು ಅವುಗಳನ್ನು ಕೇಳಿ ಜುರ್ಮಾನೆಗಳನ್ನೂ, ಖರ್ಚುಗಳನ್ನೂ ಕೊಟ್ಟ ಪಕ್ಷದಲ್ಲಿ ನಡಿಸತಕ್ಕ ರೀತಿ.*

೧೩. ದೊಡ್ಡಿಯಲ್ಲಿ ಸೇರಿಸಿರತಕ್ಕ ರಾಸುಗಳ ಮಾಲೀಕನು ಯಾ ಅವನ ಮುತಾಲೀಕನು ಬಂದು ರಾಸುಗಳನ್ನು ಕೇಳಿದ ಪಕ್ಷದಲ್ಲಿ, ದೊಡ್ಡೀದಾರನು ಸದರೀ ರಾಸುಗಳಗೋಸ್ಕರ ಸಂಭವಿಸಿದ ಖರ್ಚುಗಳನ್ನೂ, ಜುರ್ಮಾನೆಗಳನ್ನೂ, ವಸೂಲ್ಮಾಡಿಕೊಂಡು ಆತನಿಗೆ ಅವುಗಳನ್ನು ಒಪ್ಪಿಸಿ ಬಿಡತಕ್ಕದ್ದು.

ಮಾಲೀಕನು ಯಾ ಅವನ ಮುತಾಲೀಕನು ರಾಸುಗಳನ್ನು ತೆಗದುಕೊಂಡು ಹೋಗುವಾಗ್ಯೆ ದೊಡ್ಡೀದಾರನಿಂದ ಇಡಲ್ಪಟ್ಟಿರುವ ರಿಜಿಸ್ಟರಿನಲ್ಲಿ ಅವುಗಳಗೋಸ್ಕರ ಬಂದು ರಸೀತಿಗೆ ರುಜು ಹಾಕತಕ್ಕದ್ದು.

೧೪. ದೊಡ್ಡಿಯಲ್ಲಿ ರಾಸುಗಳನ್ನ ಸೇರಿಸಿದ ತಾರೀಖು ಮೊದಲ್ಗೊಂಡು ಯೇಳು ದಿವಸಗಳೊಳಗಾಗಿ ಅವುಗಳನ್ನ ಯಾರೂ ಕೇಳದೇ ಹೋದ ಪಕ್ಷದಲ್ಲಿ ದೊಡ್ಡೀದಾರನು ಸಮೀಪದಲ್ಲಿರತಕ್ಕ ಪೊಲೀಸ್ ಸ್ಟೇಷನಿನ ಜವಾಬ್ದಾರಿಯನ್ನುಳ್ಳ ಆಫಿಸರಿಗಾದರೂ ಇದಕ್ಕೋಸ್ಕರಲೇ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟನಿಂದ ಮೊಕರರ್ಮಾಡಲ್ಪಟ್ಟಂಥಾ ಇತರ ಆಫಿಸರಿಗಾದರೂ ರಿಪೋರ್ಟು ಮಾಡತಕ್ಕದ್ದು.

ಆಫಿಸರು ಆ ತರುವಾಯ ತನ್ನ ಆಫೀಸಿನ ಒಂದು ಬಹಿರಂಗವಾದ ಸ್ಥಳದಲ್ಲಿ :—

(a) ರಾಸುಗಳ ಸಂಖ್ಯೆಯನ್ನೂ ವಿವರಣೆಯನ್ನೂ,

(b) ಅವುಗಳನ್ನ ಹಿಡಿದ ಸ್ಥಳವನ್ನೂ,

(c) ಅವುಗಳನ್ನ ದೊಡ್ಡೀಲಿ ಸೇರಿಸಿರತಕ್ಕ ಸ್ಥಳವನ್ನೂ ನಮೂದಿಸಿ ಒಂದು ನೋಟೀಸು ಬರೆದು ಚಿಕಟಾಯಿಸತಕ್ಕದ್ದು.

ಮತ್ತು ಅವುಗಳನ್ನ ಹಿಡಿದ ಗ್ರಾಮದಲ್ಲೂ ಅದಕ್ಕೆ ಸಮೀಪದಲ್ಲಿರತಕ್ಕ ಬಜಾರಿನಲ್ಲಿಯೂ ಅದನ್ನ ಟಮಟೆಹೊಡಿಸಿ ಪ್ರಕಟಪಡಿಸತಕ್ಕದ್ದು.

ಹಾಗೆ ನೋಟಿಸು ಕೊಟ್ಟ ತಾರೀಖು ಆಗಾಯತು ಯೇಳು ದಿವಸಗಳೊಳಗೆ ರಾಸುಗಳನ್ನ ಯಾರೂ ಬಂದು ಕೇಳದೇ ಹೋದ ಪಕ್ಷದಲ್ಲಿ ಸದರೀ ಆಫಿಸರಾಗಲಿ ಆ ಬಗ್ಯೆ ಅವನ ಇಲಾಖೆಯಿಂದ ಕಳುಹಿಸಲ್ಪಡುವ ಇತರ ಆಫಿಸರಾಗಲಿ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರಿಂದ ಸಾಮಾನ್ಯ ಯಾ ವಿಶೇಷ ಹುಕುಮಿನ ಮೂಲವಾಗಿ ಆಗಿಂದಾಗ್ಯೆ ಗೊತ್ತು ಮಾಡಲ್ಪಡುವ ಸ್ಥಳದಲ್ಲಿ ವ ಕಾಲದಲ್ಲಿ ಮತ್ತು ಅವರಿಂದ ನಿರ್ದೇಶಿಸಲ್ಪಡುವ ಷರತ್ತುಗಳಗನುಗುಣವಾಗಿ ಅವುಗಳನ್ನು ಹರಾಜು ಹಾಕಿಸಿ ಮಾರಿ ಬಿಡತಕ್ಕದ್ದು.

ಪರಂತು, ಅಂಥಾ ಯಾವ ರಾಸುಗಳನ್ನಾದರೂ ಮೇಲ್ಕಂಡ ಪ್ರಕಾರ ವಿಕ್ರಯಿಸಿದರೆ ಸರಿಯಾದ ಬೆಲೆ ಬರಲಾರದೆಂದು ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರು ಅಭಿಪ್ರಾಯಪಟ್ಟ ಪಕ್ಷದಲ್ಲಿ ಅವರು ತನಗೆ ಯುಕ್ತ ತೋರುವ ರೀತಿಯಾಗಿ ಅವುಗಳನ್ನು ಮಾರಿ ಬಿಡಬಹುದು.

*ಹಿಡಿದುಕೊಂಡದ್ದು ಅಕ್ರಮವೆಂದು ವಿವಾದ ಮಾಡಿ ಹಣವನ್ನ ಅಮಾನತ್ತು ಇಟ್ಟಂಥಾ ಮಾಲೀಕನಿಗೆ ರಾಸನ್ನ ಒಪ್ಪಿಸುವಿಕೆ.*

೧೫. ರಾಸುಗಳ ಮಾಲೀಕನಾದರೂ ಅವನ ಮುತಾಲೀಕನಾದರೂ ಹಾಜರಾಗಿ ಅವುಗಳನ್ನ ಹಿಡಿದದ್ದು ಅಕ್ರಮವಾದದ್ದರಿಂದ ಇಪ್ಪತ್ತನೇ ಪ್ರಕರಣಕ್ಕನುಗುಣವಾಗಿ ತಾನು ಫಿರ್ಯಾದು ಮಾಡುವದಕ್ಕೆ ಸಿದ್ಧನಾಗಿರುವದಾಗಿ ಹೇಳಿ ಜುರ್ಮಾನೆಗಳನ್ನೂ ಖರ್ಚುಗಳನ್ನೂ ಕೊಡುವದಕ್ಕೆ ನಿರಾಕರಿಸಿದರೆ ಅವನಿಂದ ಜುರ್ಮಾನೆಗಳನ್ನೂ ರಾಸುಗಳ ಬಗ್ಯೆ ತಗಲಿದ ಖರ್ಚುಗಳನ್ನೂ ತೆಗದು ಠೇವಣಿಯಾಗಿ ಇಟ್ಟುಕೊಂಡು ಸದರೀ ರಾಸುಗಳನ್ನು ಅವನಿಗೆ ಒಪ್ಪಿಸಿ ಬಿಡತಕ್ಕದ್ದು.

*ಜುರ್ಮಾನೆಗಳನ್ನೂ ಖರ್ಚುಗಳನ್ನೂ ಕೊಡುವದಕ್ಕೆ ಮಾಲೀಕನು ಉಪೇಕ್ಷೆ ಮಾಡಿದರೆ, ಯಾ ಕೊಡದೇ ಇದ್ದರೆ ನಡಿಸತಕ್ಕ ರೀತಿ.*

೧೬. ರಾಸುಗಳ ಮಾಲೀಕನಾದರೂ ಅವನ ಮುತಾಲೀಕನಾದರೂ ಹಾಜರಾಗಿ ಸದರೀ ಜುರ್ಮಾನೆಗಳನ್ನೂ ಖರ್ಚುಗಳನ್ನೂ ಕೊಡುವದಕ್ಕೆ ನಿರಾಕರಿಸಿದರೆ ಅಥವಾ ಕೊಡದೇಹೋದರೇ ಅಥವಾ ಹದಿನೈದನೇ ಪ್ರಕರಣದಲ್ಲಿ ನಮೂದಿಸಿರುವಂಥಾ ಸಂಗತಿ ಯಲ್ಲಿ ಠೇವಣಿ ಇಡದೆ ಹೋದರೆ ಸದರೀ ಉದ್ಯೋಗಸ್ಥನು ಆ ರಾಸುಗಳನ್ನೂ ಯಾ ಅವುಗಳ ಪೈಕಿ ಯೆಷ್ಟು ಬೇಕೋ ಅಷ್ಟನ್ನೂ ಹದಿನಾಲ್ಕನೇ ಪ್ರಕರಣದಲ್ಲಿ ನಮೂದಿಸಿರುವ ಪ್ರಕಾರ ಗೊತ್ತು ಮಾಡಲ್ಪಡುವ ಸ್ಥಳದಲ್ಲಿ ವ ಕಾಲದಲ್ಲಿ ಅಂಥಾ ಷರತ್ತುಗಳಗನುಗುಣವಾಗಿ ಹರಾಜಿನ ಮೂಲಕ ವಿಕ್ರಯಿಸಿ ಬಿಡತಕ್ಕದ್ದು

*ಜುರ್ಮಾನೆಗಳ ವ ಖರ್ಚುಗಳ ವಜಾ*

ವಸೂಲ್ಮಾಡಬೇಕಾದ ಜುರ್ಮಾನೆಗಳನ್ನೂ ಮೇವಿನ ವ ನೀರಿನ ಖರ್ಚುಗಳನ್ನೂ ಮಾರುವದಕ್ಕೇನಾದರೂ ಖರ್ಚು ತಗಲಿದ್ದರೆ ಅದನ್ನೂ ವಿಕ್ರಯದ ಬಾಬತು ಹಣದಿಂದ ವಜಾಮಾಡಿಕೊಳ್ಳತಕ್ಕದ್ದು.

*ವಿಕ್ರಯಿಸದೇ ಯಿದ್ದ ರಾಸುಗಳನ್ನು ವಿಕ್ರಯಿಸಿದಂಥಾ ಮೊಬಲಗಿನಲ್ಲಿ ಉಳಿದ ಬಾಕಿಯನ್ನು ಒಪ್ಪಿಸುವಿಕೆ.*

ಬಾಕೀ ರಾಸುಗಳನ್ನು ಖರೀದೀ ಹಣದಲ್ಲೇನಾದರೂ ಉಳಿದಿದ್ದರೆ ಅದನ್ನು ಮಾಲೀಕನಿಗಾಗಲಿ, ಅವನ ಮುತಾಲೀಕನಿಗಾಗಲಿ ಕೊಟ್ಟು ಬಿಡತಕ್ಕದ್ದು ಮತ್ತು ಅವನಿಗ್ಯೆ

(a) ಹಿಡಿಯಲ್ಪಟ್ಟ ರಾಸುಗಳಸಂಖ್ಯೆಯನ್ನೂ

(b) ಅವುಗಳು ದೊಡ್ಡೀಲಿ ಹಾಕಲ್ಪಟ್ಟಿದ್ದ ಕಾಲವನ್ನೂ,

(c) ಜುರ್ಮಾನೆಗಳನ್ನೂ ಅವುಗಳಗಾಗಿ ತಗಲಿದ ಖರ್ಚುಗಳನ್ನೂ,

(d) ಮಾರಲ್ಪಟ್ಟ ರಾಸುಗಳ ಸಂಖ್ಯೆಯನ್ನೂ,

(e) ಅವುಗಳ ವಿಕ್ರಯದ ಬಾಬತು ಹಣವನ್ನೂ,

(f) ಸದರೀ ಹಣ ವಿನಿಯೋಗಿಸಲ್ಪಟ್ಟ ರೀತಿಯನ್ನೂ ನಮೂದಿಸಿ ಒಂದು ಲೆಕ್ಕ ಸಹ ಕೊಡತಕ್ಕದ್ದು.

*ರಶೀದಿ*

ಮಾಲೀಕನಾಗಲಿ, ಅವನ ಮುತಾಲೀಕನಾಗಲಿ, ಒಪ್ಪಿಸಿದ ರಾಸುಗಳಿಗೂ ಖರೀದಿ ಹಣದಲ್ಲೇನಾದರೂ ಉಳಿದಿದ್ದು ಸದರೀ ಲೆಕ್ಕದ ಪ್ರಕಾರ ಕೊಡಲ್ಪಟ್ಟರೆ ಅದಕ್ಕೂ ರಶೀದಿ ಕೊಡತಕ್ಕದ್ದು.

*ಜುರ್ಮಾನೆಗಳ ಖರ್ಚುಗಳ ಮತ್ತು ವಿಕ್ರಯಿಸಿದ ಹಣದಲ್ಲಿನ ಬಾಕಿಯ ವಿನಿಯೋಗ*

೧೭. ಯಾರಿಂದ ವಿಕ್ರಯ ಮಾಡಲ್ಪಟ್ಟಿತೋ ಆ ಉದ್ಯೋಗಸ್ಥನು ಹಾಗೆ ವಸೂಲ್ಮಾಡಿದ ಜುರ್ಮಾನೆಗಳನ್ನು ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರ ಬಳಗೆ ಕಳುಹಿಸಿ ಕೊಡತಕ್ಕದ್ದು.

ಹದಿನಾರನೇ ಪ್ರಕರಣಕ್ಕನುಗುಣವಾಗಿ ವಜಾ ಮಾಡಲ್ಪಡುವ ಮೇವಿನ ವ ನೀರಿನ ಬಾಬತು ಖರ್ಚುಗಳನ್ನು ದೊಡ್ಡೀದಾರನಿಗೆ ಕೊಟ್ಟು ಬಿಡತಕ್ಕದ್ದು. ಹದಿಮೂರನೇ ಪ್ರಕರಣಕ್ಕನುಗುಣವಾಗಿ ಅಂಥಾ ಖರ್ಚಿನ ಬಗ್ಗೆ ವಸೂಲ್ಮಾಡುವ ಹಣವನ್ನು ಆತನೇ ಇಟ್ಟುಕೊಂಡು ಉಪಯೋಗಿಸಿ ಕೊಳ್ಳಬಹುದು.

ರಾಸುಗಳ ವಿಕ್ರಯದ ಬಾಬತು ಹಣದಲ್ಲಿ ಖರ್ಚು ಕಳೆದು ಉಳಿದದ್ದನ್ನ ಯಾರೂ ಬಂದು ಕೇಳದೇ ಆ ಹಣ ಬೇವಾರಸಾಗಿದ್ದರೆ ಅದನ್ನು ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರ ಬಳಗೆ ಕಳುಹಿಸಿ ಕೊಡತಕ್ಕದ್ದು. ಅವರು ಅದನ್ನ ಮೂರುತಿಂಗಳವರಿಗೆ ಅಮಾನತ್ತಿನಲ್ಲಿ ಯಿಟದ್ದು ಆ ವಾಯಿದೆಯೊಳಗಾಗಿ ಯಾರಾದರೂ ಬಂದು ದಾವೇ ಮಾಡಿ ತಮ್ಮ ದಾವೆಯನ್ನು ಸ್ಥಿರಪಡಿಸಿಕೊಳ್ಳದೇ ಹೋದಪಕ್ಷದಲ್ಲಿ ಸದರೀ ವಾಯಿದೇ ಕಳೆದ ನಂತರ ಇನ್ನುಮೇಲೆ ನಿಬಂಧನೆ ಏರ್ಪಡಿಸಲಾಗುವ ಪ್ರಕಾರ ಅದನ್ನು ವಿನಿಯೋಗಿಸತಕ್ಕದ್ದು

*ಜುರ್ಮಾನೆಗಳನ್ನೂ ವಿಕ್ರಯದಿಂದ ಉತ್ಪತ್ತಿಯಾದ ಬೇವಾರಸ ಹಣವನ್ನೂ ವಿನಿಯೋಗ ಪಡಿಸುವದು.*

೧೮. ಜುರ್ಮಾನೆ ಬಾಬತು ಹಣದಿಂದಲೂ ವ ರಾಸುಗಳ ವಿಕ್ರಯದ ಬಾಬತು ಬೇವಾರಸ್ ಹಣದಿಂದಲೂ ಈ ಕೆಳಗಿನ ಖರ್ಚುಗಳ ಬಗೆ ಪಾವತಿ ಯಾಗತಕ್ಕದ್ದು,ಯಾವವಂದರೆ—

(a) ಸ್ಥಳಕ ಗವರ್ನಮೆಂಟನವರ ಹುಕುಮಿಗನುಗುಣವಾಗಿ ದೊಡ್ಡೀದಾರರಿಗೆ ಸಲ್ಲಬೇಕಾದ ಸಂಬಳಗಳು,

(b) ದೊಡ್ಡಿಗಳನ್ನ ಕಟ್ಟಿಸತಕ್ಕ ಬಗ್ಯೆ ಈ ಆಕ್ಟಿನ ಅಮಲ್ಜಾರಿಗೆ ಸಂಬಂಧಪಟ್ಟ ಇತರ ಯಾವ ಕೆಲಸದ ಬಗ್ಯೆ ತಗಲುವ ಖರ್ಚುಗಳು,

ಮತ್ತು ಸದರೀ ಖರ್ಚುಗಳು ಕಳೆದು ಬಾಕಿ (ಯೇನಾದರೂ) ಉಳಿದಿದ್ದರೆ ಅದನ್ನು ಸ್ಥಳಕ ಗವರ್ನಮೆಂಟಿನವರ ಹುಕುಮಿಗನುಗುಣವಾಗಿ ರಸ್ತೆಗಳನ್ನೂ, ಸೇತುವೆಗಳನ್ನೂ ಕಟ್ಟಿಸತಕ್ಕ ಬಗ್ಯೆ, ಜನೋಪಯುಕ್ತವಾದ ಇತರ ಕೆಲಸಗಳ ಬಗ್ಯೆ ವಿನಿಯೋಗಿಸತಕ್ಕದ್ದು.

*ಆಕ್ಟಿನಪ್ರಕಾರ ಮಾರಲ್ಪಡುವ ರಾಸುಗಳನ್ನು ಆಫೀಸರುಗಳೂ ದೊಡ್ಡೀದಾರರೂ ಕೊಂಡುಕೊಳ್ಳಬಾರದು*

೧೯. ಈ ಆಕ್ಟಿಗನುಗುಣವಾಗಿ ವಿಕ್ರಯಿಸಲ್ಪಡುವ ಯಾವ ರಾಸುಗಳನ್ನಾಗಲಿ ಯಿದರಲ್ಲಿ ಅಡಗಿರುವ ನಿಬಂಧನೆಗಳ ಪ್ರಕಾರ ಮೊಕರರ್ಮಾಡಲ್ಪಟ್ಟ ಯಾವ ಪೊಲೀಸು ಉದ್ಯೋಗಸ್ಥನಾದರೂ ದೊಡ್ಡೀದಾರನಾದರೂ ಪ್ರತ್ಯಕ್ಷವಾಗಿ ಯಾಗಲಿ ಪರೋಕ್ಷವಾಗಿ ಯಾಗಲಿ ಕೊಂಡು ಕೊಳ್ಳಕೂಡದು.

*ಕೊಟ್ಟಿಗೆಯಲ್ಲಿ ಸೇರಿಸಲ್ಪಟ್ಟ ರಾಸುಗಳನ್ನ ಕೊಟ್ಟಿಗೆದಾರರು ದಯವಾಗಿ ಬಿಟ್ಟು ಬಿಡಬಾರದು*

ದೊಡ್ಡೀಲಿ ಸೇರಿಸಲ್ಪಟ್ಟ ಯಾವ ರಾಸುಗಳನ್ನಾಗಲಿ ಬಿಟ್ಟು ಬಿಡಹೇಳಿ ಯಾ ಒಪ್ಪಿಸಿ ಬಿಡಹೇಳಿ ಮಾಜಿಸ್ಟ್ರೇಟರಿಂದ ಯಾ ಸಿವಿಲ್ ಕೋರ್ಟಿನವರಿಂದ ಹುಕುಂ ಮಾಡಲ್ಪಟ್ಟರೇನೇ ಹೊರ್ತು ಯಾವ ದೊಡ್ಡೀದಾರನಾದರೂ ಈ ಅಧ್ಯಾಯದ ಪ್ರಥಮ ಭಾಗದಲ್ಲಿ ಕಂಡಿರುವ ಪ್ರಕಾರ ಶಿವಾಯಿ ಅನ್ಯಥಾ ಬಿಟ್ಟು ಬಿಡಕೂಡದು.

(ಶೇಷ)

## SUMMARY OF NEWS.

## ವೃತ್ತಾಂತ ಸಂಗ್ರಹವು.

ಆಚೆ ಶನಿವಾರದ ದಿನ ಪ್ರಾತಃಕಾಲ ತಿರುವಳ್ಳಿಕ್ಕೇಣಿ, ಪೈಕ್ರಾಫ್ಟ್ ರಸ್ತೆಯಲ್ಲಿ ಒಬ್ಬ ಫಕೀರನ ಕೈಗೆ ೧೦೦ ರೂಪಾಯಿಗಳ ಬೆಲೆಯುಳ್ಳ ಒಂದು ಸವರ್ನಮಾಲೆ ಸಿಕ್ಕಲು ಅವನು ಅದನ್ನು ಯೆಳಂಬೂರ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿದ್ದ ಪೋಲೀಸ ಇನ್ಸ್‌ಪೆಕ್ಟರ ವಶಕ್ಕೆ ಒಪ್ಪಿಸಿ ಬಿಟ್ಟರು

ಯೂರೋಪ ಖಂಡದಲ್ಲೂ ಅಮೆರಿಕಾ ಖಂಡದಲ್ಲೂ ಜನರು ಸತ್ತು ಹೋಗಿರುವ ತಮ್ಮ ನೆಂಟರನ್ನು ಹೂಳುವದು ಪೂರ್ವದಿಂದ ಬಂದ ಅವರ ಪದ್ಧತಿಯಾಗಿದೆ. ಭರತ ಖಂಡದಲ್ಲಿ ಹೆಣಗಳನ್ನು ಸುಡುವದು ಅನೇಕರಲ್ಲಿ ಪದ್ಧತಿಯಾಗಿದೆ. ಈಚೆಗೆ ಯೂರೋಪ್ ಖಂಡದವರೂ ಅಮೆರಿಕಾ ಖಂಡದವರೂ ಶವಗಳನ್ನು ಹೂಳುವದಕ್ಕಿಂತ ಅವುಗಳನ್ನು ಸುಡುವದು ಉತ್ತಮವೆಂಬದಾಗಿ ಅಭಿಪ್ರಾಯಪಟ್ಟು ತಮ್ಮ ಪುರಾತನವಾದ ಪದ್ಧತಿಯನ್ನು ಬದಲಾಯಿಸಬೇಕೆಂದು ಬೇರೆ ಬೇರೆ ಸ್ಥಳಗಳಲ್ಲಿ ಸಂಘಗಳನ್ನು ಮಾಡಿರುತ್ತಾರೆ —ವೃ. ಪ.

ಈ ದೇಶದಿಂದ ವಿಲಾಯಿತಿಗೆ ಒಂದು ಕಾಗದವನ್ನು ಕಳುಹಿಸುವದಕ್ಕೆ 2½ ಆಣೆ ಹಾಸಲು ಬೀಳುತ್ತದೆ. ೧೨ ವರುಷಗಳ ಕೆಳಗೆ ೮ ಆಣೆಯನ್ನೂ ೫ ವರುಷಗಳ ಕೆಳಗೆ ೦ ಆಣೆಯನ್ನೂ ಕೊಡಬೇಕಾಗಿ ಇತ್ತು. ಇಷ್ಟು ಕಡಿಮೆಯಾದದ್ದು ಸಾಲದೆಂದು ಅನೇಕ ದೊಡ್ಡ ಮನುಷ್ಯರು ತಾತ್ಪರ್ಯಪಟ್ಟು ಒಂದು ಆಣೆ ಹಾಸಲು ನೇಮಿಸಬೇಕೆಂಬದಾಗಿ ಪಾರ್ಲಿಯಮೆಂಟಿನಲ್ಲಿ ಪ್ರಯತ್ನ ಮಾಡುತಲಿದಾರೆ. ೧—೨ ವರುಷಗಳೊಳಗಾಗಿ ಇಂಗ್ಲೀಷ್ ಸರ್ಕಾರದವರು ಈ ದೊಡ್ಡ ಉಪಕಾರವನ್ನು ಪ್ರಜೆಗಳಿಗೆ ಮಾಡುವರೆಂದು ನಿರೀಕ್ಷಿಸುವದಕ್ಕೆ ಒಳ್ಳೇ ಆಧಾರವುಂಟು.

ಪೂರ್ವದಲ್ಲಿ ರಾಮನು ಇಂಡಿಯಾ ದೇಶದಿಂದ ಲಂಕೆಗೆ ಹೋಗಬೇಕೆಂದು ಇದ್ದಾಗ ಸಮುದ್ರ, ತನ್ನ ಕೋತಿ ಸೈನ್ಯವನ್ನು ಕರಕೊಂಡು ಹೋಗಿ ಒಂದು ದೊಡ್ಡ ಸೇತುವೆಯನ್ನು ತಯಾರು ಮಾಡಿದನೆಂದು ಪುರಾಣದಲ್ಲಿ ಒಂದು ಕಥೆ ಇದೆ ಅಂಥಾ ಕಥೆಯನ್ನು ನಂಬುವದಕ್ಕೆ ಯಾವ ಆಧಾರವೂ ಯಾರಿಗೂ ಸಿಕ್ಕುವದು ಇಲ್ಲ. ಈಚೆಗೆ ರಾಮೇಶ್ವರದಿಂದ ಲಂಕಾದ್ವೀಪಕ್ಕೆ ಒಂದು ರೈಲ್ ರಸ್ತೆಯನ್ನು ತಯಾರು ಮಾಡಬೇಕೆಂದು ಸರ್ಕಾರದವರು ಯೋಚಿಸಿ ಅದನ್ನು ಸರ್ವೆ ಮಾಡುವದಕ್ಕೆ ಕೆಲವು ಇಂಜನಿಯರ್ ದೊರೆಗಳನ್ನು ಕಳುಹಿಸಿ ಇದ್ದಾರೆ. ಅಂಥಾ ರೈಲ್ ರಸ್ತೆಯನ್ನು ತಯಾರು ಮಾಡುವದರಲ್ಲಿ ಯಾವ ಕಷ್ಟವೂ ತೋರುವದು ಇಲ್ಲ ಭರತ ಖಂಡಕ್ಕೂ ಮತ್ತು ಲಂಕೆಗೂ ಮಧ್ಯದಲ್ಲಿ ದೊಡ್ಡ ದೊಡ್ಡ ಬಂಡೆಗಳು ಇರುವದರಿಂದ ಸೇತುವೆಗಳನ್ನು ಕಟ್ಟಿಸುವದು ಸುಲಭಸಾಧ್ಯವಾಗಿರುವದು.—ವೃ ಪ.

ಚಕ್ರವರ್ತಿನಿಯಾದ ಮಹಾರಾಜ್ಞೀಯವರು ಈ ಮಾರ್ಚಿ ೨೩ ನೇ ತಾರೀಖಿನಲ್ಲಿ ಲಂಡನ್ ಪಟ್ಟಣವನ್ನು ಬಿಟ್ಟು ಇಟಲೀ ದೇಶಕ್ಕೆ ಪ್ರಯಾಣ ಹೊರಟು ಫ್ಲಾರೆನ್ಸ ಎಂಬ ಪಟ್ಟಣದಲ್ಲಿ ಒಂದು ತಿಂಗಳವರಿಗೂ ಇರುವರು. ಮಹಾರಾಜ್ಞಿಯವರಿಗೆ ಈಗ ೭೪ ವರುಷಗಳ ವಯಸ್ಸು ಆದದರಿಂದ ಅವರು ತಮ್ಮ ದೇಹಾರೋಗ್ಯಕ್ಕಾಗಿ ಆಗಾಗ್ಯೆ ಬೇರೆ ದೇಶಗಳಲ್ಲಿ ವಿರಾಮ ತೆಗೆದು ಕೊಳ್ಳುವದು ಆವಶ್ಯಕವಾಗಿದೆ. ಇಂಥಾ ಪ್ರಯಾಣದಿಂದ ಎಷ್ಟು ಖರ್ಚು ಉಂಟಾಗುತ್ತೆ ಅವರು ಉಪಯೋಗಿಸುವ ಹಡಗಿಗೂ ರೈಲಗಾಡಿಗಳಿಗೂ ಕೊಡಬೇಕಾದ ಖರ್ಚು ಮಾತ್ರವಲ್ಲದೆ ಅವರು ಉಪಯೋಗಿಸುವ ಬಂಗಲೆಗೆ ತಿಂಗಳಿಗೆ ೫೦ ಸಾವಿರ ರೂಪಾಯಿಗಳು ಖರ್ಚು ಆಗುತ್ತದೆಂದು ವರ್ತಮಾನವಿದೆ ಮಹಾರಾಜ್ಞೀಯವರು ಒಂದು ತಿಂಗಳಿನ ರಜಾ ತೆಗದುಕೊಳ್ಳಬೇಕಾದರೆ ಲಕ್ಷಾಂತರ ರೂಪಾಯಿಗಳ ಖರ್ಚು ಆಗುತ್ತದೆಂಬುವದರಲ್ಲಿ ಸಂದೇಹವಿಲ್ಲದು —ವೃ ಪ.

ಮಹಾರಾಜ್ಞಿಯವರಿಗೆ ಪ್ರಧಾನ ಮಂತ್ರಿಗಳಾಗಿರುವ ಮಿ|| ಗ್ಲಾಡ್ಸ್ಟನ್ ಸಾಹೇಬರ ವಿಷಯದಲ್ಲಿ ಲೋಕದವರೆಲ್ಲರೂ ಆಶ್ಚರ್ಯಪಡುವದಕ್ಕೆ ಅನೇಕ ಕಾರಣಗಳುಂಟು. ಅವರು ೮೪ ವರುಷ ವಯಸುವುಳ್ಳವರಾಗಿಯಿದ್ದಾಗ್ಯೂ ಚಟುವಟಿಕೆಯಲ್ಲಿ ೫೦ ವರುಷ ವಯಸ್ಸುವುಳ್ಳವರಂತೆ ಕಾಣಿಸಿಕೊಳ್ಳುತ್ತಾರೆ. ಅವರ ಬುದ್ಧಿಯು ಇಷ್ಟು ಚುರುಕಾಗಿ ಇದೆಯೆಂದು ವರ್ಣಿಸುವದಕ್ಕೆ ಅಸಾಧ್ಯವಾಗಿದೆ, ವಾಕ್ಚಾತುರ್ಯದಲ್ಲಿ ಎಲ್ಲರಿಗಿಂತ ಪ್ರವೀಣರಾಗಿರುತ್ತಾರೆ. ಹೋದ ತಿಂಗಳಲ್ಲಿ ಅವರು ಹೌಸಾಫ್ ಕಾಮನ್ಸ್‌ನಲ್ಲಿ 2½ ಘಂಟೆಗಳವರಿಗೂ ಉಪನ್ಯಾಸವನ್ನು ಮಾಡುತ್ತಾ ಎಲ್ಲರಿಗೂ ವಿಸ್ಮಯವನ್ನು ಹುಟ್ಟಿಸಿದರು ಅವರು ದಿನವೂ ಹೌಸಾಫ್ ಕಾಮನ್ಸಿಗೆ ಹೋಗಿ ನಾಲ್ಕು ಘಂಟೆಯಿಂದ ಮಧ್ಯ ರಾತ್ರಿ ೧೨ ಘಂಟೆವರಿಗೂ ಕೆಲಸವನ್ನು ನಡಿಸುತ್ತಾ ಬರುವರು ಹಿಂದೂ ಪುರಾಣಗಳಲ್ಲಿ ಮಹಾಪುರುಷರನ್ನು ಕುರಿತು ಅನೇಕ ಕಥೆಗಳನ್ನು ನಾವು ಓದಿದಾಗ್ಯೂ ಈ ಮಹನೀಯರ ವಿಷಯವಾಗಿ ನಮಗೆ ತಿಳಿದಿರುವಷ್ಟು ಆಶ್ಚರ್ಯಕರವಾದ ಸಂಗತಿಗಳನ್ನು ಎಲ್ಲಿಯೂ ಓದಲಿಲ್ಲ ಮತ್ತು ಕೇಳಲಿಲ್ಲ —ವೃ. ಪ

Bangalore.—Printed and published at the Karnataka Press, No. 40, Hospital Road, City —1893

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

## ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

## Published Every Monday Morning.

ಶ್ರೀಮದ್ವಿವಿಧವೃತ್ತಪರಿಗತವಾರ್ತಾಕರ್ಣಾಟಕಪ್ರಕಾಶನವರಾಭಿಧಾಪ್ರಥಿತಸಾಹಿತೀಶೋಭಿತಾ॥ ಮೃಗಾಂಕಹಿತವಾಸರೇನಿಹಿತಮುದ್ರಣಾಸಜ್ಜನೈರ್ದ್ವಿಕಾಸುಪರಿಶೋಧಿತಾದಿಶತಿಮಾನಸಂತುಷ್ಟಮುದಂ

| | | |
|---|---|---|
| Vol. XX.] | BANGALORE:—MONDAY. MARCH 27, 1893. | [No. 12. |
| ಸಂಪುಟ ೨೦.] | ಬೆಂಗಳೂರು:—ಸರ್ ೧೮೯೩ ನೇ ಇಸವಿ ಮಾರ್ಚ್ ೨೭ ನೇ ತಾರೀಖ್ ಸೋಮವಾರ. | [ಸಂಚಿಕೆ ೧೨. |


### ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

| | ಸ್ಥಳದವರಿಗೆ. | ಪರಸ್ಥಳದವರಿಗೆ. |
|---|---|---|
| ಸಾಲ ೧ಕ್ಕೆ ... | ...6—0—0 | 8—0—0 |
| 6 ತಿಂಗಳಿಗೆ .. | ...3—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

| | ಸ್ಥಳದವರಿಗೆ. | ಪರಸ್ಥಳದವರಿಗೆ. |
|---|---|---|
| ಸಾಲ ೧ಕ್ಕೆ ... | .. 3—0—0 | 4—0—0 |
| 6 ತಿಂಗಳಿಗೆ ... | ... 1—12—0 | 2—8—0 |

ಈ ಪತ್ರಿಕೆಗೆ ದರುಖಾಸ್ತು ಮಾಡಿದ ತಾರೀಖು ಮೊದಲು ೬ ತಿಂಗಳೊಳಗಾಗಿ ಚಂದಾ ಹಣವನ್ನು ಕಳುಹಿಸುವವರಿಗೆ ಮಾತ್ರವೆ ಅಡ್ವಾನ್ಸ್ ದರದಂತೆ ಪತ್ರಿಕೆ ಕಳುಹಿಸಲ್ಪಡುವದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತರಿಸಿಕೊಳ್ಳಬಹುದು. ಮೂರು ತಿಂಗಳಿಗಿಂತ ಕಡಮೆಯಾಗಿ ಚಂದಾ ಹಣವು ಅಂಗೀಕರಿಸಲ್ಪಡಲಾರದು.

### ಪ್ರಕಟನೆಯ ರಿವಾಜ್.

ಮೊದಲು ಮುದ್ರಣ ಪಙ್ಕ್ತಿ ಒಂದಕ್ಕೆ ೦—೨—೦

ಎರಡನೆ ಮುದ್ರಣ ಪಙ್ಕ್ತಿ ಒಂದಕ್ಕೆ ೦—೧—೦

ದರ—ಎರಡಕ್ಕಿಂತ ಹೆಚ್ಚಾಗಿ ಎಷ್ಟು ಸಾರಿ ... ಪಙ್ಕ್ತಿ ಒಂದಕ್ಕೆ ... ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಖಾಯಂ ... ಪ್ರಕಟನೆಗಳು ... ಪ್ರಕಟಿಸಲ್ಪಡುವವು ... [illegible]

## ADVERTISEMENTS.

## NOTICE.

### VAIDYASARA SANGRAHA

A TREATISE ON THE PRINCIPLES OF

### HINDU MEDICINE.

*Price including Postage Rs 5 0-0*

### ವೈದ್ಯಸಾರ ಸಂಗ್ರಹ.

ಈ ಗ್ರಂಥವು ಬೇಕಾದವರು ಮೊಬಲಗಿನೊಡನೆ ಈ ಕೆಳಗೆ ರುಜು ಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೊಡಲ್ಪಡುವದು. ಮೊಬಲಗು ಇಲ್ಲದ ಕಾಗದಗಳಿಗೆ ಉತ್ತರ ಕೊಡಲ್ಪಡಲಾರದು.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಹಾಸಲ್ ಸಹಿತ ಪ್ರತಿ ಒಂದಕ್ಕೆ ರೂ 5—0—0

ಟಿ. ಬಿ. ವೆಂಕಟಾಚಾರ.

ಬೆಂಗಳೂರ್, ಮರ್ಕೆಟ್ ಆಸ್ಪತ್ರೆ ರೋಡ್ ೩೯ ನೇ ನಂಬರ್

### ನೋಟೀಸ್.

### ಬೆಂಗಳೂರು ಕರ್ಣಾಟಕ ಪ್ರೆಸ್.

೧೮೭೪ ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ ಸಕಲವಿಧ ಕೆಲಸಗಳು ಸುಲಭಬೆಲೆಗೆ ತೀವ್ರವಾಗಿಯೂ ಶುದ್ಧವಾಗಿಯೂ ಮಾಡಲ್ಪಡುವವು.

ಇದರಲ್ಲಿ ಸದ್ಯಃ ಇಂಗ್ಲಿಷ್ ಕನ್ನಡ ಕೆಲಸಗಳು ಮಾತ್ರವೆ ನಡೆಯುತ್ತವೆ. ಇತರ ವಿವರಗಳನ್ನು ಸದರೀ ಕಾರ್ಖಾನೆ ಮ್ಯಾನೇಜರ ಹತ್ತಿರ ತಿಳಿದುಕೊಳ್ಳಬಹುದು

### ನೋಟೀಸ್.

#### ನಂಜಪ್ಪನವರ ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು.

ಈಯೂರು ಉಪ್ಪಾರಪೇಟೆಯಲ್ಲಿರುವ ಮೇಲೆ ತಿಳಿಸಲ್ಪಟ್ಟವರಿಂದ ಮಾಡಲ್ಪಟ್ಟ ಬಹಳ ಪ್ರಖ್ಯಾತಿಗಳಾದ ಔಷಧಗಳು ಬೇಕಾದವರಿಗೆ ತಯಾರಾಗಿರುತ್ತದೆಯಾಗಿ ಬೇಕಾದವರು ಅವರಿಗೆ ಬರೆದು ತರಿಸಿಕೊಳ್ಳಬಹುದು. ಈ ಔಷಧಗಳು ಶಾಸ್ತ್ರೋಕ್ತವಾದ ಕೆಲವು ಸಿದ್ಧಕ್ರಿಯೆಗಳಿಂದ ತಯಾರಾದವಾಗಿಯೂ, ಅನುಭವ ಸಿದ್ಧವಾಗಿಯೂ, ಅನೇಕರಿಗೆ ಗುಣವನ್ನುಂಟುಮಾಡಿದವಾಗಿಯೂ ಇರುತ್ತವೆ. ತಮ್ಮ ರೋಗಸ್ವರೂಪವನ್ನೂ ಔಷಧಪಾನಾದಿ ಪಥ್ಯಗಳ ಕ್ರಮವನ್ನೂ ಸದರೀ ಪಂಡಿತರಿಗೆ ಬರೆದು ತಿಳಿದುಕೊಳ್ಳಬಹುದು. ಹೀಗೆ ಕಾಗದ ಬರೆಯುತಕ್ಕವರು ಅವರಿಂದ ಅಪೇಕ್ಷಿಸಲ್ಪಡುವ ಪ್ರತ್ಯುತ್ತರಕ್ಕೆ ಸಹ ತಮ್ಮ ಕಾಗದದಲ್ಲಿ ಅರ್ಧಾಣೆ ಲೇಬಲ್ ಮುಂಗಡ ಮಾಡಿ ಕಳುಹಿಸಬೇಕು. ವ್ಯಾಲ್ಯೂಪೇಯಬಲ್ ಮೂಲಕ ಸಹ ಪದಾರ್ಥಗಳು ಕಳುಹಿಸಲ್ಪಡುವವು. ಕಳುಹಿಸಲ್ಪಟ್ಟ ಪದಾರ್ಥಗಳನ್ನು ತರಿಸದೆ ಹಿಂದಕ್ಕೆ ಕಳುಹಿಸಿದರೆ ಆ ಬಾಬತು ವ್ಯಾಲ್ಯೂಪೇಯಬಲ್ ಖರ್ಚು ಅವರೇ ಕೊಡಬೇಕಾಗುವದು.

ತೈಲ.—ಮಹಾತಕ್ರತೈಲ, ಇದು ಶಿರೋವಾಯುಗಳಿಗೂ, ಕಾಲಕ ಸಂಬಂಧಗಳಾದ ಮತ್ತು ವಾತಸಂಬಂಧಗಳಾದ ಸಂಧಿಬಂಧಗಳಿಗೂ, ಮೂಗಿನಲ್ಲಿ ರಕ್ತ ಬೀಳತಕ್ಕದ್ದಕ್ಕೂ, ಅನೇಕವಿಧ ಶರೀರಜನ್ಯವಾದ ವೇದನೆಗಳಿಗೂ ಬಹಳ ಪ್ರಖ್ಯಾತ ನಿವಾರಕವಾದುದಾಗಿದೆ. ಸಣ್ಣ ಸೀಸೆ ಒಂದಕ್ಕೆ ೧ ರೂ. ದೊಡ್ಡ ಸೀಸೆ ೧ ಕ್ಕೆ ೫ ರೂ

ಜ್ವರದ ಗುಳಿಗೆಗಳು.—ಇದು ಚಾತುರ್ಥಿಕಾದಿ ಸಕಲವಿಧ ಜ್ವರಗಳಿಗೂ ಸ್ವಷ್ಠ ಔಷಧವಾಗಿರುತ್ತದೆ. ರೂ. ೧ ಕ್ಕೆ ೩೦ ಗುಳಿಗೆಗಳು.

ಮೇಹ ರೋಗ ನಿವಾರಕವಾದ ಪಾಕ.—ಈ ಪಾಕವು ೧೨ ದಿನಗಳವರೆಗೆ ಬರುವ ಹಾಗೆ ತೆಗೆದುಕೊಂಡರೆ ಸಕಲವಿಧ ಮೇಹಗಳೂ, ಪಹನಿಗಳೂ, ಸ್ತ್ರೀಯರಿಗೂ ಉಂಟಾಗುವ ಉಷ್ಣ ಸಂಬಂಧವಾದ ರೋಗಗಳೂ, ನಿವಾರಣೆಯಾಗುವವು. ಸೀಸೆ ೧ ಕ್ಕೆ ೨—೮—೦

ದಂತರೋಗಕ್ಕೆ ಚೂರ್ಣ.—ಹುಳುಕುಹಲ್ಲುಗಳು, ಸಡಲಬಿಟ್ಟಿರುವ ಹಲ್ಲುಗಳು, ಇವುಗಳನ್ನು ಜಾಸ್ತಿ ಭದ್ರಪಡಿಸಿ ಕಾಂತಿಯನ್ನುಂಟುಮಾಡುವದು. ಇದು ಮೂರುವಿಧವು, ಪೊಟ್ಟಣ ೧ ಕ್ಕೆ ೧ ರೂ. ಇದು ೨೦ ದಿನಗಳಿಗೆ ಆಗುವುದು.

ನೇತ್ರರೋಗಕ್ಕೆ ಮಾತ್ರೆ.—ಪೊರೆಗಳು, ದೃಷ್ಟಿಮಾಂದ್ಯ, ಕಣ್ಣುರಿ, ತಲೆನೋವು, ಕಣ್ಣಲ್ಲಿ ನೀರು ಸುರಿಯುವುದು, ಚಳುಕುಮೊದಲಾದ ಸಕಲರೋಗಗಳಿಗೂ ಪ್ರಶಸ್ತವಾದುದು, ಮೂಲಿಕಾ ಪ್ರಯೋಗದಿಂದ ಮಾಡಲ್ಪಟ್ಟ ಉತ್ತಮವಾದ ಮಾತ್ರೆ ೧ ಕ್ಕೆ ೩ ಆಣೆ. ಇದು ೩೦ ದಿನಗಳವರೆಗೆ ಬಂದು ಹೊತ್ತು ಹಾಕಿಕೊಳ್ಳಬಹುದು.

ಮೂಲವ್ಯಾಧಿಗೆ—ಲೇಪ ಉಂಗರವು ತಯಾರಾಗಿದೆ, ಇದರಿಂದ ದೀರ್ಘಕಾಲಿಕವಾದ ಮೂಲರೋಗಪ್ರವಾಹಗಳೆಲ್ಲವು ವಾಸಿಯಾಗುತ್ತವೆ. ಉಂಗರ ೧ಕ್ಕೆ ೧ ರೂಪಾಯಿ, ಇದನ್ನು ಮಧ್ಯಬೆರಳಲ್ಲಿ ನಿಯತವಾಗಿ ಧರಿಸಿಕೊಂಡಿರತಕ್ಕದ್ದು. ಇದರ ಸ್ಪರ್ಶದಿಂ ಮೂಲರೋಗವು ನಿವೃತ್ತಿಯಾಗುತ್ತದೆ.

ಭಸ್ಮಗಳು—ತಾಂಬ್ರ, ರಜತ, ನಾಗ, ಸೀಸ, ಪ್ರವಾಳ, ಶೃಂಗ, ಅಭ್ರಕ, ಲೋಹ, ಕಾಂತ ಮೊದಲಾದ ಭಸ್ಮಗಳೂ ಸಿಂಧೂರಗಳೂ ಸಿದ್ಧ ಕ್ರಿಯೆಯಿಂದ ತಯಾರಾದವು. ಇವು ಪಾಂಡು ಕಾಮಿಲಾಕ್ಷಯಾದಿ ಸಕಲ ಪ್ರಬಲ ರೋಗಗಳಿಗೂ ಪ್ರಶಸ್ತವಾದವಾಗಿರುತ್ತವೆ. ರೋಗ ಸ್ವರೂಪಾನುಗುಣವಾಗಿ ಔಷಧವು ಕೊಡಲ್ಪಡುವದಾದುದರಿಂದ ಅದರಮೇಲೆ ಕ್ರಯವು ನಿಷ್ಕರ್ಷಿಸಲ್ಪಡಬೇಕಾಗಿದೆ.

ಲೇಹ್ಯಗಳು—ಮಹಾಬಿಲ್ವಾದಿ, ಶಿವಾದಿ, ಕೂಷ್ಮಾಂಡ ವಗೈರೆ ಧಾತು ವೃದ್ಧಿಕರಗಳಾದ ಲೇಹ್ಯಗಳು ಸಿದ್ಧವಾಗಿವೆ. ಸೇರು ೧ ಕ್ಕೆ ೩ ರೂ.

ಪರಿಮಳವಸ್ತುಗಳು.—ಗಂಧ, ಜವಾದಿ, ದಾಳಿಂಬೆಹಣ್ಣು, ಅಂಜೂರು, ದ್ರಾಕ್ಷೇಹಣ್ಣು, ಸೇವು ಮೊದಲಾದ ಷರಬತುಗಳು ತಯಾರಾಗಿವೆ. ಇವು ಸೀಸೆ ೧ ಕ್ಕೆ ೨ ರೂ.

ಚೂರ್ಣಗಳು.—ಮಹಾ ಯೋಗರಾಜಚೂರ್ಣ, ವಡವಾಗ್ನಿ ಚೂರ್ಣ, ತಾಳೀಸಾದಿ ವಗೈರೆ ಚೂರ್ಣಗಳು ಅಜೀರ್ಣ ಪಿತ್ತ ವಾತರೋಗಗಳಿಗೆ ಉಪಯುಕ್ತವಾದವು. ಇದು ೩೦ ದಿನಗಳಿಗೆ ತೆಗೆದುಕೊಳ್ಳುವುದು ಡಬ್ಬಿ ೧ಕ್ಕೆ ೧ರೂ.

### ನೋಟೀಸ್.

#### ಗಣೇಶ ರಾಮಚಂದ್ರ ಕರ್ಕೆ ಮತ್ತು ಕಂಪನಿ. ಕಮಿಷನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯೊಡನೆ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ತಕ್ಕ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರಹ ಔಷಧಗಳು, ಪುಸ್ತಕಗಳು, ಮುತ್ತುಗಳು, ಚಿಪ್ಪಿ ಮುತ್ತುಗಳು, ಘಡಿಯಾರಗಳು, ವಾಚ್‌ಗಳು, ಟೈಂಪೀಸ್‌ಗಳು, ಕಾಶ್ಮೀರ ಶಾಲುಗಳು, ರೇಷ್ಮೆಸೀರೆಗಳು, ಜರತಾರ ಕಣಗಳು, ಚಂದ್ರಕಾಂತ ಲೇಪು ಕನ್ನಡಕಗಳು, ಹುಡುಗರ ಸಿತಕ್ಕ ಜರತಾರಿ ಉಡುಪುಗಳು, ಜರತಾರ ಟೋಪಿಗಳು, ಆಫಿಸ್ ಡ್ರೆಸ್‌ಗಳು, ಷರ್ಟುಗಳು, ಅತ್ತರುಗಳು, ಅತ್ಯುತ್ತಮಗಳಾದ ರತ್ನಗಳು, ಭಂಗಾರದಿಂದ ಕಟ್ಟಲ್ಪಟ್ಟ ಉಂಗುರಗಳು, ಬೆಳ್ಳಿ ಪಾತ್ರೆಗಳು, ಜರ್ಮನ್ ಬೆಳ್ಳಿ ಪಾತ್ರೆಗಳು, ಕೇಸರಿ, ಕಸ್ತೂರಿ ವಗೈರೆ ಇತರ ಸಾಮಾನುಗಳು.

ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಲೈಬಲ್ ಕಳುಹಿಸಿದ ಹೊರತು ಜವಾಬ್ ದೊರೆಯಲಾರದು

ವಿಳಾಸ—ಗಣೇಶ ರಾಮಚಂದ್ರ ಕರ್ಕೆ,<br>ಮತ್ತು ಕಂಪನಿ, ಕಮಿಷನ್ ಏಜಂಟ್ಸ್,<br>ಠಾಕೂರದ್ವಾರ, ಮಾರ್ಕೆಟ್ ಪೋಸ್ಟ್, ಮುಂಬೈ

### ನೋಟೀಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

### ಸಂಸ್ಕೃತ ಗ್ರಂಥಗಳು.

| ಹಾಸಲ್ ಸಹಿತ | | ರೂ. | ಆ | ಪೈ |
|---|---|---|---|---|
| ಸಟೀಕಾ ವೈದ್ಯಸಾರ ಸಂಗ್ರಹ | ... | ೪ | ೦ | ೦ |
| ,, ಶಿವಗೀತೆ | ... | ೧ | ೧ | ೦ |
| ,, ಶಿವಾನಂದಲಹರಿ | ... | ೦ | ೮ | ೦ |
| ,, ಕಾಲಾಮೃತ | ... | ೧ | ೦ | ೦ |
| ,, ಟಿ॥ ಬಾಲರಾಮಾಯಣ... | | ೦ | ೩ | ೦ |
| ,, ಟೀ॥ ಗೋಪಿಕಾ ಗೀತೆ ... | | ೦ | ೧ | ೦ |
| ,, ಟೀ॥ ಚಾಣಕ್ಯನೀತಿ (ಸುಭಾಷಿತ) | | ೦ | ೪ | ೦ |
| ವಿಷ್ಣುಸಹಸ್ರನಾಮ ವಗೈರೆ | .. | ೦ | ೩ | ೦ |
| ಸೂರ್ಯಸಹಸ್ರನಾಮ | ... | ೦ | ೨ | ೦ |
| ಕೃಷ್ಣಕರ್ಣಾಮೃತ | ... | ೦ | ೬ | ೦ |
| ತ್ರಿಕಾಂಡ ಅಮರ ಮೂಲ | ... | ೦ | ೬ | ೦ |
| ೧ ಕಾಂಡ | ... | ೦ | ೧ | ೦ |

### ಕನ್ನಡ ಗ್ರಂಥಗಳು.

| | | | | |
|---|---|---|---|---|
| ಕಸಿತಸ್ಪೃತಿ ಅಪ್ಪಲ್ | ... | ೩ | ೦ | ೬ |
| ಡಿಟೋ ದುಪ್ಪಟಿ | ... | ೧ | ೬ | ೦ |
| ವೃಷಭೇಂದ್ರವಿಜಯ | ... | ೧ | ೮ | ೦ |
| ಪಂಚತಂತ್ರದ ಬಾಲಬೋಧೆ | ... | ೦ | ೪ | ೦ |
| ಹನುಮದ್ವಿಲಾಸ | ... | ೦ | ೬ | ೦ |
| ಕಾಳೀಯಮರ್ದನ | ... | ೦ | ೨ | ೦ |
| ಸುಭದ್ರಾಪರಿಣಯ | ... | ೦ | ೬ | ೦ |
| ಶಶಿರೇಖಾಪರಿಣಯ | ... | ೦ | ೨ | ೬ |
| ಸುದಾಮಚರಿತ್ರೆ | ... | ೦ | ೧ | ೦ |
| ಬ್ರಹ್ಮರಾವಣ ಚರಿತ್ರೆ | ... | ೦ | ೧ | ೦ |
| ಬಾಲಗ್ರಹಚಿಕಿತ್ಸೆ | ... | ೦ | ೮ | ೦ |
| ಮಹಮ್ಮದನ್ ಲಾ | ... | ೦ | ೧೨ | ೦ |
| ಎಸ್ಕ್ರಿಪ್ಷನ್ | ... | ೦ | ೧೨ | ೦ |

### ನೋಟೀಸ್.

#### "ಇಮಾರತಿ ಕಟ್ಟಿಗೆ."

ಇದರ ಮೂಲಕ ಕೊಡುವದೇನೆಂದರೆ:—

ಹುಬ್ಬಳ್ಳಿ ರೈಲ್ವೆ ಸ್ಟೇಷನ್ ಹತ್ತರ ಇರುವ ಹುಬ್ಬಳ್ಳಿ ಡಿಪೋದಲ್ಲಿಯ ಕಟ್ಟಿಗೆಯ ಲಿಲಾವ ಸನ 1893ನೇ ಇಸವಿ ಏಪ್ರಿಲ್ 10 ನೇಗೆ ಆಗುವದು.

2 ಲಿಲಾವ ಆಗತಕ್ಕ ಕಟ್ಟಿಗೆಯ ಜಾತಿವಾರು ಕೆಳಗೆ ತೋರಿಸಿದಂತೆ ಅದೆ.

| ಜಾತಿ. | ನಗ ಸಂಖ್ಯೆ. | ದರ 50 ಕ್ಯೂಬಿಕ್ ಫೀಟಿಸ್ಟಾರ್. |
|---|---|---|
| ಸಾಗವಾನಿ. | 1420. | 580. |
| ಹೊಸಂ. | 25. | 10. |
| ಜಂಗಲಿ. | 320. | 166. |

3. ಕಟ್ಟಿಗೆಯು ಲಾಟವಾರ ಮಾಡಲ್ಪಟ್ಟು ಯೋಗ್ಯ ಸರಕಾರ ಸವಾಲ್ ಇಟ್ಟು ಲಿಲಾವ ಮಾಡಲ್ಪಡುವದು

4 ಸವಾಲಿನ ಹಣದಲ್ಲಿ ಶೇಕಡಾ 25 ರೂ.ದ ಮೇಲಿನಂತೆ ಅಂಕವನ್ನು ಸವಾಲ್ ಮಂಜೂರ ಮಾಡಿದ ಕೂಡಲೇ ವಸೂಲ್ ಕೊಡಬೇಕು, ಬಾಕಿ ಹಣವನ್ನು ಸನ 1893ನೇ ಇಸವಿ ಮೇ 31ನೇ ಒಳಗೆ ವಸೂಲ್ ಕೊಡಬೇಕು,

6. ಹೆಚ್ಚಿನ ಮಾಹಿತಿಯು ಲಿಲಾವ ಕಾಲದಲ್ಲಿ ಕೊಡಲಾಗುವದು. ಅಗದ ಕೆಳಗೆ ಸಹಿ ಮಾಡಿದವರ ಕಡೆಗೆ ಬರೆದು ತಿಳಕೊಳ್ಳಬಹುದು,

| | |
|---|---|
| ಮೊಕಾಂ ಕಲಘಟಗಿ ತಾ॥ 28ನೇ ಫೆಬ್ರುವರಿ, 1893 | W. R. WOODROW. ಡಿವಿಜನಲ್ ಫಾರೆಸ್ಟ್ ಆಫೀಸರ್, ಧಾರವಾಡ. |

### ನೋಟಿಸ್.

ಇದರಿಂದ ನಮ್ಮ ಚಂದಾದಾರರಿಗೆ ನಾವು ಪ್ರಕಟಿಸುವದೇನಂದರೆ,—

ಈ ಸಾಲಿನಲ್ಲಿ ಈ ಪತ್ರಿಕೆಯ ಚಂದಾದರವನ್ನು ಕಡಮೆ ಮಾಡಿ ಆದಂ ಪಾವತಿ ಮಾಡುವವರಿಗೆ ನಾವು ಕೊಟ್ಟಿದ್ದ ಒಂದು ತಿಂಗಳ ವಾಯಿದೆ ಗತಿಸಿ ಮೇಲೆ ಎರಡು ತಿಂಗಳಾಗುತ್ತಾ ಬರುತ್ತಿರುವದರಿಂದ ಈ ತಿಂಗಳು ಪೂರ್ತಿಯಾಗುವದರೊಳಗಾಗಿ ಚಂದಾ ಮೊಬಲಗನ್ನು ಕಳುಹಿಸಿಕೊಡದೆಹೋದವರು ಕಳೆದ ಸಾಲಿನಲ್ಲಿ ಜಾರಿಯಲ್ಲಿದ್ದ ದರ ಪ್ರಕಾರ ಚಂದಾ ಮೊಬಲಗನ್ನು ಕಳುಹಿಸಿಕೊಡಬೇಕಾಗಿರುವದಲ್ಲದೆ ಈ ತಿಂಗಳ ಆಖೈರು ವರೆಗೆ ಹೊಸದರವು ನಡೆದಂತೆ ತಿಳಿಯುತ್ತೇವೆ.

| | |
|---|---|
| ಬೆಂಗಳೂರ್, ತಾರೀಖ್ ೨೦ ನೇ ಮಾರ್ಚ್, ೧೮೯೩. | ಪ್ರೊಪ್ರೈಟರ್, ಕ ಪ್ರ. |

### THE MONEY MARKET.

ಮದರಾಸ್, ಶನಿವಾರ, ತಾರೀಖ್ ಮಾರ್ಚ್ 21ನೇ 1893.

ನೂರಕ್ಕೆ ೩|ರೂ. ಬಾಬತು ಗವರ್ನಮೆಂಟ್ ಪತ್ರಗಳು ರೂಪಾಯಿ, 105-2-0 ಇಂದ 105-8-0ವರೆಗೆ.

ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತು 965 ಲಾಗಾ ಯಿತು 970ವರೆಗೆ.

ಕಮರ್ಷಿಯಲ್ ವ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಷೇರ್‌ಗಳು, (100) ಬಾಬತು 160 ರಿಂದ 165 ವರೆಗೆ.

ಸವರೇನ್‌ಗಳು, 16-8-0 ಇಂದ 16-12-0 ವರೆಗೆ.

ಬ್ಯಾಂಕ್‌ಬಿಲ್‌ಗಳು ಯಾನೆ ಪತ್ರವಾಯಿದೆಗಳು, ರೂ ೧ಕ್ಕೆ 6ತಿಂಗಳವಾಯಿದೆಗೆ, 1s. 2 21/32 d.

ಡಿಟೋ 4 ತಿಂಗಳವಾಯಿದೆಗೆ, 1s. 2 1/32d

ಡಿಟೋ ಕೇಳಿದಾಗ, 1s. 2½d.

# ಕರ್ಣಾಟಕ ಪ್ರಕಾಶಿಕಾ.

**THE KARNATAKA PRAKASIKA.**

MONDAY, MARCH 27, 1893.

೧೮೯೩ನೇ ಇಸವಿ ಮಾರ್ಚಿ ತಾ॥ ೨೭ ನೇ ಸೋಮವಾರ


## ಕೆಲವು ಕಚ್ಚೇರಿಗಳನ್ನು ಮೈಸೂರಿಗೆ ವರ್ಗ ಮಾಡುವ ವಿಷಯ.

ಸುಮಾರ್ ಒಂದೆರಡು ವರ್ಷಗಳ ಮೊದಲಿನಿಂದ ಸಾಮಾನ್ಯವಾಗಿಯೂ, ಈಚೆಗೆ ಒಂದೆರಡು ತಿಂಗಳಿಂದ ವಿಶೇಷವಾಗಿಯೂ, ಇಲ್ಲಿನ ಸರ್ಕಾರ್ ಇಲಾಖೆಗಳ ಪೈಕಿ ಕೆಲವು ಮೈಸೂರಿಗೆ ವರ್ಗ ಮಾಡಲ್ಪಡುವವೆಂಬ ಪ್ರಸ್ತಾವ ಹುಟ್ಟಿದ್ದು ಅದಕ್ಕೆ ಪೋಷಕವಾಗಿ, ಬರುವ ಏಪ್ರಿಲ್ ತಿಂಗಳ ೧ನೇ ತಾರೀಖ್ ಮೊದಲು ಪೊಲೀಸ್ ಇನ್ಸ್‌ಪೆಕ್ಟರ್ ಜನರಲವರ ಆಫೀಸ್ ಮೈಸೂರಲ್ಲಿ ಮಾಡಲ್ಪಡುವದೆಂದು ಸದರಿ ಸರ್ಕಾರೀ ಗೆಜೆಟಿನಲ್ಲಿ ಷಾಯಿಷ್ ಮಾಡಲ್ಪಟ್ಟದ್ದಲ್ಲದೆ, ಇಲ್ಲಿಂದ ಸದರೀ ಇಲಾಖೆಯು ಮೈಸೂರಿಗೆ ಸಾಗಿಸಲ್ಪಡುವದಕ್ಕೆ ಪೂರ್ವಭಾವಿಯಾಗಿ ಅಲ್ಲಿ ಮಾಡಬೇಕಾದ ಏರ್ಪಾಡುಗಳ ಬಗ್ಗೆ ಇಲ್ಲಿಂದ ಒಬ್ಬ ಆಫೀಸರು ಮೈಸೂರಿಗೆ ಹೋಗಿದ್ದರೆಂದು ಸಹ ನಮ್ಮ ಕೇಳ್ವಿಗೆ ಬಂದಿತ್ತು. ಕೇವಲ ಜನರ ಪ್ರಸ್ತಾವಕ್ಕೆ (ಮಾತ್ರ) ಗುರಿಯಾಗಿದ್ದ ಸದರೀ ವಿಷಯವು ಸರ್ಕಾರೀಯಾಗಿ ಪ್ರಕಟಿಸಲ್ಪಟ್ಟಮೇಲೆ ಆ ಭಾಗದಲ್ಲಿ ಸಾಮಾನ್ಯವಾಗಿ ಜನಗಳಿಗುಂಟಾಗಿದ್ದ ಸಂಶಯವು ನಿವೃತ್ತಿಯಾಗಿ, ಸದರೀ ಇಲಾಖೆಗೆ ಸೇರಿದ ತಾಬೇದಾರಿ ಉದ್ಯೋಗಸ್ಥರು ಬಹಳ ಅಸಮಾಧಾನಗೊಂಡು, ಪರಂತು ತಮಗೆ ಜೀವನಾಧಾರವಾಗಿರುವ ನೌಕರಿಗಳಂ ಬಿಡಲಾರದೆ, ಪ್ರಯಾಣಕ್ಕೆ ಸನ್ನಾಹಗಳಂ ಮಾಡಲುಪಕ್ರಮಿಸಿದರು. ಇದು ಹೀಗಿರುವಲ್ಲಿ ಪೊಲೀಸ್ ಇಲಾಖೆಯೊಳು ಜಮಾದಾರ್, ಮತ್ತು ಇನ್ಸ್‌ಪೆಕ್ಟರ್ ಕೆಲಸಗಳಿಗೆ ಪರೀಕ್ಷೆ ಕೊಟ್ಟವರನ್ನೇ ನೌಕರರ್ಮಾಡಬೇಕೆಂಬ ನಿರ್ಬಂಧ ಪೂರ್ವಕ ಈಚೆಗೆ ಸುಮಾರ್ ಒಂದು ವರ್ಷದ ಹಿಂದೆ ಗವರ್ನಮೆಂಟಿನವರು ಕೆಲವು ನಿಬಂಧನೆಗಳಂ ರಚಿಯಿಸಿ, ಆ ಬಗ್ಗೆ ಒಂದು ಸ್ಕೂಲನ್ನು ಸಹ ಏರ್ಪಾಡು ಮಾಡಿ, ಅದರಲ್ಲಿ ಸುಮಾರ್ ಐವತ್ತು ಮಂದಿಗೆ ಮೇಲ್ಪಟ್ಟು ಓದುತಲಿರುವದಲ್ಲದೆ ಅವರ ಪರೀಕ್ಷಾಕಾಲವು ಕೇವಲ ಸಮೀಪಿಸಿರುವದರಿಂದ, ಅದು ಪೂರ್ತಿಯಾಗುವದರೊಳಗಾಗಿ ಅವರನ್ನೆಲ್ಲ ಮೈಸೂರಿಗೆ ಕರೆದುಕೊಂಡು ಹೋಗಬೇಕಾದರೆ ತನ್ಮೂಲಕ ವ್ಯರ್ಥವಾದ ಖರ್ಚುಗಳಿಗೂ ಅನಾನುಕೂಲಕ್ಕೂ ಕಾರಣವುಂಟಾಗುವದೆಂದು ತೋರಿ ಮೇಲ್ಕಂಡ ಪರೀಕ್ಷೆಯು ಪೂರ್ತಿಯಾದಮೇಲೆ ಸದರೀ ಇಲಾಖೆಯು ಮೈಸೂರಿಗೆ ಹೊರಡತಕ್ಕದ್ದೆಂದು ನಿರ್ಣಯವಾದಂತೆ ನಮ್ಮ ತಿಳುವಳಿಕೆಗೆ ಬಂದಿತ್ತು. ಕಳೆದ ಶುಕ್ರವಾರದ ಒಳದೇಶದ ಸ್ಪೆಕ್ಟೇಟರ್ ಪತ್ರಿಕೆಯಂ ನೋಡಲಾಗಿ, ಸರ್ಕಾರ್ ಇಲಾಖೆಗಳ ಪೈಕಿ ಕೆಲವನ್ನು ಮೈಸೂರಿಗೆ ವರ್ಗ ಮಾಡತಕ್ಕದ್ದೆಂದು ಕೊಡಲ್ಪಟ್ಟ ಹುಕುಂ ಪ್ರಾಯಶಃ ಜಾರೀಯೊಳು ತರಲ್ಪಡಲಾರದೆಂತಲೂ, ಯಾವ ಯಾವ ಇಲಾಖೆಗಳಿಗೆ ಸ್ಥಳ ಸಂಕೋಚ ಉಂಟಾಗಿರುತಿದೆಯೋ ಅವುಗಳಿಗೆಲ್ಲ ವಸತಿಯಂ ಕಲ್ಪಿಸಿಕೊಡಬೇಕೆಂದು ಗವರ್ನಮೆಂಟಿನವರು ಆಲೋಚಿಸುತಲಿರುವಂತೆಯೂ, ವಿದ್ಯಾಭ್ಯಾಸದ ಇಲಾಖೆಯೂ, ಪೊಲೀಸ್ ಇನ್ಸ್‌ಪೆಕ್ಟರ್ ಜನರಲವರ ಕಚ್ಚೇರಿಯೂ ಹುಜೂರೂ ಇಲ್ಲಿನ ಕೋಟೆಯೊಳು ಒಂದು ಕಟ್ಟಡಕ್ಕೆ ಸಾಗಿಸಲ್ಪಡುವವೆಂತಲೂ, ಸ್ಟೇಷನರಿ ಇಲಾಖೆಗೆ ಗವರ್ನಮೆಂಟ್ ಪ್ರೆಸ್ ಕಟ್ಟಡದಲ್ಲಿ ಜಾಗಾ ಕೊಡಲ್ಪಡುವದೆಂತಲೂ, ಮಿಲಿಟರೀ ಸ್ಟೋರ್ ಕಟ್ಟಡವು ಸಹ ಬಡಾಯಿಸಲ್ಪಡುವದೆಂತಲೂ, ಸದರೀ ಪತ್ರಿಕೆ ತಿಳಿಸುತಿದೆ. ಈ ಲೇಖನದ ಯಾಥಾರ್ಥ್ಯಕ್ಕೆ ನಾವು ಜವಾಬ್ದಾರರಲ್ಲದೆ ಹೋದಾಗ್ಯೂ ಈ ವರ್ತಮಾನವು ಸುತರಾಂ ನಿರಾಧಾರವಾದುದೆಂದು ಹೇಳುವದಕ್ಕಾಗುವದಿಲ್ಲವು. ಅದು ಹ್ಯಾಗಾದರೂ ಇರಲಿ. ಇಲ್ಲಿನ ಇಲಾಖೆಗಳಪೈಕಿ ಮುಖ್ಯವಾದ ಕೆಲವನ್ನು ಮೈಸೂರಿಗೆ ವರ್ಗ ಮಾಡುವದರಿಂದ ಅಂತಾ ಇಲಾಖಾಜನರಿಗೆ ಬಹುವಿಧ ಅನಾನುಕೂಲ್ಯಗಳನ್ನುಂಟುಮಾಡಿದಂತಾಗುವದಲ್ಲದೆ ಸಾಮಾನ್ಯವಾಗಿ ಪ್ರಜೆಗಳಿಗೆ ಸುತರಾಂ ಇಷ್ಟವಿಲ್ಲದ ಒಂದು ಕಾರ್ಯವಂ ಸರ್ಕಾರದವರು ನಡಸುವದು ಉಚಿತವಾಗಿ ತೋರಲಿಲ್ಲವು. ಇನ್ನು ಅನೇಕ ಕಾರಣಗಳ ದೆಸೆಯಿಂದ ಈವೂರನ್ನು ಬಡಾಯಿಸುವದೇ ಕ್ಷೇಮಕರವೆಂದು ಭಾವಿಸುವೆವು. ಈಗ ಸ್ಪೆಕ್ಟೇಟರ್ ಪತ್ರಿಕೆಯು ತಿಳಿಸುವ ಅಂಶವು ಕಾರ್ಯತಃ ಆಚರಣೆಯೊಳು ತರಲ್ಪಡುವದಾದರೆ ಇಲ್ಲಿನ ಪ್ರಜೆಗಳ ಸಂತೋಷಕ್ಕೆ ಪಾರವಿರಲಾರದು. ಇಂತಾ ವಿಷಯಗಳಲ್ಲಿ ಪ್ರಜೆಗಳ ಅಭಿಪ್ರಾಯವಂ ಗೌರವಿಸುವಣವು ಗವರ್ನಮೆಂಟಿನವರಿಗೆ ಭೂಷಣವಾಗಿರುವುದು.

## ವಿವಾಹಕ್ಕೆ ಮಾತಾಪಿತೃಗಳ ಅನುಮತಿ.

ಲೋಕದಲ್ಲಿ ಭಗವನ್ನಿರ್ಮಿತಗಳಾದ ಸಕಲಪ್ರಾಣಿಗಳೊಳಗೂ ಮನುಷ್ಯರು ವಿಲಕ್ಷಣಗಳಾದ ಜ್ಞಾನ ಕ್ರಿಯೆಗಳಿಂದ ಉತ್ತಮರೆನಿಸಿರುತ್ತಾರೆ. ಇಂತವರು ಒಂದೊಂದು ದೇಶದಲ್ಲಿ ಒಂದೊಂದು ಬಗೆಯಾದ ಜಾತಿ ಧರ್ಮಾಚಾರ ಮರ್ಯಾದೆಗಳನ್ನು ಪಡೆದಿರುತ್ತಾರೆ. ಅಂತಾ ಜಾತಿ ಧರ್ಮಾಚಾರ ವ್ಯವಹಾರಾದಿಗಳು ಕೆಲವು ಕಡೆಗಳಲ್ಲಿ ನಿಯತಗಳಾಗಿಯೂ, ಬೇರೆ ಕೆಲವು ಕಡೆಗಳಲ್ಲಿ ಕಾಲ ದೇಶ ಜನ ಸ್ಥಿತಿ ಗತಿಗಳಿಗೆ ತಕ್ಕಂತೆ ರೂಪಾಂತರವಂ ಹೊಂದತಕ್ಕವಾಗಿಯೂ ಇರುತಿವೆ. ಅವುಗಳಲ್ಲಿ ಈ ಇಂಡ್ಯದೇಶದೊಳು ವಾಸ ಮಾಡುವ ಹಿಂದೂಗಳು ವೇದಶಾಸ್ತ್ರ ವಿಹಿತ ವರ್ಣಾಶ್ರಮ ಧರ್ಮಾಚಾರಗಳುಳ್ಳವರಾಗಿಯೂ, ಅವುಗಳನ್ನೇ ನಂಬಿ ತದಭಿವೃದ್ಧಿಯಲ್ಲಿಯೇ ಅನವರತ ಪ್ರಯತ್ನಪಡತಕ್ಕವರಾಗಿಯೂ ಇರುತ್ತಾರೆ. ಇದರಿಂದ ಅವರ ಆಚಾರ ವ್ಯವಹಾರ ಸಂಪ್ರದಾಯಾದಿಗಳೆಲ್ಲವು ನಿಯತಸ್ವಭಾವವುಳ್ಳವಾಗಿರುವದರಿಂದ ಅವು ಇಷ್ಟಾನುಸಾರ ಬದಲಾಯಿಸಲ್ಪಡತಕ್ಕದಲ್ಲವಾಗಿರುತಿವೆ. ಕಾಲ ಧರ್ಮದಿಂದ ಅಂತಾ ವೇದಶಾಸ್ತ್ರ ವಿಹಿತಗಳಾದ ಧರ್ಮಾಚಾರಗಳಿಗೆ ಹಾನಿ ಉಂಟಾಗುತ ಬರಲಿಕ್ಕೆ ಸಾಕ್ಷಾತ್ತಾಗಿಯೂ, ಪರಂಪರೆಯಾಗಿಯೂ, ಪ್ರಚ್ಛನ್ನವಾಗಿಯೂ, ಅಭಿವ್ಯಕ್ತವಾಗಿಯೂ, ನಿವಾರಕವಾಗಿಯೂ, ಅನಿವಾರಕವಾಗಿಯೂ ಇರುವ ಅನೇಕ ಕಾರ್ಯಕಾರಣಗಳೇರ್ಪಡುತ ಬಂದಿವೆ. ಅದರ ಕಾರಣಗಳಂ ಕಂಡು ಹಿಡಿದು ತಕ್ಕ ಪ್ರತಿಕ್ರಿಯೆಯಂ ಮಾಡಬೇಕೆಂಬ ಪ್ರವೃತ್ತಿಯುಳ್ಳವರು ಕಡಮೆಯಾಗಿರುವದರಿಂದ ಅಂತಾ ಆಚಾರ ವ್ಯವಹಾರಗಳಂ ತಮಗೆ ಅನುಕೂಲವಾದ ರೀತಿಯಲ್ಲಿ ಬದಲಾಯಿಸಿಕೊಳ್ಳಬೇಕೆಂಬ ಅಭಿಪ್ರಾಯವು ಈಗ ಅನೇಕರಿಗೆ ಅಧಿಕವಾಗಿದೆ. ಅಂತಾ ಸಮಯಾಚಾರ ಪರಿಷ್ಕರಣಗಳಲ್ಲಿ ಹಿಂದೂ ವೈವಾಹಿಕ ಕ್ರಮವು ಒಂದಾಗಿಯೂ, ತೀವ್ರ ವ್ಯವಸ್ಥೆಯನ್ನೈದಬೇಕಾದುದಾಗಿಯೂ ಗಣಿಸಲ್ಪಟ್ಟಿದೆ. ಪರಿಣಯಾವರ್ತಿಯ ವಿಷಯದಲ್ಲಿ ಜನರ ತಾತ್ಪರ್ಯಗಳು ಭಿನ್ನಿಸಿರುವಂತೆ ವಿವಾಹಕ್ರಮಗಳಲ್ಲಿ ಸಹ ಅಭಿಪ್ರಾಯವು ನಾನಾರೂಪವಾಗಿರುವಂತೆ ವ್ಯಕ್ತವಾಗುತಿದೆ. ವಿವಾಹ ವಿಷಯದಲ್ಲಿ ಈಗ್ಯೆ ಬಹುಕಾಲದ ಮೊದಲು ನೆಲೆಗೊಂಡು ಅನೇಕರಿಂದನುವರ್ತಿಸಲ್ಪಡುತ ಬರುತಲಿರುವ ಪದ್ಧತಿಯನ್ನು ಅಂದರೆ ವಧೂವರಾನ್ವೇಷಣ ಸ್ವಾತಂತ್ರ್ಯವನ್ನು ಅವರ ಮಾತಾ ಪಿತೃಗಳುಳಿಸಿಕೊಂಡಿರುವದಂ ನಿವೃತ್ತಿಸಿಕೊಂಡು ವಿವಾಹ ಮಾಡಿಕೊಳ್ಳುವ ಮಾತ್ರ ವಧೂವರರಿಗೊಪ್ಪಿಸಿ ತಾವು ತಾಟಸ್ಥ್ಯವನ್ನೈದಬೇಕೆಂತಲೂ, ಹಾಗೆ ಮಾಡುವದರಿಂದ ಅನುರೂಪವಾದ ದಾಂಪತ್ಯವು ಘಟಿಸಲಿಕ್ಕೂ, ಅವರಿಷ್ಟಬಂದಂತೆ ಉಲ್ಲಾಸದಿಂದಿರಲಿಕ್ಕೂ, ವಿವಾಹ ಪ್ರಯುಕ್ತವಾದ ಸಾಮರಸ್ಯವು ಸಿದ್ಧಿಸಲಿಕ್ಕೂ ಅವಕಾಶ ಉಂಟಾಗುವದೆಂತಲೂ ಅನೇಕರ ತಾತ್ಪರ್ಯವಾಗಿರುತಿದೆ. ಇದಕ್ಕೆ ಆಧಾರವಾಗಿ ಪೂರ್ವದೊಳು ಇಂಡ್ಯದೇಶವನ್ನಾಳುತಲಿದ್ದ ಕೆಲವರು ರಾಜಪುತ್ರರು ವಿಶೇಷೋದ್ದೇಶದೊಡನೆ ಮಾಡಿದ ಸ್ವಯಂವರಗಳನ್ನುದಹರಿಸಿ ಈ ಸಂಪ್ರದಾಯವು ಅನಾದಿ ಸಿದ್ಧವಾದವೆಂದು ಘೋಷಿಸಿ ತಾದೃಶಭಾವವ ಪ್ರಬಲಗೊಳಿಸುತಲಿದಾರೆ. ಭವಿಷ್ಯದರ್ಥವಂ ಪರಿಕಿಸದೆ ಸಾಧ್ಯಸ್ಕ ಪ್ರಯೋಜನಕ್ಕೆ ಪರರಾದ ವರ್ತಮಾನ ಕಾಲೀನರಾದ ಬಾಲಕರು ತಮ್ಮ ಮಾತಾ ಪಿತೃಗಳಂ ವಿರೋಧಿಸಿ ಅವರೊಳಿರುವ ಸ್ವಾತಂತ್ರ್ಯವನ್ನಪಹರಿಸಲಿಕ್ಕೆ ಧೈರ್ಯ ಸಾಲದೆಯೂ, ಅವರು ಪ್ರವರ್ತಿಸಿ ಮಾಡುವ ವಿವಾಹವನ್ನಂಗೀಕರಿಸಲಿಕ್ಕೆ ಮನಸ್ಸಿಲ್ಲದೆಯೂ ತರಳ ಹೃದಯರಾಗಿ ವಿವಾಹವು ತಮಗೆ ಆವಶ್ಯಕವಿಲ್ಲವೆಂತಲಾಗಲಿ, ಅಥವಾ ಆತ್ಮರಕ್ಷಣೆಗೆ ತಕ್ಕಸಾಧನವು ತಮಗುಂಟಾದ ಬಳಿಕ ಬೇಕಾದರೆ ವಿವಾಹ ಮಾಡಿಕೊಳ್ಳಬಹುದೆಂದಾಗಲಿ ಹೇಳಿ ಪ್ರಕಾರಾಂತರವಾಗಿ ನಿಷೇಧಿಸಲಿಕ್ಕೆ ಅಲ್ಲಲ್ಲಿ ಪ್ರಾರಂಭಿಸಿರುವಂತೆ ತಿಳಿಯಬರುತಿದೆ. ಬಾಲಕರ ವಿವಾಹ ವಿಷಯದಲ್ಲಿ ಅವರ ತಾಯಿತಂದೆಗಳು ಸ್ವಾತಂತ್ರ್ಯವಂ ಪಡೆಯಲಿಕ್ಕೆ ಅನೇಕ ಕಾರಣಗಳು ಏರ್ಪಟ್ಟಿರುತಿವೆ. ಅಂತಾ ಕಾರಣಗಳನ್ನು ಮತ್ತೊಂದು ಸಮಯದಲ್ಲಿ ವಿವರಿಸುವೆವು. ಆದರೆ ಕಾಲಧರ್ಮವನ್ನನುಸರಿಸಿ ಉಂಟಾಗಬಹುದಾದ ಮೂಲತೋಹಾನಿಕರಗಳಾದ ಅನರ್ಥಗಳನ್ನು ತಪ್ಪಿಸಿಕೊಂಡು ಬಾಲಕರು ಸುಖ ಪಡುವ ವಿಷಯದಲ್ಲಿ ಯಾರ ಆಕ್ಷೇಪಣೆಯೂ ಇರಲಾರದು. ತಾದೃಶ ಅನರ್ಥ ಪರಂಪರೆಗಳು ನಿಯತವೆಂತಲೂ, ಅಪರಿಹಾರ್ಯಗಳೆಂತಲೂ ದೀರ್ಘದರ್ಶಿಗಳಾದ ಪೂರ್ವಿಕರು ಚೆನ್ನಾಗಿ ಪರ್ಯಾಲೋಚಿಸಿ ಅವುಗಳಿಗೆ ಸಾಧ್ಯವಾದ ಮಟ್ಟಿಗೆ ಅವಕಾಶವಂ ಕಡಮೆ ಮಾಡುವದಕ್ಕಾಗಿ ವರ ಕನ್ಯಾನ್ವೇಷಣಾಧಿಕಾರವ ಸ್ವತಃ ಉಳಿಸಿಕೊಂಡಂತೆ ಕಾಣುತಿದೆ. ಈ ಸಂಪ್ರದಾಯವು ಕೇವಲ ನಮ್ಮವರೊಳು ಮಾತ್ರವೇ ಅಲ್ಲವು. ವಿಜಾತೀಯರಾಗಿಯೂ, ವಿದೇಶೀಯರಾಗಿಯೂ ಇರುವವರಲ್ಲಿ ಸಹ ನೆಲೆಗೊಂಡಿರುವಂತೆ ಸ್ಪಷ್ಟವಾಗುತಿದೆ. ಫ್ರಾನ್ಸ್ ದೇಶದೊಳು ನೆಲೆಗೊಂಡಿರುವ ವೈವಾಹಿಕ ನಿಬಂಧನೆಯಂ ಕುರಿತು ಒಂದಾನೊಂದು ಇಂಗ್ಲಿಷ್ ಪತ್ರಿಕೆಯು ತಿಳಿಸುತಿದೇನೆಂದರೆ— ಮೋಹವೆಂಬುದು ನಿರ್ಬಂಧವನ್ನಾದಾಗಲೂ ಹೇಳನಮಾಡಿ ತಿರಸ್ಕರಿಸಬಿಡತಕ್ಕದ್ದಾಗಿರುತಿದೆ. ಪ್ಯಾರಿಸ್ ಪಟ್ಟಣದಲ್ಲಿ ಈಚೆಗೆ ವಿವಾಹ ಮಾಡಿಕೊಂಡ ಪ್ರಾಪ್ತ ವಯಸ್ಕರಾದ ಮತ್ತು ಪರಸ್ಪರ ನಿಶ್ಶೇಷಾನುರಾಗವುಳ್ಳವರಾದ ದಂಪತಿಗಳು ತಮ್ಮ ವಿವಾಹ ವಿಷಯದಲ್ಲಿ ಮಾತಾ ಪಿತೃಗಳಂ ಮುಂಟಾದ ವಿರೋಧವಂ ತಪ್ಪಿಸಿಕೊಳ್ಳಲಿಕ್ಕೋಸ್ಕರ ಉಪಾಯವಂ ಹುಡಿಕಿ ತಮ್ಮ ಉದ್ದೇಶವಂ ನೆರವೇರಿಸಿಕೊಂಡರು. ವಿವಾಹ ವಿಷಯದಲ್ಲಿ ಸದರೀ ರಾಜ್ಯದೊಳು ಖಂಡಿತವಾದ ಒಂದು ನಿಬಂಧನೆಯು ಆಚರಣೆಯೊಳಿರುತಿದೆ. ಇಂತಾ ನಿಬಂಧನೆಯು, ಹಿಂದೆ ಆ ರಾಜ್ಯವಂ ಪರಿಪಾಲಿಸುತಲಿದ್ದ ವೀರ್ಯ ಶೌರ್ಯಾದಿಗಳಿಂದ ಅಸಮಾನರೆನಿಸಿ ಜಗತ್ಪ್ರಸಿದ್ಧರಾಗಿದ್ದ ನೆಪೋಲಿಯನ್ ಬೋನಪಾರ್ಟಿ ಯೆಂಬವರಿಂದ ಏರ್ಪಡಿಸಲ್ಪಟ್ಟಿತು. ಅದನ್ನನುಸರಿಸಿ ಸ್ತ್ರೀ ಪುರುಷರು ೪೦ ವರುಷಗಳ ವಯಸ್ಸಿನವರಾಗಿದ್ದಾಗ್ಯೂ ಪ್ರಥಮತಃ ಅವರ ತಾಯಿತಂದೆಗಳ ಅನುಮತಿಯಂ ಪಡೆಯದೆ ವಿವಾಹ ಮಾಡಿಕೊಳ್ಳಕೂಡದೆಂದು ನಿರ್ಬಂಧವೇರ್ಪಟ್ಟಿರುತಿದೆ. ಹೀಗಿದ್ದಾಗ್ಯೂ ಕೆಲವು ಕಾಲದ ಹಿಂದೆ ಫ್ರೆಂಚ್ ದೊಡ್ಡಮನುಷ್ಯನೊಬ್ಬನು ಮಾರ್ಟಿನಿಕ್ ಎಂಬ ಪ್ರದೇಶದಲ್ಲಿ ವಿಶೇಷ ಐಶ್ವರ್ಯವಂ ಸಂಪಾದಿಸಿ ಅಲ್ಲಿಂದ ತನ್ನ ಭಾರ್ಯೆ ಮತ್ತು ಸುಂದರಿಯಾದ ಪುತ್ರಿಯೊಡನೆ ಫ್ರಾನ್ಸಿಗೆ ಹಿಂದಿರುಗಿಬಂದು ಅಲ್ಲಿ ಸುಖದಿಂ ವಾಸ ಮಾಡುತಲಿದ್ದನು. ಅವನ ಕುಮಾರಿಯ ವಿವಾಹ ವಿಷಯದಲ್ಲಿ ಭರ್ತೃ ಭಾರ್ಯೆಯರಿಗೆ ವಿವಾದ ಉಂಟಾಗಲು ತಾಯಿಯು ತನಗೆ ಇಷ್ಟವಿಲ್ಲದಿರುವಂತಾ ಪ್ರಸಿದ್ಧನಾದ ಒಬ್ಬ ಫ್ರೆಂಚ್ ಜನರಲನ್ನು ಮಗಳು ಮೋಹಿಸಿರುವದನ್ನೂ ಅದಕ್ಕೆ ತನ್ನ ಪತಿಯು ಒಡಂಬಟ್ಟಿರುವದನ್ನೂ ತಿಳಿದು ಗಂಡನನ್ನೂ ಮಗಳನ್ನೂ ತೊರೆದು ಪ್ರತ್ಯೇಕವಾಗಿ ಹೊರಟುಹೋದಳು. ಪ್ರಸಕ್ತ ವಿವಾಹದಲ್ಲಿ ಕನ್ಯೆಯ ತಂದೆಯು ಸಮ್ಮತಿಸಿದಾಗ್ಯೂ ತಾಯಿಮಾತ್ರ ಬಹಳ ವಿರೋಧಿಸಿದಳು. ಫ್ರೆಂಚ್ ಜನಗಳ ಅಭಿಪ್ರಾಯಾನುಸಾರ ಸದರೀ ವಿವಾಹವು ರದ್ದಾಗಲಿಕ್ಕೆ ಅದೇ ಸಾಕಾಗಿರುತಿದೆ. ಅದಾಗ್ಯೂ ಮೇಲೆ ಕಂಡ ನಿಬಂಧನೆಗೆ ಬೇರೆಯೊಂದು ವಿಶೇಷನಿಯಮವೇರ್ಪಟ್ಟಿರುತಿದೆ. ಅದೇನೆಂದರೆ—ವಿವಾಹ ಕಾಲದಲ್ಲಿ ಮಾತಾ ಪಿತೃಗಳಿಬ್ಬರಲ್ಲಿ ಯಾರಾದರೊಬ್ಬರಾಗಲಿ ಅಥವಾ ಇಬ್ಬರಾಗಲಿ ಹಾಜರಿರದೆ ಅಥವಾ ಇರತಕ್ಕ ಸ್ಥಳ ತಿಳಿಯದೆ ಕಣ್ಣುಮರೆಯಾಗಿದ್ದ ಪಕ್ಷದಲ್ಲಿ ಅವರು ಹಾಜರಿಲ್ಲವೆಂದು ಮಾತುಬರದಾದ ನಾಲ್ವರು ದೊಡ್ಡಮನುಷ್ಯರು ಪ್ರಮಾಣ ಪೂರ್ವಕ ತಿಳಿಸುವರಾದರೆ ಆಗ ಯಾವ ವಿವಾಹಕ್ಕಾಗಲಿ ತಾಯಿ ತಂದೆಗಳ ಅನುಮತಿಯು ಅನಾವಶ್ಯಕವೆಂಬದು. ಇದನ್ನನುಸರಿಸಿ ಪ್ರಕೃತ ಸಂದರ್ಭದಲ್ಲಿ ವಧುವಿನ ತಾಯಿಯು ಯೆಲ್ಲಿಯೂ ದೊರೆಯಲಿಲ್ಲವೆಂಬದಾಗಿ ನಾಲ್ವರು ಪ್ರಮಾಣ ಮಾಡಿ ಹೇಳಿದರು. ಅನಂತರ ವಿವಾಹಕ್ಕೆ ಬೇಕಾದ ಯೇರ್ಪಾಡುಗಳೆಲ್ಲ ಮಾಡಲ್ಪಟ್ಟು ಅದು ಅತಿಗೋಪ್ಯವಾಗಿ ಜರಿಗಿಸಲ್ಪಟ್ಟಿತು. ಬಳಿಕ ಒಂದು ದಿನ ವಧುವಿನ ತಾಯಿಯು ಪ್ಯಾರಿಸ್ ಪಟ್ಟಣದ ರಾಜಬೀದಿಯಲ್ಲಿ ಹೋಗುತಲಿರುವಾಗ್ಯೆ ಆಕೆಯ ಸ್ನೇಹಿತನೊಬ್ಬನು ಅವಳ ಸಮೀಪಕ್ಕೆ ಹೋಗಿ “ನಿನ್ನ ಮಗಳಿಗೆ ಅನುರೂಪನಾದ ಪತಿಯು ದೊರೆತದ್ದಕ್ಕಾಗಿಯೂ, ಮನೋರಂಜಕನಾದ ಅಳಿಯನು ನಿನಗೆ ಲಭಿಸಿದ್ದಕ್ಕಾಗಿಯೂ, ಶುಭವಾದವ ಮಾಡುತ್ತೇನೆಂದು” ನುಡಿಯಲು ಆಗ ಅವಳು ತನ್ನ ವಿಷಯದಲ್ಲಿ ಮಾಡಲ್ಪಟ್ಟ ಮೋಸವನ್ನು ಕಂಡುಕೊಂಡಳು. ಈಗ ಇಂತಾ ಸಂದರ್ಭದಲ್ಲಿ ನಡೆದ ವಿವಾಹವು ನ್ಯಾಯಸಮ್ಮತವಾದುದೆ, ಇದಕ್ಕೆ ಸಂಬಂಧಪಟ್ಟ ವಧೂವರಾದಿಯಾಗಿ ಯೆಲ್ಲರೂ ದಂಡನೀಯರೇ ಎಂಬ ಅಂಶವು ಅಲ್ಲಿನ ನ್ಯಾಯಸ್ಥಾನದಲ್ಲಿ ವಿಚಾರಾರ್ಹವಾಗಿರುವಂತೆಯೂ, ಅದರ ತೀರ್ಮಾನವನ್ನು ಪ್ರಜೆಗಳು ಅತ್ಯುತ್ಸಾಹದೊಡನೆ ನಿರೀಕ್ಷಿಸುತಲಿದಾರೆಂತಲೂ ತಿಳಿಯಬರುತಿದೆ.” ಇದರಿಂದ ವಿವಾಹ ವಿಷಯದಲ್ಲಿ ಮಾತಾಪಿತೃಗಳ ಅಭಿಪ್ರಾಯವು ಕೇವಲ ಮುಖ್ಯವಾದದೆಂದು ಸ್ಪಷ್ಟವಾಗುತಿದೆ.

## Occasional Notes.
## ನೈಮಿತ್ತಿಕ ವಿಷಯನ್ಯಾಸ.

ಕೊಚ್ಚಿ ಸಂಸ್ಥಾನದ ಹೊಸ ದಿವಾನರಾದ ಮ ಸುಬ್ರಹ್ಮಣ್ಯ ಪಿಳ್ಳೆಯವರು ತಮ್ಮ ಕೆಲಸವಂ ಕೈಗೊಂಡ ಕೂಡಲೆ ಸದರೀ ಸಂಸ್ಥಾನಕ್ಕೆ ಒಂದು ಸಿವಿಲ್ ಪ್ರೊಸಿಡ್ಯೂರ್‌ಕೋಡನ್ನು ತಯಾರ್ಮಾಡುವದಕ್ಕೆ ಉಪಕ್ರಮಿಸಿರುತ್ತಾರೆಂದು ತಿಳಿಯಬರುತಿದೆ.

---

ಸನ್ ೧೮೯೩ನೇ ಇಸವಿ ನವಂಬರ್ ತಿಂಗಳಲ್ಲಿ ಪುದುಕೋಟೆ ಅರಸರವರಿಗೆ ೧೮ ವರ್ಷಗಳ ವಯಸ್ಸು ಪೂರ್ತಿಯಾಗುತಿದೆಯಾಗಿ, ಆಗ ಅದರು ತಮ್ಮ ರಾಜ್ಯಭಾರವಂ ಸ್ವಯಂ ವಹಿಸತಕ್ಕದ್ದೆಂದು ಇಂಡ್ಯ ಗವರ್ನಮೆಂಟಿನಿಂದ ಖಚಿತವಾಗಿ ವ್ಯವಸ್ಥೆ ಮಾಡಲ್ಪಟ್ಟಿರುತಿದೆ.

---

ಕಪುರ್ತಲಾ ಸಂಸ್ಥಾನದ ಸಾಬಕ್ ಅರಸರಾದ ರಣಧೀರ ಸಿಂಗರವರು ಕ್ರಿಶ್ಚಿಯನ್ ಮತವನ್ನವಲಂಬಿಸಿದ ಕಾಲದಲ್ಲಿ ಅದರ ಜ್ಞಾಪಕಾರ್ಥ ರಾಜಧಾನಿಯಲ್ಲಿ ಒಂದು ಕ್ರಿಶ್ಚಿಯನ್ ಗುಡಿಯಂ ಕಟ್ಟಿಸಿದರಾಗಿ ಅದರಲ್ಲಿ ಕೆಲಕ್ಕೆ ಕಾಲದ ವರಿವಿಗೆ ದೇವರ ಪ್ರಾರ್ಥನೆ ವಗೈರೆ ಕೆಲಸಗಳು ನಡೆಯುತಬಂದವು, ಪರಂತು ತರುವಾಯ ಅರಸರವರು ತಮ್ಮ ಪೂರ್ವಿಕರ ಮತಕ್ಕೆ ವಾಪಸ್ ಹೋದಮೇಲೆ ಸದರೀ ಕಟ್ಟಡವು ಖಾಲೀಯಾಗಿರುತಿತ್ತು. ಈಚೆಗೆ ಸದರೀ ಕಟ್ಟಡದಲ್ಲಿ ಕೆಲವು ಭಾಗವನ್ನು ಕಿತ್ತುಹಾಕಿ ಈಗ ಬಂದು ಕ್ಲಬ್ಬಾಗಿ ಮಾಡಿಕೊಂಡಿರುತ್ತಾರೆ

---

ಜೆಯಿಲಿನಲ್ಲಿರುವ ಖೈದೀಗಳ ಪೈಕಿ ಒಳ್ಳೆಯ ನಡತೆಯುಳ್ಳವರನ್ನು ಅವರು ಖೈದ್ ಅನುಭವಿಸುವ ಜೆಯಿಲಿನಲ್ಲೇ ಓವರ್ಸಿಯರ್, ಮೇಸ್ತ್ರಿ ವಗೈರೆ ಕೆಲಸಗಳಲ್ಲಿಟ್ಟು, ಅವರ ಸಜಾ ಮಾಯದೆಯ ಪೈಕಿ ಕೆಲವು ಭಾಗವನ್ನು ಮಜಾ ಮಾಡು

ಷಣವು ಪಾಡಿಕೆಯಾಗಿರುತ್ತ, ಇದುವರಿವಿಗೆ ಪಾಡಿಕೆಯಾಗಿ ತಪ್ಪು ಮಾಡುವಂತವರು ಸಹ ಪೋಲೀಸಿನಂಥ ಕೆಲಸಗಳಲ್ಲಿದ್ದಷ್ಟು ತಮ್ಮ ಒಳ್ಳೆಯ ನಡತೆಯು ಪ್ರಯೋಜನವನ್ನನುಭವಿಸುತಲಿದ್ದರು. ಈಚೆಗೆ ಇಂಡ್ಯ ಗವರ್ನಮೆಂಟಿನವರು, ಪಾಡಿಕೆಯಾಗಿ ತಕ್ಸೀರುಗಳಂ ಮಾಡುವಂತವರನ್ನು, ಜಿಲ್ಲೆಗಳ ಇನ್ಸ್ಪೆಕ್ಟರ್ ಜನರಲವರ ಲಿಖಿತಮೂಲಕವಾದ ಹುಕುಂ ವಿನಾ, ಆಫೀಸರುಗಳಾಗಿ ನೇಮಕ ಮಾಡುವ ಪಾಡಿಕೆಯಂ ಸಂಪೂರ್ಣವಾಗಿ ವಿರೋಧಿಸತಕ್ಕದ್ದೆಂದು ನಿರ್ಣಯಿಸಿರುತ್ತಾರೆ. ಇದು ಹೀಗಿರುವಲ್ಲಿ ಮದರಾಸ್ ಗವರ್ನಮೆಂಟಿನವರು ಬೇರೆ ಅಭಿಪ್ರಾಯವುಳ್ಳವರಾಗಿ, ಹಳೇ ಕಳ್ಳರಿಗೆ ಅವರು ಜೈಲಿನಲ್ಲಿರುವಾಗ ಆಫೀಸರ್ ಕೆಲಸಗಳು ಕೊಟ್ಟು ತನ್ಮೂಲಕ ಅವರು ಒಳ್ಳೆಯ ನಡತೆಯುಳ್ಳವರಾಗುವಂತೆ ಯೋಗ್ಯ ಪ್ರೋತ್ಸಾಹ ಪಡಿಸಬಾರದೆಂದು ಕೇಳುತ್ತಾರೆ. ಪರಂತು ಇಂಡ್ಯ ಗವರ್ನಮೆಂಟಿನವರು ಹಳೇ ಕಳ್ಳರ ವಿಷಯದಲ್ಲಿ ಯಾವ ವಿಧವಾದ ದಯೆಯಂ ತೋರಿಸಕೂಡದೆಂದು ತಾತ್ಪರ್ಯ ಪಡುತ್ತಾರಾಗಿ, ಹಳೇ ಕಳ್ಳರಾದವರಿಗೆ ಮುಂದೆ ಕಾವಲುಗಾರಿ ಮಾಡುವದು ವಿನಾ ಬೇರೆ ಯಾವವಿಧ ನಿಯೋಗವನ್ನೂ ಉಂಟಾಗಲಾರದೆಂದು ಕಾಣುತಿದೆ.

## LOCAL AND PROVINCIAL NEWS.
### ಸ್ವದೇಶಮತ್ತುತಾಲ್ಲೂಕುಪ್ರಾಂತ್ಯವೃತ್ತಾಂತಗಳು.

ಶ್ರೀಮನ್ಮಹಾರಾಜರವರ ಅರಮನೆ ಕಂಟ್ರೋಲರಾಗಿರುತಲಿದ್ದ ಮೆ|| ಸುಬ್ಬರಾಯರವರು ಈಚೆಗೆ ಗವರ್ನಮೆಂಟ ಕಂಟ್ರೋಲರಾಗಿ ನೇಮಕರಾಗ್ಯಲ್ಪಟ್ಟರಷ್ಟೆ. ಸದರೀಯವರು ಕಳೆದ ಶುಕ್ರವಾರದ ದಿನ ಈ ಪ್ರೌಢಿಗೆ ಬಂದು ತಮ್ಮ ಹೊಸ ಕೆಲಸದ ಚಾರ್ಜನ್ನು ವಹಿಸಿದರು

ಇಲ್ಲಿನ ಚೀಫಕೋರ್ಟಿನ ಜಡ್ಜಿಯರ ಪೈಕಿ ಒಬ್ಬರಾದ ಮೆ|| ಪಿ. ಎನ್. ಕೃಷ್ಣಮೂರ್ತಿಯವರು ಕಳೆದ ಫೆಬ್ರವರಿ ೨೩ನೇ ತಾರೀಖ್ ಮೊದಲು ಮೂರು ತಿಂಗಳ ಪ್ರಿವಿಲೇಜ್ ರಜಾ ಪಡೆದುಕೊಂಡು ತಮ್ಮ ಜಹಗೀರಿಗೆ ಹೋಗಿದ್ದರಷ್ಟೆ. ಸದರೀಯವರು ಈದಿನ ವಾಪಸ್ ಬಂದು ತಮ್ಮ ಕೆಲಸದ ಚಾರ್ಜಂ ಮರಳಿ ವಹಿಸಿದರೆಂದು ಕೇಳುತ್ತೇವೆ.

ಪೋಲೀಸ್ ಇರುವಾ ಜಮಾದಾರ ಮತ್ತು ಇನ್ಸ್ಪೆಕ್ಟರ್ ಕೆಲಸಗಳಿಗಾಗಿ ಯೇರ್ಪಡಿಸಲ್ಪಟ್ಟ ಪರೀಕ್ಷೆಯು ಬರುವ ಯೇಪ್ರಿಲ್ ತಿಂಗಳ ಆದಿಭಾಗದಲ್ಲಿ ನಡೆಯುವವಾಗಿದ್ದುದನ್ನು ನಿಲ್ಲಿಸಿ, ಸದರೀ ಪರೀಕ್ಷೆ ಕೋಸುದಾಗಿ ಬೇರೆ ಯೆರಡು ಕಾನೂನುಗಳಂ ಸೇರಿಸಿ ಅದು ಬರುವ ಜೂನ್ ತಿಂಗಳಲ್ಲಿ ನಡೆಯತಕ್ಕದ್ದೆಂದು ವ್ಯವಸ್ಥೆಯಾಗಿದೆ ಕೇಳುತ್ತೇವೆ.

ಗತಿಸಿದ ಮಹಾರಾಜಾ ಕೃಷ್ಣರಾಜ ಒಡೆಯರ್ ಬಹದೂರವರ ಪತ್ನಿಯರಲ್ಲಿ ಒಬ್ಬರಾದ ಸೀತಾವಿಲಾಸದ ಅಮ್ಮಣ್ಣಿಯವರು ಈಚೆಗೆ ಕೆಲವು ದಿನಗಳಿಂದ ಕೇವಲ ಅಸ್ವಸ್ಥತೆಯಲ್ಲಿರುತಲಿದ್ದರಷ್ಟೆ, ಕಳೆದ ಶನಿವಾರದ ದಿನ ಬೆಳಗ್ಗೆ ಅವರ ದೇಹಸ್ಥಿತಿಯಂ ಕುರಿತು ಬಂದ ತಂತಿ ವರ್ತಮಾನವಂ ನೋಡಿದ ಕೂಡಲೆ ದಿವಾನರವರೂ ಮೆ|| ವಿ. ಪಿ. ಮಾಧವರಾಯರವರೂ ಮೆಯಿಲ್ ಟ್ರೈನಿನಲ್ಲಿ ಮೈಸೂರಿಗೆ ಪ್ರಯಾಣವಾದರು

ಈ ಪ್ರೌಢ ಕೋಟೆಯ ಬಾಗಿಲಲ್ಲಿರವ ಕಲ್ಯಾಣಿಯೆಂಬ ಬಾವಿಯನ್ನು ಮುಚ್ಚಿಬಿಡುವ ಪ್ರಯತ್ನಗಳು ನಡೆಯುತಲಿರುವಂತೆ ಈಗ ನಮ್ಮ ಕೇಳ್ವಿಕೆ ಬಂದಿದ್ದ ಒಂದು ವರ್ತಮಾನವನ್ನು ಯೆರಡುವಾರಗಳಹಿಂದೆ ಈ ಪತ್ರಿಕೆಯಲ್ಲಿ ಪ್ರಕಟಿಸಿದ್ದೆವಷ್ಟೆ. ಅದರಿಂದೀಚೆಗೆ ತಿಳಿಯಬರುವದರಲ್ಲಿ, ಸದರೀ ಕಲ್ಯಾಣಿಯನ್ನು ತಳದಿಂದ ಶೋಧಿಸಿ, ಅದರಲ್ಲಿರುವ ಕೆಸರು ಮೊದಲಾದವು ತೆಗೆಯಿಸಿ, ಆಪ್ರಾಂತದಜನರ ಪಾನಕ್ಕೆ ಉಪಯುಕ್ತವಾಗಿರುವಂತೆ ನಿರ್ಮಲೋದಕವನ್ನಾಗಿ ಮಾಡಬೇಕೆಂಬ ಯೋಚಿಸಿ ಯುಂಟಾಗಿರುವಂತೆ ಕೇಳುವದಕ್ಕೆ ಬಹಳಸಂತೋಷಿಸುತ್ತೇವೆ.

ಮೈಸೂರ್ ಯುವರಾಜರು ವಿದ್ಯಾಭ್ಯಾಸದಲ್ಲಿ ತಕ್ಕ ಮಟ್ಟಿಗೂ ಪ್ರಯಾಸಪಡುತಲಿದ್ದಾರೆ. ಇಂಗ್ಲೀಷ್ ಭಾಷೆಯನ್ನು ಚೆನ್ನಾಗಿ ಮಾತನಾಡುತ್ತಾರೆ ಶ್ರೀಮನ್ಮಹಾರಾಜರವರು ಯುವರಾಜರಿಗೋಸ್ಕರ ಇಂಗ್ಲೀಷ್ ಉಪಾಧ್ಯಾಯರನ್ನು ನೇಮಿಸಬೇಕೆಂದು ಯೋಚಿಸುತಲಿದ್ದಾರೆ. ಈ ವಿಷಯದಲ್ಲಿ ಕೆಲವರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿರುವ ಮಿ. ಟೇಟಿ ಸಾಹೇಬರು ಈ ಕೆಲಸಕ್ಕೆ ನೇಮಿಸಲ್ಪಡುವರೆಂದು ಅಭಿಪ್ರಾಯಪಟ್ಟಿದ್ದಾರೆ. ಅವರಿಗೆ ತಕ್ಕಷ್ಟು ಯೋಗ್ಯತೆ ಉಂಟೆಂಬುವದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ಮಹಾರಾಜರವರು ಈ ಭಾಗದಲ್ಲಿ ಮೆ|| ಬೌರಿಂಗ್ ಸಾಹೇಬರಿಗೆ ಒಂದು ಕಾಗದವನ್ನು ಬರೆದು ಯೋಗ್ಯರನ್ನು ಕಳುಹಿಸಿಕೊಡಬೇಕೆಂದು ಕೇಳಿಕೊಂಡಿದ್ದಾರೆಂಬದಾಗಿನಮಗೆ ತಿಳಿಯಬಂದಿದೆ. ಮೈ ಪ.

ದುಷ್ಟನಿಗಿರತಕ್ಕ ಬಲವು ಹ್ಯಾಗೆ ನಿರಪರಾಧಿಗಳವರೆಗೆ ಉಪಯೋಗಿಸುತ್ತೋ ಸ್ತ್ರೀಯರಿಗಿರತಕ್ಕ ವಿದ್ಯಾಕೌಶಲ್ಯವು ಕುಮಾರ್ಗದಲ್ಲಿ ಪ್ರವರ್ತಿಸಲಿಕ್ಕನುಯುಕ್ತವಾಗುತ್ತೆ. ಇದಕ್ಕೆ ದೃಷ್ಟಾಂತಗಳು ಅನೇಕಗಳಿದ್ದಾಗ್ಯೂ ಕೆಲವುಮಟ್ಟಿಗೆ ತಿಳಿಸುತ್ತೇವೆ ಏನೆಂದರೆ:—ಈಚೆಗೆ ಇಂಗ್ಲೀಷ್ ಸಂಸ್ಕೃತ ಕನ್ನಡ ಈ ೩ ಭಾಷೆಗಳಲ್ಲಿ ವಿದ್ಯಾರ್ಥಿನಿಯಾದ ಒಬ್ಬ ಹುಡಿಗಿಯು ತನ್ನ ಗಂಡನು ಊರಲ್ಲಿ ಇಲ್ಲದೇ ಇರತಕ್ಕ ಕಾಲದಲ್ಲಿ ಒಬ್ಬ ಆಕ್ಟಿಂಗ್ ಗಂಡನನ್ನು ನೇಮಕಮಾಡಿಕೊಂಡ್ಡಳು. ಆದರೆ ಈ ಗಂಡನು ಬಹಳ ಮಾನವಂತನು. ಒಂದು ದಿನ ಇವನು ಆಕೆಯ ರೂಮಿಗೆ ಸಾಯಂಕಾಲ ೫ ಘಂಟೆಯ ಸಮಯದಲ್ಲಿ ಹೋಗಿ ಆಕೆಯೊಡನೆ ಸರಸವಿನೋದಗಳನ್ನಾಡಿಕೊಂಡು ಕುಳಿತಿರುವಲ್ಲಿ ಹಠಾತ್ತಾಗಿ ಈತನಿಗೆ ಮೂತ್ರಶಂಕಬಾಧೆಯು ಪ್ರಬಲವಾಗಲು ಅಲ್ಲಿ ಸ್ಥಳವಿಲ್ಲದೆ ಇದ್ದುದರಿಂದ ಈಚೆಗೆ ಬರಬೇಕಾಯಿತು. ಬೀದಿಯ ಬಾಗಲಿಗೆ ಬರುವಲ್ಲಿ ಅವನ ಹಿರಿಯರು ಯಾರೋ ಜಗಲಿಮೇಲೆ ಕುಳಿತು ಮಾತನಾಡುತಿದ್ದರು. ಅದನ್ನು ನೋಡಿ ಅವನು ಒಳಕ್ಕೆ ಬಂದು ಈಗೇನುಗತಿ; ಇಬ್ಬರ ಮಾನವು ಹೋಗುವ ಹುಟ್ಟವು ಬಂದಿತಲ್ಲಾ? ಎಂದು ತನ್ನ ಪ್ರಿಯಳಿಗೆ ಹೇಳಿಕೊಳ್ಳಲು ಆ ಚತುರೆಯು ಧೈರ್ಯವಾಗಿರಿ; ನಾನು ಕಾಪಾಡುತ್ತೇನೆ, ಯೋಚನೆ ಮಾಡಬೇಡಿರಿ; ಎಂದು ಕಸಪೊರಕೆಯನ್ನು ತೆಗೆದುಕೊಂಡು ಬಂದು ಅವರು ಕುಳಿತಿರುವ ಜಗಲಿಯನ್ನು ಬಿಟ್ಟು ಮತ್ತೊಂದು ಜಗಲಿಯನ್ನು ಗುಡಿಸುವದಕ್ಕೆ ಪ್ರಾರಂಭಮಾಡಿದಳು. ಆಗಮಾತನಾಡುತಕುಳಿತಿದ್ದವರು ಅದಂ ನೋಡಿ ಇಲ್ಲಿಗೂ ಗುಡಿಸುವದಕ್ಕೆ ಬರುವಳೆಂದು ಯೋಚಿಸಿ ಎದ್ದು ಮುಂದಕ್ಕೆ ಹೊರಟುಹೋದರು. ಇಂತಃ ಯುಕ್ತಿಯು ಮಾಧವರಾದ ನಮ್ಮಂತವರ ಮನೆಯ ಹೆಂಗುಸರಿಗೆ ತೋರಲಾರದೆಂದು ಮೈಸೂರ್ ಸ್ಟಾರ್ ಪತ್ರಿಕೆಗೆ ಅಲ್ಲಿನ ಬಾತಮೀದಾರನೊಬ್ಬನು ಬರೆಯುತ್ತಾನೆ.

## THE MYSORE GAZETTE
### ಮೈಸೂರು ಗಜೆಟು.

ಶ್ರೀಮನ್ಮಹಾರಾಜ ರಾಜಶ್ರೀ ಬಹದೂರವರ ಸನ್ನಿಧಾನದ ಕೊಡೋಣಾದ ಇಸ್ತಿಹಾರುಗಳು.

ನಂ|| ೧೫೯೪೦ ೮ ೩೬೯೦, ತಾ|| ೧೪ನೇ ಮಾರ್ಚಿ ೧೮೯೩—ಮೈಸೂರು ಡಿಸ್ಟ್ರಿಕ್ಟ್ ಟ್ರೆಜರಿ ಇನ್‌ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರ್ ಮೆ|| ಬಿ ಕೃಷ್ಣಯ್ಯಂಗಾರ್ರವರು ಈ ತಿಂಗಳ ೧೬ನೇ ತಾರೀಖ್ ಲಗಾಯತು ಅಥವಾ ಅವರು ಬಿಡುಗಡೆ ಮಾಡಲ್ಪಡುವ ತಾರೀಖ್ ಮೊದಲು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

೨ ಪೋಲೀಸ್ ಸೂಪರಿಂಟೆಂಡೆಂಟ್ ಮೆ|| ಜೆ. ತಮ್ಮಯ್ಯ ನೈಡುಯವರು ಮೈಸೂರು ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ವ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟಾಗಿ ಕೆಲಸ ನೋಡುವಂತೆ ನೇಮಕರಾಗ್ಯಲ್ಪಟ್ಟ ಮೆ| ಕೃಷ್ಣಯ್ಯಂಗಾರ್ರು ರಜಾಮೇಲಿರುವ ಕಾಲದಲ್ಲಿ ಡಿಸ್ಟ್ರಿಕ್ಟ್ ಟ್ರೆಜರಿ ಇನ್‌ಚಾರ್ಜಿನಲ್ಲಿರುವರು.

ನಂ|| ೧೫೯೫೨-೮, ೩೬೦೨, ತಾ||೧೬ನೇ ಮಾರ್ಚಿ ೧೮೯೩-ಮೈಸೂರು ಸರ್ವಿಸ್ ರೆಗ್ಯುಲೇಷನ್ ೧೭೦ನೇ ಆರ್ಟಿಕಲ್ ಅನುಸರಿಸಿ, ಸಂಸ್ಥಾನದ ಹುಜೂರ್ ಟ್ರೆಜರಿ ಖಜಾಂಚಿ ಮೆ|| ಟಿ. ರಾಯಲು ಚೆಟ್ಟಿಯವರು ಸನ್ ೧೮೯೩ನೇ ಇಸವಿ ಮಾರ್ಚಿ ೧೮ನೇ ತಾರೀಖ್ ಮೊದಲು ೫ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ|| ೧೫೬೦೩. ೮ ೩೬೦೩, ತಾ||೧೭ನೇ ಮಾರ್ಚಿ ೧೮೯೩—ಅಮಲ್ದಾರ್ ಎಂ. ರಾಮಚಂದ್ರರಾಯರವರು ಈ ತಿಂಗಳ ೧೮ನೇ ತಾರೀಖಿನ ಮಧ್ಯಾಹ್ನಾತ್ಪರ ಬೆಂಗಳೂರಿಗೆ ಒಂದು ಕೆಲಸಕ್ಕೆ ಬಂದಿರುವದಾಗಿ ರಿಪೋರ್ಟ್ ಮಾಡಿದ್ದರಿಂದ, ಸನ್ ೧೮೯೧ನೇ ಇಸವಿ ಮೇ ತಿಂಗಳ ೮ ನೇ ಮ ಕರ್ರಂ ೫೦ ನೇ ನಂಬರ್ ಇಷ್ತಿಹಾರ್‌ನಾಮೆಯ ಮೂಲಕ ಮಂಜೂರ್ಮಾಡಲ್ಪಟ್ಟ ಫರ್ಲೋ ರಜಾ ಪೈಕಿ ಉಳಿದ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿರುವದಲ್ಲದೆ, ಮೃತಪಟ್ಟ ಸೈಯದ್ ಅಹಮದ್‌ಯವರಿಗೆ ಬದಲು, ಮೈಸೂರ್ ಡಿಸ್ಟ್ರಿಕ್ಟ್ ಗುಂಡ್ಲುಪೇಟೆ ತಾಲ್ಲೂಕಿಗೆ ನಿಯಮಿಸಲ್ಪಟ್ಟಿರುತ್ತಾರೆ

ನಂ|| ೧೫೬೯೪, ೮ ೩೬೩೬, ತಾ||೧೪ನೇ ಮಾರ್ಚಿ ೧೮೯೩—ಚಿಂತಾಮಣಿ ತಾಲ್ಲೂಕು ಅಮಲ್ದಾರರು ವಿ ಪಾರ್ಥಸಾರಥಿ ಅಯ್ಯಂಗಾರ್ರವರು ಸನ್ ೧೮೯೩ನೇ ಇಸವಿ ಮಾರ್ಚಿ ೨೦ನೇ ತಾರೀಖು ಮೊದಲು ಅಥವಾ ಮುಂದೆ ೩೫ ದಿನಗಳೊಳಗಾಗಿ ಅವರು ಉಪಯೋಗಿಸಿಕೊಳ್ಳಬಹುದಾದ ಬೇರೆಯೊಂದು ತಾರೀಖು ಲಗಾಯತು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ

ಈಗ ಮಾಲೂರಲ್ಲಿ ಬದಲೀ ನೋಡುತಲಿರುವ ವೈ. ನರಸಿಂಹಯ್ಯನವರು, ಪಾರ್ಥಸಾರಥಿ ಅಯ್ಯಂಗಾರ್ರವರು ರಜಾಮೇಲೆ ಗೈರುಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ವರೆಗೆ, ಚಿಂತಾಮಣಿ ತಾಲ್ಲೂಕು ಅಮಲ್ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲೀ ನೋಡುವಂತೆ ನೇಮಕರಾಗ್ಯಲ್ಪಟ್ಟಿರುತ್ತಾರೆ.

ನಂ|| ೧೫೭೦೭ ೩ ಎ ೮೩೯೯-೯೦—ಬೋರ್ಡ್ ಮೆಂಬರಾಗಿರುವದಕ್ಕೆ ಇಷ್ಟವಿಲ್ಲವೆಂದು ತಿಳಿಸಿದ ಮೆ|| ಶ್ರೀಕಂಠಯ್ಯನವರಿಗೆ ಬದಲು ಮೆ|| ಶ್ರೀನಿವಾಸ ಗೋಪಾಲಾಚಾರ್ರು ದೇವನಹಳ್ಳಿ ಮುನ್ಸಿಪಲ್ ಬೋರ್ಡಿನಲ್ಲಿ ಒಬ್ಬ ಮೆಂಬರಾಗಿ ನೇಮಕರಾಗ್ಯಲ್ಪಟ್ಟಿರುತ್ತಾರೆ.

ನಂ|| ೧೫೯೦೨. ೮ ೯ ೬೦೩-೯೨, ತಾ ೨೨ ನೇ ಮಾರ್ಚಿ ೧೮೯೩—ಮೈಸೂರು ಸರ್ವಿಸ್ ರೆಗ್ಯುಲೇಷನ್ ೧೭೦ನೇ ಆರ್ಟಿಕಲ್ ಅನುಸರಿಸಿ, ಕಡೂರು ಡಿಸ್ಟ್ರಿಕ್ಟ್ ಫಾರೆಸ್ಟುಗಳ ಆಫೀಷಿಯೇಟಿಂಗ್ ಕನ್ಸರ್ವೇಟರಾದ ಮೆ|| ಬಿ. ರಾಮಸ್ವಾಮಯ್ಯಂಗಾರ್ರವರು ಅವರು ಉಪಯೋಗಿಸಿಕೊಳ್ಳಬಹುದಾದ ತಾರೀಖ್ ಮೊದಲು ೧೫ ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

೨. ಮೆ|| ಬಿ. ರಾಮಸ್ವಾಮಯ್ಯಂಗಾರ್ರವರು ರಜಾಮೇಲೆ ಗೈರುಹಾಜರಾಗಿರುವ ಕಾಲದಲ್ಲಿ, ಚಿಕಾರಿಪುರ ಸಬ್‌ಡಿವಿಜನ್ ಫಾರೆಸ್ಟ್ ಪ್ರೊಬೇಷನರಾದ ಮೆ|| ಪಿ. ಹೀರಾಸಿಂಗ್ ಯವರು ಕಡೂರ್ ಡಿಸ್ಟ್ರಿಕ್ಟಿನಲ್ಲಿ ಮೆ|| ರಾಮಸ್ವಾಮಯ್ಯಂಗಾರ್ರವರ ಕೆಲಸವನ್ನು ಬದಲೀ ನೋಡುವಂತೆ ನೇಮಕರಾಗ್ಯಲ್ಪಟ್ಟಿರುವದಲ್ಲದೆ, ಶಿವಮೊಗ್ಗ ಡಿಸ್ಟ್ರಿಕ್ಟ್ ಫಾರೆಸ್ಟ್ ಪ್ರೊಬೇಷನರ್ ಮೆ| ಎಂ. ಜಿ. ರಾಮರಾಯರು ಚಿಕಾರಿಪುರ ಸಬ್ ಡಿವಿಜನ್ನಲ್ಲಿ ಮೆ| ಹೀರಾಸಿಂಗರವರ ಕೆಲಸವಂ ಬದಲೀ ನೋಡುವಂತೆ ನೇಮಕರಾಗ್ಯಲ್ಪಟ್ಟಿರುತ್ತಾರೆ.

ನಂ|| ೧೫೯೧೩ ೮. ೩೬೦೪, ತಾ|| ೨೧ ನೇ ಮಾರ್ಚಿ ೧೮೯೩—ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಮೆ||ಕೆ. ಆರ್. ಶ್ರೀನಿವಾಸಯ್ಯಂಗಾರ್ರವರು ಸನ್೧೮೯೩ನೇ ಇಸವಿ ಮಾರ್ಚಿ ೨೭ನೇ ತಾರೀಖ್ ಮೊದಲು ೩ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

### ಸನ್ ೧೮೯೨ನೇ ಇಸವಿಯ VIIIನೇ ನಂಬರ್ ರೆಗ್ಯುಲೇಷನ್ನಿಂದ ತಿದ್ದುಪಡಿಯಾದ ೧೮೭೦ನೇ ಇಸವಿಯ ರಾಸುಗಳ ಅತಿಕ್ರಮಪ್ರವೇಶಕ್ಕೆ ಸಂಬಂಧಪಟ್ಟ ಕಾನೂನನ್ನು ಮೊತ್ತಪಡಿಸಿ ದುರಸ್ತು ಮಾಡುವದಕ್ಕೆ ಹುಟ್ಟಿದ ೧ನೇ ನಂಬರ್ ಆಕ್ಟ್.

ಕಳೆದ ವಾರದ ಶೇಷ.

೫ನೇ ಅಧ್ಯಾಯ.

ನ್ಯಾಯ ವಿರೋಧವಾಗಿ ಹಿಡಿದು ಕೊಂಡಂಥಾ ಅಥವಾ ನಿಲ್ಲಿಸಿಕೊಂಡಂಥಾದ್ದಗಳ ಮೇಲಿನ ಫಿರ್ಯಾದುಗಳು.

*ಫಿರ್ಯಾದುಗಳು ಮಾಡಲಿಕ್ಕೆ ಅಧಿಕಾರ*

೨೦. ಯಾವದು ರಾಸುಗಳು ಈ ಆಕ್ಟಿಗನುಗುಣವಾಗಿ ಹಿಡಿಯಲಾಯಿತೋ, ಈ ಆಕ್ಟಿಗೆ ವಿರೋಧವಾಗಿ ಯಾ ಹಿಡಿಯಲಾಗಿ ನಿಲ್ಲಿಸಿ ಕೊಳ್ಳಲಾಯಿತೋ ಆ ಮನುಷ್ಯನು ಅವುಗಳನ್ನು ಹಿಡಿದ ಹತ್ತು ದಿವಸಗಳೊಳಗಾಗಿ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರ ಬಳೀಲಾದರೂ ಅಥವಾ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರ ದಾಖಲೆ ಯಿಲ್ಲದೆ ಫಿರ್ಯಾದುಗಳನ್ನು ಹಿಡಿದು ದರ್ಯಾಫ್ತೀ ಮಾಡುವದಕ್ಕೆ ಅಧಿಕಾರ ಹೊಂದಿರುವ ಯಾವ ಮಾಜಿಸ್ಟ್ರೇಟರ ಬಳೀಲಾದರೂ ಫಿರ್ಯಾದು ಮಾಡಬಹುದು.

*ಫಿರ್ಯಾದಿನ ತರುವಾಯ ನಡಸತಕ್ಕ ರೀತಿ*

೨೧. ಫಿರ್ಯಾದು ಖುದ್ದಾಗಿ ಫಿರ್ಯಾದ್ದಾರನಿಂದಲೇ ಯಾಗಲಿ, ಸಂಗತಿಗಳನ್ನೆಲ್ಲ ಚೆನ್ನಾಗಿ ತಿಳಿದವನಾದ ಅವನ ಮುಖತಾಲಿಕನಿಂದಲಾಗಲಿ, ಮಾಡಲ್ಪಡತಕ್ಕದ್ದು. ಅದು ಬರವಣಿಗೆಯಾ ಜಬಾನೀ ಮೂಲಕವಾಗಿರಬಹುದು. ಅದು ಜಬಾನೀ ಫಿರ್ಯಾದಾಗಿದ್ದರೆ ಅದರ ಮಜಕೂರನ್ನು ಮಾಜಿಸ್ಟ್ರೇಟರು ಬರಕೊಳ್ಳತಕ್ಕದ್ದು.

ಫಿರ್ಯಾದ್ದಾರನ ಯಾ ಅವನ ಮುಖತಾಲೀಕನ ವಿಚಾರಣೆಯಿಂದ ಫಿರ್ಯಾದಿಗೆ ತಕ್ಕ ಆಧಾರವಿಧೆಯೆಂದು ಮಾಜಿಸ್ಟ್ರೇಟರಿಗೆ ತೋರಿಬಂದರೆ ಅವರು ಯಾರ ಮೇಲೆ ಫಿರ್ಯಾದು ತರೋಣಾಗಿದೆಯೋ ಅವನಿಗೆ ಸಮನ್ ಮಾಡಿಸಿ ಮೊಕದ್ದಮೆಯನ್ನು ದರ್ಯಾಫ್ತೀ ಮಾಡತಕ್ಕದ್ದು.

*ನ್ಯಾಯ ವಿರೋಧವಾಗಿ ಹಿಡಿದದ್ದಕ್ಕೋಸ್ಕರ ತೆರಬೇಕಾದ ಲಿಗಾತು.*

೨೨ ರಾಸುಗಳನ್ನು ಹಿಡಿದದ್ದು ಯಾ ನಿಲ್ಲಿಸಿಕೊಂಡದ್ದು ಅಕ್ರಮವೆಂದು ತೀರ್ಮಾನದರೆ ಆವುಗಳನ್ನು ಹಿಡಿದು ಯಾ ನಿಲ್ಲಿಸಿ ಯಿಟ್ಟದ್ದರಿಂದ ಸಂಭವಿಸಿದ ಲುಕ್ಸಾನಿನ ಬಗ್ಗೆ ಮಾಜಿಸ್ಟ್ರೇಟರು ಫಿರ್ಯಾದ್ದಾರರಿಗೆ ಪಾಡಬಹುದಾದ ಲಿಗಾತು (ಕಾಂಪೆನ್ಸೇಷನ್) ಕೊಡಿಸತಕ್ಕದ್ದು. ಆ ಮೊಬಲಗು ನೂರು ರೂಪಾಯಿಗಳಿಗೆ ಮೀರಿದ್ದಾಗಿ ಇರಕೂಡದು. ಇದನ್ನು ಮೊದಲು ಪಾವತಿ ಮಾಡಿದ ಯೆಲ್ಲಾ ಜುರ್ಮಾನೆಗಳನ್ನೂ ರಾಸುಗಳನ್ನೂ ಬಿಡಿಸಿ ಕೊಳ್ಳತಕ್ಕ ಬಗ್ಗೆ ಫಿರ್ಯಾದ್ದಾರನಿಗೆ ತಗಲಿದ ಯೆಲ್ಲಾ ಖರ್ಚುಗಳನ್ನೂ ಸದರೀ ರಾಸುಗಳನ್ನು ಹಿಡಿದ ಯಾ ನಿಲ್ಲಿಸಿಕೊಂಡ ಮನುಷ್ಯನ್ಯಾರೋ ಆವನಿಂದ ಕೊಡಿಸಿಕೊಡತಕ್ಕದ್ದು.

*ರಾಸುಗಳನ್ನು ಬಿಟ್ಟು ಬಿಡುವದು*

ಮತ್ತು ರಾಸುಗಳನ್ನು ಬಿಟ್ಟು ಬಿಡದೇ ಇದ್ದ ಪಕ್ಷದಲ್ಲಿ ಮಾಜಿಸ್ಟ್ರೇಟರು ಕಾಂಪೆನ್ಸೇಷನ್ ಹಣವನ್ನು ಕೊಡಿಸಿ ಕೊಡುವದಲ್ಲದೆ ಅವುಗಳನ್ನು ಬಿಟ್ಟು ಬಿಡುವಂತೆ ಹುಕುಂ ಮಾಡತಕ್ಕದ್ದು. ಮತ್ತು ಈ ಆಕ್ಟಿಗನುಗುಣವಾಗಿ ವಸೂಲ್ ಮಾಡಬೇಕಾದ ಜುರ್ಮಾನೆಗಳನ್ನೂ ಖರ್ಚುಗಳನ್ನೂ ರಾಸುಗಳನ್ನು ಹಿಡಿದ ಯಾ ನಿಲ್ಲಿಸಿಕೊಂಡ ಮನುಷ್ಯನು ಕೊಡಬೇಕೆಂದು ಹುಕುಂ ಮಾಡತಕ್ಕದ್ದು.

*ಲಿಗಾತನ್ನು ವಸೂಲ್ ಮಾಡಿ ಕೊಳ್ಳುವದು.*

೨೩. ಇಪ್ಪತ್ತೆರಡನೇ ಪ್ರಕರಣದಲ್ಲಿ ನಮೂದಿಸಿರುವ ಕಾಂಪೆನ್ಸೇಷನ್ ಹಣವನ್ನೂ ಜುರ್ಮಾನೆಗಳನ್ನೂ ಖರ್ಚುಗಳನ್ನೂ ಮಾಜಿಸ್ಟ್ರೇಟರಿಂದ ವಿಧಿಸೋಣಾದ ಜುರ್ಮಾನೆಗಳಂತೆ ವಸೂಲ್ಮಾಡತಕ್ಕದ್ದು.

೭ನೇ ಅಧ್ಯಾಯ.

ದಂಡನೆಗಳು.

ರಾಸುಗಳನ್ನು ಹಿಡಿಯುವಾಗ ಬಲತ್ಕಾರದಿಂದ ಎದುರಿಸಿದರೆ ಯಾ ಹಿಡಿದ ರಾಸುಗಳನ್ನು ಬಿಡಿಸಿಕೊಂಡರೆ ದಂಡನೆ.

೨೮. ಈ ಆಕ್ಟಿಗನುಗುಣವಾಗಿ ಹಿಡಿಯಲ್ಪಡಲಿಕ್ಕೆ ಗುರಿಯಾದ ರಾಸುಗಳನ್ನು ಹಿಡಿಯುವಾಗ ಯಾವನು ಬಲಾತ್ಕಾರವಾಗಿ ಎದುರಿಸುತ್ತಾನೋ ಅಂಥಾ ವ್ಯಕ್ತಿ ಮನುಷ್ಯನೂ,

ಮತ್ತು ಅವುಗಳನ್ನು ಹಿಡಿದತರುವಾಯ ದೊಡ್ಡಿಯಿಂದಲಾಗಲಿ, ಒಬ್ಬನು ದೊಡ್ಡಿಗೆ ತೆಕೊಂಡು ಹೋಗುವಾಗ ಯಾ ತೆಕೊಂಡು ಹೋಗಲಿಕ್ಕಿರುವಾಗಾಗಲಿ ಅಂಥಾಮನುಷ್ಯನು ಸಮೀಪದಲ್ಲಿದ್ದು ಕೊಂಡು ಈ ಆಕ್ಟಿನಿಂದ ಅವನಿಗುಂಟಾಗಿರುವ ಅಧಿಕಾರಗಳನ್ನು ನಡಿಸುತ್ತಿರುವಾಗ ಯಾವನು ಅವನ ಕೈಯಿಂದ ತಪ್ಪಿಸುತ್ತಾನೋ ಅಂಥಾ ವ್ಯಕ್ತಿ ಮನುಷ್ಯನೂ,

ಮಾಜಿಸ್ಟ್ರೇಟರ ಮುಂದೆ ತಪ್ಪು ಸಾಬೀತಾದ ಮೇಲೆ ಆರುತಿಂಗಳಿಗೆ ಮೀರದ ಮೊದು ಮಾಯಿದೆಯ ಬಾಬತು ಕೈದಿನಿಂದಲಾಗಲಿ, ಐನೂರು ರೂಪಾಯಿಗಳಿಗೆ ಮೀರದ ಜುರ್ಮಾನೆಯಿಂದಲಾಗಲಿ, ಅಥವಾ ಈ ಎರಡರ ಮೂಲವಾಗಿಯಾಗಲಿ ಶಿಕ್ಷಿಸಲ್ಪಡತಕ್ಕದ್ದು.

ರಾಸುಗಳನ್ನು ಅತಿಕ್ರಮ ಪ್ರವೇಶ ಮಾಡಗೊಡಿಸಿದ್ದರಿಂದ ಆದ ಕೇಡಿಗೋಸ್ಕರ ವಿಧಿಸಿದಜುರ್ಮಾನೆಯುವಸೂಲಾತಿ.

೨೯. ಇದರ ಅನಂತರ ಬರುವ (೨೬ನೇ) ಸೆಕ್ಷನ್ನಿನ ಮೇರಿಗೆ ಆಗಲಿ, ಅಥವಾ ಯಾವ ಜಮೀನಿನ ಮೇಲಾದರೂ ರಾಸುಗಳನ್ನು ಅತಿಕ್ರಮ ಪ್ರವೇಶ ಮಾಡಗೊಡಿಸಿದ್ದರಿಂದ, ಸಂಭವಿಸಿದ ಹಾನಿಯ ಬಾಬತು ತಕ್ಸೀರಿಗೆ ಆಗಲಿ ವಿಧಿಸೋಣಾಗುವ ಜುರ್ಮಾನೆಯನ್ನು ಹಾಗೆ ಅತಿಕ್ರಮಪ್ರವೇಶ ಮಾಡಿದ ಎಲ್ಲಾ ರಾಸುಗಳನ್ನಾದರೂ ಅವುಗಳ ಪೈಕಿ ಯಾವದನ್ನಾದರೂ ಮಾರಿ ವಸೂಲ್ಮಾಡಿಕೊಳ್ಳಬಹುದು ಅವುಗಳನ್ನು ಅತಿಕ್ರಮ ಪ್ರವೇಶ ಕಾಲದಲ್ಲೇ ಹಿಡಿದಿದ್ದಾಗ್ಯೂ ಸರಿ ಇಲ್ಲದೇ ಇದ್ದಾಗ್ಯೂ ಸರೀ ಅವುಗಳು ತಪ್ಪು ಸಾಬೀತಾದ ಮನುಷ್ಯನ ಸ್ವಂತ ಸೊತ್ತಾಗಿದ್ದಾಗ್ಯೂ ಸರಿ ಅಥವಾ ಆ ಕಾಲದಲ್ಲಿ ಮಾತ್ರ ಅವನ ಜಿಮ್ಮೆಯಲ್ಲಿದ್ದಾಗ್ಯೂ ಸರಿ ಚಿಂತೆ ಇಲ್ಲ.

ಹಂದಿಗಳಿಂದ ಜಮೀನಿಗೆ, ಯಾ ಫಸಲಿಗೆ ಯಾ ಸರ್ಕಾರ್ ರಸ್ತೆಗಳಿಗೆ ಸಂಭವಿಸಿದ ನಷ್ಟಕ್ಕೋಸ್ಕರದಂಡನೆ.

೩೦. ಹಂದಿಗಳ ಮಾಲೀಕನು ಯಾ ಹಂದಿಗಳನ್ನಿಟ್ಟುಕೊಂಡಿರುವವನು ಅಜಾಗ್ರತೆಯಿಂದ ಯಾ ಅನ್ಯಥಾ ಅವುಗಳನ್ನು ಹೋಗಗೊಡಿಸುವದರಿಂದ ಯಾವ ಜಮೀನನ್ನಾದರೂ, ಫಸಲನ್ನಾದರೂ ಜಮೀನಿನ ಫಲವನ್ನಾದರೂ ಪಬ್ಲಿಕ್ ರಸ್ತೆಯನ್ನಾದರೂ ಕೆಡಿಸಿದರೆ ಯಾ ಕೆಡುವಹಾಗೆ ಮಾಡಿದರೆ ಅವನು ಮಾಜಿಸ್ಟ್ರೇಟರ ಮುಂದೆ ತಪ್ಪು ಸಾಬೀತಾದ ಮೇಲೆ ಹತ್ತು ರೂಪಾಯಿಗೆ ಮೀರದ ಜುರ್ಮಾನೆಯಿಂದ ಶಿಕ್ಷಿಸಲ್ಪಡತಕ್ಕದ್ದು.

ಮೈಸೂರು ಗವರ್ನಮೆಂಟನವರು, ಸರ್ಕಾರೀ ಗೆಜೆಟ್ಟಿನಲ್ಲಿ ಇಸ್ತಿಹಾರ್ ಮೂಲಕ, ಅದರಲ್ಲಿ ಕಾಣಿಸಲ್ಪಡುವ ಯಾವದಾದರೂ ಸ್ಥಳಪ್ರದೇಶದ ವಿಷಯದಲ್ಲಿ, ಈ ಸೆಕ್ಷನಿನ ಮೇಲೆ ನಡಿಯುವ ಭಾಗವು ಹಂದಿಗಳಿಗೆ ಮಾತ್ರವಲ್ಲದೆ ಸಾಮಾನ್ಯವಾಗಿ ಎಲ್ಲಾ ಕಾಲ್ನಡೆಗೆ ಅಥವಾ ಸದರೀ ಇಸ್ತಿಹಾರಿನಲ್ಲಿ ವಿವರಿಸಿರುವ ಪಿಂಪುಬಗೆ ಕಾಲ್ನಡೆಗೆ ಸಂಬಂಧಪಟ್ಟದ್ದರೆ ಹ್ಯಾಗೋ, ಅಥವಾ "ಹತ್ತು ರೂಪಾಯಿ" ಎಂಬ ಮಾತುಗಳಿಗೆ ಬದಲಾಗಿ "ಐವತ್ತು ರೂಪಾಯಿ" ಎಂಬ ಮಾತುಗಳು ಸೇರಿಸಲ್ಪಟ್ಟದ್ದರೆ ಹ್ಯಾಗೋ, ಅಥವಾ ಮೇಲ್ಕಂಡ ತಾತ್ಪರ್ಯದಂತೆ ಶಬ್ದಗಳ ಪ್ರಯೋಗಯಾ ಬದಲಾವಣೆಯೇ ಆಗಿದ್ದರೆ ಹ್ಯಾಗೋ, ಹಾಗೆ ಓದಿಕೊಳ್ಳಲ್ಪಡತಕ್ಕದ್ದೆಂದು ಆಗಿಂದಾಗ್ಗ ಹುಕುಂ ಮಾಡಬಹುದು.

ಮೈಸೂರು ಗವರ್ನಮೆಂಟನವರು ಈ ಸೆಕ್ಷನಿನ ಮೂಲಕ ಹುಟ್ಟುವ ಇಸ್ತಿಹಾರನ್ನು ಸರ್ಕಾರೀ ಗೆಜೆಟ್ಟಿನಲ್ಲಿ ಮತ್ತೊಂದು ಇಸ್ತಿಹಾರ್ ಮೂಲಕ ಯಾವಾಗಲಾದರೂ ರದ್ದು ಯಾ ವ್ಯತ್ಯಾಸ ಪಡಿಸಬಹುದು.

ದೊಡ್ಡೀದಾರನು ಕೆಲಸಗಳನ್ನು ಮಾಡದೇ ಇದ್ದ ಪಕ್ಷದಲ್ಲಿ ವಿಧಿಸೋಣಾಗುವ ದಂಡನೆ.

೩೧. ಯಾವ ದೊಡ್ಡೀದಾರನಾದರೂ ಹತ್ತನೇ ಪ್ರಕರಣದ ನಿಬಂಧನೆಗಳಿಗೆ ವಿರೋಧವಾಗಿ ರಾಸುಗಳನ್ನು ಬಿಟ್ಟುಬಿಟ್ಟರೆ ಯಾ ಕೊಡು ಕೊಂಡರೆ ಯಾ ಒಪ್ಪಿಸಿದರೆ, ಅಥವಾ ದೊಡ್ಡೀಲಿ ಸೇರಿಸಲ್ಪಟ್ಟ ರಾಸುಗಳಿಗೆ ಸಾಕಾದಷ್ಟು ಆಹಾರವನ್ನೂ ನೀರನ್ನೂ ಒದಗಿಸಿ ಕೊಡದೇ ಹೋದರೆ, ಅಥವಾ ಈ ಆಕ್ಟಿನ ಪ್ರಕಾರ ತಾನು ಮಾಡಬೇಕಾದ ಯಾವ ಕೆಲಸಗಳನ್ನಾದರೂ ಮಾಡುವದಕ್ಕೆ ತಪ್ಪಿದರೆ, ಅವನು ಮಾಜಿಸ್ಟ್ರೇಟರ ಮುಂದೆ ತಪ್ಪು ಸಾಬೀತಾದ ಮೇಲೆ ಐವತ್ತು ರೂಪಾಯಿಗಳಿಗೆ ಮೀರದ ಜುರ್ಮಾನೆಯಿಂದ ಶಿಕ್ಷಿಸಲ್ಪಡ ತಕ್ಕದ್ದು.

ಅಂಥಾ ಜುರ್ಮಾನೆಗಳನ್ನು ದೊಡ್ಡೀದಾರನಸಂಬಳದಿಂದ ವಜಾ ಮಾಡಿ ವಸೂಲ್ಮಾಡ ಬಹುದು.

25, 26 ಯಾ 27ನೇ ಪ್ರಕರಣದ ಪ್ರಕಾರ ವಸೂಲ್ಮಾಡಿದ ಜುರ್ಮಾನೆಗಳ ವಿನಿಯೋಗ.

೩೨. ಇಪ್ಪತ್ತೈದು, ಇಪ್ಪತ್ತಾರು, ಯಾ ಇಪ್ಪತ್ತೇಳು ಈ ಪ್ರಕರಣಗಳಿಗನುಗುಣವಾಗಿ ವಸೂಲಾಗುವ ಎಲ್ಲಾ ಜುರ್ಮಾನೆಗಳನ್ನು ಯಾ ಒಂದು ಭಾಗವನ್ನು ಯಾರಲ್ಲಿ ತಪ್ಪು ಸಾಬೀತಾಯಿತೋ ಆ ಮಾಜಿಸ್ಟ್ರೇಟರಿಗೆ ಸಮರ್ಪಕವಾಗುವಂತೆ ರುಜುಮಾಡಲ್ಪಡುವ ಲುಕ್ಸಾನಿನ ಬಗ್ಗೆ ಯಾ ನಷ್ಟದಬಗ್ಗೆ ಕಾಂಪೆನ್ಸೇಷನ್ ಆಗಿ ವಿನಿಯೋಗಿಸಬಹುದು.

೮ನೇ ಅಧ್ಯಾಯ.

ಕಾಂಪೆನ್ಸೇಷನ್ ಬಗ್ಗೆ ವ್ಯಾಜ್ಯಗಳು.

ಕಾಂಪೆನ್ಸೇಷನಿಗೋಸ್ಕರ ಪಿರ್ಯಾದು ಮಾಡುವ ಹಕ್ಕಿನ ಸುರಕ್ಷಿತ.

೩೩. ರಾಸುಗಳ ಅತಿಕ್ರಮ ಪ್ರವೇಶದಿಂದ ಯಾವ ಫಸಲು ಯಾ ಜಮೀನಿನ ಫಲ ನಷ್ಟವಾಗುತ್ತದೋ ಆ ಮನುಷ್ಯನು ಕಾಂಪೆನ್ಸೇಷನ್ ಬಗ್ಗೆ ಅಂದರೆ ತನಗೆ ಸಂಭವಿಸಿದ ಲುಕ್ಸಾನಿನ ವಸೂಲಾತಿಯ ಬಗ್ಗೆ ತಕ್ಕ ಕೋರ್ಟಿನಲ್ಲಿ ವ್ಯಾಜ್ಯ ಮಾಡಕೂಡದೆಂದು ಇದರಲ್ಲಡಗಿರುವ ಯಾವದೂ ಅವನನ್ನು ಅಟಕಾಯಿಸುವದಿಲ್ಲ.

ಮುಜರೇ ಕೊಡೋಣ.

೩೪. ಈ ಆಕ್ಟಿಗನುಗುಣವಾಗಿ ತಪ್ಪು ಹೊರಿಸಿದ ಮಾಜಿಸ್ಟ್ರೇಟರಿಂದ ಅಂಥಾ ಮನುಷ್ಯನಿಗೆ ಕೊಡಿಸಿ ಕೊಡಲ್ಪಟ್ಟ ಕಾಂಪೆನ್ಸೇಷನ್ ಹಣವನ್ನು ಅವನು ದಾವಾ ಮಾಡುವಂಥಾ ಅಥವಾ ಸದರೀ ವ್ಯಾಜ್ಯದಲ್ಲಿ ಕಾಂಪೆನ್ಸೇಷನ್ ಬಗ್ಗೆ ಫೈಸಲಾಗುವಂಥಾ ಮೊಬಲಗಿನಿಂದ ಮುಜರೇ ಕೊಟ್ಟು ವಜಾ ಮಾಡತಕ್ಕದ್ದು.

೯ನೇ ಅಧ್ಯಾಯ.

ಉಪನಿಬಂಧನೆ.

೩೫. ಮೈಸೂರು ಗವರ್ನಮೆಂಟನವರು, ಆಗಿಂದಾಗ್ಗೆ ಸರ್ಕಾರೀ ಗೆಜೆಟ್ಟಿನಲ್ಲಿ ಇಸ್ತಿಹಾರ್ ಮೂಲಕ,—

ಕೆಲವು ಅಧಿಕಾರಗಳನ್ನು ಮೈಸೂರು ಗವರ್ನಮೆಂಟನವರು ಸ್ಥಳಾಧಿಕಾರಿಗೆ ವಹಿಸಿಕೊಡುವದಕ್ಕೂ ಹುಟ್ಟುವಳಿ ಪೈಕಿ ಖರ್ಚ್ ಜಾತಾ ಉಳಿದ್ದನ್ನು ಲೋಕಲ್ ಫಂಡಿಗೆ ಜಮಾ ಹಿಡಿಯುವಂತೆ ಹುಕುಂ ಕೊಡುವದಕ್ಕೂ ಅಧಿಕಾರ.

(a) ಈ ಆಕ್ಟು ಜಾರಿಯಲ್ಲಿರುವ ತಮ್ಮ ಪ್ರಭುತ್ವಕ್ಕೆ ಒಳಪಟ್ಟ ಸೀಮೆಯ ಯಾವ ಭಾಗದೊಳಗಾಗಲಿ ಯಾರಾದರೂ ಸ್ಥಳಿಕ ಅಧಿಕಾರಿಗೆ ಆತನ ಅಧಿಕಾರಕ್ಕೊಳಪಟ್ಟ ಸ್ಥಳಿಕ ಪ್ರದೇಶದೊಳಗೆ ನಡಿಸಲು ಈ ಆಕ್ಟಿನಂತೆ ಮೈಸೂರು ಗವರ್ನಮೆಂಟನವರಿಗೆ ಯಾ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರಿಗೆ ಇರುವ ಎಲ್ಲಾ ಅಧಿಕಾರಗಳನ್ನಾದರೂ ಆ ಪೈಕಿ ಯಾವವನ್ನಾದರೂ ವಹಿಸಿ ಕೊಡಬಹುದು, ಅಥವಾ,

(b) ಈ ಆಕ್ಟಿನ ಹದಿನೆಂಟನೇ ಸೆಕ್ಷನ್ ಪ್ರಕಾರ ಯಾವದಾದರೂ ಡಿಸ್ಟ್ರಿಕ್ಟಿನಲ್ಲಿ ಹುಟ್ಟುವಳಿಯಲ್ಲಿ ಖರ್ಚ್ ಹೋಗಿ ನಿಲ್ಲುವ ತಮಾಂ ಮೊಬಲಗನ್ನು ಯಾ ಆ ಪೈಕಿ ಯಾವದಾದರೂ ಭಾಗವನ್ನು ಆ ಡಿಸ್ಟ್ರಿಕ್ಟಿನಲ್ಲಿರತಕ್ಕ ಯಾವದಾದರೂ ಸ್ಥಳಿಕ ಪ್ರದೇಶ ಯಾ ಪ್ರದೇಶಗಳಿಗಾಗಿ ಏರ್ಪಡ ಬಹುದಾದ ಲೋಕಲ್ ಫಂಡ್ ಯಾ ಫಂಡುಗಳಿಗೆ ಜಮಾ ಹಿಡಿಯತಕ್ಕದ್ದೆಂದು ಹುಕುಂ ಮಾಡಬಹುದು,

ಮತ್ತು ಆಗಿಂದಾಗ್ಗೆ ಸರ್ಕಾರೀ ಗೆಜೆಟ್ಟಿನಲ್ಲಿ ಇಸ್ತಿಹಾರ್ ಮೂಲಕ ಈ ಸೆಕ್ಷನ್ ಪ್ರಕಾರ ಹುಟ್ಟುವ ಯಾವ ಇಸ್ತಿಹಾರನ್ನಾದರೂ ರದ್ದು ಯಾ ವ್ಯತ್ಯಾಸ ಪಡಿಸಬಹುದು.

ಕೆ. ಶೇಷಾದ್ರಿಯೈಯ್ಯರ್
ಮೈಸೂರು ದಿವಾನ್.

## EXTRACTS.

ಮೂಲವ್ಯಾಧಿಯ ಮೊಳಕೆಯಮೇಲೆ ತಕ್ಕ ಮಟ್ಟಿಗೆ ಹಗುರುವಾಯವು-ಟಿಂಕ್ಚರ್ ಅಯೋಡಿನ್ ಎಂಬ ಔಷಧವನ್ನು ಹಚ್ಚಿದರೆ ಮೂರು ದಿನಗಳಲ್ಲಿಯೇ ಮೊಳಕೆಗಳು ಇಲ್ಲದಂತಾಗುತವೆ ಇದರ ಉರುಪು ಬೀಳುವದಿಲ್ಲ. ದೇಶೀವೈದ್ಯರ ಔಷಧಕ್ಕಿಂತಲೂ ಇದು ಬಹು ಒಳ್ಳೆಯದಾಗಿರುತದೆಂದು ಎನ್. ವ್ಯಾನಾಫ್ ಇವರು ಅನುಭವದಿಂದ ಸಿದ್ಧಮಾಡಿಕೊಂಡು ಹೇಳಿದ್ದಾರೆ. ಆದರೆ ಈ ರೋಗ ಪೀಡಿತರು ಇದನ್ನು ಪರೀಕ್ಷಿಸತಕ್ಕದ್ದು

೧೦ದಿವಸಗಳಕೆಳಗೆ ಅಫ್ಘಾನಿಸ್ತಾನ್ ದೇಶದ ಅಮೀರರವರ ಬಳಿಯಿಂದ ಮೆ|| ಪೈನ್ ಸಾಹೇಬರು, ಕಲ್ಕತ್ತಾ ಪಟ್ಟಣವನ್ನು ಸೇರಿ ಅಮೀರರವರು ತಮ್ಮ ಮೂಲಕ ಬರೆದು ಕಳುಹಿಸಿದ ಕೆಲವು ವಂದನಾ ಪತ್ರಿಕೆಗಳನ್ನು ವೈಸ್‌ರಾಯಿಯವರಿಗೆ ಒಪ್ಪಿಸಿದರು. ಈ ಪತ್ರಿಕೆಗಳಲ್ಲಿರುವ ವರ್ತಮಾನಗಳು ಯಾವವೆಂದು ಯಾರೊಬ್ಬರಿಗೂ ಇನ್ನೂ ಗೊತ್ತಾಗಿ ಇಲ್ಲ. ಆದರೆ ಒಬ್ಬ ಪತ್ರಿಕಾಕರ್ತರು ಪೈನ್ ಸಾಹೇಬರನ್ನು ಕಂಡು ಅಮೀರರ ವಿಷಯವಾಗಿ ಕೆಲವು ಸಂಗತಿಗಳನ್ನು ತಿಳಿದು ಅವುಗಳನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಸಿರುತ್ತಾರೆ. ಪೈನ್ ಸಾಹೇಬರವರು ತಿಳಿಸಿದ ಮುಖ್ಯಾಂಶಗಳಲ್ಲಿ ಒಂದೆರಡನ್ನು ಇವರಿಗೆ ತಿಳಿಸಬೇಕೆಂದು ಅಭಿಲಾಷಿಸುತ್ತೇವೆ, ಏನೆಂದರೆ —ಕಾಬೂಲ್ ಅಮೀರರವರ ವಿಷಯವಾಗಿ ಅನೇಕರು ತಪ್ಪಾದ ಅಭಿಪ್ರಾಯವನ್ನು ತಿಳಿದಿರುತ್ತಾರೆ, ಗುಣದಲ್ಲಿ ಇವರು ಕ್ರೂರರಾಜರಲ್ಲ. ಜನರು ವಿದ್ಯಾಭಿವೃದ್ಧಿಯನ್ನೂ ಶ್ರೇಷ್ಠವಾದ ಸ್ಥಿತಿಯನ್ನೂ ಪಡೆಯಬೇಕೆಂದು ನಾನಾರೀತಿಯಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತಲಿದಾರೆ. ಮುಖ್ಯವಾಗಿ ಯೂರೋಪ್ ಖಂಡದಲ್ಲಿ ಉಂಟಾಗಿರತಕ್ಕ ನಾಗರಿಕತೆಯು ತಮ್ಮ ದೇಶದಲ್ಲಿ ಪ್ರಬಲವಾಗಬೇಕೆಂದು ಕೆಲವು ದೊಡ್ಡ ದೊಡ್ಡ ಕಾರ್ಖಾನೆಗಳನ್ನು ರಾಜಧಾನಿಯಾದ ಕಾಬೂಲ್ ಪಟ್ಟಣದಲ್ಲಿ ಸ್ಥಾಪಿಸಿರುತ್ತಾರೆ. ಆಕಾರ್ಖಾನೆಗಳಲ್ಲಿ ಬಂದೂಕುಗಳನ್ನೂ, ಕಬ್ಬಿಣದ ಯಂತ್ರಗಳನ್ನೂ, ಉಕ್ಕಿನ ಸಾಮಾನುಗಳನ್ನೂ, ಚರ್ಮದಪದಾರ್ಥಗಳನ್ನೂ, ಬಹು ಸುಲಭವಾದ ರೀತಿಯಲ್ಲಿ ತಯಾರ್ಮಾಡಿಸುತಲಿದಾರೆ. ಈಚೆಗೆ ಅವರು ಒಂದು ಕಾಗದ ಕಾರ್ಖಾನೆಯನ್ನೂ ಏರ್ಪಡಿಸಿರುತ್ತಾರೆ. ಈ ಪ್ರಭುಗಳು ತಮ್ಮ ದೇಶಕ್ಕೆ ಸಕಲವಿಧವಾದ ಅಭಿವೃದ್ಧಿಯನ್ನೂ [illegible] ಮಾಡಬೇಕೆಂದು ಅತಿ ಕುತೂಹಲ ಭರಿತರಾಗಿರುತ್ತಾರೆ. ಅವರು ತಮ್ಮ ಪ್ರಜೆಗಳಿಗೆ ತಂದೆಯೋಪಾದಿಯಲ್ಲಿದ್ದುಕೊಂಡು ಅವರು ಅರಿಕೆ ಮಾಡುವ ಎಲ್ಲ ವಿಜ್ಞಾಪನೆಗಳನ್ನೂ ಲಾಲಿಸುವದಕ್ಕಾಗಿಯೇ ಅಮೀರರವರು ಬಹು ಸಮಯವನ್ನು ಕಳೆಯುತ್ತಾರೆ. ಅವರಿಗೂ ಇಂಡಿಯಾ ಅಧಿಕಾರಿಗಳಿಗೂ ಯಾವಾಗಲೂ ಅವಿಚ್ಛಿನ್ನವಾದ ಸ್ನೇಹವು ಇರಬೇಕೆಂಬುವದೇ ಅವರ ಕೋರಿಕೆ. ಯಾವಜನರಾಗಲಿ ಅವರ ರಾಜಧಾನಿಗೆ ಹೋದಲ್ಲಿ ಅವರನ್ನು ಮಾತನಾಡಿಸುವದಕ್ಕಾಗಿ ಯಾವಾಗಲೂ ಸಮಯವನ್ನು ದಯಪಾಲಿಸುತ್ತಾರೆ. ಈ ದೊಡ್ಡ ಅರಸರು ವಿಲಾಯಿತಿಗೆ ಹೋಗಬೇಕೆಂದು ಇಂಡಿಯಾ ಸರ್ಕಾರಕ್ಕೆ ವಿಜ್ಞಾಪನೆಯನ್ನು ಬರೆದು ಕಳುಹಿಸಿರುವಂತೆ ಕೇಳುತ್ತೇವೆ

## ಒಬ್ಬ ಸುಧಾರಕನ ವಿಚಾರವು.

ನಮ್ಮ ಹಿರಿಯರು ಮಹಾಮೂರ್ಖರು, ಆಪ ಮತಲಬಿಗಳು, ಮತ್ತು ಹುಚ್ಚರಾಗಿದ್ದರು ಇದಕ್ಕೆ ಏನಾದರೂ ಸಂಶಯವೆ? ಅವರು ನಮ್ಮ ನಿಮಿತ್ತವಾಗಿ ಯಾವದೂ ಹಿತಕರವಾದ ಕೆಲಸವನ್ನು ಮಾಡಲಿಲ್ಲವು. ಬಹಳವೂರವ್ಯಾಕೆ? ನಾವು ಧರಿಸುವ ಉದ್ದ ಅಂಗಿಯ ಬದಲಾಗಿ ಅವರು ಕೋಟುಗಳನ್ನು ನಿರ್ಮಿಸಿದ್ದರೆ ನಮಗೆಷ್ಟು ಸುಲಭವಾಗಿರುತಿತ್ತು. ಉಟ್ಟುಕೊಳ್ಳುವ ಧೋತ್ರದ ಬದಲಾಗಿ ಪ್ಯಾಟಲೋನ್‌ಗಳನ್ನು ಏರ್ಪಡಿಸಿದ್ದರೆ ನಾವು ಇದ್ದಷ್ಟು ಸಾಮರ್ಥ್ಯಹೀನರಾಗುತಿದ್ದಿಲ್ಲ. ಆ ಭಿಕಾರಿ ಮೋಚೆಗಿಂತಲೂ ಬೂಟ್ಸ್‌ಗಳನ್ನು ಏರ್ಪಡಿಸಿದ್ದರೆ ನಮ್ಮ ಜನರಿಗೆ ಈತರದ ರೋಗಗಳು ಎಂದಿಗೂ ಬರುತಿದ್ದಿಲ್ಲ. ಅಂಗಿಗಳಿಗೆ ಹಾಕಿರುವ ಕಸೆಗೆ ಬದಲಾಗಿ, ಎಲುವಿನ ಅಥವಾ ಅರಿವೆಯ ಬಟನ್‌ಗಳನ್ನು ತಯಾರಿಸಿದ್ದರೆ ನಾವೆಂದಿಗೂ ಪರತಂತ್ರರಾಗುತಿದ್ದಿಲ್ಲ. ತಲೆಯ ಮೇಲೆ ಗಾಡಿಯ ಚಕ್ರದಂತೆ ಅಥವಾ ಹಗ್ಗದಂತೆ ತೋರುವ ಮುಂಡಾಸುಗಳು ಅಥವಾ ರುಮಾಲುಗಳಿಗೆ ಬದಲಾಗಿ ಹ್ಯಾಟ್ಸ್ ಅಥವಾ ಕ್ಯಾಪ್‌ಗಳ ವ್ಯವಸ್ಥೆ ಮಾಡಿದ್ದರೆ ನಮ್ಮ ದೇಶದ ವ್ಯಾಪಾರವು ಪರದೇಶಕ್ಕೆ ಹೋಗುತಿದ್ದಿಲ್ಲ. ಉದ್ದವಾದ ಅರಿವೆಯ ತುಕಡಿಯನ್ನು ಮೈಮೇಲೆ ಧರಿಸುವದಕ್ಕಿಂತ ಸೊಗಸಾದ ಹ್ಯಾಂಡ್ ಕರ್ಚೀಫ್‌ಗಳನ್ನು ನಮ್ಮ ಸಲುವಾಗಿ ಮಾಡಿಟ್ಟದ್ದರೆ ನಮ್ಮ ವಸ್ತ್ರಗಳನ್ನು ಪರರಾಷ್ಟ್ರದವರು ಕಸುಗೊಳ್ಳುತಿದ್ದಿಲ್ಲ ನಮ್ಮ ಮನೆಯನ್ನು ಜನಸಮೂಹದ ಗುಂಪಿನಲ್ಲಿ ನಿರ್ಮಿಸದೆ ಊರು ಹೊರಗೆ ಸುಡುಗಾಡು ಘಟ್ಟದ ಸಮೀಪದಲ್ಲಿ ಹಾಳುಬಂಗಲೆಯನ್ನು ನಿರ್ಮಿಸಿದ್ದರೆ ನಮ್ಮಲ್ಲಿ ಈಪ್ರಕಾರದ ರೋಲಸು ಸೇರುತಿದ್ದಿಲ್ಲ. ಇವೆಲ್ಲ ಹಾಗಿರಲಿ, ನಮ್ಮ ಮದುವೆ ಹೆಂಗಸರು ನಮಗಿಂತಲೂ ಹೆಚ್ಚಾದ ವಿದ್ಯವನ್ನು ಕಲಿತು ಕಂಡ ಜನಗಳ ಕೈ ಹಿಡಿದು ಬೀದಿಗಳಲ್ಲಿ ತಿರುಗಾಡಬಾರದೆಂಬ ನಿಯಮವಿರುವದರಿಂದಲೇ ಪರರಾಜರ ಸತ್ತೆಯು ನಮ್ಮಮೇರೆ ಬಂತು ಪತಿರಹಿತರಾದ ೩೦ ಅಥವಾ ನಾಲ್ವತ್ತು ವರ ಷದ ಅಬಲೆಯರು ಒಂದು ಅಥವಾ ಎರಡು ನಾಲ್ಕು ಮಕ್ಕಳನ್ನು ಪಡೆದಿದ್ದರೂ ಚಿಂತೆ ಇಲ್ಲ ಅವರಿಗೆ ಪುನರ್ವಿವಾಹ ಅಥವಾ ಉಡಿಕೆ ಮಾಡದೆ ಇರುವದರಿಂದ, ನಮಗೆ ಸಂಭವಿಸುವ ಕೇಡುಗಳಿಗೆ ಮಿತಿಯೇ ಇಲ್ಲ. ಇವುಗಳಲ್ಲದೆ ನಮ್ಮ ಒಳಸತಕೆಗಳಂತೂ ಬಹಳ ಹೊಲಸಾಗಿವೆ ನಮ್ಮ ಪೂರ್ವಜರು ನಾನಾತರದ ಮತಗಳನ್ನು ರಚಿಸಿದ್ದರಿಂದ ಅವರ ಮೂರ್ಖತ್ವವನ್ನು ಎಷ್ಟು ವರ್ಣಿಸಿದರೂ ತೀರದು ಯಾಕೆಂದರೆ ಪೃಥ್ವಿಯಲ್ಲಿ ಸ್ತ್ರೀ ಪುರುಷರೆಂಬ ಎರಡು ಜಾತಿಗಳನ್ನು ಪರಮೇಶ್ವರನು ನಿರ್ಮಿಸಿದ್ದು ಅವುಗಳಲ್ಲಿ ೧೧೧ ಜಾತಿಗಳು ಎಲ್ಲಿಂದ ಬಂದವು? ಇಂಥ ದುರಾಲೋಚನೆಯಿಂದಲೇ ನಮ್ಮ ಜನರಲ್ಲಿ ಇದುವರೆವಿಗೂ ನಾನಾತರದ ಜಗಳಗಳು ಸಂಭವಿಸಿವೆ ಯಾವತ್ತು ಜಗತ್ತನ್ನ ನಿರ್ಮಿಸಿ ಸಕಲಪ್ರಾಣಿಗಳನ್ನು ಸಮನಾಗಿ ಕಾಪಾಡುವ ಆಕಾಶದಲ್ಲಿದ್ದ ಒಬ್ಬನೇ ದೊಡ್ಡ ದೇವರ ಚಿಕ್ಕಮಗನು (ತಂದೆ ಗೊತ್ತಿಲ್ಲದವನು) ನಮ್ಮನ್ನು ಆನಂದದಿಂದ ಪರಿಪಾಲಿಸುತ್ತಿರಲು ಈ ೩೩ ಕೋಟಿ ಮಣ್ಣಿನ, ಸಗಣಿಯ, ತಾಂಬ್ರದ, ಮತ್ತು ಕಟ್ಟಿಗೆಯ, ದೇವರು ಎಲ್ಲಿಂದ ಬಂದವು? ಇಂಥ ದುರ್ವಿಚಾರದ ಮೂರ್ತಿ ಪೂಜೆಯಿಂದ ನಮ್ಮದೇಶದ ಬಲವು ಕುಗ್ಗಿಹೋಗಿವೆ. ಇದೂ ಇರಲಿ, ನಮ್ಮ ಮನೆಯಲ್ಲಿರುವ ಹೆಂಗಸರಿಗೆ ೧೬ ಮೊಳ ಉದ್ದ ಎರಡುಮಳ ಅಗಲವಾದ ಸೀರೆಯು ಬೇಕು ಯಾಕೆ? ಇದರ ಬದಲಾಗಿ ೨ ರೂಪಾಯಿ ಬೆಲೆಯುಳ್ಳ ಚೀಟಿಯ ಲಂಗವನ್ನು ಸುತ್ತುವ ಪ್ರಯತ್ನವಿಟ್ಟದ್ದರೆ, ನಮ್ಮ ಹಣವು ಎಷ್ಟು ಕೂಡಿ ಬೀಳುತಿತ್ತು. ಇವುಗಳಲ್ಲದೆ ಇನ್ನೂ ನಮ್ಮ ಜನರಲ್ಲಿ ಹಾಗೂ ಅಸಹ್ಯಕರವಾದ ನಡತೆಗಳು ಇತ್ತವೆ ಆದುದರಿಂದ ನಾನು ವಿಸ್ತರಿಸಿ ಮನೆಯೊಳಗೆ ತಂಬಿಗೆ ಥಾಲಿಗೆ ಬದಲಾಗಿ ಗ್ಲಾಸ್ ಟಂಬ್ಲರುಗಳನ್ನೂ, ದೀಪ ಹಚ್ಚುವ ಹಣತೆಗಳಿಗೆ ಬದಲಾಗಿ ಗಾಜಿನ ಪಾತ್ರೆಗಳನ್ನೂ ಟೇಬಲ್ಸ್‌ಗಳನ್ನೂ ತಯಾರಿಸಬೇಕೆಂತ ಹೇಳಿದಾಗ್ಯೂ ಅವಳು ನನ್ನ ಮಾತು ಕೇಳುವದಿಲ್ಲ —ಕ. ವೈ.

Bangalore —Printed and published at the Karnataka Press, No. 40, Hospital Road, City —1893

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

## ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning.**

ಪ್ರಾಮವಿವಿಧಸ್ವನೃತ್ಯಪಗನಾರ್ಥ್ಯಕರ್ಣಾಟಕಪ್ರಕಾಶನಪರಾಭಿದಾಪ್ರಥಿತಸಾಹಿತೀಶೋಭಿತಾ॥ವ್ಯಗಾಂಕಹಿತವಾಸರೆನಿಹಿತಮುದ್ರಣಾಸದ್ಮನೈರ್ಲಿ ಶಾಸುವರಿಪೊಷಿತಾಚಕತಿವಾನಸಂಸಂಮುದಂ!

| Vol. XX.] | BANGALORE—MONDAY, APRIL 3, 1893. | [No. 13. |
|---|---|---|
| ಸಂಪುಟ ೨೦. ] | ಬೆಂಗಳೂರು:—ಸನ್ ೧೮೯೩ ನೇ ಇಸವಿ ಏಪ್ರಿಲ್ ೩ ನೇ ತಾರೀಖ್ ಸೋಮವಾರ. | ಸಂಚಿಕೆ ೧೩. |


### ಕರ್ಣಾಟಕ ಪ್ರಕಾಶಿಕಾ.

#### ಪತ್ರಿಕೆಯ ಚಂದಾ ದರಗಳು.

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

| | ಸ್ಥಳದವರಿಗೆ. | ಪರಸ್ಥಳದವರಿಗೆ. |
|---|---|---|
| ಸಾಲ್ ಒಕ್ಕೆ .. .. | 6—0—0 | 8—0—0 |
| 6 ತಿಂಗಳಿಗೆ .. .. | 3—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

| | ಸ್ಥಳದವರಿಗೆ. | ಪರಸ್ಥಳದವರಿಗೆ. |
|---|---|---|
| ಸಾಲ್ಗೆ ... .. | 3—0—0 | 4—0—0 |
| 6 ತಿಂಗಳಿಗೆ ... ... | 1—12—0 | 2—8—0 |

ಈ ಪತ್ರಿಕೆಗೆ ದರಖಾಸ್ತು ಮಾಡಿದ ತಾರೀಖಿನಿಂದ ಮೊದಲು ಒಂದು ತಿಂಗಳೊಳಗಾಗಿ ಚಂದಾ ಕೊಟ್ಟರು ಕೇವಲ ಸವಲತ್ತಿನ ದರವು ಮಾತ್ರವೇ ಅಡ್ವಾನ್ಸ್ ದರದಂತೆ ಪತ್ರಿಕೆಗೆ ಆಕರಿಸಲ್ಪಡುವದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು ಮೂರು ತಿಂಗಳಿಗಿಂತ ಕಡಮೆಯಾಗಿ ಚಂದಾ ಕೊಟ್ಟರೆ ಅಂಗೀಕರಿಸಲ್ಪಡಲಾರದು.

#### ಪ್ರಕಟನೆಯ ಚಾರ್ಜ್.

ಮೊದಲನೆಯದಕ್ಕೆ ಪಙ್ಕ್ತಿ ಒಂದಕ್ಕೆ ೦—೨—೦

ಎರಡನೆಯದಕ್ಕೆ ಪಙ್ಕ್ತಿ ಒಂದಕ್ಕೆ ೦—೧—೦

ದರ—ಎರಡಾವರ್ತಿಗಿಂತ ಹೆಚ್ಚು ಸಲ ಪ್ರಕಟಿಸತಕ್ಕ ಖಾಯಿಷ್ ಮಾಡಿದಾಗ್ಯೆ ಪಙ್ಕ್ತಿ ಒಂದಕ್ಕೆ ೧ ಆಣೆಯಂತೆ ಹೋಲಿಕೆ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಖಾಯಮ್ ಆಗಿ ಜಾಹೀರುಗಳನ್ನು ಪ್ರಕಟಪಡಿಸತಕ್ಕವರು ಅವು ಎಷ್ಟುಸಲ ಪ್ರಕಟಿಸಲ್ಪಡಬೇಕೋ ಆ ಸಂಖ್ಯೆಯನ್ನು ಸ್ಪಷ್ಟವಾಗಿ ಬರೆಯತಕ್ಕದ್ದು. ಇಲ್ಲದಿದ್ದರೆ ಅವು ನಿಲ್ಲಿಸಬೇಕೆಂದು ಬರೆಯುವವರೆಗೆ ಅವು ಪ್ರಕಟಿಸುತ್ತಿದ್ದು ಹಾಗೆ ಎಷ್ಟಾವರ್ತಿ ಪ್ರಕಟಿಸಲ್ಪಟ್ಟವೋ ಅಷ್ಟಕ್ಕೂ ದರದಂತೆ ಬಿಲ್ಲು ವಸೂಲ್ಮಾಡಲ್ಪಡುವದು. ಪ್ರಕಟನೆಗಾಗಿ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಅದಾ ಚಾರ್ಜಿನ ಸಮೇತವಾಗಿ ಎಡಿಟರಿಗೆ ಕಳುಹಿಸತಕ್ಕದ್ದು. ಪ್ರಕಟನೆಗಳನ್ನು, ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದ ಪತ್ರಗಳನ್ನು ... ನಾವು ... ಪ್ರಕಟಿಸುವದಕ್ಕೆ ... ಪ್ರಕಟಿಸುತ್ತೇವೆ. ಸಿಂಧು ... ಕಳುಹಿಸಲ್ಪಡಲಾರವು.

## ADVERTISEMENTS.

### NOTICE.

**VAIDYASARA SANGRAHA**

A TREATISE ON THE PRINCIPLES OF

**HINDU MEDICINE**

*Per including Postage Rs 5 0 0*

### ವೈದ್ಯಸಾರ ಸಂಗ್ರಹ.

ಈ ಗ್ರಂಥಾಗ್ರಹ್ರೇಷ್ಠರು ಮೊದಲಿಗೊಂಡ ... ರಾಜರು ಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು ಮೊದಲು ಇಲ್ಲದ ದರಖಾಸ್ತುಗಳಿಗೆ ಸಿಗೋ ಕೊಡಲ್ಪಡಲಾರದು.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೇ ಹಾಸಲ್ ಸೇರಿಲ್ ಪ್ರತಿ ಒಂದಕ್ಕೆ ರೂ ೫—0—0

ಟಿ. ಬಿ ವೆಂಕಟಾಚಾರ್.

ಬೆಂಗಳೂರ್. ಮಹಾಲಕ್ಷ್ಮಿ ರೋಡ್ ೪೮ ನಂಬರ್.

### ನೋಟೀಸ್.

#### ಬೆಂಗಳೂರು ಕರ್ಣಾಟಕ್ ಪ್ರೆಸ್.

೧೮೬೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ, ಸಕಲವಿಧ ಕೆಲಸಗಳು ಸುಲಭಬಾರ್ಜಿಗೆ ತೀವ್ರವಾಗಿಯೂ ಶ್ಲಾಘ್ಯವಾಗಿಯೂ, ನಡಸಲ್ಪಡುವವು.

ಇದರಲ್ಲಿ ಸಧ್ಯಕೆ ಇಂಗ್ಲಿಷ್ ಕನ್ನಡ ಕೆಲಸಗಳು ಮಾತ್ರವೆ ನಡೆಯುತಿವೆ. ಇತರ ತರಾಸೀಲ್‌ಗಳನ್ನು, ಸದರೀ ಕಾರ್ಖಾನೆಯ ಪ್ರೊಪ್ರೈಟರಿ ಬರೆದು ತಿಳಿದುಕೊಳ್ಳಬಹುದು.

### ನೋಟೀಸ್.

#### ನಂಜಪ್ಪನವರ ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು.

ಈಳೂರು ಉಪ್ಪಾರಪೇಟೆಯಲ್ಲಿರುವ ಪೇಟೆ ತಿಳಿಸಲ್ಪಟ್ಟವರಿಂದ ಮಾಡಲ್ಪಟ್ಟ ಇವಂಡಿಕೆಯ ಪ್ರಾಶಸ್ತ್ಯಗಳುಳ್ಳ ಔಷಧಗಳು ಬೇಕಾದವರಿಗೆ ತಯಾರಾಗಿರುತ್ತವೆ; ಬೇಕಾದವರು ಅವರಿಗೆ ಬರೆದು ತರಿಸಿಕೊಳ್ಳಬಹುದು. ಈ ಔಷಧಗಳು ಶಾಸ್ತ್ರೋಕ್ತವಾದ ಕೆಲವು ಸಿದ್ಧಕ್ರಿಯೆಗಳಮೇಲೆ ತಯಾರಾದವಾಗಿಯೂ, ಅನುಭವಸಿದ್ಧವಾಗಿಯೂ, ಅನೇಕರಿಗೆ ಗುಣವನ್ನುಂಟುಮಾಡಿದವಾಗಿಯೂ ಇರುತ್ತವೆ. ತಮ್ಮ ರೋಗಸ್ವರೂಪವನ್ನು ಔಷಧದ ವ್ಯಾಧಿಗಳ ಕ್ರಮವನ್ನು ಸಹಾ ಪಂಡಿತರಿಗೆ ಬರೆದು ತಿಳಿಸಿಕೊಳ್ಳಬಹುದು. ಹಾಗೆ ಕಾಗದ ಬರೆಯತಕ್ಕವರು ಅವುಗಳಪೇಕ್ಷಿಸಲ್ಪಡುವ ಪ್ರತ್ಯುತ್ತರಕ್ಕೆ ಸಹ ತಮ್ಮ ಕಾಗದದಲ್ಲಿ ಅವರಿಗೆ ಲೇಬಲ್ ಮುಖಾಂತ್ರ ಹಾಕಿ ಕಳುಹಿಸಬೇಕು. ವ್ಯಾಲ್ಯೂಪೇಯಬಲ್ ಮೂಲಕ ಸಹ ಪದಾರ್ಥಗಳು ಕಳುಹಿಸಲ್ಪಡುತ್ತವೆ. ಕಳುಹಿಸಲ್ಪಟ್ಟ ಪದಾರ್ಥಗಳನ್ನು ತರಿಸಿದವರು ... ವ್ಯಾಲ್ಯೂ ಪೇಯಬಲ್ ಕಮಿಷನ್ ಅವರೇ ಕೊಡಬೇಕಾಗುತ್ತದೆ.

ತೈ.—ಮಹಾತಕ್ರತೈಲ, ಇದು ಶಿರೋ ವಾಯುಗಳಿಗೂ, ಕಾಲಿನ ಸಂಬಂಧಿಗಳಾದ ಮತ್ತು [illegible] ಸ್ಥಿಬಂಧಗಳಿಗೂ, ಮೂಗಿನಲ್ಲಿ ರಕ್ತ ಬೀಳತಕ್ಕದ್ದಕ್ಕೂ, ಅನೇಕವಿಧ ಶಿರೋವ್ಯಾಧಿಗಳ ವೇದನೆಗಳಿಗೂ ಬಹಳ ಪ್ರಾಶಸ್ತ್ಯವಾದ ನಿವಾರಕವಾದುದಾಗಿದೆ. ಸಣ್ಣ ಸೀಸೆ ಒಂದಕ್ಕೆ ೧ ರೂ. ದೊಡ್ಡ ಸೀಸೆ ೧ಕ್ಕೆ ೫ ರೂ

ಜ್ವರದ ಗುಳಿಗೆಗಳು—... ಚಾತುರ್ಥಿಕಾದಿ ಸಕಲವಿಧ ಜ್ವರಗಳಿಗೂ ಶ್ರೇಷ್ಠ ಔಷಧವಾಗಿರುತ್ತವೆ. ರೂ ೧ಕ್ಕೆ ೨೦ ಗುಳಿಗೆಗಳು.

ಮೇಹ ರೋಗ ನಿವಾರಕವಾದ ಪಿಲ್ಲ್ಸ್—ಈ ಪಿಲ್ಲ್ಸ್‌ಗಳು ೨೦ ದಿನಗಳವರೆಗೆ ಬೆಳಗ್ಗೆ ಮತ್ತು ಸಾಯಂಕಾಲ ತೆಗೆದುಕೊಂಡರೆ ಸಕಲವಿಧ ಮೇಹಗಳೂ, ಪ್ರಮೇಹಗಳೂ, ಸ್ತ್ರೀಯರಿಗುಂಟಾಗುವ ಉಷ್ಣ ಸಂಬಂಧವಾದ ರೋಗಗಳೂ, ನಿವಾರಣೆಯಾಗುವವು ಸೀಸೆ ೧ಕ್ಕೆ ೨—೮—೦

ದಂತರೋಗಕ್ಕೆ ಚೂರ್ಣ.—ಹುಳುಕಪಲ್ಲುಗಳು, ಸಡಿಲ ಬಿದ್ದಿರುವ ಹಲ್ಲುಗಳು, ಒಸಡುಗಳನ್ನು ಗಟ್ಟಿಪಡಿಸಿ ... ಇದು ಮಹಾವಿಧವು. ಡಬ್ಬಿ ೧ಕ್ಕೆ ೧ ರೂ ಇದು ೨೦ ದಿನಗಳಿಗೆ ಆಗುವದು.

ನೇತ್ರರೋಗಕ್ಕೆ ಸುರ್ಮೆ—ಪೊರೆಗಳು, ದೃಷ್ಟಿಮಾಂದ್ಯ, ಕಣ್ಣುರಿ, ರೆಪ್ಪೆನೋವು, ಕಣ್ಣಲ್ಲಿ ನೀರು ಸುರಿಯುವುದು ಮುಂತಾದ ಎಲ್ಲಾ ಸಕಲರೋಗಗಳಿಗೂ ಪ್ರಶಸ್ತವಾದದು. ಮೂಲಿಕಾ ಪ್ರಯೋಗದಿಂದ ಮಾಡಲ್ಪಟ್ಟ ಉತ್ತಮವಾದ ಸುರ್ಮೆ ೧ಕ್ಕೆ ೮ ಆಣೆ. ಇದು ೪೦ ದಿನಗಳವರೆಗೆ ಬರುವ ಹಾಗೆ ಹಾಕಿಕೊಳ್ಳಬಹುದು.

ಮೂಲವ್ಯಾಧಿಗೆ—ಒಂದು ಲೇಹ್ಯ ತಯಾರಾಗಿದೆ, ಇದರಿಂದ ದೀರ್ಘಕಾಲಿಕವಾದ ಮೂಲರೋಗವಾದರೂ ನಿವಾರಣೆಯಾಗುತ್ತದೆ. ಉಂಡೆ ೧ಕ್ಕೆ ೧ ರೂ. ... ಇದನ್ನು ಯಥಾಕ್ರಮವಾಗಿ ಸೇವಿಸಿಕೊಂಡಿರತಕ್ಕದ್ದು. ಇದರ ಸೇವನೆಯಿಂದ ... ನಿವೃತ್ತಿಯಾಗುತ್ತದೆ.

ಭಸ್ಮಗಳು—ತಾಂಬ್ರ, ರಜತ, ನಾಗ, ಸೀಸ, ಪ್ರವಾಳ, ಶೃಂಗ, ಅಭ್ರಕ, ಲೋಹ, ಕಾಂತ ವಗೈರೆ ಭಸ್ಮಗಳೂ ಸಿಂಧೂರಗಳೂ ಸಿದ್ಧ ಕ್ರಮದಿಂದ ತಯಾರಾದವು. ಇವು ... ಸಕಲ ಪ್ರಬಲ ರೋಗಗಳಿಗೂ ಪ್ರಶಸ್ತವಾದವಾಗಿರುತ್ತವೆ. ರೋಗ ಸ್ವರೂಪನು ಗುಣವಾಗಿ ಔಷಧವು ಕೊಡಲ್ಪಡತಕ್ಕವಾದುದರಿಂದ ಆದರ ಮೇಲೆ ಕ್ರಯವು ನಿಷ್ಕರ್ಷಿಸಲ್ಪಡಬೇಕಾಗಿದೆ.

ಲೇಹ್ಯಗಳು—ಮದನವಿದ್ಯಾ, ಚ್ಯವನಪ್ರಾಶ, ಕೂಷ್ಮಾಂಡ ವಗೈರ ಧಾತು ವೃದ್ಧಿಕರಗಳಾದ ಲೇಹ್ಯಗಳು ಸಿದ್ಧವಾಗಿವೆ. ಸೇರು ೧ಕ್ಕೆ ೩ ರೂ.

ಪರಿಮಳ ಗಳು—ಗಂಧ, ಬಾಳೆಹಣ್ಣು, ... ಅಂಜೂರು, ದ್ರಾಕ್ಷೇಹಣ್ಣು, ಸೇಬು ಮೊದಲಾದ ಷರಬತ್ತುಗಳು ತಯಾರಾಗಿವೆ. ಇವು ಸೀಸೆ ೧ಕ್ಕೆ ೨ ರೂ.

ಚೂರ್ಣಗಳು—... ಯೋಗರಾಜ ಚೂರ್ಣ, ಶಂಖದ್ರಾವಕ ಚೂರ್ಣ, ... ವಗೈರೆ ಚೂರ್ಣಗಳು ಅಜೀರ್ಣ ಪಿತ್ತ ಮುಂತಾದ ರೋಗಗಳಿಗೆ ಬಾಧಕವಾದವು. ಇವು ೪೦ ದಿನಗಳಿಗೆ ಕೊಡುವಂಥವು. ಡಬ್ಬಿ ೧ಕ್ಕೆ ೨ರೂ.

### ನೋಟೀಸ್.

#### ಗಣೇಶ ರಾಮಚಂದ್ರ ಶರ್ಕಿ ಮತ್ತು ಕಂಪೆನಿ. ಕಮಿಷನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯೊಡನೆ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ತಕ್ಕ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರಹ ಔಷಧಗಳು, ಪುಸ್ತಕಗಳು, ಮುತ್ತುಗಳು, ಚಿಪ್ಪಿ ಮುತ್ತುಗಳು, ಫಡಿಯಾರಗಳು, ವಾಚ್‌ಗಳು, ಟ್ರಂಕ್ ಪೀಸ್‌ಗಳು, ಕಾಶ್ಮೀರ ಶಾಲುಗಳು, ಪಟ್ಟೇಗಳು, ಜರತಾರಿ ಶಾಲುಗಳು, ಚಂದ್ರಕಾಂತ ಶಿಲೆಯ ಕನ್ನಡಕಗಳು, ಹುಡುಗರಿಗೆ ತಕ್ಕ ಜರತಾರಿ ಉಡುಪುಗಳು, ಜರತಾರಿ ಟೋಪಿಗಳು, ಆಫೀಸ್ ಪ್ರೆಸ್‌ಗಳು, ಷಟ್ಟಿಗಳು, ಅತ್ತರಿಗಳು, ಅತ್ಯುತ್ತಮಗಳಾದ ರತ್ನಗಳು, ಭಂಗಾರದಿಂದ ಕಟ್ಟಲ್ಪಟ್ಟ ಉಂಗುರಗಳು, ಜರ್ಮನ್ ಬೆಳ್ಳಿ ಪಾತ್ರೆಗಳು, ಜರ್ಮನ್ ಬೆಳ್ಳಿ ಪಾತ್ರೆಗಳು, ಕೇಸರಿ, ಕಸ್ತೂರಿ ವಗೈರೆ ಇತರ ಸಾಮಾನುಗಳು.

ಜವಾಬ್ [illegible] ಪೋಸ್ಟೇಜ್ ಲೈಬಲ್ ಕಳುಹಿಸಿದ ಕೂಡಲೇ ಜವಾಬ್ ದೊರೆಯಬಹುದು.

ವಿಳಾಸ,—ಗಣೇಶ ರಾಮಚಂದ್ರ ಶರ್ಕಿ,
ಮತ್ತು ಕಂಪೆನಿ, ಕಮಿಷನ್ ಏಜಂಟ್ಸ್,
ದಾಕೂರ ದ್ವಾರ, ಮಾರ್ಕೆಟ್ ಪೋಸ್ಟ್, ಮುಂಬಯಿ

### ನೋಟೀಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕರಿಗೆ ಸಿದ್ಧವಾಗಿವೆ ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

#### ಸಂಸ್ಕೃತ ಗ್ರಂಥಗಳು.

| | ಟಪಾಲ್ ಸಹಿ | ರೂ | ಆ | ಪೈ |
|---|---|---|---|---|
| ಸಟೀಕಾ ವೈದ್ಯಸಾರ ಸಂಗ್ರಹ | ... | ೫ | ೦ | ೦ |
| ,, ಶಿವಗೀತೆ | .. | ೧ | ೧ | ೦ |
| ,, ಶಿವಾನಂದಲಹರಿ | ... | ೦ | ೮ | ೦ |
| ,, ಕಾಲಾಮೃತ | ... | ೧ | ೦ | ೦ |
| ,, ಟೀ॥ ವಾಲ್ಮೀಕಿರಾಮಾಯಣ | .. | ೦ | ೩ | ೦ |
| ,, ಟೀ॥ ಗೋಪಿಕಾ ಗೀತೆ | ... | ೦ | ೧ | ೦ |
| ,, ಟೀ॥ ಚಾಣಕ್ಯನೀತಿ (ಸುಭಾಷಿತ) | | ೦ | ೪ | ೦ |
| ವಿಷ್ಣುಸಹಸ್ರನಾಮ ವಗೈರೆ | ... | ೦ | ೩ | ೦ |
| ಸೂರ್ಯಸಹಸ್ರನಾಮ | ... | ೦ | ೨ | ೦ |
| ಕೃಷ್ಣಕರ್ಣಾಮೃತ | ... | ೦ | ೭ | ೦ |
| ತ್ರಿಖಂಡ ಅಮರ ಮೂಲ | ... | ೦ | ೭ | ೦ |
| ೧ ಕಾಂಡ | ... | ೦ | ೧ | ೦ |

#### ಕನ್ನಡ ಗ್ರಂಥಗಳು.

| | | ರೂ | ಆ | ಪೈ |
|---|---|---|---|---|
| ಶಂಕರವೃತ್ತಿ ಅವ್ವಲ್ | ... | ೩ | ೦ | ೬ |
| ಬಿಟೋ ದುಯ್ಯಂ | ... | ೧ | ೨ | ೦ |
| ವೃಷಭೇಂದ್ರವಿಜಯ | ... | ೧ | ೮ | ೦ |
| ಪಂಚಭಾಷಾ ಬಾಲಬೋಧೆ | ... | ೦ | ೬ | ೦ |
| ಹನುಮದ್ವಿಲಾಸ | .. | ೦ | ೬ | ೦ |
| ಕಾಳೀಯಮರ್ದನ | .. | ೦ | ೨ | ೦ |
| ಗುಣಸ್ವಾಪನಿಕಾಯ | .. | ೦ | ೭ | ೦ |
| ಕೆರೆಯಬದನೀಯ | .. | ೦ | ೨ | ೬ |
| ಸುದಾಮಚರಿತ್ರೆ | ... | ೦ | ೧ | ೦ |
| ಮೈರಾವಣ ಚರಿತ್ರೆ | ... | ೦ | ೧ | ೦ |
| ಬಾಲಗ್ರಹಚಿಕಿತ್ಸೆ | ... | ೦ | ೧ | ೦ |
| ಮಹಮ್ಮದ್ ಲಾ | ... | ೦ | ೧೨ | ೦ |
| ಬ್ರಾಂತಿವಿಲಾಸ | ... | ೦ | ೧೨ | ೦ |

### ನೋಟೀಸ್.

#### "ಇಮಾರತಿ ಕಟ್ಟಿಗೆ."

ಇದರಮೂಲಕ ಕೊಡುವದೇನಂದರೆ:—

ಹುಬ್ಬಳ್ಳಿ ರೈಲ್ವೆ ಸ್ಟೇಷನ್ ಹತ್ತಿರ ಇರುವ ಹುಬ್ಬಳ್ಳಿ ಡಿಪೋದಲ್ಲಿಯ ಕಟ್ಟಿಗೆಯ ಲಿಲಾವ ಸನ್ 1893ನೇ ಇಸವಿ ಏಪ್ರಿಲ್ 10 ನೇಗೆ ಆಗುವದು.

2. ಲಿಲಾವ್ ಆಗತಕ್ಕ ಕಟ್ಟಿಗೆಯು ಬಾವತಿಯು ಕೆಳಗೆ ತೋರಿಸಿದಂತೆ ಅವೆ.

| ಜಾತಿ | ನಾಟ ಸಂಖ್ಯೆ. | ವರ 50 ಕ್ಯೂಬಿಕ್ ಫೀಟ್ಗಳು. |
|---|---|---|
| ಸಾಗವಾನಿ. | 1420. | 580. |
| ಹೀಸಂ. | 25. | 10. |
| ಜಂಗಲಿ. | 320. | 166. |

3. ಕಟ್ಟಿಗೆಯು ಲಾಟವಾರ ಮಾಡಲ್ಪಟ್ಟು ಯೋಗ್ಯ ಸರಕಾರಿ ಸವಾಲ್ ಇಟ್ಟು ಲಿಲಾವ ಮಾಡಲ್ಪಡುವದು

4 ಸವಾಲಿನ ಹಣದಲ್ಲಿ ಶೇಕಡಾ 25 ರೂಪಾಯಿ ಯಂತೆ ಅಂಶವನ್ನು ಸವಾಲ್ ಮಂಜೂರ್ ಮಾಡಿದ್ದ ಕೂಡಲೇ ವಸೂಲ್ ಕೊಡಬೇಕು, ಬಾ ಹಣವನ್ನು ಸನ್ 1893ನೇ ಇಸವಿ ಮೇ 31ನೇ ಒಳಗೆ ವಸೂಲ್ ಕೊಡಬೇಕು

6. ಕಟ್ಟಿನ ಮಾಹಿತಿಯು ಲಿಲಾವ ಕಾಲದಲ್ಲಿ ಕೊಡಲಾಗುವದು ಅದರ ಕೆಳಗೆ ಸಹಿ ಮಾಡಿದವರ ಕಡೆಗೆ ಬರೆದು ತಿಳಿಕೊಳ್ಳಬಹುದು.

| | |
|---|---|
| ಮೊಕಾಂ ಕಲಘಟಗಿ ತಾ॥ 23ನೇ ಫೆಬ್ರವರಿ, 1893 | W. R. WOODROW. ಡಿವಿಜನಲ ಫಾರೆಸ್ಟ್ ಆಫೀಸರ್, ಧಾರವಾಡ. |

### ನೋಟೀಸ್.

ಇವೊತ್ತಿನ ನಮ್ಮ ಚಂದಾದಾರರಿಗೆ ನಾವು ಪ್ರಾರ್ಥಿಸುವದೇನಂದರೆ,—

ಈ ಸಾಲಿನಲ್ಲಿ ಈ ಪತ್ರಿಕೆಯ ಚಂದಾ ದರವು ಕಡಮೆ ಮಾಡುವದಕ್ಕೆ ನಾವು ಕೊಟ್ಟಿದ್ದ ಒಂದು ತಿಂಗಳ ಮಾಫಿಯ ಗಡುವು ಮೇಲೆ ಎರಡು ತಿಂಗಳುಗಳು ಆದುದರಿಂದ ಈ ತಿಂಗಳು ಪೂರ್ತಿಯಾಗುವದರೊಳಗಾಗಿ ಚಂದಾ ಮೊಬಲಗನ್ನು ಕಳುಹಿಸಿಕೊಡದೆ ಇರುವವರು ಕಳೆದ ಸಾಲಿನಲ್ಲಿ ಜಾರಿಯಲ್ಲಿದ್ದ ದರ ಪ್ರಕಾರ ಚಂದಾ ಮೊಬಲಗನ್ನು ಕಳುಹಿಸಿಕೊಡಬೇಕಾಗುವದಲ್ಲದೆ ಈ ತಿಂಗಳ ಆಖೈರು ಒಡನೆ ಹೊಸದರವು ರದ್ದಾದಂತೆ ತಿಳಿಯಬೇಕು.

| | |
|---|---|
| ಬೆಂಗಳೂರ್, ತಾರೀಖ್ ೨೦ ನೇ ಮಾರ್ಚ್, ೧೮೯೩. | ಪ್ರೊಪ್ರೈಟರ್, ಕ ಪ್ರ. |

### THE MONEY MARKET.

ಮದರಾಸ್, ಶನಿವಾರ, ತಾರೀಖ್ 1 ನೇ ಏಪ್ರಿಲ್ 1893

ನೇಕಡ 4ರೂ, ಬಾಬತು ಗವರ್ನಮೆಂಟ್ ಪತ್ರಗಳು ರೂಪಾಯಿ, 105-0-0 ಇಂದ 105-6-0 ವರೆಗೆ.

ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತು 965 ಆಗಾ ಯಿಂದ 970 ವರೆಗೆ.

ಕಮರ್ಷಿಯಲ್ ಡ ಬ್ಯಾಂಕ್ ಮಾರ್ಟ್ಗೇಜ್ ಬ್ಯಾಂಕ್ ಷೇರುಗಳು, (100) ಬಾಬತು 160 ರಿಂದ 165 ವರೆಗೆ

ಸವರನ್‌ಗಳು, 16-8-0 ಇಂದ 16-12-0 ವರೆಗೆ.

ಬ್ಯಾಂಕ್‌ಬಿಲ್‌ಗಳು ಯಾವ ದಸ್ತಾವೇಜುಗಳು, ರೂ, ೧ಕ್ಕೆ 6 ತಿಂಗಳ ಮಾಫಿಗೆ, 1s. 2 ¼d.

ಡಿಟ್ಟೋ 4 ತಿಂಗಳ ಮಾಫಿಗೆ, 1s. 2 11/16d

ಡಿಟ್ಟೋ ಕೇಳಿದಾಗ, 1s. 2 19/32d.

## ಸೌದೆ.

ಸೆಂಟ್ರಲ್ ಡಿಸ್ಟಿಲರಿಗೆ ಮಾಹೆಯಾನಾ ೧೫೦ ಟನ್ನುಗಳಮೊದಲು ೩೫೦ ಟನ್ನುಗಳವರಿವಿಗೆ ಸೌದೆ ಬೇಕಾಗಿರುವದರಿಂದ ಅದರ ಸರಬರಾಯಿ ಬಗ್ಗೆ ಬರುವ ದರಖಾಸ್ತುಗಳು ೧೮೯೩ನೇ ಇಸವಿ ಏಪ್ರಿಲ್ ೧೫ನೇ ತಾರೀಖಿನವರಿವಿಗೆ ತೆಗೆದುಕೊಳ್ಳಲ್ಪಡುವವು. ಇತರ ತಪ್ಸೀಲ್ ತಿಳಿಯಬೇಕಾದರೆ ಬೆಂಗಳೂರ್ ಸೆಂಟ್ರಲ್ ಡಿಸ್ಟಿಲರಿಯಲ್ಲಿ, ಮೆಸ್ಸರ್ಸ್ ಪ್ಯಾರಿ ಕಂಪೆನಿಯು ಏಜಂಟರನ್ನು ಕೇಳಿ ತಿಳಿದುಕೊಳ್ಳತಕ್ಕದ್ದು.


# ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, APRIL 3, 1893

೧೮೯೩ನೇ ಇಸವಿ ಏಪ್ರಿಲ್ ತಾ|| ೩ ನೇ ಸೋಮವಾರ


## ಶ್ರೀಮತ್ ಮಹಾರಾಣೀ ಸೀತಾವಿಲಾಸದವರ ವಿಯೋಗ ವೃತ್ತಾಂತವು.

ಗತಿಸಿದ ಮಹಾರಾಜಾ ಕೃಷ್ಣರಾಜ ಒಡೆಯರ್ ಬಹದೂರ್ ಜಿ. ಸಿ. ಎಸ್. ಐ. ಯವರ ಧರ್ಮಪತ್ನಿಗಳಲ್ಲೊಬ್ಬರಾಗಿ ಘನವನ್ನೈದಿದ, ಶ್ರೀ ಸೀತಾವಿಲಾಸದ ದೇವಾಜಮ್ಮಣ್ಣಿ ಸಿ. ಐ. ಯವರು, ತಮ್ಮ ೪೯ ನೆಯ ವಯಸ್ಸಿನಲ್ಲಿ, ೧೮೯೩ ನೇ ಇಸವಿ ಮಾರ್ಚಿ ೩೦ ನೇ ತಾರೀಖು ಭಾನುವಾರ ರಾತ್ರಿ ೧ ಘಂಟೆಯ ಸಮಯದಲ್ಲಿ ಪರಂಧಾಮವನ್ನೈದಿದರೆಂಬ ಅತ್ಯಂತ ದುಃಖಕರವಾದ ವೃತ್ತಾಂತವು ಮೈಸೂರ್ ಗೆಜೆಟಿನ ವಿಶೇಷ ಪತ್ರಿಕೆಯಿಂದಿದುವರಿವಿಗೆ ಸಕಲರೂ ಅರಿತು ಏತದ್ವಿಷಯಸ್ವರೂಪಾನುಗುಣವಾದ ಭಾವವಂ ಪಡೆದಿರುವರೆಂದು ನಂಬುತ್ತೇವೆ. ಇದಕ್ಕೆ ಪೂರ್ವ ಶ್ರೀಮತ್ ಮಹಾರಾಣೀಯವರ ಶರೀರ ಸ್ಥಿತಿ ವಿಷಯಕವಾಗಿ ಬಂದ ವೃತ್ತಾಂತಗಳೆಲ್ಲವು ತೃಪ್ತಿಕರವಾಗಿರದೆ, ಅಸ್ವಸ್ಥ್ಯವು ವೃದ್ಧಿಗೊಳಿಸತಕ್ಕದಾಗಿದ್ದವು. ಕಡೆಗೆ ಅವರ ಎದೆಯೊಳುಂಟಾಗಿದ್ದ ಅಸ್ವಸ್ಥತೆಯು ಕಾರ್ಯತಃ ಪರಿಣಮಿಸಲು ಅದು ಸೋಮವಾರದ ದಿನ ಬೆಳಗ್ಯೆ ಈ ನಮ್ಮೂರಿಗೆ ತಿಳಿಯಬಂತು. ತರುವಾಯ್ಯ ಇದರಡಿ ಕಂಡ ಇಸ್ತಿಹಾರ್ನಾಮೆಯು ಮೂಲಕ ಮಹಾರಾಣೀಯವರ ಮರಣ ವೃತ್ತಾಂತವು ಸರ್ಕಾರಿಯಾಗಿ ಸಕಲರಿಗೂ ತಿಳಿಸಲ್ಪಟ್ಟಿತಲ್ಲದೆ ಈ ಸಂಸ್ಥಾನದ ದರೋಬಸ್ತು ಪಬ್ಲಿಕ್ ಆಫೀಸ್‌ಗಳೂ ಕೋರ್ಟುಗಳೂ ಸೋಮ ಮಂಗಳವಾರಗಳೆರಡು ದಿನಗಳು ಮುಚ್ಚಲ್ಪಟ್ಟಿದ್ದುವು.

### ಇಸ್ತಿಹಾರ್ನಾಮೆ.

ತಾರೀಖು ೩೧ನೇ ಮಾರ್ಚಿ ೧೮೯೩.

ಈದಿನ ಪ್ರಾತಃಕಾಲ ಅಂದರೆ ಅರುಣೋದಯಕ್ಕೆ ಪೂರ್ವ ೧ ಘಂಟೆಯಲ್ಲಿ ಘನವನ್ನು ಹೊಂದಿದ ಹಿರೇಗರ ಮಹಾರಾಣಿಯವರಾದ ಸೀತಾವಿಲಾಸದ ದೇವಾಜಮ್ಮಣ್ಣಿ ಸಿ. ಐ. ಯವರು ಪರಂಧಾಮವನ್ನೈದಿದ ದುಃಖಕರವಾದ ವೃತ್ತಾಂತವನ್ನು ಸರ್ವರಿಗೂ ತಿಳಿಯಪಡಿಸುವದರಲ್ಲಿ ಆಜ್ಞಾಪಿಸುವದೇನೆಂದರೆ, ಈಸಂಸ್ಥಾನದ ದರೋಬಸ್ತು ಪಬ್ಲಿಕ್ ಆಫೀಸಗಳೂ, ಕೋರ್ಟುಗಳೂ, ಈದಿನವೂ, ನಾಳೆಯೂ ಮತ್ತು ೧೮೯೩ನೇ ಇಸವಿ ಏಪ್ರಿಲ್ ೪, ೫, ವ ೬ನೇ ತಾರೀಖುಗಳಲ್ಲಿ ಸುಧಾ ಮುಚ್ಚಲ್ಪಡತಕ್ಕದ್ದು.

ಮೈಸೂರು ವ ಬೆಂಗಳೂರು ಅರಮನೆಗಳಲ್ಲಿ, ಈದಿನ ಸದರೀ ಮಹಾರಾಣಿಯವರ ವಯಸ್ಸಂಖ್ಯಾನುಗುಣವಾದ ೪೯ ಶೋಕ ಸೂಚಕವಾದ ತೋಪುಗಳು ಉಡಾಯಿಸಲ್ಪಡತಕ್ಕದ್ದು.

೧೩ನೇ ದಿವಸ ಅಂದರೆ (ಏಪ್ರಿಲ್ ೧೨ನೇ ತಾರೀಖಿನಲ್ಲಿ) ನಡೆಯುವ ಶುಭ ಸ್ವೀಕಾರದ ವರಿವಿಗೂ ತಮಾಷ್ ಬಾಜಾಗಳೂ [illegible]ತಕ್ಕದ್ದು.

ಹುಕುಂ ಬಮೋಜಿಬ್,
ಟಿ. ಅನಂತರಾವ್,
ಚೀಫ್ ಸೆಕ್ರೆಟರಿ.

ಗತಿಸಿದ ಮಹಾರಾಜಾ ಕೃಷ್ಣರಾಜ ಒಡೆಯರವರ ಐದುಜನ ಧರ್ಮಪತ್ನಿಯರಲ್ಲಿ ಶ್ರೀ ದೇವಾಜಮ್ಮಣ್ಣಿಯವರೇ ಕಡೆಯವರಾಗಿದ್ದರು. ಸದರೀ ಐದುಜನ ಧರ್ಮಪತ್ನಿಯವರಿದ್ದ ಅಂತಃಪುರಗಳು ಪ್ರತ್ಯೇಕ ಪ್ರತ್ಯೇಕ ಹೆಸರುಳ್ಳ ವಿಲಾಸಗಳೆಂಬದಾಗಿ ವ್ಯವಹರಿಸಲ್ಪಡುತಲಿದ್ದವಾಗಿ ಆದರಂತೆ ಪ್ರಸಕ್ತ ಸೀತಾವಿಲಾಸವು ಸಹ ಒಂದಾಗಿಯೂ ಆಖ್ಯೆರಾದುದಾಗಿಯೂ ಏರ್ಪಟ್ಟಿತು. ಸಾಬಕ್ ಮಹಾರಾಜರವರು ಗತಿಸಿದ ಮೇಲೆ ಬ್ರಿಟಿಷ್ ಆಳ್ವಿಕೆಯಲ್ಲಿ ಶ್ರೀರಮಾವಿಲಾಸದಮ್ಮಣ್ಣಿಯವರು ಕಾಲಗತಿಯನ್ನೈದಿದರು ಪರಂತು ಸೀತಾವಿಲಾಸದವರಷ್ಟು ದೀರ್ಘಕಾಲ ಅವರ ಸಪತ್ನಿಯರ್ಯಾರೂ ಜೀವಿಸಿರಲಿಲ್ಲವು. ಇದಲ್ಲದೆ ಪ್ರಸಕ್ತ ವೃದ್ಧಮಹಾರಾಣಿಯವರಂತೆ ತಮ್ಮ ಪತಿ ಪುತ್ರರುಭಯರಿಂದಲೂ ಈಸಂಸ್ಥಾನವು ಪಾಲಿಸಲ್ಪಟ್ಟಿದ್ದನ್ನೂ ಪಡುತಲಿರುವದನ್ನೂ ನೋಡಿ ಸಂತೋಷಿಸಿದವರೊಬ್ಬರನ್ನೂ ಕಾಣೆವು. ಇವರು ಯಾವಾಗಲು ಪುರೋದೃಷ್ಟಿಯುಳ್ಳವರಾದುದರಿಂದ ತಮ್ಮ ಚರಮಾವಸ್ಥೆಯಲ್ಲಿ ನಡೆಯಬೇಕಾಗಿದ್ದ ದಾನ ಧರ್ಮಗಳೆಲ್ಲವಂ ಸ್ವತಃ ಮಾಡಿದರಲ್ಲದೆ ತಮ್ಮ ಹೆಸರಿನೊಳೊಂದು ಅಗ್ರಹಾರವಂ ಕಟ್ಟಿಸಿ ೧೪ ಜನ ಬ್ರಾಹ್ಮಣರಿಗೆ ಗೃಹ ಭೂಹಿರಣ್ಯದಾನ ಧಾರಾಪೂರ್ವಕ ದತ್ತಮಾಡಿ ಕೊಟ್ಟರು. ಇದಲ್ಲದೆ ಚಿರಕಾಲವಾಗಿ ತಮ್ಮನ್ನಾಶ್ರಯಿಸಿಕೊಂಡಿದ್ದ ಬಹುಜನ ಪರಿಜನ ಪರಿಚಾರಕರಿಗೆ ಫೀ ಯಿಸಂ ೩೦೦ ರೂಪಾಯಿಗಳಿಗೆ ಕಡಮೆ ಯಿಲ್ಲದಂತೆ ದಾನರೂಪವಾಗಿ ಕೊಟ್ಟರು. ಈಗ ಗತಿಸಿದ ಮಹಾರಾಣಿಯವರು ಗಾಂಭೀರ್ಯೌದಾರ್ಯಾದಿ ಸುಗುಣಾಲಂಕೃತರಾಗಿಯೂ, ತಮ್ಮ ಪುತ್ರರಿಂದ ಪರಿಪಾಲಿತರಾದ ಪ್ರಜೆಗಳ ಯೋಗಕ್ಷೇಮವಂ ಕೋರುತ ಅವರಿಗೆ ಸಂಭವಿಸುವ ಶುಭಪರಂಪರೆಗಳಿಗಾಗಿ ಆನಂದಿಸತಕ್ಕವರಾಗಿಯೂ, ಆಶ್ರಿತ ವಾತ್ಸಲ್ಯವುಳ್ಳವರಾಗಿಯೂ ಈ ಸಂಸ್ಥಾನದ ಪ್ರಾಚೀನ ಗೌರವ ಮರ್ಯಾದೆಗಳ ರಕ್ಷಣೆಯೊಳು ದೃಢಾಭಿನಿವೇಶವುಳ್ಳವರಾಗಿಯೂ, ಪೂರ್ವ ಸಂಪ್ರದಾಯಗಳಲ್ಲಿ ಶ್ರದ್ಧಾಭಕ್ತಿಯುಳ್ಳವರಾಗಿಯೂ ಇದ್ದರು. ಅದಲ್ಲದೆ ರಾಜ್ಯಭಾರ ನಿರ್ವಾಹಕರಾದ ತಮ್ಮ ಪುತ್ರರಿಗೆ ತತ್ತತ್ಕಾಲಗಳಲ್ಲಿ ಯುಕ್ತಾಯುಕ್ತಗಳಂ ಬೋಧಿಸುತ ಮಾರ್ಗಪ್ರದರ್ಶಕರಾಗಿದ್ದರು. ಇಂತವರು ಲೋಕಾಂತರಗತರಾದುದಕ್ಕಾಗಿ ಅವರ ಪ್ರಜೆಗಳ ಹೃದಯದೊಳುಂಟಾಗಿರುವ ಭಾವವು ಅನಿರ್ವಚನೀಯವಾದುದಾಗಿರುತಿದೆ — "ಜಾತಸ್ಯ ಮರಣಂಧ್ರುವಂ" ಎಂಬದಾಗಿ ಲೋಕದೊಳು ಜನಿಸುವ ವಸ್ತುಗಳೆಲ್ಲವು ನಾಶವನ್ನೈದುವವೆಂಬದು ಸಹಜ ವಿಷಯವಾಗಿದ್ದಾಗ್ಯೂ ಉತ್ತಮ ವಸ್ತುವಿಗೆ ವೈರೂಪ್ಯವುಂಟಾದೊಡೆ ಅದು ಪ್ರಬಲ ವಿಷಾದ ನಿಮಿತ್ತವಾಗದೆಹೋಗುವದಿಲ್ಲವು. ಅಂತಾ ಶ್ಲಾಘ್ಯ ಪದಾರ್ಥಗಳು ಕಣ್ಮರೆಯಾದಾಗ್ಯೂ, ಅವುಗಳ ಸಾಮರೂಪ ಕ್ರಿಯಾಗುಣ ವರ್ಣನೆಯು ಸ್ವಲ್ಪಮಟ್ಟಿಗೆ ದುಃಖೋಪಶಾಮಕವಾಗುತಿದೆಂಬದು ಪ್ರಸಿದ್ಧ ವಿಷಯವಾಗಿರುತಿದೆ.

ಗತಿಸಿದ ಮಹಾರಾಜಾ ಕೃಷ್ಣರಾಜ ಒಡೆಯರವರು, ತಮ್ಮ ಧರ್ಮಪತ್ನಿಯರ ವಿಲಾಸದಹೆಸರಿನಲ್ಲೂ, ಭಂಗಾರ ಸಂಬಂಧಿಗಳ ಹೆಸರಿನಲ್ಲಿಯೂ, ಇನ್ನೂ ಅವರ ಅಭಿಮಾನಕ್ಕೆ ವಿಷಯರಾಗಿದ್ದವರ ಹೆಸರಿನಲ್ಲಿಯೂ ಅಗ್ರಹಾರ, ದೇವಾಲಯ, ಛತ್ರ, ಶಾಲೆ ಮೊದಲಾದ ಅನೇಕ ಧರ್ಮಕಾರ್ಯಗಳಂ ಮಾಡಿಸಿ ಅವರ ಹೆಸರು ಅನವರತ ಜನಗಳಿಂದ ಸ್ಮರಿಸಲ್ಪಡುತಲಿರುವಂತೆ ಮಾಡಿದರು. ಅವು ಅಲ್ಲಿಯಲ್ಲಿ ಈಗಲೂ ದೃಶ್ಯಗಳಾಗಿವೆ. ಶ್ರೀ ಸೀತಾವಿಲಾಸದ ಅಮ್ಮಣ್ಣಿಯವರ ಅಂಕಿತದಲ್ಲೀಗ ಒಂದು ಅಗ್ರಹಾರವು ಸ್ಥಾಪಿತವಾಗಿ ಯೋಗ್ಯರಾದವರನೇಕರಿಗೆ ದಾನ ಮಾಡಲ್ಪಟ್ಟು ಅಂತವು ನಮಗೆ ಅಮಿತವಾದ ಸಂತೃಪ್ತಿಯನ್ನುಂಟುಮಾಡಿತು. ಆದರೆ ಒಂದಂಶವಂ ಕುರಿತು ಮಾತ್ರ ಸ್ವಲ್ಪ ಯೋಚಿಸಬೇಕಾಗಿರುತಿದೇನಂದರೆ,—ಶ್ರೀ ಮಹಾರಾಣೀಯವರ ಕೀರ್ತಿಪ್ರಕಾಶ್ಯಗಳು ಜಗದ್ವಿಖ್ಯಾತವಾಗಿರುವಂತೆ ಅಂತ ಔದಾರ್ಯವು ಸಾರ್ವಜನೀನವಾದುದಾಗಿಲ್ಲದೆ, ಪರಿಮಿತ ಜನರ ವಿಷಯದಲ್ಲಿ ಮಾತ್ರ ಸಲಿಸಿದ್ದು ಅತೃಪ್ತಿಕರವಾಗಿದೆ. ಇಂತಾ ಅತೃಪ್ತಿಗೆ ಅವಕಾಶವಿಲ್ಲದಂತೆಯೂ ಗತಿಸಿದವರ ಗುಣಗಳು ಅನವರತ ಸಕಲ ದೇಶೀಯರಿಂದ ಕೊಂಡಾಡಲ್ಪಡತಕ್ಕದ್ದಾಗಿಯೂ, ಅವರ ಪುತ್ರರಾದ ಮಹಾರಾಜರವರ ಕೀರ್ತಿ ಪ್ರತಿಷ್ಠೆಗಳಿಗೆ ಅನುಗುಣವಾದುದಾಗಿಯೂ, ಏತದರ್ಥ ವಿಶೇಷ ಧನವ್ಯಯವಿಲ್ಲದ್ದಾಗಿಯೂ ಇರುವಂತಾ ಒಂದು ಸಲಹೆಯಂ ಸೂಚಿಸಲಿಕ್ಕಿದು ಉಚಿತಸಮಯವೆಂದು ಭಾವಿಸಿ ತಿಳಿಸುತ್ತೇವೇನಂದರೆ,—ಮಹಾರಾಣೀಯವರ ಹೆಸರಿನೊಳು ಗುಂಟಕಲ್ ಜಂಕ್ಷನಿನಲ್ಲಿ ಶಾಶ್ವತವಾದ ಒಂದು ಅನ್ನಛತ್ರವನ್ನು ಸ್ಥಾಪಿಸಿದರೆ ತತ್ಪ್ರಯುಕ್ತವಾದ ಪ್ರಯೋಜನವು ಅಪರಿಮಿತವಾದುದಾಗಿರುವ್ವದು. ಇತರ ಪ್ರದೇಶಗಳನ್ನೆಲ್ಲ ತೊರೆದು ಪ್ರಾಧಾನ್ಯೇನ ನಾವದಂ ಸೂಚಿಸಲಿಕ್ಕೆ ಉದ್ದೇಶವೇನಂದರೆ—ಗುಂಟಕಲ್ ಈಚೆಗೆ ಜಂಕ್ಷನ್ ಸ್ಥಾನವಂದರೆ ಮೂರು ನಾಲ್ಕು ದಿಕ್ಕುಗಳಿಗೆ ಹೋಗುವ ರೈಲ್ವೆ ಮಾರ್ಗವು ಸಂಧಿಸುವ ಮಧ್ಯಪ್ರದೇಶವಾಗಿರುವದರಿಂದಲೂ, ದೇಶಾಂತರಗಳಿಂದ ಬೇಸತ್ತು ಬಂದಿಳಿಯುವ ಪ್ರಯಾಣಸ್ಥರಿಗೆ ಯಾವವಿಧ ಆನುಕೂಲ್ಯಗಳಿಲ್ಲದಿರುವದರಿಂದಲೂ, ಮಹಾರಾಷ್ಟ್ರ ರೈಲ್ವೇ ಸಂಬಂಧವು ವಿಶೇಷವಾಗಿರುವದರಿಂದಲೂ, ಇಲ್ಲಿನ ಜನಗಳ ಆಮದುರಫ್ತು ಆ ಮಾರ್ಗದಲ್ಲಿ ಅಧಿಕವಾಗುವ ಸಂಭವವಿರುವದರಿಂದಲೂ, ಅದು ಯೋಗ್ಯವಾದ ಪ್ರದೇಶವೆಂದು ಭಾವಿಸಬೇಕಾಯಿತು. ಹುಳಿಗೋಷ್ಠ ಪ್ರವನಿಗೆ ಬಲಾತ್ಕರಿಸಿ ಅನ್ನವನ್ನಿಕ್ಕುವಂತೆ ಅನ್ಯತರವಾದ ಯಾವ ಯೋಜನಾವಾದರೂ ವಿಶೇಷ ಫಲಪ್ರದವಾಗಲಾರದು. ಈ ದೇಶದಲ್ಲಿ, ಪ್ರಯಾಣಸ್ಥರ ಸಂಚಾರವಿಲ್ಲದಿರುವಂತಾ ಅನೇಕ ಸ್ಥಳಗಳಲ್ಲಿ ಛತ್ರಗಳು ನಾಮಮಾತ್ರಕ್ಕೆ ನೆಲೆಗೊಳಿಸಲ್ಪಟ್ಟು ನಡೆಸಲ್ಪಡುತ ಬರುತಲಿವೆ. ಅವುಗಳಿಂದ ಸರ್ಕಾರಕ್ಕೆ ಕೀರ್ತಿಯಾಗುತ್ತಾಗಲಿ ಪ್ರಯಾಣಸ್ಥರಿಗೆ ವಿಶೇಷಾನುಕೂಲ್ಯವಾಗಲಿ ಉಂಟಾಗುವಂತೆ ಕಾಣಿಸಲಿಲ್ಲವು ಅಂತಾ ಯೆರಡುಮೂರು ಛತ್ರಗಳ ಲವಾಜಮೆಯನ್ನು ಜಮಾಯಿಸಿ ಗವರ್ನಮೆಂಟನವರೂ ಯಥೋಚಿತ ಸಹಾಯ ಮಾಡಿ ತಿರುಪತಿ ಕಾಶಿ ಮೊದಲಾದ ಸ್ಥಳಗಳಲ್ಲಿರುವ ಅನ್ನ ಛತ್ರಗಳಂತೆ ಆಗಂತುಕರಿಗೆ ಸದರೀ ಪ್ರದೇಶದಲ್ಲಿ ಅನ್ನ ಹಾಕುವ ಏರ್ಪಾಡ ಮಾಡಿದರೆ ಜಾಸ್ತೀ ಖರ್ಚಿಲ್ಲದಂತೆ ಮಹಾರಾಣಿಯವರ ಕೀರ್ತಿಯು ಆಚಂದ್ರಾರ್ಕವಾಗಿ ನೆಲೆಗೊಂಡಿರಲಿಕ್ಕೆ ಅವಕಾಶವಾಗಿರುವುದು. ಇದೇನೂ ನೂತನಕ್ರಮವಲ್ಲವು. ಮೈಸೂರಲ್ಲಿ ಕೃಷ್ಣರಾಜ ಒಡೆಯರವರ ಛತ್ರವು ಕಟ್ಟಲ್ಪಟ್ಟ ಕಾಲದಲ್ಲಿ ಇತರ ಕೆಲವು ಛತ್ರಗಳ ಲವಾಜಮೆಗಳನ್ನು ಸಹ ಅದಕ್ಕೆ ಸೇರಿಸಿ ಅದರ ಪ್ರಯೋಜನವನ್ನು ಸಾಬಕ್ ದಿವಾನ್ ಮೆ|| ರಂಗಾಚಾರ್ಲುರವರು ವೃದ್ಧಿಪಡಿಸಿದರೆಂದು ಕೇಳಿದ್ದೇವೆ. ಈಗಲೂ ಪ್ರಸಕ್ತ ವಿಷಯದಲ್ಲಿ ಅದೇ ಕ್ರಮವನ್ನನುಸರಿಸುವದರಿಂದ ಯಾವ ಬಾಧಕವೂ ಕಾಣಿಸಲಿಲ್ಲವು. ಅನೇಕ ಸತ್ಕರ್ಮಗಳಿಂದ ಪಾವನಚರಿತರಾಗಿ ಬಿಜಯಮಾಡಿದ್ದ ಶ್ರೀಮನ್ಮಹಾರಾಣೀಯವರ ಕೀರ್ತಿ ಪ್ರಾಶಸ್ತ್ಯಗಳಂ ಕಾಪಾಡುವ ವಿಷಯದೊಳು ಬದ್ಧಾದರರುಳ್ಳವರಾಗಿರ್ಪ ಶ್ರೀಮತ್ ಮಹಾರಾಜರವರೂ, ಅವರ ಮಂತ್ರಾಲೋಚಕರೂ ಮೇಲೆ ತಿಳಿಸಲ್ಪಟ್ಟ ವಿಷಯಸ್ವರೂಪವಂ ಪರ್ಯಾಲೋಚಿಸಿ ಯುಕ್ತಾನುಸಾರ ಜರಿಗಿಸುವರೆಂದು ದೃಢವಾಗಿ ನಂಬುತ್ತೇವೆ.

ಶ್ರೀಮತ್ ಮಹಾರಾಣಿಯವರ ದಹನಾದಿ ಅಪರಕ್ರಿಯೆಗಳು ರಾಜಮರ್ಯಾದಾನುಗುಣವಾಗಿ ಜರಿಗಿದವಲ್ಲದೆ ಅವರ ಕಳೇಬರವು ದಹನಭೂಮಿಗೆ ಸಾಗಿಸಲ್ಪಡುವಾಗ್ಯೆ ವಯಸ್ಸಂಖ್ಯಾಸೂಚಕಗಳಾದ ೪೯ ತೋಪುಗಳು ಪುರನಿವಾಸಿಗಳ ಆರ್ತರವೋದ್ದೀಪನೋ ಎಂಬ ಭ್ರಮಿಸುವಂದದಿ ವಿಳಂಬದಿಂ ಹಾಕಲ್ಪಟ್ಟವು. ಆ ಕಾಲದಲ್ಲಿ ನಡೆದ ಇತರ ವಿಶೇಷಾಂಶಗಳಂ ಕುರಿತು ತತ್ಸವಿಸ್ತರವರ್ತಮಾನದ ವೈಸರು ವೃತ್ತಾಂತ ಭಾಷಾಮಣಿ ಪತ್ರಿಕೆಯು ಬರೆದಿರುತ ಅದ ಪೂರ್ತಿಯಂ ಈ ಪತ್ರಿಕೆಯ ಮತ್ತೊಂದು ಭಾಗದಲ್ಲಿ ಪ್ರಕಟಿಸಿರುತ್ತೇವೆಯಾಗಿ ಅದರಿಂದಲೇ ಸಕಲವೂ ವ್ಯಕ್ತವಾಗಬಹುದು.

## Occasional Notes.
## ನೈಮಿತ್ತಿಕ ವಿಷಯನ್ಯಾಸ.

ಈ ತಿಂಗಳ ೧೬ ನೇ ತಾರೀಖು ಬೃಹಸ್ಪತಿವಾರದ ದಿನ ಬಟ್ಟಿಯಾ ಸಂಸ್ಥಾನದ ಮಹಾರಾಜರವರು ದೀರ್ಘಕಾಲಿಕವಾದ ಉಬ್ಬಸರೋಗದಿಂದ ಕಲ್ಕತ್ತೆಯೊಳು ಮೃತಪಟ್ಟರೆಂಬದಾಗಿ ಅಲ್ಲಿಂದ ಬಂದ ತಂತಿ ವೃತ್ತಾಂತದ ಮೂಲಕ ತಿಳಿಯಬರುತಿದೆ.

ಮುಂಬೈ ಪ್ರೆಸಿಡೆನ್ಸಿ ಕಮಾಂಡರ್‌ಇನ್‌ಚೀಫರವರಾಗಿ ಈಚೆಗೆ ಮೊಕರರ್ಮಾಡಲ್ಪಟ್ಟ ಸರ್ ಜಾರ್ಜ ಹಸ್ನ್ ಸಾಹೇಬರವರು ತಮ್ಮ ಭಾರ್ಯೆಯವರೊಡನೆ ಕಳೆದ ವಾರದಲ್ಲಿ ಮುಂಬೈಗೆ ಬಂದು ಸೇರಿ ಅಲ್ಲಿನ ಗವರ್ನರವರ ಆತಿಥ್ಯವಂ ಕೈಗೊಳ್ಳುತಲಿದಾರೆ.

ಕಲ್ಕತ್ತೆಯಲ್ಲಿ ಇದುವರಿವಿಗೆ ಎರಡನೇ ಗ್ರೇಡ್ ಮ್ಯಾಜಿಸ್ಟ್ರೇಟ್ ಮತ್ತು ಕಲೆಕ್ಟರಾಗಿದ್ದ ಮೆ|| ರೋಮೇಶದತ್ತ, ಸಿ. ಐ. ಇ. ಯೆಂಬವರು, ಪೆನ್ಷನ್ ಮೇಲೆ ನಿವೃತ್ತರಾದ ಮೆ|| ಪವ್ವೆಲ್ ಯೆಂಬವರ ಸ್ಥಾನದಲ್ಲಿ ೧ನೇ ಗ್ರೇಡ್ ಮ್ಯಾಜಿಸ್ಟ್ರೇಟ್ ಮತ್ತು ಕಲೆಕ್ಟರ್ ಅಧಿಕಾರಕ್ಕೆ ಬಡ್ತಿ ಮಾಡಲ್ಪಟ್ಟರೆಂದು ತಿಳಿದು ಸಂತೋಷಿಸುತ್ತೇವೆ.

ಗಂಜಾಂ ಡಿಸ್ಟ್ರಿಕ್ಟ್ ಪರ್ವತ ಪ್ರದೇಶಗಳೊಳು ನರಬಲಿಕೊಡುವ ಮತ್ತು ಶೂನ್ಯಗಳು ಮಾಡುವ ಮಾಡಿಕೆಯು ಇನ್ನೂ ನೆಲೆಗೊಂಡಿರುವಂತೆ ತಿಳಿಯಬರುವದರಿಂದ ಅವುಗಳನ್ನು ತಪ್ಪಿಸಬೇಕಾದ ವಿಷಯದಲ್ಲಿ ನಿಗೇ ಕೊಡಬೇಕೆಂದು ಮದರಾಸ್ ಹೈಕೋರ್ಟ ಜಡ್ಜಿಗಳು ಈಚೆಗೆ ಒಂದು ಮೊಕದ್ದಮೆಯ ವಿಚಾರಣೆಕಾಲದಲ್ಲಿ ತಿಳಿಸಿದರು.

ಹೈದರಾಬಾದನಲ್ಲಿ ಪ್ರಸಿದ್ಧ ಕೋಠೀದಾರರ ಪೈಕಿ ಯೊಬ್ಬರಾದ ಶಿವಲಾಲ್ ಮೋತೀಲಾಲ್ ಎಂಬವರಿಂದ ತಮಗೆ ೪೦ ಲಕ್ಷ ರೂಪಾಯಿಗಳು ಬರಬೇಕೆಂದು ನವಾಬ್ ಸುಲ್ತಾನ್ ನವಾಜ್ ಜಂಗ್ ಬಹದೂರವರು ಅಲ್ಲಿನ ಹೈಕೋರ್ಟಿನಲ್ಲಿ ದಾವೆ ತಂದು ಅದು ವಿಚಾರಣೆಯೊಳಿರುತಿದೆಯಾಗಿ, ವಾದಿಯ ತರಫ್ ಸದರೀ ಮೊಕದ್ದಮೆಯಂ ನಡೆಸುವದಕ್ಕಾಗಿ ದಿನ ೧ಕ್ಕೆ ೧,೦೦೦ ರೂಪಾಯಿಗಳ ರುಸುಂ ನಿಷ್ಕರ್ಷೆಯಿಂದ ಬ್ಯಾರಿಸ್ಟರ್ ಮೆ|| ಅರಡ್ಲಿ ನಾರ್ಟನ್‌ಯವರು ನಿಯಮಿಸಲ್ಪಟ್ಟಿರುವಂತೆ ತಿಳಿಯಬರುತಿದೆ

ಈಚೆಗೆ ಒಂದು ದೇಶಭಾಷಾ ವೃತ್ತಾಂತ ಪತ್ರಿಕೆಯ ಯಜಮಾನ್ಯವು ಬದಲಾಯಿಸಿದ್ದರಿಂದ,ಸದರೀ ಪತ್ರಿಕೆಯ ಹೊಸಲೇಖಕರು ಇದರ ಮೂಲಕ ತಿಳಿಸಲ್ಪಡುವಂತೆ ಪ್ರಕಟಿಸಿರುತಾರೇನೆಂದರೆ: ಸಾಮಾನ್ಯವಾಗಿ ಗವರ್ನಮೆಂಟನವರವಿಷಯದಲ್ಲೂ ಮುಖ್ಯವಾಗಿ ಸರ್ಕಾರ್ ಅಧಿಕಾರಿಗಳ ವಿಷಯದಲ್ಲೂ ಪ್ರತ್ಯಕ್ಷವಾಗಿ ವಿರುದ್ಧಭಾವವಂತೋರ್ಪಡಿಸತಕ್ಕವರಲ್ಲವು. ಪರಂತು ವಿನಿಮಯಕ್ಕೆ ವಿಷಯವಲ್ಲದ ಮತ್ತು ಬಹುಕಾಲದಿಂನೆಲೆಗೊಂಡಿರುವ ಈ ದೇಶೀಯರ ಪದ್ಧತಿಗಳನ್ನೂ ವ್ಯವಹಾರಗಳನ್ನೂ ಬದಲಾಯಿಸಬೇಕೆಂದು ಪ್ರಯತ್ನ ಪಡುವ ಸಮಯಾಚಾರ ಮತ್ತು ಮತಾಚಾರ ಪರಿಷ್ಕರಣ ಪ್ರವರ್ತಕರಾದವರಿಗೆ ಪ್ರತ್ಯರ್ಥಿಗಳಾಗಿ ನಮ್ಮ ಕಾರ್ಯವಂ ನೆರವೇರಿಸತಕ್ಕವರು, ಎಂಬದು.

ಹೈಕೋರ್ಟನವರ ವ್ಯವಸ್ಥೆಯಬಗ್ಗೆ ಕಳುಹಿಸಲ್ಪಡುವ ಖೂನೀಮೊಕದ್ದಮೆಗಳಲ್ಲಿ ಸದರೀ ಕೋರ್ಟನವರು ಮಾಡುವ ಹುಕುಮನ್ನು ಜೆಯಿಲ್ ಸೂಪರಿಂಟೆಂಡೆಂಟುಗಳಿಗೆ ತಿಳಿಸುವದರಲ್ಲಿ ಅನೇಕಸಂದರ್ಭಗಳೊಳು ಕಾಲಾತೀತವಾಗುವದರಿಂದ, ಸದರೀ ಹುಕುಮನ್ನು ತಂತಿ ಮೂಲಕ ಆಯಾ ಜೆಯಿಲ್ ಸೂಪರಿಂಟೆಂಡೆಂಟುಗಳಿಗೆ

...ಹೊರಡುವದುಚಿತವೆಂದು ಜಡ್ಜಿಗಳ ಇನ್‌ಸ್ಪೆಕ್ಟರ್ ಜನರಲವರು ಗವರ್ನಮೆಂಟಿನವರ ಅಪ್ಪಣೆ ಪಡೆದು ಅವರು ಅದನ್ನು ಜುಡಿಷಿಯಲ್ ಕಮಿಟಿಯವರ ಅಭಿಪ್ರಾಯಕ್ಕೆ ಕಳುಹಿಸಿಕೊಟ್ಟರು. ಸದರೀ ಕಮಿಟಿಯವರು, ಅಂಥಾ ಹುಕುಂಗಳನ್ನು ಹಂತಿ ಮೂಲಕ ತಿಳಿಸುವದು ಅನುಕೂಲಕರವಾದುದು ಹೊರತಾಗಿ ಕ್ರಿಮಿನಲ್ ಪ್ರೊಸಿಜ್ಯುರ್ ಕೋಡಿನ ನಿಯಮಗಳಿಗೆ ವಿರುದ್ಧವಾದುದೇನಲ್ಲ, ಮ ತು ಕೆಳಕೋರ್ಟಿನವರು ಕೊಟ್ಟ ದಂಡನೆಯನ್ನು ಮೇಲ್ಕೋರ್ಟು ಬದಲಾಯಿಸಲಿ, ಅಥವಾ ತೀರ್ಪನ್ನು ಖುಲಾಸೆ ಮಾಡಲಿ, ಹೀಗೆ ರಿಫರ್ ಮಾಡಲ್ಪಟ್ಟ ಮೊಕದ್ದಮೆಗಳಿಗೆ ಸಂಬಂಧಪಟ್ಟ ಹುಕುಂಗಳೂ ಕೂಡಲೆ ಕಾಗದದ ಮೂಲಕ ಜಡ್ಜಿಯವರಿಗೆ ತಿಳಿಸಲ್ಪಟ್ಟು ಅವರು ಅವನ್ನು ೨೪ ಘಂಟೆಗಳೊಳಗಾಗಿ ಸದರೀ ಮೊಕದ್ದಮೆಗೆ ಸಂಬಂಧಪಟ್ಟ ಖೈದಿಗಳಿರುವ ಜೈಲ್ ಸೂಪರಿಂಟೆಂಡೆಂಟರಿಗೆ ತಿಳಿಸತಕ್ಕದ್ದೆಂಬ ವ್ಯವಸ್ಥೆ ಮಾಡಿರುವದಾಗ ಗವರ್ನಮೆಂಟಿಗೆ ರಿಪೋರ್ಟ್ ಮಾಡಿ ಅವನ್ನನುಸರಿಸಿ ಆಯಾ ಸೆಷನ್ಸ್ ಜಡ್ಜಿಗಳಿಗೆ ಸರ್ಕ್ಯುಲರ್ ಹುಕುಂ ಕೊಟ್ಟರು.

## LOCAL AND PROVINCIAL NEWS

### ಸ್ವದೇಶ ಮತ್ತು ತಾಲ್ಲೂಕು ಜಾತಿ ವೃತ್ತಾಂತಗಳು.

ಈ ಸಂಸ್ಥಾನದ ದಿವಾನರಾದ ಸರ್ ಕೆ. ಶೇಷಾದ್ರಿ ಅಯ್ಯರವರು ನಾಳೆ ಮದ್ರಾಸಿನ ಮಾರ್ಗವಾಗಿ ಊಟಿಗೆ ಪ್ರಯಾಣ ಮಾಡುತ್ತಾರೆಂದು ತಿಳಿಯಲಾಯಿತು.

ಬೀರೂರಿಂದ ೨೪ ಮೈಲಿಗಳ ಫಾಸಲೆಯಲ್ಲಿರುವ ಶಿವಮೊಗ್ಗೆಗೆ ರೈಲ್ವೆ ರಸ್ತೆ ಹಾಕುವ ಕಾರ್ಯವು ಶೀಘ್ರದಲ್ಲಿ ಪ್ರಾರಂಭಿಸಲ್ಪಡುವದೆಂತಲೂ, ಅದಕ್ಕೆ ಬೇಕಾದ ಸ್ಲೀಪರಗಳನ್ನು ಶೇಖರ ಮಾಡುವಂತೆ ಗವರ್ನಮೆಂಟಿನವರು ಹುಕುಂ ಕೊಟ್ಟಿರುತ್ತಾರೆಂತಲೂ ಕೇಳುತ್ತೇವೆ.

ಈ ಸಲದ ಎಂ. ಎ. ಪರೀಕ್ಷೆಯಲ್ಲಿ ಮಿ|| ಹೆಚ್. ವಿ. ನಂಜುಂಡಯ್ಯನವರು ಪ್ರಥಮ ಸಂಖ್ಯೆಗಳನ್ನು ತೆಗೆದುಕೊಂಡು ಪ್ಯಾಸಾಗಿರುತ್ತಾರಾದ್ದರಿಂದ ಇವರಿಗೆ ಮದ್ರಾಸ್ ಯೂನಿವರ್ಸಿಟಿ ಸಂಘದವರು ಕಾರ್ಮಿಕಲ್ ಪ್ರೈಜ್ ಎಂಬ ಬಹುಮಾನವನ್ನು ಮತ್ತು ಅರ್ನೋಲ್ಡ್ ಪ್ರೈಜ್ ಎಂಬ ಬಹುಮಾನವನ್ನೂ ಕೊಟ್ಟಿರುತ್ತಾರೆಂದು ತಿಳಿಸಲು ಸಂತೋಷಿಸುತ್ತೇವೆ.—ವ್ಯ. ಪ.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಇವರ ಮೇಲೆ ಸುಳ್ಳು ಸುದ್ದಿಗಳು ... ಈಗ್ಗೆ ಕೆಲವು ದಿವಸಗಳ ಕೆಳಗೆ ಅಮಲ್ದಾರ್ ಮತ್ತು ಡೆಪ್ಯುಟಿ ಅಮಲ್ದಾರರಿಗೆ ಅಧಿಕಾರಕ್ಕೆ ... ಹೆಸರನ್ನು ... ಎಲ್ಲಾ ... ಅವರಂತೆ ಅಲ್ಲಿನ ಆಫೀಸರರು ೩ ಜನ ... ಹೆಸರನ್ನು ... ಮೈಸೂರು ದೇಶೀಯ ... ಹೆಸರನ್ನು ಬರೆದಿದ್ದರಮೇಲೆ, ಇದಕ್ಕೆ ದಿವಾನರವರು ಎಕ್ಸ್‌ಪ್ಲೆನೇಷನ್ ಕೇಳಿರುವರೆಂದು ತಿಳಿಯಬರುತ್ತದೆ.

ಮೈಸೂರು ಡೆಪ್ಯುಟಿ ಕಮಿಷನರಾದ ಮಿ|| ರಂಗಸ್ವಾಮಿ ಅಯ್ಯಂಗಾರ್ಯರು ಮೊನ್ನೆ ಶನಿವಾರ ನಡೆದ ಮ್ಯುನಿಸಿಪಲ್ ಮೀಟಿಂಗಿನಲ್ಲಿ ಮ್ಯುನಿಸಿಪಲ್ ಮೀಟಿಂಗುಗಳು ಬಹಿರಂಗವಾದವುಗಳೇ ಸರಿ, ಈ ಮೀಟಿಂಗುಗಳಿಗೆ ಪತ್ರಿಕಾ ಬಾತ್ಮಿದಾರರುಗಳು ಬಂದು, ಇಲ್ಲಿ ನಡೆದ ಸಂಗತಿಗಳನ್ನು ಪತ್ರಿಕೆಗಳಲ್ಲಿ ಧಾರಾಳವಾಗಿ ಪ್ರಕಟಿಸಬಹುದು ಎಂಬದಾಗಿ ಕಮಿಷನರುಗಳಿಗೆ ತಮ್ಮ ಅಭಿಪ್ರಾಯವನ್ನು ತಿಳಿಯಪಡಿಸಿದ್ದಕ್ಕಾಗಿ ನಾವು ಬಹಳ ಸಂತೋಷಿಸುತ್ತೇವೆ.—ವ್ಯ. ಪ.

ಈ ಪ್ರಾಂತದಲ್ಲಿ ಜಲಾಭಾವದಿಂದ ಜನಗಳು ಅನುಭವಿಸುವ ಕಷ್ಟವು ನಿರ್ವಚನೀಯವಾದುದಾಗಿದೆ. ಇನ್‌ಫ್ಲುಯೆಂಜಾ ಯೆಂಬ ಜ್ವರ ರೋಗದಿಂ ಅನೇಕರು ಪೀಡಿತರಾಗಿಯೂ ಹೀನಸ್ಥಿತಿಯಲ್ಲೂ ಇದ್ದಾರೆ. ಅಪಾರ ಉದಾರ್ಯ ಗುಣಗಳು ಪ್ರಾಯಶಃ ಒಂದೇ ವಿಧವಾಗಿದೆ. ಬಿಸಿಲಿನ ತೀಕ್ಷ್ಣತ್ವವು ದಿನೇ ದಿನೇ ವೃದ್ಧಿಯಾಗುತಲಿದೆ. ಇನ್ನೂ ಹೀಗೂ ಹೀಗು ಬಂದು ಕಷ್ಟದ ಕಾಲ ದಾಕ್ಷಿಣ್ಯಾಧಿಕರಮಲ್ಲಿ ಕೊಳಕು ಜ್ವರ ದೊರೆಯಬಹುದು. ಅದು ತೀರಿದಮೇಲೆ ಮುಂಗಾರಿಗೆ ಪ್ರಾರಂಭವಾಗುವದರೊಳಗಾಗಿ ಈ ಪೇಟೆಯ ಜನರು ನೀರಿನ ವಿಷಯದಲ್ಲಿ ಅಪರಿಹಾರ್ಯವಾದ ಕಷ್ಟಕ್ಕೆ ಗುರಿಯಾಗಬಹುದೆಂದು ತೋರುತಿದೆ.

ಈಚೆಗೆ ಮೂರು ನಾಲ್ಕು ದಿನಗಳ ಹಿಂದೆ ಈ ಪ್ರಾಂತ ಹಲಸೂರು ಪೇಟೆಯಲ್ಲಿ ನಗರೇಶ್ವರ ದೇವಸ್ಥಾನದ ಬಳಿ ಒಬ್ಬ ವರ್ತಕನ ಮನೆಯೊಳು, ಈ ಪ್ರಾಂತದವರು ಕೆಲವರೂ ಮಿಲಿಟರಿ ಸ್ಟೇಷನಿಗೆ ಸೇರಿದವರೂ, ಮೈಸೂರಿನವರು ಕೆಲವರೂ ಸೇರಿ ಜೂಜಾಡುತಲಿದ್ದ ಸಂಗತಿ ಪೋಲೀಸಿನವರಿಗೆ ತಿಳಿಯಬಂದು ಕೂಡಲೆ ಅವರು ಅಲ್ಲಿಗೆ ಹೋಗಿ ಒಳಗೆ ಆಡುತಲಿದ್ದವರನ್ನೆಲ್ಲ ದಸ್ತಗಿರಿ ಮಾಡಿದರೆಂತಲೂ, ಈಗ ಅಪರಾಧಿಗಳು ಜಾಮೀನಮೇಲೆ ಬಿಡುಗಡೆ ಮಾಡಲ್ಪಟ್ಟಿರುವರೆಂತೆಯೂ ಕೇಳುತ್ತೇವೆ. ಈ ಜೂಜುಗಾರರಲ್ಲಿ ದುಮಾರು ೫೦೦ ರೂಪಾಯಿಗಳ ವರಿವಿಗ ಪುಷ್ಟಿಯಲ್ಲಿ ಸಿಕ್ಕಿದವೆಂದು ತಿಳಿಯಬರುತಿದೆ. ಇವರ ವಿಚಾರಣೆಯ ಫಲಿತಾಂಶವನ್ನು ಮುಂದೆ ತಿಳಿಸುತ್ತೇವೆ.

ಇಲ್ಲಿನ ಚೀಫ್ ಕೋರ್ಟ್ ಚೀಫ್ ಜಡ್ಜಿಯವರಾದ ಮಿ|| ಟಿ. ಆರ್. ಎ. ತಂಬುಚೆಟ್ಟಿಯರವರು ಸ್ವಾಕ ಖರ್ಚಿನಲ್ಲಿ ಒಂದು ಔಷಧಶಾಲೆಯನ್ನಿಟ್ಟು ಧರ್ಮಾರ್ಥವಾಗಿ ಬಡಜನರಿಗೆ ಔಷಧ ಕೊಡಿಸುತಲಿರುವದು ಪ್ರಸಿದ್ಧ ವಿಷಯವಾಗಿದೆಯಷ್ಟೆ. ಇಲ್ಲಿನ ವಿಲಿಯಂ ಸ್ಟೋರ್ಸ್ ಪಾರ್ಕಿನ ಬಳಿ ಇರುವ ಎರಂಗ್ ಚಪ್ಪಟರಿಗೆ ೧೦೦೦ ರೂಪಾಯಿಗಳು ಕೊಟ್ಟು, ಅದರ ಪೈಕಿ ಅರ್ಧಭಾಗಕ್ಕೆ ತಮ್ಮ ಹೆಸರಿನಲ್ಲಿ ಒಂದು ಔಷಧಶಾಲೆಯನ್ನು ಕಟ್ಟಿಸಿ ಹೊರಗಿನಿಂದ ಬರುವ ರೋಗಿಗಳಿಗೆ ಔಷಧ ಕೊಡುವಂತೆಯೂ, ಉಳಿದ ಅರ್ಧ ಪಾಲಿನಲ್ಲಿ ತಮ್ಮ ಭಾರ್ಯೆಯವರ ಹೆಸರಿನೊಳು, ಹೆಂಗಸರಿಗೂ ಮಕ್ಕಳಿಗೂ ಚಿಕಿತ್ಸೆ ಮಾಡುವದಕ್ಕೆ ಒಂದು ಕಟ್ಟಡವನ್ನು ಕಟ್ಟಿಸುವಂತೆಯು ಏರ್ಪಾಡು ಮಾಡಿರುತ್ತಾರೆಂದು ಕೇಳಿ ಅವರ ಧರ್ಮಚಿಂತೆ ಮತ್ತು ದಾನಗುಣಕ್ಕಾಗಿ ಬಹಳ ಸಂತೋಷಿಸುತ್ತೇವೆ.

ಕಳೆದ ತಿಂಗಳ ೩೧ನೇ ತಾರೀಖು ಶುಕ್ರವಾರ ದಿನದ ಸಾಯಂಕಾಲ ದುಮಾರು ನಾಲ್ಕು ಘಂಟೆಗೆ ಈ ಸಂಸ್ಥಾನದ ದಿವಾನರಾದ ಸರ್. ಕೆ. ಶೇಷಾದ್ರಿ ಅಯ್ಯರವರು ಪಬ್ಲಿಕ್ ಆಫೀಸ್ ಕಟ್ಟಡಕ್ಕೆ ಹೋಗಿ, ಅಲ್ಲಿನ ಪರಿಸ್ಥಿತಿ ಇಲಾಖೆಗಳನ್ನೂ ನೋಡಿ ವಾಪಸು ದಯಮಾಡಿದರು. ಇದಕ್ಕೆ ಉಂಟಾದ ಕಾರಣವಂ ವಿಚಾರಿಸಲಾಗಿ ಯಾವಯಾವ ಇಲಾಖೆಗಳಿಗೆ ಸ್ಥಳ ಸಂಕೋಚ ವುಂಟಾಗಿದೆಯೋ ಅವುಗಳಿಗೆ ಹೊಸ ಕಟ್ಟಡಗಳಂ ಕಟ್ಟಿಸುವದರ ಮೂಲಕ ಸ್ಥಳ ವಿಷಯದಲ್ಲಿ ಅನುಕೂಲ್ಯವಂ ಕಲ್ಪಿಸಬೇಕೆಂಬ ಉದ್ದೇಶದೊಡನೆ ಖುದ್ದು ಪರಾಮರಿಸುವದಕ್ಕಾಗಿ ಬಂದಿದ್ದರೆಂದು ಕೆಲವರೂ, ಯಾವ ಯಾವ ಇಲಾಖೆಗಳನ್ನು ಮೈಸೂರಿಗೆ ವರ್ಗ ಮಾಡಬಹುದೆಂದು ನೋಡುವದಕ್ಕಾಗಿ ಬಂದಿದ್ದರೆಂದು ಬೇರೆ ಕೆಲವರೂ ಹೇಳುತ್ತಾರೆ. ಇದರ ನಿಜಸ್ಥಿತಿಯಂ ತಿಳಿಯಲು ಸಾಧ್ಯವಲ್ಲವು, ಪರಂತು ಕಾರ್ಯತಃ ಯೆಲ್ಲವು ಕ್ಷಿಪ್ರದಲ್ಲಿ ಹೊರಗಾಗದೆ ಹೋಗಲಾರದು.

ನಮ್ಮ ನೆಲಮಂಗಲದ ಬಾತ್ಮೀದಾರರಮೂಲಕ ತಿಳಿಯಬರುವದೇನೆಂದರೆ:—ಈ ವಿಜಯನಾಮ ಸಂವತ್ಸರದ ಚೈತ್ರಬಹುಳ ೬ ಭಾನುವಾರಕ್ಕೆ ಸರಿಯಾದ ಯೇಪ್ರಿಲ್ ೯ನೇ ತಾರೀಖಿನಲ್ಲಿ ಇಲ್ಲಿನ ಶ್ರೀನಿವಾಸ ದೇವರಿಗೆ ರಥೋತ್ಸವ ನಡೆಯುವದರಿಂದ ಇದೇ ಯೇಪ್ರಿಲ್ ೭ನೇ ತಾರೀಖಿನಲ್ಲಿ ಉತ್ಸವ ಪ್ರಾರಂಭವಾಗಿ, ೧೩ನೇ ತಾರೀಖ್ ವರಿವಿಗೆ ಕ್ರಮವಾಗಿ ವಿಶಿಷ್ಟ ಉತ್ಸವಗಳೂ ನಡೆಯಬರುತ್ತೆ. ಈ ಮಹೋತ್ಸವಕ್ಕೆ ಪದ್ಧತಿ ಪ್ರಕಾರ ವಾದ್ಯಗಾರರೂ ತಾಳಿಯವರು ಮೊದಲಾದವರೂ ಕರೆಯಿಸಲ್ಪಡುವವರಲ್ಲದೆ, ಬಾಣವಿನೋದಗಳು ನಡೆಯುವದಕ್ಕೆ ತಕ್ಕ ಯೇರ್ಪಾಡುಗಳು ಮಾಡಲ್ಪಟ್ಟಿದೆ. ಈ ದಫೆ ಇಲ್ಲಿನ ಶ್ರೀನಿವಾಸದೇವರ ರಥೋತ್ಸವವನ್ನೂ, ದೇವಸ್ಥಾನವನ್ನೂ ಅದರ ಪ್ರಾಕಾರದಲ್ಲಿರುವ ಮನೆಗಳನ್ನೂ ಖುದ್ದು ನೋಡುವದಕ್ಕಾಗಿ ಮುಜರಾಯಿ ಸೂಪರಿಂಟೆಂಡೆಂಟವರು ತಿಬಬೂರು ಪ್ರಾಂತಕ್ಕೆ ಸವಾರಿ ದಯಮಾಡಿಸಬಹುದಾಗಿ ಕಾಣುತ್ತೆ ಎಂಬದು.

## THE MYSORE GAZETTE.

### ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜ ರಾಜಶ್ರೀ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರುಗಳು.

ನಂ|| ೧೫೬೧೫-೧. ೩೨೧೦, ತಾ|| ೨೦ನೇ ಮಾರ್ಚಿ ೧೮೯೩ —೧೮೯೩ನೇ ಇಸವಿ ಮಾರ್ಚಿ ೨ನೇ ತಾರೀಖ್‌ನೊಳು ಹರಿಹರದಲ್ಲಿ, ೩ನೇ ಕ್ಲಾಸ್ ಪೋಸ್ಟ್ ಮತ್ತು ಟೆಲಿಗ್ರಾಫ್ ಆಫೀಸ್‌ಗಳು ಸ್ಥಾಪಿಸಲ್ಪಟ್ಟವು.

ನಂ|| ೧೫೫೬೫-೧. ೩೩೩೮.—೧೮೯೩ನೇ ಇಸವಿ ಫೆಬ್ರವರಿ ೧೮ನೇ ತಾರೀಖಿನ ಪ್ರಾತಃಕಾಲದಲ್ಲಿ, ಕೋಲಾರ ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮಿಷನರ ಆಫೀಸ್ ಚಾರ್ಜನ್ನು ಅಸಿಸ್ಟೆಂಟ್ ಕಮಿಷನರ್ ಮಿ. ಎ. ಕುಪ್ಪಸ್ವಾಮಿ ಮುದಲಿಯಾರರವರು ಕೊಟ್ಟು, ಅಸಿಸ್ಟೆಂಟ್ ಕಮಿಷನರ್ ಮಿ. ಎನ್. ನಾರಣ್ಣಯ್ಯಂಗಾರ್ಯರವರು ತೆಗೆದುಕೊಂಡಿರುತ್ತಾರೆ.

ನಂ|| ೧೫೮೦೮—೧ ೩೮೦೮, ತಾ|| ೨೦ ನೇ ಮಾರ್ಚಿ ೧೮೯೩ — ನೀರಾವರೀ ಭಾವಿಗಳಿಗೆ ಸೇರಿದ ಸ್ಪೆಷಲ್ ಕೆಲಸದಮೇಲಿರುವ ೧ ನೇ ತರಗತಿ ಅಸಿಸ್ಟೆಂಟ್ ಕಮಿಷನರ್ ಮಿ|| ಬಿ. ಜೆ. ಕೃಷ್ಣಯ್ಯಂಗಾರ್ಯರವರು, ಮೃತಪಟ್ಟ ಮಿ. ಸೈಯ್ಯದ್ ನಸೀರುದ್ದೀನ್ ಯವರಿಗೆ ಬದಲು, ಬೆಂಗಳೂರು ಡಿಸ್ಟ್ರಿಕ್ಟ್ ಕ್ಲೋಸ್‌ಪೇಟೆ ಸಬ್‌ಡಿವಿಜನ್ ಆಫೀಸರಾಗಿರತಕ್ಕದ್ದು. ಪರಂತು ಮತ್ತೊಂದು ಹುಕುಂ ಕೊಡಲ್ಪಡುವತನಕ ಮೇಲಿನಂತೆ ಸ್ಪೆಷಲ್ ಡ್ಯೂಟಿಯಮೇಲಿರತಕ್ಕದ್ದು.

ಮಿ|| ಸಿ. ವಿ. ರಾಘವಾಚಾರ್ಲು ಯವರು, (ತತ್ಕಾಲದಲ್ಲಿ ೧ನೇ ಗ್ರೇಡ್ ಅಸಿಸ್ಟೆಂಟ್ ಕಮಿಷನರಾಗಿರುವ) ಮಿ|| ಬಿ. ಜೆ. ಕೃಷ್ಣಯ್ಯಂಗಾರ್ಯರವರು ಸ್ಪೆಷಲ್ ಡ್ಯೂಟಿಯ ಮೇಲಿರುವ ತನಕ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಕ್ಲೋಸ್‌ಪೇಟೆ ಸಬ್ ಡಿವಿಜನ್ ಆಫೀಸರಾಗಿ ಕೆಲಸ ನೋಡತಕ್ಕದ್ದು.

ನಂ|| ೧೫೮೦೮—೧. ೩೮೨೨ —ಸಾಗರ ಸಬ್ ಡಿವಿಜನ್ ಆಫೀಸರಾದ ಮಿ|| ಡಿ. ನಾಮಕಲ್ ರಾಯರವರು, ೧೮೯೩ ನೇ ಇಸವಿ ಮಾರ್ಚಿ ಗುರ್ತೀ ತಾರೀಖ್ ಮೊದಲು ೨ನೇ ಗ್ರೇಡಿನಿಂದ ೧ನೇ ಗ್ರೇಡ್ ಸಬ್ ಡಿವಿಜನ್ ಆಫೀಸರ್ ಕೆಲಸಕ್ಕೆ ಬಡ್ತಿ ಮಾಡಲ್ಪಟ್ಟಿರುತ್ತಾರೆ.

ಆಯಾ ತರಗತಿಗಳಲ್ಲಿ ಈಗ ಇರುವ ಖಾಲೀಗಳನ್ನು ಭರ್ತಿ ಮಾಡುವದಕ್ಕಾಗಿ, ೧೮೯೩ ನೇ ಇಸವಿ ಮಾರ್ಚಿ ಗುರ್ತೀ ತಾರೀಖ್ ಮೊದಲು ಜಾರೀಯೊಳು ಬರುವಂತೆಯೂ, ಇತರ ಇಲಾಖೆಗಳಲ್ಲಿ ಕೆಲಸ ನೋಡುತಲಿರುವಂತವರ ಈಗಿನ ಕೆಲಸಗಳಿಗೆ ಕುಂದಕವಿಲ್ಲದಂತೆಯೂ, ಇದರಡಿ ಬರುವ ಅಸಿಸ್ಟೆಂಟ್ ಕಮಿಷನರುಗಳ ಬಡ್ತಿಗಳು ಹುಕುಂ ಮಾಡಲ್ಪಟ್ಟವುತಿವೆ—

ಮಿ|| ಡಿ. ಅಪ್ಪುರಾವ್, (ತತ್ಕಾಲದಲ್ಲಿ ೧ ನೇ ತರಗತಿ) ೧ ನೇ ತರಗತಿಯಲ್ಲಿ ಕಾಯಂ ಮಾಡಲ್ಪಟ್ಟಿರುತ್ತಾರೆ.

| | |
|---|---|
| ಮಿ|| ಟಿ. ಕೃಷ್ಣಯ್ಯಂಗಾರ್<br>„ ಜಿ. ರಘುನಾಥರಾವ್<br>„ ಕೆ. ನಾಗೇಶರಾವ್ | ೨ರಿಂದ ೧ನೇ ತರಗತಿಗೆ |
| „ ಎಸ್. ಆರ್. ಸುಬ್ಬಾಯರ್<br>„ ಎಚ್. ವಿ. ನಂಜುಂಡಯ್ಯ<br>„ ಎಸ್. ವೈದ್ಯನಾಥ ಅಯ್ಯರ್ | ೩ ರಿಂದ ೨ನೇ ತರಗತಿಗೆ |
| „ ಜೆ. ಡಬ್ಲ್ಯು. ಸ್ಮಿತ್. | ೪ ರಿಂದ ೩ನೇ ತರಗತಿಗೆ |

ನಂ|| ೧೫೯೬೭—೧ ೫೨೮೫ — ಮೈಸೂರು ಸರ್ವಿಸ್ ರೆಗ್ಯುಲೇಷನ್ ೧೩೭ ನೇ ಆರ್ಟಿಕಲ್ ಅನುಸರಿಸಿ, ಚಿಕ್ಕನಾಯಕನಹಳ್ಳಿ ಅಮಲ್ದಾರ್ ಮಹಮ್ಮದ್ ರಜಾಖಾನರು, ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು ೧೦ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ|| ೧೫೬೬೭-೧ ೩೭೫೯.—ಕ್ರಿಮಿನಲ್ ಪ್ರೊಸಿಜ್ಯುರ್ ಕೋಡ್ ೩೭ ನೇ ಸೆಕ್ಷನ್ ಅನುಸರಿಸಿ, ಕೋಲಾರ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ವ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮಿ. ನರಣಯ್ಯಂಗಾರ್ಯರವರು, ಜಿಲ್ಲಾ ಕೋರ್ಟ್ ೨ನೇ ಸೆಕ್ಷನ್ ಅನುಸರಿಸಿ, ೨ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರುಗಳಿಂದ ವಿಧಿಸಲ್ಪಡುವ ದಂಡನೆಯ ಮೇಲೆ ಅಪೀಲ್ ಹಿಡಿಯುವ ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ನಂ|| ೧೫೬೬೮—೧ ೩೩೬೦ —೧೮೯೩ ನೇ ಇಸವಿ ಮಾರ್ಚಿ ೬ ನೇ ತಾರೀಖು ಮಧ್ಯಾಹ್ನದಲ್ಲಿ, ಚಿತ್ರದುರ್ಗ ಡಿಸ್ಟ್ರಿಕ್ಟ್ ಟ್ರೆಜರೀ ಚಾರ್ಜನ್ನು ಅಸಿಸ್ಟೆಂಟ್ ಕಮಿಷನರ್ ಮಿ|| ಕಮಾಲುದ್ದೀನ್ ಅಲ್ಲೀಖಾನರು ಕೊಟ್ಟು ಜನರಲ್ ಅಸಿಸ್ಟೆಂಟ್ ಕಮಿಷನರ್ ಮಿ|| ಎನ್. ವೆಂಕಟ್ರಾಯರವರು ತೆಗೆದುಕೊಂಡಿರುತ್ತಾರೆ.

ನಂ|| ೧೫೭೫೭—೧ ೩೨೮೩.— ಮೈಸೂರು ಸರ್ವಿಸ್ ರೆಗ್ಯುಲೇಷನ್ ೧೭೧ ನೇ ಆರ್ಟಿಕಲ್ ಅನುಸರಿಸಿ, ಸಬ್ ಅಸಿಸ್ಟೆಂಟ್ ಸರ್ಜನ್ ಎಸ್. ಕೆ. ಹನುಮಂತರಾಯರವರು ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು ೫ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ|| ೧೫೯೩೭—೧. ೯. ೨೦೯—೯೭, ತಾ|| ೨೩ ನೇ ಮಾರ್ಚಿ ೧೮೯೩ —ಹಾಸನ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮಿ|| ಪಿ. ಎನ್. ಪೂರ್ಣಯ್ಯನವರು ೧೮೯೩ ನೇ ಇಸವಿ ಏಪ್ರಿಲ್ ಗುರ್ತೀ ತಾರೀಖ್ ಮೊದಲು ಅಥವಾ ಅವರು ಉಪಯೋಗಿಸಿಕೊಳ್ಳಬಹುದಾದ ತಾರೀಖ್ ಮೊದಲು ೧ ವಾರದ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಆಫೀಸರಾದ ಮಿ|| ಮಹಮ್ಮದಲ್ಲಿ ಯವರು ಮಿ|| ಪೂರ್ಣಯ್ಯನವರು ರಜಾಮೇಲೆ ಗೈರುಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ, ಹಾಸನ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ವ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿ ಕೆಲಸನೋಡುವಂತೆ ನೇಮಕರಾಗ್ಮಾಡಲ್ಪಟ್ಟಿರುತ್ತಾರೆ.

ನಂ|| ೧೫೯೩೫—೧ ೩೫೩೦.—ಮೈಸೂರು ಸರ್ವಿಸ್ ರೆಗ್ಯುಲೇಷನ್ ೧೮೮ನೇ ಆರ್ಟಿಕಲ್ ಅನುಸರಿಸಿ, ಮೂಡಿಗೆರೆ ತಾಲ್ಲೂಕ್ ಅಮಲ್ದಾರ್ ಸಿ. ಕಾಮಯ್ಯಂಗಾರ್ಯ ಅವರು ಉಪಯೋಗಿಸಿಕೊಳ್ಳಬಹುದಾದ ತಾರೀಖ್‌ಲಾಗಾಯಿತು ೨ ತಿಂಗಳು ೨೫ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

೨. ಬೇಲೂರು ಡೆಪ್ಯುಟಿ ಅಮಲ್ದಾರ್ ಎನ್. ಅಳಸಿಂಗ್ರಯ್ಯಂಗಾರ್ಯರವರು, ಸಿ. ಕಾಮಯ್ಯಂಗಾರ್ಯ ರಜಾಮೇಲೆ ಗೈರುಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಮೂಡಿಗೆರೆ ತಾಲ್ಲೂಕ್ ಅಮಲ್ದಾರ್ ವ ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸನೋಡುವಂತೆ ನೇಮಕರಾಗ್ಮಾಡಲ್ಪಟ್ಟಿರುತ್ತಾರೆ.

೩. ಕಡೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ ಆಫೀಸ್ ರೆವಿನ್ಯೂ ಹೆಡ್ ಅಕೌಂಟೆಂಟರಾದ ಎಚ್. ಕೇಶವಾಚಾರ್ಯರವರು, ಎನ್. ಅಳಸಿಂಗ್ರಯ್ಯಂಗಾರ್ಯರವರು ಬೇರೆ ಕೆಲಸ ನೋಡುವಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ಬೇಲೂರು ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ ವ ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡುವಂತೆ ನೇಮಕರಾಗ್ಮಾಡಲ್ಪಟ್ಟಿರುತ್ತಾರೆ.

ನಂ|| ೧೫೯೩೩—೧ ೩೫೩೦ — ಮೈಸೂರು ಸರ್ವಿಸ್ ರೆಗ್ಯುಲೇಷನ್ ೧೮೮ ನೇ ಆರ್ಟಿಕಲ್ ಅನುಸರಿಸಿ, ಚಿತ್ರದುರ್ಗ ತಾಲ್ಲೂಕ್ ಅಮಲ್ದಾರ್ ಗುಂಡಪ್ಪನವರು, ೧೮೯೩ ನೇ ಇಸವಿ ಯೇಪ್ರಿಲ್ ಗುರ್ತೀ ತಾರೀಖ್ ಮೊದಲು ಅಥವಾ ಅವರು ಉಪಯೋಗಿಸಿಕೊಳ್ಳಬಹುದಾದ ಬೇರೆ ಯಾವುದು ತಾರೀಖ್ ಮೊದಲು ಆರು ವಾರಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

೨. ಹರಿಹರದ ಡೆಪ್ಯುಟಿ ಅಮಲ್ದಾರ್ ಎಸ್. ಕೃಷ್ಣಯ್ಯರವರು, ಗುಂಡಪ್ಪನವರು ರಜಾಮೇಲೆ ಗೈರುಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ಚಿತ್ರದುರ್ಗ ತಾಲ್ಲೂಕ್ ಅಮಲ್ದಾರ್ ವ ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡುವಂತೆ ನೇಮಕರಾಗ್ಮಾಡಲ್ಪಟ್ಟಿರುತ್ತಾರೆ.

೩ ಚಿತ್ರದುರ್ಗದ ಡೆಪ್ಯುಟಿ ಕಮಿಷನರ ಆಫೀಸ್ ಜ್ಯುಡಿಷಲ್ ಹೆಡ್ ಮುನಿಷಿ ಕೇಶವಯ್ಯನವರು, ಎಸ್. ಕೃಷ್ಣಯ್ಯನವರು ಬೇರೆ ಕೆಲಸದಮೇಲೆ ಗೈರ್ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ಹರಿಹರದ ಡೆಪ್ಯುಟಿ ಅಮಲ್ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡುವಂತೆ ನೇಮಕರಮಾಡಲ್ಪಟ್ಟಿರುತ್ತಾರೆ.

ಮರಹಮ್ಮತ್ ಇಲಾಖಾ.
ಇಸ್ತಿಹಾರ್ನಾಮಾ.

೨೮ ನೇ ಮಾರ್ಚಿ ೧೮೯೩.

ಮೈಸೂರು ಮರಹಮತ್ ಇಲಾಖಾ ಇಂಜಿನಿಯರಿಂಗ್ ಲವಾಜಮೆಯಲ್ಲಿ, ನಮೂದು ಮಾಡಲ್ಪಟ್ಟಿರುವ ತಾರೀಖ್ ಮೊದಲು ಜಾರೀಗೆ ಬರುವಂತೆ, ಇದರಡಿ ಬರುವ ಬದ್ಲಿಗಳು ಮಾಡಲ್ಪಟ್ಟಿರುತಿವೆ —

ಮೈಸೂರು ಡಿವಿಜನ್ ಅಪ್ರೆಂಟಿಸ್ ಇಂಜಿನಿಯರಾದ ಮೆ|| ಸಿ. ಮಾಧವರಾವ್, ಎ. ಸಿ. ಇ. ಯವರು ೧೮೯೩ ನೇ ಇಸವಿ ಜನವರಿ ೧೬ನೇ ತಾರೀಖ್ ಮೊದಲು, ಖಾಯಮಾಗಿ ೩ ನೇ ಗ್ರೇಡ ಅಸಿಸ್ಟೆಂಟ ಇಂಜಿನಿಯರ್ ಕೆಲಸಕ್ಕೆ.

ಕೋಲಾರ ಡಿವಿಜನ್ ೨ ನೇ ಗ್ರೇಡ್ ಅಸಿಸ್ಟೆಂಟ ಇಂಜಿನಿಯರ್ ಮೆ|| ಕೆ. ಪ್ರಹ್ಲಾದರಾಯರವರು, ಸನ್ ೧೮೯೩ ನೇ ಇಸವಿ ಮಾರ್ಚಿ ೧೩ ನೇ ತಾರೀಖ್ ಮೊದಲು ತಾತ್ಕಾಲಿಕವಾಗಿ ೧ ನೇ ಗ್ರೇಡ್ ಅಸಿಸ್ಟೆಂಟ ಇಂಜಿನಿಯರ್ ಕೆಲಸಕ್ಕೆ.

## EXTRACTS

### ಮಹಾಮಾತುಶ್ರೀಗಳಾದ ಸೀತಾವಿಲಾಸದಮ್ಮನವರು.

ಮಹಾಮಾತುಶ್ರೀಗಳಾದ ಸೀತಾವಿಲಾಸದ ದೇವಾಜಮ್ಮಣ್ಣಿಯವರು ನಿನ್ನೆ ಭಾನುವಾರದ ದಿವಸ ರಾತ್ರಿ ೧ ಘಂಟೆ ಸಮಯದಲ್ಲಿ ಸ್ವರ್ಗಾರೋಹಣ ಮಾಡಿದರೆಂಬ ಸಮಾಚಾರವನ್ನು ಈ ಬಲದ ಪತ್ರಿಕೆಯಿಂದ ತಿಳಿಸಲು ವಿಷಾದಿಸುತ್ತೇವೆ. ಇವರು ತುರುವೇಕೆರೆ ಮೆ|| ವೀರರಾಜೇಅರಸಿನವರ ಮಕ್ಕಳು. ರಾಜಮಾತೆಯರಾದ ದೇವಾಜಮ್ಮಣ್ಣಿಯವರು ೧೮೦೪ನೇ ಇಸವಿ ನವೆಂಬರ್ ೨೩ನೇ ತಾರೀಖಿಗೆ ಸಲ್ಲುವ ರಕ್ತಾಕ್ಷಿ ಸಂವತ್ಸರದ ಕಾರ್ತೀಕಬಹುಳ ೬ ಗುರುವಾರದ ದಿವಸ ತುರುವೆಕೆರೆಯಲ್ಲಿ ಜನಿಸಿದರು. ೧೮೧೪ನೇ ಇಸವಿ ಜನವರಿ ೨೧ನೇ ತಾರೀಖಿಗೆ ಸಲ್ಲುವ ವಿಜಯ ಸಂವತ್ಸರದ ಮಾಘಶುದ್ಧ ೬ ಸೋಮವಾರದ ದಿವಸ ಲೇಟ್ ಮಹಾರಾಜರವರಾದ ಶ್ರೀ ಕೃಷ್ಣರಾಜವಡೆಯರವರನ್ನು ವಿವಾಹಮಾಡಿಕೊಂಡರು. ವಿವಾಹವಾದನಂತರ ಶ್ರೀ ಕೃಷ್ಣರಾಜವಡೆಯರವರು ಸೀತಾವಿಲಾಸವೆಂಬ ಅಭಿಧಾನದ ಒಂದು ವಿಲಾಸವನ್ನು ಏರ್ಪಡುಮಾಡಿ ಅಲ್ಲಿ ಇವರು ಇರುವಂತೆ ಏರ್ಪಾಡು ಮಾಡಿದ್ದರು. ೧೮೬೮ನೇ ಇಸವಿ ಮಾರ್ಚಿ ೨೭ನೇ ತಾರೀಖಿಗೆ ಸರಿಯಾದ ವಿಭವಸಂವತ್ಸರದ ಚೈತ್ರಶುದ್ಧ ೪ ದಿವಸ ಶ್ರೀ ಕೃಷ್ಣರಾಜವಡೆಯರವರು ಸ್ವರ್ಗಾರೋಹಣ ಮಾಡಿದಮೇಲೆ ಇವರು ಇಹಲೋಕದ ಸುಖವನ್ನೆಲ್ಲ ತ್ಯಜಿಸಿ ಪಾರಲೌಕಿಕ ಸಂಬಂಧವಾದ ವೇದಾಂತಕಾಲಕ್ಷೇಪದಲ್ಲಿ ನಿರತರಾಗಿದ್ದರು. ಮಾ|| ದೇವಾಜಮ್ಮಣ್ಣಿಯವರು ಸಂಸ್ಕೃತ, ಮತ್ತು ಕನ್ನಡ, ಮಹಾರಾಷ್ಟ್ರ ಭಾಷೆಗಳಲ್ಲಿ ವಿಶೇಷ ಪಾಂಡಿತ್ಯವನ್ನು ಸಂಪಾದಿಸಿದ್ದರು. ಇವರಿಗೆ ವೇದಾಂತದಲ್ಲಿ ತುಂಬಾ ಪರಿಶ್ರಮವಿತ್ತು. ಇಂಥ ಪಾಂಡಿತ್ಯ ಉಳ್ಳವರು ಪ್ರಾಯಶಃ ಈ ಇಂಡ್ಯಾದೇಶದ ರಾಜವಂಶದ ಸ್ತ್ರೀಯರಲ್ಲಿ ಯಾರೂ ಇರಲಿಲ್ಲವೆಂತ ಎಣಿಸಬಹುದು. ಇವರ ವಿಯೋಗದಿಂದ ಶ್ರೀಮನ್ಮಹಾರಾಜರವರಿಗೆ ಮಾತ್ರವಲ್ಲದೆ ಈ ಸಂಸ್ಥಾನ ಪ್ರಜೆಗಳಿಗೆಲ್ಲಾ ವಿಶೇಷವ್ಯಸನವುಂಟಾಗಿದೆ. ಇವರು ಧರ್ಮಕ್ಕೆ ಖರ್ಚಿಗೋಸ್ಕರ ಬರುತ್ತಲಿದ್ದ ದ್ರವ್ಯವನ್ನೆಲ್ಲಾ ಪರೋಪಕಾರಾರ್ಥವಾಗಿಯೇ ವ್ಯಯಮಾಡುತ್ತ ಸುಮಾರು ೫೦೦-೬೦೦ ಕುಟುಂಬಸಂರಕ್ಷಣೆ ಮಾಡಿಸುತ್ತಿದ್ದರು. ಇವರು ಸಾಯುವದಕ್ಕೆ ೩ ದಿವಸಗಳಿಗೆ ಮುಂಚೆಯೇ ತಮ್ಮ ಶರೀರ ನಿಲ್ಲುವದಿಲ್ಲವೆಂದು ತಿಳಿದುಕೊಂಡು ಶ್ರೀಮನ್ಮಹಾರಾಜರವರನ್ನೂ ಮಹಾರಾಣಿಯವರನ್ನೂ ಬಾರಿಬಾರಿಗೂ ಕರೆಸಿಕೊಂಡು ಆಗಾಗ್ಗೆ ತೋರುತಲಿದ್ದ ನೀತಿಗಳನ್ನೆಲ್ಲ ಉಪದೇಶಮಾಡುತ್ತಿದ್ದುದಲ್ಲದೆ, ಶುಕ್ರವಾರದ ದಿವಸ ಶ್ರೀ ಪರಕಾಲ ಗುರುಗಳವರಿಂದ ಮಂತ್ರೋಪದೇಶವನ್ನು ಪಡೆದುಕೊಂಡು ಗುರುಪಾದತೀರ್ಥವನ್ನು ಸೇವಿಸಿ ಗುರೂಪದೇಶಕ್ರಮವನ್ನು ಬಿಡದೆ ದೇವರಧ್ಯಾನ ಮಾಡುತಿದ್ದರು. ಭಾನುವಾರದ ದಿವಸ ಸಂಧ್ಯಾಕಾಲದಲ್ಲಿ ತಮ್ಮ ಹೆಸರಿನಮೇಲೆ ಶ್ರೀಮನ್ಮಹಾರಾಜರವರು ಕಟ್ಟಿಸುತ್ತಿದ್ದ ಅಗ್ರಹಾರದ ಮನೆಗಳ ಪೈಕಿ ತಮ್ಮನ್ನು ಆಶ್ರಯಿಸಿಕೊಂಡಿದ್ದವರ ಪೈಕಿ ೧೪ ಜನ ಬ್ರಾಹ್ಮಣರಿಗೆ ಧಾರೆ ಎರೆದರು. ತಿರುವಾಯ ಶ್ರೀಮನ್ಮಹಾರಾಜರವರನ್ನು ಕೇಳಿ ಅವರು ಶಿಫಾರಸ್ ಮಾಡಿದ ೩ ಜನ ಬ್ರಾಹ್ಮಣರಿಗೆ ಧಾರೆ ಎರೆದರು. ಶ್ರೀಮನ್ಮಹಾರಾಜರವರು ಮಾತುಶ್ರೀಗಳ ಕೋರಿಕೆಯಂತೆ ಒಂದು ದೇವಸ್ಥಾನವನ್ನು ಕಟ್ಟಿಸುವದಲ್ಲದೆ ಅಗ್ರಹಾರದ ಬ್ರಾಹ್ಮಣರಿಗೂ ವೃತ್ತಿಗಳನ್ನು ಕಲ್ಪಿಸಿಕೊಡುವದಾಗಿ ಅರಿಕೆಮಾಡಿ ಮಾತೃವಿಯೋಗ ಉಂಟಾಗ ಬಾರದಲ್ಲಾ ಎಂಬದಾಗಿ ತುಂಬಾ ವ್ಯಥೆಪಡುತ್ತಲಿದ್ದರು. ಹನ್ನೊಂದು ಘಂಟೆಯ ಮೇಲೆ ಮಾತು ತಪ್ಪಿ, ೧ ಘಂಟೆಯಲ್ಲಿ ಸ್ವರ್ಗಾರೋಹಣ ಮಾಡಿದರು. ಸೋಮವಾರ ಪ್ರಾತಃಕಾಲದಲ್ಲಿ ಕಟ್ಟಳೆಪ್ರಕಾರ ಅರಮನೆ ಅಧಿಕಾರರು, ಕುದ್ರೇದಾರರಿಗೂ ಇನ್ನೂ ಇತರ ದೊಡ್ಡಮನುಷ್ಯರಿಗೂ ಈ ಸಮಾಚಾರವನ್ನು ಹೇಳಿ ಕಳುಹಿಸಲು, ಎಲ್ಲಾ ಅಧಿಕಾರಿಗಳೂ, ಪಟ್ಟಣದಲ್ಲಿ ಹಿಂದು ಮತ್ತು ಮಹಮ್ಮದೀಯರು ಇವರೇ ಆದಿಯಾಗಿ ಈ ಮಹಾಮಾತುಶ್ರೀಯವರ ವಿಯೋಗದಿಂದ ಅನುತಾಪಪಡುತ ನೆರೆದರು. ೮ ಘಂಟೆ ಸಮಯದಲ್ಲಿ ಅಲಂಕಾರಮಾಡಿ ಪಲ್ಲಕ್ಕಿಯಲ್ಲಿ ಮಲಗಿಸಿ ಉಚಿತವಾದ ರಾಜೋಪಚಾರಗಳಿಂದಲೂ, ಅಶ್ವಪದಾತಿಗಳಿಂದಲೂ, ಲೋಕರಿಗೆ ಪ್ರಸಿದ್ಧವಾದ ವಾದ್ಯಗಳಿಂದಲೂ ಕೋಟೆಯಿಂದ ಹೊರಡಿಸಿ ಉತ್ಸವದಿಂದ ಪಶ್ಚಿಮ ಕೋಟೆಗೆ ಸೇರಿದರು. ಮಹಾರಾಜರು ಮಾತೃಕಾರ್ಯದಲ್ಲಿ ನಿರತರಾಗಿ ಬಹಳ ವ್ಯಸನದಿಂದ ತಾಂಡವ ಮಾಡಿದರು. ಪುರವಾಸಿಗಳೆಲ್ಲರೂ ಸಂಸ್ಥಾನಕ್ಕೆ ಮಾತೃರೂಪವಾಗಿದ್ದ ಇವರ ವಿಯೋಗದಿಂದ ಬಹಳ ವ್ಯಸನಪಡುತ್ತಿದ್ದರು. ಚರ್ಮಣ್ವತೀ ತೀರದಮೇಲೆ ಶ್ರೀ ಕೃಷ್ಣರಾಜವಡೆಯರವರ ಬೃಂದಾವನದ ದಕ್ಷಿಣ ಪಾರ್ಶ್ವದಲ್ಲಿ, ಶಾಸ್ತ್ರದೀಕ್ಷಾಬದ್ಧರಾಗಿ ನಡೆಸಬೇಕಾದ ಕಾರ್ಯಗಳನ್ನೆಲ್ಲಾ ನೆರವೇರಿಸಿ, ಚಿತಾರೋಹಣಾನಂತರ ಸಪಾತ್ರರೂ ಅಗ್ನಿಕ್ರಿಯೆಯನ್ನು ಅರ್ಪಿಸಿದಮೇಲೆ ಮಾ|| ದೇವಾಜಮ್ಮಣ್ಣಿಯವರ ಶರೀರವು ಅಗ್ನಿಲೋಕವನ್ನೈದಿದ ಮೇಲೆ ಸುರಪುರ ಆಯಿತು. ಆ ತರ ಪುರವಾಸಿಗಳೆಲ್ಲರೂ ಮಾತೃವಿಯೋಗದಿಂದ ಉಂಟಾದ ದುಃಖಕ್ಕಿಂತ ಅತಿಶಯವಾಗಿ ದುಃಖವನ್ನು ಅನುಭವಿಸುತ್ತಾ, ಅವರು ಕಟ್ಟಳೆಪ್ರಕಾರ ಬಾರಿ ದಕ್ಷಿಣೆಯಾಯಿತು. ಮಂಗಳವಾರದ ದಿವಸ ಎಲ್ಲರೂ ಹೋಗಿ ಮುಂದಣಕಾರ್ಯಗಳನ್ನು ನಿರ್ವಹಿಸುವದಕ್ಕೆ ಉಪಕ್ರಮಿಸಿದರು. ಅನೇಕ ಬಾರಿ ದಕ್ಷಿಣೆ ಕೊಡಲ್ಪಟ್ಟಿತು. ಆದರೆ ಮಹಾಮಾತುಶ್ರೀಗಳಾದ ದೇವಾಜಮ್ಮಣ್ಣಿಯವರು ಪ್ರಖ್ಯಾತಿಯುಳ್ಳವರು ಶ್ರೀಕೃಷ್ಣರಾಜವಡೆಯರವರ ಪತ್ನಿಗಳಲ್ಲೆಲ್ಲ ಇವರೇ ಶತಮಾನಕ್ಕೆ ೧೦ ವರುಷ ಕಡಿಮೆಯಾಗಿ ಜೀವಿತರಾಗಿದ್ದು ಶ್ರೀಮನ್ಮಹಾರಾಜರವರಿಗೆ ಉಂಟಾದ ಪುತ್ರಸಂಪತ್ತಿನ ಸಂತೋಷವನ್ನೆಲ್ಲಾ ಅನುಭವಿಸಿದರು. ಲೋಕದಲ್ಲಿ-ಇಲ್ಲಿಯಲ್ಲಿ ೧೦೩ ವರುಷಗಳು ಬದುಕಿರುವರು ಇರುವಾಗ ಇವರು ಇಷ್ಟು ಜಾಗ್ರತೆಯಾಗಿ ಸ್ವರ್ಗಾರೋಹಣವಾದರಲ್ಲಾ ಎಂಬದಾಗಿ ವಿಷಾದವುಂಟಾಗುತಿದೆ. ದೈವಯತ್ನಕ್ಕೆ ಮಾತಕ್ಕೆದ್ದೇನು ಇವರು ಇದ್ದದ್ದು ಅಲ್ಪಾಯುಗೆ ಸಹ ಪ್ರಾಯವಾಗಿದ್ದದ್ದಲ್ಲದೆ ಈ ಸಂಸ್ಥಾನಕ್ಕೇನೆ ಗೌರವವಾಗಿತ್ತು. ಶ್ರೀಮನ್ಮಹಾರಾಜರವರಿಗೂ ಕೂಡ ಇವರಿಂದ ಬಹಳ ಧೈರ್ಯವುಂಟಾಗಿತ್ತು. ಏಕಲಾದರೇ ವಯೋವೃದ್ಧರಾಗಿಯೂ ಜ್ಞಾನವೃದ್ಧರಾಗಿಯೂ ಸಮಸ್ತವಿಷಯಗಳಲ್ಲೂ ಏಜಮಾನತ್ವವನ್ನು ವಹಿಸಿದ್ದವರಾಗಿಯೂ ಇದ್ದ ಮಹಾ ಮಾತುಶ್ರೀಯವರ ವಿಯೋಗದಿಂದ ಇಂತಾ ದೊಡ್ಡ ಟಕ್ಕು ಉಂಟಾಯಿತಲ್ಲಾ ಎಂಬ ಕೊರತೆಯು ಶ್ರೀಮನ್ ಮಹಾರಾಜರವರನ್ನೂ ಈ ಸಂಸ್ಥಾನದ ಪ್ರಜೆಗಳನ್ನೂ ಬಾಧಿಸುವದಕ್ಕೆ ಆವಕಾಶವಾಯಿತು. ನಮ್ಮ ಶ್ರೀಮನ್ಮಹಾರಾಜರವರು ಈ ಕೊರತೆಯನ್ನು ಬಿಟ್ಟು ಕ್ರಮೇಣ ಪ್ರಜೆಗಳಿಗೂ ಈ ಕೊರತೆಯು ನಿವಾರಣೆಯಾಗುವಂತೆ ಮಾಡಿಸುವರೆಂದು ನಂಬಿದ್ದೇವೆ.

ವೇದಮೂರ್ತಿಗಳಾದ ಸುಂದರಶಾಸ್ತ್ರಿಗಳು, ಕುಂಭಕೋಣಂ ಶೇಷಾಚಾರ್ಯರು, ನೇತ್ರಕ್ಷೇತ್ರ ನಾರಾಯಣಪಂಡಿತರು, ನಾರಣಪ್ಪನವರು, ಪುರೋಹಿತ ನಾಗಂಭಟ್ಟರು, ಸುಬ್ಬಾವಧಾನಿಗಳು, ಚಂದ್ರಶೇಖರಪಂಡಿತರು, ಗರುಡಮಹಾ ತೀರ್ಥಪಂಡಿತರು, ವರ ಹಸ್ವಾರ್ ಕೃಷ್ಣಯ್ಯಂಗಾರ್ಯರು, ದೇವರಭಟ್ಟರು, ಪುರೋಹಿತ ಪುಟ್ಟಣ್ಣನವರು ಇದರು, ರಾಮಚಂದ್ರಪಂಡಿತರು, ಅಂಬಾವಿಲಾಸದ ಶ್ರೀ ರಾಮಕೃಷ್ಣಪ್ಪನವರು, ಕೊಮಾರ್ಯಯ್ಯನವರು, ಮೃತ್ಯುಂಜಯಾವಧಾನಿಗಳು, ಚಂದ್ರಶೇಖರಶಾಸ್ತ್ರಿಗಳು, ಕೃಷ್ಣಾನಂದಯೋಗೀಶ್ವರರು, ಇವರಿಗೆಲ್ಲ ಮಹಾ ಮಾತುಶ್ರೀ ಸೀತಾವಿಲಾಸದ ದೇವಾಜಮ್ಮಣ್ಣಿಯವರು ಗೃಹದಾನಮಾಡಿದರು — ವೃ. ಚಿಂ.

## ಅರ್ಥಶಾಸ್ತ್ರವು.

### ಪ್ರಥಮಾಂಕನೆ.

#### ಉಪೋದ್ಘಾತವು

" ಉದ್ಯೋಗಿನಂಪುರುಷಸಿಂಹಮುಪೈತಿಲಕ್ಷ್ಮೀಃ "

ಅಂದರೆ ಲೋಕದಲ್ಲಿ ಪ್ರಯತ್ನವಂತನಾದ ಪುರುಷಶ್ರೇಷ್ಠನಿಗೆ ಸಂಪತ್ಸಂತೋಷಗಳುಂಟಾಗುವದೆಂಬ ನೀತಿವಾಕ್ಯಮಂ ಮನದೋಳ್ ಧರಿಸಿ ಸರ್ವತೂ ತಮತಮಗೆ ಸ್ವಾಭಾವಿಕಗಳಾದ ಗುಣಗಳ ದೆಸೆಯಿಂದ ಪರವಶರಾಗಿ ಕೆಲಸ ಮಾಡಿಸಲ್ಪಡುತ್ತಾರೆಯಾಗಿ ನಿಮಿಷವಾಗಲಿ ಯಾರೂ ನಿರ್ವ್ಯಾಪಾರರಾಗಿರುವದಿಲ್ಲವು. ಈ ಸಿದ್ಧಾಂತರೀತ್ಯಾ ಪ್ರಾಣಿ ಸಾಮಾನ್ಯಕ್ಕೆ ಕರ್ಮವು ಸ್ವತಸ್ಸಿದ್ಧವಾದುದಾಗಿರುವದರಿಂದಲೋಕದಲ್ಲಿ ಮನುಷ್ಯನ ಸ್ಥಿತಿಗೆ ತಾದೃಶ ಕರ್ಮವೆಂಬದೇ ಮುಖ್ಯಕಾರಣವಾಗಿದೆಯೆಂದು ತಿಳಿಯಬೇಕು. ಇಂತಾ ಸರ್ವಾಧಾರವಾದ ವಿಷಯಸ್ವರೂಪವನ್ನು, ಅಧಿಕಾರಿ ತಾರತಮ್ಯಾನುಗುಣವಾಗಿ ಅವರವರಿಗೆ ಹಿತಾಹಿತಗಳಾಗಿರುವ ಕರ್ಮಗಳ ಪ್ರಕಾರವನ್ನು ಚೆನ್ನಾಗಿ ತಿಳಿದುವರ್ತಿಸಬೇಕಾದುದು ಅತ್ಯಂತಾವಶ್ಯಕವಾಗಿರುತಿದೆ. ಇದಕ್ಕೋಸ್ಕರವೇ ನೀತಿಜ್ಞರು ಪ್ರಯತ್ನವಂತನಿಗೆ ಸಂಪತ್ತುಂಟಾಗುವದೆಂದು ಹೇಳಿದರು. ಹಾಗೆ ಎತ್ನಿಸಿ ಒಂದು ಕಾರ್ಯಕ್ಕುಪಕ್ರಮಿಸಿದ್ದು ಮೊದಲು ಫಲಪ್ರಾಪ್ತಿಕಾಲದ ವರೆವಿಗೆ ಅನುತ್ಸಾಹಕರಗಳಾದ ಅನೇಕ ವಿಘ್ನಗಳು ಸಂಭವಿಸುವಲ್ಲಿ ಅವುಗಳಿಗೆ ಹೆದರಿ ಅಂತಾ ಪ್ರಯತ್ನಮಂ ಸಫಲಪಡಿಸದೆ ತೊರೆಯುವದು ವಾಡಿಕೆಯಾಗಿರುವದರಿಂದ,

ಶ್ಲೋ|| ಪ್ರಾರಭ್ಯತೇನಖಲುವಿಘ್ನಭಯೇನನೀಚೈಃ |
ಪ್ರಾರಭ್ಯವಿಘ್ನವಿಹತಾವಿರಮಂತಿಮಧ್ಯಾಃ ||
ವಿಘ್ನೈಃಪುನಃಪುನರಪಿಪ್ರತಿಹನ್ಯಮಾನಾಃ |
ಪ್ರಾರಬ್ಧಮುತ್ತಮಜನಾನಪರಿತ್ಯಜಂತಿ ||

ಅಂದರೆ, ಅಲ್ಪರು ತಮ್ಮ ಪ್ರಯತ್ನಕ್ಕೆ ವಿಘ್ನವುಂಟಾದೀತೆಂದೆಣಿಸಿ ಒಂದು ಕಾರ್ಯವನ್ನಾರಂಭಿಸದೆಯೇ ಇರುತ್ತಾರೆ, ಮಧ್ಯಮರಾದವರೆಂದು ಕಾರ್ಯವನ್ನುಪಕ್ರಮಿಸಿ ಅನಂತರ ಸಂಭವಿಸುವ ನಾನಾವಿಧ ವಿಘ್ನಗಳಿಗೆ ಅಂಜಿ ಅದು ಕೊನೆಮುಟ್ಟಿಸದೆ ಬಿಟ್ಟುಬಿಡುತ್ತಾರೆ. ಉತ್ತಮರಾದರೋ, ಎಷ್ಟು ವಿಧ ವಿಘ್ನಗಳು ಸಂಭವಿಸಿದಾಗ್ಯೂ ಪ್ರಾರಂಭಿಸಿದ ಕಾರ್ಯವು ಬಿಡದೆ ಸಾಧಿಸುವರು. ಆದುದರಿಂದ ಲೋಕವ್ಯಾಪಾರದಲ್ಲಿ ಪ್ರವರ್ತಿಸತಕ್ಕವನು ತಾನು ಪ್ರಯತ್ನಿಸುವ ಕಾರ್ಯಗಳಲ್ಲಿ ಎಷ್ಟರ ಮನೋದಾರ್ಢ್ಯವಂ ಪಡೆದರಬೇಕೋ, ಉತ್ಸಾಹದೆಂಬದರಸ್ಥಿರತ್ವವ ಮಹತ್ತೋದ್ದೀ, ಎಷ್ಟರಮಟ್ಟಿಗೆ ಆತ್ಮನು ತನ್ನ ಪ್ರಯತ್ನಗಳಿಗೆ ರಕ್ಷಕನೆಂಬ ನಂಬಿಕೆ ಇರತಕ್ಕದ್ದೋ, ಇವು ಮುಂತಾದಸುಗತಿಗಳನ್ನರಿತು ವರ್ತಿಸಬೇಕಾದುದು ವಿವೇಕಿಯು ದವಶ್ಯವಾಗಿರುತಿದೆ. ಹೀಗೆ ದೃಢವಾದ ಅಭಿಸಂಧಿಯಿಂದನೆ ಮಾಡುವ ಪ್ರಯತ್ನವು ಸಫಲವಾಗುವದೇ ಹೊರ್ತು ವ್ಯರ್ಥವಾಗಲಾರದು. ಅವಕಾಶವಿದ್ದಾಗ ಮಾಡಿದರೆ ಆತುರವೇಇದನೆ ಮಾಡುವವಕ್ಕಿಂತಲೂ ಚೆನ್ನಾಗಿ ಫಲಪ್ರದವಾಗುವ್ರದು. ನಾತುನ ಕೆಲಸವನ್ನು ಪ್ರವರವಲೆಕ್ಕನಕ್ಕೂ, ಆವಶ್ಯಕವಿದ್ದಲ್ಲಿ ಪುನಃಪರಿಷ್ಕರಣಕ್ಕೂ ಅಥವಾ ವಿಸಂಧಿತಕಲ್ಪನಕ್ಕೂ ಅವಕಾಶವಿರುವಂತೆ ಮಾಡಿದರೆ ಅನುಭೂತಿಯಾಗಿದ್ದಾರೂ ವದರಿಂದ ವುಂಟಾಗಬಹುದಾದ ನಷ್ಟಕ್ಕೂ, ಲಾಘವಕ್ಕೂ, ಅನ್ಯರ ಹೇಳನಕ್ಕೂ ಅವಕಾಶವಿಲ್ಲದಿರುವುದು. ಕವಾಟಿಕ್ ಅಲೀಕ ಮಾಡುವವರಲ್ಲಿ ಅನ್ಯರಂ ನಂಬಿ ಮೋಸಹೋಗದೆ ಸ್ವತಃ ಮಾಡುವಣತಿ ಶ್ರೇಷ್ಠವು ಮತ್ತು ಉಪೇಕ್ಷಿಸಲ್ಪಟ್ಟಂತಾ ಕಾರ್ಯಭಾರವು ನಿವೃತ್ತಿಯಾಗಿ ಹೃದಯಕ್ಕು ಸಶಾಂತಿಯುಂಟಾಗುವ್ರದು. ಅಂತಾ ಕಾರ್ಯವಾಗುವದರಿಂದುಂಟಾಗುವ ಪ್ರಯೋಜನಗಳೆಲ್ಲವು ಮನೆಯಲಿಕ್ಕೆ ಸನ್ನದ್ಧರಾಗಿರುವಂತೆ ಮಾಡಿ ಯೋಗ್ಯವಾದ ಅಂತಾ ವಿಷಯವು ಪೂರ್ತಿಗೈದವೆಂಬ ತೃಪ್ತಿಯುಂಟಾಗುವಂತೆ ನೆರವೇರಿಸತಕ್ಕದ್ದು. ನಮ್ಮ ಪ್ರಯತ್ನವು, ಮರಳಿ ಯೆಂದಿಗೂ ಹೊಂದಕೂಡದಹಾತಾಗತಿಸಿದ ಅನುಕೂಲ್ಯಗಳಿಗಾಗಿ, ವಿಷಾದಿಸದರು ಮಂತಾದ್ದಾಗಿರಬೇಕು. ನಮ್ಮ ಶಕ್ತಿಯೂ ಅನುಕೂಲ್ಯವೂ ಎಷ್ಟರ ಅಲ್ಪವಾಗಿದ್ದಾಗ್ಯೂ, ಘನತರವಾದ ಪ್ರೊಮುವೃಷ್ಟ್ಯಂತರೂಪವಾಗಿರುವತೆಯೂ, ದುರ್ಬಲಗಳಾದ ತಾದೃಶ ಪ್ರಯತ್ನಗಳು ಭಗವದನುಗ್ರಹದಿಂ ಸಫಲಗಳಾಗಿನಾವೆಣಿಸಿಕೊಂಡಿರುವದಕ್ಕಿಂತಲೂ ವಿಶೇಷ ಪ್ರಯೋಜಕವಾಗಿಯೂ ಗೌರವಪಾದಕವಾಗಿಯೂ ಪರಿಣಮಿಸಬೇಕೆಂಬ ನಮ್ಮ ಬಯಕೆಯೊಡನೆಯೂ ನಮ್ಮ ಭವಿಷ್ಯತ್ಕಾರ್ಯಗಳಿಗೆ ಬಾಧಕವಿಲ್ಲದಂತೆಯೂ ಮಾಡತಕ್ಕದ್ದು. ಪ್ರತ್ಯಕ್ಷವಾಗಿ ಅಲ್ಪವಾಗಿರುವ ಕಾರ್ಯವನ್ನು ಚಿತಕಾಲದಲ್ಲಿ ಮಾಡುವವರಿಂದ ಘನ ವಿಶೇಷವಾದ ಕೆಲಸವನ್ನು ತಕ್ಕಂತೆ ನೆರವೇರಿಸುವದಕ್ಕೆ ಅವಧಾನವೂ ಶಕ್ತಿಯೂ ಧಾರಾಳವಾಗಿರುವ್ರದು. ಅತ್ಯಲ್ಪಾಂಶವನ್ನಾದರು ಬಿಡುವದರಿಂದಲೂ ನಿರವಕಾಶ ಮಾಡುವದರಿಂದಲೂ ಬಹುಮಿತಿಯಿಲ್ಲದ ಭ್ರಮಪ್ರಮಾದ ಪರಂಪರೆಗಾಸ್ಪದವಾಗುತಿದೆ. ಪ್ರತಿ ಕಾರ್ಯವೂ ಕಾಲೋಚಿತವಾಗಿ ಮಾಡಲ್ಪಟ್ಟರೇನೇ ಅದಕ್ಕಾಗಿ ಕ್ಲುಪ್ತವಾದ ಕಾಲವಬಳಕಲೂ ಮತ್ತು ಜೀವಿತಕಾಲಾಂತರದಲ್ಲ ೯ ನಮ್ಮ ಕರ್ತವ್ಯವಂ ನಾವೇ ಪೂರ್ತಿಗೈದೆವೆಂದು ನುಡಿಯಬಹುದಾದಷ್ಟು ಸಂತೃಪ್ತಿಯನ್ನು ಅನುಕೂಲಿಸ ವಮಟ್ಟಿಗೆ ಪಡೆಯಬಹುದು. ಅದಕ್ಕೆ ಬದುಲಾಗಿ ಮಾಡತಕ್ಕದ್ದೇನೂ ಯಿಲ್ಲವೆಂದು ಭಾವಿಸಿ ನ್ಯಸ್ತಭರರಾಗಿರಕೂಡದು. ಸರ್ವದಾ ಒಂದು ವ್ಯಾಪಾರವಂ ಮಾಡುತಲಿದ್ದರೆ ಮಾಡಲಿಕ್ಕೇನಾದರು ಕಾರ್ಯವು ನಿಯತವಾಗಿರುತಲಿರುವುದು. ಇದರಿಂದ ಅಮೂಲ್ಯವಾದ ಕಾಲವು ವ್ಯರ್ಥಗೊಳಿಸಲ್ಪಡದಿರಲಿಕ್ಕೆ, ವಿಷಯಾಂತರಗಳಲ್ಲಿ ಅಕ್ರಮವಾಗಿ ವಿನಿಯೋಗಿಸಲ್ಪಡದಿರಲಿಕ್ಕೂ, ಅದರ ಪ್ರಯೋಜನವು ನಮಗೆ ಅನನ್ಯವಾಗಿ ಸಿದ್ಧಿಸಲಿಕ್ಕೂ, ಗತಿಸಿದ ಕಾಲಕ್ಕಾಗಿ ಚಿಂತಿಸದಿರಲಿಕ್ಕೆ, ಕಾರಣವಾಗುವ್ರದು. ನ್ಯಾಯವಾದ ಅಭಿಪ್ರಾಯದಿಂದಲೂ ಯುಕ್ತವಾದ ಕಾರಣದಿಂದಲೂ, ಯೋಗ್ಯವಾದ ಉದ್ದೇಶದಿಂದಲೂ, ಇದೇ ಕರ್ತವ್ಯವೆಂಬ ಭಾವನೆಯಿಂದಲೂ, ಅನ್ಯರಿಗೆ ಮೇಲನ್ನುಂಟುಮಾಡಬೇಕೆಂಬ ಸಂಕಲ್ಪದಿಂದಲೂ ಮನಸಾ ವಾಚಾ ಕರ್ಮಣಾ ಮಾಡುವ ಕಾರ್ಯಗಳೆಲ್ಲವು ಭಗವತ್ಪ್ರೀತಿಯ ಸಾಧನವೆಂಬ ಅಭಿಪ್ರಾಯದಿ ಒಳ್ಳೆ ಮಾರ್ಗದಲ್ಲಿ ಎತ್ನಿಸಿ ಪ್ರಯೋಜನವಿಲ್ಲವೆಂದು ವೈರಾಗ್ಯವಂ ಪಡೆದು ಪ್ರಾಯಶಃ ಸರ್ವಕಾಲದಲ್ಲಿಯೂ ಪುರುಷಪ್ರಯತ್ನಗಳಲ್ಲ ಅಂತರವಾದ ಅಪೇಕ್ಷೆಯು ಹೋಗಲಾಡಿಸಿ ಬಿಡುವ್ರದು. ಮತ್ತು ಒಬ್ಬನು ಪ್ರಯತ್ನಮಾಡಿದಹೊರತು ತಾನೇನು ಪಡೆಯಲಾರನು. ಅಂತು ಅವನ ರಿಯಲಾರನು. ತಕ್ಕ ಫಲವುಂಟಾದರೂ, ಅದು ಲಭಿಸದೆ ಹೋದಾಗ್ಯೂ, ಅದಂ ಮಾಡಲುದ್ಯೋಗಿಸುವಣವು ಒಳ್ಳೆಯದು. ಸದ್ಯಃ ಪ್ರಯತ್ನಮಾತ್ರದಿಂ ಪರ್ಯವಸಾನವೆಂದು ತೋರಿಬಂದಾಗ್ಯೂ ತದಭ್ಯಾಸದಿಂ ಕರ್ತೃತ್ವಶಕ್ತಿ ವೃದ್ಧಿಯಾಗಿ ದಾರ್ಢ್ಯವಂ ಹೊಂದುವ್ರದು. ಅಂತಾ ಶಕ್ತಿಯು ಕ್ಷೀಣಿಸದಂತೆ ಅವರಲ್ಲಿ ಮೈಗಳ್ಳತನವೂ, ನಿರಾಸ್ಯವೂ ತಮ್ಮತಮ್ಮ ಸ್ಥಾನಗಳಂ ಬಲಪಡಿಸಿಕೊಳ್ಳುವವು, ಹಾಗಾದರೆ — ಯಾವದಾದರೊಂದು ಅವಯವವನ್ನು ದೀರ್ಘಕಾಲ ಸ್ವಲ್ಪಕಾಲ ಸ್ಥಿರವಾಗಿಟ್ಟು ಕದಲಿಸದಿದ್ದರೆ ಅದು ಹ್ಯಾಗೆ ಜಡವಾಗಿ ಹಿಡಿದು ಸಂಧಿಗಳು ಬಂಧಿಸಿ ಕೆಲವು ಕಾಲದ ಮೇಲೆ ನಿಜವಾಗಿ ಕದಲಿಸಕೂಡದೆ ಹೋಗುತ್ತದೋ ಹಾಗೆಯೇ ಮನುಷ್ಯನ ಜ್ಞಾನಕರಣ ಕಳೇಬರಗಳೆಲ್ಲವು ಮಾಂದ್ಯವನ್ನೈದಿ, ನಿಷ್ಪ್ರಯೋಜಕಗಳಾಗುವವು. ಯೋಗ್ಯಗಳಾದ ಅನೇಕ ಪ್ರಯತ್ನಗಳು ದೃಢಾಧ್ಯವಸಾಯವಿಲ್ಲದ್ದರಿಂದ, ಉದ್ದಿಷ್ಟ ಕಾರ್ಯದಲ್ಲಿ ಪ್ರಥಮಮೂಲಕವಾದ ಸ್ಥಿರತ್ವವಿಲ್ಲದೆ ವ್ಯರ್ಥಗಳಾಗುವದರಿಂದ ಯುಕ್ತವಾದ ಅಂಶವನ್ನು ಮನದಲ್ಲಿ ತಿಳಿಸಿ ತತ್ಸಲವು ನಿರೀಕ್ಷಿಸಲ್ಪಟ್ಟ ಕಾಲದೊಳು ಅದರ ಸಿದ್ಧಿ ಸವಿಧವಾಗ್ಯ ಪರಾಪೇಕ್ಷೆಯಂ ಕವಮೆ ಮಾಡಿಕೊಂಡು ಅದು ಸಫಲವಾಗುವತನಕ ಮರಳಿ ಮರಳಿ ಮಾಡುತಲಿದ್ದರೆ, ಭಗವದನುಗ್ರಹ ಪೂರ್ವಾಗಿ ಯೋಗ್ಯಗಳಾದಫಲವು ಲಭಿಸುವದರಲ್ಲಿ ಸ್ವಲ್ಪಮಾತ್ರವೂ ಸಂದೇಹವಿರಲಾರದು. ಅದನ್ನು ಬಿಟ್ಟು ಅಂತಾ ಭಗವದನುಗ್ರಹವನ್ನೆದುರುನೋಡುವದಕ್ಕೆ ನಮಗೆ ನ್ಯಾಯವೂ ಸಾಧ್ಯವೂ ಇಲ್ಲವಾಗಿ ನಮ್ಮಬಾಳ್ವಿಕೆಯು ನಮ್ಮ ಪ್ರಯತ್ನಾಧೀನವಾಗಿರುವುದು. ಹೇಗೆ ಮನುಷ್ಯನು ಯಾವ ವರಿವಿಗೆ ದೃಢಪ್ರಯತ್ನಗಳುಳ್ಳವನಾಗಿ ಶರೀರಶ್ರಮಪಟ್ಟು ಸುಖ ಸಂಪಾದನೆಯಲ್ಲಿ ಅಪೇಕ್ಷೆಯುಳ್ಳವನಾಗಿರುತ್ತಾನೋ ಅದುವರಿವಿಗೆ ಅವನಿಗೆ ಈ ಲೋಕದಲ್ಲಿ ಸಕಲವೂ ಸುಖಪ್ರದವಾದವಾಗಿರುವವು (ಸಶೇಷ)

BANGALORE —Printed and published at the KARNATAKA PRESS, No 40, HOSPITAL ROAD, CITY —1893

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

## ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

## Published Every Monday Morning.

ಪ್ರಾಮುವಿವಿದನ್ರನ್ಯತ್ಯನಗವಾರ್ಣ್ಣಕರ್ಣ್ಣಾಟಕಪ್ರಕಾಶನವರಾಜಿದಾಪ್ರಥಿತಸಾಹಿತೀಕಶೋಭಿತಾ | ಮೃಗಾಂಕಹಿತವಾಸರೇನಿಹಿತಮುದ್ರಣಾಸಜ್ಜನ್ಮೈರ್ದ್ದಶಾಸುಪರಿಪೋಷಿತಾದಿಶತಮಾನಸಂಸಂಮುದಂ

Vol. XX ] BANGALORE—MONDAY, APRIL 10, 1893. [No 14.

ಸಂಪುಟ ೨೦. ] ಬೆಂಗಳೂರು:—ಸರ್ ೧೮೯೩ ನೇ ಇಸವಿ ಏಪ್ರಿಲ್ ೧೦ ನೇ ತಾರೀಖ್ ಸೋಮವಾರ. | ಸಂಚಿಕೆ ೧೪.


### ಕರ್ಣಾಟಕ ಪ್ರಕಾಶಿಕಾ.

ಈ ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

| | ಸ್ಥಳದವರಿಗೆ | ಪರಸ್ಥಳದವರಿಗೆ. |
|---|---|---|
| ಒಂದು ವರ್ಷ ... ... | 6—0—0 | 8—0—0 |
| 6 ತಿಂಗಳಿಗೆ . | 3—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

| | ಸ್ಥಳದವರಿಗೆ, | ಪರಸ್ಥಳದವರಿಗೆ, |
|---|---|---|
| ವರ್ಷಕ್ಕೆ ... .. | 3—0—0 | 4—0—0 |
| 6 ತಿಂಗಳಿಗೆ . ... | 1—12—0 | 2—8—0 |

ಈ ಪತ್ರಿಕೆಗೆ ಚಂದಾಹಣವು ಪಾವತಿ ಮಾಡಿದ ತಾರೀಖಿನಿಂದ ೩ ತಿಂಗಳ ತನಕ ಹಣವನ್ನು ಕೊಡದೆ ಇರುವ ಚಂದಾದಾರರಿಗೆ ಮುಂದೆ ಪತ್ರಿಕೆಯನ್ನು ಕಳುಹಿಸಲ್ಪಡುವದಿಲ್ಲ. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತರಿಸಿಕೊಳ್ಳಬಹುದು. ಮೂರು ತಿಂಗಳಿಗೆ ಕಡಿಮೆಯಾಗಿ ಚಂದಾ ತೆಗೆದುಕೊಳ್ಳಲಾಗುವದಿಲ್ಲ.

### ಪ್ರಕಟನೆಯ ದರಗಳು.

ಮೊದಲನೇಸಾರಿ ಪಂಕ್ತಿ ಒಂದಕ್ಕೆ ೦—೨—೦

ಎರಡನೇಸಾರಿ ಪಂಕ್ತಿ ಒಂದಕ್ಕೆ ೦—೧—೦

ಸೂ—ಎರಡಾವರ್ತಿಗಿಂತ ಹೆಚ್ಚಾಗಿಯಾಗಲಿ ಎಷ್ಟನೇ ತರದ ಕಾಂಟ್ರಾಕ್ಟ್ ಮಾಡಿದಾಗಲ್ಲಿ ಕಾಲಕ್ಕೆ ಒಂದನ್ನು ಗೊತ್ತುಮಾಡಿ ಹಣ ಕೊಡಲು ಮಾಡಿಸಲ್ಪಡುವದು. ಈ ಪತ್ರಿಕೆಯಲ್ಲಿ ಪ್ರಾಯಿವೇಟಾಗಿ ಮುದ್ರಿಸುವ ಪ್ರಕಟನೆಗಳು ಕಳುಹಿಸುವವರು ಅವುಗಳ ಸ್ವರೂಪ ಕಾಯಂ ಮಾಡತಕ್ಕದ್ದೇ ಹೊರತು ಅದು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಿದ್ದರೆ ಅವುಗಳು ನಿಲ್ಲಿಸುವಂತೆ ಬರೆಯುವವರೆಗೆ ಅವು ಪ್ರಕಟಿಸುತ್ತಿದ್ದು ಹಣ ಎಷ್ಟಾದರೂ ಪ್ರಕಟಿಸಲ್ಪಟ್ಟವುಗಳಿಗೆ ಹೇಳಿಕೆಯಂತೆ ದರದಂತೆ ಕಿಮ್ಮತ್ತು ವಸೂಲಾಗುವದು. ಪ್ರಕಟನೆಯ ಬಗ್ಗೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನೂ ಚಂದಾ ಹಣವನ್ನೂ ಮ್ಯಾನೇಜರಿಗೆ ಕಳುಹಿಸತಕ್ಕದ್ದು. ಪ್ರಕಟನೆಯ ಬಗ್ಗೆ ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳಲ್ಲಿ ಕಲ್ಪಿತವಾದ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಲಾರೆವು. ಕ್ರಮವಾಗಿ ರುಜುಮಾಡಿದವುಗಳು ಯೋಗ್ಯವಾದದನ್ನು ಪ್ರಕಟಿಸಲಾರೆವು. ನಿರಾಕರಿಸಲ್ಪಟ್ಟ ಕಾಗದಗಳು ಮರಳಿ ಕಳುಹಿಸಲ್ಪಡಲಾರವು.


*ADVERTISEMENTS.*

**NOTICE.**

VAIDYASARA SANGRAHA

A TREATISE ON THE PRINCIPLES OF

HINDU MEDICINE

*Per* (*including Postage*) Rs 5 0 0

ವೈದ್ಯಸಾರ ಸಂಗ್ರಹ.

ಈ ಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಈ ಕೆಳಗೆ ರುಜು ಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ಕಾಗದಗಳಿಗೆ ಸಿಗೆ ಕೊಡಲ್ಪಡಲಾರದು.

ಇದರ ಕ್ರಯ —ಪ್ಯಾಕಿಂಗ್ ಮತ್ತು ಅಂಚೇ ಹಾಸಲ್ ಡೇಬಿಲ್ ಪ್ರತಿ ಒಂದಕ್ಕೆ ರೂ 5—0—0

ಟಿ. ಬಿ. ವೆಂಕಟಾಚಾರ್.

ಬೆಂಗಳೂರ್, ಪಟಾಲ್ ಆಸ್ಪತ್ರಿ ರೋಡ್ ೪೮ ನೇ ನಂಬರ್.

### ನೋಟೀಸ್.

ಬೆಂಗಳೂರು ಕರ್ಣಾಟಕ ಪ್ರೆಸ್.

೧೮೬೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ, ಸಕಲವಿಧ ಕೆಲಸಗಳು ಸುಲಭಚಾರ್ಜಿಗೆ ಶೀಘ್ರವಾಗಿಯೂ ಶ್ಲಾಘ್ಯವಾಗಿಯೂ, ಮುದ್ರಿಸುವವು.

ಇದರಲ್ಲಿ ಸಧ್ಯಕ್ಕೆ ಇಂಗ್ಲಿಷ್ ಕನ್ನಡ ಕೆಲಸಗಳು ಮಾತ್ರನಡೆಸುತಿವೆ. ಇತರ ತಪಶೀಲುಗಳನ್ನು ಸದರೀ ಕಾರ್ಖಾನೆ ಮುಖ್ಯಸ್ಥರಿಗೆ ಬರೆದು ತಿಳಿದುಕೊಳ್ಳಬಹುದು

### ನೋಟೀಸ್.

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ.

ಕಮಿಷನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯೊಡನೆ ವ್ಯಾಲ್ಯೂ ಪೇಯಬಲ್ ಪೋಸ್ಟುಮೂಲಕ ತಕ್ಕ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರಹ ಔಷಧಗಳು, ಪುಸ್ತಕಗಳು, ಮುತ್ತುಗಳು, ಬಿಳಿ ಮುತ್ತುಗಳು, ಛತ್ರಿಗಳು, ಪಾಪುಗಳು, ಸ್ಟಿಂಪುಗಳು, ಕಾಶ್ಮೀರ ಶಾಲುಗಳು, ಪತ್ತೀಗಳು, ಜರಿತಾರ ಕಾಪುಗಳು, ದೇವರ ಕಂತೆ ಚಿತ್ರ ಕನ್ನಡಕಗಳು, ಮಡುಗಾ ಗಿತ್ತ ಜರತಾರ ರುಮಾಲುಗಳು, ಜರತಾರ ಟೋಪಿಗಳು, ಆಫೀಸ್ ಟ್ರಂಕುಗಳು, ಪಟ್ಟೆಗಳು, ಅತ್ತರುಗಳು, ಅಮೂಲ್ಯವಾದ ರತ್ನಗಳು, ಭಂಗಾರದಿಂದ ಕಟ್ಟಿಟ್ಟ ಉಂಗುರಗಳು, ಬೆಳ್ಳಿ ಪಾತ್ರೆಗಳು, ಜರ್ಮನ್ ಬೆಳ್ಳಿ ಪಾತ್ರೆಗಳು, ಕೇಸರಿ, ಕಸ್ತೂರಿ ವಗೈರೆ ಇತರ ಸಾಮಾನುಗಳು

ಜವಾಬು ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟಾಂಪ್ ಕಳುಹಿಸಿದ ಹೊರ್ತು ಜವಾಬು ದೊರೆಯಲಾರದು

ವಿಳಾಸ,—ಗಣೇಶ ರಾಮಚಂದ್ರ ಕರ್ಕಿ,

ಮತ್ತು ಕಂಪನಿ, ಕಮಿಷನ್ ಏಜಂಟ್ಸ್,

ಠಾಕೂರದ್ವಾರ್, ಪಾರೇಖ್ ಪೋಸ್ಟ್, ಮುಂಬೈ

### ನೋಟೀಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ನಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

### ಸಂಸ್ಕೃತ ಗ್ರಂಥಗಳು.

| | | ಹಾಸಲ್ ಸಹಿ ರೂ | ಅ. | ಪೈ |
|---|---|---|---|---|
| ಟೀಕಾ ವೈದ್ಯಸಾರ ಸಂಗ್ರಹ | ... | ೫ | ೦ | ೦ |
| „ ಶಿವಗೀತೆ | .. | ೧ | ೧ | ೦ |
| „ ಶಿವಾನಂದಲಹರಿ | .. | ೦ | ೪ | ೦ |
| „ ಕಾಲಾಮೃತ | ... | ೧ | ೦ | ೦ |
| „ ಟೀ॥ ವಾಲ್ಮೀಕಿರಾಮಾಯಣ .. | | ೦ | ೩ | ೦ |
| „ ಟೀ॥ ಗೋಪಿಕಾ ಗೀತೆ ... | | ೦ | ೧ | ೦ |
| „ ಟೀ॥ ಚಾಣಕ್ಯನೀತಿ (ಸುಭಾಷಿತ) | | ೦ | ೮ | ೦ |
| ವಿಷ್ಣುಸಹಸ್ರನಾಮ ಪತ್ರಿಕೆ | ... | ೦ | ೩ | ೦ |
| ಸೂರ್ಯಸಹಸ್ರನಾಮ | .. | ೦ | ೨ | ೦ |
| ಕೃಷ್ಣಕರ್ಣಾಮೃತ | .. | ೦ | ೨ | ೦ |
| ತ್ರಿಕಾಂಡ ಅಮರ ಮೂಲ | ... | ೦ | ೨ | ೦ |
| ೧ ಕಾಂಡ | ... | ೦ | ೧ | ೦ |

### ಕನ್ನಡ ಗ್ರಂಥಗಳು.

| | | | | |
|---|---|---|---|---|
| ಟಕಸಾಲಿ ಅವ್ವಲ್ | ... | ೩ | ೧ | ೬ |
| ಚಿಟ್ಟೋ ದುಯ್ಯಂ | ... | ೧ | ೨ | ೦ |
| ವೃಷಭೇಂದ್ರವಿಜಯ | ... | ೧ | ೪ | ೦ |
| ಪಂಚತಂತ್ರ ಬಾಲಲೀಲೆ | ... | ೦ | ೩ | ೦ |
| ಹರಿ ಸುಪ್ರಭಾತ | ... | ೦ | ೬ | ೦ |
| ಕಾಳಿಯಮರ್ದನ | .. | ೦ | ೨ | ೦ |
| ಸುಧನ್ವಾವಧೆ | ... | ೦ | ೨ | ೦ |
| ಸೌರೇಂದ್ರವಿಜಯ | ... | ೦ | ೨ | ೬ |
| ಸುದಾಮಚರಿತ್ರೆ | .. | ೦ | ೧ | ೬ |
| ದ್ವೈರಾವಣ ಚರಿತ್ರೆ | ... | ೦ | ೧ | ೦ |
| ಬಾಲಗ್ರಹಚಿಕಿತ್ಸೆ | ... | ೦ | ೧ | ೦ |
| ಮಕರಂದ ಲತಾ | ... | ೦ | ೧೨ | ೦ |
| ಭ್ರಾಂತಿವಿಲಾಸ | ... | ೦ | ೧೨ | ೦ |


### POLITICAL ECONOMY.

### ಅರ್ಥಶಾಸ್ತ್ರವು.

ಪ್ರಥಮಾಧ್ಯಾಯವು.

ಉಪೋದ್ಘಾತವು.

(ಗತವಾರದ ಶೇಷ.)

ಲೋಕದಲ್ಲಿ ಪುರುಷನು ಯಾವತ್ಪರ್ಯಂತ ದ್ರವ್ಯಸಂಪತ್ತುಗಳುಳ್ಳವನಾಗಿ ಶರೀರಕ್ರಮಪಟ್ಟು ಸುಖಸಂಪಾದನೆಯಲ್ಲಿ ಅಪೇಕ್ಷೆಯುಳ್ಳವನಾಗಿರುತ್ತಾನೆಯೋ ತಾವತ್ಪರ್ಯಂತ ಆತನಿಗೆ ಈ ಲೋಕದಲ್ಲಿ ಸಕಲವೂ ಸುಖಪ್ರದವಾಗಿರುವದೆಂದು ಗತ ಸಂಚಿಕೆಯಲ್ಲಿ ತಿಳಿಸಲ್ಪಟ್ಟಿರುವಷ್ಟೆ. ಲೋಕದಲ್ಲಿ ಸಕಲ ಪ್ರಯತ್ನಗಳೂ ತತ್ಪ್ರಯುಕ್ತಗಳಾದ ಆತನ ಸಕಲ ಸಂಪತ್ಸಂತೋಷಗಳೂ ಧನಾಧೀನವಾಗಿರುವದರಿಂದ ಅದು ಸರ್ವ್ವಾಪೇಕ್ಷೆಯಾ ಅತಿಶಯ ಮೊದಲೂ ಆವಶ್ಯಕವೆಂತಲೂ ಭಾವಿಸಲ್ಪಟ್ಟಿರುತಿದೆ. ಹೀಗೆ ಸರ್ವಾತಿಶಾಯಿಯಾದ ಧನವು ಸಕಲಾರ್ಥಸಾಧಕವಾಗಿರುವದರಿಂದ ಅದನ್ನು ಸಂಪಾದಿಸಬೇಕಾದ ಮಾರ್ಗವನ್ನೂ, ಅರ್ಜಿತವಾದ ಧನವನ್ನು ರಕ್ಷಿಸಬೇಕಾದ ಕ್ರಮವನ್ನೂ, ರಕ್ಷಿತವಾದದನ್ನು ವಿನಿಯೋಗಿಸಬೇಕಾದ ರೀತಿಯನ್ನೂ ಪುರುಷನು ಅರಿಯದೆ ಹೋಗುವನಾದರೆ ಅವನಿಗೆ ತಾದೃಶ ಧನವು ಸುಖಸಂತೋಷಪ್ರದವಾದುದಾಗಿ ಪರಿಣಮಿಸಲಾರದಾಗಿ,

ಶ್ಲೋ॥ ಅರ್ಥಾನಾಮರ್ಜನೇ ದುಃಖಮರ್ಜಿತಾನಾಂ ಚ ರಕ್ಷಣೇ | ಆಯೇ ದುಃಖಂ ವ್ಯಯೇ ದುಃಖಂ ಧಿಗರ್ಥಂ ದುಃಖಭಾಜನಂ ॥

ಎಂಬುವಂತೆ ಧನಾರ್ಜನೆ ರಕ್ಷಣ ವಿನಿಯೋಗ ಜ್ಞಾನಹೀನತೆಯಿಂದದು ದುಃಖಸಾಧಕವಾಗುತದೆ. ಅಗಲ್ಲದೆಯೂ,

ಶ್ಲೋ॥ ಚತ್ವಾರೋ ವಿತ್ತದಾಯಾದಾ ಧರ್ಮಾಗ್ನಿನೃಪತಸ್ಕರಾಃ | ಜ್ಯೇಷ್ಠಭ್ರಾತ್ರವಮಾನೇನ ತ್ರಯಃ ಕುಪ್ಯಂತಿ ಸೋದರಾಃ ॥

ಎಂಬದಾಗಿ ದಾನ ಧರ್ಮ್ಮಾದ್ಯನುಪಯುಕ್ತವಾದ ಧನವು ಅಗ್ನಿ ರಾಜ ಚೋರರಪಾಲಾಗುವದಲ್ಲದೆ,

ಶ್ಲೋ॥ ದಾನಂ ಭೋಗೋ ನಾಶಸ್ತಿಸ್ರೋ ಗತಯೋ ಭವಂತಿ ವಿತ್ತಸ್ಯ | ಯೋ ನ ದದಾತಿ ನ ಭುಂಕ್ತೇ ತಸ್ಯ ತೃತೀಯಾ ಗತಿರ್ಭವತಿ ॥

ಎಂಬುವ ನ್ಯಾಯವನ್ನನುಸರಿಸಿ ಕಪ್ರಬಾಹುಳ್ಯದಿಂ ಅಂತಾ ಧನವು ನಶಿಸಲು "ಅರ್ಥೈರ್ಬಹಿಷ್ಕೃತಃ ಪ್ರಾಣಃ" ಎಂಬದಾಗಿ ತನ್ನಾತವೇ ಪ್ರಾಣವಿಯೋಗರೂಪವಾಗುತಿದೆ,ಸ್ಯಾಗಂದರೆ—

ಶ್ಲೋ॥ ದಾರಿದ್ರ್ಯಾದ್ಧ್ರಿಯಮೇತಿ ಹ್ರೀಪರಿಗತಃ ಸತ್ವಾತ್ಪರಿಭ್ರಶ್ಯತೇ | ನಿಸ್ಸತ್ವಃ ಪರಿಭೂಯತೇ ಪರಿಭವಾನ್ನಿರ್ವೇದಮಾಪದ್ಯತೇ | ನಿರ್ವಿಣ್ಣಃ ಶುಚಮೇತಿ ಶೋಕನಿಹತೋ ಬುದ್ಧ್ಯಾ ಪರಿತ್ಯಜ್ಯತೇ | ನಿರ್ಬುದ್ಧಿಃ ಕ್ಷಯಮೇತ್ಯಹೋ ನಿಧನತಾ ಸರ್ವಾಪದಾಮಾಸ್ಪದಂ ॥

ಎಂಬುವಂತೆ ದಾರಿದ್ರ್ಯವೇ ಸರ್ವಾಪತ್ಕಾರಣ ನಿಮಿತ್ತವಾಗುತಿದೆ. ಆದುದರಿಂದ ಮನುಷ್ಯನಿಗೆ ಐಹಿಕಾಮುಷ್ಮಿಕ ಸುಖಸಂತೋಷಸಂಪಾದಕವಾದದು ಐಶ್ವರ್ಯವೆಂದು ಭಾವಿಸತಕ್ಕದ್ದು. ಇಂತಾ ಐಶ್ವರ್ಯದ ಪ್ರಯೋಜನವು ಅಮೇಯವಾಗಿಯೂ ಕದಾಚಿತ್ ಚಿಂತಿಸಿದರೆ ಜಗತ್ಕಾರಣರೂಪವಾಗಿಯೂ ಕಂಡುಬರುವದರಿಂದ ಅಂತಾ ವಸ್ತುಸ್ವರೂಪವು ಚೆನ್ನಾಗಿ ತಿಳಿದುಕೊಳ್ಳಬೇ ಕಾದ್ದು ಪ್ರಥಮಕರ್ತವ್ಯವಾಗಿರುತಿದೆ. ಇಂತಾ ಅರ್ಥಾರ್ಜನ ರಕ್ಷಣ ವಿನಿಯೋಗಸ್ವರೂಪವು ಬೋಧಿಸುವ ಭಾಗವು ಪ್ರಾಧಾನ್ಯೇನ ಅರ್ಥಶಾಸ್ತ್ರವೆಂದು ವ್ಯವಹರಿಸಲ್ಪಡುತಿದೆ. ಇದಕ್ಕೆ ಆನುಶಾಸನಿಕವೆಂಬ ವ್ಯವಹಾರ ಸಹ ಉಂಟು. ಈ ನೀತಿಶಾಸ್ತ್ರದಲ್ಲಿ ಬಾರ್ಹಸ್ಪತ್ಯವೆಂತಲೂ ಭಾರ್ಗವವೆಂತಲೂ ಎರಡು ಪ್ರಭೇದಗಳು ಅಡಗಿರುತಿವೆ. ಇದು ಲೋಕತಂತ್ರಕ್ಕೆ ಮುಖ್ಯಾಂಗವಾಗಿರುವದರಿಂದ ಇದರ ಜ್ಞಾನವು ಸಾಮಾನ್ಯೇನ ಆವಶ್ಯಕವಾಗಿರುತಿದೆ. ಏತದ್ವಿಷಯವಂ ಕುರಿತು ಪೂರ್ವ್ವಮಹರ್ಷಿಗಳು ಅನೇಕ ಗ್ರಂಥಗಳಂ ರಚಿಸಿದ್ದಾಗ್ಯೂ ಕಾಲಗತಿಯಿಂದವು ನಷ್ಟವಾಗಿ ನಾಮಮಾತ್ರಾವಶಿಷ್ಟಗಳಾಗಿವೆ. ಆದರೆ ಪ್ರಸಕ್ತ ಅರ್ಥಶಾಸ್ತ್ರವು ಇತರಶಾಸ್ತ್ರಗಳಂತೆ ಬಹಳ ಮುಖ್ಯವಾದುದೆಂದು ಪರಿಗಣಿಸಲ್ಪಟ್ಟಿರುತಿದೆ.

ಅರ್ಥಶಾಸ್ತ್ರನೆಂಬದು ಮನುಷ್ಯನಿಗೆ ಜೀವನಾಧಾರವಾಗಿರುವ ವಸ್ತುಗಳಂ ಪಡೆಯಲಿಕ್ಕೆ ಸಾಧನ ರೂಪವಾದ ಸಂಪತ್ತನ್ನು ಕುರಿತು ಬೋಧಿಸುತಿದೆಯಲ್ಲದೆ, ಒಂದು ದೇಶವು ಮತ್ತೊಂದು ದೇಶಕ್ಕಿಂತ ವಿಶೇಷ ಭಾಗ್ಯಸಂಪನ್ನರಾಗಿಯೂ, ಅತ್ಯಭ್ಯುದಯಶಾಲಿಗಳಾಗಿಯೂ ಇರಲಿಕ್ಕೆ ಕಾರ್ಯ ಕಾರಣಗಳಂ ಕುರಿತು ಸಹ ವಿಚಾರ ಮಾಡುವಂತಾ ಒಂದು ಪ್ರಬಲ ಶಾಸ್ತ್ರವಾಗಿರುತಿದೆ. ಏತಚ್ಛಾಸ್ತ್ರೋದ್ದೇಶವು ಲೋಕದಲ್ಲಿ ನಿರ್ಧನರಾದವರ ಸಂಖ್ಯೆಯು ಸಾಧ್ಯವಾದ ಮಟ್ಟಿಗೆ ಕಡಮೆಯಾಗಿ ಸರ್ವ್ವಕಾಲದಲ್ಲೂ ಅವರು ಸಂತೋಷಗಳಂ ಗಳಿಸಲಿಕ್ಕೂ, ಸಾಮಾನ್ಯರ ಧನಿಕರು ಕೂಡ ತಮ್ಮ ಪರಿಶ್ರಮಕ್ಕೆ ತಕ್ಕಂತೆ ಫಲವನ್ನು ಪಡೆಯಲಿಕ್ಕೂ, ಅವಶ್ಯ ಕರ್ತವ್ಯಗಳಾದ ವಿಷಯಗಳಂ ತಿಳಿಯುವದಕ್ಕೋಸ್ಕರ ಇದ್ದಾಗಿರುತಿದೆ. ಏತದುದ್ದೇಶವು ಸಾಫಲ್ಯವನ್ನೈದಲಿಕ್ಕೆ ಇತರ ಕೆಲವು ಶಾಸ್ತ್ರಗಳು ಸಹ ಸಹಕರಿಸುತಿವೆ ಯೆಂಬುದರೊಳಿಷ್ಟುಮಾತ್ರವೂ ಸಂದೇಹವಿರಲಾರದು. ಗಣಿತದೊಳೊಂದು ಪ್ರಭೇದವಾದ (Mechanics) ಯಂತ್ರಶಾಸ್ತ್ರವು ಯಂತ್ರೋಪಕರಣಗಳ ಶಕ್ತಿಸ್ವರೂಪಗಳನ್ನೂ ತಾದೃಶ ಶಕ್ತಿಯು ಯಂತ್ರವ್ಯಾಪಾರ ಕಾಲದಲ್ಲಿ ವಿನಿಯೋಗಿಸಲ್ಪಡಬೇಕಾದ ಬಗೆಯನ್ನೂ ವಿವರಿಸುತಿದೆ. (Chemistry) ರಸ ಗಂಧಕ ಪಾಷಾಣಾದಿ ಧಾತುವರ್ಗಗಳ ಸಮ್ಮೇಳನ ಕ್ರಮವನ್ನೂ, ಅದರಿಂದುಂಟಾಗುವಂತಾ ಅದ್ಭುತ ಫಲಗಳನ್ನೂ ಅರುಹುವಂತಾ ರಸಶಾಸ್ತ್ರವು, ಪ್ರಯೋಜನಕರಗಳಾದ ಪದಾರ್ಥಗಳಂ ಪಡೆಯುವ ವಿಧಾನವನ್ನೂ, ಧೂಮ ವ್ಯಾಪಾರಗಳಲ್ಲಿ ಅನುಪಯುಕ್ತವೆಂದು ಪರಿಹರಿಸಲ್ಪಟ್ಟ ಅಸಹ್ಯ ಪದಾರ್ಥಗಳಿಂದ ಮನೋಹರಗಳಾದ ನಾನಾವಿಧ ವರ್ಣಗಳು, ಪರಿಮಳ ದ್ರವ್ಯಗಳು, ದ್ರಾವಕಗಳು ಮೊದಲಾದವು ತೆಗೆಯುವ ರೀತಿಯನ್ನೂ ತಿಳಿಸುತಿದೆ. ಜ್ಯೋತಿಶ್ಶಾಸ್ತ್ರ ಪರಿಜ್ಞಾನವು ಸಮುದ್ರಯಾಯಿಗಳಾದ ನಾವಿಕರಿಗೆ ಅತ್ಯಂತಾಪೇಕ್ಷಿತವಾಗಿರುತಿದೆ. (Geology) ಭೂಶಾಸ್ತ್ರವು ಪಾರ್ಥಿವ ಪದಾರ್ಥ ತತ್ವವಿಮರ್ಶಕಶಾಸ್ತ್ರವಾದ್ದರಿಂದ ರತ್ನ, ಲೋಹ, ಕಲ್ಲಿದ್ದಲು, ಮೊದಲಾದವಂ ಭೂಮಿಯಿಂದ ಅಗೆದು ತೆಗೆಯುವದಕ್ಕೆ ಉಪಯುಕ್ತವಾಗಿರುತಿದೆ. ಹೀಗೆಯೇ ಅನೇಕ ಲೌಕಿಕ ಶಾಸ್ತ್ರಗಳು ಕೂಡ ಪಾನವ ಸುಖಾಭಿವೃದ್ಧಿಗೆ ಅತ್ಯಂತಾಪೇಕ್ಷಿತಗಳಾಗಿರುತಿವೆ. (Jurisprudence) ಜ್ಯೂರಿಸ್ಪ್ರುಡೆನ್ಸ

ಎಂದು ವ್ಯವಹರಿಸಲ್ಪಡುತಲಿರುವ ಧರ್ಮಶಾಸ್ತ್ರವನ್ನು ಧರ್ಮನ್ಯಾಯನೀತಿಗಳಿಂದರಕ್ಷಿತವಾದ ಮನುಷ್ಯರ ನ್ಯಾಯವಾದ ಸ್ವಾತಂತ್ರ್ಯಗಳು ಹ್ಯಾಗೆ ಆರ್ಜಿಸಲ್ಪಡಬೇಕೋ ಅದಂ ವಿವರಿಸುವಂತಾ ಒಂದು ಶಾಸ್ತ್ರವಿಶೇಷವೆಂದರಿಯತಕ್ಕದ್ದು. ಲೌಕಿಕಶಾಸ್ತ್ರವು ನಾನಾವಿಧ ಪ್ರಭುತ್ವ ಸ್ವರೂಪವನ್ನು ತತ್ತತ್ಪ್ರಯೋಜನಾಪ್ರಯೋಜನಗಳನ್ನು ಕುರಿತು ವಿಚಾರ ಮಾಡುತಿದೆ. ವಾರಿಕುಧ್ಯವಿಷಯವಿಮರ್ಶಕವಾದ ಆರೋಗ್ಯಶಾಸ್ತ್ರವು ರೋಗನಿಮಿತ್ತಗಳಂ ವಿವೇಚಿಸುತಿದೆ. ಪ್ರಜಾಸ್ಥಿತಿ ನಿರ್ಧಾರಕವಾದ ಪ್ರಕರಣಗಳು ಅವರ ಉಚ್ಚನೀಚಸ್ಥಿತಿ ಗತಿಗಳಿಗೂ, ಸಮಾಜ್ಯಕ್ಕೂ ಸಂಬಂಧಿಸುವ ಆವಶ್ಯಕಗಳಾದ ವಿಷಯಗಳನ್ನು ಕೆಲುರಿಸಿ ಬೋಧಿಸುತಿವೆ. ಮೇಲೆ ತಿಳಿಸಲ್ಪಟ್ಟಂತಾ ಶಾಸ್ತ್ರಸಮುದಾಯವು ನಾವು ಆರೋಗ್ಯೈಶ್ವರ್ಯ ವಿವೇಕಶಾಲಿಗಳಾಗಬೇಕಾದ ಮಾರ್ಗವಂನಮಗೆ ವ್ಯಕ್ತಪಡಿಸಲಿಕ್ಕೆ ಸಯುಕ್ತವಾಗಿರುತಿದೆ. ಪರಂತು (Political Economy) ಎಂಬುವ ಪ್ರಸಿದ್ಧ ಅರ್ಥಶಾಸ್ತ್ರವು, ಇತರ ಶಾಸ್ತ್ರಾಪೇಕ್ಷಯಾ ಭಿನ್ನವೆನಿಸಿ ಕೇವಲ ಐಶ್ವರ್ಯ ಸ್ವರೂಪಂ ವಿಚಾರಮಾಡತಕ್ಕದ್ದಾಗಿರುತಿದೆ. ಇದರಲ್ಲಿ, ಐಶ್ವರ್ಯಸ್ವರೂಪವೆಂತಾದ್ದೋ, ಅದು ಲಭಿಸಿದಬಳಿಕ ಅದು ಉತ್ತಮಮಾರ್ಗದಲ್ಲಿ ಹ್ಯಾಗೆ ವಿನಿಯೋಗಿಸಲ್ಪಡಬೇಕೋ, ಅರ್ಥಸಂಪಾದನ ವಿಷಯದಲ್ಲಿ ಇತರ ಶಾಸ್ತ್ರಗಳಪ್ರಯೋಜನವೆಷ್ಟರಮಟ್ಟಿಗೆ ಲಭಿಸಬಹುದೋ ಏವಮಾದಿವಿಷಯಗಳು ಪ್ರಾಧಾನ್ಯೇನ ಉಪಪಾದಿಸಲ್ಪಟ್ಟಿವೆ.

## ಸೌದೆ.

ಸೆಂಟ್ರಲ್ ಡಿಸ್ಟಿಲರಿಗೆ ಮಾಹೇಯಾನಾ ೧೫೦ ಟನ್ನುಗಳ ಮೊದಲು ೨೫೦ ಟನ್ನುಗಳವರಿವಿಗೆ ಸೌದೆ ಬೇಕಾಗಿರುವದರಿಂದ ಅದರಸರಬರಾಯಿ ಬಗ್ಗೆ ಬರುವ ದರಖಾಸ್ತುಗಳು ೧೮೯೩ನೇ ಇಸವಿ ಏಪ್ರಿಲ್ ೧೫ನೇ ತಾರೀಖ್ ವರಿವಿಗೆ ತೆಗದುಕೊಳ್ಳಲ್ಪಡುವವು. ಇತರ ತಪ್ಸೀಲ್ ತಿಳಿಯಬೇಕಾದರೆ ಬೆಂಗಳೂರ್ ಸೆಂಟ್ರಲ್ ಡಿಸ್ಟಿಲರಿಯಲ್ಲಿ, ಮೆಸ್ಸರ್ಸ್ ವ್ಯಾರಿ ಕಂಪೆನಿಯ ಏಜಂಟರನ್ನು ಕೇಳಿ ತಿಳದುಕೊಳ್ಳತಕ್ಕದ್ದು.

## ನೋಟೀಸ್.

ತುಮಕೂರು ಸೇವಿಂಗ್ಸ್‌ಬ್ಯಾಂಕ್ (ಲಿಮಿಟೆಡ್)

ಷೇರಹೋಲ್ಡರುಗಳ ಸಭೆ ೧೮೯೩ನೇ ಮಾರ್ಚಿ ೩೦ನೇ ರೆಜೊಲ್ಯೂಷನ್ ಪ್ರಕಾರ ಸದರೀ ಬ್ಯಾಂಕ್ ವೈಂಡಪ್ ಮಾಡಲ್ಪಟ್ಟಿರುತ್ತೆ.

ತಾ. ೩೦ನೇ ಮಾರ್ಚಿ ೧೮೯೩ನೇ ಇಸವಿ ತುಮಕೂರು — ಸುಬ್ಬರಾವ್, ಕರಣೀಕ ನಞ್ಜಪ್ಪ, ಬಿ ನಂಜುಂಡಯ್ಯ

## THE MONEY MARKET.

ಮದರಾಸ್, ಶನಿವಾರ, ತಾರೀಖ್ 8 ನೇ ಏಪ್ರಿಲ್ 1893

ಸೇಕಡ ೩|| ರೂ ಬಾಬತು ಗವರ್ನಮೆಂಟ್ ಪತ್ರಗಳು ರೂಪಾಯಿ, 104-12-0 ಇಂದ 105-2-0 ವರಿವಿಗೆ

ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತು 965 ಲಾಗಾಯತು 970 ವರಿವಿಗೆ

ಕಮರ್ಷಿಯಲ್ ವ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಷೇರುಗಳು, (100) ಬಾಬತು 160 ರಿಂದ 165 ವರಿವಿಗೆ

ಸವರನ್‌ಗಳು, 16-7-0 ಇಂದ 16-11-0 ವರಿವಿಗೆ

ಬ್ಯಾಂಕ್‌ಬಿಲ್‌ಗಳು ಯಾನೆ ವರ್ತನ ಹುಂಡಿಗಳು, ರೂಪಾಯಿಕ್ಕೆ

6 ತಿಂಗಳವಾಯಿದೆಗೆ, 1s 2 11/16d

ಡಿಟೋ 4 ತಿಂಗಳವಾಯಿದೆಗೆ, 1s 2 5/8d

ಡಿಟೋ ಕೇಳಿದಾಗ, 1s. 2 17/32d.


# ಕರ್ಣಾಟಕ ಪ್ರಕಾಶಿಕಾ.

## THE KARNATAKA PRAKASIKA.

MONDAY, APRIL 10, 1893

೧೮೯೩ನೇ ಇಸವಿ ಏಪ್ರೆಲ್ ತಾ|| ೧೦ ನೇ ಸೋಮವಾರ


## ಇಂಡ್ಯರಾಜ್ಯದ ಅರ್ಥೋತ್ಪತ್ತಿ.

ಇಂಡ್ಯರಾಜ್ಯದ ಪ್ರಕೃತ ಅರ್ಥೋತ್ಪತ್ತಿಯು ಈಗಿನಷ್ಟು ಅತೃಪ್ತಿಕರವಾಗಿ ಯಾವ ಕಾಲದಲ್ಲೂ ಇರಲಿಲ್ಲವು. ಈಚೆಗೆ ಕೆಲವು ಸಂವತ್ಸರಗಳ ಮೊದಲು ಸವರನ್ನುಗಳ ಬೆಲೆ ಕ್ರಮಕ್ರಮವಾಗಿ ಹೆಚ್ಚಿ ೧೦ ರೂಪಾಯಿಗಳ ಕ್ರಯವು ಹೋಗಿ ಸವರನ್ ಒಂದಕ್ಕೆ ಹದಿನೇಳು ರೂಪಾಯಿಗಳ ತನಕ ಕೊಡಬೇಕಾಗಿ ಬಂದದ್ದೇ ಅರ್ಥವಿಪತ್ತಿಗೆ ಮುಖ್ಯಕಾರಣವೆಂದು ಧಾರಾಳವಾಗಿ ಹೇಳಬೇಕಾಗಿದೆ. ಸವರನಿನ ಈಗಿನ ಕ್ರಯವನ್ನನುಸರಿಸಿ ಒಂದು ರೂಪಾಯಿಗೆ ಒಂದು ಷಿಲ್ಲಿಂಗ್ ಯರಡು ಪೆನ್ಸ್ ಆಗುತಿದೆ. ಅಂದರೆ ಒಂದು ರೂಪಾಯಿಗೆ ಯರಡು ಷಿಲ್ಲಿಂಗಿನಂತೆ ಲೆಕ್ಕ ಮಾಡಿ ತೆಗೆದುಕೊಳ್ಳಬೇಕಾದ್ದಕ್ಕೆ ಒಂದು ಷಿಲ್ಲಿಂಗ್ ಯರಡು ಪೆನ್ಸ್ ಪ್ರಕಾರ ತೆಗದುಕೊಳ್ಳುತ್ತಾರೆ. ಇಂಡ್ಯದೇಶದ ಹುಟ್ಟುವಳಿಯಿಂದ ಸಾಲೀಯಾನಾ ಅನೇಕ ಕೋಟಿ ರೂಪಾಯಿಗಳು ಇಂಗ್ಲಾಂಡಿಗೆ ಕಳುಹಿಸಬೇಕಾಗಿರುವದರಿಂದಲೂ, ಇಲ್ಲಿ ಪಾವತಿ ಆಗಬೇಕಾದ ಬಾಕಿಗಳೆಲ್ಲವು ಸವರನ್, ಅಂದರೆ ಚಿನ್ನ ಲೆಕ್ಕ ಪ್ರಕಾರ ಕೊಡಬೇಕಾಗಿರುವದರಿಂದಲೂ, ಸವರನ್ ಒಂದಕ್ಕೆ ಮುಮ್ಮಾರು ಹದಿನೇಳು ರೂಪಾಯಿಗಳ ಮೇರೆ ಲೆಕ್ಕ ಮಾಡಿ ಕೊಡುವದರಲ್ಲಿ ಕೋಟ್ಯಾಂತರ ರೂಪಾಯಿಗಳು ಜಾಸ್ತೀ ಖರ್ಚು ಬಿದ್ದು ತನ್ಮೂಲಕ ಬಹಳ ನಷ್ಟಕ್ಕೂ ಅರ್ಥಾನುಪಪತ್ತಿಗೂ ಅವಕಾಶ ಉಂಟಾಗಿರುತಲಿದೆ. ಈಚೆಗೆ ಸೇರಿದ ವೈಸ್‌ರಾಯವರ ಮಂತ್ರಾಲೋಚಕ ಸಮಾಜದಲ್ಲಿ ಲಾರ್ಡ್ ಲ್ಯಾನ್ಸ್‌ಡೌನ್ ಸಾಹೇಬರವರು ಮೇಲಿನ ಅಂಶವಂ ಕುರಿತು ಪ್ರಸ್ತಾಪಿಸಿ, ಯೆಕ್ಸ್‌ಚೇಂಜ್ ಅಂದರೆ ಇಂಗ್ಲಾಂಡ್ ದೇಶದ ಚಿನ್ನದ ನಾಣ್ಯಗಳಿಗೂ ಇಂಡ್ಯರಾಜ್ಯದಲ್ಲೀಗ ಚಲಾವಣೆಯಲ್ಲಿರುವ ಬೆಳ್ಳಿ ನಾಣ್ಯಕ್ಕೂ ಬದಲಿ ಬದಲಿ ಮಾಡುವದರಿಂದುಂಟಾಗುವ ನಷ್ಟವನ್ನು ಇಲ್ಲಿ ಹೊಸಕಂದಾಯ ಶರಾಪ್ ಮಾಡುವದರಿಂದ ಭರ್ತಿ ಮಾಡುವದು ವಿನಾ ಉಪಾಯಾಂತರವಿಲ್ಲವೆಂತಲೂ, ಅಂತಾ ಕಾಲವು ಕೇವಲ ಸನ್ನಿಹಿತವಾಗಿರುವದೆಂತಲೂ ತಿಳಿಸಿದರು. ಈ ವಿಷಮದ ನಷ್ಟವಂ ತಪ್ಪಿಸುವ ಉದ್ದೇಶದೊಡನೆ ಮಾಡಲ್ಪಟ್ಟ ಪ್ರಯತ್ನಗಳೆಲ್ಲವು ನಿಷ್ಫಲಗಳಾಗಿ ಹೋದವರಿಂದ ಸದರೀ ನಷ್ಟವಂ ಪ್ರಜೆಗಳಮೇಲೆ ಹೇರಿಸಲು ಯೋಚಿಸುತಲಿರುವಂತೆ ಕಾಣುತಿದೆ. ಇಂಡ್ಯರಾಜ್ಯಕ್ಕೆ ಸುತರಾಂ ಸಂಬಂಧವಿಲ್ಲದ ಅನೇಕ ಬಾಬ್ತುಗಳಿಗಾಗಿ ಇಂಗ್ಲಾಂಡಿಗೆ ಕಳುಹಿಸುವಮೊತ್ತವನ್ನೂ, ಇನ್ನೂ ಅನೇಕ ವಿಷಯಗಳಲ್ಲಿ ಮಾಡುವ ದುಬಾರೀ ಖರ್ಚುಗಳನ್ನೂ ಕಡಮೆ ಮಾಡುವದರ ಮೂಲಕವಾಗಿಯೂ, ಇಂಡ್ಯ ದೇಶದಲ್ಲಿ ಸುಲಭಕ್ರಯಕ್ಕೆ ಸಿಕ್ಕಬಹುದಾದ ಪದಾರ್ಥಗಳಂ ಜಾಸ್ತೀ ಕ್ರಯ ಕೊಟ್ಟು ವಿಲಾಯಿತಿಯಿಂದ ತರಿಸುವ ವಾಡಿಕೆಯಂ ತಪ್ಪಿಸುವದರ ಮೂಲಕವಾಗಿಯೂ, ಮೇಲಿನ ನಷ್ಟಕ್ಕೆ ಈಡುಮಾಡಿಕೊಳ್ಳುವಣವು ನ್ಯಾಯ್ಯವಾಗಿರುವಲ್ಲಿ ಅಂತಾಸುಲಭೋಪಾಯಗಳಂ ಯೋಚಿಸದೆ, ಈಗಲೆ ಕೇವಲ ಕಷ್ಟಜೀವಿಗಳಾಗಿರುವ ಪ್ರಜೆಗಳಮೇಲೆ ಹೊಸತೆರಿಗೆಯೊಂದು ಹೇರಿಸಿ, ಅವರು ಮತ್ತಷ್ಟು ಕಷ್ಟಕ್ಕೆ ಗುರಿಮಾಡುವಣವು ಸುತರಾಂ ಉಚಿತವಲ್ಲವು. ಇಂಗ್ಲಾಂಡಿನಿಂದ ಇಂಡ್ಯದೇಶಕ್ಕೆ ಬಂದು ನೌಕರಿಮಾಡತಕ್ಕವರಿಗೆ ಪೌಂಡು ಲೆಕ್ಕದಮೇಲೆ ಸಂಬಳಕೊಡುವದರಿಂದಲೂ, ಪೆನ್‌ಷನ್ ಪಡಕೊಂಡು ಸ್ವದೇಶಕ್ಕೆ ಹೋದಮೇಲೆ ಅವರಿಗೆ ಪೌಂಡಿನ ಲೆಕ್ಕದಮೇಲೆ ಪೆನ್‌ಷನ್ ಕೊಡುವದರಿಂದಲೂ, ಅವರು ಫರ್ಲೋ ರಜಾಮೇಲೆ ಸ್ವದೇಶಕ್ಕೆ ಹೋಗುವ ಕಾಲದಲ್ಲಿ ಅವರ ತಲಬ ಪೈಕಿ ಒಂದು ಭಾಗವನ್ನು ಇಂಗ್ಲಾಂಡಿಗೆ ಕಳುಹಿಸಬೇಕಾಗಿರುವದರಿಂದಲೂ, ಇಂಡ್ಯರಾಜ್ಯದ ಕಾರ್ಯಾರ್ಥವೆಂಬ ನೆವದಮೇಲೆ ಇಂಗ್ಲಾಂಡಿನಲ್ಲಿ ಒಂದು ಭಾರೀ ಲವಾಜಮೆಯನ್ನಿಟ್ಟುಕೊಂಡು ಅವರಿಗೆಲ್ಲ ಪೌಂಡಿನಲ್ಲಿ ತಲಬಗಳು ಸಲ್ಲುತಲಿರುವದರಿಂದಲೂ ಇಂಡ್ಯದೇಶದ ಹುಟ್ಟುವಳಿಯು ಪೈಕಿ ಇಪ್ಪತ್ತರಲ್ಲೊಂದುಭಾಗಕ್ಕೆ ಅಧಿಕವಾಗಿ ಇಂಗ್ಲಾಂಡಿಗೆ ಕಳುಹಿಸಬೇಕಾಗಿ ಬಂದು ಅಂತಾ ಭಾರಿ ಮೊತ್ತಕ್ಕೆ ಹೆಚ್ಚುಕೊಡಬೇಕಾಗಿರುವದರಿಂದ ಇಷ್ಟು ನಷ್ಟಕ್ಕೂ ಸಂಕಷ್ಟಕ್ಕೂ ಆಸ್ಪದವುಂಟಾಯಿತು. ಇದು ಕಡಮೆಯಾಗುವ ಪಕ್ಷದಲ್ಲಿ ತನ್ಮೂಲಕ ಉಂಟಾಗಿರುವ ನಷ್ಟವೂ ಕಡಮೆಯಾಗುವದರಲ್ಲಿ ಸಂದೇಹವಿಲ್ಲಾದವು. ಪರಂತು ಪ್ರಸ್ತುತ ಗವರ್ನಮೆಂಟಿನವರು ಉಪಯೋಗಿಸುತಲಿರುವ ರಾಜ್ಯತಂತ್ರಕ್ರಮವಂ ಕುರಿತು ಯೋಚಿಸಲಾಗಿ ಅವರು ವಿಲಾಯಿತಿ ಖರ್ಚನ್ನಾಗಲಿ ಮಿಲಿಟರಿ ಖರ್ಚನ್ನಾಗಲಿ ಕಡಮೆ ಮಾಡುವರೆಂದು ನಾವು ಹಂಬಲಿಸಲಾರೆವು, ಯೇಕಪ್ಪಂದರೆ, ಹಾಗೆ ಮಾಡುವಣವು ಇಂಗ್ಲಾಂಡಿನಿಂದ ಸ್ವಾರ್ಥಸಂಪಾದನಾರ್ಥ ಇಂಡ್ಯದೇಶಕ್ಕೆ ಬರತಕ್ಕವರೆಲ್ಲರಿಗೂ ಬಾಧಕವಾಗಿರಬಹುದಾದುದರಿಂದ ಅದರ ಲಾಭವನ್ನೇ ಪ್ರಾಧಾನ್ಯವಾಗಿ ಭಾವಿಸುವರೆಂದು ಯೆಣಿಸಬೇಕಾಗಿದೆ. ಈ ಅರ್ಥಕ್ಕೆ ನಿದರ್ಶನರೂಪವಾಗಿ ಅನೇಕ ಕಾರ್ಯಗಳು ನಡೆದೂ ನಡೆಯುತಲೂ ಇರುವದರಿಂದ ಅದರ ವಿವರಣವು ಇಲ್ಲಿ ಅನಾವಶ್ಯಕತ್ವೇನ ಭಾವಿಸುವೆವು. ಏತೇನ ಇಂಡ್ಯರಾಜ್ಯದ ಅಲ್ಪೈಶ್ವರ್ಯವು ಸಹ ಅನ್ಯದೇಶಗಳಿಗೆ ಸಾಗಿ ಹೋಗುವದಕ್ಕೆ ಉಂಟಾಗಿರುವ ಬಹುವಿಧ ಮಾರ್ಗಗಳಲ್ಲಿ ಇದು ಮುಖ್ಯವಾಗಿ ಏರ್ಪಟ್ಟದ್ದು ಇಂಡ್ಯದೇಶೀಯರ ದುರ್ಗತಿಯೆಂದು ಯೆಣಿಸಬೇಕಾಗಿರುವುದು

## Occasional Notes
## ನೈಮಿತ್ತಿಕ ವಿಷಯನ್ಯಾಸ

ಗಡಿಗೆಗಳಿಂದ ನೀರು ಸೇದಿ ಹಾಕಿ ಬೆಳೆಸುವ ಬೆಳೆಗಳಿಗೆ ಕಂದಾಯ ದಾಖಲ್ಮಾಡಬೇಕೆಂತಲೂ, ಪರಂತು ಹಾಗೆ ಮಾಡುವ ಬೆಳೆಗಳು ಚೆನ್ನಾಗಿ ಆಗದ ಪಕ್ಷದಲ್ಲಿ ಕಂದಾಯ ಪಜಾ ಕೊಡಬೇಕೆಂತಲೂ ಮದರಾಸ್ ರೆವಿನ್ಯೂ ಬೋರ್ಡಿನವರು ಕಳುಹಿಸಿದ ಸಲಹೆಯನ್ನು ಗವರ್ನಮೆಂಟಿನವರು ಮಂಜೂರ್ಮಾಡಿರುತ್ತಾರೆ

ಕಲ್ಕತ್ತಾ ಹೈಕೋರ್ಟ್ ನೇಟಿವ್ ಜಡ್ಜಿಯರಾದ ಸರ್ ರೊಮೇಶ ಚಂದ್ರಮಿತ್ತರ್ ಮತ್ತು ಈಗಿನ ಜಡ್ಜಿಗಳಲ್ಲಿ ಪ್ರಸಿದ್ಧರಾದ ಮಿ|| ಗುರುದಾಸ ಬ್ಯಾನರ್ಜಿ, ಈ ಒಬ್ಬರು ದೊಡ್ಡಮನುಷ್ಯರುಗಳ ಪ್ರೋತ್ಸಾಹದಿಂದ ಪಂಡಿತ ಜಯಚಂದ್ರ ಸಿದ್ಧಾಂತಭೂಷಣ ಎಂಬವರು ಸಂಸ್ಕೃತಚಂದ್ರಿಕೆ ಎಂಬ ಹೆಸರಿನಿಂದ ಒಂದು ಗೀರ್ವಾಣ ಭಾಷಾ ಪತ್ರಿಕೆಯಂ ಪ್ರಕಟಿಸಲಾರಂಭಿಸುವದಕ್ಕೆ ಪ್ರಯತ್ನಪಡುತಲಿರುತ್ತಾರೆಂದು ತಿಳಿದು ಬರುತಿದೆ

ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಪ್ರಾಸಿಕ್ಯೂಷನ್ಗೆ ಹಾಜರ್ಮಾಡುವ ಸ್ಟ್ಯಾಂಪುಗಳನ್ನು ತ್ಯಜಿಸಿ ಆವಶ್ಯಕತೆ ಕಂಡುಬರುವವರೆಗೆ [illegible] ಕಡಿಸಕೂಡದೆಂತಲೂ, ಅದುಹೆರೆಗೆ ಸದರೀ ಸ್ಟ್ಯಾಂಪುಗಳನ್ನು ನಗದು ಹಣದಂತೆ ಭಾವಿಸತಕ್ಕದ್ದೆಂತಲೂ, ಒಂದುವೇಳೆ ಪ್ರಾಸಿಕ್ಯೂಷನ್ ಸಾದರಾಗದ ಪಕ್ಷಕ್ಕೆ ಅವು ಹಾಜರ್ಮಾಡಲ್ಪಟ್ಟ ಕಾಲದಲ್ಲಿದ್ದಂತೆಯೇ ಕಕ್ಷಿಗಾರರಿಗೆ ವಾಪಸ್ ಮಾಡಲ್ಪಡಬಹುದೆಂತಲೂ ಈಚೆಗೆ ಮದರಾಸ್ ರೆವಿನ್ಯೂ ಬೋರ್ಡಿನವರು ಹುಕುಂ ಮಾಡಿರುತ್ತಾರೆ. ಈ ಹುಕುಂ ಕಕ್ಷಿಗಾರರಿಗೆ ಬಹಳ ಉಪಯುಕ್ತವಾದುದೆ.

ಫಾಸೀ ಸಜಾ ವಿಧಿಸಲ್ಪಟ್ಟವರನ್ನು ಗಲ್ಲಿಗೆ ಹಾಕುವ ಕಾಲದಲ್ಲಿ ಹಾಜರಿರುವದಕ್ಕೆ ಯಾವತರಗತಿಗೆ ಸೇರಿದ ಮ್ಯಾಜಿಸ್ಟ್ರೇಟಗಳನ್ನು ನಿಯಮಿಸಬೇಕೊ ಆಬಗ್ಗೆ ಹುಕುಂ ಆಗಬೇಕೆಂದು ಅಪೇಕ್ಷಿಸಿ, ಸ್ಥಳದಲ್ಲಿರುವ ಸ್ಟೇಷನರಿ ಮ್ಯಾಜಿಸ್ಟ್ರೇಟನ್ನು ಸದರೀ ಕಾರ್ಯಕ್ಕೆ ನಿಯಮಿಸಬಹುದೆಂದು ಸೂಚಿಸಿ ದಕ್ಷಿಣ ಆರ್ಕಾಡು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಈಚೆಗೆ ಗವರ್ನಮೆಂಟಿಗೆ ಬರೆಯಲು, ಈ ಅಭಿಪ್ರಾಯವನ್ನು ತಾವು ಒಪ್ಪುವಂತೆಯೂ, ಪರಂತು ಡಿಸ್ಟ್ರಿಕ್ಟ್‌ಮ್ಯಾಜಿಸ್ಟ್ರೇಟರು ತಮಗೆ ಯುಕ್ತವಾಗಿ ಕಂಡುಬರುವ ಯಾವ ಮ್ಯಾಜಿಸ್ಟ್ರೇಟರನ್ನಾಗಲಿ ನಿಯಮಿಸಬಹುದೆಂತಲೂ ಗವರ್ನಮೆಂಟಿನವರು ಜವಾಬ್ ಕೊಟ್ಟಿರುತ್ತಾರೆ

ಕಲ್ಕತ್ತೆಯೊಳು ಒಂದು ಮನೆಯ ಯಜಮಾನನಿಗೆ ೬೦೦ ರೂಪಾಯಿಗಳು ಸಾಲ ಬೇಕಾಗಿದ್ದು ಅದು ದುರ್ಲಭವಾಗಲು ಆತನ ಹೆಂಡತಿಯು ತನ್ನ ಒಡವೆಗಳು ೪೦೦ ರೂಪಾಯಿಗಳಿಗೆ ತೆಗದುಕೊಂಡದ್ದಾದುದರಿಂದ ಲವ ಅಡವಿಟ್ಟು ಪಣ ತರುವಂತೆ ಹೇಳಿ ಹೋಗಿ ಯಲ್ಲಿ ಪ್ರಯತ್ನ ಮಾಡಿದಾಗ್ಯೂ ಹಣ ಸಿಕ್ಕದೆ ವಾಪಸ್ ಬಂದದರಿಂದ ಗಂಡನು ಕೇವಲ ಚಿಂತೆಯೊಡನೆ ಭಗ್ನಮನಸ್ಕನಾಗಿ ಆತ್ಮಹತ್ಯ ಮಾಡಿಕೊಳ್ಳಬೇಕೆಂದು ಯೋಚಿಸಿ ನೇಣು ಹಾಕಿಕೊಂಡ ಸಂಗತಿ ತಿಳಿಯಬಂದು ಕಡಲೇ ಅವನನ್ನು ಇಳಿಸಿ ಚಿಕಿತ್ಸೆಯ ಬಗ್ಗೆ ಆಸ್ಪತ್ರೆಗೆ ಕಳುಹಿಸಲು ಬೆನ್ನುಹುರಿಗೆ ತಗಲಿದ ಘಾಯಗಳ ದೆಸೆಯಿಂದ ಆಲ್ಲೇ ಮೃತಪಟ್ಟನಂತೆ

ಇಂಡಿಯಾ ದೇಶದ ಸೈನ್ಯಕ್ ಕಮಾಂಡರ್ ಇನ್ ಚೀಫ್‌ರವರಾದ ಲಾರ್ಡ್ ರಾಬರ್ಟ್ಸ್ ಸಾಹೇಬರವರೂ ಈಗ ಕಮಾಂಡರ್ ಇನ್ ಚೀಫರವರಾಗಿ ನೇಮಕರ್ಮಾಡಲ್ಪಟ್ಟು ಬಂದಿರುವ ಸರ್ ಜಾರ್ಜ್ ವೈಟ್ ಸಾಹೇಬರವರೂ, ಅವರವರ ಕೈಕೆಳಗಿನ ಮುಖ್ಯ ಉದ್ಯೋಗಸ್ಥರೂ ಸೇರಿ, ಈ ತಿಂಗಳ ೫ ನೇ ತಾರೀಖಿನೊಳು ಜೋದಪುರದಲ್ಲಿ ಹಂದಿ ಬೇಟೆಯಾಡುತ್ತಿರುವಲ್ಲಿ, ಅಲ್ಲಿನ ಮಹಾರಾಜರಾದ ಸರ್ ಪ್ರತಾಪಸಿಂಗರ ಕುದುರೆ ಕೆಳಗೆ ಬೀಳಲು ಮಹಾರಾಜರುಸಹ ಒಂದು ನಾಲೆಯಲ್ಲಿ ಬಿದ್ದುಬಿಟ್ಟರು. ಇವರು ಹೊಡೆಯಲೆತ್ನಿಸಿದ ಕಾಡುಹಂದಿಯು ಮಹಾರಾಜರವರಮೇಲೆ ತಿರುಗಿಬಿದ್ದು ಅವರ ತೊಡೆಯನ್ನು ಸೀಳಬಿಡಲು ಅರಸರವರು ತತ್ಸನ್ನಿಹಿತವಿದ್ದ ಬಾಕನ್ನು ತೆಗದುಕೊಂಡು ಅತಿ ಧೈರ್ಯದೊಡನೆ ಸದರೀ ಹಂದಿಯನ್ನು ತಿವಿದು ಕೊಂದುಹಾಕಿದರು. ಮಹಾರಾಜರವರಿಗೆ ತಕ್ಕ ಚಿಕಿತ್ಸೆಯ ಮೂಲಕ ಈಗ ಆರೋಗ್ಯ ಉಂಟಾಗುತಲಿದೆ

## LOCAL AND PROVINCIAL NEWS
## ಒಳದೇಶಮತ್ತು ತಾಲ್ಲೂಕ್‌ಜಾತಿವೃತ್ತಾಂತಗಳು.

ಈ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಕರ್ನಲ್ ಹೆಂಡರ್‌ಸನ್ ಸಾಹೇಬರವರು ಬೇಸಿಗೆಯ ಬಗ್ಗೆ ಕಳೆದ ಶನಿವಾರದ ದಿನ ಬೆಳಗ್ಗೆ ನೀಲಗಿರಿಗೆ ಪ್ರಯಾಣವಾದರು

ಶ್ರೀಮನ್ ಮಹಾರಾಜರವರ ಮಂತ್ರಾಲೋಚಕ ಸಭೆಯ ಮೆಂಬರಾದ ಆನರೆಬಲ್ ಮಿ|| ಪಿ ಚೆಂಚಲ್ ರಾವು ವೈಸ್‌ರಾಯವರ ಮಂತ್ರಾಲೋಚಕ ಸಮಾಜದ ಮೆಂಬರ್‌ಗಿರಿ ಬಗ್ಗೆ ಈಚೆಗೆ [illegible] ಮೂರು ತಿಂಗಳ ಕಾಲದ [illegible] ಕಲ್ಕತ್ತೆ [illegible] ಸದರೀ ದೊಡ್ಡ [illegible] ಈ ತಿಂಗಳ ೬ನೇ ತಾರೀಖಿನದಿವಸ [illegible] ಮೈಸೂರಿಗೆ ವಾಪಸ್ ಬಂದುಸೇರಿದರೆಂದು ತಿಳಿಯಲಾದೆವು.

ಶ್ರೀಮನ್ ಮಹಾರಾಜರವರ ಜ್ಯೇಷ್ಠಪುತ್ರರವರು ಜ್ವರದಿಂದ ಅಸ್ವಸ್ಥ ಸ್ಥಿತಿಯಲ್ಲಿರುವ ಕೆ ಕಳೆದ ಬುಧವಾರದ ದಿನ ತಂತಿ ವೃತ್ತಾಂತ ಬಂದು ಕೂಡಲೇ ಡಿವಾನರವರೂ ಡಾಕ್ಟರ್ ಮೆಗ್ಗನ್ ಸಾಹೇಬರವರೂ ಮೈಸೂರಿಗೆ ಪ್ರಯಾಣವಾದರೆಂದು ಒಳದೇಶದ ಈವನಿಂಗ್ ಮೆಯಿಲ್ ಪತ್ರಿಕೆಯ ಮೂಲಕ ತಿಳಿಯಬರುತಿದೆ. ಶ್ರೀಮನ್ ಯುವರಾಜರವರಿಗೆ ಕ್ಷಿಪ್ರದಲ್ಲಿ ಆರೋಗ್ಯಭಾಗ್ಯವನ್ನೀಯಬೇಕೆಂದು ಶ್ರೀಹರಿಯಂ ಬೇಡುವೆವು.

ಕಳೆದ ಶನಿವಾರದದಿನ ಈಪೂರು ಪಿಂಜಾರಪೇಟೆಯಲ್ಲಿನ ಮನ್ಸೂರ್‌ಸಾಹೇಬರ ಗುಡಿಯಬಳಿ ಒಂದು ಹುಲ್ಲುಮನೆಗೆ ಬೆಂಕಿ ತಗಲಿ ಅದರೊಳಗಿದ್ದ ಸಾಮಾನುಗಳೆಲ್ಲ ಸುಟ್ಟುಹೋದಂತೆ ಕೇಳುತ್ತೇವೆ. ದೊಡ್ಡ ಷಹರ್ ಜಾಗಗಳೊಳು ಮ್ಯೂನಿಸಿಪಲ್ ಸರಹದ್ದಿನೊಳಗೆ ಹುಲ್ಲು ಮನೆಗಳು ಇರಕೂಡದೆಂಬ ನಿಬಂಧನೆ ಇರುವಂತೆ ಕೇಳುತ್ತೇವೆ. ಅದು ನಿಜವಾಗಿರುವ ಪಕ್ಷಕ್ಕೆ ಈ ಷಹರ್ ಮ್ಯುನಿಸಿಪಲ್ ಅಧಿಕಾರಿಗಳು ಯೆಚ್ಚರಗೊಂಡು ಸದರೀ ನಿಬಂಧನೆಯಂ ಕೂಡಲೇ ಜಾರಿಯೊಳು ತರುವರೆಂದು ನಂಬುತ್ತೇವೆ.

ಹವಾ ವಿಷಯದಲ್ಲಿ ಅಧಿಕಾಂಶ ಯಾವ[illegible]ಯಿಲ್ಲವು, ಪರಂತು ಬಿಸಿಲು ದಿನೇ ದಿನೆ ಜೋರಾಗುತಲಿದೆ. ಆಹಾರ ಪದಾರ್ಥಗಳ ಧಾರಣೆ

ಗಳು ಬ್ರಾಯಿಕ ಒಂದೇವಿಧವಾಗಿದೆ ಮೇಲ್ಕಂಡ ಹೆಸರಿನಿಂದ ಮಾರಲ್ಪಡುವ ನೀರು ಮಡಕೆಗಳು ಧಾರಣೆ ಕೇರು ಒಂದಕ್ಕೆ ದೂರದಿಂದ ಅರ್ಧ ರೂಪಾಯಿಯಿತ್ತು. ಈಗ ಧಾರಣೆಯು ಒಂದಕ್ಕೆ ಮುಕ್ಕಾಲು ರೂಪಾಯಿ ಹೆಚ್ಚು. ಇನ್ನು ಹೆಚ್ಚಾಗುವ ಸೂಚನೆಗಳು ಕಾಣಬರುತಲಿವೆ. ಇದಕ್ಕೆ ಗ್ರಾಮಾಂತರಗಳಿಂದ ಈ ನಗರಿಗೆ ವ್ಯಾಪಾರಾರ್ಥ ಬರುವ ಜನರ ಮೂಲಕ ವಿಷಮಜ್ವರವು ಮುಖ್ಯವಾದದ್ದಾಗಿ ಹೇಳಬೇಕಾಗಿರುವದು. ಇಲ್ಲಿನ ಪ್ರಜೆಗಳ ಆರೋಗ್ಯ ಸ್ಥಿತಿಯು ಕೇವಲ ಚಿಂತನೀಯವಾಗಿರುತ್ತದೆ. ಜ್ವರರೋಗದಿಂದ ಅನೇಕರು ಮೃತಿ ಹೊಂದುತಲಿದ್ದಾರೆ. ಈಗಿನ ಜ್ವರವು ತನ್ನ ಶಕ್ತಿ ಹೊಂದು ಅನಾಯಾಸವನ್ನೇ ಮಾಡಬೇಕಾಗಿರುತ್ತದೆ.

ಇಲ್ಲಿನ ದಕ್ಷಿಣ ಭಾಗದ ಕೆರೆಯ ನೀರು ಸ್ವಲ್ಪ ನೀರು ಸಹ ಬತ್ತಿ ಹೋಗಿ ಈಗ ಕೆರೆಯೊಳಗೆ ಹಳ್ಳಗಳು ತೆಗೆಯಿಸಿ ಅದರಿಂದ ಪೇಟೆ ಬೀದಿಗೆ ನೀರು ಬಿಡುತಲಿದ್ದಾರೆ. ಈ ನೀರು ಕೇವಲ ರೋಗಕಾರಿಯೆಂದು ಭಾವಿಸಬಹುದು. ಅದನ್ನು ಚೆನ್ನಾಗಿ ಕಾಯಿಸಿ ಕುಡಿಯಬೇಕೆಂದು ಮ್ಯುನಿಸಿಪಾಲಿಟಿಯವರು ಡಂಗೂರದ ಮೂಲಕ ಪ್ರಕಟಪಡಿಸಿರುತ್ತಾರೆ. ಅದು ವಿನಾ ಈ ಪೇಟೆಗೆ ನೀರಿಗೆ ಗತ್ಯಂತರವಿಲ್ಲವಾಗಿ ರೋಗಗಳನ್ನು ನಾವು ಅನುಭವಿಸಿಕೊಂಡು ಅದೇ ನೀರನ್ನು ಕುಡಿಯಬೇಕಾದವರಾಗಿರುತ್ತೇವೆ. ಈಚೆಗೆ ವರ್ಷಚಿಹ್ನೆಗಳು ಅಲ್ಲಲ್ಲಿ ಸ್ವಲ್ಪ ಕಾಣಬರುತಲಿವೆ. ಪರಮ ಕೃಪಾಳುವಾಗಿ ಮಳೆಗರೆದು ಪ್ರಾರಂಭವಾಗಿ ಜಲಾಶಯಗಳಿಗೆ ಸಮೃದ್ಧಿಯಾಗಿ ನೀರು ಬರುವವರೊಳಗಾಗಿ ಜುಲೈಯಲ್ಲಿ ಈ ಪುರದ ಜನರಿಗೆ ಪ್ರಾಣಕಷ್ಟ ಪ್ರಾಪ್ತವಾಗದೆ ಹೋಗಲಾರದೆಂದು ಕಾಣುತ್ತದೆ. ಈ ಪುರದ ಮ್ಯುನಿಸಿಪಾಲಿಟಿಯವರು ತಾತ್ಕಾಲಿಕವಾಗಿಯಾದರೂ ಸಾಧ್ಯವಾದ ಮಟ್ಟಿಗೆ ಜಲಾನುಕೂಲ್ಯವನ್ನುಂಟುಮಾಡಬೇಕೆಂದು ಮಾಡಿದ ಪ್ರಯತ್ನವು ಪ್ರಯೋಜಕಾರಿಯಾಗದೆ ಹೋದದ್ದಕ್ಕೆ ಬಹಳ ವಿಷಾದಿಸುತ್ತೇವೆ.

ಬೆಂಗಳೂರು ಡಿಸ್ಟ್ರಿಕ್ಟು ನೆಲಮಂಗಲ ತಾಲ್ಲೂಕು ಆಯಿಮರಪುರದ ಪುರವಳ್ಳಿದ ಪ್ರಾಂತ್ಯದ ಸೋಮನಾಥಪುರದ ಮಗಳು ಮಗಳಾದ ಶ್ರೀ ಯೆಂಬ ಹುಡುಗಿಯನ್ನು ಹೆಸರಘಟ್ಟದಲ್ಲಿರುವ ಪಾಠಶಾಲೆ ಸೋಮನಾಥಪುರದ ಅಣ್ಣನ ಮಗನಾದ ಸುಬ್ಬರಾಯನು ೧೮೯೧ನೆ ಇಸವಿ ಫೆಬ್ರುವರಿ ೨೮ ನೇ ತಾರೀಖಿನಲ್ಲಿ ಹೆಸರಘಟ್ಟ ಗ್ರಾಮದ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ವಿವಾಹ ನಡೆದ ಸಮಯದಲ್ಲಿ ವಿವಾಹವು ಬಾಗಿ, ಸದರೀ ಸೋಮನಾಥನಾಯಿಸೂ ಆತನ ಮಗನಾದ ತಿಮ್ಮನ್ನಾರಾಯಿಸಿಯೂ ಸೇರಿ ಬೆಂಗಳೂರು ಡಿಸ್ಟ್ರಿಕ್ಟ ಹುಜೂರ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಸದರೀ ಸುಬ್ಬರಾಯನ ಮೇಲೆ ಕ್ರಿಮಿನಲ್ ಚಾರ್ಜ ಮಾಡಿ ನಡೆದ ವಿಚಾರಣೆಯಲ್ಲಿ ವಿವಾಹವು ನಡೆದದ್ದಿಲ್ಲವೆಂದು ಅವರೆಲ್ಲರ ಪರವಾಗಿ ಮ್ಯಾಜಿಸ್ಟ್ರೇಟರು ತೀರ್ಮಾನಿಸಿದ್ದರಿಂದ, ಅದು ಉರ್ಜಿತವಾದ ಮದುವೆ ವಿಷಯವಾಗಿ ಮುಗಿಯಿತು. ಹೀಗಿರುವಲ್ಲಿ ಸನ್ ೧೮೯೩ ನೇ ಇಸವಿ ಫೆಬ್ರುವರಿ ತಿಂಗಳಲ್ಲಿ ಮೊದಲು ವಿವಾಹವಾದ ಸದರೀ ಮೈನರ್ ಹುಡುಗಿಯ ಸೋದರಮಾವನಾದ ತಿಮ್ಮಪ್ಪವಧಾನಿಯೂ ಆತನ ತಮ್ಮನಾದ ಸುಬ್ಬಭಟ್ಟರೂ ಇನ್ನು ಕೆಲವರೂ ಸೇರಿ ಸದರೀ ಹುಡುಗಿಯನ್ನು ಕರೆದುಕೊಂಡು, ನೆಲಮಂಗಲ ಡಿಸ್ಟ್ರಿಕ್ಟು ಡಾಕಣೀಕೋಟೆ ತಾಲ್ಲೂಕು ತೊಳಸಮೀಪದಲ್ಲಿ ಇರುವ ಆರೋಳ್ಳಿ ಗ್ರಾಮಕ್ಕೆ ಹೋಗಿ, ಚಿತ್ರದುರ್ಗ ಡಿಸ್ಟ್ರಿಕ್ಟು ಜಾಗಜಾಪುರ ಕೃಷ್ಣಶಾಸ್ತ್ರಿಯ ಮಗ ತಿಮ್ಮಪ್ಪನೆಂಬುವನಿಗೆ ಕೊಟ್ಟು ಲಗ್ನ ಮಾಡಿದ ಸಂಗತಿ ಮೊದಲು ವಿವಾಹಮಾಡಿಕೊಂಡಿದ್ದ ಸುಬ್ಬರಾಯನಿಗೆ ತಿಳಿಯಬಂದು ಆತನು ಡಾಕಣೀಕೋಟೆ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಸದರೀ ಕೃತ್ಯ ನಡೆಸಿದವರ ಮೇಲೆ ಕ್ರಿಮಿನಲ್ ದಾವೆ ಮಾಡಲು, ಅಪರಾಧಿಗಳೆಲ್ಲ ಸಮ್ಮನ್ ಹುಟ್ಟಿ ಸಾದರಾದ ಮರಣ್ಯಕಿ ಆಯಿದುಮಂದಿ ಕೋರ್ಟಿಗೆ ಹಾಜರಾಗಿ ಭಾರೀ ಜಾಮೀನುಗಳಮೇಲೆ ಬಿಡಲ್ಪಟ್ಟಿರುತ್ತಾರೆ. ಲಗ್ನವಾದ ಆ ಹುಡುಗಿಯೂ, ಅವಳ ತಾಯಿಯೂ, ಯೆರಡನೇ ವಿವಾಹವಾದ ತಿಮ್ಮಪ್ಪನೂ ಪರಾರೀಯಾಗಿರುತ್ತಾರೆ. ಅವರ ಮೇಲೆ ವಾರಂಟಾಗಿರುತ್ತೆ. ಈ ತಿಂಗಳ ೨ನೇ ತಾರೀಖಿಗೆ ವಿಚಾರಣೆ ನಿಷ್ಕರ್ಷೆಯಾಗಿರುತ್ತೆಂದು ನಮ್ಮ ಡಂಕಣಿಕೋಟೆ ಬಾತ್ಮೀದಾರನು ತಿಳಿಸುತ್ತಾನೆ.

## ಹರಿಹರಪುರ.

ಶ್ರೀಮನ್ಮಹಾರಾಜರವರ ಪಟ್ಟಾಭಿಷೇಕ ವರ್ಷವರ್ಧಂತಿ ಮಹೋತ್ಸವದ ಪ್ರೊಸೀಡಿಂಗ್ಸ್.

ಈ ದಿವಸ, ಅಂದರೆ ಸನ್ ೧೮೯೩ನೇ ಇಸವಿ ಮಾರ್ಚಿ ೨೫ನೇ ತಾರೀಖು ಶನಿವಾರದ ದಿನ ಶ್ರೀಮನ್ಮಹಾರಾಜ ಶ್ರೀ ಚಾಮರಾಜೇಂದ್ರ ಒಡೆಯರವರ ಪಟ್ಟಾಭಿಷೇಕದ ದಿನವಾದ್ದರಿಂದ ಈ ದಿವಸ ತಾಲ್ಲೂಕು ಅಮಲ್ದಾರರವರಿಂದ ಗ್ರಾಮ ವಗೈರೆ ಶೃಂಗರಿಸಿ ಮಂಗಳ ತೋರಣಗಳು ಕಟ್ಟಿಸಲ್ಪಟ್ಟು ಶ್ರೀ ಸೋಮೇಶ್ವರ, ನಾರದವೇಶ್ವರ, ವೆಂಕಟರಮಣಸ್ವಾಮಿ ವಗೈರೆ ಆಲಯಗಳಲ್ಲಿ ಅಭಿಷೇಕ ಪೂಜೆ ನೈವೇದ್ಯ ವಗೈರೆ ವಿಜೃಂಭಣೆಯಿಂದ ಮಾಡಲ್ಪಟ್ಟಿತು. ಅನಂತರ ಸಾಯಂಕಾಲದಲ್ಲಿ ಈ ಹರಿಹರಪುರದ ವೆಂಕಟರಮಣಸ್ವಾಮಿ ಸನ್ನಿಧಿಯಾದ ನುಗ್ಗಿ ಮಕ್ಕಿ ಮಲ್ಲೇಶಯ್ಯನವರ ಛತ್ರದಲ್ಲಿ ಅಮಲ್ದಾರ್ ವಗೈರೆ ಯೆಲ್ಲ ನೌಕರರುಗಳೂ, ಸಾಹುಕಾರ್ ನುಗ್ಗಿ ಮಕ್ಕಿ ಮಲ್ಲೇಶಯ್ಯನವರು, ರಂಗಣ್ಣ ಉಪಾಧ್ಯರು, ಜಮ್ಮಿಟಗೆ ವಿಶ್ವೇಶ್ವರ ಭಟ್ಟರು, ಗುಂಡೇರಾಯರು ವಗೈರೆಯವರೆಲ್ಲರೂ ದರ್ಬಾರ್ ಮಾಡಿದರು. ಸದರೀ ದೇವರಿಗೆ ಪೂಜೆ, ನೈವೇದ್ಯ, ಮಂಗಳಾರತಿ, ಮಂತ್ರಪುಷ್ಪ ವಗೈರೆಗಳನ್ನು ಮಾಡಿಸಿ ಸಭೆಗೆ ಬಂದಿದ್ದ ಯೆಲ್ಲ ಬ್ರಾಹ್ಮಣ ಸುವಾಸಿನಿಗಳಿಗೂ, ಬಾಲಕರಿಗೂ, ನೌಕರರಿಗೂ ಸಕ್ಕರೆಯೂ ಬೇರೆ ಗಂಧಪುಷ್ಪ ತಾಂಬೂಲಗಳೂ ಕೊಟ್ಟು ಶ್ರೀಮನ್ ಮಹಾರಾಜರವರ ಆಳ್ವಿಕೆಯು ಸುತೇಜೋದ್ದೀಪ್ತವಾಗಿ ನಡೆಯುವಂತೆ ಅನುಗ್ರಹಿಸಬೇಕೆಂದು ದೇವರಿಗೆ ಪ್ರಾರ್ಥಿಸಿ, ಸಭಾಸದರು ಸಂತೋಷದಿಂದ ಅವರವರ ಬಿಡಾರಗಳಿಗೆ ತೆರಳಿದರು. ಪ್ರಕೃತ ನಮ್ಮ ಮಹಾರಾಜರವರ ಆಳ್ವಿಕೆಯು ಪ್ರಶಸ್ತವಾಗಿ ಏರುಪೇರಿಗೆ ಹಿನ್ನೆಲೆಯ ಪರಮ ಅಂದರೆ ಅವರವೇ ಕಾಲುಪಟ್ಟವಾಯಿತು. ಶ್ರೀಮನ್ಮಹಾರಾಜರಿಗೆ ಪಟ್ಟವಾದ ದಿನದಿಂದ ಈಚೆಗೆ ನಮ್ಮೆಲ್ಲರ ಸನ್ನಿಧಾನದಲ್ಲಿ ದೊರಕೊಂಡು ಬಂದಿರುವದ ಶ್ರೀ ಸಪ್ತ ಜೆಡ್ಡು ರಕ್ಷಣೆ ಮಾಡಿದರು ಸಿಲದ್ದಾಗಿದೆ. ಜಲೋತ್ಪತ್ತಿ ನಾಶೋದ್ಧಾರವಾಗಿ ನಡೆಸಿಕೊಂಡು ಬರಬೇಕೆಂತಲೂ, ನಮ್ಮ ಶ್ರೀಮನ್ಮಹಾರಾಜರವರಿಗೂ, ಮಹಾರಾಣೀ ಸಾಹೇಬರಿಗೂ, ಶ್ರೀ ಯುವರಾಜರಿರವರಿಗೂ, ಶ್ರೀಮನ್ಮಹಾರಾಜರವರ ದರ್ಮ ಮಂತ್ರಿಗಳಾದ ಸರ್ ಕೆ. ಶೇಷಾದ್ರಿ ಅಯ್ಯರವರಿಗೂ ಸಹ ದೀರ್ಘಾಯುಸ್ಸು ಮತ್ತು ಸುಖಾದಿ ಭೋಗಗಳುಂಟಾಗಬೇಕೆಂದು ಶ್ರೀ ಹರಿಯಂ ಸರ್ವರೂ ಪ್ರಾರ್ಥಿಸುತ್ತೇವೆ.

## THE MYSORE GAZETTE.

## ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜರವರ ಸರಕಾರದವರ ಸಪ್ಪುರದಿಂದ ಕೊಡೋಣವಾದ ಇಸ್ತಿಹಾರನಾಮೆಗಳು.

೨೫ ನೇ ಮಾರ್ಚಿ ೧೮೯೩ ನಂ ೧೫೯೬೫ — ಜಿ. ೩೪೫೯ —ಮೈಸೂರು ಸರ್ವಿಸ್ ರೆಗ್ಯುಲೇಷನಿನ ೧೨೦ ನೇ ಆರ್ಟಿಕಲ್ ಅನುಸರಿಸಿ, ಆರ್ಸೀಕೆರೆ ತಾಲ್ಲೂಕ್ ಅಮಲ್ದಾರರು ಆರ್. ಮಾಧವರಾಯರವರು ೧೮೯೩ ನೇ ಇಸವಿ ಮಾರ್ಚಿ ೧೩ನೇ ತಾರೀಖು ಮೊದಲು ೫ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿದ್ದರು.

ನಂ|| ೧೫೯೬೯—ಜಿ. ೯. ೨೧೨—೯೨ — ನಂಜನಗೂಡು ತಾಲ್ಲೂಕ್ ಅಮಲ್ದಾರರು ನರಸಿಂಹನವರಿಗೆ ಸನ್ ೧೮೯೩ನೇ ಇಸವಿ ಡಿಸೆಂಬರ್ ೨೬ನೇ ತಾರೀಖುಳ್ಳ, ೯೪೨೪—೧ ೯ ೨೧೨—೯೨ ನೇ ನಂಬರ್ ಇಸ್ತಿಹಾರನಾಮೆಯ ಮೂಲಕ ಕೊಡಲ್ಪಟ್ಟ ೨೬ ದಿನಗಳ ಪ್ರಿವಿಲೇಜ್ ರಜಾವನ್ನು ೯೩ ನೇ ಇಸವಿ ಫೆಬ್ರುವರಿ ೭ ನೇ ತಾರೀಖು ಮೊದಲು ಉಪಯೋಗಿಸಿಕೊಂಡು ಅದೇ ತಿಂಗಳ ೨೪ ನೇ ತಾರೀಖಿನ ಪೂರ್ವಾಹ್ನದಲ್ಲಿ ನೌಕರಿಗೆ ವಾಪಸ್ ಬಂದದರಿಂದ, ಸದರೀ ರಜಾ ಪೈಕಿ ಉಳಿದ ಭಾಗವು, ಅಂದರೆ, ೫ ದಿನಗಳು ಇದರಿಂದ ರದ್ದು ಮಾಡಲ್ಪಟ್ಟಿರುತ್ತದೆ.

ನಂ|| ೧೬೦೪೧—ಜಿ. ೩೪೭೭ —ಸನ್ ೧೮೯೩ ನೇ ಇಸವಿ ಫೆಬ್ರುವರಿ ೩೧ ನೇ ತಾರೀಖಿನ ಮಧ್ಯಾಹ್ನದ್ವರ ಮೈಸೂರು ಸಿಟಿ ಮ್ಯುನಿಸಿಪಾಲಿಟಿಯ ಚಾರ್ಜನ್ನು ಅಸಿಸ್ಟೆಂಟ್ ಕಮಿಷನರ್ ಮೆ|| ಎ. ನರಸಿಂಹಯ್ಯಂಗಾರ್ರವರು ಕೊಟ್ಟು ಮೆ|| ಕುಪ್ಪುಸ್ವಾಮಿ ಮುದಲಿಯಾರ್ರವರು ತೆಗದುಕೊಂಡಿರುತ್ತಾರೆ.

ನಂ|| ೧೬೦೪೨— ಜಿ. ೨೪೭೭ —ಬೆಂಗಳೂರಲ್ಲಿರುವ ಸಂಸ್ಥಾನದ ಹುಜೂರ್ ಖಜಾನೆ ಟ್ರೆಜರರಾದ ಮೆ|| ಟಿ ರಾಯಲು ಶೆಟ್ಟರವರಿಗೆ, ಸನ್ ೧೮೯೩ ನೇ ಇಸವಿ ಮಾರ್ಚಿ ೧೬ ನೇ ಮರ್ಕರ್ ಮುಳ್ಳ ೧೫೯೩೯—೩೨೧೨ ನೇ ನಂಬರ್ ಬಾಬತ್ತು ಇಸ್ತಿಹಾರನಾಮೆಯ ಮೂಲಕ ಕೊಡಲ್ಪಟ್ಟ ೫ ದಿನಗಳ ಕ್ಯಾಜುಯಲ್ ರಜಾ ಪೈಕಿ ೩ ದಿನಗಳ ಮಾತ್ರ ಉಪಯೋಗಿಸಿಕೊಂಡಿರುವುದರಿಂದ ಉಳಿದ ೨ ದಿನಗಳು ಇದರಿಂದ ರದ್ದುಮಾಡಲ್ಪಟ್ಟಿರುತ್ತದೆ.

೨೬ ನೇ ಮಾರ್ಚಿ ೧೮೯೩, ನಂ|| ೧೫೯೬೭—ಜಿ. ೩೪೫೧—ಮೈಸೂರು ಸರ್ವಿಸ್ ರೆಗ್ಯುಲೇಷನ್ ೧೨೧ನೇ ಆರ್ಟಿಕಲ್ ಅನುಸರಿಸಿ, ತಿಪಟೂರು ತಾಲ್ಲೂಕು ಅಮಲ್ದಾರ್ ಹನುಮಂತರಾಯರವರು ೧೮೯೩ ನೇ ಇಸವಿ ಮಾರ್ಚಿ ೬ನೇ ತಾರೀಖು ಮೊದಲು ಆರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿದ್ದರು.

೧ನೇ ಏಪ್ರಿಲ್ ೧೮೯೩, ನಂ|| ೧೬೦೩೦—ಜಿ. ೯. ೪೩—೯೨—ಸನ್ ೧೮೯೩ನೇ ಇಸವಿ ಮಾರ್ಚಿ ೧೪ನೇ ತಾರೀಖಿನ ಮಧ್ಯಾಹ್ನದ್ವರ, ಚಿತ್ರದುರ್ಗ ಡಿಸ್ಟ್ರಿಕ್ಟು ಟ್ರೆಜರಿ ಮತ್ತು ಜನರಲ್ ಅಸಿಸ್ಟೆಂಟ್ ಡಿ. ಕಮಿಷನರ ಆಫೀಸ್ ಚಾರ್ಜನ್ನು ಅಸಿಸ್ಟೆಂಟ್ ಕಮಿಷನರ್ ಮೆ|| ಎಸ್. ವೆಂಕಟರಾಯರವರು ಕೊಟ್ಟು ಆಕ್ಟಿಂಗ್ ಅಸಿಸ್ಟೆಂಟ್ ಕಮಿಷನರಾದ ಮೆ|| ಬಿ. ಕುಮಾರಸ್ವಾಮಿ ನಾಯಕರವರು ತೆಗದುಕೊಂಡಿರುತ್ತಾರೆ.

ನಂ|| ೧೬೩೩೩-ಜಿ ೩೯೩೬—ಮೈಸೂರು ಸರ್ವಿಸ್ ರೆಗ್ಯುಲೇಷನ್ ೧೨೦ನೇ ಆರ್ಟಿಕಲ್ ಅನುಸರಿಸಿ, ಕಡೂರು ಡಿಸ್ಟ್ರಿಕ್ಟು ಟ್ರೆಜರಿ ಇನ್‌ಚಾರ್ಜನಲ್ಲಿರುವ ಅಸಿಸ್ಟೆಂಟ್ ಕಮಿಷನರ್ ಮೆ|| ಆರ್. ಬಿ. ಪ್ಲುಮರ್ ಯವರಿಗೆ ಅವರು ಉಪಯೋಗಿಸಿಕೊಳ್ಳಬಹುದಾದ ತಾರೀಖು ಮೊದಲು ೧೦ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತದೆ.

೩ನೇ ಏಪ್ರಿಲ್ ೧೮೯೩, ನಂ|| ೧೬೨೯೬— ೩೯೨೯—ದಿವಾನರವರ ಅಂಡರ್ ಸೆಕ್ರೆಟರಿಯಾದ ಮೆ|| ಎಸ್. ಅನಂತಸ್ವಾಮಿ ರಾಯರವರಿಗೆ ೯೩ನೇ ಇಸವಿ ಏಪ್ರಿಲ್ ೩ನೇ ತಾರೀಖು ಮೊದಲು ೧ ತಿಂಗಳು ೨೮ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

## ತಾಲ್ಲೂಕ್ ಶಿರಸ್ತೇದಾರರು ಹೆಡ್‌ಕ್ವಾರ್ಟರ್‌ಗಳನ್ನು ಬಿಟ್ಟು ಹೋಗಬಹುದು.

(ವೃತ್ತಾಂತಪತ್ರಿಕೆ.)

ತಾಲ್ಲೂಕ್ ಶಿರಸ್ತೇದಾರ್ರುಗಳು ಯಾವಾಗಲೂ ತಾಲ್ಲೂಕ್ ಹೆಡ್‌ಕ್ವಾರ್ಟರುಗಳನ್ನು ಬಿಟ್ಟು ಯಾವ ಸಂದರ್ಭದಲ್ಲಿಯೂ ಹೊರಗೆ ಹೋಗಕೂಡದೆಂದು ವಿಧಿಸಿರುವ ಗವರ್ನಮೆಂಟ್ ಆರ್ಡರಿನಿಂದ ತುಂಬಾ ತೊಂದರೆ ಯುಂಟಾಗುವದರಿಂದಲೂ ಅಮಲ್ದಾರ್ರುಗಳಿಗೆ ಇದರಿಂದ ತುಂಬಾ ಅನಾನುಕೂಲವಾಗಿರುವದರಿಂದಲೂ, ಇದುವರಿವಿಗೂ ಅಮಲ್ದಾರ್ರುಗಳು ಕ್ರಿಮಿನಲ್ ವಿಚಾರಣೆಗಳಲ್ಲಿಯೂ, ಸರ್ಕ್ಯೂಟಿನಲ್ಲಿಯೂ, ಇವರಿಂದ ತುಂಬಾ ಸಹಾಯ ಪಡೆಯುತ್ತಿರುವದರಿಂದಲೂ, ಅವಶ್ಯಬಿದ್ದ ಸಂದರ್ಭಗಳಲ್ಲಿ ಅಮಲ್ದಾರ್ರು ಕ್ರಿಮಿನಲ್ ಮೊಕದ್ದಮೆಗಳನ್ನು ವಿಚಾರಣೆ ಮಾಡಿಕೊಂಡು ಶಿರಸ್ತೇದಾರರುಗಳನ್ನು ಸಮೀಪದಲ್ಲಿ ತ್ವರಿತಕೆಲಸಗಳನ್ನು ನಡೆಸುವ ಬಗ್ಗೆ ಗ್ರಾಮಾಂತರಗಳಿಗೆ ಹೋಗಿ ಬರ ಬೇಕೆಂತಲೂ, ಅಂಥಾ ಕಾಲದಲ್ಲಿ ಅಮಲ್ದಾರ್ರೇ ಹೆಡ್‌ಕ್ವಾರ್ಟರುಗಳಲ್ಲಿದ್ದುಕೊಂಡು ಟ್ರೆಜರಿ ಮತ್ತು ರಿಜಿಸ್ಟ್ರೇಷನ್ ಕೆಲಸಗಳ ಛಾರ್ಜನ್ನು ವಹಿಸಿರುವಂತೆಯೂ ಅಪ್ಪಣೆಯಾಗಬೇಕೆಂದು ಕೋಲಾರ್ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರು ಗವರ್ನಮೆಂಟಿಗೆ ಬರೆದು ಕೊಂಡರು. ಈ ರಿಪೋರ್ಟಿನಲ್ಲಿ ಅಮಲ್ದಾರ್ರುಗಳು ಹೆಡ್‌ಕ್ವಾರ್ಟರನ್ನು ಬಿಟ್ಟು ಹೊರಗಡೆ ಸರ್ಕ್ಯೂಟ್ ಹೋಗಬೇಕಾಗಿರುವ ಆವಶ್ಯಕವಾದ ಕೆಲವು ಸಂದರ್ಭಗಳನ್ನು ತಿಳಿಯಪಡಿಸಿರುತ್ತಾರೆ. ಅವುಗಳ್ಯಾವವೆಂದರೆ—(೧) ಕಾನೂನು ಪ್ರಕಾರ ಹೋಬಳಿ ಶೇಕ್‌ದಾರ್ರುಗಳು ನಡೆಸತಕ್ಕ ಜಮೀನುಗಳ ಹರಾಜನ್ನು ನಡೆಸುವ ಸಂದರ್ಭದಲ್ಲಿ; (೨) ಜಮೀನು ಪೋಡಿಗಳ ಮೇಲಿನ ವ್ಯಾಜ್ಯಗಳನ್ನಾಗಲಿ, ತಕರಾರುಗಳನ್ನಾಗಲಿ ತೀರ್ಮಾನ ಮಾಡುವವರಲ್ಲಿ ಅಮಲ್ದಾರ್ರು ಖುದ್ದಾಗಿ ಆಯಾಜಮೀನುಗಳಿಗೆ ಹೋಗಿ ತನಿಖೆ ಮಾಡುವಂಥಾ ಆವಶ್ಯಕವಾದ ಸಂದರ್ಭಗಳಲ್ಲಿ; (೩) ಸಾಗುವಳಿ ಕಟ್ಟೆಗಳಿಗೋಸ್ಕರವಾಗಿ ಗವರ್ನಮೆಂಟಿನವರಿಂದ ರೈತರಿಗೆ ವಿಶೇಷವಾಗಿ ಕೊಡಲ್ಪಟ್ಟಿರುವ ಅಡ್ವಾನ್ಸುಗಳ ವಿಷಯದಲ್ಲಿ ಅಮಲ್ದಾರ್ರುಗಳೇ ಡಿಪೋ ಭಾವಿಗಳನ್ನು ಖುದ್ದಾಗಿ ಹೋಗಿ ಅಜಮಾಯಿಷಿ ಮಾಡತಕ್ಕ ಸಂದರ್ಭದಲ್ಲಿ; (೪) ಕೆರೆಗಳ ಮತ್ತು ಲೋಕಲ್ ಫಂಡ್ ಕೆಲಸಗಳ ಕಾಮಗಾರಿಗಳನ್ನು ಅಜಮಾಯಿಷಿ ಮಾಡುವಲ್ಲಿ; (೫) ಅಮಾನಿ, ಹುಲ್ಲು ಬನ್ನಿ, ಮೀನು ಹಿಡಿಯುವದು ಮೊದಲಾದವುಗಳನ್ನು ಆಯಾ ಸ್ಥಳಗಳಲ್ಲೇ ಹರಾಜು ಹಾಕುವ ಸಂದರ್ಭಗಳಲ್ಲ; (೬) ತಾಲ್ಲೂಕುಗಳಲ್ಲಿ ಜಮಾಬಂದೀ ಕಾಲದಲ್ಲಿ ಕೆಲವು ಭಾಗಗಳಲ್ಲಿ ಹಾಜರಾಗಿರಬೇಕಾದ ಸಂದರ್ಭಗಳಲ್ಲಿ; (೭) ಕಾನೂನ ಅನುಸರಿಸಿ ಜಮೀನುಗಳನ್ನೂ, ಸರ್ವೇ ಬೌಂಡರಿ ಗುರ್ತುಗಳನ್ನೂ ಅಜಮಾಯಿಷಿ ಮಾಡುವಲ್ಲಿ; (೮) ಹೋಬಳಿ ಮತ್ತು ಗ್ರಾಮಾಧಿಕಾರಿಗಳ ಕೆಲಸಗಳನ್ನೂ, ಲೆಕ್ಕಪತ್ರಗಳನ್ನೂ ಖುದ್ದಾಗಿ ಅಜಮಾಯಿಷಿ ಮಾಡುವಾಗಲೂ ಅಮಲ್ದಾರ್ರುಗಳು ತಮ್ಮ ಹೆಡ್‌ಕ್ವಾರ್ಟರುಗಳನ್ನು ಬಿಟ್ಟು ಗ್ರಾಮಾಂತರಗಳಲ್ಲಿ ಇರಬೇಕಾಗುತ್ತೆ. ಇವುಗಳನ್ನೆಲ್ಲಾ ಸಮರ್ಪಕವಾದ ರೀತಿಯಲ್ಲಿ ನೆರವೇರಿಸಿಕೊಂಡು ಹೆಡ್‌ಕ್ವಾರ್ಟರುಗಳಲ್ಲಿ ಕ್ರಿಮಿನಲ್ ಮೊಕದ್ದಮೆಗಳನ್ನೂ ವಿಚಾರಣೆ ಮಾಡುವದು ತುಂಬಾ ತೊಂದರೆಯಾಗುತ್ತೆ. ಆದ್ದರಿಂದ ಇವುಗಳಲ್ಲಿ ಕೆಲವು ಡ್ಯೂಟಿಗಳು ಶಿರಸ್ತೇದಾರರಿಂದಲೂ ಮಾಡಲ್ಪಡಬಹುದೆಂದು ಯುಕ್ತವಾದರೆ ತುಂಬಾ ಅನುಕೂಲವಾಗಿರುವದಲ್ಲದೆ ಕೆಲಸಗಳು ಸಮರ್ಪಕವಾಗಿ ನೆರವೇರುವದಕ್ಕೆ ಆಸ್ಪದವಾಗುವದು ಎಂಬುದಾಗಿ ರಿಪೋರ್ಟ್ ಮಾಡಿಕೊಂಡಿದ್ದರು. ಇದರಮೇಲೆ ಗವರ್ನಮೆಂಟಿನವರು ಹುಕುಂ ಮಾಡಿರುವದೇನೆಂದರೆ—ಮೇಲಿನ ಎಂಟನೇ ಬಾಬಿನ ಎಲ್ಲಾ ಕೆಲಸಗಳನ್ನು ನಡೆಸುವದಕ್ಕೆ ಅಮಲ್ದಾರ್ರುಗಳೇ ಖುದ್ದಾಗಿ ಹೋಗುವರೆಂದು ನಂಬಿದ್ದೇವೆ. ಅವುಗಳನ್ನೆಲ್ಲಾ ಶಿರಸ್ತೇದಾರರು ಮಾಡಬೇಕಾಗಿದ್ದರೆ ಶ್ಯಾನುಭೋಗನ್ನಲ್ಲಿ ಅಮಲ್ದಾರ್ರು ತಮ್ಮ ಶಿರಸ್ತೇದಾರನ್ನೇ ಕಳುಹಿಸಿ ಕೊಟ್ಟು ತಾವು ಟ್ರೆಜರಿಯ ಮತ್ತು ರಿಜಿಸ್ಟ್ರೇಷನಿನ ಛಾರ್ಜನ್ನು ವಹಿಸತಕ್ಕದ್ದು. ಯಾವ ಸಂದರ್ಭದಲ್ಲಾಗಲಿ ಹೆಡ್‌ಗುಮಾಸ್ತೆ ಮೊದಲಾದ ಚಿಲ್ಲರೆ ನೌಕರರಮೇಲೆ ಟ್ರೆಜರಿಯ ಅಥವಾ ರಿಜಿಸ್ಟ್ರೇಷನಿನ ಕೆಲಸಗಳ ಜವಾಬ್ದಾರಿಯನ್ನು ವಹಿಸಕೂಡದು ಮತ್ತು ಶಿರಸ್ತೇದಾರರ ಗೈರ್ ಹಾಜರಿಯಲ್ಲಿ ಈ ಕೆಲಸಗಳನ್ನು ನಡೆಸುವದಕ್ಕಾಗಿ ಅವ ಅಧಿಕಾರ್ರುಗಳಿಗೆ ಯಾವವಿಧವಾದ ಹೆಚ್ಚಿನ ಅಲೋವನ್ಸ್ ಕೊಡಲ್ಪಡಲಾರದು.

## ಶ್ರೀ ಸೀತಾವಿಲಾಸದ ಅಮ್ಮನವರು.

ಮೈಸೂರುವೃತ್ತಾಂತ ಚಿಂತಾಮಣಿ ೫-೪-೯೮

ಮಹಾ ಮಾತುಶ್ರೀಯವರಾದ ಶ್ರೀ ಸೀತಾವಿಲಾಸದ ದೇವರಾಜಮ್ಮಣ್ಣಿ ಸಿ. ಐ. ಯವರು ತಂದೆಯ ಕಡೆ ಮಾತಸ್ಥರು ಆದಿಯಲ್ಲಿ ತಾಲಗಾಣವೆಂಬ ಸ್ಥಳದಲ್ಲಿದ್ದರು. ಇವರ ಅಜ್ಜಂದಿರು ತಮ್ಮ ಮಕ್ಕಳಾದ ವೀರರಾಜೇ ಅರಸಿನವರನ್ನು ವಿದ್ಯಾವಂತರಾಗಿ ಲೌಕಿಕ ಪ್ರವರ್ತನೆಯುಳ್ಳವರನ್ನಾಗಿ ಮಾಡಬೇಕೆಂಬ ತಾತ್ಪರ್ಯದಿಂದ ದೇಶಭಾಷೆಯಲ್ಲಿ ಸರ್ಕಾರದ ಲಿಖಾವಟ್ಟಿಗೆ ತಕ್ಕ ಅರ್ಹತೆಯುಂಟಾಗುವಂತೆ ವಿದ್ಯಾಭ್ಯಾಸ ಮಾಡಿಸಿದಮೇಲೆ ಲೇಟ ಮಹಾರಾಜರಾದ ಶ್ರೀ ಕೃಷ್ಣರಾಜ ಒಡೆಯರವರು ಅವರಿಗೆ ತುರುವೇಕೆರೆ ಮಾಮಲೇದಾರಿ ಕೆಲಸಕ್ಕೆ ನಿರೂಪ ಅಪ್ಪಣೆ ಕೊಡಿಸಿದರು. ಅದರಂತೆ ವೀರರಾಜೇ ಅರಸಿನವರು ಅಲ್ಲಿನ ಅಧಿಕಾರವನ್ನು ವಹಿಸಿ ಕೆಲಸನಡೆಸುತಿದ್ದರು. ಸದರೀ ಮ|| ವೀರರಾಜೇ ಅರಸಿನವರಿಗೆ ಬಸವರಾಜೇ ಅರಸಿನವರೆಂಬ ಒಂದು ಗಂಡುಮಗುವೂ ದೇವಾಜಮ್ಮಣ್ಣಿ ಎಂಬ ಒಂದು ಹೆಣ್ಣುಮಗುವೂ ಇದ್ದವು. ಅವರಲ್ಲಿ ಬಸವರಾಜೇ ಅರಸಿನವರಿಗೆ ವಿದ್ಯಾಭ್ಯಾಸ ಮಾಡಿಸಬೇಕೆಂದು ಯೋಚಿಸಿ ದೇಶಭಾಷೆ ಮತ್ತು ಸಂಸ್ಕೃತ ಇವುಗಳನ್ನು ಹೇಳಿಸುತ್ತಾ ಬಂದರು. ದೇವಾಜಮ್ಮಣ್ಣಿಯವರು ಯಾವಾಗಲು ತಮ್ಮ ಅಣ್ಣಂದಿರಾದ ಬಸವರಾಜೇ ಅರಸಿನವರ ಸಂಗಡ ಇದ್ದುಕೊಂಡು ಅವರು ಪಾಠ ಓದುವಾಗಲೂ, ಚಿಂತನೆ ಮಾಡುವಾಗಲೂ ಕೇಳುತ್ತಾ ಮತ್ತು ನೋಡುತ್ತಾ ಕಲಿತುಕೊಳ್ಳುತ್ತಿದ್ದರಲ್ಲದೆ, ಅಣ್ಣಂದಿರು ಚಿಂತನೆ ಮಾಡುವಾಗ ಯೇನಾದರು ತಪ್ಪಿದರೆ ಈ ಬಳಿಯಲ್ಲಿ ಹೀಗೆ ಹೇಳಬೇಕೆಂದು ಉಪಾಧ್ಯಾಯರು ಹೇಳಿದ್ದರು ಯೆಂಬದಾಗಿ ಹೇಳಿಕೊಡುತ್ತಲೂ ಇದ್ದರು. ಮ|| ವೀರರಾಜೇ ಅರಸಿನವರು ತಮ್ಮ ಮಗಳಾದ ದೇವಾಜಮ್ಮಣ್ಣಿಯವರಿಗೆ ವಿದ್ಯಾಭ್ಯಾಸ ಮಾಡಿಸಬೇಕೆಂಬ ಯೋಚನೆ ಮಾಡಿರಲಿಲ್ಲ. ಆದರೆ ಈಕೆಯು ಅಣ್ಣಂದಿರವರ ಜೊತೆಯಲ್ಲಿದ್ದುಕೊಂಡು ತಾವೂ ಅವರು ವಿದ್ಯಾಭ್ಯಾಸ ಮಾಡಿದಷ್ಟು ಕಲಿಯುತ್ತಲೇ ಇದ್ದರು. ಕೆಲವು ವರುಷಗಳ ತರುವಾಯ ಶ್ರೀ ಕೃಷ್ಣರಾಜ ಒಡೆಯರವರು ವೀರರಾಜೇ ಅರಸಿನವರ ಮಕ್ಕಳಾದ ಬಸವರಾಜೇ ಅರಸಿನವರಿಗೆ ತುರುವೇಕೆರೆ ತಾಲ್ಲೂಕ್ ಪೇಷ್ಕಾರಿ ಕೆಲಸಕ್ಕೆ ಅಪ್ಪಣೆ ಕೊಡಿಸಿದರು. ಮ|| ಬಸವರಾಜೇ ಅರಸಿನವರು ಕೆಲಸದಮೇಲೆ ಹೊರಡಲು ಪಾಠವಚನಗಳು ತಪ್ಪಿ ಈಕೆಗೆ ಪಾಠನಡೆಯದ ಹಾಗೆ ಆಯಿತು. ಅನಂತರ ಒಂದು ದಿವಸ ದೇವಾಜಮ್ಮಣ್ಣಿಯವರು ತಂದೆಯ ಬಳಿಯಲ್ಲಿ ಅಣ್ಣಂದಿರಿಗೆ ಪಾಠ ತಪ್ಪಿದ್ದರಿಂದ ನನಗೆ ತಪ್ಪಿ ಹೋಯಿತು. ನಾನು ಇಲ್ಲಿನವರಿಗೆ ಓದಿದೇನೆ, ಮುಂದಕ್ಕೂ ವಿದ್ಯಾರ್ಜನೆ ಮಾಡಬೇಕೆಂಬ ಕುತೂಹಲ ಬಹಳವಾಗಿದೆ ಎಂದು ಅರಿಕೆ ಮಾಡಲು, ತಂದೆಯಾದ ವೀರರಾಜೇ ಅರಸಿನವರು ಮಗಳ ಬುದ್ಧಿ ವಿಶೇಷಕ್ಕೂ, ಮಾಡಿರುವ ವಿದ್ಯಾಭ್ಯಾಸಕ್ಕೂ ಬಹಳವಾಗಿ ಸಂತೋಷಪಟ್ಟು, ಅವರ ಕೋರಿಕೆಯನ್ನು ಈಡೇರಿಸುವದಕ್ಕಾಗಿ ಸಂಸ್ಕೃತ, ಕನ್ನಡ, ಮಹಾರಾಷ್ಟ್ರ ಭಾಷೆಗಳನ್ನು ಹೇಳುವದಕ್ಕೆ ಉಪಾಧ್ಯಾಯರುಗಳನ್ನು ಗೊತ್ತುಮಾಡಿ ಪಾಠ ಹೇಳಿಸುತ ಬಂದರು. ದೇವಾಜಮ್ಮಣ್ಣಿಯವರು ೧೬ ವರುಷಗಳ ವಯಸ್ಸಿನೊಳಗಾಗಿ ಪಂಡಿತ ತನಕ್ಕೆ ಸ್ವಲ್ಪ ಕಡಮೆ ಯಾಗಿ ಅಸಾಧಾರಣ ಪಾಂಡಿತ್ಯವನ್ನು ಸಂಪಾದಿಸಿದರು. ಇದಲ್ಲದೆ ಮಧ್ಯೆ ವಿರಾಮಕಾಲಗಳಲ್ಲಿ ಸಂಗೀತ, ಹೊಲಿಗೆ, ಕಸೂತಿ ಮೊದಲಾದವುಗಳನ್ನೆಲ್ಲಾ ಅಭ್ಯಾಸಮಾಡಿ ಅದರಲ್ಲೂ ಕುಶಲತೆಯನ್ನು ಸಂಪಾದಿಸಿದರು. ಇಷ್ಟರಲ್ಲಿಯೇ ಶ್ರೀ ಕೃಷ್ಣರಾಜ ಒಡೆಯರವರು ನಾಲಕನೇ ಮದುವೆ ಮಾಡಿಕೊಳ್ಳಬೇಕೆಂದು ಪ್ರಯತ್ನ ಮಾಡಿದ್ದರಲ್ಲಿ ಅಲ್ಲಲ್ಲಿ ಹೆಣ್ಣುಗಳನ್ನು ಹುಡುಕುವಾಗ ದೇವಾಜಮ್ಮಣ್ಣಿಯವರ ವಿದ್ಯಾಭ್ಯಾಸ ಮೊದಲಾದವುಗಳೆಲ್ಲ ಅರಿಕೆ ಮಾಡಲ್ಪಡಲು, ಆಗಿನ ಮಹಾಸ್ವಾಮಿಯವರು ವಿದ್ಯಾವತಿಯಾದ ಈಕೆಯನ್ನು ವಿವಾಹ ಮಾಡಿಕೊಳ್ಳಬೇಕೆಂದು ಮನಸ್ಸಿನಲ್ಲಿ ಸಂಕಲ್ಪ ಮಾಡಿಕೊಂಡಿದ್ದರು. ಸತನ್ಮಧ್ಯೆ ತುರುವೇಕೆರೆ ತಾಲ್ಲೂಕಿನಿಂದ ಕೆಲವು ವರುಷಗಳು ಕ್ರಮವಾಗಿ ಐರಸಾಲ್ ಬಾಕಿ ಪಾವತಿಯಾಗದೆ ಇತ್ತು. ಆಕಾಲದಲ್ಲಿ ಮೈಸೂರಿಗೆ ಬಂದಿದ್ದ ಬಸವರಾಜೇ ಅರಸಿನವರಿಗೆ ನಿಮ್ಮ ತಂದೆಗಳನ್ನು ಕರೆದುಕೊಂಡು ಬಾ ಯೆಂಬದಾಗಿ ಹುಜೂರಿಂದ ಅಪ್ಪಣೆಯಾಯಿತು, ಹುಜೂರು ಅಪ್ಪಣೆಯಂತೆ ಬಸವರಾಜೇ ಅರಸಿನವರು ತುರುವೇಕೆರೆಗೆ ದಯಮಾಡಿ ತಂದೆಗಳಲ್ಲಿ ಹುಜೂರಿನಿಂದ ಸಾದರಾದ ಹುಕುಮನ್ನು ಹೇಳಲು, ಮಹಾಸ್ವಾಮಿಯವರ ಆಜ್ಞೆಯಂತೆ ನಡಮಾಡಿದರು: ಅವರು ಮಹಾಸ್ವಾಮಿಯವರ ರೂಬರೂ ನಿಂತ ಒಡನೆ ಯಾವದೊಂದು ವಿಚಾರಣೆಯೂ ಇಲ್ಲದೆ ಅಲ್ಲಿ ನೆಟ್ಟಿದ್ದ ಕುದುರೆಗೂಟದಮೇಲೆ ನಿಲ್ಲುವಂತೆ ಆಜ್ಞೆ ಮಾಡಿ ಛಡಿಶಿಕ್ಷೆ ಮಾಡಬೇಕೆಂದು ಅಪ್ಪಣೆ ಕೊಡಿಸಲು, ಸನ್ನಿಧಿಯಲ್ಲಿದ್ದ ಮಂತ್ರಾಲೋಚನೆ ಸಭೆಯವರು ವಿಚಾರಣೆ ಮಾಡಿಸಿ ಶಿಕ್ಷೆ ಕೊಡಿಸತಕ್ಕಂತಾದ್ದು ಧರ್ಮಸಮ್ಮತವೆಂದು ಅರಿಕೆಮಾಡಲು, ಒಳ್ಳೇದು, ಅವರು ಕೀಸೆಯಲ್ಲಿ ಕಾಗದ ಪತ್ರಗಳನ್ನು ಹಾಕಿಕೊಂಡು ಬಂದಿರಬಹುದು, ಅದನ್ನು ತೆಗೆಯಿರಿ ಯೆಂಬದಾಗಿ ಅಲ್ಲಿದ್ದವನೊಬ್ಬನಿಗೆ ಆಜ್ಞೆಯಂ ಮಾಡಿದರು. ಹುಜೂರುಅಪ್ಪಣೆಯಂತೆ ಕೀಸೆಯಲ್ಲಿದ್ದ ಕಾಗದ ಪತ್ರಗಳನ್ನೆಲ್ಲ ತೆಗೆಯುವಕಾಲದಲ್ಲಿ ಅರಿಸಿನ ಹಚ್ಚಿದ್ದ ಒಂದು ಕಾಗದ ಕಂಡಿತು. ಅದನ್ನು ಶ್ರೀ ಕೃಷ್ಣರಾಜ ಒಡೆಯರವರು ಕಂಡು, ಯೆಲ್ಲಿ ಆಕಾಗದ ತೆಗದುಕೊಂಡುಬಾ ಎಂಬದಾಗಿ ಹೇಳಿ ತಾವೇ ಅದಂತೆಗೆದು ನೋಡಿಕೊಂಡು ಮುಂದೆ ಇವರೊಡನೆ ನೆಂಟಸ್ತನಬೆಳಸಬೇಕಲ್ಲದೆ ಇವರು ಮಾನವನರಾಗಬೇಕಾಗುವದೆಂಬ ವಿಷಯವು ಮನಸ್ಸಿನಲ್ಲಿ ಯೋಚಿಸಿಕೊಂಡು ಒಡನೆ ಒಳ್ಳೇದು ಈವಿಷಯ ನಾಳೆ ಆಗಲೆಂದು ನಿಲ್ಲಿಸಿ, ತರುವಾಯ ಜಾತಕ ಭಾವವನ್ನು ನೋಡಿಸಿ, ಆಮೇಲೆ ದೇವಾಜಮ್ಮಣ್ಣಿಯವರ ವಿದ್ಯಾಬುದ್ಧಿ ಕುಶಲತೆಗೆ ಮೆಚ್ಚಿ ವಿವಾಹ ಮಾಡಿಕೊಂಡರು. ಮಾ|| ದೇವಾಜಮ್ಮಣ್ಣಿಯವರ ವಿವಾಹ ಕಾಲದಲ್ಲಿ ಅವರಿಗೆ ೧೭ವರುಷ ವಯಸ್ಸಾಗಿತ್ತು. ವಿವಾಹದ ನಂತರ ಮ|| ರಾ|| ವೀರರಾಜೇ ಅರಸಿನವರೂ ಅವರ ಮಕ್ಕಳು ಸಹ ಮೈಸೂರಲ್ಲಿಯೇ ಇರುವಂತೆ ಅಪ್ಪಣೆಯಾಯಿತು.

(ಮೈಸೂರ್ ದೇಶಾಭಿಮಾನಿ, ೧-೪-೯೮)

ಮಹಾಮಾತುಶ್ರೀ ಸೀತಾವಿಲಾಸದ ಸನ್ನಿಧಾನದವರು ಲೋಕಾಂತರವನ್ನೈದಲಿಕ್ಕೆ ೩ ದಿವಸಗಳು ಮುಂಚೆಯೇ ಶ್ರೀಮನ್ಮಹಾರಾಜರವರು ಶ್ರೀಮಹಾಮಾತುಶ್ರೀಯವರನ್ನು ನಿಮ್ಮ ಇಷ್ಟಾರ್ಥಗಳು ಏನು ಇವೆ ಎಂದು ಕೇಳಿದುದಕ್ಕೂ ಅದಕ್ಕೆ ಅವರು "ಪುತ್ರಮಿತ್ರಕಳತ್ರಾದಿಗಳೊಡನೆ ನೀವು ಕ್ಷೇಮವಾಗಿಯೂ ಪ್ರಜೆಗಳಿಗೆ ಅನುಕೂಲವಾಗಿಯೂ ಇರತಕ್ಕದ್ದೇ ನನಗೆ ಬೇಕಾದದ್ದು. ಆದಾಗ್ಯೂ ನಿನ್ನ ಹೆಣ್ಣುಮಕ್ಕಳಲ್ಲಿ ಒಬ್ಬ ಮಗುವನ್ನು ತುರವೆ ಕೆರೆ ಅರಸಿನ ಎರಡನೇ ಮಗನಿಗೆ ಕೊಡಬೇಕು, ಇದಲ್ಲದೆ ನಮ್ಮ ಅರಮನೆಗೆ ಆಚಾರ್ಯರಾದ ಶ್ರೀ ಪರಕಾಲಸ್ವಾಮಿಗಳನ್ನು ಕರೆಸಿಕೊಂಡು ನಾನು ಅವರಿಂದ ಮುದ್ರಾಂಕಿತವನ್ನು ಮಾಡಿಸಿಕೊಂಡು ಶರಣಾಗತಿಯನ್ನು ಹೊಂದಿ ಶ್ರೀಪಾದ ತೀರ್ಥವನ್ನು ತೆಗೆದುಕೊಂಡು ಲೋಕಾಂತರವನ್ನು ಹೊಂದುವದಕ್ಕೆ ಮಂತ್ರೋಪದೇಶಕ್ಕೆ ಅರ್ಹಳಾಗಬೇಕೆಂದು ಅಪೇಕ್ಷಿಸುತ್ತೇನೆ" ಎಂದು ಹೇಳಿದರು. ಅದೇಪ್ರಕಾರ ಶ್ರೀಮನ್ಮಹಾರಾಜರವರು ಪರಕಾಲಸ್ವಾಮಿಗಳನ್ನು ಕರೆಸಿ ತಾವೇ ಅವರನ್ನು ಕರೆದುಕೊಂಡು ಮಹಾ ಮಾತುಶ್ರೀಯವರ ಬಳಿಗೆ ದಯಮಾಡಿಸಿದರು. ಕೂಡಲೆ ಮಹಾ ಮಾತುಶ್ರೀಯವರು ತಮ್ಮ ಮನೋಭಿಲಾಷೆಗಳನ್ನೆಲ್ಲಾ ಶ್ರೀ ಸ್ವಾಮಿಗಳವರಿಗೆ ತಿಳಿಸಲು ಅವರು "ಮುದ್ರಾಂಕಿತವು ತಮಗೆ ಪೂರ್ವಾಚಾರ್ಯರಿಂದ ಆದಾಗ್ಯೂ ನಾವುಕೊಡ ಇದ್ದೇವು ಈಗ ಮುದ್ರಾಂಕಿತವು ಆವಶ್ಯಕವಿಲ್ಲ. ನೀವು ನಡಿಸಿರತಕ್ಕ ಧರ್ಮ ಪರಂಪರೆಗಳು ನಿಮಗೆ ಸ್ವರ್ಗಕ್ಕೆ ಸೋಪಾನಪಂಕ್ತಿಯಾಗಿ ಪರಿಣಮಿಸಿ ಇದೇ ತಾವು ಈ ವಿಷಯದಲ್ಲಿ ಯೋಚಿಸತಕ್ಕದ್ದು ಯಾವದೂ ಇಲ್ಲವೆಂದು ಹೇಳಿ, ಶ್ರೀಪಾದತೀರ್ಥವನ್ನು ಕೊಟ್ಟು ಮಂತ್ರೋಪದೇಶವನ್ನು ಮಾಡಿದರು. ಕೂಡಲೆ ಮಹಾ ಮಾತುಶ್ರೀಯವರು ಶ್ರೀ ಸ್ವಾಮಿಗಳವರ ಪಾದಗಳಿಗೆ ನಮಸ್ಕಾರ ಮಾಡಿ ಅವರ ಪಾದಗಳಂ ಶಿರಸ್ಸಿನಲ್ಲಿ ಧರಿಸಿ ನನ್ನೊಡೆಯ, ನನ್ನನ್ನು ರಕ್ಷಿಸು, ಎಂಬದಾಗಿ ಹೇಳಿದರು. ಶ್ರೀ ಹಯಗ್ರೀವರು ತಮ್ಮನ್ನು ರಕ್ಷಿಸುವರೆಂದು ಹೇಳಿ ಅವರ ಅನುಜ್ಞೆಯನ್ನು ಪಡೆದು ಶ್ರೀಯವರು ಮಠಕ್ಕೆ ಚಿತ್ತೈಸಿದರು.

ಶ್ರೀಮಹಾ ಮಾತುಶ್ರೀಯವರು ತಾವು ಇಟ್ಟುಕೊಂಡಿದ್ದ ಜವಾಹಿರು ಮೊದಲಾದ ಸರ್ವಾಭರಣಗಳನ್ನು ಶ್ರೀಮನ್ಮಹಾರಾಜರವರ ಕುಟುಂಬಕ್ಕೂ ಮಕ್ಕಳಿಗೂ ಕೊಟ್ಟು ತಾವು ಆರ್ಜಿಸಿ ಇಟ್ಟಿದ್ದ ದ್ರವ್ಯವನ್ನು ಶ್ರೀಮನ್ಮಹಾರಾಜರವರಿಗೆ ಒಪ್ಪಿಸಿ ಶ್ರೀಮನ್ಮಹಾರಾಜರವರಿಗೂ ಅವರ ಕುಟುಂಬಕ್ಕೂ ಅನೇಕವಿಧವಾದ ರಾಜಕೀಯ, ಲೌಕಿಕ ವೈದಿಕ ಹಿತೋಕ್ತಿಗಳನ್ನು ಹೇಳಿ —

ಮದ್ವಂಶಜಾಃ ಪರಮಕಾರುಣಿಕವಂಶಜಾತಾಃ
ಭೂಮಿಪಸ್ಸತತ ಮತ್ಪಾಲಿ ಧರ್ಮಚೇತಾಃ | ಮದ್ಧ
ರ್ಮಮೇವ ಸತತಂ ಪರಿಪಾಲಯಂತಿ ತ್ವತ್ಪಾದಪದ್ಮ
ಯುಗಳಂ ಶಿರಸಾನಮಾಮಿ ||

ಎಂಬ ಶ್ಲೋಕವನ್ನೂ ಅದರ ಅರ್ಥವನ್ನೂ ಹೇಳಿ, ಪ್ರಜೆಗಳನ್ನು ನೋಯಿಸದೆ ಅವರ ಪ್ರೀತಿಗೆ ಪಾತ್ರನಾಗಿ ರಾಜ್ಯಭಾರವಮಾಡುತ್ತಾ ದೀರ್ಘಾಯುವಾಗಿ ಬಾಳಪ್ಪ ಅಯ್ಯಾ ಎಂದು ಹೇಳಿ, ಅರಮನೆ ಇಲಾಖಾ ಅಧಿಕಾರಿಗಳ ಮುಖ್ಯರಾದ ಶ್ರೀರಾಮರಾಯರನ್ನು ಕರೆದು ನೀನು [illegible] ಎಂದು [illegible] ನಿಮ್ಮ ಹಿರಿಯರು ನಡೆದುಕೊಂಡತೆ ನೀನೂ ಕೂಡ ಮಹಾರಾಜರ ವಿಷಯದಲ್ಲಿ ನಡೆದುಕೊಳ್ಳಬೇಕು ಎಂದು ಹೇಳಿ, ಮಹಾರಾಣಿ ವಾಣೀವಿಲಾಸದ ಸನ್ನಿಧಾನದವರನ್ನು ಕರೆಸಿಕೊಂಡು, ಇದುವರೆವಿಗೂ ಚಿಕ್ಕ ಭಾರವನ್ನು ನನ್ನ ಮೇಲೆ ಹಾಕುತ್ತಿದ್ದರಿ, ಇನ್ನು ಅದಕ್ಕೆ ಅವಕಾಶ ತಪ್ಪಿತು. ನಿಮ್ಮ [illegible] ರಾಜ್ಯದ ಪ್ರಜೆಗಳಿಗೆಲ್ಲಾ ಭಾವಿ ಕಾಲದಿಂದ ಪತಿಗೆ ಹಿತ ವಚನವನ್ನು ನುಡಿಯುತ ಪೂರ್ವ ಪದ್ಧತಿಗಳನ್ನು ಬಿಟ್ಟು ನಡೆಯದೆ ಕರ್ನಾಟಕ ಮರ್ಯಾದೆಯನ್ನು ಕಾಪಾಡ ಬೇಕೆಂದು ಹೇಳಿದರು.

ಶ್ರೀರಾಮನವಮಿ ದಿವಸವು ಅದರ ಹಿಂದಿನ ದಿವಸ ತಮ್ಮ ಆಪ್ತ ವರ್ಗಕ್ಕೆ ಸೇರಿದ ಎಲ್ಲರಿಗು ಮಾಡತಕ್ಕ ಉಪಕಾರಗಳನ್ನೂ ವಿಪ್ರ ಜನಗಳಿಗೆ ದಾನಧರ್ಮಗಳನ್ನೂ ಮಾಡಿ ಅನಂತರದಲ್ಲಿ [illegible] ವಿಷ್ಣುಸ್ಮರಣ ಪೂರ್ವಕವಾಗಿ ಶ್ರೀರಾಮನವಮಿ ರಾತ್ರಿ ೧ ಘಂಟೆ ವೇಳೆಯಲ್ಲಿ ದೇಹ ಪರಿತ್ಯಾಗವನ್ನು ಮಾಡಿದರು. ಇವರನ್ನು ಆಶ್ರಯಿಸಿಕೊಂಡು ಅನೇಕ ಕುಟುಂಬಗಳು ಜೀವನ ಮಾಡುತಲಿದ್ದವು. ಕೆಲವರು ಇವರು ಕೊಡುತಲಿರುವ ಮಾಸಾಶನದಿಂದ [illegible] ಇವರೆಲ್ಲರ [illegible] ಸುಮಾರು ೩೦ ಸಾವಿರ ರೂಪಾಯಿಗಳ ವರಮಾನ ಪ್ರತಿ ವರುಷವೂ ಖರ್ಚಾಗುತ್ತಿತ್ತು. ಶ್ರೀ ಮನ್ಮಹಾರಾಜರವರು ಇವರ ಆಶ್ರಿತರಲ್ಲಿ ಅನನ್ಯಗತಿಕರಾದವರಿಗೆ ಜೀವನೋಪಾಯಗಳನ್ನು ಕಲ್ಪಿಸುವದರಲ್ಲಿಯೇ ಬದ್ಧ ಸಂಕಲ್ಪರಾಗಿರುವರೆಂದು ತಿಳಿಯಬರುತ್ತಿದೆ, ಇದು ಶ್ರೇಯಸ್ಕರವಾದದ್ದೇ ಸರಿ.

ಇಂಥಾ ಮಹಾ ಮಾತುಶ್ರೀಯವರ ವಿಷಯದಲ್ಲಿ ಮಹಾರಾಜರವರು ಭಕ್ತಿಪುರಸ್ಸರವಾಗಿ ಕರ್ಮಾಂತರಗಳಂ ನಡೆಸುತಿರುವರೆ. ಸೀತಾ ರಾಮ ರಾಯರು [illegible] ಮಾಡುತ್ತಾರೆ. ಮೊದಲೇ ದಿವಸದಲ್ಲೇ [illegible] ದಕ್ಷಿಣೆಕೊಟ್ಟರು. [illegible] ಮುಟ್ಟದೆ [illegible] ಹಿಂದಿನ ಕ್ರಮವನ್ನೂ [illegible] ತಿಳಿದುಕೊಂಡು ನಡೆಸಿ ಶ್ರೀಮನ್ಮಹಾರಾಜರಿಗೆ ಮರ್ಯಾದೆ ಬರುವಂ ಮಾಡಿ [illegible] ಗೋವನ್ನು ಮಹಾರಾಜರು ಕಣ್ಣಿನಲ್ಲಿ ನೋಡಿ ಒಪ್ಪತಕ್ಕ [illegible] ಪದ್ಧತಿಯನ್ನು [illegible] ಅನ್ಯರಿಗೆ ಅವಕಾಶ ಉಂಟಾಗಿದೆ. [illegible] ಆರ್ಘವಾದ ಪಶುವನ್ನು ದಾನಮಾಡುವರು [illegible] ಸೀತಾರಾಮರಾಯರು [illegible] ಸಂಪಾದಿಸಿದ ಯಶಸ್ಸನ್ನು ಇಲ್ಲಿ ಮಲಿನ ಮಾಡಿಕೊಳ್ಳುವದು ಯುಕ್ತವಲ್ಲ. ಕಡಮೆಯಾಗಿ ಖರ್ಚು ಮಾಡಿದರೆ ಮಹಾರಾಜರ ದಯೆ ಬರುವದಿಲ್ಲ. ಮಹಾರಾಜರ ಖ್ಯಾತಿಗೆ ಲೋಪ ಬಾರದಂತೆಯೂ [illegible] ರೂಪಾಯಿಗಳಿಗಿಂತಲೂ ಕಡಮೆ ಮಾಡದೆ [illegible] ಮಾಡಿಸಿದಲ್ಲಿ [illegible] ಪ್ರಜೆಗಳ [illegible] ಮಹಾರಾಜರ [illegible] ಬರುವದು [illegible] ಅಧಿಕಾರಿಗಳು [illegible] ಗೆ ಅಪಖ್ಯಾತಿಯಂ ತರುವದನ್ನು ನೋಡಿ ಒಹಳವಾಗಿ ವಿಷಾದಪಡುತ್ತೇವೆ.

## SUMMARY OF NEWS
## ವೃತ್ತಾಂತ ಸಂಗ್ರಹವು

ಮನಿಲಾ ಕಣಿವೆಯಲ್ಲಿ ಸೈಕ್ಲೋನ್ ಎಂಬ ಭಯಂಕರವಾದ ಸುಂಟರಗಾಳಿಯು ಹುಟ್ಟಿ ಅನೇಕ ಜನರು ಸತ್ತುಹೋದರು, ಮನೆಗಳೂ, ಭಾರಿ ಕಟ್ಟಡಗಳೂ ನೆಲಸಮವಾದವು, ಸುಮಾರು ನಾಲ್ಕು ಲಕ್ಷ ರೂಪಾಯಿಗಳವರೆಗೂ ನಷ್ಟವಾಗಿರುತ್ತೆ.

---

ಆಗ್ರಾದಿಂದ ಅಜ್ಮೀರಿಗೆ ಹೋಗುತ್ತಿದ್ದ ರೈಲಿನಲ್ಲಿ ಕ್ರಿಸ್ ಎಂಬ ಯೂರೋಪಿಯನು ತಾನು ಕೂತುಕೊಂಡಿದ್ದ ಗಾಡಿಯಲ್ಲಿ ಇದ್ದ ಒಬ್ಬ ಹಿಂದೂಸ್ತಾನಿಯನ್ನು ಅವಮಾನ ಪಡಿಸಿದ್ದಕ್ಕಾಗಿ ಪೋಲೀಸಿನವರು ಅವನನ್ನು ಲಾಕಪ್ಪಿನಲ್ಲಿಟ್ಟು ಇದ್ದಾರೆ. ಈಗ ಸೆಷನ್ ವಿಚಾರಣೆ ಒಗ್ಗೆ ಕಮಿಟಾಗಿದೆ.

---

ನ್ಯೂಜೀಲೆಂಡಿನಲ್ಲಿ ಈಚೆಗೆ ೭೦ ವರುಷದ ಒಬ್ಬ ಪುರುಷನು ೬೬ ಘಂಟೆಗಳಲ್ಲಿ ೩೦೦ ಮೈಲಿ ದೂರ ಕುದುರೆಸವಾರಿ ಮಾಡಿಕೊಂಡು ಬರುವನೆಂತಲೂ, ಅದಕ್ಕೆ ತಪ್ಪಿದರೆ ೫,೦೦೦ ರೂಪಾಯಿಗಳನ್ನು ದಂಡ ಕೊಡುವನೆಂತಲೂ ಷರತ್ತು ಮಾಡಿಕೊಂಡು ಪ್ರಯಾಣ ಮಾಡಿ ೬೦ ಘಂಟೆಗಳಲ್ಲಿಯೇ ಮುಗಿಸಿದನು

---

ಸಾಲೋ ಎಂಬ ಬ್ರಿಟಿಷ್ ಪ್ರಾಂತದಲ್ಲಿದ್ದ ಪಾಣಿಂಗ್ ಎಂಬ ಊರಿನಲ್ಲಿ ಕಟ್ಟಿದ್ದ ಇಂಗ್ಲಿಷ್ ಬಾವುಟವನ್ನು ಸಮೀಪದಲ್ಲಿರುವ ಡಿಸ್ಟ್ರಿಕ್ಟಿನ ಫ್ರೆಂಚ್ ಗವರ್ನರವರು ಕಿತ್ತು ಹಾಕಿಸಿದರೆಂದು ವರ್ತಮಾನ ಬಂದಿರುತ್ತೆ. ಇದಕ್ಕಾಗಿ ಇಂಗ್ಲಿಷರೂ ಫ್ರೆಂಚರೂ ಜಗಳವಾಡುವರೋ, ಅಥವಾ ಫ್ರೆಂಚರು ಕ್ಷಮಾಪಣೆಯನ್ನು ಕೇಳಿಕೊಳ್ಳುವರೋ ತಿಳಿಯತಕ್ಕದ್ದಾಗಿದೆ.

---

ವಿಲಾಯತಿಯಲ್ಲಿರುವ [illegible] ಮತ್ತು ಇಂಡ್ಯಾ ದೇಶದ ವಿಷಯವಾಗಿ [illegible] ನೆಂದು ನಂಬಿಕೆ ಕೊಡುವವರನ್ನು ವಿವಾಹ ಮಾಡಿಕೊಳ್ಳುತ್ತೇನೆಂದು ತಿಳಿಸಿದಾಳೆ ಆ ದೇಶದಲ್ಲಿ ನಮ್ಮ ಭರತಖಂಡದ ವಿಷಯವಾಗಿ ಸ್ತ್ರೀಯರಿಗೆ ಇರುವ ಅಭಿಮಾನ ನಮಗೆ ನಮ್ಮ ದೇಶದ ಮೇಲೆ ಇಲ್ಲದೇ ಇರುವದಕ್ಕೆ ವಿಷಾದಿಸಬೇಕಾಗಿದೆ,

---

ಸಂಯುಕ್ತ ಸಂಸ್ಥಾನಗಳಿಗೆ ಸೇರಿದ ದಕ್ಷಿಣ ಕೆರೋಲಿನ ವೆಂಬ ಡಿಸ್ಟ್ರಿಕ್ಟಿನಲ್ಲಿ [illegible] ತಿಂಗಳ ಲಗಾಯತು ಬೀರ್, ವೈನ್, ಸ್ಪಿರಿಟ್ ಮೊದಲಾದ ಯಾವ ತರದ ಮದ್ಯಪಾನಗಳನ್ನೂ ಅಂಗಡಿಗಳಲ್ಲಿಟ್ಟು ವಿಕ್ರಯ ಮಾಡಕೂಡದೆಂತಲೂ ಹಾಗೆ ಮಾಡಿದ ತಪ್ಪಿತಸ್ಥನಿಗೆ ಜುಲ್ಮಾನೆ ಅಥವ ಸಜಾ ಶಿಕ್ಷೆಯು ವಿಧಿಸಲ್ಪಡುವದೆಂತಲೂ ಒಂದು ಹೊಸಕಾನೂನು ಜಾರಿಯಲ್ಲಿ ಬಂದಿರುವದು ವರ್ತಮಾನಪತ್ರಿಕೆಗಳಿಂದ ತಿಳಿಯುತ್ತವೆ ಇಂಥಾ ಕಟ್ಟಳೆಯು ನಮ್ಮ ಹಿಂದೂಸ್ಥಾನದಲ್ಲಿಯೂ ಯಾವಾಗ ಜಾರಿಯಲ್ಲಿ ಬರುವದೋ ಎಂದು ನಿರೀಕ್ಷಿಸುತ್ತೇವೆ

---

ಅಚ್ಚುಕಾರ್ಖಾನೆ(ಪ್ರಿಂಟಿಂಗ್ ಆಫೀಸ)ಗಳಲ್ಲಿ ಸ್ತ್ರೀಯರನ್ನು ಮೊಳೆಜೋಡಿಸುವ (ಕಂಪೋಜಿಟರ) ಕೆಲಸಕ್ಕೆ ನೇಮಿಸಬಹುದೆಂದು ಇಂಡಿಯಾಸರ್ಕಾರದವರು ಸ್ಯಾಂಗ್ಷನ್ ಮಾಡಿರುತ್ತಾರೆ. ಕಲಕತ್ತೆಗೆ ಸೇರಿದ ಧರ್ಮತೋಲಾ ಎಂಬದರಲ್ಲಿರುವ ಗವರ್ನಮೆಂಟ್ ಪ್ರಿಂಟಿಂಗ್ ಆಫೀಸಿನಲ್ಲಿ ಸೂಪರಿಂಟೆಂಡೆಂಟರವರು ಸ್ತ್ರೀಯರಿಗೋಸ್ಕರವಾಗಿಯೇ ಒಂದು ಕೊಠಡಿಯನ್ನು ಬಿಡಿಸಿರುತ್ತಾರೆ. ಆಗಲೇ ೨೦ ಮಂದಿ [illegible] ಕೆಲಸ ಕಲಿತುಕೊಳ್ಳುತ್ತಲಿದ್ದಾರೆ. ಇವರಿಗೆ ಮೊಳೆಜೋಡಿಸುವದನ್ನು ಕಲಿಸುವದಕ್ಕೆ ವೃದ್ಧಳಾದ ಒಬ್ಬ ಯುರೋಪಿಯನ್ ಹೆಂಗಸು ಒಪ್ಪಿಕೊಂಡಿದಾಳೆ.

---

ಮದ್ರಾಸ ಗವರ್ನರಾದ ಲಾರ್ಡ್ ವೆನ್ಲಾಕರವರು ಸರ್ಕ್ಯೂಟು ಮಾಡಿಕೊಂಡು ಕಳೆದ ೨೧ ನೇ ತಾರೀಖಿನಲ್ಲಿ [illegible] ದಯಮಾಡಿದಾಗ್ಯೆ ಅಲ್ಲಿನ ವಿಧವಾ ವಿವಾಹ ಸಂಘದವರು—ವಿಧವೆಯರು ಪುನರ್ವಿವಾಹ ಮಾಡಿಕೊಂಡ ನಂತರ ಮೊದಲನೇ ಗಂಡನಿಂದ ತಮಗೆ ಬಂದ ಆಸ್ತಿಯನ್ನು ಅವರೇ ಉಪಯೋಗಿಸಿಕೊಳ್ಳುವದಕ್ಕೆ ಅವರುಗಳಿಗೆ ಹಕ್ಕು ಇರುವಂತೆ ಒಂದು ಕಾನೂನು ಮಾಡಿಸಬೇಕೆಂದು ಬೇಡಿಕೊಳ್ಳುತ್ತೇವೆ ಎಂಬರ್ಥಕ್ಕೆ ಒಂದು ಅಡ್ರೆಸ್ಸನ್ನು ಒಪ್ಪಿಸಿದರು ಅದಕ್ಕೆ ಗವರ್ನರವರು ಈ ವಿಷಯವು ನಿಮ್ಮ ಪ್ರಾವಿನ್ಸಿಗೆ ಮಾತ್ರವೆ ಅಲ್ಲ, ಇಂಡಿಯಾದೇಶಕ್ಕೆಲ್ಲಾ ಸಂಬಂಧ ಉಂಟಾಗಿರುತ್ತೆ ಆದದರಿಂದ ಈ ನಿಮ್ಮ ಅಡ್ರೆಸ್ಸನ್ನು ಇಂಡಿಯಾ ಗವರ್ನಮೆಂಟಿನವರ ತೀರ್ಮಾನಕ್ಕೆ ಕಳುಹಿಸಿ ಕೊಡುತ್ತೇನೆಂದು ಜವಾಬು ಕೊಡಿಸಿದರು.

---

ಬರ್ಮಾದೇಶಕ್ಕೆ ಉತ್ತರದಲ್ಲಿ [illegible] ಜನಗಳಿಂದ ಕೂಡಿದ ಒಂದು ದೇಶವಿತ್ತು [illegible] ಬರ್ಮಾದೇಶದ ಅರಸರು [illegible] ಅಲ್ಲಿನ ಪ್ರತಿಯೊಂದು ಗುಂಪಿನವರು ತಮ್ಮತಮ್ಮ ಪ್ರತಿನಿಧಿಗಳನ್ನು [illegible] ಸಭೆ [illegible] ಆಡಳಿತ ನಡೆಸಿಕೊಳ್ಳುತ್ತಿದ್ದರು. [illegible] ದೇಶವು ಇಂಗ್ಲಿಷರವರ ಸ್ವಾಧೀನವಾದ ಮೇಲೆ ಆ ಪ್ರಾಂತವನ್ನು ಗೆದ್ದು ಅಲ್ಲಿ ಒಂದು ಕೋಟೆಯನ್ನು ಕಟ್ಟಿ ಒಂದು ಚಿಕ್ಕ ದಳವನ್ನು ಇಟ್ಟು ಆಡಳಿತ ನಡೆಸುತ್ತಿದ್ದರು. ಹೀಗೆ ಇರುವಲ್ಲಿ ಈಚೆ, ಕೆಲವು ದಿವಸ [illegible] ಜನಗಳಲ್ಲಿ ಸುಮಾರು ೬,೦೦೦ ಜನಗಳವರೆಗೆ ಸೇರಿಕೊಂಡು ಆ ಕೋಟೆ ಮೇಲೆ ಬಿದ್ದರು. ಕೋಟೆಯಲ್ಲಿದ್ದ [illegible] ಎಂಬ [illegible] ತನ್ನ ಕೈಕೆಳಗಿದ್ದ ೧೫೦ ಜನರ [illegible] ೧೮ ಜನರನ್ನು ಯುದ್ಧಕ್ಕೆ ಕಳುಹಿಸಿದನು

BANGALORE—Printed and published at the KARNATAKA PRESS, No. 40, HOSPITAL ROAD, CITY—1898

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning.**

[illegible]

Vol. XX] BANGALORE.—MONDAY, APRIL 17, 1893 [No 15

ಸಂಪುಟ ೨೦] ಬೆಂಗಳೂರು — ಸರ್ ೧೮೯೩ ನೇ ಇಸವಿ ಏಪ್ರಿಲ್ ೧೭ ನೇ ತಾರೀಖ್ ಸೋಮವಾರ [ಸಂಚಿಕೆ ೧೫


## ಕರ್ಣಾಟಕ ಪ್ರಕಾಶಿಕಾ

### ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ಒಂದು ವರ್ಷ | 6—0 0 | 8—0—0 |
| 6 ತಿಂಗಳಿಗೆ | 3—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ವರ್ಷಕ್ಕೆ | 3—0 0 | 4—0 0 |
| 6 ತಿಂಗಳಿಗೆ | 1—12—0 | 2—8—0 |

[illegible] ದರದ ತ ಪತ್ರಿಕೆಗೆ [illegible] ಇಂಗ್ಲಿಷ್ [illegible]

### ಪ್ರಕಟನೆಯ ಚಾರ್ಜ್

[illegible] ಒಂದಕ್ಕೆ ೦—೨ ೦

[illegible] ಒಂದಕ್ಕೆ ೦—೧—೦

[illegible] ಈ ಪತ್ರಿಕೆಗೆ [illegible] ಪ್ರಕಟನೆ [illegible] ಪತ್ರಿಕೆಗೆ [illegible] ಪ್ರಕಟವಾಗುವ [illegible]

*ADVERTISEMENTS*

**NOTICE**

**VAIDYASARA SANGRAHA**

A TREATISE ON THE PRINCIPLES OF

**HINDU MEDICINE**

*Price including Postage Rs 5 0 0*

ವೈದ್ಯಸಾರ ಸಂಗ್ರಹ

ಈ ಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಕಳೆ [illegible] ರುದಾ [illegible] ಪುಸ್ತಕ ಕೊಡಲ್ಪಡುವದು. ಮೊಬಲಗು ಇಲ್ಲದ [illegible] ಕೊಡಲ್ಪಡಲಾರದು

ಇದರ ಕ್ರಯ — ಪ್ಯಾಕಿಂಗ್ ಮತ್ತು ಅಂಚೇ ಹಾಸಲ್ ಲೇಬಲ್ ಪ್ರತಿ ಒಂದಕ್ಕೆ ರೂ ೫ 0—0

ಬಿ ಬಿ ವೆಂಕಟಾಚಾರ್

ಬೋರ್ಡ್ [illegible] ರೋಡ್ ೪೮ ನೇ ನಂಬರ್

### ನೋಟೀಸ್.

**ಬೆಂಗಳೂರು ಕರ್ನಾಟಕ್ ಪ್ರೆಸ್.**

೧೮೬೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು

ಇದರಲ್ಲಿ, ಸಕಲವಿಧ ಕೆಲಸಗಳು ಮುದ್ರಣಕ್ಕೆ ತೀವ್ರವಾಗಿಯೂ ಶ್ಲಾಘ್ಯವಾಗಿಯೂ, ಮಾಡಲ್ಪಡುವವು ಇವರಲ್ಲಿ ಸಮಸ್ತ ಇಂಗ್ಲಿಷ್ ಕನ್ನಡ ಕೆಲಸ ಮಾತ್ರವೇ [illegible] ಮಾಡಿಕೊಡುವದಕ್ಕೆ [illegible]

### ನೋಟೀಸ್.

ಗಣೇಶ ರಾಮಚಂದ್ರ ಕರ್ಕ ಮತ್ತು ಕಂಪನಿ. ಕಮಿಶನ್ ಏಜಂಟ್ಸ್

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಗಿರಾಕಿಗಳಿಗೆ ನಾವು ಸುಲಭ ಕ್ರಯಕ್ಕೆ ಬಹಳ [illegible] ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ತಕ್ಕ ಕಮಿಶನ್ ತೆಗೆದುಕೊಂಡು ರವಾನಿಸಲಕ್ಕೆ ಸನ್ನದ್ಧರಾಗಿರುತ್ತೇವೆ

ಎಲ್ಲ ತರದ ಔಷಧಗಳು, ಪುಸ್ತಕಗಳು, ಮುತ್ತುಗಳು, ಒಪ್ಪಿ ಮುತ್ತುಗಳು, ಘಡಿಯಾರಗಳು [illegible], [illegible] ಕ್ಯಾಮೆರ ಜಲುಗಳು [illegible], [illegible] ಕನ್ನಡಕಗಳು, [illegible] ಟೋಪಿಗಳು, ಆಫೀಸ ತ್ರಿಗಳು, ಷರ್ಟುಗಳು, ಉತ್ತರಿಗಳು, ಅತ್ಯುತ್ತಮ [illegible] ರತ್ನಗಳು [illegible] ಉಂಗುರಗಳು, ಬೆಳ್ಳಿ ಪಾತ್ರಗಳು, ಜರ್ಮನ್ ಬೆಳ್ಳಿ ಪಾತ್ರಗಳು ಕೇಸರಿ, ಕಸ್ತೂರಿ ವಗೈರೆ ಇತರ ಸಾಮಾನುಗಳು

ಜವಾಬ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟ್ಯಾಂಪ್ ಕಳುಹಿಸದ ಹೊರತು ಜವಾಬ್ ದೊರೆಯಲಾರದು

ವಿಳಾಸ ಗಣೇಶ ರಾಮಚಂದ್ರ ಕರ್ಕ,

ಮತ್ತು ಕಂಪನಿ ಕಮಿಶನ್ ಏಜಂಟ್ಸ್

ಠಾಕೂರದ್ವಾರ, ಮಹಾಕೋಟ ಪೋಸ್ಟ್, ಮುಂಬೈ

### ನೋಟೀಸ್

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ನಾಟಕ ಮುದ್ರಾಕ್ಷರ ಶಾಲೆಯಲ್ಲಿ ಬಿಕರಿಗೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು

### ಸಂಸ್ಕೃತ ಗ್ರಂಥಗಳು

| | ರೂ | ಅ | ಪೈ |
|---|---|---|---|
| ಸಟೀಕಾ ವೈದ್ಯಸಾರ ಸಂಗ್ರಹ | ೫ | ೦ | ೦ |
| „ ಶಂಕ ತಿ | ೧ | ೨ | ೦ |
| „ ಶಿವಾನಂದಲಹರಿ | ೦ | ೪ | ೦ |
| „ ಕಾಲಾಮೃತ | ೧ | ೦ | ೦ |
| „ ಟೀ॥ ವಿಷ್ಣುರಾಮಾಯಣ | ೦ | ೩ | ೦ |
| „ ಟೀ॥ ಗೊಪಿಕಾ ಗೀತೆ | ೦ | ೧ | ೦ |
| „ ಟೀ॥ ಚಾಣಕ್ಯನೀತಿ (ಸುಭಾಷಿತ) | ೦ | ೮ | ೦ |
| ವಿಷ್ಣುಸಹಸ್ರನಾಮ ಪತ್ರಿಕೆ | ೦ | ೩ | ೦ |
| ಸೂರ್ಯಸಹಸ್ರನಾಮ | ೦ | ೨ | ೦ |
| ಕೃಷ್ಣಕರ್ಣಾಮೃತ | ೦ | ೨ | ೦ |
| ತ್ರಿಕಾಂಡ ಅಮರ ಮೂಲ | ೦ | ೨ | ೦ |
| ೧ ಕಾಂಡ | ೦ | ೧ | ೦ |

### ಕನ್ನಡ ಗ್ರಂಥಗಳು.

| | ರೂ | ಅ | ಪೈ |
|---|---|---|---|
| ಶುಕಸಪ್ತತಿ ಅವ್ವಲ್ | ೩ | ೦ | ೬ |
| ದಿಟ್ಟೋ ದುಯ್ಯಂ | ೧ | ೨ | ೮ |
| ವೃಷಭೇಂದ್ರವಿಜಯ | ೧ | ೪ | ೦ |
| ಪಂಚತಂತ್ರ ಬಾಲಬೋಧಿ | ೦ | ೬ | ೦ |
| ಹನುಮದ್ವಿಲಾಸ | ೦ | ೬ | ೦ |
| ಕಾಳೀಯಮರ್ದನ | ೦ | ೨ | ೦ |
| ಸುಭದ್ರಾಪರಿಣಯ | ೦ | ೨ | ೦ |
| ಚಿತ್ರಾಂಗದಾಪರಿಣಯ | ೦ | ೨ | ೬ |
| ಸುದಾಮ ಚರಿತ್ರೆ | ೦ | ೧ | ೦ |
| ದ್ರೌಪದೀ ಚರಿತ್ರೆ | ೦ | ೧ | ೦ |
| ಬಾಲಗ್ರಹಚಿಕಿತ್ಸೆ | ೦ | ೧ | ೦ |
| ಮಹಮ್ಮದ ಲಾ | ೦ | ೧೨ | ೦ |
| ಭ್ರಾಂತಿವಿಲಾಸ | ೧೨ | ೦ | ೦ |

## POLITICAL ECONOMY.

## ಅರ್ಥಶಾಸ್ತ್ರವು.

### ಪ್ರಥಮಾಧ್ಯಾಯವು

#### ಉಪೋದ್ಘಾತವು

(ಗತವಾರದ ಶೇಷ)

ಗತವಾರದಲ್ಲಿ ಅರ್ಥಶಾಸ್ತ್ರಾರ್ಥ ನಿರೂಪಣವಂ ಮಾಡಿ, ಇತರ ಶಾಸ್ತ್ರಾಪೇಕ್ಷಯಾ ಅದರ ವೈಶಿಷ್ಟ್ಯವನ್ನೂ ಪ್ರಯೋಜನವನ್ನೂ ಸಂಗ್ರಹವಾಗಿ ತಿಳಿಸಿದೆವಷ್ಟೆ. ಈ ಶಾಸ್ತ್ರವು ಅರ್ಥಸ್ವರೂಪ ಪ್ರಯೋಜನವಂ ಕುರಿತು ಮಾಳ್ಪ ವಿಚಾರ ಮಾಡತಕ್ಕದ್ದಾಗಿರುವದರಿಂದ ಅದರ ವಿಷಯದಲ್ಲಿ ಜನಗಳು ದೋಷವುಕೊಂಡುಹಿಡಿಯುವ ಕುತೂಹಲ ಉಳ್ಳವರಾಗಿರುತ್ತಾರೆ ಪ್ರಾಯೋಣ ಅವರು ತಿಳಿಸುವ ಆಕ್ಷೇಪಣೆಗಳ್ಯಾವವೆಂದರೆ ಲೋಕದಲ್ಲಿ ಅರ್ಥಕ್ಕಿಂತಲೂ ಸುಗುಣ ಔದಾರ್ಯನುರಾಗಾದಿ ಉತ್ಕೃಷ್ಟಾಂಶಗಳು ಹೇರಳವಾಗಿರುವದರಿಂದ ಜನಗಳು ಕೇವಲ ತುಚ್ಛಕ ಅರ್ಥಸ್ವರೂಪ ಪ್ರಯೋಜನಗಳನ್ನರಿಯುವದಕ್ಕಿಂತಲೂ ಮೇಲೆ ತಿಳಿಸಲ್ಪಟ್ಟಂಥಾ ಉತ್ತಮ ಗುಣ ಸ್ವರೂಪಗಳನ್ನರಿತು ಅವು ಸ್ವಾನುಷ್ಠಾನದೊಳು ತಂದುಕೊಳ್ಳುವುದಾಗಿರುತಿದೆ ಒಬ್ಬ ಪುರುಷನು ಅಧಿಕವ ಗಳಿಸಿ ಲುಬ್ಧನಂತೆ ಪ್ರಯೋಜನವಿಲ್ಲದೆ ಕೂಡಿಹುವದರ ಮೂಲಕ ಆತನು ದನಿಕನಾಗಬಹುದು ಪರಂತು ಅವನು ತನ್ನ ಅರ್ಥವು ಇಷ್ಟಮಿತ್ರರ ಮತ್ತು ಪ್ರಜಾ ಸಾಮಾನ್ಯರ ವಿನಿಯೋಗದೊಳು ವಿನಿಯೋಗಿಸಿರುವನಾದರೆ ಅವು ಎಷ್ಟು ಶ್ಲಾಘ್ಯವೆನಿಸಿರುವದೋ ಅಷ್ಟೇ ರ ಉತ್ತಮಗುಣವೆನ್ನಿಸಿಕೊಳ್ಳಲಾರದು ಪ್ರಸಕ್ತ ಅರ್ಥಶಾಸ್ತ್ರೋದ್ದೇಶ ಪ್ರಯೋಜನಗಳನ್ನರಿಯದೆ ಅಪಾರ್ಥಗಳಂ ಮಾಡಿಕೊಂಡು ಆಕ್ಷೇಪಿಸತಕ್ಕವರು, ಏಕಕಾಲದಲ್ಲಿ ಸಕಲ ಶಾಸ್ತ್ರಾರ್ಥಗಳನ್ನರಿಯುವಣವಸಾಧ್ಯವೆಂಬದನ್ನೂ ಒಂದೊಂದು ಕಾಲದಲ್ಲಿ ಒಂದೊಂದು ಅಂಶವೇ ಗ್ರಹಿಸತಕ್ಕದ್ದೆಂಬದನ್ನೂ ಅರಿಯದವರಾಗಿರುತ್ತಾರೆ ಏಕಕಾಲದಲ್ಲಿ ವಿಶಿಷ್ಟ ಸಾಮಾಜಿಕ ಶಾಸ್ತ್ರಗಳನ್ನು ಅಂದರೆ ಲೋಕತಂತ್ರಗಳ ಬೋಧಿಸುವ ಸಕಲ ಶಾಸ್ತ್ರಗಳನ್ನಭ್ಯಸಿಸಿ ಜ್ಞಾನವಂಸಂಪಾದಿಸಲಿಕ್ಕೆ ನಮಗೆ ಸಾಧ್ಯವಲ್ಲವು ನಕ್ಷತ್ರಗಳ ಸ್ಥಿತಿಗತಿ ಮೊದಲಾದ ಖಗೋಳ ವಿಷಯ ವಿವೇಚಕ ಶಾಸ್ತ್ರ ವಿಷಯದಲ್ಲಾಗಲಿ ಸಂಖ್ಯೆ ಮತ್ತು ತತ್ಪರಿಮಾಣ ವಿಷಯ ಬೋಧಕವಾದ ಗಣಿತಶಾಸ್ತ್ರವು ಕುರಿತಾಗಲಿ ಒಬ್ಬರೂ ಆಕ್ಷೇಪಿಸಲಾರದು ಏಕಕಾಲದಲ್ಲೇಕತ್ರ ಜ್ಯೋತಿಶ್ಶಾಸ್ತ್ರವನ್ನೂ ವ್ಯುತ್ಪತ್ತ್ಯಾದಿ ಶಬ್ದಾರ್ಥ ಪದಾರ್ಥ ಲಕ್ಷಣ ನಿರ್ಧಾರಕ ಶಾಸ್ತ್ರವನ್ನೂ, ರಸಗಂಧಕ ಪಾಷಾಣಾದಿ ಧಾತುವರ್ಗ ತತ್ವವಿವೇಚಕ ಶಾಸ್ತ್ರವನ್ನೂ ಭೌತಿಕ ಶಾಸ್ತ್ರವನ್ನೂ, ಪದಾರ್ಥ ತತ್ವವಿವೇಚಕ ಶಾಸ್ತ್ರವನ್ನೂ ಇನ್ನೂ ಇತರಶಾಸ್ತ್ರ ವಿಷಯಗಳನ್ನೂ ಸಂಗ್ರಹಿಸಿತಿಳಿಸುವಂಥಾ ಒಂದುಶಾಸ್ತ್ರಸಂಗ್ರಹವೇ ಧನಿಯುಬಹಳಆಶ್ಚರ್ಯಕರವಾದುದಾಗಿರುವುದು ಪದಾರ್ಥ ಶಕ್ತಿಲಕ್ಷಣ ನಿರ್ಣಯವು ಮಾಡುವದಕ್ಕಾಗಿ ಪ್ರವರ್ತಿಸಿದ ಶಾಸ್ತ್ರಗಳೂ ಸಾಮಾಜಿಕ ಸಂಬಂಧವಾದ ಲೌಕಿಕ ಶಾಸ್ತ್ರಗಳೂ ಭಿನ್ನಗಳಾಗಿ ಪ್ರತ್ಯೇಕಿಸಿರದೇಕಲ್ಲದೆ ಅನ್ಯ ಸಾಮಾನ್ಯ ವಿಷಯ ಬೋಧಕವಾಗಿರಲಾರದು

ಅರ್ಥಶಾಸ್ತ್ರವಿಷಯಕವಾದ ಅಪವಾದಗಳು— ಏತದ್ವಿಷಯ ಸ್ವರೂಪ ಪ್ರಯೋಜನಗಳಂ ಚೆನ್ನಾಗಿ ಅರಿತು ಅನುಭವಿಸಬೇಕಾದ ಪ್ರಜೆಗಳು ದಕ್ಷ್ಯಮಾಣವಾದ ಶಾಸ್ತ್ರ ವಿಷಯದಲ್ಲಿ ಬಹಳ ಭ್ರಾಂತರಾಗಿರುವಂತೆ ಸ್ಪಷ್ಟವಾಗುತಿದೆ. ಅರ್ಥಶಾಸ್ತ್ರವನ್ನಭ್ಯಸಿಸದುಕೆಯೇ ಜನಗಳು ಅದರಲ್ಲಿ ತಿಳಿಸಲ್ಪಟ್ಟಿರುವ ವಿಶಿಷ್ಟಾಂಶಗಳೂ ತಮಗೆ ತಿಳಿಯುವವೆಂದು ಭಾವಿಸಿರುವದರಿಂದ ಅನೇಕ ದೋಷಗಳು ಅಗಿಂದಾಗ್ಯ ಪ್ರಾಪ್ತವಾಗುತಿವೆ ರಸಗಂಧಕ ಪಾಷಾಣಾದಿಗಳ ಸಂಯೋಜನ ವಿಭಜನ ವಿಷಯದಲ್ಲಿ ನಿಪುಣನಾದ ಶಾಸ್ತ್ರವೇತ್ತ ನೊಬ್ಬನೊಡನೆ ಸಾಮಾನ್ಯಜ್ಞಾನ ಪ್ರಶ್ನೆಗನೊಬ್ಬನು ಆ ಶಾಸ್ತ್ರ ವಿಷಯದಲ್ಲಿ ವಿಚಾರ ಮಾಡಿ ನಿರಸನ ಮಾಡಲಿಕ್ಕೆ ಲೇಶವೂ ಪ್ರಯತ್ನಪಡಲಾರನು ಹಾಗೆಯೇ ಗ್ರಹನಕ್ಷತ್ರಗ್ರಹಣಾದಿವಿಷಯಗಳಂ ಕುರಿತು ಒಬ್ಬ ಜ್ಯೋತಿಶ್ಶಾಸ್ತ್ರಜ್ಞನೊಡನೆಯಾಗಲಿ ಗ್ರೈನಿಟ್ ಧಾತು ವಿಚಾರದಲ್ಲಿ ಅದರೊಳು ಪ್ರವೀಣನಾದವನೊಡನೆಯಾಗಲಿ, ಶಾಸ್ತ್ರವಿಚಾರ ಮಾಡಿ ಖಂಡಿಸಲಿಕ್ಕೆ ಪ್ರಯತ್ನಿಸಲು ಸಾಧ್ಯವಾಗಲಾರದು ಜನಗಳಿಗೆ ನಿಕ್ಷೇಪ ಅಭಿಕಾರಿಯಲ್ಲದ ಒಂದು ವ್ಯಾಪಾರವಿಷಯವಲ್ಲಾಗಲಿ, ಅಥವಾ ಅಧಿಕವೇತನ ಕೂಡುವದರಿಂದುಂಟಾಗುವ ಪ್ರಯೋಜನ ವಿಷಯದಲ್ಲಾಗಲಿ, ಅಥವಾ ಅಲ್ಪ ಫಲವು ಪಡೆವ ನಿಶ್ಚಿತ ಕರ್ತವ್ಯವು ಪಡುವದರ ಮೂಲಕ ಉದ್ಯೋಗ ಗೌರವವಂ ತಗ್ಗಿಸುವ ವಿಷಯದೊಳಾಗಲಿ, ಅಥವಾ ಪ್ರಜಾ ಸಂಬಂಧಗಳಾದ ನೂರಾರು ಮುಖ್ಯ ವಿಷಯಗಳಲ್ಲಿ ಯಾವದಾದರೊಂದನ್ನು ಕುರಿತಾಗಲಿ, ಪ್ರತಿ ಮನುಷ್ಯನೂ ಯಾವದೋ ಒಂದು ಬಗೆಯಾದ ಅಭಿಪ್ರಾಯವುಳ್ಳವನಾಗಿಯೇ ಇರುತ್ತಾನೆ ಅಂತವರಿಗೆ ಈ ವಿಷಯಗಳು ರಸಶಾಸ್ತ್ರ ಅಥವಾ ಧಾತು ಲಕ್ಷಣಾದಿಗಳಿಗಿಂತ ಗ್ರಹಿಸಲಿಕ್ಕೆ ಬಹಳಕಠಿಣವೆಂಬದಾಗಿಯೂ, ಯಾವಳ್ಳೀವ ಅಭ್ಯಾಸ ಮಾಡದಾಗ್ಯೂ ಅವುಗಳಂ ಕುರಿತು ಸ್ವಾಭಿಪ್ರಾಯವು ತಿಳಿಸಲಿಕ್ಕೆ ಅದು ಸಾಕಾಗದಂಗಿರುವದಿಲ್ಲವೆಂಬದಾಗಿಯೂ ತೋರಲಾರದು ಆದಾಗ್ಯೂ ಸಮ್ಯಕ್ಕಾಗಿ ಅರ್ಥಶಾಸ್ತ್ರಾಭ್ಯಾಸವು ಮಾಡದಿರುವುದರಿಂದ ತಮ್ಮ ತಿಳುವಳಿಕೆಯ ವಿಷಯದಲ್ಲಿ ವಿಶೇಷ ದಾರ್ಢ್ಯವುಳ್ಳವರಾಗಿರುವದು ಸ್ವಾಭಾವಿಕವಾಗಿರುತಿದೆ

ಪೂರ್ವದಲ್ಲಿ ಪ್ರಜೆಗಳು ಭೌತಿಕ ಶಾಸ್ತ್ರದಲ್ಲಿ ಹ್ಯಾಗೆ ಜಿಗುಪ್ಸೆಯುಳ್ಳವರಾಗಿದ್ದರೋ, ತದ್ವತ್ ಈಗ ಅರ್ಥಶಾಸ್ತ್ರದಲ್ಲಿ, ಮೌಢ್ಯಯುಕ್ತವಾದ ಬೆಹಾಸೆಯುಳ್ಳವರಾಗಿವಾರೆ. ಜನಗಳು ತಮ್ಮ ಉತ್ಸಾಹ ದುರಭಿಮಾನಾನುಸಾರ ವರ್ತಿಸುತ ತಮ್ಮ ಉದ್ದಿಷ್ಟಫಲಕ್ಕೆ ಸಾಕ್ಷಾದ್ವಿರುದ್ಧವಾದ ಪ್ರತಿಫಲವನ್ನಿಯ್ಯುವಂತಾ ಕಾರ್ಯವಂ ಮಾಡುವದಾಗಿ ಯಾರಾದರು ತಿಳಿಸುವದಾದರೆ ಅವರು ಅದಕ್ಕಾಗಿ ಬಹಳ ಆಗ್ರಹಗೊಳ್ಳುತ್ತಾರೆ. ಈಗ ದಾನವೆಂದು ವ್ಯವಹರಿಸಲ್ಪಡುವ ಕೃತ್ಯಸ್ವರೂಪವಂ ಕುರಿತು ಸ್ವಲ್ಪ ವಿಚಾರ ಮಾಡುವಣ; ದಾನ ಮಾಡುವದರಿಂದ ಪ್ರಜೆಗಳಿಗುಂಟಾಗತಕ್ಕ ಭವಿಷ್ಯತ್ಸ್ಥಿತಿಯಂ ಪರ್ಯಾಲೋಚಿಸದೆ ಯಾಚಿಸುವಂತಾ ಎಲ್ಲರಿಗೆ ದಾನ ಕೊಡುವಣವು ಹಿಂದು

ಪ್ರಬಲ ಸದ್ಗುಣದೋಷಾದಿಯಲ್ಲಿ ಭಾವಿಸುವ ಈ ದಯಾರಸವುಳ್ಳ ಸಹೃದಯರನೇಕರಿರುತ್ತಾರೆ. ಅವರು ಪ್ರಾಯೇಣ, ದಾನ ಕೊಡಲ್ಪಟ್ಟ ಉತ್ತರ ಕ್ಷಣದಲ್ಲಿ ಯಾಚಕನಿಗುಂಟಾಗುವ ಕ್ಷಣಿಕ ಸಂತೋಷವಂ ಕಂಡು ಆನಂದಿಸತಕ್ಕವರಾಗಿದಾರೆಯೇ ಹೊರ್ತು ಪಾಶ್ಚಾತ್ಯ ಅವರಿಗುಂಟಾಗುವ ಫಲಗಳಂ ಕುರಿತು ಸ್ವಲ್ಪವೂ ಚಿಂತಿಸತಕ್ಕವರಲ್ಲವು ಇವರಿಂದ ಪೂರ್ವಕ್ಕಿಂತಲೂ ನಿರುದ್ಯೋಗಿಗಳಾದ ಯಾಚಕರ ಸಂಖ್ಯೆಯು ಕ್ರಮೇಣ ವೃದ್ಧಿಯನ್ನೈದುತ ಬರುವಣವೇ ಯೆಲ್ಲಕ್ಕಿಂತಲೂ ಮುಖ್ಯ ಫಲವೆಂದು ಭಾವಿಸತಕ್ಕದ್ದು. ಈಗ ದೇಶದೊಳು ಪ್ರಾಚುರ್ಯವನ್ನೈದಿರುವ ಅನೇಕ ವಿರುದ್ಧ ಗುಣಗಳೂ, ದಾರಿದ್ರ್ಯವೂ, ದುಷ್ಕೃತ್ಯಗಳೂ ಪ್ರಾಯೇಣ ಪೂರ್ವಕಾಲಿಕರು ದಾನಕ್ಕೆ ಪ್ರಾರ್ಥನ ಮಾಡಿಕೊಂಡು ಹಿಂದೆ ಮಾಡಿದ ಧರ್ಮಗಳಿಂದುಂಟಾದ ಪ್ರತಿಫಲಗಳೆಂದು ಧೈರ್ಯದಿಂ ನುಡಿಯಬಹುದಾಗಿದೆ. ಅಂತಾ ವಿರುದ್ಧಾಭಿಪ್ರಾಯದೊಡನೆ ಮಾಡಲ್ಪಟ್ಟ ದಾನವು ಪ್ರಜೆಗಳ ಪೈಕಿ ಅನೇಕರನ್ನು ನಿರ್ವ್ಯಾಪಾರರನ್ನಾಗಿಯೂ ನಿರುತ್ಸಾಹಿಗಳನ್ನಾಗಿಯೂ, ಅಜಾಗರೂಕರನ್ನಾಗಿಯೂ ಮಾಡದಿರಲಿಲ್ಲವು. ಅನುಚಿತವಾದ ದಾನವನ್ನಾವಾಗಲಾದರು ಕೊಡುವದಕ್ಕೆ ಬದಲಾಗಿ ಪ್ರಜೆಗಳಿಗೆ ವಿದ್ಯಾ ವೈದುಷ್ಯವಂ ಕಲ್ಪಿಸತಕ್ಕದ್ದೆಂಬವನ್ನು, ಅವರು ಯಾವದಾದರೊಂದು ವೃತ್ತಿಯನ್ನವಲಂಬಿಸಿ ಕೃಷಿ ಮಾಡಿ ಆತ್ಮರಕ್ಷಣೆಯಂ ಮಾಡಿಕೊಂಡು ಆರ್ಜಿಸಿದ್ದರಲ್ಲಿ ಕೆಲವು ಭಾಗವನ್ನು ವಾರ್ಧಕಾವಸ್ಥೆಯೊಳು ತಮಗೆ ಉಪಯೋಗಿಸುವಂತೆ ಕೂಡಿರಿಸಿಡಬೇಕಾದ್ದು ಕರ್ತವ್ಯವೆಂಬ ಜ್ಞಾನವನ್ನುಂಟುಮಾಡತಕ್ಕದ್ದು ಆವಶ್ಯಕವೆಂಬದನ್ನು ಪ್ರಸಕ್ತ ಅರ್ಥಶಾಸ್ತ್ರವು ನಿರೂಪಿಸುತಿದೆ. ನಿರುದ್ಯೋಗಿಗಳಾಗಿ ಪುರೋದೃಷ್ಟಿ ಇಲ್ಲದೆ ಕಾಲಹರಣ ಮಾಡಿದರೆ ಅವರು ಅನಂತರ ಉಂಟಾಗತಕ್ಕ ವಿರುದ್ಧ ಫಲಾನುಭವಕ್ಕೆ ಪಾತ್ರರಾಗದೆ ಹೋಗಲಾರರು. ಆದರೆ ಇದು ಜನರ ಹೃದಯ ಕಾಠಿಣ್ಯವಂ ವ್ಯಕ್ತಗೊಳಿಸತಕ್ಕದ್ದಾಗಿರುವದರಿಂದ ಅರ್ಥಶಾಸ್ತ್ರಜ್ಞರನ್ನು ಸರಳಹೃದಯರಾದ ತದ್ವಿರುದ್ಧಜ್ಞಾನವುಳ್ಳವರು ಬಹಳವಾಗಿ ನಿಂದಿಸುತ್ತಾರೆ. ಈ ಶಾಸ್ತ್ರವು ಕೇವಲ ಕ್ರೂರವಾದುದೆಂತಲೂ ದಯಾರಹಿತವಾದುದೆಂತಲೂ, ಅದರ ಯಾವದುದ್ದೇಶವು ಧನಿಕರನ್ನು ಮತ್ತಷ್ಟು ಧನಿಕರಾಗಿ ಮಾಡಿ ದರಿದ್ರರು ನಷ್ಟರಾಗುವಂತೆ ಅವರನ್ನು ಉಪೇಕ್ಷಿಸತಕ್ಕದ್ದಾಗಿದೆಯೆಂತಲೂ ಗ್ರಹಿಸಲ್ಪಟ್ಟಿದೆ. ಇದು ಕೇವಲ ಬುದ್ಧಿಭ್ರಮಾದಜನಿತ ವಿರುದ್ಧಾಭಿಪ್ರಾಯವಾಗಿರುತಿದೆ. ಪ್ರಜೆಗಳು ಸುಲಭೋಪಾಯದಿಂ ಹ್ಯಾಗೆ ಧನವನ್ನಾರ್ಜಿಸಿ ಧನಿಕರಾಗತಕ್ಕದ್ದೆಂದು ಯಾರಾದರು ಅರ್ಥಶಾಸ್ತ್ರಜ್ಞರನ್ನು ಪ್ರಶ್ನೆ ಮಾಡಿದಪಕ್ಷಕ್ಕೆ ಅವರು, ಧನಿಕನಾದ ಪುರುಷನು ತನ್ನ ಧನವನ್ನು ವಿನಿಯೋಗಿಸದೆ ಪರಮ ಲೋಭಿಯಂತೆ ತನ್ನಲ್ಲಿ ಭದ್ರವಾಗಿ ಕಾಪಾಡಿಡಬೇಕೆಂದಾಗಲಿ, ಅಥವಾ ದುಂದುಗಾರನಂತೆ ಅತಿವ್ಯಯಮಾಡಿ ವಿಶಿಷ್ಟವಂ ಕಳೆದುಕೊಳ್ಳಬೇಕೆಂದಾಗಲಿ, ಎಂದಿಗೂ ಬೋಧಿಸಲಾರರು. ಭಾಗ್ಯಶಾಲಿಯಾದವನು ತನ್ನ ಧನವನ್ನು ಧಾರಾಳವಾಗಿಯೂ, ಉದಾರಭಾವದೊಡನೆಯೂ, ವಿವೇಕದೊಡನೆಯೂ ವಿನಿಯೋಗಿಸದಿರುವಂತೆ ಆತನಂ ನಿರೋಧಿಸಿ ಬೋಧಿಸತಕ್ಕದ್ದ್ಯಾವದೂ ಈ ಶಾಸ್ತ್ರದೊಳಿಲ್ಲವು. ವಿವೇಕಿಯಾದ ಧನವಂತನು ತನ್ನ ಇಷ್ಟ ಬಾಂಧವರಿಗೆ ಬೇಕಾದಂತೆ ಉಪಕಾರ ಮಾಡಲಿಕ್ಕೇನೂ ಬಾಧಕವಿಲ್ಲವು ಅವನು ಉಪಯುಕ್ತಗಳಾದ ಧರ್ಮಸ್ಥಾಪನೆಗಳನ್ನು ಅಂದರೆ, ಧರ್ಮಾರ್ಥವಾದ ವಿದ್ಯಾಲಯಗಳು, ಸರಸ್ವತೀ ಭಂಡಾರಗಳು, ವಿವಿಧವಸ್ತು ಪ್ರದರ್ಶಕಶಾಲೆಗಳು, ಔಷಧಶಾಲೆಗಳು, ಉದ್ಯಾನವನಗಳು, ಏವಮಾದಿಗಳಂ ವ್ಯವಸ್ಥಾಪಿಸಬಹುದು, ಅನಾಥರಿಗೆ ವಿದ್ಯಾಭ್ಯಾಸ ಮಾಡಿಸಬಹುದು. ಅಥವಾ, ವಿವಿಧಶಾಸ್ತ್ರಾಭ್ಯಾಸೋಪಯುಕ್ತಗಳಾದ ಶಾಸ್ತ್ರ ಪಾಠಶಾಲೆಗಳಂ ಪ್ರತಿಷ್ಠಗೊಳಿಸಬಹುದು, ಗತ್ಯಂತರವಿಲ್ಲದೆ ಪ್ರಬಲವಿಪತ್ತುಗಳಿಗೊಳಗಾಗಿ ಸಂಕಟಪಡತಕ್ಕವರಿಗೆ ಸಹಕರಿಸಿ ತಾದೃಶಸಂಕಟದಿಂದವರಂ ನಿವೃತ್ತಿಸಬಹುದು. ಇದಲ್ಲದೆ ಅಂಗಹೀನರು ಅಂಧರು ಮತ್ತು ಆತ್ಮರಕ್ಷಣೆ ಮಾಡಿಕೊಳ್ಳಲಿಕ್ಕೆ ಆತ್ಯಂತಿಕವಾಗಿ ಶಕ್ತಿಯಿಲ್ಲದ ಅನಾಥರು ಧನಿಕರ ದಾತೃತ್ವಕ್ಕೆ ಅರ್ಹರಾದವರಾಗಿರುತ್ತಾರೆ. ಪ್ರಾಧಾನ್ಯೇನ ಅರ್ಥಶಾಸ್ತ್ರಜ್ಞರು ತಿಳಿಸುವದೆಲ್ಲವು ಧರ್ಮವೆಂಬದು ಸ್ವರೂಪತಃ ಧರ್ಮಗುಣವುಳ್ಳದ್ದಾಗಿರಬೇಕಲ್ಲದೆ, ಅದು ಯಾರ ಸಹಾಯಾರ್ಥ ಉದ್ದಿಷ್ಟವಾದುದಾಗಿದೆಯೋ ಅಂತವರಿಗೊಂದು ಹಾನಿಯನ್ನುಂಟುಮಾಡತಕ್ಕದ್ದಾಗಿರಕೂಡದೆಂಬದು ಪ್ರಜೆಗಳಿಗೆ ಶ್ರೇಯಸ್ಸನ್ನುಂಟುಮಾಡಬೇಕೆಂಬದಾಗಿ ಇದುವರಿಗೆ ಅಪೇಕ್ಷಿಸಿದ್ದವರೆಲ್ಲರು ಸ್ವರೂಪತಃ ಬಹಳ ಹಾನಿಯನ್ನುಂಟುಮಾಡಿದರೆಂದು ಭಾವಿಸುವದು ದೋಷವಾಗಿರುತಿದೆ. ಮತ್ತೊಂದು ಬಗೆಯಾದ ಪ್ರಬಲದೋಷವಂ ಕುರಿತಿಲ್ಲಿ ಚಿಂತಿಸಬೇಕಾಗಿದೆಯೇನೆಂದರೆ,—ಅನೇಕ ಸಹಸ್ರ ಪ್ರಜೆಗಳು ವಿರುದ್ಧ ಮಾರ್ಗಗಳಲ್ಲಿ ಪ್ರವರ್ತಿಸಿ ತನ್ಮೂಲಕ ತಮ್ಮ ಸ್ಥಿತಿಯಂ ಪ್ರಬಲಪಡಿಸಿಕೊಳ್ಳಬೇಕೆಂದಾಲೋಚಿಸುತ್ತಾರೆ. ಅಂತಾ ಮಾರ್ಗಗಳಾದರೋ ಅತಿನಿಂದ್ಯಗಳಾಗಿಯೂ, ಆತ್ಮನಾಶಕರಗಳಾಗಿಯೂ, ದುಃಖದಾಯಕಗಳಾಗಿಯೂ, ಪ್ರತ್ಯುತ ವಿಶೇಷ ದಾರಿದ್ರ್ಯವನ್ನುಂಟುಮಾಡತಕ್ಕವಾಗಿಯೂ ಇರುತಿವೆ ಅನೇಕರು ಏಕೀಭವಿಸಿ ಕಲಹಿಸಿ ಯಂತ್ರ ನಡಿಸುವದು ಮೊದಲಾದ ತಮ್ಮ ಕರ್ತವ್ಯಗಳಂ ಮಾಡದೆ ಉದಾಸೀನ ಮಾಡುವರಲ್ಲದೆ ಇನ್ನು ಅನೇಕೋಪಾಯಗಳಿಂದ ಧನಾಭಿವೃದ್ಧಿಯಂ ನಿರೋಧಿಸಲೆತ್ನಿಸುವಣವು ಸಾಧಾರಣವಾದಿಕೆಯಾಗಿರುತಿದೆ. ಕೆಲಸಗಾರರು ಸ್ವೋಪಯೋಗಾರ್ಥ ಸ್ವತಃ ಒಂದು ಅರ್ಥಶಾಸ್ತ್ರವಂ ರಚಿಸಿರುತ್ತಾರೆ. ವಿಶೇಷ ದ್ರವ್ಯ ಸಂಪಾದನ ಮಾಡದೆ ಜಾಗರೂಕರಾಗಿ ತಾವೇ ಧನಿಕರಾಗುವ ಮಾರ್ಗವನ್ನವರು ಕಂಡು ಹಿಡಿದಿದ್ದಾರೆ ಅವರು ಯಾವಾಗಲು ತಾವು ಮಾಡುವ ಕಾರ್ಯದ ಸಾಧ್ಯಸ್ಥ ಪ್ರಯೋಜನವನ್ನಿರೀಕ್ಷಿಸುತ್ತಾರೆಯೇ ಹೊರ್ತು ಪಶ್ಚಾತ್ ಪ್ರುಂಟಾಗಬಹುದಾದ ಪರಂಪರಾ ಪ್ರಯೋಜನವಂ ವಿಶೇಷತಃ ಗಣಿಸತಕ್ಕವರಲ್ಲವು. ಇದೇ ಅಂಶವು (Free Trade) ಅಂದರೆ ಸ್ವತಂತ್ರವ್ಯಾಪಾರದ (ಅಂದರೆ ಪರಕೃತ ನಿರ್ಬಂಧರಹಿತವಾದದ್ದು) ವಿಷಯದಲ್ಲಿಸಹ ಅನ್ವಯಿಸತಕ್ಕದ್ದಾಗಿರುತಿದೆ. ವ್ಯಾಪಾರ ವಿಷಯದಲ್ಲಿ ವರ್ತಕರಿಗೆ ಯಾವವಿಧ ನಿರ್ಬಂಧವಿಲ್ಲದಂತೆ ಸ್ವಾತಂತ್ರ್ಯವನ್ನುಂಟುಮಾಡುವದು ಯೋಗ್ಯವೆಂದು ಕಡೆಗೆ ತೋರಿಬಂದುದರಿಂದ ತಾದೃಶಪದ್ಧತಿಯು ಇಂಗ್ಲಾಂಡ್ ರಾಜ್ಯದಲ್ಲಿ ಅಂಗೀಕರಿಸಲ್ಪಟ್ಟಿತು ಪ್ರಸಕ್ತ ಪದ್ಧತಿಯಿಂದುಂಟುಮಾಡಲ್ಪಟ್ಟ ಸ್ವಾತಂತ್ರ್ಯಸ್ವರೂಪವೇನಾದ್ದೆಂದರೆ. ಒಂದು ರಾಜ್ಯದಲ್ಲಿ ಉತ್ಪತ್ತಿಯಾಗುವ ಪದಾರ್ಥಗಳು ಅಲ್ಲಿಯೇ ಕರಗುವಡಿಯಾಗಬೇಕೆಂಬದೂ ಒಂದು ನಿಯತವಾದ ಕ್ರಯಕ್ಕೇ ವಿಕ್ರಯಿಸಲ್ಪಡಬೇಕೆಂಬದೂ, ಅನ್ಯದೇಶೋತ್ಪನ್ನಗಳಾದ ಪದಾರ್ಥಗಳು ಸ್ವರಾಜ್ಯದಲ್ಲಿ ತರಲ್ಪಡಕೂಡದೆಂಬದೂ ವ್ಯಾಪಾರಾಭಿವೃದ್ಧಿ ಭಂಜಕಗಳಾದುದರಿಂದ ಅಂತಾ ನಿರ್ಬಂಧಗಳು ಕುದ್ದಾಂಗ ನಿವೃತ್ತಿಯಾಗಿ ಅದರ ವಿಷಯದಲ್ಲಿ ಅನ್ಯಜನ ಸಂಪರ್ಕವಿಲ್ಲದೆ ವರ್ತಕರು ಸ್ವತಂತ್ರಿಸಿ ನಡೆಸುವ ವ್ಯಾಪಾರವೆಂದು ತಿಳಿಯತಕ್ಕದ್ದು. ಇತರ ದೇಶಗಳಲ್ಲಿ ತಥಾಪಿ ಆಸ್ಟ್ರೇಲಿಯಾ ಖಂಡದೊಳು ಬ್ರಿಟಿಷರ ಆಧಿಪತ್ಯಕ್ಕೊಳಪಟ್ಟಿರುವ ಪ್ರದೇಶಗಳಲ್ಲಿ ಸಹ ಪ್ರಜೆಗಳು ವಿಶೇಷವಾಗಿ ಅನ್ಯದೇಶ ಪದಾರ್ಥಗಳನ್ನುಪಯೋಗಿಸದಂತೆ ಅವರನ್ನು ನಿರ್ಬಂಧಿಸುವದರ ಮೂಲಕ ಅವರು ಮತ್ತಷ್ಟು ಧನಿಕರಾಗುವಂತೆ ನ್ಯಾಯ ನಿಬಂಧನೆಗಳು ಅದ್ಯಾಪಿ ಮಾಡಲ್ಪಡುತಲಿವೆ. ಧನವೆಲ್ಲಿ ಸುಲಭವಾಗಿಯೂ ಅಮಿತವಾಗಿಯೂ ಆರ್ಜಿಸಲ್ಪಡಬಹುದೋ ಅಲ್ಲಿ ಅದು ಸಂಪಾದಿಸುವದರ ಮೂಲಕ ವೃದ್ಧಿಪಡಿಸುವ ವಿಷಯದಲ್ಲಿ ಪ್ರಜೆಗಳು ಪ್ರತ್ಯಕ್ಷತಃ ನಿರಾಕರಿಸುತ್ತಾರೆ, ಪ್ರತಿ ವ್ಯಾಪಾರದಿಂದಲೂ ಪ್ರತಿ ಊರಿನಲ್ಲಿಯೂ, ಪ್ರತಿ ಜನಾಂಗದವನಿಂದಲೂ ಸುಲಭವಾಗಿ ಉತ್ಪತ್ತಿಯಾಗತಕ್ಕ ಪದಾರ್ಥಗಳು ಒದಗಿಸಲ್ಪಡಬೇಕಲ್ಲದೆ ಇತರ ಪದಾರ್ಥಗಳು ಕೂಡ ಬಹಳ ಸುಲಭವಾಗಿ ಲಭಿಸಬಹುದಾದ ಪ್ರದೇಶಗಳಿಂದ ಕೊಂಡುಕೊಳ್ಳಲ್ಪಡತಕ್ಕದ್ದು. (ಸಶೇಷ)

ಸೌದೆ.

ಸೆಂಟ್ರಲ್ ಡಿಸ್ಟಿಲರಿಗೆ ಮಾಹೇಯಾನಾ ೧೫೦ ಟನ್ನುಗಳ ಮೊದಲು ೨೫೦ ಟನ್ನುಗಳ ವರಿವಿಗೆ ಸೌದೆ ಬೇಕಾಗಿರುವದರಿಂದ ಅದರ ಸರಬರಾಯ್ ಬಗ್ಗೆ ಬರುವ ದರಖಾಸ್ತುಗಳು ೧೮೯೩ನೇ ಇಸವಿ ಏಪ್ರಿಲ್ ೧೫ನೇ ತಾರೀಖ್ ವರಿವಿಗೆ ತೆಗದುಕೊಳ್ಳಲ್ಪಡುವವು. ಇತರ ತಪ್ಸೀಲ್ ತಿಳಿಯಬೇಕಾದರೆ ಬೆಂಗಳೂರ್ ಸೆಂಟ್ರಲ್ ಡಿಸ್ಟಿಲರಿಯಲ್ಲಿ, ಮೆಸ್ಸರ್ಸ್ ಪ್ಯಾರಿ ಕಂಪೆನಿಯ ಏಜಂಟರನ್ನು ಕೇಳಿ ತಿಳದುಕೊಳ್ಳತಕ್ಕದ್ದು.

## THE MONEY MARKET.

ಮದರಾಸ್, ಶನಿವಾರ, ತಾರೀಖ್ 15 ನೇ ಏಪ್ರಿಲ್ 1893

ಸೇಕಡ 4ರೂ. ಬಾಬತು ಗವರ್ನಮೆಂಟ್ ಪತ್ರಗಳು ರೂ ಬಾಳು, 101-6-0 ಇಂದ 101-11-0 ವರಿವಿಗೆ

ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತು 97, ಲಾಗಾಯಿತು 980 ವರಿವಿಗೆ

ಕಮರ್ಷಿಯಲ್ ಅಂಡ್ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಷೇರುಗಳು, (100) ಬಾಬತು 160 ಇಂದ 165 ವರಿವಿಗೆ

ಸವರ್ನಗಳು, 16-7-0 ಇಂದ 16-10-0 ವರಿವಿಗೆ

ಬ್ಯಾಂಕ್‌ಬಿಲ್‌ಗಳು ಯೂನಿಪರ್ಸ ಹುಂಡಿಗಳು, ರೂ ೧ಕ್ಕೆ 6 ತಿಂಗಳವಾಯಿದೆಗೆ, 1s 2 25/32d

ಡಿಟೋ 4 ತಿಂಗಳವಾಯಿದೆಗೆ, 1s 2 23/32d

ಡಿಟೋ ಕೇಳಿದಾಗ, 1s. 2 ¾d.

# ಕರ್ನಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, APRIL 17, 1893

೧೮೯೩ನೇ ಇಸವಿ ಏಪ್ರಿಲ್ ತಾ॥ ೧೭ ಸೋಮವಾರ

## ಜೂರಿಗಳನ್ನು ಕುರಿತ ಇಶ್ತಿಹಾರ್‌ನಾಮೆ.

ಬಂಗಾಳೇ ದೇಶಕ್ಕೆ ಸೇರಿದ ಕೆಲವು ಡಿಸ್ಟ್ರಿಕ್ಟುಗಳೊಳು ಸೆಷನ್ ಮೊಕದ್ದಮೆಗಳಲ್ಲಿ ಜೂರಿಗಳೆಂಬ ಪಂಚಾಯತರಂ ಯೇರ್ಪಡಿಸಿ, ಅವರ ಸಮಕ್ಷಮದಲ್ಲಿ ಮೊಕದ್ದಮೆಯಂ ವಿಚಾರಣೆ ಮಾಡಿ ಅವರು ಕೊಡುವ ಅಭಿಪ್ರಾಯವನ್ನನುಸರಿಸಿ ಸೆಷನ್ ಜಡ್ಜಿಯವರು ಫೈಸಲ್ ಕೊಡುವ ವಾಡಿಕೆಯು ಬಹುಕಾಲದ ಮೊದಲು ನೆಲಗೊಂಡಿತ್ತು. ಈ ವಾಡಿಕೆಯ ದೆಸೆಯಿಂದ ಸದರೀ ಪ್ರೆಸಿಡೆನ್ಸಿಯ ಪೈಕಿ ಅನೇಕ ಪ್ರದೇಶಗಳೊಳು ನ್ಯಾಯಲೋಪ ಪ್ರುಂಟಾಯಿತೆಂತಲೂ, ಅಪರಾಧಿಯ ಮೇಲೆ ತಕ್ಸೀರ್ ಪೂರಾ ರುಜುವಾತ್ ಆಗಿದ್ದಾಗ್ಯೂ ಜೂರಿಗಳು ನಿರಪರಾಧಿಯೆಂದು ಫೈಸಲ್ ಕೊಟ್ಟಿರುತ್ತಾರೆಂತಲೂ ಬಂಗಾಳೆ ಲೆಫ್ಟಿನೆಂಟ್ ಗವರ್ನರಾದ ಸರ್ ಚಾರ್ಲ್ಸ್ ಯೆಲಿಯಾಟ್ ಸಾಹೇಬರು ಅಭಿಪ್ರಾಯಪಟ್ಟು, ಸದರೀ ಡಿಸ್ಟ್ರಿಕ್ಟುಗಳಲ್ಲಿ ಜೂರಿಗಳನ್ನಿಟ್ಟುಕೊಂಡು ಸೆಷನ್ ಮೊಕದ್ದಮೆಗಳಂ ವಿಚಾರಣೆ ಮಾಡುವ ವಾಡಿಕೆಯಂ ರದ್ದುಪಡಿಸಿ ಜಡ್ಜಿಗಳೇ ವಿಚಾರಿಸತಕ್ಕದ್ದೆಂದು ಒಂದು ಇಶ್ತಿಹಾರನ್ನು ಹೊರಡಿಸಿದರು. ಬಹುಕಾಲದ ಮೊದಲು ಪ್ರಜೆಗಳು ಅನುಭವಿಸುತಲಿದ್ದ ಸ್ವಾತಂತ್ರ್ಯವಂ ಹೋಗಲಾಡಿಸಿದ ಸಂಗತಿ ತಿಳಿಯಬಂದ ಕೂಡಲೆ ಕೂಗಾಟಕ್ಕೆ ಪ್ರಾರಂಭವಾಯಿತು, ಪರಂತು ಇದಕ್ಕೆ ಉಂಟಾದ ಕಾರಣ ಮಾತ್ರ ವ್ಯಕ್ತವಾಗದೆ ಹೋದಾಗ್ಯೂ ಈ ಅಕ್ರಮವಂ ಕುರಿತು ಗದ್ದಲ ಮಾಡಲು, ಅದು ಕ್ರಮೇಣ ಇಂಗ್ಲಾಂಡ್ ದೇಶದ ವೃತ್ತಾಂತ ಪತ್ರಿಕೆಗಳಿಗೆ ತಿಳಿಯಬಂದು ಅವುಗಳ ಪೈಕಿ ಕೆಲವು ಇಂಡ್ಯದೇಶದ ಪ್ರಜೆಗಳ ಪಕ್ಷವಂ ವಹಿಸಿ ಬಂಗಾಳೇ ದೇಶದ ಲೆಫ್ಟಿನೆಂಟ್ ಗವರ್ನರವರ ತಳೆದ ಕ್ರಮವು ಬಹಳ ಆಕ್ಷೇಪಣೀಯವಾದುದೆಂದು ಖಂಡಿಸಲು ಇದರ ವಿಚಾರಣೆಯ ಬಗ್ಗೆ ಒಂದು ಕಮಿಟಿ ಸಹ ನೇಮಕವಾಗಿ ಅವರು ಸಹ ಪ್ರಜೆಗಳಿಗೆ ಅನುಕೂಲವಾಗಿ ಅಭಿಪ್ರಾಯ ಕೊಟ್ಟರು. ಇಂಡ್ಯ ರಾಜ್ಯದ ಸ್ಟೇಟ್ ಸೆಕ್ರೆಟರಿಯವರು ಸಹ ಅದೇ ರೀತಿ ಅಭಿಪ್ರಾಯಪಟ್ಟು ಸದರೀ ಇಶ್ತಿಹಾರನ್ನು ರದ್ದುಪಡಿಸಿ, ಹಿಂದಿನ ಪದ್ಧತಿಯನ್ನು ಮರಳಿ ಆಚರಣೆಯೊಳು ತರತಕ್ಕದ್ದೆಂದು ಇಂಡ್ಯರಾಜ್ಯದ ವೈಸ್‌ರಾಯ್ ಸಾಹೇಬರವರಿಗೆ ಅಂತರಂಗದಲ್ಲಿ ತಿಳಿಸಿದಂತೆ ಭಾಸವಾಗುತಿದೆ. ಅದನ್ನನುಸರಿಸಿ, ಮೂವತ್ತು ಐದು ದಿನಗಳ ಹಿಂದೆ ಬಂಗಾಳೆ ಲೆಫ್ಟಿನೆಂಟ್ ಗವರ್ನರವರು ಹಿಂದೆ ತಾವು ಕೊಟ್ಟಿದ್ದ ಇಶ್ತಿಹಾರನ್ನು ರದ್ದುಮಾಡಿರುವಂತೆ ಒಂದು ಹೊಸ ಇಶ್ತಿಹಾರನ್ನು ಸಾದರ್‌ಮಾಡಿದರು. ಮೊದಲು ಇಶ್ತಿಹಾರ್ ಕೊಟ್ಟ ಕಾಲದಲ್ಲಿ ಅದರಮೇಲೆ ಯಾವ ಆಕ್ಷೇಪಣೆಯೂ ಉಂಟಾಗಲಾರದೆಂತಲೂ, ಪ್ರಜೆಗಳು ಅದನ್ನು ಮಹಾ ಪ್ರಸಾದವನ್ನಾಗಿ ಅಂಗೀಕರಿಸುವರೆಂತಲೂ ನಂಬಿ ಅವರಿಗೆ ಅಹಿತವಾದ ಈ ಕಾರ್ಯವಂ ಕೈಗೊಂಡು, ಕಡೆಗೆ ಅದನ್ನು ರದ್ದುಮಾಡಬೇಕಾದ ನಿರ್ಬಂಧ ಪ್ರುಂಟಾಗಿ, ತನ್ಮೂಲಕ ತಾವೂ ತಲೆಬಾಗಿಸಿಕೊಳ್ಳಬೇಕಾಗಿ ಬಂದು, ಈ ವಿಷಯದಲ್ಲಿ ತಮ್ಮ ಬೋಧನೆಗೆ ಒಳಪಟ್ಟು, ತಮ್ಮ ಇಷ್ಟಾನುಸಾರ ವರ್ತಿಸಿದ ವೈಸ್‌ರಾಯ್ ಸಾಹೇಬರವರಿಗೂ ಯಥೋಚಿತ ಮನೋವ್ಯಥೆಯನ್ನುಂಟುಮಾಡಿ, ಕಡೆಗೆ ಕಾರಣಾಂತರಗಳ ವ್ಯಾಜದಿಂ ಆರುತಿಂಗಳ ರಜಾ ಪಡೆದುಕೊಂಡು ಸ್ವದೇಶ ಗಮನೋನ್ಮುಖರಾಗಿರುತ್ತಾರೆ. ಅಧಿಕಾರ ಮತ್ತು ಪಸೀಲೆಯ ಬಲದಿಂ ಮನಸ್ವೀ ವರ್ತಿಸುವಂತವರು ಕಡೆಗೆ ಅನುಭವಿಸಬೇಕಾದ ಪರಾಭವದಸ್ಥಿತಿಯು ಅನ್ಯಥಾ ಉಂಟಾಗಲಾರದು.

## Occasional Notes.
## ನೈಮಿತ್ತಿಕ ವಿಷಯನ್ಯಾಸ.

ಇಂಗ್ಲಾಂಡಿನಲ್ಲಿ ರೆಯಿಲ್ ಗಾಡಿಗಳ ವೇಗವು ಘಂಟೆ ೧ಕ್ಕೆ ೫೦ ಮೈಲ್‌ಗಳ ಘಾಸಲೆಗಿಂತಲೂ ಅಧಿಕವಾಗ ಹೋಗಲಾರದು.

ಇಂಡ್ಯರಾಜ್ಯದ ವಿದ್ಯಾಭ್ಯಾಸದ ಇಲಾಖೆಯನ್ನು ಪರಿಷ್ಕರಿಸಬೇಕೆಂಬ ವಿಷಯವು ಇಂಡ್ಯಗವರ್ನಮೆಂಟಿನವರ ಆಲೋಚನೆಯಲ್ಲಿರುವಂತೆ ತಿಳಿಯಬರುತಿದೆ

ಬಂಗಾಳೆ ಗವರ್ನಮೆಂಟ್ ನ್ಯಾಯವಿಧಾಯಕ ಸಭೆಯಲ್ಲಿ ಪ್ರೆಸಿಡೆನ್ಸಿ ಮ್ಯುನಿಸಿಪಾಲಿಟಿಗಳ ತರಫ್ ಒಬ್ಬ ಮೆಂಬರಾಗಿ ಮೋತಿಲಾಲ್ ಮೋಹನ ಗೋಸ್ ಯೆಂಬವರನ್ನು ಚುನಾಯಿಸಬೇಕೆಂದು ಅಲ್ಲಿನವರು ಯೋಚಿಸುತಲಿರುವಂತೆ ಕೇಳುವದಕ್ಕೆ ಬಹಳ ಸಂತೋಷಿಸುತ್ತೇವೆ.

ಮದರಾಸ್ ಹೈಕೋರ್ಟ್ ಜಡ್ಜಿಗಳ ಪೈಕಿಯೊಬ್ಬರಾಗಿದ್ದು ಈಚೆಗೆ ತಮ್ಮ ಕೆಲಸವಂ ಬಿಟ್ಟು ಸ್ವದೇಶಕ್ಕೆ ಹೋದ ಮಿ॥ ವಿಲ್ಕಿನ್ಸನ್ ಎಂಬವರ ಸ್ಥಾನದಲ್ಲಿ ಮಿ॥ ಜೆ. ಡಬ್ಲ್ಯು. ಬೆಸ್ಟ್ ಎಂಬವರು ಮೊಕರರ್ ಮಾಡಲ್ಪಟ್ಟಿರುವದಾಗಿ ಗೆಜೆಟಿನಲ್ಲಿ ಪ್ರಸಿದ್ಧಪಡಿಸಲ್ಪಟ್ಟಿರುತ್ತೆ.

ಮದರಾಸಿನಲ್ಲಿ ಸ್ಥಾಪಿಸಲ್ಪಟ್ಟಿರುವ ಹಿಂದೂ ಸಮಯಾಚಾರ ಪರಿಷ್ಕರಣ ಸಾಮಾಜಿಕರು ಈ ತಿಂಗಳ ೧೨ನೇ ತಾರೀಖಿನಲ್ಲಿ ಸಭೆಸೇರಿದ ಕಾಲದೊಳು, ಭೋಗಾರ್ಥ ಪರಸ್ತ್ರೀ ಸಂಸರ್ಗ ಮಾಡತಕ್ಕವರನ್ನು ಸದರೀ ಸಂಘದ ಮೆಂಬರಾಗಿ ಸೇರಿಸಿ ಕೊಳ್ಳಕೂಡದೆಂದು ನಿರ್ಣಯಿಸಿದಂತೆ ತಿಳಿಯಲಾಯಿತು.

ಕಳೆದ ಜನವರಿ ತಿಂಗಳಲ್ಲಿ ನಡೆದ ಮದರಾಸ್ ಹೈಕೋರ್ಟ್ ಪ್ಲೀಡರ್ ಪರೀಕ್ಷೆಯಲ್ಲಿ ಕೆಲವು ಮೋಸಕೃತ್ಯಗಳು ನಡೆಸಲ್ಪಟ್ಟಂತೆ ತಿಳಿಯಬಂದು ಅದನ್ನು ರದ್ದುಮಾಡಿ ಮರಳಿ ಪರೀಕ್ಷೆಯನ್ನಿಡಬೇಕೆಂದು ವ್ಯವಸ್ಥೆಯಾಗಿದೆಯಷ್ಟೆ. ಈ ಹೊಸ ಪರೀಕ್ಷೆಗೆ ರದ್ದಾದ ಪರೀಕ್ಷೆಯಲ್ಲಿ ತೇರ್ಗಡೆಯಾದವರು ಮಾತ್ರ ದರಖಾಸ್ತು ಹಾಕಬಹುದೆಂಬ ಒಂದು ನಿರ್ಬಂಧವನ್ನುಂಟುಮಾಡಿರುವಂತೆ ತಿಳಿಯಬರುತಿದೆ. ಇದು ಸುತರಾಂ ಉಚಿತವಾಗಿ ಕಾಣುವದಿಲ್ಲವು.

ಈ ತಿಂಗಳ ೪ನೇ ತಾರೀಖು ಸೋಮವಾರ ಮದರಾಸ್ ಹಿಂದೂ ಸಮಾಚಾರ ಪರಿಷ್ಕರಣ ಸಂಘದ ಮೆಂಬರುಗಳು ಸಭೆ ಸೇರಿದ ಕಾಲದಲ್ಲಿ ಸುಮಾರ್ ನಾಲ್ವತ್ತೊಂದು ಅದರ ಮೆಂಬರುಗಳು ಹಾಜರಿದ್ದರು. ಇವರೆಲ್ಲರು ಬೇರೆ ಬೇರೆ ಜಾತಿಗೆ ಸೇರಿದವರಾದಾಗ್ಯೂ ಜಾತಿ ತಾರತಮ್ಯವಂ ಪರಿಗಣಿಸದೆ ಒಂದೇ ಮೇಜಿನಮೇಲೆ ಫಲಾಹಾರ ಮಾಡಿದರು, ಎಂದು ಈ ತಿಂಗಳ ೧೦ನೇ ತಾರೀಖಿನ ಮದರಾಸ್ ಸ್ಟ್ಯಾಂಡರ್ಡ್ ಪತ್ರಿಕೆ ತಿಳಿಸುತಿದೆ. ಈ ಕಾಲದಲ್ಲಿದೇನೂ ಆಶ್ಚರ್ಯ ಪಡತಕ್ಕಾದ ವಿಷಯವಲ್ಲವು.

ಪೋಸ್ಟಾಫಿಸ್ ನೌಕರರ ಮೇಲೆ ಹುಟ್ಟುವ ವಿಶ್ವಸವರ್ಕುಗಳೂ ಸಾಕ್ಷಿ ಸವರ್ಕುಗಳೂ ಸದರೀ ನೌಕರರು ತಮಗೆ ಸಮ್ಮರ್ ಹುಟ್ಟಿರುವ ಸಂಗತಿಯನ್ನು ತಮ್ಮ ಇಲಾಖೆಗೆ ತಿಳಿಸಿ ತಮ್ಮ ಗೃಹಾದಿಗಳಲ್ಲಿ ಕೆಲಸಗಳು ಅಡಚಣೆ ಇಲ್ಲದೆ ನಡೆಯುವದಕ್ಕೆ ಆವಶ್ಯಕಗಳಾದ ಏರ್ಪಾಡುಗಳು ಇಲಾಖಾ ಅಧಿಕಾರಿಗಳು ಮಾಡಿಕೊಳ್ಳುವದಕ್ಕೆ ಬೇಕಾದ ಕಾಲಸ್ವಾಯಾವು ಪೂರ್ವಕ ನೋಟಿಸ್ ಕೊಡಲ್ಪಡತಕ್ಕವೆಂದು ಮದರಾಸ್ ಪೋಸ್ಟ್ ಮಾಸ್ಟರ್ ಜನರಲ್‌ರವರು ಸರ್ಕ್ಯುಲರ್ ಹುಕುಂ ಕೊಟ್ಟಿರುತ್ತಾರೆ.

ಈ ತಿಂಗಳ ೪ನೇ ತಾರೀಖಿನಲ್ಲಿ, ಪತಿಯಾಲಾ ಸಂಸ್ಥಾನದ ಮಹಾರಾಜರವರು ತಮ್ಮ ನೌಕರಿಯಲ್ಲಿದ್ದ ಸಿ ಬ್ರೈಯನ್ ಯೆಂಬಾತನ ತಂಗಿಯಾದ ಮಿಸ್ ಫ್ಲಾರಿ ಬ್ರೈಯನ್ ಯೆಂಬಾಕೆಯನ್ನು ಕ್ರಿಶ್ಚಿಯನ್ ಮತದಿಂದ ಸಿಕ್ ಮತ ಪದ್ಧತಿ ಪ್ರಕಾರವಾಗಿ ತಮ್ಮ ಮತಕ್ಕೆ ಸೇರಿಸಿಕೊಂಡು, ತರುವಾಯ ಆಕೆಯನ್ನು ಹಿಂದೂ ಮತ್ತು ಸಿಕ್ ಸಂಪ್ರದಾಯಾನುಸಾರವಾಗಿ ಅಂತರಂಗದಲ್ಲಿ ವಿವಾಹ ಮಾಡಿಕೊಂಡು ಅದೇದಿನ ರಾತ್ರಿ ತಮ್ಮನೂತನ ಭಾರ್ಯೆಯೊಡನೆ ಫ್ರೋಜ್‌ಪುರಕ್ಕೆ ಪ್ರಯಾಣವಾದರೆಂದು ಈ ತಿಂಗಳ ೧೨ನೇ ತಾರೀಖಿನಲ್ಲಿ ಲಾಹೋರಿನಿಂದ ಬಂದ ತಂತಿ ವೃತ್ತಾಂತದಮೂಲಕ ತಿಳಿಯಬರುತಿದೆ

ಈಗ ಸವರನ್ ಒಂದಕ್ಕೆ ಕ್ರಯ ಹಿಂದೂಪದಿನೈದುಗಿಂತಲೂ ಅಧಿಕವಾಗಿ, ಬೆಳ್ಳಿ ರೂಪಾಯಿನ ಬೆಲೆ ಕಡಮೆಯಾಗುವದಕ್ಕೆ ಉಂಟಾದ ಕಾರಣಗಳಂತು ಹಿಡವು ಅದು ಕ್ರಮಪಡಿಸುವದಕ್ಕೆ ಹಿಂದೂಸ್ಥಾನದಲ್ಲಿ ಏರ್ಪಡಿಸುವದಕ್ಕಾಗಿ ನಿಯಮಿಸಲ್ಪಟ್ಟ ಕಮಿಟಿಯವರು ತಿಳಿಸಿದ ಅಭಿಪ್ರಾಯವನ್ನನುಸರಿಸಿ, ಸರ್ಕಾರ್ ಟಂಕ ಶಾಲೆಗಳಲ್ಲಿ ಬೆಳ್ಳಿ ನಾಣ್ಯಗಳು ಛಾಪಾ ಹಾಕುವಿಕೆಯಂ ನಿಲ್ಲಿಸತಕ್ಕದ್ದೆಂದು ಗವರ್ನಮೆಂಟಿನವರು ಹುಕುಂ ಮಾಡುವವರಾಗಿದಾರೆಂದು ಒಂದು ಪ್ರವಾದ ಹುಟ್ಟಿರುವಂತೆ ಇಂಡಿಯನ್ ದೈಲೀ ನ್ಯೂಸ್ ಯೆಂಬ ಪತ್ರಿಕೆ ತಿಳಿಸುತಿದೆ. ಈರೀತಿ ಮಾಡುವದರಿಂದ ರೂಪಾಯಿಗಳ ಕ್ರಯದಲ್ಲುಂಟಾಗಿರುವ ಕೊರತೆಯು ನಿವೃತ್ತಿಯಾಗಿ ಜನ್ಮಲಕ ಸವರನ್‌ಗಳ ಕ್ರಯ ಇಳಿಯಬಹುದೆಂದು ಅನೇಕರು ಅಭಿಪ್ರಾಯ ಪಡುತ್ತಾರೆ ಈ ಉಪಾಯವು ಯೆಷ್ಟರಮಟ್ಟಿಗೆ ಫಲಕಾರಿಯಾಗುವದೊ ಅದು ಮುಂದೆ ತಿಳಿಯಬೇಕಾಗಿರುತಿದೆ.

ಮದರಾಸಿನಲ್ಲಿ ಒಬ್ಬ ಹೆಂಗುಸು ಕೋರ್ಟ್ ಮೂಲಕ ತನ್ನ ಪುರುಷನಿಂದ ಜೀವನಾಂಶವಂ ಪಡೆಕೊಂಡು, ಅದನ್ನನುಭವಿಸುತ್ತಿರುವಲ್ಲಿ ಸ್ವಲ್ಪದಿನಗಳ ತರುವಾಯ ಅವಳು ದುರ್ನಡತೆಯುಳ್ಳವಳೆಂಬ ರುಜುವಾತಿನಮೇಲೆ ಕಳೆದ ತಿಂಗಳಲ್ಲಿ ಅವಳಿಗೆ ಸಲ್ಲುತಲಿದ್ದ ಜೀವನಾಂಶವ ಹುಕುಮು ರದ್ದುಮಾಡಲ್ಪಟ್ಟಿತು. ತಾನು ದುರ್ನಡತೆಯುಳ್ಳವಳೆಂದು ಕೋರ್ಟಿನಲ್ಲಿ ರುಜುವಾದ ಕಾಲದವರೆಗೆ ತನಗೆ ಜೀವನಾಂಶ ಕೊಡುವದಕ್ಕೆ ತನ್ನ ಗಂಡನು ಬದ್ಧನಾಗಿರುತ್ತಾನಾಗಿ, ಜೀವನಾಂಶದ ಬಗ್ಗೆ ಮೊದಲು ಕೊಡಲ್ಪಟ್ಟ ಹುಕುಮನ್ನು ರದ್ದು ಮಾಡಿ ಕೊಡಲ್ಪಟ್ಟ ಸ್ಪೆಷಲ್ ತಾರೀಖ್ ವರೆಗೆ ಜೀವನಾಂಶ ಸಲ್ಲಿಸಿಕೊಡುವ ಹಾಗೆ ಮದರಾಸ್ ಸ್ಮಾಲ್‌ಕಾಸ್ ಕೋರ್ಟಿನಲ್ಲಿ ದಾವೆ ಹಾಕಿ ಹೊಂದತಿಯಾದವಳು ದುರ್ನಡತೆಯುಳ್ಳವಳೆಂದು ರುಜುವಾತಿದ ತಾರೀಖ್ ವೊದಲು ಅವಳ ಜೀವನಾಂಶ ವಿಷಯದಲ್ಲಿ ಗಂಡನ ಜವಾಬ್ದಾರಿಯು ತಪ್ಪಿಹೋಗಿರುತದೆಂತಲೂ, ವಾದಿಯು ಜಾರಪುರುಷನಮೂಲಕ ಒಂದು ಮಗುವನ್ನು ಸಹ ಪಡೆದಿರುವಂತೆ ತಿಳಿಯಬರುವದರಿಂದ ಅದನ್ನು ಗರ್ಭ ಧರಿಸಿದ ತಾರೀಖ್ ಮೊದಲು ಜೀವನಾಂಶ ಸಲ್ಲತಕ್ಕದ್ದಲ್ಲವೆಂತಲೂ ಕೋರ್ಟಿನವರು ತೀರ್ಮಾನಿಸಿದರು.

ಈಚೆಗೆ ಕೆಲವು ದಿನಗಳ ಹಿಂದೆ ಖಿಲಾತ್ ಸಂಸ್ಥಾನದ ಖಾನರವರಿಗೆ, ತಮ್ಮ ಭಾರ್ಯೆಯರಲ್ಲೊಬ್ಬರ ನಡತೆಯವಿಷಯದಲ್ಲಿ ಸಂಶಯ ಹುಟ್ಟಿದ್ದರಿಂದ ಅವರನ್ನೆಲ್ಲ ಕೊಂದುಹಾಕಿದ್ದಲ್ಲದೆ, ತಮ್ಮನೌಕರರಲ್ಲೊಬ್ಬರನ್ನು ಅಂಗಹೀನರನ್ನಾಗಿ ಮಾಡಿದಲು ಅವರು ಗವರ್ನರ್ ಜನರಲರವರ ಏಜಂಟರಲ್ಲಿ ಫಿರ್ಯಾದ್ ಹೇಳಿಕೊಂಡರು. ಕೆಲವುದಿನಗಳಹಿಂದೆ ಸದರೀ ಖಾನರವರು ತಮ್ಮ ಪ್ರಧಾನಮಂತ್ರಿ, ಅವರ ತಂದೆ, ಮತ್ತು ಬಾಲಿಕನಾದ ಅವರಮಗ, ಈಮೂವರನ್ನೂ ಕೊಂದುಹಾಕಿದರು. ಈರೀತಿ ಕೊಲೆಮಾಡಲ್ಪಟ್ಟವರ ಬಂಧುಜನರ ಸಹಾಯಾರ್ಥ ಗವರ್ನರ್‌ಜನರಲವರು ಖಾನರವರಿಗೆ ನಾಲ್ವತ್ತುಸಾವಿರ ರೂಪಾಯಿಗಳು ಜುರ್ಮಾನೆ ವಿಧಿಸಿ, ಅದನ್ನು ತೆರದೆ ಹೋದರೆ ಬಲಾತ್ಕಾರಪೂರ್ವಕ ಅದನ್ನು ವಸೂಲಿಯಿಂದ ಕೊಡಿಸುವದಕ್ಕಾಗಿ ಒಂದು ಬಿರಾದರಿ ಬ್ರಿಟಿಷ್‌ಸೇನೆಯು ಕಳುಹಿಸಲ್ಪಟ್ಟು ಅದರ ಖರ್ಚನ್ನು ಸಹ ಕೊಡಬೇಕಾಗುವದೆಂದು ತಿಳಿಸಿದರು. ಇನ್ನು ಈಎಲ್ಲಾ ವ್ಯವಸ್ಥೆಯಿಲ್ಲದೆ ಕಲಹಸೂಚಕಗಳಾದ ಪ್ರಯತ್ನಗಳುನಡೆಸಲ್ಪಡುತಲಿರುವಂತಿರಾಣುತಲಿವೆ ಮುಂದೆ ಸದರೀ ಖಾನರವರು ತಮ್ಮ ವರ್ತನೆಗಳಿಗೆ ತಕ್ಕ ಫಲವನ್ನನುಭವಿಸದೆ ಹೋಗಲಾರರು

ಇಂಡ್ಯಾ ರಾಜ್ಯಾಡಳಿತಕ್ಕೆ ಸಂಬಂಧಪಟ್ಟ ಖರ್ಚುಗಳಿಗಾಗಿ ಇಂಗ್ಲಂಡಿಗೆ ವರುಷ ಲೆಕ್ಕದಲ್ಲಿ ಸಾಲೀಯಾನಾ ಕಳುಹಿಸಿಕೊಡಬೇಕಾದ ಸುಮಾರು ಮೂವತ್ತು ಕೋಟಿ ರೂಪಾಯಿಗಳಿಗೆ, ಈಗಿನ ಸವರನ್ ಧರ ಪ್ರಕಾರ ಕೊಡಬೇಕಾದ ಹೆಚ್ಚಿನಿಂದ ಉಂಟಾಗಿರುವ ನಷ್ಟಕ್ಕೆ ಈಡು ಮಾಡಿಕೊಳ್ಳುವದಕ್ಕಾಗಿ, ಈಗಲೇ ಅಧಿಕವೆಂದು ಪ್ರಜೆಗಳು ಮೊರೆಯಿಡುತಲಿರುವ ಉಪ್ಪಿನ ಮೇಲಿನ ಕಂದಾಯವು ಹೆಚ್ಚಿಸಬೇಕೆಂತಲೂ, ಈಗ ವಜಾಮಾಡಲ್ಪಟ್ಟ ರಹದಾರಿ ಆಮದು ತೀರ್ವೆಯನ್ನು ಮರಳಿ ಹಾಕಬೇಕೆಂತಲೂ, ಈಗ ಸಾಲೀಯಾನಾ ಸಾವಿರಗಳವೊದಲು ವರಮಾನವುಳ್ಳವರಿಗೆ ಹಾಕಲ್ಪಟ್ಟಿರುವ ಆಮದಾನಿ ತೀರ್ವೆಯನ್ನು ಸಾಲೀಯಾನಾ ೫೦೦ ರೂಪಾಯಿಗಳ ವರಮಾನವುಳ್ಳವರಿಗೆ ಸಹ ವಿಸ್ತರಿಸಬೇಕೆಂತಲೂ ಇಂಡ್ಯಾ ಗವರ್ನಮೆಂಟಿನವರು ಯೋಚಿಸಿ, ಅವರ ನಿರ್ಣಯದ ಬಗ್ಗೆ ಷಿಮ್ಲಾದಲ್ಲಿ ಕಲ್ಕತ್ತೆಯೊಳು ವೈಸ್‌ರಾಯ್ ಯವರ ಮಂತ್ರಾಲೋಚಕ ಸಮಾಜ ಸೇರಬೇಕೆಂದು ಅಂತರಂಗದಲ್ಲಿ ವ್ಯವಸ್ಥೆಯಾಗಿರುವಂತೆ ಇಂಡಿಯನ್ ಮಿರ್ರರ್ ಯೆಂಬ ಪತ್ರಿಕೆ ತಿಳಿಸುತಿದೆ. ಈಚೆಗೆ ಮೂರು ನಾಲ್ಕು ವರ್ಷಗಳ ವೊದಲು, ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಯೆಂಬ ಸಾರ್ವಜನಿಕ ಸಭೆಯವರು ಪ್ರತಿ ಸಂವತ್ಸರದಲ್ಲೂ ಸಭೆ ಸೇರುವ ಕಾಲದೊಳು ಉಪ್ಪಿನಮೇಲಿನ ತೀರ್ವೆ ಅಧಿಕವಾಗಿರುವದರಿಂದ ಅದನ್ನು ತಗ್ಗಿಸಬೇಕೆಂತಲೂ, ಇನ್‌ಕಂಟ್ಯಾಕ್ಸೆಂಬ ಆಮದಾನಿ ತೀರ್ವೆಯನ್ನು ಸಾಲೀಯಾನಾ ಒಂದುಸಾವಿರ ರೂಪಾಯಿಗಳಿಗೆ ಮೇಲ್ಪಟ್ಟ ಆಯತಿಯುಳ್ಳಂತವರಿಗೆ ಮಾತ್ರ ಉಳಿಸಿ ಮಿಕ್ಕವರ ವಿಷಯದಲ್ಲಿ ವಜಾ ಮಾಡಬೇಕೆಂತಲೂ ಮೊರೆಯಿಡುತ ಬಂದದಕ್ಕೆ ಇಂತಾ ವಿರುದ್ಧಫಲವುಂಟಾಗುವ ಬಗ್ಗೆ ಯೆಷ್ಟು ಚಿಂತಿಸಿದಾಗ್ಯೂ ಸಾಲದ್ದಾಗಿರುತಿದೆ.

ಈಚೆಗೆ ಯೆರಡು ಮೂರು ವಾರಗಳ ಹಿಂದೆ ಕೋಯಂಬತ್ತೂರ್ ಡಿಸ್ಟ್ರಿಕ್ಟ್ ಪೊಳ್ಳಾಚಿ ಪ್ರಾಂತದಲ್ಲಿ ನಡೆದ ಘೋರತರವಾದ ಒಂದು ಖೂನೀಮೊಕದ್ದಮೆಯನ್ನು ಕುರಿತು ಮದರಾಸ್ ಹಿಂದೂ ಪತ್ರಿಕೆಯು ಅಲ್ಲಿನ ಬಾತಮೀದಾರನೊಬ್ಬಾತನು ಬರೆಯುತ್ತಾನೇನೆಂದರೆ — ಮೂರು ಯೆರಡುವಾರಗಳಹಿಂದೆ ಬ್ರಾಹ್ಮಣ ಹುಡಿಗಿಯೊಬ್ಬಳು ತನ್ನ ಸಹೋದರನನ್ನು ಕರೆದುಕೊಂಡು ತನ್ನ ಪ್ರಸವಕ್ಕಾಗಿ ಪೊಳ್ಳಾಚಿಯಿಂದ ಕೋಯಂಬತ್ತೂರಲ್ಲಿರುವ ತನ್ನ ತಾಯಿ ಮನೆಗೆ ಹೋಗುತ್ತಿರುವಲ್ಲಿ ಮಧ್ಯಮಾರ್ಗದೊಳು ಸದರೀ ಹುಡುಗಿಗೆ ಬಹಳ ಶ್ರಮ ಹುಟ್ಟಿ ಸಂಕಟ ಪಡುವಲ್ಲಿ ಅಲ್ಲಿಯೊಬ್ಬ ತೋಟಗಾರನು ತನ್ನ ಹುಲ್ಲು ಮನೆಯಲ್ಲಿ ಅವರೆಲ್ಲರಿಗೂ ಸ್ಥಳ ಕೊಟ್ಟನು. ಅವರಿಬ್ಬರು ಸದರೀ ಹುಲ್ಲುಮನೆಯೊಳಗೆ ಪ್ರವೇಶಿಸಿದ ಕೂಡಲೆ ತೋಟದವನು ಬಾಗಿಲನ್ನು ಮುಚ್ಚಿ ಬೀಗ ಹಾಕಿದನು. ಈ ಕೃತ್ಯದಿಂದ ಒಳಗಿದ್ದ ಇಬ್ಬರಿಗೂ ಅವನಮೇಲೆ ಸಂಶಯ ಹುಟ್ಟಿ, ಆಕೆಯ ಸೋದರನಾದ ಹುಡುಗನು ಗುಡುಸಲಿನ ಛಾವಣಿಯಲ್ಲಿ ದಾರಿ ಮಾಡಿಕೊಂಡು ಹೊರಗೆ ಬಂದು ತನ್ನ ಸೋದರಿಯು ಒಡವೆಗಳೊಡನೆ ತಪ್ಪಿಸಿಕೊಳ್ಳುವದಕ್ಕೆ ಪ್ರಯತ್ನಪಟ್ಟನು, ಪರಂತು ಆಕೆಯನ್ನು ಸಹ ಅದೇಮಾರ್ಗದಲ್ಲಿ ಹೊರಪಡಿಸಲು ಅಸಾಧ್ಯವಾಗಿ ಕಂಡುಬರಲು ಆಕೆಯನ್ನು ಒಳಗೆ ಬಿಟ್ಟುಬಿಟ್ಟು ತಾನು ಮಾತ್ರ ಹೊರಗೆ ಬಂದು ಕತ್ತಲೆಯಾಗಿ ಹೋದದರಿಂದ ಒಂದು ಗಿಡವಂ ಹತ್ತಿ ಅವಿತು ಕೊಂಡಿದ್ದನು. ಸ್ವಲ್ಪಹೊತ್ತಿನ ಮೇಲೆ ತೋಟಗಾರನು ಬೇರೆ ಯಿಬ್ಬರನ್ನು ಸೇರಿಸಿಕೊಂಡು ಹುಲ್ಲುಮನೆಯ ಬೀಗವಂತೆಗೆದು ಒಳಗೆ ಹೋದರು. ಗಿಡದಮೇಲೆ ಯಿದ್ದ ಹುಡಗನು ರಸ್ತೆಯೊಳು ಒಂದು ಟಾಂಗಾಗಾಡಿಬರುವ ಶಬ್ದವಂ ಕೇಳಿ ಗಿಡದಿಂದ ಇಳಿದು ಓಡಿ ಹೋಗಿ ಗಾಡಿಯನ್ನುನಿಲ್ಲಿಸಿ, ಅದರಲ್ಲಿ ಕುಳಿತಿದ್ದ ಪೋಲೀಸ್ ಇನ್ಸ್‌ಪೆಕ್ಟರ್ ವೊದಲಾದವರಿಗೆ ನಡೆದ ಸಂಗತಿಗಳನ್ನೆಲ್ಲತಿಳಿಸಿ ಅವರನ್ನೆಲ್ಲ ಕರೆದುಕೊಂಡು ಗುಡಿಸಲಿಗೆ ಬಂದು ಬಲತ್ಕಾರಪೂರ್ವಕ ಬಾಗಿಲನ್ನು ತೆರೆದು ನೋಡುವಲ್ಲಿ ಸದರೀ ಹುಡುಗಿಯು ಖೂನಿಮಾಡಲ್ಪಟ್ಟದ್ದಲ್ಲದೆ ಆಗಲೇ ಪ್ರಸವವಾದ ಮಗು ಸಹ ಸತ್ತು ಬಿದ್ದಿತ್ತು. ಈ ಘೋರಕೃತ್ಯವಂ ನಡೆಸಿದ ಮೂವರು ಘಾತುಕರೂ ಕೂಡಲೇ ದಸ್ತಗಿರಿ ಮಾಡಲ್ಪಟ್ಟು ಈಗ ಸೆಷನ್ ವಿಚಾರಣೆಯ ಬಗ್ಗೆ ಕಮ್ಮಿಟ್ ಮಾಡಲ್ಪಟ್ಟಿರುತ್ತಾರೆ, ಎಂಬದು.

## LOCAL AND PROVINCIAL NEWS.

ಸ್ಥಳದೇಶಮತ್ತುತಾಲ್ಲೂಕ್‌ಜಾತಿವೃತ್ತಾಂತಗಳು.

ದಿನ್ನೈದು ತೋಫಗಳು ಹಾಕಲ್ಪಟ್ಟವೆಂದು ಸದರೀ ಬಾತಮೀದಾರನು ತಿಳಿಸುವದರಿಂದ ಅದಕ್ಕೆ ಅರ್ಹರಾದ ಯಾರೋಒಬ್ಬರು ನೇಟವ್ ಅರಸರುಅಲ್ಲಿಗೆ ಬಂದು ಅವರನ್ನು ಮೈಸೂರು ಮಹಾರಾಜರೆಂದು ಭ್ರಾಂತಿಗೊಂಡಂತೆ ಯೆಣಿಸಬೇಕಾಗಿದೆ

ನಮ್ಮ ದಿವಾನರವರು ಯುವರಾಜರವರಿಗೆ ಆರೋಗ್ಯಸ್ನಾನ ವಾಗುವವರಿಗೂ ರಾಜಧಾನಿಯನ್ನು ಬಿಟ್ಟು ಹೋಗುವದಿಲ್ಲವೆಂದು ಕೇಳುತ್ತೇವೆ ಪ್ರತಿದಿನವೂ ಅರಮನೆಗೆ ೩-೪ ಆವರ್ತಿ ದಯಮಾಡಿ ಯೋಗಕ್ಷೇಮಗಳನ್ನು ವಿಚಾರಿಸುತ್ತಲಿದಾರೆ. ಯುವರಾಜರವರಿಗೆ ದಿನೇ ದಿನೇ ಗುಣಮುಖವಾಗುತ್ತಲಿದೆ ಎಂದು ತಿಳಿಸಲು ಸಂತೋಷಿಸುತ್ತೇವೆ —ವೃ. ಪ.

ಅರಮನೇ ಇಲಾಖೆಯ ಇನ್‌ಚಾರ್ಜ್ ಆಫಿಸರಾಗಿ ಹೊಸದಾಗಿ ನಿಯಮಿಸಲ್ಪಟ್ಟಿರುವ ಮೆ॥ ಸೀತಾರಾಮರಾಯರವರಿಗೆ ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್‌ನಲ್ಲಿದ್ದಾಗ್ಯೆ ಮಾಹೆ ೧ಕ್ಕೆ ೪೫೦ ರೂಪಾಯಿಗಳ ತಲಬು ಇತ್ತು. ಈಗ ಬೇರೆಕೆಲಸದಲ್ಲಿರುವದರಿಂದ ಈ ೪೫೦ರ ಜೊತೆಗೆ ೧೫೦ ರೂಪಾಯಿ ಅಲೋವನ್ಸ್ ತರೀಖಾಗಿ ಸೇರಿಸಿ ಕೊಡಬೇಕೆಂದು ಚೀಫ್ ಸೆಕ್ರಟರಿಯವರು ಆರ್ಡರ್ ಮಾಡಿರುವಂತೆ ಕೇಳುತ್ತೇವೆ —ವೃ. ಪ.

ಈ ತಿಂಗಳ ೧೫ನೇ ತಾರೀಖುಳ್ಳ ಮದರಾಸ್ ಮೆಯಿಲ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುವ ಉದಕ ಮಂಡಲ ಬಾತಮೀದಾರನ ಕಾಗದದೊಳು, ಇದೇ ತಿಂಗಳ ೧೩ನೇ ತಾರೀಖಿನಲ್ಲಿ ಶ್ರೀಮನ್ಮಹಾರಾಜರವರು ಬಯಮುಂದಿ ಪರಿಜನರೊಡನೆ ನೀಲಗಿರಿಗೆ ದಯ ಮಾಡಿದರೆಂತಲೂ ಅವರ ಆಗಮನ ಸೂಚಕವಾಗಿ ೧೫ ತೋಫಗಳು ಹಾಕಲ್ಪಟ್ಟವೆಂತಲೂ ತಿಳಿಸಲ್ಪಟ್ಟಿದೆ. ಶ್ರೀಮನ್ಮಹಾರಾಜರವರು ಇದುವರೆಗೂ ಮೈಸೂರಲ್ಲೇ ಇರುವಂತೆ ನಮ್ಮ ಕೇಳ್ವಿಕೆಗೆ ಬಂದಿರ ತಿದ್ಕ ಹ

ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ವ್ಯವಹಾರಗಳು ದಿನೇ ದಿನೆ ವೃದ್ಧಿಯಾಗುತ ಬರುವಂತೆ ಗವರ್ನಮೆಂಟಿಗೆ ತಿಳಿಯಬಂದು ಅಲ್ಲಿಯೊಂದು ಸಬ್ ಜಡ್ಜಿ ಕೋರ್ಟನ್ನು ಸ್ಥಾಪಿಸತಕ್ಕದ್ದೆಂದು ಹುಕುಂ ಮಾಡಿರುವಂತೆ ಕೇಳುತ್ತೇವೆ. ಸದರೀ ಕೋರ್ಟ್ ಬೇಸಿಗೆಯರಜಾ ಪೂರ್ತಿಯಾದ ಕೂಡಲೆ ಪ್ರಾರಂಭವಾಗುವ್ರದು, ಇದು ಶಿವಾಯಿ, ಈ ದೇಶದೊಳು ಇನ್ನು ಕೆಲವುಸಬ್ ಕೋರ್ಟ್‌ಗಳು ಸಹ ಷಿಘ್ರದಲ್ಲಿ ಯೋಜನೆಯಾಗುವದಾಗಿದೆ ಯೆಂದು ಕೇಳುತ್ತೇವೆ

ಮೈಸೂರು ಗೆಜೆಟ್ ಇಂಗ್ಲಿಷ್ ಭಾಗದಲ್ಲಿ ಪ್ರಕಟಿಸಲ್ಪಟ್ಟಿರುವಂತೆ, ಮೈಸೂರು ವಿದ್ಯಾಭ್ಯಾಸದ ಇಲಾಖಾ ಸೆಕ್ರಟರಿಯವರ ಆಫಿಸ್ ಮ್ಯಾನೇಜರಾದ ಮೆ॥ ಸಿ. ವಾಸುದೇವರಾಯರಿಂದ ಕನ್ನಡ ಭಾಷೆಯಲ್ಲಿರಚಿಸಲ್ಪಟ್ಟಿರುವದು "ಸರಳಾರೋಗ್ಯವಾಚ" ವೇ ಹೊರತು ಸದರೀ ಗೆಜೆಟ್ ಕನ್ನಡ ಭಾಗದಲ್ಲಿ ಪ್ರಕಟಿಸಲ್ಪಟ್ಟಿರುವಂತೆ "ಸರಳಾರೋಗ್ಯ" ವಲ್ಲವೆಂದು ತಿಳಿಸಬೇಕಾದುದು ನಮ್ಮ ಕರ್ತವ್ಯವೆಂದು ಭಾವಿಸುವೆವು ಈಚೆಗೆ ಸರ್ಕಾರೀ ಗೆಜಟಿನಲ್ಲಿ ಅನೇಕ ಅಕ್ಷರಪಾತಗಳು ಕಂಡುಬರಲಿಕ್ಕೆ ತಕ್ಕ ಕಾರಣವು ಯೆಲ್ಲರಿಗೂ ತಿಳಿಯದಿರಲಿಲ್ಲವು. ಆದರೆ ಅದುಅಪ್ರತೀಕಾರವಾಗಿ ಏರ್ಪಟ್ಟಿದೆ.

ದೊಡ್ಡ ಬಳ್ಳಾಪುರದ ವೊದಲು ಹಿಂದೂಪುರದ ವರಿವಿಗೆ ಹಾಕಲ್ಪಟ್ಟಿರುವ ರೆಯಿಲ್ ರಸ್ತೆಯು ಕಳೆದ ಶನಿವಾರದ ದಿನ ಸರ್ಕಾರದಿಂದ ಆಡಿಟ್‌ಮಾಡುಹೀ ಮಾಡಲ್ಪಡುವದಾಗಿತ್ತು. ಧರ್ಮವರಂ ಜಂಗ್ಷನ್ನಿಂದ ಹಿಂದೂಪುರದ ವರೆಗೆ ಬರಾಪಿಸಲ್ಪಟ್ಟಿರುವ ಭಾಗದೊಳು ಈ ತಿಂಗಳ ೩೭ನೇ ತಾರೀಖಿನಲ್ಲಿ ಜನರ ಸಂಚಾರಕ್ಕೆ ಗಾಡಿಗಳು ನಡೆಸಲ್ಪಡುವವು. ದೊಡ್ಡ ಬಳ್ಳಾಪುರದಿಂದ ಹಿಂದೂಪುರದ ವರಿವಿಗೆ ಬರುವ ಜೂಲೈ ತಿಂಗಳ ಗುರ್ರೀ ತಾರೀಖಿನಲ್ಲಿ ಗಾಡಿಗಳು ನಡೆಸಲ್ಪಡುವವು ಇದರ ದೆಸೆಯಿಂದ ಬೆಂಗಳೂರು ವೊದಲು ಗುಂಟಕಲ್ ಜಂಗ್ಷನ್ ವರೆಗೆ ೧೭೪ ಮೈಲಿಗಳ ರಸ್ತೆ ಪೂರ್ತಿಯಾದಂತೆ ಆಗುವ್ರದು.

ಕಳೆದವಾರದೊಳು ಈ ವೂರು ಚಿಕ್ಕಪೇಟೆಯಲ್ಲಿ ವಾಸವಾಗಿರುವ ವಾದ್ಯ ಬ್ರಾಹ್ಮಣಪತ್ನಿಯೊಬ್ಬರು ಕೆಲವು ದಿನಗಳಿಂದ ಅಸ್ವಸ್ಥತೆಯಲ್ಲಿದ್ದು ಮೃತಪಟ್ಟರು. ಪ್ರೇತವಂ ಸಾಗಿಸುವದಕ್ಕಾಗಿ, ಪದ್ಧತಿ ಪ್ರಕಾರ ಮುಜಾಧಿಕಾರಿಗೆ ತಿಳಿಸಲು, ಮೃತಪಟ್ಟವರ ಮನೆಯ ಪುರೋಹಿತ್ಯವಂ ತನಗೆ ಶಾಶ್ವತವಾಗಿ ಬರೆದುಕೊಡುವ ಪಕ್ಷಕ್ಕೆ ತಾನು ವಾಹಕರನ್ನು ಒದಗಿಸಿಕೊಡುವದಾಗಿ ಹೇಳಲು ಅದಕ್ಕೆ ಆ ಮನೆಯವರು ಒಪ್ಪದೆ ಹೋದದರಿಂದ ಮುಜಾಧಿಕಾರಿಯು ಉದಾಸೀನನಾಗಿ ಇದ್ದುಬಿಟ್ಟದರಿಂದ ವಾಹಕರು ಸಿಕ್ಕದೆ ಪ್ರೇತವನ್ನು ಒಂಟಯೆತ್ತಿನ ಗಾಡಿಯ ಮೇಲೆ ರುದ್ರಭೂಮಿಗೆ ಸಾಗಿಸಿಕೊಂಡು ಹೋದರೆಂದು ಕೇಳುತ್ತೇವೆ.

ಈ ವೂರು ಬಳೇಪೇಟೆ ಶ್ರೀನಿವಾಸಮಂದಿರದಲ್ಲಿ ಈಗ್ಗೆ ನಾಲ್ಕೈದು ದಿನಗಳಿಂದ ಶ್ರೀರಾಮಾನುಜಾಚಾರ್ಯರ ವಾರ್ಷಿಕೋತ್ಸವವು ಯಥಾವಿಭವದಿಂನಡೆಯುತಲಿದೆ ಈ ಉತ್ಸವಕ್ಕೆ ಅಂಗವಾದ ಸಂಸ್ಕೃತ ದ್ರಾವಿಡ ವೇದಾಧ್ಯಯನಕ್ಕಾಗಿ ಕಂಚಿ ಶ್ರೀರಂಗಪ್ರಾಂತದಿಂದ ಒಳ್ಳೆಯ ಅಧ್ಯಾಪಕರು ಕೆಲವರುಕರೆಯಿಸಲ್ಪಟ್ಟಿರುತ್ತಾರೆ ಪ್ರತಿದಿನದಲ್ಲೂ ರಾತ್ರಿ ೭ ಘಂಟೆಯ ಮೇಲೆ ಮಂದಿರಪ್ರತಿಷ್ಠಾಪಕರಾದ ಶ್ರೀಪರ್ವ ಗೋಪಾಲಾಚಾರ್ಯರು ಶ್ರೀರಾಮಾನುಜಾಚಾರ್ಯರವರ ಚರಿತ್ರವಂಕುರಿತು ಉಪನ್ಯಾಸವಂ ಮಾಡುತ್ತಾರೆ. ತರುವಾಯ ದೇವರಿಗೆ ಪ್ರಾಕಾರದೊಳಗೆ ಉತ್ಸವನಡೆದು ಬ್ರಾಹ್ಮಣರೊಟ್ಟಿಗೆ ತೀರ್ಥಪ್ರಸಾದಗಳು ವಿನಿಯೋಗವಾಗಿ ಉತ್ಸವವು ಪೂರ್ತಿಯಾಗುತಿದೆ. ಈ ತಿಂಗಳ ೨೦ ನೇತಾರೀಖ್ ಶನಿವಾರದೊಡನೆ ಈ ಉತ್ಸವವು ಪೂರ್ತಿಯನ್ನೈದುವುದು.

ಕಳೆದ ಬುಧವಾರದ ದಿನ ಈ ನ್ಯೂರು ಸೆಂಟ್ರಲ್ ಜೈಲಿನಲ್ಲಿ ಯಾವಜ್ಜೀವ ಕಾರಾಗೃಹವಾಸವನ್ನನುಭವಿಸುವ ದಂಡನೆ ವಿಧಿಸಲ್ಪಟ್ಟಿರುವ ಸುಮಾರು ೨೫ ವರ್ಷಗಳ ವಯಸ್ಸುಳ್ಳ ಒಬ್ಬ ಖೈದಿಯನ್ನು, ಇನ್ನೂ ವಿಚಾರಣೆಯಲ್ಲಿದ್ದ ಬೇರೆ ಒಬ್ಬ ಖೈದಿಯು ನಿಷ್ಕಾರಣವಾಗಿ ಖೂನಿ ಮಾಡಿದನು. ಈ ಕೃತ್ಯ ನಡೆಸಿದವನಿಗೆ ಬುದ್ಧಿವಿಪರ್ಯಯ ಉಂಟಾಗಿರಬಹುದೆಂದು ಕಾಣುತ್ತದೆ.

ಮೈಸೂರು ಗವರ್ನಮೆಂಟ್ ರೈಲ್ವೇ ಇಲಾಖಾ ಜಾಯಿಂಟ್ ಸೆಕ್ರೆಟರಿಯವರಾದ ಮಿಸ್ಟರ್ ಗ್ರೀವ್ಸ್ ಸಾಹೇಬರವರು ತಲಚೇರಿ ಮೊದಲು ದಕ್ಷಿಣ ಕೊಡಗು ಅಮ್ಮತ್ತಿಯ ವರಿವಿಗೆ ದೇಶದ ಸ್ಥಿತಿಯಂ ನೋಡಿಬಂದರು. ಈ ಮಾರ್ಗದಲ್ಲಿ ರೈಲ್ ರಸ್ತೆ ಹಾಕುವ ವಿಷಯದೊಳು ಅಧಿಕ ಕಷ್ಟ ಯಾವದೂ ಇಲ್ಲವು. ಮೈಲಿಂಗೆ ಐವತ್ತು ಸಾವಿರ ರೂಪಾಯಿಗಳ ಲಾಗತು ಹಿಡಿಯಬಹುದೆಂದು ಅಂದಾಜ್ ಮಾಡಲ್ಪಟ್ಟಿರುತ್ತದೆ. ಈ ರಸ್ತೆಯು ಹಾಕಲ್ಪಡುವ ಪಕ್ಷಕ್ಕೆ ಕೊಡಗು ದೇಶಕ್ಕೆ ವಿಶೇಷ ಸೌಖ್ಯ ಉಂಟಾಗುವದಲ್ಲದೆ ತಲಚೇರಿಗೂ ಮೈಸೂರು ದೇಶಕ್ಕೂ ವ್ಯಾಪಾರ ವೃದ್ಧಿಯಾಗುವದಕ್ಕೆ ಸಂಪೂರ್ಣಾವಕಾಶ ಉಂಟಾಗುವದು.

ಈ ವಾರದಲ್ಲಿ ಕಾಲಸ್ಥಿತಿ ವಿಷಯವಂ ಕುರಿತ ನಮ್ಮ ಲೇಖವು ಚರ್ವಿತ ಚರ್ವಣವೆಂದು ಭಾವಿಸಲ್ಪಡಬಹುದು, ಪರಂತು ಈ ಕಾಲದಲ್ಲಿ ಜನವಸತಿಯುಂ, ಪ್ರಜೆಗಳ ಆರೋಗ್ಯಸ್ಥಿತಿಯೂ ಅವಶ್ಯ ತಿಳಿಸಬೇಕಾದ ವಿಷಯಗಳಾಗಿರುವದರಿಂದ ಅದಂ ಬಿಡತಕ್ಕದ್ದಲ್ಲವೆಂದು ಭಾವಿಸುತ್ತೇವೆ. ಜಲಾಭಾವವು ಅದೇ ಪ್ರಕಾರವಾಗಿಯೂ ಕಳೆದ ವಾರದೊಳು ಅಧಿಕವೆಂಬುದರಲ್ಲಿ ಸ್ವಲ್ಪವೂ ಸಂದೇಹವಿಲ್ಲವು. ತನ್ನಿಮಿತ್ತ್ಯದಾಯಗಳು ನಡೆಸಲ್ಪಡುತಲಿದ್ದಾಗ್ಯೂ ಫಲಪ್ರಾಪ್ತಿಯು ದೂರದಲ್ಲಿರುವಂತಿದೆ. ಜ್ವರರೋಗದಿಂ ಪ್ರಾಣನಾಶವು ಪ್ರತಿ ದಿನವಲ್ಲೂ ಆಗುತಲೇ ಇದೆ. ಈ ರೋಗಗಳಿಗೆ ಕಲ್ಮಷೋದಕ ಪಾನವೇ ಕಾರಣವೆಂದು ಅನೇಕರು ಅಭಿಪ್ರಾಯಗೊಂಡಿರುತ್ತಾರೆ ಅದು ಆಧಾರ ಶೂನ್ಯವಾದುದೆಂದು ನಾವು ಹೇಳಲಾರೆವು, ಪರಂತು ಪ್ರಕೃತಸ್ಥಿತಿಯಂ ಕುರಿತು ಯೋಚಿಸಲಾಗಿ ಈಗ ಈ ಪುರದಲ್ಲಿ ಉಪಯೋಗಿಸಲ್ಪಡುತಲಿರುವ ಜಲವು ಪರಿಶುದ್ಧವಾದುದೆಂದು ಯೆಲ್ಲರೂ ಭಾವಿಸಿ ತೃಪ್ತರಾಗಿರಬೇಕಾಗಿದೆ ಆಹಾರ ಪದಾರ್ಥಗಳ ದಾರಣೆಗಳು ಒಂದೇವಿಧವಾಗಿವೆ. ರಾತ್ರಿ ಕಾಲದಲ್ಲಿ ವರ್ಷ ಸೂಚನೆಗಳು ಸ್ವಲ್ಪ ಕಾಣಬರುತಲಿವೆ, ಪರಂತು ಯಾವಾಗ ಅದು ಫಲದಾಯಕಗಳಾಗುವವೋ ಹೇಳುವದಕ್ಕೆ ಸಾಧ್ಯವಲ್ಲವು.

## THE BAGNALORE SREENIVASA MANDIRAM.

### ಬೆಂಗಳೂರು, ಶ್ರೀನಿವಾಸ ಮಂದಿರ.

ಬೆಂಗಳೂರ್ ಶ್ರೀಶ್ರೀನಿವಾಸ ಮಂದಿರದ ಧರ್ಮಕ್ಕಾಗಿ ಜವಾಯಿಸಲ್ಪಟ್ಟ ಅಕ್ಕಿ ಮತ್ತು ಅದರ ವಿನಿಯೋಗದ ತಪಸೀಲ್ ತೋರಿಸುವ ತಖ್ತಾ —

೧೮೯೩ನೇ ಇಸವಿ ಏಪ್ರೆಲ್ ೯ನೇ ತಾರೀಖ್ ಮೊದಲು ೧೫ನೇ ತಾರೀಖ್ ವರಿವಿಗೆ.—

| | |
|---|---|
| ಅಕ್ಕಿ ವಸೂಲು ಮಾಡಿದ ಗೃಹಗಳ ಸಂಖ್ಯೆ | 80 |
| ಜವಾಯಿಸಿದ ಧಾನ್ಯದ ಸೇರುಗಳ ಸಂಖ್ಯೆ .... | 55¾ |
| ಗತವಾರದ ಶಿಲ್ಕು ಸೇರು ... | 4 |
| ಖರೀದಿ ಮಾಡಲ್ಪಟ್ಟ ಅಕ್ಕಿ ಸೇರು | 100 |
| ಒಟ್ಟು ... | 159¾ |
| ಅಡಿಗೆ ಸಾಮಗ್ರಿಗಳಿಗಾಗಿ ಮಾರಲ್ಪಟ್ಟ ಸೇರು | 6¼ |
| ಖರ್ಚಾದ ಅಕ್ಕಿ ಸೇರು ... | 83 |
| ಜಾತಾ ಬಾಕಿ ... | 70 |
| ಭೋಜನ ಮಾಡಿದ ಜನಗಳ ಸಂಖ್ಯೆ ಮತ್ತು ತಪಸೀಲ್. | |
| ಅನಾಥರು ... ... | 7 |
| ಸ್ಕೂಲಿನ ವಿದ್ಯಾರ್ಥಿಗಳು ... | 4 |
| ವೇದಾಂ ಇರತಕ್ಕ ವಿದ್ಯಾರ್ಥಿಗಳು ... | 14 |
| ಕೊಡತಕ್ಕ ಅರ್ಚಕ, ಪರಿಚಾರಕ ವಗೈರೇರ ಸಂಖ್ಯೆ | 42 |
| ಪ್ರಯಾಣಸ್ಥರು ... ... | 99 |
| ಒಟ್ಟು .. | 166 |

## SUMMARY OF NEWS.

### ವೃತ್ತಾಂತ ಸಂಗ್ರಹವು.

ಗಾಣಗಾಪುರದಲ್ಲಿ ಶ್ರೀ ದತ್ತಾತ್ರೇಯಸ್ವಾಮಿಯು ತನಗೆ ಪ್ರಸನ್ನವಾಗುವದಿಲ್ಲವೆಂದು ಖಿನ್ನತೆಯಿಂದ ಒಬ್ಬ ದೈವಭಕ್ತನು ಹುಲ್ಲಿನ ಚಿತೆಯನ್ನು ನಿರ್ಮಿಸಿ, ಅದರಮೇಲೆ ತಾನು ಕುಳಿತು ಬೆಂಕಿಯನ್ನು ಹಚ್ಚಿಕೊಂಡು ದುರ್ಮರಣಹೊಂದಿದನು.

ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪೆನಿಯವರು ಬೆಂಗಳೂರು—ಪುಣೇ ಲೈನಿನಮೇಲೆ ಥರ್ಡ ಕ್ಲಾಸಿನ ಪ್ರಯಾಣ ಮಾಡಲಿಕ್ಕೆ ಟಿಕೆಟುಗಳು ದೊರೆಯುವಂತೆ ವ್ಯವಸ್ಥೆಯನ್ನಿಟ್ಟಿರುತ್ತಾರೆ. ಈ ಕಂಪೆನಿಯವರ ಹತ್ತಿರ ಥರ್ಡ ಕ್ಲಾಸಿನ ಟಿಕೆಟ ಕೊಳ್ಳುವವರಿಗೆ ಲಾಭವೇನಂದರೆ— ಅವರ ಮಾಲ್ ವಗೈರೆ ಚಾರ್ಜ ಜಾಸಲಿನಿಂದ ಬಿಡುಗಡೆಯಾಗುವದು.—ಹಂ.

ಪುಣೆಯಲ್ಲಿ ಈಚೆಗೆ ಬುಲಡಾಣೆಯ ಅಸಿಸ್ಟೆಂಟ್ ಕಮಿಷನರಾದ ರಾ|| ಸಾ|| ಅಪ್ಪಾಸಾಹೇಬ ಇವರ ಮನೆಯೊಳು ಒಂದು ಲಗ್ನ ಸಮಾರಂಭವು ಸಾಂಗವಾಯಿತು. ಇದರಲ್ಲಿ ಕಂಡುಬಂದ ವಿಚಿತ್ರಾಂಶವೇನಂದರೆ—ವರನ ತಾಯಿ ಮುಸಲ್ಮಾನಳು, ವಧುವಿನ ತಾಯಿ ಹಿಂದೂ, ಮತ್ತು ವರನ ಪಾಲಕನು ಹಿಂದುವು, ವಧುವಿನ ಪಾಲಕನು ಮುಸಲ್ಮಾನನೆಂದು ತಿಳಿದುಬರುತ್ತದೆ.

ಅಲಹಾಬಾದಿನಿಂದ ಕಲ್ಕತ್ತಾದ ತನಕ ಹೋಗಿರುವ ಈಸ್ಟಿಂಡಿಯನ್ ರೈಲ್ವೆ ಕಂಪೆನಿಯವರು ಹೊಸ ಇಂಜಿನ್‌ಗಳನ್ನು ತರಿಸಿದಾರೆ, ಈ ಇಂಜಿನ್‌ಗಳಿಂದ ೧ ಘಂಟೆಗೆ ೫೦ ಮೈಲ್ ಹೋಗಲಿಕ್ಕೆ ಆಗುತ್ತದೆ, ಇಷ್ಟು ದಿವಸದ ಇಂಜಿನ್‌ಗಳಿಂದ ೧ ಘಂಟೆಗೆ ೩೦ ಮೈಲ್ ಹೋಗುತಲಿತ್ತು. ಇದನ್ನು ಓದಿ ನಮ್ಮ ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪೆನಿಯವರು ನಾಚಿಕೆಯಿಂದ ತಲೆಬೊಗ್ಗಿಸದೆ ಇರುವದು ಹ್ಯಾಗೆ!

ಚಿಕಾಗೊ ಪ್ರದರ್ಶನಕ್ಕೆ ಹನ್ನೆರಡುವರೆ ಲಕ್ಷ ರೂಪಾಯಿ ಖರ್ಚು ಮಾಡಿ ಒಂದು ಉತ್ತಮವಾದ ಛಾಪಖಾನೆಯನ್ನು ಇಡುವವರಾಗಿದಾರೆ. ಈ ಛಾಪಖಾನೆಯಲ್ಲಿ ಪ್ರಾತಃಕಾಲ ೧, ಸಾಯಂಕಾಲ ೪, ಈಪ್ರಕಾರ ದಿನವೂ ೫ ವರ್ತಮಾನ ಪತ್ರಗಳನ್ನು ಛಾಪಿಸುವರು. ಈ ವರ್ತಮಾನ ಪತ್ರಗಳಲ್ಲಿ ಈ ಪ್ರದರ್ಶನ ಸಂಬಂಧವಾದ ಹೊಸ ಹೊಸ ವರ್ತಮಾನವು ಸಂಪೂರ್ಣವಾಗಿ ಕೊಡಲ್ಪಡುವವು. ಇವರ ಉದ್ಯೋಗಕ್ಕೆ ಸಹಾಯಕ್ಕೂ ಎಣೆಯೇ ಇಲ್ಲವು—ಹಂ.

ನೈಜಾಂ ಇಲಾಖಾ ಅಕ್ಕಲಕೋಟ ತಾಲ್ಲೂಕು ಮೈಸಿ ಬೆಣ್ಣಿತಿರುವೆಂಬ ಹಳ್ಳಿಯಲ್ಲಿ ಕೆಲವು ಠಕ್ಕರು ಯೋಗಿಗಳ ವೇಷ ಧರಿಸಿಕೊಂಡು ಬಂದಿದ್ದು 'ಒಂದಕ್ಕೆ ಎರಡು ಮಾಡಿಕೊಡುತ್ತೇವೆ' ಎಂದು ಹೇಳಿ ಅಲ್ಲಿನ ಮುಗ್ಧಜನರ ಕಡೆಯಿಂದ ರೂಪಾಯಿಗಳನ್ನು ಎತ್ತಲಿಕ್ಕೆ ಪ್ರಾರಂಭಿಸಿರುತ್ತಾರೆಂದು ಗುಲ್ಬರ್ಗಾ ಸಮಾಚಾರಕರ್ತರು ಬರೆಯುತ್ತಾರೆ. ಇವರನ್ನು ಊರು ಕೆಲವರು ಕೈಲಾಸವೆಂದು ಹೇಳುತ್ತಾರೆ. ಇವರ ಹೆಸರು ಕೇಳಿದರೆ ಕೆಲವರು ಶಂಭೂ ಯೆಂತ ಕೆಲವರು ಶಂಕರ ಯೆಂತ ಹೇಳುತ್ತಾರೆ. ಯಾರಾದರೂ ಸಣ್ಣ ಸಣ್ಣ ರಕಮು ಕೊಟ್ಟರೆ ತೀವ್ರವೆ ದುಪ್ಪಟ್ಟು ಕೊಟ್ಟುಬಿಡುತ್ತಾರೆ, ದೊಡ್ಡ ದೊಡ್ಡ ರಕಮಿಗೆ ಮಾತ್ರ ಹೆಚ್ಚು ಮುದ್ದತವನ್ನು ಹೇಳಿ ಕಳುಹಿಸುತ್ತಾರೆ. ಇದರಲ್ಲೇ ಇವರ ಮಂತ್ರಬೀಜವು ಉಂಟೆಂದು ಕಾಣುತ್ತದೆ, ಸಣ್ಣ ಸಣ್ಣ ರಕಮನ್ನು ದುಪ್ಪಟ್ಟುಕೊಟ್ಟದ್ದು ಕೇಳಿ ಅಥವಾ ನೋಡಿ ಜನರು ದೊಡ್ಡ ದೊಡ್ಡ ರಕಮು ಕೊಟ್ಟರೆಂದರೆ ಗಟ್ಟಿ ಹಿಡಿಸಬೇಕೆಂಬ ಇಚ್ಛೆಯಿಂದ ಈ ಠಕ್ಕರು ಈಪ್ರಕಾರ ಮಾಡುತಿರಬಹುದೆಂದು ಸ್ಪಷ್ಟವಾಗಿ ಕಾಣುತಿದೆ. ಉದ್ಯೋಗದಿಂದ ಹಣವನ್ನು ಸಂಪಾದಿಸಿ ಶ್ರೀಮಂತರಾಗಬೇಕೆಂಬ ಇಚ್ಛೆಯನ್ನು ತೊರೆದು, ಆಶೆಬುರುಕರಾದ ಜನರು ಮಂತ್ರದಿಂದಾಗಲಿ, ಭೂತಸಹಾಯದಿಂದಾಗಲಿ, ದೇವರಿಗೆ ನರಬಲಿ ಅರ್ಪಿಸುವದರಿಂದಾಗಲಿ, ತಮಗೆ ದ್ರವ್ಯವು ಸಿಕ್ಕುವದೆಂದು ಭಾವಿಸಿ ಕೊನೆಗೆ ಮೋಸ ಹೊಂದುತ್ತಾರೆ—ಹಂ.

ಬೂರಾದ ಹುಡಗಿಯು ಮಿರಜೆಯ ಸ್ಟೇಷನಿನಮೇಲಿರುವ ಸೆಂಟಿಂಗ್ ಮ್ಯಾಸ್ಟರನ ಮಗಳು. ಈ ಹುಡುಗಿಯು ಶಾಲೆಯಲ್ಲಿ ಓದುತಿತ್ತು. ಇದು ಸುಮಾರು ೮—೧೦ ವರ್ಷದಿದ್ದು ಪ್ರತಿನಿತ್ಯ ಶಾಲೆಗೆ ಹೋಗಿ ಬರುತ್ತಿತ್ತು. ಇದನ್ನು ಅಲ್ಲಿಯ ಇಬ್ಬರು ದುಶ್ಶೀಲರು ಹೆಂಗಸರು ಲಕ್ಷ್ಯದಲ್ಲಿಟ್ಟು ತಮ್ಮ ಜೊತೆಗೆ ಇನ್ನಿಬ್ಬರು ಗಂಡಸರನ್ನು ಕರಕೊಂಡು ಒಂದು ದಿವಸ ಆ ಹುಡಿಗಿಯು ಶಾಲೆಯಿಂದ ಬರುವ ಕಾಲಕ್ಕೆ ಈ ಉಭಯತರು ಆ ಹುಡುಗಿಗೆ ಏನೋ ತಿನ್ನುವದಕ್ಕೆ ಕೊಟ್ಟು ತಮ್ಮ ಮನೆಗೆ ಕರದೊಯ್ದರು ಆಗಲಾ ಹುಡಗಿಯು ಮನೆಗೆ ಬಂದಕೂಡಲೆ ತಮ್ಮ ಕೆಲಸ ಸೈಗೂಡಿತೆಂತ ಆನಂದಭರಿತರಾಗಿ ಹೋದರು. ಇವರು ಈ ಹುಡಿಗಿಯನ್ನು ಮುಂಬೈ ಪುಣೆಯಿಂದ ದೊಡ್ಡ ನಗರಗಳಲ್ಲಿ ಒಯ್ದು ಮಾರಿದರೆ ತಮಗೆ ವಿಪುಲ ಧನ ಸಿಗುವದೆಂಬ ದುರಾಶೆಯಿಂದಲೋ ವಿನೋ ಆ ಹುಡುಗಿಯನ್ನು ಹಾಗೆ ತಮ್ಮ ಮನೆಯ ಒಂದು ಕೋಣೆಯಲ್ಲಿ ಬಚ್ಚಿಟ್ಟರು. ಆ ದಿವಸ ಸೆಂಟಿಂಗ್ ಮ್ಯಾಸ್ಟರು ತನ್ನ ಮಗಳು ಶಾಲೆಯಿಂದ ಇನ್ನೂ ಯಾಕೆ ಬರಲಿಲ್ಲವೆಂದು ಪುಷ್ಕಳ ತಲಾಷೆ ಮಾಡಿದನು ಆದರೆ ಹುಡಿಗಿಯು ಸಿಗುವಹಾಗೆ ಎಲ್ಲ; ನಂತರ ಊರಲ್ಲಿ ಶೋಧನೆ ಮಾಡಲಾಗಿ ಎಲ್ಲಿಯೂ ಪತ್ತೆಯಾಗಲಿಲ್ಲ. ಬಳಿಕ ಪೋಲೀಸಿನವರಿಗೆ ವರ್ದಿ ಹೋಯಿತು. ಆ ಮೇಲೆ ಈ ಹುಡುಗಿಯು ಮಾಯವಾದ ದಿವಸ ಇಂಥವರ ಸಂಗಡ ಇತ್ತೆಂದು ನೋಡಿದವರು ಹೇಳಿದ್ದರ ಮೇಲಿಂದ ಸಂಶಯದಿಂದ ಆ ಇಬ್ಬರು ಹೆಂಗಸರನ್ನು ಹಿಡಿದು ಅಟಕಿನಲ್ಲಿಟ್ಟರು. ಈ ಸುದ್ದಿಯನ್ನು ಆವರ ಇಬ್ಬರು ಸಂಗಡಿಗರಾದ ನರಾಧಮರು ಕೇಳಿ ಇನ್ನುಮೇಲೆ ತಮ್ಮ ತಮ್ಮ ಕೃತ್ಯದ ಮರ್ಮವು ಹೊರಬಿದ್ದೀತೆಂದು ನೆನೆದು ಆ ಹುಡಿಗಿಯನ್ನು ಪಂಜಿನಿಂದ ಕುಟ್ಟಿ ಪ್ರಾಣ ಹೋದಮೇಲೆ ಗುಪ್ತ ರೂಪವಾಗಿ ಒಂದು ಆಳವಾದ ಬಾವಿಯಲ್ಲಿ ಮೂಟೆ ಕಟ್ಟಿ ಒಯ್ದರು. ಊರಲ್ಲಿ ಪೋಲೀಸ್ ತಪಾಸಣೆಯು ನಡೆದು ಹುಡಗಿಯು ಎಲ್ಲಿಯೂ ಸಿಗದಾಗಲು, ತಂದೆ ತಾಯಿಗಳು ದುಃಖಾಕ್ರಾಂತರಾಗಿ ಕೂತರು. ಮುಂದೆ ೨—೩ ದಿವಸಗಳಲ್ಲಿಯೇ ಬಾವಿಯಲ್ಲಿ ಹಾಕಿದ ಶವವು ಮೂಟೆ ಹೊತಿದ್ದುವವನ ಮೋಟೆಯ ಧಡಿಕೆಯಿಂದ ಮೇಲೆ ಬಾವು ಮೋಟಿನ್ನುದರಲ್ಲಿ ಬಂತು. ಆಗ ನೋಡಲಾಗಿ ಇವಳೇ ಸೆಂಟಿಂಗ್ ಮ್ಯಾಸ್ಟರನ ಮಗಳೆಂದು ಗೊತ್ತಾಯಿತು. ಈ ಪ್ರಕಾರ ಭಯಂಕರವಾಗಿ ಖೂನಿ ಮಾಡಿದವರ ಹೆಸರನ್ನು ಆ ಹೆಂಗಸರು ಹೇಳಿದ್ದರ ಮೇಲಿಂದ ಅವರನ್ನೂ ಈಗ ಅಟಕಿನಲ್ಲಿಟ್ಟಿದ್ದಾರೆಂದೂ ಇದರ ಹೆಚ್ಚಿನ ವಿಚಾರವು ಇನ್ನೂ ಅಲ್ಲಿಯ ಅ. ಸ್ಟೇ. ಪಿಜಂಟರಾದ ಮ. ರೇಸಿಂಡೆಬರು ಪತ್ತೆ ಮಾಡುತಲಿದ್ದಾರೆಂದೂ ತಿಳಿಯುತ್ತದೆ.

## EXTRACTS.

### ಶ್ರೀ ಸೀತಾ ವಿಲಾಸ ಅಮ್ಮಣ್ಣಿಯವರ ಚರಮ ಕಾರ್ಯ.

ಮೈಸೂರ್ ವೃತ್ತಾಂತ ಬೋಧಿನಿ ೧೦ ೪ ೯೩.

ಮಹಾಮಹಿಮ ಶ್ರೀ ಯುವರಾಜ ಶ್ರೀ ಸೀತಾವಿಲಾಸದ ಅಮ್ಮಣ್ಣಿ ಸಿ. ಐ. ರವರು ಸ್ವರ್ಗಸ್ಥರಾದ ವಿಷಯದಲ್ಲಿ ಆವರ ಉತ್ತಮಲೋಕಾದಿ ಸದ್ಗತಿಗಾಗಿ ನಡೆದ ಕರ್ಮಗಳೆಲ್ಲಾ ಪೂರೈಸಿತು. ಕ್ರಿಯಾಪ್ರಕಾರ ವಿಶೇಷ ವ್ಯಾದಶಾಹ ಕರ್ಮದ ದ ಕರ್ಮಗಳೆಲ್ಲಾ ಯೋಗ್ಯರಾದ ಬ್ರಾಹ್ಮಣರ ಮೂಲಕ ಕ್ರಮವಾಗಿ ನಡೆಯಿತು ಗೋದಾನ ಭೂದಾನ ಸುವರ್ಣದಾನ, ಅನ್ನದಾನ ಇವೇ ಮೊದಲಾದ ಸಮಸ್ತದಾನಗಳೂ ಎತ್ತಿನ ಟ್ಟಲೆಗಳೂ ನಡೆದದ್ದಲ್ಲದೆ ಅನ್ನ ದಾನವೂ ಕೂಡ ವಿಶೇಷವಾಗಿ ನಡೆಯಿತು ಕೆಂಪೆ ಮೊದಲಾದ ಬಹಳ ದೂರ ದೇಶದಿಂದ ಬ್ರಾಹ್ಮಣರು ಬಂದಿದ್ದರು. ಅವರವರ ಯೋಗ್ಯತೆಯನ್ನು ವಿಚಾರಮಾಡಿ ಪಟ್ಟಿಯನ್ನು ಕಲ್ಪಿಸಿ ಯೋಗ್ಯತಾನುಸಾರವಾಗಿ ಸಂಭಾವನೆಯನ್ನು ಪರಿವಾರದವರು ಕೊಡಿಸಿ ಕಳುಹಿಸಿದರು. ಬೃಹಸ್ಪತಿವಾರದ ದಿವಸ ಶುಭಸ್ವೀಕಾರದ ಕಾಲದಲ್ಲಿ ಬಿಡಾರದವರು ಇನ್ನೂ ಕೆಲವು ರೀಡಾಮೆಂಡರಿಯವರು ಬಿಲ್ಲತ್ತನ್ನು ಒಪ್ಪಿಸಿದರು. ಆ ದಿನ ರಾತ್ರಿಯಿಂದ ಪ್ರತಿದಿನವೂ ಬೆಳಗಿನಜಾವ ಮತ್ತು ರಾತ್ರಿ ೮ ಘಂಟೆಸಮಯದಲ್ಲಿ ಮಂಗಳಾರ್ಥವಾಗಿ ಬಿನೆಸಹಿ ಹಾರಿಸತಕ್ಕ ಗನ್‌ಗಳನ್ನು ಹಾರಿಸುವಂತೆ ಅಪ್ಪಣೆಯಾಯಿತು ಅಷ್ಟೋನ್ನತಿಯಾಗಿ ಕಟ್ಟಲ್ಪಟ್ಟಿದ್ದ ಧ್ವಜಗಳೆಲ್ಲಾ ಎತ್ತಿ ಕಟ್ಟಲ್ಪಟ್ಟವು ಶುಭಸ್ವೀಕಾರದ ದಿವಸ ಸಾಯಂಕಾಲ ಕೋಟೆಯಲ್ಲಿ ಬಂದ ಬ್ರಾಹ್ಮಣ ಮುತ್ತೈದೆಯರಿಗೆಲ್ಲಾ ಸೀರೆ ಭೂರಿ ದಕ್ಷಿಣೆಯನ್ನು ಕೊಟ್ಟರು. ಬೃಹಸ್ಪತಿವಾರದ ದಿವಸವೂ ಕೂಡ ರಿಸಾಚಾರದ ಮರದಲ್ಲಿ ರಿಸಾಚಾರದವರಿಗೂ ಸಂತರ್ಪಣೆ ನಡೆಯಿತು. ಶುಕ್ರವಾರದ ದಿವಸ ಕೆಲ್ಬಿನಡಗ್ಗೆಯನ್ನು ಹಿಡಿದು ದೇವಸ್ಥಾನಗಳಿಗೆ ಹೋಗಿ ದೇವತಾದರ್ಶನ ತೆಗೆದುಕೊಂಡು ಬಂದಮೇಲೆ ಮುಖ್ಯವಾದ ರಾಜಬಂಧುಗಳ ಮನೆಗಳಲ್ಲಿ ಪಾದಪೂಜೆಯು ಬೆಳೆಯಿತು. ಆ ದಿನ ಮಧ್ಯಾಹ್ನ ಟೌನ್‌ಹಾಲಿನಲ್ಲಿ ಕೂಟದಾರು ಕೆರೆಯರು ಮೊದಲಾದವರಿಗೆ ಬಟ್ಟೆಬರೆ ಮೊದಲಾದದ್ದುಗಳನ್ನು ಕೊಡುವಂತೆ ಯೇರ್ಪಾಡು ಮಾಡಿದ್ದ ಪ್ರಕಾರ ಟೌನ್‌ಹಾಲಿನಲ್ಲಿ ಎಲ್ಲರಿಗೂ ಬಟವಾಡೆ ಮಾಡಲ್ಪಟ್ಟಿತು ಸಂಜ್ಞಾನಾಮುಳೆಯಿಂದ ಒಂದಿದ್ದ ದೊಡ್ಡದೊಡ್ಡ ಹುದ್ದೆದಾರರೆಲ್ಲಾ ಶುಭಸ್ವೀಕಾರನಂತರ ಮಹಾರಾಜರ ದರ್ಶನ ತೆಗೆದುಕೊಂಡು ಅವರಿಂದ ಅಪ್ಪಣೆಯನ್ನು ಪಡೆದು ತಮ್ಮ ತಮ್ಮ ಕೆಲಸಗಳ ಮೇಲೆ ದಯಮಾಡಿಸಿದರು. ನಮ್ಮ ಶ್ರೀಮನ್ಮಹಾರಾಜರವರೂ ವಿಶೇಷ ಜ್ಞಾನಶಾಲಿಗಳಾದುದರಿಂದ ಮಾತೃವಿಯೋಗದ ದುಃಖವನ್ನೆಲ್ಲಾ ಅಡಗಿಸಿ ಮಾಡಿಕೊಂಡು ಪ್ರಜಾಪಾಲನಾದಿ ಕಾರ್ಯಗಳಲ್ಲಿ ಮನಸ್ಸು ಕೊಡುವದಕ್ಕೆ ಎಸ್ಸಿಸುತ್ತಿದ್ದಾರೆ? ರಾಜ್ಯಕರ್ಮದ ಶಕ್ತಿಯುವಂತೆ ಈಶ್ವರನು ಅನುಗ್ರಹಿಸಿ ಸಂತೋಷ ಮತ್ತು ಮಂಗಳಪರಂಪರೆಗಳನ್ನುಂಟುಮಾಡಲಿಯೆಂದು ಕೋರುತ್ತೇವೆ.

ಮೈಸೂರ್ ದೇಶಾಭಿಮಾನಿ, ೯-೪-೯೩.

ಮಹಾ ಮಾತೃಶ್ರೀ ದೇವಾಜಮ್ಮಣ್ಣಿಯವರು ಸ್ವರ್ಗಸ್ಥರಾದ ಸಮಾಚಾರವನ್ನು ಹಿಂದೆ ಪ್ರಕಟಿಸಿದ್ದೆವಷ್ಟೆ, ಅವರಿಗೆ ನಡೆಯಬೇಕಾದ ಉತ್ತರ ಕ್ರಿಯಾಶಾಸ್ತ್ರ ಯಥಾ ಶಾಸ್ತ್ರೀಯವಾಗಿ ಸಾಂಗವಾಗಿ ನಡೆದವು ಮಹಾರಾಜರವರು ಮಂತ್ರ ಲೋಪವು ತಂತ್ರ ಲೋಪವು ನಡೆಯದಂತೆ ಅತಿ ವೈದಿಕ ಕ್ರಮೋಕ್ತ ನಡೆಸಿದರು. ದ್ರವ್ಯಲೋಪವೇನೋ ನಡೆಯಿತು. ಆ ದೋಷಕ್ಕೆ ನಮ್ಮ ಮಹಾರಾಜರು ಭಾಗಿಗಳಲ್ಲ. ಅಧಿಕಾರಿಗಳನ್ನು ನಾವು ನಿಂದಿಸಬೇಕು. ಮಹಾರಾಜರವರಿಗಿದ್ದ ಕರ್ಮಶ್ರದ್ಧೆಯನ್ನು ನೋಡಿ ನಾವು ಪರವಶರಾಗಿ ಪಟ್ಟೆವು ಸಾಧಾರಣವಾಗಿ ದ ನರಿಗೆ ಒಂದು ಅಧಿಕಾರ ದೊರೆತರೆ ಅಷ್ಟಕ್ಕೆ ಮಹದೈಶ್ವರ್ಯರಾಗಿ ಯಾರನ್ನೂ ಲಕ್ಷ್ಯಮಾಡದೆ ಸ್ವೇಚ್ಛೆಯನ್ನು ಕಂಡರೆ ವಿರೋಧಿಗಳೆಂದು ಭಾವಿಸುತ್ತಾ “[illegible]” ಎಂಬ ಮಂತ್ರೋಚ್ಚಾರಣೆಯಿಂದ ಸಕಲ ಕರ್ಮಗಳನ್ನು ನಡೆಸುತ್ತಾರೆ. ಇವರು ಮಹಾರಾಜರಾಗಿದ್ದುಕೊಂಡು ಶಿವಲ ಭಕ್ತಿಯಿಂದ ವೈದಿಕ ಶ್ರದ್ಧೆಯಿಂದ ನಡೆಸಿದ ಮಹತ್ಕರ್ಮವನ್ನು ನೋಡಿದ ಎಲ್ಲ ಅಧಿಕಾರಿಗಳು ತಮ್ಮ ಪ್ರವರ್ತನೆಯನ್ನು ಸೋಧಿ ಯಾದರೂ ಮುಂದೆ ಕರ್ಮ ಶ್ರದ್ಧೆಯನ್ನು ಕ್ರಮವಾಗಿ ನಡೆಯಲಿ ಎಂದು ಯೋಚಿಸಿದಂತೆ ಆರಿಸುತ್ತೇವೆ. ಒಂದು ದಿವಸ ಪುರೋಹಿತರು ಒಂದು ಗೋದಾನವನ್ನು ಮಾಡಿಸಿದರು. “ಮನಸೋದಿಷ್ಟಾಯ ಬ್ರಾಹ್ಮಣಾಯ” ಎಂದು ಸಂಕಲ್ಪ ಮಾಡಿಸಿ ಧಾರೆ ಎರಸಿದರು ಆದು ತಮ್ಮ ಕೊಟ್ಟಿಗೆಯನ್ನಲಂಕರಿಸುವಂತೆ ಮಾಡಿದರು. ಇದನ್ನು ಗತಿತ್ವ ಗತ್ತಾಗಿ ತಿಳಿದು ಬಹಳ ಆಗ್ರಹಪಡಿದರು. ಇದನ್ನು ಮನಸ್ಸಿನಲ್ಲಿಯೇ ಇಟ್ಟುಕೊಂಡು ಪ್ರತಿ ದಾನ ಕೊಡುವಾಗಲೂ “ಮನಸೋದಿಷ್ಟಾಯ ಬ್ರಾಹ್ಮಣಾಯ” ಎಂದು ಹೇಳಬೇಕೆಂದು ಪುರೋಹಿತರಿಗೆ ಹೇಳಿ ಅವರೂ ಎಂಬಂತೆ ಕೇಳ್ತಿ ದ್ದುತ್ತಾ ಪ್ರತಿಗ್ರಹೀತೃವಿನ ಗೋತ್ರ ಸೂತ್ರ ಪ್ರವರಗಳನ್ನು ಉಚ್ಚಾರಣೆ ಮಾಡಿ ದಾನ ಕೊಡುವದಕ್ಕಾರಂಭ ಮಾಡಿದರು. ದಾನ ಸ್ವೀಕಾರ ಮಾಡತಕ್ಕವರೆಲ್ಲರೂ ಯೋಗ್ಯರಾಗಿಯೂ, ಬಡವರಾಗಿಯೂ ಇರಬೇಕೆಂದು ಹೇಳಿದರು. ಪ್ರತಿ ಗೋದಾನ ಮಾಡುವ ಕಾಲದಲ್ಲಿ ಕಟ್ಲೇ ಮೇರೆ ಊರು ಬಾಗಿಲ್ಲಿ ಹಸವಿದ್ದರೆ ಕನ್ನ ಕೈಯಲ್ಲಿ ಕೊಡುವದಕ್ಕೆ ಬಂದರು. ಗೋದಾನದಲ್ಲಿ ಒಂದು ತಂತ್ರ ನಡೆಯುತ್ತಿತ್ತೆಂದು ನಾವು ಹಿಂದಿನ ಪತ್ರಿಕೆಯಲ್ಲಿ ಬರೆದಿದ್ದೆವು. ಅದನ್ನು ಮನಸ್ಸಿನಲ್ಲಿಟ್ಟುಕೊಂಡು ನಮ್ಮ ಮಾತಿನ ನಿಜಸ್ಥಿತಿಯನ್ನು ಅಜಮಾಯಿಷಿ ಮಾಡಬೇಕೆಂದು ಅಧಿಕಾರಿಗಳು ಹಾಕುತ್ತಿದ್ದ ಬಾರಿಕೆ ಕಲೆ ಬಿಗ್ಗಿದೆ ಅವರು ಮಾಡಿದ ನಿರ್ಬಂಧವಂ ಲಕ್ಷ್ಯ ಮಾಡದೆ ಹಸುವಿನ ಹತ್ತಿರಕ್ಕೆ ಹೋದರು ಹಸುವನ್ನು ನೋಡಿ ಇದಕ್ಕಿಂತಲೂ ಒಳ್ಳೇ ಹಸು ಇಲ್ಲದೆ ಹೋಯಿತೆ ಎಂದು ಹೇಳಿ, ಪರಿಶೋಧಿಸುವಂತೆ ಅಧಿಕಾರಿಗಳಮೇಲೆ ಕಣ್ಣಿಟ್ಟರು. ಕೊನೆಗ ಹು. ಹು ಹು ಎಂದು ಬಹಳತೆಯಿಂದ ಹೂ ಗುಟ್ಟುತ್ತ ಹಸುವಿನ ಬಾಲವನ್ನು ಹಿಡಿದು ಕೊಟ್ಟು ಮಂತ್ರಪಾತ್ರಾಗಿ ದಾನಮಾಡಿ ಪ್ರತಿಗ್ರಹೀತೃ ಸಾಂಪ್ರದಾಯ ಕೊಡಿತ ಹೇಳಿಸಿದರು. ಒಬ್ಬ ಪೊನಸಾಲಿನವನ್ನು ಎತ್ತಿ ಕಟ್ಟಿಗೆ ಗೊತ್ತು ಮಾಡಿದರು ಅವರು ಅಕ್ಕಿಕೆಗಳನ್ನು ತಿವೆ ಪೂಜೆಗಾಗಿ ತೀರಿಸಿಕೊಂಡು ಒಳವದಕ್ಕೆ ಸಪ್ತ ಸಾವಕಾರವಾಯಿತು, ಆದರೆ ಒರುವ ಪರೀಕ್ಷಣೆಯಲ್ಲಿ ಕಾಲು ಘಂಟೆಯ ವರೆಗೂ ಕಾದುಕೊಂಡಿದ್ದರು. ಇಷ್ಟು ನಿಧಾನವುಳ್ಳ ಮಹಾರಾಜರು ನಮಗೆ ದೊರಕಿರುವದು ನಮ್ಮಗಳ ಭಾಗ್ಯವೇ ಸರಿ ಮಹಾರಾಜರು ಗುಣಿಗಳನ್ನು ಎಷ್ಟು ಪರೀಕ್ಷಿಸಿದರೂ ಇದೆ. ಆದರೆ ಸಮೀಪ ವರ್ತಿಗಳು ಯೋಗ್ಯರಲ್ಲದೆ ಅವರನ್ನು ಆಪತ್ತಿಗೆ ತರುತ್ತಾರಲ್ಲಾ ಎಂಬ ವ್ಯಸನವು ನಮ್ಮನ್ನು ಬಿಟ್ಟದ್ದಲ್ಲಾ.

ಸಾಂಪ್ರತದಲ್ಲಿ ನಮ್ಮ ದೇಶದಲ್ಲಿ ಜ್ಞಾನಶೂನ್ಯರಾದ ನಿರುದ್ಯೋಗಿ ಮೋಸಗಾರ ಜನರಿಗೆ ಹೊಟ್ಟೇ ತುಂಬಿಕೊಳ್ಳುವದಕ್ಕೆ ವೈದ್ಯಕೀಯ ಒಂದು ಮಾತ್ರಸ್ಥಾನವಾಗಿದೆ. ಯಾವನು ಚಿಕ್ಕತನದಲ್ಲಿ ಸದ್ವರ್ತನೆಯಿಂದ ನಡೆದು ಜ್ಞಾನ ಸಂಪಾದನೆ ಮಾಡಿಕೊಂಡಿರುವದಿಲ್ಲವೋ, ಅಂಥ ಮನುಷ್ಯನು ತನ್ನ ಉದರಪೋಷಣೆಯ ಭಾರವು ತನ್ನ ಮೇಲೆಯೇ ಬಿದ್ದಾಗ್ಯೇ ಹೇಳುತ್ತದೆಯೋ ಆಗ್ಯೆ ಇತರ ಯಾವ ವ್ಯವಸಾಯವು ಮಾಡುವದಕ್ಕೆ ಆಸ್ಪದ ಇಲ್ಲದಂತೆ ಯಾಗುತ್ತದೆಯೋ ಆಗ್ಯೆ ವೈದ್ಯಕೀಯ ದಾರಿಯನ್ನು ತೆಗೆಯುತ್ತಾನೆ. ಯಂತ್ರ, ಮಂತ್ರ, ಜಾದು ಮೊದಲಾದ ಮೋಸಗಾರಿಕೆಯ ಮೇಲೆ ಈ ಹೀನ, ಕಾಲದಲ್ಲಿ ಬಹು ಲೋಕ ಜನರು ಆವಿಶ್ವಾಸ ಮಾಡುತ್ತಾರೆ. ಆದಕಾರಣ ಅವುಗಳಿಂದ ಚೆನ್ನಾಗಿ ಈ ಜ್ಞಾನಶೂನ್ಯರ ಉದರ ನಿರ್ವಹವಾಗುವದಿಲ್ಲ, ಆದ್ದರಿಂದ ಆ ಧಂದೆ ಈಚೆಯಾಗಿ ಸಾಂಪ್ರತದಲ್ಲಿ ವೈದ್ಯಧಂದೆ ಮಾಡುವವರು ಬಹಳ ಹೆಚ್ಚಾಗಿದ್ದಾರೆ. ನೋಡಿರಿ! ದೊಡ್ಡ ಪುರದಲ್ಲಿ ಕೂಡ ಪಾಡಿವರೆ ಪ್ರತಿಯೊಂದು ಓಣಿಗೆ ೨—೩ ಜನ ವೈದ್ಯರಾಗುತ್ತಾರೆ, ಇವರಲ್ಲಿ ಪ್ರತಿಯೊಬ್ಬನು ನಾನು ಎಲ್ಲ ವೈದ್ಯರಿಗಿಂತಲೂ ಶ್ರೇಷ್ಠನೆಂದು ಹೇಳಿಕೊಳ್ಳುತ್ತಿರುತ್ತಾನೆ. ಇವರಿಗೆ ವಾಸ್ತವಿಕ ವೈದ್ಯಜ್ಞಾನವೆಂಬದರೆ ಲೇಶಮಾತ್ರವೂ ಇರುವದಿಲ್ಲ, ಕೆಲವು ರೋಗಗಳೊಳಗಿನ ಬೇನೆ ಹೆಸರುಗಳೂ ಮತ್ತು ಔಷಧಿ ಹೆಸರುಗಳೂ ಮಾತ್ರ ಗೊತ್ತಿರುತ್ತವೆ. ಇವರಲ್ಲಿ ಯಾವನು ನಾನು ನಾಡಿ ಪರೀಕ್ಷೆ ಬಹು ಚೆನ್ನಾಗಿ ಬಲ್ಲೆನೆಂದು ಹೇಳಿಕೊಳ್ಳುತ್ತಾನೆ. ಯಾವನು ರೋಗಗಳ ನಿದಾನ ನಾನು ಬಹು ಚೆನ್ನಾಗಿ ಬಲ್ಲೆನೆಂದು ಹೇಳಿಕೊಳ್ಳುತ್ತಿರುತ್ತಾನೆ. ಆದರೆ ಈ ಎಲ್ಲರನ್ನು ಪರೀಕ್ಷೆ ಮಾಡಿದರೆ ಒಬ್ಬರು ಮೂರ್ಗಂಥವುಳ್ಳ ಪದಾರ್ಥಗಳನ್ನು ಅನೇಕ ಭಾಗ ಮಾಡಿ ಇದರಲ್ಲಿ ಯಾವದರಲ್ಲಿ ಗುಣವುಂಟೆಂದು ಪರೀಕ್ಷೆ ಮಾಡುವದಕ್ಕೆ ಉದ್ಯೋಗ ಮಾಡಿದಂತೆ ಆಗುತ್ತದೆ. ಕಾರಣ ಜನರಿಗೆ ನಾವು ಸೂಚಿಸುವದೇನಂದರೆ, ಔಷಧ ಕೊಡಿಸುವದೆಂದರೆ ಸಾಧಾರಣವಾದ ಕೆಲಸವಲ್ಲ. ಈ ವಿದ ಮೇಲಿನ ಪ್ರಸಂಗವಿರುತ್ತದೆ. ಆದಕಾರಣ ಇಂಥ ಮೂರ್ಖ ರೋಗದುಃಖಿಗಳ ದಿಷದ ಕೊಡಿಸುವದಕ್ಕೂ ಹಾದು ಕೊಳ್ಳುವದಕ್ಕೂ ಯಾರೂ ಮನಸು ಮಾಡಬಾರದು. ನಿರುಗೋಸ್ಥರ ಕಲಿತು ಪರೀಕ್ಷೆ ಕೊಟ್ಟಂಥಾ ಉತ್ಕೃಷ್ಟವೈದ್ಯರು ಸಿದ್ಧರಿರುವದರಿಂದ ಮೂರ್ಖಜನರ ಮೇಲೆ ವಿಶ್ವಾಸ ಮಾಡುವದರಿಂದ ಕಡೆಗೆ ದೊಡ್ಡ ನಷ್ಟವಾಗುವ ಸಂಭವವದೆ.—ಸ, ಸ್ಯ.

BANGALORE—Printed and published at the KANNATAKA PRESS, No. 40, [illegible] ROAD, CITY.—1893

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

## ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

## Published Every Monday Morning.

[illegible] ಕರ್ಣಾಟಕಪ್ರಕಾಶಕನಪರಾಜಿದಾಪ್ರಥಿತಸಾಹಿತೀಶೋಭಿತಾ [illegible] ಕಹಿತವಾನರೆನಿಹಿತಮುದ್ರಣಾಸಜ್ಜ್ಯನೈರ್ದಿ [illegible]

Vol. XX ] BANGALORE—MONDAY, APRIL 24, 1893. [No 16.

ಸಂಪುಟ ೨೦. ] ಬೆಂಗಳೂರು:—ಸರ್ ೧೮೯೩ ನೇ ಇಸವಿ ಏಪ್ರಿಲ್ ೨೪ ನೇ ತಾರೀಖ್ ಸೋಮವಾರ. | ಸಂಚಿಕೆ ೧೬.


### ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ಒಂದು ವರ್ಷಕ್ಕೆ .. | ...6—0—0 | 8—0—0 |
| 6 ತಿಂಗಳಿಗೆ .. | . 3—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

| | ಸ್ಥಳದವರಿಗೆ. | ಪರಸ್ಥಳದವರಿಗೆ. |
|---|---|---|
| ವರ್ಷಕ್ಕೆ .. | .. 3—0—0 | 4—0—0 |
| 6 ತಿಂಗಳಿಗೆ .. | ... 1—12—0 | 2—8—0 |

ಈ ಪತ್ರಿಕೆಗೆ ದರಖಾಸ್ತು ಮಾಡಿದ ತಾರೀಖ್ ಮೊದಲು [illegible] ಚಂದಾ ಮೊಬಲಗು ಕಳುಹಿ [illegible] ಅಡ್ವಾನ್ಸ್ ದರವಂತೆ ಪತ್ರಿಕೆ [illegible] ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. ಮೂರು ತಿಂಗಳಿಗಿಂತ ಕಡಿಮೆಯಾಗಿ ಚಂದಾ [illegible] ತೆಗೆದುಕೊಳ್ಳಲ್ಪಡಲಾರದು.

### ಪ್ರಕಟನೆಯ ರಿವಾಜ್

| | |
|---|---|
| ಮೊದಲನೆಸಾರೆಗೆ ಪಙ್ಕ್ತಿ ಒಂದಕ್ಕೆ | ೦—೨—೦ |
| ಎರಡನೆಯದಕ್ಕೆ ಪಙ್ಕ್ತಿ ಒಂದಕ್ಕೆ | ೦—೧—೦ |

[illegible] ಎಕ್ಕುವತನ [illegible] ಪಙ್ಕ್ತಿ ಒಂದಕ್ಕೆ [illegible] ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಖಾಯಮ್ ಆಗಿ ಪ್ರಕಟನೆಗಳನ್ನು ಕಳುಹಿಸುವವರು ಅವು ಎಷ್ಟು ವರ್ಷ ಖಾಯಮ್ ಮಾಡಲ್ಪಡಬೇಕೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. [illegible] ಅವು ಪ್ರಕಟಿಸುತ [illegible] ಪ್ರಕಟಿಸಲ್ಪಟ್ಟಿದ್ದಾಗ್ಯೂ [illegible] ಪ್ರಕಟನೆಗಳನ್ನೂ [illegible] ಪತ್ರಿಕೆಗೆ ಕಳುಹಿಸ [illegible] ಕ್ರಮವಾಗಿ [illegible] ಪ್ರಕಟಿಸಲಾರೆವು. [illegible]

ADVERTISEMENTS


NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs 5 0 0

ವೈದ್ಯಸಾರ ಸಂಗ್ರಹ.

ಈ ಗ್ರಂಥಕ್ಕೆ ಬೇಕಾದವರು ಮೊಬಲಗಿನ ಜತೆಗೆ ಕಳು [illegible] ಬರೆದುಕೊಂಡರೆ ಪು ಸ್ತಕ ಕೊಡ [illegible] ಕಳುಹಿಸಲ್ಪಡುವದು. ವೇ [illegible] ಇಲ್ಲದ [illegible] ಕೊಡಲ್ಪಡಲಾರದು

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೇ ಹಾಸಲ್ ಸಹಿತ ಪ್ರತಿ ಒಂದಕ್ಕೆ ರೂ 5—0—0

ಟಿ. ಬಿ. ವೆಂಕಟಾಚಾರ್.

ಬೆಂಗಳೂರ್, ಪಹರ್ ಅಸ್ಪತ್ರಿ ರೋಡ್ ೪೯ ನೇ ನಂಬರ್.



### ನೋಟಿಸ್.

ಬೆಂಗಳೂರು ಕರ್ಣಾಟಿಕ್ ಪ್ರೆಸ್.

೧೮೬೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ ಸಕಲವಿಧ ಕೆಲಸಗಳು ಸುಲಭಚಾರ್ಜಿಗೆ ಶೀಘ್ರವಾಗಿಯೂ ಶುದ್ಧವಾಗಿಯೂ, ಮಾಡಲ್ಪಡುವವು. ಇದರಲ್ಲಿ ಸಧ್ಯಃ ಇಂಗ್ಲಿಷ್ ಕನ್ನಡ ಕೆಲಸಗಳು ಮಾತ್ರವೇ ನಡೆಯುತಿವೆ. ಇತರ ತಪಸೀಲ್‌ಗಳನ್ನು ಸದರೀ ಕಾರ್ಯಾ [illegible] ಬರೆದು ತಿಳಿದುಕೊಳ್ಳಬಹುದು.



### ನೋಟಿಸ್.

ಗಣೇಶ ರಾಮಚಂದ್ರ ಕರ್ಕೆ ಮತ್ತು ಕಂಪನಿ. ಕಮಿಷನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ [illegible] ವ್ಯಾಲ್ಯು ಪೇಯಬಲ್ ಪೋಸ್ಟ್ ಮೂಲಕ ತಕ್ಕ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರದ ಔಷಧಗಳು, ಪುಸ್ತಕಗಳು, ಮುತ್ತುಗಳು, ಚಿಪ್ಪು ಮುತ್ತುಗಳು, ಫಡಿಯಾರಗಳು, ವಾಚ್‌ಗಳು, ಟೈಂಪೀಸ್‌ಗಳು, ಕಾಶ್ಮೀರ ಶಾಲುಗಳು, ಪೆಟ್ಟಿಗೆಗಳು, ಜರತಾರಿ ಕಣಗಳು, ಚಂದ್ರಕಾಂತ ಶಿಲೆಯ ಕನ್ನಡಕಗಳು, ಜಾಹಗೀರು ರೇಶ್ಮೆ ಜರತಾರಿ ಉಡುಪುಗಳು, ಜರತಾರಿ ಟೋಪಿಗಳು, ಆಫೀಸ್ ಡ್ರೆಸ್‌ಗಳು, ಪಟಗಳು, ಅತ್ತರ್‌ಗಳು, ಅತ್ಯುತ್ತಮವಾಗಿರುವ ರತ್ನಗಳು, ಭಂಗಾರದಿಂದ ಕಟ್ಟಲ್ಪಟ್ಟ ಉಂಗುರಗಳು, ಬೆಳ್ಳಿ ಪಾತ್ರಗಳು, ಜರ್ಮನ್ ಬೆಳ್ಳಿ ಪಾತ್ರಗಳು, ಕೇಸರಿ, ಕಸ್ತೂರಿ ವಗೈರೆ ಇತರ ಸಾಮಾನುಗಳು

ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟೆಂಪ್ ಕಳುಹಿಸಿದ ಹೊರತು ಜವಾಬ್ ದೊರೆಯಲಾರದು

ವಿಲಾಸ.—ಗಣೇಶ ರಾಮಚಂದ್ರ ಕರ್ಕೆ,
ಮತ್ತು ಕಂಪೆನಿ, ಕಮಿಷನ್ ಏಜಂಟ್ಸ್,
ಠಾಕೂರ್ ದ್ವಾರ, ಮಾರ್ಕೆಟ್ ಪೋಸ್ಟ್, ಮುಂಬೈ


### ನೋಟಿಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕರೀಗೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

### ಸಂಸ್ಕೃತ ಗ್ರಂಥಗಳು.

| | | ಹಾಸಲ್ ಸಹಿತ ರೂ | ಆ | ಪೈ |
|---|---|---|---|---|
| ಟೀಕಾ ವೈದ್ಯಸಾರ ಸಂಗ್ರಹ | .. | ೫ | ೦ | ೦ |
| ,, ಶಿವಗೀತೆ | .. | ೧ | ೧ | ೦ |
| ,, ಶಿವಾನಂದಲಹರಿ | .. | ೦ | ೪ | ೦ |
| ,, ಕಾಲಾಮೃತ | .. | ೧ | ೦ | ೦ |
| ,, ಟಿ॥ ಬಾಲರಾಮಾಯಣ | .. | ೦ | ೩ | ೦ |
| ,, ಟೀ॥ ಗೋಪಿಕಾ ಗೀತೆ | ... | ೦ | ೧ | ೦ |
| ,, ಟೀ॥ ಚಾಣಿಕ್ಯನೀತಿ (ಸುಭಾಷಿತ) | | ೦ | ೮ | ೦ |
| ವಿಷ್ಣುಸಹಸ್ರನಾಮ ವಗೈರೆ | .. | ೦ | ೩ | ೦ |
| ಸತ್ಯಸಹಸ್ರನಾಮ | ... | ೦ | ೨ | ೦ |
| ಕೃಷ್ಣಕರ್ಣಾಮೃತ | ... | ೦ | ೨ | ೦ |
| ತ್ರಿಕಾಂಡ ಅಮರ ಮೂಲ | ... | ೦ | ೨ | ೦ |
| ೧ ಕಾಂಡ | .. | ೦ | ೧ | ೦ |

### ಕನ್ನಡ ಗ್ರಂಥಗಳು.

| | | | | |
|---|---|---|---|---|
| ಶುಕಸಪ್ತತಿ ಅವ್ವಲ್ | ... | ೩ | ೦ | ೬ |
| ದಿಟ್ಟಾ ದುಯ್ಯಂ | ... | ೧ | ೨ | ೦ |
| ವೃಷಭೇಂದ್ರವಿಜಯ | ... | ೧ | ೪ | ೦ |
| ಪಂಚಭಾಷೆ ವಾಲಿಪ್ರೆಸ | ... | ೦ | ೬ | ೦ |
| ಹನುಮದ್ವಿಲಾಸ | ... | ೦ | ೬ | ೦ |
| ಕಾಳೀಯಮರ್ದನ | ... | ೦ | ೨ | ೦ |
| ಸುಭದ್ರಾಪರಿಣಯ | ... | ೦ | ೨ | ೦ |
| ಕಾರೆಲ್ಯಾಪರಿಣಯ | ... | ೦ | ೨ | ೬ |
| ಸುದಾಮಚರಿತ್ರೆ | .. | ೦ | ೧ | ೦ |
| ಮೈರಾವಣ ಚರಿತ್ರೆ | ... | ೦ | ೧ | ೦ |
| ಬಾಲಗ್ರಹಚಿಕಿ | ... | ೦ | ೧ | ೦ |
| ಮಹಮ್ಮದ್ ಲಾ | ... | ೦ | ೧೨ | ೦ |
| ಭ್ರಾಂತಿವಿಲಾಸ | .. | ೧೨ | ೦ | ೦ |

### ದಕ್ಷಿಣಮಹಾರಾಷ್ಟ್ರ ರೆಯಿಲ್ವೆ.

ಧರ್ಮವರಂ–ಹಿಂದೂಪುರ ಭಾಗದಲ್ಲಿ ಗಾಡಿ ಬಿಡುವದಕ್ಕೆ ಪ್ರಾರಂಭ

ಸರ್ ೧೮೯೩ನೇ ಇಸವಿ ಏಪ್ರಿಲ್ ೨೩ನೇ ತಾರೀಖ್ ಆದಿತ್ಯವಾರ ಮೊದಲು ಧರ್ಮವರವಿಗೂ ಹಿಂದೂಪುರಕ್ಕೂ ಮಧ್ಯೆ ಇರುವ ರೆಯಿಲ್ ಮಾರ್ಗದಲ್ಲಿ ಯಲ್ಲಬಗೆ ಆಮದ ರಫ್ತಿಗೂ ಗಾಡಿಗಳು ಬಿಡಲ್ಪಡುವವು.

ಇದರಡಿ ತಿಳಿಸಲ್ಪಡುವಂತೆ ಗಾಡಿಗಳು ನಡೆಯುವವು.

| | | |
|---|---|---|
| ಧರ್ಮವರದಿಂದ ಹೊರಡುವ ಕಾಲ | | 13—10. |
| ಹಿಂದೂಪುರ ತಲಪುವ ಕಾಲ | ... | 17— 5 |
| ಹಿಂದೂಪುರದಿಂದ ಹೊರಡುವ ಕಾಲ | | 9—30 |
| ಧರ್ಮವರ ತಲಪುವಕಾಲ | ... | 13— 0 |

ಇತರ ತಪ್ಸೀಲಿಗಳನ್ನು ತಿಳಿದ ಕೊಳ್ಳಬೇಕಾದರೆ, ಸ್ಟೇಷನ್‌ಗಳಲ್ಲಿ ತೋರಿಸಲ್ಪಟ್ಟಿರುವ ಕಾಲ ಮತ್ತು ರುಸುಮನ್ನು ಕುರಿತ ತಖ್ತೆಯನ್ನು ನೋಡಿ, ಅಥವಾ ಇದರಡಿ ರುಜು ಮಾಡಿರುವಂತವರಿಗೆ ಬರೆದು ತಿಳಿದುಕೊಳ್ಳಬಹುದು.

ಧಾರ್ವಾಡ, ಟ್ರಾಫಿಕ್ ಮ್ಯಾನೇಜರ ಆಫೀಸ್, ೧೫ನೇ ಏಪ್ರಿಲ್ ೧೮೯೩. } W. M STEWART, Traffic Manager.

### Bangalore City Municipality.

ಬೆಂಗಳೂರ್ ಸಿಟಿ ಮ್ಯೂನಿಸಿಪಾಲಿಟಿ.

ಸರ್ ೧೮೯೩ ನೇ ಇಸವಿ ಏಪ್ರಿಲ್ ೨೮ ನೇ ತಾರೀಖ್ ಶುಕ್ರವಾರದ ದಿನ ಬೆಳಿಗ್ಗೆ ೮ ಘಂಟೆಗೆ ಸಿಟಿ ಮ್ಯೂನಿಸಿಪಲ್ ಕಮಿಷನರಿಗಳು ಬೆಂಗಳೂರು ಕೋಟೆಯೊಳಿರುವ ಮ್ಯೂನಿಸಿಪಲ್ ಆಫೀಸಿನಲ್ಲಿ ಸಾಮಾನ್ಯ ಸಭೆ ಸೇರುವರು.

ಇದರಡಿ ತಿಳಿಸಲ್ಪಡುವ ವಿಷಯಗಳು ವಿಚಾರಣೆಗೆ ತರಲ್ಪಡುವವು

೧. ಸರ್ ೧೮೯೩ ನೇ ಇಸವಿ ಮಾರ್ಚಿ ಮಾಹೆ ಬಾಬತು ಸಿಟಿ ನಗರು ಜಮಾಖರ್ಚು ಲೆಕ್ಕಗಳು, ಮರಣಲೆಕ್ಕ, ತಗಾದೆ, ವಸೂಲಿ, ಮತ್ತು ಬಾಕಿಪಟ್ಟಿ, ಮನೆಗಳಿಗೆ ಹೋಗಿ ಚಿಕಿತ್ಸೆ ಮಾಡುವ ಮೆಡಿಕಲ್ ಆಫೀಸರರ ಲೆಕ್ಕ, ಶಾನುಭೋಗರ [illegible] ರಿಪೋರ್ಟ್, [illegible] ಬಿಡದ ಬೈಪ್ಯಾರಿಗೆ ಹೋದ ಜನರ ಪಟ್ಟಿ

೨. ಮ್ಯೂನಿಸಿಪಾಲಿಟಿಯ ನೌಕರಿಯಲ್ಲಿರುವ ಬೇಲಿ ಗುತ್ತಿಗೆ ಹಾಕುವಂತವರ ಈಗಿನ ಪಾಲನ್ನು ಜಾಸ್ತಿ ಮಾಡಬೇಕಾದ ವಿಷಯದಲ್ಲಿ, ಮೈಸೂರು ಗವರ್ನಮೆಂಟ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರವರು ಬರೆದ ಸರ್ ೧೮೯೩ ನೇ ಇಸವಿ ಮಾರ್ಚಿ ೧೦ ನೇ ತಾರೀಖಿನ ೩೫೫ ನೇ ನಂಬರ್ ಲೆಟರ್.

೩. ಈಗಿನ ಸಾಬುಧರ ದೊಡ್ಡಿಯು, ಹೊಸ ತರಗುಪೇಟೆಗೂ ಈ ಪುರಾ [illegible] ಭಾಗದಲ್ಲಿ ಹೊಸದಾಗಿ ಕಟ್ಟಲ್ಪಡುತಲಿರುವ ಪೇಟೆಗೂ ಬಹಳ ಸಮೀಪದಲ್ಲಿರುವದರಿಂದ ಅದನ್ನು ಬೇರೆ ಸ್ಥಳಕ್ಕೆ ತೆಗೆದುಹಾಕುವ ವಿಷಯದಲ್ಲಿ ಯಿರಡು ಅಂದಾಜ್ ಪಟ್ಟಿಗಳೊಡನೆ ಪ್ರೆಸಿಡೆಂಟರವರು ಸರ್ ೧೮೯೩ ನೇ ಇಸವಿ ಮಾರ್ಚಿ ೧೩ ನೇ ತಾರೀಖಿನಲ್ಲಿ ಬರೆದ ಯಾದಿ.

೪. ಕಳೆದ ಜನವರಿ ೨೦ ನೇ ತಾರೀಖಿನಲ್ಲಿ ಮಾಡಲ್ಪಟ್ಟ ನಿರ್ಣಯದ ಷರತುಗಳಿಗೆ ಅನುಸಾರವಾಗಿ, ದರಖಾಸ್ತು ಮಾಡಿದ ಲೆಕ್ಕದ ತನಿಖೆ ಬಗ್ಗೆ ಸಬ್ ಕಮಿಟಿಯ ಮೆಂಬರುಗಳ ನಿಯಾಮಕ.

೫. ಕೋಟೆಯ ದೊಡ್ಡ ಮೋರಿಯನ್ನು ಕಟ್ಟುವದಕ್ಕೆ ಹಿಡಿಯಬೇಕಾದ ಖರ್ಚಿನ ವಿಷಯದಲ್ಲಿ ಮೈಸೂರು ಗವರ್ನಮೆಂಟ್ ಚೀಫ್ ಸೆಕ್ರೆಟರಿಯವರು, ಸರ್ ೧೮೯೩ ನೇ ಇಸವಿ ಏಪ್ರಿಲ್ ೩ ನೇ ತಾರೀಖಿನಲ್ಲಿ ಬರೆದ ೧೬೬೧೨—G. F. ೩೯—F೨ ನೇ ನಂಬರ್ ಯಾದಿ.

೬. ವೈಸ್ ಪ್ರೆಸಿಡೆಂಟರ ತಲಬ್ ಮತ್ತು ಗಾಡಿ ಖರ್ಚಿನ ವಿಷಯದಲ್ಲಿ ಮೈಸೂರು ಗವರ್ನಮೆಂಟಿನವರು ನಡೆಸಿದ ಸರ್ ೧೮೯೩ ನೇ ಇಸವಿ ಏಪ್ರಿಲ್ ೩ ನೇ ಮುಕ್ಕಾಂ ೧೬೬೧೪—೩೯೧—G. F. ೧೯೩ —F೨ ನೇ ನಂಬರ್ ಪ್ರೊಸೀಡಿಂಗ್ಸ್

ವಿಶ್ಲೇಷಿಸಲ್ಪಟ್ಟದ್ದ ವಿಷಯ.

ಮ್ಯೂನಿಸಿಪಾಲಿಟಿಯ ನೋಟಿಸುಗಳ ಪ್ರಕಟನೆಯ ವಿಷಯದಲ್ಲಿ ಕಾಸಿಮುಲ್ ಅಕಬಾರ್ ಎಂಬಪತ್ರಿಕೆಯ ಪ್ರೊಪ್ರೈಟರು ಬರೆದುಕೊಂಡ ಸರ್ ೧೮೯೩ ನೇ ಇಸವಿ ಮಾರ್ಚಿ ೧೬ ನೇ ತಾರೀಖಿನ ಲೆಟರ್.

ಬೆಂಗಳೂರುಸಿಟಿ ಮ್ಯೂನಿಸಿಪಲ್ ಆಫೀಸ್ ತಾ|| ೨೦-೪-೧೮೯೩ನೇ ಇಸವಿ. } K. SHINIVASA RAO, Vice-President, City Muni Commission

### ಮನೇ ವಿಕ್ರಯ ನೋಟಿಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯುವ ದಿಸುವದೇನಂದರೆ,—ಬೆಂಗಳೂರು ಚಿಕ್ಕಪೇಟೆಯಲ್ಲಿರುವ ಗೋಪಾಲಕೃಷ್ಣದೇವರ ದೇವಸ್ಥಾನಕ್ಕೆ ಎದುರು ಸಂದಿನಲ್ಲಿರುವ ಕೋಲಾರ್ ರಾಮಸ್ವಾಮಿ ಶಾಸ್ತ್ರಿಗಳ, (ಮ್ಯೂನಿಸಿಪಲ್ ಬೋರ್ಡ್ ೨೯ನೇನಂಬರುಳ್ಳ) ಮನೆಯು ೧೮೯೩ನೇ ಇಸವಿ ಯೇಪ್ರಿಲ್ ೩೦ನೇ ತಾರೀಖಿನಲ್ಲಿ ಮಾಲೀಕರಿಂದ ವಿಕ್ರಯಿಸಲ್ಪಡುವದು. ಇದರ ಕ್ರಯ ಮೊದಲಾದ ತಪ್ಸೀಲಿಗಳನ್ನು ಸದರೀ ಯವರಿಂದ ತಿಳಿದುಕೊಳ್ಳಬಹುದು.

### THE MONEY MARKET.

ಮದರಾಸ್, ಶನಿವಾರ, ತಾರೀಖ್ 22 ಸೆಪ್ಟಂಬರ್ 1893

ನೂರಕ್ಕೆ ೩ರೂ ಬಾಬತು ಗವರ್ನಮೆಂಟ್ ಪತ್ರಗಳು ರೂಪಾಯಿ, 104-2-0 ಇಂದ 104-10-0ವರೆಗೆ.

ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತು 975 ಇಂದ [illegible] ವರೆಗೆ

ಕಮರ್ಷಿಯಲ್ ವ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಷೇರುಗಳು, (100) ಬಾಬತು 160 ರಿಂದ 165 ವರೆಗೆ

ಸವರ್ನಗಳು, 16-7-0 ಇಂದ 16-10-0 ವರೆಗೆ

ಬ್ಯಾಂಕ್‌ಬಿಲ್‌ಗಳು ಯಾನೆ ದರ್ಶನಹುಂಡಿಗಳು, ರೂಪಾಯಿಕ್ಕೆ 6 ತಿಂಗಳವಾಯಿದೆಗೆ, 1s. 2 25, 32d

ಡಿಟ್ಟೋ 4 ತಿಂಗಳವಾಯಿದೆಗೆ, 1s 2 2 [illegible] d

ಡಿಟ್ಟೋ ಕೇಳಿದಾಗ, 1s 2 [illegible] d

### THE BAGNALORE SREENIVASA MANDIRAM.

ಬೆಂಗಳೂರು, ಶ್ರೀನಿವಾಸ ಮಂದಿರ.

ಬೆಂಗಳೂರ್ ಶ್ರೀ ಶ್ರೀನಿವಾಸ ಮಂದಿರದ ಧರ್ಮಕ್ಕಾಗಿ ಜಮಾಯಿಸಲ್ಪಟ್ಟ ಅಕ್ಕಿ ಮತ್ತು ಅದರ ವಿನಿಯೋಗದ ತಪಸೀಲ್ ತೋರಿಸುವ ತಖ್ತೆ.—೧೮೯೩ನೇ ಇಸವಿ ಏಪ್ರಿಲ್ ೧೬ ನೇ ತಾರೀಖ್ ಮೊದಲು ೨೨ ನೇ ತಾರೀಖ್ ವರಿವಿಗೆ.—

| | | |
|---|---|---|
| ಅಕ್ಕಿ ಮಡೊಬಿ ಮಾಡಿದ ಗೃಹಸ್ಥರ ಸಂಖ್ಯೆ | | 80 |
| ಜಮಾಯಿಸಿದ ಧಾನ್ಯದ ಸೇರುಗಳ ಸಂಖ್ಯೆ | .. | 57 |
| ಗತವಾರದ ಶಿಲ್ಕು ಸೇರು | ... | 167 |
| ಜಮಾ | ... | 224 |
| ಅಡಿಗೆ ಸಾಮಗ್ರಿಗಳಿಗಾಗಿ ಮಾರಲ್ಪಟ್ಟ ಸೇರು | | 90 |
| ಖರ್ಚಾದ ಅಕ್ಕಿ ಸೇರು | ... | 128 |
| ಜಾತಾ ಬಾಕಿ | ... | 6 |

ಭೋಜನ ಮಾಡಿದ ಜನಗಳ ಸಂಖ್ಯೆ ಮತ್ತು ತಪ್ಸೀಲ್.

| | | |
|---|---|---|
| ಅನಾಥರು | ... ... | 7 |
| ದಿಕ್ಕಿಲ್ಲದ ವಿದ್ಯಾರ್ಥಿಗಳು | .. | 4 |
| ಕಾಯಂ ಇರತಕ್ಕ ವಿದ್ಯಾರ್ಥಿಗಳು | ... | 14 |
| ಅಕ್ಕಿ ಕೊಡತಕ್ಕ ಆಹಾರಕ್ಕಬರುವವರಗೈರೇನ ಸಂಖ್ಯೆ | | 54 |
| ಗೃಹಸ್ಥರು | ... | 177 |
| ಜಮಾ | .. | 256 |

# ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, APRIL 24, 1893.

೧೮೯೩ನೇ ಇಸವಿ ಏಪ್ರೆಲ್ ತಾ॥ ೨೪ ನೇ ಸೋಮವಾರ.


## ಆಧುನಿಕ ವಿದ್ಯಾಭ್ಯಾಸದ ಕ್ರಮ.

ಈಗಿನ ಕಾಲದಲ್ಲಿ ವಿದ್ಯಾಭ್ಯಾಸದ ಕ್ರಮವು ಬಾಲಕರಿಗೆ ವಿಜಾತೀಯಗಳಾದ ಅಭಿಪ್ರಾಯಗಳನ್ನೂ ಆಚಾರಗಳನ್ನೂ ಉಂಟುಮಾಡಿ ಅವರೊಂದು ಪ್ರತ್ಯೇಕ ಮಾರ್ಗವನ್ನವಲಂಬಿಸುವಂತೆ ಮಾಡತಕ್ಕದ್ದಾಗಿರುತ್ತದೆ. ಇಂತಾ ಸ್ಥಿತಿ ವಿಪರ್ಯಯವನ್ನುಂಟುಮಾಡುವದು ವಿದ್ಯೆಯೆ, ಅಲ್ಲದೆ ತದ್ಬೋಧನಾಕ್ರಮವೇ, ಅಥವಾ ಸಹವಾಸಾದಿಗಳೇ ಯೆಂಬ ವಿಷಯವಂ ಕುರಿತು ಆಲೋಚಿಸಬೇಕಾಗಿರುತ್ತದೆ. ಇದಕ್ಕೆ ವಿದ್ಯೆಯನ್ನೇ ಸಾಕ್ಷಾತ್ಕಾರಣವೆಂದು ನುಡಿಯುವದಕ್ಕಿಂತಲೂ ತದ್ಬೋಧನಾಕ್ರಮವನ್ನೂ ಬಾಲಕರಿಗುಂಟಾಗುವ ಇತರ ಸಹವಾಸಾದಿ ದೋಷಗಳನ್ನೂ ನಿಮಿತ್ತರೂಪೇಣ ನುಡಿಯಬಹುದು. ಪೂರ್ವ ಕಾಲದಲ್ಲಿ ನಡೆಗೊಂಡಿದ್ದ ವಿದ್ಯಾಭ್ಯಾಸಕ್ರಮಕ್ಕೂ ಈಗಿನಕ್ರಮಕ್ಕೂ ಬಹಳತಾರತಮ್ಯವಿರುತ್ತದೆ. ಈಗಲೂ ಗ್ರಾಮಾಂತರಗಳಲ್ಲಿ ಕಲಿಸಲ್ಪಡುವ ಕ್ರಮಕ್ಕೂ ಪಟ್ಟಣಗಳಲ್ಲಿ ಆಚರಣೆಯೊಳಿರುವರೀತಿಗೂ ಬಹಳ ಭೇದ ಕಂಡುಬರದೆ ಇಲ್ಲವು. ಗ್ರಾಮಾಂತರಗಳಲ್ಲಿ ನಡೆಗೊಂಡಿರುವ ಪದ್ಧತಿಯು ಸ್ವಲ್ಪ ಹೆಚ್ಚುಕಡಮೆಯಾಗಿ ಪೂರ್ವಪದ್ಧತಿಯನ್ನನುಸರಿಸಿದ್ದಾಗಿರುದದರಿಂದ ಬಾಲಕರಿಗೆ ಯಥೋಚಿತ ದೈವ ಗುರುಭಕ್ತಿಯೂ, ಉಚ್ಚನೀಚ ಜ್ಞಾನವೂ, ಪೂಜ್ಯರಲ್ಲಿ ವಿಶ್ವಾಸವೂ, ಸ್ವೀಯ ವಿಷಯಗಳಲ್ಲ ಅಭಿಮಾನವೂ ಕುದು ಬರಬಹುದು. ಪರಂತು ಇಂಗ್ಲಿಷ್ ವಿದ್ಯಾಲಯಗಳಲ್ಲಿ ತದ್ವಿದ್ಯಾಭ್ಯಾಸವು ಮಾಡುತಲಿರತಕ್ಕ ಬಾಲಕರಿಗೆ, ಆದಿ ವರ್ಣಾರಂಭದಲ್ಲೀ ಆಚಾರವು ಅಸ್ಪೃಶ್ಯವಾಗುತ್ತದೆ. ವರ್ಣಮಾಲೆಯುಚ್ಚಾರಿತಿಯಾಗುವದರೊಳಗಾಗಿ ವರ್ಣವು ವಿವರ್ಣವಾಗುತ್ತದೆ. ಒಂದು ಪರೀಕ್ಷೆಯಂ ಕೊಟ್ಟ ಕೂಡಲೇ ಸ್ವೀಯ ವಿಷಯಗಳಿಗೆ ಪರಿಪಂಥಿಯಾಗುತ್ತಾರೆ. «ರಾಜಾಕಾಲಸ್ಯಕಾರಣಂ» ಎಂಬದಾಗಿ ಇದಕ್ಕೆ ಪ್ರಜಾಪಾಲಕರಾದ ಅರಸರು ಬಹಳಮಟ್ಟಿಗೆ ಕಾರಣಭೂತರಾಗದೆ ಹೋಗುವದಿಲ್ಲವು. ಅದು ಹ್ಯಾಗಂದರೆ—ಒಬ್ಬ ಬಾಲಕನ ಸದ್ಗುಣಾದಿಗಳಿಗೆ ಅವನ ಮಾತಾ ಪಿತೃಗಳು ಹ್ಯಾಗೆ ಉತ್ತರವಾದಿಗಳಹುದೋ ಹಾಗೆಯೇ ಒಂದು ರಾಜ್ಯದ ಪ್ರಜೆಗಳ ನೀತಿ ಪ್ರವರ್ತನೆಗಳಿಗೆ ತತ್ಪಾಲಕನಾದ ಅರಸನು ಕಾರಣಭೂತನಾಗುತ್ತಾನೆ. ದುರ್ನೀತನಾದ ತಂದೆಯು ತನ್ನ ಕುಮಾರನನ್ನಂತು ಶಿಕ್ಷಿಸಿ ಸನ್ಮಾರ್ಗಪ್ರವಿಷ್ಟನಾಗಿ ಮಾಡಲಿಕ್ಕೆ ಅಶಕ್ತನಾಗಿರುವನೋ ಆದರಂತೆ ಅರಸನು ನೀತಿಪರನಲ್ಲದೆ ಹೋದರೆ ಪ್ರಜೆಗಳಮೇಲೆ ಆತನ ಅಧಿಕಾರ ಪ್ರಾಭವಗಳು ವಿಶೇಷತಃ ವ್ಯಾಪಿಸಿ ಸತ್ಫಲಗಳನ್ನಿಯ್ಯಲಾರವು. ಪ್ರಜೆಗಳು ಅನಿಯತರಾಗಿ ಮನಸ್ವೀ ವರ್ತಿಸುವಂತವರಾದರೆ ಅವರು ಸಾಕ್ಷಾತ್ತಾಗಿಯೂ ಪರಂಪರೆಯಾಗಿಯೂ ಒಡನೆಯೂ ಕಾಲಾಂತರದಲ್ಲಿಯೂ ಐಹಿಕಗಳಾಗಿಯೂ, ಆಮುಷ್ಮಿಕಗಳಾಗಿಯೂ ಇರುವ ಹಾನಿಯನ್ನು ತಮ್ಮೊಡೆಯನಿಗುಂಟುಮಾಡತಕ್ಕವರಾಗುತ್ತಾರೆ. ಈಗಲೀಭರತಖಂಡವಂ ಪಾಲಿಸುತಲಿರುವ ಇಂಗ್ಲಿಷ್ ನವರಿಗೂ ಅವರ ಪಾಲನೆಗೊಳಗಾಗಿರುವ ಪ್ರಜೆಗಳಗೂ ಜಾತಿ ಮತಾಚಾರ ವ್ಯವಹಾರಾಭಿಪ್ರಾಯಗಳಲ್ಲಿ ಬಹಳ ವ್ಯತ್ಯಾಸವಿರುತ್ತವೆ. ನಮಗೆ ಪ್ರತ್ಯವಾಯಗಳಾಗಿರುವ ಅನೇಕ ವಿಷಯಗಳು ಅವರಿಗೆ ಆದರಣೀಯಗಳಾಗಿಯೂ ಪ್ರಶಂಸನೀಯಗಳಾಗಿಯೂ [illegible]ಟ್ಟವೆ. ಅವರು ನಿರಾಕರಿಸಿರತಕ್ಕವು ಕೆಲವುನಾವು ಸದ್ಧರ್ಮಗಳೆಂಬದಾಗಿಯೂ ಪುಣ್ಯಪ್ರದವೆಂಬದಾಗಿಯೂ ಭಾವಿಸಿರುವೆವು. ಪರಕೀಯಗಳಾದ ಮತಾಚಾರ ವ್ಯವಹಾರಾದಿಗಳಿಗೆ ವಿಜಾತೀಯರಾಗಿರುವಂತಾ ಸದರೀ ಪ್ರಭುಗಳು ಪ್ರವರ್ತಿಸಿ ಒಂದು ಕಟ್ಟುಪಾಡು ಮಾಡಲಿಕ್ಕೆ ಇಷ್ಟವಿಲ್ಲದೆಯೂ ಅಶಕ್ತರಾಗಿಯೂ ಇರುವದರಿಂದ ಆ ವಿಷಯದಲ್ಲಿ ಜನಗಳಿಗೆ ಪ್ರಭುಮೂಲಕವಾದ ನಿರ್ಬಂಧವೂ ಭೀತಿಯೂ ಇಲ್ಲದೆ ಹೋಯಿತು. ಸ್ವತಃ ಬೇಕಾದ ನಿಯಮಗಳಂ ಕಲ್ಪಿಸಿಕೊಳ್ಳಲಿಕ್ಕೆ ಪರಸ್ಪರಾನ್ಯೋನ್ಯಭಾವವೂ ಐಕಮತ್ಯವೂ, ಸ್ವೀಯಾಭಿಮಾನವೂ ಕಡಮೆಯಾಗಿರುವದರಿಂದ, ಅದು ಅವರಿಗೆ ಅಸಾಧ್ಯವಾಗಿ ಪರಿಣಮಿಸಿದೆ. ವಿಶೇಷ ಮತಾಚಾರಗಳ ವಿಷಯಗಳಲ್ಲಿ ಒಂದು ನಿಯಮವಿಲ್ಲದೆ ಹೋದುದರಿಂದ ಪ್ರಜೆಗಳು ಇಷ್ಟಬಂದಂತೆ ವರ್ತಿಸಲಿಕ್ಕೀಗ ಬೇಕಾದ ಅವಕಾಶ ವುಂಟಾಗಿದೆ. ನೀತಿ ವಿಷಯಗಳಲ್ಲಿ ಕೂಡ ಪಾಲ್ಯಪಾಲಕರಿಗೆ ಬಹಳ ತಾರತಮ್ಯವುಂಟು. ಅಂತಾ ತಾರತಮ್ಯ ಜ್ಞಾನವೇ, ಜನಗಳು ದುರ್ನೀತರಾಗಿ ನಾಶವು ಹೊಂದುತಲಿದ್ದಾಗ್ಯೂ, ತಾಟಸ್ಥ್ಯದೊಡನೆ ನೋಡುತಲಿರುವಂತೆ ಅವರು ಪ್ರೇರಿಸುತ್ತಿದೆ. ಆದುದರಿಂದ ಈ ಯೆರಡು ವಿಷಯಗಳಲ್ಲಿಯೂ ಜನಗಳಿಗೆ ಪ್ರಬಲ ಭೀತಿ ಯಿಲ್ಲದೆ ಹೋಯಿತು. ಮತ್ತು ಅವಂ ತಿಳಿಯಬೇಕೆಂಬ ಕೋರಿಕೆಯೂ ಪ್ರವೃತ್ತಿಯೂ ಶೂನ್ಯವಾಯಿತು. ಆದಕಾರಣ ವಿದ್ಯಾಭ್ಯಾಸದಲ್ಲಿ ಪ್ರಧಾನಭಾಗಗಳಾಗಿಯೂ ಮಾನುಷವೃತ್ತಿಗೆ ಆವಶ್ಯಕಗಳಾಗಿಯೂ ಯಿರುವ ನೀತಿ ಮತ್ತು ಸದ್ಧರ್ಮಬೋಧಕಗಳಾದ ಗ್ರಂಥಾಭ್ಯಾಸವು ಈ ಕಾಲದೊಳು ಬಹಳ ತಗ್ಗಿ ಹೋಯಿತು. ಬಾಲಕರಿಗೆ ಯಾವಾಗ ನೀತಿ ವಿಷಯಕವಾದ ಜ್ಞಾನವು ಅಲಭ್ಯವಾಯಿತೋ ಅವರು ದಿನೇ ದಿನೇ ಆತ್ಮವಿಷಯಕಗಳಾದ ಪ್ರಪಂಚಿಕ ಸುಖಸಂತೋಷಗಳೇ ನಿಶ್ಚಯವೆಂದು ದೃಢವಾಗಿ ನಂಬಿ ಅವುಗಳಲ್ಲೀ ಮಗ್ನರಾಗಿ ಮದೋನ್ಮತ್ತರಾಗುತಲಿದ್ದಾರೆ. ಅದು ಅನುಚಿತವೆಂದು ವಾದಿಸಿ ಖಂಡಿಸುವದಕ್ಕೆ ಪ್ರಯತ್ನಪಡುವವರಂ ಶ್ರದ್ಧಾಜಡರೆಂತಲೂ ಅರಸಿಕರೆಂತಲೂ ಮೂಢರೆಂತಲೂ ನಿಂದಿಸಲಾರಂಭಿಸಿದ್ದಾರೆ. ತಮ್ಮ ಕೋರಿಕೆಗೂ ಉಲ್ಲಾಸಕ್ಕೂ ಅನುಗುಣಗಳಾದ ಮಾರ್ಗಗಳಂ ಸ್ವತಃ ಕಲ್ಪಿಸಿಕೊಂಡು ಅವಂ ಬಲಪಡಿಸುತಲಿದ್ದಾರೆ. ನಾಸ್ತಿಕ್ಯವು ಬಹಳವೃದ್ಧಿಯನ್ನೈದಿತು. ಲಿಬರ್ಟಿ ಮತ್ತು ಈಕ್ವಾಲಿಟಿಗಳೆಂಬ ಶಬ್ದದ್ವಯಗಳು ಉನ್ಮತ್ತಕಗಳಾಗಿ, ಸದರೀ ಸ್ವಾತಂತ್ರ್ಯವು ಸ್ವಜನರಲ್ಲಿಯೂ ಸಮದರ್ಶಿತ್ವವು ತಮ್ಮ ಗುರುಜನರಲ್ಲಿಯೂ ಅನ್ವಯಿಸಲ್ಪಡಲಿಕ್ಕೆ ಅರ್ಹವಾದವು. ಇದರಿಂದ ಗುರುಜನರಲ್ಲಿ ಸಮ್ಯಗ್ಭಾವವೂ, ವಿಶ್ವಾಸವೂ ಕುದ್ದಾಂಗ ಕಡಮೆಯಾದವು. ಇವಂ ಕುರಿತು ಯಾರಾದರು ಪ್ರಸ್ತಾಪಿಸಿದರೆ ಅವರನ್ನು ಹುಚ್ಚರೆಂದು ಧಾರಾಳವಾಗಿ ಕರೆಯಲಾರಂಭಿಸಿದ್ದಾರೆ. ಈಗ ದುಶ್ಚೇಷ್ಟೆಗಳು ಅನಂತಗಳಾಗಿ ವೃದ್ಧಿಯನ್ನೈದುತಬರುತ್ತಿವೆ. ಇಂಗ್ಲಿಷ್ ವಿದ್ಯಾಭ್ಯಾಸವು ಸೋದರಭಾವವಂ ಶಬ್ದತಃ ಉಂಟುಮಾಡಿತೇ ಹೊರ್ತು ಪರೋಪಕಾರ ಚಿಂತೆಯಂ ಕಾರ್ಯತಃ ಉಂಟುಮಾಡದೆ ಹೋಯಿತು. ಅದು ಪೂರ್ವ ವಿಷಯಕ ಜ್ಞಾನವಂ ಹೋಗಲಾಡಿಸಿ ಅವುಗಳಂ ತುಚ್ಛತ್ವೇನ ಭಾವಿಸುವಂತೆ ಬುದ್ಧಿವೈಕಲ್ಯವನ್ನುಂಟುಮಾಡಿತಲ್ಲದೆ, ಯೋಗ್ಯವಾದ ಬೇರೆಯೊಂದು ಮಾರ್ಗವನ್ನವಲಂಬಿಸಲಿಕ್ಕೆ ಪ್ರವೃತ್ತಿಯಂ ಹುಟ್ಟಿಸದೆ ಹೋಯಿತು. ಆ ಚಂಡಾಲಾದಿ ಪ್ರಾಣಿಸಾಮಾನ್ಯೇನ ಯೆಲ್ಲವೂ ಒಂದೇ ಯೆಂಬ ಜ್ಞಾನವನ್ನುಂಟುಮಾಡಿ ತಾರತಮ್ಯ ವಿವೇಚನೆಯನ್ನಾಕಗೊಳಿಸಿತೇ ಹೊರ್ತು ವಂದ್ಯ ನಿಂದ್ಯ ಜ್ಞಾನವನ್ನುಂಟುಮಾಡಲಿಲ್ಲವು. ಆಚಾರಗಳನ್ನು ಕೋರೆಯುವದಕ್ಕೆ ಬೇಕಾದ ಅನುಕೂಲ ಸಾಮಗ್ರಿಗಳನ್ನೊದಗಿಸಿದೆಯೇ ಹೊರ್ತು, ಅವರ ಸದ್ವರ್ತನಕ್ಕೂ ವಿವೇಕಕ್ಕೂ ಹೊಣೆಯಾಗದೆ ಹೋಯಿತು. ಇವುಗಳಿಗೆಲ್ಲ ಈಗ ಪಾಠಶಾಲೆಗಳಲ್ಲಿ ನಡೆಗೊಂಡಿರುವ ವಿದ್ಯಾಭ್ಯಾಸಕ್ರಮವೇ ಮುಖ್ಯ ಕಾರಣವೆಂದು ಭಾವಿಸುವೆವು. ಸಾಂಕ್ರಾಮಿಕರೂಪವಾದ ಈ ಪ್ರಬಲ ಹಾನಿಯನ್ನು ನಿವೃತ್ತಿಸಲಿಕ್ಕೆತ್ನಿಸದೆ ಹೋದರೆ ಅದು ಪ್ರಬಲಿಸಿ ಮಹದನರ್ಥವನ್ನುಂಟುಮಾಡುವದರಲ್ಲಿಸ್ವಲ್ಪವೂ ಸಂಶಯವಿಲ್ಲವು. ಇದಲ್ಲದೆ ಈಗಿನ ಕಾಲದ ಬಾಲಕರು ಸಹವಾಸಬಲದಿಂದ ಕ್ರಮಪಡುವ ಸಂಭವವೂ ಕಾಣಿಸಲಿಲ್ಲವು. ಅವರಿಗೆ ಸಹವಾಸಯೋಗ್ಯರು ತಮ್ಮಂತವರೇ ಹೊರ್ತು ತಮಗಿಂತ ವಯೋವೃದ್ಧರ ಸಹವಾಸವು ಅಗೌರವತ್ವೇನ ಅಥವಾ ಅಯೋಗ್ಯತ್ವೇನ ಭಾವಿಸುವದಲ್ಲದೆ ಇಂಗ್ಲಿಷ್ ವಿನಾ ಮತ್ಯಾವದೂ ತಿಳುವಳಿಕೆಗೆ ಸೇರಿದವಲ್ಲವೆಂತಲೂ ತದ್ಜ್ಞಾನವುಳ್ಳವರು ವಿನಾ ಮಿಕ್ಕವರು ಅಕ್ಷರಾಸ್ಯರಲ್ಲವೆಂತಲೂ, ಅಂತವರ ಸಹವಾಸ ಸಲ್ಲಾಪಾದಿಗಳು ವಿನಾ ಮಿಕ್ಕವು ಒಂದೂ ಸಂತೋಷಪ್ರದವಾಗಲಾರವೆಂತಲೂ ಭಾವಿಸಿ ಕಡೆಗೆ ತಮ್ಮ ಮಾತಾ ಪಿತೃಗಳೊಡನೆ ಸಮದೃಷ್ಟಿಯಲ್ಲಿ ಮಾತನಾಡುವದು ಸಹ ಅತಿ ಜಿಗುಪ್ಸಾವಹವಾದ ವ್ಯಾಪಾರವೆಂದು ನಂಬಿದ್ದಾರೆ. ಇದು ಯಾರೂ ಅತಿಶಯೋಕ್ತಿಯೆಂದು ಭಾವಿಸಕೂಡದು. ಆದುದರಿಂದ ಅವರ ಇಷ್ಟಮಿತ್ರರು ಸಹ ಅವರ ಹೃದಯ ಸಂತೃಪ್ತಿಯನ್ನುಂಟುಮಾಡುವಂತವರಾಗಿರುವರೇ ಹೊರ್ತು ಅವರು ಖಂಡಿಸತಕ್ಕವರಾಗಿರಲಾರರು. ಬಾಲಕರ ವಿದ್ಯಾ ವಿಷಯದಲ್ಲಿ ಮಾತ್ರವಲ್ಲದೆ ಅವರು ದುಷ್ಟಸಹವಾಸವು ಮಾಡದೆ ನೀತಿಪರರಾಗಿ ಪ್ರವರ್ತಿಸುವಂತೆ ಅವರಂ ಜಾಗರೂಕತೆಯೊಡನೆ ವಿಚಾರಿಸಿಕೊಳ್ಳುವದಕ್ಕಾಗಿ ಒಂದು ಸಂಘವನ್ನೇರ್ಪಡಿಸಿ ಕಾಪಾಡಬೇಕಾದುದು ಆವಶ್ಯಕವೆಂದು ಲಾರ್ಡ್ ಲ್ಯಾನ್ಸಡೌನ್ ಯವರು ಈಚೆಗೆ ಒಂದು ಸಂದರ್ಭದಲ್ಲಿ ತಿಳಿಸಿದರು. ಇದಲ್ಲದೆ ಈ ವಿಷಯದೊಳು ಅವರ ಮುಖ್ಯ ತಾತ್ಪರ್ಯವೇನೆಂದರೆ—ಪಾಠಶಾಲೆಗಳಲ್ಲಿ ಬಾಲಕರಿಗೆ ವಿದ್ಯಾಭಿವೃದ್ಧಿಯನ್ನು ಮಾತ್ರವಲ್ಲದೆ ಅವರಿಗೆ ನೀತಿ ಸಂಬಂಧವಾದ ಜ್ಞಾನವಂ ವೃದ್ಧಿಪಡಿಸಲಿಕ್ಕೆ ಶಕ್ತರಾದ ವಿದ್ಯಾಗುರುಗಳು ಕೇವಲ ಅಪೇಕ್ಷಿತರಾಗಿದ್ದಾರೆ ವಿದ್ಯಾಗುರುಗಳು ನೀತಿಪರರಾಗಿದ್ದರೆ ಅವರು ವಿದ್ಯಾರ್ಥಿಗಳನ್ನು ನೀತಿಪರರಾಗಿ ಮಾಡುವರು. ಆದಕಾರಣ ಬೋಧಕರ ಗುಣವಿವೇಚನೆಯು ಅತ್ಯಂತಾವಶ್ಯಕ ವಾದದ್ದಾಗಿರುತ್ತದೆ. ಈ ಕಾಲದಲ್ಲಿ ನೀತಿ ವಿಷಯವು ಉಪಾಧ್ಯಾಯರಿಂದಾಗಲಿ ಅವರ ವಿದ್ಯಾರ್ಥಿಗಳಿಂದಾಗಲೀ ಸುತರಾಂ ಪರಿಗಣನೀಯವಲ್ಲದೆ ಹೋಗಿದೆ. ಯೂನಿವರ್ಸಿಟಿ ಪರೀಕ್ಷೆಗಳಂ ಕೊಡಲಿಕ್ಕೆ ಶಕ್ತರನ್ನಾಗಿ ಮಾಡುವ ಮಾತ್ರದಿಂದಲೇ ತಮ್ಮ ಕರ್ತವ್ಯಗಳೆಲ್ಲವು ಸಾಂಗವಾದಂತೆ ಉಪಾಧ್ಯಾಯರೂ, ಸದರೀ ಪರೀಕ್ಷೆಯಲ್ಲಿ ತೇರ್ಗಡೆಯಾದ ಮಾತ್ರದಿಂದಲೇ ತಮ್ಮ ಜನ್ಮ ಸಾಫಲ್ಯವಾದಂತೆ ವಿದ್ಯಾರ್ಥಿಗಳೂ ಭಾವಿಸಿರುತ್ತಾರೆ. ಪರೀಕ್ಷೆಗಳನ್ನಿತ್ತವರು ಯೆಷ್ಟು ದುರ್ನೀತರಾಗಿದ್ದಾಗ್ಯೂ ಅವರು ದೊಡ್ಡ ಉದ್ಯೋಗಗಳಲ್ಲಿದ್ದಂತೆ ತಾವನ್ಮಾತ್ರದಿಂದವರು ಸರ್ವವಿಧದಲ್ಲಿಯೂ ಶ್ರೇಷ್ಠರೆಂದು ಭಾವಿಸಲ್ಪಡುತಲಿದೆ, ಎಂಬದು. ಈಗಿನಕಾಲದ ದೊಡ್ಡಮನುಷ್ಯತನಕ್ಕೆ ಮುಖ್ಯಾಂಗಗಳು ಐದಾರು ವಿಷಯಗಳಿಗಿಂತಲು ಅಧಿಕವಾಗಿಲ್ಲವು, ಅವುಗಳ್ಯಾವವಂದರೆ, ಕೈಯಲ್ಲಿ ಚತ್ರಿ, ಕಾಲಲ್ಲಿ ಇಂಗ್ಲಿಷ್ ಬೂಟ್ಸಿ, ಮತ್ತು ಇಂಗ್ಲಿಷ್ ನಮೂನೆ ಷರಾಯಿಗಳು, ತಲೆಯಲ್ಲಿ ಟೋಪಿ, ಒಂದು ಸಣ್ಣಪುದಿಯಾರ, [illegible], ಒಂದು ಕಾಫಿ ಅಥವಾ ಟೀ ತಯಾರಿ ಪಾತ್ರೆ, ಮತ್ತು ಷಾಪುಬಿಲ್ಲಿಗಳು, ಇವು ಅತ್ಯಂತಾಪೇಕ್ಷಿತವು. ಇವುಗಳೊಳು ಯಾವದು ಕಡಮೆಯಾದಾಗ್ಯೂ ವೈಲಕ್ಷಣ್ಯ ಪೂರ್ತಿಯಾಗಲಾರದು. ಇಂತಾ ವೈಲಕ್ಷಣ್ಯವುಳ್ಳವರು ಜಗನ್ಮೋಹಕರಾಗಿ ಸನ್ಮಾನಿತರಾಗಿದ್ದಾರೆ ಯಲ್ಲದೆ ಅವರ ನೀತಿ ನಡವಳಿಕೆಗಳಂ ಕುರಿತು ಒಬ್ಬರೂ ಚಿಂತಿಸುವದಿಲ್ಲವು. ಪೂರ್ವಕಾಲದಲ್ಲಿ ವ್ಯಭಿಚಾರ ದೋಷಕ್ಕಾಗಿ ಜನರು ಬಹಳ ಹೆದರುತಲಿದ್ದರು. ಈಗ ವ್ಯಭಿಚರಿಸುವಂತವರು ಸರಸಸದ್ಗುಣಾಢ್ಯರಾದ ಸಜ್ಜನರಂತೆ ಭಾವಿಸಲ್ಪಟ್ಟದ್ದಾರೆ. ಈಗ ವ್ಯಭಿಚಾರ ಮದ್ಯಪಾನಗಳೆರಡೂ ಪುಷ್ಕಳವು, ಮಾನಿತರೊಳಗ್ರಮರು. ಮನುಷ್ಯನ ನೀತಿಗುಣ ವಿಚಾರವಾಡದೆ ಹೋಗುವದರಿಂದುಂಟಾಗುವ ಪ್ರಯೋಜನವು ಇದಕ್ಕಿಂತಲೂ ಅನ್ಯಥಾ ಯಿರದು. ಇದರಿಂದಲೇ ಇಂತಾ ಅನರ್ಥಗಳಿಗೆ ಅವಕಾಶ ದೊರೆಯಿತು. ಆದಕಾರಣ ಬಾಲಕರ ವಿದ್ಯಾಮಂದಿರಗಳಲ್ಲಿ ನೀತಿ [illegible] ಉಪಾಧ್ಯಾಯರು [illegible]. ಈ ವಿಷಯದಲ್ಲಿ ಪ್ರಜೆಗಳು ತಮ್ಮ ಕರ್ತವ್ಯಗಳಂ [illegible] ದಂತೆ ಮಾಡುವದಾದರೆ ಅನಂತರ ಅರಸರು [illegible] ನ್ಯಾಯನಿಬಂಧನೆಗಳ ಮೂಲಕ ಜನರು ನೀತಿಯಾದ ಮಾರ್ಗದಲ್ಲಿ ನಡೆಯುವಂತೆ ವಿಧಿಸಿ ವಿಚಾರದಿಂ ನೋಡುತಲಿರುವರು. «ರಂಜನಾತ್ ರಾಜಾ» ಅಂದರೆ ಜನರಂ ರಂಜಿಸಿ ಕಾಪಾಡುವಂತವನು ಅರಸನಾದುದರಿಂದ, ಪ್ರಜಾಪಾಲಕನು ತನ್ನ ರಾಷ್ಟ್ರದಲ್ಲಿರುವ ಜನರು ನೀತಿಪರರಾಗಬೇಕೆಂದು ನೋಡಿ ಅದಕ್ಕಾಗಿ ಪ್ರಯತ್ನ ಮಾಡಬೇಕಾದುದು ಆತನ ಕರ್ತವ್ಯವಾಗಿರುತ್ತದೆ. ಪ್ರಭುಗಳು ಅಂತಾ ಸ್ವಾತಂತ್ರ್ಯವುಳ್ಳವರಾಗಿರುವದರಿಂದ ಜನರ ನೀತಿವರ್ಧಕಗಳಾದ ಏರ್ಪಾಡುಗಳಂ ಮಾಡಲಿಕ್ಕೆ ಬದ್ಧಕಂಕಣವುಳ್ಳವರಾಗಿರುವದಂ ಕೇಳಿ ಬಹಳ ಸಂತೋಷಿಸುತ್ತೇವೆ.

## Occasional Notes.
### ನೈಮಿತ್ತಿಕ ವಿಷಯನ್ಯಾಸ.

ಬರೋಡೆ ಗಾಯಕವಾಡ ಮಹಾರಾಜರವರು, ಪೊಲಿಟಿಕಲ್ ಯೇಜಂಟರು, ದಿವಾನರವರು ಮೊದಲಾದವರೊಡನೆ ವೈಸ್‌ರಾಯವರ ಭೇಟಿಯ ಬಗ್ಗೆ ಮಸೂರೀಪುರಕ್ಕೆ ಹೋಗಿರುತ್ತಾರೆ.

ಉಪ್ಪಿನ ಮೇಲಿನ ತೆರಿಗೆಯು ಹೆಚ್ಚಿಸಲ್ಪಟ್ಟಾಗ್ಯೂ ಕಳೆದ ಸಾಲಿನಲ್ಲಿ ಅಯಿ[illegible]ಕ್ಷ ಮಣ ಉಪ್ಪು ಅಧಿಕವಾಗಿ ಖರ್ಚಾಗಿ ಆಬಗ್ಗೆ ಹದಿನೇಳುಲಕ್ಷ ರೂಪಾಯಿಗಳು ಜಾಸ್ತೀ ವಸೂಲಾಗಿರುತ್ತದೆ.

ಕಲ್ಕತ್ತೆಯೊಳು ಆರು ವರ್ಷಗಳ ವಯಸ್ಸಿನ ಒಂದು ಮಗು ಒಂದು [illegible] ನಾಣ್ಯ [illegible] ನಟ್ಟಿ ಬೆಳ್ಳಗೆ [illegible] ಅವನ್ನು [illegible] ಒಬ್ಬ ಮಿತಾಯಿ [illegible] ಯತ್ನಿಸಿದ ಅಪ್ಪಿತವಬಗ್ಗೆ ದಸ್ತಗಿರಿ ಮಾಡಲ್ಪಟ್ಟಿತು.

ಲಂಡನ್ ಪಟ್ಟಣದಲ್ಲಿ ಈಚೆಗೆ ನಡೆದ ಒಂದು [illegible] ಸಂದರ್ಭದಲ್ಲಿ ಮಹಾರಾಣಿಯವರ ಪಾರ್ಲಿಮೆಂಟಿನ ಮೆಂಬರಗಳ ಪೈಕಿ ಒಬ್ಬರಾದ ಶ್ರೀ ದಾದಾಭಾಯ್ ನೌರೋಜಿ ಯವರು ಇಂಗ್ಲೆಂಡ್ ಸಂಸ್ಥಾನದ ಪ್ರಧಾನ ಮಂತ್ರಿಯಾದ ಮಿ॥ ಗ್ಲಾಡಸ್ಟನ್ ಯವರ ಭೇಟಿ ಮಾಡಿಸಲ್ಪಟ್ಟು [illegible] ಗೌರವಪೂರ್ವಕವಾಗಿ ಬರಮಾಡಿಕೊಳ್ಳಲ್ಪಟ್ಟರು.

ಬಾಬೂ ಸೂರೇಂದ್ರನಾಥ ಬಾನರ್ಜಿಯವರು ಬಂಗಾಳೆ ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರಾಗಿ ಚುನಾಯಿಸಲ್ಪಟ್ಟಂತೆ ಆಬಗ್ಗೆ ಸೇರಿದ್ದ ಸಭೆಯ ಅಗ್ರಾಸನಾಧಿಪತಿಯವರು ತಿಳಿಸಿದ ಕೂಡಲೆ, ಅಯಿದು ನಿಮಿಷಗಳ ಕಾಲ [illegible] ಜಯಘೋಷದಿಂ ತುಂಬಿತ್ತೆಂತಲೂ, ಮುಸಲ್ಮಾನ್ ಕಮಿಷನರ್‌ಗಳ ಪೈಕಿ ಒಬ್ಬರು ವಿನಾ ಮಿಕ್ಕವರೆಲ್ಲರು ಸದರೀ ಬಾಬೂ ಯವರಿಗೆ ಅನುಕೂಲವಾಗಿ ಅಭಿಪ್ರಾಯಕೊಟ್ಟರೆಂತಲೂ ಕಲ್ಕತ್ತಾ ಮಹಮುರ್ದ ಅಬ್ಸರ್ವರ್ ಎಂಬ ಪತ್ರಿಕೆ ತಿಳಿಸುತ್ತದೆ.

ಈಚೆಗೆ ಕಲ್ಕತ್ತಾ ಮ್ಯೂನಿಸಿಪಲ್ ಕಮಿಷನರ್‌ಗಳು ಮೀಟಿಂಗ್ ಮಾಡಿದ ಕಾಲದಲ್ಲಿ ಬಂಗಾಳೆ ಗವರ್ನಮೆಂಟಿ ನ್ಯಾಯವಿಧಾಯಕ ಸಭೆಯಲ್ಲಿ ಸದರೀ ಮ್ಯೂನಿಸಿಪಾಲಿಟಿಯ ತರಫೆ ಪ್ರತಿನಿಧಿಯಾಗಿ ಬಾಬೂಸೂರೇಂದ್ರನಾಥ ಬಾನರ್ಜಿಯವರು ಚುನಾಯಿಸಲ್ಪಟ್ಟರು ಈ ಮೀಟಿಂಗ್‌ನಲ್ಲಿ ಸೇರಿದ್ದ ೬೮ ಮಂದಿ ಮೆಂಬರಗಳ ಪೈಕಿ ೬೩ ಮಂದಿ ಸೂರೇಂದ್ರನಾಥ ಬಾನರ್ಜಿಯವರಿಗಾಗಿ ಅಭಿಪ್ರಾಯ ಕೊಟ್ಟರು. ಯೂರೋಪಿಯನ್ ಮೆಂಬರ್‌ಗಳ ಪೈಕಿ ಒಬ್ಬರು ವಿನಾ ಮಿಕ್ಕವರೆಲ್ಲರು ಅವರಿಗೆ ವಿರೋಧವಾಗಿ ಅಭಿಪ್ರಾಯ ಕೊಟ್ಟರು.

ಒಬ್ಬ ಯೂರೋಪಿಯನ್ ಸರದಾರನು ಒಂದಾನೊಂದು ಪತ್ರಿಕೆಗೆ ಬರೆದು ತಿಳಿಸುವ ಅಭಿಪ್ರಾಯವೇನೆಂದರೆ:— ಈಗಿನ ಲಿಬರಲ್ ಗವರ್ನಮೆಂಟಿನವರು ಇಂಡ್ಯಾದೇಶದಲ್ಲಿರುವ ಯೂರೋಪಿಯನ್ ಸೈನ್ಯದ ಪೈಕಿ ೧೬,೦೦೦, ನೇಟಿವ್ ಸೈನ್ಯದ ಪೈಕಿ ೫೦,೦೦೦, ಈ ಮೇರೆ ಕಡಿಮೆ ಮಾಡುವಂತೆ ಬಲಾತ್ಕಾರಿಸಲ್ಪಡಬೇಕು. ಸ್ವಾಭಾವಿಕವಾಗಿ ಶಾಂತರಾಗಿಯೂ ಕಾಯಿದೆ ಕಾನೂನುಗಳಿಗೆ ಬದ್ಧರಾಗಿಯೂ ಇರುವ ಪ್ರಜೆಗಳುಳ್ಳ ಮದರಾಸ್ ಪ್ರೆಸಿಡೆನ್ಸಿಯಲ್ಲಿ ಗ್ಯಾರಿಸನ್ ಇಡುವದಕ್ಕಾಗಿ ಬ್ರಿಟಿಷ್ ಗವರ್ನಮೆಂಟಿನವರು ಇಷ್ಟು ಹಣ ಯಾತಕ್ಕೆ ಖರ್ಚು ಮಾಡಬೇಕೋ ನಾನರಿಯೆನು, ಎಂಬದು.

ಅಮೆರಿಕಾದೇಶಕ್ಕೆ ಸೇರಿದ ಚಿಕಾಗೋ ಎಂಬ ಪಟ್ಟಣದೊಳು ಬರುವ ಮೇ ತಿಂಗಳಲ್ಲಿ ನಡೆಯುವದಾಗಿರುವ ವಿವಿಧವಸ್ತು ಪ್ರದರ್ಶನಕ್ಕೆ ಸುಮಾರು ಅವಿುವತ್ತು ದೇಶಗಳಿಂದ ಸುಂದರೀಯರಾದ ಹೆಂಗಸರು ಹೋಗಿರುತ್ತಾರೆ. ಅವರ ಪೈಕಿ ಒಬ್ಬೊಬ್ಬರೂ ತನ್ನ ದೇಶದ ವಸ್ತ್ರಾಭರಣಗಳಂ ಧರಿಸಿಕೊಂಡು ತನ್ನ ದೇಶದಲ್ಲಿನ ಹೆಂಗಸರಿಗೆ ಸ್ವಾಭಾವಸಿದ್ಧವಾಗಿರುವ ಕಸುಬನ್ನು ಅನುವರ್ತಿಸುವರು. ಚೀನಾ, ಜಪಾನ್, ಮೆಕ್ಸಿಕೋ, ಕ್ಯೂಬಾ ಮೊದಲಾದ ದೇಶಗಳಿಂದ ಅನೇಕರು ಹೋಗಿರುತ್ತಾರೆ. ಇವರೆಲ್ಲರು ತಮ್ಮ ತಮ್ಮ ದೇಶಗಳ ದುಸ್ತುಗಳು, ಮತ್ತು ಕಸಬುಗಳನ್ನು ಅಲ್ಲಿ ಪ್ರಕಟಪಡಿಸುವರು.

## ಕರ್ನಾಟಕಭಾಷಾಭಿವೃದ್ಧಿಯಂಕುರಿತು.

೧೯೧೩ ನೇ ಸು ಏಪ್ರಿಲ್ ೧೬ನೇ ಬುಧವಾರದಲ್ಲಿ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಕರ್ಣಾಟಭಾಷೆಯ ಅಭಿವೃದ್ಧ್ಯರ್ಥವಾಗಿ ಅಲ್ಲಿನ ಪಂಡಿತರೂ, ಗ್ರಾಜ್ಯುಯೇಟುಗಳೂ, ಇನ್ನೂ ಇತರರೂ ೫೦ ಮಂದಿ ಸೇರಿ ಆ ವಿಷಯವಾಗಿ ಎರಡು ಘಂಟೆಗಳ ಕಾಲ ಚರ್ಚಿಸಿ ಫಲಿತಾಂಶವನ್ನು ನಿರ್ಣಯಿಸಿಕೊಂಡರು. ಈ ಸಂಘುಕ್ಕೆ ಮ|| ರಾ|| ಶ್ರೀ ಸ ಮಂಗೇಶರಾವ್, ಬಿ. ಎ., ಯವರು ಅಗ್ರಾಸನಾಧಿಪತಿಗಳಾಗಿದ್ದರು. ಬ್ರಹ್ಮಶ್ರೀ|| ಗ ವೈ ಕೃಷ್ಣಾಚಾರ್ಯರು ಭಾಷಾ ಸವಿಸ್ತರಣೋದ್ಯೋಗವನ್ನು ಕುರಿತು ಒಂದು ಉಪನ್ಯಾಸವನ್ನು ಓದಿದರು. ಅದರ ಸಾರಾಂಶವೇನೆಂದರೆ;—

ಪ್ರಾಚ್ಯಭಾಷೆಗಳ ಬಾಹ್ಯ ಬಹಳ ಶೋಚನೀಯ ಸ್ಥಿತಿಯಲ್ಲಿ ಇರುವುದು ಪ್ರಾಚೀನ ಗ್ರಂಥಗಳಿಂದಲೇ ತಿಳಿಯಬರುವುದು. ಬಳಿಕ ಇತರ ರಾಜಕೀಯ ಪ್ರಭಾವದಿಂದಲೂ, ಮತಸ್ಥರಿಂದಲೂ, ಬಹಳಮಟ್ಟಿಗೆ ಕ್ಷೀಣಿಸಿ ಹೋಯಿತು. ಬಳಿಕ ಸ್ವತಂತ್ರವನ್ನು ಪಡೆದು ವೃದ್ಧಿಪಡಿಸಿಕೊಳ್ಳದೆ ಮರಳಿ ಕೆಲವು ಬ್ರಾಹ್ಮಣರು ಜೈನ ಗ್ರಂಥಗಳನ್ನು, ಶೈವರು ವೈಷ್ಣವ ಗ್ರಂಥಗಳನ್ನೂ, ವೈಷ್ಣವರು ಶೈವ ಗ್ರಂಥಗಳನ್ನೂ ದೂಷಿಸುವದಲ್ಲದೆ ತಮತಮಗೆ ತೋರಿದಂತೆ ಅನ್ಯಶಿಷ್ಟ ಭಾಷೆಯಿಂದ ಗ್ರಂಥಗಳಂ ರಚಿಸತೊಡಗಲು ತತ್ಪ್ರಯೋಜನವು ಆಯಾ ಬಾಷೆಗಳಂ ಕೆಡಿಸುತ್ತಾ ಬಂದಿತು. ಅದರಿಂದಲೇ ಆ ಗ್ರಾಮ್ಯ ಭಾಷೆಯನ್ನೇ ಬಾಲಕರಿಗೆ ಕಲಿಸಬೇಕೆಂದು ಪ್ರಯತ್ನಿಸಿ ಕಡೆಗೆ ಬಾಷೆಯನ್ನು ಇಷ್ಟು ಅವ್ಯವಸ್ಥೆಗೆ ತಂದಿರುವರು. ಅದರಿಂದ ಒಂದೊಂದು ದೇಶದಲ್ಲಿ ಒಂದೊಂದು ಬಗೆಯ ಗ್ರಾಮ್ಯಭಾಷೆ ಪ್ರಚಾರದಲ್ಲಿರುವುದು. ಮೊದಲಿಂದಲೂ ಆ ಗ್ರಾಮ್ಯ ಭಾಷೆಯನ್ನೇ ಕಲಿತವರು ದೊಡ್ಡ ತರಗತಿಗಳಿಗೆ ಬಂದಮೇಲೆ ಅಲ್ಲಿ ಶುದ್ಧ ಭಾಷೆಯಂ ಕಲಿಯಬೇಕಾಗಿರುವದರಿಂದ "ಲ್ಯಾಟಿನ್, ಗ್ರೀಕ್" ಬಾಷೆಗಳಂ ಕಲಿತಂತೆ ಸ್ವಭಾಷೆಯಾದ ಕನ್ನಡವನ್ನು ಬಹಳಮಟ್ಟಿಗೆ ಕಲಿಯಬೇಕಾಗಿರುವುದು. ಹಾಗೆ ಪರೀಕ್ಷಕರೂ ಪರೀಕ್ಷಕರು ಪ್ರಶ್ನೆವಾಕ್ಯವನ್ನಾದರೂ ಶುದ್ಧಭಾಷೆಯಿಂ ಬರೆಯದಿರುವದರಿಂದ ವಿದ್ಯಾರ್ಥಿಗೆ ಉತ್ಸಾಹವಿಲ್ಲದೆ ಹೋಗುವುದು. ತೆಲುಗು ತಮಿಳು ಭಾಷೆಗಳಲ್ಲಿ ಯಾವುದೋ ಪ್ರಥಮ ಬಾಲ ಪುಸ್ತಕ ಮೊದಲ್ಗೊಂಡು ಬಿ. ಎ., ಎಂ. ಎ., ತರಗತಿಗಳ ವರೆಗೂ ಓದಬೇಕಾದ ಪುಸ್ತಕಗಳ ಬಾಷೆ ಯೆಲ್ಲವೂ ಶುದ್ಧವಾಗಿರುವದಲ್ಲದೆ ತತ್ಪರೀಕ್ಷಕರು ಕೂಡ ಚೆನ್ನಾಗಿ ಪರೀಕ್ಷಿಸುತ ಭಾಷೆಯನ್ನು ಏಕರೂಪ ಸ್ಥಿತಿಯಲ್ಲಿಟ್ಟುಕೊಂಡಿರುವರು. ಅವರಲ್ಲಿಯೂ ಜನರು ಆಡುವ ಮಾತು ನಮ್ಮಲ್ಲಿದ್ದಂತೆ ಯಾವಾಗಲೂ ಗ್ರಾಮ್ಯವಾಗಿಯೇ ಇರುವುದು. ಆದರೂ ಓದುವ ಭಾಷೆ ಯಾವುದೋ ಶುದ್ಧವೆನಿಸಿಕೊಂಡಿರುವುದು, ಅವರಲ್ಲಿರುವ ಗ್ರಾಮ್ಯ ಭಾಷೆಗೆ ಪಠನೀಯ ಗ್ರಂಥಗಳಲ್ಲಿ ಅವಕಾಶವು ಕೊಡಲಿಲ್ಲ, ನಮ್ಮಲ್ಲಿ ಹಾಗಿಲ್ಲದೆ ಓದುವ ಗ್ರಂಥಗಳಲ್ಲಿ ಗ್ರಾಮ್ಯ ಬಾಷೆಗೆ ಅವಕಾಶವಂ ಕೊಟ್ಟಿರುವುದು ಲಜ್ಜಾಸಹವಾಗಿರುವುದು, ಆದುದರಿಂದ ಇದುವರೆಗೆ ಕಳೆದು ಹೋದುದಂ ಚಿಂತಿಸದೆ ಮೈಸೂರು ಕೇಮೆಯ ವಿದ್ಯಾಭ್ಯಾಸದ ಟೆಕ್ಸ್ಟ್ಬುಕ್ ಕಮಿಟಿ ಎಂಬ ಸಂಘದವರು ಮುಂತಾಗಿ ಈ ವಿಷಯವಂ ಮನಸ್ಸಿಗೆತಂದು ಈಗ ವಿದ್ಯಾರ್ಥಿಗಳು ಓದಬೇಕಾಗಿರುವ ಗ್ರಂಥರಾಶಿಯೆಲ್ಲವೂ ಏಕರೂಪದಿಂ ಶುದ್ಧವಾಗುವಂತೆ ತಿದ್ದಿಸಿ ತೆಲುಗು ತಮಿಳು ಬಾಷೆಗಳಂತೆ ನಮ್ಮ ಬಾಷೆಯನ್ನೂ ವೃದ್ಧಿಗೆ ತರಲು ಪ್ರಯತ್ನಿಸಬೇಕು. ಹೀಗೆ ಒಂದೇಸಲ ಎಲ್ಲಾ ಪುಸ್ತಕಗಳನ್ನು ತಿದ್ದಿಸಿ ಪ್ರಕಟಿಸಿದರೆ ಆ ಭಾಷೆ ವಿದ್ಯಾರ್ಥಿಗಳಿಗೆ ಕಷ್ಟವಾಗುವದೆಂದು ತಾಕಿಸದೆ ಬೀಜಾರ್ಥಪರಿಶೋಧನಾದಿ ಪ್ರಥಮ ಪುಸ್ತಕದಲ್ಲ ಸುಧಿ ಹೊಂದಬಾರದುಗಳನ್ನಾದರೆ ಶಬ್ದಪದಜ್ಞಾನ ಮಾತ್ರ ವಾಗುವಂತೆಯೂ, ದ್ವಿತೀಯ ಪಾಠಪುಸ್ತಕದಲ್ಲಿ ಸಾಧಾರಣವಾದ ಸಂಧಿ ಜ್ಞಾನ ವಾಗುವಂತೆಯೂ, ತೃತೀಯಪಾಠಪುಸ್ತಕದಲ್ಲಿ ಸಂಧಿಜ್ಞಾನವೂ ಸ್ವಲ್ಪವಾಗಿ ಸಮಾಸಜ್ಞಾನವೂ ಆಗುವಂತೆಯೂ, ಬಳಿಕ ನಾಲ್ಕನೆಯ ಪುಸ್ತಕದಲ್ಲಿ ಆಸಂಧಿ ಸಮಾಸಜ್ಞಾನವೂ ಅರ್ಥಪೂರ್ವಪದಜ್ಞಾನವು ಆಗುವಂತೆಯೂ ಮಾಡಿ ಹೀಗೆಯೇ ಕ್ರಮಕ್ರಮವಾಗಿ ಅದಕ್ಕೆ ತಕ್ಕಷ್ಟು ಲಕ್ಷಣಜ್ಞಾನವನ್ನೂ ಉಂಟುಮಾಡುತ್ತಾ ಬಂದರೆ ಆರಂಭದಲ್ಲಿ ಓದುವವರಿಗೆ ಸ್ವಲ್ಪಕಾಲವಿಷ್ಟು ಬೇಕಾದರೂ ಹಾಗೆ ಅವುಗಳಂ ಕ್ರಮವಾಗಿ ಓದಿದವರು ದೊಡ್ಡ ತರಗತಿಗಳಿಗೆ ಬಂದಮೇಲೆ ಉದ್ಗ್ರಂಥಗಳನ್ನು ಸುಲಭವಾಗಿ ಕಲಿಯುವರು. ಅಂತಹವರಜ್ಞಾನವೂ ತೆಲುಗು ತಮಿಳರಜ್ಞಾನದಂತೆ ಸುಸ್ಪಷ್ಟವಾಗಿರುವದಲ್ಲದೆ ಅವರಿಗೆ ಉದ್ಗ್ರಂಥಗಳಲ್ಲಿ ಅಭಿರುಚಿಯೂ, ಶುದ್ಧಬಾಷಾಸ್ವಾರಸ್ಯಜ್ಞಾನದಿಂದ ಗ್ರಾಮ್ಯಭಾಷೆಯಲ್ಲಿ ಜಿಗುಪ್ಸೆಯೂ, ಉಂಟಾಗಿ ಆಂದ್ರದ್ರಾವಿಡರಂತೆ ಬಾಷಾಭಿಮಾನಿಗಳೆನಿಸಿಕೊಳ್ಳುವುದರಲ್ಲಿ ಸಂಶಯವಿಲ್ಲ. ಹೀಗಾಗಬೇಕಾದರೆ ಭಾಷಾಭಿಮಾನಿಗಳೆಲ್ಲರೂ ಸುಬೋಧವಿಸಿ ಈಗಿರುವಭಾಷಾದೋಷಗಳನ್ನು ಪ್ರಭುತ್ವದವರಿಗೆ ತಿಳಿಯಪಡಿಸಿ ಯುಕ್ತೋಚಿತವಾದ ಅವರ ಸಾಹ್ಯವಂ ಪಡೆದುಕೊಂಡು ಭಾಷಾನ್ಯೂನತೆಯಂ ಹೋಗಲಾಡಿಸಿ ಅಕ್ಕತಂಗಿಯರಂತೆ ಪಕ್ಕದಲ್ಲಿರುವ ದ್ರಾವಿಡಾಂಧ್ರರೊಡನೆ ಸಮಾನರೆನಿಸಿಕೊಳ್ಳುವುದಾಗಿ ಬಾಷೆಯಂ ಶುದ್ಧಿಯೊಡನೆ ವೃದ್ಧಿಪಡಿಸಬೇಕೆಂಬುದು ಆ ಯುಪನ್ಯಾಸದ ಮುಖ್ಯಾಭಿಪ್ರಾಯವು.

ಈ ಉಪನ್ಯಾಸವು ಕೇಳಿ ಅಗ್ರಾಸನಾಧಿಪತಿಗಳಾದ ಮ|| ರಾ|| ಶ್ರೀ ಸ ಮಂಗೇಶರಾವ್ ಬಿ. ಎ. ಯವರು ತದುಪನ್ಯಾಸಾರ್ಥವನ್ನನುಮೋದಿಸಿ ಸ್ವಾಭಿಪ್ರಾಯವಂ ಸೂಚಿಸಿದರು. ಬಳಿಕ ಮಹಾರಾಜ ಶ್ರೀ ಬಿಳಿಗಿರಿ ಅಯ್ಯಂಗಾರ್ಯರವರು ಬಹು ಸ್ವಾರಸ್ಯವಾಗಿ ಅನೇಕೋದಾಹರಣೆಗಳಿಂದ ಸಭಿಕರ ಮನಸ್ಸು ಆನಂದಾಬ್ಧಿ ಮಗ್ನವಾಗುವಂತೆ ಮಾಡಿ ತದುಪನ್ಯಾಸಾರ್ಥವನ್ನೇ ಸಮರ್ಥಿಸಿದರು. ಬಳಿಕ ಮ|| ರಾ|| ಶ್ರೀ. ಬಿ. ರಾಮಸ್ವಾಮಯ್ಯ ಬಿ. ಎ. ಯವರು "ತಾವು ಶಾಸ್ತ್ರಿ ಪ್ರಥಮ ಪರೀಕ್ಷೆಗೆ ಹೋಗುವಾಗ ಓದಿದ ದೃಷ್ಟಾಂತಮಂಜರಿ ಯೆಂಬ ಪುಸ್ತಕವನ್ನು ಕುರಿತು ಸ್ವಾನುಭವವಂ ಹೇಳಿ ಹೀಗೆ ಗ್ರಾಮ್ಯಭಾಷಾ ಪುಸ್ತಕಗಳಂ ಪರೀಕ್ಷೆಗಿಡುವುದರಿಂದ ಸ್ವದೇಶೀಯರ ಮಾತು ಕೂಡ ಮರೆತುಹೋಗುವುದು. ಶುದ್ಧಾಶುದ್ಧ ವಿವೇಕವು ಎಂದಿಗೂ ಆಗಲಾರದು: ಆದುದರಿಂದ ವಿದ್ಯಾರ್ಥಿಗಳು ಮೊದಲಿಂದಲೂ ಓದಬೇಕಾದ ಪುಸ್ತಕಗಳೆಲ್ಲವೂ ಒಂದೇವಿಧವಾಗಿಲ್ಲದಿದ್ದರೆ ಈ ಯವ್ಯವಸ್ಥೆ ತಪ್ಪುವುದೇ ಇಲ್ಲ. ಅದರಿಂದೆಲ್ಲವನ್ನೂ ತಿದ್ದಿಕೊಳ್ಳಬೇಕು" ಎಂದು ಹೇಳಿದರು. ಮ|| ರಾ|| ಶ್ರೀ ಎಚ್. ನಾರಾಯಣರಾವ್ ಬಿ. ಎ. ಯವರು ಗ್ರಾಮ್ಯಭಾಷೆಗೆ ವ್ಯಾಕರಣಕಲ್ಪನೆಯೆಂಬದು ಅಸಂಗತವು. ಎಲ್ಲಾ ಭಾಷೆಗಳಲ್ಲಿಯೂ ಶುದ್ಧಭಾಷೆ ಗ್ರಾಮ್ಯಭಾಷೆ ಯೆಂಬ ಭೇದ ನ್ಯಾಯ ಉಂಟು. ಎಲ್ಲರೂ ಶುದ್ಧಭಾಷೆಯಂ ಕಲಿಸಲು ಪ್ರಯತ್ನಿಸಬೇಕಲ್ಲದೆ ಗ್ರಾಮ್ಯವನ್ನು ಶುದ್ಧಿ ಮಾಡುವುದು ಅಸಾಧ್ಯವು. ಶಬ್ದಮಣಿದರ್ಪಣಕಾರನಾದ ಕೇಶಿರಾಜನ ಕಾಲಕ್ಕೂ ಗ್ರಾಮ್ಯಭಾಷೆ ಯಿತ್ತೆಂದೇ ತಿಳಿಯಬರುವುದು. ಆದುದರಿಂದ ಎಲ್ಲಾ ಪಂಡಿತರೂ ಸರಿಯೆಂದು ಒಪ್ಪಿಕೊಳ್ಳುವ (ಸ್ಟ್ಯಾಂಡರ್ಡ್ ಗ್ರಾಮರ್) ವ್ಯಾಕರಣದಮೇರೆಗೆ ಎಲ್ಲಾ ಪುಸ್ತಕಗಳನ್ನೂ ಒಂದೇವಿಧವಾಗಿ ತಿದ್ದಿಕೊಳ್ಳುವುದು ಉತ್ತಮವೆಂದು ಹೇಳಿದರು. ಹೀಗೆಯೇ ಇದೇ ವಿಷಯವನ್ನು ಕುರಿತು ಮ|| ರಾ|| ಶ್ರೀ ಕೆ. ಸುಬ್ಬರಾವ್ ಬಿ. ಎ. ಯವರು ವಿನೋದವಾಗಿ ಹೇಳುತ್ತಾ "ಈಗ ಇದ್ದಮಟ್ಟಿಗೆ ಮೈಸೂರು ಬಾಷೆ ಗ್ರಾಮ್ಯವಾದರೂ ಶುದ್ಧವಾಗಿರುವುದು" ಎಂದು ಹೇಳಿದ್ದಕ್ಕೆ ಬ್ರ|| ಶ್ರೀ ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳು ಗ್ರಾಮ್ಯ ಬಾಷೆಯಲ್ಲಿ ಶುದ್ಧಾಶುದ್ಧ ವಿಚಾರ ಮಾಡುವುದಾದರೆ ಕುಂದಾಪುರ ಪ್ರಾಂತದಲ್ಲಿಯೂ ಉತ್ತರ ಕನ್ನಡ ಜಿಲ್ಲೆಯಲ್ಲಿಯೂ ಒಕ್ಕಲಿಗರು ಮೊದಲುಗೊಂಡು ಈಗ ಗ್ರಂಥಗಳಲ್ಲಿ ಉಪಯೋಗಿಸಿರುವ ಹಳಗನ್ನಡ ಮಾತುಗಳನ್ನು ಅಪಭ್ರಂಶವಾಗಿ ಆಡುತ್ತಿರುವುದರಿಂದ ಇದಕ್ಕಿಂತಲೂ ಅದು ಉತ್ತಮವೆಂದು ಭಾವಿಸಬಹುದಾಗಿರುತ್ತೆ. ಮೈಸೂರು ದೇಶದ ಗ್ರಾಮ್ಯ ಭಾಷೆಯಾದರೋ ತೆಲುಗು ತಮಿಳು ಮಿಶ್ರವಾಗಿ ಕೆಟ್ಟಿದೆ ಮಂಗಳೂರು ಪ್ರಾಂತದ್ದು ಕೊಂಕಣ ತುಳುಮುಂತಾದ ಭಾಷಾಸಂಬಂಧದಿಂದ ಮಿಶ್ರವಾಗಿದೆ. ಧಾರ್ವಾಡದ ಕನ್ನಡವು ಮಹಾರಾಷ್ಟ್ರ ಮಿಶ್ರವಾಗಿದೆ. ಆದುದರಿಂದ ಗ್ರಾಮ್ಯ ಭಾಷೆಯಲ್ಲಿ ಶುದ್ಧಾಶುದ್ಧ ವಿಚಾರವಂ ಮಾಡದೆ ಇದುವರೆಗೆ ಪ್ರಸಿದ್ಧಿಗೆ ಬಂದಿರುವ ಪ್ರಮಾಣಿಕಗ್ರಂಥ ಭಾಷೆಯನ್ನು ಕಲಿಸುವುದು ಉತ್ತಮಪಕ್ಷವೆಂದುಹೇಳಿದರು. ಹೀಗೆಯೆ ಇನ್ನೂ ಬಹುಮಂದಿ ಮೇಲಿನವಿಷಯವನ್ನೇ ಅನುಮೋದಿಸಿ ಹೇಳಿದರು. ಬಳಿಕ ಅಗ್ರಾಸನಾಧಿಪತಿಗಳು ಕೆಳಗೆ ಹೇಳುವ ನಿರ್ಣಯಗಳನ್ನು ಓದಿದರು. ಸಭಿಕರೆಲ್ಲರೂ ಅದನ್ನು ಐಕಕಂಠ್ಯದಿಂದ ಅನುಮೋದಿಸಿ ಸಂತೋಷವಂ ಸೂಚಿಸಿದರು. ಆ ನಿರ್ಣಯಗಳ್ಯಾವುವೆಂದರೆ:—

೧. ಈ ಸಭೆಯಲ್ಲಿ ಬ್ರಹ್ಮಶ್ರೀ ಗ. ವೈ. ಕೃಷ್ಣಾಚಾರ್ಯರವರು ತಮ್ಮ ಉಪನ್ಯಾಸದಲ್ಲಿ ಹೇಳಿದ ಅಭಿಪ್ರಾಯಗಳನ್ನು ಈ ಸಭೆಯವರು ಸಂಪೂರ್ಣವಾಗಿ ಅನುಮೋದಿಸಿದರು.

೨. ಪ್ರೈಮರಿ ಮತ್ತು ಮಿಡಲ್ ಸ್ಕೂಲ್ ತರಗತಿಗಳಲ್ಲಿ ಈಗ ಉಪಯೋಗಿಸಲ್ಪಡುತಲಿರುವ ಪಾಠ ಪುಸ್ತಕಗಳನ್ನು ಈ ಕಾಲಕ್ಕೆ ಪ್ರಮಾಣವೆಂದು ನಿರ್ಣಯಿಸಲ್ಪಟ್ಟಿರುವ ವ್ಯಾಕರಣಕ್ಕನುಸಾರವಾಗಿ ತಿದ್ದಬೇಕೆಂದು ಈ ಸಭೆಯವರು ಸಂಪೂರ್ಣವಾಗಿ ಅಭಿಪ್ರಾಯಪಡುತ್ತಾರೆ.

೩. ಅಕ್ಕತಂಗಿಯರಂತಿರುವ ತೆಲಗು ತಮಿಳು ಭಾಷೆಗಳಲ್ಲಿರುವಂತೆಯೇ ಕರ್ಣಾಟ ಭಾಷೆಯಲ್ಲಿಯೂ ಬರವಣಿಗೆಯು ಕಡೆಗೆ ವ್ಯಾಕರಣಾನುಸಾರವಾದ ರೂಪಗಳಲ್ಲಿಯೂ ಪ್ರತ್ಯಯಗಳಲ್ಲಿಯೂ ಎಲ್ಲಾ ಕಡೆಗಳಲ್ಲಿಯೂ ಏಕರೂಪವಾಗಿರಬೇಕು. ಮತ್ತು ಆ ರೂಪಗಳು ಸಾಧ್ಯವಾದ ಮಟ್ಟಿಗೆ ಕನ್ನಡ ಮಾತುಗಳನ್ನಾಡುವರೆಲ್ಲರೂ ಪ್ರಮಾಣ ಗ್ರಂಥಗಳೆಂದು ಒಪ್ಪಿರುವ ಗದ್ಯ ಪದ್ಯ ಕಾವ್ಯಗಳಲ್ಲಿ ಪ್ರಯೋಗಿಸಿರುವ ರೂಪಗಳಿಗೆ ಅನುಸಾರವಾಗಿರಬೇಕು.

೪. ಈ ನಿರ್ಣಯಗಳನ್ನು ಮೈಸೂರು ಎಡ್ಯುಕೇಷನ್ ಸೆಕ್ರೆಟರಿಯವರಿಗೂ, ಮದರಾಸ್ ಟೆಕ್ಸ್ಟ್ಬುಕ್ ಕಮಿಟಿಯ ಸೆಕ್ರೆಟರಿಯವರಿಗೂ ತಿಳಿಸುವದಲ್ಲದೆ ಮದರಾಸ್ ಅಧಿಪತ್ಯದಲ್ಲಿಯೂ ಮೈಸೂರು ದೇಶದಲ್ಲಿಯೂ ಉಪಯೋಗದಲ್ಲಿರುವ ಪಾಠ ಪುಸ್ತಕಗಳನ್ನು ೩ನೆಯ ನಿರ್ಣಯಕ್ಕನುಸಾರವಾಗಿ ತಿದ್ದಿಸಿಕೊಳ್ಳಬೇಕೆಂದು ವಿಜ್ಞಾಪಿಸಿಕೊಳ್ಳಬೇಕು.

ಎಸ್. ಮಂಗೇಶರಾವ್,
ಚೇರ್‌ಮ್ಯಾನ್.

## LOCAL AND PROVINCIAL NEWS
### ಒಳದೇಶವರ್ತಮಾನಗಳೂ ತಾಲ್ಲೂಕ್ ಜಾಕ್ ವೃತ್ತಾಂತಗಳು.

ಶ್ರೀಮನ್ಮಹಾರಾಜರವರು ನಾಳೆ ಬುಧವಾರ ನೀಲಗಿರಿಗೆ ಪ್ರಯಾಣಬೆಳಸುವರೆಂದು ಕೇಳುತ್ತೇವೆ.

ಈ ಸಂಸ್ಥಾನದ ದಿವಾನರಾದ ಸರ್ ಕೆ ಶೇಷಾದ್ರಿ ಅಯ್ಯರವರು ಕಳೆದ ಬುಧವಾರದ ದಿನ ಮಧ್ಯಾಹ್ನ ಮೈಸೂರಿಂದ ಅಷ್ಟಗ್ರಾಮ ಬಸ್ ಬಂದು ಶುಕ್ರವಾರದ ದಿನ ಸಂಸಾರ ಸಮೇತರಾಗಿ ನಂದೀದುರ್ಗಕ್ಕೆ ದಯಮಾಡಿದರು.

ಬ್ರಹ್ಮಶ್ರೀ ಮಹಾವಿದ್ವಾನ್, ವಾಸುದೇವಶಾಸ್ತ್ರಿಗಳವರಿಂದ "ಅದ್ವೈತಮತ ವಿಷಯವಾಗಿ ತಾಲ್ಲೂಕು ಕಚೇರಿಬಳಿಯಲಿಕಾಪಾಠಶಾಲೆಯಲ್ಲಿ, ನಿನ್ನೆಯದಿನ ಸಾಯಂಕಾಲ ೬ ಘಂಟೆಗೆ ಸರಿಯಾಗಿ ಉಪನ್ಯಾಸ ಮಾಡಲ್ಪಟ್ಟಿತು. ಅದಕ್ಕೆ ಅನೇಕಜನ ದೊಡ್ಡಮನುಷ್ಯರು ಬಂದಿದ್ದರು. ಇದರ ತಪ್ಸೀಲುಗಳನ್ನು ಮುಂದಿನವಾರದಲ್ಲಿ ತಿಳಿಸುವೆವು.

ಈಸಲ ಸ್ವದೇಶ ನೌಕರಿ ಮತ್ತು ಪ್ಲೀಡರ್ ಪರೀಕ್ಷೆಗೆ ಹೋಗಲಿಷ್ಟಪಡುವವರು ಕಳೆದ ಮಾರ್ಚಿ ೩೧ ನೇ ತಾರೀಖಿನೊಳಗಾಗಿ ದರಖಾಸ್ತುಗಳಂ ಕಳುಹಿಸತಕ್ಕದ್ದೆಂದು ನಿರ್ಣಯವಾಗಿತ್ತಷ್ಟೆ. ಆ ಕಾಲದೊಳಗೆ ಹಾಗೆ ಮಾಡಲು ತಪ್ಪಿಹೋದವರ ಅನುಕೂಲ್ಯಕ್ಕಾಗಿ ಸದರೀ ಕಾಲವು ಬರುವ ಮೇ ೩೧ ನೇ ತಾರೀಖ್ ವರಿವಿಗೆ ತಳ್ಳಿ ಇಡಲ್ಪಟ್ಟಿಂತೆ ತಿಳಿಯಲಾದೆವು.

ಈ ವೈಶಾಖ ಶುದ್ಧ ೧೦ ಯಲ್ಲು ನಡೆಯಬೇಕಿರುವ ಶ್ರೀಮಚ್ಛಂಕರ ಭಗವತ್ಪಾದ ಜಗದ್ಗುರುಗಳವರ ಆರಾಧನಮಹೋತ್ಸವವು ಈ ಬೆಂಗಳೂರು ಸುಲ್ತಾನ್ ಪೇಟೆಯಲ್ಲಿರುವ ಶ್ರೀ ಶೃಂಗೇರಿಮಠದಲ್ಲಿ ಯಥೋಚಿತವಾಗಿ ನಡೆಯುತ್ತಿದ್ದದ್ದು ಸರಿಯಷ್ಟೆ? ಮೇಲ್ಕಂಡ ಉತ್ಸವವನ್ನು ಅತಿಶಯವಾಗಿ ನಡಿಸಬೇಕೆಂದು ಅನೇಕರು ಪ್ರೋತ್ಸಾಹಗೊಂಡಿರುವದರಿಂದ ಈ ವಿಜಯನಾಮಸಂವತ್ಸರ ವೈಶಾಖಶುದ್ಧ ೧೦ ಗುರುವಾರ ಪ್ರಾತಃಕಾಲ ೬ ಘಂಟೆಗೆ ಸರಿಯಾಗಿ ಮೇಲಿನ ಶ್ರೀ ಶೃಂಗೇರಿಮಠದ ದೇವಾಲಯಕ್ಕೆ ಗುರುಭಕ್ತಿಯುಳ್ಳವರೆಲ್ಲರೂ ದಯಮಾಡಿ ಬಂದು ಅಲ್ಲಿ ನಡೆಯುವ ಆರಾಧನೋತ್ಸವ ಗುರುಚರಿತ್ರೆ ಉಪನ್ಯಾಸಾದಿ ಕಾರ್ಯಗಳಿಗೆಲ್ಲಾ ಸಹಾಯಕರಾಗಿ ನೆರವೇರಿಸಿ ಗುರು ಕೃಪಾಕಟಾಕ್ಷಪಾತ್ರರಾಗಬೇಕೆಂದು ಮಠಮುದ್ರೆಯವರು ತಿಳಸಿರುತ್ತಾರೆ.

ಕಳೆದ ಶುಕ್ರವಾರ ಸಾಯಂಕಾಲ ಸುಮಾರು ಮೂರು ಘಂಟೆಗೆ ಬಲವಾಗಿ ಪೆಟ್ಟು ಮಳೆ ಕಿ ವರ್ಷಕ್ಕೆ ಪ್ರಾರಂಭವಾದ ಉತ್ತರೆಕ್ಷಣದಲ್ಲಿ ಬಿರುಗಾಳಿಯು ದೆಸೆಯಿಂದ ಮೇಘಗಳು ಛಿನ್ನಾಭಿನ್ನವಾಗಿ ಚದರಿಸಲ್ಪಟ್ಟವು. ಕೆಲವು ಹಸಿಗಳೂ ಚಿನ ಸಮಾಪ್ತಿಯನ್ನೈದಿತು. ಪಡೆಂಗೆ ಮುಖ್ಯಾಧಾರವಾಗಿರುವ ಧರ್ಮಾಂಬುಧಿ ಕೆರೆಯಲ್ಲಿ ನೀರು ಸಾತರಾಂ ಬತ್ತಿಹೋದುತೆಂಬ ಸಂಗತಿಯನ್ನು ಹಿಂದಿನವಾರಗಳಲ್ಲಿ ತಿಳಿಸಿರುತ್ತೇವೆಯಷ್ಟೆ. ಈಗ ಸೇದುವ ಭಾವಿಗಳಲ್ಲಿ ಸಹ ನೀರು ಬತ್ತಿಹೋಗಿ ಜಲದೌರ್ಲಭ್ಯದಿಂ ಜನರು ಅನುಭವಿಸುವ ಕಷ್ಟವು ಹೇಳತೀರದಾಗಿದೆ. ಈ ಕಷ್ಟವು ಯಾವ ಮಾರ್ಗದಿಂ ಪರಿಹಾರವಾಗುವುದೊ ತಿಳಿಯಲಶಕ್ಯವಾಗಿದೆ ಈ ವಿಷಯದಲ್ಲಿ ಮೈಸೂರು ಸರ್ಕಾರದವರೂ ಮಿಲಿಟರಿ ಸ್ಟೇಷನ್ ಅಧಿಕಾರಿಗಳೂ ಸಾಧ್ಯವಾದ ಪ್ರಯತ್ನಗಳಂ ಮಾಡುತಲಿದಾರೆಂಬದು ದಿಟ, ಪಡುತ್ತು ಫಲಪ್ರಾಪ್ತಿಯು ನಾವು ನಿರೀಕ್ಷಿಸುವಷ್ಟು ಶೀಘ್ರದಲ್ಲಿ ಕೈಗೂಡುವದೆಂದು ಹೇಳುವದಕ್ಕಾಗುವದಿಲ್ಲವು. ಆಹಾರ ಪದಾರ್ಥಗಳ ಧಾರಣೆಗಳು ಒಂದೇ ವಿಧವಾಗಿದೆ. ವ್ಯಾಪಾರ್ಯವರ್ತಮಾನಗಳೂ ಹಿಂದಿನವಾರದಲ್ಲಿದ್ದಂತೆಯೇ ಇದೆ.

## THE MYSORE GAZETTE.

### ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಹೊರಡಿಸಲ್ಪಟ್ಟ ಇಸ್ತಿಹಾರನಾಮೆಗಳು.

೧೦ ನೇ ಮಾರ್ಚಿ ೧೮೯೩, ನಂ. ೧೬೭೦೫—೮. ೪೧೪೧.—ಚಾಮರಾಜ ನಗರ ತಾಲ್ಲೂಕ್ ಅಮಲ್ದಾರ್ ಟಿ. ಎಂ. ಮಿಯರ್ ನೈಜಾಮುದ್ದೀನ್ ಅಲೀಖಾನರವರು ಈ ತಿಂಗಳ ೭ ನೇ ತಾರೀಖ್ ಮೊದಲು ಅಥವಾ ಅವರು ಉಪಯೋಗಿಸಿಕೊಳ್ಳುವದಕ್ಕೆ ಅಪ್ಪಣೆ ಕೊಡಲ್ಪಟ್ಟ ತಾರೀಖ್ ಮೊದಲು ೧೫ ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ|| ೧೬೬೯೮—೮. ೪೧೩೪.—ಸರ್ ೧೮೯೩ ನೇ ಇಸವಿ ಮಾರ್ಚಿ ೩೪ ನೇ ತಾರೀಖ್ ಮಧ್ಯಾಹ್ನಾತ್ಪರ, ಮೆ|| ಇ. ಆರ್. ಸುಬ್ಬರಾಯರವರು ಮೈಸೂರು ಗವರ್ನಮೆಂಟ್ ಕಂಟ್ರೋಲರ ಆಫೀಸ್ ಚಾರ್ಜನ್ನು ಅಸಿಸ್ಟೆಂಟ್ ಕಂಟ್ರೋಲರಾದ ಮೆ|| ಎಚ್. ಈಗಲ್ಸ್ ಯವರಿಂದ ತೆಗೆದುಕೊಂಡರು.

ನಂ|| ೧೬೬೯೯—೮. ೪೧೩೫.—ಆಫೀಸಿಯೇಟಿಂಗ್ ಡೆಪ್ಯುಟಿ ಕಮಿಷನರ್ ಮೆ|| ಬಿ. ಟಿ. ಕೃಷ್ಣಯ್ಯಂಗಾರ್ರವರು, ಸರ್ ೧೮೯೩ ನೇ ಇಸವಿ ಏಪ್ರಿಲ್ ೩ ನೇ ತಾರೀಖಿನ ಮಧ್ಯಾಹ್ನಾತ್ಪೂರ್ವ ಚಿತ್ರದುರ್ಗ ಡಿಸ್ಟ್ರಿಕ್ಟ್ ಮತ್ತು ಡಿಸ್ಟ್ರಿಕ್ಟ್ ಟ್ರೆಜರೀ ಚಾರ್ಜನ್ನು ಮೆ|| ಸಿ. ಶ್ರೀನಿವಾಸಯ್ಯಂಗಾರ್ರಿಗೆ ಕೊಟ್ಟು ಅವರು ತೆಗೆದುಕೊಂಡಿರುತ್ತಾರೆ.

ನಂ|| ೧೬೭೦೦—೮. ೯. ೧೯೭—೯೭—ಮೈಸೂರು ಸರ್ವಿಸ್ ರೆಗ್ಯುಲೇಷನಿನ ೧೭೭ನೇ ಆರ್ಟಿಕಲ್ ಅನುಸರಿಸಿ ಮೈಸೂರು ಡಿಸ್ಟ್ರಿಕ್ಟ್ ಪೊಲೀಸ್ ಪ್ರೊಬೇಷನರಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮೆ|| ಮೆಕ್ನೀಲ್ ಮಾರ್ಷಲ್ ಯವರು ೧೮೯೩ನೇ ಇಸವಿ ಮಾರ್ಚಿ ೨೦ನೇ ತಾರೀಖ್ ಮೊದಲು ೧೦ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿದ್ದರು.

ನಂ|| ೧೬೭೦೨—೮. ೪೧೩೮.—ಕ್ಲೋಸ್‌ಪೇಟೆ ಆಕ್ಟಿಂಗ್ ಸಬ್‌ಡಿವಿಜನ್ ಆಫೀಸರಾದ ಮೆ|| ರಘುನಾಥರಾಯರವರು, ಸರ್ ೧೮೯೩ನೇ ಇಸವಿ ಫೆಬ್ರುವರಿ ೨೫ನೇ ಮಾರ್ಚ್ಯಂ ೨೫೪ನೇ ನಂಬರ್ ಇಸ್ತಿಹಾರ್‌ನಾಮೆಯ ಮೂಲಕ ಕೊಡಲ್ಪಟ್ಟ ೨೦ ದಿನಗಳ ಪ್ರಿವಿಲೀಜ್ ರಜಾ ಪೈಕಿ ೧೫ ದಿನಗಳು ಮಾತ್ರ ಉಪಯೋಗಿಸಿಕೊಂಡಿರುತ್ತಾರಾಗಿ ಅದರ ಪೈಕಿ ಉಳಿದ ಭಾಗ, ಅಂದರೆ, ೫ ದಿನಗಳು ಇದರಿಂದ ರದ್ದು ಮಾಡಲ್ಪಟ್ಟಿವೆ.

ನಂ|| ೧೬೭೦೪—೮. ೪೧೪೦.—ಕಡೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮೆ|| ಎಚ್. ಎಚ್. ಸ್ಪಾರ್ಕ್ಸ್‌ಯವರಿಗೆ ಸರ್ ೧೮೯೩ನೇ ಇಸವಿ ಮಾರ್ಚ್ ೧೯ನೇ ತಾರೀಖಿನ ೧೫೩೫೭—೮. ೩೬೭೫ ನೇ ನಂಬರುಳ್ಳ ಇಸ್ತಿಹಾರ್‌ನಾಮೆಯ ಮೂಲಕ ಕೊಡಲ್ಪಟ್ಟ ಮೂರು ದಿನಗಳ ಕ್ಯಾಜುಯಲ್ ರಜಾ ಪೈಕಿ ೨ ದಿನಗಳು ಮಾತ್ರ ಉಪಯೋಗಿಸಿಕೊಂಡಿರುವದರಿಂದ ಉಳಿದ ೧ ದಿನ ಇದರಿಂದ ರದ್ದು ಮಾಡಲ್ಪಟ್ಟಿದೆ.

ನಂ|| ೧೬೭೦೭—೮. ೪೧೪೦.—ಮೈಸೂರು ಸರ್ವಿಸ್ ರೆಗ್ಯುಲೇಷನ್ ೧೭೨ನೇ ಆರ್ಟಿಕಲ್ ಅನುಸರಿಸಿ, ದೊಡ್ಡಬಳ್ಳಾಪುರ ತಾಲ್ಲೂಕು ಅಮಲ್ದಾರ್ ಬಿ. ಕೃಷ್ಣರಾಯರವರಿಗೆ ಸರ್ ೧೮೯೩ ನೇ ಇಸವಿ ಏಪ್ರಿಲ್ ೨ನೇ ತಾರೀಖ್ ಮೊದಲು ಅಥವಾ ಅವರು ಚಿಂತಾಮಣಿ ತಾಲ್ಲೂಕು ಈಗಿನ ಆಕ್ಟಿಂಗ್ ಅಮಲ್ದಾರರಾದ ವೈ. ನರಸಿಹ್ಮಯ್ಯನವರಿಂದ ಬಿಡುಗಡೆ ಮಾಡಲ್ಪಡತಕ್ಕದ್ದಾದ ತಾರೀಖ್ ಮೊದಲು ೩ ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ. ಸದರೀ ವೈ. ನರಸಿಹ್ಮಯ್ಯನವರು ಬಿ. ಕೃಷ್ಣರಾಯರು ರಜಾಮೇಲೆ ಗೈರ್ ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ ದೊಡ್ಡಬಳ್ಳಾಪುರ ತಾಲ್ಲೂಕು ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡುವಂತೆ ಇದರಿಂದ ನೇಮಕರಾಗಲ್ಪಟ್ಟಿರುತ್ತಾರೆ.

ನಂ|| ೧೬೭೦೩—೮. ೪೧೩೯, ತಾ|| ೧೩ನೇ ಏಪ್ರಿಲ್ ೧೮೯೩.—ಕಡೂರು ಡಿಸ್ಟ್ರಿಕ್ಟ್ ಆಕ್ಟಿಂಗ್ ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮೆ|| ಡಿ. ಎ. ಬಾಲಾರ್ಡ್‌ಯವರು, ೧೮೯೩ನೇ ಇಸವಿ ಮಾರ್ಚಿ ೧೭ನೇ ತಾರೀಖಿನ ಪೂರ್ವಾಹ್ನದಲ್ಲಿ, ಕಡೂರು ಡಿಸ್ಟ್ರಿಕ್ಟ್ ಪೊಲೀಸ್ ಆಫೀಸ್ ಚಾರ್ಜನ್ನು ಕೊಟ್ಟು, ಮೆ|| ಜೆ. ಡನ್ನಿಂಗ್ ಯವರು ತೆಗೆದುಕೊಂಡಿರುತ್ತಾರೆ.

ನಂ|| ೧೬೯೨೫—೮. ೪೧೯೨—ಮೈಸೂರು ಸರ್ವಿಸ್ ರೆಗ್ಯುಲೇಷನ್ ೧೭೭ನೇ ಆರ್ಟಿಕಲ್ ಅನುಸರಿಸಿ, ಕೋಲಾರ ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂಟರಾದ ಮೆ|| ಎಚ್. ರಾಮಾನುಜಯ್ಯಂಗಾರ್ರವರು ಸರ್ ೧೮೯೩ನೇ ಇಸವಿ ಏಪ್ರಿಲ್ ೭ನೇ ತಾರೀಖ್ ಮೊದಲು ೩ ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

೨. ಕೋಲಾರ ಗೋಲ್ಡ್ ಫೀಲ್ಡ್ ಸ್ಪೆಷಲ್ ಪೊಲೀಸ್ ಇನ್ಸ್‌ಪೆಕ್ಟರಾದ ಮೆ|| ಡಿ. ಎ. ಬಾಲಾರ್ಡ್‌ಯವರು ಮೆ|| ರಾಮಾನುಜಯ್ಯಂಗಾರ್ರವರು ರಜಾಮೇಲೆ ಗೈರ್ ಹಾಜರಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ, ಕೋಲಾರ ಡಿಸ್ಟ್ರಿಕ್ಟ್ ಎಕ್ಸ್ಟ್ರಾ ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾಗಿ ಕೆಲಸನೋಡುವಂತೆ ನೇಮಕರಾಗಲ್ಪಟ್ಟಿರುತ್ತಾರೆ.

ನಂ|| ೧೬೯೨೭—೮. ೪೧೯೨.—ಸರ್ ೧೮೯೩ ನೇ ಇಸವಿ ಏಪ್ರಿಲ್ ೬ ನೇ ತಾರೀಖಿನ ಮಧ್ಯಾಹ್ನಾತ್ಪರ, ಕೋಲಾರ ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂಟರಾದ ಮೆ|| ಎಚ್. ರಾಮಾನುಜಯ್ಯಂಗಾರ್ರವರು ಕೋಲಾರ ಡಿಸ್ಟ್ರಿಕ್ಟ್ ಪೊಲೀಸ್ ಆಫೀಸ್ ಚಾರ್ಜನ್ನು ಮೆ|| ಡಿ. ಎ. ಬಾಲಾರ್ಡ್ ಯವರಿಗೆ ಕೊಟ್ಟು ಅವರು ವಹಿಸಿಕೊಂಡಿರುತ್ತಾರೆ.

ನಂ|| ೧೬೯೨೮—೮. ೪೧೯೩— ಚಿತ್ರದುರ್ಗ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ಮೆ|| ಎಂ. ವೆಂಕಟರಾಯರವರು, ಸರ್ ೧೮೯೩ ನೇ ಇಸವಿ ಮಾರ್ಚಿ ೧೩ ನೇ ಮಾರ್ಚ್ಯಂ ೧೫೦೭೫ ೮. ೩೫೩೭ ನೇ ನಂಬರ್ ಇಸ್ತಿಹಾರ್‌ನಲ್ಲಿ ಮಂಜೂರ್ಮಾಡಲ್ಪಟ್ಟ ರಜಾಕ್ಕೆ ಜಾಸ್ತಿಯಾಗಿ ೨೨ ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ|| ೧೬೯೩೦—೮. ೪೧೯೫—ಸರ್ ೧೮೯೩ ನೇ ಇಸವಿ ಏಪ್ರಿಲ್ ೩ ನೇ ತಾರೀಖಿನ ಮಧ್ಯಾಹ್ನಾತ್ಪರ, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲವರ ಮತ್ತು ಕಂಪೆನಿಗಳ ರಿಜಿಸ್ಟ್ರಾರವರ ಆಫೀಸ್ ಚಾರ್ಜನ್ನು ಮೆ|| ಆರ್. ವಿಜಯೇಂದ್ರರಾಯರವರು ಕೊಟ್ಟು ಮೆ|| ಸಿ. ಮೀನಾಕ್ಷಿ ಅಯ್ಯರವರು ಮರಳಿ ವಹಿಸಿಕೊಂಡರು.

ನಂ|| ೧೬೯೩೧—೮. ೪೧೯೬—ಮೈಸೂರು ಸರ್ವಿಸ್ ರೆಗ್ಯುಲೇಷನ್ ೧೭೧ ನೇ ಆರ್ಟಿಕಲ್ ಅನುಸರಿಸಿ, ಕೋಲಾರ ತಾಲ್ಲೂಕ್ ಅಮಲ್ದಾರ್ ಹೇಮಾ ಹನುಮಂತಯ್ಯನವರು, ೧೮೯೩ ನೇ ಇಸವಿ ಏಪ್ರಿಲ್ ೭ನೇ ತಾರೀಖ್ ಮೊದಲು ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿದ್ದರು.

ನಂ|| ೧೭೦೦೪—೮. ೯. ೨೫—೯೨, ತಾರೀಖ್ ೧೫ ನೇ ಏಪ್ರಿಲ್ ೧೮೯೩ —ಕಡೂರು ಡಿಸ್ಟ್ರಿಕ್ಟ್ ಟ್ರೆಜರಿ ಇನ್‌ಚಾರ್ಜಿನಲ್ಲಿರುವ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಮೆ|| ಆರ್. ಬಿ. ಕೃಷ್ಣಮರವರಿಗೆ ಸರ್ ೧೮೯೩ ನೇ ಇಸವಿ ಏಪ್ರಿಲ್ ಗುರ್ರೇ ತಾರೀಖಿನ ೧೬೩೩೩—೮. ೩೯೩೬ನೇ ನಂಬರುಳ್ಳ ಇಸ್ತಿಹಾರ್ ನಾಮೆಯಲ್ಲಿ ಮಂಜೂರ್ಮಾಡಲ್ಪಟ್ಟ ಹತ್ತು ದಿನಗಳ ಪ್ರಿವಿಲೀಜ್ ರಜಾ ಅವರ ಕೋರಿಕೆಯಂತೆ ರದ್ದು ಮಾಡಲ್ಪಟ್ಟಿರುತ್ತದೆ.

ನಂ|| ೧೭೦೧೩—೮. ೪೨೪೦—ಕೊಪ್ಪ ತಾ|| ಲ್ಲೂಕು ಅಮಲ್ದಾರ್ ಸಿ. ಕೃಷ್ಣರಾಯರು ೧೮೯೩ನೇ ಇಸವಿ ಫೆಬ್ರುವರಿ ೨೬ನೇ ಮಾರ್ಚ್ಯಂ ಮುಳ್ಳ ೧೫೪೩೪—೮. ೩೩೫೩ನೇ ನಂಬರ್ ಇಸ್ತಿಹಾರ್ ನಾಮೆಯಲ್ಲಿ ಕೊಡಲ್ಪಟ್ಟ ಮೂರು ವಾರಗಳ ಪ್ರಿವಿಲೀಜ್ ರಜಾದಿಂದ ಸರ್ ೧೮೯೩ನೇ ಇಸವಿ ಮಾರ್ಚಿ ೧೮ ನೇ ತಾರೀಖಿನ ಮಧ್ಯಾಹ್ನಾತ್ಪೂರ್ವ ಕೆಲಸದಮೇಲೆ ಹಾಜರಾದುದರಿಂದ ಸದರೀ ರಜಾ ಪೈಕಿ ಉಳಿದ ಭಾಗವು, ಅಂದರೆ, ೫ ದಿನಗಳು ಇದರಿಂದ ರದ್ದು ಮಾಡಲ್ಪಟ್ಟಿರುತ್ತದೆ.

## EXTRACTS.

### ಮಾ|| ಸೀತಾವಿಲಾಸದ ದೇವಾಜಮ್ಮಣ್ಣಿ ಸಿ. ಐ. ರವರು.

ವೃತ್ತಾಂತ ಚಿಂತಾಮಣಿ ೧೯—೪—೯೩

ಮಹಾಮಾತುಶ್ರೀಯವರು ಅಂತ್ಯಕಾಲದಲ್ಲಿ ಅಪ್ಪಣೆಕೊಡಿಸಿದ ಮಾತುಗಳನ್ನು ತಿಳಿದುಕೊಳ್ಳಬೇಕೆಂಬುದು ಎಲ್ಲರಿಗೂ ಸಹಜವಾಗಿದೆ. ವಿದ್ಯಾವತಿಯರಾದ ಶ್ರೀಮನ್ ಮಹಾರಾಣಿಯವರು ತಮ್ಮ ದಿವ್ಯಜ್ಞಾನವೆಂಬ ದೀಪದ ಬೆಳಕನ್ನು ಪ್ರಕಾಶಮಾಡುವರು ಎಂಬ ವಿಷಯ ಸುಲಭವಾಗಿ ಊಹಿಸಬಹುದು. ಇದು ನತ್ಯ ವಸ್ತುವಾದ ಮಾತುಶ್ರೀಯವರು ಸ್ವದೇಶಾಭಿಮಾನದಿಂದಲೂ ಪುತ್ರವಾತ್ಸಲ್ಯದಿಂದಲೂ ಶ್ರೀಮನ್ಮಹಾರಾಜರವರಿಗೂ ಮಹಾರಾಣಿಯವರಿಗೂ ರಾಜ್ಯಪಾಲನ ಧರ್ಮಸೂಕ್ಷ್ಮಗಳನ್ನು ತಿಳಿಸಬೇಕೆಂದು ಇದ್ದರೂ ಅವುಗಳನ್ನೆಲ್ಲಾ ನೆರವೇರಿಸಿದರು. ಮಹಾಮಾತುಶ್ರೀಯವರು ಅಪ್ಪಣೆಕೊಡಿಸಿದ್ದನ್ನು ಮಹಾರಾಜರವರು ಮತ್ತು ಮಹಾರಾಣಿಯವರು ಭಯಭಕ್ತಿಯಿಂದ ವಿನೀತರಾಗಿ ಇದ್ದುಕೊಂಡು ಕೇಳಿದುಕೊಂಡರು. ಮಹಾಮಾತುಶ್ರೀಯವರು ದೇವರ ಬುದ್ಧಿವಾದಗಳಲ್ಲಿ ಇಲ್ಲಿ ಉದಹರಿಸುವ ಒಂದರಿಂದಲೇ ಅನೇಕವು ಅಮೂಲ್ಯವಾದ್ದೆಂದು ಎಣಿಸಬಹುದು ಏನಂದರೆ, “ಅಪ್ಪಾಜೀ, ನಿಮ್ಮ ಪುತ್ರರ ವಿಯೋಗಕ್ಕೋಸ್ಕರ ನೀವು ವ್ಯಸನಪಡುವದು ಸಹಜವೆ, ಆದರೆ ನೀವು ವಿಶೇಷವ್ಯಸನಪಡತಕ್ಕದ್ದು ಸರಿಯಾದದ್ದಲ್ಲವೆಂದು ನನಗೆ ತೋರುತ್ತದೆ. ಈ ವ್ಯಸನದಿಂದ ಏನೂ ಪ್ರಯೋಜನವಾಗಲಾರದು. ನಿಮ್ಮ ವಿಸ್ತಾರವಾದ ರಾಜ್ಯವನ್ನು ನೋಡಿ. ಪುತ್ರರೋಪಾದಿಯಲ್ಲಿರುವ ನಿಮ್ಮ ಲಕ್ಷಾಂತರ ಪ್ರಜೆಗಳನ್ನು ನೋಡಿ. ಇತರ ವಿಷಯಗಳನ್ನೆಲ್ಲಾ ದೇವರಲ್ಲಿ ಬಿಡಿ” ಎಂಬವಾಗಿ ಅಮೃತಕ್ಕೆ ಸಮವಾದ ವಾಕ್ಯಗಳಿಂದ ಶ್ರೀಮನ್ಮಹಾರಾಜರವರನ್ನೂ ಮಹಾರಾಣಿಯವರನ್ನೂ ಸಮಾಧಾನಗೊಳಿಸಿದರು. ಬಳಿಕ ನವ ಮಹಾಮಾತುಶ್ರೀಯವರ ಕ್ಷೇಮಸಮಾಚಾರಗಳನ್ನು ತಿಳಿದುಕೊಳ್ಳುವದಕ್ಕಾಗಿ ದಯಮಾಡಿಸಿ, ರಾಜಮರ್ಯಾದೆ ಪೂರ್ವಕವಾಗಿ ದರ್ಶನ ತೆಗೆದುಕೊಂಡಮೇಲೆ, ಮಹಾರಾಣಿಯವರು ಎದ್ದು ಲೇಟ್ ದಿವಾನರವರಾದ ರಂಗಾಚಾರ್ಲುರವರು ಯಾವ ರೀತಿಯಲ್ಲಿ ದೇಶಾಭಿಮಾನ, ಪ್ರಜಾಭಿಮಾನ, ಮಹಾರಾಜರವರಲ್ಲಿ ಪ್ರೀತಿ ವಿಶ್ವಾಸಗಳನ್ನು ಇಟ್ಟಿದ್ದರೋ ಅದೆಲ್ಲಾ ನಿಮ್ಮಲ್ಲೂ ಸಂಪೂರ್ಣವಾಗಿ ಇಟ್ಟು ಕೊಂಡು ಅವರಂತೆಯೇ ರಾಜ್ಯದ ಹಿತಗಳನ್ನು ನಡೆಸುವರೆಂಬ ನಿರೀಕ್ಷಣೆಯಿಂದ ಇರುವದು ಮತ್ತು ನಿಮ್ಮ ಅನುಭವ, ಜ್ಞಾನ, ವಿವೇಕ ಇವುಗಳು ನಮ್ಮ ಮಹಾರಾಜರವರನ್ನು ಸರಿಯಾಗಿ ತಿದ್ದಿಕೊಂಡು ಹೋಗುವದಕ್ಕೆ ಶಕ್ತಿಯುಳ್ಳದ್ದಾಗಿವೆ. ನಮ್ಮ ಪ್ರಜೆಗಳ ಕ್ಷೇಮಸುಖಗಳಿಗೋಸ್ಕರ ಇದಕ್ಕಿಂತ ಹೆಚ್ಚಾಗಿ ತಿಳಿಸತಕ್ಕದ್ದು ಏನೂ ಇರುವದಿಲ್ಲ; ಎಂದು ಅಪ್ಪಣೆ ಕೊಡಿಸಿದರು. ಮುಖ್ಯವಾಗಿ ವಿದ್ಯಾವಂತರಾಗಿಯೂ ಬಹಳ ಅದ್ಭುತಗಳನ್ನು ಬಲ್ಲವರಾಗಿಯೂ ೯೦ ವರುಷಗಳಿಂದ ದೃಷ್ಟಾಂತಪ್ರೋತ್ಸಾಹವಾಗಿ ಸಕಲವನ್ನೂ ಬಿಳಿದ-ಘಾವರರಾಗಿಯೂ ಈ ಸಂಸ್ಥಾನದ ಐಶ್ವರ್ಯ ಸ್ವರೂಪರಾಗಿಯೂ, ಮಹಾರಾಜರವರ ಆದರಣೆಗೆ ಯಾವ ಜವಾನ್ಯತ್ತ[illegible]ಸಿದ್ಧರಾಗಿದ್ದ ಮಹಾಮಾತುಶ್ರೀಯವರ ಚರಿತ್ರೆಯನ್ನು ನೋಡಿದವರಿಗೂ, ಮತ್ತು ಕೇಳಿದವರಿಗೂ ಕೂಡ ಅವರಮರಣವು ಬೇಸರವನ್ನುಂಟುಮಾಡದೆ ಬಿಡದು.

### ಕರಹಂಗೋಡ ಮಹೋತ್ಸವ.

ಈ ಶ್ರೀಕೃಷ್ಣನ ಸಂಪ್ರದಾಯ ಸಿದ್ಧವಾಗಿಯೂ ಶಾಸ್ತ್ರಸಮ್ಮತವಾಗಿಯೂ ಇರುವದು. ಇದರಿಂದ ಲೌಕಿಕ ಶ್ರೇಯಸ್ಸುಂಟಾಗುವದು ಇದಕ್ಕಾಗಿ ಶ್ರೀ ಪರಕಾಲಸ್ವಾಮಿಗಳವರು ಮಹಾರಾಜರವರ ಆಜ್ಞೆ ಪ್ರಕಾರ ಸೀತಾವಿಲಾಸದ ಅಮ್ಮಣ್ಣಿಯವರ ಹನ್ನೆರಡನೇ ದಿನ ರಾತ್ರಿ ಅರಮನೆಗೆ ದಯಮಾಡಿಸಿದ್ದರು ಆಗ ಮಹಾರಾಜರವರು ತಮ್ಮ ಶ್ರೀಕೃಷ್ಣನ ಕುಲಸಂಪ್ರದಾಯ ಪ್ರಕಾರ ಕರಹಂಗೋಡ ಮಹೋತ್ಸವವು ಮಾತುಶ್ರೀ ಯವರಿಗೆ ನೆರವೇರಿಸಬೇಕೆಂದು ತಮ್ಮ ಕುಲಗುರುಗಳಾದ ಶ್ರೀ ಪರಕಾಲಸ್ವಾಮಿಗಳ ಸನ್ನಿಧಿಯಲ್ಲಿ ವಿಜ್ಞಾಪನೆ ಮಾಡಿದರು. ಅದೇ ವೇಳೆಗೆ ತೊಡಕವು ಪ್ರಾರಂಭವಾಯಿತು. ಕೊನೆಗೆ ಬಾದಪೂಜೆ ಆಯಿತು. ಶ್ರೀಗಳವರು ಮರಕ್ಕೆ ದಯಮಾಡಿದರು. ಮಾರನೇದಿನ ಪ್ರಾತಃಕಾಲದಲ್ಲಿ ಶ್ರೀಕೃಷ್ಣಬ್ರಹ್ಮತಂತ್ರ ಪರಕಾಲಸ್ವಾಮಿಗಳವರು ಮಹಾರಾಜರ ಪ್ರಾರ್ಥನೆ ಪ್ರಕಾರ ಎಲ್ಲಾ ಪರಿವಾರದೊಡನೆ ಅರಮನೆಗೆ ದಯಮಾಡಿದರು. ಕೂಡಲೇ ಉತ್ಸವಕ್ಕೆ ಪ್ರಾರಂಭವಾಯಿತು ರಾಜಬೀದಿಯಲ್ಲಿ ದೇವರ ಉತ್ಸವವು ಬೆಳೆಯಿತು. ಮಹಾರಾಜರವರು ತಮ್ಮ ಎಲ್ಲಾ ರಾಜಾಂಗಪರಿವಾರದೊಡನೆ ತಾವು ಶ್ರೀವೈಷ್ಣವ ತೇಜಸ್ಸಿನಿಂದ ಶೋಭಿತರಾಗಿ, ಆಚಾರ್ಯಭಕ್ತಿಯಿಂದ ಶ್ರೀಗಳವರ ಸಂಗಡ ಹಿಂದುಗಡೆಗಳಲ್ಲಾಗಿಯೂ, ಅಂಜಲಿಬದ್ಧರಾಗಿಯೂ ಶ್ರೀಗಳವರಲ್ಲಿ ಸಮಯಭಕ್ತಿ, ವಿಶ್ವಾಸಗಳುಳ್ಳವರಾಗಿಯೂ ದಯಮಾಡುತ್ತಿದ್ದರು ಬಹಳ ಶ್ರೀವೈಷ್ಣವರ ಗೋಷ್ಠಿಯು ತುಂಬಿತ್ತು. ಎಲ್ಲಾ ಅರಸುಗಳೂ ಶ್ರೀಗಳವರಿಗೆ ಪಾದಪೂಜೆಯನ್ನು ಮಾಡಿದರು. ಹೀಗೆ ದೇವರ ಸಾನ್ನಿಧ್ಯದಿಂದಲೂ, ಆಚಾರ್ಯಸಾನ್ನಿಧ್ಯದಿಂದಲೂ, ಈ ಗೋಷ್ಠಿಯಿಂದಲೂ ಪ್ರಕಾಶಿಸುತ್ತ ಮಹಾರಾಜರು ದಯಮಾಡುತ್ತಿರುವಾಗ ಈ ಮತ್ಸವವು ಅತ್ಯದ್ಭುತವಾಗಿತ್ತು. ಇದನ್ನು ನೋಡುವದಕ್ಕೆ ಪಟ್ಟಣವೆಲ್ಲಾ ಕೋಟೆಯಲ್ಲಿ ನೆರೆಯಿತ್ತು. ಅನಂತರ ಎಲ್ಲರೂ ಅರಮನೆಗೆ ದಯಮಾಡಿದರು. ಕಡೆಗೆ ದೇವರಿಗೆ ಕಲ್ಲ ಮೇಲೆ ಎಲ್ಲಾ ಜರುಗಿತು. ಮಹಾರಾಜರವರು ಶ್ರೀಗಳವರಿಗೆ ಪಾದಪೂಜೆಯನ್ನು ಮಾಡಿ ಶ್ರೀಪಾದತೀರ್ಥವನ್ನು ತೆಗೆದುಕೊಂಡರು. ಹಾಗೆಯೇ ಎಲ್ಲರೂ ಸಂಪ್ರದಾಯ ಪ್ರಕಾರ ಪಾದಪೂಜೆಮಾಡಿದರು. ಕೊನೆಗೆ ಪಾರುಪತ್ಯಗಾರರಾದ ಶ್ರೀಮನ್ ಮಹಾರಾಣಿಯವರು ಎಲ್ಲಾ ಬಂಧುವರ್ಗಸಮೇತರಾಗಿ ಶ್ರೀಪಾದತೀರ್ಥವನ್ನು ತೆಗೆದುಕೊಂಡು, ಪಾದಪೂಜೆಯನ್ನು ಮಾಡಿದರು ಅನಂತರ ಶ್ರೀಗಳವರು ಎಲ್ಲರಿಗೂ ಫಲಮಂತ್ರಾಕ್ಷತೆಗಳನ್ನು ಅಪ್ಪಣೆಕೊಟ್ಟು ಶ್ರೀಮಠಕ್ಕೆ ದಯಮಾಡಿದರು. ಹೀಗೆ ನಮ್ಮ ಮಹಾರಾಜರಿಗೆ ದೇವರಲ್ಲಿಯೂ ಗುರುಗಳಲ್ಲಿಯೂ ಕ್ರಮಶ್ರೀಸುವಾಗಿ ದೀಕ್ಷೆ ಇರುವ ಶಿಷ್ಟ ಮಾರ್ಗವಾದ ಭಕ್ತಿಯನ್ನೂ ಇವರಿಗೆ ಉಂಟಾಗಿರುವ ಮಾತೃವಿಯೋಗದುಃಖದಲ್ಲಿಯೂ ಧರ್ಮೈಕರಕ್ಷಕತೆಯನ್ನೂ ಪ್ರಜಾನುರಾಗವನ್ನೂ ನೋಡಿ ನಮ್ಮ ಮಹಾರಾಜರು ಸಕಲ ಸಾಮ್ರಾಜ್ಯಸಂಪತ್ತಿನೊಡನೆ ಪುತ್ರಮಿತ್ರಕಳತ್ರ ಸಹಿತರಾಗಿ, ಆ ಸಮಸ್ತ ಕೀರ್ತಿಪ್ರಭಾವರಾಗಿ, ರಾಜ್ಯಪಾಲನೆಯನ್ನು ನಡೆಸುತ್ತಾ ಚಿರಂಜೀವಿಗಳಾಗಿರಲಿ ಎಂದು ಇಷ್ಟ ಆಚಾರ್ಯರು ಶ್ರೀ ಕರಹಂಗೋಡದ ಸನ್ನಿಧಿಯಲ್ಲಿ ಯಾವಾಗಲೂ ಪ್ರಾರ್ಥಿಸುವದಲ್ಲದೆ, ಈಪಟ್ಟಣದ ಆಬಾಲವೃದ್ಧರೂ ಇದೇ ರೀತಿಯಾಗಿ ಪ್ರಾರ್ಥಿಸುತ್ತಾರೆ.

### ಹಿಂದೂ ಸ್ತ್ರೀವಿದ್ಯಾಭ್ಯಾಸ.

ವಿದ್ಯಾಹೀನೆಯರಾದ ಸ್ತ್ರೀಯರು ದಾಂಪತ್ಯದಲ್ಲಿ ಪ್ರವೇಶಿಸಲ್ಪಟ್ಟರೆ ಅವರ ಮನೋರಥವು ಪೂರೈಸುವದಕ್ಕೆ ಮಧ್ಯಸ್ಥಗಾರರು ಬೇಕೆ ಬೇಡವೊ ಈ ವಿಷಯವು ತಿಳಿಯಬೇಕಾಗಿ ಸಂಭವಿಸುವದರಿಂದ ತಮ್ಮ ಗುಟ್ಟು ಎಲ್ಲಿ ಹೊರಬೀಳುವದೋ ಎಂಬ ಭೀತಿಯೊಂದು ಅವರ ಕಾರ್ಯಕ್ಕೆ ಪ್ರತಿಬಂಧಕಸಾಮಗ್ರಿಯಾಗಿ ವ್ಯಾಪ್ತವಾಗುವದರಿಂದ ವಿಶೇಷತಃ ಅಸ್ತ್ರೀಯರಲ್ಲಿ ಕ್ರಮವು ಹುಟ್ಟುವದಕ್ಕೆ ಅವಕಾಶವಾಗಲಾರದು. ವಿದ್ಯಾವತಿಯರಿಗಾದರೋ ಮಧ್ಯಸ್ಥಗಾರರು ಮುಂತಾದ ಯಾವ ಬಾಹ್ಯ ಉಪಕರಣವಸ್ತುಗಳೂ ಬೇಕಾಗುವದಿಲ್ಲ. ಹಾಗೆಯೂ ಕಷ್ಟ ಅಧೀನವಾದನ್ನಗಳಾದುದರಿಂದ ಯಾವ ಭೀತಿಯೂ ಆಲಸ್ಯವಿಕೆಯೂ ಇಲ್ಲದಂತೆ ತಮ್ಮ ಮನೋರಥವನ್ನೆಲ್ಲಾ ತಿಳಿಸಿ ನಾಯಕರಿಗೆ ಪತ್ರಗಳಂ ಟಪಾಲ್ ಮೂಲಕ ಕಳುಹಿಸಿ ಅಪ್ಪಣೆಗಳನ್ನು ಪಡೆದು ಕೊಳ್ಳುವದಕ್ಕೆ ಬಹು ಅನುಕೂಲವಾದುದರಿಂದ ದುರ್ವರ್ತನಬದ್ಧಬುದ್ಧಿಗಳಾದ ಸ್ತ್ರೀಯರಿಗೆ ಈ ದಾಂಪತ್ಯದಲ್ಲಿ ಪ್ರವೇಶಿಸುವದಕ್ಕೆ ಈ ವಿದ್ಯೆಯು ಎಷ್ಟೋ ಸಹಾಯಕವಾಗಿ ಪರಿಣಮಿಸುವದು.

ಪ್ರಾಚೀನರುಗಳ್ದ ನಮ್ಮ ಸ್ತ್ರೀಯರಿಗೆ ವಿದ್ಯಾಭ್ಯಾಸವು ಕೂಡ ಅನಿವಾರ್ಯವಾಗಿರಲಿಲ್ಲವೇ ? ಎಂದು—ಕೆಲವರು ಅಭಿಪ್ರಾಯ ಪಡುತ್ತಿರಬಹುದು. ಯಥಾರ್ಥವೇ ಸರಿ. ಪೂರ್ವದಲ್ಲಿದ್ದವರಿಗೂ ಸ್ತ್ರೀಯರುಗಳೇ ಹೆಸರು. ಈಗಿನವರಿಗೂ ಸ್ತ್ರೀಯರುಗಳೇ ಹೆಸರು. ಬ್ರಹ್ಮನಿಂದ ಆಕಾಲದಲ್ಲಾ ಸ್ತ್ರೀಯರಿಗೆ ಯಾವ್ಯಾವ ಅಂಗಗಳು ಸೃಜಿಸಲ್ಪಟ್ಟಿದ್ದುವೋ ತತ್ಸದೃಶವಾದ ಅಂಗಗಳು ಈಗಿನ ಸ್ತ್ರೀಯರುಗಳೂ ಶೋಭಿಸುತ್ತಲಿವೆ. ಆದರೆ ಆಕಾಲದಲ್ಲಿದ್ದ ಸ್ತ್ರೀಧರ್ಮಕ್ಕೂ ಈ ಕಾಲದ ಸ್ತ್ರೀಧರ್ಮಕ್ಕೂ ಮಾತ್ರ ಭೇದವುಂಟು. ಕಂಡಿದಾರೆ ಸ್ತ್ರೀವಿದ್ಯಾಭ್ಯಾಸವು ನಿಷಿದ್ಧವೆಂದು ಹೇಳಿ ಕೊಳ್ಳುವದಕ್ಕೆ ಅವಕಾಶವಾಯಿತು. ಆ ಕಾಲದಲ್ಲಿ ಸಾಧಾರಣವಾಗಿ ಪತಿಯೇ ದೈವವೆಂಬ ತಿಳಿದ ಸತಿಯರೇ ಜಗತ್ತಿನಲ್ಲಿ ಪೂರ್ಣವಾಗಿದ್ದರೆಂದು ಹೇಳಬಹುದು. ಈ ಕಾಲದಲ್ಲಾದರೋ ಮುಕ್ಕಾಲುವಾಸಿ ಎಂಥಾ ಪತಿವ್ರತೆಯರು ಕೇಳ್ಪಡುವರೆಂದರೆ “ಪತಿಶ್ಚೈವ ಪ್ರತ್ಯಕ್ಷದೈವಂ” (ತಮ್ಮ ಪತಿಯಲ್ಲಿ ನಿಂದುವ ಪತ್ನಿಯರು) ಅಂದರೆ ತಾನು ಯಥಾಮತಿಯಿಂದ ತನ್ನ ಜೀವಿತಾವಧಿ ಆತನ ಸಂಸರ್ಗವಂ ಮಾಡುವೆನೆಂಬ ವ್ರತನಿಷ್ಠೆಯರಾಗಿರುವರು. ಆಗಿನ ಸ್ಥಿತಿಗೂ ಈಗಿನ ಸ್ಥಿತಿಗೂ ಉಂಟಾಗಿರುವ ಗುಣವೈಲಕ್ಷಣ್ಯಾದಿ ಹೇಳುವದಕ್ಕಾಗದು. ಪೂರ್ವದಲ್ಲಿದ್ದ ಸತಿಯರಿಗೆ ಯಾವ ವಿಧವಾದ ವಿದ್ಯಾಭ್ಯಾಸವು ಅಭಿವೃದ್ಧಿಗೊಳಿಸಲ್ಪಟ್ಟಿತ್ತೋ ಅದು ಅವರಿಗೆ ಉಂಟುಮಾಡಿದ್ದಷ್ಟು ನಾನಾ ವಿಧ ವೈಲಕ್ಷಣ್ಯಗಳು ಈಗಿನ ಜನಕ್ಕೆ ಗುರುತ್ವವೋ ಹಾಗೆ ಅವರ ಸದ್ಗುಣ ವರ್ಧನಕ್ಕೆ ಹೇತು ಭೂತವಾಗುತ್ತಿದ್ದವು. ಈಗಿನ ಸ್ತ್ರೀಯರಿಗೆ ವರೋ ಅಂಥಾ ವಿದ್ಯಾಭ್ಯಾಸವು ಬಿಟ್ಟು ಬೇರೆ ಸದ್ಗುಣಗಳು ಹುಟ್ಟಬಹುದೆ ವೈಲಕ್ಷಣ್ಯದಿಂದ ಆ ವಿಷಯವೇ ನಷ್ಟ ವಾಗಿ ಆ ಕಸ್ಮಾತ್ತಾಗಿ ಆ ವೈಲಕ್ಷಣ್ಯವನ್ನು ಉಂಟುಮಾಡುವದಕ್ಕೆ ಪ್ರಯತ್ನಿಸಿದ ಪುರುಷನಿಗೆ ಪ್ರಾಣಕ್ಕೆ ಹಾನಿಕರವಾಗುತ್ತದೆ ಆದರಂತೆ ಮತ್ತಷ್ಟು ವೈಷಮ್ಯಕ್ಕೆ ಮೂಲವಾಗುವದು. ಆದುದರಿಂದ ಈಗಿನ ಸ್ತ್ರೀಯರಿಗೆ ಪೂರ್ವದ ಸ್ತ್ರೀಯರ ಮಹತ್ವವಂ ತಂದು ವಿದ್ಯಾಭ್ಯಾಸವಂ ಮಾಡಿಸುತ್ತೇವೆಂಬುದು ಯೋಚನೀಯವಾದುದಾಗಿರುತ್ತದೆ. ಅತಿಬಲವತ್ತರವಾದ ಈ ಕಲಿಕಾಲದಲ್ಲಿ ತಾವರೆದಂಟಿನ ನೂಲಿನಿಂದ ಮದಗಜವಂ ಕಟ್ಟುತ್ತೇನೆಂಬ ಧೈರ್ಯವುಳ್ಳ ಮಹಾತ್ಮನು ಮುಖ್ಯ ಸ್ತ್ರೀಯರಿಗೆ ವಿದ್ಯಾಭ್ಯಾಸವಂ ಮಾಡಿಸಿ ಅದರಿಂದ ಸತ್ಫಲವನ್ನು ತಾನು ಅನುಭವಿಸಿ ಅವರಿಂದಲೂ ಅನುಭವಿಸುವಂತೆ ಮಾಡುತ್ತೇನೆಂದು ಪ್ರಯತ್ನ ಪಡಬಹುದು.

Bangalore.—Printed and published at the Karnataka Press, No. 40, Hospital Road, City.—1893

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

## ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning.**

ಪ್ರಕಾಶವಿನಿರತಸ್ವಸ್ಥ್ಯಾವನಗಮಾರ್ಗ್ಯಕರ್ಣಾಟಕಪ್ರಕಾಶನವರಾಭಿದಾಪ್ರಥಿತಸಾಹಿತೀಶೋಭಿತಾ। ವ್ಯಾಗಾಂಕಹಿತವಾಸರೇನಿಹಿತಮುದ್ರಣಾಸಜ್ಜನೈರ್ದ್ವಿಕಾಸುಪರಿಶೋಭಿತಾದಿಶತಿಮಾನಸಂಸುಮುದಂ

Vol. XX | BANGALORE—MONDAY, MAY 1, 1893 [No. 17.

ಸಂಪುಟ ೨೦. ] ಬೆಂಗಳೂರು:—ಸರ್ ೧೮೯೩ ನೇ ಇಸವಿ ಮೇ ೧ ನೇ ತಾರೀಖ್ ಸೋಮವಾರ. | ಸಂಚಿಕೆ ೧೭.

### ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲೀಷ್ ಮತ್ತು ಕನ್ನಡಭಾಗಗಳಿಗೆ.

| | ಮುಂಗಡವಾಗಿ. | ಪರ್ಯಂತದವರಿಗೆ |
|---|---|---|
| ಸಾಲ್ ಒಕ್ಕೆ | 6—0—0 | 8—0—0 |
| 6 ತಿಂಗಳಿಗೆ | 3—8—0 | 4—8—0 |

ಇಂಗ್ಲೀಷ್ ಅಥವಾ ಕನ್ನಡ ಭಾಗಗಳಿಗೆ.

| | ಮುಂಗಡವಾಗಿ. | ಪರ್ಯಂತದವರಿಗೆ. |
|---|---|---|
| ಸಾಲ್ ಒಕ್ಕೆ | 3—0—0 | 4—0—0 |
| 6 ತಿಂಗಳಿಗೆ | 1—12—0 | 2—8—0 |

ಈ ಪತ್ರಿಕೆಗೆ ಚಂದಾ [illegible] ಪಡಾದ ತಾರೀಖ್ ಕೊಡ [illegible] ಪ್ರತಿ [illegible] ಪ್ರಕಾರ ಪತ್ರಿಕೆ [illegible] ಇಂಗ್ಲೀಷ್ [illegible] ಕನ್ನಡ [illegible] ಮಾಡಲ್ಪಡುವದು.

ಪ್ರಕಟನದ ದರಗಳು.

ಒಂದು ಸಾಲಿಗೆ [illegible] ಒಂದಕ್ಕೆ ೧—೨—೦

ಎರಡನೇ [illegible] ಒಂದಕ್ಕೆ ೦—೧—೦

[illegible] ಈ ಪತ್ರಿಕೆಯಲ್ಲಿ [illegible] ಈ ಪತ್ರಿಕೆಗೆ [illegible]

*ADVERTISEMENTS*

## NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

*Price including Postage Rs 5 0 0*

ವೈದ್ಯಸಾರ ಸಂಗ್ರಹ.

ಈ ಗ್ರಂಥವು [illegible] ಪ್ರಕಟಿಸಿರುವ [illegible] ಸಂಸ್ಕೃತ [illegible]

ಇದರ ಕ್ರಯ—ಟ್ಯಾಕ್ಸಿನ್ ಖರ್ಚು ಸಹಾ [illegible] ರೂ ೫—೦—೦

ಟಿ. ಬಿ. ವೆಂಕಟಾಚಾರ್.

ಬೆಂಗಳೂರ್, [illegible]

### ನೋಟೀಸ್.

ಬೆಂಗಳೂರು ಕರ್ನಾಟಿಕ್ ಪ್ರೆಸ್.

೧೮೬೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ ಸಕಲವಿಧ ಕೆಲಸಗಳು ಸುಲಭಬೆಲೆಗೆ ಶೀಘ್ರವಾಗಿಯೂ ಶುದ್ಧವಾಗಿಯೂ ಮುದ್ರಿಸಲ್ಪಡುವವು. ಇದಲ್ಲದೆ ಇಂಗ್ಲೀಷ್ ಕನ್ನಡ ಕೆಲಸಗಳು ಮಾತ್ರವೇ [illegible] ಮ್ಯಾನೇಜರ್ ರವರಿಗೆ ಬರೆದು ತಿಳಿದುಕೊಳ್ಳಬಹುದು.

### ನೋಟೀಸ್.

ಗಣೇಶ ರಾಮಚಂದ್ರ ಕರ್ಣೆ ಮತ್ತು ಕಂಪೆನಿ. ಕಮಿಷನ್ ಏಜೆಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು [illegible] ಕಡಿಮೆ ಕ್ರಯಕ್ಕೆ ಬಹಳ [illegible] ವ್ಯಾಪಾರ [illegible] ಕಮಿಷನ್ ಬೆಲೆಯಿಂದ ಕಳುಹಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರಹ ದಿನಸುಗಳು, ಪುಸ್ತಕಗಳು, ಮುತ್ತುಗಳು, ಪಚ್ಚೆ ಮಾಣಿಕ್ಯಗಳು, ಫೋಟೋಗ್ರಾಫುಗಳು, ವಾಚುಗಳು, ಕ್ಲಾಕುಗಳು, ಶಾಸ್ತ್ರೀಯ ದಾಲುಗಳು, ಸಕ್ಕರೆಗಳು, ಚರ್ಮದ ಕೆಲಸಗಳು, ಚಂದ್ರಕಾಂತ ಶಿಲಾ ಕನ್ನಡಕಗಳು, ಸುಗಂಧ ದ್ರವ್ಯಗಳು, ಔಷಧಿಗಳು, ಆಫೀಸ್ ಡ್ರೆಸ್ಸುಗಳು, ಪಟಗಳು, ಅತ್ತರುಗಳು, ಉತ್ತಮವಾದ ರತ್ನಗಳು, ಬೆಂಗಳೂರ ಕಟ್ಟಲ್ಪಟ್ಟ ಉಂಗುರಗಳು, ಪಾತ್ರೆಗಳು, ಬೆಳ್ಳಿ ಪಾತ್ರೆಗಳು, ಕೇಸರಿ, ಕಸ್ತೂರಿ ಮೊದಲಾದ ಸಾಮಾನುಗಳು.

ಪ್ರಾಪ್ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟ್ಯಾಂಪ್ ಕಳುಹಿಸಿ [illegible] ಮಾಡಬಹುದು.

ವಿಳಾಸ,—ಗಣೇಶ ರಾಮಚಂದ್ರ ಕರ್ಣೆ, ಮತ್ತು ಕಂಪೆನಿ, ಕಮಿಷನ್ ಏಜೆಂಟ್ಸ್, ಠಾಕೂರದ್ವಾರ, ಮಾರ್ಕೆಟ್ ಪೋಸ್ಟು, ಮುಂಬೈ

### ನೋಟೀಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ನಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕರೀಗೆ ಸಿದ್ಧವಾಗಿವೆ. ಬೇಕಾದವರು ಬೆಲೆಯನ್ನು ಕಳುಹಿಸಿ ತರಿಸಿಕೊಳ್ಳಬಹುದು.

### ಸಂಸ್ಕೃತ ಗ್ರಂಥಗಳು.

| | ರೂ | ಆ | ಪೈ |
|---|---|---|---|
| [illegible] | ೩ | ೦ | ೦ |
| ,, [illegible] | ೧ | ೧ | ೧ |
| ,, [illegible] | ೦ | ೮ | ೦ |
| ,, [illegible] | ೧ | ೦ | ೦ |
| ,, [illegible] | ೦ | ೩ | ೦ |
| ,, [illegible] | ೦ | ೧ | ೦ |
| ,, [illegible] | ೦ | ೪ | ೦ |
| [illegible] | ೦ | ೩ | ೦ |
| [illegible] | ೦ | ೨ | ೦ |
| [illegible] | ೦ | ೨ | ೦ |
| [illegible] | ೦ | ೨ | ೦ |
| ೧ [illegible] | ೦ | ೧ | ೦ |

### ಕನ್ನಡ ಗ್ರಂಥಗಳು.

| | ರೂ | ಆ | ಪೈ |
|---|---|---|---|
| [illegible] | ೩ | ೦ | ೬ |
| [illegible] | ೧ | ೨ | ೦ |
| [illegible] | ೧ | ೮ | ೦ |
| [illegible] | ೦ | ೬ | ೦ |
| [illegible] | ೦ | ೬ | ೦ |
| [illegible] | ೦ | ೨ | ೦ |
| [illegible] | ೦ | ೨ | ೦ |
| [illegible] | ೦ | ೨ | ೬ |
| [illegible] | ೦ | ೧ | ೦ |
| [illegible] | ೦ | ೧ | ೦ |
| [illegible] | ೦ | ೧ | ೦ |
| [illegible] | ೦ | ೧೨ | ೦ |
| [illegible] | ೧೨ | ೦ | ೦ |

### THE BANGALORE SREENIVASA MANDIRAM

ಬೆಂಗಳೂರು, ಶ್ರೀನಿವಾಸ ಮಂದಿರ.

ಬೆಂಗಳೂರ್ ಶ್ರೀ ಶ್ರೀನಿವಾಸ ಮಂದಿರದ ಧರ್ಮಶಾಲೆಗೆ ಬರಮಾಡಿಸಲ್ಪಟ್ಟ ಅಕ್ಕಿ ಮತ್ತು ಅದರ ವಿನಿಯೋಗದ ತಪಸೀಲ್ ತೋರಿಸುವ ತಖ್ತೆ.—

೧೮೯೩ನೇ ಇಸವಿ ಏಪ್ರಿಲ್ ೨೨ ನೇ ತಾರೀಖ್ ಮೊದಲು ೨೮ನೇ ತಾರೀಖ್ ವರೆವಿಗೆ —

| | |
|---|---|
| ಅಕ್ಕಿ ಕೊಟ್ಟು ಮಾಡಿದ ಗೃಹಗಳ ಸಂಖ್ಯೆ | 74 |
| ಬರಮಾಡಿಸಿದ ಧಾನ್ಯದ ಸೇರುಗಳ ಸಂಖ್ಯೆ .. | 53½ |
| ಹತವಾದ ಹಿಟ್ಟು ಸೇರು .. | 6 |
| ಜಮಾ ... | 59½ |
| ಅಡಿಗೆ ಕೆಲಸಗಾರರಿಗಾಗಿ ಮಾಡಲ್ಪಟ್ಟ ಸೇರು | 25 |
| ಖರ್ಚಾದ ಅಕ್ಕಿ ಸೇರು ... | 33½ |
| ಜಾತಿ ಬಾಕಿ ... | 1 |
| ಭೋಜನ ಮಾಡಿದ ಜನಗಳ ಸಂಖ್ಯೆ ಮತ್ತು ತಪ್ಸಿಲ್. | |
| ಅನಾಥರು ... .. | 7 |
| ಬಿಕ್ಕಲ್ಲಿದ ವಿದ್ಯಾರ್ಥಿಗಳು ... | 5 |
| ಕಾಯಂ ದರಕ್ತ ವಿದ್ಯಾರ್ಥಿಗಳು .. | 14 |
| ಕಟ್ಟೆ ಕೆಲಸಕ್ಕೆ ಅರ್ಚಕ,ಪರಿಚಾರಕವಗೈರೇರ ಸಂಖ್ಯೆ | 30 |
| ಗ್ರಹಸ್ಥರು .. ... | 11 |
| ಜಮಾ .. | 67 |

### THE MONEY MARKET.

ಮದರಾಸ್, ಶನಿವಾರ, ತಾರೀಖ್ 29 ಏಪ್ರಿಲ್ 1893

ನೇಕಡ ೪ರೂ, ಬಡ್ಡಿ ಗವರ್ನಮೆಂಟ್ ಪತ್ರಗಳು ರೂಪಾಯಿ, 104-0-0 ಇಂದ 104-8-0 ವರವಿಗೆ,

ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತು 975 ಆಗಾ ಯಿತು 980 ವರವಿಗೆ,

ಕೆಮಪ್ನಿನ್ ಅಲ್ ವ ಬ್ಯಾಂಕ್ ಮದ್ರಾಸ್ ಗೌಜ್ ಬ್ಯಾಂಕ್ ಷೇರುಗಳು, (100) ಬಾಬತು 160 ಇಂದ 165 ವರವಿಗೆ

ಸವರ್ನಗಳು, 16—7—0 ಇಂದ 16—10—0 ವರವಿಗೆ

ಬ್ಯಾಂಕ್ ಬಿಲ್‌ಗಳು ಲಂಡನ ಪತ್ರವರುಂಬಿಗೆ, ರೂಪಾಯಿಕ್ಕೆ 6 ತಿಂಗಳವಾಯಿದೆಗೆ, 1s. 2 27/32d

ಡಿಟೋ 4 ತಿಂಗಳವಾಯಿದೆಗೆ, 1s. 2 11/16d

ಡಿಟೋ ಕೇಳಿದಾಗ, 1s. 2 1/4d.

## ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, 1st MAY, 1893

೧೮೯೩ನೇ ಇಸವಿ ಮೇ ತಾ|| ೧ ನೇ ಸೋಮವಾರ.

### ಸಂಗೀತ ವಿದ್ಯಾಭ್ಯಾಸದ ಕುರಿತು.

ಮೈಸೂರ್ ಸಂಸ್ಥಾನದ ಯೂನಿವರ್ಸಿಟಿ ಸೆಕ್ರೆಟರಿಯವರಾದ ಮಿ|| ಬಿ. ಎ. ಯವರು ಪ್ರಕೃತ ಕೆಲಸದ ಆ ರಿಪೋರ್ಟನ್ನು ಕೈಗೊಂಡ ಕಾಲದ ಮೊದಲು, ತಮ್ಮ ಇಲಾಖೆಯ ಅಧೀನ ತಪ್ಪುಗಳನ್ನು ವ್ಯಾಪಕ ವಿಷಯಗಳಿಂದ ಅತ್ಯಂತ ಪರಿಶ್ರಮವಾಗಿ ಸುಪ್ರಸಿದ್ಧ ಪಡಿಸಬೇಕೆಂಬ ಸಂಕಲ್ಪವುಳ್ಳವರಾಗಿ ನ ನಾನಾವಿಧ ಪರೀಕ್ಷೆಗಳಿಂದ ಪರಿಶೀಲಿಸಿ ಬರುತಲೂ, ಪಡಿಯನ್ನು ಈ ಎರಡರ ಪರೀಕ್ಷೆಯಾಗಿ [illegible] ತಕ್ಕಾ ಅಭ್ಯ ಗವರ್ನರ್ ನೇಮಕ ಸಮರ್ಥಕರಾಗಿಯೂ, ಪ್ರಶಂಸನೀಯರಾಗಿಯೂ ಇರುವದರಿಂದ ಅವರ ಪ್ರಯತ್ನ [illegible] ಸಕಲ ಸುಕಾರ್ಯಗಳಿಂ ದುಮುಗುತಲಿದಾರೆ. ಈಗಿನ ಪ್ರಯತ್ನದಲ್ಲಿ ಕೆಲವು ಕಾಲದೊಳಗಾಗಿ ಮೈಸೂರು ದೇಶದವರ್‌ಲ್ಲರು ಸಕಲ ಕಲಾಪ್ರವೀಣರಾಗ ಬೇಕೆಂಬ ಅಭಿನಿವೇಶವು ಸರ್ಕಾರದವರಿಗೂ, ಅವರ ಸೆಕ್ರೆಟರಿ ಯವರಿಗೂ ಅಧಿಕವಾಗಿರುವಂತೆ ಸ್ಪಷ್ಟವಾಗುತಿದೆ. ಹಿಂದೂ ಸಂಗೀತ ಶಾಸ್ತ್ರಕ್ಕೆ ಈ ಕಾಲದಲ್ಲಿ ಉಂಟಾಗುತಲಿರುವ ಕ್ಷೀಣಗತಿಯಂ ಹೋಗಲಾಡಿಸಿ, ತದಭಿವೃದ್ಧಿಗೆ ಬೇಕಾದ ಪ್ರೋತ್ಸಾಹವನ್ನುಂಟುಮಾಡಬೇಕೆಂಬ ಅಭಿಪ್ರಾಯವು ತೋರಿಸುವಂತೆ ಕಾಣುತಿದೆ. ಸಂಗೀತ ವಿದ್ಯೆಯನ್ನು ಸಕಲ ಪಾಠಶಾಲೆಗಳಲ್ಲಿ ಸರ್ವತ್ರ ಬಾಲಕರಿಗೂ ಬಾಲೆಯರಿಗೂ ಬೋಧಿಸಬೇಕೆಂಬುದಾಗಿ ಈಚೆಗೆ ಒಂದು ಹುಕುಂ ಹೊರಟಿತ್ತೆಂಬಂತ ಕೇಳುತ್ತೇವೆ. ಸದರೀ ಉದ್ದೇಶವು ಯೋಗ್ಯವಾದುದಾಗ್ಯೂ ಅದರ ಸಾಫಲ್ಯ ವಿಷಯದಲ್ಲಿ ಮಾತ್ರ ಬಹಳ ಅನುಮಾನಿಸಬೇಕಾಗಿರುತಿದೆ. ಹಿಂದೂ ಸಂಗೀತ ಶಾಸ್ತ್ರವು ಇತರ ಶಾಸ್ತ್ರಗಳಂತೆ ಭಾವಿಸಲ್ಪಡತಕ್ಕದ್ದಲ್ಲವು. ಅದಕ್ಕೆ ಸಾಹಿತ್ಯಶಕ್ತಿ ಮತ್ತು ಪ್ರಕೃತಿ ಸಿದ್ಧಿಸುವದು ಪ್ರಯಾಸವು. ತದ್ಭ್ಯಾಸಕ್ಕೆ ಇತರ ಶಾಸ್ತ್ರಗಳಂತೆ ಯಾರಿಗೂ ಅವಕಾಶವಾಗದು. ಪ್ರಥಮತಃ ಶರೀರ ಭಾಗ್ಯವು ಅಂದರೆ ಕಂಠನಾದವು ಅತ್ಯಂತಾಪೇಕ್ಷಿತವಾದುದರಿಂದ, ಇಷ್ಟಗಿರುವವನ್ನು ಕೋಗಿಲೆಗಳೆನಿಸಲಾಗದು, ಒಂದುವರೆ ಶ್ರುತಿಯಿರುವ ಬಾಲಕರಲ್ಲಿಯೂ ಸಂಗೀತವಿದ್ಯಾಭ್ಯಾಸಾರ್ಹತೆಯನ್ನು ಭಾವಿಸಲಾಗದು. ದಾರಿದ್ರದ ಸಂಕಷ್ಟದಲ್ಲಿ ಕಲಿಸುತ್ತೇನೆಂದು ನುಡಿಯುವ ಪಕ್ಷಕ್ಕೆ ಸಾಮಾನ್ಯವಾದ ಪ್ರಸಂಗಕ್ಕೆ ವಿಷಯವಾಗಲಾರದು. ಆಗ ಉದ್ದೇಶವು ಫಲಿಸದೆ ಹೋಗುವದು. ಸಂಗೀತದಿಂದುಂಟಾಗುವ ಪ್ರಯೋಜನವು ಅಧಿಕವಾಗಿದ್ದಾಗ್ಯೂ ಇದ್ದ ಪ್ರಯೋಜನವನ್ನು ನೋಡಿದರೆ ಅದಕ್ಕೆ ಯೋಗ್ಯವಾದವರಿಗೆ ಆ ವಿದ್ಯೆಯಂ ಕಲಿಸುವದರಿಂದ, ಗಾಯಕನು ತನ್ನ ಕಂಠದ್ವನಿಯಿಂದ ಸ್ವತಃ ಸಂತೋಷಿಸುವದಲ್ಲದೆ, ಆತ್ಮಸಂಬಂಧಿಗಳಾದವರಿಗೂ ಕೂಡ ಸಂತೋಷವನ್ನುಂಟುಮಾಡುವನು. ಇದಲ್ಲದೆ ಇವನು ಪ್ರಯೋಜನಕಾರಿಯಾಗಲಾರದು. ಯಾವಾಗ ಈ ವಿದ್ಯೆಯು ಸ್ವಾರ್ಥವಾಗಿಯೂ ಪರಾರ್ಥವಾಗಿಯೂ ಪ್ರಯೋಜನಕಾರಿಯಾಗದೆ ಹೋಗುವದೋ ಆಗ ಅಂತಹ ವಿದ್ಯೆಯ ಪ್ರೋತ್ಸಾಹದಿಂದೇನೂ ಪ್ರಯೋಜನವಿಲ್ಲವು. ಪ್ರಯೋಗ ಮಾಡಬೇಕೆಂಬ ಸ್ಕೂಲ್‌ಗಳಲ್ಲಿ ಪ್ರಾಯಶಃ ದೂಡತಕ್ಕವರಲ್ಲದು, ಗ್ರಾಮಾಂತರಗಳಲ್ಲಿರುವವರು ಅವರಲ್ಲಿಯೂ ಸಂಗೀತ ಹೇಳಿಸುವದಕ್ಕೆ ಪ್ರಶ್ನಿಸುವದು ಸಫಲವಾಗಲಾರದು. ಇಂಥಾ ಪರೀಕ್ಷೆಗಳಲ್ಲಿಯೂ, ಈ ವಿಷಯದಲ್ಲಿ ಪ್ರಕೃತಿದತ್ತವಾದ ಬೇರೆ ಯಾವ ಪರೀಕ್ಷೆ ಮಾಡಿದರೂ ಚೆನ್ನಾಗಿ ಬರುವವರ್‌ಲ್ಲದೆ ಕೆಲವು ಕೆಲವು ಮಕ್ಕಳಿಗೆ ಸಫಲವಾಗುವದಲ್ಲದೆ, ಪ್ರಾಂತ್ಯದವರೆ, ಮೈಸೂರಲ್ಲಿ ಯಾವರೂ ಅಥವಾ ಈ ಪ್ರಾಂತಗಳಲ್ಲಿ ಯಾರಾದರೂ ಮದರಾಸ್ ಪೂನಾ ಮುಂತಾದ ಪ್ರದೇಶಗಳಲ್ಲಿರುವ ಗಾಯನ ಸಮಾಜಗಳಂತೆ ಒಂದು ಸಮಾಜವನ್ನು ಸ್ಥಾಪಿಸಿ ಅದರೊಳಗೆ ಸಮರ್ಥರಾದ ವಿದ್ವಾಂಸರನ್ನು ಉಚಿತವೇತನಗಳನ್ನು ಕೊಟ್ಟು ಕರೆಯಿಸಿ ನಿಯಮಿಸಿ ಅವರ ಮೂಲಕ ಸದರೀ ವಿದ್ಯೆಯನ್ನು ಸಲಕ್ಷಣವಾಗಿ ಬೋಧಿಸುವದಲ್ಲದೆ, ಆ ವಿದ್ಯಾಭ್ಯಾಸವಂ ಮಾಡಲಿಚ್ಛೆಯುಳ್ಳವರು ಬಹಳ ಮೊದಲಾದ ಅರ್ಹತೆಗಳುಳ್ಳವರಾಗಿರಬೇಕೆಂಬ ಕೆಲವು ವಿಶೇಷ ವಿಧಿಗಳನ್ನೇರ್ಪಡಿಸಿ ಅವುಗಳಿಗೆ ಒಪ್ಪಿರುವವರಂ ಚುನಾಯಿಸಿ ದೃಷ್ಟಾಂತವಾಗಿ ಅಂದರೆ ಸಮರ್ಥರಾದ ವಿದ್ಯಾಗುರುಗಳೂ ಅನುರಾಗವುಳ್ಳ ವಿದ್ಯಾರ್ಥಿಗಳೂ, ಶಾಸ್ತ್ರೀಯವಾದ ಪಾಠಪ್ರವಚನವೂ, ಸಕಲಜನ ಸಮ್ಮತಿಯು ಅನೇಕವಾದ ಪ್ರಯೋಜನವೂ, ಅನಿವಾರ್ಯವಾದ ಸ್ಥಿರವಾದ ವ್ಯವಹಾರವೂ, ಪಿತ್ರಾರ್ಜಿತವಾದ ವಿದ್ಯೆಗೆ ಅಧಿಕ ಪ್ರೋತ್ಸಾಹವು ಉಂಟಾಗುವದರಲ್ಲಿ ಸಂದೇಹವಿಲ್ಲವು. ಈಗ ಸ್ತ್ರೀ ವಿದ್ಯಾಭ್ಯಾಸವು ಸಮಸ್ತ ಜನರ ಹಿತಕ್ಕೆ ತಿಳಿಯುವಂತೆ ಪ್ರಚಲಿತವಾಗಿರುವದರಿಂದ ಮತ್ತು, ಕುಲಕನ್ಯೆಯರು ಶಾಸ್ತ್ರೀಯವಾಗಿ ಗಾನವಿದ್ಯೆಯನ್ನು ಕಲಿತು ಪಠಿಸುವದೆ ಸ್ವದೇಶೀಯ ಶ್ಲಾಘನೀಯವಾಗಿ (ಕೆಲವು ಪ್ರವೃತ್ತಿಗಳನ್ನು ಬಿಡುವದರಿಂದಲೂ, ಅಧುನಿಕ ವ್ಯಭಿಚಾರಕ್ಕೆ ಆದ ಅವಕಾಶಗಳನ್ನು) ಮುಖ್ಯಲಕ್ಷಣವಾಗಿ ಗಣಿಸಲ್ಪಟ್ಟು ಎಲ್ಲರೂ ತಮ್ಮ ಸಂತತಿಯವರು, ವೈದಿಕರಾಗಿಯೂ ಗಾನಶೀಲರಾಗಿಯೂ, ಪ್ರಸಿದ್ಧಿಯನ್ನು ಪಡೆಯಬೇಕೆಂದು ಪ್ರೋತ್ಸಾಹಿಸತಕ್ಕವರಾಗಿರುವದರಿಂದಲೂ, ಇಂಥಾ ಸ್ಥಿತಿಯಲ್ಲಿ ಜನರ ಕೂಗು ಈಶ್ವರನಿಗೆ ಕೇಳುವದಕ್ಕೆ ಮೊದಲು ತಿಳಿಸಲ್ಪಟ್ಟಂತ ಪ್ರತ್ಯೇಕ ಸಂಗೀತಶಾಸ್ತ್ರ ಶಾಲೆಯೊಂದು ಕೇವಲ ಆವಶ್ಯಕವೆಂಬುದಾಗಿ ಈ ಭೂಮಿ ಯವರು ಪ್ರಾಯೋಜಿಸಿ ತಕ್ಕ ಏರ್ಪಾಡುಗಳಂ ಮಾಡುವರೆಂದು ನಂಬುತ್ತೇವೆ. ಇಂಥಾ ಏರ್ಪಾಡು ಮಾಡಲ್ಪಟ್ಟಲ್ಲಿ ಆಗ ಗಾನವಿದ್ಯಾಭ್ಯಾಸವಾದ ಅನಂತರ ಸ್ತ್ರೀಪುರುಷರು ಸಮನಾಗಿ ಅನುಭವಿಸಿ ಅನ್ಯೋನ್ಯ ಸಂತೋಷಗೊಳಿಸಲಿಕ್ಕೆ ಸಾಧಕವಾಗಿ ಉದ್ದಿಷ್ಟ ಫಲವು ಶೀಘ್ರದಲ್ಲಿಯೇ ಕೈಗೂಡಿ ಲೋಕಕ್ಕೆ ಬಹು ಉಪಕಾರವಾಗುವದೆಂದು ನಂಬುತ್ತೇವೆ.

## ಔತನೋತ್ಸವಗಳು ಮತ್ತು ತಾಕೀಗಳು.

ಹಿಂದೂ ದೇವಾಲಯಗಳಲ್ಲಿ ನಡೆಯುವ ಉತ್ಸವಕಾಲಗಳಲ್ಲೂ, ವಿವಾಹ ಮೊದಲಾದ ಶುಭಸಮಯಗಳಲ್ಲೂ, ಔತನೋತ್ಸವಗಳಲ್ಲೂ ವಾರಾಂಗನೆಯರಂ ಕರೆಯಿಸಿ ಅವರಿಂದ ಗಾನ ನರ್ತನಗಳಂ ನಡಿಸುವುದು ಈ ಇಂಡ್ಯದೇಶದೊಳು ಅನಾದಿ ಸಂಪ್ರದಾಯವಾಗಿ ಇರುತಲಿದೆಯಷ್ಟೆ. ಹೀಗಿರುವಲ್ಲಿ ಈಚೆಗೆ ಕೆಲವು ಕಾಲದ ಮೊದಲು ಮಿಷನೆರಿಗಳ ಪೈಕಿ ಒಬ್ಬರಿಬ್ಬರು, ಸದರೀ ಪದ್ಧತಿಯು ಕೇವಲ ದೂಷ್ಯವಾದುದೆಂತಲೂ, ಅದರಿಂದ ಜನರು ದುರ್ನೀತರಾಗುವದಕ್ಕೆ ಸುಲಭಾವಕಾಶ ವುಂಟೆಂತಲೂ, ಸರ್ವಪ್ರಯತ್ನದಿಂ ಸದರೀ ದುಷ್ಪದ್ಧತಿಯಂ ತಪ್ಪಿಸುವದುಚಿತವೆಂತಲೂ, ಸ್ವಾಭಿಪ್ರಾಯಪೂರ್ವಕವಾದ ಒಂದು ಲೇಖನವಂ ವೃತ್ತಾಂತಪತ್ರಿಕೆಗಳ ಮೂಲಕ ಪ್ರಕಟಿಸಲಾರಂಭಿಸಿದರು. ಅಂತಾ ಲೇಖನಕ್ಕೆ ಪ್ರೋತ್ಸಾಹಕವಾಗಿ ಕಳೆದ ತಿಂಗಳ ೨೭ನೇ ತಾರೀಖಿನ ಮದರಾಸ್ ಹಿಂದೂ ಎಂಬ ಪತ್ರಿಕೆಯು ಮದರಾಸ್ ಗವರ್ನರಾಗಿರುವ ಲಾರ್ಡ್ ವೆನ್ಲಾಕ್‌ಗಾರವರಂ ನಿರ್ದೇಶಿಸಿ ತಿಳಿಸುವ ಅಭಿಪ್ರಾಯವೇನೆಂದರೆ — ಘನವಂತರಾದ ಗವರ್ನರವರು ರಾಜ್ಯಧುರವಂ ಕೈಗೊಂಡಕಾಲದಲ್ಲಿ ಬಳ್ಳಾರಿ ಮೊದಲಾದ ಶಹರುಗಳಂ ನೋಡುವದಕ್ಕೆ ಹೋಗಿದ್ದ ಸಂದರ್ಭಗಳೊಳು ತಮ್ಮ ಆಗಮನಕ್ಕಾಗಿ ಅಲ್ಲಿಯಲ್ಲಿ ಮಾಡಲ್ಪಟ್ಟದ್ದ ಬಹ್ವರ್ಥಸಾಧ್ಯಗಳಾದ ಸನ್ಮಾನಗಳಂ ನೋಡಿ, ಬಲಾತ್ಕಾರಪೂರ್ವಕ ಪ್ರಜೆಗಳಿಂದ ಅರ್ಥಸಹಾಯವಂ ಪಡೆವ ಈ ರೀತಿ ಮಾಡುವದನುಚಿತವೆಂದು ಭಾವಿಸಿ, ಅದಂ ಖಂಡಿತವಾಗಿ ನಿಲ್ಲಿಸಿದರು. ತದ್ವತ್ ಔತನೋತ್ಸವ ಸಂದರ್ಭಗಳೊಳು ಅಬಗ್ಯೆ ಕರೆಯಿಸಲ್ಪಟ್ಟವರ ಸಂತೋಷಾರ್ಥ ವೇಶ್ಯೆಯರಂ ಕರೆಯಿಸಿ ಗಾನ ನರ್ತನಗಳಂ ಮಾಡಿಸುವ ಪಕ್ಷಕ್ಕೆ ತಾವೂ ತಮ್ಮ ಭಾರ್ಯೆಯವರೂ ಬರುವದಿಲ್ಲವೆಂದು ನಯವಾದ ಶಬ್ದಗಳಿಂದ ತಿಳಿಸುವದರ ಮೂಲಕ ಸದರೀ ವಾಡಿಕೆಯಂ ತಪ್ಪಿಸುವದು ಭೂಷಣವಾಗಿಯೂ ಜನರು ದುರ್ನೀತರಾಗದೆ ಇರುವದಕ್ಕೂ ಕಾರಣವಾಗುವದು. ಯೂರೋಪಿಯನ್ನರು ಸಾಮಾನ್ಯವಾಗಿ ಇಂಡ್ಯದೇಶದ ನರ್ತನಕ್ಕಾಗಲಿ, ಗಾನಕ್ಕಾಗಲಿ ಸಂತೋಷಪಡುವದಿಲ್ಲವು. ಪರಂತು ಹಿಂದುಗಳ ಮನಸ್ಸುಗಳಂ ನೋಯಿಸಬಾರದೆಂಬ ಉದ್ದೇಶದೊಡನೆ ಅದಂ ಸಹನೆಯೊಡನೆ ನೋಡುತ್ತಾರೆ ಗವರ್ನರವರು ಗವರ್ನಮೆಂಟಿಗೆ ಮುಖಂಡರಾಗಿಯೂ, ಯೂರೋಪಿಯನ್ ಜನರಿಗೆ ತಲೆವರಾಗಿಯೂ, ಬ್ರಿಟಿಷಿನವರ ಸಮಯಾಚಾರಗಳಲ್ಲಿ ದೋಷ ನಿವಾರಕವಾಗಿಯೂ ವಿವೇಕ ಜನಕವಾಗಿಯೂ ಇರುವ ವಿಶಿಷ್ಟ ವಿಷಯಗಳನ್ನೂ ತಿಳಿಸತಕ್ಕವರಾಗಿಯೂ ಇರುವದರಿಂದ, ಅಂತಾ ಸಭೆಗಳಿಗೆ ಗವರ್ನರವರು ಹೋಗದೆ ಇರುವದು ಉಚಿತವೆಂದು ನಾವು ಅವರು ಕೇಳಿಕೊಳ್ಳಬಹುದು ವಿಲಕ್ಷಣ ಮಂಡಲಿಯಲ್ಲಿ ಅಂತಾ ಸ್ತ್ರೀಯರ ಪ್ರವೇಶಕ್ಕೆ ಅವಕಾಶವಂ ಕೊಡುವದು ಗೌರವ ಹಾನಿಕರವಾದುದೆಂಬ ಭಾವವು ಇಂಡ್ಯದೇಶೀಯರಿಗುಂಟಾಗುತಲಿದೆ. ಹಿಂದೂಗಳಲ್ಲಿ ಮೇಲಿನ ದುಷ್ಪದ್ಧತಿಯಂ ನಿವೃತ್ತಿಸುವವರೊಳು ಅಭಿಮತವುಳ್ಳವರ ಸಂಖ್ಯೆಯು ದಿನೇ ದಿನೆ ವೃದ್ಧಿಯಾಗುತಲಿದೆ. ಪ್ರಜೆಗಳ ವಿವೇಕಾಭಿವೃದ್ಧಿಗೆ ಪ್ರತಿಬಂಧಕಗಳಾದ ಯಾವ ವಿಷಯಕ್ಕೂ ಅವಕಾಶ ಕೊಡಲ್ಪಡಕೂಡದು. ವೇಶ್ಯೆಯರು ಕರೆಯಿಸಲ್ಪಡುವ ಔತನಗಳಿಗೆ ತಾವಾಗಲಿ ತಮ್ಮ ಭಾರ್ಯೆಯವರಾಗಲಿ ಬರುವದಿಲ್ಲವೆಂದು ಗವರ್ನರವರು ಹೇಳಿದರೆ ಸಾಕಾಗಿರುತಿದೆ. ಮದರಾಸ್ ಪ್ರೆಸಿಡೆನ್ಸಿಯಲ್ಲಿ ಸರ್ವೋನ್ನತಾಧಿಕಾರಿಯಾದವರು ಆ ರೀತಿ ಮಾಡುವದರಿಂದ ಇತರ ಯೂರೋಪಿಯನ್ ದೊಡ್ಡ ಮನುಷ್ಯರೂ ಲೇಡಿಗಳೂ ಅವರನ್ನನುವರ್ತಿಸುವರೆಂಬದಂ ನಾವು ತಿಳಿಸಬೇಕಾದುದಿಲ್ಲವು. ವೇಶ್ಯೆಯರು ಕರೆಯಿಸಿದರೆ ಯೂರೋಪಿಯನ್ನರು ಬರಲಾರರೆಂಬಂತೆ ಜನರಿಗೆ ತಿಳಿದರೆ ಆ ವಾಡಿಕೆಯು ಅವರೇ ನಿಲ್ಲಿಸಿಬಿಡುತ್ತಾರೆ, ಎಂಬದು ಪತ್ರಿಕೆ.

ಇದೇ ವಿಷಯದಲ್ಲಿ ಈಚೆಗೆ ಮದರಾಸ್ ಟೈಂಸ್ ಎಂಬ ಪತ್ರಿಕೆ ವ್ಯಕ್ತಪಡಿಸುವ ಅಭಿಪ್ರಾಯವು ಪ್ರಾಯಶಃ ಸಮರ್ಪಕವಾಗಿ ಕಂಡುಬರುವದರಿಂದ ಅದನ್ನಿದರಡಿ ಸಂಗ್ರಹವಾಗಿ ತಿಳಿಸುತ್ತೇವೇನೆಂದರೆ.—ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಮಹಾರಾಜ್ಞೀಯವರ ಪುತ್ರರಾದ ಡ್ಯೂಕ್ ಆಫ್ ಯೆಡಿಂಬರೋ ಯವರೂ, ತರುವಾಯ ಪ್ರಿನ್ಸ್ ಆಫ್ ವೇಲ್ಸ್‌ರವರೂ, ಇಂಡ್ಯದೇಶ ಸಂಚಾರ ಮಾಡಿಕೊಂಡು ಮದರಾಸಿಗೆ ಬಂದಿದ್ದ ಕಾಲದೊಳು ಅವರ ಗೌರವಾರ್ಥ ಅಲ್ಲಿನ ನೇಟಿವ್ ದೊಡ್ಡ ಮನುಷ್ಯರು ಮಾಡಿಸಿದ್ದ ಔತನೋತ್ಸವಕಾಲದಲ್ಲಿ ಜಗದ್ವಿಖ್ಯಾತಳಾದ ವೇಶ್ಯಾಂಗನೆಯೊಬ್ಬಳು ಕರೆಯಿಸಲ್ಪಟ್ಟು ಮಹಾರಾಜ್ಞೀಯವರ ಪುತ್ರರ ದರ್ಶನ ಸಲ್ಲಾಪಗಳಿಗೆ ಪಾತ್ರಳನ್ನಾಗಿ ಮಾಡಲ್ಪಟ್ಟಳು ಈಗಿನಂತೆ ಆ ಕಾಲದಲ್ಲೂ ವೃತ್ತಾಂತ ಪತ್ರಿಕೆಗಳು ನಡೆಯುತಿದ್ದವು; ಈಗಿನಂತೆ ಆಗಲೂ ಯೂರೋಪಿಯನ್ ಸಮೂಹವಿರುತಲಿತ್ತು; ಈಗಿನಂತೆ ಆಗಲೂ ಮಿಷನೆರಿಗಳೂ ಇರುತಲಿದ್ದರು. ಆದಾಗ್ಯೂ ವೃತ್ತಾಂತ ಪತ್ರಿಕಾ ಲೇಖಕರೇ ಆಗಲಿ, ಯೂರೋಪಿಯನ್ನರೇ ಆಗಲಿ, ಮಿಷನೆರಿಗಳೇ ಆಗಲಿ, ವೇಶ್ಯೆಯರ ನಾಟ್ಯವಂ ನೋಡುವದು ದೋಷಾವಹವೆಂದು ಆಕ್ಷೇಪಿಸಲಿಲ್ಲವು. ಅದು ಮೊದಲು ಇಪ್ಪತ್ತು ವರ್ಷಗಳ ಕಾಲ ಕಳೆದು, ಮಿಷನೆರಿಗಳ ಪ್ರಾಬಲ್ಯದ ದೆಸೆಯಿಂದ ಯೂರೋಪಿಯನ್ ಜನರ ಚಿತ್ತವೃತ್ತಿಯು ಸಂಪೂರ್ಣವಾಗಿ ರೂಪಾಂತರವನ್ನೈದಿರುತಿದೆ. ಯೂರೋಪಿಯನ್ ಜನರು ಉಲ್ಲಾಸಾರ್ಥ ಒಂದು ಕಡೆ ಸೇರುವಲ್ಲಿ ಪರಾಪೇಕ್ಷೆ ಇಲ್ಲದೆ ಸಂತೋಷ ಜನಕಗಳಾದ ಕಾರ್ಯಗಳಂ ತಮ್ಮೊಳು ತಾವೇ ನೆರವೇರಿಸಿಕೊಳ್ಳುತ್ತಾರೆ, ಪರಂತು ಅಂತಾ ಸಂದರ್ಭಗಳಲ್ಲಿ ನೇಟಿವ್‌ಗಳು ಕಸಬುದಾರರಾದವರನ್ನು ಕರೆಯಿಸಿ ಅವರ ಮೂಲಕ ನಡಸಿಕೊಳ್ಳುತ್ತಾರೆ. ಹಿಂದೂಗಳು ಪ್ರಾಯಶಃ ಕಾಮುಕಿಯರಾದ ಸದರೀ ವೇಶ್ಯಾಜನರಂ ಕರೆಯಿಸಿ, ಸಭಾ ಮಧ್ಯದಲ್ಲಿ ಹೊಂದುವದಕ್ಕೆ ಅರ್ಹರಲ್ಲದ ಅವರಿಗೆ ಒಂದು ಗೌರವವನ್ನುಂಟುಮಾಡುವದರಿಂದ ದುಷ್ಫಲಗಳುಂಟಾಗುವವೆಂಬದಂ ಯೋಚಿಸದೆ ಔದಾಸೀನ್ಯತೆಯಂ ವಹಿಸಿರುತ್ತಾರೆಂಬದು ದಿಟ, ಪರಂತು ಸದರೀ ಜನರು ವಿನೋದಾರ್ಥ ಸ್ವಲ್ಪ ಕಾಲದವರೆಗೆ ಕರೆಯಿಸಲ್ಪಡತಕ್ಕವರಾಗಿರುತ್ತಾರೆ ವಿಶೇಷ ಸಂದರ್ಭಗಳಲ್ಲಿ ಸದರೀ ಯವರಂ ಕರೆಯಿಸುವದು ಯೂರೋಪಿಯನ್ ಜನರಿಗೆ ಇಷ್ಟವಿಲ್ಲದಿದ್ದು ಕರೆಯಿಸಿದರೆ, ಅದರಿಂದ ಯೂರೋಪಿಯನ್ನರು ಬರುವದಿಲ್ಲವೆಂದು ಹೇಳಿ ತನ್ಮೂಲಕ ಅವರಿಗೂ ನೇಟಿವ್‌ಗಳಿಗೂ ಉಂಟಾಗಿರುವ ಸ್ನೇಹ ಸಂಬಂಧಕ್ಕೆ ನ್ಯೂನತೆ ಯುಂಟಾಗುವದಾಗಿ, ಅಂತಾ ಸಮಯಗಳಲ್ಲಿ ತಪ್ಪಿಸಿ, ಹಿಂದೂಗಳಿಗೆ ಇಷ್ಟವಿದ್ದರೆ ತಮ್ಮ ದೇಶವಾಡಿಕೆಯನ್ನನುಸರಿಸಿ ಇತರ ಸಂದರ್ಭಗಳಲ್ಲಿ ಕರೆಯಿಸಿಕೊಳ್ಳುವದರಲ್ಲಿ ಅಭ್ಯಂತರವಿಲ್ಲವು, ಎಂಬದು. ಈ ವಿಷಯದಲ್ಲಿ ನಮ್ಮ ಅಭಿಪ್ರಾಯವಂ ಮುಂದೆ ತಿಳಿಸುವೆವು.

## Occasional Notes.
## ನೈಮಿತ್ತಿಕ ವಿಷಯನ್ಯಾಸ.

ಕಳೆದ ತಿಂಗಳ ೨೮ ನೇ ತಾರೀಖಿನಲ್ಲಿ ಭಾವನಗರದ ಮಹಾರಾಜರವರು ಲಂಡನ್ ಪಟ್ಟಣವಂ ಸೇರಿದರು. ಅವರು ಹಡಗು ಇಳಿಯುವಕಾಲಕ್ಕೆ ಸರಿಯಾಗಿ ಮಹಾರಾಜ್ಞೀ ಸರ್ಕಾರದ ತರಫ ಒಬ್ಬ ಪ್ರತಿನಿಧಿಯವರು ಹಾಜರಿದ್ದು ಮಹಾರಾಜರವರನ್ನು ಬರಮಾಡಿಕೊಂಡರು.

ಲೋಕದಲ್ಲಿ ಮನುಷ್ಯನಿಗೆ ತನ್ನ ಬೆನ್ನಂ ತಾನು ನೋಡಿಕೊಳ್ಳುವದಕ್ಕೆ ಸಾಧ್ಯವಲ್ಲವಷ್ಟೆ. ಈಚೆಗೆ ಅಮೆರಿಕಾ ದೇಶದೊಳಗಣ ಪೆನ್ಸಿಲ್ವೇನಿಯಾ ಎಂಬ ಶಹರಿನಲ್ಲಿ ಒಬ್ಬಾತನು ಒಂದು ಉಪನೇತ್ರವಂ ಸೃಜಿಸಿರುತ್ತಾನೆ ಅದನ್ನು ಹಾಕಿಕೊಂಡವನಿಗೆ ತನ್ನ ಮುಂದುಗಡೆಯಂತೆ ಬೆನ್ನಿನಕಡೆ ನಡೆಯುವದೆಲ್ಲವು ಕಾಣಬರುತಿದೆ ಉಪನೇತ್ರದ ಕನ್ನಡಿಗಳಿರತಕ್ಕ ಪ್ರತಿಫಲಕಶಕ್ತಿಯುಳ್ಳ ಸಣ್ಣ ಕನ್ನಡಿಗಳಂ ಸೇರಿಸಿ ಬಿಗಿಸುವದರಿಂದ ಮೇಲಿನ ಶಕ್ತಿ ಯುಂಟಾಗುತಲಿದೆ.

ಕೊಚ್ಚಿ ಸಂಸ್ಥಾನಕ್ಕೆ ಒಂದು ನ್ಯಾಯವಿಧಾಯಕ ಸಭೆ ಇರಬೇಕಾದ್ದಾವಶ್ಯಕವೆಂದು ಅಲ್ಲಿನ ಬ್ರಿಟಿಷ್ ರೆಸಿಡೆಂಟರವರು ಸೂಚಿಸಲು ಅದೇ ಮೇರೆ ಕ್ಷಿಪ್ರದಲ್ಲಿ ಒಂದು ನ್ಯಾಯವಿಧಾಯಕ ಸಭೆಯಂ ಏರ್ಪಾತು ಮಾಡುವ ಯೋಚನೆ ಯುಂಟಾಗಿದೆಯೆಂದು ಆ ಪ್ರಾಂತದ ಪತ್ರಿಕೆಯೊಂದು ತಿಳಿಸುತಿದೆ. ಈ ಸಭೆಗೆ ಸದರೀ ಸಂಸ್ಥಾನದ ದಿವಾನರವರು ಪ್ರೆಸಿಡೆಂಟರಾಗಿಯೂ, ನೌಕರರಲ್ಲದವರೊಬ್ಬರೂ ಅಧಿಕಾರಿಗಳಿಬ್ಬರೂ ಮೆಂಬರ್‌ಗಳಾಗಿ ನಿಯಮಿಸಲ್ಪಡುವರು

ಭಿಕಾನಿಯರ್ ಸಂಸ್ಥಾನದ ಮಹಾರಾಜರವರು ಈಚೆಗೆ ಮುಂಬೈ ಟಂಕಸಾಲೆಗೆ ಬೇಕಾದಷ್ಟು ಬೆಳ್ಳಿಯಂ ಕಳುಹಿಸಿ ತಮ್ಮ ಸಂಸ್ಥಾನದ ಉಪಯೋಗಕ್ಕಾಗಿ ಸುಮಾರು ಒಂದು ಲಕ್ಷ ರೂಪಾಯಿಗಳಂ ಟಾಕಾ ಹಾಕಿಸಿ ತರಿಸಿಕೊಂಡರು ಮುಂದೆ ಮೂವತ್ತು ಸಂವತ್ಸರಗಳ ವರೆಗೆ ತಮ್ಮ ಸಂಸ್ಥಾನದ ಟಂಕಸಾಲೆಗೆ ತಾಂಬ್ರ ಬೆಳ್ಳಿ ನಾಣ್ಯಗಳಂ ಛಾಪಿಸುವದಿಲ್ಲವೆಂದು ಮಹಾರಾಜರವರು ಒಡಂಬಡಿಕೆ ಮಾಡಿಕೊಂಡದರಿಂದ ಬ್ರಿಟಿಷ್ ಇಂಡ್ಯಾ ರಾಜ್ಯದಲ್ಲಿ ಸದರೀ ರೂಪಾಯಿಗಳು ಚಲಾವಣೆ ನಾಣ್ಯಗಳಾಗಿ ಅಂಗೀಕರಿಸಲ್ಪಟ್ಟವು

ಮುಂಬೈ ಶಹರಿನಲ್ಲಿ ಒಂದು ವಿಶೇಷ ಸಂದರ್ಭದೊಳು ಪ್ರಜೆಗಳು ಸ್ವತಂತ್ರವಾಗಿ ಉಪಯೋಗಿಸಿಕೊಳ್ಳುವದಕ್ಕೆ ಅರ್ಹವಾದ ಒಂದು ಕಟ್ಟಡವಿಲ್ಲದೆ ಇದ್ದದ್ದು ಒಂದು ಪ್ರಬಲ ಲೋಪವಾಗಿತ್ತು. ಅದು ನಿವೃತ್ತಿಯಾಗುವ ಕಾಲ ಪ್ರಾಪ್ತವಾಗುವಂತೆ ಕಾಣುತಿದೆ ಸ್ವಲ್ಪಕಾಲದೊಳಗಾಗಿ ಮಾಡಿದ ಅನೇಕ ಧರ್ಮಕಾರ್ಯಗಳ ದೆಸೆಯಿಂದ ಮುಂಬೈಯಲ್ಲಿ ಸಾಮಾನ್ಯವಾಗಿ ಎಲ್ಲರ ಗೌರವ ಪುರಸ್ಕಾರಗಳಿಗೆ ವಿಷಯಳಾಗಿರುವ ಫಾರ್ಸೀಜಾತಿಹೆಂಗಸು ಒಬ್ಬಾಕೆಯು, ಸದರೀ ಶಹರಿನೊಳು ಜನರ ಉಪಯೋಗಾರ್ಥ ಒಂದು ದೊಡ್ಡ ಕಟ್ಟಡವಂ ಕಟ್ಟಿಸಿ ಅದಕ್ಕೆ ಸೇರಿದಂತೆ ಒಂದು ಸರಸ್ವತೀ ಭಂಡಾರವನ್ನು ಸ್ಥಾಪಿಸತಕ್ಕ ಬಗ್ಗೆ ಐದುಲಕ್ಷ ರೂಪಾಯಿಗಳು ಕೊಡುವದಾಗಿ ತಿಳಿಸಿರುತ್ತಾಳೆ ಸದರೀ ಕಟ್ಟಡವು ಎಸ್‌ಪ್ಲನೇಡ್ ಎಂಬ ಮೈದಾನ್ನಲ್ಲಿ ಮುಖ್ಯವಾದ ಒಂದು ಪ್ರದೇಶದೊಳು ಕಟ್ಟಲ್ಪಡುವುದು. ಸಮರ್ಥರಾದ ಒಬ್ಬ ಇಂಜನಿಯರಿಂದ ಅದರ ನಕ್ಷೆ ವಗೈರೆ ಇದುವರೆಗೇನೇ ತಯಾರ್ಮಾಡಲ್ಪಟ್ಟಿರುತಿವೆ ಸದರೀ ಕಟ್ಟಡವು ಮೃತಪಟ್ಟ ಆಕೆಯ ಪತಿಯ ಜ್ಞಾಪಕಾರ್ಥ ಕಟ್ಟಲ್ಪಡುವುದು.

ಈಚೆಗೆ ಕೆಲವು ದಿನಗಳ ಹಿಂದೆ ವಾಯುವ್ಯ ದೇಶದ ಲೆಫ್ಟಿನೆಂಟ್ ಗವರ್ನರಾದ ಸರ್ ಚಾರ್ಲ್ಸ್ ಕ್ರಾಸ್ಥ್‌ವೈಟ್ ಎಂಬವರು ಹರಿದ್ವಾರದ ಬ್ರಾಹ್ಮಣರಂ ಕೂಡಿಸಿ ಒಂದು ಉಪನ್ಯಾಸವಂ ಮಾಡಿದರೇನೆಂದರೆ—ಹರಿದ್ವಾರದ ಬ್ರಾಹ್ಮಣರೆ, ನೀವು ಅನುಪಪನ್ನರಾದ ಯಾತ್ರಾರ್ಥಿಗಳ ಪ್ರಾಣಂ ಭಕ್ಷಿಸುತ ಇಲ್ಲಿ ಕುಳಿತುಕೊಂಡಿರುತ್ತೀರಿ, ಪರಂತು ಷಹರನ್ನು ಪರಿಶುದ್ಧವಾಗಿ ಇಟ್ಟುಕೊಂಡಿರಬೇಕಾದ ವಿಷಯಕ್ಕಾಗಲಿ, ಯಾತ್ರಾರ್ಥಿಗಳಾಗಿ ಬರುವಂತವರಿಗೆ ಪಾನೋದಕವಂ ಒದಗಿಸಿಕೊಡುವ ವಿಷಯಕ್ಕಾಗಲಿ ಒಂದು ಕಾಸು ಸಹಾಯ ಮಾಡುವದಿಲ್ಲವು. ಮತ್ತು ಯಾವ ದುಡ್ಡಿನಿಂದ ನೀವು ಜೀವಿಸುತಲಿರುತ್ತೀರೆಯೋ ಅವರ ಆರೋಗ್ಯಸ್ಥಿತಿಗೆ ನೀವು ಅವಧಾನ ಕೊಡುವದಿಲ್ಲವು ಈಗ ನಿಮಗೆ ನಾನು ತಿಳಿಸುವದೇನೆಂದರೆ, ನಿಮ್ಮ ಉತ್ಸವದಲ್ಲಿ ಗವರ್ನಮೆಂಟಿನವರು ಪ್ರವೇಶಿಸುವದಿಲ್ಲವು, ಪರಂತು ಪ್ರಬಲರೋಗಗಳೇನಾದರು ಪ್ರಾಪ್ತವಾಗುವದಾದರೆ, ನಿಮಗೆ ನಷ್ಟವುಂಟಾಗಲಿ ಆಗದೆ ಹೋಗಲಿ, ಜನಸಂಘವನ್ನು ಚದರಿಸಿಬಿಡಬೇಕಾಗುವದು. ಸ್ಥಳದ ಪರಿಶುದ್ಧತೆಯ ಬಗ್ಗೆ ಮಾಡಲ್ಪಟ್ಟಿರುವ ನಿಬಂಧನೆಗಳಿಗೂ ಕೊಡಲ್ಪಡುವ ಹುಕುಂಗಳಿಗೂ ನೀವು ಬದ್ಧರಾಗಿರಬೇಕು, ಮತ್ತು ಮೇಲಿನ ಕಾರ್ಯಗಳಂ ನೆರವೇರಿಸುವದಕ್ಕಾಗಿ ವಿಧಿಸಲ್ಪಟ್ಟಿರುವ ತೆರಿಗೆಯ ಪೈಕಿ ಉಚಿತವಾದ ಭಾಗವನ್ನು ನೀವು ಕೊಡಬೇಕಾಗುವದು ಆದುದರಿಂದ ಈ ಕಾರ್ಯಕ್ಕೆ ನಿಮ್ಮ ಸ್ವಂತದ್ರವ್ಯದಿಂದ ನೀವು ಸಹಾಯ ಮಾಡಬೇಕೆಂದು ನಿಮಗೆ ನಾನು ಬುದ್ಧಿ ಹೇಳುತ್ತೇನೆ, ಎಂಬದು

## ನೋಟಿಸು

ಇದರಿಂದ ನಮ್ಮ ಚಂದಾದಾರರಿಗೆ ನಾವು ಪ್ರಕಟಿಸುವದೇನೆಂದರೆ:—

ಈ ಸಾಲಿನಲ್ಲಿ ನಿನ್ನೆಯ ದಿನವೊಡನೆ ನಾಲ್ಕು ತಿಂಗಳು ಕಳೆದವು. ಇನ್ನು ಅವರವರು ಚಂದಾ ಮೊಬಲಗನ್ನು ಕಳುಹಿಸದ ಹೊರತು ಈ ಪತ್ರಿಕೆಯ ಕಾರ್ಯವು ನಿರುಪಾಧಿಕವಾಗಿ ನಡೆಯಲಾರದು. ಆದಕಾರಣ ಎಲ್ಲರು ದಯಮಾಡಿ ಕೂಡಲೆ ಚಂದಾ ಹಣವನ್ನು ಕಳುಹಿಸ ಬೇಕೆಂದು ಕೇಳಿಕೊಳ್ಳುತ್ತೇವೆ. ಹಾಗೆ ಮಾಡದವರಿಗೆ ಈ ಪತ್ರಿಕೆ ಕಳುಹಿಸಲ್ಪಡಲಾರದು

೧—೫—೯೩ ಪ್ರೊಪ್ರೈಟರ್.

## LOCAL AND PROVINCIAL NEWS
## ಒಳದೇಶಮತ್ತು ತಾಲ್ಲೂಕಿನವೃತ್ತಾಂತಗಳು.

ಈ ಸಂಸ್ಥಾನದ ದಿವಾನರವರು ನಂದಿ ಪ್ರಾಂತದಲ್ಲಿರುವದು ಸರಿಯಷ್ಟೆ ಈ ಪ್ರಾಂತಿಗೆ ಅವರು ಬರುವದಕ್ಕೆ ಇನ್ನು ಒಂದೆರಡು ವಾರಗಳು ಹಿಡಿಯಬಹುದೆಂದು ಕಾಣುತಿದೆ.

ಕಳೆದ ಶುಕ್ರವಾರ ಮತ್ತು ಮಂಗಳವಾರ ಸಾಯಂಕಾಲಗಳಲ್ಲಿ ರಾಜಧಾನಿಯಲ್ಲಿ ಒಳ್ಳೇ ಮಳೆಯಾಯಿತು. ಇದರಿಂದ ಕಾದಿರುವ ನೆಲ ಸ್ವಲ್ಪ ತಂಪು ಉಂಟಾಯಿತು, ಗುಂಡಿ ಕೆರೆಗಳಲ್ಲಿ ಕೆಲವರಿಗೂ ನೀರು ಬಂದಿರತ್ತೆ.

ಈಗ ಚೆಬ್ಬಾಳದ ಕೆರೆ [illegible] ಇಲ್ಲಿನ ಧರ್ಮ[illegible] ದುವದಕ್ಕೆ ತಕ್ಕ ಪ್ರ[illegible] ಯಷ್ಟೆ, ಈ ತಿಂಗಳ [illegible] ಲು ಯೆಂತ್ರದ ಮೂಲಕ [illegible] ಉಪಕ್ರಮವಾಗುವದೆಂದು ಕೇಳುತ್ತೇವೆ.

ನಿಜಾಮ ಗಜ, ಅಶ್ವ, ಒಂಟೆಗಳ ಪ್ರಯಾಣವನ್ನು ಗೊತ್ತು ಮಾಡಿ ಅದರ ನಕಲನ್ನು ಪ್ರತಿ ಡಿಸ್ಟ್ರಿಕ್ಟ್, ಸಬ್ ಡಿವಿಜನ್ [illegible] ತಾಲ್ಲೂಕ್ ಆಫೀಸುಗಳಲ್ಲಿ [illegible] ದಲ್ಲಿ ಸ್ವಲ್ಪವೂ ಅಡ್ಡಿ ಇಲ್ಲದಂತೆ [illegible] ಬಂದು ನೋಡುವಂತೆ [illegible] ಗೌರ್ನಮೆಂಟಿನವರು ಹುಕುಂ ಮಾಡಿರುತ್ತಾರೆ

ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಾದ ಮೆ|| [illegible] ಕ್ಷಿಪ್ರದಲ್ಲಿ ಒಂದೆರಡು ತಿಂಗಳು ರಜ [illegible] ಹೋಗುವರೆಂತಲೂ, ಅವರ ಕೆಲಸವನ್ನು ಹೊಸಪೇಟೆ ಸಬ್‌ಡಿವಿಜನ್ ಆಫೀಸರಾದ ಮೆ|| ಬಿ ಪಿ, ಕೃಷ್ಣಯ್ಯಂಗಾರ್‌ರವರು [illegible] ನೋಡುವರೆಂತಲೂ ಒಂದು ಪ್ರವಾದ ಹುಟ್ಟಿದೆ ಇದು ಎಷ್ಟರಮಟ್ಟಿಗೆ ನಿಜವೋ ನಾವರಿಯೆವು

ಕಳೆದ ಬುಧವಾರ ರಾತ್ರಿ [illegible] ಒಂದೂ ಕಾಲು ಇಂಚ್ ಮಳೆಬಿದ್ದು ಧರ್ಮಾಂಬುಧಿ ಕೆರೆಗೆ ಸುಮಾರು ೧೫ [illegible] ದಿನಗಳಿಗೆ ಆಗಬಹುದಷ್ಟು ನೀರು ಬಂ[illegible] ದರ ತರುವಾಯ ಮಳೆ ಇಲ್ಲವು, ಪರಂತು ಕುಪ್ಪಮುತ್ತು ಗ್ರಾಮಗಳಲ್ಲಿ ಅಲ್ಪ ಮಳೆ ಆಗಿಂದಾಗ್ಯೆ ಬೀಳುತಲಿರುವಂತೆ ಕಾಣುತಿದೆ ಇತರ ವಿಷಯಗಳು ಹಿಂದಿನವಾರದಷ್ಟೆ [illegible]ರುವಂತೆಯೇ ಇವೆ ಸದರೀ ದಿನ ಈ ಪ್ರಾಂತ [illegible] ಲ್ಲಿ ಒಬ್ಬನಿಗೆ ಸಿಡಿಲು ತಗಲಿ ಮೃತಪಟ್ಟನು.

ಅಮೃತಮಹಲ್ ಕಾವಲುಗಳಲ್ಲಿ ಮೇಯುವ ಪ್ರತಿ ರಾಸಿಗೂ ನಾಲ್ಕಣೆಯ ಪ್ರಕಾರ ಕಂದಾಯ ವಸೂಲಾಗುತಲಿದೆ, ಇದು ಬಹಳ ಸ್ವಲ್ಪ. ಇದನ್ನು ಹೆಚ್ಚಿಸಿ ೭ ಆಣೆ ಮಾಡಬೇಕೆಂದು ಹಾಸನ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರು ಗೌರ್ನಮೆಂಟಿನವರ ಅಪ್ಪಣೆಯನ್ನು ಕೇಳಿದ್ದಕ್ಕೆ ಈ ಅಲ್ಪ ವಿಷಯಕ್ಕೆಲ್ಲಾ [illegible] ಇದರಿಂದ ಜನಗಳ ಅಪ್ರೀತಿಗೆ ಕಾರಣವಾಗುವದೇ ವಿನಾ ಅದರಿಂದ ಆಗುವ ಪ್ರಯೋಜನವು ಅಷ್ಟರಲ್ಲೇ ಇದೆ, ಆದ್ದರಿಂದ ಹಿಂದಿನ ಪ್ರಕಾರ ನಾಲ್ಕಣೆಯಂತೆಯೇ ವಸೂಲು ಮಾಡಬೇಕೆಂಬದಾಗಿ ಹುಕುಂ ಸಾದರಾಗಿರುತ್ತೆ.

(ಮೈಸೂರು ದೇಶಾಭಿಮಾನಿ—ತಾ|| ೨೭-೪-೯೩)

ಈ ನ್ಯಾಯದಲ್ಲೊಬ್ಬ ಮಾಧ್ವ ಬ್ರಾಹ್ಮಣನನ್ನು ಸ್ಮಾರ್ತಬ್ರಾಹ್ಮಣನನ್ನಾಗಿ ಮಾಡಿ ದತ್ತು ಸ್ವೀಕಾರಮಾಡಿಕೊಂಡಿದ್ದಾರೆ ಈ ಕೇಸನ್ನು ಒಬ್ಬ [illegible] ಮಾಡಿದಾಗ ಅದನ್ನು ವಿಚಾರಿಸುವ [illegible] ಮತದವರಿಗೆ ಪ್ರಸಕ್ತವಾಗಿರಲಿಲ್ಲ.

ಊರಲ್ಲಿ ಅಲ್ಲಲ್ಲಿ ಬೆಂಕಿಯು ಬೀಳುತಲಿದೆ, ಸರ್ಕಾರದವರು ಪ್ರತಿ ಮನೆಯ ಬಾಗಲಿನಲ್ಲಿಯೂ ಆ ಮನೆಯವರು ಎರಡೆರಡು ಗಡಿಗೆ ನೀರು ಮಡಗಿರುವಂತೆ ಏರ್ಪಾಡು ಮಾಡಿದ್ದರೆ ಅಪಾಯಕಾಲದಲ್ಲಿ ತುಂಬಾ ಸಹಾಯವಾಗುತಿದೆ.

ಶ್ರೀರಂಗ ಪಟ್ಟಣದ ಮರ್ಕಿಸಪೆ ಕೋರ್ಟಿನಲ್ಲಿ ನೌಕರಿ ಮಾಡುವರು ಕಕ್ಷಿಗಾರರ ಹೊಸ [illegible] ಕೈಗಳನ್ನು ಮುಂಚಿನ ಕೆಲಸಕ್ಕೆ [illegible] ಕಾಯುವರೆಂತಲೂ, ಆ ಕೈಮೇಲೆ ಯಥಾಶಕ್ತಿಯಾಗಿ [illegible] ಬಿದ್ದರೆ [illegible] ಜನರು [illegible] ತಿದ್ದದು [illegible] ಸಾಗುತ್ತದೆ [illegible] ತಿಳಿಸಿ [illegible] ಬರೆದು ನಮ್ಮ ಪತ್ರ.

[illegible] ಮನೆ [illegible] ಯಲ್ಲಿ [illegible] ತೆಗೆದು [illegible] ಬಂದು [illegible] ಆ ಮನೆ [illegible] ಹೋಗುತಿದ್ದಾರೆ ಬಾಗಿಲ [illegible] ಬಗ್ಗೆ [illegible] ಯಾವ ನಗ [illegible] ಅದು ವ್ಯಕ್ತವಾಗಲು ನಮ್ಮ ಅಧಿಕಾರಿಗಳಿಗೂ ನಿಷ್ಕೃರ ವಿಲ್ಲವೆ ಏನಿ ಯೋಗವಾಗುವದೆಂದು ನಾವು ಅಭಿಪ್ರಾಯ ಪಡುತ್ತೇವೆ.

ದಿವಾನರವರು ಮನೆ ಕಟ್ಟ ದಾನ ಕೊಟ್ಟ [illegible] ಪ್ರೈಕಿಯಲ್ಲೊಬ್ಬರು ಶೀತ ವಿಲಾಸ [illegible] ಕೆಲಸ [illegible] ಕೈಬಿಟ್ಟರು ಒಬ್ಬರು [illegible] ಮತ್ತೊಬ್ಬರು ಎರಡೆ [illegible] ತುಂಬಾ ವ್ಯಸನ [illegible] ಮನಯು [illegible] ಮಟ್ಟಿನ [illegible] ತಿಳಿಯಲಿಲ್ಲ, ಆದಾಗ್ಯು [illegible] ಇವರು ಸರಿಯಾಗಿ [illegible] ಮಾಡಿಕೊಂಡು [illegible] ತೆಗೆದುಕೊಂಡು [illegible] ಎಂದು ಹೇಳಿರುವದಾಗಿ ಕೇಳುತ್ತೇವೆ. ದಿವಾನರಿಗಿರುವ ಕರುಣ ಕೃತಿಗಾಗಿ ನಾವು ಅವರನ್ನು ವಂದಿಸುವೆವು.

(ವೃತ್ತಾಂತ ಚಿಂತಾಮಣಿ—ತಾ|| ೨೬-೪-೯೩)

ಶ್ರೀಮನ್ಮಹಾರಾಜ್ಞೀಯವರ ಪಾಠಶಾಲೆಯಲ್ಲಿ ಬೋಧಕರಾಗಿದ್ದ ಮಿ|| ಜಿ. ಕೃಷ್ಣರಾಯರವರಿಗೆ ದಿವಾನರವರ ಆಫೀಸಿನಲ್ಲಿ ಕೆಲಸ ವಾಗುವದೆಂದು ಗೊತ್ತಾಗಿದೆ.

ಡಿಸ್ಟ್ರಿಕ್ಟ್ ಜಡ್ಜಿಗಳಾದ ಮಿ|| ಕೃಸ್ಸಾಹೇಬರವರು ಸಂಸಾರಸಮೇತರಾಗಿ ೧ನೇ ತಾರೀಖಿನ ದಿನ ಬೇಸಿಗೆಕಾಲದ ಪರ್ವತ ಪ್ರಾಂತ್ಯದ ತಂಪಾದ ಹವಾಕ್ಕೋಸ್ಕರ ನೀಲಗಿರಿಗೆ ದಯಮಾಡಿದರು.

ಶ್ರೀಮನ್ಮಹಾರಾಣಿಯವರ ಬಾಲಿಕಾ ಪಾಠಶಾಲೆಗೆ ಬಂಗಾಳೆಯಿಂದ ಬಿ. ಎ. ಪರೀಕ್ಷೆಯನ್ನು ಕೊಟ್ಟು ಸಂಸ್ಕೃತದಲ್ಲಿ ಪಾಂಡಿತ್ಯವನ್ನು ಸಂಪಾದಿಸಿ ಇರುವ ಒಬ್ಬ ಉಪಾಧ್ಯಾಯನಿಯು ಬರುವಳೆಂದು ಹಿಂದೆ ತಿಳಿಸಿದ್ದೆವಷ್ಟೆ. ನಿನ್ನೆ ಶುಕ್ರವಾರದ ದಿವಸ ಬಂಗಾಳೆಯಿಂದ ಮಿಸ್ ಕಸ್ತೂರಿ ಬಿ. ಎ. ಎಂಬುವರು ದಯಮಾಡಿಸಿದರು ಅವರು ಮಿಸ್ ಗೋವಿಂದರಾಜುಲುರವರು ಇದ್ದ ಬಂಗಲೆಯಲ್ಲಿ ಇಳಿದುಕೊಂಡಿದ್ದಾರೆ ಈಕೆಗೆ ಮಾಹೆಯಾನಾ ೩೫೦ ರೂಪಾಯಿ ಸಂಬಳ ಕೊಡುವಂತೆ ಗೊತ್ತಾಗಿದೆ.

ಮಿಡ್ಲ್ ಸ್ಕೂಲಿನಲ್ಲಿ ಲ್ಯಾಟಿನ್ ಭಾಷೆ ಕಲಿಸುವದಕ್ಕಾಗಿ ಒಂದು ತರಗತಿಯನ್ನು ಏರ್ಪಡಿಸಿರುತ್ತಾರೆ. ಇದಕ್ಕಾಗಿ ೩೦ ರೂಪಾಯಿ ಗ್ರ್ಯಾಂಟು ಕೊಡಿಸಿ ಕೊಡಬೇಕೆಂದು ಗವರ್ನ್‌ಮೆಂಟಿಗೆ ಮಿಷನಿನವರು ಬರೆದುಕೊಂಡಿದ್ದದನ್ನು ಗವರ್ನ್‌ಮೆಂಟಿನವರು ಅಭಿಪ್ರಾಯದ ಬಗ್ಗೆ ಮ್ಯೂನಿಸಿಪಾಲಿಟಿಯವರಿಗೆ ಕಳುಹಿಸಿಕೊಟ್ಟಿದ್ದಾರೆ. ಒಂದು ತರಗತಿಗಾಗಿಯೇ ಇಷ್ಟು ಗ್ರ್ಯಾಂಟು ಕೊಡುವದೆಂಬ ಸಂಗತಿ ಹ್ಯಾಗೆ ಸಂಗತವೋ: ವಾಚಕರೇ ಊಹಿಸಿಕೊಳ್ಳಬಹುದು. ಈ ವಿಷಯದಲ್ಲಿ ಮ್ಯೂನಿಸಿಪಾಲಿಟಿಯವರು ಏನು ನಡೆಸುವರೋ ಅದನ್ನು ತಿಳಿದಮೇಲೆ ನಮ್ಮ ಅಭಿಪ್ರಾಯವನ್ನು ತಿಳಿಸುವೆವು.

ನಿನ್ನೆ ಶುಕ್ರವಾರದ ದಿವಸ ಪಾಸ್ಟ್ರೆಂಗಲೆಯಲ್ಲಿ ಬೆಳಗ್ಗೆ ೯ ಘಂಟೆ ಸಮಯದಲ್ಲಿ ಕಚೇರಿ [illegible] ಹೋಗುತ್ತ ಇದ್ದ [illegible] ಒಂದು ಹುಲಿಯು [illegible] ತೆರದು [illegible] ರೂಪಾಯಿ ಹಾಗೆ [illegible] ದಿನ [illegible] ಬಂಗಲನ್ನು [illegible] ಹುಲಿಯು ಈ ಬಗೆ ಬಂದು ಬೋನಿನ ಸುತ್ತಲೂ [illegible] ಸುತ್ತುತ್ತ ಬಂತು. ಅಲ್ಲಿ ಸುತ್ತಮುತ್ತಲಿದ್ದವರೆಲ್ಲಾ ಪ್ರಾಣಭಯದಿಂದ ಓಡಿಹೋದರು ಮತ್ತು ಕೆಲವರು ಮಹಾರಾಜರವರ [illegible] ಓಡಿಹೋದರು ಬಳಿಕ [illegible] ಕೆಲವು ಸಾಮಾನುಗಳನ್ನು ತೆಗೆದುಕೊಂಡು ಓಡಿಹೋದರು [illegible] ತೆಗೆದು [illegible] ಬಂದೂಕನ್ನು ಟಾರ್ಗೆಟ್ ಗುರಿಹಿಡಿದಿದ್ದರು. ಅಲ್ಲಿ ದೊಡ್ಡ ಮಾಂಸರಾಂ ಎಂಬಾತನು ಆ ಬೋನಿನ ಮೇಲ್ಗಡೆ ಪಕ್ಕದಲ್ಲಿ ಸೇರಿಕೊಂಡಿದ್ದನು [illegible] ಬಂದೂಕನ್ನು ಹಾರಿಸಿ ಅವನ ಮೇಲೆ ಹುಲಿಗೆ [illegible] ಪಕ್ಷದಲ್ಲಿ [illegible] ಅವನ ಮೇಲೆ ಬಿದ್ದು ಕೊಲ್ಲುತಿತ್ತು ಆ ಬಳಿ ದೈವವಶಾತ್ [illegible] ಮಾಂಸರಾಂ ಎಂಬಾತನು ಆ ಕಾಲನ್ನು ಕರೆದು ಬೇಗ ಬೋನಿನ [illegible] ಅಲ್ಲಿದ್ದ ಜನರು ಘಾಬರಿಯಿಂದ ಆ ಹುಲಿಯು ಬೋನಿನೊಳಕ್ಕೆ ಹೋದದ್ದು ಕೂಡ ತಿಳಿಯದೆ ಪೇಚಾಡುತಿದ್ದರು. ತಕ್ಷಣ ಆ ಜವಾನನು ಓಡಿಹೋಗಿ ಬೋನಿನ ಬಾಗಲನ್ನು ಬಂದು ಮಾಡಿದನು.

## THE MYSORE GAZETTE.
### ಮೈಸೂರು ಗೆಜೆಟ

ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದೂರವರ ಸರ್ಕಾರದಿಂದ ಕೊಡಲ್ಪಟ್ಟ ಇಸ್ತಿಹಾರುಗಳು

ನಂ|| ೧೨೦೫೪—೮ ರೆ೦೨೦—ತಾ|| ೧೨ನೇ ಏಪ್ರಿಲ್ ೧೮೯೩—ಇದರಡಿ ಬರುವ ಅಮಲ್ದಾರ್‌ಗಳ ಬಡ್ತಿಗಳು ಸನ್ ೧೮೯೨ನೇ ಇಸವಿ ಏಪ್ರಿಲ್ ಗುರ್ರೇ ತಾರೀಖ್ ಮೊದಲು ಜಾರಿಯೊಳು ಬರುವಂತೆ ಹುಕುಂ ಮಾಡಲ್ಪಟ್ಟಿರುತಿವೆ:—

| | |
|---|---|
| ೧ ಬಾಚಹಳ್ಳಿ<br>೨ ಮಾಗಡಿ [illegible] | ೨ನೇ ಗ್ರೇಡಿನಿಂದ ೩ನೇ ಗ್ರೇಡಿಗೆ. |
| ೧ ಹೆಚ್ ಗುಂಡಪ್ಪ<br>೨ ಬೆಂಗಳೂರ್ ಸೀತಾರಾಮಯ್ಯ<br>೩ ಸಿ ಶಾಮಯ್ಯಂಗಾರ್<br>೪ ಎಂ ಕೃಷ್ಣಯ್ಯಂಗಾರ್ | ೩ನೇ ಗ್ರೇಡಿನಿಂದ ೨ನೇ ಗ್ರೇಡಿಗೆ. |
| ೧ ಎಸ್ ಕೃಷ್ಣಮೂರ್ತಿರಾವ್<br>೨ ಸಿ ವೆಂಕಟಾಚಲಯ್ಯ<br>೩ ಎಂ ಎ ತಿರುಮಲಾಚಾರಿ<br>೪ ಬಿ ನಾಗೇಶರಾವ್ | ೪ನೇ ಗ್ರೇಡಿನಿಂದ ೩ನೇ ಗ್ರೇಡಿಗೆ |

ನಂ|| ೧೨೦೯೨—೮ ರೆ೦೯೮—ಇದರಡಿ ಬರುವ ಅಮಲ್ದಾರರ ಮತ್ತು ಡೆಪ್ಯುಟಿ ಅಮಲ್ದಾರರುಗಳ ವರ್ಗಾವರ್ಗಿಗಳು ಮತ್ತು ಸ್ಥಳ ನಿಯಾಮಕಗಳು ಹುಕುಂ ಮಾಡಲ್ಪಟ್ಟಿರುತಿವೆ—

ಅಮಲ್ದಾರ್ ಆಳಸಂದಲ್ಲಿ, ಮೈಸೂರ ಸಿಟಿಯಿಂದ ಮೈಸೂರು ತಾಲ್ಲೂಕಿಗೆ.

" ಬಿ ನಾಗೇಶರಾವ್, ಬೆಂಗಳೂರು ಸಿಟಿಯಿಂದ ಬೆಂಗಳೂರು ತಾಲ್ಲೂಕಿಗೆ.

" ಬಿ ಸೀತಾರಾಮಯ್ಯ, ಮೈಸೂರಿಂದ ಹೊಸಕೋಟೆಗೆ, ರಜಾ ಮೇಲೆ ನಿವೃತ್ತರಾದ ಡಿ ವೆಂಕಟ್ರಮಣಯ್ಯನವರಿಗೆ ಬದಲು,

" ಟಿ ಚೊಕ್ಕಣ್ಣ, ಬಿ ಎ, ಹಾಸನ ತಾಲ್ಲೂಕಿಗೆ, ರಜಾ ಪಡೆಕೊಂಡ ಲಕ್ಷ್ಮೀನಾರಣಪ್ಪನವರಿಗೆ ಬದಲು

" ಅಳಸಿಂಗ್ರಯ್ಯಂಗಾರ್, ಅರಕೆರೆ ತಾಲ್ಲೂಕಿಗೆ, ಬೇರೆ ಕೆಲಸದಮೇಲಿರುವ ಬಾಬಾರಾಯರಿಗೆ ಬದಲು

" ಪೈ ನರಸಿಂಹಯ್ಯ ಹುಣಸೂರಿಗೆ ರಜಾ ಪಡೆಕೊಂಡ ಲಾಜರಸ್ ತಿಮ್ಮಿಂಗೊಯವರಿಗೆ ಬದಲು

" ಕೃಷ್ಣೋಜಿ ಅರಸ್, ಚೆನ್ನರಾಯಪಟ್ಟಣ ತಾಲ್ಲೂಕಿಗೆ.

ಡೆಪ್ಯುಟಿ ಅಮಲ್ದಾರ್ ವಾಸುದೇವರಾವ್, ಎಡತೊರೆಗೆ.

ನಂ|| ೧೨೩೧೦—೮ ರೆ೦೯೧—ಇದರಡಿ ಬರುವ ಅಮಲ್ದಾರರ ಕ್ಲಾಸ್ ೧ ಮತ್ತು ಮೊಕರರ್ ರಾತಿಗಳ ಬಗ್ಗೆ ಹುಕುಂ ಕೊಡಲ್ಪಟ್ಟಿರುತಿವೆ:—

| | |
|---|---|
| ಎ ರಾಮ ಕೃಷ್ಣರಾವ್,<br>ವಿ ಎ ಗೋಪಾಲರಾವ್<br>ಸಿ ಎ ಚಾಮಯ್ಯ,<br>ಕೆ ಜೆ ಅನಂತರಾಮಯ್ಯಂಗಾರ್ | ೫ನೇ ಕ್ಲಾಸ ಸಬ್ ಪ್ರೊಬೇಷನ್ ಅಮಲ್ದಾರ್‌ಗಳು, ಅವರು ಸಬ್ ಪ್ರೊಟೆಮ್ ವಾಗಿ ಮೊಕರರ್ ಮಾಡಲ್ಪಟ್ಟಿರುವ ೫ನೇ ಕ್ಲಾಸಿನಲ್ಲಿ ಕಾಯಂ ಮಾಡಲ್ಪಟ್ಟಿರುತ್ತಾರೆ |
| ನಾಡಿಗ ಸುಬ್ಬರಾವ್<br>ಜೆ ಹನುಮಂತರಾವ್<br>ರಾಮಸ್ವಾಮಯ್ಯ, ಬಿ ಎ | ೫ನೇ ಕ್ಲಾಸ ಆಕ್ಟಿಂಗ್ ಅಮಲ್ದಾರರು, ೯ನೇ ಇಸವಿ ಏಪ್ರಿಲ್ ಗುರ್ರೇ ತಾರೀಖ್ ಮೊದಲು ೫ನೇ ಕ್ಲಾಸಿನಲ್ಲಿ ಕಾಯಂ ಮಾಡಲ್ಪಟ್ಟಿರುತ್ತಾರೆ |
| ಮೈಸೂರು ಡಿಸ್ಟ್ರಿಕ್ಟ್ ಟಿ ಚೊಕ್ಕಣ್ಣ, ಬಿ. ಎ<br>ಡೆಪ್ಯುಟಿ ಅಮಲ್ದಾರ್ ಅಳಸಿಂಗ್ರಯ್ಯಂಗಾರ್<br>ಮೈಸೂರು ಡಿಸ್ಟ್ರಿಕ್ಟ್ ಮುನ್ಸಿಫ್ ನರಸಿಂಹಯ್ಯ | ೫ನೇ ಗ್ರೇಡ್ ಅಮಲ್ದಾರರಾಗತಕ್ಕದ್ದು |

ಡೆಪ್ಯುಟಿ ಅಮಲ್ದಾರ್ ಕೃಷ್ಣೋಜಿ ಅರಸಿನವರು, ಅವರಿಗೆ ನಿಯಮಿಸಲ್ಪಟ್ಟಿರುವ ಪರೀಕ್ಷೆಯನ್ನು ಪೂರ್ತಿ ಮಾಡುವವರಿಗೆ ತಾತ್ಕಾಲಿಕ ೫ನೇ ಕ್ಲಾಸ್ ಅಮಲ್ದಾರರಾಗಿರತಕ್ಕದ್ದು

ಪೋಲೀಸ್ ಇನ್ಸ್‌ಪೆಕ್ಟರ್ ಮತ್ತು ಚೆನ್ನರಾಯ ಪಟ್ಟಣದ ಆಕ್ಟಿಂಗ್ ಅಮಲ್ದಾರ್ ವಾಸುದೇವರಾಯರು ಡೆಪ್ಯುಟಿ ಅಮಲ್ದಾರರಾಗಿರತಕ್ಕದ್ದು

೨ ಖಾಲಿಯಾಗಿರುವ ಕಾಯಂ ಕೆಲಸಗಳನ್ನು ನೋಡುತಲಿರುವ ಇದರಡಿ ಬರುವ ಡೆಪ್ಯುಟಿ ಅಮಲ್ದಾರರು ಕಾಯಂ ಮಾಡಲ್ಪಟ್ಟಿರುತ್ತಾರೆ—

ವೆಂಕಟ್ರಮಣಯ್ಯ—ಗ್ರಾಮ,

ಆರ್ ರಾಮರಾವ್—ಗುಡಿಬಂಡೆ

ಕೆ ಸುಬ್ಬರಾವ್—ಕುಂಸಿ

ಎಸ್ ಪಿ ದೇವರಾಜು—ಶ್ರೀರಂಗಪಟ್ಟಣ

ನಂ|| ೧೨೮೪೩—೮ ರೆ೩೦೨ ತಾ|| ೧೪ ನೇ ಏಪ್ರಿಲ್ ೧೮೯೩—ಸನ್ ೧೮೯೩ ನೇ ಇಸವಿ ಏಪ್ರಿಲ್ ೩ ನೇ ತಾರೀಖ್ ಸೋಮವಾರ ಮಧ್ಯಾಹ್ನಾತ್ಪರ, ಚೀಫ್ ಕೋರ್ಟಿನ ಜಡ್ಜಿ ಕೆಲಸದ ಚಾರ್ಜನ್ನು ಆಕ್ಟಿಂಗ್ ಜಡ್ಜಿಯವರಾದ ಮಿ|| ಸಿ ವಿರೂಪಾಕ್ಷ ಅಯ್ಯರವರು ಕೊಟ್ಟು ಮಿ|| ಪಿ. ಎನ್ ಕೃಷ್ಣಮೂರ್ತಿಯವರು ತೆಗೆದುಕೊಂಡಿರುತ್ತಾರೆ.

ನಂ|| ೧೨೩೨೧—೮ ರೆ೦೯೯, ತಾ|| ೨೧ನೇ ಏಪ್ರಿಲ್ ೯೩—ಮೈಸೂರು ಸರ್ವಿಸ್ ರೆಗ್ಯುಲೇಷನ್ಸ್‌ಗಳ ೧೪೪ನೇ ಆರ್ಟಿಕಲ್ ಅನುಸರಿಸಿ, ಚೀಫ್ ಕೋರ್ಟಿನ ರಿಜಿಸ್ಟ್ರಾರ್ ಮತ್ತು ದಿವಾನರವರ ಆಫೀಸಿನಲ್ಲಿ ಕೆಲಸ ನೋಡುತಲಿರುವ ಮಿ|| ಎಸ್ ಆರ್ ಸುಬ್ಬರಾಯ ಅಯ್ಯರವರು ಸನ್ ೧೮೯೩ ನೇ ಇಸವಿ ಏಪ್ರಿಲ್ ೨೧ನೇ ತಾರೀಖ್ ಮೊದಲು ೬ ವಾರಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ

ನಂ|| ೧೨೮೪೮—೦. ೯. ೩೬—೯೨—ಹಾಸನ ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮಿಷನರ್ ಮಿ|| ಪಿ ಪಂಚನದರಾಯರವರಿಗೆ ಸನ್ ೧೮೯೩ ನೇ ಇಸವಿ ಫೆಬ್ರವರಿ ೧೫ ನೇ ತಾರೀಖಿನ ೧೩೬೪೨—೦. ೯ ೩೬—೯೨ ನೇ ನಂಬರ್ ಇಷ್ತಿಹಾರ್ ಮೂಲಕ ಕೊಡಲ್ಪಟ್ಟ ಮೂರು ತಿಂಗಳ ಪ್ರೈವೇಟ್ ರಜಾ ಇದರಿಂದ ಮತ್ತು ಮೂರು ತಿಂಗಳಿಗೆ ಬೆಳಾಯಿಸಲ್ಪಟ್ಟಿರುತಿದೆ.

ನಂ|| ೧೨೪೭೩೩—೦. ೯. ೪೬—೯೨, ತಾ|| ೨೮ ನೇ ಏಪ್ರಿಲ್ ೧೮೯೩.—ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ ೧೨ ನೇ ಸೆಕ್ಷನ್ ಅನುಸರಿಸಿ, ಇದರಡಿ ಬರುವ ಆಫೀಸರುಗಳು ೧ ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

(೧) ಕ್ಯಾಸಿಸಲ್ ಸೆಟ್ಲ್‌ಮೆಂಟ್ ಆಫೀಸರ್ ಮಿ|| ಸಿ. ರಾಘವಾಚಾರ್, ಬಿ. ಎ

(೨) ಶಿವಮೊಗ್ಗ ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮಿಷನರ್ ಮಿ|| ರಾಮಸ್ವಾಮಯ್ಯರ್, ಬಿ. ಎ

(೩) ಮೈಸೂರು ಡಿಸ್ಟ್ರಿಕ್ಟ್ ಜನರಲ್ ಅ|| ಕ ಮಿ|| ಎಸ್. ನಂಜುಂಡರಾಜ ಅರಸ್,

೨ ಬೆಂಗಳೂರು ಡಿಸ್ಟ್ರಿಕ್ಟ್ ಆಕ್ಟಿಂಗ್ ಅ|| ಕ|| ಮಿ|| ಬಿ ಕುಪ್ಪುಸ್ವಾಮಿ ನಾಯಡುರವರು, ಶಿವಮೊಗ್ಗ ಡಿಸ್ಟ್ರಿಕ್ಟ್ ಆಕ್ಟಿಂಗ್ ಅ|| ಕ|| ಮಿ|| ಕೆ ರಾಮಾನುಜಯ್ಯಂಗಾರ್ಯರವರು ಒಂದು ವಿಶೇಷ ಕಾರಣದಮೇಲೆ, ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ ೧೨ ನೇ ಸೆಕ್ಷನ್ ಅನುಸರಿಸಿ, ೧ ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

ಕೋಲಾರ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ಮಿ|| ಕೆ ಎಸ್. ದೊರೆಸ್ವಾಮಯ್ಯರವರು [illegible] ದರಿಂದ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ [illegible] ಗಳು ಕೊಡಲ್ಪಟ್ಟಿರುತ್ತಾರೆ

ಕಡೂರು ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ಮಿ|| ಕೆ ರಾಮಸ್ವಾಮಯ್ಯಂಗಾರ್ಯರವರು, ಸನ್ ೧೮೯೩ ನೇ ಇಸವಿ ಜನವರಿ ೫ ನೇ ತಾರೀಖಿನ ೯೩೬೪—೦. ೯ ೪೬—೯೨ ನೇ ನಂಬರ್ ಇಷ್ತಿಹಾರ್‌ನ ಮೂಲಕ ಅವರಿಗೆ ಕೊಡಲ್ಪಟ್ಟ ೧ ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ಮತ್ತೊಂದು ಹುಕುಂ [illegible] ಚಲಾಯಿಸತಕ್ಕದ್ದು

ನಂ|| ೧೨೫೫೦—೦ ರ೩೩೧—[illegible] ಸರ್ವಿಸ್ ರೆಗ್ಯುಲೇಷನ್ಸ್‌ಗಳ ೧೨[illegible] ಅನುಸರಿಸಿ, ತಿರುಮಕೂಡಲು ನರಸೀಪುರ ತಾಲ್ಲೂಕ್ ಅಮಲ್ದಾರ್ ಟಿ. ರಾಮಚಂದ್ರರಾಯರಿಗೆ ಅವರು ಪಯೋಗಿಸಿಕೊಳ್ಳುವ ತಾರೀಖ್ ಮೊದಲು ೫ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ|| ೧೨೫೫೮—೮ ರ೩೩೩—[illegible] ಸರ್ವಿಸ್ ರೆಗ್ಯುಲೇಷನ್ಸ್ ೧೪೪ [illegible] ಅನುಸರಿಸಿ, ಕೋಟೆಗೆ ಸಬ್ ತಾಲ್ಲೂಕ್ [illegible] ಅಮಲ್ದಾರ್ ವಿ. ಕೃಷ್ಣರಾಯರು, ಅವರು ಪಯೋಗಿಸಿಕೊಳ್ಳುವ ತಾರೀಖ್ ಮೊದಲು ೧೫ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

೨ ಡೆಪ್ಯುಟಿ ಅಮಲ್ದಾರ್ ವಿ. ಕೃಷ್ಣರಾಯರು ರಜಾ ಮೇಲೆ ಗೈರುಹಾಜರಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಮಧುಗಿರಿ ತಾಲ್ಲೂಕ್ ಅಮಲ್ದಾರರು ತಮ್ಮ ಸ್ವಂತ ಕೆಲಸಗಳೊಂದಿಗೆ, ಕೋಟೆಗೆರೆ ಸಬ್ ತಾಲ್ಲೂಕ್ ಇನ್‌ಚಾರ್ಜಿನಲ್ಲಿರತಕ್ಕದ್ದು.

ನಂ|| ೧೨೫೫೦—೮ ರ೩೭೯—ಮೈಸೂರು ಸರ್ವಿಸ್ ರೆಗ್ಯುಲೇಷನ್ಸ್ ೧೨೨ ನೇ ಆರ್ಟಿಕಲ್‌ಗೆ ಷರತ್ತುಗಳನುಗುಣವಾಗಿ, ದಿವಾನರವರ ಆಫೀಸಿನಲ್ಲಿ ಕೆಲಸ ನೋಡುತಲಿರುವ ಅಸಿಸ್ಟೆಂಟ್ ಕಮಿಷನರ್ ಮಿ|| ಎಸ್ ಆರ್ ಸುಬ್ಬರಾಯ ಅಯ್ಯರವರು, ಸನ್ ೧೮೯೩ ನೇ ಇಸವಿ ಏಪ್ರಿಲ್ ೨ ನೇ ತಾರೀಖ್‌ವರೆಗೆ ಉಭಯ ದಿನಗಳು ಸೇರಿ ೬ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿದ್ದರು.

ನಂ|| ೧೨೬೮೭—೦. ರ೩೩೮.—ಮೈಸೂರು ಸರ್ವಿಸ್ ರೆಗ್ಯುಲೇಷನ್ಸ್‌ಗಳ ೨೨೦ [illegible] ಅನುಸರಿಸಿ, ಗುಂಡಲ್‌ಪೇಟೆ ಅಮಲ್ದಾರ್ [illegible] ರಾಮಚಂದ್ರರಾಯರು, ಸನ್ ೧೮೯೩ ನೇ ಇಸವಿ ಮೇ ೩ ನೇ ತಾರೀಖ್ ಮೊದಲು ಅಥವಾ [illegible] ಪಯೋಗಿಸಿಕೊಳ್ಳಬಹುದಾದ ತಾರೀಖ್ ಮೊದಲು, ರುಸುಮಿಲ್ಲದೆ, ೩೦ ದಿನಗಳ ರಜಾ ಕೊಡಲ್ಪಟ್ಟಿರುತ್ತಾರೆ.

೨ ಎಂ. ರಾಮಚಂದ್ರರಾಯರು ರಜಾಮೇಲೆ ಗೈರುಹಾಜರಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ವಿ ಸುಭಾಪತಿ ಪಿಳ್ಳೆಯವರು ಗುಂಡಲ್‌ಪೇಟೆ ತಾ

## ಚಿತನೋತ್ಸವಗಳು ಮತ್ತು ತಾಕ್ಷೆಗಳು.

ಹಿಂದೂ ದೇವಾಲಯಗಳಲ್ಲಿ ನಡೆಯುವ ಉತ್ಸವಕಾಲಗಳಲ್ಲೂ, ವಿವಾಹ ಮೊದಲಾದ ಶುಭಸಮಯಗಳಲ್ಲೂ, ಚಿತನೋತ್ಸವಗಳಲ್ಲೂ ವಾರಾಂಗನೆಯರು ಕರೆಯಿಸಿ ಅವರಿಂದ ಗಾನ ನರ್ತನಗಳಂ ಮಾಡಿಸುವುದು ಈ ಇಂಡ್ಯಾದೇಶದೊಳು ಅನಾದಿ ಸಂಪ್ರದಾಯವಾಗಿ ಇರುತಲಿದೆಯಷ್ಟೆ. ಹೀಗಿರುವಲ್ಲಿ ಈಚೆಗೆ ಕೆಲವು ಕಾಲದ ಮೊದಲು ಮಿಷನರಿಗಳ ಪೈಕಿ ಒಬ್ಬರಿಬ್ಬರು, ಸದರೀ ವಾಡಿಕೆಯು ಕೇವಲ ದೂಷ್ಯವಾದುದೆಂತಲೂ, ಅದರಿಂದ ಜನರು ದುರ್ನೀತರಾಗುವದಕ್ಕೆ ಸುಶ್ರೀಣಾವಕಾಶ ವುಂಟೆಂತಲೂ, ಸರ್ವಪ್ರಯತ್ನದಿಂ ಸದರೀ ದುಷ್ಪದ್ಧತಿಯಂ ತಪ್ಪಿಸುವದುಚಿತವೆಂತಲೂ, ಸ್ವಾಭಿಪ್ರಾಯಪ್ರಕಟಕವಾದ ಒಂದು ಲೇಖನವಂ ವೃತ್ತಾಂತಪತ್ರಿಕೆಗಳ ಮೂಲಕ ಪ್ರಕಟಿಸಲಾರಂಭಿಸಿದರು. ಅಂತಾ ಲೇಖನಕ್ಕೆ ಪ್ರೋತ್ಸಾಹಕವಾಗಿ ಕಳೆದ ತಿಂಗಳ ೭ನೇ ತಾರೀಖಿನ ಮದರಾಸ್ ಹಿಂದೂ ಎಂಬ ಪತ್ರಿಕೆಯು ಮದರಾಸ್ ಗವರ್ನರಾಗಿರುವ ಲಾರ್ಡ್ ವೆನ್ಲಾಕ್ ಸಾಹೇಬರಂ ನಿರ್ದೇಶಿಸಿ ತಿಳಿಸುವ ಅಭಿಪ್ರಾಯವೇನೆಂದರೆ — ಘನವಂತರಾದ ಗವರ್ನರವರು ರಾಜ್ಯದುರವಂ ಕೈಗೊಂಡಕಾಲದಲ್ಲಿ ಬಳ್ಳಾರಿ ಮೊದಲಾದ ಷಹರುಗಳಂ ನೋಡುವದಕ್ಕೆ ಹೋಗಿದ್ದ ಸಂದರ್ಭಗಳೊಳು ತಮ್ಮ ಆಗಮನಕ್ಕಾಗಿ ಅಲ್ಲಿಯಲ್ಲಿ ಮಾಡಲ್ಪಟ್ಟಿದ್ದ ಬಹ್ವರ್ಥಸಾಧ್ಯಗಳಾದ ಸನ್ಮಾನಗಳಂ ನೋಡಿ, ಬಲಾತ್ಕಾರಪೂರ್ವಕ ಪ್ರಜೆಗಳಿಂದ ಅರ್ಥಸಹಾಯವು ಪಡೆದು ಈ ರೀತಿ ಮಾಡುವದನುಚಿತವೆಂದು ಭಾವಿಸಿ, ಅದಂ ಖಂಡಿತವಾಗಿ ನಿಲ್ಲಿಸಿದರು. ತದ್ವತ್ ಚಿತನೋತ್ಸವ ಸಂದರ್ಭಗಳೊಳು ಆಬಗ್ಗೆ ಕರೆಯಿಸಲ್ಪಟ್ಟವರ ಸಂತೋಷಾರ್ಥ ವೇಶ್ಯೆಯರಂ ಕರೆಯಿಸಿ ಗಾನ ನರ್ತನಗಳಂ ಮಾಡಿಸುವ ಪಕ್ಷಕ್ಕೆ ತಾವೂ ತಮ್ಮ ಭಾರ್ಯೆಯವರೂ ಬರುವದಿಲ್ಲವೆಂದು ನಯವಾದ ಶಬ್ದಗಳಿಂದ ತಿಳಿಸುವದರ ಮೂಲಕ ಸದರೀ ವಾಡಿಕೆಯಂ ತಪ್ಪಿಸುವಣವು ಭೂಷಣವಾಗಿಯೂ ಜನರು ದುರ್ನೀತರಾಗದೆ ಇರುವದಕ್ಕೂ ಕಾರಣವಾಗುವದು. ಯೂರೋಪಿಯನ್ನರು ಸಾಮಾನ್ಯವಾಗಿ ಇಂಡ್ಯಾದೇಶದ ನರ್ತನಕ್ಕಾಗಲಿ, ಗಾನಕ್ಕಾಗಲಿ ಸಂತೋಷಪಡುವದಿಲ್ಲವು. ಪರಂತು ಹಿಂದುಗಳ ಮನಸ್ಸುಗಳಂ ನೋಯಿಸಬಾರದೆಂಬ ಉದ್ದೇಶದೊಡನೆ ಅದಂ ಸಹನೆಯೊಡನೆ ನೋಡುತ್ತಾರೆ. ಗವರ್ನರವರು ಗವರ್ನಮೆಂಟಿಗೆ ಮುಖ್ಯರಾಗಿಯೂ, ಯೂರೋಪಿಯನ್ ಜನರಿಗೆ ತಲೆವರಾಗಿಯೂ ಬ್ರಿಟಿಷರವರ ಸಮಯಾಚಾರಗಳಲ್ಲಿ ದೋಷನಿವಾರಕವಾಗಿಯೂ ವಿವೇಕಜನಕವಾಗಿಯೂ ಇರುವ ವಿಶಿಷ್ಟ ವಿಷಯಗಳನ್ನೂ ತಿಳಿಸತಕ್ಕವರಾಗಿಯೂ ಇರುವದರಿಂದ, ಅಂತಾ ಸಭೆಗಳಿಗೆ ಗವರ್ನರವರು ಹೋಗದೆ ಇರುವಣವು ಉಚಿತವೆಂದು ನಾವು ಅವರು ಕೇಳಿಕೊಳ್ಳಬಹುದು. ವಿಲಕ್ಷಣ ಮಂಡಲಿಯಲ್ಲಿ ಅಂತಾ ಸ್ತ್ರೀಯರ ಪ್ರವೇಶಕ್ಕೆ ಅವಕಾಶವಂ ಕೊಡುವಣವು ಗೌರವಹಾನಿಕರವಾದುದೆಂಬ ಭಾವವು ಇಂಡ್ಯಾದೇಶೀಯರಿಗುಂಟಾಗುತಲಿದೆ. ಹಿಂದೂಗಳಲ್ಲಿ ಮೇಲಿನ ದುಷ್ಪದ್ಧತಿಯಂ ನಿವೃತ್ತಿಸುವವರೊಳು ಅಭಿಮತವುಳ್ಳವರ ಸಂಖ್ಯೆಯು ದಿನೇ ದಿನೆ ವೃದ್ಧಿಯಾಗುತಲಿದೆ. ಪ್ರಜೆಗಳ ವಿವೇಕಾಭಿವೃದ್ಧಿಗೆ ಪ್ರತಿಬಂಧಕಗಳಾದ ಯಾವ ವಿಷಯಕ್ಕೂ ಅವಕಾಶ ಕೊಡಲ್ಪಡಕೂಡದು. ವೇಶ್ಯೆಯರು ಕರೆಯಿಸಲ್ಪಡುವ ಚಿತನಗಳಿಗೆ ತಾವಾಗಲಿ ತಮ್ಮ ಭಾರ್ಯೆಯವರಾಗಲಿ ಬರುವದಿಲ್ಲವೆಂದು ಗವರ್ನರವರು ಹೇಳಿದರೆ ಸಾಕಾಗಿರುತದೆ. ಮದರಾಸ್ ಪ್ರೆಸಿಡೆನ್ಸಿಯಲ್ಲಿ ಸರ್ವೋನ್ನತಾಧಿಕಾರಿಯಾದವರು ಆರೀತಿ ಮಾಡುವದರಿಂದ ಇತರ ಯೂರೋಪಿಯನ್ ದೊಡ್ಡಮನುಷ್ಯರೂ ಲೇಡಿಗಳೂ ಅವರನ್ನನುವರ್ತಿಸುವರೆಂಬದಂ ನಾವು ತಿಳಿಸಬೇಕಾದುದಿಲ್ಲವು. ವೇಶ್ಯೆಯರು ಕರೆಯಿಸಿದರೆ ಯೂರೋಪಿಯನ್ನರು ಬರಲಾರರೆಂಬಅಂಶ ಜನರಿಗೆ ತಿಳಿದರೆ ಆ ವಾಡಿಕೆಯಂ ಅವರೇ ನಿಲ್ಲಿಸಿಬಿಡುತ್ತಾರೆ, ಎಂಬದು ಪತ್ರಿಕೆ.

ಇದೇ ವಿಷಯದಲ್ಲಿ ಈಚೆಗೆ ಮದರಾಸ ಲಾಟ್ಯಂಸ್ ಎಂಬ ಪತ್ರಿಕೆ ವ್ಯಕ್ತಪಡಿಸುವ ಅಭಿಪ್ರಾಯವು ಪ್ರಾಯಶಃ ಸಮರ್ಪಕವಾಗಿ ಕಂಡುಬರುವದರಿಂದ ಅದನ್ನಿದರಡಿ ಸಂಗ್ರಹವಾಗಿ ತಿಳಿಸುತ್ತೇವೇನೆಂದರೆ — ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಮಹಾರಾಜ್ಞೀಯವರ ಪುತ್ರರಾದ ಡ್ಯೂಕ್ ಆಫ್ ಯೆಡಿಂಬರೋ ಯವರೂ, ತರುವಾಯ ಪ್ರಿನ್ಸ್ ಆಫ್ ವೇಲ್ಸ್‌ರವರೂ, ಇಂಡ್ಯಾದೇಶ ಸಂಚಾರ ಮಾಡಿಕೊಂಡು ಮದರಾಸಿಗೆ ಬಂದಿದ್ದ ಕಾಲದೊಳು ಅವರ ಗೌರವಾರ್ಥ ಅಲ್ಲಿನ ನೇಟಿವ್ ದೊಡ್ಡ ಮನುಷ್ಯರು ಮಾಡಿಸಿದ್ದ ಚಿತನೋತ್ಸವಕಾಲದಲ್ಲಿ ಜಗದ್ವಿಖ್ಯಾತಳಾದ ವೇಶ್ಯಾಂಗನೆಯೊಬ್ಬಳು ಕರೆಯಿಸಲ್ಪಟ್ಟು ಮಹಾರಾಜ್ಞೀಯವರ ಪುತ್ರರ ದರ್ಶನ ಸಲ್ಲಾಪಗಳಿಗೆ ಪಾತ್ರಳನ್ನಾಗಿ ಮಾಡಲ್ಪಟ್ಟಳು. ಈಗಿನಂತೆ ಆ ಕಾಲದಲ್ಲೂ ವೃತ್ತಾಂತ ಪತ್ರಿಕೆಗಳು ನಡೆಯುತ್ತಿದ್ದವು; ಈಗಿನಂತೆ ಆಗಲೂ ಯೂರೋಪಿಯನ್ ಸಮಾಜವಿರುತಲಿತ್ತು, ಈಗಿನಂತೆ ಆಗಲೂ ಮಿಷನರಿಗಳೂ ಇರುತಲಿದ್ದರು. ಆದಾಗ್ಯೂ ವೃತ್ತಾಂತ ಪತ್ರಿಕಾ ಲೇಖಕರೇ ಆಗಲಿ, ಯೂರೋಪಿಯನ್ನರೇ ಆಗಲಿ, ಮಿಷನರಿಗಳೇ ಆಗಲಿ, ವೇಶ್ಯೆಯರ ನಾಟ್ಯವಂ ನೋಡುವಣವು ದೋಷಾವಹವೆಂದು ಆಕ್ಷೇಪಿಸಲಿಲ್ಲವು. ಅದು ಮೊದಲು ಇಪ್ಪತ್ತು ವರ್ಷಗಳ ಕಾಲ ಕಳೆದು, ಮಿಷನರಿಗಳ ಪ್ರಾಬಲ್ಯದ ದೆಸೆಯಿಂದ ಯೂರೋಪಿಯನ್ ಜನರ ಚಿತ್ತವೃತ್ತಿಯು ಸಂಪೂರ್ಣವಾಗಿ ರೂಪಾಂತರವನ್ನೈದಿರುತಿದೆ. ಯೂರೋಪಿಯನ್ ಜನರು ಉಲ್ಲಾಸಾರ್ಥ ಒಂದು ಕಡೆ ಸೇರುವಲ್ಲಿ ಪರಾಪೇಕ್ಷೆ ಇಲ್ಲದೆ ಸಂತೋಷಜನಕಗಳಾದ ಕಾರ್ಯಗಳಂ ತಮ್ಮೊಳು ತಾವೇ ನೆರವೇರಿಸಿಕೊಳ್ಳುತ್ತಾರೆ, ಪರಂತು ಅಂತಾ ಸಂದರ್ಭಗಳಲ್ಲಿ ನೇಟಿವ್‌ಗಳು ಕಸಬುದಾರರಾದವರನ್ನು ಕರೆಯಿಸಿ ಅವರ ಮೂಲಕ ನಡೆಸಿಕೊಳ್ಳುತ್ತಾರೆ. ಹಿಂದೂಗಳು ಪ್ರಾಯಶಃ ಕಾಮುಕಿಯರಾದ ಸದರೀ ವೇಶ್ಯಾಜನರು ಕರೆಯಿಸಿ, ಸಭಾ ಮಧ್ಯದಲ್ಲಿ ಹೊಂದುವದಕ್ಕೆ ಅರ್ಹರಲ್ಲದ ಅವರಿಗೆ ಒಂದು ಗೌರವವನ್ನುಂಟುಮಾಡುವದರಿಂದ ದುಷ್ಫಲಗಳುಂಟಾಗುವದೆಂಬದಂ ಯೋಚಿಸದೆ ಔದಾಸೀನ್ಯತೆಯಂ ವಹಿಸಿರುತ್ತಾರೆಂಬದು ದಿಟ, ಪರಂತು ಸದರೀ ಜನರು ವಿನೋದಾರ್ಥ ಸ್ವಲ್ಪ ಕಾಲದವರೆಗೆ ಕರೆಯಿಸಲ್ಪಡತಕ್ಕವರಾಗಿರುತ್ತಾರೆ. ವಿಶೇಷ ಸಂದರ್ಭಗಳಲ್ಲಿ ಸದರೀ ಯವರು ಕರೆಯಿಸುವಣವು ಯೂರೋಪಿಯನ್ ಜನರಿಗೆ ಇಷ್ಟವಿಲ್ಲದಿದ್ದು ಕರೆಯಿಸಿದರೆ, ಅದರಿಂದ ಯೂರೋಪಿಯನ್ನರು ಬರುವದಿಲ್ಲವೆಂದು ಹೇಳಿ ತನ್ಮೂಲಕ ಅವರಿಗೂ ನೇಟಿವ್‌ಗಳಿಗೂ ಉಂಟಾಗಿರುವ ಸ್ನೇಹಸಂಬಂಧಕ್ಕೆ ನ್ಯೂನತೆ ಯುಂಟಾಗುವದಾಗಿ, ಅಂತಾ ಸಮಯಗಳಲ್ಲಿ ತಪ್ಪಿಸಿ, ಹಿಂದೂಗಳಿಗೆ ಇಷ್ಟವಿದ್ದರೆ ತಮ್ಮ ದೇಶವಾಡಿಕೆಯನ್ನನುಸರಿಸಿ ಇತರ ಸಂದರ್ಭಗಳಲ್ಲಿ ಕರೆಯಿಸಿಕೊಳ್ಳುವದರಲ್ಲಿ ಅಭ್ಯಂತರವಿಲ್ಲವು, ಎಂಬದು. ಈ ವಿಷಯದಲ್ಲಿ ನಮ್ಮ ಅಭಿಪ್ರಾಯವಂ ಮುಂದೆ ತಿಳಿಸುವೆವು.

## Occasional Notes
## ನೈಮಿತ್ತಿಕ ವಿಷಯನ್ಯಾಸ.

ಕಳೆದ ತಿಂಗಳ ೨೮ ನೇ ತಾರೀಖಿನಲ್ಲಿ ಭಾವನಗರದ ಮಹಾರಾಜರವರು ಲಂಡನ್ ಪಟ್ಟಣವಂ ಸೇರಿದರು. ಅವರು ಹಡಗು ಇಳಿಯುವಕಾಲಕ್ಕೆ ಸರಿಯಾಗಿ ಮಹಾರಾಜ್ಞೀ ಸರಕಾರದ ತರಫ ಒಬ್ಬ ಪ್ರತಿನಿಧಿಯವರು ಹಾಜರಿದ್ದು ಮಹಾರಾಜರವರನ್ನು ಬರಮಾಡಿಕೊಂಡರು.

ಲೋಕದಲ್ಲಿ ಮನುಷ್ಯನಿಗೆ ತನ್ನ ಬೆನ್ನಂ ತಾನು ನೋಡಿಕೊಳ್ಳುವದಕ್ಕೆ ಸಾಧ್ಯವಲ್ಲವಷ್ಟೆ. ಈಚೆಗೆ ಅಮೆರಿಕಾ ದೇಶದೊಳಗಣ ಪೆನ್ಸಿಲ್ವೇನಿಯಾ ಎಂಬ ಷಹರಿನಲ್ಲಿ ಒಬ್ಬಾತನು ಒಂದು ಉಪನೇತ್ರವಂ ಸೃಜಿಸಿರುತ್ತಾನೆ. ಅದನ್ನು ಹಾಕಿಕೊಂಡವನಿಗೆ ತನ್ನ ಮುಂದುಗಡೆಯಂತೆ ಬೆನ್ನಿನಕಡೆ ನಡೆಯುವದೆಲ್ಲವು ಕಾಣಬರುತಿದೆ. ಉಪನೇತ್ರದ ಕನ್ನಡಿಗಳೆರಡಕ್ಕೂ ಪ್ರತಿಫಲಕಶಕ್ತಿಯುಳ್ಳ ಸಣ್ಣ ಕನ್ನಡಿಗಳಂ ಸೇರಿಸಿ ಬಿಗಿಸುವದರಿಂದ ಮೇಲಿನ ಶಕ್ತಿ ಯುಂಟಾಗುತಲಿದೆ.

ಕೊಚ್ಚಿ ಸಂಸ್ಥಾನಕ್ಕೆ ಒಂದು ನ್ಯಾಯವಿಧಾಯಕ ಸಭೆ ಇರಬೇಕಾದ್ದಾವಶ್ಯಕವೆಂದು ಅಲ್ಲಿನ ಬ್ರಿಟಿಷ ರೆಸಿಡೆಂಟರವರು ಸೂಚಿಸಲು ಅದೇಮೇರೆ ಶೀಘ್ರದಲ್ಲಿ ಒಂದು ನ್ಯಾಯವಿಧಾಯಕ ಸಭೆಯು ಏರ್ಪಾಡು ಮಾಡುವ ಯೋಚನೆಯುಂಟಾಗಿದೆಯೆಂದು ಆ ಪ್ರಾಂತದ ಪತ್ರಿಕೆಯೊಂದು ತಿಳಿಸುತ್ತಿದೆ. ಈ ಸಭೆಗೆ ಸದರೀ ಸಂಸ್ಥಾನದ ದಿವಾನರವರು ಪ್ರೆಸಿಡೆಂಟರಾಗಿಯೂ, ನೌಕರರಲ್ಲದವರೊಬ್ಬರೂ [illegible] ಅಧಿಕಾರಿಗಳಿಬ್ಬರೂ ಮೆಂಬರುಗಳಾಗಿ ನಿಯಮಿಸಲ್ಪಡುವರು.

ಭಿಕಾನಿಯರ್ ಸಂಸ್ಥಾನದ ಮಹಾರಾಜರವರು ಈಚೆಗೆ ಮುಂಬೈ ಟಂಕಸಾಲೆಗೆ ಬೇಕಾದಷ್ಟು ಬೆಳ್ಳಿಯಂ ಕಳುಹಿಸಿ ತಮ್ಮ ಸಂಸ್ಥಾನದ ಉಪಯೋಗಕ್ಕಾಗಿ ಸುಮಾರು ಒಂದು ಲಕ್ಷ ರೂಪಾಯಿಗಳಂ ಟಾಕಾ ಹಾಕಿಸಿ ತರಿಸಿಕೊಂಡರು. ಮುಂದೆ ಮೂವತ್ತು ಸಂವತ್ಸರಗಳವರೆಗೆ ತಮ್ಮ ಸಂಸ್ಥಾನದ ಟಂಕಸಾಲೆಗೆ ತಾಂಬ್ರ ಬೆಳ್ಳಿ ನಾಣ್ಯಗಳಂ ಛಾಪಿಸುವದಿಲ್ಲವೆಂದು ಮಹಾರಾಜರವರು ಒಡಂಬಡಿಕೆ ಮಾಡಿಕೊಂಡದರಿಂದ ಬ್ರಿಟಿಷ್ ಇಂಡ್ಯಾ ರಾಜ್ಯದಲ್ಲಿ ಸದರೀ ರೂಪಾಯಿಗಳು ಚಲಾವಣೆ ನಾಣ್ಯಗಳಾಗಿ ಅಂಗೀಕರಿಸಲ್ಪಟ್ಟವು.

ಮುಂಬೈ ನಗರಿನಲ್ಲಿ ಒಂದು ವಿಶೇಷ ಸಂದರ್ಭದೊಳು ಪ್ರಜೆಗಳು ಸ್ವಾತಂತ್ರ್ಯವಾಗಿ ಉಪಯೋಗಿಸಿಕೊಳ್ಳುವದಕ್ಕೆ ಅರ್ಹವಾದ ಒಂದು ಕಟ್ಟಡವಿಲ್ಲದೆ ಇದ್ದದ್ದು ಒಂದು ಪ್ರಬಲ ಲೋಪವಾಗಿತ್ತು. ಅದು ನಿವೃತ್ತಿಯಾಗುವ ಕಾಲ ಪ್ರಾಪ್ತವಾಗುವಂತೆ ಕಾಣುತದೆ. ಸ್ವಲ್ಪಕಾಲದೊಳಗಾಗಿ ಮಾಡಿದ ಅನೇಕ ಸತ್ಕಾರ್ಯಗಳ ದೆಸೆಯಿಂದ ಮುಂಬೈಯಲ್ಲಿ ಸಾಮಾನ್ಯವಾಗಿ ಎಲ್ಲರ ಗೌರವ ಪುರಸ್ಕಾರಗಳಿಗೆ ವಿಷಯರಾಗಿರುವ ಪಾರಸೀಜಾತಿಯ ಹೆಂಗುಸು ಒಬ್ಬಾಕೆಯು, ಸದರೀ ಷಹರಿನೊಳು ಜನರ ಉಪಯೋಗಾರ್ಥ ಒಂದು ದೊಡ್ಡ ಕಟ್ಟಡವಂ ಕಟ್ಟಿಸಿ ಅದಕ್ಕೆ ಸೇರಿದಂತೆ ಒಂದು ಸರಸ್ವತೀ ಭಂಡಾರವನ್ನು ಸ್ಥಾಪಿಸತಕ್ಕ ಬಗ್ಗೆ ಐದುಲಕ್ಷ ರೂಪಾಯಿಗಳು ಕೊಡುವದಾಗಿ ತಿಳಿಸಿರುತ್ತಾಳೆ. ಸದರೀ ಕಟ್ಟಡವು ಯಸ್ಪ್ಲನೇಡ್ ಎಂಬ ಮೈದಾನದಲ್ಲಿ ಮುಖ್ಯವಾದ ಒಂದು ಪ್ರದೇಶದೊಳು ಕಟ್ಟಲ್ಪಡುವದು. ಸಮರ್ಥರಾದ ಒಬ್ಬ ಇಂಜನಿಯರಿಂದ ಅದರ ನಕಷೆ ವಗೈರೆ ಇದುವರೆಗೇನೇ ತಯಾರ್ ಮಾಡಲ್ಪಟ್ಟಿರುತವೆ. ಸದರೀ ಕಟ್ಟಡವು ಮೃತಪಟ್ಟ ಆಕೆಯ ಪತಿಯ ಜ್ಞಾಪಕಾರ್ಥ ಕಟ್ಟಲ್ಪಡುವದು.

ಈಚೆಗೆ ಕೆಲವು ದಿನಗಳ ಹಿಂದೆ ವಾಯವ್ಯದೇಶದ ಲೆಫ್ಟನಂಟ ಗವರ್ನರಾದ ಸರ್ ಚಾರ್ಲ್ಸ ಕ್ರಾಸ್ಥ್‌ವೈಟ ಎಂಬವರು ಹರಿದ್ವಾರದ ಬ್ರಾಹ್ಮಣರಂ ಕೂಡಿಸಿ ಒಂದು ಉಪನ್ಯಾಸವಂ ಮಾಡಿದರೇನೆಂದರೆ—ಹರಿದ್ವಾರದ ಬ್ರಾಹ್ಮಣರೆ, ನೀವು ಅನುಪಪನ್ನರಾದ ಯಾತ್ರಾರ್ಥಿಗಳ ದ್ರವ್ಯವಂ ಭಕ್ಷಿಸುತ ಇಲ್ಲಿ ಕುಳಿತುಕೊಂಡಿರುತ್ತೀರಿ, ಪರಂತು ಷಹರನ್ನು ಪರಿಶುದ್ಧವಾಗಿ ಇಟ್ಟುಕೊಂಡಿರಬೇಕಾದ ವಿಷಯಕ್ಕಾಗಲಿ, ಯಾತ್ರಾರ್ಥಿಗಳಾಗಿ ಬರುವಂತವರಿಗೆ ಪಾನೋದಕವಂ ಒದಗಿಸಿಕೊಡುವ ವಿಷಯಕ್ಕಾಗಲಿ ಒಂದು ಕಾಸು ಸಹಾಯ ಮಾಡುವದಿಲ್ಲವು ಮತ್ತು ಯಾರ ದುಡ್ಡಿನಿಂದ ನೀವು ಜೀವಿಸುತಲಿರುತ್ತೀರೆಯೊ ಅವರ ಆರೋಗ್ಯಸ್ಥಿತಿಗೆ ನೀವು ಅವಧಾನ ಕೊಡುವದಿಲ್ಲವು ಈಗ ನಿಮಗೆ ನಾನು ತಿಳಿಸುವದೇನೆಂದರೆ, ನಿಮ್ಮ ಉತ್ಸವದಲ್ಲಿ ಗವರ್ನಮೆಂಟನವರು ಪ್ರವರ್ತಿಸುವದಿಲ್ಲವು, ಪರಂತು ಪ್ರಬಲರೋಗಗಳೇನಾದರು ಪ್ರಾಪ್ತವಾಗುವದಾದರೆ, ನಿಮಗೆ ನಷ್ಟವುಂಟಾಗಲಿ ಆಗದೆ ಹೋಗಲಿ, ಜನಸಂಘವನ್ನು ಚೆದರಿಸಿಬಿಡಬೇಕಾಗುವದು. ಸ್ಥಳದ ಪಾರಿಶುದ್ಧ್ಯತೆಯ ಬಗ್ಗೆ ಮಾಡಲ್ಪಟ್ಟಿರುವ ನಿಬಂಧನೆಗಳಿಗೂ ಕೊಡಲ್ಪಡುವ ಹುಕುಂಗಳಿಗೂ ನೀವು ಬದ್ಧರಾಗಿರಬೇಕು, ಮತ್ತು ಮೇಲಿನ ಕಾರ್ಯಗಳಂ ನೆರವೇರಿಸುವದಕ್ಕಾಗಿ ವಿಧಿಸಲ್ಪಟ್ಟಿರುವ ತೆರಿಗೆಯ ಪೈಕಿ ಉಚಿತವಾದ ಭಾಗವನ್ನು ನೀವು ಕೊಡಬೇಕಾಗುವದು ಆದುದರಿಂದ ಈ ಕಾರ್ಯಕ್ಕೆ ನಿಮ್ಮ ಸ್ವಂತ [illegible] ದಿಂದ ನೀವು ಸಹಾಯ ಮಾಡಬೇಕೆಂದು ನಿಮಗೆ ನಾನು ಬುದ್ಧಿ ಹೇಳುತ್ತೇನೆ. ಎಂಬದು

## ನೋಟಿಸ್.

ಇದರಿಂದ ನಮ್ಮ ಚಂದಾದಾರರಿಗೆ ನಾವು ಪ್ರಕಟಿಸುವದೇನೆಂದರೆ — ಈ ಸಾಲಿನಲ್ಲಿ ನಿಶ್ಚಯ ದಿನವೊಳಗೆ ನಾಲ್ಕು ತಿಂಗಳು ಕಳೆದವು ಇನ್ನು ಅವರವರು ಚಂದಾ ಮೊಬಲಗನ್ನು [illegible] ಸದಿರುವ ಕಾರಣ ಈ ಪತ್ರಿಕೆಯ ಕಾರ್ಯವು ನಿರುಪಾಯ [illegible] ನಡೆಯಲಾರದು, ಆದುದರಿಂದ ಯಾರು [illegible] ಚಂದಾ ಹಣವನ್ನು ಕಳುಹಿಸಲಿಕ್ಕಿಲ್ಲವೊ ಅವರಿಗೆ [illegible] ಬಾಗ ಮಾಡದವರಿಗೆ ಈ ಪತ್ರಿಕೆ ಕಳುಹಿಸಲ್ಪಡಲಾರದು

೧—೫—೯೪ ಪ್ರೊಪ್ರೈಟರ್.

## LOCAL AND PROVINCIAL [illegible]
## ಒಳದೇಶಮತ್ತು ಪ್ರಾಂತಿಕ ಸಮಾಚಾರ ವೃತ್ತಾಂತಗಳು.

ಈ ಸಂಸ್ಥಾನದ ದಿವಾನರವರು ನಂದಿ ಬೆಟ್ಟದಲ್ಲಿರುವರು [illegible] ಈ ಪ್ರಾಂತಿಗೆ [illegible] ಬರುವದಕ್ಕೆ ಇನ್ನು ಒಂದೆರಡು ವಾರ [illegible] ಹಿಡಿಯಬಹುದೆಂದು ಕಾಣುತದೆ

ಕಳೆದ ಶುಕ್ರವಾರ ಮತ್ತು [illegible] ಸಾಯಂಕಾಲಗಳಲ್ಲಿ [illegible] ಆಯಿತು, ಇದರಿಂದ [illegible] ಸ್ವಲ್ಪ [illegible] ಉಂಟಾಯಿತು [illegible] ಕಾಲುವೆಗಳಿಗೂ ನೀರು ಬಂದಿರತ್ತೆ,

ಈಗ ಬೆಟ್ಟ [illegible] ಇಲ್ಲಿನ [illegible] ಮಾಡುವದಕ್ಕೆ ತಕ್ಕ [illegible] ಈ ತಿಂಗಳ [illegible] ಉಪಕ್ರಮವಾಗುವದೆಂದು ಕೇಳುತ್ತೇವೆ

ನಿವಾಸ ಗಜ, ಅಧಿ [illegible] ಗವನ್ನು ಗೊತ್ತು ಮಾಡಿ ಅದರ ನಕಲನ್ನು ಪ್ರತಿ ಡಿಸ್ಟ್ರಿಕ್ಟ್, ಸಬ್ ಡಿವಿಜನ್ [illegible] ತಾಲ್ಲೂಕ ಆಫೀಸುಗಳಲ್ಲಿ ಬಹಿರಂಗ [illegible] ದಲ್ಲಿ ಸ್ವಲ್ಪವೂ ಅಡ್ಡಿ ಇಲ್ಲದಂತೆ [illegible] ಬಾದು ನೋಡುವಂತೆ [illegible] ಗವರ್ನಮೆಂಟನವರು [illegible] ಮಾಡಿರುತ್ತಾರೆ

[illegible] ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಾದ ಮಿ|| [illegible] ಶೀಘ್ರದಲ್ಲಿ ಒಂದೆರಡು ತಿಂಗಳ ಕಾಲ ರಜಾ ಪಡೆದು ಹೋಗುವರೆಂತಲೂ, ಅವರ ಕೆಲಸವನ್ನು [illegible] ಸಬ್ ಡಿವಿಜನ್ [illegible] ಬಿ. ಪಿ. [illegible] ಯ್ಯಂಗಾರ್ [illegible] ನೋಡುವರೆಂತಲೂ ಒಂದು ಪ್ರವಾದ ಹುಟ್ಟಿರುವದೆ ಇದು ಎಷ್ಟರಮಟ್ಟಿಗೆ ನಿಜವೋ ನಾವರಿಯೆವು

ಕಳೆದ ಬುಧವಾರ ರಾತ್ರಿ [illegible] ದೂಕಾಲು ಇಂಚ್ ಮಳೆ ಬಿದ್ದು, ಧರ್ಮಾಂಬುಧಿ ಕೆರೆಗೆ ಸುಮಾರು ೧೫ [illegible] ದಿನಗಳಿಗೆ ಆಗಬಹುದಷ್ಟು ನೀರು ಬಂ[illegible] ದರ ತರುವಾಯ ಮಳೆ ಎಲ್ಲವು, ಪರಂತು ಸುತ್ತುಮುತ್ತು ಗ್ರಾಮಗಳಲ್ಲಿ ಅಲ್ಪ ಮಳೆ ಆಗಿ [illegible] ಬೀಳುತಲಿರುವಂತೆ ಕಾಣುತಿದೆ ಇತರ ವಿಷಯಗಳು ಹಿಂದಿನವಾರದಲ್ಲಿ [illegible] ರುವಂತೆಯೇ ಇವೆ ಸದರೀ ದಿನ [illegible] ನಲ್ಲಿ ಒಬ್ಬನಿಗೆ ಸಿಡಿಲು ತಗಲಿ ಮೃತಪಟ್ಟನು.

ಅಮೃತಮಹಲ್ ಕಾವಲುಗಳಲ್ಲಿ [illegible] ಪ್ರತಿ ರಾಸಿಗೂ ನಾಲ್ಕಾಣೆಯ ಪ್ರಕಾರ ರುಸುಂ ವಸೂಲಾಗುತಲಿದೆ, ಇದು ಬಹಳ ಸ್ವಲ್ಪ ಇದನ್ನು ಹೆಚ್ಚಿಸಿ ೮ ಆಣೆ ಮಾಡಬೇಕೆಂದು ಹಾಸನ ಡಿಸ್ಟ್ರಿಕ್ಟ ಡೆಪ್ಯುಟಿ ಕಮಿಷನರವರು ಗೌರ್ನಮೆಂಟನವರ ಅಪ್ಪಣೆಯನ್ನು ಕೇಳಿದ್ದಾರೆ, ಈ ಕ್ಷುಲ್ಲಕ ವಿಷಯಕ್ಕೆಲ್ಲಾ ರುಸುಂ [illegible] ದರಿಂದ ಜನಗಳ ಅಪ್ರೀತಿಗೆ [illegible] ವಾಗುವದೇ ವಿನಾ ಅದರಿಂದ ಆಗುವ ಪ್ರಯೋಜನವು ಅಷ್ಟರಲ್ಲೇ ಇದೆ, ಆದ್ದರಿಂದ ಯಥಾಪ್ರಕಾರ ನಾಲ್ಕಾಣೆಯುದರವನ್ನೇ ಕಾಯಂ [illegible] ಎಂಬದಾಗಿ ಹುಕುಂ ಸಾದರಾಗಿರುತ್ತೆ.

(ಮೈಸೂರು ದೇಶಾಭಿಮಾನಿ—ತಾ॥ ೨೬-೪-೯೩.)

ಈ ಸ್ತ್ರೀಯೊಬ್ಬ ಮಾಧ್ವ ಬ್ರಾಹ್ಮಣನನ್ನು ಸ್ಮಾರ್ತಬ್ರಾಹ್ಮಣನನ್ನಾಗಿ ಮಾಡಿ ದತ್ತ ಸ್ವೀಕಾರಮಾಡಿಕೊಂಡಿದಾರೆ ಈಕೆಯನನ್ನು ಒಪ್ಪ ಹೆಂಗಸು ಮಾಡಿದಾಳೆ. ಅದನ್ನು ವಿಚಾರಿಸುವ ದಕ್ಷಿ ಮತದವರಿಗೆ ಪ್ರಾಸಕ್ತ್ಯವಿಲ್ಲ.

ಊರಲ್ಲಿ ಅಲ್ಲಲ್ಲಿ ಬೆಂಕಿಯುಬೀಳುತಲಿದೆ, ಸರ್ಕಾರದವರು ಪ್ರತಿ ಮನೆಯ ಬಾಗಲಿನಲ್ಲಿ ಯೂ ಆಯಾ ಮನೆಯವರು ಎರಡೆರಡು ಗಡಿಗೆ ನೀರು ಮಡಗಿರುವಂತೆ ಏರ್ಪಾಡು ಮಾಡಿರುವೆ ಅದರಿಂದ ಕಾಲದಲ್ಲಿ ತುಂಬಾ ಸಹಾಯವಾಗುತಿದೆ

ಶ್ರೀರಂಗ ಪಟ್ಟಣದ ಪುರ್ಣಸವೆ ಕೋಟೆನಲ್ಲಿ ನೌಕರಿಮಾಡುವರು ಕಕ್ಷಿಗಾರರ ಮೊಕದ್ದಮೆಗಳಲ್ಲಿ ಕೈಗಳನ್ನು ಮೇಜಿನ ಕೆಳಕ್ಕೆ ಚಾಚಿ [illegible] ಕಾಣುವುದೆಂತಲೂ, ಆ ಕೈಮೇಲೆ ಯಥಾಶಕ್ತಿಯಾಗಿ ಕಪ್ಪ ಬಿದ್ದರೆ ಬೆರಳನ ಕೊನೆ ಅಣಗುವದೆಂತಲೂ ಬಹು ಜನರು [illegible] ಬಹು [illegible] ನಿಜವಾಗಿದ್ದರೆ ಮೆಂದು ನಮಗೆ ಸಂಶಯ [illegible] ಮೈಸೂರು ಸರಕಾರದವರು ಇದನ್ನು ಪತ್ತೆ ಮಾಡುವ ನಕ್ಷೆ ತಿಳಿಸಿ ಬಿಡೂ ಬಹು ಮಾಡುವ ರೆಂದು ನಂಬಿದ್ದೇವೆ

ಸೀತಾವಿಲಾಸ ಅಗ್ರಹಾರದ ಮನೆಕೊಂದಿಗೆ [illegible] ದಾನ ಕೆಲವು [illegible] ಬಂದರೆ ತೆಗೆ [illegible] ಪ್ರತಿಯೊಬ್ಬರೂ [illegible] ಬ್ಬರ ಮನೆಗೆ ಬಂದು [illegible] ಈ ಮನೆಯವರಿಗೆ [illegible] ಮನೆ ಬರದ ಪ್ರತಿಕೂಲ [illegible] ನುಸುಳಿ ಹೋಗಲು ಹೋಗುತ್ತಿವೆ [illegible] ಮನೆಯನ್ನು ಬಿಟ್ಟು ಮುಖ್ಯರು ಅನೇಕರು [illegible] ೧೮ ನೇ ತಾರೀಖು [illegible] ದಿವಸಗಳು [illegible] ಯಾವ ಮನೆ [illegible] ವ್ಯಕ್ತವಾಗು ತದು. ಅಧಿಕಾರಿಗಳಿಗೂ ವಿಸ್ಮರವಿಲ್ಲದೆ ವಿನಿಯೋಗವಾಗುವದೆಂದು ನಾವು ಅಭಿಪ್ರಾಯ ಪಡುತ್ತೇವೆ.

ಬಿವಾನರವರು ಮನೆ ಕಟ್ಟ ದಾನ ಕೊಟ್ಟರಷ್ಟೆ; ಆ ಪೈಕಿಯಲ್ಲೊಬ್ಬರು ಸೀತಾವಿಲಾಸದವರ [illegible] ಪ್ರಕಾರಕ್ಕೆ ಕೈಬಿಟ್ಟಿದರು. ಒಬ್ಬರು ಸ್ವಿನ್ಯಾವಾತೆಗೆ [illegible] ಮತ್ತೊಬ್ಬರು ಎರಡಗೆ ನಿಂದರು. ಇದನ್ನು ನೋಡಿ ದಿವಾನರು ತುಂಬಾ ವ್ಯಸನ ಪಟ್ಟು [illegible] ಯೋಗ್ಯತೆಯುಳ್ಳ [illegible] ಗಳಗೆಲ್ಲಾ [illegible] ಕೈ ಒಪ್ಪತಕ್ಕವನೆಂದು ನಾನು [illegible] ರಲಿಲ್ಲ, ಇದಾಗ್ಯೂ ಚಿಂತೆ ಇಲ್ಲ. ಇವರು ಸರಿಯಾಗಿ ಪ್ರಾಯಶ್ಚಿತ್ತ ಮಾಡಿಕೊಂಡು ಶೃಂಗೇರಿ ಮಠದವ್ಲ ಶುದ್ಧಪತ್ರಿಕೆ ತೆಗೆದುಕೊಂಡು ಬಂದ ಮೇಲೆ ಮನೆಯಲ್ಲಿ ವಾಸ ಮಾಡಿಕೊಳ್ಳಬಹುದು, ಎಂದು ಹೇಳಿರುವವರಾಗಿ ಕೇಳಲ್ಪಟ್ಟೆವು. ಪಿವಾನರಿಗಿರುವ ಕರ್ಮಶ್ರದ್ಧೆಗಾಗಿ ನಾವು ಅವರನ್ನು ವಂದಿಸುವೆವು.

(ಸತ್ಯಾಂತ ಚಿಂತಾಮಣಿ—ತಾ॥ ೨೬-೪-೯೩)

ಶ್ರೀಮನ್ ಮಹಾರಾಜ್ಞೀಯವರ ಬಾಲಿಕಾ ಪಾಠಶಾಲೆಗೆ ಮೋದಲಿಗರಾಗಿದ್ದ ಮ॥ ಬಿ. ಕೃಷ್ಣರಾಯರವರಿಗೆ ದಿವಾನರವರ ಆಫೀಸಿನಲ್ಲಿ ಕೆಲಸ ಆಗುವದೆಂದು ಗೊತ್ತಾಗಿದೆ.

ಡಿಸ್ಟ್ರಿಕ್ಟ್ ಜಡ್ಜಿಯಾಗಲಾದ ಮ॥ ಕೃಷ್ಣಸಾಹೇಬರವರು ಸಂಸಾರಸಮೇತರಾಗಿ ೧೯ನೇ ತಾರೀಖಿನ ಬೇಸಿಗೆಯಕಾಲದ ಪರ್ವತ ಪ್ರಾಂತ್ಯದ ಶಿವಗಂಗಾ ಕ್ಷೇತ್ರದ [illegible] ದೇಶದ ಕುಟುಂಬದವರು ದಯಮಾಡಿಸಿದರು.

ಶ್ರೀಮನ್ಮಹಾರಾಣಿಯವರ ಬಾಲಿಕಾ ಪಾಠಶಾಲೆಗೆ ಬಂಗಳೂರಿನಿಂದ ಬಿ. ಎ. ಪರೀಕ್ಷೆಯನ್ನು ಕೊಟ್ಟು ಸುಸ್ಪಷ್ಟವಾಗಿ ಪಂಡಿತ್ಯವನ್ನು ಸುತಿಸಿ ಇರುವ ಒಬ್ಬ ಉಪಾಧ್ಯಾಯನಿಯು ಬರುವರೆಂದು ಹಿಂದೆ ತಿಳಿಸಿದ್ದೆವಷ್ಟೆ. ನಿನ್ನೆ ಶುಕ್ರವಾರದ ದಿವಸ ಬಂಗಳೂರಿನಿಂದ ಮಿಸೆಸ್ ಸ್ಟೀವೆನ್ಸ್ ಬಿ. ಎ. ಎಂಬುವರು ದಯಮಾಡಿಸಿದರು. ಅವರು ಮಿಸ್ ಗೋವಿಂದರಾಜುಲುರವರು ಇದ್ದ ಬಂಗಲೆಯಲ್ಲಿ ಇಳಿದುಕೊಂಡಿದಾರೆ ಈಕೆಗೆ ಮಾಹೆಯಾನಾ ೨೫೦ ರೂಪಾಯಿ ಸಂಬಳ ಕೊಡುವ ರೆಂದು ಗೊತ್ತಾಗಿದೆ

ವಿದ್ಯಾರ್ಥಿಸ್ಕೂಲಿನಲ್ಲಿ ಲ್ಯಾಟಿನ್ ಭಾಷೆ ಕಲಿಸುವದಕ್ಕಾಗಿ ಒಂದು ತರಗತಿಯನ್ನು ಏರ್ಪಡಿಸಿರುತ್ತಾರೆ. ಇದಕ್ಕಾಗಿ ೩೦ ರೂಪಾಯಿ ಗ್ರಾಂಟ್ ಕೊಡಿಸಿ ಕೊಡಬೇಕೆಂದು ಗವರ್ನಮೆಂಟಿಗೆ ಮಿಷನಿನವರು ಬರೆದುಕೊಂಡಿದ್ದದನ್ನು ಗವರ್ನಮೆಂಟಿನವರು ಅಭಿಪ್ರಾಯದ ಬಗ್ಗೆ ಮ್ಯಾನಿಸಿಪಾಲಿಟಿಯವರಿಗೆ ಕಳುಹಿಸಿಕೊಟ್ಟರಂತೆ. ಒಂದು ತರಗತಿಗಾಗಿಯೇ ಇಷ್ಟು ಗ್ರಾಂಟು ಕೊಡುವದೆಂಬ ಸಂಗತಿ ಹ್ಯಾಗೆ ಸಂಗತವೋ ವಾಚಕರೇ ಊಹಿಸಿಕೊಳ್ಳಬಹುದು. ಈ ವಿಷಯದಲ್ಲಿ ಮ್ಯಾನಿಸಿಪಾಲಿಟಿಯವರು ಏನು ನಡೆಸುವರೋ ಅದನ್ನು ತಿಳಿದಮೇಲೆ ನಮ್ಮ ಅಭಿಪ್ರಾಯವನ್ನು ತಿಳಿಸುವೆವು

ನಿನ್ನೆ ಶುಕ್ರವಾರದ ದಿವಸ ಮಾಸ್ಟಿಂಗಳಿಯ ಷೆ ಬೆಳಗ್ಗೆ ೯ ಘಂಟೆ ಸಮಯದಲ್ಲಿ ಕಚೇರಿ ಕೆಲಸ [illegible] ತೋಳಿಗೆ ತಕ್ಕ ಆಳು ಪಾಲಿಯ [illegible] ಗಳನ್ನು ತೆರದು ಗುಡಿಸುತ್ತ [illegible] ಹಾಗೆ ಮನೆಯ ಆಚೆ ಕಡೆ [illegible] ದಿನ ಕಚೇರಿ ಬಾಗಲನ್ನು ಹಾಕ [illegible] ಮನೆಯ ಹೊರಗು [illegible] ಬೀಗಿನ ಸುಲ್ಲಲಿದ್ದ [illegible] ಯು ಆಚೆಗೆ ಬಂದು ಬೀಗಿನ ಸುತ್ತಲೂ ಮುಂಸಿಕೊಂಡು ಸುತ್ತುತ್ತಿದ್ದಾಬಾ. ಅಲ್ಲಿ [illegible] ತ್ತಿಯುತ್ತಲಿದ್ದ ಚರಿತ್ರೆ ಘಾಬರಿಯಿಂದ ಓಡಿಹೋದರು ಮತ್ತೆ ಕೆಲವರು ಮಹಾರಾಜರವರ ವಸ್ತುಗಳಿಟ್ಟಿರುವ ಕೊಂಕೆ ಓಡಿಹೋದರು. ಬಳಕ [illegible] ನಲ್ಲಿನ ಕೆಲವರು ಕೆಲವು ಸಾಮಾನುಗಳನ್ನು ತೆಗೆದುಕೊಂಡು ಓಡಿಹೋದರು ದ್ವಿಗ ದಿನಗಳ ಮೇಲ್ವಿಚಾರಕರನ್ನು ತೆಗೆದು ಕೊಳ್ಳುವ ನೂರಕೆಲ್ವಾಟೆ ಯವರವರು ಹೋಗುತ್ತಿದ್ದ ಬಂದೂಖುನ್ನು ಬಾರ್ಮಾಡಿ ಗುರಿಹಿಡಿದಿದ್ದರು. ಅಲ್ಲಿ ಯಿದ್ದ ವಾಮಾಂ ಎಂಬಾತನು ಆ ದೋಸಿನ ಮೇಲ್ಗಡೆ ಪಕ್ಕದಲ್ಲಿ ಸೇರಿಕೊಂಡಿದ್ದನು ನೂರಕೆಲ್ವಾಟೆ ಯವರವರು ಬಂದೂಕನ್ನು ಹಾರಿಸಿ ಆ ಹುಲಿಗೆ ಬೀಳಲಿಲ್ಲ ಪಕ್ಕದಲ್ಲಿ ಇದ್ದ ಅವನ ಮೇಲೆ ಬಿದ್ದು ಕೊಳ್ಳುತಿತ್ತು. ಆ ಬರೆ ದೈವಯೋಗದಿಂದ ಅವನು ಬೀಗಿನೊಳಕ್ಕೆ ಹೋಗಲು ಅದನ್ನು ನೋಡುತ್ತ ವಿಜಾರಾಂ ಎಂಬಾತನು ಆ ಆಳನ್ನು ಕರೆದು ಬೇಗ ಬೋನಿನ ಬಾಗಲು ಹಾಕೆಂದು ಕೇಳಿದನು ಅಲ್ಲಿದ್ದ ಜನರು ಘಾಬರಿಯಿಂದ ಆ ಹುಲಿಯು ಬೀಗಿನೊಳಕ್ಕೆ ಹೋದದ್ದು ಕೂಡ ತಿಳಿಯದೆ ಬೀಡಾದು ತಿದ್ದರು. ತಕ್ಷಣ ಆ ಜವಾನನು ಓಡಿಹೋಗಿ ಬೋನಿನ ಬಾಗಲನ್ನು ಬಂದು ಮಾಡಿದನು.

## THE MYSORE GAZETTE.

## ಮೈಸೂರು ಗೆಜೆಟ್

ಶ್ರೀಮನ್ಮಹಾರಾಜರವರ ಸರಕಾರದವರ ಸ್ವಾಧೀನದ ಕೊಡಲ್ಪಟ್ಟ ಹುಕುಂ ನಾಮೆಗಳು.

ನಂ॥ ೧೭೩೯—೦. ೪೨೨೦—ತಾ॥ ೧೨ನೇ ಏಪ್ರಿಲ್ ೧೮೯೩—ಇದರಡಿ ಬರುವ ಅಮಲ್ದಾರ್ ಗಳ ಬಡ್ತಿಗಳು ಸರ್ ೧೮೯೩ನೇ ಇಸವಿ ಏಪ್ರಿಲ್ ಗುರ್ರೇ ತಾರೀಖ್ ಮೊದಲು ಜಾರಿಯೊಳು ಬರು ವಂತೆ ಹುಕುಂ ಮಾಡಲ್ಪಟ್ಟಿರುತಿವೆ:—

| | |
|---|---|
| ೧. ಬಂದರಲ್ಲಿ<br>೨. ವಾಗ ಕಿಂಮಣಚಂದ್ರರಾವ್ | ಎನೇ ಗ್ರೇಡಿನಿಂದ ೫ನೇ ಗ್ರೇಡಿಗೆ. |
| ೧. ಹೆಚ್. ಗುಂಡಪ್ಪ<br>೨. ಚಂಗಲ್ ರಾಯಪ್ಪ<br>೩. ಸಿ. ಶಾಮಯ್ಯಂಗಾರ್<br>೪. ಎಂ. ಕೃಷ್ಣಯ್ಯಂಗಾರ್ | ೫ನೇ ಗ್ರೇಡಿನಿಂದ ೪ನೇ ಗ್ರೇಡಿಗೆ. |
| ೧. ಎಸ್. ಕೃಷ್ಣಮೂರ್ತಿ ರಾವ್<br>೨. ಸಿ. ವೆಂಕಟಸುಬ್ಬಯ್ಯ<br>೩. ಎಂ. ಎ. ತಿರುಮಲಾಚಾರಿ.<br>೪. ಬಿ. ನಾಗೇಶರಾವ್ | ೪ನೇ ಗ್ರೇಡಿನಿಂದ ೩ನೇ ಗ್ರೇಡಿಗೆ. |

ನಂ॥ ೧೭೪೨—೦. ೪೨೫೮—ಇದರಡಿ ಬರುವ ಅಮಲ್ದಾರರ ಮತ್ತು ಡೆಪ್ಯುಟಿ ಅಮಲ್ದಾರರುಗಳ ವರ್ಗಾವರ್ಗಿಗಳು ಮತ್ತು ಸ್ಥಳ ನಿಯಾಮಕಗಳು ಹುಕುಂ ಮಾಡಲ್ಪಟ್ಟಿರುತಿವೆ.—

ಅಮಲ್ದಾರ್ ಅಸಿಸ್ಟೆಂಟಿ ಮೈಸೂರ ಸಿಟಿಯಿಂದ ಮೈಸೂರು ತಾಲ್ಲೂಕಿಗೆ.

" ಬಿ. ನಾಗೇಶರಾವ್, ಬೆಂಗಳೂರು ಸಿಟಿಯಿಂದ ಬೆಂಗಳೂರು ತಾಲ್ಲೂಕಿಗೆ.

" ಬಿ. ಸೀತಾರಾಮಯ್ಯ, ಮೈಸೂರಿಂದ ಹೊಸಕೋಟೆಗೆ, ರೆವಿನ್ಯೂ ಸರ್ವೆ ಡಿಪಾರ್ಟುಮೆಂಟಿಗೆ ಮಾಡಿರುವ ಪಿ. ವೆಂಕಟ್ರಮಣಯ್ಯನವರಿಗೆ ಬದಲು.

" ಟಿ. ಚೋಕ್ಕಣ್ಣ, ಬಿ. ಎ., ಹುಣಸೂರು ತಾಲ್ಲೂಕಿಗೆ, ರೆವಿನ್ಯೂ ಸರ್ವೆ ವರ್ಗಕೊಂಡ ಲಕ್ಷ್ಮೀ ನಾರಣಪ್ಪನವರಿಗೆ ಬದಲು.

" ಅಳಸಿಂಗ್ರಯ್ಯಂಗಾರ್, ತರೀಕೆರೆ ತಾಲ್ಲೂಕಿಗೆ, ಬೇರೆ ಕೆಲಸವನ್ನೆಯುವ ಬಾವಾ ರಾಯರಿಗೆ ಬದಲು.

" ವೈ. ನರಸಿಮ್ಮಯ್ಯ ಹೊನ್ನಾಳಿಗೆ ರೆವಿನ್ಯೂ ಸರ್ವೆ ವರ್ಗಕೊಂಡ ಲಾಜರಸ್ ತುಮಕೂರು ಯವರಿಗೆ ಬದಲು.

" ಕೃಷ್ಣೋ ಅರಸ್, ಚೆನ್ನರಾಯಪಟ್ಣ ತಾಲ್ಲೂಕಿಗೆ.

ಡೆಪ್ಯುಟಿ ಅಮಲ್ದಾರ್ ವಾಸುದೇವರಾವ್, ಎಡತೊರೆಗೆ.

ನಂ॥ ೧೭೩೩—೦. ೪೨೯೧—ಇದರಡಿ ಬರುವ ಅಮಲ್ದಾರರ ಕಾಯಂ ಮತ್ತು ಮೋಕರರಾತಿಗಳಬಗ್ಗೆ ಹುಕುಂ ಕೊಡಲ್ಪಟ್ಟಿರುತಿವೆ:—

| | |
|---|---|
| ಬಾದಾಮಿ ಕೃಷ್ಣರಾವ್,<br>ವಿ. ಎಸ್. ಗೋವಿಂದರಾವ್,<br>ಸಿ. ಎಸ್. ಚನ್ನಪ್ಪ,<br>ಕೆ. ಪಿ. ಅನಂತರಾಮಯ್ಯಂಗಾರ್ | ೫ನೇ ಕ್ಲಾಸಿನ ಸಪ್ಲಿಮೆಂಟ ಅಮಲ್ದಾರರಾಗಿ ಅವರು ಈ ಹುದ್ದೆ ಮಾಡಿ ಮೋಕರರ್ ಪಟ್ಟಿತಾಕೆ ನೋದಲು ೫ನೇ ಕ್ಲಾಸಿನಲ್ಲಿ ಕಾಯಂ ಮಾಡಲ್ಪಟ್ಟಿರುತ್ತಾರೆ. |
| ನಾಡಿಗ ಸುಬ್ಬರಾವ್<br>ಜಿ. ಹನುಮಂತರಾವ್<br>ರಾಮಸ್ವಾಮಯ್ಯ, ಬಿ. ಎ | ೪ನೇ ಕ್ಲಾಸ್ ಅಸಿಸ್ಟೆಂಟ್ ಅಮಲ್ದಾರರು ೧೮ನೇ ಇಸವಿ ಏಪ್ರಿಲ್ ಗುರ್ರೇ ತಾರೀಖ್ ಮೊದಲು ೫ನೇ ಕ್ಲಾಸಿನಲ್ಲಿ ಕಾಯಂ ಮಾಡಲ್ಪಟ್ಟಿರುತ್ತಾರೆ. |
| ಮೈಸೂರಿನ ರೆವಿನ್ಯೂ ಟಿ. ಚೋಕ್ಕಣ್ಣ, ಬಿ. ಎ. ಡೆಪ್ಯುಟಿ ಅಮಲ್ದಾರ್ ಅಳಸಿಂಗ್ರಯ್ಯಂಗಾರ್ ಮೈಸೂರಿನ ರೆವಿನ್ಯೂ ನರಸಿಮ್ಮಯ್ಯ | ೫ನೇ ಗ್ರೇಡ್ ಅಮಲ್ದಾರರಾಗಿ ಕಾಯಂ ಪಡೆದ್ದು. |

ಡೆಪ್ಯುಟಿ ಅಮಲ್ದಾರ್ ಕೃಷ್ಣೋ ಅರಸಿನವರು, ಅವರಿಗೆ ನಿಯಮಿಸಲ್ಪಟ್ಟಿರುವ ಪರೀಕ್ಷೆಯನ್ನು ಫಾಸ್ ಮಾಡುವವರೆಗೆ ತಾತ್ಕಾಲಿಕ ೫ನೇ ಕ್ಲಾಸ್ ಅಮಲ್ದಾರರಾಗಿರತಕ್ಕದ್ದು.

ಫೊರಿನ್ ಇನ್ಸ್‌ಪೆಕ್ಟರ್ ಮತ್ತು ಚನ್ನರಾಯಪಟ್ಟದ ಆಫೀಸಿಂಗ್ ಅಮಲ್ದಾರ್ ವಾಸುದೇವರಾಯರು ಡೆಪ್ಯುಟಿ ಅಮಲ್ದಾರರಾಗಿರತಕ್ಕದ್ದು.

೫. ಖಾಲಿಯಾಗಿರುವ ಕಾಯಂ ಕೆಲಸಗಳನ್ನು ನೋಡುತಲಿರುವ ಇವರಡಿ ಬರುವ ಡೆಪ್ಯುಟಿ ಅಮಲ್ದಾರರು ಕಾಯಂ ಮಾಡಲ್ಪಟ್ಟಿರುತ್ತಾರೆ:—

ವೆಂಕಟ್ರಮಣಯ್ಯ—ಗ್ರಾಮ.

ಆರ್. ರಾಮರಾವ್—ಗುಡಿಬಂಡೆ.

ಕೆ. ಸುಬ್ಬರಾವ್—ಕುಂದಿ.

ಎಸ್. ಪಿ. ವೆಂಕಟಾಚಲ—ಶ್ರೀರಂಗಪಟ್ಟಣ.

ನಂ॥ ೧೭೪೩—೦. ೬೩೦೭. ತಾ॥ ೧೮ ನೇ ಏಪ್ರಿಲ್ ೧೮೯೩—ಸರ್ ೧೮೯೩ ನೇ ಇಸವಿ ಏಪ್ರಿಲ್ ೩ ನೇ ತಾರೀಖ್ ನೋದಲು ಮಧ್ಯಾಹ್ನ ದ್ವರ, ಚೀಫ್ ಕೋರ್ಟ್ ಜಡ್ಜಿ ಕೆಲಸದ ಚಾರ್ಜನ್ನು ಆಫೀಸಿಂಗ್ ಜಡ್ಜಿಯವರಾದ ಮ॥ ಸಿ. ಮೀನಾಕ್ಷಿ ಅಯ್ಯರವರು ಕಚ್ಚಿ ಮ॥ ಪಿ. ಎನ್. ಕೃಷ್ಣಮೂರ್ತಿಯವರು ತೆಗೆದುಕೊಂಡಿರುತ್ತಾರೆ.

ನಂ॥೧೭೩೯೦—೦. ೪೩೯೯, ತಾ॥೧೦ನೇ ಏಪ್ರಿಲ್ ೯೩—ಮೈಸೂರು ಸರ್ವಿಸ್ ರೆಗ್ಯುಲೇಷನ್ ಗಳ ೧೮೮ನೇ ಆರ್ಟಿಕಲ್ ಅನುಸರಿಸಿ, ಚೀಫ್ ಕೋರ್ಟಿನ ರಿಜಿಸ್ಟ್ರಾರ್ ಮತ್ತು ಜವಾನರವರ ಆಫೀಸಿನಲ್ಲಿ ಕೆಲಸ ನೋಡುತಲಿರುವ ಮ॥ ಎಸ್. ಆರ್. ಸುಬ್ಬರಾಯ ಅಯ್ಯರವರು ಸರ್ ೧೮೯೩ ನೇ ಇಸವಿ ಏಪ್ರಿಲ್ ೧೫ನೇ ತಾರೀಖ್ ಮೊದಲು ೭ ವಾರಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ॥ ೧೭೪೮—೦. ೯. ೨೬—೯೦—ಹಾಸನ ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮಿಷನರ್ ಮ॥ ಪಿ. ವಂಚನದಾಯರವರಿಗೆ ಸರ್ ೧೮೯೩ ನೇ ಇಸವಿ ಫಬ್ರವರಿ ೧೫ ನೇ ಮುಕರ್ರಮುಲ್ಲ ೧೩೪೮—೦. ೯. ೨೬—೯೦ ನೇ ನಂಬರ್ ಇಷ್ಟಾರ್ ಮೂಲಕ ಕೊಡಲ್ಪಟ್ಟ ಮೂರುತಿಂಗಳ ಪ್ರಿವಿಲೇಜ್ ರಜಾ ಇದರಿಂದ ಮತ್ತು ಮೂರು ತಿಂಗಳಿಗೆ ಬಡಾಯಿಸಲ್ಪಟ್ಟಿರುತಿದೆ.

ನಂ॥ ೧೭೩೬೩—೦. ೯. ೬೬—೯೦, ತಾ॥ ೨೪ನೇ ಏಪ್ರಿಲ್ ೧೮೯೩.—ಶ್ರೀವಿನಸ್ ಪ್ರೊಸಿಜ್ಯೂರ್ ಕೋಡ್ ೧೩ ನೇ ಸೆಕ್ಷನ್ ಅನುಸರಿಸಿ, ಇದರಡಿ ಬರುವ ಆಫೀಸರ್‌ಗಳು ೧ ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

(೧) ಕೈಸನಿಂಗ್ ಅಸಿಸ್ಟೆಂಟ್ ಆಫೀಸ್ ಮ॥ ಸಿ. ರಘು ನಾಥಾಲ್, ಬಿ. ಎ.

(೨) ಶಿವಮೊಗ್ಗ ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮಿಷನರ್ ಮ॥ಪಿ. ರಾಮಸ್ವಾಮಯ್ಯರ್, ಬಿ. ಎ.

(೩) ಮೈಸೂರು ಡಿಸ್ಟ್ರಿಕ್ಟ್ ಜನರ ಅ॥ ಕ ಮ॥ ಎಸ್. ಸಂಪತರಾಜ ಅರಸ್.

೭. ಬೆಂಗಳೂರು ಡಿಸ್ಟ್ರಿಕ್ಟ್ ಆಫೀಸಿಂಗ್ ಅ॥ ಕ॥ ಮ॥ ಬಿ. ಕುಪ್ಪುಸ್ವಾಮಿ ನಾಯಡುರವರು, ಶಿವಮೊಗ್ಗ ಡಿಸ್ಟ್ರಿಕ್ಟ್ ಆಫೀಸಿಂಗ್ ಅ॥ ಕ॥ ಮ॥ ಕೆ. ರಾಮಾನುಜಯ್ಯಂಗಾರ್ಯರವರು ಒಂದು ವಿಶೇಷ ಕಾರಣದಮೇಲೆ, ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್ ೧೩ನೇ ಸೆಕ್ಷನ್ ಅನುಸರಿಸಿ, ೧ ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

ಕೋಲಾರ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ಮ॥ ಕೆ. ಎಸ್. ದೊರೆಸ್ವಾಮಯ್ಯರವರು ಇದರಿಂದ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ [illegible] ಗಳು ಕೊಡಲ್ಪಟ್ಟಿರುತ್ತಾರೆ.

ಹಾಸನ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ಮ॥ ಕೆ. ರಾಮಸ್ವಾಮಯ್ಯಂಗಾರ್ಯರವರು, ಸರ್ ೧೮೯೩ ನೇ ಇಸವಿ ಜನವರಿ ೫ ನೇ ತಾರೀಖಿನ ೩೩೪೮—೦. ೯. ೭೬—೯೦ ನೇ ನಂಬರ್ ಇಷ್ಟಾರ್‌ನಾಮೆಯ ಮೂಲಕ ಅವರಿಗೆ ಕೊಡಲ್ಪಟ್ಟ ೧ ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ಮತ್ತೊಂದು ಹುಕುಂ [illegible] ವರೆಗೆ ಚಲಾಯಿಸತಕ್ಕದ್ದು.

ನಂ॥ ೧೭೩೪೫—೦. ೪೩೩೦ — ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೭೦ನೇ ಆ[illegible] ಅನುಸರಿಸಿ, ತಿರುಮಕೂಡಲು ನರಸೀಪುರ ತಾಲ್ಲೂಕ್ ಅಮಲ್ದಾರ್ ಟಿ. ರಾಮಚಂದ್ರರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು ೫ ದಿನಗಳ ಕ್ಯಾಜುಯಲ್ ರಜಾ [illegible] ಟ್ಟಿರುತ್ತೆ.

ನಂ॥ ೧೭೩೪೪೮—೦. ೪೩೩೩ — [illegible] ಸರ್ವಿಸ್ ರೆಗ್ಯುಲೇಷನ್ ೧೮೮ ನೇ ಆರ್ಟಿಕಲ್ ಅನುಸರಿಸಿ, ಕೊರಟಗೆರೆಗೆ ಸಬ್ ತಾಲ್ಲೂಕ್ [illegible] ಟ ಅಮಲ್ದಾರ್ ವಿ. ಕೃಷ್ಣರಾಯರು, ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು ೧೫ ದಿನಗಳ ಪ್ರಿವಿಲೇಜ್‌ರಜಾ ಕೊಡಲ್ಪಟ್ಟಿರುತ್ತಾರೆ.

೨. ಡೆಪ್ಯುಟಿ ಅಮಲ್ದಾರ್ ವಿ. ಕೃಷ್ಣರಾಯರು ರಜಾ ಮೇಲೆ ಗೈರುಹಾಜರಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಮಧುಗಿರಿ ತಾಲ್ಲೂಕ್ ಅಮಲ್ದಾರರು ತಮ್ಮ ಸ್ವಂತ ಕೆಲಸಗಳೊಂದಿಗೆ, ಕೊರಟಗೆರೆ ಸಬ್ ತಾಲ್ಲೂಕ್ ಇನ್‌ಚಾರ್ಜಿನಲ್ಲಿರತಕ್ಕದ್ದು.

ನಂ॥ ೧೭೩೪೫—೦. ೪೩೫೭.—ಮೈಸೂರು ಸರ್ವಿಸ್ ರೆಗ್ಯುಲೇಷನ್ ೧೭೦ ನೇ ಆರ್ಟಿಕಲ್‌ನ ಷರತ್ತುಗಳನುಗುಣವಾಗಿ, ದಿವಾನರವರ ಆಫೀಸಿನಲ್ಲಿ ಕೆಲಸ ನೋಡುತಲಿರುವ ಅಸಿಸ್ಟೆಂಟ್ ಕಮಿಷನರ್ ಮ॥ ಎಸ್. ಆರ್. ಸುಬ್ಬರಾಯ ಅಯ್ಯರವರು, ಸರ್ ೧೮೯೩ ನೇ ಇಸವಿ ಏಪ್ರಿಲ್ ೫ ನೇ ತಾರೀಖಿವರೆಗೆ ಉಭಯ ದಿನಗಳೂ ಸೇರಿ, ೨ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿದ್ದರು.

ನಂ॥ ೧೭೩೪೩—೦. ೪೩೫೪.—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೨೦೦ ನೇ [illegible] ಅನುಸರಿಸಿ, ಗುಂಡಲುಪೇಟೆ ಅಮಲ್ದಾರ್ ಎ. ರಾಮಚಂದ್ರರಾಯರು, ಸರ್ ೧೮೯೩ ನೇ ಇಸವಿ ಮೇ ೩ ನೇ ತಾರೀಖ್ ಮೊದಲು ಅಥವಾ ಅವರು ಉಪಯೋಗಿಸಿಕೊಳ್ಳಬಹುದಾದ ತಾರೀಖ್ ಮೊದಲು, ಸಂಬಳವಿಲ್ಲದೆ, ೫೦ ದಿನಗಳ ರಜಾ ಕೊಡಲ್ಪಟ್ಟಿರುತ್ತಾರೆ.

೨. ಎ. ರಾಮಚಂದ್ರರಾಯರು ರಜಾಮೇಲೆ ಗೈರುಹಾಜರಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ಪಿ. ಸಭಾಪತಿ ಪಿಳ್ಳೆಯವರು ಗುಂಡಲುಪೇಟೆ ತಾ

ಅಮಲ್ದಾರ್ ದ ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟ ರಾಗಿ ಕೆಲಸ ನೋಡುವಂತೆ ನೇಮಕರಾಗ್ಮಲ್ಪಟ್ಟಿರುತ್ತಾರೆ.

ನಂ ೩ ೧೩೫೧೩—೧. ೪೩೦೫ — ಮರುಹುಕುಂ ಕೊಡಲ್ಪಡುವ ತನಕ ದಿವಾನರವರ ಹೆಸರಿಗೆ ಪೋಸ್ಟಿನಲ್ಲಿ ರವಾನೆ ಆಗತಕ್ಕವೆಲ್ಲವು ದೊಡ್ಡಬಳ್ಳಾಪುರದ ಮೊಕಾಮಿಗೆ ರವಾನಿಸಲ್ಪಡತಕ್ಕವು.

ನಂ॥ ೧೩೫೩೭—೧. ೪೩೩೬.—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೩೧ ನೇ ಆರ್ಟಿಕಲ್ ಅನುಸರಿಸಿ, ಬೆಂಗಳೂರಲ್ಲಿರುವ ಸಂಸ್ಥಾನದ ಹುಜೂರು ಖಜಾನೆ ಖಜಾಂಚಿ ಮ॥ ಟ. ರಾಯಲು ಶೆಟ್ಟರವರು ೧೮೯೩ ನೇ ಇಸವಿ ಏಪ್ರಿಲ್ ೧೯ ನೇ ತಾರೀಖ್ ಮೊದಲು ೬ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿದ್ದರು.

## ಸ್ನೇಹಿತರಾದ ಇಬ್ಬರ ಪರಸ್ಪರ ಸಲ್ಲಾಪ.

ಒಂದಾನೊಂದು ಪಟ್ಟಣದೊಳು ಪರಸ್ಪರ ಸುಹೃತ್ತುಗಳಾದ A. ಎಂಬವರೊಬ್ಬರೂ B. ಎಂಬವರೊಬ್ಬರೂ ಒಂದು ರಮಣೀಯವಾದ ಪ್ರದೇಶದಲ್ಲಿ ಸ್ವತಂತ್ರರಾಗಿ ಕುಳಿತು ತತ್ಕಾಲದಲ್ಲಿ ತಮ್ಮ ಬುದ್ಧಿಗಳಿಗೆ ಗೋಚರಗಳಾಗಿಯೂ, ಹೃದಯ ರಂಜಕಗಳಾಗಿಯೂ, ಶಾಸ್ತ್ರಲೋಕೋಚಿತಗಳಾಗಿಯೂ, ಮನೋರಂಜಕಗಳಾಗಿಯೂ ಇರುವ ಕೆಲವು ವಿಷಯಗಳಂ ಕುರಿತು ಮಾತನಾಡುತ ಪ್ರಸಂಗಸಂಗತಿಯಿಂದ ತಾವಿಬ್ಬರಿಗೊಬ್ಬರು ಪಡೆದಿರುವ ಸ್ನೇಹವನ್ನು ಕುರಿತು ಮಾಡಿದ ಪ್ರಸಂಗವೆಂತೆಂದರೆ:—

A.—ಅಯ್ಯಾ, ನಾವಿಬ್ಬರೂ ಬಹುದಿವಸಗಳಿಂದ ಸ್ನೇಹಿತರಾಗಿದ್ದೇವೆಯಷ್ಟೆ, ಇಂತಾ ಸ್ನೇಹ ಹ್ಯಾಗೆ ಉಂಟಾಯಿತು, ನಮ್ಮ ಸ್ವರೂಪಗಳೆಂತವು, ನಾವು ಮಾಡುವ ಯಾವ ಕಾರ್ಯಗಳಿಂದ ಇದು ವೃದ್ಧಿಯಂ ಪಡೆದೀತು, ಯಾವದರಿಂದ ಭಂಗವನ್ನೈದೀತು, ಈ ಸ್ನೇಹದಿಂ ನಮಗುಂಟಾಗುವ ಫಲವೇನು, ಇದು ಕೆಟ್ಟರೆ ನಮಗೆ ಹಾನಿಯೇನು, ಇದಕ್ಕೆ ವಿರೋಧಿ ವಿಷಯಗಳು ಯಾವವು, ಇವುಗಳನ್ನು ನೀವು ಚೆನ್ನಾಗಿ ಬಲ್ಲಿರಾ?

B.—ಮಿತ್ರರೆ, ಈ ಪ್ರಶ್ನೆಗಳು ಸಾಮಾನ್ಯಗಳಲ್ಲನ್ನ, ಉತ್ತರೋತ್ತರ ವಿಶೇಷ ಪ್ರಶ್ನೆಗಳಿಗೂ ತರ್ಕಗಳಿಗೂ ಅವಕಾಶವನ್ನೀಯುತವೆ, ಆದರೂ ನನ್ನ ಬುದ್ಧ್ಯನುಗುಣವಾಗಿ ಉತ್ತರಗಳಂ ಕೊಡುತ್ತೇನೆ, ಅವಧಾರಿಸಿರಿ.

A.—ನೀವು ಬುದ್ಧಿವಂತರು, ಚೆನ್ನಾಗಿ ಉತ್ತರವಂ ಹೇಳಬಲ್ಲಿರಿ, ಹೇಳಿರಿ ಅವಧಾನವನ್ನಿಡುತ್ತೇನೆ.

B.—ನಮ್ಮ ಸ್ವರೂಪ ಗುಣಗಳಿಂದಲೇ ನಮಗೆ ಸ್ನೇಹ ವುಂಟಾಗಿದೆ.

A.—ಅದು ಹ್ಯಾಗೆ ವಿವರಿಸಿ ಹೇಳಿರಿ.

B.—ನಮ್ಮಿಬ್ಬರ ಹೃದಯಗಳೂ ಈ ವಿಷಯವನ್ನು ಚೆನ್ನಾಗಿ ತಿಳಿದಿರುತಿವೆ, ಆದರೂ ನಿನ್ನ ಮುಖದಿಂದ ಕೇಳಿ ಸಂತೋಷ ಪಡಬೇಕೆಂಬ ಯೆಣಿಸಿದರೊ ಅಲ್ಲದೆ ಇದರಲ್ಲಿ ನನಗೆ ತತ್ವಜ್ಞಾನವಿದೆಯೆ ಎಂದು ತಿಳಿಯಬೇಕೆಂದೆಣಿಸಿದರೊ ತಿಳಿಯದು, ಆವದೂ ಇವೆರಡೂ ನನಗೆ ಪ್ರಯೋಜನಕಾರಿಗಳೆ.

ಯಾವವಿಧದಿಂದಲಾದರೂ ಮಿತ್ರರಂಜಕಹಿಂದು. ಅಜ್ಞಾನಾಂಶವನ್ನು ನಿಮ್ಮಿಂದ ತಿಳಿದುಕೊಳ್ಳುವಣವು ಒಂದು.

A.—ಅಯ್ಯಾ, ಆಗಲಿ, ಭ್ರಮಪ್ರಮಾದಾದಿ ದೋಷಗಳಿಲ್ಲದೆ ನಿರ್ಮಲವಾದ ನಿಮ್ಮ ಬುದ್ಧಿಯನ್ನು ನಾನು ಬಲ್ಲೆನು, ಹೇಳಿರಿ

B.—ಕೇಳಿ, ನಮ್ಮ ಮುಖಾದ್ಯವಯವಗಳೂ ಅದರ ವರ್ಣಕಾಂತಿಗಳೂ ನಮ್ಮ ಪರಸ್ಪರ ದೃಷ್ಟಿಗಳಿಗೆ ಆಹ್ಲಾದಕಗಳಾಗಿರುವದರಿಂದ ಪರಸ್ಪರ ಸಂಬಂಧ ಪರಸ್ಪರಾಭಿಲಷಿತವಾಗಿರುತಿದೆ ಇದೇ ಸ್ವರೂಪ ನಿಮಿತ್ತಕವೆಂಬುವದು.

A.—ಸರಿಯೆ, ಗುಣನಿಮಿತ್ತಕ ಹ್ಯಾಗೆ ಇರುತಿದೆ.

B.—ನನಗೆ ಇಷ್ಟಾನಿಷ್ಟ ವಿಷಯಗಳು ನಿಮಗೂ ಹಾಗೆಯೇ ಇರುತಿದೆ, ಇದೆ ಗುಣಕೃತವಾಗುದು.

A.—ಇದು ನಂಬತಕ್ಕದ ವಿಷಯವಾಗಿರುತಿದೆ, ಹ್ಯಾಗಂದರೆ,, ಲೋಕೋಭಿನ್ನರುಚಿಃ ಎಂಬುವ ನ್ಯಾಯದಿಂದ ಪ್ರತಿ ಮನುಷ್ಯನ ಬುದ್ಧ್ಯಪೇಕ್ಷಾಭಿರುಚಿ ವ್ಯಾಪಾರಾದಿ ವಿಷಯಗಳೆಲ್ಲವೂ ಭಿನ್ನಭಿನ್ನಗಳಾಗಿರುವಲ್ಲಿ ಈಸಾಮ್ಯ ಹ್ಯಾಗುಂಟಾದೀತು, ಇದು ಸ್ವಾಭಾವಿಕವಾಗಿರುವದೆ ಅಲ್ಲದೆ ಆರೋಪಿತವೆ, ಅಲ್ಲಿಯೂ ಸರ್ವಾಂಶವೆ, ಯೆತ್ಕಿಂಚಿದಂಶವೆ?

B.—ಈಶ್ವರ ಸೃಷ್ಟಿಯಲ್ಲಿ ಸಕಲ ಚರಾಚರಗಳೂ ಪ್ರಾಯಶಃ ಪ್ರತಿವ್ಯಕ್ತಿ ಭಿನ್ನಗಳಾಗಿರುವದರಿಂದ ಸ್ವಾಭಾವಿಕವೆಂಬದಾಗಿಯೂ, ಸರ್ವಾಂಶವೆಂಬದಾಗಿಯೂ ನಾನು ಪೇಳಲಾರೆನು. ಆದರೆ ಎತ್ಕಿಂಚಿದಂಶದಲ್ಲಿ ಸಹಜವಾಗಿದ್ದರೂ ಸರ್ವಾಂಶಗಳಲ್ಲಿ ಆರೋಪಿತವಾಗಿಯೇ ಇರುವ್ಪದು.

A.—ಈ ಆರೋಪಣೆ ಎಂತಾದ್ದು ಬಲ್ಲಿರಾ, ಸುಹೃತ್ತುಗಳಲ್ಲಿ ಐಕ್ಯಕವಮಾತ್ರಕಾರ್ಯವೆ, ಪರಸ್ಪರಕಾರ್ಯವೆ?

B.—ಸ್ನೇಹವೆಂಬುವದು ವ್ಯಾಸಜ್ಯವೃತ್ತಿಯಾದದರಿಂದ ತತ್ಕಾರ್ಯಗಳೆಲ್ಲವೂ ಉಭಯ ಕರ್ತೃಕವಾಗಿಯೇ ಇರುತಿದೆ.

A.—ಏಕವಮಾತ್ರಕಾರ್ಯವಾಗಿರುವದಿಲ್ಲವೊ?

B.—ಉಂಟು. ಅದು ಸ್ನೇಹವೆನ್ನಿಸಿಕೊಳ್ಳಬಾರದು. ಇಬ್ಬರೊಳಗೆ ಒಬ್ಬನಲ್ಲಿ ಅನುವೃತ್ತಿ, ಸೇವೆ ಅನ್ನಿಸಿಕೊಳ್ಳುವದಲ್ಲದೆ ಅದಕ್ಕೆ ಪ್ರತಿಯಾಗಿ ಮತ್ತೊಬ್ಬನಲ್ಲಿ ದಾಕ್ಷಿಣ್ಯ, ದಯಾ, ಪ್ರೇಮ, ಇತ್ಯಾದಿ ಭಾವರೂಪವಾಗಿರುತಿವೆಯಾಗಿ ಅದು ಪ್ರಕೃತ ನಿರೂಪಣಕ್ಕೆ ವಿಷಯವಾಗಲರಿಯದು.

A.—ಆರೋಪಣವೆಂಬ ವಿಷಯವು ಗಹನವಾಗಿಯೂ, ವಿಶೇಷವಿಚಾರಕ್ಷಮವಾಗಿಯೂ ಇರುವದರಿಂದ ಇದನ್ನು ನೀವು ಸ್ಪಷ್ಟವಾಗಿ ಹೇಳಿರಿ.

B.—ಮಿತ್ರರಿಬ್ಬರು ಭಿನ್ನಭಾವಪ್ರಕೃತರಾಗಿದ್ದರೂ ಪರಸ್ಪರಾರ್ಥವಾಗಿ ಸ್ವಸ್ವೇಷ್ಟಗಳನ್ನು ಬಿಡುವದು, ಅನಿಷ್ಟಗಳನ್ನು ಗ್ರಹಿಸುವದು.

A.—ಆದರೆ ಮಿತ್ರರು ಸ್ವಸ್ವಪ್ರಯೋಜನಾರ್ಥವಾಗಿ ವಂಚಕರಾಗುವದಿಲ್ಲವೆ?

B.—ಪರಸ್ಪರ ಹೃದಯಾನಂದ ಪ್ರಯೋಜಕವಾದ ಸಂಬಂಧವೇಸ್ನೇಹವು, ತದಿತರಪ್ರಯೋಜನಗಳೆಲ್ಲವು ವೃತ್ತ್ಯಪಾಯ ಸೇವಾನುವೃತ್ತ್ಯಾದಿ ಸಂಬಂಧರೂಪಗಳಾಗುತವೆ.

A.—ಮೊದಲನೆಯ ಸಂಬಂಧದಲ್ಲಿ ಮಿತ್ರರ ಚರ್ಯಾಭೇದಗಳುಂಟೊ?

B.—ಉಂಟು. ಅವು ಬಹುವಿಚಾರಕ್ಷಮಗಳಾಗಿರುತಿವೆ.

A.—ಆಗಲಿ ನುಡಿಯಿರಿ.

B.—ಮಿತ್ರರು ತಮ್ಮೊಳಗೆ ಪರಸ್ಪರ ಸ್ನೇಹ ಸಂಬಂಧೋದಯಕ್ಕೆ ಮುಂಚೆ ಒಬ್ಬನಿಗೆ ಯಿಷ್ಟವಾದದು ಮತ್ತೊಬ್ಬನಿಗೆ ಅನಿಷ್ಟವೆಂದು ತಿಳಿದ ಕ್ಷಣವೇ ಅದನ್ನು ಬಿಟ್ಟು ತದಿಷ್ಟವನ್ನು ಪರಿಗ್ರಹಿಸಬೇಕೆಂದು ನಿರೀಕ್ಷಿಸುತ್ತಾನೆ. ಹೀಗೆ ಪರಸ್ಪರ ಪ್ರತೀಕ್ಷೆಯಲ್ಲಿ ಯಾದೃಚ್ಛಿಕವಾಗಿ ಸಾಮ್ಯವಂ ಪಡೆದಿರುವ ಪರಸ್ಪರಾಭಿಲಷಿತ ವಿಷಯಗಳನ್ನೇ ಕೊಂಡಾಡುತ್ತಾರೆ. ಇದೊಂದು ಬಗೆ, ಪರಸ್ಪರಾನಿಷ್ಟವಿಷಯಗಳನ್ನು ಪರಿಗ್ರಹಿಸುವ್ಪದು. ಇಬ್ಬರಲ್ಲಿ ಯೊಬ್ಬನಿಗೆ ಇಷ್ಟವಾದುದು, ಮತ್ತೊಬ್ಬನಿಗೆ ಅನಿಷ್ಟವಾಗಿದ್ದರೆ, ತದರ್ಥವಾಗಿ ಅವನದನ್ನೇ ಪರಿಗ್ರಹಿಸುವ್ಪದು.

A.—ಹಾಗಾದರೆ ಆವರಲ್ಲಿ ಇಷ್ಟಾನಿಷ್ಟ ವ್ಯವಹಾರಕ್ಕವಕಾಶವಿಲ್ಲ?

B.—ಅಯ್ಯಾ, ಅದು ಯಿಲ್ಲ. ಸರ್ವವೂ ಪರಸ್ಪರೇಷ್ಟವೇ ಸರಿ.

A. ಇದರಿಂದ ನನ್ನ ಮನಸ್ಸಿಗೆ ಪ್ರಬಲಶಂಕೆಯುಂಟಾಯಿತು, ಏನಂದರೆ—ಪರಸ್ಪರಾರ್ಥವಾಗಿ ಪರಸ್ಪರಾನಿಷ್ಟ ವಿಷಯ ಪರಿಗ್ರಹಮಮಾಡುವಂತವರು, ಅನಿಷ್ಟಫಲಗಳಂ ಹೊಂದುವದಿಲ್ಲವೆ?

B.—ವಿಷಯಗಳಿಗೆ ಅನಿಷ್ಟತ್ವವಾವ್ಯಾವುಕವೊ ಅಂತಾ ಫಲಪವರಿಗೆ ತಪ್ಪದು. ಮತ್ತು ಅದು ದುಃಖಪ್ರಯೋಜಕವಾಗುವದರಿಂದ ಸ್ನೇಹಸ್ವರೂಪ ಹಾನಿಯುಂಟಾಗುತದೆ. ಅದು ಪರಸ್ಪರಾಭಿಮತವಾಗಲಾರದು, ಅದನ್ನು ತಪಸ್ವರು ಕೊಂಡಾಡರು.

A.—ಹಾಗಾದರೆ, ಅನಿಷ್ಟವಿಷಯ ಪರಿಗ್ರಹವೆಂಬುವದೇ ಅಪ್ರಸಿದ್ಧವಾಗುತದಲ್ಲವೆ?

B.—ಹೌದು. ಸ್ಥೂಲದೃಷ್ಟಿಯಿಂದದು ಹಾಗೆಯೇ ತೋರುವ್ಪದು, ಅದರ ಸೂಕ್ಷ್ಮಾಂಶವನ್ನು ವಿಚಾರಿಸಿದರೆ ಯುಕ್ತಾಂಶ ತಿಳಿಯಬರುತದೆ ಹ್ಯಾಗಂದರೆ, ಪ್ರಾಯಶಃ ಲೋಕದೋಳು ಸ್ವವಿಷಯಗಳಲ್ಲಿ ಇಷ್ಟಾನಿಷ್ಟ ಭಾವನೈಕ್ಯವಿಲ್ಲ ಕಾಲದೇಶ ಕಾರ್ಯಪರಿಗ್ರಹ ವಿನಿಯೋಗಾದಿಗಳಿಂದಲೂ, ತತ್ತದ್ಗುಣ ಹಾನೋಪಾದಾನಾದಿಗಳಿಂದಲೂ, ವಿಷಯಾಂತರ ಸಂಯೋಗ ಜನ್ಯವಾದ ಗುಣಾಂತರೋತ್ಪಾದನದಿಂದಲೂ, ದುಷ್ಟವಿಷ್ಟಪಲಪ್ರದವಾಗುತಿದೆ. ಅದುಷ್ಟವನಿಷ್ಟ ಫಲಕವಾಗುತಿದೆ ಯಾಗಿ ಮಿತ್ರರು ಪರಸ್ಪರಾರ್ಥವಾಗಿ ಪರಸ್ಪರಾನಿಷ್ಟ ವಿಷಯಗಳಂ ಈಉಪಾಯದಿಂ ಪರಿಗ್ರಹಿಸುತ ಪರಸ್ಪರೇಷ್ಟಫಲಗಳನ್ನೇ ಪಡೆಯುವರು ಆದುದರಿಂದ ಈ ವಿಷಯದಲ್ಲಿ ತಮ್ಮ ಶಂಕೆಗೆ ಅವಕಾಶವಿಲ್ಲವು

ಏತಂಚ ಹೀಗೆ ನಾವಿಬ್ಬರೂ ಪರಸ್ಪರಾಭಿಮತವಾದ ಚರ್ಯೆಗಳಿಂದ ಪರಸ್ಪರ ಹೃದಯಾನಂದವನ್ನೇ ಅಪೇಕ್ಷಿಸುತಲಿರುವದರಿಂದ ನಮಗೆ ಸ್ನೇಹ ವುಂಟಾಯಿತು.

A.—ನಮ್ಮ ಸ್ವರೂಪವೆಂತಾದ್ದು?

B.—ಲೋಕದಲ್ಲಿ ಸಾಮಾನ್ಯವು ಜನಗಳಿಂದ ಕಂಡಾದಲ್ಪಡುವ ದೇಶ, ಗ್ರಾಮ ಜಾತಿ, ಕುಲ, ಮತ, ರೂಪ, ಸಾಮ್ಯ, ವಯೋ ವಸ್ತ್ರ, ಅಧಿಕಾರ, ಧನ, ಯನ್ನ, ಪ್ರಯೋಜನಗಳೆಂಬುವ, ಪ್ರತ್ಯಾಸತ್ತಿಗಳಲ್ಲೊಂದೂ ಯಿಲ್ಲದೆ ಇದ್ದರೂ ನಮ್ಮ ಪರಸ್ಪರ ಸ್ವರೂಪಗಳು ಪರಸ್ಪರ ಹೃದಯಾಹ್ಲಾದಕಗಳಾಗಿರುತವೆ. ಆದದರಿಂದ ನಮ್ಮ ಪರಸ್ಪರ ಸ್ನೇಹ ಸಂಬಂಧ ಪ್ರಾಪಕವಾಗಿರುತಿದೆ

A.—ನಮ್ಮ ಸ್ನೇಹಾಭಿವರ್ಧಕವಾಗಿ ನಾವು ಮಾಡತಕ್ಕ ಕಾರ್ಯಗಳು ಯಾವವು!

B.—ಪ್ರಥಮೋತ್ತರದಿಂದಲೆ ಇದು ದತ್ತೋತ್ತರವಾಗುತದೆ, ಆದರೂ ಇತರ ಜನ ಪ್ರತಿಪತ್ಯರ್ಥವಾಗಿಯೂ ಕೆಲವು ವಿಶೇಷಾಂಶ ನಿರೂಪಣಕ್ಕಾಗಿಯೂ ಇದಕ್ಕುತ್ತರವಂ ಕೊಡುತ್ತೇನೆ, ಹ್ಯಾಗಂದರೆ,—

ಪರಸ್ಪರ ಹೃದಯಗೂಢ ವಿಶ್ವಾಸದಿಂ ಅತಿ ಕಂಠಾತಂಕಗಳನ್ನೈದದಿರುವಿಕೆಯು, ಅವುಗಳಿಗೆ ನಿಮಿತ್ತ ಭೂತಗಳಾದ ಈಕ್ಷಣ, ಸಲ್ಲಾಪ, ಹಾಸ, ಅಧರ, ನಯನ, ಶಿರೋಹಸ್ತ ಸ್ಪಂದನಾದಿ ಚೇಷ್ಟೆಗಳು, ಗಮನಾಗಮನ ಶಯನೋತ್ಥಾನ, ಆಸನಾದಿ ವ್ಯಾಪಾರಗಳು, ಜನಾಂತರ ಸಂಸರ್ಗವು, ಅನಾವೇದಿತಕಲಹವು, ಕೃತಾನಾವೇದನವು, ದಸಾದಿ ಪ್ರಯೋಜನಾಪೇಕ್ಷೆಯು, ಬಹುಬಾಹುಕ್ಯವು, ವೃಥಾ ವಾಕ್ಕಲಹವು, ಅನುಚಿತಪರಿಹಾಸಾಲಾಪವು, ದುರ್ಮಾರ್ಗಶ್ಲಾಘನವು, ಛಿದ್ರಾನ್ವೇಷಣವು ಇಂತಾ ಕಾರ್ಯಗಳನ್ನು ರುದ್ಧವಾಗಿ ಬಿಡುವಿಕೆಯು, ಈ ವಿಷಯಗಳಲ್ಲಿ, ನಾವು ಪರಸ್ಪರ ಜಾಗರೂಕರಾಗಿರುತ್ತೇವಯಾಗಿ ನಮ್ಮ ಸ್ನೇಹವು ದಿನೇ ದಿನೆ ವೃದ್ಧಿಯನ್ನೈದುತಿದೆ

A.—ಅಯ್ಯಾ, ವಿವಾದಮರ್ಥಸಂಬಂಧಂ ಪರೋಕ್ಷೇದಾರಭಾಷಣಂ । ಯತ್ರಮಿತ್ರಮಿಚ್ಛಂತಿ ತತ್ರತ್ರೀಣಿನಕಾರಯೇತ್ ॥ ಎಂಬ ನೀತಿ ವಚನವಿಂ ವಿವಾದಾದಿ ಮೂರು ವಿಷಯಗಳೇ ಸೌಹೃದಭಂಜಕಗಳಾಗಿ ಹೇಳಲ್ಪಟ್ಟಿರುವಲ್ಲಿ ಅತಿ ಶಂಕಾದಿ ಬಹುವಿಷಯಗಳನ್ನು ಹ್ಯಾಗೆ ಹೇಳಿದಿರಿ

B.—ಅಯ್ಯಾ, ಆ ವಚನವಿಂ ಉಪಲಕ್ಷಣವಿಧಯಾ ಈ ವಿಷಯಗಳೆಲ್ಲವೂ ಗಮ್ಯಗಳಾಗುತಿವೆ. ಇದರಿಂದ ಇಲ್ಲಿ ಹೇಳಲ್ಪಟ್ಟ ವಿಷಯಗಳ ಪರಿಗ್ರಹವೇ ಸ್ನೇಹ ಭಂಗಕಾರಿಯಾಗುವದರಿಂದ ಇದಕ್ಕೆ ಪ್ರತ್ಯೇಕ ನಿರೂಪಣವನಾವಶ್ಯಕವಾಗಿದೆ.

ಏವಂಚ ಸದರೀ ವಿಷಯಗಳನ್ನು ನಾವು ಬಿಟ್ಟಿರುವದರಿಂದ ನಮ್ಮ ಮೈತ್ರಿಯು ವೃದ್ಧಿಯಂ ಪಡೆದಿದೆ

A.—ಅಯ್ಯಾ ನಿಮ್ಮ ನಿರೂಪಣದಿಂದ ಸ್ನೇಹವೆಂಬುವದು ಪ್ರಬಲವಿಷಯವಾಗಿದ್ದರೂ, ಇದರ ಸಂಪಾದನ ಪೋಷಣ ವರ್ಧನಗಳು ಬಹುಕಷ್ಟಸಾಧ್ಯಗಳಾಗಿರುತಿವೆ ಆದರೆ ಅದನು ಸೂಕ್ಷ್ಮವಾಗಿ ಪರಿಭಾವಿಸಿದರೆ, ಅವಿಜ್ಞಾನದವರಿಗೆ ಅದು ಬಹುಲಸುಲಭಸಾಧ್ಯವಾಗಿರುತಿದೆ, ಮತ್ತು ಕಷ್ಟಸಾಧ್ಯವಾಗಿಯೂ ಇರುತಿದೆ.

A.—ಹಾಗಾದರೆ ಲೋಕದಲ್ಲಿ, ಪಂಡಿತರಿಗೆ ಪರಸ್ಪರಸ್ನೇಹವು ಲಾಗಲಾರದು, ಅಥವಾ ಉಂಟಾದರೂ ನಿಲ್ಲಲಾರದೆಂದು ನೆನಸಬೇಕೋ?

B.—ಹಾಗಲ್ಲ, ದೋಷಲೇಶ ಸಂಬಂಧವೂ ಯಿಲ್ಲದೆ, ಸರ್ವಗುಣ ಸಂಪತ್ತಿಯುಳ್ಳ ವಿಷಯವು ಪ್ರಪಂಚದಲ್ಲಿ ಬಹು ದುರ್ಲಭವಾಗಿರುವದನ್ನು ಯೆಲ್ಲರೂ ತಿಳಿದಿರುತ್ತಾರಲ್ಲದೆ, ಸದ್ಗುಣಾಗುಣವಿವೇಚನದಿಂ ಅವಿನೀತವೃತ್ತಿಯುಳ್ಳ ಪಂಡಿತರ ಸ್ನೇಹವು ಸರ್ವೋತ್ತಮವಾಗಿರುವದು ಎಂದ ಅದು ದುರ್ಲಭವೇ ಆಗುತ್ತಿದೆ

ಇದಕ್ಕೆ ಪ್ರಾಯೇಣ ಪ್ರಪಂಚದಲ್ಲಿ ಅವಿವೇಕ ಭೂಯಿಷ್ಟರಾದ ಪಾಮರ ಜನದಲ್ಲಿ ಪರಸ್ಪರ ಸ್ನೇಹವು ಕಾಣಬರುವಷ್ಟು ಪಂಡಿತರಲ್ಲಿ ಸ್ನೇಹವು ಕಾಣಬರುವದಿಲ್ಲವು ಇದಕ್ಕೆ ನಿದರ್ಶನವಾಗಿ, ಮೊದಲು ಹೇಳಲ್ಪಟ್ಟ ದೋಷಗಳಿಗವಕಾಶವಿಲ್ಲದೆ ಉತ್ತಮೋತ್ತಮವಾದ ಸ್ನೇಹವು ನಾವು ಪಡೆದಿದ್ದೇವಷ್ಟೆ ನಮ್ಮಲ್ಲಿ ಅದನ್ನು ಕಾಣಬಹುದು ಈ ವೃತ್ತಿಯು ಸ್ನೇಹವೆನಿಸಿಕೊಳ್ಳುತಿವೆ. ಇದಕ್ಕೆ ಪಡವೆಯವುಗಳೆಲ್ಲ ವಾಸ್ತವವಾದ ಸ್ನೇಹವೆನಿಸಿಕೊಳ್ಳಲಾರದು.

A.—ಹಾಗಿಲ್ಲವೆ ಎರಡು ಪರಸ್ಪರ ಸಂಬಂಧಗಳನ್ನೇನೆಂದು ಹೇಳಬೇಕು?

B.—ಏನೇ ಒಂದುಬಗೆ ಪ್ರತ್ಯಾಸತ್ತಿಯೇ ಹೊರತು ಬೇರಲ್ಲವು.

A.—ಅಲ್ಲಿಯುಳ್ಳ ಸ್ನೇಹವನ್ನು ಸ್ವಭಾವವಿದೆಯಷ್ಟೆ, ಅದಕ್ಕೇನುಗತಿ?

B.—ಅದು ಪಾಮರ ಪರಿಭಾಷಾನಿಬದ್ಧವೇ ಹೊರತು ಅನ್ವರ್ಥವಲ್ಲ. ಇದಕ್ಕೆ,—ಬಹುವರ್ಷ ಸಂಪಾದಿ ಪಸ್ಯಕಥವ ದೈವೋಪಹಿತತ್ವಾತ್ ದೃಶ್ಯತೆ ಎಂಬದಾಗಿಯೂ ಮೂರ್ಖಸ್ನೇಹತ ದಾಸ್ಯತಿಸ್ಮಿದಾನವಿ ದೃಷ್ಟ್ವೈವ ತಡವೋಪಾಸಯೇ । ಎಂಬುವ ಮಹಾ ಕವಿವಚನಗಳು ಪ್ರಮಾಣಗಳಾಗಿರುತಿವೆ ದಸ್ಯುತಿ ಸರ್ವ ಪ್ರಕಾರಗಳಿಂದಲೂ, ಸರ್ವಸಾಧನಗಳ ಮೂಲ, ಇಷ್ಟಾನಿಷ್ಟಾದಿ ಸಕಲ ವಿಷಯಗಳಲ್ಲಿಯೂ ಸಾಮ್ಯವು ಸ್ನೇಹವೆನಿಸಿಕೊಳ್ಳುವದೆ ಇದಕ್ಕೆ ಪರಸ್ಪರ ಶರೀರ ನಾಶವೇ ಸಾರಕವು. ಅದು ಸಮತಾವಿಕವಾಗಿಯೇ ಇರುವ್ಪದು, ಇದರ ಹಾನಿಯೇ ಸ್ವಸ್ವ ಹಾನಿ ರೂಪವಾಗುವದೆಂದು ನನ್ನ ತಾತ್ಪರ್ಯವು

A.—ಹೌದು ಹೌದು, ನಿಶ್ಚಯ, ಹೀಗೆ ದುರ್ಲಭವಾದ ಈ ಸ್ನೇಹವೆಂಬುವದರಿಂದ ನಮಗುಂಟಾಗುವ ಪ್ರಯೋಜನವೇನು?

B.—ಪರಸ್ಪರ ಹೃದಯಾನಂದವೆ ಎಂಬದಾಗಿ ಅಬಜ್ಞರು ನುಡಿಯುವರು.

A.—ಹಾಗಾದರೆ ಇತರಪ್ರಯೋಜನವಿಲ್ಲವೊ?

B. ಇರಲಾರದು.

A.—ಎಲ್ಲಾ ಜನರೊಂದು ಕಡೆ ಯಿದ್ದರೆ, ಅದನ್ನೇನನ್ನುತ್ತೀರಿ?

B.—ಅದು ಅದಲ್ಲ, ಅದು ಸಾಧಾರಣಸಂಬಂಧನೆನಿಸಿಕೊಳ್ಳುತಿದೆ ಅದು ಸರ್ವ ಸುಲಭವು, ಸರ್ವತ್ರ ಕಾಣಲ್ಪಡುವ್ಪದು, ಅದರ ಉತ್ಪತ್ತಿ ಲಯಗಳು ಅತಿ ಕ್ಷಿಪ್ರಗಳು.

A.—ಹೌದು ಅವು ನಮ್ಮ ವೃತ್ತಿಗಳಿಗೆ ಅತಿ ದೂರಗಳಾಗಿರುತಿವೆ. ಇದಕ್ಕೆ ವಿರೋಧ ವಿಷಯಗಳು ಯಾವವು, ಅನುಕೂಲ ವಿಷಯಗಳು ಯಾವವು?

B.—ಇವುಗಳನ್ನು ಮೊದಲೇ ಚೆನ್ನಾಗಿ ನಿರೂಪಿಸುವದಾಗಿ ಪುನಃ ಇದಕ್ಕೆ ಉತ್ತರವನಾವಶ್ಯಕವೆಂದು ನೀವೇ ಭಾವಿಸಿಕೊಳ್ಳಬಹುದು.

Bangalore.—Printed and published at the Karnataka Press, No. 40, Hospital Road, City—1893

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

## ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning.**

ಪ್ರಜಾನುವಿನಿವಪ್ರವೃತ್ತ್ಯೈನಗವಾರ್ತ್ಯ ಕರ್ಣಾಟಕಪ್ರಕಾಶನವರಾಭಿಧಾಪ್ರಥಿತಸಾಹಿತೀಶೋಭಿತಾ। ಮ್ಯಗಾಂಕಹಿತವಾಸರೇನಿಹಿತಮುದ್ರಣಾಸಜ್ಜನೈರ್ದೃಶಾಸುದರಿದೃಶಾ [illegible]

Vol XX] ಸಂಪುಟ ೨೦] | BANGALORE—MONDAY MAY 8, 1893 | [No 18
ಬೆಂಗಳೂರು—ಸರ್ ೧೮೯೩ ನೇ ಇಸವಿ ಮೇ ೮ ನೇ ತಾರೀಖ್ ಸೋಮವಾರ | [ಸಂಚಿಕೆ ೧೮.


### ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ಒಂದು ವರ್ಷಕ್ಕೆ | 6—0—0 | 8—0—0 |
| 6 ತಿಂಗಳಿಗೆ | 3—8—0 | [illegible] |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ವರ್ಷಕ್ಕೆ | 3—0—0 | 4—0—0 |
| 6 ತಿಂಗಳಿಗೆ | 1—12—0 | 2—8—0 |

ಈ ಪತ್ರಿಕೆಗೆ ದರಖಾಸ್ತು, ವರ್ತಮಾನ [illegible] ಮೊದಲಾದವು [illegible] ಪತ್ರಿಕೆಗೆ [illegible] ಇಂಗ್ಲಿಷ್ [illegible]

### ಪ್ರಕಟನೆಯ ಚಾರ್ಜ್

| | |
|---|---|
| [illegible] ಒಂದಕ್ಕೆ | 0—2—0 |
| ಎರಡು [illegible] ಒಂದಕ್ಕೆ | 0—1—0 |

[illegible] ಪತ್ರಿಕೆಯಲ್ಲಿ [illegible] ಪ್ರಕಟಿಸಲ್ಪಡುವವು [illegible] ಕಳುಹಿಸುವವರು [illegible] ಪ್ರಕಟಿಸಲ್ಪಡುವದು [illegible] ಪ್ರಕಟಿಸಲ್ಪಡಲಾರದು [illegible]


*ADVERTISEMENTS*

**NOTICE**

VAIDYASARA SANGRAHA

A TREATISE ON THE PRINCIPLES OF

HINDU MEDICINE

*Price including Postage Rs 5 0 0*

ವೈದ್ಯಸಾರ ಸಂಗ್ರಹ

ಈ ಗ್ರಂಥವು [illegible] ಬೇಕಾದವರು [illegible] ಕಳುಹಿಸಿದರೆ [illegible] ಕೊಡಲ್ಪಡಲಾರದು

[illegible] ಕ್ರಯ—[illegible] ಮತ್ತು ಅಂಚೇ ಹಾಸಲ್ [illegible] ಪ್ರತಿ ಒಂದಕ್ಕೆ ರೂ 5 0—0

ಟಿ ಬಿ ವೆಂಕಟಾಚಾರ್

[illegible] ಆಸ್ಪತ್ರಿ ರೋಡ್ [illegible] ನಂಬರ್

**ನೋಟಿಸ್.**

**ಬೆಂಗಳೂರು ಕರ್ನಾಟಿಕ್ ಪ್ರೆಸ್**

[illegible] ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು

[illegible] ಸಕಲವಿಧ ಕೆಲಸಗಳು ಸುಲಭಚಾರ್ಜಿಗೆ ತೀವ್ರ [illegible] ಕ್ಯಾವಾಗಿಯೂ, ಮಾಡಲ್ಪಡುವವು. [illegible] ಇಂಗ್ಲಿಷ್ ಕನ್ನಡ ಕೆಲಸಗಳು ಮಾತ್ರವೆ [illegible] ಇತರ ತಪಸೀಲುಗಳನ್ನು ಸದರೀ [illegible] ಬರೆದು ತಿಳಿದುಕೊಳ್ಳಬಹುದು.

**ನೋಟಿಸ್.**

ಗಣೇಶ ರಾಮಚಂದ್ರ ಕಶೀ ಮತ್ತು ಕಂಪೆನಿ. ಕಮಿಶನ್ ಏಜಂಟ್ಸ್

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ಸುಲಭ ಕ್ರಯಕ್ಕೆ ಬಹಳ ಪ್ರಮಾಣಿಕತೆಯೊಡನೆ ವ್ಯಾಲ್ಯೂ ಪೇಯಬಲ್ ಪೋಸ್ಟಿನ ಮೂಲಕ ಕಮಿಶನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ

ಎಲ್ಲಾ ತರದ ಔಷಧಗಳು, ಪುಸ್ತಕಗಳು, ಮುತ್ತುಗಳು, [illegible] ಮುತ್ತುಗಳು [illegible] ಕಾಶ್ಮೀರ ಶಾಲುಗಳು, [illegible] ಚಂದ್ರಕಾಂತ [illegible] ಕನ್ನಡಕಗಳು, [illegible] ಆಫೀಸ ಡ್ರೆಸ್‌ಗಳು, [illegible] ಅತ್ತರುಗಳು, ಅತ್ಯುತ್ತಮವಾಗಿರುವ ರತ್ನಗಳು [illegible] ಪಾತ್ರೆಗಳು, [illegible] ಪಾತ್ರೆಗಳು, ಕೇಸರಿ, ಕಸ್ತೂರಿ ವಗೈರೆ ಇತರ ಸಾಮಾನುಗಳು

ಜವಾಬ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟ್ಯಾಂಪ್ ಕಳುಹಿಸಿದ ಹೊರತು ಜವಾಬ್ ದೊರೆಯಲಾರದು

ವಿಳಾಸ—ಗಣೇಶ ರಾಮಚಂದ್ರ ಕಶೀ,
ಮತ್ತು ಕಂಪೆನಿ ಕಮಿಶನ್ ಏಜಂಟ್ಸ್
[illegible] ಸ್ಟ್ರೀಟ್ ಫೋರ್ಟ್, ಮುಂಬೈ

**ನೋಟೀಸು**

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು [illegible] ಮುದ್ರಾಕ್ಷರ ಶಾಲೆಯಲ್ಲಿ ಬಿಕರಿಗೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು

### ಸಂಸ್ಕೃತ ಗ್ರಂಥಗಳು

| | ರೂ | ಆ | ಪೈ |
|---|---|---|---|
| [illegible] ವೈದ್ಯಸಾರ ಸಂಗ್ರಹ | 5 | 0 | 0 |
| „ ಶಿವಗೀತೆ | 1 | 0 | 0 |
| „ [illegible] | 0 | 8 | 0 |
| „ [illegible] | 1 | 0 | 0 |
| „ [illegible] | 0 | 2 | 0 |
| „ [illegible] ಗೀತ | 0 | 1 | 0 |
| „ [illegible] (ಸಟೀಕ) | 0 | 8 | 0 |
| ವಿಷ್ಣುಸಹಸ್ರನಾಮ [illegible] | 0 | 3 | 0 |
| ಸೂರ್ಯಸಹಸ್ರನಾಮ | 0 | 2 | 0 |
| ಕೃಷ್ಣಕರ್ಣಾಮೃತ | 0 | 6 | 0 |
| [illegible] ಅಮರ ಮೂಲ | 0 | 4 | 0 |
| 1 ಕಾಂಡ | 0 | 1 | 0 |

### ಕನ್ನಡ ಗ್ರಂಥಗಳು

| | ರೂ | ಆ | ಪೈ |
|---|---|---|---|
| ಶುಕಸಪ್ತತಿ ಅನ್ವಯ | 3 | 0 | [illegible] |
| ಡಿಟೋ [illegible] | 1 | 6 | 0 |
| ವೃಷಭೇಂದ್ರವಿಜಯ | 1 | 8 | 0 |
| ಪಂಚತಂತ್ರ [illegible] | 0 | 4 | 0 |
| ಹನುಮದ್ವಿಲಾಸ | 0 | 4 | 0 |
| ಕಾಳೀಯಮರ್ದನ | 0 | 2 | 0 |
| ಸುಭದ್ರಾಪರಿಣಯ | 0 | 4 | 0 |
| [illegible] ಪರಿಣಯ | 0 | 2 | [illegible] |
| ಸುದಾಮಚರಿತ್ರೆ | 0 | 1 | 0 |
| ಮೈರಾವಣ ಚರಿತ್ರೆ | 0 | 1 | 0 |
| ಬಾಲಗ್ರಹಚಿಕಿ | 0 | 1 | 0 |
| [illegible] | 0 | 10 | 0 |
| [illegible] | 10 | 0 | 0 |

### ಮೈಸೂರ್ ಗವರ್ನ್‌ಮೆಂಟ್ ಎಕ್ಸೈಜ್ ಇಶ್ತಿಹಾರ ನೋಟೀಸ್.

1\. ಬೆಂಗಳೂರು ಷಹರಿನಲ್ಲಿಯೂ, ಬೆಂಗಳೂರ್ ಡಿಸ್ಟ್ರಿಕ್ಟು ಶಿವಾಯಿ ಕಡಮೆ ಯೆಲ್ಲಾ ಡಿಸ್ಟ್ರಿಕ್ಟುಗಳಲ್ಲಿಯೂ, 1893 ನೇ ಇಸವಿ ಜುಲೈ ಒಂದನೇ ತಾರೀಖು ಮೊದಲುಗೊಂಡು 1897 ನೇ ಇಸವಿ ಜೂನ್ 30ನೇ ತಾರೀಖಿಗೆ ಅಂತ್ಯವಾಗುವ ನಾಲ್ಕು ಸಾಲುಗಳಲ್ಲಿ ಬಂಡೆಯ ಕೋಠಿಗಳನ್ನು ಸ್ಥಾಪಿಸಿ, ಆ ಕೋಠಿಗಳಿಗೆ ಬೆಂಗಳೂರ್ ಬಳಿ ಇರುವ ಸರ್ಕಾರದ ಸೆಂಟ್ರಲ್ ಡಿಸ್ಟಿಲರಿಯಿಂದ ಶರಾಬನ್ನು ಬಗರ್ ಡ್ಯೂಟಿ ಯಾ ಬಗರ್ ಹಾಸಿಲ್ ನಿತಿ ತೆಗೆದುಕೊಂಡು ಹೋಗಿ ಆಯಾಯ ಕೋಠಿಗೆ ದಾಖಲಾಗಿರುವ ಶರಾಬ್ ಬಿಕರೀ ಖಜಾನೆಗಳ ಗುತ್ತಿಗೇದಾರರಿಗೂ, ವ ಸ್ವತಂತ್ರವಾದ ಅಂಗಡಿಕಾರರಿಗೂ ಸರಬರಾಯಿ ಮಾಡುವ ಹಕ್ಕನ್ನು ಪಡೆಯಲಿಕ್ಕೆ ಅಪೇಕ್ಷಿಸುವ ಜನರು ದರಖಾಸ್ತುಗಳನ್ನು ಕೊಡಬಹುದು.

2\. ದರಖಾಸ್ತುದಾರರು, ಸದರೀ ಡಿಸ್ಟಿಲರಿಯಿಂದ ಒಯ್ಯಲ್ಪಡುವ ಶರಾಬಿನ ಪರ ಗ್ಯಾಲನ್ 1 ಕ್ಕೆ ಅತ್ಯಂತ ಕಮ್ಮಿಯಾದ ಯಾವ ದರದಂತೆ ಈ ಕಂಟ್ರಾಕ್ಟನ್ನು ಮಾಡಿಕೊಳ್ಳಲು ಅಪೇಕ್ಷಿಸುವರೋ ಆ ದರವನ್ನು ಅವರ ದರಖಾಸ್ತಿನಲ್ಲಿ ಉಪನ್ಯಸಿಸಬೇಕು. ಬೆಂಗಳೂರು ಷಹರಿಗಾಗಿ ಒಂದು ದರವನ್ನು, ಬೆಂಗಳೂರ್ ಡಿಸ್ಟ್ರಿಕ್ಟ್ ಶಿವಾಯಿ ಕಡಮೆ ಯಲ್ಲಾ ಡಿಸ್ಟ್ರಿಕ್ಟುಗಳ ಕೋಠಿಗಳಿಗಾಗಿ ಮತ್ತೊಂದು ದರವನ್ನೂ ವಿವರಿಸಬೇಕು. ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಶರಾಬ್ ಬಿಕರೀ ಖಜಾನೆಗಳ ಗುತ್ತಿಗೇದಾರರು ಅವರ ಸ್ವಂತ ಉಪಯೋಗಕ್ಕಾಗಿ ಶರಾಬನ್ನು ಡಿಸ್ಟಿಲರಿಯಿಂದಲೇ ತೆಗೆದುಕೊಂಡು ಹೋಗುವರು. ಖಾಲೀ ಕಂಟ್ರಾಕ್ಟುದಾರರಿಗೆ ಬೆಂಗಳೂರು ಷಹರಿಗೆ ದರ ಗ್ಯಾಲನ್ 1 ಕ್ಕೆ ಹತ್ತು ಪೈಗಳ ಪ್ರಕಾರವೂ ಬೆಂಗಳೂರು ಡಿಸ್ಟ್ರಿಕ್ಟ್ ಶಿವಾಯಿ ಕಡಮೆ ಯೆಲ್ಲಾ ಡಿಸ್ಟ್ರಿಕ್ಟುಗಳಿಗೆ ಮೂರು ಆಣೆ ಪ್ರಕಾರವೂ ದಸ್ತೂರಿ ಸಲ್ಲುತ್ತೆ.

3\. ಬೆಂಗಳೂರು ಷಹರಿಗೋಸ್ಕರ ಕೊಡುವ ದರಖಾಸ್ತಿನೊಡನೆ 100 ರೂಪಾಯಿ, ಹೊರಗಿನ ಕೋಠಿಗಳಿಗೋಸ್ಕರ 500 ರೂಪಾಯಿ ರೇವಣಿಯನ್ನು ಕಳುಹಿಸಿಕೊಡಬೇಕು. ಪ್ರತಿ ದರಖಾಸ್ತನ್ನು ಬೆಂಗಳೂರಲ್ಲಿ ಯೆಕ್ಸೈಜ್ ಕಮಿಷನರ್ ಸಾಹೇಬರವರಿಗೆ 1893 ನೇ ಇಸವಿ ಮೇ 18 ನೇ ತಾರೀಖ್ ಬೃಹಸ್ಪತಿವಾರ ಮಧ್ಯಾಹ್ನಕ್ಕೆ ಮುಂಚೆಯೇ ಬಂದು ಮುಟ್ಟುವಂತೆ ಕಳುಹಿಸಿಕೊಡಬೇಕು. ಆ ತಾರೀಖಿನ ತರುವಾಯ ಬರುವ ದರಖಾಸ್ತುಗಳು ಅಂಗೀಕರಿಸಲ್ಪಡುವದಿಲ್ಲವು. ದರಖಾಸ್ತುಗಳು, ಹಾಜರಿರಬಹುದಾದ ದರಖಾಸ್ತುದಾರರ ಸಮಕ್ಷಮ ಸದರೀ ಮೇ 18ನೇ ತಾರೀಖಿನ ಮಧ್ಯಾಹ್ನ 12 ಘಂಟೆಗೆ ಯೆಕ್ಸೈಜ್ ಕಮಿಷನರ್ ಸಾಹೇಬರವರಿಂದ ತೆರೆಯಲ್ಪಡುವವು.

4\. ಕಡಮೆ ತಪಶೀಲ್‌ಗಳು ಅಂದರೆ ಕೋಠೀಗಳ ಸ್ಥಳಗಳು, ಒಪ್ಪಂದದ ಷರಾಯಿತುಗಳು, ಲೈಸೆನ್ಸ್, ಕಂಟ್ರಾಕ್ಟುಮುಚ್ಚಳಿಕೆ ಫಾರಮ್ಮುಗಳು, ಮುಂತಾದ ವಿಷಯಗಳಿಗಾಗಿ 1893ನೇ ಇಸವಿ ಯೇಪ್ರಿಲ್ 27ನೇ ತಾರೀಖಿನ ಮೈಸೂರ್ ಗೆಜೆಟನ್ನೂ, ಆ ತರುವಾಯ ಪ್ರಕಟವಾಗುವ ಗೆಜೆಟುಗಳನ್ನೂ ನೋಡಬೇಕು ಅಥವಾ ಬೆಂಗಳೂರ್ ಕೋಟೆಯಲ್ಲಿರುವ ಯೆಕ್ಸೈಜ್ ಕಮಿಷನರ್ ಆಫೀಸಿಗೆ ರೂಬರೂ ಬಂದು ತಿಳಿದುಕೊಳ್ಳಬಹುದು.

ಬೆಂಗಳೂರ್,
ಸರ್ 1893ನೇ ಇಸವಿ
ಮೇ ತಾರೀಖ್ 2

L. RICKETTS,
*Excise Commissioner,*
*in Mysore.*


# ಕರ್ಣಾಟಕ ಪ್ರಕಾಶಿಕಾ.

**THE KARNATAKA PRAKASIKA**

MONDAY, MAY 8 1893

೧೮೯೩ನೇ ಇಸವಿ ಮೇ ತಾ|| ೮ ನೇ ಸೋಮವಾರ

### ಮದರಾಸು ಕಮಾಂಡರ್ ಇನ್ ಚೀಫ್‌ರವರ ಮರಣ ವೃತ್ತಾಂತವು

ಈಗ್ಯೆ ಎರಡು ವರುಷಗಳ ಕಾಲವಾಗಿ ಮದರಾಸ್ ಸೇನೆಯ ಕಮಾಂಡರ್ ಇನ್ ಚೀಫ್ ಉದ್ಯೋಗವನ್ನು ವಹಿಸಿದ್ದ ಲೆಫ್ಟಿನೆಂಟ್ ಜನರಲ್ ಸರ್ ಜೇಂಸ್ ಸಿ ಡಾರ್ಮರ್ ಕೆ ಸಿ ಬಿ ಯವರು ಮಾಹೇ ಮಜಕೂರ್ 3 ನೇ ತಾರೀಖ್ ಬುಧವಾರದ ದಿನ ಮಧ್ಯಾಹ್ನ 3 ಘಂಟೆಯ ಸಮಯದಲ್ಲಿ ಉದಕಮಂಡಲದೊಳು ಕಾಲಗತಿಯನ್ನೈದಿದರೆಂಬ ವೃತ್ತಾಂತವನ್ನೀಪತ್ರಿಕಾ ಮೂಲಕ ತಿಳಿಸಲಿಕ್ಕೆ ನಾವು ಬಹಳ ವಿಷಾದಿಸುತ್ತೇವೆ. ಈ ಸೇನಾಧಿಪತಿಯವರ ಮರಣವು ಕೇವಲ ದೈವಕೃತವಲ್ಲದೆ ದುರ್ದೈವಕೃತವಾದುದರಿಂದ ಅದಕ್ಕಾಗಿ ವಿಶೇಷವಾಗಿ ದುಃಖಪಡಬೇಕಾಗಿರುತ್ತದೆ. ಕಳೆದ ತಿಂಗಳ ೨೫ ನೇ ತಾರೀಖಿನ ದಿನ ಸರ್ ಜೇಂಸ್ ಡಾರ್ಮರ್ ಯವರು ಇನ್ನಿತರ ಮಿಲಿಟರಿ ಆಫೀಸರುಗಳೊಡನೆ ಉದಕಮಂಡಲದಿಂದ ಆಚರಸನಿಯಿರುವ [illegible] ಯೆಂಬ ಅರಣ್ಯಕ್ಕೆ ಮೃಗಯಾ ವಿನೋದಾರ್ಥ ದಯಮಾಡಿದ್ದರು. ಆ ಅರಣ್ಯದಲ್ಲಿ ಅವರೆ ಒಂದು ಪ್ರದೇಶದೊಳು ಒಬ್ಬರಾಗಿ ಸಂಚರಿಸುತಲಿರುವಾಗ್ಯೆ ಒಂದು ದೊಡ್ಡ ವ್ಯಾಘ್ರವು ಅಕಸ್ಮಾತ್ತಾಗಿ ಅವರ ದೃಷ್ಟಿಯೊಳು ಬಿದ್ದುದರಿಂದ ಅದು ಬಂದೂಖಿನಿಂದ ಹೊಡೆದರು. ಆಗ ಗುರಿ ತಪ್ಪಿಹೋಗಲು ಹುಲಿಯು ತಪ್ಪಿಸಿಕೊಂಡು ಓಡಿಹೋಗುವಾಗ್ಯೆ ಕಮಾಂಡರ್ ಇನ್ ಚೀಫರವರು ಅದಂ ಬಿಡದೆ ಸ್ವಲ್ಪದೂರ ಅಟ್ಟಿಕೊಂಡು ಹೋಗುವಲ್ಲಿ ಸದರೀ ಮೃಗವು ಹಿಂದಿರುಗಿ ಅತಿ ಕ್ರೋಧದಿಂದವರಮೇಲೆ ಹಾಯ್ದು ಸಂಪೂರ್ಣ ಜಖಂ ಮಾಡಿತು, ಅಷ್ಟರಲ್ಲಿ ಯೇ ಮತ್ತೊಬ್ಬ ಆಫೀಸರರು ದೈವಾತ್ ಅಲ್ಲಿಗೆ ಬರಲು, ಅವರು ಹುಲಿಯನ್ನು ಕೊಂದರಲ್ಲದೆ, ಕೂಡಲೇ ಸರ್ ಡಾರ್ಮರ್ ಯವರ ಸ್ಥಿತಿಯಂ ಕಂಡು ಅನುತಾಪಿಸುತ ಅವರಿಗೆ ಬೇಕಾದಂತೆ ಉಪಚರಿಸಿ ಅದಿನ ಸಾಯಂಕಾಲ ಉದಕಮಂಡಲಕ್ಕೆ ಕರೆದುಕೊಂಡುಹೋದರು. ಕಮಾಂಡರ್ ಇನ್ ಚೀಫರವರಿಗಾದ ಘಾಯಗಳು ಅತಿ ಘೋರವಾಗಿಯೂ ಪ್ರಬಲವಾಗಿಯೂ ಇದ್ದುದರಿಂದ ಅವು ಕ್ರಮಶೂನ್ಯವಾಗಿ ಕಂಡುಬಂದವು. ಗತ ಭಾನುವಾರದ ವರೆವಿಗೆ ಸರ್ ಡಾರ್ಮರ್‌ಯವರ ಸ್ಥಿತಿಯು ಸ್ವಲ್ಪಮಟ್ಟಿಗೆ ಪ್ರತ್ಯಾಶಾವಕಾಶವುಳ್ಳದ್ದಾಗಿತ್ತು. ಹೀಗಿರುವಲ್ಲಿ ಅದು ಏಕಾಏಕಿ ಬದಲಾಯಿಸಿ ಕಳೆದ ಬುಧವಾರದದಿನ ಅತಿ ಭಯಂಕರವಾಗಿ ಅಧಿಕವಾಗಲು ಅವರ ಜೀವಿತಾಶೆಯು ಮುಗ್ಧವಾಗಿ ತಪ್ಪಿಹೋಯಿತು, ಗತ ಬುಧವಾರದದಿನ ಮಧ್ಯಾಹ್ನಾನಂತರದ ಅನಾಯಾಸವಾಗಿ ತಮ್ಮ ಕಳೇ

ಚರಣವಂ ತ್ಯಜಿಸಿಬಿಟ್ಟರು. ಸಮರ್ಥರಾದ ಬಹುಜನ ಚಿಕಿತ್ಸಕರು ಸವರೀ ದೊಡ್ಡ ಮನುಷ್ಯರ ಆರೋಗ್ಯಭಾಗ್ಯವು ಕೋರಿ ಬಹಳ ಶ್ರಮಿಸಿದಾಗ್ಯೂ ಅವರ ಪ್ರಯತ್ನಗಳ್ಯಾವವೂ ಸಫಲಗಳಾಗದೆ ಹೋದವು. ಬಹಳ ಶೂರರಾಗಿಯೂ ಪ್ರಸಿದ್ಧರಾಗಿಯೂ ಇದ್ದ ಸರ್ ಡಾರ್‌ಮರ್‌ಯವರ ಶೌರ್ಯ ಧೈರ್ಯ ಪರಾಕ್ರಮಗಳೆಲ್ಲವು ಪ್ರಕೃತ ಸಂದರ್ಭವಲ್ಲಿ ವಿರುದ್ಧ ಫಲಪ್ರದವಾಗಿ ಕಡೆಗೆ ಅವರು ಒಂದು ಅರಣ್ಯಕ ಮೃಗದ ದೆಸೆಯಿಂದ ಮೃತರಹುವಂತೆ ಪರಿಣಮಿಸಿದ್ದು ಬಹಳ ಅನುತಾಪಕರವಾದ ವಿಷಯವಾಗಿರುತ್ತದೆ. ಗುರುವಾರದದಿನ ಕಮಾಂಡರ್‌ಇನ್‌ಚೀಫ್‌ರವರ ಅಪರಕ್ರಿಯೆಗಳೆಲ್ಲವು ವಿಶಿಷ್ಟ ಸೈನಿಕ ಮರ್ಯಾದೆಗಳೊಡನೆ ಗೌರವಾನುಗುಣವಾಗಿ ಜರಿಗಿದವು. ಅವರ ಶರೀರವು ಖನನಸ್ಥಾನವಂ ಸೇರಲಿಕ್ಕೆ ಪೂರ್ವಭಾವಿಯಾಗಿಯೇ ಲಾರ್ಡ್ ವೆನ್‌ಲಾಕ್‌ಯವರೂ ಶ್ರೀಮನ್ಮಹಾರಾಜಾ ಚಾಮರಾಜೇಂದ್ರ ಒಡೆಯರವರೂ ಅಲ್ಲಿಗೆ ಹೋಗಿದ್ದು ಗತಿಸಿದವರಲ್ಲಿ ತಮಗುಂಟಾಗಿದ್ದ ಪ್ರೀತಿ ಗೌರವಗಳನ್ನು ತಕ್ಕ ರೀತಿಯಿಂದ ವ್ಯಕ್ತಪಡಿಸಿದರು. ಇವರ ಮರಣ ವೃತ್ತಾಂತವಂ ಸೂಚಿಸಿ ಇದರಡಿ ಕಂಡ ವಿಶೇಷ ಪತ್ರಿಕೆಯು ಸರ್ಕಾರೀಯಾಗಿ ಸಕಲಜನಗಳ ತಿಳುವಳಿಕೆಯಬಗ್ಯೆ ಪ್ರಾಯಿಷ್ ಮಾಡಲ್ಪಟ್ಟಿತು.

ಮಂತ್ರಾಲೋಚನ ಸಭೆಯೊಳಗಣ ರೈಟ್ ಆನರಬಲ್ ಗವರ್ನರವರಿಂದ ಸಾದರಾದಹುಕುಂ.

ಪೊಕ್ಕಾಂ ಉದಕಮಂಡಲ, ತಾ|| ೩ನೇ ಮೇ ೧೮೯೩—ಮದರಾಸ್ ಸೇನೆಯ ಕಮಾಂಡರ್ ಇನ್ ಚೀಫ್‌ರವರಾದ ಘನವನ್ನೈದಿದ ಲೆಫ್ಟಿನೆಂಟ್ ಜನರಲ್ ಸರ್ ಜೇಂಸ್ ಚಾರಲ್ ಸ್ಟೀಯರ್ಟ್ ಡಾರ್‌ಮರ್‌ಯವರು ೧೮೯೩ನೇ ಇಸವಿ ಮೇ ೩ನೇ ತಾರೀಖಿನದಿನ ಉದಕಮಂಡಲದೊಳು ಕಾಲಗತಿಯನ್ನೈದಿದ ಅತಿ ದುಃಖಕರವಾದ ವೃತ್ತಾಂತವಂ, ಮಂತ್ರಾಲೋಚಕ ಸಮಾಜದೊಳಗಣ ರೈಟ್ ಆನರಬಲ್ ಗವರ್ನರು ಬಹಳ ನಿರ್ವೇದದೊಡನೆ ಇದರಿಂದ ಸಕಲ ಸೈನಿಕರಿಗೆ ತಿಳಿಯಪಡಿಸುತ್ತಾರೆ. ಗೌರವಪ್ರವರ್ತಕವಾಗಿ ನಾಳೆಯದಿನ ಸೂರ್ಯೋದಯ ಮೊದಲು ಸೂರ್ಯಾಸ್ತಮಾನ ಪರ್ಯಂತ ಫ್ರೋರ್ಟ್ ಸೆಂಟ್ ಜಾರ್ಜ್ ಕೋಟೆಯಮೇಲಿರುವ ಬಾವುಟವು ಅರ್ಧಕ್ಕಿಳಿಸಲ್ಪಡತಕ್ಕದ್ದು. ದುಃಖ ಸೂಚಕಗಳಾದ ೧೫ ತೋಫೆಗಳು ಹಾಕಲ್ಪಡತಕ್ಕದ್ದಲ್ಲದೆ ಕಡೇ ತೋಫೆ ಸೂರ್ಯಾಸ್ತಮಯ ಸಮಯಕ್ಕೆ ಸರಿಯಾಗಿ ಹಾಕಲ್ಪಡತಕ್ಕದ್ದು. ಗತಿಸಿದ ಕಮಾಂಡರ್ ಇನ್ ಚೀಫ್‌ರವರ ಜ್ಞಾಪಕಾರ್ಥ ಉದಕಮಂಡಲದಲ್ಲಿಯೂ ಮದರಾಸ ಸೇನಾಧಿಪತ್ಯಕ್ಕೊಳಪಟ್ಟಿರುವ ವಿಶಿಷ್ಟ ಮುಖ್ಯ ಮಿಲಿಟರಿ ಸ್ಟೇಷನ್‌ಗಳಲ್ಲಿಯೂ ಗೌರವ ಪ್ರದರ್ಶಕಗಳಾದ ತತ್ಸಮಾನ ಮರ್ಯಾದೆಗಳು ನಡೆಸಲ್ಪಡುವವು. ಮಂತ್ರಾಲೋಚಕ ಸಮಾಜದೊಳಗಣ ಗವರ್ನರವರು, ಮತ್ತೂ ಆಜ್ಞಾಪಿಸುತ್ತಾರೇನೆಂದರೆ, ಮದರಾಸ್ ಸೇನಾಧಿಪತ್ಯಕ್ಕೆ ಸೇರಿರತಕ್ಕ ವಿಶಿಷ್ಟ ಆಫಿಸರ್‌ಗಳು ಈ ತಾರೀಖ್ ಮೊದಲು ೧೫ ದಿನಗಳ ಕಾಲ ದುಃಖಸೂಚಕವಾದ ದುಸ್ತನ್ನು ಧರಿಸಿಕೊಳ್ಳತಕ್ಕದ್ದು ಎಂಬದು.

ಹೆಚ್. ಆರ್. ಹೋಪ್, ಬ್ರಿಗೇಡಿಯರ್ ಜನರಲ್,
ಗವರ್ನಮೆಂಟ್ ಸೆಕ್ರೆಟರಿ.

ಮದರಾಸ ಗವರ್ನಮೆಂಟಿನವರು ಕೊಟ್ಟ ಮೇಲ್ಕಂಡ ವಿಶೇಷ ಹುಕುಂ ಅನುಸರಿಸಿ ಗತ ಗುರುವಾರದ ದಿನ ಇಲ್ಲಿನ ಸಿವಿಲ್ ವ ಮಿಲಿಟರಿ ಸ್ಟೇಷನಿನಲ್ಲಿ ಬಾವುಟವು ಅರ್ಧಕ್ಕೆ ಇಳಿಸಲ್ಪಟ್ಟಿತಲ್ಲದೆ, ಮೈಸೂರು ಗವರ್ನಮೆಂಟಿನವರು ಕೂಡ ಅದನ್ನನುಸರಿಸಿ, ಪಬ್ಲಿಕ್ ಆಫಿಸಿನ ಮೇಲಿರುವ ಮಹಾರಾಜರವರ ಬಾವುಟವನ್ನು ಕೂಡ ಇಳಿಸಿದ್ದರು. ಸೆಂಟ್ ಆಂಡ್ರೂಸ್ ಚರ್ಚಿಗೆ ಎದುರು ಭಾಗದೊಳಿರುವ ಕವಾಯತ್ ಮೈದಾನಿನಲ್ಲಿ ೧೫ ತೋಫೆಗಳು ಮೇಲೆ ತಿಳಿಸಲ್ಪಟ್ಟಂತೆ ಹಾಕಲ್ಪಟ್ಟವಲ್ಲದೆ ಪ್ರಸಿದ್ಧಗಳಾದ ವ್ಯಾಪಾರ ಸ್ಥಾನಗಳು ಆ ದಿನ ಮಧ್ಯಾಹ್ನಾತ್ಪರ ಮುಚ್ಚಲ್ಪಟ್ಟಿದ್ದವು.

ಸರ್ ಡಾರ್‌ಮರ್ ಯವರು ಮದರಾಸ್ ಸೇನಾಧಿಪತ್ಯವಂ ಕೈಗೊಂಡ ಕಾಲದ ಮೊದಲು, ಅಂದರೆ ಕಳೆದ ೨ ವರುಷಗಳ ಕಾಲದೊಳಗೆ ಬಹಳ ಪ್ರಜಾನುರಾಗವಂ ಪಡೆದು ಸೈನಿಕರ ಮತ್ತು ಇತರರ ಪ್ರೀತಿ ಗೌರವಗಳಿಗೆ ಪಾತ್ರರಾಗಿದ್ದರು. ಇವರು ಮಾಡಿದ ಸೈನಿಕ ವಿಷಯಕಗಳಾದ ಅನೇಕ ಏರ್ಪಾಡುಗಳು ಬಹಳ ಶ್ಲಾಘ್ಯಗಳಾಗಿಯೂ ಗವರ್ನಮೆಂಟಿಗೆ ಲಾಭಕರಗಳಾಗಿಯೂ ಇದ್ದವು. ಈ ಸರದಾರರು ಮಿಲಿಟರಿ ಇಲಾಖೆಯಲ್ಲಿಯೇ ಆದಿಯಿಂದಲೂ ವಿಶೇಷ ಪ್ರಾಶಸ್ತ್ಯವಂ ಪಡೆದವರಾಗಿರುತ್ತಾನೆ. ಇವರು ೬೪ ನೇ ಹೈಲಾಂಡರ್ ರಿಜಮೆಂಟಿನಲ್ಲಿ ಒಬ್ಬ ಕೆಪ್ಟನಾಗಿದ್ದು ಅಲ್ಲಿಂದ ಕ್ರಮೇಣ ಲೆಫ್ಟಿನೆಂಟ್ ಜನರಲ್ ಹೋದೆಗೆ ಬಡ್ತಿ ಮಾಡಲ್ಪಟ್ಟರು.

ಸರ್ ಡಾರ್‌ಮರ್ ಯವರು, ಕ್ರಿಮಿಯಾ ಯುದ್ಧ ಕಾಲದಲ್ಲಿಯೂ, ಇಂಡಿಯನ್ ಮ್ಯೂಟಿನಿ ಕಾಲದಲ್ಲಿಯೂ, ಚೀನಾ ಯುದ್ಧದಲ್ಲಿಯೂ ಬಹಳವಾಗಿ ಸಮೂಹಿಗೆ ಬಂದರು. ಸನ್ ೧೮೮೨ನೇ ಇಸವಿಯಲ್ಲಿ ನಡೆದ ಈಜಿಪ್ಟ್ ಯುದ್ಧದಲ್ಲಿಯೂ ಸನ್ ೧೮೮೫ನೇ ಇಸವಿಯಲ್ಲಿ ಜರಿಗಿದ ಸೌಡಾನ್ ಯುದ್ಧದಲ್ಲಿಯೂ ಇತರ ಅನೇಕ ಪ್ರಕರಣಗಳಲ್ಲಿಯೂ ಬಹಳ ಪ್ರಸಿದ್ಧಿಯಂ ಪಡೆದು ಗವರ್ನಮೆಂಟಿನವರ ಗೌರವಕ್ಕೆ ಪಾತ್ರರಾಗಿ ಐರ್ಲ್ಯಾಂಡ್ ರಾಜ್ಯದೊಳು ಸೇನಾಧಿಪತಿಯಾಗಿರುವಾಗ ಅವರಿಗೆ ಕೆ. ಸಿ. ಬಿ. ಎಂಬ ಅಸಾಧಾರಣವಾದ ಪ್ರಶಸ್ತಿಯು ಕೊಡಲ್ಪಟ್ಟಿತು. ಬಳಿಕ ೯೧ನೇ ಇಸವಿ ಮಾರ್ಚಿ ೭ನೇ ತಾರೀಖಿನಲ್ಲಿ ಮದರಾಸ್ ಸೇನಾಧಿಪತ್ಯವಂ ಕೈಗೊಂಡು ಬಹಳ ತೃಪ್ತಿಕರವಾಗಿ ತಮ್ಮ ಕೆಲಸವಂ ನಿರ್ವಹಿಸುತಲಿದ್ದರು. ಇಂತವರ ಮರಣವು ಸಾಮಾನ್ಯವಾಗಿ ನಷ್ಟರೂಪೇಣ ಭಾವಿಸಲ್ಪಡದಿರಲಾರದು ಲೇಡಿ ಡಾರ್‌ಮರ್ ಯವರಿಗೆ ಪ್ರಾಪ್ತವಾದ ಇಂತಾ ವೈಧವ್ಯ ಪ್ರಯುಕ್ತವಾದ ಅನಿರೀಕ್ಷಿತ ಖೇದವು ಅತಿ ದಾರುಣವಾದಾಗ್ಯೂ ತಮ್ಮ ಪತಿಯ ಕೀರ್ತಿಪ್ರತಿಷ್ಠೆಗಳು ಸ್ವಲ್ಪಮಟ್ಟಿಗೆ ತಾದೃಶದುಃಖವಂ ಶಮನಗೊಳಿಸಬಹುದೆಂದು ನಂಬುತ್ತೇವೆ. ಮುಖ್ಯವಾಗಿ, ಯಾವನಿಗೆ ಯಾವ ವಿಷಯದಲ್ಲಿ ನಿರೂಢವಾದ ಉತ್ಸಾಹವೂ ಪ್ರವೃತ್ತಿಯೂ ಅತ್ಯಧಿಕವಾಗಿರುವದೋ ಕಡೆಗೆ ಅವನ ಪ್ರಾಣಹಾನಿಗೆ ಅದೇ ಸಹಕಾರಿಯಾಗುತ್ತದೆಂಬ ಲೋಕೋಕ್ತಿಯು ಅನೇಕಪ್ರಕರಣಗಳಲ್ಲಿ ನಿರೂಪಣೆಗೆ ಬಂದಿರುತ್ತದೆಯಾಗಿ ಅಂತಾದೃಷ್ಟಾಂತಗಳೊಡನೆ ಇದನ್ನೂ ಒಂದಾಗಿ ಪರಿಗಣಿಸುವದರೊಳ್ಯಾವ ಆಕ್ಷೇಪಣೆಯೂ ಕಾಣಿಸಲಿಲ್ಲವು. ಏತೇನ ಇವುಗಳನ್ನೆಲ್ಲವಂ ನಾವು ಕರ್ಮಕೃತ ದೋಷಗಳೆಂದು ಭಾವಿಸಿರುವೆವು

## Occasional Notes.
## ನೈಮಿತ್ತಿಕ ವಿಷಯನ್ಯಾಸ.

ಬರುವ ಜೂಲೈ ಗುರ್ರೇ ತಾರೀಖಿನೊಳಗಾಗಿ ರಾಜಮಹೇಂದ್ರವರದಿಂದ ವಿಜಯನಗರದ ತನಕ ೧೩೦ ಮೈಲುಗಳ ವಿಸ್ತೀರ್ಣದವರೆಗೆ ರೈಲ್ವೇ ಕಾಮಗಾರಿ ಪೂರೈಸಿ ಪ್ರಯಾಣಸ್ಥರ ಮತ್ತು ಸರಕುಗಳ ಆಮದರಫ್ತಿಬಗ್ಯೆ ಗಾಡಿಗಳು ಬಿಡಲ್ಪಡುವವು.

ಕಳೆದತಿಂಗಳಲ್ಲಿ ಮದರಾಸ್ ನೊಳು ನಡೆದ ಪ್ರೊವಿನ್ಷಿಯಲ್ ಸಿವಿಲ್ ಸರ್ವಿಸ್ ಆಖೈರ್ ಪರೀಕ್ಷೆಗೆ ಹೋಗಿದ್ದ ಐದುಮಂದಿ ಉಮೇದ್‌ವಾರರ ಪೈಕಿ ಇಬ್ಬರು ಮಾತ್ರವೇ ಕೇಗರ್‍ಡೆಯಾದರೆಂತಲೂ ಅವರಲ್ಲಿ ಕೊಚ್ಚಿ ರಾಜಪುತ್ರರೊಬ್ಬರೆಂತಲೂ ಅರಿತು ಸಂತೋಷಿಸುತ್ತೇವೆ.

ಮಾಹೇ ಮಜಕೂರ್ ೫ನೇ ತಾರೀಖ್ ಶುಕ್ರವಾರದದಿನ ವಿಂಡ್ಸರ್ ಕ್ಯಾಸಲ್ ಯೆಂಬ ಮಹಾರಾಜ್ಞೀ ಭವನದಲ್ಲಿ ಭಾವನಗರದ ಮಹಾರಾಜರವರಿಗೆ ಚಕ್ರವರ್ತಿನೀಯವರ ಸಂದರ್ಶನವಾಗಿ ಅವರು ಬಹಳಹೊತ್ತು ಪ್ರೀತಿ ಗೌರವ ಪುರಸ್ಸರವಾಗಿ ಮಹಾರಾಜರೊಡನೆ ಸಂಭಾಷಿಸುತಲಿದ್ದರೆಂಬದಾಗಿ ರೂಟರ್‌ಯವರ ತಂತಿವೃತ್ತಾಂತದಿಂ ತಿಳಿಯಬರುತ್ತದೆ.

ಅಲೆಗ್ಸಾಂಡ್ರಿಯಾ ಪಟ್ಟಣದೊಳಿರುವ ಬ್ರಿಟಿಷರವರ ಮಂತ್ರಿಯಾದ ಲಾರ್ಡ್ ಕ್ರೋಮರ್‌ಯವರು ಈಜಿಪ್ಟ್ ದೇಶದ ಅರಸರಾದ ಖೆದೈವಯವರ ವಿಷಯದೊಳು ನಡೆಸಿದ ವಿದ್ವಾಂಸಗಳಿಗಾಗಿ ತುರ್ಕೀ ಸರಕಾರದವರು, ಅತ್ಯಾಗ್ರಹಗೊಂಡು ಸವರೀಯವರನ್ನು ವಾಪಸ್ ಕರೆಯಿಸಿಕೊಳ್ಳಬೇಕೆಂಬದಾಗಿ ಸೂಚಿಸಿರುವಂತೆ ತಿಳಿಯಬರುತ್ತದೆ.

ಈಗ ಇಂಗ್ಲಾಂಡಿನಲ್ಲಿ ನ್ಯಾಯಶಾಸ್ತ್ರಾಭ್ಯಾಸವಂ ಮಾಡುತಲಿರುವ ಸೋರಾಬ್‌ಜಿ ಯೆಂಬವರ ಪುತ್ರಿಯು ಪ್ರತಿಭಾಶಾಲಿ ವ್ಯಾಸಂಗವು ಪೂರೈಸಿರುವದರಿಂದ ಶೀಘ್ರದಲ್ಲಿಯೇ ಆಕೆ ಬ್ಯಾರಿಸ್ಟರ್ ಪರೀಕ್ಷೆಯಂ ಕೊಟ್ಟು ಇಂಡ್ಯಾದೇಶಕ್ಕೆ ಬಂದು ಮುಂಬೈ ಹೈಕೋರ್ಟಿನಲ್ಲಿ ವಕಾಲತ್ ಮಾಡಬೇಕೆಂದುದ್ದೇಶಿಸಿರುವಂತೆಯೂ, ಘೋಷಾ ಹೆಂಗಸರು ತಮ್ಮ ನ್ಯಾಯ ರಕ್ಷಣಾರ್ಥ ಕೋರ್ಟಿಗೆ ಬರಲಾರದೆ ಬಹಳ ನಷ್ಟವನ್ನೂ ಖೇದವನ್ನೂ ಅನುಭವಿಸುತಲಿರುವದರಿಂದ ಅಂತಾ ಸ್ವದೇಶೀಯರ ಪ್ರಯೋಜನಾರ್ಥವಾಗಿ ತಮ್ಮ ವೃತ್ತಿಯಂ ಸಾರ್ಥಕಪಡಿಸಬೇಕೆಂಬ ಕೋರಿಕೆಯುಳ್ಳವರಾಗಿ ದಾರೆಂಬದಾಗಿಯೂ ತಿಳಿಯಬರುತ್ತದೆ. ಸ್ತ್ರೀಯರ ಧರ್ಮನ್ಯಾಯಗಳನ್ನರಿತು ವಿಮರ್ಶಿಸಲು ಶಕ್ತರಾದ ಸಜಾತೀಯರಾದ ನ್ಯಾಯಾಧಿಪತಿಗಳೀಸಂದರ್ಭದಲ್ಲಿ ಬಹಳ ಅಪೇಕ್ಷಿತರಾಗಿದ್ದಾರೆ.

ಮದರಾಸ ಪ್ರೆಸಿಡೆನ್ಸೀ ಕಾಲೇಜ್ ಸಂಸ್ಕೃತ ಪಂಡಿತರಾದ ಡಾಕ್ಟರ್ ಆಪರ್ಟ್‌ಯವರು ಶೀಘ್ರದೊಳು ತಮ್ಮ ಕೆಲಸದಿಂ ನಿವೃತ್ತರಾಗುವದರಿಂದ ಅವರ ಕೆಲಸಕ್ಕೆ ಮತ್ತೊಬ್ಬರಂ ನಿಯಮಿಸಬೇಕಾದ ಅವಶ್ಯಕತೆ ಯುಂಟಾಗಿ ಸದರೀ ವಿಷಯವಂ ಕುರಿತು ವೃತ್ತಾಂತ ಪತ್ರಿಕೆಗಳಲ್ಲಿ ಬಗೆಬಗೆಯಾಗಿ ವಿಚಾರ ಮಾಡಲ್ಪಡುತ್ತಿದೆಯಷ್ಟೇ. ಕಡೆಗೆ ಮದರಾಸ ಗವರ್ನಮೆಂಟಿನವರ ತಾತ್ಪರ್ಯಕ್ಕೆ ವಿರುದ್ಧವಾಗಿ ಸ್ಟೇಟ್ ಸೆಕ್ರೆಟರಿಯವರು ಸದರೀ ಕೆಲಸವು ಸಮರ್ಥರಾದ ಒಬ್ಬ ಹಿಂದೂ ಪಂಡಿತರಿಗೆ ಕೊಡಲ್ಪಡತಕ್ಕದ್ದೆಂದು ನಿರ್ಣೈಸಿದ್ದರಮೇರೆ, ಅದು ಮ|| ಶೇಷಗಿರಿಶಾಸ್ತ್ರಿ ಎಂ. ಎ ಯವರಿಗೆ ಕೊಡಲ್ಪಟ್ಟು ಬರುವವಾರದ ಸರ್ಕಾರೀ ಗೆಜೆಟಿನಲ್ಲಿ ಪ್ರಾಯಿಷ್ ಮಾಡಲ್ಪಡುವದೆಂಬ ವರ್ತಮಾನವು ಕೇಳಲಿಕ್ಕೆ ನಾವು ಬಹಳ ಸಂತೋಷಿಸುತ್ತೇವೆ.

ಇಂಡ್ಯಾದೇಶದ ದ್ರವ್ಯವು ನಾಶವಾಗಲಿಕ್ಕೆ ವಿಜಾತೀಯರುಗಳಾದ ನಾನಾಕಾರಣಗಳು ದಿನೇ ದಿನೇ ಅಂಕುರಿಸುತಬರುತಲಿವೆ ಇವುಗಳಿಗೆಲ್ಲ ಅನ್ಯರಾಜರಾದ ಬ್ರಿಟಿಷರವರೊಬ್ಬರನ್ನೇ ಕಾರಣವಾಗಿ ಭಾವಿಸಿ ದೂಷಿಸುತಲಿದ್ದೆವು. ಈಗ ಅವರೊಡನೆ ಹಿಂದೂಸಂಸ್ಥಾನಾಧಿಪತಿಗಳೂ ಸೇರಿದಂತೆ ಕಾಣುತ್ತದೆ. ಈಗಯೂರೋಪಿಗೆ ಹೋಗಿರುವ ಕಪುರ್‌ಥಲಾವ್ ಮಹಾರಾಜರವರು ನೈಲ್ ಪಟ್ಟಣದಲ್ಲಿದ್ದ ಸಮಯದಲ್ಲಿ ಸುಂದರಿಯಾದ ತರುಣಿಯೊಬ್ಬಳು ಒಂದು ಗುಲಾಬಿಗುಚ್ಛವನ್ನು ಸ್ವತಃ ಮಹಾರಾಜರಿಗೆ ಕೊಡಲು ಅದನ್ನವರು ಬಹಳ ಸಂಭ್ರಮದಿಂದಂಗೀಕರಿಸಿದರು. ಅನಂತರ ಪುಷ್ಪವಂ ತಾನು ತಂದು ಕೊಟ್ಟದಕ್ಕಾಗಿ ಸುಮಾರ್ ೫೦ ರೂಪಾಯಿಗಳು ಕೊಡಬೇಕೇಂದು ಅಪೇಕ್ಷಿಸಲು ಅದೇರೀತಿ ಕೊಟ್ಟುಬಿಟ್ಟರು. ಹೀಗೆ ಅನೇಕ ವಿಧವಾಗಿ ಭ್ರಾಂತರಾದ ಇಂಡ್ಯಾದೇಶೀಯರು ವೇಷಧರಿಸಿ ಟೋಪಿಹಾಕಲಿಕ್ಕೆ ಯೂರೋಪಿಯನ್ನರಿಗೂ ಹಾಕಿಕೊಳ್ಳಲಿಕ್ಕೆ ನೇಟೀವ್‌ಗಳೂ ಸನ್ನದ್ಧರಾಗಿರುವಲ್ಲಿ ಅದಕ್ಕಾಗಿ ಚಿಂತಿಸಿ ಪ್ರಯೋಜನವಿಲ್ಲವು.

ಈ ಪತ್ರಿಕೆಯ ಮತ್ತೊಂದು ಭಾಗದಲ್ಲಿ ಪ್ರಕಟಿಸಿರತಕ್ಕ ಮದರಾಸ ನ್ಯಾಯವಿಧಾಯಕ ಸಭೆಗೆ ಹಾಸ್ಯಾ ಮೆಂಬರ್‌ಗಳನ್ನು ಚುನಾಯಿಸುವ ಕಾಯಿದೆ ನಿಬಂಧನೆಗಳನ್ನನುಸರಿಸಿ ಮದರಾಸ ಯೂನಿವರ್ಸಿಟಿಯವರು ತಮ್ಮ ತರಫ್ ಒಬ್ಬ ಪ್ರತಿನಿಧಿಯಂ ಚುನಾಯಿಸಬೇಕಾಗಿರುವದರಿಂದ ಕ್ರಿಶ್ಚಿಯನ್ ಕಾಲೇಜ್ ಪ್ರಿನ್ಸಿಪಾಲರಾದ ರೆವರೆಂಡ್ ಡಾಕ್ಟರ್ ಮಿಲ್ಲರ್‌ಯವರನ್ನು ಪ್ರಾಯಶಃ ನ್ಯಾಯವಿಧಾಯಕ ಮೆಂಬರಾಗಿ, ಅವರು ಚುನಾಯಿಸಬಹುದೆಂದು ಕಾಣುವಂತೆ ತಿಳಿಸಿ, ಸದರೀ ಯೂನಿವರ್ಸಿಟಿಯಲ್ಲಿ ಇದಕ್ಕೆ ಲಾಯಖಾದ ನೇಟಿವ್ ದೊಡ್ಡ ಮನುಷ್ಯರ್ಯಾರು ಇಲ್ಲವೆ ಹೇಳಿರೆ ಯೆಂಬದಾಗಿ ಕಲ್ಕತ್ತಾ ಇಂಡಿಯನ್ ಮಿರ್ರರ್ ಪತ್ರಿಕೆ ಪ್ರಶ್ನೆ ಮಾಡುತ್ತದೆ ರೆವರೆಂಡ್ ಮಿಲ್ಲರ್‌ಯವರ ಯೋಗ್ಯತೆಯೂ ನಿಷ್ಪಕ್ಷಪಾತತೆಯೂ ಪ್ರಸಿದ್ಧವಾಗಿದ್ದಾಗ್ಯೂ ಮಂತ್ರಾಲೋಚಕ ಸಮಾಜಗಳಲ್ಲಿ ಇಂಡ್ಯಾದೇಶೀಯರ ನಿಜವಾದ ಭಾವವನ್ನರಿತು ವ್ಯಕ್ತಪಡಿಸಲಿಕ್ಕೆ ಶಕ್ತರಾದಂತಾ ಹಿಂದೂಗಳ ಸಂಖ್ಯೆ ಅಧಿಕವಾಗಿರಬೇಕೆಂಬದು ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸಭೆಯವರ ಮುಖ್ಯಾಭಿಪ್ರಾಯವಾಗಿರುವದರಿಂದ ಯೂರೋಪಿಯನ್ ಜನಗಳ ಸಂಖ್ಯೆಯನ್ನು ಒಲವಡಿಸುವವಕ್ಷಕ್ಕೆ ಇದುವರಿವಿಗು ಇರುವ ಏರ್ಪಾಡುಗಳನ್ನೂ ಬದಲಾಯಿಸಬೇಕಾದ ಅವಶ್ಯಕತೆ ಕಾಣಿಸಲಿಲ್ಲವು.

## ನೋಟಿಸ್.

ಇದರಿಂದ ತಮ್ಮ ಚಂದಾದಾರರಿಗೆ ನಾವು ಕೃತಜ್ಞತಾಪೂರ್ವಕ ಪಡಿಸುವದೇನೆಂದರೆ —

ಈ ಸಾಲಿನಲ್ಲಿ ನಿಶ್ಚಯ ದಿನದೊಳಗೆ ನಾಲ್ಕು ತಿಂಗಳು ಕಳೆದರೂ ಇನ್ನು ಅನೇಕರು ಚಂದಾ ಹಣವನ್ನು ಕಳುಹಿಸದ ಹೊರತು ಈ ಪತ್ರಿಕೆಯ ಪ್ರಕಾಶವು ನಿರುಪಾಧಿಕವಾಗಿ ನಡೆಯಲಾರದು, ಆದುದರಿಂದ ದಯವಿಟ್ಟು ಪ್ರಯತ್ನಪಟ್ಟು ಕೂಡಲೆ ಚಂದಾ ಹಣವನ್ನು ಕಳುಹಿಸಬೇಕೆಂದು ಕೋರುತ್ತೇವೆ ಹಾಗೆ ಮಾಡದವರಿಗೆ ಈ ಪತ್ರಿಕೆ ಕಳುಹಿಸಲ್ಪಡಲಾರದು

೧–೫–೯೩ ಪ್ರೊಪ್ರೈಟರ್.

## LOCAL AND PROVINCIAL NEWS
## ಸ್ಥಳದೇಶಮತ್ತು ತಾಲ್ಲೂಕ್‌ಜಾತಿ ವೃತ್ತಾಂತಗಳು.

ರೆಯಿಲ್ವೇ ಪೋಲೀಸಿಗೆ ಸೇರಿದ ಚಿ ಪೆ ಕಾನ್‌ಸ್ಟೆಬಲ್‌ಗಳಿರಲಿಕ್ಕೆ ಮದರಾಸ್ ರೆಯಿಲ್ವೇ ಕಂಪೆನಿಯು ಸ್ಟೇಷನ್ ಬದಿಯ ಸಮೀಪದಲ್ಲಿ ಹೊಸದಾಗಿ ಕೆಲವು ಮನೆಗಳನ್ನು ಕಟ್ಟಿಕೊಡುವಂತೆ ಮೈಸೂರ್ ಸರ್ಕಾರದವರು ಹುಕುಂ ಮಾಡಿರುತ್ತಾರೆ.

ಈ ಸಂಸ್ಥಾನದ ಕೌನ್ಸಿಲ್ ಮೆಂಬರಾದ ಆನರಬಲ್ ಮ|| ಚೆಂಚಲರಾವ್ ಪಂಡಿತ್ ಸಿ ಐ ಇ ಯವರು ತಮ್ಮ ಪುತ್ರರಿಗುಂಟಾಗಿದ್ದ ಶರೀರಾಲಸ್ಯಪ್ರಯುಕ್ತ ಅವರು ನೋಡುವಬಗ್ಯೆ ಕಲಿಕತ್ತೆಯಿಂದ ಮದರಾಸಿಗೆ ಬಂದಿದ್ದವರು ಗತ ಬುಧವಾರದದಿನ ಕೆಲವು ಜರೂರಿಯಾತ್ ಕೆಲಸದ ಮೇಲೆ ಈ ಪ್ರಾಂತಿಗೆ ಬಂದಿದ್ದು ಮೊನ್ನೆಯದಿನ ವಾಪಸ್ ಹೋದರೆಂದು ಕೇಳುತ್ತೇವೆ.

ಈ ಸಂಸ್ಥಾನದ ಫಾರೆಸ್ಟ್ ಇಲಾಖಾ ನೌಕರಿಯಲ್ಲಿರುವ ಮಿರ್ಜಾ ಮಹಮದ್ ಬೇಗ್‌ರವರು ತಮ್ಮ ಕುಟುಂಬಕ್ಕೆ ಸೇರಿದವರೊಬ್ಬರಿಗೆ ತಮ್ಮ ಘೋಷಾಪದ್ಧತಿಯನ್ನು ಬಿಟ್ಟುಬಿಡುವಂತೆ ಬೋಧಿಸಿದಕ್ಕಾಗಿ ಅವರ ಮತಸ್ಥರೆಲ್ಲರೂ ಸೇರಿ ಅವರಿಗೆ ಬಹಿಷ್ಕಾರ ಹಾಕಿದಾರೆಂದು ಮೈಸೂರ್ ಹೆರಲ್ಡ್ ಪತ್ರಿಕೆ ತಿಳಿಸುತ್ತದೆ. ಮುಸಲ್ಮಾನ್ ಸ್ತ್ರೀಯರಿಗಿನ್ನೂ ವಿದ್ಯಾವೈಲಕ್ಷಣ್ಯ ಪ್ರಾಪ್ತವಾಗದಿರುವದೇ ಇದಕ್ಕೆ ಕಾರಣವು.

ಮುಂಬೈ ಗವರ್ನರಾದ ಲಾರ್ಡ್ ಹಾರಿಸ್‌ಯವರು ತಮ್ಮ ಭಾರ್ಯೆಯವರೊಡನೆ ಮಾಹೇ ಮಜಕೂರ್ ೧೨ ನೇ ತಾರೀಖಿನಲ್ಲಿ ಮಹಾಬಲೇಶ್ವರದಿಂದ ಉದಕಮಂಡಲಕ್ಕೆ ದಯಮಾಡಿ ೨೬ ನೇ ತಾರೀಖ್ ಶುಕ್ರವಾರದ ವರಿವಿಗೆ ಅಲ್ಲಿಯೇ ಇದ್ದು, ಅಲ್ಲಿಂದ ಮೈಸೂರ್ ಮಾರ್ಗವಾಗಿ ಈ ಪ್ರಾಂತಿಗೆ ಬಂದು ಇಲ್ಲಿಂದ ಸದರ್ನ್ ಮರಾಠಾ ರೆಯಿಲ್ವೆಯಲ್ಲಿ ಮಹಾಬಲೇಶ್ವರಕ್ಕೆ ಮರಳಿ ದಯಮಾಡುವಂತೆ ಏರ್ಪಾಡಾಗಿರುತ್ತದೆ.

ಜುನಾಘರ್ ನವಾಬರವರು ನಿನ್ನೆಯ ದಿನ ಮಧ್ಯಾಹ್ನ ದಕ್ಷಿಣ ಮಹಾರಾಷ್ಟ್ರ ರೆಯಿಲ್ ಮಾರ್ಗವಾಗಿ ಈ ಪ್ರಾಂತಿಗೆ ದಯಮಾಡಿದರು. ಈ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರ್ ಮೊದಲಾದ ಕೆಲವರು ದೊಡ್ಡ ಮನುಷ್ಯರು ಸಿಟೀ ರೆಯಿಲ್ವೇ ಸ್ಟೇಷನಿನಲ್ಲಿ ಹಾಜರಿದ್ದು ಅವರು ಉಚಿತಮರ್ಯಾದೆಗಳೊಡನೆ ಬರಮಾಡಿಕೊಂಡರಲ್ಲದೆ ಈ ದಿನ ಮರ್ಯಾದಾರ್ಥ ೧೧ ತೋಫೆಗಳು ಹಾ

ಸ್ಪಷ್ಟವು. ಇವರು ಶ್ರೀಮನ್ಮಹಾರಾಜರ ಸಂದರ್ಶನಾರ್ಥ ರಾಜಧಾನಿಗೆ ದಯಮಾಡಿ ಸುವರೆಂದು ಕಾಣುತಿದೆ. ಇವರೀಗ ಮಹಾರಾಜರವರ ಆತಿಥ್ಯವನ್ನಂಗೀಕರಿಸಿ ಅವರ ಅರಮನೆಯಲ್ಲಿಯೇ ಬಿಡಾರಮಾಡಿರುತ್ತಾರೆ

---

ಪ್ರತಿದಿನ ಸಾಯಂ ಕಾಲ ವೇಳೆಯಲ್ಲಿ ಮೋಡ ಮುಸುಕು, ಗುಡುಗು, ಘೂಳಿ ಮೊದಲಾದವುಗಳ ಆಡಂಬರದಿಂದ ಮಹಾ ಮಳೆಯು ಬರುವಂತೆ ಜನರಿಗೆ ತೋರುತಲಿದ್ದಾಗ್ಯೂ ನೋಡುತಲಿರುವಾಗ್ಯೆ ಎಲ್ಲವೂ ಅದೃಶ್ಯಗಳಾಗಿ ಆಕಾಶವು ನಿರ್ಮಲವಾಗಿ ದರಿದ್ರನ ಮನೋರಥದಂತೆ ಹುಟ್ಟಿದ ಕ್ಷಣದಲ್ಲೇ ಲೀನವಾಗಿ ಹೋಗುತಿವೆ. ಭೂಮಿಯ ಮೇಲೆ ಹಸಿಗಳು ಬೀಳಲಿಕ್ಕೆ ಬಹಳ ಹೆದರುತಿವೆ ಈ ಬಗೆಗೆ ಆದ ವರ್ಷದಿಂದ ಎಟ್ಟಾಡಿ ಬೆಳೆಯುತ್ತಿದ್ದ ಮನ ನೀಡು ಹೋಗುತ ಬರುತಲಿವೆ ಜಲಾಭಾವದಿಂ ಪ್ರಜೆಗಳನುಭವಿಸುವ ಕ್ಲೇಶವು ಅನಿರ್ವಚನೀಯವಾಗಿರುತಿದೆ

---

ವಿಜಾಗಪಟ್ಟ ಜಿಲ್ಹೆಯ ನಾಗರಿಕರೆ ದೇಹಾರೋಗ್ಯವನ್ನು ನೋಡಿಕೊಳ್ಳುವದಕ್ಕಾಗಿಯೇ ಒಬ್ಬ ವೈದ್ಯರು ನೇಮಿಸಲ್ಪಟ್ಟಿರುತ್ತಾರೆಂತಲೂ ಅವರ ಸಂಬಳವನ್ನು ಸಂಸ್ಥಾನದ ಖರ್ಚಿನಲ್ಲಿ ಸೇರಿಸುತ್ತಾರೆಂತಲೂ ಆಗೆ ಸಂಬಂಧಪಟ್ಟ ಎಷ್ಟು ರೂ ಖರ್ಚಾಗುವರು ಇಂಥಾ ಪ್ರತ್ಯೇಕ ಸಹಾಯ ನೋಡುವ ದಾಯಕರಿಗೆ ವೈದ್ಯರಿಗೆ ವೇತನವು ...ಗಿದೆ

---

ಸಾಧಾರಣವಾಗಿ ಅನೇಕ ತಾಲ್ಲೂಕುಗಳಲ್ಲಿ ಗವರ್ನಮೆಂಟಿನವರಿಂದ ಸ್ಥಾಪಿತವಾದ ಒಂದು ಇಂಗ್ಲೀಷ್ ಸ್ಕೂಲೂ ಒಂದು ಕನ್ನಡ ಸ್ಕೂಲೂ ಇರುತಿವೆಯಷ್ಟೆ ಇಂಗ್ಲೀಷನ್ನು ಓದತಕ್ಕ ವಿದ್ಯಾರ್ಥಿಗಳು ಕನ್ನಡ ಪಾಠಗಳಿಗಾಗಿ ಕನ್ನಡ ಸ್ಕೂಲುಗಳಿಗೆ ಹೋಗಬೇಕೆಂದು ಹಾಗೆ ಹೋಗುವುದರ ಬದಲು ಅವರನ್ನು ಇಂಗ್ಲೀಷ್ ಸ್ಕೂಲಿನಲ್ಲಿಯೇ ಕನ್ನಡವನ್ನು ಕಲಿಸುವರೆಂದು ಜಾಕಂ ಹೊರಡಿಸುತ್ತ

## CORRESPONDENCE

[ಇದರಲ್ಲಿ ಪ್ರಕಟಿಸಲ್ಪಟ್ಟಿರುವ ಲೇಖನಗಳ ಅಭಿಪ್ರಾಯಗಳ ಗುಣದೋಷಗಳಿಗೆ ಪತ್ರಿಕಾ ಲೇಖಕರು ಜವಾಬ್ದಾರರಲ್ಲವು. ಎಡಿಟರ್, ಕ. ಪ್ರ.]

---

ಶ್ರೀ| ರಾ| ಕರ್ಣಾಟಕ ಪ್ರಕಾಶಿಕಾ ಎಡಿಟರವರ ಸ|| ಕ್ಕೆ||

ಅಯ್ಯಾ,—ಮದರಾಸಿ ಕಾರ್ಯಧುರಂಧರನೆಂಬುವ ಸರಕಾರಿ ನೌಕರರು ಪ್ರತಿ ವಾರ ವೃತ್ತಾಂತ ಪತ್ರಿಕೆಯ ತಮ್ಮ ಮಾತು ಸ್ವರೂಪವೆಂದರೆ ಭಾವನೆ ತಿಳಿಯುತ್ತೇನೆ ನಮ್ಮ ದೊಡ್ಡ ಮನುಷ್ಯರಿಗೆ ಪ್ರಸ್ತಾಪದ ಇಂಥಾ ಮನ್ನಣೆ ಕುರಿತು ಎಲ್ಲರೂ ಬಹಳ ಅನುತಾಪಪಡುತ್ತಾರೆ. ಇದು ಮನುಷ್ಯರಿಗೆ ಸ್ವಾಭಾವಿಕ ಗುಣವು ಆದರೆ ಅದರಲ್ಲಿ ಅಜ್ಞಾನಿಗಳೂ, ಅನಾಥರೂ ಇದ್ದು ಸಂಗೊಳಿಸಲ್ಪಟ್ಟ ವ್ಯಕ್ತಿಯ ವಿಷಯದಲ್ಲಿ ಕನಿಕರಪಡತಕ್ಕ ನಮ್ಮೊಬ್ಬ ಕನ್ನಡಿಗನು ಪರವಸ್ತುವಿಷ್ಟಕ್ಕಾಗಿ ಪ್ರಾಣಿಹಿಂಸೆಯ ವಿಷಯದಲ್ಲಿ ಇಷ್ಟರ ಪಕ್ಷಪಾತವಿಲ್ಲದೆ ನಮ್ಮ ದೇಶದಲ್ಲಿರುವ ಮೃಗಗಳ ಗೋಸ್ಕರ ತಮ್ಮ ಪ್ರಾಣ ಕೊಡುವಂತಹಗಿರುತಿವೆ ಮನುಷ್ಯ ಸಾಮಾನ್ಯರ ತತ್ತ್ವವಿಚಾರಗಳು ಆ ಪ್ರಾಂತಗಳಲ್ಲಿ ವಿಶೇಷತಃ ಸಂತೋಷಕ ಅದಂ ಆಕ್ರಮಿಸಿಕೊಳ್ಳುತಲಿದವೆ. ನೀಲಗಿರಿ ಬೆಟ್ಟದವರು ಇದನ್ನು ಒಳ್ಳೆ ಸ್ವಲ್ಪ ಹೆಚ್ಚು ಕಡಮೆಯಾಗಿ ಸಹನೆ ಮಾಡಿ ತಮ್ಮ ರಕ್ಷಣೆಯನ್ನು ಅಂಗೀಕರಿಸಿದ್ದಾಗ್ಯೂ ಅರಣ್ಯಕ ಮೃಗಗಳಿಗಿಂತಲೂ ಅವರಿರುವ ಪ್ರದೇಶಕ್ಕೆ ಬರುವದಿಲ್ಲವು ಅವರಿಗೆ ಅಪಾಯಕರವಾದ ಸ್ಥಳಗಳಿಗೆ ಹೋಗಿ ಅವುಗಳನ್ನು ಹೊರಗೆ ತೆಗೆದು ಹಿಂಸಿಸುತ್ತಾರೆ ಪ್ರಕೃತ ಸಂದರ್ಭದಲ್ಲಿ ಕರ್ನಲ್ ಹಂಫ್ರೀ ಎಂಬವರು ತಾವಾಗಿ ಹುಲಿಯನ್ನು ಕೆಣಕಿ ಗೋಲಿಯಿಂದ ಹೊಡೆದು ಅದು ಪ್ರಾಣಭೀತಿಯಿಂದ ಓಡಿಹೋದಾಗ್ಯೂ ಅಲ್ಲಿಗೂ ಬಿಡದೆ ಅದಂ ಅಟ್ಟಿಕೊಂಡು ಹೋದರು ಒಳಿಕ ಅದು ಅತಿಕೋಪದಿಂದ ಹಿಂತಿರುಗಿ ಮೇಲೆಬಿದ್ದು ಪ್ರಾಣವಹರಿಸಿತು. ಆದ್ದರಿಂದ ಈ ಅನರ್ಥಕ್ಕೆ ಅವರೆ ಮನಃಪೂರ್ವಕ ನಿಮಿತ್ತವಾಯಿತು ಇಂಥಾ ಸಂದರ್ಭದಲ್ಲಿ ಹುಲಿಯು ಮನುಷ್ಯನಾಗಿದ್ದು ತನ್ನ ಅಭಿಪ್ರಾಯವನ್ನು ತಿಳಿಸಲಿಕ್ಕೆ ಶಕ್ತನಾದವನಾಗಿದ್ದರೆ ಅದು ಏನು ನುಡಿಯುತಿದ್ದಿತು ? ಅದಕ್ಕೆ ಅಂಟಿದ ಜಮೀನ್ಗಳಿಗೂ ಧೂರ್ತರ ಅರಣ್ಯದಲ್ಲಿ ಪ್ರಾಣವಾಯು ಮರಣದಿಂದ ಲಭಿಸಿದ ವೀರಸ್ವರ್ಗ ಪ್ರಾಪ್ತಿಯೂ ಎಷ್ಟರಮಟ್ಟಿಗೆ ಸಂತೋಷ ಪಡುವದೋ ಅದಂ ಅವರಿಗೆ ಸ್ವಾನುಭವದಿಂದ ಆಲೋಚಿಸಿಕೊಳ್ಳಬೇಕಾಗಿರುತಿದೆ. ಕೆಲವರಿಗೆ ಸಹ ಮಾನವಕೋಟಿಗೆ ಸೇರಿದ ನಮ್ಮಂತಹ ಯೋಚನಾಶಕ್ತಿಯೂ ವಿವೇಕ ಸ್ವಾಭಿಮಾನಗಳು ಇರುವ ಪಕ್ಷಕ್ಕೆ ಇದು ಸತ್ಕೀರ್ತಿಯ ದಿಗ್ವಿಜಯಾರ್ಥ ಬಂದು ಮನುಷ್ಯಜನ್ಮವನ್ನು ಕೆಡಿಸಿಕೊಳ್ಳುವರು, ಈ ಸಂದರ್ಭದಲ್ಲಿ ಉಭಯರ ನ್ಯಾಯನಿರ್ಣಯ ಭಾರವು ತಮ್ಮಂಥರ ಸೃಷ್ಟಿಕರ್ತನಾದ ಭಗವಂತನಿಗಿರುತಿದೆಂದು ನಂಬಿರುವ,

ತಮ್ಮ ವಿಧೇಯನಾದ,

ಜೀವದಯಾಪರನು.

## SUMMARY OF WNES.

### ವೃತ್ತಾಂತ ಸಂಗ್ರಹವು.

---

ನ್ಯೂಯಾರ್ಕ್ ಪಟ್ಟಣದಲ್ಲಿ ಸ್ತ್ರೀಯರಿಗೋಸ್ಕರ ವಾಗಿಯೇ ಪ್ರತ್ಯೇಕವಾಗಿ ಒಂದು ಭೋಜನಶಾಲೆಯನ್ನು ಕಟ್ಟಿಸಬೇಕೆಂಬ ಪ್ರಯತ್ನ ಮಾಡಿರುತ್ತಾರೆ ಇದರಲ್ಲಿ ೩೦೦ ಜನಗಳಿಗೆ ಸಾಕಾಗುವಷ್ಟು ಕೋಣೆಗಳಿರಬೇಕಂತೆ

---

ನಮ್ಮ ದೇಶಿಯರಲ್ಲಿ ನವರತ್ನಗಳನ್ನು ಧರಿಸಿಕೊಳ್ಳುವವರಲ್ಲಿ ಒಂದು ರತ್ನಕ್ಕೆ ಒಂದು ಸಾಮರ್ಥ್ಯವನ್ನೂ, ಶುಭಕರವನ್ನೂ, ಮತ್ತೊಂದಕ್ಕೆ ಧೈರ್ಯವನ್ನೂ, ಅಶುಭಕರವನ್ನೂ ಆರೋಪಿಸುವದು ವಾಡಿಕೆಯಷ್ಟೆ. ವಿಲಾಯತಿಯಲ್ಲಿ ಪಾಶ್ಚಾತ್ಯ ಸ್ತ್ರೀಯರೂ ಕೂಡ ಕೆಲವು ರತ್ನಗಳಲ್ಲಿ ಈ ವಿಧವಾದ ಅಭಿಪ್ರಾಯಗಳುಳ್ಳವರಾಗಿರುವರೆಂತಲೂ ಯಾವದನ್ನು ಯಾರಿಗೆ ಯಾವಕಾಲದಲ್ಲಿ ಬಳಸಬೇಕಾಗಿ ಕಳುಹಿಸಬೇಕಾದಾಗ್ಯೂ ತಮ್ಮ ಈ ಅಭಿಪ್ರಾಯಾನುಸಾರವಾಗಿಯೇ ನಡೆಯುತ್ತಾರೆಂತಲೂ ಅಲ್ಲಿನ ಪತ್ರಿಕೆಯೊಂದು ತಿಳಿಸುತಿದೆ

---

ನಂಜುಂಡಯ್ಯನೆಂಬವನೊಬ್ಬನು ಮದರಾಸಿಗೆ ಹೋಗಿ ಅಲ್ಲಿ ಕೆಲವರೊಡನೆ ತಾನು ಮೈಸೂರಿನಲ್ಲಿ ಪೋಲೀಸ್ ಇನ್ಸ್ಪೆಕ್ಟರನೆಂತಲೂ, ಇನ್ಸ್ಪೆಕ್ಟರ್ ಜನರಲ್‌ರವರಾದ ಮಹಮೂದರವರಲ್ಲಿ ಬಹಳ ಸಲಿಗೆಯುಳ್ಳವನೆಂತಲೂ, ತಾನು ವಿವಾಹದ ವೆಚ್ಚಕ್ಕಾಗಿ ಸಾಲಕ್ಕೆ ೧೦೦೦ ರೂಪಾಯಿ ಬೇಕೆಂದು ಕೇಳಿಕೊಂಡ, ಸಂಬಳ ಮ ಡಿಕೆ ಕಟ್ಟಿ ಜನರಿಗೆ ಚ ಸಾಲಕೊಡುವುದಾಗಿ ನಂಬಿಸಿದನು ಆದನನ್ನು ಅಲ್ಲಿನ ಪೊಲೀಸರು ಪ್ರಶ್ನೆ ಮಾಡಿದ್ದಕ್ಕೆ ಪೂರ್ವಾಪರ ವಿಚಾರ ಮಾಡಿ ೬ ತಿಂಗಳ ಕಠಿಣ ಶಿಕ್ಷೆ ಅನುಭವಿಸುವಂತೆ ವಿಧಿಸಿದರು —ವೃ. ಚಿ.

---

ಒಂದು ಸರ್ಪವನ್ನು ಕೊಂದು ಅದರ ದೇಹವನ್ನು ಮನೆಯಲ್ಲಿಟ್ಟುಕೊಂಡಿದ್ದರೆ ಆ ಮನೆಗೆ ಸರ್ಪಗಳ ಕಾಟವು ತಪ್ಪದೆ ಬರುವದೆಂಬ ವಾಡಿಕೆಯಾದವಷ್ಟೆ ಈಚೆಗೆ ಉತ್ತರದೇಶದಲ್ಲಿ ಒಬ್ಬ ಮನುಷ್ಯನು ಒಂದು ಸರ್ಪವನ್ನು ಕೊಂದು, ತನ್ನ ಆಳಿನ ವಶಕ್ಕೆ ಕೊಟ್ಟು, ಅದರ ಚರ್ಮದೊಳಗೆ ಹುಲ್ಲನ್ನು ತುರುಕಿಸಿ ಮನೆಯಲ್ಲಿಡುವಂತೆ ಆಜ್ಞೆಮಾಡಿದನು, ಅವನು ಅದೇ ರೀತಿಯಾಗಿ ನಡೆಸಿದ ಕೆಲವು ದಿನಗಳೊಳಗಾಗಿ ಆ ಒಂದು ಸರ್ಪದ ಹೆಂಡತಿ ಸರ್ಪವು ಬಂದು ಮನೆಯೊಳಕ್ಕೆ ನುಗ್ಗಿ ಹೀಗೆ ಅನೇಕ ಸರ್ಪಗಳು ಬರತೊಡಗಿ ೧೦—೧೫ ದಿನದಲ್ಲಿ ೨೦ ಹಾವುಗಳನ್ನು ಕೊಂದರೂ ತಾವು ಇಟ್ಟುಕೊಂಡಿದ್ದ ಸತ್ತ ಹಾವಿನ ತೊಗಲನ್ನು ಮನೆಯಿಂದ ಹೊರಗೆ ಬಿಸಾಡಬೇಕಾಯಿತು

---

ಕಲ್ಕತ್ತೆಯಲ್ಲಿರುವ ಬಂಗಾಳಿ ನೇಟಿವ್ ಪತ್ರಿಕೆಯು ತಿಳಿಸುವಂತೆ ಆಸಾಮಿನ ಸಿವಿಲ್ ಮತ್ತು ಮಿಲಿಟರಿ ಗೆಜೆಟ್ ಪ್ರಕಟಿಸಿರುವದೇನೆಂದರೆ,—ಡಾರ್ಜಿಲಿಂಗ್ ಡಿಸ್ಟ್ರಿಕ್ಟಿನ ಗ್ರಾಮ ನಿವಾಸಿಗಳು, ಒಬ್ಬ ಮನುಷ್ಯನು ಹೇಗೆ ಬುದ್ಧಿ ವಂತನಾದರೂ ಸಿಡಿಲು ಬಡಿದವನನ್ನು ನೋಡಿ ವಿಶೇಷ ಭಯಭ್ರಾಂತರಾಗಿರುವವರು ಅಜ್ಞಾನಿಗಳಿಂದ ಅತ್ಯಧಿಕವಾಗಿ ಹೊಗೆಯು ಹೊರಡುತ್ತಲಿರುವದು. ಬಹುಜನರು ಸುತ್ತಮುತ್ತಲೂ ಗುಂಪುಕೂಡಿದ್ದರು ಸಮೀಪಕ್ಕೆ ಹೋಗಲು ಯಾರಿಗೂ ಧೈರ್ಯ ಸಾಲದೆ ಹೋಯಿತು. ಈಗ ಸುಮಾರು ೬೦ ವರ್ಷಗಳ ಕೆಳಗೆ ಮೃತನಾದವನೊಬ್ಬನು ಈಗ ನರಕಬಾಧೆಯನ್ನು ಅನುಭವಿಸುತಲಿರುವನನ್ನು ಇದು ಸೂಚಿಸುವದೆಂದು ನಂಬಿ, ಬಡಜನ ಮುಖಂಡರೆಲ್ಲರು ಗುಂಪುಗೂಡಿ ದೇವತಾ ಪ್ರಾರ್ಥನೆಯನ್ನು ಮಾಡುತಲಿರುವರು —ವೃ. ಚಿಂ.

## EXTRACTS.

### ಮುಂಬೈ ಕರ್ಣಾಟಕ ವೃತ್ತ, ೨೭ ನೇ ಏಪ್ರಿಲ್.

ಜಾತ್ರೆಗಳಲ್ಲಿ ನಡೆಯುವ ಪ್ರಮಾದಗಳಲ್ಲಿ ಕೆಲವು ಬಹಳ ನಿಂದಾರ್ಹವಾದವುಗಳಾಗಿರುತ್ತವೆ ವ್ಯಭಿಚಾರ ಮಾಡುತ್ತಿರುವ ಹೆಂಡತಿಯನ್ನು ಸಹಿಸಿ, ಅವಳ ಸಂಗಡ ರಮಿಸುವವನಾಗಿದ್ದ ಪರಪುರುಷನನ್ನು ಕೊಂದು ಹಾಕುವದು, ಅಂಥವನ್ನು ಹೊಡೆದು ಅಥವಾ ಮನನೊಂದು ಕೊಲ್ಲುವದು ಇವೇ ಮೊದಲಾದ ಕೃತ್ಯಗಳು ನಡೆಯುತ್ತವೆ, ದೊರ್ಜನ್ಯ ವ್ಯಭಿಚಾರಕ್ಕೆ ಮೂಲಕಾರಣಳಾಗಿದ್ದ ಸ್ತ್ರೀಯನ್ನು ಶಿಕ್ಷಿಸಿ ದಂಡಿಸುವವರು ನೋಡುವದಿಲ್ಲವು! ಪರಪುರುಷನನ್ನು ಬಿಟ್ಟು ಹೆಂಡತಿಯನ್ನು ಶಿಕ್ಷಿಸಬೇಕು ಎಂಬ ಅಭಿಪ್ರಾಯವುಳ್ಳ ಕೆಲವರು ಸರಕಾರದ ಅಪ್ಪಣೆ ಇಲ್ಲದೆ ಹೊಡೆದು ಬಿಟ್ಟು ಬಿಟ್ಟು, ಸೆರೆಯಲ್ಲಿ ಕಳುಹಿ ಗಳನ್ನು ಕೆಟ್ಟದು ಮಾಡಿ ಮದುವೆಯನ್ನು ಮಾಡಿಕೊಂಡಿದ್ದ ಹೆಂಡತಿಯನ್ನು ಹ್ಯಾಗೆ ಶಿಕ್ಷಿಸತಕ್ಕದ್ದು? ಮನಸಿಗೆ ಬಂದಂತೆ ವ್ಯಭಿಚಾರವನ್ನು ಮಾಡಿಕೊಂಡಿರುವವಳ್ಳಿ ಅವಳನ್ನು ಬಿಟ್ಟು ಅವಳ ಬದಲಾಗಿ ಅವನನ್ನು ಶಿಕ್ಷಿಸಿ ಗುರಿಮಾಡುವುದು ಎಂದರೆ ನಾವು ಹಿಂದೆ, ನಮ್ಮಂಥವರು ವ್ಯಭಿಚಾರಿಗಳು ಇತ್ಯಾದಿ ಕಂಡ ಪಾದ ವಿಶೇಷಣಗಳನ್ನು ದಂಪತಿಯರಿಂದ ಕೇಳುತ್ತೇವೆ ವ್ಯಭಿಚಾರಕ್ಕೆ ಸಿಲುಕಿದ ಸ್ತ್ರೀಯರನ್ನೇ ಶಿಕ್ಷಿಸುವ ಕ್ರಮವನ್ನು ಗಂಡಂದಿರು ನಡೆಸಿದ್ದಲ್ಲಿ, ವ್ಯಭಿಚಾರವು ಇಳಿಮುಖವಾಗಿ, ಅನೇಕ ಮಂದಿ ಗಂಡಂದಿರ ದುಃಖಗಳು ಕಡಿಮೆಯಾಗಲ್ಪಡುವವು

---

ಹಿಂದುಸ್ಥಾನದಲ್ಲಿ ಸರಕಾರೀ ಕೆಲಸ ಮಾಡತಕ್ಕವರ ಮಕ್ಕಳಿಗಾಗಿ ರಾಜ್ಯಭಾರದ ಪ್ರತ್ಯೇಕ ಶಾಖೆಯಲ್ಲಿ ಕೆಲವು ಸ್ಥಳಗಳನ್ನು ಹಾಗೆ ಕಾದಿಡಬೇಕೆಂಬ ಅರ್ಥವುಳ್ಳದ್ದೊಂದು ಸ

ಮಂಜಸವಾದ ವಿಷಯವು ಪಯೋನಿಯರ ಪತ್ರದಲ್ಲಿ ಪ್ರಕಟಿಸಲ್ಪಟ್ಟಿದೆ. ಅದು ನಿಜವಾಗಿ ಒಬ್ಬ ಸರಕಾರೀ ಅಧಿಕಾರಸ್ಥನಿಂದ ಬರದು ಕಳುಹಿಸಲ್ಪಟ್ಟದೆಂದು ಹೇಳಲಿಕ್ಕೆ ಅಡ್ಡಿಯೇ ತೋರುವದಿಲ್ಲ ಆ ವಿಷಯವು ಸಮಂಜಸವಲ್ಲವೆಂದು ಯಾರೂ ಅನಲಾರರು, ಏಕೆಂದರೆ ಬಹಳ ವರ್ಷಗಳಿಂದ ಆ ಅಧಿಕಾರಸ್ಥರ ಮಕ್ಕಳ ಸಲುವಾಗಿಯೇ ಆ ಸೂಚನೆಯು ಇದ್ದುದರಿಂದ ಆ ಮಕ್ಕಳು ಸ್ವಲ್ಪ ಮಟ್ಟಿಗಾದರೂ ಕೆಲಸಗಳನ್ನು ತಿರುಗಬೇಕಾಗುತ್ತದೆ ಹಿಂದುಸ್ಥಾನದ ರಹಿವಾಸಿಗಳ ಸಂಬಂಧವಾಗಿ ಆ ಸೂಚನೆಯಲ್ಲಿ ಒಂದೆರಡು ಅಕ್ಷರಗಳನ್ನು ಬೇಸರದಿಂದ ಹೋಗೆಯನ್ನು ಕಿವಿಗೆಕೊಂಡಿದ್ದರೂ ಹಾಕಿದ್ದರೆ, ಆ ಅಧಿಕಾರಿಯ ಸೂಚನೆಯು ಜಗಮಾನ್ಯವೇ ಆಗುತಿತ್ತು. ಹಿಂದುಸ್ಥಾನದ ರಹಿವಾಸಿಗಳ ಕಲ್ಯಾಣದ ಸಲುವಾಗಿ ಇದನ್ನು ಬರೆಯಲ್ಪಟ್ಟ ಕೆಲವು ಸಂಗ್ರಹಿಸುವರು ಈ ಬಗೆಯ ಸೂಚನೆಯಲ್ಲಿ ಅವರನ್ನು ಎಂದಿಗಾದರೂ ಕಟ್ಟಿಕೊಂಡಿದ್ದಾರೇ ಇಲ್ಲದ್ದನ್ನು ಕೊರಗಿ ಹಾಕಿಕೊಂಡು ಸವ್ಯಾಪಸವ್ಯ ಮಾಡತಕ್ಕವರು ವಿತರ್ಕಿಗಳೆಯರು , ಇರಲಿ

---

ವೃತ್ತಾಂತ ಚಿಂತಾಮಣಿ ತಾ ೩ ಮೇ ೯೩

ವನಪರ್ತಿಸಂಸ್ಥಾನದ ರಾಣಿಯವರು ಕೃಷ್ಣಾ ನದೀತೀರದಲ್ಲಿರುವ ವನಪರ್ತಿ ಸಂಸ್ಥಾನದದೊರೆಗಳಾಗಿದ್ದ ನಮ್ಮೆ ರಾಜಾಬಹದ್ದೂರಿ ಬಲವಂತರಾಮೇಶ್ವರರಾವ್ ಶ್ರೀಮಂತರೆಂಬವರ ಧರ್ಮಪತ್ನಿಯರು ಈಗ ಆ ರಾಜ್ಯವನ್ನಾಳುತ್ತಿರುವ ಧೊರೆಗಳ ಮಾತುಶ್ರೀಯವರು ಇವರು ಅನೇಕ ದಿನಗಳು ಧರ್ಮದಿಂದ ರಾಜ್ಯಪರಿಪಾಲನೆಯನ್ನು ಮಾಡಿ, ವಾರ್ಧಕ್ಯದಿನ ಪ್ರವೃತ್ತಿಯಿಂದ ಎಂಬಂತೆ ಈಗ ವೈರಾಗ್ಯಭಾಗ್ಯವನ್ನವಲಂಬಿಸಿ, ತಮ್ಮ ಪುತ್ರರಿಗೆ ರಾಜ್ಯಾಭಿಷೇಕವನ್ನು ಮಾಡಿ, ಸರ್ವದಾ ಸತ್ಕಾಲಕ್ಷೇಪದ ಕಾಲವನ್ನು ಕಳೆಯುತ್ತಾ ಇದ್ದಾರೆ. ಇವರ ಸಂಸ್ಥಾನದಲ್ಲಿಯೇ ಈಗ ಇಲ್ಲಿ ದಯಮಾಡಿರುವ ಶ್ರೀ ಕೃಷ್ಣ(ಹಯಗ್ರೀವ)ಸ್ವಾಮಿ ಪರಕಾಲಸ್ವಾಮಿಗಳವರು ಪೂರ್ವಾಶ್ರಮದಲ್ಲಿ ಧರ್ಮಾಧಿಕಾರಿಗಳಾಗಿದ್ದರು. ಈಗ ಈ ಮಹಾರಾಣಿಯವರು ಇವರನ್ನು ಪ್ರಾರ್ಥಿಸಿ ಇವರಲ್ಲಿ ಆಚಾರ್ಯಭಕ್ತಿಯನ್ನಿಟ್ಟು ಇವರಿಂದ ಮಹಾಭಾರತ ಮುಂತಾದ ಅಷ್ಟಾದಶ ಪುರಾಣಶ್ರವಣವನ್ನು ಮಾಡಿ, ಅನೇಕ ಸಂಪ್ರದಾಯದರ್ಶನಗಳನ್ನು ತಿಳಿದುಕೊಂಡು [illegible]ಯನ್ನು ಪಡೆದರು ಹೀಗಿರಲಾಗಿ ಕೋದಂಡರಾಮರ ದೇವಸ್ಥಾನವನ್ನು ಕಟ್ಟಿಸಿ, ರಾಮಪ್ರತಿಷ್ಠೆಯನ್ನು ಮಾಡಿಸಿ, ಅಲ್ಲಿಯೇ ಅಗ್ರಹಾರವನ್ನು ಕಟ್ಟಿಸಿ, ಬ್ರಾಹ್ಮಣರಿಗೆ ವೃತ್ತಿಸಹಿತ ಕೊಟ್ಟಿರುವರು ಇದಲ್ಲದೆ ಅನೇಕ ಪಟ್ಟಣಗಳನ್ನೂ ದೇವಾಲಯ ಮಠಾದಿಯುಗಳನ್ನೂ ಜೀರ್ಣೋದ್ಧಾರ ಮಾಡಿಸಿಯೇ ಪ್ರತಿವರ್ಷ ಕಾರ್ತೀಕಮಾಸದಲ್ಲಿಯೂ ಅನೇಕ ಸಹಸ್ರ ವಿದ್ವಾಂಸರಿಗೆ ವಿಶೇಷವಾಗಿ ಸಂಭಾವನೆಯನ್ನು ಕೊಡುತಲಿದ್ದಾರೆ ಹೀಗೆ ಪ್ರಾಜ್ಞತೆಯೂ, ವಿವೇಕವೂ, ವೈರಾಗ್ಯಭಾಗ್ಯವೂ, ಶ್ರೀದೇವತಾಪ್ರೀತ್ಯರ್ಥ ಸ್ಮೃತಿಯೂ, ಸದಾಚಾರಸಂಪತ್ತಿಯೂ, ಭಕ್ತಿಶ್ರದ್ಧೆಗಳೂ, ಉದಾರಸ್ವಭಾವವೂ ಇವರಿಗೆ ಉಂಟಾಗುವದಕ್ಕೆ ಶ್ರೀ ಕೃಷ್ಣ ಬ್ರಹ್ಮತಂತ್ರ ಪರಕಾಲಸ್ವಾಮಿಗಳವರು ಪೂರ್ವಾಶ್ರಮದಲ್ಲಿ ಇವರಿಗೆ ಮಾಡಿದ ಧರ್ಮೋಪದೇಶವೇ ಮೂಲಕಾರಣವಾಯಿತು ಈಗ ಆ ಸ್ವಾಮಿಗಳವರ ದರ್ಶನಾರ್ಥವಾಗಿಯೇ ಇಲ್ಲಿಗೆ ಇವರು ದಯಮಾಡಿದರು. ಇಲ್ಲಿಗೆ ದಯಮಾಡಿ, ಸುಮಾರು ೧೫ ದಿವಸಗಳು ಆದವು. ಇವರು ದಯಮಾಡುವ ಸಮಾಚಾರವನ್ನು ಕೇಳಿ, ನಮ್ಮ ಮಹಾರಾಜರವರು ಶ್ರೀಗಳವರ ಅಪ್ಪಣೆ ಪ್ರಕಾರ ರಾಜಮರ್ಯಾದೆಗಳಿಂದ ಅವರನ್ನು ಜಗನ್ಮೋಹಿನಿ ಬಂಗಲೆಯಲ್ಲಿ ಇಳಿಸಿ ರಾಜೋಪಚಾರದಿಂದ ಸತ್ಕರಿಸಿದರು. ಈ ರಾಣಿಯವರು ಬಹಳ ಭಕ್ತಿಯಿಂದ ತಮ್ಮ ಗುರುಗಳಾದ ಶ್ರೀಗಳವರನ್ನು ನಮಸ್ಕರಿಸಿ ಅವರ ಚರಣಸಂದರ್ಶನದಿಂದಲೂ ಲಕ್ಷ್ಮೀಹಯಗ್ರೀವರ ಸೇವೆಯಿಂದಲೂ ಪರಮಾನಂದಭರಿತರಾದರು ಇವರು ಈ ಸನ್ನಿಧಿಯಲ್ಲಿ ಡೋಲೋತ್ಸವ ಮಾಡಿಸಿದರು, ಆಗ ಅಲ್ಲಿಗೆ ಅನೇಕ ವಿದ್ವಾಂಸರು ಬಂದಿದ್ದರು ಶ್ರೀಗಳವರು ಹಯಗ್ರೀವರ ಮಾಹಾತ್ಮ್ಯವನ್ನು ಸಂಕ್ಷೇಪವಾಗಿ ಅಪ್ಪಣೆ ಕೊಟ್ಟರು. ಮಾರನೇ ದಿನ ರಾಣಿಯವರು ಶ್ರೀ ಮಠದಲ್ಲಿ ಸಭೆಯನ್ನು ಮಾಡಿಸಿದರು. ಶ್ರೀ ಧರ್ಮಾಧಿಕಾರಿ ರಾಮಶಾಸ್ತ್ರಿಗಳೇ ಮೊದಲಾದ ಅನೇಕವಿದ್ವಾಂಸರು ಸೇರಿದ್ದರು. ಶ್ರೀಗಳವರ ಪೂರ್ವಾಶ್ರಮದ ಕುಮಾರರು ವ್ಯಾಕರಣದಲ್ಲಿ ಸ್ವಲ್ಪ ಹೊತ್ತು ವಾಕ್ಯಾರ್ಥವನ್ನು ಮಾಡಿದರು. ಅದನ್ನು ಕೇಳಿ ಎಲ್ಲರೂ ಸಂತೋಷಪಟ್ಟರು ಮಾರನೇ ದಿನ ಈ ಮಹಾರಾಣಿಯವರು ಶ್ರೀಗಳವರಿಗೆ ಪಾದಪೂಜೆಯನ್ನು ಮಾಡಿ ಶ್ರೀ ಪಾದತೀರ್ಥವನ್ನು ತೆಗೆದುಕೊಂಡರು. ಅನಂತರ ರಾಣಿಯವರು ಧರ್ಮಾಧಿಕಾರಿಗಳಿಗೂ ಶ್ರೀ ಮಠದ ವಿದ್ವಾಂಸರಿಗೂ ಉಳಿದ ಕೈಂಕರ್ಯಪರರಿಗೂ ತಕ್ಕ ಮರ್ಯಾದೆಯನ್ನು ಮಾಡಿದರು. ಇವರಿಗೆ ಮಹಾರಾಜರವರು ರಾಜಮರ್ಯಾದೆಯಿಂದ ಸನ್ಮಾನಿಸಿದರು ಮೊತ್ತಾಗಿ ಗಳಿಸಿದರೂ ಇವರಿಗೆ ವಿಶೇಷವಾಗಿ ಬಹುಮಾನ ಮಾಡಿದರು. ವನಪರ್ತಿ ರಾಣಿಯವರು ಈ ಸ್ವಾಮಿಗಳವರ ವಿಜಯವನ್ನೆಲ್ಲಾ ನೋಡಿ ಪರಮಾನಂದಭರಿತರಾಗಿ ಹಯಗ್ರೀವರನ್ನು ನಮ್ಮ ದೇಶಕ್ಕೆ ವಿಜಯಮಾಡಿಸಬೇಕೆಂದು ಪ್ರಾರ್ಥಿಸಿದರು. ಅನಂತರ ಸ್ವಾಮಿಗಳವರ ಅಪ್ಪಣೆಯನ್ನು ತೆಗೆದುಕೊಂಡು ತಮ್ಮ ದೇಶಕ್ಕೆ ಪ್ರಯಾಣಮಾಡಿದರು ಹೀಗೆ ಸ್ವಾಮಿಗಳವರಲ್ಲಿ ಪೂರ್ವಾಶ್ರಮದಲ್ಲಿಯೇ ಆ ದೇಶದ ಅನೇಕ ರಾಜರು ಗುರುಭಾವದಿಂದ ಮರ್ಯಾದೆಯನ್ನು ಇಟ್ಟುಕೊಂಡಿದ್ದರು ವೃ. ಚಿ.

## ಮದರಾಸ್ ಗವರ್ನ್‌ಮೆಂಟ್ ಲೆಜಿಸ್ಲೇಟಿವ್ ಇಲಾಖಾ.

೧೮೯೨ ನೇ ಇಸವಿ ಇಂಡಿಯನ್ ಕೌನ್ಸಿಲ್ಸ್ ಆಕ್ಟಿನ ೧ನೇ ಪ್ರಕರಣದ (೪) ನೇ ಉಪಪ್ರಕರಣಕ್ಕನುಗುಣವಾಗಿ ಮದರಾಸಿನ ಬಗ್ಗೆ ಏರ್ಪಟ್ಟ ನಿಬಂಧನೆಗಳು.

---

೧ ಕಾಯಿದೇ ಕಾನೂನುಗಳನ್ನು ಮಾಡುವದರಲ್ಲಿ ಮದರಾಸ್ ಗವರ್ನರವರಿಗೆ ಸಹಾಯ ಮಾಡುವದಕ್ಕೋಸ್ಕರ ಆಲೋಚನೆ ಸಭೆಯ ಅಡಿಷನಲ್ ಮೆಂಬರಾಗಿ ಮದರಾಸ್ ಗವರ್ನರವರಿಂದ ನೇಮಿಸಲ್ಪಡತಕ್ಕ ಜನರಲ್ಲಿ, ಅಡ್ವೊಕೇಟ್ ಜನರಲಿನ ಯಾ ಆ ಕೆಲಸವನ್ನು ನೋಡುವ ಆಫಿಸರ್ ವಿನಹಾ ಒಂಭತ್ತಕ್ಕಿಂತ ಹೆಚ್ಚುಮಂದಿ ಸರಕಾರೀ ಉದ್ಯೋಗದಾರರಿರಕೂಡದು.

೨ ಈ ಕೆಳಗೆ ಕಾಣಿಸಿದ ಸಂಘದವರ ವಕೀಲದವರ ಶಿಫಾರಸು ಮೇರೆಗೆ ಏಳು ಜನಗಳನ್ನು ಗವರ್ನರವರು ಮೆಂಬರರ್ ಮಾಡತಕ್ಕದ್ದು,—

A.—ಮದರಾಸ್ ಮ್ಯುನಿಸಿಪಲ್ ಸಂಘ ;

B —ಮದರಾಸ್ ಮ್ಯುನಿಸಿಪಲ್ ಸಂಘದ ವಿನಹಾ ಆಲೋಚನೆ ಸಭೆಯೊಳಗಣ ಗವರ್ನರವರು ಫೋರ್ಟ್ ಸೆಂಟಜಾರ್ಜ್ ಗೆಜೆಟಿನಲ್ಲಿ ಆಗಿಂದಾಗ್ಯೆ ಇಸ್ತಿಹಾರು ಕೊಡುವದರ ಮೂಲಕ ನಿರ್ದೇಶಿಸಬಹುದಾದ ಇತರ ಮ್ಯುನಿಸಿಪಲ್ ಸಂಘಗಳು ಅಥವಾ ಮ್ಯುನಿಸಿಪಲ್ ಸಂಘಗಳ ಗುಂಪು ಯಾ ಗುಂಪುಗಳು ;

C —ಆಲೋಚನೆ ಸಭೆಯೊಳಗಣ ಗವರ್ನರವರು ಮೇಲೆ ಹೇಳಿದ ಮೇರೆಗೆ ಆಗಿಂದಾಗ್ಯೆ ನಿರ್ದೇಶಿಸಬಹುದಾದ ಡಿಸ್ಟ್ರಿಕ್ಟ್ ಬೋರ್ಡುಗಳು ಯಾ ಡಿಸ್ಟ್ರಿಕ್ಟ್ ಬೋರ್ಡುಗಳ ಗುಂಪು ಯಾ ಗುಂಪುಗಳು;

D —ಆಲೋಚನೆ ಸಭೆಯೊಳಗಣ ಗವರ್ನರವರು ಮೇಲೆ ಹೇಳಿದ ಮೇರೆಗೆ ಆಗಿಂದಾಗ್ಯೆ ನಿರ್ದೇಶಿಸಬಹುದಾದ ಜಮೀನ್ದಾರರ, ಕಸುಬುದಾರರು ವ್ಯಾಪಾರಸ್ಥರ ಸಂಘ ಯಾ ಸಂಘಗಳು ;

E —ಮದರಾಸ್ ಯೂನಿವರ್ಸಿಟಿಯ ಸೆನೆಟ್ ಎಂಬ ಸಭೆಯವರು :

ಪರಂತು ಮೇಲೆ A, B, C, D ವ E ಶಿರಗಳಲ್ಲಿ ವಿವರಿಸಲ್ಪಟ್ಟ ಸಂಘಗಳಲ್ಲಿ ಪ್ರತಿ ಒಂದು ಸಂಘದವರಕಡೆಯಿಂದ(ಇದರಲ್ಲಿ ಮುಂದೆ VII ನೇ ಕ್ರಮದಲ್ಲಿ ನಿಬಂಧಿಸಲ್ಪಟ್ಟ ಮೇರೆಗೆ ವಿನಹಾ) ಅವರ ಶಿಫಾರಸು ಮೇರೆಗೆ ನೇಮಿಸಲ್ಪಟ್ಟ ಕನಿಷ್ಟಪಕ್ಷ ಒಬ್ಬ ಮನುಷ್ಯನಾದರೂ ಇರತಕ್ಕದ್ದು. ಮತ್ತು A, D, ವ E ಸಂಘದವರ ಕಡೆಯಿಂದ ಒಬ್ಬನಿಗಿಂತ ಹೆಚ್ಚುಮಂದಿ ಇರಕೂಡದು.

೩. ಸರಕಾರೀ ಉದ್ಯೋಗದಾರರನ್ನು ಮೆಂಬರರ್ ಮಾಡತಕ್ಕದ್ದಲ್ಲದೆ ಉಳಿದ ಸ್ಥಾನಗಳ ಬಗ್ಗೆ, ಯಾವರೀತಿಯಲ್ಲಿ ಪ್ರವರ್ತಿಸಿದರೆ ಬೇರೆ ಬೇರೆ ತರಗತಿಯ ಜನರ ಪ್ರತಿನಿಧಿಗಳು ನ್ಯಾಯವಾಗಿ ಸೇರ್ಪಡೆಯಾಗುವರೆಂತ ಗವರ್ನರವರು ಅಭಿಪ್ರಾಯ ಪಡುತ್ತಾರೋ ಆ ರೀತಿಯಲ್ಲಿ ತಮ್ಮ ಮನಸಿನ ಮೇರೆಗೆ ಜನರನ್ನು ನೇಮಿಸಬಹುದು. ಪರಂತು ಆ ವ್ಯಕ್ತಿ ಒಂದು ಸ್ಥಾನದಲ್ಲಿ ಸಾಧಾರಣವಾಗಿ ಸರಕಾರಕ್ಕೆ ವರುಷಾವಧಿ ರೂ ೫೦,೦೦೦ ಕ್ಕೆ ಕಡಮೆ ಯಾಗದಷ್ಟು ಪೇಷ್ಕಶನ್ನು (ಪಗದಿಯನ್ನು) ತೆರುವಂಥಾ ಒಬ್ಬ ಜಮೀನ್ದಾರನಾಗಿರತಕ್ಕದ್ದು.

೪. ಒಂದು ಇಸಂ ಖಾಲಿ ಆಗಿ ಅದನ್ನು ಈ ನಿಬಂಧನೆಗಳ ಪೈಕಿ ೨ ನೇ ಕ್ರಮಕ್ಕನುಗುಣವಾಗಿ ಭರ್ತಿ ಮಾಡಬೇಕಾಗಿದ್ದಲ್ಲಿ ಕ್ರಮಪ್ರಕಾರ ನೇಮಿಸತಕ್ಕ ಬಗ್ಗೆ ಒಬ್ಬನನ್ನು ಶಿಫಾರಸು ಮಾಡಬೇಕಾಗಿ ಗವರ್ನರವರು ಆ ಸಂಘದವರ ಯಾ ಸಂಘಗಳ ಗುಂಪಿನವರ ಅಥವಾ ಕೂಟದ ಯಾ ಕೂಟಗಳವರನ್ನು ಕೇಳುವಂತೆ ಮಾಡತಕ್ಕದ್ದು.

೫ ಅಂಥಾ ಶಿಫಾರಸುಗಳನ್ನು,—

೧ ಒಂದು ಮ್ಯುನಿಸಿಪಲ್ ಸಂಘ ಯಾ ಡಿಸ್ಟ್ರಿಕ್ಟ್ ಬೋರ್ಡ್ ಯಾ ಯೂನಿವರ್ಸಿಟಿ

ಯು ಸೆನೆಟ್ ಎಂಬ ಸಭೆಯವರು ಮಾಡುವದಾದರೆ ಆಯಾ ಸಂಘದ, ಬೋರ್ಡಿನ ಯಾ ಸಭೆಯ ಬಹುಭಾಗದವರ ವೋಟುಗಳ ಮೇರೆಗೆ ;

(b) ಕಾನೂನಿಂದ ಸ್ಥಾಪಿಸಲ್ಪಟ್ಟದ್ದಲ್ಲದೆ ಕೂಟಗಳು ಶಿಫಾರಸು ಮಾಡುವದಾದರೆ ನಿರ್ಣಯಗಳನ್ನು ಜಾರಿಯಲ್ಲಿ ತರುವ ಬಗ್ಯೆ ಯಾ ಕೂಟದ ಮುಂದೆ ತರಲ್ಪಟ್ಟ ಕೆಲಸಕ್ಕೆ ಸಂಬಂಧಪಟ್ಟ ವಿಷಯಗಳಂ ಕುರಿತು ತೀರ್ಮಾನಗಳನ್ನು ರೆಕಾರ್ಡು ಮಾಡುವ ಬಗ್ಯೆ ಅವರವರ ಕ್ರಮಗಳಲ್ಲಿ ಯಾ ಆರ್ಟಿಕಲ್ಸುಗಳಲ್ಲಿ ಏರ್ಪಡಿಸಿರುವ ರೀತಿಯಲ್ಲಿ ;

(c) ಮ್ಯುನಿಸಿಪಲ್ ಸಂಘಗಳ, ಡಿಸ್ಟ್ರಿಕ್ಟು ಬೋರ್ಡುಗಳ ಯಾ ಇತರ ಸಂಘಗಳ ಒಂದು ಗುಂಪಿನವರು ಶಿಫಾರಸು ಮಾಡುವದಾದರೆ ಆಲೋಚನೇ ಸಭೆಯೊಳಗಣ ಗವರ್ನರವರು ಆಗಿಂದಾಗ್ಯೆ ನಿರ್ದೇಶಿಸುವ ನಿಯಮಗಳನುಸಾರವಾಗಿ ಅಂತಾ ಸಂಘಗಳಿಂದ, ಬೋರ್ಡುಗಳಿಂದ ಯಾ ಕೂಟಗಳಿಂದ ನೇಮಿಸಲ್ಪಡತಕ್ಕ ಪ್ರತಿನಿಧಿಗಳ ಬಹುಭಾಗದವರ ವೋಟುಗಳ ಮೇರಿಗೆ ಸಹಾ, ಮಾಡತಕ್ಕದ್ದು.

೬. ಒಂದು ಮ್ಯುನಿಸಿಪಲ್ ಸಂಘದಿಂದ, ಅಥವಾ ಮ್ಯುನಿಸಿಪಲ್ ಸಂಘಗಳ ಒಂದು ಗುಂಪಿನಿಂದ ಒಬ್ಬ ಮನುಷ್ಯನು ಶಿಫಾರಸು ಮಾಡಲ್ಪಡಬೇಕಾದರೆ, ಅವನು ಸಾಧಾರಣವಾಗಿ ಆ ಮ್ಯುನಿಸಿಪಾಲಿಟಿಯೊಳಗೆ ಯಾ ಅದು ಇರುವಂಥಾ ಡಿಸ್ಟ್ರಿಕ್ಟಿನಲ್ಲಿ ಅಥವಾ ಆ ಗುಂಪಿನಲ್ಲಿ ಸೇರಿದ ಒಂದು ಮ್ಯುನಿಸಿಪಾಲಿಟಿಯೊಳಗೆ ಯಾ ಆ ಮ್ಯುನಿಸಿಪಾಲಿಟಿಗಳಿರುವ ಯಾವದಾದರೂ ಒಂದು ಡಿಸ್ಟ್ರಿಕ್ಟಿನಲ್ಲಿ ವಾಸವಾಗಿರುವಂತವನಾಗಿರತಕ್ಕದ್ದು. ಡಿಸ್ಟ್ರಿಕ್ಟ ಬೋರ್ಡುಗಳಿಂದ ಶಿಫಾರಸು ಮಾಡಲ್ಪಡಬೇಕಾದ ಮನುಷ್ಯರಿಗೆ ಸಹಾ ಇಂಥಾದೊಂದು ಶರತ್ತು ಲಗಾವಾಗತಕ್ಕದ್ದು.

೭. ೫ ನೇ ಕ್ರಮದಿಂದ ನಿಬಂಧಿಸಲ್ಪಟ್ಟ ಮೇರೆಗೆ ಗವರ್ನರವರ ಅಪೇಕ್ಷೆ ತಿಳಿಸಲ್ಪಟ್ಟ ಎರಡು ತಿಂಗಳುಗಳೊಳಗಾಗಿ ಆ ಸಂಘದವರು ಯಾ ಕೂಟದವರು ಅಥವಾ ಸಂಘಗಳ ಯಾ ಕೂಟಗಳ ಗುಂಪಿನವರು ಆ ಮೇರೆಗೆ ಶಿಫಾರಸು ಮಾಡಲಿಕ್ಕೆ ತಪ್ಪಿದರೆ ಸಂಘವು ಯಾ ಕೂಟವು ಅಥವಾ ಅವುಗಳ ಗುಂಪು ಕಳುಹಿಸತಕ್ಕ ಪ್ರತಿನಿಧಿಯು ಯಾವ ಜಾತಿಯವರ ಪ್ರತಿನಿಧಿಯಾಗಿರಬೇಕೆಂದು ಗವರ್ನರವರು ಎಣಿಸುತ್ತಾರೋ ಅಂಥಾ ಜಾತಿಗೆ ಸಂಬಂಧಿಸುವ ಒಬ್ಬ ಮನುಷ್ಯನನ್ನು ಅವರು ತಮ್ಮ ಮುನಾಸಬ ಮೇರೆಗೆ ನೇಮಿಸಬಹುದು.

೮. ಈ ನಿಬಂಧನೆಗಳನುಗುಣವಾಗಿ ಶಿಫಾರಸು ಮಾಡಲ್ಪಟ್ಟ ಯಾವನೊಬ್ಬ ಮನುಷ್ಯನನ್ನು ನೇಮಿಸುವದಕ್ಕೆ ಗವರ್ನರವರು ನಿರಾಕರಿಸಿದರೆ ೫ ನೇ ಕ್ರಮದಲ್ಲಿ ನಿಬಂಧಿಸಲ್ಪಟ್ಟ ಮೇರೆಗೆ ಪುನಹಾ ಅವರನ್ನು ಕೇಳಿಕೊಳ್ಳಾಗುವದು. ಮತ್ತು ೫ ನೇ ೭ ನೇ ಕ್ರಮಗಳಲ್ಲಿ ಏರ್ಪಟ್ಟ ಸಹವಾಳಿಕೆಯು ಕ್ರಮವೇ ಲಗಾವಾಗತಕ್ಕದ್ದು.

೯. (a) ಈ ನಿಬಂಧನೆಗಳು ಜಾರಿಯಲ್ಲಿ ಬಂದನಂತರ ಆದಷ್ಟು ಬೇಗನೆ ಸರಕಾರ್ ಉದ್ಯೋಗದಾರರಲ್ಲದೆ ಮನುಷ್ಯರಿರಬೇಕಾದ ಸ್ಥಾನಗಳ ಪೈಕಿ ಏಳು ಸ್ಥಾನಗಳನ್ನು ೨ ನೇ ಕ್ರಮಕ್ಕನುಗುಣವಾಗಿ ಮಾಡಲ್ಪಡುವ ಶಿಫಾರಸುಗಳ ಮೇರೆಗೆ ಭರ್ತಿ ಮಾಡತಕ್ಕದ್ದು.

(b) ಈ ಉದ್ದೇಶಕ್ಕೋಸ್ಕರವಾಗಿ ತತ್ಕಾಲದಲ್ಲಿ ಪೂರಾ ಏಳು ಸ್ಥಾನಗಳು ಖಾಲಿ ಇಲ್ಲದಿದ್ದರೆ ಗವರ್ನರವರು ೨ ನೇ ಕ್ರಮದಲ್ಲಿನ ನಿಯಮಕ್ಕೆ ಯಾವಾಗಲೂ ಒಳಪಟ್ಟು ತಮ್ಮ ಮುನಾಸಬು ಮೇರೆಗೆ, ಖಾಲೀ ಇರಬಹುದಾದಂಥಾ ಸ್ಥಾನಗಳನ್ನು ಭರ್ತೀ ಮಾಡಲಿಕ್ಕೆ ಜನರನ್ನು ಶಿಫಾರಸು ಮಾಡುವ ಬಗ್ಯೆ ೩ ಕ್ರಮದಲ್ಲಿ ನಮೂದಿಸಲ್ಪಟ್ಟವುಗಳ ಪೈಕಿ ಯಾವ ಸಂಘಗಳಿಗೆ ಯಾ ಗುಂಪುಗಳಿಗೆ ಕೇಳತಕ್ಕದ್ದೆಂಬವನ್ನು ನಿಶ್ಚಯಿಸತಕ್ಕದ್ದು. ಮತ್ತು ಏಳು ಇಸಂಗಳು ಪೂರಾ ಭರ್ತಿಯಾಗುವವರಿಗೆ ಸರಕಾರ ಉದ್ಯೋಗದಾರರಲ್ಲದ ಮೆಂಬರುಗಳ ಸ್ಥಾನಗಳು ಖಾಲಿಬಿದ್ದಾಗ್ಯೆಲ್ಲಾ ಪ್ರ ಬಿದ್ದ ಪ್ರತಿ ಒಂದು ಸರ್ತಿ ಹಾಗೆಯೇ ಮಾಡತಕ್ಕದ್ದು.

ಹುಕುಂ—ತಾರೀಕ್ ೧೨ನೇ ಏಪ್ರಿಲ್, ೧೮೯೩ ನಂಬರ್ ೩೭ ನ್ಯಾಯವಿಧಾಯಕ ಇಲಾಖೆ.

೧೮೯೨ ನೇ ಇಸವಿಯ ಇಂಡಿಯನ್ ಕೌನ್ಸಿಲ್ಸ್ ಆಕ್ಟಿನ ೧ (೪) ನೇ ಪ್ರಕರಣಕ್ಕನುಗುಣವಾಗಿ ಏರ್ಪಡಿಸಿದ ರೆಗ್ಯುಲೇಷನ್‌ಗಳನ್ನು 'ಫೋರ್ಟ್ ಸೆಂಟ್‌ಜಾರ್ಜ್ ಮತ್ತು ಜಿಲ್ಲಾ ಗೆಜೆಟುಗಳಲ್ಲಿ ಇಂಗ್ಲೀಷಿನಲ್ಲಿಯೂ ದೇಶಭಾಷೆಗಳಲ್ಲಿಯೂ ಪ್ರಕಟಿಸತಕ್ಕದ್ದು.

೨. ಪ್ರಕೃತ (ಅಡ್ವೊಕೇಟ್ ಜನರಲ್ ಸಹಿತವಾಗಿ) ಆಲೋಚನೇ ಸಭೆಯಲ್ಲಿ ಎಂಟು ಮಂದಿ ಅಫಿಷಿಯಲ್ ಮೆಂಬರಿರುತ್ತಾರೆ. ಸದರೀ ಸಭೆಯ ಮೆಂಬರುಗಳ ಸಂಖ್ಯೆಯನ್ನು ಕಾನೂನಿನಿಂದವಿಧಿಸಿರುವ ಅತ್ಯಧಿಕ ಸಂಖ್ಯೆಗೆ ತರುವಂತೆ ನಿಶ್ಚೈಸಿರುವದರಿಂದ (ಅಡ್ವೊಕೇಟ್ ಜನರಲ್ ಸಹಿತವಾಗಿ) ಇನ್ನು ಮುಂದೆ ೨೧ ಮೆಂಬರಿರಬೇಕು. ಇವರೊಳಗೆ ಕನಿಷ್ಟಪಕ್ಷ ಅರವಾಸಿ ಅಂದರೆ ಹನ್ನೊಂದು ಜನವಾದರೂ ಸರಕಾರೀಉದ್ಯೋಗದಾರರಲ್ಲದವರಾಗಿರತಕ್ಕದ್ದು. ಪ್ರಕೃತ ಆಲೋಚನೇ ಸಭೆಗೆ (ಅಡ್ವೊಕೇಟ್ ಜನರಲ್ ಸಹಿತವಾಗಿ) ನಾಲ್ಕುಮಂದೀ ಸರಕಾರೀ ಉದ್ಯೋಗದಾರರೂ ನಾಲ್ಕುಮಂದಿ ಸರಕಾರ್ ನೌಕರಿಯಲ್ಲಿಲ್ಲದವರೂ ಸಹಾ ಇರುತ್ತಾರೆ. ಈ ಪ್ರಕಾರ ಸರಕಾರ್ ಉದ್ಯೋಗದಾರರ ನೇಮಕದಿಂದ ಭರ್ತಿಯಾಗಬೇಕಾದ ಸ್ಥಾನಗಳು ಆರೂ, ಸರಕಾರ್ ಉದ್ಯೋಗವಿಲ್ಲದವರ ನೇಮಕದಿಂದ ಭರ್ತಿಯಾಗಬೇಕಾದ ಸ್ಥಾನಗಳು ಏಳೂ ಸಹಾ ಖಾಲಿ ಇರುತಿವೆ.

೩. ೨ ನೇ ಕ್ರಮವನ್ನನುಸರಿಸಿ ಘನವಂಹೊಂದಿದ ಗವರ್ನರವರು ಸರಕಾರೀ ಉದ್ಯೋಗದಾರರಲ್ಲದವರನ್ನು ನೇಮಿಸತಕ್ಕ ಸ್ಥಾನಗಳನ್ನು ಇವರಡಿಕಾಣಿಸಿರುವ ರೀತಿಯಲ್ಲಿ ಭರ್ತಿ ಮಾಡುವಂತೆ ನಿಶ್ಚೈಸಿದ್ದಾರೆ.—

| | | |
|---|---|---|
| A | (ಮದರಾಸ್‌ಮ್ಯುನಿಸಿಪಲ್ ಕಮಿಷನರ್) ಶಿಫಾರಸು ಮೇರೆಗೆ | 1 |
| B | (ಡಿಸ್ಟ್ರಿಕ್ಟು ಮ್ಯುನಿಸಿಪಾಲಿಟಿಯವರ) ಶಿಫಾರಸು ಮೇರೆಗೆ | ೨ |
| C | (ಡಿಸ್ಟ್ರಿಕ್ಟು ಬೋರ್ಡಿನವರ) ಶಿಫಾರಸು ಮೇರೆಗೆ | |
| D | (ಮದರಾಸ್ ಚೇಂಬರ್ ಆಫ್ ಕಾಮರ್ಸಿನ) ಶಿಫಾರಸ್ಸಿನ ಮೇರಿಗೆ | 1 |
| E | (ಮದರಾಸ್ ಯೂನಿವರ್ಸಿಟಿ ಸೆನೆಟ್ ಯಾನೆ ಸಭೆಯವರ) ಶಿಫಾರಸು ಮೇರೆಗೆ | 1 |

೪. ಆ ಪ್ರಕಾರ ಮದರಾಸ್ ಮ್ಯುನಿಸಿಪಲ್ ಸಂಘದ ಪ್ರೆಸಿಡೆಂಟರು, ಚೇಂಬರ್ ಆಫ್ ಕಾಮರ್ಸಿನ ಚೇರ್ಮನ್ (ಸಭಾಧ್ಯಕ್ಷರು) ಮತ್ತು ಯೂನಿವರ್ಸಿಟಿಯ ರಿಜಿಸ್ಟ್ರಾರ್ ಸಹಾ ಈ ಪ್ರೊಸಿಡಿಂಗ್ಸ್ ತಲುಪಿದ ಎರಡು ತಿಂಗಳೊಳಗಾಗಿ ತಾವು ಶಿಫಾರಸು ಮಾಡುವಂತ ಜನರ ಹೆಸರನ್ನು ಗವರ್ನಮೆಂಟಿನ ಚೀಫ್ ಸೆಕ್ರೆಟರಿ ಯವರಿಗೆ ತಿಳಿಸಬೇಕಾಗಿ ಅಪೇಕ್ಷಿಸಲ್ಪಡತಕ್ಕದ್ದು. ಈ ವಿಷಯದಲ್ಲಿ ಚೇಂಬರ್ ಆಫ್ ಕಾಮರ್ಸಿನವರು ೬ (b) ಕ್ರಮವನ್ನು ಕುರಿತು ನಿಗೇ ಕೊಡತಕ್ಕದ್ದು. ಸದರೀ ಕ್ರಮದಲ್ಲಿ ಅಂಥಾ ಸಿಫಾರಸನ್ನು ಯಾವರೀತಿ ಮಾಡಬೇಕೆಂಬದನ್ನು ಕಾಣಿಸಿದೆ.

೫. ಈಗ ಆಲೋಚನೆ ಸಭೆಯೊಳಗೆ ಜಾರಿಯಲ್ಲಿ ತಂದ ಪ್ರತಿನಿಧಿತ್ವದ ಕ್ರಮವು ಕೂಡುವಷ್ಟರ ಮಟ್ಟಿಗೆ ಸಂಪೂರ್ಣ ಫಲಿಸುವ ಬಗ್ಯಾಗಿ ಪ್ರತಿಒಂದು ಮ್ಯುನಿಸಿಪಾಲಿಟಿಯವರು ಮತ್ತು ಡಿಸ್ಟ್ರಿಕ್ಟು ಬೋರ್ಡಿನವರು ಒಬ್ಬೊಬ್ಬ ಮೆಂಬರನ್ನು ಆರಿಸುವದಕ್ಕೆ ಬಿಡಬೇಕಾಗಿ ಗವರ್ನಮೆಂಟಿನವರು ನಿಶ್ಚೈಸಿರುತ್ತಾರೆ. ಡಿಸ್ಟ್ರಿಕ್ಟು ಬೋರ್ಡುಗಳ ಬಗ್ಯೆ ಮ್ಯುನಿಸಿಪಾಲಿಟಿಗಳ ಬಗ್ಯೆ ಎರಡೆರಡು ಇಸಂಗಳು ಇರುವದರಿಂದ ಡಿಸ್ಟ್ರಿಕ್ಟು ಬೋರ್ಡುಗಳನ್ನೂ ಮ್ಯುನಿಸಿಪಾಲಿಟಿಗಳನ್ನೂ ಉತ್ತರ ಮತ್ತು ದಕ್ಷಿಣ ಗುಂಪುಗಳೆಂಬ ಎರಡು ಗುಂಪುಗಳಾಗಿ ವಿಭಾಗಿಸುವದಕ್ಕೆ ಆಲೋಚನೆ ಸಭೆಯೊಳಗಣ ಗವರ್ನರವರುನಿಶ್ಚೈಸಿರುತ್ತಾರೆ ಉತ್ತರ ಗುಂಪಿನಲ್ಲಿ ಗಂಜಾಂ, ವಿಶಾಖಪಟ್ಟಣ, ಗೋದಾವರಿ, ಕೃಷ್ಣಾ, ನೆಲ್ಲೂರು, ಕರ್ನೂಲ್, ಬಳ್ಳಾರಿ, ಅನಂತಪುರ, ಕಡಪೆ, ಚೆಂಗಲ್ಪಟ್ಟು, ಉತ್ತರಆರ್ಕಾಡು ಜಿಲ್ಲೆಗಳೂ ಅವುಗಳಲ್ಲಿನ ಮ್ಯುನಿಸಿಪಾಲಿಟಿಗಳೂ ದಕ್ಷಿಣ ಗುಂಪಿನಲ್ಲಿ (ಮದರಾಸ್ ವಿನಹಾ) ಉಳಿದ ಜಿಲ್ಲೆಗಳೂ ಅವುಗಳಲ್ಲಿನ ಮ್ಯುನಿಸಿಪಾಲಿಟಿಗಳೂ ಸೇರಿರುತ್ತವೆ.

ಉತ್ತರ ಗುಂಪಿನ ಮ್ಯುನಿಸಿಪಾಲಿಟಿಗಳಿಗೆ ಒಂದು ಇಸಂ ದಕ್ಷಿಣಗುಂಪಿಗೆ ಒಂದು ಇಸಂ ಕೊಡಲ್ಪಡುವದು. ಹಾಗೆಯೇ ಉತ್ತರದ ದಕ್ಷಿಣ ಗುಂಪುಗಳ ಡಿಸ್ಟ್ರಿಕ್ಟು ಬೋರ್ಡುಗಳಿಗೆ ಸಹಾ ಒಂದೊಂದು ಇಸಂ ಕೊಡಲ್ಪಡುವದು

೬ ಪ್ರಥಮತಃ ಪ್ರತಿ ಒಂದು ಮ್ಯುನಿಸಿಪಾಲಿಟಿಯವರು ವ ಡಿಸ್ಟ್ರಿಕ್ಟು ಬೋರ್ಡಿನವರು ಬರುವ ಮೇ ತಿಂಗಳ ೨೦ ನೇ ತಾರೀಖಿನೊಳಗೆ ಚೀಫ್ ಸೆಕ್ರೆಟರಿಯವರಿಗೆ ತಲುಪುವಹಾಗೆ ಸದರೀ ಮ್ಯುನಿಸಿಪಾಲಿಟಿಯವರು ಯಾ ಡಿಸ್ಟ್ರಿಕ್ಟು ಬೋರ್ಡಿನವರು ನ್ಯಾಯ ವಿಧಾಯಕ ಸಭೆಗೆ ನೇಮಿಸಲ್ಪಡತಕ್ಕ ಬಗ್ಯೆ ಘನವಂ ಹೊಂದಿದಗವರ್ನರವರ ಬಳಿ ಆಖೈರ್ ಶಿಫಾರಸ್ ಮಾಡುವಂತೆ ಯೋಚಿಸಿರುವ ಉಮೇದ್ವಾರನ ಹೆಸರನ್ನು ಸದರೀ ಮ್ಯುನಿಸಿಪಾಲಿಟಿ ವ ಡಿಸ್ಟ್ರಿಕ್ಟು ಬೋರ್ಡಿನವರು ತಮ್ಮ ಕಡೆಯಿಂದ ವೋಟಿಂಗ್ ಡೆಲಿಗೇಟ್ ಅಂದರೆ ವೋಟುಮಾಡುವದಕ್ಕೆ ತಮ್ಮ ಪ್ರತಿನಿಧಿಯಾಗಿ ತಾವು ಕಳುಹಿಸುವ ಒಬ್ಬ ಮನುಷ್ಯನ ಹೆಸರನ್ನೂ ನಮೂದಿಸಿ ಒಂದು ಯಾದಾಸ್ತನ್ನು ಕಳುಹಿಸಬೇಕು. ವೋಟಿಂಗ್ ಡೆಲಿಗೇಟ್ (ವೋಟು ಕೊಡತಕ್ಕ ಬಗ್ಯೆ ಕಳುಹಿಸಲ್ಪಟ್ಟ ಪ್ರತಿನಿಧಿಯು) ಯಾವಾಗಲೂ ಆಯಾ ಮ್ಯುನಿಸಿಪಾಲಿಟಿ ಯಾ ಡಿಸ್ಟ್ರಿಕ್ಟು ಬೋರ್ಡಿನ ಮೆಂಬರಾಗಿರತಕ್ಕದು. ಈ ಬಾಬಿನಲ್ಲಿ ಅವನು ೬ ನೇ ಕ್ರಮಕ್ಕೆ ನಿಗೇ ಕೊಡುವದು ಯುಕ್ತವೆಂಬದಾಗಿ ಗವರ್ನಮೆಂಟನವರು ತಿಳಿದುಕೊಳ್ಳುತ್ತಾರೆ. ಉತ್ತರ ಗುಂಪಿನಲ್ಲಿರುವ ಒಂದು ಮ್ಯುನಿಸಿಪಾಲಿಟಿಯವರು ಯಾ ಡಿಸ್ಟ್ರಿಕ್ಟು ಬೋರ್ಡಿನವರು ಉತ್ತರ ಗುಂಪಿಗೆ ಸೇರಿದ ಜಿಲ್ಲೆಗಳಲ್ಲಿ ವಾಸವಾಗಿರುವ ಯಾವನೊಬ್ಬನನ್ನು ಉಮೇದವಾರನಾಗಿ ಶಿಫಾರಸ್ ಮಾಡಬಹುದು ಹಾಗೆಯೇ ದಕ್ಷಿಣ ಗುಂಪಿನಲ್ಲಿನ ಒಂದು ಮ್ಯುನಿಸಿಪಾಲಿಟಿಯವರು ಯಾ ಡಿಸ್ಟ್ರಿಕ್ಟು ಬೋರ್ಡಿನವರು ದಕ್ಷಿಣ ಗುಂಪಿನ ಜಿಲ್ಲೆಗಳಲ್ಲಿ ವಾಸವಾಗಿರುವ ಒಬ್ಬನನ್ನು ಶಿಫಾರಸ್ ಮಾಡಬಹುದು. ನ್ಯಾಯವಿಧಾಯಕ ಸಭೆಗೆ ನೇಮಕಪಡಬೇಕೆಂಬ ಅಪೇಕ್ಷೆಯುಳ್ಳ ಯಾವನೊಬ್ಬನು ತಾನು ವಾಸವಾಗಿರುವ ಗುಂಪಿನಲ್ಲಿನ ಯಾವ ಒಂದು ಮ್ಯುನಿಸಿಪಾಲಿಟಿಗಾಗಲಿ ಡಿಸ್ಟ್ರಿಕ್ಟು ಬೋರ್ಡಿಗಾಗಲಿ ತನ್ನ ಹೆಸರನ್ನು ಕಳುಹಿಸತಕ್ಕದ್ದು.

೭ ಸದರೀ ಯಾದಾಸ್ತುಗಳು ತಲಪುತಲೆ ಅವುಗಳಿಂದ ಚೀಫ್‌ಸೆಕ್ರೆಟರಿಯು, ಶಿಫಾರಸು ಮಾಡಲ್ಪಟ್ಟ ಎಲ್ಲಾ ಉಮೇದ್ವಾರರ ವ ಅವರನ್ನು ಆರಿಸತಗಿಯುವಬಗ್ಯೆ ಕಳುಹಿಸಲ್ಪಡುವ ಎಲ್ಲಾ ಜನರಹೆಸರುಗಳನ್ನು ಕಾಣಿಸಿ ಒಂದು ಪಟ್ಟಿಯನ್ನು ತಯಾರ್ಮಾಡಿ ಅದನ್ನು ಆ ಗುಂಪಿನಲ್ಲಿಸೇರಿರುವ ಎಲ್ಲಾ ಮ್ಯುನಿಸಿಪಾಲಿಟಿಗಳ ಮತ್ತು ಡಿಸ್ಟ್ರಿಕ್ಟಬೋರ್ಡುಗಳ ತಿಳುವಳಿಕೆಯಬಗ್ಯೆ ಕಳುಹಿಸತಕ್ಕದ್ದು.

೮ ಉತ್ತರ ಮ್ಯುನಿಸಿಪಾಲಿಟಿಗಳ ಗುಂಪಿನ ವೋಟಿಂಗ್ ಡೆಲಿಗೇಟರು ಜುಲೈ೧೭ನೇ ತಾರೀಖಿನ ಮಧ್ಯಾನ್ಹ ವಿಶಾಖಪಟ್ಟಣದಲ್ಲಿ ಸಭೆಸೇರಿ ಸದರೀ ಮ್ಯುನಿಸಿಪಾಲಿಟಿಯವರು ಸಮ್ಮತಿಸಿದಉಮೇದ್ವಾರರಲ್ಲಿ ಒಬ್ಬನನ್ನುಘನವಂತೊಂದಿದಗವರ್ನರವರಬಳಿಗೆ ಆಖೈರ್ ಶಿಫಾರಸಿನ ಬಗ್ಯೆ ಆರಿಸತೆಗೆಯತಕ್ಕದ್ದು. ಆರಿಸುವಿಕೆಯನ್ನು ಚೀಟುಹಾಕಿ (ballot) ಮಾಡತಕ್ಕದ್ದು; ಮತ್ತು ಆರಿಸಲ್ಪಟ್ಟ ಮನುಷ್ಯನಿಗೆಹಾಜರಿದ್ದ ವೋಟು ಚೀಟುಹಾಕಿ ಆರಿಸಿದಲ್ಲಿಡೆಲಿಗೇಟರಮೈಕಿಬಹುಮಂದಿಗಳವೋಟುಗಳಸಿಕ್ಕತಕ್ಕದ್ದು. ಮೊದಲನೇ ಸರ್ತಿ ಚೀಟುಹಾಕಿ ಆರಿಸಿದ್ದಲ್ಲಿ ಡೆಲಿಗೇಟರಪೈಕಿ ಬಹುಮಂದಿಗಳವೋಟುಗಳುಸ್ಪಷ್ಟವಾಗಿ ಸಿಕ್ಕದಿದ್ದರೆ ಹಾಗೆ ಸಿಕ್ಕುವತನಕ ಮರಳಿಮರಳಿ ಚೀಟು ಹಾಕತಕ್ಕದ್ದು. ಈ ಆರಿಸುವಿಕೆಯನ್ನು ಜುಲೈ ೧೮ನೇ ತಾರೀಖಿನ ಮಧ್ಯಾನ್ಹದೊಳಗೆ ಮುಗಿಸತಕ್ಕದ್ದು. ಮತ್ತು ಅದರಫಲವನ್ನು ಈ ಆರಿಸುವಿಕೆಯ ಸಾಮಾನ್ಯಮೇಲ್ವಿಚಾರ ಮತ್ತು ವಿಲೇವಾರಿಮಾಡುವದಕ್ಕೆ ಅಧಿಕಾರಹೊಂದಿರುವ ಕೃಷ್ಣಾಜಿಲ್ಲೆಯ ಕಲೆಕ್ಟರವರು ಕೂಡಲೆ ಗವರ್ನಮೆಂಟು ಚೀಫ್‌ಸೆಕ್ರೆಟರಿಯವರಿಗೆ ರಿಪೋರ್ಟ ಮಾಡತಕ್ಕದ್ದು. ಅದೇದಿವಸ ಮಧ್ಯಾನ್ಹದಲ್ಲಿ ದಕ್ಷಿಣ ಮ್ಯುನಿಸಿಪಾಲಿಟಿಗಳ ಗುಂಪಿನ ವೋಟಿಂಗ್‌ಡೆಲಿಗೇಟರು ತಿರುಚನಾಪಳ್ಳಿಯಲ್ಲಿ ಸಭೆಸೇರಿ ಎಲ್ಲಾ ಸಂಗತಿಗಳಲ್ಲಿ ಮೇಲಿನಕ್ರಮಗಳಗನುಸಾರವಾ ನಡಸುಕೊಳ್ಳತಕ್ಕದ್ದು. ಈ ಗುಂಪಿನವರ ಆರಿಸುವಿಕೆಯು ಸರಿಯಾಗಿನಡೆದದ್ದನ್ನುಕುರಿತು ತಿರುಚನಾಪಳ್ಳಿಯ ಕಲೆಕ್ಟರವರು ಜವಾಬ್ದಾರರಾಗಿರತಕ್ಕದ್ದು.

೯ ಡಿಸ್ಟ್ರಿಕ್ಟ ಬೋರ್ಡಗಳ ಉತ್ತರ ಮತ್ತು ದಕ್ಷಿಣ ಗುಂಪಿನವರು ಪ್ರತಿನಿಧಿಗಳನ್ನು ಆರಿಸಿ ತೆಗೆಯುವದರಲ್ಲಿ ಇದೇ ಕ್ರಮಗಳನ್ನೇ ಅಚರಿಸತಕ್ಕದ್ದು ಆದರೆ ಈ ಸಂಗತಿಯಲ್ಲಿ ವೋಟಿಂಗ್ ಡೆಲಿಗೇಟರು ಜುಲೈ ೧೮ನೇತಾರೀಖಿನ ಮಧ್ಯಾನ್ಹದಲ್ಲಿ ಸಭೆಸೇರಿ ಆರಿಸುವಿಕೆಯನ್ನು ಅದೇತಿಂಗಳ ೧೯ನೇ ತಾರೀಖಿನ ಮಧ್ಯಾನ್ಹದೊಳಗಾದರೂ ಮುಗಿಸತಕ್ಕದ್ದು. ಒಂದುಗುಂಪಿನ ಮ್ಯುನಿಸಿಪಾಲಿಟಿಯವರೂ ಬೋರ್ಡಿನವರೂ ಒಬ್ಬನನ್ನೇ ಆರಿಸಿತೆಗೆಯುವಂತೆ ಬೇರೆ ಬೇರೆ ತಾರೀಖುಗಳನ್ನು ನಿಶ್ಚಯಿಸುವದು ಯುಕ್ತವೆಂದು ಎಣಿಸಲಾಯಿತು.

೧೦ ಈಕೆಳಗಿನ ಇಸ್ತಿಹಾರ್ ಫೋರ್ಟಸೆಂಟ್ ಜಾರ್ಜಗೆಜೆಟಿನಲ್ಲಿ ಪ್ರಕಟಿಸಲ್ಪಡತಕ್ಕದ್ದು —

ಇಸ್ತಿಹಾರ್‌ನಾಮೆ.

೧೮೯೨ ನೇ ಇಸವಿಯ ಇಂಡಿಯನ್‌ಕೌನ್ಸಿಲ್ಸ್ ಆಕ್ಟಿನ ೧ (೪) ನೇ ಪ್ರಕರಣಕ್ಕನುಗುಣವಾಗಿ [illegible] ೨ ನೇ ಕ್ರಮವಿಧಿಯಲ್ಲಿ ತತ್ಕಾಲಕ್ಕೆ ಕೆಳಗೆ ಕಾಣಿಸಿರುವ ಮ್ಯುನಿಸಿಪಾಲಿಟಿಗಳವ ಡಿಸ್ಟ್ರಿಕ್ಟ ಬೋರ್ಡುಗಳ ಪ್ರತಿ ಒಂದು ಗುಂಪಿನವರು ಮತ್ತು ವರ್ತಕಸಂಘದವರು ಮಾಡಿದ ಶಿಫಾರಸುಮೇರೆಗೆ ನ್ಯಾಯವಿಧಾಯಕ ಸಭೆಯಲ್ಲಿ ಒಂದು ಪದವಿಯು ಕೊಡಲ್ಪಡುವದೆಂತ ತಿಳಿಸುವದಕ್ಕೆ ಆಲೋಚನೆ ಸಭೆಯೊಳಗಣ ಬಹುಮಾನಪಟ್ಟ ಗವರ್ನರವರು ಸಂತೋಷಪಟ್ಟಿರುತ್ತಾರೆ —

(i) ಗಂಜಾಂ, ವಿಶಾಖಪಟ್ಟಣ, ಗೋದಾವರಿ ಕೃಷ್ಣಾ, ನೆಲ್ಲೂರ, ಕರ್ನೂಲ್, ಬಳ್ಳಾರಿ, ಅನಂತಪುರ, ಕಡಪೆ, ಉತ್ತರಆರ್ಕಾಡು ಮತ್ತು ಗೋದಾವರಿ ಜಿಲ್ಲೆಗಳಲ್ಲಿರುವ ಮ್ಯುನಿಸಿಪಲ್‌ಸಭೆಗಳು

(ii) ದಕ್ಷಿಣಆರ್ಕಾಡು, ಸೇಲಂ, ಕೊಯಂಬತ್ತೂರ್, ತಿರುಚನಾಪಳ್ಳಿ, ತಂಜಾವೂರ್, ಮಧುರೆ, ತಿರುನಲ್ವೇಲಿ, ನೀಲಗಿರಿ, ಮಲೆಬಾರ್ ಮತ್ತು ದಕ್ಷಿಣಕನ್ನಡ ಜಿಲ್ಲೆಗಳಲ್ಲಿರುವ ಮ್ಯುನಿಸಿಪಲ್ ಸಭೆಗಳು.

(iii) ಗಂಜಾಂ, ವಿಶಾಖಪಟ್ಟಣ, ಗೋದಾವರಿ, ಕೃಷ್ಣಾ, ಕರ್ನೂಲ್, ಬಳ್ಳಾರಿ ಅನಂತಪುರ, ಕಡಪೆ, ಉತ್ತರಆರ್ಕಾಡು ಮತ್ತು ಚೆಂಗಲ್ಪಟ್ಟು ಜಿಲ್ಲೆಗಳಲ್ಲಿರುವ ಡಿಸ್ಟ್ರಿಕ್ಟ ಬೋರ್ಡುಗಳು

(iv) ದಕ್ಷಿಣಆರ್ಕಾಡು, ಸೇಲಂ, ಕೊಯಂಬತ್ತೂರ್, ತಿರುಚನಾಪಳ್ಳಿ, ತಂಜಾವೂರು, ಮಧುರೆ, ತಿರುನಲ್ವೇಲಿ, ನೀಲಗಿರಿ, ಮಲೆಬಾರ್ ಮತ್ತು ದಕ್ಷಿಣಕನ್ನಡ ಜಿಲ್ಲೆಗಳಲ್ಲಿರುವ ಡಿಸ್ಟ್ರಿಕ್ಟಬೋರ್ಡುಗಳು

(v) ಮದರಾಸಿನ ವರ್ತಕಸಂಘವು.

(ನಿಜವಾದ ಎಕ್ಸ್ಟ್ರಾಕ್ಟ)

ಎ. ಬಟ್ಟರ್‌ವರ್ತ್,

ಗವರ್ನಮೆಂಟು ಆಕ್ಟಿಂಗ ಅಂಡರ್ ಸೆಕ್ರೆಟರಿ

Bangalore —Printed and published at the Karnataka Press, No. 40, Hoor[illegible] Road, City.—1893.

# ಕರ್ನಾಟಕ ಪ್ರಕಾಶಿಕಾ.

# THE KARNATAKA PRAKASIKA.

## ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

## Published Every Monday Morning.

ಪ್ರಕಾಶಯಿತನು [illegible] ಕರ್ನಾಟಕಪ್ರಕಾಶಿಕಾ [illegible] ಸರ್ಕಾರವಾಸ [illegible] ಮುದ್ರಣಾಲಯದಲ್ಲಿ [illegible] ಮುದ್ರಿಸಲ್ಪಡುವದು

Vol. XX] BANGALORE—MONDAY, MAY 15, 1893. [No. 19.

ಸಂಪುಟ ೨೦.] ಬೆಂಗಳೂರು—ಸನ್ ೧೮೯೩ ನೇ ಇಸವಿ ಮೇ ೧೫ ನೇ ತಾರೀಖ್ ಸೋಮವಾರ. [ಸಂಚಿಕೆ ೧೯.

### ಕರ್ನಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು.

ಇಂಗ್ಲಿಷ್ ಮತ್ತು ತನ್ನಾಡುಗಳಿಗೆ.

| | ಮುಂಗಡವಾಗಿ | ಹಿಂದುಗಡೆಯಾಗಿ |
|---|---|---|
| ಸಾಲ್ ೧ಕ್ಕೆ | 6—0—0 | 8—0—0 |
| 6 ತಿಂಗಳಿಗೆ | 3—8—0 | 4—8—0 |

ಇಂಗ್ಲಿಷ್ ಅಥವಾ ಅನ್ಯದ ದುಗಗಳಿಗೆ.

| | ಮುಂಗಡವಾಗಿ | ಹಿಂದುಗಡೆಯಾಗಿ |
|---|---|---|
| ಸಾಲ್ ೧ಕ್ಕೆ | 3—0—0 | 4—0—0 |
| 6 ತಿಂಗಳಿಗೆ | 1—12—0 | 2—8—0 |

ಈ ಪತ್ರಿಕೆ [illegible] ಕಳುಹಿಸಿದ ರಾಸೀದ್ [illegible] ಪತ್ರಿಕೆ [illegible] ಇಂಗ್ಲಿಷ್ [illegible]

### ಪ್ರಕಟನದ [illegible]

[illegible] ೦—೨—೦

[illegible] ೦—೧—೦

[illegible]

## ADVERTISEMENTS.

### NOTICE.

### VAIDYASARA SANGRAHA

A TREATISE ON THE [illegible] OF

### HINDU MEDICINE

*Price including Postage Rs 5-0-0*

ವೈದ್ಯಸಾರ ಸಂಗ್ರಹ.

ಈ ಗ್ರಂಥವು [illegible] ಕರ್ನಾಟಕ [illegible] ಬೇಕಾದವರು [illegible] ಕೊಡಲ್ಪಡಲಾರದು.

ಇದರ ಕ್ರಯ—ಪೋಸ್ಟೇಜ್ ಮತ್ತು ಒಂದೇ [illegible] ಪ್ರತಿ ಒಂದಕ್ಕೆ ರೂ ೫—೦—೦

ಟಿ. ಬಿ. [illegible]

ಬೆಂಗಳೂರು, [illegible] ರೋಡ್ [illegible] ನಂಬರ್

### ನೋಟೀಸ್.

### ಬೆಂಗಳೂರು ಕರ್ನಾಟಕ ಪ್ರೆಸ್.

೧೮೭೪ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ, ಸಕಲವಿಧ ಕೆಲಸಗಳು ಸುಲಭಚಾರ್ಜಿಗೆ ತೀವ್ರವಾಗಿಯೂ ಶುದ್ಧವಾಗಿಯೂ, ಮಾಡಲ್ಪಡುವವು.

ಇದರಲ್ಲಿ ಸಹ ಇಂಗ್ಲಿಷ್ ಕನ್ನಡ ಕೆಲಸಗಳು ಮಾತ್ರವೇ ಹೆಚ್ಚು. ಇತರ ತರ್ಜುಮೆಗಳನ್ನು ಸದರೀ ಕರ್ನಾಟಕ ಪ್ರೆಸ್ಸಿನವರಿಗೆ ಬರೆದು ತಿಳುಕೊಳ್ಳಬಹುದು.

### ನೋಟೀಸ್.

ಗಣೇಶ ರಾಮಚಂದ್ರ ಕರ್ಲೆ ಮತ್ತು ಕಂಪೆನಿ. ಎಂಪೋರಿಯಂ ಬಜಾರ್.

ಅದರಿಂದ ತಿಳಿಸಲ್ಪಡುವದೇನೆಂದರೆ ಸಾಮಾನುಗಳನ್ನು [illegible] ಸುಲಭ ಕ್ರಯಕ್ಕೆ ಬಹಳ [illegible] ಕೊಡಲ್ಪಡುವವು [illegible]

ಎಲ್ಲಾ ತರದ ಪುಸ್ತಕಗಳು, ಕೈಗಡಿಯಾರಗಳು, ಮುತ್ತುಗಳು, ಬೆಳ್ಳಿ ಮುತ್ತುಗಳು, ಛತ್ರಿಗಳು, ವಾಚುಗಳು, [illegible], [illegible], [illegible] ಕನ್ನಡಕಗಳು, [illegible] ಟೋಪಿಗಳು, ಆಫೀಸ್ [illegible], [illegible], ಅತ್ತರುಗಳು, [illegible] ಪಾತ್ರೆಗಳು, [illegible] ಸಾಮಾನುಗಳು

[illegible]

ವಿಲಾಸ—ಗಣೇಶ ರಾಮಚಂದ್ರ ಕರ್ಲೆ, ಮತ್ತು ಕಂಪೆನಿ, ಎಂಪೋರಿಯಂ ಬಜಾರ್, ವಾಕರ್‌ಟ್ಯಾಂಕ್ ಮಾರ್ಕೆಟ್ ಪೋಸ್ಟು ಮುಂಬಯಿ

### ನೋಟೀಸ್

[illegible] ಸಂಸ್ಕೃತ ಕನ್ನಡ ಪುಸ್ತಕಗಳು [illegible] ಸಿದ್ಧವಾಗಿವೆ [illegible]

### ಸಂಸ್ಕೃತ ಗ್ರಂಥಗಳು.

| | | ರೂ | ಆ | ಪೈ |
|---|---|---|---|---|
| [illegible] | .. | ೫ | ೦ | ೦ |
| ,, [illegible] | .. | ೧ | ೨ | ೦ |
| ,, [illegible] | | ೦ | ೪ | ೦ |
| ,, [illegible] | . | ೧ | ೦ | ೦ |
| ,, [illegible] | | ೦ | ೩ | ೦ |
| ,, [illegible] | . | ೦ | ೧ | ೦ |
| ,, [illegible] | | ೦ | ೮ | ೦ |
| ವಿಷ್ಣುಸಹಸ್ರನಾಮ [illegible] | .. | ೦ | ೨ | ೦ |
| [illegible] | .. | ೦ | ೬ | ೦ |
| [illegible] | . | ೦ | ೬ | ೦ |
| [illegible] | | ೦ | ೬ | ೦ |
| [illegible] | .. | ೦ | ೧ | ೦ |

### ಕನ್ನಡ ಗ್ರಂಥಗಳು.

| | | | | |
|---|---|---|---|---|
| [illegible] | ... | ೩ | ೦ | ೬ |
| [illegible] | ... | ೧ | ೬ | ೦ |
| [illegible] | . | ೧ | ೪ | ೦ |
| [illegible] | ... | ೦ | ೪ | ೦ |
| [illegible] | ... | ೦ | ೬ | ೦ |
| [illegible] | ... | ೦ | ೬ | ೦ |
| [illegible] | ... | ೦ | ೬ | ೦ |
| [illegible] | . | ೦ | ೬ | ೬ |
| [illegible] | .. | ೦ | ೧ | ೦ |
| [illegible] | ... | ೦ | ೧ | ೦ |
| [illegible] | ... | ೦ | ೧ | ೦ |
| [illegible] | . | ೦ | ೧೨ | ೦ |
| [illegible] | ... | ೧೬ | ೦ | ೦ |

### THE BAGNALORE SREENIVASA MANDIRAM.

ಬೆಂಗಳೂರು. ಶ್ರೀನಿವಾಸ ಮಂದಿರ.

ಬೆಂಗಳೂರ್ ಶ್ರೀ ಶ್ರೀನಿವಾಸ ಮಂದಿರದ ಧರ್ಮಕ್ಕಾಗಿ ಜಮಾಯಿಸಲ್ಪಟ್ಟ ಅಕ್ಕಿ ಮತ್ತು ಅದರ ವಿನಿಯೋಗದ ತಪಸೀಲ್ ತೋರಿಸುವ ತಖ್ತಾ.—

೧೮೯೩ನೇ ಇಸವಿ ಮೇ ೬ ನೇ ತಾರೀಖ್ ಮೊದಲು ೧೩ನೇ ತಾರೀಖ್ ವರಿವಿಗೆ —

| | | |
|---|---|---|
| ಅಕ್ಕಿ ವಸೂಲು ಮಾಡಿದ ಗೃಹಗಳ ಸಂಖ್ಯೆ | | 76 |
| ಜಮಾಯಿಸಿದ ಧಾನ್ಯದ ಸೇರುಗಳ ಸಂಖ್ಯೆ | .... | 53½ |
| [illegible] ಸೇರು | ... | 2 |
| ಜುಮ್ಲಾ | ... | 55½ |
| ಅತಿಥಿ ಸ್ವಾಮಿಗಳಿಗಾಗಿ ಖರ್ಚಾಗಿರುವ ಸೇರು | | 20½ |
| ಖರ್ಚಾದ ಅಕ್ಕಿ ಸೇರು | ... | 31 |
| ಜಾತಿ ಬಾಕಿ | ... | 4 |

ಭೋಜನ ಮಾಡಿದ ಜನಗಳ ಸಂಖ್ಯೆ ಮತ್ತು ತಪ್ಸೀಲ್.

| | | |
|---|---|---|
| ಅನಾಥರು | ... ... | 7 |
| ವಿಕಲಾಂಗ ವಿದ್ಯಾರ್ಥಿಗಳು | . | 2 |
| [illegible] ವಿದ್ಯಾರ್ಥಿಗಳು | ... | 14 |
| [illegible] ಸಂಖ್ಯೆ | | 30 |
| [illegible] | .. ... | 9 |
| ಜುಮ್ಲಾ | .. | 62 |

### THE MONEY MARKET.

ಮದರಾಸ್, ಶನಿವಾರ, ತಾರೀಖ್ 13 ನೇ ಮೇ 1893

ಸೇಕಡ 4ರೂ. ಬಡ್ಡಿ ಗವರ್ನಮೆಂಟ್ ಪತ್ರಗಳು ರೂ ಪಾಯಿ, 104 8—0 ಇಂದ 10 —0—0ವರೆವಿಗೆ

ಮದರಾಸ್ ಬ್ಯಾಂಕ್ ಷೇರಿಗಳು, (500) ರೂಪಾಯಿಗಳ ಷೇರು 97[illegible] ಯಿಂದ 980ವರೆವಿಗೆ,

[illegible] ಬ್ಯಾಂಕ್ ಷೇರಿಗಳು (100) [illegible] 160 ಇಂದ 165 ವರೆವಿಗೆ

ಸವರೇನಗಳು, 16—4—0 ಇಂದ 16—8—0 ವರೆವಿಗೆ

ಬ್ಯಾಂಕ್‌ಬಿಲ್‌ಗಳು ಮಾನಿಟರಿ [illegible], ರೂಪಾಯಿಕೆ 6 ತಿಂಗಳವಾಯಿದೆಗೆ, 1s. 2 7/8d.

ಡಿಟ್ಟೋ 4 ತಿಂಗಳವಾಯಿದೆಗೆ, 1s. 2 13/16d

ಡಿಟ್ಟೋ ಶೀಘ್ರವಾಗ, 1s. 2 23/32d.



### ಲೆಜಿಸ್ಲೆಟಿವ್ ಕೌನ್ಸಿಲ್ ಮೆಂಬರ್‌ಗಳ ಚುನಾವಣೆಯ ಕುರಿತು.

ಸನ್ ೧೮೯೨ನೇ ಇಸವಿಯ ಇಂಡಿಯನ್ ಕೌನ್ಸಿಲ್ ಆಕ್ಟಿನ ಒಂದನೇ ಸೆಕ್ಷನಿನ ೪ ನೇ ಸಬ್‌ಸೆಕ್ಷನ್ ಅನುಸರಿಸಿ ಆಯಾ ಪ್ರೊವಿನ್ಸೀಗವರ್ನರವರ ಮತ್ತು ಇಂಡಿಯಾ ಗವರ್ನರ್ ಜನರಲ್ಲವರ ನ್ಯಾಯವಿಧಾಯಕ ಸಭೆಗಳಿಗೆ ಜಾಸ್ತೀ ಮೆಂಬರ್‌ಗಳನ್ನು ಚುನಾಯಿಸಿ ಶಿಫಾರಸ್ಸು ಮಾಡುವ ಸ್ವಾತಂತ್ರ್ಯವನ್ನು ಕೆಲವು ವಿಶೇಷ ನಿಬಂಧನೆಗಳಿಗೊಳಪಟ್ಟು ಶ್ರೀಮನ್ಮಹಾರಾಜ್ಞೀ ಸರ್ಕಾರದವರು ಪ್ರಜೆಗಳಿಗೆ ಕಲ್ಪಿಸಿಕೊಟ್ಟದರಮೇಲೆ ಈಗ ಸದರೀ ಮೆಂಬರ್‌ಗಳ ಚುನಾವಣೆಯೂ, ಚುನಾಯಿಸಿ ಶಿಫಾರಸು ಮಾಡತಕ್ಕವರುಗಳ ಅರ್ಹತೆಗಳೂ ಅಲ್ಲಿಯಲ್ಲಿ ಬಹಳ ಅಭಿನಿವೇಶಪೂರ್ವಕ ಜರುಗುತಲಿರುವಂತೆ ನಮಗೆ ಬರಹಕ್ಕೆ ಅನ್ಯದೇಶ ಪತ್ರಿಕೆಗಳ ಮೂಲಕ ತಿಳಿಯಬರುತ್ತದೆ. ಈ ಸ್ವಾತಂತ್ರ್ಯವು ಪ್ರಜೆಗಳ ಚಿರಪ್ರಾರ್ಥನೆಯ ಮೇರೆ ಯಥೋಚಿತ ಅವರಿಗೆ ಲಭಿಸಿದ್ದಾಗಿರುತ್ತದೆ. ಆದರೆ ಇದು ಸುಲಭವಾಗಿ ಪ್ರಾಪ್ತವಾಯಿತೆಂದು ಒಬ್ಬರೂ ಭಾವಿಸಲಾಗದು. ಇಂಡಿಯನ್ ಕೌನ್ಸಿಲ್ಸ್ ಆಕ್ಟಿನ ಮೂಲಕ ವುಂಟಾದ ಈ ಅಲ್ಪರಿಯಾಯಿತಿಗೆ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನವರ ಅನ್ಯಾದೃಶಗಳಾದ ಸಾಹಸ ಪ್ರಯತ್ನಗಳೂ, ಅಪರಿಮಿತವಾದ ಧೈರ್ಯವೂ ಕಾರಣವೆಂಬುದಂ ಯಾರೂ ನಿರಾಕರಿಸಲಾರರು. ಸದರೀ ಸಭೆಯವರು ಗತ ಏಳೆಂಟುವರ್ಷಗಳ ಕಾಲದವರೆಗೂ ಅವಿಚ್ಛಿನ್ನವಾಗಿ ಚರ್ಚಿಸಿ ಪ್ರಾರ್ಥಿಸಿ ನಿರ್ಬಂಧಿಸಿ ಕೇಳಿಕೊಂಡ ಅನೇಕ ವಿಷಯಗಳಲ್ಲಿ ಪ್ರಸಕ್ತ ನ್ಯಾಯವಿಧಾಯಕ ಸಭೆಯ ಪುನರ್ವಿಮರ್ಶೆಯು ಒಂದಾಗಿರುತ್ತದೆ. ಇಂಡ್ಯದೇಶದ ರಾಜ್ಯಾಂತಗಳಲ್ಲಿ ನೇಟಿವ್‌ಗಳಿಗೆ ವಿಶೇಷ ಸ್ವಾತಂತ್ರ್ಯವನ್ನೂ ಪ್ರವೇಶಾಧಿಕಾರಗಳನ್ನೂ ಕಲ್ಪಿಸಬೇಕೆಂದು ಪ್ರಾರ್ಥಿಸಿದ್ದಕ್ಕೆ ಕೆಲವು ಅಧಿಕಾರಗಳನ್ನು ಅಧಿಕವಾಗಿ ನೇಟಿವ್‌ಗಳಿಗೆ ಕೊಡಬಹುದೆಂದು ನಿಶ್ಚಯಿಸಿದರು. ಪ್ರಜೆಗಳು ವಿಶೇಷ ಸ್ವಾತಂತ್ರ್ಯಾನುಭವಕ್ಕೆ ಎಷ್ಟುಮಟ್ಟಿಗೆ ಅರ್ಹರಾಗಿರುವರೆಂಬುದಂ ಪರೀಕ್ಷಿಸಿ ನೋಡುವದಕ್ಕಾಗಿ ತಮ್ಮಕಡೆ ಅರ್ಹರಾದ ಪ್ರತಿನಿಧಿಗಳನ್ನು ಚುನಾಯಿಸಿ ನಿಶ್ಚಯಿಸುವ ಭಾರವನ್ನೀಗ ಕೆಲವುಮಟ್ಟಿಗೆ ಕೊಟ್ಟಿರುತ್ತಾರೆ. ಇದುವರೆವಿಗೆ ವ್ಯಯವಾಗಿರುವ ಧನವನ್ನೂ, ಅನುಭವಿಸಿದ ಶರೀರಶ್ರಮವನ್ನೂ ವಿರೋಧಿಗಳ ಮೂಲಕ ಪಟ್ಟ ಪರಿಭವಗಳನ್ನೂ ಪರ್ಯಾಲೋಚಿಸಿ ನೋಡಿದರೆ ಈಗ ಕೊಡಲ್ಪಟ್ಟ ಸ್ವಾತಂತ್ರ್ಯವು ತುಧ್ಧಾಂಗ ಪರಿಗಣನೀಯವಲ್ಲದ್ದಾಗಿರುತ್ತದೆ. ಆದಾಗ್ಯೂ ಯಥೋಚಿತವಾಗಿ ಸಿದ್ಧರಿಂದ ತೃಪ್ತಿಯನ್ನೈದಿ ಅದಂ ಉಚಿತರೀತಿಯಿಂದ ವಿನಿಯೋಗಿಸಿ ವಿಶದಪಡಿಸಿ ಮುಂದೆ ವಿಶೇಷ ಸ್ವಾತಂತ್ರ್ಯಾಧಿಕಾರ ಪ್ರಾಪ್ತಿಗೆ ಅರ್ಹರಾಗಿರುವಂತೆ ನಿರೂಪಿಸಿ ಗವರ್ನಮೆಂಟಿನವರನ್ನು ತೃಪ್ತಿಪಡಿಸಬೇಕಾದುದು ಪ್ರಕೃತ ಸಂದರ್ಭದಲ್ಲಿ ಪ್ರಜೆಗಳ ಮುಖ್ಯಕರ್ತವ್ಯವಾಗಿರುತ್ತದೆ. ಈ ಪ್ರಾರಂಭದೆಶೆಯಲ್ಲಿಯೇ ಪರಸ್ಪರಾಸಹಿಷ್ಣುತೆಯಿಂದ ಲಭಿಸಿದ ಪ್ರಯೋಜನವಂ ದುರುಪಯೋಗಪಡಿಸಿ ತಮ್ಮ ವರ್ತನವನ್ನು ಹೇಳನಾಸ್ಪದವಾಗಿ ಮಾಡಿಕೊಂಡರೆ ಅವರಂ ಹೀಯಾಳಿಸಲಿಕ್ಕೆ ಅವರ ಪ್ರಾಭವ ವೈಭವಗಳಿಗಾಗಿ ಅಂತಃ ಅಸಮಾಧಾನ ಪಡುತಲಿರುವ ಇಂಡ್ಯದೇಶವಾಸಿಗಳಾದ ಇಂಗ್ಲಿಷಿನವರನೇಕರು ಸನ್ನದ್ಧರಾಗಿ, ನೇಪಥ್ಯದೊಳು ಸಮಯವಂ ನಿರೀಕ್ಷಿಸುತಲಿರುವರಲ್ಲದೆ ನಮ್ಮ ಅವಜ್ಞತೆಯಂ ನಾನಾಗಿ ಹೊರಪಡಿಸಿಕೊಂಡಂತಾಗುವದು. ಇದುವರೆವಿಗೆ ಪ್ರಜೆಗಳು ತಮಗೆ ಅಪೇಕ್ಷಿತಗಳಾಗಿರುವ ಅನೇಕ ವಿಷಯಗಳನ್ನು ತಮ್ಮ ಪ್ರತಿನಿಧಿಗಳ ಮೂಲಕ ಗವರ್ನಮೆಂಟಿನವರಿಗೆ ವಿಶದ ವಿಶೇಷವಾಗಿ ತಿಳಿಯಪಡಿಸುತ್ತಾರೆ. ಈಗ ತಮ್ಮ ಅಭೀಷ್ಟಗಳಂ ತಮ್ಮ ಕಡೆಯವರ ಮೂಲಕ ನೆರವೇರಿಸಿಕೊಳ್ಳುವ ಸ್ವಾತಂತ್ರ್ಯವು ಕೈಗೊಂಡು ಕೇವಲ ವಾಗಾಡಂಬರವುಳ್ಳವರೇಹೊರತು ಕಾರ್ಯಪರರಲ್ಲವೆಂಬ ಭಾವವನ್ನುಂಟುಮಾಡದೆ, ತಮ್ಮ ಕರ್ತೃತ್ವಶಕ್ತಿಯಂ ದಕ್ಷತೆಯೋಗ್ಯವಾಗಿ ತೋರಿಸಬೇಕಾದ ಕಾಲವು ಅದೃಷ್ಟವಶಾತ್ ಈಗ ಇಂಡ್ಯದೇಶೀಯರಿಗೆ ಹಸ್ತಗತವಾಗಿದೆ, ನಮ್ಮ

ನರು ಸ್ವಾತಂತ್ರ್ಯಾಧಿಕಾರಪ್ರಾಪ್ತಿಗಾಗಿ ಸ್ಪರ್ಧಿಸಿ ಕದಾಚಿತ್ ಅವು ಲಭಿಸಿದೊಡೆ ತದರ್ಥದ ರಸ್ಪರಾಸಹಿಷ್ಣುತೆಯಿಂದ ಕಲಹಿಸಿ ಅಥವಾ ನಿಸ್ಪೃಹರಾಗಿ ಸಕಲ ಉದ್ದೇಶಗಳು ನಾಶಗೊಳಿಸತಕ್ಕದ್ದು ನಮ್ಮ ದೇಶದಲ್ಲಿ ನಡೆದ ಲಕ್ಷಣವು ದೇರ್ಪಟ್ಟಿದೆ. ಇಂತಹ ಅನಪಾಯಾನಕರವಾದ ಸ್ಥಿತಿಯು ಜನರ ಅಧಿಕಾರ ಕಾಂಕ್ಷೆಯಿಂದಲ್ಲದೆ ಅನ್ಯತರವಾಗಿ ಉಂಟಾಗತಕ್ಕದ್ದಲ್ಲವು. ಇದಕ್ಕೆ ದೃಷ್ಟಾಂತವು, ನಮ್ಮ ಮ್ಯುನಿಸಿಪಾಲಿಟಿಗಳನ್ನೂ, ಅವುಗಳ ಮೆಂಬರಿಗಳನ್ನೂ, ಅವರ ವಿಷಯದೊಳು ಅನ್ಯರಿಗುಂಟಾಗಿರುವ ಪ್ರೀತಿ ಗೌರವಗಳನ್ನೂ, ಸದರೀ ಮೆಂಬರಿಗಳು ಪ್ರಜಾನುರಾಗದಿಂ ಅವರಲ್ಲಿ ಸ್ನಿಗ್ಧರಾಗಿ ಅವರ ಪ್ರಯೋಜನಗಳಂ ಕಾಪಾಡುವ ಬಗೆಯನ್ನೂ ಊಹಿಸಿಕೊಳ್ಳಬಹುದು. ಮಸಲಾ ಒಂದು ಮಂತ್ರಾಲೋಚಕ ಸಮಾಜದಲ್ಲಿ ಮಂತ್ರಾಲೋಚಕರಾಗಿ ನಿಯಮಿಸಲ್ಪಡಲಿಕ್ಕೆ ನೂರಾರುಜನ ವಿದ್ಯಾವಂತರಾದ ದೊಡ್ಡ ಮನುಷ್ಯರು ಅರ್ಹತೆನಿಸಿ ಸನ್ನದ್ಧರಾಗಿರುತ್ತಾರೆ. ಇವರೆಲ್ಲರಿಗೂ ಸಭೆಯಲ್ಲಿ ಸ್ಥಾನವು ದೊರೆಯಬೇಕೆಂದು ನಿರೀಕ್ಷಿಸಲಿಕ್ಕೆ ಸಾಧ್ಯವಹುದೆ? ಹಾಗಾಂಗ ಸಾಧ್ಯವಲ್ಲವು. ಚುನಾವಣೆ ಸ್ವಾತಂತ್ರ್ಯವುಂಟುಮಾಡಲ್ಪಟ್ಟ ಕಾಲದಲ್ಲಿ ಸ್ವದೇಶಾಭಿಮಾನಿಗಳೆಂದಾರೋಪಿಸಿಕೊಂಡು ಸಮುದಾಯವಾಗಿ ಕಲೆತು ತಾದೃಶ ಸ್ವಾತಂತ್ರ್ಯ ಪ್ರಾಪ್ತಿಗಾಗಿ ಶ್ರಮಿಸತಕ್ಕವರೆಲ್ಲರೂ ಬಿನ್ನಿಸಿ ಪ್ರತಿ ಮನುಷ್ಯನೂ ತನಗೂ ಅಧಿಕಾರವುಂಟಾಗಬೇಕೆಂದಪೇಕ್ಷಿಸುವಂತಾಗಾಗುತ್ತಾನೆ. ಇದರ ಪ್ರಯೋಜನವು, ಸಮರ್ಥರು ಅನಾಮಧೇಯರಾಗುವಣವೂ ಅರ್ಹರುಳ್ಳವರು ಅಥವಾ ಜನಶೀಲೆಯುಳ್ಳರು ಪ್ರಸಿದ್ಧಿಗೆ ಬರುವಣವೂ ವಿನಾ ಮತ್ತ್ಯಾವುದೂ ನಮಗೆ ಗೋಚರವಾಗಲಿಲ್ಲವು. ಇಂತಹ ಪ್ರಯೋಜನಹಾನಿ ಯೇತರಿಂದುಂಟಾಗುತಿದೆಯೆಂದರೆ—ಕೇವಲ ಅಧಿಕಾರಾತುರರಾದವರ ಮೋಹಕವಾಕ್ಯಗಳಿಗೂ, ಅವರು ತೋರಿಸುವ ಪ್ರತ್ಯಕ್ಷಗಳಿಗೂ, ವ್ಯಕ್ತಪಡಿಸುವಂತಹ ಅಘಟನಘಟನಾ ಸಾಮರ್ಥ್ಯಗಳಿಗೂ ಭ್ರಮಿಸಿ ಮರುಳಾಗಿ ತತ್ಪಕ್ಷಾವಲಂಬಿಗಳೆನಿಸಿ ಅಭಿಪ್ರಾಯಗಳಂ ತಿಳಿಸುವಂತಹ ಜನಸಮೂಹಗಳ ಅವಿಮರ್ಶಕತೆಯಿಂದಲೇ ಯೆಂಬದಾಗಿ ವಿವೇಕಿಗಳೆಲ್ಲರು ಭಾವಿಸಬಹುದು. ಈಗ ನ್ಯಾಯವಿಧಾಯಕ ಸಭೆಯ ಮೆಂಬರ್‌ಗಳ ಚುನಾವಣೆಯ ವಿಷಯದಲ್ಲಿ ಅಂತಾದ್ದೊಂದೂ ಪ್ರಾಪ್ತವಾಗದಿರಬೇಕೆಂಬದೇ ನಮ್ಮ ಕೋರಿಕೆಯಾಗಿರುತಿದೆ. ಮಿ॥ ಗ್ಲ್ಯಾಡ್‌ಸ್ಟನ್, ಲಾರ್ಡ್ ಸಾಲಿಸ್‌ಬರಿ, ಪ್ರಿನ್ಸ್ ಬಿಸ್ಮಾರ್ಕ್ ಮೊದಲಾದ ಪ್ರಸಿದ್ಧ ಪುರುಷರಂತೆ ರಾಜ್ಯತಂತ್ರಜ್ಞರಾಗಿಯೂ, ಒಂದು ಕಕ್ಷಿಗೆ ಅಧ್ಯಕ್ಷರಾಗಿಯೂ ಸರ್ವಶಕ್ತರಾಗಿಯೂ ಇರುವಂತಹ ಮುಖ್ಯಪ್ರವರ್ತಕರು ನಮಗೆ ಬೇಕಾದ ಕಡೆಗಳಲ್ಲಿ ದೊರೆಯಲಾರರು. ಹಾಗೆ ದೊರೆಯುವ ಪಕ್ಷಕ್ಕೆ ಮೇಲೆ ತಿಳಿಸಲ್ಪಟ್ಟವರಿಗೆ ಈಗಿನಷ್ಟು ಪ್ರಾಶಸ್ತ್ಯವು ಯೆಂದಿಗೂ ಉಂಟಾಗಲಾರದು. ಇಂಗ್ಲಿಷ್ ಪಾರ್ಲಿಮೆಂಟಿನಂತೆ ಪ್ರಜಾ ಪ್ರತಿನಿಧಿ ಸಭೆಯು ಇಲ್ಲಿರುವಪಕ್ಷಕ್ಕೆ ಇಂಗ್ಲಿಷಿನವರ ವ್ಯವಸ್ಥಿತ ರಾಜ್ಯತಂತ್ರಗ್ರಾಮಕ್ಕೆ ವಿಕಾಸ ಮಹಿಮೆಯುಂಟಾಗಿರಲಾರದು. ಐರಿಷ್ ಜನರಂತೆ ಪ್ರತ್ಯೇಕವಾಗಿ ಸ್ವದೇಶ ಪರಿಪಾಲನಾಧಿಕಾರವಂ ವಹಿಸುವಷ್ಟರ ಶಕ್ತಿಯಾಗಲಿ, ಅದಂ ಕಲ್ಪಿಸಿಕೊಡುವಷ್ಟರ ಕರ್ತರಾಗಲಿ ಇರುವಂತೆ ತೋರಲಿಲ್ಲವು. ಅಥವಾ ಉತ್ತರ ದೇಶದಲ್ಲಿ ವಾಗ್ಮಿಗಳಾಗಿಯೂ ಪ್ರಸಿದ್ಧರಾಗಿಯೂ ಇರುವಂತಹ ಸುರೇಂದ್ರನಾಥ ಬ್ಯಾನರ್ಜಿ, ಕಲಿಚರ್ರಣ ಬಾನರ್ಜಿ, ಲಾಲ್ ಮೋಹನ್‌ಘೋಸ್, ದಾದಾಬಾಯಿ ನವರೋಜಿ ವಗೈರೇರು ಸರ್ವತ್ರ ದೊರೆಯತಕ್ಕವರಲ್ಲವು. ಆದುದರಿಂದ ಎಲ್ಲರೂ ನಿಸ್ಪೃಹರಾದ ಒಂದು ಶೀಲವರ್ತನವಂ ತಮ್ಮೊಳು ಮಾಡಿಕೊಂಡು ದೇಶಕ್ಕೆ ಯಾರಿಂದ ನಿಜವಾಗಿ ಕ್ಷೇಮವುಂಟಾಗಬಹುದೋ, ಯಾರು ಕೇವಲ ಸ್ವಪ್ರತಿಷ್ಠಾಪರರಲ್ಲದೆ ಪಾರಮಾರ್ಥಿಕ ಜ್ಞಾನದೊಡನೆ ಪರಹಿತಾರ್ಥವಾಗಿ ಶ್ರಮಿಸತಕ್ಕವರೋ, ಯಾರ ತಾತ್ಪರ್ಯವು ಅನ್ಯಪ್ರಯುಕ್ತವಾದುದಾಗಿರುವುದೋ ಅಂತವರನ್ನು ಏಕಕಂಠ್ಯದೊಡನೆ ಚುನಾಯಿಸಿ ಮೊಕರಮ್ಮಾಡಿಕೊಳ್ಳುವದು ನಮ್ಮ ಕರ್ತವ್ಯವಾಗಿರುತಿದೆ. ಇಂತಹ ನಮ್ಮ ಕರ್ತವ್ಯವು ನೆರವೇರಿಸುವದರಲ್ಲಿ ವೋಟಿಂಗ್ ಡೆಲಿಗೇಟಿಗಳು ಅಂದರೆ ಚುನಾಯಿಸುವಂತಹ ಪ್ರತಿನಿಧಿಗಳು ಚುನಾಯಿಸಲಿಕ್ಕೆ ಹಿಂದೆರಡು ದಿನಗಳಿಗೆ ಪೂರ್ವವೇ ತಮ್ಮ ತಮ್ಮ ಸ್ಥಳಗಳಲ್ಲಿ ಮುಂಚಿತವಾಗಿ ಸಭೆ ಸೇರಿ ವ್ಯಕ್ತಿನಿಷ್ಠಗಳಾದ ರಾಗದ್ವೇಷಗಳನ್ನೂ ಅಲ್ಪ ಪರಿಭಾವನೆಗಳನ್ನೂ ದೂರದೊಳಿಟ್ಟು ಸೌಮ್ಯಭಾವದಿಂದಾಲೋಚಿಸಿ ಭಿನ್ನಾಭಿಪ್ರಾಯಗಳಿಲ್ಲದೆ ಏಕಮತ್ಯದೊಡನೆ ಒಬ್ಬರನ್ನು ಚುನಾಯಿಸುವದೇನೋ ಯೋಗ್ಯವಾದ ಕೆಲಸವೆಂದು ಭಾವಿಸುತ್ತೇವೆ. ಈಗ ಚುನಾಯಿಸಲ್ಪಡುವವರೂ ಚುನಾಯಿಸತಕ್ಕವರೂ, ತಾವು ಮಾಡಬೇಕಾದ ಕಾರ್ಯ ಗೌರವವನ್ನೂ, ತಾವು ಸೇರತಕ್ಕ ಸ್ಥಾನ ಗೌರವವನ್ನೂ, ತನ್ಮೂಲಕ ವುಂಟಾಗಬಹುದೆಂದು ನಿರೀಕ್ಷಿಸಲ್ಪಟ್ಟಿರುವ ಪ್ರಯೋಜನ ಗೌರವವನ್ನೂ, ಉದ್ದೇಶವು ವ್ಯರ್ಥವಾದರೆ ಪಶ್ಚಾತ್ ವುಂಟಾಗಬಹುದಾದ ಸಾಮುದಾಯಕ ಹಾನಿಯನ್ನೂ ಈಗಲೇ ಯೆಲ್ಲರೂ ಚೆನ್ನಾಗಿ ಆಲೋಚಿಸಬೇಕಾದುದು ಆವಶ್ಯಕವಾಗಿರುತಿದೆ. ಈಗ ಚುನಾವಣೆವಿಷಯದಲ್ಲಿ ಕೆಲವು ಕಡೆಗಳಲ್ಲಿ ಅಂಕುರಿಸಿರುವ ಮನಸ್ತಾಪಗಳು ಅಭಿವೃದ್ಧಿಯಾಗುವಂತೆ ಪೋಷಿಸಿ ಬೆಳೆಸುತಬರುವಪಕ್ಷಕ್ಕೆ ಕಾಂಗ್ರೆಸ್ ಸಭೆಗೆ ಮಾಲಕೋಹಾನಿಯುಂಟಾಗುವದರಲ್ಲಿ ಸ್ವಲ್ಪಮಾತ್ರವೂ ಸಂಶಯವಿರಲಾರದು. ಒಂದುವೇಳೆ ಈಸಲ ಒಬ್ಬನ ಉದ್ದೇಶವು ತೃಪ್ತಿಕರವಾಗಿ ನೆರವೇರದಪಕ್ಷಕ್ಕೆ ಅಂತವನ ಆಶಾಪ್ರತೀಕ್ಷೆಯು ಬೇರೊಂದು ಸಮಯದಲ್ಲಿ ಅನ್ಯವಿಧದಿಂದುಟಾಗದೆ ಹೋಗಲಾರದು. ಪ್ರತಿಮನುಷ್ಯನೂ ಸಾಮುದಾಯಕ ಪ್ರತಿಷ್ಠೆಯಂ ಕುರಿತು ಪರ್ಯಾಲೋಚಿಸಬೇಕಲ್ಲದೆ ಆತ್ಮೀಯ ಪ್ರಾಶಸ್ತ್ಯವನ್ನೇ ಬಯಸಿ ಅದಂ ಪಡೆಯಲಿಚ್ಛೈಸುವಣವು ಶ್ರೇಯಸ್ಕರವಲ್ಲವು, ಮತ್ತು ವಿರುದ್ಧ ಫಲದಾಯಕವಾಗಿರುವದು. ಆದುದರಿಂದ ಮೇಲೆ ಕಂಡ ನಮ್ಮ ಅಭಿಪ್ರಾಯವನ್ನು ಪ್ರಕೃತ ಸಂದರ್ಭದಲ್ಲಿ ಸಕಲರೂ ಮನದೊಳು ಧರಿಸಿ ತಮ್ಮ ಕರ್ತವ್ಯಗಳನ್ನು ಉಚಿತವಾಗಿ ಕೊನೆ ಮುಟ್ಟಿಸಿ ಪ್ರತಿಷ್ಠಾಸಂಪಾದಕರಾಗಬೇಕೆಂದು ಕೋರುತ್ತೇವೆ. ಈ ವಿಷಯವು ಮೈಸೂರ್ ಪ್ರತಿನಿಧಿಸಭೆಯವರಿಗೆ ಸಹ ಪರ್ಯಾಯವಾಗಿ ಅನ್ವಯಿಸಬಹುದಾದುದರಿಂದ ಅವರೂ ಇದುಲಕ್ಷ್ಯದೊಳಿಟ್ಟಿರಬೇಕೆಂದು ಕೋರುತ್ತೇವೆ

## ಕರ್ನಾಟಕ ಭಾಷಾಭಿವೃದ್ಧಿಯಂ ಕುರಿತು

ಕರ್ಣಾಟಕಭಾಷೆಯು ತತ್ಪ್ರಚಾರವುಳ್ಳ ಕನ್ನಡ ದೇಶಗಳಲ್ಲೊಂದೊಂದರಲ್ಲೊಂದೊಂದು ರೀತಿಯಾಗಿ ವ್ಯವಹರಿಸಲ್ಪಡುತಲಿರುವದರಿಂದ ಅವುಗಳನ್ನೆಲ್ಲ ಕ್ರಮಪಡಿಸಿ ಒಂದು ವ್ಯವಸ್ಥಿತಸ್ಥಿತಿಗೆ ತಂದೊಪ್ಪಿಸಬೇಕೆಂಬ ಕೋರಿಕೆಯು ಈಗ ಅನೇಕರಿಗುಂಟಾಗಿ ತದರ್ಥ ಅವರು ಅನೇಕ ಸಭೆಗಳನ್ನೂ ಸಂಘಗಳನ್ನೂ ಏರ್ಪಡಿಸಿಕೊಂಡು ತತ್ಪ್ರಯತ್ನಗಳಂ ಮಾಡುತಲಿದ್ದಾರೆ. ಕೆಲವರು ವೃತ್ತಾಂತಪತ್ರಿಕಾ ಲೇಖಕರು ಸಹ ಸದರೀ ಭಾಷೆಯು ಸರ್ವತ್ರ ಏಕರೂಪವಾಗಿ ವ್ಯವಹರಿಸಲ್ಪಡುವದಕ್ಕೆ ಅನುಗುಣವಾದುದಾಗಿ ಅದಂ ಮಾಡಬೇಕೆಂದು ವಾದಿಸುತ್ತಾರೆ. ಇದರಲ್ಲಿ ಪೂರ್ವಸ್ಥಿತಿಯನ್ನವಲಂಬಿಸಬೇಕೆಂಬ ಅಭಿಪ್ರಾಯವುಳ್ಳವರು ಕೆಲವರು, ಕಾಲದೇಶಾನುಸಾರವಾಗಿ ಭಾಷೆಯು ವೃದ್ಧಿಯಾಗುತ ಬರುವಂತೆಲ್ಲ ಅದು ಅಂಗೀಕರಿಸಿ ತದನುಗುಣವಾಗಿ ವ್ಯವಹರಿಸುತಬರಬೇಕೆಂಬ ತಾತ್ಪರ್ಯವುಳ್ಳವರು ಮತ್ತೆ ಕೆಲವರು, ಗ್ರಾಂಥಿಕಭಾಷೆಯನ್ನೇ ಪ್ರಚಾರದೊಳು ತಂದು ಅದಂ ಲಕ್ಷ್ಯ ಲಕ್ಷಣ ಯುಕ್ತವಾಗಿ ಎಲ್ಲರೂ ಬಳೆಸುವಂತೆ ಮಾಡಬೇಕೆಂಬ ಕೋರಿಕೆಯುಳ್ಳವರು ಇನ್ನು ಕೆಲವರು. ಹೀಗೆ ಅವರವರು ಭಿನ್ನಾಭಿಪ್ರಾಯಗಳುಳ್ಳವರಾಗಿ ತಮ್ಮ ತಮ್ಮ ತಾತ್ಪರ್ಯ ಪೋಷಕಗಳಾದ ಕಾರ್ಯಕಾರಣಗಳನ್ನರುಹಿ ಸ್ವಪಕ್ಷವಂ ನಿರ್ಧರಿಸಲಾರಂಭಿಸಿ ಇದ್ದಾರೆ. ಈವು ಯಕ್ಷನೋದ್ದೇಶಗಳು ಸ್ವರೂಪತಃ ಶ್ಲಾಘ್ಯಗಳೆಂದು ಕಂಡುಬರುದಾಗ್ಯೂ ಅವುಗಳ ಪರ್ಯವಸಾನವಿಷಯದೊಳು ನಮಗೆ ಬಹಳ ಅನುಮಾನವುಂಟಾಗದಿರಲಿಲ್ಲವು. ಸರ್ವತ್ರ ಕರ್ಣಾಟಕಭಾಷೆಯನ್ನೊಂದು ವ್ಯವಸ್ಥಿತಸ್ಥಿತಿಗೆ ತರುವವೆಂದು ಪ್ರಯತ್ನಪಡುವಣವು ಕೇವಲಸಾಹಸವೆಂದೆಣಿಸಬೇಕಾಗಿರುತಿದೆ. ಲೋಕದಲ್ಲಿ ಮನುಷ್ಯನ ಪ್ರಕೃತಿಸ್ವಭಾವಾಭಿರುಚಿಗಳು ಹ್ಯಾಗೆ ಭಿನ್ನಭಿನ್ನಗಳಾಗಿರುತಿವೆಯೋ ತದ್ವತ್ ಒಂದು ಭಾಷೆಯು ಸಹ ಅದಂ ವ್ಯವಹರಿಸತಕ್ಕ ಜನರ ಅಭಿರುಚಿ ಕಾಲ ದೇಶಾನುಗುಣವಾಗಿ ರೂಪಾಂತರವನ್ನೈದತಕ್ಕದ್ದಾಗಿರುತಿದೆ. ಭಿನ್ನಸ್ವಭಾವವುಳ್ಳವರನೇಕರಂ ಒಂದೇ ವ್ಯವಸ್ಥಿತಗುಣ ವುಳ್ಳವರಾಗಿರುವಂತೆ ಮಾಡುವಣವು ಪರಮಾತ್ಮನಿಗೆ ಕೂಡ ಹ್ಯಾಗೆ ಅಸಾಧ್ಯವಾಗಿ ಏರ್ಪಟ್ಟದೆಯೋ ಅದೇರೀತಿ ಸದರೀ ಪ್ರಯತ್ನವು ಸಹ ಬಹಳಮಟ್ಟಿಗೆ ಸಾಧ್ಯವಾಗತಕ್ಕದ್ದಲ್ಲವೆಂಬದೇ ನಮ್ಮ ಅಭಿಪ್ರಾಯವಾಗಿರುತದೆ

ಇತರ ಭಾಷೆಗಳಂತೆ ಈ ಕರ್ಣಾಟಕಭಾಷೆಯು ಕೂಡ ಅತಿ ಗಂಭೀರವಾದ ದಾಗಿಯೂ ಮಧುರವಾದುದಾಗಿಯೂ ಇರುತಿದೆ. ಇದು ಗ್ರಾಂಥಿಕಭಾಷೆಯೆಂತಲೂ, ವ್ಯಾವಹಾರಿಕ ಭಾಷೆಯೆಂತಲೂ ಎರಡು ಪ್ರಭೇದಗಳುಳ್ಳದ್ದಾಗಿರುತಿದೆ. ಮೊದಲನೆಯದನ್ನು ಹಳೆಗನ್ನಡವೆಂತಲೂ, ಎರಡನೆಯದನ್ನು ಹೊಸಗನ್ನಡವೆಂತಲೂ ಕರ್ನಾಟಕರು ವ್ಯವಹರಿಸುತ್ತಾರೆ. ಹಳೆಗನ್ನಡವು ಪೂರ್ವಕಾಲದಲ್ಲಿ ಈ ದೇಶದೊಳಗಿದ್ದ ಪ್ರಸಿದ್ಧರಾದ ಪಂಡಿತರುಗಳಿಂದ ರಚಿಸಲ್ಪಟ್ಟ ಶಬ್ದಮಣಿದರ್ಪಣ, ಶಬ್ದಾರ್ಣವ, ಕಬ್ಬಿಗರಕೈಪಿಡಿ, ಜಗನ್ನಾಥವಿಜಯ, ಕನ್ನಡ ಭಾರತ, ಜೈಮಿನಿ, ರಾಜಶೇಖರವಿಲಾಸ, ರಾಮಾಯಣಾದಿ ಅನೇಕ ಲಕ್ಷ್ಯ ಲಕ್ಷಣ ಕಾವ್ಯಗ್ರಂಥಗಳಲ್ಲಿ ಉಪಯೋಗಿಸಲ್ಪಟ್ಟಿರುವ ಭಾಷೆಯಾಗಿರುತಿದೆ. ಹೊಸಗನ್ನಡವೆಂಬುವದು ಸಾಧಾರಣವಾಗಿ ಜನರಿಂದ ನುಡಿಯಲ್ಪಡುವ ಭಾಷೆಯಾಗಿರುತಿದೆ. ಇದಕ್ಕೆ ಹಳೆಗನ್ನಡದಂತೆ ಪ್ರತ್ಯೇಕ ವ್ಯಾಕರಣ ಮೊದಲಾದ ಲಕ್ಷಣಗ್ರಂಥಗಳಿಲ್ಲದಿದ್ದರೂ ಹಳೆಗನ್ನಡದ ನಿಬಂಧನೆಗಳೇ ಬಹಳಮಟ್ಟಿಗೆ ಇದಕ್ಕೂ ಅಂಗೀಕರಿಸಲ್ಪಟ್ಟಿರುತಿವೆ. ಆದಾಗ್ಯೂ ಈ ಭಾಷೆಯು ಕಾಲದೆಸೆಯಂತೆ ಏರ್ಪಟ್ಟ ಉಪಯೋಗಿಸತಕ್ಕವರ ಇಷ್ಟಾನುಸಾರವಾಗಿ ವರ್ತಿಸುತ ಅನಿಯತವಾಗಿ ಒಂದೊಂದುದೇಶದಲ್ಲಿ ಒಂದೊಂದುರೂಪವ ತಾಳ್ದು ಉಜ್ಜೀವಿಸಿರುತಿದೆ. ಸಮಷ್ಟಿಯಲ್ಲಿ ಕರ್ಣಾಟಕ ದೇಶವೆಂದು ಕರೆಯಲ್ಪಡುವ ಈ ಮೈಸೂರು ರಾಜ್ಯದಲ್ಲಿಯೇ ಸದರೀ ಭಾಷೆಯು ಸರ್ವತ್ರ ಏಕರೂಪವಾಗಿರಲಿಲ್ಲವು. ಬೆಂಗಳೂರಲ್ಲಿ ವ್ಯವಹರಿಸಲ್ಪಡುತಲಿರುವ ಭಾಷೆಗೂ ಮೈಸೂರಲ್ಲಿ ಪ್ರಚಾರದೊಳಿರುವ ಭಾಷೆಗೂ ತಾರತಮ್ಯವೇರ್ಪಟ್ಟದೆ. ಮೈಸೂರಲ್ಲಿರುವವಕ್ಕೂ ಶಿವಮೊಗ್ಗ ನಗರ ಮೊದಲಾದ ಮಲೆನಾಡು ಸೀಮೆಯಲ್ಲಿರುವವಕ್ಕೂ ಬಹಳ ವ್ಯತ್ಯಾಸವುಂಟಾಗಿರುತಿವೆ. ಈ ಭೇದವು ಭಾಷಾ ಪ್ರಯುಕ್ತವಾದುದು ಮಾತ್ರವಲ್ಲದೆ ಕಡೆಗೆ ಬರೆಯಲ್ಪಡುವ ಅಕ್ಷರಗಳು ಸಹ ವಿಜಾತೀಯಗಳಾಗಿರುತಿವೆ. ಹೀಗೆಯೇ ಮೈಸೂರ ಸೀಮೆಯ ಕನ್ನಡಕ್ಕೂ, ಮುಂಬೈ ವಗೈರೆ ಪ್ರಾಂತಗಳ ಕನ್ನಡಕ್ಕೂ ಸ್ವಲ್ಪವೂ ಸಂಬಂಧವಿರುವದಿಲ್ಲವು. ಧಾರವಾಡ, ಬೆಲ್ಗಾಂ ವಗೈರೆ ಕನ್ನಡ ಡಿಸ್ಟ್ರಿಕ್ಟ್‌ಗಳ ಭಾಷೆಯು ವಿಚಿತ್ರವಾದುದಾಗಿರುತಿವೆ. ಹೀಗೆ ಒಂದು ಭಾಷೆಯು ನಾನಾರೂಪವಾಗಿ ಸಂಕರವಾಗಲಿಕ್ಕೆ ಕಾರಣವು ಪ್ರಸಿದ್ಧವಾಗಿಯೇ ಇದೆ. ಈ ಕರ್ಣಾಟಕ ದೇಶದ ಸರಹದ್ದುಗಳಲ್ಲಿ ಪ್ರಚಾರಗೊಂಡಿರುವ ಅರವ, ತೆಲುಗು, ತುಳು, ಕೊಂಕಣ, ಮಹಾರಾಷ್ಟ್ರ ಭಾಷೆಗಳು ಕನ್ನಡದೊಡನೆ ಕಲೆತಿರುವದರಿಂದ ಆಯಾ ದೇಶಗಳ ಸರಹದ್ದು ಪ್ರಾಂತಗಳಲ್ಲಿ ವ್ಯವಹರಿಸಲ್ಪಡುವ ಕನ್ನಡವು ಮಿಶ್ರವಾಗಿಯೂ ವಿಜಾತೀಯವಾಗಿಯೂ ಇರುತಿದೆ. ಇದಲ್ಲದೆ ಈ ರಾಜ್ಯವು ಬಹುದಿನಗಳ ವರಿವಿಗೂ ಮುಸಲ್ಮಾನರಿಂದ ಆಳಲ್ಪಟ್ಟದರಿಂದ ಅವರ ಅನೇಕಮಾತುಗಳು ಸೇರಿ ಈ ರಾಜ್ಯದ ಮಧ್ಯಭಾಗದಲ್ಲಿ ದಖನಿ ಮಿಶ್ರವಾದ ಕನ್ನಡವು ಪ್ರಚುರವಾಗಿರುತಿದೆ. ಈಗ ೬೦ ವರುಷಗಳ ಕಾಲವಾಗಿ ಇಂಗ್ಲಿಷಿನವರ ಪ್ರಾಬಲ್ಯವು ಹೆಚ್ಚಾದಮೇಲೆ ಕನ್ನಡಕ್ಕೆ ಮತ್ತಷ್ಟು ದುರ್ದಶೆ ಯುಂಟಾಗಲಿಕ್ಕೆ ಬೇಕಾದ ಅವಕಾಶವೇರ್ಪಟ್ಟಿತು. ಈಗ ಕ್ರಮೇಣ ತದ್ಭಾಷಾ ವ್ಯವಹಾರವೇ ಗೌರವತ್ವೇನ ಭಾವಿಸಲ್ಪಡುವಂತೆ ಪರಿಣಮಿಸಿದೆ. ಸದ್ಯಃ ವ್ಯವಸ್ಥೆ ಪಡಿಸಬೇಕೆಂದುದ್ದೇಶಿಸಲ್ಪಟ್ಟಿರುವ ಕರ್ಣಾಟ ಭಾಷೆಯ ತಾತ್ಕಾಲಿಕ ಲಕ್ಷಣವು ನೋಡಿದರೆ ಬಹಳ ಆಶ್ಚರ್ಯಪಡತಕ್ಕದ್ದಾಗಿರುತಿದೆ. ಇದಕ್ಕೆ ನಿದರ್ಶನವೇನೆಂದರೆ—ಮುಂಬೈ ಧಾರ್ವಾಡ, ಹುಬ್ಬಳ್ಳಿ, ಬೆಳಗಾಂ, ಬಿಜಾಪುರ, ಗದಗ, ಈ ಪ್ರದೇಶಗಳಲ್ಲಿ ೧೦-೧೨ ಕನ್ನಡ ಪತ್ರಿಕೆಗಳೂ, ಮೈಸೂರ್ ಬೆಂಗಳೂರುಗಳಲ್ಲಿ ೫ ಆರುನಾಲ್ಕು ಪತ್ರಿಕೆಗಳೂ ಪ್ರಕಟಿಸಲ್ಪಡುತಲಿರುವಣವು ಪ್ರಸಿದ್ಧ ವಿಷಯವಾಗಿಯೇ ಇರುತಿದೆ. ಇವಲ್ಲದೆ ಅನೇಕ ಮಾಸಪತ್ರಿಕೆಗಳು ಕೂಡ ಅಲ್ಲಿಯಲ್ಲಿ ಛಾಪಿಸಲ್ಪಡುತಿವೆ. ಇವುಗಳ ಪದಪ್ರಯೋಗಗಳೂ, ವಾಕ್ಯಶೈಲಿಗಳೂ ಶಬ್ದಾಲಂಕಾರಾದಿಗಳೂ, ಇತರಲಕ್ಷಣಗಳೂ ಪರಸ್ಪರ ವಿಜಾತೀಯಗಳಾಗಿಯೂ ವಿಚಿತ್ರಗಳಾಗಿಯೂ ಇರುತಿವೆ. ಮೇಲೆ ಕಂಡ ಪತ್ರಿಕಾ ಲೇಖಕರ ವಾಕ್ಯರಚನಾಕ್ರಮವು ಪರಸ್ಪರ ಅಸಮರ್ಪಕವಾಗಿ ಏರ್ಪಟ್ಟಿರುವುದಲ್ಲದೆ ಕಡೆಗೆ ಒಬ್ಬರ ವಾಕ್ಯಗಳನ್ನು ಯಥಾಸ್ಥಿರವಾಗಿ ಇನ್ನೊಬ್ಬರು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸುವದಕ್ಕೆ ಸಹ ಇಷ್ಟವಿಲ್ಲದವರಾಗಿರುತ್ತಾರೆ. ಕದಾಚಿತ್ ಒಂದು ವಿಷಯ ಗ್ರಹಣ ಮಾಡಬೇಕಾಗಿ ಬಂದಲ್ಲಿ ಅದರ ವಾಕ್ಯಶೈಲಿಯನ್ನು ಬದಲಾಯಿಸಿ ತಮ್ಮ ಇಷ್ಟಾನುಸಾರ ಪ್ರಕಾರಾಂತರವಾಗಿ ಬರೆದು ಪ್ರಕಟಿಸುತ್ತಾರೆ. ಇದಲ್ಲದೆ ಮೈಸೂರ್ ದೇಶೀಯರ ಕನ್ನಡವು ಧಾರ್ವಾಡ ವಗೈರೆ ಪ್ರದೇಶಗಳ ಜನರಿಗೆ ಕರ್ಣಕಠೋರವಾಗಿಯೂ ಪರಿಹಾಸ್ಯವಾಗಿಯೂ ತೋರುವದಿಲ್ಲವು. ಅದೇರೀತಿ ಧಾರ್ವಾಡ ದೇಶದ ಕನ್ನಡವನ್ನು ಇಲ್ಲಿನವರು ಉಚ್ಚರಿಸುವದಕ್ಕೆ ಸಹ ಬೇಸರಪಡುತ್ತಾರೆ. ಈ ಕರ್ಣಾಟಕ ದೇಶದೊಳಾದರೋ, ಮನುಷ್ಯನಿಗೆ ನಿತ್ಯ ಆವಶ್ಯಕವಾದುವೆಂಬ ಭಾವನೆಯನ್ನು ಜನರು ಬಹಳ ವಿರಳರಾಗಿದ್ದರು. ಈಚೆಗೆ ವಿದ್ಯಾಭ್ಯಾಸವು ಪ್ರಾಚ್ಯರೀತಿಯನ್ನೈದಿ ವಿದ್ಯಾವಂತರನೇಕರು ಅಮುಖ್ಯರಾಗಿ ಗರ್ಭ ಶೋಚ್ಯನಾರ್ಥ ಪ್ರವರ್ತಿಸಲಿಚ್ಛಿಸಿರುವಣವು ನಮಗೆ ಸಂತೋಷಪ್ರದವಾದಾಗ್ಯೂ ಹೊಸನಕ್ಕೆ ನಾವು ದಯಾನುಗ ಏರ್ಪಟ್ಟಿರುವ ಪುಸಕ್ತ ಕನ್ನಡವು ಅವರಿಂತು ಪರಿಷ್ಕರಿಸುವರೋ ತಿಳಿಯಲಿಲ್ಲವು. ಇದ್ಯಾರ ಕನ್ನಡ ಮಾತ್ರ ಇಂತಹ ಸ್ಥಿತಿಯಾಗಿರಲಿಲ್ಲವು. ಆಂಧ್ರ ದ್ರಾವಿಡ ಮಹಾರಾಷ್ಟ್ರ ಹಿಂದೂಸ್ಥಾನಿ ಭಾಷೆಯೂ ರೂಪ ಸಾಂಕರ್ಯವನ್ನೈದಿವೆ. ಬಹು ಪುರುಷಸಂಪರ್ಕವುಳ್ಳ ಹೆಂಗಸಿನ ಗರ್ಭದೊಳು ಜನಿಸಿದ ಶಿಶುವಿಗೆ ಜನಕನು ನಿಷ್ಕರಿಸುವದು ಹ್ಯಾಗೆ ಇತರರಿಗೆ ಅಸಾಧ್ಯವೋ ಅದರಂತೆ ಈಗ ವ್ಯವಹಾರದೊಳು ಬರುವ ಅನೇಕ ಅಪಭ್ರಂಶಪ್ರಯೋಗಗಳಿಗೂ ಅಪಶಬ್ದಗಳಿಗೂ ಆಧಾರಗಳು ಕಂಡುಬರುವದಿಲ್ಲವು. ಇವುಗಳಂ ಪ್ರಯೋಗಿಸತಕ್ಕವರ ಲಕ್ಷಣವೇಲಕ್ಷಣವು. ಇವುಗಳ ರೂಪಸಿದ್ಧಿಯು ಒಂದು ಶಾಸ್ತ್ರೋಕ್ತ ವಿಧಾಯುಕವಾದುದಾಗಿರುವದಿಲ್ಲವು. ಮುಸಲ್ಮಾನರ ಪ್ರಾಭಲ್ಯದಲ್ಲಿ ಮ್ಲೇಚ್ಛ ಶಬ್ದಗಳನೇಕ ಈ ದೇಶಭಾಷೆಯಲ್ಲಿ ಬೆರತು ಅಭಿನ್ನಗಳಾಗಿವೆ. ಈ ಕಾಲದಲ್ಲಿ ಇಂಗ್ಲಿಷ್ ಭಾಷಾ ಪ್ರಾಬಲ್ಯವು ಅಧಿಕವಾಗಿರುವದರಿಂದ ಅದರ ಸಂಪರ್ಕವಿಲ್ಲದೆ ಶುದ್ಧದೇಶ್ಯವಾಗಿ ಯೆರಡು ಮಾತುಗಳನ್ನಾದರೂ ಸೇರಿಸಿ ನುಡಿಯಲಿಕ್ಕೆ ಅನೇಕರಿಗೆ ಬರುವದಿಲ್ಲವು. ಬರವಣಿಗೆಯು ಶುದ್ಧ ಅನಿರೀಕ್ಷಿತ ವಿಷಯವು. ಸಾಧಾರಣ ಮಾತುಗಳಿಗೂ ಅನ್ಯಭಾಷೆಯನ್ನು ಬೆರಸಿಕೆಡಿಸುವ ವಾಡಿಕೆ ನಮ್ಮವರಿಗೆ ಅಧಿಕವಾಗಿದೆ. ಅನಾವಶ್ಯಕಗಳಾದ ಪರಂತು ವಾಡಿಕೆಯಾದ

ಹಿಂದ ಸಾಫ್, ಬಯಾರ್, ರೂಬರೂ, ಜರೂರ್, ಪ್ರಯಾಣ, ತಯಾರ್, ಹಾಜರ್, ಏತವಾದಿ ಅನುಪಯುಕ್ತಕಗಳಾದ ಶಬ್ದಗಳು ಪ್ರಯೋಗಿಸಲ್ಪಡುತಿವೆ. ಈಗ ಇವುಗಳ ಪ್ರಾಬಲ್ಯವು ಕಡಮೆಯಾಗಿ ಇಂಗ್ಲಿಷ್ ಶಬ್ದಗಳು ತತ್ಸ್ಥಾನಾಪನ್ನಗಳಾಗಿ ಏರ್ಪಟ್ಟಿವೆ ಏ ಎಂಬವನಿಗೂ ಬಿ, ಎಂಬವನಿಗೂ ನಡೆವ ದೇಶಭಾಷಾ ಸಂವಾದಸ್ವರೂಪವು ಸ್ವಲ್ಪ ನಿದರ್ಶನಾರ್ಥ ಇದರಡಿ ತಿಳಿಸುತ್ತೇವೆಂತೆಂದರೆ—ಏ. ಎಂಬವನು ಬಿ ಎಂಬವನು ಕೇಡಿ—ವಾಟಿನಾರ್ ಈ ವೆಕೇಷನ್ನಲ್ಲಿ ನೀವು ನಿಮ್ಮ ನೇಟವ್ ಪ್ಲೇಸಿಗೆ ಹೋಗಿ ರಿಲೇಟವ್‌ಗಳನ್ನು ನೋಡುತ್ತೀರಿ ಇಂಟೆಂಡ್ ಇಲ್ಲವೋ? ನನ್ನ ಪೇರೆಂಟುಗಳು ನನ್ನನ್ನು ಫಲಾನೆ ಪ್ಲೇಸ್‌ನಲ್ಲಿ ಫಲಾನೇ ಡೇಟಿನಲ್ಲಿ ವಿಸಿಟ್ ಮಾಡುವಂತೆ ಪ್ರಿವಿಯಸ್ ಆಗಿ ಪರ್ಮಿಷನ್ ಕೊಟ್ಟಿರುವದರಿಂದ ಪ್ರೆಸೆಂಟ್ಲಿ ಅಲ್ಲಿಗೆ ಹೋಗಿ ಫ್ರೆಂಡುಗಳ ಕಂಪೆನಿಯಲ್ಲಿ ಜಾಲಿಯಾಗಿ ನನ್ನ ಹಾಲಿಡೇಯನ್ನು ಸ್ಪೆಂಡ್ ಮಾಡಬೇಕೆಂದಿದ್ದೇನೆ ಎಂದಿವುಗಳಲ್ಲಿ ಎಷ್ಟು ಇಂಗ್ಲಿಷ್ ಶಬ್ದಗಳು ಇವೆಯೋ ಎಷ್ಟು ಕನ್ನಡ ಪದಗಳು ಇವೆಯೋ ಅದು ಸ್ಥಾನದೇ ಎಣಿಸಿ ನೋಡಿಕೊಳ್ಳಬಹುದು ಈ ಕಾಲದ ವಿದ್ಯಾರ್ಥಿಗಳು ಇಂಗ್ಲಿಷ್ ಕಲಿತ ವಿದ್ಯಾರ್ಥಿಗಳ ದೇಶಭಾಷಾ ಪ್ರಯೋಗಗಳೆಲ್ಲವೂ ಮೇಲೆ ಕಂಡಂತೆಯೇ ಇರುತ್ತಿವೆ. ಈ ರೀತಿಯಲ್ಲಾ ಪಾಶ್ಚಾತ್ಯ ಶಬ್ದಗಳು ಅತಿ ಮಿಶ್ರವಾಗಿರುತ್ತಾರೆ ಈಗ ಮೈಸೂರ್ ಸರ್ಕಾರದ ವಿದ್ಯಾಧ್ಯಕ್ಷರು ಇಲ ಯವರು ದೇಶಭಾಷಾ ಪ್ರಚಾರದ ವಿಷಯದ ದೃಷ್ಟಿಯುಳ್ಳವರಾಗಿ ಅನೇಕ ಈಗ ಅನೇಕ ಗ್ರಂಥಗಳ ಸಮುಚ್ಚಯ ಕರಿಯದೆ ಪರಂತು ನಾವು ಮೇಲೆ ತಿಳಿಸಿದ ಭಾಷಾ ಶೈಲಿ ಮಾತ್ರ ಅತ್ಯಂತ ಪ್ರತಿಕ್ರಿಯೆ ಗೋಚರವಾಗಿಲ್ಲವು ಇದ ನಿ ಗ್ರಂಥಕರ್ತರ ಸೇರತ, ತಮ್ಮ ಕೃತಿಯಲ್ಲಿ ... ಕಲ್ಪಿಸಲ್ಪಡಬೇಕೆಂಬ ಹೋಲಿಕೆಯುಳ್ಳವರಾಗಿ ಕೆಲವು ಸಿಪ ಟು ಘಟಿತ ನಾನಾರ್ಥ ಪದಗಳನ್ನು ಅರಿಸಿ ಅವುಗಳಿಗೆ ಕೆಲವು ಹಳೇ ... ವೃತ್ತ್ಯಯಗಳನ್ನು ಸೇರಿಸಿ, ತಾವು ಶ್ಲಾಘ್ಯಕವಿಗಳಾದೆವೆಂಬ ಭಾವನೆಯೊಡನೆ ಬರೆಯಲಾರಂಭಿಸಿರುವರೆ ಎಂತವರ ಸುಲೋಕ್ಷಾರ್ಥವಾಗಿ ಅವರು ಕಾಳಿದಾಸ ಭವಭೂತಿ ವಿದ್ಯಾರಣ್ಯ ಪ್ರಮುಖ ಮಹಾಕವಿಗಳ ಸನ್ಮಾನ ... ಮುಖ್ಯವಾಗಿ ಜಾನಪಿದವೆಂತೋ ನಿರ್ದಿಗ್ಗ್ಯ ಕನ್ನಡಭಾಷೆಯು ಪರಿಷ್ಕೃತವಾಗಿ ಪ್ರಸನ್ನಗೆ ಬರುವಂತೆ ಕೇಳಿಸಲಿಲ್ಲವು ಈಗ ಸಕ್ಕಕವಿಗಳು ಅಂದರೆ ಕಲ್ಪಿತ ಯುವರಾದರು ಹೋದವರನ್ಯ ಅವರ ಶೈಲಿಯು ಶಿಲಾಪ್ರಾಯವಾಗಿಯೂ, ವಾಕ್ಯವು ಸಂಯಾಸವಾಗಿಯೂ, ಅರ್ಥವು ಅಸ್ಪಷ್ಟವಾಗಿಯೂ, ಶಿಕ್ಷಣವು ಅನಲಕ್ಷಣವಾಗಿಯೂ, ಮಾರ್ಗವು ಕುಮಾರ್ಗವಾಗಿಯೂ, ಪ್ರಕೃತಿಯು ನವಪ್ರಾಯ ಸ್ವಾರಸ್ಯವಾಗಿಯೂ ಇರುತಿವೆ ಗದ್ಯ, ಅಂದರೆ ವಾಕ್ಯಗ್ರಂಥಗಳು ಈಚಿಗೆ ಅನೇಕ ಹೊಸ ಗ್ರಂಥ ಬರುವುಗಳು ಅವುಗಳು ಸಹ ಬಹ ಲಕ್ಷಣಗಳುಂಟಾದ ಲಕ್ಷಣವನ್ನು ವಿಲಕ್ಷಣವಾಗಿ ಏರ್ಪಡುತಲಿವೆ ಇಂತಾಸ್ಥಿತಿಯಲ್ಲಿರುವ ಭಾಷೆಯು ಪರಿಷ್ಕರಿಸಬೇಕೆಂಬವರು ಕಾಲವಶ ಪ್ರಯತ್ನೋದ್ದೇಶಗಳು ಸ್ವೈರಿಣಿಗೆ ಪಾತಿವ್ರತ್ಯವು ಕಲ್ಪಿಸಲ್ಪಡುತ್ತ ಸತ್ಕೃತವ ವೃತ್ತಿಯುತಿರುವದು

## Occasional Notes
## ನೈಮಿತ್ತಿಕ ವಿಷಯ ಸ್ಯಾರ

ಭಾವನಗರದ ಮಹಾರಾಜರವರಿಗೆ ಕೇಂಬ್ರಿಜ್ ಯೂನಿವರ್ಸಿಟಿ ಯವರು "ಡಾಕ್ಟರ್ ಆಫ್ ಲಾಸ್" ಎಂಬ ಪ್ರಶಸ್ತಿಯು ಕೊಟ್ಟಿರುವಂತೆ ಕೇಳುತ್ತೇವೆ.

ಉತ್ತರ ಹಿಂದೂಸ್ಥಾನದೊಳೊಂದರಲ್ಲಿ ಮಾತ್ರ ನಲವತ್ತುಮೂರು ನಾಟಕಶಾಲೆಗಳೂ, ನೂರ ಒಂಬತ್ತೊಂಬತ್ತು ಸಂಗೀತ ಶಾಲೆಗಳೂ ಇರುತಿವೆ. ಇವುಗಳು ಎರಡು ಲಕ್ಷದ ಐವತ್ತು ಸಾವಿರ ಪ್ರಜೆಗಳು ಸೇರುವಷ್ಟರ ಅವಕಾಶವುಳ್ಳ ವಾಗಿಯೂ, ೧೨ ಸಾವಿರ ಜನಕ್ಕೆ ಜೀವನಾಧಾರ ಮಾಡವಾಗಿಯೂ ಇರುತಿವೆ.

ಗತ ವಾರದಲ್ಲಿ ಕಾಲಗತಿಯನ್ನೈದಿದ, ಮದರಾಸ್ ಸರ್ವೆಯರ್ ಜನರಲ್ ಜೀಫ್ ವರಾದ ಸರ್ ಹಾರ್ನುರ್ ಯವರ ಮರಣದ ದೆಸೆಯಿಂದ ಈಗ ಖಾಲಿಯಾಗಿರುವ ಅವರ ಕೆಲಸಕ್ಕೆ ಇನ್ನೊಬ್ಬರು ನಿಯಮಿಸಲ್ಪಡುವ ತನಕ ಮೇಜರ್ ಜನರಲ್ ಸ್ಟುವರ್ಟ್ ಎಂಬವರು ಹಂಗಾಮಿಯಾಗಿ ಸದರೀ ಕೆಲಸವನ್ನು ನೋಡುತಲಿರತಕ್ಕದ್ದೆಂದು ಸ್ಟೇಟ್ ಸೆಕ್ರೆಟರಿಯವರು ಹುಕುಂ ಮಾಡಿರುವ ತೆ ತಿಳಿಯುಬರುತಿದೆ

ಗ್ರೇಟ್ ಬ್ರಿಟನ್ ರಾಜ್ಯದಲ್ಲಿರುವ ಯಂತ್ರದ ಕಾರ್ಖಾನೆಗಳಲ್ಲಿನ ಯಂತ್ರಗಳ ಶಕ್ತಿಯಂ ಗಣಿಸಿ ನೋಡುವಲ್ಲಿ, ನಾನೂರು ಕೋಟಿ ಪ್ರಜೆಗಳ ಶರೀರದಾರ್ಢ್ಯವುಳ್ಳವಾಗಿರಬಹುದೆಂತಲೂ, ಅಥವಾ ಈ ಭೂಮಂಡಲದಲ್ಲಿ ವಾಸವಾಗಿರುವಂತೆ ಉದ್ದೇಶಿಸಲ್ಪಟ್ಟಿರುವ ಪುರುಷ ಸಂಖ್ಯೆಯ ಎರಡರಷ್ಟು ಶಕ್ತಿಯುಳ್ಳವಾಗಿರಬಹುದೆಂತಲೂ ಸ್ಪಷ್ಟವಾಗುತದೆ ಈ ಯಂತ್ರಶಕ್ತಿಯೇ ಬ್ರಿಟಿಷ್ ಜನರ ಪ್ರಭುಶಕ್ತಿಗೆಲ್ಲಾ ಸಹಕಾರಿಯಾಗಿರುತಿವೆ

ಮದರಾಸ್ ಪ್ರೆಸಿಡೆನ್ಸಿ ಕಾಲೇಜ್ ಸುಸ್ಥಿರ ತಿಪೊಡಿಗರಾಗಿದ್ದ ಡಾಕ್ಟರ್ ಬರ್ನೆಸ್ ಯವರು ತಮ್ಮ ಕೆಲಸವು ಬಿಟ್ಟು ಸ್ವದೇಶಗಮನೋದ್ಯುಕ್ತರಾಗಲು, ಸದರೀಯವರ ಕೆಲಸವು ವಿಧವಾದುದ ವಿಷಯದಲ್ಲಿ ಪತ್ರಿಕಾ ಲೇಖಕರ ವಿಚಾರಕ್ಕೆ ಸಂಪ್ರಾಪ್ತವಾಗಿ ಪ್ರಯೋಗಿತ್ತಿಷ್ಟೆ. ಕಡೆಗೆ ನೇಟವ್‌ಗಳ ಅಭಿಪ್ರಾಯಾನುಗುಣವಾಗಿ, ಮಹಾರಾಜಶ್ರೀ ಎಂ ಶೇಷಗಿರಿಶಾಸ್ತ್ರಿ. ಎಂ. ಎ ಯವರಿಗೆ ಸದರೀ ಕೆಲಸ ಕೊಟ್ಟಿರುವರು ಅವರು ಈ ತಿಂಗಳ ೧೧ ನೇ ತಾರೀಖಿನ್ನು ಅದು ಕ್ಕೆ ... ಕೇಳುವದಕ್ಕೆ ಸಂತೋಷಿಸುತ್ತೇವೆ

ತಿರುವಾಂಕೂರ್ ಸಂಸ್ಥಾನದ ಪಬ್ಲಿಕ್ ಆಫೀಸ್ ಕಟ್ಟಡದ ಮುಂಭಾಗದಲ್ಲಿ, ಹಿಂದೆ ಸದರೀ ಸಂಸ್ಥಾನದಲ್ಲಿ ದಿವಾನ್ ಗಿರಿಮಾಡಿ ಪ್ರಸಿದ್ಧರೆನಿಸಿದ ರಾಜಾ ಸರ್ ಟಿ ಮಾಧವರಾಯರವರ ಪ್ರತಿಕೃತಿಯೊಂದು ಏತದರ್ಥ ನಿರ್ಮಿಸಲ್ಪಟ್ಟ ಒಂದು ಉನ್ನತಾಸನದಲ್ಲಿ ಸ್ಥಾಪಿಸಲ್ಪಟ್ಟಿರುತಿವೆ ಈಗ ಪ್ರತಿಷ್ಠಿಸಲ್ಪಟ್ಟಿರುವ ಸದರೀ ಪ್ರತಿಕೃತಿಯು, ಈ ತಿಂಗಳ ೩೦ ನೇ ತಾರೀಖಿನ ದಿನ ವಿಶೇಷ ವಿನೋದದ ಪ್ರಜೆಗಳ ವೀಕ್ಷಣಾರ್ಥವಾಗಿ ಮಾಡಲ್ಪಡುವದೆಂದು ತಿಳಿಯಬರುತಿದೆ ಸರ್ ಟಿ ಮಾಧವರಾಯರವರು ಸದರೀ ನೇಟವ್ ಅರಸರ ವಿಷಯದಲ್ಲಿ ಮಾಡಿದ ಉಪಕೃತಿಗೆ ನಿದರ್ಶನವಾಗಿ ಅವರು ತಮ್ಮ ಕೃತಜ್ಞತೆಯನ್ನೀಗ ಈ ನಿದವಾಗಿ ತೋರಿಸಿದ್ದಾರೆ.

ಬಹು ಭಾರ್ಯಾ ಪರಿಗ್ರಹವು ರಾಜಲಕ್ಷಣವೆಂಬದಾಗಿ ಭಾವಿಸಲ್ಪಟ್ಟಿದ್ದರೆ ಅವರ ಸಂಖ್ಯೆಯು ಲಭ್ಯವಿಲ್ಲವಾದರೆ ಅದು ದುಃಖಪ್ರದವಾಗದೆ ಹೋಗಲಾರದು. ಆ ಕಿಲ್ ಸುಲ್ತಾನರವರಿಗೆ ಮುನ್ನೂರು ಜನರೂ, ಘರ್ಣಿಯಾ ರಾಜ್ಯದ ಅರಸರವರಾದ ಷಾ ಯವರಿಗೆ ನಾನೂರು ಮಂದಿಯೂ, ಸಯಾಂ ಅರಸರಿಗೆ ಆರನೂರು ಮಂದಿಯೂ, ಅಷಾಂಟ ಅರಸರಿಗೆ ಮೂರು ಸಾವಿರ ಮಂದಿಯೂ ಭಾರ್ಯೆಯರಿದ್ದರಲಿರುವಂತೆ ತಿಳಿಯಬರುತಿದೆ ಇವರೆಲ್ಲರು, ರಾಜ್ಯಾಂಗವಾದ ಕಾಲ್ನಡಿಗಳಂತಿರಬೇಕೆಂಬ ಭಾವನೆಯೊಡನೆ ಪರಿಗ್ರಹಿಸಲ್ಪಡವರಾಗಿರಬೇಕೆಂದು ತೋರುತಿದೆ ಯೇ ಹೊತರ್ ಭರ್ತೃಭಾರ್ಯಾ ಸುಖಾಪೇಕ್ಷೆಯೊಡನೆ ಅಂಗೀಕರಿಸಲ್ಪಟ್ಟವರಂತೆ ಕಾಣಿಸಲಿಲ್ಲವು ಕಡೇ ಉದ್ದೇಶವೇ ಇರುವ ಪಕ್ಷಕ್ಕೆ ಎವರನ್ನು ಸಾಮಾನ್ಯ ಮನುಷ್ಯರಂತೆ ಭಾವಿಸಕೂಡದು

ಮಧುರೆಯಲ್ಲಿ ಅಸಿಸ್ಟೆಂಟ್ ಕಲೆಕ್ಟರಾಗಿದ್ದ ಮೆ|| ಪಿ. ರಾಮಚಂದ್ರ ರಾಯರೆಂಬವರು ಒಂದು ದೇವಸ್ಥಾನದ ಹೆಚ್ಚಿನ ಒಂದು ಛತ್ರಿಯಂ ತೆಗೆದುಕೊಂಡರೆಂಬದಾಗಿ ಅವರಮೇಲೆ ಒಂದು ಮೊಕದ್ದಮೆ ತರಲ್ಪಟ್ಟು ಅದರ ವಿಚಾರಣೆಯ ಬಗ್ಗೆ ಒಂದು ಕಮಿಟಿ ಯೇರ್ಪಾಡಾಗಿ ಅವರು ತಮ್ಮ ರಿಪೋರ್ಟನ್ನು ಗವರ್ನಮೆಂಟಿಗೆ ಕಳುಹಿಸಿದ್ದರಷ್ಟೆ ಅದರಮೇಲೆ ಸದರೀ ರಾಮಚಂದ್ರರಾಯರನ್ನು ಕೆಲಸದಿಂದ ನಿವೃತ್ತಿಮಾಡಿ. ಪರಂತು ಅವರಿಗೆ ಮಾಹೆಯಾನಾ ೧೪೦ ರೂಪಾಯಿಗಳ ಪೆನ್ಶನ್ ಕೊಡಬೇಕೆಂದು ಮದರಾಸ್ ಗವರ್ನಮೆಂಟನವರು ಮಾಡಿದ ಶಿಫಾರಸ್ಸನ್ನನುಸರಿಸಿ ಇಂಡ್ಯ ಗವರ್ನಮೆಂಟನವರು ಅವರನ್ನು ತಗ್ಗೈರಿಮಾಡಿ ರುಸುಂ ವಿಷಯದಲ್ಲಿ ಸ್ಟೇಟ್ ಸೆಕ್ರೆಟರಿಯವರಿಗೆ ಬರೆದಿರುವಂತೆ ಮದರಾಸ್ ಹಿಂದೂ ಪತ್ರಿಕೆಯ ಮೂಲಕ ತಿಳಿಯಬರುತಿದೆ. ಮೈಸೂರ್ ರಾಜ್ಯದಲ್ಲಿ ಇಂತಾದ್ದೇನೂ ದೊಡ್ಡ ವಿಷಯವಲ್ಲವು

ಈಗ ಚಿಕಾಗೋ ಪಟ್ಟಣದೊಳು ನಡೆಯುವದು ಪ್ರಪಂಚದ ವಿವಿಧವಸ್ತು ಪ್ರದರ್ಶಕ ಶಾಲೆಯಲ್ಲಿ ರಚಿಸಲ್ಪಟ್ಟಿರುವ ಅನೇಕ ಅದ್ಭುತ ವಿಷಯಗಳಲ್ಲಿ ಬೃಹದಾಕೃತಿಯುಳ್ಳ ಒಂದು ನರ್ತನ ಶಾಲೆಯೂ, ಗಜಾಕೃತಿಯುಳ್ಳ ಒಂದು ಭೋಜನಶಾಲೆಯೂ ವಿಶೇಷತಃ ಪ್ರಶಂಸನೀಯಗಳಾಗಿರುತಿವೆ ಗಜಾಕೃತಿಯುಳ್ಳ ಸದರೀ ಗೃಹವು, ಹೆಜ್ಜೆಯ ಮೊದಲು, ಬೆನ್ನಿನವರಿಗೆ ೧೫೫ ಅಡಿಗಳ ಎತ್ತರವೂ ಅಲ್ಲಿಂದ ಹೌದಾವಿನ ಭಾವಣೆಯ ಪರಿಯಗೆ ೬೦೦ ಅಡಿಗಳ ಎತ್ತರವೂ ಇರುತಿವೆ ಅದರಲ್ಲಿ ಕಲ್ಪಿಸಲ್ಪಟ್ಟಿರುವ ಯಂತ್ರ ಕೌಶಲ್ಯದಿಂ, ಮಹತ್ತರವಾದ ಅದರ ಸೊಂಡಿಲನ್ನೂ, ನಾಲಿಗೆಯನ್ನೂ, ಕಿವಿಗಳನ್ನೂ ಆಡಿಸುವದಕ್ಕೂ, ಕಣ್ಣು ಗುಡ್ಡೆಗಳು ಚಲಿಸುತಲಿರುವದಕ್ಕೂ, ಅದುಭುತವಾಗಿ ಘರ್ಜಿಸುವದಕ್ಕೂ ಅನುಕೂಲವಾಗುವಂತೇರ್ಪಡಿಸಲ್ಪಟ್ಟಿದೆ. ಅದರಲ್ಲಿ ಎರಡು ಮಹಡಿಗಳು ಇವೆಯಲ್ಲದೆ ಇದಕ್ಕಾಗಿ ಒಟ್ಟು ೫ ಲಕ್ಷ ರೂಪಾಯಿಗಳು ಖರ್ಚಾಗಿರುತಿವೆ

## ನೋಟಿಸ್.

ಅವಧಿಯ ತಮ್ಮ ಚಂದಾದಾರರಿಗೆ ನಾವು ಪ್ರಕಟಪಡಿಸುವದೇನಂದರೆ,—

ಈ ಕ.ಮದಲ್ಲಿ ನಿಶ್ಚಯ ದಿನಮೊದಲು ನಾಲ್ಕು ತಿಂಗಳು ಕಳೆದರೂ ಇನ್ನು ಅವರವರು ಚಂದಾ ಮೊಬಲಗನ್ನು ಕಳುಹಿಸದ ಹೋದರು ಈ ಪತ್ರಿಕೆಯ ಆದ್ಯಂತ ನಿಯಮಿತವಾಗಿ ನಡೆಯಲಾರದು, ಆದುದರಿಂದ ದಯವಿಟ್ಟು ಜಾಗ್ರತೆಯಾಗಿ ಕಳುಹಿಸಬೇಕೆಂದು ಕೋರುತ್ತೇವೆ ಹಾಗೆ ಕಳುಹಿಸದವರಿಗೆ ಈ ಪತ್ರಿಕೆ ಕಳುಹಿಸಲ್ಪಡಲಾರದು

೧—೫—೯೩  ಪ್ರೊಪ್ರೈಟರ್

## LOCAL AND PROVINCIAL NEWS
## ಒಳದೇಶ ಮತ್ತು ತಾಲ್ಲೂಕು ಜಾತಿ ವೃತ್ತಾಂತಗಳು

ಶ್ರೀಮನ್ಮಹಾರಾಜರವರು ಈ ತಿಂಗಳ ೨೩ ನೇ ತಾರೀಖಿನಲ್ಲಿ ಉದಕಮಂಡಲದಿಂದ ರಾಜಧಾನಿಗೆ ವಾಪಸ್ ದಯಮಾಡುವರೆಂದು ಒಳದೇಶದ ಪತ್ರಿಕೆಯೊಂದು ಹೇಳುತಿದೆ.

ಮಹಾರಾಜ್ಞೀ ಇಂಡ್ಯಾ ಚಕ್ರವರ್ತಿನೀ ಯವರ ವರ್ಷವರ್ಧಂತಿ ಮಹೋತ್ಸವವು ಇಂಡ್ಯಾ ದೇಶದಲ್ಲಿ ಮೇ ತಿಂಗಳ ೨೪ ನೇ ತಾರೀಖಿನಲ್ಲಿ ಆಚರಿಸಲ್ಪಡುವದೆಂದು ಪ್ರಕಟಿಸಲ್ಪಟ್ಟಿರುತಿದೆ.

ಈ ಸಂಸ್ಥಾನದ ದಿವಾನರಾದ ಸರ್. ಕೆ ಶೇಷಾದ್ರಿ ಅಯ್ಯರವರು ಕಳೆದ ಮಂಗಳವಾರದ ದಿನ ನೀಲಗಿರಿಗೆ ಪ್ರಯಾಣಮಾಡಿದರು. ಶ್ರೀಮನ್ ಮಹಾರಾಜರವರ ಸವಾರಿಯು ಅಲ್ಲಿಂದ ದಯಮಾಡುವ ವರೆಗೆ ದಿವಾನರವರೂ ಅಲ್ಲೇ ಇದ್ದು ಅವರ ಸಂಗಡ ವಾಪಸ್ ಬರುವರೆಂದು ಕೇಳುತ್ತೇವೆ

ನರಸಿಂಹಾಚಾರ್ಯರೆಂಬ ಯವ್ವನಸ್ಥರು ಬೊಂಬಾಯಿಗೆ ಹೋಗಿ ಅಲ್ಲಿ ಮೃಗಾದಿಗಳ ಚಿಕಿತ್ಸೆಯನ್ನುಮಾಡುವ ವಿದ್ಯೆಯಂ ಕಲಿತು ಅಲ್ಲಿ ಪ್ಯಾಸ್ ಮಾಡಿ ಬಂದಿರುತ್ತಾರೆ. ಇವರಿಗೆ ಸ್ವಲ್ಪದಿವಸಗಳಲ್ಲೇ ಶ್ರೀಮನ್ ಮಹಾರಾಜರವರ ಪಾಸ್ ಬಂಗಲೆಯಲ್ಲಿ ಕೆಲಸ ನೇಮಕ ಮಾಡಿಸೆಂದು ನಿರೀಕ್ಷಿಸುತ್ತೇವೆ.

ಈಪೂರು ಕೋಟೆಯ ಬಾಗಿಲ ಬಳಿ ಇರುವ ಕಲ್ಯಾಣಿಯಲ್ಲಿ ಕಳೆದ ಮಂಗಳವಾರದ ದಿನ ಕೋಟೆ ಜಾತಿಯ ಮದಾರ್ ೧೨ ವರ್ಷಗಳ ವಯಸ್ಸುಳ್ಳ ಹುಡುಗನೊಬ್ಬನು ನೀರಿಗೋಸ್ಕರ ಹೋಗಿ ನೀರು ತುಂಬುತ್ತಿರುವಲ್ಲಿ ಕಾಲುಜಾರಿ ಬಿದ್ದು ಮುಳುಗಿಹೋದನು. ಶವವನ್ನು ಹೊರಪಡಿಸುವುದು ಕೇವಲ ಪ್ರಯಾಸ ಸಾಧ್ಯವಾಯಿತು. ತರುವಾಯ ಸಿಕ್ಕಿ ದಫ್ನ ಆಯಿತು

ಶ್ರೀಮನ್ ಮಹಾರಾಜರವರ ಹೆಸರಿನಲ್ಲಿ ಈ ಪೂರೊಳು ಸ್ಥಾಪಿಸಲ್ಪಟ್ಟಿರುವ ಅರಳೆ ಯಂತ್ರದ ಕಾರ್ಖಾನೆ ಯೇಜಂಡಿ ಅಧಿಕಾರವನ್ನು ಮೆ|| ಸ್ಕಾಟ್ ಯವರಿಂದ ಮದರಾಸ್ ಹೈಕೋರ್ಟ್ ಅಟರ್ನಿಯಾದ ಮೆ|| ಎಸ್. ಬಿಳಿಗಿರಿ ಅಯ್ಯಂಗಾರ್ಯರು ವಹಿಸುವರೆಂದು ಒಳದೇಶದ ಈವನಿಂಗ್ ಮೆಯಿಲ್ ಪತ್ರಿಕೆ ತಿಳಿಸುತಿದೆ. ಪರಂತು ಈ ಬದಲಾವಣೆಗೆ ಉಂಟಾದ ಕಾರಣ ಮಾತ್ರ ಘಲಾನೆಯದೆಂದು ಹೊರಗಾಗಲಿಲ್ಲವು.

ಮೈಸೂರು ಸರ್ಕಾರ್ ನೌಕರಿಯಲ್ಲಿರುವಂತವರು ತಾವು ನೌಕರಿಯಲ್ಲಿ ಪ್ರವೇಶಿಸಿದ ಕಾಲದಲ್ಲಿ ಅಂದರೆ ಮೊದಲನೇ ತಿಂಗಳ ಬರಾವರ್ದಿನೊಡನೆ ಹಾಜರ್ಮಾಡಿರುವ ಮೆಡಿಕಲ್ ಸರ್ಟಫಿಕೇಟ್ ಸಾಕಾಗಿರುವದರಿಂದ ಅಂತವರ ಮೈಸೂರು ದವು ಲೋಕಲ್ ಸರ್ವಿಸ್ ಪರೀಕ್ಷೆಗೆ ಹೋಗುವರಾದರೆ ಆ ಬಗ್ಗೆ ಮರಳಿ ಸರ್ಟಫಿಕೇಟ್ ಹಾಜರ್ಮಾಡಬೇಕಾದ್ದಿಲ್ಲವೆಂದು ಈಚೆಗೆ ಮೈಸೂರು ಗವರ್ನಮೆಂಟನವರು ನಿರ್ಣಯಿಸಿರುತ್ತಾರೆ.

ಬೊಂಬಾಯಿ ಗವರ್ನರಾದ ಲಾರ್ಡ್ ಹ್ಯಾರಿಸ್‌ರವರು ಸಪತ್ನೀಕರಾಗಿಯೂ ಪರಿವಾರ ಸಮೇತರಾಗಿಯೂ ಮಹಾಬಲೇಶ್ವರದಿಂದ ಬೇಸಿಗೆಯ ಹವಾ ಉಷ್ಣತ್ವವಾಗಿ ನೀಲಗಿರಿಗೆ ದಯಮಾಡುತ್ತಾರಷ್ಟೆ. ನೀಲಗಿರಿಯಿಂದ ಬೊಂಬಾಯಿಗೆ ವಾಪಸು ದಯಮಾಡುವ ಕಾಲದಲ್ಲಿ ಸದರ್ನ್ ಮರಾಠಾ ರೈಲ್ವೇ ಮಾರ್ಗವಾಗಿ ಮೈಸೂರಿನ ಮೇಲೆ ದಯಮಾಡುವದಾಗಿ ಕೆಲವು ಪತ್ರಿಕೆಗಳು ತಿಳಿಸಿರುತಿವೆ ಈ ವರ್ತಮಾನವು ಸಂಬವದಕ್ಕೆ ಎಷ್ಟು ಮಟ್ಟಿಗೆ ಅರ್ಹವಾದದ್ದೋ ನಮಗೆ ಸಂದೇಹವಾಗಿದೆ.—ವೈ. ಪ.

ನಿನ್ನೆಯ ದಿನ ಪ್ರಾತಃಕಾಲ ಮೂವರು ಘಂಟೆಗೆ ಮದರಾಸ್ ರೈಲ್ವೆ ಪೈಕಿ ಕೋಲಾರ ಸ್ಟೇಷನಿಗೂ ಮಾಲೂರು ಸ್ಟೇಷನಿಗೂ ಮಧ್ಯೆ ರೈಲ್ವೆ ಮಾರ್ಗದಲ್ಲಿ ಒಂದು ಹವಕ್ಕೆ ಆದಮೆ ಇಲ್ಲದೆ ಮಳೆ ಬಿತ್ತು ಈ ವರ್ಷವು ಆ ಪ್ರಾಂತದಲ್ಲಿ ಇನ್ನು ಅನೇಕ ಸ್ಥಳಗಳೊಳು ಬಿದ್ದಿರಬಹುದೆಂದು ಕಾಣುತಿದೆ ಈ ಪೂರಲ್ಲಿ ಮಾತ್ರ ಇದುವರಿವಿಗೆ ಕೆರೆ ಕುಂಟೆಗಳಿಗೆ ಸಮೃದ್ಧಿಯಾಗಿ ನೀರು ಬರುವಷ್ಟು ಬಲವಾಗಿ ಮಳೆ ಬೀಳಲಿಲ್ಲವು ಪರಂತು ವರ್ಷಸೂಚನೆಗಳಲ್ಲಿ ಕೊರತೆಯಿಲ್ಲವು. ಜನಾರೋಗ್ಯವು ಕೇವಲ ಸಾಮಾನ್ಯವಾಗಿದೆ ಆಹಾರ ಪದಾರ್ಥಗಳ ಧಾರಣೆಗಳು ಪ್ರಾಯಶಃ ಒಂದೇ ವಿಧವಾಗಿಯೇ ಇವೆ.

ಹೋದವಾರದಲ್ಲಿ ಒಂದುದಿವಸ ರಾತ್ರಿ ಇಲ್ಲಿನ ಮೋತೀಖಾನೆಯಲ್ಲಿ ಹಣ್ಣು ಕಾಯಿಗಳಿರುವ ಕೊಠಡಿಯಲ್ಲಿ ಅಲ್ಲಿನ ಒಬ್ಬ ಜವಾನನು ಬೀಗ ಮುದ್ರೆ ಯಾದ ನಂತರ ದಿನಸೀ ಕೃಷ್ಣಪ್ಪನವರ ಪೆಟ್ಟಿಗೆಯಿಂದ ೬೦—೭೦ ರೂಪಾಯಿಗಳನ್ನು ತೆಗೆದುಕೊಂಡು ಒಂದು ಪಾತ್ರೆಯಲ್ಲಿ ಸುಮಾರು ಅರ್ಧ ಮಣ ತುಪ್ಪವನ್ನು ಬೆಗ್ಗಿಸಿ ಕೊಂಡು ಬೆಳಗಿನವರಿಗೂ ಒಳಗೇ ಇದ್ದು ಬೆಳಗಾಗುತ್ತಲೇ ಕೆಟ್ಲೀಪ್ರಕಾರ ಕಂಟ್ರಾಕ್ಟುದಾರನು ಬಂದು ಬೀಗ ತೆಗೆಯುವಲ್ಲಿ ಹ್ಯಾಗೋ ಹೊರಕ್ಕೆ ಬಂದನಂತೆ ಅನಂತರ ತುಪ್ಪ ಮತ್ತು ರೂಪಾಯಿಗಳನ್ನು ಕಳಕೊಂಡವರು ಫಿರ್ಯಾದೆ ಮಾಡಿದಾಗ ಅವನು ತಾನು ತೆಗೆದುಕೊಂಡದ್ದು ಉಂಟೆಂದು ಒಪ್ಪಿಕೊಂಡಂತೆಯೂ ಅನಂತರ ಈ ಸಮಾಚಾರವು ಅರಮನೇ ಆಫೀಸರವರ ತಿಳುವಳಿಕೆಗೆ ತರಲ್ಪಟ್ಟಾಗ ಅವರು ಅವನನ್ನು ಡಿಸ್‌ಮಿಸ್ ಮಾಡಬೇಕೆಂದು ಹುಕ್ಕುಂ ಮಾಡಿದಂತೆಯೂ ಕೇಳುತ್ತೇವೆ.—ವೈ. ಪ.

ಕರಾಬ ಜಮೀನ.—ಕಂದಾಯ ನಿಷ್ಕರ್ಷೆಯಾಗದೆ ಇರುವ ಕರಾಬ ಜಮೀನುಗಳನ್ನು ಬಾಗಾಯತ್ ಸಾಗುವಳಿಬಗ್ಗೆ ಕೊಡಬಹುದೆ ಎಂಬ ವಿಷಯದಲ್ಲಿ 'ಗವರ್ನಮೆಂಟಿನವರು ಇದರಡಿ ಕಂಡ ಹುಕುಂ ಕೊಟ್ಟಿರುತ್ತಾರೆ.— (೧) ಕುಷ್ಕಿ ಕಂದಾಯ ಬಿದ್ದಿರುವ ಯಾವ ಭೂಮಿಯನ್ನು ಬಾಗಾಯತ್ ಅಥವಾ ತರೀ ಸಾಗುವಳಿಗಾಗಿ ಕುಷ್ಕೀ ದರದ ಮೇಲಿಗೆ ಕೊಡದೆ ಇರತಕ್ಕದು. ಸರ್ಕಾರೀ ನೀರನ್ನು ಉಪಯೋಗಪಡಿಸಿಕೊಂಡದ್ದಾದರೆ ನೀರಿನ ಕಂದಾಯವು ಸೇರಿಸಲ್ಪಡತಕ್ಕದ್ದು. (೨) ಕಂದಾಯ ನಿಷ್ಕರ್ಷೆಯಾಗದಿರುವ ಖಾಲಿ ಭೂಮಿಯನ್ನು ಕುಷ್ಕಿ ಸಾಗುವಳಿಗಾಗಿ ಕೊಡದೆ ಇರತಕ್ಕದು: (೩) ರೆವಿನ್ಯೂ ರೂಲ್ಸಿ ೧ನೇ ಅಪ್ಪೆಂಡಿಕ್ಸಿನಲ್ಲಿರುವ ಪ್ರಕಾರ ಬಾಗಾಯತು ಸಾಗುವಳಿಗೆ ಬೇಕಾದ ಅನುಕೂಲ್ಯಗಳು ಇರುವದಾದರೆ, ಕಂದಾಯ ನಿಷ್ಕರ್ಷೆಯಾಗದಿರುವ ಖಾಲೀ ಭೂಮಿಗಳನ್ನು ವ್ಯವಸಾಯಕ್ಕಾಗಿ ಡೆಪ್ಯುಟಿ ಕಮಿಷನರಿಗಳೇ ಕೊಡಬಹುದು.

---

ಹುಜೂರ್ ಟ್ರಜರಿ.—ಹುಜೂರು ಟ್ರಜರಿ ಮತ್ತು ಸ್ಟಾಂಪ್ ಸಿಬ್ಬಂದಿಗಳನ್ನು ರಿವೈಜ್ ಮಾಡಿ, ಇದರಡಿ ತಿಳಿಸಿರುವಂತೆ ತಲಬ್‌ಗಳು ನಿಷ್ಕರ್ಷೆಯಾಗಿವೆ.—ಟ್ರಜರರಿಗೆ ೧೦೦ ರಿಂದ ೧೫೦ ರೂಪಾಯಿಗಳು. ಹೆಡ್ಡು ಅಕೌಂಟೆಂಟಿಗೆ ೧೦೦ ರಿಂದ ೧೨೫ರ ವರೆಗೆ ಅಸಿಸ್ಟೆಂಟ್ ಅಕೌಂಟೆಂಟರಿಗೆ ೪೦ ರಿಂದ ೫೦. ಕ್ಲಾರ್ಕ್ ಮತ್ತು ಅಕೌಂಟೆಂಟ್ ೨೧, ೧, ೨, ೩, ೪ನೆ ಅಕೌಂಟೆಂಟರಿಗೆ ಕ್ರಮವಾಗಿ ೩೦, ೨೦, ೧೫, ೧೫, ರೆಕಾರ್ಡ್‌ಕೀಪರ್ ೨೦, ೮ ಆಳುಗಳು ೨೦, ಕ್ಯಾಷ್‌ಕೀಪರ್ ೩೦ರಿಂದ ೩೫, ಪಾಳ್ಯಗಾರ್ ಗುಮಾಸ್ತೆ ೧೦ರಿಂದ ೧೫, ಹೆಡ್ಡುಶರಾಫ್ ೩೦ರಿಂದ ೩೫ ಇನ್ನಿಬ್ಬರು ಸರಾಫರು ೪೦. ಮುಚ್ಚಿ ಮತ್ತು ಕನ್ನಡ ರೆಕಾರ್ಡ್‌ಕೀಪರ್ ೧೦ರಿಂದ ೧೫, ಗೊಲ್ಲರು, ಮುಚ್ಚಿ ದಫೇದಾರ್ ಮೊದಲಾದವರು ೧೪ದವರು, ೧೦೮ರಿಂದ ೧೨೦ ವರೆಗೆ. ಸ್ಟಾಂಪ್ ಇಲಾಖೆಯಲ್ಲಿ ಸೂಪರ್‌ವೈಜರ್ ೫೦ರಿಂದ ೬೦, ಅಕೌಂಟೆಂಟ್, ಗುಮಾಸ್ತೆರು, ಸ್ಟೋರ್‌ಮ್ಯಾನ್, ಮುಚ್ಚಿ ಮೊದಲಾದ ೧೦ ಜನರು ೧೦೫ ರಿಂದ ೧೦೯ ರವರೆಗೆ. ಈ ಸಿಬ್ಬಂದಿಯನ್ನು ೩೮೩ ರೂಪಾಯಿಗಳಿಂದ ೯೩೮ ವರೆಗೆ ಜಾಸ್ತೀ ಮಾಡಲ್ಪಟ್ಟಿದೆ.

---

## THE MYSORE GAZETTE.
## ಮೈಸೂರು ಗಜೆಟ.

ಶ್ರೀಮನ್ಮಹಾರಾಜಾರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರನಾಮೆಗಳು.

---

ನಂ॥ ೧೮೦೫೨—ಜಿ. ಎ. ೨೪—೯೨ ತಾ॥ ೨ನೇ ಮೇ ೧೮೯೩ — ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೩೦ ನೇ ಆರ್ಟಿಕಲ್ ಅನುಸರಿಸಿ ಕೋಲಾರ್ ಗೋಲ್ಡ್ ಫೀಲ್ಡ್‌ಗಳ ಸ್ಪೆಷಲ್ ಮ್ಯಾಜಿಸ್ಟ್ರೇಟರಾದ ಮ॥ ಜೆ ಹ್ಯಾಂ ರೈಟ್ ರವರಿಗೆ ೧೮೯೩ ನೇ ಇಸವಿ ಮೇ ಗುರ್ರೀ ತಾರೀಖ್ ಮೊದಲು, ಅಥವಾ ಆ ತರುವಾಯ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು ೧೦ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಿದೆ

ನಂ॥ ೧೮೨೫೪—ಜಿ. ೪೪೫೦ ತಾ॥ ೩ ನೇ ಮೇ ೧೮೯೩.—ಚಾಮರಾಜ ನಗರ ತಾಲ್ಲೂಕ್ ಅಮಲ್‌ದಾರ್ ಟಿ. ಎಸ್. ನಿಜಾಮುದ್ದೀನ್ ಅಲ್ಲೀ ಖಾನರವರಿಗೆ, ೧೮೯೩ ನೇ ಇಸವಿ ಏಪ್ರಿಲ್ ೧೦ ನೇ ಮಾರ್ಚ್, ೧೬೭೦೫—ಜಿ ೪೧೪೧ ನೇ ನಂಬರುಳ್ಳ ಇಸ್ತಿಹಾರ್‌ನಾಮೆಯ ಮೂಲಕ ಕೊಡಲ್ಪಟ್ಟದ್ದು ೧೫ ದಿನಗಳ ಪ್ರಿವಿಲೀಜ್ ರಜಾ ಪೈಕಿ ೧೪ ದಿನಗಳನ್ನು ಮಾತ್ರ ಅವರು ಉಪಯೋಗಿಸಿಕೊಂಡು, ೧೮೯೩ ನೇ ಇಸವಿ ಏಪ್ರಿಲ್ ೨೧ ನೇ ತಾರೀಖಿನ ಪೂರ್ವಾಹ್ನದಲ್ಲಿ ತಮ್ಮ ಕೆಲಸಕ್ಕೆ ವಾಪಸ್ ಬಂದರಾಗಿ ಅವರಿಂದ ಉಪಯೋಗಿಸಿಕೊಳ್ಳಲ್ಪಡದಿರುವ ಒಂದು ದಿನವು ಇದರಿಂದ ರದ್ದು ಮಾಡಲ್ಪಟ್ಟಿರುತ್ತಿದೆ.

ನಂ॥ ೧೮೩೦೫ ಜಿ. ಎ. ೬೪—೯೨.— ತಾ॥ ೪ ನೇ ಮೇ ೧೮೯೩ —ಬೆಂಗಳೂರು ಮ್ಯುನಿಸಿಪಲ್ ರೆಗ್ಯುಲೇಷನಿನ ೫ ನೇ ಸೆಕ್ಷನ್ ಅನುಸರಿಸಿ ಬೆಂಗಳೂರು ಷಹರ್ ಮ್ಯುನಿಸಿಪಾಲಿಟಿಯಲ್ಲಿ ಮ॥ ಬಸಪ್ಪಶೆಟ್ಟಿರವರು ಒಬ್ಬ ಅಡಿಷನಲ್ ಮೆಂಬರಾಗಿ ನೇಮಕರಾಗ್ಮಡಲ್ಪಟ್ಟಿರುತ್ತಾರೆ.

ನಂ॥ ೧೮೦೬೯—ಜಿ. ಎ. ೨೧—೯೨.— ಸಾಹುಕಾರ್ ಮಹಾರಾಜಶ್ರೀ ಪಾಂಡುರಂಗ ರಾಯರವರೂ, ಸ್ಕೂಲಿಗಳ ಡೆಪ್ಯುಟಿ ಇನ್‌ಸ್ಪೆಕ್ಟರ್ ಮ॥ ರಾಮಸ್ವಾಮಯ್ಯನವರೂ, ಶಿವಮೊಗ್ಗ ಷಹರ್ ಮ್ಯುನಿಸಿಪಾಲಿಟಿಯ ಮೆಂಬರಿಗಳ ಪಟ್ಟಿಯಿಂದ ಖಜಾ ಮಾಡಲ್ಪಟ್ಟ ಮಹಾರಾಜಶ್ರೀ ವೆಂಕಟರಾವ್ ಮತ್ತು ನರಸಿಂಹಾಚಾರ್ಯರಿಗೆ ಬದಲಾಗಿ, ಮ್ಯುನಿಸಿಪಲ್ ಮೆಂಬರ್‌ಗಳಾಗಿ ನಿಯಮಿಸಲ್ಪಟ್ಟಿರುತ್ತಾರೆ.

ನಂ॥ ೧೮೦೯೧—ಜಿ. ಎ ೯೩—೯೨— ಜಮೀನ್‌ದಾರ್ ಮಿರ್ಜಾ ಸೈಯದ್ ಗೌಸ್ ಸಾಹೇಬರವರು ಮ್ಯುನಿಸಿಪಲ್ ಬೋರ್ಡಿನ ೫ ಮೀಟಿಂಗಿಗೆ ಕ್ರಮವಾಗಿ ಹಾಜರಾಗದೆ ಇದ್ದದಕ್ಕಾಗಿ ನಿವೃತ್ತಿಸಲ್ಪಟ್ಟ ಮ॥ ಸೂರ್ಯನಾರಣಪ್ಪನವರಿಗೆ ಬದಲಾಗಿ ಆಲೂರ್ ಮ್ಯುನಿಸಿಪಲ್ ಬೋರ್ಡಿನಲ್ಲಿ ಒಬ್ಬ ಮೆಂಬರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ನಂ॥ ೧೮೩೩೯—ಜಿ. ೪೪೭೪— ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೩೧ ನೇ ಆರ್ಟಿಕಲ್ ಅನುಸರಿಸಿ ಫಾರೆಸ್ಟ್ ಸಬ್ ಅಸಿಸ್ಟೆಂಟ್ ಕನ್ಸರ್ವೇಟರ್ ಮ॥ ಹೆಚ್. ಮುತ್ತಪ್ಪನವರಿಗೆ, ೧೮೯೩ ನೇ ಇಸವಿ ಏಪ್ರಿಲ್ ೮ ನೇ ಮಾರ್ಚ್ ಲಾಗಾಯಿತು ೫ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಿದೆ.

ನಂ॥ ೧೮೫೫೦—ಜಿ. ೪೫೪೩ ತಾ॥ ೬ನೇ ಮೇ ೧೮೯೩—ಈಗ ಹೊಸಕೋಟೆ ತಾಲ್ಲೂಕಿಗೆ ವರ್ಗವಾಗಿರುವ ಮೈಸೂರ್ ತಾಲ್ಲೂಕ್ ಅಮಲ್‌ದಾರ್ ಬಿ. ಸೀತಾರಾಮಯ್ಯನವರಿಗೆ ಮಾರ್ಚಿ ಮಹಜರ್ ಗುರ್ರೀ ತಾರೀಖ್ ಲಾಗಾಯಿತು ಅಥವಾ ಅವರು ಮೈಸೂರ್ ತಾಲ್ಲೂಕ್ ಚಾರ್ಜಿನಿಂದ ಬಿಡುಗಡೆಯಾದ ತಾರೀಕ್ ಮೊದಲು, ಒಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾದೆ

ನಂ॥ ೧೮೪೫೬—ಜಿ. ೪೫೧೦— ಮೈಸೂರು ಸರ್ವಿಸ ರೆಗ್ಯುಲೇಷನ್‌ಗಳ ೨೧೮ನೇ ಆರ್ಟಿಕಲ್ ಅನುಸರಿಸಿ ಪೊಲೀಸ್ ಪ್ರೊಬೇಷನರಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮ॥ ಅಬ್ದುಲ್‌ರಹಿಂ ಮೆಕ್ರಿಯವರಿಗೆ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ, ೧೮೯೩ ನೇ ಇಸವಿ ಮಾರ್ಚ್ ೨೦ ನೇ ಮಾರ್ಚ್ ಲಾಗಾಯಿತು ೩ ತಿಂಗಳ ರಜಾ ಕೊಡಲ್ಪಟ್ಟಿರುತ್ತಿದೆ.

ನಂ॥ ೧೮೪೫೮—ಜಿ. ಎ. ೧೮೧—೯೨—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೮೮ ನೇ ಆರ್ಟಿಕಲ್ ಅನುಸರಿಸಿ ಹಿರಿಯೂರ್ ತಾಲ್ಲೂಕ್ ಅಮಲ್‌ದಾರ್ ಎಸ್. ಸುಬ್ಬರಾಯರವರಿಗೆ ಅವರು ಉಪಯೋಗಿಸಿಕೊಳ್ಳಬಹುದಾದ ತಾರೀಖ್ ಲಾಗಾಯಿತು ೮ ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತದೆ.

ನಂ॥ ೧೮೫೮೪—ಜಿ. ೪೫೪೧—ತಾ॥ ೧೦ ನೇ ಮೇ ೧೮೯೩.—ಮತ್ತೊಂದು ನೋಟೀಸ್ ಕೊಡಲ್ಪಡುವ ತನಕ ದಿವಾನರವರ ಹೆಸರಿಗೆ ರವಾನಿಸಲ್ಪಡುವ ಲಕೋಟೆಗಳೆಲ್ಲವೂ ಉದಕಮಂಡಲದಲ್ಲಿ ಫೆರ್ನ್‌ಹಿಲ್‌ಗೆ ಎಂದು ಮೇಲ್ವಿಳಾಸ ಬರೆದು ರವಾನಿಸಲ್ಪಡತಕ್ಕದ್ದು. ೧೮೯೩ ನೇ ಇಸವಿ ಏಪ್ರಿಲ್ ೨೫ ನೇ ಮಾರ್ಚ್ ೧೭೫೧೩ ಜಿ. ೪೩೭೫ ನೇ ನಂಬರುಳ್ಳ ಇಸ್ತಿಹಾರ್ ನಾಮೆಯು ಇದರಿಂದ ರದ್ದು ಮಾಡಲ್ಪಟ್ಟಿರುತಿದೆ.

ನಂ॥ ೬೪—ತಾ॥ ೨ ನೇ ಮೇ ೧೮೯೩ —ಮಿಸ್ ಕುಮುದಿನೀ ಬಸ್ತಗಿರಿ ಬಿ. ಏ. ಯವರು, ಮೈಸೂರ್ ಮಹಾರಾಣೀ ಬಾಲಿಕಾ ಪಾಠಶಾಲೆಯ ಅಸಿಸ್ಟೆಂಟ್ ಸೂಪರಿಂಟೆಂಡೆಂಟಾಗಿ ನೇಮಕರಾಗಿ, ೧೮೯೩ ನೇ ಇಸವಿ ಏಪ್ರಿಲ್ ೨೫ ನೇ ತಾರೀಖಿನ ಪೂರ್ವಾಹ್ನದಲ್ಲಿ ಆಳಿಯವರು ತಮ್ಮ ಕೆಲಸದ ಚಾರ್ಜನ್ನು ತೆಗೆದುಕೊಂಡಿರುತ್ತಾರೆ.

## SUMMARY OF WNES.
## ವೃತ್ತಾಂತ ಸಂಗ್ರಹವು.

ಕಳೆದಗುರುವಾರ ಮಹಾರಾಜಾ ಧುಲೀಪ್ ಸಿಂಗರವರ ಕಿರೀ ಮಕ್ಕಳು ವಿಲಾಯಿತಿಯಲ್ಲಿ ಹೇಸ್ಟಿಂಗ್ಸ್ ಪಟ್ಟಣದಲ್ಲಿ ಕಾಲವಾದರು.

---

ಶ್ರೀಮಂತ ಸಯಾಜಿರಾವ್ ಗಾಯಕವಾಡಿ ಯವರ ಮುಖ್ಯಾಕೃತಿಯನ್ನು ಧರಿಸಿ ಮಾಡಿದ ನಾಣ್ಯಗಳು ಅವರ ಸಂಸ್ಥಾನದಲ್ಲಿ ಚೈತ್ರಶುದ್ಧ ಪ್ರತಿಪತ್ತಿನಿಂದ ಪ್ರಾರಂಭವಾದವು

---

ಕೊಳಪುರಿಗೆ ಬಾಲಿಗಳನ್ನು ಇಡುವದಕ್ಕೆ ಅದೇ ಜಾತಿಯೊಳಗಿನ ಕ್ಷೌರಿಕರನ್ನು ತರಿಸತಕ್ಕದ್ದೆಂದು ಮದರಾಸ್ ಸರ್ಕಾರದವರು ನಿರ್ಣಯ ಮಾಡಿರುತ್ತಾರೆ.

---

ಜಗತ್ತಿನ ಮೇಲಿರುವ ಎಲ್ಲಾ ಬಂಗಾರವನ್ನು ಒಂದಾಗಿ ಕೂಡಿಸಿ ಒಂದು ಗುಂಡು ಮಾಡಿ ತಗಡು ಬಡಿಸಿದರೆ, ಆ ತಗಡು ೨೫ ಕೋಟಿ ಫರಸಾಖ ಆದೀತು ಎಂಬದಾಗಿ ಒಬ್ಬ ಶೋಧಕನು ಗುಣಿಸಿರುತ್ತಾನೆ.

---

ರಷ್ಯಾ ರಾಜ್ಯದಲ್ಲಿರುವ ಒಂದು ಹಳ್ಳಿಯಲ್ಲಿ ೧೩೨ ವರುಷದವನೊಬ್ಬ ಮುದುಕನು ಮೃತಪಟ್ಟನು. ಅವನಿಗೆ ೧೫೦ ಜನ ಮಕ್ಕಳಿದ್ದರು. ಒಬ್ಬನು ೯೭ ವರುಷದವನಿದ್ದಾನೆಂದು ತಿಳಿಯುವರುತಿದೆ.

---

ಮದರಾಸಿನಲ್ಲಿ ೧೬ ವರ್ಷದ ಹುಡುಗಿಗೆ, ಆಕೆಯ ಗಂಡನು ಅಡಿಗೆ ಮಾಡದೇ ಇದ್ದದರಿಂದ ಪೆಟ್ಟು ಹೊಡಸಲು, ಆಗ ಆ ಹುಡುಗಿಯು ತನು ಉಟ್ಟ ಸೀರೆಯಿಂದ ಉರುಲು ಹಾಕಿಕೊಂಡು ಆತ್ಮಹತ್ಯ ಮಾಡಿಕೊಂಡಳು.

---

ಯೂರೋಪ ಖಂಡದಲ್ಲಿ ಪ್ರತಿ ವರ್ಷವು ಎಷ್ಟು ಖೂನಿಗಳಾಗುತ್ತವೆಯೋ, ಅದರ ಎಂಟರಷ್ಟು ಜಾಸ್ತೀ ಖೂನಿಗಳು ಇಟಲೀ ದೇಶದಲ್ಲಿ ಆಗುತ್ತವೆಂದು ಆ ಪ್ರಾಂತದ ಒಬ್ಬ ಗಣಿತಜ್ಞನ ಲೆಕ್ಕದಿಂದ ಗೊತ್ತಾಗುತ್ತದೆ.

---

ಜರ್ಮನ ದೇಶಕ್ಕೆ ಸೇರಿದ ಕನಗನ್ವಾ ಎಂಬ ಊರಿಗೆ ಬೆಂಕಿ ಬಿದ್ದು ಕೊನೆಗೆ ೨೦,೦೦೦ ಮನೆಗಳು ನಿರ್ಮೂಲ ವಾದವಲ್ಲದೆ, ನಷ್ಟವೇನಾಗಿರಬಹುದೋ ವಾಚಕರೇ ಊಹಿಸಿಕೊಳ್ಳಬಹುದು.

---

ಸಂಯುಕ್ತ ಸಂಸ್ಥಾನಗಳಿಗೆ ಸೇರಿದ ಸಾಲ್ಟ್‌ಲೇಕ್ ಸಿಟಿ ಎಂಬ ಪಟ್ಟಣದಲ್ಲಿ ೪೦ ವರುಷಗಳಿಂದಲೂ ಕಟ್ಟುತಲಿದ್ದ ಛರಿ ಮಾರ್ಮನ್ ಎಂಬ ದೇವಾಲಯವು ಪೂರೈಸಿತು. ಇದಕ್ಕೆ ಖರ್ಚಾದ ಹಣವು ೩೪೮ ಕೋಟಿ ರೂಪಾಯಿಗಳಂತೆ! ಕಟ್ಟಡವು ಎಂಥಾದ್ದೋ ನಮ್ಮಿಂದ ಊಹಿಸುವದಕ್ಕೂ ಅಸಾಧ್ಯವಾಗಿದೆ.

---

ಚಿಕಾಗೋ ಪಟ್ಟಣದ ಪ್ರದರ್ಶನ ಮಹೋತ್ಸವವನ್ನು ಕಳೆದ ೧ನೇ ತಾರೀಖಿನ ದಿವಸ ಪ್ರೆಸಿಡೆಂಟ್ ಕ್ಲೀವ್‌ಲೆಂಡರವರು ಪ್ರಾರಂಭಿಸಿದರು. ಯಂತ್ರಗಳ ಮೂಲಕ ನಾನಾವಿಧವಾದ ಗಾನಗಳು ನಡೆಸಲ್ಪಟ್ಟವು. ಅಲ್ಲಿ ಪ್ರದರ್ಶನ ಮಾಡಲ್ಪಟ್ಟ ವಸ್ತುಗಳೆಲ್ಲವೂ ಸರ್ವೋತ್ಕೃಷ್ಟವಾಗಿದ್ದವೆಂದು ಹೇಳಲು ಸಂದೇಹವೇನು ?

---

ಮ್ಯಾಕ್ಸ್ ಮುಲರ್ ಎಂಬ ಸಂಸ್ಕೃತ ಪಂಡಿತರು ವಿಜಯನಗರದ ಮಹಾರಾಜರವರ ಪ್ರಾರ್ಥನೆಯ ಮೇರೆಗೆ ಸಾಯಣರೆಂಬ ಭಾಷ್ಯಕಾರರ ವ್ಯಾಖ್ಯಾನಸಹಿತವಾಗಿ ಋಗ್ವೇದವನ್ನು ಅಚ್ಚು ಹಾಕಿಸುತ್ತಾರೆ ಇದಕ್ಕಾಗಿ ಜರ್ಮನೀ ಚಕ್ರವರ್ತಿಗಳು ಅವರಿಗೆ ಬಹು ಬೆಲೆಯುಳ್ಳ ಬಹುಮಾನವನ್ನು ದಯಪಾಲಿಸಿರುತ್ತಾರೆಂದು ತಿಳಿಸಲು ಸಂತೋಷಿಸುತ್ತೇವೆ.

---

ಆಸ್ಟ್ರೇಲಿಯಾ ದೇಶದಲ್ಲಿ ಜಾಜ್ ಆಟ್ಕಿನ್ ಎಂಬುವರು ಬೇಕ್‌ತಾ ೫೮ ರಂತೆ ಸರ್ಕಾರಕ್ಕೆ ಕಂದಾಯ ಕೊಡಬೇಕೆಂದು ವಿಧಿಸಿರುತ್ತಾರೆ. ಜಾಜಿನ ಹಣ ಇಷ್ಟು ಎಂದು ಜಾಜ್ ಕೋರ್ಟಿನವರು ಸರ್ಕಾರಕ್ಕೆ ತಿಳಿಸಿ ಅವರ ಅನುಮತಿಯಿಂದ ಜಾತಿಯ ಹಣವು ತಮಗೆ ಖರ್ಚಾದ ಗಿಂತ ಅಧಿಕವನು ತಮಗೆ ಮೋಸಮಾಡಿದರೆ ಈ ಸಂಗತಿ ಸರ್ಕಾರದವರು ವ್ಯವಸ್ಥೆ ಮಾಡುವರಂತೆ, ಆಶ್ಚರ್ಯಕರವಾದ ಪದ್ಧತಿಯೋ ಸರಿ ?

---

ರೂಪಾಯಿಯ ಬೆಲೆಯು ಇಂಡಿಯಾದಲ್ಲಿ ಬಹಳ ಕಡಿಮೆಯಾಗಿದೆಯಾದ್ದರಿಂದ ಅದನ್ನು ತಪ್ಪಿಸಿ ಕೊಡಬೇಕೆಂದು ಇಲ್ಲಿನ ನಾನಾತರವಾದ ಅಧಿಕಾರಿಗಳೂ, ಸಾಹುಕಾರರೂ, ಎಲ್ಲರೂ ಸೇರಿ ಸವರಾರು ೧೫೦೦೦ ಜನರು ಒಂದು ಅರ್ಜೀ ಬರೆದು ಅದಕ್ಕೆ ರುಜು ಮಾಡಿ ವಿಲಾಯಿತಿಯ ಪಾರ್ಲಿಮೆಂಟ್ ಸಭಾಸದಕ್ಕೆ ಕಳುಹಿಸಿರುತ್ತಾರೆ. ಅದರಿಂದ ಪ್ರಯೋಜನವಾಗುವದರಲ್ಲಿ ಸಂಶಯವಿಲ್ಲವೆಂದು ನೆನಸಬಹುದಾಗಿದೆ.

---

ಮುಂಬೈಯಲ್ಲಿ ಒಬ್ಬನು ಒಂದು ಚಮತ್ಕಾರವಾದ ಮಂಚವನ್ನು ತಯಾರ್ ಮಾಡಿರುತ್ತಾನೆ. ಈ ಮಂಚದ ನಾಲ್ಕು ಕಾಲುಗಳಲ್ಲಿರತಕ್ಕ ಕಂಭಗಳ ಬಳಿ ನಾಲ್ಕು ಗೊಂಬೆಗಳು ಮಾಡಲ್ಪಟ್ಟಿರುತಿವೆ. ಮಂಚದಮೇಲೆ ಮನುಷ್ಯನು ಮಲಗಿದರೆ, ಆ ನಾಲ್ಕು ಗೊಂಬೆಗಳ ಪೈಕಿ ೨ ಹಾಡುವದಕ್ಕೆ ಪ್ರಾರಂಭಿಸುತಿವೆ. ಮತ್ತೆರಡು ಮಂಚದಮೇಲೆ ಮಲಗಿದ ಮನುಷ್ಯನಿಗೆ ಪಂಖಾ ಹಾಕುತಿವೆ. ಬಹಳ ಆಯಾಸವಾಯಿತೆಂದರೆ ಹಾಡುವದನ್ನೂ ಪಂಖಾ ಹಾಕುವದನ್ನೂ ನಿಲ್ಲಿಸಿಬಿಡುತಿವೆ. ಈ ಮಂಚದ ಕಿಮ್ಮತ್ತು ೧೦,೦೦೦ ರೂಪಾಯಿಗಳೆಂದು ತಿಳಿಯಬರುತಿವೆ.

ವಿಜಯನಗರದಲ್ಲಿ ಕ್ರಿಶ್ಚಿಯನ್ ಮಿಷನರಿಯಾದ ಶ್ರೀಮತಿ ಲಕ್ಷ್ಮೀ ನರಸಿಂಹಂ ಎಂಬುವರು ಅಲ್ಲಿನ ವೈಶ್ಯರಿಗೆ ವೇದಗಳನ್ನು ಕಲಿಸುವ ಪಾಠಶಾಲೆಯನ್ನು ಪ್ರಾರಂಭಿಸಿರುತ್ತಾರೆ. ಈಗ ಈ ಪಾಠಶಾಲೆಯಲ್ಲಿ ೪೦ ಮಂದಿಯವರಿಗೂ ವಿದ್ಯಾರ್ಥಿಗಳು ಇರುತ್ತಾರೆ. ಅವರು ಇಂಗ್ಲೀಷನ್ನು ಕಲಿಯುವದಕ್ಕೂ ಪ್ರಯತ್ನ ಮಾಡಿರುವದಲ್ಲದೆ ಅವರು ಅನ್ಯ ವಸ್ತ್ರಗಳಿಗೆ ಸಹಾಯ ಮಾಡುತ್ತಾರೆ ವೈಶ್ಯರ ಗತಿಯೇನು ?

---

ಉತ್ತರ ಅಮೇರಿಕದಲ್ಲಿರುವ ಯುನೈಟೆಡ್ ಸ್ಟೇಟ್ಸಿನಲ್ಲಿನ ಅನೇಕ ಊರುಗಳು, ಗ್ರಾಮಗಳು, ಸಣ್ಣ ಸಣ್ಣ ಹಳ್ಳಿಗಳು, ಅಲ್ಲಿ ಪ್ರಸಿದ್ಧವಾದ ಸೈಕ್ಲೋನ್ ಎಂಬ ಸುಂಟರಗಾಳಿಯಿಂದ ನಾಶವಾದವು, ಅಸಂಖ್ಯಾತವಾದ ಪ್ರಜೆಗಳು ಸತ್ತರು, ಕಟ್ಟಡಗಳು ನೆಲಸಮವಾದವು, ಕೋಟ್ಯಂತರ ಜನರು ಮನೆಯಿಲ್ಲದೆ ಅಲೆಯುವವರಾಗಿದ್ದಾರೆ, ಎಲ್ಲಿನೋಡಿದರು ಜನರಗೋಳಾಟವು ವಿಪರೀತವಾಗಿದೆ.

---

ಇಂಡಿಯಾ ಚಕ್ರವರ್ತಿನಿಯಾದ ಕ್ವೀನ್ ವಿಕ್ಟೋರಿಯಾ ಮಹಾರಾಣಿಯವರು ಈಗ ಇಟಲೀ ದೇಶದ ರಾಜಧಾನಿಯಾದ ಫ್ಲಾರೆನ್ಸ ಪಟ್ಟಣದಲ್ಲಿರುವಷ್ಟು ಕೆಲವು ದಿವಸಗಳಕಳಗೆ ಅವರು ಅಲ್ಲಿನ ನೋಡತಕ್ಕ ಯೋಗ್ಯವಾದ ಸಕಲ ಕಟ್ಟಡಗಳನ್ನೂ ನೋಡಿಕೊಂಡು ಬಂದರು, ಅಲ್ಲಿನ ಛಾಯಾ ಶಾಲೆಯನ್ನು ನೋಡಿ, ಅದರಲ್ಲಿ ಶೇಖರವಾಗಿದ್ದ ಚಿತ್ರಗಳ ಮೊದಲಾದ ನಾನಾ ವಸ್ತುಗಳನ್ನು ನೋಡಿ ಬಹಳ ಸಂತೋಷಪಟ್ಟರು.

---

ಜಾಂಜಿಬಾರಿನಿಂದ ಪ್ರಯಾಣ ಮಾಡುತ್ತಿದ್ದ ಆಫ್ರಿಕದವರ ಒಂದು ದಳಕ್ಕೆ ಇಂಗ್ಲೀಷರವರ ಸ್ಟಾಫ ಪ್ರತಿನಿಧಿಯಂತೆ ಫ್ರೆಂಚ್ ಜನರ ಬಾವುಟವನ್ನು ಕಟ್ಟಿಕೊಂಡು ಪ್ರಯಾಣ ಮಾಡುತ್ತಿರುವಲ್ಲಿ ಒಬ್ಬ ಫ್ರೆಂಚ್ ಯುದ್ಧ ಅಧಿಕಾರಿಯು ಅಕಸ್ಮಾತ್ತಾಗಿ ಅವರನ್ನು ಪರೀಕ್ಷೆ ಮಾಡಿ ಅವರ ಹಿಂದಿನ ದಾರಿಹೋಗಿ ನೋಡಿದಾಗ ಬಾವುಟದಿಂದ ಮೋಸ ಮಾಡಿದ್ದು ಕಂಡು ಒಬ್ಬರು ಹಿಡಿದು ಆರು ಜನರು ಅಲ್ಲದೆ ಈಗವರನ್ನು ಹಿಡಿದು ನಿರ್ಬಂಧದಲ್ಲಿಟ್ಟಿರುತ್ತಾರೆ.

---

ಒಬ್ಬ ಸಂಸ್ಥಾನದ ಮಹಾರಾಜರು "ತಮ್ಮ ಸ್ವಬುದ್ಧಿಯನ್ನು ಪಡೆಯಲಿಲ್ಲವೆಂದು ಅವರ ಸಂಸ್ಥಾನದಲ್ಲಿ ರಾಜ್ಯವನ್ನು ಆಳುವದಕ್ಕೆ ಒಂದು ಸಭೆಯನ್ನು ಏರ್ಪಡಿಸಿರುತ್ತಾರೆ. ರಾಜರ ಪದ್ಧತಿಗೆ ವಿರೋಧವಾಗಿ ಹಿಂದೆ ಒಂದು ಪ್ರತಿನಿಧಿ ಸಭೆಯನ್ನು ಮಾಡಿದರು, ಆ ಸಭಿಕರೂ ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟಿರುತ್ತಾರೆ ಅವರನ್ನು ಪುನಃ ಸಭೆ ಮೆಂಬರುಗಳಾಗಿ ಮಾಡುವದಕ್ಕೆ ಗವರ್ನರ್ ಜನರಲ್‌ರವರೇ ವ್ಯವಸ್ಥೆ ಮಾಡಬೇಕಾಗಿದೆ ಎಂದು ಗೊತ್ತಾಗಿದೆ. ಇಂಥ ಸನ್ನಿವೇಶದಲ್ಲಿ ಮಹಾರಾಜರವರು ರಾಜ್ಯವನ್ನು ಆಳಲು ಅಸಮರ್ಥರು ಎಂಬುದು ಆ ಸಂಸ್ಥಾನದ ಮುಂದಿನ ಸ್ಥಿತಿಯು ಏನಾಗುವದೋ ವಾಚಕರೇ ಊಹಿಸಿಕೊಳ್ಳಬಹುದಾಗಿದೆ.

---

ಒಬ್ಬ ಹಳೆ ಕಾಲದ ಜಾತಿಯ ಬ್ರಾಹ್ಮಣನು ಇರುತ್ತಾನೆ, ಅವನಿಗೆ ಈಗ ೫೫ ವರುಷಗಳಾದುವು. ಆಗಲೇ ಅವನು ೫೬ ಮಂದಿ ಹೆಣ್ಣನ್ನು ಮದುವೆಮಾಡಿಕೊಂಡಿದ್ದಾನೆ, ಇನ್ನೂ ಒಂದು ಮದುವೆಮಾಡಿಕೊಳ್ಳುವದಕ್ಕೆ ಸಿದ್ಧನಾಗಿದ್ದಾನೆ, ಇದರಿಂದ ಕುಲೀನ ಜಾತಿಯಲ್ಲಿ ಅತ್ತೀ ಹೆಣ್ಣಿನ್ನುಳ್ಳವರ ದುರ್ಗತಿ ಹೆಚ್ಚಿದೆಯೆಂದು ವಿಪರೀತವಾಗಿರುತ್ತದೆಂದು ಸ್ಪಷ್ಟವಾಗುತ್ತದೆ. ಇವನಿಗೆ ಇನ್ನೂ ಹೆಣ್ಣುಗಳನ್ನು ಕೊಡುವುದಾಗಿ ಜನಗಳು ಬರುತ್ತಲಿರುವರೆ ಇವನು ಹಣವಿಲ್ಲದೆ ವಿಪರೀತವಾಗಿ ಹೇಳಿದ, ಕುಲೀನ ಬ್ರಾಹ್ಮಣರು ಹೀಗೆ ಮದುವೆಗಳನ್ನು ಮಾಡಿಕೊಳ್ಳುತ್ತಿರುವುದರಿಂದ ಇವರ ಸಂತತಿಯು ಇನ್ನೂ ಹೆಚ್ಚಬಹುದೆಂದು ಊಹಿಸಬೇಕಾಗಿದೆ, ಇಂಥಾ ಆಶ್ಚರ್ಯವನ್ನು ಇದುವರೆಗೂ ಕೇಳಿಲ್ಲ

---

ಜರ್ಮನೀ ದೇಶದಲ್ಲಿ ಒಬ್ಬ ವರ್ತಮಾನ ಪತ್ರಿಕಾಕರ್ತನು ತನ್ನ ಪತ್ರಿಕೆಯಲ್ಲಿ ರಷ್ಯಾ ಚಕ್ರವರ್ತಿಯನ್ನು ಕುರಿತು ಸಾಧಾರಣವಾಗಿ ದೊರೆಗಳು ಕೇಳಬಾರದ ವಿಷಯಗಳು ಇಂಥವುಗಳಾಗಿರಲೆಂದು ಬರೆದು ಬುದ್ಧಿವಾದಗಳನ್ನು ಬರೆದನು. ಅಧಿಕಾರಿಗಳು ಇದರಿಂದ ತಪ್ಪು ಯುವರಾಜನಿಗೆ ಅವಮಾನವಾಯಿತೆಂದು, ಆ ವರ್ತಮಾನ ಪತ್ರಿಕಾಕರ್ತನನ್ನು ಕೋರ್ಟಿಗೆ ಎಳೆದು ಅವನಿಗೆ ೬ ತಿಂಗಳ ಸಜಾ ವಿಧಿಸಿದರು ಈ ವರ್ತಮಾನವು ದೊರೆಗೂ, ಯುವರಾಜನಿಗೂ ತಿಳಿದಕೂಡಲೆ ಆ ಪತ್ರಿಕೆಯನ್ನು ತರಿಸಿಕೊಂಡು ಅದರಲ್ಲಿ ಬರೆದಿದ್ದ ವಿಷಯಗಳನ್ನು ಚೆನ್ನಾಗಿ ಓದಿನೋಡಿಕೊಂಡು—ಇದರಲ್ಲಿ ಏನೂ ಬುದ್ಧಿವಾದಗಳಿರುತ್ತವೆಯೇ ಹೊರತು ನಮಗೆ ಅವಮಾನಕರವಾದ ಸಂಗತಿಗಳಾವುವೂ ಇಲ್ಲ, ಆತನಿಗೆ ವಿಧಿಸಿದ ಶಿಕ್ಷೆಯು ಅನ್ಯಾಯವಾದದ್ದೆಂದು, ಆ ಕೂಡಲೆ ಸೆರೆಯನ್ನು ಬಿಡುಗಡೆ ಮಾಡತಕ್ಕದ್ದೆಂದು ಹುಕುಂ ಮಾಡಿರುತ್ತಾರೆ. ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿಸಿದ್ದನ್ನೇ ಅನುಸರಿಸಿ ನಡೆಯುವವರು ಇಲ್ಲದೆ ಇಲ್ಲ. ಆದದರಿಂದ ವರ್ತಮಾನ ಪತ್ರಿಕೆಗಳಿಗೆ ಗೌರವವು ಎಂಥಾದ್ದೋ ವಾಚಕರೇ ಊಹಿಸಿಕೊಳ್ಳಬಹುದಾಗಿದೆ.

---

BANGALORE —Printed and published at the KARNATAKA PRESS, No 40, Hospital ROAD, CITY.—1893

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

## ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning.**

ಪ್ರಜಾನಾವಿವಿಧಸನ್ನ್ಯತ್ಯುಪಗತಮಾರ್ಗ್ಗಕರ್ಣ್ಣಾಟಕಪ್ರಕಾಶನವರಾಭಿಧಾಪ್ರಥಿತಸಾಹಿತೀಕೋಭಿತಾ। ಮೈಗಾಂಕಹಿತವಾಸರನಿಹಿತಮುದ್ರಣಾಸಜ್ಜನಸ್ಫೂರ್ತಿದಾಸುಪರಿದೃಢಾವಿಕಶಿತಜಾನಸುಸುಖದು

| | | |
|---|---|---|
| Vol. XX.] | BANGALORE—MONDAY, MAY 22, 1893. | [No. 20] |
| ಸಂಪುಟ ೨೦.] | ಬೆಂಗಳೂರು:—ಸನ್ ೧೮೯೩ನೇ ಇಸವಿ ಮೇ ೨೨ ನೇ ತಾರೀಖ್ ಸೋಮವಾರ. | ಸಂಖ್ಯೆ ೨೦. |


### ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು.

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ಸಾಲ ಒಂದಕ್ಕೆ .. | 6—0—0 | 8—0—0 |
| 6 ತಿಂಗಳಿಗೆ .. | 3—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ಸಾಲಿಂಗೆ .. | 3—0—0 | 4—0—0 |
| 6 ತಿಂಗಳಿಗೆ ... ... | 1—12—0 | 2—8—0 |

ಈ ಪತ್ರಿಕೆಗೆ ದರಖಾಸ್ತು ಮಾಡಿದ ತಾರೀಖ್ ಮೊದಲು ಮುಂದೆ ಬೆಂಗಳೂರಿಗಾಗಿ ಇಂಥಾ ಮೊಬಲಗು ಕಳುಹಿಸುವಂತಾಗಿ ಪತ್ರಿಕೆ ಅಡ್ವಾನ್ಸ್ ದರಪ್ರತಿ ಪತ್ರಿಕೆಗೆ ಕಳುಹಿಸಲ್ಪಡುವದು. ಸಂಘಾದವರು ಇಂಗ್ಲಿಷ್ ಒಳಗಿನ ವ್ಯಾಗನಿ ಕನ್ನಡ ಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು ಮುಂದಿನ ತಿಂಗಳಿಗಾಗಿ ಬಿಡಿ ಬಿಡಿಯಾಗಿ ಬೇಕಾ ಮೊಬಲು ಅಂಗೀಕರಿಸಲ್ಪಡುವದು.

#### ಪ್ರಕಟನೆಯ ರಿವಾಜ್.

| | |
|---|---|
| ಮೊದಲನೆಯದಿಸಾ ಪಟ್ಟಿ ಒಂದಕ್ಕೆ | ೦—೨—೦ |
| ಎರಡನೆಯದಿಸಾ ಪಟ್ಟಿ ಒಂದಕ್ಕೆ | ೦—೧—೦ |

ಸೂಚನೆ—ಎರಡಕ್ಕಿಂತ ಹೆಚ್ಚಾಗಿ ಎಷ್ಟು ಕೇಳಿದರೂ ಮೊದಲನೆಯ ಪಟ್ಟಿ ಒಂದಕ್ಕೆ ೧ ಆಣೆ ಇಟ್ಟು ಕೊಡಬೇಕು. ಈ ಪತ್ರಿಕೆಯಲ್ಲಿ ಪ್ರಾಯಿ ಪ್ರಕಟಿಸುವುದಕ್ಕೆ ಪ್ರಕಟನೆಗಳು ಕಳುಹಿಸುವವರು ಅವು ಎಷ್ಟು ಸರ್ತಿ ಪ್ರಕಟಿಸಲ್ಪಡಬೇಕೋ ಅದನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇದಕ್ಕೆ ಉತ್ತರ ನಾಗೆ ನಿಲ್ಲಿಸುವಂತೆ ಬರೆದುಕೊಳ್ಳದ ಪಕ್ಷದಲ್ಲಿ ಪ್ರಕಟನೆಯು ಇದ್ದು ಹಾಗೆ ಎಷ್ಟಾದರೂ ಪ್ರಕಟಿಸಲ್ಪಟ್ಟಿದ್ದಾಗ್ಯೂ ಮೇಲಿನಂತೆ ದರದಂತೆ ಕ್ರಮಕ್ಕೆ ಸಲ್ಲತಕ್ಕದ್ದಾಗುವದು. ಪ್ರಕಟನೆಯ ಬಗ್ಗೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಆಯಾ ಕಳುಹಿಸುವ ಮುಂಚಿತವಾಗಿ ರುಸುಂ ಕಳುಹಿಸತಕ್ಕದ್ದು. ಪ್ರಕಟಿಸುವುದಕ್ಕೆ ಈ ಪತ್ರಿಕೆ ಕಛೇರಿಯ ಸ್ವಾಧೀನಕ್ಕೆ ಕಳುಹಿಸಲ್ಪಡುವ ಎಲ್ಲಾ ಕಾಗದಗಳು ಕ್ರಮವಾಗಿ ರುಜುಮಾಡಿ ಪೋಸ್ಟೇಜ್ ಚಾರ್ಜ್ ಸಹಿತವಾಗಿ ಕಳುಹಿಸಲ್ಪಡತಕ್ಕದ್ದು. ಸಿರಿಹಿತ ಕಳುಹಿಸಲ್ಪಡದ ಕಾಗದಗಳು ಅಂಗೀಕರಿಸಲ್ಪಡಲಾರವು.


## ADVERTISEMENTS.

### NOTICE.

### VAIDYASARA SANGRAHA

A TREATISE ON THE PRINCIPLES OF

### HINDU MEDICINE

*Price including Postage Rs 5-0-0*

ವೈದ್ಯಸಾರ ಸಂಗ್ರಹ.

ಈ ಗ್ರಂಥವು ಬೇಕಾದವರು ಮೊಬಲಗು ಕೊಡತಕ್ಕ ಪಕ್ಷ ದಲ್ಲಿ ರಾಜು ಮಾಡಿದವರ ಹೆಸರಿಗೆ ಭಟವಾಡೆ ಮಾಡಿ ಪುಸ್ತಕ ಕೊಡಲ್ಪಡುವದು. ಮೊಬಲಗು ಇಲ್ಲದೆ ಹೊಬಾಬ್ಜನಿಗೆ ಬರೆ ಕೊಡಲ್ಪಡುವದು.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೇ ಹಾಸಲ್ ಗೋಟೆಲ್ ಪ್ರತಿ ಒಂದಕ್ಕೆ ರೂ 5—0—0

ಟಿ. ಬಿ ವೆಂಕಟರಾವ್,

ಬೆಂಗಳೂರ್, ಪೂರ್ ಪಸ್ಪತ್ರಿ ರೋಡ್ 80 ನಂಬರ್.

### ನೋಟೀಸ್.

#### ಬೆಂಗಳೂರು ಕರ್ಣಾಟಕ ಪ್ರೆಸ್.

೧೮೬೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ, ಸಕಲವಿಧ ಕೆಲಸಗಳು ಸುಲಭದರಗಳಿಗೆ ತೀವ್ರವಾಗಿಯೂ ಶ್ಲಾಘ್ಯವಾಗಿಯೂ, ಮಾಡಲ್ಪಡುವವು.

ಇದರಲ್ಲಿ ಸದ್ಯಕ್ಕೆ ಇಂಗ್ಲಿಷ್ ಕನ್ನಡ ಕೆಲಸಗಳು ಮಾತ್ರವೇ ನಡೆಯುತಿವೆ. ಇತರ ಭಾಷೆಗಳನ್ನು ಸದರಿ ಕಾರ್ಖಾನೆ ಮುನ್ನೆಚ್ಚರಿಕೆಯ ಬರೆದು ತಿಳಿದುಕೊಳ್ಳಬಹುದು.

### ನೋಟೀಸ್.

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ.

ಕಮಿಶನ್ ಏಜಂಟ್ಸ್.

ಇವರದಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯಿಂದ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ತಕ್ಕ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರಹ ವಿಷಯಗಳು, ಪುಸ್ತಕಗಳು, ಮುತ್ತುಗಳು, ಚಿನ್ನ ಮುತ್ತುಗಳು, ಘಡಿಯಾರಗಳು, ವಾಚುಗಳು, ಟೈಂಪೀಸುಗಳು, ಕಾಶ್ಮೀರ ಶಾಲುಗಳು, ಪಟ್ಟೆ ಸೀರೆಗಳು, ಜರತಾರಿ ಕಣಗಳು, ಲೋಹಕಾಂತ ಬಲಿಯ ಕನ್ನಡಕಗಳು, ಹುಡುಗರಿಗೆ ತಕ್ಕ ಜರತಾರಿ ಉಡುಪುಗಳು, ಜರತಾರಿ ಟೋಪಿಗಳು, ಆಫೀಸ ತ್ರಸುಗಳು, ಷರ್ಟುಗಳು, ಅತ್ತರುಗಳು, ಅತ್ಯುತ್ತಮಗಳಾದ ರತ್ನಗಳು ಭಂಗಾರದಿಂದ ಕಟ್ಟಲ್ಪಟ್ಟ ಉಂಗುರಗಳು, ಪತ್ರ ಪಾತ್ರೆಗಳು, ಜರ್ಮನ್ ಬೆಳ್ಳಿ ಪಾತ್ರೆಗಳು, ಕೇಸು, ಕಸೂತಿ ವಗೈರೆ ಇತರ ಸಾಮಾನುಗಳು

ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟ್ಯಾಂಪ್ ಕಳುಹಿಸಿದ ಹೊರತು ಜವಾಬ್ ದೊರೆಯಲಾರದು.

ವಿಳಾಸ,—ಗಣೇಶ ರಾಮಚಂದ್ರ ಕರ್ಕಿ,

ಮತ್ತು ಕಂಪನಿ, ಕಮಿಷನ್ ಏಜಂಟ್ಸ್.

ಠಾಕೂರ ದ್ವಾರ, ಮಾರ್ಕೆಟ್ ಪೋಸ್ಟ್, ಮುಂಬೈ.

### ನೋಟೀಸ್.

ಇವರದಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

#### ಸಂಸ್ಕೃತ ಗ್ರಂಥಗಳು.

| | | ಹಾಸಲ್ ಸೇರಿ ರೂ | ಆ. | ಪೈ. |
|---|---|---|---|---|
| ಸಟೀಕಾ ವೈದ್ಯಸಾರ ಸಂಗ್ರಹ | ... | ೫ | ೦ | ೦ |
| ,, ಶಿವಗೀತೆ | ... | ೧ | ೭ | ೦ |
| ,, ಶಿವಾನ ಪಲಹರಿ | .. | ೦ | ೪ | ೦ |
| ,, ಕಾಲಾಮೃತ | ... | ೧ | ೦ | ೦ |
| ,, ಟೀ|| ವಾಲ್ಮೀಕಿರಾಮಾಯಣ | .. | ೦ | ೩ | ೦ |
| ,, ಟೀ|| ಗೋಪಿಕಾ ಗೀತ | .. | ೦ | ೧ | ೦ |
| ,, ಟೀ|| ಚಾಣಕ್ಯನೀತಿ (ಸುಭಾಷಿತ) | | ೦ | ೮ | ೦ |
| ವಿಷ್ಣುಸಹಸ್ರನಾಮ ವಗೈರೆ | .. | ೦ | ೩ | ೦ |
| ಸೂರ್ಯಸಹಸ್ರನಾಮ | ... | ೦ | ೨ | ೦ |
| ಕೃಷ್ಣಕರ್ಣಾಮೃತ | ... | ೦ | ೨ | ೦ |
| ತ್ರಿಕಾಂಡ ಅಮರ ಮೂಲ | ... | ೦ | ೨ | ೦ |
| ೧ ಕಾಂಡ | ... | ೦ | ೧ | ೦ |

#### ಕನ್ನಡ ಗ್ರಂಥಗಳು.

| | | | | |
|---|---|---|---|---|
| ಕುಶಲಪ್ರತಿ ಅಪ್ಪಲ್ | .. | ೩ | ೦ | ೬ |
| ಡಿಟೆಕ್ಟಿವ್ ದುರ್ಗ | ... | ೧ | ೨ | ೦ |
| ನೃಪಧರ್ಮೇಂದ್ರವಿಜಯ | ... | ೧ | ೪ | ೦ |
| ಪಂಚಪಾಂಡವ ಚಾಳೀಸಿ | ... | ೦ | ೬ | ೦ |
| ಹನುಮದ್ವಿಲಾಸ | ... | ೦ | ೬ | ೦ |
| ಕಾಳೀಯಮರ್ದನ | ... | ೦ | ೨ | ೦ |
| ಸುಭದ್ರಾಪರಿಣಯ | .. | ೦ | ೨ | ೦ |
| ಶಶಿರೇಖಾಪರಿಣಯ | ... | ೦ | ೨ | ೬ |
| ಸುದಾಮಚರಿತ್ರೆ | ... | ೦ | ೧ | ೦ |
| ಮೈರಾವಣ ಚರಿತ್ರೆ | ... | ೦ | ೧ | ೦ |
| ಬಾಲಕ್ರೀಡೆ | ... | ೦ | ೧ | ೦ |
| ಮಕರಧ್ವಜ ಲಾ | .. | ೦ | ೧೨ | ೦ |
| ಭ್ರಾಂತಿವಿಲಾಸ | ... | ೧ | ೨ | ೦ |


### ನೋಟೀಸ್.

ಬೆಂಗಳೂರು ಸಿವಿಲ್ ವ ಮಿಲಿಟರಿ ಸ್ಟೇಷನ್ ವಿನಾ ಕಡಮೆ ಮೈಸೂರು ಸೀಮೆಯಲ್ಲೆಲ್ಲಾ ಗಾಂಜಾವನ್ನು ವ ಹಲ್ವಾ ಶಿವಾಯಿ ಮಿಕ್ಕ ಗಾಂಜಾದಿಂದ ತಯಾರಾಗುವ ಇತರ ಪದಾರ್ಥಗಳನ್ನು ಸನ್ 1893 ನೇ ಇಸವಿ ಜೂಲೈ ಗುರ್ರಲಾಗಾಯತು 1897 ನೇ ಇಸವಿ ಜೂನ್ ೩೦ ನೇ ತಾರೀಖಿನ ವರೆಗೆ ೪ ಸಾಲುಗಳಲ್ಲಿ ಒಟ್ಟು ವಿಕರಿಸತಕ್ಕ ಹಕ್ಕನ್ನು ಪಡೆಯಲಿಕ್ಕೆ ಅಪೇಕ್ಷಿಸುವ ಜನರು ದರಖಾಸ್ತುಗಳನ್ನು ಕೊಡಬಹುದು.

2. ದರಖಾಸ್ತುದಾರರು ಸರ್ಕಾರಕ್ಕೆ ಸಾಲ್ ಒಂದಕ್ಕೆ ಎಷ್ಟು ಮೊತ್ತಕ್ಕೆ ಕಮ್ಮಿ ಇಲ್ಲದ ಮೊಬಲಗನ್ನು ಕೊಡಲಿಕ್ಕೆ ಬದ್ಧರಾಗಿರುತ್ತೇವೆಂದು ಅಪೇಕ್ಷಿಸುತ್ತಾರೋ ಅಂಥಾ ಮೊಬಲಗನ್ನು ದರಖಾಸ್ತುಗಳಲ್ಲಿ ವಿವರಿಸಬೇಕು. ಸದರೀ ಮೊಬಲಗು ಲೋಕಲ್ ಲಿಸ್ ದೇಖೀಲು ಮೈಸೂರು ಸೀಮೆಗೆಲ್ಲಾ ಒಂದೇ ಮೊತ್ತವಾಗಿರಬೇಕು. ಲೋಕಲ್ ಲಿಸ್ ದೇಖೀಲು ಎಂಟುಸಾವಿರ ರೂಪಾಯಿಗಳಿಗಿಂತ ಕಮ್ಮಿಯಾದ ಮೊಬಲಗನ್ನು ನಮೂದಿಸಿ ಕೊಡಲ್ಪಡುವ ದರಖಾಸ್ತು ಆಲೋಚಿಸಲ್ಪಡುವದಿಲ್ಲವು.

3. ಪ್ರತಿ ದರಖಾಸ್ತಿನೊಡನೆ ನಗದಾಗಿ 200 ರೂಪಾಯಿಗಳ ಠೇವಣಿಯನ್ನು ಕಳುಹಿಸಿ ಕೊಡತಕ್ಕದ್ದು. ದರಖಾಸ್ತುಗಳು ಸನ್ 1893ನೇ ಇಸವಿ ಜೂನ್ 10 ನೇ ತಾರೀಖಿನ ಮಧ್ಯಾಹ್ನಕ್ಕೆ ಪೂರ್ವ ಬೆಂಗಳೂರಲ್ಲಿ ಎಕ್ಸೈಸ್ ಕಮಿಷನರ್ ಸಾಹೇಬರವರಿಗೆ ಬಂದು ತಲುಪುವಂತೆ ಕಳುಹಿಸಲ್ಪಡಬೇಕು. ದರಖಾಸ್ತುಗಳು ಸದರಿ ಜೂನ್ 10 ನೇ ತಾರೀಖಿನ ಮಧ್ಯಾಹ್ನ 12 ಘಂಟೆಗೆ ಸರಿಯಾಗಿ ಎಕ್ಸೈಸ್ ಕಮಿಷನರ್ ಸಾಹೇಬರವರಿಂದ ಅವರ ಆಫೀಸಿನಲ್ಲಿ ಹಾಜರಿರಬಹುದಾದ ದರಖಾಸ್ತುದಾರರ ಸಮಕ್ಷಮ ಒಡೆಯಲ್ಪಡುವವು.

4. ಮೇಲ್ಕಂಡ ಕಂಟ್ರಾಕ್ಟಿನ ಕಡಮೆ ಷರತ್ತುಗಳು ಮತ್ತು ಇತರ ವಿವರಗಳನ್ನು ತಿಳಿದುಕೊಳ್ಳುವದಕ್ಕಾಗಿ 1893 ನೇ ಇಸವಿ ಮೇ 11 ನೇ ತಾರೀಖಿನ ಮೈಸೂರು ಗೆಜೆಟನ್ನು ಅದಕ್ಕೆ ತರುವಾಯ ಪ್ರಕಟವಾಗುವ ಗೆಜೆಟುಗಳನ್ನು ನೋಡತಕ್ಕದ್ದು. ಅಥವಾ ಬೆಂಗಳೂರು ಕೋಟೆಯಲ್ಲಿರುವ ಎಕ್ಸೈಸ್ ಕಮಿಷನರ್ ಆಫೀಸಿಗೆ ಜನರು ರೂಬರೂಬ ಬಂದು ತಿಳಿದುಕೊಳ್ಳಬಹುದು.

ತಾರೀಖ್ 21 ನೇ ಮೇ,
ಸನ್ 1893 ನೇ ಇಸವಿ.

L. Ricketts,
*Excise Commissioner in Mysore.*


### ದಕ್ಷಿಣ ಮಹಾರಾಷ್ಟ್ರ ರೈಲ್ವೆ.

ಸನ್ ೧೮೯೩ ನೇ ಇಸವಿ ಜುಲೈ ಗುರ್ರಲಾಗಾಯತು ಪ್ರಾರಂಭವಾಗುವ ಸಾಲಿನಲ್ಲಿ ಬೇಕಾಗಿರುವ ಸಾಮಾನುಗಳ ಸರಬರಾಯಿ ಬಗ್ಗೆ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿವೆ, ಮತ್ತು ಸದರೀ ದರಖಾಸ್ತುಗಳು ಸನ್ ೧೮೯೩ ನೇ ಇಸವಿ ಜೂನ್ ೧೦ ನೇ ತಾರೀಖ್ ವರೆಗೆ ಅಂಗೀಕರಿಸಲ್ಪಡುವವು, ಸದರೀ ಸಾಮಾನುಗಳು ಯಾವವೆಂದರೆ:—

೧. ಸ್ವದೇಶದ ತಯಾರಿ ಚಿಲ್ಲರೆ ಸಾಮಾನುಗಳು.

೨. ಎಣ್ಣೆ, ಕೊಬ್ಬು ಮತ್ತು ಬಿಂದಿ ಬಟ್ಟೆಗಳು.

೩. ಬಟ್ಟೆಗಳು.

೪. ಕಾಗದ ಲೇಖನ ವಗೈರೆ.

ದರಖಾಸ್ತುದಾರರ ಷೆಡ್ಯೂಲ್ ಪಟ್ಟಿ ಅಚ್ಚು ಹಾಕಲ್ಪಟ್ಟ ನಮೂನೆಗಳಲ್ಲಿ ದರಖಾಸ್ತುಗಳನ್ನು ಬರೆದು ಕಳುಹಿಸತಕ್ಕದ್ದು. ಸದರೀ ನಮೂನೆಗಳನ್ನು ೧, ೨, ಮತ್ತು ೩ ನೇ ಬಾಬುಗಳ ವಿಷಯದಲ್ಲಿ ಹುಬ್ಬಳ್ಳಿಯಲ್ಲಿರುವ ಸ್ಟೋರ್ ಕೀಪರಿಂದಲೂ, ಕಾಗದ ವಗೈರೆ ಸಾಮಾನುಗಳ ವಿಷಯದಲ್ಲಿ ಪ್ರತಿ ಒಂದಕ್ಕೆ ೪ ಆಣೆ ಕೊಟ್ಟು ಧಾರವಾಡದಲ್ಲಿರುವ ಆಡಿಟರಿಂದಲೂ ಪಡೆಯಬಹುದು.

ಕಂಪೆನಿಯವರ ಯಾವ ಷರತ್ತುಗಳನ್ನು ಅನುಸರಿಸಿ ಕಂಟ್ರಾಕ್ಟುಗಳು ಕೊಡಲ್ಪಡುವವೋ ಅವು ದರಖಾಸ್ತುದಾರರ ಪ್ರತಿ ಒಂದು ಷೆಡ್ಯೂಲ್ ಪಟ್ಟಿಗೂ ಸೇರಿಸಲ್ಪಟ್ಟಿವೆ. ನಾನಾವಿಧ ಚಿಲ್ಲರೆ ಸಾಮಾನುಗಳ ವಿಷಯದಲ್ಲಾಗಲಿ, ಎಣ್ಣೆ ಅಥವಾ ಬಟ್ಟೆಗಳ ವಿಷಯದಲ್ಲಾಗಲಿ, ಅನ್ಯೇನಾದರು ತಿಳಿದುಕೊಳ್ಳಬೇಕಾದ ಅವಶ್ಯವಿದ್ದರೆ ಅದನ್ನು ಹುಬ್ಬಳ್ಳಿಯಲ್ಲಿರುವ ಸ್ಟೋರ್ ಕೀಪರಿಂದಲೂ, ಸ್ಟೇಷನರಿ ವಿಷಯದಲ್ಲಿ ಧಾರವಾಡದಲ್ಲಿರುವ ಆಡಿಟರಿಂದಲೂ ತಿಳಿದುಕೊಳ್ಳಬಹುದು.

ದರಖಾಸ್ತು ಬರೆದ ಲಕೋಟೆಯಲ್ಲಿ ಹಾಕಿ ಮೊಹರು ಮಾಡಿ ಧಾರವಾಡದಲ್ಲಿರುವ ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪೆನಿಯ ಏಜಂಟರವರ ಹೆಸರಿಗೆ ಕಳುಹಿಸತಕ್ಕದ್ದು. ಲಕೋಟೆಯ ಮೇಲೆ,

ಸ್ವದೇಶದ ಸಾಮಾನುಗಳ ಬಗ್ಗೆ ದರಖಾಸ್ತು.

ಎಣ್ಣೆ, ಕೊಬ್ಬು ಮತ್ತು ಬಿಂದಿ ಬಟ್ಟೆಯ ಬಗ್ಗೆ ದರಖಾಸ್ತು.

ಕಾಗದ ವಗೈರೆ ಸಾಮಾನುಗಳ ಬಗ್ಗೆ ದರಖಾಸ್ತು,

ಎಂಬ ಆಯಾ ಬಾಬುಗಳನ್ನು ನಮೂದಿಸತಕ್ಕದ್ದು.

ಏಜಂಟರವರು ಕಂಡದರಖಾಸ್ತನ್ನಾಗಲಿ, ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೆ ಬದ್ಧರಾಗಿರುವದಿಲ್ಲ.

ಏಜಂಟರ ಆಫೀಸ,
ಧಾರವಾಡ,
೧೨ ನೇ ಮೇ ೧೮೯೩

J. Campbell,
*Agent,*
*S. M. Railway.*

### ಕೊಡಗು ಫಾರೆಸ್ಟ್ ಇಲಾಖಾ ನೋಟಿಸ್.

1893 ನೇ ಇಸವಿ ಮೇ ತಾರೀಖ 18 ರಲ್ಲು ಅಧಿಕಾರ ಸಮೂಹದ ಸಾವರ್ಣಗಳು ಹೂಗೂರು ತಿ ಹೊಳಲ್ಲಿ ಸ 1893 ನೇ ಇಸವಿ ಜೂನ್ ತಾರೀಕು 21 ರಲ್ಲು ಹರಾಜ್ ಮಾಡಲ್ಪಡುತ್ತದೆ

ತ್ಯಾಗದ ಪುಂಡಗಳು 55 . 1700 ಸರ ಅಡಿ

ಹೊನ್ನೆ ವಗ್ಗೆರ 215 5100 „

ಷರ:—ಸನ 1899ನೇ ಇಸವಿ ಡಿಸಂಬರ ತಾರೀಖ 19 ನಂಬರ 54 ರ ಚೀಫ್ ಕಮಿಷನರ ಸಾಹೇಬರವರ ನೋಟಿಫಿಕೇಷನ್ ಮೇರೆ ನಡದ ಕ್ರಮದ ಕ್ರೈ ಟೀಕಾ ಪತ್ರದಲ್ಲಿ ಮೊಬಲಗನ್ನು ಹರಾಜ್ ಕಾಲ ದಲ್ಲಿ ಮಾಡತಕ್ಕ ನಡತೆ ಬಾಕೀ ಮೊಬಲಗನ್ನು ಹರಾಜ್ ತಾರೀಖ ಆಗಾಯಿತು 30 ದಿವಸಗಳೊಳಗೆ ಮಾಡತಕ್ಕ ದಾಖಲಾಗಬೇಕು

F. A LEAGER
ಡಿಪ್ಟಿ ಕನಸರ್ವೇಟರ,
ಕೊಡಗು ಫಾರೆಸ್ಟ್

### ನೋಟಿಸ್.

ಇದರಿಂದ ನಮ್ಮ ಚಂದಾದಾರರಿಗೆ ನಾವು ಪ್ರಕಟಿಸುವ ದೇನಂದರೆ —

ಈ ಕಾಲೆನಲ್ಲಿ ನಿನ್ನೆಯ ದಿನದೊಡನೆ ನಾಲ್ಕು ತಿಂಗಳು ಕಳೆದವು ಇನ್ನು ಅವರವರು ಚಂದಾ ಮೊಬಲಗನ್ನು ಕಳು ಹಿಸದ ಹೊರತು ಈ ಪತ್ರಿಕೆಯ ಕಾರ್ಯವು ನಿರುಪದ್ರವವಾಗಿ ನಡೆಯಲಾರದು, ಆದುದರಿಂದ ಎಲ್ಲರು ದಯವಿಟ್ಟು ಕೂಡಲೆ ಚಂದಾ ಹಣವನ್ನು ಕಳುಹಿಸಬೇಕೆಂದು ಕೋರುತ್ತೇವೆ ಹಾಗೆ ಮಾಡದವರಿಗೆ ಈ ಪತ್ರಿಕೆ ಕಳುಹಿಸಲ್ಪಡಲಾರದು

೧—೫—೯೩ ಪ್ರೊಪ್ರೈಟರ


# ಕರ್ಣಾಟಕ ಪ್ರಕಾಶಿಕಾ.

**THE KARNATAKA PRAKASIKA.**

MONDAY, MAY 22 1893

೧೮೯೩ನೇ ಇಸವಿ ಮೇ ತಾ|| ೨೨ನೇ ಸೋಮವಾರ


## ದಿವಾನರವರ ನೀಲಗಿರಿ ಪ್ರಯಾಣವನ್ನು ಕುರಿತು.

ಈ ಸಂಸ್ಥಾನದ ದಿವಾನರಾದ ಸರ್ ಕೆ. ಶೇಷಾದ್ರಿ ಅಯ್ಯರ್ ಕೆ. ಸಿ. ಎಸ್. ಐ. ಯವರು ಈಗ ನೀಲಗಿರಿಯಲ್ಲಿರುತ್ತಾರೆಯಷ್ಟೆ. ಈ ದೊಡ್ಡಮನುಷ್ಯರು ಶ್ರೀಮನ್ಮಹಾರಾಜರವರ ಸವಾರಿಯೊಡನೆ ಪ್ರತಿ ಸಂವತ್ಸರವೂ ಬೇಸಗೆ ಕಾಲದಲ್ಲಿ ಉದಕಮಂಡಲಕ್ಕೆ ಹೋಗಿ ಅವರೊಡನೆ ವಾಪಸ್ ಬರುವದು ಸಹ ಪ್ರಸಿದ್ಧ ವಿಷಯವಾಗಿರುತ್ತದೆಯಷ್ಟೆ. ಹೀಗಿದ್ದಾಗ್ಯೂ ಈ ಸಂವತ್ಸರದಲ್ಲಿ ದಿವಾನರವರ ನೀಲಗಿರಿ ಪ್ರಯಾಣ ವಿಷಯದಲ್ಲಿ ಆಪ್ಪೂರು ಇಂಗ್ಲಿಷ್ ಪತ್ರಿಕೆಗಳು ಅನಿರೂಪಗಳಾದ ಕೆಲವು ಕಾರಣಗಳಂ ತಿಳಿಸುತ್ತವೆ. ಒಂದು ಪತ್ರಿಕೆಯು ದಿವಾನರವರು ತಮ್ಮ ಪುತ್ರರ ವಿವಾಹ ನಿಶ್ಚಯಕ್ಕಾಗಿ ಹೋಗಿದಾರೆಂತಲೂ, ಮತ್ತೊಂದು ಪತ್ರಿಕೆಯು ಬೆಂಗಳೂರು ಷಹರ ಜಲವಸತಿಯಂ ಕುರಿತು ಮಹಾ ರಾಜರವರೊಡನೆ ಆಲೋಚಿಸಿ ಅವರ ಅನುಮತಿಯಂ ಪಡೆಯುವ ಉದ್ದೇಶದೊಡನೆ ಹೋಗಿದಾರೆಂತಲೂ, ಮತ್ತೊಂದು ಪತ್ರಿಕೆಯು ಈ ರಾಜ್ಯಾಡಳಿತದಲ್ಲಿ ಕ್ಷೈತ್ರದೊಳು ಮಾಡಬೇಕೆಂದು ಆಲೋಚಿಸಿರುವ ಮುಖ್ಯಗಳಾದ ಕೆಲವು ಯೋಚನೆಗಳಂ ಮಹಾರಾಜಾ ಸನ್ನಿಧಾನದಲ್ಲಿ ವಿಜ್ಞಾಪಿಸಿ ಅಪ್ಪಣೆಯಂ ಪಡೆಯುವದಕ್ಕಾಗಿ ಹೋಗಿದಾರೆಂತಲೂ ತಿಳಿಸುತ್ತವೆ ಸದರೀ ಪತ್ರಿಕೆಗಳು ಇಷ್ಟುಮಾತ್ರದಿಂ ತೃಪ್ತಿಯನ್ನೈದದೆಂತೆ ಕಾಣಿಸಲಿಲ್ಲವು. ಮೊನ್ನೆಯ ದಿನದಿವದ ಈವನಿಂಗ್ ಮೆಯಿಲ್ ಪತ್ರಿಕೆಯು ಹೈದರಾಬಾದ್ ವೃತ್ತಾಂತ ಸಂಗ್ರಹದಲ್ಲಿ, ಸದರೀ ಸಂಸ್ಥಾನದ ಪ್ರಧಾನ ಮಂತ್ರಿ ಆಲಿಸೆಕ್ಕೆ ಹೋಗುವ ಸಂಭವದೊಡನೆ ಸರ್ ಕೆ. ಶೇಷಾದ್ರಿ ಅಯ್ಯರವರು ಉದಕಮಂಡಲಕ್ಕೆ ಹೋಗಿದಾರೆಂತಲೂ, ನೀಲಗಿರಿಯಲ್ಲಿರುವ ಹೈದರಾಬಾದ್ ರೆಸಿಡೆಂಟರಾದ ಮಿಸ್ಟರ್ ಪ್ಲೌಡನ್ ರವರು ಸದರೀ ಯವರಂ ಭೇಟಿಗಾಗಿ ಕರೆಯಿಸಿ, ಒಂದುವೇಳೆ ಇಂಡ್ಯಾಗವರ್ನಮೆಂಟಿನವರು ಮೇಲೆ ಕಂಡ ಸಂಸ್ಥಾನದ ಮಂತ್ರಿತ್ವಕ್ಕೆ ಕೊಡುವದಕ್ಕೆ ಅದನ್ನಂಗೀಕರಿಸಲಿಕ್ಕೆ ತಮಗೆ ಇಷ್ಟವುಂಟೆ ಎಂಬದಾಗಿ ಕೇಳಿದಾರೆಂತಲೂ ಒಂದು ಪ್ರವಾದ ವುಂಟಾಗಿರುವಂತೆ ತಿಳಿಸಲ್ಪಟ್ಟಿರುತ್ತದೆ.] ನಿರಾಧಾರವಾದ ಈ ಪ್ರವಾದವು ಹ್ಯಾಗೆ ಉದ್ಭವಿಸಿತೊ ನಾವರಿಯೆವು. ಸರ್ ಶೇಷಾದ್ರಿ ಅಯ್ಯರವರು ಕಲ್ಕತ್ತೆಗೆ ಹೋಗಿದ್ದ ಕಾಲದಲ್ಲಿ ಈ ವಿಧವಾದ ಪ್ರವಾದ ಒಂದು ಹಬ್ಬಿದೋರಿ ಇದ್ದನವರು ಅವರ ಉತ್ತರಾಧಿಕಾರಿ ಯೆಂಬುದನ್ನು ತಮ್ಮ ಸಹಾಯಕರೊಡನೆ ವಾಚಾ ನಿಯಮಿಸಿದ್ದರು ಇಂತಾ ಅಸಂಬದ್ಧವಾದ ಪ್ರವಾದಗಳನ್ನು ನಾವು ಯಾವಾಗಲೂ ನಂಬತಕ್ಕವರಲ್ಲವಾಗಿ ಇವರ ಯಾ ಥಾರ್ಥ್ಯವಂ ಕುರಿತು ವಿಚಾರ ಮಾಡುತ್ತಿರೆ. ವಾರ್ತೆಯ ನಿಜಾಮರವರ ಅಭಿಪ್ರಾಯವು ಸ್ಪಷ್ಟವಾಗಿ ವ್ಯಕ್ತವಾಯಿತು ಈಚೆಗೆ ತಮ್ಮರಾಜ್ಯಾಡಳಿತದಲ್ಲಿ ಹೊಸ ಬದಲಾವಣೆಗಳನ್ನು ಮಾಡಿ ರಾಜಶಾಸನವನ್ನು ಹೊರಪಡಿಸಿದ ಸಂದರ್ಭದಲ್ಲಿ ತಮ್ಮ ಸಂಸ್ಥಾನದ ದಿವಾನಗಿರಿಯನ್ನು ಸ್ವದೇಶೀಯರಲ್ಲದ ತಪ್ಪಾಗಿ ಹಿಂದೂಗಳಲ್ಲದವರಿಗೆ ಕೊಡದ ಪಕ್ಷಕ್ಕೆ ಅವರಿಗೆ ತಮ್ಮ ದೇಶೀಯರ ವಿಷಯದಲ್ಲಿ ಗೌರವಾಭಿಮಾನಗಳು ದುವದು ಅಸಾಧ್ಯವಲ್ಲದೆ ಅವರು ವಿಧೇಯರಾಗಿ ರಾಜಕಾರ್ಯಗಳಂ ನಿರ್ವಹಿಸಲಾರರೆಂದು ತಿಳಿಸಿದರು ತರುವಾಯ ಸದರೀ ಪ್ರವಾದವು ಇದ್ದ ಹಾಗೆಯೇ ಶಾಂತವಾಯಿತಲ್ಲದೆ ಅದರೊಡನೆ ಅಂಕುರಿಸಿದ ನಾಯಿಬ ದಿವಾನಗಿರಿ ಏರ್ಪಾಡಿನ ಪ್ರಸ್ತಾವ ಕೂಡ ಅಡಗಿಹೋದಂತೆ ಕಾಣುತ್ತದೆ ಹೀಗಿರುವಲ್ಲಿ ಮೆಜಾರಿಟಿಯವರು ನಿಜಾಮರವರ ಅಪೇಕ್ಷೆಯಲ್ಲಿ ಇಂಡ್ಯಾ ಗವರ್ನಮೆಂಟಿನವರ ತಿಳಿವಳಿಕೆಯಿಲ್ಲದೆ ನವೀನವಾದ ಒಬ್ಬ ನೇಟಿವ್ ಸಂಸ್ಥಾನದ ದಿವಾನರನ್ನು ಕರೆಯಿಸಿ ಕೇಳುವರೆಂಬುದೇನೊ ಬಹಳ ಅಸಹಜವಾಗಿಯೂ ನಂಬಕೂಡದ್ದಾಗಿಯೂ ಇರುತ್ತದೆ. ಬ್ರಿಟಿಷ್ ರೆಸಿಡೆಂಟರ ಸಿಫಾರಸ್ಸೇ ಬಲೀಯವಾದ ದಾಗಿರುವ ಪಕ್ಷಕ್ಕೆ ನಿಜಾಮರವರು ಪ್ರಕೃತ ಏರ್ಪಾಡುಗಳನ್ನು ಸ್ವಲ್ಪ ದಿವಸಗಳ ಹಿಂದೆ ಮಾಡಿದಾಗಲೇ ಅವರುಅಪೇಕ್ಷಿಸಿತದಿಯುಬಹುದಾಗಿತ್ತು. ಮತ್ತು ಇಂಡ್ಯಾಗವರ್ನಮೆಂಟಿನವರದು ಮುಂಚಿತವಾಗಿಯೇ ನಿರಾಕರಿಸಬಹುದಾಗಿತ್ತು. ಹಾಗಿಲ್ಲದೆ ನಿಜಾಮರವರ ಚರಿತ್ರೆಯನ್ನೆಲ್ಲರೂ ಒಪ್ಪಿಕೊಳ್ಳುಂತರು ಹೈದರಾಬಾದ್ ಸಂಸ್ಥಾನದ ತಾತ್ಕಾಲಿಕ ಸ್ಥಿತಿಯು ಪರ್ಯಾಲೋಚಿಸಿ ನೋಡುವಲ್ಲಿ ಸಮರ್ಥನಾಗಿಯೂ, ಧೈರ್ಯಶಾಲಿಯಾಗಿಯೂ, ಅಲ್ಲಿನ ಉತ್ತೇಜಕ ಸಾಮಗ್ರಿಗಳಿಗೆ ಪಕ್ಷಪಾತವಿಲ್ಲದವನಾಗಿಯೂ, ನಿಜಾಮ ಸರಕಾರಕ್ಕೂ ಇಂಡ್ಯಾಗವರ್ನಮೆಂಟಿನವರಿಗೂ ಮಧ್ಯೆ ನಿಸ್ಪೃಹನಾಗಿರುತ ಸ್ವತಂತ್ರಿಸಿ ಕೆಲಸ ನೋಡತಕ್ಕವನಾಗಿಯೂ, ಪ್ರಬಲರಾದ ಅಲ್ಲಿನ ನವಾಬರುಗಳನ್ನೂ ಸಾಮಾನ್ಯವಾಗಿ ಇತರ ಪ್ರಜೆಗಳನ್ನೂ ಅವರವರ ತಾರತಮ್ಯಾನುಗುಣವಾಗಿಟ್ಟು ಎಲ್ಲರು ಸ್ವಾಧೀನದಲ್ಲಿ ಇಟ್ಟುಕೊಳ್ಳುವವಕ್ಕೆ ಶಕ್ತನಾಗಿಯೂ ಇರುವಂತಾ ಆನ್ಯಜಾತಿ ಮಂತ್ರಿಯೊಬ್ಬನು ಆವಶ್ಯಕವಾಗಿರುತ್ತದೆಯಲ್ಲದೆ ಆತನ ಬಹಳ ವಿಸ್ತಾರವಾದ ಮೊದಲಾದ ಸಕಲಾಧಿಕಾರಗಳನ್ನು ವೈಸರಾಯಿ ಯವರು ಸ್ವತಃ ಆಳಿಸಿಕೊಂಡು ಆತನ ಆತ್ಮರಕ್ಷಣೆಯಲ್ಲಿ ಬೇಕಾದ ಬಂದೋಬಸ್ತುಗಳನ್ನುಂಟುಮಾಡಿದರೆ ಆಗ ಅಂತವನ ದಿವಾನಗಿರಿಯು ಪ್ರಯೋಜನಕರವಾಗಿರುವದಲ್ಲದೆ ಆತನ ಅಪ್ಪಣೆಗಳೆಲ್ಲವೂ ನ್ಯಾಯಪ್ರ) ಮುದವಹಬಹುದು. ಈ ವಿಷಯದಲ್ಲಿ ಗವರ್ನಮೆಂಟಿನವರದ್ದರವರಿಸ್ಕೃತಿ ಯಿಂದ ಪಡೆಸಿವ ಶಕ್ತಿಯ ಅಧಿಕಾರವು ನಿಸ್ಸಂದೇಹವಾಗಿರುವದರಿಂದ ಅವರಂ ಪ್ರಕಾರಾಂತರದಿಂ ನಿರೀಕ್ಷಿಸಿಸತಿರುವಂತೆ ತಿಳಿಯಬರುತ್ತದೆ ಈಗಿನ ಸ್ಥಿತಿಯೇ ಮುಂದೆಯೂ ಅನುವರ್ತಿಸಲ್ಪಡುತ್ತಿಬಂದರೆ ತಾದೃಶವಾದ ಕಷ್ಟ ಅತಿದೂರವಾಗಿರಲಾರದೆಂದು ನಂಬುತ್ತೇವೆ ಈಗಿನಸ್ಥಿತಿಯಲ್ಲಿ ಸದರೀ ಸಂಸ್ಥಾನದ ರಾಜ್ಯಕಾರ್ಯವಂ ನಿರ್ವಹಿಸುವದು ಯೆಂತವರಿಗೂ ಪ್ರಯಾಸಕರವಾದ ವಿಷಯವಾಗಿರುತ್ತದೆ. ಪಕ್ಷಭೇದ, ಪ್ರಜೆಗಳು ಧಾರ್ಮಿಕರು, ಅರಸರು ಅತಿ ಸ್ವತಂತ್ರರು, ಇಂಡ್ಯಾ ಗವರ್ನಮೆಂಟಿನವರು ಸ್ವಾರ್ಥಪರರು, ರಾಜ್ಯವು ಅಪಾರವಾದದ್ದು, ಜವಾಬ್ದಾರಿಯು ಮಹತ್ತರವಾದದ್ದು, ಪ್ರಭುತ್ವಕ್ಕೆ ಸ್ವಲ್ಪವು ವಿಜಾತೀಯವಾದದ್ದು. ಈ ಪಕ್ಷೆಯಿಂ ಳರುವ ಸಂಸ್ಥಾನದಿಂದ ಯೆಂತವರಿಗೂ ಕೀರ್ತಿ ಪ್ರತಿಷ್ಠೆಗಳುಂಟಾಗಲಾರದು ಇಂತಾ ವಿಷಯಗಳಿಗೆ ಪತ್ರಿಕೆಗಳವರು ನಿರೀಕ್ಷಿಸುವ ಸಂದರ್ಭಗಳಲ್ಲಿ ತಾವು ಬರೆಯುವ ವಿಷಯಸ್ವರೂಪವನ್ನು ಅದರ ಕಾರ್ಯ ಕಾರಣಗಳನ್ನೂ ಪರಿಶೀಲಿಸತಕ್ಕದಾಗಿ ಆಲೋಚಿಸುವ ಪಕ್ಷಕ್ಕೆ ಅಂತವರ ವಾಕ್ಯಗಳಲ್ಲಿ ಪ್ರಜೆಗಳಿಗೆ ನ ಬಿಕೆಯೂ ವಿಶ್ವಾಸವೂ ಸ್ವಲ್ಪವು ಸಹ ಹೋಗಲಾರದು.

## ಲಾ ಕಾಲೇಜಿನ ಆವಶ್ಯಕತೆಯಂ ಕುರಿತು.

ಈ ಕಾಲದಲ್ಲಿ ವಿದ್ಯಾರ್ಥಿಗಳಿಗೆ ವ್ಯಾಸಂಗದ ಸ್ವಲ್ಪವಾದ ಹೊತ್ತಿನ ಹಣ ವೆಚ್ಚದ ಅತಿ ಪ್ರಯಾಸವಾಗಿರುತ್ತದೆ ಸಾಮಾನ್ಯವಾಗಿ ಬಾಲಕರಿಗೆ ಹತ್ತನೆ ವರುಷದಿಂದ ಕೂಡಲೆ ಇಂಗ್ಲಿಷ್ ವಿದ್ಯಾಭ್ಯಾಸದ ಮಾಡಿಯೂ, ಬಿ ಎ ಪರೀಕ್ಷೆ ತೇರ್ಗಡೆಯಾಗುವ ಕಾಲವರೆಗೆ ಯಾವ ಕಷ್ಟಪಾಡು ವಿದ್ಯೆಯನ್ನು ಭ್ಯಸಿಸಬಹುದೆಂಬು ಅದೇ ಆಲೋಚನೆಯೂ ಏಕೆ ಪ್ರತ್ಯಾರಾದಿತವೆ ಈಗ ಯಾವದು ದರೊಂದು ವೃತ್ತಿಯಲ್ಲಿ ಪ್ರವೀಣನೆನಿಸಿಕೊಂಡ ಮೊದಲ್, ಅತನ ವಿದ್ಯೆಗೆ ಪ್ರತಿಫಲ ಉಂಟಾಗುವದು ಪ್ರಯಾಸವು ಕೇವಲ ಬಿ ಎ ಪ್ಯಾಸ್ ಮಾಡಿದ್ದ ಮಾತ್ರಕ್ಕೆ ಅವರು ಗೌರವಿಸತಕ್ಕ ಕಾಲವು ಕಳೆದುಹೋಯಿತು ಮುದ್ರಣ ಪ್ರಸಿದ್ಧವಾಗಿ ಯಲ್ಲಿ ಒಬ್ಬ ಗ್ರ್ಯಾಜ್ಯುಯೇಟನ ನಾಡೆಯನ್ನು ಇಂಗ್ಲೆಂಡಿನ ಗಳನ್ನು ಇಳಿಸಿರುತ್ತಾರೆ ಈ ಸಂಸ್ಥಾನದಲ್ಲಿಯೂ ಎಂ ಎ ಪದವಿಯುಳ್ಳವರೆ ದರಲ್ಲೇ ನಿಂತಿವೆ ಈಗ ನಾಟ್ಯಗಳ ಪರಿ ಬದಲಾಯಿಸುತ ಬರುವಂತೆ ನಾನಾಯಾಸವೂ ದಿನದಿನ ವೃದ್ಧಿಯನ್ನೈದುತಬರುತಲಿವೆ ಇದರಿಂದ ಅರ್ಥ ಗೌರವವು ಪರಿಗಣನೆಯಾಗಿ ಏರ್ಪಟ್ಟಿತೆ ಹೊರ್ತು ವೃತ್ತಿಗೌರವವು ಮನಸ್ಸಿನ ಸ್ಮರಣೆಯಲ್ಲದೆ ಹೋಗಿದೆ ಆದಾಗ್ಯೂ ಈಗ ಬಾಲಕರಿಗೆ ಸಂಬಳ ಪ್ರಯೋಜಕ ಯೋಗ್ಯವಾಗಿರುವ ಕಸಬುಗಳು ಮುಂದರ ನಾಲ್ಕೈದು ಅಧಿಕವಾಗಿಲ್ಲವು ಅವು ಯಾವವುಂದರೆ, ಸರ್ಕಾರ ನೌಕರಿ, ಲೀಗಲ್ ಅಂದರೆ ವಕೀಲ್, ಮೆಡಿಕಲ್ ಅಂದರೆ ವೈದ್ಯ, ಇಂಜನಿಯರಿಂಗ್ ಅಂದರೆ, ಗೃಹ ನಿರ್ಮಾಣಾದಿ ಶಿಲ್ಪವಿದ್ಯೆ, ಫಾರೆಸ್ಟ್, ಅಂದರೆ ಅರಣ್ಯ ವಿದ್ಯೆ, ಕೃಷಿ, ಇವುಗಳು ವಿನಾ ಬೇರೆ ಮಾರ್ಗವು ಕಾಣುತ್ತಿಲ್ಲವು ಇವುಗಳ ಪೈಕಿ ಸರ್ಕಾರ ನೌಕರಿಯು ವಾಲ್ಲಭ್ಯವನ್ನನುಸರಿಸಿಯೂ ಅದನನ ಅದೃಷ್ಟಾನುಸಾರವಾಗಿಯೂ, ಅಪ್ತಬಂಧುಗಳ ಪ್ರಾಬಲ್ಯ ದೌರ್ಬಲ್ಯವನ್ನನುಸರಿಸಿಯೂ ಲಭಿಸಬೇಕಾದುದಾಗಿರುತ್ತದೆ ಈ ಅನುಕೂಲ್ಯಗಳು ವಿದ್ಯಾಭ್ಯಾಸ ಮಾಡತಕ್ಕವರೆಲ್ಲರಿಗೂ ಒಬ್ಬರಿಗಿಬ್ಬರಿಗೆ ದೊರೆಯುವುದೇ ಇಲ್ಲವೋ ನಮಗೆ ತಿಳಿಯದು ಮಿಕ್ಕವರು ಜೀವನಾರ್ಥ ಏಂಪಟರಾಯವು ಮಾಡುತಬೇಕಾದ್ದು ಅವಶ್ಯಕವಾದುದರಿಂದ ಕೆಲವರು ಮೇಲೆ ತಿಳಿಸಲ್ಪಟ್ಟ ವೃತ್ತಿಗಳಲ್ಲಿ ಶಿಕ್ಷೆಯೂ ದಿನಗಳಿಗೆ ತಕ್ಕಂತೆ ಪ್ರವೇಶಿಸಿ ಅಲ್ಲಿಗೂ ದೊರಕದವರು ತಕ್ಕ ಪ್ರತಿಫಲವಿಲ್ಲದೆ ಅನೇಕರು ಕ್ರಮಸದೃಶ ಳಿರುವದು ನಾವು ಪ್ರತಿನಿತ್ಯವೂ ನೋಡುತ್ತಿದ್ದೇವೆ ಆದಾಗ್ಯೂ ಇತರ ವೃತ್ತಿಗಳು ಸಾವಕಾಶವಾದ ಹಿಂದೊಂದುಕಾರಣದಿಂದ ಒಪ್ಪಿಸುವ್ವರಿಗೆ ಅನುಕೂಲಿಸದೆ ಹೋಗುವದರಿಂದ ವ್ಯಾಯಾಮ ಅನೇಕರು ಬಿ. ಎ ಪ್ಯಾಸ್ ಕೂಡಲೆ ವಕೀಲರಾಗುವದಕ್ಕೆ ಪ್ರಯತ್ನಪಡುತ್ತಾರೆ ಇದಕ್ಕೆ ಬೇಕಾದ ಯೋಗ್ಯತೆಯಂ ಸಂಪಾದಿಸಿಕೊಳ್ಳುವದರೊಳಗಾಗಿ ಅವರಿದ್ದ ಪಿತರಾರ್ಜಿತವೆಲ್ಲವು ವ್ಯಯವಾಗಿ ಕಡೆಗೆ ಕೋರ್ಟುದಾರಿ ಭಿಕ್ಷಗ್ಯ ಸಾಲಕಗೆಯತಕ್ಕ ಸ್ಥಿತಿಗೆ ಬರುತ್ತಾರೆ ಸ್ಥಿತರಾಗಿ ಅವರು ದಾಖಲಾದ ಕೂಡಲೇ ಅರ್ಥಾರ್ಜನ ಪವತ್ತಿ ಪೀಠಿಕರಾಗಿ ದೊರೆತದ್ದು ಲಾಭವೆಂದು ಭಾವಿಸಿ ಕಡೆಗೆ ಒಂದು ಕಟ್ಟು ವಿಳ್ಳೆಯವಂ ಸಹ ಪ್ರತಿಫಲವೆಂದೇ ಅಂಗೀಕರಿಸಬೇಕಾದ ಆವಶ್ಯಕತೆಯುಂಟಾಗುತ್ತಿದೆ. ಇದಲ್ಲದೆ ಪ್ರಾರ್ಥಿಗಳಿಗೆ ಕೆಲವು ಲಕ್ಷಣಗಳು ಕಲ್ಪಿಸಿಕೊಂಡ ಹೊರತು ಸದರೀ ವೃತ್ತಿಯು ಸಿದ್ಧಿಸುವದಿಲ್ಲವು ಅವುಗಳ್ಯಾವವೆಂದರೆ—ಒಂದು ಕುದುರೆ ಗಾಡಿ, ಒಬ್ಬ ಗುಮಾಸ್ತೆ, ಒಂದು ಬಂಗ್ಲೇ, ಒಂದು ಆಫೀಸ್, ಇವುಗಳಿಗೆ ಆಗದ ತಿಂಗಳ ವೆಚ್ಚ ಮತಿಯು ಸಾಲದೆ ಹೋಗುತ್ತದೆ. ಆದುದರಿಂದ ಅನೇಕರಿಗೆ ಈ ಕಸಬು ನಿರುಪಯೋಗವಾಗಿ ನಿಷ್ಫಲಕಾರಿಯಾಗಲಿಲ್ಲವೆ. ಗಿಂತಿಗಿಂತ ಅಧಿಕವಾಗಿ ವಕೀಲರಿಗೆ ತಕ್ಷಣ ಬರುವ ಅಸೌಕರ್ಯ ಆದಕ್ಕಾಗಿ ಪ್ರಯೋಜನವಿಲ್ಲವೂ ಮುಖ್ಯ ಕಾರಣಗಳೆಂದು ತೋರುತ್ತದೆ ಮೇಲೆ ಒಬ್ಬ ವಿದ್ಯಾರ್ಥಿಯು ಬಿ. ಎಲ್ ಪರೀಕ್ಷೆಯಂ ಕೊಟ್ಟು ಕೃತಾರ್ಥನಾಗಬೇಕಾದರೆ ಅವನು ಮದರಾಸು ಪಟ್ಟಣಕ್ಕೆ ಹೋಗಿ ಮೂರು ವರ್ಷ ವಾಸ ಮಾಡಬೇಕಾಗಿರುವ ತಲ್ಲಕ್ಕೆ ಇಲ್ಲಿಗಿಂತ ಅಧಿಕ ವೆಚ್ಚವಾಗಿ ನಿರುದ್ಯೋಗವಾಗುವದಿಲ್ಲವು ಇಷ್ಟು ದಿನವೂ ಮಾಡಲಿಕ್ಕೆ ಕಷ್ಟವಾದವರೆ, ಜನ ಯಿರುವವರೂ ಈ ಪತ್ರಿಕೆಯನ್ನೋದತಕ್ಕವರೇ ಆಲೋಚಿಸಬಹುದು. ಬಿ ಎಲ್ ಪರೀಕ್ಷೆಗೆ ಹೋಗಬೇಕಾದವರು ಆ ಕ್ಲಾಸಿಗೆ ಅಗತ್ಯ ಹಾಜರಾಗಬೇಕೆಂಬ ನಿಬಂಧನೆಯ ಏರ್ಪಟ್ಟಿರುವದರಿಂದಲೂ, ಅಂತಾ ಲಾ ಕಾಲೇಜ್ ಮದರಾಸು ಮತ್ತು ತಿರುವಾಂಕೂರು ಈ ಎರಡು ಸ್ಥಳಗಳಲ್ಲಿ ವಿನಾ ಇನ್ನೆಲ್ಲಿಯೂ ಇಲ್ಲವೆ ಇರುವದರಿಂದಲೂ ವಿದ್ಯಾರ್ಥಿಗಳು ಮದರಾಸಿಗಾದರೂ ಅಥವಾ ತಿರುವಾಂಕೂರಿಗಾದರೂ ಹೋಗದೆ ಯಿಲ್ಲದೆ ತಿಳಿಗಬೇಕಾದದ್ದಾಗಿರುತ್ತದೆ. ಇದು ಸುಲಭಸಾಧ್ಯವಲ್ಲವು ಈ ವಿಷಯವನು ಕುರಿತು ವಿದ್ಯಾರ್ಥಿಗಳು ಆಲೋಚಿಸುತಲಿದ್ದಾರೆ. ಈ ರಾಜ್ಯವು ಪ್ರಾಚ್ಯ, ಪಶ್ಚಿಮ, ದಕ್ಷಿಣ ದೇಶಗಳಿಗೆ ಪ್ರಧಾನವಾಗಿರುವದರಿಂದಲೂ, ರೈಲ್ವೆಮೂಲಕ ಇಲ್ಲಿನ ಸಂಬಂಧವು ಸುಲಭವಾಗಿಯು ಇತ್ಯಾದಿಗಳಲ್ಲಿಯೂ ಪ್ರಸಿದ್ಧಿಯಾಗುತ ಜನರ ಆಚಾರ ವ್ಯವಹಾರಗಳು ಸೌಕರ್ಯಗಳೂ ಮನೋಹರವಾಗಿ ಹೊಂದಿರುವದರಿಂದಲೂ, ಬ್ರಿಟಿಷ್ ಗವರ್ನಮೆಂಟಿನವರ ನ್ಯಾಯ ನಿರ್ಣಯ ಕಾರ್ಯ ಇಲ್ಲಿಯೂ ಜಾರಿಯೊಳು ತಂದು ಪದ್ಧತಿ ಪ್ರಭುತ್ವ ಸಹಿತ ಸ್ಥಾಪಿತವಾಗಿರುವದರಿಂದಲೂ, ಗುಣ ಪಕ್ಷಪಾತಿಗಳಾಗಿ ವಿದ್ಯಾಮಂದಿರಾದವರನ್ನೇ ಆರಿಸಿ ದೊಡ್ಡ ಕೆಲಸಗಳಲ್ಲಿ ನೇಮಕದ್ದಾಗಿ ಪ್ರಭುತ್ವ ಕ್ರಮ ಸಕಲ ವಿಷಯಗಳಲ್ಲಿ ಮಾತೃ ಆದರಾರು ಹಾಗದ ಹೊಸ ವಿಷಯಗಳು ಆನಂದ ನ್ಯಾಯ ಸಕಲ ವಿಧ ಏನ ಕ್ರಮಗಳು ಅನ್ಯೋನ್ಯವಾಗಿ ಮಾಡಲ್ಪಡುತ್ತಿರುವದರಿಂದಲೂ, ಶ್ರೀಮನ್ಮಹಾರಾಜರವರು, ಈ ಇಂಡ್ಯಾ ದೇಶದಲ್ಲಿ ಸರ್ವತ್ರ ಸುಪ್ರಸಿದ್ಧ ಆಲ್ಲಿಯಲ್ಲಿರತಕ್ಕ ಅನ್ಯ ಸಂಸ್ಥಾನಗಳಿಗಿಂತ ಮುಂದೆ ಹೆಚ್ಚಿನ ಗಳ ದ ವಿಶೇಷಾಂಶಗಳನ್ನೆಲ್ಲ ತಮ್ಮ ರಾಜ್ಯದಲ್ಲಿ ಕಲ್ಪಿಸಿ ಸಿದ್ಧಪಡಿಸಿಕೊಳ್ಳಬೇಕೆಂಬ ಉತ್ಸಾಹ ವುಳ್ಳವರಾಗಿರುವದರಿಂದಲೂ, ಇಲ್ಲೊಂದು ಲಾ ಕಾಲೇಜ್ ಇಲ್ಲದಿರುವದು ಪ್ರಸಂಗೋಚಿತವೆಂದು ಯಿತಿಸುತಲಿದ್ದೇವೆ ಈ ಲೋಪದಂ ಪರಿಹರಿಸಬೇಕಾದುದು ಪ್ರಕೃತ ಸ್ಥಿತಿಯಲ್ಲಿ ಅಪೇಕ್ಷಿತವಾಗಿರುವಂತೆ ನ್ಯಾಯಾರಾಧಕರಾದ ಕೆಲವರು ವಿದ್ವಾಂಸರು ನೆರೆ ಶ್ರೀಮದ್ದಾ ಮಹಾರಾಜಾ ಸರ್ಕಾರಕ್ಕೆ ಒಂದು ವಿಜ್ಞಾಪನ ಪತ್ರಿಕೆಯಂ ಬರೆದು ಕಳುಹಿಸಿದಾರೆಂದು ಅಲ್ಲಿನ ಪತ್ರಿಕೆಯ ಮೂಲಕ ತಿಳಿದು ಬಹಳ ಸಂತೋಷಪಡುತ್ತೇವೆ ಈ ಏರ್ಪಾಡಿನ ವಿಷಯದಲ್ಲಿ ದಿವಾನರವರು ಮಹಾರಾಜರವರಿಗೆ ಸಿಫಾರಸ್ಸುಮಾಡಿ ಅವರು ತಮ್ಮ ಅನುಮತಿಯಂ ಕೊಡಲಿಕ್ಕೆ ಬೇಕಾದ ಸಹಾಯ ಮಾಡಬೇಕೆಂದು ಪ್ರಾರ್ಥಿಸುತ್ತೇವೆ ಸದ್ಯಕ್ಕೆ ಅದರ ಖರ್ಚು ವಿಷಯದಲ್ಲಿ ಸ್ವಲ್ಪಮಟ್ಟಿಗೆ ಆಲೋಚಿಸಲ್ಪಡಬಹುದು. ಇಲ್ಲಿ ಅನೇಕ ಇತರ ವಿದ್ಯೆಗಳಿಗಾಗಿ ಅಪರಿಮಿತವಾಗಿ ಧನವ್ಯಯ ಮಾಡಲ್ಪಡುತಲಿರುವದರಿಂದಲೂ, ಸಂಸ್ಥಾನದ ಹುಟ್ಟುವಳಿಯು ಸಾಲೇ ಸಾಲಿ ಜಾಸ್ತಿಯಾಗುತ ನೂತನ ವಿಷಯ ಕಲ್ಪನೆಗೆ ಅವಕಾಶವನ್ನೂ ಉತ್ಸಾಹವನ್ನೂ ಉಂಟುಮಾಡುತಲಿರುವದರಿಂದಲೂ ವಿದ್ಯಾರ್ಥಿಗಳ ಪ್ರಯೋಜನವನ್ನೂ ಸಂಸ್ಥಾನದ ಪ್ರತಿಷ್ಠೆಯನ್ನೂ ಪರ್ಯಾಲೋಚಿಸಿ ಅಸಾಧ್ಯ ಅಥವಾ ಅನಾವಶ್ಯಕವೆಂದು ಭಾವಿಸದೆ, ಸಾವ್ಯವಾದಮಟ್ಟಿಗೆ ತಯಾರಿಯಲ್ಲಿ ಪ್ರಸಕ್ತ ಉದ್ದೇಶವಂ ನೆರವೇರಿಸುವರೆಂದು ನಂಬುತ್ತೇವೆ.

## ಶುಭಸಮಯಗಳಲ್ಲಿ ವೇಶ್ಯಾಂಗನೆಯರಂ ಕರೆಯಿಸುವದನ್ನು ಕುರಿತು.

ಪ್ರಪಂಚದಲ್ಲಿ ಮನುಷ್ಯರು ತಮ್ಮ ಹೆಂಡತಿ ಮಕ್ಕಳಿಗೂ, ಗುರು ಹಿರಿಯರಿಗೂ ಧನ, ಧಾನ್ಯ, ವಸ್ತು, ಕೀರ್ತಿ, ಪ್ರತಿಷ್ಠೆಗಳುಂಟಾದ ಕಾಲಗಳಲ್ಲಿ ಮನಸ್ಸಿಗೆ ಉಂಟಾಗುವ ಒಂದು ಉತ್ಸಾಹ ಸ್ಥಿತಿಯನ್ನು ಸಂತೋಷವೆನ್ನುವರು. ಆ ಕಾಲದಲ್ಲಿ ಮೃಷ್ಟಾನ್ನ ಭೋಜನ, ದುಕೂಲವಸ್ತ್ರಧಾರಣ, ಸುಗಂಧಾನುಲೇಪನ, ಗಾನ, ನೃತ್ಯ, ಹಾಸ್ಯ, ದ್ಯೂತ, ಕವಿತ್ವ, ಇವು ಮೊದಲಾದ ಸಂತೋಷಸೂಚಕಗಳಾದ ಕಾರ್ಯಗಳನ್ನು ನಡೆಸಲ್ಪಡುತ್ತಿವೆ, ಇದಕ್ಕಾಗಿ ನೌಕರರು, ಚಾಕರರು, ಕಸಬುದಾರರು, ವಿದ್ವಾಂಸರು ಇವರೆಲ್ಲರೂ ಜಾತಿ ಮತ ಸಂಪ್ರದಾಯಾನುಸಾರವಾಗಿ ಅವರವರ ಉತ್ಸಾಹಕ್ಕನುಗುಣವಾಗಿ ಬರುತ್ತಿರುತ್ತಾರೆ.

ಈಗ ಕೆಲವು ಜನ ನವನಾಗರಿಕರು ವಿದ್ಯಾಶಾಸ್ತ್ರ ದೃಷ್ಟಿ ಮೇಲಾದವುಗಳಲ್ಲಿ ತಾವು ಪ್ರತಿಷ್ಠಾಪರರಾಗುವದಕ್ಕೋಸ್ಕರ, ಧರ್ಮೋಪದೇಶಗಳು ಮಾಡುವವರಲ್ಲಿ ಅಧಿಕ ಗೌರವವನ್ನಿಟ್ಟು ಇನ್ನಿತರ ಕೆಲವು ಅವಶ್ಯಕ ಸಂದರ್ಭಗಳಂ ಹುಡುಕುತ್ತಿದ್ದರೆ ವಿಶೇಷ ಶುಭ ಸಮಯಗಳಲ್ಲಿ ವೇಶ್ಯಾಂಗನೆಯರ ಕರೆಯಿಸಿ ಅವರಿಂದ ಗಾನ ನರ್ತನಗಳಂ ಮಾಡಿಸುವದನ್ನು ಅನುಚಿತವೆಂದೂ ಕುಲಾಂಗನೆಯರು ಲಜ್ಜೆಯಿಂದ ಅಂತಾ ಸಭೆಗಳಲ್ಲಿ ನಿಷಿದ್ಧ ವಿಷಯವೆಂದೂ ಪ್ರತಿಪಾದಿಸಿ ಗಾನ ನಾಟಕ ಪದ್ಧತಿಯನ್ನು ನಾಗರಿಕರಿಗೆ ಲೋಪವೆಂದೂ ವರ್ತಮಾನ ಪತ್ರಿಕೆಗಳಲ್ಲಿ ಪ್ರಚಾರಪಡಿಸುತ್ತಿದ್ದಾರೆ. ಇದರಿಂದ ನಮ್ಮ ಪೂರ್ವಿಕರು ವಿವೇಕಶೂನ್ಯರೆಂತಲೂ, ನಮ್ಮ ಪೂರ್ವ ಸಂಪ್ರದಾಯಗಳು ತುಚ್ಛವಾದವೆಂತಲೂ, ನಮ್ಮ ರಾಜರುಗಳೂ ರಾಜಮಂತ್ರಿಗಳೂ ಸಾಮಾನ್ಯ ಜನರಂತೆ ಆಯಿತು ಅವರ ಮಾತುಗಳನ್ನು ಯಾರೂ ಕೇಳುವವರಿಲ್ಲ. ಯಾವ ಕಾರ್ಯಕ್ಕೂ ಒಂದು ಕಾರಣ ಇದ್ದೇ ಇರುತ್ತದೆ ಯಷ್ಟೆ. ವೇಶ್ಯಾಂಗನೆಯರು ಕೂಡದು, ಕುಲಾಂಗನೆಯರಿಗೆ ಬಿಟ್ಟು ಅಧಿಕಾರ ಕೊಡಬೇಕೆಂಬುವದು ಯೂರೋಪಿಯನ್ನರ ಸಹವಾಸದಿಂದ ನಮಗೆ ಪ್ರಾಪ್ತವಾದ ಜ್ಞಾನವಾಗಿದೆ. ವೇಶ್ಯಾಸ್ತ್ರೀ ಅಂದರೆ ವ್ಯಭಿಚಾರಸ್ತ್ರೀ ಯೆಂದು ಅರ್ಥ ಮಾಡಿಕೊಂಡು ಇಂತವರ ದರ್ಶನವೂ ಪ್ರಿಯ ಸಂಸಾರಿಗಳಿಗೆ ಅನರ್ಥ ಪ್ರಾಪ್ತವಾಗುವದೆಂಬ ಭ್ರಾಂತಿಯೇ ಇದಕ್ಕೆ ಕಾರಣವೆಂದು ತೋರುತ್ತದೆ. ಹಿಂದೆ ಸ್ತ್ರೀಯರಲ್ಲಿ ನಿಷ್ಠನ ಸಭಕ್ತಿ ಯೆಂಬ ಭೇದವಿಲ್ಲದಿರಿಗ ನವೀನ್ಯರುಗಳೂ ಇಂಗ್ಲೀಷ್ ವಿದ್ಯಾಭ್ಯಾಸಿಗಳಾಗಿರುವವರೂ ರಾಜಸನ್ಮಾನಿತರಾದ ಪ್ರಾಮುಖ್ಯರಾಗಿ ಮೇರ್ಪಟ್ಟಿರುವವರಿಂದ ಅದಕ್ಕೆ ಸಾರ್ಥಕ್ಯವನ್ನು ಕಲ್ಪಿಸಬೇಕೆಂದು ಪ್ರಯತ್ನಪಡುತ್ತಿದೆ. ನಾವು ಈ ವಿಷಯದಲ್ಲಿ ಯೂರೋಪಿಯನ್ನರನ್ನು ವೇಲ್ಪಟ್ಟಿಯಾಗಿ ಇಟ್ಟುಕೊಳ್ಳುವದು ಅನುಚಿತವು. ಅವರಲ್ಲಿ ಸ್ತ್ರೀಯರು ಪರಕೀಯರೂ ಯೆಂಬ ಯೇರದು ವಿಧಗಳಿರುತ್ತಾರೆಯೇ ಹೊರ್ತು ಸಾಮಾನ್ಯರೆಂಬ ಮೂರನೆ ಜಾತಿ ಇಲ್ಲವು. ಅವರಲ್ಲಿ ವಿವಾಹಗಳು ಕಾಮಸ್ವಾತಂತ್ರ್ಯವಾಗಿಯೇ ಮಾಡಿಕೊಳ್ಳಲ್ಪಡುತ್ತೆ. ಅದರಿಂದ ಪುತ್ರಸಂತಾನವಿಲ್ಲದ ಸಂದರ್ಭಗಳಲ್ಲಿ ಸಹ ಬಹುಭಾರ್ಯಾ ಪರಿಗ್ರಹವು ನಿಷೇಧವು. ನೇಟಿವ್‌ಗಳಲ್ಲಿ ಸಾಮಾನ್ಯೆಯರೆಂಬುವ ಒಂದು ತರದ ಸ್ತ್ರೀಯರಿರುತ್ತಾರೆ. ಪುನರುಕ್ತರಾದ ಪುರುಷರನ್ನು ಗಾನ, ನಾಟ್ಯ, ಸರಸೋಕ್ತಿಗಳಿಂದ ಸಂತೋಷಪಡಿಸುತ್ತಾರೆ. ಅದಕ್ಕಾಗಿಯೇ ಅವರಿಗೆ ನಾಯಕಸಾನಿಗಳೆಂತಲೂ, ಕಳಾವಂತಿನಿಗಳೆಂತಲೂ ಹೆಸರುಂಟಾಯಿತು. ಇವರಲ್ಲಿ ಸಂಗೀತ ಮಾಡಿದರೆ ಜಾರತ್ವವೆನಿಸಿಕೊಳ್ಳುವದೇ ಹೊರ್ತು ವ್ಯಭಿಚಾರ ವೆನ್ನಿಸಿಕೊಳ್ಳಲಾರದು. ಹಿಂದಿನವರಿಗೆ ಪ್ರಸಕ್ತತ್ವವನ್ನು ಕಲ್ಪಿಸಿ ಅವರ ಸ್ತ್ರೀಯರು ಅಂಗ ತಿರಸ್ಕರಿಸಿ ಅವರ ಸ್ಥಾನದಲ್ಲಿ ಕುಲಾಂಗನೆಯರನ್ನೇರ್ಪಡಿಸುವದು ಬಹಳ ಅನುಚಿತವಾಗಿ ತೋರುತ್ತದೆ. ಕುಲಾಂಗನೆಯರು ಶಾಸ್ತ್ರ ನಿಯಮಗಳಿಗೊಳಪಟ್ಟು ಒಂದು ತಿಂಗಳಲ್ಲಿ ಕೆಲವು ದಿವಸಗಳು ಮಾತ್ರ ಪತಿಯ ಇಷ್ಟಾನುಸಾರ ವರ್ತಿಸತಕ್ಕವರಾಗಿರುವಲ್ಲಿ ಪರ ಪುರುಷರ ಸಾನ್ನಿಧ್ಯದಲ್ಲಿ ನಟಿಸುವದಕ್ಕೆ ಹ್ಯಾಗೆ ಸಾಧ್ಯವಾದಾರು? ಹಾಗಾದರೆ ಕುಲಾಂಗನೆಗಿಂತಲೂ ವಿವಾಹಾಂಗನೆಗೆ ಯಾವ ಅಭ್ಯಂತರವೂ ಇಲ್ಲವೆನ್ನುವಿರೋ? ಇದು ನಾಚಿಕೆಗೇಡು ವ್ಯಾಪಾರ. ಪುರುಷರಲ್ಲಿ ಸನ್ಯಾಸಿಗಳು ಹ್ಯಾಗೋ ಸ್ತ್ರೀಯರಲ್ಲಿ ವಿಧವೆಯರು ಹಾಗೆಂದು ತಿಳಿದುಕೊಳ್ಳಬೇಕು. ಇವರನ್ನು ಪುನಃ ಸಧವೆಯರನ್ನಾಗಿ ಮಾಡುವದೇ ಕಷ್ಟವಾಗಿರುವಲ್ಲಿ ವೇಶ್ಯೆಗಳಾಗಿ ಮಾಡುವದು ಹ್ಯಾಗೆ ಸಾಧ್ಯವಾದೀತು? ಮುಖ್ಯವಾಗಿ ವೇಶ್ಯಾಂಗನೆಯರನ್ನು ನಾಮಾವಶೇಷ ರಪ್ಪ ಪಡಿಸಬೇಕೆಂಬುವದು ಮದರಾಸ್ ಜಂಟಲ್‌ಮೆನ್‌ಗಳ ತಾತ್ಪರ್ಯವಾಗಿರುತ್ತದೆ. ಆ ಹೆಸರನ್ನು ಮಾತ್ರ ತೆಗದುಹಾಕಿ ಅವರ ಕೆಲಸಗಳನ್ನೆಲ್ಲ ಕುಲಾಂಗನೆಯರಿಂದ ಮಾಡಿಸಬೇಕೆಂಬುವದು ಮೈಸೂರು ಜಂಟಲ್‌ಮೆನ್‌ಗಳ ತಾತ್ಪರ್ಯ. ಇವ್ವೆಂತಿರಲಿ ಯೆಂಬುವದು ಬೆಂಗಳೂರಿನಲ್ಲಿರುವ ಕೆಲವರ ತಾತ್ಪರ್ಯ. ಈ ಅಲ್ಲರಿ ಮುಂದೆ ಪ್ಯಾಗೆ ಪರ್ಯವಸಾನವನ್ನೈದುವದೋ ನೋಡಬೇಕು.

---

ಮದರಾಸ್ ಮೇಲ್ ಪತ್ರಿಕೆಯ ಮಂಗಳೂರು ವರ್ತಮಾನದಾರನೊಬ್ಬ ತಾನು ಬರೆಯುತ್ತಾನೆಂದರೆ:— ಈ ವರ್ಷ ಕೆನರಾದಲ್ಲಿ ಕಂಡುಬಂದ ಆಶ್ಚರ್ಯಕರವಾದ ಒಂದು ವಿಷಯವನ್ನು ವಿಶದವಾಗಿ ತಿಳಿಸಲು ಬಹಳ ಅಪೇಕ್ಷೆಯುಳ್ಳವನಾಗಿರುತ್ತೇನೆ. ನಿನ್ನೆಯ ದಿನ ರಾತ್ರಿ ನಾನು ನನ್ನ ಕೋಣೆಯಲ್ಲಿ ಕುಳಿತುಕೊಂಡು ಓದುತ್ತಿರುವಲ್ಲಿ ಆಶ್ಚರ್ಯಕರವಾದ ಒಂದು ಧ್ವನಿಯನ್ನು ಜನರ ಕೋಣೆಕೋಣೆ ಕೇಳಲ್ಪಟ್ಟಿರುವಂತೆ ವರ್ತಮಾನ ಕೇಳಿದ ಕೂಡಲೆ ಯೆದ್ದು ಹೊರಗೆ ಹೋಗಿ ನೋಡುವಲ್ಲಿ ವಿಚಿತ್ರವಾದ ಒಂದು ಆಕಳು ಕಾಣಬಂತು. ಸದರೀ ಆಕಳಿಗೆ ಯೆರಡು ಮೂಗುಗಳೂ ಒಂದರೊಂದಕ್ಕೆ ಯೆರಡೆರಡು ಹೊಳ್ಳೆಗಳೂ ಇವ್ವನ್ನು ಯೆರಡು ಮೂಗುಗಳೂ ವಿರೂಪವಾಗಿ ಕಾಣುತ್ತಿವೆ, ದವಡೆಯ ಮೇಲಿನ ಹಲ್ಲುಗಳು ಬಹಳ ಅಳದುಹೋಗಿರುತ್ತಿವೆ, ಕೆಳಗಿನ ಹಲ್ಲುಗಳು ಉಬ್ಬಿಗಿವೆ. ಸಿಕ್ಕಿನ ಪ್ರಾಯುಕ್ತ ಕೆಳಗಿನ ಹಲ್ಲುಗಳೆಲ್ಲವು ಕಾಣಬರುತ್ತಿವೆ. ಸ್ವಾಭಾವಿಕವಾಗಿ ಯೆರಡು ಕಣ್ಣುಗಳಿರುವವಲ್ಲದೆ ಅದರ ಮಧ್ಯೆ ಮುಖದ ಕೆಳಗಡೆ ಮೂರನೇ ಕಣ್ಣು ಬಂದಿರುತ್ತೆ, ಪರಂತು ಮೂರನೇ ಕಣ್ಣು ವಿಸ್ತಾರವಾಗಿ ಬೆಳೆದಿರಲಿಲ್ಲವು. ಅದನ್ನು ಸ್ವಲ್ಪ ತೆರೆಯುವದಕ್ಕಾಗುತ್ತಿದೆಯೇ ಹೊರತು ಬೆಳಕನ್ನು ನೋಡುವದಕ್ಕಾಗುವದಿಲ್ಲವು. ಅದನ್ನು ಪ್ರಾಯಶಃ ಯಾವಾಗಲೂ ಮುಚ್ಚಿಕೊಂಡೇ ಇರುತ್ತೆ. ಪ್ರತ್ಯೇಕ ಮಧ್ಯೆ ಸ್ವಲ್ಪ ತೆರೆಯುವದೂ ಉಂಟು. ಮೂರನೇ ಕಣ್ಣಿರುವ ಭಾಗವು ಸ್ವಲ್ಪ ಉಬ್ಬಿಗಿರುತ್ತೆ. ಸದರೀ ಹಸುವಿನ ಮುಖವು ಬುಲ್‌ಡಾಗ್ ಯೆಂಬ ನಾಯಿಯ ಮುಖದಂತಿದೆ. ನಾಲಿಗೆಗಳು ಸ್ವಲ್ಪ ಸಣ್ಣವಾಗಿವೆ. ಈ ಭೇದಗಳು ತಿವಾಯಿ ಉಳಿದ ವಿಷಯಗಳಲ್ಲಿ ಇತರ ಹಸುಗಳಂತೆಯೇ ಇದೆ, ಪರಂತು ಕರ ಹಾಕಲಿಲ್ಲ, ಹಾಲು ಕೊಡುವದಿಲ್ಲವು. ವಯಸ್ಸಿನಲ್ಲಿ ದೇ ಯೆಂಟು ವರ್ಷಗಳಿರುವವು. ಸದರೀ ಹಸು ಸ್ವಂತ ಹುಲ್ಲು ತಿನ್ನಲಾರದು, ಹುಲ್ಲನ್ನು ಬಾಯಲ್ಲಿ ತುರುಕಿದರೆ ಅಗೆದು ನುಂಗುತ್ತದೆ. ಅನ್ನ ಇಟ್ಟರೆ ನಾಯಿ ಮಾಡುವಂತೆ ನಾಲಿಗೆಯಿಂದ ಯೆತ್ತಿಕೊಳ್ಳುತ್ತೆ. ಸಾಮಾನ್ಯ ಹಸುಗಳಂತಲ್ಲದೆ ಹುಲ್ಲನ್ನು ಅಗೆದು ನುಂಗುವದಕ್ಕೆ ಸ್ವಲ್ಪ ಹೊತ್ತು ಹಿಡಿಯುತ್ತೆ. ದಕ್ಷಿಣ ಕನರಾ ಜಿಲ್ಲಾ ಕಾಸರಗೋಡು ನಿವಾಸಿಯಾದ ನೇಟಿವ್ ಒಬ್ಬನು ಸದರೀ ಆಕಳನ್ನು ತಂದಿರುತ್ತಾನೆ. ಅದನ್ನು ದೊಡ್ಡಮನುಷ್ಯರ ಮನೆಗಳಿಗೆ ಕರೆದುಕೊಂಡು ಹೋಗಿ ಅವರಿಂದ ಇನಾಂಗಳಂ ಪಡೆದು ತನ್ನ ಕಾಲಕ್ಷೇಪ ಜೀವಿಸುತ್ತಲಿದ್ದಾನೆ. ಹಗಲಹೊತ್ತು ಅದನ್ನು ಹೊರಗೆ ತರುವದಿಲ್ಲವು. ಯಾಕೆಂದರೆ ಯೆಲ್ಲರು ನೋಡಿಬಿಟ್ಟರೆ ಜನರೊಳಗೆ ಅದರಲ್ಲಿ ಆಸಕ್ತಿ ಪ್ರಯೋಜನ ಭಂಗ ವುಂಟಾಗುವುದೆಂದು ಹೆದರುತ್ತಾನೆ. ಗವರ್ನಮೆಂಟಿನವರು ನ್ಯಾಯವಾದ ಕ್ರಯವು ನಾಲೀಕನಿಗೆ ಕೊಟ್ಟು ಅದನ್ನು ಕೊಂಡುಕೊಂಡು ಮ್ಯೂಜೆಯಂನಲ್ಲಾಗಲಿ ಪೀಪಲ್ಸ್ ಪಾರ್ಕ್ ಯೆಂಬ ತೋಟದಲ್ಲಾಗಲಿ ಇಡಿಸುವದು ಉಚಿತವಾಗಿರುವುದು, ಎಂಬದು.

---

ಈ ಇಂಡಿಯಾ ದೇಶದೊಳು ನೇಟಿವ್‌ಗಳ ಗೃಹಗಳಲ್ಲಿ ನಡೆಯುವ ಶುಭ ಸಮಯಗಳಲ್ಲೂ, ದೇವಾಲಯಗಳಲ್ಲಿ ನಡೆಯುವ ನಿತ್ಯ ನೈಮಿತ್ತಿಕೋತ್ಸವಗಳಲ್ಲೂ ದೇವದಾಸಿಗಳೆಂಬ ವಾರಾಂಗನೆಯರು ಕರೆಯಿಸಿ ಗಾನ ನರ್ತನಗಳಂ ಮಾಡಿಸುವದು ಅನಾದಿ ಸಂಪ್ರದಾಯವಾಗಿರುತ್ತಿದೆಯಷ್ಟೆ. ಈ ಕಾರ್ಯವು ಕೇವಲ ಅನುಚಿತವೆಂಬ ಭಾವವು ಮದರಾಸಿನಲ್ಲಿ ವೈಲಕ್ಷಣ್ಯಾಧಿಕ್ಯಗಳಾದ ಕೆಲವರು ದೊಡ್ಡಮನುಷ್ಯರ ಹೃದಯಗಳೊಳುಂಕುರಿಸಿ. ಸದರೀ ಪದ್ಧತಿಯಂ ಮೂಲೋತ್ಪಾಟನ ಮಾಡಬೇಕೆಂಬ ಸಂಕಲ್ಪದಿಂ ನೆತವ್ಮ್ ಗೋಷ್ಠಿಗೆ ಸೇರಿದ ಬೇರೆ ಕೆಲವರು ಸೇರಿಸಿಕೊಂಡು, ಅಲ್ಲಿಯಲ್ಲಿ ಸಭೆಗಳಂ ಕೂಡಿಸಿ, ಆ ಸಭೆಗಳಿಗೆ ಪ್ರಾಯಶಃ ಯೂರೋಪಿಯನ್ನರನ್ನೇ ಅಧ್ಯಕ್ಷರನ್ನಾಗಿ ಮಾಡಿ, ಈಶ್ವರ ಕೃಪೆಯಿಂದ ಲಬ್ಧವಾದ ತಮ್ಮ ವಾಗ್ಮಿತೆಯಿಂದಲೂ ಶಬ್ದಜಾಲದಿಂದಲೂ ಬಹುಮುಖವಾಗಿ ಮೇಲಿನ ಸಂಪ್ರದಾಯಗಳಂ ಖಂಡಿಸಿ, ಅದನ್ನು ಸಾಮಾನ್ಯವಾಗಿ ಯೆಲ್ಲರು ತ್ಯಜಿಸಬೇಕೆಂದು ಬೋಧಿಸುವುದು ಮಾತ್ರವಲ್ಲದೆ ಯೂರೋಪಿಯನ್ ದೊಡ್ಡಮನುಷ್ಯರ ಮರ್ಯಾದಾರ್ಥ ನೇಟಿವ್‌ಗಳಿಂದ ನಡೆಸಲ್ಪಡುವ ಔತಣ ಮೊದಲಾದ ವಿಶೇಷ ಸಂದರ್ಭಗಳಲ್ಲಿ ಅವರ ಸಂತೋಷಾರ್ಥ ಗಾನ ನರ್ತನಗಳಿಗೆ ವೇಶ್ಯೆಯರಂ ಕರೆಯಿಸಲ್ಪಡುವದಾದರೆ ಅಂತಾ ಔತಣಗಳಿಗೆ ತಾವು ಬರುವದಿಲ್ಲವೆಂದು ನಿರಾಕರಿಸಬೇಕೆಂದು ಗವರ್ನರ್ ಮೊದಲಾದ ಅಧಿಕಾರಿಗಳಂ ಪ್ರೇರಿಸುತಲಿರುವದು ಪ್ರಸಿದ್ಧ ವಿಷಯವಾಗಿದೆಯಷ್ಟೆ. ಈ ವಿಷಯದಲ್ಲಿ ಅಭಿಪ್ರಾಯಗಳು ಭಿನ್ನಭಿನ್ನಗಳಾಗಿವೆ. ಉಭಯ ಕಕ್ಷಿಗೂ ಪ್ರೋತ್ಸಾಹಕರವಾಗಲಿ ಆಧಾರಗಳಾಗಲಿ ಇಲ್ಲದಿರಲಿಲ್ಲವು. ಈ ವಿಚಾರವು ಮೊದಲು ಮದರಾಸಿನಲ್ಲುದ್ಭವಿಸಿ, ಸಾಂಕ್ರಾಮಿಕ ರೋಗದಂತೆ ಮೈಸೂರು ದೇಶದಲ್ಲಿ ಸಹ ವ್ಯಾಪಿಸಿ, ಆಧುನಿಕ ವೈಲಕ್ಷಣ್ಯಾಧಿಕ್ಯಗಳಾದ ಕೆಲವರಂ ಪೀಡಿಸಲಾರಂಭಿಸಿದೆ. ಮದರಾಸಿನಲ್ಲಿ ಕೆಲವರು ಅಲ್ಲಿನ ಗವರ್ನರ್ ಮೊದಲಾದವರನ್ನು ಬೋಧಿಸುವಂತೆ ಮೈಸೂರಲ್ಲಿನ ಕೆಲವರು ಶ್ರೀಮನ್ಮಹಾರಾಜರನ್ನು ಅವರ ದಿವಾನರನ್ನು ಬೋಧಿಸುವದರ ಮೂಲಕ ತಮ್ಮ ಇಷ್ಟವನ್ನೇರಿಸಿಕೊಳ್ಳಬೇಕೆಂದು ಪ್ರಯತ್ನಪಡುತಲಿರುವಂತೆ ತೋರುತಲಿದೆ. ಇದರ ಪರ್ಯವಸಾನವಂ ಕೇವಲ ಆತುರದೊಡನೆ ನಿರೀಕ್ಷಿಸುತಲಿರುವೆವು.

---

## Occasional Notes.
## ನೈಮಿತ್ತಿಕ ವಿಷಯನ್ಯಾಸ.

ಸಯಾಂ ಸಂಸ್ಥಾನಕ್ಕೂ ಫ್ರೆಂಚಿನವರಿಗೂ ಹೊಸ್ತಿನಲ್ಲಿ ಯುದ್ಧ ಪ್ರಾರಂಭವಾಗುವ ಕಾಲವು ಸಮೀಪಿಸುತಲಿರುವಂತೆ ತಿಳಿಯಬರುವದಾಗಿ ರಂಗೂನ್ ಟೈಂಸ್ ಪತ್ರಿಕೆ ತಿಳಿಸುತಿದೆ.

---

ಪೂರ್ವ ಸಮುದ್ರ ತೀರದ ರೈಲ್ ರಸ್ತೆಯನ್ನು ಬರುವ ಜನವರಿ ೧ನೇ ತಾರೀಖಿನಲ್ಲಿ ಮದರಾಸ್ ಗವರ್ನಮೆಂಟಿನವರಿಂದ ಇಂಡ್ಯಾ ಗವರ್ನಮೆಂಟಿನವರು ವಹಿಸಿಕೊಂಡು ರೈಲ್ವೆಗಳ ಡೈರೆಕ್ಟರ್ ಜನರಲವರ ಅಧಿಕಾರಕ್ಕೆ ಒಳಪಡಿಸುವರು.

---

ಲಂಡನ್ ಯೂನಿವರ್ಸಿಟಿಗೆ ಸೇರಿದ ಎಫ್. ಎ ಮತ್ತು ಬಿ. ಎ ಪರೀಕ್ಷೆಗಳಂ ಕಲ್ಕತ್ತೆಯಲ್ಲಿ ಸಹ ನಡೆಸುವದಕ್ಕೆ ಅವಕಾಶ ಕೊಡಿಸಬೇಕೆಂದು ಇಂಡ್ಯಾ ಗವರ್ನಮೆಂಟಿನವರು ಸದರೀ ಯೂನಿವರ್ಸಿಟಿ ಅಧಿಕಾರಿಗಳಂ ಕೇಳಿಕೊಂಡು ಅವರದು ಅಂಗೀಕರಿಸಿದರಾಗ್ಗಿ, ಪ್ರತಿ ಸಂವತ್ಸರದ ಜನವರಿ ತಿಂಗಳ ಮೂರನೇ ಸೋಮವಾರದಲ್ಲಿ ಎಫ್. ಎ. ಪರೀಕ್ಷೆಯೂ. ಅಕ್ಟೋಬರ್ ತಿಂಗಳ ಕಾಲ್ನೇ ಸೋಮವಾರದ ದಿನ ಬಿ. ಎ. ಪರೀಕ್ಷೆಯೂ ಪ್ರಾರಂಭವಾಗುವವು.

---

ಬ್ರಿಟಿಷ್ ಮತ್ತು ನೇಟಿವ್ ಮಿಲಿಟರಿ ಆಫೀಸರ್‌ಗಳು ನೇಟಿವ್ ಸಿಪಾಯಿಗಳಂ ಹೊಡೆಯುವಂತೆಯೂ ಅಂತಾ ಶಿಕ್ಷೆಗಳಂ ನಡೆಸಿದವರು ಪ್ರತಿಯೊಂದು ಸಂಗತಿಯನ್ನೂ ಕೇವಲ ವಾಕ್‌ದಂಡನೆಯ ಮಾತ್ರದಿಂದ ವಿಮುಕ್ತರಾಗುವಂತೆಯೂ ಕಮಾಂಡರ್ ಇನ್ ಚೀಫರವರ ಅವಧಾನಕ್ಕೆ ಬರಲು, ಮುಂದೆ ಅಂತಾ ಸಂದರ್ಭಗಳಲ್ಲಿ ತಕ್ಷೀರ್ ನಡೆಸಿದವನು ಯೆಂತಾ ಹುದ್ದೇದಾರನಾಗಲಿ, ಅತನನ್ನು ದಸ್ತಗಿರಿ ಮಾಡಿ, ಫೈಸಲ್ ಬಗ್ಗೆ ತಮಗೆ ತಿಳಿಸತಕ್ಕದೆಂದು ಕಮಾಂಡರ್ ಇನ್ ಚೀಫರವರು ಹುಕುಂ ಮಾಡಿರುತ್ತಾರೆ.

---

ಈ ತಿಂಗಳ ೧೨ ನೇ ತಾರೀಖಿನಲ್ಲಿ ತಿರುಚನ್ನಾಪಲ್ಲಿ ಕ್ಲಬ್ ಎಂಬ ಸಂಘದವರು ಸಾಮಾನ್ಯ ಸಭೆ ಸೇರಿದ ಕಾಲದಲ್ಲಿ ಅಲ್ಲಿನ ಸಬ್ ರಿಜಿಸ್ಟ್ರಾರವರಾದ ಮಿ. ಪಾರ್ಥಸಾರಥಿ ಅಯ್ಯಂಗಾರ್ ಬಿ. ಎ ಯವರು ವೇಶ್ಯೆಯರಂ ಕುರಿತು ಮಾಡಿದ ಉಪನ್ಯಾಸದಲ್ಲಿ ಅವರು ದೇವದಾಸಿಯರೆನ್ನಿಸಿ ದೇವರ ಸೇವೆಯಂ ಮಾಡುತ ಪರಿಶುದ್ಧರಾಗಿರುತಿದ್ದರು, ಪರಂತು ಕಾಲಕ್ರಮೇಣ ದುರ್ವೃತ್ತಿಗೆ ಪ್ರಾರಂಭಿಸಿದರು. ಹಿಂದುಗಳಾದ ನಾವು ಮಹರ್ಷಿಗಳ ಆಜ್ಞಾನುಸಾರ ನಡೆಯತಕ್ಕವರಾಗಿರುವದರಿಂದ ಸದರೀ ಜನರ ವಿಷಯದಲ್ಲಿಯೂ ಪರಿಶೀಲನೆಯನ್ನೂ ಮಾಡದಿರುವದು ನ್ಯಾಯ್ಯವಾಗಿರುವುದು, ಎಂಬದು.

---

## THE MONEY MARKET.

ಮದರಾಸ್, ಭಾನುವಾರ, ಮೇ 20 ನೇ ತಾ 1898

ಶೇಕಡಾ ೩, ಬಾಬತು ಗವರ್ನಮೆಂಟ್ ಪತ್ರಗಳು ರೂಪಾಯಿ, 104–2–0 ಇಂದ 104–10–0 ವರೆಗೆ.

ಮದರಾಸ್ ಬ್ಯಾಂಕ್ ಷೇರ್‌ಗಳು, (500) ರೂಪಾಯಿಗಳ ಬಾಬತು 975 ಇಂದ 980 ವರೆಗೆ.

ಅರ್ಬತ್‌ನಾಟ್ ಕಂಪೆನಿ ಬ್ಯಾಂಕ್ ಷೇರ್‌ಗಳು, (100) ಬಾಬತು 160 ಇಂದ 165 ವರೆಗೆ

ಸವರಿನ್‌ಗಳು, 16–4–0 ಇಂದ 16–8–0 ವರೆಗೆ

ಬ್ಯಾಂಕ್‌ಬಿಲ್‌ಗಳು ಯಾಪಿವರ್ತನೆಯ ದರಗಳು, ಲಂಡನ್‌ಗೆ 6 ತಿಂಗಳವಾಯಿದೆಗೆ, 1s. 2 13/16d.

ಹಾಗೆ 4 ತಿಂಗಳವಾಯಿದೆಗೆ, 1s 2 23/32d

ಹಾಗೆ ಕೇಳಿದಾಗ, 1s 2 ⅜d.

---

## LOCAL AND PROVINCIAL NEWS.
## ಸ್ಥಳದೇಶಮತ್ತು ಜಿಲ್ಲಾ ಪ್ರಾಂತ ವೃತ್ತಾಂತಗಳು

ಈ ಪಟ್ಟಣದಲ್ಲಿ ಸ್ಥಾಪಿಸಲ್ಪಟ್ಟಿರುವ ಗವರ್ನಮೆಂಟ್ ಆಸ್ಪತ್ರಿಗೆ ಸಮರ್ಥನಾದ ಒಬ್ಬ ನೇತ್ರಚಿಕಿತ್ಸಕನನ್ನು ಇಂಗ್ಲಾಂಡಿನಿಂದ ಕರೆಯಿಸಿ ನೇಮಕಮಾಡಬೇಕೆಂದು ಸೀನಿಯರ್ ಸರ್ಜನ್‌ರವರು ಗವರ್ನಮೆಂಟಿಗೆ ಸಿಫಾರಸ್ ಮಾಡಿರುವಂತೆ ತಿಳಿಯಬರುತಿದೆ.

---

ಇಲ್ಲಿನ ಪಟ್ಟಣ ಮ್ಯುನಿಸಿಪಾಲಿಟಿಯವರು ಮನೆಗಳ ಕಂದಾಯವಂ ಪುನಸ್ಸಿಮಾಕರ್ದಮಾಡಿ ಹೆಚ್ಚಿಸಬೇಕಾದ್ದಕ್ಕೆ ಹೆಚ್ಚಿಸಿ, ತಗ್ಗಿಸಬೇಕಾದ್ದಕ್ಕೆ ತಗ್ಗಿಸಿ, ಒಟ್ಟಿನಲ್ಲಿ ಈ ಬಾಬಸಿನ ವರಮಾನವನ್ನು ಜಾಸ್ತೀ ಮಾಡಬೇಕೆಂದುದ್ದೇಶಿಸುವಂತೆ ತಿಳಿಯಬರುತಿದೆ. ತಪ್ಪಾಲದಲ್ಲಿರುವ ಈ ದುರ್ಭಿಕ್ಷದಲ್ಲಿ ಲೋಕಾದಡಾಗಲ್ಲ ತೆರಿಗೆಗಳನ್ನು ಹೆಚ್ಚಿಸಬಹುದು: ಪ್ರಜೆಗಳು ತೆರುವ ತೆರಿಗೆಗೆ ಪ್ರತ್ಯುಪಕಾರವೇನು? ಮ್ಯುನಿಸಿಪಾಲಿಟಿಯಲ್ಲಿ ಹೇಳ ಪಡಿಸುವವರಲ್ಲಿಯೂ ಅದು ವಿಚಾರಕೆ ಇಲ್ಲದೆ ನಿರರ್ಥಕವಾಗಿ ದ್ರವ್ಯವಾಗುವದರಲ್ಲಿಯೂ ಸ್ವಲ್ಪವೂ ಕಡಮೆಯಿಲ್ಲವು.

---

ಈ ಪಟ್ಟಣದ ಕೋಟೆಗೆ ಇನ್ನೂ ಕೆಲವು ಬಾಗಿಲುಗಳು ಮಾಡಲ್ಪಡಬೇಕಾಗಿರುವದರಿಂದ ಅಲ್ಲಿನ ಅರಮನೆಯಲ್ಲಿರುವ ಕೆಲವು ಬಾಗಿಲುಗಳಲ್ಲಿ ಆವರಣಗಳನ್ನೇರ್ಪಡಿಸಿ ಅಧಿಕಗಳಿರುವದಕ್ಕೆ ಅನುಕೂಲವಾಗಿರುವಂತೆ ಸ್ಥಳಗಳು ರಿಪೇರ್ ಮಾಡಿಸಬೇಕೆಂಬದಾಗಿ ವಿಚಾರಣೆ ಪಿಡಬ್ಲ್ಯೂ ಇಂಜನಿಯರವರಿಗೆ ತಿಳಿಯಪಡಿಸಿರುತ್ತಾ

ರುವ ಡೆಯಿಲೀ ಪೋಸ್ಟ್ ಪತ್ರಿಕೆಯು ತಿಳಿಸುತಿದೆ. ಇದು ನೋಡಲಾಗಿ ಕೆಲವು ಐರೋಪ್ಯರಿಗೆ ಮೈಸೂರಿಗೆ ವರ್ಗವಾಗಲ್ಪಡುವುದೆಂದು ಉಂಟಾಗಿದ್ದ ಪ್ರವಾದವು ಉಪಶಮಿಸಿದಂತೆ ಭಾವಿಸಬೇಕಾಗಿದೆ.

---

ಮೈಸೂರ್ ಸೀಮೆಯ ಆನೆ ಬಂಗಾರ ಸಕ್ಯವ ರ್ಗಡೆಂಡೆಂಟರಾದ ಮಿ॥ ಶಾಮಯ್ಯಂಗಾರ್ರವರು ಕಡೂರ್ ಡಿಸ್ಟ್ರಿಕ್ಟಿನಲ್ಲಿ ಹಿಂದೆರಡು ಪ್ರದೇಶಗಳಲ್ಲಿ ಆನೆಗಳು ಹಿಂಡು ಕದಾಚಿತ್ ಬರುವದರಿಂದ ಅವು ಹಿಡಿಯುವಬಗ್ಗೆ ಅಲ್ಲಿ ಎರಡು ಕಡೆಗಳಲ್ಲಿ ಅದಕ್ಕಾಗಿ ತಕ್ಕ ಯೋಜನೆಗಳಂ ಮಾಡುತಲಿದಾರೆಂದು ತಿಳಿಯಬರುತಿದೆ ಈ ಸಂಸ್ಥಾನದಲ್ಲಿ ಬರುತ ಬರುತ ಆನೆಯ ವ್ಯಾಪಾರವು ವಿಶೇಷ ಕೀರ್ತಿಗೆ ನಿಮಿತ್ತವಾಗುತಲಿದೆ

---

ಶ್ರೀಮನ್ಮಹಾರಾಜರವರು ನೀಲಗಿರಿಯಿಂದ ವಾಪಸು ದಯಮಾಡುವಲ್ಲಿ ಗುಂಡಲ್ ತಾಲ್ಲೂಕಿಗೆ ಸೇರಿದ ಹಿಮವದ್ಗೋಪಾಲ ಬೆಟ್ಟಕ್ಕೆ ಹೋಗಿ ಅಲ್ಲಿನ ವಿಶೇಷಗಳಂ ನೋಡಿಕೊಂಡು ರಾಜಧಾನಿಗೆ ದಯಮಾಡುವರೆಂದು ಕೇಳುತ್ತೇವೆ ಸದರೀ ಬೆಟ್ಟದ ಮೇಲೆ ಮಂಜು ಗಡ್ಡೆಗಳು ಬಹಳವಾಗಿ ಬೀಳುವದರಿಂದ ಅದಕ್ಕೆ ಸದರೀ ಹೆಸರುಂಟಾಯಿತು, ಮತ್ತು ಪ್ರಸಿದ್ಧವಾದ ಯಾತ್ರಾಸ್ಥಳವಾದುದರಿಂದಲೂ, ಅಮೂಲ್ಯವಾದ ಓಷಧಿಗಳಿಂದ ತುಂಬಿರುವದರಿಂದಲೂ, ಅದಕ್ಕೆ ಗೋಸಾಯಿಗಳೂ ವೈರಾಗಿಗಳೂ ಬರುತಲಿರುತ್ತಾರೆ ಅಂತಾ ಜನರಿಗೆ ಮೈಸೂರು ಸರ್ಕಾರದಿಂದ ಉಲ್ಪಸೆ ಕೊಡಲ್ಪಡುತ್ತೆ.

---

ಮೈಸೂರ್ ಗವರ್ನಮೆಂಟ್ ಕಂಟ್ರೋಲರವರು ತಮ್ಮ ಆಫೀಸ್ ಸಿಬ್ಬಂದಿಗಳನ್ನು ಪುನರ್ವ್ಯವಸ್ಥೆ ಮಾಡಬೇಕೆಂಬ ತಾತ್ಪರ್ಯ ವುಳ್ಳವರಾಗಿದಾರೆಂತಲೂ, ಅಲ್ಲಿನ ನೌಕರಮಾನೇರನೇಕರಿಗೆ ಅವರು ಮಾಡುವ ಕೆಲಸಗಳಿಗೆ ತಕ್ಕ ತಲಬ್ ಸಲ್ಲುವದಿಲ್ಲವಾಗಿ ಅವರಿಗೆ ಪ್ರೋತ್ಸಾಹ ವುಂಟುಮಾಡಬೇಕೆಂದಿರುತಲೂ,ಅದರಮೇಲೆ ಅವರೀಗ ತಮ್ಮ ತಾಬೇದಾರರೆಲ್ಲರ ಹೆಸರು, ತಲಬ್, ನೌಕರಿಯ ಕಾಲ, ಈಮಧ್ಯೆ ಅವರಿಗೆ ಲಭಿಸಿದ ಇಜಾಪೆಗಳ ವಿವರ ವಗೈರೆ ತಪಸೀಲ್ ನಿಶಿ ಒಂದು ತಖ್ತೆಯನ್ನು ತಯಾರ್ಮಾಡಬೇಕೆಂದು ಹುಕುಂ ಮಾಡಿದಾರೆಂತಲೂ ಬೆಳದೇಶದ ಈವನಿಂಗ್ ಮೆಯಿಲ್ ಪತ್ರಿಕೆಯು ತಿಳಿಸುತಿದೆ ಇದು ನಿಜವಾಗಿರುವ ಪಕ್ಷಕ್ಕೆ ಸಂತೋಷಿಸಬೇಕಾದ ವಿಷಯವೆ

---

## THE MYSORE GAZETTE
## ಮೈಸೂರು ಗೆಜೆಟ

ಶ್ರೀಮನ್ಮಹಾರಾಜ ರಾಜಶ್ರೀ ಬಹದೂರವರ ಸರ್ಕಾರದಿಂದ ಕೊಡೋಣವಾದ ಇಸ್ತಿಹಾರನಾಮೆಗಳು.

---

ರಿಜಿಸ್ಟ್ರೇಷನ್ ಇಲಾಖಾ

೧೮೯೩ನೇ ಇಸವಿ ೧೩ನೇ ನಂಬರ್ ಸರ್ಕ್ಯುಲರ್ ಮೈಸೂರ್ ಶೀಮೆಯಲ್ಲಿರುವ ರಿಜಿಸ್ಟರಿಂಗ್ ಆಫೀಸರಿಗಳಿಗೆ

೧೮೯೩ನೇ ಇಸವಿ ಮಾರ್ಚ್ ೨೦ನೇ ಮಹಜರು ೧೬೪೮೯—೩ ೯೧೩ನೇ ನಂಬರುಳ್ಳ ಗವರ್ನಮೆಂಟ್ ಪ್ರೊಸೀಡಿಂಗ್ಸಿನಲ್ಲಿ ನಮೂದಾಗಿರುವರಿತಿಗನುಸಾರ ಮೆಂಟನರುವ ಮಂಜೂರಾತಿ ನಿಶಿ ರಿಜಿಸ್ಟ್ರೇಷನ್ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ಲವರು ತಿಳಿಯಪಡಿಸುವ ದೇನಂದರೆ — ಇನಾಂ ಜಮೀನುಗಳ ಕ್ರಯ ಭೋಗ್ಯಯಾ

1866ನೇ ಇಸವಿ ಫೆಬ್ರವರಿ ೨ನೇ ತಾರೀಖು 1—10ನೇ ನಂ.೮
1870ನೇ ಇಸವಿ ಫೆಬ್ರವರಿ ೧ನೇ ತಾರೀಖು 21—17ನೇ ನಂ.
1870ನೇ ಇಸವಿ ಜೂನ್ 29ನೇ ತಾರೀಖು 26—೩ನೇ ನಂ.
1885ನೇ ಇಸವಿ ಡಿಸೆಂ 2ನೇ ತಾರೀಖು ೨ನೇ ನಂಬರ್
1886ನೇ ಇಸವಿ ಸೆಪ್ಟಂಬರ್ ೩ನೇ ತಾರೀಖು ೬ನೇ ನಂಬರ್

ಇತರ ವಿಧವಾದ ಪರಭಾರೆಗಳನ್ನು ನಿರ್ಬಂಧಿಸಿ ನಿತ್ಯ ದಸ್ತಾವೇಜುಗಳ ರಿಜಿಸ್ಟ್ರೇಷನ್ ವಿಷಯದಲ್ಲಿ ನಿಷೇಧಿಸಿ ಕೊಡಲ್ಪಟ್ಟಿರುವ ಟಾಜಿನಲ್ಲಿ ಕಾಣಿಸಿರುವ ಸರ್ಕ್ಯುಲರ್‌ಗಳು ಖಂಡಿತವಾಗಿ ನ್ಯಾಯವಾದದಲ್ಲವೆಂದು ತೋರಿ ಬಂದದರಿಂದ ಅವು ಇದರಿಂದ ವಾಪಸು ತೆಗೆದುಕೊಳ್ಳಲ್ಪಟ್ಟಿರುತಿವೆ (ಅಂದರೆ ರದ್ದು ಮಾಡಲ್ಪಟ್ಟಿರುತಿವೆ)

೧ ಒಂದು ದಸ್ತಾವೇಜನ್ನು ರಿಜಿಸ್ಟರ್ ಮಾಡುವಾಗ್ಗೆ ಆ ದಸ್ತಾವೇಜು ಹುಟ್ಟಿದ್ದಕ್ಕೆ ಕೇವಲ ಸಾಕ್ಷಿರೂಪವಾಗಿರುತಿದೆಯೋ ಹೊರ್ತು ಅಂತಾ ದಸ್ತಾವೇಜು ಸ್ವತಃ ವುಂಟು ಮಾಡದಿರುವಂತಾ ಯಾವ ಬಾಧ್ಯತೆಗಳಾಗಲಿ ರಿಜಿಸ್ಟ್ರೇಷನ್ ದೆಶೆಯಿಂದ ಉಂಟಾಗಲಾರದು ಮತ್ತು ವುಂಟು ಮಾಡಲಾರದಾದ್ದರಿಂದ, ಒಬ್ಬ ರಿಜಿಸ್ಟರಿಂಗ್ ಆಫೀಸರ್ ತಮ್ಮಲ್ಲಿ ಹಾಜರ್ಮಾಡಲ್ಪಟ್ಟ ಒಂದು ದಸ್ತಾವೇಜನ್ನು, ರಿಜಿಸ್ಟ್ರೇಷನ್ ಆಕ್ಟಿನಲ್ಲಿ ನಮೂದಾಗಿರುವ ಕಾರಣಗಳು ಶಿವಾಯಿ ಅನ್ಯತರವಾಗಿ ನಿರಾಕರಿಸುವದು ಸರಿಯಾದ್ದಲ್ಲವೆಂದು ತೋರುತಿದೆ.

೨ ಅದಾಗ್ಯೂ ಅಧಿಕಾರವಿಲ್ಲದ ಪರಭಾರೆಗಳಿಗೆ ಸಂಬಂಧಿಸಿದ ದಾಖಲೆಗಳು ಕಾರಭಾರೀ ರೆವಿನ್ಯೂ ಅಧಿಕಾರಿಗಳ ಬಳಿ ಇರಬೇಕಾದದ್ದು ಅಪೇಕ್ಷಿತವಾದುದರಿಂದ ಮೇಲೆ ಕಂಡ ಸರ್ಕ್ಯುಲರ್‌ಗಳಲ್ಲಿ ತಿಳಿಸಲ್ಪಟ್ಟಿರುವ ಹುಕುಂಗಳಿಗೆ ವಿರುದ್ಧವಾಗಿ ರಿಜಿಸ್ಟ್ರೇಷನ್ ಬಗ್ಗೆ ಹಾಜರ್ಮಾಡಲ್ಪಡತಕ್ಕ ದಸ್ತಾವೇಜುಗಳ ನಕಲುಗಳನ್ನು ರಿಜಿಸ್ಟರಿಂಗ್ ಆಫೀಸರ್ ತಾವು ಯಾವ ಡಿಸ್ಟ್ರಿಕ್ಟಿಗೆ ಸೇರಿದವರೋ ಆ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರ ಬಳಿಗೆ ಕಳುಹಿಸತಕ್ಕದ್ದು

ಸಿ ಶ್ರೀನಿವಾಸಯ್ಯ
ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್

---

## SUMMARY OF NEWS
## ವೃತ್ತಾಂತ ಸಂಗ್ರಹವು

ಕಳೆದ ಶನಿವಾರ ಮುಂಬಯಿಯಲ್ಲಿ ರಾತ್ರಿ ಸುಮಾರು ೧೧ ಘಂಟೇ ಹೊತ್ತಿನಲ್ಲಿ ಒಬ್ಬ ಕೆರೋಸಿನ್ ಎಣ್ಣೇ ವ್ಯಾಪಾರಸ್ತನ ಅಂಗಡಿಗೆ ಬಂಕಿ ಬಿದ್ದು ೭೫,೦೦೦ ರೂಪಾಯಿಗಳಕ್ಕಿಂತ ಬಳುವಷ್ಟು ಎಣ್ಣೆ ಉರಿದು ಹೋಯಿತು

---

ವಿಲಾಯತಿಯಿಂದ ೧೮೯೧ನೆ ವರುಷದಲ್ಲಿ ಇಂಡಿಯಾಕ್ಕೆ ಬಂದ ನೂಲುಬಟ್ಟೆಗಿಂತಲೂ ೯೨ನೆ ಇಸವಿಯಲ್ಲಿ ೭ ೫೬ ೦೦೦ ರೂಪಾಯಿಗಳ ಬೆಲೆಯ ಬಟ್ಟೆಯು ಕಡಮೆಯಾಯಿತು, ಆದರೆ ಇಂಡಿಯಾದಿಂದ ವಿಲಾಯತಿಗೆ ಕಳುಹಿಸಲ್ಪಟ್ಟದರ ಬೆಲೆಯು ಹೋದವರ್ಷಕ್ಕಿಂತಲೂ ಈ ವರುಷದಲ್ಲಿ ೯,೯೫,೦೦೦ ರೂಪಾಯಿನಷ್ಟು ಹೆಚ್ಚಿತು

---

ವಾಯುವ್ಯ ಪ್ರಾಂತಗಳು ಮತ್ತು ಅಯೋಧ್ಯೆಯಲ್ಲಿ ಸೆನ್ಸಸ್ ಎಣಿಕೆಯ ಪ್ರಕಾರ ೨,೯೦೧೩೪೮ ಮಂದಿ ಹೆಂಗಸರೂ, ೩೪ ೪೦೭ ೯೦೧, ಜನ ಗಂಡಸರೂ ಇದ್ದಾರೆಂತಲೂ, ಆದರೆ ಇವರಲ್ಲಿ ೬೯,೪೮೩ ಗಂಡಸರೂ ೧೮೩೫ ಹೆಂಗಸರೂ ಅಲ್ಲಿನ ಸೆಂಟ್ರಲ್ ಮತ್ತು ಡಿಸ್ಟ್ರಿಕ್ಟ್ ಜೈಲುಗಳಲ್ಲಿ ಇರುತ್ತಾರೆಂತಲೂ ಕೇಳುತ್ತೇವೆ

---

ಕಳೆದ ೧೦ನೇ ತಾರೀಖಿನ ದಿವಸ ವಿಲಾಯತಿ ಲಂಡನ್ ಪಟ್ಟಣದಲ್ಲಿ ಇಂಪೀರಿಯಲ್ ಇನ್ಸ್‌ಟಿಟ್ಯೂಟ್ ಎಂಬ ಕಟ್ಟಡವು ಶ್ರೀಮದಿಂದಿಯ ಚಕ್ರವರ್ತಿನಿಯವರಿಂದ ಶಾಸ್ತ್ರೋಕ್ತವಾಗಿ ತೆರೆಯಲ್ಪಟ್ಟಿತು ಅದರ ಬಾಗಲಿಗೆ ಹಾಕಿದ್ದ ಬೀಗದ ಕೈ ನವರತ್ನಗಳಿಂದ ಕೆತ್ತಲ್ಪಟ್ಟಿತ್ತು ಇಂಡಿಯಾದ ರಾಜರುಗಳೂ ಕೆಲವರು ಆಕಾಲದಲ್ಲಿ ಹಾಜರಾಗಿದ್ದರು.

---

ಮದರಾಸ್ ಜನಾನಾ ಸಭೆಯಲ್ಲಿ ಉಪಾಧ್ಯಾಯಿನಿಯಾಗಿದ್ದ ರತ್ನಮ್ಮಾಳ್ ಎಂಬಾಕೆಯು ಆದಿನಾರಾಯಣ ಚೆಟ್ಟಿ ಎಂಬ ಒಬ್ಬ ವೈಶ್ಯ ವಿದ್ಯಾರ್ಥಿಯ ಬಳಿಯಲ್ಲಿದ್ದ ಸುಮಾರು ೨೦೦ ರೂಪಾಯಿ ಬಾಳುವ ಒಡವೆಗಳನ್ನು ಅಪಹರಿಸಿದಳೆನ್ನುವ ಕದ್ದು ಕೊಂಡಳೆಂದು ಛಾರ್ಜ್ ಮಾಡಲ್ಪಟ್ಟಳು, ಆದರೆ ಆಕೆಯು ತಾನು ಕಳುವಿನ ಅಪರಾಧಿ ಎಂದಾಗಿ ಒಪ್ಪಿಕೊಂಡದರಿಂದ ಮ್ಯಾಜಿಸ್ಟ್ರೇಟರು ಆಕೆಗೆ ೨ ತಿಂಗಳು ಕಠಿಣ ಸಜಾ ವಿಧಿಸಿದರು

---

ಚಿಕಾಗೋ ಎಂಬ ಪಟ್ಟಣದಲ್ಲಿ ಕೆಲವು ವಾರಗಳ ಹಿಂದೆ ಉ, ವಾಂಡರಬಿಲ್ಟ್ ಎಂಬ ಕುಬೇರನು ಅಲ್ಲಿಯ ಜಗತ್ಪ್ರದರ್ಶನ (ಪ್ರಪಂಚದ ವಸ್ತುಗಳೆಲ್ಲವನ್ನೂ ನೋಡುವ ಬಗ್ಗೆ ಕೂಡಿರುವ) ಜಾತ್ರೆಯ ಮೈದಾನದ ಮುಂದೆ ಬಹಳ ವಿಶಾಲವಾದ ಮನೆಗಳನ್ನು ಒಂದು ಸಾವಿರದ ಐದು ನೂರು ಸಾವಿರ ಡಾಲರುಗಳಿಗೆ ಬಾಡಿಗೆ ಮಾಡಿದನು ಈ ಪ್ರಕಾರ ಕೊಟ್ಟಿರುತ್ತಾನೆ ಬೇರೆ ಎರಡು ಮನೆಗಳ ಇನ್ನೊಂದು ಮನೆಯು ನಾಲ್ಕು ತಿಂಗಳ ಬಗ್ಗೆ ಪ್ರತಿ ತಿಂಗಳಿಗೆ ೫೦೦ ರಂತೆ, ಮತ್ತೊಂದು ಆರುತಿಂಗಳ ಬಗ್ಗೆ, ದರ ತಿಂಗಳಿಗೆ ೩೦೦೦ ರಂತೆ ಮಾಡಿದರು ಚಿಕಾಗೋ ಪಟ್ಟಣದ ಒಬ್ಬ ಲಕ್ಷಾಧಿಪತಿಯು ರಾಜ್ಯವಾಳುತಿರುವ ವಾಣಿಜ್ಯಕನು ಆ ಪ್ರದರ್ಶನದ ಕಾಲವು ಮುಗಿಯುವ ವರಿಗೆ ೫೦ ಸಾವಿರ ಪೌಂಡುಗಳಿಗೆ ಬಾಡಿಗೆಗೆ ಒಬ್ಬ ಗಾರ್ಡಿನರನು ಮಾಡಿಕೊಂಡನು. ಬೇರೆ ಕಡೆಯಲ್ಲಿ ಬಾಡಿಗೆ ಕೇಳಿರುಗಳು ಆಗುತ್ತ ಅವು ತಿಂಗಳಿಗೆ ಸಾವಿರ ಪೌಂಡುಗಳು ಬಹಳ ಮುಂಚೆಯಿಂದ ಇಪ್ಪತ್ತು ಸಾವಿರಕ್ಕೆ ಕಡಿಮೆಯಾಗಿ ಇದ್ದಂಥವು ಎಣಿಕೆಯ ಹೊರಗೆ ಇದ್ದಾವೆ ಬಹಳ ಜಾಲೀ

ಹೋಟಲುಗಳು ಅಲ್ಲಿಯ ದೊಡ್ಡ ಭೋಜನ ಗೃಹಗಳಲ್ಲಿ ಆ ಪ್ರದರ್ಶನದ ಸಮಯಕ್ಕಾಗಿ ಕಟ್ಟುವ ಬಗ್ಗೆ ತಯಾರಿಸಿದ್ದಾರೆ

---

ಸಾಮಾನ್ಯರಿಗೆ ನಿಜ ವಜೀರನನ್ನು ಕೊಂದದಕ್ಕೆ ನ್ಯಾಯವಾದ ಕಾರಣಗಳನ್ನು ಹೇಳುವಿರಾ ಎಂದು ಕೇಳಿದ್ದಕ್ಕೆ ಅವರು, ವಜೀರನು ತಮ್ಮನ್ನು ಕೊಲ್ಲುವದಕ್ಕೆ ಪ್ರಯತ್ನ ಮಾಡುತ್ತಾನೆಂದು ತಿಳಿದಾಬಂದದ್ದರಿಂದಲೂ, ಮತ್ತು ಆತನು ತಮ್ಮ ಗುಲಾಮನಿದ್ದುದರಿಂದ ಅವನನ್ನು ಬೇಕಾದಾಗ ಕೊಲ್ಲಲಿಕ್ಕೆ ತಮಗೆ ಅಧಿಕಾರವಿದ್ದುದರಿಂದಲೂ ಹೇಳಿದರು ಈ ಮಹಾತ್ಮರು ಗವರ್ನರ್ ಸಾಹೇಬರವರ ವಿಚಾರಣೆಗೆ ಬರೆದ ಜವಾಬಿನಲ್ಲಿ ತಾವು ಈಗ ೪೬ ವರುಷಗಳ ಮುಂಚೆ ಗಾದಿಯಮೇಲೆ ಕುಳಿತದ್ದು ಮೊದಲು ೪೦೦ ಕ್ಕಿಂತ ಹೆಚ್ಚು ಜನ ಗಂಡಸರನ್ನೂ ಹೆಂಗಸರನ್ನೂ ಕೊಂದು ಹಾಕಿರುತ್ತೇವೆಂದು ಒಪ್ಪಿಕೊಂಡಿರುತ್ತಾರೆ ಕ್ಯಾಟ ಏನ ಕವರ್ನಾರಿಂಗ ಆಫೀಸರಾದ ಸರ್ ರಾಬರ್ಟ್ ಸ್ಯಾಂಡಿಮನ್ ರವರ ಮರಣ ಹೊಂದಿದಾರಭ್ಯ ಖಾನರವರು ತಮ್ಮ ಸಂಸ್ಥಾನದಲ್ಲಿಯೂ ೬೦ ಜನರನ್ನು ಕೊಂದುಹಾಕಿರುತ್ತಾರೆ ಇದಲ್ಲದೆ ಈಗ ಕೆಲವು ತಿಂಗಳ ಮುಂಚೆ ಖಾನರವರು ತಮ್ಮ ಹೆಂಡತಿಯರಲ್ಲಿ ಒಬ್ಬಳನ್ನು ಜೀವದಿಂದಿರುವಾಗಲೇ ಸುಡಿಸಿದರೆಂತಲೂ, ಅವಳ ಸಂಬಂಧಿಕನೊಬ್ಬ ಮನುಷ್ಯನನ್ನು ಕಲ್ಲಿನಿಂದ ಜಜ್ಜಿ ಕೊಲ್ಲಿಸಿದರೆಂತಲೂ ತಿಳಿಯಬರುತಿದೆ — ರಾಜಹಂಸ

---

## EXTRACTS

ಈ ಕೆಳಗಿನ ವಿಷಯವು ಹಿಂದೂ ಧರ್ಮವನ್ನು ಕೇವಲ ನಿರ್ಭರವಾಗಿ ದೂಷಿಸುವ ಸಂಘಾರಕ ಪತ್ರಿಕೆಯಿಂದ ತೆಗೆದುಕೊಂಡಿರುತ್ತೇವೆ ಈ ವಿಷಯವನ್ನು ಸುಧಾರಕ ಜನರು ತಮ್ಮ ಪತ್ರದಲ್ಲಿ ತ್ತಿಕೊಂಡವನ್ನು ನೋಡಿ ಬಹಳ ಆಶ್ಚರ್ಯವಾಗುತಿದೆ ಅದೇ ಪ್ರಕಾರ ನಮ್ಮ ವಾಚಕರಿಗೂ ಇದು ಆಶ್ಚರ್ಯಕರವಾಗಿ ಇರಬಹುದು — ಹಿಂದೂ ಮಹಾಯೋಗಿಗಳ ಅನೇಕ ವಿಧ ಉಪಾಯಗಳು ಸುಗಂಧಯುಕ್ತವಾದ ಹವೆಯು ಮತ್ತು ನಿರು ಇವುಗಳೇ ಅನೇಕ ಪ್ರಕಾರದ ರೋಗಗಳು ಬಂದಾಗ ಆರೋಗ್ಯದ ಸ್ವಭಾವತಃ ಎಲ್ಲ ಪ್ರಾಣಿಗಳಿಗೂ ಮುಖ್ಯಕ್ಕೆ ಕಾರಣವಾಗುತಿದೆ ಹಾಗೆಯೇ ಸುಗಂಧಯುಕ್ತವಾದ ಘೃತ ಮತ್ತು ಉತ್ತಮವಾದ ಸಾಮಗ್ರಿಯು ಆರೋಗ್ಯವುಳ್ಳವಾಗಿ ಸಕಲ ಪ್ರಾಣಿಗಳಿಗೂ ಸುಖವಾಗುತಿದೆಂಬುದು ಎಲ್ಲರಿಗೂ ತಿಳಿದವಿಷಯವಾಗಿರುತ್ತೆ ಆದಾಗ್ಯೂ ಯಜ್ಞ ಮುಂತಾದ ಹೋಮ ಕರ್ಮಗಳಲ್ಲಿ ಶುದ್ಧದಿಂದ ಆಹುತಿಗಳನ್ನು ಮಾಡುವದರಿಂದ ಅದು ರೋಗ ನಾಶ ಹೊಂದಿ ಜಗತ್ತಿಗೆ ಸಮ್ಮಿಶ್ರವಾಗಿ ದುರ್ಗಂಧ ನ ಕೆಡಿಸುತ್ತದೆಂಬುದನ್ನು ಕಾಣುತ್ತ ಪದಾರ್ಥ ವಿಜ್ಞಾನ ಶಾಸ್ತ್ರ ಬಲ್ಲವರು ಬಲ್ಲೇ ರೀತಿಯಲ್ಲಿ ತಿಳಿದವರಾಗಿರುತ್ತಾರೆ ಆದಕಾರಣ ಪ್ರತಿಯೊಬ್ಬ ಮನುಷ್ಯನು ಆತನ ಷ್ಟಸಕ್ಕಕ್ಕೆ ಪ್ರತಿದಿವಸ ಆತನಿಂದ ಉತ್ಪನ್ನವಾಗುವಷ್ಟು ದುರ್ಗಂಧದ ದರೂ ನಾಶ ಮಾಡುವದಕ್ಕೆ ಅಗತ್ಯವಾಗಿ ಸಾಧ್ಯವಾದಲ್ಲದಾದರೂ ಪ್ರಾತಃಕಾಲದಲ್ಲಿಯಾದರೂ ಹೋಮ ಕರ್ಮಗಳನ್ನು ಮಾಡಬೇಕು ಇದರಿಂದ ಒಳ್ಳೇದ ಯೋಗ್ಯತೆಯು ಸಹಜವಾಗಿ ತಿಳಿದುಬರುವದು, ಪೂರ್ವಕಾಲದಲ್ಲಿ ಋಷಿಗಳು ಅನೇಕರು ಮುಂತಾದವರು ಆಪ್ರಕಾರ ಯಜ್ಞ ಯಾಗಗಳು ಮಾಡಿದ್ದರಿಂದ ಆ ದೇಶವು ರೋಗರಹಿತವಾಗಿ ಸುಖದಿಂದ ಕೂಡಿದ ಹೊಸ ಪ್ರಜೆಗಳ ಜನ್ಮವನ್ನು ಕೊಡುವುದಕ್ಕೆ ಉಪಾಯವಾಗಿರುತ್ತಿದ್ದವು ಹಾಗೆಯೇ ಪ್ರಕಾರ ಸಿದ್ಧವಾದ ಹೋತ್ರಿಗಳಂತ ಯಜ್ಞಗಳನ್ನು ಮಾಡುವದರಿಂದ ಯಾರಿಗೂ ಆರೋಗ್ಯವೂ ಸೌಖ್ಯವೂ ಪ್ರಾಪ್ತವಾಗುವದು, ಇದುವರೆಗೂ ನಮ್ಮ ದೇಶದ ಮುಖ್ಯ ತತ್ವಗಳಾದ ಅಹಿಂಸೆ, ಸತ್ಯ, ತಂಗೆ, ಚೋರ ಕರ್ಮಗಳನ್ನು ತ್ಯಜಿಸುವದು, ಪವಿತ್ರವಾದ ಆಚಾರಗಳನ್ನು ಸ್ವಭಾವದಲ್ಲಿ ತರುವದು ವಿದ್ಯಾವೃದ್ಧಿ ಅವಿದ್ಯಾ ಅಜ್ಞಾನ ನಾಶ, ದಯೆ, ಕ್ಷಮೆ, ಇಂದ್ರಿಯನಿಗ್ರಹ, ಯಾರಿಗೂ ಮೋಸ ಹೊಂದುವದರಿಂದ, ಯಾರೊಡನೆ ಪ್ರೀತಿ ಪೂರ್ವಕವಾಗಿ ಯೂ ಯಥಾಯೋಗ್ಯವಾಗಿಯೂ ಧರ್ಮಾನುಸಾರವಾಗಿಯೂ ನವ[illegible] ಮಾದ ವಿಷಯಗಳನ್ನು ವಿದ್ಯಾವಂತರೂ ಬುದ್ಧಿವಂತರೂ ಆದ ಎಲ್ಲ ಮತಸ್ಥರು ಅನುಕರಿಸಿಕೊಂಡು ಆಪ್ರಕಾರ ನಡೆ ಮಾಡಿಕೊಳ್ಳುವದೇ ಹಿತಕರವಾದ ಸಂಗತಿಗಳಾಗಿರುತಿವೆ — ಕ ಸು

---

ಬಿಲಾತ್ ಸಂಸ್ಥಾನದ ಖಾನರವರು ತಮ್ಮ ೫ ಜನ ಜೊತೆದಾರರನ್ನೂ ಪ್ರಧಾನಿಯನ್ನೂ ರಾಕ್ ಹೊಡೆದದರಿಂದ ಕಿಂದಕ್ಕೆ ನಾವು ಪ್ರಕಟಿಸಿರುತ್ತೇವೆಯಷ್ಟೆ ಅದರ ಈಗ್ಗೆ ಬಲೂಚಿಸ್ತಾನದಲ್ಲಿರುವ ಗವರ್ನರ್ ಜನರಲವರ ಏಜಂಟರು ಆ ಸಂಸ್ಥಾನದಲ್ಲಿರುವ ಸರದಾರರ ಮತ್ತು ಇನಾಂದಾರರ ಸಭೆಯನ್ನು ಮೇ ೧ನೇ ತಾರೀಖಿನ ದಿವಸ ಕ್ವೆಟಾ ಷಹರ ನೊಳಗೆ ಸೇರಿಸಿದ್ದರು ಈ ಸಭೆಯೊಳಗೆ ಬಲೂಚಿಸ್ತಾನದಲ್ಲಿರುವ ಇಂಗ್ಲಿಷರವರ ಏಜಂಟರಾದ ಸರ್ ಜೇಂಸ್ ಬ್ರೌನ್ ದೊರೆಗಳು ಖಿಲಾತ್ ಖಾನರವರು ತಮ್ಮ ದರ್ಬಾರಿನಲ್ಲಿ ನಡೆಸಿದ ಕೃತ್ಯಗಳನ್ನೂ ಅನ್ಯಾಯಗಳನ್ನೂ ಸವಿಸ್ತಾರವಾಗಿ ತಿಳಿಸಿ ಅವರಿಗೆ ಯಾವತರದ ಶಿಕ್ಷೆಯನ್ನು ಕೊಡುವದು ಯೋಗ್ಯವೆಂದು ಎಲ್ಲ ಸಭಿಕರ ಅಭಿಪ್ರಾಯಗಳನ್ನು ಕೇಳಿದ್ದಕ್ಕೆ ಯಲ್ಲರೂ ಖಾನರವರಿಗೆ ವಿರುದ್ಧವಾಗಿ ಅಭಿಪ್ರಾಯಗಳನ್ನು ಕೊಟ್ಟಂತೆ ತಿಳಿಯಬರುತ್ತೆ ಈ ಸಭೆಯಲ್ಲಿ ಸ್ವತಃ ಖಿಲಾತ್ ಖಾನರವರೂ ಅವರ ಮಕ್ಕಳೂ ಹಾಜರಿದ್ದರು ಸಭೆಯ ಕೆಲಸವು ಮುಗಿದ ಕೂಡಲೆ ಖಾನರವರ ಮನೆಯಲ್ಲಿ ಕಾವಲಿಗಾಗಿ ಇಟ್ಟಿದ್ದ ನೇಟಿವ್ ಶಿಪಾಯಿಗಳನ್ನು ಇಮ್ಮಡಿಸಿ ಅವರ ಮನೆಯಸುತ್ತ

ಮುತ್ತಲೂ ವಿಶೇಷ ಬಂದೋಬಸ್ತು ಇಡಲ್ಪಟ್ಟಿತು. ಖಾನರವರನ್ನು ಗಾದಿಯಮೇಲಿಂದ ತಳ್ಳಬೇಕೆಂದು ನಿಶ್ಚಯಿಸಲಾಯಿತ್ತೆಂಬುದು ಆಧಾರಪೂರ್ವಕವಾದ ವರ್ತಮಾನದಿಂದ ಗೊತ್ತಾಗುತಿದೆ ಮತ್ತು ಖಾನರವರ ಹಿರಿಯಮಗನಾದ ಮಹಮೂದಖಾನರವರನ್ನು ಗಾದಿಯಮೇಲೆ ಕುಳ್ಳಿರಿಸುವರೆಂತಲೂ, ಖಾನವರನ್ನು ಬಹುಶಃ ಹಿಂದುಸ್ಥಾನಕ್ಕೆ ಕಳುಹಿ ಖಿಲಾತ್ ಸಂಸ್ಥಾನದ ಕಾರ್ಭಾರವನ್ನು ಬಲೂಚಿಸ್ತಾನದೊಳಗಿನ ಒಬ್ಬ ನೇಟಿವ್ ಸರ್ಕಾರಿ ಅಧಿಕಾರಿಯ ವಶಕ್ಕೆ ಒಪ್ಪಿಸುವರೆಂತಲೂ ವಿಶ್ವಸನೀಯವಾದ ಮಾರ್ಗದಿಂದ ನಮಗೆ ತಿಳಿಯಬರುತಿದೆ.

---

ಬಂಧವಿನೋಚನೆಯಿಲ್ಲದ ಇನಾಂಜಮೀನುಗಳಿಗೆ ಸಂಬಂಧಪಟ್ಟ ಪತ್ರಗಳ ರಿಜಿಸ್ಟ್ರೇಷನ್ ವಿಷಯ —

೧೮೯೧ನೇ ಇಸವಿ ಮೇ ತಿಂಗಳು ೫ನೇ ತಾರೀಖು ೨೦ನೇ ನಂಬರ್ ರಿಜಿಸ್ಟ್ರೇಷನ್ ಆಫೀಸು ಸರ್ಕ್ಯುಲರಿಂದ ಬಂಧವಿನೋಚನೆಯಿಲ್ಲದ ಇನಾಂ ಜಮೀನುಗಳಿಗೆ ಸಂಬಂಧಪಟ್ಟ ಪತ್ರಗಳನ್ನು ರಿಜಿಸ್ಟರ್ ಮಾಡಕೂಡದೆಂದು ವಿಧಿಸಲ್ಪಟ್ಟಿದೆ ಈ ಸರ್ಕ್ಯುಲರಿಗೆ ಅನುಸಾರವಾಗಿ ನಂಜನಗೂಡು ಸಬ್‌ರಿಜಿಸ್ಟ್ರಾರ್ ಆಫೀಸಿನವರು ರಾಘವೇಂದ್ರಸ್ವಾಮಿಗಳ ಮಠದ ಸ್ವಾಮಿಗಳ ರಾಯಸ್ವಾಮಿ ಅಂಥಾ ಜಮೀನಿಗೆ ಸಂಬಂಧಪಟ್ಟ ಒಂದು ಪತ್ರವನ್ನು ರಿಜಿಸ್ಟರ್ ಮಾಡುವದಿಲ್ಲವೆಂದು ನಿರಾಕರಿಸಿದರು ಅಪೀಲು ಮಾಡಿದ್ದರಲ್ಲಿ ಮೈಸೂರು ಡಿಸ್ಟ್ರಿಕ್ಟ್ ರಿಜಿಸ್ಟ್ರಾರವರೂ ಸಹ ಅದೇ ಪ್ರಕಾರವಾಗಿ ಮಾಡಿದರು ರಿಜಿಸ್ಟ್ರೇಷನ್ ಆಕ್ಟು ೭೭ ನೇ ಸೆಕ್ಷನ್ ಪ್ರಕಾರವಾಗಿ ದಸ್ತಾವೇಜು ಮಾಡಿಸಿಕೊಂಡವರು ಮೈಸೂರು ಡಿಸ್ಟ್ರಿಕ್ಟ್ ಜಡ್ಜಿ ಕೋರ್ಟಿನಲ್ಲಿ ರಿಜಿಸ್ಟ್ರೇಷನ್ ಗೋಸ್ಕರ ದಾವಾ ಹಾಕಿದರು. ಈ ದಾವಾದಲ್ಲಿ ಮೈಸೂರು ರಿಜಿಸ್ಟ್ರಾರ್ ಮತ್ತು ನಂಜನಗೂಡು ಸಬ್ ರಿಜಿಸ್ಟ್ರಾರು ಪ್ರತಿವಾದಿಗಳಾಗಿ ಮಾಡಲ್ಪಟ್ಟಿದ್ದರು ಇವರುಗಳ ಪರವಾಗಿ ಗವರ್ನಮೆಂಟು ಕೇಳಿದ್ದರಿಂದ ಇನ್ಸ್‌ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷನವರಿಗೆ ತಿಳಿಸಿದ್ದರಿಂದ ಗವರ್ನಮೆಂಟ್ ಪ್ಲೀಡರ್ ರಿಜಿಸ್ಟ್ರಾರು ಕೋರ್ಟಿನಲ್ಲಿ ಹಾಜರಾಗಿ ಕೋರ್ಟಿನವರಿಗೆ ಬೇಕಾದ ಅಂಶಗಳನ್ನು ತಿಳಿಸಬೇಕೆಂದು ಏರ್ಪಾಡು ಮಾಡಿದರು ಡಿಸ್ಟ್ರಿಕ್ಟ್ ಜಡ್ಜಿಯವರು ಆ ಸರ್ಕ್ಯುಲರನ್ನು ಚರ್ಚೆಯಲ್ಲಿ ತಂದು ಹೊಂದದ ಕಾರಣ ಯೆಂಬುದಾಗಿ ತೀರ್ಮಾನಿಸಿ, ರಿಜಿಸ್ಟ್ರೇಷನ್ ಆಕ್ಟಿಗೆ ಅನುಸಾರವಾಗಿ ಇಲ್ಲ ನೆಗೆದಿನ ಸಬ್ ರಿಜಿಸ್ಟ್ರಾರವರು ರಿಜಿಸ್ಟರ್ ಮಾಡತಕ್ಕದೆಂದು ಡಿಕ್ರಿ ಮಾಡಿದರು ರಿಜಿಸ್ಟ್ರೇಷನ್ ಇನಸ್ಪೆಕ್ಟರ್ ಜನರಲ್ ಆಕ್ಟಿನ್ ೫೦ನೇ ಸೆಕ್ಷನ್ ಆಧಾರವಾಗಿ ಚೀಫ್ ಕೋರ್ಟಿಗೆ ರಿವಿಜನ್ [illegible] ಮಾಡಿಕೊಂಡ ವಿಚಾರಣೆಯಲ್ಲಿ ಬಂದು ಅರ್ಜಿಯನ್ನು ಸಮಾಚಾರಕ್ಕಾಗಿ ಹೈಕೋರ್ಟ್ ಗೆ ಪ್ರಯತ್ನ ಮಾಡಿ ಇದು ನ್ಯಾಯವಾಗಿ ನೆರವೇರಿಸಲ್ಪಡುವುದಿಲ್ಲ ಎಂದು ಆದ ನಂತರ ಬಳಿಕ ಇನ್ಸ್‌ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷನವರು ಚೀಫ್ ಕೋರ್ಟಿಗೆ ಅರ್ಜಿ ಕೊಟ್ಟಿದ್ದರು ಅಂದರೆ ಜಿಲ್ಲಾ ಕೋರ್ಟಿನವರಿಗೆ ಚೀಫ್ ಕೋರ್ಟಿನವರ ಅಭಿಪ್ರಾಯವು ತಿಳಿದಿದ್ದಿಲ್ಲ ತಮ್ಮನ್ನು ಪಾರ್ಟಿ ಮಾಡಿದ್ದಕ್ಕೆ ಕಾರಣವಿಲ್ಲವೆಂದು ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ಅವರು ನ್ಯಾಯದಿಂದ ತೀರ್ಪು ಹೇಳಿ ಡಿಸ್ಟ್ರಿಕ್ಟ್ ರಿಜಿಸ್ಟ್ರಾರವರು ಮತ್ತು ತಮ್ಮ ಸ್ವಂತ ತೀರ್ಮಾನಿಸಿ ಡಿಸ್ಟ್ರಿಕ್ಟ್ ಜಡ್ಜಿಯವರ ಜಡ್ಜ್‌ಮೆಂಟ ಕೇಳಿ ಯನ್ನು ರದ್ದುಮಾಡಬೇಕೆಂದು ಇನ್ಸ್‌ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷನವರನ್ನು ಕೇಳಿಕೊಂಡಿದಾರೆ

[illegible] ಅಲ್ಲದೆ ಸರ್ಕ್ಯುಲರ್ ವಿಷಯವಾಗಿ ಗವರ್ನಮೆಂಟಿನವರ ಅನುಮತಿ ಇಲ್ಲದೆ ಅದು ಕೊಡಲ್ಪಟ್ಟಿದ್ದರಿಂದ ಅದನ್ನು ಹಿಂದೆ ತೆಗೆದುಕೊಳ್ಳತಕ್ಕದ್ದೆಂದು ವಿಧಾಯಕ ಮಾಡಲ್ಪಟ್ಟಿತೆ ಒಬ್ಬ ಮನುಷ್ಯನಿಗೆ ಇಲ್ಲದುದನ್ನು ರಿಜಿಸ್ಟರ್ ಮಾಡುವವರಿಂದುಂಟಾಗುವದಿಲ್ಲ ಆದ್ದರಿಂದ ಬಂಧವಿನೋಚನೆಯಿಲ್ಲದ ಇನಾಂ ಜಮೀನುಗಳ ವಿಷಯವಾದ ಅಂಥಾ ಪತ್ರಗಳನ್ನು ರಿಜಿಸ್ಟರ್ ಮಾಡುವದರಿಂದ ಗವರ್ನಮೆಂಟಿನವರಿಗಿರುವ ಅಂಥಾ ಜಮೀನಿಗೆ ಸಂಬಂಧಪಟ್ಟ ಹಕ್ಕು ಯಾವದೂ ತಪ್ಪಿಹೋಗುವದಿಲ್ಲವೆಂದು ಚೀಫ್ ಕಮಿಷನರವರು ಇನ್ಸ್‌ಪೆಕ್ಟರ್ ಜನರಲ್‌ರವರ ಅರ್ಜಿಯಿಂತೆ ಹುಕುಂ ಮಾಡಿದ್ದಾರೆ ಇದರಿಂದ ಅನೇಕ ಜನಗಳಿಗೆ ಉಪಕಾರವಾಗುವದರಲ್ಲಿ ಸಂಶಯವಿಲ್ಲ ಇಂಥಾ ತೀರ್ಮಾನವು ಅತ್ಯಂತ ಅಪೇಕ್ಷಣೀಯವಾಗಿತ್ತು ಮತ್ತು ಇಂಥಾ ಸಂದರ್ಭಗಳಲ್ಲಿ ರೆವಿನ್ಯೂ ರುಗಳೂ ಹಿಂದೆ ಮುಂದು ನೋಡದೆ ತೋರುವ ಅಪ್ಪಿಕೊಳ್ಳುವಿತು ಶ್ರೀಮನ್ಮಹಾರಾಜರವರು ಇಂಥಾ ಶಾಸನವನ್ನು ಮಾಡಿದ್ದಕ್ಕಾಗಿ ಪ್ರಜೆಗಳು ತುಂಬಾ ಕೃತಜ್ಞರಾಗಿರುವರೆಂದು ನಾವು ನಂಬಿದೆವೆ — ವೃ ಪ

BANGALORE — Printed and published at the KARNATAKA PRESS, No 40, Hospital Road, CITY— 1893

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

## ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning**

[illegible] ಕರ್ಣಾಟಕ ಪ್ರಕಾಶನ [illegible] ವಿದ್ಯಾಪ್ರತಿಷ್ಠಾಹಿತೈಷೋಜಿತಾ [illegible] ಸಜ್ಜನೈರ್ದ್ದ [illegible] ಸುಮುದಃ

Vol XX] BANGALORE —MONDAY MAY 29 1893 [No 21

ಸಂಪುಟ ೨೦ | ಬೆಂಗಳೂರು — ಸನ್ ೧೮೯೩ನೇ ಇಸವಿ ಮೇ ೨೯ ನೇ ತಾರೀಖು ಸೋಮವಾರ [ಸಂಚಿಕೆ ೨೧


## ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,

ಇಂಗ್ಲೀಷು ಮತ್ತು ಕನ್ನಡ ಭಾಷೆಗಳಿಗೆ

| | ಮುಂಗಡವಾಗಿ | ಹಿಂದುಗಡೆಯಾಗಿ |
|---|---|---|
| ವರ್ಷ ೧ಕ್ಕೆ | [illegible] | ೮—೦ ೦ |
| ೬ ತಿಂಗಳಿಗೆ | ೪—೮—೦ | [illegible] |

ಇಂಗ್ಲೀಷು ಅಥವಾ ಕನ್ನಡ ಭಾಷೆಗಳಿಗೆ

| | ಮುಂಗಡ | ಹಿಂದುಗಡೆ |
|---|---|---|
| ವರ್ಷ ೧ಕ್ಕೆ | ३—०—0 | ४ 0—0 |
| ೬ ತಿಂಗಳಿಗೆ | 1—12 0 | २—8 0 |

ಈ ಪತ್ರಿಕೆ ದರ [illegible] ಬಾಕಿ [illegible] ಒಂದು [illegible] ಮುಂತಾದವರಿಗೆ ಪತ್ರಿಕೆ ಅರ್ಧ್ವ ದರದ ಮೇಲೆ ಪತ್ರಿಕೆ ಕಳುಹಿಸಲ್ಪಡುವದು [illegible] ಇಂಗ್ಲೀಷ್ ಭಾಗವೆ [illegible] ಕನ್ನಡ ಭಾಗವನ್ನು [illegible] ತೆಗೆದುಕೊಳ್ಳಬಹುದು [illegible] ಚಂದಾ ಮೊಬಲಗು ಅಂಗೀಕರಿಸಲ್ಪಡುವದು

## ಪ್ರಕಟನೆಯ ರಿವಾಜು

ಮೊದಲನೆಯ ದಫೆ ಪ್ರತಿ ಪಂಕ್ತಿಗೆ ೦—೧—೦

ಎರಡನೆಯ ದಫೆ ಪ್ರತಿ ಪಂಕ್ತಿಗೆ ೦—೧—೦

ಜಡು—ಎರಡಾವರ್ತಿಗಿಂತ [illegible] ಪ್ರಕಟನೆಗಳಿಗೆ [illegible] ಒಂದಕ್ಕೆ ೧ ಆಣೆಯಂತೆ [illegible] ಈ ಪತ್ರಿಕೆಯ [illegible] ಪ್ರಕಟನೆಗಳು ಕಳುಹಿಸುವವರು [illegible] ಪ್ರಕಟಿಸಿ [illegible] ಕಳುಹಿಸಬೇಕು [illegible] ಇಲ್ಲದಿದ್ದಲ್ಲಿ ಅವರು [illegible] ಪ್ರಕಟನೆ [illegible] ಪ್ರಕಟನೆಗಳನ್ನು [illegible] ಈ ಪತ್ರಿಕೆಗೆ [illegible] ಪ್ರಕಟಿಸಲ್ಪಡಲಾರವು


ADVERTISEMENTS

**NOTICE**

VAIDYASARA SANGRAHA

A TREATISE ON THE [illegible] OF

HINDU MEDICINE

*Price (India) Postage Rs 5 0 0*

ವೈದ್ಯಸಾರ ಸಂಗ್ರಹ

ಈ ಗ್ರಂಥಾವಲೋಕನದಿಂದ [illegible] ಕೋಬಲಿಗೆ [illegible] ಸ್ವತಃ ಕೊಡಬೇಕೆ ಕಳುಹಿಸ [illegible] ಇಲ್ಲದ [illegible] ಸಿಗಲಾರದು

ಬೆಲೆ ಕ್ರಯ—[illegible] ಮತ್ತು [illegible] ಪೋಸ್ಟೇಜ್ ಪ್ರತಿ ಒಂದಕ್ಕೆ ರೂ ೮ 0—0

ಟಿ ಬಿ ವೆಂಕಟಾಚಾರ್

ಬೆಂಗಳೂರ್ [illegible] ರೋಡ್ ೫೮ ನಂಬರು

## ನೋಟೀಸು

ಬೆಂಗಳೂರು ಕರ್ಣಾಟಕ್ ಪ್ರೆಸ್

೧೮೬೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು

ಇದರಲ್ಲಿ ಸಕಲವಿಧ ಕೆಲಸಗಳು [illegible] ಹಾಗೆಯೂ ಕ್ಷಿಪ್ರವಾಗಿಯೂ ನಡೆಯುವವು ಇದರಲ್ಲಿ ಅಚ್ಚು ಇಂಗ್ಲೀಷು ಕನ್ನಡ [illegible] ಮಾತ್ರವೆ [illegible] ಇತರ [illegible] ಸದರೀ ಕಾರ್ಖಾನೆ [illegible] ಎರಡು ತೀರಿಸಿಕೊಳ್ಳಬಹುದು.

## ನೋಟೀಸ್

ಗಣೇಶ ರಾಮಚಂದ್ರ ಕರ್ ಮತ್ತು ಕಂಪೆನಿ ಕಮಿಷನ್ ಏಜಂಟ್ಸ್

[illegible] ತಿಳಿಸಲ್ಪಡುವ ಸಾಮಾನುಗಳನ್ನು [illegible] ನಾವು ಸುಲಭ ಕ್ರಯಕ್ಕೆ ಬಹಳ [illegible] ತೀಸಿ ಮಾರುವೆವು [illegible] ಸರಸಿ [illegible]

[illegible] ಪ್ರಸ್ತಕ [illegible] ಗಳು, ಎಲ್ಲಾ ಮುದ್ರಣ [illegible] ಸಾಮಾನುಗಳು, [illegible] ಸಕ್ಕರೆ, ಜರತಾರಿ [illegible] ಹಿತ್ತಾಳೆ [illegible] ಬೆಳ್ಳಿ ಪಾತ್ರೆಗಳು [illegible] ಅತ್ತರ [illegible] ವಸ್ತ್ರಗಳು [illegible] ಪಾತ್ರೆಗಳು [illegible] ವಗೈರೆ ಇತರ ಸಾಮಾನುಗಳು

ಇದಾಲ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟ್ಯಾಂಪ್ [illegible] ಜವಾಬು ಮಾಡಲಾಗುವದು

ವಿಳಾಸ —ಗಣೇಶ ರಾಮಚಂದ್ರ ಕರ್ ಮತ್ತು ಕಂಪೆನಿ, ಕಮಿಷನ್ ಏಜಂಟ್ಸ್ ಠಾಕುರದ್ವಾರ ಮಾರ್ಕೆಟ್ ಪೋಸ್ಟ್ ಮುಂಬೈ


## ನೋಟೀಸು

ಅಡಿಯಲ್ಲಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು [illegible] ದ್ರಾಕ್ಷರ ಶಾಲೆಯಲ್ಲಿ ಮಾರಾಟಕ್ಕೆ ಸಿದ್ಧವಾಗಿವೆ ಬೇಕಾದವರು [illegible] ತರಿಸಿಕೊಳ್ಳುವದು

## ಸಂಸ್ಕೃತ ಗ್ರಂಥಗಳು

| | ರೂ | ಆ | ಪೈ |
|---|---|---|---|
| ಸಟೀಕಾ ವೈದ್ಯಸಾರ ಸಂಗ್ರಹ | ೧ | ೦ | ೦ |
| ,, [illegible] | ೧ | ೧ | ೦ |
| ,, [illegible] | ೦ | ೮ | ೦ |
| ,, [illegible] | ೧ | ೦ | ೦ |
| ,, [illegible] | ೦ | ೭ | ೦ |
| ,, [illegible] | ೦ | ೧ | ೦ |
| ,, [illegible] (ಸಟೀಕ) | ೦ | ೬ | ೦ |
| ವಿದ್ಯಾಪತ್ರಿ [illegible] | ೦ | ೩ | ೦ |
| ಸೂರ್ಯ [illegible] | ೦ | ೨ | ೦ |
| ಕೃಷ್ಣಕರ್ಣಾಮೃತ | ೦ | ೨ | ೦ |
| [illegible] ಅಮರ [illegible] | ೦ | ೨ | ೦ |
| ೧ ಕಾಂಡ | ೦ | ೧ | ೦ |

## ಕನ್ನಡ ಗ್ರಂಥಗಳು

| | ರೂ | ಆ | ಪೈ |
|---|---|---|---|
| [illegible] ಅಪ್ಪಾಲ್ | ೩ | ೦ | ೩ |
| ಡಿಟ್ಟೋ [illegible] | ೧ | ೨ | ೦ |
| ವೃಷಭೇಂದ್ರವಿಜಯ | ೧ | ೮ | ೦ |
| [illegible] | ೦ | ೪ | ೦ |
| [illegible] | ೦ | ೪ | ೦ |
| [illegible] | ೦ | ೨ | ೦ |
| [illegible] | ೦ | ೨ | ೦ |
| [illegible] | ೦ | ೨ | ೩ |
| [illegible] | ೦ | ೧ | ೦ |
| [illegible] ಚರಿತ್ರೆ | ೦ | ೧ | ೦ |
| [illegible] | ೦ | ೧ | ೦ |
| [illegible] | ೦ | ೧೨ | ೦ |
| [illegible] ವಿಲಾಸ | ೧ | ೨೦ | ೦ |

## ದಕ್ಷಿಣ ಮಹಾರಾಷ್ಟ್ರ ರೈಲ್ವೆ

ಸನ್ ೧೮೯೩ ನೇ ಇಸವಿ ಜುಲೈ ಗುರುವಾರ ೧ ನೇ ತಾರೀಖಿನಲ್ಲಿ ಪ್ರಾರಂಭವಾಗುವ ಸಾಲಿನಲ್ಲಿ ಬೇಕಾಗಿರುವ ಸಾಮಾನುಗಳ ಸರಬರಾಯಿ ಬಗ್ಗೆ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿವೆ, ಮತ್ತು ಸದರೀ ದರಖಾಸ್ತುಗಳು ಸನ್ ೧೮೯೩ ನೇ ಇಸವಿ ಜೂನ್ ೧೦ ನೇ ತಾರೀಖು ವರೆಗೆ ಅಂಗೀಕರಿಸಲ್ಪಡುವವು, ಸದರೀ ಸಾಮಾನುಗಳು ಯಾವವಂದರೆ —

೧ ಸ್ವದೇಶದ ತಯಾರಿ ಚರ್ಮದ ಸಾಮಾನುಗಳು.

೨ ಎಣ್ಣೆ, ಕೊಬ್ಬು ಮತ್ತು ಬಂದು ಬಟ್ಟೆಗಳು

೩ ಬಟ್ಟೆಗಳು

೪ ಕಾಗದ ಲೇಖನ ವಗೈರೆ

ದರಖಾಸ್ತುದಾರರ ಷೆಡ್ಯೂಲ್ ಪಟ್ಟಿ [illegible] ಹಾಕಲ್ಪಟ್ಟ ನಮೂನೆಗಳಲ್ಲಿ ದರಖಾಸ್ತುಗಳನ್ನು ಬರೆದು ಕಳುಹಿಸತಕ್ಕದ್ದು ಸದರೀ ನಮೂನೆಗಳನ್ನು ೧ ೨, ಮತ್ತು ೩ ನೇ ಬಾಬುಗಳ ವಿಷಯದಲ್ಲಿ ಹುಬ್ಬಳ್ಳಿಯಲ್ಲಿರುವ ಸ್ಟೋರ್ಸ್ ಡಿಪೋವಿನಿಂದಲೂ ಕಾಗದ ವಗೈರೆ ಸಾಮಾನುಗಳ ವಿಷಯದಲ್ಲಿ ಒಂದಕ್ಕೆ ೮ ಆಣೆ ಕೊಟ್ಟು ಧಾರವಾಡದಲ್ಲಿರುವ ಆಡಿಟ್ ಆಫೀಸಿನಿಂದಲೂ ಪಡೆಯಬಹುದು

ಕಂಪೆನಿಯವರ ಯಾವ ತಪ್ಸೀಲು ಪಟ್ಟಿಯನ್ನೂ ಷರತ್ತುಗಳನ್ನೂ ಅನುಸರಿಸಿ ಕಂಟ್ರಾಕ್ಟುಗಳು ಕೊಡಲ್ಪಡುವವೆ ಅವು ಅಪ್ಪ ದರಖಾಸ್ತುದಾರರ ಪ್ರತಿ ಒಂದು ಷೆಡ್ಯೂಲ್ ಪಟ್ಟಿಗೂ ಸೇರಿಸಲ್ಪಟ್ಟಿವೆ ನಾನಾವಿಧ [illegible] ಸಾಮಾನುಗಳ ವಿಷಯದಲ್ಲಾಗಲಿ, ಎಣ್ಣೆ ಅಥವಾ ಬಟ್ಟೆಗಳ ವಿಷಯದಲ್ಲಾಗಲಿ, ಇನ್ನೇನ ವರು ತಿಳಿದುಕೊಳ್ಳಬೇಕಾದ ಅವಶ್ಯವಿದ್ದರೆ ಅದನ್ನು ಹುಬ್ಬಳ್ಳಿಯಲ್ಲಿರುವ ಸ್ಟೋರ್ಸ್ ಡಿಪೋವಿನಿಂದಲೂ, ಸ್ಟೇಷನರಿ ವಿಷಯದಲ್ಲಿ ಧಾರವಾಡದಲ್ಲಿರುವ ಆಡಿಟ್ ಆಫೀಸಿನಿಂದಲೂ ತಿಳಿದುಕೊಳ್ಳಬಹುದು.

ದರಖಾಸ್ತು ಬರೆದು ಲಕೋಟೆಯಲ್ಲಿ ಹಾಕಿ ಮೊಹರು ಮಾಡಿ ಧಾರವಾಡದಲ್ಲಿರುವ ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪೆನಿಯ ಏಜಂಟರವರ ಹೆಸರಿಗೆ ಕಳುಹಿಸತಕ್ಕದ್ದು ಲಕೋಟೆಯ ಮೇಲೆ,

ಸ್ವದೇಶದ ಸಾಮಾನುಗಳ ಬಗ್ಗೆ ದರಖಾಸ್ತು

ಎಣ್ಣೆ, ಕೊಬ್ಬು ಮತ್ತು ಬಂದು ಬಟ್ಟೆಯ ಬಗ್ಗೆ ದರಖಾಸ್ತು

ಕಾಗದ ವಗೈರೆ ಸಾಮಾನುಗಳ ಬಗ್ಗೆ ದರಖಾಸ್ತು

ಎಂದು ಆಯಾ ಬಾಬುಗಳನ್ನು ನಮೂದಿಸತಕ್ಕದ್ದು

ಕಂಪೆನಿಯವರು ಕಡಮೆ ದರಖಾಸ್ತನ್ನಾಗಲಿ, ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೆ ಬದ್ಧರಾಗಿರುವದಿಲ್ಲವು

ಏಜಂಟರ ಆಫೀಸ ಧಾರವಾಡ ೧೩ ನೇ ಮೇ ೧೮೯೩

J CAMPBELL,
*Agent,*
*S M Railway*

## ಕೊಡಗು ಫಾರೆಸ್ಟ್ ಇಲಾಖಾ

ನೋಟೀಸು

1893 ನೇ ಇಸವಿ ಮೇ ತಾರೀಖು 18 ರಲ್ಲಿ [illegible] ಸಮೂನಿಯ ಸಾಮಾನುಗಳು [illegible] ಸನ್ 1893 ನೇ ಇಸವಿ ಜೂನ್ ತಾರೀಖು ೨೧ ರಲ್ಲಿ [illegible] ಹಾಕಲ್ಪಡುತ್ತವೆ

ತ್ಯಾಗದ [illegible] 1700 ಸಲೆ [illegible]

ಹೊನ್ನೆ ವಗೈರೆ 21 [illegible] 100

ಈ —ಸ 1893ನೇ ಇಸವಿ [illegible] ತಾರೀಖು 1 [illegible] ನಂ 5 [illegible] ರ [illegible] ಗೆಜೆಟ್ಟಿ [illegible] ಷರತ್ತು [illegible] ಕೊಡಲ್ಪಟ್ಟ [illegible] ಹತ್ತರಷ್ಟು [illegible] ಮೂಲಗನ್ನು [illegible] ತಾರೀಖು [illegible] 10 ದಿನಗಳೊಳಗೆ [illegible] ಮಾಡತಕ್ಕದ್ದು

J A LAKE
ಡಿಪ್ಯುಟಿ ಕನ್ಸರ್ವೇಟರ್,
ಕೊಡಗು ಫಾರೆಸ್ಟ್

## ನೋಟೀಸು

ಬೆಂಗಳೂರು ಸಿಟಿ ಮ್ಯುನಿಸಿಪಲ್ ಪ್ರೆಸಿಡೆಂಟರವರ ಸನ್ 1893—94 ನೇ ಸಾಲಿಗೆ ಬೇಕಾಗಿರುವ ರಸ್ತೆ [illegible] ಜಮಾವಣಿ ಮತ್ತು ಅವುಗಳ ಬಿಚಾವಣೆಗೆ ದರಖಾಸ್ತುಗಳನ್ನು ಮೇ ಮಾಹೆ [illegible] ೩೦ ನೇ [illegible] ಮಧ್ಯಾಹ್ನ 12 ಘಂಟೆ ವರೆಗೆ ಅಂಗೀಕರಿಸುತ್ತಾರೆ ದರಖಾಸ್ತು ನಮೂನೆ ಬೇಕಾಗಿರುವ ದಳ [illegible] ಗಳ ತಪ್ಸೀಲು, ಅವುಗಳ [illegible], ಇವುಗಳನ್ನು [illegible] ಷೆಡ್ಯೂಲ್ ಪಟ್ಟಿ ಮತ್ತು ಮುಚ್ಚಳಿಕೆ ಷರತ್ತು ಇವುಗಳೆಲ್ಲ, ಮ್ಯುನಿಸಿಪಲ್ ಎಕ್ಸಿಕ್ಯೂಟಿವ್ ಇಂಜನಿಯರವರ ಆಫೀಸಿನಲ್ಲಿ ಕಚೇರಿ ಕಾಲಗಳಲ್ಲಿ ದೊರೆಯುತ್ತೆ.

[illegible] ಕಂಟ್ರಾಕ್ಟುದಾರರುಗಳು ಕೋರ್ಟಿನಲ್ಲಿರುವ ಮ್ಯುನಿಸಿಪಲ್ ಆಫೀಸಿನಲ್ಲಿ ಮುದ್ರೆ [illegible] ವೈಸ್ ಪ್ರೆಸಿಡೆಂಟರಿಗೆ ದರಖಾಸ್ತು ಕೊಡತಕ್ಕದ್ದು ದರಖಾಸ್ತುಗಳು ಮೊಹರ್ ಮಾಡಲ್ಪಟ್ಟ ಅವುಗಳ ಮೇಲೆ [illegible] ಗಳ [illegible] ಜಮಾವಣೆ ಮತ್ತು ಅವುಗಳ ಬಿಚಾವಣೆಗೆ ದರಖಾಸ್ತು ಎಂದು ಬರೆಯತಕ್ಕದ್ದು

ಕಡಮೆ ದರಖಾಸ್ತು ಅಥವಾ ಯಾವ ದರಖಾಸ್ತು ಅಂಗೀಕರಿಸಲೇಬೇಕೆಂಬ ನಿಯಮವಿಲ್ಲ ಮತ್ತು ಹಾಗೆ ಅಂಗೀಕರಿಸದೆ ಇರುವದಕ್ಕೆ ಯಾವ ಕಾರಣವೂ ಕೊಡುವದಿಲ್ಲ.

ಬೆಂಗಳೂರು 22 ನೇ ಮೇ 1893 } K SRINIVASA RAO, *Vice President*

## ಪ್ರಸಿದ್ಧಪತ್ರಿಕೆ

ಇದರಿಂದ ಸಮಸ್ತ ಜನಗಳಿಗೂ ತಿಳುವಳಿಸುವದೇನಂದರೆ—ಈ ಕೆಳಗೆ ಸೂಚಿಸಲ್ಪಟ್ಟಿರುವ ನಂಬರಿನ [illegible] ರೂಪಾಯಿನ [illegible] ನೋಟುಗಳು [illegible] ಕಳೆದು ಹೋಗಿವೆ [illegible] ಯಾವ ಅಂಗಡಿಯಲ್ಲಾಗಲಿ, ಮತ್ತಲ್ಲಿಯಾಗಲಿ ಯಾರ ವಶಕ್ಕೆ ಸಿಕ್ಕಿದಪಕ್ಷದಲ್ಲಿ ಅದನ್ನು ತಂದುಕೊಟ್ಟವರಿಗೆ ಜಮ ರೂಪಾಯಿಗಳು ಇನಾಮು ದೊರೆಯುವದೆಂದು ಈ ನೋಟೀಸ ಮೂಲಕ ಪ್ರಕಟಿಸಲ್ಪಟ್ಟಿದೆ ಇದನ್ನು ತಂದು ಕೊಟ್ಟವರಿಗೆ ಯಾವವಿಧವಾದ ತಕ್ಸೀರೂ ಉಂಟಾಗಲಾರದೆಂದು ಭಾವಿಸುವದು

## ನೋಟ್ ನಂಬರ್

| Rs | T | No |
|---|---|---|
| 100 | 44 | 54692 |
| 100 | 38 | 57158 |
| 50 | 27 | 89987 |

20—5—93 ಮೈಸೂರ್ } ಸುಬ್ರಹ್ಮಣ್ಯ [illegible] ಅಯ್ಯರ್ [illegible], [illegible]

# BANGALORE CITY MUNICIPALITY.

## ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ

ಸನ್ ೧೮೯೮ನೇ ಇಸವಿ ಮೇ ಮಾಹೆ ೩೧ ನೇ ತಾರೀಖು ಬುಧವಾರದ ದಿನ ಬೆಳಗ್ಗೆ ೮ ಘಂಟೆಗೆ ಬೆಂಗಳೂರು ಸಿಟಿ ಮ್ಯುನಿಸಿಪಲ್ ಕಮಿಷನರುಗಳು ಕೋಟೆಯೊಳಗಿರುವ ತಮ್ಮ ಆಫೀಸಿನಲ್ಲಿ ಸಾಮಾನ್ಯ ಸಭೆ ಸೇರುವರು

ಆದರಲ್ಲಿ ಬರುವ ವಿಷಯಗಳು ವಿಚಾರಣೆಗೆ ಮುಂದೆ ಇಡಲ್ಪಡುವವು —

೧ ಸನ್ ೧೮೯೮ನೇ ಇಸವಿ ಏಪ್ರಿಲ್ ಮಾಹೆ ಬಾಬತು ಸೇರುವ ಜಮಾಖರ್ಚಿನ ಲೆಕ್ಕ, ಮರಾಮತ್ ಲೆಕ್ಕ, ಮನೆಗಳಿಗೆ ಹೋಗಿ ಚಿಕಿತ್ಸೆ ಮಾಡುವ ಮೆಡಿಕಲ್ ಆಫೀಸರ ಲೆಕ್ಕ, ತಾಗಾದೆ, ವಸೂಲಿ ಮತ್ತು ಬಾಕೀ ಪಟ್ಟಿ, ಶಾಖಾಗಾರಗಳ ಅಭಿವೃದ್ಧಿಯನ್ನು ಕುರಿತ ರಿಪೋರ್ಟ್, ಮತ್ತು ಶ್ರೀನಿವಾಸ ಮಂದಿರದ ಛತ್ರಕ್ಕೆ ಹೋಗಿದ್ದ ಜನರ ಪಟ್ಟಿ

೨ ಕೋಟೆ ಕಂದಕವನ್ನು ಬಾಳೆತೋಟವಾಗಿ ಮಾಡುವ ವಿಷಯದಲ್ಲಿ ಕೊಡಲ್ಪಟ್ಟ ಸಲಹೆಯು ಅನುಚಿತವೆಂದು ತಿಳಿಸಿ ಮೈಸೂರ ಗವರ್ನಮೆಂಟ ಸಾನಿಟರಿ ಕಮಿಷನರವರು ಬರೆದ ಸನ್ ೧೮೯೮ನೇ ಇಸವಿ ಏಪ್ರಿಲ್ ೨೫ನೇ ಮುಕಾಮ್ ಮಿತಿಯ ೬೨೯ನೇ ನಂಬರ ಲೆಟರ್

೩ ಆಫೀಸ ದಫೇದಾರನಿಗೂ ಜವಾನರಿಗೂ ಉಡುಪುಗಳು ಸರಬರಾಯಿ ಮಾಡುವ ವಿಷಯವನ್ನು ಕುರಿತ ಯಾದಾಸ್ತು.

೪. ಪಳೇಪೇಟೆ ರಸ್ತೆಯನ್ನು ಕಿಳ್ಳೆಮುನ್ಯಪ್ಪನವರ ಸತ್ರದ ರಸ್ತೆಯನ್ನು ಸೇರಿಸುವದಕ್ಕಾಗಿ ಒಂದು ರಸ್ತೆಯನ್ನು ಹಾಕುವದಕ್ಕೆ ಮ|| ನರಸಿಂಹಯ್ಯಂಗಾರ್ಯರವರ ಬಂಗ್ಲೆ ಕಾಂಪೌಂಡಿನ ಮೈಕಿ ಒಂದು ಭಾಗವನ್ನು ತೆಗೆದುಕೊಳ್ಳಬೇಕೆಂಬ ಹೊಸ ಆಲೋಚನೆಗೆ ಸಂಬಂಧಪಟ್ಟ ಯಾದಿ ಮತ್ತು ಅದಕ್ಕೆ ಸೇರಿದ ಕಾಗದಗಳು

೫ ಕೋಟೆಯ ದೊಡ್ಡ ಮೋರಿಯ ವಿಷಯದಲ್ಲಿ ಮಾಡಲ್ಪಟ್ಟ ಅಂದಾಜು ಮತ್ತು ಕಂಟ್ರಾಕ್ಟುದಾರನು ಜಾಸ್ತೀ ಮೊಬಲಗನ್ನು ಪಡೆಯಲಿಕ್ಕೆ ಹಕ್ಕು, ಇವುಗಳಿಗೆ ಸಂಬಂಧಪಟ್ಟ ಕಾಗದಗಳು

೬ ಪೊಲೀಸ ಜಮೀನಿಗೆ ಸೇರಿಸುವದಕ್ಕಾಗಿ ಮ| ನಾರಾಯಣಪ್ಪ ಮತ್ತು ಮ|| ಅಬ್ದುಲ್ ಕರೀಂ ಸಾಹೇಬರವರ ಬಂಗ್ಲೆಗಳ ಕಾಂಪೌಂಡಿನಿಂದ ಒಂದು ಭಾಗವನ್ನು ಪಡೆಯುವದಕ್ಕೂ, ಮ| ಅಬ್ದುಲ್ ಕರೀಂ ಸಾಹೇಬರವರಿಗೆ ೧೬೦ ರೂಪಾಯಿಗಳು ಈ ಮೊಬಲಗು ಕೊಡುವದಕ್ಕೂ ಸಂಬಂಧಪಟ್ಟ ಯಾದಿ

೭ ಸನ್ ೧೮೯೮ ನೇ ಇಸವಿ ಏಪ್ರಿಲ್ ೧೩ನೇ ತಾರೀಖಿನಲ್ಲಿ ಮ| ಬಿ. ವೆಂಕಟ್ರಾಮಯ್ಯನವರು ಬರೆದ ಕಾಗದದಲ್ಲಿ ಸೂಚಿಸಲ್ಪಟ್ಟಿರುವ ಅಂಶಗಳು —

(1) ಸಿಟಿ ಅಭಿವೃದ್ಧಿಸಂಘದ ಸೆಕ್ರೆಟರಿ ಕೆಲಸದಿಂದ ವೈಸ್ ಪ್ರೆಸಿಡೆಂಟರನ್ನು ಬಿಡುಗಡೆ ಮಾಡಬೇಕಾದ್ದು

(2) ಮ್ಯುನಿಸಿಪಲ್ ಎಕ್ಸಿಕ್ಯೂಟಿವ್ ಇಂಜನಿಯರ ನೇಮಕವನ್ನು ಗವರ್ನಮೆಂಟನವರ ಒಪ್ಪಿಗೆ ಒಪ್ಪಿಸತಕ್ಕದ್ದು

(3) ಬೋರ್ಡಿನ ಮೀಟಿಂಗನ್ನು ತಿಂಗಳ ಕಡೇ ಬೃಹಸ್ಪತಿವಾರದ ದಿನ ಇಡುವದು

(4) ಮ್ಯುನಿಸಿಪಲ್ ಸರಹದ್ದಿಗೆ ಒಳಪಟ್ಟಿರುವ ರಸ್ತೆಗಳ ಮತ್ತು ಚರಂಡಿಗಳ ಸ್ಥಿತಿಯು ಆಡವದಿಯಿಂದ ರಿಪೋರ್ಟ್ ಮಾಡುವದಲ್ಲದೆ ಅವುಗಳನ್ನು ದುರಸ್ತು ಮಾಡುವದಕ್ಕೆ ಒಂದು ಅಂದಾಜು ಪಟ್ಟಿಯನ್ನು ತಯಾರ್ಮಾಡಿ ಕಳುಹಿಸತಕ್ಕಬಗ್ಗೆ ಒಂದು ಕಮಿಟಿಯನ್ನು ನೇಮಕ ಮಾಡಬೇಕಾದ್ದು.

೮ ಮ|| ಎಸ್ ರಾಮಯ್ಯನವರು ಬರೆದ ಸನ್ ೧೮೯೮ನೇ ಇಸವಿ ಏಪ್ರಿಲ್ ೧೩ನೇ ಮುಕಾಮ್ ೧೫ನೇ ನಂಬರ ಕಾಗದದಲ್ಲಿ ತಿಳಿಸಿರುವ ವಿಷಯಗಳು —

(a) [illegible] ಮತ್ತು [illegible] ಸಾಕಿಸಬೇಕಾದ್ದು

(b) ರಸ್ತೆಯನ್ನು ಅಗಲಮಾಡುವದಕ್ಕಾಗಿ ಮೆ|| ಸಾರಾ ದಾಸರವರ ಮನೆ ಮುಂದುಗಡೆ ಇರುವ ಸ್ಥಳ ಪ್ರಸೆಂಪರ ಒಂದು ಸಣ್ಣ ಮನೆಯನ್ನು ಕಿತ್ತುಹಾಕತಕ್ಕದ್ದು.

೯ ಮ|| ಸ್ವಾಮಿದಾಸ ಪಿಳ್ಳೆಯವರು ಸಿಟಿ ಟಪಾಲ್‌ದಾರ್ ಆಫೀಸ [illegible] ಆಲೋಚನೆ ಕೊಡಬೇಕೆಂದು ಬರೆದುಕೊಂಡ ಯಾದಿ

೧೦ ಇದರಡಿ ಬರುವ ರಸ್ತೆಗಳಿಗೆ ಮರಳು ಜಲ್ಲಿ ಹಾಕಿ ದುರಸ್ತು ಮಾಡುವದಕ್ಕೆ ಏರ್ಪಡಿಸಿದ ಅಂದಾಜು

| | | |
|---|---|---|
| ೧. | ಪೋಸ್ಟಾಫೀಸ ರೋಡಿಗೆ | ೧,೨೮೩ |
| ೨ | ಲಾಲ್‌ಬಾಗ್ ರಸ್ತೆಗೆ | ೯೩೮ |
| ೩. | ಹೊಸಕೋಟೆ ರಸ್ತೆಗೆ | ೭೦೩ |
| ೪ | ಹೊಸೂರು ರಸ್ತೆಗೆ | ೧,೨೮೬ |
| ೫ | ಆವೆನ್ಯೂ ರಸ್ತೆಗೆ | ೧,೩೯೧ |
| ೬ | ಸದರಿ ರಸ್ತೆಗೆ ಜಲ್ಲಿ ಹಾಕುವದಕ್ಕೆ | ೧,೧೦೩ |

೧೧. ಮ್ಯುನಿಸಿಪಲ್ ಬೋರ್ಡ್ ಮೀಟಿಂಗಳನ್ನು ಆಫೀಸ ಕೆಲಸದ ಹೊತ್ತಿನಲ್ಲಿ ಯೇತಕ್ಕೆ ಮಾಡಬಾರದೆಂದು ವಿಚಾರಪೂರ್ವಕ ಗವರ್ನಮೆಂಟಿನವರು ಮಾಡಿದ ೧೮೯೮ನೇ ಇಸವಿ ಏಪ್ರಿಲ್ ೩ನೇ ಮುಕಾಮ್ ೧೬,೩೦೨—೧೧—೪೦೨—೯೨ನೇ ನಂಬರ ಪ್ರೊಸೀಡಿಂಗ್ಸ್

೧೨ ಮ್ಯುನಿಸಿಪಲ್ ಲೆಕ್ಕಗಳ ತನಿಖೆಗೆ ಕೆಲವು ರೂಲ್ಸುಗಳನ್ನು ಮಾಡಬೇಕಾದ ವಿಷಯದಲ್ಲಿ ಮಾರ್ಚಿ ೧೯ನೇ ತಾರೀಖಿನಲ್ಲಿ ಸಬ್ ಕಮಿಟಿಯವರು ಸೂಚಿಸಿದ ಪ್ರೊಸೀಡಿಂಗ್ಸ್

೧೩ ಮಹಮ್ಮದನ್ ಬಾಲಿಕಾ ಪಾಠಶಾಲೆಯ ಪ್ರಯೋಜನಕ್ಕಾಗಿ ಮ|| ಬಾಬ ಸಾಹೇಬ ಸಾಹೇಬರವರು ದಾನಕೊಡಲ್ಪಟ್ಟ ಜಮೀನಿನ ವಿಷಯಕ್ಕೆ ಸಂಬಂಧಪಟ್ಟ ಯಾದಾಸ್ತು ಮತ್ತು ಕಾಗದಗಳು

೧೪ ಸಂಪಂಗಿ ಕೆರೆಯಲ್ಲಿರುವ ಕಾಂಟೆಯ ಕಟ್ಟೆಗಳಿಗೆ ಕಲ್ಲು ಕಟ್ಟುವದಕ್ಕೆ ಅಂದಾಜು

೧೫ ಧರ್ಮಾಂಬುಧಿ ಕೆರೆಯಲ್ಲಿನ ಬಾವಿಗಳಿಂದ ಯಂತ್ರ ಮುಖಾಂತರ ಕಾಲುವೆಗಳಿಗೆ ನೀರು ಬಿಟ್ಟ ಕಾಲದಲ್ಲಿ ಜಾಸ್ತೀ ಕೆಲಸ ಮಾಡಿದ್ದುದಕ್ಕೆ ಸಬ್ ಓವರ್‌ಸಿಯರಿಗೆ ಬಹುಮಾನ ಕೊಡಬೇಕೆಂದು ಶಿಫಾರಸ ಮಾಡಿ ಮ್ಯುನಿಸಿಪಲ್ ಎಕ್ಸಿಕ್ಯೂಟಿವ್ ಇಂಜನಿಯರವರು ಸನ್ ೧೮೯೮ನೇ ಇಸವಿ ಮೇ ೧೩ನೇ ತಾರೀಖಿನಲ್ಲಿ ಬರೆದ ೯೪೨ನೇ ನಂಬರ ಯಾದಿ.

೧೬ ಎಕ್ಸಿಕ್ಯೂಟಿವ್ ಇಂಜನಿಯರವರು, ೬೨೪೩—೧—೩ ರೂಪಾಯಿಗಳ ವರೆಗೆ ಮಂಜೂರಿ ಇಲ್ಲದೆ ಇರುವ ಬಿಲ್ಲುಗಳ ಒಂದು ಪಟ್ಟಿಯನ್ನು ಕಳುಹಿಸಿ ಸನ್ ೧೮೯೮ನೇ ಇಸವಿ ಏಪ್ರಿಲ್ ೧೩ನೇ ತಾರೀಖಿನಲ್ಲಿ ಬರೆದ ೯೩೯ನೇ ನಂಬರ ಯಾದಾಸ್ತು

೧೭ ಆಸ್ಪತ್ರೆ ಗ್ರಾಮಗಳಿಗೆ ಕಾನಸರ್ವೆನ್ಸಿ ಓವರಸಿಯರುಗಳ ನೇಮಕವಾಗಬೇಕೆನ್ನುವುದನ್ನು ಕುರಿತ ಯಾದಾಸ್ತು.

೧೮. ನೀರಿನ ಸರಬರಾಯಿ ವಿಷಯದಲ್ಲಿ ಆದ ಖರ್ಚಿನ ಪಟ್ಟಿಯನ್ನು ತೋರಿಸುವ ಯಾದಿ.

೧೯ ಇದರಡಿ ತಿಳಿಸಲ್ಪಡುವ ಪಾಠಶಾಲೆಗಳ ನಿರ್ವಹಣ ಕಾರ್ಯವನ್ನು ಗವರ್ನಮೆಂಟಿಗೆ ವರ್ಗ ಮಾಡುವ ವಿಷಯಕ್ಕೆ ಸಂಬಂಧಪಟ್ಟ ಯಾದಿ ಮತ್ತು ಕಾಗದಗಳು

(೧) ಮ್ಯುನಿಸಿಪಲ್ ಇಂಗ್ಲಿಷ್ ಸ್ಕೂಲ್

(೨) ಹುಡುಗರ ಕನ್ನಡ ಸ್ಕೂಲ್ ಮತ್ತು ಇಂಗ್ಲಿಷ್ ಸ್ಕೂಲನ್ನು ದುರಸ್ತು ಮಾಡುವದಕ್ಕೆ ಅಂದಾಜು ಪಟ್ಟಿ

K. Srinivasa Rao,
*Vice President.*

## THE BAGNALORE SREENIVASA MANDIRAM

### ಬೆಂಗಳೂರು ಶ್ರೀನಿವಾಸ ಮಂದಿರ.

ಬೆಂಗಳೂರ ಶ್ರೀ ಶ್ರೀನಿವಾಸ ಮಂದಿರದ ಧರ್ಮಕ್ಕಾಗಿ ಜಮಾಯಿಸಲ್ಪಟ್ಟ ಅಕ್ಕಿ ಮತ್ತು ಅದರ ವಿನಿಯೋಗದ ತಪಸೀಲು ತೋರಿಸುವ ತಃಖ್ತೆ —

೧೮೯೮ನೇ ಇಸವಿ ಮೇ ೨೧ನೇ ತಾರೀಖ್ ಮೊದಲು ೨೭ನೇ ತಾರೀಖ್‌ವರಿವಿಗೆ.—

| | |
|---|---|
| ಅಕ್ಕಿ ನೀಡಲು ಮಾಡಿದ ಗೃಹಗಳ ಸಂಖ್ಯೆ | 77 |
| ಜಮಾಯಿಸಿದ ಧಾನ್ಯದ ಸೇರುಗಳ ಸಂಖ್ಯೆ | 54½ |
| ಗತವಾರದ ಶಿಲ್ಕು ಸೇರು | 4 |
| ಜುಮ್ಲಾ | 58½ |
| ಅಡಿಗೆ ಸಾಮಗ್ರಿಗಳಿಗಾಗಿ ಮಾರಲ್ಪಟ್ಟ ಸೇರು | 20½ |
| ಶಿಲ್ಕಾದ ಅಕ್ಕಿ ಸೇರು | 34 |
| ಚಿಂತಾ ಬಾಕಿ | 4 |
| ಭೋಜನ ಮಾಡಿದ ಜನಗಳ ಸಂಖ್ಯೆ ಮತ್ತು ತಪಸೀಲ್ | |
| ಅನಾಥರು | 7 |
| ದಿಕ್ಕಿಲ್ಲದ ವಿದ್ಯಾರ್ಥಿಗಳು | 1 |
| ಶಾಲೆಯ ಇರತಕ್ಕ ವಿದ್ಯಾರ್ಥಿಗಳು | 14 |
| ಶಾಲೆಗೆ ಹೋಗತಕ್ಕ ಅರ್ಚಕ ಪರಿಚಾರಕವರ್ಗದವರ ಸಂಖ್ಯೆ | 30 |
| ಪ್ರಯಾಣಸ್ಥರು | 13 |
| ಜುಮ್ಲಾ | 68 |

## THE MONEY MARKET

ಮದರಾಸ್, ಶನಿವಾರ, ತಾರೀಖ್ 20 ನೇ ಮೇ 1898

ಸೇಕಡ ೩½ ರೂ ಬಾಬತು ಗವರ್ನಮೆಂಟು ಪತ್ರಗಳು ರೂಪಾಯಿ, 104 4–0 ರಿಂದ 104–12–0 ವರಿವಿಗೆ

ಮದರಾಸ ಬ್ಯಾಂಕ್ ಷೇರುಗಳು (500) ರೂಪಾಯಿಗಳ ಬಾಬತು 975 ಬಾಗಾ ಮಿತು 980 ವರಿವಿಗೆ

ಕಮರ್ಷಿಯಲ ಲೆವ ಲ್ಯಾಂಡ್ ಎಕ್ಸ್‌ಚೇಂಜ್ ಬ್ಯಾಂಕ್ ಷೇರುಗಳು (100) ಬಾಬತು 160 ರಿಂದ 165 ವರಿವಿಗೆ

ಸವರ್ನಗಳು, 16–4–0 ರಿಂದ 16–9–0 ವರಿವಿಗೆ

ಬ್ಯಾಂಕ್‌ಬಿಲ್‌ಗಳು ಯಾನಿ ದರ್ಶನ ಹುಂಡಿಗಳು, ರೂ ೧ಕ್ಕೆ

6 ತಿಂಗಳವಾಯಿದೆಗೆ, 1s 2 13/16d

ಟಿಲಿಗ್ರಾಮ್ 4 ತಿಂಗಳವಾಯಿದೆಗೆ, 1s 2 21/32 d

ಟಿಲಿಗ್ರಾಮ್ ಕೇಳಿದಾಗ, 1s 2 ⅝d


# ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA

MONDAY, MAY 29 1898

೧೮೯೮ನೇ ಇಸವಿ ಮೇ ತಾ|| ೨೯ನೇ ಸೋಮವಾರ


## ಮ್ಯುನಿಸಿಪಲ್ ತೋಟದಲ್ಲಿ ನಡೆಯುತ್ತಲಿದ್ದ ಓಲಗವನ್ನು ಕುರಿತು.

ಈಗ ಮುಜರಾಯಿ ಸೂಪರಿಂಟೆಂಡೆಂಟರಾಗಿರುವ ಮೆಸ್ಟರ್ ಎ ಶ್ರೀನಿವಾಸಾಚಾರ್ಯರವರು ಈ ಮುಂಚೆ ಮ್ಯುನಿಸಿಪಾಲಿಟಿಯ ವೈಸ ಪ್ರೆಸಿಡೆಂಟರಾಗಿದ್ದ ಕಾಲದಲ್ಲಿ ಈ ಪೂರ್ವ ಧರ್ಮಾಂಬುಧಿ ಕೆರೆಯ ಕೆಳಗಡೆ ಇರುವ ಮ್ಯುನಿಸಿಪಲ್ ತೋಟವನ್ನು ಒರ್ವ್ವರ್ಥ ಪ್ರಯತ್ನದಿಂ ನಾನಾವಿಧ ಗಿಡಗಳಿಂದಲೂ ಕಟ್ಟಡಗಳಿಂದಲೂ ಮನೋಹರವನ್ನಾಗಿಯೂ ವಿಶ್ರಾಂತಿಸುವ ಪಂಕ್ತಿಗಳಗರನುಳ್ಳದ್ದಾದ ಒಂದು ಉದ್ಯಾನವನವನ್ನಾಗಿಯೂ ಮಾಡಿದ್ದು ಮಾತ್ರವಲ್ಲದೆ, ಪ್ರತಿ ಭಾನುವಾರದ ಸಾಯಂಕಾಲ ೬ ಘಂಟೆಗೆ ಸದರೀ ತೋಟದಲ್ಲಿ ಒಂದೆರಡು ಘಂಟೆಯ ಕಾಲ ಓಲಗ ನಡೆಯುವಂತೆಯೂ, ಪ್ರತಿಬುಧವಾರದಲ್ಲೂ ಇಂಗ್ಲಿಷ್‌ಬ್ಯಾಂಡ ನಡೆಯುವಂತೆಯೂ ಏರ್ಪಡಿಸುವಮಾಡಿ ಅದರಂತೆ ಕಳೆದ ೯ ವರ್ಷಗಳ ಕಾಲದಿಂ ನಡೆಯುತಬಂದು, ಈಚೆಗೆ ಒಂದೆರಡು ವರ್ಷಗಳ ಹಿಂದೆ, ಇಂಗ್ಲಿಷ್ ಬ್ಯಾಂಡೆ ನಿಲ್ಲಿಸಲ್ಪಟ್ಟು, ಓಲಗ ಮಾತ್ರ ನಡೆಯುತಲಿತ್ತು. ಪ್ರತಿದಿನ ಸಾಯಂಕಾಲದಲ್ಲಿ ವಿಶ್ರಾಂತಿಯಬಗ್ಗೆ ಕೆರೆಯ ಕಟ್ಟೆಯಮೇಲೆ ಹೋಗುವಂತವರು ಸದರೀ ವಾದ್ಯವು ಕೇಳುವವರ ಮೂಲಕವಾಗಿಯೂ, ತಣ್ಣಾಳಿಯ ಬೆಸೆಯಿಂದಲೂ ಸಂತುಷ್ಟ ಮನಸ್ಕರಾಗಿ ಅವರವರ ಮನೆಗಳಿಗೆ ವಾಪಸ್ ಹೋಗುತಲಿದ್ದರು. ಈ ಸುಖವನ್ನು ಪುರುಷರು ಮಾತ್ರವಲ್ಲದೆ ಕೆಲವರು ದೊಡ್ಡಮನುಷ್ಯರ ಮನೆಗಳ ಹೆಂಗುಸರು ಮಕ್ಕಳು ಸಹ ಅನುಭವಿಸುತ ಬಂದರು ಹೀಗಿರುವಲ್ಲಿ ಈಚೆಗೆ ಇಲ್ಲಿನ ಬೋರ್ಡಿನವರು ಸದರೀ ಓಲಗಕ್ಕಾಗಿ ಮಾಹೇಯಾನಾ ಆಗುವ ಖರ್ಚನ್ನು ಭರಿಸುವದಕ್ಕೆ ಪ್ರಕೃತಸ್ಥಿತಿಯಲ್ಲಿ ಮ್ಯುನಿಸಿಪಾಲಿಟಿಗೆ ಅಧಿಕಾರ ಇತ್ತಿ ಸಾಲದೆಂಬ ಕಾರಣವಮೇಲೆ ಅದನ್ನು ವಜಾಕಡಿ ಮಾಡಬೇಕೆಂದು ಬೋರ್ಡಿನ ಮೀಟಿಂಗ್ ಕಾಲದಲ್ಲಿ ಒಂದು ನಿರ್ಣಯವು ಮಾಡಿದ್ದರಿಂದ ಈಚೆಗೆ ನಾಲ್ಕು ವಾರಗಳ ಮೊದಲು ಮ್ಯುನಿಸಿಪಲ್ ತೋಟದಲ್ಲಿ ಓಲಗ ನಡೆಯುವದನ್ನು ನಿಂತಿರುತದೆ. ಅದರಮೇಲೆ ಈ ನಗರ ಪ್ರಜೆಗಳು ಗವರ್ನಮೆಂಟಿಗೆ ಅಪ್ಪೀಲ ಮಾಡುವ ಪ್ರಯತ್ನದಲ್ಲಿರುವಂತೆ ಕೇಳುತ್ತೇವೆ

ಮ್ಯುನಿಸಿಪಲ್ ಫಂಡ ಎಂಬುದು ಪ್ರಜೆಗಳಿಂದ ವಸೂಲಾಗುವ ಹಣವೆಂದು ಪ್ರಸಿದ್ಧವಾಗಿರುತದೆ, ಹಾಗಿದ್ದಾಗ್ಯೂ ಅವರ ಸಂತೋಷಕ್ಕೆ ವಾ ಮಾಹೇಯಾನಾ ಸದರೀ ಫಂಡಿನಿಂದ ೧೬ ರೂಪಾಯಿಗಳು ಖರ್ಚು ಆಗುವದು ವ್ಯರ್ಥವೆಂದು ಪ್ರಜೆಗಳ ಪ್ರತಿನಿಧಿಯಿಂದ ನಡೆಯುವ ಬೋರ್ಡಿನ ಮೆಂಬರುಗಳು ಭಾವಿಸಿ ಅದು ತಪ್ಪಿಸಿದ್ದು ನಮ್ಮಂತೆ ಅನೇಕರಿಗೆ ಆಶ್ಚರ್ಯವನ್ನು ವಿಷಾದವನ್ನು ಉಂಟುಮಾಡದೆ ಇರಲಾರದು. ಮುಂಬರಿಗೆ ಬರ ಸಾಲದೆ ಕಾಲದಲ್ಲಿ, ತಾವು ಪ್ರಜೆಗಳ ಪಕ್ಷದಲ್ಲಿ ಪಠಿಸಿ ಅವರ ಅಭೀಷ್ಟಗಳನ್ನೀಡೇರಿಸ ಕೊಡುವದಾಗಿ ಅವರಿಗೆ ಒಳಪಿದ ಮಾತುಗಳಿಂದ ಜನಸಮೂಹ ಕೊಟ್ಟ ತಮ್ಮನ್ನು ಬೋರ್ಡ ಮೆಂಬರಾಗಿ ಚುನಾಯಿಸುವದಕ್ಕೆ ಅನ್ವಯ ಕೊಡುವಂತೆ ಪ್ರೇರಿಸಿದ ದೊಡ್ಡಮನುಷ್ಯರೇ ಈಗ ಅವರು ಒಪ್ಪಿಕೊಂಡ ಅನುಭವಿಸುತಬಂದ ಸಂತೋಷಕ್ಕೆ ಏನುಪರ್ಯಂತ ಭಂಗವನ್ನುಂಟು ಮಾಡಿದ ವಂತ ಹೇಳಬೇಕಾಗಿದೆ. ಇದು ಕೇವಲ ಪ್ರಜೆಗಳ ಸಂತೋಷ ಕ್ಕೆ ಏರ್ಪಟ್ಟದ್ದು ಕಾರ್ಯವಾಗಿರುವದರಿಂದ ಇದಂ ನಿಲ್ಲಿಸಿ ದ ವಿಷಯದಲ್ಲಿ ಮಾಡಲ್ಪಟ್ಟ ನಿರ್ಣಯವನ್ನು ಗವರ್ನಮೆಂಟಿನವರು ಅಮಂಜೂರುಮಾಡಲಾರರೆಂದು ನಂಬುತ್ತೇವೆ

## ಕೆಲವರು ಮಠಾಧಿಪತಿಗಳ ವರ್ತನವು ಕುರಿತದ್ದು.

ಶೃಂಗೇರಿ ಶ್ರೀ ಸ್ವಾಮಿಗಳವರು ಈಗ ದಕ್ಷಿಣದೇಶ ಸಂಚಾರ ಮಾಡುತ ತಿರುಚನಾಪಲ್ಲಿ ಪ್ರಾಂತ್ಯದೊಳು ಸವಾರಿ ಚಿತ್ತೈಸಿರುವದು ಸರಿಯಷ್ಟೇ. ಶ್ರೀ ಸ್ವಾಮಿಗಳವರು ಶ್ರೀ ಚಕ್ರಸೊಂಕಿತ ಒಂದು ಜತೆ ತಾಟಂಕವು ಮಾಡಿಸಿ ಅದನ್ನು ಪ್ರಸಿದ್ಧ ಪುಣ್ಯಕ್ಷೇತ್ರ ಜಂಬುಕೇಶ್ವರದಲ್ಲಿನ ಶ್ರೀ ಅಖಿಲಾಂಡೇಶ್ವರೀ ಅಮ್ಮನವರಿಗೆ ಸಮರ್ಪಿಸುವದಕ್ಕೆ ಪ್ರಯತ್ನಪಡುತ್ತಿರುವದಾಗಿ ಕುಂಭಕೋಣದ ಶ್ರೀ ಶಂಕರಾಚಾರ್ಯರವರು ಕೇಳಿ ತ ರೀತಿ ಮಾಡಕೂಡದೆಂದು ತಕರಾರ್ ಮಾಡುವಂತೆಯೂ ಉಭಯ ಸ್ವಾಮಿಗಳಲ್ಲೂ ಅಂತರಂಗಿರುವ ಬಾಧ್ಯತೆಯು ನ್ಯಾಯಸ್ಥಾನದ ಮೂಲಕ ಸ್ಥಿರಪಡಿಸಿಕೊಳ್ಳುವ ಯೋಚನೆಯು ಇರುವಂತೆಯೂ, ಮದರಾಸ್ ಹಿಂದೂ ಪತ್ರಿಕೆಯು ಆ ಪ್ರಾಂತದ ಬಾತಮಿದಾರನೊಬ್ಬಾತನು ಸದರೀ ಪತ್ರಿಕೆಗೆ ಬರೆದಿರುತ್ತಾನೆ ಆದಿ ಶಂಕರಾಚಾರ್ಯರಿಂದ ಸ್ಥಾಪಿಸಲ್ಪಟ್ಟಿರುವ ಮಠಗಳ ಪೈಕಿ ಶೃಂಗೇರಿಯಲ್ಲಿನದು ಪ್ರಧಾನ ಮಠವಾಗಿಯೂ ಆಳವಡಿಲ್ಲದು ಅದಕ್ಕೆ ಶಾಖಾಪ್ರಾಯದ್ದಾಗಿಯೂ ಇರುತಿರೆ. ಹೀಗಿರುವಲ್ಲಿ ಶೃಂಗೇರಿ ಶ್ರೀ ಸ್ವಾಮಿಗಳವರು ಮಾಡುವ ಕಾರ್ಯವನ್ನು ಆಕ್ಷೇಪಿಸಿ ಅದಕ್ಕೆ ವಿಘಾತವನ್ನುಂಟುಮಾಡುವದಕ್ಕೆ ಯಾತ ಮಠಾಧಿಪತಿಗೂ ಯೋಗ್ಯತೆ ಇರುವದಿಲ್ಲವೆಂದು ಧಾರಾಳವಾಗಿ ಹೇಳಬಹುದಾಗಿದೆ. ಆಯಾ ಸ್ಥಳಗಳಲ್ಲಿರುವ ಸ್ಮಾರ್ತ ಬಾಹ್ಮಣರ ದುಷ್ಟ ಜನರು ಸ್ವಪ್ರಯೋಜನ ದೃಷ್ಟಿಯಿಂದ ಕೊಡುವ ಸೂಚನೆಗಳಿಗೆ ಈ ತಾಟೇದಾರ ಮಠಾಧಿಪತಿಗಳು [illegible] ಗೊಟ್ಟು ಕಲಹಕ್ಕೆ ಪ್ರವರ್ತಿಸಿ, ಶಿಷ್ಯ ಮುಂ[illegible] ಯಿಂದ ಮಠಕ್ಕೆ ಬರುವ ಆಯತಿಗಳೆಲ್ಲ [illegible] ಪಯುಕ್ತವಾದ ಕಾರ್ಯಗಳಗಾಗಿ ವ್ಯಯ [illegible] ಮಠದ ಯಶಸ್ಸಿಗೆ ನ್ಯೂನತೆ ಯುಂ[illegible] ಕಳ್ಳ ಶಿಷ್ಯವರ್ಗಕ್ಕೆ ಮಠದ ವಿಷಯ[illegible]

...ಗೌರವಗಳು ನಡರಿಹೋಗುವದಕ್ಕೂ ಆ...ವನ್ನುಂಟುಮಾಡಿಕೊಳ್ಳುವದಕ್ಕಾಗಿ ವಿ...ವಿಸುತ್ತೇವೆ.

## Occasional Notes.
## ನೈಮಿತ್ತಿಕ ವಿಷಯನ್ಯಾಸ.

ಕಾಬೂಲ್ ಅಮೀರರವರು ತಮ್ಮ ಸಂಸ್ಥಾನದ ನೌಕರಿಯಲ್ಲಿದ್ದ ಯೂರೋಪಿಯನ್ ಅಧಿಕಾರಿಗಳ ಪೈಕಿ ಅನೇಕರನ್ನು ಕೆಲಸದಿಂದ ವಜಾ ಮಾಡಿರುತ್ತಾರೆ ಇದಕ್ಕೆ ಉಂಟಾದ ಕಾರಣವೂ ಫಲಾನೇದೆಂದು ವ್ಯಕ್ತವಾಗಲಿಲ್ಲವು

ಕಾಬೂಲಿ ಅಮೀರರವರು ತಮ್ಮ ಸೈನ್ಯಗಳೊಡನೆ ಕಲಹಗಳನ್ನು ಶಾಲ್ಕ ಕಡೆಯಲ್ಲೂ ನಡಸುತ್ತಿಕೊಂಡಿರುತ್ತಾರೆ ಪ್ರಬಲಯುದ್ಧ ಸೂಚನೆಗಳು ಕಾಣಬರುತಲಿವೆ, ಎಂದು ರಾಂತಿ ಮೂಲಕ ತಿಳಿಯಬಂದಿದೆ

ಲಕ್ನೋ ಪಟ್ಟಣದಿಂದ ಕಾನ್‌ಪುರದಲ್ಲಿನ ಗಂಗಾನದಿಯ ಸೇತುವೆಯ ವರೆವಿಗೆ ಸಣ್ಣ ಅಳತೆಯ ರೈಲ್ ರಸ್ತೆಯೊಂದನ್ನು ಖಾಸಗಿ ವಿಷಯದಲ್ಲಿ ಮಾಡಲ್ಪಡುವ ಯೋಗ್ಯತೆಯನ್ನು ಇಂಡ್ಯ ಗವರ್ನ್‌ಮೆಂಟಿನವರು ಮಂಜೂರ್ ಮಾಡಿರುತ್ತಾರೆ

ಕಲ್ಕತ್ತಾ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರಾದ ನಾಗೇಂದ್ರ ಬಾಬುರಾಯ್ ಎಂಬವರು ಕೆಲವು ಅಧಿಕಾರಿಗಳ ಪತ್ರಗಳ್ಳೆಸಿದುವಲ್ಲಿ ಬನಾವಣೆ ಮೊದಲಾದ ದುಷ್ಕೃತ್ಯಗಳಿಗೆ ಪ್ರೇರಕರೆಂದು ಅಲ್ಲಿನ ಪೊಲೀಸ್ ಕೋರ್ಟಿನಲ್ಲಿ ಆಪಾದಿಸಲ್ಪಟ್ಟಿರುತ್ತಾರೆ

ಈ ತಿಂಗಳ ಎರಡನೇ ತಾರೀಖಿನಲ್ಲಿ ಕಲ್ಕತ್ತೆಯಲ್ಲಿನ ಒಂದು ಹೋಟೆಲ್ ಮ್ಯಾನೇಜರಾದ ಮ. ನ್ಯೂಬರ್ ಎಂಬರು ವಿನೋದಾರ್ಥ ತನ್ನ ಭಾರ್ಯೆ ಮೊದಲಾದ ಬಾಲ್ಯರೊಡನೆ ಒಂದು ಸಣ್ಣ ಹೊಗೇಜಹಜಿನಲ್ಲಿ ಕುಳಿತು ಹೊರಟು ಹೋದವರು, ಅದ್ಯಾಪಿ ಪತ್ತೆಯಿಲ್ಲವೆಂದು ತಂತಿ ವರ್ತಮಾನದ ಮೂಲಕ ತಿಳಿಯಬರುತಿದೆ.

ಅಲಹಾಬಾದಿನಲ್ಲಿರುವ ವಕೀಲರಾದ ಬಾಬೂ ಮುಕರ್ಜಿ ಎಂಬುವವರೂ ಅಲ್ಲಿನ ವಕೀಲ್ ಸಂಘದವರೂ ಸೇರಿ ಸದರೀ ಷಹರಿನಲ್ಲಿ ಪ್ರಕಟಿಸಲ್ಪಡುವ ಮಾರ್ನಿಂಗ್ ಪೋಸ್ಟ್ ಎಂಬ ಪತ್ರಿಕೆಯ ಎಡಿಟರ್ ಮತ್ತು ಪ್ರೊಪ್ರೈಟರ ಮೇಲೆ ಅಲ್ಲಿನ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮಾನನಷ್ಟದಾವೆ ಮಾಡಿ ಅದು ಬರುವ ಜೂನ್ ತಿಂಗಳ ೧೧ ನೇ ತಾರೀಖಿನಲ್ಲಿ ವಿಚಾರಣೆ ಮಾಗುವದಾಗಿದೆ.

ಆಸ್ಟ್ರೇಲಿಯಾಖಂಡದೊಳಗಣ ಕ್ವೀನ್ಸ್‌ಲ್ಯಾಂಡ್ ಎಂಬ ಪ್ರದೇಶದಲ್ಲಿ ಇದುವರಿವಿಗೆ ಮಾವಿನಗಿಡಗಳಿಲ್ಲದೆಯಿದ್ದು ಈಚೆಗೆ ಸದರೀ ದೇಶೀಯರು ಇಂಡ್ಯ ದೇಶದ ಸಸಿಗಳಂ ತೆಗದುಕೊಂಡು ಹೋಗಿ ಅಲ್ಲಿ ಅದನ್ನು ಬೆಳಸಿದರು ಈಗ ಫಲಬಿಟ್ಟ ಹಣ್ಣುಗಳು ಬಹಳ ದೊಡ್ಡವಾಗಿಯೂ ಬಹಳ ಮಧುರವಾಗಿಯೂ ಇರುವಂತೆ ಸದರೀ ದೇಶದ ಪತ್ರಿಕೆಯೊಂದು ತಿಳಸುತಿದೆ.

ಅಮೇರಿಕಾ ದೇಶದೊಳು ಒಬ್ಬ ಸಿಲ್ಪಿಯು ಮನುಷ್ಯಾಕೃತಿಯುಳ್ಳ ಒಂದು ಹೊಗೇ ಯಂತ್ರವ ನಿರ್ಮಿಸಿ, ಹೊಗೆ ಹೊರಡುವ ಕೊಳವೆಯನ್ನು ಟೋಪಿಯಂತೆಯೂ, ಹಬೆ ಹೊರಡುವ ಕೊಳವೆಯನ್ನು ಹೊಗೇ ಸುತ್ತಿನಂತೆ ಮಾಡಿ ಬಾಯಲ್ಲಿ ಕೊಟ್ಟಿರುತ್ತಾನೆ. ಸದರೀ ಬೊಂಬೆಯು ಭಾರಿ ಗಾಡಿಯೊಂದನ್ನು ಸೆಳಕೊಂಡು ಘಂಟೆಗೆ ೩ ಮೈಲಿ ಪ್ರಕಾರ ಹೋಗುತಿದೆಯಂತೆ.

ಕಾಬೂಲ್ ಸಂಸ್ಥಾನಕ್ಕೆ ಸೇರಿದ ಹಜಾರಾ ಎಂಬ ಕುಲದಿಯ ಜನರು ಕಲಹಕ್ಕೆ ಪ್ರೇರುಪಿಸಿರುವದರಿಂದ ಸದರೀ ಜನರ ಭ್ರಾಂತನ್ನಣಗಿಸು ಉದ್ದೇಶದೊಡನೆ ಅಮೀರರವರು ತುರ್ಕಸ್ತಾನ, ಕಂದಾರ್, ಗಿಜ್ನಿ ಮತ್ತು ಕಾಬೂಲಿನಿಂದ ಬಲವಾದ ಸೈನ್ಯಗಳಂ ಕಳುಹಿಸುತಲಿರುವಂತೆ ಇಂಡ್ಯಗವರ್ನ್‌ಮೆಂಟ್ ಸರಿಹದ್ದಿನವರು ಸರ್ಕಾರೀಯಾಗಿ ಪ್ರಕಟಿಸಿರುತ್ತಾರೆ. ಈ ಸಂದರ್ಭದೊಳು ಹಜಾರಸ್ ಜನರೊಡನೆ ಬಂದು ಘೋರಯುದ್ಧ ನಡೆಯಬಹುದೆಂಬ ಭೀತಿಯು ಅಮೀರರಂ ಬಾಧಿಸುತಲಿದೆ. ಇದರ ಪರ್ಯವಸಾನವು ಮುಂದೆ ತಿಳಿಯ ಬೇಕಾದದ್ದಾಗಿದೆ.

ಚಿಕಾಗೋ ಷಹರಿನಲ್ಲಿ ನಡೆಯುವ ವಿವಿಧವಸ್ತು ಪ್ರದರ್ಶನದಲ್ಲಿ ಪೋಟಾ ಪೋಟಿ ಮಾಡುವದಕ್ಕಾಗಿ ನಾನಾವಿಧ ಪದಾರ್ಥಗಳಂ ತೆಗದುಕೊಂಡು ಹೋಗಿರುವ ಅನೇಕ ದೇಶೀಯರ ಪೈಕಿ ಗ್ರೇಟ್ ಬ್ರಿಟನ್ ಸಂಸ್ಥಾನದವರು ಸೇರಿ ಹದಿನೇಳು ದೇಶದವರು ತಾವು ಕೊಟ್ಟಿದ್ದ ಪದಾರ್ಥಗಳಂ ವಾಪಸ್ ತೆಗದುಕೊಂಡರು ಏತಕ್ಕೆಂದರೆ, ತೆರಲ್ಪಟ್ಟ ಪದಾರ್ಥಗಳಂ ನೋಡಿ ಅದರದರ ಯೋಗ್ಯತಾನುಗುಣವಾಗಿ ಇನಾಂಗಳಂ ಕೊಡುವದಕ್ಕೆ ಒಬ್ಬರನ್ನೇ ಯೇರ್ಪಡಿಸಿದ್ದರು ಹಾಗೆ ಕೂಡದು, ಒಂದು ಪಂಚಾಯಿತೀ ಸಭೆಯಂ ಯೇರ್ಪಡಿಸಬೇಕೆಂದು ಸದರೀದೇಶೀಯರು ಆಕ್ಷೇಪಿಸಿ ಮೇಲಿನಂತೆ ವಾಪಸ್ ತೆಗದುಕೊಂಡರು.

ಬಂಗಾಳೇ ದೇಶದ ಕಡೇ ಸಮುದ್ರದಲ್ಲಿ (ಪೂರ್ವಸಮುದ್ರ) ಈ ತಿಂಗಳ ೨೬ನೇ ತಾರೀಖ್ ಸೇಳುತ ಫರ್ ಹೊಡೆದು ಅನೇಕ ಗಿಡಗಳು ಬುಡಸಹಿತ ಮುರಿದು ಬಿದ್ದುಹೋದದ್ದಲ್ಲದೆ ರಸ್ತೆಗಳಲ್ಲಿ ಗಾಡಿಗಳ ಸಂಚಾರ ನಿಂತುಹೋದವು, ರೈಲ್ ಗಾಡಿಗಳ ಸಂಚಾರ ಅಡ್ಡಿಪಟ್ಟವು, ಸಣ್ಣಸಣ್ಣ ಮನೆಗಳು ಬಿದ್ದುಹೋದವು, ಅನೇಕನಾವೆಗಳು ಯೋದ ದಾರಿಯೇ ತಿಳಿಯದೆ ಕಣ್ಮರೆಯಾದವು ಈ ತುಫಾನಿನ ದೆಸೆಯಿಂದ ಪೂರ್ವಬಂಗಾಳೇದೇಶದ ರೈಲಿನಲ್ಲಿ ಪ್ರಯಾಣಸ್ಥರಿಗೆ ಎಸುವಿಧ ಅನಾನುಕೂಲಗಳುಂಟಾದವು, ಎಂದು ಪಕ್ಕೆರೆ ಆ ಪ್ರಾಂತದಿಂದ ಬಂದ ತಂತಿ ವೃತ್ತಾಂತದ ಮೂಲಕ ತಿಳಿಯ ಬರುತಿದೆ

ಭಾವನಗರದ ಮಹಾರಾಜರವರು ಈಗ ಲಂಡನ್ ಪಟ್ಟಣದಲ್ಲಿರುತ್ತಾರೆಯಷ್ಟೆ. ಈ ಅರಸಿನವರು ಮಹಾರಾಣಿಯವರ ಪ್ರಧಾನ ಮಂತ್ರಿಯವರಾದ ಮಾರ್ಕ್ವಿಸ್ ಆಫ್ ಸಾಲಿಸ್ಬರಿ, ಇಂಡಿಯಾ ಸೆಕ್ರೆಟರಿ, ಮೊದಲಾದ ಅಲ್ಲಿನ ದೊಡ್ಡದೊಡ್ಡ ಅಧಿಕಾರಿಗಳ ಭೇಟಿಯಬಗ್ಗೆ ಅವರವರ ಗೃಹಗಳಿಗೆ ಹೋಗಿದ್ದರು. ಅವರಪೈಕಿ ಸೆಕ್ರೆಟರಿಗಳಾದವರು ಮಹಾರಾಜರವರ ದರ್ಶನಾರ್ಥ ಇವರ ವಾಸಗೃಹಕ್ಕೆ ಬಂದಿದ್ದರು. ಮಹಾರಾಜರವರು ಲಂಡನ್ ಪಟ್ಟಣದಲ್ಲಿನ ವಿಶೇಷಾಂಶಗಳನ್ನೆಲ್ಲ ಒಂದೊಂದಾಗಿ ನೋಡುತಲಿವಾರೆ ಇನ್ನು ಕೆಲವುಕಾಲ ಸದರೀ ಪಟ್ಟಣದಲ್ಲಿದ್ದು ತರುವಾಯ ಇತರ ದೊಡ್ಡ ಷಹರ್‌ಗಳಂ ನೋಡುವದಕ್ಕೆ ಪ್ರಯಾಣ ಮಾಡುವರೆಂದು ವಿಲಾಯಿತಿ ಪತ್ರಿಕೆಯೊಂದು ತಿಳಸುತಿದೆ

ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಯೆಂಬ ಸಭೆಯು ಪ್ರಜಾ ಪ್ರತಿನಿಧಿ ಸಭೆಯಲ್ಲವೆಂತಲೂ, ಅದರ ಮುಖ್ಯಪ್ರವರ್ತಕರು ಪ್ರಜೆಗಳಿಂದ ನಿಯಮಿಸಲ್ಪಟ್ಟವರಲ್ಲವೆಂತಲೂ ಪರಂತು ಸ್ವಯಂ ಪ್ರವರ್ತಕರೆಂತಲೂ ಅದಕ್ಕೆ ಪ್ರತ್ಯರ್ಥಿಗಳಾದವರು ಉದ್ಘೋಷಿಸುತಲಿದ್ದರಷ್ಟೆ. ಈಚೆಗೆ ಬಂಗಾಳೇ ಗವರ್ನ್‌ಮೆಂಟ್ ನ್ಯಾಯ ವಿಧಾಯಕ ಸಭೆಗೆ ಮೆಂಬರಾಗಿ ಚುನಾಯಿಸಲ್ಪಟ್ಟ ಆರು ಮಂದಿಯ ಪೈಕಿ ಐದರು ನ್ಯಾಷನಲ್ ಕಾಂಗ್ರೆಸ್ಸಿನಲ್ಲಿ ಮುಖ್ಯಪ್ರವರ್ತಕರಾಗಿರುತ್ತಾರೆ ಆರನೆಯವರಾದರೋ, ಸದರೀ ಸಭೆಗೆ ವಿರೋಧಿಯಲ್ಲವು ಇನ್ನು ಮುಂದೆ? ವಿಮರ್ಶ ಪೂರ್ವಕ ಯೇರ್ಪಟ್ಟಿರುವ ಮಂತ್ರಾಲೋಚಕ ಸಭೆಯಲ್ಲಿ ಮೆಂಬರ್‌ಗಳಾಗಿ ಪ್ರಜೆಗಳಿಂದ ಚುನಾಯಿಸಲ್ಪಟ್ಟಿರುವವರಿಂದಲೇ ಸದರೀ ಸಾರ್ವಜನಿಕ ಸಭೆಯು ಪ್ರಜಾ ಪ್ರತಿನಿಧಿ ಸಭೆಯೆಂದು ಗವರ್ನ್‌ಮೆಂಟಿನವರೂ ಇತರರೂ ಬುದ್ಧಿಸ್ವಾಗಿ ತಿಳಿಯಬಹುದು

## LOCAL AND PROVINCIAL NEWS.
## ಸ್ವದೇಶವುತ್ತು ತಾಲ್ಲೂಕ್‌ಜಾತ್‌ವೃತ್ತಾಂತಗಳು

ಆರಣಿ ಜಹಗೀರುದಾರ್ರವರು ಕಳೆದ ಮಂಗಳವಾರದ ದಿನ ಇಲ್ಲಿಗೆ ಬಂದು ವಂದಿನಲ್ಲಿಳದಿರುವುದು ತಿಳಿಯಬರುತಿದೆ

ಈ ತಿಂಗಳ ೨೯ನೇ ತಾರೀಖಿನಲ್ಲಿ ನಡೆಯುವದಾಗಿ ಪ್ರಕಟಿಸಲ್ಪಟ್ಟ ಸಿಟಿ ಮ್ಯುನಿಸಿಪಲ್ ಬೋರ್ಡ್ ಮೀಟಿಂಗ್ ಇದೇ ತಿಂಗಳ ೩೧ ನೇ ತಾರೀಖ್ ಬುಧವಾರಕ್ಕೆ ನಿಲ್ಲಿಸಲ್ಪಟ್ಟಿದೆ.

ಶ್ರೀಮನ್ಮಹಾರಾಜ ರಾಜಾ ಸಾಹೇಬ ಬಹದ್ದೂರವರು ತಮ್ಮ ದಿವಾನರವರು ಮತ್ತು ಪರಿಜನ ಪರಿವಾರರೊಡನೆ ಈ ತಿಂಗಳು ೨೫ನೇ ತಾರೀಖಿನಲ್ಲಿ ನೀಲಗಿರಿಯಿಂದ ರಾಜಧಾನಿಗೆ ತಿರುಗಿ ಬಂದಿರು.

ಕಳೆದ ಬುಧವಾರದ ದಿನ ಮಹಾರಾಜ್ಞೀ ಚಕ್ರವರ್ತಿನೀಯವರ ವರ್ಷ ವರ್ಧಂತಿ ಯಾದುದರಿಂದ ಆ ದಿನ ವಿಶಿಷ್ಟ ಉದ್ಯೋಗಗಳೂ ರಜೆಕೊಡಲ್ಪಟ್ಟದ್ದಲ್ಲದೆ ಮಾಮೂಲ್ ಪ್ರಕಾರ ಆದಿನ ಬೆಳಗ್ಗೆ ಮಿಲಿಟರಿ ಸ್ಟೇಷನ್ನಲ್ಲಿನ ಸೇನೆಯ ಪ್ರದರ್ಶನವು ಚೆನ್ನಾಗಿ ನಡೆದವು.

ಇಲ್ಲಿನ ರೈಲ್ವೆ ಸ್ಟೇಷನನ್ನು ಬದಲಾಯಿಸಿ ಕಟ್ಟುವ ಕಾರ್ಯಕ್ಕಾಗಿ ಮದರಾಸ್ ಗವರ್ನ್‌ಮೆಂಟಿನವರು ೧,೭೭,೦೦೦ ರೂಪಾಯಿಗಳು ಸ್ಯಾಂಗ್ಷನ್ ಮಾಡಿ ಇಂಡ್ಯ ಗವರ್ನ್‌ಮೆಂಟಿನವರ ಮಂಜೂರಾತಿಯ ಬಗ್ಗೆ ಕಳುಹಿಸಿರುವಂತೆ ಸ್ವದೇಶದ ಈವನಿಂಗ್‌ಮೆಯಿಲ್ ಪತ್ರಿಕೆಯ ಮೂಲಕ ತಿಳಿಯಬರುತ್ತೆ.

ಈ ಸಂಸ್ಥಾನದ ಯುವರಾಜರವರಿಗೆ ಕಳೆದ ಶುಕ್ರವಾರದದಿನ ವರ್ಷವರ್ಧಂತಿ ಉತ್ಸವವಾದುದರಿಂದ ಅದರ ಗೌರವಾರ್ಥ ಆ ದಿನ ಈ ಸಂಸ್ಥಾನಕ್ಕೆ ಸೇರಿದ ವಿಶಿಷ್ಟ ಉದ್ಯೋಗಗಳೂ ರಜಾ ಕೊಡಲ್ಪಟ್ಟಿತ್ತು. ಮರುದಿನ ಕಡೇ ಶನಿವಾರವಾದುದರಿಂದ ಆ ದಿನವೂ ವಿಶಿಷ್ಟ ಕಚೇರಿಗಳೂ ವಾಡಿಕೆಯಾಗಿ ಮುಚ್ಚಲ್ಪಟ್ಟಿದ್ದವು.

ಜನಾಥುರಿ ಸಂಸ್ಥಾನದ ನವಾಬರವರು ಕಳೆದ ಶುಕ್ರವಾರದದಿನ ಬೆಳಗ್ಗೆ ಮೆಯಿಲ್ ಟ್ರೇಯಿನ್ನಲ್ಲಿ ಮದರಾಸಿನಿಂದ ಇಲ್ಲಿಗೆ ದಯಮಾಡಿದರು. ರೈಲ್ವೆ ಸ್ಟೇಷನ್ ಪ್ಲಾಟ್‌ಫಾರಂನಲ್ಲಿ ಈ ಸಂಸ್ಥಾನಕ್ಕೆ ಸೇರಿದ ಅಧಿಕಾರಿಗಳೂ ಮ್ಯುನಿಸಿಪಲ್ ಕಮಿಷನರ್‌ಗಳೂ ಹಾಜರಿದ್ದು ನವಾಬರವರನ್ನು ಉಚಿತ ಮರ್ಯಾದೆಗಳೊಡನೆ ಬರಮಾಡಿಕೊಂಡರು. ಮಾಮೂಲ್ ಮರ್ಯಾದೆಗಳು ನಡೆಸಲ್ಪಟ್ಟವು.

ಇಲ್ಲಿನ ಲೋಕಲ್ ಸರ್ವಿಸ್ ಪರೀಕ್ಷೆಯ ಬೋರ್ಡಿನ ಮೆಂಬರ್‌ಗಳ ಪೈಕಿ ರೆವರೆಂಡ್ ಸಿ. ಎಚ್. ಹಾರ್ಕಎಂಬವರೂ, ರೆವರೆಂಡ್ ಜೆ ಎ. ವೇಗನ್ ಯವರೂ ಸ್ವದೇಶಕ್ಕೆ ಹೋಗಬೇಕಾದ ಕಾರಣದಮೇಲೆ ತಮ್ಮ ಕೆಲಸಗಳಿಗೆ ರಾಜೀನಾಮೆ ಕೊಟ್ಟಿರುತ್ತಾರೆ ಮತ್ತು ಇದರಡಿ ತಿಳಸಲ್ಪಟ್ಟಿರುವ ದೊಡ್ಡ ಮನುಷ್ಯರು ಸದರೀ ಬೋರ್ಡಿನ ಮೆಂಬರ್‌ಗಳಾಗಿ ಗವರ್ನ್‌ಮೆಂಟ್ ನವರಿಂದ ನೇಮಕರಾಗಲ್ಪಟ್ಟಿರುತ್ತಾರೆ:—

ರೆವರೆಂಡ್ ಜೆ ಪರ್ಸಿ, ಬಿ ಎ
ರೆವರೆಂಡ್ ಎಫ್ ಗಲ್ಲಿಫೋರ್ಡ್,
ಮ. ಎ. ಎ. ನರಸಿಂಹಯ್ಯಂಗಾರ್
ಮ. ಎ. ವೆಂಕಟೇಶಯ್ಯಂಗಾರ್, ಬಿ ಎ,
ಮ ಮಿಯರ್ ಹಂಜಾಮರ್ಸ್ಲ, ಬಿ ಎ ಬಿ. ಎಲ್
ಮ ಆರ್ ನರಸಿಂಹಾಚಾರ್, ಎಂ ಎ

ಈ ತಿಂಗಳ ೨೦ ನೇ ತಾರೀಖ್ ಶನಿವಾರಕ್ಕೆ ಮುಗಿದ ವಾರದ ಬಾಬತು ಸರ್ಕಾರೀ ಕಾಲಸ್ಥಿತಿ ರಿಪೋರ್ಟನ್ನು ನೋಡುವಲ್ಲಿ ಸದರೀ ವಾರದೊಳು ಅನೇಕ ತಾಲೂಕುಗಳಲ್ಲಿ ಒಂದರಿಂದ ಮೂರುವರೆ ಅಂಗುಳಗಳ ವರೆಗೂ ಮಳೆ ಬಿದ್ದಿರುವಂತೆ ತಿಳಿಯಬರುತಿದೆ. ಹೀಗಿದ್ದಾಗ್ಯೂ ಈ ಬೆಂಗಳೂರು ಷಹರಿನಲ್ಲಿ ಮಾತ್ರ ಸ್ವಲ್ಪವಾದರು ಮಳೆಯಿಲ್ಲದೆ ವ್ಯರ್ಥವಾದ ಆಡಂಬರದೊಡನೆ ಪರಿಸಮಾಪ್ತಿಯನ್ನೈದುವದಕ್ಕೆ ಕಾರಣವು ನಮ್ಮ ಬುದ್ಧಿಸ್ಥವಾಗಲಿಲ್ಲವು. ಪ್ರಾಯಶಃ ಮೈಸೂರಲ್ಲಿಯೂ ಇಲ್ಲಿನಂತೆಯೇ ವರ್ಷಾಪೇಕ್ಷೆ ಯುಂಟಾಗಿರುವಂತೆ ಕಾಣುತಿದೆ ಆಹಾರಪದಾರ್ಥಗಳ ದಾರಣೆಗಳೆಲ್ಲವು ಒಂದೇ ವಿಧವಾಗಿರುತಿವೆ. ...ಗ್ಯವು ಕ್ಷೇಮಕರವಾಗಿಲ್ಲವು. ಎಲ್ಲಿ ನೋಡಿದಾಗ್ಯೂ ಜ್ವರದ ಬಾಧೆಯು ಪ್ರಬಲಿಸಿದೆ. ...ದೆಯುಗಳೆಲ್ಲವು ಸಾಧಾರಣವಾಗಿವೆ.

ಈ ವಿಚಿತ್ರವಾದ ಸರ್ಪದ ಕಥೆಯು ಬನ್ನೂರಿನಿಂದ ಬಂದಿರುವದು : « ಒಬ್ಬಾನೊಬ್ಬ ರೈತನು ಬನ್ನೂರಿನ ಬಳಿಯಲ್ಲಿರುವ ಒಂದು ಗ್ರಾಮದಲ್ಲಿ ತನ್ನ ಕೆಲಸದಮೇಲಿರುವಾಗ್ಯೆ ಒಂದು ಸರ್ಪವು ಬಂದು ಕಚ್ಚಿ ಹೋಯಿತು ಅವನು ಎಂಟು ದಿನಕ್ಕೆ ನಿಮಿಷಗಳೊಳಗೆ ಸ್ಮರಣೆ ತಪ್ಪಿ ಕೆಳಗೆ ಬಿದ್ದು ಬಿಟ್ಟನು, ಹತ್ತಿರ ಇದ್ದವರಲ್ಲಿ ಯಾರೋ ಕೆಲವರು ಚಿಕಿತ್ಸೆ ಮಾಡುವವರನ್ನು ಕರೆತರುವದಕ್ಕಾಗಿ ಓಡಿ ಒಬ್ಬಾತನನ್ನು ಕರೆತಂದರು. ಈತನು ಯಕೃದ್ದರಿಯನ್ನು ಅಥವಾ ಮುಂತಾಗಳ್ಳ ಯಲೆಯನ್ನೂ ತೆಗದುಕೊಂಡುಬಂದು ಕಚ್ಚಿದಸ್ಥಳದ ಮೇಲೆ ಇಟ್ಟು ಮಂತ್ರ ಹಾಕಿದಂತೆ ಮಾಡಿದನು. ಇದರಿಂದ ಏನೂ ಗುಣವಾಗದೆ ಇದ್ದದ್ದನ್ನು ನೋಡಿ, ಆ ಮನುಷ್ಯನನ್ನು ಕೂರಿಸಿಕೊಂಡು, ತಲೆಯಮೇಲೆ ಒಂದು ಸಿಂಬಿಯನಿಟ್ಟು, ಅದರಮೇಲೆ ಒಂದು ಗಡಿಗೆಯನ್ನಿಟ್ಟು, ಗಡಿಗೆಯೊಳಕ್ಕೆ ಬೇಕೆಯನ್ನು ಸುರಿದು ಮಂತ್ರ ಹಾಕಿದಂತೆ ಮಾಡಲು, ಸ್ವಲ್ಪ ಹೊತ್ತಿನಲ್ಲಿ ಸ್ಮರಣೆತಪ್ಪಿ ಬಿದ್ದಿದ್ದ ಮನುಷ್ಯನು ಚೇತರಿಸಿಕೊಂಡು ಎದ್ದನು.

ಈಗ ಕೆಲವು ದಿನಗಳ ಹಿಂದೆ ನಮ್ಮ ರಾಜಧಾನಿಯಲ್ಲಿ ಒಂದು ವಿನೋದ ನಡೆಯಿತು. ತಿಂಗಳೊಂದಕ್ಕೆ ೧೫ ರೂಪಾಯಿ ಸಂಬಳವುಳ್ಳವಳಾದ ೧೫—೧೬ ವರುಷಗಳ ಬಾಲ್ಯಮರಣವಿಧವೆಯು ರಾತ್ರಿ ಹೊತ್ತಿನಲ್ಲಿ ದೊಡ್ಡಕೆರೆಯಲ್ಲಿ ಬಿದ್ದು ಪ್ರಾಣಬಿಡುವದಕ್ಕಾಗಿ ಹೊರಟಿದ್ದಳು. ಆ ಹೊತ್ತಿನಲ್ಲಿ ಆಕೆಯನ್ನು ಕಂಡ ಪಂಡಿತರ ಪತ್ನಿಯೊಬ್ಬರು ಸಮಾಧಾನಪಡಿಸಿ ಹಿಂದಕ್ಕೆ ಕರೆತಂದರು. ಕಾರಣವೇನೆಂದು ವಿಚಾರಿಸುವಲ್ಲಿ, « ನನಗೆ ೧೫ ರೂಪಾಯಿ ಸಂಬಳವಿದೆ, ೧೫-೧೬ ಪ್ರಾಯವಾಯಿತು, ಸುಖಪಡುವದಕ್ಕೆ ಮಾರ್ಗವಿಲ್ಲ ; ಪುನರ್ವಿವಾಹಕ್ಕೆ ತಂದೆಯು ಸಮ್ಮತಿಸುವದಿಲ್ಲ ; ಹೀಗಿರುವಲ್ಲಿ ಆತ್ಮಹತ್ಯವೇ ಲೇಸಲ್ಲವೇ ? ಎಂದು ಹೇಳಿದಂದೆ ತಿಳಿದು ಬರುತ್ತದೆ. ಇಂತಹರು ಮದರಾಸಿನಲ್ಲಿರುವ ದಿವಾನ್ ಬಹದ್ದೂರ್ ರಘುನಾಥರಾಯರವರೊಡನೆ ಕರೆಸ್ಪಾಂಡೆನ್ಸ್ ನಡೆಸಿ, ಅವರ ಸಹಾಯದಿಂದ ಪುನರ್ವಿವಾಹವನ್ನು ಮಾಡಿಸಿಕೊಳ್ಳುವದು ಉಚಿತವು.

ಕಳೆದ ಶನಿವಾರ ಸಾಯಂಕಾಲದಲ್ಲಿ ಮೈಸೂರು ಲಿಟರರಿಯೂನಿಯನ್ ಎಂಬವರಲ್ಲಿ ಸಭೆ ಸೇರಿತು ಆಗ ಮ ಎಂ ವೆಂಕಟಕೃಷ್ಣಯ್ಯನವರು ಒಂದು ಉಪನ್ಯಾಸವನ್ನು ಮಾಡಿ ವೇಶ್ಯಾಸ್ತ್ರೀಯರನ್ನು ಶುಭಕಾಲಗಳಲ್ಲಿ ಸಭೆಗೆ ಕರೆಸುವ ನಾಚ್ ಮೊದಲಾದ ರೀತಿಗಳನ್ನು ಮಾಡಿಸುತ್ತಲಿರುವದರಿಂದ ಸಂಸರ್ಗವು ಎಷ್ಟುಮಟ್ಟಿಗೆ ಕೆಡುತ್ತಬಂದಿರುವದೆಂಬುವದನ್ನೂ, ಮುಖ್ಯವಾಗಿ ಕುಲೀನೆಯರಾಗಿರುವವರಿಷ್ಟು ಜನರು ಗೃಹಿಣಿಯರೆಂದು ನಟಿಸುತ್ತಾ, ವಾಸ್ತವವಾಗಿಯೂ ದೇಹವಿಕ್ರಯವನ್ನು ಮಾಡಿಕೊಂಡು, ಅಶ್ಯರ ಕೀರ್ತಿಗೆ ಕಳಂಕವನ್ನುಂಟುಮಾಡುತ್ತಲಿರುವರೆಂಬುವದನ್ನೂ ತಿಳಿಸಿ, ಸಭೆಗೆ ಬಂದಿದ್ದವರು ತಮ್ಮಲ್ಲಿ ಒಂದು ವಿಧವಾದ ಕಟ್ಟನ್ನು ಮಾಡಿಕೊಂಡು, ವೇಶ್ಯೆಯರ ನಾಚ್ ಮೊದಲಾದವುಗಳಿಗೆ ಪ್ರೋತ್ಸಾಹಕರಾಗದಂತೆ ಮಾಡಬೇಕೆಂದು ಹೇಳಲು, ಕೆಲವು ಜನ ವಿದ್ಯಾವಂತರೂ ಕೂಡ, ವೇಶ್ಯಾಸ್ತ್ರೀಯರೂ ಅವರ ನಾಚೆಯೂ ಸಂಸರ್ಗಕ್ಕೆ ಅಂಗಭೂತಗಳೆಂದು ಅಭಿಪ್ರಾಯ ಪಟ್ಟರು ; ಮತ್ತು ಕೆಲವು ಕಟ್ಟು ಮಾಡಿಕೊಳ್ಳುವದಕ್ಕೆ ಇದ್ದವರೆಲ್ಲ ಒಪ್ಪದೆ ಕೂಡ ಮುಗಿಸಿದವರುಬಂದಿರು. ಕೆಲವು ಮುಸುಕಿನೊ, ಕರೀ ಮುಸುಕಿನೊ ಇರುವ ವ್ಯತ್ಯಾಸವಿಷ್ಟೆ —ಸ್ವ. ಪ.

## THE MYSORE GAZETTE.
### ಮೈಸೂರು ಗೆಜೆಟು.

ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದೂರವರ ಸನ್ನಿಧಿಯಿಂದ ಹೊರಟಿರುವ ಇಸ್ತಿಹಾರ್‌ನಾಮೆಗಳು.

ನಂ॥ ೧೯೦೫೮-೧. ೮೬೩೬, ತಾ॥ ೧೩ನೇ ಮೇ-೧೮೯೩.—ಮೈಸೂರು ಸರ್ವಿಸ್ ರೆಗ್ಯುಲೇಷರ್ ೧೩೨ನೇ ಆರ್ಟಿಕಲ್ ಅನುಸರಿಸಿ ಚಳ್ಳಕೆರೆ ತಾ॥ ಅಮಲ್ದಾರ್ ಜಿ. ಶ್ರೀನಿವಾಸರಾಯರವರು ೧೮೯೩ನೇ ಇಸವಿ ಮಾರ್ಚಿ ೧೦ನೇ ತಾರೀಖ್ ಮೊದಲು ೧೫ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿದ್ದರು.

ನಂ॥ ೧೯೦೮೮-೧ ೮೬೨೩.—ಮೈಸೂರು ಸರ್ವಿಸ್ ರೆಗ್ಯುಲೇಷರ್ ೧೩೧ನೇ ಆರ್ಟಿಕಲನ್ನನುಸರಿಸಿ, ಹೊಸದುರ್ಗ ಸಬ್‌ತಾಲೂಕು ಡೆಪ್ಯುಟಿ ಅಮಲ್ದಾರ್ ನರಸಿಂಗರಾಯರು ಈ ತಿಂಗಳ ೧೨ನೇ ತಾರೀಖ್ ಮೊದಲು ೨ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿದ್ದರು.

ತಾ॥ ೧೫ನೇ ಮೇ, ೧೮೯೩ ನಂ॥ ೧೯೦೬೩-೧. ೮೬೪೦.—ಜನರಲ್ ಪಿ. ಮೆಕ್ಕಿಂಟೈರ್ ಕೇಂಬೆಲ್ ಯವರು ಪ್ರಿವಿಲೀಜ್ ರಜಾ ಮೇಲಿರುವ ಕಾಲದಲ್ಲಿ ಮಿ॥ ಮುಕ್ಕಚ್ಚೊ೯ಯವರು ಮೈಸೂರು ಚೀಪ್ ಎಂಜಿನಿಯರಾಗಿಯೂ, ಮೈಸೂರು ಗವರ್ನಮೆಂಟ್ ಮರಾಮತ್ತು ಇಲಾಖಾ ಸೆಕ್ರೆಟರಿಯಾಗಿಯೂ ಕೆಲಸ ನೋಡುವರು.

ಮಿ॥ ಮುಕ್ಕಚ್ಚೊ೯ಯರು ಮೈಸೂರು ಗವರ್ನಮೆಂಟ್ ಆಫಿಷಿಯೇಟಿಂಗ್ ಚೀಫ್ ಯೆಂಜಿನಿಯರಾಗಿ ಯೂ ಮರಾಮ್ಮತ್ತು ಇಲಾಖಾ ಸೆಕ್ರೆಟರಿಯಾಗಿಯೂ ೧೮೯೩ ನೇ ಇಸವಿ ಏಪ್ರಿಲ್ ೫ನೇ ತಾರೀಖ್ ಮಧ್ಯಾನ್ಹೋತ್ತರ ತಮ್ಮ ಕೆಲಸದಲ್ಲಿ ಪ್ರವೇಶಿಸಿದರು.

ನಂ॥ ೧೯೧೯೦-೧. ೬೬೨೫.—ಕೋಲಾರ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ಮಿ॥ ಕೆ.ಎಸ್. ಧೊರೆಸ್ವಾಮಿ ಅಯ್ಯರವರು ಈ ತಿಂಗಳ ೭ನೇ ತಾರೀಖ್ ಮೊದಲು ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

ಕೋಲಾರ ತಾಲ್ಲೂಕು ಅಮಲ್ದಾರರು ಮಿ॥ ಜೀವಾ ಹನುಮಂತಯ್ಯನವರು, ಮಿ. ಕೆ. ಎಸ್. ಧೊರೆಸ್ವಾಮಿ ಅಯ್ಯರವರು ಪ್ರಿವಿಲೀಜ್ ರಜಾ ಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ಕೋಲಾರ ಡಿಸ್ಟ್ರಿಕ್ಟ್ ಟ್ರೆಜರಿ ಅಸಿಸ್ಟೆಂಟ್ ಕಮಿಷನರಾಗಿ ಕೆಲಸ ನೋಡುವಂತೆ ಮೊಕರರ್ರು ಮಾಡಲ್ಪಟ್ಟಿರುತ್ತಾರೆ.

ನಂ॥ ೧೯೫೬೧-೧. ೮೩೯೦.—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೨೧ನೇ ಆರ್ಟಿಕಲ್ ಅನುಸರಿಸಿ, ಮೈಸೂರು ಪ್ರೊಬೇಷನರಿ ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮಿ॥ ಮೆಕ್ನೀಲ್ ನಾರ್ಟ್ರಯವರು ಅಲೋವೆನ್ಸಿಲ್ಲದೆ ೧೮೯೩ನೇ ಇಸವಿ ಮಾರ್ಚ್ ೨ನೇ ತಾರೀಖ್ ಮೊದಲು ೬ ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ॥ ೧೯೫೬೬-೧ ೮೩೯೫-ಮೈಸೂರು ಸರ್ವಿಸ್ ರೆಗ್ಯುಲೇಷರ್ ೧೮೮ನೇ ಆರ್ಟಿಕಲ್ ಅನುಸರಿಸಿ ತುಮಕೂರ್ ಡಿಸ್ಟ್ರಿಕ್ಟ್ ಆಫಿಷಿಯೇಟಿಂಗ್ ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮಿ॥ ಅಬ್ದುಲ್ ಅಜೀಜ್‌ಯವರು ೧೮೯೩ನೇ ಇಸವಿ ಮಾರ್ಚ್ ೨ನೇ ತಾರೀಖ್ ಮೊದಲು ೨ ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿದ್ದರು.

೧೨ನೇ ಮೇ, ೧೮೯೩, ನಂ॥ ೧೯೨೨೧-J. F. ೮೬-೯೨—ಕ್ರಿಮಿನಲ್ ಪ್ರೊಸೀಜ್ಯುರ್ ಕೋಡ್ ೧೨ನೇ ಸೆಕ್ಷನ್ ಅನುಸರಿಸಿ, ಕೋಲಾರ ಡಿಸ್ಟ್ರಿಕ್ಟ್ ಮುಳಬಾಗಲ್ ತಾಲ್ಲೂಕು ಅಮಲ್ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಸಿ. ಶೇಷಾದ್ರಿ ಅಯ್ಯಂಗಾರ್ರವರು ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ

ನಂ॥ ೧೯೦೬೬-೧. ೮೬೬೮—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೮೮ನೇ ಆರ್ಟಿಕಲ್ ಅನುಸರಿಸಿ, ಶಿವಮೊಗ್ಗ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ಮಿ॥ ಪಿ. ರಾಮಸ್ವಾಮಯ್ಯರ್, ಬಿ. ಎ. ಯವರು ಈ ತಿಂಗಳ ೧೮ನೇ ತಾರೀಖ್ ಮೊದಲು ೩ ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

ಮಿ॥ ಕೆ. ರಾಮಾನುಜಯ್ಯಂಗಾರ್ರವರು, ಮಿ॥ ರಾಮಸ್ವಾಮಯ್ಯನವರು ರಜಾ ಮೇಲೆ ಗೈರುಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ಶಿವಮೊಗ್ಗ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರಾಗಿ ಕೆಲಸ ನೋಡುವಂತೆ ಮೊಕರರ್ರು ಮಾಡಲ್ಪಟ್ಟಿರುತ್ತಾರೆ.

ನ ॥೧೯೮೫೫—೧ ೮೩೨೨—ದೊಡ್ಡಬಳ್ಳಾಪುರ ತಾಲ್ಲೂಕು ಅಮಲ್ದಾರ್ ಬಿ ಕೃಷ್ಣರಾಯರವರು ೧೮೯೩ನೇ ಇಸವಿ ಏಪ್ರಿಲ್ ೧ನೇ ತಾರೀಖಿನ ೧೬೩೦೨-೮೧೮೩ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಮಂಜೂರ್ ಮಾಡಲ್ಪಟ್ಟ ೩ ತಿಂಗಳ ಪ್ರಿವಿಲೀಜ್ ರಜಾವನ್ನು ಉಪಯೋಗಿಸಿಕೊಳ್ಳದ್ದರಿಂದ ಅದು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾ॥ ೧೮ನೇ ಮೇ ೧೮೯೩, ನಂ॥ ೧೯೬೫೫-J. F. ೮೬—೯೨—ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ ೩೫೨ನೇ ಸೆಕ್ಷನ್ ಅನುಸರಿಸಿ, ಎಡೆಹಳ್ಳಿ ಮುನ್ಸಫ್ ಮತ್ತು ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮಿ॥ ಮಂಜಯ್ಯ, ಬಿ. ಎ. ಬಿ. ಎಲ್ ಯವರು ಸಾಕ್ಷಿಗಳ ಸಾಕ್ಷ್ಯವನ್ನು ಸ್ವದಸ್ತೂರ್ ಇಂಗ್ಲಿಷ್ ಭಾಷೆಯಲ್ಲಿ ತೆಗೆದುಕೊಳ್ಳುವಂತೆ ಹುಕುಂ ಮಾಡಲ್ಪಟ್ಟಿರುತ್ತಾರೆ

ನಂ॥ ೧೯೬೫೩—J. F. ೮೬—೯೨—ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ ೧೨ನೇ ಸೆಕ್ಷನ್ ಅನುಸರಿಸಿ, ಕಡೂರ್ ಡಿಸ್ಟ್ರಿಕ್ಟ್ ಟ್ರೆಜರಿ ಅಸಿಸ್ಟೆಂಟ್ ಕಮಿಷನರಾದ ಮಿ ಆರ್ ಬಿ ಭೂಪರವರು ಇದರಿಂದ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

೧೯ನೇ ಮೆ ೧೮೯೩, ನಂ॥ ೧೯೫೬೩-೧. F. ೩೦೩-೯೨—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೬೩ನೇ ಆರ್ಟಿಕಲ್ ಅನುಸರಿಸಿ, ತೀರ್ಥಹಳ್ಳಿ ತಾಲ್ಲೂಕು ಅಮಲ್ದಾರ್ ಬಿ ವೆಂಕಟಸುಬ್ಬಯ್ಯನವರು ೧೮೯೩ನೇ ಇಸವಿ ಮೇ ೧೬ನೇ ತಾರೀಖ್ ಮೊದಲು ಅಥವಾ ಅವರದನ್ನುಪಯೋಗಿಸಿಕೊಳ್ಳುವದಕ್ಕೆ ಹುಕುಂ ಕೊಡಲ್ಪಟ್ಟಿರುವುದಾದ ಬೇರೆಯೊಂದು ತಾರೀಖ್ ಮೊದಲು ೧೫ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ॥ ೧೯೫೬೫—೧ ೮೩೯೮—೧೮೯೩ನೇ ಇಸವಿ ಮೇ ೯ನೇ ತಾರೀಖಿನ ಮಧ್ಯಾನ್ಹೋತ್ತರ ತುಮಕೂರು ಡಿಸ್ಟ್ರಿಕ್ಟ್ ಪೊಲೀಸ್ ಆಫೀಸ್ ಚಾರ್ಜನ್ನು ಆಫಿಷಿಯೇಟಿಂಗ್ ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮಿ॥ ಅಬ್ದುಲ್ ಅಜೀಜ್ ಯವರು ಕೊಟ್ಟು ಪೊಲೀಸ್ ಸೂಪರಿಂಟೆಂಡೆಂಟರಾದ ಮಿ॥ ಜೆ. ಡಬ್ಲ್ಯು ಸ್ಮೈದಿಯವರು ತೆಗೆದುಕೊಂಡಿರುತ್ತಾರೆ.

ತಾ॥ ೨೦ನೇ ಮೇ ೧೮೯೩, ನಂ ೧೯೫೯೯—J. F. ೧೯೩-೯೨—ಮೈಸೂರು ಸರ್ವಿಸ್ ರೆಗ್ಯುಲೇಷರ್ ೧೮೮ನೇ ಆರ್ಟಿಕಲ್ ಅನುಸರಿಸಿ, ಬೆಂಗಳೂರು ಮ್ಯುನಿಸಿಪಲ್ ಯೆಗ್ಜಿಕ್ಯೂಟಿವ್ ಇಂಜನಿಯರಾದ ಮಿ॥ ಎಂ. ಬಿ. ತಿವಾರಿಯವರು, ೯೩ನೇ ಇಸವಿ ಫೆಬ್ರವರಿ ೧೩ನೇ ತಾರೀಖ್ ಮೊದಲು ಮಾರ್ಚ್ ೧೨ನೇ ತಾರೀಖ್ ವರೆಗೆ ಉಭಯ ದಿನಗಳೂ ಸೇರಿ, ಒಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿದ್ದರು.

ನಂ॥ ೧೯೬೯೩—೧. ೮೮೨೩—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೩೧ನೇ ಆರ್ಟಿಕಲ್ ಅನುಸರಿಸಿ, ಕೃಷ್ಣರಾಜಪೇಟೆ ತಾಲ್ಲೂಕ್ ಅಮಲ್ದಾರರು ಕೃಷ್ಣಮೂರ್ತಿರಾಯರವರು ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು ೫ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ॥ ೧೯೨೧೦—೧. ೮೮೨೫—ಮಾಲೂರು ತಾಲ್ಲೂಕ್ ಅಮಲ್ದಾರ್ ವಿ. ಎನ್. ಗೋವಿಂದರಾಯರವರು, ೧೮೯೩ನೇ ಇಸವಿ ಮಾರ್ಚ್ ೨ನೇ ತಾರೀಖಿನ ೧೮೫೯೧—೬. ೩೮೦೧ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಅವರಿಗೆ ಮಂಜೂರ್ ಮಾಡಲ್ಪಟ್ಟ ೧೫ ದಿನಗಳ ಪ್ರಿವಿಲೀಜ್ ರಜಾಕ್ಕೆ ಜಾಸ್ತಿಯಾಗಿ ೭ ದಿನಗಳ ರಜಾ ಕೊಡಲ್ಪಟ್ಟಿರುತ್ತಾರೆ.

ನಂ॥ ೧೯೫೧೦-೧ F. ೨೫-೯೨—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೨೨ನೇ ಆರ್ಟಿಕಲ್ ಅನುಸರಿಸಿ, ಕಡೂರ್ ಡಿಸ್ಟ್ರಿಕ್ಟ್ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರಾದ ಮಿ॥ ಆರ್ ಬಿ. ಭೂಪರವರು ೧೮೯೩ನೇ ಇಸವಿ ಮೇ ೧೨ನೇ ತಾರೀಖ್ ಮೊದಲು ಹತ್ತು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿದ್ದರು.

## EXTRACTS.

ನಮ್ಮ ದಿವಾನರವರು ಈ ಗೊಂದು ಕಾರ್ಯತ್ನವನ್ನು ನಡೆಸುತ್ತಲಿರುವರು ಅದೇನೆಂದರೆ, ವಿಲಾಯತಿಯಲ್ಲಿರುವ ಮಿ॥ ಕ್ಯುನಾರ್ಡ್ ಬರವರು ಒಂದು ಕಂಪೆನಿಯನ್ನು ಮಾಡಿಕೊಂಡು, ಅರಸೀಕೆರೆಯಿಂದ ಮಂಗಳೂರಿಗೆ ಒಂದು ರೈಲ್ವೇ ಲೈನನ್ನು ಹಾಕಿ ಸದರೀ ಲೈನು ಹಾಸನದವರೆಗೂ, ಸಿರಿಡಿ ಘಾಟ್ ಮೇಲೂ ಹೋಗುವಂತೆ ಮಾಡುವದೆಂದು, ಮೈಸೂರಿಂದ ಹಾಸನಕ್ಕೆ ನೆಟ್ಟಗೆ ಯೋಜನೆಯ ಪ್ರಕಾರವಾಗಿ ಒಂದು ಲೈನನ್ನು ಹಾಕುವದೆಂದೂ, ರಾಜರ್ ಇಂದಿನಿಂದ ಈ ರೋಡಿಗೆ ನಮ್ಮಗೆ ಒಂದು ಲೈನು, ಈ ಮೂರು ಕೆಲಸಗಳನ್ನೂ ತಗಮಾಡಿಸಿ ಕೊಡುವಂತೆಯೂ, ಇದಕ್ಕೆ ಪ್ರತಿಯಾಗಿ ಈ ವಿಧವಾದ ಕೆಲಸಗಳಿಗೆ ಇಂಡಿಯಾ ಗವರ್ನಮೆಂಟಿನವರು ಯಾವ ರಿಯಾಯಿತಿಯನ್ನು ಮಾಡಿ ಕೊಡುತ್ತಿರುವರೋ, ಅದನ್ನೇ ನಮ್ಮ ಸರ್ಕಾರದವರೂ ಒಪ್ಪಿಕೊಡುವುದು ನ್ಯಾಯವಾಗಿರುವದೆಂತಲೂ, ಅದರ ಸಂಬಂಧದಿಂದ ನಮ್ಮ ಸರ್ಕಾರದವರು ಬಂಡವಾಳಕ್ಕೆ ಗ್ಯಾರಂಟಿಯನ್ನು ಕೊಡಬೇಕಾದ ಪಕ್ಷದಲ್ಲಿ ಇತರ ಕಡೆಗಳಲ್ಲಿರುವ ರಿಯಾಯಿತಿಯನ್ನು ತೋರಿಸಬೇಕೆಂತಲೂ, ಮಿ॥ ಲಿಸ್ಟರ್ ಎಂಬವರ ಮೂಲಕ ನಮ್ಮ ಗವರ್ನಮೆಂಟಿಗೆ ಬರೆಯುತ್ತಾರೆ. ಕುನಾರ್ಡ್ ಬರವರು ತಮ್ಮ ಕಂಪೆನಿಗೆ ೧೦ ಲಕ್ಷ ಪೌಂಡುಗಳು, ಅಥವಾ ೧೦೦-೧೫೦ ಲಕ್ಷ ರೂಪಾಯಿಗಳು, ಮೂಲಧನ ಬೇಕಾಗುವದೆಂತಲೂ, ಇಂಥಾ ಒಂದು ಕೆಲಸವನ್ನು ನಿರ್ಮಾಣ ಮಾಡಲು ೬ ಅಥವಾ ೭ ತಿಂಗಳ ಕಾಲ ಬೇಕಾಗುವದೆಂತಲೂ, ಕೆಲಸ ಸಮರ್ಪಕವಾಗಿ ನಡೆದು ಜನಗಳಲ್ಲಿ ವಿಶ್ವಾಸ ಹುಟ್ಟುವಂತೆ ಮಾಡುವದಕ್ಕಾಗಿ ಗವರ್ನಮೆಂಟಿನವರು ಇಪ್ಪತ್ತೈದು ಮೂವತ್ತು ಲಕ್ಷ ರೂಪಾಯಿಗಳನ್ನು ಹಾಕಿದ್ದು, ಅದಕ್ಕೆ ಜಮಾ ಮಾಡಿದ ಹಣಕ್ಕೆ ವಾಪಸ್ ತೆಗೆದುಕೊಳ್ಳುವದೆಂತಲೂ, ಸದರೀ ಕಂಪೆನಿಯು ಸೆಕ್ರೆಟರಿ ಆಫ್ ಸ್ಟೇಟ್‌ರವರ ಕೈಕೆಳಗೆ ಇರುವಂತೆ ಅವರ ಸಲಹೆಯಿಂದ ನಡೆಯತಕ್ಕದ್ದೆಂದೂ ಕಂಪೆನಿಯವರು ಮತ್ತು ಈ ನಾರ್ಡ್ ಬರು ಕೇಳುವ ರಿಯಾಯಿತಿಗಳು ಯಾವುವೆಂದರೆ—(೧) ದಕ್ಷಿಣ ಮಹಾರಾಷ್ಟ್ರ ರೈಲ್ವೆಯು ಮೈಸೂರ್ ಲೈನನ್ನು ತೆಗೆದು ಈ ಹೊಸ ಲೈನನ್ನು ಹಾಕುವದು—ಇಂಡಿಯಾ ಗವರ್ನರ್ ಜನರಲ್‌ರವರು ನಿರ್ಣಯಿಸಿರುವ ಪ್ರಕಾರ ಆಕ್ಟಿನನ್ನು ಇಟ್ಟು ಕೊಡುವದು, (೨) ಸದರೀ ರೈಲ್ವೇಗಾಗಿ ಬೇಕಾಗುವ ಭೂಮಿಗಳನ್ನು ಗವರ್ನಮೆಂಟಿನವರು ತೆಗೆದುಕೊಂಡು ಕಂಪೆನಿಗೆ ದಸ್ತ್ ಫ್ರೀ ಆಗಿ ಕೊಡುವದು, ಸರ್ವೆ, ಪ್ಲಾನು, ಎಸ್ಟಿಮೇಟು ಮೊದಲಾದವುಗಳನ್ನು ಗವರ್ನಮೆಂಟಿನವರೇ ಮಾಡಿಸಬೇಕು (೩) ರೈಲ್ವೆಗೆ ಬೇಕಾಗುವ ಸಾಮಗ್ರಿ ಮೊದಲಾದವುಗಳನ್ನು ದಕ್ಷಿಣ ಮಹಾರಾಷ್ಟ್ರ ರೈಲ್ವೆ ಮೇಲೆ ಕಮ್ಮಿ ದರಕ್ಕೆ ಸಾಗಿಸುವಂತೆ ಮಾಡುವದು (೪) ಬೇಗ ನಮೂದು ಮಾಡಿರುವ ರೈಲ್ವೆ ಲೈನುಗಳಿಗೆ ಬೇಕಾದ ಕಟ್ಟೆ ಬಿಲ್ಡಿಂಗುಗಳನ್ನು ಮಾಡಿಕೊಳ್ಳುವದಕ್ಕೆ ಸ್ವಾತಂತ್ರ್ಯಾಧಿಕಾರ—ಇದಕ್ಕಾಗಿ ಬೇಕಾಗುವ ಪ್ರದೇಶವು ಬ್ರಿಟಿಷ್ ಇಂಡಿಯಾ ಸೀಮೆ, ಅಥವಾ ನೇಟಿವ್ ಸಂಸ್ಥಾನಕ್ಕೆ ಸೇರಿರಲಿ, (೫) ಬಡ್ಡಿ ಕೊಟ್ಟುಕೊಳ್ಳುವದಕ್ಕೆ ಅನುಕೂಲವಾಗುವಂತೆ ಅಕ್ಸ್‌ಚೇಂಜ್ ರೇಟು ಕಡಿಮೆಯಾಗದ ಹಾಗೆ ಗ್ಯಾರಂಟಿ, (೬) ಪ್ರಯಾಣಿಕರಿಗೂ, ಸಾಮಾನಿನ ಆಮದು ರಫ್ತಿಗೂ ದರಗಳನ್ನು ಇತರ ರೈಲ್ವೆ ಲೈನುಗಳಲ್ಲಿರುವಂತೆ ಏರ್ಪಡಿಸಿಕೊಳ್ಳುವದು (೭) ಬರಿಗಾಡಿ ಲೈನುಗಳನ್ನು ಇಂಡಿಯಾ ಗವರ್ನಮೆಂಟಿನವರು ವಿಧಾಯಕ ರೀತಿಯಂತೆ ಏರ್ಪಡಿಸಿಕೊಳ್ಳುವದು (೮) ಟಪಾಲ್, ಮಿಲಿಟರಿ, ಪೋಲೀಸ್ ಮೊದಲಾದ ಇಲಾಖೆ ಸಂಬಂಧದಲ್ಲಿ ಇಂಡಿಯಾ ರೈಲ್ವೆಗಳಲ್ಲಿರುವಂತೆಯೇ ದರಗಳನ್ನು ಕಲ್ಪಿಸಿಕೊಳ್ಳುವದು, (೯) ಇಂಡಿಯಾ ಗವರ್ನಮೆಂಟಿನವರು ಉಚಿತವೆಂದು ನಡೆಸುವ ರೀತಿಯಲ್ಲಿ ರೈಲ್ವೆ ಟ್ರಾನ್ಸ್‌ಫರ್ ಮತ್ತು ಸೂಪರ್‌ವಿಷನಿಗೆ ಒಳಪಟ್ಟಿರತಕ್ಕದ್ದು (೧೦) ಲೈನ್ ನಡೆಸುವ ವಿಷಯದಲ್ಲಿ ಗವರ್ನಮೆಂಟಿನವರೊಡನೆ ಕಲೆತು ಅವಶ್ಯವಿದ್ದಾಗ ಬೇಕಾದ ಏರ್ಪಾಡುಗಳನ್ನು ಮಾಡಿಕೊಳ್ಳುವದು." ನಮ್ಮ ದಿವಾನರವರು ಈ ರಿಯಾಯಿತಿಗಳನ್ನು ಯುಕ್ತವಾದವುಗಳೆಂದು ಒಪ್ಪಿಕೊಂಡಿದ್ದಾರೆ; ಆದರೆ ಗವರ್ನಮೆಂಟಿನವರು ೨೫—೩೦ ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಡಬೇಕೆಂಬ ವಿಷಯವನ್ನು ಮಾತ್ರ ಆಲೋಚಿಸತಕ್ಕದ್ದೆಂದು ನಮೂದು ಮಾಡಿರುವರಂತೆ ಈ ವಿಷಯಗಳನ್ನೆಲ್ಲಾ [illegible], ಮದರಾಸ್ ಗವರ್ನಮೆಂಟಿಗೆ [illegible] ದಿವಾನರವರು ಬರೆಯುತ್ತಾರೆ. ಮೈಸೂರು ಸಂಸ್ಥಾನಕ್ಕೆ ಸೇರಿರುವ ಪ್ರದೇಶಗಳಲ್ಲಿ ಕಂಪೆನಿಯವರಿಗೆ ಬೇಕಾಗಿರುವ ಅನುಕೂಲ್ಯಗಳನ್ನು ಕಲ್ಪಿಸಿಕೊಡುವದಕ್ಕೆ ಸಿದ್ಧರಾಗಿರುವಂತೆಯೂ, ಮದರಾಸ್ ಗವರ್ನಮೆಂಟಿಗೆ ಸೇರಿರುವಂತೆ ಇಂತಾ ರಿಯಾಯಿತಿಯನ್ನು ಪಡೆದುಕೊಳ್ಳುವದಕ್ಕೆ ಕೇಳಿಕೊಂಡಿರುವರು. ಪ್ರವರ್ತಕರಿಗೆ ಬೇಕಾಗುವ ದಿವಾನರವರು ವ್ಯಕ್ತಪಡಿಸಿರುವರು ಮದರಾಸ್ ಗವರ್ನಮೆಂಟಿನವರ ಕಡೆಗೆ ಈ ವಿಷಯದಲ್ಲಿ ಇಂಡಿಯಾ ಗವರ್ನಮೆಂಟಿನವರ ಆಲೋಚನೆಯನ್ನು ಕೇಳಿರುತ್ತಾರೆ ಪರ್ಯಾಲೋಚನವು ತೀರುವತಕ್ಕದ್ದಾಗಿರುವದು —ವ್ಯ. ಬೆ.

## SUMMARY OF NEWS
### ವೃತ್ತಾಂತ ಸಂಗ್ರಹವು

ಗಂಗಾನದಿ ಪ್ರಾಂತ್ಯದಲ್ಲಿ ಕುಷ್ಟರೋಗಿಗಳು ವಿಶೇಷವಾಗಿರುತ್ತಾರಷ್ಟೆ ಈ ರೋಗವನ್ನು ಹೋಗಲಾಡಿಸುವದಕ್ಕೆ ಅಲ್ಲಿನ ಹಿಂದೂಗಳು ಒಂದು ಕೆಲಸ ಮಾಡಬೇಕೆಂದು ಹೇಳುತ್ತಾರೆ ಅದೇನೆಂದರೆ—ಹುಳಿಯ ಮಿನಸಿನಕಾಯನ್ನು—ತಮ್ಮ ಅದರಿಂದ ಒಂದು ಊಟವನ್ನು ಮಾಡಿ, ಅವನ್ನು ರೋಗಿಯಕೈ ಅಥವಾ ಕಾಲಿನ ಮೇಲೆ ಹಾಕಿದ್ದರೆ ರೋಗವು ಬಿಡಿ ಹೋಗುವದು ಎಂಬುವದೇ ಆಚರಣೆ. ಹುಳಿಯ ಮಿನಸಿಗೂ ಕುಷ್ಠ ರೋಗಕ್ಕೂ ಸಂಬಂಧವೇನು ?

ಕೇಲಿಫೋರ್ನಿಯ ಪೂರ್ವದಿಕ್ಕಿನ ಬಾಗಲಿಗೆ ಹೆಂಗಸಿನ ತಲೆಕೂದಲು ತಗಲಿದಾಕ್ಷಣ, ಮತ್ತು ನೋಡಿದವರಲ್ಲಿ ಭಯವನ್ನು ಉಂಟುಮಾಡುತ್ತದೆ. ಇದಕ್ಕೆ ಕಾರಣವೇನಾಗಿರಬಹುದೆಂದರೆ ಪಿಚ್‌ಬರ್ಗಿನಲ್ಲಿ—ಆ ಪಟ್ಟಣದ ಒಬ್ಬ ದೊಡ್ಡ ಮನುಷ್ಯನು ತನ್ನ ಹೆಂಡತಿಯ ನಡತೆಯಲ್ಲಿ ಏನೋ ಅನುಮಾನಪಟ್ಟು ಅವಳನ್ನು ಕೊಂದುಹಾಕುವಾಗ ಕತ್ತರಿಸಿ ಅವಳ ತಲೆಯ ಕೂದಲನ್ನು ಇತರರಿಗೆ ಹೆದರಿಕೆಯನ್ನುಂಟು ಮಾಡುವದಕ್ಕಾಗಿ ಕೋಟೆಯ ಬಾಗಲಿನಲ್ಲಿ ತಗಲಿ ಹಾಕಿದನೆಂದು ತಿಳಿದು ಬಂದಿದೆ.

ಹೈದರಾಬಾದಿನಲ್ಲಿ ಒಂದು ಸೋಮ ಹಿಂಡು ಇಲಾಖೆಯಲ್ಲಿ ವಸ್ತೀದಾರನಾದ ಅಂಬಾದಾಸ್ ಎಂಬವನು ಮೂರು ವರುಷಗಳಿಂದಲೂ ಮುಲ್ಲಾ ಲಿಂಗ ಪಿ ಎಂಬೊಬ್ಬನ ಹೆಸರಿನಲ್ಲಿ ತಾನೇ ಅವನ ರುಜು ಹಾಕಿ ತೆಗೆದುಕೊಳ್ಳುತ್ತಿದ್ದನು. ಈಚೆಗೆ ಕೆಲವು ದಿವಸಗಳ ಕೆಳಗೆ ವಿಚಾರಿಸುವಲ್ಲಿ ಮುಲ್ಲಾ ಲಿಂಗ ಪಿ ಎಂಬುವನು ಸತ್ತು ಮೂರು ವರುಷಗಳಾದವೆಂದು ತಿಳಿದು ಬಂದು ಅಂಬಾದಾಸನಿಗೆ ಗವರ್ನಮೆಂಟಿನವರು ಅವನಿಂದ ಮೂರು ವರುಷಗಳ ಹಣವನ್ನು ವಸೂಲ್ ಮಾಡಿಕೊಂಡರೇ ವಿನಹ ಅವನಿಗೆ ಯಾವ ಶಿಕ್ಷೆಯನ್ನೂ ನಡಿಸಿಲ್ಲವೆಂತಲೂ ಅವನನ್ನು ಅದೇ ಕೆಲಸದಲ್ಲಿ ಇಟ್ಟಿರುತ್ತಾರೆಂತಲೂ ಕೇಳುತ್ತೇವೆ ಇದು ಅಲ್ಲಿನ ಅಧಿಕಾರಿಗಳ ದಯಾರಸವನ್ನೂ ಕರ್ತವ್ಯಜ್ಞಾನವನ್ನೂ ಚೆನ್ನಾಗಿ ವ್ಯಕ್ತಪಡಿಸುತ್ತದೆಯಲ್ಲವೆ ? ಅತನು ಗವರ್ನಮೆಂಟಿಗೆ ಮೋಸ ಮಾಡಿ ಮೂರು ವರುಷಗಳ ಹಣವನ್ನು ಸ್ವಂತ ಉಪಯೋಗಕ್ಕಾಗಿ ತೆಗೆದುಕೊಂಡಿಸಿಂತಲೂ, ಮುಲ್ಲಾ ಲಿಂಗ ಪಿ ಎಂಬವನು ಸತ್ತುಹೋಗಿರುವದು ತನಗೆ ಗೊತ್ತಿಲ್ಲದಿದ್ದಾಗಿಯೂ ಒಪ್ಪಿಕೊಂಡಾಗ್ಯೂ, ಅಂಥಾ ಮೋಸಗಾರನನ್ನು ನೌಕರಿಯಲ್ಲಿ ಇನ್ನೂ ಇಟ್ಟುಕೊಂಡಿರುವಂತೆ ಕೇಳುತ್ತೇವೆ ಇದು ನಿಜವಾಗಿದ್ದ ಪಕ್ಷದಲ್ಲಿ ತುಂಬಾ ಆಶ್ಚರ್ಯಕರವಾದ ವರ್ತನೆ ಸರಿ

ರಷ್ಯಾದೇಶದ ಜಾರರವರು ಸಾರಟಫ್ ಎಂಬ ಪ್ರದೇಶದಲ್ಲಿ ರೈಲಿನಲ್ಲಿ ಪ್ರಯಾಣಮಾಡುತ್ತಿದ್ದಾಗ್ಯೆ, ಅನೇಕ ಮಂದಿ ರೈತರು ಅವರನ್ನು ಕಂಡು ಸ್ವತಃ ತಮ್ಮ ಕಷ್ಟಗಳನ್ನು ಅವರಿಗೆ ಹೇಳಿಕೊಳ್ಳಬೇಕೆಂದು ಎದುರು ನಿಂತರು. ಜಾರ್‌ರವರ ಸಮೀಪದಲ್ಲಿದ್ದ ಅಧಿಕಾರಿಗಳು ಇವರನ್ನು ಬಿಡದೆ ಹೋದದ್ದರಿಂದ, ಅನೇಕ ಮಂದಿ ರೈತರು ರೈಲ್‌ಕಂಬಿಗಳ ಮೇಲೆ ಅಡ್ಡಕ್ಕೆ ಮಲಗಿಬಿಟ್ಟರು ಸುಮಾರು ೧೦ ಮಂದಿ ಹಾಗೂ ಗಾಡಿಗೆ ಸಿಕ್ಕಿ ಚಚ್ಚಿಹೋದರು, ಉಳಿದವರು ಚಕ್ರವರ್ತಿಗಳ ಸಮಾಧಾನ ಬೇಕು ಎಂದು ಎಷ್ಟು ಘಟ್ಟಿಯಾಗಿ ಕಿರುಚಿಕೊಂಡರೂ ಅಧಿಕಾರಿಗಳು ಸ್ವಲ್ಪವೂ ಅಸ್ಪದ ಕೊಡದೆ ತಮ್ಮ ಸನ್ನೆ ಮಾಡಿದರು ತಕ್ಷಣ ಸುಮಾರು ೩೦ ಮಂದಿಯನ್ನು ಹೀಗೂ ಕೊಂದರು, ಆದರೆ ರೈತರು ಸುಮ್ಮನಿರಲಿಲ್ಲ ಅವರೂ ಕೂಡ ಸೋಲ್ಜರುಗಳಲ್ಲಿ ೧೫—೨೦ ಮಂದಿಯನ್ನು ಕೊಂದುಹಾಕಿದರು ಜಾರರವರು ಇವನ್ನೆಲ್ಲಾ ನೋಡಿ ರಾಜ್ಯಪ್ರಭುತ್ವವನ್ನು ಹೊತ್ತು, ಅಂಥಾ ಅನರ್ಥಗಳನ್ನು ನಿಲ್ಲಿಸಲಾರದೆ ಹೋದರು, ಇದರಿಂದ ಅಲ್ಲಿನ ಅಧಿಕಾರಿಗಳು ವೃಥಾ ಜನಗಳಿಗೆ ಬಹು ಸಂಕಟ ಪಡಿಸುತ್ತಾರೆಂತಲೂ, ಆಳುವ ಅರಸರು ಸ್ವಲ್ಪವಾದರೂ ಪ್ರಜೆಗಳ ಕ್ಷೇಮಲಾಭಗಳನ್ನು ವಿಚಾರಿಸುವದಿಲ್ಲವೆಂತಲೂ, ಪ್ರಜೆಗಳನ್ನು ಅಧಿಕಾರಿಗಳ ವಶಕ್ಕೆ ಕೊಟ್ಟಿರುತ್ತಾರೆಂತಲೂ ಊಹಿಸಬೇಕಾಗಿದೆಯಲ್ಲವೆ ? ಪ್ರಜೆಗಳ ಕಷ್ಟಸುಖಗಳನ್ನು ಪರಮೇಶ್ವರನು ಅಧಿಕಾರಿಗಳಿಗೆ ಒಪ್ಪಿಸಿ, ಸ್ವೇಚ್ಛೆಯಲ್ಲಿ ನಿರತರಾಗಿರುವಂಥಾ ಅರಸರು ಈ ಇಂಡಿಯಾದಲ್ಲಿ ಅಪರೂಪವಾಗಿ ಇಲ್ಲ ಇಂಥಾ ಸ್ವಭಾವವುಳ್ಳವರ ವಿಷಯವಾದ ಸಂಗತಿಗಳು ಆಗಾಗ್ಯೆ ವಾಚಕರು ಪತ್ರಿಕೆಗಳ ಮೂಲಕ ಓದಿ ತಿಳಿಯುತ್ತಲೇ ಇರುವೆ — ವೃ ಪ

BANGALORE.—Printed and published at the KARNATAKA PRESS, No. 40, [illegible] ROAD, CITY— 1893.

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning.**

ಅನುವಿದಿತಸ್ಸನ್ಯತ್ಯವಗನಾರ್ತ್ಯಕರ್ಣಾಟಕಪ್ರಕಾಶನಪರಾಭಿಧಾಪ್ರಥಿತಸಾಪತ್ರಿಕೋಭಿತಾ। ಮ್ಯಗಾಕಹಿತಹಾನಿರಿಹಿತಮುದ್ರಣಾಸಜ್ಜನೈರ್ನಿತ್ಯಮುಪರಿಪೋಷಿತಾದಿಶಿಖಾಸಂಸುಖಾ

Vol. XX ] BANGALORE—MONDAY, JUNE 5, 1893. [No 22.

ಸಂಪುಟ ೨೦. ] ಬೆಂಗಳೂರು:—ಸನ್ ೧೮೯೩ನೇ ಇಸವಿ ಜೂನ್ ೫ ನೇ ತಾರೀಖು ಸೋಮವಾರ. [ಸಂಚಿಕೆ ೨೨.


## ಕರ್ಣಾಟಕ ಪ್ರಕಾಶಿಕಾ.

### ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ ಮತ್ತು ಕನ್ನಡಭಾಗಗಳಿಗೆ.

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ವರ್ಷ | 6—0—0 | 8—0—0 |
| ತಿಂಗಳಿಗೆ | 3—8—0 | 4—8—0 |

ಇಂಗ್ಲಿಷ ಅಥವಾ ಕನ್ನಡ ಭಾಗಗಳಿಗೆ.

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ವರ್ಷ | 3—0—0 | 4—0—0 |
| ತಿಂಗಳಿಗೆ | 1—12—0 | 2—8—0 |

ಈ ಪತ್ರಿಕೆಗೆ ದರ ನಾಲ್ಕು ಮಾಡಿದ ತಾರೀಖು ಮೊದಲು ಮೂರು ತಿಂಗಳೊಳಗಾಗಿ ಚಂದಾ ಹಣವನ್ನು ಕಳುಹಿಸಬೇಕಾದವರಿಗೆ ಮಾತ್ರ ೩ ಅರ್ಧ್ಯಾರ್ಧ ದರದ ಮೇಲೆ ಪತ್ರಿಕೆ ಕಳುಹಿಸಲ್ಪಡುವದು. ಮುಂದಾಗಿ ಇಂಗ್ಲಿಷ್ ಭಾಗವೂ ಕನ್ನಡಭಾಗವೂ ಅಥವಾ ಎರಡನ್ನೂ ಪಡೆದುಕೊಳ್ಳುವುದು. ಮೂರು ತಿಂಗಳಿಗಿಂತ ಕಡಿಮೆಯಾಗಿ ಹಣವನ್ನು ಅಂಗೀಕರಿಸಲ್ಪಡುವದಿಲ್ಲ.

### ಪ್ರಕಟನೆಯ ರಿವಾಜ್.

ಒಂದಾವೃತ್ತಿಗೆ ಸಾಲು ಒಂದಕ್ಕೆ ೦—೨—೦

ಪುನರಾವೃತ್ತಿಗೆ ಸಾಲು ಒಂದಕ್ಕೆ ೦—೧—೬

ಎರಡಾವೃತ್ತಿಗಿಂತ ಹೆಚ್ಚಾಗಿ ಪ್ರಕಟನೆ ಮಾಡಬೇಕಾದ್ದಕ್ಕೆ ಸಾಲು ಒಂದಕ್ಕೆ ೧ ಆಣೆಯಂತೆ ತಕ್ಕೊಳ್ಳಲಾಗುವದು. ಈ ಪತ್ರಿಕೆಯಲ್ಲಿ ಪ್ರಕಟನೆಗಳನ್ನು ಕಳುಹಿಸುವವರು ಅವು ಎಷ್ಟು ಆವೃತ್ತಿ ಮಾಡಬೇಕೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಿದ್ದರೆ ಅವರು ಸಲ್ಲಿಸುವಂತೆ ಬರೆಯುವವರೆಗೆ ಅವು ಪ್ರಕಟಿಸುತ್ತಾ ಹೋಗಿ ಎಷ್ಟು ಸಾರಿ ಪ್ರಕಟಿಸಲ್ಪಟ್ಟಿವೆಯೋ ಅದರಂತೆ ದರದ ಹಣವು ವಸೂಲು ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಪ್ರಕಟನೆಗಳನ್ನು ಆವೃತ್ತಿ ಮಾಡಬೇಕಾದದ್ದು ಎಂಬ ನಿರ್ಬಂಧವಿಲ್ಲ. ಪ್ರಕಟನೆಯನ್ನು ಈ ಪತ್ರಿಕೆಗೆ ಕಳುಹಿಸುವ ಕಾಗದ (ಸ್ಪಷ್ಟವಾಗಿ ಬರೆದಿರುವ ಪ್ರತಿ)ಯಾಗಿ ಬರಬೇಕು. ರಾಜಕೀಯ ವಿಷಯದಲ್ಲಿ ಯಾವತ್ತನ್ನೂ ಪ್ರಕಟಿಸಲಾರೆವು. ಸಿರಿಕೆ ಪತ್ರಗಳು ಸ್ವೀಕರಿಸಲ್ಪಡಲಾರವು.


## ADVERTISEMENTS.

### NOTICE.

**VAIDYASARA SANGRAHA**

A TREATISE ON THE PRINCIPLES OF

**HINDU MEDICINE**

*Price including Postage Rs 5 0-0*

ವೈದ್ಯಸಾರ ಸಂಗ್ರಹ.

ಈ ಗ್ರಂಥವು ಸಂಕ್ಷೇಪವುಳ್ಳವರು ಬೋಧಿಸಿಕೊಂಡು ಸುಲಭವಾಗಿ ಚಿಕಿತ್ಸೆ ಮಾಡತಕ್ಕವರ ಮೇಲಿಗೆ ಬರೆಯಲ್ಪಟ್ಟಿದೆ. ದುಡ್ಡು ಇಲ್ಲದವರು ಓದಲಿಕ್ಕೆ ಸಿಗದು.

ಕ್ರಯ—ಪ್ಯಾಕಿಂಗ್ ಮತ್ತು ಅಂಚೇ ಪಾರ್ಸೆಲ್ ಪ್ರತಿ ಒಂದಕ್ಕೆ ರೂ 5—0—0

ಟಿ. ಬಿ. ವೆಂಕಟಾಚಾರ್,

ಬೆಂಗಳೂರ್, ಮಹಾ ಆಸ್ಪತ್ರೆ ಕೋರ್ಟ್ ೪೪ ನಂಬರ್

### ನೋಟೀಸ್.

**ಬೆಂಗಳೂರು ಕರ್ಣಾಟಿಕ್ ಪ್ರೆಸ್.**

ಸನ್ ೧೮೭೪ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಸಕಲವಿಧ ಕೆಲಸಗಳು ಸುಲಭಚಾರ್ಜಿಗೆ ತೀವ್ರವಾಗಿಯೂ ಶ್ಲಾಘ್ಯವಾಗಿಯೂ, ಮುದ್ರಿಸಲ್ಪಡುವವು. ಇನ್ನೂ ಇಂಗ್ಲಿಷ ಕನ್ನಡ ಕೆಲಸ ಮಾತ್ರವೇ ಅಲ್ಲ. ಇತರ ವಿವರಗಳನ್ನು ಸದರೀ ಕಾರ್ಖಾನೆ ಮ್ಯಾನೇಜರಿಗೆ ಬರೆದು ತಿಳುಕೊಳ್ಳಿ.

### ನೋಟೀಸ್.

ಗಣೇಶ ರಾಮಚಂದ್ರ ಕರ್ಕ ಮತ್ತು ಕಂಪನಿ. ಕಮಿಷನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯೊಡನೆ ವ್ಯಾಲ್ಯೂ ಪೇಯಬಿಲ್ ಪೋಸ್ಟು ಮೂಲಕ ತಕ್ಕ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರಹ ಬಿಸ್ಕತಗಳು, ಪುಸ್ತಕಗಳು, ಮುತ್ತುಗಳು, ಚಿಪ್ಪಿ ಮುತ್ತುಗಳು, ಘಡಿಯಾರಗಳು, ಚೈನುಗಳು, ಟ್ರಿಂಕೆಟ್‌ಗಳು, ಕಾಶ್ಮೀರ ಶಾಲುಗಳು, ಪಶ್ಮೀನೆಗಳು, ಜರತಾರಿ ಕಣಗಳು, ಚಂದ್ರಕಾಂತ ಮೊದಲಾದ ಕನ್ನಡಕಗಳು, ಹುಡುಗರಿಗೆ ತಕ್ಕ ಜರತಾರಿ ಉಡುಪುಗಳು, ಜರತಾರಿ ಟೋಪಿಗಳು, ಆಫೀಸ ಡೆಸ್ಕುಗಳು, ಪಟಗಳು, ಅತ್ತರಿಗಳು, ಅತ್ಯುತ್ತಮಗಳಾದ ರತ್ನಗಳು, ಭಂಗಾರದಿಂದ ಕಟ್ಟಲ್ಪಟ್ಟ ಉಂಗುರಗಳು, ಜರ್ಮನ್ ಸಿಲ್ವರ್ ಪಾತ್ರಗಳು, ಜರ್ಮನ್ ಬೆಳ್ಳಿ ಪಾತ್ರಗಳು, ಕೇಸು, ಕಸ್ತೂರಿ ವಗೈರೆ ಇತರ ಸಾಮಾನುಗಳು

ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟಾಂಪ್ ಕಳುಹಿಸಿದ್ದಾರೆ ಹೊರತು ಜವಾಬ್ ದೊರೆಯಲಾರದು

ವಿಳಾಸ.—ಗಣೇಶ ರಾಮಚಂದ್ರ ಕರ್ಕ,
ಮತ್ತು ಕಂಪನಿ, ಕಮಿಷನ್ ಏಜಂಟ್ಸ್,
ಠಾಕೂರ್ ದ್ವಾರ, ಮಾರ್ಕೆಟ್ ಪೋಸ್ಟು, ಮುಂಬೈ.

### ನೋಟೀಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕರೀಗೆ ಸಿದ್ಧವಾಗಿವೆ. ಬೇಕಾದವರು ಹಣವನ್ನು ಕಳುಹಿಸಿ ತರಿಸಿಕೊಳ್ಳಬಹುದು.

#### ಸಂಸ್ಕೃತ ಗ್ರಂಥಗಳು.

| | ಪೋಸ್ಟ್ ಸಹಿತ | ರೂ | ಆ | ಪೈ. |
|---|---|---|---|---|
| ಸಟೀಕಾ ವೈದ್ಯಸಾರ ಸಂಗ್ರಹ | ... | ೫ | ೦ | ೦ |
| „ ಶಿವಗೀತೆ | ... | ೧ | ೧ | ೦ |
| „ ಶಿವಾನಂದಲಹರಿ | ... | ೦ | ೮ | ೦ |
| „ ಕಾಲಾಮೃತ | .. | ೧ | ೦ | ೦ |
| „ ಟಿ॥ ವಾಲ್ಮೀಕಿರಾಮಾಯಣ | .. | ೦ | ೩ | ೦ |
| „ ಟೀ॥ ಗೋಪಿಕಾ ಗೀತೆ | . | ೦ | ೧ | ೦ |
| „ ಟೀ॥ ಚಾಣಕ್ಯನೀತಿ (ಸುಭಾಷಿತ) | | ೦ | ೪ | ೦ |
| ವಿಷ್ಣುಸಹಸ್ರನಾಮ ವಗೈರೆ | ... | ೦ | ೩ | ೦ |
| ಸಂಧ್ಯಾವಂದನ ಪ್ರಯೋಗ | .. | ೦ | ೨ | ೦ |
| ಕೃಷ್ಣಕರ್ಣಾಮೃತ | .. | ೦ | ೨ | ೦ |
| ಶ್ರೀಕಾಂತ ಅಮರ ಮೂಲ | ... | ೦ | ೬ | ೦ |
| ೧ ಕಾಂಡ | ... | ೦ | ೧ | ೦ |

#### ಕನ್ನಡ ಗ್ರಂಥಗಳು.

| | | ರೂ | ಆ | ಪೈ. |
|---|---|---|---|---|
| ಶುಕಸಪ್ತತಿ ಅಸ್ವಿಲ್ | ... | ೩ | ೦ | ೬ |
| ದಿಟೋ ಮುಸ್ತಾ | ... | ೧ | ೨ | ೦ |
| ವೃಷಭೇಂದ್ರವಿಜಯ | .. | ೧ | ೮ | ೦ |
| ಪಂಚತಂತ್ರ ಬಾಲಲೀಲೆ | ... | ೦ | ೬ | ೦ |
| ಹನುಮದ್ವಿಲಾಸ | ... | ೦ | ೬ | ೦ |
| ಕಾಳೀಯಮರ್ದನ | ... | ೦ | ೨ | ೦ |
| ಸುಜನಾಪರಿಣಯ | ... | ೦ | ೨ | ೦ |
| ಶಶಿರೇಖಾಪರಿಣಯ | ... | ೦ | ೨ | ೬ |
| ಸುದಾಮಚರಿತ್ರೆ | ... | ೦ | ೧ | ೦ |
| ಸ್ವರ್ಣಾವತಿ ಚರಿತ್ರೆ | ... | ೦ | ೧ | ೦ |
| ಬಾಲಸ್ವಸ್ತಿಕೆ | ... | ೦ | ೧ | ೦ |
| ಮಹಿಷಮರ್ದನ ಲಾ | .. | ೦ | ೧೦ | ೦ |
| ಬ್ರಾಹ್ಮವಿಲಾಸ | ... | ೨ | ೦ | ೦ |

### ದಕ್ಷಿಣ ಮಹರಾಷ್ಟ್ರ ರೆಯಿಲ್‌ವೆ.

ಸನ್ ೧೮೯೩ ನೇ ಇಸವಿ ಜುಲೈ ಗುರ್ರು ತಾರೀಖಿನಲ್ಲಿ ಪ್ರಾರಂಭವಾಗುವ ಸಾಲಿನಲ್ಲಿ ಬೇಕಾಗಿರುವ ಸಾಮಾನುಗಳ ಸರಬರಾಯಿ ಬಗ್ಗೆ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿವೆ, ಮತ್ತು ಸದರೀ ದರಖಾಸ್ತುಗಳು ಸನ್ ೧೮೯೩ ನೇ ಇಸವಿ ಜೂನ್ ೧೦ ನೇ ತಾರೀಖು ವರೆಗೆ ಅಂಗೀಕರಿಸಲ್ಪಡುವವು, ಸದರೀ ಸಾಮಾನುಗಳು ಯಾವವೆಂದರೆ :—

೧. ಸ್ವದೇಶದ ತಯಾರಿ ಬಿಳಿಕ ಸಾಮಾನುಗಳು.
೨. ಎಣ್ಣೆ, ಕೊಬ್ಬು ಮತ್ತು ಚಿಂದಿ ಬಟ್ಟೆಗಳು.
೩. ಬಟ್ಟೆಗಳು.
೪. ಕಾಗದ ಪೇನಾ ವಗೈರೆ.

ದರಖಾಸ್ತುದಾರರ ಸ್ಪೆಷಿಯಲ್ ಪಟ್ಟಿ ಅಚ್ಚು ಹಾಕಲ್ಪಟ್ಟ ನಮೂನೆಗಳಲ್ಲಿ ದರಖಾಸ್ತುಗಳನ್ನು ಬರೆದು ಕಳುಹಿಸತಕ್ಕದ್ದು. ಸದರೀ ನಮೂನೆಗಳನ್ನು ೧, ೨, ಮತ್ತು ೩ ನೇ ಬಾಬುಗಳ ವಿಷಯದಲ್ಲಿ ಹುಬ್ಬಳ್ಳಿಯಲ್ಲಿರುವ ಸ್ಟೋರ್ಕೀಪರಿಂದಲೂ, ಕಾಗದ ವಗೈರೇ ಸಾಮಾನುಗಳ ವಿಷಯದಲ್ಲಿ ಕಾಪಿ ಒಂದಕ್ಕೆ ೮ ಆಣೆ ಕೊಟ್ಟು ಧಾರವಾಡದಲ್ಲಿರುವ ಏಜಂಟರಿಂದಲೂ ಪಡೆಯಬಹುದು,

ಕಳುಹಿಸುವವರ ಯಾವ ತಪ್ಸೀಲ ಪಟ್ಟಿಯನ್ನೂ ಷರತ್ತುಗಳನ್ನೂ ಅನುಸರಿಸಿ ಸಾಮಾನುಗಳು ಕೊಡಲ್ಪಡುವವೆಯೋ ಅವು ದರಖಾಸ್ತುದಾರರ ಪ್ರತಿ ಒಂದು ಸ್ಪೆಷ್ಯಲ್ ಪಟ್ಟಿಗೂ ಸೇರಿಸಲ್ಪಟ್ಟಿವೆ. ನಾನಾವಿಧ ಬಿಳಿಕ ಸಾಮಾನುಗಳ ವಿಷಯದಲ್ಲಾಗಲಿ, ಎಣ್ಣೆ ಅಥವಾ ಬಟ್ಟೆಗಳ ವಿಷಯದಲ್ಲಾಗಲಿ, ಇನ್ನೇನಾದರು ತಿಳಿದುಕೊಳ್ಳಬೇಕಾದ ಅಂಶವಿದ್ದರೆ ಅದನ್ನು ಹುಬ್ಬಳ್ಳಿಯಲ್ಲಿರುವ ಸ್ಟೋರಕೀಪರಿಂದಲೂ, ಸ್ಟೇಷನರಿ ವಿಷಯದಲ್ಲಿ ಧಾರವಾಡದಲ್ಲಿರುವ ಏಜಂಟರಿಂದಲೂ ತಿಳಿದುಕೊಳ್ಳಬಹುದು.

ದರಖಾಸ್ತು ಬರೆದು ಲಕೋಟೆಯಲ್ಲಿ ಹಾಕಿ ಮೊಹರ ಮಾಡಿ ಧಾರವಾಡದಲ್ಲಿರುವ ದಕ್ಷಿಣ ಮಹರಾಷ್ಟ್ರ ರೆಯಿಲವೆ ಕಂಪನಿಯ ಏಜಂಟರವರ ಹೆಸರಿಗೆ ಕಳುಹಿಸತಕ್ಕದ್ದು. ಲಕೋಟೆಯ ಮೇಲೆ,

ಸ್ವದೇಶದ ಸಾಮಾನುಗಳ ಬಗ್ಗೆ ದರಖಾಸ್ತು.
ಎಣ್ಣೆ, ಕೊಬ್ಬು ಮತ್ತು ಚಿಂದಿ ಬಟ್ಟೆಯ ಬಗ್ಗೆ ದರಖಾಸ್ತು.
ಕಾಗದ ವಗೈರೆ ಸಾಮಾನುಗಳ ಬಗ್ಗೆ ದರಖಾಸ್ತು,

ಎಂದು ಆಯಾ ಬಾಬುಗಳನ್ನು ನಮೂದಿಸತಕ್ಕದ್ದು.

ಏಜಂಟರವರು ಕಡಿಮೆದರಖಾಸ್ತನ್ನಾಗಲಿ, ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೆ ಬದ್ಧರಾಗಿರುವದಿಲ್ಲ.

ಏಜಂಟರ ಆಫೀಸ್,
ಧಾರವಾಡ,
೧೩ ನೇ ಮೇ ೧೮೯೩.

J. CAMPBELL,
*Agent,*
*S. M. Railway.*

### ಕೊಡಗು ಫಾರೆಸ್ಟ್ ಇಲಾಖಾ

#### ನೋಟಿಸ್.

1893 ನೇ ಇಸವಿ ಮೇ ತಾರೀಖು 18 ರಲ್ಲು.

ಇದರಡಿ ನಮೂದಿಸಿದ ಸಾಮಾನುಗಳು ಹುಣಸೂರು ಡಿಪೋದಲ್ಲಿ ಸನ್ 1893 ನೇ ಇಸವಿ ಜೂನ್ ತಾರೀಖು 21 ರಲ್ಲು ಹರಾಜ್ ಹಾಕಲ್ಪಡುತ್ತದೆ.

ತ್ಯಾಗದ ತೊಲೆಗಳು ..5 ... 1700 ಸರಿ ಅಡಿ.
ಹೊನ್ನೆ ವಗೈರ 215 ... 5100 „

ರಿ:—ಸನ್ 1889ನೇ ಇಸವಿ ಡಿಸೆಂಬರ ತಾರೀಖು 19ರ, ನಂಬರ 53 ರ ಚೀಫ್ ಕಮಿಷನರ ಸಾಹೇಬರವರ ನೋಟಿಫಿಕೇಷನ್‌ಮೇರೆ ನಂತರ ಕ್ರಯದ ನೈಷ ಹಣವಾ ಹತ್ತರಷ್ಟು ಹಣವನ್ನು ಹರಾಜ್ ಕಾಲದಲ್ಲಿ ಪಾವತಿ ಮಾಡಿ ಬಾಕೀ ಹಣವನ್ನು ಹರಾಜ್ ತಾರೀಖು ಆಗಾಯಿತು 30 ದಿನಗಳೊಳಗೆ ಪಾವತಿ ಮಾಡತಕ್ಕದ್ದು.

F. A. LEAGER
ಡಿಪ್ಟಿ ಕನಸರ್ವೇಟರ್,
ಕೊಡಗು ಫಾರೆಸ್ಟ್

### THE MONEY MARKET.

ಮದರಾಸ್, ಶನಿವಾರ, ತಾರೀಖು ೩ ನೇ ಜೂನ್ 1893

ಸೇಕಡ ೩ರೂ. ಬಡ್ಡಿ ಗವರ್ನಮೆಂಟು ಪತ್ರಗಳು ರೂಪಾಯಿ, 104–14–0 ಇಂದ 104–6–0ವರೆಗೆ.

ಮದರಾಸ್ ಬ್ಯಾಂಕ್ ಷೇರಗಳು, (500) ರೂಪಾಯಿಗಳ ಬಾಬತು 970 ಆಗಾ ಯಿತು 980ವರೆಗೆ.

ಕಮರ್ಷಿಯಲ್ ಪ ಬ್ಯಾಂಕ್ ಪದ್ಮಗೇಜ್ ಬ್ಯಾಂಕ್ ಷೇರಗಳು. (100) ಬಾಬತು 160 ರಿಂದ 165 ವರೆಗೆ

ಸವರೇಗಳು, 16–4–0 ಇಂದ 16–8–0 ವರೆಗೆ

ಬ್ಯಾಂಕ್‌ಬಿಲ್‌ಗಳು ಯಾನೆ ದಸ್ತನೆಮುಂಡಿಗಳು, ರೂ,ಗೆ 6 ತಿಂಗಳವಾಯಿದೆಗೆ, 1s. 2 3/10d.

ದಿಟೋ 4 ತಿಂಗಳವಾಯಿದೆಗೆ, 1s. 2 31/32d

ದಿಟೋ ಕೇಳಿದಾಗ, 1s. 2 ¾d.

### ನೋಟಿಸ್.

ಇದರಿಂದ ಸರ್ವರಿಗೂ ತಿಳಿಯಪಡಿಸುವದು ಏನೆಂದರೆ :—

ಈ ಸಾಲಿನಲ್ಲಿ ನಿಮ್ಮ ದಿನವೊಂದಕ್ಕೆ ನಾಲ್ಕು ತಿಂಗಳು ಕಳೆದವು. ಇನ್ನು ಅವರವರು ಚಂದಾ ಹಣವನ್ನು ಕಳುಹಿಸಿದ ಹೊರತು ಈ ಪತ್ರಿಕೆಯ ಕಾರ್ಯವು ನಿರುಪಾಧಿಕವಾಗಿ ನಡೆಯಲಾರದು, ಆದುದರಿಂದ ಮೊದಲು ಪಡೆಯುವರು ತಮ್ಮ ಚಂದಾ ಹಣವನ್ನು ಕಳುಹಿಸಬೇಕೆಂದು ಕೋರುತ್ತೇವೆ. ಹಾಗೆ ಮಾಡದವರಿಗೆ ಈ ಪತ್ರಿಕೆ ಕಳುಹಿಸಲ್ಪಡಲಾರದು.

೧—೫—೯೩. ಪ್ರೊಪ್ರೈಟರ್.

### THE BAGNALORE SREENIVASA MANDIRAM.

#### ಬೆಂಗಳೂರು. ಶ್ರೀನಿವಾಸ ಮಂದಿರ.

ಬೆಂಗಳೂರ ಶ್ರೀ ಶ್ರೀನಿವಾಸ ಮಂದಿರದ ಧರ್ಮಕ್ಕಾಗಿ ಏರ್ಪಾಡಿಸಲ್ಪಟ್ಟ ಅನ್ನ ಮತ್ತು ಅದರ ವಿನಿಯೋಗದ ತಪಸೀಲ ತೋರಿಸುವದು.—

೧೮೯೩ನೇ ಇಸವಿ ಮೇ ೨೮ ನೇ ತಾರೀಖಿನ ಮೊದಲು ಜೂನ್ ೩ನೇ ತಾರೀಖಿನ ವರಿವಿಗೆ.—

| | |
|---|---|
| ಅಕ್ಕಿ ವಸೂಲು ಮಾಡಿದ ಸ್ಥಳಗಳ ಸಂಖ್ಯೆ | 60 |
| ದಾನಮಾಡಿದ ಧಾನ್ಯದ ಸೇರುಗಳ ಸಂಖ್ಯೆ ... | 59 |
| ಗತವಾರದ ಶಿಲ್ಕು ಸೇರು ... | 4 |
| ಜಮಾ ... | 63 |
| ಸ್ವಯಂಪಾಕಿ ಸಾಮಾನ್ಯ ಭೋಜನಾರ್ಥಿಗಳಿಗೆ ಸೇರು | 25½ |
| ಹಬ್ಬದ ಅಕ್ಕಿ ಸೇರು .. | 36½ |
| ಜಮಾ ಬಾಕಿ .. | 1 |
| ಭೋಜನ ಮಾಡಿದ ಜನಗಳ ಸಂಖ್ಯೆ ಮತ್ತು ತಪ್ಸೀಲ. | |
| ಅನಾಥರು ... ... | 7 |
| ಬೈರಾಗಿ ವಿದ್ಯಾರ್ಥಿಗಳು ... | 6 |
| ಕಾಯಂ ಇರತಕ್ಕ ವಿದ್ಯಾರ್ಥಿಗಳು ... | 14 |
| ಒಟ್ಟು ಕೊಡತಕ್ಕ ಆಹಾರ ಮಾಡಿದವರ ಸಂಖ್ಯೆ | 30 |
| ಪ್ರಯಾಣಸ್ಥರು ... ... | 16 |
| ಜಮಾ | 73 |

# ಕರ್ಣಾಟಕ ಪ್ರಕಾಶಿಕಾ.

**THE KARNATAKA PRAKASIKA.**

**MONDAY, JUNE 5 1893**

೧೮೯೩ನೇ ಇಸವಿ ಜೂನ್ ತಾ|| ೫ ನೇ ಸೋಮವಾರ


## ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ಕಳೆದ ತಿಂಗಳ ೩೧ನೇ ತಾರೀಖು ಬುಧವಾರ ದಿನದ ಬೆಳಗ್ಗೆ ೮ ಘಂಟೆಗೆ ಈ ಪಟ್ಟಣದ ಮ್ಯುನಿಸಿಪಲ್ ಸಂಘದವರು ತಮ್ಮ ಆಫೀಸಿನಲ್ಲಿ ಸಭೆ ಸೇರಿದ ಕಾಲದಲ್ಲಿ ನಡೆದ ಆಭಾಸಕರವಾದ ಒಂದು ವಿಷಯವು ಈ ಪತ್ರಿಕೆಯನ್ನೋದುವ ತಜ್ಞರ ತಿಳುವಳಿಕೆಯ ಬಗ್ಗೆ ಇದರಡಿ ಸಂಗ್ರಹವಾಗಿ ಪ್ರಕಟಿಸುವೆವು —

ಈ ಸಭಾಕಾರ್ಯವು ಪ್ರಾರಂಭಿಸುವದಕ್ಕೆ ಪೂರ್ವಭಾವಿಯಾಗಿ, ಹಾಜರಿದ್ದ ೧೫ ಮಂದಿ ಮೆಂಬರುಗಳ ಪೈಕಿ ೮ ಮಂದಿ, ಈ ಮ್ಯುನಿಸಿಪಲ್ ರೆಗ್ಯುಲೇಷನ್‌ಗಳನ್ನನುಸರಿಸಿ, ಈ ಮೀಟಿಂಗ್ ಮಾಡುವದಕ್ಕೆ ಯೋಗ್ಯ ದಿನಗಳ ಮುಂಚಿತವಾಗಿ ನೋಟೀಸ್ ಕೊಡಬೇಕಾಗಿದ್ದಾಗ್ಯೂ ಆ ರೀತಿ ಮಾಡದೆ ಇರುವದರಿಂದ ಈಗ ಮೀಟಿಂಗ್ ಮಾಡುವಣವು ನ್ಯಾಯವಿರುದ್ಧವಾದ ಕಾರ್ಯವೆಂದು ಆಕ್ಷೇಪಿಸಲು ಅದರಮೇಲೆ ಬಹಳ ಚರ್ಚೆನಡೆದ ತರುವಾಯ ಪ್ರೆಸಿಡೆಂಟರವರು ಮುಂದೆ ಕೆಲಸವನ್ನು ಜರಿಗಿಸತಕ್ಕದ್ದೆ ಅಥವಾ ನಿಲ್ಲಿಸತಕ್ಕದ್ದೆಯೆಂಬ ವಿಷಯದಲ್ಲಿ ಮೀಟಿಂಗಿನ ಅಭಿಪ್ರಾಯವಂ ಅರಿಯುವದಾಗಿ ಹೇಳಿದರು. ಹಾಜರಿದ್ದ ೧೫ ಮಂದಿ ಮೆಂಬರುಗಳ ಪೈಕಿ ೮ ಮಂದಿ ಕೆಲಸ ಜರಿಗಿಸಕೂಡದೆಂತಲೂ ಉಳಿದ ೭ ಮಂದಿ ನಡೆಸಬಹುದೆಂತಲೂ ಹೇಳಿದರು. ತರುವಾಯ ಪ್ರೆಸಿಡೆಂಟರವರು ಪ್ರತ್ಯರ್ಥಿಗಳಾದವರನ್ನು ಪ್ರತಿಭಟಿಸಿ ತಮಗೆ ಇಷ್ಟವಿದ್ದರೆ ಮೀಟಿಂಗನ್ನು ನಡೆಸುವದಕ್ಕೆ ತಮಗೆ ಅಧಿಕಾರವುಂಟೆಂದು ಹೇಳಿ ಕೆಲಸನಡೆಯತಕ್ಕದ್ದೆಂದು ತೀರ್ಮಾನಿಸಿದರು. ಅದರಮೇಲೆ ಪ್ರತಿಭಟಿಸಿದ ಮೆಂಬರುಗಳು ತಾವು ಯಿಮ್ಮ ಬೋರ್ಡಿನ ನಡವಳಿಕೆಯಲ್ಲಿ ಕಲೆತು ನಡೆಸುವ ಪಕ್ಷಕ್ಕೆ ಇದುವರೆಗೆ ತಾವು ಹೇಳಿದ ಆಕ್ಷೇಪಣೆಗಳೆಲ್ಲವು ವ್ಯರ್ಥವಾಗಿ ಹೋಗುವದಾದುದರಿಂದ ತಾವೆಲ್ಲರು ಹೊರಟು ಹೋಗುವದಕ್ಕೆ ಅಪ್ಪಣೆಕೊಡಬೇಕೆಂದು ಕೇಳಿದರು. ಇಷ್ಟವಿಲ್ಲದವರು ಹೊರಟು ಹೋಗುವದಕ್ಕೆ ಸ್ವತಂತ್ರರಾಗಿರುತ್ತಾರೆಯೆಂದು ಪ್ರೆಸಿಡೆಂಟರು ತಿಳಿಸಲು ಇದರಡಿ ಕಾಣಿಸುವ ಸದರೀ ಯೆಂಟುಮಂದಿ ಮೆಂಬರುಗಳು ಹೊರಟುಹೋದರು, ಎಂಬವು

ಮಿ. ಡಿ ವೆಂಕಟರಾಮಯ್ಯನವರು.

,, ಸಾಂಬಶಿವಯ್ಯನವರು.

,, ಎಸ್. ಸುಬ್ಬರಾಯರವರು.

,, ಎಚ್. ರಾಮಯ್ಯನವರು

,, ಟಿ ಆರ್ ವೆಂಕಟಸ್ವಾಮಿ ನಾಯುಡರವರು

,, ಬಸಪ್ಪ ಶೆಟ್ಟರು.

,, ಅಣ್ಣಯ್ಯಪ್ಪಶೆಟ್ಟರವರು

,, ಶಫಿಉಲ್ಲಾಖಾನ್.

ಈ ಪಟ್ಟಣದ ಮ್ಯುನಿಸಿಪಲ್ ಆಡಳಿತವು ಈ ಸ್ಥಿತಿಗೆ ಬಂದಿರುತ್ತದೆ. ಬೋರ್ಡಿನ ಕೆಲಸಗಳು ಕ್ರಮವಾಗಿ ಜರುಗುವದಿಲ್ಲವೆಂದು ಆಗಿಂದಾಗ್ಗೆ ನಮ್ಮ ಕಿವಿಗೆ ಬೀಳುತ್ತಲಿವೆ ಇದಕ್ಕೆ ಕಾರಣವಂ ವಿಚಾರಿಸಲಾಗಿ, ವೈಸ್ ಪ್ರೆಸಿಡೆಂಟರು ಸ್ವತಂತ್ರಿಸಿ ವ್ಯವಸ್ಥೆ ಮಾಡುವದಕ್ಕೆ ಅರ್ಹಗಳಾದ ವಿಷಯಗಳು ಸಹ ಅವರಿಗೆ ಬಿಡದೆ ಪ್ರೆಸಿಡೆಂಟರವರು ವಿಶಿಷ್ಟವನ್ನು ತಾವೇ ಮಾಡುವ ಭಾರವಂ ವಹಿಸಿ ಕೊಂಡಿರುವದರಿಂದ ಕೆಲಸಗಳು ಇಷ್ಟು ಸುಸ್ಥಿಗೆಟ್ಟು ಮಹಜನ್ನು ಅಲಕ್ಷದವಗಳ ಅತೃಪ್ತಿಗೆ ಅವಕಾಶ ಉಂಟಾಯಿತೆಂದು ತಿಳಿಯಬರುತ್ತಿದೆ ಪ್ರೆಸಿಡೆಂಟರು ಒಂದು ಡಿಸ್ಟ್ರಿಕ್ಟಿನ ಅಧಿಕಾರಿಯಾಗಿ ಅಲ್ಲಿ ನಿರ್ವಹಿಸಬೇಕಾದ ಕಾರ್ಯಗಳು ಅವರಿಗೆ ಅನೇಕವಾಗಿರುವದರಿಂದ ಮ್ಯುನಿಸಿಪಲ್ ಕೆಲಸಕ್ಕೆ ತಕ್ಕ ನಿಗಾ ಕೊಡುವದಕ್ಕೆ ಅವರಿಗೆ ಸುಕರಂ ಅವಕಾಶವಿಲ್ಲದೆ ಕ್ಲೆಸಲಾತಿಯ ಬಗ್ಗೆ ಅವರಿಗೆ ಕಳುಹಿಸಲ್ಪಟ್ಟ ಕಾಗದಗಳು ಮರೆಯಾಗಿ ಹೋಗುತಲಿವೆ. ಮ್ಯುನಿಸಿಪಾಲಿಟಿಯ ನೌಕರರ್ಮನೇರು ಸಂಖ್ಯೆಯಲ್ಲೂ ಕೆಲಸದಲ್ಲೂ ಕಡಮೆ ಯಿಲ್ಲದೆ ಇದ್ದಾಗ್ಯೂ ಕಾರ್ಯ ನಿರ್ವಾಹಕರಾದವರ ಸಂಖ್ಯೆಯು ಅತ್ಯಲ್ಪವಾಗಿರುತ್ತದೆ. ಕೇವಲ ಅವಶ್ಯಕವಾದ ಖರ್ಚುಗಳು ತಪ್ಪಿ ಅನಾವಶ್ಯಕಗಳಾದ ದುಬಾರಿ ಖರ್ಚುಗಳು ದಿನೇದಿನೆ ಹೆಚ್ಚುತಲಿವೆ ಯಾವ ಬಾಬಿಗಾಗಿ ಖರ್ಚ ಮಾಡುವದಕ್ಕೆ ಬಜೆಟ್ಟಿನ ಲೆಕ್ಕವನ್ನನುಸರಿಸಿ ಹುಕುಂ ಇಲ್ಲವೊ ಹು ಬೋರ್ಡಿನವರು ಮಂಜೂರುಮಾಡುತಲಿದಾರೆವೋ ಅದೇ ಹೆಡ್ಡಿನಲ್ಲಿ ಖರ್ಚನ್ನು ಹೆಚ್ಚಿಸುವದಕ್ಕೆ ಅಧಿಕಾರಿಗಳಾದವರಿಗೆ ಇರುವ ದಾಕ್ಷಿಣ್ಯ ವಿನಾ ಇನ್ನೇನು ಕಾರಣ ವಿರಬಹುದು? ತಾವು ಒಪ್ಪಿಕೊಂಡ ಕೆಲಸವನ್ನು ತೀರಿಸಿಕೊಟ್ಟು ಆ ಬಗ್ಗೆ ಬಿಲ್ಲು ಕೊಟ್ಟವರಿಗೆ ಹಣ ಕೊಡುವದಕ್ಕೆ ಮಾರ್ಗವಿಲ್ಲದೆ ಇರುವಲ್ಲಿ ಮುಂದೆ ಆಯಾ ತಿಂಗಳಲ್ಲಿ ಮಾಡುವದಾಗಿ ಒಪ್ಪಿಕೊಂಡ ಕೆಲಸಕ್ಕೆ ಒಂದು ವರ್ಷದವೊಳಗು ಅಡ್ವಾನ್ಸ್ ತೆಗದುಕೊಂಡು ಹೋದವರು ಕೆಲವರು ಇದು ಮಕೇಲೇಬಲದಿಂ ನಡೆದದ್ದಲ್ಲವೆ? ಇದಲ್ಲದೆ ತಮ್ಮನ್ನಾಶ್ರಯಿಸಿದವರಿಗೆ ಸಹಾಯ ಮಾಡುವದಕ್ಕಾಗಿ ಮ್ಯುನಿಸಿಪಲ್ ರೆಗ್ಯುಲೇಷನಿಗೆ ಪ್ರತ್ಯಕ್ಷತಃ ವಿರುದ್ಧವಾದ ಮತ್ತು ಅನಾವಶ್ಯಕಗಳಾದ ಕೆಲಸಗಳ ಬಗ್ಗೆ ಅರ್ಥ ವ್ಯಯವಾಡಲ್ಪಡುತ್ತಿದೆ. ಇಂತಾ ಕಾರ್ಯಗಳಿಗೆ ನಿಗಾ ಕೊಟ್ಟು ಅವು ಸಾಧ್ಯವಾದ ಮಟ್ಟಿಗೆ ಪರಿಹರಿಸ ಬೇಕೆಂಬ ಅಕ್ಕರೆಯು ಮೆಂಬರುಗಳಲ್ಲಿದೆ ಎಂಬದಕ್ಕೆ ನಿದರ್ಶನಗಳು ಸುತರಾಂ ಕಾಣಬರುವದಿಲ್ಲವು ಮೀಟಿಂಗ್ ಕಾಲದಲ್ಲಿ ಮೆಂಬರುಗಳ ಪೈಕಿ ಕೆಲವರು ತಮಗುಂಟಾಗಿರುವ ವಾಗ್ಮಿತೆಯನ್ನು, ಕಾಯಿದೆ ಕಾನೂನುಗಳಲ್ಲಿ ತಾವು ಪಡೆದಿರುವ ಜ್ಞಾನವನ್ನು ತೋರ್ಪಡಿಸುವದಕ್ಕಾಗಿ ಬರುವಂತೆ ತೋರುತ್ತಿದೆಯೇ ಹೊರತು ಬೋರ್ಡಿನ ಕಾರ್ಯವಂ ಉಚಿತ ರೀತಿಯಿಂದ ನೆರವೇರಿಸಬೇಕೆಂಬ ಶ್ರದ್ಧೆಯೊಡನೆ ಬರುವಂತಿಲ್ಲವು. ಇದರ ದೆಸೆಯಿಂದ ಆಯಾ ಮೀಟಿಂಗುಗಳಲ್ಲಿ ವ್ಯವಸ್ಥೆಯಾಗಬೇಕಾದ ಕಾರ್ಯಗಳು ಪೂರ್ತಿಯಾಗಿ ವ್ಯವಸ್ಥೆಯಂ ಹೊಂದುವದಿಲ್ಲವು ಇತ್ಯಾದಿ ಕಾರಣಗಳ ದೆಸೆಯಿಂದ ಬೋರ್ಡಿನ ಕೆಲಸಗಳು ಕೇವಲ ಅವ್ಯವಸ್ಥೆ ಸ್ಥಿತಿಗೆ ಬಂದಿರುತ್ತಿದೆಂದು ಹೇಳುವಣವು ಹ್ಯಾಗೆ ಆಕ್ಷೇಪಣೀಯವಾದೀತು? ಈ ವಿಷಯದಲ್ಲಿ ಇನ್ನು ತಿಳಿಸಬೇಕಾದ ಅಂಶಗಳನೇಕ ವಿರುತಿವೆ, ಅವಂ ಮತ್ತೊಂದು ಸಂದರ್ಭದಲ್ಲಿ ತಿಳಿಸುವೆವು.

## ವೈಲಕ್ಷಣ್ಯಾಭಿವೃದ್ಧಿ.

ಇದರಡಿ ಪ್ರಕಟಿಸಲ್ಪಡುವ ವಿಲಕ್ಷಣವಾದ ಒಂದು ಪ್ರಕಟನೆಯನ್ನು ಬಿಜಾಪುರದ ಕರ್ನಾಟಕ ವೈಭವವೆಂಬ ಪತ್ರಿಕೆಯಿಂದ ಸಂಗ್ರಹಿಸಿರುತ್ತೇವೆ. ಇದರ ದೆಸೆಯಿಂದ, ಹಿಂದೂಸ್ತ್ರೀಯರು ವಿದ್ಯಾ ವೈಲಕ್ಷಣ್ಯ ಸ್ವಾತಂತ್ರ್ಯಾದಿಗಳಿಲ್ಲದೆ ಕೇವಲ ಹೀನಸ್ಥಿತಿಯಲ್ಲಿ ಬಹುವಿಧ ಬವಣೆಗಳನ್ನನುಭವಿಸುತಲಿರುತ್ತಾರೆಂತಲೂ, ಅಂತಾ ಸ್ಥಿತಿಯಿಂದ ಅವರು ಬಿಡುಗಡೆಮಾಡಿ ಕಾಲಾನುಗುಣವಾಗಿ ವಿಲಕ್ಷಣಸ್ಥಿತಿಗೆ ತರಬೇಕೆಂಬ ಸಂಕಲ್ಪಪೂರ್ವಕ ಪ್ರವರ್ತಿಸಿರುವ ನವನಾಗರಿಕರ ಪ್ರಯತ್ನೋದ್ದೇಶಗಳು ಕೈಗೂಡಿತೆಂದು ಈ ಪತ್ರಿಕೆಯನ್ನೋದತಕ್ಕವರು ಸುಲಭವಾಗಿ ಅರಿಯಬಹುದು. ಇದರಿಂದ ಗಂಡನಾದವನು ತನಗೆ ಪುಂಸತ್ವ ತಪ್ಪಲಿಲ್ಲವೆಂಬ ಬಗ್ಗೆ ತನ್ನ ಹೆಂಡತಿ ಅಪೇಕ್ಷಿಸಿದ ಪಕ್ಷದಲ್ಲಿ ಡಾಕ್ಟರಿಂದ ಸರ್ಟಿಫಿಕೇಟು ಹಾಜರ್ ಮಾಡುವದಕ್ಕೆ ಬದ್ಧನಾಗಿರುತ್ತಾನೆಂದು ಯೋಚನೆಯಾಗುತ್ತಿದೆ. ಇದಕ್ಕಾಗಿ ಗವರ್ನಮೆಂಟಿನವರು ಅಲ್ಲಲ್ಲಿ ಒಬ್ಬ ಸರ್ಜನ್‌ಯನ್ನು ಮೊಕರರ್ ಮಾಡಬೇಕಾದ ಕಾಲ ಪ್ರಾಪ್ತವಾಗುವ ಪಕ್ಷದಲ್ಲಿ ಆತನಿಗೆ ಸಂಬಳ ಕೊಡಬೇಕಾದ ಭಾರವನ್ನು ಗವರ್ನಮೆಂಟಿನವರು ವಹಿಸಬೇಕಾದ್ದಿಲ್ಲವು ಫ್ರೆಂಸ್ಟ್ರೆಟ ಸರ್ಟಿಫಿಕೇಟು ಅಪೇಕ್ಷಿಸತಕ್ಕವರು ಅಬಗ್ಗೆ ಇಷ್ಟು ಫೀ ಕೊಡಬೇಕೆಂದು ನಿರ್ಣಯ ಮಾಡಿದರೆ, ಹೆಂಡತಿ ಬೇಕಾದವನು ಅದಂ ಕೊಟ್ಟು ಸರ್ಟಿಫಿಕೇಟು ಹೊಂದಬೇಕಾದವನಾಗಿರುತ್ತಾನೆ.

## ನೋಟೀಸ್.

ಕರ್ನಾಟಕ ವೈಭವ

ವರ್ಷ ೨ ಅಂಕ ೧೨

ಭ್ರತಾರ ಕಾರಪ್ಪನವರ ಧರ್ಮಪತ್ನಿ ಹೆಂಗಿ ಸಾಕೀನ ಬರೇ ಹೇನನೂರಿ ತಾಲೂಕ ಇಂಡಿ ಇವನಿಗೆ ಕಳಗೆ ಸಹಿ ಮಾಡುವವಳ ಕಡೆಯಿಂದ್ದ ನೋಟೀಸು ಕೊಡುವದರಲ್ಲಿ ಬರತದಲ್ಲ, ನೀನು ನನ್ನ ಲಗ್ನದ ಗಂಡನಿದ್ದು ನಾನು ಪ್ಯೆನೆರದು ಇವತ್ತಿಗೆ ಅಜಮಾಸ ೮ ವರ್ಷಗಳಾಗಿದ್ದು ಪ್ಯೆನೆರದ ಲಾಗಾಯತು ೫ ವರ್ಷದ ವರೆಗೆ ನಿನ್ನ ಸಂಗಡಾ ಪ್ರಸಂಗ ಮಾಡಿದೆ ಈ ಐದು ವರ್ಷದಲ್ಲಿ ನಾನು ನೋಡಿದಾಗ್ಯೂ ನಿನ್ನಲ್ಲಿ ಪುರುಷತ್ವ ಏನೂ ಇಲ್ಲ ಅಂಬುವದು ನನಗೆ ಖಾತ್ರಿ ಪೂರ್ವಕ ತಿಳಿದದ್ದರಿಂದ ನಿನಗೆ ವಿಚಾರಿಸಲಾಗಿ ನನಗೆ ನೀನು ಕೊಟ್ಟನಿಂದು ಮೈಮೇಲಿನ ದಾಗೀನೆಗಳನ್ನು ತಕ್ಕೊಂಡು ತವರಮನಿಗೆ ಮೂರು ವರ್ಷದ ಹಿಂದೆ ಕಳುಹಿಸಿಕೊಟ್ಟೆ ಇವತ್ತಿಗೂ ನೀನು ಕರಿಯಲಿಕ್ಕೆ ಬರಲಿಲ್ಲಾ ನನ್ನ ತವರ ಮನಿಯವರು ಬಡವರಿರುವದರಿಂದ ವರ ವರ್ಷ ೫೦ ರೂಪಾಯಿ ಅಂತೆ ಮೂರುವರ್ಷದಲ್ಲಿ ೧೫೦ ರೂಪಾಯಿ ಸಾವಕಾರರಲ್ಲಿ ಸಾಲಾ ಮಾಡಿ ಹೊಟ್ಟೆ ತುಂಬಿಕೊಂಡೀನಿ ಆದ್ದರಿಂದ ಈ ನೋಟಿಸಿನದ್ವಾರಾ ಹೀಗೆ ತಿಳಸತೇನಲ್ಲಾ ಈ ನೋಟೀಸ ಮುಟ್ಟಿದ ೮ ದಿವಸದಲ್ಲಿ ನಾನು ಸಾಲಾ ಮಾಡಿದ ೧೫೦ ರೂಪಾಯಿ ಕೊಟ್ಟು ನಿನಗೆ ಪುರುಷತ್ವ ಇಲ್ಲದ ಮೂಲಕ ನನಗೆ ಬಿಡತನೇದು ವದನ್ನು ಉಚಿತವಾಗಿ ಪ್ರಸಿದ್ಧ ಮಾಡಲಿಕ್ಕೆ ಪರವಾನಿಗಿ ಕೊಟ್ಟು ಹೋಗಬೇಕು ವ ಅದರಂತೆ ಮಾಡತಕ್ಕೆ ಇದ್ದರೆ ಸಿವಿಲ ಸರ್ಜನನ ಸರಟಿಪಿಕೇಟ (ನಿನಗೆ ಪುರುಷತ್ವ ಇದ್ದ ಎಗ್ಯೆ) ತಂದು ನನಗೆ ತೋರಿಸಿ ಖಾತ್ರಿ ಮಾಡಿಕೊಟ್ಟು ಕರಕೊಂಡು ಹೋಗಬೇಕು ಅದರಂತೆ ನಡಿಯದೆ ಮುದ್ದತಿನ ಒಳಗ ನೀ ಮಾಡದೆ ಹೋದರೆ ನಾನು ಇದೇ ಧರ್ಮಿಕ ಅಂತಾ ತಿಳಕೊಂಡು ನನ್ನ ಸ್ತ್ರೀಧರ್ಮದ ಪ್ರಕಾರ ಎರಡನೇ ದವರಿಗೆ ಉಡಕೀ ಮಾಡ್ಕೊಂಡೇನು ಆಮೇಲೆ ನನ್ನ ಮೇಲೆ ವ ನನ್ನನ್ನು ಉಡಿಕೆ ಮಾಡಿಕೊಂಡವನ ಮೇಲೂ ನಿನ್ನ ಯಾವರೀತಿ ಹಕ್ಕು ಉಳಿಸಲಿಕ್ಕಿಲ್ಲಾ ಕಾನೂನಿನ ಜವಾಬದಾರಿ ನಿನ್ನ ಮೇಲೆ ಅದೆ, ತಿಳಿಯುವದು

ತಾ|೨೩ – ೫ — ೯೩ನೇ ಇಸವಿ

ಈ ನಿಶಾನಿ ಸ್ವಯಂವ್ಯಾ ಕೋಮು ಕಾರಪ್ಪ

ಹೆಂಗಿ ಸಾಕೀನ ಇಂಡಿ ಇವಳದು ಅದೆ.

ಶ್ಲೋ|| ನಷ್ಟೇ ಮೃತೇ ಪ್ರವ್ರಜಿತೇ ಕ್ಲೀಬೇ ಚ ಪತಿತೇ ಪತೌ ||
ಪಂಚಸ್ವಾಪತ್ಸು ನಾರೀಣಾಂ ಪತಿರನ್ಯೋ ವಿಧೀಯತೇ ||

ಎಂಬ ಪ್ರಮಾಣವಚನಕ್ಕೆ ಮೇಲಿನ ಮಹಾನುಭಾವೆಯು ಸಾರ್ಥಕ್ಯವನ್ನುಂಟುಮಾಡಿದಬಗ್ಗೆ ಆಕೆಯ ವಿಷಯದಲ್ಲಿ ಗ್ರಂಥಕರ್ತರು ಕೇವಲ ಕೃತಜ್ಞರಾಗಿರಬೇಕು

## Occasional Notes

## ನೈಮಿತ್ತಿಕ ವಿಷಯನ್ಯಾಸ

ಉತ್ತರ ಅಮೆರಿಕಾ ದೇಶದ ನೈಋತ್ಯ ಪಶ್ಚಿಮ ಭಾಗದಲ್ಲಿ ಅತಿ ಪ್ರವಾಹದ ದೆಸೆಯಿಂದ ಅನೇಕ ಗ್ರಾಮಗಳು ಕೊಚ್ಚಲ್ಪಟ್ಟುಹೋಗಿ ಹತ್ತಾರು ಸಾವಿರ ಜನರಿಗೆ ವಾಸಸ್ಥಳಗಳು ಹೋಗಿಬಿಟ್ಟವು

ಕಾಶ್ಮೀರ ದೇಶದೊಳು ೩೦೦ ಮೈಲಿಗಳ ಫಾಸಲೆ ರೈಯಿಲ್ ಹಾಕುವದಕ್ಕೆ ಮುನ್ನೂರು ಲಕ್ಷ ರೂಪಾಯಿಗಳು ಹಿಡಿಯುವದೆಂದು ಅಂದಾಜ್ ಮಾಡಲ್ಪಡಲು ಆ ಪ್ರಯತ್ನವಂ ಮಹಾರಾಜರವರು ಅದುಕ್ಕೆ ಬಿಟ್ಟದರಿಂದಲೂ, ಗವರ್ನಮೆಂಟಿನವರಿಗೆ ಅರ್ಥೋಪಪತ್ತಿ ಸಾಲದೆ ಇರುವದರಿಂದಲೂ ಪ್ರಾಯಶಃ ಸದರೀ ಪ್ರಯತ್ನವು ತಪ್ಪಿ ಹೋಗಬಹುದೆಂದು ವರ್ತಮಾನಪತ್ರಿಕೆಗಳು ತಿಳಿಸುತಿವೆ

ಬುದ್ಧ ಗಯೆಯಲ್ಲಿರುವ ಬೌದ್ಧದೇವಸ್ಥಾನವಂ ಈ ಪ್ರಪಂಚದಲ್ಲಿರುವ ಬೌದ್ಧಮತಾವಲಂಬಿಗಳಾದವರ ಉಪಯೋಗಾರ್ಥವಾಗಿಯೂ, ಮಹಾಬೋಧಿ ಸೊಸೈಟಿಯವರಿಗಾಗಿಯೂ, ಕರ್ನಲ್ ಆಲ್ಕಾಟಿಯವರೂ ಸದರೀ ಸೊಸೈಟಿಯ ಸೆಕ್ರಿಟೆರಿಯಾದ ಮಿ|| ಧರ್ಮಪಾಲರವರೂ ಸೇರಿ ಸದರಿ ದೇವಸ್ಥಾನವಂ ಈಗಿನ ಅದರಸ್ವಾಧೀನದಾರರಿಂದ ಕ್ರಯದಲ್ಲಿ ಕೊಂಡುಕೊಳ್ಳುವವರಾಗಿದಾರೆಂದು ತಿಳಿಯಬರುತಿದೆ

ದಕ್ಷಿಣ ಮಹಾರಾಷ್ಟ್ರ ರೈಯಿಲ್ ಕಂಪೆನಿಯಲ್ಲಿ ಮೊದಲನೇ ತರಗತಿ ಪ್ರಯಾಣಸ್ಥರ ಟಿಕ್ಕೆಟದರಗಳು ಕೆಲವುಕಡೆ ಮೈಲೊಂದಕ್ಕೆ ಯೆರಡು ಪೈಯಂತೆಯೂ ಮತ್ತು ಕೆಲವುಕಡೆ ಯೆರಡೂವರೆ ಪೈ ಯಂತೆಯೂ ಇರುವದನ್ನು ತಪ್ಪಿಸಿ ಸರ್ವತ್ರ ಒಂದೇವಿಧವಾಗಿ ಯೆರಡು ಪೈ ಮಾಡಬೇಕೆಂದು ವಿಲಾಯತಿಯಲ್ಲಿರುವ ಸದರೀ ರೈಯಿಲ್ವೆ ಬೋರ್ಡಿನವರು ಇದೀಗೆ ನಿರ್ಣಯಿಸಿರುತ್ತಾರೆ ತಿಳಿಬರುತಿದೆ.

ಕಾಬೂಲ್ ಅಮೀರರ ಸೈನ್ಯಕ್ಕೂ ಹಜಾರಾಯೆಂಬ ಕಲಹಿಗಳಿಗೂ ಈಚೆಗೆ ನಡೆದ ಯುದ್ಧದಲ್ಲಿ ಕಲಹಿ ಸೈನ್ಯದಪೈಕಿ ೩೦೦೦ ಮಂದಿ ಹತರಾದ್ದಾಗಿ ವರ್ತಮಾನ ಹುಟ್ಟಿರುತಿದೆ, ಇಂತಾ ಕಂದಹಾರ್‌ದಿಂದ ಬಂದ ರಿಪೋರ್ಟಿನ ಮೂಲಕ ಯಿಂದ ಅಮೀರರ ಸೈನ್ಯವು ಪರಾಜಯವನ್ನು ಹೊಂದಿ ಅನೇಕರು ಯುದ್ಧದಲ್ಲಿ ಪ್ರಾಣಗಳನ್ನು ಕಳೆದುಕೊಂಡರೆಂತಲೂ ತಿಳಿಯಬರುತಿದೆ. ಇದರ ನಿಜಸ್ಥಿತಿಯು ಮುಂದೆ ತಿಳಿಯಬೇಕಾಗಿದೆ.

ಅಮೆರಿಕಾ ದೇಶದ ಯಂತ್ರ ನಿರ್ಮಾಣಕ ನೊಬ್ಬನು, ಸುಖವಾಗಿ ಒಂದುಕಡೆ ಕುಳಿತು ಕುದುರೆ ಜೂಜನ್ನು ನೋಡುವದಕ್ಕಾಗಿ ಒಂದು ಉಪಾಯವಂ ಕಲ್ಪಿಸಿರುತ್ತಾನೇನಂದರೆ, ಕುದುರೆ ಜೂಜಿನ ಬಿನ್ನಿಯ ಮಧ್ಯಭಾಗದೊಳು ಮರದ ಅಥವಾ ಕಬ್ಬಿಣದಲ್ಲಿ ಒಂದು ಮಂಟಪವಂ ಕಟ್ಟಿಸಿ, ಅದು ನಾಲ್ಕುಕಡೆಯಲ್ಲೂ ತಿರುಗುತಲಿರುವಂತೆ ಮಾಡಿದರೆ ಅದರಲ್ಲಿ ಕುಳಿತುಕೊಂಡಿರುವಂತವರಿಗೆ ಕುದುರೆಗಳು ಹೊರಡುವದು ಮೊದಲು ಜೂಜು ಮುಗಿದು ಬಂದು ಸೇರುವತನಕ ನಾಲ್ಕು ಕಡೆಯಲ್ಲೂ ಯೆದುರಿಗೆ ಚೆನ್ನಾಗಿ ಕಾಣಬರುವದೆಂಬದು.

ಪಟ್ಟಿಯಾಳ ಮಹಾರಾಜರವರು ಯುರೋಪಿಯನ್ ಹೆಂಗಸೊಬ್ಬಳನ್ನು ಮದುವೆ ಮಾಡಿಕೊಂಡರೆಂಬ ವರ್ತಮಾನವಂ ಹಿಂದೆ ಪತ್ರಿಕೆಯು ಮುಖಾಂತರ ತಿಳಿಸಿ ಏಕ್ಸ್‌ಪ್ರೆಸ್‌ಯಲ್ಲಿ ಸದರೀ ನೂತನ ಪ್ರಿಯಳು ವಿಶಿಷ್ಟ ಕಾಗದಪತ್ರಗಳಲ್ಲಿಯೂ, "ಫ್ಲೋರೆನ್ಸ್ ಮಹಾರಾಣಿ" ಎಂದು ರುಜು ಮಾಡುತಲಿರುವದಾಗಿ ಒಂದಾನೊಂದು ಪತ್ರಿಕೆ ತಿಳಿಸುವದಲ್ಲದೆ, ಪಂಜಾಬ ದೇಶಕ್ಕೆ ಸೇರಿದ ಜೀಂದ್ ಯೊಬ್ಬ ರಾಜಕುಮಾರನು ಒಬ್ಬ ಯುರೋಪಿಯನ್ ಹೆಂಗಸನ್ನು ಮದುವೆ ಮಾಡಿಕೊಂಡನು, ಅಥವಾ ಮಾಡಿಕೊಳ್ಳುವ ಪ್ರಯತ್ನದಲ್ಲಿದಾನೆಯೆಂಬ ಪ್ರವಾದ ಪ್ರಬಲವಾಗಿರುತ್ತದೆ ಅದೇ ಪತ್ರಿಕೆ ತಿಳಿಸುತಿದೆ

ತುರ್ಕೀದೇಶದ ಸೈನ್ಯದಲ್ಲಿ ನೌಕರಿಯೊಳಿದ್ದ ಒಬ್ಬಾತನು ತನ್ನ ತಾಯಿಯ ಸಹಾಯಕ್ಕೆ ಮನೆಯೊಳು ನಿಂತು ಹೋಗಬೇಕಾಗಿ ಬರಲು ಆತನ ಸೋದರಿಯಾದ ಸಣ್ಣ ಹುಡುಗಿಯು ಅಣ್ಣನಂತೆ ವೇಷ ಹಾಕಿಕೊಂಡು ಸೈನ್ಯದಲ್ಲಿ ಅವನ ಕೆಲಸವಂ ೩ ವರ್ಷಗಳ ಕಾಲ ನೋಡುತ್ತ ತನ್ನ ನಡತೆಯ ದೆಸೆಯಿಂದ ಪ್ರಶಸ್ತಿಯಂ ಪಡೆದಿದ್ದಳು. ಸದರೀ ಹುಡುಗಿಯು ತನ್ನ ಅಣ್ಣನ ಸಹಾಯಾರ್ಥ ಈ ಸಾಹಸ ಕೃತ್ಯವಂ ಮಾಡಿದಳೆಂದು ಸುಲ್ತಾನರವರಿಗೆ ತಿಳಿಯಬರಲು ಅವಳಿಗೆ ಒಂದು ಬಿರುದಂ ಕೊಟ್ಟದ್ದಲ್ಲದೆ ಅವಳು ಯಾವಜ್ಜೀವ ಅನುಭವಿಸತಕ್ಕ ಬಗ್ಗೆ ಮಾಹೆಯಾನಾ ತುರ್ಕೀದೇಶದ ಅಯಿದು ಪೌಂಡುಗಳ ವರ್ಷ ಕೊಡತಕ್ಕದ್ದೆಂದು ಹುಕುಂ ಮಾಡಿದ್ದಲ್ಲದೇ ಅವಳಂ ಮನೆಗೆ ಕಳುಹಿಸಿದ್ದಲ್ಲದೆ ಅವಳ ಅಣ್ಣನನ್ನು ನೌಕರಿಯಿಂದ ಬಿಡುಗಡೆ ಮಾಡಿ ಸ್ವತಂತ್ರನಾಗಿರಬಹುದೆಂದು ಹುಕುಂ ಕೊಟ್ಟರು

ಸನ್ ೧೮೮೯ ನೇ ಇಸವಿಯಲ್ಲಿ ಮುಂಬಯಿ ಹೈಕೋರ್ಟಿನವರು ಒಂದು ಮೊಕದ್ದಮೆಯಲ್ಲಿ ತಾವು ಕೊಟ್ಟ ಫೈಸಲಿನಮೇಲೆ ಪ್ರಿವೀ ಕೌನ್ಸಿಲಿಗೆ ಅಪೀಲು ಮಾಡಿಕೊಳ್ಳುವದಕ್ಕೆ [illegible] ಕೊಟ್ಟು ಅಬಗ್ಗೆ ತಮ್ಮ ಕೋರ್ಟಿನಿಂದ ಸರ್ಟಿಫಿಕೇಟು ಸಹ ಕೊಟ್ಟಿದ್ದರು. ಸದರೀ ಮೊಕದ್ದಮೆಗೆ ಸಂಬಂಧಪಟ್ಟ ಕಾಗದಪತ್ರಗಳನ್ನೆಲ್ಲ ಇಂಗ್ಲಾಂಡಿಗೆ ಕೋರ್ಟಿನ [illegible] ಸುವದಕ್ಕೆ ಮುಂಚಿತವಾಗಿ ಮೈನರ್ [illegible] ದ್ದ ಅಪೀಲು ವಾದಿಯ ತರಫ ಇದ್ದರು [illegible] ಯರುಗಳು ಮೊಕದ್ದಮೆಯನ್ನು [illegible] ರಾಜೀ ಮಾಡಿಕೊಂಡು ತಮ್ಮ ಅಪೀಲನ್ನು [illegible] ಪಸ್ ಪಡೆಯಲಿಕ್ಕೆ ಅಪ್ಪಣೆಯಂ [illegible] ಈಗ ಸದರೀ ಮೈನರು ಪ್ರಾಪ್ತ ವಯಸ್ಕ [illegible] ದರಿಂದ, ೧೮೮೯ ನೇ ಇಸವಿಯಲ್ಲಿ [illegible]

...ಳ್ಳುವ ವಿಷಯದಲ್ಲಿ ಕೊಡಲ್ಪಟ್ಟ ಹುಕುಮನ್ನು ರದ್ದು ಮಾಡಬೇಕೆಂತಲೂ, ಅದು ಮ್ಯೂನಿಸಿಪಲ್ ಕಮಿಷನರರ ಪ್ರಯೋಜನಕರ ವಾದುದಲ್ಲವೆಂತಲೂ ಪ್ರಿವೀಕೌನ್ಸಿಲಿಗೆ ಅಪೀಲ್ ಮಾಡಿಕೊಳ್ಳುವಂತೆ ಒಂದು ತಡವೆ ಸರ್ಟಿಫಿಕೇಟ್ ಕೊಟ್ಟಮೇಲೆ ಅದನ್ನು ರದ್ದುಮಾಡಿ ಬೇರೆ ಹುಕುಂ ಕೊಡುವದಕ್ಕೆ ಕೋರ್ಟಿನವರಿಗೆ ಅಧಿಕಾರ ವಿಲ್ಲವೆಂತಲೂ ಮ|| ಭಾಷ್ಯಮ್ಮಯ್ಯಂಗಾರ್ರವರು ಈಚೆಗೆ ಚೀಫ್ ಜಸ್ಟಿಸ್ ಮತ್ತು ಜಸ್ಟಿಸ್ ಮುತ್ತುಸಾಮಿ ಅಯ್ಯರವರ ಮುಂದೆಹಾಜರಾಗಿ ತಿಳಿಸುವಲ್ಲಿ, ಅಪೀಲ್ ದಾರರಿಗೆ ರಾಜಮಾತೆಯ ಪ್ರೀವಿಕೌನ್ಸಿಲ್ ನ್ಯಾಯಸ್ಥಾನಕ್ಕೆ ಅಪೀಲು ಮಾಡುವುದಕ್ಕೆ ಜನ್ಮಸಿದ್ಧವಾದ ಹಕ್ಕಿದೆ ಯೆಂದೂ, ಅದರಿಂದ ಆರೀತಿ ಕೊಡಲ್ಪಟ್ಟ ತೀರ್ಪನ್ನು ಹಿಂದೆ ತೆಗೆದುಕೊಳ್ಳಲು ಕೋರ್ಟಿನವರಿಗೆ ಅಧಿಕಾರವಿಲ್ಲವೆಂದು ವಾದಿಸಿ, ಮ|| ಭಾಷ್ಯಮಯ್ಯಂಗಾರ್ರವರ ವಾದವನ್ನು ತಿರಸ್ಕರಿಸಿದರು.

## LOCAL AND PROVINCIAL NEWS
### ಪಟ್ಟಣದ ಮತ್ತು ದೇಶದ ವರ್ತಮಾನಗಳು

ಈ ಸಂಸ್ಥಾನದ ಪ್ರೈವೇಟ್ ಸೆಕ್ರೆಟರಿಯವರಾದ ಕರ್ನಲ್ ಹೆಂಡರ್‌ಸನ್ ಸಾಹೇಬರವರು ಕಳೆದ ವಾರ ಬೆಂಗಳೂರಿಗೆ ಹಿಂತಿರುಗಿ ಬಂದಿದ್ದಾರೆ.

ಈ ಸಂಸ್ಥಾನದ ಮಹಾರಾಜರವರ ಪಟ್ಟದ ರಾಣಿ ಮತ್ತು ಅವರ ಪರಿವಾರದವರು ಕಳೆದವಾರದ ಕಡೆಯ ಭಾಗದಲ್ಲಿ ಮೈಸೂರಿಗೆ ಸೇರಿದರು.

ಘನತೆವೆತ್ತ ಮಹಾರಾಜರವರು ಕಳೆದ ತಿಂಗಳ ೩೦ ನೇ ತಾರೀಖಿನ ದಿನ ಮಧ್ಯಾಹ್ನ ರಾಣಿ ಮತ್ತು ಪ್ರೈವೇಟ್ ಸೆಕ್ರೆಟರಿಯವರ ಜೊತೆಯಲ್ಲಿ ಒಂದು ಮಿಲಿಟರಿ ಸ್ಪೆಷಲ್ ಟ್ರೈನಿನಲ್ಲಿ ಬಂದಿದ್ದಾರೆ.

ಈ ಸಂಸ್ಥಾನದ ದಿವಾನರವರಾದ ಸರ್ ಕೆ. ಶೇಷಾದ್ರಿ ಅಯ್ಯರ್ ಕೆ. ಸಿ. ಎಸ್. ಐ. ಯವರ ಕುಮಾರರಾದ ಮ|| ಎಸ್. ಶ್ರೀನಿವಾಸ ಅಯ್ಯರವರಿಗೆ ಮ|| ವೆಂಕಟರಮಣಯ್ಯನವರ ಕುಮಾರಿಯನ್ನು ಕೊಟ್ಟು ಈ ತಿಂಗಳ ೨ನೇ ತಾರೀಖಿನ ದಿವಸ ಮೈಸೂರಿನಲ್ಲಿ ವಿವಾಹ ಮಹೋತ್ಸವವು ಅತಿ ವಿಜೃಂಭಣೆಯಿಂದ ನಡೆಸಲ್ಪಟ್ಟಿತೆಂದು ಕೇಳುತ್ತೇವೆ.

ಕಳೆದ ಬುಧವಾರದ ರಾತ್ರಿ ಮೈಸೂರಿನಲ್ಲಿ ಎಂಟು ಘಂಟೆಯ ಸಮಯದಲ್ಲಿ ವರ್ಷಕ್ಕೆ ಪ್ರಾರಂಭವಾಗಿ ಒಂದು ಘಂಟೆಯ ಕಾಲ ಮಳೆ ಹೊಡೆಯಿತು. ಮೈಸೂರು ಪ್ರಾಂತ್ಯದ ಅಂಗುಲ ಮಳೆ ಸುರಿದಿರುವುದಾಗಿ ತಿಳಿಯಬರುತ್ತದೆ. ಮತ್ತು ಕಳೆದ ಶನಿವಾರದ ದಿವಸ ೯ ಘಂಟೆಗೆ ಪುನಃ ಅರ್ಧಗಂಟೆ ಮಳೆಬಿದ್ದು ದಣ್ಣಗೆ ಭೂಮಿ ಕೆರೆಗೆ ಮೂರು ತಿಂಗಳಿಗೆ ಆಗುವಷ್ಟು ನೀರು ಬಂದಿರುತ್ತದೆ. ಮಾಸ್ಕೃತಿಕಗಳಲ್ಲಿನ ಬಾವಿಗಳಿಗೆ ಇನ್ನು ನೀರು ಬರಲಿಲ್ಲವು. ಇನ್ನೂ ಯಥೇಚ್ಛವಾಗಿ ಮಳೆ ಬಿದ್ದರೆ ಸದ್ಯಕ್ಕೆ ಜನರು ಭಾವಿಸುತ್ತಿರುವ ಕಷ್ಟ ನಿವೃತ್ತಿಯಾಗಬಹುದು. ಈ ಪೂರ್ವದಲ್ಲಿ ವ್ಯಾಪಿಸಿರುವ ಜ್ವರ ರೋಗವು ಅಧ್ಯಾಪಕವಾಗಿರುವ ಕಾರಣ ವಾಗಲಿಲ್ಲವು ಇನ್ನು ಜನರನ್ನು ಪೀಡಿಸುತ್ತಲಿದೆ. ಆಹಾರಪದಾರ್ಥಗಳ ಧಾರಣೆಗಳು ಪ್ರಾಯಶಃ ಒಂದೇ ವಿಧವಾಗಿವೆ.

ಕಳೆದ ಶುಕ್ರವಾರದ ರಾತ್ರಿ, ಈ ಪಟ್ಟಣದ ಕಬ್ಬಿಣಗಾರರ ರೇವಣ್ಣನ ಬೀದಿಯಲ್ಲಿ ವಕ್ಕಲಿಗರ ಬಸ್ಸಲು ಮುದ್ದನೆಂಬುವನು ತನ್ನ ಮನೆಯೊಳಗೆ ತಾನೊಂದು ಕಡೆಯಲ್ಲೂ ಹೆಂಡತಿಯೊಂದು ಕಡೆಯಲ್ಲೂ ಮಲಗಿಕೊಂಡಿರುವಲ್ಲಿ, ಸದರೀ ಹೆಂಡತಿಯಾದ ದೇವೀರಿ ಯೆಂಬುವಳು ಮುಂದಿನ ಬಾಗಿಲನ್ನು ತೆರೆದು ಬೀದಿ ಕೆಲವರನ್ನು ಸೇರಿಸಿಕೊಂಡು ಅರ್ಧರಾತ್ರಿಯಲ್ಲಿ ಮುದ್ದನೆಂಬುವನ ಮನೆಯೊಳಗೆ ನುಗ್ಗಿ, ಅವನ ಹಿಂದಕೊಂಡು ಹೊರಗೆತಂದು ಕುತ್ತಿಗೆಯನ್ನು ಕೊಯಿದುಹಾಕುತ್ತಿರುವಲ್ಲಿ ಸ್ವಲ್ಪ ಗದ್ದಲವಾಗಲು ಸದರೀ ಘಾತುಕರು ನಾಲ್ವರೂ ಪರಾರಿಯಾದರೆಂತಲೂ, ಕೂಡಲೆ ಅದೇ ಮನೆಯೊಳು ದಕ್ಕಳಿ ಧುಮಂತವರೂ ಆಸುಪಾಸು ಮನೆಯವರೂ ಬಂದು ನೋಡುವಲ್ಲಿ ಕುತ್ತಿಗೆಯು ಇನ್ನು ಸ್ವಲ್ಪ ಅಂಟಿಕೊಂಡು ಪ್ರಾಣ ಉಳಿದಿತ್ತೆಂತಲೂ, ಚಿಕಿತ್ಸೆ ಮಾಡಿದ್ದಾಗ್ಯೂ ಅವನು ಆಸ್ಪತ್ರೆಗೆ ಸೇರಿದ ಮೇಲೆ ಮೃತಿ ಹೊಂದಿರುತ್ತಾನೆಂತಲೂ ತಿಳಿಯಬರುತ್ತದೆ.

ಕಳೆದ ಮಂಗಳವಾರದ ದಿನ ಮಧ್ಯಾಹ್ನ ಈ ಪ್ರಾಂತ ಕೋಟೆಯಲ್ಲಿ ವಾಸವಾಗಿರುವ ರಾಜಶ್ರೀ ಕುಮಾರಸಾಮಿ ಮುದಲಿಯಾರ್ರವರ ಮನೆಯವರೆಲ್ಲರು ಮನೆಯ ಬಾಗಿಲುಗಳಿಗೆ ಬೀಗಹಾಕಿಕೊಂಡು ಊರಿಗೆ ಹೋಗಿದ್ದ ಸಮಯದಲ್ಲಿ ಯಾರೋ ಕಳ್ಳರು ಬಾಗಿಲುಗಳನ್ನು ಮುರಿದು ಒಳಗೆ ನುಗ್ಗಿ ಬಂಗಾರ, ಬೆಳ್ಳಿ, ನಗದು ಮೊದಲಾದ ಸುಮಾರು ಮೂರುಸಾವಿರ ರೂಪಾಯಿಗಳು ಬಾಳುವಷ್ಟು ಸಾಮಾನುಗಳನ್ನು ಕಳ್ಳತನ ಮಾಡಿಕೊಂಡು ಹೋದರು. ಈ ಮನೆಯವರು ಮನೆಗೆ ಬಂದು ನೋಡುವಲ್ಲಿ ಬಾಗಿಲುಗಳೂ, ಒಳಗೆ ಇದ್ದ ಪೆಟ್ಟಿಗೆಗಳೂ ಒಡೆಯಲ್ಪಟ್ಟು ಒಳಗಿದ್ದ ಸಾಮಾನುಗಳೆಲ್ಲ ಕಳುವಾಗಿದ್ದವು. ಈ ವಿಷಯವಾಗಿ ಬೆಂಗಳೂರು ಪೋಲೀಸಿಗೆ ವರ್ತಮಾನ ಕೊಡಲು ಸಿಟಿ ಇನ್ಸ್‌ಪೆಕ್ಟರ್ ಮ|| ನ್ಯಾಯದುರ್ಗ ನಾರಾಯಣರಾಯರವರು, ಪೋಲೀಸ್ ಸೂಪರಿಂಟೆಂಡೆಂಟರವರು ದೇವರಾಜ ಅರಸಿನವರು, ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಮ|| ಮಾಧವರಾಯರವರು ಸಹ ಆ ಸ್ಥಳಕ್ಕೆ ಬಂದು ವಿಚಾರಣೆ ಮಾಡಿಕೊಂಡು ಹೋದರೆಂದು ತಿಳಿಯಬರುತ್ತದೆ.

ಕಳೆದ ತಿಂಗಳ ೨೫ನೇ ತಾರೀಖಿಗೆ ಮುಗಿದ ವಾರದ ಮಾಸಿಕ ಸರ್ಕಾರಿ ಕಾಲಸೂಚಿ ರಿಪೋರ್ಟಿನ ಪ್ರಕಾರವಾಗಿ ಬೆಂಗಳೂರು ಡಿಸ್ಟ್ರಿಕ್ಟಿಗೆ ಸೇರಿದ ತಾಲ್ಲೂಕುಗಳ ಪೈಕಿ ಹೊಸಕೋಟೆ, ಬೆಂಗಳೂರು, ದೇವನಹಳ್ಳಿ, ಈ ಮೂರುವಿನಾ ಮಿಕ್ಕ ತಾಲ್ಲೂಕುಗಳಲ್ಲೆಲ್ಲ ಅಲ್ಪವರ್ಷವಾಗಿರುವುದೆಯೂ, ಕೋಲಾರ ಡಿಸ್ಟ್ರಿಕ್ಟು ಗೌರಿಬಿದನೂರು, ಗುಡಿಬಂಡೆ ಈ ಎರಡುವಿನಾ ಮಿಕ್ಕ ಪ್ರಾಂತಗಳಲ್ಲಿ ಸ್ವಲ್ಪಮಳೆ ಬಿದ್ದಿರುತ್ತದೆ. ತುಮಕೂರು ಪೈಕಿ ಮಧುಗಿರಿಯಲ್ಲಿ ಮಾತ್ರ ಒಂದೂವರೆ ಅಂಗುಲ ಮಳೆ ಬಿತ್ತು, ಅನ್ಯತ್ರ ಅಲ್ಪವೃಷ್ಟಿ. ಮೈಸೂರು ಡಿಸ್ಟ್ರಿಕ್ಟ್ ಪೈಕಿ, ಹುಣಸೂರು, ಯಡತೊರೆ, ಕೃಷ್ಣರಾಜಪೇಟೆ, ನಾಗಮಂಗಲ, ಇವುಗಳಲ್ಲಿ ಒಂದರಿಂದ ಮೂವರು ಎರಡು ಅಂಗುಲವರೆಗೆಯೂ, ಅನ್ಯತ್ರ ಅಲ್ಪವೃಷ್ಟಿಯೂ ಆಯಿತು. ಹಾಸನ ಡಿಸ್ಟ್ರಿಕ್ಟು ಪೈಕಿ, ಹಾಸನ, ಮಂಜರಾಬಾದ್, ಚನ್ನರಾಯಪಟ್ಟಣ, ಈ ಮೂರು ತಾಲ್ಲೂಕುಗಳಲ್ಲೂ ಒಂದರಿಂದ ಎರಡೂವರೆ ಅಂಗುಲ ಮಳೆ ಆಗಿರುತ್ತೆ. ಕೆಲವು ಕಡೆಗಳಲ್ಲಿ ಸುತರಾಂ ಇಲ್ಲವು. ಇನ್ನು ಕೆಲವು ಪ್ರದೇಶಗಳಲ್ಲಿ ಅಲ್ಪವೃಷ್ಟಿ. ಶಿವಮೊಗ್ಗ ಡಿಸ್ಟ್ರಿಕ್ಟು ಪೈಕಿ ಒಂದು ತಾಲ್ಲೂಕಿನಲ್ಲೂ ವರ್ಷವಿಲ್ಲವು. ಕಡೂರ್ ಡಿಸ್ಟ್ರಿಕ್ಟ್ ಪೈಕಿ ಮೂಡಗೆರೆಯಲ್ಲಿ ಮಾತ್ರ ಒಳ್ಳೆ ಮಳೆ, ಅನ್ಯತ್ರ ಕೇವಲ ಅಲ್ಪ. ಚಿತ್ರದುರ್ಗ ಡಿಸ್ಟ್ರಿಕ್ಟು ಪೈಕಿ ದಾವಣಗೆರೆ, ಮತ್ತು ಹೊಸದುರ್ಗದಲ್ಲಿ ಮಾತ್ರ ಒಂದೂವರೆ ಅಂಗುಲ ವರ್ಷವಾಗಿದೆ, ಅನ್ಯತ್ರ ಪ್ರಾಯಶಃ ಇಲ್ಲವೆಂತಲೇ ಹೇಳಬೇಕು.

ಶೃಂಗಾರತರಂಗಿಣೀ ನಾಟಕದವರಿಗೆ ಇತರ ನಾಟಕದವರಿಗೆ ಹ್ಯಾಗೋಹಾಗೆ ವ್ಯತ್ಯಾಸವಿಲ್ಲದೆ ಟೌನ್‌ಹಾಲ್ ಉಪಯೋಗಕ್ಕೆ ನ್ಯಾಯರ ಫೀಜುಗಳನ್ನು ಹಾಕಬೇಕೆಂದು, ಯುಕ್ತಾಯುಕ್ತ ವಾಗಿಯೂ, ಚಮತ್ಕಾರವಾಗಿಯೂ, ಅನೇಕ ನ್ಯಾಯಗುಂಭಿತವಾದ ಹರಣ ಪೂರ್ವಕವಾಗಿಯೂ, ನಿಷ್ಪಕ್ಷಪಾತವಾಗಿಯೂ ಮ|| ಮ್ಯೂನಿಸಿಪಲ್ ಕಮಿಷನರ್ ರಾಮಣ್ಣನವರು ವಾದಿಸಿದರು. ಮ|| ಅಂಬ್ರೋ ಅಂತೋಣಿಯವರು ತೆರವರು ಮ|| ಎ. ರಾಮಣ್ಣನವರು, ಮ|| ಗುಲಾಂ ದಸ್ತಗಿರ್ ಸಾಹೇಬರು, ಈ ಮೂವರು, ವೇಶ್ಯಾಸ್ತ್ರೀಯರ ನಾಟಕಕಾರರಿಗೆ ಟೌನ್‌ಹಾಲ್ ಫೀಜುನ್ನು ಕಮ್ಮಿಮಾಡುವದಕ್ಕೋಸ್ಕರ ಒಪ್ಪಿ ಕೊಟ್ಟಬಗ್ಗೆ ಈ ಕಂಪೆನಿಯವರು ಅವರಿಗೆ ಬಹಳ ಕೃತಜ್ಞರಾಗಿರುವರೆಂದು ನಂಬುತ್ತೇವೆ.—ಚಿ

ನಮ್ಮ ಯುವರಾಜರವರ ಒಂಭತ್ತನೇ ಯ ವರ್ಷವರ್ಧಂತಿಯು ಕಳೆದಶುಕ್ರವಾರದದಿನ ಅತಿವಿಜೃಂಭಣೆಯಿಂದ ನೆರವೇರಿತು. ಪ್ರಾತಃಕಾಲದಲ್ಲಿ ತೋಪುಗಳನ್ನು ಹಾರಿಸಿದ ನಂತರ ೯ ಘಂಟೆಯಲ್ಲಿ ಒಂದು ದರ್ಬಾರು ನಡೆಯಿತು. ದಿವಾನರವರು, ಚೀಫ್ ಕೋರ್ಟ್ ಜಡ್ಜಿಗಳು, ಎಕ್ಸಿಕ್ಯೂಟಿವ್ ಸೆಕ್ರಿಟರಿಯವರು, ಲೆಜಿಸ್ಲೇಟಿವ್ ಸೆಕ್ರಿಟರಿಯವರು, ಚೀಫ್ ಸೆಕ್ರಿಟರಿಯವರು, ಅಂಡರ್ ಸೆಕ್ರೆಟರಿಯವರು ಮೊದಲಾದ ಅಧಿಕಾರಿಗಳೂ, ಅಡ್ವೊಕೇಟರೂ, ವಕೀಲರು ಮೊದಲಾದ ಕೆಲವುಜನ ಸ್ಥಳೀಯ ಮಹಾಜನಗಳೂ ದಯಮಾಡಿದ್ದರು. ಸಾಯಂಕಾಲದಲ್ಲಿ ಕೋಟೆಯೊಳಗೆ ಉತ್ಸವ ನಡೆಯಿತು. ಎಂಟು ಘಂಟೆಯ ಮೇಲೆ ಭುವನ ಸಜ್ಜೆಯ ಮೇಲೆ ಒಂದು ದರ್ಬಾರು ನಡೆಯಿತು. ಬಾಣದಿರಸುಗಳೂ, ವೇಶ್ಯನರ್ತನ ಮೊದಲಾದವುಗಳೂ ಸಮಸ್ತರಿಗೂ ಆನಂದವನ್ನುಂಟು ಮಾಡಿದವು. ಮಹಾರಾಜರ ಕೀರ್ತಿಮತ್ಕುಮಾರರಿಗೂ ಸ್ವಾಮಿದೇವರನ್ನು ಮತಗಳಲ್ಲಿ ಸಂತರ್ಪಣೆಯೂ ನಡೆಯಿತು.—ಚಿ

ಚಾಮರಾಜನಗರದಲ್ಲಿ ಜನಗಳು ಅಹರ್ನಿಶಿಯಲ್ಲಿಯೂ ಸಂಚಾರ ಮಾಡುತ್ತಲಿರುವದು ಸರಿಯಷ್ಟೆ. ಇಲ್ಲಿ ಮ್ಯೂನಿಸಿಪಲ್ ಲಾಂದ್ರಗಳಾಗಲಿ, ಪೋಲೀಸ್ ಪಹರೆಯವರಾಗಲಿ ಯಾವದೂ ಇಲ್ಲದೆ ತಿರುಗಾಡುವ ಜನಗಳಿಗೆ ಬಹಳ ಅನಾನುಕೂಲವನ್ನುಂಟುಮಾಡುತ್ತಲಿರುವರು. ಈಗ ಕೆಲವು ದಿನಗಳ ಹಿಂದೆ ೩—೪ ಜನ ಹೆಂಗಸರೂ ಮಕ್ಕಳೂ ರಾತ್ರಿ ಹೊತ್ತಿನಲ್ಲಿ ಈ ರಸ್ತೆಯಲ್ಲಿ ಹೋಗುತಲಿದ್ದಾಗ್ಗೆ ಮ|| ಬ್ಯಾಕ್ ಲಿಂಗಣ್ಣನವರ ಮನೆಯ ಬಳಿಯಿಂದ ಕೆಲವರು ಘಾತುಕರು ಬಂದು ರಸ್ತೆಗೆ ಅಡ್ಡವಾಗಿ ತನ್ನ ಒಂದು ಕಂಬಳಿಯನ್ನು ಹಿಡಿದು ಹೆಂಗಸರನ್ನು ಅಡ್ಡಹಾಕಿ ಆ ಕಂಬಳಿಯಿಂದಲೇ ಅವರನ್ನು ಹಿಡಿದು ಕಟ್ಟುವಂತೆ ಮುಂದಕ್ಕೆ ಎಳೆದುಕೊಂಡು ಹೋದರೆಂತಲೂ, ಇವರಿಂದಹಿಂದುಗಡೆಯವರನ್ನು ಕೇಳಿಕೊಂಡು ಬಿಟ್ಟರೆಂತಲೂ, ಅಷ್ಟರಲ್ಲೇ ಪಾಗಸ್ತಾನದ ಒಬ್ಬ ಸಿಪಾಯಿಯನ್ನು ಕಂಡು ಕಾಲಿಗೆ ಬುದ್ಧಿ ಹೇಳಿದರೆಂತಲೂ ತಿಳಿದು ಬರುತ್ತದೆ. ನಮ್ಮ ಪೋಲೀಸಿನವರು ಈ ರಸ್ತೆಯನ್ನು ಹೀಗೆ ಬಿಡತಕ್ಕದ್ದು ಉಚಿತವಲ್ಲ, ಈ ವಿಷಯವನ್ನು ಆಲೋಚಿಸಿ ತಕ್ಕ ಏರ್ಪಾಡುಗಳನ್ನು ಮಾಡಿರುವರೆಂದು ನಂಬುತ್ತೇವೆ.—ಸ್ವ. ಚಿ

## THE MYSORE GAZETTE
### ಮೈಸೂರು ಗೆಜೆಟು.

ಶ್ರೀಮನ್ಮಹಾರಾಜರವರ ಸರ್ಕಾರದಿಂದ ಹೊರಟಿರುವ ಇಷ್ತಿಹಾರನಾಮೆಗಳು.

೩೦ ನೇ ಮೇ ೧೮೯೩ ನಂ|| ೧೮೩೭೬—೮೦ ——ಕ್ರಿಮಿನಲ್ ಪ್ರೊಸಿಜರ್ ಕೋಡ್ ೩೫೦ನೇ ಸೆಕ್ಷನ್ ಅನುಸರಿಸಿ, ಮೈಸೂರು ಅಸಿಸ್ಟೆಂಟ್ ಕಮಿಷನರ್ ಮ್ಯಾಜಿಸ್ಟ್ರೇಟ್ ಆಗಿರುವ ಮ|| ನಂಜುಂಡರಾಜೆ ಅರಸಿನವರು ಕ್ರಿಮಿನಲ್ ಕೇಸುಗಳಲ್ಲಿ ಫಿರ್ಯಾದಿಗಳ ಮತ್ತು ಸಾಕ್ಷಿಗಳ ಸಾಕ್ಷ್ಯವನ್ನು ಸ್ವಹಸ್ತದಿಂದ ಇಂಗ್ಲಿಷ್‌ಭಾಷೆಯಲ್ಲಿ ತೆಗೆದುಕೊಳ್ಳುವಂತೆ ಹುಕುಂ ಕೊಡಲ್ಪಟ್ಟಿರುತ್ತದೆ.

ನಂ|| ೧೮೩೭೦—೬ , ೩೦ನೇ ಮೇ ——ಕೋಲಾರ ಡಿಸ್ಟ್ರಿಕ್ಟು ಪೋಲೀಸ್ ಸೂಪರಿಂಟೆಂಡೆಂಟರಾದ ಮ|| ಎಸ್. ರಾಮಾನುಜಯ್ಯಂಗಾರ್ರವರು, ಸೆ|| ೧೮೯೩ ನೇ ಇಸವಿ ಏಪ್ರಿಲ್ ೧೩ ನೇ ತಾರೀಖು ಮುನ್ನ ೧೯ನೇ, ೨೦ನೇ ನಂ|| ೧೦ ಸ್ಪೆಷಲ್ ನಾಮಿಯ ಮುಖಾಂತರ ಕೊಡಲ್ಪಟ್ಟ ಮೂರುತಿಂಗಳ ಪ್ರಿವಿಲೆಜ್‌ರಜಾವನ್ನು ಅದೇತಿಂಗಳ ೨೩ನೇ ತಾರೀಖು ಮೊದಲು ಉಪಯೋಗಿಸಿಕೊಂಡು ೧೮೯೩ನೇ ಇಸವಿ ಮೇ ೩ನೇ ತಾರೀಖಿನ ಮಧ್ಯಾಹ್ನತ್ತರ ನೌಕರಿಗೆ ವಾಪಸ್ ಬಂದರೆಂದ ಸದರೀ ರಜಾಪೈಕಿ ಉಳಿದ ಭಾಗವು, ಅಂದರೆ, ೨ ತಿಂಗಳು ೩ ದಿನಗಳು ಇವರಿಂದ ರದ್ದುಮಾಡಲ್ಪಟ್ಟಿದೆ.

೨೬ನೇ ಮೇ, ೧೮೯೩, ನಂ|| ೧೮೩೭೪—೮. ೮೪೮೦ ——ಮೈಸೂರು ಸರ್ವಿಸ್ ರೆಗ್ಯುಲೇಷನ್ಸ್ ೪ ೧೭೫ ನೇ ಆರ್ಟಿಕಲ್ ಅನುಸರಿಸಿ, ನಗರ ಡಿಸ್ಟ್ರಿಕ್ಟ್ ಜಡ್ಜಿಯವರಾದ ಮ|| ಎ. ಶಿ ರುಮಲಾಚಾರ್ಯರವರು, ೧೮೯೩ನೇ ಇಸವಿ ಜೂನ್ ಸುಗ್ರೀವ ತಾರೀಖು ಮೊದಲು ೪ ದಿನಗಳು ಪ್ರಾಯವಿಲ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ|| ೧೮೩೭೦ ೬. ೮೪೮೦—ಮೈಸೂರು ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮ|| ಎಸ್. ವೆಂಕಟವರದಯ್ಯಂಗಾರ್ರವರು ೧೮೯೩ನೇ ಇಸವಿ ಮೇ ೩೦ನೇ ತಾರೀಖು ಮೊದಲು ೮ ದಿನಗಳ ಪ್ರಿವಿಲೆಜ್ ರಜಾ ಕೊಡಲ್ಪಟ್ಟಿರುತ್ತಾರೆ.

೩೦ನೇ ಮೇ ೧೮೯೩, ನಂ, ೧೮೯೩೬—೮೪೭೮. ದಿವಾನರವರ ಅಂಡರ್ ಸೆಕ್ರಿಟರಿಯಾದ ಮ|| ಎಲ್. ಅನಂತನಾರಾಯಣರಾಯರವರು, ಮ|| ಇ. ಆರ್. ಸುಬ್ಬರಾಯಅಯ್ಯರವರು ಬೇರೆ ಕೆಲಸದ ಮೇಲಿರುವಾಗ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವವರೆಗೆ ಚೀಫ್ ಸೆಕ್ರಿಟರಿಯವರಾಗಿ ಮಾಡಲ್ಪಟ್ಟಿರುತ್ತಾರೆ. ರಜಾ ಮುಗಿದ ಕೂಡಲೆ ಕೆಲಸದಮೇಲೆ ಹಾಜರಾಗತಕ್ಕದ್ದು.

ಮ|| ಇ. ಆರ್. ಸುಬ್ಬರಾಯ ಅಯ್ಯರವರು ಅವರ ರಜಾ ಪೂರ್ತಿಯಾದಕೂಡಲೆ, ಮತ್ತೊಂದು ಹುಕುಂ ಕೊಡಲ್ಪಡುವವರೆಗೆ, ದಿವಾನರವರ ಆಫೀಸಿನಲ್ಲಿ ಯಥಾಪ್ರಕಾರ ಕೆಲಸ ನೋಡತಕ್ಕದ್ದು.

೩೦ನೇ ಮೇ ೧೮೯೩, ನಂ ೧೮೯೩೬—೮೪೭೬. ೧೮೯೩ ನೇ ಇಸವಿ ಮೇ ೧೭ನೇ ತಾರೀಖಿನ ಪೂರ್ವಾಹ್ನದಲ್ಲಿ ಶಿವಮೊಗ್ಗ ಡಿಸ್ಟ್ರಿಕ್ಟ್ ಟ್ರೆಜರಿ ಚಾರ್ಜನ್ನು ಆಫೀಸಿಯೇಟಿಂಗ್ ಅಸಿಸ್ಟೆಂಟ್ ಕಮಿಷನರಾದ ಮ|| ಕೆ. ರಂಗಸ್ವಾಮಯ್ಯಂಗಾರ್ರವರು ಕೊಟ್ಟ ಮ|| ಕೆ. ನಾಗೇಶರಾಯರವರು ತೆಗೆದುಕೊಂಡಿರುತ್ತಾರೆ.

ನಂ. ೨೦೦೦೦—೮ ೧೧೧೧೫—ಕ್ರಿಮಿನಲ್ ಪ್ರೊಸಿಜರ್ ಕೋಡ್ ೩೫೦ನೇ ಸೆಕ್ಷನ್ ಅನುಸರಿಸಿ, ಕಡೂರು ಅಸಿಸ್ಟೆಂಟ್ ಕಮಿಷನರ್ ಮತ್ತು ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮ|| ಕೆ. ಅನಂತಸ್ವಾಮಯ್ಯಂಗಾರ್ರವರು ಫಿರ್ಯಾದಿಗಳ ಮತ್ತು ಸಾಕ್ಷಿಗಳ ಸಾಕ್ಷ್ಯವನ್ನು ಸ್ವಹಸ್ತದಿಂದ ಇಂಗ್ಲಿಷ್ ಭಾಷೆಯಲ್ಲಿ ತೆಗೆದುಕೊಳ್ಳುವಂತೆ ಹುಕುಂ ಮಾಡಲ್ಪಟ್ಟಿರುತ್ತಾರೆ.

ನಂ ೧೮೯೦೯—೬ ೯ ೧೮೩—೯೦.—೧೮೭೭ ನೇ ಇಸವಿಯ ೩ ನೇ ನಂಬರ್ ಮ್ಯೂನಿಸಿಪಲ್ ರೆಗ್ಯುಲೇಷನಿನ ೧೩ ನೇ ಸೆಕ್ಷನ್ ಅನುಸರಿಸಿ, ಗವರ್ನಮೆಂಟಿನವರು ಮ|| ಸುಂದರಅಯ್ಯರವರನ್ನು ಮೈಸೂರು ಸಿಟಿ ಮ್ಯೂನಿಸಿಪಲ್ ಮೆಜಿಸ್ಟ್ರೇಟ್ ಇಂಜನಿಯರಾಗಿ ನೇಮಕ ಮಾಡಿರುತ್ತಾರೆ.

೩೦ ನೇ ಮೇ ೧೮೯೩ ನಂ|| ೨೦೦೦೫— ೮೪೧೩—ಶಿವಮೊಗ್ಗ ಅಸಿಸ್ಟೆಂಟ್ ಮ|| ಎಸ್. ವರದರಾಜಯ್ಯಂಗಾರ್ರವರು, ೧೮೯೩ ನೇ ಇಸವಿ ಜೂನ್ ಸುಗ್ರೀವ ತಾರೀಖು ಮೊದಲು ಅಥವಾ ಅವರು ಉಪಯೋಗಿಸಿ ಕೊಳ್ಳಬಹುದಾದ ಬೇರೆ ಯಾವುದು ತಾರೀಖು ಮೊದಲು ೩೦ ದಿನಗಳ ಪ್ರಿವಿಲೆಜ್ ರಜಾ ಕೊಡಲ್ಪಟ್ಟಿರುತ್ತಾರೆ.

ಈ ನಗರ ಡಿವಿಜನ್ ಡಿಸ್ಟ್ರಿಕ್ಟ್ ಕೋರ್ಟ್ ಶಿರಸ್ತೇದಾರರು ಕೇಶಗಿರಿ ರಾಯರವರು, ಮ|| ಎಸ್. ವರದರಾಜಯ್ಯಂಗಾರ್ರವರು ರಜಾಮೇಲೆ ಗೈರುಹಾಜರಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವವರೆಗೆ, ತಮ್ಮ ಕೆಲಸದ ಜೊತೆಗೆ ನಾಲ್ಕನೆಯ ತರಗತಿಯಲ್ಲಿ ಶಿವಮೊಗ್ಗ ಮುನ್ಸಿಫ್‌ರಾಗಿ ಕೆಲಸ ನೋಡುವಂತೆ ನೇಮಕ ಮಾಡಲ್ಪಟ್ಟಿರುತ್ತಾರೆ.

೩೦ ನೇ ಮೇ, ೧೮೯೩, ನಂ ೧೮೯೦—ಮುಜರಾಯ್ ಸೂಪರಿಂಟೆಂಡೆಂಟ ರ ದಿವಾನರವರ ಚೀಫ್ ಆಫೀಸಿನ ಸೆಕ್ರಿಟರಿಯವರಾದ ರಾಯ್ ಬಹದೂರ್ ಎ ಶ್ರೀನಿವಾಸ ಅಚಾರ್ಯರವರು, ಮೈಸೂರು ಸರ್ವಿಸ್ ರೆಗ್ಯುಲೇಷನ್ಸ್ ೧೭೫ ನೇ ಆರ್ಟಿಕಲ್ ಅನುಸರಿಸಿ, ೧೮೯೩ ನೇ ಇಸವಿ ಜೂನ್ ೬ ನೇ ತಾರೀಖು ಮೊದಲು ಅಥವಾ ಅವರು ಉಪಯೋಗಿಸಿಕೊಳ್ಳಬಹುದಾದ ಬೇರೆ ಯಾವುದು ತಾರೀಖು ಮೊದಲು ಏಳು ದಿನಗಳ ಪ್ರಿವಿಲೆಜ್ ರಜಾ ಕೊಡಲ್ಪಟ್ಟಿರುತ್ತಾರೆ.

## SUMMARY OF NEWS
### ವೃತ್ತಾಂತ ಸಂಗ್ರಹವು.

ನಿನ್ನೆಯ ದಿವಸ ಧಾರವಾಡಕ್ಕೆ ಬರುತಲಿದ್ದ ರುಮಿಫ್ ಗಾಡಿಯು ಅಳ್ನಾವರ ಮತ್ತು ಕಂಬಾರಗಣವಿಯ ಮಧ್ಯದಲ್ಲಿ ಹಳಿ ಬಿಟ್ಟು ಕೆಳಗೆ ಬಿದ್ದು ಕೃಷ್ಣ ಕಂಪನಿಗೆ ಸುಮಾರು ಒಂದು ಲಕ್ಷರೂಪಾಯಿಗಳ ಲುಕ್ಸಾನಾಯಿತೆಂದು ತಿಳಿಯುತ್ತದೆ.

ಈ ದೇಶದ ಬಡತನವು ಅತಿ ವಿಪರೀತವಾಗುತ ಬರುತಿರುವದು. ಬ್ರಿಗಸ ದೇಶದವರೊಬ್ಬನು ಧಾರವಾಡ ಜಿಲ್ಹೆಯ ಧಾರೆಗಳನ್ನು ತಯಾರ್ಮಾಡುವ ಒಂದು ಕಾರಖಾನೆಯನ್ನು ಕಂಡು ಹಿಡಿದಿರುತ್ತಾನಂತೆ! ಇನ್ನು ರೇಶ್ಮೆ ವಗೈರೆಯಿಂದ ಪ್ರಯೋಜನವೇನು ?

ಮಿಸ್ಟರ್ ಲಕ್ಷ್ಮೀಭಾಯಿ ಗಾಡುಲದಾಸ್ ಎಂಬವರು ತಮ್ಮ ಹೆಂಡತಿಯಾದ ಸತ್ಯವತಿ ಎಂಬವಳ ಜ್ಞಾಪಕಾರ್ಥ ೧೦೦೦ ರೂಪಾಯಿಗಳನ್ನು ವೈದ್ಯಕೀ ಮೊದಲನೆಯ ಪರೀಕ್ಷೆಯಲ್ಲಿ ೧ನೇ ನಂಬರ ಪಡೆದು ತೇರ್ಗಡೆ ಹೊಂದಿದ ವಿದ್ಯಾರ್ಥಿಯವರಿಗೆ ಸ್ಕಾಲರ್‌ಷಿಪ್ ಕೊಡುವ ಉದ್ದೇಶದಿಂದ ಯೂನಿವರ್ಸಿಟಿಯವರಿಗೆ ಒಪ್ಪಿಸಿದರೆಂದು ತಿಳಿಯಬರುತ್ತದೆ.

ಗ್ರೇಟ್‌ಬ್ರಿಟನ್ನಿನ ಇಂಡ್ಯಾಕ್ಕೂ ಇಂಡ್ಯಾದಿಂದ ಗ್ರೇಟ್‌ಬ್ರಿಟನ್ನಿಗೂ ಕಾಗದಗಳನ್ನು ರವಾನಿಸುವದರ ಅಧಿಕವಾದ ಟಪ್ಪಾಲ ಹಾಸಲನ್ನು ತಗ್ಗಿಸದೆ, ಬಳಕೆಯಲ್ಲಿ ನಡೆಯುವಂತೆಯೇ ಇಟ್ಟುಕೊಳ್ಳಬೇಕೆಂದು ಕೆಲವರು ವಿಲಾಯತಿಯ ಗವರ್ನಮೆಂಟಿಗೆ ವಿಜ್ಞಾಪನೆ ಮಾಡಿಕೊಂಡಿದ್ದರಷ್ಟೆ. ಈ ರೀತಿಯಲ್ಲಿ ಬದಲಾವಣೆಯಾಗುವದರಿಂದ ಗವರ್ನಮೆಂಟಿಗೆ ವರ್ಷ ಒಂದಕ್ಕೆ ೩೦,೦೦ ೦೦೦ ರೂಪಾಯಿಗಳು ಲುಕ್ಸಾನವಾಗುವಂತೆ ಪೋಸ್ಟ್‌ಮಾಸ್ಟರ್ ಜನರಲರವರು ತಿಳಿಸುತ್ತಾರೆ.

ನಾಗಪುರ ಗೋರಕ್ಷಕ ಸಭೆಯ ಪ್ರಭಾವದಿಂದ ಆ ಪ್ರಾಂತದವರಾದ ೫೦-೬೦ ಸಾವಿರ ಜನರು ಗೋಮಾಂಸ ತಿನ್ನುವದನ್ನು ತೀರ ಬಿಟ್ಟರು. ಈ ಪ್ರಾಂತದಲ್ಲಿ ೧೬,೦೦೦ ಎತ್ತುಗಳು ವಧಿಸಲ್ಪಡುತ್ತಿದ್ದವು. ಈಗ ೪೮೦೦ ವರೆಗೆ ಕೊಲ್ಲಲ್ಪಡುತ್ತವೆ; ಇನ್ನು ಸ್ವಲ್ಪ ದಿನಗಳಲ್ಲಿ ತೀರ ನಿಂತು ಹೋಗೀತು.

ಈ ಪುಣ್ಯಕರ ಹಾಗೂ ಹಿತಕರ ಸಮುದ್ಯೋಗಕ್ಕೆ ಏತದ್ದೇಶೀಯ ರಾಜರೂ, ಸಂಸ್ಥಾನಿಕರೂ, ಸ್ವದೇಶ ಬಾಂಧವರೂ ನಿರ್ವಂಚನೆಯಿಂದ ಸಾಹ್ಯ ಕೊಡುತ್ತ ಹೋದಲ್ಲಿ, ಆರೋಗ್ಯ ವೃದ್ಧಿಗೂ, ಹೊಲಮನೆಗಳ ಕೆಲಸಕ್ಕೂ ಅತ್ಯವಶ್ಯಕವಾದ ಪಶುಗಳ ಅಭಿವೃದ್ಧಿಯು ಹಿಂದುಸ್ಥಾನದಲ್ಲಿ ಉತ್ತರೋತ್ತರ ಆದೀತು; ಮತ್ತು ಆ ಪ್ರಾಣಿಗಳು ಹಾನಿಯನ್ನು ಹೊಂದವು.

ಈಚೆ ಅಂದರೆ ಮೊನ್ನೆ ಯಾತ್ರೆಗೆ ಸುಮಾರು ೧,೦೦೦ ಜನ ಯಾತ್ರಸ್ಥರನ್ನು ತೆಗೆದುಕೊಂಡುಹೋಗುವ ಹಾಜಿ ಟಿ.ಸಿಂ ಕಂಪನಿಯ "ಚೈನಾ" ಎಂಬ ಆಗ್ಬೋಟಿಗೆ ಬೆಂಕಿಬಿದ್ದು ಮುಂಬಯಿ ಬಂದರ ಬಿಟ್ಟು ೪ ದಿವಸಗಳ ತರುವಾಯ ಆ ಸಂಕಟ ಬಂದಿತು. ಆಗ ಅದು ಹಡಗನ್ನು ಹಬ್ಬಿಕೊಂಡಿತು. ಈ ಭಯಂಕರ ಸಂಕಟ ಕಾಲದಲ್ಲಿ ಹಡಗಿನ ಮುಖ್ಯನಾವಿಕನು ಹಡಗನ್ನು ಆಫ್ರಿಕಾಖಂಡದ ಸೋಮಾಲಿಯಾ ತೀರದ ಮೇಲಿನ ಹೋರಬೀಡ ಎಂಬಲ್ಲಿಗೆ ಹಡಗವನ್ನು ಒಯ್ದು ಅಲ್ಲಿ ಭಯಭೀತರಾದ ಎಲ್ಲ ಯಾತ್ರಸ್ಥರನ್ನು ಇಳಿಸಿದನು. ತರುವಾಯ ಈ ಯಾತ್ರಸ್ಥರಲ್ಲಿ ೨೦೦ಮಂದಿ ಕರಾಚಿ ಬಂದರಕ್ಕೆ ಬಂದು ಸೇರಿಕೊಂಡರು. ಕೆಲವರು ಮಕ್ಕೆಗೆ ಹೋದರು. ಕೆಲವರು ಬಗೆಬಗೆಗಳನ್ನು ಮಾಡಿಕೊಂಡು ಯಾತ್ರೆಗೆ ಮುಂದರಿಸಿದರು. ಇನ್ನು ಕೆಲವರು ಹೊರಬೀಡದಲ್ಲಿಯೇ ಇರುತ್ತಾರೆ. ಈ ಪ್ರಕಾರ ಭಯಂಕರಸಂಕಟದ ವ್ಯವಸ್ಥೆಯಾಯಿತು. ಆದರೆ ದೈವಕೃಪೆಯಿಂದ ಪ್ರಾಣಹಾನಿ ಇಲ್ಲ. —ಕನ್ನ ಹಿತವಾರ್ತೆ

ಕಾಟಕರ ಕೈಯಿಂದ ಪ್ರಾಣಿಗಳ ಸಮೋಚ ಯೋಗಕ್ಕೂ ಅತ್ಯವಶ್ಯಕವಾದ ದನಕರುಗಳು ಅಸಂಖ್ಯಾತ ಕೊಲ್ಲಲ್ಪಟ್ಟು ದೇಶ ಅತೋನಾತ ಕೇಡಾಯಿತು, ಮತ್ತು ಇನ್ನೂ ಆಗುತ್ತಲಿರುವ ರಹಸ್ಯವು ಈಚೆಗೆ ಅಲ್ಲಲ್ಲಿ ಸ್ಥಾಪಿತವಾಗಿರುವ ಗೋರಕ್ಷಕ ಸಂಘಗಳ ದೆಸೆಯಿಂದ ಕೆಲವು ಏತದ್ದೇಶೀಯ ಸಂಸ್ಥಾನಿಕರಿಗೆ ತಿಳಿಯುತ್ತ, ಆಕಳ, ಎತ್ತು, ಎಮ್ಮೆ, ಕರ, ಮುಂತಾದವುಗಳ ವಧೆಯನ್ನು ನಿಲ್ಲಿಸುವದಕ್ಕೆ ಉದ್ಯುಕ್ತರಾಗಿರುವದನ್ನು ಕೇಳಿ ಬಹು ಆನಂದವಾಯಿತು. ಈ ಬಗೆಯ ದನಗಳನ್ನು ಕೊಂದವರು ಶಿಕ್ಷಿಸಲ್ಪಟ್ಟವರೆಂದು ಶ್ರೀಮಂತ ಛತ್ರಪತಿ ಮಹಾರಾಜ ಮೈಸೂರ ಇವರು ತಮ್ಮ ರಾಜ್ಯದಲ್ಲಿ ನಿಬಂಧನೆಯನ್ನು ಮಾಡಿದ್ದಾರೆ. ಜೋಧಪುರದ ಮಹಾರಾಜರವರಿಂದಲೂ ಇದೇ ಮೇರೆಗೆ ನಿರ್ಣಯಿಸಲ್ಪಟ್ಟದೆ. ತಮ್ಮ ರಾಜ್ಯದಲ್ಲಿ ಗೋಮಾಂಸ ಭಕ್ಷಣ ಮಾಡಕೂಡದೆಂದು ಮದ್ರಾಸಿನ ರಾವ ಬಹಾದ್ದೂರ ಸಿಂಗರವರು ನಿಬಂಧನೆಯನ್ನು ಮಾಡಿದ್ದಾರೆ —ಶ. ವೃ

ಕಳೆದ ಮಂಗಳವಾರ ಅಂದರೆ ಮೊನ್ನೆ ತಾ ೩೦ನೆಯ ದಿವಸ ಹೋಸೂರ ಬಿಷ್ಷನ ವಿರುದ್ಧಪಕ್ಷದ ಪ್ರಮುಖ ಗೃಹಸ್ಥರಾದ ರಾವ್ ಸಾಹೇಬ ಬಿ ಧೋರಿಗಳು ಮೈಸೂರಿನಿಂದ ಬರುವ ಸಂಗಡ ಹೋದಾಗ ಅಲ್ಲಿಯ ಕ್ರಿಶ್ಚಿಯನ್ ಜನರು ಧೋರೆಗಳ ಸ್ವಾಗತವನ್ನು ಬಹು ಸಂತೋಷದಿಂದ ಮಾಡಿ ಅವರು ಕುಳಿತುಕೊಂಡಿದ್ದ ರಥವನ್ನು ತಾವೇ ಎಳೆದುಕೊಂಡು ಒಯ್ದರು!! ರಥಕ್ಕೆ ಕಟ್ಟಿದ್ದ ಕುದುರೆಗಳನ್ನು ಬಿಟ್ಟು ತಾವೇ ರಥವನ್ನು ಎಳೆದುಕೊಂಡು ಒಯ್ಯುವ ಈ ಜನರ ಭಕ್ತಿಯೂ ಪ್ರೀತ್ಯಾದರವೂ ಲಾರ್ಡ್ ಬಿಷ್ಷರವರ ಮೇಲೆ ಎಷ್ಟಿರುತ್ತದೆಯೆಂಬುದು ಸ್ಪಷ್ಟವಾಗಿ ಕಾಣುವದು. ಹೋಸೂರ-ಬಿಷ್ಷ್-ಪ್ರಕರಣದ ದೆಂದು ಇಚ್ಛಿಸುವ ಜನರು ಈ ಪ್ರಕಾರ ಬಿ.ಡಿ. ಸಾಹೇಬರಂ ಧೋರೆಗಳನ್ನೂ ಈ ಬಿಷ್ಷು ಪ್ರಸಂಗದಲ್ಲಿ ಇಚ್ಛಿಸುವ ಜನರು ಬ್ರಿಗ್ಯಾರ್ಸನ ಧೋರೆಗಳನ್ನೂ ಸಾಕ್ಷಾತ್ ದೇವರಂತೆ ಆರಾಧಿಸುತ್ತಿರುವದನ್ನು ಕಂಡು ನಮಗೆ ಒಂದು ಬಗೆಯ ಆಶ್ಚರ್ಯ ಪುಟ್ಟುತ್ತದೆ. ಸಾರ್ವಜನಿಕ ಕೆಲಸಗಳನ್ನು ಮಾಡುವಂಥವರಿಗೆ ಕೀರ್ತಿಯೆಂಬ ಸನ್ಮಾನವು ದೊರೆಯುತ ಹೋದರೆ, ಆಯಾ ಕೆಲಸಗಳನ್ನು ಕೈಕೊಂಡ ಜನರಿಗೆ ತಮ್ಮ ತಮ್ಮ ಕೆಲಸಗಳನ್ನು ಕಡೆಗಾಣಿಸಲಿಕ್ಕೆ ಹೆಚ್ಚು ಉತ್ತೇಜನ ಕೊಟ್ಟಂತಾಗುವದು. ಸುಧಾರಿಸಿದ ದೇಶಗಳಲ್ಲಿರುವ ಈ ಪದ್ಧತಿಯನ್ನು ಹಿಂದುಸ್ಥಾನದ ಜನರು ಕಲಿತುಕೊಂಡರೆ, ದೇಶ ಸುಧಾರಣೆಗೆ ಬಹಳ ಸಹಾಯವಾದೀತು. ಸಾರ್ವಜನಿಕ ಸಂಸ್ಥೆಗಳನ್ನು ನೋಡಿ ಮೂಗು ಮುರಿಯುವ ವಿಘ್ನಸಂತೋಷಿಗಳು ಇದನ್ನು ಕಂಡು ನಾಚಿಕೆ ಪಡತಕ್ಕದ್ದು!!

## EXTRACTS

### ಪ್ಲೀಡರುಗಳಾಗುವದಕ್ಕೆ ಸರ್ಕಾರದವರ ಸಹಾಯ.

ಹಿಂದುಸ್ಥಾನದಲ್ಲಿರುವ ಎಲ್ಲಾ ನೇಟಿವ್ ರಾಜ್ಯಗಳ ಪೈಕಿ ನಮ್ಮ ಮೈಸೂರು ಸಂಸ್ಥಾನವು ಸಕಲವಿಷಯಗಳಲ್ಲೂ ಬಹಳ ಚನ್ನಾಗಿ ಆಳಲ್ಪಟ್ಟದೆಯೆಂಬುದಾಗಿ ಹೆಸರು ಗಳಿಸಿಕೊಂಡಿದೆ. ಇದನ್ನು ನಿಜವೆಂದು ಹೇಳುವದಕ್ಕೆ ಕೆಲವು ಸಹಜವಾದ ಕಾರಣಗಳಿರುತ್ತವೆ. ಆದರೆ ಕೆಲವು ವಿಷಯಗಳಲ್ಲಿ ಇನ್ನೂ ಹಿಂದೇ ಇದೆಯೆಂದು ಹೇಳುವದಕ್ಕೂ ಕಾರಣಗಳುಂಟು. ಯಾಕೆಂದರೆ ಈ ಸಂಸ್ಥಾನದಲ್ಲಿ ಪ್ಲೀಡರುಗಳ ಪರೀಕ್ಷೆಯೆಂಬುವದು ಬಹುಕಾಲದಿಂದಲೂ ವರ್ಷಂಪ್ರತಿ ನಡೆಯುತ್ತಲಿದೆ. ಆದರೆ ಅಪ್ಲಿಕೇಶನ್ ಹಾಕುವ ಉಮೇದವಾರರ ಸಂಖ್ಯೆಯು ಹೆಚ್ಚುತ್ತಲಿದ್ದಾಗ್ಯೂ ಪ್ಯಾಸಾಗತಕ್ಕವರ ಸಂಖ್ಯೆಯು ಬಹಳ ಕಡಿಮೆಯಾಗಿರುವದು. ಇದಕ್ಕೆ ಕಾರಣವೇನಾಗಿರಬಹುದೆಂದು ಊಹಿಸುವದಕ್ಕಿಂತ ಮುಂಚಿತವಾಗಿಯೇ ಈ ಪರೀಕ್ಷೆಗೆ ಇಟ್ಟಿರತಕ್ಕ ಪುಸ್ತಕಗಳನ್ನು ಉಮೇದವಾರರು ಸ್ವತಃ ಓದಿಕೊಳ್ಳಬೇಕಾಗಿರುವುದು, ಇವುಗಳನ್ನು ಬೋಧಿಸತಕ್ಕ ಪಾಠಶಾಲೆಯು ಇಲ್ಲದಿರುವದು ಎಂಬೀ ಸ್ಪಷ್ಟವಿಷಯಗಳು ತೋರುತ್ತವೆ. ಇವರ ದೂರು ನಿಜವೇಸರಿ, ಉಮೇದವಾರರು ತಮಗೆ ತಿಳಿಯದ ಸಂಗತಿಗಳನ್ನು ಬಾಯಿಪಾಠಮಾಡಿ ಕೇಳುವಾಗ ಗೊಂದಿಯಲ್ಲಿ ಹೊರಬೀಳುತ್ತಾರೆಯೇ ವಿನಹ ಅವುಗಳನ್ನು ಉಪಯೋಗಿಸತಕ್ಕ ರೀತಿಯು ಅವರಿಗೆ ಹೊಳೆಯುವದಿಲ್ಲ. ಇದು ನಿಜವೇಸರಿ ಎಂಬುದಾಗಿ ಹೇಳುವದಕ್ಕೆ ಅನೇಕ ದೃಷ್ಟಾಂತಗಳುಂಟೆಂಬುದು ಸಕಲರಿಗೂ ವೇದ್ಯವೇ ಇದೆ. ಆದರೂ ಈ ವಿಷಯದಲ್ಲಿ ಸರ್ಕಾರದವರು ಯೋಚಿಸಿ ಇದನ್ನು ಹೋಗಲಾಡಿಸುವದಕ್ಕೆ ಅದ್ಯಾಪಿ ಯಾವ ಉಪಾಯವನ್ನೂ ಮಾಡದೆ ಇರುವದು ಆಶ್ಚರ್ಯವೇಸರಿ. ಈ ಸಂಸ್ಥಾನಕ್ಕೆ ಸರ್ಕಾರದಿಂದ ಲಾ ಕಾಲೇಜ್ ಒಂದು ವಿಶ್ವವಿದ್ಯಾಲಯವನ್ನು ಬೆಂಗಳೂರಿನಲ್ಲಿಯೋ ಅಥವಾ ರಾಜಧಾನಿಯಲ್ಲಿಯೋ ಸ್ಥಾಪಿಸಿ, ಅದಕ್ಕೆ ಘಟಿಕರಿಸ್ಸಿ ಕೊಂಡಿರುವ ಕೆಲವು ಕಾಂಡಿಯನ್ನು ಬೋಧಕರನ್ನಾಗಿ ನೇಮಿಸಿ, ಪ್ಲೀಡರ್ ಪರೀಕ್ಷೆಯಲ್ಲಿ ಪ್ಯಾಸಾಗಬೇಕಾದತ್ತ ಮತ್ತು ಬೇಕೆಂದು ಪ್ರಯತ್ನಪಡುವವರೆಲ್ಲರೂ ತಲೆಗೆ ಒಪ್ಪತ್ತ ಫೀಜ್ ಕೊಡತಕ್ಕದ್ದು, ಇಷ್ಟುಕಾಲ ಪಾಠಶಾಲೆಯಲ್ಲಿ ಓದಬೇಕು, ಆನಂತರ ಪರೀಕ್ಷೆಗೆ ಅಪ್ಲಿಕೇಷನ್ ಹಾಕಬಹುದು ಎಂಬುದಾಗಿ ಏರ್ಪಡಿಸುವದರಿಂದ ಸರ್ಕಾರಕ್ಕೆ ಆದಾಯವೂ ಕೀರ್ತಿಯೂ, ಅನೇಕ ಪ್ರಜೆಗಳಿಗೆ ಜೀವನೋಪಾಯವೂ ಉಂಟಾಗುವದರಲ್ಲಿ ಸಂಶಯವಿಲ್ಲ. ಈ ಸಂಸ್ಥಾನವು ಚಿಕ್ಕದು, ಅನೇಕಮಂದಿ ಲಾಯರುಗಳು ಅನಾವಶ್ಯಕವೆಂದಾಗಿ ಹೇಳಬಹುದು. ಯಾಗಿ ದ್ವಿಪಕ್ಷಕ್ಕೆ ಲಾ ಕಾಲೇಜನ್ನು ೧೦—೧೫ ವರುಷಗಳವರೆಗೆ ಇರುವಂತೆಯೂ, ಆನಂತರ ಅದನ್ನು ಮುಚ್ಚಿಬಿಡುವಂತೆಯೂ, ಏರ್ಪಡಿಸಿದಲ್ಲಿ ಆ ಕಾಲದೊಳಗಾಗಿ ಅಲ್ಪಸ್ವಲ್ಪ ಮಂದಿಯಾದರೂ ಲಾಪನ್ನು ಚನ್ನಾಗಿ ತಿಳಿದವರು ತಲೆದೋರುತ್ತಾರೆ. ಇದರಿಂದ ಸರ್ಕಾರದವರ ಕೆಲಸಗಳು ಅತಿಶೀಘ್ರವಾಗಿ ನೆರವೇರಿಸಲ್ಪಡುತ್ತವೆ. ಹ್ಯಾಗೆಂದರೆ ಲಾ ಅರ್ಥ ತಿಳಿಯದೆ ಇರುವವರ ಸಂಗಡ ಜಡ್ಜಿಗಳು ಹೋರಾಡುವದಕ್ಕಿಂತ, ತಿಳಿದವರ ಸಂಗಡ ಕೆಲಸಮಾಡುವದು ಹರ್ಷಯುಕ್ತವಾದದ್ದಾಗಿರುವದು. ಆದಕಾರಣ ಈ ವಿಷಯಗಳನ್ನೆಲ್ಲಾ ಗೌರ್ನಮೆಂಟಿನವರು ತಮ್ಮ ಘನವಾದ ಆಲೋಚನೆಗೆ ತಂದುಕೊಂಡು ಪ್ರಜೆಗಳ ಅಭಿವೃದ್ಧಿಗೆ ಕಾರಣವಾಗಿರುವ ಈ ಕಾಲೇಜನ್ನು ಸ್ಥಾಪಿಸೋಣದ ಮೂಲಕ ಕೀರ್ತಿ ಪಡೆಯುವರೆಂದು ನಂಬಿದ್ದೇವೆ.—ವೃ. ಪ.

### ಲೋಕಾಪುರ ಸ್ವಾಮಿಗಳು.

ಲೋಕಾಪುರದಲ್ಲಿ ಈ ಸ್ವಾಮಿಗಳ ಮಠವಿದ್ದು ಇವರ ಪೂರ್ವಜರು ಈ ಲೋಕದಲ್ಲಿ ಸಾಮಾನ್ಯರಾಗಿ ಹೋದರು. ಮತ್ತು ಇವರ ವಿಷಯವಾಗಿ ನಾವು ನಮ್ಮ ಪತ್ರದಲ್ಲಿ ಹಿಂದೆ ಸ್ವಲ್ಪಮಾಹಿತಿಯಾದರೂ ಕೊಟ್ಟಿದ್ದೆವು. ಆದರೆ ಈಗ ಇವರ ಅನುಷ್ಠಾನಕ್ಕೆ ಕೂತ ಬಾಲ ಯತಿಗಳ ಅಲೌಕಿಕ ಖ್ಯಾತಿಯನ್ನು ಬಹುಜನರ ಬಾಯಿಂದ ಕೇಳಿದ್ದೆವು. ಆದರೆ ಈಗ, ೮—೧೦ ದಿವಸಗಳ ಹಿಂದೆ ನಾನು ಸ್ವತಃ ಅಲ್ಲಿಯವರೆಗೆ ಹೋಗಿ, ಸ್ವಾಮಿಗಳ ದರ್ಶನ ತೆಗೆದುಕೊಂಡು ಬಂದೆನು. ಸಂಗತಿಯನ್ನು—ಕಣ್ಣಾರೆ ನೋಡಿ ವರವಾಕ್ಯ ವೈವಾಟಿಂದ ಸ್ವಲ್ಪದಲ್ಲಿಯೇ ತಮ್ಮ ಪ್ರಿಯವಾಚಕರಿಗೆ ತಿಳಿಸಲಪೇಕ್ಷಿಸುತ್ತೇನೆ.

ಸದ್ಯ ಮಠದಲ್ಲಿ ಶ್ರೀ ಪರಮಹಂಸ ಭುಜಂಗಸ್ವಾಮಿಯವರಾದ ಪ್ರಖ್ಯಾತ ಆರೂಢರವರ ಬೃಂದಾವನಗಳಿರುತ್ತವೆ. ಇವುಗಳಲ್ಲಿ ಶ್ರೀ ಪರಮಹಂಸಸ್ವಾಮಿಗಳ ಬೃಂದಾವನವಿರುವ ಸ್ಥಳವನ್ನು ಶ್ರೀಮಂತ ಅಪ್ಪಾಸಾಹೇಬ ಜಮಖಂಡಿಕರ ಇವರು ಉತ್ತಮವಾದ ಗಚ್ಚಿನ ಗೋಡೆಯಿಂದ ಕಟ್ಟಿಸಿ ಮೇಲೆ ಹಾಗಿನ ಛಾವಣಿಯನ್ನು ಹಾಕಿಸಿ ಬೃಂದಾವನ ಕಟ್ಟೆಯನ್ನು ಮತ್ತು ಒಳಗಿನ ಅಂಗಳವನ್ನು ಬಂದೋಬಸ್ತು ಸ್ಥಳವನ್ನು ಸಂಗಮರವರಿಕಲ್ಲಿನಿಂದ ರಚನೆ ಮಾಡಿ, ಉಳಿದ ಭಾಗವನ್ನಾದರೂ ಸುಧಾರಿಸಿ ಸ್ವಚ್ಛತೆಯಿಂದ ಇಟ್ಟಿರುತ್ತಾರೆ. ಈ ಬೃಂದಾವನದ ಕಟ್ಟೆಯ ಮೇಲೆ ಕುಳಿತಿರುವ ಸ್ವಾಮಿಗಳು ನಾಲ್ಕು ದಿವಸಗಳ ವರೆಗೆ ಮಧುಕರ ಮಾಡಿಕೊಂಡು ಅನುಷ್ಠಾನಕ್ಕೆ ಕುಳಿತುಕೊಳ್ಳುತ್ತಾರೆ. ೫ನೇ ದಿವಸ ೭-೮ ತಾಸು ರಾತ್ರಿ ಸುಮಾರಿಗೆ ಮಧುಕರತಗದು ಸ್ವಲ್ಪ ಫಲಾಹಾರ ತೆಗೆದುಕೊಂಡು ಆದಿನ ರಾತ್ರಿಯೆಲ್ಲ ಜಾಗರಮಾಡಿ ದರ್ಶನಕ್ಕೆ ಬಂದ ವೈದಿಕ ಬ್ರಾಹ್ಮಣರಿಗೆ ಯಥೇಷ್ಟವಾಗಿ ತಿಂದಷ್ಟು ಬಾಳೇಹಣ್ಣು ಮುಂತಾದ ಫಲಾಹಾರ ಕೊಟ್ಟು ಮಾರನೆಯ ದಿವಸ ಬೆಳಿಗ್ಗೆ ಸ್ನಾನವಂಮಾಡಿ ಪುನಃ ಮಧುಕರಪೂರ್ವಕ ಅನುಷ್ಠಾನಕ್ಕೆ ಕೂತವರು ನಾಲ್ಕು ದಿನಗಳ ವರೆಗೆ ಆ ಸ್ಥಳವನ್ನು ಬಿಟ್ಟು ಏಳುವದಿಲ್ಲವು. ಮಧುಕರ ಸಹ ತೆಗೆಯುವದಿಲ್ಲ. ಪುನಃ ನಾಲ್ಕು ದಿನಗಳಾದನಂತರ ಹಿಂದೆ ಹೇಳಿದ ಕ್ರಮ ನಡೆಸುತ್ತಾರೆ. ಮಧುಕರ ತೆಗೆಯುವದಿನ ಗ್ರಾಮಾಂತರದಿಂದ ಬಹುಜನರು ದರ್ಶನಕ್ಕೆ ಬರುತ್ತಾರೆ. ಬಂದಂಥಾ ಜನರನ್ನು ಸ್ವಾಮಿಗಳು ಬಹು ಸಂತೋಷದ ಸನ್ಮಾನಿಸುತ್ತಾರೆ. ಅನುಷ್ಠಾನಕ್ಕೆ ಕೂಡುವದಿನಸ ಅಲ್ಲಿಯೇ ಸಮೀಪದಲ್ಲಿರುವ ಹಳ್ಳಕ್ಕೆ ಹೋಗಿ ಸ್ನಾನ ಮಾಡಿಕೊಂಡು ಮಠಕ್ಕೆ ಬಂದು ಪರಮಹಂಸರ ಬೃಂದಾವನಕ್ಕೂ ಮತ್ತು ಮಠದೊಳಗೆ ಇರುವ ಭುಜಂಗಸ್ವಾಮಿಗಳ ಬೃಂದಾವನಕ್ಕೂ ನಮಸ್ಕರಿಸುತ್ತಾರೆ. ನಮಸ್ಕರಿಸುವದಕ್ಕೆ ಮುಂಚೆ ಭುಜಂಗಸ್ವಾಮಿಗಳ ಬೃಂದಾವನವು ಮೆಲ್ಲಗೆ ಹೊಲಯಿಸುವದೆ, ಅಲ್ಲಾಡುತ್ತದೆ. ಇದನ್ನು ನೋಡುವದಕ್ಕೆ ನೂರಾರು ಜನರು ನಿಂತಿರುತ್ತಾರೆ. ಬೃಂದಾವನವು ಅಲ್ಲಾಡುವದನ್ನು ನಾವು ಪ್ರತ್ಯಕ್ಷವಾಗಿ ನೋಡಿದೆವು. ಇಷ್ಟಾದಬಳಿಕ ಸ್ವಾಮಿಗಳು ಮಧುಕರ ಹಾಕಿ ಅನುಷ್ಠಾನಕ್ಕೆ ಕೂಡುತ್ತಾರೆ. ಮಧುಕರ ಹಾಕಿದ ಕೂಡಲೇ ಬೃಂದಾವನ ಅಲ್ಲಾಡುವದು ನಿಂತುಹೋಗುತ್ತದೆ. ೫ ವರ್ಷದಿಂದೀಚೆ ಇವರು ಫಲಾಹಾರದ ಮೇಲೆ ಇರುವದರಿಂದ ಶರೀರವು ಬಹು ಕೃಶವಾಗಿರುತ್ತದೆ. ಆದರೂ ಇವರ ಮುಖವು ಅನುಷ್ಠಾನಬಲದಿಂದ ಹುಣ್ಣಿಮೆಯ ಚಂದ್ರನಂತೆ ಇದ್ದು ತಪಸ್ಸಿನ ಬಹುತೇಜಸ್ಸು ಕಾಣುತ್ತದೆ. ಇವರ ಅನುಷ್ಠಾನವನ್ನು ಮತ್ತು ೫ವರ್ಷದಿಂದ ಫಲಾಹಾರದ ಮೇಲೆಯೇ ಜೀವಿಸಿದ್ದನ್ನೂ, ಬೃಂದಾವನವು ತೂಗ್ಯಾಡುವದನ್ನೂ ಕೇಳಿ ಈಗಿನ ಪ್ರಚಂಡ ಸುಧಾರಕರು ಅಂಥವರೆ ದೇವಬ್ರಾಹ್ಮಣರು ಸುಳ್ಳನ್ನುವವರು ಕಣ್ಣಾರ ಅನುಭವ ತೆಗೆದುಕೊಂಡು ಬಿಟ್ಟ ನಮಸ್ಕಾರ ಹಾಕಿರುತ್ತಾರೆ.

ಇವರ ಯಾವತ್ತು ಮಹಾತ್ಮೆಯನ್ನು ವರ್ಣಿಸುವದು ನನ್ನಂಥಾ ಅಲ್ಪ ಮಂದಮತಿಗೆ ಆಗದು, ಆದರ ನಮ್ಮಯ ಪತ್ತು ವಾಚಕರಿಗೂ ಮತ್ತು ಹಿಂದೂವಂಶಾಭಿಮಾನಿಗಳಿಗೂ ಇಷ್ಟೇ ಸೂಚಿಸುತ್ತೇನೆ. ಒಂದಾವರ್ತಿಯಾದರೂ ಈ ಮಹಾಪುರುಷರ ದರ್ಶನ ತೆಗೆದುಕೊಂಡು ದೇವಬ್ರಾಹ್ಮಣರಲ್ಲಿ ವಿಶ್ವಾಸವಿಟ್ಟು ಸದಾಚಾರದಿಂದ ನಡೆದುಕೊಳ್ಳಬೇಕೆಂದು ಬಯಸುವ ತಮ್ಮ ವಿಧೇಯನಾದ ಷ ಬಾಗಲಕೋಟೆ ಚಪ್ಪರೆ

ವೇಶ್ಯಾಂಗನೆಯರು ವ್ಯಭಿಚಾರವಾಡುತ್ತಾರಾದದರಿಂದ ಅವರ ಮೇಲೆ ವ್ಯಾಪಾರದಾದಗಿನ ಸತ್ಕೃತ್ಯಗಳನ್ನು ಕುರಿತು ಏನೊಂದು ವಿಚಾರವೂ ಪೂರ್ವಕವಿಲ್ಲದೆ ಅನೇಕರು ಕೇವಲ ನಿಂದಾಸ್ಪದರೂ ಅನೀತಿ ಉಳ್ಳವರೆಂದು ತಿಳಿದಿರುವಂತೆ ಮುಂಬಯಿ ಹಾಗೂ ಮದ್ರಾಸು ಇಲಾಖೆಗಳೊಳಗಿನ ಜನರು ಒಂದೇಸಮ ಗುಲ್ಲು ಮಾಡಲಾರಂಭಿಸಿದ್ದಾರೆ. ಈ ಗುಲ್ಲು ಉಂಟುಮಾಡಲಿಕ್ಕೆ ಕ್ರಿಸ್ತಮತದ ಪಾದ್ರಿಗಳೇ ಕಾರಣವೆಂತ ತೋರುತ್ತದೆ. ಆ ತರುವಾಯ ಆವರನ್ನು ಹಿಂಬಾಲಿಸಿ, ಸೋಷ್ಯಲ್ ಸಮಾಜ ಸುಧಾರಕರಾದ ಎಷ್ಟೋ ಜನ ಗ್ರಾಜ್ಯುಯೆಟರು ಸೇರಿಕೊಳ್ಳುವರು. ಈ ಗುಲ್ಲಿನಲ್ಲಿ ಕೇಳಿಕೊಂಡಿರುತ್ತಾರೆ. ತ ತಿಳಿಯುತ್ತದೆ. ನಾವೇನು ವೇಶ್ಯಾಂಗನೆಯರ ಅಥವಾ ವಾತ್ಸವನ ಹಿತಕರಿಗಳಲ್ಲ. ಅವರು ವ್ಯಭಿಚಾರ ನಡಿಸುವದಿಲ್ಲವೆಂತ ನಾವು ಹೇಳುವದಿಲ್ಲ. ಅವರಿಗೆ ಈ ಕಲಿಕಾಲದಲ್ಲಿ ಗಾನಾದಿಗಳಿಂದುಂಟಾಗುವ ಪ್ರಾಪ್ತಿಗಿಂತಲೂ ವ್ಯಭಿಚಾರಾದಿಗಳಿಂದಲೇ ಹೆಚ್ಚಿನ ಪ್ರಾಪ್ತಿ ಆಗುತ್ತದೆಂತ ನಾವು ತಿಳಿದಿದ್ದೇವೆ. ಮತ್ತು ಈ ಕಾರಣದಿಂದಲೇ ಅವರು ಈಗಿನ ಕಾಲದಲ್ಲಿ ಗಾನಾದಿಗಳನ್ನು ದುರ್ಲಕ್ಷಿಸಿ ಹಣವುಳ್ಳವರನ್ನು ಭೋಜುಗಾರರನ್ನು ಹೊಂಕಗಾರರನ್ನು ನಾನಾವಿಧದಿಂದ ತಮ್ಮ ವಶ ಯುವಕರೊಳಗೆಲ್ಲ ಕೊಳ್ಳಲಿಕ್ಕೆ ಹೆಚ್ಚಾಗಿ ಪ್ರಯತ್ನಿಸುತ್ತಾರೆಂತ ನಾವು ಪೂರ್ಣವಾಗಿ ಬಲ್ಲೆವು. ಹೀಗಿನ ವ್ಯವಸ್ಥೆ ಇರುವಾಗ ನಾವು ವೇಶ್ಯಾಂಗನೆಯರ ಪಕ್ಷವನ್ನು ಆವಲಂಬಿಸುವೆವೆಂತ ಎಂದೆಂದಿಗೂ ತಿಳಕೊಳ್ಳಬಾರದು. ಆದರೆ ಅವರನ್ನು ಹೀಯಾಳಿಸಿ ತಿರಸ್ಕರಿಸುವವರು ಅವರಿಂದುಂಟಾಗುವ ಅನೀತಿಯನ್ನು ನಾಶ ಮಾಡಲಿಕ್ಕೆ ಯಾವ ಉಪಾಯವನ್ನು ಸೂಚಿಸುತ್ತಾರೋ ಆ ಉಪಾಯವಾದರೂ ಸರಿಯಲ್ಲವೆಂತ ನಮ್ಮ ಹೇಳಿಕೆ ಆಗಿದೆ. ಇದಲ್ಲದೆ ಈ ವೇಶ್ಯಾಂಗನಾ ನಿಂದಕರುಗಳ ಮುಖ್ಯ ಅಂಬೋಣವೇನೆಂದರೆ— ವೇಶ್ಯೆಯರನ್ನು ಸಭಾರಂಜನಾರ್ಥವಾಗಿ ಯಾವ ಉತ್ಸವ ಕಾರ್ಯಗಳಲ್ಲಿಯೂ ಕರೆಯಬಾರದು, ಅಂದರೆ ವೇಶ್ಯಾಂಗನೆಯರ ಜಾತಿಯೇ ಉಳಿಯಲಿಕ್ಕಿಲ್ಲ. ಈ ಸೂಚನೆಯು ಎಷ್ಟು ಅಯೋಗ್ಯವಾದದ್ದೆಂತ ಕೆಲವು ವಿಚಾರ ಮಾಡಿದರೆ ಸಹಜವೇ ತಿಳಿದೀತು. ಗಾನ ನೃತ್ಯಾದಿಗಳಂಥ ಹೊಟ್ಟೆ ಹೊರಕೊಳ್ಳುವ ಉಪಾಯ ಉಳಿಯದೆ ಹೋದರೆ ವೇಶ್ಯಾಂಗನೆಯರು ಸಹಜವಾಗಿ ಅವರು ಇತ್ತ ಭಾಗ ಹೊಂದಿಕೊಂಡ ಅತ್ಯಂತ ನಿಂದ್ಯ ವ್ಯಭಿಚಾರವನ್ನೇ ಒಳ್ಳೇ ಜೋರಿಯಿಂದ ನಡಿಸಬೇಕಾದೀತು. ಹೀಗಾದರೆ ವೇಶ್ಯಾಂಗನೆಯರು ಕೇವಲ ಹೊಟ್ಟೆ ಕಡಿಗೆ ಸಂಪೂರ್ಣವಾಗಿ ವ್ಯಭಿಚಾರಿ ಸ್ತ್ರೀಗಳೇ ಆಗಿ ಹೋದಾರು. ಮತ್ತು ಅದರಿಂದ ಜನರಲ್ಲಿ ಅನೀತಿ ಹೆಚ್ಚಾಗಿ ಬೆಳೆದೀತು. ಹೀಗೆ ಅವರ ಈ ಸಾಧ್ಯ ಪ್ರವೃತ್ತಿಗಳು ಎಣಿಸಿದ ಉಪಾಯವು ಅಪಾಯವನ್ನೇ ಮಾಡೀತು. ಆದದರಿಂದ ಈ ಜಾತಿಯ ಜನರಲ್ಲಿ ನಡೆಯುತ್ತಿರುವ ವ್ಯಭಿಚಾರವನ್ನೇ ನಿಲ್ಲಿಸಲಿಕ್ಕೆ ಪ್ರಯತ್ನಿಸುವದೇ ಲೇಸೆಂತ ನಮ್ಮ ಅಂಬೋಣವದೆ. ಇದು ಸುಲಭ ಪ್ರಯತ್ನದಿಂದ ಸಾಧ್ಯವಾದೀತು. ಎಲ್ಲ ಜಾತಿಗಳು ತಮ್ಮವರು ವ್ಯಭಿಚಾರಕ್ಕಾಗಲಿ ಯಾ ಬೇರೆ ಕಾರಣದಿಂದಾಗಲಿ ವೇಶ್ಯಾಂಗನೆಯರ ಸಹವಾಸ ಮಾಡಕೂಡದೆಂಬ ಕಟ್ಟು ತಮ್ಮ ತಮ್ಮೊಳಗೆ ಮಾಡಿಕೊಳ್ಳಬೇಕು; ಮತ್ತು ಗಾನಾದಿಗಳ ಹೊರತು ವ್ಯಭಿಚಾರದ ಕಸುಬು ಮಾಡದಂತೆ ವೇಶ್ಯಾಂಗನೆಯರನ್ನು ಸರಕಾರದವರು ನಿರ್ಬಂಧಿಸಬೇಕು. ಈ ವೇಶ್ಯಾಂಗನೆಯರಲ್ಲಿ ಮದುವೆ ಕ್ರಮ ಇರಬೇಕು. ಅವರ ಪುರುಷರು ಈಗ ಅನಾಥ ಮೇಲಾದ ಹುಡಿಗೆಯರನ್ನು ಹಿಡಿಕೊಂಡು ಬಂದು ಮದುವೆಯಾಗುತ್ತಾರೆ. ಹೀಗೆ ಮಾಡುವವರ ಬದಲು ತಮ್ಮ ಜಾತಿಯ ಹೆಂಗಸರನ್ನೇ ಮದುವೆಯಾಗಬೇಕು, ಅಂದರೆ ಈ ಜಾತಿಯಲ್ಲಿ ವ್ಯಭಿಚಾರ ತನ್ನಷ್ಟಕ್ಕೇನೆ ಕಡಿಮೆಯಾದೀತು. ಗಾಯನಾದಿ ಕಲೆಗಳಿಗೆ ಜನರು ಒಳ್ಳೇ ಉತ್ತೇಜನವನ್ನು ಕೊಟ್ಟು ಈ ನಾಯಕಸಾನಿಗಳನ್ನು ಗಾನ ನೃತ್ಯಾದಿಗಳ ಬಗ್ಗೆ ಮಾತ್ರ ಕರಕೊಳ್ಳಬೇಕು. ಗಾಯನಾದಿ ಕಲೆಗಳಿಗೂ ವ್ಯಭಿಚಾರಕ್ಕೂ ಏನೂ ಸಂಬಂಧವಿರುವದಿಲ್ಲ. ನಾಯಕಸಾನಿಯರನ್ನು ಗಾನಾದಿ ರಂಜನಕಾರ್ಯಗಳಿಗೆ ಕರಕೊಳ್ಳುವದರಿಂದ ವ್ಯಭಿಚಾರಕ್ಕೆ ಉತ್ತೇಜನವಾಗುತ್ತೆಂಬುವದು ಸುಳ್ಳು. ನಾಯಕಸಾನಿಯರು ವ್ಯಭಿಚಾರಿ ಸ್ತ್ರೀಯರಾದ ಬಳಿಕವೇ ವ್ಯಭಿಚಾರದ ದುರ್ವರ್ತನಗಳು ನಡಿಯುತ್ತವೆ. ಆದರೆ ನಾವು ಮೇಲೆ ಸೂಚಿಸಿರುವ ಉಪಾಯಗಳಂತೆ ನಡೆಕೊಂಡರೆ ಈ ಜಾತಿಯು ವ್ಯಭಿಚಾರದ ದುರ್ಗುಣ ಹೋಗಿ ಅವರ ನೃತ್ಯಾದಿ ಕಲೆಗಳಿಂದ ರುಚಿಕರವಾದ ಸುಗುಣವು ವೃದ್ಧಿಯಾದೀತು; ನಾಶಿಯಿಂದ ನಡೆದು ಬಂದ ಭಾರತ ಗಾಯನ ಕಲೆಯು ಊರ್ಜಿತಸ್ಥಿತಿಯನ್ನು ಹೊಂದೀತು, ಮತ್ತು ಈ ಜಾತಿಯಲ್ಲಿ ಹಾಗು ಜನರಲ್ಲಿ ಇರುವ ವ್ಯಭಿಚಾರವು ನಾಶವಾದೀತು. ಮತ್ತು ಅನೀತಿಯಿಂದ ದ್ರವ್ಯವನ್ನು ಕಳೆಯುವ ಈ ಜನರನ್ನು ಸನ್ಮಾರ್ಗಕ್ಕೆ ಹಚ್ಚುವ ಯಶಸ್ಸು ಸರಕಾರಕ್ಕೂ ಜನರಿಗೂ ಉಂಟಾದೀತು.—ಶ. ಸು.

BANGALORE —Printed and published at the KARNATAKA PRESS, No 40, HOSPITAL ROAD, CITY— 1893.

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

## ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning.**

ಪ್ರಕಾಮವಿವಿಧಪ್ರವೃತ್ತ್ಯುಪಗತಾರ್ಥ್ಯಕರ್ಣಾಟಕಪ್ರಕಾಶನಪರಾಭಿಧಾಪ್ರಥಿತಸಾಹಿತೀಶೋಭಿತಾ | ವ್ಯಾಖ್ಯಾತಹಿತವಾಸನೆನಿಹಿತಮುದ್ರಣಾಸಜ್ಜನಸ್ಫೂರ್ತಿಗಾಸುಪವಿವೇಚನಾವಿಕಸಿತ ವಿಸನುಸಂಚರು

Vol. XX ] BANGALORE—MONDAY, JUNE 12 1893. [No 23.

ಸಂಪುಟ ೨೦. ] ಬೆಂಗಳೂರು:—ಸನ್ ೧೮೯೩ನೇ ಇಸವಿ ಜೂನ್ ೧೨ನೇ ತಾರೀಖ್ ಸೋಮವಾರ. [ಸಂಚಿಕೆ ೨೩.


## ಕರ್ಣಾಟಕ ಪ್ರಕಾಶಿಕಾ.

### ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

| | ಸ್ಥಳದವರಿಗೆ | ಪರಸ್ಥಳದವರಿಗೆ. |
|---|---|---|
| ವರ್ಷ ೧ಕ್ಕೆ | 6—0—0 | 8—0—0 |
| 6 ತಿಂಗಳಿಗೆ | 3—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

| | ಸ್ಥಳದವರಿಗೆ. | ಪರಸ್ಥಳದವರಿಗೆ. |
|---|---|---|
| ವರ್ಷ ೧ಕ್ಕೆ | 3—0—0 | 4—0—0 |
| 6 ತಿಂಗಳಿಗೆ | 1—12—0 | 2—8—0 |

ಈ ಪತ್ರಿಕೆಗೆ ಚಂದಾ ಕೊಡುವುದಾಗಿ ಮಾಡಿದ ತಾರೀಖ್ ಮೊದಲು ಒಂದು ತಿಂಗಳೊಳಗಾಗಿ ಚಂದಾ ಹಣವನ್ನು ಕಳುಹಿಸದವರಿಗೆ ಮಾತ್ರ 3 ಆರ್ಡರ್ ದಂತೆ ಪತ್ರಿಕೆ ಕಳುಹಿಸಲ್ಪಡುವದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡ ಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು, ಮೂರು ತಿಂಗಳಿಗಿಂತ ಕಡಮೆಯಾಗಿ ಚಂದಾ ಹಣವನ್ನು ತೆಗೆದುಕೊಳ್ಳಲ್ಪಡುವದಿಲ್ಲ.

### ಪ್ರಕಟನೆಯ ದರಗಳು.

ಮೊದಲನೆಯದಕ್ಕೆ ಪಂಕ್ತಿ ಒಂದಕ್ಕೆ ೦—೨—೦

ಎರಡನೆಯದಕ್ಕೆ ಪಂಕ್ತಿ ಒಂದಕ್ಕೆ ೦—೧—೦

ಸೂಚನೆ—ಎರಡು ಪತ್ರಗಳಿಗಿಂತ ಹೆಚ್ಚಾಗಿಯೂ ಎಷ್ಟು ಕಾಲ ಪ್ರಕಟಿಸಬೇಕೆಂಬುದನ್ನು ತಿಳಿಸದೆ ಪಂಕ್ತಿ ೧ ಆಣೆಯಂತೆ ತೆಗೆದುಕೊಳ್ಳುವದು. ಈ ಪತ್ರಿಕೆಯಲ್ಲಿ ಪ್ರಕಟಿಸತಕ್ಕ ಪ್ರಕಟನೆಗಳನ್ನು ಕಳುಹಿಸುವವರು ಅವು ಎಷ್ಟು ಕಾಲ ಪ್ರಕಟಿಸಬೇಕೆಂಬುದನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಿದ್ದರೆ ಅವರು ನಿಲ್ಲಿಸಬೇಕೆಂದು ತಿಳಿಸುವವರೆಗೂ ಅವು ಪ್ರಕಟಿಸಲ್ಪಡುವವು. ಪ್ರಕಟನೆಗಳ ಚಾರ್ಜ್ ಮೊದಲೇ ಕೊಡತಕ್ಕದ್ದು. ಪ್ರಕಟನೆಗಳನ್ನು ... ಕಳುಹಿಸಬೇಕು. ಪ್ರಕಟನೆಗಳು ಈ ಪತ್ರಿಕೆಗೆ ಕಳುಹಿಸತಕ್ಕ ... ಕಾಗದಗಳಲ್ಲಿ ... ಪ್ರಕಟನೆಗಳನ್ನು ಪ್ರಕಟಿಸಲಾಗುವುದು. ಸಿಲ್ಲರೆ ... ತೆಗೆದುಕೊಳ್ಳಲ್ಪಡಲಾರವು.


*ADVERTISEMENTS.*

**NOTICE.**

**VAIDYASARA SANGRAHA**

A TREATISE ON THE PRINCIPLE OF

**HINDU MEDICINE.**

*Per copy including Postage Rs. 5 0 0*

ವೈದ್ಯಸಾರ ಸಂಗ್ರಹ.

ಈ ಗ್ರಂಥಾಪೇಕ್ಷೆಯುಳ್ಳವರು ಮೊಬಲಗನ್ನು ಮನಿಆರ್ಡರ್ ಮೂಲಕ ರವಾನಿಸುವುದು. ವಿಳಾಸ ... ತಿಳಿಸಿ ಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ಕಾಗದಗಳಿಗೆ ಸಿಗೆ ಕೊಡಲ್ಪಡಲಾರದು.

ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಹಾಸಲ್ ಸಹಿತ ಪ್ರತಿ ಒಂದಕ್ಕೆ ರೂ 5—0—0

ಟಿ. ಬಿ. ವೆಂಕಟಾಚಾರ್.

ಬೆಂಗಳೂರ್, ಮೆಟರ್ ಆಸ್ಪತ್ರಿ ರೋಡ್ ೪೮ ನೆಂಬರ್.

## ನೋಟಿಸ್.

### ಬೆಂಗಳೂರು ಕರ್ಣಾಟಿಕ್ ಪ್ರೆಸ್.

**೧೮೮೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.**

ಇದರಲ್ಲಿ ಸಕಲವಿಧ ಕೆಲಸಗಳು ಸುಲಭಬೆಲೆಗೆ ತೀವ್ರವಾಗಿಯೂ ಅಚ್ಚುಕಟ್ಟಾಗಿಯೂ, ಮಾಡಲ್ಪಡುವವು.

ಇದರಲ್ಲಿ ಸಕ್ಕೂ ಇಂಗ್ಲಿಷ್ ಕನ್ನಡ ಕೆಲಸಗಳು ಮಾತ್ರವೆ ಆಗುತ್ತವೆ. ಇತರ ಪಾರ್ಟಿಕ್ಯುಲರ್‌ಗಳನ್ನು ಮನೇಜರ್ ಅವರಿಂದ ... ಬರೆದು ತಿಳಿದುಕೊಳ್ಳಬಹುದು.


## ನೋಟಿಸ್.

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪೆನಿ.

ಕಮಿಷನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯೊಡನೆ ವ್ಯಾಲ್ಯೂ ಪೇಯಬಲ್ ಪೋಸ್ಟಿನ ಮೂಲಕ ತಕ್ಕ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರಹ ಔಷಧಗಳು, ಪುಸ್ತಕಗಳು, ಮುತ್ತುಗಳು, ಚಿಪ್ಪಿ ಮುತ್ತುಗಳು, ಘಡಿಯಾರಗಳು, ವಾಚ್‌ಗಳು, ಟ್ರಂಕ್‌ಗಳು, ಕಾಶ್ಮೀರ ಶಾಲುಗಳು, ಪಟ್ಟೇದಗಳು, ಜರತಾರಿ ಕಣಗಳು, ಚಂದ್ರಕಾಂತ ಶಿಲೆಯ ಕನ್ನಡಕಗಳು, ಕುಶಾಗರ ತಕ್ಕ ಜರತಾರಿ ಉಡುಪುಗಳು, ಜರತಾರಿ ಟೋಪಿಗಳು, ಆಫೀಸ್ ಡ್ರೆಸ್‌ಗಳು, ಷರ್ಟುಗಳು, ಅತ್ತರ್‌ಗಳು, ಅತ್ಯುತ್ತಮಗಳಾದ ರತ್ನಗಳು, ಭಂಗಾರದಿಂದ ಕಟ್ಟಲ್ಪಟ್ಟ ಉಂಗುರಗಳು, ಬೆಳ್ಳಿ ಪಾತ್ರೆಗಳು, ಜರ್ಮನ್ ಬೆಳ್ಳಿ ಪಾತ್ರೆಗಳು, ಕೇಸರಿ, ಕಸ್ತೂರಿ ವಗೈರೆ ಇತರ ಸಾಮಾನುಗಳು.

ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟಾಂಪ್ ಕಳುಹಿಸಿದ ಹೊರತು ಜವಾಬ್ ದೊರೆಯಲಾರದು.

ವಿಳಾಸ.—ಗಣೇಶ ರಾಮಚಂದ್ರ ಕರ್ಕಿ,

ಮತ್ತು ಕಂಪೆನಿ, ಕಮಿಷನ್ ಏಜಂಟ್ಸ್,

ಠಾಕೂರ್ ದ್ವಾರ, ಮಾರ್ಕೆಟ್ ಪೋಸ್ಟ್, ಮುಂಬಯಿ.

## ನೋಟಿಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

### ಸಂಸ್ಕೃತ ಗ್ರಂಥಗಳು.

| | | ಪೋಸ್ಟೇಜ್ ಸೇರಿ ರೂ | ಆ | ಪೈ. |
|---|---|---|---|---|
| ಸಟೀಕಾ ವೈದ್ಯಸಾರ ಸಂಗ್ರಹ | ... | ೫ | ೦ | ೦ |
| ,, ಶಿವಗೀತೆ | ... | ೧ | ೨ | ೦ |
| ,, ಶಿವಾನಂದಲಹರಿ | ... | ೦ | ೮ | ೦ |
| ,, ಕಾಲಾಮೃತ | ... | ೧ | ೦ | ೦ |
| ,, ಟಿ॥ ವಾಲ್ಮೀಕಿರಾಮಾಯಣ | ... | ೦ | ೩ | ೦ |
| ,, ಟಿ॥ ಗೋಪಿಕಾ ಗೀತೆ | ... | ೦ | ೧ | ೦ |
| ,, ಟೀ॥ ಚಾಣಕ್ಯನೀತಿ (ಸುಭಾಷಿತ) | | ೦ | ೪ | ೨ |
| ವಿಷ್ಣುಸಹಸ್ರನಾಮ ವ್ಯಾಖ್ಯೆ | ... | ೦ | ೩ | ೦ |
| ಸೂರ್ಯಸಹಸ್ರನಾಮ | ... | ೦ | ೬ | ೬ |
| ಕೃಷ್ಣಕರ್ಣಾಮೃತ | ... | ೦ | ೬ | ೦ |
| ತ್ರಿಕಾಂಡ ಅಮರ ಕೋಶ | ... | ೦ | ೬ | ೦ |
| ೧ ಕಾಂಡ | ... | ೦ | ೧ | ೦ |

### ಕನ್ನಡ ಗ್ರಂಥಗಳು.

| | | | | |
|---|---|---|---|---|
| ಶುಕಸಪ್ತತಿ ಅನ್ವಯ | ... | ೨ | ೦ | ೬ |
| ಡಿಟೋ ದುರ್ಬ್ಯಾಂ | ... | ೧ | ೬ | ೦ |
| ವೃಷಭೇಂದ್ರವಿಜಯ | ... | ೧ | ೮ | ೦ |
| ಪಂಚಭಾಷೆ ಬಾಲಬೋಧೆ | ... | ೦ | ೪ | ೦ |
| ಹನುಮದ್ವಿಲಾಸ | ... | ೦ | ೪ | ೦ |
| ಕಾಳೀಯಮರ್ದನ | ... | ೦ | ೬ | ೦ |
| ಸುಭದ್ರಾಪರಿಣಯ | ... | ೦ | ೬ | ೦ |
| ಶಶಿರೇಖಾಪರಿಣಯ | ... | ೦ | ೬ | ೪ |
| ಸುದಾಮಚರಿತ್ರೆ | ... | ೦ | ೧ | ೦ |
| ಮೈರಾವಣ ಚರಿತ್ರೆ | ... | ೦ | ೧ | ೦ |
| ಬಾಲಗ್ರಹಚಿಕಿತ್ಸೆ | ... | ೦ | ೧ | ೧ |
| ಮಹಮ್ಮದನ್ ಲಾ | ... | ೦ | ೧೨ | ೦ |
| ಭ್ರಾಂತಿವಿಲಾಸ | ... | ೬ | ೦ | ೦ |

## ಕೊಡಗು ಫಾರೆಸ್ಟ್ ಇಲಾಖಾ ನೋಟಿಸ್.

1893 ನೇ ಇಸವಿ ಮೇ ತಾರೀಖ್ 18 ರಲ್ಲು.

ಇದರಡಿ ನಮೂದಿಸಿದ ಸಾಮಾನುಗಳು ಮೂರ್ನಾಡಿ ಡಿಪೋದಲ್ಲಿ ಸನ್ 1893 ನೇ ಇಸವಿ ಜೂನ್ ತಾರೀಖ್ 21 ರಲ್ಲು ಹರಾಜ್ ಹಾಕಲ್ಪಡುತ್ತದೆ.

ತ್ಯಾಗದ ತೊಲೆಗಳು 55 ... 1700 ಘನ ಅಡಿ.

ಹೊನ್ನೆ ವಗೈರೆ 215 ... 5100 ,,

ರಿ:—ಸನ್ 1889ನೇ ಇಸವಿ ಡಿಸೆಂಬರ್ ತಾರೀಖ್ 19ನೇ, ನಂಬರ್ 53 ರ ಚೀಫ್ ಕಮ್ಮಿಷನರ್ ಸಾಹೇಬರವರ ನೋಟಿಫಿಕೇಷನ್ ಮೇರೆ ನಡೆದ ಕ್ರಯದ ಶೈಪ ... ಹತ್ತರಷ್ಟು ಮೊಬಲಗನ್ನು ಹರಾಜ್ ಕಾಲದಲ್ಲಿ ಪಾವತಿ ಮಾಡಿ ಬಾಕೀ ಮೊಬಲಗನ್ನು ಹರಾಜ್ ತಾರೀಖ್ ಲಾಗಾಯತು 30 ದಿನಗಳೊಳಗೆ ಪಾವತಿ ಮಾಡತಕ್ಕದ್ದು.

F. A. Leager.

ಡಿಪ್ಯುಟಿ ಕನ್ಸರ್ವೇಟರ್,

ಕೊಡಗು ಫಾರೆಸ್ಟ್.

## THE MONEY MARKET.

ಮದರಾಸ್, ಶನಿವಾರ, ತಾರೀಖ್ 10 ನೇ ಜೂನ್ 1893.

ಸೇಕಡ 4ರೂ. ಬಡ್ಡಿಯ ಗವರ್ನಮೆಂಟ್ ಪತ್ರಗಳು ರೂ. ನೂರಕ್ಕೆ, 105-12-0 ಇಂದ 106-4-0ವರೆಗೆ.

ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತು 965 ಲಾಗು ಮುತು 975ವರೆಗೆ.

ಕಮಾರ್ಷಿಯಲ್ ವ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಷೇರುಗಳು, (100) ಬಾಬತು 160 ಇಂದ 165 ವರೆಗೆ.

ಸವರನ್‌ಗಳು, 16-3-0 ಇಂದ 16-7-0 ವರೆಗೆ.

ಬ್ಯಾಂಕ್‌ಬಿಲ್‌ಗಳು ಯೂನಿಯನ್ ಹುಂಡಿಗಳು, ರೂಪಾಯಿ ೧ಕ್ಕೆ 6 ತಿಂಗಳವಾಯಿದೆಗೆ, 1s. 2 $\frac{3}{8}$9/2 d.

ಡಿಟೋ 4 ತಿಂಗಳವಾಯಿದೆಗೆ, 1s 2 2/3 7/2 d.

ಡಿಟೋ ಕೇಳಿದಾಗ, 1s. 2$\frac{3}{4}$d.


## ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JUNE 12 1893

೧೮೯೩ನೇ ಇಸವಿ ಜೂನ್ ತಾ|| ೧೨ ನೇ ಸೋಮವಾರ.


## ಮೈಸೂರುದೇಶದ ಈಗಿನ ವ್ಯವಸಾಯ ಸ್ಥಿತಿಯಂಕುರಿತು.

ಈ ಇಂಡ್ಯ ದೇಶದಲ್ಲಿ ಜನಗಳು ಪ್ರಾಯಶಃ ಕೃಷಿ ಜೀವಿಗಳಾಗಿರುತ್ತಾರಲ್ಲದೆ ಜಮೀನ್ದಾರ್ ರೆಂದಾಯವೇ ಸರ್ಕಾರದ ಜಮಾಬಂದಿಯಲ್ಲಿ ಮುಖ್ಯವಾದ ಬಾಬಾಗಿರುತ್ತೆ. ಹೀಗಿರುವಲ್ಲಿ ಈ ಬಾಬಿನ ಅಭಿವೃದ್ಧಿಯು ಜನಗಳ ಕ್ಷೇಮಕ್ಕೂ ಸರಕಾರದ ಆದಾಯಕ್ಕೂ ಕಾರಣವಾಗಿ ದೇಶದ ಉತ್ತರೋತ್ತರಾಭಿವೃದ್ಧಿಗೆ ಸೂಚಕವಾಗಿರುವದು.

ಕಳೆದ ಧಾತು ಈಶ್ವರ ಸಂವತ್ಸರಗಳಲ್ಲಿ ಈ ದಕ್ಷಿಣದೇಶದೊಳು ಪ್ರಾಪ್ತವಾಗಿದ್ದ ಘೋರಕ್ಷಾಮದಲ್ಲಿ ಈ ಮೈಸೂರು ದೇಶದಲ್ಲಿ ಸುಮಾರು ೧೦ ಲಕ್ಷ ಜನಗಳು ಕ್ಷುದ್ರೋಗಗಳ ದೆಸೆಯಿಂದ ಲಯವನ್ನು ಹೊಂದಿದರು. ಆದರೆ ಈಚಿನ ಸೆನ್ಸಸ್ ಲೆಕ್ಕಗಳನ್ನು ನೋಡುವಲ್ಲಿ ದೇಶದಲ್ಲಿ ಒಟ್ಟು ಪ್ರಜಾ ಸಂಖ್ಯೆಯು ಅಧಿಕವಾಗುತ ಬಂದಿದೆ. ಪರಂತು ಕೆಲವು ಗ್ರಾಮಗಳಲ್ಲಿ ಪ್ರಜೆಗಳು ವಾಸ ಮಾಡುವದಕ್ಕೆ ಸ್ಥಳ ಸಾಲದೆ ವ್ಯವಸಾಯಕ್ಕೆ ಭೂಮಿಗಳು ಸಿಕ್ಕದೆ ಪಶುಗಳ ಮೇವಿಗಾಗಿ ಬಿಟ್ಟಿದ್ದ ನಿಷ್ಪ್ರಯೋಜಕವಾದ ಭೂಮಿಗಳನ್ನು ವ್ಯವಸಾಯ ಮಾಡುವ ಸ್ಥಿತಿಯಲ್ಲಿರುತ್ತಾರೆ. ಇನ್ನೂ ಕೆಲವು ಕಡೆಗಳಲ್ಲಿ ಪ್ರಜೆಗಳು ಬಹಳ ವಿರಳವಾಗಿ ಭೂಮಿಗಳು ಅಲ್ಲಲ್ಲಿ ಬಿದ್ದಿರುತ್ತವೆ. ಮತ್ತು ಅನೇಕ ಗ್ರಾಮಗಳು ನಾಮಮಾತ್ರಾವಶಿಷ್ಟಗಳಾಗಿ ಬೇಚರಾಖ್ ಅಂದರೆ ಜನ ಇಲ್ಲದ ಗ್ರಾಮಗಳಾಗಿರುತ್ತವೆ. ಜನ ಸಂಖ್ಯೆಯು ಗ್ರಾಮಗಳಲ್ಲಿ ಸರಿಯಾಗಿ ಹಂಚಿಕೆ ಆಗಿರುವದಿಲ್ಲವೆಂದು ಇದರಿಂದ ತಿಳಿಯಬರುತದೆ.

ಈ ಸ್ಥಿತಿಯು ಅಪರಿಹಾರ್ಯವಾದದ್ದಲ್ಲವು. ಕೆಲ ವರುಷಗಳ ಹಿಂದೆ ಈ ಬೇಚರಾಗ್ ಗ್ರಾಮಗಳನ್ನು ಪ್ರಜಾಭರಿತಗಳನ್ನಾಗಿ ಮಾಡುವ ಉದ್ದೇಶದಿಂದ ಸರಕಾರದವರು ಕೆಲವು ಸಹಾಯಕರವಾದ ಏರ್ಪಾಡುಗಳುಳ್ಳ ನಿಬಂಧನೆಗಳನ್ನು ಪ್ರಸಿದ್ಧ ಪಡಿಸಿದರು. ಆದರೆ ಇವು ಕಾರ್ಯಕಾರಿಯಾಗಲಿಲ್ಲತ್ತೆ. ಏತಕ್ಕೆಂದರೆ—ಇತರ ವಾಣಿಜ್ಯಾದಿ ವ್ಯಾಪಾರಗಳಿಂದ ಉಂಟಾಗುವ ಲಾಭಕ್ಕಿಂತಲೂ ಕೃಷಿ ವ್ಯಾಪಾರ ಲಾಭವು ಕಡಿಮೆಯಾದದ್ದು. ಆದ್ದರಿಂದ ಕೃಷ್ಯುಪಜೀವಿಗಳು ಅಲ್ಲಿಗೆ ಪ್ರವರ್ತಿಸಲಿಕ್ಕೆ ಹಿಂತೆಗೆಯುವರು. ದ್ರವ್ಯಾನುಕೂಲವಿಲ್ಲದವರಿಗೆ ಇದು ಅಸಾಧ್ಯವೆಂದು ಹೇಳಬೇಕಾದದ್ದಿಲ್ಲ. ಆದದರಿಂದ ಮತ್ತೊಂದು ಮಾರ್ಗದಲ್ಲಿ ಯತ್ನಿಸಬೇಕಾದ್ದು ಅವಶ್ಯಕವಾಗಿರುತದೆ.

ಈ ವಿಷಯದಲ್ಲಿ ಡೆಪ್ಯುಟಿ ಕಮಿಷನರುಗಳು ಮತ್ತು ಇತರ ದೊಡ್ಡ ಅಧಿಕಾರಿಗಳು ಜನಗಳಿಗೆ ಪ್ರತ್ಯಕ್ಷವಾಗಿ ಪ್ರೋತ್ಸಾಹ ಪಡಿಸಬೇಕು. ಹೆಚ್ಚು ಜನ ಸಂಖ್ಯೆಯುಳ್ಳ ಗ್ರಾಮಗಳ ರೈತರಿಗೆ ಇತರ ಗ್ರಾಮಗಳಿಗೆ ಹೋಗುವದರಿಂದುಂಟಾಗುವ ಪ್ರಯೋಜನಗಳನ್ನು ಹೃದಯಂಗಮವಾಗುವ ರೀತಿಯಲ್ಲಿ ತಿಳಿಸಿ, ಆರೀತಿ ಹೊರಡಲಿಕ್ಕೆ ಒಪ್ಪತಕ್ಕ ಬಡರೈತರಿಗೆ ತಕಾವಿ ಮೊದಲಾದ ಸಹಾಯಗಳನ್ನು ಮಾಡಿ ... ಶ್ಚಿಮಾತ್ಯರುಗಳಲ್ಲಿ ಉಪಯೋಗಿಸಲ್ಪಡುತಿರುವ ವ್ಯವಸಾಯಯಂತ್ರಗಳು ಮೊದಲಾದದ್ದನ್ನು ತರಿಸಿಕೊಟ್ಟು ಅವರೊಳು ಮಾಡುವ ವ್ಯವಸಾಯವನ್ನು ದೃಷ್ಟಿಯಿಟ್ಟು ನೋಡುತ ಈ ಅಭಿವೃದ್ಧಿರೀತಿಯಿಂದುಂಟಾಗುವ ಪ್ರಯೋಜನಗಳನ್ನು ಪ್ರಜೆಗಳಿಗೆ ಕಾರ್ಯದಲ್ಲಿ ತೋರ್ಪಡಿಸಿದಲ್ಲಿ ಇದರಿಂದ ಇತರರೂ ಅದೇರೀತಿಯನ್ನನುಸರಿಸಿದಲ್ಲಿ ದೇಶಾಭಿವೃದ್ಧಿಗೆ ಕಾರಣವಾಗುವದಲ್ಲದೆ ಈಗ ಪ್ರಜಾಶೂನ್ಯಗಳಾದ ಗ್ರಾಮಗಳು ಕ್ರಮೇಣ ಜನಭರಿತಗಳಾಗುವವು. ಮೈಸೂರು ಸರ್ಕಾರದಿಂದ ವಿದ್ಯಾರ್ಥಿ ವೇತನಗಳನ್ನು ಪಡೆದು ಮದರಾಸ್ ಅಗ್ರಿಕಲ್ಚರಲ್ ಕಾಲೇಜಿನಲ್ಲಿ ಓದಿ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ಬಂದು ಅಗ್ರಿಕಲ್ಚರಲ್ ಇನ್ಸ್‌ಪೆಕ್ಟರ್‌ಗಳಾಗಿರುವವರನ್ನು ಈ ಕೆಲಸದಲ್ಲಿಯು ಮುಖ್ಯವಾಗಿ ನೇಮಿಸಿ ಅವರು ಗಳ ಮೇಲೆ ಕ್ರಮವಾದ ಮೇಲ್ವಿಚಾರಣೆಯನ್ನು ಮಾಡುತ್ತಬಂದಲ್ಲಿ ಈ ವಿಷಯವು ನೆರವೇರಬಹುದಾಗಿ ತೋರುತಿದೆ.

ಈ ವಿಷಯವನ್ನು ನಮ್ಮ ಶ್ರೀಮನ್ಮಹಾರಾಜರವರ ಮತ್ತು ದಿವಾನರವರ ಅವಧಾನಕ್ಕೆ ತೋರಿಸುವವು.

## ಈ ದೇಶದ ವಿದ್ಯಾಭ್ಯಾಸವನ್ನು ಕುರಿತು.

ಈ ಭರತಖಂಡದಲ್ಲಿ ಬಹುಕಾಲದಿಂದಲೂ ನಡೆಯುತ್ತಿರುವ ವಿದ್ಯಾಭ್ಯಾಸಕ್ರಮವನ್ನು ಪರ್ಯಾಲೋಚಿಸಿದರೆ ಆಯಾ ಪ್ರಭುತ್ವ ಮತ್ತು ಪ್ರಜೆಗಳ ನಾಗರಿಕತೆಯನ್ನನುಸರಿಸಿ ನಡೆಯುತ್ತಿದ್ದಂತೆ ಎಣಿಸಬಹುದಾಗಿದೆ. ಆದರೆ ಪ್ರಭುತ್ವವೂ ನಾಗರಿಕತೆಯೂ ತತ್ತತ್ಕಾಲೋಚಿತ ವಿದ್ಯಾಭ್ಯಾಸಾನುಗುಣವಾಗಿ ಏರ್ಪಡುತ್ತೆಂದರೂ ಹೇಳಬಹುದು. ನಮ್ಮ ಭಾರತೀಯರು ಪೂರ್ವಕಾಲದಲ್ಲಿ ಸಂಪೂರ್ಣ ಶಾಸ್ತ್ರಾಭ್ಯಾಸ ಧುರಂಧರರಾಗಿದ್ದರಿಂದಲೇ ಮನು, ಯಾಜ್ಞವಲ್ಕ್ಯ, ಪರಾಶರಾದಿಗಳ ಧರ್ಮಶಾಸ್ತ್ರಗಳೂ, (ಆ) ವ್ಯಾಸಾದಿ ಮಹರ್ಷಿಗಳ ವೇದಾಂತಶಾಸ್ತ್ರ ಸೂತ್ರಗಳೂ, ಕಣಾದಾದಿ ನ್ಯಾಯಶಾಸ್ತ್ರಗಳೂ ಇನ್ನೂ ಅನೇಕ ವೈದ್ಯ, ಜ್ಯೋತಿಷ, ವ್ಯಾಕರಣ, ಯೋಗ, ಸಾಂಖ್ಯ, ಅಸ್ತ್ರ ಶಸ್ತ್ರಾದಿ ಕ್ರಮಬೋಧನಾ ಶಾಸ್ತ್ರಗಳೂ ಪ್ರಮಾಣಗಳಾಗಿವೆ.

ಈ ದಕ್ಷಿಣದೇಶದಲ್ಲಿಯೂ ಪಂಚದ್ರಾವಿಡಭಾಷೆಯ ಪುರಾತನ ಗ್ರಂಥಗಳನ್ನು ನೋಡಿದರೆ ಈ ಸಂಗತಿ ಗೊತ್ತಾಗುತ್ತದೆ. ಅದಕಾರಣ ಎಲ್ಲಾ ಕಾಲಗಳಲ್ಲಿಯೂ ವಿಶೇಷತಃ ಹಿಂದೂಗಳಲ್ಲಿ ಬ್ರಾಹ್ಮಣಾದಿ ಉತ್ತಮ ವರ್ಣದವರು ಮಾತ್ರವೇ ವಿಶೇಷ ವಿದ್ಯಾಭ್ಯಾಸವನ್ನು ಮಾಡುತ್ತಿದ್ದರೆಂದು ಅರಿಯಬೇಕಾಗಿರುತ್ತೆ. ಪರಂತು ಇತರರು ಅವರವರ ವ್ಯವಹಾರಗಳಿಗೆ ತಕ್ಕಷ್ಟುಮಟ್ಟಿಗಾದರೂ ವಿದ್ಯಾಭ್ಯಾಸ ಮಾಡುತ್ತಿರಲಿಲ್ಲವೆಂದು ಹೇಳಲಾಗುವದಿಲ್ಲ. ಬ್ರಾಹ್ಮಣೇತರರಾದ ಅನೇಕರು ಉತ್ತಮ ವಿಷಯಗಳನ್ನಡಗಿರುವ ಬಹುಗ್ರಂಥಗಳನ್ನು ರಚಿಸಿರುತ್ತಾರೆ. ಮುಖ್ಯವಾಗಿ ಇವುಗಳೆಲ್ಲವೂ ಪೂರ್ವಕಾಲದ ವಿದ್ಯಾಭ್ಯಾಸವನ್ನು ಜನಗಳು ಆಯಾ ಕಾಲದೇಶೋಚಿತ ಕ್ರಮಗಳನ್ನನುಸರಿಸಿ ಹೊಂದುತಲಿದ್ದ ನಾಗರಕತೆಯನ್ನು ತೋರ್ಪಡಿಸುತಲಿದೆ. ಈ ನಮ್ಮ ಮೈಸೂರು ದೇಶದಲ್ಲಿಯೂ ಮೇಲ್ಕಂಡಂತೆ ಪುರಾತನ ಪದ್ಧತಿಯನ್ನು ಅನುಸರಿಸಿದ ಬೇರೆ ಬೇರೆ ಕ್ರಮಗಳಿಂದ ವಿದ್ಯಾಭ್ಯಾಸವು ನಡೆಯುತ್ತಿದ್ದವೆಂಬದಕ್ಕೆ ಸಹ ಈ ದೇಶಸ್ಥರಾದ ಪೂರ್ವ ಕವಿಗಳಿಂದ ರಚಿತಗಳಾದ ಅನೇಕ ಗ್ರಂಥಗಳು ಸಾಕ್ಷಿಗಳಾಗಿವೆ. ಈ ದೇಶದಲ್ಲಿ ಸಂಸ್ಕೃತ ವಿದ್ಯಾಭ್ಯಾಸ ಪ್ರಾಚುರ್ಯವು ಪ್ರಕೃತಕಾಲಕ್ಕಿಂತ ಪೂರ್ವದಲ್ಲಿ ಕ್ರಮಕ್ರಮವಾಗಿ ಬಹುವಿಧ ಅಭಿವೃದ್ಧಿಗಳಿಂದ ಅತ್ಯುತ್ತಮಸ್ಥಿತಿಯೊಳು ಪ್ರಕಾಶಿಸುತಿತ್ತೆಂಬುವದು ಲೋಕಪ್ರಸಿದ್ಧವಿಷಯವಾಗಿರುತದೆ. ಅಭ್ಯಾಸಕ್ರಮದೊಳು ವೇದವಿದ್ಯೆಗೂ ಪ್ರಚುರದೊಳು ದೇಶಭಾಷಾ ವಿದ್ಯೆಯು ಸಹ ಇತೋಪ್ಯತಿಶಯಸ್ಥಿತಿಯೊಳತ್ತೆಂಬುವದಕ್ಕೆ ಯೇನೂ ಸಂದೇಹವಿಲ್ಲವು. ದೇಶಭಾಷಾ ಪಂಡಿತರನೇಕರು ತಮ್ಮುಗಳಿಂದ ರಚಿಸಲ್ಪಟ್ಟಿರುವ ಗ್ರಂಥಗಳಲ್ಲಿ ತಮಗೆ ತಿಳದಿದ್ದ ನೀತಿ ತಾತ್ಕಾಲಿಕ ಲೋಕಸ್ಥಿತಿ ಮೊದಲಾದವುಗಳ ಸಾರಾಂಶವನ್ನು ಜನಗಳಿಗೆ ಸುಲಭದಿಂದ ತಿಳಿಯಪಡಿಸಬೇಕೆಂಬ ಆಶಯಯುತರಾಗಿ ಸರ್ವಕಾಲದಲ್ಲಿಯೂ ಜನಗಳಿಂದ ಗಾಢರೂಪವಾಗಿ ವ್ಯವಹರಿಸಲ್ಪಡುವದಕ್ಕೆ ಯೋಗ್ಯಗಳಾಗಿಯೂ ಇರುವಂತೆ ಚರಕ, ಶತಕ, ಸಾಂಗತ್ಯ, ಗಾಧ ಮೊದಲಾದ ಚಿಕ್ಕ ಚಿಕ್ಕ ಗ್ರಂಥಗಳಿಂದ ಅನೇಕ ವಿಷಯಗಳನ್ನು ಬೋಧಿಸಿರುತ್ತಾರೆ. ಪೂರ್ವಕಾಲದೊಳು ಈಗಿರುವಂತೆ ಅನುಕೂಲ್ಯಗಳು ಇಲ್ಲದಿದ್ದದರಿಂದಲೂ ಈಚೆಗೆ ಮಹಮ್ಮದೀಯರ ಪ್ರಭುತ್ವದಲ್ಲಿ ಜನಗಳಿಗುಂಟಾದ ನಾನಾಬಗೆಯ ತೊಂದರೆಗಳಿಂದಲೂ, ಉಪದೇಶ್ಯ ಉಪದೇಶಕರುಗಳ ಪರಸ್ಪರ ಔದಾಸೀನ್ಯದಿಂದಲೂ, ಪೂರ್ವದೊಳು ಸಾರ್ವತ್ರಿಕ ಪ್ರಚುರವಾಗುತಿದ್ದ ವಿದ್ಯಾಭ್ಯಾಸವು ಬ್ರಾಹ್ಮಣರಲ್ಲಿ ಮಾತ್ರ ಅವಶೇಷವಾಗುತ ಬಂತಲ್ಲದೆ ಈ ಸರ್ಕಾರದ ಆಶ್ರಯ ... ಪಟ್ಟಣಗಳಲ್ಲಿಯೂ, ಗ್ರಾಮಗಳಲ್ಲಿಯೂ ಜನಗಳ ವಿದ್ಯಾಭ್ಯಾಸಕ್ಕಾಗಿ ಮಠಗಳನ್ನಿಟ್ಟುಕೊಂಡು ಜೀವಿಸುತಿದ್ದ ಪೂರ್ವದಕೆಲವರು ಉಪಾಧ್ಯಾಯರು, ಅಯ್ಯಗಳು, ಪೂಜಾರಿಗಳು ಸ್ವತಃ ಅವಿದ್ಯಾವಂತರಾಗದ್ದಾಗ್ಯೂ ತಮ್ಮ ಕರ್ತವ್ಯವನ್ನು ಪರಿಗಣಿಸದೆ ಅರ್ಥಜ್ಞಾನ ಶೂನ್ಯವಾದ ಮತ್ತು ಅಪದ್ಧಕರಗಳಾದ ಪಾಠಗಳನ್ನು ಕಲಿಸುತ ಬಂದದರಿಂದ ಹಾಗೆ ಕಲಿತವರು ಮತ್ತೊಬ್ಬರಿಗೆ ಕಲಿಸುವಾಗಮತ್ತಷ್ಟು ಅವಿವೇಕದಿಂ ಬೋಧಿಸುತ ಹಾಗೆಯೇ ಪರಂಪರೆಯಾ ದೇಶಭಾಷೆಗಳು ಕೆಲ ಪ್ರಭಾಗಗಳಲ್ಲಿ ಮಲಿನವಾಗುತಬರಲು ಕಾರಣವಾಯಿತೇ ಹೊರತು ವ್ಯವಹಾರಜ್ಞಾನವೂ, ಶಾಸ್ತ್ರಜ್ಞಾನವೂ ತತ್ವಜ್ಞಾನವೂ ಪ್ರಾಯೇಣ ಉತ್ತಮವರ್ಣದಲ್ಲಿ ಕಡಮೆಯಾಗುತಿರಲಿಲ್ಲವು. ಅತಏವ ರಾಜ್ಯಕಾರ್ಯಗಳೂ ನಾಗರಕತೆಯೂ ಸಾಧಾರಣವಾಗಿ ತತ್ತತ್ಕಾಲದೇಶೋಚಿತಗಳಾಗಿ ನ್ಯೂನಾಧಿಕಗಳನ್ನು ಹೊಂದುತಬಂದವು. ಆಂಗ್ಲೇಯ ಪ್ರಭುಗಳ ಆಳ್ವಿಕೆಗೆ ಈ ದೇಶವು ಒಳಪಟ್ಟನಂತರ ಪ್ರಜೆಗಳ ಸ್ವಾತಂತ್ರ್ಯವು ಅಭಿವೃದ್ಧಿಯಾಗುತಬಂದದರಿಂದ ವಿದ್ಯಾಭ್ಯಾಸವಂ ಸರ್ಕಾರದವರು ಕ್ರಮಶೋಧನಾ ಪದ್ಧತಿಗಳ ಗೊಳಪಡಿಸಿ ಈಗಿನ ಪ್ರಭುತ್ವಕ್ರಮಗಳಿಗೆ ಯೋಗ್ಯರಲ್ಲದ ಅನೇಕರನ್ನು ಸರ್ವಸಮತಾಬುದ್ಧಿಯಿಂದ ವಿದ್ಯಾವಂತರನ್ನಾಗಿಮಾಡಿಸಿ ರಾಜ್ಯದಲ್ಲಿ ಒಳ್ಳೇ ಕ್ರಮಗಳನ್ನು ನೆಲಗೊಳಿಸುತಬರುವದರಿಂದ ಬ್ರಿಟಿಷ್ ಆಳ್ವಿಕೆಯ ವಿಷಯದಲ್ಲಿ ಇಲ್ಲಿನ ಪ್ರಜೆಗಳೆಲ್ಲರು ವಿವೇಕದೊಡನೆ ಸ್ವಾಮಿಭಕ್ತಿ ಕೃತಜ್ಞತೆಗಳನ್ನು ತೋರ್ಪಡಿಸುತ ನಿಮಿಸುತಲಿರುತ್ತಾರೆ. ವಿದ್ಯಾಭ್ಯಾಸಕ್ರಮೋತ್ಕರ್ಷ ಆಂಗ್ಲೇಯ ಪ್ರಭುಗಳು ಇಷ್ಟುಮಾತ್ರವಲ್ಲದೆ ಪ್ರಥಮತಃ ಸುಶಿಕ್ಷಿತರಾದ ವಿದ್ಯಾವಂತರುಗಳಮೂಲಕ ವಿದೇಶಪದ್ಧತಿಯನ್ನನುಸರಿಸಿ ಅದು ತಮ್ಮ ರಾಜ್ಯದ ಪ್ರಸಿದ್ಧ ಸ್ಥಳಗಳಲ್ಲಿ ಸರ್ವೋತ್ತಮವಾಗಿ ನಡೆಯಬೇಕೆಂಬ ಅಭಿನಿವೇಶದೊಡನೆ ಸ್ಥಾಪಿಸಲ್ಪಟ್ಟ ಪಾಠಶಾಲೆಗಳೊಳು ಅನೇಕರನ್ನು ವಿದ್ಯಾವಂತರನ್ನಾಗಿ ಮಾಡಿದರು. ಇದಲ್ಲದೆ ಇದಕ್ಕಾಗಿ ಲೋಕಮಯಕ್ಕಿರುವಂತೆ ಈ ದೇಶದಲ್ಲಿಯೂ ಮುಖ್ಯ ರಾಜಧಾನಿಗಳಾದ, ಅಂದರೆ ಮದರಾಸ್, ಕಲ್ಕತ್ತಾ, ಮುಂಬೈ ಈ ಸ್ಥಳಗಳಲ್ಲಿ ಯೂನಿವರ್ಸಿಟಿ ಯೆಂಬ ಸರ್ವಕಲಾ ಪರೀಕ್ಷಾ ಸಂಘಗಳನ್ನು ಯೇರ್ಪಡಿಸಿರುತ್ತಾರೆ.

ಈ ಮೇಲ್ಕಂಡ ಕ್ರಮಗಳನ್ನನುಸರಿಸಿ ನಮ್ಮ ಮೈಸೂರು ಸರ್ಕಾರದವರು ಸಹ ಈ ದೇಶದಲ್ಲಿನ ಪ್ರಜೆಗಳ ಅಭಿವೃದ್ಧಿಗಾಗಿ ಕ್ರಮಬೋಧನಾ ಪದ್ಧತಿಗಳನ್ನು ಯೇರ್ಪಡಿಸಿ ಇವುಗಳ ರೀತ್ಯಾ ಶಾಸನ ಪ್ರಚನೆಗಳು ನಡಿಯುವಂತಾ ಪಾಠಶಾಲೆಗಳನ್ನು ಸ್ಥಾಪಿಸಿರುತ್ತಾರೆ. ಇವುಗಳಲ್ಲಿನ ವಿದ್ಯಾಭ್ಯಾಸ ಕ್ರಮಗಳು ಈ ಇಲಾಖಾ ಮುಖ್ಯಾಧಿಕಾರಿಗಳಾದವರ ಪಾಂಡಿತ್ಯವನ್ನೂ ಅವರಿಗಿರುವ ಪ್ರಭುವಾಲಭ್ಯವನ್ನೂ ಸರ್ಕಾರದ ಸಹಾಯವನ್ನು ಅನುಸರಿಸಿದ್ದಾಗಿಯೂ, ಆಯಾ ಕಾಲದ ಪ್ರಜೆಗಳ ಮತ್ತು ರಾಜ್ಯಸ್ಥಿತಿಗೆ ತಕ್ಕದ್ದಾಗಿಯೂ, ಅಭಿವೃದ್ಧಿಯಾಗುತ್ತಿವೆ. ಈ ದೇಶದೊಳು ಇಂತಾ ಯೇರ್ಪಾಟಿಗೆ ಮೊದಲು ಸಾಧಾರಣ ಬಾಲ್ಯ ವಿದ್ಯಾಭ್ಯಾಸ ಕ್ರಮದಲ್ಲಿ ರವಷೆ, ಪ್ರೊಟಮಗ್ಗಿ, ಧೂಳಗಣಿತ, ಪ್ರೋಲಿ, ಯಕ್ಷದಹಾಳೆ, ಕಡಿತ, ಮರದಹಲಿಗೆ, ಇವುಗಳ ಮೇಲಿನ ಬರವಣಿಗೆಗಳು ರೂಢಿಯಾಗಿ ಇದ್ದದ್ದು ಏನಕ್ರಮೇಣ ನಿವರ್ತಿಸಲ್ಪಟ್ಟು ಸ್ಲೇಟುಗಳೂ ನಾನಾವಿಧ ಕಾಗದಗಳೂ, ಕಬ್ಬಿಣದ ಲೇಖಿಣಿಗಳೂ, ಪೆನ್ಸಿಲ್ ಮೊದಲಾದವುಗಳು ಶಲಿಮೋರುತ ಜನಗಳಿಗೆ ಬಹುವಿಧ ಅನುಕೂಲ್ಯಗಳನ್ನುಂಟುಮಾಡುತ್ತಲಿವೆ. ಇಂತಾ ಯೋಗ್ಯಗಳಾದ ಅನುಕೂಲ್ಯಗಳಿಂದ ದೇಶವು ನಾಗರಕತೆಗೆ ಬರಲು ಪ್ರಾರಂಭಿಸಿದಾಗ ನಮ್ಮ ಸೀಮೆಯ ವಿದ್ಯಾಭ್ಯಾಸ ವಿಚಾರಣಾಧಿಕಾರಿಗಳಾಗಿ ಮಿಸ್ಟರ್ ಗ್ಯಾರೆಟ್ ಸಾಹೆಬರವರು ದಯಮಾಡಿಸಿದರು. ಇವರ ಕಾಲದೊಳು ದೇಶಭಾಷೆಗಾಗಿ ಪಾಠಶಾಲೆಗಳು ತಾಲ್ಲೂಕ್ ಸ್ಥಳಗಳಲ್ಲಿ ಯೇರ್ಪಡಿಸಲ್ಪಟ್ಟವು. ಈ ವಿದ್ಯಾಶಾಲೆಗಳಲ್ಲಿ ಅಗ್ರೇ ಪಂಡಿತರಾಗಿದ್ದವರೇ ಆರಿಸಲ್ಪಟ್ಟು ನಿಯಮಿಸಲ್ಪಟ್ಟರಲ್ಲದೇ ವಿದ್ಯಾಭಿರುಚಿಯು ಜನಗಳಲ್ಲಿ ಅಂಕುರಿಸುವಂತೆ ಮಾಡುವದೇ ಅವರ ಮುಖ್ಯ ಕೆಲಸವಾಗುತಿತ್ತು. ಅನಂತರ ಚೀಫ್ ಇನ್ಸ್‌ಪೆಕ್ಟರಾಗಿದ್ದ ಮಿಸ್ಟರ್ ರೈಸ್ ಸಾಹೆಬರವರು ಡೈರೆಕ್ಟರ್ ಪದವಿಗೆ ಬಂದಾಗ ತಮ್ಮ ಅನುಭವದೊಳು ಚೆನ್ನಾಗಿ ತಿಳದಿದ್ದ ಅಜ್ಞಾನದ ಗ್ರಾಮ್ಯರನ್ನು ತಿದ್ದಬೇಕು ಮಾತಲು, ಹೋಬಳಿಗಳಲ್ಲಿಯೂ ಗ್ರಾಮಗಳಲ್ಲಿಯೂ ಪಾಠಶಾಲೆಗಳನ್ನು ಸ್ಥಾಪಿಸಿದರು. ಪರಂತು ಗ್ರಾಮನಿವಾಸಿಗಳು ವಿದ್ಯಾಭ್ಯಾಸದಿಂದುಂಟಾಗುವ ಪ್ರಯೋಜನವನ್ನು ಲೇಶವೂ ಯೆಣಿಸದೆ ಉಪಾಧ್ಯನನ್ನೂ, ಪಾಠಶಾಲೆಯನ್ನೂ, ಕೇವಲ ಉದಾಸೀನದಿಂದ ಕಾಣುತ ಬಂದಹಿಂದಲೂ, ಆ ಗ್ರಾಮಗಳಿಗೆ ವಿದ್ಯಾವಂತರು ಉಪಾಧ್ಯಾಯರಾಗಿ ಹೋಗಲು ಇಷ್ಟಪಡದೇಲೂ, ವೊಂದು ವೇಳೆ ಇಷ್ಟಪಡತಕ್ಕವರು ಅಲ್ಪವೇತನಕ್ಕೆ ವೊಪ್ಪದೇಲೂ ಹೊದ್ದರಿಂದ ಸಾಮಾನ್ಯ ವಿದ್ಯಾವಂತರಾಗಿಯೂ ಯೋಗ್ಯರಾಗಿಯೂ ಇರತಕ್ಕವರು ನೇಮಿಸಲ್ಪಟ್ಟಿರಬಹುದೆಂದು ತೋರುತ್ತೆ. ಮಿಸ್ಟರ್ ರೈಸ್ ಸಾಹೆಬರವರು ಸ್ವತಃ ವಿದ್ಯಾಭಿಮಾನಿಗಳಾಗಿಯೂ ಪ್ರೋತ್ಸಾಹಕರಾಗಿಯೂ, ಬಹು ಶಾಂತರಾಗಿಯೂ ಗವರ್ನಮೆಂಟಿನವರು ಇದಕ್ಕಾಗಿ ಕೊಡುತಲಿದ್ದ ದ್ರವ್ಯವನ್ನೇ ಮಿತವಾಗಿ ವಿನಿಯೋಗಿಸುತ ಅಧಿಕ ಪ್ರಯೋಜನವನ್ನು ಉಂಟುಮಾಡಬೇಕೆಂಬ ಇರಾದೆಯುಳ್ಳವರಾಗಿಯೂ ಇದ್ದದರಿಂದ ಇವರ ಕಾಲದಲ್ಲಿ ಮೊದಲು ಇದ್ದ ಅನೇಕ ತೊಂದರೆಗಳು ನಿವರ್ತಿಸಲ್ಪಟ್ಟು ಜನಗಳಿಗೆ ಹೆಚ್ಚಾಗಿ ವಿದ್ಯಾಭಿರುಚಿಯು ಉಂಟಾದುದರಿಂದ ಈ ಸೀಮೆಯಲ್ಲಿ ಅನೇಕ ಪಾಠಶಾಲೆಗಳು ವಿದ್ಯಾರ್ಥಿಗಳು ಹೆಚ್ಚಿ ವಿದ್ಯಾಭ್ಯಾಸ ಕ್ರಮವು ಸಹ ಪ್ರಶಂಸನೀಯ ಸ್ಥಿತಿಗೆ ತರಲ್ಪಟ್ಟವು. ಇದಲ್ಲದೆ ಇವರ ಕಾಲದೊಳು ಜನಗಳಿಗೆ ಅಭೂತಪೂರ್ವಕವಾಗಿದ್ದ "ಕರ್ಣಾಟಕ ಭಾಷಾ ಲೋಯರ್ ಎಗ್ಜಾಮಿನೇಷನ್" ಎಂಬ ಪರೀಕ್ಷಾ ಕ್ರಮವು ಏರ್ಪಡಾಯಿತು. ಈಚೆಗೆ ಮಿಸ್ಟರ್ ಪಿ. ಬಿ. ಭಾ. ಭಾ. ಎಂ. ಏ. ಯವರು ವಿದ್ಯಾಭ್ಯಾಸದ ಇಲಾಖಾ ಸೆಕ್ರೆಟರಿಗಳಾಗಿ ದಯಮಾಡಿಸಿ ಇರುತ್ತಾರೆ. ಇವರ ಘನತೆಯೂ, ಶಕ್ತಿಯೂ, ಕೌಶಲ್ಯವೂ ಅಮೋಘವಾದದ್ದೆಂದು ನಾವು ಹೇಳಬೇಕಾದ್ದಿಲ್ಲವು. ಶ್ಲಾಘ್ಯವಾದ ಇವರ ವೈದುಷ್ಯಕ್ಕೂ ಬುದ್ಧಿಕೌಶಲ್ಯಕ್ಕೂ ಸತ್ಪಾತ್ರವಾದ ಈ ವಿದ್ಯಾಭ್ಯಾಸದ ಇಲಾಖೆಯು ದೊರತದ್ದು ಬಹು ಯುಕ್ತವಲ್ಲದೆ ಪ್ರಜೆಗಳ ಪುಣ್ಯೋದಯವೆಂದು ಸಹಾ ಹೇಳಬಹುದು. ಈ ದೊಡ್ಡಮನುಷ್ಯರು ಈ ಅಧಿಕಾರದ ಚಾರ್ಜ್ ಅಂಗೀಕರಿಸಿದ ನಂತರ ಈ ದೇಶದ ವಿದ್ಯಾಭಿವೃದ್ಧಿ ವಿಷಯಕವಾಗಿ ಸರ್ವಸಮ್ಮತವಾದ ಅನೇಕ ಹೊಸ ಯೇರ್ಪಾಡುಗಳನ್ನು ಸ್ವಾನುಭವದಿಂದ ಯೋಚಿಸಿ ಅನ್ಯರುಗಳೆಲ್ಲರನ್ನು ಅನುಭವಶಾಲಿಗಳಾದ ದೊಡ್ಡ ಮನುಷ್ಯರೊಡನೆಯೂ, ಗ್ರಾಜ್ಯುಯೇಟ್ಸ್ ಎ ಬಿ ಪಂಡಿತರುಗಳೊಡನೆಯೂ ಆಲೋಚಿಸಿ ಸರ್ವಾಂಗೀಕಾರಾನಂತರ ಜಾರಿಯೊಳು ತರುವ ಪದ್ಧತಿಯನ್ನು ಯೇರ್ಪಡಿಸಿರುತ್ತಾರೆ. ಇಂತಾ ಹೊಸ ನಿಬಂಧನೆಗಳು ನಿರಾಟಂಕವಾಗಿ ಜಾರೀಯಲ್ಲಿ ಬರುವದು ಬಹಳ ಅನುಕೂಲವಲ್ಲವೇ? ಈಗ ಪ್ರತಿಯೊಂದು ಪಾಠಶಾಲೆಯಲ್ಲಿಯೂ, ಉಪಾಧ್ಯ ಮತ್ತು ಶಿಷ್ಯರು ಅನುಸರಿಸಿ ನಡಿಯಬೇಕಾದ ನಿಬಂಧನೆಗಳು ಪಾಠಕ್ರಮಗಳು ಬುದ್ಧಿ ಸಂಸ್ಕಾರೈಕಲಭ್ಯವಾಗಬಹುದಾದ ವಿದ್ಯಾಭ್ಯಾಸ ರೀತಿಯು ಸಹ ಬಹು ಸುಲಭ ಪಡಿಸಲ್ಪಟ್ಟು ಶೋಭಿಸುತಿವೆ. ಪಾಠಶಾಲೆಗಳ ಪರಸ್ಪರ ಕಲಹಗಳು ತಪ್ಪುವಂತೆ ಕೆಲವು ಹೊಸನಿಯಮಗಳನ್ನು ಮಿ|| ಭಾ ಭಾಯವರು ಈಚೆಗೆ ಬಹು ಯೋಗ್ಯವಾದರೀತಿಯೊಳು ಪ್ರಚುರಪಡಿಸಿರುತ್ತಾರೆ. ಆದಾಗ್ಯೂ ಅವುಗಳಲ್ಲಿ ಇನ್ನೂ ಬಹುವಿಧ ತೊಂದರೆಗಳಿಂದ ಪರಸ್ಪರ ಅವಿವೇಕಗಳುಂಟಾಗಿ ವೊಂದು ಸ್ಥಳದಲ್ಲಿರುವ ಅನೇಕ ಪಾಠಶಾಲೆಗಳು ಬಹು ಹೀನ ಸ್ಥಿತಿಗೆ ಬರಲು ಇರುವ ಅವಕಾಶಗಳು ಈಗಿನ ಏರ್ಪಾಡುಗಳಿಂದ ನಿವರ್ತಿಯಾಗುವಂತೆ ತೋರುವದಿಲ್ಲವು. ಆದರೆ ಅದೂ ಸಹ ಕ್ರಮೇಣ ಬದಲಾಯಿಸಲ್ಪಡಬಹುದೆಂದು ತೋರುತ್ತೆ. ಪಾಠಪುಸ್ತಕಗಳು ಯೋಗ್ಯರಾದ ಪಂಡಿತರಿಂದ ಹೊಸ ಹೊಸದಾಗಿ ಬರೆಯಲ್ಪಡಲು ಯೇರ್ಪಾಡಾಗಿರುತ್ತೆ. ಇಂತಾ ಸರ್ವೋತ್ಕೃಷ್ಟವಾದ ಯೇರ್ಪಾಡುಗಳಿಗೋಸ್ಕರ ಮಿ|| ಭಾ ಭಾ ಯವರು ಅನವರತವೂ ಬುದ್ಧಿಶ್ರಮವನ್ನು ತೆಗದುಕೊಳ್ಳುತ್ತಾ ಇರುತ್ತಾರೆ ಯಲ್ಲದೆ, ಇಂಗ್ಲಿಷ್ ಭಾಷೆಯಲ್ಲಿರುವ ಉತ್ತಮವಾದ ಸೈನ್ಸ್ ಯಾನೆ ಶಾಸ್ತ್ರ ಪುಸ್ತಕಗಳನ್ನು ಕೂಡಾ ಭಾಷಾಂತರ ಮಾಡಿಸಿ ಎಂದಿಗೂ ಈ ಶಾಸ್ತ್ರಕ್ರಮವೇ ತಿಳಿಯದವರಿಗೂ ಕೂಡಾ ಸುಬೋಧವಾಗುವಂತೆ ಏರ್ಪಡಿಸುತ್ತಲಿರುವಂತೆ ತಿಳಿಯಬರುತ್ತೆ.

### Occasional Notes.
### ನೈಮಿತ್ತಿಕ ವಿಷಯನ್ಯಾಸ.

ಮದರಾಸ್ ಸಮೀಪದಲ್ಲಿರುವ ತಿರುವಳ್ಳೂರು ಸ್ಟೇಷನ್ ಬಡಾಯಿಸತಕ್ಕ ಬಗ್ಗೆ ೯೦೦೦೦ ರೂಪಾಯಿಗಳು ಇಂಡ್ಯ ಗವರ್ನಮೆಂಟಿನವರಿಂದ ಸ್ಯಾಂಕ್ಷನ್ ಆಗಿರುತ್ತೆ.

ಈಗ್ಗೆ ಕೆಲವು ದಿವಸಗಳ ಹಿಂದೆ ಹೈದರಾಬಾದ್ ನಿಜಾಮರವರ ಹಾಸ ಖಜಾನೆಯಿಂದ ೧೧೦೦೦ ರೂಪಾಯಿ ಜವಾಹಿರಿಗಳು ಕಳವಾದ ಹಾಗೂ, ಅವುಗಳ ಪೈಕಿ ಕೆಲವು ಪತ್ತೆಯಾಗಿ ಆ ಸಂದರ್ಭದಲ್ಲಿ ಗುಮಾನಿಗೆ ವಿಷಯರಾದ ೪ ಜನಗಳನ್ನ ದಸ್ತಗಿರಿ ಸಹಾ ಮಾಡಿರುವದಾಗಿ ತಿಳಿಯಬರುತ್ತೆ.

ಮಹಾರಾಜಾ ಗಾಯಕವಾಡ ಸರಕಾರ ತಮ್ಮ ಸಂಸ್ಥಾನದ ಕಾರ್ಯವನ್ನು ಬಿಟ್ಟು ಆಗಾಗ್ಗೆ ವಿಲಾಯತಿಗೆ ಹೋಗಿ ಬರುತಲಿರುವದು, ಮಹಾರಾಜ್ಞೀ ಸರ್ಕಾರದವರಿಗೆ ಇಷ್ಟವಿಲ್ಲವೆಂಬ ಸೂಚನೆಯನ್ನು, ಸ್ಟೇಟ್ ಸೆಕ್ರೆಟರಿಯವರು ಮಹಾರಾಜರವರಿಗೆ ತಿಳಿಸಿದ್ದಾಗಿ ಇಂಡಿಯನ್ ಮಿರ್ರರ್ ಪತ್ರಿಕೆ ತಿಳಿಸುತದೆ.

ಬೊಬ್ಬಿಲಿ ಜಮೀನ್‌ದಾರ್ ಮಹಾರಾಜ್ಞಿಯವರ ಭೇಟಿಗಾಗಿ ವಿಲಾಯತಿಗೆ ಹೊರಟವರು ಕಳೆದ ತಿಂಗಳು ೧೭ನೇ ತಾರೀಖಿನಲ್ಲಿ ಫ್ರೆಂಚ್‌ದೇಶದ ಮಾರ್ಸೇಲ್ಸ್ ಯೆಂಬ ಪಟ್ಟಣ ಸೇರಿದಹಾಗೂ ಅಲ್ಲಿ ಮಹಾರಾಜ್ಞಿಯವರ ಪರವಾಗಿ ಕರ್ನಲ್ ಹಂಫ್ರೆಯವರು ಅವರನ್ನು ಉಚಿತಮರ್ಯಾದೆಯೊಡನೆ ಬರಮಾಡಿಕೊಂಡರೆಂತಲೂ ತಿಳಿಯ ಬರುತ್ತೆ.

ಭಾವನಗರದ ಮಹಾರಾಜರವರು ಈಗ ವಿಲಾಯತಿಯಲ್ಲಿರುತ್ತಾರೆ ಯಷ್ಟೆ. ಅಲ್ಲಿ ಲೋಕಪ್ರಸಿದ್ಧವಾದ ಕೇಂಬ್ರಿಡ್ಜ್ ಯೆಂಬ ಶಾರದಾನಿಲಯದ ಪಂಡಿತ ಮಂಡಲಿಯವರು ಸದರಿ ಮಹಾರಾಜರವರ ಪಾಂಡಿತ್ಯದ ಪ್ರಶಸ್ತಿ ದ್ಯೋತಕಾರ್ಥವಾಗಿ ಯಲ್. ಯಲ್. ಡಿ. ಯೆಂಬ ಬಿರುದನ್ನು ಅವರಿಗೆ ಅರ್ಪಿಸಲು ನಿಶ್ಚಯಿಸಿರುವದಾಗಿ ತಿಳಿಯಬರುತ್ತೆ.

ವೊಂದು ರಿಜಿಮೆಂಟಿಗೆ ಸೇರಿದ ಒಬ್ಬ ಸಿಪಾಯಿಯು ಗೈರುಹಾಜರಾಗಿ ಹೋಗಿರುವ ಕಾಲದಲ್ಲಿ ಅವನು ಕೊಡಬೇಕಾಗಿದ್ದ ಸಾಲದ ಹಣಕ್ಕಾಗಿ ಮತ್ತೊಬ್ಬ ಡಿಕ್ರಿಪಡದು ಸದರೀ ಸಿಪಾಯಿಯನ್ನು ವಾರಂಟಿನಿಂದ ಹಿಡಿಸಿದ ವಿಷಯ ಗವರ್ನಮೆಂಟಿನವರಿಗೂ ತಿಳದು ಮುಂದಕ್ಕೆ ಬ್ರಿಟಿಷ್ ರಿಜಿಮೆಂಟಿಗೆ ಸೇರಿದ ಸಿಪಾಯಿಗಳನ್ನು ಸಾಲಕ್ಕಾಗಿ ವಾರಂಟು ಮೂಲಕ ಹಿಡಿಯುವದಕ್ಕೆ ಯಾವ ಸಿವಿಲ್ ರೆವಿನ್ಯೂಕೋರ್ಟುಗಳಿಗೂ ಅಧಿಕಾರವಿರುವದಿಲ್ಲವೆಂದು ತೀರ್ಮಾನವಾಗಿರುತ್ತೆ.

ಜಗನ್ನಾಥ ದೇಶದ ಯಂಕೋಯೋಮಾ ಯೆಂಬ ಪಟ್ಟಣಕ್ಕೆ ಏಳು ಮೈಲಿ ದೂರದಲ್ಲಿರುವ ಕಾಮಕುರಾ ಯೆಂಬ ದೇವಸ್ಥಾನದಲ್ಲಿ ವೊಂದು ಪಂಚಲೋಹದ ಬುದ್ಧ ವಿಗ್ರಹವಿರುತ್ತೆ. ಇದು ಈಗ್ಗೆ ೧೧೪೪ ವರುಷಗಳ ಹಿಂದೆ ಆ ದೇಶದ ಚಕ್ರವರ್ತಿಯಾಗಿದ್ದ ಸೋಮನೆಬುತನಿಂದ ಮಾಡಿಸಿ ಇಡಿಸಲ್ಪಟ್ಟದ್ದು. ಆ ವಿಗ್ರಹದ ಆಕೃತಿ ಸೊಬಗಾಗಿದ್ದು ಪವಿತ್ರವಿರುವದನ್ನು ನೋಡಿದಾಗ ಅದಕ್ಕೆ ಸಮಾನವಾದ ವಿಗ್ರಹವು ಪ್ರಪಂಚದಲ್ಲಿನ್ನೆಲ್ಲೂ ಇರಲಾರದಾಗಿ ಕಾಣುತ್ತೆ.

... ವಿಗ್ರಹ ಕೂತುಕೊಂಡಿರುವ ಕಮಲದ ... ದ ಅಡಿಯಿಂದ ವಿಗ್ರಹದ ತಲೆಯವರೆಗೆ ೬೩ ... ಯತ್ತರ ವಿರುವದಲ್ಲದೆ ಅದರಮೇಲೆ ೩೪ ... ಗಳಯತ್ತರ ದೊಡ್ಡ ಯಶೋಸ್ತಂಭಗಳ ... ವು ೧೬ ಅಡಿ ಗ್ರಹಸ್ತಂಭ ೪ ಅಡಿ ... ಲವಾಗಿರುತ್ತೆ. ಪ್ರಾದೇಶದ ಕಣ್ಣು ೩ ಅಡಿ ... ವಿದೆಯಲ್ಲದೆ ಹುಬ್ಬು ೪ ಅಡಿ ಉದ್ದವಿ ... ಕಿವಿಗಳು ಪ್ರತಿಯೊಂದು ೪ ಅಡಿ ... ವಿದೆ ಭುಜಗಳ ಮಧ್ಯದ ... ಅಗಲವಿರುವದಲ್ಲದೆ ಸ್ತನಗಳ ಮಧ್ಯದ ... ಅಡಿ ಉದ್ದವಿದೆ. ಈ ವಿಗ್ರಹದ ಕಾಲುಗಳ ... ರುವ ಕಮಲ ಪುಷ್ಪದಲ್ಲಿ ... ದಳಗಳಿದ್ದು ... ಪ್ರತಿಯೊಂದು ದಳವು ೧೦ ಅಡಿ ಉದ್ದ ... ಅಡಿ ಅಗಲವಿರುತ್ತೆ.

ಈ ವಿಗ್ರಹದ ... ಪಾಣಕ್ಕೆ ... ವಿರುವ ... ದ ಇದನ್ನು ಮಾಡುವದಕ್ಕೆ ತಗಲಿದ ಲೋಹದ ತೂಕಗಳೆಷ್ಟೆಂದರೆ,—೩೧ ಮಣ ಬಂಗಾರ, ೭೦೦ ಮಣ ತಗಡು, ೪೦ ಮಣ ಸೀಸವು, ೬೧೦೪೭ ಮಣ ತಾಮ್ರ ಇವನ್ನೆಲ್ಲಾ ವಿಗ್ರಹಕ್ಕೆ ಉಪಯೋಗ ಮಾಡಿರುತ್ತೆ.

## LOCAL AND PROVINCIAL NEWS

### ಸ್ಥಳದೇಶ ಮತ್ತು ಪ್ರಾಂತ್ಯ ವರ್ತಮಾನಗಳು

ಘನವನ್ನು ಹೊಂದಿದ ... ಯುವರಾಜ ... ನ ... ಸನ್ನಿಧಾನ ... ಆಗಿ ... ಎಂಬ ಬಿರುದನ್ನು ... ನಮ್ಮದೇಶದ ... ಕೊಡುತ್ತೇವೆ.

ಮಹತ್ವರ ... ಮಿಲ್ಲಿನ ... ವರಲ್ಲಿ ... ಯವರ ... ಶ್ವರ ... ವರನ್ನೆಲ್ಲ ... ೭ ೧೦೦ ... ಕೊಟ್ಟಿರುತ್ತಾರೆ ಕೇಳುತ್ತೇವೆ.

ಈ ನ್ಯಾಯ ಹೊಸ ತರಗುದೇಟಿಯಲ್ಲಿ ... ಬಂಗಳೂರು ... ಪ್ಪನಾಯಿ ... ನ್ನು ... ಕೇಳುತ್ತೇವೆ.

ಈ ತಿಂಗಳ ... ರದ ... ಅವ ... ಕೊಳ್ಳಬೇಕೆಂಬ ... ಅವರನ್ನು ... ವಿಧಿಸಿರುತ್ತಾರೆ.

ದೇವನಹಳ್ಳಿ ... ೪ ವರುಷದ ... ಭೂಮಿಯನ್ನು ... ವಡಿಸಿ ... ಸಿದ ... ಜಿಸ್ಟ್ರೇಟರವರಿಂದ ೩ ವರುಷಗಳ ... ವಿಧಿಸಲ್ಪಟ್ಟಿರುತ್ತಾನೆ.

ಮೂರ್ವಾಡಿಯವರ ಗುರುಗಳಾದ ದೇವಕ ಸೂರ್ಯಜೀ ಮಹಾರಾಜ್ ಎಂಬುವರು ಕಳೆದ ೬ನೇ ತಾರೀಖು ಮಂಗಳವಾರ ... ಈ ಊರಿಗೆ ದೈವಾನುಗ್ರಹವಾಗಿಬರಲು ಸ್ಟೇಷನ್ನಲ್ಲಿ ಅವರ ಶಿಷ್ಯರುಗಳಾದ ಅನೇಕಜನ ಮಾರ್ವಾಡಿ ಶೆಟ್ಟಿ ಮನುಷ್ಯರು ... ಉಚಿತ ... ಯೊಡನೆ ಅವರು ಬರಮಾಡಿಕೊಂಡರು.

ಜೈನಾಥನ ... ಕೆಲವು ದಿವಸಗ ಳಿಂದ ... ಈ ... ಶ್ವರಪ್ಪ ಕಳೆದ ಶುಕ್ರವಾರ ... ತಾರೀಖಿನ ದಿನ ದೈವಾನುಗ್ರಹವಾಗಿ ತಮ್ಮ ಸಂಸ್ಥಾನಕ್ಕೆ ಹೊರಟುಹೋದರು. ಇವರು ನಾಗರಿಕರುಗಳು

ಸುಖವಕ್ಕಾಗಿ ಇಲ್ಲಿನ ... ಅಧಿಕಾರಿಗಳು ಸಿರ್ಕಾರ್ ... ವರೆಲ್ಲರೂ ಸ್ಟೇಷನಿಗೆ ಹೋಗಿದ್ದರು.

ತುಮಕೂರು ... ದವುಗಳನ್ನು ... ಜಿಲ್ಲಾ ... ಗೆ ... ಕಳುಹಿಸುತ್ತಿದ್ದದ್ದು ... ಹೀಗೆ ... ಸಲ್ಪಡುವ ... ದವರಿಗೆ ... ವೃಗಳನ್ನು ... ಲ್ಲೇ ... ತ್ತೇವೆ.

ಮೈಸೂರು ... ಬಳಿಗೋಳಿಂದ ಈ ... ನೀರನ್ನು ... ರೂಪಾಯಿಗಳ ... ನದಿಯಿಂದ ... ಸರಿಗೆ ಬೇಕಾದ ... ನೀರು ಸರಬರಾಯಿ ... ಪತ್ರಿಕೆ ... ಈ ... ವರು ... ಕೇವಲ ... ಪಾಡದಿರುವದು ಬಹಳ ... ರುತ್ತೆ.

ಕಳೆದ ತಿಂಗಳ ೩೧ ನೇ ತಾರೀಖು ... ಡಿಸ್ಟ್ರಿಕ್ಟ್ ... ಬೋರ್ಡ ... ಕ್ಕೆ ... ವಿಷಯ ... ದಲ್ಲಿ ... ತಾರೀಖು ... ದರ್ಶನ ... ಪತ್ರಿಕೆಯಲ್ಲಿ ... ಸಿದ್ದೇವೆ.

ಈ ... ಪ್ರೊಸೀಡಿಂಗ್ಸ ... ಕಳುಹಿಸಲು ... ಗಳಿಗೆ ... ಬೋರ್ಡಿನ ... ಪ್ರೊಸೀಡಿಂಗ್ಸು ... ಮುಂದಕ್ಕೆ ... ನಿರ್ಧಾರವಾಗಿ ... ಬರವೇಕೆಂದು ... ತಿಳಿಯಬರುತ್ತೆ.

ಎಗ್ಜಿಕ್ಯೂಟಿವ್ ... ಈಚೆಗೆ ... ಮೈಸೂರು ... ತಾಲ್ಲೂಕ ... ಪ್ರಕೃತಿ ... ಆರೋಗ್ಯ ... ಕೇವಲ ... ಮಹಾರಾಜರವರು ... ಯ್ಯಂಗಾರ್ ಬಿ. ಎ. ರಂಗಣ್ಣ, ಎಂ. ಎ. ... ಮತ್ತು ನೀಲಕಂಠರಾಯರುಗಳಿಗೆ, ... ದೃಷ್ಟಿಗೋಚರವಾಗುವದಕ್ಕಾಗಿ ಈ ದಿನ ಈ ಊರಿನ ಗವರ್ನಮೆಂಟ್ ಕನ್ನಡ ಸ್ಕೂಲಿನಲ್ಲಿ, ಮಾಸ್ತರುಗಳೆಲ್ಲರೂ ಸಭೆ ಸೇರಿದರು. ... ಉಪಾಧ್ಯಾಯರ ... ಕಟೇಶಯ್ಯಂಗಾರ್ರು, ಅನಿವಾರ್ಯ ನಿಮಿತ್ತ ಸಭೆ ಗೆ ... ಸಭೆಗೆ ಅನೇಕ ಜನ ದೊಡ್ಡ ಮನುಷ್ಯರು ... ಕಾಲೇಜಿನ ... ಡಿಪ್ಯೂಟಿ ಇನ್ಸ್ಪೆಕ್ಟರ್ ಮ|| ರಾ|| ನಾಥಮುನಿನಾಯುಡರವರು, ಅಲಂಕರಿಸಿದ್ದರು. ಸ್ವಲ್ಪ ಹೊತ್ತು ಗಾನ ... ನಡೆದ ನಂತರ, ಇದರ ...

ವಿಜ್ಞಾಪನ ಪತ್ರಿಕೆಯು ಓದಲ್ಪಟ್ಟಿತು. ಅನಂತರ ಅಗ್ರಾಸನಾಧಿಪತಿಗಳು, ಮ|| ರಾ|| ಗಳಾದ ರಂಗಣ್ಣ, ಮತ್ತು ನೀಲಕಂಠರಾಯರು ಸಹ ತಾವು ಹೊಂದಿದ ಮರ್ಯಾದೆಗೆ ಸಂತೋಷಿಸಿ, ಮಾಸ್ತರುಗಳಿಗೆ ಸಮಯೋಚಿತ ಬುದ್ಧಿವಾದಗಳನ್ನು ತಿಳಿಸಿದರು.

ಶ್ರೀವಾಮಹೂಮವಿಭೂಷಂ | ಭೂಪತಕ್ಷವನೇ ಯಂದಿ ... | ಜ್ಞಾತಕ್ರಮವಿಶಾಲಂ | ... ||೧||

ವಿದ್ಯಾಪ್ರತಿಷ್ಠಿತಂ | ... ||೨||

... ||೩||

... ||೪||

... ||೫||

... ||೬||

## ನೋಟಿಸ್.

ಇದರಿಂದ ನಮ್ಮ ಚಂದಾದಾರರಿಗೆ ನಾವು ಬಿನ್ನವಿಸುವದೇನಂದರೆ,—

ಈ ಪತ್ರಿಕೆಯ ... ಕೆಲವರು ... ಈ ಪತ್ರಿಕೆಯು ... ಮಾಡುವರು ಈ ಪತ್ರಿಕೆ ... ಬರಬೇಕೆಂದು ...

೧—೬—೯೩. ಪ್ರಕಾಶಕರು.

## THERAGNALORE SREENIVASA MANDIRAM.

### ಬೆಂಗಳೂರು ಶ್ರೀನಿವಾಸ ಮಂದಿರ.

ಬೆಂಗಳೂರ ಶ್ರೀ ಶ್ರೀನಿವಾಸ ಮಂದಿರದ ಧರ್ಮಕ್ಕಾಗಿ ಜವಾಯಿಸಲ್ಪಟ್ಟ ಅಕ್ಕಿ ಮತ್ತು ಅದರ ವಿನಿಯೋಗದ ತಖಸೀಲ್ ತೋರಿಸುವದು,—

೧೮೯೩ನೇ ಇಸವಿ ಮೇ ೩೮ ನೇ ತಾರೀಖ್ ಮೊದಲು ಜೂನ್ ೩ನೇ ತಾರೀಖ್ ವರಿವಿಗೆ.—

| | |
|---|---|
| ಅಕ್ಕಿ ವಸೂಲು ಮಾಡಿದ ಗೃಹಂಗಳ ಸಂಖ್ಯೆ | 72 |
| ಜಮಾಯಿಸಿದ ಧಾನ್ಯದ ... ಸಂಖ್ಯೆ .. | 51 |
| ಗತವಾರದ ಬಾಕಿ ಸೇರು .. | 1 |
| ಜುಮ್ಲಾ .. | 52 |
| ಕ್ಷಾಳಿಸಿ ಹಾಕುವುದರಲ್ಲಿ ಸವೆದ್ದೆ ಸೇರು | 1½ |
| ಖರ್ಚಿನ ಅಕ್ಕಿ ಸೇರು | 34½ |
| ಜಮಾ ಬಾಕಿ | 2 |
| ಭೋಜನ ಮಾಡಿದ ಜನಗಳ ಸಂಖ್ಯೆ ಮತ್ತು ತಪಸೀಲ್. | |
| ಅನಾಥರು .. | 7 |
| ಬೆಂಗ್ಲೂರಿನ ವಿದ್ಯಾರ್ಥಿಗಳು .. | 4 |
| ಊರಿಗೆ ಬಂದ ವಿದ್ಯಾರ್ಥಿಗಳು ... | 11 |
| ... ... | 30 |
| ಪ್ರಯಾಣಿಕರು .. .. | 15 |
| ಜುಮ್ಲಾ .. | 69 |

## CORRESPONDENCE

[ಇದರಲ್ಲಿ ಪ್ರಕಟಿಸಲ್ಪಟ್ಟಿರುವ ಅಭಿಪ್ರಾಯಗಳಿಗೆ ... ಪತ್ರಿಕಾಕರ್ತರು ... ಮಾಡುವದಿಲ್ಲ. ಕ. ಪ್ರ.]

ಮ|| ರಾ|| ಕರ್ಣಾಟಕ ಪ್ರಕಾಶಿಕಾ ಎಡಿಟರವರ ಸನ್ನಿಧಿಗೆ.

ಮ|| ರಾ|| ಗಳಾದ, ವೆಂಕಟೇಶಯ್ಯಂಗಾರ್, ಬಿ. ಎ. ರಂಗಣ್ಣ, ಎಂ. ಎ. ಎಂ. ಆರ್. ಮತ್ತು, ನೀಲಕಂಠರಾವ್ ಮುಂತಾದವರಿಗೆ,

ಸ್ವಾಮಿ,—ಈ ಊರಲ್ಲಿ ನಡೆದ, ಶಾಸ್ತ್ರೀಯ ಉಪನ್ಯಾಸ ತರಗತಿಗೆ ಬಂದಿದ್ದ ಬೆಂಗಳೂರು ಡಿಸ್ಟ್ರಿಕ್ಟ್ ಸರ್ಕಾರಿ ಕನ್ನಡ ಮತ್ತು ಹಿಂದುಸ್ಥಾನಿ ಸ್ಕೂಲುಗಳ ಉಪಾಧ್ಯಾಯರು, ವಿಜ್ಞಾಪಿಸುವದೇನೆಂದರೆ.—

ಈ ದೇಶದಲ್ಲಿ ಶಾಸ್ತ್ರಾಭ್ಯಾಸ ... ಭಾಷೆಗಳು ತರ್ಕ, ವ್ಯಾಕರಣ, ಶಾಸ್ತ್ರಗಳು ಬಹಳ ... ಪ್ರಕೃತಿ ವಿಚಾರ ವಿಷಯಕವಾದ, ಶಾಸ್ತ್ರಾಭ್ಯಾಸವು ಕಡಿಮೆಯಾಗಿತ್ತು. ಈ ಶಾಸ್ತ್ರಗಳು ವಿಶೇಷವಾಗಿ ಅಭ್ಯಾಸ ಮಾಡಲ್ಪಡುತ್ತಿರುವ, ಐರೋಪ್ಯ ದೇಶಗಳಲ್ಲಿ, ನಾಗರಿಕತೆಯೂ, ಐಶ್ವರ್ಯವೂ, ಆರೋಗ್ಯವೂ, ಕೇವಲ ಅಭಿವೃದ್ಧಿಗೆ ಬಂದಿರುತ್ತವೆ. ಇಂತಹ ಶಾಸ್ತ್ರಗಳನ್ನು, ಈ ದೇಶದಲ್ಲಿ ಪ್ರಚಾರಕ್ಕೆ ತರಬೇಕೆಂಬ ತಾತ್ಪರ್ಯದಿಂದ ನಮ್ಮ ಎಜ್ಯುಕೇಷನ್ ಸೆಕ್ರೆಟರಿ ಸಾ|| ರವರು, ಪ್ರಾರಂಭಿಸಿರುವದಕ್ಕಾಗಿ ನಾವು ಅತ್ಯಂತ ಕೃತಜ್ಞರಾಗಿದ್ದೇವೆ. ಮೇಲ್ಕಂಡ ಶಾಸ್ತ್ರಗಳ ವಿಷಯವಾಗಿ ಉಪನ್ಯಾಸಕರಾಗಿ ದೊರೆತದ್ದು ನಮ್ಮ ಪುಣ್ಯವಿಶೇಷವೆಂದು ಭಾವಿಸುತ್ತೇವೆ. ಈಚೆಗೆ ಬಂದಾಗ ತಿಂಗಳ ... ಗಾಯಿತು ... ಇಂದ ... ಹೊಂದಿದ ನವೀನ ಶಾಸ್ತ್ರಜ್ಞಾನಕ್ಕಾಗಿ, ತಮ್ಮಗಳಿಗೆ ಬಹಳ ಕೃತಜ್ಞರಾಗಿದ್ದೇವೆ. ತಮ್ಮ ಉಪನ್ಯಾಸ ಮಾಡುವ ರೀತಿಯೂ, ಸಂಶಯಗಳನ್ನು ನಿವೃತ್ತಿ ಮಾಡುವ ಶಕ್ತಿಯೂ, ತಮಗಿರುವ ತಾಳ್ಮೆಯೂ ಸಹ, ನಮ್ಮ ಹೃದಯದಲ್ಲಿ ಸ್ಥಿರವಾಗಿ ನೆಲೆಗೊಂಡಿರುತವೆ.

ಕಾಲವು ಸ್ವಲ್ಪವಾದುದರಿಂದ ಆಯಾ ಶಾಸ್ತ್ರಗಳಲ್ಲಿ, ವಿಶೇಷವಾಗಿ ತಿಳಿಯಲಸಾಧ್ಯವಾದರೂ, ತಮ್ಮಗಳಿಂದ ಕೇವಲ ವಿಶ್ವಾಸದೊಡನೆ ತಿಳಿಸಲ್ಪಟ್ಟ ಅಂಶಗಳೆಲ್ಲವೂ, ನಮಗೆ ಚೆನ್ನಾಗಿ ಅವಗಾಹನೆಯಾಗಿರುತ್ತದ್ದರಿಂದ ಅವೇ ಬೀಜವಾಗಿ ಸಂತು, ಮುಂದೆ ಸ್ಪಷ್ಟವಾಗಿ ಬೆಳೆಯ... ಕೆ ಪ್ರಯತ್ನಪಡಲು ಬದ್ಧರಾಗಿದ್ದೇವೆ.

ತಾವುಗಳು ನಮಗೆ ಮಾಡಿದ ಉಪಕಾರಕ್ಕೆ ನಮ್ಮಗಳೆಲ್ಲರ ಕೃತಜ್ಞತಾಪೂರ್ವಕವಾದ ಈ ವಿಜ್ಞಾಪನೆಯನ್ನಂಗೀಕರಿಸುವದಲ್ಲದೆ ಇವೆಲ್ಲಕ್ಕೂ ಕಾರಣಭೂತರಾದ ಮ|| ಭಾ|| ಭಾ|| ಸಾಹೇಬರವರಿಗೆ, ನಮ್ಮ ವಿಜ್ಞಾಪನೆಯನ್ನು ತಿಳಿಯಪಡಿಸಬೇಕೆಂದು ವಿನಯದಿಂದ ಪ್ರಾರ್ಥಿಸುತ್ತೇವೆ.

ಬೆಂಗಳೂರು, ೧೦—೬—೯೩

## THE MYSORE GAZETTE.

### ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದೂರವರ ಸರ್ಕಾರದ ಹುಕುಂಗಳ ಅಸ್ಸಲಿನ ಪಟ್ಟಿಗಳು.

ತಾ|| ೨ ನೇ ಜೂನ್ ೧೮೯೩.

ನಂ|| ೨೩೬೨—ಕೌನ್ಸಿಲ್—ಮೈಸೂರು ಅಸಿಸ್ಟೆಂಟ್ ಸರ್ಜನ್ ಮ|| ವೆಂಕಟವರದಯ್ಯಂಗಾರ್ರವರಿಗೆ ಕಳೆದ ಮೇ ೨ ಅಥವಾ ಅವರದನ್ನು ಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯಿತು ಅರ್ಧ ಸಂಬಳದ ಮೇಲೆ ೧೫ ದಿವಸಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ. ಇವರ ಗೈರಹಾಜರಿ ಕಾಲದಲ್ಲಿ ಅವರ ಕೆಲಸವನ್ನು ನೋಡುವದಕ್ಕೆ ಥರ್ಡ್ ಕ್ಲಾಸ್ ಹಾಸ್ಪಿಟಲ್ ಅಸಿಸ್ಟೆಂಟ್ ರಾವ್ ಮ|| ... ಬಿ. ಎ. ಬಿ. ಎಸ್. ಯವರು ನಿಯಮಿಸಲ್ಪಟ್ಟಿರುತ್ತಾರೆ.

ನಂ|| ೨೩೬೩—ಕೌನ್ಸಿಲ್—ಹೊಸ ... ನಂತಶಯನಯ್ಯನವರು ನೇಮಕವಾಗಿ ಬೇರೆ ಕೆಲಸದಲ್ಲಿರುವವರಿಗಾ ಕೋಲಾರ ತಾಲ್ಲೂಕ ಅಮಲ್ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಡಿ ಪಾರ್ಟ್‌ಮೆಂಟರಿ ಕ್ಲರ್ಕ್ ಮ|| ಕಂಕಯ್ಯ ಬಿ. ಎ. ಯವರು ನಿಯಮಿಸಲ್ಪಟ್ಟಿರುತ್ತಾರೆ.

೩ನೇ ಜೂನ್ ೯೩

ನಂಬರ್ ೨೩೭೪—ಕೌನ್ಸಿಲ್—ಬೆಂಗಳೂರು ಅಸಿಸ್ಟೆಂಟ್ ಸಿಟಿ ಮ್ಯಾಜಿಸ್ಟ್ರೇಟರಾದ ಮ|| ವೈದ್ಯನಾಥಯ್ಯರವರಿಗೆ ಜೂನ್ ೯ ಅಥವಾ ಅವರುಪಯೋಗಿಸಿಕೊಳ್ಳುವ ತಾರೀಖ್ ಲಾಗಾಯಿತು ೧೫ದಿವಸಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ. ಅವರ ಗೈರಹಾಜರಿ ಕಾಲದಲ್ಲಿ ಸ್ಪೆಷಲ್ ಡ್ಯೂಟಿ ಮೇಲಿರುವ ಮಿಸ್ಟರ್ ಬಿ. ಜಿ. ಕೃಷ್ಣಯ್ಯಂಗಾರ್ರವರು ಅವರ ಕೆಲಸವನ್ನು ನೋಡತಕ್ಕದ್ದು.

ನಂ|| ೨೩೭೫—ಕೌನ್ಸಿಲ್—ಮೈಸೂರ್ ಸರ್ವೆ ರೆವೆನ್ಯೂ ಸೆಟಲ್‌ಮೆಂಟ್ ೧೮೯೮ನೇ ಆರ್ಟಿಕಲ್ ಅನುಸರಿಸಿ ೧೦ ನೇ ಜೂನ್ ಲಾಗಾಯಿತು ಅಥವಾ ಅವರುಪಯೋಗಿಸಿಕೊಳ್ಳುವ ತಾರೀಖ್ ಲಾಗಾಯಿತು ಹುಣಸೂರು ತಾಲ್ಲೂಕ ಅಮಲ್ದಾರ್ ಶೇಷಯ್ಯಂಗಾರ್ರವರಿಗೆ ೧ ತಿಂಗಳು ೨೩ ದಿವಸಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ|| ೨೩೭೬—ಕೌನ್ಸಿಲ್—ಮೈಸೂರು ಸರ್ವೆ ರೆವೆನ್ಯೂ ಸೆಟಲ್‌ಮೆಂಟ್ ... ನೇ ಆರ್ಟಿಕಲ್

ಖುಸರಿಸಿ ಫ್ರೀಷ್‌ಟಾಕ್ಸ್ ಅಸಿಸ್ಟೆಂಟ್ ಪ್ರೊಫೆಸರ್ ಸ್ಕ್ಯಾಲರ್‌ಶಿಪ್ ಡಿರ್ಕೆಕ್ಟರಾದ ಮೆ|| ನಂಜರಾಜೇ ಅರಸಿನವರಿಗೆ ಅವರು ವಯೋಗಿಸಿಕೊಳ್ಳುವ ತಾ ರೀಖ್ ಆಗಾಯಿತು ಅವರ ಸ್ವಂತ ಕೆಲಸವನ್ನೇ ವೆ ಹೋಗತಕ್ಕ ಬಗ್ಗೆ ೬ ತಿಂಗಳ ರಜಾ ಕೊಡ ಲ್ಪಟ್ಟಿರುತ್ತೆ. ಅವರಸ್ಥಾನಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ವರಿಯಂತ ಆ ಕೆಲಸವನ್ನು ಮೆ|| ಡಿ. ಎ. ಬ್ಯಾಲಾರ್ಡ್ ಯವರು ನೋಡತಕ್ಕದ್ದು.

೩ನೇ ಜೂನ್ ೧೮೯೩

ನಂ|| ೬೦೫೩೭—೫೦೮೦—ಮೈಸೂರ ನೋ ಟಿಫಿಕೇಷನ್ ಮೇರಿಗೆ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟ್ ಕೆಲಸವನ್ನು ಆಕ್ಟಿಂಗ್ ತರೀಖ್ ನೋಡತಕ್ಕ ಬಗ್ಗೆ ನಿಯಮಿಸಲ್ಪಟ್ಟಿರುವ ಮೆ|| ಬಿ. ಟಿ. ಕೃಷ್ಣಯ್ಯಂಗಾರ್ರವರಿಗೆ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ ೧೨ ನೇ ಸೆಕ್ಷನ್ ಪ್ರಕಾರ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ವಿದ್ಯಾಭ್ಯಾಸದ ಇಲಾಖೆ.

ಪ್ರಕಟನಪತ್ರಿಕೆ

ಸನ್ 189 3ನೇ ಇಸವಿ ಜೂನ್ ತಾರೀಖು }

ಮೈಸೂರು ಲೋವರ್ ಸೆಕಂಡರೀ ಪರೀಕ್ಷೆ.

ಸನ್ ೧೮೯೬ನೇ ಇಸವಿ ಜೂನ್ ತಾರೀಖು ೧೮ರಲ್ಲು ಪ್ರಾಯಿಷ್ಟಾತಲ್ಪಟ್ಟ ಲೋವರ ಸೆಕಂಡರೀ ಪರೀಕ್ಷಾ ಸಂಬಂಧವಾದ ಪ್ರಕಟನ ಪತ್ರಿಕೆಯಲ್ಲಿನ ನಿಬಂಧನೆಗಳ ತಿದ್ದುಪಾಟುಗಳು ಈ ದರಡಿ ಕಂಡಂತೆ ಪ್ರಕಟಿಸಲ್ಪಟ್ಟಿರುತ್ತವೆ.

I ನಿಬಂಧನೆ ೨ (೧) ಎಂಬದಕ್ಕೆ

(೧) ಪೋಕ್ಯಂಡವರಲ್ಲದೆ ಪರೀಕ್ಷೆಗೆ ಬರುವವರೆಲ್ಲರೂ ಸ್ವಂತ ವ್ಯಾಸಂಗಗಳಿಂದ ಭಾವಿ ಲ್ಪಡತಕ್ಕದ್ದು. ಸಿವಿಲಿಯರು ಸರ್ಕಾರೀ ಉದ್ಯೋಗಸ್ಥರಾಗಿರುವ ಪಕ್ಷದಲ್ಲಿ ಯಾವ ವಯಸ್ಸಿನವರಾಗಿಯಾದರೂ ಇರಬಹುದು. ಸರ್ಕಾರಿ ಉದ್ಯೋಗಸ್ಥರಲ್ಲದ ಪಕ್ಷದಲ್ಲಿ ಅವರು ಹದಿನಾರು ವರುಷಕ್ಕಿಂತ ಕಡಮೆಯಾದ ವಯಸ್ಸುಳ್ಳವರಾಗಿರಕೂಡದು, ಎಂದು ಓದಿಕೊಳ್ಳತಕ್ಕದ್ದು.

II 6 VI (a) ಎಂಬದಕ್ಕೆ

(a) ರೇಖಾಗಣಿತ—ಆದು ಯವರಿಂದ ರಚಿಸಲ್ಪಟ್ಟ ರೇಖಾಗಣಿತದ ಮೊದಲಿನ ಪುಸ್ತಕದಲ್ಲಿ ನೊದಲಿನ ೩೦ ಪ್ರತಿಜ್ಞೆಗಳು ಸುಲಭವಾದ ಡಿಡಕ್ಷನ್ಸ್ ಅಂದರೆ ಫಲಿತಾರ್ಥ ಪ್ರಶ್ನೆಗಳು ಡನೆ—೬೦ ನಂಬರು, ಓದಿಕೊಳ್ಳತಕ್ಕದ್ದು.

ನಿಬಂಧನೆ ೧೧ಕ್ಕೆ

III ೧೨ ವಿದ್ಯಾರ್ಥಿಗಳಾಗಿರುವ ಪಕ್ಷದಲ್ಲಿ ಈ ಪರೀಕ್ಷೆಗೆ ಸೇರುವ ಬಗ್ಗೆ ಆಯಾ ಶಾಲೆಯ ಮುಖ್ಯೋಪಾಧ್ಯಾಯರುಗಳ ಮೂಲಕ ದರಖಾಸ್ತುಗಳನ್ನು ಕಳುಹಿಸತಕ್ಕದ್ದು. ಎರಡನೇ ನಿಬಂಧನೆಯಲ್ಲಿ ಹೇಳಲ್ಪಟ್ಟ ಖಾಸಗಿ ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರುಗಳು ತಮ್ಮ ದರಖಾಸ್ತುಗಳನ್ನು ಆಗಷ್ಟ್ ತಿಂಗಳ ೩೧ ನೇ ತಾರೀಖನ್ನು ಅತಿಕ್ರಮಿಸದಂತೆ ಡೈರೆಕ್ಟರ ಪರೀಕ್ಷಾ ಮ್ಯಾನೇಜರುವರಲ್ಲಿಗೆ ಸೇರುವಂತೆ, ಕಳುಹಿಸತಕ್ಕದ್ದು. ಸ್ವಂತ ವ್ಯಾಸಂಗಿಗಳ ದರಖಾಸ್ತುಗಳೆಲ್ಲಾ ಜುಲೈ ತಿಂಗಳ ೩೧ನೇ ತಾರೀಖನ್ನು ಅತಿಕ್ರಮಿಸದಂತೆ ಡೈರೆಕ್ಟರ ಪರೀಕ್ಷಾ ಮ್ಯಾನೇಜರುವರಲ್ಲಿಗೆ ಬಂದು ಸೇರತಕ್ಕದ್ದು.

ಎಚ್. ಜೆ. ಭಾಭಾ,

ಎಡ್ಯುಕೇಷನ್ ಸೆಕ್ರೆಟರಿ

SUMMARY OF NEWS

ವೃತ್ತಾಂತ ಸಂಗ್ರಹವು.

ವೃತ್ತಾಂತ ಪತ್ರಿಕೆ, ತಾ|| ೧೧ನೇ ಜೂನ್ ೧೮೯೩.

ಮಿಲ್ಯಾಪೂರಿನಲ್ಲಿರುವ ಆಯುರ್‌ಗಳಲ್ಲಿರೂ ಸ್ತ್ರೀಯನ್ನು ಗಂಡನರು ಆ ಕಸಬಿನಲ್ಲಿ ಹಿಡಿದುಹಾಕಿ ಬರುವದಿಲ್ಲವಂತೆ.

ಸೇಲಂ ಜಿಲ್ಲೆಯಲ್ಲಿ ಗ್ರಾಮಾದಾಯಿಗಳನ್ನು ಗಂಡನು ಖರ್ಚುಮಾಡಿದ ತನ್ನ ಹೆಂಡತಿಯನ್ನು ತ್ಯಜಿಸಿ ಬಿಟ್ಟನಂತೆ.

ಚಿಕ್ಕಗೋಪಟ್ಟಣದಲ್ಲಿ ನಾಲ್ಕುಸಪ್ತಾಹದಿಂದಿಂಗಲ್ಲಿ ನಡೆಯುತ್ತಾ ಬರುತಿರುವ ಸಮಾಜಕ್ಕೆ ಮದುವಾಸಿಸುವ ಯೋಗ್ಯತೆ...

ಸಾರಥಿ ಅಯ್ಯಂಗಾರ್ ಬಿ. ಎ. ಬಿ. ಎಲ್ ರವರು ಹಿಂದೂಮತದ ವಿಷಯವಾದ ಉಪನ್ಯಾಸವನ್ನು ಬಹಳವಾಗಿ ಬರೆದು ಕವಾನಿಸುತ್ತಾರೆ.

ಸಂಯುಕ್ತ ಸಂಸ್ಥಾನಗಳಲ್ಲಿ ಈ ವರುಷ ನದಿಗಳೆಲ್ಲಾ ಪೂರ್ಣ ಪ್ರವಾಹದಿಂದ ಅನೇಕ ಪಟ್ಟಣಗಳು ಮುಳುಗಿ ಹೋಗಿವೆ ಕ್ಯಾರೋ ಪಟ್ಟಣದಿಂದ ನ್ಯೂಆರ್ಲಿಯನ್ಸ್ ವರೆಗೂ ೬ ಕವಾಗಿ ೪—೧೦ ಅಡಿಗಳ ನೀರು ನಿಂತಿದೆ ನಷ್ಟವೆಂದು ಊಹಿಸಲೂ ಅಸಾಧ್ಯವಾಗಿದೆ.

ಸಿಲ್‌ಹಟ್ಟಿನಲ್ಲಿ ೪ ಗಂಟೆಗಳ ಕಾಲದಲ್ಲಿ ೧೫ ಅಂಗುಲ ಪ್ರಮಾಣದ ಮಳೆಯು ಸುರಿಯಿತು, ಪ್ರತಿಸಲವೂ ಮಳೆ ಬಿದ್ದು ಹೋಯಿತು, ಟೀ ತೋಟಗಳು ನೀರಿನಲ್ಲಿ ಮುಳುಗಿ ಹೋದವು, ಲಕ್ಷಾಂತರ ಜನರಿಗೆ ಬಾಧಕವಾಗಿದೆ ಮುಂದು ವರ್ತಮಾನ ಬರಬೇಕು.

ಗುಂಟೂರಿಗೆ ಒಂದು ಮೈಲಿ ದೂರದಲ್ಲಿರುವ ಕೋರಿಟ್ಟಲ್ಲ ದಾ ಎಂಬ ಹಳ್ಳಿಯಲ್ಲಿ ೧೦೦ ಮನೆಗಳು ಅಗ್ನಿಪ್ರವೇಶವಾದ ವಂತೆ, ಸಬ್ ರೇಂಜ್ ಅಧಿಕಾರಿಗಳೆಲ್ಲರೂ ಬಹಳವಾಗಿ ಸಹಾಯ ಮಾಡಿದರಂತೆಯೂ, ಅಲ್ಲಿನ ರೈಲ್ವೆ ಡಿವಿಷನ್‌ಮೇಟ ಹಜಾರ ತ್ತಂ ಮೊದಲಿನವರು ಜನಗಳಿಗೆ ಆಹಾರ ಸಾಮಗ್ರಿಗಳನ್ನು ಕೊಡಿಸಿದರೆಂತಲೂ ತಿಳಿಯಬರುವುದು.

ಪರ್ಲಿಂಡ್ ದೇಶದಲ್ಲಿ ಒಂದು ವಿಧವಾದ ರೋಗವು ಪ್ರಾಪ್ತವಾಗಿದೆಯಂತೆ ಇದು ಬಿಡದಕೊಸಲೆ ಹಲ್ಲು ನೋವು ಪ್ರಾರಂಭವಾಗುತ್ತದೆ, ಅನಂತರ ಗಂಟಲಿನಲ್ಲಿ ಹುಣ್ಣಾಗುತ್ತೆ, ಕಾಲ್ಪಡುವ ಸಗಳ ಮೇಲೆ ಬಿಳಿಯುಮ್ಮು ಹೊಂಗುತ್ತೆ, ತಣ್ಣುಬಿಡುವವಕ್ಕೆ ಆಗುವದಿಲ್ಲ, ಹಾಗೆಯೇ ಸಾಯುವವೂ ಬಡುಕುವವರೂ ಗೊತ್ತೇ ಇಲ್ಲ, ಇದೆಂಥಾ ರೋಗವೋ ಅದಕ್ಕೆ ಯಾವ ಔಷಧಿ ಯೂ ಹಿಡಿಯುವದಿಲ್ಲವಂತೆ.

ಕವಾನ ಸ್ಟ್ರಿಟ್ಟ್‌ಗೆ ಸ್ಥಿದ ಪ್ರೋವಿನ್ಸ್ ಹ್ ಎಂಬ ತಾಲ್ಲೂಕಿನಲ್ಲಿ ಪೋಲೀಸವರು ಒಬ್ಬ ಸ್ತ್ರೀಯಿಂದ ತಪ್ಪುಸೂರ ಅಪರಾಧಕ್ಕೆ ಅವನನ್ನು ರಾತ್ರಿಯೆಲ್ಲಾ ಬಹಳವಾಗಿ ಹಿಂಸೆ ಮಾಡಿದರೆಂದೂ, ಮಾರನೇ ಜಗಗಣ ಹೊತ್ತಿಗೆ ಅವನು ಕೂರದಿಯಲ್ಲಿ ಸತ್ತು ಬಿದ್ದಿದ್ದನೆಂತಲೂ ಕೇಳುತ್ತೇನೆ ಈಗ ಆ ಪೋಲೀಸವರು ಶಿಕ್ಷಿಸಲ್ಪಡುವರೆಂದು ವರ್ತಮಾನವಿದೆ, ಪೋಲೀಸವರು ಹೀಗೆ ಹಿಂಸೆ ಮಾಡುವದು ಅಪರೂಪವಲ್ಲ.

ಸೆಪ್ಟೆಂಬರ್‌ನಲ್ಲಿ ಒಬ್ಬ ಸ್ತ್ರೀಗೆ ಮರಣ ಶಿಕ್ಷೆಯು ಹೊಡಲು ವಿಧಿಸಲ್ಪಟ್ಟು ಅನಂತರ ಅಪೀಲಿನಲ್ಲಿ ೧೦ ವರುಷದ ಕಠಿಣ ಸಜಾ ಗೊತ್ತಾಯಿತು ಸ್ತ್ರೀಯು ಬೆಂಕೊಳ್ಳಿಗೆ ಹೋಗುವಾಗ್ಗೆ ಕಾಲಿಗೆ ಹಾಕಿದ್ದ ಸಂಕೋಲೆಯೊಂದಿಗೆ ಒಬ್ಬನನ್ನು ವಾಡಿಸಿದನು, ಅವಳೂ ಅವನೂ ದೇವಸ್ಥಾನಕ್ಕೆ ಸವರಮೇಲೆ ಹೋಗಿ ಮದುವೆ ಮಾಡಿಕೊಂಡು ಹೊರಕ್ಕೆ ಬಂದರು ಈಗ ಅವನ ಜೊತೆಯಲ್ಲಿ ಬೆಂಕೊಳ್ಳಿಗೆ ಅವನ ಹೆಂಡತಿಯೂ ಹೋಗಿರುತ್ತಾಳೆ ಆಶ್ಚರ್ಯಪಡ ಮಧ್ಯವೆಯೇ ಸರಿ.

ಒಂದು ದೇಶದಲ್ಲಿ ಹೆಂಡತಿಯನ್ನು ಘಟಾದ್ದುನ್ನವಾಡಿ ತ್ಯಜಿಸುವದ ಪದ್ಧತಿಯು ವಿಶೇಷವಾಗಿದ್ದಾಗ್ಯೂ ಇದು ಅಂತರಂಗದಲ್ಲಿ ನಡೆಯುವದೇ ವಿನಾ ಕೋರ್ಟು ಗಳಿಗೆ ಹೋಗುವದೇ ಇಲ್ಲ ಅವರ ಪದ್ಧತಿ ಏನಂದರೆ —ಅವರ ಹಿರಿಯರಲ್ಲಿ ಕೆಲವು ಮಂದಿಯನ್ನು ಬರಮಾಡಿ ಹೆಂಡತಿಯನ್ನು ಬಿಡಬೇಕೆಂದು ಇಷ್ಟಪಡುವವನು ಮನಸ್ಸಿಗೆ ಕರಮಕೊಂಡು ಬರುತ್ತಾರೆ. ಗಂಡನ ಕಡೆಯವರೂ, ಹೆಂಡತಿಕಡೆಯವರೂ ಎದುರುಬದುರಾಗಿ ಕೂತುಕೊಂಡು ಅವರವಲ್ಲಿ ಒಬ್ಬ ತನ್ನ ೨ ಪೌಂಡು ೩ ಬಟ್ಟೆಗಳನ್ನು ತೆಗೆದು ಶಿಕ್ಷಿಸುವದಲ್ಲಿ ಎರಡನ್ನೂ ಕಟ್ಟಿ ೫ ಹುತ್ತಾರೆ, ಗಂಡನಪಕ್ಷದವರು ಹೊಸ್ಟಿಪ್ಟಿನ್ನು ಮಾಡಿದ್ದೇ ಅದು ಮೊದಲ ಗಂಡನು ತನ್ನ ವಸ್ತುಗಳನ್ನು, ತನ್ನ ಸಕಲ ಆಸ್ತಿಯನ್ನೂ ಹೆಂಡತಿಗೆ ಬಿಟ್ಟು ಹೊರಟು ಹೋಗುವನು ಹೆಂಡತಿಯು ಕಡೆಯ ದಿವಸವು ಮೊದಲೇ ಅಂತ್ಯವನ್ನ ದಿದರೆ ಅವಳ ಗಂಡನಿಂದ ತ್ಯಜಿಸಲ್ಪಟ್ಟಳೆಂದು ಗೊತ್ತು ಮಾಡಲ್ಪಡುವಳು, ಅದಕ್ಕೆ ಅವಳು ಒಪ್ಪಿಕೊಂಡು ಹೊರಟು ಹೋಗುವಳು ತ್ತಿದ್ದರೆ ತಮ್ಮ ತಮ್ಮ ಜೀವದ ಅಂತ್ಯವರೆವಿಗೂ ಪ್ರೀತಿ ಯಿಂದ ಸಂಸಾರಕ್ಕೆ ಪುನಃ ಸೇರತಕ್ಕ ಗಂಡ ಹೆಂಡತಿಗೆ ಜೋಡಿಸಲ್ಪಟ್ಟ ಯ ಉಳಿದೀ ಬೇರೆನಾಡಿದಿದ್ದತಕ್ಕೆ ಶಕ್ತಿಯನ್ನು ಹಿಡಿದಿದ್ದರೆ ಇ ಪ್ಪಿಜನಗಳ ಇತರ ಪದ್ಧತಿಗಳು ಇಷ್ಟು ಗೌರವಕರವಾಗಿ ರುವದೇ ಮಾಡಿಕರೇ ಊಹಿಸಿಕೊಳ್ಳಬಹುದು.

## EXTRACTS.

ಯೋಮತ್ತು ಇನರಿಗೆ ಇತ್ತೀಚಲಾಗಿ ಬ್ರಾಹ್ಮಣ ಪದ್ಧತಿಯಂತೆ ನಡೆಯುವುದರಿಂದ ಮನಸ್ಸಿನಲ್ಲಿ ಬುದ್ಧಿ ಹುಟ್ಟಿಕೊಂಡಿದೆ. ಅವರ ಬ್ರಾಹ್ಮಣರಿಗೆ ತಪ್ಪದಷ್ಟು ವರ್ತಮಾನ ಮಾಡಬೇಕೆಂದಿರುವುತ್ತದೆ ಏನು ಚಮತ್ಕಾರ ನೋಡಿರಿ ? ಕೆಳಗೆ ಬರೆದ ಇತರ ಪಠಣವದ ನಿರ್ಣಯವನ್ನು ನೋಡಿ ಬ್ರಾಹ್ಮಣರು ನಾಚುವಂಥ ಸಂಗತಿಯಾಗಿದೆ. ತೇಜ ತಾಲ್ಲೂಕಿನಲ್ಲಿ ೬೦೦೦ ಚರೆ ಒಕ್ಕಲಿಗರು ಬಂದು ದೊಡ್ಡ ಸಭೆಯನ್ನು ಕೂಡಿಸಿ ತಮ್ಮ ಜಾತಿಯ ಹೆಂಗಸರ ಸಂಬಂಧವಾಗಿ ಕೆಳಪು ನಿರ್ಣಯಗಳನ್ನು ಮಾಡಿರುತ್ತಾರೆ.

೧ ಬ್ರಾಹ್ಮಣರ ಹೆಂಗಸರಂತೆ ನೀರಿಯನ್ನು ಉಟ್ಟುಕೊಳ್ಳುವದು.

೨ ಸಂತೆ ಪೇಟೆ ಮೊದಲಕ್ಕೆ ಹೋಗಬಾರದು.

೩ ಬೀಸು ಕಟ್ಟುವ ಕೆಲಸಕ್ಕಾಗಿ ಎಷ್ಟೇಬೆಲವಾದರೂ ತ ವಗೆ ಹೋಗಕೂಡದು. ಬೇಕಾದರೆ ತಮ್ಮ ಮನೆಯಲ್ಲೇ ತಂದು ಬೀಸು ಕುಟ್ಟುವ ಕೆಲಸ ಮಾಡಬೇಕು.

೪ ಯಾರವನೆಯಲ್ಲಿಯೂ ಕೆಲಸಕ್ಕೆ ಜೀತಕ್ಕೆ ನಿಲ್ಲಬಾರದು.

ನೋಡುವಾ, ಈ ಪ್ರಕಾರದ ಕರಾರುಗಳಂತೆ ಎಷ್ಟು ದಿವಸ ನಡೆಯುವದಾಗುತ್ತದೆ ? ಹೆಂಗಸರ ಬದಲಾಗಿ ಗಂಡಸರು ನುಡಿಯುವ ಪ್ರಸಂಗ ಮಾತ್ರ ಬಾರದಿರಲಿ ? ಇಲ್ಲದಿದ್ದರೆ ಇವು ಕರಾರುಗಳು, ರಾಜಪುತ್ರರನ್ನು ಇವರ ಕಳ್ಳತನವಾಗುವ ವೇಳೆ ಬಂದೀತು—ಲೋಕಬಂಧು

ರಾಜಾಪಂಗ ತಾ|| ೬ ನೇ ಜೂನ್ ೧೮೯೩

ಈ ಊರಲ್ಲಿ ಒಂದರ ದೊನ್ನವರ ಬಂದರಿಂದ ಸುಮಾರು ನಾಲ್ಕು ಮೈಲ ಅಂತರದಲ್ಲಿ ಒಂದು ಹಳ್ಳಿಯು ಟ ಇವರ ಹೆಸರು ಪಂಚಿಪುರ. ಇವರ ಪತ್ರದ ಸಮುದ್ರದಲ್ಲಿ ವಿಮಾರ ತಾ || ೬೩ ನೇ ನೇ ಸನ್ ೧೮೯೩ ನೇ ದಿವಸ ಎರಡು ಹಡಗಗಳು ಒಡೆದವು, ಈ ಹಡಗುಗಳು ಸಾವಿರಾರವು ಅವ್ಯಾ ಜನೇನು ಅದರಲ್ಲಿ ಬಹಳ ಇದ್ದಿಲ್ಲ ಬಟ್ಟೆಗೆ ಜನರಿಗಿಯ ತ್ತಿ ಜನಗಳನ್ನುವರು ಈ ಹಡಗನಲ್ಲಿ ಇದ್ದರು ಕುರ್ಹ ಬಿಟ್ಟು ಅವರ ಚಕಣಗಳು ಒಡೆದುಹೋದವು ಅವರ ಈ ಜನರು ಆ ಹಡಗು ಒಡೆದ ಕ್ಷಣವೇ ನೀರ ಒಳಕ್ಕೆ ಸೇರಿ ಕಾಣದು ಹೋದರು ಸುರಕ್ಷಿತವಾಗಿ ದೊನ್ನಾವರ ಬಂದರದ ಹತ್ತಿರ ಬಂದು ಮುಟ್ಟಿದರು ಅವರ ಇವರ ಪೈಕಿ ಒಬ್ಬ ಗುಡ್ಡದ ಮೇಲಿನ ಮನುಷ್ಯನು ತಾನು ಬಂದು ಹಡಗಿನ ತುಂಡು ಹಿಡಿದುಕೊಂಡು ಸಮುದ್ರದಲ್ಲಿ ತೇಲುತ್ತಾ ಬರುತ್ತಾಗ್ಗೆ ಬಿಟ್ಟಿಂಚೊಬ್ಬ ಬಂದು ಮಸ್ತ ಮುಂದುವರು ತೂಲೆಯು ನೀರಿನ ಹರಿಯುವದು ಇವನ ಮೇಲೆ ಬಿದ್ದರಿಂದ ಇವನು ಮಾತ್ರ ಸತ್ತು ಹೋದನು ಈಶ್ವರ ಆಗಾಧ ಚಮತ್ಕಾರ ಹೇಗಿರುತ್ತದೆ ಸುಮಾರು ೬೦ ವರುಷದ ಹಡಗಿನವರು ಹ ಈ ಹಡಗಿನಲ್ಲಿ ಇದ್ದ ದೇವರ ದಯೆಯಿಂದ ಈ ಕಾಲದ ನು ಒಂದು ಹಲಗೆಯ ತುಂಡಿನ ಮೇಲೆ ಕುಳಿತುಕೊಂಡು ಸುರಕ್ಷಿತವಾಗಿ ಒಂದು ದಡಕ್ಕೆ ಬಂದನು ಇಲ್ಲಿನ ಜನರ ಲೀವಾರ್ ಪಕ್ಕಿರ ಜನರು ಹೋಗಿ ತಪ್ಪಿಸಿದನು. ಎರಡು ಹಡಗುಗಳು ಸ್ಥಿಪತ್ತು.

ಈ ಊರು ಸಮೀಪದಲ್ಲಿ ಕೋಟೆ ಎಂಬಿದೊಂದು ಸಣ್ಣ ಹಳ್ಳಿಯುಂಟು, ಈ ಹಳ್ಳಿಯ ಜನರು ಕಷ್ಟ ದ ಪದ್ದತಿಯ ಗ ಪದ ಚೆಕ್ಕೆಗಳನ್ನು ಮಾತ್ರ ತಿಂದು ಬದುಕುತ್ತಾರೆ ಈ ಗಿಡದ ಚೆಕ್ಕೆಗಳನ್ನು ತಂದು ಪುಡಿಮಾಡಿ ಗೋಧಿಯ ಹಿಟ್ಟಿನಂತೆ ಉತ್ತಮವಾದ ಹಿಟ್ಟು ಹೊರಡುತ್ತದೆ ಇದು ಒಂದು ಪಲ್ಲ ಹಸಿ ಅಧಿಕವಾದಂತೆ ಹಾಗಾಗಿರುತ್ತದೆ ಈ ಕೋಟೆಯ ಜನರು ಫಕ್ತು ಈ ಗಿಡದಹಿಟ್ಟನ್ನೇ ತಿನ್ನುತ್ತಾರೆ ಎರಡನೆ ಯಾವ ತರದ ಧಾನ್ಯವು ಅವರಿಗೆ ಸಿಗುವದು ಬಹಳ ಮುಷ್ಕಿಲವಿರುವದು, ಯಾತಕ್ಕಂದರೆ ಅವರು ಅಷ್ಟು ದರಿದ್ರರಿರುತ್ತಾರೆ. ಇವರು ಗೋಸ್ಕರ ಒಂದು ಚಮತ್ಕಾರಿಕ ಸಂಗತಿಯುಂಟು, ಅದನ್ನು ನಾನು ತಮಗೆ ಮುಂದೆ ತಿಳಿಸುತ್ತೇನೆ.

ಕಳೆದ ಮೇ ೧೯ನೇ ತಾರೀಖಿನ ದಿವಸ ಲಂಡನ್ನಿನಲ್ಲಿ ಇಂಪೀರಿಯಲ್ ಇನ್‌ಸ್ಟಿಟ್ಯೂಟ್ ಎಂಬ ಹೆಸರಿನ ಗೃಹವು ಜನಪ್ರಭಾವದೊಡನೆ ತೆರೆಯಲ್ಪಟ್ಟಿತು ಈ ಇಂಪೀರಿಯಲ್ ಇನ್‌ಸ್ಟಿಟ್ಯೂಟ್ ಗೃಹದ ಸ್ಥಾಪನೆಯು ಮಹಾರಾಣಿಯವರ ಆಳ್ವಿಕೆಯ ಕಾಲದಲ್ಲಿಳಿಗಿನ ಅತಿ ಮಹತ್ವದ ಒಂದು ಸಂಗತಿಯಾಗಿದೆ ಈ ಸೂಚನೆಯು ಚರಿತ್ರೆಗಳಲ್ಲಿ ಬರೆಯಲ್ಪಡ ಯೋಗ್ಯವಾದದಾಗಿರುತ್ತದೆ. ಈ ಸಮಾರಂಭವು ಒಂದು ವಿಚಿತ್ರವಾಗಿ ನಡೆಯಿತು. ಅಂದವಾಗಿಯೂ ಆಯಿತು ಸಮಾರಂಭದ ದಿವಸ ಬೀದಿಗಳಲ್ಲಿ ಚಿತ್ರವಿಚಿತ್ರವಾದ ತೋರಣ ಗಳಿಂದಲಂಕರಿಸಲ್ಪಟ್ಟಿದ್ದವು, ಅಲ್ಲಲ್ಲಿ ನೋಡ ನೋಡುವಂತ ಜನರು ಕೂಡಿ ಕೊಂಡಿದ್ದರು, ಇಲ್ಲಿದೆ ಈ ಸಮಾರಂಭಕ್ಕಾಗಿ ಯೋಗ್ಯರಾದ ಕೀರವೆಡು, ಗುಜರಾತ್, ಪಂಜಾಬು ಮೊದಲಾದ ಪ್ರದೇಶಗಳಿಂದ ಅನೇಕರು ಕೂಡ ಅದನ್ನು ತಮ್ಮ ಮುಖ್ಯ ಪಾಡಿಕ್ಕ ವಸ್ತ್ರಪ್ರದರ್ಶನ ಸವರಕ್ಕೆ ಬಿಡಿತ ಅಲಂಕಾರಗಳನ್ನ ತೊಟ್ಟುಕೊಂಡು ಸಂತೋಷ ಉಡಿಗೆಗಳನ್ನು ಉಟ್ಟುಕೊಂಡಿರುವದರಿಂದಲೂ, ಅತಿಶಯವಾಗಿ ಶೋಭಿಸುತಿದ್ದರು.

ಆಸ್ಟ್ರೇಲಿಯಾ, ಅಮೇರಿಕಾ, ಹಿಂದುಸ್ಥಾನ ಮೊದಲಾದ ದೇಶಗಳಿಂದ ಬಂದಿರುವ ದೊಡ್ಡ ದೊಡ್ಡ ಅಧಿಕಾರಿಗಳೂ ಇಂಗ್ಲಾಂಡಿನಲ್ಲಿರುವ ದೇಶ ದೇಶಾಂತರದ ಅರಸರುಗಳ ಪ್ರತಿನಿಧಿಗಳೂ ಈ ಸಮಾರಂಭಕ್ಕಾಗಿ ಬಂದಿದ್ದರು

ಹಿಂದುಸ್ಥಾನ ಮತ್ತು ಆಸ್ಟ್ರೇಲಿಯಾ ದೇಶಗಳಿಂದ ಮತ್ತು ಬೇರೆ ಕಡೆಯಿಂದ ಕೆಲವರ ಸವಾರರು ದೇನವರನ್ನು ಈ ಉತ್ಸವವನ್ನು ನೋಡುವುದಕ್ಕೆ ಕಳಿಸಿಕೊಟ್ಟಿದ್ದರು. ಯುವರಾಜ ಪ್ರಿನ್ಸ್ ಆಫ್‌ವೇಲ್ಸ್‌ರವರು ಮತ್ತು ಮಹಾರಾಣಿಯವರು ಈ ಗೃಹವನ್ನು ತೆರೆಯುವ ಸಮಯಕ್ಕೆ ಅನುಕೂಲವಾಗಿ ಬಂದು ಸೇರಿದರು ಮಹಾರಾಜ್ಞಿಯವರ ಅನುಜ್ಞೆಯನ್ನು ಪಡೆಕೊಂಡು ಯುವರಾಜರು ಗೃಹವನ್ನು ತೆರೆದರು ಸಮಾರಂಭಕ್ಕೆ ಬಂದ ಅರಸರು, ಅರಸು ಪ್ರತಿನಿಧಿಗಳಲ್ಲದೆ ಟಿಕೇಟು ಪಡೆಕೊಂಡು ಬಂದ ಜನರು ಸುಮಾರು ೩೦,೦೦೦ ಇದ್ದರು, ಮಹಾರಾಣೀಯವರು ಈ ಪ್ರಕಾರ ಒಟ್ಟು ಕೂಡಿದ ಅರಸನನ್ನೂ ಜನರನ್ನೂ ನೋಡಿ ಅತ್ಯಾನಂದಪಟ್ಟು ತಮ್ಮಲ್ಲಿ ಪ್ರಜೆಗಳಿಗೆ ತಮ್ಮನ್ನಲ್ಲಿರುವ ಭಕ್ತಿಯನ್ನು ಮನ್ನಿಸಿದರು, ಹಾಗೆಯೇ ದೇಶವಿದೇಶದ ಅರಸರೊಳಗಿರುವ ಸಂಗತಿ ಮತ್ತು ಸ್ನೇಹಭಾವವನ್ನು ನೋಡಿ ರರು, ತರುವಾಯ ಎಲ್ಲ ಅರಸು, ಪ್ರತಿನಿಧಿಗಳೊಳಗೆ ನ್ನು ತೆಗೆದುಕೊಂಡರು. ಈ ಪ್ರಕಾರ ಈ ಸಮಾರಂಭವು ಬಹು ಆನಂದದಿಂದಲೂ ವೈಭವದಿಂದಲೂ ಮುಗಿಯಿತು. ಮಹಾರಾಜ್ಞಿಯವರ ಅರ್ಧ ಶತಮಾನದ ಆಳ್ವಿಕೆಗಾಗಿ ಆದ "ಜೂಬಿಲಿ" ಉತ್ಸವವನ್ನು ಈ ಕಡುಮುತ್ಸವವೂ ಈ ಸಮಾರಂಭದಲ್ಲಿ ಆಯಿತು —ಕೆ ಸು.

(ಕರ್ನಾಟಕ ವೃತ್ತ, ೬ನೇ ಜೂನ್, ೧೮೯೩.)

ರೇಲ್ವೆ ಪ್ರಯಾಣದಲ್ಲಿನತಕ್ಕ ಚೆನ್ನ, ಜಿಲ್ಲೆ ತಾಲ್ಲೂಕು ಇವುಗಳ ಸಾಧ್ಯಗಳು ರಾಜ್ಯಕರ್ತ್ಯರಿಂದಲೇ ನಿರ್ಮಿಸಲ್ಪಟ್ಟಿರುತ್ತವೆ. ಜನರು ತಮ್ಮ ತಮ್ಮ ಮನೆಗಳಲ್ಲಿ ಮಾಡಿದ ವಲ್ಲ ೬೩ ದುಡ್ಡುಗಳನ್ನು ೪ ದಮಡಿಗಳನ್ನು, ನಾಲ್ಕು ಹಣಗಳನ್ನು ಅಥವಾ ಎರಡು ಅರ್ಧ ರೂಪಾಯಿಗಳನ್ನು ಕೊಟ್ಟರೆ ಒಂದು ರೂಪಾಯಿ ಯಾಗುತ್ತದೆ. ನಾಲ್ಕಾಣೆ ಕೊಡತಕ್ಕದ್ದಿದ್ದರೆ, ರೈಲ್ಯ ಮಾಸ್ತರನೇ ಕೊಡಲಿಕ್ಕೆ ಬೇಕೆ ? ೧೬ ದುಡ್ಡುಗಳನ್ನು ಕೊಟ್ಟರೆ ಆಗದೇ ? ಸರಕಾರ ಪೇಟೆಯಲ್ಲಿನ ನಾಣ್ಯವಿದ್ದರಾಯಿತು ಹೀಗಿದ್ದು ದಕ್ಷಿಣಮರಾಠಾ ರೈಲ್ವೆಗೆ ಸೇರಿದ ಸ್ಟೇಷನ್‌ಗಳಲ್ಲಿ ೭ ದುಡ್ಡುಗಳಿಂದ ಅಗಿಯನ್ನು, ಅದಕ್ಕಿಂತ ಟಿಕೇಟು ಕೊಡತಕ್ಕವರು ವ ಹಾಕೋಡುವದರೊಡನೆ ರೈಲಿನಲ್ಲಿ ಬಸಿಸಿ ಬಿಡ ಮುದುಕ ಹೊತ್ತಿಗೆ ರೈಲ್ವೆಯ ಕರಿಬೆಲೆಯ ನಾಣ್ಯಾನ್ನು ಬೇರೆಯಾಗಿಲ್ಲವೆ ಅದನ್ನು ತರುವವಕ್ಕೆ ದಾರಿಕಾರರು ಎಲ್ಲಿ ಹೋಗಬೇಕು? ವಿಶಾಲ ಮಾತು ದುಡ್ಡುಗಳನ್ನು ಕೆಲವುಕೆಂಡರೆ, ಅವುಗಳಲ್ಲಿ ಕೆಲವು ಸವೆದಿರುತ್ತವೆಂ ತಲೂ, ಕೆಲವು ಕುಟ್ಟಿಗಿರುತ್ತವೆಂತಲೂ, ಕೆಲವು ಆಕೃತಿಯಲ್ಲಿ ಬಿಟ್ಟು ಕಡಿಮೆ ಇರುತ್ತವೆಂತಲೂ, ಕೆಲವು ರುಳ ಯುಳ್ಳವೆಂತಲೂ ಅಂದು, ಅವುಗಳನ್ನು ಬರಲಾಡಿ ಬಿಡಿ ಕೆಲವರು ಮಾತುಕೆ ಎಂದರೆ "ಥ್ಯಾಂಕ್, ಸ್ಯಾಕ್, ರೋ ಗಳು, ಇತ್ಯಾದಿ ಹೀಗೆ ಸೈಯಾತ್ತಾರೆ ಇದರಿಂದ ಧಾರಿ ವ ರಕ್ಕೆ ಬರುವದಕ್ಕೋಸ್ಕರ ತಪ್ಪುತ್ತಾಲಾಗ್ಗೆ ಬೇಡಿಯು ಳ್ಳ ಟಿಕೇಟು ಕೇಳುವಕೆಲ್ಲವರೇಕಾದರೆ, ಖತ್ತು ಆಣೆಯ ಕೆಯ್ಯಿಯ ನಾಣ್ಯ ಹಾಗೂ ಒಂದು ತಾಲ್ಲೂಕದ ದುಡ್ಡು ಕೊಟ್ಟರೆ ದಲಿತನು ರೈಲ್ವೆಯ ನಾಣ್ಯ ಎಂದು ಆಣೆಯ ದುಡ್ಡುಗಳನ್ನು ತಾವು ಮತ್ತು ಇಟ್ಟುಕೊಳ್ಳುವರಾಯಿತು, ಟಿಕೇಟ್ ಮಾಸ್ತರ್ ಗಾಡಿ ತಲೆಯ ಹೀರಿತೆ ! ಮತ್ತು ಆದುಡ್ಡುಗಳು ಬರೀದುಲ್ಲ ಬಿಕ್ಕಿಕೊಂಡಾಗ ವಿನಾಡಿಲ್ಲವಲ್ಲ ನ ! ಎಲ್ಲರೂ ಬಿಡಿ ದುಡ್ಡುಗಳನ್ನೇ ಕೊಟ್ಟರೆ, ಅವುಗಳನ್ನೆಣಿಸಿ ತೆಗೆದುಕೊಳ್ಳುವದರಲ್ಲಿ ಹೊತ್ತು ಹೋಗಿ, ಹೊತ್ತಿಗೆ ಸರಿಯಾಗಿ ಪ್ರಯಾಣಿಕರಿಗೆ ಟಿಕೇಟುಗಳನ್ನು ಕೊಡುವ ಕೆಲಸದಲ್ಲಿ ಬಹು ತೊಂದರೆಯುಂಟಾಗುತ್ತಿರುವದರಿಂದ, ರೈಲ್ವೆಯ ನಾಣ್ಯವನ್ನೇ ಕೊಡಬೇಕು ಬೇಕೆಂದು ಹೇಳುವರು, ಟಿಕೇಟಿಗಾಗಿ ಕೊಟ್ಟ ರೈಲ್ವೆಯ ನಾಣ್ಯವನ್ನು ಕಣ್ಣೋಳಗೆ ಕಟ್ಟಿಟ್ಟು ಹನ್ನೆರಡಾಣೆ ಬಾರಿಸಿ, ೬೩ ಪೇಳ್ತೆ ತಿರುಗಿ ತಿರುಗಿ ನೋಡಿ, ೪೧ ವರ್ತಿ ಎಣಿಸಿ ವತಿ ಕೈಸಿ ಮನವಿಕೆ ಮಾಡಿಕೊಂಡು ಬೇಲಿಕ್ಕೆ ಹಾಕುವದರಲ್ಲಿ ಹೇಳಿಯನ್ನು ಸ್ಟೇಷನ್‌ಗಳವರಂತೆ ಅಗುವುದಕ್ಕೂ ಬೇರೆಯಾ ನಾಣ್ಯವನ್ನು ತೆಗೆದುಕೊಳ್ಳುವದರಿಂದ ಸಂಶಯ ೧೧ ನಿರ್ಬಂಧವಿಲ್ಲದ್ದರಿಂದ ಬಿಡಿ ದುಡ್ಡುಗಳ ಬಗ್ಗೆ ಹರಿಯತ್ತಿಲ್ಲ, ಇದಾದರಿಗೆ ನೂರಾರು ಜನಕೆ ಇದರಿಂದ ಧಾರಣೆಯಿಂದ ಮತ್ತೆ ಧಾರವಾಡದಿಂದ ಸರಕಿನ ಹೋಗ ಎಂದಿದ್ದವೇ, ಆದರೆ ಈ ಮೇಲಿನ ನಾ ಣ್ಯದ ಬಗ್ಗೆ ತೊಂದರೆಯಾಗದಿದ್ದಿತು. ಪ್ಲೇಡೊಂದು ಗಂಡು ಜೋಡಿನ ರೂಪಾಯಿ ಮತ್ತು ೧೯ ತಾವ್ರದ ದುಡ್ಡುಗಳನ್ನು ಕೊಟ್ಟು ಇದರಿಂದ ಧಾರವಾಡಕ್ಕೊಂದು ಟಿಕೇಟುಗಳನ್ನು ಬೇಡಿದರೆ ಪ್ರಸ್ತುತಕ್ಕಿರುವ, ಟಿಕೇಟ್ ಮಾಸ್ತರ್ ನಾ ಹೊರದರು ಹಾಸ್ಯಕ್ಕಾಗಿ ಒಂದಂತೆ ನುಡಿದು, ಆ ದುಡ್ಡುಗಳನ್ನು ಮರಳಿ ಹಣ್ಣಾದೋಕೆಯ ರೂಪಾಯಿಯೇ ಬೇಕೆಂದು ಅದನ್ನು ದರಿಸಿದನ್ನೂರು ಆ ಕಾಲಕ್ಕೆ ಆ ಸ್ಟೇಷನ್ನಿನಲ್ಲಿ ಬಿದ್ದ —ನರ ಕಿಸೆ ೯ ೬೦ ಯ ಚಾವಲಿ ಹಾಗೂ ಹೆಣ್ಣು ಹೊಸಿದು ರೂಪಾಯಿಯನ್ನು ಇಸಕೊಂಡು ಎರಡು ಬಿಡಿ ದುಡ್ಡುಗಳೊಡನೆ ಕೊಟ್ಟ ಬಳಿಕ, ರಾ. ಸಾ. ರವರು ದುಮುದುಮು ಉರಿಯುತ್ತೇ ಟಿಕೇಟುಗಳನ್ನು ಕೊಟ್ಟರು ಆ ಕಾಲಕ್ಕೆ ರಾ. ಸಾ ರವರು ಬಳಸಿದ ಮಾತುಗಳ ಬಗ್ಗೆ ವ್ಯಾಖ್ಯಾನವನ್ನೇ ತೆರಬೇಕಾಗುತ್ತ, ಆದರೆ ಅವರ ರವಿಪ್ಪನೊಂದ ಹಾಗೆಯೇ ಹೊರಟು ಬಂದೆವು.

ಪ್ರಸ್ತುತಕ್ಕೆ ಸದಗರತ್ತರಕ್ಕೆ ರಾ. ಸಾ ಟಿಕೇಟ್ ಮಾಸ್ತರವರು ಆಕ್ಷೇಪಣೆಗಳಲ್ಲದವಾಗಿಕೆ ನಮ್ಮ ಸರಕಾರದವರು ಲಿಮಿಟೆಡ್‌ಟೆಂಡರ್ ರೂಪಾಯಿ ಬೆಲೆ ನಾಣ್ಯವನ್ನು ನಿರ್ಮಿಸಿಕೊಡುವ ವ್ಯವಸ್ಥೆಯನ್ನು ಮಾಡಲಿಕ್ಕೆಬೇಕು, ಮತ್ತು ಹಣವನ್ನು ಲೆಕ್ಕಿಸಿ ಟಿಕೇಟುಗಳನ್ನು ಕೊಡುವಬಗ್ಗೆ ಒಬ್ಬರನ್ನು ಬೇರೆ ನಿಯಾಮಿಸಿ ರಾ ಸಾ ರವರು ಸ್ವಸ್ಥ ಕೆಲಸದಿಂದ ತಿಂಗಳಿಗೊಮ್ಮೆ ತಲೆಯನ್ನು ತುರಿಸಿಕೊಳ್ಳುವಂತೆ ಅವಕಾಶವನ್ನು ಕೊಡಬೇಕೆಂದು ವಿನಂತಿ, ಡಾಮಿನಿಯರನ್ನೂ ರಾ. ಸಾ. ರವರನ್ನೂ ಕಾಗದಗಳಿಗೆ ಗುರಿಯಾಗದಂತೆ ಮಾಡುವ ಬಗ್ಗೆ ಸಾಧಿಸಬೇಕೆಂದು ಕೋರಿಕೆಯುಂಟು.

BANGALORE—Printed and published at the KARNATAKA PRESS, No 40, HOSPITAL ROAD, CITY—1893

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವುದು.

**Published Every Monday Morning.**

ಪ್ರಕಾಶಮಿರಿವರ್ನ್ಯತ್ರ್ಯಗನಗರಾನ್ಕರ್ಣ್ಣಾಟಕಪ್ರಕಾಶನಪರಾಧಿಧಾಪ್ರತಿತಸಾಹಿತ್ಯೀಕೋಭಿತಾ॥ ಪ್ರ್ಯಗಾಂಕಹಿತವಾಸದೆನಿಹಿತಮುದ್ರಣಾಸಜ್ಜ ನೈರ್ದ್ವಿ ಕಾಸುಪರಿಪೂರ್ಣತಾದಿಕತಿವಹಾನಸ್ತೂಶಂಮುದಂ॥

| Vol. XX ] | BANGALORE—MONDAY, JUNE 19 1893 | [No 24. |
|---|---|---|
| ಸಂಪುಟ ೨೦. ] | ಬೆಂಗಳೂರು:—ಸನ್ ೧೮೯೩ನೇ ಇಸವಿ ಜೂನ್ ೧೯ನೇ ತಾರೀಖ್ ಸೋಮವಾರ. | [ಸಂಖ್ಯೆ ೨೪. |


## BANGALORE CITY MUNICIPALITY.

### ಬೆಂಗಳೂರು ಸಿಟಿ ಮ್ಯೂನಿಸಿಪಾಲಿಟಿ.

ಸನ್ ೧೮೯೩ ನೇ ಇಸವಿ ಜೂನ್ ಮಾಹೆ ೨೩ ನೇ ಶನಿವಾರದ ದಿನ ಬೆಳಿಗ್ಗೆ ೮ ಘಂಟೆಗೆ ಬೆಂಗಳೂರು ಸಿಟಿ ಮ್ಯೂನಿಸಿಪಲ್ ಕಮ್ಮಿಷನರುಗಳು ಕೂಡಿಕೊಳ್ಳುವ ತಮ್ಮ ಆಫೀಸಿನಲ್ಲಿ ಸಾಧಾರಣ ಸಭೆ ಸೇರುವರು.

ಅದರಲ್ಲಿ ಬರುವ ವಿಷಯಗಳು ಕೆಳಗಿನ ಮಾರ್ಗವಾಗಿ ಇರುವುವು

೧. ಸನ್ ೧೮೯೩ನೇ ಇಸವಿ ಏಪ್ರಿಲ್ ಮೇ ತಿಂಗಳುಗಳ [illegible] ಲೆಕ್ಕ, [illegible] ಲೆಕ್ಕ, [illegible] ಆಫೀಸ ಲೆಕ್ಕ [illegible] ಮತ್ತು [illegible] ಅಭಿವೃದ್ಧಿಯನ್ನು ಕುರಿತ ರಿಪೋರ್ಟ್, ಮತ್ತು [illegible] ಜನನ ಮರಣ ಪಟ್ಟಿ.

೨. [illegible] ಮೈಸೂರ್ ಗವರ್ನಮೆಂಟ್ [illegible] ಸನ್ ೧೮೯೩ ನೇ ಇಸವಿ ಏಪ್ರಿಲ್ ೨೫ ನೇ [illegible] ಲೆಟರ್

೩. ಆಫೀಸ [illegible] ಜನಗಳಿಗೂ [illegible] ವಿಷಯವನ್ನು ಕುರಿತ [illegible].

೪. [illegible] ರಸ್ತೆಯನ್ನು [illegible] ರಸ್ತೆಯನ್ನು [illegible] ಒಂದು [illegible] ತಗದುಕೊಳ್ಳಬೇಕೆಂಬ [illegible] ಸ್ಥಳದ [illegible].

೫. [illegible]

೬. [illegible] ಬೆಂಗ್ಳೂರ [illegible] ಕಟ್ಟಡ [illegible] ೧೦೦ ರೂಪಾಯಿಗಳು [illegible] ಮೊಬಲಗು [illegible].

೭. ಸನ್ ೧೮೯೩ ನೇ ಇಸವಿ ಏಪ್ರಿಲ್ ೧೭ ನೇ ತಾರೀಖಿನಲ್ಲಿ [illegible] ಬರೆದ ಕಾಗದದಲ್ಲಿ ಸೂಚಿಸಲ್ಪಟ್ಟಿರುವ ಅಂಶಗಳು:—

(೧) ಸಿಟಿ [illegible] ವಿಷಯವಾಗಿ ಮಾಡಬೇಕಾದ್ದು.

(೨) ಮ್ಯೂನಿಸಿಪಲ್ [illegible] ಗವರ್ನಮೆಂಟಿನವರ [illegible].

(೩) [illegible].

(೪) ಮ್ಯೂನಿಸಿಪಲ್ [illegible] ಮತ್ತು [illegible].

೮. ಮಿ|| ಎಸ್. [illegible] ಸನ್ ೧೮೯೩ ನೇ ಇಸವಿ ಏಪ್ರಿಲ್ ೧೭ ನೇ [illegible] ನೇ ನಂಬರ ಕಾಗದದಲ್ಲಿ ತಿಳಿಸಿರುವ ವಿಷಯಗಳು:—

(a) [illegible] ಮಣ್ಣು [illegible] ತೆಗೆದು [illegible].

(b) ರಸ್ತೆಯನ್ನು [illegible] ಮಾಡತಕ್ಕದ್ದು.

೯. ಮಿ|| [illegible] ಸಿಟಿ [illegible] ಆಫೀಸ [illegible] ಕಾಲದೊಳಗಾಗಿ [illegible].

೧೦. ಜರದಿ ಬರುವ ರಸ್ತೆಗಳಿಗೆ [illegible] ಮತ್ತು ಮಾಡುವದಕ್ಕೆ [illegible] ಅಂದಾಜ್.

| | | | |
|---|---|---|---|
| ೧ | [illegible] | ... | ೬೭೩ |
| ೨ | [illegible] | ... | ೯೩೧ |
| ೩ | [illegible] ರಸ್ತೆಗೆ | ... | ೮೦೩ |
| ೪ | [illegible] ರಸ್ತೆಗೆ | ... | ೯೨೭೩ |
| ೫ | [illegible] ರಸ್ತೆಗೆ | ... | ೯೫೧೦ |
| ೬ | [illegible] ರಸ್ತೆ [illegible] | ... | ೧೩೦೦ |

೧೧. ಮ್ಯೂನಿಸಿಪಲ್ [illegible] ಆಫೀಸ [illegible] ಗವರ್ನಮೆಂಟಿನವರು [illegible] ಸನ್ ೧೮೯೩ನೇ ಇಸವಿ [illegible] ನಂಬರ್ ಪ್ರೊಸೀಡಿಂಗ್ಸ್.

೧೨. ಮ್ಯೂನಿಸಿಪಲ್ ಲೆಕ್ಕಗಳ ತನಿಖೆ [illegible] ನೇ ನಂಬರ್ [illegible] ಪ್ರೊಸೀಡಿಂಗ್ಸ್.

೧೩. [illegible] ಜಮೀನಿನ ವಿಷಯಕ್ಕೆ ಸಂಬಂಧಪಟ್ಟ [illegible].

೧೪. [illegible]

೧೫. [illegible] ಸನ್ ೧೮೯೩ನೇ ಇಸವಿ [illegible] ನಂಬರ್ [illegible].

೧೬. [illegible] ಸನ್ ೧೮೯೩ ನೇ ಇಸವಿ [illegible] ನಂಬರ್ [illegible].

೧೭. [illegible] ಕುರಿತ [illegible].

೧೮. [illegible] ವಿಷಯದಲ್ಲಿ [illegible].

೧೯. [illegible] ಗವರ್ನಮೆಂಟಿಗೆ [illegible] ವಿಷಯ [illegible] ಮತ್ತು [illegible].

(೧) ಮ್ಯೂನಿಸಿಪಲ್ ಇಂಗ್ಲಿಷ್ ಸ್ಕೂಲ್.

(೨) ಹುಡುಗರ ಕನ್ನಡ ಸ್ಕೂಲ್ ಮತ್ತು ಇಂಗ್ಲಿಷ್ ಸ್ಕೂಲನ್ನು [illegible] ಅಂದಾಜ್ ಪಟ್ಟಿ.

೨೦. ಸುಲ್ತಾನುಲ್ ಅಕಬರ್ [illegible] ಪತ್ರಿಕೆಯು ಪ್ರೊಸ್ಕ್ರೈಬ್ [illegible] ಮ್ಯೂನಿಸಿಪಲ್ ನೋಟೀಸುಗಳನ್ನು [illegible] (೧೦) ಹತ್ತು ರೂಪಾಯಿ [illegible] ತಮ್ಮ ಪತ್ರಿಕೆಯಲ್ಲಿ ಪ್ರಕಟಿಸುವದಕ್ಕೆ ಕೊಡಬೇಕೆಂಬದಾಗಿ ಬರೆದುಕೊಂಡ ೧೮೯೩ ನೇ ಇಸವಿ ಮೇ ೨೨ ನೇ ತಾರೀಖಿನ ೧೨೨ ನೇ ನಂಬರ್ ಲೆಟರ್.

೨೧. [illegible] ತಮ್ಮ [illegible] ದಿಕ್ಕಿನಲ್ಲಿರುವ [illegible] ಜಮೀನನ್ನು [illegible] ಬರೆದುಕೊಂಡ [illegible] ೧೯ ನೇ ತಾರೀಖಿನ ಲೆಟರ್.

೨೨. [illegible] ಮಿಷನ್ [illegible] ಸ್ಕೂಲ್ [illegible] ಕಟ್ಟಡ [illegible] ವಿಸ್ ಮುಲ್ಲರ್ [illegible] ಬರೆದುಕೊಂಡ ಲೆಟರ್.

೨೩. [illegible] ತಮ್ಮ [illegible] ಜಮೀನನ್ನು ತಮಗೆ ಕೊಡಿಸಬೇಕೆಂಬದಾಗಿಯೂ, ಮತ್ತು [illegible] ಜಾತಿ ಜನಗಳ ಉಪಯೋಗಾರ್ಥವಾಗಿ [illegible] ಮಿ|| ಪಿ. ಎ. ನರಸಿಂಹಯ್ಯಂಗಾರ್ರು ಬರೆದುಕೊಂಡ ೧೮೯೩ ನೇ ಇಸವಿ ಮಾರ್ಚಿ ೩ ನೇ ತಾರೀಖಿನ ಲೆಟರ್.

೨೪. [illegible] ಪೇಟೆಯಲ್ಲಿ ಮನೆ ಕಟ್ಟಿಕೊಳ್ಳುವದಕ್ಕಾಗಿ ಕೊಟ್ಟ ಸ್ಥಳದ ವಿಷಯವಾಗಿ [illegible] ೧೮೯೩ ನೇ ಇಸವಿ ಜೂನ್ ೨ ನೇ ತಾರೀಖ್ [illegible] ನೇ ನಂಬರ ಗವರ್ನಮೆಂಟ್ ಪ್ರೊಸೀಡಿಂಗ್ಸ್.

೨೫. ಬಜೆಟ್ ಮೊಬಲಗನ್ನು ಅತಿಕ್ರಮಿಸಿದ ಮತ್ತು [illegible] ಸರ್ಕಾರ್ [illegible] ಖರ್ಚು ಮತ್ತು [illegible] ಸಂಬಂಧಪಟ್ಟ [illegible] ಉಪಯೋಗಿಸಬೇಕಾದ ಮೊಬಲಗುಗಳ ಜಾಪ್ತಾ ಪಟ್ಟಿ.

೨೬. ೧೮೯೩ನೇ ಇಸವಿ ಏಪ್ರಿಲ್ ಮಾಹೆಯ ಮ್ಯೂನಿಸಿಪಲ್ ಲೆಕ್ಕಗಳನ್ನು ತನಿಖೆಮಾಡಿದ ಆಡಿಟರವರ ರಿಪೋರ್ಟ್.

ಜಾಸ್ತಿ ಅಂಶಗಳು.

೧. ೧೮೯೩ ನೇ ಇಸವಿ ಜೂನ್ ೫ ನೇ ತಾರೀಖಿನ [illegible] ನೇ ನಂಬರ ಗವರ್ನಮೆಂಟ್ ಪ್ರೊಸೀಡಿಂಗ್ಸ್.

೨. [illegible] ಲೆಕ್ಕದಿಂದ ತೆಗೆದು ಹಾಕತಕ್ಕ ವಿಷಯದಲ್ಲಿ ತಯಾರಾದ ಪಟ್ಟಿ.

ತಾರೀಖ್ ೧೫ ನೇ ಜೂನ್ }
೧೮೯೩ ನೇ ಇಸವಿ. }

K. Shinivasa Rao,
*Vice President.*

### ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು.

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ಸಾಲ್ ಒಕ್ಕೆ ... | ...6—0—0 | 8—0—0 |
| 6 ತಿಂಗಳಿಗೆ .. | 3—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ಸಾಲಿಂಗೆ ... .. | 3—0—0 | 4—0—0 |
| 6 ತಿಂಗಳಿಗೆ ... ... | 1—12—0 | 2—8—0 |

ಈ ಪತ್ರಿಕೆಗೆ ದಯಮಾಡಿ [illegible] ಒಂದು ತಿಂಗಳೊಳಗಾಗಿ ಚಂದಾ ಮೊಬಲಗು [illegible] ಮಾತ್ರವೆ [illegible] ಪತ್ರಿಕೆ [illegible]. ಚಂದಾದಾರರು ಇಂಗ್ಲಿಷ್ [illegible] ಕನ್ನಡ [illegible] ಅಥವಾ [illegible] ತಿಂಗಳಿಗಿಂತ [illegible] ಚಂದಾ ಮೊಬಲಗು ಅಂಗೀಕರಿಸಲ್ಪಡಲಾರದು.

ಪ್ರಕಟನೆಯ ರಿವಾಜ್.

ಕನ್ನಡ [illegible] ಪಂಕ್ತಿ ಒಂದಕ್ಕೆ ೦—೨—೦
ಇಂಗ್ಲಿಷ್ [illegible] ಪಂಕ್ತಿ ಒಂದಕ್ಕೆ ೦—೧—೦

[illegible] ಈ ಪತ್ರಿಕೆಯಲ್ಲಿ [illegible] ಪ್ರಕಟನೆಗಳು [illegible] ಸ್ಪಷ್ಟವಾಗಿ [illegible] ಪ್ರಕಟಿಸುತ [illegible] ಪ್ರಕಟಿಸಲ್ಪಟ್ಟದ್ದಾಗ್ಯೂ [illegible] ಪ್ರಕಟನೆಗಳನ್ನು [illegible] ಪ್ರಕಟನೆಯುಳ್ಳ ಈ ಪತ್ರಿಕೆಗೆ ಕಳುಹಿಸುವ [illegible] ನಾವು ಜವಾಬ್ದಾರರಾಗಲಾರೆವು. ಕ್ರಮವಾಗಿ [illegible] ಪ್ರಕಟಿಸುತ್ತೇವೆ. [illegible].

### ನೋಟಿಸ್.

ಗಣೇಶ ರಾಮಚಂದ್ರ ಕರ್ಕೆ ಮತ್ತು ಕಂಪೆನಿ.
ಕಮ್ಮಿಷನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬರಹ ಮೂಲಕವೆ [illegible] ವ್ಯಾಲ್ಯು ಪೇಯಬಲ್ ಪೋಸ್ಟ್ ಮೂಲಕ ಕಮ್ಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರದ ಔಷಧಗಳು, ಪುಸ್ತಕಗಳು, ವಸ್ತ್ರಗಳು, ಬಟ್ಟೆ ಮುತ್ತುಗಳು, ಛತ್ರಿಗಳು, ವಾಚ್‌ಗಳು, [illegible] ಪಿನ್ನುಗಳು, [illegible], [illegible], [illegible] [illegible] ಕನ್ನಡಕಗಳು, [illegible] [illegible] ಟೋಪಿಗಳು, ಆಫೀಸ [illegible], [illegible], ಅತ್ತರುಗಳು, ಅತ್ಯುತ್ತಮವಾದ ರತ್ನಗಳು, ಚಿನ್ನದಿಂದ ಕಟ್ಟಲ್ಪಟ್ಟ ಉಂಗುರಗಳು, [illegible] ಪಾತ್ರೆಗಳು, ಜರ್ಮನ್ [illegible] ಪಾತ್ರೆಗಳು, [illegible], [illegible] ಮೊದಲಾದ ಇತರ ಸಾಮಾನುಗಳು.

ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟ್ಯಾಂಪ್ ಕಳುಹಿಸಿದ ಹೊರತು ಜವಾಬ್ ದೊರೆಯಲಾರದು.

ವಿಳಾಸ,—ಗಣೇಶ ರಾಮಚಂದ್ರ ಕರ್ಕೆ,
ಮತ್ತು ಕಂಪೆನಿ, ಕಮ್ಮಿಷನ್ ಏಜಂಟ್ಸ್,
ಠಾಕೂರದ್ವಾರ, ಮಾರ್ಕೆಟ್ ಪೋಸ್ಟ್, ಮುಂಬೈ.

### ಕೊಡಗು ಫಾರೆಸ್ಟ್ ಇಲಾಖಾ.

ನೋಟಿಸ್.

ಮೈನರ್ ಫಾರೆಸ್ಟ್ ಹರಾಜುಗಳು ಜೂನ್ ತಾ ತಾರೀಖ್ 15 ರಲ್ಲಿ ಇಟ್ಟದ್ದನ್ನು ಜೂನ್ 30 ಕ್ಕೆ ಬದಲಾಯಿಸಿದೆ.

ಡುಣಸೂರ್ ಟಿಂಬರ್ ಹರಾಜ್ ಜೂನ್ 21ರಿಂದ ಬರುವ ಜುಲೈ 15 ಕ್ಕೆ ಬದಲಾಯಿಸಿದೆ.

ಮಡಿಕೇರಿ 10ನೇ ಜೂನ್ 1893ನೇ ಇಸವಿ

B. Srinivasa[illegible],
*for Extra Assistant Conservator,*
*Incharge of Coorg Forest.*

## THE MONEY MARKET

ಮದರಾಸ್, ಶನಿವಾರ, ತಾರೀಖ್ 17ನೇ ಜೂನ್ 1893
ಸೇಕಡ ೩|ರ ಬಾಬತು ಗವರ್ನಮೆಂಟ್ ಪತ್ರಗಳು ರೂಪಾಯಿ, 107–0–0 ಇಂದ 107–8–0 ವರೆಗೆ
ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತು 975 ಲಾಗಾಯತು 980ವರೆಗೆ,
ಅರುಷ್ನಾಯಲ್ ವ ಲ್ಯಾಂಡ್ ಮರ್ಟ್ಗೇಜ್ ಬ್ಯಾಂಕ್ ಷೇರುಗಳು, (100) ಬಾಬತು 160 ಇಂದ 165 ವರೆಗೆ
ಸವರಗಳು, 16–2–0 ಇಂದ 16–7–0 ವರೆಗೆ
ಬ್ಯಾಂಕ್‍ಬಿಲ್‍ಗಳು ಯಾನೆ ದರ್ಶನಹುಂಡಿಗಳು, ರೂ|| ೧ಕ್ಕೆ
6 ತಿಂಗಳವಾಯಿದೆಗೆ, 1s. 3 3/32 d
ಟಿಟೀ 4 ತಿಂಗಳವಾಯಿದೆಗೆ, 1s 3 1/32 d
ಟಿಪೀ ಕೇಳಿದಾಗ, 1s 3 5/6 d.


# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA

MONDAY, JUNE 19 1893
೧೮೯೩ನೇ ಇಸವಿ ಜೂನ್ ತಾ|| ೧೯ ನೇ ಸೋಮವಾರ


## ಬೆಂಗಳೂರು ಧಾರಣಿವಾಸಿಯಂ ಕುರಿತು.

ಈ ಸೀಮೆಯಲ್ಲಿರತಕ್ಕ ಇತರ ಯೆಲ್ಲಾ ಸ್ಥಳಗಳಿಗಿಂತಲೂ ಈ ಬೆಂಗಳೂರು ದೊಡ್ಡ ಷಹರಾಗಿಯೂ, ವ್ಯಾಪಾರಸ್ಥಳವಾಗಿಯೂ ಇರುತ್ತದೆ ವ್ಯಾಪಾರಕ್ಕೆ ಮುಖ್ಯವಾದ್ದು ಆಹಾರ ಪದಾರ್ಥ, ಅಂದರೆ—ಅಕ್ಕಿ, ರಾಗಿ ಶ್ರೇಷ್ಠವಾದದ್ದು ಅಂದಾಹಾಗಾಯಿತು. ಈ ಎರಡೂ ಈ ಪ್ರಾಂತ್ಯಲ್ಲಿ ತುಂಬಿದೆ. ಅದನ್ನು ಖರೀದಿ ಫರೋಖ್ತ್ ಮಾಡುವ ಜನರು ಪ್ರಾತಃಕಾಲ ಮೊದಲುಗೊಂಡು ಮಧ್ಯಾಹ್ನದವರಿವಿಗೂ ಅರಿಗಿನಪೇಟೆಯಲ್ಲಿ ತುಂಬಿರುತ್ತಾರೆ ಪರಂತು ಈ ಜಿನಸಿಗಳಿಗೆ ಯಾವಾಗ್ಯೂ ನಿರಖ್ ಚಲಾವಣೆಯೇ ಇರುತ್ತದೆ

ರಾಗಿ ಇಲ್ಲಿಂದ ರಫ್ತಾಗುತ್ತದೆಂದು ಹೇಳಿದರೂ ಹೇಳಬಹುದು. ಅದು ಇತರಸೀಮೆಗಳಲ್ಲಿ ಬೆಳೆಯುತ್ತದ್ದಿಲ್ಲ, ಅಕ್ಕಿ ವಿಷಯವಾದರೋ ಅದು ಯಾವಾಗ್ಯೂ ಆಮದಿಗೂ ರಫ್ತಿಗೂ ವಿಷಯವಾಗಿರುತ್ತದೆ. ಇದಕ್ಕೆ ಉದಾಹರಣೆ ಏನೆಂದರೆ, ನಾವು ಅರಿಗಿನಪೇಟೆಗೆ ಹೋಗಿ ಅಕ್ಕಿಯ ರಾಸಿಗಳನ್ನು ನೋಡಿ ಇದು ಯಾವೂರಿನದು ಯೆಂದು ಕೇಳಿದರೆ ಗೋರೀಬಿದನೂರು, ಮದ್ದಗಿರಿ, ಹಿಂದೂಪುರ, ಕದಾಚಿತ್ ಅನಂತಪುರವೆಂದು ಹೇಳುತ್ತಾರೆ. ಇದು ಉತ್ತರಸೀಮೆ ಅಕ್ಕಿ ಒಳ್ಳೇದು ಯೆಂದು ತಿಳಿದುಕೊಳ್ಳುತ್ತಾರೆ ಗಂಜಾಂ, ಪಟ್ಟನಾಯಕನಹಳ್ಳಿ ಅಕ್ಕಿಯೆಂದು ಹೇಳಿದರೆ ಇದು ಪಶ್ಚಿಮ ಸೀಮೆಯದು, ಸರುಕು ಸಾಧಾರಣವಾದ್ದೆಂದು ತಿಳಿದುಕೊಳ್ಳುತ್ತಾರೆ ವೇಲೂರು ಅಕ್ಕಿಯೆಂದು ಹೇಳಿದರೆ ಕೊಂಚ ಅನುಮಾನಪಡುತ್ತಾರೆ ಮದರಾಸ್ ಕಾಕಿನಾಡಾ ಯೆಂದು ಹೇಳಿದರೆ ಪ್ರೈಸು ಬಂತು, ಕಿಚ್ಚನೆಯೇರ್ಪಟ್ಟಿತೆಯೆಂದು ಗಾಬರಿಪಡುತ್ತಾರೆ ಇದರಿಂದ ಉತ್ತರಪಶ್ಚಿಮ ದಿಕ್ಕಿನಿಂದ ಬರತಕ್ಕ ಸರಕು ಒಳ್ಳೇದು ಅಗ್ಗವಾದ್ದುಯೆಂದು ಹೇಳಿದ ಹಾಗಾಯಿತು ಉತ್ತರದಿಕ್ಕಿನ ಸರಕಿಗೆ ಈಗ ಸ್ವಲ್ಪ ಆಮದಿಗೆ ಆಸ್ಪದ ಪ್ರಾಪ್ತವಾಗಿದೆ. ಈ ಪ್ರಾಂತಕ್ಕೂ ಗುಂತಕಲ್ಲಿಗೂ ೧೪೪ ಮೈಲಿದೂರವಿದೆ. ಹಿಂದೂಪುರದ ರೈಲ್ವೆ ಕಂಪ್ಲೀಟಾದ್ದರಿಂದ ಅನಾಯಾಸವಾಗಿ ಹೇರಳವಾಗಿ ಜಿನಿಸು ಬರಬಹುದು. ಹಿಂದು ಕೃಷ್ಣಾ ನದಿಯಿಂದ ಬೆಳೆಯುವ ಜಿನಿಸಿನಸ್ಥಿತಿ ಸ್ವಲ್ಪ ವಿಸ್ತಾರವಾಗಿ ಹೇಳುತ್ತೇವೆ. ಬೆಜವಾಡಾ ಸೀತಾನಗರ ಯೆಂಬ ಯೆರಡು ಪರ್ವತಗಳ ಮಧ್ಯದಲ್ಲಿ ಪ್ರವಹಿಸುವ ಕೃಷ್ಣಾನದಿಗೆ ಆಣೆಕಟ್ಟು ಹಾಕಿದ್ದಾರೆ ಇದರಿಂದ ಉಭಯಪಾರ್ಶ್ವಗಳ ಕಾಲುವೆಗಳಲ್ಲಿಯೂ ನೀರು ಹರಿದು ಅಲ್ಲಿಂದ ಸಮುದ್ರದವರಿವಿಗೂ ಇರುವ ಭೂಮಿಯು ವಿಶಿಷ್ಟವಾಗಿ ಭತ್ತದಪೈರಾಗುತಿದೆ. ಆರು ದೊಡ್ಡಕಾಲುವೆಗಳು, ಹಿಂದು ಸಣ್ಣದು ಇದೆ. ಇದರಿಂದ ಪೈರಾಗುವದೇ ಅಲ್ಲದೆ ಜಿನಿಸು ಮತ್ತು ಜನಗಳ ಆಮದ ರಫ್ತಿಗೆ ಕೇವಲ ಉಪಯೋಗವಾಗಿದೆ. (೧) ಮಛಲೀಬಂದರ್ ಕಾಲುವೆ ಯೆಂಬುವದು ಬೆಜವಾಡೆಯಿಂದ ಹೊರಟು, ಬೆಜವಾಡಾ ನೂಜಿವೀಡು, ಬಂದರ್, ತಾಲ್ಲೂಕುಗಳಲ್ಲಿ ಪ್ರವಹಿಸಿ ಸಮುದ್ರಕ್ಕೆ ಸೇರುತ್ತೆ. ಇದು ನಾಲ್ವತ್ತೆಂಟು ಮೈಲಿಗಳುದ್ದವಿದೆ. (೨) ಯೇಲೂರುಕಾಲ್ವೆಯೆಂಬುವದು ಬೆಜವಾಡಾ, ನೂಜಿವೀಡು, ಜಮೀನ್ದಾರಿಗಳಮೇಲೆ ಯೇಲೂರಿಗೆ ಹೋಗಿ ಗೋದಾವರಿ ಕಾಲುವೆಯಲ್ಲಿ ಸಂಗಮವಾಗುತಿದೆ. ಇದರ ಉದ್ದ ಮೂವತ್ತೆಂಟು ಮೈಲಿಗಳು. (೩) ತುಂಗಭದ್ರಾಕಾಲುವೆ–ಇದು ಸೀತಾನಗರದಿಂದ ಹೊರಟು ಗುಂಟೂರು, ರೇಪಲ್ಲಿ ತಾಲ್ಲೂಕುಗಳಲ್ಲಿ ಪ್ರವಹಿಸುವದು. ಮತ್ತು ದುಗ್ಗಿರಾಲಾ ಯೆಂಬ ಕಾಲುವೆಯಲ್ಲಿ ಸೇರಿಹೋಗುವದು. ಇದರ ಉದ್ದ ಹದಿಮೂರು ಮೈಲಿಗಳು. (೪) ಕೊಮ್ಮಮೂರು ಕಾಲ್ವೆ—ಇದು ದುಗ್ಗಿರಾಲಾ ಯೆಂಬ ಕಾಲುವೆಯಲ್ಲಿ ಪ್ರತ್ಯೇಕಿಸಿ ಅಯಿವತ್ತಾರು ಮೈಲ್ ಪ್ರವಹಿಸಿ ಪೆದ್ದಗಂಜಾಂ ಎಂಬ ಊರುಬಳಿ ಇರುವ ಬಕಿಂಗ್ಹಾಂ ಕಾಲುವೆಗೆ ಸೇರುವದು, (೫) ನಿಜಾಂಪಟ್ಣಕಾಲುವೆ—ಇದು ತುಂಗಭದ್ರಾಕಾಲುವೆ ಹದಿಮೂರನೇ ಮೈಲಿಯಿಂದ ಪ್ರತ್ಯೇಕವಾಗಿ ರೇಪಲ್ಲಿ ತಾಲ್ಲೂಕಿನಲ್ಲಿ ಪ್ರವಹಿಸಿ ಮೂವತ್ತೊಂದು ಮೈಲಿಹೋಗಿ ನಿಜಾಂಪಟ್ಣದಬಳಿಯ ಸಮುದ್ರಕ್ಕೆ ಸೇರುವದು (೬) ಪಶ್ಚಿಮ ಕಾಲುವೆ—ಸೀತಾನಗರದಬಳಿಯಲ್ಲಿರುವ ಲೀಪೀದ್ರನಾಥ ಯೆಂಬ ಸ್ಥಳದಲ್ಲಿ ಪಟ್ಟುನಾಲ್ವತ್ತೇಳು ಮೈಲ್ ಪ್ರವಹಿಸಿ ಸಮುದ್ರಕ್ಕೆ ಸೇರುವದು ಈ ಕಾಲುವೆಯಲ್ಲಿ ಮಾರ್ಗ ಇಪ್ಪತೆರಡು ಮೈಲಿ ದೂರ ಪವಗೆ ಹೋಲುವದೆ ಯಾವದು ಚಿಲ್ಲರೆ ಕಾಲುವೆಗಳ ಸಂಗತಿ ಹೇಳತಕ್ಕದ್ದಿನ ಪತ್ಯಕವು ಮೇಲೆ ಸರಸ್ಸು ಯೆಂದು ಹೇಳುವವಲ್ಲಾ ಅದು ಕೊಲ್ಲೇರಿಯೆಂದು ಕರೆಯಲ್ಪಟ್ಟು ಗುಡಿವಾಡಾ ತಾಲೂಕಿನಲ್ಲಿ ಗೋದಾವರಿ ಡಿಸ್ಟ್ರಿಕ್ಟಿಗೆ ಅಂಟಿಕೊಂಡಿರುತ್ತದೆ ಇದರ ವೈಶಾಲ್ಯ ೧೦೦ ಮೈಲಿಗಳು, ಕೃಷ್ಣಾ ಗೋದಾವರಿ ಯೆರಡು ನದೀನೀರುಗಳು ಇದಕ್ಕೆ ಬರುತಲಿದೆ. ಇದರಿಂದ ಯೆಷ್ಟು ಬತ್ತ ಬೆಳೆಯಾಗಬಹುದೋ ಯೆಲ್ಲರೂ ಯೋಚಿಸಬಹುದು ಗುಂತಕಲ್ಲಿಗೆ ಹತ್ತಿ ಇರುವ ಅನಂತಪುರ ಧರ್ಮಾವರ ಯೆಂಬ ಸ್ಥಳಗಳಲ್ಲಿಯೂ ಭಾರೀ ಕೆರೆಗಳಿವೆ ಅಲ್ಲಿಂದಲೂ ಹೇರಳವಾಗಿ ಭತ್ತ ಬರಬಹುದು. ಯೇಕೆಂದರೆ ಸದರ್ನ ಮಹಾರಾಷ್ಟ್ರ ರೈಲ್ವೇ ಬೆಜವಾಡದಿಂದ ಬೆಂಗಳೂರಿಗೆ ಬರುತಲಿದೆ ಇನ್ನೂ ಉತ್ತರದಿಕ್ಕಿನವು ಹೀಗಾಯಿತಲ್ಲ, ಪಶ್ಚಿಮ ದಿಕ್ಕಿನಲ್ಲಿರತಕ್ಕ ಕಾವೇರಿನದಿಗೆ ಯೆಡತೊರೆ ನಂಜನಗೂಡು ಈ ತಾಲ್ಲೂಕುಗಳಿಗೆ ಹೊಸದಾಗಿ ನಾಲಾ ಯೇರ್ಪಾಡಾಗಿದೆ. ಅಲ್ಲಿಂದಲೂ ಬೇಕಾದಹಾಗೆ ಸರಬರಾಯ್ ಆಗಬಹುದು ಇದರಿಂದ ಅಕ್ಕಿ ಧಾರಣೆಯೂ ಸರಾಸರಿ ಪಲ್ಲ ೧ಕ್ಕೆ ೪ ರೂಪಾಯಿ ಆಗ ಬಹುದೆಂದು ತೋರುತಿದೆ.

## ದೇವದಾಸಿಯರಂ ಕುರಿತು.

ನಾಯಕಸಾನಿಯರನ್ನು ದೇವಸ್ಥಾನಗಳಲ್ಲಿ ಸೇವಾರ್ಥವಾಗಿ ಇಟ್ಟಿರುವದು ಸರಿಯಲ್ಲವೆಂತಲೂ, ಅವರುಗಳನ್ನು ಶುಭ ಶೋಭನಾದಿಗಳಲ್ಲಿ ತಾಫೆ ಉದ್ದಿಸ್ಯ ದೊಡ್ಡಮನುಷ್ಯರಾದವರು ತಮ್ಮ ತಮ್ಮ ಮನೆಗಳಿಗೆ ಕರೆಯಿಸುವ ವಾಡಿಕೆಯು ಕೆಟ್ಟದ್ದೆಂತಲೂ ಕೆಲವರಿಗೆ ತೋರಿ ಈ ಪದ್ಧತಿಯನ್ನು ನಿಲ್ಲಿಸಬೇಕೆಂಬ ಕುತೂಹಲದಿಂದ ಸ್ವಲ್ಪ ದಿವಸಗಳ ಹಿಂದೆ ಮದರಾಸಿನಲ್ಲಿ ಒಂದು ದೊಡ್ಡ ಸಭೆ ನಡೆದ ವಿಷಯವು ನಮ್ಮ ವಾಚಕರಿಗೆ ತಿಳಿದಿರಬಹುದು

ರಾಮನಾಥ ಸಂಸ್ಥಾನದ ರಾಜರಾದ ವಿಜಯ ರಘುನಾಥಭಾಸ್ಕರ ಸೇತುಪತಿಯವರು ಮೇಲೆ ಕಂಡವರ ಅಭಿಪ್ರಾಯವನ್ನೇ ಅನುಮೋದಿಸಿ ಅವರು ಮದರಾಸಿನಿಂದ ತಮ್ಮ ಸಂಸ್ಥಾನಕ್ಕೆ ಹೋಗುವಾಗ ಮಾರ್ಗಸ್ತೇನ ಮಧುರೆಯಲ್ಲಿಳಿದ ಕಾಲದಲ್ಲಿ ಅಲ್ಲಿನ ದೊಡ್ಡಮನುಷ್ಯರು ಅವರಿಗೆ ಮಾಡಿದ ಆತಿಥ್ಯವನ್ನು ಕೈಗೊಂಡು ಅನಂತರ ತದಂಗವಾಗಿ ಯೇರ್ಪಡಿಸಿದ್ದ ತಾಫೆಯನ್ನು ಕಟಾಕ್ಷಿಸುವದಕ್ಕೆ ದಯಮಾಡಬೇಕೆಂದು ಅಪೇಕ್ಷಿಸಲ್ಪಟ್ಟಾಗ ಅದರ ನಾಟ್ಯವನ್ನು ನೋಡುವದು ತಮಗೆ ಸಮ್ಮತವಲ್ಲವೆಂದು ಹೇಳಿ ತಿರಸ್ಕರಿಸಿದ ಸಂಗತಿಯೂ ನಮ್ಮ ವಾಚಕರಿಗೆ ತಿಳಿದಿರಬಹುದು. ಈಚೆಗೆ ಸದರೀ ಸೇತುಪತಿ ರಾಜರವರು ಈ ವಿಷಯವನ್ನು ಉದಾಸೀನಮಾಡದೆ ವೇಶ್ಯಾಸ್ತ್ರೀಗಳನ್ನು ದೇವಸ್ಥಾನಗಳಲ್ಲಿ ದೇವದಾಸಿಯರಿಗೆ ಶಾಸ್ತ್ರತಃ ನೇಮಕವಾಗಿರುವ ಕಾರ್ಯಗಳನ್ನು ನಡೆಸಲು ಇಟ್ಟಿರುವ ಪದ್ಧತಿಯು ಸರಿಯಾದದ್ದೋ, ಅಲ್ಲವೆ ಎಂಬ ವಿಷಯದಲ್ಲಿ ಶಾಸ್ತ್ರವಿಧಿ ಹ್ಯಾಗೆ ಯೇರ್ಪಟ್ಟಿದೆಯೋ ಅದನ್ನು ತಿಳಿಸಬೇಕೆಂದು ಪ್ರಾರ್ಥಿಸಿ ಶೃಂಗೇರಿ, ಕುಂಭಕೋಣ, ಅಹೋಬಲ, ವಾನಮಾಮಲೆ, ಮೊದಲಾದ ಮಠಾಧಿಪತಿಗಳಿಗೂ, ಚಿದಂಬರದ ದೀಕ್ಷಿತರಿಗೂ, ಕಂಚಿಯ ಗುರುಕ್ಕಳುಗಳಿಗೂ ಪ್ರಸಿದ್ಧ ಪಂಡಿತರಾದ ಮನ್ನಾರ್‍ಗುಡಿ ರಾಜುಶಾಸ್ತ್ರಿಗಳು ಮೊದಲಾದವರಿಗೆ ವಿಜ್ಞಾಪನೆ ಪತ್ರಿಕೆಯನ್ನು ಬರೆದುಕೊಂಡಿರುತ್ತಾರೆ. ಅನಂತರ –

"ನಿಮ್ಮ ಶಿವಾಲಯಗಳಲ್ಲಿ ದೇವರ ಸೇವಾರ್ಥವೆಂಬದಾಗಿ ವೇಶ್ಯಾಸ್ತ್ರೀಗಳನ್ನು ದೇವದಾಸಿಯರೆಂಬ ಅಭಿದಾನದಿಂದ ಇಟ್ಟಿರುವ ಪದ್ಧತಿ ಇದೆ. ದೇವರ ಆರಾಧನಾಕ್ರಮವನ್ನು ವಿಧಿಸಿರುವ ಆಗಮಗಳ ರೀತ್ಯಾ ನೋಡುವಲ್ಲಿ, ಈ ದೇವದಾಸಿಗಳೆಂಬುವರು ಆಜನ್ಮ ಬ್ರಹ್ಮಚಾರಿಣಿಗಳಾಗಿಯೂ, ನಿರ್ಮಲ ಮನಸ್ಕರಾಗಿಯೂ, ದೇವತಾರಾಧನೆ ಕಾಲದಲ್ಲಿ ನೃತ್ತ ಗೀತಗಳನ್ನು ಮಾಡಬೇಕಾದವರಾಗಿಯೂ, ಇತರ ಕಾಲಗಳಲ್ಲಿ ಅಂತವರ ವಾಸಕ್ಕಾಗಿ ಯೇರ್ಪಟ್ಟ ಮಠಗಳಲ್ಲಿ ವಾಸ ಮಾಡುತ ದೇವರಿಗೆ ಪುಷ್ಪಹಾರಾದಿಗಳನ್ನು ಮಾಡುವ ಕಾರ್ಯದಲ್ಲಿ ನಿರತರಾಗಿರತಕ್ಕವರಾಗಿಯೂ ಇರಬೇಕೆಂದು ನಿರ್ಧರಿಸುತ್ತಿದೆ"

"ಹೀಗಿದ್ದಾಗ್ಯೂ ಈಗಿನ ಕಾಲದ ದೇವದಾಸಿಗಳೆಂಬುವರಾದರೋ ಆಗಮಗಳಿಗೆ ಶುದ್ಧ ವ್ಯತಿರಿಕ್ತವಾದ ಸ್ವೈರಿಣಿಗಳಾಗಿ ಪ್ರವರ್ತಿಸಿರುತ್ತಾರೆ. ಆದ್ದರಿಂದ ಈ ವಿಧವಾದ ಹೆಂಗಸರುಗಳನ್ನು ದೇವಸ್ಥಾನಗಳ ನೌಕರಿಗಳಿಂದ ತಪ್ಪಿಸಿ ತನ್ಮೂಲಕವಾಗಿ ನಮ್ಮ ದೇವಾಲಯಗಳನ್ನು ಶುದ್ಧಗೊಳಿಸಬೇಕೆಂಬ ತಾತ್ಪರ್ಯವಿರುವದರಿಂದ ತಾವುಗಳು ದಯವಿಟ್ಟು ಕೆಳಗೆ ಉದಹರಿಸಿರುವ ಪ್ರಶ್ನೆಗಳಿಗೆ ಉತ್ತರವಂ ದಯಪಾಲಿಸಬೇಕಲ್ಲದೆ ಇದೇ ವಿಷಯವಾಗಿ ಬರುವ ಆವಣಿ ತಿಂಗಳ ೧೧ನೇ ತೇದಿಯಲ್ಲಿ ಮದುರೆಯೊಳು ನಡೆಯಬೇಕೆಂದು ನಿರ್ಧರಿಸಿರುವ ದೊಡ್ಡ ಸಭೆಗೆ ತಮ್ಮ ಮಠದ ಪ್ರತಿನಿಧಿಯಾಗಿ ಒಬ್ಬ ಪಂಡಿತರನ್ನು ಕಳುಹಿಸಬೇಕೆಂದು ಪ್ರಾರ್ಥಿಸುತ್ತೇನೆ"

ಪ್ರಶ್ನೆಗಳು.

೧ ದೇವದಾಸಿ ಎಂಬ ಪದದ ಅರ್ಥವೇನು?
೨ ದೇವದಾಸಿಗಳೆಂಬುವರು ಆಮರಣಾಂತ ನಿಯತ ಬ್ರಹ್ಮಚಾರಿಣಿಗಳಾಗಿರಬೇಕೆಂದು ಆಗಮಗಳು ವಿಧಿಸುತ್ತಿವೆಯೆ ಇಲ್ಲವೆ?
೩ ದೇವದಾಸಿಗಳೊಡನೆ ದೇಹಸಂಬಂಧಮಾಡುವದು ಮಾತೃಗಮನಕ್ಕಿಂತಲೂ ಹೆಚ್ಚಾದ ಪಾಪವೆಂದು ಆಗಮಗಳು ಮೊರೆಯಿಡುತ್ತಿವೆಯೆ ಇಲ್ಲವೆ?
೪. ಹೀಗಿದ್ದ ಪಕ್ಷದಲ್ಲಿ ಸ್ವೈರಿಣಿಗಳಾದ ಈ ಹೆಂಗಸರನ್ನು ದೇವಾಲಯಗಳಲ್ಲಿ ಸೇವೆಗಾಗಿ ಇಟ್ಟಿರುವದು ಆಗಮಾಂಗೀಕಾರವಾಗುವದೆ? ಹಾಗಾಗುವ ಪಕ್ಷದಲ್ಲಿ ಅದಕ್ಕೆ ಪ್ರಮಾಣವೇನು?
೫ ದೇವತಾರಾಧನೆಯ ಕ್ರಮದಲ್ಲಿ ಯಾವದಾದರೂ ಒಂದು ಲೋಪವಾದರೆ ಅದಕ್ಕೆ ಬದಲಾಗಿ ಕರ್ಪೂರದಾರತಿಯನ್ನು ದೇವರಿಗೆ ಸಮರ್ಪಿಸಿದಲ್ಲಿ ಸಾಕಾಗಿರುತ್ತದೆಂದು ಆಗಮಗಳು ಹೇಳುತ್ತಿದೆ ಈಗ ನೀಚವೃತ್ತಿಯಲ್ಲಿರುವ ದೇವದಾಸಿಗಳನ್ನು ಆಗಮೋಕ್ತ ದೇವದಾಸಿಗಳನ್ನಾಗಿ ಮಾಡುವದು ಅಸಾಧ್ಯವಾಗಿರುವದರಿಂದಲೂ, ಈಗ ಇವರುಗಳ ಸೇವೆ ಯೆಂಬುವದು ಆಗಮ ವಿರುದ್ಧವಾಗಿರುವದರಿಂದಲೂ ದೇವಾಲಯಗಳಲ್ಲಿ ಇವರುಗಳ ಸೇವೆಯನ್ನೇ ತೆಗದುಹಾಕಿ ಅದಕ್ಕೆ ಬದಲಾಗಿ ಆಗಮಾವಕಾಶವಾದ ಕರ್ಪೂರದಾರತಿಯನ್ನು ಆಚರಣೆಯಲ್ಲಿ ತರುವದಕ್ಕೆ ಅಭ್ಯಂತರವೇನು?
೬ ವರ್ತಮಾನಕಾಲದ ದೇವದಾಸಿಗಳನ್ನು ದೇವಾಲಯಗಳಿಂದ ಸರ್ವಾಂಗವಾಗಿಯಾಕೆ ತೆಗದುಹಾಕಬಾರದು? ಹಾಗೆ ಮಾಡಿದಲ್ಲಿ ಆಗಮವಿರುದ್ಧವಾಗುವದೊ?

ವಿಜಯಸಂವತ್ಸರದ ವೃಷಭ ಮಾಸ, ೨ನೇ ತೇದಿ ಮೊಕ್ಕಾಂ ರಾಮನಾಥ. | ರಾಜಾ, ವಿಜಯ ರಘುನಾಥ ಭಾಸ್ಕರ ಸೇತುಪತಿ.

## Occasional Notes
## ನೈಮಿತ್ತಿಕ ವಿಷಯನ್ಯಾಸ.

ಈ ಹಿಂದುಸ್ತಾನ ದೇಶದ ವಿಶಿಷ್ಟ ರೈಲ್ ಮಾರ್ಗಗಳಲ್ಲಿಯೂ ೧೮೯೧—೯೨ನೇ ಇಸವಿಗಳಲ್ಲಿ ಸಂಭವಿಸಿದ ಅಪಾಯಗಳಿಂದ ಪ್ರತಿಶತ ಜನಸಂಖ್ಯೆ—೯೧ನೇ ಇಸವಿಯಲ್ಲಿ ೬೮೫ ೯೨ರಲ್ಲಿ ೫೬೮, ಗಾಯ ಪಟ್ಟವರು—೯೧ರಲ್ಲಿ ೧೦೪೪, ೯೨ರಲ್ಲಿ ೯೩೦ ಜನಗಳೆಂದು ತಿಳಿಯಬರುವದರಿಂದ ರೈಲ್ ಇಲಾಖೆಯವರು ೯೧ನೇ ವರುಷಕ್ಕಿಂತಲೂ ೯೨ನೇ ವರುಷದಲ್ಲಿ ಹೆಚ್ಚಾದ ಜಾಗರೂಕತೆಯಿಂದ ತಮ್ಮ ಕೆಲಸವನ್ನು ನೋಡಿದ್ದಾಗಿ ಗೊತ್ತಾಗುತದೆ

ಮದರಾಸ್ ಕೋರಿನಲ್ಲಿ ರೈಲ್ ರಸ್ತೆಯು ಯಾವಯಾವ ಮ್ಯುನಿಸಿಪಲ್ ಸರಹದ್ದುಗಳಲ್ಲಿ ಹೋಗುತದೆಯೋ ಅಲ್ಲಿ ಕಟ್ಟಿರತಕ್ಕ ಕಂಪೆನಿಯವರ ವಿಶಿಷ್ಟ ಕಟ್ಟಡಗಳಿಗೂ ಆಯಾಯ ಮ್ಯುನಿಸಿಪಾಲಿಟಿಯವರು ಮೆಹಸೂಲ್ ಕಂದಾಯವನ್ನು ಕಾನೂನ್ ಅನುಸರಿಸಿ ವಸೂಲ್ಮಾಡಲು ರೈಲ್ವೇ ಕಂಪೆನಿಯವರು ಮದರಾಸ್ ಗವರ್ನಮೆಂಟಿಗೆ ಅಪ್ಪೀಲ್ ಮಾಡಲು ಮೊಕದ್ದಮೆ ದಾಖಲ್ಮಾಡಿರತಕ್ಕದ್ದು ನ್ಯಾಯವಾಗಿರುತ್ತಾದ್ದರಿಂದ ಅವನ್ನು ವಸೂಲ್ ಮಾಡಲು ಅವಕಾಶವಿಲ್ಲವೆಂದು ಹುಕುಂ ಮಾಡಿರುತ್ತಾರೆಂದು ಮೆಯಿಲ್ ಪತ್ರಿಕೆ ತಿಳಿಸುತ್ತಿದೆ ಬೆಂಗಳೂರು ಷಹರ್ ಮ್ಯುನಿಸಿಪಾಲಿಟಿಯವರು ದುಡ್ಡಿಲ್ಲದೆ ತತ್ತರಿಸುತ ಬಡಬಗ್ಗರ ಮನೆಗಳ ಕಂದಾಯವಂ ಹೆಚ್ಚಿಸುವದಕ್ಕೆ ಪ್ರಾರಂಭವಾಗಿರುವದನ್ನು ಬಿಟ್ಟು ರೈಲ್ ಇಲಾಖೆಯವರ ಭಾರೀ ಕಟ್ಟಡಗಳಮೇಲೆ ನಿಗಾ ಇಡುವದು ಉತ್ತಮವೆಂದು ತೋರುತದೆ.

ಉತ್ತರ ಹಿಂದುಸ್ತಾನದಲ್ಲಿ ಭಾರೀ ಡಕಾಯಿತಿ ನಡೆಸಿದ ಕಳ್ಳರನ್ನು ಅಲ್ಲಿನ ಸೆಷನ್ ಕೋರ್ಟಿನವರು ವಿಚಾರಣೆ ಮಾಡಿ ಅವರುಗಳಮೇಲೆ ತಪ್ಪು ಸಾಬೀತಾಗಲು ಜಡ್ಜಿಯವರು ಜೂರಿಗಳನ್ನು ನೋಡಿ ಆಪಾದಿತರುಗಳು ತಪ್ಪಿತಸ್ಥರೆ ಅಲ್ಲವೆ ಎಂಬ ವಿಷಯದಲ್ಲಿ ನಿಮ್ಮ ಅಭಿಪ್ರಾಯವನ್ನು ಒರೆಯಿಕೊಡಬೇಕೆಂದು ಕೇಳಲು ಜೂರಿಗಳಲ್ಲಿ ಮುಖ್ಯಸ್ಥರಾದವರು ಗಾಬರಿಯಲ್ಲಿ "ತಪ್ಪಿತಸ್ಥರೆಂದು" ಹೇಳುವದಕ್ಕೆ ಬದಲಾಗಿ "ತಪ್ಪಿತಸ್ಥರಲ್ಲ" ವೆಂದು ಹೇಳಿಬಿಟ್ಟಕೂಡಲೆ ಜಡ್ಜಿಯವರು ವಿಶಿಷ್ಟ ಖೈದಿಗಳನ್ನೂ ಬಿಡುಗಡೆ ಮಾಡಿಬಿಟ್ಟರಂತೆ ಆಕಡೆ ಜೂರಿ ಮೆಂಬರ್‍ಗಳೆಲ್ಲ ಬೇರಾಗಿ ಕಾರಣವನ್ನು ತಿಳಿದು ಜಡ್ಜಿಯವರಲ್ಲಿ ಹೋಗಿ ತಮ್ಮ ಸರಿಯಾದಅಭಿಪ್ರಾಯವನ್ನು ಪ್ರಮಾದವಶಾತ್ ತಪ್ಪಾಗಿ ತಮ್ಮ ಮುಖ್ಯಸ್ಥರಾದವರು ತಿಳಿಸಿದ್ದನ್ನು ಅಂಗೀಕರಿಸಕೂಡದೆಂದು ಕೇಳಿಕೊಂಡದ್ದಕ್ಕೆ ಖೈದಿಗಳ ಪುಣ್ಯವೇ ನಿಮ್ಮ ಬಾಯಲ್ಲಿ ಹಾಗೆ ನುಡಿಸಿದ್ದಕ್ಕೆ ತಮ್ಮ ಎನೂ ಇಲ್ಲವೆಂದು ಹೇಳಿದರಂತೆ

## LOCAL AND PROVINCIAL NEWS
## ಒಳದೇಶದ ಮತ್ತು ತಾಲ್ಲೂಕ್‍ಜಾತಿವೃತ್ತಾಂತಗಳು.

ಕಳೆದವಾರದಲ್ಲಿ ಒಂದೆರಡು ದಿನಗಳು ಜಡಿ ಹಿಡಿದು ಇದ್ದದ್ದಲ್ಲದೆ ಪ್ರತಿನಿತ್ಯವೂ ಮೋಡ ಮುಸುಗಿಯೇ ಇರುತಿದೆ ಭಾರಿಮಳೆಬೀಳಲಿಲ್ಲವು. ಆಚೇವಾರದಲ್ಲಿ ಬಿದ್ದಮಳೆಯಿಂದ ಧರ್ಮಾಂಬುಧಿ ಕೆರೆಗೆ ೩–೪ ತಿಂಗಳ ನೀರು ಬಂದಾಗ್ಯೂ ಪೇಟೆಯಲ್ಲಿರುವ ಭಾವಿಗಳಿಗೆ ಮಾತ್ರ ಅದ್ಯಾಪಿ ನೀರು ಬರಲಿಲ್ಲ ಧಾರಣೆವಾಸಿಗಳು ಸ್ವಲ್ಪ ಹೆಚ್ಚುಕಡಿಮೆ ಯಥಾಪ್ರಕಾರವಿರುತ್ತವೆ.

ಲೋಕಲ್‍ಫಂಡ್ ಮತ್ತು ಮ್ಯುನಿಸಿಪಲ್ ಲೆಕ್ಕಗಳನ್ನು ಇಂಗ್ಲೀಷಿನಲ್ಲಿ ತಯಾರುಮಾಡಿಸಿ ಕಳುಹಿಸಬೇಕೆಂದು ಕಂಟ್ರೋಲರವರು ತಮ್ಮ ಸರ್ಕ್ಯು

ಗಳಿಗೆ ಬರೆದಿರಲು, ತಾಲ್ಲೂಕ್‌ಜಾತಿಗಳಿಂದ ಈ ಬಾಬತಿನ ಲೆಕ್ಕಗಳೊಳು ಕನ್ನಡದಲ್ಲಿ ತಯಾರಾಗಿಬರುತಿವೆ ಯಾದ್ದರಿಂದ ಆ ಲೆಕ್ಕ ಡಿಸ್ಟ್ರಿಕ್ಟ್‌ನಲ್ಲಿ ಇಂಗ್ಲಿಷ್ ತರ್ಜುಮೆ ಮಾ ಕಳುಹಿಸುವದಕ್ಕೆ ಈಗಿರುವಬಬ್ಬರೈಟರ್ ಆಗತಕ್ಕದ್ದಲ್ಲವೆಂದು ಹಾಸನ ಮತ್ತು ಗಳೂರ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಕಂಟ್ರೋಲರವರಿಗೆ ಜವಾಬು ಕೊಟ್ಟದ್ದ ಲೆಕ್ಕವರು ದಿವಾನರವರ ಜಾಹೀರಾತಿಗೆ ಪ್ರ ಅಂತಾ ಲೆಕ್ಕಗಳನ್ನು ತಾಲ್ಲೂಕ್ ಜಾತಿನಿಂದ ಇಂಗ್ಲಿಷ್‌ನಲ್ಲಿ ತಯಾರ್ಮಾಡಿ ಕಳುಹಿಸುವದಕ್ಕೆ ಪ್ರತಿ ತಾಲ್ಲೂಕಿನಲ್ಲಿಯೂ ಈಗಿರುವ ಲವಾಜ ಪೈಕಿ ಇಂಗ್ಲಿಷ್ ತಿಳಿದ ಒಬ್ಬ ಗುಮಾಸ್ತೆ ರುವಂತೆ ಏರ್ಪಾಡು ಸಂದರ್ಭಾನುಸಾರ ಮಾ ಡತಕ್ಕದ್ದೆಂದು ದಿವಾನರವರು ಅಪ್ಪಣೆ ಮಾ ಡಿರುವಂತೆ ಕೇಳುತ್ತೇವೆ.

---

ಬೆಂಗಳೂರಿಂದ ಗುಂತಕಲ್ ವರಿಗೆ ಹಿಂದೂ ಪುರದ ಮಾರ್ಗವಾಗಿ ರೈಲುರಸ್ತೆ ಕೆಲಸಗಳು ನಡೆವ್ವ ಗುಂತಕಲ್‌ನಿಂದ ಧರ್ಮವರದ ವರೆಗೂ ಬೆಂಗಳೂರಿನಿಂದ ದೊಡ್ಡಬಳ್ಳಾಪುರದ ವರೆಗೂ ಈಗ ರೈಲು ಬಂಡಿ ನಡೆಯುತಲಿರುವದುನ್ನೂ ಮತ್ತು ದೊಡ್ಡಬಳ್ಳಾಪುರದಿಂದ ಮುಂದಕ್ಕೆ ಹಿಂದೂಪುರದ ಮಾರ್ಗವಾಗಿ ಧರ್ಮವರದ ವರೆಗೆ ರೈಲು ಬಂಡಿಯನ್ನು ಮುಂದೆ ಗ ಬ್ರಾಂಚ ಲೈನ ಮಾಡಿ ನಿಶ್ಚಯಿಸಿದ ಆಗದ್ದಂತೆ ಹಿಂ ದಿನ ತಿಳಿಸಿದ್ದೆವಷ್ಟೆ. ಆ ರೀತಿ ನಡೆಯು ವದಕ್ಕೆ ಕೆಲವು ಕಾಮಗಾರಿಗಳನ್ನು ಪೂರೈಸು ವದಕ್ಕೆ ಜಾಸ್ತಿ ಅವಕಾಶ ವರಿವಿಗೂ ಹಿಡಿಯ ಬಹುದಾದ್ದರಿಂದ ಆಗಸ್ಟ್ ಗುರ್ರೇ ಆ ಗಾಯತು ಬೆಂಗಳೂರಿಂದ ನೆಟ್ಟಗೆ ಗುಂತಕಲ್ಲಿಗೆ ಗಾಡಿ ಬಿ ಡುವದಾಗಿ ನಿಶ್ಚಯವಾಗಿರುತಿದೆ.

ಬೆಂಗಳೂರು ಬಿಡುವದು ಬೆಳಗ್ಗೆ ೬ ಘಂಟೆ ಗುಂತಕಲ್ ಜಂಕ್ಷನ್ ಸೇರುವದು ರಾತ್ರಿ ೭-೩೪ ಗುಂತಕಲ್‌ನಿಂದ ಹೊರಡುವದು ಬೆಳಗ್ಗೆ ೭-೩೪ ಅಲ್ಲಿಂದ ಬೆಂಗಳೂರ್ ತಲುಪುವದು ರಾತ್ರಿ ೧೦-೧೭

---

ಸಿವಿಲ್ ವ ಮಿಲಿಟರಿ ಸ್ಟೇಷನ್ ಡಿಸ್ಟ್ರಿಕ್ಟ್ ಜ ಡ್ಜಿಯವರ ಕೋರ್ಟಿನಲ್ಲಿ ಈ ತೆಗೆದು ವಿಚಾ ರಣೆಯಾದ ಮೊಕದ್ದಮೆಯು ನಡೆಯುತಲಿದೆ ಅದರ ವಿವರವೇನೆಂದರೆ :—

ರಾಮಸ್ವಾಮಿ ನಾಯುಡು ಎಂಬಾತನು ತನ್ನ ಮಕ್ಕಳ ಪೈಕಿ ೮ ವರುಷದ ಒಂದು ಹೆಣ್ಣು ಮಗುವನ್ನು ಪೆಣ್ಣುಮಕ್ಕಳಲ್ಲ ಮಕ್ಕಳನ್ನು ನಾಯುಡು ಎಂಬುವನು ಸಾಕಿಕೊಳ್ಳುವದಕ್ಕಾಗಿ ಕೊಟ್ಟದ್ದರಿಂದ, ಈಗ ಆಮಗುವಿಗೆ ೧೨ ವ ರುಷ ವಯಸ್ಸಾಗಿ ಬಂದಿರುವದರಿಂದ ತನ್ನ ಮ ಗಳನ್ನು ತನಗೆ ವಾಪಸ್ ಕೊಡಿಸಬೇಕೆಂ ದು ಮೇಲ್ಕಂಡ ಕೋರ್ಟಿನಲ್ಲಿ ೮ ನಂಬ್ರ ದಾವೆ ಹಾಕಿದನು. ಪ್ರತಿವಾದಿ ನಾಯುಡು ದಾವೆ ತರಲು ಮಾಡದೆ ನಾಯುಡು ಎಂಬಾತನು ತಾನು ಕಳೆದ ೪ ಸಂವತ್ಸರಗಳ ಕಾಲ ದಲ್ಲಿ ಆ ಮಗುವನ್ನು ಕೇವಲ ವಿದ್ಯಾನಿರೋಧ ನೆ ಸಾಕಿದ್ದರಿಂದ ಈಗ ಆ ಮಗುವನ್ನು ವಾಪಸ್ ಕಳುಹಿಸಲು ಆಗುವದಿಲ್ಲವೆಂದು ವಾದಿ ಸುತ್ತಾನೆ. ಇದರಮೇಲೆ ಜಡ್ಜಿಯವರಾದ ಸುಬ್ರಾಕೃಷ್ಣರಾಯರವರು ವಾದಿ ನಿಜವಾಗಿಯು ಗಳು ತಮ್ಮ ಮಗುವನ್ನು ಇನ್ಸ್ಪೆಕ್ಟರ ಸುಪರ್ದಿ ಯಲ್ಲಿ ೪ ವರುಷಗಳಕಾಲ ಬಿಟ್ಟ ಮಾತ್ರದಿಂದ ಲೇ ಆ ಮಗುವಿನಮೇಲೆ ಅವರಿಗಿದ್ದ ಬಾಧ್ಯತೆ ಯು ತಪ್ಪಿಹೋಗುವದೋ ಎಂಬ ಅಂಶವನ್ನು ನಿ ಶ್ಚಯಿಸುವದಕ್ಕಾಗಿ ಇನ್ನೂ ಇಟ್ಟಿರುವಂತೆ ಕೇ ಳುತ್ತೇವೆ. ಪರ್ಯವಸಾನವನ್ನು ಮುಂದೆ ತಿಳಿಸುವೆವು.

ಮೈಸೂರಿನ ಎಡ್ಯುಕೇಷನ್ ಸೆಕ್ರೆಟೆರಿಯವರಿ ಗೆ ಅಸಿಸ್ಟೆಂಟರಾಗಿರುವ ಮ॥ ಎಂ. ಶಾಮರಾವ್ ಎಂ. ಎ. ಯವರು "ಕನ್ನಡ ಗ್ರಂಥಮಾಲಾ" ಎಂಬ ಒಂದು ಮಾಸಿಕ ಪುಸ್ತಕವನ್ನು ನಾಳ ಹೊರ್ಬ ಗುಪ್ತ ಲಾಗಾಯಿತು ಹೊರಡಿಸುವಂತೆ ಮತ್ತು ಅದಕ್ಕೆ ವರ್ಷ ೧ಕ್ಕೆ ಹಾಕಲು ಸೇರಿ ಎಂ ಕೊಡುವವಗಳೆಂತಲೂ, ಚಂದಾದಾರರಾಗಬೇಕೆಂ ಬುವವರು ತಮ್ಮ ಚಂದಾ ಹಣವನ್ನು ಮೈ ಸೂರು ಮಹಾರಾಜಾ ಕಾಲೇಜಿನಲ್ಲಿ ಅಸಿಸ್ಟೆಂಟ್ ಮಾಸ್ಟರಾಗಿರುವ ಮ॥ ಬಿ. ಸುಬ್ಬರಾವ್ ಬಿ. ಎ ಯವರ ಹೆಸರಿಗೆ ಕಳುಹಿಸಿಕೊಡಬೇಕೆಂಬದಾಗಿ ಯೂ ಹೆರಲ್ಡ್ ಪತ್ರಿಕೆಯು ತಿಳುಸುತ್ತದೆ. ಪ್ರ ಪ.

---

## ದಳವಾಯಿಯವರ ಮನೆತನದ ಹಿಂದಿನವೃತ್ತಾಂತ.

---

ಈಗ ಬೆಂಗಳೂರು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟ್ ಕೆಲಸದ ಮೇಲಿರುವ ಮ॥ ಡಿ ದೇವರಾಜೇ ಅರಸಿನವರಿಗು ಮೈಸೂರು ಸ ರ್ಕಾರಕ್ಕೂ ಪೂರ್ವದಲ್ಲಿಯೆ ಇದ್ದಾದ ಸಂಬಂಧ ವಿಶ್ವಾಸ ಎಂಬ ವಿಷಯದಲ್ಲಿ ಇವರ ಪೂರ್ವೀಕರು ದಳವಾಯಿಗಳಾಗಿದ್ದಂತೆಯೂ, ಆ ಬೆಂಗಳೂ ರು ಖರೀದಿಗೆ ದೆಗದುಕೊಂಡಂತೆಯೂ ಈಗ ಮ ನವಾರ್ತೆಗೆ ಟೌಟಪೊಂದು ಕೆರೆಯಲ್ಲಿರುವ ಬಾಜಾರ್ ಇವರ ಸ್ವಂತವೆಂತಲೂ ಹೇಳಿಕೊಳ್ಳುತ್ತಾರೆ. ಇದಂತು ಇವರದಿ ಕಂಡುಬರುವ ಕೈಫೀಯತ್ ನ ಮಗೆ ಸಿಕ್ಕಿರುತಿವೆ ಯಾಗಿ ಅದರಿಂದ ದೊಡ್ಡ ಪುರಾವೆ ಬೇರುವದಕ್ಕೇನೂ ಸಂದೇಹವಿಲ್ಲ. ಅದ್ಯಾಗೆಂದರೆ,—

ಶಾಲೀವಾಹನಶಕೆ ೧೬೪೨ ನೇ ವಿಷು ಸಂವ ತ್ಸರದಲ್ಲಿ ನವಾಬನ ಪಾಳೆಯನಲ್ಲಿ, ಮೈಸೂರು ಮಹಾರಾಜರ ಮಹಲಿನ ಖರ್ಚಿಗೆ ಇಲಿಪ್ಪಸರಿದ್ದ, ನಂ॥ ೧॥ ಖರಾಬ್‌ರ್ ನಂದರಾಜ ವೊಡೆಯರ ರವರೆಂಬ ದಳವಾಯಿಯವರ ಪೂರ್ವಿಕರ ಮನೆ ವಾರ್ತೆ ಖರ್ಚಿನ ಬಗ್ಗೆ ೧ಲಕ್ಷ ವರಹ ಅಂತೂ ೮ ಲಕ್ಷ ವರಹಾ ಮೇಲಿಗೆ ವ್ಯಾಜು ಸಂವತ್ಸರದ ವರಿವಿಗೂ ನಡೆದು ಬಂತು.

ಸರ್ವಜಿತು ಸಂವತ್ಸರದಲ್ಲಿ ಖರಾಬ್‌ರ್ ನಂ ಜರಾಜ ವೊಡೆಯರವರಿಗೆ ಶಾಮಲಿ ಆಗುವವರಿವಿ ಗೂ ಸದರೀ ಶೀಮೆ ನಡೆದು ಆಮೇಲೆ ಜಪ್ತೀ ಆಗಿ ಇವರ ಸ್ವಂತ ರಾಜ್ಯವಾದ ಕಳಲೆ ಹನ್ನೆರ ಡು ಸಾವಿರ ಶೀಮೆ ನಡೆಯುತ ಬಂತು. ಸರ್ವಜಿ ತು ಸಂವತ್ಸರದಾರಭ್ಯ ವಿಕಾರಿ ಸಂವತ್ಸರದ ವರಿ ವಿಗೂ ಕಳಲೆ ಹನ್ನೆರಡುಸಾವಿರ ಶೀಮೆ ನಡೆದು ಆ ಮೇಲೆ ಜಪ್ತೀ ಆಯಿತು.

ವಿಕಾರಿ ಸಂವತ್ಸರದ ಆಗಾಯಿತು ನವಾಬ ಹೈದರಖಾನನು ಪಟ್ಟಣಕ್ಕೆ ನೇಮಕ ಮಾಡಿಸಿ ದ್ದ ನಗದು ಕಂಟೀರಾಯಿ ೫೦೦ ವರಹ ಅಪ್ಪಲಿ ಲವಾಜಮೆ ಜೆಸಿಸಿ ೩೦೦ ವರಹ ಅಂತೂ ೫೦ ದು ಸಾವಿರ ವರಹದ ಮೇರಿಗೆ ವಿಶ್ವಾವಸು ಸಂವ ತ್ಸರದ ವರಿವಿಗೂ ನಡೆದು ಬಂತು. ಆಮೇಲೆ ಟಿಪ್ಪೂ ಸುಲ್ತಾನರವರು ಆರ್ಕಾಟಿನಿಂದ ದೊರೆ ತನ ಸಂಬಂಧಿಕರು ಬಂದಮೇಲೆ ಪಟ್ಟೀ ಲವಾ ಜಮೆ ತರಿಸಿಕೊಂಡು ನೋಡಿ ಪಾಸ ಖರ್ಚು ನ ಮೂದಿಸದೆ ಪುಕಾರ ನೇಮಕ ಮಾಡಿಸಿ ೩೦೦ ವರಹದ ಸಾವಾರ್ ಕೊಡಿಸುತ ನಗದು ಕಂಟೀ ರಾಯಿ ೬೦೦ ವರಹ ಅಂತೂ ಹೇಳುನಾರು ವರಹದ ಮೇರಿಗೆ ಮೊತೆಬರ್ ಆಗಿ ತಿಂಗಳು ೧ಕ್ಕೆ ಪ್ರಾಂದಾವರ್ತ್ ಕೊಡಿಸುವದಲ್ಲದೆ ಜನ ಸಲುಗಳು ಮ ಸರ್ಕಾರದ ಕೊಡಿಸುತ್ತಾ ಉಮ್ಮಳತೋಟ, ಉಮ್ಮಳಗಡ್ಡೆ ಬೆಲ್ಲವಕಾಪರ ನಡ ನಡೆಸುತಿದ್ದರು. ನಳ ಸಂವತ್ಸರದಲ್ಲಿ ತಿಂಗಳುವಾದ್ಯರದಲ್ಲಿಗೆ ಹೋದಮೇಲೆ ಸದರೀ ಗ್ರಾಮಗಳೂ, ಉಂಬಳಿತೋಟಗಳೂ ಉಂಬಳಿಗ ಚ್ಛೆ ಕಾವಲ್ ಸಹ ಜಪ್ತೀ ಆಯಿತು. ಆತರುವಾ ಯ ನಳ ಸಂವತ್ಸರ ತಿಂಗಳುವಾದ್ಯರ ಮನೆಗೆ ಹಿಟ್ಟೀ ತೆಗೆದುಕೊಂಡು ಸದರೀ ಮನೆಗೆ ಕಳುಹಿಸಿದಾಗ ಲವಾಜಮೆ ಪಟ್ಟಿ ನೋಡಿ ಖಾಸಾ ಖರ್ಚು ಬಾಬ್ತ ಸಹ ೩೦೦ ವರಹದ ವರಿವಿಗೂ ಜೆಸಿಸಿ ನವೆಭತ ನಗದು ಕಂಟೀರಾಯಿ ಇನ್ನೂರು ವರಹಾವು ನಾಲ್ಕು ಜನ, ಅಂತೂ ಐನೂರು ವರಹಾವು ನಾಲ್ಕು ಜನ, ಹಲ್ಲಾ ಆಗುವವರಿವಿಗೂ ಇದೇಮೇರಿಗೆ ನಡೆದುಬಂತು. ಆಮೇಲೆ ಶ್ರೀರಂಗಪಟ್ಟಣ ಹ ಲ್ಲಾ ಆದಮೇಲೆ ಮಹಾರಾಜರು ಸಾಹೇಬರನರು ಪಟ್ಟ ಊಳಿಗದವರ ನೌಕರರನ್ನ ಕರೆಯಿಸಿ ತಮ್ಮಬಳಿ ಆಗುವ ಪರಿಯಂತರಕ್ಕೂ ದಿನ ೧ಕ್ಕೆ ೧೧ ರೂಪಾಯಿ ಕೊಡುತ ಮುಂದೆ ತೆರದಬಳಿ ಆದ ಮೇಲೆ ಮುಶಾಯಿರ ನೋಡಿ ಗೊತ್ತುಮಾ ಡಿಸುತ್ತೇವೆಂಬದಾಗಿ ಹೇಳ ಲೈಲಿ ಮಹಾರಾಜ ಕೃಷ್ಣರಾಜ ಒಡೆಯರವರಿಗೆ ಪಟ್ಟಾಭಿಷೇಕವಾ ಗುವ ವರಿಯಂತ ಕೊಡಿಸುತ ಬಂದರು. ಆಳ ದ ಮಹಾಸ್ವಾಮಿ ಯವರಿಗೆ ಪಟ್ಟಾಭಿಷೇಕವಾ ದಮೇಲೆ ದಿವಾನ್ ಪೂರ್ಣಯ್ಯನವರ ದಿವಸದಲ್ಲಿ ಆಳದ ಮಹಾಸ್ವಾಮಿ ಯವರು ರಾಜ್ಯ ವಿಚಾರಿ ಸುವ ವರಿಯಂತಕ್ಕೂ ಸಾವಿರ ರೂಪಾಯಿ ಕೆಗ ದುಕೊಳುತ ಬರಬೇಕೆಂಬದಾಗಿ ಹೇಳ ಪಲ್ಲಕೆ ಕೆ ಲಸಗಳು ನಡೆಸುತ ಪ್ರಮೋದೂತ ಸಂವತ್ಸರದ ವರಿವಿಗೆ ನಡೆಸಿಕೊಂಡು ಬಂದರು. ದಿವಾನ್ ಪೂರ್ಣಯ್ಯನವರ ದಿವಸದಲ್ಲಿ ಕಾಲುಪೂರಿ ಐ ದು ಸಾವಿರ ವರಹದ ಮೇರಿಗೆ ತಿಂಗಳ ಕಟ್ಟ ಯಲ್ಲೂ ಪ್ರಮೋದೂತ ಸಂವತ್ಸರದ ವರಿಗೂ ನಡೆದು ಬಂತು. ದೊರೆಯವರಿಗೆ ದೌಲತ್ ಸ್ವಾ ಧೀನವಾದ ಮೇಲೆ ರಾಜಾ ಯರಡು ಸಾವಿರ ರೂ ಪಾಯಿ ಮೇರಿಗೆ ನಡೆದು ಬಂತು.

ಈ ಪೈಕಿ ಕೆಲವು ವೊಬಲಗು ಕಾರ್ಯಾಂತರ ಕಾರಣಾಂತರದಿಂದ ಅಮಾನತ್ ಮಾಡಲ್ಪಟ್ಟಿತು. ಇದಕ್ಕೆ ಬದಲಾಗಿ ಅರಕಲಗೋಡು ತಾಲ್ಲೂಕಿನ ಲ್ಲಿ ಯೇಳು ಗ್ರಾಮಗಳುಳ್ಳ ಒಂದು ಹೋಬಳಿ ಜಹಗೀರ್ ಕೊಡಲ್ಪಟ್ಟಿದೆ ಇಂಡ್ಯ ಗವರ್ನ ಮೆಂಟಿನವರ ಮಂಜೂರ್ ಮೇಲೆ ವರಮಾಹಾ ಮುನ್ನೂರು ವರಹ ಅಂದರೆ ೪೮೬ ರೂಪಾಯಿ ಪ್ರತಿ ತಿಂಗಳಲ್ಲಿಯೂ ಅರಮನೆ ಖಜಾನೆಯಿಂದ ಸಲ್ಲುತಲಿದೆ.

---

## CORRESPONDENCE

[ಇದರಲ್ಲಿ ಪ್ರಕಟಿಸಲ್ಪಟ್ಟಿರುವ ಅಭಿಪ್ರಾಯಗಳಿಗೆ ಅಭಿ ಪ್ರಾಯಗಳ ಗುಣದೋಷಗಳಿಗೆ ಪತ್ರಪ್ರೇಷಕರೇ ಜ ವಾಬ್ದಾರರು. ಎಡಿಟರ್ ಕ. ಪ್ರ.]

ಮ॥ ರಾ॥ ಕರ್ಣಾಟಕ ಪ್ರಕಾಶಿಕಾ ಎಡಿಟರವರ ಸನ್ನಿಧಿಗೆ.

ಶೃಂಗೇರಿ, ತಾ॥ ೧೦-೬-೯೪.

ಅಯ್ಯಾ,—ಕಳೆದ ಮಾಹೆಯಲ್ಲಿ ಹಿಂದಿನೊಂ ದು ತಮ್ಮ ಪತ್ರಿಕೆಯಲ್ಲಿ ದುಂಬುಕೇಶ್ವರ ಅಭಿ ಲಾಂಡ ಅಮ್ಮನವರಿಗೆ ಕಾಟಂಕ ಪ್ರತಿಷ್ಠಾಪ ಮಿತ್ತವಾಗಿ ಕುಂಭಕೋಣದ ತವರವರಿಗೂ ಶ್ರೀ ಗಳಿಗೆ ಮಠದವರಿಗೂ ವಿವಾದ ಹುಟ್ಟಿರುವದಾಗಿ ಮದರಾಸ್ ಹಿಂದೂ ಮೈಲ್ ಪತ್ರಿಕೆಗಳು ಹೇ ಳದ್ದಾಗಿ ಪಕ್ಕರೆ ಕೆಲವು ಅಂಶ ನಮೂದಾಗಿದೆ. ಮೇಲ್ಕಂಡ ವಿಷಯವು ನಿರ್ಮೂಲವಾದದ್ದು ಅಂತಾ ಸಂಭವಗಳಾಗಲಿ, ಪ್ರಸ್ತಾಪವಾಗಲಿ ಇಲ್ಲಿ ಯಾವದೂ ಇಲ್ಲದೆ ಇರುವಲ್ಲಿ ಸದರೀ ಪ ತ್ರಿಕೆಯು ಅನುಚಿತವಾಗಿ ಮತ್ತು ನಿರ್ಮೂಲ ವಾದ ಪ್ರಕಾರವನ್ನು ಮಾಡಿದಂತೆ ಭಾವಿಸ ಬೇಕಾಗಿದೆ. ವೃತ್ತಾಂತ ಬಡತಿಯ ಪತ್ರಿಕಾ ಕಾರರು ಹೆಚ್ಚಾಗಿ ಅವರಸ್ವಾಭಿಪ್ರಾಯ ದಂತೆ ಪ್ರಕಟಿಸ ಇದ್ದದರಿಂದ ಅವರಿಗೆ ಅಬಾಧಿತ ಯೆಚ್ಚರಿಕೆಕೊಟ್ಟಿರುತ್ತೇ. ತಮ್ಮ ಪತ್ರಿಕೆ ಯೆಂ ಬುವದು ಬಹುಕಾಲದಿಂದ ಒಂದೇ ವಿಧವಾಗಿ ಜ ನರಿಗೆ ಹಿತವನ್ನು ಕೋರಿದ್ದಾಗಿಯೂ ಸೈಜವ ನ್ನೇ ಬೋಧಪಡಿಸತಕ್ಕದ್ದಾಗಿಯೂ ಇರುವದ ರಿಂದ ಯೆಲ್ಲ ಪತ್ರಿಕೆಗಳಿಗಿಂತಲೂ ತಮ್ಮ ಪತ್ರಿ ಕೆಯಲ್ಲಿ ಜನರಿಗೆ ವಿಶ್ವಾಸವೂ ಮತ್ತು ಪತ್ರಿಕಾ ಪ್ರಚಾರವೂ ಹೆಚ್ಚಾದದ್ದಾಗಿ ತುಂಬಾ ಗೌರವ ಪುಟ್ಟದ್ದಾಗಿರುವದರಿಂದ ಇಂತಾ ಅಲ್ಪವಿಷಯಗ ಳಿಗೆ ಯಾವಾಗಲೂ ಅವಕಾಶವನ್ನೆ ಕೊಡದೇ ಇ ರಬೇಕೆಂಬದೇ ಸರ್ವರ ಅಪೇಕ್ಷೆಯಾಗಿರುತ್ತೆ. ಪ್ರಸ್ತುತದಲ್ಲಿ ಇಂತಾ ಅಸಂಭಾವಿತವಾದ ಕಲ್ಪನೆ ವಾರ್ತೆಯನ್ನು ಮೇಲೆ ಕಂಡ ಪತ್ರಿಕೆಗಳು ಹೊ ರಪಡಿಸಿರುವದು ಅಜ್ಞಾನವಾದ ಕೆಲವರಿಗೆ ಮನೋ ಚಂಚಲವನ್ನುಂಟುಮಾಡಿರಬಹುದಾಗಿ ಅಂತಾ ಚಂಚಲವು ಪರಿಹಾರವಾಗುವಂತೆ ಮಾಡಲು ಮ ತ್ತೊಂದು ವಾರ ತಮ್ಮ ಪತ್ರಿಕೆಯು ನಮೂದು ಮಾಡಬೇಕೆಂದು ನಾನು ಯೋಚಿಸುತ್ತೇನೆ. ಶ್ರೀಗಳ ವರಸವಾರಿ ಹಾಲಿ ದಾರಾಪುರದಾಲ್ಲೂಕಿನ ಕೊಳಂ ಜವಾಡಿಯಲ್ಲಿ ವಿಜಯವಾಗಿದೆ. ಇಲ್ಲಿಂದ ದಾರಾಪು ರ ಉದುಮಲ ಪೇಟ ಮಾರ್ಗವಾಗಿ ಉದುಮಲಪೇ ಟೆ ತಾಲ್ಲೂಕಿನ ಕೊಳಮಯೆಂಬಗ್ರಾಮಕ್ಕೆ ವಿಜ ಯಮಾಡಿ ಅಲ್ಲಿ ಚಾತುರ್ಮಾಸ್ಯಸಂಕಲ್ಪವನ್ನು ನೆರವೇರಿಸಿಕೊಂಡು ತದನಂತರ ಪಳನಿ ಮಧುರೆ ಮಾರ್ಗವಾಗಿ ಶ್ರೀರಾಮ ಸೇತುವಿಗೆ ಪಯಮಾ ಡಬೇಕೆಂಬದರಲ್ಲಿ ಕುತೂಹಲ ವುಳ್ಳವರಾಗಿರುತ್ತಾ ರೆ. ಅಭಿಜ್ಞರಿಗೆ ವಿಶೇಷ ಬರೆಯಬೇಕಾದ್ದಿಲ್ಲ ಇದೆ ವಿಜ್ಞಾಪಿಸಿಕೊಂಡೆನು.

ಇಂತೀ ನಮಸ್ಕಾರ.

ಬಿ. ಕೃಷ್ಣಪ್ಪ ಹೆಡ್ ಮುನಿಷಿ,
ಶೃಂಗೇರಿ ಶ್ರೀಮಠ.

[ಮೆಯಿಲ್, ಹಿಂದೂ ಪತ್ರಿಕೆಗಳು ದಕ್ಷಿಣದೇಶದಲ್ಲಿ ಬಹಳ ಪ್ರಸಿದ್ಧಿಯನ್ನು ಗೌರವವನ್ನೂ ಹೊಂದಿದವಾಗಿರುವದ ರಿಂದ ಅವುಗಳಲ್ಲಿ ನಿರ್ಮೂಲವಾದ ವರ್ತಮಾನಗಳು ಪ್ರ ಯಶ ಬೀಳುವದಿಲ್ಲವಾಗ ನಾವು ಆವರ್ತಮಾನವನ್ನು ನಮ್ಮ ಪತ್ರಿಕೆಯಲ್ಲಿ ಪ್ರಕಟಪಡಿಸಿದವೇ ಹೊರತು ಅದರ ಸಮೂಲ ನಿರ್ಮೂಲತ್ವಗಳಿಗೆ ನಾವು ಜವಾಬ್ದಾರರಲ್ಲವು, ಪರಂತು ಈ ಕಾಟಂಕಗಳ ವಿಷಯದಲ್ಲಿ ಹುಟ್ಟಿದ ವರ್ತಮಾನ ನಿರ್ಮೂ ಲವಾದದ್ದೆಂದು ಮೇಲ್ಕಂಡ ಲೇಖನದಿಂದ ತಿಳಿಯಲು ಸಂತೋ ಷಿಸುತ್ತೇವೆ—ಎ. ಕ. ಪ್ರ.]

---

## THE MYSORE GAZETTE.

### ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜರಾಜಾಸಾಹೇಬ ಬಹದೂರವರ ಸರ್ಕಾ ರದಿಂದ ಕೊಡೋಣಾದ ಇಸ್ತಿಹಾರನಾಮೆಗಳು

ನಂ ೫೦೪೬೦ ಜೆ ೫೦೦೮—ಮ॥ ಕೆ. ರಾಮ ಚಂದ್ರರಾಯರವರು ರಜಾದಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ವರಿಯಂತ ತುಮಕೂರು ಡಿಸ್ಟ್ರಿಕ್ಟ್ ರನೇಕಾಷ್ಪ ಸ ಅಸಿಸ್ಟೆಂಟ್ ಕಮಿಷನರ್ ಮತ್ತು ಫಸ್ಟ ಕ್ಲಾಸ್ ಮ್ಯಾಜಿಸ್ಟ್ರೇಟ್ ಕೆಲಸವನ್ನು ಆಕ್ಟಿಂಗ್ ತರೀಖ್ ನೋಡಲು ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರಾದ ಮ॥ ಬಿ. ಜೆ. ಕುಮಾರಸ್ವಾಮಿ ನಾಯಡು ಬಿ. ಎ. ಯವರು ನಿಯಮಿಸಲ್ಪಟ್ಟಿ ರುತ್ತಾರೆ.

ನಂ ೦೦೫೦೬, ಜೆ ೫೦೩೪—ಮೈಸೂರ್ ಸ ರ್ವಿಸ್ ರೆಗ್ಯುಲೇಷನ್ ೧೩೭ನೇ ಆರ್ಟಿಕಲ್ ಅನು ಸರಿಸಿ ಕಡೂರು ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮಿಷನರ್ ಮ॥ ಕೆ. ರಾಮಸ್ವಾಮಯ್ಯಂಗಾ ರ್ರವರಿಗೆ ೯೩ನೇ ಇಸವಿ ಜೂನ್ ೬ನೇ ತಾರೀಖ್ ಲಾಗಾಯತು ಹದಿನೈದು ದಿನಗಳ ಕ್ಯಾಜುಯಲ್ ರಜಾ ಕೊಟ್ಟಿರುತಿದೆ.

ನಂ ೫೦೫೪೮, ಜೆ ೫೦೭—ಮೈಸೂರ್ ಸ ರ್ವಿಸ್ ರೆಗ್ಯುಲೇಷನ್ ೧೪೪ನೇ ಆರ್ಟಿಕಲ್ ಅನು ಸರಿಸಿ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಆಫೀಸ್ ನಲ್ಲಿ ಕೆಲಸ ನೋಡುತ್ತಿರುವ ಪೋಲೀಸ್ ಸೂಪ ರಿಂಟೆಂಡೆಂಟರಾದ ಮ॥ ಕೆ. ಪಿ ಪುಟ್ಟಣ್ಣಶೆಟ್ಟಿ ರವರಿಗೆ ೯೩ನೇ ಇಸವಿ ಜೂನ್ ಗುರ್ರೇ ಲಾಗಾ ಯತು ಯೆರಡೂವರೆ ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ.

ನಂ ೫೦೫೪೮೧. ಜೆ. ೫೦೮೭—ಮೈಸೂರ್ ಸ ರ್ವಿಸ್ ರೆಗ್ಯುಲೇಷನ್ ೧೨೭ ನೇ ಆರ್ಟಿಕಲ್ ಅನು ಸರಿಸಿ ಕೋಲಾರ ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂ ಟ್‌ಕಮಿಷನರ್ ಮ॥ ನಾರಣಯ್ಯಂಗಾರ್ರವರಿಗೆ ೯೩ನೇ ಇಸವಿ ಮೇ ೩೦ ರ ಲಾಗಾಯತು ಹೆಂ ಬತ್ತುದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿ ರುತ್ತಾರೆ.

ನಂ೫೦೫೪೪೩. ಜಿ. ೫೦೪೮—ಮೈಸೂರ್ ಸ ರ್ವಿಸ್ ರೆಗ್ಯುಲೇಷನ್ ೧೪೪ನೇ ಆರ್ಟಿಕಲ್ ಅನು ಸರಿಸಿ ಹಾಸನ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಸರ್ಜ ನ್ನರಾದ ಮ॥ ಎ. ಎಸ್. ಕೃಷ್ಣಸ್ವಾಮಯ್ಯ ರವರಿಗೆ ಅವರು ಕೆಲಸದಿಂದ ವಿಮುಗವೆ ನಾಡಲ್ಪ ಡುವ ತಾರೀಖ್ ಲಾಗಾಯತು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ॥ ೫೦೫೪೪೫. ಜಿ. ೫೦೫೦—ಕೋಲಾರ ಡಿ ಸ್ಟ್ರಿಕ್ಟ್ ಅಸಿಸ್ಟೆಂಟ್ ಸರ್ಜನ್ನರಾದ ಮಿಸ್ಟರ್ ಜಿ. ಜೆ. ನರಸಿಂಹನಾಯಡುರವರಿಗೆ ಮೈಸೂರ್ ಸರ್ವಿಸ್ ರೆಗ್ಯುಲೇಷನ್ ೧೪೪ನೇ ಆರ್ಟಿಕಲ್ ಅನುಸರಿಸಿ ಅವರು ಕೆಲಸದಿಂದ ವಿಮುಗವಾದ ತಾರೀಖ್ ಲಾಗಾಯ ತು ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪ ಟ್ಟಿರುತಿದೆ.

ನಂ॥ ೫೦೫೪೪೭ ಜೆ ೫೦೫೦—ಚಿಕ್ಕಮಗಳೂ ರು ಸಿವಿಲ್ ಸರ್ಜನ್ನರಾದ ಮ॥ ಎ. ಎಸ್. ಫೆರ ನಾಂಡೆಸ್‌ಯವರು ಮೈಸೂರ್ ಸರ್ವಿಸ್ ರೆಗ್ಯುಲೇ ಷನ್ ೧೪೪ನೇ ಆರ್ಟಿಕಲ್ ಅನುಸರಿಸಿ ೯೩ನೇ ಇಸವಿ ಮೇ ೧೩ನೇ ತಾರೀಖ್ ಲಾಗಾಯತು ೫೦ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

ಇವರ ಗೈರುಹಾಜರೀ ಕಾಲದಲ್ಲಿ ಅಥವಾ ಮ ತ್ತೊಂದು ಹುಕುಂ ಕೊಡುವ ವರಿಯಂತ ಚಿಕ್ಕ ಮಗಳೂರು ಸಿವಿಲ್ ಸರ್ಜನ್ ಕೆಲಸದ

ಶಿವಮೊಗ್ಗ ಸಿವಿಲ್ ಸರ್ಜೆಯನ್‌ರಾದ ಮ|| ಪಿ ಎಸ್. ಅಚ್ಯುತರಾಯರು ನೋಡತಕ್ಕದ್ದು.

ಮ|| ಅಚ್ಯುತರಾಯರು ಇನ್ನೊಂದು ಕೆಲಸದಮೇಲಿರುವ ಅಥವಾ ಮತ್ತೊಂದು ಹುಕುಂ ಕೊಡುವ ವರಿಯಂತ ಶಿವಮೊಗ್ಗ ಸಿವಿಲ್ ಸರ್ಜಿಯನ್ ಕೆಲಸವನ್ನು ಚಿಕ್ಕಮಗಳೂರು ಸಿವಿಲ್ ಆಸ್ಪತ್ರೆಯಲ್ಲಿ ಕೆಲಸ ನೋಡುತಲಿರುವ ಸಬ್ ಅಸಿಸ್ಟೆಂಟ್ ಸರ್ಜೆಯನ್ ಸಿ. ಎ ನಂಜಪ್ಪನವರು ನೋಡತಕ್ಕದ್ದು.

ಪಬ್ಲಿಕ್‌ವರ್ಕ್ಸ್ ಇಲಾಖೆ.

ನಂ|| ಎರಡು-ರ೬೦—ಅಸಿಸ್ಟೆಂಟ್ ಇಂಜಿನಿಯರಾದ ಮ|| ಓ. ವಿ. ನಾರಿಸ್‌ಯವರು ೧೮೯೨ ನೇ ಇಸವಿ ಜನವರಿ ೩೧ ಲಾಗಾಯತು ಅದೇ ಇಸವಿ ಮಾರ್ಚಿ ೩ ರ ವರಿವಿಗೆ ಕಾಯಿಲೆ ಸಬಬ ರಜಾ ಹೊಂದಿದ್ದರು.

ನಂ|| ಎಸ್‌ಟಿ. ೫೩೦—ಕೋಲಾರ ಡಿವಿಜನ್ ಎಕ್ಸಿಕ್ಯೂಟಿವ್ ಇಂಜಿನಿಯರಾದ ವೆ || ವೈ, ಶ್ರೀನಿವಾಸರಾಯರವರು ಜಾರ್ತೀ ಮಾಹೆ ೫ ನೇ ತಾರೀಖ್ ಆ ಗಾಯತು ಮೂರುತಿಂಗಳು ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ. ಇವರ ಗೈರ್‌ಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ವರಿಯಂತ ಅವರ ಕೆಲಸವನ್ನು ಅಸಿಸ್ಟೆಂಟ್ ಇಂಜಿನಿಯರಾದ ಮ|| ಪ್ರಾಣ್ನೇಶರಾಯರವರು ಆಕ್ಟಿಂಗ್‌ತಿವಿಜ್ ನೋಡತಕ್ಕದ್ದು.

## SUMMARY OF NEWS
## ವೃತ್ತಾಂತ ಸಂಗ್ರಹವು

ಸ್ತ್ರೀ ಶಿಕ್ಷಣದಿಂದ ಸ್ತ್ರೀಯರು ಸುಶಿಕ್ಷಿತರಾಗುವರೆಂತ್ತ ಟೀಕ ಇದು ಅವರು ಕಣ್ಣುಗಳನ್ನು ಮಾತ್ರ ಕಳೆದುಕೊಳ್ಳುವ ಹೊತ್ತು ಬಂದಂತೆ ತೋರುತ್ತದೆ ? ಬಂಗಾಳದ ಕುರಿತು ಯಾರ ಶಾಲೆಗಳ ಮೇಲಧಿಕಾರಿಗಳು ಪ್ರಸಿದ್ಧ ವೈದ್ಯರ ಮೇಲಿಂದ ಅಲ್ಲಿಯ ಶಾಲೆಗಳಿಗೆ ಹೋಗುತ್ತಿರುವ ಹುಡಿಗೆಯರಲ್ಲಿ ನೂರಕ್ಕೆ ನಾಲ್ವತ್ತು ಹುಡುಗೆ ಯರು ಉಪನೇತ್ರಗಳನ್ನು ಉಪಯೋಗಿಸುತ್ತಿದ್ದಾರೆಂದು ತಿಳಿಯುತದೆ ಇಷ್ಟಾದರೂ ಸ್ತ್ರೀ ಶಿಕ್ಷಣದ ಪತಾಕೆಗಳನ್ನು ಧರಿಸುವವರಿಗೆ ಬುದ್ಧಿ ಬರುವದಿಲ್ಲವೆಂಬದನ್ನು ಕಂಡು ದುಃಖಪಡತಕ್ಕದಾಗಿದೆ ವಿದ್ಯೆ ಕಲಿತು ಕಣ್ಣುಕಳೆದುಕೊಂಡು ಪರರ ಕೈಯಿಂದ ಕೈಹಿಡಿಸಿಕೊಂಡು ಓಡ್ಯಾಡುವ ಬೆಸ್ ಟೆಕ್ಕ ಮಡಿಯೆಂದು ರಾ ಕ್ರ ಮದಿಂದ ಬಲವಾಗಿ ದೃಷ್ಟಿಗೆ ಬೀಳುವ ಚವವು ಏನೇನು ಉಂಟು ಇಷ್ಟಾದರೆ ಸ್ತ್ರೀ ಶಿಕ್ಷಣಾಭಿಲಾಷಿಗಳಿಗೆ ಸಮಾಧಾನವಾಗುವದೋ ? —ರಾಜಹಂಸ

ಭಾತಗಾಂವೆಂಬಲ್ಲಿ ಮಧುಕರ್ ರಾವ ಪಟಗಾಂವ ರವರು ಒಂದು ಗಂಡು ಕೋತಿಯನ್ನು ಸಾಕಿ, ಅದನ್ನು ಹೊಟ್ಟೆಯ ಮಗನಿಗಿಂತಲೂ ಹೆಚ್ಚಾಗಿ ಪ್ರೀತಿಸುತ್ತಿದ್ದರು ಹೀಗಿರುವಲ್ಲಿ ಅವರ ಲಗ್ನ ಮಾಡುವ ಇಚ್ಛೆಯುಳ್ಳವರಾಗಿ ಒಂದು ಹೆಣ್ಣು ಕೋತಿಯನ್ನು ವಧುವಾಗಿ ನೇಮಿಸಿದರು ರ ಜೋಸು ಕ ಭಿಮರಾವ ಎಂಬುವನು ವಧುವಿನ ತಂದೆಯಾದವನು, ಒಳ್ಳೆ ಸಮಾರಂಭದೊಡನೆ ಮದುವೆಯನ್ನು ಮಾಡಬೇಕೆಂತ ಗೊತ್ತಾಯಿತು. ಲಗ್ನಪತ್ರಿಕೆಗಳು ಕಳುಹಿಸಲ್ಪಟ್ಟವು ಪುರೋಹಿತರು ಬಂದು, ಒಳ್ಳೇ ಸಂಭ್ರಮದಿಂದ ಮುಹೂರ್ತಕ್ಕೆ ಉಭಯತ್ರರೂ ಹೋದರು ಲಗ್ನವು ವಿಧ್ಯುಕ್ತ ನಡೆಯಿತು ವಧುವಿನ ತಂದೆಯು ೧೦೦ ರೂ ಗಳನ್ನು ವರದಕ್ಷಿಣೆಯಾಗಿ ಕೊಟ್ಟನು. ಪುರೋಹಿತನಿಗೆ ಹತ್ತುರೂ ದಕ್ಷಿಣೆ ಕೊಟ್ಟನು. ವಧೂವರರಿಗೆ ರೇಷ್ಮೆಯ ಬಟ್ಟೆಗಳನ್ನು ತೊಡಿಸಿ, ಆಭರಣಗಳನ್ನಿಟ್ಟು, ಒಳ್ಳೇವಾದ್ಯ ವೈಭವದೊಡನೆ ಮೆರವಣಿಗೆಯನ್ನು ಹೊರಡಿಸಿದರು ತರುವಾಯ ಮೂವರು ವೃದ್ಧೆಯರಿಗೆ ಲಗ್ನ ಸಮಾರಂಭವು ನಿರ್ವಿಘ್ನತೆಯಿಂದ ಪೂರ್ಣವಾಯಿತು

## EXTRACTS

ಹಿಮಾಚಲ ಪರ್ವತ ಮತ್ತು ಅದರ ಸುತ್ತು ಮುತ್ತಲು ಬೀಳುವ ಹಿಮದ ಪ್ರಮಾಣದ ಮೇಲಿಂದಲೂ, ಬೇಸಿಗೆ ಕಾಲದ ಪ್ರಾರಂಭದಲ್ಲಿ ಬೀಳುವ ಥಣ್ಣನ್ನ ಹನಿಯ ಮಾನದಿಂದಲೂ ಪರ್ಜನ್ಯ ವೃಷ್ಟಿಯ ವಿಷಯವಾಗಿ ಅಂದಾಜಿನ ಒಂದು ಪತ್ರಿಕೆಯು ಸಿಮ್ಲಾದಲ್ಲಿರುವ ಜ್ಯೋತಿಷ್ಯ ಶಾಖೆಯ ಮುಖ್ಯಸ್ಥರಿಂದ ಪ್ರತಿವರುಷ ಪ್ರಸಿದ್ಧಿಸಲ್ಪಡುತ್ತಲಿದೆ ಅದರಂತೆಯೇ ಈ ಸೀರಿಯುಮಳೆಯ ಅಂದಾಜಿನ ಪತ್ರಿಕೆಯು ಪ್ರಸಿದ್ಧವಾಗಿದ್ದು, ಅದರಲ್ಲಿ ಹಿಂದುಸ್ಥಾನದ ಯಾವ ಭಾಗದಲ್ಲಿ ಎಷ್ಟೆಷ್ಟು ಮಳೆ ಬಿಬ್ಬುತ್ತದೆಂಬದರ ಬಗೆ ಬರೆದದರಲ್ಲಿ ಮುಂಬೈ ಇತ್ಯಾ ಕೊಂಕಣದ ಸಮುದ್ರದ ದಂಡೆ ಮಳೆಯು ಚೆನ್ನಾಗಿ ಬೀಳುವದಲ್ಲದೆ ಪ್ರಸಕ್ತ ವೃಷ್ಟಿಯಾಗುವದು ಬಂಗಾಳ ಅಸ್ಸಾಂ ಪ್ರಾಂತಗಳಲ್ಲಿ ವಿಪುಲವಾಗಿ ಮಳೆಯಾಗು, ದು, ಬ್ರಹ್ಮದೇಶದಲ್ಲಿ ವಿಶೇಷ ಮಳೆ ನಾಗುವ ಸಂಭವವಿಲ್ಲ ಪಂಜಾಬ್ ಮತ್ತು ವಾಯುವ್ಯಪ್ರಾಂತ್ಯದಲ್ಲಿಯೂ ಸಾಕಷ್ಟು ಮಳೆ ಯಾಗುವ ಸಂಭವವಿಲ್ಲ ಗಂಗಾ ನದಿಯ ಕಟಾಕದಲ್ಲಿ ಕೆರ ಸ್ವಲ್ಪ ಮಳೆಯಾಗಿತು. ರಾಜಪುಟಾನದಲ್ಲಿಯೂ ಮಧ್ಯಹಿಂದುಸ್ಥಾನದಲ್ಲಿಯೂ ಚನ್ನಾಗಿ ಮಳೆಯಾಗುವದು; ನಮ್ಮ ಇಲಾಖೆಯಲ್ಲಿ ಮದರಾಸ್ ಪ್ರಾಂತ, ಕರ್ನಾಟಕಭಾಗ, ನಿಜಾಮ್ ಇಲಾಖೆಯಲ್ಲಿ ಪುಷ್ಕಳ ಮಳೆಯಾಗುವದು, ಉತ್ತರ ಹಿಂದೂಸ್ಥಾನದಲ್ಲಿ ಮಳೆಯು ಸಾಕಷ್ಟು ನಿಶ್ಚಯದಿಂದ ಬೀಳುವದು, ದಕ್ಷಿಣ ಹಿಂದುಸ್ಥಾನ ಮೈಸೂರ ಪ್ರಾಂತಗಳಲ್ಲಿಯ ಹವಾಯಮಾನದ ಸ್ಥಿತಿಯು ಚನ್ನಾಗಿ ಗೊತ್ತಾಗದ್ದರ ಮೂಲಕ ಮಳೆಯ ಅಂದಾಜು ಮಾಡಲಿಕ್ಕೆ ಬರಲಿಲ್ಲವೆಂದು ಪ್ರಸಿದ್ಧಿ ಪತ್ರಿಕೆಯಲ್ಲಿ ಬರೆದಿದ್ದಾಗ್ಯೂ ಅಲ್ಲಿ ಅವಶ್ಯಕತೆ ಇದ್ದಷ್ಟಾದರೂ ಮಳೆ ಬೀಳುವದೆಂದು ವಿವರಿಸಲ್ಪಟ್ಟಿದೆ —ರಾಜಹಂಸ

ಮ|| ಜಮಸೇಟ್‌ಜಿ ಎಡಲ್‌ಜೀ ಜಾಟಲೀವಾಲಾ ಎಂಬ ಸದ್ಗೃಹಸ್ಥರು ರೈಲ್ವೆಯ ಆಕೌಂಟೆಂಟರಾಗಿರುತ್ತಾರೆ ಇವರು ಡೆತ್ ಬೆನಿಫಿಟ್ ಫಂಡ್ ಎಂಬ ಒಂದುಫಂಡು ಆ ಕಂಪನಿಯ ನೌಕರರ ಹಿತದ ಸಲುವಾಗಿ ಕೂಡಿಸುವ ಪ್ರಯತ್ನ ನಡಿಸುತ್ತಿದ್ದಾರೆ ಮತ್ತು ಹೇಳುವದು ಈ ಫಂಡಿನ ಮೆಂಬರಾಗುವವರು ಎರಡು ತರಗತಿಗಳನ್ನು ಮಾಡಿ ಮೊದಲನೇ ತರಗತಿಯವರು ಮೊದಲು ನಾಲ್ಕು ರೂಪಾಯಿ ಮತ್ತು ಎರಡನೇ ತರಗತಿಯವರು ೨ ರೂಪಾಯಿಯಂತೆ ಕೊಡಬೇಕೆಂದು ನಿರ್ಣಯಿಸಿರುತ್ತಾರೆ ಆ ಮೇಲೆ ಪ್ರತಿ ಒಂದು ಸಾರಿಗೆ (೧ ತಿಂಗಳಿಗೆ ಅಥವಾ ೩ ತಿಂಗಳಿಗೊಮ್ಮೆ ಇರಬಹುದು ! ಮೊದಲನೂ ಮತ್ತು ಎರಡನೇ ತರಗತಿಯವರು ಕ್ರಮಶಃ ೧ ರೂಪಾಯಿ ಮತ್ತು ೮ ಆಣೆ ಕೊಡಬೇಕು ಮೊದಲನೇ ತರಗತಿಯ ಮೆಂಬರಿಗೆ ಮರಣದ ನಂತರ ಅವನ ಹೆಂಡತಿ ಅಥವಾ ಹೌಸುಗಾರನಿಗೆ ಅಥವಾ ಅವನು ಹೇಳಿದವರಿಗೆ ಅವನಿಗೆ ಅಥವಾ ಅವನ ಲಿಸ್ಟಿನಿಗೆ ೫೦೦ ರೂಪಾಯಿ ಕೊಡಬೇಕೆಂದು ತಿಳಿಯುತ್ತದೆ ಅದರಂತೆಯೇ ಮೆಂಬರಿನ ಪ್ರಕಾರದ ಎರಡನೇ ತರಗತಿಯ ಮೆಂಬರಿಗೂ ೩೦೦ ರೂಪಾಯಿ ಕೊಡುವದು

ಈ ಉಪಯೋಗವು ಸ್ತುತ್ಯ ಹಿಂದೂ ರೈಲ್ವೆ ಕಂಪನಿಯ ಸಹ ತಂಮ ಸ್ಥಳದ ಮಟ್ಟಿಗೆ ಇದಕ್ಕೆ ಸಹಾಯವನ್ನು ಕೊಡುತ್ತಾರೆ. ಪೇರ್ಷಿ ಅಕೆ ಇಂಡಿಯಾ ರೈಲ್ವೆ ನೌಕರರು ದರ ಉಪಯೋಗವನ್ನು ಮಾಡಿಕೊಂಡರು ೧೦೦೦ ಜನರು ಸೇರಿದರೆ ಈ ಫಂಡು ಕೂಡಿಸಲಾಗಿತು

ಮುಂಬೈ ಇಲಾಖೆಯ ಸೇನಾನಾಯಕರಾದ ಜನರಲ್ ಸರ್ ಜಾರ್ಜ್ ಹಡರ್ಸ್ ಇವರ ಅಪಮೃತ್ಯು

ಕನ್ನಡಸಮಾಚಾರ ತಾ|| ೪ ನೇ ಜೂನ್ ೧೮೯೩

ಸಿಮ್ಲಾ ಸಮೀಪದೊಳಗಾದ ಕಟಡಿಸಿ ಇವರೂ, ಇವರ ಮಿಲಿಟರಿ ಸೆಕ್ರೆಟರಿಗಳಾದ ಕರ್ನಲ್ ಲೀಚ್ ಧೊರೆಗಳೂ ಕುದುರೆಗಳನ್ನೇರಿಕೊಂಡು ಸವಾರಿಗೋಸ್ಕರ ವ ನೆಯಿಂದ (ಪೋಸ್ಟಾಫೀಸು ಹಾದಿಯ ಮೇಲಿನ ಪೇಟೆ) ಹೋದಬಳಿಕ ಅಲ್ಲಿನ ಕುದುರೆಗಳನ್ನು ನಿಲಿಸಿದ್ದರುವ ಹೋಟಲಿನ ದಿಕ್ಕಿಗೆ ನಡೆದರು ಮಧ್ಯಂತರದಲ್ಲಿ ಕುದುರೆಗಳನ್ನು ಜೋರಾಗಿ ಓಡಿಸುವ ಸಮಯದಲ್ಲಿ ಬೈಲಿನ ಕಟ್ಟೆ ಉದ್ದ ಹಿರಿದಾದ ಆಪಘಾತವು ಸಂಭವಿಸಿತು ಹೋಟೆಲಿನ ಬಳಿಯ ಬೀದಿಯು ಬಹಳ ಇಕ್ಕಟ್ಟಾಗಿದೆ ಇಲ್ಲಿ ಜನರಲ್ ಹಡರ್ಸ್‌ರವರ ಕುದುರೆ ಕಾಲಿಟಿ ಎತ್ತು ಆಗ ಜನರಲ್ ಹಡರ್ಸ್‌ರವರು ಕುದುರೆಯ ಮೇಲಿನಿಂದ ತಲೆ ಕೆಳಗಾಗಿ ಬಿದ್ದರು, ತಲೆ ಜಜ್ಜಿ ಅವರ ಶರೀರವೆಲ್ಲ ಭಾರ ಬಿದ್ದು ಮಸ್ತಕದ ಎಲುಬು ಒಳಗಿನೊಳಗೆ ಜಜ್ಜಿ ಹೋಗಿ ತತ್ಕಾಲವೇ ಅವರ ಪ್ರಾಣ ಹಾರಿ ಹೋಯಿತು ಕರ್ನಲ್ ಲೀಚರವರು ಕೂಡಲೇ ಕುದುರೆಯ ಮೇಲಿಂದ ಇಳಿದು ನೋಡಲು ಜನರಲ್ ಹಡರ್ಸ್ ರವರ ಪ್ರಾಣವು ವ್ಯರ್ಥವಾಗಿ ಹೋದದನ್ನು ಕಂಡರು ಈ ಅಪಘಾತ ಸಂಭವಿಸುತ್ತಿರುವದನ್ನು ದೂರದಿಂದ ನೋಡುತ್ತಿದ್ದ ಪೋಲೀಸಿನವರು ಕೆಲವು ಯುರೋಪಿಯನ್ ಪಟಾಲದ ಶಿಪಾಯರು ಅಷ್ಟರಲ್ಲಿ ಅಲ್ಲಿಗೆ ಓಡಿ ಬಂದರು ಆ ಶಿಪಾಯರೂ ಕರ್ನಲ್ ಲೀಚರವರೂ ಕೂಡಿ ಜನರಲ್ ಹಡರ್ಸರವರನ್ನು ಸಮೀಪದಲ್ಲಿರುವ ಪೋಲೀಸಿನ ಒಂದು ಬಿಡಾರಕ್ಕೆ ಬ್ಯಾರಕ್ಸಿಗೆ ಹೊತ್ತುಕೊಂಡು ಹೋದರು ಅಲ್ಲಿ ಡಾಕ್ಟರ ಕತೆಯಿಂದ ಚನ್ನಾಗಿ ಪರೀಕ್ಷಿಸಿ ನೋಡಲು ಅವರ ಪ್ರಾಣವು ಎಷ್ಟೋ ಹೊತ್ತಿನ ಹಿಂದೆ ಬಿದ್ದ ಕ್ಷಣವೇ ಹಾರಿ ಹೋಗಿದೆಂತ ಸಿದ್ಧವಾಯಿತು, ತರುವಾಯ ಕರ್ನಲ್ ಲೀಚರವರು ಕುದುರೆಯನ್ನು ಹತ್ತಿ ಮಗ ದಾವಾ ಹೌಸಿಗೆ ಬಂದು ಜನರಲ್ ಹಡರ್ಸ್‌ರವರ ಜೀರ್ಜ್‌ ನವಾದ ಕೌನ್ಸಿಲ್ ಲೇಡಿ ಹರ್ಡರವರಿಗೆ ಈ ಪ್ರಸಾರಿತ ಸಂಭವಿಸಿದ ಅಪಘಾತದ ವರ್ತಮಾನವನ್ನು ತಿಳಿಸಿದರು ಕರ್ನಲ್ ಹಡರ್ಸ್‌ರವರು ಕರ್ನಲ್ ಲೀಚರ ಸುಗಡ ತಮ್ಮ ತಂದೆಯ ಶವವಿರುವಲ್ಲಿಗೆ ಅಕ್ಷಣವೆ ಬಂದರು ತಂದೆಗಳ ಶವವನ್ನು ನೋಡಿ ಅವರಿಗೆ ತಾಳಿಕೊಳ್ಳಲಾಗದಷ್ಟು ದುಃಖವಾಯಿತು, ಈ ದುಃಖಿತ ವರ್ತಮಾನವನ್ನು ಮನೆಗೆ ಹಿಂತಿರುಗಿ ಬಂದು ಎನ್ನ ಮಾತೋಶ್ರೀಯವರಿಗೂ ತಂಗಿಗೂ ತಮ್ಮನಿಗೂ ಅವರು ಹೇಳಿದರು ತರುವಾಯ ಮುಗ್ಗಾಲದ ಹಾಸಿಗೆಯಿಂದ ಶವವಿರುವಲ್ಲಿಗೆ ಜನರಲ್ ಹಡರ್ಸರವರ ಒಂದು ದೊಡ್ಡ ಗಾಡಿ ಕಳುಹಿಸಿ ಶವವು ಮನೆಗೆ ತರಲ್ಪಟ್ಟಿತು. ಇವರ ಪ್ರೇತ ಸಂಸ್ಕಾರದ ಕ್ರಿಯೆಯು ಸಾಯಂಕಾಲ ಘಂಟೆ (8½) ಘಂಟೆಯಿಂದ ನಡೆಯಿತ ಈ ಸಂಸ್ಕಾರಕ್ಕಾಗಿ ಎಲ್ಲ ಸಿದ್ಧತೆ ಯೋಗ್ಯವಾಗಾಯಿತು. ಫ್ರೆಸ್ ಮತ್ತು ಮಿಟಿಕೆಯಲ್ಲಿರುವ ಎಲ್ಲ ಶಾಲಿಗಳ, ಕುದುರೆಪಟಾಲ್, ತೋಪಖಾನೆ ಇತ್ಯಾದಿ ಸೇನೆಯವರಿಗೂ ವಾಲಂಟಿಯರ ಮತ್ತು ಪೋಲೀಸಿನವರಿಗೂ ಜನರಲ್ ಹಡರ್ಸರವರಿಗೆ ಸಂಸ್ಕಾರದ ಸಮಯ ಮರ್ಯಾದೆಯನ್ನು ಸಮರ್ಪಿಸಲಿಕ್ಕೆ ಸಿದ್ಧವಿರಬೇಕೆಂತ ಅಪ್ಪಣೆ ಆಗಿತ್ತು, ಅಪ್ರಕಾರ ಸರ್ವರು ಹಾಜರಿದ್ದರು ಗವರ್ನರ್ ಧೊರೆಗಳು ಕೂಡ ಪಂಚಗಣಿಯಿಂದ ಈ ಸಂಸ್ಕಾರಕ್ಕಾಗಿ ಪುಣೆಗೆ ಬಂದಿರುತ್ತಾರೆ ಈಗ ಪುಣೆಯಲ್ಲಿ ಇವರ ಪತ್ನಿಯವರೂ, ಒಬ್ಬ ಕುಮಾರಿಯೂ, ಇಬ್ಬರು ಕುಮಾರರೂ ಇರುತ್ತಾರೆ ಇವರೆಲ್ಲರಿಗೆ ಉಂಟಾದ ಆಪತ್ತಿಗಾಗಿ ದ ಯೆಯಾರಿಂದ ವರ್ಣಿಸಲಾಗೀತು

ಬಾಲವಿವಾಹವೆಂದರೆ ಜನರು ತಮ್ಮ ತಮ್ಮ ಚಿಕ್ಕ ಬಾಲಕ ಬಾಲಿಕೆಯರಿಗೆ ಬಹಳ ಚಿಕ್ಕ ವಯಸ್ಸಿನಲ್ಲಿ ಲಗ್ನ ಮಾಡುವದಕ್ಕೆ ಬಾಲ ವಿವಾಹವೆನ್ನುತ್ತಾರೆ ಬಾಲವಿವಾಹವನ್ನು ಮಾಡುವದರಿಂದ ದೇಶಕ್ಕೆ ಬಹಳೇ ಹಾನಿ ಯಾಗುವದಲ್ಲದೆ ವರ್ಣಸಂಕರ್ಯ, ವ್ಯಭಿಚಾರ, ಗರ್ಭಪಾತ, ದುರಾಚಾರ ಮುಂತಾದ ಹಾನಿಗಳಲ್ಲದೆ ಇನ್ನು ಎಷ್ಟೋ ಹಾನಿಗಳಾಗುತ್ತದೆ ನಮ್ಮ ಹಿಂದೂ ಧರ್ಮ ಶಾಸ್ತ್ರಸಂತ ವಿಧಿ ರಗಳನ್ನು ಮಾಡಿದವರಿಗೆ ಲಗ್ನಕ್ಕೆ ಯೋಗ್ಯವಾದ ಸ್ತ್ರೀಯರಿಗೆ ೧೬ ವರ್ಷ ಪುರುಷನಿಗೆ ೨೫ ವರ್ಷಗಳೆಂದು ಪ್ರಾಚೀನ ಕಾಲದ ಋಷಿಗಳ ಗ್ರಂಥಗಳ ಸಹಾಯದಿಂದಲೂ, ಆಧುನಿಕ ರಿಂದಲೂ ತಿಳಿಯುತ್ತದೆ ಪುರುಷನಿಗೆ ನಾಲ್ಕು ಅವಸ್ಥೆಗಳುಂಟು ಯಾವವೆಂದರೆ—ಬಾಲ್ಯಾವಸ್ಥೆ, ಯೌವನಾವಸ್ಥೆ, ತರುಣಾವಸ್ಥೆ, ಮತ್ತು ವೃದ್ಧಾವಸ್ಥೆ ಮುಂತಾದ ನಾಲ್ಕು ಪ್ರಕಾರಗಳುಂಟು ಯಾವ ಯಾವ ಅವಸ್ಥೆಯಲ್ಲಿ ಯಾವ ಯಾವ ಕಾರ್ಯಗಳನ್ನು ಮಾಡಬೇಕೆಂತ ಸಹ ಅನೇಕ ನಿಯಮಗಳುಂಟು ಬಾಲ್ಯಾವಸ್ಥೆಯಲ್ಲಿ ಮನುಷ್ಯನು ತನ್ನ ತಂದೆ ತಾಯಿಗಳಿಂದ ಚನ್ನಾಗಿ ಜ್ಞಾನವನ್ನು ಶಿಕ್ಷಣಕ್ಕೆ ಪ್ರಾರಂಭವನ್ನು ಮಾಡಿ, ಅನಂತರ ಎಂಟನೇ ವರ್ಷದಲ್ಲಿ ಉಪನಯನವೆಂಬ ಪ್ರಕಾರದ ಸಂಸ್ಕಾರಕ್ಕೆ ಪ್ರಾಪ್ತನಾಗಿ, ಉಪನಯನವಾದ ಬಳಿಕ ವಿದ್ಯಾರ್ಜನೆ ಮಾಡುತ್ತಾನೆ ಆಮೇಲೆ ಬ್ರಹ್ಮಚರ್ಯದಲ್ಲಿ ಸದ್ಗುರುಗಳ ಬಳಿಯಲ್ಲಿ ನಿಂತು ಚನ್ನಾಗಿ ವಿದ್ಯಾಭ್ಯಾಸವನ್ನು ಮಾಡಬೇಕು ಹಾಗೂ ಸದ್ವರ್ತನೆಯಿಂದಲೂ ಪ್ರಾಮಾಣಿಕತನದಿಂದಲೂ ಸಹೆಸರು ಕೊಂಡು ಜನರಲ್ಲಿ ಕೀರ್ತಿಯನ್ನು ಹೊಂದಬೇಕು ಇಷ್ಟು ಆಗುವದರೊಳಗಾಗಿ ಅವನಿಗೆ ಸುಮಾರು ೨೫ ವರ್ಷದ ವಯಸ್ಸುಳ್ಳವನಾಗುವನು ಪೂರ್ಣ ವಯಸ್ಸಿನಲ್ಲಿ ಅವನ ಯೌವನವು ಅವಯವಗಳೂ ಪೂರ್ಣವಾಗಿ, ನವಯೌವನವು ಪ್ರಾಪ್ತವಾಗಲಾಗಿ ಅವನಿಗೆ ಲಗ್ನ ಮಾಡಿಕೊಳ್ಳಬೇಕೆಂಬ ಇಚ್ಛೆಯು ಹುಟ್ಟಿ ಆ ಕಾಲದಲ್ಲಿ ಅವನು ಸ್ವತಂತ್ರ ಲಗ್ನವನ್ನು ಮಾಡಿಕೊಳ್ಳಲಿಕ್ಕೆ ತಕ್ಕವನಾಗಿ ತನ್ನ ಮನಸ್ಸಿಗೆ ಬರುವಂಥಾ ನವಯೌವನ ರೂಪ ಸಂಪನ್ನಳಾದ ಸ್ತ್ರೀಯನ್ನು ಹುಡುಕಲಿಕ್ಕೆ ಪ್ರಾರಂಭಿಸುತ್ತಾನೆ ಆ ಕಾಲದಲ್ಲಿ ಅವನು ತನ್ನ ಕುಟುಂಬದ ಉದರ ನಿರ್ವಾಹವನ್ನು ಸಾಗಿಸುವಷ್ಟು ಆಸ್ತಿಯುಳ್ಳವನೂ, ಧೈರ್ಯವಂತನೂ ಅವನಂತರ, ಅವನಿಗೆ ಯಾವದರೂ ಹೆಣ್ಣು ಕೊಡುವರು ಇದಲ್ಲದೆ ಬಾಲಿಕೆಯರು ಹುಟ್ಟಿದಂದಿನಿಂದ ಹದಿನಾರು ವರ್ಷಗಳ ವರೆಗೂ ತಂದೆ ತಾಯಿಗಳು ಅವಳಿಗೆ ಚನ್ನಾಗಿ ವಿದ್ಯಾಭ್ಯಾಸವನ್ನು ಮಾಡಿಸಬೇಕು, ಆಮೇಲೆ ಆ ಮುಗ್ಧಳಿಗೆ ಸಂಸಾರ ಕ್ರಮಕ್ಕೆ ಸಹಾಯವಾದ ಆರೋಗ್ಯಶಾಸ್ತ್ರ, ಸೂಪ ಶಾಸ್ತ್ರ ಮುಂತಾದ ಶಿಕ್ಷಣವನ್ನೂ ಚನ್ನಾಗಿ ಕಲಿಸಬೇಕು ಇಷ್ಟಾಗುವದರೊಳಗೆ ಆ ಸ್ತ್ರೀಯಳಿಗೆ ೧೬ ವರ್ಷ ವಯಸ್ಸು ಆಗುತ್ತದೆ ಅವಳಿಗೆ ನವಯೌವನವು ಪ್ರಾಪ್ತವಾಗಿ ಮದುವೆಯನ್ನು ಮಾಡಿಕೊಳ್ಳಬೇಕೆಂಬ ಜ್ಞಾನವುಂಟಾಗಿ ತನ್ನ ಯೌವನ ರೂಪ ಗುಣಾಲಂಕಾರಗಳಿಗೆ ಸರಿಯಾದ ಪುರುಷನನ್ನು ನೋಡಿಕೊಂಡು ಅತಿಶಯ ಆನಂದದಿಂದ ಲಗ್ನವನ್ನು ಮಾಡಿಕೊಳ್ಳುತ್ತಾಳೆ ಇಂಥಾ ಸಮುಚಿತವಾದ ಸ್ತ್ರೀಪುರುಷರ ಸಂಯೋಗದಿಂದ ಸದೃಢರೂ, ಆರೋಗ್ಯವುಳ್ಳವರೂ, ರೂಪವುಳ್ಳವರೂ, ಆದ ಮಕ್ಕಳು ಹುಟ್ಟುತ್ತಾರೆ. ಇದರಿಂದ ಲೋಕದೊಳಗಿನ ಜನಸಂಖ್ಯೆಯು ವೃದ್ಧಿಯಾಗಿ ವ್ಯಾಪಾರ ಕಲಾಕೌಶಲ್ಯಗಳೂ, ಇನ್ನೂ ಅನೇಕ ಪ್ರಕಾರ ಸತ್ಕಾರ್ಯಗಳೂ ಆಗುತ್ತವೆ ಹೀಗೆ ಮಾಡದೆ ಪ್ರಸ್ತುತಕಾಲದಲ್ಲಿ ಎಷ್ಟೋ ಜನರು ತಮ್ಮ ಮಕ್ಕಳಿಗೆ ಅತಿಶಯ ಚಿಕ್ಕಂದಿನಲ್ಲಿಲಗ್ನವನ್ನು ಮಾಡುತ್ತಾರೆ ಅದ್ದರಿಂದ ಅವರು ಬಹಳತೊಂದರೆಯಲ್ಲಿ ಬೀಳುತ್ತಾರೆ ಇದಲ್ಲದೆ ಇನ್ನು ಕೆಲವು ಹಾನಿಯುಂಟು ಮನುಷ್ಯಜಾತಿಯಲ್ಲಿ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕ ಲಿಂಗವೆಂಬ ಮೂರು ಪ್ರಕಾರಗಳುಂಟು ಪುಲ್ಲಿಂಗ, ಸ್ತ್ರೀಲಿಂಗ ಸಂಯೋಗದಿಂದ ಪ್ರಜಾವೃದ್ಧಿಯಾಗಿ ದೇಶದ ಜನಸಂಖ್ಯೆಯು ಬೆಳೆಯಲಿಕ್ಕೆ ಕಾರಣವಾಗುತ್ತದೆ ಇನ್ನು ನಪುಂಸಕಲಿಂಗದ ವಿಚಾರವನ್ನು ನೋಡತಕ್ಕದ್ದು ನಪುಂಸಕ ಲಿಂಗಸ್ವರೂಪವು ಒಂದೊಂದು ಕಾಲದಲ್ಲಿ ಬಾಹ್ಯಸ್ತ್ರೀಲಿಂಗರೂಪವಾಗಿಯೂ, ಅಂತರ್ನಪುಂಸಕಲಿಂಗರೂಪವಾಗಿಯೂ, ಒಂದೊಂದು ಕಾಲದಲ್ಲಿ ಬಾಹ್ಯಪುಲ್ಲಿಂಗರೂಪವಾಗಿಯೂ, ಅಂತರ್ನಪುಂಸಕಲಿಂಗ ರೂಪವಾಗಿಯೂ ಕಾಣಬರುವದು ಆದರೆ ಈ ವಿಚಾರವು ಬಾಲ್ಯಾವಸ್ಥೆಯಲ್ಲಿ ಲಗ್ನ ಮಾಡುವದರಿಂದ ಮುಂದೆ ಅವರ ಪರಿಣಾಮವು ಯಾವ ಪ್ರಕಾರ ವಾಗುತ್ತದೆಂಬದು ವಾಚಕರೇ ತಿಳಿದುಕೊಳ್ಳತಕ್ಕದ್ದು ಒಬ್ಬ ಒಡವನಿಗೆ ಇಂಥಾ ಪ್ರಕಾರ ಸ್ತ್ರೀಯಳನ್ನು ಲಗ್ನ ಮಾಡುವದರಿಂದ ಬಹಳ ಹಾನಿಯುಂಟು, ಆ ಮನುಷ್ಯನು ಕೊಡುವ ಲಗ್ನ ಮಾಡಿಕೊಂಡ ನಾಲ ಇನ್ನೂ ಯಾರಿಗೂ ತಿಳಿದಿಲ್ಲ, ಆಪ್ರಸಂಗದಲ್ಲಿ ಮತ್ತೊಂದು ಲಗ್ನ ಮಾಡಿಕೊಳ್ಳದಿದ್ದರೆ ಎಷ್ಟು ಹಾನಿಯಾಗುತಿದೆ ? ಇನ್ನು ಸ್ತ್ರೀಯಳಿಗೆ ಇಂಥಾ ನಪುಂಸಕ ಮನುಷ್ಯನು ಲಗ್ನವಾದರೆ, ಆಕೆಯು ಅವಸ್ಥೆ ಯಾವಪ್ರಕಾರ ? ಮತ್ತು ಧರ್ಮಶಾಸ್ತ್ರದಲ್ಲಿ ಹೀಗೆ ಹೇಳಿರುವದು, ಯಾವ ಸ್ತ್ರೀಯರ ಪತಿಯು ನಪುಂಸಕನಾದರೆ, ಅಲ್ಲದೆ ಭ್ರಷ್ಟನಾದರೆ ಇಂಥಾ ಮನುಷ್ಯನ ಸ್ತ್ರೀಯಳು ಪರಪುರುಷನ ಕೂಡ ಸಂಭೋಗವನ್ನು ಮಾಡಿ ಪಡೆದ ಬಾಲಕನಿಂದ ಮೂಲ ಪಿತೃ ಮಾತೃಗಳ ಆಸ್ತಿಗೆ ಬಾಧ್ಯನಾಗುತ್ತಾನೆಂತಲೂ, ಅದೇ ಮಗನಿಂದ ಮೂಲ ತಂದೆ ತಾಯಿಗಳಿಗೆ ಮೋಕ್ಷವೆಂತಲೂ ಬರೆದಿದೆ ಇದು ಶಾಸ್ತ್ರಸಮ್ಮತವಿದ್ದರೂ ಲೋಕಾಚಾರಕ್ಕೆ ವಿರುದ್ಧವೆನಿಸುತಿದೆ ಇಂಥಾ ಆಪತ್ತಿನ ತೊಂದರೆಯೊಳಗೆ ಬೀಳುವದಕ್ಕಿಂತಲೂ ಬಾಲ್ಯ ವಿವಾಹವನ್ನು ಮಾಡದೆ ಇರುವದು ಬಹಳ ಉತ್ತಮವು.—ಸತ್ಯವೃತ್ತ.


## ADVERTISEMENTS.

### ನೋಟೀಸು

ಬೆಂಗಳೂರು ಕರ್ಣಾಟಕ ಪ್ರೆಸ್.
೧೮೭೩ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.
ಇದರಲ್ಲಿ, ಸಕಲವಿಧ ಕೆಲಸಗಳು ಸುಲಭಚಾರ್ಜಿಗೆ ಶೀಘ್ರವಾಗಿಯೂ ಶುಭ್ರವಾಗಿಯೂ, ಮಾಡಲ್ಪಡುವವು ಇದರಲ್ಲಿ ಸದ್ಯಕ್ಕೆ ಇಂಗ್ಲೀಷು ಕನ್ನಡ ಕೆಲಸಗಳು ಮಾತ್ರವೆ ... ತರ್ಜುಮೆಗಳನ್ನು ಸವರೀ ಕಾರ್ಖಾನೆಯು ಪ್ರೊಪ್ರೈಟರರಿಗೆ ಬರೆದು ತಿಳಿದುಕೊಳ್ಳಬಹುದು.

### NOTICE

VAIDYASARA SANGRAHA
A TREATISE ON THE PRINCIPLE OF
HINDU MEDICINE
*Price including Postage Rs 5 0 0*
ವೈದ್ಯಸಾರ ಸಂಗ್ರಹ

ಈ ಗ್ರಂಥಾಪೇಕ್ಷೆಯುಳ್ಳವರು ವೋಬಲೀನೊಡನೆ ಈ ಕೆಳಗೆ ರುಜು ಹಾಕಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕಳುಹಿಸಲ್ಪಡುವದು. ಹಣವಿಲ್ಲದ ವಿ.ಪಿ. ಗಳಿಗೆ ಸರ್ಕಾರ ಕೊಡಲ್ಪಡಲಾರದು

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೇ ಹಾಸಲ್ ಟೋಟಲ್ ಪ್ರತಿ ಒಂದಕ್ಕೆ ರೂ ೫-೦-೦
ಟಿ ಬಿ ವೆಂಕಟಾಚಾರ್.
ಬೆಂಗಳೂರ್ ಮಹರ್ ಆಸ್ಪತ್ರೆ ರೋಡ್ ೪೮ ನೆಂಬರ್.

### ನೋಟೀಸ್,

ಎದುರಿಗೆ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ನಾಟಕ ಮುದ್ರಾಕ್ಷರ ಶಾಲೆಯಲ್ಲಿ ಬಿಕರಿಗೆ ಸಿದ್ಧವಾಗಿವೆ. ಬೇಕಾದವರು ವೋಬಲಿಗೆ ಕಳುಹಿಸಿ ತರಿಸಿಕೊಳ್ಳಬಹುದು.

### ಸಂಸ್ಕೃತ ಗ್ರಂಥಗಳು.

| | ಪೋಸ್ಟ್ ಸಹಿ ರೂ | ಆ | ಪೈ. |
|---|---|---|---|
| ಟೀಕ ವೈದ್ಯಸಾರ ಸಂಗ್ರಹ | ೫ | ೦ | ೦ |
| ,, ಭಗೀತೆ | ೧ | ೦ | ೦ |
| ,, ರಿವಾಸದಲಹರಿ | ೦ | ೮ | ೦ |
| ,, ಕಾಲಾಮೃತ | ೧ | ೦ | ೦ |
| ,, ಟಿ|| ಮಹಾರಾಮಾಯಣ | ೦ | ೩ | ೦ |
| ,, ಟೀ|| ಗೋಪಿಕಾ ಗೀತ | ೦ | ೧ | ೦ |
| ,, ಟೀ|| ಚಾಣಕ್ಯನೀತಿ (ಸುಭಾಷಿತ) | ೦ | ೪ | ೦ |
| ವಿಷ್ಣುಸಹಸ್ರನಾಮ ಪತ್ರಿಕೆ | ೦ | ೩ | ೦ |
| ಸೌರ್ಯಸಹಸ್ರನಾಮ | ೦ | ೨ | ೦ |
| ಕೃಷ್ಣಕರ್ಣಾಮೃತ | ೦ | ೨ | ೦ |
| ತ್ರಿಕಾಂಡ ಅಮರ ಮೂಲ | ೦ | ೬ | ೦ |
| ೧ ಕಾಂಡ | ೦ | ೧ | ೦ |

### ಕನ್ನಡ ಗ್ರಂಥಗಳು.

| | | | |
|---|---|---|---|
| ಶುಕಸಪ್ತತಿ ಅಪ್ಪಲ್ | ೩ | ೦ | ೦ |
| ಡಿಟೋ ಮಧ್ಯಂ | ೧ | ೨ | ೦ |
| ವೃಷಭೇಂದ್ರವಿಜಯ | ೧ | ೮ | ೦ |
| ಪಂಚತಂತ್ರ ವಾಲಪೀಠಿಕೆ | ೦ | ೬ | ೦ |
| ಹನುಮದ್ವಿಲಾಸ | ೦ | ೬ | ೦ |
| ಕಾಳೀಯಮರ್ದನ | ೦ | ೨ | ೦ |
| ಸುಭದ್ರಾಪರಿಣಯ | ೦ | ೨ | ೦ |
| ಚಕೋರೀಪರಿಣಯ | ೦ | ೨ | ೦ |
| ಸುದಾಮಚರಿತ್ರೆ | ೦ | ೧ | ೦ |
| ಮೈರಾವಣ ಚರಿತ್ರೆ | ೦ | ೧ | ೦ |
| ಬಾಲಗ್ರಹಚಿಕಿ | ೦ | ೧ | ೦ |
| ಮಹಮ್ಮರ್ದ ಲಾ | ೦ | ೧೦ | ೦ |
| ಬ್ರಾಂತಿವಿಲಾಸ | ೨ | ೦ | ೦ |


BANGALORE —Printed and published at the KARNATAKA PRESS, No 40, HOSPITAL ROAD CITY— 1893

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning.**

ಶ್ರೀಮದ್ವಿವಿಧಸ್ವಸ್ತ್ಯನುನಗರಸಾರ್ಥಕರ್ಣಾಟಕಪ್ರಕಾಶನಪರಾಭಿಧಾಪ್ರಥಿತಶರಾಹಿತೀಶೋಭಿತಾ॥ಮೃಗಾಂಕಹಿತವಾಸರೇಸಿತಮುದ್ರಣಾಸದ್ವನ್ಯೆರ್ಧಶಾಸುಪರಿಪೋಷಿತಾಧಿಕತಿವರಾನಸುಸಂಮುದಃ

Vol. [XX] | BANGALORE—MONDAY, JUNE 26 1893 | [No 25

ಸಂಪುಟ ೨೦.] | ಬೆಂಗಳೂರು:—ಸನ್ ೧೮೯೩ನೇ ಇಸವಿ ಜೂನ್ ೨೬ನೇ ತಾರೀಖು ಸೋಮವಾರ. | [ಸಂಚಿಕೆ ೨೫.


## ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

| | ಸ್ಥಳೀಯರಿಗೆ | ಪರಸ್ಥಳೀಯರಿಗೆ |
|---|---|---|
| ಸಾಲ್ ಒಂದಕ್ಕೆ ... | 6—0—0 | 8—0—0 |
| 6 ತಿಂಗಳಿಗೆ . . | 3—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

| | ಸ್ಥಳೀಯರಿಗೆ. | ಪರಸ್ಥಳೀಯರಿಗೆ. |
|---|---|---|
| ಸಾಲ್ ಒಂದಕ್ಕೆ ... .. | 3—0—0 | 4—0—0 |
| 6 ತಿಂಗಳಿಗೆ . . | 1—12—0 | 2—8—0 |

ಈ ಪತ್ರಿಕೆಯ ನ್ನು ತರಿಸುವವರು, ಪ್ರಕಟಿಸಿದ ತಾರೀಖಿನ ಮೊದಲು ಒಂದು ತಿಂಗಳೊಳಗಾಗಿ ಚಂದಾ ಮೊಬಲಗನ್ನು ಕಳುಹಿಸದಂತವರಿಗೆ ಗಾಕ್ಕಾಪಿ ಅಡ್ವಾನ್ಸ್ ದರದಂತೆ ಪತ್ರಿಕೆ ಕಳುಹಿಸುವದು. ಚಂದಾದಾರರು ಇಂಗ್ಲಿಷ್ ಭಾಗದ ಬದಲಿಗೆ ಕನ್ನಡ ಭಾಗವನ್ನಾಗಲಿ ಅಥವಾ ವಿಶೇಷವಾಗಿ ತರಿಸಿಕೊಳ್ಳುವದು ಇದ್ದರೆ ತಿಂಗಳಿಗೆ ಬದಲಾಗಿ ಚಂದಾ ಮೊಬಲಗು ಅಂಗೀಕರಿಸಲ್ಪಡಬಹುದು.

### ಪ್ರಕಟನದ ದರಗಳು.

| | | |
|---|---|---|
| ಲೇಖನದ ಮೊದಲಿನ ಪಂಕ್ತಿಗೆ | ಒಂದಕ್ಕೆ | ೦—೨—೦ |
| ಎರಡನೇ ಸಲದಿಂದ ಮುಂದೆ | ಒಂದಕ್ಕೆ | ೦—೧—೦ |

ದರ—ಎರಡಾವರ್ತಿಗಿಂತ ಹೆಚ್ಚಾಗಿ ಎಷ್ಟು ಕಟುವ ಕಾಲಂ ಮೊದಲಾದ್ದಕ್ಕೆ ಪ್ರತಿ ಒಂದಕ್ಕೆ ೧ ಆಣೆಯಂತೆ ಈ ಪತ್ರಿಕೆಯಲ್ಲಿ ತಮ್ಮ ಪ್ರಕಟನೆಗಳನ್ನು ಕಳುಹಿಸುವವರು ಅವುಗಳನ್ನು ಪ್ರಕಟಿಸತಕ್ಕ ಕ್ರಮವನ್ನೂ ತಿಳಿಸತಕ್ಕದ್ದು. ಇಲ್ಲದಿದ್ದಲ್ಲಿ ಅವುಗಳನ್ನು ಮಾನ್ಯ ಸಲ ಪ್ರಕಟಿಸುವದು. ಅವು ಪ್ರಕಟಿಸಲ್ಪಟ್ಟ ಮೇಲೆ ದರದಂತೆ ಚಂದಾ ಹಣ ಪ್ರಕಟನೆಗಳ ಮೊಬಲಗನ್ನು ಕಳುಹಿಸತಕ್ಕದ್ದು. ಪ್ರಕಟನೆಗಳನ್ನು ಕಳುಹಿಸುವವರು ಮುಂದಾಗಿ ಹಣ ಕಳುಹಿಸಬೇಕು. ಪ್ರಕಟನೆಗಳ ಪತ್ರ ವ್ಯವಹಾರ ಮುಂತಾದ್ದಕ್ಕೆ ಕಾಗದ ಬರೆಯುವವರು ಜವಾಬಿಗಾಗಿ ಸ್ಟ್ಯಾಂಪ್ ಕಳುಹಿಸಬೇಕು. ಪ್ರಕಟನೆಗಳ ಹಣವನ್ನು ಮುಂದಾಗಿ ಕೊಡತಕ್ಕದ್ದು.

*ADVERTISEMENTS*


## NOTICE.

### VAIDYASARA SANGRAHA

A TREATISE ON THE PRINCIPLES OF

### HINDU MEDICINE

*Price including Postage Rs 5 0 0*

ವೈದ್ಯಸಾರ ಸಂಗ್ರಹ.

ಈ ಗ್ರಂಥವು ಶ್ರೇಷ್ಠವಾದ ವೈದ್ಯಶಾಸ್ತ್ರಗಳ ಸಾರವನ್ನು ಸಂಗ್ರಹಿಸಿ ಬರೆದಿರುವದು. ಮೊದಲು ಇದ್ದ ಬೆಲೆಗಿಂತ ಕಡಿಮೆ ಬೆಲೆಗೆ ಕೊಡಲ್ಪಡುವದು.

ಬೆಲೆ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಹಾಸಲು, ದೇಹಲ್ ಪ್ರತಿ ಒಂದಕ್ಕೆ ರೂ 5—0—0

ಟಿ. ಬಿ. ವೆಂಕಟಾಚಾರ್.

ಬೆಂಗಳೂರ್, ಮದ್ರಾಸ್ ಆಸ್ಪತ್ರೆ ರೋಡ್ ೪೮ ನೇ ನಂಬರ್

## ನೋಟೀಸ್.

### ಬೆಂಗಳೂರು ಕರ್ಣಾಟಕ ಪ್ರೆಸ್.

೧೮೬೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು. ಇದರಲ್ಲಿ ಸಕಲವಿಧ ಕೆಲಸಗಳು ಸುಲಭಬೆಲೆಗೆ ಶೀಘ್ರವಾಗಿಯೂ ಅಚ್ಚುಕಟ್ಟಾಗಿಯೂ ಮಾಡಲ್ಪಡುವವು. ಇದರಲ್ಲಿ ಸಂಸ್ಕೃತ ಇಂಗ್ಲಿಷ್ ಕನ್ನಡ ಕೆಲಸಗಳು ಮಾತ್ರವೇ ಆಗುತ್ತವೆ. ಇತರ ತಪಶೀಲುಗಳನ್ನು ಸದರಿ ಕಚೇರಿ ಮ್ಯಾನೇಜರಿಗೆ ಬರೆದು ತಿಳಿದುಕೊಳ್ಳಬಹುದು.


## ನೋಟೀಸ್.

ಗಣೇಶ ರಾಮಚಂದ್ರ ಕರ್ಕ ಮತ್ತು ಕಂಪೆನಿ. ಕಮಿಶ್ಶನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇರೆ ದರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯೊಡನೆ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ತಕ್ಕ ಕಮಿಶ್ಶನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರದ ಔಷಧಗಳು, ಪುಸ್ತಕಗಳು, ಮುತ್ತುಗಳು, ಹವಳ ಮುತ್ತುಗಳು, ಘಡಿಯಾರಗಳು, ಸಾಬೂನುಗಳು, ಟ್ರಂಕುಗಳು, ಕಾಪ್ರೆ ರಾಲುಗಳು, ಪುಸ್ತಕಗಳು, ಬಿಸ್ತಾರ ಗಳು, ಚಂದ್ರಕಾಂತ ಮುಂತಾದ ಕನ್ನಡಕಗಳು, ಸುವಾಸನೆ ಎಣ್ಣೆ ಜರತಾರಿ ವಸ್ತುಗಳು, ಬನಾರಸ ಟೋಪಿಗಳು, ಆಫೀಸ ಡ್ರೆಸ್ಸಗಳು, ಪಟಗಳು, ಅತ್ತರಗಳು, ಅತ್ಯುತ್ತಮವಾದ ರತ್ನಗಳು, ಬಂಗಾರದಿಂದ ಕಟ್ಟಲ್ಪಟ್ಟ ಉಂಗುರಗಳು, ಪತ್ರಗಳು, ಜರ್ಮನ ಬೆಳ್ಳಿ ಪಾತ್ರಗಳು, ಕೇಸರಿ, ಕಸ್ತೂರಿ ವಗೈರೆ ಇತರ ಸಾಮಾನುಗಳು.

ಜವಾಬು ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟ್ಯಾಂಪ್ ಕಳುಹಿಸಿದ ಹೊರತು ಜವಾಬು ದೊರೆಯಲಾರದು.

ವಿಳಾಸ,—ಗಣೇಶ ರಾಮಚಂದ್ರ ಕರ್ಕ, ಮತ್ತು ಕಂಪೆನಿ, ಕಮಿಶ್ಶನ್ ಏಜಂಟ್ಸ್, ಠಾಕೂರದ್ವಾರ, ಮಾರ್ಕೆಟ್ ಪೋಸ್ಟ್, ಮುಂಬಯಿ.

## ನೋಟೀಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರಶಾಲೆಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

### ಸಂಸ್ಕೃತ ಗ್ರಂಥಗಳು.

| | | ರೂ | ಅ. | ಪೈ. |
|---|---|---|---|---|
| ಸಟೀಕಾ ವೈದ್ಯಸಾರ ಸಂಗ್ರಹ | ... | ೫ | ೦ | ೦ |
| „ ಶಿವಗೀತ | ... | ೧ | ೧ | ೦ |
| „ ಶಿವಾನಂದಲಹರಿ | ... | ೦ | ೮ | ೦ |
| „ ಕಾಲಾಮೃತ | .. | ೧ | ೦ | ೦ |
| „ ಟಿ॥ ವಾಲ್ಮೀಕಿರಾಮಾಯಣ .. | | ೦ | ೩ | ೦ |
| „ ಟಿ॥ ಗೋಪಿಕಾ ಗೀತ . . | | ೦ | ೧ | ೦ |
| „ ಟಿ॥ ಚಾಣಕ್ಯನೀತಿ (ಸುಭಾಷಿತ) | | ೦ | ೪ | ೦ |
| ವಿಷ್ಣುಸಹಸ್ರನಾಮ ಪದ್ಧತಿ | .. | ೦ | ೩ | ೦ |
| ನಾಮ್ಯಕಸ್ರಸಾಮ | .. | ೦ | ೨ | ೦ |
| ಕೃಷ್ಣಕರ್ಣಾಮೃತ | ... | ೦ | ೨ | ೦ |
| ತ್ರಿಶಾಂತ ಅಗಾದ ಮೂಲ | . | ೦ | ೨ | ೦ |
| ೧ ಕಾಂಡ | ... | ೦ | ೧ | ೦ |

### ಕನ್ನಡ ಗ್ರಂಥಗಳು.

| | | ರೂ | ಅ. | ಪೈ. |
|---|---|---|---|---|
| ಶಕಸಪ್ತತಿ ಅನ್ವಯ | ... | ೩ | ೦ | ೪ |
| ಬಿ ಟಿ ಮ್ಯಾಂ | ... | ೧ | ೨ | ೦ |
| ನೃಪಪೀಠಿಕಾಪ್ರಬಂಧ | ... | ೧ | ೮ | ೦ |
| ಪಂಚತಂತ್ರ ಬಾಲಬೋಧೆ | ... | ೦ | ೬ | ೦ |
| ಕನಕಾಪ್ಪಿಲೀಲ | . | ೦ | ೬ | ೦ |
| ಕಾಳಿಂಗಮರ್ದನ | .. | ೦ | ೨ | ೦ |
| ಸುಭದ್ರಾಪರಿಣಯ | ... | ೦ | ೨ | ೦ |
| ಕಲೋಪಾಖ್ಯಾನ | ... | ೦ | ೨ | ೬ |
| ಸುದಾಮಚರಿತ್ರ | .. | ೦ | ೧ | ೦ |
| ಸ್ಯಮಂತಕ ಚರಿತ್ರೆ | . | ೦ | ೧ | ೦ |
| ಬಾಲನೃಸಿಂಹ | ... | ೦ | ೧ | ೦ |
| ಮುಕುಂದ ಲಾ | . | ೦ | ೧೨ | ೦ |
| ಪ್ರಾಂತವಿಲಾಸ | ... | ೨ | ೦ | ೦ |

### ಕೊಡಗು ಫಾರೆಸ್ಟ್ ಇಲಾಖಾ.

#### ನೋಟೀಸ್.

ವೈನಾಡ್ ಫಾರೆಸ್ಟ್ ಡಿಪೋಗಳು ಜೂನ್ ತಾರೀಖು 15 ರಲ್ಲಿ ಇಟ್ಟದ್ದನ್ನು ಜೂನ್ 30 ಕ್ಕೆ ಬದಲಾಯಿಸಿದೆ.

ಹುಣಸೂರ್ ಟಿಂಬರ್ ಡಿಪೋ ಜೂನ್ 21ರಿಂದ ಬರುವ ಜುಲೈ 15 ಕ್ಕೆ ಬದಲಾಯಿಸಿದೆ.

ಬತಾರೀಖ್ 10ನೇ ಜೂನ್ 1893ನೇ ಇಸವಿ.

B. SHAMARAO,
*for Extra Assistant Conservator,*
*Incharge of Coorg Forest*

## ನೋಟೀಸ್.

ಇಂಥ ಲೋಕ ಪ್ರಸಿದ್ಧ ಬಗೆಯದು

೧ ಎಲ್ಲ ಶ್ರೀಮದ್ಮ ಮತಾನುಯಾಯಿಗಳಿಗೆ ವಿನಯಿಸುವದೇನೆಂದರೆ—ಶ್ರೀ ಹಂಸರೂಪಿ ಪರಮಾತ್ಮನನ್ನು ಆರಂಭ ಮಾಡಿಕೊಂಡು, ಶ್ರೀಮದಾನಂದ ತೀರ್ಥರಿಂದ, ಇಂದಿನವರಿಗೆ ಭಿ.ಮಾಕತ್ತಿ, ಉತ್ತರಾದಿ (ಸತ್ಯಧೀರತೀರ್ಥಸ್ವಾಮಿಗಳವರ) ಮಠ, ಪೂರ್ವಾದಿ (ರಾಘವೇಂದ್ರಸ್ವಾಮಿಗಳವರ) ಮಠ, ವ್ಯಾಸರಾಯ ಮಠ, ಇವಲ್ಲದೆ ಅಷ್ಟ ಮಠಗಳು—ಕೃಷ್ಣಾಪುರ, ಶಿರೂರ, ಫಲಿಮಾರ, ಪೇಜಾವರ, ಕಾಣೂರ, ಸೋದೆ, ಪುತ್ತಿಗೆ, ಅದಮಾರ, ಮುಂತಾದ ಪ್ರಖ್ಯಾತ ವೈಷ್ಣವ ಮಠಗಳ ಗುರುಪೀಠಗಳನ್ನು ಕೂಡಿಸಿ, ಅಪೂರ್ವವಾದ "ಶ್ರೀಮಧ್ವವಂಶ ವೃಕ್ಷಪಟವು" ಶಾಸ್ತ್ರೋಕ್ತ ಮರ್ಯಾದೆ ಪೂರ್ವಕವಾಗಿ ಪ್ರಕಟಿಸಲ್ಪಡುವದು.

೨ ಇದರಲ್ಲಿ ಶ್ರೀಗುರು ಶ್ರೀಮೂಲ ಪರಮಾತ್ಮನ ಶೇಷಶಾಯಿ ಚಿತ್ರವೂ ನಾಭಿಕಮಲದಿಂದ ಬ್ರಹ್ಮದೇವರು ಉದ್ಭವಿಸಿದ ಕೌತುಕವೂ, ಶ್ರೀವಾಯುದೇವರ ರೋಮಾಂಚ ಗೋಚರವೂ, ನಾರದ ತುಂಬುರ ನಡುವೆ, ಬ್ರಹ್ಮ ಶ್ರೀವ್ಯಾಸಾದಿ ಸಪ್ತರ್ಷಿ ಮಧ್ಯ ಯುಕ್ತ ಶ್ರೀಮದಾನಂದ ತೀರ್ಥರಿಂದ ಟೀಕೆಗಳ ಮತ್ತು ನಾಮಾಭಿಧಾನ ಸಹ ವೃಕ್ಷ ಶಾಖೆಗಳ ಒಡನಿರುವ ಶೋಭಾಯೂ, ರಮಣೀಯ ವರ್ಣಗಳ ಮನೋಲ್ಲಾದಕರ ಶೋಭೆಗಳೂ ಸುವರ್ಣಾಂಕಿತವಾದ ಚಿತ್ರಗಾರರ ಕುಶಲದಿಂದ ಕರಿಕರಿ ವರ್ಣದಿಂದಲೂ, ಅಪ್ರತಿಮ ಚಿತ್ರ ಕೌಶಲ್ಯದಿಂದಲೂ ಈ ವೃಕ್ಷಪಟವು ರಚಿಸಲ್ಪಡುವದು.

೩ ಇದಲ್ಲದೆ, ಪ್ರತಿಯೊಂದು ಮಠದ ಗುರುಗಳವರ ಪ್ರಾರ್ಥನಾದ ಹೆಸರು ಸ್ಥಳ ವ ಆಚಾರದ ಸಂಗತಿಯೂ, ಆ ಪರಂಪರೆಯಿಂದ ನಡೆದ ಚಮತ್ಕೃತಿಗಳೂ, ವಿದ್ವತ್ತಾ ವ್ಯಾಖ್ಯಾನದಿಂದ ರಚಿಸಿದ ಗ್ರಂಥಗಳ ಹೆಸರು, ಸಂಖ್ಯೆಯೂ, ಪ್ರಾಣ್ಯಾಲಯ ತಿಥಿ, ಪಕ್ಷ, ಮಾಸ, ಸಂವತ್ಸರ, ವೃಂದಾವನಸ್ಥಳ, ಆಳಿಕೆಯ ದಿನಗಳೂ, ಅಷ್ಟಕಗಳೂ, ಚರಮಶ್ಲೋಕಗಳೂ, ಮುಂತಾದವುಗಳೊಂದಿಗೆ ದೊಂತನ್ನು ಸಂಗತಿಯು ವೈಷ್ಣವ ಗುರುಚರಿತ್ರ ಎಂಬ ಪುಸ್ತಕದಲ್ಲಿ ದಿಗ್ದರ್ಶನ ಮಾಡಲ್ಪಡುವದು.

ಮುಂಗಡ ಕ್ರಯ ಕೊಡುವ ನೆಡು ಹೆಸರು ಕಳುಹಿಸಿಕೊಡುವವರಿಗೆ ಬರುವ ಜೂನ್ ತಿಂಗಳ ಕಡೆಯವರೆಗಾಗಿ ಶ್ರೀಮಧ್ವವಂಶ ವೃಕ್ಷಪಟ ಒಕ್ಕೆ ಒಂದು ರೂಪಾಯಿ ಮತ್ತು ವೈಷ್ಣವ ಗುರುಚರಿತ್ರ ಒಕ್ಕೆ ಒಂದು ರೂಪಾಯಿ ಕ್ರಯ ಬೀಳುವದು ಅಂಚೆ ಹಾಸಲು ಇಲ್ಲ. ವ್ಯಾಪಾರ ಮಾಡುವವರಿಗೆ ನೂರಕ್ಕೆ ೨೦ ರಂತೆ ಲಾಭ ಕೊಡುವದು. ಬಿಡಿ ಒಂದೇ ಚಿತ್ರಪಟ ಇಲ್ಲವೇ ಚರಿತ್ರವು ಗ್ರಾಹಕರು ಬೇಡಿದರೆ ಸಿಗುವದು.

ಶ್ರೀಮಧ್ವವಂಶ ವೃಕ್ಷ ಪಟಕ್ಕೆ ಮುಂಗಡ ಸಹಾಯ ಕೊಡುವವೆಂದು ಅಭಿಮಾನ ಕೊಡುವವರ ಸಬ್ಸ್ಕ್ರಿಪ್ಶನ್ ಚರಿತ್ರ ಪುಸ್ತಕಗಳು ಮತ್ತು ವೃಕ್ಷ ಪಟಗಳು ಅಚ್ಚು ಹಾಕಿಸುವರು. ಹೆಚ್ಚಿಗೆ ಅಚ್ಚು ಹಾಕುವದಿಲ್ಲ ಯಾಕೆಂದರೆ ಇದಕ್ಕೆ ಪ್ರಯತ್ನಿಸುವರ ಹೊರತು ಮಿಕ್ಕಾದ ಜನರಬಗ್ಗೆ ಹೆಚ್ಚು ಹಣ ಖರ್ಚಿಸಲಿಕ್ಕೆ ಕಾರಣ ಸಂಭವಿಸುವುದಿಲ್ಲ. ಆದರೆ ಈ ತೊಂದರೆಯು ಎಲ್ಲ ಅಭಿಮಾನಿಗಳು ಮತ್ತು ಮಹಾರಾಜ ಮಹಾಪಟ್ಟಕೊಡುವವರು ಅವಶ್ಯ ಬೆಂಬಲಿಸಬೇಕು.

ಈ ವೃಕ್ಷ ಪಟದೊಳಗೆ ಮತ್ತು ಚರಿತ್ರ ಪುಸ್ತಕದೊಳಗೆ ಅವಶ್ಯವಾಗಿ ಮಾಡತಕ್ಕ ಸೂಚನೆಗಳನ್ನು ಮತ್ತು ಪ್ರಖ್ಯಾತ ಸ್ವಾಮಿಗಳವರ ಬಗ್ಗೆ ದಂತಕಥೆಗಳನ್ನು ಸಜ್ಜನರು ಸ್ವಹಸ್ತ ಬರಹದಿಂದ ಕೂಡಿಸಿ ಆದಷ್ಟು ಶೀಘ್ರ ಕಳುಹಿಸಿದರೆ ಅವುಗಳ ಅವಶ್ಯ ವಿಚಾರಿಸಲಾದೀತು.

ಸುಬ್ರಹ್ಮಣ್ಯ, ಮಾಡಿಗೆರೆ, ಕೊಡಲಿಗೆ, ಶ್ರೀನಿವಾಸರಾಯರ ವೈಷ್ಣವ ಮಠಗಳ ಗುರುಪೀಠಗಳು ಮತ್ತು ಅವುಗಳ ಬಗ್ಗೆ ೩ ನೇ ಕಲ್ಮಿನಲ್ಲಿ ಬರೆದ ಸಂಗತಿಗಳು ಯಾರಾದರೂ ತ್ವರದಿಂದ ಕಳುಹಿಸಿದರೆ ಅವರ ಉಪಕಾರ ಮನ್ನಿಸುವೆವು. ಈ ನಾಲ್ಕು ಮಠಗಳ ಪೀಠಗಳು ಮತ್ತು ಐತಿಹಾಸಿಕ ಸಂಗತಿಗಳು ವಿಶ್ವಸನೀಯವಾಗಿಲ್ಲ ಕಾರಣ ಬಿನ್ನೈಸಿದ್ದೇವೆ.

ಅತಿ ಪ್ರಯೋಜನದ ಕಾರ್ಯವು, ಸಾಫಲ್ಯ ವಾಗುವ ಬಗ್ಗೆ ಬಹಳ ಹಣ ತೊಡಗಿಸಿ ಪ್ರಕಟಿಸುವಂಥ ಅನಾಯಾಸದ ಸಕಲ ಸೌಖ್ಯಕರವಾದ ಇತಿಹಾಸ ಚರಿತ ಈ ಅಲಭ್ಯಲಾಭವು, ಎಲ್ಲ ಜಿಜ್ಞಾಸು ವೈಷ್ಣವಾಭಿಮಾನಿಗಳು ಅವಶ್ಯ ಸ್ವೀಕರಿಸುವರೆಂದು ನಾವು ತುಂಬಾ ಅಪೇಕ್ಷಿಸುತ್ತೇವೆ.

ಈ ಬಗ್ಗೆ ಎಲ್ಲ ಬಗೆಯ ಪತ್ರವ್ಯವಹಾರ ಮತ್ತು ಹಣ ಕಳುಹಿಸುವದು ಮೂಳಿಕರಾದ ಗುರುರಾವ್ ರಾಮಚಂದ್ರ ಶ್ರೀಮಧ್ವವಂಶ 'ವೃಕ್ಷ ಪ್ರಕಾಶಕರು ಬೆಳಗಾಂ ಇವರ ಹೆಸರಿನ ಲ್ಲಿ ಮಾಡಬೇಕು.

ವೆಂಕಟರಾವ್ ಕೃಷ್ಣ ಪಾನಸೂರ್ ಪೆನ್ಶನರ್,
ಮಾಮಲೇದಾರ್ ಬೆಳಗಾಂ.

ಸ್ವಾಮಿರಾವ್ ಸೇನಾಪತಿ ಪೆನ್ಶನರ್ ಮಾಮಲೇದಾರ್
ಸಂಗುನಾಥ

## THE MONEY MARKET.

ಮದರಾಸ್, ಶನಿವಾರ, ತಾರೀಖ್ 24ನೇ ಜೂನ್ 1893

ಸೇಕಡ 4ರ ಬಾಬತು ಗವರ್ನಮೆಂಟ್ ಪತ್ರಗಳು ರೂ. ಗಳು, 107-12-0 ಇಂದ 108-2-0 ವರಿಗೆ.

ಮದರಾಸ್ ಬ್ಯಾಂಕ್ ಷೇರಗಳು, (500) ರೂಪಾಯಿಗಳ ಬಾಬತು 985 ರಿಂದ 990ವರಿಗೆ.

ಕಮರ್ಷಿಯಲ್ ವ ಲ್ಯಾಂಡ್ ಮಾರ್ಟ್ಗೇಜ್ ಬ್ಯಾಂಕ್ ಷೇರಗಳು, (100) ಬಾಬತು 160 ರಿಂದ 165 ವರಿಗೆ.

ಸವರನ್‌ಗಳು, 16-2-0 ಇಂದ 16-7-0 ವರಿಗೆ.

ಬ್ಯಾಂಕ್ ಬಿಲ್ಲುಗಳ ಮಾನ ವರ್ತನಹುಂಡಿಗಳು, ರೂ॥ ೧ಕ್ಕೆ 6 ತಿಂಗಳವಾಯಿದೆಗೆ, 1s. 3 9/32 *d.*

ಡಿಟ್ಟೋ 4 ತಿಂಗಳವಾಯಿದೆಗೆ, 1s 3 7/32 *d.*

ಡಿಟ್ಟೋ ಕೇಳಿದಾಗ, 1s. 3 1/8 *d.*


## ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JUNE 26 1893.

೧೮೯೩ನೇ ಇಸವಿ ಜೂನ್ ತಾ॥ ೨೬ ನೇ ಸೋಮವಾರ.


## ಬ್ರಾಹ್ಮಣ ಜಾತಿ ಮತ್ತು ಶೂದ್ರ ಭಾರ್ಯೆಯನ್ನು ಕುರಿತದ್ದು.

ಬ್ರಾಹ್ಮಣನಾದವನು ಶೂದ್ರಸ್ತ್ರೀಯನ್ನು ವಿವಾಹ ಮಾಡಿಕೊಳ್ಳುವಣವು ಪುರಾತನವಾದ ಒಪ್ಪಿ ಹಿಂದಿನ ಧರ್ಮಶಾಸ್ತ್ರಗಳಿಗೆ ಅವಿರುದ್ಧವಾಗಿದ್ದಾಗ್ಯೂ ಅಂತಾ ಶಾಸ್ತ್ರಗಳು ಹುಟ್ಟಿದ ಸ್ವಲ್ಪ ಕಾಲದಮೇಲೆ ಮಾಡಲ್ಪಟ್ಟ ಬೇರೆ ಕೆಲವು ಧರ್ಮಶಾಸ್ತ್ರಗಳು ಮತ್ತು ನಿಬಂಧನೆಗಳನ್ನನುಸರಿಸಿ ಸದರೀ ವಿವಾಹವು ದೂಷ್ಯವೆಂದು ಏರ್ಪಟ್ಟ ತದ್ವತ್ ಬಹುಕಾಲದ ಮೊದಲು ನಡೆದು ಬರುತ್ತಲಿದೆ. ಹೀಗಿದ್ದಾಗ್ಯೂ, ಈಚೆಗೆ ಕಲ್ಕತ್ತಾ ಹೈಕೋರ್ಟಿನವರ ವಿಚಾರಣೆಗೆ ವಿಧೆಯವಾದ ಒಂದು ಮೊಕದ್ದಮೆಯಲ್ಲಿ ಸದರೀ ಕೋರ್ಟಿನ ಜಡ್ಜಿಗಳಿಬ್ಬರು ವಿರುದ್ಧಾಭಿಪ್ರಾಯಗಳುಳ್ಳವರಾಗಿ ಬಿಟ್ಟಿರುತ್ತಾರೆ ಹ್ಯಾಗಂದರೆ, ಕಲ್ಕತ್ತೆಯೊಳು

ಜಾನಕೀನಾಥ ಬಾನರ್ಜಿ ಯೆಂಬ ಬ್ರಾಹ್ಮಣನೊಬ್ಬನು ಗೋಲಾಬಿಲಮಾಣಿ ಯೆಂಬವಳನ್ನು ಮದುವೆಮಾಡಿಕೊಂಡು ಅವಳೊಡನೆ ಒಂದು ವರ್ಷದ ಕಾಲ ಸಂಸಾರ ಮಾಡಿಕೊಂಡಿದ್ದನು. ತರುವಾಯ ಅವಳು ಶೂದ್ರಸ್ತ್ರೀಯೆಂದು ತಿಳಿಯಬರಲು ಅವಳಂ ತ್ಯಜಿಸಿ ತಾನು ಬೇರೆಯಾದನು. ಅದರಮೇಲೆ ಸದರೀ ಹೆಂಗುಸು ಕಲ್ಕತ್ತಾ ಪ್ರಸಿಡೆನ್ಸಿ ಮ್ಯಾಜಿಸ್ಟ್ರೇಟರಕೋರ್ಟಿನಲ್ಲಿ ಜೀವನಾಂಶದಬಗ್ಗೆ ಗಂಡನಮೇಲೆ ದಾವೇಹೂಡಿ ತನಗೆ ಮಾಹೆಯಾನಾ V ರೂಪಾಯಿಗಳಮೇರೆ ಜೀವನಾಂಶ ಕೊಡುವಂತೆ ಡಿಕ್ರಿಯಂ ಪಡೆಕೊಂಡಳು. ಈ ಮೊಕದ್ದಮೆಯ ವಿಚಾರಣೆ ಕಾಲದಲ್ಲಿ, ಪ್ರಸಕ್ತ ವಿವಾಹವು ನ್ಯಾಯ್ಯವಾದುದಲ್ಲವೆಂದು ವಾದಿಸಲ್ಪಟ್ಟಾಗ್ಯೂ, ವಾದಿಯು ಪ್ರತಿವಾದಿಗೆ ನ್ಯಾಯವಾದ ಭಾರ್ಯೆಯೆಂತಲೂ, ವಿವಾಹವು ಹಿಂದೂ ಮತಾಚಾರವನ್ನನುಸರಿಸಿ ನಡೆದಿರುವಂತೆಯೂ, ಭರ್ತೃಭಾರ್ಯೆಯರಿಬ್ಬರು ಕೆಲವು ಕಾಲ ಸೇರಿ ಸಂಸಾರ ಮಾಡುತಲಿದ್ದಂತೆಯೂ ತೃಪ್ತಿಕರವಾಗಿ ತಿಳಿಯಬಂದುದರಿಂದ ಅವಳಿಗೆ ಜೀವನಾಂಶ ಕೊಡುವದಕ್ಕೆ ಗಂಡನು ಬದ್ಧನಾಗಿರುತ್ತಾನೆಂದು ಮ್ಯಾಜಿಸ್ಟ್ರೇಟರು ಅಭಿಪ್ರಾಯಪಟ್ಟರು. ಅದರಮೇಲೆ ಕಲ್ಕತ್ತಾ ಹೈಕೋರ್ಟಿಗೆ ಅಪೀಲಾಗಿ ಅಲ್ಲಿ ನಡೆದ ವಿಚಾರಣೆಯಲ್ಲಿ, ವಾದಿಗೂ ಪ್ರತಿವಾದಿಗೂ ನಡೆದ ವಿವಾಹವು ನ್ಯಾಯ್ಯವಾದುದೆ ಎಂಬ ಅಂಶವನ್ನು ವ್ಯವಸ್ಥೆ ಮಾಡುವದಕ್ಕೆ ಪೂರ್ವ ಜೀವನಾಂಶಕೊಡಬೇಕೆಂದು ಮ್ಯಾಜಿಸ್ಟ್ರೇಟರು ಕೊಟ್ಟ ಫೈಸಲ್ ಅಕ್ರಮವಾದುದೆಂದು ಅಪೀಲ್ದಾರಿಯ ಪರದಲ್ಲಿ ಆಕ್ಷೇಪಿಸಲ್ಪಟ್ಟಾಗ್ಯೂ ಜಡ್ಜಿಗಳು ಅದು ಅಂಗೀಕರಿಸದೆ, ಫಿರ್ಯಾದಿಯು ಪ್ರತಿವಾದಿಗೆ ವಿವಾಹವಾಗಿ ಕೆಲವು ಕಾಲ ಭರ್ತೃಭಾರ್ಯೆಯರಾಗಿ ಸಂಸಾರ ಮಾಡುತಲಿದ್ದುದರಿಂದ ಗಂಡನು ಹೆಂಡತಿಗೆ ಜೀವನಾಂಶ ಕೊಡುವದಕ್ಕೆ ಬದ್ಧನಾಗಿರುತ್ತಾನೆಂದು ಅಭಿಪ್ರಾಯಪಟ್ಟು ಮ್ಯಾಜಿಸ್ಟ್ರೇಟರು ಕೊಟ್ಟ ಹುಕುಮನ್ನು ಕಾಯಂ ಮಾಡಿದರು.

ಪುರಾತನಗಳಾದ ಮತ್ತು ವಿಧಿಚೋದಿತಗಳಾದ ನಮ್ಮ ಆಚಾರವ್ಯವಹಾರಗಳಿಗೆ ಮೂಲಕ್ಕೋ ಹಾನಿಯನ್ನುಂಟುಮಾಡಬೇಕೆಂಬ ಸಂಕಲ್ಪದೊಡನೆ ಆಧುನಿಕ ವೈಲಕ್ಷಿಣ್ಯಾಭಿಲಾಷಿಗಳಾದ ಹಿಂದೂಗಳನೇಕರು ಪ್ರವರ್ತಿಸಿರುವ ಈಕಾಲದಲ್ಲಿ ಮತ ಸಂಬಂಧವಾದ ನಿಬಂಧನೆಗಳಿಗೂ ಆಚಾರಗಳಿಗೂ ಬಾಹ್ಯರಾದ ನ್ಯಾಯಾಧಿಪತಿಗಳಿಂದ ನಮ್ಮ ಧರ್ಮಶಾಸ್ತ್ರಗಳೂ ನಿಬಂಧನೆಗಳೂ ಸ್ಥಿರಪಡಬೇಕೆಂದು ಹ್ಯಾಗೆ ನಿರೀಕ್ಷಿಸಬಹುದು?

## ವಾರಾಂಗನೆಯರಂ ಕುರಿತದ್ದು.

ಈ ಇಂಡ್ಯಾ ದೇಶದಲ್ಲಿ ಹಿಂದೂ ಮತ್ತು ಮುಸಲ್ಮಾನರ ಮನೆಗಳೊಳು ಆಯಾ ಕಾಲಗಳಲ್ಲಿ ನಡೆಯುವ ಶುಭ ಸಂದರ್ಭಗಳೊಳು, ಮನೆಯ ಯಜಮಾನನು ತನ್ನ ಬಂಧುವರ್ಗಕ್ಕೆ ಸೇರಿದವರನ್ನೂ ಮಿತ್ರಮಂಡಲಿಯನ್ನೂ ಮರ್ಯಾದಾರ್ಥ ಫಲತಾಂಬೂಲಕ್ಕಾಗಿ ಕರೆಯುವದೂ, ಅಂತವರು ಒಂದು ವಿವಾಹ ಮಂಟಪವನ್ನಲಂಕರಿಸಿರುವ ಕಾಲದಲ್ಲಿ ಅವರ ಉಲ್ಲಾಸಾರ್ಥ ಗಾನ, ನರ್ತನ ಮೊದಲಾದ ವಿನೋದಕಾರಿಗಳಾದ ಕಾರ್ಯಗಳಿಂದ ಆ ಹೊರಗಿನವರಂ ಸಂತೋಷಗೊಳಿಸಿ ಕಳುಹಿಸುವದೂ ಒಂದು ಅನಾದಿ ಸಂಪ್ರದಾಯವಾಗಿರುತಿದೆ. ಗಾನ, ನರ್ತನಗಳಲ್ಲಿ ಮೊದಲನೆಯದಂ ಪುರುಷರಾದವರು ಕೈಗೊಂಡು, ಎರಡನೆಯದಾದ ನರ್ತನ ಕಾರ್ಯವಂ ಸ್ತ್ರೀಯರಿಂದ ಮಾಡಿಸುವದು ಹೆಚ್ಚು ರಂಜಕವಾಗಿರುವದೆಂದು ಭಾವಿಸಿ ಅದಂ ಅವರಿಗೊಪ್ಪಿಸಿದ್ದು ಮಾತ್ರವಲ್ಲದೆ, ಸಾಂಸಾರಿಕ ವೃತ್ತಿಯಲ್ಲಿರುವ ಸ್ತ್ರೀಯರಂ ಸಭಾಮಂಟಪಕ್ಕೆ ಕರೆಯಿಸಿ ಅವರಿಂದ ನರ್ತನವಂ ಮಾಡಿಸುವದನು ಹೀನ ಮತ್ತು ಗೌರವಹಾನಿಕರವಾದ ಕೃತ್ಯವೆಂದು ಭಾವಿಸಿ, ಅದಕ್ಕಾಗಿಯೇ ಬೇರೆಯೊಂದು ತರಗತಿ ಜನರು ನಿಯಮಿಸಲ್ಪಟ್ಟು, ಅವರಿಂದ ನರ್ತನವು ಮಾಡಿಸಲ್ಪಡುತಿದೆ, ಮತ್ತು ನರ್ತನಕ್ಕೆ ಗಾನವು ಮುಖ್ಯಾಂಗವಾಗಿರುವದರಿಂದ ಅದನ್ನೂ ಸದರೀ ತರಗತಿಯವರು ಅಭ್ಯಸಿಸಬೇಕಾಯಿತು. ಈ ಜನರನ್ನು ಗೌರವ್ಯವಾದ ಸಭಾಮಂಟಪ ಪ್ರವೇಶಕ್ಕೆ ಅರ್ಹರನ್ನಾಗಿ ಮಾಡುವ ಉದ್ದೇಶದೊಡನೆ, ಅವರಿಗೆ ದೇವಾಲಯಗಳಲ್ಲಿ ಪ್ರತಿದಿನದಲ್ಲೂ ದೇವರಿಗೆ ಕುಂಭಾರ್ತಿ ಸಮರ್ಪಿಸುವದು, ಆವಶ್ಯಕಗಳಾದ ಕಾಲಗಳಲ್ಲಿ ಗಾನ, ನರ್ತನಗಳಂ ಮಾಡುವದು, ಇವು ಮೊದಲಾದ ಕಾರ್ಯಗಳಂ ನಿಯಮಿಸಿ, ಅವರಿಗೆ ದೇವಸ್ಥಾನಗಳ ಆಯತಿಯಿಂದ ಯಥೋಚಿತ ಜೀವನೋಪಾಯವಂ ಕಲ್ಪಿಸಿ ಕೊಟ್ಟಿರುವದಲ್ಲದೆ, ಇವರಿಗೆ ಆಲಯಗಳಲ್ಲಿ ಕೆಲವು ಮರ್ಯಾದೆಗಳಂ ಸಹ ಏರ್ಪಡಿಸಿ, ಇವರ ನಡವಳಿಕೆಯ ವಿಷಯದಲ್ಲಿ ಕೆಲವು ನಿಯಮಗಳಂ ಸಹ ಮಾಡಿರುತ್ತಾರೆ. ಮೇಲಿನ ಯೋಗ್ಯತೆಗೆ ಬದ್ಧರಾಗಿ ನಡೆಯತಕ್ಕವಂತವರು ಮಾತ್ರವೇ ದೇವದಾಸಿಯರೆನ್ನಿಸಿಕೊಳ್ಳುತ್ತಾರೆ. ನಾವು ಮುಂದಾತರ ಕಾಲದ ಮೊದಲು ನಡೆದು ಬರುವ ಈ ವಾಡಿಕೆಯು ಕೇವಲ ದೂಷ್ಯವಾದುದೆಂತಲೂ, ಇವರ ಸಂಸರ್ಗವು ಸಾಮಾನ್ಯವಾಗಿ ಜನರ ವೈಲಕ್ಷಿಣ್ಯಾಭಿವೃದ್ಧಿಗೆ ಬಾಧಕವಾದುದೆಂತಲೂ, ಈಚೆಗೆ ಕೆಲವರು ಭಾವಿಸಿ, ಸರ್ವಪ್ರಯತ್ನದಿಂದಲೂ ಅವರ ಸಂಸರ್ಗ ನಿವೃತ್ತ್ಯುಪಾಯವಂ ಹುಡುಕಬೇಕೆಂದು ಬಹುವಿಧ ಪ್ರಯತ್ನಗಳಂ ಮಾಡುತ್ತ, ನಾಗರಿಕರಾದವರೆಲ್ಲರು ಅಂತ ತಮ್ಮ ಪ್ರಯತ್ನಕ್ಕೆ ಪೋಷಕರಾಗಬೇಕೆಂದು ಅವರಂ ಪ್ರೇರಿಸುತಲಿದಾರೆ. ಈ ಗದ್ದಲವು ಮೊದಲು ಮದರಾಸ್ ನಲ್ಲುದ್ಭವಿಸಿ, ಅಲ್ಲಿಂದ ಸಾಂಕ್ರಾಮಿಕವಾಗಿ ದೇಶದೇಶಕ್ಕೂ ವ್ಯಾಪಿಸಿ, ಅಲ್ಲಲ್ಲಿ ಸಭೆಗಳು ಸೇರುತ ಮೇಲಿನ ತರಗತಿಯವರ ನಾಶನವೋಚಿಸುತಲಿದಾರೆ. ಪರಂತು ಈ ವ್ಯವಹಾರಿಗೆ ಪ್ರೋತ್ಸಾಹಕರಾಗಿ ವಾದಿಸತಕ್ಕವರ ಸಮೂಹವು ಅಲ್ಪವಾದುದೆಂದು ನಾವು ಭಾವಿಸಲಾರೆವು. ಈ ಮೈಸೂರು ದೇಶದೊಳು, ತತ್ರಾಪಿ ರಾಜಧಾನಿಯಲ್ಲಿ ಆಧುನಿಕ ವೈಲಕ್ಷಿಣ್ಯಾಭಿಲಾಷಿಗಳಾದವರು ಕೆಲವರು, ಮದರಾಸ್ ಪ್ರಾಂತದವರನ್ನನುವರ್ತಿಸಿ, ತಾವು ಸಭೆ ಸೇರಿ ಅನ್ಯತ್ರ ನಡೆಸಲ್ಪಟ್ಟಂತೆ ಕೆಲವು ರೆಜೊಲ್ಯೂಷನ್, ಅಂದರೆ ವೇಶ್ಯೆಯರಂ ಯಾವ ಸಂದರ್ಭದಲ್ಲೂ ಸಭಾಮಂಟಪಕ್ಕೆ ಕರೆಯಿಸಕೂಡದೆಂದು ನಿರ್ಬಂಧನೆಗಳಂ ಮಾಡಿ, ಶ್ರೀಮನ್ ಮಹಾರಾಜರವರು ತಮ್ಮ ಅರಮನೆಗೆ ಸೇರಿದ ವೇಶ್ಯೆಯರಂ ಅವರ ನೌಕರಿಯಿಂದ ನಿವೃತ್ತಿ ಮಾಡುವದರ ಮೂಲಕವಾಗಿಯೂ, ದಿವಾನರವರು ತಮ್ಮ ಮನೆಯೊಳು ನಡೆದ ವಿವಾಹದ ಸಂದರ್ಭದಲ್ಲಿ ಅವರುಗಳಂ ಕರೆಯಿಸದೆಯೋಗುವದರ ಮೂಲಕವಾಗಿಯೂ ಪ್ರಸಕ್ತ ತಮ್ಮ ಪ್ರಯತ್ನಕ್ಕೆ ಪ್ರೋತ್ಸಾಹವನ್ನುಂಟುಮಾಡಬೇಕೆಂದು ವೃತ್ತಾಂತ ಪತ್ರಿಕೆಗಳ ಮೂಲಕ ಪ್ರಾರ್ಥಿಸಿ, ತಮ್ಮ ಇಷ್ಟ ಸ್ವೀಕೃತಿಯ ಕಾಲವಂ ಕೇವಲ ಆತುರದೊಡನೆ ನಿರೀಕ್ಷಿಸುತಲಿದ್ದರು. ಪರಂತು ದಿವಾನರವರ ಗೃಹದೊಳು ಈಚೆಗೆ ನಡೆದ ವಿವಾಹಮಹೋತ್ಸವಕ್ಕೆ ಶ್ರೀಮನ್ ಮಹಾರಾಜರವರ ಸವಾರಿಯು ಚಿತ್ತೈಸಿದ್ದ ಕಾಲದಲ್ಲಿ ವೇಶ್ಯೆಯರ ಗಾನ, ನರ್ತನಗಳು ನಿರಾಕ್ಷೇಪಣೀಯವಾಗಿ ನಡೆದಂತೆ ತಿಳಿಯಬರುವದರಿಂದ ಶ್ರೀಮನ್ಮಹಾರಾಜರವರೇ ಆಗಲಿ ದಿವಾನರವರೇ ಆಗಲಿ ಇದಕ್ಕೆ ಪ್ರತ್ಯರ್ಥಿಗಳಾಗಿ ಪ್ರವರ್ತಿಸಿರುವ ಜನರ ಕೋರಿಕೆಯಂ ಅಂಗೀಕರಿಸುವ ವಿಷಯದಲ್ಲಿ ವಿಮುಖರಾದಂತೆ ಸ್ಪಷ್ಟವಾಗುತಿದೆ. ಈ ಕಾಲದಲ್ಲಿ ದೇವದಾಸಿಯರೆನ್ನಿಸಿಕೊಂಡಿರುವ ವೇಶ್ಯೆಯರು ತಮಗಾಗಿ ಪೂರ್ವಿಕರಿಂದ ಮಾಡಲ್ಪಟ್ಟಿರುವ ನಿಯಮಗಳಿಗನುಸಾರವಾಗಿ ನಡೆದುಕೊಳ್ಳುತ್ತಾರೆಂದು ನಾವು ಹೇಳುವದಿಲ್ಲವು. ಕಾಲವೈಪರೀತ್ಯದಿಂ ಶಾಸ್ತ್ರಕ್ಕೂ ವೃದ್ಧಾಚಾರಕ್ಕೂ ಬದ್ಧರಾದವರೆನ್ನಿಸಿಕೊಂಡಿರುವಂತವರಲ್ಲಿ ಅನೇಕರು ಕೇವಲ ದೂಷ್ಯಗಳಾದ ಕಾರ್ಯಗಳಲ್ಲಿ ಪ್ರವರ್ತಿಸಿರುವಂತೆ ವಾರಾಂಗನೆಯರೂ ದುಶ್ಶೀಲರಾಗಿರಬಹುದು. ಪರಂತು ಉಪಾಯಾಂತರಗಳಿಂದ ಅವರಂ ಸನ್ಮಾರ್ಗಪ್ರವರ್ತಕರನ್ನಾಗಿ ಮಾಡುವದು ಉಚಿತವೇ ಹೊರ್ತು ಅವರಿಗೆ ಮೂಲಕ್ಕೋಹಾನಿಯನ್ನುಂಟುಮಾಡುವ ಪ್ರಯತ್ನವು ಸರ್ವಜನಾಭಿಮತವಾಗಲಾರದು, ಮತ್ತು ಅಮಲಬರುವಿಧಾನಸ್ಥಕಾರಿಯಾಗುವದು ಮಾತ್ರವಲ್ಲದೆ ಸಾಧ್ಯವೂ ಆಗಲಾರದೆಂದು ತೋರುತಿದೆ. ಪ್ರಜೆಗಳಿಗೆ ತಮ್ಮ ವೃದ್ಧಾಚಾರಗಳೊಳು ಯಾವ ಭಾಗದಲ್ಲಾಗಲಿ ಲೋಪವು ತಂದು ಬಂದರೆ ಅದಂ ಬಹುಜನಾಭಿಪ್ರಾಯಾನುಸಾರವಾಗಿ ತಮ್ಮೊಳು ತಾವು ತಿದ್ದಿಕೊಳ್ಳುವದು ಉಚಿತವೇ ಹೊರತು, ತನ್ನಿವೃತ್ತ್ಯುಪಾಯಕ್ಕಾಗಿ ಗವರ್ನಮೆಂಟಿನವರಂ ಬೇಡುವದು ನಮ್ಮವರ ಬುದ್ಧಿಹೀನತೆಯಂ ಹೊರಪಡಿಸದೆಹೋಗಲಾರದು.

## Occasional Notes
## ನೈಮಿತ್ತಿಕ ವಿಷಯನ್ಯಾಸ

ಕೂಚ್ ಬಿಹಾರ್ ಸಂಸ್ಥಾನದ ಮಹಾರಾಜರವರು ತಮ್ಮ ದೇಶದೊಳು ಮರಣದಂಡನೆ ವಿಧಿಸುವ ವಾಡಿಕೆಯಂ ರದ್ದುಪಡಿಸಿಬಿಟ್ಟರು.

ಕಳೆದ ಮೇ ತಿಂಗಳ ೧ನೇ ತಾರೀಖಿನಲ್ಲಿ ಅಮೆರಿಕಾ ದೇಶದ ಚಿಕಾಗೊ ಪಟ್ಟಣದೊಳು ನಡೆದ ಪ್ರದರ್ಶನ ಪ್ರಾರಂಭದದಿನ ಅದಂ ನೋಡುವದಕ್ಕಾಗಿ ೪,೮೦,೦೦೦ ಜನ ಬಂದಿದ್ದರು.

ಈ ತಿಂಗಳ ೧೬ನೇ ತಾರೀಖು ಮೊದಲು, ಮಸ್ಕಾಟ್ ಪಟ್ಟಣದಲ್ಲಿ ವಾಂತಿ ಭೇದಿ ರೋಗದ ದೆಸೆಯಿಂದ V೩೦ ಮಂದಿ ಮೃತರಾದಂತೆ ಅಲ್ಲಿಂದ ಬಂದ ತಂತಿ ವೃತ್ತಾಂತದ ಮೂಲಕ ತಿಳಿಯಬರುತಿದೆ.

ಮಹಾರಾಜ್ಞಿಯ ಸರ್ಕಾರದ ನೌಕರಿಯ ಬಗ್ಗೆ ಹೈದರಾಬಾದ್ ಸರ್ಕಾರದಿಂದ ಯೋಗ್ಯಪಡಿಸಲ್ಪಟ್ಟಿರುವ ಸೇನೆಗೆ ಮೇಜರ್ ಅಫ್ಸರಜಂಗ್ ಯೆಂಬವರು ಸೇನಾನಾಯಕರಾಗಿ ಸದರೀ ಸರ್ಕಾರದಿಂದ ಮೊಕರರ್ರು ಮಾಡಲ್ಪಟ್ಟಿರುತ್ತಾರೆ.

ಮೈಮನ್‌ಸಿಂಗ್ ಅರಸರಮೇಲೆ ಅಸೂಯೆಯಿಂದ ಅವರನ್ನು ಕೋರ್ಟಿಗೆ ಸೆಳೆದು ಅಲ್ಲಿ ಅವರನ್ನು ನಾನಾವಿಧ ಪರಿಭವಗಳಿಗೆ ಗುರಿಮಾಡಿದ ಮಿ|| ಫಿಲಿಪ್ಸ್ ಯೆಂಬವರಮೇಲೆ ಸದರೀ ಅರಸರವರು ಮಾನ ನಷ್ಟದಬಗ್ಗೆ ಸಿವಿಲ್ ದಾವೆಯಂ ಹೂಡಿರುತ್ತಾರೆ.

ಬರುವ ಅಕ್ಟೋಬರ್ ತಿಂಗಳೊಳಗೆ ಇಂಡ್ಯಾ ರಾಜ್ಯದ ವೈಸರಾಯರಾದ ಲಾರ್ಡ್ ಲ್ಯಾನ್ಸ್‌ಡೌನ್ ಸಾಹೇಬರವರ ಉದ್ಯೋಗ ಕಾಲವು ಪೂರ್ತಿಯಾಗುವದರಿಂದ ಅವರ ಪದವಿಗೆ ಲಾರ್ಡ್ ಹರ್ಷಲ್ ಸಾಹೇಬರವರು ನಿಯಮಿಸಲ್ಪಡುವರೆಂದು ಹೇಳಿಕೊಳ್ಳುತ್ತಾರೆ.

ಬ್ರಹ್ಮದೇಶದಲ್ಲಿನ ಮಂಡಲಪುರದ ಪಟ್ಟದ ಮೇಲೆ ಗೌತಮಬುದ್ಧನ ದೊಡ್ಡ ಬಿಂಬವೊಂದು ಸ್ಥಾಪಿಸಲ್ಪಟ್ಟಿತ್ತು. ಈ ತಿಂಗಳ ೧೨ನೇ ತಾರೀಖಿನಲ್ಲಿ ಸದರೀ ಬಿಂಬಕ್ಕೆ ಮರೆಯಾಗಿ ಕಟ್ಟಲ್ಪಟ್ಟಿದ್ದ ಕಟ್ಟಡಕ್ಕೆ ಬೆಂಕಿ ಬಿದ್ದು ಅದು ಪೂರ್ತಿಯಾಗಿ ಸುಟ್ಟುಹೋದದ್ದಲ್ಲದೆ ಅದರೊಳಗಿದ್ದ ಬಿಂಬವು ಸಹ ನಾಶವನ್ನೈದಿತು.

ಇಂಡ್ಯಾದೇಶದರಕ್ಷಣೆಯಬಗ್ಗೆ ಇನ್ನು ೨೦,೦೦೦ ಬ್ರಿಟಿಷ್ ಸೋಲ್ಜರ್‌ಗಳನ್ನು ಜಾಸ್ತಿಯಾಗಿಡಬೇಕೆಂದು ಇಂಡ್ಯಾರಾಜ್ಯದ ಕಮಾಂಡರ್ ಇನ್ ಚೀಫ್ ರವರಾಗಿದ್ದು ಸ್ವಲ್ಪ ದಿನಗಳ ಹಿಂದೆ ಪೆನ್ಷನ್ ಮೇಲೆ ನಿವೃತ್ತರಾಗಿ ಸ್ವದೇಶಕ್ಕೆ ಹೊರಟುಹೋದ ಲಾರ್ಡ್ ರಾಬರ್ಟ್ಸ್ ಸಾಹೇಬರು ಅಲ್ಲಿನ ಯುದ್ಧ ಇಲಾಖೆಗೆ ತಿಳಿಸಿರುವಂತೆ ಒಂದಾನೊಂದು ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುತಿದೆ.

ಈ ತಿಂಗಳ ೧೯ನೇ ತಾರೀಖಿನರಾತ್ರಿ ಪುನೇಯಲ್ಲಿ ಪ್ರಬಲ ವರ್ಷಕ್ಕೆ ಪ್ರಾರಂಭವಾಗಿ ಅನುಸ್ಯೂತವಾಗಿ ರಾತ್ರಿಯೆಲ್ಲ ಸುರಿದದ್ದರಿಂದ ಮರುದಿನ ಪ್ರಾತಃಕಾಲದಲ್ಲಿ ಯತ್ತ ನೋಡಿದಾಗ್ಯೂ ಬಹುದೂರದ ವರೆಗೆ ಜಲಮಯವಾಗಿ ಕಂಡುಬಂದದ್ದಲ್ಲದೆ, ಅಲ್ಲಿನ ನದಿಯಲ್ಲಿ ಪೂರ್ಣಪ್ರವಾಹ ಹರಿಯುತಲಿದೆಯೆಂದು ಅಪ್ರಾಂತದ ಪತ್ರಿಕೆಗಳ ಮೂಲಕ ತಿಳಿಯಬರುತಿದೆ. ಇದೇ ರೀತಿಯಲ್ಲಿ ಅಥವಾ ಇನ್ನು ಸ್ವಲ್ಪ ಅಧಿಕವಾಗಿಯೇ ಕಲ್ಕತ್ತೆಯಲ್ಲೂ ಮಳೆ ಬಿದ್ದಿರುತಿದೆ.

ಮಹಾರಾಜ್ಞಿಯವರ ಮಂತ್ರಾಲೋಚಕ ಸಮಾಜದವರು ಈಚೆಗೆ ಕೊಟ್ಟ ಹುಕುಂ ಅನುಸರಿಸಿ ಕಾಶೀ ಕ್ಷೇತ್ರದಲ್ಲಿರುವ ವಿಶ್ವೇಶ್ವರಸ್ವಾಮಿ ದೇವಾಲಯಕ್ಕೆ ಎರಡನೆಯದಾಗಿಯೂ, ಸಾಲೀಯಾನಾ ಒಂಬತ್ತು ಲಕ್ಷ ರೂಪಾಯಿಗಳ ಆಯತಿಯುಳ್ಳದ್ದಾಗಿಯೂ ಇರುವ ರಾಮೇಶ್ವರ ದೇವಸ್ಥಾನವು, ರಾಮೇಶ್ವರ ದ್ವೀಪಸೇರಿ, ರಾಮನಾಥ ಸಂಸ್ಥಾನದ ಅರಸಿನವರ ವಶ ಮಾಡಲ್ಪಟ್ಟಿತು. ಸದರೀ ದೇವಸ್ಥಾನವೂ ಅದರ ವಿಚಾರಣೆಯೂ ಮೊದಲಿಂದ ಸದರೀ ಅರಸರಿಗೇ ಸೇರಿ ಇದ್ದವು.

ಇಂದ್ಯದೇಶದ ಮಹಾರಾಜರು ಯಾರಾದರೂ ಬುಕೆಫೆಲಸ್ ಬಂದರಿಗೆ ಹೋಗುವದು ಸಾಮಾನ್ಯವಲ್ಲವು. ಈಗ ಒಬ್ಬ ಮಹಾರಾಜರವರು ಲಂಡನ್ ಪಟ್ಟಣಕ್ಕೆ ಹೊರಡುತ್ತಾರೆ. ಮಾರ್ಗದಲ್ಲಿ ಅವರ ಉಪಯೋಗಾರ್ಥ ನೂರಾರು ಪುಸ್ತಕಗಳು, ಅನೇಕ ಚೀಲಗಳ ಬೆಳ್ಳಿ ಪಾತ್ರೆಗಳು, ೩೦ ಮೂಟೆ ಅಕ್ಕಿ, ದೊಡ್ಡ ದೊಡ್ಡ ಗಡಿಗೆಗಳಲ್ಲಿ ತುಪ್ಪ, ಇನ್ನೂ ನಾನಾವಿಧ ಸಾಮಾನುಗಳು ಸದರೀ ಮಹಾರಾಜರವರ ಜೊತೆಯಲ್ಲಿ ಹೊರಡುತಿದೆಯೆಂದು ಒಬ್ಬ ಬಾತಮೀದಾರನು ಒಂದಾನೊಂದು ಪತ್ರಿಕೆಗೆ ಬರೆದಿರುತ್ತಾನೆ.

ಕಪುರ್ತಲಾ ಮಹಾರಾಜರವರು ಈಗ ಇಂಗ್ಲಾಂಡಿನಲ್ಲಿರುತ್ತಾರೆ. ಮುಂಚೆ ಈ ತಿಂಗಳ ೨ನೇ ತಾರೀಖಿನಲ್ಲಿ ಸದರೀ ಅರಸಿನವರು ಸಂಯುಕ್ತ ರಾಜ್ಯದ ಪ್ರಧಾನ ಮಂತ್ರಿ ಮಹಾಶಯರಾದ ಮಿ|| ಗ್ಲಾಡ್‌ಸ್ಟನ್ ಸಾಹೇಬರವರ ದರ್ಶನಕ್ಕೆ ಅವರ ವಾಸಗೃಹಕ್ಕೆ ಹೋಗಿದ್ದು ಬಹಳಹೊತ್ತು ಪ್ರಧಾನಿಯವರ ಸಂಗಡ ಮಾತನಾಡುತಿದ್ದರು. ಮತ್ತು ಮಹಾರಾಜ್ಞಿಯವರ ಜನ್ಮದಿನದ ಗೌರವಾರ್ಥ ಮಾಡಲ್ಪಟ್ಟ ದೀಪೋತ್ಸವದ ಸಂದರ್ಭದೊಳು ಇಂಡಿಯಾ ಆಫೀಸಿನಲ್ಲಿ ಸ್ಟೇಟ್ ಸೆಕ್ರೆಟರಿಯವರಾದ ಲಾರ್ಡ್ ಕಿಂಬರ್ಲಿಯವರ ಸಂಗಡ ಭೋಜನ ಮಾಡಿದರು.

ಈ ತಿಂಗಳ ೨೨ನೇ ತಾರೀಖಿನ ಸಾಯಂಕಾಲ ೪ ಘಂಟೆಗೆ, ಸಿರಿಯಾದೇಶದ ಕೆಳಗಣ ಟ್ರಿಪೋಲಿ ಎಂಬ ಪಟ್ಟಣಕ್ಕೆ ಹಲವು ಮೈಲುಗಳ ದೂರದಲ್ಲಿ ಸಮುದ್ರದೊಳು, ವಿಕ್ಟೋರಿಯಾ ಮತ್ತು ಕ್ಯಾಂಪರ್‌ಡೌನ್ ಎಂಬ ಎರಡು ಯುದ್ಧನಾವೆಗಳಿಗೆ ಒಂದಕ್ಕೊಂದು ಢಕ್ಕಾ ತಗಲಿ, ವಿಕ್ಟೋರಿಯಾ ಯೆಂಬ ಹಡಗು ೧೫ ನಿಮಿಷಗಳೊಳಗಾಗಿ ಮುಣಗಿಹೋಗಿ, ಅದರಲ್ಲಿದ್ದ ನಾವಿಕ ಸೇನಾಪತಿಯವರಾದ ಸರ್ ಜಾರ್ಜ್ ಟ್ರಯಾನ್ ಎಂಬವರೂ ಬಹುಮಂದಿ ಆಫೀಸರ್‌ಗಳೂ ನಾವೆಯಲ್ಲಿ ಕೆಲಸ ಮಾಡತಕ್ಕವರನೇಕರೂ ಸೇರಿ ಸುಮಾರ್ ೪೩೦ ಮಂದಿ ಮುಳುಗಿಹೋದರೆಂದು ತಂತಿ ವೃತ್ತಾಂತದ ಮೂಲಕ ತಿಳಿಯಬರುತಿದೆ.

ಇಂಡಿಯನ್ ಸಿವಿಲ್ ಸರ್ವಿಸ್ ಪರೀಕ್ಷೆಯಬಗ್ಗೆ ಇಂಗ್ಲಾಂಡಿಗೆ ಹೋಗತಕ್ಕ ವಿದ್ಯಾರ್ಥಿಗಳ ಪ್ರಯೋಜನಾರ್ಥ ಲಂಡನ್ ಪಟ್ಟಣದೊಳು ಕ್ವೀನ್ಸ್ ರೋಡ್ ಯೆಂಬ ರಸ್ತೆಯಲ್ಲಿ ಒಂದು ಕಾಲೇಜ್ ಪಾಠಶಾಲೆಯು ಸ್ಥಾಪಿಸಲ್ಪಟ್ಟಿರುತಿದೆ. ಸದರೀ ಪ್ರೊಬೇಷನ್ ಪರೀಕ್ಷೆಯಬಗ್ಗೆ ಇಂಗ್ಲಾಂಡಿಗೆ ಹೋಗುವ ವಿಷಯದಲ್ಲಿ ಸಮುದ್ರಯಾನವು ಯಾರಿಗೆ ನಿರ್ಬಂಧ ರೂಪವಾಗಿ ತೋರುವದೋ ಅಂತವರಿಗೆ ಪತ್ರಿಕಾ ಮೂಲಕ ಪಾಠ ಹೇಳುವ ಕ್ರಮ ಒಂದು ಏರ್ಪಡಿಸಲ್ಪಟ್ಟಿರುತಿದೆ. ಸದರೀ ಕ್ರಮದ ದೆಸೆಯಿಂದ, ವಿಷಯ ಒಂದಕ್ಕೆ ೩ ಪೌಂಡು ಒಂದು ವ್ಯವಸ್ಥೆಯಮೇಲೆ, ಪ್ರತಿವಾರದಲ್ಲೂ ತಪಾಲಿದ್ವಾರಾ ಪಾಠಗಳಂ ಬರೆದುಕಳುಹಿಸಲ್ಪಡುವವು.

ಸನ್ ೧೮೯೧ನೇ ಇಸವಿ ೧ನೇ ಜೂನ್ ಹೌಸ್ ಆಫ್ ಕಾಮನ್ಸ್ ಎಂಬ ಸಂಘದೋರಾಗಿ ಮತಿಯಂ ಕುರಿತ ಕಾನೂನು ಜಾರಿಯೊಳು ತರಲ್ಪಟ್ಟದರಿಂದುಂಟಾದ ಫಲವಂಕುರಿತು ವಿಶೇ

...ಬಾರತಕ್ಕದ್ದೆಂಬು ಕಳೆದ ಸಂವತ್ಸರದಲ್ಲಿ ... ಗವರ್ನ್ಮೆಂಟಿನವರು ಆಯಾ ಲೋಕಲ್ ಗವರ್ನ್ಮೆಂಟಿನವರನ್ನು ಕೇಳಲು ಅದರ ವಿಷಯದಲ್ಲಿ ಸರಿಯಾದ ಅಭಿಪ್ರಾಯಂ ಕೊಡುವುದಕ್ಕೆ ಇನ್ನೂ ಕಾಲ ಸಾಲದೆಂದು ಅನೇಕರು ಕಮಿಷನರುಗಳೂ ಸೆಷನ್ ಜಡ್ಜಿಗಳೂ ತಿಳಿಸಿದ್ದರು. ಅದೇವಿಷಯದಲ್ಲಿ ಮರಳಿ ಅಭಿಪ್ರಾಯ ಕೊಡಬೇಕೆಂದು ಇಂಡ್ಯಾ ಗವರ್ನ್ಮೆಂಟಿನವರು ಈ ಸಂವತ್ಸರದಲ್ಲಿ ಪುನಃ ಆಯಾ ಸ್ಥಳಿಕ ಗವರ್ನ್ಮೆಂಟಿನವರನ್ನು ಅಪೇಕ್ಷಿಸಿರುತ್ತಾರೆ. ಇದಕ್ಕೆ ಉಂಟಾದ ಕಾರಣ ಮಾತ್ರ ಇಷ್ಟೆಂದು ತಿಳಿಯಬರಲಿಲ್ಲವು.

ಈಚೆಗೆ ಮೂರುನಾಲ್ಕು ವರ್ಷಗಳ ಮೊದಲು ಎಕ್ಸ್‌ಚೇಂಜ್, ಅಂದರೆ ಸವರನ್ ಕ್ರಯವು ಹೆಚ್ಚಿ ವ್ಯಾಪಾರಗಳಲ್ಲಿ ಅದರ ಲೆಕ್ಕವನ್ನನುಸರಿಸಿ ಕೊಡಬೇಕಾದ ಸಂದರ್ಭಗಳೊಳು ಸವರನ್ ಒಂದಕ್ಕೆ ಹದಿನಾರು ಚಿಲ್ಲರೆ ರೂಪಾಯಿಗಳ ಪ್ರಕಾರ ಕೊಡಬೇಕಾಗಿ ಬಂದು, ತನ್ಮೂಲಕ ಇಂಡ್ಯಾದೇಶೀಯರು ಬಹಳ ಬಳಲುತ್ತಿರುವ ಕಷ್ಟ ನಷ್ಟಗಳು ಪ್ರಸಿದ್ಧವಾಗಿದೆ. ಇದಕ್ಕೆ ಮಾಡತಕ್ಕ ಯೋಚನೆ ಇತ್ಯಾದಿಗಳ ಬಗ್ಗೆ ಇಂಡ್ಯಾ ಗವರ್ನ್ಮೆಂಟಿನವರು ಒಂದು ಕಮಿಟಿಯಂ ನೇಮಿಸಿ, ಅದಕ್ಕೆ ಲಾರ್ಡ್ ಹರ್ಷೆಲ್ ಯೆಂಬವರನ್ನು ಪ್ರೆಸಿಡೆಂಟರನ್ನಾಗಿ ಮಾಡಿದರು. ಸದರೀ ಕಮಿಟಿಯವರು ನಾಲ್ಕಾರು ತಿಂಗಳ ಮೊದಲು ಆಗಿಂದಾಗ್ಗೆ ಸಭೆ ಸೇರಿ ಎಲ್ಲಾ ಕುರಿತೂ ವಿಚಾರಿಸಿ ತಮ್ಮ ಅಭಿಪ್ರಾಯವನ್ನು ಗವರ್ನ್ಮೆಂಟಿಗೆ ತಿಳಿಸಿರುತ್ತಾರೆ. ಅದು ಕೇವಲ ರಹಸ್ಯದಲ್ಲಿರುತ್ತದೆ. ಆದಾಗ್ಯೂ ಸವರನ್ ಒಂದಕ್ಕೆ ಸ್ವಲ್ಪ ಹೆಚ್ಚು ಕಡಮೆ ಹದಿನಾರು ರೂಪಾಯಿಗಳಂತೆ ಇರ ನಿಷ್ಕರ್ಷಿಸಿ ಮೇಲಿನ ಕಮಿಟಿಯವರು ತೀರ್ಮಾನ ಮಾಡಿರಬಹುದೆಂದು ಊಹಿಸಲ್ಪಡುತ್ತದೆ. ಇನ್ನು ಮುಂದಾದರೂ ಈಗಿನ ಇವರ ದುಸ್ಥಿತಿ ಹೋಗಬಹುದು.

ನೋಟೀಸು.

ಇದುವರೆಗೆ ಈ ಸಾಲಿನ ಚಂದಾ ಹಣಗಳನ್ನು ಕಳುಹಿಸದೆ ಇರತಕ್ಕವರೆಲ್ಲರು ಈ ನೋಟೀಸ್ ನೋಡಿದ ಕೂಡಲೆ ದಯಮಾಡಿ ಕಳುಹಿಸಿಕೊಡಬೇಕೆಂದು ಮರಳಿ ಜ್ಞಾಪಕ ಕೊಡುತ್ತೇವೆ.

೨೬—೬—೯೪ ಪ್ರೊಪ್ರೈಟರ್

## LOCAL AND PROVINCIAL NEWS
### ಒಳದೇಶವರ್ತಮಾನಗಳೂ ಪ್ರಾಂತ್ಯವೃತ್ತಾಂತಗಳು

ಕರ್ನಲ್ ಹೆಂಡರ್ಸನ್ ಸಾಹೇಬರವರು ತಮ್ಮ ರಜಾವನ್ನು ಪೂರೈಸಿಕೊಂಡು ವಾಪಸ್ ಬಂದು ಈ ತಿಂಗಳ ೨೨ನೇ ತಾರೀಖಿನಲ್ಲಿ ಮೈಸೂರು ರೆಸಿಡೆಂಟರವರ ತಮ್ಮ ಕೆಲಸದ ಚಾರ್ಜು ವಹಿಸಿದರು.

ಇಲ್ಲಿನ ಸೆಂಟ್ರಲ್ ಜೈಲಿನಲ್ಲಿ ಚೀಫ್ ಜೈಲರ್ ರಾಗಿದ್ದ ಮಿ. ಟೇಡಿ ಯೆಂಬುವರು ವರ್ತಮಾನ ಕೆಲಸದಿಂದ ನಿವೃತ್ತರಾದುದರಿಂದ ಅವರ ಕೆಲಸಕ್ಕೆ ದಿವಾನರವರ ಆಫೀಸಿನಲ್ಲಿ ಕೆಲಸನೋಡುತಲಿದ್ದ ಮಿ ಅಬ್ಬಟ್ ಪೀಟರ್ ಯೆಂಬುವರು ನಿಯಮಿಸಲ್ಪಟ್ಟಿರುತ್ತಾರೆ.

ಈ ಸಂಸ್ಥಾನದ ದಿವಾನರವರಾದ ಸರ್. ಕೆ. ಶೇಷಾದ್ರಿ ಅಯ್ಯರವರಿಗೆ ಮಹಾರಾಣಿಯವರ ಸರ್ಕಾರದವರು ಈಚೆಗೆ ಕೆ. ಸಿ. ಎಸ್. ಐ. ಎಂಬ ಘನತರವಾದ ಪದವಿಯಂ ಕೊಟ್ಟಿರುವಷ್ಟೆ. ಸದರೀ ಪದವಿಯಂ ದಿವಾನರವರಿಗೆ ಒಪ್ಪಿಸತಕ್ಕ ಬಗ್ಗೆ ಈ ತಿಂಗಳ ೨೮ನೇ ತಾರೀಖಿನಲ್ಲಿ ಮೈಸೂರೊಳು ಒಂದು ದರ್ಬಾರ್ ಮಾಡಲ್ಪಟ್ಟು ಅದರಲ್ಲಿ ಶ್ರೀಮನ್ಮಹಾರಾಜರವರು ಅಗ್ರಾಸನವ ವಹಿಸುವರೆಂದು ಒಳದೇಶದ ಈವನಿಂಗ್ ಮೆಯಿಲ್ ಪತ್ರಿಕೆ ತಿಳಿಸುತ್ತದೆ.

ಈಚೆಗೆ ಯೆರಡುವಾರಗಳ ಮೊದಲು ಮಳೆ ಬೀಳಬಹುದು ಸುತರಾಂ ಇಲ್ಲವು. ರಾತ್ರಿ ಹಗಲು ದುಸ್ಸಹವಾಗಿ ಬಿರುಗಾಳಿ ಬೀಸುತ ಮಧ್ಯೆ ಮಧ್ಯೆ ಮೋಡವಾಗುತಲಿದೆ. ಸದ್ಯಃ ದೊಡ್ಡಾಂಬುಧಿ ಕೆರೆಯಲ್ಲಿ ಯೆರಡುತಿಂಗಳಿಗಾಗುವಷ್ಟು ನೀರಿದೆ. ಮನೆಗಳ ಬಾವಿಗಳಿಗೆ ಇನ್ನು ನೀರು ಬರಲಿಲ್ಲವು. ಈ ಷಹರಿನಲ್ಲಿ ಜಲಕಷ್ಟ ಯೆಂದಿಗೆ ಪರಿಹಾರವಾಗುವದೊ ತಿಳಿಯದು. ಜ್ವರ ಮೊದಲಾದ ರೋಗಗಳಿಂದ ಜನಾರೋಗ್ಯವು ಕಡಮೆಯೆಂತಲೇ ಹೇಳಬೇಕಾಗಿದೆ. ಆಹಾರ ಪದಾರ್ಥಗಳ ದಾರಣೆಗಳು ಪ್ರಯುಕ್ತ ಒಂದೇವಿಧವಾಗಿವೆ.

ಹೊಳೇನರಸೀಪುರದ ಮುನ್ಸೀಫರಾದ ಮ|| ಚೆಲುವೈಯಂಗಾರ್ ಬಿ. ಎ ಬಿ ಎಲ್, ರವರು ಒಂದು ತಿಂಗಳು ರಜಾ ಪಡೆದುಕೊಂಡಿದಾರೆ ಇವರು ಮುಂದೆ ಈ ಕೆಲಸಕ್ಕೆ ರಾಜೀನಾಮೆ ಕೊಟ್ಟು ಅಡ್ವೋಕೇಟರಾಗಿ ಎನ್ರೋಲಾಗುವ ಯೋಚನೆಯಲ್ಲಿದಾರೆಂತಲೂ ಇದಕ್ಕೆ ಇದೇ ಸೂಚನೆಯೆಂತಲೂ ಪ್ರವಾದವಿದೆ. ಇದು ನಿಜವಾದಲ್ಲಿ ಜುಡಿಷಿಯಲ್ ಬಾಬಿನಲ್ಲಿ ಕೆಲವು ಬದಲಾವಣೆಗಳಾಗಬಹುದು. ಮ|| ಚೆಲುವೈಯಂಗಾರ್ಯರು ಈ ತಿಂಗಳಲ್ಲೇ ರಜಾ ಅಪೇಕ್ಷಿಸಿದ್ದಕ್ಕೆ ಈ ತಿಂಗಳಲ್ಲಿ [illegible] ಗಿರುವದಾಗಿ ತಿಳಿಯಬರುತ್ತದೆ

## THE MYSORE GAZETTE.
### ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜ ಚಾಮರಾಜ ಒಡೆಯರ್ ಬಹದೂರರವರ ಸರ್ಕಾರದಿಂದ ಹೊರಟಿರುವ ಇಸ್ತಿಹಾರುನಾಮೆಗಳು.

೧೪ನೇ ಜೂನ್ ೧೮೯೪, ನಂ|| ೨೦೮೧೫–೮೫೨೮—ಮೈಸೂರು ಸರ್ವಿಸ್ ರೆಗ್ಯುಲೇಷನ್ಸಗಳ ೧೮೮ನೇ ಆರ್ಟಿಕಲ್ ಅನುಸರಿಸಿ, ಬೆಂಗಳೂರಲ್ಲಿರುವ ಪಾರೆಸ್ಟ್ ಇಲಾಖಾ ಡಿಪಾರ್ಟ್ಮೆಂಟ್ ಅಸಿಸ್ಟೆಂಟ್ ಮಿ. ಟಿ ಅಬ್ದುಲ್ ಕರೀಂಯವರು ಅವರು ಪಯೋಗಿಸಿಕೊಳ್ಳುವ ತಾರೀಖ್ ಮೊದಲು ೨೦ ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ

ನಂ ೨೦೮೫೦–೮ ೫೨೬೦—ಮೈಸೂರು ಸರ್ವಿಸ್ ರೆಗ್ಯುಲೇಷನ್ಸಗಳ ೧೭೦ನೇ ಆರ್ಟಿಕಲ್ ಅನುಸರಿಸಿ, ಶಿವಮೊಗ್ಗ ಡಿಸ್ಟ್ರಿಕ್ಟ ಆಫಿಷಿಯೇಟಿಂಗ್ ಅಸಿಸ್ಟೆಂಟ್ ಕಮಿಷನರಾದ ಮ|| ಕೆ ರಾಮಾನುಜಯ್ಯಂಗಾರ್ಯರು, ೧೮೯೪ನೇ ಇಸವಿ ಜೂನ್ ೫ ನೇ ತಾರೀಖ್ ಮೊದಲು ೮ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ|| ೨೦೯೬೦—೮. ೫೯೨೮—ಪೆ.—ಮ|| ಬಸಪ್ಪಶೆಟ್ಟರು ಸ್ಥಳದಲ್ಲಿ ಮ|| ಗಂಗಶೆಟ್ಟರಿಗೆ ಬದಲಾಗಿಯೂ, ಮ|| ಅರುಣಾಚಲಂಸ್ವಾಮಿಯ ಅಡ್ಡಿಷನಲ್ ಮೆಂಬರಾಗಿಯೂ ಚಿಕ್ಕಬಳ್ಳಾಪುರ ಮ್ಯುನಿಸಿಪಲ್ ಮೆಂಬರುಗಳಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

೧೫ನೇ ಜೂನ್ ೧೮೯೪ ನೇ ನಂ|| ೨೦೯೬—ಮೈಸೂರು ಸರ್ವಿಸ್ ರೆಗ್ಯುಲೇಷನ್ ೧೮೮ನೇ ಆರ್ಟಿಕಲ್ ಅನುಸರಿಸಿ ಮೈಸೂರು ಡಿಸ್ಟ್ರಿಕ್ಟ ಅಸಿಸ್ಟೆಂಟ್ ಕಮಿಷನರ್ ಮ ಎಚ್ ನಂಜುಂಡರಾಜೇ ಅರಸಿನವರು ಈ ತಿಂಗಳಲ್ಲಿ ಅವರುಪಯೋಗಿಸಿಕೊಳ್ಳಬಹುದಾದ ತಾರೀಖ್ ಮೊದಲು ೨ ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ

೨ ಶ್ರೀರಂಗಪಟ್ಟಣ ತಾ|| ಅಮಲ್ದಾರ್ ಮ ಎಂ. ಕೃಷ್ಣಯ್ಯಂಗಾರ್ಯರು, ಮ|| ನಂಜುಂಡರಾಜ ಅರಸಿನವರು ರಜಾಮೇಲೆ ಗೈರ್ಹಾಜರಿರುವಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ಆಫಿಷಿಯೇಟಿಂಗ್ ಅಸಿಸ್ಟೆಂಟ್ ಕಮಿಷನರ್ ವ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡುವರು.

ನಂ ೨೦೮೧೯—೮ ೫೯೨೬—ತುಮಕೂರ್ ಡಿಸ್ಟ್ರಿಕ್ಟ ಜನರಲ್ ಅಸಿಸ್ಟೆಂಟ್ ಕಮಿಷನರ್ ಮ ಕೆ. ರಾಮಚಂದ್ರರಾಯರವರು ಸನ್ ೧೮೯೪ನೇ ಇಸವಿ ಜೂನ್ ೩ನೇ ತಾರೀಖಿನ ಮಧ್ಯಾಹ್ನತ್ಪರ ಜನರಲ್ ಅಸಿಸ್ಟೆಂಟ್ ಕಮಿಷನರ್ ಆಫೀಸ್ ಚಾರ್ಜನ್ನು ಕೊಟ್ಟು ಆಕ್ಟಿಂಗ್ ಅಸಿಸ್ಟೆಂಟ್ ಕಮಿಷನರ್ ಬಿ. ಜೆ. ಕುಮಾರಸ್ವಾಮಿ ನಾಯುಡರವರು ತೆಗದುಕೊಂಡಿರುತ್ತಾರೆ.

ನಂ|| ೨೦೮೨೦—೮, ೯. ೫೯೧—೯೨—ಕಡೂರು ಡಿಸ್ಟ್ರಿಕ್ಟ ಆಫಿಷಿಯೇಟಿಂಗ್ ಫಾರೆಸ್ಟ ಅಸಿಸ್ಟೆಂಟ್ ಕನ್ಸರ್ವೇಟರ್ ಮ|| ಬಿ. ರಾಮಸ್ವಾಮಯ್ಯಂಗಾರವರು, ಸನ್ ೧೮೯೩ನೇ ಇಸವಿ ಮಾರ್ಚಿ ೨ನೇ ಮುಕರ್ರಮುಳ್ಳ ೧೫೫೦೨—೮. ೩೭೧೭ನೇ ನಂಬರ್ ಇಸ್ತಿಹಾರನಾಮೆಯ ಮೂಲಕ ಕೊಡಲ್ಪಟ್ಟ ಯೆರಡೂವರೆ ತಿಂಗಳ ಪ್ರಿವಿಲೀಜ್ ರಜಾದಿಂದ ಕೆಲಸಕ್ಕೆ ವಾಪಸ್ ಬಂದು ೯೩ನೇ ಇಸವಿ ಮೇ ೩೧ನೇ ತಾರೀಖಿನ ಮಧ್ಯಾಹ್ನತ್ಪರ ಮ|| ಹೀರಸಿಂಗರವರಿಂದ ತಮ್ಮ ಆಫೀಸ್ ಚಾರ್ಜನ್ನು ವಹಿಸಿಕೊಂಡದರಾಗಿ, ಅವರ ರಜಾ ಪೈಕಿ ಉಳಿದ ಭಾಗವು ಇದರಿಂದ ರದ್ದುಮಾಡಲ್ಪಟ್ಟಿದೆ

ನಂ|| ೨೦೮೨೬—೮ ೯ ೨೧೮–೯೨—ಸನ್ ೯೩ ನೇ ಇಸವಿ ಜೂನ್ ೩ನೇ ತಾರೀಖಿನ ಮಧ್ಯಾಹ್ನತ್ಪರ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟ್ ಚಾರ್ಜನ್ನು ಮ|| ಎಸ್. ವೈದ್ಯನಾಥ ಅಯ್ಯರವರು ಕೊಟ್ಟು ಮ|| ಬಿ ಜಿ ಕೃಷ್ಣಯ್ಯಂಗಾರ್ಯರು ತೆಗದುಕೊಂಡಿರುತ್ತಾರೆ.

೧೬ನೇ ಜೂನ್ ೧೮೯೪, ನಂ|| ೨೦೮೧೯—೮ ೫೦೨೩—ಮೈಸೂರು ಸರ್ವಿಸ್ ರೆಗ್ಯುಲೇಷನ್ಸ ೧೮೮ನೇ ಆರ್ಟಿಕಲ್ ಅನುಸರಿಸಿ, ಹಾಸನ ಡಿ. ಟ್ರೆಜರಿ ಇನ್‌ಚಾರ್ಜನಲ್ಲಿರುವ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಮ|| ವಿ. ಶ್ರೀನಿವಾಸಾಚಾರ್ಯರವರು ಅವರುಪಯೋಗಿಸಿ ಕೊಳ್ಳುವತಾರೀಖ್ ಮೊದಲು ೧ ತಿಂಗಳು ೭ ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ

೨ ಹಾಸನ ಮುನಸೀಫ್ ಮ ಜೆ ಟಿ. ಪಾಂಡುರಂಗಯ್ಯರವರು, ಮ|| ಶ್ರೀನಿವಾಸಾಚಾರ್ಯರವರು ರಜಾಮೇಲೆ ಗೈರ್ಹಾಜರಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ, ಹಾಸನ ಡಿಸ್ಟ್ರಿಕ್ಟ ಟ್ರೆಜರಿ ಅಸಿಸ್ಟೆಂಟ್ ಕಮಿಷನರ್ ವ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ|| ೨೦೮೭೮—೮. ೫೦೬೧—ಬೆಂಗಳೂರು ಡಿಸ್ಟ್ರಿಕ್ಟ ಪೊಲೀಸ್ ಸೂಪರಿಂಟೆಂಡೆಂಟರಾದ ಮ ಡಿ ದೇವರಾಜ ಅರಸಿನವರು ಅವರುಪಯೋಗಿಸಿಕೊಳ್ಳಬಹುದಾದ ತಾರೀಖ್ ಮೊದಲು. ೧ ತಿಂಗಳು ೧೬ ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

೨ ತುಮಕೂರು ಡಿಸ್ಟ್ರಿಕ್ಟ ಪೊಲೀಸ್ ಸೂಪರಿಂಟೆಂಡೆಂಟರಾದ ಮ|| ಜೆ ಡಬ್ಲ್ಯು ಸ್ಮಿತ್‌ಯವರು, ಮ|| ಡಿ. ದೇವರಾಜ ಅರಸಿನವರು ರಜಾಮೇಲೆ ಗೈರ್ಹಾಜರಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ಬೆಂಗಳೂರು ಡಿಸ್ಟ್ರಿಕ್ಟ ಪೊಲೀಸ್ ಸೂಪರಿಂಟೆಂಡೆಂಟರಾಗಿ ವರ್ಗ ಮಾಡಲ್ಪಟ್ಟಿರುತ್ತಾರೆ.

೩. ತುಮಕೂರು ಡಿಸ್ಟ್ರಿಕ್ಟಿಗೆ ಸೇರಿದ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಮ|| ಅಬ್ದುಲ್ ಅಜೀಜ್ ಯವರು, ಮ|| ಸ್ಮಿತ್ ದೊರೆಯವರು ಬೇರೆ ಕೆಲಸದಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ತುಮಕೂರು ಡಿಸ್ಟ್ರಿಕ್ಟ ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾಗಿ ಕೆಲಸ ನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತಾರೆ

ನಂ|| ೨೦೮೨೬— ೮ ೫೨೮— ಚನ್ನಪಟ್ಟಣ ತಾ|| ಅಮಲ್ದಾರ್ ಜೆ. ಶ್ರೀನಿವಾಸರಾಯರವರು, ೧೮೯೪ ನೇ ಇಸವಿ ಮೇ ೧೩ ನೇ ಮುಕರ್ರಮುಳ್ಳ ೧೯೧೫೯—೮. ೪೬೩೬ ನೇ ನಂಬರ್ ಇಸ್ತಿಹಾರನಾಮೆಯ ಮೂಲಕ ಕೊಡಲ್ಪಟ್ಟ ೧೫ ದಿನಗಳ ಕ್ಯಾಜುಯಲ್ ರಜಾವನ್ನು ೧೮೯೪ ನೇ ಇಸವಿ ಮಾರ್ಚಿ ೧೨ ನೇ ತಾರೀಖ್ ಮೊದಲು ಉಪಯೋಗಿಸಿಕೊಂಡು ಅದೇ ತಿಂಗಳ ೨೮ ನೇ ತಾರೀಖಿನಲ್ಲಿ ಕೆಲಸಕ್ಕೆ ವಾಪಸ್ ಬಂದದರಿಂದ ಸದರೀ ರಜಾ ಪೈಕಿ ಉಳಿದ ಭಾಗವು, ಅಂದರೆ ೨ದಿನಗಳು ಇದರಿಂದ ರದ್ದುಮಾಡಲ್ಪಟ್ಟಿರುತ್ತೆ.

ನಂ|| ೨೦೯೭೮—೮ ೯. ೨೮—೯೨.—ಕೋಲಾರ ಗೋಲ್ಡ್‌ಫೀಲ್ಡ್ಸ್ ಸ್ಪೆಷಲ್ ಮ್ಯಾಜಿಸ್ಟ್ರೇಟರಾದ ಮ. ಜೆ. ಹ್ಯಾಂಪ್ಷೈರ್ ಯವರು, ಸನ್ ೧೮೯೨ ನೇ ಇಸವಿ ಮೇ ೨ ನೇ ಮುಕರ್ರಮುಳ್ಳ ೧೮೧೫೦—೮ ೯. ೨೮–೯೨ ನೇ ನಂಬರ್ ಇಸ್ತಿಹಾರನಾಮೆಯ ಮೂಲಕ ಕೊಡಲ್ಪಟ್ಟ ೧೦ ದಿನಗಳ ಕ್ಯಾಜುಯಲ್ ರಜಾವನ್ನು ಅದೇ ತಿಂಗಳ ೨೨ ನೇ ತಾರೀಖ್ ಮೊದಲು ಉಪಯೋಗಿಸಿಕೊಂಡು ಅದೇ ತಿಂಗಳ ೨೮ನೇ ತಾರೀಖಿನ ಪೂರ್ವಾಹ್ನದಲ್ಲಿ ಕೆಲಸಕ್ಕೆ ವಾಪಸ್ ಬಂದದರಿಂದ ಸದರೀ ರಜಾ ಪೈಕಿ ಉಳಿದ ಭಾಗವು, ಅಂದರೆ, ೪ ದಿನಗಳು ಇದರಿಂದ ರದ್ದುಮಾಡಲ್ಪಟ್ಟಿರುತ್ತೆ.

೧೩ ನೇ ಜೂನ್ ೧೮೯೪, ನಂ|| ೨೦೯೧೮–೮ ೫೧೨೮—ಮೈಸೂರು ಸರ್ವಿಸ್ ರೆಗ್ಯುಲೇಷನ್ಸಗಳ ೧೭೨ ನೇ ಆರ್ಟಿಕಲ್ ಅನುಸರಿಸಿ, ಬಾಗೇಪಲ್ಲಿ ತಾಲ್ಲೂಕ್ ಅಮಲ್ದಾರ್ ಸಿ. ಕೃಷ್ಣರಾಯರವರು, ೧೮೯೪ ನೇ ಇಸವಿ ಜೂನ್ ೬ ನೇ ತಾರೀಖ್ ಮೊದಲು ೭ ವಾರದ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ|| ೨೦೯೨೦—೮ ೫೧೮೦ .— ಕೋಲಾರ ಡಿಸ್ಟ್ರಿಕ್ಟ ಜನರಲ್ ಅಸಿಸ್ಟೆಂಟ್ ಕಮಿಷನರ್ ಮ|| ನಾರಣಯ್ಯಂಗಾರ್ಯರು, ೧೮೯೪ ನೇ ಇಸವಿ ಜೂನ್ ೫ನೇ ಮುಕರ್ರಮುಳ್ಳ ೨೦೫೮೧–೮. ೫೦೮೬ ನೇ ನಂಬರ್ ಇಸ್ತಿಹಾರನಾಮೆಯ ಮೂಲಕ ಕೊಡಲ್ಪಟ್ಟ ೮ ದಿನಗಳ ಕ್ಯಾಜುಯಲ್ ರಜಾದಿಂದ ೧ ದಿನ ಜಾಸ್ತಿ ಮಾಡಲ್ಪಟ್ಟಿರುತ್ತೆ.

ನಂ|| ೨೦೯೨೨—೮. ೫೧೮೨ — ಚಿಕ್ಕಮಗಳೂರು ಸಿವಿಲ್ ಸರ್ಜನ್ ಮ|| ಎ. ಎಸ್. ಫರ್ನಾಂಡಿಸ್ ಯವರು, ೧೮೯೪ ನೇ ಇಸವಿ ಜೂನ್ ೫ ನೇ ಮುಕರ್ರಮುಳ್ಳ ೨೦೫೮೩–೮. ೫೦೫೦ ನೇ ನಂಬರ್ ಇಸ್ತಿಹಾರನಾಮೆಯ ಮೂಲಕ ಕೊಡಲ್ಪಟ್ಟ ೩೦ ದಿನಗಳ ಪ್ರಿವಿಲೀಜ್ ರಜಾವನ್ನು ೧೮೯೪ ನೇ ಇಸವಿ ಮೇ ೧೮ ನೇ ತಾರೀಖ್ ಮೊದಲು ಉಪಯೋಗಿಸಿಕೊಂಡು ಜೂನ್ ತಿಂಗಳ ೯ ನೇ ತಾರೀಖಿನಲ್ಲಿ ಕೆಲಸಕ್ಕೆ ವಾಪಸ್ ಬಂದದರಿಂದ ಸದರೀ ರಜಾ ಪೈಕಿ ಉಳಿದ ಭಾಗವು ಇದರಿಂದ ರದ್ದುಮಾಡಲ್ಪಟ್ಟಿರುತ್ತೆ.

ನಂ|| ೨೦೯೨೮—೮. ೫೧೮೮.—ಕಡೂರು ಡಿಸ್ಟ್ರಿಕ್ಟ ಅಸಿಸ್ಟೆಂಟ್ ಕಮಿಷನರ್ ಮ|| ಕೆ. ರಾಮಸ್ವಾಮಯ್ಯಂಗಾರ್ಯರು, ೧೮೯೪ ನೇ ಇಸವಿ ಜೂನ್ ೫ ನೇ ಮುಕರ್ರಮುಳ್ಳ ೨೦೫೦೨—೫೦೩೪ ನೇ ನಂಬರ್ ಇಸ್ತಿಹಾರನಾಮೆಯ ಮೂಲಕ ಕೊಡಲ್ಪಟ್ಟ ೧೫ ದಿನಗಳ ಕ್ಯಾಜುಯಲ್ ರಜಾವನ್ನು ಅದೇ ತಿಂಗಳ ೭ ನೇ ತಾರೀಖ್ ಮೊದಲು ಉಪಯೋಗಿಸಿಕೊಂಡು ಅದೇ ತಿಂಗಳ ೭ ನೇ ತಾರೀಖಿನ ಮಧ್ಯಾಹ್ನತ್ಪರ ಕೆಲಸಕ್ಕೆ ವಾಪಸ್ ಬಂದದಾಗಿ ಅವರುಪಯೋಗಿಸಿಕೊಳ್ಳದ ಭಾಗವು ಅಂದರೆ, ೮ ದಿನಗಳು ಇದರಿಂದ ರದ್ದುಮಾಡಲ್ಪಟ್ಟಿವೆ.

ನಂ|| ೨೦೯೨೬—೮. ೫೧೯೬ —ಮೈಸೂರು ಸರ್ವಿಸ್ ರೆಗ್ಯುಲೇಷನ್ಸಗಳ ೧೭೧ನೇ ಆರ್ಟಿಕಲ್ ಅನುಸರಿಸಿ, ಬೆಂಗಳೂರಲ್ಲಿರುವ ಗವರ್ನ್ಮೆಂಟ್ ತೋಟಗಳ ಸೂಪರಿಂಟೆಂಡೆಂಟರಾದ ಮ|| ಜೆ ಕ್ಯಾಮರನ್ ಯವರು ಈ ತಿಂಗಳ ೧೫ ನೇ ತಾರೀಖ್ ಮೊದಲು ೫ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ|| ೨೦೯೨೭—೮. ೯. ೮೦೩–೯೨ —ಮೈಸೂರು ಸರ್ವಿಸ್ ರೆಗ್ಯುಲೇಷನ್ಸಗಳ ೧೭೧ ನೇ ಆರ್ಟಿಕಲ್ ಅನುಸರಿಸಿ, ಹಾಸನ ಡಿಸ್ಟ್ರಿಕ್ಟ ಆಫಿಷಿಯೇಟಿಂಗ್ ಅಸಿಸ್ಟೆಂಟ್ ಕಮಿಷನರ್ ಮ|| ವಿ. ವೆಂಕಟಸುಬ್ಬರಾಯರವರು, ೧೮೯೪ ನೇ ಇಸವಿ ಜೂನ್ ೧೨ ನೇ ತಾರೀಖ್ ಮೊದಲು ಅಥವಾ ಅದರುಪಯೋಗಿಸಿಕೊಳ್ಳಬಹುದಾದ ಬೇರೆಯೊಂದು ತಾರೀಖ್ ಮೊದಲು ೫ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ|| ೨೦೯೩೦—೮. ೫೧೯೦.—ಮೈಸೂರು ಸರ್ವಿಸ್ ರೆಗ್ಯುಲೇಷನ್ಸಗಳ ೧೭೧ ನೇ ಆರ್ಟಿಕಲ್ ಅನುಸರಿಸಿ, ತುಮಕೂರು ಡಿಸ್ಟ್ರಿಕ್ಟ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಮ|| ಅಬ್ದುಲ್ ಅಜೀಜ್ ಯವರು ಅವರುಪಯೋಗಿಸಿಕೊಳ್ಳಬಹುದಾದ ತಾರೀಖ್ ಮೊದಲು ೭ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ|| ೩ ೨೧೯೩-೯೪—೮ ೯. ೪೩೧-೯೩.—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೩೧ ನೇ ಆರ್ಟಿಕಲ್ ಅನುಸರಿಸಿ, ಕಡೂರು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರಾದ ಮೆ|| ಪ ಹನ್ನಿಂಗ್ಸ್ ಯವರು ೧೮೯೩ ನೇ ಇಸವಿ ಜೂನ್ ೨ ನೇ ತಾರೀಖ್ ಮೊದಲು ೫ ದಿನಗಳ ಕ್ಯಾಜು ಯಲ್ ರಜಾ ಕೊಡಲ್ಪಟ್ಟಿದ್ದರು.

ನಂ|| ೨೧೯೪೪—೫೦೦೨.—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೩೧ ನೇ ಆರ್ಟಿಕಲ್ ಅನುಸರಿಸಿ, ಅಸಿಸ್ಟೆಂಟ್ ಸರ್ಜನ್ ಮೆ|| ಎಸ್. ವಿ. ರಾಮಸ್ವಾಮಯ್ಯಂಗಾರ್ರವರು ಈ ತಿಂಗಳ ೧೦ ನೇ ತಾರೀಖ್ ಮೊದಲು ೫ ದಿನಗಳ ಕ್ಯಾಜು ಯಲ್ ರಜಾ ಕೊಡಲ್ಪಟ್ಟಿದ್ದರು.

ನಂ|| ೨೧೦೨೨—೮ ೫೦೪೨.—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೩೧ನೇ ಆರ್ಟಿಕಲ್ ಅನುಸರಿಸಿ, ಮೈಸೂರು ಸಿಟಿ ಮ್ಯುನಿಸಿಪಲ್ ಬೋರ್ಡ್ ವೈಸ್ ಪ್ರೆಸಿಡೆಂಟ್ (ಟೌನ್ ಮ್ಯಾಜಿಸ್ಟ್ರೇಟ್) ಮೆ|| ಕುಪ್ಪುಸಾಮಿ ಮುದಲಿಯಾರ್ರವರು ೧೮೯೩ ನೇ ಇಸವಿ ಜೂನ್ ೮ ನೇ ತಾರೀಖ್ ಮೊದಲು ೩ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

೧೯ ನೇ ಜೂನ್ ೧೮೯೩, ಮೊಕ್ಕಾಂ ನಂ|| ೩೪೩.—ಮೈಸೂರು ಸರ್ವಿಸ್ ರೆಗ್ಯುಲೇಷನ್ ೮ ೧೮೮ ನೇ ಆರ್ಟಿಕಲ್ ಅನುಸರಿಸಿ, ಸಾಗರ ತಾಲ್ಲೂಕು ಅಮಲ್ದಾರ್ ಪಿ. ನಂಜುಂಡನಾಯಕರವರು ಅವರು ಉಪಯೋಗಿಸಿಕೊಳ್ಳಬಹುದಾದ ತಾರೀಖ್ ಮೊದಲು ೩ ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

೨. ಸಾಗರ ಸಬ್ ಡಿವಿಜನ್ ಆಫೀಸ್ ಶಿರಸ್ತೇದಾರ್ ಶಾಮರಾಯರು, ನಂಜುಂಡನಾಯಕರು ರಜಾ ಮೇಲೆ ಗೈರ್ಹಾಜರಾಗಿರುವ ಕಾಲದಲ್ಲಿ ಅಥವಾ ಮುಕ್ತೊಂದು ಹುಕುಂ ಕೊಡಲ್ಪಡುವ ತನಕ ಸಾಗರ ತಾಲ್ಲೂಕ್ ಅಮಲ್ದಾರ್ ವ ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡು ವಂತೆ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ|| ೨೧೦೨೧—೮ ೫೦೪೦.—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೩೧ ನೇ ಆರ್ಟಿಕಲ್ ಅನುಸರಿಸಿ, ಕೃಷ್ಣರಾಜಪೇಟೆ ಆಫಿಷಿಯೇಟಿಂಗ್ ಸಬ್ ಡಿವಿಜನ್ ಆಫೀಸರಾದ ಮೆ|| ಸಿ. ವಿ. ರಾಘವಾಚಾರ್ಲು ಯವರು ಈ ತಿಂಗಳಲ್ಲಿ ಉಪಯೋಗಿಸಿಕೊಳ್ಳುವದಕ್ಕೆ ಅಪ್ಪಣೆ ಕೊಡಲ್ಪಡಬಹುದಾದ ತಾರೀಖ್ ಮೊದಲು ೩ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ|| ೨೧೦೨೮—೮ ೫೦೪೪.—ಅಗ್ರಿಕಲ್ಚರಲ್ ಮುನ್ಸಿಫ್ ಮೆ|| ಎಸ್. ವೆಂಕಟವರದಯ್ಯಂಗಾರ್ರವರು, ೧೮೯೩ ನೇ ಇಸವಿ ಜೂನ್ ೨ ನೇ ತಾರೀಖು ೨೦೩೩೨—೦ ೪೯೩೧ ನೇ ನಂಬರ್ ಇಷ್ಟಿಹಾರ್ ನಾಮೆಯ ಮೂಲಕ ಕೊಡಲ್ಪಟ್ಟ ರಜಾವಿಗೆ ಸೇರಿದಂತೆ ಅರ್ಧ ಸಂಬಳದ ಮೇಲೆ ಒಂದು ವಾರದ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

೨೧ ನೇ ಜೂನ್ ೧೮೯೩, ನಂ|| ೨೧೯೯—೮ ೫೦೩೩.—ಬೆಂಗಳೂರು ಡಿಸ್ಟ್ರಿಕ್ಟ್ ಆಫಿಸಿಯೇಟಿಂಗ್ ಅಸಿಸ್ಟೆಂಟ್ ಕಮಿಷನರ್ ಮೆ|| ಬಿ. ಕುಪ್ಪುಸಾಮಿ ನಾಯುಡರವರು ಅವರು ಉಪಯೋಗಿಸಿಕೊಳ್ಳಬಹುದಾದ ತಾರೀಖ್ ಮೊದಲು ೩ ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

೨. ನೆಲಮಂಗಲ ತಾಲ್ಲೂಕ್ ಅಮಲ್ದಾರ್ ಸಿ. ಡಿ. ರಾಮಸ್ವಾಮಯ್ಯನವರು, ಅಸಿಸ್ಟೆಂಟ್ ಕಮಿಷನರ್‌ಗಳು ರಜಾವಿಂದ ವಾಪಸು ಬರುವ ವನ್ನು ನುಸರಿಸಿ, ೪ ನೇ ತರಗತಿ ಅಸಿಸ್ಟೆಂಟ್ ಕಮಿಷನರಾಗಿ ಕೆಲಸ ನೋಡುವಂತೆ ಮೊಕರರ್ ಮಾಡಲ್ಪಟ್ಟು, ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಜನರಲ್ ಡ್ಯೂಟಿಯ ಬಗ್ಗೆ ನಿಯಮಿಸಲ್ಪಟ್ಟಿರುತ್ತಾರೆ. ಇಂತಾ ಹಂಗಾಮಿ ನೌಕರಿಯ ಕಾಲದಲ್ಲಿ ಸದರೀ ಯವರು ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಡಲ್ಪಟ್ಟಿರುತ್ತಾರೆ.

೩. ಕೃಷ್ಣರಾಜಪೇಟೆ ಡೆಪ್ಯುಟಿ ಅಮಲ್ದಾರ್ ಕೆ. ಜಿ ಶಾಮಣ್ಣ, ಬಿ. ಎ. ಯವರು, ಸಿ. ಡಿ. ರಾಮಸ್ವಾಮಯ್ಯನವರು ಬೇರೆ ಕೆಲಸದಮೇಲಿರುವ ಕಾಲದಲ್ಲಿ ಅಥವಾ ಮುಕ್ತೊಂದು ಹುಕುಂ ಕೊಡಲ್ಪಡುವ ತನಕ, ನೆಲಮಂಗಲ ತಾಲ್ಲೂಕ್ ಅಮಲ್ದಾರ್ ವ ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತಾರೆ.

೪. ಸರ್ವೆ ಸೂಪರಿಂಟೆಂಡೆಂಟರ ಆಫೀಸ್ ಹೆಡ್ ಕ್ಲರ್ಕ್ ಯಲೆ ಶ್ರೀನಿವಾಸ ಯವರು, ಕೆ. ಜಿ ಶಾಮಣ್ಣನವರು ಬೇರೆ ಕೆಲಸದಮೇಲಿರುವಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ಕೃಷ್ಣರಾಜಪೇಟೆ ಡೆಪ್ಯುಟಿ ಅಮಲ್ದಾರ್ ವ ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತಾರೆ.

## SUMMARY OF NEWS.

### ವೃತ್ತಾಂತ ಸಂಗ್ರಹವು

ಹುಬ್ಬಳ್ಳಿ ಮುನ್ಸಿಪಲ್ ಸೂಪ್ರಿಟೆಂಡೆಂಟನ್ನು ಕೊಂದವರು ಇನ್ನು ಸಿಕ್ಕಿಲ್ಲ. ಡಿ. ಪೋಲೀಸ್ ಸೂಪರಿಂಟೆಂಡೆಂಟ್ ತನಿಖೆ ಹೋಗಿದ್ದಾರೆ.

ಕಲಕತ್ತೆಯಲ್ಲೊಬ್ಬ ಶ್ರೀಮಂತ ಗೃಹಸ್ಥನು ತನ್ನ ಮಗಳ ಮಗಳಿಗೆ ಎಂತಹ ವರನು ದೊರೆಯುತ್ತಾನೋ ಎಂದು ಆಲೋಚಿಸುತ್ತಿರಲು, ಏಳಗೆ ಗಂಟೆ ಹೊತ್ತಿಗೆ ಸತ್ತ ಶ್ವಾನದ ನಾಲಿಗ್ಗಿನ ಹೆಂಡತಿಯನ್ನು ಹುಡುಕುತ್ತಿದ್ದ ಒಬ್ಬ ತರುಣ ಧನಿಕನು ಅವಳನ್ನು ಮದುವೆ ಮಾಡಿಕೊಂಡನು.

ಕಾರೋಮಂಡಲ ದಂಡೆಯ ಮೇಲೊಬ್ಬ ಮೂಕನು ತಿರುಗುತ್ತಿದ್ದುದರಿಂದ ಅಲ್ಲಿಯ ಏಳು ಗಿಡಗಳನ್ನು ತೆಗೆದುಕೊಂಡು ತಿನ್ನಲು ಅವನ ಕಿವುಡತನವು ಹೋಗಿತು. ಈ ಗಿಡದ ಔಷಧವನ್ನು ಪಡೆದವರಲ್ಲಿ ಅನೇಕ ಜನರು ಮೂಕರು ಹೋಗಲು ಅಲ್ಲಿಗೆ ಹೋಗಿದ್ದಾರಂತೆ.

ಹಿಂದಕ್ಕೆ ದಕ್ಷಿಣ ಮಹಾರಾಷ್ಟ್ರ ರೈಲ್ವೆ ಆಫೀಸಿನಲ್ಲಿ ಕಳವಾದ ಹೊಸ ನೋಟುಗಳು ಖಜಾನೆಯಲ್ಲಿ ಐದು ಬಿತ್ತಾ ಯಿತಂತೆ. ಇವುಗಳನ್ನು ಯಾವ ಭೂತವು ತಂದು ಚೆಲ್ಲಿರಬಹುದು? ಖಜಾನೆಯವರಿಗೆ ಈ ನೋಟುಗಳ ನಂಬರುಗಳು ಗೊತ್ತಿರಲಿಲ್ಲವೇನು? ಛೆ! ಛೆ! ಕಳವಾದ ಹೊಸ ನೋಟುಗಳ ನಂಬರುಗಳು ಯಲ್ಲಾ ಕಡೆಗೂ ಪ್ರಸಿದ್ಧ ಮಾಡಿದ್ದಾರೆ. ಹಾಗಾದರೆ ಈ ನೋಟುಗಳು ಬಂದ ಕೂಡಲೆ ಖಜಾನೆಯಲ್ಲಿ ನಂಬರ ನೋಡಿದ್ದರೆ ಆ ಭೂತವು ಭವಿಷ್ಯವಾಗುತ್ತಿತ್ತು. ಆದರೆ ಕೆಲಸವು ಬಹು ಸೋಜಿಗವಾದದ್ದು. ವಿಚಾರಕರು ಸನವಾಗಿ ವಿಚಾರ ಮಾಡಬೇಕೆಂದು ನಮ್ಮ ಸೂಚನೆ.—ಕ. ವೃ.

ಬನಾರಸ (ಕಾಶೀಕ್ಷೇತ್ರದ) ಮ್ಯುನಿಸಿಪಾಲಿಟಿಯವರು ನಗರ ಪೇಟ್ಟರ್ ಮ್ಯುನಿಸಿಪಲ್ ಆಕ್ಟಿನ ೨ನೇ ಕಲ್ಮಿನ ನಿಯಮವನ್ನು ಯಾತ್ರೆಯ ನಿಮಿತ್ತವಾಗಲೀ, ವ್ಯಾಪಾರ ನಿಮಿತ್ತವಾಗಲೀ ಕಾಶೀಕ್ಷೇತ್ರಕ್ಕೆ ಬರುವ ಜನರ ಮೇಲೆ ಹನ್ನೆರಡು ವರ್ಷ ಪ್ರಾಯ ಮೀರಿದ ಗಂಡಸಿಗೆ ಅಥವಾ ಹೆಂಗಸಿಗೆ ೪ ಆಣೆಯಂತೆ ಮತ್ತು ೩ ವರ್ಷದಿಂದ ೧೨ ವರ್ಷಗಳವರೆಗಿನ ಪ್ರಾಯದವರಾದ ಹುಡುಗರಿಗೆ ಆಥವಾ ಹುಡುಗಿಯರಿಗೆ ೨ ಆಣೆಯಂತೆ ತಲೆಪಟ್ಟಿಯನ್ನು ಕೂಡಿಸಬೇಕೆಂದು ನಿರ್ಧರಿಸುವ್ದಾಗಿ ತಿಳಿಯುತ್ತದೆ. ಈ ಮ್ಯುನಿಸಿಪಾಲಿಟಿಯವರು ತಮಗೆ ನಾರ್ಥ ವೆಸ್ಟ ಪ್ರಾವಿನ್ಸಿನ ಸರಕಾರದ ಸಕ್ರಿಟೇರಿಯವರ ಕಚೇರಿಯಿಂದ ಸ ೧೮೯೩ನೇ ಇಸವಿಯ ಮಾರ್ಚಿ ೧೭ ನೇ ತಾ. ನ ದಿವಸ ಬಂದ ಪತ್ರದ ಸನೇ ಪ್ಯಾರಾಗ್ರಾಫಿಗೆ ಅನುಸರಣವಾಗಿ ಜನರ ಮೇಲೆ ಈ ತಲೆಪಟ್ಟಿಯನ್ನು ಕೂಡ್ರಿಸುವ ಉದ್ದೇಶದಿಂದ ಈ ತಲೆಪಟ್ಟಿಯನ್ನು ಕೂಡ್ರಿಸುವದರಂತ ಆಕ್ಷೇಪಣೆಯು ಸಹಿತ ಬರುವ ತಮ್ಮ ತಕರಾರುಗಳನ್ನು ನಿಮ್ಮ ಹಿತ ಮುಟ್ಟಿಸತಕ್ಕದ್ದಾಗಿ ತಿಳಿಸಿದ್ದಾರೆ. ಇಂಥಾ ಬಗ್ಗೆ ಜಾಹೀರಾತುಗಳು ಪ್ರಸಿದ್ಧವಾಗಿರುತ್ತವೆಂದು ಕಲಕತ್ತೆಯ “ಅಮೃತಬಜಾರ ಪತ್ರಿಕೆ”ಯವರು ಬರೆಯುತ್ತಾರೆ.

### ವೃತ್ತಾಂತಪತ್ರಿಕೆ ತಾ ೨೩ ಶಿ ೯೩.

ವಿಕ್ಟೋರಿಯಾ ಮಹಾರಾಣಿಯವರಿಗೆ ಕಳೆದ ಮೇ ತಿಂಗಳಿಗೆ ೭೪ ವರ್ಷಗಳು ತುಂಬಿದವು, ಇಂಗ್ಲಂಡ ಪಟ್ಟಣದ ಮಹಾಲಕ್ಷ್ಮೀಕರಿಲ್ಲಾ ವೆಲ್ಲರಾಣಿಯವರೂ ಮತ್ತೆಯವರು ಒಂದು ಭಾರೀ ಔತಣವನ್ನು ಮಾಡಿದರು.

ಗದಗಿನ ಆರ್. ಟಿ. ಪಾಂಡುರಂಗರಾಯರವರ ಪ್ರತಿಮೆಯನ್ನು ಬೆಂಗಳೂರಿಂದ ತರಿಸಿಕೊಂಡು ಟ್ರಸ್ಟಿಯವರು ಕಲ್ಲಿನ ಕೆಲವು ಗಳ ಕೆಳಗೆ ಪ್ರತಿಷ್ಠೆ ಮಾಡಿಸಿರುತ್ತಾರೆ, ಆ ಪ್ರತಿಮೆಯನ್ನು ನೋಡಿದರೆ ಸರ್. ಟಿ. ಮಾಧವರಾಯರವರು ಪುನಃ ಹುಟ್ಟಿರುತ್ತಾರೋ ಎಂಬಹಾಗಿರುವುದಂತೆ.

ಸುಮಾರು ೧೩ ವರುಷದ ಮುನಿಯಮ್ಮಳು ಎಂಬ ಹುಡುಗಿಯನ್ನು ೩೦ ವರುಷದ ಇಬ್ಬರೆ ಕಂಟ್ರಾಕ್ಟರಿನಾದ್ದ ಮುನಿಸಾಮಿಶೆಟ್ಟಿ ಎಂಬನು ಅಪಹರಿಸಿಕೊಂಡು ಹೋದ್ದರಿಂದ ಅವನಿಗೆ ಮ್ಯಾಜಿಸ್ಟ್ರೇಟರು ದಿಕ್ಕಾರ್ಯಿಯಿಂದ ೬ ವಾರಗಳ ಕಠಿಣ ಸಜಾ ವಿಧಿಸಲ್ಪಟ್ಟಿತು.

ನಾಲ್ಕೈದು ದಿವಸಗಳ ಸ್ಟೇಷನ್ ಎಂಬ ಪಟ್ಟಣದಮುಖ್ಯದಲ್ಲಿ ಒಂದು ಹಳ್ಳಿಯಲ್ಲಿ ಆಕಸ್ಮಿಕವಾಗಿ ಬಹಳಮಾನು ಕುಸುರು ಹೋಯಿತು ೪೦ ಭಾರೀ ಮನೆಗಳು ಮುಳುಗಿಹೋದವು ೧೦೦ ಜನರು ಸತ್ತರು. ಆ ಸ್ಥಳವು ಒಂದು ದೊಡ್ಡ ಕೆರೆಯಾಗಿ ಆಗಿದೆ ಅದರ ತುಂಬ ಕೆಸರೇ ವಿಪರೀತವಾಗಿದೆ.

ಅಲಜೀರಿಯದಲ್ಲಿ ಮೊನ್ನೆ ಒಂದು ರೈಲು ಹೋಗುತ್ತಿರುವಾಗ ಮಿಡತೆಗಳು ಗುಂಪಾಗಿ ರೈಲಿನ ದಾರಿಯನ್ನು ಮುಚ್ಚಿ ರೈಲು ಮುಂದಕ್ಕೆ ಹೋಗದಹಾಗೆ ಅಡ್ಡಿ ಮಾಡಿದವು. ಇದರಿಂದ ಸ್ವಲ್ಪ ಹೊತ್ತು ಯಂತ್ರದ ಚಕ್ರಗಳು ತಿರುಗಿದರೂ ರೈಲು ಮುಂದಕ್ಕೆ ಹೋಗುವದು ಅಶಕ್ಯವಾಗಿ ರೈಲನ್ನು ಹಿಂದಕ್ಕೆ ತೆಗೆದುಕೊಂಡು ಹೋಗಬೇಕಾಯಿತು ಇದೆ ಥಾ ಆಶ್ಚರ್ಯ.

ಜರ್ಮನೀ ದೇಶದ ಉಪ್ಸಬರ್ಗ ಪಟ್ಟಣದ ಆಸ್ಪತ್ರೆಯಲ್ಲಿ ಒಬ್ಬ ರೋಗಿಯು ಚಿಕಿತ್ಸೆ ಹೊಂದುತ್ತಿದ್ದಾಗ ಅವನು ಸ್ನೇಹಿತರ ಎದುರು ಚಿಲಿಯೆಂಬ ಕಳ್ಳನಂತೆ ಹಿಡಿದುಕೊಂಡಿದ್ದನು. ಆ ಕೂಡಲೆ ಅವನ ಹೊಟ್ಟೆಯನ್ನು ಬಗೆದು ನೋಡಲು ಒಂದು ತಿಂಗಳ ಮೇಲೆ ಚಿಕಿತ್ಸೆ ಮಾಡಿ ೬೩ ಕಲ್ಲುಗಳನ್ನು ಅವನ ಹೊಟ್ಟೆಯಿಂದ ಹೊರಕ್ಕೆ ತೆಗೆದಿರುತ್ತಾರೆ. ಇದು ಜರ್ಮನ್ ಆಫೀಸು ಸುಮಾರು ೫|| ಗಂಟೆಯ ಸಂಪಾದನೆಗಾಗಿ ಅವನು ತನ್ನ ಗುಂಡಿಗೆಯನ್ನು ಕರಗಿಸಿಕೊಂಡಿದ್ದಾನಂತೆ.

ಕನ್ನಡ ರಾಜ್ಯದ ಬಾರಿಸ್ಟರನೊಬ್ಬನು ಒಂದು ಸೋಡಾ ಕುಡಿದು ಸತ್ತನು. ...

## EXTRACTS.

ಸುತ್ತಿನ ಯುವತಿಯ ಇಷ್ಟಾರ್ಥಗಳನ್ನು ರಂಗನಾಥ ನಗರದವರು ಬಹುರೀತಿಯಿಂದ ಸ್ಕೂಲ್‌ಗಳನ್ನು ಸ್ಥಾಪಿಸುವವರನ್ನು ಅನೇಕ ವಿಧವಾಗಿ ಪ್ರಶಂಸಿಸಿ, ... ಕನ್ಯೆಯರ ವಿವಾಹವನ್ನು ಮುಂದಿನ ಕಾಲದಲ್ಲಿ ... [illegible]

ಬಾಲ್ಯವಿವಾಹವನ್ನು ಕುರಿತು.

ಶಿಳಶಿವಪದ ಕ್ಷೇತ್ರ ...

ವರು ಲಗ್ನ ಮಾಡಿಕೊಂಡರು. ಇವರು ಬಾಲ್ಯದಲ್ಲಿ ಲಗ್ನ ಮಾಡಿಕೊಳ್ಳಲಿಲ್ಲ, ಆದ್ದರಿಂದ ಅವರು ಕೇವಲ ಯೌವನಾವಸ್ಥೆಯಲ್ಲಿ ಲಗ್ನ ಮಾಡಿಕೊಂಡದ್ದರಿಂದ ಅವರು ಚನ್ನಾಗಿ ವ್ಯಾಸಂಗವನ್ನು ಮಾಡಿ ಎಷ್ಟೋ ಲೋಕಹಿತವನ್ನು ಮಾಡಿ ಕೀರ್ತಿ ಸಂಪಾದನವನ್ನು ಮಾಡಿದರು. ... [illegible]

... ಖರ್ಚೂ ಬಹಳ ಹೆಚ್ಚಾಯಿತು.—ವೃತ್ತಾಂತ.

BANGALORE.—Printed and published at the KARNATAKA PRESS, No. 40, HOSPITAL ROAD, CITY—1893

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning.**

ಶ್ರೀಮನುವಿವಿಧಸ್ವನ್ಯತ್ಯೋದಿಗನುಸಾರ್ತ್ಯಕರ್ಣಾಟಕಪ್ರಕಾಶನವರಾಭಿಧಾನ್ಸ್ವಭಿತಸಾಹಿತೀಶೋಭಿತಾ। ಮೃಗಾಂಕಹಿತವಾಸರನಿಹಿತಮುದ್ರಣಾಸಜ್ಜನ್ಯಸ್ವರ್ಗಿಕಾಸುವರಿನೋಟಾದಿಕತವಾಸನ್ಸುಂಭುದು॥


Vol. XX] BANGALORE—MONDAY, JULY 3 1893. [No 26.

ಸಂಪುಟ ೨೦.] ಬೆಂಗಳೂರು:—ಸನ್ ೧೮೯೩ನೇ ಇಸವಿ ಜುಲೈ ೩ನೇ ತಾರೀಖ್ ಸೋಮವಾರ. [ಸಂಖ್ಯೆ ೨೬.


## ಕರ್ಣಾಟಕ ಪ್ರಕಾಶಿಕಾ.

### ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ವರ್ಷ ಒಂದಕ್ಕೆ .. | 6—0—0 | 8—0—0 |
| 6 ತಿಂಗಳಿಗೆ .. | 3—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

| | ಸ್ಥಳದವರಿಗೆ. | ಪರಸ್ಥಳದವರಿಗೆ. |
|---|---|---|
| ವರ್ಷಕ್ಕೆ | 3—0—0 | 4—0—0 |
| 6 ತಿಂಗಳಿಗೆ .. | 1—12—0 | 2—8—0 |

ಈ ಪತ್ರಿಕೆಗೆ ದರ ಕಾಪ್ಪು ಮಾಡಿದ ರಾಶೀನ್ ಮೊದಲು ಒಂದು ತಿಂಗಳೊಳಗಾಗಿ ಚಂದಾ ಮೊಬಲಗು ಕಳುಹಿಸುವಂತಾದವರಿಗೆ ಈ ಪತ್ರಿಕೆ ಆಫೀಸ್ ದರದಂತೆ ಪತ್ರಿಕೆ ಕಳುಹಿಸಲ್ಪಡುವದು. ಚಂದಾದಾರರು ಇಂಗ್ಲಿಷ್ ಭಾಗದ ಸಾಲಿಗೆ ತನ್ನ ಚಂದಾವನ್ನು ೬ ಅಥವಾ ಎರಡನ್ನಾಗಿ ಕಳುಹಿಸಿಕೊಡಬೇಕು. ಮೂರು ತಿಂಗಳಿಗಿಂತ ಕಡಮೆಯಾಗಿ ಚಂದಾ ಮೊಬಲಗು ಅಂಗೀಕರಿಸಲ್ಪಡಲಾರದು.

### ಪ್ರಕಟನೆಯ ರಿವಾಜ್.

| | |
|---|---|
| ಮೊದಲನೆಯದಫಾ ಪಂಕ್ತಿ ಒಂದಕ್ಕೆ | ೦—೨—೦ |
| ಎರಡನೆಯದಫಾ ಪಂಕ್ತಿ ಒಂದಕ್ಕೆ | ೦—೧—೦ |

ಮಿಗಿ—ಎರಡಾವರ್ತಿಗಿಂತ ಬಹಳ ಸಾರಿ ಎಷ್ಟು ಕಡದಫೆ ಪ್ರಕಟಿಸಬೇಕಾಗಿದ್ದರೂ ಪಂಕ್ತಿ ಒಂದಕ್ಕೆ ೧ ಆಣೆಯಂತೆ ಲಕ್ಷ್ಯ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಖಾಯಮಾಡುವಂತೆ ಪ್ರಕಟನೆಗಳು ಕಳುಹಿಸುವವರು ಅವು ಎಷ್ಟು ಸಾರಿ ಪ್ರಕಟಿಸಬೇಕೋ ಆ ಅಂಕೆಯನ್ನು ಸ್ಪಷ್ಟವಾಗಿ ತಿಳಿಸಬೇಕು. ಇಲ್ಲದಿದ್ದರೆ ಅವರು ನಮಗೆ ನಿಲ್ಲಿಸುವಂತೆ ಬರೆಯುವತನಕ ಅದು ಪ್ರಕಟಿಸಲ್ಪಡುವದು. ಹಾಗೆ ಎಷ್ಟು ದಫೆ ಪ್ರಕಟಿಸಲ್ಪಟ್ಟಿತ್ತೋ ಅಷ್ಟಕ್ಕೆ ಮೇಲ್ಕಂಡ ದರದಂತೆ ಕಿಮ್ಮತ್ತು ವಸೂಲ್ಮಾಡಲ್ಪಡುವದು. ಪ್ರಕಟನೆಗೋಸ್ಕರ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಆಯಾ ಸೋಮವಾರದ ಮಧ್ಯಾಹ್ನ ೨ ಗಂಟೆಯೊಳಗಾಗಿ ಕಳುಹಿಸಬೇಕು. ಪ್ರಕಟನೆಯ ಬಗ್ಗೆ ಪತ್ರಿಕೆಗೆ ಕಳುಹಿಸುವವರು ಕಾಗದಗಳಲ್ಲಿ ತಿಳಿಸಲ್ಪಡುವ ವಿಷಯಗಳಿಗೆ ನಾವು ಜವಾಬ್ದಾರರಲ್ಲವೆಂತಲೂ ಕ್ರಮವಾಗಿ ರುಜುವಾತಿ ಕೊಡದ್ದು ಯಾವ ಕಾಗದವನ್ನೂ ಪ್ರಕಟಿಸಲಾರೆವು. ಸಿರ್ಫ್ ಪ್ರಕಟನೆ (ಸುಮಾರು ವಾರ್ತೆಗಳು) ಕಳುಹಿಸಲ್ಪಡಬಾರದು.


*ADVERTISEMENTS.*

**NOTICE.**

VAIDYASARA SANGRAHA

A TREATISE ON THE PRINCIPLES OF

HINDU MEDICINE

*Price including Postage Rs 5 0-0*

ವೈದ್ಯಸಾರ ಸಂಗ್ರಹ.

ಈ ಗ್ರಂಥಾಪೇಕ್ಷೆಯುಳ್ಳವರು ಮೊಬಲಗನ್ನೊದಗಿಸಿ ಕಳುಹಿ ರುಜು ಮಾಡಿದಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ಕಾಗದಗಳಿಗೆ ಪುಸ್ತಕ ಕೊಡಲ್ಪಡಲಾರದು.

ಅದರ ಕ್ರಯ—ಬೈಂಡಿಂಗ್ ಮತ್ತು ಅಂಚೇ ಹಾಸಿಲು, ಛಾಪಿಲ್ ಪ್ರತಿ ಒಂದಕ್ಕೆ ರೂ 5—0—0

ಟಿ. ಬಿ. ವೆಂಕಟಾಚಾರ್.

ಬೆಂಗಳೂರ್, ಪಟಾಳಿ ಆಸ್ಪತ್ರೆ ರೋಡ್ ೪೮ ನೆಂಬರ್.

ನೋಟೀಸ್.

ಬೆಂಗಳೂರು ಕರ್ಣಾಟಕ ಪ್ರೆಸ್.

೧೮೭೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ ಸಕಲವಿಧ ಕೆಲಸಗಳು ಸುಲಭಬೆಲೆಗೆ ಶೀಘ್ರವಾಗಿಯೂ ಸ್ವಚ್ಛವಾಗಿಯೂ, ಮಾಡಲ್ಪಡುವವು. ಇದರಲ್ಲಿ ಸರ್ವ ಇಂಗ್ಲಿಷ್ ಕನ್ನಡ ಕೆಲಸವು ಮಾತ್ರವೇ ನಡೆಯುತ್ತವೆ. ಇತರ ತಪಸೀಲುಗಳನ್ನು ಸದರೀ ಕಾರ್ಯಾಧಿಕಾರಿಗೆ ಬರೆದು ತಿಳಿದುಕೊಳ್ಳಬಹುದು.

ನೋಟೀಸ್.

ಗಣೇಶ ರಾಮಚಂದ್ರ ಕರ್ಕೆ ಮತ್ತು ಕಂಪೆನಿ.
ಕಮಿಷನ್ ಏಜಂಟ್ಸ್.

ಇವರಿಂದ ತಿಳಿಸಲ್ಪಡುವ ಸಾಮಾನುಗಳನ್ನು ಜೆಂ:ಕಾ: ಜನರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತನದಿಂದ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ತಕ್ಕ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರಹ ಔಷಧಗಳು, ಪುಸ್ತಕಗಳು, ಮುತ್ತುಗಳು, ಚಿಪ್ಪಿ ಮುತ್ತುಗಳು, ಘಡಿಯಾರಗಳು, ವಾಚುಗಳು, ಟ್ರಂಕುಗಳು ಹ್ಯಾಟ್ ಕಂಬಳಿಗಳು, ಚಿಪ್ಪಿಸೀರೆಗಳು, ಜರತಾರಿಗಳು, ಚಿತ್ರಕಾಂತ ಮುಂತಾದ ಕನ್ನಡಿಗಳು, ಮಡಗಿಕತಕ್ಕ ಬಗೆ ಬಗೆ ಪಾತ್ರೆಗಳು, ಜರತಾರಿ ಟೋಪಿಗಳು, ಆಫೀಸ್ ಪ್ರೆಸ್‌ಗಳು, ಪಟಗಳು, ಅತ್ತರುಗಳು, ಅತ್ಯುತ್ತಮವಾದ ರತ್ನಗಳು ಭಂಗಾರದಿಂದ ಕಟ್ಟಲ್ಪಟ್ಟ ಉಂಗುರಗಳು, ಬೆಳ್ಳಿ ಪಾತ್ರೆಗಳು, ಜರ್ಮನ್ ಬೆಳ್ಳಿ ಪಾತ್ರೆಗಳು, ಕೇಸರಿ, ಕಸ್ತೂರಿ ಮತ್ತೆ ಇತರ ಸಾಮಾನುಗಳು.

ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟ್ಯಾಂಪ್ ಕಳುಹಿಸಿದ ಮೇಲೆ ಜವಾಬ್ ಕೊಡಲ್ಪಡುವದು.

ವಿಳಾಸ —ಗಣೇಶ ರಾಮಚಂದ್ರ ಕರ್ಕೆ,
ಮತ್ತು ಕಂಪೆನಿ, ಕಮಿಷನ್ ಏಜಂಟ್ಸ್,
ಠಾಕೂರ ದ್ವಾರ, ಮಾರ್ಕೆಟ್ ಪೋಸ್ಟ್, ಮುಂಬೈ.

ನೋಟೀಸ್.

ಇವರಿಂದ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

### ಸಂಸ್ಕೃತ ಗ್ರಂಥಗಳು.

| | | ರೂ | ಆ | ಪೈ |
|---|---|---|---|---|
| ಸಟೀಕಾ ವೈದ್ಯಸಾರ ಸಂಗ್ರಹ | .. | ೫ | ೦ | ೦ |
| „ ಶಿವಗೀತೆ | .. | ೧ | ೭ | ೦ |
| „ ಶಿವಾನಂದಲಹರಿ | .. | ೦ | ೮ | ೦ |
| „ ಕಾಲಾಮೃತ | .. | ೧ | ೦ | ೦ |
| „ ಟೀ॥ ವಾಲ್ಮೀಕಿರಾಮಾಯಣ | . | ೦ | ೩ | ೦ |
| „ ಟೀ॥ ಗೋಪಿಕಾ ಗೀತೆ | .. | ೦ | ೧ | ೦ |
| „ ಟೀ॥ ಚಾಣಕ್ಯನೀತಿ (ಸುಭಾಷಿತ) | | ೦ | ೪ | ೦ |
| ವಿಷ್ಣುಸಹಸ್ರನಾಮ ಪತ್ರಿಕೆ | .. | ೦ | ೩ | ೦ |
| ಸೂರ್ಯಸಹಸ್ರನಾಮ | .. | ೦ | ೨ | ೦ |
| ಕೃಷ್ಣಕರ್ಣಾಮೃತ | ... | ೦ | ೨ | ೦ |
| ತ್ರಿಕಾಂಡ ಅಮರ ಮೂಲ | | ೦ | ೨ | ೦ |
| ೧ ಕಾಂಡ | .. | ೦ | ೧ | ೦ |

### ಕನ್ನಡ ಗ್ರಂಥಗಳು.

| | | | | |
|---|---|---|---|---|
| ಕಕಲಸ್ತುತಿ ಅಪ್ಪಲ್ | ... | ೩ | ೦ | ೯ |
| ಡಿಟೋ ದುಯ್ಯಂ | ... | ೧ | ೨ | ೦ |
| ವೃಷಭೇಂದ್ರವಿಜಯ | ... | ೧ | ೮ | ೦ |
| ಪಂಚತಂತ್ರ ಬಾಲಬೋಧೆ | ... | ೦ | ೬ | ೦ |
| ಹನುಮದ್ವಿಲಾಸ | .. | ೦ | ೬ | ೦ |
| ಕಾಳೀಯಮರ್ದನ | ... | ೦ | ೨ | ೦ |
| ಸುಭದ್ರಾಪರಿಣಯ | . | ೦ | ೨ | ೦ |
| ಶಶಿರೇಖಾಪರಿಣಯ | . | ೦ | ೨ | ೬ |
| ಸುದಾಮಚರಿತ್ರೆ | .. | ೦ | ೧ | ೦ |
| ಪ್ರೈರಾಗಾಣ ಚರಿತ್ರೆ | ... | ೦ | ೧ | ೦ |
| ಬಾಲಗ್ರಹಚಿಕಿತ್ಸೆ | . | ೦ | ೧ | ೦ |
| ಮಹಮ್ಮರ್ದ ಲಾ | .. | ೦ | ೧೨ | ೦ |
| ಭ್ರಾಂತಿವಿಲಾಸ | .. | ೨ | ೦ | ೦ |


## THE MONEY MARKET.

ಮದರಾಸ್, ಶನಿವಾರ, ತಾರೀಖ್ 1ನೇ ಜುಲೈ 1893

ಸೇಕಡ 4ರೂ. ಬಾಬತು ಗವರ್ನಮೆಂಟ್ ಪತ್ರಗಳು ರೂ ಪಾಯಿ, 107-4-0 ಇಂದ 107-12-0 ವರೆಗೆ.

ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತು 990 ಲಾಗಾಯತು 1,000 ವರೆಗೆ.

ಅರ್ಬತ್ನಾಟ್ ಮತ್ತು ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಷೇರುಗಳು, (100) ಬಾಬತು 160 ಇಂದ 165 ವರೆಗೆ.

ಸವರನ್‌ಗಳು, 15-8-0 ಇಂದ 15-10-0 ವರೆಗೆ.

ಬ್ಯಾಂಕ್‌ಬಿಲ್‌ಗಳು ಮಾನೆ ವ್ಯವಹಾರಗಳು, ರೂ॥ ಒಂದಕ್ಕೆ

6 ತಿಂಗಳವಾಯಿದೆಗೆ, 1s. 3 31/32 d.

ಡಿಟೋ 4 ತಿಂಗಳವಾಯಿದೆಗೆ, 1s. 3 29/32d.

ಡಿಟೋ ಕೇಳಿದಾಗ, 1s. 3 13/16 d.

# ಕರ್ಣಾಟಕ ಪ್ರಕಾಶಿಕಾ.

## THE KARNATAKA PRAKASIKA.

MONDAY, JULY 3 1893

೧೮೯೩ನೇ ಇಸವಿ ಜುಲೈ ತಾ॥ ೩ ನೇ ಸೋಮವಾರ.

### ನಾಣ್ಯಪರಿವರ್ತನೆ.

ಈಚೆಗೆ ಕೆಲವು ಸಂವತ್ಸರಗಳ ಕಾಲದವರೆಗೂ, ಎಕ್ಸ್‌ಚೇಂಜ್ ಅಂದರೆ, ಇಂಗ್ಲೆಂಡ್ ದೇಶದ ಚಲಾವಣೆ ನಾಣ್ಯವಾದ ಸಾವರಿನ್‌ಗೂ ಇಂಡಿಯಾದೇಶದ ಚಲಾವಣೆ ನಾಣ್ಯವಾದ ರೂಪಾಯಿಗೂ, ವ್ಯವಹಾರದಲ್ಲಿ ಕ್ರಮಕ್ರಮವಾಗಿ ಉಂಟಾಗುತಲಿರುವ ಅತ್ಯಧಿಕವಾದ ತಾರತಮ್ಯದ ದೆಸೆಯಿಂದ ಇಂಡ್ಯ ಗವರ್ನ್‌ಮೆಂಟಿಗೂ ಅದರ ಪ್ರಜೆಗಳಿಗೂ ಉಂಟಾಗುತ ಬಂದ ಅಮಿತವಾದ ನಷ್ಟವನ್ನು ಬ್ರಿಟಿಷ್ ಗವರ್ನ್‌ಮೆಂಟಿನವರು ಯೋಚಿಸಿ, ತನ್ನಿವೃತ್ತ್ಯುಪಾಯವು ಕಂಡು ಹಿಡಿಯತಕ್ಕ ಬಗ್ಗೆ ಇಂಗ್ಲೆಂಡಿನಲ್ಲಿ ಒಂದು ಕಮಿಟಿಯು ಯೇರ್ಪಡಿಸಿ, ಅದಕ್ಕೆ ಲಾರ್ಡ್ ಹರ್ಷೆಲ್ ಎಂಬವೊತ್ತ ಮನುಷ್ಯರನ್ನು ಪ್ರೆಸಿಡೆಂಟರನ್ನಾಗಿ ಮಾಡಿದರು. ಸದರೀ ಕಮಿಟಿಯವರು ನಾಲ್ಕಾರು ತಿಂಗಳ ಮೊದಲು ಆಗಿಂದಾಗ್ಗೆ ಸಭೆ ಸೇರಿ ಸದರೀ ವಿಷಯವಂ ಕುರಿತು ಬಹು ಮುಖವಾಗಿ ವಿಚಾರಮಾಡಿ ಕೊಟ್ಟ ರಿಪೋರ್ಟಿನಲ್ಲಿ ಕಂಡ ಅಭಿಪ್ರಾಯವನ್ನನುಸರಿಸಿ, ಸವರನಿನ ಕ್ರಯ ಮನಸ್ವಿ ಬದಲಾಯಿಸಲ್ಪಡದೆ ಇರತಕ್ಕ ಬಗ್ಗೆ ಅದರ ಧಾರಣೆಯು ಮತ್ತೊಂದು ಹುಕುಂ ಕೊಡಲ್ಪಡುವತನಕ ಕಾಯಮಾಗಿ ಹದಿನೈದು ರೂಪಾಯಿಗಳೆಂತೆಯೂ, ಅರ್ಧಸವರನಿನ ಕ್ರಯ ಏಳೂವರೆ ರೂಪಾಯಿಗಳೆಂತೆಯೂ ಇರತಕ್ಕದ್ದೆಂತಲೂ, ಸರ್ಕಾರಕ್ಕೆ ಕೊಡತಕ್ಕ ಕಂದಾಯ ವಗೈರೆ ಬಾಕೀಗಳ ಬಗ್ಗೆ ಸವರನ್‌ಗಳು ಕೊಡಲ್ಪಡುವ ಪಕ್ಷಕ್ಕೆ ಅವು ಸವರನ್ ಒಂದಕ್ಕೆ ಹದಿನೈದು ರೂಪಾಯಿಗಳ ಕ್ರಯವಂತೆ ಅಂಗೀಕರಿಸಲ್ಪಡುವವೆಂತಲೂ, ಬೆಳ್ಳಿ ಕೊಟ್ಟವರಿಗೆ ರೂಪಾಯಿಗಳು ಛಾಪಿಸಿ ಕೊಡುವ ಪದ್ಧತಿಯು ನಿಲ್ಲಿಸತಕ್ಕದ್ದೆಂತಲೂ ವಿಧಿಸಿ ಇಂಡ್ಯ ಗವರ್ನ್‌ಮೆಂಟಿನವರು ಕಳೆದ ವಾರದಲ್ಲಿ ಒಂದು ಇಷ್ತಿಹಾರನಾಮೆಯನ್ನು ಪ್ರಕಟಿಸಿದರು. ಈ ಪ್ರಕಟನೆ ಹೊರಗಾದದಿನ ಬಾಬಿನ ಬಗ್ಗೆ ಮುಂಚೆ ಟಂಕಶಾಲೆಗಳಿಗೆ ಗಾಡಿಗಳಲ್ಲಿ ಕಳುಹಿಸಲ್ಪಟ್ಟ ಬೆಳ್ಳಿಯು ಸದರೀ ಶಾಲಾಧಿಕಾರಿಗಳಿಂದ ವಾಪಸ್ ಮಾಡಲ್ಪಟ್ಟದ್ದು ಪೂರ್ವಭಾವಿಯಾದ ಯಾವ ಸೂಚನೆಯೂ ಇಲ್ಲದೆ ಅನಿರೀಕ್ಷಿತವಾಗಿ ಪ್ರಜೆಗಳ ವಿಷಯದಲ್ಲಿ ಟಂಕಶಾಲೆಗಳು ಮುಚ್ಚಿ ಬಿಟ್ಟದರಿಂದ, ಛಾಪಾಕಾಕಿಸುವ ಉದ್ದೇಶದಿಂದ ಕೋರೀದಾರರು ಕೆಲವರು ಮುಖ್ಯವಾಗಿ ಹತ್ತು ಲಕ್ಷ ಪೌಂಡಿನವರಿಗೂ ಬೆಳ್ಳಿ ಆಮದ್ ಮಾಡಿರುತ್ತಾರಾಗಿ ಅಂತವರೆಲ್ಲರು ಪ್ರಬಲ ನಷ್ಟಕ್ಕೆ ಗುರಿಯಾಗುವಂತೆ ಟಂಕಶಾಲೆಗಳು ಬಂದುಮಾಡಿದ್ದು ಅನುಚಿತವೆಂದು ಪತ್ರಿಕಾಲೇಖಕರೂ ಕೋರೀದಾರರೂ ಆಕ್ಷೇಪಿಸುತಲಿದ್ದಾರೆ. ಈ ವಿಷಯವು ಈಚೆಗೆ ಹೌಸಾಫ್‌ಕಾಮನ್ಸ್ ಸಭಾಜನರೊಳು ವಿಚಾರಕ್ಕೆ ಬಂದ ಸಂದರ್ಭದಲ್ಲಿ, ಇಂಡ್ಯ ಗವರ್ನ್‌ಮೆಂಟಿಗೆ ಉಚಿತವಾಗಿ ತೋರುವ ಪಕ್ಷದಲ್ಲಿ ಇದುವರೆಗೆ ಇಂಡ್ಯದೇಶಕ್ಕೆ ಆಮದ್ ಮಾಡಲ್ಪಟ್ಟಿರುವ ಬೆಳ್ಳಿಯನ್ನು ತೆಗೆದು ಕೊಂಡು ಛಾಪಾ ಹಾಕಿ ಕೊಡುವದಕ್ಕೆ ಅವರು ಸ್ವತಂತ್ರರಾಗಿರುತ್ತಾರೆಂದು ಮೆ॥ ಗ್ಲ್ಯಾಡ್‌ಸ್ಟನ್ ಸಾಹೇಬರವರು ತಿಳಿಸಿರುವವರಿಂದ ಅದರಂತೆ ಮಾಡಿ, ಏಕಾಏಕ್ ಟಂಕಶಾಲೆಗಳು ಬಂದ್ ಮಾಡಿದ್ದರಿಂದ ಉಂಟಾದ ಕೆಡುಕುಗಳು ಸಾಧ್ಯವಾದ ಮಟ್ಟಿಗೆ ತಪ್ಪಿಸುವದಾವು ಉಚಿತವಾಗಿ ತೋರುವದು. ಪ್ರಸಕ್ತ ಬದಲಾವಣೆಯಿಂದ ಮುಂಬೈ ಶಹರ ಮಾಡುವ ಬ್ಯಾಂಕಿನವರೇ ಪ್ರಬಲ ನಷ್ಟಕ್ಕೆ ಗುರಿಯಾಗಿರುವದರಿಂದ ಅವರೆಲ್ಲರೂ ಸೇರಿ ತಮಗುಂಟಾದ ನಷ್ಟವಂ ನಿವೃತ್ತಿಸುವದಕ್ಕಾಗಿ ಈಗ ಮುಂಬೈಗೆ ಬಂದಿರುವ ಭಾರಿ ಮೊತ್ತದ ಬೆಳ್ಳಿಯನ್ನು ಟಂಕಶಾಲೆಗಳಲ್ಲಿ ಅಂಗೀಕರಿಸಿ ಛಾಪಾ ಹಾಕಿಕೊಡುವಂತೆ ಹುಕುಂ ಆಗಬೇಕೆಂದು ವೈಸ್‌ರಾಯ್ ಯವರಿಗೆ ತಂತಿ ಮೂಲಕ ತಿಳಿಸಿರುತ್ತಾರೆ. ಕೋರೀದಾರರು ತರುವ ಬೆಳ್ಳಿಯಂ ಅಂಗೀಕರಿಸಿ ಅವರಿಗೆ ನಾಣ್ಯಗಳಂ ಛಾಪಾ ಹಾಕಿಕೊಡುವ ವಾಡಿಕೆಯಂ ಗವರ್ನ್‌ಮೆಂಟಿನವರು ಯಾವಾಗ ತಪ್ಪಿಸಿದರೋ ಕೂಡಲೇ ಅದಕ್ಕೆ ಗಿರಾಕಿ ತಪ್ಪಿಹೋಗುವದಾವು ಸಹಜವಾಗಿರುತ್ತದೆ. ಹಾಗೆ ಗಿರಾಕಿ ತಪ್ಪಿ ಹೋದಮೇಲೆ ಬೆಳ್ಳಿ ಗನಿಗಳಲ್ಲಿ ಕೆಲಸ ನಡೆಸುವಂತವರಿಗೆ ಪ್ರೋತ್ಸಾಹವು ತಪ್ಪಿ ತಮ್ಮ ಗನಿಗಳ ಕೆಲಸವು ಬಂದು ಮಾಡುವ ಯೋಚನೆಯಲ್ಲಿರುವಂತೆ ತಿಳಿಯಬರುತಿದೆ. ಬೆಳ್ಳಿಯ ಉತ್ಪತ್ತಿ ದಿನೇ ದಿನೇ ವೃದ್ಧಿಯಾಗಿ ಅದಕ್ಕೆ ಗಿರಾಕಿ ಕಡಮೆಯಾದುದರಿಂದಲೇ ಸವರನ್ ಕ್ರಯ ಹೆಚ್ಚಿದ್ದರಿಂದ ಅದರ ಉತ್ಪತ್ತಿಯಲ್ಲಿ ಕೊರತೆಯುಂಟಾದ ಹಾಗೆಲ್ಲ ಅದರ ಧಾರಣೆ ಹೆಚ್ಚಿ ಸವರನ್ ಕ್ರಯ ಇಳಿದು ಹೋಗುವದೆಂದು ಗವರ್ನ್‌ಮೆಂಟಿನವರು ಅಭಿಪ್ರಾಯಪಟ್ಟಿರುವಂತೆ ತೋರುತಿದೆ. ಲೋಕದಲ್ಲಿ ಯಾವ ಪದಾರ್ಥವು ಅಮಿತವಾಗಿ ಬೆಳೆಯುವುದೋ ಅದಕ್ಕೆ ಗಿರಾಕಿ ತಪ್ಪಿ ಅದರ ಕ್ರಯವೂ ಕೇವಲ ಸುಲಭವಾಗಿ ಹೋಗುವುದು ಸ್ವಾಭಾವಿಕವಾಗಿರುವುದು. ಹಾಗೆ ಅಪರಿಮಿತವಾಗಿ ಉತ್ಪತ್ತಿಯಾಗುವ ವಸ್ತುವಿಗೂ ಮಿತವಾಗಿ ಉತ್ಪತ್ತಿಯಾಗುವ ವಸ್ತುವಿಗೂ ಪರಿವರ್ತನೆಮಾಡಿಕೊಳ್ಳ ಬೇಕಾದ ಸಂದರ್ಭಗಳಲ್ಲಿ ಅಮಿತವಾಗಿ ಬೆಳೆಯುವ ವಸ್ತುವನ್ನು ಒಂದಕ್ಕೆ ಒಂದೂವರೆ ಯಷ್ಟು ಕೊಟ್ಟು ಮಿತವಾಗಿ ಬೆಳೆಯುವ ವಸ್ತುವನ್ನು ಪಡೆಯಬೇಕಾದುದು ಸಹಜ ಧರ್ಮವಾಗಿರುವುದು. ಹದ್ದಿಕ್ ಬೆಳ್ಳಿಯ ಉತ್ಪತ್ತಿಯನ್ನಪೇಕ್ಷಿಸಿ ಭಂಗಾರದ ಉತ್ಪ

ಶ್ರೀಯು ಬಹಳ ಕಡಿಮೆಯಾಗುತಲಿರುವದರಿಂದ ಭಂಗಾರನಾಣ್ಯಕ್ಕೆ ಬೆಳ್ಳಿ ನಾಣ್ಯಗಳು ಅಧಿಕವಾಗಿ ಕೊಟ್ಟೇ ಅದಂ ಪಡೆಯಬೇಕಾಗಿದೆ. ಕೇವಲ ಪಾಮರರಾದ ಭ್ರಾಂತರು ಕೆಲವರು, ಬೆಳ್ಳಿಯಧಾರಣೆ ಅಷ್ಟು ಇಳಿದುಹೋಗಿರುವದಕ್ಕೆ, ಒಂದು ರೂಪಾಯಿ ತೂಕದ ಬೆಳ್ಳಿಯು ಬೆಳ್ಳಿಗೆ ಒಂದು ರೂಪಾಯಿ ಒಂದಾಣೆ ಕೊಡದು ಕೊಳ್ಳುವುದೇಕೆ, ಒಂದುರೂಪಾಯಿಗೆ ಒಂದೂವರೆ ರೂಪಾಯಿ ತೂಕದಷ್ಟು ಬೆಳ್ಳಿಯೇತಕ್ಕೆ ಸಿಕ್ಕಬಾರದೆಂದು ಪ್ರಶ್ನೆ ಮಾಡುತ್ತಾರೆ ರೂಪಾಯಿಯೂ ಬೆಳ್ಳಿಯೇ ಆದುದರಿಂದ ಬೆಳ್ಳಿಗೆ ಯೆಷ್ಟು ನಾಣ್ಯವೊ ರೂಪಾಯಿಗೂ ಅಷ್ಟೇ ನಾಣ್ಯವಿರುವದೆಂದು ಸದರೀ ಭ್ರಾಂತರು ಸುಲಭವಾಗಿ ಅರಿಯಬಹುದು. ಇದುವರಿಗೆ ಸವರ್ನಗಳಧಾರಣೆ ನಿಲಕಡೆಯಿಲ್ಲದೆ ಬಹಳ ಹೆಚ್ಚುಹೋಯಿತೆಂಬ ಗಲ್ಲಬಲ್ಲೆಯೊಂದು ಇಂಡ್ಯದೇಶವಂ ವ್ಯಾಪಿಸಿಕೊಂಡು ಸಾಮಾನ್ಯವಾಗಿ ಯೆಲ್ಲರಿಗೂ ಒಂದು ಚಿಂತೆಯನ್ನುಂಟುಮಾಡುತಲಿತ್ತು. ಈಚೆಗೆ ಗವರ್ನಮೆಂಟಿನವರು ಅದಕ್ಕೆ ಹದ್ದನ್ನೇರ್ಪಡಿಸಿ, ಬೆಳ್ಳಿಯ ಧಾರಣೆ ಹೆಚ್ಚುವದಕ್ಕೆ ಒಂದು ಉಪಾಯವಂ ಕಲ್ಪಿಸಿದ್ದರಿಂದ ಬೇರೆಯೊಂದು ವಿಧ ಆಕ್ಷೇಪಣೆಗೆ ಅವಕಾಶ ಪ್ರುಂಟಾಯಿತು. ಪ್ರಸಕ್ತ ಏರ್ಪಾಡಿನ ದೆಸೆಯಿಂದ ಸವರ್ನಕ್ರಯ ಹದಿನೈದು ರೂಪಾಯಿಗಳಿಗೆ ಹೆಚ್ಚದಂತಾಯಿತೆ ಹೊರತು ಇದರಿಂದ ಅಧಿಕ ಪ್ರಯೋಜನ ಯಾವದೂ ಕಾಣಿಸಲಿಲ್ಲವು.

## ದಿವಾನರವರಿಗೆ ಪ್ರಶಸ್ತಿಯಂ ಕೊಡುವದಕ್ಕಾಗಿ ನಡೆಸಲ್ಪಟ್ಟ ದರ್ಬಾರ್.

ಈ ಸಂಸ್ಥಾನದ ದಿವಾನರಾದ ಸರಿ. ಕೆ. ಶೇಷಾದ್ರಿ ಅಯ್ಯರವರಿಗೆ ಈಚೆಗೆ ಮಹಾರಾಜ್ಞೀ ಸರ್ಕಾರದವರಿಂದ ಕೊಡಲ್ಪಟ್ಟ ಕೆ. ಸಿ. ಎಸ್. ಐ ಎಂಬ ಘನತರ ಪ್ರಶಸ್ತಿಯಂ ಅವರಿಗೆ ಒಪ್ಪಿಸುವದಕ್ಕಾಗಿ ಕಳೆದ ತಿಂಗಳ ೨೮ನೇ ತಾರೀಖ್ ಬುಧವಾರದದಿನ ಮಧ್ಯಾನ್ಹ ಶ್ರೀಮನ್ಮಹಾರಾಜರವರ ಅಪೇಕ್ಷಾನುಸಾರ ಅರಮನೆಯೊಳು ಒಂದು ದರ್ಬಾರ್ ಮಾಡಲ್ಪಟ್ಟು ಅದರಲ್ಲಿ ಶ್ರೀಮನ್ಮಹಾರಾಜರವರು ಅಗ್ರಾಸನವಂ ವಹಿಸಿದ್ದರು. ಈ ಪ್ರಬಲ ಸಂದರ್ಭಕ್ಕೆ ಆಹೂತರಾಗಿ ಇಲ್ಲಿನ ಬ್ರಿಟಿಷ್ ರೆಸಿಡೆಂಟರು ಮೊದಲಾದ ಬಹುಮಂದಿ ಯೂರೋಪಿಯನ್ ಆಫಸರ್‌ಗಳೂ ನೇಟಿವ್ ಅಧಿಕಾರಿಗಳೂ ಬಂದಿದ್ದರು. ಆನರಬಲ್ ಬ್ರಿಟಿಷ್ ರೆಸಿಡೆಂಟರವರು ಯೆದ್ದು ನಿಂತುಕೊಂಡು ಸರ್. ಕೆ. ಶೇಷಾದ್ರಿ ಅಯ್ಯರವರು ಈ ಸಂಸ್ಥಾನದ ನೌಕರಿಯಲ್ಲಿ ಪ್ರವೇಶಿಸಿದ್ದು ಮೊದಲು ಅವರು ವಹಿಸಿದ್ದ ಆಯಾ ಅಧಿಕಾರಗಳಲ್ಲಿ ಮಾಡಿದ ಮೆಚ್ಚಿಕೆಯನ್ನೂ, ದಿವಾನಗಿರಿಯಂ ಹೊಂದಿದ್ದು ಮೊದಲು ಅವರು ಮಾಡಿದ ಬಹುವಿಧ ಏರ್ಪಾಡುಗಳನ್ನೂ ಅವುಗಳಿಂದ ದೇಶಕ್ಕೂ ಪ್ರಜೆಗಳಿಗೂ ಉಂಟಾದ ಬಹುವಿಧ ಪ್ರಯೋಜನಗಳನ್ನೂ ಪ್ರಶಂಸಿಸಿ, ವೈಸರಾಯ್ ಸಾಹೇಬರವರ ಆಜ್ಞಾನುಸಾರ ಸದರೀ ಲಾಂಛನವನ್ನು ದಿವಾನರವರ ವಕ್ಷಸ್ಥಳದಲ್ಲಿ ಅಲಂಕರಿಸಿದರು. ಅದಾದಮೇಲೆ ದಿವಾನರವರು ಯೆದ್ದು ನಿಂತುಕೊಂಡು ತಿಳಿಸಿದ ಅಭಿಪ್ರಾಯವೇನೆಂದರೆ :—

ಶ್ರೀಮನ್ಮಹಾರಾಜರವರೆ, ಮತ್ತು ಕರ್ನಲ್ ಹೆಂಡರ್ಸನ್ ಸಾಹೇಬರವರೆ,—

ಮಹಾರಾಜ್ಞೀ ಚಕ್ರವರ್ತಿನೀಯವರು ದಯಾಪೂರ್ವಕವಾಗಿ ನನಗೆ ಉಂಟುಮಾಡಿದ ಪ್ರಬಲ ಗೌರವದಬಗ್ಗೆ ಅವರಿಗೆ ಆಂತರವಾದ ನನ್ನ ಕೃತಜ್ಞತೆಯಂ ವ್ಯಕ್ತಪಡಿಸಲು ಈ ದರ್ಬಾರಿನಲ್ಲಿ ಅವಕಾಶವಂ ಬೇಡುತ್ತೇನೆ. ಮಹಾರಾಜ್ಞೀಯವರಿಂದ ಕೃಪಾಪೂರ್ವಕ ನನಗೆ ಉಂಟುಮಾಡಲ್ಪಟ್ಟ ಯಾವ ಗೌರವವೇ ಆಗಲಿ, ಅದು ಮಹಾರಾಜರ ಕೃಪೆಗೆ ಒಂದು ನಿದರ್ಶನದೋಪಾದಿಯಲ್ಲಿ ಯಾವಾಗಲು ನನಗೆ ಒಂದು ಪ್ರತಿಷ್ಠಾರೂಪವಾಗಿಯೂ ಸಂತೋಷನಿಮಿತ್ತಕವಾಗಿಯೂ ಇರುವುದು, ಪರಂತು ಪ್ರಸಕ್ತ ಪ್ರಬಲ ಗೌರವವು ನಾನು ದಿವಾನ್ ಪದವಿಯಲ್ಲಿರುವ ಈ ಸಂದರ್ಭದೊಳು ಉಂಟುಮಾಡಲ್ಪಟ್ಟದರಿಂದ ಅದರ ಘನತೆಯು ನನ್ನದೃಷ್ಟಿಯಲ್ಲಿ ಸಹಸ್ರಾಂಶ ವೃದ್ಧಿ ಹೊಂದಿರುತಿದೆ, ಏಕೆಂದರೆ, ಯಥಾಪೂರ್ವಕ ದಿವಾನರಾಗಿ ಅನೇಕ ಸಂವತ್ಸರಗಳ ಕಾಲ ನಾನು ನಡೆಸಿದ ಆಡಳಿತದಲ್ಲಿ ಸರಿಸ್ಕರಿಸಿದ ಶ್ರೀಮನ್ಮಹಾರಾಜರವರು ಗುಣಗ್ರಹಣ ಮಾಡಿದರೆಂಬದಕ್ಕೂ ಘನವಂ ಪಡೆದ ವೈಸ್‌ರಾಯ್ ಸಾಹೇಬರವರು ಅದನ್ನು ಒಪ್ಪಿದರೆಂಬದಕ್ಕೂ ಇದು ಫಲವೆಂದರಿಯಬಹುದಾಗಿದೆ. "ಶ್ರೀಮನ್ಮಹಾರಾಜರವರ ರಾಜ್ಯಭಾರವನ್ನು ಬ್ರಿಟಿಷ್ ಗವರ್ನಮೆಂಟಿನವರು ಸಕಾರಣವಾಗಿ ಒಪ್ಪಿದರೆಂಬದಕ್ಕೆ ಒಂದು ಪ್ರಬಲ ಚಿನ್ಹೆ ಯೀಪಾಡಿಯಲ್ಲಿದೆ" ಎಂಬದಾಗಿ ಕರ್ನಲ್ ಹೆಂಡರ್ಸನ್ ಸಾಹೇಬರವರು ತಿಳಿಸಿದಂತೆ, ನನ್ನ ವೃತ್ತಿಯವಿಷಯದಲ್ಲಿ ನನಗೆ ಉಂಟಾದ ಕೃತಜ್ಞತೆಯನ್ನು ಉಚಿತರೀತಿಯಲ್ಲಿ ವ್ಯಕ್ತಗೊಳಿಸಲು ನಾನು ಶಬ್ದದಾರಿದ್ರ್ಯವುಳ್ಳವನಾಗಿರುತ್ತೇನೆ. ಹತ್ತು ಸಂವತ್ಸರಗಳ ಹಿಂದೆ ಶ್ರೀಮನ್ಮಹಾರಾಜರವರು ನನ್ನಂ ದಿವಾನರಾಗಿ ಮೊಕರರ್ ಮಾಡಿದ ಕಾಲದೊಳು ನನ್ನಶಕ್ತಿಯ ವಿಷಯದಲ್ಲಿ ಪ್ರಬಲ ಸಂಶಯದೊಡನೆ ಕೇವಲ ಕಷ್ಟವಾದ ಸದರೀ ಕಾರ್ಯದೊಳು ನಾನು ಪ್ರವೇಶಿಸಿದೆನು, ಪರಂತು ಸಂಸ್ಥಾನದ ಕಾರ್ಬಾರೀ ಅಧಿಕಾರವಂ ನಡೆಸುವದರಲ್ಲಿ ಶ್ರೀಮನ್ಮಹಾರಾಜರವರು ಪ್ರೀತಿಪುರಸ್ಸರವಾಗಿ ನನಗೆ ಉಂಟುಮಾಡಿದ ಪ್ರೋತ್ಸಾಹವು ಯಾವಾಗಲು ನನ್ನ ಶ್ರಮವಂ ಕಡಿಮೆಮಾಡಿದಬಗ್ಗೆ ನಾನು ಕೃತಜ್ಞನಾಗಿರುತ್ತೇನೆ, ಮತ್ತು ಅಂತಾ ನನ್ನ ಶ್ರಮದಿಂದ ಒಳ್ಳೆಯ ಫಲವೇನಾದರುಂಟಾಗಿರುವ ಪಕ್ಷಕ್ಕೆ ಅದು, ಯಾವ ಮಹಾರಾಜರವರ ರಾಜ್ಯತಂತ್ರವು ವಿವೇಕ ಮತ್ತು ಉಪಕಾರ ಬುದ್ಧಿಯಬಗ್ಗೆ ಪ್ರಸಿದ್ಧಿಯಂ ಹೊಂದಿ ರುತಿದೆಯೊ ಅಂತಾ ಮಹಾರಾಜರವರು ಮಾಡಿದ ದೃಢತರವಾದ ಸಹಾಯ ಮತ್ತು ಹುಕುಂಗಳ ದೆಸೆಯಿಂದ ಉಂಟಾದದ್ದೆಂದು ಅತಿಶಯೋಕ್ತಿ ಇಲ್ಲದೆ ನಾನು ಹೇಳಬಹುದಾಗಿದೆ. ಆದುದರಿಂದ, ಈಗ ನನಗೆ ಕೊಡಲ್ಪಟ್ಟ ಪ್ರಶಸ್ತಿಯನ್ನು ಶ್ರೀಮನ್ಮಹಾರಾಜರವರ ಸಮಕ್ಷಮದಲ್ಲಿ ಪಡೆದುಕೊಳ್ಳುವುದು ನನಗೆ ಕೇವಲ ತೃಪ್ತಿಕರವಾಗಿರುವುದೆಂದು ಯೋಚಿಸಬಹುದಾಗಿದೆ. ಈ ಸಂದರ್ಭದೊಳು, ಮೃತಪಟ್ಟ ಸರ್. ಜೇಂಸ್ ಗಾರ್ಡನ್ ಸಾಹೇಬರು ಮೊದಲು, ಈಗಮೈಸೂರು ದೇಶದಲ್ಲಿ ಬ್ರಿಟಿಷರವರ ಪ್ರತಿನಿಧಿಯಾಗಿ ದೊಡ್ಡ ಪದವಿಯಲ್ಲಿರುವ ಕರ್ನಲ್ ಹೆಂಡರ್ಸನ್ ಸಾಹೇಬರವರಿಗೆ ಆಯಾ ಬ್ರಿಟಿಷ್‌ರೆಸಿಡೆಂಟರುಗಳ ಅನುರಾಗ ಮತ್ತು ಗುಣಗ್ರಹಣಕ್ಕಾಗಿ ಎಷ್ಟರಮಟ್ಟಿಗೆ ನಾನು ಬಾಧ್ಯವಟ್ಟಿರುತ್ತೇನೆಯೋ ಅದಂ ಈ ಸಂದರ್ಭದಲ್ಲಿ ತಿಳಿಸಲು ಮರೆಯಲಾರೆನು. ನನ್ನವಿಷಯದಲ್ಲಿ ಪ್ರಸಕ್ತ ರೆಸಿಡೆಂಟರವರ ಮಿತ್ರಭಾವವೂ ಪ್ರೀತಿಪೂರ್ವಕವಾದ ಗೌರವವೂ ನನ್ನ ದೃಷ್ಟಿಯಲ್ಲಿ ಈದಿನದ ಉತ್ಸವಕ್ಕೆ ಅಧಿಕ ಘನತೆಯನ್ನುಂಟುಮಾಡುತಿವೆ, ಮತ್ತು ನೈಟ್ ಹೂಡ್ ಎಂಬ ಘನತರ ಪ್ರಶಸ್ತಿಯನ್ನು ಅವರ ಹಸ್ತಗಳಿಂದ ಪಡೆದುಕೊಳ್ಳುವುದು ನನಗೆ ಆಂತರವಾದ ತೃಪ್ತಿಯನ್ನುಂಟುಮಾಡುತಿದೆ. ಕರ್ನಲ್ ಹೆಂಡರ್ಸನ್ ಸಾಹೇಬರವರೆ! ಇದು ಪೂರ್ತಿಮಾಡುವದಕ್ಕೆ ಪೂರ್ವ ನನಗೆ ಕೊಡಲ್ಪಟ್ಟ ಘನತರವಾದ ಪ್ರಶಸ್ತಿಯಂ ರಾಜಭಕ್ತಿ ಕೃತಜ್ಞತಾದಿ ಭಾವಗಳೊಡನೆ ನಾನು ಪಡೆಕೊಂಡದ್ದಾಗಿ ಮಹಾರಾಜ್ಞೀ ಚಕ್ರವರ್ತಿನೀಯವರಿಗೂ, ಯಾರು ನನ್ನ ವಿಷಯದಲ್ಲಿ ಒಳ್ಳೆಯ ಅಭಿಪ್ರಾಯವಂ ಪಡೆದು ತಮಗೆನಾನು ಯಾವಾಗಲು ಕೃತಜ್ಞನಾಗಿರುವಂತೆ ಮಾಡಿರುತ್ತಾರೆಯೋ, ಮತ್ತು ಶ್ರೀಮನ್ಮಹಾರಾಜರವರ ರಾಜ್ಯಭಾರದ ವಿಷಯದಲ್ಲಿ ಯಾರಅಭಿಪ್ರಾಯವು ಮೈಸೂರುರಾಜ್ಯದ ಅಭಿವೃದ್ಧಿಗೆ ಉತ್ತೇಜಕವಾಗಿರುತಿದೆಯೊ ಅಂತಾ ಲಾರ್ಡ್ ಲ್ಯಾನ್ಸ್‌ಡೌನ್ ಸಾಹೇಬರವರಿಗೂ ತಿಳಿಸಬೇಕೆಂದು ನಾನು ತಮ್ಮನ್ನು ಪ್ರಾರ್ಥಿಸುತ್ತೇನೆ, ಎಂಬದು.

ತರುವಾಯ ಸಭಾಸದರಿಗೆ ಗಂಧ ಪುಷ್ಪ ತಾಂಬೂಲಗಳು ಕೊಡಲ್ಪಟ್ಟಮೇಲೆ ಸಭೆ ಬರಖಾಸ್ತಾಯಿತು.

## Occasional Notes.
### ನೈಮಿತ್ತಿಕ ವಿಷಯನ್ಯಾಸ.

ಸತಾರೆಯಲ್ಲಿ ಪ್ರಸಿದ್ಧ ಪಂಡಿತರೆನಿಸಿರ್ದ ಶೇಂಪ್ರಗಡದ ಬ್ರಹ್ಮಶ್ರೀ ಅನಂತಾಚಾರ್ಯರೆಂಬವರು ಆಚೇ ಸೋಮವಾರದದಿನ ಪರಂಧಾಮವನ್ನೈದಿದರೆಂದು ಕೇಳಿ ಬಹಳ ವಿಷಾದಿಸುತ್ತೇವೆ.

ಈಚೆಗೆ ಸ್ವಲ್ಪದಿನಗಳಹಿಂದೆ ರಾಜಮಹೇಂದ್ರದಲ್ಲಿ ಮಿ॥ ವೀರೇಶಲಿಂಗಂ ಎಂಬವರ ಮನೆಯೊಳು ಮರಳಿ ಯೊಂದು ವಿಧವಾ ವಿವಾಹವು ನಡೆಯಿತು. ಸೀತಮ್ಮಾಳೆಂಬ ೧೮ ವರ್ಷಗಳ ವಯಸ್ಸುಳ್ಳ ವಿತಂತುವನ್ನು, ಆದಿಪೂಡಿ ಸೋಮನಾಥರಾವ್ ಎಂಬ ೧೮ ವರ್ಷಗಳವಯಸ್ಸುಳ್ಳ ಒಬ್ಬತನು ಪಾಣಿಗ್ರಹಣವಮಾಡಿದನು.

ಬುದ್ಧಗಯೆಯಲ್ಲಿರುವ ದೇವಸ್ಥಾನದ ಮಹಂತರವರು, ಸದರೀ ಆಲಯದ ಸಂರಕ್ಷಣೆಯ ವಿಷಯದಲ್ಲಿ ಸಾಮಾನ್ಯವಾಗಿ ಹಿಂದುಗಳೆಲ್ಲರು ತೋರ್ಪಡಿಸಿದ ಔದಾಸೀನ್ಯತೆಯಿಂದ ಭಗ್ನಮನಸ್ಕರಾಗಿ ಸದರೀ ಆಲಯದಲ್ಲಿ ತಮಗಿರುವ ಬಾಧ್ಯತೆಯನ್ನು ಮಹಾಬೋಧಿ ಸಂಘದವರಿಗೆ ಒಂದು ಲಕ್ಷ ರೂಪಾಯಿಗಳಿಗೆ ಕಡಮೆ ಯಿಲ್ಲದ ಒಂದು ಮೊತ್ತಕ್ಕೆ ಮಾರಿಬಿಡಬೇಕೆಂದು ನಿಶ್ಚಯಿಸಿರುವಂತೆ ವೃತ್ತಾಂತ ಪತ್ರಿಕೆಗಳಲ್ಲಿ ಪ್ರಕಟಿಸಲ್ಪಟ್ಟಿರುತಿದೆ.

ಈಚಗ ರಷ್ಯಾದೇಶದಿಂದ ಒಬ್ಬ ಡಾಕ್ಟರು ಇಂಡಿಯಾದೇಶಕ್ಕೆ ಬಂದಿರುತ್ತಾರೆ. ಸದರೀಯವರು ದೇಹಕ್ಕೆ ಗುರುತು ಹಾಕುವದರ ಮೂಲಕ ಮನುಷ್ಯರಿಗೆ ವಾಂತಿಭೇದಿರೋಗ ತಗಲದೆ ಇರುವಂತೆಮಾಡುತ್ತಾರಾಗಿ ಅನೇಕರು ಅವರಿಂದ ಗುರುತ್ತುಹಾಕಿಸಿ ಕೊಳ್ಳುತಲಿದಾರೆ. ಈ ಭಿಷಗ್ವರರು ಇದುವರೆಗೆ ಅನೇಕಸಹಸ್ರ ಜನರಿಗೆ ಮೇಲಿನಂತೆ ಗುರುತ್ತು ಹಾಕಿ ಅಂತವರಲ್ಲಿ ಯಾರಿಗೂ ಇದುವರೆಗೆ ಸದರೀ ರೋಗ ತಗಲಿಲ್ಲವೆಂದು ತಿಳಿಯಬರುತಿದೆ.

ಈಚೆಗೆ ಕೆಲವು ದಿನಗಳ ಮೊದಲು ಕಾಬೂಲ್ ಅಮೀರರವರ ಸೇನೆಗೂ ಅವರ ವಿರೋಧಿಗಳಿಗೂ ಯುದ್ಧನಡೆಯುತಲಿದೆಯಷ್ಟೆ. ಸದರೀ ಯುದ್ಧದಲ್ಲಿ ಇದುವರೆಗೆ ಮಾಡುತಬಂದಂತೆ ಶತ್ರುಗಳ ತಲೆಗಳಂ ಕಳುಹಿಸಿ ಕೊಡುವದಕ್ಕೆ ಬದಲು ಮುಂದೆ ಅವರ ಮೂಗುಗಳನ್ನೂ ಕಿವಿಗಳನ್ನೂ ಕಳುಹಿಸಿ ಕೊಡಬೇಕೆಂದು ತಮ್ಮ ಸೇನಾನಾಯಕರುಗಳಿಗೆ ಹುಕುಂ ಕಳುಹಿಸಿರುವದಾಗಿ ಒಂದಾನೊಂದು ಪತ್ರಿಕೆಯ ಬಾತಮಿದಾರನು ತಿಳಿಸಿರುತ್ತಾನೆ.

ಮೈಮನ್‌ಸಿಂಗ್ ಅರಸರವರು ಅಲ್ಲಿನಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿದ್ದ ಮಿ. ಫಿಲಿಫ್ಸ್ ಯೆಂಬವರಮೇಲೆ ಮಾನನಷ್ಟದಾವೆ ತಂದಿರುತ್ತಾರೆಯಷ್ಟೆ. ಅದರಲ್ಲಿ ತಮ್ಮಮೇಲೆ ದ್ವೇಷದಿಂದ ಕ್ರಿಮಿನಲ್ ಚಾರ್ಜ್ ಮಾಡಿ ತಮ್ಮನ್ನು ಕೋರ್ಟಿಗೆ ಸೆಳೆದ ಬಗ್ಗೆ ೫೦,೦೦೦ ರೂಪಾಯಿಗಳನಷ್ಟವನ್ನೂ, ತಮ್ಮ ಅರಮನೆಯ ಕಂಪೌಂಡ್ ಗೋಡೆಗಳನ್ನು ಒಡೆದುಹಾಕಿ ಅದರಲ್ಲಿ ಚರಂಡಿ ತೆಗೆಯಿಸಿದಬಗ್ಗೆ ೧೦,೦೦೦ ರೂಪಾಯಿಗಳನಷ್ಟವನ್ನು ಪ್ರತಿವಾದಿಯಿಂದ ಕೊಡಿಸಬೇಕೆಂದು ದಾವೇ ಅರ್ಜಿಯಲ್ಲಿ ಕೇಳಿಕೊಂಡಿರುತ್ತಾರೆ

ಪೋಸ್ಟೇಜ್ ಲೇಬಲ್‌ಗಳೆಂಬ ತಪಾಲ್ ಚೀಟಿಗಳಂ ಮುದ್ರಿಸುವದಕ್ಕೆ ರಬ್ಬರ್ ಸ್ಟಾಂಪುಗಳಂ ಉಪಯೋಗಿಸುವ ಪಾಡಿಕೆಯಂ ತಪ್ಪಿಸುವ ವಿಷಯದಲ್ಲಿ ಮುಂಬೈ, ಮದರಾಸ್. ಕಲ್ಕತ್ತಾ, ರಂಗೂನ್ ಮತ್ತು ಕರಾಚಿಯಲ್ಲಿರುವ ವ್ಯಾಪಾರ ಸಂಘದವರು ಅಭಿಪ್ರಾಯ ಕೊಟ್ಟಿರುತ್ತಾರೆ, ಲೇಬಲ್‌ಗಳ ಮುದ್ರಿಸುವ ವಿಷಯದಲ್ಲಿ ಪರ್ಫೊರೇಟರೆಂಬ ಕಾಗದಗಳಮೇಲೆ ರಂಧ್ರಹಾಕುವ ಆಯುಧವನ್ನು ಉಪಯೋಗಿಸಬಹುದೆಂದು ಕೆಲವರೂ, ಬೇರೆ ಗುರುತು ಮಾಡಿದರೆ ಸಾಕೆಂದು ಕೆಲವರೂ ಅಭಿಪ್ರಾಯಗಳು ಕೊಟ್ಟಿರುತ್ತಾರೆ.

ಈಚೆಗೆ ಬಂಗಾಳೇ ದೇಶದ ಪರಮಹಂಸ ಸಚ್ಚಿದಾನಂದಸ್ವಾಮಿ ಎಂಬ ಶಿಷ್ಯರೊಬ್ಬರು ಮುಂಬೈ ಪಟ್ಟಣದಲ್ಲಿ ಹಡಗು ಹತ್ತಿ ಯೂರೋಪ್ ಖಂಡಕ್ಕೆ ಪ್ರಯಾಣಮಾಡಿರುವರೆಂತಲೂ, ಅವರು ಅಲ್ಲಿಂದ ಅಮೆರಿಕಾ ದೇಶಕ್ಕೆ ಹೋಗುತ್ತಾರೆಂತಲೂ ತಿಳಿಯಬರುತಿದೆ. ಇವರು ಇಂಗ್ಲಿಷ್ ಮತ್ತು ಸಂಸ್ಕೃತದಲ್ಲಿ ಒಳ್ಳೆಯ ಪಂಡಿತರು. ಆಮುಷ್ಮಿಕಫಲಾಪೇಕ್ಷೆಯಿಂದ ಆಶ್ರಮವಂ ಸ್ವೀಕರಿಸಿದ ಸನ್ಯಾಸಿಯು ಕೇವಲ ಪಾಮರರೊಡನೆ ದಿಯಲ್ಲಿ ಜಪಜಾಪತ್ಯಕ್ಲೇಶದೇಶ ಸಂಚಾರ ಮಾಡುವದಕ್ಕೆ ಪ್ರವರ್ತಿಸಿದ ಮೇಲೆ ಐಹಿಕ ಫಲಾಪೇಕ್ಷೆಗಳಾದವರು ಶಪ್ಪ್ ಮಾಡುವದರಲ್ಲಿ ಆಕ್ಷೇಪಣೆ ಯೇನಿದೆ?

ಮಹಾರಾಜ್ಞೀ ಇಂಡ್ಯ ಚಕ್ರವರ್ತಿನೀಯವರ ಜ್ಯೇಷ್ಠಪುತ್ರರಾದ ಪ್ರಿನ್ಸ್ ಆಫ್ ವೇಲ್ಸ್ ಯವರ ದ್ವಿತೀಯ ಪುತ್ರರಾದ ಡ್ಯೂಕ್ ಆಫ್ ಯಾರ್ಕ್ ಯೆಂಬವರು ಪ್ರಿನ್ಸೆಸ್ ಮೇರಿ ಆಫ್ ಟೆಕ್ ಎಂಬ ರಾಜಕುಮಾರಿಯವರು ಪಾಣಿಗ್ರಹಣ ಮಾಡುವದಾಗಿ ನಿಶ್ಚಯಿಸಿ, ಈ ತಿಂಗಳ ೬ ನೇ ತಾರೀಖಿನಲ್ಲಿ ವಿವಾಹ ಮಹೋತ್ಸವವು ಜರುಗುವದರಿಂದ, ರಾಜ್ಞೀಯವರ ಪ್ರಜೆಗಳಾದ ಇಂಡ್ಯ ದೇಶೀಯರೆಲ್ಲರು ಈ ಶುಭಸಂದರ್ಭದೊಳು ಅಕೆಯವರಲ್ಲಿ ತಮಗಿರುವ ರಾಜಭಕ್ತಿ ಕೃತಜ್ಞತಾದಿ ಭಾವಗಳಂ ವ್ಯಕ್ತಪಡಿಸುವದು ಉಚಿತವೆಂದು ಯೋಚಿಸಿ, ದೊಡ್ಡ ದೊಡ್ಡ ಪಟ್ಟಣಗಳೊಳು ಸಭೆಸೇರಿ ಅದರ ಮೂಲಕ ದ್ರವ್ಯ ಕೇಳಬರದಾಗಿ ವಿವಾಹದ ದಿನ ವಧೂವರರಿಗೆ ತಲುಪುವಂತೆ ಅವರ ಗೌರವಾನುಗುಣವಾದ ಸಜರ್ಗಳಂ ಕಳುಹಿಸಿರುವರು. ಈ ಡ್ಯೂಕ್ ಆಫ್ ಯಾರ್ಕ್ ಯವರು ಕಾಲಕ್ರಮೇಣ ಇಂಡ್ಯಾರಾಜ್ಯದ ಚಕ್ರವರ್ತಿಯಾಗತಕ್ಕವರಾಗಿರುವದರಿಂದ ಅವರವಿಷಯದಲ್ಲಿ ಇಂಡ್ಯಾ ದೇಶೀಯರು ತಮ್ಮ ರಾಜಭಕ್ತಿಯಂ ತೋರಿಸುವದು ಅವರ ಕರ್ತವ್ಯವಾಗಿರುತಿದೆ. ಸದರೀ ದಂಪತಿಗಳಿಬ್ಬರಿಗೂ ಆಯುರಾರೋಗ್ಯೈಶ್ವರ್ಯಾಭಿವೃದ್ಧಿಯಂ ದೇವರು ಅನುಗ್ರಹಿಸಬೇಕೆಂದು ಪ್ರಾರ್ಥಿಸುವೆವು

ಕಡಪಾ ಡಿಸ್ಟ್ರಿಕ್ಟ್ ಮದನಪಲ್ಲಿಬಂದಸ್ತಾರದ ಮಿ॥ ವಕೀಲ್ ನಾಯನಶಾಸ್ತ್ರಿ ಯೆಂಬವರು, ಬ್ರಾಹ್ಮ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ಜಾತಿಭೇದವು ಕಲ್ಪಿತವೆಂತಲೂ, ಅದಕ್ಕೆ ಶಾಸ್ತ್ರಾಧಾರವಿಲ್ಲವೆಂತಲೂ ಮುವ್ವಾರ್ ಒಂದೆರಡು ವರ್ಷಗಳ ಕಾಲದ ಮೊದಲು ವೃತ್ತಾಂತ ಪತ್ರಿಕೆಗಳ ಮೂಲಕ ವಾದಿಸುತ ಬಂದು ಕಡೆಗೆ ಶೂದ್ರರ ಶ್ಯಾನ್ನ ಭೋಜನವಂ ಸಹ ಮಾಡಿದರೆಂಬ ವಿಷಯ ವೃತ್ತಾಂತ ಪತ್ರಿಕೆಗಳ ಮೂಲಕ ಪ್ರಕಟಿತವಾಗಿರುತಿದೆ ಯಷ್ಟೆ. ಈಚೆಗೆ ಸ್ವಲ್ಪ ದಿನಗಳ ಹಿಂದೆ ಸದರೀ ಶಾಸ್ತ್ರಿಯವರು ಪ್ರಾಯಶ್ಚಿತ್ತಪೂರ್ವಕ ಮರಳಿ ಸ್ವಮತವಂ ಸೇರಿದರೆಂದು ಮದರಾಸ್ ಸ್ಟ್ಯಾಂಡರ್ಡ್ ಪತ್ರಿಕೆಗೆ ಒಬ್ಬ ಬಾತಮಿದಾರನು ಬರೆದಿರುತ್ತಾನೆ. ಲೋಕದಲ್ಲಿ ಯಾರಾಗಲಿ ಅಜ್ಞಾನದಿಂದ ಮಾಡುವ ಕೆಲವು ಪಾಪಕರ್ಮಗಳಿಗೆ ಶಾಸ್ತ್ರಗಳಲ್ಲಿ ಪ್ರಾಯಶ್ಚಿತ್ತಗಳು ವಿಧಿಸಲ್ಪಟ್ಟಿರುತಿವೆಯೇ ಹೊರತು ಉತ್ತಮವರ್ಣದೂಷಣ ತಿರಸ್ಕಾರ ಪೂರ್ವಕವಾಗಿ ಬುದ್ಧಿಪೂರ್ವಕ ಮಾಡಲ್ಪಡುವ ದುಷ್ಕೃತ್ಯಗಳಿಗೆ ಯಾವಶಾಸ್ತ್ರದಲ್ಲಾಗಲಿ ಪ್ರಾಯಶ್ಚಿತ್ತ ವಿಧಿಸಲ್ಪಟ್ಟಿರುವಂತೆ ಕಾಣಿಸಲಿಲ್ಲವು. ಆದುದರಿಂದ ಸದರೀ ಶಾಸ್ತ್ರಿಗಳವರಂ ಮರಳಿ ಬ್ರಾಹ್ಮಣಗೋಷ್ಠಿಗೆ ಸೇರಿಸಿಕೊಳ್ಳುವದರ ಔಚಿತ್ಯವಂ ಅಭಿಜ್ಞರಾದವರು ಯೋಚಿಸದೆ ಹೋಗಲಾರರೆಂದು ನಂಬುತ್ತೇವೆ.

ಈಚೆಗೆ ಯೆರಡು ವಾರಗಳ ಹಿಂದೆ ರಂಗೂನ್ನಲ್ಲಿ ಹಿಂದೂಗಳಿಗೂ ಮುಸಲ್ಮಾನರಿಗೂ ಒಂದು ಪ್ರಬಲ ಕಲಹ ಪ್ರಾಪ್ತವಾಗಿ ಅದರಲ್ಲಿ ಅನೇಕರು ಪ್ರಾಣಗಳಂ ಕಳೆಕೊಂಡಿರುತ್ತಾರೆ. ಹ್ಯಾಗೆಂದರೆ :—ಈಚೆಗೆ ಪ್ರಾಪ್ತವಾದ ಒಂದು ಹಬ್ಬದದಿನ ಮುಸಲ್ಮಾನರು ಅಲ್ಲಿರುವ ಒಂದು ಹಿಂದೂ ದೇವಾಲಯಕ್ಕೆ ಯೆದುರಿಗಿರುವ ಒಂದ

...ಯಲ್ಲಿ ಗೋವಧೆ ಮಾಡುವದಕ್ಕೆ ಪ್ರಯತ್ನ ಪಟ್ಟು ಅದಕ್ಕೆ ಅಲ್ಲಿನ ಮ್ಯಾಜಿಸ್ಟ್ರೇಟರು ಅವ ಕಾಶಕೊಡದೆ ಅದುನಿರೋಧಿಸಿ ಅವರಿಗೆ ಯೆಚ್ಚ ರಿಕೆಕೊಡದೇಳವಾಗ್ಯೇಳದೆ ಪೋಲೀಸಿನವರ ಮೇಲೆ ಜುಲುಂ ನಡಸಿದ್ದಲ್ಲದೆ ಮಸೀದಿ ಯೊಂದ ಲೂ ಆಸ ಪಾಸ ಮನೆಗಳಿಂದಲೂ ಅವರು ಗೋ ಲಿಯಿಂದ ಹೊಡೆದರು. ಅದರಮೇಲೆ ಅಲ್ಲಿರುವ ಗೆ ...ರ್ ಯೆಂಬ ಅಧಿಕಾರಿಯು ಸದರೀ ಕಲಹಿಗ ಳನ್ನು ಗೋಲಿಯಿಂದಹೊಡೆಯುವಂತೆ ಪೋಲೀ ಸಿನವರಿಗೆ ಹುಕುಂ ಕೊಟ್ಟು ಅವರು ಆರೀತಿ ಮಾಡಿದ್ದರಲ್ಲಿ ಇಪ್ಪತ್ತು ಮಂದಿ ಗೋಲಿಗಳು ತ ಗಲಿ ಸತ್ತುಹೋದರು. ಮರಳಿಪೋಲೀಸಿನವರು ಅವರುಗಳಮೇಲೆ ಬಿದ್ದು ಹೊಡೆಯಲು ಕೂಡಲೆ ಸದರೀ ಜನರು ಚದರಿಹೋದರು ತರುವಾಯ ಹಾರ್ಕೋರ್ಟಿನಮುಂದೆ ಬೈಕಿ ೨೦೦ ಮಂದಿ ಕರೆಯ ಲ್ಪಟ್ಟು ಅವರು ಬೀದಿಗಳಲ್ಲಿ ಬಂದೋಬಸ್ತು ಮಾಡಿದರು. ಅವರ ಸಹಾಯಕ್ಕಾಗಿ ಪಾಲ್ಟನ್ ಸೇನೆ ಸಹ ಕರೆಯಿಸಲ್ಪಟ್ಟವು ಹಿಂದೂಗಳ ಗೂ ಮುಸಲ್ಮಾನರಿಗೂ ವೈಮನಸ್ಯವು ಹೆಚ್ಚಿ ಕೆ ರೀತಿಯಾಗಿರುವದರಿಂದ ಪರಳಿ ಕಲಹಕ್ಕೆ ಉ ತ್ಪನ್ನವಾಗುವದೆಂದು ನಿರೀಕ್ಷಿಸಲ್ಪಟ್ಟದೆ

ನೋಟೀಸ್

ಇದುವರಿವಿಗೆ ಈ ಸಾಲಿನ ಚಂದಾ ಹಣಗಳನ್ನು ಕಳುಹಿಸದೆ ಇರತಕ್ಕವರೆಲ್ಲ ರೂ ಈ ನೋಟೀಸ್ ನೋಡಿದ ಕೂಡಲೆ ದಯಮಾಡಿ ಕಳುಹಿಸಿಕೊಡಬೇಕೆಂದು ಮರಳಿ ಜ್ಞಾಪಕ ಕೊಡುತ್ತೇವೆ

೩—೭—೯೩ ಪ್ರೊಪ್ರೈಟರ್

## LOCAL AND PROVINCIAL NEWS
### ಒಳದೇಶವು ತಾಲ್ಲೂಕುವರ್ತಮಾನಗಳು

ವೆ|| ವಿಶ್ವನಾಥರಾವ್ ಯೆಂಬವರು ಮಾಹೆ ಯಾನಾ ೫೦೦ ರೂಪಾಯಿಗಳ ತಲಬಿನಮೇಲೆ ಮೈಸೂರು ಯೆಕ್ಸ್‌ಚೇಂಜ್ ಇಲಾಖೆಯಲ್ಲಿ ಒಂದು ಅಸಿಸ್ಟೆಂಟ್ ಕಮಿಷನರಾಗಿ ನೇಮಿಸಲ್ಪ ಟ್ಟರೆಂದು ಒಳದೇಶದ ಈವನಿಂಗ್ ಮೇಯಿಲ್ ಪ ತ್ರಿಕೆಯ ಮೂಲಕ ತಿಳಿಯಲಾದೆವು

ಕಳೆದ ಶುಕ್ರವಾರದ ದಿನ ಮಧ್ಯಾಹ್ನ ಮೂ ರಾರ್ ಘಂಟೆಗೆ ಮೋಡವು ಕವಿದು ಘಟ್ಟ ಯಾಗಿ ಒಂದುಗುಳಿ ಮಳೆ ಬಿದ್ದು ಮರಳಿ ಶನಿ ವಾರದದಿನ ರಾತ್ರಿಯೇಳು ಘಂಟೆಗೆ ಸ್ವಲ್ಪ ಮ ಳೆ ಆಯಿತು. ಇತರ ವಿಷಯಗಳು ಕಳೆದವಾರದ ಲ್ಲಿ ತಿಳಿಸಲ್ಪಟ್ಟಂತೆಯೇ ಇವೆ

ಈಗ್ಗೆ ಕೆಲವು ತಿಂಗಳಕಾಲದ ಮೊದಲು ಫ ರ್ಲೋ ರಜಾಮೇಲೆ ಇಂಗ್ಲಂಡಿಗೆ ಹೋಗಿರುವ ಸೆಂಟ್ರಲ್ ಕಾಲೇಜ್ ಪ್ರಿನ್ಸಿಪಾಲರಾದ ಮೆಸ್ಟರ್ ಜೆ ಕೂಕ್ ಸಾಹೇಬರವರು ಬರುವವಾರದಲ್ಲಿ ವಾ ಪಸ್ ಬಂದು ತಮ್ಮ ಕೆಲಸದ ಚಾರ್ಜು ತೆಗದು ಕೊಳ್ಳುವರೆಂಬದಾಗಿ ತಿಳಿಯಬರುತಿದೆ

ಶ್ರೀಮನ್ಮಹಾರಾಜ ಲೇಡಾಸಾಹೆಬ್ ಬಹದೂ ರವರು ಈ ತಿಂಗಳ ೬ನೇ ತಾರೀಖ್ ಬೃಹಸ್ಪತಿ ವಾರದದಿನ ಹಗಲು ೧೧ ಘಂಟೆ ಸುಮಾರಿಗೆ, ತಮ್ಮ ದಿವಾನರು ಮತ್ತು ಪರಿಜನರೊಡನೆ ರಾ ಜಧಾನಿಯಿಂದ ಸ್ಪೆಷಲ್ ಟ್ರೇಯಿನ್ನಲ್ಲಿ ಹೊರಟು ಸಾಯಂಕಾಲ ೫ ಘಂಟೆಗೆ ಈ ಪ್ರಾಂತ್ಯಕ್ಕೆ ದಯಮಾ ಡುವರೆಂದು ತಿಳಿಯಬರುತಿದೆ.

ಅಲ್ಲಿನ ಪೋಲೀಸ್ ಸ್ಟೇಷನ್ನಲ್ಲಿ ಚಿಲ್ಲರೆ ಅಂಗ ಡಿಯವರು ಇಬ್ಬರು ಮೂವರು ಕೆಲವು ಕ ದ್ದು ಆದ ಗಂಟುಗಳನ್ನೂ ಪಿಚ್ಚೆ ಸೀರುಗಳ ನ್ನು ಇಟ್ಟು ಕೊಂಡು ದಿನಗಳಂ ಮೋಸಗೊ ಳಿಸುತಲಿದ್ದ ಸಂಗತಿ ಪೋಲೀಸಿನವರಿಗೆ ತಿಳಿ ದುಬಂದು ಅವರು ದಸ್ತಗಿರಿಯಿಂದ ಮ್ಯಾಜಿ ಸ್ಟ್ರೇಟರವರಮುಂದೆ ಹಾಜರ್ಮಾಡಲು ಅವರೆಲ್ಲ ರಿಗೂ ಫೀ ಯೆಸಾ ೧೧ ರೂಪಾಯಿಗಳಂತೆ ಜು ರ್ಮಾನೆ ವಿಧಿಸಿದರು.

ಯೆಲ್ಲಿ ಮುನಸಿಫರಾಗಿದ್ದ ಮೆ|| ಘಂಟ ಯ್ಯ, ಬಿ. ಎ. ಬಿ. ಎಲ್. ಯವರು ಸಂಕಟವ್ಯಾರ ರೋಗದಿಂದಿಸಿಯಿಂದ ಕಳೆದವಾರದಲ್ಲಿ ಕಾಲಗತಿ ಯನ್ನೈದಿದರೆಂದು ಕೇಳಿ ಬಹಳ ವಿಷಾದಿಸುತ್ತೇ ವೆ ಬಾಲ್ಯವಯಸ್ಕರಾಗಿಯೂ, ವಿದ್ಯಾವಂತರಾ ಗಿಯೂ, ಬಹಳ ಉಪಕಾರಿಗಳಾಗಿಯೂ, ದರ್ಧ ಪ್ನವಾಗಿಯೂ ಇದ್ದ ಈ ದೊಡ್ಡ ಮನುಷ್ಯರಿ ಗೆ ಪ್ರಾಪ್ತವಾದ ಅಕಾಲ ಮರಣದ ಬಗ್ಗೆ ಯ ಷ್ಟು ದುಃಖಿಸಿದಾಗ್ಯೂ ಸ್ವಲ್ಪವಾಗಿಯೇ ಇ ರುವುದು.

ಈಸಂಸ್ಥಾನದ ದಿವಾನರಾದ ಸರ್ ಕೆ ಶೇಷಾ ದ್ರಿ ಅಯ್ಯರವರಿಗೆ ಕೆ ಸಿ ಎಸ್. ಐ ಎಂಬ ಘ ನತರ ಪ್ರಶಸ್ತಿಯು ಕೊಡುವದಕ್ಕಾಗಿ ಮೈಸೂ ರಿಗೆ ಹೋಗಿದ್ದ ಇಲ್ಲಿನ ಬ್ರಿಟಿಷ್ ರೆಸಿಡೆಂಟರಾದ ಕರ್ನಲ್ ಪಿ. ಡಿ. ಹೆಂಡರ್ಸನ್ ಸಾಹೇಬರವರು ಕ ಳೆದ ಶುಕ್ರವಾರದ ದಿನ ಬೆಂಗಳೂರಿಗೆ ವಾಪಸ್ ಬಂದು ಸೇರಿದರು ಮೇಲಿನ ವಿಶೇಷ ಸಂದರ್ಭ ದರ್ಶನಾರ್ಥ ರಾಜಧಾನಿಗೆ ಹೋಗಿದ್ದ ಚೀಫ್ ಕೋರ್ಟ ಜಡ್ಜಿಗಳು ಮೊದಲಾದ ದೊಡ್ಡ ದೊ ಡ್ಡ ಅಧಿಕಾರಿಗಳೆಲ್ಲರು ಕಳೆದ ಶನಿವಾರದ ದಿನ ದ ಮಧ್ಯಾಹ್ನ ವಾಪಸ್ ಬಂದರು.

ಈ ಸಂಸ್ಥಾನದಲ್ಲಿ ಸರ್ಕಾರೀ ಕೆಲಸಗಳ ಕ ಲಾಪವು ದಿನೇ ದಿನೆ ಅತ್ಯಧಿಕವಾಗಿ ಕಂಡುಬ ರುವದರಿಂದ ಇಲ್ಲಿನ ದಿವಾನರವರ ಸಹಾಯಾರ್ಥ ನಾಯಬ್ ದಿವಾನರೊಬ್ಬರು ನಿಯಮಿಸಲ್ಪಡುವ ರೆಂತಲೂ, ಆ ಕೆಲಸವು ಪ್ರಾಯೇಣ ಪೋಲೀಸ್ ಇನ್ಸ್ಪೆಕ್ಟರ್ ಜನರಲ್ಲವರಾದ ಮೆಸ್ಟರ್ ವಿ ಪಿ ಮಾಧವರಾಯರವರಿಗೆ ಕೊಡಲ್ಪಡುವದೆಂತಲೂ ಈಗ್ಯೆ ಕೆಲವು ಕಾಲದಮೊದಲು ಉಂಟಾಗಿದ್ದ ಪ್ರವಾದವು ಕೇವಲ ನಿರಾಧಾರವೆಂಬದಾಗಿ ನಂಬತಕ್ಕಮೂಲಕ ತಿಳಿಯಬರುವಂತೆ ಗತ ಶನಿ ವಾರದ ಒಳದೇಶದ ಸ್ಪೆಕ್ಟೇಟರ್ ಪತ್ರಿಕೆಯು ತಿಳಿಸುತಿದೆ.

## THE BAGNALORE SREENIVASA MANDIRAM
### ಬೆಂಗಳೂರು. ಶ್ರೀನಿವಾಸ ಮಂದಿರಂ.

ಬೆಂಗಳೂರ್ ಶ್ರೀ ಶ್ರೀನಿವಾಸ ಮಂದಿರದ ದರ್ಶ ಕ್ಕಾಗಿ ಪ್ರಕಟಿಸಲ್ಪಟ್ಟ ಅಕ್ಕಿ ಮತ್ತು ಅದರ ವಿನಿಯೋಗದ ವಹಿವಾಟು ತೋರಿಸುವ ಪಟ್ಟಿ —

೧೮೯೩ನೇ ಇಸವಿ ಜೂನ್ ೧೫ ನೇ ತಾರೀಖ್ ಮೊದಲು ಜೂನ್ ೩೦ನೇ ತಾರೀಖ್ ವರಿವಿಗೆ —

| | |
|---|---|
| ಅಕ್ಕಿ ವಸೂಲು ಮಾಡಿದ ಗೃಹಗಳ ಸಂಖ್ಯೆ | 65 |
| ವಸೂಲಿಸಿದ ಧಾನ್ಯದ ಸೇರುಗಳ ಸಂಖ್ಯೆ . | 46 |
| ಗತವಾರದ ಶಿಲ್ಕು ಸೇರು . | 2 |
| ಜುಮ್ಲಾ | 48 |
| ಸ್ವಾಮಿಗೆ ಸಾಮಗ್ರಿಗಳ ವಟ್ಟಿಗಾಗಿರುವ ಸೇರು | 5 |
| ಅನ್ನದ ಅಕ್ಕಿ ಸೇರು | 39 |
| ಜಮಾ ಬಾಕಿ | 4 |
| ಭೋಜನ ಮಾಡಿದ ಜನಗಳ ಸಂಖ್ಯೆ ಮತ್ತು ತಪ್ಸೀಲ್ | |
| ಅನಾಥರು .. .. | 7 |
| ದಿಕ್ಕಿಲ್ಲದ ವಿದ್ಯಾರ್ಥಿಗಳು ... | 8 |
| ಕಾಯಂ ಅರ್ಹತೆಯ ವಿದ್ಯಾರ್ಥಿಗಳು . | 14 |
| ಕಟ್ಟೆ ಕೊಡತಕ್ಕ ಅರ್ಥಕ್ಯವಹಾರಕರವಗೈರೆರ ಸಂಖ್ಯೆ | 30 |
| ಪ್ರಯಾಣಸ್ಥರು | 18 |
| ಜುಮ್ಲಾ . | 78 |

## CORRESPONDENCE.

[ಇದರಡಿ ಪ್ರಕಟಿಸಲ್ಪಟ್ಟಿರುವ ಲೇಖನದಲ್ಲಿ ಕಂಡ ಅಭಿ ಪ್ರಾಯಗಳ ಗುಣದೋಷಗಳಿಗೆ ಪತ್ರಿಕಾಲೇಖಕರು ಜ ವಾಬ್ದಾರರಲ್ಲವೆಂದು ಎಡಿಟರ್ ಕ ಪ್ರ]

ಮ|| ರಾ|| ಕರ್ಣಾಟಕ ಪ್ರಕಾಶಿಕಾ ಎಡಿಟರವರ ಸ|| ಕ್ಕೆ.

ಈ ಮೇಲುಕೋಟೆಯ ಸದಾನಂದ ವರ್ಧನೀ ಸಭೆಯೊಳು ಪ್ರಕೃತ ಪ್ರತಿ ಭಾನುವಾರವೂ ವ ಯೋವೃದ್ಧರಾಗಿಯೂ, ಜ್ಞಾನವೃದ್ಧರಾಗಿ ಯೂ, ಪುರಾತನ ವಾಗ್ಮಿಶೇಖರರಾಗಿಯೂ ಇರುವ ಪಂಡಿತವರ್ಯರೊಬ್ಬರಿಂದ ಉಪ ನ್ಯಾಸಿಸಲ್ಪಡುವ ನೀತಿವಿಷಯಗಳನ್ನು ಯಥೋ ಕ್ತ ರೀತಿಯಾಗಿ ಪ್ರತಿವಾರವೂ ಘನತರವಾದ ತಮ್ಮ ಪತ್ರಿಕೆಯಲ್ಲಿ ಪ್ರಚುರಪಡಿಸಲು ವೊಂ ದು ಕಾಲಂ ಅವಕಾಶವನ್ನು ಪ್ರಾರ್ಥಿಸುವದರ ಮೂಲಕ ಆಕಾರದ ಉಪನ್ಯಾಸವನ್ನು ಇದರಡಿ ಪ್ರಾರಂಭಿಸಿರುತ್ತೇನೆ.

ಹಿಂದುಸ್ಥಾನದಲ್ಲಿ ಅನೇಕ ಹಿಮಾಚಲ ಮ ಧ್ಯವಾಸಿಗಳಾದ ಸರ್ವ ಮಹಾಜನಂಗಳಿಗೂ ? ನ ಮ್ಮಗಳಿಗೆ ಪರಮಪೂಜ್ಯರಾಗಿಯೂ, ಚತುರ್ವಿ ಧ ಪುರುಷಾರ್ಥ ಸಾಧಕವಾಗಿ ಇರುವ ವೇದಾಂ ತ ಮೊದಲಾದ ಸರ್ವ ಶಾಸ್ತ್ರೋಪದೇಶ ಕರ್ತೃ ಗಳಾಗಿಯೂ, ಜಯವಡಾಡಿರುವ ವ್ಯಾಸ ಪ ರಾಶರಾದಿ ಮಹರ್ಷಿಗಳನ್ನ ಅಫೀಂ, ಭಂಗಿ, ಮುಂತಾದವುಗಳ ಸೇವನೆ ಮಾಡುವವರನ್ನಾಗಿ ಯೂ, ಅವರುಗಳಿಂದ ಪ್ರಣೀತಗಳಾದ ಶಾಸ್ತ್ರ ಗಳನ್ನ ಉನ್ಮತ್ತ ಪ್ರಲಾಪಗಳೆಂತಲೂ, ಈಗಿನ ಕೆಲವರು ಭಾವಿಸಿರುತ್ತಾರೆ. ಇಂತಾ ಭಾವನೆಗೆ, ಲೌಕಿಕ ಸಾಕ್ಷಾತ್ಕಾರ ಧುರೀಣರಾದ ಮಹರ್ಷಿ ಗಳ ಮುಖನಿಸ್ಸೃತವಾದ ಶಾಸ್ತ್ರತತ್ವವನ್ನ ಅವರು ಪಾನಮಾಡದೆ ಇರೋಣವೇ ಕಾರಣವು. ಹೀಗೆ ಆಗುವದಕ್ಕೆ, “ ಅವ್ಯವಸ್ಥಂಬ್ರಾಹ್ಮಣಮುಖನಮಿತಾತ್” “ಕೆಮುಧ್ಯಾಯೇತ್ ” ಎಂಬ ವಿಧಿಗೆ ಇಂಗ್ಲಿಷ್ ವಿದ್ಯಯಾದದ್ದು ನಿಮಿ ತ್ತವಾಗಿ ಇದೆ. ಇಂಗ್ಲಿಷಿನವರು ನಮ್ಮ ಋಷಿ ಗಳಿಂದ ಉಪದಿಷ್ಟವಾದ ಶಾಸ್ತ್ರ ಶ್ರೀಕ ದೇಶವಾ ದ, ಶಿಲ್ಪ ಶಾಸ್ತ್ರದಲ್ಲಿ ಪ್ರವೀಣರಾಗಿರುತ್ತಾರೆ ನಮ್ಮ ಶಾಸ್ತ್ರವನ್ನೋದಿ ಅವರು ಪ್ರವೀಣರಾ ದರೆಂಬುವದಕ್ಕೆ, ಅವರೇನೇ ತಮ್ಮ ಮತೋತ್ಪ ತ್ತಿಯ ಕಾಲವನ್ನು ನಿಬಂಧನೆ ಮಾಡಿರುತ್ತಾರೆ. ಈಗ ಇಂಗ್ಲಿಷಿನವರು ಶಿಲ್ಪಶಾಸ್ತ್ರೈಕದೇಶ ಜ್ಞಾನವನ್ನ ಹೊಂದಿದ ಮಾತ್ರದಿಂದಲೇ, ಸರ್ವ ಜ್ಞರೆಂದು ಹೇಳುವದಕ್ಕೂ, ಭೂಮಂಡಲಾಧಿ ಕಾರವನ್ನು ಮಾಡುವದಕ್ಕೂ ಕಾರಣವಾಗಿರು ತ್ತೆ. ಈಗ ನಾವು ಅವರನ್ನ ಸರ್ವಜ್ಞರಾಗಿ ಯೂ, ಸರ್ವ ಶಕ್ತರಾಗಿಯೂ ಎಣಿಸಿ, ಅವರ ಮುಂದೆ ನಿಂತು ಹಲ್ಲು ಗಿರಿಯುವದಕ್ಕೆ ನಮ್ಮ ಉಭಯಭ್ರಷ್ಟತ್ವವೇ ಕಾರಣವು. ಆ ಉಭ ಯಭ್ರಷ್ಟತ್ವವು ಯಾತಕೆಂದರೆ, ಅರ್ಥ ಕಾಮ ಗಳಿಗೆ ಬೇಕಾದ ಸಾಮಗ್ರಿಯನ್ನ ಸಂಪಾದಿಸಿ ಕೊಳ್ಳದೆ ಇರೋಣವೂ, ಮತ್ತು ಮೋಕ್ಷಸಾಧ ಕವಾದ ಭಕ್ತಿವೈರಾಗ್ಯಗಳಂ ಸಾಧಿಸದೆ ಇರೋ ಣವೂ, ನಮ್ಮ ಪೂರ್ವಾಚಾರ್ಯರುಗಳಾದ ಭಗವ ಚ್ಛಂಕರಾಚಾರ್ಯರು ಮೊದಲಾದವರು ಸಂಸಾರಾ ಸ್ಥಿರತ್ವವನ್ನೂ, ದುಃಖೈಕಭಾಜನತ್ವವನ್ನೂ ಬಲಾಂಬರಿಸಿ ಪರಮ ಪ್ರಾವೃತ್ತಿಕನಿರತರಾದ್ದ ರಿಂದ ಇತರ ಶಾಸ್ತ್ರಗಳನ್ನ ಭುಕ್ತಿಕೇಡಗಳೆಂದೆ ನಿರಾಕರಿಸಿದರು. ಈಗ ಜನಿಸಿ ಇರುವ ನನ್ನಂ ತವರಿಗೆ ಲೋಕಾಂತರವೇ ಇಲ್ಲವಾದ್ದರಿಂದ, ಆ ಲೋಕಾಂತರಕ್ಕಾಗಿ ಪ್ರವರ್ತಿಸುವದೂ ಕ ಪ್ಪಿತವೇ ಸರಿ, ಪ್ರವರ್ತಿಸಬೇಕಾದ್ದೂ ಇಲ್ಲ ನನ್ನಂತಾವರು, ವ್ಯವಸಾಯೋದರಪೋಷಣವ ನ್ನು ಮಾಡಿಕೊಳ್ಳುವದಕ್ಕಾಗಿ ಪರಮಕೃಪಾಳು ಗಳಾದ ಮಹರ್ಷಿಗಳು, ವೈದ್ಯ, ಜ್ಯೋತಿಷ, ಮಂತ್ರ, ಶಿಲ್ಪ, ಇವು ಮೊದಲಾದ ಅನೇಕ ಶಾ ಸ್ತ್ರಗಳನ್ನ ಏರ್ಪಡಿಸಿ ಕೊಟ್ಟಿರುತ್ತಾರೆ. ಆ ಯಾಯ ಶಾಸ್ತ್ರಗಳ ಕೋಟ್ಯಂಶದಲ್ಲಿ ಒಂ ದಂಶವನ್ನು ತಿಳಿದು ಉದರ ಭರಣಾದಿಗಳನ್ನ ಮಾಡುವ ಮಹಾತ್ಮರನ್ನ ನೋಡಿಯೂ ಇರು ತ್ತೇನೆ. ಆದರೆ ಉದರ ಭರಣಾದಿಗಳಿಗಾಗಿ ಪ್ರ ವರ್ತಿಸಬೇಕಾದ್ದಿಲ್ಲವೆಂಬದಾಗಿ “ಯೋಮೋಗ ರ್ಭಗತಸ್ಯಾಪಿ ವೃತ್ತಿಂಕಲ್ಪಿತವಾನ್‌ಪ್ರಭುಃ|| ಶೇ ಷವೃತ್ತಿ ವಿಧಾನೇತು ಸುಪ್ತಃಕಿಮಥವಾಪ್ಯಶಃ” ಎಂದು ಪ್ರಾಜ್ಞರು ಅಪ್ಪಣೆಕೊಡಿಸಿದರಾದ್ದರಿಂ ದ ಪರಮಭಕ್ತರ ಶರೀರ ಪೋಷಣಾದಿಗಳು ಭಗ ವಂತನನ್ನೆ ಸೇರಿದವುಗಳಾಗಿರುತಿವೆ “ಪಿತಾಮಾ ತಾಸುಹೃದ್ಬಂಧು ಸ್ಸರ್ವಂನಾರಾಯಣಃ ” ಎಂ ದು ಇರುವದಕ್ಕಾಗುವದಿಲ್ಲವಾದ್ದರಿಂದ ಅಪರಂ ಕ ಎಲ್ಲರೂ ಇರುವದಕ್ಕಾಗುವದಿಲ್ಲವು. “ಶರೀರ ಮಾದ್ಯಂಖಲುಧರ್ಮಸಾಧನಂ” ಎಂಬದಾಗಿ ಶರೀರ ಸಂರಕ್ಷಣವು ಪಂಡಿತ ಪಾಮರರೆಲ್ಲರಿಗೂ ಅತ್ಯಾ ವಶ್ಯಕವು. ಸಂಸಾರ ಭರಣಪ್ರಕಾರವೇನೆಂದರೆ ? ಹಿಟ್ಟನು ವ್ಯವಸಾಯದಿಂದಲೂ, ಮತ್ತೊಬ್ಬನು ವ್ಯಾಪಾರದಿಂದಲೂ, ಮತ್ತು ಕೆಲವರು ಅನೇಕ ಶಾಸ್ತ್ರಸಂಬಂಧವಾದ ವೃತ್ತಿಗಳಿಂದಲೂ ಜೀವಿಸು ತ್ತಾರೆ. ಅದ್ದರಿಂದ ನಾವು ಇಂಗ್ಲಿಷ್ ಅಧಿ ಕಾರಿಗಳ ಮುಂದೆ ನಿಂತು ಹಲ್ಲುಗಿರಿಯಬೇಕಾದ ಆವಶ್ಯಕ ವೇನೂ ಇಲ್ಲವು. ನಮ್ಮ ಶಾಸ್ತ್ರ ಪ ರಿಶೀಲನವನ್ನು ಮಾಡಿ ಆಚರಿಸಿದ್ದೇ ಆದರೆ ಮ ದಾಗಿ, ನಾವೆಲ್ಲರೂ ಧನವಂತರಾಗಿಯೂ ಶ್ರೀರಾ ಮಾದಿಗಳಂತೆಯೂ ಸಾಮ್ರಾಜ್ಯವನ್ನು ವಹಿಸಿ ಇ ಬ್ಬರಿಗೆ ತಿಳಿಯದೆ ಇರುವ ವಿದ್ಯೆಯನ್ನು ಮ ಕ್ಕಳಿಗೆ ಕಲಿಸಿಕೊಡುವುದೂ, ಇಟ್ಟುಕೊಳ್ಳದ ಲ್ಲಿ ಆಗದೆ ಇರುವ ಕೆಲಸಗಳಿಗೆ ಮತ್ತೊಬ್ಬನು ಸಹಕಾರಮಾಡುವುದೂ ಅವಶ್ಯಂತಾಮ್ನವಾಗಿ ಕೊಡುತಾ ಬರುವದಕ್ಕೆ ನಮಗೆ ಬುದ್ಧಿ ಹುಟ್ಟಿ ದರೆ ನಮ್ಮಗಳಲ್ಲಿ ಭಗವಂತನೂ ಅನುಗ್ರಹಿಸು ವನು, ಸಕಲ ಸಂಪತ್ಸಮೃದ್ಧಿಯೂ ಉಂಟಾ ಗುತಿದೆ. “ಸ್ವೇವಾಶ್ವವೃತ್ತಿರಾಖ್ಯಾತಾ” ಎಂದು ಹೇಳುವ ನ್ಯಾಯಧರ್ಮವು ಬಿಟ್ಟುಹೋಗು ತಿದೆ. “ಅನ್ಯೋನ್ಯಮುದರೋಭ್ಯಾಸಾ ಗುಣೈರ್ರಾ ಸ್ಯಮುದಾಗತಃ” ಎಂಬದಾಗಿಯೂ, “ದೇಶದೇ ಶೆ...ಯಾತ್ರಾಭ್ಯಾಸಸಹೋದರಃ ” ಎಂಬದಾಗಿ ಯೂ ಹೇಳುವರಾಗುತ್ತೇವೆ. “ ಅಹಂಸರ್ವಂ ಕರಿಷ್ಯಾಮಿ ” ಎಂಬುವ ಧರ್ಮವು ನಮಗೆ ಬರು ತಿದೆ. ಆದ್ದರಿಂದ ಯೆಲ್ಲರೂ ಸಾಜನ್ಯವನ್ನು ಹೊ ಸೋಣವು ಉತ್ತಮವಲ್ಲವೆ. (ಸಶೇಷ)

## THE MYSORE GAZETTE.
### ಮೈಸೂರು ಗಜೆಟ್.

ಶ್ರೀಮನ್ಮಹಾರಾಜಾ ಸಾಹೇಬ್ ಬಹದೂರವರ ಸರ್ಕಾರದಿಂದ ಹೊರಡಿಸಿದ ಅಸ್ತಿಹಾರನಾಮೆಗಳು.

೧೯ ನೇ ಜೂನ್ ೧೮೯೩—ನಂ|| ೨೧೨೦— ೮. ೫೦೮೩ —ಸಬ್ ಅಸಿಸ್ಟೆಂಟ್‌ಸರ್ಜನ್ ಸಿ. ಎ. ನಂಜಪ್ಪನವರು, ಹಾಸನ ಡಿಸ್ಟ್ರಿಕ್ಟ ಅಸಿ ಸ್ಟೆಂಟ ಸರ್ಜನ್ ಮೆ|| ಇ. ಎಸ್ ಕೃಷ್ಣಸ್ವಾ ಮಿ ಅಯ್ಯರವರು ರಜಾಮೇಲೆ ಗೈರುಹಾಜರಾ ಗಿರುವ ಕಾಲದಲ್ಲಿ ಅಸಿಸ್ಟೆಂಟ ಸರ್ಜನ್ರಾಗಿ ಕೆಲಸ ನೋಡುವಂತೆ ನೇಮಕರ್ಮಾಡಲ್ಪಟ್ಟಿರು ತ್ತಾರೆ.

ನಂ|| ೨೧೨೦—೧ ೫೦೮೫ — ಬೆಂಗಳೂರಿ ನಲ್ಲಿರುವ ಗವರ್ನ್‌ಮೆಂಟ್ ಜನರಲ್ ಆಸ್ಪತ್ರಿಗೆ ಸೇ ರಿದ ಸಬ್ ಅಸಿಸ್ಟೆಂಟ್ ಸರ್ಜನ್ ಎಸ್. ಕೆ. ಹನುಮಂತರಾಯರು ರಜಾಮೇಲಿರುವ ಮೆ|| ಜೆ. ಜೆ ನೊರೋನ್ಹಾ ಯವರಿಗೆ ಬದಲು ಕೋ ಲಾರ ಡಿಸ್ಟ್ರಿಕ್ಟ ಅಸಿಸ್ಟೆಂಟ ಸರ್ಜನ್ರಾಗಿ ಕೆಲಸ ನೋಡುವಂತೆ ನೇಮಕರ್ಮಾಡಲ್ಪಟ್ಟಿರು ತ್ತಾರೆ.

೨೦ ನೇ ಜೂನ್ ೧೮೯೩, ನಂ|| ೨೧೨೮— ೮. ೧೧೮೫ — ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್ ೩೭ ನೇ ಶೆಕ್ಷನ್ ಅನುಸರಿಸಿ, ಕೋಲಾರ ಡಿ ಸ್ಟ್ರಿಕ್ಟ ಅಸಿಸ್ಟೆಂಟ ಕಮಿಷನರ್ ಪ ಫಸ್ಟ ಕ್ಲಾಸ್ ಮ್ಯಾಜಿಸ್ಟ್ರೇಟರಾದ ಪ್ರ. ನಾರಣಪ್ಪಯ್ಯಂ ಗಾರ್ರವರು, ಸ್ಥಳೀಕ ಗವರ್ನ್‌ಮೆಂಟಿನಿಂದ ಕೊ ಡಲ್ಪಡಬೇಕಾದ ಅಧಿಕಾರಗಳಂದು ೪ ನೇ ಷ ಡ್ಯೂಲ್‌ನಲ್ಲಿ ವಿವರಿಸಲ್ಪಟ್ಟಿರುವ ೩,೪,೫,೬,೮ ಮತ್ತು ೧೧ ನೇ ನಂಬರ್‌ಗಳುಳ್ಳ ಹಾಸ್ತೀ ಅಧಿ ಕಾರಗಳು ಇದುವರಿವಿಗೇನೆ ಕೊಡಲ್ಪಟ್ಟಿರುವದ ಲ್ಲದೆ, ಸದರೀ ಷೆಡ್ಯೂಲ್‌ನಲ್ಲಿ ವಿವರಿಸಲ್ಪಟ್ಟಿರುವ ೧,೨,೬,೯ ಮತ್ತು ೧೨ ನೇ ನಂಬರ್‌ಗಳುಳ್ಳ ಹೆ ಚ್ಚಧಿಕಾರ ಸಹ ಕೊಡಲ್ಪಟ್ಟಿರುತ್ತಾರೆ. ಸ ದರೀ ಯವರು ಸಮ್ಮರಿ ವಿಚಾರಣೆ ಮಾಡುವ ೧೦ ನೇ ನಂ|| ಅಧಿಕಾರ ವಿನಾ ೪ನೇ ಷೆಡ್ಯೂಲ್ ನಲ್ಲಿ ತಿಳಿಸಲ್ಪಟ್ಟಿರುವ ವಿಶಿಷ್ಟ ಅಧಿಕಾರಗಳೂ ಈ ರೀತಿ ಕೊಡಲ್ಪಟ್ಟಿರುತ್ತಾರೆ.

೨೧ ನೇ ಜೂನ್ ೧೮೯೩, ನಂ|| ೨೧೧೩೭— ೮. ೫೦೫೮.—ಜಾಗ್ಲಿಗಳ ಮತ್ತು ಗವರ್ನ್‌ಮೆಂಟ್ ವ್ಯವಸಾಯ ಜಮೀನುಗಳ ಸೂಪರಿಂಟೆಂಡೆಂಟ ರಾದ ಮೆ|| ಸಿ. ಇ. ಎ. ರಸ್ಸೆಲ್ ಯವರು, ಸರ್ ೧೮೯೦ ನೇ ಇಸವಿ ಜೂನ್ ೫ ನೇ ಮಾರ್ಚಿಯ ೪ ೪೭ ನೇ ನಂಬರ್ ಇಸ್ತಿಹಾರನಾಮೆಯ ಮೂ ಲಕವಾಗಿಯೂ, ೯೦ ನೇ ಇಸವಿಯ ಫೆಬ್ರವರಿ ೨೪ ನೇ ತಾರೀಖುಳ್ಳ ೪೨೭ ನೇ ನಂಬರ್ ಇಸ್ತಿ

ಹುಕುಂನಾಮೆಯ ಮೂಲಕವಾಗಿಯೂ ಕೊಡಲ್ಪಟ್ಟ ೩ ವರ್ಷಗಳು ೮ ತಿಂಗಳ ರಜಾದಿಂದ ವಾಪಸ್ ಬಂದು ಈ ತಿಂಗಳ ೧ನೇ ತಾರೀಖಿನಲ್ಲಿ ಕೆಲಸದಮೇಲೆ ಹಾಜರಾದುದರಿಂದ ಅವರ ರಜಾ ಸ್ಥಿತಿ ಉಳಿದ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿದೆ.

ನಂ|| ೧೧೩೪೩-೦. ೫೩೦೪.—ಹೊಳೇನರಸೀಪುರ ಮುನಸಫ್ ಮಿ. ಎಸ್ ಚೆಲುವಯ್ಯಂಗಾರ್, ಬಿ. ಎ. ಬಿ. ಎಲ್. ಯವರು, ೧೮೯೩ನೇ ಇಸವಿ ಜೂಲೈ ೧ನೇ ತಾರೀಖು ಮೊದಲು ಅಥವಾ ಅವರು ವಹಿಸಿಕೊಳ್ಳುವದಕ್ಕೆ ಚೀಫ್ ಕೋರ್ಟಿನವರು ಅಪ್ಪಣೆ ಕೊಡಬಹುದಾದ ತಾರೀಖ್ ಮೊದಲು ಅರ್ಧಸಂಬಳದ ಮೇಲೆ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

೨ ಮಿ. ಮಿಯರ್ ಹಂಜಾಹುಸೇನ್, ಬಿ. ಎ. ಬಿ. ಎಲ್. ಯವರು, ಮಿ. ಚೆಲುವಯ್ಯಂಗಾರ್ರವರು ರಜಾಮೇಲೆ ಗೈರುಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ಹೊಳೇ-ನರಸೀಪುರ ಮುನಸಫರಾಗಿ ಕೆಲಸ ನೋಡುವಂತೆ ನೇಮಕರಾಗಿಸಲ್ಪಟ್ಟಿರುತ್ತಾರೆ. ಮೈಸೂರು ಅಡಿಷನಲ್ ಮುನಸಫ್ ಕೋರ್ಟ್ ಚಾರ್ಜಿನಿಂದ ಬಿಡುಗಡೆ ಮಾಡಲ್ಪಟ್ಟ ಕೂಡಲೆ ಕೆಲಸದಮೇಲೆ ಹಾಜರಾಗತಕ್ಕದ್ದು.

ನಂ|| ೧೧೩೪೯-೫೩೧೦—ಅಡಿಷನಲ್ ಮುನಸಫ್ ಮಿ|| ಎಸ್ ವೆಂಕಟವರದಯ್ಯಂಗಾರ್ರವರು, ೧೮೯೩ನೇ ಇಸವಿ ಜೂನ್ ೧೯ನೇ ತಾರೀಖು ೧೧೦೪೮-೦. ೫೩೪೪ ನೇ ನಂಬರ್ ಇಸ್ತಿಹಾರ್ ನಾಮೆಯ ಮೂಲಕ ಕೊಡಲ್ಪಟ್ಟ ಜಾಸ್ತಿ ರಜಾವಿಗೆ ಸೇರಿದಂತೆ, ಜೂನ್ ೩೦ನೇ ತಾರೀಖ್ ವರಿವಿಗೆ ಮತ್ತು ಜಾಸ್ತಿ ರಜಾ ಕೊಡಲ್ಪಟ್ಟಿದಾರೆ.

ಮುಜರಾಯಿ ಇಲಾಖಾ.

೨ ನೇ ಜೂನ್ ೧೮೯೩, ನಂ. ೯೨೪—ಮುಜರಾಯಿ ಸೂಪರಿಂಟೆಂಡೆಂಟ್ ಮತ್ತು ದಿವಾನರವರ ಯೆಕ್ಸ್ ಆಫಿಷಿಯೊ ಸೆಕ್ರೆಟರಿಯವರಾದ ರಾಯ್ ಬಹದೂರ್ ಎ ಶ್ರೀನಿವಾಸಾಚಾರ್ಲು ಯವರು, ೧೮೯೩ನೇ ಇಸವಿ ಮೇ ೩೧ ನೇ ಪುಕಾರಮುಖ್ಯ ೪೬೮ ನೇ ನಂ|| ಇಸ್ತಿಹಾರ್‌ನಾಮೆಯ ಮೂಲಕ ಕೊಡಲ್ಪಟ್ಟ ೭ ದಿನಗಳ ಕ್ಯಾಜುಯಲ್ ರಜಾವನ್ನು ಈ ತಿಂಗಳ ೭ ನೇ ತಾರೀಖ್ ಮೊದಲು ಉಪಯೋಗಿಸಿಕೊಂಡು ಇದೇ ತಿಂಗಳ ೧೦ ನೇ ತಾರೀಖಿನ ಮಧ್ಯಾನ್ಹತ್ತೊಪ್ಪರ್ ಕೆಲಸಕ್ಕೆ ವಾಪಸ್ ಬಂದವರಿಂದ ಸದರೀ ರಜಾಸ್ಥಿತಿ ಉಳಿದ ಭಾಗವು, ಅಂದರೆ ೨ ದಿನಗಳು ಇದರಿಂದ ರದ್ದು ಮಾಡಲ್ಪಟ್ಟಿವೆ.

## SUMMARY OF NEWS.
## ವೃತ್ತಾಂತ ಸಂಗ್ರಹವು.

ಭೀಮಾನದಿಯ ಪ್ರವಾಹವು ಹೆಚ್ಚಾಗಿಯಿಂದು ಪಂಢರಪುರದ ಷಹರ ಕೈಕಿ ನಾಲ್ಕರಲ್ಲಿ ಒಂದು ಭಾಗವು ನೀರಿನಲ್ಲಿ ಮುಳುಗಿ ಹೋಯಿತೆ ತಿಳಿಯಬರುತಿದೆ.

ಅಲಹಾಬಾದ್ ಆಸರಿ ಅಸಿಸ್ಟೆಂಟ್ ಕಮಿಷನರ್ ಬಾ ಬಾ ಹಾಡಿ ಪರ್ಸೀರವರೆದುರಿಗೆ ಒಂದು ಫೌಜದಾರಿ ಪ್ರಕರಣ ನಡೆದು ಅವರಲ್ಲಿ ಆರೋಪಿಗೆ ಶಿಕ್ಷೆ ವಿಧಿಸಿದ ಕೂಡಲೆ ಆರೋಪಿಯು ಕಾಲೊಳಗಿನ ಪಾದರಕ್ಷೆಯಂ ತೆಗೆದು ಮ್ಯಾಜಿಸ್ಟ್ರೇಟರ ಮೇಲೆ ಹಾರಿಸಿದನು. ಇದು ಬಾ ಬಾ ಯವರ ಮೇಲಿನ ಯುರಡನೇ ಪ್ರಯೋಗವು.—ಚಂದ್ರಿಕ.

ಕಪಾಪುರದಲ್ಲಿಯು ಒಬ್ಬ ವೈಷ್ಣವ ಬ್ರಾಹ್ಮಣನು ತಾನು ೬೯ ವರುಷ ಪ್ರಾಯದವನಿದ್ದು ಪೆನ್ಶನ್ ಪಂಕ್ತಿಯನ್ನು ಕೊಟ್ಟು ಈಗ ವಕೀಲಿಯ ಅಭ್ಯಾಸವನ್ನು "ಮುಡುತ್ತಿದ್ದು ಒಬ್ಬ ೧೪-೧೬ ವರುಷದ ವೈಷ್ಣವ ಬ್ರಾಹ್ಮಣರ ವಿಧವೆಯನ್ನು ಪುನರ್ವಿವಾಹವನ್ನು ಮಾಡಿಕೊಳ್ಳತಕ್ಕವನೆಂಬುದಾಗಿ ಕಪಾಪುರದಲ್ಲಿ ಹೊರಡುತ್ತಿರುವ "ವಿಜಯ" ಪತ್ರದಲ್ಲಿ ಪ್ರಸಿದ್ಧಿಸಿರುತ್ತಾನೆ.

ವಿಲಾಯತಿಯಲ್ಲಿಯು ಇಂಪೀರಿಯಲ್ ಇನ್ಸ್ಟಿಟ್ಯೂಟ್ ಪ್ರಾರಂಭೋತ್ಸವದ ಕಾಲಕ್ಕೆ ಹಿಂದುಸ್ತಾನದಿಂದ ಅತಿಥಿಗಳಾಗಿ ಹೋದ ರಾಜರಿಗೆ ಬಳಿಗೆ ಬಿರುದಿನ ಪದಕವನ್ನು ತೆಗೆದುಕೊಂಡೆಂದು ವಿಲಾಯತಿಯ ಪತ್ರದ ಮೇಲಿಂದ ತಿಳಿಯುತ್ತದೆ. ಈ ಪಂಡಿತಕ್ಕೆ ಹಿಂದುಸ್ಥಾನಕ್ಕೆ ಏನೂ ಉಪಯೋಗವಿಲ್ಲದಿದ್ದಾಗ್ಯೂ ಇನ್ನೂ ಕೆಲವು ರಾಜರು ಅದಕ್ಕೆ ಲಕ್ಷಾವಧಿ ರೂಪಾಯಿಗಳನ್ನು ಕೊಟ್ಟರೂ ಅದರಿಂದ ಬಳಿಗೆ ಕೊಡುವದಕ್ಕೆ ಹಣ ತೆಗೆದುಕೊಂಡ ವಿಲಾಯತಿಯ ಅಧಿಕಾರಿಗಳ ಪದ್ಧತಿಯನ್ನು ನೋಡಿ ಯಾರೂ ಬೆಚ್ಚು ಕಸ್ಟದಿರಲಾರರು.—ವಾ.

ಶಿವಿ ಸೋರಲಿಕ್ಕೆ ಹತ್ತಿದರೆ, ಘಟಕದ ನೀರಿನಿಂದ ೨ ಗುಂಜಿ ಘಟಕವನ್ನು ೨|| ತೊಲೆ ನೀರೊಳಗೆ ಹಾಕಿ ದರರಿವಸ ೨ ಸಾರೆ ಶಿವಿಯೊಳಗೆ ಪಿಚಕಾರಿಯನ್ನು ಹೊಡದು ತೊಳಿಯಬೇಕು.

ವಮ್ಮು ಮರುವಾಗುವ ಲಕ್ಷಣ ಕಂಡರೆ, ತತ್ಕ್ಷಣದಲ್ಲಿಯೇ ೫ ಗುಂಜಿ ಘಟಕದ ಬುಕ್ಕುಡಿಯನ್ನು ನಾಲಿಗೆಯ ಮೇಲೆ ಹಾಕಿಕೊಳ್ಳಬೇಕು, ಅಂದರೆ ವಮ್ಮು ಬರುವದು ತಕ್ಷಣಕ್ಕೆ ಕಡಿಮೆಯಾಗುತದೆ.

ಮೂಗಿನೊಳಗಿಂದ ರಕ್ತಸ್ರಾವವಾಗಲಿಕ್ಕೆ ಹತ್ತಿದರೆ, ಘಟಿಕದ ಪುಡಿಯನ್ನು ಮೂಗಿನೊಳಗೆ ಹಾಕಿಕೊಳ್ಳಬೇಕು. ಈ ಪ್ರಕಾರ ಮೇಲಿಂದ ಮೇಲೆ ಹಾಕಿಕೊಂಡರೆ ನಿಲ್ಲುಗುತ್ತದೆ, ಇಲ್ಲವೇ ೧ ತೊಲೆ ತೂಕ ಪುಡಿಯನ್ನು ೨|| ತೊಲೆ ನೀರೊಳಗೆ ಹಾಕಿ ಆ ನೀರಿನಿಂದ ಮೂಗಿನೊಳಗೆ ಪಿಚಕಾರಿಯನ್ನು ಹೊಡಿಯಬೇಕು.

ವೃತ್ತಾಂತ ಪತ್ರಿಕಾ ತಾ|| ೨೩ ನೇ ಜೂನ್ ೯೩.

ಗಾಯಕವಾಡಿ ಮಹಾರಾಜರವರು ಈಗ ಯುರೋಪಿನಲ್ಲಿ ಸಂಚರಿಸುತ್ತಲಿದ್ದಾರಷ್ಟೆ, ತಮ್ಮ ಜೊತೆಯಲ್ಲಿ ಕೆಲವು ಹುಲಿಗಳನ್ನು ಇಟ್ಟುಕೊಂಡಿರುತ್ತಾರಂತೆ. ಒಳ್ಳೇ ಸವಾಸವೇ ಸರಿ ಈಗ ಬೇಸಿಗೆ ಧಾರಣೆಯು ವಿಪರೀತ ಹೆಚ್ಚಾಗಿರುವದರಿಂದ

ದ ೧೮೯೧—೯೨ನೆ ವರುಷದಲ್ಲಿ ಹಿಂದುಸ್ಥಾನದ ರೈಲ್ವೆ ಕಂಪೆನಿಗಳಿಗೆ ವಾನುಗಳಾಗಿ ಹೋದದರಿಂದ ೨ ಲಕ್ಷರೂಪಾಯಿ ನಷ್ಟವಾಯಿತೆಂದು ರಿಪೋರ್ಟಿನಲ್ಲಿ ಪ್ರಕಟವಾಯಿತು.

ಕೂಲಿಯವರು ನೆಬ್ರಾಸ್ಕದಲ್ಲಿನ ಗಣಿಗಳಲ್ಲಿ ಕೆಲಸಮಾಡುತಿದ್ದಾಗ್ಯೆ ಬಂಡೆಗಳ ಮೇಲೆ ಪಕ್ಷಿಗಳ ಗುರುತುಗಳನ್ನು ಕಂಡರು, ಆ ಗುರುತುಗಳು ಮನುಷ್ಯನವೇ ಆಗಿದ್ದಾಗ್ಯೂ, ಅಷ್ಟು ದೊಡ್ಡ ಪಕ್ಷಿಗಳು ಪ್ರಪಂಚದಲ್ಲಿ ಯಾರಿಗೂ ಇಲ್ಲವಾದ್ದರಿಂದ ಅವೇನಾಗಿರಬಹುದೆಂದು ಅನೇಕ ಶಾಸ್ತ್ರಜ್ಞರು ಚರ್ಚಿಸುತಲಿದ್ದಾರೆ.

ಈಗ ಆಕಾಶದಲ್ಲಿ ಕಾಣುವ ನಕ್ಷತ್ರಗಳು ೫೦ ಕೋಟಿ ಇವೆ, ಆದರೆ ಕಾಣದವು ಇನ್ನೂ ಅಸಂಖ್ಯಾತವಾದಷ್ಟು ಇರುತ್ತವೆ. ಇವುಗಳಲ್ಲಿ ಮುಖ್ಯವಾದ ನಕ್ಷತ್ರಗಳನ್ನೂ, ಅವುಗಳ ಆಕಾರಗಳನ್ನೂ ಜನ್ಮನಿವೇದಸ್ಥಾನದ ಒಬ್ಬ ಫೋಟೋಗ್ರಾಫರನು ಪಕ್ಷ ತೆಗೆಯುತ್ತಾನೆ, ಅದಕ್ಕಾಗಿ ಅವನಿಗೆ ೨ ಕೋಟಿ ದ್ರವ್ಯ ಖರ್ಚಾಗುತ್ತದೆ.

ಸೂರ್ಯನಿಗೆ ೫೦ ಮೈಲಿಗಳ ಪ್ರಕಾರ ಹಗಲೂ ರಾತ್ರಿ ಒಂದು ನಿಮಿಷವೂ ನಿಲ್ಲದೆ ೬ ತಿಂಗಳ ದಿವಸ ಪ್ರಯಾಣ ಮಾಡಿದರೆ ಚಂದ್ರನ ಬಳಿಗೆ ಹೋಗಬಹುದೆಂತಲೂ, ಹೀಗೆಯೇ ಇದೇ ರೇಟಿನ ಪ್ರಕಾರ ೨೦೦ ವರುಷಗಳ ವರೆಗೂ ಪ್ರಯಾಣ ಮಾಡಿದರೆ ಸೂರ್ಯನ ಬಳಿಗೆ ಹೋಗಬಹುದಾಗಿದೆ ಎಂತಲೂ, ವಿಲಾಯತಿಯ ಒಬ್ಬ ಜ್ಯೋತಿಷಜ್ಞನು ತಿಳಿಸುತ್ತಾನೆ.

ಲಿವರ್‌ಪೂಲ್ ಸರ್ಕಲ್ ಕೋರ್ಟಿನಲ್ಲಿ ಒಬ್ಬ ಹೆಂಗಸು ತನ್ನ ಇಬ್ಬರು ಮಕ್ಕಳಿಗೆ ಶಿಕ್ಷೆಯಾಗುವದೆಂದು ತಿಳಿದು ಪದ ಕಾಲಿರಿಯಿಂದ ಹಿಡಿದುಕೊಂಡು ಮೂಗನಾಗಿ ಹೋಗಲೆಂದು ಶಪಿಸಿದಳಂತೆ, ಅದರ ಪ್ರಕಾರ ಆ ಕ್ಷಣವೇ ಫಿರ್ಯಾದಿಯು ಮಾತನಾಡುವದಕ್ಕಾಗದೆ, ಸ್ವಲ್ಪ ಹೊತ್ತು ಸುಮ್ಮನೆ ನಿಂತಿದ್ದು ಫಿರ್ಯಾದನ್ನು ವಜಾ ಮಾಡಿಸಿಕೊಂಡನಂತೆ. ಅವನು ೬೦ ದಿನಗಳ ವರಿವಿಗೂ ಮೂಗನಾಗಿ ಮಾತನಾಡುವದಕ್ಕಾಗದೆ ಇದ್ದನಂತೆ!

ನೆಮ್ನಿಕೋವಿನ ಗಣಿಗಳಲ್ಲಿ ಪ್ಲಾಟಿನಂ ಮೊದಲಾದ ಲೋಹಗಳನ್ನು ಅಗೆದು ತೆಗೆಯುವದಕ್ಕಾಗಿ ಕೂಲಿಯವರು ಅಹೋರಾತ್ರಿಯೂ ಕೆಲಸಮಾಡುತಲಿದ್ದಾರೆ, ಅಲ್ಲಿ ಬೆಳ್ಳಿಯು ತುಕ್ಕು ಎಷ್ಟು ವಿಪರೀತವಾಗಿ ಲಭಿಸಿದರೂ ಜನರು ಅದಕ್ಕೆ ಅಷ್ಟು ನಿಗಾ ಕೊಡುವದಿಲ್ಲ, ಯಾಕೆಂದರೆ, ಬೆಳ್ಳಿಯನ್ನು ಲೋಹಗಳಲ್ಲಿ ಬಹಳ ಕೀಳು ಜಾತಿಯದೆಂದು ತಿರಸ್ಕರಿಸುತ್ತಾರೆ. ಈ ತಿರಸ್ಕರಿಸಲ್ಪಟ್ಟ ಬೆಳ್ಳಿಗೆ ಇಂಡಿಯಾದಲ್ಲಿ ಪುರಸ್ಕಾರ ಉಂಟಾಗಿದೆ, ಆದ್ದರಿಂದಲೇ ರೂಪಾಯಿನ ಬೆಲೆಯು ದಿನೇ ದಿನೇ ಕಮ್ಮಿ ಯಾಗುತಲಿದೆ.

## EXTRACTS.

ದೇವರು ತನ್ನ ಭಕ್ತರಿಗೆ ಬಂದ ವಿಪತ್ತಿನೊಳಗಿಂದ ದೂರಮಾಡುತ್ತಾನೆಂತಲೇ ಆತನು ಭಕ್ತವತ್ಸಲಾ ಭಯನಿವಾರಣ ಎಂದು ಸ್ತೋತ್ರಮಾಡಿಸಿಕೊಳ್ಳುತ್ತಾನೆ. ದೇವರು ಇಹಲೋಕದ ಮಾನವಜಾತಿಗಳಿಗಾಗಿ ಪಕ್ಷಪಾತ ಮಾಡದೆ ಉಚ್ಚರೇ ಆಗಲೀ ನೀಚರೇ ಆಗಲೀ ಅವರವರ ಭಕ್ತ್ಯಾನುಸಾರವಾಗಿ ಫಲ ಕೊಡುತ್ತಾನೆ. ಮತ್ತು ತನ್ನಲ್ಲಿ ಸದಾ ಸರ್ವಕಾಲದಲ್ಲಿ ಆಸಕ್ತರಾಗಿರುವವರಿಗೆ ಎಂಥ ಸಂಕಟ ಬಂದರೂ ಅವರ ಮಾನ ಹೋಗದೆ ಕಾಯುತ್ತಾನೆ. ಹೀಗೆ ಮಹಾತ್ಮ್ಯವಿರುವ ನಮ್ಮ ಪುರಾಣಗಳಲ್ಲಿ ಅನೇಕ ಸಂಗತಿಗಳನ್ನು ಓದಿದಾಗ್ಯೂ ಈಗ ಪ್ರತ್ಯಕ್ಷ ಒಂದು ಸಂಗತಿಯು ಸಂಭವಿಸಿದ್ದನ್ನು ಕೇಳಿ ಭಯಭಕ್ತರಾಗುತ್ತೇವೆ. ಸೊಲಾಪುರದಿಂದ ೧೬ ಹರದಾರಿಗಳ ಮೇಲೆ ಪಂಢರಪುರವೆಂಬ ಗ್ರಾಮವಿರುತ್ತದೆ. ಅಲ್ಲಿ ನರಸಿಂಗನೆಂಬುವನೊಬ್ಬ ದೇವಭೋಳೆ ಹಾಡುಗಾರನಿರುತ್ತಾನೆ. ಆತನು ತನ್ನ ಮನೆಯಲ್ಲಿ ಒಂದು ಶಿವಾಲಯವನ್ನು ಕಟ್ಟಿಸಿ, ಲಿಂಗಸ್ಥಾಪನೆ ಮಾಡಿಸಿರುತ್ತಾನೆ. ಆತನು ಕಳೆದ ಚೈತ್ರ ಶುದ್ಧ ದ್ವಾದಶಿಯ ದಿನದ ರಥೋತ್ಸವ ಮಾಡಿಸಿದಲ್ಲಿ, ಆ ಪುರದ ದೇಶಪಾಂಡೆಯು ಈ ನರಸಿಂಗನಿಗೆ ನೀನು ನಿಜವಾಗಿ ದೇವರ ಭಕ್ತನಿದ್ದರೆ ರಥವು ತನ್ನಿಂದ ತಾನೇ ನಡೆಯುವಂತೆ ಮಾಡು, ಇಲ್ಲದಿದ್ದರೆ ನಾವು ಆ ಗುಡಿಯ ಉತ್ಸವ ಪೂಜೆ ಮಾಡುವದಿಲ್ಲವೆಂದು ಪಟ್ಟಸಿದನು. ಇದನ್ನು ನರಸಿಂಗನು ಏಕಾಗ್ರಚಿತ್ತದಿಂದ ಕೇಳಿ ತಥಾಸ್ತು ಅಂದನು. ರಥೋತ್ಸವದ ದಿವಸ ಈ ಅತ್ಯಾಶ್ಚರ್ಯದ ಕೌತುಕವನ್ನು ನೋಡುವದಕ್ಕಾಗಿ ಅನೇಕ ಜನರು ಮಿಳಿತರಾದರು. ರಥೋತ್ಸವದ ಕಾಲವು ಸಮೀಪಿಸಿದ ಕೂಡಲೆ ನರಸಿಂಗನು ದೇವರಿಗೆ ಮಂಗಳಾರತಿ ಮಾಡಿ, ರಥದ ಮುಂಭಾಗದಲ್ಲಿ ನಿಂತುಕೊಂಡು ಕೆಲವು ನಿಮಿಷ ಭಕ್ತವತ್ಸಲನನ್ನು ಸ್ಮರಿಸುತ್ತಾ ಕರುಣಾರಸ ಪ್ರಾರ್ಥಿಸಿದ ಬಳಿಕ ಜಯ ಜಯ ಶಂಕರನೆಂದು ಪರಮೇಶ್ವರನ ನಾಮೋಚ್ಚಾರಣೆ ಮಾಡುತ ಮುಂದಡಿಯನ್ನಿಕ್ಕಲು, ಭಕ್ತನ ವಾತ್ಸಲ್ಯವನ್ನು ಪರಿಪೂರ್ಣ ಮಾಡುವದಕ್ಕಾಗಿ, ಸಾಕ್ಷಾತ್ ಸ್ವಾಮಿಯೇ ರಥಾರೂಢನಾಗಿರುವನೋ ಏನೋ ಎಂಬಂತೆ ರಥವು ನರಸಿಂಗನ ಹಿಂದೆ ತನ್ನಷ್ಟಕ್ಕೆ ತಾನೇ ನಡೆಯುತ್ತಿತ್ತು. ರಥವು ನಡೆಯುವದನ್ನು ಜನರು ಕಂಡು ಆನಂದಭರಿತರಾದರೆಂದು ಈ ಸಂಗತಿಯನ್ನು ಒಬ್ಬ ಸದ್ಗೃಹಸ್ಥನು ಪೂನೆಯ ಜನಸ್ಥಿತೇಚ್ಛು ಪತ್ರಕ್ಕೆ ಬರೆದಿರುತ್ತಾನಂತೆ.

## ಮಕ್ಕಳನ್ನು ಬೆಳೆಸುವ ರೀತಿ.

"ತಸ್ಮಾಚ್ಛಿಷ್ಯಂಚ ಪುತ್ರಂಚ ತಾಡ ಯೇನ್ನತುಲಾಲಯೇತ್" ಎಂಬ ನೀತಿವಾಕ್ಯದ ಪ್ರಕಾರ ಮಕ್ಕಳನ್ನು ಶಿಕ್ಷಿಸದೆ ಬಿಡಬಾರದು. ಅನೇಕ ಜನರು ಮುದ್ದಿನಿಂದ ಮಕ್ಕಳನ್ನು ಲಾಲನೆಯಿಂದ ಬೆಳೆಸಿ ಅಬಿರುವಾಗಿ ಮಾಡುತ್ತಾರೆ, ಇದು ಸರಿಯಲ್ಲವು. ಅನುಭವವೂ ತಿಳುವಳಿಕೆಯೂ ತಾಂತವ್ಯ ಪರಿಜ್ಞಾನವೂ ಇಲ್ಲದ ಮೂರ್ಖರು ಮಕ್ಕಳನ್ನು ಎಷ್ಟು ಎಳೆಯಂದಿನಿಂದ ಬೆಳೆಸಿ ಗಮನಿಸಿ ಶಿಕ್ಷಿಸಬೇಕಾಗ್ಯು ಮಕ್ಕಳಿಗೆ ಬರೀ ಹಿಂಸೆಯಾಗುತ್ತದೆ ಹೊರತು ಬುದ್ಧಿ ಪ್ರಯೋಜನವಾಗಲಾರದು. ಕೆಲವರು ಬಹು ಸ್ವಲ್ಪ ತಪ್ಪು ಮಾಡಿದ ಮಕ್ಕಳನ್ನು ನಿಷ್ಕರುಣೆಯಿಂದ ಅನಿಯಾಗಿ ಹೊಡೆದು ತಮ್ಮ ಆಕ್ರೋಶವನ್ನು ತೀರಿಸಿಕೊಳ್ಳುವರು. ಕೆಲವರು ತಮ್ಮ ಮಕ್ಕಳು ಮಾಡುವ ತಪ್ಪುಗಳನ್ನು ಮನ್ನಿಸಿ ಆಗಲೇ ಆ ತಪ್ಪುಗಳಿಗೆ ತಕ್ಕ ಶಿಕ್ಷೆಗಳನ್ನು ಮಾಡದೆ ಸುಮ್ಮನೆ ನಿರ್ಲಕ್ಷ್ಯವಾಗಿರುವರು, ಕೆಲವು ಕೇಳದವರಂತೆ ಇರುವರು, ಹಾಗೂ ಇತರರ ಮಕ್ಕಳು ಬಹು ಸ್ವಲ್ಪ ತಪ್ಪುಗಳನ್ನು ಮಾಡಿದಾಗ್ಯೂ ಭಯಂಕರಾಗಿರುವ ಸಿಕ್ಕುಗಳಂತೆ ಶಿಕ್ಷಿಸಿ ಸೂಚಿಸುವರು. ಕೆಲವರು ತಮ್ಮ ಮಕ್ಕಳು ಮಾಡುವ ನೀಚಕೃತ್ಯಗಳನ್ನು ನೋಡಿ ಹೀಗೆ ಮಾಡಬಾರದೆಂದು ಬುದ್ಧಿಯನ್ನು ಹೇಳದೆ ಆನಂದದಿಂದಿದ್ದು ನಮ್ಮ ಮಗು ಬಹು ಚೇಷ್ಟೆ ಪ್ರವೀಣನಾಗಿ ಇರುವನೆಂದು, ಬಹು ಚುರುಕು ಎಂಬುದಾಗಿ ಹೊಗಳುತ್ತ ಮತ್ತಿಷ್ಟು ಪ್ರೋತ್ಸಾಹಿಸುವರು. ಕೆಲವು ಜನರು ಮಕ್ಕಳಿಗೆ ನಾನಾ ದುರ್ಭಾಷೆಗಳಿಂದ ಬೈಯುವರು, ಕಾಲಿನಿಂದ ಒದೆಯುವರು, ಥೂ ಎಂದು ಉಗುಳುವರು, ಕೈಕಾಲು ಕಟ್ಟಿಸಿ ನನ್ನನ್ನು ಕೊಟ್ಟ ಬಿಡಿ ಬಿಡಿ ಎಂದು ಪೇಳಿ ಕೊಡದೆ ಬಡಿಸುವವರೂ ಇರುತ್ತಾರೆ. ಇದು ಬಿಸಿ ಮೆಣಸಿನಕಾಯಿಯಿಂದ ಹೊಗೆ ಕೊಡುವರು. ನರಕಯಾತನೆಗಳನ್ನು ಕಾಯುವವಕ್ಕೂ ಹೋಗುವ ಪೀಠಿಕೆ ಕೊಡುವುದನ್ನು ತಿಳಿಯುತ್ತಿರುವ ಹುಡುಗರು ಮನೆಯಲ್ಲಿ ಅಥವಾ ಶಾಲೆಗಳಲ್ಲಿ ಏನಾದರೂ ತಮ್ಮ ಅಂಗಡಿಗೆ ಹಾಕಬೇಕಾದದ್ದು ಕೊಂಡು ತಿಂದು, ಮನೆ ಕೊಡದವರಂತೆ ವರ್ಧಮಾನರಾಗುವರು. ಕೆಲವು ಜನ ತಾಯಿತಂದೆಗಳು ತಮ್ಮ ಮಕ್ಕಳು ಕದ್ದು ತಂದ ಸ್ವಲ್ಪ ವಸ್ತುವೇ ಆ-ಬೀಜಾರಿ ವಸ್ತು ಎಂದಾಗ ಹಣಾರ್ಜನೆಗಳೇ ಆಗಲಿ ಏನು ಸಂತೋಷದಿಂದ ಬಚ್ಚಿಟ್ಟು ಕೊಂಡು ಏನಾದರೂ ತಿನ್ನಲಿಕ್ಕೆ ಕೊಟ್ಟು ಮತ್ತೆ ಮುಂದೆ ಕಾರ್ಯಸಾಧನೆಗೆ ಯೋಗ್ಯವಾದ ಬುದ್ಧಿಯನ್ನು ಕಲಿಸುವರು. ಕೆಲವರು, ಮಕ್ಕಳು ಮಕ್ಕಳು ಜಗಳವಾಡಿ ಹೊಡೆದಾಡಿದರೆ ಬಯ್ಯದೆ ತಾವು ಸಹಾಯವಾಗಿ ಹೋಗಿ ಬೀದಿಯಲ್ಲಿ ದುರ್ಭಾಷೆಗಳಿಂದ ಉನ್ಮತ್ತರಂತೆ ಕೂಗುವರೇ ಹೊರತು ತಮ್ಮ ಮಕ್ಕಳ ತಪ್ಪಿನ ಕಡೆ ಲಕ್ಷಿಸದೆ ಶಿಕ್ಷಿಸದೆ ಮತ್ತಿಷ್ಟು ಪ್ರೋತ್ಸಾಹ ಪಡಿಸುತ್ತಿರುವರು. ಕೆಲವು ಜನ ಅಧಿಕಾರಸ್ಥರ ಮಕ್ಕಳು ಬಡವರ ಮಕ್ಕಳನ್ನು ಬೈದು ಹೊಡೆದು ಹಿಂಸಿಸುತ್ತಿದ್ದಾಗ್ಯೂ ತಂದೆ ತಾಯಿಗಳು ಹಾಗೆ ಮಾಡಬಾರದೆಂದು ಮಕ್ಕಳಿಗೆ ಹೇಳದೆ ತಮ್ಮ ಮಕ್ಕಳ ಧೈರ್ಯಕ್ಕೂ ಸಾಹಸಕ್ಕೂ ಮೆಚ್ಚಿ ಆನಂದ ಪಡುತ್ತಿರುವರು. ಇಂತಾ ತಂದೆತಾಯಿಗಳೇ ಮಕ್ಕಳ ಬಾಳಿಗೆ ಮೃತ್ಯು ದೇವತೆಗಳೆಂದು ಹೇಳಲು ಅಡ್ಡಿಯೇನು ? ಎಳೇ ಮಗುವಿನ ಸರ್ವ ಸುಖ ಹೇಳದೆ ಕಡಿಯದೆ ಕೆಟ್ಟ ಚೇಷ್ಟೆಗಳನ್ನು ಕಲಿಸದೆ ಭಯ ಭಕ್ತಿಗಳಿಂದ ಸನ್ಮಾರ್ಗದಲ್ಲಿ ನಡೆಯುವ ಪದ್ಧತಿಗಳನ್ನು ತಂದೆತಾಯಿಗಳು ಮಕ್ಕಳಿಗೆ ಕಲಿಸಿ ಕೊಟ್ಟ ಹೊರತು ಹ್ಯಾಗೆ ಲಭಿಸೀತು ? ಕೆಲವರು ಮಕ್ಕಳು ಯಾರಲ್ಲಾದರೂ ಒಂದು ವಸ್ತುವನ್ನು ಕಂಡಲ್ಲಿ ಅದು ತಮಗೆ ಬೇಕೆಂದು ಅತ್ತು ಗೋಳಾಡಿ ಬೀದಿಯಲ್ಲಿ ಬಿದ್ದು ಉರುಳಾಡಿ ರಂಪಮಾಡುವರು. ಆಗ ಅವರ ಹಿರಿಯರು ಆ ಹುಡುಗ ಬೇಡಿದ ವಸ್ತು ಯಾರಲ್ಲಿ ಇಂಟೋ ಅವರಲ್ಲಿಂದ ಗಾಮದಿಂದಲೋ ದುಡ್ಡಿಂದ ಲೋ ಸಂಪಾದಿಸಿ ತಂದು ಮಕ್ಕಳಿಗೆ ಕೊಡುವರೇ ಹೊರತು ತಮ್ಮ ಮಕ್ಕಳನ್ನು ಶಿಕ್ಷಿಸಲಾರರು. ಕೆಲವು ಜನ ಮಕ್ಕಳು ಊಟ ತಿಂಡಿಗಳಲ್ಲಿ ಕಟ್ಟುಪಟ್ಟು ಇಲ್ಲದೆ ಕತ್ತಿಗಳ ಹಾಗೆ ಹಿಂದು ಹೊಟ್ಟೆಗಳನ್ನು ಬೆಳೆಸಿ ಕೊಂಡು ನಾನಾ ವಿಧ ವ್ಯಾಧಿಗಳಲ್ಲಿ ಬೀಳುವರು ಆಗ ತಂದೆ ತಾಯಿಗಳು ಮಗುಗಿ ಮರುಗಿ ವೈದ್ಯರಾದ ಮುದಿ ರಂಡೆಯರಿಂದ ಬದ್ಧ ಬೇಳುಗಳ ಉಪಜೀಗಳೂ ಮಾಡಿಸುವರೇ ಹೊರತು ರೋಗ ಬಂದ ಕಾರಣವನ್ನು ತಿಳಿದು ಅದಕ್ಕೆ ತಕ್ಕ ಔಷಧವನ್ನು ಕೊಡಿಸುವ ಬುದ್ಧಿ ಇಲ್ಲದೆ ತೊಳಲಿಸುವರು, ಮುಖ್ಯವಾಗಿ ತಾಯಿ ವಿದ್ಯಾವಂತರಾಗಿ ಅಥವಾ ಅನುಭವವೂ ಯುಕ್ತಾಯುಕ್ತ ವಿವೇಚನಾಶಕ್ತಿಯೂ ಬುದ್ಧಿಯೂ ಉಳ್ಳವಳಾಗಿರಬೇಕು. ಇಂತಾ ತಾಯಿಗಳು ಇನ್ನು ಸತ್ತು ವರುಷಗಳ ನಂತರ ನಮ್ಮ ಭರತ ಖಂಡದಲ್ಲಿ ಅನೇಕರುಂಟಾಗುವರೆಂದು ಖಂಡಿತವಾಗಿ ಹೇಳಬಹುದು

ಈಗ ನಮ್ಮ ದೇಶದಲ್ಲಿ ತಾಯಿ ತಂದೆಗಳು ಮಕ್ಕಳಿಗೆ ಕಲಿಸಬೇಕಾದ ವಿಷಯಗಳ್ಯಾವವೆಂದರೆ.—

೧. ಸುಳ್ಳು ಹೇಳುವದನ್ನೂ, ಕೆಟ್ಟ ಮಾತುಗಳಾಡುವದನ್ನೂ ಕಲಿಸಬಾರದು, ಕಲಿಸುವವರ ಜೊತೆಗೆ ಬಿಡಬಾರದು

೨. ಕರೆದರೆ ತತ್‌ಕ್ಷಣ ಮಾತನಾಡಬೇಕು, ಹೇಳಿದ ಕೆಲಸವನ್ನು ಮಾಡಬೇಕು.; ಲಜ್ಜೆಯೋ ದಮ್ಮಯ್ಯೋ ಹೇಳು ಅಂದ ಕ್ಷಣ ಹೇಳಬೇಕು, ಆ ಕೆಲಸವನ್ನು ಮಾಡ ಬೇಡೆಂದು ಹೇಳಿದ ಕ್ಷಣ ಬಿಟ್ಟುಬಿಡಬೇಕು; ಇತ್ಯಾದಿ ಬುದ್ಧಿಗಳನ್ನು ಕಲಿಸಬೇಕು.

೩ ಕರೆದ ಕ್ಷಣ ಬಾರದೇ, ಹೇಳು ಅಂದದ್ದು ಹೇಳದೇ, ಮಾಡು ಅಂದದ್ದು ಮಾಡದೇ, ಮಾಡಬೇಡವೆಂದದ್ದನ್ನ ಬಿಡದೇ ಇದ್ದ ಹುಡುಗನನ್ನ ಆ ಆ ತಪ್ಪುಗಳಿಗೆ ತಕ್ಕ ಮಾತ್ರ ಹೊಡೆದು ಶಿಕ್ಷಿಸಿ ಆ ಕಾರ್ಯಗಳನ್ನು ಮಾಡಿಸಲೇ ಬೇಕು,

೪. ಹುಡುಗರ ಶಕ್ತಿಗೆ ಮೀರಿದ ಕೆಲಸಗಳನ್ನು ಹೇಳಿ ಅದೇ ಹಿಡೀ ಮಾಡದ ಶಿಕ್ಷಿಸುವದು ಹಿಂಸೆಗೆ ಶ್ರೇಯಸ್ಕರವಲ್ಲವು

೫ ಪರರ ಬಳಿ ಇರುವ ಯಾವ ಬಗೆಯ ವಸ್ತುವನ್ನೇ ಆಗಲಿ ಕಂಡ ಕ್ಷಣ ತನಗೆ ಬೇಕೆಂದು ಪ್ರೇರಣಾ ಹುಡುಗನಿಗೆ ಆ ವಸ್ತುವನ್ನು ಖಂಡಿತವಾಗಿ ಕೊಡಲೇ ಬಾರದು ಕಂಡವರ ಸ್ವತ್ತು ನಾವು ಮುಟ್ಟ ಬಾರದು. ಛೀ, ಥೂ, ಎಂದು ಹೀಗಳದು ಮರೆಸಿ ಬಿಡಬೇಕು

೬ ಜಾತ್ಯ ಹುಟ್ಟಿಸತಕ್ಕ ಪದಾರ್ಥಗಳನ್ನೂ ಹಣ್ಣು ಹಂಪಲಗಳನ್ನೂ ತೋರಿಸಲೂ ಕೊಡಲೂ ಬಾರದು, ದೊಡ್ಡವರು ಸಹ ಮಕ್ಕಳ ಎದುರಿನಲ್ಲಿ ತಿನ್ನ ಬಾರದು ತಾವು ತಿನ್ನುತ್ತಿರುವಾಗ ಸನಿಹ ಬೇಕೆನ್ನುವ ದುರಭ್ಯಾಸವನ್ನು ಕಲಿಸಬಾರದು

೭. ಊಣ್ಣುವವರ ಜೊತೆಯಲ್ಲಿ, ಉಣಿಸುವನ್ನುವವರ ಜೊತೆಯಲ್ಲಿ ಮಿತಿಯಿಲ್ಲದೆ ತಿಂದು ಅರಿವ ಮಕ್ಕಳಿಗೆ ವ್ಯಾಧಿಗಳು ತಪ್ಪವೇ ಬರುವವು. ಆದ್ದರಿಂದ ಈ ವಿಷಯದಲ್ಲಿ ತಾಯಿತಂದೆಗಳು ತಮ್ಮ ಮಕ್ಕಳನ್ನು ಬಹಳ ಜಾಗರೂಕರಾಗಿ ಕಾಪಾಡಬೇಕು.

೮ ಮಕ್ಕಳು ಸದಾ ಆಟವಾಡುತ್ತಾ ಸದಾ ಹೇಳು ನೋಡುವಿಷ್ಟರಿಗೆ ಯಾವ ಕೆಲಸವನ್ನು ಮಾಡಿದಾಗ್ಯೂ ಅವನ್ನು ಯುಕ್ತವಾದ ದಿಟ್ಟವಾಗಿ ಪೂರ್ಣವಾಗಿ ಮಾಡುವಂತೆ ಕಲಿಸಿಕೊಡಬೇಕು

೯. ನಿಲಿಸಲ್ಲಿ ಕಾಲವಿದೂ ಅಲ್ಪ ಸ್ವಲ್ಪ ಸಾಧುವಾದ್ದು ಮತ್ತು ಕಷ್ಟ ಕೆಲಸಗಳನ್ನು ಮಾಡುವುದಾ ಸಹ ಉಪಾಯವನ್ನೂ ಕಲಿಸಿ ಕೊಡಬೇಕು,

೧೦ ಮಕ್ಕಳ ಎದುರಿಗೆ ಗಂಡ ಹೆಂಡತಿ ಜಗಳವಾಡಬಾರದು, ಕೂಡಿ ಆಡುವ ಮಕ್ಕಳು ಮಾತುಗಳಾಡುವದು ಬೇಡ ಮುದ್ದಿಗೋಸ್ಕರ ಮಕ್ಕಳ ಮುಂದೆ ಚಪ್ಪಾಳೆ ಬಡಿಯುತ್ತ ಪದಗಳನ್ನು ಹೇಳಿ ಕೊಡುವ ಕುಣಿದಾಡ ಬಾರದು. ಮಕ್ಕಳ ಮನಸ್ಸಿಗೆ ಹರ್ಷವೂ ಉತ್ಸಾಹವೂ ಉಂಟುಮಾಡುವಂಥ ಚಿತ್ರಪಟಗಳನ್ನೂ ಆಟಗಳನ್ನೂ ಮೃಗಗಳನ್ನೂ ಅಗತ್ಯವಾಗಿ ತೋರಿಸುತ್ತಿರಬೇಕು.

೧೧. ಚಿನ್ನ, ಬೆಳ್ಳಿಯ ವಸ್ತುಗಳನ್ನು ಮಕ್ಕಳಿಗಿಟ್ಟು ಆ ವೇಷವನ್ನು ನೋಡಿ ಸಂತೋಷದ ಭರಿತರಾಗುತ್ತಿರುವವರಲ್ಲಿ ಅನೇಕರಿಗೆ ಅರ್ಥಹಾನಿ, ಪ್ರಾಣಹಾನಿ, ಸಹ ಉಂಟಾಗಿರುವ ಪ್ರಾಸ್ತವಿಕವದರಿಂದ ಒಂದಾದ ಈ ಕಾರ್ಯವನ್ನು ಆದಷ್ಟಿಗೆ ತಗ್ಗಿಸುವದೇ ಉತ್ತಮವು.

೧೨ ಮಕ್ಕಳಿಗೆ ಅಂಗಿಗಳಿಲ್ಲದೇ ಬತ್ತಲೆ ಇರಲೀಸಬಾರದು.

೧೩. ಮಕ್ಕಳನ್ನು ತಂದೆಯು ಶಿಕ್ಷಿಸುತ್ತಿರುವಾಗ ತಾಯಿ ಬಂದು ಪರರಾಗಿ ಅಡ್ಡಿಯ ಮಾತುಗಳನ್ನಾಡ ಬಾರದು ಬಿಡಿಸ ಬಾರದು, ಮುದ್ದಿಸಿಕೊಳ್ಳಬಾರದು ತಂದೆ ತಾಯಿಗಳ ಮನಸ್ಸು ಒಂದೇರೀತಿ ಇರದಿದ್ದರೆ ಆ ಶಿಕ್ಷೆಯಿಂದ ಏನೂ ಮೇಲುಂಟಾಗಲಾರದು. ಮಕ್ಕಳಿಗೆ ನಂಬಿಗೆಯೂ ಭಯವೂ ತಪ್ಪಿ ಹೋಗಿ ಚಂಡಿಗಳಾಗಲು ಕಾರಣವಾಗುವದು. ಆದ ಪ್ರಯುಕ್ತ ಗಂಡ ಹೆಂಡರು ದೇಹವೆರಡಾಗಿದ್ದಾಗ್ಯೂ ಮನಸ್ಸು ಒಂದೇ ಆಗಿದ್ದರೆ ಮಾಧುರ್ಯದ ಅನುವಾದಗಳುಂಟಾಗುವವು

Bangalore—Printed and published at the Karnataka Press, No. 40, Hospital Road, City—1893

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

## ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning**

ಪ್ರಕಾಶಮವಿವಿಧಪ್ರವೃತ್ತ್ಯಾಗಮಾರ್ಥ್ಯಕರ್ಣಾಟಕಪ್ರಕಾಶನವರಾವಿದಾಪ್ರಥಿತಸಾಹಿತೀಶೋಭಿತಾ॥ಮೃಗಾಂಕಹಿತವಾಸರನಿರುತಮುದ್ರಣಾಸಜ್ಜನೈರ್ನಿಶಾಸುಪರಿಪೋಷಿತಾ(ಶತಿಮಾನಸಸುಸುದುಃ॥

Vol XX] BANGALORE—MONDAY JULY 10 1893. [No 27

ಸಂಪುಟ ೨೦] ಬೆಂಗಳೂರು—ಸನ್ ೧೮೯೩ನೇ ಇಸವಿ ಜುಲೈ ೧೦ನೇ ತಾರೀಖ್ ಸೋಮವಾರ [ಸಂಖ್ಯೆ ೨೭.


### ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡದವರುಗಳಿಗೆ

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ಸಾಲ್ ಒಕ್ಕೆ | 6—0 0 | 8—0—0 |
| 6 ತಿಂಗಳಿಗೆ | 3—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡದವರುಗಳಿಗೆ

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ಸಾಲ್ ಒಕ್ಕೆ | 3—0—0 | 4—0—0 |
| 6 ತಿಂಗಳಿಗೆ | 1—12—0 | 2—8—0 |

ಈ ಪತ್ರಿಕೆಗೆ [illegible] ಒಂದು ತಿಂಗಳಿಗೆ [illegible] ಇಂಗ್ಲಿಷ್ [illegible] ಕನ್ನಡ [illegible] ಕೊಡಬೇಕು [illegible]

### ಅಡ್ವರ್ಟೈಸ್ಮೆಂಟು ಚಾರ್ಜ್

ಒಂದು ಸಾರಿಗೆ ಪಂಕ್ತಿ ಒಂದಕ್ಕೆ ೦—೧—೦

ಎರಡನೆಯವರಿಗೆ ಪಂಕ್ತಿ ಒಂದಕ್ಕೆ ೦—೧—೦

ಫರಾ—ಎರಡಕ್ಕಿಂತ [illegible] ಒಂದಕ್ಕೆ ೧ ಆಣೆಯಂತೆ [illegible] ಈ ಪತ್ರಿಕೆಯ [illegible] ಪ್ರಕಟನೆಗಳು [illegible] ಪ್ರಕಟಿಸಲ್ಪಡುವುದು [illegible]

*ADVERTISEMENTS*

## NOTICE

### VAIDYASARA SANGRAHA

A TREATISE ON THE PRINCIPLES OF HINDU MEDICINE

*Price including Postage Rs. 1-0-0*

ವೈದ್ಯಸಾರ ಸಂಗ್ರಹ

ಈ ಗ್ರಂಥವು [illegible] ವೈದ್ಯಶಾಸ್ತ್ರದ [illegible]

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಕೂಲಿ, ಸೇರಿ ಪ್ರತಿ ಒಂದಕ್ಕೆ ರೂ ೧ 0—0

ಬಿ. ವಿ. ವೆಂಕಟರಾವ್

ಬೆಂಗಳೂರ್ ಮರ್ಕ್ಯಂಟೈಲ್ ಪ್ರೆಸ್ [illegible]

### ನೋಟೀಸ್

#### ಬೆಂಗಳೂರು ಕರ್ನಾಟಿಕ್ ಪ್ರೆಸ್

೧೮೬೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು

ಇದರಲ್ಲಿ, ಸಕಲವಿಧ ಕೆಲಸಗಳು ಸುಲಭಬೆಲೆಗೆ ತೀವ್ರವಾಗಿಯೂ ಶ್ಲಾಘ್ಯವಾಗಿಯೂ, ಮಾಡಲ್ಪಡುವವು ಇದರಲ್ಲಿ ಸಂಸ್ಕೃತ ಇಂಗ್ಲಿಷ್ ಕನ್ನಡ ಕೆಲಸ ಮಾತ್ರವೇ [illegible] ಇತರ ತರಹೆಗಳನ್ನು ಸದರೀ ಕಂಪೆನೀ [illegible] ತಿಳಿದುಕೊಳ್ಳಬಹುದು

### ನೋಟೀಸ್

ಗಣೇಶ ರಾಮಚಂದ್ರ ಕರ್ಕೆ ಮತ್ತು ಕಂಪೆನಿ. ಕಮಿಷನ್ ಏಜಂಟ್ಸ್

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಮಕ್ಕೆ ಬಹಳ [illegible] ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ

[illegible] ಪುಸ್ತಕಗಳು, ಮುತ್ತುಗಳು, [illegible] ಮುತ್ತುಗಳು, [illegible], ವಾಚ್‌ಗಳು, [illegible] ಸ್ಟೇಷನರಿಗಳು, [illegible] ಪ್ರಕಾಶ [illegible] ವಸ್ತ್ರಗಳು, [illegible] ಆಫೀಸ್ [illegible] ಉತ್ತರೀಯ, ಅತ್ಯುತ್ತಮವಾಗಿರುವ [illegible] ಪಾತ್ರೆಗಳು, ಬೆಳ್ಳಿ ಪಾತ್ರೆಗಳು, ಕೇಸರಿ, ಕಸ್ತೂರಿ ಇವೇ ಮೊದಲಾದ ಸಾಮಾನುಗಳು

[illegible] ಅಪೇಕ್ಷಿಸತಕ್ಕವರು [illegible] ಪೋಸ್ಟೇಜ್ [illegible]

ವಿಳಾಸ—ಗಣೇಶ ರಾಮಚಂದ್ರ ಕರ್ಕೆ, ಮತ್ತು ಕಂಪೆನಿ, ಕಮಿಷನ್ ಏಜಂಟ್, ಠಾಕೂರ್‌ದ್ವಾರ, ಮಾರ್ಕೆಟ್ ಪೋಸ್ಟ್ ಮುಂಬೈ

### ನೋಟೀಸ್

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು [illegible] ಬೆಂಗಳೂರು [illegible] ಸಿದ್ಧವಾಗಿವೆ [illegible] ಕಳುಹಿಸಿ ತರಿಸಿಕೊಳ್ಳಬಹುದು

### ಸಂಸ್ಕೃತ ಗ್ರಂಥಗಳು

| | ರೂ | ಆ | ಪೈ |
|---|---|---|---|
| ಸಟೀಕಾ ವೈದ್ಯಸಾರಸಂಗ್ರಹ | ೫ | ೦ | ೦ |
| „ ಶಿವಗೀತೆ | ೧ | ೦ | ೦ |
| „ ಶಿವಸಹಸ್ರನಾಮ | ೦ | ೮ | ೦ |
| „ ಕಾಲಮೃತ | ೧ | ೦ | ೦ |
| „ ಟಿ॥ ಮಂಜರಿ ಪಾರಾಯಣ | ೦ | ೩ | ೦ |
| „ ಟಿ॥ ಗೊವಿಂದ ಗೀತೆ | ೦ | ೧ | ೦ |
| „ ಟೀ॥ [illegible] (ಗುರು [illegible]) | ೦ | ೪ | ೦ |
| ವಿ [illegible] ಪತ್ರಿಕೆ | ೦ | ೩ | ೦ |
| ಸೂರ್ಯಶತಕ [illegible] | ೦ | ೨ | ೦ |
| ಕೃಷ್ಣಕರ್ಣಾಮೃತ | ೦ | ೨ | ೦ |
| ತ್ರಿಕಾಂಡ ಅಮರ [illegible] | ೦ | ೨ | ೦ |
| [illegible] | ೦ | ೧ | ೦ |

### ಕನ್ನಡ ಗ್ರಂಥಗಳು

| | ರೂ | ಆ | ಪೈ |
|---|---|---|---|
| [illegible] ಅವ್ವೆಲ್ | ೩ | ೦ | [illegible] |
| ಬಿಟಂ [illegible] | ೧ | ೨ | ೦ |
| ವೃಷಭೇಂದ್ರವಿಜಯ | ೧ | ೮ | ೦ |
| [illegible] | ೦ | ೩ | ೦ |
| ಹನುಮದ್ವಿಲಾಸ | ೦ | ೬ | ೦ |
| [illegible] ಮರ್ದನ | ೦ | ೨ | ೦ |
| [illegible] | ೦ | ೨ | ೦ |
| [illegible] | ೦ | ೨ | ೬ |
| ಸುದಾಮಚರಿತ್ರೆ | ೦ | ೧ | ೦ |
| [illegible] ಚರಿತ್ರೆ | ೦ | ೧ | ೦ |
| [illegible] | ೦ | ೧ | ೮ |
| [illegible] | ೦ | ೧೨ | ೦ |
| [illegible] | ೨ | ೦ | ೦ |

## TELEGRAMS

ತಂತಿ ವೃತ್ತಾಂತಸಂಗ್ರಹ.

### ಡ್ಯೂಕ್ ಆಫ್ ಯಾರ್ಕ್ ಯವರ ವಿವಾಹ ಮಹೋತ್ಸವ.

ಲಂಡನ್, ೬ನೇ ಜುಲೈ—ಈದಿನ ರಾಜಧಾನಿಯಲ್ಲಿ ಚೆನ್ನಾಗಿ ಬಿಸಿಲು ಕಾಯಿದ್ದರಿಂದ ಡ್ಯೂಕ್ ಆಫ್ ಯಾರ್ಕ್‌ಯವರ ವಿವಾಹೋತ್ಸವ ಬೆಳೆಸುವದಕ್ಕೆ ಅನುಕೂಲವಾಗಿದೆ ಸರ್ಕಾರ್ ಕಟ್ಟಡಗಳೂ ರಾಜಬೀದಿಗಳೂ ನಾನಾವಿಧ ಅಲಂಕಾರಗಳಿಂದ ಶೋಭಿತವಾಗಿ ಅವು ನೋಡುವದಕ್ಕಾಗಿ ಬಹುಜನ ಬಂದು ನೆರದಿದ್ದರು

ಲಂಡನ್, ೭ನೇ ಜುಲೈ ನಿನ್ನೆಯದಿನ ಡ್ಯೂಕ್ ಆಫ್ ಯಾರ್ಕ್ ಸಾಹೇಬರಿಗೂ ಮೇರಿ ಎಂಬ ರಾಜಕುಮಾರಿಯವರಿಗೂ ವಿವಾಹವು ನಡೆಯಿತು ಘನವಂತರಾದ ಸದರೀ ಭರ್ತೃ ಭಾರ್ಯೆಯರಿಬ್ಬರೂ, ಸೇಂಟ್ ಜೇಂಸ್ ಚಾಪಲ್ ಎಂಬ ಆಲಯಕ್ಕೆ ಹೋಗಿದ ಕಾಲದಲ್ಲೂ ಅಲ್ಲಿಂದ ತಿರುಗಿ ಬಂದ ಕಾಲದಲ್ಲೂ ಪ್ರಜೆಗಳಿಂದ ಮಾಡಲ್ಪಟ್ಟ ಮರ್ಯಾದೆಗಳು ಕೈಗೊಂಡರು ಸದರೀ ಆಲಯದಲ್ಲಿ ಯೂರೋಪಿಯನ್ ಅಧಿಕಾರಿಗಳೂ ನೇಟಿವ್ ಅರಸರುಗಳೂ ಧರಿಸಿಕೊಂಡು ಬಂದಿದ್ದ ಅನರ್ಘ್ಯವಾದ ರತ್ನಾಭರಣಗಳು ಒಳಗೆ ಶೋಭಾಯಮಾನವಾಗಿ ಕಾಣ್ಗೊಳಿಸುತಲಿದ್ದವು, ವಿವಾಹವು ಪೂರ್ತಿಯಾದಮೇಲೆ ನವ ದಾಂಪತ್ಯದವರು ಪಥಿಕರೊಡನೆ ಬಕ್ಕಿಂಗ್ಹಾಂ ಅರಮನೆಯ ಮಹಡಿಯಲ್ಲಿ ನಿಂತುಕೊಂಡು ಪ್ರಜೆಗಳು ಮಾಡಿದ ಕೋಲಾಹಲವನ್ನು ಕೇಳಿ ಸಂತುಷ್ಟಮನಸ್ಕರಾದರು ಲಂಡನ್ ಪಟ್ಟಣದ ಸಾಂಪ್ರದಾಯಿಕ ಚರಿತ್ರೆಯಲ್ಲಿ ಈದಿನವು ಸ್ಮರಣೀಯವಾದುದಾಗಿರುವುದು ಬೀದಿಗಳಲ್ಲಿ ಈ ಸಂದರ್ಭದಲ್ಲಿ ಸೇರಿದಷ್ಟು ಗುಂಪು ಹಿಂದೆ ಯಾವಾಗಲೂ ಸೇರಲಿಲ್ಲವು ಇಂಡ್ಯಾದೇಶದ ಸವಾರ್ ಸೇನೆಯು ಮಹಾರಾಜ್ಞಿಯವರ ಗಾಡಿಯ ಮುಂದುಗಡೆ ಹೋಯಿತು

ನಿನ್ನೆಯದಿನ ರಾತ್ರಿ ಬೀದಿಗಳಲ್ಲಿ ಅತಿ ಪ್ರಕಾಶಮಾನವಾಗಿ ದೀಪೋತ್ಸವಗಳು ನಡೆದವು ಬೀದಿಗಳಲ್ಲಿ ಜನರು ತುಂಡೋಪತುಂಡವಾಗಿ ತಿರುಗುತಲಿದ್ದರು, ಪರಂತು ಯಾವವಿಧ ಗದ್ದಲವೂ ಇಲ್ಲವು

### THE MONEY MARKET

ಮದರಾಸ್, ಶನಿವಾರ, ತಾರೀಖ್ 8ನೇ ಜುಲೈ 1893

ಸೇಕಡ 4ರೂ ಬಾಬತು ಗವರ್ನಮೆಂಟ್ ಪತ್ರಗಳು ರೂಪಾಯಿ, 106 14—0 ಇಂದ 107—6—0 ವರೆಗೆ

ಮದರಾಸ್ ಬ್ಯಾಂಕ್ ಷೇರ್‌ಗಳು (500) ರೂಪಾಯಿಗಳ ಬಾಬತು 960 ಲಾಗಾಯಿತು 1,96[illegible]ವರೆಗೆ

ಕಮರ್ಷಿಯಲ್ ಮ್ಯಾಂಡ್ ಮರ್ಕ್ಯಂಟೈಲ್ ಬ್ಯಾಂಕ್ ಷೇರುಗಳು (100) ಬಾಬತು 160 ರಿಂದ 165 ವರೆಗೆ

ಸವರನ್‌ಗಳು, 15—10—0ಇಂದ 15—12—0ವರೆಗೆ

ಬ್ಯಾಂಕ್‌ಬಿಲ್‌ಗಳು ದಾನೆ ದರ್ಶನ ಹುಂಡಿಗಳು, ಲಂಡನ್‌ಕ್ಕೆ

6 ತಿಂಗಳವಾಯಿದೆಗೆ, 1s 3 29/32 d

ಡಿಟೋ 4 ತಿಂಗಳವಾಯಿದೆಗೆ, 1s 3 27/32d

ಡಿಟೋ ಕೇಳಿದಾಗ, 1s 3 3/4 d

# ಕರ್ಣಾಟಕ ಪ್ರಕಾಶಿಕಾ.

## THE KARNATAKA PRAKASIKA

MONDAY, JULY 10 1893

೧೮೯೩ನೇ ಇಸವಿ ಜುಲೈ ತಾ॥ ೧೦ನೇ ಸೋಮವಾರ

### ಇಂಡ್ಯಾದೇಶದ ಸಿವಿಲ್ ಸರ್ವೀಸ್ ಪರೀಕ್ಷೆ.

ಇಂಡ್ಯಾ ದೇಶದ ಸಿವಿಲ್ ಸರ್ವೀಸ್ ನೌಕರಿಗೆ ನೌಕರರಾಗತಕ್ಕವರು, ಆ ಬಗ್ಗೆ ಇಂಗ್ಲಾಂಡಿನಲ್ಲಿ ಏರ್ಪಡಿಸಲ್ಪಟ್ಟಿರುವ ಪಾಠಶಾಲೆಯಲ್ಲಿ ಓದಿ, ಅಲ್ಲಿ ನಡೆಯುವ ಪ್ರೋಟೋಪ್ರೋಟ ಪರೀಕ್ಷೆಯಲ್ಲಿ ತೇರ್ಗಡೆಯಾಗುವಂತವರು ಕೆಲವು ಷರತ್ತುಗಳಿಗೆ ಬದ್ಧರಾಗಿ ಇಂಡ್ಯಾ ದೇಶಕ್ಕೆ ಬಂದು ಇಲ್ಲಿ ಅಸಿಸ್ಟೆಂಟ್ ಕಲೆಕ್ಟರ್, ಸಬ್ ಕಲೆಕ್ಟರ್ ವಗೈರೆ ಅಧಿಕಾರಗಳಂ ಪಡೆದು ಕ್ರಮಕ್ರಮವಾಗಿ ಕಲೆಕ್ಟರ್, ಡಿಸ್ಟ್ರಿಕ್ಟ್ ಜಡ್ಜ್, ತರುವಾಯ ರೆವಿನ್ಯೂ ಬೋರ್ಡ್ ಮೆಂಬರ್, ಗವರ್ನಮೆಂಟ್ ಸೆಕ್ರೆಟರಿ ಮೊದಲಾದ ದೊಡ್ಡ ದೊಡ್ಡ ಅಧಿಕಾರಗಳಿಗೆ ನಿಯಮಿಸಲ್ಪಡುತ್ತಾರೆ ಸಾಮಾನ್ಯವಾಗಿ ಇಂಡ್ಯಾ ದೇಶೀಯರು ಇಂಗ್ಲಾಂಡಿಗೆ ಹೋಗಿ ಅಲ್ಲಿ ಕೆಲವು ಕಾಲವಿದ್ದು ಅಲ್ಲಿನ ಪಾಠಶಾಲೆಯಲ್ಲಿ ಓದಿ ಸದರೀ ಪರೀಕ್ಷೆಯಂ ಕೊಡುವದಕ್ಕೆ ಅನೇಕ ಕಾರಣಗಳ ದೆಸೆಯಿಂದ ಸಾಧ್ಯವಾಗದೆ ಹೋಗಲು ಸದರೀ ಪರೀಕ್ಷೆಯಲ್ಲಿ ತೇರ್ಗಡೆಯಾಗುವ ಇಂಗ್ಲಿಷ್ ಜನರೇ ಇಲ್ಲಿನ ದೊಡ್ಡ ಅಧಿಕಾರಗಳಿಗೆ ನಿಯಮಿಸಲ್ಪಡುತ್ತಾ ಬರುತ್ತಾರೆ. ಕದಾಚಿತ್ ಇಂಡ್ಯಾದೇಶೀಯರು ಯಾರಾದರೂ ಒಬ್ಬರಿಬ್ಬರು ಇಂಗ್ಲಾಂಡಿಗೆ ಹೋಗಿ ಓದಿ ಪರೀಕ್ಷೆ ಕೊಟ್ಟು ತೇರ್ಗಡೆಯಾಗಿ ಬರುವ್ವದೂ ಉಂಟು ಈಚೆಗೆ, ಅಂದರೆ, ಕಳೆದ ತಿಂಗಳ ೨ನೇ ತಾರೀಖ್‌ನಲ್ಲಿ, ಮಹಾರಾಜ್ಞಿಯವರ ಪಾರ್ಲಿಯಮೆಂಟ್ ಸಭಾಜನವಲ್ಲಿ, ಅಂದರೆ ಹೌಸ್ ಆಫ್ ಕಾಮನ್ಸ್ ಸಭಾಜನವಲ್ಲಿ, ಮಿ॥ ಪಾಲ್ ಎಂಬವರು, ಸದರೀ ಪ್ರೋಟೋಪ್ರೋಟ ಪರೀಕ್ಷೆಯು ಇಂಗ್ಲಾಂಡಿನಲ್ಲೂ ಇಂಡ್ಯಾದೇಶದಲ್ಲೂ ಒಂದೇಕಾಲದಲ್ಲಿ ನಡೆಯುವಹಾಗೆ ಏರ್ಪಾಡು ಮಾಡುವುದುಚಿತವೆಂದು ಪ್ರಸ್ತಾಪಿಸಲು, ಅದಕ್ಕೆ ಅನೇಕರು ಪ್ರತಿಭಟಿಸಿ ಹಾಗೆ ಮಾಡಕೂಡದೆಂದು ವಾದಿಸಲಾಗಿ, ಆಕಾಲದಲ್ಲಿ ಹಾಜರಿದ್ದ ಮೆಂಬರ್‌ಗಳು ಎರಡು ಪಕ್ಷಿಯಾಗಿ, ಮಿ॥ ಪಾಲ್ ಎಂಬವರ ಪಕ್ಷದಲ್ಲಿ ಎಂಟುಮಂದಿ ಅಧಿಕನಾಗಿ ಸೇರಿದರಿಂದ ಅವರು ಸೂಚಿಸಿದ ಪ್ರಕಾರ ಸದರೀ ಪರೀಕ್ಷೆಯು ಮುಂದೆ ಒಂದೇ ಕಾಲದಲ್ಲಿ ಇಂಗ್ಲಾಂಡಿನಲ್ಲೂ ಇಂಡ್ಯಾದೇಶದಲ್ಲೂ ನಡೆಯತಕ್ಕದ್ದೆಂತಲೂ, ಅದರ ಪ್ರಶ್ನಪತ್ರಿಕೆಗಳೆಲ್ಲವು ಒಂದೇಯಾಗಿರತಕ್ಕದ್ದೆಂತಲೂ, ಇಂಗ್ಲಾಂಡಿನಲ್ಲೂ ಇಂಡ್ಯಾ ದೇಶದಲ್ಲೂ ತೇರ್ಗಡೆಯಾದವರನ್ನೆಲ್ಲ ಅವರವರ ಯೋಗ್ಯತಾನುಸಾರ ಒಂದೇ ಪಟ್ಟಿಯಲ್ಲಿ ದಾಖಲ್ ಮಾಡತಕ್ಕದ್ದೆಂತಲೂ ನಿರ್ಣಯ ಮಾಡಿದರು ಈ ನಿರ್ಣಯವು, ತಾವು ಬಹುಕಾಲದ ಮೊದಲು ಅನುಭವಿಸುತ ಬಂದ ಪ್ರಯೋಜನಕ್ಕೆ ಭಂಗಕಾರಿಯಾಗಬಹುದೆಂದು ಭಾವಿಸಿದ ಇಂಗ್ಲಿಷ್ ಜನರಿಗೆಲ್ಲ ಹೃದಯವ್ಯಥೆಯನ್ನುಂಟುಮಾಡಲು, ಈ ಹೊಸ ಏರ್ಪಾಡು ಆಚರಣೆಯಲ್ಲಿ ತರಲ್ಪಡತಕ್ಕ ಇದರ ಬಗ್ಗೆ ಕೇವಲ ಬಲ್ಲಜನಗಳಿಂದ ಕೆಲವು ಕಾರಣಗಳಂ ಕಲ್ಪಿಸಿಕೊಂಡು ಆಕ್ಷೇಪಿಸುತಲಿದ್ದಾರೆ. ಅಂ

ಈ ಆಕ್ಷೇಪಣೆಗಳಲ್ಲೊಕ್ಕಿ, ಒಂದನೆಯದು —ಇಂಗ್ಲಾಂಡಿನಲ್ಲಿ ನಡೆಯುವಂತೆ ಇಂಡ್ಯಾದೇಶದಲ್ಲೂ ಸದರೀ ಪರೀಕ್ಷೆ ನಡೆಯಬೇಕೆಂಬ ಒಂದು ಹಕ್ಕನ್ನು ಕಲ್ಪಿಸಿದರೆ, ಬಂಗಾಳೀ ದೇಶೀಯರೇ ಅಧಿಕವಾಗಿ ಸದರೀ ನೌಕರಿಯಲ್ಲಿ ಸೇರುವದಕ್ಕೆ ಅವಕಾಶವುಂಟಾಗುವದು. ಸದರೀ ಜನರು ಕೇವಲ ಸುಲಭವಾಗಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಮೇಲಕ್ಕೆ ಬಂದುಬಿಡುತ್ತಾರೆಂಬದು. ಒಂದು ದೇಶೀಯರನೇಕರು ಸದರೀ ನೌಕರಿಯಲ್ಲಿ ಪ್ರವೇಶಿಸುವದಕ್ಕೆ ಅವಕಾಶವಿಲ್ಲದಂತೆ ಒಂದು ನಿಬಂಧನೆಯಂ ಮಾಡುವದು ಗವರ್ನಮೆಂಟಿಗೆ ಸಾಧ್ಯವಾಗಿರುವಲ್ಲಿ ಅದು ಒಂದು ಪ್ರಬಲಕಾರಣವಾಗಿ ಭಾವಿಸುವದುಚಿತವಾಗಿ ಪರಿಗ್ರಹಿಸಲ್ಪಡಲಾರದು. ಮತ್ತು ಸದರೀ ಪ್ರೋಟಾಪ್ರೋಟ ಪರೀಕ್ಷೆ ಇಲ್ಲಿ ನಡೆಯುವ ಪಕ್ಷಕ್ಕೆ ಮದರಾಸ ಮುಂಬೈ ಮೊದಲಾದ ದೊಡ್ಡ ದೊಡ್ಡ ಷಹರ್‌ಗಳಲ್ಲಿರುವ ವಿದ್ಯಾವಂತರಾದವರನೇಕರು ತಮ್ಮ ಸರ್ವಶಕ್ತಿಯಂ ವಿನಿಯೋಗಿಸಿ ಸದರೀ ಪರೀಕ್ಷೆಯಲ್ಲಿ ತೇರ್ಗಡೆಯಾಗುವದಕ್ಕೆ ಪ್ರಯತ್ನ ಪಡದೆ ಹೋದಾರೆ? ಈ ಪರೀಕ್ಷೆಯ ದೆಸೆಯಿಂದ ವಿದ್ಯಾಭಿವೃದ್ಧಿಗೆ ವಿಶೇಷ ಪ್ರೋತ್ಸಾಹ ಉಂಟಾಗುವದರಲ್ಲಿ ಸಂಶಯ ಲೇಶವೂ ಇರಲಾರದು, ಮತ್ತು ಇದರಿಂದ ಬಹುವಿಧ ಪ್ರಯೋಜನಗಳುಂಟಾಗುವವು. ಎರಡನೆಯ ಆಕ್ಷೇಪಣೆ—ಇಲ್ಲಿನ ಜನರು ತಮ್ಮ ಜನ್ಮ ಭೂಮಿಯಂ ಬಿಟ್ಟು ಕದಲಲಾರರಾಗಿ ಅವರಿಗೆ ಪ್ರಾಪಂಚಿಕ ಜ್ಞಾನವಿರಲಾರದೆಂಬದು. ಕೇವಲ ಬಾಲ್ಯ ವಯಸ್ಸಿನಲ್ಲೇ ಪ್ರಸಕ್ತ ಪರೀಕ್ಷೆಯಂ ಕೊಟ್ಟು ಪಾಸಾಗಿ ಚೆನ್ನಾಗಿ ಹೊರಡುವದಕ್ಕೆ ಪೂರ್ವ ಇಂಡ್ಯಾ ದೇಶದ ಸಿವಿಲ್ ಸರ್ವೆಂಟಾಗಿ ನೇಮಕಮಾಡಲ್ಪಟ್ಟು ಇಲ್ಲಿಗೆ ಬಂದು ತಮಗೆ ಕೊಡಲ್ಪಡುವ ಅಧಿಕಾರವಂ ಕೈಗೊಂಡಮೇಲೆ, ತಾಬೇದಾರಿ ನೌಕರರು ತಮ್ಮ ಬಳಿಗೆ ತರುವ ಕಾಗದಗಳಿಗೆ ರುಜು ಮಾಡಬೇಕಾದ ಸ್ಥಳವಂ ತೋರಿಸಬೇಕೆಂದು ಕೇಳತಕ್ಕ ಆಫೀಸರ್‌ಗಳು ಯೆಷ್ಟು ಜನರಿಲ್ಲವು? ಅವರೆಲ್ಲರು ಪ್ರಾಪಂಚಿಕ ಜ್ಞಾನಸಂಪಾದನಾನಂತರವೇ ನೌಕರಿಗೆ ಬರುತ್ತಾರೆಂದು ಹೇಳುವದಕ್ಕೆ ಸಾಧ್ಯವಾದೀತೆ? ಯಾರಿಗಾದರು ಓದುವದರಿಂದಲೂ, ಸ್ವಯಂ ನೋಡುವದರಿಂದಲೂ, ಅನುಭವಶಾಲಿಗಳಾದವರಿಂದ ಕೇಳುವದರಿಂದಲೂ, ಸ್ವಯಂ ಮಾಡುವದರಿಂದಲೂ, ಅನೇಕ ವಿಷಯಗಳಂ ಗ್ರಹಿಸಬೇಕಾಗಿರುತದೆ. ಹೀಗಿರುವಲ್ಲಿ ವಿದ್ಯಾಸಂಗ್ರಹಣ ಕಾಲದೊಳು ಲೋಕಾನುಭವವಿಲ್ಲವೆಂದು ಹೇಳುವದು ಅಸೂಯಾಜನಕವಾದ ಆಕ್ಷೇಪಣೆಯೇ ಹೊರತು ಅನ್ಯಥಾ ಯೆಣಿಸಲ್ಪಡಲಾರದು.

ಇಂಡ್ಯಾ ದೇಶೀಯರು, ಶತ್ರಾಪಿ ಉತ್ತಮವರ್ಣದವರು ಸಮುದ್ರಯಾನಪೂರ್ವಕ ಅನ್ಯರಾಜ್ಯಗಳಿಗೆ ಹೋಗುವ ವಿಷಯದಲ್ಲಿ ಪ್ರತಿಬಂಧಕ ಸಾಮಗ್ರಿಗಳು ಬಹುವಾಗಿರುತವೆಂಬದು ಪ್ರಸಿದ್ಧ ವಿಷಯವಾಗಿರುತದೆ. ಅಂತಾ ಪ್ರತಿಬಂಧಕಗಳು ಸಹ್ಯಗ್ರಾಹ್ಯದೆ ಹೋಗುವಂತವರ ಸಂಖ್ಯೆಯು ಕೇವಲ ಅಲ್ಪವಾದುದಾಗಿಯೂ, ಅಲ್ಲಿನ ಪರೀಕ್ಷೆಯೊಳು ತೇರ್ಗಡೆಯಾಗುವಂತವರ ಸಂಖ್ಯೆಯು ಮತ್ತು ಅಲ್ಪವಾಗಿಯೂ, ಇದುವರಿವಿಗೆ ಇರುತಲಿದ್ದುದರಿಂದ ಯೂರೋಪಿಯರ್‌ಜನರಿಗೆ ಅದು ಅಷ್ಟು ಬಾಧಕವಾಗಿ ತೋರಿರಲಿಲ್ಲವು. ಈಗಲಾದರೂ, ಪ್ರಸಕ್ತ ಬದಲಾವಣೆಯ ದೆಸೆಯಿಂದ ಸಾಮಾನ್ಯವಾಗಿ ವಿದ್ಯಾವಂತರಾದ ಇಂಡ್ಯಾ ದೇಶೀಯರೆಲ್ಲರು ಸದರೀ ಪ್ರೋಟಾಪ್ರೋಟ ಪರೀಕ್ಷೆಗೆ ಹೋಗುವದಕ್ಕೆ ಮಾರ್ಗ ಕಲ್ಪಿಸಲ್ಪಟ್ಟದರಿಂದ ತಮ್ಮ ಪ್ರಯೋಜನಕ್ಕೆ, ಇಂಡ್ಯಾ ದೇಶೀಯರು ಭಾಗಭಾಕ್ಕುಗಳಾದಾರಲ್ಲಾ ಎಂಬ ಅತಿತರವಾದ ಅಸೂಯೆಯಿಂದುಂಟುಮಾಡಲ್ಪಟ್ಟ ದುರಾಕ್ಷೇಪಣೆಗಳೆಂದು ಭಾವಿಸಲ್ಪಡದೆ ಹೋಗಲಾರದು. ನಿಷ್ಕಲ್ಮಷ ಹೃದಯರಾಗಿಯೂ, ನ್ಯಾಯೈಕಪರರಾಗಿಯೂ, ಇಂಡ್ಯಾ ದೇಶೀಯರ ಕ್ಷೇಮಾಕಾಂಕ್ಷಿಗಳಾಗಿಯೂ[illegible] ಕೆಲವು ಮೆಂಬರುಗಳು ಸೇರಿ ಮಾಡಿದ ಈ ಹೊಸ ಯೇರ್ಪಾಡಿನ ಬಗ್ಗೆ ಅವರ ವಿಷಯದಲ್ಲಿ ಇಂಡ್ಯಾ ದೇಶೀಯರು ಕೃತಜ್ಞತಾ ಪೂರ್ವಕವಾದ ಭಕ್ತಿ ವಿಶ್ವಾಸಗಳುಳ್ಳವರಾಗಿರುವರು, ಪರಂತು, ಈ ವಿಷಯಕ್ಕೆ ಪ್ರತಿಬಂಧಕ ಸಾಮಗ್ರಿಗಳು ಬಲವತ್ತರವಾಗಿರುವದರಿಂದ ದೃಢತರ ಸಂಕಲ್ಪದೊಡನೆ ಸರ್ವಪ್ರಕಾರದಿಂದಲೂ ಅವುಗಳಂ ನಿವೃತ್ತಿಸಿ, ತಾವು ಮಾಡಿದ ನಿರ್ಣಯದ ಫಲವಂ ಇಂಡ್ಯಾದೇಶೀಯರು ನಿರುಪಾಧಿಕವಾಗಿ ಅನುಭವಿಸುವಂತೆ ಮಾಡಿ ತನ್ಮೂಲಕ ಉಂಟಾಗಬಹುದಾದ ಕೀರ್ತಿಪ್ರತಿಷ್ಠೆಗಳಂ ಈ ಕಾರ್ಯಕ್ಕೆ ಮುಖ್ಯಪ್ರವರ್ತಕರಾದ ಮಿ|| ಪಾಲ್ ಮತ್ತು ಮಿ|| ದಾದಾಬಾಯಿ ನೌರೋಜಿ ಮೊದಲಾದವರು ಪಡೆಯಬೇಕೆಂದು ಕೋರುವೆವು. ಪ್ರಸಕ್ತ ನಿರ್ಣಯವಂ ಉಚಿತರೀತಿಯಲ್ಲಿ ಅಮಲಿನೊಳು ತರಬೇಕಾದ ವಿಷಯದಲ್ಲಿ ಇಂಡ್ಯಾ ದೇಶದ ವೈಸರಾಯ್ ಸಾಹೇಬರವರಿಗೆ ಅಧಿಕಾರ ಕೊಡಲ್ಪಟ್ಟಿರುವದರಿಂದ ಅವರು ಅದಂ ಯಾವ ರೀತಿಯಲ್ಲಿ ಎಷ್ಟು ಮಟ್ಟಿಗೆ ಜಾರಿಯೊಳು ತರುವರೋ ಅದಂ ಆತುರದೊಡನೆ ನಿರೀಕ್ಷಿಸುತಲಿರುವೆವು.

## ವೇಶ್ಯೆಯರ ನರ್ತನ.

ಹಿಂದೂಗಳ ಮನೆಗಳೊಳು ನಡೆಯುವ ಶುಭಸಮಯಗಳಲ್ಲೂ, ದೇವಾಲಯಗಳಲ್ಲಿ ನಡೆಯುವ ಉತ್ಸವ ಕಾಲಗಳಲ್ಲೂ ಗಾನ ನರ್ತನಗಳ ವ್ಯಾಜದಿಂದ ವೇಶ್ಯೆಯರಂ ಕರೆಯಿಸುವದು ದುಷ್ಟಪದ್ಧತಿ ಯೆಂದುಭಾವಿಸಿ ಅದಂ ತಪ್ಪಿಸುವದು ಅವಶ್ಯಕರ್ತವ್ಯವೆಂದು ಆಧುನಿಕ ವೈಲಕ್ಷಿಣ್ಯಾಭಿಲಾಷಿಗಳಾದವರು ಕೆಲವರು ಯೋಚಿಸಿ ತನ್ನಿವೃತ್ಯುಪಾಯವಂ ಹುಡುಕುತಲಿರುವದು ಪ್ರಸಿದ್ಧವಿಷಯವಾಗಿರುತದೆಯಷ್ಟೆ. ಈಚೆಗೆ ಮದರಾಸಿನಲ್ಲಿ ಕೆಲವರು ದೊಡ್ಡಮನುಷ್ಯರು ತಮ್ಮ ಮನೆಗಳೊಳು ನಡೆಸಲ್ಪಟ್ಟ ಶುಭಗಳ ಬಗ್ಗೆ ತಮ್ಮ ಮಿತ್ರರಾದವರಿಗೆ ಕಳುಹಿಸಿದ ಲಗ್ನಪತ್ರಿಕೆಗಳಲ್ಲಿ "ನಾಚ್" ಎಂಬ ಶಬ್ದಕ್ಕೆ ಬದಲು "ಯಂಟರ್‌ಟೆಯಿನ್‌ಮೆಂಟ್" ಎಂಬ ಶಬ್ದವನ್ನು ಸೇರಿಸಿ ಕಳುಹಿಸಲು, ವೇಶ್ಯೆಯರಂ ಕರೆಯಿಸಕೂಡದೆಂದು ವಾದಿಸುವಂತವರು ಕೆಲವರು, ಸದರೀ ವಿವಾಹ ಮಂಟಪದಲ್ಲಿ ವೇಶ್ಯೆಯರ ಪ್ರವೇಶಕ್ಕೆ ಅವಕಾಶ ಕೊಡಲ್ಪಡಲಾರದು, ಪರಂತು ಆಪೋಶನಾದ ದೊಡ್ಡ ಮನುಷ್ಯರ ಸಂತೋಷಾರ್ಥ ಬೇರೇವಿಧವಾದ ವಿನೋದಗಳು ನಡೆಸಲ್ಪಡಬಹುದೆಂಬನು ಬಳಿಯೊಡನೆ ವಿವಾಹ ಮಂಟಪವಂ ಪ್ರವೇಶಿಸಲು ಅಲ್ಲಿಯೊಂದು ವೇಶ್ಯೆಯಂ ತಂದು ನಿಲ್ಲಿಸಿ ಸಭಾಸದರನೇಕರಿಗೆ ಮನೋವ್ಯಥೆಯನ್ನುಂಟುಮಾಡಿದರೆಂತಲೂ, ವಿಶೇಷ ಉತ್ಸವ ಕಾಲಗಳಲ್ಲಿ ವೇಶ್ಯೆಯರಂ ಕರೆಯಿಸುವ ದುರಾಚಾರವಂ ತಪ್ಪಿಸಬೇಕೆಂದು ಸಮಾಜ ಪರಿಷ್ಕರಣ ಪ್ರವರ್ತಕರು ಒಂದುಕಡೆ ಸರ್ವಪ್ರಯತ್ನವಂ ಮಾಡುತಿರುವಲ್ಲಿ ಸದರೀ ವಾರ್ತೆಗೆ ಪ್ರೋತ್ಸಾಹವನ್ನುಂಟುಮಾಡುವದಿವು ತಮಗೆಭೂಷಣವೆಂದು ಕೆಲವರು ಭಾವಿಸುತ್ತಾರಾಗಿ ಅಂತವರ ಮೂಲಕ ಸಮಾಜ ಪರಿಷ್ಕರಣ ಕಾರ್ಯವು ನೆರವೇರುವದೆಂದು ನಿರೀಕ್ಷಿಸುವದಕ್ಕಾಗುವದಿಲ್ಲವೆಂತಲೂ, ವೇಶ್ಯೆಯರಂ ಕರೆಯಿಸಿ ಗಾನ ನರ್ತನಗಳಂ ಮಾಡಿಸುವ ಸಂದರ್ಭಗಳೊಳು ಮಜಲಿಸ್ ನಡೆಯುವದೆಂದು ಸ್ಪಷ್ಟವಾಗಿ ಲಗ್ನಪತ್ರಿಕೆಯಲ್ಲಿ ನಮೂದ್ ಮಾಡಿದರೆ ಸಮಾಜ ಪರಿಷ್ಕರಣ ಕಾರ್ಯಕ್ಕೆ ಕೇವಲ ಸಹಾಯವಾಗಿರುವದೆಂತಲೂ ಮದರಾಸ್ ಹಿಂದೂ ಪತ್ರಿಕೆಗೆ ಒಬ್ಬ ಬಾತಮೀದಾರನು ಬರೆದಿರುತ್ತಾರೆ. ಈ ವಿಷಯದಲ್ಲಿ ನಮಗೆ ತೋರುವ ಅಭಿಪ್ರಾಯವೇನೆಂದರೆ—ಮೇಲಿನ ವಿಷಯದಲ್ಲಿ ಎರಡು ಪಕ್ಷಗಳೇರ್ಪಟ್ಟಿರುವದರಿಂದ, ಆದಕ್ಕೆ ಪ್ರೋಷಕರಾದವರ ಮನೆಗಳೊಳು ನಡೆಯಬಹುದಾದ ಶುಭ ಸಮಯಗಳಲ್ಲಿ ಗಾನ ನರ್ತನಗಳ ಬಗ್ಗೆ ವೇಶ್ಯೆಯರಂ ಕರೆಯಿಸಬೇಕೆಂಬ ಅಪೇಕ್ಷೆಯುಳ್ಳವರು ಸದರೀ ಶುಭದಬಗ್ಗೆ ತಮ್ಮ ಬಂಧುಗಳಿಗೂ ಮಿತ್ರರಿಗೂ ಕಳುಹಿಸಬಹುದಾದ ಲಗ್ನ ಪತ್ರಿಕೆಯಲ್ಲಿ, ಆಪೋಶರಾದವರ ಸಂತೋಷಾರ್ಥ ತಾವು ನಡೆಸಲುದ್ದೇಶಿಸಿರುವ ವಿನೋದ ಕಾರ್ಯಗಳ ಸ್ವರೂಪವಂ ಸ್ಪಷ್ಟವಾಗಿ ವಿವರಿಸಿದರೆ ಅದಂ ಯೋಚಿಸಿ ಅವರವರ ಇಷ್ಟಾನುಸಾರ, ಅಂದರೆ, ವೇಶ್ಯೆಯರ ಗಾನ ನರ್ತನಗಳಂ ನೋಡುವದರಲ್ಲಿ ಕುತೂಹಲ ವುಳ್ಳವರು ಅದು ನಡೆಯುವ ಕಾಲದಲ್ಲಿ ಹೋಗುವದಕ್ಕೂ ಇಷ್ಟವಿಲ್ಲದವರು ಅದಂ ಬಿಟ್ಟು ಬೇರೆಯೊಂದು ಸಮಯದಲ್ಲಿ ಹೋಗುವದಕ್ಕೂ ಅವಕಾಶವನ್ನುಂಟುಮಾಡುತ್ತೆಯಾಗುವದಲ್ಲದೆ ಪ್ರತಿಕಕ್ಷಿಯವರಿಗೆ ವ್ಯರ್ಥವಾದ ಮನೋವ್ಯಥೆಯನ್ನುಂಟುಮಾಡಿದರೆಂಬ ನಿಂದೆಯೂ ತಪ್ಪುವದು. ವೇಶ್ಯೆಯರಂ ಕರೆಯಿಸುವಂತವರ ಮನೆಗಳಿಗೆ ಯಾವ ಸಂದರ್ಭದಲ್ಲೂ ಹೋಗಕೂಡದೆಂದು ಹಟಹಿಡಿಯುವಂತವರು ಅವರ ಇಷ್ಟಾನುಸಾರ ನಡೆದುಕೊಳ್ಳುವದಕ್ಕೆ ಸ್ವತಂತ್ರರಾಗಿರುವರು.

## Occasional Notes.
## ನೈಮಿತ್ತಿಕ ವಿಷಯನ್ಯಾಸ.

ಕ್ರಿಶ್ಚಿಯನ್ನರ ಪ್ರಾರ್ಥನಾಲಯಗಳಿಗೆ ದಸ್ತಾಮ್ ಕೊಡಲ್ಪಡುವ ಆಯಾತಿಗಳಮೇಲೆ ಇನ್‌ಕಂಟ್ಯಾಕ್ಸ್ ವಸೂಲ್ಮಾಡತಕ್ಕದ್ದೆಂದು ಗವರ್ನಮೆಂಟನವರು ನಿರ್ಣಯಿಸಿರುತ್ತಾರೆ.

ಮದರಾಸಿನಲ್ಲಿ ನೂತನವಾಗಿ ಸ್ಥಾಪಿಸಲ್ಪಟ್ಟಿರುವ ಸಿಟಿ ಸಿವಿಲ್ ಕೋರ್ಟಿಗೆ ಮಾಹೆಯಾನ ೩೦೦ ರೂಪಾಯಿಗಳ ಸಂಬಳದಮೇಲೆ ಒಬ್ಬ ರಿಜಿಸ್ಟ್ರಾರನ್ನು ನೇಮಕಮಾಡುವಂತೆ ಗವರ್ನಮೆಂಟನವರು ಮಂಜೂರ್ಮಾಡಿದರು.

ಅಚೆಮುಂಗಳವಾರದಿನ ಹೈದರಾಬಾದ್ ನಿಜಾಮರವರ ದ್ವಿತೀಯ ಪುತ್ರರು ಮೃತಪಟ್ಟಂತೆ ಕೇಳುವದಕ್ಕೆ ಬಹಳ ವಿಷಾದಿಸುತ್ತೇವೆ ಮರುದಿನ ಸಂಸ್ಥಾನದ ವಿಶಿಷ್ಟ ಕೋರ್ಟ್‌ಗಳೂ ಆಫೀಸ್‌ಗಳೂ ಮುಚ್ಚಲ್ಪಟ್ಟವು

ಈ ತಿಂಗಳ ೫ನೇ ತಾರೀಖಿನಲ್ಲಿ, ಅಹಮದ ನಗರದೊಳು, ಅಲ್ಲಿ ಸ್ಥಾಪಿಸಲ್ಪಟ್ಟಿರುವ ವಿಧವಾ ವಿವಾಹ ಸಂಘದ ಕೃಷಿಯಲ್ಲಿ ಒಂದು ವಿಧವಾ ವಿವಾಹವು ನಡೆಯಿತು. ಇದರಲ್ಲಿ ವಧೂವರರಿಬ್ಬರು ಬ್ರಾಹ್ಮಣರು.

ಈತಿಂಗಳ ೪ನೇ ತಾರೀಖಿನೊಳು ಇಂಗ್ಲಾಂಡ್ ದೇಶಕ್ಕೆ ಸೇರಿದ ಒಂದು ಪ್ರದೇಶದಲ್ಲಿ ಇದ್ದಲು ಅಗೆಯುತಿರುವಲ್ಲಿ ಬೆಂಕಿ ಬಿದ್ದು ಅದರಲ್ಲಿ ಕೆಲಸ ಮಾಡುತಿದ್ದವರ ಪೈಕಿ ೧೪೫ ಮಂದಿ ಸತ್ತುಹೋದರು.

ಬೇಸಿಗೆಯ ಬಗ್ಗೆ ಮದರಾಸ ಹೈಕೋರ್ಟ್, ಸ್ಮಾಲ್‌ಕಾಸ್‌ಕೋರ್ಟ್, ಸಿಟಿ ಸಿವಿಲ್ ಕೋರ್ಟ್, ಇವು ಈಗ್ಯೆ ಯೆರಡುತಿಂಗಳ ಕಾಲದ ಮೊದಲು ಮುಚ್ಚಲ್ಪಟ್ಟಿದ್ದವಷ್ಟೆ. ಸದರೀ ಕೋರ್ಟ್‌ಗಳೆಲ್ಲವು ಈದಿನ ತೆರೆಯಲ್ಪಟ್ಟು ಮರಳಿ ಕೆಲಸಗಳಿಗೆ ಪ್ರಾರಂಭವಾಗುವದು.

ಇಂಡ್ಯಾದೇಶದಲ್ಲಿ ಸೆಣಬು ಮತ್ತು ಗಾಂಜಾ ವ್ಯವಸಾಯವಂ ಕುರಿತು ತನಿಖೀ ಮಾಡುವದಕ್ಕಾಗಿ ಒಂದು ಕಮಿಟಿ ಯೇರ್ಪಾಡಾಗಿರುತದೆ ಸದರೀ ಕಮಿಟಿಯವರು ಇಂಡ್ಯಾರಾಜ್ಯಕ್ಕೆ ಸೇರಿದ ಪ್ರತಿ ಒಂದು ಡಿಸ್ಟ್ರಿಕ್ಟಿಗೂ ಹೋಗಿ ಆ ವಿಷಯದಲ್ಲಿ ಪೂರಾ ನಿಗೇಯಿಂದ ದರ್‍ಯಾಫ್ತು ಮಾಡುವರು.

ಧಾರ್ವಾಡ, ಗದಗ, ಹುಬ್ಬಳ್ಳಿ, ರಾಯಿಚೂರ್, ಶಾದವತ್ರಿ, ಮತ್ತು ಬಳ್ಳಾರಿ, ಈ ಪ್ರಾಂತೆಗಳಲ್ಲೆಲ್ಲ ಈಸಲ ಅರಳೇಫಸಲ್ ಯೆಂದಿಗೂ ಇಲ್ಲದಷ್ಟು ಅಪರಿಮಿತವಾಗಿ ಆಗಿ, ಕೆಲವು ಸ್ಥಳಗಳೊಳು ಒಳ್ಳೆಯ ಕಾಲದಲ್ಲಿ ಅದಂ ಬಿಡಿಸುವದಕ್ಕೆ ಬೇಕಾದಷ್ಟು ಕೂಲಿ ಜನರು ಸಿಕ್ಕದೆಹೋದರೆಂದು ಆ ಪ್ರಾಂತದ ಪತ್ರಿಕೆ ತಿಳಿಸುತದೆ.

ಇಂಗ್ಲಾಂಡಿನಲ್ಲೂ ಇಂಡ್ಯಾದೇಶದಲ್ಲೂ ಒಂದೇ ಕಾಲದಲ್ಲಿ ಸಿವಿಲ್ ಸರ್ವೀಸ್ ಪರೀಕ್ಷೆ ನಡೆಸಲ್ಪಡಬೇಕೆಂದು ಈಚೆಗೆ ಹೌಸಾಫ್ ಕಾಮನ್ಸ್ ಸಭಾಮಂಡಪದಲ್ಲಿ ಮಾಡಲ್ಪಟ್ಟ ನಿರ್ಣಯದ ವಿಷಯದಲ್ಲಿ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಿಂದ ಇಂಡ್ಯಾಗವರ್ನಮೆಂಟಿಗೆ ಇದುವರಿವಿಗೆ ಯಾವದೂ ಹುಕುಮೂ ಬಂದಿರುವದಿಲ್ಲವು.

ಈಚೆಗೆ ಕೆಲವು ದಿನಗಳ ಮೊದಲು, ಹಜಾರಾ ಯೆಂಬ ತುಕಡಿಯಲ್ಲಿ ಕಾಬೂಲ್ ಅಮೀರರವರ ಸೇನೆಗೂ ಅಲ್ಲಿನವರಿಗೂ ಯುದ್ಧ ನಡೆಯುತಿರುವದು ಸರಿಯಷ್ಟೆ, ಈಗ ಸದರೀ ಯುದ್ಧವು ತಾತ್ಕಾಲಿಕವಾಗಿ ನಿಲ್ಲಿಸಲ್ಪಟ್ಟು ಸಮಾಧಾನ ಪ್ರಯತ್ನಗಳು ನಡೆಸಲ್ಪಡುತಲಿರುವಂತೆ ಕಾಬೂಲಿನಿಂದ ಬಂದ ವರ್ತಮಾನದ ಮೂಲಕ ತಿಳಿಯಬರುತದೆ.

ಈಚೆಗೆ ಮದರಾಸ್ ಹೈಕೋರ್ಟಿನಲ್ಲಿ ಮೊಕದ್ದಮೆಗಳು ಹೆಚ್ಚಾಗಿ ಬರುವದರಿಂದ ಅರಸಿಯ ಜಡ್ಜಿ ಯೊಬ್ಬರಂ ನೇಮಕಮಾಡಬೇಕೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಿಗೆ ಬರೆದುಕೊಂಡದಕ್ಕೆ ಹೈಕೋರ್ಟ್ ಜಡ್ಜಿಗಳಿಗೆ ಕೆಲಸದ ಗಲಾಟೆಯಂ ತಪ್ಪಿಸುವದಕ್ಕಾಗಿ ಅವಶ್ಯಕತೆ ಕಂಡುಬಂದರೆ ಸಿಟಿ ಸಿವಿಲ್ ಕೋರ್ಟಿಗೆ ಇನ್ನೊಬ್ಬ ಜಡ್ಜಿಯಂ ನೇಮಕಮಾಡಿಕೊಳ್ಳಬಹುದೆಂದು ಸ್ಟೇಟ್ ಸೆಕ್ರೆಟರಿಯವರು ಸೂಚಿಸಿದರೆಂದು ತಿಳಿಯಬರುತದೆ.

ಹೈದರಾಬಾದಿನಲ್ಲಿ ಸಾಮಾನ್ಯರಾದ ಒಬ್ಬ ಪ್ರಮುಖರಿಗೂ ಒಬ್ಬ ಬ್ಯಾರಿಸ್ಟರಿಗೂ ಒಂದು ತಕರಾರ್ ನಡೆದು, ತನ್ಮೂಲಕ ಸದರೀ ಬ್ಯಾರಿಸ್ಟರು ತಮಗೆ ೫೫,೦೦೦ ರೂಪಾಯಿಗಳು ಕೊಟ್ಟರೆ ತಾನು ಸದರೀ ಪ್ರಮುಖರಿಗೆ ಕೆ. ಸಿ. ಐ. ಇ. ಎಂಬ ಘನವಾದ ಪ್ರಶಸ್ತಿಯಂ ಉಂಟುಮಾಡಿಕೊಡುವಂತೆಯೂ, ಸದರೀ ಮೊತ್ತದ ಪೈಕಿ ೫೦೦೦ ರೂಪಾಯಿಗಳು ಅಡ್ವಾನ್ಸ್ ಕೊಡತಕ್ಕೆಂತಲೂ ಒಡಂಬಡಿಕೆ ಮಾಡಿಕೊಂಡಿರುವ ಬಗ್ಗೆ ತಮಗೆ ಕಾಗದಗಳು ಬಂದಿರುವವಾಗಿ ದರ್ಬಾರ ಪತ್ರಿಕಾ ಲೇಖಕರು ತಿಳಿಸುತ್ತಾರೆ.

ಕಡಪೆಯಲ್ಲಿ ಸಂಸ್ಕೃತಭಾಷೆಯೊಳು ಪಂಡಿತರಾಗಿಯೂ ಧರ್ಮಶಾಸ್ತ್ರಾರ್ಥವಂ ಚೆನ್ನಾಗಿ ತಿಳಿದವರಾಗಿಯೂ ಇರುವ ಒಬ್ಬರಿಗೆ ಈಚೆಗೆ ಕೆಲವು ತಿಂಗಳ ಹಿಂದೆ ಭಾರ್ಯಾವಿಯೋಗವುಂಟಾಯಿತು. ಅವರಿಗೆ ನಾಲ್ವರು ಗಂಡುಮಕ್ಕಳಿರುತ್ತಾರೆ. ಅವರಿಗೆ ಈಗ ವಯಸ್ಸು ಅರವತ್ತು ವರ್ಷಗಳು, ಆದಾಗ್ಯೂ ಹನ್ನೆರಡು ವರ್ಷಗಳ ವಯಸ್ಸುಳ್ಳ ಹುಡುಗಿಯೊಬ್ಬಳನ್ನು ಮದುವೆ ಮಾಡಿಕೊಂಡರು ಎಂದು ಮದರಾಸ್ ಹಿಂದೂ ಪತ್ರಿಕೆಯ ಒಬ್ಬ ಬಾತಮೀದಾರನು ಬರೆಯುತ್ತಾನೆ.

ಕಳೆದ ತಿಂಗಳ ೧೨ ನೇ ತಾರೀಖಿನ ಸಾಯಂಕಾಲದ ಮೇಲೆ, ತಿರುನಲ್ವೆಲಿ ಡಿಸ್ಟ್ರಿಕ್ಟ್ ಟೆಂಕಸಿ ಯೆಂಬ ತಾಲ್ಲೂಕು ಖಜಾನೆಗೆ ಒಂದು ಗ್ರಾಮದಿಂದ ೩೯೨ ರೂಪಾಯಿಗಳು ಖರಸಾಲ್ ಬಂತು. ಆ ದಿನ ಹೊತ್ತು ಹೋಗಿದ್ದುದರಿಂದ ಖಜಾನೆಯ ಹೊರಗಡೆಯಲ್ಲಿದ್ದ ಪೆಟ್ಟಿಗೆಯಲ್ಲಿ ಅದನ್ನಿಟ್ಟರು. ಅದೇ ತಿಂಗಳ ೧೩ ನೇ ತಾರೀಖಿನಲ್ಲಿ ಸದರೀ ಪೆಟ್ಟಿಗೆಯಂ ತೆರದು ನೋಡುವಲ್ಲಿ ರೂಪಾಯಿಗಳು ಇದ್ದ ಸ್ಥಳದಲ್ಲಿ ಕಲ್ಲುಗಳು ತುಂಬಿದ್ದವು. ಸದರೀ ಡಿಸ್ಟ್ರಿಕ್ಟ್ ಸಬ್ ಕಲೆಕ್ಟರವರು ಅದಂ ಕುರಿತು ದರ್‍ಯಾಫ್ತು ಮಾಡುತಲಿದಾರೆ.

ಇಂಡ್ಯಾ ಗವರ್ನಮೆಂಟನವರು ತಮ್ಮ ಅಧಿಕಾರಕ್ಕೆ ಒಳಪಟ್ಟ ಟಂಕಸಾಲೆಗಳಲ್ಲಿ ಕೋರಿಕೆದಾರರು ತರುವ ಬೆಳ್ಳಿಯಂ ತೆಗೆದುಕೊಂಡು ರೂಪಾಯಿಗಳಂ ಛಾಪಾ ಹಾಕಿ ಕೊಡುವ ವಾಡಿಕೆಯಂ ನಿಲ್ಲಿಸತಕ್ಕದ್ದೆಂದು ಕೊಟ್ಟ ಹುಕುಂ ಅನುಸರಿಸಿ ಮುಂಬೈ ಮತ್ತು ಕಲ್ಕತ್ತಾ ಟಂಕಸಾಲೆಗಳು ಮುಚ್ಚಲ್ಪಟ್ಟವಷ್ಟೆ. ಅದನ್ನನುಸರಿಸಿ, ಹೈದರಾಬಾದ್ ಮತ್ತು ಬರೋಡೆ ಸಂಸ್ಥಾನಗಳ ಟಂಕಸಾಲೆಗಳಲ್ಲಿ ಕೋರಿಕೆದಾರರಿಗೆ ರೂಪಾಯಿಗಳಂ ಛಾಪಾಹಾಕಿ ಕೊಡಬೇಕೆವೆಂದು ಹುಕುಂ ಹುಟ್ಟಿ ಟಂಕಸಾಲೆಗಳು ಬಂದು ಮಾಡಲ್ಪಟ್ಟಂತೆ ತಿಳಿಯಬರುತದೆ.

ಈಗ ವಿಲಾಯತಿಯಿಂದ ಇಂಡ್ಯಾದೇಶದ [illegible]ಕೋರಿಕೆದಾರರಿಗೆ ಬಂದೂ ಬರುತಲೂ ಇರುವ [illegible]

ಯನ್ನು ಟುಕಸಾಲೆಗಳಲ್ಲಿ ತೆಗದುಕೊಂಡು ಭಾಷಾಕಿ ಕೊಡಬೇಕೆಂತಲೂ, ಹಾಗೆ ಮಾಡದೆ ಹೋದರೆ ತಾವು ಪ್ರಬಲ ನಷ್ಟಕ್ಕೆ ಗುರಿಯಾಗಬೇಕಾಗುವದೆಂತಲೂ ಕೋಟೀದಾರರನೇಕರು ಶ್ರೀ ವೈಸರಾಯ್ ಸಾಹೇಬರವರಿಗೆ ತಂತಿಮೂಲಕ ಅರಿಕೆ ಮಾಡಿಕೊಂಡಿರುತ್ತಾರೆಂದು ಕಳೆದವಾರದ ಪತ್ರಿಕೆಯ ಮೂಲಕ ತಿಳಿಸಿದ್ದೇವಷ್ಟೆ. ಸದರೀ ವಿಷಯವನ್ನು ವೈಸ್‌ರಾಯ್ ಸಾಹೇಬರವರು ಕೋಟೀದಾರರಿಗೆ ಅನುಕೂಲವಾದ ರೀತಿಯಲ್ಲಿ ವ್ಯವಸ್ಥೆ ಮಾಡುವ ಆಲೋಚನೆಯಲ್ಲಿರುವಂತೆ ತಿಳಿಯಲಾಯಿತು.

ಮದರಾಸ್ ಡೆಪ್ಯುಟಿ ಕಲೆಕ್ಟರಾದ ಮೆ|| ಚೆಟ್ಟಿಯವರು, ಅಲ್ಲಿರುವ ವಿಶಿಷ್ಟ ಕ್ರಿಶ್ಚಿಯನ್ ಮತ್ತು ಹಿಂದೂ ಆಲಯಗಳ, ಮಸ್ಜಿದ್‌ಗಳ ಮತ್ತು ಇತರ ಧರ್ಮಸ್ಥಾಪನೆಗಳ ವಿಚಾರಣಾಧಿಕಾರಿಗಳಿಗೆ ನೋಟೀಸುಗಳು ಕೊಟ್ಟು ಆಯಾ ಆಲಯಗಳು ಮೊದಲಾದವುಗಳಿಗೆ ಬರತಕ್ಕ ಉತ್ಪತ್ತಿಯ ಮೇಲೆ ಇನ್‌ಕಂಟ್ಯಾಕ್ಸ್ ಕೊಡಬೇಕೆಂದು ತಿಳಿಸಲು, ಈ ಯೋಚನೆಯು ಕೇವಲ ಅಕ್ರಮವಾದುದೆಂದು ಆಕ್ಷೇಪಿಸುವ ಉದ್ದೇಶದಿಂದ ಅಲ್ಲಿನ ಮಹಾಜನರ ಒಂದು ಪ್ರಬಲ ಮೀಟಿಂಗ್ ಸೇರಿಸುವದಕ್ಕೆ ಪ್ರಯತ್ನಗಳು ನಡೆಯುತ್ತಿರುವಂತೆ ಮದರಾಸ್ ಮೇಲ್ ಪತ್ರಿಕೆ ತಿಳಿಸುತ್ತದೆ.

ರಂಗೂನ್ನಲ್ಲಿ ಗೋವಧೆಯ ವಿಷಯದೊಳು ಹಿಂದೂಗಳಿಗೂ ಮುಸಲ್ಮಾನರಿಗೂ ಪ್ರಬಲ ಕಲಹ ನಡೆದು ತನ್ಮೂಲಕ ಅನೇಕ ಪ್ರಾಣಹಾನಿಗಳು ಸಹ ಉಂಟಾದುವೆಂದು ಕಳೆದವಾರದ ಪತ್ರಿಕೆಯ ಮೂಲಕ ತಿಳಿಸಿದ್ದೇವಷ್ಟೆ. ಸದರೀ ಕಲಹವು ಅಣಗಿಸುವದಕ್ಕಾಗಿಯೂ ಮುಂದೆ ಅಂತಾ ಕಲಹಗಳಿಗೆ ಅವಕಾಶವಿಲ್ಲದೆ ಇರತಕ್ಕ ಬಗ್ಗೆ ಬರ್ಮಾ ದೇಶದ ಚೀಫ್ ಕಮಿಷನರವರು ಎರಡು ಕಂಪನಿ ಮಿಲಿಟರಿ ಪೋಲೀಸ್ ಸೇನೆಯನ್ನು ರಂಗೂನ್ ನಗರದಲ್ಲಿಟ್ಟು, ಅವು ಆರು ತಿಂಗಳ ಕಾಲ ಅಲ್ಲಿ ಕಾಯುವಾಗಿರತಕ್ಕದ್ದೆಂತಲೂ, ಸದರೀ ಸೇನೆಗೆ ಆ ಕಾಲಕ್ಕೆ ಹಿಡಿಯಬಹುದಾದ ಖರ್ಚುಗಳನ್ನು ಯಾವ ಪ್ರದೇಶದಲ್ಲಿ ಕಲಹ ನಡೆಯಿತೋ ಅಲ್ಲಿನ ಜನರು ವಹಿಸತಕ್ಕದ್ದೆಂತಲೂ ಯೋಚನೆ ಮಾಡಿರುವಂತೆ ಸರ್ಕಾರೀಯಾಗಿ ಪ್ರಕಟಿಸಲ್ಪಟ್ಟಿರುತ್ತದೆ.

ನೇಟಿವ್‌ಗಳಿಗೂ ಯೂರೋಪಿಯನ್ನರಿಗೂ ನಡತೆಯ ವಿಷಯದಲ್ಲಿರುವ ತಾರತಮ್ಯವು ಕುರಿತು ವೃತ್ತಾಂತ ಪತ್ರಿಕಾ ಲೇಖಕರೊಬ್ಬರು ತಿಳಿಸುವ ಅಭಿಪ್ರಾಯವೇನೆಂದರೆ—ಒಂದು ದೇಶದ ಜನರ ನಡವಳಿಕೆಯು ತಿಳಿದುಕೊಳ್ಳಬೇಕಾದರೆ ಅವರು ಪ್ರಕಟಿಸುವ ವೃತ್ತಾಂತ ಪತ್ರಿಕೆಗಳಲ್ಲಿನ ಪ್ರಕಟನೆಗಳು ಓದಿನೋಡಿರಿ. ಇಂಡ್ಯಾ ದೇಶದಲ್ಲಿರುವ ಯೂರೋಪಿಯನ್ನರು ಪ್ರಕಟಿಸುವ ಪತ್ರಿಕೆಗಳಲ್ಲಿ ಪ್ರಾಯಶಃ ಪ್ರಕಟನೆಗಳೆಲ್ಲಾ ನಾನಾವಿಧ ಸಾರಾಯಿಗಳನ್ನೂ ಮದ್ಯಗಳನ್ನೂ ಕುರಿತದ್ದಾಗಿವೆ. ಹಿಂದೂಗಳು ಪ್ರಕಟಿಸುವ ಪತ್ರಿಕೆಗಳಲ್ಲಾದರೋ, ಪ್ರಕಟನೆಗಳು ಬುಕ್ಕುಗಳು ಮತ್ತು ಔಷಧಗಳನ್ನು ಕುರಿತವಾಗಿವೆ. ಇದರಿಂದ ಸಾಮಾನ್ಯವಾಗಿ ಹಿಂದೂಗಳು ಗ್ರಂಥಗಳನ್ನು ಓದಿ ಕಾಹಿಲೆಯಾಗುತ್ತಾರೆ. ಸಾಮಾನ್ಯವಾಗಿ ಯೂರೋಪಿಯನ್ನರಾದರೋ ಸಾರಾಯಿ ಕುಡಿದು ರೋಗದಿಂದ ಹೊಡೆದುಕೊಳ್ಳುತ್ತಾರೆ, ಎಂಬದು.

ಕಳೆದ ತಿಂಗಳ ೨೬ನೇ ತಾರೀಖಿನಲ್ಲಿ ಇದರ ತಿಳಿವಳಿಕೆಯು ಕಲ್ಕತ್ತಾ ಸ್ಟೇಟ್ಸ್‌ಮನ್ ಪತ್ರಿಕೆಗೆ ತಂತಿ ವೃತ್ತಾಂತ ಬಂದಿರುತ್ತದೆ:—ಫ್ರೆಂಚಿನವರ ಫಾರಿನ್ ಸೇನೆಯು ಸ್ಯಾಂರಾಜ್ಯದ ಪ್ರಧಾನನಗರವಾದ ಬ್ಯಾಂಕಾಕ್ ಎಂಬ ಪಟ್ಟಣಕ್ಕೆ ಮುತ್ತಿಗೆ ಹಾಕುವ ಕಾಲವು ಸಮೀಪಿಸಿರುವದರಿಂದ ಬಹಳ ಗದ್ದಲ ಉಂಟಾಗಿದೆ. ನದಿಯ ಮುಖಭಾಗವು ಬಂದೋಬಸ್ತು ಮಾಡಬೇಕಾದ ವಿಷಯದಲ್ಲಿ ಪ್ರಬಲ ಸನ್ನಾಹಗಳು ನಡೆಸಲ್ಪಡುತಲಿವೆ, ಎಂಬದು. ಇದಕ್ಕುಂಟಾದ ಕಾರಣವು ವಿಚಾರಿಸಲಾಗಿ, ಸ್ಯಾಂ ದೇಶದವರಿಗೂ ಅಲ್ಲಿರುವ ಫ್ರೆಂಚಿನವರಿಗೂ ಉಂಟಾದ ಅಲ್ಪಕಲಹವು ಪ್ರಬಲಿಸಿ, ಸ್ಯಾಂ ದೇಶೀಯರು ೧೭ ಮಂದಿ ಫ್ರೆಂಚಿನವರನ್ನು ಕೊಂದುಹಾಕಿದ್ದರಿಂದ ಫ್ರೆಂಚಿನವರು ಅವರಮೇಲೆ ತಮ್ಮ ಭುಜಬಲವನ್ನು ತೋರಿಸಬೇಕಾದವರಾದರೆಂದು ತಿಳಿಯಬರುತ್ತದೆ. ಈ ಕಲಹವು ಕಡೆಗೆ ಯಾವರೀತಿಯಲ್ಲಿ ಪರ್ಯವಸಾನವನ್ನು ಹೊಂದುವುದೋ ಮುಂದೆ ತಿಳಿಯಬೇಕಾದದ್ದಾಗಿದೆ.

ಅಜಂಘುರ ಡಿಸ್ಟ್ರಿಕ್ಟಿಗೆ ಸೇರಿದ ಅನೇಕ ಗ್ರಾಮಗಳಲ್ಲೂ, ಗಾಜೀಪೂರ್ ಡಿಸ್ಟ್ರಿಕ್ಟಿಗೆ ಸೇರಿದ ಸಾದಿಯಾವನ್ನಲ್ಲೂ, ಬಕ್ರೀ ಇದ್ ಹಬ್ಬದ ದಿನ ಮಹಮ್ಮದರ ಜನರಿಗೂ ಹಿಂದೂಗಳಿಗೂ, ಪ್ರಬಲ ಕಲಹಗಳು ನಡೆದವು. ಕಲಹಿಗಳಿಗೂ ಪೋಲೀಸಿನವರಿಗೂ ಕ್ರಮವಾಗಿ ಕೆಲವು ಪ್ರಾಣಹಾನಿಗಳು ಸಹ ಉಂಟಾದವು. ಬಲಿಯಾ, ಘಾಜೀಪೂರ್ ವಗೈರೆ ಸ್ಥಳಗಳಿಂದ ಬಹುಮಂದಿ ಹಿಂದೂಗಳು ಕಲಹ ನಡೆಯುವ ಸ್ಥಳಗಳಿಗೆ ಹೋಗುವದಕ್ಕಾಗಿ ಗುಂಪುಗೂಡಿರುತ್ತಾರೆ. ಮಹಮ್ಮದರ ಜನರು ಗೋವಧೆ ಮಾಡುವದನ್ನು ನಿರೋಧಿಸಬೇಕೆಂಬ ಆಲೋಚನೆಯು ಸರ್ವತ್ರ ವ್ಯಾಪಿಸಿಕೊಂಡಿರುತ್ತದೆಂಬದಕ್ಕೆ ಸೂಚನೆಗಳು ಕಾಣಬರುತಲಿವೆ. ಪೋಲೀಸ್ ಇನ್ಸ್‌ಪೆಕ್ಟರ್ ಜನರಲವರು ಅಜಂಘುರಿಗೆ ಹೋಗಿರುತ್ತಾರೆ. ಸಿವಿಲ್ ಅಧಿಕಾರಿಗಳಿಗೆ ಸಹಾಯಾರ್ಥ ಪೈಜಾಬಾದಿನಿಂದ ನೇಟಿವ್ ಸೈನ್ಯಗಳು ಹೊರಡುವಹಾಗೆ ಹುಕುಂ ಆಗಿದೆ, ಎಂದು ವಗೈರೆ ಕುರಿತ ವೃತ್ತಾಂತದ ಮೂಲಕ ತಿಳಿಯಬರುತ್ತದೆ.

ಈ ತಿಂಗಳ ೮ ನೇ ತಾರೀಖಿನ ರಾತ್ರಿ ಹಾಸ್ ಆಫ್ ಲಾರ್ಡ್ಸ್ ಸೇರಿದ್ದ ಕಾಲದೊಳು ಕೆಲವು ಸಂವತ್ಸರಗಳ ಹಿಂದೆ ಇಂಡ್ಯಾ ರಾಜ್ಯದ ವೈಸ್‌ರಾಯ್‌ರಾಗಿದ್ದ ಲಾರ್ಡ್ ನಾರ್ಥ್‌ಬ್ರೂಕ್ ಸಾಹೇಬರವರು, ೧೮೭೪ ನೇ ಇಸವಿಯು ಮೊದಲು ೨೯ ನೇ ಇಸವಿಯ ವರಿಗೆ, ಇಂಡಿಯಾ ಗವರ್ನಮೆಂಟಿನವರ ಕಾಗದಗಳನ್ನು ಹಾಜರ್ಮಾಡಬೇಕೆಂತ ತಿಳಿಸಿ, ಇಂಡ್ಯಾದೇಶವು ಯಾವ ಅಕ್ರಮದ ದೆಸೆಯಿಂದ ನಷ್ಟವನ್ನನುಭವಿಸುತಲಿದೆಯೋ ಅದನ್ನು ಪರಿಹರಿಸುವ ವಿಷಯದಲ್ಲಿ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಾದ ಲಾರ್ಡ್ ಕಿಂಬರ್ಲಿಯವರು ಪ್ರಯತ್ನಪಡಬೇಕೆಂದು ತಾನು ಕೋರುವದಾಗಿ ಹೇಳಿದರು. ಇಂಡ್ಯಾರಾಜ್ಯದ ಸರಹದ್ದಿನ ಹೊರಗಡೆ ನಡೆದ ಕೆಲವು ಯುದ್ಧಗಳ ಖರ್ಚನ್ನು ಇಂಡ್ಯಾ ದೇಶದ ಹಣದಿಂದ ಕೊಡಿಸಿದ್ದು ಅಕ್ರಮವೆಂದು ಒಪ್ಪಿಕೊಂಡು ಗವರ್ನಮೆಂಟಿನವರು ಆ ವಿಷಯವನ್ನು ವಿವರವಾಗಿ ವಿಚಾರಿಸುವರೆಂದು ಹೇಳಿದರು. ಲಾರ್ಡ್ ರಾಬರ್ಟ್ಸ್ ಸಾಹೇಬರವರು ಸದರೀ ವಿಷಯವು ಸಂಪೂರ್ಣವಾಗಿ ವಿಮರ್ಶಿಸಲ್ಪಡುವದೆಂದು ತಾವು ಕೋರುವಂತೆ ತಿಳಿಸಿದರು.

ಗ್ರೇಟ್ ಬ್ರಿಟನ್ ಸಂಸ್ಥಾನದ ಪ್ರಧಾನ ಮಂತ್ರಿಯವರಾದ ಮೆ|| ಗ್ಲಾಡ್‌ಸ್ಟನ್ ಸಾಹೇಬರವರು ಐರ್ಲೆಂಡ್ ದ್ವೀಪದ ಪ್ರಜೆಗಳಿಗೆ ಸ್ವತಂತ್ರವಾದ ಪಾರ್ಲಿಮೆಂಟ್ ಸಮಾಜವು ಕಲ್ಪಿಸಿಕೊಳ್ಳುವ ಸ್ವಾತಂತ್ರ್ಯವು ಉಂಟುಮಾಡಬೇಕೆಂದು ಬಹುಕಾಲದ ಮೊದಲು ಯೋಚಿಸುತಲಿದ್ದು ಈಚೆಗೆ ಕೆಲವು ದಿನಗಳ ಹಿಂದೆ ಆಬಗ್ಗೆ ಒಂದು ಮಸೂದಾ ಆಕ್ಟನ್ನು ಮಾಡಿ ಅದನ್ನು ಹೌಸ್ ಆಫ್ ಕಾಮನ್ಸ್ ಸಮಾಜದ ಮುಂದೆ ಇಡಲು ಅದಕ್ಕೆ ವಿರೋಧಿಗಳಾದವರೆಲ್ಲರು ಬಹುಮುಖವಾಗಿ ವಾದವಂ ಬಡಿಸುತಬಂದರು, ಪರಂತು ಮೆ|| ಗ್ಲಾಡ್‌ಸ್ಟನ್‌ರವರ ಪಕ್ಷಾವಲಂಬಿಗಳಾದವರ ಸಂಖ್ಯೆಯು ಪ್ರತ್ಯರ್ಥಿಗಳಾದವರ ಸಂಖ್ಯೆಗಿಂತಲೂ ಅಧಿಕವಾಗಿರುವದರಿಂದ ಸದರೀ ಮಸೂದಾ ಆಕ್ಟಿನ ಪ್ರಕಾರ ಒಂದೊಂದು ಕಲಮಾಗಿ ಅಂಗೀಕರಿಸಲ್ಪಡುತ ಬರುತಲಿದೆ. ಈ ತಿಂಗಳ ೭ ನೇ ತಾರೀಖಿನ ರಾತ್ರಿ ಸೇರಿದ ಸಮಾಜದೊಳು ೫,೬,೭,೮ ನೇ ಕಲಂಗಳು ಅಧಿಕ ಸಂಖ್ಯೆಯುಳ್ಳ ಮೆಂಬರ್‌ಗಳಿಂದ ಮಂಜೂರ್ಮಾಡಲ್ಪಟ್ಟವು. ೫ನೇ ಕಲಮನ್ನು ಓದುವಕಾಲದೊಳು ಮಿ|| ಬಾಲ್‌ಫೋರ್ ಎಂಬವರು ರೇಗಿಕೊಂಡು ಕಠಿಣ ಶಬ್ದಗಳಿಂದ ಅದಂ ನಿಂದಿಸಿದರು. ಪ್ರತ್ಯರ್ಥಿಗಳಾದವರು ಗುಂಪುಗೂಡಿ ಅವರಿಗೆ ಸಹಾಯಕರಾದರು. ಮೆ|| ಗ್ಲಾಡ್‌ಸ್ಟನ್‌ರವರು ಪ್ರತಿಪಕ್ಷದವರು ಮಾಡುವ ಪ್ರಯತ್ನಗಳನ್ನು ಅಗ್ರಾಸನಾಧಿಪತಿಯವರಿಗೆ ತಿಳಿಸಲು ಅವರು ಸದರೀ ಜನರ ನಡತೆಯನ್ನು ಕುರಿತು ಪೂರಾ ಆಕ್ಷೇಪಿಸಿ ಬಾಯಿಮುಚ್ಚಿಸಿದರು.

## ನೋಟಿಸ್.

ಇದುವರಿವಿಗೆ ಈ ಸಾಲಿನ ಚಂದಾ ಮೊಬಲಗನ್ನು ಕಳುಹಿಸದೆ ಇರತಕ್ಕವರೆಲ್ಲರು ಈ ನೋಟಿಸ್ ನೋಡಿದ್ದೊಡನೆ ಕೂಡಲೆ ದಯಮಾಡಿ ಕಳುಹಿಸಿಕೊಡಬೇಕೆಂದು ಮರಳಿ ಜ್ಞಾಪಕ ಕೊಡುತ್ತೇವೆ.

೧೦—೭—೯೩. ಪ್ರೊಪ್ರೈಟರ್

## LOCAL AND PROVINCIAL NEWS.

## ಒಳದೇಶ ಮತ್ತು ತಾಲ್ಲೂಕ್‌ಜಾತ ವೃತ್ತಾಂತಗಳು

ಕಳೆದ ಬೃಹಸ್ಪತಿವಾರದ ದಿನ, ಶ್ರೀಮನ್ಮಹಾರಾಜ್ಞೀ ಇಂಡ್ಯಾ ಚಕ್ರವರ್ತಿನೀ ಯವರ ಪೌತ್ರರಾದ ಡ್ಯೂಕ್ ಆಫ್ ಯಾರ್ಕ್ ಯವರಿಗೆ ವಿವಾಹ ಮಹೋತ್ಸವ ಬೆಳೆದದರಿಂದ ಅದರ ಗೌರವಾರ್ಥ ಆದಿನ ಈ ಸಂಸ್ಥಾನದ ಮತ್ತು ಸಿವಿಲ್ ಸ್ಟೇಷನಿನ ವಿಶಿಷ್ಟ ಆಫೀಸುಗಳಿಗೂ ರಜಾ ಕೊಡಲ್ಪಟ್ಟಿತು. ಅದೇ ದಿನ ಮಧ್ಯಾಹ್ನತ್ಪದ ೩೧ ತೋಪುಗಳು ಹಾಕಲ್ಪಟ್ಟವು.

ಕಳೆದ ಬೃಹಸ್ಪತಿವಾರ ಸಾಯಂಕಾಲ ೫½ ಘಂಟೆಗೆ ಸರಿಯಾಗಿ ಶ್ರೀಮನ್ಮಹಾರಾಜರವರು ಕುಟುಂಬಸಮೇತರಾಗಿ ಸ್ಪೆಷಲ್ ಟ್ರೇನ್ನಲ್ಲಿ ಈ ಪುರಿಗೆ ದಯಮಾಡಿದರು. ಅದೇ ಗಾಡಿಯಲ್ಲಿ ದಿವಾನ್ ಸರ್ ಕೆ. ಶೇಷಾದ್ರಿ ಅಯ್ಯರವರೂ ಇನ್ನು ಕೆಲವರು ಯೂರೋಪಿಯನ್ ಆಫೀಸರುಗಳೂ ಬಂದರು. ಶ್ರೀಮನ್ಮಹಾರಾಜರವರು ಬರಮಾಡಿಕೊಳ್ಳುವದಕ್ಕಾಗಿ ಇಲ್ಲಿನ ಬ್ರಿಟಿಷ್ ರೆಸಿಡೆಂಟರಾದ ಕರ್ನಲ್ ಪಿ. ಡಿ. ಹೆಂಡರ್ಸನ್ ಸಾಹೇಬರವರು ಮೊದಲಾಗಿ ಬಹುಮಂದಿ ಯೂರೋಪಿಯನ್ ಆಫೀಸರ್‌ಗಳೂ, ಚೀಫ್‌ಕೋರ್ಟ್ ಜಡ್ಜಿಗಳು ಮೊದಲಾದ ನೇಟಿವ್ ಅಧಿಕಾರಿಗಳನೇಕರೂ, ಮ್ಯುನಿಸಿಪಲ್ ಕಮಿಷನರಿಗಳೂ, ಸಿಟಿ ಸ್ಟೇಷನ್ ಪ್ಲಾಟ್‌ಫಾರಮಿನಲ್ಲಿ ಹಾಜರಿದ್ದು ಶ್ರೀಮನ್ಮಹಾರಾಜರವರಂ ಉಚಿತ ಮರ್ಯಾದಾಪೂರ್ವಕವಾಗಿ ಬರಮಾಡಿಕೊಂಡರು. ಇತರ ಮಾಮೂಲಿ ಮರ್ಯಾದೆಗಳೆಲ್ಲವು ಸಾಂಗವಾಗಿ ನೆರವೇರಿಸಲ್ಪಟ್ಟವು. ತರುವಾಯ ಶ್ರೀಮನ್ಮಹಾರಾಜರವರು ರಥಾರೂಢರಾಗಿ ತಮ್ಮ ದಿವಾನರವರೊಡನೆ ಅರಮನೆಗೆ ದಯಮಾಡಿದರು.

ಕಳೆದ ವಾರವೆಲ್ಲ ಯಾವಾಗಲೂ ಮೋಡವು ಕವಿದೇ ಇತ್ತು. ಒಂದೆರಡು ದಿನ ಬಲವಾದ ವರ್ಷವು ಬಿತ್ತು. ಇತರದಿನಗಳಲ್ಲಿ ಮಧ್ಯೆಮಧ್ಯೆ ತುಂತುರುಹನಿಗಳೂ ಬೀಳುತಲಿತ್ತು. ಕೆರೆಗಳಿಗೆ ಒಂದೆರಡು ತಿಂಗಳಿಗೆ ಆಗುವಷ್ಟು ನೀರು ಬಂದಿದೆ, ಪರಂತು ಮನೆಗಳ ಬಾವಿಗಳಿಗೆ ನೀರು ಬರಲಿಲ್ಲವು. ಆ ಭಾಗದಲ್ಲಿ ಈ ಶಹರ್ ನಿವಾಸಿಗಳ ಕಷ್ಟ ಅದ್ಯಾಪಿ ಪರಿಹಾರವಾಗಲಿಲ್ಲವು. ಆಹಾರ ಪದಾರ್ಥಗಳ ದಾರಣೆಗಳು ಪ್ರಾಯಶಃ ಒಂದೇ ವಿಧವಾಗಿಯೇ ಇವೆ. ನೆಗಡಿ ಜ್ವರ ಮೊದಲಾದ ಕೆಲವು ರೋಗಗಳು ಪ್ರಜೆಗಳನ್ನು ಪೀಡಿಸುತಲಿವೆ. ಸದ್ಯಃ ಈ ಶಹರಿನ ಹೊರಗಡೆ ಪಕ್ಕಗಳಿಗೆ ನೀರೂ ಮೇವೂ ಸಿಕ್ಕುತಿವೆ. ಈ ತಿಂಗಳ ಗುರ್ರೇತಾರೀಖಿಗೆ ಕೈದಾದ ವಾರದ ಮಳೆ ಸರ್ಕಾರೀ ಕಾಲಸ್ಥಿತಿ ರಿಪೋರ್ಟಿನಂ ನೋಡಲಾಗಿ, ಬೆಂಗಳೂರು ಡಿಸ್ಟ್ರಿಕ್ಟು ಪೈಕಿ ನೆಲಮಂಗಲ, ಚೆನ್ನಪಟ್ಟಣ, ಇವೆರಡರಲ್ಲಿ ಮಾತ್ರ ಒಂದಂಗುಳಕ್ಕೆ ಸ್ವಲ್ಪ ಹೆಚ್ಚಾಗಿ ವರ್ಷ ಬಿದ್ದಿರುವಂತೆಯೂ, ಅನ್ಯತ್ರ ಅಲ್ಪ ವೃಷ್ಟಿಯೆಂತಲೂ ಕಾಣಬರುತ್ತದೆ. ಕೋಲಾರ ಡಿಸ್ಟ್ರಿಕ್ಟು ಪೈಕಿ ಗೌರೀಬಿದನೂರಲ್ಲಿ ಒಂದೂಕಾಲು ಅಂಗುಳ, ಅನ್ಯತ್ರ ಅಲ್ಪವೃಷ್ಟಿ. ತುಮಕೂರು ಡಿಸ್ಟ್ರಿಕ್ಟುಪೈಕಿ ಕಸಬಾ ತುಮಕೂರು, ಚಿಕ್ಕನಾಯಕನಹಳ್ಳಿ, ಸೀರಾ, ಗುಬ್ಬಿ, ಈ ನಾಲ್ಕು ತಾಲೂಕುಗಳಲ್ಲಿ ಒಂದರಿಂದ ಮೂರಂಗುಳ ಮಳೆ ಆಗಿರುತ್ತೆ, ಅನ್ಯತ್ರ ಅಲ್ಪವೃಷ್ಟಿ. ಮೈಸೂರು ಡಿಸ್ಟ್ರಿಕ್ಟಿನಲ್ಲಿ ಸರ್ವತ್ರ ಅಲ್ಪವರ್ಷ. ಹಾಸನ ಡಿಸ್ಟ್ರಿಕ್ಟು ಪೈಕಿ ಮಂಜರಾಬಾದಿನಲ್ಲಿ ಮಾತ್ರ ಪ್ರಬಲವರ್ಷ, ಅರಕಲಗೂಡಿನಲ್ಲಿ ಒಂದಂಗುಳ ಚಿಲ್ಲರೆ, ಅನ್ಯತ್ರ ಕೇವಲ ಅಲ್ಪವೃಷ್ಟಿ. ಶಿವಮೊಗ್ಗ ಡಿಸ್ಟ್ರಿಕ್ಟುಪೈಕಿ, ಸೊರಬ, ಸಾಗರ, ನಗರ, ತೀರ್ಥಹಳ್ಳಿ, ಕುಂಸಿ, ಇವುಗಳಲ್ಲಿ ಒಂದರಿಂದ ಏಳಂಗುಳದ ವರಿವಿಗೆ ಮಳೆ ಆಗಿದೆ, ಇತರ ತಾಲ್ಲೂಕುಗಳಲ್ಲಿ ಅಲ್ಪವೃಷ್ಟಿ. ಕಡೂರು ಡಿಸ್ಟ್ರಿಕ್ಟು ಪೈಕಿ ಕೊಪ್ಪದಲ್ಲಿ ಏಳಂಗುಲ, ಮೂಡಗೆರೆಯಲ್ಲಿ ಅಯಿದಂಗುಳ, ಉಳಿದ ತಾಲ್ಲೂಕಿನ ಕೆಲವುಕಡೆ ಕೇವಲ ಅಲ್ಪವೃಷ್ಟಿ, ಕೆಲವುಕಡೆ ಸುತರಾಂ ಇಲ್ಲವು, ಚಿತ್ರದುರ್ಗ ಡಿಸ್ಟ್ರಿಕ್ಟು ಪೈಕಿ ಹೊಸದುರ್ಗದಲ್ಲಿ ಒಂದಂಗುಳ, ಉಳಿದ ತಾಲ್ಲೂಕುಗಳಲ್ಲಿ ಅಲ್ಪವೃಷ್ಟಿ. ಪಶು ಧನಗಳಿಗೆ ಮೇವೂ ನೀರು ಸರ್ವತ್ರ ಸಿಕ್ಕುವಂತೆಯೂ, ಧನಗಳು ಸುಖವಾಗಿವೆಯೆಂತಲೂ, ಜನಾರೋಗ್ಯ ತೃಪ್ತಿಕರವಾಗಿರುವಂತೆಯೂ ವ್ಯವಸಾಯ ಕೆಲಸಗಳು ಕ್ರಮವಾಗಿ ಜರುಗುತಲಿರುವದಾಗಿಯೂ, ಈಗ ಬೆಳೆಯಲ್ಲಿರುವ ಫಸಲ್‌ಗಳು ಒಳ್ಳೆಯ ಸ್ಥಿತಿಯಲ್ಲಿರುವಂತೆಯೂ ತಿಳಿಯಬರುತ್ತದೆ.

## CORRESPONDENCE

[ಇದರಡಿ ಪ್ರಕಟಿಸಲ್ಪಟ್ಟಿರುವ ಲೇಖನದಲ್ಲಿ ಕಂಡ ಅಭಿಪ್ರಾಯಗಳ ಗುಣದೋಷಗಳಿಗೆ ಏತತ್ಪತ್ರಿಕಾಲೇಖಕರು ಜವಾಬ್ದಾರರಲ್ಲವು. ಎಡಿಟರ್ ಕ. ಪ್ರ.]

ಮ|| ರಾ|| ಕರ್ಣಾಟಕ ಪ್ರಕಾಶಿಕಾ ಎಡಿಟರವರ ಸ|| ಕ್ಕೆ.

ಈ ಕಾಲದಲ್ಲಿ ವಿದ್ಯಾಹೀನರಾದವರ ಸ್ಥಿತಿಯೂ ವಿದ್ಯಾವಂತರಾದವರ ಸ್ಥಿತಿಯೂ ಸ್ವಲ್ಪ ಹೆಚ್ಚು ಕಡಮೆಯಾಗಿ ಸಮಾನವಾದುದಾಗಿಯೇ ಇದೆ. ವಿದ್ಯಾಹೀನನು ಜೀವನಾಧಾರವಾದ ವೃತ್ತ್ಯಂತರವನ್ನರಿಯದೆ ದಾರಿದ್ರ್ಯದಿಂ ಪೀಡಿತನಾಗಿ ನರಳುವದು ಸ್ವಾಭಾವಿಕವಾದಾಗ್ಯೂ ವಿದ್ಯಾವಂತನು ಅವರಿಗಿಂತ ಅಧಿಕವಾಗಿ ದಾರಿದ್ರ್ಯದಿಂ ಕ್ಲೇಶಪಡಬೇಕಾದ ಕಾಲವು ಈಗ ಪ್ರಾಪ್ತವಾಗಿದೆ. ಲೋಕದಲ್ಲಿ ಅನೇಕ ವ್ಯಕ್ತಿಗಳೂ ಅವುಗಳಿಗೆ ಅರ್ಹತಾ ಸಂಪಾದನಕ್ಕೆ ಆವಶ್ಯಕಗಳಾದ ಅನೇಕವಿಧ ಪರೀಕ್ಷೆಗಳೂ ನಿಯಮಗಳೂ ಏರ್ಪಟ್ಟದ್ದಾಗ್ಯೂ ಈಗ ಅವು ಅನೇಕ ಕಾರಣಗಳಿಂದ ದುಷ್ಪ್ರಾಪಗಳಲ್ಲದೆ ಹೋಗಿ ಕಡೆಗೆ ಸಾಮಾನ್ಯನಾದ ಒಬ್ಬ ಭಿಕ್ಷುಕನಿಗೆ ಉಂಟಾಗಿರುವಷ್ಟು ಮನೋಸ್ವಾಸ್ಥ್ಯವೂ, ನಿರುದ್ಯೋಗಿಕತೆಯೂ ವಿದ್ಯಾವಂತನಿಗೆ ಲಭಿಸುವುದು ಪ್ರಯಾಸವಾಗಿದೆ. ಇದಲ್ಲದೆ ಭಿಕ್ಷುಕನಿಗೆ ನಿರಾಯಾಸವಾಗಿ ಅದನ್ಯಾಪರಿ ಜೀವನ ಜರಗಿ ಹೋಗುತಿದೆ. ವಿದ್ಯಾವಂತನಿಗೆ ವಿದ್ಯಾಭ್ಯಾಸವು ಪೂರ್ತಿಯಾಗಲಿಕ್ಕೆ ಅರ್ಧ ಆಯುಸ್ಸು ಗತಿಸಿ ಹೋಗುತಿದೆ. ವೃತ್ತ್ಯನ್ವೇಷಣದಲ್ಲಿ ಹಾಗಮೇಲು ಆಯುಸ್ಸು ಕಳೆದುಹೋಗುತಿದೆ. ಮಿಕ್ಕ ಹಾಗವಾಲು ವ್ಯಾದ್ಯಾದ್ಯುಪದ್ರವಗಳಿಂದ ಕಳೆದು ಹೋಗುತಿದೆ. ಏತೇನ ಪುರುಷಾಯುಸ್ಸಿನಲ್ಲಿ ಪರಿಶ್ರಮಕ್ಕೆ ತಕ್ಕ ಪ್ರತಿಫಲವನ್ನನುಭವಿಸಿ ಆನಂದಿಸುವಂತ ಭಾಗ್ಯವಂತರು ಸಾವಿರಕ್ಕೆ ಒಬ್ಬರಿಬ್ಬರು ದೊರೆಯುವುದು ಸಹ ಪ್ರಯಾಸವೆಂದೆಣಿಸಬೇಕಾಗಿದೆ. ಸ್ವಯಂಪಾಕಿ ಕೆಲಸಕ್ಕೆ ಪಾಕಶಾಸ್ತ್ರದಲ್ಲಿ ಡಿಗ್ರಿ ಪಡೆದವನಾಗಿರಬೇಕೆಂದು ಅಪೇಕ್ಷಿಸುವಂತಾ ಈ ಕಾಲದಲ್ಲಿ ಸಾಮಾನ್ಯೇನ, ಜೀವನವೆಂತು ಸಾಗುವದೋ ಆಲೋಚಿಸಬಹುದು. ವಿದ್ಯಾಭ್ಯಾಸಕ್ಕಾಗಿ, ಅಲ್ಪಸ್ವಲ್ಪ ಇರುವ ಪೈತೃಕ ಆಸ್ತಿಯೆಲ್ಲವು ವ್ಯಯವಾಗಿ, ಫಲಪ್ರಾಪ್ತಿ ಕಾಲದಲ್ಲಿ ಅಶನವಸನಗಳಿಗಾಗಿ ಅನ್ಯ ಗೃಹದ್ವಾರದಲ್ಲಿ ಪರಿಭವಪಡುತ ಕಾದು ಉಪಸರ್ಪಣ ಮಾಡಬೇಕಾಗಿರುತ್ತದೆ. ಅಂತಾ ಉಪಸರ್ಪಣೆಯು ಅವನವನ ಅದೃಷ್ಟಾನುಗುಣವಾಗಿ ಫಲವನ್ನೀಯತಕ್ಕದ್ದಾಗಿರುವುದು. ಅದಕ್ಕೆ ಯೋಗ್ಯತೆಯಾಗಲಿ, ಹಕ್ಕುದಾರಿಯಾಗಲಿ, ಇತರ ವಿಧ ಅರ್ಹತೆಯಾಗಲಿ ಆವಶ್ಯಕವಿಲ್ಲವು. ಈಗ ಪ್ರಯೋಜನಪ್ರಾಪ್ತಿಗೆ ಬೇಕಾದ ಮುಖ್ಯಾರ್ಹತೆಯು ಪ್ರತ್ಯೇಕವಾಗಿರುವದರಿಂದ ಅಂತಾಗುಣಗಳುಳ್ಳವರೇ ಮುಂದಕ್ಕೆ ಬಂದು ಸುಕೋಷಪಡತಕ್ಕವರಾಗಿರುತ್ತಾರೆಯೇ ಹೊರ್ತು ವಿದ್ಯಾ ಬುದ್ಧಿ ಕೌಶಲ್ಯ

ದಿಗಳ್ಯಾವವೂ ಜೀವನ ಸಂಪಾದಕವಲ್ಲದೆ ಹೋಗುವಣವು ಸಹ ದೌರ್ಭಾಗ್ಯ ವಿಶೇಷವೆಂದೆಣಿಸಬೇಕಾಗಿದೆ.

ತಮ್ಮ ವಿಧೇಯನಾದ,
ಅನುವರ್ತಿ ಪೀಡಿತನು.

---

ಶ್ರೀ ಎದುಗಿರಿ ಸದಾನುದವರ್ಧಿನೀ ಸಭಾ,
ಮೇಲುಕೋಟೆ, ತಾ|| ೫ನೇ ಜೂಲೈ ೧೮೯೩

(ಕಳೆದವಾರದ ಶೇಷ)

ಈಭೂಮಿಯಲ್ಲಿ ಎಲ್ಲಾ ಕುಲದವರೂ ತಮ್ಮ ತಮ್ಮ ಕುಲಾಚಾರಗಳನ್ನು ಸ್ವಲ್ಪಸ್ವಲ್ಪ ವಾದರೂ, ನಡೆಸುತ್ತಾಬರುತ್ತಾರೆ. ಅದರೆ ಬ್ರಾಹ್ಮಣಾದಿ ವರ್ಣಗಳ ಧರ್ಮವನ್ನೆ ಮಾತ್ರ ನಡೆಸುತ್ತಿರುವವರಲ್ಲಿ ಮೊದಲು ಮೊದಲಿದ್ದ ಅನುಕೂಲತೆಗಳು ಕಡಮೆಯಾಗುತ್ತಾ ಬಂದು, ತತ್ಸಿದ್ಧ್ಯಂಶೀಯರ ಧರ್ಮಪರಿತ್ಯಾಗದಿಂದಲೂ, ಬ್ರಾಹ್ಮಣಾದಿಗಳ ಸದ್ಧರ್ಮಾನುಷ್ಠಾನಕ್ಕಾಗಿ ಏರ್ಪಟ್ಟಿದ್ದ ಅವರವರ ವೃತ್ತಿಸ್ವಾಸ್ಥ್ಯಾದಿಗಳು ತತ್ತದ್ವಂಶೀಯರಾದ ಬ್ರಾಹ್ಮಣರುಗಳಿಂದಲೇ ಪರ ಪರೋಗಪಡಿಸಲ್ಪಡುತ ಜೀವನಾಧಾರವು ನಿರಾತಂಕವಾಗಿ ನಡೆಯಲಭ್ಯಂತರ ವುಂಟಾದ್ದರಿಂದಲೂ, ಇಂತಾ ದೋಷಗಳಂ ನಿವೃತ್ತಿಗೊಳಿಸಿ ತಕ್ಕ ಅನುಕೂಲ್ಯಗಳಂ ಕಲ್ಪಿಸುವಷ್ಟು ಅಭಿಮಾನವು ಪಾಲಕರಿಗೆ ಅದ್ಯಾಪಿ ಉಂಟಾಗದೆ ಇರುವದರಿಂದಲೂ, ಇವರು ಜೀವನಾರ್ಥವಾಗಿ ಯಥಾ ಯೋಗ್ಯಗಳಾದ ವೃತ್ತಿಗಳನ್ನವಲಂಬಿಸಿ, ತಕ್ಕಮಟ್ಟಿಗೆ ಸ್ವಧರ್ಮಗಳನ್ನು ಕಾಪಾಡಿಕೊಳ್ಳುವದಿರಬೇಕಾಗಿ ಬಂದಿದೆ. ಇವರಿಗೆ ವಿಧಿಸಿರುವ ಮುಖ್ಯವಾದ ಧರ್ಮಗಳು ಆರು ವಿಧಗಳಾಗಿವೆ. ಕ್ಷತ್ರಿಯರಿಗೆ ವಿಧಿಸಲ್ಪಟ್ಟ ಧರ್ಮವು ಮೂರು ಪ್ರಕಾರವಾದವುಗಳು. ಇವು ಆತ್ಮೋಜ್ಜೀವನಕರವು. ಇಂತಾ ಧರ್ಮಗಳಂ ಕಾಪಾಡಿಕೊಳ್ಳದೆ ಹೋಗೋಣವೇ ಆಯಾ ವರ್ಣತ್ರಯದ ಧರ್ಮಗಳ ಹೀನಸ್ಥಿತಿಗೆ ಕಾರಣವು. ಹೀಗೆ ಪರಮಪೂಜ್ಯವಾದ ಆರ್ಯ ಮತಗಳಲ್ಲಿ ಕಾಲಾನುಸಾರ ಧರ್ಮ ಲೋಪಗಳು ಉಂಟಾಗುವಾಗ್ಯೆ ಶ್ಲೋ||...ಪರಿತ್ರಾಣಾಯ ಸಾಧೂನಾಂ ...... ಸಂಭವಾಮಿ ಯುಗೇಯುಗೇ ಎಂಬ ಗೀತಾಚಾರ್ಯರಿಂದ ಮೊದಲೇ ಸೂಚಿಸಲ್ಪಟ್ಟಿರುವ ಪ್ರಮಾಣದಲ್ಲಿ ನಂಬಿಕೆಯನ್ನು ಹೆಚ್ಚಿಸಿಕೊಳ್ಳುತ ಇರಬೇಕಾಗಿದೆ. ಭಗವತ್ಪ್ರೋಕ್ತಗಳಾದ ವಾಕ್ಯಗಳಲ್ಲಿಯೂ, ಮನ್ವಾದಿ ಮಹರ್ಷಿಗಳ ಧರ್ಮಶಾಸ್ತ್ರಗಳಲ್ಲಿಯೂ ನಂಬಿಕೆ ಯಿಲ್ಲದ ಈಗಿನ ಕೆಲವು ನಾಗರಿಕರ, ಕುವಾದವಲ್ಲಿಯ ಪರಿವೇಷ್ಟನದಿಂದ ಪರಿಭ್ರಾಂತರಾಗುವ ನಮ್ಮವರಾದರೂ, ತಮ್ಮ ತಮ್ಮ ಪೂರ್ವಸದಾಚಾರಗಳನ್ನನುಸರಿಸಿ, ತಮ್ಮತಮ್ಮ ಸ್ವಧರ್ಮಗಳಂ ಕಾಪಾಡಿಕೊಳ್ಳಲು, ಮತ್ತು ಮನ್ವಾದಿ ಋಷಿ ಪ್ರೋಕ್ತಗಳಾದ ಗ್ರಂಥಗಳನ್ನೂ, ವೇದಶಾಸ್ತ್ರಪುರಾಣಾದಿಗಳನ್ನೂ ತತ್ತನ್ಮತಾನುಸಾರವಾಗಿ ಸ್ವಲ್ಪಸ್ವಲ್ಪವಾಗಿಯಾದರೂ, ಪರಿಶೋಧಿಸಿ ಪ್ರಾಜ್ಞರ ಬುದ್ಧಿವಾದಗಳನ್ನು ಪ್ರತಿದಿವಸಗಳಲ್ಲಿಯೂ ಕೊಂಚಕಾಲವಾದರೂ, ಸ್ಮರಿಸುವದಕ್ಕೆ ಅವಕಾಶವನ್ನುಂಟುಮಾಡಿಕೊಳ್ಳಂತು ಸ್ವಸ್ಥಚಿತ್ತರಾಗುವರೆಂದು ನಂಬುತ್ತೇನೆ.

(ಸಶೇಷ.)

---

## THE MYSORE GAZETTE.
### ಮೈಸೂರು ಗೆಜೆಟು.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ತಾ|| ೨೬ನೇ ಜೂನ್ ೧೮೯೩, ನಂ|| ೨೧೬೩೮–೧. ೩೮೭–೯೨.—ಮೈಸೂರು ಗವರ್ನಮೆಂಟ ಕಂಟ್ರೋಲರ ಚೀಫ್ ಅಸಿಸ್ಟೆಂಟರಾದ ಮಿಸ್ಟರ್ ಜೆ. ಆರ್. ಬ್ಯಾರೋಯವರು ಸನ್ ೧೮೯೩ ನೇ ಇಸವಿ ಮೇ ೧೯ನೇ ತಾರೀಖ್ ಮೊದಲು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದ್ದರು.

ತಾ|| ೨೮ನೇ ಜೂನ್ ೧೮೯೩, ನಂ|| ೨೧೫೬೧–L. ೨೮೧೧.—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೩೧ನೇ ಆರ್ಟಿಕಲ್ ನಿಯಮಗಳನ್ನನುಸರಿಸಿ, ಅಸಿಸ್ಟೆಂಟ್ ಕಮಿಷನರ್ ಮಿ|| ಟಿ. ಪರಮಶಿವಯ್ಯರವರು, ೧೮೯೩ನೇ ಇಸವಿ ಮೇ ೨೯ನೇ ತಾರೀಖ್ ಮೊದಲು ಜೂನ್ ೧೯ನೇ ತಾರೀಖ್‌ವರಿಗೆ ಎರಡುದಿನಗಳೂ ಸೇರಿ ನಾಲ್ಕು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿದ್ದರು.

ತಾ|| ೩೦ನೇ ಜೂನ್ ೧೮೯೩. ಮೊಕಾಂ ನಂ|| ೮೩೦—ಸನ್ ೧೮೯೨ನೇ ಇಸವಿ ಜೂನ್ ೭ನೇ ಮರ್ಕ್ಯುಮಲ್ಲ ೧೮೮೮–೯. ೮೬೦–೯೨ನೇ ನಂ|| ಇಸ್ತಿಹಾರನಾಮೆಯನ್ನನುಸರಿಸಿ, ಸಿವಿಲ್ ಇಂಜನಿಯರಗಳ ಇನ್ಸ್ಟಿಟ್ಯೂಟ್ ಮೆಂಬರಾದ ಮತ್ತು ಮೈಸೂರು ಗವರ್ನಮೆಂಟ ರೆಯಿಲ್ ರಸ್ತೆಗಳ ಸೂಪರಿಂಟೆಂಡಿಂಗ್ ಇಂಜನಿಯರಾದ ಮಿ|| ಎಚ್. ಗ್ರೋಸ್‌ಯವರು, ಸನ್೧೮೯೩ನೇ ಇಸವಿ ಏಪ್ರಿಲ್ ೬ನೇ ತಾರೀಖ್ ಮೊದಲು. ಮೈಸೂರು ಗವರ್ನಮೆಂಟ ರೆಯಿಲ್ವೆ ಇಲಾಖಾ ಸೆಕ್ರೆಟರಿಯಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

೨ನೇ ಜೂಲೈ ೧೮೯೩, ನಂ|| ೩೦–೧. ೩೮.—ಮಿ|| ತಬ್ಬಿಯ ವಿನಿಕೊಂ ದೇವಿಯವರು ಮೈಸೂರು ಯೆಕ್ಸೈಜ್ ಕಮಿಷನರ ಅಸಿಸ್ಟೆಂಟರಾಗಿ ನಿಯಮಿಸಲ್ಪಟ್ಟಿರುತ್ತಾರೆ.

---

## SUMMARY OF NEWS.
### ವೃತ್ತಾಂತ ಸಂಗ್ರಹವು.

ಅಟ್ಲಾಂಟಿಕ್ ಮಹಾಸಾಗರದ ಬುಡದಲ್ಲಿ ೧,೦೦,೦೦,೦೦೦ ಪೌಂಡು ಬೆಲೆ ಬಾಳುವ ಬಂಗಾರವೂ ನಾಣ್ಯವೂ ಇರಬೇಕೆಂಬದಾಗಿ ತೋರುತ್ತದೆ.

---

ಪ್ಯಾರಿಸ್ ನಗರದಲ್ಲಿ ಒಂದು ವಾನರ ವಿರುವದು, ಅದು ನ್ಯೂಪರ್ಸಿ ಎಂಬ ಹೆಸರುಳ್ಳ ತಂತುವಾದ್ಯವನ್ನು ಒಳ್ಳೇ ಉತ್ತಮರೀತಿಯಿಂದ ಬಾರಿಸುತದೆ—ಸತ್ಯ.

---

ಇಟಲೀ ರಾಜ್ಯದ ನೇಪಲ್ಸ್ ಬ್ಯಾಂಕಿನಲ್ಲಿ ಒಬ್ಬ ಡೈರಕ್ಟರೂ, ಒಬ್ಬ ಕ್ಯಾಷಿಯರೂ ಸೇರಿ ೨೦ ಕೋಟಿ ದ್ರವ್ಯವನ್ನು ಅಪಹರಿಸಿದ್ದು ಸಿದ್ಧಾಂತವಾದ್ದರಿಂದ ಡೈರಕ್ಟರಿಗೆ ೧೦ ವರ್ಷಗಳೂ, ಕ್ಯಾಷಿಯರಿಗೆ ೬ ವರ್ಷಗಳೂ ಕಠಿಣ ಸಜಾ ವಿಧಿಸಿದರೆಂದು ಕೇಳುತ್ತೇವೆ.

ನಾಸಿಗಾವ್ ತಾಲ್ಲೂಕ್ ಬೈಕಿ ವಳಸಗಾವ್ ಎಂಬಲ್ಲಿ ಒಬ್ಬ ಮರಾಠ ಜಾತಿಯ ಸ್ತ್ರೀಯಳು ಒಬ್ಬ ಗೋಂದಲಿಗನೊಡನೆ ಆನಂದದಿಂ ರತಿವಿಲಾಸ ನಡೆಸುತ್ತಿರುವದನ್ನು ಅವಳ ಗಂಡನು ಕಂಡಾರ ಕಂಡು ಮುತ್ತಿಬ್ಬರನ್ನು ತನ್ನ ಸಹಾಯಕ್ಕೆ ಕರಕೊಂಡು ಆ ಗೋಂದಲಿಗನ ಜನನೇಂದ್ರಿಯವನ್ನು ಕೊಯ್ದುಬಿಟ್ಟನಂತೆ.—ಚಂದ್ರಿಕಾ.

---

ಅಮೇರಿಕಾದಲ್ಲಿ ಮಾರ್ಜಬ್ಯಾರಿ ಎಂಬ ಹೆಸರುಳ್ಳ ಗಾಯನ ವಿಶ್ವಾಸದ ಸ್ತ್ರೀಯು ಬೀಜಿದ್ದು, ಆವಳು ತನ್ನ ಗಾಯನದ ಚೆಲುವು ಒಳ್ಳೇ ಕೀರ್ತಿಯನ್ನು ಹೊಂದಿರುತ್ತಾಳೆ ಎಲ್ಲಾದರೂ ಗಾಯನ ಮಾಡಬೇಕಾದರೆ ಒಂದು ಟ್ರಿಪಿಗೆ ೧೩೦೦ ರೂಪಾಯಿಗಳನ್ನು ತೆಗೆದುಕೊಳ್ಳುತ್ತಾಳೆ.—ಸತ್ಯ.

---

ತಿರುವಾಂಕೂರಿನಲ್ಲಿ ಸ್ತ್ರೀಯರನ್ನು ಗಲ್ಲಿಗೆ ಹಾಕುವ ಪದ್ಧತಿ ಇಲ್ಲ. ಕೆಲವು ದಿವಸಗಳ ಕೆಳಗೆ ಕ್ವಿಲೋನಿನಲ್ಲಿ ಒಬ್ಬ ಸಿರಿಯನ್ ಹೆಂಗಸು ಅನ್ನ ಮಕ್ಕಳನ್ನು ಕೊಂದದಕ್ಕಾಗಿ ಅವಳಿಗೆ ಮಹಾರಾಜರು ಅವಳ ಜೀವಮಾನದ ವರಿಗೂ ಸಜಾ ಶಿಕ್ಷೆಯನ್ನು ಅನುಭವಿಸಬೇಕೆಂದು ವಿಧಿಸಿದರು

---

ಅಹೋದ್ಯರ ತಾಲ್ಲೂಕಿನವರಾದ ಸೇಠಿ ಕುಮಾರು ೧ ಲಕ್ಷರೂಪಾಯಿನ ಮೂಲಧನದಿಂದ ಲಕ್ನೋವಿನಲ್ಲಿ ಒಂದು ಕಬ್ಬಿಣದ ಕಾರ್ಖಾನೆಯನ್ನು ಸ್ಥಾಪಿಸಿರುತ್ತಾರೆ ಇಂಡಿಯಾದ ಹಿಂದುಗಳು ತಮ್ಮ ಜನಗಳಲ್ಲಿ ಹೀಗೆಯೇ ಕಸಬುಗಳನ್ನು ಪ್ರಾರಂಭಿಸುವದಕ್ಕೆ ಪ್ರಯತ್ನ ಮಾಡುವದರಿಂದ ತುಂಬಾ ಪ್ರಖ್ಯಾತಿ ಪಡೆಯುವದರಲ್ಲಿ ಸಂಶಯವಿಲ್ಲ.

---

ಗಂಜಾಂ ಜಿಲ್ಲಾ ಶ್ರೀಕಾಕುಳದಲ್ಲಿರುವ ಮ|| ಟಿ. ವಿ ಶಿವರಾಮ ಪಂತುಲರವರಿಗೆ ವರ್ಷಕ್ಕೆ ೧೦,೦೦೦ ರೂಪಾಯಿ ವರಮಾನ ಬರತಕ್ಕ ಜಮೀನ್ದಾರಿ ಗ್ರಾಮಗಳಿವೆ. ಇವರು ಒಂದು ಟೌನ್‌ಹಾಲನ್ನು ಕಟ್ಟಿಸುತಲಿದ್ದಾರೆ. ಇದಲ್ಲದೆ ಮಾರ್ಗಸ್ಥರಿಗೋಸ್ಕರ ಒಂದು ಛತ್ರ ಕಟ್ಟಿಸಿರುವದಲ್ಲದೆ ತಮ್ಮ ಮನೆಯಲ್ಲಿ ೨೫ ಜನ ವಿದ್ಯಾರ್ಥಿಗಳಿಗೆ ಅನ್ನ ಬಟ್ಟೆ ಸ್ಕೂಲ್ ಫೀ ಗಳನ್ನು ಕೊಟ್ಟು ಬೇಕಾದ ಪುಸ್ತಕಗಳನ್ನು ತೆಗೆದುಕೊಟ್ಟು ವಿದ್ಯಾಭ್ಯಾಸಮಾಡಿಸುತಲಿದ್ದಾರೆ ಪ್ರಖ್ಯಾತರು ಹೀಗಲ್ಲವೆ ಇರಬೇಕು.

---

ಮದರಾಸ್ ಯೂನಿವರ್ಸಿಟಿ ಪರೀಕ್ಷೆಯಲ್ಲಿ ಪರೀಕ್ಷಕರಾಗಿರುವವರು ತಮ್ಮ ಬಳಿಗೆ ಪ್ರಶ್ನೋತ್ತರಗಳ ಪತ್ರಿಕೆಗಳು ಬಂದ ತರುವಾಯ ಯೂನಿವರ್ಸಿಟಿಯವರು ಗೊತ್ತುಮಾಡಿದ ತಾರೀಖಿನ ಮುಂದೆ ಎಲ್ಲವನ್ನೂ ನೋಡಿ ನಂಬರು ಹಾಕಿ ಕಳುಹಿಸಿ ಕೊಡದಿದ್ದರೆ ವಾಯಿದೆ ತಾರೀಖಿನ ಮಾರನೇದಿನದಿಂದ ದಿನಕ್ಕೆ ಇಷ್ಟು ರೂಪಾಯಿ ಅಪರಾಧ ಕೊಡಬೇಕೆಂದು ವಿಧಿಸಿರುತ್ತಾರೆ. ಹೀಗೆ ವಿಧಿಸಿದ ಪಿನಾಲ್ಟಿಯಲ್ಲಿ ಒಬ್ಬ ಪರೀಕ್ಷಕರು ತಾವು ಕಳುಹಿಸುವದು ಸಾವಕಾಶ ವಾದುದರಿಂದ ದಿನಕ್ಕೆ ೨೦ ರೂಪಾಯಿ ಪ್ರಕಾರ ೨೦೦ ರೂಪಾಯಿಗಳವರಿಗೂ ಆದ ಅಪರಾಧದ ಹಣವನ್ನು ಹಿಡಿದುಕೊಂಡು ಅವರಿಗೆ ೧೦ ರೂಪಾಯಿ ಕಳುಹಿಸಲು, ಆ ಪರೀಕ್ಷಕರು ಆ ರೂಪಾಯಿಗಳನ್ನು ಯೂನಿವರ್ಸಿಟಿಯವರಿಗೆ ತಮ್ಮ ಕಡೆ ಉಚಿತಾರ್ಥ ದ್ರವ್ಯವೆಂದು ಸೇರಿಸಿಕೊಳ್ಳಬೇಕೆಂಬದಾಗಿ ಕಳುಹಿಸಿದರಂತೆ.

---

ಕೇಸರಿಮಾರರು ದ್ವಾರಕಾಮಠದ ಸ್ವಾಮಿಗಳು ಗೌಡಬ್ರಾಹ್ಮಣರಿಂದ ದೀಕ್ಷೆ ತೆಗೆದುಕೊಂಡಿದ್ದು, ಅವರು ಜಗದ್ಗುರುಗಳಾಗದೆ, ಇದುವರಿಗೆ ನಡೆದು ಬಂದದಕ್ಕೆ ಶೃಂಗೇರಿಯವರೇ ಜಗದ್ಗುರುಗಳಾಗಿರುತ್ತಾರೆಂದು ಬರೆದನ್ನೆ ದೀಪಸಿಂಧುಕರ್ತರು ಈ ಪ್ರಕಾರ ಬರೆಯುತ್ತಾರೆ "ಮೂಲ ದ್ವೈತ ಮತಪ್ರತಿಷ್ಠಾಪಕರಾದ ಆಚಾರ್ಯರಿಗೂ ಗೌಡಬ್ರಾಹ್ಮಣರೇ ದೀಕ್ಷೆ ಕೊಟ್ಟಿರುತ್ತಾರೆ. ಗೌಡಬ್ರಾಹ್ಮಣರಲ್ಲಿಯೂ ಇಲ್ಲಿ ದ್ರಾವಿಡ ಬ್ರಾಹ್ಮಣರಲ್ಲಿಯೂ ಇಲ್ಲ. ಇಂಥ ಚಿತ್ಪಾವನ ಬ್ರಾಹ್ಮಣರು ಕೂಡಾ ಗೌಡಬ್ರಾಹ್ಮಣರಿಂದ ದೀಕ್ಷೆ ತೆಗೆದುಕೊಂಡಿರುತ್ತಾರೆ ಗೌಡರು ದೀಕ್ಷೆ ಕೊಟ್ಟಿರುವದಕ್ಕೆ ಅವರು ಅನ್ಯ ವ್ಯವಹಾರಕ್ಕೆ ಅಯೋಗ್ಯರಾದರೆ ಚಿತ್ಪಾವನರು ಕೂಡ ಇತರ ಬ್ರಾಹ್ಮಣರು ಬಹಿಷ್ಕಾರ ಮಾಡುವಂದು" ಎಂಬದು "ನವಿ ಮೂಲ ಯುಬಿಮೂಲ ಬದುಕಿಹಾರದು —ಜಂ.

---

## EXTRACTS.

//ಕಳೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ಗ್ರಾಮ ಮುನಿಸೀಫ್ ಕೋರ್ಟು ವಿಚಾರದ ಚರ್ಚೆಯಾದಾಗ ಯೆಲ್ಲಾ ಪ್ರತಿನಿಧಿಗಳು ಪಂಚಾಯಿತಿ ಕೋರ್ಟುಗಳ ಪ್ರಯೋಜನ ವಿಷಯದಲ್ಲಿ ಅನೇಕ ಸಂಗತಿಗಳನ್ನು ತಿಳಿಸಿ ಶೀಘ್ರವಾಗಿ ಪಂಚಾಯಿತಿ ಕೋರ್ಟುಗಳ ಏರ್ಪಾಡನ್ನು ಮಾಡಿ ಕೊಡಬೇಕೆಂದು ಪ್ರಾರ್ಥಿಸಿದರು. ಅದ್ಯಾಪಿ ದಿವಾನರವರು ಈ ವಿಷಯದಲ್ಲಿ ಯಾವ ವಿಚಾರವನ್ನೂ ಮಾಡಲಿಲ್ಲ. ಅನೇಕ ಗ್ರಾಮಾದಿ ಜನಗಳು ವಿದ್ಯಾವಿಹೀನರಾಗಿರುತ್ತಾರೆ, ಪೂರ್ವಾಪರ ವಿಚಾರಗಳನ್ನು ಮಾಡುವದಕ್ಕೆ ಶಕ್ತರಾಗದುದರಿಂದ ರಾಗದ್ವೇಷ ಪ್ರತಿನಿವಿಷ್ಟರಾಗಿ ಪರಸ್ಪರ ದ್ವೇಷವನ್ನು ಬೆಳಸುತ್ತಾ ಜಮೀನಿನ ಸಿವಿಲ್ ಕ್ರಿಮಿನಲ್ ಮೊಕದ್ದಮೆಗಳನ್ನು ತಮ್ಮ ನೆರೆಹೊರೆಯವರ ಮೇಲೆ ಹಾಕುತ್ತಾ ಸ್ವಂತ ಕೆಲಸಗಳನ್ನು ಬಿಟ್ಟು ಕೋರ್ಟುಗಳಲ್ಲಿ ಅಲೆಯುತ್ತಾ ಜೀವನಾರ್ಥವಾದ ದ್ರವ್ಯ ಧವಸಗಳನ್ನು ಪ್ರತೀಕಾರ ಬುದ್ಧಿಯಿಂದ ಲಾಯರುಗಳು, ತಮ್ಮ ಪ್ರಯಾಣದ ಖರ್ಚು, ಕೆಲವು ಸಂದರ್ಭಗಳಲ್ಲಿ ರುಷುವತ್ತು ಮೊದಲಾದವುಗಳಿಗೋಸ್ಕರ ವಿನಿಯೋಗಿಸುತ್ತಾ ತಾವು ದರಿದ್ರರಾಗುವದಲ್ಲದೆ ತಮ್ಮ ಪ್ರತಿವಾದಿಗಳನ್ನು ದರಿದ್ರರನ್ನಾಗಿ ಮಾಡುತ್ತಾ ಕ್ರಮೇಣ ತಾವು ತಮ್ಮ ಪ್ರತಿವಾದಿಗಳು ಎಲ್ಲರೂ ಪರಸ್ಪರ ವೈರಾಗ್ನಿಯಿಂದ ಅರ್ಥಹಾನಿ ಪ್ರಾಣಹಾನಿ ಮಾನಹಾನಿಗಳನ್ನು ಕೂಡ ಹೊಂದುವರು. ಪಂಚಾಯಿತಿ ಕೋರ್ಟುಗಳಲ್ಲಿ ಪರಸ್ಪರ ವೈರವು ಪ್ರಬಲವಾಗಿ ಅಭಿವೃದ್ಧಿಯಾಗುವದಕ್ಕೆ ಮೊದಲೇ ರಾಜಿ ಪ್ರಯತ್ನಗಳನ್ನು ಕನಮೆಮಾಡಿ ರಾಜೀ ಮಾಡಿಸುವದು. ಇದರಿಂದ ಜನಗಳು ಪರಸ್ಪರ ಸೌಹಾರ್ದ ಉಳ್ಳವರಾಗಿ ಪರಸ್ಪರ ಪ್ರತಿ ಕಾರ ಪ್ರಯತ್ನಕ್ಕೆ ವಿನಿಯೋಗಿಸತಕ್ಕ ದ್ರವ್ಯವನ್ನು ಹೆಚ್ಚು ಮಾಡಿಕೊಳ್ಳುವದಲ್ಲದೆ ಲೋಕದ ಉತ್ಪತ್ತಿಯನ್ನು ಜಾಸ್ತೀ ಮಾಡಿ ಸರ್ಕಾರಿಗೂ ದವಸ ಧಾನ್ಯಗಳು ಸುಲಭದ ಕ್ರಯಕ್ಕೆ ಸಿಕ್ಕುವಂತೆ ಮಾಡುವರು. ಇದರಿಂದ ದೈವಿಕ ಜನಗಳಿಗೆ ಮಾತ್ರವೇ ಅಲ್ಲದೆ ಇತರ ಪ್ರಾಂತಗಳಿಗೂ ಸುಭಿಕ್ಷವೂ ಕ್ಷೇಮವೂ ಉಂಟಾಗುವದು. ಪ್ರಜೆಗಳು ಪರಸ್ಪರ ಕಲಹವನ್ನು ಬಿಟ್ಟು ಕೃಷಿ ವಾಣಿಜ್ಯಾದಿಗಳನ್ನು ಹೆಚ್ಚಿಸುತ್ತಾ ಬಂದರೆ ಉತ್ಪತ್ತಿಯೂ ಆಮದು ರಫ್ತುಗಳೂ ಜಾಸ್ತಿಯಾಗುವದರಿಂದ ಸರ್ಕಾರದ ಆಯಿವಿಯೂ ಕೂಡ ಸರಿಯಾಗಿ ಬರುವದಲ್ಲದೆ ವಿಶೇಷ ಜಾಸ್ತೀಯಾಗುವದು. ನಮ್ಮ ದಿವಾನರವರು ಈ ವಿಷಯಗಳನ್ನೆಲ್ಲಾ ತಿಳಿಯದ ಅಪ್ರಾಜ್ಞರಲ್ಲ.—ನೇಟಿವಭಿಮಾನಿ.

---

### ಸಂಗೀತದ ಬೆಳವಣಿಗೆಯು ಮೇರೆಮೀರಿ ಹೋಯಿತು.

//ಮೊದಲು ಸುತ್ತಿದ ಕೆಳಗಿನ ಜನರು ಭಾಗವತರಾಟಗಳನ್ನು ಕನ್ನಡ ಭಾಷೆಯಲ್ಲಾಡುತ್ತಿದ್ದವರನ್ನು ನೋಡಿ ಸಾಂಗಲೀ ಸಂಸ್ಥಾನದ ಅಧಿಪತಿಗಳಾಗಿದ್ದ ಕೈ. ಶ್ರೀಮಂತ್ ಚಿಂತಾಮಣರಾವ್ ಅಪ್ಪಾಸಾಹೇಬರವರು ತಮ್ಮ ಕೈಕೆಳಗಣ ಕಾರಕೂನ್ ರಾ|| ರಾ|| ವಿಷ್ಣುಪಂತ ಭಾವೆ ಇವರಿಂದ ಮಹಾರಾಷ್ಟ್ರ ಭಾಷೆಯಲ್ಲಿ ನಾಟಕಗಳನ್ನು ರಚಿಸಿ ಆಟಗಳನ್ನು ಆಡಿಸಿದರು. ಅದನ್ನು ನೋಡಿಕೊಂಡೇ ಎಷ್ಟೋ ನಾಟಕ ಸಂಘಗಳು ಆಯಾ ಪ್ರದೇಶಗಳಲ್ಲಿ ಸ್ಥಾಪಿಸಲ್ಪಟ್ಟು ಸರ್ವತ್ರ ವ್ಯಾಪಿಸಿರುತ್ತವೆ. ಬಳಿಕ ಬೆಳಗಾಂನಲ್ಲಿ ಕೈ. ರಾ||ರಾ|| ಅಣ್ಣಾಸಾಹೇಬ್ ಕಿರ್ಲೋಸ್ಕರ್ ಇವರು ಭರತ ಶಾಸ್ತ್ರೋತ್ತೇಜಕ ನಾಟಕ ಸಂಘವನ್ನು ಸ್ಥಾಪಿಸಿದ್ದು ಮನಸ್ಸಿಗೆ ಬಾರದೇ ಸಂಗೀತ ನಾಟಕಗಳನ್ನು ರಚಿಸಿ ಪಾತ್ರಗಳ ಕಡೆಯಿಂದ ಮಾಡಿಸುತ್ತಿದ್ದರು. ತರುವಾಯ ರಾ. ರಾ. ಡೆಂಗರೆ ಪ್ರಭೃತಿಗಳೂ ಸಂಗೀತ ನಾಟಕಗಳನ್ನು ಬರೆದರು. ಸ್ವಲ್ಪವೇಳೆಯಲ್ಲಿಯೇ ಸಂಗೀತ ನಾಟಕದ ಪ್ರಸ್ಥವು ಬೆಳೆದು, ಕರ್ನಾಟಕಪ್ರಾಂತದಲ್ಲೆಲ್ಲಾ ಹಬ್ಬಿತು. ಅದರಂತೇ ನಮ್ಮ ಊರಲ್ಲಿಯೂ ೧೨ ಸಂಘಗಳಾಗಿವೆ ಸರ್ವತ್ರ ಸಂಗೀತದ ಹುಚ್ಚು ಬೆಳೆದು, ಸಂಗೀತ ಹೋಳೀ ಹಬ್ಬ, ಸಂಗೀತ ಶಿವರಾತ್ರಿ, ಸಂಗೀತ ದೇವತಾರ್ಚನೆ, ಸಂಗೀತ ಆರತಿ, ಸಂಗೀತ ಪುರಾಣ ಕೀರ್ತನೆ, ಸಂಗೀತ ಧೂಮಪಾನ ಮತ್ತು ಸಂಗೀತ ನಾಟ್ಯ, ಇವುಗಳು ಉತ್ಪತ್ತಿಯಾದವು. ಇದೂ ಅಲ್ಲದೆ ಸಂಗೀತದ ಅಂಗಿ, ಸಂಗೀತ ಕೋಟು, ಸಂಗೀತ ಬೂಟ್ಸು, ಸಂಗೀತ ಕೋಲು ಮತ್ತು ಸಂಗೀತ ಸಂಚಾರ ಇವುಗಳು ನಡದು, ಸಂಗೀತ ಊಟ, ಸಂಗೀತ ಹಾಸಿಗೆಯ ಮೇಲೆ ಸಂಗೀತ ಹೊದಿಕೆಯನ್ನು ಹೊದ್ದುಕೊಂಡು ಸಂಗೀತ ನಿದ್ದೆಯನ್ನು ಮಾಡುತ್ತಿದ್ದರಮೇಲೆ ಸಂಗೀತ ಗಸ್ತಿಯು ಬೇಡವನೆ? ಬೇಕಲ್ಲವೇ, ಬೇಕು, ದಿಕ್ಕುದಿಕ್ಕುಗಳಲ್ಲಿದ್ದರೂ ನಮ್ಮಲ್ಲಿ ಸಂಗೀತ ಗಸ್ತಿಯನ್ನು ತಿರುಗುವ ಪ್ರಚಾರವು ನಡೆಯುತ್ತದೆ. ಈ ಗಸ್ತಿಯನ್ನು ತಿರುಗತಕ್ಕ ಸಂಗೀತ ಶಿಪಾಯರು ಮತ್ತು ಸಂಗೀತ ಪಾಟೀಲರ ಸಂಗೀತ ಕೂಗುಗಳು ಜನರ ಸಂಗೀತ ನಿದ್ರೆಯನ್ನು ಕೆಡಿಸುವದರಿಂದ, ಜನರಲ್ಲಿ ಸಂಗೀತ ಸಿಟ್ಟು ಉಂಟಾಗಿ ಸಂಗೀತವನ್ನೇ ಹಾಡುತ್ತ ಕೊಡ್ರಿಸುತ್ತಿದೆ ಸಂಗೀತ ಗಸ್ತಿಯನ್ನು ತಿರುಗುತ್ತಿದ್ದರೂ, ಬೆನ್ನ ಹಿಂದೆ ಸಂಗೀತ ಅಪರಾಧಗಳು ಸಂಭವಿಸುತ್ತವೆ ಈ ಸಂಗೀತ ಅಪರಾಧಗಳನ್ನು ನೋಡಿ ಕಟ್ಟಿ, ಸಂಗೀತ ಆರೋಪಿಗಳನ್ನು ಸಂಗೀತ ನ್ಯಾಯಾಲಯದ ಮುಂದೆ ನಿಲ್ಲಿಸುವದಕ್ಕೆ ಸಂಗೀತ ಪೋಲೀಸರು ಮತ್ತು ಸಂಗೀತ ಅಪರಾಧಗಳನ್ನು ಶಿಕ್ಷಿಸುವದಕ್ಕಾಗಿ ಸಂಗೀತ ನ್ಯಾಯಾಧೀಶರು ಮ್ಯಾಜಿಸ್ಟ್ರೇಟರು, ಇನ್ನೇನಿದ್ದಾಗುವದೇ ಯಿಲ್ಲವೊ ಸಂಗೀತ ಮೂರ್ಖರಿಗೆ, ಎಲ್ಲರಿಗೂ ಸಂಗೀತಸೌಖ್ಯದ ಲಾಭವು ದೊರೆತು, ಸಂಗೀತ ಸ್ವರ್ಗದಲ್ಲಿ ಲೀನರಾಗುವದು ಆದ್ದರಿಂದ, ಪ್ರಯುಕ್ತ ನಮ್ಮ ಸಂಗೀತ ಸರಕಾರದವರು ನಮ್ಮ ಸಂಗೀತ ಗಾಳಿಯನ್ನು ತಮ್ಮ ಸಂಗೀತ ಚಿತ್ತಕ್ಕೆ ತರುವರೆಂದು ನಮ್ಮ ಸಂಗೀತ ಮನಸ್ಸು ನಂಬಿರುತ್ತದೆ.—ಕರ್ನಾಟಕವೃತ್ತ.//

---

ಪೂರ್ವದಲ್ಲಿ ಮನುಷ್ಯನ ಸ್ವಾಭಾವಿಕ ಉಪಯೋಗವಾಗದೇ ಹೋದದಾಗಿ, ಉಳಿದ ವಿದ್ಯೆಗಳಂತೆಯೇ ಜ್ಯೋತಿಶ್ಶಾಸ್ತ್ರದ ಅಭ್ಯಾಸವನ್ನು ಮಾಡುತ್ತಿದ್ದರು. ಆಕಾಶದೊಳಗಿನ ಗ್ರಹಗಳ ಗತಿ, ಮತ್ತು ಅವುಗಳ ಪರಸ್ಪರ ಸ್ಥಿತಿ ಇವುಗಳ ಮೇಲೆ ಬರತಕ್ಕ ಋತುಗಳು ಇವನ್ನು ತಿಳಿದುಕೊಳ್ಳತಕ್ಕದ್ದು, ಮತ್ತು ಅದರ ನಿಯಮವನ್ನು ಕಟ್ಟೋಣ, ಇದೇ ಈ ಶಾಸ್ತ್ರಕ್ಕೆ ಮುಖ್ಯ ಉದ್ದೇಶವು. ಅಂತೇನ ಸಮಾಜಕ್ಕೆ ಈ ವಿಷಯವನ್ನು ತಿಳಿಯುವ ಆವಶ್ಯಕತೆಯುಂಟಾಗಿದೆ, ಕಳೆದ ಯುಗಗಳಲ್ಲಿ ಸುಮಾರಾಗಿ ಋತುಗಳ ಪ್ರಮಾಣಗಳನ್ನು ತಿಳಿಯುವದರ ಸಲುವಾಗಿಯೇ ಈ ಶಾಸ್ತ್ರವನ್ನು ಕಲಿಯುತ್ತಿದ್ದರು. ಅದರ ಮೂಲಕವೇ ಒಕ್ಕಲಿಗರು ಹರಗುವದಕ್ಕೆ ಅಲ್ಲದೇ ಬಿತ್ತುವದಕ್ಕೆ, ಹೊಲಕ್ಕೆ ಹೋಗುವವರ ಹೊತ್ತಿಂದ ಕಾಲುಬಾಸು ತನ್ನ ಕಾಲ ಹೀಗನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗುವವರ ಸಲುವಾಗಿ, ಮತ್ತು ಪ್ರವಾಸ ಮಾಡುವವರ ಸಲುವಾಗಿ, ಹೊತ್ತನ್ನು ಗೊತ್ತು ಮಾಡುತ್ತಿದ್ದರು. ಇವರಂತೆ ಅನ್ಯ ಕಾರ್ಯಗಳನ್ನು ಮಾಡುವವರೂ ಮುಹೂರ್ತವನ್ನು ಹೇಳುತ್ತಿದ್ದರು. ಸೂರ್ಯನ ಕಲ್ಪಿತ ಗತಿಯಿಂದ ಆಗತಕ್ಕ ಋತುಗಳ ಬದಲಾವಣೆಗಳು ಮತ್ತು ವೃಷ್ಟಿಯ ಪ್ರಮಾಣವು ಇವುಗಳ ತಿಳುವಳಿಕೆಯು ಬೇಸಾಯಗಾರರಿಗೆ ಬೇಕು; ಅದರ ಬದಲಾಗಿ ಬರಗಾಲ ಅತಿವೃಷ್ಟಿ ಒಳ್ಳೇ ಬೆಳೆ ಮುಂತಾಗುತ್ತದೆ. ಪ್ರತಿ ಕಾಲದ ಪ್ರತ್ಯೇಕ ಕೆಲಸವು ಯಾವ ವೇಳೆಯಲ್ಲಿ ಮಾಡಿದರೆ ಹಿತವಾಗುತ್ತದೆಂತ ಗೊತ್ತು ಮಾಡುತ್ತಿದ್ದರು; ಅವರ ಕೆಲಸಗಳು ಯಾವ ಕಾಲಕ್ಕೆ ಸರಿಯಾಗಿಯೇ ಮಾಡಲ್ಪಡುತ್ತವೆ. ಮುಂದಿನ ಈ ಕಾಲವು ಸರಿಯಾದದ್ದೋ ಅದು ಬರದಂತೆ ಮುಂಚೇ ಬಂದಿತೋ, ಮತ್ತು ಅದು ಬಂದ ಬಳಿಕ ಎಷ್ಟುದಿವಸ ಸ್ಥಿರವಾಗಿದ್ದೀತು; ಹಾಗೂ ಪ್ರಸವ ಅವಧಿ ಮೊದಲಾದವು ಇವೆಲ್ಲವನ್ನು ಚೆನ್ನಾಗಿ ತಿಳಿಕೊಳ್ಳುವದಕ್ಕೆ ಅವರಿಗೆ ಜ್ಯೋತಿಶ್ಶಾಸ್ತ್ರವು ಗೊತ್ತಿರಲಿಕ್ಕೆ ಬೇಕು; ಯಾಕಂದರೆ ಗ್ರಹಾದಿಗಳ ಪರಿಭ್ರಮಣದಿಂದೇ ಈ ಯಾವತ್ತೂ ಪ್ರಸಂಗಗಳು ಸಂಭವಿಸುತ್ತವೆ. ಸೂರ್ಯಸ್ಥಿತಿಯು ಅದರ ನಕ್ಷತ್ರಗಳು ಇಂಥ ರಾಶಿಗತಿ ಇವನ್ನು ನೋಡಿ ಯಾವ ಸಂಗತಿಗಳು ಗೊತ್ತಾಗುತ್ತವೆ, ಅವುಗಳಲ್ಲಿ ಎಷ್ಟೋ ಅನುಭವ ಗೊತ್ತಿರುತ್ತವೆ. ಮತ್ತು ಅದೇ ತಿಳುವಳಿಕೆಯ ಮೇಲಿಂದ ಪ್ರಾಚೀನ ಜನರು ಬೇಸಾಯ ಮುಂತಾದ ಕೆಲಸಗಳನ್ನು ಮಾಡುತ್ತಿದ್ದರೂ, ಹಾಗೂ ಅದರ ಮೇಲೆ ಅವರ ಸಕಲ ಸುಖಗಳು ಅವಲಂಬಿಸಿದ್ದರೂ ಪ್ರಸ್ತುತಕ್ಕೆ ಅವುಗಳ ತಾದೃಶ ಉಪಯೋಗವಾಗುವದಿಲ್ಲ. ಪ್ರಾಚೀನ ಗ್ರೀಕ್ ಜನರು "ಭರತ, ಎಂಬ ತಾರಕಾ ಸಮೂಹದೊಳಗಣ" ಆರ್ಕಟಸ್ ಎಂಬ ತಾರಾ ಮತ್ತು ಕೃತ್ತಿಕಾ ನಕ್ಷತ್ರ ಇವುಗಳ ಮೇಲಿಂದ ಋತುಗಳ ನೇಮಗಳನ್ನು ಕಟ್ಟುತ್ತಿದ್ದರು ಇದರಂತೆ ಮಿಸರ ದೇಶದ ಜನರು ಸೂರ್ಯನ ಸಂಗಡ "ಸಿರಿಯಸ್" ಎಂಬ ತಾರೆ ಉದಯಿಸಿದರೆ, ಆಫ್ರಿಕಾ ಖಂಡದೊಳಗಣ ನೈಲನದಿಗೆ ಮಹಾಪೂರ ಬರುವ ಮತ್ತು ಅದು ಇಳಿಯುವ ವೇಳೆಯನ್ನು ತಿಳಿಯುತ್ತಿದ್ದರು, ಮತ್ತು ಅದಕ್ಕೆ ಸರಿಯಾಗಿಯೇ ಅವರು ತಮ್ಮ ಕೃಷಿ ಕರ್ಮಕ್ಕೆ ಆರಂಭವನ್ನು ಮಾಡುತಲಿದ್ದರು.—ಸತ್ಯವೃತ್ತ.

---

Bangalore.—Printed and published at the Karnataka Press, No 40, Hospital Road, City—1893

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

## ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning.**

ಪ್ರಕಾಶನಿದಿನಪ್ರತ್ಯತ್ಯೇನನಗರಾರ್ಯಕರ್ಣಾಟಕಪ್ರಕಾಶನಾಭಿದಾಪ್ರತಿನಾಹಿತಿಃಶೋಭಿತಾ॥ವ್ಯಗ್ರಾಕಹಿತವಾಸರಸಹಿತಮುದ್ರಣಾಸಜ್ಜನ್ಯೈರ್ನಾನುಪರಿಶೋಭಿತಾದಿಶತಿಷ ಜನಸಂಸುವಮು॥

Vol. XX] BANGALORE—MONDAY JULY 17, 1893 [No 28

ಸಂಪುಟ ೨೦.] ಬೆಂಗಳೂರು:—ಸನ ೧೮೯೩ನೇ ಇಸವಿ ಜುಲೈ ೧೭ನೇ ತಾರೀಖ್ ಸೋಮವಾರ. [ಸಂಚಿಕೆ ೨೮.


### ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ಸಾಲ್ ೧ಕ್ಕೆ | 6—0—0 | 8—0—0 |
| 6 ತಿಂಗಳಿಗೆ | 3—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ಸಾಲ್ ೧ಕ್ಕೆ | 3—0—0 | 4—0—0 |
| 6 ತಿಂಗಳಿಗೆ | 1—12—0 | 2—8—0 |

ಈ ಪತ್ರಿಕೆಗೆ ದರಖಾಸ್ತು ಮಾಡಿದ ತಾರೀಖಿನಿಂದ ಮೊದಲು ಒಂದು ತಿಂಗಳೊಳಗಾಗಿ ಚಂದಾ ಮೊಬಲಗು ಕಳುಹಿಸುವಂತಹವರಿಗೆ ಮಾತ್ರವೆ ಮೇಲ್ಕಂಡ ದರದಂತೆ ಪತ್ರಿಕೆ ಕಳುಹಿಸಲ್ಪಡುವದು ಬೇರೆ ವರ್ತಕರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು ಮತ್ತು ೬ ತಿಂಗಳಿಗಿಂತ ಕಡಿಮೆಯಾಗಿ ಚಂದಾ ಮೊಬಲಗು ಅಂಗೀಕರಿಸಲ್ಪಡಲಾರದು.

### ಪ್ರಕಟನೆಯ ರಿವಾಜ್.

ಮೊದಲನೆಯದಕ್ಕಾಗಿ ಪಂಕ್ತಿ ಒಂದಕ್ಕೆ ೦—೨—೦

ಎರಡನೆಯದಕ್ಕಾಗಿ ಪಂಕ್ತಿ ಒಂದಕ್ಕೆ ೦—೧—೬

ಬರಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟುಸಲದ, ಪ್ರಕಟನೆಗಳಿಗೆ ಪಂಕ್ತಿ ಒಂದಕ್ಕೆ ೧ ಆಣೆಯಂತೆ ತೆಗೆದುಕೊಳ್ಳಲಾಗುವದು. ಈ ಪತ್ರಿಕೆಯಲ್ಲಿ ಪ್ರಾಮಿಸರಿಯ ಪ್ರಕಟನೆಗಳು ಕಳುಹಿಸುವವರು ಅವು ಎಷ್ಟು ಸಲ ಪ್ರಕಟಿಸಲ್ಪಡಬೇಕೋ ಆ ಅಂಕೆಯನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಹಾಗಿಲ್ಲದಿದ್ದರೆ ಅವು ನಮಗೆ ತಿಳಿಸುವವರೆಗೂ ಪ್ರಕಟಿಸಲ್ಪಡುವವು. ಹೀಗೆ ಎಷ್ಟಾವರ್ತಿ ಪ್ರಕಟಿಸಲ್ಪಟ್ಟಿದ್ದಾಗ್ಯೂ ಮೇಲ್ಕಂಡ ದರದಂತೆ ಚಾರ್ಜು ಮಾಡಲ್ಪಡುವದು. ಪ್ರಕಟನೆಯ ಬಗ್ಗೆ ಕಳುಹಿಸಲ್ಪಡದಕ್ಕೆ ಪ್ರಕಟನೆಗಳನ್ನು ಆ ದಿನ ಕಳುಹಿಸುವವರು ಮುಂಗಡವಾಗಿ ಹಣವನ್ನು ಕಳುಹಿಸತಕ್ಕದ್ದು. ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳು ಪತ್ರಾಧಿಪತಿಯವರ ಹೆಸರಿಗೆ ಬರೆಯಲ್ಪಡತಕ್ಕವು. ಪ್ರಕಟನೆಗಳ ವಿಷಯವಾಗಿ ಮ್ಯಾನೇಜರವರ ಹೆಸರಿಗೆ ಬರೆಯಲ್ಪಡಬೇಕು. ಸಿಂ ಕರಿಸಲ್ಪಡದ ಕಾಗದಗಳು ಮತ್ತು ವಾಲ್ಯೂ ಪೇಯಬಲ್ಲುಗಳು ಹಿಂತಿರುಗಿಸಲ್ಪಡುವವು.


*ADVERTISEMENTS.*

**NOTICE.**

**VAIDYASARA SANGRAHA**

A TREATISE ON THE PRINCIPLES OF

**HINDU MEDICINE**

*Price including Postage Rs 5 0 0*

ವೈದ್ಯಸಾರ ಸಂಗ್ರಹ.

ಈ ಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಕೆಳಗೆ ಸಹಿ ಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಸಿಗೆ ಕೊಡಲ್ಪಡಲಾರದು.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೇ ಖರ್ಚು, ಕೇವಲ್ ಪ್ರತಿ ಒಂದಕ್ಕೆ ರೂ 5—0—0

ಟಿ. ಬಿ. ವೆಂಕಟಾಚಾರ್.

ಬೆಂಗಳೂರ್ ಸಿಟಿ ಆಸ್ಪತ್ರೆ ರೋಡ್ ಬಂಗ್ಲೆ ನಂಬರ್

### ನೋಟೀಸು.

## ಬೆಂಗಳೂರು ಕರ್ಣಾಟಕ್ ಪ್ರೆಸ್.

೧೮೬೮ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ, ಸಕಲವಿಧ ಕೆಲಸಗಳು ಸುಲಭಬೆಲೆಗೆ ಶೀಘ್ರವಾಗಿಯೂ ಶುದ್ಧವಾಗಿಯೂ, ಮಾಡಲ್ಪಡುವವು.

ಇದರಲ್ಲಿ ಸಧ್ಯಕ್ಕೆ ಇಂಗ್ಲಿಷ್ ಕನ್ನಡ ಕೆಲಸಗಳು ಮಾತ್ರನಡೆಯುತಿವೆ. ಇತರ ತಪಸೀಲ್‌ಗಳನ್ನು ಸದರಿ ಕಾರ್ಖಾನೆಯ ಪ್ರೊಪ್ರೈಟರಿಗೆ ಬರೆದು ತಿಳಿದುಕೊಳ್ಳಬಹುದು.

### ನೋಟೀಸ್.

ಗಣೇಶ ರಾಮಚಂದ್ರ ಕರ್ಶಿ ಮತ್ತು ಕಂಪೆನಿ.
ಕಮಿಷನ್ ಏಜಂಟ್ಸ್.

ಇವರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯಿಂದನೆ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ತಕ್ಕಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರಹ ಔಷಧಗಳು, ಪುಸ್ತಕಗಳು, ಮುತ್ತುಗಳು, ಚಿಪ್ಪಿ ಮುಟ್ಟುಗಳು, ಛಡಿ ಸರಗಳು, ಹಾರಗಳು, ಟ್ರ್ಯಾಂಪೀಸುಗಳು, ಕಾರ್ಪೆಟ್ ಕಂಬಳಿಗಳು, ಪಟ್ಟೆ ಸೀರೆಗಳು, ಜರತಾರಿ ಕಂಗಳು, ಚಂದ್ರಕಾಂತ ಬಿಲ್ಲೆ ಕನ್ನಡಕಗಳು, ಕಾಡುಗರಿ ಕೆತ್ತನೆ ಜರತಾರಿ ಉಡುಪುಗಳು, ಜರತಾರಿ ಟೋಪಿಗಳು, ಅಫೀಸ್ ಡ್ರೆಸ್ಸುಗಳು, ಪಟಗಳು, ಅತ್ತರುಗಳು, ಅತ್ಯುತ್ತಮಗಳಾದ ರತ್ನಗಳು, ಬಂಗಾರದಿಂದ ಕಟ್ಟಲ್ಪಟ್ಟ ಉಂಗುರಗಳು, ಬೆಳ್ಳಿ ಪಾತ್ರೆಗಳು, ಜರ್ಮನ್ ಬೆಳ್ಳಿ ಪಾತ್ರೆಗಳು, ಕೇಸರಿ, ಕಸ್ತೂರಿ ವಗೈರೆ ಇತರ ಸಾಮಾನುಗಳು

ಜವಾಬ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಟಿಕೆಟ್ ಕಳುಹಿಸಿದ ಹೊರತು ಜವಾಬ ದೊರೆಯಲಾರದು

ವಿಳಾಸ—ಗಣೇಶ ರಾಮಚಂದ್ರ ಕರ್ಶಿ,
ಮತ್ತು ಕಂಪೆನಿ, ಕಮಿಷನ್ ಏಜಂಟ್ಸ್,
ಠಾಕೂರದ್ವಾರ, ಮಾರ್ಕೆಟ್ ಪೋಸ್ಟ್, ಮುಂಬೈ.

### ನೋಟೀಸ್.

ಅಡಿಗೆರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ಬಿಕರಿಗೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

### ಸಂಸ್ಕೃತ ಗ್ರಂಥಗಳು.

| | ರೂ | ಆ | ಪೈ |
|---|---|---|---|
| ಸಟೀಕಾ ವೈದ್ಯಸಾರ ಸಂಗ್ರಹ .. | ೫ | ೦ | ೦ |
| „ ಶಿವಗೀತೆ | ೧ | ೨ | ೦ |
| „ ಶಿವಾನಂದಲಹರಿ . | ೦ | ೮ | ೦ |
| „ ಕಾಲಾಮೃತ | ೧ | ೦ | ೦ |
| „ ಟಿ॥ ಬಾಲರಾಮಾಯಣ .. | ೦ | ೩ | ೦ |
| „ ಟೀ॥ ಗೋಪಿಕಾ ಗೀತ . | ೦ | ೧ | ೦ |
| „ ಟೀ॥ ಚಾಣಕ್ಯನೀತಿ (ಸುಭಾಷಿತ) | ೦ | ೪ | ೦ |
| ವಿಷ್ಣುಸಹಸ್ರನಾಮ ವ್ಯಾಖ್ಯೆ . | ೦ | ೩ | ೦ |
| ಸೂರ್ಯಸಹಸ್ರನಾಮ . | ೦ | ೨ | ೦ |
| ಕೃಷ್ಣಕರ್ಣಾಮೃತ . | ೦ | ೨ | ೦ |
| ತ್ರಿಕಾಂಡ ಅಮರ ಮೂಲ . | ೦ | ೨ | ೦ |
| ೧ ಕಾಂಡ ... | ೦ | ೧ | ೦ |

### ಕನ್ನಡ ಗ್ರಂಥಗಳು.

| | ರೂ | ಆ | ಪೈ |
|---|---|---|---|
| ಸುಕಸಪ್ತತಿ ಅಪ್ಪಾಜಿ .. | ೩ | ೦ | ೯ |
| ಟಿಪ್ಪೂ ದುರ್ಗಂ ... | ೧ | ೨ | ೦ |
| ವೃಷಭೇಂದ್ರವಿಜಯ .. | ೧ | ೮ | ೦ |
| ಪಂಚಪಾಡ ಬಾಲಲೀಲೆ ... | ೦ | ೩ | ೦ |
| ಪದುಮದ್ವಿಲಾಸ . | ೦ | ೪ | ೦ |
| ಕಾಳಿಂಯಮರ್ದನ .. | ೦ | ೨ | ೦ |
| ಸುವದ್ರಾಪರಿಣಯ . | ೦ | ೨ | ೦ |
| ಸತಿದೇವಾಪರಿಣಯ . | ೦ | ೨ | ೬ |
| ಸುದಾಮಚರಿತ್ರೆ . | ೦ | ೧ | ೦ |
| ಮೈರಾವಣ ಚರಿತ್ರೆ .. | ೦ | ೧ | ೦ |
| ಬಾಲಗ್ರಹವರಿ ... | ೦ | ೧ | ೦ |
| ಮುದ್ದುಮಣಿ ಲತೆ .. | ೦ | ೧೦ | ೦ |
| ಪ್ರಾಂತವಿಲಾಸ ... | ೨ | ೦ | ೦ |

## Bagalore City Municipality.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಬೋರ್ಡ್ ಆಫೀಸಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ.—

ಸಿಟಿ ವೆಸ್ಟರ್ನ್ ಯಕ್ಸ್‌ಟೆನ್ಶನ್‌ನಲ್ಲಿ ಮನೆಗಳಿಗಾಗಿ ವಿಂಗಡಿಸಿ ಇರತಕ್ಕ ನಿವೇಶನಗಳ ಪೈಕಿ ಬಾಕೀ ಇರತಕ್ಕ ಸೈಟುಗಳ ಸಬ್‌ವಾರ್ ಮತ್ತು ಸೋಮವಾರ್ ತಪಸೀಲ್ ಪಟ್ಟಿ 1 ಕಟ್ಟಿಯು ಬೆಂಗಳೂರ್ ಡಿಸ್ಟ್ರಿಕ್ಟ್ ಆಫೀಸ್‌ನಲ್ಲಿ ಇರುತ್ತೆ. ಆವಶ್ಯಕ ಪ್ಪಳ್ಳವರು ಅಲ್ಲಿಗೆ ಹೋಗಿ ಬೇಕಾದ ಸೈಟುಗಳನ್ನು ಅರ್ಜಿ ಮೂಲಕ ಸಿಟಿ ಮ್ಯುನಿಸಿಪಲ್ ಬೋರ್ಡಿಗೆ ದರಖಾಸ್ತು ಕೊಟ್ಟು ಪಡೆದುಕೊಳ್ಳಬಹುದು.

ತಾ॥12ನೇ ಜುಲೈ ಸನ 1893ನೇ ಇಸವಿ. } K. SRINIVASA RAO, *Vice-President, City Muni. Commission.*

## ದಕ್ಷಿಣ ಮಹರಾಷ್ಟ್ರ ರೈಲ್‌ವೆ.

### ನೋಟೀಸ್.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ —

ನಾನಾವಿಧ ಕೊರಮುಟ್ಟುಗಳು, ಕಬ್ಬಿಣ, ತ್ಯಾಗದಮರ, ಆಫೀಸ್ ಕುರ್ಚಿ ಮೇಜು ವಗೈರೆ ಅನುಪಯುಕ್ತಗಳಾದ ರೈಯಿಲ್ವೆ ಸಾಮಾನುಗಳು ಬಹಳವಾಗಿ, ಸನ ೧೮೯೩ನೇ ಇಸವಿ ಜುಲೈ ೨೮ನೇ ತಾರೀಖ್ ಶುಕ್ರವಾರದ ದಿನ ಹಗಲು ೨ ಘಂಟೆಗೆ ಸರಿಯಾಗಿ, ಬೆಂಗಳೂರಲ್ಲಿರುವ ಕಂಪೆನಿಯವರ ಸರುಂಜಾಂ ಕೋಠಿಯಬಳಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವವು.

ಷರ—ನಗದು ಹಣ ಪಾವತಿಮಾಡಬೇಕು.

ಸ್ಟೋರ್‌ಕೀಪರ್ ಆಫೀಸ್ ಹುಬ್ಬಳ್ಳಿ, ೧೦ನೇ ಜುಲೈ ೧೮೯೩. } (Signed,) H. WEIR, *Offg Storekeeper, S. M. Railway*

## TELEGRAMS

ತಂತಿ ವೃತ್ತಾಂತಸಂಗ್ರಹ.

ಲಂಡನ್, ೧೦ನೇ ಜುಲೈ —ಈಗ ಆಫ್ಘನಿಸ್ಥಾನದಲ್ಲಿರುವ ಮೇಜರ್ ಜನರಲ್ ಸಿ. ಎಂ. ಕ್ಲಾರ್ಕ್ ಸಾಹೇಬರು ಮದ್ರಾಸ ಸೇನೆಯ ಕಮಾಂಡರ್ ಇನ್ ಚೀಫರಾಗಿ ಮಹಾರಾಜ್ಞೀಯವರು ಮಂಜೂರ್ ಮಾಡಿರುತ್ತಾರೆ.

೧೨ ನೇ ಜುಲೈ —ಫ್ರೆಂಚರು ಸಯಾಂ ರಾಜ್ಯವನ್ನು ತಮ್ಮ ಅಧಿಕಾರಕ್ಕೆ ಸೇರಿಸಿಕೊಂಡಾಗ್ಯೂ, ಅದು ತಮ್ಮ ಅಧಿಕಾರಕ್ಕೆ ಒಳಪಟ್ಟದ್ದಾಗಿ ಮಾಡಿದಾಗ್ಯೂ ಅದನ್ನು ಚೀನಾ ಸರ್ಕಾರದವರು ಮನ್ನಿಸುವರೆಂದು ಟೈಂಸ್ ಪತ್ರಿಕೆಯು ಬಾತಮೀದಾರನು ತಂತಿ ಮೂಲಕ ತಿಳಿಸುತ್ತಾನೆ.

ಲಂಡನ್, ೧೧ ನೇ ಜುಲೈ—ಯೋರ್ಕ್ ನ ಡ್ಯೂಕರವರ ಮ॥ ಆಸ್ಟ್ರಿಯ ಸಾಮ್ರಾಜ್ಯವು ಇವರಿಗೆ ಬರುವ ಅಂಶವನ್ನು ಪ್ರಕಟಿಸುವಂತೆ ಮಹಾರಾಜ್ಞೀಯವರಿಂದ ಆಜ್ಞಾಪಿಸಲ್ಪಟ್ಟಿದ್ದಾರೆ. ವಿಕ್ಟೋರಿಯ ಫ್ಯಾಸಿಲ್ ೧೨ ನೇ ಜುಲೈ —

ಪ್ರಿಯರಾದ ತಮ್ಮ ಪೌತ್ರನ ವಿವಾಹ ಕಾಲದಲ್ಲಿ ಇಂಡ್ಯಾದೇಶದ ಪ್ರಜೆಗಳು ತಮ್ಮ ವಿಷಯದಲ್ಲೂ ತಮ್ಮ ಕುಟುಂಬದ ವಿಷಯದಲ್ಲೂ ವ್ಯಕ್ತಪಡಿಸಿದ ರಾಜಭಕ್ತಿ ವಿಶ್ವಾಸಗಳ ಬಗ್ಗೆ ತಮಗುಂಟಾದ ಸಂತೋಷಾತಿಶಯವನ್ನು ಪರಾಕಿ ತಮ್ಮ ಪ್ರಜೆಗಳಿಗೆ ತಿಳಿಸಬೇಕೆಂತ ಅಪೇಕ್ಷಿಸುತ್ತಾರೆ. ಇದು ಮಹಾರಾಜ್ಞೀಯವರಿಗೆ ಹೊಸ ವಿಷಯವಲ್ಲವೆ, ಪತಕ್ಕಾಗಲಿ, ಸುಖದುಃಖ ಸಮಯಗಳಲ್ಲಿ ತಮ್ಮ ಪ್ರಜೆಗಳು ಯಾವಾಗಲು ಪ್ರೀತ್ಯಭಿಮಾನಗಳನ್ನು ತೋರಿಸುತಲಿರುತ್ತಾರೆ. ಅದನ್ನು ಆಕೆಯವರು ಚೆನ್ನಾಗಿ ತಿಳಿದಿರುತ್ತಾರೆ. ವಿಸ್ತಾರವಾದ ಆಕೆಯವರ ರಾಜ್ಯದ ಪ್ರಜೆಗಳ ಸುಖದುಃಖಗಳಲ್ಲಿ ಆಕೆಯವರ ಹೃದಯವು ಎಷ್ಟರ ಮಟ್ಟಿಗೆ ಸೇರಿಕೊಂಡಿರುತ್ತದೆಯೋ ಅದನ್ನು ಪ್ರಜೆಗಳು ತಿಳಿದುಕೊಂಡಿರುತ್ತಾರೆಂಬ ಅಂಶವನ್ನು ಆಕೆಯವರು ಬಲ್ಲರು. ಪ್ರಜೆಗಳಿಗೂ ಆಕೆಯವರಿಗೂ ಇರುವ ಅಂತಾ ಬಂಧವೇ ರಾಷ್ಟ್ರಕ್ಕೆ ವ್ಯಾಸ್ತವ್ಯವಾದ ಬಲವಾಗಿರುತ್ತದೆ. ಮಹಾರಾಜ್ಞೀಯವರು ತಮ್ಮ ಮೊಮ್ಮಕ್ಕಳಿಗೆ ಸುಖಸಂತೋಷಗಳುಂಟಾಗಬೇಕೆಂದು ತಮ್ಮ ಪ್ರಜೆಗಳು ಮಾಡುವ ಪ್ರಾರ್ಥನೆಯಲ್ಲಿ ಸಂತೋಷಿಸುವರೆಂದು ತಿಳಿಸುತ್ತಾರೆ, ಎಂದು.

ಲಂಡನ್, ೧೧ನೇ ಜುಲೈ—ಫ್ರೆಂಚರು ಸ್ಯಾಂ ಎಂಬ ಪ್ರದೇಶದಲ್ಲಿರುವ ತಮ್ಮ ಗ್ಯಾರಿಸನ್ ಸೇನೆಗೆ ಮತ್ತಷ್ಟು ಸೇನೆಯನ್ನು ಸೇರಿಸಿ ಬಲಪಡಿಸುತಲಿದ್ದಾರೆ.

ಲಂಡನ್, ೧೧ ನೇ ಜುಲೈ—ಕಾಬೂಲ್ ರಾಜ್ಯದ ಅರಸರ ಮಗ ಶಿಹಜಾದಾ ಎಂಬವರು ಈ ದಿನ ಕಾನ್‌ಸ್ಟಾಂಟಿನೋಪಲ್ ಪಟ್ಟಣಕ್ಕೆ ಬಂದು ಸೇರಿದರು.

ಅಲಹಾಬಾದ್, ೧೧ ನೇ ಜುಲೈ—ಅಮೀರರ ಸೇನೆಗೂ ಹಜಾರಸ್ ಎಂಬ ಕಾಡು ಜನರಿಗೂ ಒಂದು ಘೋರಯುದ್ಧ ನಡೆದು ಅದರಲ್ಲಿ ಅಮೀರರ ಸೇನೆಗೆ ಜಯಪ್ರಾಪ್ತಿಯಾಯಿತೆಂದು ಇಂಡ್ಯಾ ದೇಶಕ್ಕೆ ವರ್ತಮಾನ ಬಂದಿರುತ್ತದೆ. ಕಾಡಿಗಳ ಪೈಕಿ ಬಹು ಜನ ಸತ್ತರೆಂದು ಹೇಳಿಕೊಳ್ಳುತ್ತಾರೆ. ಹೀಗೆಂತು ಈ ವರ್ತಮಾನವು ಕಾಬೂಲ್‌ನಲ್ಲಿರುವ ಬ್ರಿಟಿಷ್ ರೆಸಿಡೆಂಟರ ಇದುವರೆಗೆ ಖಚಿತವಾಗಲಿಲ್ಲವು.

ಕಲ್ಕತ್ತಾ, ೧೨ ನೇ ಜುಲೈ—ಬಂಗಾಳ ದೇಶದ ಅಫೀಂ ನಾಲ್ಕಾವರ್ತಿ ಹರಾಜ್ ಮಾಡಲ್ಪಟ್ಟದರಲ್ಲೂ ಮುಂಚೆಯಿಂದ ಅಂದಾಜು ಮಾಡಲ್ಪಟ್ಟ ಅಫೀಂ ಬೆಲೆ ಹೆಗ್ಗಳಾದ ಕಡದಾರಿ ಹೆಚ್ಚಾಗಿಯೂ ಅಂದಾಜಿಗಿಂತಲೂ ಇಪ್ಪತ್ತೊಂದು ಲಕ್ಷ ರೂಪಾಯಿಗಳು ಕಡಮೆಯಾಗಿ ಮಾರಲ್ಪಟ್ಟವು.

ಸಿಂಲಾ, ೧೨ ನೇ ಜುಲೈ —ಲಾರ್ಡ್ ಲ್ಯಾನ್ಸ್‌ಡೌನ್ ಸಾಹೇಬರವರ ಅಧಿಕಾರಕ್ಕೆ ಅವರ ಕಾಲಾನಂತರ ಯಾರು ಬರುವರೂ ಆ ವಿಷಯದಲ್ಲಿ ಏನಾದರೂ ತಿಳಿಯಬರಲಿಲ್ಲವು.

ಲಂಡನ್, ೧೨ ನೇ ಜುಲೈ—ಸಯಾಂ ಯವರು ಫ್ರೆಂಚರವರ ತೋಪು ಹಡಗುಗಳು ಮಿನಾಂ ಎಂಬ ನದಿಯಲ್ಲಿ ಪ್ರವೇಶಿಸುವದಕ್ಕೆ ಅವಕಾಶ ಕೊಡುವದಿಲ್ಲವೆಂತಲೂ ಹಾಗೆ ಬಂದರೆ ಅವು ಮುಳುಗಿಸಲ್ಪಡುವವೆಂತಲೂ ಸ್ಯಾಂ ರಾಜ್ಯದ ಅಧಿಕಾರಿಗಳು ಫ್ರೆಂಚರವರಿಗೆ ತಿಳಿಸಿದರೆಂದು ಲಂಡನ್ ಟೈಂಸ್ ಪತ್ರಿಕೆಯ ಬಾತಮೀದಾರನು ತಿಳಿಸಿರುತ್ತಾನೆ.

ಲಂಡನ್, ೧೩ ನೇ ಜುಲೈ—ಭಾವನಗರ ಮಹಾರಾಜರವರು ಮೊದಲಾದ ಇಂಡ್ಯಾ ದೇಶದ ಅರಸುಗಳು ನಿನ್ನೆಯ ದಿನ ವಿಂಡ್‌ಸರ್ ಕ್ಯಾಸಲ್ ಎಂಬ ಅರಮನೆಯಲ್ಲಿ ಭೋಜನಮಾಡಿ ರಾತ್ರಿ ಅಲ್ಲೇ ಇದ್ದರು.

ಅಲಹಾಬಾದ್ ೧೩ ನೇ ಜುಲೈ—ಪೂರ್ವಸಮುದ್ರ ತೀರದ ರೈಯಿಲ್ ರಸ್ತೆಯ ಪೈಕಿ ದಕ್ಷಿಣ ಭಾಗದಲ್ಲಿ ವಿಶಾಖಪಟ್ಟಣದವರೆಗೆ ಇರುವ ಆಗಸ್ಟ್ ಗುರು ೧ ತಾರೀಖಿನೊಳಗೆ ಗಾಡಿಗಳು ನಡೆಸಲ್ಪಡುವದಕ್ಕೆ ಪ್ರಾರಂಭವಾಗುವದು, ವಿಜಯನಗರಕ್ಕೆ ಹಾಕಲ್ಪಟ್ಟಿರುವ ಸಣ್ಣ ನಗರದಲ್ಲಿ, ಇನ್ನು ಕೆಲವು ವಾರಗಳಲ್ಲಿ ಗಾಡಿಗಳು ಬಿಡಲ್ಪಡುವವು.

ಕಲ್ಕತ್ತಾ, ೧೪ ನೇ ಜುಲೈ—ಬನಾರಸ್ ಡಿಸ್ಟ್ರಿಕ್ಟ್‌ನಲ್ಲಿ ಕಲಹಗಳು ಇನ್ನು ಶಾಂತವಾಗಲಿಲ್ಲವು. ಅಲ್ಲಿನ ಮ್ಯಾಜಿಸ್ಟ್ರೇಟರು ಹಾಕಿರುವ ಉಪೇಕ್ಷಿಸಿದ ಪ್ರಕಾರ ನಿನ್ನೆಯ ದಿನ ಮತ್ತೊಂದು ಕಂಪೆನಿ ಬಂಗಾಳಿ ಇ. ಫೋರ್ಟ್ಸ್ ಸೇನೆಯೂ ಬಲಿಯಾ ಎಂಬ ಪ್ರದೇಶಕ್ಕೆ ಕಳುಹಿಸಲ್ಪಟ್ಟಿತು.

### THE MONEY MARKET.

ಮದರಾಸ್, ಶನಿವಾರ, ತಾರೀಖ್ 15ನೇ ಜುಲೈ 1893

ನೂರಕ್ಕೆ 4ರೂ ಬಡ್ಡಿ ಬರುವ ಗವರ್ನಮೆಂಟ್ ಪತ್ರಗಳು ರೂಪಾಯಿಗಳು, 107 4—0 ಇಂದ 107—12—0 ವರೆಗೆ

ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತು 960 ಆಗಾ ಮಿತು 965 ವರೆಗೆ,

ಕಮರ್ಷಿಯಲ್ ವ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಷೇರುಗಳು, (100) ಬಾಬತು 150 ಇಂದ 155 ವರೆಗೆ,

ಸವರಸ್‌ಗಳು, 15—10—0 ಇಂದ 15—12—0 ವರೆಗೆ,

ಬ್ಯಾಂಕ್ ಬಿಲ್‌ಗಳು ಯಾನೆ ದರ್ಶನಹುಂಡಿಗಳು, ರೂ॥ ೧ಕ್ಕೆ

6 ತಿಂಗಳ ಮುದ್ದತಿಗೆ, 1s. 3 29/32 d.

ಡಿಮಾಂಡ್ 4 ತಿಂಗಳ ಮುದ್ದತಿಗೆ, 1s. 3 13/16d.

ಟೆಲಿಗ್ರಾಫಿಕ್ ವರ್ಗಾವಣೆ, 1s. 3 11/16 d.

# ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JULY 17 1893.

೧೮೯೩ನೇ ಇಸವಿ ಜುಲೈ ತಾ॥ ೧೭ ನೇ ಸೋಮವಾರ.


## ಅನಾಲೋಚಿತ ಪ್ರವರ್ತನೆ.

ಲೋಕದಲ್ಲಿ ಪುರೋದೃಷ್ಟಿಯಿಲ್ಲದೆ ವರ್ತಿಸ ತಕ್ಕವರಬಾಳ್ವಿಕೆಯು ಯಾವಾಗಲು ಹೇಳನಾಸ್ಪದವಾಗುವದಲ್ಲದೆ ಅವರ ವಿಷಯದಲ್ಲಿ ಜನಗಳಗೌರವವಿಲ್ಲದೆ ಹೋಗುತಿದೆ. ಮ॥ ರಾ॥ ಮದನಪಲ್ಲಿ ನಾಯನ ಶಾಸ್ತ್ರಿಗಳವರು, ಹಿಂದೂಸಮಯಾಚಾರ ಪರಿಷ್ಕರಣಾದ್ಯಸ್ತ್ರನಾಲಂಕೃತರಾಗಿ ಮನುಪರಾಶರಾದಿಶ್ರೌತ್ರಿಕರಂತೆ ಮಹಾಪ್ರಸಿದ್ಧರೆನಿಸಿ, ಒಂದು ನೂತನಾಚಾರ ವ್ಯವಸ್ಥಾಪಕರಾಗಬೇಕೆಂಬ ಉದ್ದೇಶದೊದನೆ, ತಮ್ಮ ಸರ್ವಸಮತ್ವಜ್ಞಾನವು ವ್ಯಕ್ತಪಡಿಸುವಂತೆ ಬ್ರಾಹ್ಮಣೇತರರೊಡನೆ ಏಕ ಪಙ್ತಿಯಲ್ಲಿ ಕುಳಿತು ಭೋಜನ ಮಾಡಿದ್ದು ಬ್ರಾಹ್ಮಣದೃಷ್ಟಿಗೆ ನೀಚಕೆಲಸವಾಗಿ ತೋರಿದಾಗ್ಯೂ, ತದಿತರರು ಶಾಸ್ತ್ರಿಗಳವರ ಚಿತ್ತಸ್ಥೈರ್ಯವಂ ಕುರಿತು ಬಹಳವಾಗಿ ಪ್ರಶಂಸಿಸ ತೊಡಗಿದರು. ಅವರ ಪೈಕಿ ಮದರಾಸ್ ಆಂಧ್ರಪ್ರಕಾಶಿಕಾ ಪತ್ರಿಕಾಲೇಖಕರು ಸದರೀ ನಾಯನಶಾಸ್ತ್ರಿಗಳವರ ಯೋಗ್ಯತಾ ಪ್ರತಿಪಾದನವಲ್ಲಿ ತಮ್ಮ ಯಾವತ್ಸಾಮರ್ಥ್ಯವಂ ವಿನಿಯೋಗಿಸುತ ಪ್ರತಿವಾರದ ತಮ್ಮ ಪತ್ರಿಕೆಯಲ್ಲಿಯೂ ತದ್ವಿಷಯವು ಕುರಿತು ಪ್ರಾಧಾನ್ಯೇನ ವಿಚಾರಮಾಡುತಲಿದ್ದರು. ಈಚೆಗೆ ನಾಯನಶಾಸ್ತ್ರಿಗಳವರು, ತಮ್ಮ ಅವಿವೇಚಿತವರ್ತನಕ್ಕಾಗಿ ಅಂತಃ ಅನುತಪಿಸುತ, ವಿಧ್ಯುಕ್ತ ಪ್ರಾಯಶ್ಚಿತ್ತಾದಿಗಳಂ ಮಾಡಿಕೊಂಡು ಸದ್ವ್ಯವಹಾರಾರ್ಹರಾದರೆಂಬದಾಗಿ ಆಚೇವಾರದ ಪತ್ರಿಕೆಯ ಮೂಲಕ ತಿಳಿಸಿದ್ದೆವಷ್ಟೆ. ಈ ವಿಷಯದಲ್ಲಿ ಶಾಸ್ತ್ರಿಗಳವರ ಪೂರ್ವವರ್ತನಾನುಮೋದಕರಾಗಿದ್ದವರು ಯಾವ ಅಭಿಪ್ರಾಯಪಡುವರೋ, ಮತ್ತು ಹಿಂದೂಗಳ ಪೂರ್ವ ಸಂಪ್ರದಾಯಗಳನ್ನೂ, ಸಾಮಾನ್ಯವಾಗಿ ಬ್ರಾಹ್ಮಣ ಸಮುದಾಯವನ್ನೂ ಆಕ್ಷೇಪಿಸಿ ನಿಂದಿಸಲುಜ್ಜುಗಿಸಿರುವ ಆಂಧ್ರಪ್ರಕಾಶಿಕೆಯು ಎಂತು ತಾತ್ಪರ್ಯ ಪಡುವುದೋ ಅದಂ ತಿಳಿದುಕೊಳ್ಳಬೇಕೆಂಬ ಕುತೂಹಲದೊಡನೆ ಇದುವರೆಗೂ ನಿರೀಕ್ಷಿಸುತಲಿದ್ದೆವು. ಪರಂತು, ಆ ವಿಷಯವನ್ನಿದುವರೆಗೆ ಒಬ್ಬರೂ ಪ್ರಸ್ತಾಪಿಸದಿರುವದಂ ನೋಡಲಾಗಿ, ಸ್ವಪಕ್ಷಪ್ರೋತ್ಸಾಹಕರಾದ ಇಂತಾ ಸಾಹಸಿಯೊಬ್ಬರು ದೂರರಾದ ಬಗ್ಗೆ ಉಂಟಾಗಿರಬಹುದಾದ ದುಃಖಾತಿರೇಕದಿಂದಲೋ, ಪುರೋದೃಷ್ಟಿಯಿಲ್ಲದೆ ಕೇವಲ ಆತ್ಮಪ್ರಾಗಲ್ಭ್ಯದಿಂ ಶಾಸ್ತ್ರವಿರುದ್ಧಗಳಾದ ಆಚಾರಗಳನ್ನನುಸರಿಸುತ ಮನೋಧೈರ್ಯವಿಲ್ಲದ ಸಮಯಾಚಾರ ಪ್ರವರ್ತಕರನ್ನು ತಮ್ಮ ಸಮೂಹಾಗ್ರಗಣ್ಯರಾಗಿ ಅಂಗೀಕರಿಸಿ ಅವರ ಬಲದಿಂ ತಾವೂ ಮನಸ್ವೀ ವರ್ತಿಸುತ ಬಂದು ಕಡೆಗೆ ತಮ್ಮ ಉದ್ದೇಶವು ವಿಫಲವಾದ ಸಂಕೋಚದಿಂದಲೊ, ಅಥವಾ ಅನಿರೂಪಕರಾದ ಇಂತಾ ಚಪಲಚಿತ್ತರೆಲ್ಲರು ಆಚಾರ ಪರಿಷ್ಕರಣ ಪ್ರವರ್ತಕರಾಗಿಪರ್ಯಟಿಸುತ ಹಿಂದೂಮತಕ್ಕೆ ಅಪ್ರತೀಕಾರವಾದ ಅಪಯಶಸ್ಸನ್ನುಂಟುಮಾಡುತ್ತಾರಲ್ಲಾ ಎಂಬ ಅನುತಾಪಾಧಿಕ್ಯದಿಂದಲೊ ಮೌನವಂತಾಳ್ದಿರಬಹುದೆಂದೂಹಿಸಬೇಕಾಗಿದೆ. ಮ॥ ನಾಯನಶಾಸ್ತ್ರಿಗಳವರಿಗೆ ತಮ್ಮ ಕೃತ್ಯದಿಂದುಂಟಾದ ಅನುತಾಪವೂ ಖೇದವೂ ತತ್ಪಕ್ಷಾವಲಂಬಿಗಳಾಗಿದ್ದವರಿಗೆಲ್ಲ ಉಂಟಾಗಿರಬಹುದೆಂದು ಭಾವಿಸುತ್ತೇವೆ. ಅವರನುವರ್ತಿಸಿದ್ದ ಮಾರ್ಗವನ್ನೇ ತದಿತರರೆಲ್ಲರು ಅವಲಂಬಿಸಬೇಕೆಂದು ಸೂಚಿಸುತಲಿದ್ದ ಆಂಧ್ರಪ್ರಕಾಶಿಕೆಯು ಆರೀತಿ ಯಾರಾದರು ವರ್ತಿಸಿದ್ದರೆ ಅವರ ಸ್ಥಿತಿಯಂ ಕುರಿತು ಈಗ ಏನು ನುಡಿಯುವದೊ ನಮಗೆ ತಿಳಿಯಲಿಲ್ಲವು. ಮುಖ್ಯವಾಗಿ ಅನಾಲೋಚಿತ ವ್ಯಾಪಾರಗಳಿಂದ ಪಶ್ಚಾತ್ ಖೇದ ಪಡಬೇಕಾಗಿರುವದಾಗಿ ಯಾವ ವಿಷಯದಲ್ಲಿ ಪ್ರವೇಶಿಸದಾಗ್ಯೂ ಪ್ರವರ್ತಿಸತಕ್ಕವರಿಗೆ ಪುರೋದೃಷ್ಟಿಯೂ, ಸಾಧ್ಯಾಸಾಧ್ಯ ವಿವೇಚನಾ ಜ್ಞಾನವೂ, ವಿಷಯಾಪೇಕ್ಷೆಯೂ ಆವಶ್ಯಕಗಳಾಗಿರುತಿವೆ. ಅವುಗಳಿಲ್ಲದೆ ತಮಗೆ ಲಭಿಸಿರುವ ಯತ್ಕಿಂಚಿದ್ವಿದ್ಯಾಬಲದಿಂದಲಾಗಲಿ, ತನಗುಂಟಾಗಿರುವ ಅಲ್ಪಬಲದಿಂದಾಗಲಿ ಅಸಾಧ್ಯವಿಷಯಗಳಲ್ಲಿ ಪ್ರವೇಶಿಸುವಂತವರ ಸ್ಥಿತಿಯು ಮೇಲೆ ತಿಳಿಸಿದಂತೆ ಪರಿತಾಪಕರವಾದುದಾಗಿರುವದರಲ್ಲಿಷ್ಟುಮಾತ್ರವೂ ಸಂದೇಹವಿರಲಾರದು.

ಈ ತಿಂಗಳ ೪ನೇ ತಾರೀಖಿನ ಆಂಧ್ರಪ್ರಕಾಶಿಕಾ ಪತ್ರಿಕೆಯು ವಿವಾಹ ಸಂಬಂಧ ಪರಿತ್ಯಾಗ ವಿಷಯದಲ್ಲಿ ಆಯಾ ದೇಶಗಳೊಳಿರುವ ಆನುಕೂಲ್ಯಗಳಂ ಸಂಗ್ರಹಿಸಿ ತಿಳಿಸಿ ಭರ್ತೃಭಾರ್ಯೆಯರಿಗೆ ಅನ್ಯೋನ್ಯೈಕಮತ್ಯಗಳು ತಪ್ಪಿಹೋಗುವ ಸಂದರ್ಭದಲ್ಲಿ ವಿವಾಹ ಸಂಬಂಧ ಪರಿತ್ಯಾಗವಂ ಮಾಡುವ ಪದ್ಧತಿಯಂ ಇತರ ದೇಶಗಳಂತೆ ಇಲ್ಲಿಯೂ ಏತಕ್ಕೆ ಆಚರಣೆಯೊಳು ತರಲಾಗದೆಂದು ಹೇಳುತಿದೆ. ವೈವಾಹಿಕ ಹಿಂದೂ ಧರ್ಮಶಾಸ್ತ್ರಗಳಲ್ಲಿ ತಿಳಿಸಲ್ಪಟ್ಟಿರುವ ನಿರ್ಬಂಧಗಳನ್ನೂ, ದಾಂಪತ್ಯ ಸಂಬಂಧವು ಯಾವ ಸಂದರ್ಭದಲ್ಲಿಯೂ ನಿವೃತ್ತಿಯಾಗತಕ್ಕದ್ದಲ್ಲವೆಂಬುವದನ್ನೂ, ಬೇಕಾದಾಗ ಮಾಡಿಕೊಳ್ಳುವ ಕೋರಿಕೆಯು ಸಹ ಐಚ್ಛಿಕವಾಗಿ ತ್ಯಜಿಸಲ್ಪಡತಕ್ಕದ್ದಲ್ಲವೆಂಬುವದನ್ನೂ, ಅಂತಾ ಪರಿಷ್ಕರಣಾವಶ್ಯಕತೆಗೆ ಇನ್ನೂ ಹಿಂದೂಗಳು ಸನ್ನದ್ಧರಾಗಲಿಲ್ಲವೆಂಬುವದನ್ನೂ, ಸದರೀ ಲೇಖಕರು ಅರಿಯದೆ ಯಾವದೋ ಒಂದು ಬಗೆ ವಿರುದ್ಧಾಭಿಪ್ರಾಯದೊಡನೆ ಬರೆದಿರುವ ಲೇಖನವು ಅಭಿಜ್ಞರಿಗೆ ವಿಷಾದವನ್ನುಂಟುಮಾಡದೆ ಹೋಗಲಾರದು. ಮುಖ್ಯವಾಗಿ ಶಾಸ್ತ್ರಾಧಾರಗಳ ಸ್ಥೂಲಸೂಕ್ಷ್ಮಗಳನ್ನೂ ಪ್ರಜೆಗಳ ಸ್ಥಿತಿ ಗತಿಗಳನ್ನೂ ದೇಶ ಕಾಲ ಭೇದವನ್ನೂ ಅರಿಯದೆ ತಿಳಿಸುವ ಅಭಿಪ್ರಾಯಗಳೆಂದಿಗೂ ಶ್ಲಾಘ್ಯವೆನಿಸಲಾರವು.

## Occasional Notes
## ನೈಮಿತ್ತಿಕ ವಿಷಯನ್ಯಾಸ.

ಮಹಾರಾಜ್ಞೀಯವರ ಪೌತ್ರರಾದ ಡ್ಯೂಕ್ ಆಫ್ ಯಾರ್ಕ್ ಸಾಹೇಬರವರಿಗೆ ಈ ತಿಂಗಳ ೬ ನೇ ತಾರೀಖಿನೊಳು ವಿವಾಹವು ನಡೆಯಿತಷ್ಟೆ. ಈ ಶುಭ ಸಮಯದೊಳು ಸದರೀ ದಂಪತಿಗಳಿಗೆ ನಜರ್ ಕಳುಹಿಸುವದಕ್ಕಾಗಿ ಕಲ್ಕತ್ತೆಯೊಳು ೧೫,೦೦೦ ರೂಪಾಯಿಗಳ ಚಂದಾ ಮಾಡಲ್ಪಟ್ಟಿವೆ.

ಈಚೆಗೆ ಸ್ವಲ್ಪ ದಿನಗಳ ಹಿಂದೆ, ನಾಗಪುರದಿಂದ ಹೋಗುವ ರಸ್ತೆಯಲ್ಲಿನ ಒಂದು ಘಾಟಿಯೊಳು ನಾಲ್ಕೈದು ಮಂದಿ ವರ್ತಕರು ಹೋಗುತ್ತಿರುವಲ್ಲಿ ದರೋಡೆ ಕಳ್ಳರು ಕೆಲವರು ಬಂದು ಅವರಮೇಲೆ ಬಿದ್ದು ಅವರನ್ನೆಲ್ಲ ತುಂಡುತುಂಡಾಗಿ ಕಡಿದುಹಾಕಿ ಅವರಲ್ಲಿದ್ದದನ್ನೆಲ್ಲ ದೋಚಿಕೊಂಡು ಹೋದರು.

ನ್ಯೂಗಿನಿಯಾ ದೇಶದೊಳು ಒಂದು ವಿಧ ಪಕ್ಷಿ ಇದೆ. ಅದು ಯಾರನ್ನಾದರು ಕಚ್ಚಿದರೆ ಅದರ ವಿಷದ ಬೇನೆಯಿಂದ ದುಸ್ಸಹವಾದ ನೋವುಂಟಾಗಿ, ಅದು ಕೂಡಲೆ ದೇಹವೆಲ್ಲ ವ್ಯಾಪಿಸಿ, ಕಣ್ಣುಗಳು ಕಾಣಿಸದೆ ಹೋಗಿ, ಸದಾಕ ನಂಟಾಗಿ, ದವಡೆಗಳ ಹಲ್ಲುಗಳು ಬಿಗಿದುಕೊಂಡು ಹೋಗಿ ಕಡೆಗೆ ಮರಣ ಪ್ರಾಪ್ತವಾಗುತಿದೆ.

ಈಚೆಗೆ ಪತ್ತಿಯಾಲಾ ಮಹಾರಾಜರವರು ಸಿಂಹಾಸನ ಏರುವ ತಮ್ಮ ಸಂಸ್ಥಾನಕ್ಕೆ ಸೇರಿದ ಕೆಲವು ಭೂಮಿಯನ್ನು ಧೋಲಿಪುರದ ಮಹಾರಾಣಾಯವರಿಗೆ ಇನಾಮಾಗಿ ಕೊಡಲು, ತಮ್ಮ ಅನುಮತಿ ಇಲ್ಲದೆ ಆರೀತಿ ಅವರು ಕೊಡಬಹುದೆ ಎಂಬ ಅಂಶ ಇಂಡ್ಯಾ ಗವರ್ನಮೆಂಟಿನವರ ಆಲೋಚನೆಗೆ ವಿಷಯವಾಗಿದೆ.

ಮದರಾಸ್ ಸ್ಮಾಲ್‌ಕಾಸ್‌ಕೋರ್ಟುಗಳು ಮತ್ತು ಮ್ಯಾಜಸ್ಟ್ರೇಟ್ ಕೋರ್ಟುಗಳಲ್ಲಿ ವಕಾಲತ್ ಮಾಡುತಲಿರುವ ಪ್ಲೀಡರುಗಳು ಸಿಟಿ ಸಿವಿಲ್ ಕೋರ್ಟಿನಲ್ಲಿ ವಕಾಲತ್ ಮಾಡುವದಕ್ಕೆ ತಮಗೆ ಹುಕುಂ ಕೊಡಬೇಕೆಂದು ಹೈಕೋರ್ಟಿಗೆ ಬರೆದುಕೊಂಡ ಅರ್ಜಿಯನ್ನು ಅಲ್ಲಿನ ಜಡ್ಜಿಗಳು ಡಿಸ್‌ಮಿಸ್ ಮಾಡಿದರೆಂದು ತಿಳಿಯಬರುತಿದೆ.

ಕಕ್ಷಿಗಾರರಿಗೂ ಪ್ಲೀಡರುಗಳಿಗೂ ಮಧ್ಯಸ್ಥ ಮಾಡತಕ್ಕವರೇ ಆಗಲಿ ಅರ್ಜಿಗಳು ಬರೆದುಕೊಡತಕ್ಕವರೇ ಆಗಲಿ, ತಮ್ಮ ಕೋರ್ಟಿನ ಆವರಣದೊಳಗೆ ಬಂದು ಸದರೀ ಕೆಲಸ ಮಾಡಿದರೆ ಅಂತವರು ಪೂರಾ ದಂಡನೆಗೆ ಗುರಿಯಾಗುವರೆಂದು ಮದರಾಸು ಚೀಫ್ ಮ್ಯಾಜಿಸ್ಟ್ರೇಟರವರು ನೋಟಿಸು ಮೂಲಕ ಪ್ರಕಟಪಡಿಸಿರುವದಾಗಿ ಅಲ್ಲಿನ ಪತ್ರಿಕೆಯೊಂದು ತಿಳಿಸುತಿದೆ.

ಈ ಪ್ರಪಂಚದಲ್ಲಿ ಧನಿಕರಾದವರಪೈಕಿ ಅಗ್ರಮನಾದವನು ಯಾರೆಂಬ ವಿಚಾರ ಪುಂಟಾಗಲು, ಚೀನಾ ದೇಶದೊಳು ಹಾಕ್ವೆ ಎಂಬ ಕೋಶೀದಾರನೆಂತಲೂ, ಆತನಬಳಿ ೩,೬೦೦,೦೦೦,೦೦೦ ರೂಪಾಯಿಗಳೆಂತಲೂ, ಫಿನಾನ್ಷಿಯಲ್ ನ್ಯೂಸ್ ಎಂಬ ಪತ್ರಿಕೆ ತಿಳಿಸುತಿದೆ. ಸದರೀ ದೇಶದೊಳಿರುವ ದೊಡ್ಡ ದೊಡ್ಡ ಬ್ಯಾಂಕುಗಳೆಲ್ಲವು ಆತನ ಅಧಿಕಾರಕ್ಕೆ ಒಳಪಟ್ಟವುಗಳಾಗಿರುತಿವೆ.

ಹೆತ್ತತಾಯಿಯನ್ನು ಪೂಜಿಸಿ ಗೌರವಿಸುವದರ ಮೂಲಕ ಮೋಕ್ಷ ಪುಂಟಾಗುತಿದೆ ಎಂಬ ವಿಷಯದಲ್ಲಿ ಬಂಗಾಳೀಭಾಷೆಯಲ್ಲಿ ಒಂದು ಗ್ರಂಥವಂ ಬರೆಯತಕ್ಕವನಿಗೆ ೨೦೦ ರೂ॥ ಗೋಪಥೆಯಿಂದ ಹಾನಿಗಳುಂಟಾಗುತಿವೆ ಎಂಬ ವಿಷಯದಲ್ಲಿ ಬಂಗಾಳ ಅಥವಾ ಉರ್ದು ಭಾಷೆಯೊಳು ಒಂದು ಗ್ರಂಥವಂ ಬರೆಯತಕ್ಕವನಿಗೆ ೧೫೦ ರೂಪಾಯಿಗಳೇ ಇನಾಂ ಕೊಡುವದಾಗಿ ಬಂಗಾಳಾ ದೇಶದ ಧನಿಕನಾದ ದೊಡ್ಡಮನುಷ್ಯನೊಬ್ಬತನು ಪ್ರಕಟಿಸಿರುವದಾಗಿ ಒಂದಾನೊಂದು ಪತ್ರಿಕೆ ತಿಳಿಸುತಿದೆ.

ಅಮೆರಿಕಾ ದೇಶದೊಳು ವಿವಾಹ ಸಂಬಂಧ ಪರಿತ್ಯಾಗ ವಿಷಯದಲ್ಲಿ ಹುಟ್ಟಿರುವ ಕಾನೂನು ವಿಲಕ್ಷಣ ಸ್ವಭಾವವುಳ್ಳದ್ದಾಗಿರುತಿದೆ. ಈಚೆಗೆ ಅಂದರೆ, ಹದಿನೆಂಟು ತಿಂಗಳ ಹಿಂದೆ ಒಬ್ಬ ದೊಡ್ಡಮನುಷ್ಯನು ಮದುವೆ ಮಾಡಿಕೊಂಡ ಒಬ್ಬ ಹೆಂಗಸು ಈಗ ವಿವಾಹ ಪರಿತ್ಯಾಗದ ಬಗ್ಗೆ ಕೋರ್ಟಿಗೆ ಅರ್ಜಿ ಕೊಟ್ಟು ಹುಕುಂ ಪಡಕೊಂಡದ್ದರಿಂದ ಆಕೆಯು ಬೇರೆಯೊಬ್ಬ ಪುರುಷನನ್ನು ಮದುವೆ ಮಾಡಿಕೊಳ್ಳುವದಕ್ಕೆ ಸ್ವತಂತ್ರಳಾಗಿದ್ದಾಳೆ. ವಿವಾಹ ಪರಿತ್ಯಾಗವು ಹೊಂದಿದವಳು ಬೇರೆ ಯೊಬ್ಬ ಪುರುಷನಂ ವರಿಸುವತನಕ ಪುರುಷನಿಗೆ ಬೇರೆಯೊಬ್ಬಳಂ ಮದುವೆಮಾಡಿಕೊಳ್ಳುವದಕ್ಕೆ ಅಧಿಕಾರವಿಲ್ಲದೆ, ಪರಂತು ಅವಳು ಇವನ ಹೆಂಡತಿಯೆಂತಲೇ ಭಾವಿಸಲ್ಪಡುವಳು.

ಮಹಾರಾಜ್ಞೀಯವರ ಪಾರ್ಲಿಯಮೆಂಟ್ ಸಭಾಜದ ಮೆಂಬರಾದ ಮೆ॥ ಕೆರ್ಯಿ ಎಂಬವರು, ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಆಫೀಸು ಬಿಲ್ಡಿಂಗ್ ಖರ್ಚು, ಇಂಡ್ಯಾ ಗವರ್ನಮೆಂಟಿಗೆ ಬೇಕಾದ ಸಾಮಾನುಗಳನ್ನು ಖರೀದಿ ಮಾಡುವದಕ್ಕಾಗಿ ಏರ್ಪಟ್ಟಿರುವ ಇಲಾಖೆಯ ಖರ್ಚು ಮತ್ತು ಅದರಲ್ಲಿ ಕೆಲಸ ನಡೆಯುವ ರೀತಿ, ವಿಲಾಯತಿ ಇಲಾಖೆಯವರು ಇಂಡ್ಯಾರಾಜ್ಯ ಖಜಾನೆಯಿಂದ ವಸೂಲ್ ಮಾಡುವ ಸಹಾಯದ್ರವ್ಯ, ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಮಂತ್ರಾಲೋಚಕ ಸಮಾಜವನ್ನು ತೆಗದುಹಾಕಬೇಕಾದದ್ದು ಈ ಕಾರ್ಯಗಳ ವಿಚಾರಣೆಯಬಗ್ಗೆ ಸರ್ಕಾರದ ತರಫ ಒಂದುಕಮಿಟಿಯನ್ನು ನೇಮಕರನ್ನಾಗಬೇಕೆಂದು ಹೌಸ್ ಆಫ್ ಕಾಮನ್ಸ್ ಸಮಾಜದಲ್ಲಿ ತಾವು ಪ್ರಸ್ತಾಪಿಸುವದಾಗಿ ನೋಟಿಸ್ ಕೊಟ್ಟಿರುತ್ತಾರೆ.

ಗೋವಧೆಯಂ ನಿಲ್ಲಿಸುವದಕ್ಕಾಗಿ ಒಂದು ಸಂಘವಂ ಏರ್ಪಡಿಸುವದುಚಿತವೆಂಬ ಅಂಶವಂ ಕುರಿತು ಯೋಚಿಸುವದಕ್ಕಾಗಿ ಈ ತಿಂಗಳ ೩ ನೇ ತಾರೀಖಿನ ರಾತ್ರಿ ೧೦ ಘಂಟೆಗೆ ಮುಂಬೈಯಲ್ಲಿ, ಸರ್ ಮಂಗಲದಾಸ್ ಯವರ ಜವಳಿ ಅಂಗಡಿಯೊಳು ಅಲ್ಲಿನ ನೇಟಿವ್ ದೊಡ್ಡ ಮನುಷ್ಯರು ಒಂದು ದೊಡ್ಡ ಸಭೆ ಸೇರಿದರು. ಪ್ರಸಕ್ತ ಕಾರ್ಯದ ಉದ್ದೇಶ ಪ್ರಯೋಜನಗಳಂ ಕುರಿತು ಸಭಾಸದರಲ್ಲಿ ಅನೇಕರು ವಿಸ್ತಾರವಾಗಿ ಉಪನ್ಯಾಸವು ಮಾಡಿದ ತರುವಾಯ "ಗೋಪಾಲ ಉಪದೇಶಕ ಸಭಾ" ಎಂಬ ಹೆಸರಿನಿಂದ ಒಂದು ಸಭೆಯಂ ಸ್ಥಾಪಿಸತಕ್ಕದ್ದೆಂದು ನಿರ್ಣಯವಾದ ಮೇಲೆ ಸಭಾ ಕಾರ್ಯನಿರ್ವಹಣಕ್ಕಾಗಿ ಅಲ್ಲಿದ್ದ ದೊಡ್ಡಮನುಷ್ಯರ ಪೈಕಿ ಅನೇಕರು ೨೦೦೦ ರೂಪಾಯಿಗಳ ವರಿವಿಗೆ ಚಂದಾ ಮಾಡಿದರು.

ರೈಲ್ವೆ ಅಥವಾ ಗವರ್ನಮೆಂಟ್ ನೌಕರನೊಬ್ಬನು ಕೊಡಬೇಕಾದ ಸಾಲಕ್ಕಾಗಿ ಆತನ ಸಂಬಳದ ಪೈಕಿ ಅರ್ಧಭಾಗವನ್ನು ಹಿಡಿಯುವಂತೆ ಹೈಕೋರ್ಟ್, ಸಿಟಿ ಸಿವಿಲ್‌ಕೋರ್ಟ್, ಸ್ಮಾಲ್‌ಕಾಸ್ ಕೋರ್ಟ್ ಇಂದ ಹುಟ್ಟುವ ವಾರಂಟುಗಳನ್ನು ಅನುಸರಿಸಿ ಹಿಡಿಯಲ್ಪಡುವ ಮೊಬಲಗನ್ನು ದಾಮಾಷಾಯಿ ಪ್ರಕಾರ ಡಿಕ್ರೀದಾರರು ಹಂಚಿಕೊಂಡು ಹೋಗುತ್ತಿದ್ದಾರೆ. ಅದೇ ಮನುಷ್ಯರು ಸರ್ಕಾರಕ್ಕೆ ಕೊಡಬೇಕಾದ ಬಾಕಿ ಬಗ್ಗೆ ಆತನ ಸಂಬಳವನ್ನು ಹಿಡಿಯುವಂತೆ ವಾರಂಟು ಹುಟ್ಟುವ ಪಕ್ಷಕ್ಕೆ, ಸದರೀ ಸಾಲ ತೀರುವ ವರಿವಿಗೆ ಆತನ ಸಂಬಳದ ಪೈಕಿ ಅರ್ಧವನ್ನು ಪಡೆಯುವ ವಿಷಯದಲ್ಲಿ ಇತರ ಸಾಲಗಾರರನ್ನಪೇಕ್ಷಿಸಿ ಸರ್ಕಾರಕ್ಕೆ ವಿಶೇಷವಾದ ಒಂದು ಬಾಧ್ಯತೆ ಇರಬೇಕಾದುದಿಲ್ಲವೆ ಎಂಬ ಜಿಜ್ಞಾಸೆಯುಂಟಾಗಿ ಆ ವಿಷಯವು ಈಗ ಅಭಿಪ್ರಾಯದ ಬಗ್ಗೆ ಅಡ್ವೋಕೇಟ್ ಜನರಲವರಿಗೆ ತಿಳಿಸಲ್ಪಟ್ಟಿದೆ.

ಉತ್ತರ ಮಲಬಾರ್ ಡಿಸ್ಟ್ರಿಕ್ಟಿನಲ್ಲಿ ಒಬ್ಬ ಎನೇ ಕ್ಲಾಸ್ ಮ್ಯಾಜಿಸ್ಟ್ರೇಟರು ಒಂದು ಕ್ರಿಮಿನಲ್ ಮೊಕದ್ದಮೆಯೊಳು ಅಪರಾಧಿಯು ತನ್ನ ಅಧಿಕಾರ ಸರಹದ್ದಿಗೆ ಹೊರಪಟ್ಟ ಒಂದು ಸ್ಥಳಕ್ಕೆ ಹಾಜರಾಗುವಂತೆ ಸಮ್ಮನ್ ಕೊಟ್ಟು ಆ ರೀತಿ ಆತನು ಹಾಜರಾಗದೆ ಹೋದನೆಂಬ ಕಾರಣದಮೇಲೆ ಆತನಂ ದಂಡಿಸಿದರು. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಸದರೀ ದಂಡನೆಯು ನ್ಯಾಯವಾದುದಲ್ಲವೆಂದು ಅಭಿಪ್ರಾಯಪಟ್ಟು ಆ ವಿಷಯದಲ್ಲಿ ಹೈಕೋರ್ಟಿನವರ ವ್ಯವಸ್ಥೆಯಬಗ್ಗೆ ಮೊಕದ್ದಮೆಯನ್ನು ಕಳುಹಿಸಿದರು. ಸಮ್ಮನ್ನಲ್ಲಿ ಕಂಡಂತೆ ಬ್ರಿಟಿಷ್ ರಾಜ್ಯಕ್ಕೆ ಹೊರಗಡೆ ಮ್ಯಾಜಿಸ್ಟ್ರೇಟರ ಮುಂದೆ ಹಾಜರಾಗುವದಕ್ಕೆ ಅಪರಾಧಿಯು ಬದ್ಧನಾಗಿರುವದಿಲ್ಲವೆಂತಲೂ, ಆತನು ಹಾಗೆ ಹಾಜರಾಗದೆ ಹೋದದ್ದು ಇಂಡಿಯನ್ ಪೀನಲ್‌ಕೋಡ್ ಪ್ರಕಾರ ತಪ್ಪಿತವಾಗುವದಿಲ್ಲವೆಂತಲೂ ಹೈಕೋರ್ಟಿನವರು ಅಭಿಪ್ರಾಯಪಟ್ಟು ಆತನಿಗೆ ವಿಧಿಸಲ್ಪಟ್ಟಿದ್ದ ದಂಡನೆಯಂ ರದ್ದು ಮಾಡಿದರು.

## LOCAL AND PROVINCIAL NEWS
## ಈ ದೇಶ ಮತ್ತು ತಾಲ್ಲೂಕ್‌ಜಾತವೃತ್ತಾಂತಗಳು.

ಕಳೆದ ಶನಿವಾರದದಿನ ಮೊಹರಂ ಹಬ್ಬ ಪ್ರಾರಂಭವಾಯಿತು, ಸದರೀ ಹಬ್ಬದಲ್ಲಿ ವಾಡಿಕೆಯಾಗಿ ನಡೆಯುವ ವಿಶೇಷಗಳಿಗೆ ಇನ್ನು ಅವಕಾಶವಿಲ್ಲವಾಗಿ ಆ ವಿಷಯವನ್ನು ಕುರಿತ ನಮ್ಮ ಲೇಖನಕ್ಕೂ ಅವಕಾಶ ಕಡಮೆಯಾಗಿದೆ.

ಈ ಸಿಟಿ ಮ್ಯುನಿಸಿಪಾಲಿಟಿಯವರು ವ್ಯಾಪಾರಕ್ಕಾಗಿ ಈ ಷಹರಿಗೆ ಬರುವ ಕೆರೋಸಿನ್ ಎಣ್ಣೆಯಮೇಲೆ, ತಗರದ ಡಬ್ಬಿ ಒಂದಕ್ಕೆ ಒಂದಾಣೆ ಪ್ರಕಾರ ತೆರಿಗೆ ವಸೂಲ್ಮಾಡಬೇಕೆಂದು ನಿರ್ಣಯಿಸಿರುವಂತೆಯೂ, ಪರಂತು ಈ ಹೊಸ ತೆರಿಗೆಯು ಗವರ್ನಮೆಂಟಿನವರ ಮಂಜೂರಾತಿಯಂ ಇದುವರೆಗೆ ಪಡೆಯಲಿಲ್ಲವೆಂತಲೂ ಏಳಿದೇಶದ ಸ್ಪೆಕ್ಟೇಟರ್ ಪತ್ರಿಕೆ ತಿಳಿಸುತಿದೆ.

ಈಚೆಗೆ ಕೆಲವು ದಿನಗಳ ಹಿಂದೆ ಈ ಪ್ರೊರು ಕವಾಡಿಗರ ರೇವಣ್ಣನ ಪೇಟೆಯಲ್ಲಿ ನಡೆದ ಒಂದು ಖೂನಿ ಮೊಕದ್ದಮೆಯನ್ನು ಹಿಂದಿನ ಪತ್ರಿಕೆಯಲ್ಲಿ ವಿವರವಾಗಿ ತಿಳಿಸಿದ್ದೆವಷ್ಟೆ. ಸದರೀ ಮೊಕದ್ದಮೆಯು ಸೆಷನ್ ಕಮಿಟಾಗಿ ಕಳೆದ ಶನಿವಾರದದಿನ ನಡೆದ ವಿಚಾರಣೆಯೊಳು ಖೂನಿಮಾಡಲ್ಪಟ್ಟ ಮುದ್ದನೆಂಬವನ ಹೆಂಡತಿಯಾದ ಅಪರಾಧಿ ದೇವೀರಿ, ಮೈಸೂರು ತಿಮ್ಮ, ಚಿತ್ರಗಾರ ವೆಂಕಟ್ರಮಣ, ಪಟ್ಲಗಾ ಇವರುಗಳ ಮೇಲೆ ಕೇಸ್ ರುಜುವಾತಾಗಲಿಲ್ಲವೆಂಬ ಕಾರಣದಮೇಲೆ ಯೆಲ್ಲರು ಖುಲಾಸೇ ಮಾಡಲ್ಪಟ್ಟರು.

ಈ ಪಟ್ಟಣವಾಸಿಗಳು ಜಲವಿಷಯದಲ್ಲಿ ಅನುಭವಿಸುವ ಕಷ್ಟವಂ ನಿವೃತ್ತಿ ಮಾಡಬೇಕೆಂಬ ಸಂಕಲ್ಪದೊಡನೆ ಈ ಸಂಸ್ಥಾನದ ದಿವಾನರವರು ಕೆಲವು ತಿಂಗಳ ಮೊದಲು ನಡೆಸುತಲಿರುವ ಬಹುವಿಧ ಪ್ರಯತ್ನಗಳು ಸಾಮಾನ್ಯವಾಗಿ ಎಲ್ಲರಿಗೂ ತಿಳಿದ ವಿಷಯವಾಗಿದೆಯಷ್ಟೆ. ಇಲ್ಲಿಗೆ ನೀರು ತರುವದಕ್ಕಾಗಿ ಗೊತ್ತು ಮಾಡಲ್ಪಟ್ಟ ಹೊಸ ಹೆಸರಗಟ್ಟವೆಂಬ ಸ್ಥಳವಂ ನೋಡಿ ಬರುವದಕ್ಕಾಗಿ, ಕಳೆದ ಬೃಹಸ್ಪತಿವಾರದ ದಿನ ಬೆಳಗ್ಗೆ ೭½ ಘಂಟೆಗೆ ಶ್ರೀಮನ್ಮಹಾರಾಜರವರು, ಶ್ರೀಮದ್ದಿವಾನರು, ಬ್ರಿಟಿಷ್ ರೆಸಿಡೆಂಟರು, ಡಿವಿಜನಲ್ ವಾರ್ಕಿಂಗ್ ಆಫಿಸರ್ ಮೊದಲಾದವರೊಡನೆ ಸ್ಪೆಷಲ್ ಟ್ರೈನಿನಲ್ಲಿ ಸದರೀ ಸ್ಥಳಕ್ಕೆ ದಯಮಾಡಿ ಅಲ್ಲಿನ ಸ್ಥಿತಿಯಂ ನೋಡಿಕೊಂಡು ಅದೇ ದಿನ ಸಾಯಂಕಾಲ ವಾಪಸ್ ದಯಮಾಡಿದರು. ಅವರಿಂದೀಚೆಗೆ ತಿಳಿಯಬರುವದರಲ್ಲಿ ಹೊಸ ಕಟ್ಟದಿಂದ ನೀರು ತರುವ ಯೋಜನೆಯನ್ನು ಸ್ಥಿರಿಸಿ ಕೂಡಲೇ ಕಾಮಗಾರಿಗೆ ಪ್ರಾರಂಭಿಸತಕ್ಕದ್ದೆಂದು ಹುಕುಂ ಆಗಿರುವಂತೆ ಕಾಣುತ್ತಿದೆ.

ಕಳೆದ ಮಂಗಳವಾರದ ದಿನ ರಾತ್ರಿ ಸುಮಾರು ೯ ಘಂಟೆಗೆ ವರ್ಷಕ್ಕೆ ಪ್ರಾರಂಭವಾಗಿ ಮರುದಿನ ಬೆಳಗ್ಗೆ ನಾಲ್ಕು ಘಂಟೆಯವರೆಗೆ ಮಳೆ ಬೀಳುತಲಿತ್ತು. ಪುನಃ ಕಳೆದ ಶುಕ್ರವಾರದ ದಿನ ರಾತ್ರಿ ವರ್ಷಕ್ಕೆ ಪ್ರಾರಂಭವಾಗಿ ಸುಮಾರು ಒಂದು ಘಂಟೆಯ ಕಾಲ ಹೊಡೆಯಿತು. ಈ ಮಳೆಯು ಮೂವರು ಒಂದಂಗುಲ ನಿರಬಹುದೆಂದು ತೋರುತ್ತದೆ. ಯಾವಾಗಲೂ ಮೋಡವಾದುದ ಮಧ್ಯೆ ತುಂತುರು ಹನಿಗಳು ಬೀಳುತಲಿವೆ. ಇಷ್ಟಾದಾಗ್ಯೂ ಪಾಸ್ತ್ಯಗಳ ಬಾವಿಗಳಿಗೆ ನೀರು ಬರಲಿಲ್ಲವು. ಧರ್ಮಾಂಬುಧಿ ಕೆರೆಗೂ ವಿಶೇಷವಾಗಿ ನೀರು ಬಂದಂತೆ ಕಾಣಿಸಲಿಲ್ಲವು. ಇದರ ಕಾರಣವಂ ವಿಚಾರಿಸಲಾಗಿ ಬಗೆಬಗೆಯಾಗಿ ಹೇಳುತ್ತಾರೆ.

ಶ್ರೀ ಎದುಗಿರಿ ಸದಾನಂದವರ್ಧನೀ ಸಭಾ.

ಮೇಲುಕೋಟೆ, ೧೨-೭-೯೩.

ಮ|| ರಾ|| ಳಾದ ಶ್ರೀಯದುಗಿರಿ ಸದಾನಂದವರ್ಧನೀ ಸಭಾ ಮೆಂಬರುಗಳ ಸನ್ನಿಧಿಗೆ.

ವಿಜ್ಞಾಪನಾ—

ಮೈಸೂರು ಗವರ್ನಮೆಂಟ ೧೮೯೩ನೇ ಇಸವಿ ಮೇ ೧೬ನೇ ಮಾರ್ಚ ೨೬ನೇ ನಂಬರ್ ಇಷ್ತಿಹಾರನಾಮಾ ಮತ್ತು ೧೫—೫—೯೧ನೇ ಮ|| ೧೨೦೩—೧೧ನೇ ನಂಬರ್ ಪ್ರೊಸೀಡಿಂಗ್ಸನ್ನು ಅನುಸರಿಸಿ ಮ|| ರಾ|| ಮೈಸೂರು ಡಿಸ್ಟ್ರಿಕ್ಟ ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ಬಂದ ೨೩-೬-೯೩ ನೇ ಮ|| ೫೩೩ನೇ ನಂಬರ್ ಜಾಕೀತಿ ಮೇರೆಗೆ ೯೩ನೇ ಸಾಲಿನ ಮೈಸೂರು ಪ್ರಜಾ ಪ್ರತಿನಿಧಿ ಸಭೆಗೆ ಈ ಸಭೆಯ ಮೆಂಬರುಗಳ ಪೈಕಿ ಒಬ್ಬರನ್ನು ಪ್ರತಿನಿಧಿಯಾಗಿ ಚುನಾಯಿಸುವದಕ್ಕೂ, ಸದರಿ ಪ್ರತಿನಿಧಿಯು ಮೈಸೂರು ಸಭೆಯಲ್ಲಿ ಈ ಸಭಾ ತರಫ ಚರ್ಚಿಸಬೇಕಾದ ವಿಷಯಗಳನ್ನು ನಿರ್ಣಯಿಸುವದಕ್ಕೂ ೧೮೯೩ ನೇ ಇಸವಿ ಜೂಲೈ ೨೦ನೇ ತಾರೀಖು ಗುರುವಾರ ಮಧ್ಯಾಹ್ನ ೩ ಘಂಟೆಯೊಳು ಮೆಂಬರುಗಳ ಮೀಟಿಂಗ ಸೇರಿಸಲ್ಪಡುವದು. ಆ ವೇಳೆಗೆ ಸರಿಯಾಗಿ ಈ ಸಭೆಯ ಮೆಂಬರುಗಳು ದಯಮಾಡಿ ಸಭೆಯನ್ನಲಂಕರಿಸಬೇಕು.

ಪರಸ್ಥಳದ ಮೆಂಬರುಗಳ ಪೈಕಿ ಕಾರ್ಯಗೌರವದಿಂದ ಯಾರಾದರು ಮೀಟಿಂಗಿಗೆ ದಯಮಾಡಲು ಅಸಂದರ್ಭವಾದಲ್ಲಿ,

೧. ಯಾವ ಮೆಂಬರನ್ನು ಪ್ರತಿನಿಧಿಯಾಗಿ ಚುನಾಯಿಸಬಹುದು?
೨. ಒಂದು ವೇಳೆ ಒಬ್ಬರನ್ನು ಯೆಲ್ಲಾ ಮೆಂಬರೂ ಚುನಾಯಿಸದರೆ ಪ್ರತಿನಿಧಿಯಾಗಿ ಕಾನ್ಸ ಹೋಗುವ ತಾತ್ಪರ್ಯ ಹ್ಯುಂಟೆ?
೩. ಈವರುಷದ ಪ್ರತಿನಿಧಿ ಸಭೆಯಲ್ಲಿ ಯೋಗ್ಯಗಳಾದ ಯಾವ ವಿಷಯಗಳನ್ನು ಚರ್ಚಿಸಬಹುದು?

ಈ ಮುಂತಾದ ವಿಷಯಗಳಿಗೆ ತಮ್ಮ ಅಭಿಪ್ರಾಯಗಳನ್ನು ದಯವಿಟ್ಟು ಜಾಗ್ರತೆಯಾಗಿ ಕಳುಹಿಸಬೇಕೆಂದು ಪ್ರಾರ್ಥಿಸುತ್ತೇನೆ.

*M. G. Shamaengar,*
ಸಭಾ ಸೆಕ್ರೆಟರಿ.

## CORRESPONDENCE

[ ಇದರಡಿ ಪ್ರಕಟಿಸಲ್ಪಟ್ಟಿರುವ ಲೇಖನದಲ್ಲಿ ಕಂಡ ಅಭಿಪ್ರಾಯಗಳ ಗುಣದೋಷಗಳಿಗೆ ಪತ್ರಿಕಾಲೇಖಕರು ಬಾಧ್ಯರಲ್ಲವು. ಎಡಿಟರ್ ಕ. ಪ್ರ. ]

ಮ|| ರಾ|| ಕರ್ನಾಟಕ ಪ್ರಕಾಶಿಕಾ ಎಡಿಟರವರ ಸನ್ನಿಧಿಗೆ.

ಶ್ರೀ ಎದುಗಿರಿ ಸದಾನಂದವರ್ಧನೀ ಸಭಾ.

ಮೇಲುಕೋಟೆ, ತಾ|| ೧೦ ನೇ ಜೂಲೈ ೧೮೯೩

(ಕಳೆದವಾರದ ಶೇಷ)

ಮನುಷ್ಯರಿಗೆ ಸಮಾನದರ್ಶವು ಯಾವದೋ ವಿಚಾರಿಸುವಣ! ಕರಚರಣಾದ್ಯವಯವ ನಿದ್ರಾ ಆಹಾರಾದಿಗಳು ಸರ್ವ ಪ್ರಾಣಿ ಸಮವಾಗಿದ್ದಾಗ್ಯೂ, ಮನುಷ್ಯರಿಗೆ ಈ ಸಾಮ್ಯವನ್ನು ತಪ್ಪಿಸುವದಕ್ಕಾಗಿ ವಿವೇಕ ವೆಂಬುವ ವಿಶೇಷ ಕಾರಣವು ಒಂದು ಇದೆ. ಈ ವಿವೇಕಾದಿಗಳನ್ನ ಅಂಗೀಕರಿಸಿ ಪೂಜ್ಯತಾದಿಗಳನ್ನ ಒಪ್ಪಿಕೊಳ್ಳಬೇಕು. ಹಾಗಲ್ಲದಿದ್ದರೆ ಹುಟ್ಟಿದವರೆಲ್ಲರೂ, ಗವರ್ನರುಗಳಾಗಬೇಕಾಗುತ್ತೆ. ಹಾಗೆಯೇ ದೊಡ್ಡ ಮನುಷ್ಯರೆಲ್ಲರೂ ಹೀನಚಾಕರರಾಗಬೇಕಾಗುತ್ತದೆ. ಹೀನರಲ್ಲಿ ಸಮ್ಮಂದವನ್ನು ಬೆಳಸೋಣವು ಎಲ್ಲರಿಗೂ ಅಸಹ್ಯಕರವಲ್ಲವೆ? ಅಂಥಾ ಹೀನತಾಸೂಚಕ ವ್ಯಪದೇಶವು ಅಕರಿಮಿತವಾದ್ದರಿಂದ ಅದನ್ನು ನಿರ್ದೇಶಿಸುವದಕ್ಕಾಗುವದಿಲ್ಲವಾಗಿ ಪ್ರತ್ಯೇಕ ಪ್ರತ್ಯೇಕವಾಗಿ ತಿಳಿದುಕೊಳ್ಳತಕ್ಕದ್ದಾಗಿದೆ. ಶಾಸ್ತ್ರದಲ್ಲಿಯೂ ಮತ್ತು ದೊಡ್ಡವರ ಸಮಾಜದಲ್ಲಿಯೂ ನಿಷೇಧಿಸಲ್ಪಟ್ಟ ಹೀನಕೃತ್ಯವು ಬ್ರಾಹ್ಮಣರಲ್ಲಿ ಇಲ್ಲವಾದ್ದರಿಂದ ಬ್ರಾಹ್ಮಣನು ತನ್ನ ಕರ್ಮಾನುಷ್ಠಾನದಿಂದ ಭೂಲೋಕದ ಪ್ರಾಣಿಗಳಿಗೂ, ಮತ್ತು ಇಂದ್ರಾದಿ ದೇವತೆಗಳಿಗೂ, ತೃಪ್ತಿಯನ್ನು ಮಾಡುತ್ತಾನೆಂಬುವದನ್ನು ಶ್ರೀ ಗೀತಾಚಾರ್ಯರು ಸ್ಪಷ್ಟವಾಗಿ ವಿವರಿಸಿ ಇದ್ದಾರೆ. ಆದ್ದರಿಂದಲೇ ಬ್ರಾಹ್ಮಣನು ತನ್ನ ಆಚಾರದಿಂದ ಉತ್ತಮನಾದನು. ಇದನ್ನೇ ಮನುವು ಕೂಡಾ ಅಪ್ಪಣೆ ಕೊಡಿಸಿರುತ್ತಾರೆ. ಆದರೆ ಕೆಲವರು ಲೋಕಾಂತರವನ್ನೂ, ದೇಹಾಂತರವನ್ನೂ ಒಪ್ಪುವದಿಲ್ಲ. ಇದೂ ಕೂಡ ಶಾಸ್ತ್ರಾವಗಾಹನವಿಲ್ಲದ ಕೆಲಸವಾಗಿರುತ್ತೆ. ಸಾಧಾರಣವಾಗಿ ಒಂದು ತಾಯಿ ತಂದೆಗೆ ಹುಟ್ಟಿದ ಮಕ್ಕಳಲ್ಲಿ ಒಬ್ಬೊಬ್ಬನು ಒಂದುವಿಧವಾಗಿ ಇರುತ್ತಾನೆ. ಇದಕ್ಕೆ ಕಾರಣವನ್ನು ಜನ್ಮಾಂತರದ ಕರ್ಮವನ್ನೇ ಹೇಳಬೇಕಲ್ಲದೆ ಮತ್ತ್ಯಾವದನ್ನೂ ಹೇಳುವದಕ್ಕಾಗುವದಿಲ್ಲವು. ಮತ್ತು ಕೆಲವು ವಿದೇಶೀಯರು ಲೋಕಾಂತರವನ್ನು ಮಾತ್ರ ಒಪ್ಪಿಕೊಳ್ಳುತ್ತಾರೆ. ಆದರೆ ಪರಸ್ಪರ ಉಂಟಾಗಬೇಕಾದ ಸಹಾಯವನ್ನು ಒಪ್ಪುವದಿಲ್ಲವು. ಇವರು ದೇವರೊಬ್ಬನೇ ಸಕಲ ಕಾರ್ಯಗಳನ್ನು ನಡಿಸುತ್ತಾನೆನ್ನುತ್ತಾರೆ. ಆದರೆ ಗವರ್ನರವರು ರಾಜ್ಯವನ್ನು ಪಾಲಿಸುತ್ತಾರೆ ಅಂದರೆ ಪರಿಜನರಿಲ್ಲನೆಂಬುವದಾಗಿ ಹೇಳಲಾಗುವದಿಲ್ಲ. ಪರಿಜನರಿಗೆ ಸಂಬಳವನ್ನೇರ್ಪಡಿಸಿ ಕೊಡುವಂತೆಯೂ, ಪ್ರೈವರಿಂದ ಮಿರಾಸುಏರ್ಪಡಿಸಿಕೊಡುವಂತೆಯೂ, ದೇವರು ನಮಗೆ ಸುಖವನ್ನುಂಟುಮಾಡಿಕೊಡುವದಕ್ಕಾಗಿ, ದೇವತೆಗಳನ್ನು ಯೇರ್ಪಡಿಸಿ ಅವರುಗಳಿಗೆ ನಮ್ಮಿಂದ ರುಸುಂ ಸಹ ಏರ್ಪಡಿಸಿ ಇರುತ್ತಾನೆ. ಇಂದ್ರಾದಿಗಳು ದೇವರಿಗೆ ಪರಿಜನರು. ಇವರ ಪೂಜೆಯೂ ಬ್ರಾಹ್ಮಣರದಾಗಿರುತ್ತಾದ್ದರಿಂದಲೂ, ಎರಡು ಲೋಕದಲ್ಲಿಯೂ ಇರುವ ಪ್ರಾಣಿಗಳ ಸುಖವೂ ಬ್ರಾಹ್ಮಣಾಧೀನವಾದ್ದರಿಂದಲೂ, ಈ ಬ್ರಾಹ್ಮಣರು ಶ್ರೇಷ್ಠರಾಗಿರುತ್ತಾರೆ. ಇವರುಗಳಿಗೆ ಸಹಾಯವನ್ನು ಮಾಡುವ ಕ್ಷತ್ರಿಯರನ್ನು ಕೂಡ ಇವರುಗಳ ಶ್ರೇಷ್ಠರೆಂದೇ ಹೇಳಬೇಕು. ಇವರ ಕರ್ಮವು ಪ್ರಾತಃಸ್ನಾನ, ಮಂತ್ರ, ಜಪ, ಹೋಮಾದಿಗಳಾಗಿರುತಿವೆ. ಈ ಕಾರ್ಯಗಳನ್ನು ಸಕಲ ಮತದವರೂ ಒಪ್ಪಿ ನಡವಳತದಲ್ಲಿ ಸಹ ತಂದಿರುತ್ತಾರೆ. ಆದರೆ ಮಂತ್ರ ಜಪಾದಿಗಳ ಫಲಸಿದ್ಧಿ ವಿಷಯದಲ್ಲಿ ವಿದೇಶೀಯರಾದ ಕೆಲವರು ವಿನಾ, ಮಿಕ್ಕಾದ ಮತಸ್ಥರೆಲ್ಲರೂ ಒಪ್ಪಿಕೊಳ್ಳುತ್ತಾರೆ. ಮತ್ತು ಫಲವನ್ನು ಅನುಭವಿಸಿಯೂ ಇರುತ್ತಾರೆ. ಪರಂತು ಸಾಧನ ಸಾಮಗ್ರಿಗಳು ಸಾಲದೆ ಹೋದರೇನೇ ಫಲಿಸದೆಹೋಗುವದೇ ಹೊರತು ಶಾಸ್ತ್ರವಿಧಿಯು ಸುಳ್ಳಲ್ಲವು. ಈ ಅಂಶವನ್ನ ಕುರಿತು ವ್ಯಾಸಮಹಾಮುನಿಯು ಶ್ಲೋಕ|| ಸತ್ಯಂ ಸತ್ಯಂ... ..ವೇದ್ವೇದಾಃ ಕೇಶವಾತ್ಪರಂ ಎಂದು ಪ್ರತಿಜ್ಞೆಯೂ ಮಾಡಿದರು. ಮನ್ವಾದಿ ಮಹರ್ಷಿಗಳೂ ಕೂಡ ಶಾಸ್ತ್ರಾರ್ಥವನ್ನೂ, ಸದಾಚಾರಗಳನ್ನೂ, ಲೋಕಹಿತಾರ್ಥವಾಗಿ ವಿವರಿಸಿ ಇರುತ್ತಾರಾದ್ದರಿಂದ ಮಾನನೀಯರಾದ ಮಹಾತ್ಮರುಗಳು, ಯುಕ್ತಾಯುಕ್ತ ವಿಷಯಗಳಲ್ಲಿ ಸಚ್ಛಾಸ್ತ್ರವಾಗಿ ಅಂಗೀಕರಿಸಬೇಕಾದದ್ದು ಯುಕ್ತವಲ್ಲವೇ?

## THE MYSORE GAZETTE.
## ಮೈಸೂರು ಗೆಜೆಟು

ಶ್ರೀಮನ್ಮಹಾರಾಜ ರಾಜಾಸಾಹೇಬ ಬಹದೂರವರ ಸರ್ಕಾರದಿಂದ ಕೊಡೋಣಾದ ಇಷ್ತಿಹಾರನಾಮೆಗಳು.

೫ನೇ ಜೂಲೈ ೧೮೯೩, ನಂ|| ೬೬—ಐ. ೩೦—ಮೈಸೂರು ಸರ್ವಿಸ್ ರೆಗ್ಯುಲೇಷನ್ಸಗಳ ೧೨೧ನೇ ಆರ್ಟಿಕಲ್ ಅನುಸರಿಸಿ, ಕುಣಿಗಲ್ ತಾಲ್ಲೂಕು ಅಮಲ್ದಾರ್ ಎಂ. ಕೃಷ್ಣರಾಯರವರು ಅವರು ಉಪಯೋಗಿಸಿಕೊಳ್ಳಬಹುದಾದ ತಾರೀಖ್ ಮೊದಲು ೫ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟರುತ್ತಾರೆ.

ನಂ ೬೮—ಐ. ೩೧—ಶಿವಮೊಗ್ಗಾ ಡಿಸ್ಟ್ರಿಕ್ಟ ಆಫಿಷಿಯೇಟಿಂಗ ಅಸಿಸ್ಟೆಂಟ ಕಮಿಷನರ್ ಮ|| ಕೆ. ರಾಮಾನುಜಯ್ಯಂಗಾರ್ರವರು, ೧೮೯೩ನೇ ಇಸವಿ ಜೂನ್ ೧೮ನೇ ಮಾರ್ಚ ೨೦೮೫—೧ ೬೦೫ನೇ ನಂಬರ್ ಇಷ್ತಿಹಾರನಾಮೆಯ ಮೂಲಕ ಅವರಿಗೆ ಕೊಡಲ್ಪಟ್ಟ ರಜಾಕ್ಕೆ ಜಾಸ್ತೀಯಾಗಿ ೩ ದಿನಗಳ ರಜಾ ಕೊಡಲ್ಪಟ್ಟಿದ್ದರು.

ನಂ|| ೭೮—೦ ೩೮—ಮೈಸೂರು ಸರ್ವಿಸ್ ರೆಗ್ಯುಲೇಷನ್ಸಗಳ ೧೨೧ನೇ ಆರ್ಟಿಕಲ್ ಅನುಸರಿಸಿ, ತುಮಕೂರು ಡಿಸ್ಟ್ರಿಕ್ಟ ಪೋರೆಸ್ಟ ಸಬ್ ಅಸಿಸ್ಟೆಂಟ ಕನ್ಸರ್ವೇಟರಾದ ಮ|| ವೆಂಕಟನಾರಣಪ್ಪನವರು ೧೮೯೩ನೇ ಇಸವಿ ಜೂನ್ ೩೦ನೇ ತಾರೀಖ್ ಮೊದಲು ೫ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿದ್ದರು.

ನಂ|| ೭೬—೧ ೪೦—ಮೈಸೂರು ಸರ್ವಿಸ್ ರೆಗ್ಯುಲೇಷನ್ಸಗಳ ೧೨೧ ನೇ ಆರ್ಟಿಕಲ್ ಅನುಸರಿಸಿ, ಚಿಕ್ಕನಾಯಕನ ಹಳ್ಳಿ ತಾಲ್ಲೂಕ್ ಅಮಲ್ದಾರ್ ಮಹಮದ್ ರಜಾ ಯವರು, ಅವರುಪಯೋಗಿಸಿಕೊಳ್ಳಬಹುದಾದ ತಾರೀಖ್ ಮೊದಲು ೩ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟರುತ್ತಾರೆ.

ನಂ|| ೭೮—೧ ೪೫—ಮೈಸೂರು ಸರ್ವಿಸ್ ರೆಗ್ಯುಲೇಷನ್ಸಗಳ ೧೨೧ ನೇ ಆರ್ಟಿಕಲ್ ಅನುಸರಿಸಿ, ತುಮಕೂರು ಡಿಸ್ಟ್ರಿಕ್ಟ ಡೆಪ್ಯುಟಿ ಕಮಿಷನರ್ ಮ|| ಬಿ. ಕೆ. ವೆಂಕಟವರದಯ್ಯಂಗಾರ್ರವರು, ೧೮೯೩ ನೇ ಇಸವಿ ಜೂನ್ ೨೨ ನೇ ತಾರೀಖಿನಲ್ಲಿ ಒಂದು ದಿನ ಕ್ಯಾಜುಯಲ್ ರಜಾ ಕೊಡಲ್ಪಟ್ಟಿದ್ದರು.

ನಂ|| ೮೦—೧. ೪೪—ದಿವಾನರವರ ಆಫೀಸಿನಲ್ಲಿ ಕೆಲಸ ನೋಡುತಲಿರುವ ಚೀಫ್ ಕೋರ್ಟ ರಿಜಿಸ್ಟ್ರಾರ್ ಮ|| ಇ. ಆರ್. ಸುಬ್ಬರಾಯ ಅಯ್ಯರವರಿಗೆ, ೧೮೯೩ ನೇ ಏಪ್ರಿಲ್ ೨೧ ನೇ ಮಾರ್ಚ ೧೩೩೨—೧. ೪೨೮೯ ನೇ ನಂಬರ್ ಇಷ್ತಿಹಾರನಾಮೆಯ ಮೂಲಕ ಕೊಡಲ್ಪಟ್ಟ ೬ ವಾರಗಳ ಪ್ರಿವಿಲೇಜ್ ರಜಾ ಇದರಿಂದ ೫ ದಿನಗಳಿಗೆ ಜಾಸ್ತೀ ಮಾಡಲ್ಪಟ್ಟಿದೆ.

೨. ಮ|| ಸುಬ್ಬರಾಯ ಅಯ್ಯರವರು ರಜಾದಿಂದ ವಾಪಸ್ ಬಂದು ೧೮೯೩ನೇ ಇಸವಿ ಜೂನ್ ೭ ನೇ ತಾರೀಖಿನ ಮಧ್ಯಾಹ್ನಾತ್ಪೂರ್ವ ದಿವಾನರವರ ಆಫೀಸಿನಲ್ಲಿ ತಮ್ಮ ಕೆಲಸದ ಚಾರ್ಜನ್ನು ಮರಳಿ ವಹಿಸಿದರು.

ನಂ|| ೧೬೪—೧. ೬೪—ಗುಂಡಲಪೇಟೆ ಅಮಲ್ದಾರ್ ಎಂ. ರಾಮಚಂದ್ರರಾಯರಿಗೆ ೧೮೯೩ ನೇ ಇಸವಿ ಏಪ್ರಿಲ್ ೨೬ನೇ ಮಾರ್ಚ ೧೩೬೪೩—೧. ೪೫೫೪ನೇ ನಂ|| ಇಷ್ತಿಹಾರನಾಮೆಯ ಮೂಲಕ ರುಸುಮಿಲ್ಲದೆ ಕೊಡಲ್ಪಟ್ಟ ೫೦ ದಿನಗಳ ರಜಾ ಇದರಿಂದ ೧೫ ದಿನಗಳು ಜಾಸ್ತಿ ಮಾಡಲ್ಪಟ್ಟಿರುತ್ತೆ.

೩ನೇ ಜೂಲೈ, ನಂ|| ೪೨—೧. ೪೬—೧೮೯೩ ನೇ ಇಸವಿ ಜೂನ್ ೨೦ ನೇ ತಾರೀಖಿನ ಮಧ್ಯಾಹ್ನಾತ್ಪೂರ, ಪೊಲೀಸ್ ಸೂಪರಿಂಟೆಂಡೆಂಟರಾದ ಮ|| ಡಿ. ದೇವರಾಜ ಅರಸಿನವರು ಬೆಂಗಳೂರು ಡಿಸ್ಟ್ರಿಕ್ಟ ಮತ್ತು ಪೊಲೀಸ್ ಆಫಿಸ್ ಚಾರ್ಜನ್ನು ಕೊಟ್ಟು ಪೊಲೀಸ್ ಸೂಪರಿಂಟೆಂಡೆಂಟರಾದ ಮ|| ಜೆ ಡಬ್ಬಿಯು ಸ್ಮಿಥಿಯವರು ತೆಗದುಕೊಂಡಿರುತ್ತಾರೆ.

ನಂ|| ೪೩—೧ ೪. ೧೯೫—೯೨—೧೮೯೩ನೇ ಇಸವಿ ಜೂನ್ ೧೯ನೇ ತಾರೀಖಿನ ಮಧ್ಯಾಹ್ನಾತ್ಪೂರ, ಪೊಲೀಸ್ ಅಸಿಸ್ಟೆಂಟ ಸೂಪರಿಂಟೆಂಡೆಂಟರಾದ ಮ|| ಎಂ. ನಂಜರಾಜ ಅರಸಿನವರು ಫ್ರೆಂಚ್ ರಾಕ್ಸ ಸಬ್‌ಡಿವಿಜನ್ ಚಾರ್ಜನ್ನು ಕೊಟ್ಟು ಮ|| ಡಿ. ಎ. ಬಾಲಾರ್ಡ್‌ಯವರು ತೆಗದುಕೊಂಡಿರುತ್ತಾರೆ.

೮ನೇ ಜೂಲೈ ೧೮೯೩, ನಂ|| ೩೭೮—೧. ೧೦೦—೧೮೯೩ ನೇ ಇಸವಿ ಜೂನ್ ೨೮ ನೇ ತಾರೀಖಿನ ಪೂರ್ವಾಹ್ನದಲ್ಲಿ, ಬೆಂಗಳೂರು ಡಿಸ್ಟ್ರಿಕ್ಟ ಫಾರೆಸ್ಟ ಆಫೀಸ್ ಚಾರ್ಜನ್ನು ಅಸಿಸ್ಟೆಂಟ ಕನ್ಸರ್ವೇಟರ್ ಮ|| ಎಸ್. ಎ. ಬಾಪೂರಾಯರವರು ಕೊಟ್ಟು ಫಾರೆಸ್ಟ ಸೂಪರಿಂಟೆಂಡೆಂಟರಾದ ಮ|| ಸಿ. ಇ. ಎಂ. ರಸ್ಸೆಲ್ ಯವರು ತೆಗದುಕೊಂಡಿರುತ್ತಾರೆ.

೨. ಮ|| ಎಸ್ ಎ ಬಾಪೂರಾಯರವರು, ಮ|| ಟಿ. ಅಬ್ದುಲ್ ರಹಿಮಾನ್ ಯವರು ರಜಾಮೇಲೆ ಗೈರ್ಹಾಜರಿರುವ ಕಾಲದಲ್ಲಿ, ಹಸ್ಸನ್ ಡಿಸ್ಟ್ರಿಕ್ಟ ಫಾರೆಸ್ಟ ಅಸಿಸ್ಟೆಂಟ ಕನ್ಸರ್ವೇಟರಾಗಿ ನೇಮಕ ಕರ್ಮಾಡಲ್ಪಟ್ಟಿರುತ್ತಾರೆ.

೭ ನೇ ಜೂಲೈ ೧೮೯೩, ನಂ|| ೨೪೮—೧. ೨೨.—ಮೈಸೂರು ಸರ್ವಿಸ್ ರೆಗ್ಯುಲೇಷನ್ಸಗಳ ೧೯೯ ನೇ ಆರ್ಟಿಕಲ್ ಅನುಸರಿಸಿ, ಕಡೂರು ಡಿಸ್ಟ್ರಿಕ್ಟಿನೊಳು ಜನರಲ್ ಡ್ಯೂಟಿಯಮೇಲಿರುವ ಮ|| ಕೆ ರಾಘುಸ್ವಾಮಯ್ಯಂಗಾರ್ರವರು, ಜೂಲೈ ಗುರ್ರೀ ತಾರೀಖ್ ಮೊದಲು ಅಥವಾ ಅವರುಪಯೋಗಿಸಿಕೊಳ್ಳಬಹುದಾದ ತಾರೀಖ್ ಮೊದಲು ಅಯಿದು ವಾರಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

೨. ಮೂಡಿಗೆರೆ ತಾಲ್ಲೂಕ್ ಅಮಲ್ದಾರ್ ಮ|| ಸಿ. ರಾಮಯ್ಯಂಗಾರ್ರವರು ಮ|| ಕೆ. ರಾಮಸ್ವಾಮಯ್ಯಂಗಾರ್ರವರು ರಜಾಮೇಲಿರುವ ಕಾಲದಲ್ಲಿ, ಕಡೂರು ಡಿಸ್ಟ್ರಿಕ್ಟ ಅಸಿಸ್ಟೆಂಟ ಕಮಿಷನರ್ ವ ೧ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡುವಂತೆ ನೇಮಕರ್ಮಾಡಲ್ಪಟ್ಟಿರುತ್ತಾರೆ.

ನಂ|| ೪೦೮—೧. ೧೪೩ — ಮೈಸೂರು ಸರ್ವಿಸ ರೆಗ್ಯುಲೇಷನ್ಸಗಳ ೧೨೧ ನೇ ಆರ್ಟಿಕಲ್ ಅನುಸರಿಸಿ, ಮೈಸೂರು ಡಿಸ್ಟ್ರಿಕ್ಟ ಫಾರೆಸ್ಟ ಪ್ರೊಬೆಷನರ್ ಮ|| ರಾಮಯ್ಯಂಗಾರ್ರವರು ೧೮೯೩ ನೇ ಇಸವಿ ಜೂನ್ ೩ ನೇ ತಾರೀಖ್ ಮೊದಲು ೭ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

೧೦ ನೇ ಜೂಲೈ ೧೮೯೩, ನಂ|| ೪೦೬—೧ ೧೪೧.—ಮೈಸೂರು ಸರ್ವಿಸ್ ರೆಗ್ಯುಲೇಷನ್ಸಗಳ ೧೨೧ ನೇ ಆರ್ಟಿಕಲ್ ಅನುಸರಿಸಿ, ಹೆಗ್ಗಡದೇವನ ಕೋಟೆ ತಾಲ್ಲೂಕ್ ಅಮಲ್ದಾರ್ ಬಿ. ಶ್ರೀನಿವಾಸ ರಾಯರವರು ಅವರುಪಯೋಗಿಸಿಕೊಳ್ಳಬಹುದಾದ ತಾರೀಖ್ ಮೊದಲು ೫ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ|| ೪೦೮—೧. ೧೪೯.— ಮೈಸೂರು ಸರ್ವಿಸ್ ರೆಗ್ಯುಲೇಷನ್ಸಗಳ ೧೨೩ ನೇ ಆರ್ಟಿಕಲ್ ಅನುಸರಿಸಿ, ಹಾಸನ ತಾಲ್ಲೂಕು ಅಮಲ್ದಾರ್ ಟಿ. ಚೊಕ್ಕಣ್ಣನವರು ೧೮೯೩ ನೇ ಇಸವಿ ಆಗಸ್ಟ ೧೮ ನೇ ತಾರೀಖ್ ಮೊದಲು ಒಂದು ವಾರದ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ|| ೪೦೭—೧. ೧೩೨—ನಗರ ಡಿವಿಜನ್ ಡಿಸ್ಟ್ರಿಕ್ಟ ಕೋರ್ಟ ಶಿರಸ್ತೇದಾರ್ ಮ|| ಶೇಷಗಿರಿರಾಯರವರು, ಮೃತಪಟ್ಟ ಮ|| ಮಂಜಯ್ಯ, ಬಿ. ಎ. ಬಿ. ಎಲ್. ಯವರಿಗೆ ಬದಲು, ಮುಂದೊಂದು ಹುಕುಂ ಕೊಡಲ್ಪಡುವವರೆವಿಗೆ, ತಾತ್ಕಾಲಿಕವಾಗಿ, ಕೆಲಸ ನೋಡತಕ್ಕ ಬಗ್ಗೆ, ಮುಂದೆ ಮುನಸಫರಾಗಿ ನೇಮಕರ್ಮಾಡಲ್ಪಟ್ಟಿರುತ್ತಾರೆ.

## ವಿದ್ಯಾಭ್ಯಾಸದ ಇಲಾಖಾ.

ಇಷ್ತಿಹಾರನಾಮೆ.

೧೩ನೇ ಜೂಲೈ ೧೮೯೩

ಇ. ನಂ|| ೩.—ಬೆಂಗಳೂರು ಡಿಸ್ಟ್ರಿಕ್ಟು ಸ್ಕೂಲುಗಳ ಡೆಪ್ಯುಟಿ ಇನ್ಸ್ಪೆಕ್ಟರ್ ಮ|| ಬಿ ವೆಂಕಟವರದಯ್ಯಂಗಾರ್ಯರವರು, ೯೩ ನೇ ಇಸಿವಿ ಜೂನ್ ೧೯ನೇ ತಾರೀಖು ಮೊದಲು ಅವರಿಗೆ ಕೊಡಲ್ಪಟ್ಟ ೧೨ ದಿನಗಳ ರಜಾವನ್ನು ಉಪಯೋಗಿಸಿಕೊಂಡು ೧೮೯೩ನೇ ಇಸಿವಿ ಜೂಲೈ ಗುರ್‍ರೀತಾರೀಖಿನಲ್ಲಿ ಕೆಲಸಕ್ಕೆ ವಾಪಸ್ ಬಂದಿರುತ್ತಾರೆ

ಇ. ನಂ|| ೩.—ಶ್ರೀಮನ್ಮಹಾರಾಜರವರ ಅರಮನೆ ಕಂಟ್ರೋಲರಾದ ಮ. ಡಿ. ಸೀತಾರಾಮರಾವ್‌ಯವರು ಕೆಲಸಕ್ಕೆ ರಾಜೀನಾಮೆ ಕೊಟ್ಟು, ಮ. ಸಿ ಶ್ರೀನಿವಾಸಯ್ಯಂಗಾರವರಿಗೆ ಬದಲು, ಮೈಸೂರು ಶ್ರೀಮನ್ಮಹಾರಾಣೀಯವರ ಬಾಲಿಕಾಪಾಠಶಾಲೆಯ ಕಾರ್ಯನಿರ್ವಹಣ ಸಂಘದಲ್ಲಿ ಒಬ್ಬ ಮೆಂಬರಾಗಿ ನಿಯಮಿಸಲ್ಪಟ್ಟಿರುತ್ತಾರೆ.

## ಮರಾಮತ್ ಇಲಾಖಾ

ಇಷ್ತಿಹಾರ್‌ನಾಮ.

೫ನೇ ಜೂಲೈ ೧೮೯೩

ಮೈಸೂರು ಪಬ್ಲಿಕ್‌ವರ್ಕ್ಸ್ ಅಕೌಂಟ್ ಅಸಿಸ್ಟೆಂಟ್ ಎಗ್ಜಾಮಿನರಾದ ಮ. ಸಿ. ವರದರಾಜಪಿಳ್ಳೆಯವರು, ಈ ತಿಂಗಳ ೮ನೇ ತಾರೀಖ್ ಮೊದಲು, ಮೆಡಿಕಲ್ ಸರ್ಟಿಫಿಕೇಟಿನಮೇಲೆ ಒಂದು ತಿಂಗಳ ರಜಾ ಕೊಡಲ್ಪಟ್ಟಿರುತ್ತಾರೆ.

೭ನೇ ಜೂಲೈ ೧೮೯೩.—ಈ ತಿಂಗಳ ೯ನೇ ತಾರೀಖಿನಲ್ಲಿ ರಾಯಲ್ ಇಂಜಿನಿಯರಾದ ಲೆಪ್ಟಿನೆಂಟ್ ಕರ್ನಲ್ ಡಿ. ಮೆಕ್ನೀಲ್ ಕೇಂಬಲ್ ಸಾಹೇಬರವರು, ಮೈಸೂರು ಗವರ್ನಮೆಂಟ್ ಚೀಫ್ ಇಂಜಿನಿಯರ್ ಶಿಕ್ಷತು ಮರಾಮತ್ತು ಇಲಾಖಾ ಜನರಲ್ ಬ್ರಾಂಚ್ ಸೆಕ್ರಟರಿ ಕೆಲಸದ ಚಾರ್ಜನ್ನು ಮ|| ಡಬ್ಲ್ಯು ಮೆಕ್ಕಚ್ಚಿನ್ ಸಾಹೇಬರವರಿಂದ ತೆಗೆದುಕೊಂಡರು.

೧೦ನೇ ಜೂಲೈ ೧೮೯೩.

ಸರ್ಕಾರ್ ನೌಕರಿಯ ಅನುಕೂಲ್ಯಕ್ಕಾಗಿ ಇದರಡಿ ಬರುವ ಯಗ್ಜಿಕ್ಯೂಟಿವ್ ಇಂಜಿನಿಯರ್‌ಗಳ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತಿವೆ —

೧. ಯಗ್ಜಿಕ್ಯೂಟಿವ್ ಇಂಜಿನಿಯರ್ ಮಿಸ್ಟರ್ ಗೋವಿಂದಾಚಾರ್ಲು ಯವರು ಕಡೂರು ಡಿಸ್ಟ್ರಿಕ್ಟಿನಿಂದ ಚಿತ್ರದುರ್ಗ ಡಿಸ್ಟ್ರಿಕ್ಟಿಗೆ.

೨ ಆಫೀಷಿಯೇಟಿಂಗ್ ಯಗ್ಜಿಕ್ಯೂಟಿವ್ ಇಂಜಿನಿಯರ್ ಮ|| ಡಿ ರಂಗಸ್ವಾಮಿಯರವರು ಚಿತ್ರದುರ್ಗ ಡಿಸ್ಟ್ರಿಕ್ಟಿನಿಂದ ಕಡೂರು ಡಿಸ್ಟ್ರಿಕ್ಟಿಗೆ

## SUMMARY OF NEWS

ವೃತ್ತಾಂತ ಸಂಗ್ರಹವು.

ಜರ್ಮನಿ ದೇಶದಲ್ಲಿ ಒಂದು ವರ್ಷದೊಳಗೆ ೩೬೦ ದಫೆ ಭೂಕಂಪನಗಳಾಗುತ್ತವೆ

ಸಯಾಂ ಸರ್ಕಾರದವರು ಫ್ರೆಂಚರ ಕೂಡಿದವರನ್ನು ಫ್ರಾನ್ಸ್ ವರದಿಯಿಂದ ಯುದ್ಧವೇನಗುವ ಗುಟ್ಟುಸ್ಥಿಗಳು ತೋರುತ್ತಿವೆ.

ಡಿಷಿಮಾರಿಗೂ ಜಪಾನಿಯವರಿಗೂ ಯುದ್ಧ ನಡೆದರೆ ಜಯ್ತಿನಿಯವರು ಏಕಕಾಲಕ್ಕೆ ಮೂರುಲಕ್ಷ ಸೈನ್ಯವನ್ನು ರಷಿಯಾರವರ ಹದ್ದಿನಲ್ಲಿ ಹೋಗುವಷ್ಟುಸಿದ್ಧತೆಯನ್ನಿಟ್ಟಿರುತ್ತಾರೆ

ಗೊಂಡಾಲದ ಮಹಾರಾಜರವರು ತಮ್ಮ ದೇಶದ ರಾಷ್ಟ್ರೀಯ ಪದ್ಯಗಳನ್ನು ಮಾಡಿ ಕೊಡುವವರಿಗೆ ೧೫೦೦ ರೂಪಾಯಿಗಳನ್ನು ಇನಾಂ ಕೊಡುವೆವೆಂದು ಪ್ರಸಿದ್ಧಮಾಡಿರುತ್ತಾರೆ.

ಮುಂಬೈಗೆ ಸಕ್ಕರೆಯನ್ನು ತುಂಬಿಕೊಂಡು ಬರತಕ್ಕಂಥ ಪೆಸಿಫಿಕ್ ಯೆಂಬ ಹೆಸರುಳ್ಳ ಹಡಗು ಬೀಗಿದ್ದ ಜನಸಹಿತವಾಗಿ ಮುಳುಗಿಹೋದು ದೂರದೃಷ್ಟಿಯಿಂದ ಬಂದ ತಂತಿ ವರ್ತಮಾನದಿಂದ ತಿಳಿಯುತ್ತದೆ —ಸತ್ಯವೃತ್ತ.

ಕೃಷ್ಣಾಜಿಲ್ಲೆಯಲ್ಲಿ ಒಬ್ಬ ಬಡ ಕೂಲಿಗಾರನಿಗೆ ಆತನ ಹೊಲದಲ್ಲಿ ಸುಮಾರು ಮೂರುಸಾವಿರ ರೂಪಾಯಿ ಕ್ರಯ ಬಾಳುವ ಒಂದು ಬಂಗಾರದ ಮುದ್ದೆಯು ಸಿಕ್ಕಿತೆಂದು ತಿಳಿಯಬರುತದೆ

ಹಲ್ಲು ಕಟ್ಟುವಾಗಲಿಕ್ಕೆ ಉಪಾಯ ಹುಡುಕಿದ ಬಾಯಿಯ ಚಿಕ್ಕಿ, ಕಲ್ಲುಕ್ಕು ಮತ್ತು ಶೀರು ಇವೆಲ್ಲ ಸಿದ್ಧಪಡಿ ಗತಕ್ಕೊಂಡು ಅವರ ಬಾಯಿಯಿಂದ ಹಲ್ಲುಗಳನ್ನು ಉಜ್ಜಿದರೆ ಹಲ್ಲುಗಳು ಶುಭ್ರವಾಗುವವು

ಚೀನಾ ದೇಶಕ್ಕೆ ಸೇರಿದ ಚೂಹೋವಾ ಎಂಬ ಊರಿನಲ್ಲಿನ ಬೌದ್ಧರ ಸನ್ಯಾಸಿಗಳ ಮಠದಲ್ಲಿ ಸನ್ಯಾಸಿಗಳೆಲ್ಲರೂ ಗುಟ್ಟಿನಲ್ಲಿ ಕೆಲವು ಸ್ತ್ರೀಯರ ಸಹವಾಸಮಾಡಿಕೊಂಡು ಇದ್ದು ಈಗ ಆ ಮಠದ ಅನೇಕ ಆಭರಣಗಳನ್ನು ಚೋರತನಮಾಡಿದರೆಂದು ಎಲ್ಲರೂ ಬಂಧಿಸಲ್ಪಟ್ಟು ಲಾಕಪ್ಪಿನಲ್ಲಿ ಇಡಲ್ಪಟ್ಟಿದ್ದಾರೆ.

ವರ್ಮಂಟ್ರೀಶನಲ್ಲಿದ್ದ ವಿಲ್ಲಾ ಮೇರಿಯಾ ಎಂಬ ಕಟ್ಟಡಕ್ಕೆ ಬೆಂಕಿಬಿದ್ದು ಸುಟ್ಟುಹೋಯಿತು ಈ ಕಟ್ಟಡಕ್ಕೆ ೫೦ ಕೋಟಿ ರೂಪಾಯಿಗಳು ಖರ್ಚಾಗಿತ್ತು ಪ್ರಾಣನಷ್ಟವಾಗಲಿಲ್ಲ ಅದ್ದ್ರೆ ೫೦೦ ಸಹಸ್ರಮಂದಿ ವಿದ್ಯಾರ್ಥಿಗಳೂ ಸನ್ಯಾಸಿಗಳೂ ಇದ್ದರು ಹಾಗಿದ್ದರೆ ಆ ಕಟ್ಟಡವು ಎಷ್ಟು ದೊಡ್ಡದಾಗಿತ್ತೋ ವಾಚಕರೇ ಊಹಿಸಿಕೊಳ್ಳಬಹುದು

ಈ ಚಾವಡದಲ್ಲಿ ಮೂರು ಮಂದಿ ಕಾಬೂಲಿಗಳು ತಮಗೆ ಹಣಕೊಡಬೇಕಾಗಿದ್ದವನ ಮನೆಗೆ ಹೋಗಿ ಸಾಲ ಕೇಳಲು ಅವನಿಗೂ ಇವರಿಗೂ ಜಗಳವಾಯಿತು ಆ ಸಾಲ ಕೊಡಬೇಕಾಗಿದ್ದವನನ್ನು ಈ ಮೂವರು ಕಾಬೂಲಿ ಜನಗಳು ಹೊಡೆಯಲು ಅವನು ಪ್ರಾಣ ಬಿಟ್ಟನು ಈಗ ಕಾಬೂಲಿಗಳನ್ನು ಕರೆ ಹಿಡಿದು ಬಂಧಿಸಲ್ಪಟ್ಟಿದ್ದಾರೆ

ಅಲಿಪುರದ ಸಬಿಡಿವಿಷನಲ್ಲಿ ಒಬ್ಬ ಬ್ರಾಹ್ಮಣನು ೫ ವರುಷಗಳಕೆಳಗೆ ಒಬ್ಬ ಯುವ್ವನಸ್ಥನಿಗೆ ತನ್ನ ಮಗಳನ್ನು ಕೊಟ್ಟು ಮದುವೆ ಮಾಡಿದ್ದನು ಈಚೆಗೆ ಗಂಡನೂ ಮಗಳೂ ಕಲ್ಕತ್ತೆಯಲ್ಲಿ ವಾಸಮಾಡಲು ಆರಂಭಿಸಿ ಕೆಲವು ದಿನಗಳಕೆಳಗೆ ಅಲ್ಲಿನ ಒಬ್ಬ ಯುವ್ವನಸ್ಥನಿಂದ ೩೦ ರೂಪಾಯಿ ತೆಗೆದುಕೊಂಡು ತನ್ನ ಮಗಳನ್ನು ಅವನಿಗೆ ಕೊಟ್ಟು ಮದುವೆ ಮಾಡಿದನು ಈ ಸಮಾಚಾರ ತಿಳಿದು ಮೊದಲನೇ ಅಳಿಯನು ಬಂದು ತನ್ನ ಹೆಂಡತಿಯನ್ನು ಕರೆದುಕೊಂಡು ಹೋದನು ಈಗ ಎರಡನೇ ಅಳಿಯನು ಮಾವನ ಮೇಲೆ ಮ್ಯಾಜಿಸ್ಟ್ರೇಟು ಕೋರ್ಟಿನಲ್ಲಿ ದಾವಾ ಹಾಕಿರುತ್ತಾನೆ, ಮೊಕದ್ದಮೆ ಇನ್ನೂ ತೀರ್ಮಾನವಾಗಲಿಲ್ಲ

ಮೈಸೂರಲ್ಲಿ ಪ್ರಕಟಿಸಲ್ಪಡುತ್ತಿರುವ ವೃತ್ತಾಂತಪತ್ರಿಕೆಯೊಂಬದೊಂದು ಪತ್ರಿಕೆಯು ಪ್ರಾರಂಭದಿಂದ ನಡೆಸಲ್ಪಡುತ್ತಲಿದೆ ಈ ಪತ್ರಿಕೆಯಲ್ಲಿಸಾಧಾರಣ ಸ್ವತಂತ್ರ ಹಿಂದುಗಳ ದೇವರ, ಆಚರಣೆಗಳ ದೂಷಣೆಯ ಲೇಖನಗಳು ತಪ್ಪದೆ ಬರುತ್ತವೆ ಈ ಪತ್ರಕಾರರು ಕೇಳಿದವರಿಗೆಲ್ಲ ಸಮರ್ಪಕ ಉತ್ತರಗಳನ್ನು ಕೊಡದೆ ತಮ್ಮ ಹಟ ನಡೆಸುತ್ತಾರೆ ವಾರ್ತಾ ಪತ್ರಿಕೆಗಳ ಮೂಲಕ ಅವರ ವಿಷಯಗಳ ಖಂಡನೆ ಮಾಡಿದರೆ, ಅವರು ಇವರಿಗೆ ತಮ್ಮ ಸಂಚಿಕೆಗಳನ್ನೇ ಕಳಿಸುವದು ನಿಲ್ಲಿಸುತ್ತಾರೆ, ಮೈಸೂರು ದೇಶಾಭಿಮಾನಿಕರ್ತರು ಅವರ ಪತ್ರಿಕೆಯನ್ನೋದಬೇಕೆಂದು ಇಚ್ಛಿಸಿದ್ದರೆ, ಅವರ ಜವರ ಮಾತಬಿಡದ ದೂಷಣೆಗಳು ಏಕೆ. ನಮ್ಮ ಸೂಚನೆಯುಂಟು ಕ. ವೃ

ನ್ಯೂಕ್ಯಾಸಲಿಗೆ ಸೇರಿದ ಒಂದು ಹಳ್ಳಿಯಲ್ಲಿ ಗೃಹಸ್ಥನು ಮನೆಯಿಂದ ಹೊರಗೆ ಹೋಗಬೇಕಾದಾಗಲೆಲ್ಲ ತನ್ನ ಹೆಂಡತಿಯನ್ನು ಒಂದು ಕಬ್ಬಿಣದ ಪೆಟ್ಟಿಗೆಯಲ್ಲಿ ಹಾಕಿ ಬೀಗವನ್ನು ಹಾಕಿಕೊಂಡು ಹೋಗುತಿದ್ದನು ಈ ಸಂಗತಿ ಹ್ಯಾಗೋ ಪ್ರಕಟವಾಯಿತು ಸರ್ಕಾರದವರು ಅಕಸ್ಮಾತ್ತಾಗಿ ಮನೆಯನ್ನು ನುಗ್ಗಿ ಅವನ ಹೆಂಡತಿಯನ್ನು ಮನೆಯ ಎಲ್ಲಾ ಭಾಗಗಳಲ್ಲಿಯೂ ಹುಡುಕಿಬಿಟ್ಟರು ಕೊನೆಗೆ ಎಲ್ಲೂ ಸಿಕ್ಕದೆ ಹೋದಳು ಆಗ ಬಹಳಹೊತ್ತು ಯೋಚನೆಮಾಡಿ ಆತನ ಮನೆಯಲ್ಲಿ ಹುಡುಕಿದರೂ ಅದರಲ್ಲಿ ಒಂದು ಬೀಗವಕ್ಕೆಯು ಸಿಕ್ಕಿತು ಅದನ್ನು ತೆಗೆದುಕೆ ನೋಡು ಅವನ ಪೆಟ್ಟಿಗೆಯನ್ನು ಹುಡುಕಿ, ಪೆಟ್ಟಿಗೆ ಬೀಗಳು ತೆರದಾಗ ಒಳಗಿದ್ದ ಆವನ ಹೆಂಡತಿ ಈಚೆಗೆ ಬಂದು ತನ್ನನ್ನು ಗಂಡನು ಹೀಗೆಯೇ ಯಾವಾಗಲೂ ಪೆಟ್ಟಿಗೆಯಲ್ಲಿ ಹಾಕಿ ಬೀಗಹಾಕಿಕೊಂಡು ಹೋಗುತ್ತಾನೆ, ತನಗೆ ಉಸುರು ಬಿಡುವದೇ ಬಹಳ ಪ್ರಯಾಸವಾಗುತ್ತ ಎಂದು ದಾನಿ ಹೇಳಿದಳು, ಆ ಮನುಷ್ಯನನ್ನು ಸರ್ಕಾರದವರು ಹಿಡಿದು ಶಿಕ್ಷೆಹೊಂದುವದಕ್ಕೆ ಗುರಿಮಾಡಿದರೆ —ವೃ. ಪ.

ಇಂಗ್ಲಂಡಿನಲ್ಲಿ ಬೇರೆಬೇರೆ ಕೆಲಸ ಮಾಡತಕ್ಕ ಸ್ತ್ರೀಯರ ಸಂಖ್ಯೆ

| | |
|---|---|
| ೫೪೮ | ಸ್ತ್ರೀಯರು ಕಲ್ಲುಗಳಲ್ಲಿ ಚಿತ್ರವನ್ನು ತೆಗೆಯುವ ಕೆಲಸ ಮಾಡುತ್ತಾರೆ |
| ೧೯೪೦ | ಸ್ತ್ರೀಯರು ಚಿತ್ರಗಳಿಗೆ ಬಣ್ಣ ಕೊಡುತ್ತಾರೆ. |
| ೪೭೦೦ | ಸ್ತ್ರೀಯರು ವೈದ್ಯ, ಶಸ್ತ್ರಚಿಕಿತ್ಸೆ, ಸೂಲಗಿತ್ತಿ ತನವನ್ನು ನಡಸುತ್ತಾರೆ. |
| ೨೪೦೦ | ಸ್ತ್ರೀಯರು ಛಾಪಖಾನೆಗಳಲ್ಲಿ ಜಾತಿ ಜೋಡಿಸುವ ಕೆಲಸ ಮಾಡುತ್ತಾರೆ |
| ೪೫೦೦ | ಸ್ತ್ರೀಯರು ಛಾಪಖಾನೆಗಳಲ್ಲಿ ಮೊಳೆ ಜೋಡಿಸುತ್ತಾರೆ |
| ೧೦೪೯೦ | ಸ್ತ್ರೀಯರು ಪುಸ್ತಕಗಳ ಬಯಿಂಡಿಂಗ್ ಮಾಡುತ್ತಾರೆ |
| ೯೧೪೯ | ಸ್ತ್ರೀಯರು ಲಾಳ ಕಟ್ಟುತ್ತಾರೆ. |
| ೧೫೨೦ | ಸ್ತ್ರೀಯರು ಫೋಟೋಗ್ರಾಫ್ ತೆಗೆಯುತ್ತಾರೆ. |
| ೨೪೯೯೧ | ಸ್ತ್ರೀಯರು ಪಾಠಶಾಲೆಯಲ್ಲಿ ಶಿಕ್ಷಕರಾಗಿರುತ್ತಾರೆ |
| ೨೨೫೦ | ಸ್ತ್ರೀಯರು ದಿವಾಣಿ ಖಾತೆಯಲ್ಲಿ ಗುಮಾಸ್ತರಾಗಿರುತ್ತಾರೆ |

ಮುಸಲ್ಮಾನರ ಬಕ್ರೀದ್ ದಿವಸ ಎಷ್ಟು ಆಕಳುಗಳು ವಧೆಯಾಗುತ್ತವೆಂಬದರ ಗಣನೆಯೇ ಹತ್ತುವದಿಲ್ಲ ಆದಿನ ಇವರು ಗಟ್ಟಿಯಾಗಿದ್ದರೇನು ? ಗಟ್ಟಿ ಇಲ್ಲದಿದ್ದರೇನು ? ಸಾರಾ ಸಕಟ ಕೈಗೆ ಬಂದವುಗಳಂ ಛೇದಿಸುತ್ತಾರೆ ಹೀಗೆ ಕಳೆದ ಈ ದಿವಸ ತಲಪಿಗೆ ಯಲ್ಲಿ ಒಂದು ಗಬ್ಬವಿದ್ದ ಆಕಳ ವಧೆ ನಡೆಸಿದಾಗ್ಯೆ ಅದರ ಉದರದಿಂದ ನಾಲ್ಕು ಕಣ್ಣುಗಳೂ, ನಾಲ್ಕು ಕಿವಿಗಳೂ, ಎರಡು ತಲೆಗಳೂ ಇದ್ದ ಒಂದು ಕರುವು ಹೊರಬಿದ್ದದ್ದು ಕಂಡೆನೆಂದು ಗುಲಬರ್ಗಾ ಸಮಾಚಾರಕರ್ತರು ಬರೆಯುತ್ತಾರೆ ಜನರು ಮಹಮ್ಮದನ ಹೇಳಿಕೆಯು ಪ್ರಕಾರ ಸರ್ವ ಶಕ್ತನಾದ ಪರಮೇಶ್ವರನು ಒಬ್ಬನೇ ಎರಡನೇ ವನೆಯು ಇಲ್ಲವೆಂಬುವ, ಅನೇಕ ರೂಪಗಳ ಪೂಜಿಸುವದು ತಪ್ಪೆನುವವರಾದ ಅಲ್ಲಿನ ಭಕ್ತರಾದ ಮುಸಲ್ಮಾನರು ಜನರ ಈ ತಪ್ಪು ತಿಳುವಳಿಕೆಯು ಬಿಡಾದ ವಿಚಾರವಾದಕ್ಕಾಗಿ ಗ ಮೂರ್ತಿಯು ಪ್ರಕಟವೆಂದು ಪ್ರದರ್ಶಿಸಲ್ಪಡುತ್ತಿರುವದರಿಂದ ಅದರ ವಧೆಮಾಡಿದರೆ, ಅದು ತಾನುವೇದಾಗಿದ್ದರೆ ಪುನರ್ಜನ್ಮ ವ ಹೊಂದಬೇಕು ಹೀಗಾಗುವದಿಲ್ಲವೆಂದರೆ ನಾವು ಗೋವಧೆ ಮಾಡುತ್ತೇವೆಂದು ಹೇಳುತ್ತಾರೆ ಅವರ ದೇವರು ಗಾಯಿತ್ರಿಯಲ್ಲಿ ತಾನುವಾಸ್ತವ್ಯವ ಗಿರುತ್ತೇನೆಂದು ಜನರಿಗೆ ಗೋ ಮುಸಲ್ಮಾನರಾಗಿ ಹಿಂದುಗಳನ್ನು ಆಗಾದ ಮಾಡುವುದನ್ನು ತೋರಿಸಿದನೋ ? ಅದರ ಮೂರ್ತಿಯು ವಧೆಗೆ ಮುಟ್ಟಿ ತನ್ನ ದರ್ಶನವನ್ನು ಅನ್ಯರ ಇಚ್ಛೆಯ ಕೊಟ್ಟಿರುವನೋ ? ತಿಳಿಯದು

## EXTRACTS

ವೃತ್ತಾಂತ ಪತ್ರಿಕಾ ಕಾರರ
ಅಜ್ಞಾನಾಂಧಕಾರ ಪ್ರದರ್ಶನ
(ಹಿ ಕಾಭಿಸ ೨)

ಇವರು ಯಾವಾಗಲೂ ಹಿಂದೂಮತವನ್ನು ದೂಷಿಸುತ್ತಿರುವುದೂ, ಆ ಪತ್ರಿಕೆಯನ್ನು ನಮ್ಮ ಓದುಗರೂ ಮುತವ ವಿಚಾರವನ್ನು ತಿಳಿದವರು ಓದಿ ಭ್ರಾಂತರಾಗುವುದರಿಂ ಇದನ್ನು ನೋಡಿ ಬಹಳ ನಾಚಿಕೆ, ದುಃಖ ಅನುಭವವನ್ನು ತಿಳಿಸಿ ಕೊಳ್ಳಿರೆಂದು ಕೇಳಿಸಿದೆವು

ಮತವೆಂದರೆ ಅಭಿಪ್ರಾಯ, ಕ್ರಿಸ್ತಮತವೆಂದರೆ ಕ್ರಿಸ್ತನ ಅಭಿಪ್ರಾಯ, ಹಿಂದೂ ಮತವೆಂದರೆ ಹಿಂದೂಜನರ ಅಭಿಪ್ರಾಯ, ಒಬ್ಬರ ಮತವನ್ನನುಸರಿಸದಿದ್ದರೆ ತನ್ನ ಮತವನ್ನೇಳಿಸಿಕೊಳ್ಳುವರು ಹಿಂದುಮತದಲ್ಲಿ ಅನೇಕಪ್ರಭೇದಗಳುಂಟು, ಉದರ ಅವಿರತ್ರಾಯಗಳನ್ನನುಸರಿಸಿ, ಒದರದವ ವದರೆಂದು ವ್ಯವಹಾರದಲ್ಲಿವೆ ಆದರೆ ಜನರ ಮತಕ್ಕನುಸಾರವಾಗಿ ಬೌದ್ಧ, ಜೈನಾಚಾರಗಳುಂಟು ಕ್ರಿಸ್ತರು ತಮ್ಮ ಮತದ ಗರ್ವದಿಂದ ಸ್ವ ಶೋಭಿಸುವದನ್ನು ತಿಳಿಸಿಗೆ ಬೋಧಿಸಬೇಕೆಂದರೆ ಇತರ ಮತದಲ್ಲಿ ಇಲ್ಲದ ಸತ್ಯೋಪದೇಶವಾದ ಗುಣಗಳನ್ನು ಉದ್ಘರಿಸಿ ವಾದಿಸು ಶಿಕ್ಷೆಯ ಪ್ರದರ್ಶ ಲಕ್ಷಣವನ್ನಿಸಿಕೊಳ್ಳಬೇಕು ಸ್ವಮತವಿಚಾರವನ್ನೇ ಬಿನ್ನಾಗಿ ತಿಳಿದ ಕೊಳ್ಳದೆ ಜಾಹೀರಾತುಮಾಡಿ ಮೊದಲ್ಲೇ ಪರಿಪೂರ್ಣತೆ ಅನ್ಯರಮತದೊಳಗಿನ ಗುಣಗಳನ್ನೆಲ್ಲಾ ಬಿಟ್ಟು, ದೋಷಗಳನ್ನು ಆರಿಸಿಕೊಂಡು ಎಲ್ಲಾ ಲೋಪಗಳನ್ನು ಇಟ್ಟು, ಕೆಸರನ್ನೆರಚುವದಕ್ಕೆ ಆದಿಸ ವಿಷ ಪ್ರಿಯನ್ಯಾಯವಾಗಿ ಮನಸ್ವೀ ಪ್ರಪಂಚದ ಮಾತ್ರಕ್ಕೆ ಸ್ವಮತ ಪ್ರಚಾರ ಪ್ರಯೋಜನವಾಗುತ್ತದೆ ? ಹಿಂದೂಗಳು ವಿಭೂತಿ ನಾಮ, ವಿಭೂತಿ, ಅಂಗಾರ, ಅಕ್ಷತೆ, ಗಂಧ, ಕುಂಕುಮ ವಿಲೇಪಗಳನ್ನು ಇಟ್ಟುಕೊಳ್ಳುತ್ತಾರೆಂದು ಪತ್ರಿಕಾಕಾರರು ಎಷ್ಟು ಅಪಹಾಸ್ಯ ಮಾಡುತ್ತಾರೆ ಕೇಳುತ್ತಾರೆ ಕ್ರೈಸ್ತರಲ್ಲಿಯೂ ಈಹ ಈ ಮೂರ್ಖ ತಿಲಕದ ಹಾಗೆ ಸ್ಪರ್ಶವೇ ಪ್ರಾಯವು ಸತ್ಯದ ಮರ ಲಕ್ಷಣವಿಲ್ಲದಿಂದ ಮ್ಮ ಹಿಂದೂ ಜನರು ಅವರವರ ಮತಗಳನ್ನು ಅವರವರ ಮನಸ್ಸಿನಂತೆ ತೋರ್ಪಡಿಸುತ್ತಾರೆ ಕ್ರೈಸ್ತರು ಲಾಭಕ್ಕೋಸ್ಕರವಾಗಿ ಪವರವೇಶದ ಕಟ್ಟುವದರಿಂದ ನೋಡಿದವರಿಗೆ ಇಂತಾ ಮೂರ್ಖ ತಿಳಿದಿದವರೊಬ್ಬರು ತೀರ ನೃತ್ಯ ಸಿಕೊಳ್ಳುತ್ತಾರೆ ಕ್ರಿಸ್ಚಿಯನ್ನರು ಇಂಥಾ ವಿವಾದ ಮಾಡುವವರೂ ಇಲ್ಲವೆ, ಅವರವರ್ಗ ಇಲ್ಲರುವರು. ನೋಡಿದರೆ, ಇವರಿಗೆ ಮತಾನುಷ್ಠಾನ ಮಾಡುವವರಲ್ಲಿ ಇವರ್ಕ್ಕಾ ಬಂದ ಕತೆ ಸಿಟ್ಟುವಂದು ಹೇಳಬೇಕಾಗಿದೆ ಇವರು ಕಬ್ಬೆಲುಬಿನ ಲಿಂಗವನ್ನೂ, ಮತ್ತ ಕೇಶವಿಂದವನ್ನಿಲ್ಲದವರ ಗೊತ್ತು, ಇರುವದರಿಂದ ಸಾರ್ತಿಕರವರಿಗೆ ಮ್ಲೇಚ್ಛರೆಂಬ ಹೀನತೆಯು ಕೊಡುತ್ತದೆ, ಆದರೆ, ದೊಡ್ಡ ಪಿಶಾಚಿಯರುವವರಿಂದ ಹ್ಯಾಗೋ ಎಂಬ ಭ್ರಾಂತಿಯೂ ಹುಟ್ಟುತ್ತದೆ, ಇವರ ದೇವರಾದ ಕ್ರಿಸ್ತನು ಕಾಪ್ರಿನ ಮೇಲೆ ಶಿಲುಬೆಹಾಕಿದದಾದಕಾರಣ ಇವರಿಗೆ ಕ್ರಾಸ್ ಎಂಬುವದು ಹೆಗ್ಗುರುತಾಯಿತು. ನ್ಯಾಯವಾಗಿ ಮ ಖನ ಪ್ರೀತಿ ಅದನ್ನು ಕಾಪಾಡುವುದರಿಂದಲೆ ಮುಖ್ಯಾವತಾ ಪುಕ್ಕಿಸ್ಟಿಯನ್ನರ ಬಾವದನ್ನು ಅನ್ಯರಿಗೆ ತೋರ್ಪಡಿಸಿ ಕೊಡಬೇಕು, ಅದನ್ನು ಇವರು ಮಾಡದಿರುವದರಿಂದ, ಹಿಂದೂಜನರ ವಿಷಯದಲ್ಲಿ ಆರೋಪಿಸತಕ್ಕಂಥ ಕೃತಜ್ಞತೆಯನ್ನು ನೋಡಿ ಆನಂದಿಸುವಾಗ ಕ್ರಿಶ್ಚಿಯನ್ ಜನರಲ್ಲಿರುವ ಕೃತಘ್ನತೆಯನ್ನು ನೋಡಿ, ಪಶ್ಚಾತ್ತಾಪ ಪಡಬೇಕಾಗಿದೆ

ನ್ಯಾಯವಾಗಿ ತಾವು ಕೊರಳಲ್ಲಿ ಹಾಕಬೇಕಾದ ಕ್ರಾಸ್ ಹಾಕನ್ನು ಬಿಟ್ಟು ನಡೆಸುವ ತಮ್ಮ ತಪ್ಪನ್ನು ತಾವು ಸರಿಮಾಡಿಕೊಳ್ಳದೆ, ಕೃತಜ್ಞತೆಸೂಚಕ ಸ್ವಮತಪ್ರದರ್ಶನಾರ್ಥವಾಗಿ ಮುಖದಲ್ಲಿ ವಿಭೂತ್ಯಾದ ಚಿಹ್ನೆಯಂಥ ದಿರುವ ಹಿಂದೂ ಜನರಂ ದೂಷಿಸುವ ವೃತ್ತಾಂತ ಪತ್ರಿಕಾಕಾರರ ಅಜ್ಞಾನಾಂಧಕಾರವು ಯಾವಾಗಲಾದರೂ ನಿವೃತ್ತಿಸುವದೋ ತಿಳಿಯಬೇಕಾಗಿದೆ

## ಸರ್ಕಾರದ ನೌಕರಿಗಳು.

ಸರ್ಕಾರದ ಇಲಾಖೆಗಳ್ಗಿ ಸಾಧಾರಣ ಎಲ್ಲಾ ಇಲಾಖೆಗಳ್ಲಿಯೂ ವಿದ್ಯಾವಂತರಾದವರಿಗೆ ಬಡತಿಗೆ ಬರುವದಕ್ಕೆ ಅವಕಾಶವಿರುವದು ರೆವಿನ್ಯೂ ಇಲಾಖೆಗಳಲ್ಲಿರತಕ್ಕ ಹಾಗೆ ಸಾಮಾನ್ಯವಾದ ಗುಮಾಸ್ತೆ ಕೆಲಸದ ಡೆಪ್ಯುಟಿಕಮಿಷನರ ಕೆಲಸದ ವರೆಗೂ ಯೋಗ್ಯತಾನುಸಾರವಾಗಿ ವೃದ್ಧಿಗೆ ಬರುವದಕ್ಕೆ ಅವಕಾಶವಿರುವದು ಜುಡಿಷಿಯಲ್, ಪೋಲೀಸ್ ಪೋಸ್ಟ್, ಸರ್ವೆ ಮೊದಲಾದ ಇಲಾಖೆಗಳಲ್ಲಿಯೂ ಕೆಳಗಿನ ಕ್ರಮಕ ಮಹಾ ಒಡತಿಯಾಗುವದಕ್ಕೆ ತಪ್ಪದವಿರುವದು. ಈ ಇಲಾಖೆಗಳಲ್ಲಿರತಕ್ಕವರು ಕಾಲಕ್ರಮದಲ್ಲಿ ಭಾರಿ ಉದ್ಯೋಗಗಳಿಗೆ ಬಂದು ದೊಡ್ಡ ಸಂಬಳಗಳನ್ನೂ ಹೊಂದುವರು ಮೆಡಿಕಲ್ ಮತ್ತು ವಿದ್ಯಾ, ಇಂಜಿನೀರು ಈ ಇಲಾಖೆಗಳಲ್ಲೂ ಸ್ತ್ರೀಸ್ತಕ್ಕೆ ಭಾರಿ ಪರಿಕ್ಷೆಗಳನ್ನು ಕೊಟ್ಟವರಿಗೆ ಸುಮಾರಾಗಿರುವದು ವಿದ್ಯಾಭ್ಯಾಸದ ಇಲಾಖೆಯಲ್ಲಾದರೋ ಯೋಗ್ಯತೆಯುಳ್ಳವರು ಕೂಡ ಮುಂದಕ್ಕೆ ಬರುವದಕ್ಕೆ ಅವಕಾಶವು ಅಲ್ಪವಾಗಿರುವದು ದೇಶಭಾಷಾ ವಿದ್ಯಾಭ್ಯಾಸಮಾಡತಕ್ಕವರಿಗೆ ಪ್ರೋತ್ಸಾಹವು ಸುತರಾಂ ಇಲ್ಲದೆ ಇರುತ್ತೆ ಹೋಬಳಿ ಸ್ಕೂಲುಮಾಸ್ತರು ಅವರ ಕೆಲಸಗಳಲ್ಲಿದ್ದು ಮುದುಕರಾಗಿ, ೧೨ ರೂಪಾಯಿಗಳ ಮೇಲ್ಪಟ್ಟ ಸಂಬಳದಿಂದ ಒಡೆದು ಪೂರ್ತಿಯನ್ನು ಮಾಡಿಕೊಳ್ಳುವರಿಗೆ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕ ಸ್ಕೂಲ್ಮಾಸ್ತರು ೫೦ ರೂಪಾಯಿಗಳ ಮೇಲೆ ಸಂಬಳ ರುವದಕ್ಕೆ ಅವಕಾಶವಿಲ್ಲ ಇವರ ಅಸಿಸ್ಟೆಂಟ್ ಮಾಸ್ಟರು ೧೨ ರೂಪಾಯಿ ಬಳಿಕ ಒಳಗಾಗಿ ಇಂಗ್ಲಿಷಿನಲ್ಲಿ ಬಿ ಎ ಎಂ ಎ ಪರೀಕ್ಷೆಗಳನ್ನು ಕೊಟ್ಟು ಕಾಲೇಜ್ ಅಸಿಸ್ಟೆಂಟ್ ಮಾಸ್ಟರಾಗಿ ಸೇರತಕ್ಕವರಲ್ಲ ಅಲ್ಪವಾದ ಬಾ ಡಿಸ್ಟ್ರಿಕ್ಟಿನವರು ಅಲ್ಲಿಯವರು ಇದ್ದರೆ ಇವರ ಎಲ್ ಮಿಸ್ಟ್ರೆಸ್ ನಡಸಿದವರು ನಿರ್ದಿಷ್ಟ ಇಲಾಖೆಗಳನ್ನು ಸೇರಿ ಇವರಿಗಿಂತ ಕಿರಿಯರು ಜಾಸ್ತಿಯಾದ ಸಂಬಳವನ್ನು ಪಡೆಯುತ್ತಲಿದರೆ ಇಲಾಖೆಗಳ ಉತ್ತಮ ಸ್ಥಿತಿಗೆ ಬರಬೇಕಾದರೆ ಪ್ರೋತ್ಸಾಹವು ಎಲ್ಲಾ ಕಡೆಗಳಲ್ಲೂ ಸಮನಾಗಿರಬೇಕು. ಅಧಿಕಾರಿಗಳ ನಿಯಮಿಸೂತ್ತರಂತರವಾಗಿರಬೇಕಾದರೆ ಬಹಳ ದೂರವಿರುವ ನೌಕರರಿಗೆ ಕೂಡ ತಮ್ಮ ಇಲಾಖೆಗಳಲ್ಲಿ ಎಲ್ಲಾ ಕೆಲಸಗಳ ದೊಡ್ಡಪದವಿಗೆ ನಿಯುಕ್ತನಿಸಿದ ಮೇಲೆ ತನ್ನ ಮಾಡ ಕ್ರಮವಾಗಿ ರುವಬಗ್ಗೆ ಅವಕಾಶವಿರಬೇಕು ಈಗ ಅಂಥಾ ಅವಕಾಶವು ಆ ಇಲಾಖೆಗಳಲ್ಲಿ ಇಲ್ಲವಿಲ್ಲ ವಿದ್ಯಾಭ್ಯಾಸವನ್ನು ಹೊಂದಿದವರಿಗೂ ನ್ಯಾಯವಾಗಿ ಸರಿಯಾದದ್ದು ದೊರೆಯುವದಕ್ಕೆ ಸಾಧನೆಗಳಿಲ್ಲ ಸಿಫಾರ್ಸು ಸಮಸ್ತ ಇಲಾಖೆಗಳಲ್ಲಿ ಮುಖ್ಯಸಾಧನವಾಗಿ ಪರಿಣಮಿಸಿದೆ ಅದ್ದರಿಂದ ದೊಡ್ಡವರ ಅನುಕರಣೆಯೂ ಅವರ ಪ್ರಸನ್ನತೆಗೋಸ್ಕರ ಮಾಡಬೇಕಾದ ಕೆಲಸ ಮಾಡೋ ಣವು, ಇವೆರಡನ್ನೂ ಜನರು ಅವಲಂಬಿಸ ಬೇಕಾಗಿದೆ ಇದರಿಂದ ಸತ್ಯ, ಸ್ವಾತಂತ್ರ್ಯ, ನ್ಯಾಯ ಪ್ರಮಾಣಿಕತೆ ಇವುಗಳಿಂದ ಮುಂದಕ್ಕೆ ಬರುತಕ್ಕಂಥಾದ್ದು ಎರಡನೇದಾಗಿದೆ ವಿದ್ಯಾಭ್ಯಾಸದ ಇಲಾಖೆಯಲ್ಲಿ ವೃದ್ಧಿ ಹೊಂದುವದಕ್ಕೆ ಅವಕಾಶವಿಲ್ಲದೆ ಇರುವದರಿಂದ ಇಲ್ಲಿ ಗ್ರಹಿಸತಕ್ಕವರು ಜನರು ಅಪೇಕ್ಷಿಸುವದಿಲ್ಲ ಅದ್ದರಿಂದ ಈ ಇಲಾಖೆಯಲ್ಲಿ ನಿಪುಣತ್ವ ಕಡಿಮೆಯಾಗುತ್ತಾ ಬರುತ್ತಲಿದೆ, ಸರ್ಕಾರದವರು ಈ ವಿಷಯವನ್ನು ಪರ್ಯಾಲೋಚಿಸಿ ಕ್ರಮವಾದ ಪರೀಕ್ಷೆಗಳನ್ನು ಏರ್ಪಡಿಸಿ, ಅಪೇಕ್ಷಿತವುಳ್ಳ ದೇಶಭಾಷೆ ಯಾದವರನ್ನು ಅವರವರ ಯೋಗ್ಯತೆ ಮತ್ತು ಸರ್ವಿಸ್ ಮೊದಲಾದವುಗಳನ್ನು ಆಧಾರವಾಗಿಟ್ಟು ಒಡೆಯನ್ನು ಕೊಡುವದ ಒಳ್ಳೆಯ ತಪ್ಪಿ ಏರ್ಪಾಡನ್ನು ಮಾಡಬೇಕಾದದ್ದು ನ್ಯಾಯವಾಗಿದೆ ಎಲ್ಲಾ ಇಲಾಖೆಗಳಲ್ಲಿ ಕಟ್ಟಕಡೆ ಅವರಿಗೆ ನೋಟಿ ಇರುವದರಿಂದ ಗೆ ಅವರ ಅನುಭವ ಪ್ರಮಾಣಿಕತೆ, ಕಾರ್ಯನಿರ್ವಹಣಶಕ್ತಿ ಮೊದಲಾದ ಗುಣಗಳ ಅನ ರೂಪವಾಗಿ ಒಡೆಯನ್ನು ಕೊಡುತ್ತಾ ಬರಬೇಕಲ್ಲದೆ ಮೇಲ್ಪಟ್ಟ ಕೆಲಸಗಳು ಖಾಲಿಯಾದಲ್ಲಿ ಅದನ್ನು ಕೂಡ ಕೊಡುತ್ತಾ ಬರಬೇಕು ಈಗ ಬೇರೆ ಇಲಾಖೆಗಳ ಮೊಟ್ಟಮೊದಲು ಪ್ರವೇಶಿಸದವರನ್ನು ಭಾಗವಹಿಸದವರನ್ನೂ, ಇಲಾಖೆಯ ಕೆಳಗಿನ ನೌಕರಿಗೆ ಏರತಕ್ಕ ಅಂಕಗಳಲ್ಲಿ ಒಂದು ತಾಂತ್ರಿಕ್ಞಾನವೂ ಇಲ್ಲದವ ರಾಗಿರುವ, ಅವರ ಮೇಲಿನವರ ದ ದಾಪು ಮಾತ್ರ ಕಾರ್ಯ ನಿರ್ವಾಹಕರೆಂದು ಹೆಸರುವಾಸಿಯನ್ನು ಪಡೆದುಕೊಳ್ಳತಕ್ಕವರಾಗಿಯೂ ಇದ್ದ ಹೊತ್ತಾರೆ ಇದು ಸರ್ಕಾರಕ್ಕೆ ಬಹಳ ಅವಮಾನಕರವಾಗಿಯೂ ನಷ್ಟಕರವಾಗಿಯೂ ಇರುವದು ಹೀಗೆ ಯೇನೂ ತಿಳಿಯದವರನ್ನು ಇಲಾಖೆಯ ಮೇಲ್ಪಟ್ಟ ನೌಕರರನ್ನಾಗಿ ಕೊಡುವದರಿಂದ ಅನುಭವಶಾಲಿಗಳು ಲೆಖುರಿ ಪಟ್ಟಿಗಳಲ್ಲಿ ಎಳೆದ ಹಾಗೆ ಆಗುತ್ತದೆ ಈ ವಿಷಯವನ್ನು ಪರ್ಯಾಲೋಚಿಸಿನೋಡಿ ನ್ಯಾಯ ಪ್ರಕ್ರಿಯೆಗಳನ್ನು ಸರಿಪಡಿ, ನಮ್ಮ ಸರ್ಕಾರದವರು ಮೆಹರ್ಬಾನ್ ಮಾಡತಕ್ಕವರ ಕೃತಜ್ಞತೆಗೆ ಪಾತ್ರರಾಗುವರೆಂದು ನಂಬಿದ್ದೇವೆ.—ವೃ ಚಿ.

Bangalore —Printed and published at the Karnataka Press, No. 40, Hospital Road, City— 1893

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning.**

ಪ್ರಾಮಾಣಿವಿವಿಧಪ್ರವೃತ್ತ್ಯುಪಗಮಾರ್ಹ ಕರ್ಣಾಟಕಪ್ರಕಾಶನಪರಾಭಿಧಾ ಪ್ರಥಿತಸಾಹಿತೀಶೋಭಿತಾ ॥ ಮೃಗಾಂಕಹಿತವಾಸರೇ ನಿಹಿತಮುದ್ರಣಾ ಸಜ್ಜನೈರ್ದ್ಧಿನಾಸು ಪರಿಪೋಷಿತಾ ವಿಶತಿವರ್ಷ ಸಂಸುಮುದೇ ॥

Vol. XX ] BANGALORE—MONDAY, JULY 24, 1893 [No 29

ಸಂಪುಟ ೨೦.] ಬೆಂಗಳೂರು:—ಸನ್ ೧೮೯೩ನೇ ಇಸವಿ ಜುಲೈ ೨೪ನೇ ತಾರೀಖ್ ಸೋಮವಾರ. [ಸಂಚಿಕೆ ೨೯.


## ಕರ್ಣಾಟಕ ಪ್ರಕಾಶಿಕಾ.

### ಪತ್ರಿಕೆಯ ಚಂದಾ ದರಗಳು.

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

| | ಸ್ಥಳದವರಿಗೆ. | ಪರಸ್ಥಳದವರಿಗೆ. |
|---|---|---|
| ವರ್ಷಕ್ಕೆ .. | 6—0—0 | 8—0—0 |
| 6 ತಿಂಗಳಿಗೆ . | 3—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

| | ಸ್ಥಳದವರಿಗೆ. | ಪರಸ್ಥಳದವರಿಗೆ. |
|---|---|---|
| ವರ್ಷಕ್ಕೆ ... | 3—0—0 | 4—0—0 |
| 6 ತಿಂಗಳಿಗೆ . .. | 1—12—0 | 2—8—0 |

ಈ ಪತ್ರಿಕೆಗೆ ದಯಮಾಡಿ ಮಾಡಿದ ತಾರೀಖ್ ಮೊದಲು ಒಂದು ತಿಂಗಳೊಳಗಾಗಿ ಚಂದಾ ಕೊಡಬೇಕು. ಕಳುಹಿಸುವವರಿಗೆ ಮಾತ್ರವೇ ಅಡ್ವಾನ್ಸ್ ರೇಟಿನಂತೆ ಪತ್ರಿಕೆ ಕಳುಹಿಸಲ್ಪಡುವದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. ಮೂರು ತಿಂಗಳಿಗಿಂತ ಕಡಿಮೆಯಾಗಿ ಚಂದಾ ತೊಕಬಲು ಅಂಗೀಕರಿಸಲ್ಪಡಲಾರದು.

### ಪ್ರಕಟನೆಯ ವಿಚಾರ.

| | |
|---|---|
| ಮೊದಲನೆಯದರ್ಥಾ ಪಙ್ಕ್ತಿ ಒಂದಕ್ಕೆ | ೦—೨—೦ |
| ಎರಡನೆಯದರ್ಥಾ ಪಙ್ಕ್ತಿ ಒಂದಕ್ಕೆ | ೦—೧—೦ |

ಪರಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟು ಕಾಲದ ಟೈಮಿನ್ ಮಾತಿದಾನ್ನು ಪಙ್ಕ್ತಿ ಒಂದಕ್ಕೆ ೧ ಆಣೆಯಂತೆ ರೇಟ್ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಯಾವ ಮಾನಮುಮೆಗೂ ಪ್ರಕಟನೆಗಳು ಕಳುಹಿಸುವವರು ಅವು ಎಷ್ಟು ವರ್ಷ ಟೈಮಿನ್ ಮಾಡತಕ್ಕದ್ದೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಂದರಿಷ್ಟಕ್ಕೆ ಅವರು ನಮಗೆ ತಿಳಿಸುವಂತೆ ಬರೆಯುವವರೆಗೆ ಅವು ಪ್ರಕಟಿಸುತಲಿದ್ದು ಹಾಗೆ ಎಷ್ಟು ವರ್ಷ ಪ್ರಕಟಿಸಲ್ಪಟ್ಟಿದ್ದವೋ ಮೇಲ್ಕಂಡ ದರದಂತೆ ಬಿಲ್ ಮಾಡಲ್ಪಡುವವು. ಪ್ರಕಟನೆ ಸಂಬಂಧ ಕಳುಹಿಸಲ್ಪಡುವದಕ್ಕೆ ಪ್ರಕಟನೆಗಳನ್ನು ಆ ವಾರ ಸೋಮವಾರದ ಮುಂಚೆ ೨ ಘಂಟೆಯೊಳಗಾಗಿ ತಲುಪುವಂತೆ ಪ್ರಕಾಶಕನಿಗೆ ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳಿಗೆ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಲಾರೆವು. ಕ್ರಮವಾಗಿ ರುಜುವಾತಿ ದಸ್ತೂರ್ಪು ಯಾವ ಕಾಗದವನ್ನೂ ಪ್ರಕಟಿಸಲಾರೆವು. ನಿರ ಕ ರಿಸಲ್ಪಟ್ಟ ಕಾಗದಗಳು ಹಿಂತಿರುಗಿ ಕಳುಹಿಸಲ್ಪಡಲಾರವು.


*ADVERTISEMENTS*

**NOTICE.**

VAIDYASARA SANGRAHA

A TREATISE ON THE PRINCIPLES OF

HINDU MEDICINE.

*Price including Postage Rs 5 0 0*

ವೈದ್ಯಸಾರ ಸಂಗ್ರಹ.

ಈ ಗ್ರಂಥಾಪೇಕ್ಷಿಸುವವರು ಮೊಬಲಗಿನ ಸಹಿತ ಈ ಕೆಳಗೆ ರುಜು ಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಬೆಲೆ ಕೊಡಲ್ಪಡಲಾರದು.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೇ ಹಾಸಲ್,

ರೆಜಿಸ್ಟರ್ ಪ್ರತಿ ಒಂದಕ್ಕೆ ರೂ 5—0—0

ಟಿ. ಬಿ. ವೆಂಕಟಾಚಾರ್,

ಬೆಂಗಳೂರ್, ಮಹಾಲಕ್ಷ್ಮಿ ರೋಡ್ ಕ್ಸ್ ನೆಂಬರ್.

## ನೋಟೀಸ್.

### ಬೆಂಗಳೂರು ಕರ್ಣಾಟಕ ಪ್ರೆಸ್.

೧೮೭೪ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟಿದ್ದು.

ಇದರಲ್ಲಿ, ಸಕಲವಿಧ ಕೆಲಸಗಳು ಸುಲಭಬಾಜಿಗೆ ತೀವ್ರವಾಗಿಯೂ ಶ್ಲಾಘ್ಯವಾಗಿಯೂ, ಮಾಡಲ್ಪಡುವವು.

ಇದರಲ್ಲಿ ಸದ್ಯಃ ಇಂಗ್ಲಿಷ್ ಕನ್ನಡ ಕೆಲಸ ಮಾತ್ರವೇ ನಡೆಯುತ್ತಿದೆ. ಇತರ ಭಾಷೆಗಳನ್ನು ಸದರೀ ಕಾರ್ಖಾನೆಯ ಪ್ರೊಪ್ರೈಟರಿಗೆ ಬರೆದು ತಿಳಿದುಕೊಳ್ಳಬಹುದು.



## ನೋಟೀಸ್.

### ಗಣೇಶ ರಾಮಚಂದ್ರ ಕರ್ಣ ಮತ್ತು ಕಂಪನಿ.
### ಕಮಿಷನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಮಾಣಿಕತೆಯೊಡನೆ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ತಕ್ಕ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರದ ಔಷಧಗಳು, ಪುಸ್ತಕಗಳು, ಮುತ್ತುಗಳು, ಚಿಪ್ಪಿ ಮುತ್ತುಗಳು, ಘಡಿಯಾರಗಳು, ವಾಚಗಳು, ಲ್ಯಾಂಪ್‌ಗಳು, ಕ್ಯಾಂಪ್ ಖುರ್ಚುಗಳು, ಪೆಟ್ಟಿಗೆಗಳು, ಜರತಾರಿ ಕೆಲಸಗಳು, ಚಂದ್ರಕಾಂತ ಶಿಲೆ ಕನ್ನಡಕಗಳು, ಜಮಖಾನೆ ರತ್ನ ಜರತಾರಿ ಉಡುಪುಗಳು, ಜರತಾರಿ ಟೋಪಿಗಳು, ಆಫೀಸ ಡ್ರೆಸ್‌ಗಳು, ಷರಟುಗಳು, ಅತ್ತರುಗಳು, ಅತ್ಯುತ್ತಮಗಳಾದ ರತ್ನಗಳು ಭಂಗಾರದಿಂದ ಕಟ್ಟಲ್ಪಟ್ಟ ಉಂಗುರಗಳು, ಬೆಳ್ಳಿ ಪಾತ್ರೆಗಳು, ಜರ್ಮನ್ ಬೆಳ್ಳಿ ಪಾತ್ರೆಗಳು, ಕೇಸರಿ, ಕಸ್ತೂರಿ ವಗೈರೆ ಇತರ ಸಾಮಾನುಗಳು

ಜವಾಬು ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟ್ಯಾಂಪ್ ಕಳುಹಿಸದ ಹೊರತು ಜವಾಬ್ ದೊರೆಯಲಾರದು

ವಿಳಾಸ —ಗಣೇಶ ರಾಮಚಂದ್ರ ಕರ್ಣ,
ಮತ್ತು ಕಂಪನಿ, ಕಮಿಷನ್ ಏಜಂಟ್ಸ್,
ಠಾಕೂರ್‌ದ್ವಾರ, ಮಾರ್ಕೆಟ್ ಪೋಸ್ಟ್, ಮುಂಬೈ.


## Bangalore City Municipality.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಬೋರ್ಡ್ ಆಫೀಸಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ —

ಸಿಟಿ ಪೆಸ್ಟರ್ನ್ ಯಕ್ಸ್‌ಟೆನ್ಷನ್‌ನಲ್ಲಿ ಮನೆಗಳಿಗಾಗಿ ನಿಗದಿಸಿ ಇರತಕ್ಕ ನಿವೇಶನಗಳ ಪೈಕಿ ಖಾಲೀ ಇರತಕ್ಕ ಸೈಟುಗಳ ನಂಬರ್‌ವಾರ್ ಮತ್ತು ಕೇಯಿಮಾರ್ ತಪಸೀಲ್ ಪ್ರತಿ 1 ಟಿಟ್ಟೆಯು ಬೆಂಗಳೂರ್ ಡಿಸ್ಟ್ರಿಕ್ಟ್ ಆಫೀಸಿನಲ್ಲಿ ಇರುತ್ತೆ. ಅವಶ್ಯಕ ಪ್ರಸ್ತದವರು ಅಲ್ಲಿಗೆ ಹೋಗಿ ಬೇಕಾದ ಸೈಟುಗಳನ್ನು ಅರ್ಜಿ ಮೂಲಕ ಸಿಟಿ ಮ್ಯುನಿಸಿಪಲ್ ಬೋರ್ಡಿಗೆ ದರಖಾಸ್ತು ಕೊಟ್ಟು ಪಡೆದುಕೊಳ್ಳಬಹುದು.

ತಾ॥ 12ನೇ ಜುಲೈ ಸನ್ 1893ನೇ ಇಸವಿ } K. S. SRINIVASA RAO, *Vice-President, City Munl Commission.*

## ದಕ್ಷಿಣ ಮಹಾರಾಷ್ಟ್ರ ರೈಲ್ವೇ.
### ನೋಟೀಸ್.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ:—

ನಾನಾವಿಧ ಕಬ್ಬಿಣದ ಮುಟ್ಟುಗಳು, ಕಬ್ಬಿಣ, ತ್ಯಾಗದಮರ, ಆಫೀಸ್ ಕುರ್ಚಿ ಮೇಜು ವಗೈರೆ ಅನುಪಯುಕ್ತಗಳಾದ ರೈಲ್ವೆ ಸಾಮಾನುಗಳು ಬಹಳವಾಗಿ, ಸನ್ ೧೮೯೩ನೇ ಇಸವಿ ಜುಲೈ ೨೮ನೇ ತಾರೀಖ್ ಶುಕ್ರವಾರದ ದಿನ ಹಗಲು ೨ ಘಂಟೆಗೆ ಸರಿಯಾಗಿ, ಬೆಂಗಳೂರಲ್ಲಿರುವ ಕಂಪನಿಯವರ ಸಿರಂಜಾಂ ಕೋಠಿಯ ಬಳಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವವು.

ಷರಾ—ನಗದು ಹಣ ಪಾವತೀ ಮಾಡಬೇಕು.

ಸ್ಟೋರ್‌ಕೀಪರ್ ಆಫೀಸ ಮೈಸೂರ್, ೧೧ನೇ ಜುಲೈ ೧೮೯೩ } (Signed,) H. WEIR, *Offg. Storekeepr, S. M. Railway.*

## ಇಷ್ತಿಹಾರ್.

ಬೆಂಗಳೂರು ಮುನ್ಸಫ್ ಕೋರ್ಟಿನಲ್ಲಿ.

ಸನ್ 1893 ನೇ ಇಸವಿ ಒರಿಜನಲ್ ಸೂಟ್ 323.

| ವಾದಿ. | ಪ್ರತಿವಾದಿ. |
|---|---|
| ಬೆಂಗಳೂರು ಅರಳೇಪೇಟೆಗೆ ಸೇರಿದ ಗೌಡನ ಪೇಟೆಯಲ್ಲಿ ಇರುವದು, 1ನೇ ಹೊಂಗೆಪ್ಪ. 2ನೇ ಸಿಪಾಯಿ ದೊಡ್ಡ ಅಪ್ಪಣ್ಣಪ್ಪ. 3ನೇ ರಾಜಪ್ಪ. | ಬಿಡ್ರೋ ಗೌಡನಪೇಟೆಯಲ್ಲಿರುವ ಜಂಗಮ ನಾಗ ಭೂಷಣ ಕೇಶಣ್ಣ. |

ಇದರಿಂದ ಪರೋಬಸ್ತು ಜನರಿಗೂ ತಿಳಿಯಪಡಿಸುವದೇನೆಂದರೆ:—

ಈ ಕೆಳಗೆ ನಮೂದಾಗುವ ಚಕ್ಕುಬಂದಿಗೆ ಒಳಪಟ್ಟ ಬೆಂಗಳೂರು ಗೌಡನಪೇಟೆಯಲ್ಲಿರುವ ಗೌರಮ್ಮನ ಗುಡಿ ಜಾಗ ಪಂಚ ಜನಗಳಿಗೆ ಸೇರಿದ್ದೆಂಬುದನ್ನೂ, ಪ್ರತಿವಾದಿಗೆ ಈ ಜಾಗದ ಮೇಲೆ ಯಾವ ಹಕ್ಕೂ ಇರುವದಿಲ್ಲವೆಂಬುದನ್ನೂ ಸ್ಥಾಪಿಸಿ ಸದರೀ ಜಾಗದಲ್ಲಿ ಪ್ರತಿವಾದಿಯು ಯಾವ ಕೆಲಸವನ್ನೂ ನಡಿಸದಂತೆ ಪರ್ಮನೆಂಟ್ ಇಂಜಂಕ್ಷನ್ ಕೊಡಿಸಬೇಕೆಂದು ವಗೈರೆ ವಾದಗಳು ಈ ಕೋರ್ಟಿನಲ್ಲಿ ದಾವಾ ದಾಖಲ್ ಮಾಡಿರುತ್ತಾರೆ. ಈ ಮೊಕದ್ದಮೆಗೆ ಕಕ್ಷಿಗಾರರಾಗಿ ಸೇರಲು ಇಚ್ಛೆಯುಳ್ಳವರು ಸನ್ 1893ನೇ ಇಸವಿ ಆಗಸ್ಟ್ ತಿಂಗಳ 10 ನೇ ತಾರೀಖ್ ಹಗಲು 11 ಘಂಟೆಗೆ ಈ ಕೋರ್ಟ್ ರೂಬರೂ ಹಾಜರಾಗಿ ಕೋರ್ಟಿಗೆ ತಿಳಿಸತಕ್ಕದ್ದು.

ಬೆಂಗಳೂರು, ತಾರೀಖ್ 18 ನೇ ಜುಲೈ 1893 ನೇ ಇಸವಿ. P. SINGRACHAR, ಮುನ್ಸೆಫ್.

### ದಾವಾಸ್ವತ್ತಿನ ಚಕ್ಕುಬಂದಿ.

ಬೆಂಗಳೂರು ಅರಳೇಪೇಟೆಗೆ ಸೇರಿದ ಗೌಡನಪೇಟೆಯಲ್ಲಿರುವ ಪೂರ್ವಕ್ಕೆ ಘಂಟೇ ಸಿದ್ಧಪ್ಪನ ಇತ್ತಲು, ಪಶ್ಚಿಮಕ್ಕೆ ಸಂಕಾರದ ರಸ್ತೆ, ಉತ್ತರಕ್ಕೆ ಘಂಟೆ ಸಿದ್ಧಪ್ಪನ ಮನೆ, ದಕ್ಷಿಣಕ್ಕೆ ಕೆಂಪಣ್ಣನ ಮನೆಗೆ ಹೋಗುವ ದಾರಿ, ಈ ಮಧ್ಯೆ ಇರುವ. ಪೂರ್ವಪಶ್ಚಿಮ ಗಜಾ 20, ಉತ್ತರದಕ್ಷಿಣ ಗಜಾ 10.


## ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JULY 24 1893

೧೮೯೩ನೇ ಇಸವಿ ಜುಲೈ ತಾ॥ ೨೪ ನೇ ಸೋಮವಾರ.


### ವೇಶ್ಯಾಂಗನೆಯರ ಗಾನ ನರ್ತನಗಳ ಕುರಿತು.

ಗತ ಶನಿವಾರದ ದಿನ ಸಾಯಂಕಾಲ ಈ ಪ್ರಾಂತ ಡಿಸ್ಟ್ರಿಕ್ಟ್ ಆಫೀಸ್ ಕಟ್ಟಡದಲ್ಲಿ ಪ್ರಮುಖರಾದ ಕೆಲವರು ದೊಡ್ಡಮನುಷ್ಯರ ಸಭೆಯೊಂದು ಸೇರಿತ್ತು. ಇದಕ್ಕೆ ಬಂದಿದ್ದ ಸರ್ಕಾರಿ ಉದ್ಯೋಗಸ್ಥರ ಸಂಖ್ಯೆಯು ಅಲ್ಪವಾದಾಗ್ಯೂ ಸ್ಕೂಲ್ ಹುಡುಗರ ಬಾಹುಳ್ಯದಿಂದ ಸದರೀ ಸಭೆಗೊಂದು ಸಂಪೂರ್ಣತೆ ಯುಂಟಾಯಿತು. ಇದರ ಮುಖ್ಯೋದ್ದೇಶವೇನೆಂದರೆ—ಈಗ್ಗೆ ಬಹುಕಾಲದ ಮೊದಲು ಅನುಸರಿಸಿ ಬರುವಂಥ ಪದ್ಧತಿಯನ್ನು, ಅಂದರೆ, ಶುಭಸಮಯಗಳಲ್ಲಿ ನರ್ತಕೀಯರಂ ಕರೆಯಿಸಿ ಗಾನ ನರ್ತನಗಳಂ ಮಾಡಿಸುವಿಕೆಯು ತಪ್ಪಿಸಬೇಕೆಂಬದಾಗಿರುತಿದೆ. ಏತದ್ವಿಷಯ ವಿಚಾರಕ್ಕೆ ಪ್ರವರ್ತಕರಾದವರು ಈ ಊರು ಮುನ್ಸಫರಾದ ಮೆ॥ ಪಿ. ಶಿಂಗರಾಚಾರ್ಯರವರು, ಮೆಡ್ರಾಸ್ ಕಲೆಕ್ಟರ್ ಸೆಕ್ರೆಟರಿಯವರಾದ ಮೆ॥ ಭಾಭಾ ಯವರು ಅಗ್ರಾಸನಾಧಿಪತಿಯು. ಅನುಮೋದಕರು ರೆವರೆಂಡ್ ಮೆ॥ ಸ್ಲೇಟರ್‌ಯವರು. ಪೂರ್ವಪಕ್ಷಿಗಳಾದವರು ಮೆ॥ ಆರ್. ವಿಜಯೇಂದ್ರರಾಯರವರು ಮತ್ತು ಮೆ॥ ವಿ. ಎನ್. ನರಸಿಂಹಯ್ಯಂಗಾರ್ಯರವರು ಕಡೆಗೆ ಸಿದ್ಧಾಂತವು ಅನ್ಯವಸ್ಥಿತವು. ಈ ವಿಷಯದಲ್ಲಿ ಇಲ್ಲಿನವರಿಗೀಗ ಉಂಟಾಗಿರುವ ಔತ್ಸುಕ್ಯವೂ ಅಭಿನಿವೇಶವೂ ಪ್ರವೃತ್ತಿ ನಿವೃತ್ತಿಜ್ಞಾನವೂ ಅಪ್ರೇರಿತವಾಗಿ ಉಂಟಾದ ಸ್ವತಸಿದ್ಧಜ್ಞಾನವಾಗಿರುವದೇನೋ ಯೆಂದು ಯಾರಾದರು ಭ್ರಾಂತಿ ಪಡಬಹುದು. ತಾದೃಶ ಭ್ರಾಂತಿಗೆ ಅವರೆಷ್ಟುಮಾತ್ರವೂ ಅವಕಾಶವನ್ನೀಯಕೂಡದು. ಇಲ್ಲಿನವರಾವಾಗಲು ಅನುಕರಣಶಕ್ತಿಯುಳ್ಳವರಾದುದರಿಂದ ಯಾರು ಹ್ಯಾಗೆ ಆಡಿಸಿದರೆ ಅದರಂತೆಲ್ಲ ಆಡತಕ್ಕವರೆಂಬುವದು ಪ್ರಸಿದ್ಧ ವಿಷಯವಾಗಿರುತಿದೆ. ಇಲ್ಲದಿದ್ದರೆ ಹಲ್ವ ಸೂರು ಶೀಮೆಯಲ್ಲಿರತಕ್ಕವರಿಗೂ, ಮದರಾಸ್ ಗವರ್ನರವರೂ ವೈಸ್‌ರಾಯ್ ಯವರೂ ತಾವೇ ಮೊದಲಾದವು ಜರುಗುವ ಸ್ಥಳಗಳಿಗೆ ದಯಮಾಡತಕ್ಕವೆಂದು ಪ್ರಾರ್ಥಿಸಿ ಮದರಾಸ್ ಪ್ರಜೆಗಳು ಬರೆದುಕೊಂಡಿರುವ ಅರ್ಜಿಗೂ ಏನು ಸಂಬಂಧವೋ ವಿವೇಕಿಗಳು ಆಲೋಚಿಸಬಹುದು. ಇವರು ಯೆಷ್ಟುವರ್ಷ ಅಂತಾ ದೊಡ್ಡ ಮನುಷ್ಯರಂ ಕರೆಯಿಸಿ ಅತಿಥಿ ಸತ್ಕಾರಗಳಂ ಮಾಡಿದ ಹಾಗೇ ತಿಳಿಯಲಿಲ್ಲವು. ವಿಶೇಷ ಸಂದರ್ಭಗಳಲ್ಲಿ ನರ್ತಕೀಯರ ಮುಂದೆ ಅನ್ಯ ದೇಶೀಯರಾದ ಯೂರೋಪಿಯರ್ಗಳನ್ನು ಕರೆಯಿಸಕೂಡದೆಂತಲೂ, ಅಂತಾ ಸ್ಥಳಗಳಿಗೆ ತಾವು ಹೋಗಕೂಡದೆಂತಲೂ ವಾದಿಸುತ ಬದ್ಧಕಂಕಣರಾಗಿ ಅವಿವೇಕದೊಡನೆ ಅಭಿಮುಖರಾಗಿರುವ ದೊಡ್ಡಮನುಷ್ಯರೆಲ್ಲರು ಕಳೆದ ತಿಂಗಳಲ್ಲಿ ದಿವಾನರವರ ಗೃಹದಲ್ಲಿ ನಡೆದ ವಿವಾಹ ಮಹೋತ್ಸವ ಸಮಯದೊಳು ಈ ಪದ್ಧತಿಯನ್ನಂಗೀಕರಿಸುವದು ಅನುಚಿತವೆಂತಲಾಗಲಿ, ಹಾಗೆ ಅನುಸರಿಸಲ್ಪಟ್ಟರೆ ತಾವು ಯಾರೂ ಆಸಮಯದಲ್ಲಿ ಬರುವದಿಲ್ಲವೆಂತಲಾಗಲಿ ತಿಳಿಸಿ ಪಕಮತ್ಯದೊಡನೆ ಯೆಷ್ಟುಜನ ನಿಂತರೋ ಅಂತಾ ದೊಡ್ಡ ಮನುಷ್ಯರ ಹೆಸರುಗಳಂ ಕೇಳಲಿಕ್ಕೆ ನಾವು ಬಹಳ ಉತ್ಸಾಹದೊಡನೆ ನಿರೀಕ್ಷಿಸುತಲಿದೇವೆ. ಅನ್ಯದೇಶದವರಾಗಿಯೂ, ಅನ್ಯದೇಶ ಪಾಲಕರಾಗಿಯೂ ಇರುವ ಇಂಗ್ಲಿಷಿನವರ ಪ್ರವೇಶಾವರೋಧವನ್ನಪೇಕ್ಷಿಸಲಿಕ್ಕೆ ಪೂರ್ವ ಸ್ವಸ್ಥಾನದಲ್ಲಿ ಸ್ವರಾಜರಿಗೆ ಈ ವಿಷಯವನ್ನರುಹಿ ತಕ್ಕ ವ್ಯವಸ್ಥೆಯಂ ಮಾಡಿಕೊಳ್ಳಬೇಕೆಂಬ ಪ್ರವೃತ್ತಿಯು ಇಲ್ಲಿನವರಿಗೇತಕ್ಕೆ ಉಂಟಾಗಲಿಲ್ಲವೋ ನಾವರಿಯೆವು. ಪ್ರಾಯಶಃ ಅವರ ಉದ್ದೇಶ ಪ್ರಯತ್ನಗಳು ಇಲ್ಲಿ ಸಫಲವಾಗಲಾರದೆಂಬ ಭಾವವಿರಬಹುದು. ಮುಖ್ಯವಾಗಿ ಈವಿಷಯದ ಸ್ಥೂಲಸೂಕ್ಷ್ಮಗಳನ್ನು ಆಗ್ರಹರಹಿತರಾಗಿ ಸಾಮ್ಯಭಾವದಿಂ ಪರ್ಯಾಲೋಚಿಸುವವರು ಬಹಳ ಸ್ವಲ್ಪಮಂದಿಯಾಗಿರುತ್ತಾರೆ. ಈ ವಿಷಯದಲ್ಲಿ ನಮ್ಮ ಅಭಿಪ್ರಾಯವು ಮುಂದೆ ತಿಳಿಸುವೆವಲ್ಲದೆ ಅನ್ಯರ ಅಭಿಪ್ರಾಯವಂ ಸಹ ತಿಳಿಯಲಪೇಕ್ಷಿಸುತ್ತೇವೆಯಾಗಿ ಅಂತವರ ಲೇಖನಗಳಿಗೆ ಸಾಧ್ಯವಾದಮಟ್ಟಿಗೆ ಈ ಪತ್ರಿಕೆಯಲ್ಲಿ ಮುಂದೆ ಅವಕಾಶವನ್ನೀಯುವೆವು.

## ೧೮೯೧ನೇ ಇಸವಿಯ ಮೈಸೂರು ಶೇನ್ಸಸ್ ರಿಪೋರ್ಟು

ಈಗ್ಯೆ ಬಹುಕಾಲದ ಮೊದಲು ನಾವು ಆತುರದೊಡನೆ ನಿರೀಕ್ಷಿಸುತಲಿದ್ದ, ಮೈಸೂರ್ ಶೀಮೆಯ ಖಾನೇಷುಮಾರಿ ರಿಪೋರ್ಟಿನ ಈಗ ಹೊರಗಾಗಿ ಅದರ ಒಂದೆರಡನೆಭಾಗಗಳಸಂಚಿಕೆಗಳು ಕಳೆದ ವಾರದಲ್ಲಿ ಸೆನ್‌ಸಸ್ ಸೂಪರಿಂಟೆಂಡೆಂಟವರ ಆಫಿಸಿನಿಂದ ನಮಗೆ ಕಳುಹಿಸಲ್ಪಡಲು, ಅವುಂ ನಾವು ಕೃತಜ್ಞತಾ ಪೂರ್ವಕ ಅವರಿಂ ಅಂಗೀಕರಿಸಿದೆವು. ಈಗ ನಮ್ಮ ಹಸ್ತಗತವಾಗಿರುವ ರಿಪೋರ್ಟಿನ ದೆಸೆಯಿಂದ ಸೆನ್‌ಸಸ್ ಸೂಪರಿಂಟೆಂಡೆಂಟರಾದ ಮೆ|| ವಿ. ಎನ್. ನರಸಿಮ್ಹಯ್ಯಂಗಾರ್ಯರವರ ಶಾರೀರ ಮಾನಸಿಕ ಶ್ರಮಗಳು ಪ್ರಬಲತರವಾದವೆಂದು ದಾರಾಳವಾಗಿ ನುಡಿಯಬಹುದಾಗಿದೆ. ಪ್ರಥಮ ಭಾಗವು ಷುಮಾರ್ ೪೦೦ ಪುಟಗಳುಳ್ಳದ್ದಾಗಿಯು ೧೨ ಪ್ರಕರಣಗಳುಳ್ಳದ್ದಾಗಿಯೂ ಇರುತದೆ. ಸದರೀಪ್ರಕರಣಗಳಲ್ಲಿ ವಿಚಾರ ಮಾಡಲ್ಪಟ್ಟಿರುವ ವಿಷಯ ಸ್ವರೂಪಗಳಂ ಕುರಿತು ಮುಂದೆ ಅವಕಾಶಾನುಗುಣವಾಗಿ ವಿಚಾರಮಾಡುವೆವು. ಪರಂತು ಸ್ಥೂಲವಾಗಿ ಅವರ ಸಾರಾಂಶವನ್ನಿಲ್ಲಿ ತಿಳಿಸುವೆವು ಮೊದಲನೆಯ ಪ್ರಕರಣದಲ್ಲಿ ದೇಶವಿಸ್ತೀರ್ಣವೂ, ತದ್ವಿಭಾಗವೂ, ಪ್ರಜಾಬಾಹುಳ್ಯವೂ, ಬಹುಗುಣಾದಿ ವಿವರಣೆಗಳೂ, ಸಮೀಪಾತ್ಯೇಕಪ್ರದೇಶಾದಿಗಳೂ ತಿಳಿಸಲ್ಪಟ್ಟಿವೆ ೨ ನೆಯ ಪ್ರಕರಣವು ಪ್ರಜೆಗಳ ಹ್ರಾಸವೃದ್ಧಿಯನ್ನರುಹುತಿದೆ ೩-೪ ನೆಯ ಪ್ರಕರಣಗಳಲ್ಲಿ ಮತಗಳ ತದಂತರಾಳದ ಭೇದಗಳೂ ಜಾತಿ ಮತ್ತು ಪಯಃಪರಿಮಾಣಗಳೂ ವಿಚಾರ ಮಾಡಲ್ಪಟ್ಟಿವೆ. ೫ ನೆಯ ಪ್ರಕರಣದಲ್ಲಿ ಭ್ರಷ್ಟಾಸ್ಥಿತಿ, ೬ ನೆಯ ದರಲ್ಲಿ ರೋಗಾದ್ಯುಪದ್ರವಗಳು, ೭ ನೆಯದರಲ್ಲಿ ವಿದ್ಯಾಭ್ಯಾಸ, ೮ನೆಯದರಲ್ಲಿ ವ್ಯವಹೃತಭಾಷೆಗಳು, ೯ನೆಯದರಲ್ಲಿ ಜನ್ಮಸ್ಥಾನಗಳು, ೧೦ ಮತ್ತು ೧೧ನೆಯದರಲ್ಲಿ ಮತಗಳು ಮತ್ತು ವೃತ್ತಿಗಳು, ೧೨ನೆಯದರಲ್ಲಿ ಖಾನೇಷುಮಾರಿ ತೆಗೆಯಲ್ಪಡಲಿಕ್ಕಾಗಿ ನಡೆಸಿದ ಆದಳಿತಗಳು, ಇವುಗಳು ಪ್ರಾಧಾನ್ಯೇನ ತಿಳಿಸಲ್ಪಟ್ಟಿರುತಿವೆ ಇವಲ್ಲದೆ ಅವಶ್ಯವೇದನೀಯಗಳಾದ ಅನೇಕ ವಿಶೇಷಾಂಶಗಳು ರಮ್ಯವೈಷಯ ಸಂವಿಭಾಗಗಳೊಡನೆ ವಿಭಜಿಸಲ್ಪಟ್ಟು ಪ್ರಕಟಿಸಲ್ಪಟ್ಟಿವೆಯಲ್ಲದೆ ಅನೇಕಾಂಶಗಳು ಹಿಂದಿನ ರಿಪೋರ್ಟುಗಳಲ್ಲಿ ಬರೆದಿರತಕ್ಕವು ಇಲ್ಲಿ ದೃಶ್ಯಗಳಾಗಿವೆ ಇವುಗಳೊಡನೆ ಕಳುಹಿಸಲ್ಪಟ್ಟಿರುವ ಮೈಸೂರುದೇಶದ ೨ ಮ್ಯಾಪುಗಳು ಬಹಳ ಶ್ಲಾಘನೀಯವಾಗಿಯೂ, ಆಯಾಪ್ರದೇಶಗಳ ಪ್ರಜಾಸಂಖ್ಯಾದಿ ವಿವರಣೆಗಳನ್ನರುಹತಕ್ಕವಾಗಿಯೂ, ಇರುತಿವೆ ಕೇವಲ ಶ್ರಮಭೂಯಿಷ್ಠವಾದ ಪ್ರಸಕ್ತ ಕಾರ್ಯವು ಪರೀಕ್ಷಾರ್ಥ ನೇಟಿವ್ ಆಫಿಸರೊಬ್ಬರಿಗೆ ಒಪ್ಪಿಸಲ್ಪಟ್ಟದಕ್ಕೆ ಇದೇ ಪ್ರಥಮಾವರ್ತಿಯಾಗಿರುತಿದೆ ೧೮೭೧ನೇ ಇಸವಿಯ ಖಾನೇಷುಮಾರಿ ರಿಪೋರ್ಟನ್ನು ಮೇಜರ್ ಲಿಂಡ್‌ಸೆಯವರೂ, ೧೮೮೧ ನೇ ಇಸವಿಯ ರಿಪೋರ್ಟನ್ನು ಮಿ|| ಟೈಟ್ ಯವರೂ ಬರೆದರು. ಅವರು ಯೂರೋಪಿಯನ್ ಆಫಿಸರುಗಳಾಗಿರುದರಿಂದ ಸಾಮಾನ್ಯೇನ ಪ್ರಶಂಸನೀಯಗಳಾಗಿಯೇ ಇದ್ದವು. ಪ್ರಕೃತ ಸಂದರ್ಭದಲ್ಲಿ ಪೂರ್ವಾಪೇಕ್ಷೆಯಾ ಅತಿ ಶ್ರಮಸಾಧ್ಯವಾದ ಪ್ರಸಕ್ತ ಉದ್ಯೋಗವಂ ಪರಿಗ್ರಹಿಸಿ ಕೈಗೊಂಡ ಮೆ|| ನರಸಿಮ್ಹಯ್ಯಂಗಾರ್ಯವರು, ತಮ್ಮ ಕಾರ್ಯವನ್ನು ಬಹುವಿಧ ಪ್ರತಿಬಂಧಕಗಳ ಮಧ್ಯೆ ನಿರ್ವಿಘ್ನವಾಗಿಯೂ ತೃಪ್ತಿಕರವಾಗಿಯೂ, ನಡೆಯಿಸಿರುತ್ತಲೂ ಪ್ರಕಟಿಸಿದ ರಿಪೋರ್ಟು ಅವರಿಗೆ ವಿಶೇಷ ಪ್ರಾಶಸ್ತ್ಯ ಸಂಪಾದಕವಾಗಿಯೂ, ಗವರ್ನಮೆಂಟಿನವರಿಗೆ ಪ್ರತಿಷ್ಠಾಪಕವಾಗಿಯೂ, ಇರುತಿದೆ ಇದರಿಂದ ನೇಟಿವ್‌ಗಳ ಯೋಗ್ಯತೆಯು ಯಾವ ಭಾಗದಲ್ಲಿಯೂ ನ್ಯೂನವಾದದ್ದಲ್ಲವೆಂದು ಸ್ಪಷ್ಟವಾಗುತಿದೆ ಏತದ್ವಿಷಯಕವಾದ ವಕ್ತವ್ಯಾಂಶಗಳನ್ನು ನಾವು ಮುಂದೆ ಕ್ರಮವಾಗಿ ತಿಳಿಸುವೆವು.

## Occasional Notes
## ನೈಮಿತ್ತಿಕ ವಿಷಯನ್ಯಾಸ

ಇಂಗ್ಲಾಂಡಿನಲ್ಲಿ ಸಾಲೀಯಾನಾ ೪೦೦,೦೦೦,೦೦೦ ಪೌಂಡ್ ಸಬ್ಬು ಖರ್ಚಾಗುತಿದೆ

ಈಗ ಇಂಡಿಯಾ ಸ್ಟೇಟ್ ಸೆಕ್ರೆಟೆರಿಯವರಾಗಿರುವ ಲಾರ್ಡ್ ಕಿಂಬರ್ಲಿ ಯವರಿಗೆ, ಲಾರ್ಡ್ ಲ್ಯಾನ್ಸ್‌ಡೌನ್‌ಯವರ ಕಾಲ ನಂತರ ಇಂಡ್ಯಾರಾಜ್ಯದ ವೈಸ್‌ರಾಯ್ ಅಧಿಕಾರವನ್ನು ಕೊಡುವದಾಗಿ ತಿಳಿಸಲ್ಪಟ್ಟು ಅವರದು ಅಂಗೀಕರಿಸಲಿಲ್ಲವೆಂದು ಇಂಗ್ಲಿಷ್‌ಮ್ಯಾನ್ ಪತ್ರಿಕೆಯು ಲಂಡನ್ ಬಾತಮಿದಾರನು ಬರೆದಿರುತ್ತಾನೆಂದು ಮದರಾಸ್ ಟೈಂಸ್ ಪತ್ರಿಕೆ ತಿಳಿಸುತದೆ

ಈಚೆಗೆ ರಷ್ಯಾ ಚಕ್ರವರ್ತಿಯವರು ನೀಲಸಮುದ್ರದಲ್ಲಿ ನಿಲ್ಲಿಸಿರುವ ತಮ್ಮ ನಾವಿಕಸೈನ್ಯವನ್ನು ತೋರಿಸುವಂತೆ, ಜನಜಾಗಳ ಚಿತ್ರಪಟಗಳಂ ಬರೆಯಿಸಿ ಅವನ್ನೆಲ್ಲ ಒಂದು ಬುಕ್ಕು ಕಟ್ಟಿಸಿ ಟರ್ಕಿ ಸುಲ್ತಾನರವರಿಗೆ ಕಳುಹಿಸಿದರು. ಸುಲ್ತಾನರವರು ರಷ್ಯಾ ಚಕ್ರವರ್ತಿಯವರ ಒಳಿತ್ರಯವಂ ತಿಳಿದುಕೊಂಡು ತಮ್ಮ ನಾವಿಕ ಸೇನಾಬಲವಂ ತೋರಿಸತಕ್ಕ ಪಟಗಳ ಒಂದು ಬುಕ್ಕನ್ನು ಚಕ್ರವರ್ತಿಯವರಿಗೆ ಕಳುಹಿಸಿಕೊಟ್ಟಿರುವರು

ಮಹಾರಾಜ್ಞೀ ಇಂಡ್ಯ ಚಕ್ರವರ್ತಿನೀಯವರ ಪೌತ್ರರಾದ ಡ್ಯೂಕ್ ಆಫ್ ಯಾರ್ಕಿಯವರಿಗೆ ಈ ತಿಂಗಳ ೬ನೇ ತಾರೀಖಿನಲ್ಲಿ ವಿವಾಹೋತ್ಸವ ನಡೆಯಿತಷ್ಟೆ. ಈ ಶುಭಸಮಯದಲ್ಲಿ ಸದರೀ ದಂಪತಿಗಳಿಗೆ ನಜರ್ ಕಳುಹಿಸುವದಕ್ಕೆ ಇಂಡಿಯಾದೇಶದ ಒರ್ಚನೆ ಬಗ್ಗೆ ಯೋಜನೆ ಮಾಡಲ್ಪಟ್ಟ ಫಂಡಿಗೆ ಬಂಗಾಳೆ ದೇಶದ ಮಹಾಸಂಸ್ಥಾನ ಮಹಾರಾಣಿ ಸ್ವರ್ಣಮಯಿ ಮೊದಲಾದ ನೇಟಿವ್ ಲೇಡಿಗಳು ೫೦೦೦ ರೂಪಾಯಿಗಳಂ ಕೊಟ್ಟಿರುತ್ತಾರೆ

ಈ ಪ್ರಪಂಚದೊಳಗಣ ಸುಸ್ಥಾನಾಧಿಪತಿಗಳ ಪೈಕಿ ಟರ್ಕಿ ಸುಲ್ತಾನರವರು ತಮ್ಮ ಗೃಹಕೃತ್ಯ ವಿಷಯದಲ್ಲಿ ಅತಿ ವ್ಯಯ ಮಾಡತಕ್ಕವರೆಂದು ಹೇಳಬೇಕಾಗಿದೆ, ಹ್ಯಾಗೆಂದರೆ-ಪ್ರತಿ ಸಂವತ್ಸರದಲ್ಲೂ ದಿವೇರಿಗಳು, ಜೋಷ್‌ದಾರ್‌ನ್, ಮೇಜಿಗಳು, ಚಾಪೆಗಳು, ಹಾಸಿಕೆಗಳು ವಗೈರೆ ಬಗ್ಗೆ ತೊಂಬತ್ತು ಲಕ್ಷ ರೂಪಾಯಿಗಳು, ಜನಾನಾ ಹೆಂಗುಸರ ವಸ್ತ್ರಾಭರಣಗಳ ಬಗ್ಗೆ ಮೂರು ಕೋಟಿ ರೂ||, ದರ್ಬಾರ್ ಖರ್ಚು ಮೂರು ಕೋಟಿ ತೊಂಬತ್ತು ಲಕ್ಷ ರೂ|| ಸುಲ್ತಾನರವರ ಸ್ವಂತ ಉಪಯೋಗಕ್ಕೆ ವಸ್ತ್ರಗಳು ಮತ್ತು ಸುಖೋಪಕರಣಗಳು ಅರವತ್ತು ಲಕ್ಷ ರೂ|| ಇನಾಂಗಳು ವಗೈರೆಯ ಬಗ್ಗೆ ಒಂದುಕೋಟಿ ಇಪ್ಪತ್ತು ಲಕ್ಷ ರೂ|| ಬೆಳ್ಳಿ ಬಂಗಾರದ ಪಾತ್ರೆಗಳ ಬಗ್ಗೆ ಎಪ್ಪತ್ತೈದುಲಕ್ಷ ರೂ|| ಗಾಡಿಗಳು ಮತ್ತು ಕುದುರೆಗಳ ಸಂರಕ್ಷಣೆಯ ಬಗ್ಗೆ ಅರವತ್ತೈದುಲಕ್ಷ ರೂ|| ಒಟ್ಟು ಹದಿನಾರುಕೋಟಿ ರೂಪಾಯಿಗಳು ಖರ್ಚು ಮಾಡುತ್ತಾರೆ.

## LOCAL AND PROVINCIAL NEWS
## ಪಳದೇಶಮತ್ತುತಾಲ್ಲೂಕುಜಾತಿವೃತ್ತಾಂತಗಳು

ಶಿವಮೊಗ್ಗೆಯೊಳು ಪ್ರಸ್ತುತದಲ್ಲಿ ನೆರೆಗೊಳಿಸಲ್ಪಡುವದಾಗಿರುವ ಸಬ್ ಜಡ್ಜ್ ಕೋರ್ಟಿಗೆ ಬೇಕಾದ ಶಿಬ್ಬಂದಿಗಳನ್ನು ಗವರ್ನಮೆಂಟಿನವರು ಮಂಜೂರ್ಮಾಡಿದ್ದಾರೆಂದು ತಿಳಿಯಬರುತಿದೆ

ಚಿಕ್ಕಮಗಳೂರ್ ಮುನ್‌ಸಫ್ ಮೆ|| ಪಿ. ವೆಂಕಣ್ಣಯ್ಯರವರಿಗೆ ವಯಸ್ಸಾದುದರಿಂದ ಪೆನ್ಷನ್ ಕೋಡ್ ಪ್ರಕಾರ ಅವರು ಕೆಲಸದಿಂದ ನಿವೃತ್ತಿಸಲ್ಪಡದೇಕಾದವರಾಗಿದ್ದಾಗ್ಯೂ, ಗವರ್ನಮೆಂಟಿನವರು ಅವರಂ ೧೮೯೪ನೇ ಯಿಸವಿ ಜೂನ್ ತಿಂಗಳವರಿಗೆ ಕೆಲಸದೊಳಿರಲಿಕ್ಕೆ ಅವಕಾಶಕೊಟ್ಟರೆಂದು ಅರಿತೆವು

ಮೈಸೂರ್ ಶ್ರೀಮನ್ ಮಹಾರಾಣಿ ಯವರ ಬಾಲಿಕಾ ಪಾಠಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತಲಿರುವ ವಿದ್ಯಾರ್ಥಿನೀಯರಲ್ಲಿ ರಿಕ್ತರಾಗಿಯೂ ಅರ್ಹರಾಗಿಯೂ ಯಿರತಕ್ಕವರಿಗೆ ಅವಶ್ಯಕಗಳಾದ ಪುಸ್ತಕಗಳನ್ನು ಉಚಿತವಾಗಿ ಕೊಡುವ ಬಗ್ಗೆ ಮೈಸೂರು ಗವರ್ನಮೆಂಟಿನವರು ೨೦೦ ರೂಪಾಯಿಗಳು ಮಂಜೂರ್ಮಾಡಿದರೆಂದು ತಿಳಿಯಬರುತಿದೆ

ಹೊಳೆನರಸೀಪುರದ ಮುನಸಫರಾದ ಮೆ|| ಬಿ. ಚೆಲುವಯ್ಯಂಗಾರ್ಯರು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟು ಮರಳಿ ಪ್ರಾಕ್ಟೀಸು ಮಾಡತಕ್ಕ ಸ್ವತಂತ್ರರಾಗಿದ್ದಾರೆಂದು ಕೇಳುತ್ತೇವೆ ಇವರಿಗೆ ಈಗ ಬರುತಲಿದ್ದ ವೇತನ ಹೆಚ್ಚಿನದಾಯಿರಾಗಿ ಅಧಿಕವಾಗಿ ಸಂಪಾದಿಸಬಹುದೆಂಬ ದೃಢವಿಶ್ವಾಸವೂ ಉಂಟಾಗಿರುವದರಿಂದ ಈ ಮೇಲಿಕಂಡಂತೆ ಸರಕಾರ ನೌಕರಿಯನ್ನು ಬಿಟ್ಟಿದ್ದಿರಬಹುದೆಂದು ತೋರುತಿದೆ ಹೀಗೆ ವಿದ್ಯಾವಂತರಲ್ಲರು ಸ್ವತಂತ್ರರಾಗಿ ಪ್ರವರ್ತಿಸುವದೆ ನಮ್ಮ ಪ್ರಜೆಗಳಿಗೆ ಶ್ರೇಯಸ್ಕರವಾಗುವುದು

ಬಹುದಿನಗಳ ಗವರ್ನ್‌ಮೆಂಟಿಗೆ ಪೇಪರು ಮುಮುಕ್ಷು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ರವರಲ್ಲಿ ಸ್ಥಾಪಿತವಾದ ... ಗವರ್ನಮೆಂಟಿನವರು ಮುಕ್ತ ಮಾಡಿರುವದರಿಂದ ಇನ್ಸ್‌ಪೆಕ್ಟರ್ ಹುದ್ದೆಯನ್ನು ಸದರೀ ... ನಿಯಮಿಸಲ್ಪಟ್ಟಿದೆ ಬೇಕಾದ ವಿವರಣೆಗಳು ... ಇನ್ಸ್‌ಪೆಕ್ಟರ್ ... ಎಂದು ತಿಳಿಯಬರುತ್ತದೆ.

ಸಾಗರದ ಇಂಜಿನಿಯರ್ ಮೆ|| ಸ್ವಾಮಿ ... ಮೆ|| ರಾಘವೇಂದ್ರ ರಾಯರವರು, ತಮ್ಮ ... ಕಡಮೆಯಾಗದೆ ಅವರಾತ ... ಕ್ಕೆ ೬ ವರುಷಗಳ ... ತಮ್ಮ ಕೆಲಸಗಳಲ್ಲಿರಬಹುದೆಂದು ಹಿರಿಯರವರು ಮಂಜೂರ್ಮಾಡಿರುವರೆಂದು ಕೇಳುತ್ತೇವೆ

ಈಗ ಕಾಲಸ್ಥಿತಿಯು ಒಳ್ಳೆ ಪಿಳಿಪಿಳಿ ಇದ್ದಂತಾಗಿಯೂ ವೃಷ್ಟಿಯೂ ಅಧಿಕವಾಗಿದೆ ಪದೆ ಪದೆ ಸೂರ್ಯದರ್ಶನವಾಗದೆ ದಿನಗಳು ಮೋಡವಾಗಿಯೇ ಇವೆ ಯದಾವಾಗಲಾದರು ಸಾಯಂಕಾಲದ ಹೊತ್ತಿನಲ್ಲಿ ಅಲ್ಪ ಮಳೆ ಬೀಳುತಿದೆ ಆದಾಗ್ಯೂ ಬಾವಿಗಳಿಗೆ ಅದರಿಂದ ಅಲ್ಪಪ್ರಯೋಜನ ಮಾತ್ರವಾಗಿದೆ ಮೇ ಮಾಹೆ ೨೫ ನೇ ತಾರೀಖಿಗೆ ಮುಗಿದ ವಾರದಲ್ಲಿ ಬಂದ ಸರ್ಕಾರೀ ರಿಪೋರ್ಟಿನಿಂದ ಬೆಂಗಳೂರು ಡಿಸ್ಟ್ರಿಕ್ಟ್ ಒಂದು ನಿಸ ಮಿಕ್ಕ ಭಾಗಗಳಲ್ಲೆಲ್ಲ ಸಾಮಾನ್ಯವಾಗಿ ಮಳೆ ... ಒಂದು ಅಂಗುಳ ಮಳೆಗೆ ಸಹ ... ಕಡೂರ್ ಡಿಸ್ಟ್ರಿಕ್ಟ್ ... ಅಂಗುಲ ಮಳೆ ಬಿದ್ದಂತೆ ಲೆಕ್ಕವಾಗಿರುವದಾಗಿಯು ತಿಳಿಯಬರುತಿದೆ ... ಜನಗಳಿಗೂ ಜನಗಳಿಗೂ ಆರೋಗ್ಯದೊಳಿನೂ ತೊಂದರೆಯಿಲ್ಲವು

ಮೈಸೂರು ಗವರ್ನಮೆಂಟಿ ಪೋಲೀಸ್ ಇಲಾಖೆಯಲ್ಲಿ ಎಕ್ಸಿಕ್ಯೂಟಿವ್ ಸರ್ವಿಸ್‌ನಲ್ಲಿರತಕ್ಕವರುಗಳಲ್ಲಿ ಫೋಟೊಗ್ರಾಫ್ ಮರೆಕೆಲಸ, ಸರ್ವೆ, ಚಿತ್ರಬರೆಯುವಿಕೆ, ವಗೈರೆ ಕೆಲವು ವಿಶೇಷ ಕುಶಲತೆಯನ್ನುಂಟು ಮಾಡಬೇಕಾದದು ಆವಶ್ಯಕವಾಗಿರುವದರಿಂದ ಅವರಿಗೆ ಅವು ಕಲಿಸುವದಕ್ಕೆ ಪ್ರತ್ಯೇಕ ತರಗತಿಗಳನ್ನಿಡಬೇಕಾದದ್ದು ಆವಶ್ಯಕವೆಂದು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ಲವರು ಗವರ್ನಮೆಂಟಿಗೆ ಸೂಚಿಸಿದ್ದರಮೇಲೆ ದಿವಾನರವರು ಫೋಟೋಗ್ರಫಿಯು ಪೋಲೀಸಿನವರಿಗೆ ಪತ್ತೆ ವಿಷಯದೊಳು ಸಹಾಯಕವಾಗಿದ್ದಾಗ್ಯೂ ಅದು ಬಹಳ ಖರ್ಚು ಬಾಬುದರಿಂದಲದನ್ನು ಮುಂದೊಳು ಸ್ವಲ್ಪ ಆಲೋಚಿಸಬೇಕಾಗಿದೆಯೆಂದು ಅಭಿಪ್ರಾಯಪಟ್ಟರಂತೆ

## THE MYSORE GAZETTE.
## ಮೈಸೂರು ಗೆಜೆಟು

ಶ್ರೀಮನ್ಮಹಾರಾಜರವರ ಹುಜೂರ್ ಸೆಕ್ರೆಟರಿಯವರ ಸ್ವಾಧೀನದ ಕೊಡಲ್ಪಟ್ಟ ಹಸ್ತಾಕ್ಷರಗಳು,

೧೨ ನೇ ಜೂಲೈ ೧೮೯೩, ನಂ|| ೫೭೬— ೮೯೫.—ಮೈಸೂರು ಸರ್ವಿಸ್ ರೆಗ್ಯುಲೇಶನ್‌ಗಳ ೧೮೮ ನೇ ಆರ್ಟಿಕಲ್ ಅನುಸರಿಸಿ, ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮೆ|| ಎ. ರಂಗಸ್ವಾಮಯ್ಯಂಗಾರ್ಯರು ಅವರುಪಯೋಗಿಸಿಕೊಳ್ಳಬಹುದಾದ ತಾರೀಖ್ ಮೊದಲು ೩ ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

೨ ಪ್ರೊಬೇಷನ್ ಸಬ್ ಡಿವಿಜನ್ ಆಫಿಸರಾದ ಮೆ|| ಕೆ. ಮಾದಮುದಲ್ಲಿ ಯವರು, ಮೆ|| ಎ. ರಂಗಸ್ವಾಮಯ್ಯಂಗಾರ್ಯರು ರಜಾಮೇಲೆ ಗೈರ್ಹಾಜರಿರುವ ಕಾಲದಲ್ಲಿ ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ವ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡುವಂತೆ ನೇಮಕಮಾಡಲ್ಪಟ್ಟಿರುತ್ತಾರೆ

೩ ನೇ ೧೮೯೩ ನೇ ಇಸವಿ ಫೆಬ್ರವರಿ ೧೫ ನೇ ... ನಂ|| ೩೬—೯೨ ನೇ ನಂಬರ್ ... ಅದೇ ಇಸವಿ ಏಪ್ರಿಲ್ ೨೧ ನೇ ... ೧೨೪೮ —೯ | ೭೬—೯೨ ನೇ ನಂಬರ್ ... ಕೆಲಸದ ಮೇಲೆ ರಜಾ ಕೊಡಲ್ಪಟ್ಟಿದ್ದ, ಹಾಸನ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ಮೆ|| ಎ. ರಂಗನಾಥರಾಯರವರು ನೌಕರಿಗೆ ಹಾಜರಾಗಿರುವಂತೆ ರಿಪೋರ್ಟ್ ಮಾಡಿದ್ದರಿಂದ, ಮೆ|| ಕೆ. ಮಹಮ್ಮದ್ ಯವರು ... ಕೆಲಸದ ... ಕಾಲದಲ್ಲಿ, ... ಚಾರ್ಜ್ ... ಮ್ಯಾಜಿಸ್ಟ್ರೇಟರಾಗಿ ... ಕಾಲದಲ್ಲಿ ಅವರಿಗೆ ಕೊಡಲ್ಪಟ್ಟ ... ರಜಾ ... ಅವರುಪಯೋಗಿಸಿ ... ಬಾಕಿಸಲ್ಪಡುವುದು

ನಂ|| ೩೬೫—೯ ೬೩೮ — ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೨೦ ನೇ ಆರ್ಟಿಕಲ್ ಅನುಸರಿಸಿ, ತುಮಕೂರು ಡಿಸ್ಟ್ರಿಕ್ಟ್ ಸಬ್ ಅಸಿಸ್ಟೆಂಟ್ ಕಮಿಷನರಾದ ಮೆ|| ಎಂ. ವೆಂಕಟರಾಮಯ್ಯನವರು, ೧೮೯೩ ನೇ ಇಸವಿ ಜೂಲೈ ೩ ನೇ ತಾರೀಖ್ ಮೊದಲು ೧೦ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿದ್ದಾರೆ

ನಂ|| ೩೭೮—೯ | ೩೮೬—೯೨ —ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೩೩ನೇ ಆರ್ಟಿಕಲ್ ಅನುಸರಿಸಿ, ಕೋಲಾರ ಗೋಲ್ಡ್‌ಫೀಲ್ಡ್ ಸ್ಪೆಷಲ್ ಮ್ಯಾಜಿಸ್ಟ್ರೇಟರಾದ ಮೆ|| ಹಯವದನರಾಯರು ೧೮೯೩ ನೇ ಇಸವಿ ಜೂನ್ ೨೦ ನೇ ತಾರೀಖ್ ಮೊದಲು ಆರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿದ್ದಾರೆ

ನಂ|| ೮೭೩—೯ | ೭೫೦—೯೨ — ಬೆಂಗಳೂರು ತಾಲ್ಲೂಕು ಮರಿಯಪ್ಪ ಬಿ. ಶೇಷಯ್ಯಂಗಾರ್ಯರು, ೧೮೯೩ ನೇ ಇಸವಿ ಜೂನ್ ೧ ನೇ ಮತ್ತು ೨೫೯೩—೫೦೦ನೇ ನಂಬರ್ ... ಮೂಲಕ ಕೊಡಲ್ಪಟ್ಟ ೩ ದಿನಗಳ ಕ್ಯಾಜುಯಲ್ ರಜಾ ಎರಡು ದಿನಗಳಿಗೆ ಜಾಸ್ತೀ ಮಾಡಲ್ಪಟ್ಟಿದೆ

೧೩ನೇ ಜೂಲೈ, ನಂ ೨೪೦—೯೩ ೬೭೩—೯೨ —ಮೈಸೂರು ಸರ್ವೀಸ್ ರೆಗ್ಯುಲೇಷನ್‌ಗಳ ೧೨೦ ನೇ ಆರ್ಟಿಕಲ್ ಅನುಸರಿಸಿ, ಶಿವಮೊಗ್ಗ ಡಿಸ್ಟ್ರಿಕ್ಟ್ ಪ್ರೊಬೇಷನರಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮೆ|| ... ಯವರು ಅವರು ಉಪಯೋಗಿಸಿಕೊಳ್ಳಬಹುದಾದ ತಾರೀಖ್ ಮೊದಲು ೧೦ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ

೧೫ ನೇ ಜೂಲೈ, ನಂ ೩೩೯—೯. ೫೩೨ — ಶ್ರೀರಂಗಪಟ್ಟಣದ ಅಮಲ್ದಾರ್ ಮೆ|| ಕೃಷ್ಣಯ್ಯಂಗಾರ್ಯರು ಬೇರೆ ಕೆಲಸದ ಮೇಲೆ ಗೈರ್ಹಾಜರಿರುವ ಕಾಲದಲ್ಲಿ, ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ ಆಫಿಸ್ ರೆವಿನ್ಯೂ ಹೆಡ್ ಅಕೌಂಟೆಂಟ್ ಟಿ. ಕೆ. ಸುಂದರರಾಜ ಅಯ್ಯಂಗಾರ್ಯರು ಮೇಲೆ ತಿಳಿಸಲ್ಪಟ್ಟ ತಾಲ್ಲೂಕಿನ ಅ

ಶಿರಸ್ತೆದಾರ್ ವ ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟ ರಾಗಿ ಕೆಲಸ ನೋಡುವಂತೆ ನೇಮಕರನ್ನಾಗಿ ಮಾಡಲ್ಪಟ್ಟಿರುತ್ತಾನೆ.

ನಂ|| ೪೦೪—೧ ೨೪೨ — ಮೆ|| ವಿನಿಕೋಂಬೆ ಯವರು, ೧೮೯೩ ನೇ ಇಸವಿ ಜೂಲೈ ೧೬ ನೇ ತಾರೀಖಿನ ಮಧ್ಯಾಹ್ನಾನಂತರ ಮೈಸೂರು ಎಕ್ಸೈಜ್ ಕಮಿಷನರ ಅಸಿಸ್ಟೆಂಟರಾಗಿ ತನ್ನ ಕೆಲಸದಲ್ಲಿ ಪ್ರವೇಶಿಸಿದರು.

ನಂ ೪೧೯—೧ ೬೦೪೪ — ಮೈಸೂರು ಸರ್ವಿಸ ರೆಗ್ಯುಲೇಷನ್‌ಗಳ ೧೭೦ ನೇ ಆರ್ಟಿಕಲ್ ಅನುಸರಿಸಿ, ಪ್ರೊಬೇಷನರ್ ಸಬ್ ಡಿವಿಜನ್ ಆಫೀಸರಾದ ಮ|| ಕೆ ಶ್ರೀನಿವಾಸರಾಯರವರು ೧೮೯೩ ನೇ ಇಸವಿ ಜೂನ್ ೬ ನೇ ತಾರೀಖು ಮೊದಲು ಸಿವಿಲ ಕಾರ್ಯಗಳ ಚಾರ್ಜನ್ನು ವಹಿಸಿಕೊಂಡಿರುತ್ತಾರೆ.

ನಂ|| ೪೨೧—೧. ೬೩೦—ಪ್ರೊಬೇಷನರ್ ಸಬ್ ಡಿವಿಜನ್ ಆಫೀಸರಾದ ಮ|| ಕೆ. ಸುಬ್ಬಣ್ಣನವರಿಗೆ ಯವರಿಗೆ, ೧೮೯೩ ನೇ ಇಸವಿ ಆಗಸ್ಟು ೧೯ ನೇ ತಾರೀಖು ೩೦೦—೧ ೭೪೩—೯೩ ನೇ ನಂಬರ್ ಉತ್ತರದಲ್ಲಿ ಪ್ರಕಟಿಸಲ್ಪಟ್ಟ ಒಂದು ವಾರದ ರಜಾ ಎರಡನೇ ಪ್ರಿವಿಲೇಜ ರಜಾ ಯನ್ನು ಮಂಜೂರು ಮಾಡಲ್ಪಟ್ಟಿದೆ.

ನಂ ೪೩೨—೧ ೬೬೦—೧೮೯೩ ನೇ ಇಸವಿ ೩ ನೇ ನಂಬರ್ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟಿನ ೬ ನೇ ಸೆಕ್ಷನ್ ಅನುಸರಿಸಿ, ಸ್ಪೆಶಲ್ ಸಬ್ ರಿಜಿಸ್ಟ್ರಾರರಿಗೆ ಇವರಡಿ ಬರೆದ ತಾಲೂಕುಗಳ ಸಂಬಂಧ ವಾದ ದಸ್ತೈವಜುಗಳನ್ನು ಸ್ವೀಕರಿಸಲು ಅಧಿಕಾರ ಕೊಡಲ್ಪಟ್ಟಿರುತ್ತದೆ —

ಮೈಸೂರು ಟೌನ್ ಮ್ಯಾಜಿಸ್ಟ್ರೇಟ್ ರವರ ಕೋರ್ಟಿನ ಸಬ್ ರಿಜಿಸ್ಟ್ರಾರ್ ... ಮಂಜೂರಾದ ನಂತರ ಸರ್ಕಾರದ ಮಾಡುವ ... ರಾಗುತ್ತದೆ ... ವನ್ನು ತೀರ್ಮಾನಿಸಲ್ಪಟ್ಟಿರುತ್ತದೆ ... ಕೊಡಲ್ಪಟ್ಟಿರುತ್ತದೆ.

ಬೆಂಗಳೂರು ... ೩ ನೇ ಗ್ರೇಡ ಸಬ್ ರಿಜಿಸ್ಟ್ರಾರ್ ... ಅವರು ... ನೇಮಿಸಲ್ಪಟ್ಟಿರುತ್ತಾರೆ.

---

## EXTRACTS

ಮುನಿಸ್ವಾಮಿಯವರ ಹಿಂದೂ ... ಬಗ್ಗೆ ... ಇರುವುದು ... [illegible]

---

ಉಳಿದು ಹೇಗೂ ಸಮಿಯಾದ ಹೋಯಿತು ಪಟಾಲವು ತಂದೆ ಹೊರ್ಟ ನಿರ್ಗಾವಿಲ್ಲದೆ ಹೋಯಿತು ತರುವಾಯ ಮಾಲ್ಗುಡಿಗೆ ಈ ಋಣಗಳು ಸರಕಾರದವರ ದ್ರವ್ಯವೆಂದು ಪಟಾಲಮಿನವರ ಸಹಾಯ ಹಿಡಲೂ ನಿಂತಿತು.

---

ಗೋಮತೀ ಮಸೂತ್ರದ ಕಾಯಿದೆಯ ಪರಿಣಾಮವು—ಈ ಕಾಯಿದೆಯು ಜಾರಿಗೆ ಬಂದು ಎರಡು ವರ್ಷದ ಕಾಲವು ಆಯಿತು ... ಇದರಿಂದ ಪ್ರತಿಕೂಲ ಹಿತವು ಎಷ್ಟು ಮಟ್ಟಿಗೆ ... ಹಿಂದುಸ್ಥಾನ ಸರಕಾರದವರು ... ಆದರೆ ಒಂದೇ ವರ್ಷದೊಳಗೆ ... ಪರಿಣಾಮವು ಸ್ಪಷ್ಟವಾಗಿ ... [illegible]

ಮಧ್ಯಂದರೆ—

... [illegible]

---

## BANGALORE CITY MUNICIPALITY.

### ಬೆಂಗಳೂರು ಸಿಟಿ ಮ್ಯೂನಿಸಿಪಾಲಿಟಿ.

ಸನ್ 1893 ನೇ ಇಸವಿ ಜೂಲೈ ೨೫ನೇ ತಾರೀಖು ಸೋಮವಾರ ಹಗಲು 8 ಘಂಟೆಗೆ, ಬೆಂಗಳೂರು ಸಿಟಿ ಮ್ಯೂನಿಸಿಪಲ್ ಸಂಘದವರು ಕೋಟೆಯೊಳಗಿರುವ ತಮ್ಮ ಆಫೀಸಿನಲ್ಲಿ ಸಾಮಾನ್ಯ ಸಭೆ ಸೇರುವರು.

ಇದರಡಿ ತಿಳಿಸಲ್ಪಡುವ ವಿಷಯಗಳು ಸಭೆಯ ಮುಂದೆ ಇಡಲ್ಪಡುವವು:—

1. ಸನ್ ೧೮೯೩ ನೇ ಇಸವಿ ಜೂನ್ ತಿಂಗಳ ... ನಗರದ ಜನನ ಮರಣ ಲೆಕ್ಕ, ಮರಣಲೆಕ್ಕ, ರೋಗಿಗಳಿಗೆ ಮಾಡಿದ ಚಿಕಿತ್ಸೆ ಮಾಡುವ ಮೆಡಿಕಲ್ ಆಫೀಸರನ ಲೆಕ್ಕ, ಜಮಾ, ವಸೂಲಿ, ಮತ್ತು ಬಾಕಿ ಪಟ್ಟಿ, ಕಾಮಗಾರಿಗಳ ಅಭಿವೃದ್ಧಿಯನ್ನು ಕುರಿತ ರಿಪೋರ್ಟ, ಮತ್ತು ... ಜನರನ್ನು ಕುರಿತ ಬಾಬು.

2. ಮಾರ್ಕೆಟ್ ... ಮ|| ಎಸ್. ... ನವರು ಸನ್ 1893 ನೇ ಇಸವಿ ಜೂನ್ 27 ನೇ ತಾರೀಖಿನಲ್ಲಿ ಬರೆದ 26 ನೇ ನಂಬರ್ ಚೀಟಿ.

3. ... ಮ್ಯೂನಿಸಿಪಲ್ ... ಮ|| ಎಸ್. ರಾಮಸ್ವಾಮಿರವರು 1893 ನೇ ಇಸವಿ ಜೂನ್ 26 ನೇ ತಾರೀಖಿನಲ್ಲಿ ಬರೆದ 25 ನೇ ನಂಬರ್ ಚೀಟಿ.

4. ಮ|| ... ಸಿಟಿ ಇಂಪ್ರೂವ್‌ಮೆಂಟ್ ಕಮಿಟಿಯವರಲ್ಲಿ ... ವಿಷಯದಲ್ಲಿ ಮ್ಯೂನಿಸಿಪಲ್ ಎಕ್ಸಿಕ್ಯೂಟಿವ್ ಇಂಜಿನಿಯರವರು, 1893 ನೇ ಇಸವಿ ಜೂಲೈ 3 ನೇ ತಾರೀಖಿನಲ್ಲಿ ಬರೆದ 1061 ನೇ ನಂಬರ್ ಬಾಬು.

5. 2 ನೇ ನಂಬರ್ ... ವಿಷಯವನ್ನು ಕುರಿತ ಜ್ಞಾಪಕ.

6. ... ರೂಪಾಯಿಗಳ ... 595 ರೂಪಾಯಿಗಳ ...

7. ... ಪತ್ರಗಳು.

8. ... ಜೂನ್ 19 ನೇ ತಾರೀಖಿನಲ್ಲಿ ಬರೆದ 118 ನೇ ನಂಬರ್ ಬಾಬು, ಮತ್ತು ... ಬರೆದ ಪತ್ರ.

9. ... 7 ರೂಪಾಯಿಗಳ ... 1893 ನೇ ಇಸವಿ ಜೂಲೈ ... ಬರೆದ 253 ನೇ ನಂಬರ್ ಚೀಟಿ.

10. ಇದರಡಿ ತಿಳಿಸಲ್ಪಡುವ ಅಂಶಗಳನ್ನು ಸೂಚಿಸಿ ಮ್ಯೂನಿಸಿಪಲ್ ಕಮಿಷನರ್ ಮ|| ... ರವರ ಸನ್ 1893 ನೇ ಇಸವಿ ಜೂನ್ ೧೦ ನೇ ತಾರೀಖಿನಲ್ಲಿ ಬರೆದ ಚೀಟಿ:

1. ... 12 ರೂಪಾಯಿಗಳ ... ಲೈಟಿಂಗ್ ಇನ್ಸ್‌ಪೆಕ್ಟರ್‌ಗಳ ನೇಮಕ ... ಕೇಳಿಕೊಳ್ಳಬೇಕಾದ್ದು.
2. ಸಂಸ್ಕೃತ ... ಮ್ಯೂನಿಸಿಪಾಲಿಟಿಯಿಂದ ಕೊಡಲ್ಪಡುವ ಸಹಾಯದ್ರವ್ಯವನ್ನು ನಿಲ್ಲಿಸಬೇಕಾದ್ದು.
3. ... 1 ... ಹೆಚ್ಚು ...
4. ಮ್ಯೂನಿಸಿಪಲ್ ಕಮಿಷನರುಗಳು ... ಸೇರಿಸಬೇಕಾದ್ದು.
5. ಆರೋಗ್ಯ ಸ್ಥಿತಿ ... ಬಗ್ಗೆ ... ಮಾಡಬೇಕಾದ್ದು.

11. ಮುಂದಿನ ವರ್ಷದ ... ಮ್ಯೂನಿಸಿಪಲ್ ಕಮಿಷನರುಗಳ ಚುನಾವಣೆ ಮತ್ತು ... ವಿಷಯಗಳು.

12. ಮುಂದಿನ ಸರ್ಕಾರಿ ... ವ್ಯವಸ್ಥೆ
(1) ... ದರ
(2) ... ಬಗ್ಗೆ ದರ
(3) ... ಬಗ್ಗೆ ದರ
(4) ... ಬಗ್ಗೆ ದರ
(5) ...
(6) ... ದರ

ಇದರಡಿ ತಿಳಿಸಲ್ಪಡುವ ದರಗಳು —

| | | ರೂ | ಆ | ಪೈ | |
|---|---|---|---|---|---|
| ... | ದರ | 2 | 0 | 0 | ... 1 ಕ್ಕೆ. |
| ... | , | 1 | 14 | 0 | „ |
| ... | , | 1 | 8 | 0 | „ |
| ... | „ | 0 | 10 | 0 | „ |
| ... | „ | 0 | 6 | 0 | „ |
| ... | „ | 0 | 6 | 0 | „ |
| ... | „ | 0 | 0 | 2 | ... 1 ಕ್ಕೆ. |

13. ... ಇಟ್ಟುಕೊಳ್ಳಬೇಕಾದ್ದು.

14. ಮ್ಯೂನಿಸಿಪಲ್ ಕಮಿಷನರು ... ಇದರಡಿ ತಿಳಿಸಲ್ಪಡುವ ವಿಷಯಗಳನ್ನು ಸೂಚಿಸಿ 1893 ನೇ ಇಸವಿ ಜೂಲೈ 4 ನೇ ತಾರೀಖಿನಲ್ಲಿ ಬರೆದ ಚೀಟಿ—

(1) ... ಮ್ಯೂನಿಸಿಪಲ್ ಸರಹದ್ದಿನೊಳಗಿರುವ ಭೂಮಿಗಳು, ... ಆವಶ್ಯಕವು.
(2) ಮ್ಯೂನಿಸಿಪಲ್ ಕಮಿಷನರುಗಳ ಅನುಮತಿಯಿಲ್ಲದೆ ಮ್ಯೂನಿಸಿಪಲ್ ಸರಹದ್ದಿನೊಳಗೆ ಅಭಿವೃದ್ಧಿಯು ... ಮತ್ತು ...
(3) ಮ್ಯೂನಿಸಿಪಲ್ ... ಗವರ್ನಮೆಂಟಿನವರು ... ಬಗ್ಗೆ ಮ್ಯೂನಿಸಿಪಲ್ ಕಮಿಷನರುಗಳಿಗೆ ... ತಿಳಿಸಬೇಕಾದ್ದು
(4) ... ಬೇಕಾದ್ದು.

15. ... ಮ್ಯೂನಿಸಿಪಲ್ ಎಕ್ಸಿಕ್ಯೂಟಿವ್ ಇಂಜಿನಿಯರವರು ... ಬರೆದ 1893 ನೇ ಇಸವಿ ಜೂಲೈ 10 ನೇ ತಾರೀಖಿನ ಬಾಬು

16. ... ವಿಷಯದಲ್ಲಿ ... ಮ|| ... 1893 ನೇ ಇಸವಿ ಜೂಲೈ 11ನೇ ತಾರೀಖಿನಲ್ಲಿ ಬರೆದ ಚೀಟಿ.

17. ಸನ್ 1891—92 ನೇ ಇಸವಿಗೆ ಬೆಂಗಳೂರು ಸಿಟಿ ಮ್ಯೂನಿಸಿಪಾಲಿಟಿಯ ಸ್ಟೇಟ್‌ಮೆಂಟ್ ... ಗವರ್ನಮೆಂಟಿನವರು ಸಹಿಯ 1893 ನೇ ಇಸವಿ ಜೂನ್ 16 ನೇ ತಾರೀಖಿನ 20807—8—L. 272—92 ನೇ ನಂಬರ್ ಪ್ರೊಸೀಡಿಂಗ್ಸ್.

18. ಇದರಡಿ ತಿಳಿಸಲ್ಪಡುವ ... ಬಗ್ಗೆ ಕಳುಹಿಸಿ, ಮ್ಯೂನಿಸಿಪಲ್ ... ಇಂಜಿನಿಯರವರು ಬರೆದ 1893 ನೇ ಇಸವಿ ಜೂನ್ 13 ನೇ ತಾರೀಖಿನ 33 ನೇ ನಂಬರ್ ಬಾಬು.

## ಸಿಟಿ ರಸ್ತೆಗಳು ಮತ್ತು ಇತರ ಕಾಮಗಾರಿಗಳು.

### ರಸ್ತೆಗಳು.

| | | | | ರೂ |
|---|---|---|---|---|
| ಮಾರ್ಕೆಟ್ ರಸ್ತೆಗೆ ಕೆಂಪು ಮರುಜು ಕಲ್ಲು ಹಾಕುವದಕ್ಕೆ ಅಂದಾಜ್ | | | ... | 568 |
| ಧರ್ಮಾಂಬುಧಿ ಕೆರೆ ಕಟ್ಟೆ ರಸ್ತೆಗೆ | " | " | ... | 851 |
| ಜೈಲ್ ರಸ್ತೆಗೆ | " | " | ... | 851 |
| ಹಳೇ ಬಟ್ ರಸ್ತೆಗೆ | " | " | ... | 851 |
| ತಾಲ್ಲೂಕ್ ಕಚ್ಚೇರಿ ರಸ್ತೆಗೆ ಕಲ್ಲುಗಟ್ಟೆ ಹಾಕುವದಕ್ಕೆ | " | | .. | 542 |
| ನಗರ್ತರಪೇಟೆ ರಸ್ತೆಗೆ | " | " | ... | 542 |
| ಕೋಟೆಯ ದೊಡ್ಡ ರಸ್ತೆಗೆ | " | " | ... | 1,304 |
| ಸಿದ್ದಿ ರಸ್ತೆಗೆ | " | " | . | 816 |
| ಕಬ್ಬನ್‌ಪೇಟೆ ಬೀದಿಗೆ ಜಂಗ್ಲಿ ಜಲ್ಲಿ ಹಾಕುವದಕ್ಕೆ | | " | ... | 933 |
| ಕೋಟೆ ರಾಂಪಾರ್ಟ್ ರಸ್ತೆಗೆ ಗ್ರಾವಲ್ ಹಾಕುವದಕ್ಕೆ | | " | ... | 615 |
| | | | ಜುಮ್ಲಾ... | 7,873 |

### ಮೊಹರಿಗಳ ರಿಪೇರಿ.

| | | |
|---|---|---|
| ಸರ್ 1893—94 ನೇ ಇಸವಿಗೆ, ಬಾಳಿಹಾತಗಳು ಪೇಠೆ ಟೌನ್ ಮತ್ತು ಅಗ್ರಹಾರ ಗ್ರಾಮಗಳ ರಸ್ತೆಗಳ ರಿಪೇರಿಗೆ ... | ... | 2,100 |

### ಸಾಧಾರಣ ರಿಪೇರಿಗಳು.

| | | |
|---|---|---|
| ಸರ್1893—94 ನೇ ಇಸವಿಯಲ್ಲಿ ಸಿಟಿ ಮ್ಯುನಿಸಿಪಾಲಿಟಿಯೊಳಗೆ ಟೌನ್ ಮತ್ತು ಅಗ್ರಹಾರ ಗ್ರಾಮಗಳಲ್ಲಿನ ರಸ್ತೆಗಳ ಸಾಮಾನ್ಯ ರಿಪೇರಿ | .. | 7,000 |
| | ಜುಮ್ಲಾ. | 16,973 |

## ಆಸ್‌ಪಾಸ್ ಗ್ರಾಮಗಳ ಮತ್ತು ಡಿಸ್ಟ್ರಿಕ್ಟ್ ಫಂಡ್ ರಸ್ತೆಗಳು.

### ಕೆಂಪು ಮರುಜು ಕಲ್ಲು.

| | | | | |
|---|---|---|---|---|
| ಅವಿನ್ಯು ರಸ್ತೆಗೆ ಕೆಂಪು ಮರುಜು ಕಲ್ಲು ಹಾಕುವದಕ್ಕೆ ಅಂದಾಜ್ | | | ... | 1,947 |
| ಹೊಸಕೋಟೆ ರಸ್ತೆಗೆ | ಡಿಟೊ | ಡಿಟೊ | ... | 940 |
| ಪೋಸ್ಟಾಫೀಸ್ ರಸ್ತೆಗೆ | ಡಿಟೊ | ಡಿಟೊ | ... | 541 |

### ಕಲ್ಲುಬಂಡೆ ಜಲ್ಲಿ.

| | | | | |
|---|---|---|---|---|
| ಕೋಟೆ ಬಾಗಿಲಿನ ಹೊಸೂರು ರಸ್ತೆಗೆ ಕಲ್ಲು ಜಲ್ಲಿ ಹಾಕುವದಕ್ಕೆ ಅಂದಾಜ್ | | | ... | 1,294 |
| ಮೈಸೂರು ರಸ್ತೆಗೆ | ಡಿಟೊ | ಡಿಟೊ | ... | 2,587 |
| ಹೊಸಕೋಟೆ ರಸ್ತೆಗೆ | ಡಿಟೊ | ಡಿಟೊ | ... | 1,696 |
| ಬಳ್ಳಾರಿ ರಸ್ತೆಗೆ | ಡಿಟೊ | ಡಿಟೊ | ... | 1,034 |
| ಮಿಲ್ಲರ್ ರಸ್ತೆಗೆ | ಡಿಟೊ | ಡಿಟೊ | .. | 618 |
| ಸುಬೇದಾರ್ ಛತ್ರದ ರಸ್ತೆಗೆ | ಡಿಟೊ | ಡಿಟೊ | ... | 2,065 |
| ರೇಸ್‌ಕೋರ್ಸ್ ರಸ್ತೆಗೆ | ಡಿಟೊ | ಡಿಟೊ | ... | 1,941 |

### ಜಂಗ್ಲೀ ಕಲ್ಲು.

ಜಂಗ್ಲೀಕಲ್ಲು ಹಾಕುವದಕ್ಕೆ ಅಂದಾಜ್.

| | | | |
|---|---|---|---|
| ಮೈಸೂರು ರಸ್ತೆಯಿಂದ ರೇಸ್ ಕೋರ್ಸ್‌ಗೆ | ... | ... | 732 |
| ಲಾಲ್‌ಬಾಗ್ ರಸ್ತೆಯಿಂದ ರೇಸ್‌ಕೋರ್ಸ್‌ಗೆ | ... | .... | 718 |
| | | ಜುಮ್ಲಾ .. | 16,119 |

## ಸರ್ ೧೮೯೩—೯೪ ನೇ ಸಾಲಿನಲ್ಲಿ ಪೂರ್ತಿಯಾಗದ ಕಾಮಗಾರಿಗಳು.

### ರಸ್ತೆಗಳು.

| | | | | ರೂ. |
|---|---|---|---|---|
| ಅವಿನ್ಯು ರಸ್ತೆ | ಫರ್ಲಾಂಗ್ | 4 6/2 | ... | 313 |
| ತಾಲ್ಲೂಕ್ ಕಚ್ಚೇರಿ ರಸ್ತೆ | " | 7 ನೇ | ... | 248 |
| ಕನ್ನಿಂಗ್‌ಹ್ಯಾಂ ರಸ್ತೆ | " | 4 ನೇ | ... | 86 |
| ಸುಬೇದಾರ್ ಛತ್ರದ ರಸ್ತೆ | " | 13 ನೇ | .. | 180 |
| ತುಮಕೂರ್ ರಸ್ತೆ | " | 8 | ... | 62 |
| ಬಳ್ಳಾರಿ ರಸ್ತೆ | " | 8 ಮತ್ತು 9 | ... | 175 |
| ಕಾಕ್‌ಬರ್ನ್‌ಹಳ್ಳಿ ರಸ್ತೆ | " | 5,6,7,8 | .. | 819 |
| ಮಾಮೂಲ್‌ಪೇಟೆರಸ್ತೆ | " | 2 ಮತ್ತು 3 | ... | 168 |
| ಮಾಗಡಿ ರಸ್ತೆ | " | 3 ಮತ್ತು 4 | ... | 303 |
| ಅರಳೇಪೇಟೆ ರಸ್ತೆ | " | 3 ಮತ್ತು 4 | ... | 384 |
| ಮೈಸೂರು ರಸ್ತೆ | " | 8 ಮತ್ತು 9 | ... | 450 |
| ಸುಲ್ತಾನ್‌ಪೇಟೆ ರಸ್ತೆ ಮತ್ತು ತಿಗಳರಪೇಟೆ | " | 1,2,3 | ... | 613 |
| ರೇಸ್‌ಕೋರ್ಸ್ ರಸ್ತೆಯಿಂದ ಮೈಸೂರು ರಸ್ತೆ | " | 15 ಮತ್ತು 20 | .. | 127 |
| ಹೊಸಕೋಟೆ ರಸ್ತೆ | " | 8/2 | ... | 46 |
| ಬಳೇಪೇಟೆ ರಸ್ತೆ | " | 1 ಮತ್ತು 2 | ... | 274 |
| ರಾಣೀಸಿಂಗ್‌ಪೇಟೆ ರಸ್ತೆ | " | 1 ಮತ್ತು 2 | .. | 281 |
| ಅವಿನ್ಯು ಕ್ಯಾತ್‌ಕಾರ್ಟ್ ರಸ್ತೆ | " | 7,17,18 | ... | 313 |
| ಪೋಸ್ಟಾಫೀಸ್ ರಸ್ತೆ | " | 2,4,8 | ... | 250 |
| | | | ಜುಮ್ಲಾ ... | 5,133 |

### ಕಟ್ಟಡಗಳು.

| | | | |
|---|---|---|---|
| ಮ್ಯುನಿಸಿಪಲ್ ಆಫೀಸಿನ ದುರಸ್ತಿಗೆ | ... | .. | 497 |
| ಪೆಟ್ಟೆ ಮಾರ್ಕೆಟ್ ದುರಸ್ತಿಗೆ | ... | . | 46 |
| ಖಸಾಯಿ ಅಂಗಡಿ ದುರಸ್ತಿಗೆ | .. | ... | 87 |
| ಗವೀಪುರದಲ್ಲಿ ಪಾಯಖಾನೆ ಕಟ್ಟುವದಕ್ಕೆ | ... | ... | 19 |
| ಹೊಸೂರ್ ಗೇಟ್‌ಬಳಿ ಟ್ರಾನ್ಸ್‌ಫರ್ ಡೆಪ್ಪೋ ಕಟ್ಟುವದಕ್ಕೆ ... | | ... | 219 |
| ಉಪ್ಪಾರ ಹಳ್ಳಿಯಲ್ಲಿ ಪಾಯಖಾನೆ ಕಟ್ಟುವದಕ್ಕೆ | ... | ... | 98 |
| ಲಾಲ್ ಮಿರ್ಚಿ ಪಾಠಶಾಲೆಗೆ ಸೇರಿದ ಉಪಾಧ್ಯಾಯರ ಮನೆ ಹಿಂದುಗಡೆ ಹುಡುಗರಿಗೆ ಕಲ್ಲಿನಿಂದ ಪಾಯಖಾನೆ ಕಟ್ಟುವದಕ್ಕೆ | | .. | 25 |
| | | ಜುಮ್ಲಾ ... | 199 |

## ದುರಸ್ತು ಮತ್ತು ಇತರ ಕಾಮಗಾರಿಗಳು.

| | |
|---|---|
| ಬಳ್ಳಾರಿ ರಸ್ತೆ ಸಂಧಿಸುವ ಸ್ಥಳದಲ್ಲಿ ಅರಮನೆ ಅಡ್ಡ ರಸ್ತೆಯನ್ನು ಅಗಲ ಮಾಡುವದಕ್ಕೆ | 38 |

### ನೀರಾವರಿ ಕಾಮಗಾರಿಗಳು.

| | | | |
|---|---|---|---|
| ಕಾರಂಜಿ ಕೆರೆಯೊಳಗೆ ಕುಂಟೆ ಅಗೆಯುವದಕ್ಕೆ | ... | ... | 328 |
| ಗುಂಡೋಪಂತ ಇರುವ ಭಾವಿಗೆ ಕೈಪಿಡಿ ಗೋಡೆ ಕಟ್ಟುವದಕ್ಕೆ | | ... | 80 |
| ಉಪ್ಪಾರಹಳ್ಳಿ ಪಿಂಟೋ ಭಾವಿಗೆ ಕೈಪಿಡಿ ಗೋಡೆ ಕಟ್ಟುವದಕ್ಕೆ | | .. | 155 |
| ಸೇಟ್ ಮಾರ್ವಾಡಿಯವರ ಛತ್ರದಲ್ಲಿ ಒಂದು ಭಾವಿ ತೋಡುವದಕ್ಕೆ | | ... | 308 |
| ತಾರಾಮಂಡಲದ ಭಾವಿಗೆ | .. | .. | 245 |
| ಪುಟ್ಟಣ್ಣನ ಭಾವಿಗೆ | . | ... | 348 |
| ಧರ್ಮಾಂಬುಧಿ ಕೆರೆಯ ಅಡ್ಡಕಟ್ಟೆಗೆ | .. | .. | 685 |
| ಕಬ್ಬನ್‌ಪೇಟೆ ಭಾವಿಯನ್ನು ಇಳಿಸುವದಕ್ಕೆ | . | ... | 67 |
| | | ಜುಮ್ಲಾ | 2,161 |
| | | ಒಟ್ಟು ಜುಮ್ಲಾ | 8,323 |

19 ಮ|| ಎಸ್. ರಾಮಯ್ಯನವರು ಬರೆದ ಸರ್ 1893 ನೇ ಇಸವಿ ಏಪ್ರಿಲ್ 13 ನೇ ತಾರೀಖಿನ 14 ನೇ ನಂಬರ ಕಾಗದದಲ್ಲಿ ತಿಳಿಸಿರುವ ವಿಷಯಗಳು.—

(a) ಧರ್ಮಾಂಬುಧಿ ಕೆರೆಗೆ ನೀರು ಬರುವ ಪ್ರದೇಶಗಳಲ್ಲಿನ ಮಣ್ಣು ಮುಂತಾದ ಕಸದ ಭಾಗಗಳನ್ನು ತೆಗೆದು ಹಾಕಿಸಬೇಕೆಂಬದು.

(b) ರಸ್ತೆಯನ್ನು ಅಗಲಮಾಡುವದಕ್ಕಾಗಿ ಮ|| ನಾರಾಯಣರಾಯರ ಮನೆ ಮುಂದುಗಡೆ ಇರುವ ಸೂರಪ್ಪನೆಂಬವರ ಒಂದು ಸಣ್ಣ ಮನೆಯನ್ನು ಕಿತ್ತು ಹಾಕತಕ್ಕದ್ದು.

20 ಸುಲ್ತಾನುಲ್ ಅಕ್‌ಬಾರ ಎಂಬ ಪತ್ರಿಕೆಯ ಪ್ರೊಪ್ರೈಟರು ಮ್ಯುನಿಸಿಪಲ್ ನೋಟೀಸುಗಳನ್ನು ನೂರೇಳನೂ (10) ಹತ್ತು ರೂಪಾಯಿ ಲೆಕ್ಕದಲ್ಲಿ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸುವದಕ್ಕೆ ಕೊಡಬೇಕೆಂಬದಾಗಿ ಬರೆದುಕೊಂಡ 93ನೇ ಇಸವಿ ಮೇ 22 ನೇ ತಾರೀಖಿನ 142 ನೇ ನಂಬರ ಅರ್ಜಿ.

21 ಸಂಪಂಗಿ ಕೆರೆಯಲ್ಲಿರುವ ಕುಂಟೆಯ ಪಕ್ಕಗಳಿಗೆ ಕಲ್ಲು ಕಟ್ಟುವದಕ್ಕೆ ಅಂದಾಜ್.

22 ನೀರಿನ ಸರಬರಾಯಿ ವಿಷಯದಲ್ಲಿ ಆದ ಖರ್ಚಿನ ತಖ್ತೆಯನ್ನು ತೋರಿಸುವ ಯಾದಿ.

23 ಇದರಡಿ ಬರೆಯಲ್ಪಡುವ ಪಾಠಶಾಲೆಗಳ ನಿರ್ವಹಣಾ ಕಾರ್ಯವನ್ನು ಗವರ್ನಮೆಂಟಿಗೆ ವರ್ಗ ಮಾಡುವ ವಿಷಯಕ್ಕೆ ಸಂಬಂಧಪಟ್ಟ ಯಾದಿ ಮತ್ತು ಕಾಗದಗಳು.

(1) ಮ್ಯುನಿಸಿಪಲ್ ಇಂಗ್ಲಿಷ್ ಸ್ಕೂಲ್.

(2) ಹನುಮಂತನಗರ ಕನ್ನಡಸ್ಕೂಲ್ ಮತ್ತು ಇಂಗ್ಲಿಷ್ ಸ್ಕೂಲನ್ನು ದುರಸ್ತು ಮಾಡುವದಕ್ಕೆ ಅಂದಾಜ್‌ಪಟ್ಟಿ.

24 ಬಿನ್ನಿ ಕಾಫಿ ಕಾರ್ಖಾನೆಯ ಮ್ಯಾನೇಜರು ತಮ್ಮ ಕಾರ್ಖಾನೆಗೆ ಹತ್ತಿರ ಇರುವ ಖಾಲಿ ಜಮೀನನ್ನು ಭಾವಿ ತೋಡುವ ಉದ್ದೇಶದಿಂದ ತಮಗೆ ಕೊಡಿಸಬೇಕೆಂದು ಬರೆದುಕೊಂಡ ಜೂನ್ 11 ನೇ ತಾರೀಖಿನ ಅರ್ಜಿ.

25 ಹೊಸೂರು ಪೇಟೆಯಲ್ಲಿ ತಮ್ಮ ಮನೆಗೆ ಸಮೀಪದಲ್ಲಿರುವ ಒಂದು ಖಾಲಿ ಜಮೀನನ್ನು ತಮಗೆ ಕೊಡಿಸಬೇಕೆಂಬದಾಗಿಯೂ, ಮತ್ತು ಹೊಸ ಬಾವಿಯನ್ನು ಕೆಳಗಿನ ವರ್ಗಗಳ ನಾನಾ ಜಾತಿ ಜನಗಳ ಉಪಯೋಗಾರ್ಥವಾಗಿ ಬಿಡುವದಾಗಿಯೂ ಮ|| ವಿ. ಎಸ್. ನರಸಿಂಹಯ್ಯಂಗಾರ್ಯರು ಬರೆದುಕೊಂಡ 93 ನೇ ಇಸವಿ ಮಾರ್ಚಿ 4 ನೇ ತಾರೀಖಿನ ಅರ್ಜಿ.

26 ಅಂಕಣ 1 ಕ್ಕೆ 1—6—0 ಮೇರೆಗೆ ಪೇಟೆ ಹಾಕತಕ್ಕ ಎಲ್ಲಿ—ತ್ತನ್ನು ಸಿಪಾಯಿಗೆ ಹೊಸ ತಿಗಳರ ಪೇಟೆಯಲ್ಲಿ ಮನೆ ಕಟ್ಟಿಕೊಳ್ಳುವದಕ್ಕಾಗಿ ಕೊಟ್ಟ ಸ್ಥಳದ ವಿಷಯವಾಗಿ ಹುಕುಂ ಕೊಟ್ಟ 92 ನೇ ಇಸವಿ ಜೂನ್ 2ನೇ ತಾರೀಖಿನ 20347—430—92 ನೇ ನಂಬರಿನ ಗವರ್ನಮೆಂಟ್ ಪ್ರೊಸೀಡಿಂಗ್ಸ್.

27 1893 ನೇ ಇಸವಿ ಏಪ್ರಿಲ್ ಮಾಹೆಯ ಮ್ಯುನಿಸಿಪಲ್ ಲೆಕ್ಕಗಳನ್ನು ತನಿಖೆಮಾಡಿದ ಆಡಿಟರವರ ರಿಪೋರ್ಟ್.

28 93ನೇ ಇಸವಿ ಜೂನ್ 5ನೇ ತಾರೀಖಿನ 20560—ಎಲ್ ಎಫ್. 132 92ನೇ ನಂಬರಿನ ಗವರ್ನಮೆಂಟ್ ಪ್ರೊಸೀಡಿಂಗ್ಸ್.

---

ಸರ್ 1893 ನೇ ಇಸವಿ ಜೂಲೈ 31 ನೇ ತಾರೀಖಿನಲ್ಲಿ ಸಭೆ ಸೇರುವ ಮ್ಯುನಿಸಿಪಲ್ ಸಂಘದ ಮುಂದೆ ಇಡಲ್ಪಡಬೇಕಾಗಿರುವ ಜಾಸ್ತೀ ವಿಷಯಗಳು.

1. ಅರಮನೆಯ ಪೂರ್ವದ ಬಾಗಿಲ ಬಳಿ ಇರುವ ಭೂಮಿಯನ್ನು ವಶಕ್ಕೆ ತೆಗೆದುಕೊಳ್ಳುವ ವಿಷಯದಲ್ಲಿ, 1893 ನೇ ಇಸವಿ ಜೂಲೈ 18 ನೇ ತಾರೀಖಿನಲ್ಲಿ ವೈಸ್ ಪ್ರೆಸಿಡೆಂಟರು ಬರೆದ ಯಾದಿ.

2. ಕವಾಲ್‌ದಾರ್ ಮುಂಬಾರನು ತೊಟ್ಟಿ ಹೊರಗಿನ ಪೇಟೆ ಬಗ್ಗೆ ಹುಕುಂ ಬಂದ ವಸೂಲನ್ನು ಕಟ್ಟಿದ ವಿಷಯದಲ್ಲಿ ಸರ್ 1893 ನೇ ಇಸವಿ ಜೂನ್ 28 ನೇ ತಾರೀಖಿನಲ್ಲಿ ವೈಸ್ ಪ್ರೆಸಿಡೆಂಟರವರು ಬರೆದ ಯಾದಿ.

3. ಮಲ್ಲಯ್ಯ ಮತ್ತು ನಂಜುಂಡಯ್ಯನವರು ಅವರಿಗೆ ಮನೆ ಕಟ್ಟಿಕೊಳ್ಳುವದಕ್ಕೆ ಅವಕಾಶ ಕೊಡುವ ಷರತ್ತಿನ ಮೇಲೆ ರಸ್ತೆಯ ಪಕ್ಕದಲ್ಲಿರುವ ಕಲ್ಲುಗಳನ್ನು ತಮ್ಮ ಖರ್ಚಿನಲ್ಲಿ ತೆಗೆಯಿಸಿ ಹಾಕುವದಾಗಿ 1893 ನೇ ಇಸವಿ ಏಪ್ರಿಲ್ 17 ನೇ ತಾರೀಖಿನಲ್ಲಿ ಬರೆದುಕೊಂಡ ಅರ್ಜಿ.

4. ಮೆಸರ್ಸ್ ಬಿನ್ನಿ ಕಂಪೆನಿಯವರು ಕಾಲುವೆಗಳನ್ನು ದುರಸ್ತು ಮಾಡಿದ ಬಗ್ಗೆ ಅವರ ಬಿಲ್ಲುಗಳಿಗೆ ಹಣ ಕೊಡಬೇಕಾದ ವಿಷಯದಲ್ಲಿ ವೈಸ್ ಪ್ರೆಸಿಡೆಂಟರವರು ಬರೆದ ಯಾದಿ.

5. ಮ್ಯುನಿಸಿಪಲ್ ತೋಟದಲ್ಲಿ ನಡೆಯುತ್ತಿದ್ದ ನರ್ಸರಿ ಕೆಲಸವನ್ನು ನಿಲ್ಲಿಸಬೇಕೆಂದು ಹೊರ್ಟಿಕಲ್ಚರಲ್ ಸೂಪರಿಂಟೆಂಡೆಂಟವರು ಮಾಡಿದ ನಿರ್ಣಯದ ಮೇಲೆ ಬೆಂಗಳೂರು ನಿವಾಸಿಗಳು ಬರೆದುಕೊಂಡ ಅರ್ಜಿಯನ್ನು ಅಪ್ರೂವ್‌ಮೆಂಟಿನ ಬಗ್ಗೆ ಕಳುಹಿಸಿ, 1893ನೇ ಇಸವಿ ಜೂಲೈ ನಾಲ್ಕನೇ ತಾರೀಖಿನಲ್ಲಿ ಚೀಫ್ ಸೆಕ್ರೆಟರಿಯವರು ಬರೆದ 12—271—92 ನೇ ನಂಬರ ಯಾದಿ.

6. ಈಚೆಗೆ ಪ್ರಾರಂಭಿಸಲ್ಪಟ್ಟದ್ದಾದ ವಿವಾಹ ಕೆಲಸಕ್ಕೆ ಕಮಿಷನರುಗಳು ಸಹಾಯಕರಾಗಿರಬೇಕಾದ ವಿಷಯದಲ್ಲಿ ವೈಸ್ ಪ್ರೆಸಿಡೆಂಟರು 1893 ನೇ ಇಸವಿ ಜೂಲೈ 6 ನೇ ತಾರೀಖಿನಲ್ಲಿ ಬರೆದ ಯಾದಿ.

7 ಸರ್ 1893 ನೇ ಇಸವಿ ಜೂನ್ 1 ನೇ ತಾರೀಖಿನಲ್ಲಿ ಮೈಸೂರು ವೈಸ್ ಪ್ರೆಸಿಡೆಂಟರವರು ಬರೆದ 951 ನೇ ನಂಬರ ಕಾಗದವನ್ನು ಹುಕುಂ ಬಗ್ಗೆ ಕಳುಹಿಸಿ ವೈಸ್ ಪ್ರೆಸಿಡೆಂಟರು 1893 ನೇ ಇಸವಿ ಜೂನ್ 28 ನೇ ತಾರೀಖಿನಲ್ಲಿ ಬರೆದ ಯಾದಿ.

8. ತಾರಾಮಂಡಲ ಭಾವಿಯನ್ನು ಆಳವಾಗಿ ಮಾಡುವದಕ್ಕೆ ಬಗ್ಗೆ 8 ಅಡಿಗಳ ಮಧ್ಯ ಅಳತೆಯುಳ್ಳ ಒಂದು ತೊಟ್ಟಿಯನ್ನು ಕಟ್ಟಿಸುವದಕ್ಕಾಗಿ 797 ರೂಪಾಯಿಗಳ ಅಂದಾಜ್ ಪಟ್ಟಿ.

9. ಪುಟ್ಟಣ್ಣನ ಭಾವಿಗೆ ಸದರಿ ಬಗ್ಗೆ 1,100 ರೂಪಾಯಿಗಳ ಅಂದಾಜ್ ಪಟ್ಟಿ.

10 ಬಿಡಿಕಯ್ಯನ ಛತ್ರದಲ್ಲಿ ಒಂದು ಭಾವಿಯನ್ನು ಅಗೆಯಿಸುವದಕ್ಕೆ 618 ರೂಪಾಯಿಗಳ ಅಂದಾಜ್ ಪಟ್ಟಿ.

11. ಕಾಶೀ ವಿಶ್ವೇಶ್ವರ ದೇವಸ್ಥಾನದ ಬಳಿ ಮ|| ಶ್ರೀನಿವಾಸಯ್ಯಂಗಾರ್ಯರವರಿಗೆ ಅವರ ಮನೆ ಮುಂದುಗಡೆ ಭೂಮಿಯಂ ಕೊಡುವ ವಿಷಯ.

12 ಬೆಂಗಳೂರು ಸಿಟಿಯ ಮೊಹರಿಗಳ ವಿಷಯದಲ್ಲಿ ಸ್ಕೀಂ ತಯಾರು ಮಾಡಬೇಕಾದ್ದನ್ನು ಕುರಿತು 1893 ನೇ ಇಸವಿ ಜೂಲೈ 16 ನೇ ತಾರೀಖಿನಲ್ಲಿ ಪ್ರೆಸಿಡೆಂಟರು ಬರೆದ ಯಾದಿ.

13. ಪ್ರತಿ ವಾರದಲ್ಲೂ ಜೋಡಿಯವರು ಮೀಟಿಂಗ್ ಮಾಡಬೇಕು, ಅಥವಾ ರೆಗ್ಯುಲೇಷನ್ ಪ್ರಕಾರ ಅನಾನುಕೂಲವಾದ ಕೆಲವು ಸಂದರ್ಭಗಳನ್ನು ಅವಲೋಕಿಸಿ ಅನುಮತಿ ಗವರ್ನಮೆಂಟಿನವರನ್ನು ಕೇಳಬೇಕೆಂದು ಸೂಚಿಸಿ 1893 ನೇ ಇಸವಿ ಜೂಲೈ 18ನೇ ತಾರೀಖಿನಲ್ಲಿ ಪ್ರೆಸಿಡೆಂಟರು ಬರೆದ ಯಾದಿ.

ತಾರೀಖ್ ೨೦ ನೇ ಜೂಲೈ ೧೮೯೩ ನೇ ಇಸವಿ. K. SRINIVASA RAO, Vice President.

BANGALORE—Printed and published at the KARNATAKA PRESS, No. 40, HOSPITAL ROAD, CITY.—1893

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

## ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning.**

ಶ್ರೀಕಾಮವಿವಿಧಪ್ರವೃತ್ತ್ಯೋಸಗವಾರ್ತಾಕರ್ಣಾಟಕಪ್ರಕಾಶನಪರಾವಿದಾಪ್ರಥಿತಸಾಹಿತೀಶೋಭಿತಾ ॥ ನ್ಯಾಗಾಂಕಹಿತವಾಸರೆನಿಹಿತಮುದ್ರಣಾಸಜ್ಜನೈರ್ಬ್ರಿಕಾಸುಪರಿಪೋಷಿತಾದಿಕತಿಮಾಸಸಂಸಂಮುದಾ ॥

[ Vol. XX ] BANGALORE—MONDAY, JULY 31. 1893 [No 30

ಸಂಪುಟ ೨೦.] ಬೆಂಗಳೂರು:—ಸನ್ ೧೮೯೩ನೇ ಇಸವಿ ಜುಲೈ ೩೧ ನೇ ತಾರೀಖ್ ಸೋಮವಾರ. [ಸಂಚಿಕೆ ೩೦.


## ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ಸಾಲ್ ಒಕ್ಕೆ ... | 6—0—0 | 8—0—0 |
| 6 ತಿಂಗಳಿಗೆ . | 3—4—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

| | ಸ್ಥ ಳದವರಿಗೆ | ಪರಸ್ಥಳದವರಿಗೆ |
|---|---|---|
| ಸಾಲ್ಒಕ್ಕೆ . . | 3—0—0 | 4—0—0 |
| 6 ತಿಂಗಳಿಗೆ . . . | 1—12—0 | 2—8—0 |

ಈ ಪತ್ರಿಕೆಗೆ ಚಂದಾ [illegible] ತಾರೀಖ್ ಮೊದಲು ಒಂದು ತಿಂಗಳೊಳಗಾಗಿ [illegible] ಕೊಡುವವರಿಗೆ ಮಾತ್ರವೇ [illegible] ದರಗಳ ಪತ್ರಿಕೆ [illegible] ಇಂಗ್ಲಿಷ್ [illegible] ಅಥವಾ [illegible] ತಿಳಿಸಲ್ಪಡುವದು [illegible]

ಪ್ರಕಟನಾ ದರಗಳು.

ಮೊದಲನೆಯದಕ್ಕೆ ಪಙ್ಕ್ತಿ ಒಂದಕ್ಕೆ ೦—೨—೦
ಎರಡನೆಯದಕ್ಕೆ ಪಙ್ಕ್ತಿ ಒಂದಕ್ಕೆ ೦—೧—೦

ಅಥವಾ—ಎರಡನೆಯದಕ್ಕಿಂತ ಹೆಚ್ಚಾಗಿ ಪ್ರಕಟನೆಗಳು [illegible] ಪಙ್ಕ್ತಿ ಒಂದಕ್ಕೆ [illegible] ಈ ಪತ್ರಿಕೆಯಲ್ಲಿ ಪ್ರಕಟನೆಗಳು ಕಳುಹಿಸುವವರು [illegible] ಮ್ಯಾನೇಜರ್ [illegible] ಪ್ರಕಟನೆ [illegible] ಪತ್ರಿಕೆಯ ಕೆಲಸ [illegible] ಪ್ರಕಟನೆಗಳಿಗೆ [illegible] ದರಗಳ [illegible] ಬದಲಾಯಿಸಲ್ಪಡುವದು [illegible] ಪ್ರಕಟನೆಯ [illegible] ಈ ಪತ್ರಿಕೆಗೆ [illegible]


*ADVERTISEMENTS.*

**NOTICE.**

**VAIDYASARA SANGRAHA**

A TREATISE ON THE PRINCIPLES OF

**HINDU MEDICINE**

*Price including Postage Rs 5 0 0*

ವೈದ್ಯಸಾರ ಸಂಗ್ರಹ.

ಈ ಗ್ರಂಥವು [illegible] ಮೊದಲಾಗಿ [illegible] ರಾಜು [illegible] ಪುಸ್ತಕ [illegible] ಬೆಲೆಯು [illegible] ದರಖಾಸ್ತುಗಳಿಗೆ [illegible]

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೇ ಖರ್ಚು, ಟಪಾಲ್ ಪ್ರತಿ ಒಂದಕ್ಕೆ ರೂ ೫—೦—೦

ಟಿ. ಬಿ. ವೆಂಕಟಾಚಾರ್.

ಬೆಂಗಳೂರ್, ಮಹಾ [illegible] ನವೆಂಬರ್.

ನೋಟೀಸು.

## ಬೆಂಗಳೂರು ಕರ್ಣಾಟಕ್ ಪ್ರೆಸ್.

೧೮೮೩ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ ಸಕಲವಿಧ ಕೆಲಸಗಳು ಸುಲಭವಾದ [illegible] ನಿರ್ವಹಿಸಲ್ಪಡುವವು.

ಇದರಲ್ಲಿ ಸಕ್ಕರ್ ಇಂಗ್ಲಿಷ್ ಕನ್ನಡ ಕೆಲಸ ಮಾತ್ರವೇ [illegible] ಇತರ [illegible] ಸಕಲ [illegible] ಪ್ರತ್ಯೇಕವಾಗಿ [illegible]


## ನೋಟೀಸ್.

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪೆನಿ. ಕಮಿಷನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯೊಡನೆ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ಅಲ್ಪ ಕಮಿಷನ್ ತೆಗೆದುಕೊಂಡು ರವಾನಿಸುವುದಕ್ಕೆ ಸನ್ನದ್ಧರಾಗಿರುತ್ತೇವೆ

ಎಲ್ಲಾ ರೀತಿಯ ಔಷಧಗಳು, ಪುಸ್ತಕಗಳು, ಮುತ್ತುಗಳು, ಚಿನ್ನ [illegible] ಗಡಿಯಾರಗಳು, [illegible] ಕಾಶ್ಮೀರ ಶಾಲುಗಳು, ಪಟ್ಟೆಗಳು, [illegible] ಬಂಗಾರ [illegible] ಪುಸ್ತಕಗಳು, [illegible] ಟೋಪಿಗಳು, ಆಫೀಸ್ [illegible] ಅತ್ತರುಗಳು [illegible] ಬೇರೆ ಸಾಮಾನುಗಳು

ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಸ್ಟ್ಯಾಂಪ್ ಕಳುಹಿಸಿದ ಮೇಲೆ ಜವಾಬ್ ದೊರೆಯುವದು

ವಿಳಾಸ—ಗಣೇಶ ರಾಮಚಂದ್ರ ಕರ್ಕಿ, ಮತ್ತು ಕಂಪೆನಿ ಕಮಿಷನ್ ಏಜಂಟ್ಸ್, ಶಾಹೂಕಾರ್ ಪೇಠ, ಮಾರ್ಕೆಟ್ ಪೋಸ್ಟ್ ಮುಂಬೈ.

## ನೋಟೀಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿವೆ. ಬೇಕಾದವರು ಬೆಲೆಯನ್ನು ಕಳುಹಿಸಿ ತರಿಸಿಕೊಳ್ಳಬಹುದು.

### ಸಂಸ್ಕೃತ ಗ್ರಂಥಗಳು.

| ಪುಸ್ತಕದ ಹೆಸರು | | ರೂ | ಆ | ಪೈ |
|---|---|---|---|---|
| ಸಟೀಕಾ ವೈದ್ಯಸಾರ ಸಂಗ್ರಹ | ... | ೫ | ೦ | ೦ |
| „ ವಿವೇಕ | . . | ೦ | ೦ | ೦ |
| „ ವಿವೇಕ ಪೂರಣ | . . | ೦ | ೪ | ೦ |
| „ ಕಾಲಾಮೃತ | ... | ೦ | ೦ | ೦ |
| „ ಟಿ॥ ವಾಲ್ಮೀಕಿ ಸಾರ | .. | ೦ | ೩ | ೦ |
| „ ಟಿ॥ ಶೋಭಕ ಗೀತ | . . | ೦ | ೧ | ೦ |
| „ ಟಿ॥ ಬಾಲಚಿಕಿತ್ಸಾ (ಸುಭಾಷಿತ) | | ೦ | ೮ | ೦ |
| ವಿಷ್ಣುಸಹಸ್ರನಾಮ ಪದ್ಧತಿ | ... | ೦ | ೨ | ೦ |
| ಸನ್ಯಾಸಪದ್ಧತಿ | . | ೦ | ೨ | ೦ |
| ಶ್ರೀಕೃಷ್ಣಕರ್ಣಾಮೃತ | . | ೦ | ೨ | ೦ |
| ಶ್ರೀಕಂಠ ಅಮರ ಮೂಲ | ... | ೦ | ೨ | ೦ |
| „ ಕಾಂಡ | ... | ೦ | ೧ | ೦ |

### ಕನ್ನಡ ಗ್ರಂಥಗಳು.

| | | ರೂ | ಆ | ಪೈ |
|---|---|---|---|---|
| ಕುಶಸ್ಥಲಿ ಅಶ್ವತ್ಥ | .. | ೩ | ೦ | ೦ |
| ಚಿತ್ರ ದುಗ್ಗ | ... | ೦ | ೨ | ೦ |
| ದ್ವಾದಶಿಸಂಧ್ಯಾವಿಧಿ | .... | ೧ | ೪ | ೦ |
| ಪಂಚಮಾತ್ರ ಚಂಪೂ | ... | ೦ | ೩ | ೦ |
| ಮುಮುಕ್ಷುಪ್ರಕಾಶ | ... | ೦ | ೬ | ೦ |
| ಕಾಶೀಖಂಡ | .. | ೦ | ೨ | ೦ |
| ಸುಭಾಷಿತ | .... | ೦ | ೨ | ೦ |
| ಕಥಾಸಂಗ್ರಹ | ... | ೦ | ೩ | ೦ |
| ಸುಧಾಮಚರಿತ್ರೆ | .. | ೦ | ೦ | ೦ |
| ಪ್ರಬೋಧ ಚಂದ್ರ | ... | ೦ | ೦ | ೧ |
| ಬಾಲಬೋಧೆ | | ೧ | ೦ | ೦ |
| ಮದನ್ದರ್ಪ | . | ೦ | ೧೦ | ೦ |
| ಧರ್ಮಪ್ರಕಾಶ | . | ೦ | ೨ | ೦ |

## Bangalore City Municipality.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಬೋರ್ಡ್ ಆಫೀಸಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

ಸಿಟಿ ವೆಸ್ಟರ್ನ್ ಎಕ್ಸ್‌ಟೆನ್ಶನ್‌ನಲ್ಲಿ ಮನೆಗಳಿಗಾಗಿ ವಿಂಗಡಿಸಿ ಇರತಕ್ಕ ನಿವೇಶನಗಳ ಪೈಕಿ ಖಾಲೀ ಇರತಕ್ಕ ಸೈಟುಗಳ ನಂಬರ್‌ವಾರ್ ಮತ್ತು ಕ್ಷೇತ್ರಫಲ ತಪಸೀಲ್ ಪಟ್ಟಿ 1 ಸೆಟ್ಟು ಯು ಬೆಂಗಳೂರ್ ಡಿಸ್ಟ್ರಿಕ್ಟ್ ಆಫೀಸಿನಲ್ಲಿ ಇರುತ್ತೆ. ಆವಶ್ಯಕ ಪಟ್ಟವರು ಅಲ್ಲಿಗೆ ಹೋಗಿ ಪ್ರೀಕಾಡ್ಡ ಸೈಟುಗಳನ್ನು ಅರ್ಜಿ ಮೂಲಕ ಸಿಟಿ ಮ್ಯುನಿಸಿಪಲ್ ಬೋರ್ಡಿಗೆ ದರಖಾಸ್ತು ಕೊಟ್ಟು ಪಡೆದುಕೊಳ್ಳಬಹುದು.

ತಾ॥12ನೇ ಜುಲೈ ಸನ್ 1893ನೇ ಇಸವಿ. } K SRINIVASA RAO, *Vice President, City Muni Commission.*

## THE MONEY MARKET.

ಮದರಾಸ್, ಶನಿವಾರ, ತಾರೀಖ್ 29ನೇ ಜುಲೈ 1893

ಸೇಕಡ 4ರೂ, ಬಾಬತು ಗವರ್ನಮೆಂಟ್ ಪತ್ರಗಳು ರೂಪಾಯಿಗಳು, 107–0–0 ಇಂದ 107–8–0 ವರೆಗೆ.

ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತು 975 ಇಂದ ಮತ್ತು 980 ವರೆಗೆ

ಅರ್ಬತ್‌ನಾಟ್ ವ ಸ್ಯಾಂಡ್ ಪೋರ್ಚುಗೀಸ್ ಬ್ಯಾಂಕ್ ಷೇರುಗಳು, (100) ಬಾಬತು 150 ಇಂದ 155 ವರೆಗೆ.

ಸವರನ್‌ಗಳು, 15–11–0 ಇಂದ 15–13–0 ವರೆಗೆ.

ಬ್ಯಾಂಕ್‌ಬಿಲ್‌ಗಳು ಯೂನಿಯನ್ ಬ್ಯಾಂಕ್ ಕಿ ರೂ॥ ೧ಕ್ಕೆ

6 ತಿಂಗಳವಾಯಿದೆಗೆ, 1s. 3 ½ d.

ಡಿಮ್ಯಾಂಡ್ 4 ತಿಂಗಳವಾಯಿದೆಗೆ, 1s 3 7/16d

ಡಿಮ್ಯಾಂಡ್ ಕೇಬಲ್‌ಗೆ, 1s. 3 11/32d.

# ಕರ್ಣಾಟಕ ಪ್ರಕಾಶಿಕಾ.

**THE KARNATAKA PRAKASIKA.**

MONDAY, JULY 31 1893

೧೮೯೩ನೇ ಇಸವಿ ಜುಲೈ ತಾ॥ ೩೧ ನೇ ಸೋಮವಾರ.

## ಆಯುರ್ವೃದ್ಧಿಯ ಕುರಿತು.

ಈ ಕಾಲದಲ್ಲಿ ಸಾಮಾನ್ಯವಾಗಿ ಪ್ರಜೆಗಳೆಲ್ಲ ರೂ ಅಲ್ಪಾಯುಗಳಾಗಿಯೇ ಇದ್ದಾರೆ. ಕದಾಚಿತ್ ಯಾರಾದರು ಕೆಲವರು ೭೦—೮೦ ಸಂವತ್ಸರಗಳು ಜೀವಿಸಿದ್ದ ಪಕ್ಷಕ್ಕೆ ಅವರನ್ನು ತಿರುಗುತ್ತ ಶಾಲಿಗಳೆಂತಲೂ ದೀರ್ಘಾಯುಗಳೆಂತಲೂ ಪ್ರಶಂಸಿಸುತ್ತಾರೆ. ಈ ದೇಶದಲ್ಲಿ ದೀರ್ಘಕಾಲ ಜೀವಿಸಿರುವಂತವರ ಸಂಖ್ಯೆ ಅತಿ ವಿರಳವಾಗಿದ್ದಾಗ್ಯೂ ದೇಶಾಂತರಗಳಲ್ಲಿ ಅಂತವರು ಅನೇಕರು ದೊರೆಯುತ್ತಾರೆ. ಇಂಡ್ಯಾ ದೇಶದಲ್ಲಿ ಸಹ ಮೆಲ್ಲಿಯಾದರು ಒಬ್ಬರಿಬ್ಬರು ದೀರ್ಘಕಾಲ ಜೀವಿಸಿದಂತವರಿದ್ದರೆ ಅವರ ವೃತ್ತಾಂತವು ಆಶ್ಚರ್ಯದೊಡನೆ ತಿಳಿಸಲ್ಪಡುತ್ತಿದೆ. ಮದರಾಸು ಪಟ್ಟಣದಲ್ಲಿ ವಾಸವಾಗಿದ್ದು ಕಳೆದ ಬುಧವಾರದ ದಿನ ಕಾಲಗತಿಯನ್ನೈದಿದ ಅಜ್ಜಮ್ಮನೆಂಬವಳಿಗೆ ೧೧೨ ವರುಷಗಳೆಂತಲೂ ಈಕೆಯು ಜನ್ಮಭೂಮಿಯು ಮಚಲೀಬಂದರೆಂತಲೂ, ಕ್ರಿಶ್ಚಿಯನ್ ವಾರ್ತಾವಳಿಯೆಂತಲೂ ಮದರಾಸ್ ಉ ಧ್ರುವಪ್ರಕಾಶಿಕಾ ಪತ್ರಿಕೆ ತಿಳಿಸುತ್ತದೆ. ಫ್ರಾನ್ಸ್ ರಾಜಧಾನಿಯಾದ ಪ್ಯಾರಿಸ್ ಪಟ್ಟಣದಲ್ಲಿ ಬರುವ ತಿಂಗಳೊಳು ಜರುಗತಕ್ಕ ಒಂದು ಪ್ರದರ್ಶಕ ಸಭೆಯಲ್ಲಿ ದೀರ್ಘ ಕಾಲ ಜೀವಿಸಿರುವವರ, ಅಂದರೆ ೧೦೦ ವರುಷಗಳ ವಯಸ್ಸಿಗೆ ಮೇಲ್ಪಟ್ಟಂತಾ ವೃದ್ಧ ಸಮೂಹವೊಂದು ಪ್ರದರ್ಶಿಸಲ್ಪಡುವದು. ಇಂತಾ ವೃದ್ಧರಿಗೆ ಅಲ್ಲಿ ನಿರುಪಮಿತನ್ನಳವೂ ಇಷ್ಟವಾದ ಆಹಾರವೂ ಕಲ್ಪಿಸಲ್ಪಡುವವು. ಇವರಲ್ಲಿ ಬಹುಕಾಲ ಜೀವಿಸಿ ಶರೀರಾರೋಗ್ಯ ಬುದ್ಧಿಪಾಟವವಿರತಕ್ಕವರಿಗೆ ಸನ್ಮಾನರೂಪವಾಗಿ ಸುವರ್ಣಪದಕವೂ, ಅವರವರ ಜೀವಿತಕಾಲದಲ್ಲಿ ನಡೆದ ವಿಶೇಷಾಂಶಗಳನ್ನೆಲ್ಲ ಕ್ರಮವಾಗಿ ವಿವರಿಸಿ ತಿಳಿಸತಕ್ಕಂತವರಿಗೆ ೨೦,೦೦೦ ಫ್ರ್ಯಾಂಕ್ಸಗಳೂ, (೪೦೦ ಪೌಂಡ್‌ಗಳು—ಈಗಿನ ನಿರಖ್ ಪ್ರಕಾರ ೧೨೪೦೦ ರೂಪಾಯಿಗಳು) ಇನಾಮಾಗಿ ಕೊಡಲ್ಪಡುವವು. ಪುರುಷನು ದೀರ್ಘಕಾಲ ಜೀವಿಸುವಿಕೆಯ ಕುರಿತು ವಿಲ್ಯಂ ಕೆನ್ನಿಯಾರ್ ಎಂಬಾತನು ನಾರ್ಥ್ ಅಮೆರಿಕನ್ ರಿವ್ಯೂ ಎಂಬ ಒಂದು ಪತ್ರಿಕೆಗೆ ಬರೆಯುವಾಗ್ಯೆ, ತಾನು ತಿಳಿಸುವಂತೆ ಯಾರು ಅನುಸರಿಸುತ್ತಾರೆಯೋ ಅಂತವರು ಇನ್ನೂರು ಸಂವತ್ಸರಗಳಿಗಿಂತ ಅಧಿಕವಾಗಿ ಮರಣಭೀತಿ ಇಲ್ಲದೆ ಜೀವಿಸಿರಬಹುದೆಂದು ತಿಳಿಸಿ, ಒಂದುಉಪಾಯವು ಸೂಚಿಸಿರುತ್ತಾನೇನಂದರೆ,—ಪುರುಷನು, ಪ್ರಾರಂಭದಿಂದ ಫಲಸೇವನೆಯನ್ನಾತ್ಯಂತಿಕವಾಗಿ ತ್ಯಜಿಸತಕ್ಕದ್ದು. ನೂತನ ಫಲಗಳನ್ನು ಅಂದರೆ ರಕ್ತವರ್ಧಕವಾದ ಆಪಲ್, ಅಂಜೂರ್ ದ್ರಾಕ್ಷಿ ಫಲಗಳನ್ನೇ ಸೇವಿಸತಕ್ಕದ್ದು. ಡಿಸ್ಟಿಲ್ಡ್‌ವಾಟರ್ ಅಂದರೆ, ಬಟ್ಟಿ ಇಳಿಸಲ್ಪಟ್ಟ ಕುದ್ಧೋದಕದಲ್ಲಿ ಜಲವಿಕ್ರಮವಾದ ಫಾಸ್ಫರಿಕ್ ದ್ರಾವಕವನ್ನು ೧೦—೧೫ ಬಿಂದುಗಳು ಹಾಕಿ ಪ್ರತಿನಿತ್ಯವೂ ತೆಗೆದುಕೊಳ್ಳತಕ್ಕದ್ದು. ಸ್ತ್ರೀಸಂಭೋಗವೂ, ಗುರುತ್ವಪದಾರ್ಥ ಸೇವನೆಯೂ, ಅಪಕ್ವಪದಾರ್ಥ ಭೋಜನವೂ, ಅನಾರೋಗ್ಯ ನಿಮಿತ್ತಕಗಳಾದುದರಿಂದ ಅವು ತ್ಯಜಿಸಿ ಅಗ್ನಿದಗ್ಧವಾದ ಫಲಕಂದಗಳನ್ನೂ, ಕುದ್ಧೋದಕವನ್ನೂ ನಿಯತವಾಗಿ ಯಾವನು ಭಕ್ಷಿಸಿ ಪಾನಮಾಡುತಲಿರುತ್ತಾನೆಯೋ, ಮತ್ತು ಯಾವನು ಶ್ವಾಸವನ್ನು ಅಧಿಕವಾಗಿ ಹೊರಡಿಸುತ್ತಾ ಶ್ರಮಸಾಧ್ಯಗಳಾದ ಶಾರೀರಕ ವ್ಯಾಪಾರಗಳನ್ನು ಮಾಡುತ್ತಾನೆಯೋ, ಮನೋವ್ಯಾಕುಲಕ್ಕೆ ಅನವರತವು ಎಡೆಕೊಡದವನಾಗುತ್ತಾನೆಯೋ, ಅಂತಹನು ನಿಸ್ಸಂಶಯವಾಗಿ ದೀರ್ಘಕಾಲ ಜೀವಿಸಿರುವನು. ಇದಕ್ಕೆ ನಿದರ್ಶನವಾಗಿ ಪೂರ್ವಕಾಲದ ನಮ್ಮ ಮಹರ್ಷಿಗಳು ಅರಣ್ಯವಾಸಿಗಳಾಗಿ ದೀರ್ಘಕಾಲ ಜೀವಿಸಿ, ಭಗವಧ್ಯಾನ ಮಾಡುತ್ತ ಮುಕ್ತರಾದರೆಂದು ಪ್ರಾಚೀನ ಗ್ರಂಥಗಳಲ್ಲಿ ಸ್ಪಷ್ಟವಾಗುತ್ತಿದೆ. ದಶರಥಾದಿ ಚಕ್ರವರ್ತಿಗಳು ಅನೇಕ ಸಹಸ್ರ ಕಾಲ ಭೂಪಾಲನೆ ಮಾಡುತ್ತಿದ್ದರೆಂದು ತಿಳಿಸುವ ರಾಮಾಯಣಾದಿ ಗ್ರಂಥಗಳನ್ನು ಅಸಂಭವವೆಂದು ಯಾಗಿ ಎಣಿಸಬಹುದು. ಜನರು, 'ಜಾತಸ್ಯ ಮರಣಂ ಧ್ರುವಂ' ಎಂಬ ಪ್ರಮಾಣವಾಕ್ಯವನ್ನು ಸ್ಮರಿಸುತ್ತ, ದ್ಯಾಗಾದರೂ, ಎಂದಿಗಾದರೂ ಹುಟ್ಟಿದವನು ಸಾಯಬೇಕಾದ್ದು ನಿಜವಾದುದರಿಂದ ಜೀವಿಸಿರುವಾಗ್ಯೆ ಇಷ್ಟವಾದ ಪದಾರ್ಥಗಳನ್ನು ಭುಜಿಸುತ ದೇಹಾದಂತೆ ವಿಷಯಾನಂದಗಳನ್ನನುಭವಿಸುತ ತಮ್ಮ ಪಕ್ಷಸೌಖ್ಯಕ್ಕೆ ಪಾನಭೋಜನಾದಿಗಳ ಸುಖವೇ ಪುರುಷಾರ್ಥವೆಂದೆಣಿಸಿರುವಂತವರ

ಗಿದು ಅನ್ವೈಸತಕ್ಕದ್ದಲ್ಲವು. ಆದರೆ, ಮರಣವು ನಿಜವಾದುದರಿಂದಲೂ ಜೀವಿತಕಾಲವು ಅಸ್ವಲ್ಪವಾಗಿರುವದರಿಂದಲೂ ಅದರೊಳಗಾಗಿ ಸತ್ಕಾರ್ಯಗಳಂತಹಾದಿ ಭಗವಜ್ಞಾನವಂ ಸಂಪಾದಿಸಿ ಲೋಕಪವಿತ್ರೀಕರರಾಗಿ ತಮ್ಮ ಜನ್ಮಸಾಫಲ್ಯವನ್ನುಂಟುಮಾಡಿಕೊಳ್ಳಬೇಕೆಂಬ ತಾತ್ಪರ್ಯವಿರುವಂತವರಿಗೆ ಮೇಲೆ ತಿಳಿಸಲ್ಪಟ್ಟ ವಿದುಷ ಉಪಯುಕ್ತವಾಗಿರಬಹುದೆಂದೆಣಿಸಿಲ್ಲಿ ಪ್ರಕಟಿಸಿದೆವು.

## ಹೊಗೇಸೊಪ್ಪಿನ ಉಪಯೋಗವನ್ನು ಕುರಿತು.

ಈಗ ಹೊಗೇಬತ್ತಿ ಸೇದುವ ಅಭ್ಯಾಸವು ಜನರಲ್ಲಿ ಅತ್ಯಧಿಕವಾಗುತಲಿದೆ. ಇಂಗ್ಲೀಷ್ ಸ್ಕೂಲುಗಳಲ್ಲಿ ಓದುತಲಿರುವ ಬಾಲಕರಲ್ಲಿ, ಸದರೀ ಅಭ್ಯಾಸವು ನಿರವಧಿಕವಾಗಿ, ಟೋಪಿ, ಬೂಟ್ಸುಗಳಂತೆ ಅದೂಂದು ವೈಲಕ್ಷಣ್ಯಾಂಗವಾಗಿ ಭಾವಿಸಲ್ಪಟ್ಟದೆ. ಇದರಿಂದುಂಟಾಗತಕ್ಕ ಅನರ್ಥ ಪರಂಪರೆಗಳನ್ನು ಒಬ್ಬರೂ ಪರ್ಯಾಲೋಚಿಸುವಂತೆ ಕಾಣಿಸುವದಿಲ್ಲವು. ಇದು ಅನೇಕವಿಧ ದುಶ್ಚರ್ಯೆಗಳಲ್ಲಿ ಒಂದಾಗಿರುತಿದೆ. ಹೊಗೇಸೊಪ್ಪನ್ನು ಮೆಲ್ಲುವದು, ಅದುಬತ್ತಿಮಾಡಿ ಸೇದುವದು, ಚೂರ್ಣಮಾಡಿ ಮೂಗಿನಲ್ಲಿ ಹಾಕಿಕೊಳ್ಳುವದು, ಈ ಪದ್ಧತಿಗಳು ಆದಿಯಲ್ಲಿ ಅಮೆರಿಕಾ ದೇಶಸ್ಥರಲ್ಲಿ ನೆಲೆಗೊಂಡಿದ್ದಂತೆ ಸ್ಪಷ್ಟವಾಗುತಿದೆ. ಸದರೀ ಖಂಡವನ್ನು ಪ್ರಥಮತಃ ಕಂಡು ಹಿಡಿದ ಕೊಲಂಬಸ್ ಯೆಂಬವರು, "ಅಲ್ಲಿನ ಜನರಲ್ಲೀ ಆಚಾರವು ಪ್ರಬಲಗೊಂಡಿದ್ದಂತೆ ತಿಳಿಸಿರುತ್ತಾರೆ. ಪೋರ್ಚುಗಲ್ ರಾಜ್ಯದವರು ಹೊಗೇ ಸೊಪ್ಪನ್ನುಪಯೋಗಿಸುವದು ೧೫೧೮ ನೆಯ ಸಂವತ್ಸರದಲ್ಲಿ ಕೆಬ್ರಾಲ್ ಯೆಂಬವರು ಕಂಡು ಹಿಡಿದರು. ಅನಂತರ ಜರಿಗಿದ ದೇಶಸ್ಥಿತಿ ವಿಚಾರಣೆಯ ದೆಸೆಯಿಂದ ರೆಡ್ ಇಂಡಿಯನ್ಸ್ ಯೆಂಬವರಿಗೆ ಹೊಗೇ ಸೊಪ್ಪಿನಲ್ಲಿ ವಿಶೇಷ ಗೌರವ ವುಂಟಾಗಿದ್ದಂತೆಯೂ, ಅದನ್ನವರು ಪೂಜ್ಯಾರ್ಹವಾದ ಪ್ರಬಲ ಮೂಲಿಕೆಯೋಪಾದಿಯಲ್ಲಿ ಭಾವಿಸಿದ್ದಂತೆಯೂ, ಮಣಿಮಂತ್ರೌಷಧ ಪ್ರಯೋಗಾದಿಗಳಲ್ಲಿ ಪರಿಶ್ರಮಪಟ್ಟವರು ಅದನ್ನೊಂದು ಸಿದ್ಧೌಷಧಿಯಂತೆ ಯೆಣಿಸಿದ್ದಂತೆಯೂ, ಧೂಪಕ್ಕುಪಯೋಗವಾಗಿರುವ ಸಾಂಬ್ರಾಣಿಯ ಸ್ಥಾನದಲ್ಲಿ ತಂಬಾಖ್ ಚೂರ್ಣವನ್ನುಪಯೋಗಿಸುತಿದ್ದಂತೆಯೂ, ಅದ್ಯಾಪಿ ಹೊಗೇಸೊಪ್ಪು ಚುಟ್ಟವೊಂದಾದವಂ ಪರಸ್ಪರ ಕೊಟ್ಟು ತಗದುಕೊಳ್ಳುವದು ಪ್ರಬಲ ಮೈತ್ರಾದಿರೂಪವಾಗಿ ಎಣಿಸಲ್ಪಟ್ಟಿರುವದಾಗಿಯೂ, ಸ್ನೇಹಲಾಂಛನರೂಪವೆಂಬದಾಗಿ ಭಾವಿಸಲ್ಪಟ್ಟಿರುವದಾಗಿಯೂ ತಿಳಿಯಬರುತಿದೆ. ದುಷ್ಟನಿಗ್ರಹ ಶಿಷ್ಟಪರಿಪಾಲನಕ್ಕೆ ಯೆಲ್ಲರೂ ಏಕತ್ರ ಗುಂಪುಗೂಡಿ ಚುಟ್ಟ ಹಿಡಿಯುತ ಭಗವಧ್ಯಾನ ಮಾಡುವ ವಾಡಿಕೆಯು ನವಾಜೋಸ್ ಯೆಂಬ ಜನರಲ್ಲಿರುವಂತೆ ಜಾರ್ಜ್‌ಹಾರ್ಕಿನ್ಸ್ ಯೆಂಬವರು ತಿಳಿಸಿರುತ್ತಾರೆ. ಭೂತ ಪಿಶಾಚಾದಿಗಳ ಆಕರ್ಷಣಕ್ಕೂ, ಮಾಟೋಚ್ಚಾಟನ ಮಾರಣಾದಿಗಳಿಗೂ ಹೊಗೇಸೊಪ್ಪು ಪ್ರಬಲಸಾಧನ ರೂಪವಾಗಿ ಯೆಣಿಸಲ್ಪಟ್ಟಿರುತಿದೆ. ಈ ದೇಶದಲ್ಲಿ ಹೊಗೇಬತ್ತಿ ಸೇದುವಂತವರು ಅದರ ಧೂಮವನ್ನು ಪಾನಮಾಡುವದಿಲ್ಲವು. ಎಷ್ಟು ಕಾಲ ಹೊಗೆಯನ್ನು ಬಾಯಲ್ಲಿ ಕೂಡಿಟ್ಟು ಬಳಿಕ ಹೊರಗೆ ಬಿಡುವಾಗ್ಯೆ ಅದು ಎಷ್ಟು ದೂರ ವ್ಯಾಪಿಸುತಿದೆಯೋ ತಾವತ್ಪರ್ಯಂತ ಅವರ ಕೀರ್ತಿ ಮಹಿಮೆಗಳು ವ್ಯಾಪಿಸುತಿದೆ ಯೆಂಬ ನಂಬಿಕೆಯು ಅನೇಕರಿಗುಂಟಾಗಿದೆ. ಅಮೆರಿಕಾ ದೇಶದಲ್ಲಿ ಅಂತಾ ಹೊಗೆಯನ್ನು ಯೆಷ್ಟು ಕೀಳರಿಸಿ ನುಂಗಿ ಬಿಟ್ಟರೆ ಅಷ್ಟರ ಶಕ್ತಿಯುಕ್ತ ಸಾಮರ್ಥ್ಯಗಳು ಮನುಷ್ಯನಿಗುಂಟಾಗುವದೆಂದು ಅಲ್ಲಿನವರ ತಾತ್ಪರ್ಯವಾಗಿರುತಿದೆ. ಹೀಗೆ ಮಾಡುವದರಿಂದ ಒಂದು ಬಗೆ ಲಾಹಿರಿಯುಂಟಾಗುವದಾಗಿ ಆಕಾಲದೊಳು ಧ್ಯಾನಮಾಗತಕ್ಕ ಸ್ವಪ್ನಾವಸ್ಥೆಯಲ್ಲಿ ಲೋಕಾಂತರ ದೇವತಾಂತರ ದರ್ಶನಗಳೂ ತ್ರಿಕಾಲಿಕಜ್ಞಾನವೂ ಉಂಟಾಗುವವೆಂದು ದೃಢತರಾಭಿಪ್ರಾಯವುಳ್ಳವರಾಗಿರುತ್ತಾರೆ. ಇದಂ ಮಹತ್ತರ ಶಕ್ತಿಯುಕ್ತವಾದ ಸಿದ್ಧಮೂಲಿಕೆಯೆಂಬ ಅಮೆರಿಕಾದೇಶೀಯರು ತಾತ್ಪರ್ಯಗೊಂಡಿದ್ದಾಗ್ಯೂ ಅದರಿಂದುಂಟಾಗುವ ದುಗುರ್ಣಗಳನುತಗಳೆಂಬದಾಗಿ ಬಳ್ಳಾರಿ ಸನ್ಮಾರ್ಗಬೋಧಿನಿಯೆಂಬ ಒಂದು ಆಂಧ್ರಪತ್ರಿಕೆಗೆ ಅದರ ಉಪವಿಲೇಖಕರೊಬ್ಬರು ಈ ಕೆಳಗೆ ತಿಳಿಸಲ್ಪಟ್ಟಿರುವಂತೆ ಬರೆದಿರುತ್ತಾರೇನಂದರೆ— ಇಂಡ್ಯ ದೇಶೀಯರಿಗೆ ವಿಶೇಷೋಪಯುಕ್ತಗಳಾಗಿರುವ ಪದಾರ್ಥಗಳ ಪೈಕಿ ತಂಬಾಖ್ ಮುಖ್ಯವಾದದ್ದೆಂಬದು ಪ್ರಸಿದ್ಧ ವಿಷಯವಾಗಿರುತಿದೆ. ಹೊಗೇಬತ್ತಿ ಸೇದದಿರತಕ್ಕವರು ನಸ್ಯ ಹಾಕಿಕೊಳ್ಳುತ್ತಾರೆ. ನಸ್ಯ ಹಾಕದಿರುವವರು ಚುಟ್ಟ ಸೇದುತ್ತಾರೆ. ಈ ಯೆರಡು ಅಭ್ಯಾಸ ವುಳ್ಳವರೂ ಮತ್ತು ಇಲ್ಲದವರನೇಕರು ಸಹ ತಾಂಬೂಲದೊಡನೆ ಹೊಗೇಸೊಪ್ಪನ್ನುಪಯೋಗಿಸುತ್ತಾರೆ ಇವುಗಳೆಲ್ಲವನ್ನೂ ತ್ಯಜಿಸಿದವರು ಸಿಗಾರೇಟ್ ಯೆಂಬದನ್ನುಪಯೋಗಿಸುತ್ತಾರೆ. ಸಕೃತ ಕೆಲವರು ಗಾಂಜಾ ಯೆಲೆಯನ್ನು ಸಹ ಬಳಸುವದುಂಟು, ವಿವೇಕಶೂನ್ಯರಾದವರು ಮಾತ್ರವಲ್ಲವೆ ಶರೀರಾರೋಗ್ಯವನ್ನರಿತು ಪ್ರವರ್ತಿಸತಕ್ಕವರು ಕೂಡ ಹೊಗೇಸೊಪ್ಪನ್ನು ಬಿಡಲಾರದೆ ಸಂಕಟಪಡುತಲಿರುತ್ತಾರೆ ಸಂಸ್ಕೃತದಲ್ಲಿದು ಸತೀಕ್ಷ್ಣಪತ್ರವೆಂಬದಾಗಿ ವ್ಯವಹರಿಸಲ್ಪಡುತಿದೆ. ನಾಮಮಾತ್ರದಿಂದಲೇ ಇದಕ್ಕಿದ್ದ ರಸೈಕ್ಷ್ಣ್ಯವುಂಟಾಗಿರುವಲ್ಲಿ ಅದು ಸರ್ವಕಾಲ ಸರ್ವಾವಸ್ಥೆಗಳಲ್ಲುಪಯೋಗಿಸುತಲಿರುವಂತವರೆಷ್ಟರ ತೀಕ್ಷ್ಣಸ್ವಭಾವವುಳ್ಳವರಾಗಿರುವರೋ ಅದು ವಿವೇಕಿಗಳಾಲೋಚಿಸಬಹುದು. ಇದರ ಸ್ವಭಾವಿಕ ಗುಣವಂ ಕುರಿತು, ಅನೇಕಜನ ಡಾಕ್ಟರುಗಳೂ, ಸರ್ಜಾರ್ಯುಗಳೂ, ಹಿಂದೂ ವೈದ್ಯರೂ, ಹಿಂದೂ ವೈದ್ಯಶಾಸ್ತ್ರಕರ್ತರೂ ಬಹಳಮಟ್ಟಗೆ ತಿಳಿಸಿರುತ್ತಾರೇನಂದರೆ— ಹೊಗೇಸೊಪ್ಪನ್ನುಪಯೋಗಿಸುವದರಿಂದ, ಪ್ರಜ್ಞಾಭಂಗ, ಬುದ್ಧಿ ಪಾಟವಕ್ಕೆ ಲೋಪ, ಚಿತ್ತಚಾಂಚಲ್ಯ, ನೇತ್ರಮಾಲಿನ್ಯ, ಶಿರೋರೋಗ, ಅತ್ಯುಷ್ಣದಿಂದುಂಟಾಗತಕ್ಕ ಅನೇಕವಿಧ ಉಪರೋಗಗಳು, ಮೇದಸ್ಸು ಕ್ಷೀಣವಾಗುವದು, ಗಳರೋಗ ಮೊದಲಾದ ವ್ಯಾಧಿಗಳುಂಟಾಗುವವಲ್ಲದೆ ಅದು ಅನೇಕ ಇತರ ರೋಗೋತ್ಪತ್ತಿಗೆ ಸಹ ಕಾರಣವಾಗಿ ಕುದುರುತಿದೆ. ಇದು ಶರೀರಾರೋಗ್ಯವನ್ನು ನಾಶ ಪಡಿಸುವಂತಾ ನೀಚಪದಾರ್ಥವೆಂಬದಂ ಅನೇಕರು ತಿಳಿದಿದ್ದಾಗ್ಯೂ ಅದನ್ನವರು ಬಿಡುವದಿಲ್ಲವು. ಮಾತ್ರ ಶರೀರಗಳಿಗಿದು ಸಾಧ್ಯಸ್ಥ ಪ್ರಯೋಜನವನ್ನುಂಟುಮಾಡತಕ್ಕದ್ದಾಗಿದ್ದರೂ. ಆಂಧ್ರಕವಿಯೊಬ್ಬರು "ಜಲದೋಷಕಾಪಂಬಸಂಘುಸಪಿಶಾರಂಬು ಮಾತಾಂದಕಾರ ಪ್ರಭಾಕರಂಬು" ಎಂದು ವರ್ಣಿಸಿರುವದರಿಂದ ನಿಷಿದ್ಧನಸ್ತುವೆಂತ ನುಡಿಯುಕೂಡದೆಂಬದು ಕೆಲವರ ಮತವಾಗಿರುತಿದೆ. ಉಷ್ಣಾಧಿಕ್ಯದಿಂದ ಮಲಬದ್ಧವಾಗಿ ಜ್ವರಾಭಿವೃದ್ಧಿಯೂ ಇತರ ದುರ್ಗುಣಗಳೂ ಉಂಟಾಗುವದರಲ್ಲೆಷ್ಟು ಮಾತ್ರವೂ ಸಂದೇಹವಿಲ್ಲವು. ದೊಡ್ಡಮನುಷ್ಯತನಕ್ಕಿದೊಂದು ಲಾಂಛನರೂಪವಾಗಿಯೂ, ಮಾದಕ ಪದಾರ್ಥ ಸ್ವೀಕರಣವು ಪ್ರತಿಷ್ಠಾಪದವಾಗಿಯೂ ಅನೇಕರು ಭಾವಿಸಿರುವಾಗ್ಯೆ ಇದಂ ಹ್ಯಾಗೆ ತುಚ್ಛತ್ವೇನ ಪರಿಗಣಿಸಬಹುದೆಂದು ಬಹುಜನ ಆಕ್ಷೇಪಿಸುತ್ತಾರೆ. ಅಭ್ಯಾಸದೋಷದಿಂದ ಮನುಷ್ಯರಿಗೆ ಅನೇಕ ಪದಾರ್ಥಗಳು ಬಹುವಿಧ ಸಂಕಟಗಳನ್ನುಂಟುಮಾಡುತಿವೆಯಾಗಿ ಅಂತೆಯೂ, ಸರ್ವ ಸುಗುಣತ್ವೇನ ಕಂಡುಬಂದಾಗ್ಯೂ ಉತ್ತರೋತ್ತರ ವಿರುದ್ಧಫಲದಾಯಕಗಳಾಗದಿರುವದಿಲ್ಲವು ಮದರಾಸ್ ಪ್ರೆಸಿಡೆನ್ಸಿಯ ಉತ್ತರದಿಕ್ಕಿನ ಡಿಸ್ಟ್ರಿಕ್ಟ್‌ಗಳಾದ ಗುಂಟೂರ್ ರಾಜಮಹೇಂದ್ರ, ನೆಲ್ಲೂರ್, ವಿಶಾಖಪಟ್ಣ ವಗೈರೆ ಡಿಸ್ಟ್ರಿಕ್ಟ್‌ಗಳ ಪ್ರಜೆಗಳು, ಸ್ತ್ರೀಪುರುಷ ತಾರತಮ್ಯವಿಲ್ಲದೆ ಚುಟ್ಟ ಸೇದುತ್ತಾರೆ. ಚೆಂಗಲ್‌ಪಟ್ ವಗೈರೆ, ಅರವ ಡಿಸ್ಟ್ರಿಕ್ಟ್‌ಗಳಲ್ಲಿರತಕ್ಕ ವೆಳ್ಳಾಳರು ನಾಯುಡುಗಳು, ಬಲವಾಗಿ ಚುಟ್ಟ ಸೇದುತ್ತಾರೆ. ಶೀತಪ್ರದೇಶಗಳಲ್ಲಿರತಕ್ಕವರಿಗೆ ದೇಹವು ಉಷ್ಣವಾಗಿರುವದಕ್ಕೆ ಸದರೀ ಪದ್ಧತಿ ಅನುಕೂಲವಾಗಿದ್ದಾಗ್ಯೂ ಉಷ್ಣಪ್ರದೇಶವಲ್ಲಿರುವವರಿಗಿದರಿಂದೇನು ಪ್ರಯೋಜನವೋ ನಾವರಿಯೆವು ಉಷ್ಣಾಧಿಕ್ಯದಿಂದ ವಾತಪ್ರಕೋಪವೂ, ಅದರಿಂದ ಬೃಹದ್ಬೀಜಾದಿ ಪಾತೋಪದ್ರವಗಳೂ, ತನ್ಮೂಲಕ ಸಂತಾನರಾಹಿತ್ಯವೂ, ಅದರಿಂದ ವಂಶನಾಶನವೂ, ಕಡೆಗೆ ಮಾನಹಾನಿಯೂ ವುಂಟಾಗದೆ ಹೋಗಲಾರದು ಆದುದರಿಂದ ಈ ವಿಷಯವನ್ನು ಪರ್ಯಾಲೋಚಿಸಿ ಸದರೀ ದುರಾಚಾರವಂ ಬಿಡತಕ್ಕವರಿಗೆ ಆಯುರಾರೋಗ್ಯ ಸಂತಾನಾಭಿವೃದ್ಧಿಯುಂಟಾಗುವದರಲ್ಲೇನೂ ಸಂದೇಹವಿಲ್ಲವು.

## ಸುಮತಿಶತಕ.

ಮೇಲೆ ಕಂಡ ಅಂಕಿತವುಳ್ಳ ಒಂದು ಸಣ್ಣ ಗ್ರಂಥವು ಗತವಾರದಲ್ಲಿ ನಮಗೆ ಗ್ರಂಥಕರ್ತರಿಂದ ಕಳುಹಿಸಲ್ಪಟ್ಟಿತು. ಇದು ಆಂಧ್ರಭಾಷಾವಿರಚಿತವಾದ ಸುಮತಿಶತಕದ ಭಾಷಾಂತರವಾಗಿಯೂ, ಕಂದರೂಪವಾಗಿಯೂ ಇರುತಿದೆ. ಮೈಸೂರ್ ವೆಸ್ಲಿಯನ್ ಮಿಷನ್ ಸ್ಕೂಲ್ ಕನ್ನಡ ಮುನಿಷಿಯರಾದ ಬ್ರಹ್ಮಶ್ರೀ ಲಕ್ಷ್ಮೀನೃಸಿಹ್ಮ ಶಾಸ್ತ್ರಿಗಳವರು ಮೇಲೆ ಕಂಡ ಮೂಲ ಗ್ರಂಥದ ರೀತಿ ಶಯ್ಯಾಲಂಕಾರಾದಿ ಗುಣಾಂಶಗಳನ್ನು ಪರಿಭಾವಿಸಿ ತದನುಸಾರ ಕರ್ಣಾಟ ಭಾಷೆಯಲ್ಲಿ ಜೇಲೊಂದನ್ನು ರಚಿಸಿ, ನೋಲನೆಯುದಾಕ್ಕುಂಟಾಗಿರುವ ಪಾಂಡಿತ್ಯದೊಳು ಯುತ್ಕಿಂಚಿತ್ಪಂಶವನ್ನಾದರು ಅರ್ಜಿಸಬೇಕೆಂಬ ಕೋರಿಕೆಯು ಅವರಿಗುಂಟಾಗಲು, ತದ್ವತ್ ೧೧೧ ಕಂದಪದ್ಯಗಳನ್ನು ಬರೆದು ಮುದ್ರಿಸಿರುತ್ತಾರೆ. ೩೮ ಪುಟಗಳುಳ್ಳ ಪ್ರಸಕ್ತ ಶತಕಕ್ಕೆ ಶುದ್ಧಾಶುದ್ಧಗಳು ಯೆರಡು ಪುಟಗಳಲ್ಲಿ ಕೂಡ ಪೂರೈಸದೆ ಹೋದವು. ಇವಲ್ಲದೆ ಈ ನೂತನ ಶತಕವು ವಿದ್ವತ್ಶಿಲ್ಪ ಪ್ರದರ್ಶನಸ್ಥಾನವೆನಿಸಿದ ಮೈಸೂರ್ ಗ್ರಾಡ್ಯುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟದ್ದಾಗಿಯೂ, ಕರ್ಣಾಟ ಭಾಷೆಯಲ್ಲಿ ಪ್ರಸಿದ್ಧ ಪಂಡಿತರೆನಿಸಿರತಕ್ಕ "ಮೈಸೂರ್ ಗವರ್ನಮೆಂಟ್ ಕನ್ನಡ ಸ್ಕೂಲ್, ಹೆಡ್‌ಮ್ಯಾಸ್ಟರ್ ಮ|| ರಾ|| ಮಲ್ಲಪ್ಪನವರಿಂದಲೂ, ಮಹಾರಾಜರ ಕಾಲೇಜ್ ಕನ್ನಡ ಮುನಿಷಿಗಳಾದ ಮ|| ರಾ|| ಕರಿಬಸವಶಾಸ್ತ್ರಿಗಳಿಂದಲೂ ಆದ್ಯಂತವಾಗಿನೋಡಿ ಪರಿಶೋಧಿಸಲ್ಪಟ್ಟದ್ದಾಗಿಯೂ" ಇರುತಿದೆ. ವರ್ಣಸಂಯೋಜಕರ ಮತ್ತು ಪರಿಶೋಧಕರ ಪ್ರಮಾದವಶಾತ್ ಕದಾಚಿತ್ ಯೆಲ್ಲಿಯಾದರೂ ಕೆಲವು ಅಕ್ಷರದೋಷಗಳುಂಟಾಗುವದಂ ನಾವು ನೋಡಿಯೂ ಕೇಳಿಯೂ ಸಹ ಇದೇವೆ. ಪರಂತು ಪದ್ಯರಚನಾ ಕೌಶಲ್ಯಕ್ಕೆ ನಿದರ್ಶನ ರೂಪವಾದ ಪ್ರಸಕ್ತ ಸುಮತಿಶತಕದೊಳು ಶಬ್ದಗಳಿಗೆ ಪ್ರತಿಶಬ್ದಗಳೂ, ಪದ್ಯಗಳಿಗೆ ಪ್ರತಿಪದ್ಯಗಳೂ ಪ್ರಕಟವಾಗಿರುವದುಸೋಡಲಾಗಿ, ಇಷ್ಟರ ದೋಷಗಳಿಗೆ ಅವಕಾಶವೆತ್ತಣದೋ ಯೆಂದು ನಮ್ಮ ಬುದ್ಧಿ ಶಂಕಿಸುತಲದೆ. ಒಂದುವೇಳೆ ಇಷ್ಟು ವರ್ಣಸಂಯೋಜಕರದಾಗಿಯೇ ಇರಬಹುದೆಂದೂಹಿಸುವ ಪಕ್ಷಕ್ಕೆ ಮೂಲಪ್ರತಿಯಲ್ಲಿಲ್ಲದಿರುವ ಪ್ರತ್ಯೇಕ ಪದ್ಯಗಳನ್ನು ರಚಿಸಿ ಸೇರಿಸುವಷ್ಟರ ಸಮರ್ಥರಾದ ನೌಕರರವಾನೇರು ಸದರೀ ಮುದ್ರಾಕ್ಷರ ಶಾಲೆಯಲ್ಲಿರುವದು ಪ್ರತಿಷ್ಠಾಪದವೆಂತಲೇ ಭಾವಿಸಬೇಕು ಹಾಗಿಲ್ಲದೆ ಅಕ್ಷರ ದೋಷಗಳಿಗೆ ಮಾತ್ರ ಅವರು ಗುರಿಯಾಗುವ ಪಕ್ಷಕ್ಕೆ ಶಬ್ದಪದ್ಯ ದೋಷಗಳಿಗೆ ಗ್ರಂಥಕರ್ತರು ಜವಾಬ್ದಾರರಾಗದೆ ಹೋಗಲಾರರು ಈ ಗ್ರಂಥವು ಮುದ್ರಿಸಲ್ಪಡುವದಕ್ಕೆ ಪೂರ್ವದಲ್ಲಿ ಮೇಲೆ ತಿಳಿಸಿದ ಪ್ರಸಿದ್ಧರಾದ ಕನ್ನಡ ಪಂಡಿತರಿಬ್ಬರೂ ಪರಿಶೋಧಿಸಿರುವ! ಪಕ್ಷಕ್ಕೆ ಇಷ್ಟರ ದೋಷಯುಕ್ತವಾದ ಅವರ ಪರಿಶೀಲನೆಯು ಚಿಂತಾಸ್ಪದವಾಗದೆ ಹೋಗಲಾರದು. ಹಾಗಿಲ್ಲದೆ ಗ್ರಂಥಕರ್ತರು, ತಮ್ಮ ಗ್ರಂಥವನ್ನು ಬರೆದು ಅಪ್ರಕಟಿತಾವಸ್ಥೆಯೊಳದಂ ಅನ್ಯರಿಗೆ ತೋರಿಸದೆ ಅದು ಮುದ್ರಿಸಲ್ಪಟ್ಟಮೇಲೆ ಮ|| ರಾ|| ಮಲ್ಲಪ್ಪ ಮೊದಲಾದವರು ನೋಡಿ ಪರಿಷ್ಕರಿಸಿರುವ ಪಕ್ಷಕ್ಕೆ ಭಾಷಾಂತರವಮಾಡಿದಂತಾ ಶಾಸ್ತ್ರಿಗಳವರ ಭಾಷಾಜ್ಞಾನವೂ ಕವಿತಾಶಕ್ತಿಯೂ ಸ್ಪಷ್ಟವಾಗದೆ ಹೋಗಲಾರದು. ಏನಕೇನಾಪ್ಯುಪಾಯೇನ ಆಂಧ್ರಭಾಷೆಯೊಳಿರುವಸುಮತಿಶತಕಕ್ಕೆ ಸಮಾನವಾದ ಟೀಕೊಂದನ್ನು ಭಾಷಾಂತರದೊಳೇರ್ಪಡಿಸಿ ಚಿರಕಾಲಿಕವಾದಲೋಪವನ್ನು ಬ್ರಹ್ಮಶ್ರೀ ನೃಸಿಹ್ಮಶಾಸ್ತ್ರಿಗಳವರು ನಿವೃತಿಸಲಿಚ್ಛಿಸಿದಂನೋಡಿ ಬಹಳ ಸಂತೋಷಿಸುತ್ತೇವೆ. ಈ ಶತಕವು ನೀತಿಬೋಧಕವಾಗಿದ್ದಾಗ್ಯೂ, ಇದು ಪುನಃ ಪರಿಷ್ಕೃತವಾಗಿ ಸಲಕ್ಷಣದಿಂ ಹೊರಗಾಗುವ ತನಕ ಬಾಲಕರದಂ ನಿರೀಕ್ಷಿಸುತಲಿರಬೇಕೆಂದು ಕೋರುತ್ತೇವೆ

## Occasional Notes.
## ನೈಮಿತ್ತಿಕ ವಿಷಯನ್ಯಾಸ

ಫ್ರೆಂಚ್ ಸೆಟಲ್‌ಮೆಂಟ್‌ಗಳಾದ ಪುದುಚೇರಿ ಮತ್ತು ಕಾರಿಕಲ್ ತುಕಡಿಗಳಲ್ಲಿ ಸರ್ವೇ ಸೆಟಲ್‌ಮೆಂಟ್ ಮಾಡಬೇಕೆಂಬದಾಗಿ ಫ್ರೆಂಚ್ ಸರ್ಕಾರದವರು ಹುಕುಂಮಾಡಿ ಅಬಗ್ಯೆ ಮಾರ್ಕ್ವಿಯರ್ ವಿಕ್ಟರ್ ಕ್ವಾರ್ಟನ್ನಿ ಯೆಂಬವರನ್ನು ಸೆಟಲ್‌ಮೆಂಟ್ ಆಫಿಸರಾಗಿ ಮೊಕರರ್‌ಮಾಡಿರುತ್ತಾರೆ.

ಮಾಹೇ ಮಜಕೂರ್ ೨೦ ನೇ ತಾರೀಖಿನಲ್ಲಿ ಮೆ|| ಗ್ಲೈಡ್‌ಸ್ಟನ್ ಯವರು ಸರ್ ಜಾರ್ಜ್ ಲಬಕ್ ಯವರಿಗೆ, ಸದ್ಯಃ ವೆಳ್ಳಿ ನಾಣ್ಯಗಳಿಗೆ ಬದಲು ಭಂಗಾರದ ನಾಣ್ಯಗಳನ್ನು ಚಲಾವಣೆಯಲ್ಲಿ ತರುವ ಆಲೋಚನೆ ತಮಗಿರುವದಿಲ್ಲವೆಂದು ತಿಳಿಸಿದರಂತೆ.

ಕಲ್ಕತ್ತಾ ಹೈಕೋರ್ಟಿನಲ್ಲಿ ಕಲಹ ಮೊಕದ್ದಮೆಯೊಂದು ಕಳೆದವಾರದಲ್ಲಿ ವಿಚಾರಣೆಯಾಗುತಲಿರುವಾಗ್ಯೆ ಆನರೆಬಲ್ ಜಸ್ಟಿಸ್ ಪ್ರಿನ್‌ಸೆಪ್ ಯವರು ಈ ದೇಶವು ಅವ್ಯವಸ್ಥಿತಸ್ಥಿತಿ ಯೆಳವುವಂತೆಕಾಣುತಿದೆಯೆಂದು ತಿಳಿಸಿದರು. ದೇಶದಲ್ಲಿ ನ್ಯಾಯ ನಿಬಂಧನೆಗಳು ಅಧಿಕವಾಗುತಬರುವಂತೆಲ್ಲ ಪ್ರಜೆಗಳ ಉಚ್ಛೃಂಖಲ ಪ್ರವೃತ್ತಿಗೆ ಅವಕಾಶವು ಅಧಿಕವಾಗುತಿದೆ

ಲಾರ್ಡ್ ಲ್ಯಾನ್‌ಸ್‌ಡೌನ್ ಸಾಹೇಬರವರು ಬರುವ ಮಾರ್ಚಿ ತಿಂಗಳ ಆಖೈರ್ ವರಿವಿಗೆ ತಮ್ಮ ಕೆಲಸವಂ ಬಿಟ್ಟು ಹೋಗಲಾರರೆಂಬದಾಗಿ ಈ ಮಧ್ಯೆ ಉಂಟಾದ ಪ್ರವಾದವು ಶುದ್ಧ ನಿರಾಧಾರವಾದುದೆಂತಲೂ, ಈಗಿನ ಯೇರ್ಪಾಡಿನ ಪ್ರಕಾರ ಬರುವ ಡಿಸೆಂಬರ್ ತಿಂಗಳಲ್ಲಿ ತಮ್ಮ ಕೆಲಸದ ಚಾರ್ಜನ್ನು ಮುಂದೆ ಬರತಕ್ಕವರಿಗೊಪ್ಪಿಸಿ ಸ್ವದೇಶಕ್ಕೆ ದಯಮಾಡುವರೆಂತಲೂ ನಂಬತಕ್ಕ ಮೂಲಕ ತಿಳಿಯಬರುವಂತೆ ಮದರಾಸ್ ಸ್ಟ್ಯಾಂಡರ್ಡ್ ಪತ್ರಿಕೆ ತಿಳಿಸುತಿದೆ.

ಬರ್ಮಾ ರಾಜ್ಯದ ಸಾಬಕ್ ಅರಸರಾದ ಥೀಬಾಯವರು, ಅಪಹೃತ ಸಂಪತ್ತುಳ್ಳವರಾಗಿ, ರತ್ನಗಿರಿಯಲ್ಲಿ ನಿರ್ಬಂಧದೊಳಿರುತಲಿರುವದು ಯೆಲ್ಲರಿಗೂ ತಿಳಿದ ವಿಷಯವಷ್ಟೆ. ಅವರೀಚೆಗೆ ಇಂಗ್ಲಿಷ್‌ಭಾಷೆಯಲ್ಲಿ ಬಹಳ ದೂರ ಪರಿಚಯಮಾಡಿದಾರಾಳವಾಗಿಮಾತನಾಡಲಿಕ್ಕೆ ಶಕ್ತರಾಗಿದಾರೆಂತಲೂ, ರತ್ನಗಿರಿಯಲ್ಲಿ ಜನಿಸಿದ ಅವರ ಕುಮಾರ್ತೆಯೊಬ್ಬಾಕೆ ಸಹ ಸದರೀ ಭಾಷೆಯಲ್ಲಿ ಪರಿಚಯಮಾಡಿಚತುರಳೆನಿಸಿದಾಳೆಂತಲೂ ಒಂದಾನೊಂದು ಇಂಗ್ಲಿಷ್ ಪತ್ರಿಕೆ ತಿಳಿಸುತಿದೆ. ರಾಜ್ಯ, ಕೋಶ ಪ್ರಭುತ್ವವು ಕಳೆದುಕೊಂಡವರ್ಗೆ ಇಷ್ಟರಿಂದಲೂ ಪ್ರಯೋಜನವೇನು?

## LOCAL AND PROVINCIAL NEWS.
## ಒಳದೇಶಮತ್ತುತಾಲ್ಲೂಕ್‌ಜಾತ್‌ವೃತ್ತಾಂತಗಳು.

ಇಲ್ಲಿನ ಅಸಿಸ್ಟೆಂಟ್ ರೆಸಿಡೆಂಟರಾದ, ಮೇಜರ್ ರಾವೆನ್‌ಷಾ ಯವರಿಗೆ ನಾಳೆಯದಿನದ ಮೊದಲು, ಮೂರುತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುವಂತೆ ಈ ವಾರದ ಇಂಡ್ಯ ಗಜೆಟನ ಮೂಲಕ ತಿಳಿಯಬರುತಿದೆ.

ಮೈಸೂರು ದೇಶದಲ್ಲಿ ಗಣ್ಯರಾಗಿಯೂ ದೊಡ್ಡ ವಿದ್ವಾಂಸರಾಗಿಯೂ ಇದ್ದ ಮಹತ್ತಾದ ಸಂಸ್ಕೃತ ಪಾಠಶಾಲೆಯುಬ್ರಹ್ಮವಿದ್ಯೋಪಾಧ್ಯಾ

ಪ್ರಾಚ್ಯ ಪಂಡಿತ ಯೋಗಾನಂದ ಶಾಸ್ತ್ರಿಗಳು ೯೩ ನೇ ಇಸವಿ ಜೂಲೈ ೩೦ನೇ ತಾರೀಖು ಭಾನುವಾರ ಸಾಯಂಕಾಲದಲ್ಲಿ ಯೋಗಮಾರ್ಗದಿಂದ ಈ ಭೂಲೋಕ ಸಂಬಂಧವಂ ಬಿಟ್ಟು ಬ್ರಹ್ಮ ಸಾಯುಜ್ಯವನ್ನು ಹೊಂದಿದರು.

ನಮ್ಮ ಡೆಪ್ಯುಟಿ ಕಮ್ಮಿಷನರವರಾದ ಮ|| ರು ಕೃಷ್ಣಯ್ಯಂಗಾರ್ಯರು ತಾವು ರಜಾ ಮೇಲೆ ದಯಮಾಡಿಸುವದಕ್ಕೆ ಪೂರ್ವಭಾವಿಯಾಗಿ, ತಮ್ಮ ಇಲಾಖೆಯಲ್ಲಿ ಎಷ್ಟು ನೌಕರಿಗಳು ಖಾಲಿ ಇವೆ ಯೆಂಬುವದನ್ನು ಗೊತ್ತು ಮಾಡಿಕೊಂಡು ತನಗೆ ಹ್ಯಾಗೆ ಉಚಿತವೆಂದು ತೋರಿತೋ ಹಾಗೆ ಎಲ್ಲಾ ನೌಕರಿಗಳನ್ನೂ ವಿಲೇವಾರಿ ಮಾಡಿಬಿಟ್ಟು ಅನಂತರ ತಮ್ಮ ಚಾರ್ಜನ್ನು ಮೆ|| ಮಾಧವಯ್ಯನವರಿಗೆ ಒಪ್ಪಿಸಿದರು.

ನಂದಿದುರ್ಗಾಡಿವಿಜನ್ ಸೆಷನ್ಸ್ ಕೋರ್ಟಿನಲ್ಲಿ ಋಣ ಕಬ್ಬಿಣ ಪೆಟ್ಟಿಗೆಯ ಬೀಗವನ್ನು ಒಡೆದು ಅದರೊಳಗಿದ್ದ ೫೩ ರೂಪಾಯಿಗಳನ್ನು ಯಾರೋ ಅಪಹರಿಸಿದರೆಂತಲೂ, ಕದಮೆಯಾದ ಮೊಬಲಗನ್ನು ನಾಜರು ಕೈಯಿಂದ ಖಾತೆ ಭರ್ತಿ ಮಾಡತಕ್ಕದ್ದೆಂದು ಜಿಲ್ಲೆಯವರು ಹುಕುಂ ಮಾಡಿ ಅದರಂತೆ ಆತನ ಸರ್ವೀಸ್ ಮೇಲೆ ಮುಲುಗುವದಕ್ಕೆ ಬುದ್ಧಿ ಪೂರ್ವಕ ಜವಾಬನ್ನು ತಗ್ಗಾದ ಮಾಡಿದರೆಂತಲೂ ತಿಳಿಯಬರುತಿದೆ. ಸೆಷನ್ಸ್ ಕೋರ್ಟಿನಲ್ಲೀ ಕಳವು ಮಾಡಿದವನನ್ನು ಪೊಲೀಸಿಗೆ ಕಮ್ಮಿಟಿ ಮಾಡದೇ ಕೋ ತಿಳಿ ೦. ಬಲ್ಲವು.

ಈಗ ಪ್ರತಿದಿನವೂ ಸಾಯಂಕಾಲ ವೇಳೆಯಲ್ಲಿ ಮಳೆ ಬೀಳುತ್ತಿದೆ. ಪರಂತು ಬಳ್ಳಾಪುರದ ಧರ್ಮಾಂಬುದಿ ಕೆರೆಯ ದಾರಿದ್ರ್ಯ ಮಾತ್ರ ನಿವೃತ್ತಿಯಾಗಲಿಲ್ಲ. ಇದರಿಂದ ಅದರ ಅಚ್ಚುಕಟ್ಟು ಪ್ರಾಂತಗಳಲ್ಲಿರುವ ಭಾವಿಗಳು ನಿಷ್ಪ್ರಯೋಜಕಗಳಾಗಿವೆ. ಈ ವರ್ಷಕಾಲದಲ್ಲಿಯೇ ಜನಗಳು ಜಲಕಷ್ಟವನ್ನನುಭವಿಸುವಾಗ್ಯೆ ಮುಂದಿನ ಬೇಸಿಗೆಯನ್ನವರು ಹ್ಯಾಗೆ ಕಳೆಯತಕ್ಕದ್ದೋ ತಿಳಿಯಲಿಲ್ಲ. ಕೆರೆ ಭಾವಿಗಳಿಗೆ ನೀರು ಬಾರದಿದ್ದಾಗ್ಯೂ, ಈ ಪ್ರಾಂತ್ಯದಲ್ಲಿ ಬೀಳುವ ಮಳೆಯು ಕಾಡ್ಯಭೂಮಿಗಳಿಗೂ, ಮಾಗಣಿವು ಕೆಸರಾಗಲಿಕ್ಕೂ, ಅನಾವೃಷ್ಟಿಕ್ಕೂ ಸಹಕಾರಿಯಾಗಿದೆ.

ಬರುವ ತಿಂಗಳ ೧೮ನೇ ತಾರೀಖಿನಲ್ಲಿ ಶ್ರೀ ಮನ್ಮಹಾರಾಜರವರು ಹಿಂದೂಪುರ ರೈಲ್ವೇ ಮಾರ್ಗವಾಗಿ ಸ್ವಲ್ಪ ದೂರ ಪಯಣ ಮಾಡಿ ಅದೇ ದಿನ ಸಾಯಂಕಾಲ ವಾಪಸ್ ಬರುವರೆಂದು ತಿಳಿಯಬರುತಿದೆ. ಪ್ರಾಯಶಃ ಈಗ ರೈಲ್ವೇ ಕಾಮಗಾರಿಗಳೆಲ್ಲವು ಪೂರೈಸಿದ್ದರಿಂದ ಬರುವ ಸೆಪ್ಟಂಬರ್ ತಿಂಗಳ ಮೊದಲನೇ ತಾರೀಖಿನಲ್ಲಿ, ಪ್ರಯಾಣಿಕರ ಮತ್ತು ಸಾಮಾನ್ ಗಾಡಿಗಳ ಆಮದು ರಫ್ತಿಗೆ ಪ್ರಾರಂಭವಾಗುವಂತೆ ನಿಷ್ಕರ್ಷೆಯಾಗಿರುತಿದೆ. ಮುಂಬೈ ಗವರ್ನಮೆಂಟ್ ಕನ್‌ಸಲ್ಟಿಂಗ್ ಇಂಜನಿಯರವರು ಬರುವ ತಿಂಗಳ ೪ ನೇ ತಾರೀಖಿನಲ್ಲ ರಸ್ತೇ ಪರಿಶೋಧನೆ ಬಗ್ಗೆ ಬರಹೋಗುವಂತೆ ತಿಳಿಯಬರುತದೆ.

ಮ|| ಮರಿಮಲ್ಲಪ್ಪನವರ ಧರ್ಮಕೆಲಸಕ್ಕೋಸ್ಕರ ಒಂದು ಫಂಡನ್ನು ಏರ್ಪಾಡು ಮಾಡಿ ಅದನ್ನು ಟ್ರಸ್ಟಿಗಳ ವಶಪಡಿಸಿಟ್ಟಿರುವದು ಸರಿಯಷ್ಟೆ. ಈಚೆಗೆ ಮಹಾರಾಜಾ ಕಾಲೇಜಿನ ಪ್ರಿನ್ಸಿಪಲ್‌ರಾದ ಮೆಸ್ಟರ್ ಜೆ. ವೀವರ್ ಸಾಹೇಬರವರು ಇದಕ್ಕೆ ಸೆಕ್ರಟರಿಗಳಾಗಿ ನಿಯಮಿಸಲ್ಪಟ್ಟ ಮೇಲೆ ಇವರು ಈ ಹಣವನ್ನು ಗವರ್ನಮೆಂಟ ಟ್ರೆಜರಿಯಲ್ಲಿ ಡಿಪಾಜಿಟ್ ಇಡಬೇಕೆಂದು ಬರೆದದ್ದರಮೇಲೆ, ಗವರ್ನಮೆಂಟಿನವರು ಕೇವಲ ವಿಶ್ವಾಸದಿಂದ ಒಪ್ಪಿ ಅದನ್ನು ತೆಗದುಕೊಳ್ಳುವಂತೆಯೂ ಅದಕ್ಕಾಗಿ ಶೇಕಡಾ ವರುಷಕ್ಕೆ ೫ ರೂಪಾಯಿ ಬಡ್ಡಿಯಂತೆ ಆಗುವ ಮೊಬಲಗನ್ನು ಆರಾರು ತಿಂಗಳಿಗೆ ಒಂದೊಂದು ಸಲ ಕೊಡುವಂತೆಯೂ ಏರ್ಪಾಡು ಮಾಡಿರುತ್ತಾರೆ.

ತುಮಕೂರ್ ಡಿಸ್ಟ್ರಿಕ್ಟಿಗೆ ಸೇರಿದ ಕೆಲವು ತಾಲ್ಲೂಕ್ ಅಮಲ್ದಾರರು ವಿಶೇಷ ಶ್ರದ್ಧಾಜಾಗರೂಕತೆಯೊಡನೆ ಕಳೆದ ಸಾಲಿನ ಸರ್ಕಾರ್ ಕಂದಾಯವನ್ನು ಬೇಟಾಕಾಗಿ ವಸೂಲ್ಮಾಡಿ ಬಾಕೀಪಟ್ಟಿಗೆ ನುಚ್ಚಾ ಹಾಕಿಸಿದಾರೆಂಬ ಅಂಶವನ್ನು ಡೆಪ್ಯುಟಿ ಕಮ್ಮಿಷನರವರು ಗವರ್ನಮೆಂಟಿಗೆ ರಿಪೋರ್ಟ್ ಮಾಡಿದ್ದರ ಮೇಲೆ ಅವರು, ಡೆಪ್ಯುಟಿ ಕಮ್ಮಿಷನರ ಮತ್ತು ಅಮಲ್ದಾರರುಗಳ ಮಹತ್ವತನ್ನು ಕೊಂಡಾಡಿ ತಮ್ಮ ಸಂತೃಪ್ತಿಯನ್ನು ವ್ಯಕ್ತಪಡಿಸಿದರೆಂದು ಒಳದೇಶದ ಇಂಗ್ಲಿಷ್ ಪತ್ರಿಕೆಯೊಂದು ತಿಳಸುತಿದೆ. ಪ್ರಾಯೇಣ ಇದು ನಿಜವಾಗಿರಬಹುದು. ಕಂದಾಯ ವಸೂಲಿ ವಿಷಯದಲ್ಲಿ ಅಧಿಕಾರಿಗಳ ಜಾಗರೂಕತೆಯು ಗವರ್ನಮೆಂಟಿನವರ ಪ್ರಶಂಸೆಗೆ ವಿಷಯವಾದಂತೆಲ್ಲ ರೈತರ ಸ್ಥಿತಿಯು ನಮ್ಮ ಅನುತಾಪಕ್ಕೆ ಪಾತ್ರವಾಗದೆ ಹೋಗಲಿಲ್ಲವು. ಇಷ್ಟುಜನ ಅಮಲ್ದಾರರಿಗೆ ಪ್ರತಿಷ್ಠಾ ಸೂಚಕವಾಗಿ ಏರ್ಪಟ್ಟ ರೈತರ ಸ್ಥಿತಿ ವಸೂಲಿ ಸಮಯದಲ್ಲಿ ಯೆಷ್ಟರದಾಗಿತ್ತೋ ತಿಳಿಯಲಿಲ್ಲವು.

ಮೆ|| ಭಾಭಾಸಾಹೇಬರವರ ಏರ್ಪಾಡಿನಂತೆ ಅಕ್ಷರಾಭ್ಯಾಸದ ತರಗತಿಗಳಲ್ಲಿ ಸ್ವಲ್ಪವೂ ಮಾರಗಳು ನಡೆಯದೆ ಕೇವಲ ಹೀನಸ್ಥಿತಿಯಲ್ಲಿದೆ, ಎಂತಲೂ, ಆ ತರಗತಿಗಳಲ್ಲಿರತಕ್ಕ ಬಾಲಕರಿಗೆ ೧—೨ ವರುಷಗಳ ಮೇಲಾದರೂ ಕಾಗುಣಿತವಿಲ್ಲದೆ ಬರೀ ಅಕ್ಷರಗಳಲ್ಲಿ ಹೇಳಿದ ಅಕ್ಷರವನ್ನು ಕಾಣಿಸುವದಕ್ಕೆ ಬರುವದಿಲ್ಲವೆಂತಲೂ, ಆ ತರಗತಿಗಳಿಗೆ ಪರೀಕ್ಷಕರ ಮೇಲ್ವಿಚಾರಕರ ನಿರ್ಲಕ್ಷ್ಯತೆಯಿಂದಲೇ ಅಥವಾ ತಿಳುವಳಿಕೆ ಸಾಲದ್ದರಿಂದಲೋ ಈ ಮೇರೆ ಆಗುತಲಿದೆ ಎಂತಲೂ, ಈ ವಿಷಯದಲ್ಲಿ ಇನ್ಸ್‌ಪೆಕ್ಟರುಗಳು ಇನ್ಸ್‌ಪೆಕ್ಷನ್ ಕಾಲಗಳಲ್ಲಿ ಕೂಡ ಅದರ ತನಿಖೆ ನಡೆಯದೇ ಇರುವದು ಪ್ರಬಲ ಕಾರಣವೆಂತಲೂ ಅಲ್ಲದೆ ಹೆಡ್ಮಾಸ್ಟರುಗಳು ಲೋವರ್ ಸೆಕೆಂಡರಿ ಪರೀಕ್ಷೆ ಕೊಡಿಸಿಬಿಟ್ಟರೆ ತಮ್ಮ ಸ್ಕೂಲುಗಳ ಸ್ಥಿತಿ ಸ್ವತಃ ಸಮವಾಗಿದೆ ಎಂಬ ಭಾವನೆ ವಿದ್ಯಾಭ್ಯಾಸದ ಇಲಾಖೆ ಅಧಿಕಾರಿಗಳಿಗುಂಟಾಗುವದೆಂದು ಭಾವಿಸಿ, ಆ ತರಗತಿ ಯೊಂದರಮಟ್ಟಿಗೆ ನಿಗಾಕೊಟ್ಟುಕೊಂಡು ಇದಾರೆಂತಲೂ ಈ ಕಾರಣಗಳಿಂದ ಕೆಳಗಣ ತರಗತಿಗಳ ವಿದ್ಯಾರ್ಥಿಗಳ ಜೀವಿತಕಾಲವೆಲ್ಲಾ ನಿರರ್ಥಕವಾಗುತಲಿದೆ ಎಂತಲೂ, ಕೆಲವು ತಾಲ್ಲೂಕುಗಳ ಬಾತ್ಮೀದಾರರಿಂದ ಲೇಖನಗಳು ಬಂದಿವೆ. ಈ ಸಂಗತಿ ಪ್ರಾಯಶಃ ಎಲ್ಲಾ ತಡೆಗಳಲ್ಲೂ ಇರತಕ್ಕ ಭಾಗವಾಗಿದೆ.

## CORRESPONDENCE

ಮೇಲುಕೋಟೆ, ತಾ|| ೨೯ ನೇ ಜೂಲೈ ೧೮೯೩
(ಕಳೆದವಾರದ ಶೇಷ)

ಧರ್ಮ.—ಲೋಕದಲ್ಲಿ ವರ್ಣಗಳ ಧರ್ಮವು ಎರಡುವಿಧವಾಗಿ ಇದೆ ಹ್ಯಾಗೆಂದರೆ? ಮಾಡಬೇಕಾದ ಧರ್ಮಗಳನ್ನು ಮಾಡೋಣವು, ಮಾಡಬಾರದ ಕೃತ್ಯಗಳನ್ನು ಬಿಡೋಣವು ಎಂಬದು, ಇವುಗಳಲ್ಲಿ ಅನುಷ್ಠಿಸಬೇಕಾದ ಧರ್ಮವನ್ನು ಮಾಡದಿದ್ದಾಗ್ಯೂ, ಅಕಾರ್ಯಗಳನ್ನು ಮಾಡದಿರುವದೇ ಉತ್ತಮವು ಹ್ಯಾಗೆಂದರೆ, ಸರ್ಕಾರದವರು ಪ್ರಜಾಸಂರಕ್ಷಣಕ್ಕಾಗಿ ಪೋಲೀಸು ಅಧಿಕಾರಿಗಳಿಗೆ ರಾಜ್ಯದಲ್ಲಿ, ಕಳವು ಮುಂತಾದ ಕೆಟ್ಟ ಕೆಲಸಗಳನ್ನು ನಡೆಸುವವರಿಗೆ ಬಂದೋಬಸ್ತು ಮಾಡುವನ್ನು ಸ್ವಧರ್ಮವಾಗಿ ಕಲ್ಪಿಸಿರುತ್ತಾರೆ. ಒಂದು ವೇಳೆ ಅವರು ಈ ಕೆಲಸದಲ್ಲಿ ಸ್ವಲ್ಪ ಉದಾಸೀನರಾದಾಗ್ಯೂ, ಅಷ್ಟು ಬಾಧಕವಿಲ್ಲ, ಸ್ವಧರ್ಮನಿಯುಕ್ತರಾದ ಚಾರರು ಅಕಾರ್ಯಗಳಲ್ಲಿ ಪ್ರವರ್ತಿಸಿ, ಚೌರ್ಯಾದಿಗಳನ್ನು ನಡಿಸಿದರೆ ತತ್ಕ್ಷಣವೇ ಶಿಕ್ಷೆಯನ್ನು ಹೊಂದಿದವರು. ಇದರಂತೆಯೇ, ಬ್ರಾಹ್ಮಣಾದಿ ವರ್ಣಗಳು ಸ್ವಧರ್ಮದಲ್ಲಿ ಕೆಲವು ಅಂಶ ಪರಿತ್ಯಾಗ ಮಾಡಿದಾಗ್ಯೂ, ಅಧರ್ಮದಲ್ಲಿ ಪ್ರವರ್ತಿಸದೆ ಇರುವದು ಮುಖ್ಯಧರ್ಮವು. ಈ ವಿಷಯವನ್ನೇ ಪುರಾಣಾದಿಗಳು, ಕಲಿಯುಗದಲ್ಲಿ "ತಂತುಮಾತ್ರಂಬ್ರಾಹ್ಮಣ್ಯಂ" ಎಂದು ಅನುವದಿಸುವವು. ತಂತು ಮಾತ್ರವು ದರೆ, ಜನಿವಾರದಿಂದ ಮಾತ್ರವೆಂದಲ್ಲವು, ಪರಂತು ಯತ್ಕಿಂಚಿದ್ಧರ್ಮಾನುಷ್ಠಾನವೆಂಬರ್ಥವು. ಆದ್ದರಿಂದ ಅಭಕ್ಷ್ಯಭಕ್ಷಣಾದ್ಯಧರ್ಮವು ಬ್ರಹ್ಮಕ್ಷತ್ರಿಯರಲ್ಲಿ ಪ್ರಾಯೇಣ ಇಲ್ಲವು, ಆದ್ದರಿಂದ ಬ್ರಾಹ್ಮಣಾದಿಗಳು, ಮನ್ವಾದ್ಯುಕ್ತ ಧರ್ಮಾನುಷ್ಠಾನವನ್ನು ಮಾಡಿದವಾಗೆಯೇ ಆಮೆಂತು ಒಬ್ಬ ಮನುಷ್ಯನನ್ನು ಪ್ರೋಟಸಿವಿರುವದಕ್ಕಿಂತಲೂ, ಹಿಂಸಿಸದೆ ಇರುವದು ಹಿತಕರವು. ಶಾಸ್ತ್ರಜ್ಞರು, ನಮಗೆ ಈಗ ಪ್ರತ್ಯಕ್ಷವಾಗಿ ತಿಳಿಯಲು ಅಸಾಧ್ಯವಾಗಿರುವವುಗಳನ್ನು ಪ್ರತ್ಯಕ್ಷವಾಗಿ ನೋಡಿ ಪ್ರಪಂಚದ ಹಿತಕ್ಕಾಗಿ, ಸ್ಮೃತಿ ಮುಂತಾದವುಗಳನ್ನು ಬರೆದಿರುತ್ತಾರೆ, ಹ್ಯಾಗಂದರೆ—ನಮ್ಮ ಹಿಂದೂ ಶಾಸ್ತ್ರಗಳಲ್ಲಿ ಲೋಕಗಳು ಹದಿನಾಲ್ಕು ಎಂಬದಾಗಿವೆ, ಅವುಗಳಲ್ಲಿ ಇಂದ್ರಾದಿ ದೇವತೆಗಳ ವಿಹಾರಸ್ಥಾನಾದಿಗಳು ಅಪರಿಮಿತವಾಗಿವೆ ಯೆಂಬುವದನ್ನು ಅನುಸರಿಸಿ ಇಂಗ್ಲಿಷ್ ಪ್ರಭುಗಳು ಕೂಡ ನಮ್ಮ ಕಣ್ಣುಗಳಿಗೆ ತಿಳಿಯುವ ನಕ್ಷತ್ರ ಮಂಡಲಗಳನ್ನು ಲೋಕಾಂತರಗಳಾಗಿ ಅಂಗೀಕರಿಸುತಲಿದ್ದಾರೆ. ನಮ್ಮ ಪುರಾಣಾದಿಗಳಲ್ಲಿ ಹಿಮಾಚಲ, ಗಂಧಮಾದನ, ಕೈಲಾಸ, ಮುಂತಾದ ಬೆಟ್ಟಗಳಲ್ಲಿ ದೇವಭೋಗ್ಯವಾದ ಪದಾರ್ಥಗಳು ಇರುತಿವೆ ಎಂದು ಹೇಳುವ ಮೇರೆ, ಅಲ್ಲಿಯೂ ಇದಕ್ಕಿಂತ ಅತಿಶಯವಾದ ಭೋಗ್ಯ ವಸ್ತುಗಳಿರಬಹುದು. ಗಂಧಮಾದನಾದಿಗಳಲ್ಲಿರುವ ಭೋಗವಸ್ತುಗಳನ್ನು ಮನುಷ್ಯರಾದ ಪಾಂಡವರು ಅನುಭವಿಸಿದರೆಂಬುವದು ಭಾರತದ "ಸೌಗಂಧಿಕಾಹರಣ" ವೃತ್ತಾಂತದಲ್ಲಿ ಸ್ಪಷ್ಟವಾಗಿದೆ. ಇದಕ್ಕೆ ಕಾರಣವು ತಪಃಪ್ರಭಾವವೆಂಬುವದು ಸಹ ಅದರಲ್ಲಿಯೇ ವಿವರಿಸಲ್ಪಟ್ಟಿರುತಿದೆ. ನಾವು ನಮ್ಮ ಕಣ್ಣುಗಳಿಂದ ನೋಡುವದಕ್ಕಾಗದಿರುವ ವಸ್ತುಗಳಿರಬಹುದೆಂದು ನಂಬುವದಕ್ಕೆ ಸತ್ಯವಾದಿಗಳಾಗಿಯೂ, ಆಪ್ತರಾಗಿಯೂ ಇರುವವರ ಮಾತುಗಳನ್ನೇ ಕಾರಣವಾಗಿ ಒಪ್ಪಿಕೊಳ್ಳಬೇಕು. ಇದಕ್ಕೆ ಬ್ರಿಟಿಷರವರ ಕಾರ್ಯಗಳೇ ದೃಷ್ಟಾಂತಗಳಾಗಿವೆ, ಅದೇನೆಂದರೆ ಇವರುಗಳು ಈದೇಶಾಧಿಕಾರಕ್ಕೆ ಬರುವದಕ್ಕೆ ಮೊದಲು, ಗಡಿಯಾರ, ರೈಲ್‌ಬಂಡಿ, ತಂತಿಸಮಾಚಾರ, ಧ್ವನ್ಯಾವರ್ತಕಯಂತ್ರ, ಸೂಕ್ಷ್ಮದರ್ಶಿ, ಇವುಮೊದಲಾದ ಯಂತ್ರಸಾಮಗ್ರಿಗಳ ಕೃತ್ಯಗಳು ನಮ್ಮಗಳಿಗೆಸುಳ್ಳಾಗಿದ್ದವು. ಅವು ಪ್ರತ್ಯಕ್ಷವಾಗಿ ತೋರಿಸಿದ ಬಳಿಕ ಅವರುಗಳ ಮಾತನ್ನು ನಂಬಿದೆವು ಮತ್ತು ದೂರದಲ್ಲಿರುವ ದೃಷ್ಟಿಗಗೋಚರವಾದ ಲೋಕಾಂತರ ವಿಷಯಗಳನ್ನು ಕೂಡ ಯಂತ್ರ ಸಾಧನಗಳ ಮೂಲಕ ತೋರಿಸ್ಯಾರು ಎಂಬುವ ವಿಷಯದಲ್ಲಿ ಬಹಳ ಕುತೂಹಲಿಗಳಾಗಿದೇವೆ. ಇವರು ಕೂಡ ಶಾಸ್ತ್ರ ಪರಿಶೀಲನವನ್ನು ಮಾಡಿ ಅದರಲ್ಲಿ ತಮ್ಮ ಬುದ್ಧಿಕುಶಲತೆಯನ್ನು ತೋರಿಸಿ, ನಾನಾವಿಧಚಮತ್ಕಾರಗಳನ್ನು ವ್ಯಕ್ತಪಡಿಸುತ್ತಾರಾದ್ದರಿಂದ ಹೀಗೆಯೆ ನಮ್ಮ ಶಾಸ್ತ್ರಜ್ಞರ ಮಾತು ಇದಕ್ಕಿಂತಲೂ ಮೊದಲೇ ಬರಿಯಲ್ಪಟ್ಟು ಅನೇಕರಿಂದ ಅನುಭವಿಸಲ್ಪಟ್ಟು ಇರುವದರಿಂದ ಪ್ರಾಜ್ಞರ ಪ್ರಮಾಣ್ಯವಾಕ್ಯವು ಎಂದಿಗೂ ಸುಳ್ಳಾಗಲಾರದು.

ಈ ನ್ಯಾಯವು ನಮ್ಮ ವೈದ್ಯ ಶಾಸ್ತ್ರದಲ್ಲಿ ಪ್ರತ್ಯಕ್ಷ ಸಿದ್ಧವಾಗಿಯೇ ಇರುತ್ತೆ. ಆದರೆ ವೈದ್ಯರಲ್ಲಿ ಕೆಲವು ಕಡೆ ತಪ್ಪಿ ಹೋಗುವದಕ್ಕೆ ವೈದ್ಯರ ಅನವಧಾನತೆಯೇ ಕಾರಣವು. ಅಲೌಕಿಕ ಸಾಕ್ಷಾತ್ಕಾರ ಧುರೀಣರಾದ ಮನ್ವಾದಿ ಮಹರ್ಷಿಗಳ ಶಾಸ್ತ್ರದಲ್ಲಿ ಅತಿ ಶಂಕೆಯನ್ನು ಮಾಡುವದು ಯುಕ್ತವಾದ್ದಲ್ಲವು. ಲೌಕಿಕ ಪದಾರ್ಥಗಳನ್ನ ಸಾಧಿಸಿಕೊಳ್ಳುವದಕ್ಕಾಗಿ ವಿದ್ಯಾದಿಗಳನ್ನು ಸಂಪಾದಿಸುವಂತೆ ಅಲೌಕಿಕ ಪುರುಷಾರ್ಥವನ್ನ ಸಂಪಾದಿಸುವದಕ್ಕೆ ಯಜ್ಞಾದಿಗಳನ್ನು ಯಾತಕ್ಕೆ ಅನುಷ್ಠಿಸಬಾರದು ಅರ್ಥವು ಹ್ಯಾಗೆ ಇಹಲೋಕದಲ್ಲಿ ಸುಖಸಾಧಕವಾಗಿರುತ್ತೋ, ಹಾಗೆಯೇ ಧರ್ಮವು ಇಹಪರಗಳೆರಡು ಲೋಕಗಳಲ್ಲಿಯೂ ಸುಖಕರವಾಗಿದೆ. ಈ ಧರ್ಮವು ಅರ್ಥಸಾಧಕವಾದ್ದರಿಂದ ಇಹಲೋಕ ಸೌಖ್ಯಕರವು. ಇದಕ್ಕೆ ಪ್ರತಿಪಾದಕವಾದ ವೇದ ಪ್ರಮಾಣವನ್ನ ಪ್ರಕೃತ ಪತ್ರಿಕೆಯಲ್ಲಿ ಬರಿಯುವದಕ್ಕೆ ಹಿರಿಯರ ಅನುಮತಿ ಇಲ್ಲವಾದ್ದರಿಂದ ಇದ್ದಕಡೆಯಲ್ಲಿ ನೋಡಿಕೊಳ್ಳಬೇಕು. ಇಂತಾವೇದದ ಅರ್ಥವನ್ನ ನಿಶ್ಚೈಸಬೇಕಾದರೆ, ಕಲಿಯುಗದಲ್ಲಿ ಶಬ್ದಗ್ರಹವಿಲ್ಲದವರಿಗೆ ಅಸಾಧ್ಯವು. ಪೂರ್ವದಲ್ಲಿ ನಡೆದ ಪ್ರೊಫೆಸರ್ ಫೌಸಿವಿರುತಿದೆ, ಅದೇನೆಂದರೆ—ಕೆಲವು ವಿದ್ವಾಂಸರು ರಾಮಾಯಣಾರ್ಥವನ್ನು ನಿಶ್ಚೈಸುವದಕ್ಕಾಗಿ ಸಭೆಯನ್ನು ಮಾಡಿ ಕುಳಿತುಕೊಂಡು ಇರುವಕಾಲದಲ್ಲಿ "ನೀವು ನವವ್ಯಾಕರಣ ಪಂಡಿತರಾದರೆ ಅರ್ಥ ವಿಶರಣ ಮಾಡಬಹುದೆಂಬದಾಗಿ ಆಕಾಶವಾಣಿಯು ನುಡಿದಹಾಗೂ" ಅದನ್ನ ಸಭಿಕರು ಕೇಳಿ ಪಯಂಪಚ-ಎಂಬದಾಗಿ ಪ್ರತ್ಯುತ್ತರವನ್ನು ಹೇಳಿ ತಮ್ಮ ತಮ್ಮ ಮನೆಗಳಿಗೆ ತೆರಳಿದರಂತೆ, ಆದರೆ ಶ್ರೀ ರಾಮಾಯಣ ಮೊದಲಾದ ಸಕಲ ಶಾಸ್ತ್ರಗಳಿಗೂ ಮೂಲಭೂತವಾದ ವೇದವಚನಕ್ಕೆ ಅರ್ಥವನ್ನು ವಿವರಿಸಬೇಕಾಗಿದ್ದರೆ ಸಕಲಶಾಸ್ತ್ರ ಪ್ರವೀಣನಾಗಬೇಕಲ್ಲವೇ? ಲೋಕದಲ್ಲಿ ಎಲ್ಲಾ ಭಾಷೆಗಳಲ್ಲಿಯೂ ಇರುವ ಶಬ್ದಗಳಿಗೆ ಅರ್ಥವನ್ನು ಹೇಳುವದಕ್ಕೆ ಶಬ್ದ ಶಕ್ತಿಯೆಂತಲೂ, ಲಕ್ಷಣವೆಂತಲೂ, ವ್ಯಂಜನವೆಂತಲೂ, ಮೂರು ವಿಧಗಳಾದ ಶಕ್ತಿಗಳುಂಟು. ಇವುಗಳನ್ನು ಪ್ರಕೃತಾನುಸಾರವಾಗಿ ಉಪಯೋಗಿಸುವದು ಕೂಡ ಶಾಸ್ತ್ರಜ್ಞಾನ ಸಾಧ್ಯವು. ಇದರಲ್ಲಿ ವ್ಯಂಜನವೆಂದರೆ ಒಂದು ವಿಧವಾಗಿ ಪ್ರಾರಂಭಿಸಿದ ವಸ್ತುವವು, ಅರ್ಥಾಂತರವನ್ನು ಪ್ರಕಾಶಪಡಿಸಿದರೆ ಆ ಕಡೆಯಲ್ಲಿ ವ್ಯಂಜನಶಕ್ತಿಯನ್ನು ಅಂಗೀಕರಿಸಬೇಕು, ಅದು ಹ್ಯಾಗಂದರೆ, ಒಬ್ಬ ಮನುಷ್ಯನು ಅಧಿಕಾರಿಗಳ ಬಳಿಗೆ ಹೋಗಿ ತನ್ನ ಸಂಕಟವನ್ನು ತಾನು ಪದೇಪದೆ ಅರ್ಜೀ ಮೂಲಕವಾಗಿಯೂ, ಪ್ರತ್ಯಕ್ಷದಲ್ಲಿಯೂ, ಅರಿಕೆ ಮಾಡಿಕೊಂಡಿದ್ದಾಗ್ಯೂ, ತನಗೆ ಹುಕುಂ ದೊರೆಯದೆ ಇರುವದಕ್ಕೆ, ತನ್ನ ಪ್ರಾಚೀನ ಕರ್ಮವು ಕಾರಣವಾಗಿದೆ ಎಂಬದಾಗಿ ಹೇಳಿಕೊಳ್ಳುತ್ತಾನೆ. ಈ ಮಾತಿನಲ್ಲಿ ಅರ್ಜೀದಾರನಮನೋಗತವನ್ನ ತಿಳಿಸುವಂತಾದ್ದು ಒಂದು ಶಕ್ತಿ ಇರುತಿದೆ, ಅದಕ್ಕೇನೆ "ವ್ಯಂಜನ" ವೆಂದು ಹೆಸರು ಮತ್ತು ಲೋಕದಲ್ಲಿ, ಲಿಫ್, ಲೋಟಿ, ತವ್ಯ, ಪ್ರತ್ಯಯಾಂತರವಾದ ಶಬ್ದಗಳುಂಟು. ಮಿಕ್ಕ ಶಬ್ದಗಳಿಗೆಲ್ಲ ಪ್ರಾಯೇಣ ಪ್ರಯೋಗಾನುಸಾರವಾಗಿ, ವ್ಯಂಜನವನ್ನು ಕಲ್ಪಿಸಬೇಕು, ಅದು ಹ್ಯಾಗೆಂದರೆ, ಒಬ್ಬ ಮನುಷ್ಯನು ತನ್ನಿದಿರಿಗೆ ಬಂದ ಮನುಷ್ಯನನ್ನು ನೋಡಿ, ಬಾಡಿರಾ, ಬನ್ನಿ, ಎಂಬದಾಗಿ ಹೇಳಿದರೆ ನೀನ್ಯಾತಕ್ಕೆ ಬಂದೆ, ನಿನ್ನ ಸ್ವರೂಪ ಕಂಡಹಾಗೆಯೆ ಇದೆ ಎಂದು ನಿಂದೆಯು ತೋರುತ್ತೆ. ಮತ್ತು ನೀವು ಯಾತಕ್ಕೆ ಬಂದಿರಿ ಎಂದು ಹೇಳಿದರೆ, ನಾನೇ ತಮ್ಮ ಸನ್ನಿಧಾನಕ್ಕೆ ಬರುವೆನು ಈ ಅಪರಾಧವನ್ನ ನನ್ನ ತಲೆಯಮೇಲೆ ಯಾತಕ್ಕೆ ಹೊರಿಸಿದಿರಿ; ನಾನು ಅಷ್ಟು ಅವಿಧೇಯನೆ ಎಂಬದಾಗಿ ತನ್ನನಿಂದೆಯೂ ತೋರುತ್ತದೆ. ಮತ್ತು ಯಾರಾದರು ಅಂಗಡಿಗೆ ಹೋಗಿ, ಯಾವದಾದರೂ ಒಂದು ಪದಾರ್ಥವನ್ನು ಕೇಳಿದರೆ ಅಂಗಡಿಯವನು ಮತ್ಯಾವದು ಬೇಕು ಎಂಬದಾಗಿ ಪ್ರತ್ಯುತ್ತರವನ್ನು ಹೇಳುತ್ತಾನೆ. ಇದಕ್ಕೆ ಕೆಲವು ಕಡೆಯಲ್ಲಿ ನೀನು ಕೇಳುವ ಪದಾರ್ಥವು ನಮ್ಮ ಅಂಗಡಿಯಲ್ಲಿಲ್ಲವೆಂಬ ಅರ್ಥವುಂಟು. ಹೀಗೇನೆ ಶಾಸ್ತ್ರಕರ್ತೃಗಳಾದ ಭಗವಚ್ಛಂಕರಾಚಾರ್ಯರು ಮೊದಲಾದವರು ಸಹ, ಘಟವಿದೆ ಎಂದಂಥ ಕಡೆಯಲ್ಲಿ ಪಟವಿಲ್ಲವೆಂಬಅರ್ಥವನ್ನೂ, ಪಟವಿದೆ ಎಂಬ ಕಡೆಯಲ್ಲಿ ಘಟವಿಲ್ಲವೆಂಬ ಅರ್ಥವನ್ನೂ ಪರಸ್ಪರಾಭಾವೋಕ್ತಿಗಳಿಂದ, ಪರಸ್ಪರ ಸಕ್ತಿಯು ತೋರುತ್ತೆಂದು ಅಂಗೀಕರಿಸಿರುತ್ತಾರೆ. ನಮ್ಮ ವೇದಪುರಾಣಾದಿಗಳಲ್ಲಿ ಸ್ವಲ್ಪ ನಡವಳಿಕೆಗಳು ವ್ಯತ್ಯಾಸವಾಗಿ ನಡಿಸಲ್ಪಟ್ಟಂತೆ ಹೇಳಲ್ಪಟ್ಟದೆ. ಹಾಗೆ ನಡಿಸಿದವರು ಸರ್ವಜ್ಞರೆಂಬದಾಗಿಯೂ ಹೇಳರುತ್ತಾರೆ. ವೇದವು ಪರಸ್ಪರ ವಿರುದ್ಧ ಧರ್ಮಗಳನ್ನು ಪ್ರತಿಪಾದಿಸುವದರಿಂದ ಅಪ್ರಮಾಣವೆಂತಲೂ, ವ್ಯತ್ಯಾಸವಾದ ಕಾರ್ಯಗಳನ್ನು ನಡಸಿದವರು ಅವಿವೇಕಿಗಳೆಂತಲೂ ಕೆಲವರು ಹೇಳುತ್ತಾರೆ. ಹೀಗೆ ಹೇಳತಕ್ಕವರು ಶಬ್ದಗಳಿಗೆ ಮೇಲೆ ಬರೆದಿರುವ ಮೇರೆ ವ್ಯಂಜನಾಶಕ್ತಿ ಉಂಟೆಂಬುವದನ್ನ ತಿಳಿಯದೇ ಹೇಳುತ್ತಾರೋ ಅಥವಾ ನಮ್ಮ ಮತವನ್ನ ದೂಷಿಸಬೇಕೆಂಬ ಆಗ್ರಹದಿಂದ ಹೇಳುತ್ತಾರೆಯೋ ತಿಳಿಯಲಶಕ್ಯವು. ಅಲಂಕಾರ ಶಾಸ್ತ್ರದವರು ಕೂಡ ಧ್ವನ್ಯರ್ಥದಲ್ಲಿ ಸ್ವಲ್ಪಭೇದವನ್ನಂ

ಗೀಕರಿಸಿ ನಾನಾವಿಧವಾದ ಅಲಂಕಾರಗಳನ್ನು ಕಲ್ಪಿಸಿರುತ್ತಾರೆ. ವಕ್ತವ್ಯಾಂಶ ಅಪರಿಮಿತವಾದ್ದರಿಂದ ಬುದ್ಧಿ ಸಾಲದೆ ಮೂಕನಾಗುತ್ತೇನೆ. ಅಭಿಜ್ಞರು ಶಾಸ್ತ್ರ, ಲೌಕಿಕವ್ರವಾದ, ಇವುಗಳನ್ನಂಗೀಕರಿಸಿ ವ್ಯಂಜನಾಶಕ್ತಿಯನ್ನು ಚಿತ್ತಕ್ಕೆ ತಂದು, ಪ್ರಕೃತಾನುಸಾರವಾಗಿ ಅರ್ಥವನ್ನೂ ವಿವರಿಸಿದರೆ ಯಾವದೊಂದು ಬಾಧೆ ಇರುವದಿಲ್ಲವು. ಪ್ರಸಕ್ತಾನುಪ್ರಸಕ್ತವಾದ ಮಾತುಗಳಿಂದ ಏನೂ ಪ್ರಯೋಜನವಿಲ್ಲದೆ ಪುರುಷಾರ್ಥ ಸಿದ್ಧಿಗೆ ಶರೀರವೃದ್ಧಿಕ್ಷಯ್ವ ಅವಶ್ಯಾಪೇಕ್ಷಿತವೆಂದು ಮೊದಲೇ ವಿಜ್ಞಾಪಿಸಿರುತ್ತೇನೆ

## THE MYSORE GAZETTE.
## ಮೈಸೂರು ಗೆಜೆಟಿ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಹೊರಡಿಸಲ್ಪಟ್ಟ ಅಸ್ತಿಹಾರನಾಮೆಗಳು,

ನಂ||೧೦೦೨—೧. ೩೩೦ ತಾ ೧೮ನೇ ಜೂಲೈ ೧೮೯೩—೧೮೯೩ನೇ ಇಸವಿ ಜೂನ್ ೨೬ನೇ ತಾರೀಖಿನ ಮಧ್ಯಾಹ್ನಾನಂತರ, ೨ನೇ ಜನರಲ್ ಅಸಿಸ್ಟೆಂಟ್ ಕಮಿಷನರ್ ಕೋರ್ಟಿನ ಚಾರ್ಜನ್ನು ಮೆ॥ ಜೆಚ್. ನಂಜುಂಡರಾಜ ಅರಸಿನವರು ಕೊಟ್ಟು ಮೆ॥ ಕೃಷ್ಣಯ್ಯಂಗಾರ್ರವರು ತೆಗದುಕೊಂಡಿರುತ್ತಾರೆ.

ನಂ||೧೦೧೩-೧. ೩೩೩-ತಾ|೧೯ನೇಜೂಲೈ೯೩-ಈಗ ಇರುವ ಖಾಲೀಗಳನ್ನು ಬರ್ತಿ ಮಾಡುವದಕ್ಕಾಗಿ ಮುನಸಪ್‌ಗಳ ಇದರಡಿ ಬರುವ ಗ್ರೇಡಗಳಲ್ಲಿ ಬಡ್ತಿಗಳು ಮಂಜೂರ್ಮಾಡಲ್ಪಟ್ಟಿವೆ.—

ಶ್ರೀರಂಗ ಪಟ್ಟಣದ ಮುನಸಪ್ ಮೆ॥ಬಿ. ಶ್ರೀನಿವಾಸರಾಯರ.೩ನೇಗ್ರೇಡನಿಂದ೨ನೇಗ್ರೇಡಿಗೆ

ತುಮಕೂರು ಮುನ್‌ಸಫ್ ಮೆ॥ಎ, ಅನಂದರಾಯರವರು ೪ನೇ ಗ್ರೇಡಿನಿಂದ ೩ನೇಗ್ರೇಡಿಗೆ.

ಕೋಲಾರ್ ಮುನ್‌ಸಫ್ ಮೆ॥ಜೆಚ್. ತಿಮ್ಮಕೃಷ್ಣರಾವ್, ಬಿ. ಎ. ಬಿ. ಎಲ್. ಯವರು ೪ನೇ ಗ್ರೇಡಿನಿಂದ ೩ನೇ ಗ್ರೇಡಿಗೆ.

ನಂ|| ೧೩೧೦—೧. ೪೧೩—ಅಡ್ಡಿಷನಲ್ ಮುನ್‌ಸಫ್ ಮೆ|| ಎಸ್. ವೆಂಕಟವರದಯ್ಯಂಗಾರ್ರವರು ರಜಾದಿಂದ ವಾಪಸ್ ಬಂದು ೧೮೯೩ನೇ ಇಸವಿ ಜೂನ್ ೨೬ನೇ ತಾರೀಖಿನ ಪ್ರಾರ್ವಾಹ್ನದಲ್ಲಿ ಮೈಸೂರು ಅಡ್ಡಿಷನಲ್ ಮುನಸಫ್‌ಕೋರ್ಟ್ ಚಾರ್ಜ ವಹಿಸಿಕೊಂಡವರಿಂದ, ಸನ್ ೧೮೯೩ನೇ ಇಸವಿ ಜೂಲೈ ೨೦ನೇ ನಂಬ್ರ ೨೦೩೮—೧. ೫೩೦ ನೇನಂಬರ ಇಸ್ತಿಹಾರಿಮೂಲಕ ಅವರಿಗೆ ಕೊಡಲ್ಪಟ್ಟಿದ್ದ ರಜಾಪೈಕಿ ಉಪಯೋಗಿಸಿಕೊಳ್ಳಲ್ಪಡದ ಭಾಗವು ಇದರಿಂದ ರದ್ದುಮಾಡಲ್ಪಟ್ಟಿರುತದೆ

ನಂ|೧೪೦೬-೧. ೪೩೯-೨೦ನೇ ಜೂಲೈ೯೩-- ಮೈಸೂರ್‌ಡಿಸ್ಟ್ರಿಕ್ಟ್ ಡೆಪ್ಯುಟಿಕಮ್ಮಿಷನರ್ ಮೆ ಎ. ರಂಗಸ್ವಾಮಯ್ಯಂಗಾರ್ರವರು ೧೮೯೩ ನೇ ಇಸವಿ ಜೂಲೈ ೧೯ನೇ ತಾರೀಖಿನ ಮಧ್ಯಾಹ್ನಾನಂತರ ಮೈಸೂರ್ ಡಿಸ್ಟ್ರಿಕ್ಟ್ ಚಾರ್ಜನ್ನು ಕೊಟ್ಟು ಮೆ॥ ಕೆ. ಮಹಮ್ಮದಲ್ಲಿಯವರು ತೆಗದುಕೊಂಡಿರುತ್ತಾರೆ.

ನಂ॥ ೧೪೧೩—೧. ೪೪೦—ಪ್ರೊಬೇಷನರಿ ಪ್ರೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟಾದ ಮೆ॥ಅಬ್ದುಲ್‌ರಹಿಂ ಮೊಕರಿಯವರು, ೧೮೯೩ನೇ ಇಸವಿ ಮೇ ೬ನೇಮರ್ಚ್ಚ ೧೮೪೫೬ ೧. ೪೫೦ ನೇ ನಂಬರ್ ಇಸ್ತಿಹಾರನಾಮೆಯಲ್ಲಿ ಮಂಜೂರ್ ಮಾಡಲ್ಪಟ್ಟಿದ್ದ ರಜಾಕ್ಕೆ ಜಾಸ್ತೀಯಾಗಿ ಮೆಡಿಕಲ್ ಸರ್ಟಿಫಿಕೇಟಿನಮೇಲೆ ನಾಲ್ಕು ತಿಂಗಳ ರಜಾ ಕೊಡಲ್ಪಟ್ಟಿರುತ್ತಾರೆ.

ನಂ|೧೪೧೭—೧. ೪೫೫—ತಾ ೨೦ನೇಜೂಲೈ ೧೮೯೩—ಮೈಸೂರ್ ಸರ್ವಿಸ ರೆಗ್ಯುಲೇಷನ್‌ಗಳ ೧೮೮ನೇ ಆರ್ಟಿಕಲ್ ಅನುಸರಿಸಿ ಅಸಿಸ್ಟೆಂಟ್ ಸರ್ಜನ್ ಮೆ॥ ಎ. ಆರ್. ವೈದ್ಯನಾಥಶಾಸ್ತ್ರಿ ಎಂ. ಎ ಎಂ. ಬಿ ಎಂ. ಸಿ., ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯತು, ೨ ತಿಂಗಳ ೨೦ ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತಿದೆ.

ನಂ|೧೫೬೫-೦ ೪೮೩—ಶ್ರೀಮನ್ ಮೈಸೂರ್ ಮಹಾರಾಜರವರು ಆಗಾಗ್ಗೆ ಚಿತ್ ಅಲಿಯಾಸ್ಕರಿಯೆಂಬವರನ್ನು ತಮ್ಮ ಮುಸಾಹೆಬರನ್ನಾಗಿ ನೌಕರರನ್ನಾಡಿರುವಂತೆ ಆಜ್ಞಾಪಿಸಿರುತ್ತಾರೆ.

### ಮರಮಮ್ಮತ್ ಇಲಾಖಾ.

ನಂ||೩೦೧೬—೬೫೨—ತಾ॥ ೨೦ನೇ ಜೂಲೈ ೧೮೯೩—ಯೆಗ್ಜಿಕ್ಯೂಟಿವ್ ಇಂಜನಿಯರ್ ಮೆ॥ ಟಿ. ಇರ್‌ವಿನ್‌ಯವರು ಊದಿನ ಪ್ರಾರ್ವಾಹ್ನದಲ್ಲಿ ರಜಾ ಪೂರೈಸಿಕೊಂಡು ವಾಪಸ್ ಬಂದರಾಗಿ, ಅವರು ಪ್ರೊಫ್‌ವರ್ಕ್ಸ್ ಡಿವಿಜನಿಗೆ ನಿಯಮಿಸಿ ಕಳುಹಿಸಲ್ಪಟ್ಟಿರುವದರಿಂದ ಸಾಧ್ಯವಾದಷ್ಟು ಜಲ್ತಿಯಾಗಿ ತಮ್ಮ ಕೆಲಸದಮೇಲೆ ಹೋಗಿ ಹಾಜರಾಗತಕ್ಕದ್ದು.

ಆಫಿಸಿಯೇಟಿಂಗ್ ಯೆಗ್ಜಿಕ್ಯೂಟಿವ್ ಇಂಜನಿಯರ್ ಮೆ| ವಿ ಅರುಣಾಚಲ ಮುದಲಿಯಾರ್ರವರು ಮೆ॥ಇರ್‌ವಿನ್‌ಯವರಿಂದ ಬಿಡುಗಡೆಯಾದ ಕೂಡಲೆ ಏನ್ ಬೆಂಗಳೂರಲ್ಲಿರುವ ಕಾಮಗಾರಿಗಳು ಡಿವಾಯಿ ಬೆಂಗಳೂರು ಡಿವಿಜನ್ ಚಾರ್ಜನ್ನು ಆರ್. ಟಿ. ಸ್ಕ್ಯಾಲ್ಡ್‌ವೆಲ್‌ಯವರಿಂದ ತೆಗದುಕೊಳ್ಳುವರು. ಮೆ ಸ್ಕ್ಯಾಲ್ಡ್‌ವೆಲ್‌ಯವರು ಹೊಸ ರಘುಟ್ಟದ ವಾಟರ್ ಸಪ್ಲೈ ಪ್ರಾಜಕ್ಟಿನ ಡೆಪ್ಯುಟಿ ರಿ ಡಿವಿಜನ್ ಯೆಗ್ಜಿಕ್ಯೂಟಿವ್ ಇಂಜನಿಯರಾಗಿ ನೌಕರರಾಗಿರುತ್ತಾರೆ.

ನಂ|| ೩೦೮೨—೬೬೩—ತಾ॥ ೨೦ನೇ ಜೂಲೈ ೧೮೯೩—ಕಡೂರ್ ಡಿವಿಜನ್ ಯೆಗ್ಜಿಕ್ಯೂಟಿವ್ ಇಂಜನಿಯರ್ ಮೆ॥ ಎ. ಗೋವಿಂದಾಚಾರ್ರವರಿಗೆ ಮಾರ್ಚಿ ಮುಜಕೂರ್ ೧೮ನೇ ತಾರೀಖ್ ಲಾಗಾಯತು ಮೆಡಿಕಲ್ ಸರ್ಟಿಫಿಕೇಟಿನಮೇಲೆ ಒಂದು ತಿಂಗಳ ರಜಾ ಕೊಡಲ್ಪಟ್ಟಿರುತಿದೆ. ಎಗ್ಜಿಕ್ಯೂಟಿವ್ ಇಂಜನಿಯರ್ ಮೆ॥ ಎ. ಗೋವಿಂದಾಚಾರ್ರವರ ಗೈರುಹಾಜರೀಕಾಲದಲ್ಲಿ ಅಪ್ರೆಂಟಿಸ್ ಇಂಜನಿಯರ್ ಮೆ॥ ಟಿ. ಎಸ್. ಶೇಷಯ್ಯಂಗಾರ್ರವರು ಮೇಲೆ ಕಂಡ ತಾರೀಖ್ ಲಾಗಾಯತು ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಕಡೂರ್ ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರಾಗಿ ಆಕ್ಟಿಂಗ್ ತರೀಕ ಕೆಲಸನೋಡುವಂತೆ ನೌಕರರನ್ನಾಡಲ್ಪಟ್ಟಿರುತ್ತಾರೆ.

### ವಿದ್ಯಾಭ್ಯಾಸದ ಇಲಾಖಾ.

ನಂ| ೬ ತಾ|೨೦ನೇ ಜೂಲೈ ೧೮೯೩—ಬೆಂಗಳೂರ್ ಸೆಂಟ್ರಲ್ ಕಾಲೀಜ್ ಪ್ರಿನ್ಸಿಪಲ್ ಮೆ॥ ಜೆ. ಕುಕ್ ಎಂ ಎ. ಯವರು ೧೮೯೦ನೇ ಇಸವಿ ಜೂಲೈ ೨೦ನೇ ತಾರೀಖ್ ಲಾಗಾಯತು ಕೊಡಲ್ಪಟ್ಟಿದ್ದ ಫರ್ಲೋ ರಜಾವನ್ನು ಉಪಯೋಗಿಸಿಕೊಂಡವರಿಂದ ೧೮೯೩ನೇ ಇಸವಿ ಜೂಲೈ ೧೯ನೇ ತಾರೀಖ್ ಬುಧವಾರದದಿನ ಪ್ರಾರ್ವಾಹ್ನದಲ್ಲಿ ಕಾಲೀಜ್ ಚಾರ್ಜನ್ನು ವಾಪಸ್ ತೆಗದುಕೊಂಡಿರುತ್ತಾರೆ.

ಸನ್ ೧೮೯೩ನೇ ಇಸವಿ ಮೇ ತಿಂಗಳಲ್ಲಿ ನಡೆದ ಪೊಲೀಸ್ ಇನ್ಸ್‌ಪೆಕ್ಟರ್‌ಗಳ ಮತ್ತು ಜಮೇದಾರಗಳ ಪರೀಕ್ಷೆಯಲ್ಲಿ ತೇರ್ಗಡೆಯಾದ ಉಮೇದ್ವಾರರ ಹೆಸರುಗಳು ಅದರವರ ದರ್ಜೆಪ್ರಕಾರ ಇವರಡಿ ತಿಳಿಸಲ್ಪಡುತಿವೆ:—

#### ೧ನೇ ತರಗತಿ.

೧. ಎಸ್. ಶ್ರೀನರಸಿಂಹಶಾಸ್ತ್ರಿ.
೨. ಜೆ. ಮುರಡಪ್ಪ.
೩. ಎಚ್. ಎನ್. ರಾಘವೇಂದ್ರರಾವ್.
೪. ಎಂ ದೇವನಾಥರಾಮ ಅಯ್ಯಂಗಾರ್.
೫. ವಿ. ದಾಮೋದರಪಿಳ್ಳೆ.
೬. ಆರ್. ಸುಂದರಪ್ಪ.
೭. ಕೆ. ನಾರಾಯಣಯ್ಯರ್.
೮. ಸಂಜೀವರಾವ್.
೯. ಸಿ ವಿ. ಪುಟ್ಟಣ್ಣ.
೧೦ ಟಿ. ಎಸ್. ಚಿಕ್ಕಪ್ಪ
೧೧. ಎಂ. ಎನ್. ಶ್ರೀನಿವಾಸಯ್ಯಂಗಾರ್.
೧೨. ಟಿ ರಾಮಸ್ವಾಮಯ್ಯ.
೧೩. ಎಸ್ ನರಸಿಂಹಯ್ಯ.
೧೪. ಇ. ಲ್ಯೂಯಿಸ್.
೧೫ ಎಚ್. ಸುಬ್ಬರಾವ್.
೧೬. ಬಿ ನಾರಣಯ್ಯಂಗಾರ್.
೧೭. ಎಚ್. ಕೃಷ್ಣಮಾಚಾರ್.
೧೮. ಕೆ. ವಾಸುದೇವರಾವ್.

#### ೨ನೇ ತರಗತಿ.

೧೯. ಸಿ ಬಸಪ್ಪ.
೨೦. ಸೈಯದ್‌ಗಯಾಸುದ್ದೀನ್.
೨೧. ಕೆ ಸುಬ್ಬರಾವ್.
೨೨ ಟಿ ಶೇಷಾಚಾರ್.
೨೩. ಕೆ. ವೆಂಕಟರಾವ್.
೨೪. ಎಚ್. ಅಪ್ಪಯ್ಯಗೌಡ.
೨೫. ಎನ್. ಆರ್ ಸುಬ್ರಹ್ಮಣ್ಯಅಯ್ಯರ್
೨೬. ಜಿ ವೆಂಕಟಗಿರಿಅಯ್ಯರ್.
೨೭ ಸಿ ಎಚ್. ವಾಲ್ಟರ್.
೨೮. ಜಿ ವೆಂಕಟನಾರಣಪ್ಪ
೨೯. ಎಂ, ರಾಮಶೇಷಯ್ಯ
೩೦. ಎಚ್ ಕೃಷ್ಣರಾವ್.
೩೧. ಟಿ ಕೆಂಪಣ್ಣ
೩೨ ಎನ್. ಚಂದ್ರಶೇಖರಯ್ಯ.
೩೩ ಎಂ. ಲಕ್ಷ್ಮಣಯ್ಯ.
೩೪ ಬಿ ಪುಟ್ಟರಂಗಯ್ಯ.
೩೫ ಅನಂತರಾಮಯ್ಯಂಗಾರ್.
೩೬ ವಿ. ವೇಣುಗೋಪಾಲ ಚಾರ್.
೩೭ ಲಕ್ಷ್ಮಣನಾಯಕ
೩೮. ಪಿ ಚನ್ನರಾಜ
೩೯. ಕೆ. ಗುರುಮಲ್ಲಯ್ಯ.
೪೦ ವೈ ಸುಬ್ಬರಾವ್
೪೧ ಬಿ. ಸಭಾಪತಿ ಪಿಳ್ಳೆ.

ಬಿ. ನಾರಣಯ್ಯಂಗಾರ್ರು ಮಾತ್ರ ಗೈರುಹಾಜರಾಗಿದ್ದರು. ಮಿಕ್ಕ ಉಮೇದ್ವಾರರೆಲ್ಲರು ಕವಾಯತ್ ಮತ್ತು ಸಿಸ್ತು ಹೊಡೆಯುವವರಲ್ಲಿ ತೇರ್ಗಡೆಯಾಗಿರುತ್ತಾರೆ. ದಾಮೋದರಪಿಳ್ಳೆಯವರು ಬಹಳ ತೃಪ್ತಿಕರವಾಗಿ ತೇರ್ಗಡೆಯಾಗಿರುತ್ತಾರೆ.

## SUMMARY OF NEWS
## ವೃತ್ತಾಂತ ಸಂಗ್ರಹವು.

ಕೊಲ್ಲಾಪುರದಲ್ಲಿರುವ ಕೆಲವು ಜನ ಪಾರ್ಸಿಗಳು ಮೊಹರಂ ಹಬ್ಬದಲ್ಲಿ ಹಿಂದೂ ಜನರು ವೇಷಾ ಹಾಕಿಕೊಂಡು ಬರುವದು ತಮಗೆ ಬಹಳ ತೊಂದರೆಯಾಗುತ್ತದೆಂದು ಕಟ್ಟುಮಾಡಿಕೊಂಡಿರುವರೆಂದು ತಿಳಿಯಬರುತಿದೆ

ಹಿಂದುಸ್ಥಾನದ ವೈಸರಾಯಿಯವರು ಸರ್ಕಾರದ ತರಫಿನಿಂದ ೧ ಕೋಟಿ ೫೦ ಲಕ್ಷ ರೂಪಾಯಿ ಸಾಲಾ ತೆಗೆಯುವದಾಗಿ ಇಂಡಿಯಾ ಗೆಜೆಟ್ಟಿನಲ್ಲಿ ಪ್ರಸಿದ್ಧ ಪಡಿಸುತ್ತಾರೆ, ಈ ಸಾಲದ ಹಣಕ್ಕೆ ವರುಷಕ್ಕೆ ಶೇಕಡಾ ೩| ರೂಪಾಯಿ ಬಡ್ಡಿ ಕೊಡುವರು.

ಶಕೆ ೧೮೧೮ನೇ ದುರ್ಮುಖಿನಾಮ ಸಂವತ್ಸರದಲ್ಲಿ ನಮಗೆ ಸಂಸ್ಥಾಪಕರು ಜನಿಸುವಂತಾ ಉತ್ತಮಯೋಗ ಒದಗಿರುತ್ತದೆಂದು ಜ್ಯೋತಿಷ್ಕರು ಭವಿಷ್ಯ ಹೇಳುತ್ತಾರೆ. ಪೂರ್ವದಲ್ಲಿ ರಾಮಕೃಷ್ಣರು ಜನಿಸುವಾಗ್ಯೆ ಕೂಡಿದ್ದ ಯೋಗಗಳೇ ಈಗ ಕೂಡುವವಂತೆ।

ಅಫ್ಗನಿಸ್ಥಾನದ ಅಮೀರರಿಗೆ ಆಗಾಗ್ಯೆ ಕೆಮ್ಮುಉಪದ್ರವ ಬರುತಲೇ ಇದೆ. ಇದನ್ನು ಹೋಗಲಾಡಿಸಬೇಕೆಂದು ಅಮೀರರು ಈಗ ಇಂಗ್ಲಿಷ ಔಷಧಗಳನ್ನೇ ಉಪಯೋಗಿಸುತಲಿದ್ದಾರೆ, ಕಾಬೂಲಿನಿಂದ ಪೆಷಾವರಿಗೂ ಜನಗಳನ್ನು ಟಪ್ಪಾಲ ನಿಲ್ಲಿಸಿ, ಪೆಷಾವರದಲ್ಲಿ ತೆಗೆದುಕೊಂಡ ಔಷದವು ಆಕ್ಷಣವೇ ತಮ್ಮ ಬಳಿಗೆ ಬರುವಂತೆ ಏರ್ಪಾಡುಗಳನ್ನು ಮಾಡಿದಾರೆ

ಕೆಲವು ದಿವಸಗಳ ಕೆಳಗೆ ಪಟಿಯಾಲಾ ಮಹಾರಾಜರವರು ಧೋಳಪುರದ ಮಹಾರಾಜರವರಿಗೆ ಟೈ ಎಂಬ ಗ್ರಾಮವನ್ನು ಇನಾಮಾಗಿ ಕೊಟ್ಟರು. ಆದರೆ ಈ ವಿಷಯದಲ್ಲಿ ಇಂಗ್ಲೆಂಡಿನ ಗೌರ್ಮೆಂಟವರ ಸ್ಯಾಂಕ್ಷನ್ ಪಡೆಯದೆ ಮಾಡಿದ್ದರಿಂದ ಹೀಗೆ ಕೊಡುವ ಮಾಡಿದ್ದು ಸರಿಯಾದದ್ದಲ್ಲವಾದಕಾರಣ ಇದನ್ನು ಅವರು ರದ್ದುಗೊಳಿಸಿದರು, ಎಂದಾಗಿ ಈಚೆಗೆ ಬಂದ ತಂತಿವರ್ತಮಾನದಿಂದ ತಿಳಿಯಬರುತ್ತದೆ

ಇಂಡಿಯಾ ವೈಸರಾಯಿಯವರ ಸಭೆಯಲ್ಲಿ ಅವರ ಜೊತೆಗೆ ಕೂತುಕೊಳ್ಳತಕ್ಕ ಮೆಂಬರುಗಳಿಗೆಲ್ಲಾ ತಲೆಗೆ ವರ್ಷ ೧ಕ್ಕೆ ೮೦,೦೦೦ ರೂಪಾಯಿಯೂ, ಮುಂಬಾಯಿ, ಮದರಾಸ್, ಬೆಂಗಾಲ, ವಾಯುವ್ಯಪ್ರಾಂತ್ಯಗಳ ಕೌನ್ಸಿಲ್ ಮೆಂಬರುಗಳಿಗೆ (ಪ್ರಯೋಜನಗಳಿಗೆ ಮಾತ್ರ) ವರ್ಷ ೧ಕ್ಕೆ ತಲೆಗೆ ೩೦೦೦ ರೂಪಾಯಿಯೂ ಸರ್ಕಾರದವರು ಕೊಡುತ್ತಾರೆಂದು ಟೈಮ್ಸ್ ಪತ್ರಿಕೆಯಿಂದ ತಿಳಿಯುತಿದೆ.

ಮದರಾಸ ಪ್ರೆಸಿಡೆನ್ಸಿಯಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆ ಕೊಟ್ಟವರಿಗೆ ಪ್ಲೀಡರ್ ಸ್ಥಾನಗಳು ಸಿಕ್ಕುವವಲ್ಲ. ೧೫ ರೂಪಾಯಿನ ಸಂಬಳದ ಕೆಲಸ ಕೊಡಬಹುದೆಂದು ರೂಲ್ಸ್ ಮಾಡಿದ್ದರಷ್ಟೆ ಈಚೆಗೆ ಆ ರೂಲ್ಸನ್ನು ಬದಲು ಮಾಡಿ ಮೆಟ್ರಿಕ್ಯುಲೇಷನ್ ಪಾಸಾದವರಿಗೆ ೧೫ ರೂಪಾಯಿಗೆ ಕೀಳ್ಪಟ್ಟ ಲೋವರ್ ಸರ್ವಿಸ್ ಕೆಲಸವನ್ನು ಕೊಡಬೇಕೆಂದು ರೂಲ್ಸ್ ಮಾಡಿದರೆ, ಮೆಟ್ರಿಕ್ಯುಲೇಷನ್ ಪರೀಕ್ಷೆ ಕೊಟ್ಟವರ ಗತಿ ಎಷ್ಟರಮಟ್ಟಿಕ್ಕೆ ಇಳಿಯಿತು!

ಜೋಧಪುರ ಪಾಲನಪುರ ಸಂಸ್ಥಾನಗಳಲ್ಲಿ ಅತಿ ಚಮತ್ಕಾರವಾದ ನಡತೆಯೊಂದಿರುತಿದೆ. ಯಾವಳೊಬ್ಬಳ ಗಂಡ ಸತ್ತರೆ ಕಳೇಬರವು ಮನೆಯೊಳಗಿದ್ದಾಗ್ಯೆ ಹೆಂಡತಿಯು ಭಾವ ಅಥವಾ ಮೈದುನನೊಡನೆ ಸಂಗವ ಮಾಡಬೇಕಂತೆ! ಅಂದರೆ ಅವರು ಅವಳ ಗಂಡಂದಿರಾಗುತ್ತಾರಂತೆ, ಹೀಗೆ ಅನೇಕ ಸ್ತ್ರೀಯರು ಇದಕ್ಕೆ ತಮ್ಮ ಒಪ್ಪಿಗೆಯನ್ನು ಕೊಡದಿದ್ದರೂ ಅಲ್ಲರಿದ್ದವರೆಲ್ಲರೂ ಕೂಡಿ ಅವಳ ಇಚ್ಛೆಯಿಂದ ಈ ಆಚರಣೆಯನ್ನು ಜುಲುಮಿನಿಂದ ಮಾಡಿಸುತ್ತಾರಂತೆ,

ಚೀನಾರಾಜ್ಯಕ್ಕೆ ಸೇರಿದ ಪೂಕಿನ ಎಂಬ ಡಿಸ್ಟ್ರಿಕ್ಟಿನಿಂದ ಬಂದ ಒಬ್ಬ ಪ್ರಯಾಣಸ್ಥನು ಅಲ್ಲಿನ ಕ್ಷಾಮವನ್ನು ಕುರಿತು ಹೀಗೆ ವಿವರಿಸಿರುತ್ತಾನೆ—ನನ್ನ ಜೊತೆಯಲ್ಲಿರುವ ಈ ಸಣ್ಣವರ ಹುಡುಗಿಯರನ್ನು ಅವರ ತಂದೆ ತಾಯಿಗಳಿಂದ ಕೊಂಡು ಕೊಂಡುಬಂದೆನು. ಅವರಿಗೆ ಹತ್ತು ತಾಂ ಬಡಾನಾಣ್ಯಗಳನ್ನು ಮಾತ್ರಕೊಟ್ಟೆನು. ಒಲ್ಲಿಹೊಟ್ಟೆಗಿಲ್ಲದೆ ದಿನಂಪ್ರತಿಯಲ್ಲೂ ಸ್ವಾವಿರಾರು ಪ್ರಾಣಗಳು ನಷ್ಟವಾಗುತಲಿವೆ. ಬಲಿಷ್ಟರು ಪ್ರಬಲರ ತೋಟ ಹೊಲಗಳಲ್ಲಿರುವ ಬೆಳೆಧಾನ್ಯಗಳನ್ನು ಕಾಯಿದು ತಿನ್ನುತ್ತಾರೆ, ಹೀಗೆ ಲಕ್ಷಾಂತರ ಜನರು ಕೊಲ್ಲಲ್ಪಡುತಲಿದ್ದಾರೆ, ಸರ್ಕಾರದವರು ಈ ಕ್ಷಾಮನಿವಾರಣಾರ್ಥವಾಗಿ ಏನುಮಾಡುವರೋ ಮನುಷ್ಯ ಮಾತ್ರದವನಿಂದ ಊಹಿಸುವದಕ್ಕಾಗುವದಿಲ್ಲ.

ಗಾಜಿಪುರ ಮೆ॥ ಚೊಕ್ಕಲಿಂಗಪಿಳ್ಳೆಯವರು ಚೇಳು ಕಡಿದವರಿಗೆ ಒಂದು ಔಷಧವನ್ನು ತಿಳಿಸುತ್ತಾರೆ. ಬಿಳಿದಾದ ನಾಲ್ಕು ಮೆಣಸಿನ ಕಾಳಿನ ಗಾತ್ರದ ಒಂದು ಸ್ಫಟಿಕದಂತಿರುವ ಗಡ್ಡೆಯನ್ನು ರೆಗೆದುಕೊಂಡು ಪಿಟೀಲು ಕೆಂಪದ ಮೇಣದಿಂದ್ಟು (ಪಿಮಿಪ) ಸುಣ್ಣದಿಂದಲೂ ನೀರಿಗೆ ಬಿಳಿದಾಗುತ್ತದೆ ಅದನ್ನು ಒಂದು ಪಾತ್ರದಲ್ಲಿ ಹಾಕಿ, ಬೆಂಕಿಯೊಳಗಿನಿಂದ ಅದನ್ನು ನೀರಿನಲ್ಲಿ ಕರಗಿಸಬೇಕು. ಆ ಸ್ಥಳವನ್ನು ಚೇಳು ಕಚ್ಚಿದ ಬಳಿ ಉಜ್ಜಿ, ಅದರಮೇಲೆ ಎರಡು ಹನಿ ಬಿಟ್ಟು ಶಾಖ ಮಾಡಿದರೆ ೧೦ ನಿಮಿಷ ಒಳಗಾಗಿ ಆ ಮೇಲೆ ವಿಷ ಹಾಗು ಚೇಳಿನ ಬಾಧೆಯು ತಪ್ಪುವದು ಉಪ್ಪುನೀರನ್ನು ಅನ ಹೊಸದಾಗಿ ಮಾಡಿಕೊಂಡು ಉಪಯೋಗಿಸಿ, ಆದರೆ ಈ ಚಿಕಿತ್ಸೆಯಲ್ಲಿ ಪ್ರತಿ ನಾಲ್ಕರಷ್ಟೆ ಸುಟ್ಟುಹೋಗುವದೇ ಆ ರಿ ಹೊಪ್ಪಳೆ ಏಳುವದೇ ಆಗಲಿ ಆಗುವದಿಲ್ಲ.—ಅಂ. ಪ್ರ.

ಹೈದರಾಬಾದಿನ ದೊಡ್ಡ ಮನುಷ್ಯರೆಲ್ಲ ಬಹುಕಾಲದಿಂದಲೂ ಒಂದು ವಾನಪತ್ಯದ ವಿಷಯವು ಹುಟ್ಟಿ ಎಲ್ಲರಿಗೂ ಚಿಂತೆಯನ್ನುಂಟುಮಾಡಿತ್ತು. ಅದು ಪೂರೈಸಿದ ಕೂಡ್ಲೆ ಈಗ ಹೊಸದಾಗಿ ಒಂದು ಬೇರೆ ಮೊಕದ್ದಮೆಯು ಹುಟ್ಟಿ ಅದರಲ್ಲಿ ಸರ್‌ಅಸ್ಮಾನ್‌ಜಾಯವರು ನವಾಬ ಸರ್ದಾರ್‌ಜಂಗರವರಿಗೆ ಒಂದು ಲಕ್ಷ ರೂಪಾಯಿಗಳನ್ನು ಲಂಚ ಕೊಟ್ಟರೆಂತಲೂ, ನವಾಬ ಮೆಹದಿ ಅಲಿ ಅವರು ಇದಕ್ಕೆ ಮಧ್ಯಸ್ಥ ಮಾಡಿದರೆಂತಲೂ ಇವರ ಮೂವರ ಮೇಲೂ ಕೋರ್ಟಿನಲ್ಲಿ ಛಾರ್ಜ ಕೊನೆಗೆ ನವಾಬ ಮೆಹದಿಅಲಿ ಅವರನ್ನು ಕೆಲಸದಿಂದ ನಿವೃತ್ತಿಸಿ ಅವರನ್ನು ಹತ್ತು ದಿನಗಳೊಳಗಾಗಿ ದೇಶಬಿಟ್ಟು ಹೊರಗೆ ಹೋಗಬೇಕೆಂತಲೂ, ಹೊರಗೆ ಇರುವ ಕಾಲದಲ್ಲಿ ಹೈದರಾಬಾದಿನ ವಿಷಯವಾದ ಯಾವ ಸಂಗತಿಯನ್ನೂ ಯಾರಿಗೂ ಹೇಳಕೂಡದೆಂತಲೂ, ಇದಕ್ಕಾಗಿ ಅವರಿಗೆ ೧,೫೦೦ರೂಪಾಯಿ ಪಿಂಚನ್ ಕೊಡಲ್ಪಡುವದೆಂತಲೂ ನಿಜಾಮರವರು ರಮ್ಮ ತೀರ್ಮಾನವನ್ನು ತಿಳಿಸಿದರು. ಈ ತೀರ್ಮಾನವನ್ನು ತಿಳಿದನಂತರ ಮೆಹದಿಅಲಿಯವರು ಕಳೆದ ದಿನಗಳ ೩ನೇ ತಾರೀಖಿನ ರೈಲುಬಂಡಿಯಲ್ಲಿ ಹೈದರಾಬಾದನ್ನು ಬಿಟ್ಟು ಪ್ರಯಾಣ ಬೆಳಸಿದರು, ಇವರು ಹೊರಡುವಾಗ್ಯೆ ಅಲ್ಲಿನ ಸಕಲ ನೌಕರರೂ, ಎಲ್ಲಾ ಪ್ರಜೆಗಳೂ ಅವರನ್ನು ನೋಡಿ ಬಹಳವಾಗಿ ದುಃಖಪಟ್ಟರು,ಅನೇಕರು ಅತ್ತು ಗೋಳಾಡಿದರು.

ಸಯಾಮಿ ಸರ್ಕಾರದವರಿಗೂ ಫ್ರೆಂಚಿನವರಿಗೂ ಬಹು ಕಠಿಣವಾದ ಯುದ್ಧ ನಡೆದಿರುತಿದೆ. ಸಯಾಂನವರು ಫ್ರೆಂಚಿನವರ ಒಬ್ಬ ದಳಪತಿಯನ್ನೂ ೧೬ಜನ ಸಿಪಾಯಿಗಳನ್ನೂ ಕೊಲೆ ಮಾಡಿದ್ದರಿಂದ ಈ ಕಲಹಕ್ಕೆ ಕಾರಣವಾಯಿತು. ಈ ತಿಂಗಳ ೧೩ನೇ ತಾರೀಖಿನಲ್ಲಿ ಈ ಉಭಯರಿಗೂ ಯುದ್ಧವಾಗಿ ಫ್ರೆಂಚಿನವರ ಕಡೆ ೫ ಜನರೂ, ಸಯಾಮಿಯವರು ೨೨ ಜನರೂ ಹತರಾದರು. ಈ ವರ್ತಮಾನವು ಫ್ರೆಂಚಿನವರಿಗೆ ತಿಳಿದಕೂಡಲೆ ಅವರು ಸಯಾಂ ರಾಜಧಾನಿಯಾದ ಬ್ಯಾಂಕಾಕ್ ಪಟ್ಟಣವನ್ನು ಮುತ್ತಿಗೆ ಹಾಕಿ ಯಾರದು ಹಡಗಿನಲ್ಲಿ ಸಿಪಾಯಿಗಳನ್ನು ಕಳುಹಿಸಿದ್ದಲ್ಲದೆ ಸಯಾಂ ಸುತ್ತಮುತ್ತಲೂ ಸೈನ್ಯ ಸಿದ್ಧವಾಗಿರಲಿಕ್ಕೆ ಅಪ್ಪಣೆ ಕೊಟ್ಟಿರುತ್ತಾರೆ. ಬ್ಯಾಂಕಾಕ್ ಪಟ್ಟಣದ ಕಿಲ್ಲೆಯು ಕಟ್ಟಿಸಿರುವದಲ್ಲದೆ ಮುತ್ತಿಗೆಯಲ್ಲೂ ಕಟ್ಟಲ್ಪಟ್ಟಿದ್ದರೂ ಫ್ರೆಂಚಿನವರು ಸಹಜವಾಗಿ ಅದನ್ನು ಸ್ವವಶ ಮಾಡಿಕೊಳ್ಳುವರೆಂದು ವೈರ್ರ ತಿಳಿಸುತ್ತಾನೆ. ಇತ್ತ ಸಯಾಮಿಯವರು ಯುದ್ಧದ ಸಕಲ ಸನ್ನಾಹಗಳಿಂದ ಸಿದ್ಧರಾಗಿರುತ್ತಾರೆ ಇಂಗ್ಲಿಷನವರು ಬ್ಯಾಂಕಾಕಿನಲ್ಲಿರುವ ತಮ್ಮ ಜನರ ಸುರಕ್ಷಿತೆಗೋಸ್ಕರ ಬರ್ಮಾ ಬಂದರಿನಲ್ಲಿ ಸೈನ್ಯಗಳನ್ನು ಕಳುಹಿಸಿಕೊಟ್ಟರೆಂದು ತಿಳಿಯಬರುತಿದೆ. ಇಂಗ್ಲಿಷನವರು ಪ್ರಾರಂಭದಲ್ಲಿ ಈ ಪ್ರಕರಣದೊಳಗೆ ತಾವು ಪ್ರವೇಶಿಸುವದಿಲ್ಲವೆಂದು ಹೇಳಿದ್ದರು, ಆದರೆ ಈಗ ಅಲ್ಲಿಗೆ ದಂಡು ಯಾಕೆ ಕಳುಹಿಸಿರುವರೋ ತಿಳಿಯದು.—ಚಿಂ

BANGALORE.—Printed and published at the KARNATAKA PRESS, No. 40, HOSPITAL ROAD, CITY—1893

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning.**

ಪ್ರಕಾಮವಿರಿದವೃವೃತ್ತ್ಯನಗನಾರ್ರ್ಯ ಕರ್ನಾಟಕಪ್ರಕಾಶನನಾಮಭಿದಾಪ್ರಥತಸಾಹಿತೀಶೋಭಿತಾ ॥ ವ್ಯಗಾಂಕಹಿತವಾಸರನಿಹಿತಮುದ್ರಣಾಸಜ್ಜನೈರ್ದ್ವಿಕಾಸುಪರಿಶೋಧಿತಾದಿಶತಿವಾನಸುಂನೊವುದು ॥

Vol. XX ] BANGALORE—MONDAY, AUGUST 7. 1893 [No 31.

ಸಂಪುಟ ೨೦. | ಬೆಂಗಳೂರು:—ಸನ್ ೧೮೯೩ನೇ ಇಸವಿ ಆಗಸ್ಟ್ ೭ನೇ ತಾರೀಖ್ ಸೋಮವಾರ. [ಸಂಚಿಕೆ ೩೧.


## ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

| | ಸ್ಥಳದವರಿಗೆ. | ಪರಸ್ಥಳದವರಿಗೆ |
|---|---|---|
| ಸಾಲಿಯಾನೆ .. | 6—0—0 | 8—0—0 |
| 6 ತಿಂಗಳಿಗೆ .. | 3—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

| | ಸ್ಥಳದವರಿಗೆ, | ಪರಸ್ಥಳದವರಿಗೆ, |
|---|---|---|
| ಸಾಲಿಯಾನೆ .. | 3—0—0 | 4—0—0 |
| 6 ತಿಂಗಳಿಗೆ .. | 1—12—0 | 2—8—0 |

ಈ ಪತ್ರಿಕೆಗೆ ಮುಂಗಡವಾಗಿ ಹಣ ಕಳುಹಿಸದ ತಾರೀಖಿನಿಂದ ಮೂರು ಒಂದು ತಿಂಗಳೊಳಗಾಗಿ [illegible] ಹೊರಬರುವ ಕಳುಹು ಸ್ತಾಂಪು [illegible] ದರದಂತೆ ಪತ್ರಿಕೆ ಕಳುಹಿಸಲ್ಪಡುವದು. ಬೆಂಗಳೂರಿನವರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡ ಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. ಮೂರು ತಿಂಗಳಿಗಿಂತ ಕಡಿಮೆಯಾಗಿ ಚಂದಾ ಹಣವನ್ನು ತೆಗೆದುಕೊಳ್ಳಲಾಗುವದಿಲ್ಲ.

## ಪ್ರಕಟನೆಯ ದರಾವು.

| | |
|---|---|
| ಮೊದಲನೆಯದಕ್ಕೆ ಪಂಕ್ತಿ ಒಂದಕ್ಕೆ | ೦—೩—೦ |
| ಎರಡನೆಯದಕ್ಕೆ ಪಂಕ್ತಿ ಒಂದಕ್ಕೆ | ೦—೧—೦ |

ಸೂಚನೆ—ಎರಡಾವರ್ತಿಗಿಂತ ಜಾಸ್ತಿಯಾಗಿ ಪ್ರಕಟನೆ ಮಾಡಬೇಕಾದರೆ ಪಂಕ್ತಿ ಒಂದಕ್ಕೆ ೧ ಆಣೆಯಂತೆ ತೆಗೆದುಕೊಳ್ಳಲ್ಪಡುವದು. ಈ ಪತ್ರಿಕೆಯಲ್ಲಿ ಖಾಯಮ್ಮಾಗಿ ಪ್ರಕಟನೆ ಮಾಡಿಸಬೇಕೆನ್ನುವವರು [illegible] ವಿಷಯವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇದಲ್ಲದೆ [illegible] ಅವರು ಪ್ರಕಟಿಸುತ್ತಿದ್ದು ಹಾಗೆ ಎಷ್ಟು ಸಾರೆ ಪ್ರಕಟಿಸಲ್ಪಡಬೇಕಾಗಿ [illegible] ದರದ ಮೇಲೆ ಕಡಿಮೆ ಮಾಡಲ್ಪಡುವದು. ಪ್ರಕಟನೆಯನ್ನು ಕಳುಹಿಸತಕ್ಕ ಪ್ರಕಟನೆಗಳನ್ನು ಯಾ ಕಮಿಷನರ ಮುಖಾಂತರ [illegible] ಕಳುಹಿಸಲಿ ಕೂ ಪ್ರಕಟನೆಯ ಲೇ ಪತ್ರಿಕೆಗೆ ಕಳುಹಿಸಲ್ಪಡತಕ್ಕ [illegible] ಸ್ವಾಮಿಯವರಿಗೆ ಕ್ರಮವಾಗಿ [illegible] ದರೊಳಗೆ [illegible] ಪ್ರಕಟಿಸಲಿಕ್ಕೆ. [illegible]

## ADVERTISEMENTS.

### NOTICE.

**VAIDYASARA SANGRAHA**

A TREATISE ON THE PRINCIPLES OF

**HINDU MEDICINE**

*Price including Postage Rs 5 0 0*

ವೈದ್ಯಸಾರ ಸಂಗ್ರಹ.

ಈ ಗ್ರಂಥಕ್ಕೆ ವೈದ್ಯರುಗಳು ಮೊದಲಾದವರು [illegible] ರಾಜಾ ಪತ್ರಿಕೆಗೆ [illegible] ಪುಸ್ತಕ ಕೂಡಲೇ ಕಳುಹಿಸ [illegible] [illegible]

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೇ ಹಾಸಲು, ಸೇರಿಸಿ ಪ್ರತಿ ಒಂದಕ್ಕೆ ರೂ 5 -0—0

ಟಿ. ಬಿ ವೆಂಕಟಾಚಾರ್,

ಬೆಂಗಳೂರ್, ಬಳೆ ಪೇಟೆ [illegible]

### ನೋಟೀಸ್.

**ಬೆಂಗಳೂರು ಕರ್ಣಾಟಕ್ ಪ್ರೆಸ್.**

೧೮೭೪ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ, ಸಕಲವಿಧ ಕೆಲಸಗಳು ಸುಲಭಬೆಲೆಗೆ ಶೀಘ್ರವಾಗಿಯೂ ಶುದ್ಧವಾಗಿಯೂ, ನಡೆಸಲ್ಪಡುವವು.

ಇದರಲ್ಲಿ ಸದ್ಯಃ ಇಂಗ್ಲಿಷ್ ಕನ್ನಡ ಕೆಲಸಗಳು ಮಾತ್ರ ನಡೆಸುತ್ತಿವೆ. ಇತರ ಡೀಟೇಲುಗಳನ್ನು ಸದರೀ ಕಾರ್ಖಾನೆ ಪ್ರೊಪ್ರೈಟರಿಗೆ ಬರೆದು ತಿಳಿದುಕೊಳ್ಳಬಹುದು.

### ನೋಟೀಸ್.

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪೆನಿ.
ಕಮಿಷನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಮಾಣಿಕತೆಯಿಂದ ವ್ಯಾಲ್ಯು ಪೇಯಬಲ್ ಪೋಸ್ಟ್ ಮೂಲಕ ದಕ್ಕ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರದ ದಿವಸಗಳು, ಪುಸ್ತಕಗಳು, ಮುತ್ತುಗಳು, ಒಪ್ಪ ಮುತ್ತುಗಳು, ಘಡಿಯಾರಗಳು ಸಾಬೂನುಗಳು, ಟ್ರಿಂಕುಗಳು, ಜಾಕೆಟ್ ಕಾಟುಗಳು, ಪಟ್ಟೆಸೀರೆಗಳು, ಜರತಾರಿ ಕಣಗಳು, ಚಂದ್ರಕಾಂತ ಶಿಲೆಯ ಕನ್ನಡಕಗಳು, ಮಾಡುಗರಿಗೆತಕ್ಕ ಜರತಾರಿ ಉಡುಪುಗಳು, ಜರತಾರಿ ಟೋಪಿಗಳು, ಛತ್ರಿಗಳು, ಪಟಗಳು, ಅತ್ತರುಗಳು, ಅತ್ಯುತ್ತಮಗಳಾದ ವಸ್ತ್ರಗಳು, ಛಂಗಾರದಿಂದ ಕಟ್ಟಲ್ಪಟ್ಟ ಉಂಗುರಗಳು, ಪಾತ್ರೆಗಳು, ಜರ್ಮನ ಸಿಲ್ವರ ಪಾತ್ರೆಗಳು, ಕೇಸರಿ, ಕಸ್ತೂರಿ ವಗೈರೆ ಇತರ ಸಾಮಾನುಗಳು,

ಜವಾಬ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟೈಂಪ್ ಕಳುಹಿಸಿದ ಹೊರತು ಜವಾಬ ದೊರೆಯಲಾರದು

ವಿಳಾಸ.—ಗಣೇಶ ರಾಮಚಂದ್ರ ಕರ್ಕಿ,
ಮತ್ತು ಕಂಪೆನಿ, ಕಮಿಷನ್ ಏಜಂಟ್ಸ್,
ಠಾಕೂರದ್ವಾರ, ಮಾರ್ಕೆಟ್ ಪೋಸ್ಟ್, ಮುಂಬೈ.

### ನೋಟೀಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ನಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿವೆ. ಬೇಕಾದವರು ಹಣವನ್ನು ಕಳುಹಿಸಿ ತರಿಸಿಕೊಳ್ಳಬಹುದು.

### ಸಂಸ್ಕೃತ ಗ್ರಂಥಗಳು.

| | | ರೂ | ಆ | ಪೈ |
|---|---|---|---|---|
| ಸಟೀಕಾ ವೈದ್ಯಸಾರ ಸಂಗ್ರಹ | ... | ೫ | ೦ | ೦ |
| ,, ಶಿವಗೀತೆ | . | ೧ | ೧ | ೦ |
| ,, ನಿದಾನ ದೀಪಿಕೆ | ... | ೦ | ೮ | ೦ |
| ,, ಕಾಲಾಮೃತ | .. | ೧ | ೦ | ೦ |
| ,, ಟಿ ॥ ವಾಲ್ಮೀಕಿ ರಾಮಾಯಣ . | | ೦ | ೩ | ೦ |
| ,, ಟಿ ॥ ಗೋಪಿಕಾ ಗೀತೆ ... | | ೦ | ೧ | ೦ |
| ,, ಟಿ ॥ ನೀತಿ (ಸುಭಾಷಿತ) | | ೦ | ೪ | ೦ |
| ವಿಷ್ಣುಸಹಸ್ರನಾಮ ಸ್ತೋತ್ರ | .. | ೦ | ೩ | ೦ |
| ಸೂರ್ಯನಮಸ್ಕಾರ | .. | ೦ | ೨ | ೦ |
| ಕೃಷ್ಣಕರ್ಣಾಮೃತ | ... | ೦ | ೭ | ೦ |
| ಶ್ರೀಕಂಠ ಅಮರ ಮೂಲ | ... | ೦ | ೨ | ೦ |
| ೧ ಕಾಂಡ | .. | ೦ | ೧ | ೦ |

### ಕನ್ನಡ ಗ್ರಂಥಗಳು.

| | | ರೂ | ಆ | ಪೈ |
|---|---|---|---|---|
| ಚಿಕಿತ್ಸಾ ಪದ್ಧತಿ ಅನ್ವಯ | ... | ೨ | ೦ | ೦ |
| ಡಿಟೋ ದುರ್ಬಲ | ... | ೧ | ೭ | ೦ |
| ವೃಷಭೇಂದ್ರವಿಜಯ | ... | ೧ | ೮ | ೦ |
| ಪಂಚತಂತ್ರ ಟಿಪ್ಪಣಿ | .. | ೦ | ೬ | ೦ |
| ಜನ ಮನ್ಮಥ | .. | ೦ | ೬ | ೦ |
| ಕಾಶೀಯಾತ್ರೆ ದರ್ಪಣ | ... | ೦ | ೨ | ೦ |
| ಸುಂದರ ಪ್ರವೇಶಿಕೆ | ... | ೦ | ೨ | ೦ |
| ಚಿತ್ರ ದರ್ಪಣ | .. | ೦ | ೨ | ೬ |
| ಕುಮಾರರಾಮಚರಿತ್ರೆ | ... | ೦ | ೧ | ೦ |
| ಮೈರಾವಣ ಚರಿತ್ರೆ | .. | ೦ | ೧ | ೯ |
| ಚಾಣಕ್ಯನೀತಿ | ... | ೨ | ೦ | ೦ |
| ಮುನ್ಸಿಫ್ ಲಾ | .. | ೦ | ೧೨ | ೦ |
| ಬ್ರಾಹ್ಮಣ [illegible] | .. | ೨ | ೦ | ೦ |

### ಕೊಡಗು ಫಾರೆಸ್ಟ್ ಇಲಾಖಾ.

**ನೋಟಿಸ್.**

1883ನೇ ಇಸವಿ ಜುಲೈ ತಾರೀಖ್ 26 ರಲ್ಲು.

ಇದರಡಿ ನಮೂದಿಸಿದ ಸಾಮಾನುಗಳು ಫ್ರೇಜರಪೇಟೆ ಅರಣ್ಯ ಡಿಪೋಗಳಲ್ಲಿ

ಸನ್ 1893 ನೇ ಇಸವಿ ಅಗಸ್ಟ ತಾರೀಖ್ 31 ರಲ್ಲು ಹರಾಜ್ ಹಾಕಲ್ಪಡುತವೆ.

| | | | |
|---|---|---|---|
| ತ್ಯಾಗದ ತೊಲೆಗಳು | 220 | .. 1500 | ಸಲಿಂಡ. |
| ಹೊನ್ನೆ ಪಟ್ಟಿ | 160 | .. 3500 | ಡಿ |

ಷರತ್ :—ಸನ್ 1889ನೇ ಇಸವಿ ಡಿಸೆಂಬರ್ ತಾರೀಖ್ 19ನೇ ತಾರೀಖಿನ 53 ನೇ ನಂಬರ ಚೀಫ್‌ಕಮಿಷನರ ಸಾಹೇಬರವರ ನೋಟಿಫಿಕೇಷನ್ ಮೇರೆ ಮರದ ಕ್ರಯದ ಕೈಕೀ ಶೇಕಡಾ ಹತ್ತರಷ್ಟು ಹಣವನ್ನು ಹರಾಜ್ ಕಾಲದಲ್ಲಿ ಪಾವತಿ ಮಾಡಿ ಬಾಕೀ ಹಣವನ್ನು ಹರಾಜ್ ತಾರೀಖಿನಿಂದ ಮೂವತ್ತು 30 ದಿವಸಗಳೊಳಗೆ ಪಾವತಿ ಮಾಡತಕ್ಕದ್ದು

F. A. Leager.
ಡಿಪ್ಯುಟಿ ಅಸಿಸ್ಟೆಂಟ್ ಕನ್ಸರ್ವೇಟರ್,
ಕೊಡಗು ಫಾರೆಸ್ಟ್.

### THE MONEY MARKET.

ಮದರಾಸ್, ಶನಿವಾರ ತಾರೀಖ್ 6 ನೇ ಅಗಸ್ಟ 1893

ಸೇಕಡ 4ರೂ. ಬಾಬತು ಗವರ್ನಮೆಂಟ ಪತ್ರಗಳು ರೂಪಾಯಿಗಳು, 106–14–0 ಇಂದ 107–6–0 ವರಿಗೆ

ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತು 980 ಲಾಗಾಯತು 985 ವರಿಗೆ,

ಕಮರ್ಷಿಯಲ್ ಬ್ಯಾಂಕ್ ಮದ್ರಾಸ್ ಬ್ಯಾಂಕ ಷೇರುಗಳು, (100) ಬಾಬತು 150 ಇಂದ 155 ವರಿವಿಗೆ,

ಸವರೇನುಗಳು, 15–11–0ಇಂದ 15–13–0ವರಿಗೆ,

ಬ್ಯಾಂಕ್‌ಬಿಲ್‌ಗಳು ಯೂರೋಪಿಯನ್ ದುಡ್ಡಿಗಳು, ರೂ॥ ಒಂದಕ್ಕೆ

6 ತಿಂಗಳ ಮಿಯಾದಿಗೆ, 1s 3 19/32d.

ಡಿಟೋ 4 ತಿಂಗಳ ಮಿಯಾದಿಗೆ, 1s 3½d

ಡಿಟೋ ಕೇಳಿದಾಗ 1s 3 13/32d.

## ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, AUGUST 7 1893

೧೮೯೩ನೇ ಇಸವಿ ಆಗಸ್ಟ ತಾ॥ ೭ ನೇ ಸೋಮವಾರ.

### ಶ್ರೀಮನ್ಮಹಾರಾಜರವರಿಗೆ ಲಭಿಸಿದ ಸೈನಿಕ ಪ್ರಾಶಸ್ತ್ಯವಂ ಕುರಿತು.

ಮೊನ್ನೆ ಮಂಗಳವಾರ ೨ ನೇ ತಾರೀಖ್ ಬುಧವಾರದ ದಿನ ಮಧ್ಯಾಹ್ನ ೧ ಘಂಟೆಯ ಸಮಯದಲ್ಲಿ, ಈ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಕರ್ನಲ್ ಹೆಂಡರ್ಸನ್ ಯವರು ತಮ್ಮ ಅಸಿಸ್ಟೆಂಟರಾದ ಮೇಜರ್ ರಾವೆನ್‌ಷಾ ಯವರೊಡನೆ ಶ್ರೀಮನ್ ಮಹಾರಾಜರವರ ಸಂದರ್ಶನಾರ್ಥ ಅರಮನೆಗೆ ದಯಮಾಡಿದ್ದರು. ಇವರ ಆಗಮನವು ಸರ್ಕಾರೀಯಾಗಿದ್ದುದರಿಂದ ಮಾಮೂಲ್ ಮೇಲೆ ಜರಗತಕ್ಕ ಮರ್ಯಾದೆಗಳೆಲ್ಲವೂ ನಡೆದವು. ಇವರು, ದಯಮಾಡಿದ್ದ ಉದ್ದೇಶವಂ ವಿಚಾರಿಸಲಾಗಿ ತಿಳಿಯಬಂದದ್ದೇನೆಂದರೆ, ಲಾರ್ಡ್ ಲ್ಯಾನ್ಸ್‌ಡೌನ್ ಯವರು ಮಾಡಿದ್ದ ಸಿಫಾರಸ್ಸನ್ನನುಸರಿಸಿ, ಶ್ರೀಮನ್ಮಹಾರಾಜ್ಞೀ ಇಂಡ್ಯ ಚಕ್ರವರ್ತಿನೀಯವರು, ತಮ್ಮ ಸೈನ್ಯದಲ್ಲಿ ಒಬ್ಬ ಕರ್ನಲ್ ಹೋದೆಯನ್ನು ಶ್ರೀಮನ್ ಮಹಾರಾಜರವರಿಗೆ ಅತ್ಯುತ್ಸಾಹದೊಡನೆ ದಯಪಾಲಿಸಿದರೆಂಬ ವೃತ್ತಾಂತವನ್ನು ತಿಳಿಯಪಡಿಸಿ, ವೈಸ್‌ರಾಯಿಯವರು ಸ್ವತಃ ಬರೆದ ಅಭಿವಾದನರೂಪವಾದ ಒಂದು ಲೇಖನವನ್ನು ಒಪ್ಪಿಸುವ ನಿಮಿತ್ತ ಬಂದಿದ್ದರು. ಇದರಲ್ಲಿ ರೆಸಿಡೆಂಟರವರ ಪ್ರಾರ್ಥನೆಯ ಮೇಲೆ ಬ್ರಿಗೇಡಿಯರ್ ಜನರಲ್ ಫೋರ್ಬ್ಸ್ ಯವರು ತಮ್ಮ ಪರಿವಾರದೊಡನೆ ಹೋಗಿ, ಶ್ರೀಮನ್ ಮಹಾರಾಜರವರಿಗೆ ಲಭಿಸಿದಂತಾ ಗೌರವಕ್ಕಾಗಿ ಅವರಿಗೆ ಶುಭವಾದ ನಮಸ್ಕಾರ ಮಾಡಿ ವಾಪಸ್ ಬಂದರೆಂದು ತಿಳಿಯಲಾದೆವು. ಪ್ರಸಕ್ತ ಗೌರವವಂ ಕೇವಲ ಅಸಾಧಾರಣವಾದುದೆಂದು ಭಾವಿಸುವದಕ್ಕೆ ಅದು ಶ್ರೀಮನ್ ಮಹಾರಾಜ್ಞೀ ಯವರಿಂದ ಸಾಕ್ಷಾತ್ತಾಗಿ ದಯಪಾಲಿಸಲ್ಪಟ್ಟಿರುವದೇ ಮುಖ್ಯ ಕಾರಣವೆಂದೆಣಿಸುತ್ತೇವೆ. ಇದು ಸಾಮಾನ್ಯವಾಗಿ ಒಂದು ರಿಜಿಮೆಂಟಿನಲ್ಲಿ ವ್ಯವಹರಿಸಲ್ಪಡುವ ಕರ್ನಲ್ ಹೋದೆಯಂತಾದ್ದಲ್ಲವು. ರಿಜಿಮೆಂಟಿಗಳಲ್ಲಿ ಕ್ರಮವಾಗಿ ಮೇಜರ್ ಜನರಲ್, ಲೆಫ್ಟಿನೆಂಟ್ ಜನರಲ್, ಜನರಲ್ ವಗೈರೆ ಅಧಿಕಾರಪ್ರಾಪ್ತಿಗೆ ಅವಕಾಶವಿರುತ್ತಿವೆ. ಈ ಪ್ರಕರಣದೊಳಂತಾದ್ದೇನೂ ಇಲ್ಲವು. ಆದರೆ, ಇಲ್ಲಿ ಕರ್ನಲ್ ಪದವಿಕ್ಕೆ ಕಮಾಂಡರ್ ಅಂದರೆ ಸೇನಾನಾಯಕನೆಂತಲೇ ಅರ್ಥ ಮಾಡಬೇಕಾಗಿರುತ್ತಿದೆ. ಹ್ಯಾಗಂದರೆ—ಜರ್ಮನ್ ಚಕ್ರವರ್ತಿಯವರನ್ನು ಶ್ರೀಮನ್ ಮಹಾರಾಣಿಯವರು ತಮ್ಮ ಸೈನ್ಯದಲ್ಲಿ ಒಬ್ಬ ಕರ್ನಲಾಗಿ ನಿಯಮಿಸಿದಾರೆ. ಬದಲಿಗೆ ಸದರೀ ಚಕ್ರವರ್ತಿಯವರು ಶ್ರೀಮನ್ ಮಹಾರಾಣಿಯವರನ್ನು ಕೂಡ, ತಮ್ಮ ಸೈನ್ಯದ ಸ್ವಾರಿ ಒಂದು ರಿಜಿಮೆಂಟಿಗೆ ಕರ್ನಲಾಗಿ ನಿಯಮಿಸಿದಾರೆ. ಏತಕ್ಕೇನ ಇದು ನೋಡಲಾಗಿ, ಕರ್ನಲ್ ಹೋದೆಯು, ಕೇವಲ ಪ್ರೀತಿ ಗೌರವವಿಶ್ವಾಸ ಪ್ರಸನ್ನತಾ ಜ್ಞಾನ ವಗೈರೆ ಪರಿಭಾವನೆಯೊಡನೆ ಕೊಡಲ್ಪಡತಕ್ಕದ್ದೆಂದು ಎಲ್ಲರೂ ಎಣಿಸಬೇಕೇ ಹೊರ್ತು ಸಾಮಾನ್ಯವಾದದ್ದೆಂದರಿಯಕೂಡದು. ಶ್ರೀಮನ್ ಮಹಾರಾಜರವರಿಗೆ ಬ್ರಿಟಿಷ್ ರಿಜಿಮೆಂಟಿಗಳಲ್ಲಿ ಒಬ್ಬ ಕರ್ನಲಿಗೆ ನಡೆಯಬೇಕಾದ ಮಿಲಿಟರಿ ಮರ್ಯಾದೆಗಳೆಲ್ಲವು ಸಾಂಗವಾಗಿ ನಡೆಯುವವು.

### ಮೈಸೂರು ಸೀಮೆಯ ಪಾಳೇಗಾರರಂ ಕುರಿತು.

ಈ ಸಂಸ್ಥಾನಕ್ಕೆ ಸೇರಿದ ಬಹುಜನ ಪಾಳೇಗಾರರ ವಿಜ್ಞಾಪನೆಯನ್ನಾಲೈಸತಕ್ಕ ಬಗ್ಗೆ ಶ್ರೀಮನ್ ಮಹಾರಾಜರವರು ನಾಲ್ಕೈದು ದಿವಸಗಳ ಹಿಂದೆ ತಮ್ಮ ಅರಮನೆಯಲ್ಲಿ ಒಂದು ದರ್ಬಾರ್ ಮಾಡಿದರೆಂತಲೂ, ತತ್ಕಾಲದಲ್ಲಿ ಬಂದಿದ್ದ ಪಾಳೇಗಾರರೆಲ್ಲರು, ತಮ್ಮ ತಾತ್ಕಾಲಿಕ ಸ್ಥಿತಿಯಂ ತಿಳಿಸಿ, ತಮಗೆ ಬರುವ ಆದಾಯವು ಅಲ್ಪವಾಗಿರುವದರಿಂದ ತನ್ಮೂಲಕ ತಮ್ಮ ಜೀವನವು ಅತಿ ಕಷ್ಟಸಾಧ್ಯವಾಗಿದೆ ಯೆಂಬದಾಗಿಯೂ, ತಮ್ಮ ಕುಲಗಳನ್ನು ಯಥೋಚಿತ ಬಿಡ್ತೀವಾರಿ ತಮ್ಮನ್ನು ಗೌರವದೊಡನೆ ರಕ್ಷಿಸುತ ಬರಬೇಕೆಂಬದಾಗಿಯೂ ಪ್ರಾರ್ಥಿಸಿದರೆಂತಲೂ, ಅದರಮೇಲೆ ಶ್ರೀಮನ್ ಮಹಾರಾಜರವರು, ಅವರ ಪ್ರಾರ್ಥನಾನುಗುಣವಾಗಿ ಜರಿಗಿಸುವಂತೆ ವಾಗ್ದಾನ ಮಾಡಿ ಅವರು ಮನಸ್ಸಂತೋಷಪಡಿಸಿ ಕಳುಹಿಸಿದರೆಂತಲೂ ಕೇಳುತ್ತೇವೆ. ಈ ಪಾಳೇಗಾರರೆಲ್ಲರು ಪೂರ್ವದಲ್ಲಿ ಸ್ವತಂತ್ರರಾಗಿಯೂ, ಮಾನಿತರಾಗಿಯೂ, ದೊಡ್ಡ ಪ್ರಭುಗಳಂತೆಯೂ ಇರುತಲಿದ್ದರು. ಇವರು ತಮ್ಮ ಪ್ರಾಭವಕಾಲದ

ಲ್ಲಿ ಯೋಗ್ಯತೆಗೆ ಮೀರಿದಂತಾ ಮಹತ್ಕಾರ್ಯಗಳಂ ಮಾಡಿ ಗವರ್ನಮೆಂಟಿನವರ ಅವಧಾನಕ್ಕೆ ಎಷ ಯರಾಗಿ ಕಡೆಗೆ ಪ್ರಕೃತ ಸ್ಥಿತಿಯಂ ಸ್ವತಃ ಸಂಪಾದಿಸಿಕೊಂಡರು ಮುಖ್ಯವಾಗಿ ಇವರ ಉಚ್ಛ್ರಾಯವೆಲ್ಲವು ಗತಿಸಿ ಯಷ್ಟೋಕಾಲವಾಯಿತು. ಈಗ ಕೇವಲ ಸಾಮಾನ್ಯರಂತೆ ಅನೇಕರು ಅಶನ ವಸನಗಳಿಗೆ ಸಹ ಸಾಲದೆ ಕಷ್ಟಪಡುತ್ತಲಿದ್ದಾರೆಯಾಗಿ ಸರ್ಕಾರದವರು ಅವರ ವೇತನಗಳನ್ನು ಯಥೋಚಿತ ಜಾಸ್ತೀಮಾಡುವ ಪಕ್ಷಕ್ಕೆ, ಗೌರವದಿಂದವರು ಮಿಕ್ಕ ಕಾಲವಂ ಕಳೆಯಬಹುದು. ಆಶ್ರಿತರಕ್ಷಕರಾದ ಶ್ರೀಮನ್ಮಹಾರಾಜರವರಿಗಿದು ಮಹತ್ಕಾರ್ಯವಲ್ಲವು ಪಾಳೇಗಾರರ ಸಂತತಿಯವರನ್ನು ಅವಿಸ್ಮಟ್ಟಿಗೆ ತರಬೇಕೆಂಬ ಅಭಿಪ್ರಾಯವು ಮಹಾರಾಜರವರ ದಿವ್ಯ ಚಿತ್ತದಲ್ಲಿ ಹುಟ್ಟಿದೇ ಕೋರಿ, ಅವರ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಇತರಾಪೇಕ್ಷಯಾ ಅನೇಕ ಸೌಕರ್ಯಗಳನ್ನುಂಟುಮಾಡಿ ಅವರಿಗೆ ವಿದ್ಯಾರ್ಥಿ ವೇತನಗಳಂ ಕಲ್ಪಿಸಿಕೊಡಿಸಿದರು. ಅದರ ಪ್ರಯೋಜನವು ಬಹುಜನ ಬಳಸಿಕೊಂಡಂತೆ ಕಾಣಿಸಲಿಲ್ಲವು ಮುಖ್ಯವಾಗಿ ಈ ಪಾಳೇಗಾರರು ಕೇವಲ ತಮ್ಮ ಪೂರ್ವ ಪ್ರಾಭವ ವೈಭವಗಳನ್ನೇ ಸ್ಮರಿಸಿಕೊಂಡು ವ್ಯರ್ಥವಾಗಿ ಕಾಲಹರಣ ಮಾಡುವದಕ್ಕಿಂತಲೂ, ತಮ್ಮ ಕುಮಾರರಿಗೆ ವಿದ್ಯಾಭ್ಯಾಸವಂ ಮಾಡಿಸಿ ಅವರು ಯಾವದಾದರೊಂದು ವೃತ್ತಿಯನ್ನವಲಂಬಿಸಲಿಕ್ಕೆ ಶಕ್ತರಾಗುವಂತೆ ಮಾಡುವದುಚಿತವೆಂದು ಕಾಣುತಿದೆ ಅವರು ಪ್ರವರ್ತಮಾನರಾಗಿ ಮುಂದೆ ಸಂಪಾದಿಸುವ ಕೀರ್ತಿಪ್ರತಿಷ್ಠೆಗಳು ಪ್ರಯೋಜನಕರಗಳಾಗಬೇಕೇ ಹೊರ್ತು ಪೂರ್ವ ಸ್ಥಿತಿ ಯೆಂದಿಗೂ ಮರಳಿ ಲಭಿಸಲಾರದು. ಈ ಜನಗಳಲ್ಲಿ ಅದ್ಯಾಪಿ ಅನುಸರಿಸಿ ಬಂದಿರುವ ರಾಜಕೀಯಾಡಂಬರಗಳು ಈಗಿನ ಕಾಲದಲ್ಲಿ ಅನಾದರಣೀಯಗಳೆಂಬ ಭಾವವು ಅವರಿಗೆ ಸ್ಫುರಿಸಿ ಜೀವನಾನ್ವೇಷಣದೊಳು ಪ್ರವರ್ತಿಸಿದಹೊರ್ತು ಸುಖವುಂಟಾಗಲಾರದು. ಇವರಲ್ಲಿ ವಿದ್ಯಾವಿವೇಕಾದಿ ಸುಗುಣಗಳಿಂದ ಶ್ಲಾಘ್ಯರೆಂದು ಕಂಡುಬರತಕ್ಕವರಿಗೆ ಅವರ ಯೋಗ್ಯತಾನುಸಾರ ಗವರ್ನಮೆಂಟಿನಲ್ಲಿ ಉದ್ಯೋಗಗಳು ಕೊಡಲ್ಪಡುವವೆಂಬದಾಗಿ ಶ್ರೀಮನ್ಮಹಾರಾಜರವರು ಸ್ವತಃ ಅಭಯವನ್ನಿತ್ತರೆ ಆಗ ಅವರು ಜಾಗರೂಕತೆಯುಂ ವಹಿಸಿ ಅಭಿವೃದ್ಧಿಗೆ ಬರಬಹುದೆಂದು ನಂಬುತ್ತೇವೆ

## ಮೆ|| ಟಿ. ಟಿ. ಲೆನಾರ್ಡ್‌ಯವರ ಪ್ರೇತನಾಭಿವೃದ್ಧಿಯಂ ಕುರಿತ.

ಮೈಸೂರ್ ಗವರ್ನಮೆಂಟ್ ಪ್ರೆಸ್ ಸ್ಯೂಪರಿಂಟೆಂಡೆಂಟರಾದ ಮೆ|| ಟಿ ಟಿ ಲೆನಾರ್ಡ್‌ಯವರು ಪಂಜಾಬಿನಲ್ಲಿ ಮಾಹೆಯಾನಾ ೧,೦೦೦ ರೂಪಾಯಿಗಳ ಸಂಬಳದ ಜವಾಬ್ದಾರಿಯೊಂದು ಕೆಲಸಕ್ಕೆ ಹೊರಟುಹೋಗುವವರಾಗಿದ್ದಾರೆಂಬದಾಗಿ ಈಚೆಗೆ ಪ್ರಮಾದವಶಾಗಿರುವಂತೆ ಬೆಳದೋಕದ ಸ್ಪೆಕ್ಟೇಟರ್ ಪತ್ರಿಕೆಯು ತಿಳಿಸುತಿದೆ ಇದು ನಿಜವಾಗಿರುವ ಪಕ್ಷಕ್ಕೆ ಮೆ|| ಲೆನಾರ್ಡ್‌ಯವರಿಗುಂಟಾದ ಉನ್ನತಾಧಿಕಾರಕ್ಕಾಗಿ ಅವರಿಗೆ ನಾವು ಶುಭವಾದನ ಮಾಡುವೆವು. ಇವರು ಪ್ರಕೃತ ಕೆಲಸದ ಚಾರ್ಜನ್ನು ವಹಿಸಿದ್ದು ಮೊದಲು ಇದುವರಿವಿಗೆ ಮಾಡಿದ ಮಹನ್ನತಿಯಿಂದ ಗವರ್ನಮೆಂಟ್ ಪ್ರೆಸ್ ಶ್ಲಾಘ್ಯಮಾನವಾದ ಸ್ಥಿತಿಗೆ ಬಂತಲ್ಲದೆ ಅನೇಕ ಪ್ರಯೋಜನಗಳಿಗೂ ಗವರ್ನಮೆಂಟಿನವರ ಪರಾಮರ್ಶೆಗೂ ವಿಷಯವಾಯಿತು, ಮೆ|| ಲೆನಾರ್ಡ್‌ಯವರು ಪ್ರೆಸ್ಸಿನ ಸಂಬಂಧವಂ ನಿಜವಾಗಿ ಒಂದುವೇಳೆ ತೊರೆಯುವಪಕ್ಷಕ್ಕೆ ಮುಂದೆ ಇವರಂತಾ ಅಧಿಸರರು ಸದರೀ ಕಾರ್ಖಾನೆಗೆ ದೊರೆಯುವಣವು ಪ್ರಯಾಸವಲ್ಲದೆ ಅಲ್ಲಿನ ನೌಕರ ಮಾನೇರ ವಿಷಯದಲ್ಲಿ ಇವರಂತೆ ಬಹುಮಾನ್ಯತೊಡನೆ ನಡೆಸಿ ಅನುಕೂಲರಾಗಿರುವವರು ಸಹ ದುರ್ಲಭರೆಂದು ಹೇಳುವೆವು ಇವರ ಶಕ್ತಿಯಂ ಪರಿಭಾವಿಸಿ ಮಹಾರಾಜಾ ಸರ್ಕಾರದವರು ಈಚೆಗೆ ಇವರಿಗೆ ಸಂಬಳವನ್ನು ಸಹ ಜಾಸ್ತೀಮಾಡಿದರು. ಕಲ್ಕತ್ತೆಯಲ್ಲಿನ ದೇವ ವಾಲಂಟಿಯರ್ ಕಮಿಷನಿಗಾಗಿ ಮೆ|| ಲೆನಾರ್ಡ್‌ಯವರು ಹೋಗಿದ್ದ ಸಮಯದಲ್ಲಿ ವಾಲಂಟಿಯರ್‌ಗಳ ಪುರೋಭಿವೃದ್ಧಿಯೊಳು ವಿಶೇಷ ಆಸಕ್ತರಾದ ಘಾರ್ಬಿಸ್ ಸಿಕ್ರೆಟರಿ ಸರ್ ಮಾರ್ಟಿಮರ್ ಡ್ಯೂರಾಂಡ್‌ಯವರು ಅವರಾ ಬಹಳ ಅಭಿಮಾನಿಸಿ ಗೌರವಿಸಿದರು. ಅದರ ತರುವಾಯ ಮೆ|| ಲೆನಾರ್ಡ್‌ಯವರ ಪ್ರಾಶಸ್ತ್ಯವು ಹೆಚ್ಚಿ ಅವರು ಮದರಾಸ್ ಗವರ್ನರವರಿಗೆ ಮರ್ಯಾದಾರ್ಥ ಏಡಿಕಾಂಗ್ ಅಂದರೆ ಅಂಗರಕ್ಷಕರಾಗಿ ನೇಮಿತರಾದರು, ಮೆ|| ಲೆನಾರ್ಡ್‌ಯವರಿಗೆ ತಲಬ್ ಜಾಸ್ತೀಯಾಗುವ ವಿಚಾರವು ನಮಗೆ ಅಭಿಮತವಾಗಿ ದ್ದಾಗ್ಯೂ ರತ್ನಾಲದಲ್ಲಿದು ಅಷ್ಟು ನಿಜವಾಗಿರಲಾರದೆಂದು ಸದರೀ ಪತ್ರಿಕೆಯೇ ಫಲಿತಾಂಶವನ್ನು ಸೂಚಿಸುತಿದೆ ಇದುನೋದಲಾಗಿ ಸದರೀ ದೊಡ್ಡಮನುಷ್ಯರಿಗಿಲ್ಲಯೇ ಇನ್ನೂ ಬಡ್ತೀಯಾಗಬೇಕಾದ್ದಕ್ಕಿದು ಭವಿಷ್ಯತ್ಸೂಚನೆಯೋ ಯೆಂದೂ ಹಿಸಬೇಕಾಗಿದೆ. ಹಾಗಾದಾಗ್ಯೂ ಅವರ ಇಷ್ಟಮಿತ್ರರಿಗೆಲ್ಲ ಸಂತೋಷಕರವಾದ ವಿಷಯ ವೆಂಬದರಲ್ಲಿಷ್ಟುಮಾತ್ರವೂ ಸಂದೇಹವಿಲ್ಲವು

## ಗತಿಸಿದ ಮೆ|| ಶಿವರಾಮಯ್ಯನ ವಿಯೋಗ ವೃತ್ತಾಂತವಂ ಕುರಿತು.

ಈ ಸಂಸ್ಥಾನದ ದಿವಾನರವರಾದ ಸರ್. ಕೈ ಶೆ ಷಾಸ್ತ್ರಿ ಅಯ್ಯರ್ ಯವರ ದೊಡ್ಡ ಅಳಿಯಂದರಾದ ಮೆ|| ಶಿವರಾಮಯ್ಯರವರು, ಈಗ್ಯೆ ೧೫ ದಿನಗಳ ಕಾಲವಾಗಿ ಜ್ವರ ರೋಗದಿಂದ ಅಸ್ವಸ್ಥರಾಗಿರುತಿರಲು, ಇವರ ಆರೋಗ್ಯಭಾಗ್ಯವಂ ಕೋರಿ ಸಮರ್ಥರಾದ ಬಹುಜನ ಡಾಕ್ಟರುಗಳ ಮೂಲಕ ಮಾಡಲ್ಪಟ್ಟ ಚಿಕಿತ್ಸೆಗಳೆಲ್ಲವು ನಿಷ್ಫಲಗಳಾಗಿ, ಕಡೆಗೆ ಗತ ಸೋಮವಾರದ ದಿನ ಮಧ್ಯಾಹ್ನ ೨ ಗಂಟೆಗೆ ದಿವಾನರವರ ಬಂಗ್ಲೆಯಲ್ಲಿ ಕಾಲಗತಿಯನ್ನೈದಿದರೆಂಬ ವೃತ್ತಾಂತವು ಕೇಳಿದವರಿಗೆಲ್ಲ ಮಹತ್ತರವಾದ ಖೇದವನ್ನುಂಟುಮಾಡದಿರಲಿಲ್ಲವು. ಮೆ|| ಶಿವರಾಮಯ್ಯರವರ ಶರೀರ ದಾರ್ಢ್ಯವಂ ಚೆನ್ನಾಗಿ ಅರಿತಿದ್ದಂತಾ ಅವರ ಪರಿಚಿತರ್ಯಾರೂ ಅವರಿಗಿಂತಾ ಅನಿರೀಕ್ಷಿತ ಶರೀರ ವಿಯೋಗವು ಪ್ರಾಪ್ತವಾಗುವದೆಂದು ತಿಳಿದಿರಲಿಲ್ಲವು. ಅತಿ ಗುಣಾಢ್ಯರಾಗಿಯೂ ಸ್ನೇಹಪರರಾಗಿಯೂ ಇದ್ದ ಇವರ ಮರಣಕ್ಕಾಗಿ ತನ್ಮಿತ್ರ ಬಂಧುವರ್ಗದವರೆಲ್ಲರೂ ಬಹಳ ವಿಷಾದಿಸುತ್ತಾರಲ್ಲದೆ, ಅತಿ ಬಾಲ್ಯದಲ್ಲಿ, ಅಂದರೆ ೨೨ ವರುಷಗಳ ಕಾಲದೊಳಗಾಗಿ, ತರುಣಿಯಾದ ತಮ್ಮ ಭಾರ್ಯೆಯನ್ನೂ ಪುತ್ರಿಯನ್ನೂ ನಿರಂತರ ದುಃಖಭಾಜನರನ್ನಾಗಿ ಮಾಡಿ ಗತಿಸಿದಕ್ಕಾಗಿಯೂ, ಪುತ್ರೀ ಸಂಬಂಧವಾದ ಖೇದವು ದಿವಾನರವರು ಅನವರತ ಅನುಭವಿಸ ವಂತೆ ಬಗವಂತನು ಮಾಡಿದ್ದಕ್ಕಾಗಿಯೂ ಯೆಲ್ಲರೂ ವಿಶೇಷತಃ ಸಂಕಟಪಡುತ್ತಾರೆ ಈಗ ಮೃತಪಟ್ಟವರ ವಂದೆಗಳು ಕೊಚ್ಚಿ ಸಂಸ್ಥಾನದೊಳು ಬ್ಬ ದುರ್ಗಸಥರಾಗಿರುವಂತೆ ಕೇಳುತ್ತೇವೆ ಇವರಿಗೆ ಪುತ್ರವಸನ ಕಾಲದಲ್ಲಿ ಅವರ ಮುಖಾವಲೋಕನಕ್ಕೆ ಕೂಡ ಅವಕಾಶವಿಲ್ಲದೆ ಹೋದದ್ದು ಮತ್ತೂ ಚಿಂತಾಸ್ಪದವಾದುದಾಗಿರುತಿದೆ "ಸುಖ್ಯವಾಗಿ ‹‹ ಅನ್ಯಥಾಚಿಂತಿತಂಕಾರ್ಯಂ ದೈವಮನ್ಯತ್ರ ಚಿಂತಯೇತ್" ಎಂಬದಾಗಿ ನಮ್ಮ ಕೋರಿಕೆಗಳೊಂದೂ ಕ್ರಮವಾಗಿ ನೆರವೇರುವದಿಲ್ಲವು, ಏತಕ್ಕೆಂದರೆ--ದಿವಾನರವರು ಉತ್ತರೋತ್ತರಾಭಿವರ್ಧಕಗಳಾದ ಕೀರ್ತಿಪ್ರತಿಷ್ಠೆಗಳಂ ಪಡೆದು ಸಂತುಷ್ಟರಾಗಿರಬೇಕೆಂಬದು ಎಲ್ಲರ ನಿರಂತರ ಪ್ರಾರ್ಥನೆಯಾಗಿದ್ದಾಗ್ಯೂ. ಅದಕ್ಕೆ ಸಾಕ್ಷಾದ್ವಿರುದ್ಧವಾಗಿ ಅನ್ಯತರವಾದ ಭಗವದಾಜ್ಞೆಯಿಂದ ಏವಮಾದಿ ಸಂಸ್ಥಿತಿಕ್ಲೇಶಗಳು ಆಗಿಂದಾಗ್ಯೆ ಅವರಿಗೆ ಪ್ರಾಪ್ತವಾಗುತಲಿರುತಿವೆ ಅನುಲ್ಲಂಘನೀಯವಾದ ದೈವವಿಧಿಗೆ ಸಾಮಾನ್ಯವಾಗಿ ಎಲ್ಲರೂ ಬದ್ಧರಾಗಬೇಕಾಗಿರುವದರಿಂದ ಅದಕ್ಕೆ ಯಾವವಿಧ ತಾರತಮ್ಯವೂ ಪರಿಗಣನೀಯವಲ್ಲದೆ ಹೋಗುತಿದೆ ಏತೇನ ದಿವಾನರವರಿಗೂ, ಅವರಕುಟುಂಬಕ್ಕೂ, ವಿಶೇಷ ದುಃಖಪೀಡಿತೆಯಾದ ಅವರ ಪುತ್ರಿಗೂ ಸಂಭವಿಸಿದ ಪ್ರಸಕ್ತ ಕ್ಲೇಶವು ಸಂಪೂರ್ಣವಾಗಿ ಯೆಂದಿಗೂ ಮರೆಯತಕ್ಕದ್ದಲ್ಲವು ಈ ಸಮಯದಲ್ಲಿ ಸ್ವಾಭಾವಿಕವಾದ ಚಿತ್ತಸ್ಥೈರ್ಯ ವೊಂದೇ ಅವರ ಮನೋವ್ಯಥೆಯಂ ನಿವೃತ್ತಿಸಿ ಉಪಶಾಂತಿಯನ್ನುಂಟುಮಾಡಬೇಕಾದುದಾಗಿರುತಿದೆ

## Occasional Notes
## ನೈಮಿತ್ತಿಕ ವಿಷಯನ್ಯಾಸ.

ಕಳೆದ ತಿಂಗಳ ೩೧ನೇ ತಾರೀಖಿನ ರಾತ್ರಿ ಕದಲೂರು ಮೊದಲು ಚೆಂಗಲ್‌ಪಟ್ಟುವರಿವಿಗೆ ರೈಯಿಲ್ ಮಾರ್ಗದಲ್ಲಿ ಪ್ರಬಲವರ್ಷವಾದಂತೆ ತಿಳಿಯಬರುತಿದೆ

ಬಿಕಾನಿಯರ್ ಸಂಸ್ಥಾನದಮಹಾರಾಜರವರಿಂದ ಮುಂಬೈ ಟಂಕಸಾಲೆಗೆ ಯೆರಡು ಲಕ್ಷ ರೂಪಾಯಿಗಳು ಕಳುಹಿಸಲ್ಪಟ್ಟು ಅವು ಬ್ರಿಟಿಷ್ ಇಂಡಿಯಾ ದೇಶದಲ್ಲಿ ನ್ಯಾಯವಾದ ಚಲಾವಣಿ ನಾಣ್ಯವೆಂದು ಪ್ರಕಟಿಸಲ್ಪಟ್ಟಿರುತಿದೆ

ದಂಜಾವೂರು ಸಬ್‌ಡಿವಿಷನ್ ಜಡ್ಜಿಯವರಾದ ಮೆ|| ವಂಕೋಬಾಚಾರ್ಯರು ರಜಾ ಮೇಲೆ ಹೋಗುವ ಮೆ|| ಜೆ ಸಪಲ್‌ಯೆಂಬವರಿಗೆ ಬದಲು ಉತ್ತರ ಆರ್ಕಾಟು ಡಿಸ್ಟ್ರಿಕ್ಟಿನ ಸೆಷನ್ ಜಡ್ಜಿಯವರಾಗಿ ಆಕ್ಟಿಂಗ ರೀತಿ ನೇಮಿತರಾಗ್ತಿರಲ್ಪಟ್ಟರುತ್ತಾರೆ

ಉತ್ತರ ಬಂಗಾಳೇ ದೇಶದೊಳು ಹಿಂದೂಗಳಲ್ಲಿ ಹೆಣ್ಣುಮಕ್ಕಳ ವಿವಾಹವನ್ನು ಹನ್ನೆರಡು ವರ್ಷಗಳು ಆರುತಿಂಗಳಿಗೂ, ಪಶ್ಚಿಮ ಬಾಗಲೊಳು ಹನ್ನೆರಡು ವರ್ಷಗಳು ಹತ್ತು ತಿಂಗಳಿಗೂ ಮಾಡಬೇಕೆಂದು ವ್ಯವಸ್ಥೆ ಮಾಡಿಕೊಂಡಿರುವದಾಗಿ ಅಮೃತಬಜಾರ್ ಪತ್ರಿಕೆಯೆಂದು ತಿಳಿಸುತಿದೆ.

ಜೂನಾಗಡ್ ಸಂಸ್ಥಾನಕ್ಕೆ ಸೇರಿದ ಪಾಟನ್ ಎಂಬ ಪ್ರದೇಶದೊಳು ಈ ಸಲದ ಮೊಹರಂ ಹಬ್ಬದಲ್ಲಿ ನಡೆದ ಕಲಹಕ್ಕೆ ಮಹಮ್ಮದ್ ಜನರು ಪ್ರಥಮ ಪ್ರವರ್ತಕರೆಂದು ಸದರೀ ಸಂಸ್ಥಾನದ ದಿವಾನರವರು ರಿಪೋರ್ಟುಮಾಡಿರುತ್ತಾರೆ ಈ ಕಲಹದಲ್ಲಿ ಹನ್ನೊಂದು ಮಂದಿ ಪ್ರಾಣಗಳಂ ಹೋಗಲಾಡಿಸಿ ಕೊಂಡರು.

ಈಚೆಗೆ ಪರ್ಬ (ಬ್ಯಾಬ್ಬಾ) ಎಂಬ ಪ್ರದೇಶದೊಳು ಹಿಂದೂಗಳಿಗೂ ಮುಸಲ್ಮಾನರಿಗೂ ನಡೆದ ಕಲಹದಲ್ಲಿ ಮುಸಲ್ಮಾನರು ಅಲ್ಲಿರುವ ಹಿಂದೂ ದೇವಸ್ಥಾನದೊಳು ನುಗ್ಗಿ ಮೊದಲು ಅಲ್ಲಿದ್ದ ವೈದಿಕರನ್ನೆಲ್ಲ ಹೊಡದು ಚೆನ್ನಾಗಿ ಮರ್ದಿಸಿ, ಅನಂತರವಲ್ಲಿಯಾವೋಂದು ಕೆರೋಸೀನ್ ಯಣ್ಣೆಯನ್ನು ಹುಯಿದು ಬೆಂಕಿ ಹಚ್ಚಿಬಿಟ್ಟರು. ಮೂವರು ಸತ್ತರೆಂತಲೂ ಒಂದುಸಲದು ಪತ್ರಿಕೆಯ ಬಾತಮಿದಾರನು ಬರೆಯುತ್ತಾನೆ

## LOCAL AND PROVINCIAL NEWS
## ಬಳಲೇಕವುತ್ತು ತಾಲ್ಲೂಕಿಜಾತಿ ವೃತ್ತಾಂತಗಳು

ಈ ಸಂವತ್ಸರದ ಮೈಸೂರ್ ಲೋಕಲ್ ಸರ್ವಿಸ್ ಪರೀಕ್ಷೆಯು, ಈ ದಿನ ಪ್ರಾರಂಭವಾಗಿ ಶನಿವಾರದ ತನಕ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ನಡೆಯುವುದು. ಗವರ್ನಮೆಂಟಿನವರು ಸದರೀ ಪರೀಕ್ಷೆಯನ್ನು ಅನೇಕ ಭಾಗಗಳಾಗಿ ಪ್ರತ್ಯೇಕಿಸಿ, ಅದಕ್ಕೆ ತಕ್ಕಂತೆ ಫೀಜಯನ್ನು ಕೂಡ ಕಡಮೆ ಮಾಡಿದ್ದರಿಂದ ಈಸಂವತ್ಸರದಲ್ಲಿ ಉಮೇದ್ವಾರರ ಸಂಖ್ಯೆಯು ಹಿಂದಿನ ವರುಷಗಳಿಗಿಂತ ಅಧಿಕವಾಗಿರುವಂತೆ ಕೇಳುತ್ತೇವೆ

ಮೇಲುಕೋಟೆ ಯದುಗಿರಿ ಸದಾನಂದವರ್ಧಿನೀ ಸಭೆಯಲ್ಲಿ ಪ್ರತಿದಿನವೂ ನಡೆಯುತಲಿರುವ ಮಹಾಭಾರತ ಪುರಾಣದೊಳು ೩೦ನೇ ತಾರೀಖಿನಲ್ಲಿ ಆದಿಪರ್ವವು ಪೂರೈಸಿದ್ದರಿಂದ ತಚ್ಛಾಂತ್ಯರ್ಥ ೫೦ ಮಂದಿ ಬ್ರಾಹ್ಮಣರಿಗೆ ಸಂತರ್ಪಣೆ ಮಾಡಲ್ಪಟ್ಟು ೩೧ನೇ ತಾರೀಖಿನಲ್ಲಿ ಸಭಾಪರ್ವೋಪನ್ಯಾಸವು ಪ್ರಾರಂಭಿಸಲ್ಪಟ್ಟಿತು. ಬನೇ ದಿನೆ ಯೆಲ್ಲಾಮತದ ಗಂಡುಸರೂ ಹೆಂಗುಸರೂ ವಿಶೇಷ ಭಕ್ತಿಯುಕ್ತರಾಗಿ ಕಥಾಶ್ರವಣಕ್ಕೆ ಬರುತಲಿರುವದಂ ನೋಡಿ ಸಂತೋಷಿಸಬೇಕಾಗಿದೆ.

ಈಚೆಗೆ ಯೆರಡು ವಾರಗಳ ಮೊದಲು ಹಗಲು ರಾತ್ರಿ ಯೆಡಬಿಡದೆ ಮೋಡವಾಡುತ ಮಧ್ಯೆ ಮಧ್ಯೆ ಕೆಲವು ವೇಳೆಯಲ್ಲಿ ಗಟ್ಟಿಯಾಗಿಯೂ ಕೆಲವು ವೇಳೆಯಲ್ಲಿ ಮೃದುವಾಗಿಯೂ ಮಳೆ ಬೀಳುತಿದೆ ಇದರಿಂದ ಕೆರೆ ಕುಂಟೆಗಳಿಗೆ ಸ್ವಲ್ಪ ನೀರು ಸಹ ಬಂದಿರುತಿದೆ ಮನೆಗಳ ಬಾವಿಗಳಿಗೆ ಮಾತ್ರ ಬೇಕಾದಷ್ಟು ನೀರುಬರಲಿಲ್ಲವು. ಈ ವರ್ಷದ ದೆಸೆಯಿಂದ ತುಮಕೂರು ಡಿಸ್ಟ್ರಿಕ್ಟಿಗೆ ಸೇರಿದ ಅನೇಕ ಗ್ರಾಮಗಳಲ್ಲಿ ರಾಗೀಪೈರು ಪೂರಾ ಕೆಟ್ಟುಹೋಗಿರುವಂತೆ ತಿಳಿಯಬರುತಿವೆ ಈ ಕಾರಣದಿಂದ ಈ ಪ್ರಾಂತ್ಯದಲ್ಲಿ ರಾಗಿಯ ಧಾರಣೆ ಗಾಡಿ ಒಂದಕ್ಕೆ ಮೂರುನಾಲ್ಕು ರೂಪಾಯಿಗಳು ಹೆಚ್ಚಿಸಲ್ಪಟ್ಟಿತು ಇತರಪದಾರ್ಥಗಳ ಧಾರಣೆಗಳುಪ್ರಾಯಶಃ ಒಂದೇನಿದವಾಗಿರುತಿವೆ.

ಈ ಸಂಸ್ಥಾನದ ಪೋಲೀಸ್ ದಲ ಪೆಯು ಸದ್ಯಾಂತದಲ್ಲಿಯೂ ವಿಶೇಷ ವೈಲಕ್ಷಣ್ಯವುಳ್ಳದ್ದಾಗಿರಬೇಕೆಂಬ ತಾತ್ಪರ್ಯವು ಗವರ್ನಮೆಂಟಿನವರಿಗುಂಟಾಗಿರುವಂತೆ ಕಾಣುತಿದೆ ಪೋಲೀಸ್ ಜವಾನರು ಸಕಲಕಲಾ ಪ್ರವೀಣರಾಗಿರಬೇಕೆಂಬ ಕೋರಿಕೆಯಿಂದಲೇ, ಅವರು ರಕ್ಷಕವೃತ್ತಿಗೆ ಬೇಕಾದ ತಾತ್ಪರ್ಯಗಳೊಡನೆ ಚಿತ್ರಬರೆಯುವದು, ವೈದ್ಯಮಾಡುವದು, ನಕ್ಷೆ ತೆಗೆಯುವದು, ಫೋಟೋ ತೆಗೆಯುವದು, ಮರಕೆಲಸ ಮಾಡುವದು, ಏವಮಾದಿ ವಿದ್ಯೆಗಳಲ್ಲಿ ಪ್ರವೀಣರೆನಿಸಿರಬೇಕಾದ್ದು ಅವಶ್ಯಕವೆಂಬದಾಗಿ ನಿರ್ಣಯಿಸಿರುತ್ತಾರೆ ಈಗ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರು ಮೊದಲು ಕದಗೆ ಒಬ್ಬ ಗ್ರಾಮ ಪೋಲೀಸ್ ಜವಾನನವರೆಗೆ ಅವರವರ ದರ್ಜೆಗೆ ತಕ್ಕಂತೆ ಧರಿಸಬೇಕಾದ ಉಡುಪುಗಳನ್ನು ವಿಂಗಡಿಸಿ ಅವರವರು ನಿಶ್ಚಯಮಾಡಿರುವಾಗ್ಯೆ ಸದರೀ ಉಡುಪನ್ನು ಹಾಕಿಕೊಂಡಿರತಕ್ಕದ್ದೆಂದು ಹಿಂದು ನಿಬಂಧನೆಮಾಡಿ ಮಹಾರಾಜರವರ ಮಂಜೂರಾತಿಯಂ ಬ್ರಿ ಇನ್ಸ್‌ಪೆಕ್ಟರ್ ಜನರಲ್‌ರವರು ಕಳುಹಿಸಿರುವಂತೆಯೂ, ಸದರೀ ಉಡುಪುಗಳ ನಮೂನೆಗಳು ಬಹಳ ಗಂಭೀರವಾಗಿರುವಂತೆಯೂ, ಇವಂ ಮಹಾರಾಜರವರು ಅನುಮೋದಿಸಿದರೆಂತಲೂ ಕೇಳಲಿಕ್ಕೆ ನಾವು ಬಹಳ ಸಂತೋಷಿಸುತ್ತೇವೆ. ಆದರೆ ನಮ್ಮ ಪುರರಕ್ಷಕರಾದ ಮತ್ತು ಅಸಹಾಯಶೂರರಾದ ಪೋಲೀಸಿನವರಸ್ಥಿತಿಯು ಹೆಚ್ಚುತಬರುವಂತೆಲ್ಲ ಏವಾಕಾಲದಲ್ಲಿ ಪಟ್ಟಣದೊಳು ನಡೆಯುವ ಖ ಆಸಿ ಕನ್ನ ಕಳವುಗಳ ಸಂಖ್ಯೆ ಅಧಿಕವಾಗಿ, ಅವುಗಳ ಪತ್ತೆಯು ಸುದ್ದಿಯೇ ಇಲ್ಲದೆ ಹೋಗುತಲಿವೆ. ಪೋಲೀಸ್ ಜಮೇದಾರ್ ದಫೇದಾರರು ಮೊದಲ್ಗೊಂಡು ಎಲ್ಲರು ವಿದ್ಯಾವಂತರೆನಿಸಿ ಗ್ರಾಜ್ಯುಯೇಟಗಳಾಗಿದ್ದರೆ ಉತ್ತಮವೆಂಬ ವಿಶೇಷ ನಿಬ ಯೇರ್ಪಟ್ಟದರಿಂದ ಮೊಕದ್ದಮೆಗಳ ಪತ್ತೆ ವಿಷಯದಲ್ಲಿ ಹಿಂದಿನವರಿಗೆ ಅನಾದರವೂ, ಹೊಸದಾಗಿ ಬರತಕ್ಕವರಿಗೆ ಅನುಭವರಾಹಿತ್ಯವೂ ಕಳ್ಳರಿಗೆ ನಿರ್ಭೀತಿಯೂ ನಷ್ಟಪಟ್ಟವರಿಗೆ ಪ್ರಬಲವಾದ ನೈರಾಶ್ಯವೂ ತಪ್ಪತಕ್ಕದ್ದಾಗಿಲ್ಲವು

ಮೊದಲು ನಿಶ್ಚಯಿಸಲ್ಪಟ್ಟದ್ದಂತೆ ಕಳೆದ ಜಾರ್ಜ್ ನೇ ತಾರೀಖಿನೊಳು ಮೇಲುಕೋಟೆಯಲ್ಲಿ ನಡೆದ ಸಭೆಯಲ್ಲಿ ಬರುವ ದಸರಾ ಪ್ರಜಾ ಪ್ರತಿನಿಧಿ ಸಭೆಗೆ ಸದರೀ ಸಭೆಯ ಪ್ರತಿನಿಧಿಯಾಗಿ. ಕಳೆದ ವರುಷ ಚುನಾಯಿಸಲ್ಪಟ್ಟಿದ್ದ, ಸಭಾ ಮೆಂಬರ್, ಶ್ರೀಮಾನ್ ಪಂಡಿತ ತಿರುವಾಯ್‌ಮೊಳಿ ತಿರುನಾರಣಯ್ಯಂಗಾರ್ಯರವರೇ ಈ ಸಲವೂ ಸಭೆಯವರಿಂದ, ಚುನಾಯಿಸಲ್ಪಟ್ಟಿರುತ್ತಾರೆ ಪ್ರಜಾ ಪ್ರತಿನಿಧಿ ಸಭೆಯಲ್ಲಿ (೧) ಗೋವಧೆಯ ನಿರೋಧ, (೨) ಸಂಸ್ಕೃತ ವಿದ್ಯಾಭ್ಯಾಸ ಕ್ರಮಗಳನ್ನು ತಿದ್ದುಪಾಟುಮಾಡುವುದು, (೩) ಕನ್ನಡ ಪಾಠಶಾಲಾ ಉಪಾಧ್ಯಾಯರನ್ನೂ ಮತ್ತೂ ಬಡವರಾದ ವಿದ್ಯಾರ್ಥಿಗಳನ್ನೂ ವೇತನ ಮತ್ತೂ ಪುಸ್ತಕ ಮುಂತಾದವುಗಳ ಮೂಲಕ ಪ್ರೋತ್ಸಾಹ ಪಡಿಸುವದು, (೪) ಮುಜರೈ ಬಾಬಿನಿಂದ ಮತ ಮತ್ತೂ ನೀತಿ ವಿಷಯಕವಾದ ಉಪನ್ಯಾಸ ಸಭೆಗಳನ್ನೇರ್ಪಡಿಸುವದು (೫) ದ್ಯೂತನಿರೋಧಕವಾದ ಆಕ್ಟನ್ನು ಈ ಸೀಮೆಯಲ್ಲಿ ಸರ್ವತ್ರ ಜಾರೀಯಲ್ಲಿ ತರಬೇಕೆಂಬದು ಮುಂತಾದ ವಿಷಯಗಳನ್ನು ಚರ್ಚಿಸತಕ್ಕದೆಂತಲೂ, ಮುಜರೈ

...ಬಿನಲ್ಲಿ ಕೆಲವು ಸಂಗತಿಗಳನ್ನು ಚರ್ಚಿಸಬೇಕೆಂಬ ವಿಷಯಗಳ ಕೆಲವು ಮೆಂಬರುಗಳ ಅಭಿಪ್ರಾಯಗಳನ್ನು ಮೊದಲು ಮೈ|| ರಾ|| ಮುಜರಾಯಿ ಸೂಪರಿಂಟೆಂಡೆಂಟರವರ ಅವಧಾನಕ್ಕೆ ತಂದು, ಅವರಿಂದ ಸದುತ್ತರ ಜೊತೆಗೆ ತರುವಾಯ ಆ ಅಂಶಗಳನ್ನು ಸಭೆಯ ಮುಂದೆ ಮಂಡಿಸಬಹುದೆಂದೂ ಪ್ರತಿನಿಧಿ ಸಭೆಗೆ ಕಳುಹಿಸಬಹುದೆಂದೆಲ್ಲಾ, ನಿಶ್ಚಯಿಸಲ್ಪಟ್ಟಂತೆ ಅಲ್ಲಿನ ಬಾತಮೀದಾರರ ಕಾಗದದಿಂದ ತಿಳಿಯಬರುತ್ತದೆ.

## CORRESPONDENCE

[ ಇದರಲ್ಲಿ ಪ್ರಕಟಿಸಲ್ಪಟ್ಟಿರುವ ಲೇಖನದಲ್ಲಿ ಕಂಡ ಅಭಿಪ್ರಾಯಗಳ ಗುಣದೋಷಗಳಿಗೆ ಈ ಪತ್ರಿಕಾ ಲೇಖಕರು ಜವಾಬ್ದಾರರಲ್ಲವು. ಎಡಿಟರ್ ಕ. ಪ್ರ ]

ಮೈ|| ರಾ|| ಕರ್ನಾಟಕ ಪ್ರಕಾಶಿಕಾ ಎಡಿಟರವರ ಸನ್ನಿಧಿಗೆ.

ಮೊಳಕಾಲೂರು, ತಾ|| ೩ ನೇ ಆಗಸ್ಟ್ ೧೮೯೪
(ಕಳೆದವಾರದ ಶೇಷ)

ಹರಿಶ್ಚಂದ್ರ ) - ಇವನು ಪ್ರಕೃತಿಯ ಅವಸ್ಥಾಭೇದಗಳಿಂದ ಯಾವುದೂ ಇಲ್ಲವು. ಅವರ ಆಹಾರ ಮೊದಲಾದ ಸಕಲ ಕಾರ್ಯಗಳು ನಡೆಯತಕ್ಕದ್ದರಿಂದ ಅವರವರ ಮನಸ್ಸಿನ ಕಾರ್ಯಗಳು, ಯಾವ ಕಾರ್ಯಗಳಾದರೂ ದೇಹಕ್ಕೆ ಹಿತವು, ಮನಸ್ಸಿಗೆ ಹೇಗಿರಬೇಕೆಂಬುದಕ್ಕೆ ಮುಂಚಿತವಾಗಿಯೇ ತಿಳಿಯಬೇಕು. ಆಹಾರ ನಿಯಮಗಳು ಮತ್ತು ಪದಾರ್ಥಗಳ ಗುಣಗಳನ್ನು ಸಹ ಮುಂದೆ ವಿವರಿಸುತ್ತೇನೆ. ಪ್ರಕೃತದಲ್ಲಿ ಪಿತ್ತ ಪ್ರಕೃತಿ ಮೊದಲಾದ ಪ್ರಕೃತಿಗಳನ್ನು ತಿಳಿಯುವದಕ್ಕೆ ವಿವರಿಸುತ್ತೇನೆ.

ಮನುಷ್ಯ ವಾತಪ್ರಕೃತಿಯವನೆಂತಲೂ, ಪಿತ್ತಪ್ರಕೃತಿಯವನೆಂತಲೂ, ಶ್ಲೇಷ್ಮಪ್ರಕೃತಿಯವನೆಂತಲೂ ಹೇಳುವದು ಯಾವಾಗ ಅವನಲ್ಲಿ ವಾತಪ್ರಕೃತಿ ಮೊದಲಾದ ಪ್ರಕೃತಿಗಳಿಗೆ ಇರುವ ಧರ್ಮಗಳು ಅಧಿಕವಾಗಿ ಕಾಣುವವೋ ಆ ವಿಧವಾದ ದೇಹಕ್ಕೆ ಆ ಪ್ರಕೃತಿಯೆಂದು ಹೇಳುವದು. ಇವುಗಳ ಲಕ್ಷಣಗಳು ವಿವರಿಸುತ್ತೇನೆ ಹೇಗೆಂದರೆ— ಮೈ ಬಿಸಿಯಾಗಿರುವದು, ಧೈರ್ಯವಿಲ್ಲದಿರುವದು, ಬೇಗ ಹಸಿವಾಗುವದು, ಬಾಯಾರಿಕೆ ಹೆಚ್ಚಾಗಿರುವದು, ಬೆವರು, ಮೈನ ದುರ್ಗಂಧ, ಕೂದಲು ನರೆಯುವದು, ಉದುರುವದು, ತಲೆ ಬೋಳಾಗುವದು, ಚರ್ಮವು ಹಳದಿಯಾಗಿರುವದು, ಅಲ್ಪವಾದ ಶಕ್ತಿ, ಶ್ಲೇಷ್ಮ, ಚಿಕ್ಕವಯಸ್ಸಿನಲ್ಲಿಯೇ ನರೆ, ಬಹಳ ಕೋಪ, ಜ್ವರ ಬರುವದು, ಮೈಮೇಲೆ ಮಚ್ಚೆ, ತುರಿ, ಕಜ್ಜಿ ಮೊದಲಾದವು, ನಸ್ತಿಕತೆ, ಕೋಪದಿಂದ ಮಾತನಾಡುವದು [illegible] ತನಗೆ ತೋರಿದ ಮಾತನ್ನೇ ಹೇಳುವದು, ಕಣ್ಣು ಮುಖ ಮೊದಲಾದವುಗಳು ಕೆಂಪಾಗಿರುವದು, ಸಂಗೀತ ಮೊದಲಾದ ವಿದ್ಯೆಗಳಲ್ಲಿ ಆಸಕ್ತಿ, ಮಧುರ, ಶೀತ ಪದಾರ್ಥಗಳಲ್ಲಿ ಇಷ್ಟ, ಹೂವಿನಲ್ಲಿ ಆಸಕ್ತಿ, ಮತ್ತು ಸ್ವಲ್ಪ ದುಃಖವಾದ ಮೈಯು, [illegible] ಬುದ್ಧಿಯುಳ್ಳವನಾಗಿ [illegible] ಸ್ವಲ್ಪ ಕಾಲದಲ್ಲಿಯೇ ಕಲಿಯುವದು [illegible] ಬುದ್ಧಿಶಾಲಿತ್ವ, ಸ್ತ್ರೀಯರಿಗೆ ಪ್ರಿಯನಾಗಿರುವದು, ಸ್ವಲ್ಪ ಮಕ್ಕಳಾಗುವದು, ಅತ್ಯಲ್ಪ ರೇತಸ್ಸು, ಅವನಿಗೆ ಕಣ್ಣು ರೋಗವಾಗಿರುವದು, ಮುಖದ ಮೇಲೆ ಎಣ್ಣೆ [illegible] ವಾಗಿರುವದು, ಕುತ್ತಿಗೆ ಬೆನ್ನು ಮೊದಲಾದ ಸ್ಥಳಗಳಲ್ಲಿ ಕೆಂಪಾಗಿ ಕಾಣುವದು ಮತ್ತು ಪಿತ್ತ ಪ್ರಕೃತಿಯನು ಸ್ವಪ್ನದಲ್ಲಿ ಮಿಂಚನ್ನೂ ಕಾಣುತ್ತಾನೆ, ಬೆಂಕಿಯನ್ನು ಹತ್ತುತ್ತಿರುವ ಆಕಾಶದಲ್ಲಿ ಹಾರುತ್ತಾನೆ, ಅವನ ಸ್ನೇಹವು ನಿಯಮವಾದದ್ದಲ್ಲ [illegible] ಳೂ ಕೂಡ ನಿಂತಿರುವದಿಲ್ಲ. [illegible] ಉರಿ, ದಪ್ಪ, [illegible] ಪಿತ್ತ ಪ್ರಕೃತಿಯ ಲಕ್ಷಣವಾಗಿರುವದು— ಪಿತ್ತ ವಿಕಾರವೂ ಉಷ್ಣವಾಗಿಯೂ ಇರುವ ದೇಹ, ಹಳದಿ ಬಣ್ಣ, ಕಾಲು, ಕಣ್ಣುಗಳು, ನಾಲಿಗೆ, ಬಿಸಿಯಾದ ಗಾಳಿ ಕೆಂಪಾದ ತೂಕಡಿಕೆ, ಅಲ್ಪರೋಮ, ಪುಷ್ಪವಾತ ಪದರುಗಳು, ಆಹಾರ, ಇವುಗಳ ಸಂಬಂಧದಲ್ಲಿ ಆಸೆ, ಸಹಜ ಬೆವರು, ಕೈ, ಅಂತರ್ಬಹಿರ್ಭಾಗದಲ್ಲಿ ಉಷ್ಣ, ಬ್ರಾಂತಿಯಲ್ಲಿ ಆಸಕ್ತಿ, ಪ್ರಮಾದ ಸಾಧಕವಾದ ಬುದ್ಧಿ ಬಲ, ಶತ್ರುಗಳಿಗೆ ಭಯಂಕರನಾದವನು, ಶೀಘ್ರದಲ್ಲಿ ವ್ಯಸನ, ಅಲ್ಪಬುದ್ಧಿ, ಕೋಪದಿಂದ ಸ್ತ್ರೀಯರುಗಳಿಗೆ ಪ್ರೀತಿಪಾತ್ರನಾಗದಿರುವದು, ಸೇ, ವ್ಯಾಸೋಕ್ತಿ [illegible] ಕೆ, ಎಂಬ ದೋಷಕ್ಕೆ ಸ್ಥಾನವಾಗಿರುವನು, ಮಧುರವಾಗಿ, ಬಗೆಯಾಗಿ, ಕಹಿಯಾಗಿ, ತಣ್ಣಗೆ ಇರುವ ಆಹಾರದಲ್ಲಿ ಇಚ್ಛೆಯುಳ್ಳವನಾಗಿ, ಬಿಸಿಲಿನಲ್ಲಿ ದ್ವೇಷವು ಮೈಯಲ್ಲಿ ಬೆವರು, ದುರ್ಗಂಧ, ಅಧಿಕವಾದ ಮೂತ್ರ, ಕೋಪ, ಜಲಪಾನ, ಆಹಾರ, ಪರೋತ್ಕರ್ಷ, ಸಹಿಷ್ಣುತ್ವ, ಇವುಗಳು ಅಲ್ಲೋಣವು, ಆಲೋಚನಾಪರತ್ವ, ಸಂಬಂಧಗಳಲ್ಲಿ ತಳ್ಳಿಹಾಕುವ ಮನಸ್ಸು, ಇವುಗಳು ಪಿತ್ತಪ್ರಕೃತಿಯ ಲಕ್ಷಣ. ಪಿತ್ತಪ್ರಕೃತಿಯುಳ್ಳವನು ಸ್ವಪ್ನದಲ್ಲಿ ಕರ್ಣಿಕಾರವೃಕ್ಷ, ಮುತ್ತುಗದ ಮರ, ಕಾಡುಗಿಚ್ಚು, ಉಲ್ಕಾಪಾತ, ಸೂರ್ಯ, ಅಗ್ನಿ, ಇವುಗಳಂ ನೋಡುವನು. ಅವನ ಕಣ್ಣುಗಳು ಚಿಕ್ಕವುಗಳಾಗಿ ಜೊಂಪಾಗಿ, ಸಣ್ಣವಾಗಿ, ಅಲ್ಪವಾಗಿರುವ ರೆಪ್ಪೆಗಳುಳ್ಳವುಗಳಾಗಿ, ಶೀತೋಪಚಾರಾಪೇಕ್ಷೆಯುಳ್ಳವಾಗಿ, ಬಿಸಿಲು, ಕೋಪ, ಮದ್ಯಪಾನ, ಇವುಗಳಲ್ಲಿ ಉಂಟಾಗತಕ್ಕ ಪಿತ್ತಪ್ರಕೃತಿಯ ಲಕ್ಷಣವು

## THE MYSORE GAZETTE.
ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜಾ ಸಾಹೇಬ್ ಬಹದೂರವರ ಸರ್ಕಾರದಿಂದ ಕೊಡಲ್ಪಟ್ಟ ಅಪ್ಪಣೆಯ ಪ್ರಕಾರ

### ಲೆಜಿಸ್ಲೇಷನ್ ಇಲಾಖಾ.

ಶ್ರೀಮನ್ ಮಹಾರಾಜಾ ಸರ್ಕಾರದವರ ಪರ್ಯಾಲೋಚನೆಯಲ್ಲಿರತಕ್ಕ ಇದರಡಿ ಕಂಡ ಮುಸವಿದಾ ರೆಗ್ಯುಲೇಷನ್ ಅದರ ಕಾರಣೋದ್ದೇಶಗಳೊಡನೆ ಸಕಲ ಜನಗಳ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಕಟಿಸಲ್ಪಟ್ಟಿರುತ್ತೆ.

೧೮೯೪ನೇ ಇಸವಿಯ ೧ ನೇ ನಂಬರ್ ಮುಸವಿದಾ ರೆಗ್ಯುಲೇಷನ್.

ಮೈಸೂರ್ ಸೀಮೆಯಲ್ಲಿ ಬಾಲ್ಯವಿವಾಹಗಳನ್ನು ನಿರೋಧಿಸುವ ಬಗ್ಗೆ ಏರ್ಪಟ್ಟ ರೆಗ್ಯುಲೇಷನ್

ಪೀಠಿಕೆ. ಮೈಸೂರ್ ಸೀಮೆಯಲ್ಲಿ ಬಾಲ್ಯ ವಿವಾಹಗಳನ್ನು ನಿರೋಧಿಸತಕ್ಕದ್ದು ಯುಕ್ತವೆಂದು ಕಂಡುಬಂದದರಿಂದ ಮಹಾಸ್ವಾಮಿಯವರಾದ ಶ್ರೀಮನ್ ಮಹಾರಾಜ ಜಂ ಬಹದೂರವರು ಇದರಡಿ ಕಂಡಂತೆ ನಿಬಂಧಿಸಿರುತ್ತಾರೇನೆಂದರೆ:—

ಚಿಕ್ಕ ಹೆಸರು. ೧ (೧) ಈ ರೆಗ್ಯುಲೇಷನ್ ೧೮೯೪ ನೇ ಇಸವಿಯ ೧ ಮೈಸೂರ್ ಇನ್‌ಫೆಂಟ್ ಮ್ಯಾರಿಯೇಜಸ್ ಪ್ರಿವೆನ್ಷನ್ ರೆಗ್ಯುಲೇಷನ್, (The Mysore Infant Marriages Prevention Regulation, 1893) ಯಾನೆ ಮೈಸೂರ್ ಸೀಮೆಯ ಬಾಲ್ಯವಿವಾಹ ನಿರೋಧಕ ನಿಬಂಧನ," ಎಂದು ಕರೆಯಲ್ಪಡಬಹುದು.

ಸ್ಥಳ ವ್ಯಾಪ್ತಿ. (೨) ಇದು ಮೈಸೂರ್ ದೇಶದಲ್ಲಿ ಸರ್ವತ್ರ ವ್ಯಾಪಿಸುತ್ತದೆ. ಮತ್ತು

ಪ್ರಾರಂಭ. ಇದು ಸರಕಾರಿ ಗೆಜೆಟಿನಲ್ಲಿ ಪ್ರಕಟಿಸಲ್ಪಟ್ಟ ತಾರೀಖು ಮೊದಲ್ಗೊಂಡು ಆರು ತಿಂಗಳು ಪ್ರತ್ಯೈಸಿದ ನಂತರ ಜಾರಿಯಲ್ಲಿ ಬರತಕ್ಕದ್ದು.—

ಅರ್ಥ ವಿವರಣೆಯ ಕಲಂ. ೨. ಈ ರೆಗ್ಯುಲೇಷನಿನ ಉದ್ದೇಶಗಳ ಬಗ್ಗೆ "ಒಬ್ಬ ಚಿಕ್ಕ ಹುಡುಗಿ ಯಾನೆ ಬಾಲೆ" ಅಂದರೆ ಎಂಟು ವರುಷಗಳ ವಯಸ್ಸು ಪೂರೈಸದಿರತಕ್ಕ ಒಬ್ಬ ಹುಡುಗಿಯೆಂತಲೂ, "ಒಬ್ಬ ಚಿಕ್ಕ ಹುಡುಗ ಯಾನೆ ಬಾಲಕ," ಅಂದರೆ ಹದಿನಾಲ್ಕು ವರುಷಗಳ ವಯಸ್ಸು ಪೂರೈಸದಿರತಕ್ಕ ಒಬ್ಬ ಬಾಲಕನೆಂತಲೂ ಅರ್ಥ ಮಾಡಿಕೊಳ್ಳತಕ್ಕದ್ದು.

ಬಾಲ್ಯವಿವಾಹ ಮಾಡುವವರೇ ಮೊದಲಾದವರಿಗೆ ದಂಡನೆ. ೩. ಯಾವ ಮನುಷ್ಯನಾಗಲಿ ಒಬ್ಬ ಚಿಕ್ಕ ಹುಡುಗಿಗೆ ಯಾ ಚಿಕ್ಕ ಹುಡುಗನಿಗೆ ವಿವಾಹ ಮಾಡಿಸುತ್ತಾನೆಯೋ ಮತ್ತು ಯಾವ ಮನುಷ್ಯನು ಮುಖ್ಯ ಪ್ರವರ್ತಕನಾಗಿ ತಾನು ಅಂತಾ ವಿವಾಹಕ್ಕೆ ಇಂಡಿಯನ್ ಪೀನಲ್ ಕೋಡಿನ ಅರ್ಥರೀತ್ಯಾ ಸಹಕರಿಸಿ ಸಹಾಯ ಮಾಡುತ್ತಾನೆಯೋ ಮತ್ತು ಯಾವ ಮನುಷ್ಯನಾಗಲಿ ಹದಿನೆಂಟು ವರುಷಗಳ ವಯಸ್ಸಿನ ಮೇಲೆ ಒಬ್ಬ ಚಿಕ್ಕ ಹುಡುಗಿಯನ್ನು ವಿವಾಹ ಮಾಡಿಕೊಳ್ಳುತ್ತಾನೆಯೋ ಅಂತಾ ಮನುಷ್ಯನು, ಆರು ತಿಂಗಳ ವರಿಗೆ ವ್ಯಾಪಿಸಬಹುದಾದ ಒಂದು ಮಿಯಾದಿಯ ತನಕ ಸಾಧಾರಣ ಕೈದ್ ಮೂಲಕವಾಗಲಿ ಅಥವಾ ಜುರ್ಮಾನೆ ಮೂಲಕವಾಗಲಿ ಯಾ ಈ ಎರಡರ ಮೂಲಕವಾಗಲಿ ದಂಡಿಸಲ್ಪಡತಕ್ಕದ್ದು.

ಐವತ್ತು ವರುಷಗಳಿಗಿಂತ ಮೇಲ್ಪಟ್ಟ ವಯಸ್ಸಾದವನು ೧೪ ವರುಷಗಳ ವಯಸ್ಸಿಗೆ ಕಡಮೆಯಾದ ಹುಡುಗಿಯನ್ನು ವಿವಾಹ ಮಾಡಿಕೊಂಡರೆ ದಂಡನೆ. ೪. ಐವತ್ತು ವರುಷಗಳಿಗೆ ಮೇಲ್ಪಟ್ಟ ವಯಸ್ಸುಳ್ಳ ಯಾವ ಮನುಷ್ಯನಾಗಲಿ ೧೪ ವರುಷಗಳ ವಯಸ್ಸು ಪೂರೈಸದಿರತಕ್ಕ ಒಬ್ಬ ಹುಡುಗಿಯನ್ನು ವಿವಾಹ ಮಾಡಿಕೊಂಡರೆ ಅಂತವನು ಎರಡು ವರುಷಗಳ ವರಿಗೆ ವ್ಯಾಪಿಸಬಹುದಾದ ಒಂದು ಮಿಯಾದಿಯ ತನಕ ಯಾವದಾದರೊಂದು ತರದ ಕೈದ್ ಮೂಲಕವಾಗಲಿ ಅಥವಾ ಜುರ್ಮಾನೆಯ ಮೂಲಕವಾಗಲಿ ಯಾ ಈ ಎರಡರ ಮೂಲಕವಾಗಲಿ ದಂಡಿಸಲ್ಪಡತಕ್ಕದ್ದು.

ನಾಲ್ಕನೇ ಪ್ರಕರಣದಲ್ಲಿ ತಿಳಿಸಲ್ಪಟ್ಟ ತಕ್ಸೀರಿಗೆ ಸಹಾಯ ಯಾ ಮದ್ದತ್ ಮಾಡತಕ್ಕವರಿಗೆ ದಂಡನೆ. ೫. ಹದಿನಾಲ್ಕು ವರುಷಗಳ ವಯಸ್ಸು ಪೂರೈಸದಂತಾ ಒಬ್ಬ ಹುಡುಗಿಗೂ ಐವತ್ತು ವರುಷಗಳ ವಯಸ್ಸಾದ ಒಬ್ಬ ಪುರುಷನಿಗೂ ಯಾವನು ವಿವಾಹವನ್ನು ಮಾಡಿಸುತ್ತಾನೆಯೋ ಮತ್ತು ಯಾವನು ಮುಖ್ಯ ಪ್ರವರ್ತಕನಾಗಿ ಅಂತಾ ವಿವಾಹಕ್ಕೆ ಇಂಡಿಯನ್ ಪೀನಲ್ ಕೋಡಿನ ಅರ್ಥರೀತ್ಯಾ ಸಹಾಯ ಮತ್ತು ಮದ್ದತ್ ಮಾಡುತ್ತಾನೆಯೋ ಅಂತಾ ಮನುಷ್ಯನು ಆರು ತಿಂಗಳ ವರಿಗೆ ವ್ಯಾಪಿಸಬಹುದಾದ ಒಂದು ಮಿಯಾದಿಯ ತನಕ ಸಾಧಾರಣ ಕೈದ್ ಮೂಲಕವಾಗಲಿ ಅಥವಾ ಜುರ್ಮಾನೆಯ ಮೂಲಕವಾಗಲಿ ಯಾ ಈ ಎರಡರ ಮೂಲಕವಾಗಲಿ ದಂಡಿಸಲ್ಪಡತಕ್ಕದ್ದು.

ರೆಗ್ಯುಲೇಷನಿನಲ್ಲಿ ಕಂಡ ತಕ್ಸೀರುಗಳು ಯಾರಿಂದ ದರ್ಯಾಫ್ತು ಮಾಡಲ್ಪಡತಕ್ಕದ್ದು. ೬. ಈ ರೆಗ್ಯುಲೇಷನ್ ಅನುಸರಿಸಿ ದಂಡಿಸಲ್ಪಡತಕ್ಕಂತಾ ಯಾವದೊಂದು ಕೃತ್ಯವಾಗಲಿ, ಒಬ್ಬ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗಿಂತ ಕೆಳಪಟ್ಟ ಯಾವ ಕೋರ್ಟಿನವರಿಂದಲೂ ದರ್ಯಾಫ್ತು ಮಾಡಲ್ಪಡತಕ್ಕದ್ದಲ್ಲ.

ರೆಗ್ಯುಲೇಷನಿನಲ್ಲಿ ತಿಳಿಸಲ್ಪಟ್ಟಂತೆ ದಂಡಿಸಲ್ಪಟ್ಟ ಸ್ವಭಾವವಾಗಿ ನಡೆದ ವಿವಾಹಗಳು ರದ್ದಾಗಲಾರವು. ೭. ಈ ರೆಗ್ಯುಲೇಷನಿನಲ್ಲಿ ವಿಧಿಸಲ್ಪಟ್ಟಿರುವ ದಂಡನೆಗಳ ನಿಮಿತ್ತದಿಂದಲೇ ನಿಜವಾಗಿ ನೆರವೇರಿದಂತಾ ಯಾವ ವಿವಾಹವಾಗಲಿ ರದ್ದಾಗಲಾರದು.

### ಈ ರೆಗ್ಯುಲೇಷನಿನ ಕಾರಣೋದ್ದೇಶಗಳು.

ಸಾಮಾನ್ಯವಾಗಿ ಹಿಂದೂಗಳಲ್ಲಿಯೂ ಅತ್ಯಂತ ಬ್ರಾಹ್ಮಣ, ವೈಶ್ಯಜಾತಿಯವರಲ್ಲಿಯೂ, ಜರಗತಕ್ಕ ಬಾಲ್ಯವಿವಾಹಗಳಂ ಕುರಿತ ಒಂದು ಮುಖ್ಯ ವಿಷಯವು ಈಗ್ಯೆ ಕೆಲವು ಕಾಲದವರೆಗೆ ಗವರ್ನಮೆಂಟಿನವರ ಅವಧಾನವನ್ನಾಕರ್ಷಿಸಿರುತ್ತದೆ.

೨. ವಧುವು ಐದು ವರುಷಗಳು ಮತ್ತು ಅದಕ್ಕಿಂತ ಕಡಮೆ ವಯಸ್ಸುಳ್ಳ ಮಗುವಾಗಿಯೂ, ವರನು ಅವಳಿಗಿಂತ ಹಿಂದೆರಡು ವರುಷಗಳ ವಯಸ್ಸು ಸಹ ಮೀರದಿರುವಂತಾ ಬಾಲಕನಾಗಿಯೂ ಇರುವ ಪ್ರಮೇಯಗಳು ಅಸಾಧಾರಣಗಳಾಗಿಲ್ಲವು. ಮಾತಾಪಿತೃಗಳ ಅಥವಾ ತದ್ರಕ್ಷಕರಾದ ಇತರರ ಅಜಾಗರೂಕತ್ವದಿಂದಲಾಗಲಿ ಅಥವಾ ಅಯೋಗ್ಯಗಳಾದ ಅವರ ಇತರ ಉದ್ದೇಶಗಳಿಂದಲಾಗಲಿ ಅತಿ ಬಾಲ್ಯದಶೆಯಲ್ಲಿರತಕ್ಕ ಹುಡುಗಿಯರನ್ನು ವೃದ್ಧರಿಗಿತ್ತು ವಿವಾಹ ನಡೆಸುವ ಸಂಬಂಧಗಳು ನಡೆಗೊಂಡಿರುತ್ತವೆ. ಅಂತಾ ವಿವಾಹಗಳಿಂದ ವಿಶೇಷ ಅಪಾಯಕರಗಳಾದ ಶೋಚನೀಯ ದುಷ್ಫಲಗಳು ಪ್ರಾಪ್ತವಾಗದೆ ಹೋಗುವದಿಲ್ಲವು. ಹೇಗೂ ವಿವಾಹ ವಿಷಯದಲ್ಲಿ ದೃಢತರವಾದ ಮತ್ತು ಅಸ್ವಾಧೀನವಾದ ವಿನೋದವು; ಸಾಮಾಜಿಕಗಳಂ ಸ್ವತಂತ್ರಾಭ್ಯಾಸದಿಂದ ಬಹಿಷ್ಕೃತರಾಗಿ ಮಾಡಿ, ಅವರನ್ನು ಏಕಾಂತಿಕವಾಗಿ ಪ್ರತ್ಯೇಕಿಸುವದಕ್ಕಿಂತ ಕಡಮೆಯಲ್ಲದ ಪ್ರತಿಕೂಲವನ್ನುಂಟುಮಾಡುವಂತಾ ದೇಶದಲ್ಲಿ ಅಪುರಣಾಂತವಾದ ವೈಧವ್ಯಕ್ಕೆ ಅಭಿವರ್ಧಕಗಳಾದ ಅವಕಾಶಗಳುಂಟಾಗಿರುವದು, ನಿಜವಾಗಿ ಬಹಳ ವಿಷಾದಿಸತಕ್ಕದ್ದಾಗಿರುತ್ತದೆ ಮತ್ತು ಏತದ್ವಿಷಯಕವಾದ ಶಾರೀರಕ ಬಲವಿಚಾರವು ಕೂಡ ಸನಾತನವಾದ ಅನುತ್ಸಾಹವನ್ನುಂಟುಮಾಡತಕ್ಕದ್ದಾಗಿರುತ್ತದೆ. ಬಾಲಕನಾದ ಪತಿಯೂ ಬಾಲೆಯಾದ ಭಾರ್ಯೆಯೂ, ನಿಷೇಕ ಪ್ರಸ್ತುತ ಕಾಲದಲ್ಲಿ ಇನ್ನೂ ಸಂಪೂರ್ಣಶೈಶವಾವಸ್ಥೆಯಲ್ಲಿರುತ್ತಾರಾಗ ನಡರೀ ದಂಪತಿಗಳೂ ತದ್ವಂಶದರೂ ಕ್ರಮಶಃ ಶರೀರ ಕಾರ್ಶ್ಯವಂ ಹೊಂದುವರೆಂದು ನಿರೀಕ್ಷಿಸುವದೇನೂ ಅಪ್ರಯೋಜಕವಲ್ಲವು. ಈ ಭಾಗದಲ್ಲಿ ಪರಿಷ್ಕರಣವು ಕೇವಲ ಅಪೇಕ್ಷಿತವೆಂಬದಾಗಿ ಗವರ್ನಮೆಂಟಿನವರು ತಾತ್ಪರ್ಯಗೊಂಡಿದ್ದರಲ್ಲದೆ ಏತದ್ವಿಧನವಾದ ಸಮಯಾಚಾರ ವಿಷಯಗಳಲ್ಲಿ ನ್ಯಾಯವಿಧಾಯಕವಾದ ಏರ್ಪಾಟನ್ನು ಸಾಮಾನ್ಯವಾಗಿ ಪ್ರಜೆಗಳು ಪ್ರೋತ್ಸಾಹಿಸಿ ತದನುಗುಣವಾದ ಮನೋಭಾವವು ವ್ಯಕ್ತಪಡಿಸುವ ತನಕ ಅಂತಾ ಏರ್ಪಾಡು ಅನಾವಶ್ಯಕವೆಂದು ಸಹ ಅಭಿಪ್ರಾಯಪಟ್ಟಿದ್ದರು. ಈಗ ಅಂತಾ ಪ್ರಜಾಭಿಪ್ರಾಯವು ವ್ಯಕ್ತವಾದ ಬಗ್ಗೆ ಸೂಚನೆ ಹಿಸಬೇಕಾಗಿರುತ್ತದೆ. ಈ ನಿಬಂಧನೆಯನ್ನು ಕೂಡಲೇ ಮಾಡುವದಕ್ಕುಂಟಾದ ಸಂದರ್ಭಗಳು ಕೆಳಗಿನಲ್ಲಿ ಸಂಗ್ರಹವಾಗಿ ತಿಳಿಸಲ್ಪಡುತ್ತವೆ.

೩. ೧೮೯೧ ನೇ ಇಸವಿಯ ದಸರಾ ದರ್ಬಾರ್ ಕಾಲದಲ್ಲಿ ಪ್ರಜಾ ಪ್ರತಿನಿಧಿಗಳು ಪ್ರಕೃತ ವಿಷಯವನ್ನು ಗವರ್ನಮೆಂಟಿನವರ ಪರ್ಯಾಲೋಚನೆಗೆ ತಂದು ಅದರಲ್ಲಿರತಕ್ಕ ಸಾಧಕ ಬಾಧಕಗಳನ್ನು ಬಹುಮುಖವಾಗಿ ಅತ್ಯಾದರದೊಡನೆ ವಿಚಾರಮಾಡಿ ನ್ಯಾಯವಿಧಾನವನ್ನಪೇಕ್ಷಿಸಿದರು. ಪ್ರಜಾಪ್ರತಿನಿಧಿಗಳ ಈ ವಿಧವಾದ ವಿಜ್ಞಾಪನೆಯು ಗವರ್ನಮೆಂಟಿನವರನ್ನು ಪ್ರೋತ್ಸಾಹಿಸಿದ್ದಲ್ಲದೆ ಹಿಂದಿನಿಂದ ಯೇನಾದರೂ ಇರುವ ಪಕ್ಷಕ್ಕೆ ಬಾಲ್ಯವಿವಾಹ ವಿಷಯದೊಳು ಹಿಂದೂ ಧರ್ಮಶಾಸ್ತ್ರಗಳು ಯಾವ್ವರಮಟ್ಟಿಗೆ ಪ್ರೋತ್ಸಾಹಕರಗಳಾಗಿಯೂ ನಿರೋಧಕಗಳಾಗಿಯೂ ಇವೆಯೋ ಅದನ್ನು ನಿಷ್ಕರ್ಷಿಸಿ ತಿಳಿದುಕೊಳ್ಳಬೇಕಾದ್ದು ಅಪೇಕ್ಷಿತವೆಂದು ಭಾವಿಸಲಾಯಿತು. ಜ್ಞಾನಮಾರ್ಗ ಬೋಧಕರಾದ ಶ್ರೀ ಶೃಂಗೇರಿ ಸ್ವಾಮಿಗಳವರು ಮೈಸೂರಿಗೆ ದಯಮಾಡಿದ್ದ ಸಂದರ್ಭದಲ್ಲಿ ಅವರ ಅಧ್ಯಕ್ಷತೆಯೊಳು ಒಂದು ವಿದ್ವತ್ಸಭೆಯು ಜರುಗಿ ಏತದ್ವಿಷಯಕವಾದ ಶಾಸ್ತ್ರಾಧಾರಗಳು ಸಂಪೂರ್ಣವಾಗಿ ಶೋಧಿಸಿ ವಿಚಾರ ಮಾಡಲ್ಪಟ್ಟವು. ಇದಲ್ಲದೆ ಈ ವಿಷಯದಲ್ಲಿ ಇತರ ಮಠಾಧಿಪತಿಗಳ ಅಭಿಪ್ರಾಯಗಳು ಸಹ ಅಪೇಕ್ಷಿಸಲಾಯಿತು. ಇಂತಾ ಪರಿಶೋಧನೆಯ ಫಲರೂಪವಾಗಿ, ದಿವಾನರವರು ೧೮೯೨ ನೇ ಇಸವಿಯ ಪ್ರಜಾಪ್ರತಿನಿಧಿ ಸಭೆಯ ದಸರಾ ಅಧಿವೇಶನದಲ್ಲಿ ಇದರಡಿ ಕಂಡಂತೆ ತಿಳಿಸಿರುತ್ತಾರೇನೆಂದರೆ.—

"ಬಾಲ್ಯವಿವಾಹವನ್ನೂ ಚಿಕ್ಕ ವಯಸ್ಸಿನ ಹೆಣ್ಣು ಮಕ್ಕಳನ್ನು ವೃದ್ಧರುಗಳಿಗೆ ಕೊಟ್ಟು ಲಗ್ನ ಮಾಡುವ ಸಂಪ್ರದಾಯವನ್ನೂ ಕೂಡ ನಿರೋಧ ಮಾಡುವದಕ್ಕೋಸ್ಕರ ಸರಕಾರದವರು ಒಂದು ಕಾನೂನ್ ಏರ್ಪಡಿಸುವ ವಿಷಯವು ಹೋದ ವರ್ಷದ ಸಭೆಯಲ್ಲಿ ಚರ್ಚೆಯಾಗಿತ್ತಷ್ಟೆ. ಆಗ ನಾವು ಮಾಡಿದ ವಾಗ್ದಾನವನ್ನು ನೆರವೇರಿಸುವದಕ್ಕಾಗಿ ಮುಖ್ಯವಾದ ಮಠಾಧಿಪತಿಗಳ ಅಭಿಪ್ರಾಯಗಳನ್ನು ವಿಚಾರ ಮಾಡಿದ್ದರಲ್ಲಿ ಮೇಲ್ಕಂಡ ಎರಡು ಪದ್ಧತಿಗಳೂ ಕೆಲವು ಮಟ್ಟಿಗೆ ಶಾಸ್ತ್ರವಿರುದ್ಧವಾಗಿವೆಯೆಂದು ಅವರೆಲ್ಲರೂ ಅಭಿಪ್ರಾಯಪಟ್ಟಿದ್ದಾರೆಂದು ಹೇಳುವದಕ್ಕೆ ನೀವು ಸಂತೋಷಪಡುವಿರಿ. ಮಠಾಧಿಪತಿಗಳ ಅಭಿಪ್ರಾಯವನ್ನೂ, ಸಾಧ್ಯವಾದ ಮಟ್ಟಿಗೆ ನಾವು ವಿಚಾರಿಸಿ ತಿಳಿದುಕೊಂಡು ಪ್ರಜೆಗಳ ಮನೋಭಾವವನ್ನೂ ಆಲೋಚಿಸಲಾಗಿ ಪ್ರಕೃತಕ್ಕೆ ೮ ವರುಷದೊಳಗಿನ ಬಾಲಕಿಯರ ವಿವಾಹವನ್ನೂ ಮತ್ತು ೫೦ ವರುಷಗಳ ವಯಸ್ಸಿಗೆ ಮೇಲ್ಪಟ್ಟ ಪುರುಷನಿಗೆ ೧೪ ವರುಷಗಳ ವಯಸ್ಸಿಗೆ ಕಮ್ಮಿಯಾದ ಬಾಲಕಿಯನ್ನು ಕೊಟ್ಟು ವಿವಾಹ ಮಾಡುವದನ್ನೂ ನಿಷೇಧಪಡಿಸುವದಕ್ಕಿಂತ ಹೆಚ್ಚಾದ ಪ್ರವರ್ತನೆಗೆ ಪ್ರಯತ್ನಪಡುವದು ಅನುಚಿತವಾಗಿ ತೋರುತ್ತದೆ. ಸ್ತ್ರೀಯರಿಗೆ ೧೬ ವರುಷಗಳ ವಯಸ್ಸು ವಿವೇಕಜ್ಞಾನಾವಿರ್ಭಾವ ಕಾಲವೆಂದು ಇಟ್ಟುಕೊಳ್ಳಬಹುದಾದ್ದರಿಂದ ಆ ವಯಸ್ಸಿನಲ್ಲಿರುವವರು ಸ್ವಂತ ವಿವೇಕವನ್ನು ಸರಿಯಾಗಿ ಉಪಯೋಗಿಸುವದರಲ್ಲಿ ಭರವಸೆಯನ್ನಿಡಬಹುದು. ಮೇಲೆ ಹೇಳಿದಂತೆ ನಿರೋಧನೀಯವಾದ ವಿವಾಹಗಳು ಸರ್ಕಾರಿ ಕಾನೂನ್ ಪ್ರಕಾರ ಸುತರಾಂ ಅಸಿದ್ಧಗಳೆಂದು ಮಾಡೋಣವೆಂದರೆ ಸಂಘಟಿಸಿಲ್ಲದೆ ಸಂತಾನ ಮತ್ತು ದಾಯಭಾಗ ಪ್ರಕರಣಗಳಲ್ಲಿ ಅಪಾರಗಳಾದ ತೊಂದರೆಗಳಿಗೆ ಅವಕಾಶ ಉಂಟಾಗುವದು, ಅಂತಾ ವಿವಾಹಗಳನ್ನು ನಡೆಸಿದ್ದಕ್ಕೆ ಯಾರು ಜವಾಬ್ದಾರರೋ ಅವರನ್ನು ಕ್ರಿಮಿನಲ್ ಶಿಕ್ಷೆಗೆ ಗುರಿಪಡಿಸುವದಕ್ಕಿಂತ ಹೆಚ್ಚಾಗಿ ಮತ್ತೇನು ಮಾಡುವದೂ ಸಾಧ್ಯವಿಲ್ಲವೆಂದು ತೋರುತ್ತದೆ. ಈ ರೀತಿಯಾದ ಕಾನೂನಿನಿಂದ ನಿಷೇಧಿಸಲ್ಪಡುವ ವಿವಾಹಗಳ ಸಂಖ್ಯೆಯು ಸ್ವಲ್ಪವಾದ್ದರಿಂದ ಅಂತಾ ಕಾನೂನ್ ಜಾರಿಗೆ ಬರಬೇಕಾದ ಸಂಭವವು ಮಟ್ಟಿಗೆಯೇ ಇರುವದು. ಈ

ವಿಷಯದಲ್ಲಿ ಬದಲಾವಣೆಯನ್ನು ಆತುರದಿಂದನೆ ಅಪೇಕ್ಷಿಸತಕ್ಕವರು ಇಂತಾ ವಿಹಿತವಾದ ಏರ್ಪಾಡಿನಿಂದ ಸಂತುಷ್ಟರಾಗಲಾರರು. ಆದರೆ ಮೇಲೆ ಸೂಚಿಸಿದ ವಯಃಪರಿಮಿತಿಗಳು ಮತಾಧಿಕಾರಿಗಳ ಮತ್ತು ಪ್ರಜೆಗಳ ಅಭಿಪ್ರಾಯಾನುಸಾರವಾಗಿರುವದಲ್ಲದೆ ಇವನ್ನನುಸರಿಸುವದು ಉತ್ತರೋತ್ತರ ಬದಲಾವಣೆಗೆ ಅಂಕುರರೂಪವಾಗಿರುತ್ತದೆ. ಈ ಭಾಗದಲ್ಲಿ ಹೋದ ವರ್ಷದಲ್ಲಿ ನೀವು ಮಾಡಿದ ಸೂಚನೆಯ ಮೇಲೆ ನಡೆಸಿದ ಕ್ರಮವನ್ನೂ ಮತ್ತು ಸರ್ಕಾರದವರ ಈಗಿನ ತಾತ್ಪರ್ಯವೇನಾದ್ದಾಗಿರುತ್ತದೆಂಬದನ್ನೂ ನಿಮಗೆ ತಿಳಿಸಿದೇನೆ. ಈಗ ನೀವು ಈ ವಿಷಯವನ್ನು ಕುರಿತು ಎಲ್ಲಾ ಭಾಗದಲ್ಲಿಯೂ ಜಾಗರೂಕತೆಯಿಂದ ಪರ್ಯಾಲೋಚಿಸಿ ಮುಂದೆ ಏನು ಮಾಡಬೇಕೆಂಬದಾಗಿ ಅಪೇಕ್ಷಿಸುತ್ತೀರೋ ಅದನ್ನು ತಿಳಿಸಬೇಕಾಗಿದೆ. ನೀತಿ ಮತ್ತು ಮತಾಚಾರ ಸಂಬಂಧವಾದ ವಿಷಯಗಳಲ್ಲಿದು ಕೇವಲ ಪ್ರಾಮುಖ್ಯವಾದ್ದರಿಂದ ಈ ಭಾಗದಲ್ಲಿ ಬಹಳ ಎಚ್ಚರಿಕೆಯಿಂದ ಪ್ರವರ್ತಿಸತಕ್ಕದ್ದುಚಿತವಾಗಿದೆ ಎಂಬದನ್ನು ನಿಮಗೆ ತಿಳಿಸತಕ್ಕ ಆವಶ್ಯಕವಿರುವದಿಲ್ಲವು "

೮. ಈ ವಿಷಯಕ್ಕೆ ಆಧಾರಗಳಾಗಿರತಕ್ಕ ಶಾಸ್ತ್ರಾಧಾರಗಳನ್ನಿಲ್ಲಿ ಉದಹರಿಸುವದು ಅಸ್ಥಾನವೆನಿಸಿಕೊಳ್ಳಲಾರದು. ಋತುವಾಗುವದಕ್ಕೆ ಪೂರ್ವ ಕನ್ಯೆಯರಿಗೆ ವಿವಾಹ ಮಾಡಬೇಕಾದ್ದು ಅವಶ್ಯಕರ್ತವ್ಯವೆಂದು ವಿಧಿಸಿರುವಂತಾ ಶಾಸ್ತ್ರಗಳು, ಉತ್ತಮವಾದ ಮತ್ತು ಅಧಮವಾದ ವಿವಾಹಾರ್ಹಕಾಲವು ೮—೯—೧೦ ನೆಯ ವರುಷಗಳೆಂದು ನಿರ್ಧರಿಸುತ್ತಿವೆ ಹ್ಯಾಗಂದರೆ —

ಅಷ್ಟವರ್ಷಾಭವೇದ್ಗೌರೀನವವರ್ಷಾತುರೋಹಿಣೀ|
ದಶವರ್ಷಾಭವೇತ್ಕನ್ಯಾ ಅತಊರ್ಧ್ವಂರಜಸ್ವಲಾ ||

ಮೇಲೆ ಕಂಡ ಶ್ಲೋಕಾರ್ಥವೇನೆಂದರೆ —ಒಬ್ಬ ಬಾಲೆಯು, ಅವಳ ೮ ನೆಯ ವರುಷದಲ್ಲಿ ಗೌರಿಯೆಂತಲೂ ೯ ನೆಯ ವರುಷದಲ್ಲಿ ರೋಹಿಣಿಯೆಂತಲೂ ೧೦ ನೆಯ ವರುಷದಲ್ಲಿ ಕನ್ಯೆಯೆಂತಲೂ ತತಃಪರ ರಜಸ್ವಲೆಯೆಂತಲೂ ವ್ಯವಹರಿಸಲ್ಪಡುತ್ತಾಳೆ. ಮೇಲೆ ಕಂಡ ವಯಃಪರಿಮಾಣಾನುಗುಣವಾಗಿ ವಿವಾಹ ಮಾಡುವದರಿಂದುಂಟಾಗತಕ್ಕ ಫಲ ತಾರತಮ್ಯಸ್ವರೂಪವನ್ನು ಸಹ ತಿಳಿಸತಕ್ಕ ಪ್ರಮಾಣವಚನ ಒಂದೇನಿಟ್ಟದೇನಂದರೆ —

ಗೌರೀಂದದನ್ನಾಕಪೃಷ್ಠಂವೈಕುಂಠಂರೋಹಿಣೀಂದದನ್|
ಕನ್ಯಾಂದದದ್ಬ್ರಹ್ಮಲೋಕಂ ರೌರವಂತುರಜಸ್ವಲಾಂ||

ಅಂದರೆ.—ಗೌರಿಯನ್ನು ದಾನ ಮಾಡುವದರಿಂದ ನಾಕ ಅಂದರೆ ಸ್ವರ್ಗಲೋಕ ಪ್ರಾಪ್ತಿಯೂ, ರೋಹಿಣಿಯದಾನದಿಂದ ವೈಕುಂಠ ಪ್ರಾಪ್ತಿಯೂ, ಕನ್ಯಾದಾನದಿಂದ ಬ್ರಹ್ಮಲೋಕ ಪ್ರಾಪ್ತಿಯೂ, ರಜಸ್ವಲಾ ದಾನದಿಂದ ನರಕ ಪ್ರಾಪ್ತಿಯೂ ಉಂಟಾಗುತ್ತದೆಂದು ಶಾಸ್ತ್ರ ವಿಧಿಸುತ್ತದೆ. ಈ ಶಾಸ್ತ್ರಾಧಾರದಿಂದ ಕನ್ಯಾದಾನವು ಸರ್ವೋತ್ಕೃಷ್ಟವಾದ ಫಲದಾಯಕವೆಂದು ಸ್ಪಷ್ಟವಾಗುತ್ತದೆಯಲ್ಲದೆ "ಕನ್ಯಾದಾನ ಶಬ್ದಾರ್ಥದಿಂದ ಕನ್ಯೆಯನ್ನು ಅವಳ ಹತ್ತನೆಯ ವರುಷದಲ್ಲಿ ದಾನ ಮಾಡಬೇಕಾದ್ದು ಶಾಸ್ತ್ರೀಯವೆಂದು ಸ್ಪಷ್ಟವಾಗುತ್ತದೆ. ಆದರೆ ಪೂರ್ವೋಕ್ತ ಪ್ರಮಾಣವಚನಕ್ಕೆ ಬೇರೆ ಅಂದು ಮತಾಂತರವು ವ್ಯವಹಾರದೊಳಿದೆ. ಮರುತು ಅದರ ಪ್ರಾಮಾಣ್ಯ ವಿಷಯದಲ್ಲಿ ಮತಾಧಿಪತಿಗಳು ಸಂದೇಹಿಸತಕ್ಕವರಾಗಿದಾರೆ. ಈ ಮತಾಂತರ ಶ್ಲೋಕಾರ್ಥರೀತ್ಯಾ ೮ ವರುಷದವಳು ಕನ್ಯೆಯೆಂತಲೂ ೯ ವರುಷದವಳು ರೋಹಿಣಿಯೆಂತಲೂ, ೧೦ ವರುಷದವಳು ಗೌರಿಯೆಂತಲೂ, ವ್ಯವಹರಿಸಲ್ಪಡುತ್ತಾಳೆ.

ಐವತ್ತು ವರುಷಗಳ ವಯಸ್ಸಿನ ಬಳಿಕ ಒಬ್ಬ ಪುರುಷನು ವಿವಾಹ ಮಾಡಿಕೊಳ್ಳುವ ವಿಷಯದಲ್ಲಿ ಏರ್ಪಟ್ಟಿರುವ ಶಾಸ್ತ್ರ ನಿಷೇಧವು ಬಹಳ ಸ್ಪಷ್ಟವಾಗಿದೆ, ಏನಂದರೆ —

ಪಂಚಾಶದ್ವತ್ಸರಾದೂರ್ಧ್ವಂ ನಕಾರ್ಯಂಪಾಣಿಪೀಡನಂ|
ಕಲಿಯುಗಸ್ಯದುಷ್ಟತ್ವಾತ್ತ್ಯಾಜ್ಯವಾಹುರ್ಮನೀಷಿಣಃ||

ಈ ಶ್ಲೋಕಾರ್ಥವೇನಂದರೆ.—ಐವತ್ತು * ಸಂವತ್ಸರಗಳ ವಯಸ್ಸಾದ ಬಳಿಕ ಪುರುಷನು ವಿವಾಹ ಮಾಡಿಕೊಳ್ಳಕೂಡದು. ಇದು ಕಲಿಯುಗ ದೋಷದಿಂದ ತ್ಯಾಜ್ಯವೆಂಬದಾಗಿ ಮತಿಶರು ತಿಳಿಸಿರುತ್ತಾರೆ.

ಕಳೆದ ಸಂವತ್ಸರದ ನವಂಬರ ತಿಂಗಳಲ್ಲಿ ಘನವಂತ್ತೈದಿದ ವೈಸರಾಯಿ ವ ಗವರ್ನರಜನರಲ್ ಸಾಹೇಬರವರು ತಮ್ಮ ಶುಭಾಗಮನ ಮೂಲಕ ಈ ಮೈಸೂರ ರಾಜ್ಯಕ್ಕೆ ಗೌರವವಂ ಕೃಪಗೈದ ಸಂದರ್ಭದಲ್ಲಿ ಪ್ರಜಾಪ್ರತಿನಿಧಿ ಸಮಾಜಕ್ಕೆ ಸೇರಿದ ಮೆಂಬರುಗಳು ಕೆಲವರು ಅವರಸಂದರ್ಶನಾರ್ಥ ಪ್ರತಿನಿಧಿತ್ವೇನ ಹೋಗಿ, ಒಪ್ಪಿಸಿದ ವಿಜ್ಞಾಪನ ಪತ್ರಿಕೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ್ದೇನಂದರೆ.—

ನಮ್ಮ ವಿಜ್ಞಾಪನೆಯನ್ನನುಸರಿಸಿ ಘನವಿನ್ನೈದಿದ ಶ್ರೀಮನ್ಮಹಾರಾಜಾಸರ್ಕಾರದವರು, ಈ ಸಂವತ್ಸರದಲ್ಲಿ ಬಾಲ್ಯ ವಿವಾಹ ಸಂಬಂಧವಾದ ಸಮಯಾಚಾರ ಪರಿಷ್ಕರಣ ವಿಷಯದಲ್ಲೊಂದು ನಿಬಂಧನೆಯನ್ನು ಮಾಡುವಂತೆ ವಾಗ್ದಾನ ಮಾಡಿ ಅದು ಸತ್ಫಲಕಾರಿಯಾಗಿಯೂ ಜ್ಞಾನವರ್ಧಕವಾಗಿಯೂ, ಹಿಂದೂ ಸಮುದಾಯಕ್ಕೆ ವಿಶೇಷಸುಗುಣವನ್ನುಂಟುಮಾಡುವದೆಂದು ಉಭಯ ರೂಪವಾಗಿ ತಿಳಿಸಿರುವ ಅಂತವು ಮಹನೀಯರಾದ ತಮಗೆ ಅನುಮತನ್ನುಂಟುಮಾಡದಿರಲಾರದು.

ಘನವನ್ನೈದಿದ ವೈಸರಾಯ್‌ರವರು ಇದಕ್ಕೆ ಉತ್ತರವಂ ದಯಪಾಲಿಸುವಾಗ್ಯೆ ಪ್ರಸಕ್ತ ವಿಷಯವು ಪ್ರತಿಬಂಧಕ ಯುಕ್ತವಾದದ್ದೆಂಬದನ್ನು ಸ್ವತಃ ಅಂಗೀಕರಿಸಿ, ವಿಜ್ಞಾಪಿಸಿದರೇನಂದರೆ —ಬಾಲ್ಯವಿವಾಹವಂ ಕುರಿತ ಪರಿಷ್ಕರಣರೂಪವಾದ ಒಂದು ನಿಬಂಧನೆಯಂ ಪಡೆಯಬೇಕೆಂಬ ನಿಮ್ಮ ಪ್ರಯತ್ನಗಳು ಸಫಲಗಳಾಗುವದು ಕೇಳಲಿಕ್ಕೆ ನಾವು ಉತ್ಸಾಹಪೂರ್ವರಾಗಿದೇವೆ.

* * *

ನೀವು ಈಗ ಆಚರಣೆಯೊಳು ತರಲಿಚ್ಛೈಸುವ ಸಂಘ ಪರಿಷ್ಕರಣವು, ಪ್ರಜೆಗಳ ಸ್ವತಸ್ಸಿದ್ಧವಾದ ಪ್ರಯತ್ನದಿಂದಲೇ ಬ್ರಿಟಿಷಿಂಡ್ಯದೇಶದಲ್ಲಾಗಲಿ ತದನ್ಯತ್ರವಾಗಲಿ ಮುಖ್ಯವಾಗಿ ನಿರೀಕ್ಷಿಸಬೇಕಾಗಿದೆಯೆಂದು ನಾವು ಭಾವಿಸುತ್ತೇವೆ, ಎಂಬದು.

ಪೂರ್ವ ವೃತ್ತಾಂತ ರೂಪವಾದ ಪ್ರಸಕ್ತ ನಿಬಂಧನೆಯ ವಿವೇಚನೆಯನ್ನಿದುವರೆಗೆ ಸಂಗ್ರಹವಾಗಿ ತಿಳಿಸಿರುವೆಯಷ್ಟೆ, ಇನ್ನು ಸ್ವರೂಪವಾದ ಅದಂ ಕುರಿತ ಕೆಲವು ಅಂಶಗಳನ್ನಿಲ್ಲಿ ತಿಳಿಸಬೇಕಾಗಿರುತ್ತದೇನಂದರೆ —

ಈ ನಿಬಂಧನೆಯು ಪ್ರಸ್ತುತರೂಪದಲ್ಲಿ ನಿಸ್ಸಂಶಯವಾಗಿ ಕೇವಲ ಸಾಮ್ಯವಾದುದಾಗಿರುತ್ತದೆ ಇದು, ಸಂಘಪರಿಷ್ಕರಣದಲ್ಲಿ ವಿಶೇಷ ಅಭಿನಿವಿಷ್ಟರಾದವರ ಅಭೀಷ್ಟಗಳನ್ನು ಸಂಪೂರ್ಣ ತೃಪ್ತಿಪಡಿಸತಕ್ಕದ್ದಾಗಿಯಾಗಲಿ ಅಥವಾ ತತ್ಕಾಲದಲ್ಲಿ ನೆಗೊಂಡಿರತಕ್ಕ ಬಹುಕಾಂತರಗಳಿಗೆ ಯೋಗ್ಯವಾದ ಆತ್ಯಂತಿಕ ಪರಿಹಾರವನ್ನುಂಟುಮಾಡತಕ್ಕದ್ದಾಗಿಯಾಗಲಿ ಇರುವದಿಲ್ಲವು. ಪರಂತು ಪ್ರಜೆಗಳ ದುರಭಿಮಾನ ಪ್ರಯುಕ್ತವಾದ ಆಗ್ರಹಗಳಿಗನವಕಾಶ ಮಾಡಿ ಅವರ ಅನುರಾಗ ಸಂಪಾದನ ಪೂರ್ವಕ ಜಾಗರೂಕತೆಯಿಂದಲೆ ಪ್ರವರ್ತಿಸಿ ಒಂದು ನಿಬಂಧನೆಯನ್ನು ಮಾಡುವದು ಉತ್ತರೋತ್ತರ ವಿಶೇಷ ಬದಲಾವಣೆಗಳಿಗೆ ಅವಕಾಶವುಳ್ಳದ್ದಾಗಿರಬಹುದೆಂದು ಭಾವಿಸಲ್ಪಟ್ಟಿದೆ. ಬಾಲ್ಯ ವಿವಾಹಗಳು ನ್ಯಾಯವಿರುದ್ಧಗಳೆಂದು ನಿಷೇಧಿಸದೇ, ವಿವಾಹ ಯೋಗ್ಯಕಾಲವು ಕನಿಷ್ಠಪಕ್ಷ ಹುಡುಗಿಗೆ ಎಂಟು ವರುಷಗಳೂ ಹುಡುಗನಿಗೆ ಹದಿನಾಲ್ಕು ವರುಷಗಳೂ ಅವಶ್ಯಕಗಳೆಂದು ನಿಶ್ಚೈಸಿರುವಾಗಿದೆಯಲ್ಲದೆ ಅಂತಾ ವಿವಾಹಗಳಿಗೆ ದಂಡನೆಗಳು ಕೂಡ ವಿಧಿಸಲ್ಪಟ್ಟಿರುತ್ತವೆ. ಹುಡುಗಿಯರು ಆರೇಳು ಸಂವತ್ಸರಗಳ ಅಥವಾ ಅದಕ್ಕಿಂತ ಕಡಮೆ ವಯಸ್ಸುಳ್ಳವರಾಗಿರುವಾಗಲೇ ವಿವಾಹಗಳು ನಡೆಯುವಂತಾ ಪ್ರದೇಶದಲ್ಲಿ ಎಂಟು ವರುಷಗಳೆಂದು ಕಾಲ ನಿರ್ಣಯವಂ ಮಾಡುವದು ಒಂದು ವಿಧ ಉಪಕ್ರಮ ರೂಪವಾಗಿರುತ್ತದೆ. ಏತದಪೇಕ್ಷಿಯಾ ಅಧಿಕವಯೋನಿರ್ಣಯವು ಎಷ್ಟು ಅಪೇಕ್ಷಿತವಾಗಿದ್ದಾಗ್ಯೂ ಅದು ವಿರೋಧವನ್ನುಂಟುಮಾಡುವದಲ್ಲದೆ ನಿರೀಕ್ಷಿತೋದ್ದೇಶಗಳಾದ ಪ್ರಜೆಗಳಿಗೆ ವಿವೇಕಕಲ್ಪನೆಯನ್ನೂ ಅವರ ಅನುರಾಗ ಸಂಪಾದನವನ್ನೂ ವಿಫಲಗೊಳಿಸತಕ್ಕದ್ದಾಗಿರುತ್ತದೆ.

ಹದಿನಾಲ್ಕು ವರುಷಗಳಿಗಿಂತ ಕಡಮೆ ವಯಸ್ಸುಳ್ಳ ಒಬ್ಬ ತರುಣಿಯನ್ನು ಐವತ್ತು ವರುಷಗಳ ವಯಸ್ಸುಳ್ಳ ಒಬ್ಬ ಪುರುಷನಿಗೆತ್ತು ವಿವಾಹ ಮಾಡಿಸುವದು ಸಹ ಶಿಕ್ಷಾರ್ಹವೆಂದು ವಿಧಿಸಲ್ಪಟ್ಟಿರುತ್ತದೆ ಇದಲ್ಲದೆ ಯೋಗ್ಯವಾದ ವಿಚಾರಣಾರ್ಥವಾಗಿ ಈ ನಿಬಂಧನೆಗೆ ಸಂಬಂಧಪಟ್ಟ ಅಪರಾಧಗಳೆಲ್ಲವು ಒಂದು ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ ಕೋರ್ಟಗಿಂತ ಕಡಮೆಯಾದ ಕೋರ್ಟಗಳವರಿಂದ ವಿಚಾರಿಸಲ್ಪಡರೋದದೆಂಬ ನಿಯಮ ಸಹ ಕಲ್ಪಿಸಲ್ಪಟ್ಟಿರುತ್ತದೆ

## SUMMARY OF NEWS
### ವೃತ್ತಾಂತ ಸಂಗ್ರಹವು

ಜುನಾಗಡ ಸಂಸ್ಥಾನದ ಪ್ರಾಂತ ಪರ್ವತದಲ್ಲಿ ಮುಸಲ್ಮಾನರು, [illegible] ೧೦ ದಿವಸ ಹಿಂದುಗಳನ್ನು [illegible] ದೇವಾಲಯಗಳನ್ನು [illegible] ರಣಕತ್ತಲ [illegible] —ತಂ

ನಾಗಪಟ್ಟಣದ ಹತ್ತಿರ [illegible] ಜನರು ಸಮುದ್ರದ [illegible] ದವಲ್ಲಿ [illegible] ಅತ್ತಲ [illegible] ಅದರ ನಡುವಿನ [illegible] ದಿನ ಸಮಯ [illegible] —ವ್ಯ. ಪ

ಸೂರತ್ ಕಲೆಕ್ಟರಾದ ಮಿ|| [illegible] ತಮ್ಮ ತೀರದಲ್ಲಿ ಬ್ರಾಹ್ಮಣರನ್ನು [illegible] ನಿಮಿತ್ತ [illegible] ಒಂದು ದೊಡ್ಡ ಬ್ರಾಹ್ಮಣ ಭೋಜನ ಮಾಡಿಸಿ, [illegible] (ಕಂದ ಪದಾರ್ಥ) ದಾನಕೊಟ್ಟ ಮತ್ತು [illegible] ಬ್ರಾಹ್ಮಣರ ತಸ್ಸೀರ ತಕ್ಕೊಂಡರು —ಪಂ.

ಮುಂಬೈಯೊಳಗಿನ ಕಾಲ [illegible] ಸಮುದ್ರದಲ್ಲಿ [illegible] ಒಂದು ಹೊಸ ಬಂಡಿ ತರಿಸಿದವರು ಅದರ ಬೆಲೆಯು ೨|| ಲಕ್ಷ ರೂಪಾಯಿ ಇರುತ್ತದೆ. ಇದರಷ್ಟು ದೊಡ್ಡ ಬಂಡಿ ಜಗತ್ತಿನಲ್ಲಿರುವದಿಲ್ಲ ಇದರ ಸಹಾಯದಿಂದ ಒಂದು ದಿವಸದಲ್ಲಿ [illegible] ಗ್ಯಾಲನ ನೀರು ಸಮುದ್ರದಲ್ಲಿ ಚಲ್ಲಲ್ಪಡುತ್ತದೆ —ಕ ವೃ

ಕೆಲವು ದಿನಗಳ ಕೆಳಗೆ ಕಲ್ಲಿಕೋಟೆಗೆ ಸೇರಿದ [illegible] ಎಂಬ ಊರಿನಲ್ಲಿ ಒಬ್ಬ [illegible] ಮೊಸತ್ತು [illegible] ಮನುಷ್ಯನ ದೇಹಕ್ಕೆ [illegible] ಉಪನ್ಯಾಸವನ್ನು ಮಾಡಿದನು [illegible] ತ ಲೋಕರು ತಮ್ಮ ದೇಹವನ್ನು [illegible] ಅನೇಕ ವಸ್ತುಗಳನ್ನು [illegible] ಬಿಟ್ಟರು —ವೃ ಪ

ಪಂಜಾಬ ದೇಶದಲ್ಲಿ [illegible] ಗುವ ದೈವ ದಿಕ್ಕಿನಲ್ಲಿ [illegible] ಗಳು ಪ್ರವಾಹದಿಂದ ಕೊಚ್ಚಿಕೊಂಡು ಹೋದವು ಆದರೆ [illegible] ೧೦ ನಿಮಿಷಗಳ ಮಾತ್ರವೇ [illegible] ಸ್ವಲ್ಪ [illegible] ದುದಕ್ಕೆ ಕಾರಣ [illegible] ಸುಮಾರು ಕೆಲವು ಲಕ್ಷ ರೂಪಾಯಿಗಳು ನಷ್ಟವಾಗಿರುತ್ತವೆ —ವೃ ಪ

[illegible] ಮುಸಲ್ಮಾನರು [illegible] ಗಳು [illegible] ದಿವಸ ಹಿಂದೂ ಜನರ [illegible] ಹಳ್ಳಿ [illegible] ಸನ್ಯಾಸಿ [illegible] ಕಡೆಯಿಂದ [illegible] ಮುಸಲ್ಮಾನರು [illegible] ಗಳನ್ನು [illegible] —ಕ ವೃ

ಪಂಜಾಬಿನಲ್ಲಿ ನದಿಗಳಿಗೆ ಪ್ರವಾಹ [illegible] ಬಂದು [illegible] ಕಾಂಗ್ರಾ [illegible] ದಿವಸ ಮಳೆಯಾಗಿ [illegible] ತನ್ನ [illegible] ಬಿಟ್ಟು [illegible] ಅತಿ ಪ್ರವಾಹದಿಂದ [illegible] ಎಂಬ ಹಳ್ಳಿಯು [illegible] ಷಹರದೊಳಗಿನ ಸುಮಾರು ೭೦೦ ಮನೆಗಳು [illegible] ಬಿದ್ದು ಪ್ರತಿ ಒಂದು ಮನೆ [illegible] ಜನರು ಹಾಗೂ ೭೦೦—೭೦೦ ದನಗಳು [illegible] ಹೋದವು [illegible] ಲಕ್ಷದ ಬಡಿಗೆಗಳು [illegible] ತ್ತೆ, ಇವರಿಂದ ಎಲ್ಲ ಕಡೆಗೂ ಹಾಹಾಕಾರವಾಗಿರುವದು ಹಿಂದೆ ಇಂತಾ ಪ್ರವಾಹ ಎಂದೂ ಆಗಿಲ್ಲವೆಂದು ಅನ್ನುತ್ತಾರೆ.—ವೃ

ಬೆಳಗಾಂವಿನಿಂದ ಸ್ವಲ್ಪ ಅಂತರದ ಮೇಲೆ ಒಂದು ಸಣ್ಣ ಅಡವಿ ಇದ್ದು, ಆ ಅಡವಿಯಲ್ಲಿ ಒಂದು ವೃಕ್ಷವಿರುತ್ತದೆ. ಆ ಮರದಲ್ಲಿಯ ಮೂರು ಟೊಂಗೆಗಳು ಬಹಳ ಸರಳವಾಗಿಯೂ ಬಹಳ ದೀರ್ಘವಾಗಿಯೂ, ಮನೋಹರವಾಗಿಯೂ ಒಂದು ಕೊಂಬು ಸಮಾನವಾಗಿದ್ದು, ಅದರಮೇಲೆ ಸ್ವಚ್ಛವಾದ ನೀರಿನಿಂದ ಭರಿತವಾದ ದೋಣಿಯಾಕೃತಿಯುಳ್ಳ ಒಂದು ಕಲ್ಲು ಇಟ್ಟಿರುತ್ತದೆ. ಯಾರಾದರು ಅಲ್ಲಿಗೆ ಹೋಗಿ, ಆ ನೀರನ್ನು ಕುಡಿದು ಉಳಿದನೀರುಗಳನ್ನು ಚಲ್ಲಿ ಬರೇದು ಮಾಡಿ ಇಟ್ಟಾಗ್ಯೂ ತತ್‌ಕ್ಷಣದಲ್ಲಿಯೇ ಅದು ಪುನಃ ಸ್ವಚ್ಛನೀರಿನಿಂದ ಭರಿತವಾಗುತ್ತದೆ. ಈ ಪ್ರಕಾರ ಒಂದು ದಿವಸಕ್ಕೆ ಎಷ್ಟು ಸಾರೆ ಮಾಡಿದಾಗ್ಯೂ ನೀರು ಬಂದೇ ಬರುತ್ತದೆ. ಈ ರೀತಿ ಯಾಗಬೇಕಾದರೆ ಶ್ರೀ ದತ್ತಾತ್ರೆಯ ಸ್ವಾಮಿಯ ಅನುಗ್ರಹವೆಂದು ಹೇಳಲಿಕ್ಕೆ ಏನು ಸಂದೇಹ? ಇದೇ ಪ್ರಕಾರ ಯಾವ ಯಾವ ಸ್ಥಳಗಳಲ್ಲಿ ಶ್ರೀ ಗುರು ದತ್ತಾತ್ರೆಯ ಸ್ವಾಮಿಯ ಅಂತರ್ಗಾಮಿಯಿರುವದೋ ಅಲ್ಲಲ್ಲಿ ನಿಧಾನ ಕೊಂತ ಏನು [illegible] ಸತ್ಯ

ಸ್ವಲ್ಪ ದಿವಸಗಳ ಕೆಳಗೆ ಇಲ್ಲಿನ ಪ್ರಾಸ್ಪರ ಮರಾಠಾ ವ್ಯರು [illegible] ಕ್ರಿಸ್ತನಾಗಿ ಪುನಃ ಬ್ರಾಹ್ಮಣಗೋಷ್ಠಿಗೆ ಸೇರುವನೆಂಬ ಆರೋಪ [illegible] ಬ್ರಾಹ್ಮಣರ ಕೂಡ [illegible] ಸ್ವಲ್ಪ [illegible] ಈಗ [illegible] ಪ್ರಮುಖ ಜನರು [illegible] ಅವರಕೂಡ ಅನ್ಯೋನ್ಯಕ ವ್ಯವಹಾರ ಮಾಡುತ್ತಾರೋ [illegible] ಕೆಲವರಿಗೆ [illegible] ಸ್ವಾಮಿಗಳವರ ಕಡೆಯಿಂದ ಬಹಿಷ್ಕಾರ ಪತ್ರ [illegible] ನಿಜವಿದ್ದರೆ ಸ್ವಾಮಿಗಳವರು ಯೋಗ್ಯರಾದ [illegible] ಗ್ರಾಮದ ಧರ್ಮ [illegible] ಅವರು [illegible] ನ ಗೌರವ — ಲೋ

ರತ್ನಗಿರಿ ಜಿಲ್ಲೆಯ [illegible] ಶ್ರೀ ಶಂಕರಾಚಾರ್ಯ ಸ್ವಾಮಿಗಳವರ [illegible] ಕನ್ಯಾವಿಕ್ರಯದ [illegible] ವಿಜ್ಞಾಪನೆ ಮಾಡಿಕೊಂಡಿದ್ದರು ಸ್ವಾಮಿಗಳವರು ಯಾರಾದರೂ ದ್ರವ್ಯ ತೆಗೆದುಕೊಂಡು ಕನ್ಯೆಕೊಟ್ಟು [illegible] ಕನ್ಯ [illegible] ಗೃಹಿಸಿ ಧರ್ಮಶಾಸ್ತ್ರದ ಪ್ರಕಾರ ಮತ್ತು ಸಂಸ್ಥಾನ ಸಂಪ್ರದಾಯದ ಮೇರೆಗೆ ಆಚರ ವಿಷಯದಲ್ಲಿ ಯೋಗ್ಯ [illegible] ಮಾಡಲ್ಪಟ್ಟೀತೆಂದು ಆಜ್ಞಾಪತ್ರ [illegible] ಇದರಂತೆ ಇತರ [illegible] ತಮ್ಮ ತಮ್ಮ [illegible] ವ್ಯರಿಗೆ ಆಜ್ಞಾಪಿಸಿದಲ್ಲಿ [illegible] ದೊಡ್ಡ ಅನಾಚಾರವನ್ನು [illegible] ಇತ್ತಕಡೆ ಸಕಲರ ಚಿತ್ತ [illegible] —ಲೋ

ಕಾಶ್ಮೀರ ರಾಜ್ಯದ [illegible] ಪರ್ವತಗಳ ಪ್ರಾಂತದಲ್ಲಿ [illegible] ಅಲ್ಲಿ [illegible] ಉತ್ಪತ್ತಿಯಾಗುತ್ತದೆ. ಈ [illegible] ರಾಜಧಾನಿ [illegible] ಧಾನಿಯಲ್ಲಿ [illegible] ಅಪ್ಪ [illegible] ಅನೇಕ [illegible] ಗಳಲ್ಲಿ [illegible] ತಮ್ಮ ಮನೆ [illegible] ಅಪ್ಪತ್ರೆಯಂ [illegible] ರೋಗಿಗಳನ್ನು [illegible] ರಾಜಧಾನಿಯಲ್ಲಿ ಪದ್ಧತಿ [illegible] ಹೊರಗೆ [illegible] ಹೋಗುವದು ಅಸಾಧ್ಯವು [illegible] ಅಲ್ಲಿಗೆ [illegible] ಹೋಗುವದು ಕಷ್ಟವಾಗಿದೆ [illegible] ಪೋಸ್ಟ ಆಫೀಸ್, ಟೆಲಿಗ್ರಾಫ ಆಫೀಸ [illegible] ಅನೇಕ [illegible] ಮನೆಗಳನ್ನು [illegible] ಅಲ್ಲಿನ ನಾನಾತರ [illegible] ಅಲ್ಲಿಂದ ಹೋಗಿದ್ದ [illegible] ಪೋಸ್ಟನ್ನು [illegible] ತಲೆಕೆಳಗೆ [illegible] ಕಳೆದ ೨ ನೇ ತಾರೀಖ ಮಧ್ಯಾಹ್ನ ೩ ಘಂಟೆಯ ಪೋಸ್ಟಿನಲ್ಲಿ ನೀರು ರಾಜಧಾನಿಯೊಳಕ್ಕೆ ನುಗ್ಗುವದಕ್ಕೆ ಪ್ರಾರಂಭವಾಗಿ ಸ್ವಲ್ಪ ಹೊತ್ತಿನಲ್ಲಿಯೇ [illegible] ೩—೬ ಅಡಿಗಳ ಪ್ರಮಾಣ ನೀರು [illegible] —ವ್ಯ ಪ

BANGALORE —Printed and published at the KARNATAKA PRESS, No. 40, HOSPITAL ROAD, CITY —1893

# ಕರ್ಣಾಟಕ ಪ್ರಕಾಶಿಕಾ

# THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning.**

ಪ್ರಕಾಮನಿರಿವಪ್ರಸ್ಯಸ್ಯೇವಗವರ್ನ್ಮೆಂಟ್ಕರ್ಣಾಟಕಪ್ರಕಾಶನಸರಂಭಿಧಾಪತ್ರಿಕಾಹಿತೇಶೋಭಿತಾ। ಪ್ರಗಾಂಕಹಿತವಾನಸನಿಹಿತಮುದ್ರಣಾಸಜ್ಜನೈರ್ದ್ವಿಕಾಸುದರಿಸಲಾಸಾದಿಕತಿಮಾನನುಸುಮದು।

Vol. XX ] BANGALORE—MONDAY, AUGUST 14 1893. [No 32.

ಸಂಪುಟ ೨೦. ] ಬೆಂಗಳೂರು:—ಸನ್ ೧೮೯೩ನೇ ಇಸವಿ ಆಗಸ್ಟ್ ೧೪ನೇ ತಾರೀಖು ಸೋಮವಾರ. [ಸಂಚಿಕೆ ೩೨.


## ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲೀಷ್ ಮತ್ತು ಕನ್ನಡಭಾಗಗಳಿಗೆ.

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ಸಾಲ್ ಒಂದಕ್ಕೆ .. .. | 6—0—0 | 8—0—0 |
| 6 ತಿಂಗಳಿಗೆ | 3—8—0 | 4—8—0 |

ಇಂಗ್ಲೀಷ್ ಅಥವಾ ಕನ್ನಡ ಭಾಗಗಳಿಗೆ.

| | ಸ್ಥಳದವರಿಗೆ, | ಪರಸ್ಥಳದವರಿಗೆ, |
|---|---|---|
| ವರ್ಷಕ್ಕೆ .. .. . | 3—0—0 | 4—0—0 |
| 6 ತಿಂಗಳಿಗೆ .. ... | 1—12—0 | 2—8—0 |

ಈ ಪತ್ರಿಕೆಗೆ ದಸ್ತಾವೇಜು ಮಾಡಿದ ತಾರೀಖು ಮೊದಲು ಒಂದು ತಿಂಗಳೊಳಗಾಗಿ ಚಂದಾ ಹಣವನ್ನು ಕಳುಹಿಸುವಂತಾದವರಿಗೆ ಮಾತ್ರವೆ ಅಡ್ವಾನ್ಸ್ ದರವತಿ ಪತ್ರಿಕೆ ಕಳುಹಿಸಲ್ಪಡುವದು. ಸಂಗಾತಿಯರು ಇಂಗ್ಲೀಷ್ ಭಾಗವನ್ನಾಗಲಿ ಕನ್ನಡ ಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. ಮೂರು ತಿಂಗಳಿಗಿಂತ ಕಡಮೆಯಾಗಿ ಚಂದಾ ಹಣವು ಅಂಗೀಕರಿಸಲ್ಪಡಲಾರದು.

### ಪ್ರಕಟನೆಯ ಚಾರ್ಜಿ.

ಮೊದಲನೆಯದಕ್ಕೆ ಪಙ್ಕ್ತಿ ಒಂದಕ್ಕೆ ೦—೨—೦

ಎರಡನೆಯದಕ್ಕೆ ಪಙ್ಕ್ತಿ ಒಂದಕ್ಕೆ ೦—೧—೦

ಸರಾ—ಎರಡಾವರ್ತಿಗಿಂತ ಹೆಚ್ಚಿನದಾಗಿ ಬೇಕಾಗುವ ಜಾಹೀರಾತುಗಳಿಗೆ ಪಙ್ಕ್ತಿ ಒಂದಕ್ಕೆ ೧ ಆಣೆಯಂತೆ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಖಾಯಮಾಗಿ ಪ್ರಕಟನೆಗಳನ್ನು ಕಳುಹಿಸುವವರು ಬರೆದು ಒಪ್ಪಂದ ಮಾಡಿಕೊಂಡರೆ ಅವರಿಗೆ ಕಡಮೆ ದರ ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಿದ್ದಲ್ಲಿ ಆವರ್ತಿಗಳ ಸಂಖ್ಯೆ ಬರೆಯದಿದ್ದರೆ ಅವು ಪ್ರಕಟಿಸುತ್ತಿದ್ದು ಹಾಗೆ ಎಷ್ಟು ವರ್ತಿ ಪ್ರಕಟಿಸಲ್ಪಟ್ಟಿತ್ತೋ ಅಷ್ಟಕ್ಕೂ ಮೇಲೆ ಕಂಡ ದರದಂತೆ ಚಾರ್ಜ್ ಮಾಡಲ್ಪಡುವದು. ಪ್ರಕಟನೆಯನ್ನು ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಆಯಾ ಶನಿವಾರದ ಮಧ್ಯಾಹ್ನ ೩ ಘಂಟೆಯೊಳಗಾಗಿ ಕಳುಹಿಸಬೇಕು. ಪ್ರಕಟನೆಯನ್ನು ಈ ಪತ್ರಿಕೆಗೆ ಕಳುಹಿಸಬೇಕಾದ ಗುಪ್ತ ಪತ್ರಗಳ ವಿಷಯದಲ್ಲಿ ನಾವು ಜವಾಬ್ದಾರರಲ್ಲವಾದ್ದರಿಂದ ಕ್ರಮವಾಗಿ ರುಜುಮಾಡಿ ದಲ್ಲಿದ್ದ ವಿಷಯಗಳನ್ನು ಪ್ರಕಟಿಸಲಾರೆವು. ಸಿವಿಲ್ ವಿಷಯಗಳಿಗೆ ಸಂಬಂಧಿಸಿದ ಕಾಗದಗಳು ಕಳುಹಿಸಲ್ಪಡಲಾರವು.

*ADVERTISEMENTS.*

## NOTICE.

**VAIDYASARA SANGRAHA**

A TREATISE ON THE PRINCIPLES OF

**HINDU MEDICINE**

*Price including Postage Rs 5 0 0*

ವೈದ್ಯಸಾರ ಸಂಗ್ರಹ.

ಈ ಗ್ರಂಥಕ್ಕೆ ಬೇಕಾಗುವವರು ಮೊಬಲಗಿನೊಡನೆ ಕಾಗದ ಬರೆದರೆ ಮಾತ್ರ ಪುಸ್ತಕ ಕೊಡಲ್ಪಡುವದು. ಮೊಬಲಗು ಇಲ್ಲದ ಬರಹಗಳಿಗೆ ಸರಿಯಾದ ಉತ್ತರ ಕೊಡಲ್ಪಡಲಾರದು.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೇ ಹಾಸಲು, ಸೇರಿಸಿ ಪ್ರತಿ ಒಂದಕ್ಕೆ ರೂ 5—0—0

ಟಿ. ಬಿ. ವೆಂಕಟಾಚಾರ್,

ಬೆಂಗಳೂರ್, ಮಹಾನ್ ಆಸ್ಪತ್ರೆ ರೋಡ್ ೪೮ ನೇ ನಂಬರ್.

## ನೋಟೀಸ್.

### ಬೆಂಗಳೂರು ಕರ್ಣಾಟಕ ಪ್ರೆಸ್.

೧೮೬೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ, ಸಕಲವಿಧ ಕೆಲಸಗಳು ಸುಲಭವಾದ ದರಗಳಿಗೆ ತೀವ್ರವಾಗಿಯೂ ಸ್ವಚ್ಛವಾಗಿಯೂ, ಮಾಡಲ್ಪಡುವವು.

ಇದರಲ್ಲಿ ಸಧ್ಯಕ್ಕೆ ಇಂಗ್ಲೀಷ್ ಕನ್ನಡ ಕೆಲಸಗಳು ಮಾತ್ರವೆ ನಡೆಯುತಿವೆ. ಇತರ ತಪಸೀಲ್‌ಗಳನ್ನು ಸದರೀ ಕಾರ್ಖಾನೆಯ ಪ್ರೊಪ್ರೈಟರಿಗೆ ಬರೆದು ತಿಳಿದುಕೊಳ್ಳಬಹುದು.

## ನೋಟೀಸ್.

ಗಣೇಶ ರಾಮಚಂದ್ರ ಕರ್ಕರ್ ಮತ್ತು ಕಂಪನಿ.
ಕಮಿಶನ್ ಏಜಂಟ್ಸ.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯೊಡನೆ ವ್ಯಾಲ್ಯೂ ಪೇಯಬಿಲ್ ಪೋಸ್ಟ್ ಮೂಲಕ ತಕ್ಕ ಕಮಿಶನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರಹ ಔಷಧಗಳು, ಪುಸ್ತಕಗಳು, ಮುತ್ತುಗಳು, ಚಿಪ್ಪಿ ಮುತ್ತುಗಳು, ಛತ್ರಿಗಳು, ಶಾಲುಗಳು, ಟ್ರಂಕುಗಳು, ಕ್ಯಾಂಡಲ್ ಬೂಟುಗಳು, ಪಟ್ಟೆಗಳು, ಜರತಾರಿ ಕಾಗದಗಳು, ಚಂದ್ರಕಾಂತ ಮೊದಲಾದ ಕನ್ನಡಕಗಳು, ಮುಸುರಿ ಕೆತ್ತ ಜರತಾರಿ ಉಡುಪುಗಳು, ಜರತಾರಿ ಟೋಪಿಗಳು, ಅಫೀಸ್ ಡ್ರೆಸ್‌ಗಳು, ಪರ್ಸ್‌ಗಳು, ಅತ್ತರುಗಳು, ಅತ್ಯುತ್ತಮವಾದ ರತ್ನಗಳು, ಬಂಗಾರದಿಂದ ಕಟ್ಟಲ್ಪಟ್ಟ ಉಂಗುರಗಳು, ಬೆಳ್ಳಿ ಪಾತ್ರೆಗಳು, ಜರ್ಮನ್ ಬೆಳ್ಳಿ ಪಾತ್ರೆಗಳು, ಕೇಸರಿ, ಕಸ್ತೂರಿ ವಗೈರೆ ಇತರ ಸಾಮಾನುಗಳು

ಜವಾಬು ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟ್ಯಾಂಪ್ ಕಳುಹಿಸಿದ ಹೊರತು ಜವಾಬ್ ದೊರೆಯಲಾರದು

ವಿಳಾಸ.—ಗಣೇಶ ರಾಮಚಂದ್ರ ಕರ್ಕರ್,
ಮತ್ತು ಕಂಪನಿ, ಕಮಿಶನ್ ಏಜಂಟ್ಸ್,
ರಾಜೂರ್ ದ್ವಾರ, ಮಾರ್ಕೆಟ್ ಪೋಸ್ಟ್, ಮುಂಬೈ.

## ನೋಟೀಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕರಿಗೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

### ಸಂಸ್ಕೃತ ಗ್ರಂಥಗಳು.

| | ಪೋಸ್ಟೇಜ್ ಸಹಿತ | ರೂ | ಆ. | ಪೈ. |
|---|---|---|---|---|
| ಸಟೀಕಾ ವೈದ್ಯಸಾರ ಸಂಗ್ರಹ | . . | ೫ | ೦ | ೦ |
| ,, ಶಿವಗೀತ | ... | ೧ | ೧ | ೦ |
| ,, ಶಿವಾನಂದಲಹರಿ | ... | ೦ | ೪ | ೦ |
| ,, ಶಾಲಾಮೃತ | ... | ೧ | ೦ | ೦ |
| ,, ಟೀ॥ ವಾಲ್ಮೀಕಿರಾಮಾಯಣ | . | ೦ | ೩ | ೦ |
| ,, ಟೀ॥ ಗೋಪಿಕಾ ಗೀತೆ | ... | ೦ | ೧ | ೦ |
| ,, ಟೀ॥ ಚಾಣಕ್ಯನೀತಿ (ಸುಭಾಷಿತ) | | ೦ | ೪ | ೦ |
| ವಿಷ್ಣುಸಹಸ್ರನಾಮ ವಗೈರೆ | ... | ೦ | ೩ | ೦ |
| ಸೂರ್ಯಸಹಸ್ರನಾಮ | . . | ೦ | ೨ | ೦ |
| ಕೃಷ್ಣಕರ್ಣಾಮೃತ | ... | ೦ | ೨ | ೦ |
| ಶ್ರೀಕಾಂತ ಅಮರ ಮೂಲ | ... | ೦ | ೨ | ೦ |
| ೧ ಕಾಂಡ | . . | ೧ | ೧ | ೦ |

### ಕನ್ನಡ ಗ್ರಂಥಗಳು.

| | | | | |
|---|---|---|---|---|
| ಕುಶಲಸ್ಮೃತಿ ಬಸ್ವಲ್ | ... | ೩ | ೦ | ೦ |
| ಡಿಟೊ ದುಪ್ಪಟಿ | . . | ೧ | ೨ | ೦ |
| ವೃಷಭೇಂದ್ರವಿಜಯ | .. | ೧ | ೪ | ೦ |
| ಸಂಚಭಾವ ಬಾಲಲೀಲೆ | ... | ೦ | ೬ | ೦ |
| ಹನುಮದ್ವಿಲಾಸ | ... | ೦ | ೬ | ೦ |
| ಕಾಳಿಂಗಮರ್ದನ | ... | ೦ | ೨ | ೦ |
| ರುಕ್ಮಿಣೀಪರಿಣಯ | ... | ೦ | ೨ | ೦ |
| ಶಶಿರೇಖಾಪರಿಣಯ | ... | ೦ | ೨ | ೬ |
| ಸುದಾಮಚರಿತ್ರೆ | ... | ೦ | ೧ | ೦ |
| ಪೈರಾವಣ ಚರಿತ್ರೆ | ... | ೦ | ೧ | ೯ |
| ಬಾಲಚಿಕಿತ್ಸೆ | ... | ೧ | ೦ | ೦ |
| ಮಹಮ್ಮದನ್ ಲಾ | ... | ೦ | ೧೨ | ೦ |
| ಭ್ರಾಂತಿವಿಲಾಸ | ... | ೨ | ೦ | ೦ |

## ಕೊಡಗು ಫಾರೆಸ್ಟ್ ಇಲಾಖಾ.

ನೋಟಿಸ್.

1883ನೇ ಇಸವಿ ಜುಲೈ ತಾರೀಖು 26 ರಲ್ಲು.
ಇದರಡಿ ನಮೂದಿಸಿದ ಸಾಮಾನುಗಳು ಫ್ರೇಸರ್‌ಪೇಟೆ
ಅವರಿಗೆ ಡಿಪೋಗಳಲ್ಲಿ,

ಸನ್ 1893 ನೇ ಇಸವಿ ಆಗಸ್ಟ್ ತಾರೀಖು 31 ರಲ್ಲು ದಹಡೆ ಹಾಕಲ್ಪಡುತ್ತವೆ.

ತ್ಯಾಗದ ತೊಲೆಗಳು 220 ... 1500 ಸರಿಸುಮಾರು.

ಕೌನ್ಸಿ ವಗೈರೆ 160 .. 3500 ಡಿ॥

ಷರತ್.—ಸನ್ 1885ನೇ ಇಸವಿ ಡಿಸೆಂಬರ್ ತಾರೀಖು 19ನೇ ತಾರೀಖಿನ 73 ನೇ ನಂಬರ್ ಚೀಫ್‌ಕಮಿಷನರ್ ಸಾಹೇಬರವರ ನೋಟಿಫಿಕೇಷನ್ ಪ್ರಕಾರ ಹರಾಜಿನ ಕ್ರಯದ ಪೈಕಿ ಕೇಕಡಾ ಇಪ್ಪತ್ತು ಮೊಬಲಗನ್ನು ಹರಾಜಿನ ಕಾಲದಲ್ಲಿ ಪಾವತಿ ಮಾಡಿ ಬಾಕೀ ಮೊಬಲಗನ್ನು ಹರಾಜ್ ತಾರೀಖು ಮೊದಲುಗೊಂಡು 30 ದಿನಗಳೊಳಗೆ ಪಾವತಿ ಮಾಡತಕ್ಕದ್ದು.

F. A. Leager.
ಡಿಪುಟಿ ಅಸಿಸ್ಟೆಂಟ್ ಕನ್ಸರ್ವೇಟರ್,
ಕೊಡಗು ಫಾರೆಸ್ಟ್

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

MONDAY, AUGUST 14 1893.

೧೮೯೩ನೇ ಇಸವಿ ಆಗಸ್ಟ್ ತಾ॥ ೧೪ ನೇ ಸೋಮವಾರ.

### ಸಮುದ್ರಯಾನ ವಿಷಯದಲ್ಲಿ ಮೆ॥ ಚೆಂಚಲ ರಾಯರವರ ಅಭಿಪ್ರಾಯವು.

ಈಗ್ಗೆ ಕೆಲವು ದಿನಗಳಹಿಂದೆ ಮದರಾಸಿನಲ್ಲಿ ಸೇರಿದ್ದ ಒಂದು ಸಭೆಯಲ್ಲಿ ಆನರಬಲ್ ಮೆ॥ ಚೆಂಚಲರಾವ್ ಪಂತುಲುಯವರು, ಇಂಡಿಯನ್ ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ಏಕಕಾಲದಲ್ಲಿ ಇಂಡ್ಯದೇಶದಲ್ಲೂ ಇಂಗ್ಲೆಂಡಿನಲ್ಲೂ ಜರಿಗಿಸುವ ವಿಷಯದಲ್ಲಿ ತಮ್ಮ ಒಪ್ಪಿಗೆಯನ್ನು ತಿಳಿಸಿ, ಸದರೀ ಪರೀಕ್ಷೆಯು ಇಲ್ಲಿ ನಡೆದಾಗ್ಯೂ ಅದರಲ್ಲಿ ತೇರ್ಗಡೆಯಾದ ಉಮೇದವಾರರು ಇಂಗ್ಲೆಂಡಿಗೆ ಹೋಗಿ ಕೆಲವುಕಾಲ ಅಲ್ಲಿ ವಾಸಮಾಡಿ ತಮ್ಮ ವಿದ್ಯಾಭ್ಯಾಸವಂ ಪೂರ್ತಿಗೊಳಿಸಬೇಕೆಂದು ಒಂದು ನಿರ್ಬಂಧವನ್ನು ಮಾಡಲ್ಪಡತಕ್ಕದ್ದೆಂದು ಹೇಳಿದರು. ಈಗಿನ ಪದ್ಧತಿ, ಅಂದರೆ, ಇಂಗ್ಲೆಂಡಿಗೆ ಹೋಗಿ ವಿದ್ಯಾಭ್ಯಾಸಮಾಡಿ ಪರೀಕ್ಷೆಯಂ ಕೊಟ್ಟು ತೇರ್ಗಡೆಯಾಗುವವರಲ್ಲಿ ಸ್ವಮತಾಚಾರ ರಕ್ಷಕರಾದ ಹಿಂದೂಗಳನೇಕರು ಅನ್ಯದೇಶವಾಸದಿಂದಲೂ ಸಮುದ್ರಯಾನದಿಂದಲೂ ಸ್ವಸಮಾಜ್ಯದಲ್ಲಿ ತಮಗ ನ್ಯೂನತೆಯುಂಟಾಗುವದೋ ಏನೋ ಎಂಬ ಭೀತಿಯಿಂದ ಹಿಂಜರಿದು, ಅಭಿಸಬಹುದಾದ ಬಹು ಪ್ರಯೋಜನಗಳನ್ನೆಲ್ಲ ತೊರೆಯುತ ಬರುತ್ತಾರೆಂಬದಾಗಿಯೂ, ಈ ಪರೀಕ್ಷೆಯು ಇಲ್ಲಿನವರಿಗೂ ಅನುಕೂಲಿಸುವಂತೆ, ಈ ದೇಶದಲ್ಲಿ ಸಹ ನಡೆಸಲ್ಪಡಬೇಕೆಂದು ವಾದಿಸಲಿಕ್ಕೆ ಇದು ಮುಖ್ಯಕಾರಣವೆಂಬದಾಗಿಯೂ, ವಿಶೇಷ ಆದಾಯವುಳ್ಳ ದೊಡ್ಡ ಉದ್ಯೋಗ ಪ್ರಾಪ್ತಿ ಕೊಡಲ್ಪಡುವದೆಂಬ ಭರವಸೆಯು ದೊರೆಯುವದೇ ಮಾನನೀಯರಾದ ಹಿಂದೂ ದೊಡ್ಡ ಮನುಷ್ಯರನೇಕರು ಅನುರಕ್ತರಾದ ಸಂಬಂಧಗಳನ್ನೂ ಸ್ವಸಮಾಜ್ಯ ನಿಶ್ಚಯವಾದ ವ್ಯುತ್ಪತ್ತಿಯನ್ನೂ ಇತರಾನುರಾಗ್ಯಗಳನ್ನೂ ನಿರ್ಧರಿತರಾಗಿ ತೋರಿಸುತ್ತಿದ್ದು ವರೆಂದು ನಿರೀಕ್ಷಿಸುವದು ಕೇವಲ ಭ್ರಾಂತಿಜನ್ಯವೆಂದು ನುಡಿಯಬೇಕಾಗಿದೆ ಎಂಬದಾಗಿಯೂ, ಅಥವಾ ಕೆಲವರು ಇಂಗ್ಲೆಂಡಿಗೆ ಹೋಗಿಬಂದ ಮಾತ್ರದಿಂದಲೇ ಅವರಿಗೆ ಸಮಾಜ್ಯದಲ್ಲಿ ಏನು ಗೌರವವಿರುವದೆಂಬದಾಗಿಯೂ ಪಗ್ಗೆ ರೆ ಭಾವ ಗರ್ಭಿತಗಳಾದ ಸ್ವಾಭಿಪ್ರಾಯವಂ ತಿಳಿಯಪಡಿಸಿದರು. ಮೆ॥ ಪಂತುಲು ಯವರ ಅಭಿಪ್ರಾಯವು, ಮದರಾಸಿನಲ್ಲಿ ಪ್ರಕಟಿಸಲ್ಪಡುವ ಇಂಡಿಯನ್ ಸೋಷಿಯಲ್ ರಿಫಾರ್ಮರ್ ಎಂಬ ಪತ್ರಿಕೆಗೆ, ಪ್ರಬಲವಾದ ನಿರ್ಬಂಧವನ್ನೂ, ಸಹಿತ ಆಗ್ರಹವನ್ನೂ, ಕ್ಷುಬಿತ ಭಾವವನ್ನೂ ಉಂಟುಮಾಡಿದ್ದಲ್ಲದೆ, ಮೆ॥ ಚೆಂಚಲರಾಯರವರಿಗೆ ಮೇಲೆ ಕಂಡಂತಾ ಭಾವವು ಸ್ಫುರಿಸಿದ್ದು ಅವರ ದೋಷವಲ್ಲವು, ಪರಂತು ದೇಶದ ದೌರ್ಭಾಗ್ಯ ನಿಮಿತ್ತಕವೆಂತಲೂ, ಹೀಗೆ ಉತ್ತಮರಾದ ವರೆಲ್ಲರೂ ವೃದ್ಧರಾಗುವುದೆಲ್ಲ ಜಗದ್ವಿಷಕರಾಗುತ ಸರ್ವವು ಕಾಲಾಧೀನವೆಂದು ವಾದಿಸಲಿಕ್ಕಿಸುವದು ಮಹದ್ದುಃಖಕರವೆಂತಲೂ ಖಿನ್ನವಾಗಿ ತೋರಿಸುತಿದೆ. ಕೆಲವು ಅಭಿಪ್ರಾಯಗಳಲ್ಲಿ ದಿವಾನ್ ಬಹದೂರ್ ರಘುನಾಥರಾಯರವರ ವಿಷಯದಲ್ಲಿ ಸಂಘಪರಿಷ್ಕರಣ ಪ್ರವರ್ತಕರಿಗೆ ಸ್ವಲ್ಪ ವೈಮನಸ್ಯವೂ, ಬೇಸರಿಕೆಯೂ ಉಂಟಾದವೋ, ತದ್ವತ್ ಮೆ॥ ಚೆಂಚಲರಾವ್ ಪಂತುಲು ಯವರು ಇತರವಿಷಯ ಪರಿಷ್ಕರಣಗಳಲ್ಲಿ ಅಭಿರುಚಿಯಿದ್ದಾಗ್ಯೂ ಸಮುದ್ರಯಾನವಿಚಾರದಲ್ಲಿ ಪ್ರತ್ಯೇಕವಾಗಿ ವಿರುದ್ಧಾಭಿಪ್ರಾಯವಂ ಬಹಿರಂಗವಾಗೀಗ ತೋರಪಡಿಸಿದ್ದರಿಂದಲೂ ಅನೇಕರಿಗೆ ಅವರ ವಿಷಯದಲ್ಲಿ ಸಂಪೂರ್ಣ ಅತೃಪ್ತಿಯನ್ನೂ ಅಪ್ರೀತಿಯನ್ನೂ ಉಂಟುಮಾಡಿದಂತೆ ಕಾಣುತಿದೆ. ಒಂದುವೇಳೆ ಭಾವ್ಯನಿಷ್ಟಗಳಂ ಚಿಂತಿಸದೆ ಹಿಂದೂಗಳು, ದ್ವೀಪಾಂತರ ವಾಸಮಾಡಿ ಸ್ವೋದ್ದೇಶ ಪರಿಪೂರ್ಣರಾಗಬೇಕಾದಂತೆ ವರ್ತಿಸಬಹುದೆಂದು ಅನುಮತಿಯಂ ಕೊಟ್ಟಿರುವ ಪಕ್ಷಕ್ಕೆ ಮೆ॥ ಚೆಂಚಲರಾಯರವರ, ವಯಃಪ್ರಯುಕ್ತಗಳಾದ ಜ್ಞಾನವೂ ಅನುಭವವೂ, ಸ್ವದೇಶಾಭಿಮಾನವೂ, ಸದರೀ ರಿಫಾರ್ಮರ್ ಪತ್ರಿಕೆಗೆ ಬಹಳ ವಿಶ್ವಸನೀಯಗಳಾಗಿದ್ದಿರಬಹುದು. ಮೆ॥ ಚೆಂಚಲರಾಯರವರು ಈ ಇಂಡ್ಯದೇಶದ ಅನೇಕರೊಳು ಪ್ರತಿಗಳಲ್ಲೊಬ್ಬರೆಂಬದನ್ನೂ ಇವರ ವಿಧಿನಿಷೇಧಾತ್ಮಕಗಳಾದ ಅಭಿಪ್ರಾಯಗಳು ಸಾರ್ವಜನೀನವಾದ ಪ್ರವೃತ್ತಿನಿವೃತ್ತಿಗಳಿಗೆ ಸಾಧಕಗಳಾಗಲಾರವೆಂಬುವದನ್ನೂ ಸ್ವಲ್ಪವೂ ಪರ್ಯಾಲೋಚಿಸದೆ, ಸದರೀ ಪತ್ರಿಕೆಯು ಮೆ॥ ಪಂತುಲು ಯವರನ್ನು ಹಾಸ್ಯಮಾಡಲೆತ್ನಿಸಿದ್ದನ್ನು ನೋಡಲಾಗಿ ಯುಕ್ತಾಯುಕ್ತ ವಿವೇಚನಾರೂಪ ಗ್ರಹಣಕ್ಕೆಂತಲೂ ಉದ್ದೇಶ ಭ್ರಾಂತಿಯೇ ಆಧುನಿಕರಿಗಲ್ಲ ಅಪೇಕ್ಷಿತವೆಂದು ನಿರ್ಧರಿಸಬೇಕಾಗಿದೆ. ಮೆ॥ ಪಂತುಲು ಯವರು, ಅವರ ಬಾಲ್ಯದೆಶೆಯಲ್ಲಿ ಸಂಘಪರಿಷ್ಕರಣಕ್ಕೆ ಅನುಕೂಲರಾಗಿಯೂ ಸ್ವತಃ ಪ್ರವರ್ತಕರಾಗಿಯೂ ಇದ್ದರಲ್ಲದೆ ಗವರ್ನ್‌ಮೆಂಟಿನವರಿಂದ ಸಕಲವಿಧ ಪ್ರಾಶಸ್ತ್ಯಗಳನ್ನೂ ಪಡೆದು ಅನುಭವಿಸತಕ್ಕವರಾಗಿದ್ದಾರೆ. ಇಂತವರು ತಿಳಿಸುವ ಅಭಿಪ್ರಾಯವು ಪ್ರಾತ್ಯಕ್ಷಿಕವಾಗಿಯೂ, ನಿರಾಧಾರಗಳಾದ ಅನುಮಾನವನ್ನುಂಟುಮಾಡತಕ್ಕದ್ದಾಗಿಯೂ, ಇರುವದಲ್ಲದೆ ಮತವಿನಾಶಕವಾದ ಪ್ರಯತ್ನವೆಂದು ಇವರುದ್ಘೋಷಿಸಿದ್ದಾರೆಂಬವದನ್ನಾಲೋಚಿಸಿ

ದರೆ, ಈ ಇಂಡ್ಯಾದೇಶದ ಪ್ರಸಕ್ತ ಪ್ರಭುತ್ವಕ್ಕೂ ಮತ್ತು ಆತ್ಯಂತಿಕವಾದ ರಾಜಭೇದವನ್ನೈದ ಜೋಕಾಗಿರುವದೆಂದು, ಸದರೀ ಪತ್ರಿಕೆಯು, ಸೂಚಿಸುತ್ತಿದೆ ಹ್ಯಾಗೆಂದರೆ,—ರೆಯಿಲ್ ರಸ್ತೆಗಳೂ ಇಂಗ್ಲಿಷ್ ವಿದ್ಯಾಭ್ಯಾಸವೂ, ನಾಗರಿಕಾಭಿವೃದ್ಧಿಗೆ ಸಾಧಕಗಳಾದ ಇತರಾಂಶಗಳೂ ಪರುಷರಯಾಗಿ ಮತವಿನಾಶಕಗಳೆಂದು ಬಹುಕಾಲದ ಹಿಂದೆಯೇ ಜನರಿಂದ ಗ್ರಹಿಸಲ್ಪಟ್ಟಿತು. ಇಂತಾ ಜನರನ್ನೆಲ್ಲ ಸಂತೃಪ್ತಿಪಡಿಸಬೇಕಾಗಿದ್ದರೆ ಬ್ರಿಟಿಷ್ ಗವರ್ನಮೆಂಟಿನವರು ತಮ್ಮ ಪ್ರಭುತ್ವವನ್ನು ಬ್ರಾಹ್ಮಣ ಸಾಧುಗಳಿಗೊಪ್ಪಿಸಿ ದೇಶವಂ ಬಿಟ್ಟು ಹೊರಟುಹೋಗಬೇಕಾದ್ದು ಆವಶ್ಯಕವಾಗಿರುತ್ತಿದೆ. ಆ ರೀತಿ ಬ್ರಿಟಿಷ್ ಗವರ್ನಮೆಂಟಿನವರೆಂದಿಗೂ ಮಾಡುವದಿಲ್ಲವು ಇಂಗ್ಲಾಂಡ್ ದೇಶವನ್ನು ನೋಡದಂತವರಾಗಿಯೂ, ಪ್ರೈಸ್ಟರಾಯಿಯವರಿಂದ ಸ್ಪರ್ಶವಾದ ಉಪಕಾರತನವೂ ನಿಂದ್ಯವೆಂಬದಾಗಿಯೂ, ಏವರುಷಗಳಲ್ಲಿ ತಮ್ಮ ಹೆಣ್ಣುಮಕ್ಕಳಿಗೆ ವಿವಾಹಗಳಂ ಮಾಡಿ ಅವರು ವಿಧವೆಗಳಾಗಿ ಹೋದಾಗ್ಯೂ ಅವರನ್ನು ವಿಧವೆಕರನ್ನಾಗಿಮಾಡತಕ್ಕವರಾಗಿಯೂ ಇರುವಂತಾ ಬ್ರಾಹ್ಮಣರು ಸರ್ ಆರ್ ಆಕ್ಲಾಂಡ್ ಕಾಲ್ವಿನ್ ಮತ್ತು ಸರ್ ಚಾರ್ಲ್ಸ್ ಯೆಲಿಯಟ್ ವಗೈರೇರ ಸ್ಥಾನಾಪನ್ನರಾಗಿ ಪ್ರಕೃತ ಸ್ಥಿತಿಯಲ್ಲಿರುವಂತೆ ಕೃತಜ್ಞತರಾಗಿ ಪರ್ಯಟಿಸಿ ಆಗ ಪ್ರಜೆಗಳು ಸಂತೋಷಿಸಬಹುದೆಂದು ತೋರಿತಿದೆಯೆಂದೂ ಹಿಸಿ, ಇಂಡ್ಯಾದೇಶಕ್ಕಿಂತ ದುಸ್ಥಿತಿಯು ಯಾವ ಕಾಲದಲ್ಲಿಯೂ ಪ್ರಾಪ್ತವಾಗದಿರಬೇಕೆಂಬ ಪ್ರಾರ್ಥನೆಯೊಡನೆ ಮೇಲೆ ಕಂಡ ರಿಫಾರ್ಮರ್ ಪತ್ರಿಕೆಯು ತನ್ನ ಕಣ್ಣನ್ನೊರಿಸಿಕೊಳ್ಳುತ್ತಿದೆ ಹೃದಯಂಗಮವಾದ ಭಾವಪ್ರದರ್ಶನಕ್ಕೆ ಮುಖವು ದರ್ಪಣದಂತಿರುವ ಹಾಗೆ ಸದರೀ ಪತ್ರಿಕಾಲೇಖನವು ಲೇಖಕರ ಜಾತಿಮತ ನೀತಿ ನಿಯಮಗಳನ್ನು ಬೇಕಾದ ಮಟ್ಟಿಗೆ ಪ್ರಕಟಿಸತಕ್ಕದ್ದಾಗಿರುವದರಿಂದ ಪ್ರತ್ಯೇಕ ಉತ್ತರವು ಅನಾವಶ್ಯಕವಾಗಿರುತ್ತಿದೆ. ಇತರ ಮತಸ್ಥರ ಪ್ರಸ್ತಾಪವನ್ನು ಕೊರೆವು ಬ್ರಾಹ್ಮಣ ಸಾಧುಗಳೆಂದು ಪ್ರಾಧಾನ್ಯೇನ ಅವರನ್ನೇ ಉದಹರಿಸಿದ್ದನ್ನು ನೋಡಲಾಗಿ ಲೇಖಕರು ಬ್ರಾಹ್ಮಣೇತರರು ಮಾತ್ರವಲ್ಲದೆ ಬ್ರಾಹ್ಮಣದ್ವೇಷಯುಕ್ತರೂ ಬ್ರಹ್ಮಘಾತುಕರೆಂತಲೂ ಸ್ಪಷ್ಟವಾಗುತ್ತಿದೆ. ಅವರವರ ಬಾಳ್ವಿಕೆಯು ಅವರವರ ಹೃದಯದಂತಿರುವದೆಂಬದು ಸುಪ್ರಸಿದ್ಧವಾಗಿರುವಲ್ಲಿ ಸ್ವೀಯ ವಿಷಯಗಳಲ್ಲಿ ವೈಮುಖ್ಯತೆಯೂ ವಿದ್ವೇಷವೂ ಸ್ವಜನರಲ್ಲಿ ಅಪ್ರೀತಿಯೂ, ಜನಿಸಬೇಕಾದರೆ ಏನೇ ಉತ್ಪಾತಹೇತುವಾಗಿರಬೇಕೇ ಹೊರ್ತು ಅನ್ಯಥಾ ಉಂಟಾಗಲಾರದು.

## ಉಮೇದ್ವಾರರ ನಿವೃತ್ತಿ.

ಯಾವದೋ ಒಂದು ಸರ್ಕಾರಿ ಇಲಾಖೆಯಲ್ಲಿ ಉಮೇದ[illegible]ವರುಷಗಳ ಕಾಲಕ್ಕಿಂತ ಅಧಿಕವಾಗಿ ಯಾವವಿಧ ಪ್ರತಿಫಲವೂ ಇಲ್ಲದೆ ಕೆಲಸಮಾಡುತಲಿದ್ದ ಒಬ್ಬಾತನು, ಸದರೀ ಇಲಾಖಾಧಿಕಾರಿಯು ತನ್ನ ಹಕ್ಕನ್ನು ಪರಿಗಣಿಸದೆ ಖಾಲಿಯಾದ ಕೆಲಸವನ್ನು ಅನ್ಯನೊಬ್ಬನಿಗೆ ಕೊಟ್ಟದರಿಂದ, ತನ್ನ ಆಯುಸ್ಸಿನಲ್ಲಿ ಯೆರಡು ವರ್ಷಗಳ ಕಾಲವನ್ನು, ಅಲಭ್ಯವಾದ ವಿಷಯವನ್ನಿರೀಕ್ಷಿಸಿ, ತನ್ನನ್ನು ಪುರಸ್ಕರಿಸದಿರುವಂತಾ ಆತ ಹಾದಿಯಲ್ಲಿ ಕಳೆದಬಗ್ಗೆ ತಾನು ಬಹಳ ಚಿಂತಿಸುವದಾಗಿ ನಮೂದಿಸಿ ದಿವಾನರವರಿಗೊಂದು ಅರ್ಜಿಯನ್ನು ಬರೆದುಕೊಂಡನಂತೆ. ಅವರಮೇಲೆ ದಿವಾನರವರು ಒಂದು ಪ್ರೊಸೀಡಿಂಗ್ಸ್ ಮಾಡಿ ಇಲಾಖಾಧಿಕಾರಿಗಳಿಗೆಲ್ಲ ಸಾಮಾನ್ಯವಾಗಿ ಒಂದು ಒಟ್ಟು ಹುಕುಂ ಮಾಡಿರುತ್ತಾರೇನೆಂದರೆ, ಇನ್ನುಮೇಲೆ ಯಾವ ಇಲಾಖಾಧಿಕಾರಿಯಾಗಲಿ, ಜವಾಬ್ದಾರಿಯೂ ಸಂಬಳವೂ ಇಲ್ಲದಿರುವಂತಾ ಯಾವ ಉಮೇದ್ವಾರನಿಂದಲಾಗಲಿ ಕೆಲಸಮಾಡಿಸಿ, ಕಾಯಂ ನೌಕರ್ಮನೇರಿಗೆ ಸಹಾಯವಾಗಿರಿಸಿಕೊಳಕೂಡದೆಂಬದು. ಇದನ್ನನುಸರಿಸಿ ಕೆಲವು ಇಲಾಖೆಯಲ್ಲಿದ್ದ ಉಮೇದ್ವಾರರೆಲ್ಲರು ವಜಾಮಾಡಲ್ಪಟ್ಟರೆಂದು ತಿಳಿಯಬರುತ್ತಿದೆ. ನ್ಯಾಯತಃ ಇದು ದಿವಾನರವರ ಜನರಲ್ ಡಿಪಾರ್ಟ್ಮೆಂಟಿಗೆ ವಿಶೇಷತಃ ಬಾಧಕವಾದುದಾಗಿರುತ್ತಿದೆ. ಅಲ್ಲಿ ಕಾಯಂ ಬರಾವರ್ದಿಗಿಂತಲೂ ಉಮೇದ್ವಾರರ ಸಂಖ್ಯೆಯು ಹೆಚ್ಚಾಗಿರುತ್ತಿದೆ. ಮುಖ್ಯವಾಗಿ ದಿವಾನರವರ ಹುಕುಂ ಒಂದು ಭಾಗದಲ್ಲಿ ಅನುಕೂಲವಾಗಿಯೂ ಮತ್ತೊಂದು ಭಾಗದೊಳು ಪ್ರತಿಕೂಲವಾಗಿಯೂ, ಇಲಾಖಾಧಿಕಾರಿಗಳಿಗೆ ಪ್ರೋತ್ಸಾಹಕರವಾಗಿಯೂ, ಬಡವರಿಗೆ ಅನುತ್ಸಾಹಕರವಾಗಿಯೂ ಇರುತ್ತಿದೆ ಹ್ಯಾಗೆಂದರೆ, ಅನುಭವಶೂನ್ಯರಾದ ಪ್ರೌಢ್ಯ ಜವಾಬ್ದಾರಿಯಿಲ್ಲದಂತವರೆಲ್ಲರು ಸರ್ಕಾರೀ ಕಾಗದ ಪತ್ರಗಳ ಸಂಬಂಧವಂ ಪಡೆದಿರುವಣದರಿಂದ ಅವು ಕದಾಚಿತ್ ಗೈರುವಿಲೆಯಾದರೆ ಅವುಗಳ ಜವಾಬ್ದಾರಿಯು ಒಬ್ಬರನ್ನೂ ಸೇರದೆ ಹೋಗುತ್ತಿದೆ. ಕಾಯಂ ನೌಕರನು ಉಮೇದ್ವಾರನ ಮೇಲೆ ಹೊರಿಸುವದಕ್ಕೂ, ಅವನು ತನಗೇನಾದರು ಸಂಬಳ ಕೊಡಲ್ಪಡುತ್ತಿದೆಯೇ ಯೆಂದು ಕೇಳಿ ತಪ್ಪಿಸಿಕೊಳ್ಳುವದಕ್ಕೂ ಅಂತಾ ಉಮೇದ್ವಾರನನ್ನು ಆಫೀಸಿನಲ್ಲಿ ದಾಖಲ್ಮಾಡಿಸಿದ ಆಫೀಸರರ ಅವಿಮರ್ಶಕತೆಯು ಸ್ಪಷ್ಟವಾಗುವದಕ್ಕೂ, ಅವಕಾಶವುಂಟಾಗಿರುತ್ತಿದೆ. ಮುಂದೆ ಅಂತಾದ್ದಕ್ಕೆ ಆಸ್ಪದವಿಲ್ಲದಂತೆ ತಪ್ಪಿಸಿದ್ದು ಒಂದುವಿಧ ಅನುಕೂಲ್ಯವು. ಒಂದು ಇಲಾಖೆಯಲ್ಲಿ ನಿಯಮಿಸಲ್ಪಡತಕ್ಕವರು ಪ್ರಿಯತಃ ವಾಲ್ಲಭ್ಯನೆಲ್ಲುಂತಾ ಪ್ರಬಲರ ಪರಂಪರಾ ಸಂಬಂಧಿಗಳಾಗಿರುವದರಿಂದ ಅವರ ವಾಲ್ಲಭ್ಯವೂ, ಪ್ರಬಲಾಭಿಮಾನವೂ, ದಾಕ್ಷಿಣ್ಯವೂ, ಇತರರಿಗಲಭ್ಯವಾದ ವಿಶೇಷ ಸ್ವಾತಂತ್ರ್ಯವೂ, ಆಫೀಸಿನಲ್ಲಿ ಮೇಜವ ಮುಂದೆ ಕ್ಷಣಕಾಲ ಕುಳಿತು ಅವರು ಕೆಲಸಮಾಡಿಸರೊಲ್ಲರು ಅವರುಸ್ವಾತಂತ್ರ್ಯ ಪ್ರವರ್ತಕ ಲೇಖರಿಸಿಟ್ಟು ಹೋಗತಕ್ಕ ಕೆಲಸಗಳನ್ನು ಸಹ ಸಿಲ್ಕು ಇವವೆ ಪೈಸಲ್ಮಾಡಿ ತಮ್ಮ ತಲಬನ್ನು ದೃಢಪಡಿಸಿಕೊಳ್ಳಬೇಕಾದ ಭಾರವು, ಪಡಿತರರಾದ ನಿರ್ಭಾಗ್ಯರದಾಗಿರುವವರಿಂದ ಜರೂರಿಯಾತ್ ಕಾಲದಲ್ಲಿ ಈ ಉಮೇದ್ವಾರರು ಪ್ರತ್ಯೇಕವೊಡನೆ ಶ್ರಮಿಸಿ ಸಹಾಯ ಮಾಡಿ ಕೆಲಸವಂ ನೆರವೇರಿಸುತ್ತಾರೆ. ಅಂತಾ ಅನುಕೂಲ್ಯವಂ ಹೋಗಲಾಡಿಸಿದ್ದು ಪ್ರತಿಕೂಲ್ಯವು, ಇಲಾಖೆಯಲ್ಲಿ ಯಾವದಾದರೆ ಒಂದು ಕೆಲಸ ಖಾಲಿಯಾಗುವ ಸಂದರ್ಭದಲ್ಲಿ ಉಮೇದ್ವಾರರಿಂದ ವ್ಯರ್ಥವಾದ ಪ್ರಕಾರಗಳೂ, ಮನಸ್ತಾಪಕ್ಕೂ, ನಿರ್ಬಂಧಕ್ಕೂ ಅಧಿಕಾರಿಗಳು ವಿಷಯರಾಗಬೇಕಾಗಿತ್ತು. ಈಗ ಅಂತಾದ್ದೊಂದು ಇಲ್ಲದೆ ಕೆಲಸ ಖಾಲಿಯಾದ ಕೂಡಲೆ ತಮ್ಮ ಇಷ್ಟಮಿತ್ರರಿಗಾಗಲಿ, ತದಾಶ್ರಿತರಿಗಾಗಲಿ, ಸದ್ದಿಲ್ಲದೆ ವಿಲೇವಾರಿಮಾಡಿಕೊಳ್ಳಲಿಕ್ಕೆ ಅನುಕೂಲಿಸಿರುವದರಿಂದ ಪ್ರತಿಬಂಧಕ ಪ್ರಾಯರಾದ ಉಮೇದ್ವಾರರ ಬಧೆಯಿಂದ ವಿಮುಕ್ತರನ್ನಾಗಿ ಮಾಡಿದ್ದು ಅವರಿಗೆ ಪ್ರಬಲ ಪ್ರೋತ್ಸಾಹರೂಪವಾಗಿರುತ್ತಿದೆ. ನಿರ್ಭಾಗ್ಯರಾದ ಬಡವರು ಯೆಲ್ಲಿಯಾದರೊಂದು ಇಲಾಖೆಯಲ್ಲಿ ಅಪ್ರಮಿಸಿಕೊಂಡಿದ್ದರೆ ಕಾಲಾಂತರದಲ್ಲಿ ಇಲಾಖಾಧಿಕಾರಿಗಳಿಗೆ ಕೃಪೆಯುಂಟಾಗಿ, ನಿಶ್ಕೇಳನನ್ನಾದರು ತಮಗೆ ಕೊಡದೆ ಹೋಗುವರೇ ಎಂಬ ಪ್ರತ್ಯಾಶೆಯೊಡನೆ ಶ್ರಮಪಡುತ್ತಲಿದ್ದ ಉಮೇದ್ವಾರರಿಗಿದು ಅನುತ್ಸಾಹಕರವಾದುದಾಗಿರುತ್ತಿದೆ. ಏತೇನ ವಾಲಂಟಿಯರ್ ಶಬ್ದವೂ, ಪ್ರೊಬೇಷನರಿ ಶಬ್ದವೂ ಫಲ ಪರ್ಯವಸಾನದಲ್ಲಿ ಸಮಾನಾರ್ಥ ಬೋಧಕಗಳಾಗಿರುತ್ತಿವೆ ಹ್ಯಾಗೆಂದರೆ, ವಾಲಂಟಿಯರೆಂಬವರು ಸದ್ಯಃ ಪ್ರತಿಫಲವಂ ಪಡೆಯದೆ ಕೆಲಸವಂ ಕಲಿತುಕೊಳ್ಳತಕ್ಕವರಾಗಿರುತ್ತಾರೆ. ಪ್ರೊಬೇಷನರ್‌ಗಳು ಫಲಾನುಭವವೊಡನೆ ಕೆಲಸವಂ ಕಲಿತುಕೊಳ್ಳುವಂತವರಾಗಿರುತ್ತಾರೆ. ಮೊದಲನೆಯವರು ಅನುಭವಶಾಲಿಗಳಾಗಿ ಸಮರ್ಥರೆನಿಸಿಕೊಂಡಾಗ್ಯೂ ಕಡೆಗೆ ಅವರಿಗೊಂದು ಕೆಲಸ ದೊರೆಯುವದು ಅಸಾಧ್ಯವಾಗುತ್ತಿದೆ. ಎರಡನೆಯವರು ನಿಯಮಿತ ಕೆಲಸದಲ್ಲಿ ಜ್ಞಾನವಂ ಪಡೆಯದಿದ್ದಾಗ್ಯೂ ಅವರಿಗೆ ಬೇರೆಯೊಂದು ವಿಧವಾದ ಪ್ರಯೋಜನಾವಾಪ್ತಿಯು ಸ್ವತಸ್ಸಿದ್ಧವಾಗಿರುತ್ತಿದೆ. ಪ್ರಥಮಪಕ್ಷದವರಿಗೆ ಭವಿಷ್ಯತ್ಫಲನಿರೀಕ್ಷಣೆಯಮೇಲೆ ಕೆಲಸದಲ್ಲಿ ಆಸಕ್ತಿಯೂ ಭೀತಿಯೂ ಅಧಿಕವಾಗಿರುವವು ದ್ವಿತೀಯಪಕ್ಷದವರಿಗೆ ತನುಗೆಲಭಿಸಿದ ಪ್ರಯೋಜನವು ಅನುಪಯತವಾದುದರಿಂದ ಲವಕ್ಕೆ ಚ್ಯುತಿಬರಲಾರದೆಂಬ ಧೈರ್ಯವೂ ಅಶ್ರದ್ಧೆಯೂ ಅನಾದರಣೆಯೂ ಅವರಲ್ಲಿ ದಾರ್ಢ್ಯವನ್ನೈದುತ್ತಿವೆ. ಇಂತಾ ಪ್ರೊಬೇಷನರ್‌ಗಳ ಸಂಖ್ಯೆಯು ಪ್ರತಿ ಇಲಾಖೆಯಲ್ಲಿಯೂ, ಪ್ರತಿಬಾಪನ್ನದಲ್ಲಿಯೂ ವೃದ್ಧಿಯನ್ನೈದುತಲಿರುವಂತಾ ಈಕಾಲದಲ್ಲಿ ವಾಲಂಟಿಯರ್‌ಗಳ ಪ್ರಯೋಜನವು ಅಲ್ಪವಾಗಿಯೂ ಅನಾವಶ್ಯಕವಾಗಿಯೂ ಇರುತ್ತಿದೆ. ಇಂತವರ ಸಂಬಂಧವಂ ಇಲಾಖೆಗಳಿಂದ ತಪ್ಪಿಸಬೇಕಾದ್ದುಚಿತವೆಂಬದು ಬಹಳ ಶ್ಲಾಘ್ಯವಾದ ಅಭಿಪ್ರಾಯವಾಗಿರುತ್ತಿದೆ. ಇದೇ ಸಿದ್ಧಾಂತವನ್ನೇ ಬೇರೆಯೊಂದು ವಿಷಯದಲ್ಲಿ ಅನ್ವೈಸಿದರೆ ಅದು ಹಾಸ್ಯಾಸ್ಪದವಾಗುವದಲ್ಲ ಎಂದು ಭಯಪಡುತ್ತೇವೆ. ಹ್ಯಾಗೆಂದರೆ, ಜವಾಬ್ದಾರಿ ಇಲ್ಲದೆಯೂ, ವೇತನಗಳಿಲ್ಲದೆಯೂ, ಇರುವಂತಾ ವಾಲಂಟಿಯರ್‌ಗಳ್, ದ ಕಾಯಂ ರಿಜಿಮೆಂಟಿಗೆ ವಿಶೇಷ ಸಂದರ್ಭಗಳಲ್ಲಿ ಸಹಾಯ ಮಾಡಿಸುವಣವು ಕೂಡ ಅಹಿತಾಯಕರವಾಗಿಯೂ ಅಕ್ರಮವಾಗಿಯೂ ಇರಬಹುದಾಗಿ ಬ್ರಿಟಿಷ್ ಗವರ್ನ್‌ಮೆಂಟಿನವರು ತಮ್ಮ ರಿಜಿಮೆಂಟಿನಲ್ಲಿ ದಾಖಲಾಗಿರುವಂತಾ ವಾಲಂಟಿಯರ್‌ಗಳನ್ನೆಲ್ಲ ಏಕಕಾಲದಲ್ಲಿ ತಳ್ಳಿಹಾಕಬೇಕಾದ್ದೇ ಅವರಿಗೆ ಕರ್ತವ್ಯವಾಗಿರುತ್ತದೆ. ಇಂತಾ ಸಲಹೆಯನ್ನು ಯಾವನಾದರು ಮಾಡುವನಾದರೆ ಅವನು ಹುಚ್ಚನೆಂದು ಕರೆಯಲ್ಪಡುವದಕ್ಕೇನೂ ಅಭ್ಯಂತರವಿಲ್ಲವು. ಮುಖ್ಯವಾಗಿ ನಾವಿಲ್ಲಿ ತಿಳಿಸುವದೇನೆಂದರೆ, ಉಮೇದ್ವಾರರನ್ನು ಇಟ್ಟುಕೊಂಡು ಅವರಿಗೆ ಇಲಾಖೆಯ ಸಕಲ ಬಾಬ್‌ಗಳನ್ನೂ ಬೋಧಿಸಿ ಅವರು ಅನಭವಶಾಲಿಗಳೆಂದು ವ್ಯಕ್ತವಾಗುವ ಸಂದರ್ಭದಲ್ಲಿ ಅವರ ಹಕ್ಕುದಾರಿಯನ್ನು ಇಲಾಖಾಧಿಕಾರಿಗಳು ಸದ್ದಾಂಗವಾಗಿ ಉಪೇಕ್ಷಿಸಿ ಅನ್ಯರಿಗೆ ಕೊಡದೆ ಅವರಿಗೆ ಕೊಡಬೇಕೆಂಬದಾಗಿಯೂ, ಅಂತಾ ವಾಲಂಟಿಯರ್‌ಗಳನ್ನು ದಾಖಲ್ಮಾಡಿಕೊಳ್ಳಬೇಕಾದ ಸಂದರ್ಭಗಳಲ್ಲಿ ಯೋಗ್ಯರಾಗಿಯೂ, ಪ್ರಾಮಾಣಿಕರಾಗಿಯೂ, ಜಾಗರೂಕರಾಗಿಯೂ, ವಿದ್ಯಾವಂತರಾಗಿಯೂ ಉತ್ತರೋತ್ತರ ಕೊಡಲ್ಪಡಬಹುದಾದ ಕೆಲಸವಂ ನಿರ್ವಹಿಸಲಿಕ್ಕೆ ಶಕ್ತರಾಗಬಹುದೆಂಬ ನಂಬಿಕೆಯು ಪೂರ್ವವರಾಗಿಯೂ ಇರುವ ಬಾಲಕರನ್ನೇ ಆರಿಸಿ ದಾಖಲ್ಮಾಡಿಕೊಳ್ಳತಕ್ಕದ್ದೆಂಬದಾಗಿಯೂ, ಹುಕುಂ ಕೊಡಲ್ಪಟ್ಟದ್ದರೆ ಮೇಲೆ ನಾವು ತಿಳಿಸಿರುವ ಅಸಂದರ್ಭಗಳ್ಯಾವವಕ್ಕೂ ಅವಕಾಶವುಂಟಾಗಿರುತಲಿರಲಿಲ್ಲವು. ಇದರಿಂದ ದಿವಾನರವರ ಹುಕುಮನ್ನು ಆಕ್ಷೇಪಿಸುವದಕ್ಕೆ ನಾವುಪ್ರಯತ್ನಿಸಿದವರಲ್ಲವು, ಪರಂತು ಅದು ನಿವಾರಕವಾದುದಾಗದೆಯೇ ಹೋಗದು ತಕ್ಕ ಪ್ರತಿಕ್ರಿಯೆಯಂ ಕಲ್ಪಿಸುವದಾದ್ದಾಗಿಲ್ಲವೆಂಬದಂ ತೋರಿಸಬೇಕಾದ್ದೇ ಪ್ರಕೃತ ನಮ್ಮ ಲೇಖನದ ಮುಖ್ಯೋದ್ದೇಶವಾಗಿರುತ್ತಿದೆ.

## ಪ್ರಾಣಾಂತವಾದ ಮತವಿದ್ವೇಷವು.

ಹಿಂದೂಗಳಿಗೂ ಮುಸಲ್ಮಾನರಿಗೂ ಉಂಟಾಗಿರುವ ವಿದ್ವೇಷವು ಕಾಲಕ್ರಮೇಣ ವಿಷದಂತೆ ದಿನೇ ದಿನೆ ವೃದ್ಧಿಯನ್ನೈದುತ ಇಂಡ್ಯಾದೇಶದ ಸಮೂಲ ವಿನಾಶಕ್ಕೆ ಕಾರಣವಾಗುವಂತೆ ತೋರುತ್ತಿದೆ. ಮಾಹೇ ಮಜಕೂರ್ ೧೧ ನೇ ತಾರೀಖ್ ಶುಕ್ರವಾರದ ದಿನ ಮುಂಬೈ ಷಹರಿನಲ್ಲಿ ಮುಸಲ್ಮಾನರಿಗೂ ಹಿಂದೂಗಳಿಗೂ ಅತಿಘೋರವಾದ ಕಲಹವೊಂದು ಪ್ರಾಪ್ತವಾಗಿ ಅದರಿಂದ ಕೆಲವು ಪ್ರಾಣಹಾನಿಗಳು ಸಂಭವಿಸಿದವು. ಇದರ ಕಾರಣವೇನೆಂದರೆ— ಗೋರಕ್ಷಕ ಸಂಘವೆಂಬದಾಗಿ ಮುಂಬೈಯೊಳೇರ್ಪಟ್ಟಿರುವ ಒಂದು ಸಮಾಜದವರು ಗೋವಧೆಗೆ ಅವಕಾಶವನ್ನೀಯದಂತೆ ಗೋವುಗಳನ್ನು ಕ್ರಯಕ್ಕೆ ಕೊಂಡುಕೊಂಡು ಅವಂ ಅನ್ಯಥಾ ವಿನಿಯೋಗಿಸುವದರ ಮೂಲಕ ಗೋಹಿಂಸಕರಾದ ಮುಸಲ್ಮಾನರ ಪ್ರಯತ್ನಕ್ಕೆ ಭಂಗ ವುಂಟುಮಾಡಬೇಕೆಂದು ಬಹಿರಂಗವಾಗಿ ಬೀದಿಗಳಲ್ಲಿ ಸಾರುತ ಹೊರಡಲಾರಂಭಿಸಿದರು, ಅದರಮೇಲೆ ಬದ್ಮಾಷ್‌ಗಳಾದ ಕೆಲವರು, ಮುಸಲ್ಮಾನರು ಕಲಹಪ್ರಿಯರಾದ ಕೆಲರಂ ಸೇರಿಸಿಕೊಂಡು ಹಿಂದೂಗಳು ತಮಗೆ ಮುಖ್ಯ ಆಹಾರ ವಸ್ತುವಾದ ಗೋವು ತಮಗೆ ದೊರೆಯದಂತೆ ಮಾಡುವ ಪ್ರಯತ್ನವುಳ್ಳವರಾಗಿದು ಗೊಂಡದಾಗಿ ವಿರುದ್ಧ ಭಾವವನ್ನುಂಟುಮಾಡಿ, ಹಿಂದೂಗಳು ಏತದರ್ಥ ದನಸಹಾಯಕ್ಕಾಗಿ ಸಭೆ ಸೇರುತ್ತಾರಾಗಿ ಅವರ ಪ್ರಯತ್ನಗಳು ಸಫಲಗೊಂಡರೆ ಬಳಿಕ ಆಹಾರವಿಲ್ಲದೆ ಮುಸಲ್ಮಾನರೆಲ್ಲರು ಸಾಯಬೇಕಾಗಿರುವದೆಂದು ದುರ್ಬೋಧಿಸಿದರು. ಪೋಲೀಸ್ ಕಮಿಷನರವರು ಸದರೀ ಸಂಘದ ಪಜಾಡಗಳನ್ನು ಕರೆಯಿಸಿ ನಿಮ್ಮ ಪ್ರಯತ್ನೋದ್ದೇಶಗಳು ಇತರ ಮತಸ್ಥರಿಗೆ ವೈಮನಸ್ಯವನ್ನೂ, ಆಗ್ರಹವನ್ನೂ ಉಂಟುಮಾಡತಕ್ಕವಾಗಿರುವದರಿಂದ ಮುಂದೆ ಪ್ರಬಲ ಕಲಹಕ್ಕೆ ಆಕರವಾಗದೆ ಹೋಗುವದಿಲ್ಲವೆಂದು ತಿಳಿಸಿದರು. ದಿನೇದಿನೆ ಹಿಂದೂಗಳ ಪ್ರಯತ್ನವು ಮುಸಲ್ಮಾನರಿಗೆ ಪರಹಸ್ತಾರವಾದ ಆಗ್ರಹವು ವೃದ್ಧಿಪಡಿಸುತ ಬಂದವಲ್ಲದೆ ಅವರು ಕಲಹಕ್ಕೆ ಕಾಲ್ಕೆರೆಯುತ ಕಾರಣವಂ ಹೊಂಚುಹಾಕಿಕೊಂಡು ನಿರೀಕ್ಷಿಸಿಕೊಂಡಿದ್ದರು. ಹೀಗಿರಲಾಗಿ, ಹಿಂದೂಗಳು ಪ್ರಭಾಸ ಪಟ್ಟಣದಲ್ಲಿ ನಡೆದ ಕಲಹದೊಳು ಅಪರಾಧಿಗಳನ್ನು ದಂಡಿಸದೆ ಬಿಡಕೂಡದೆಂದು ಪ್ರಕಟಿಸಲು ಅವರ ಆಗ್ರಹವು ಮತ್ತಷ್ಟು ವೃದ್ಧಿಯಾಯಿತು. ಆ ದಿನ ಮಧ್ಯಾಹ್ನ ಮೂವರ್ ೩ ಘಂಟೆಯ ಸಮಯದಲ್ಲಿ ಆಕ್ಟಿಂಗ್ ಪೋಲೀಸ್ ಕಮಿಷನರವರೂ ಆಕ್ಟಿಂಗ್ ಡೆಪ್ಯುಟಿಕಮಿಷನರವರೂ, ಇನ್ಸ್‌ಪೆಕ್ಟರ್ ಮತ್ತು ೩ ಸವಾರರೊಡನೆ ಪಿಂಡಿಬಜಾರ್ ಮಾರ್ಗವಾಗಿ ಹೋಗುತಲಿರುವಾಗ್ಯೆ ಮುಸಲ್ಮಾನರು ಕೆಲವರು ತಮ್ಮ ಮನೆಯ ಮಹಡೀ ಮೇಲಿಂದ ಕಲ್ಲುಗಳನ್ನೆಸೆದು ಸದರೀ ಆಫೀಸರ್‌ಗಳನ್ನು ಎಂಗಾಗಿ ಜಖಂಪಡಿಸಿದರು. ಇದರಸಂಗತ ಯುದ್ಧವರಿಗೆ ಸಹ ಬಲವಾದ ಘಾಯಗಳಾದವು ಇಷ್ಟರಲ್ಲಿ ಮಿಲಿಟರಿಸೈನ್ಯವನ್ನು ಕರೆಯಿಸಬೇಕೆಂಬದಾಗಿ ಪೋಲೀಸ್‌ಕಮಿಷನರವರು [illegible]ರಿಗೆ ಹುಕುಂ ಮಾಡಿದರು ಸುಮಾರ್ ೩೦೦ ಜನ [illegible] ಬೀದಿನಲ್ಲಿ ಗುಂಪುಸೇರಿ ಕಲಹಕ್ಕಾಪಕ್ರಮಿಸಿದರೆಂದು ತಿಳಿಯಬಂತು. ಬೇಂಡಿ ಬಜಾರಿನಲ್ಲಿರುವ ಅರಬ್ಬು ಮತ್ತು ಶಿದ್ದೀ ವಗೈರೆ ಕಂಜಾತಿ ಮುಸಲ್ಮಾನರು ತಿರುಗಿಬಿದ್ದು, ಭುವನೇಶ್ವರ ಮತ್ತು ಕಾಳಕಾದೇವಿಯ ದೇವಸ್ಥಾನಗಳನ್ನು ನಾಶಪಡಿಸಿ ಅರ್ಧಬರುವಂತಾ ಹಿಂದೂಗಳನ್ನು ಖೂನ್ ಮಾಡಿ ಗಲಭೆಪಡಿಸಬಹುದೆಂದು ತಿಳಿದು ಅಲ್ಲಿನ ಪೋಲೀಸ್ ಸ್ಟೇಷನಿನಬಳಿ ಬೇಕಾದ ಪಹರೆಯವರನ್ನಿಡಬೇಕಾಯಿತು. ಶುಕ್ರವಾರದ ದಿನ ಮಧ್ಯಾಹ್ನ ಬೇಂಡಿಬಜಾರಿನಲ್ಲಿರತಕ್ಕ ಮುಸಲ್ಮಾನರೆಲ್ಲರು [illegible] ತಿರುಗಿಬಿದ್ದು ಹಿಂದೂ ಅಂಗಡಿಗಳನ್ನೊಡೆದು ಅಲ್ಲಿದ್ದ ಪದಾರ್ಥಗಳನ್ನೆಲ್ಲ ಬೀದಿಯಲ್ಲಿ ಹಾಕಿಬಿಟ್ಟರು. ಇಷ್ಟರಲ್ಲಿ ಅನ್ಯತ್ರ ಕಲೆಯಿಸಿ ಗಲಭೆ ನಡೆಸಿದ ಮುಸಲ್ಮಾನರನೇಕರು ಪೋಲೀಸ್ ಸ್ಟೇಷನಿಗೆ ತರಲ್ಪಟ್ಟರು. ಬೇಂಡಿ ಬಜಾರಿನಲ್ಲಿ ಜನಗಳ ಸಮ್ಮರ್ದವು ಅಧಿಕವಾದ್ದರಿಂದ ಕೂಡಲೆ ಅಂಗಡಿಗಳೆಲ್ಲವು ಮುಚ್ಚಲ್ಪಟ್ಟವು ತತ್ಕಾಲದಲ್ಲಿ ಹಾಜರಿದ್ದ ಪೋಲೀಸ್‌ನವರ ಸಂಖ್ಯೆಯು ಕಲಹಿಗಳ ಪ್ರಾಬಲ್ಯವಂ ಅಡಗಿಸುವದಕ್ಕೆ ಶಕ್ತವಾಗಿಲ್ಲದೆ ಹೋದ್ದರಿಂದ ಯೂರೋಪಿಯನ್ ಸೈನ್ಯವು ಬಂದು ತಡಬಂದಿಗೆ ನಿಂತಿತು. ಆ ಸಮಯದಲ್ಲಿ ಮಿಲಿಟರಿ ಸಹಾಯವು ಲಭಿಸದಿದ್ದರೆ ಬಹು ಪ್ರಾಣಹಾನಿಗೆ ಆಸ್ಪದವಾಗಿರುವದು. ಅರಬ್ಬಿಯವನೊಬ್ಬನು ಒಬ್ಬ ಹಿಂದುವನ್ನು ಖೂನ್ ಮಾಡುತಲಿರುವ ಸಮಯದಲ್ಲಿ ಯೂರೋಪಿಯನ್ ಪೋಲೀಸ್ ಇನ್ಸ್‌ಪೆಕ್ಟರ್ ಪ್ರವೇಶಿಸಿ ಅವನಂ ಕಾಪಾಡಿದನು. ಸೆಂಟ್ರಲ್ ಜೆಯಿಲ್‌ನಿಂದ ಮುಸಲ್ಮಾನರಿರುವ ಪ್ರದೇಶಕ್ಕೆ ಹೋಗುವ ಮಾರ್ಗಕ್ಕೆ ಮಧ್ಯೆ ಬಿದ್ದ ಒಂದು ದೇವಾಲಯವಂ ನೆಲಸಮನುಮಾಡಿ ಅದರಲ್ಲಿದ್ದ ವಿಗ್ರಹವನ್ನು ತುಂಡುಮಾಡಿ ಬಚ್ಚಲಲ್ಲೆಸೆದುಬಿಟ್ಟರು. ಮತ್ತೊಂದು ದೊಡ್ಡ ದೇವಾಲಯವನ್ನು ಬದನೂರ್ ನಾಶ ಮಾಡಿ ಅದರೊಳಗಿದ್ದ ವಿಗ್ರಹ ಮೊದಲಾದ ಸಾಮಾಗ್ರಿಗಳನ್ನೆಲ್ಲ ಚೂರುಚೂರಾಗಿ ಮುರುಕು

ಹಾಕಿದರು. ಇದರಮೇಲೆ ಮುಸಲ್ಮಾನರ ಗಲಾಟೆಯನ್ನು ಕುರಿತು ಹಿಂದೂಗಳು ಪೋಲೀಸ್ ಕಮಿಷನರಿಗೂ ಚೀಫ್ ಮ್ಯಾಜಿಸ್ಟ್ರೇಟರಿಗೂ ತಿಳಿಸಲು ಅವರು ಸದರೀ ಸ್ಥಳಕ್ಕೆ ಹೋಗಿ ಹಿಂದೂಗಳಿಗೆ ಪ್ರಾಪ್ತವಾದ ನಷ್ಟವನ್ನು ಗುರ್ತುಮಾಡಿಕೊಂಡು ಹೊರಟುಹೋದರು. ಅಲ್ಲಿಂದ ಸ್ವಲ್ಪ ದೂರ ಹೋಗುವಾಗ್ಯೆ ಅಲ್ಲಿದ್ದ ಮತಸ್ಥರು ದೇವಾಲಯದ ಗುರುತು ಇಲ್ಲದಂತೆ ನೆಲಸಮನಾಗಿರುವದನ್ನು ಕಂಡರು. ಅದೇದಿನ ಸಾಯಂಕಾಲ ಪ್ರೆಸೀಯಿಂದ ಬಾಂಬೆ ಇರ್ರೆಗ್ಯುಲರ್ ಪೈಕಿ ೩೦ ಜನ ಕರೆಯಿಸಲ್ಪಟ್ಟರು. ಕಲಹ ನಡೆಯಬಹುದೆಂಬ ಅನುಮಾನಕ್ಕೆ ಸಂಬಂಧ ಕಡೆಗಳಲ್ಲೆಲ್ಲ ಮಿಲಿಟರಿ ಸೈನ್ಯಗಳಿಡಲ್ಪಟ್ಟವು. ಈ ಕಲಹವು ಪ್ರಥಮತಃ ಜುಮ್ಮಾ ಮಸೀದಿಯಲ್ಲಿ ಜನಿಸಿ ಅಲ್ಲಿಂದ ಇತರ ಕಡೆಗಳಿಗೆ ಹರಡಿದಂತೆ ತಿಳಿಯುಬರುತ್ತದೆ. ಮಾಂಡ್ವಿಯೆಂಬ ಪ್ರದೇಶದಲ್ಲಿ ನಡೆದ ಕಲಹವು ಅತಿ ಘೋರವಾದದ್ದಲ್ಲದೆ ಇತರತ್ರ ಜರುಗಿದ ಕಲಹಗಳಲ್ಲಿ ಇಬ್ಬ ಹಿಂದೂಗಳ ಪ್ರಾಣಹಾನಿಯೂ, ೨೦೦ ಮಂದಿಗಿಂತ ಅಧಿಕವಾಗಿ ಜಖಮೂ ಬಹು ಪದಾರ್ಥ ನಷ್ಟವೂ ಪ್ರಾಪ್ತವಾದವು. ಮುಸಲ್ಮಾನರು ಹಿಂದೂಗಳನ್ನು ದಾರಿಗಟ್ಟಿ ಹೊಡೆದು ಆಕ್ರಮಿಸಿದರು. ಹಿಂದೂಗಳು ಸಹ ಕೆಲವು ವೇಳೆಯಲ್ಲಿ ತಮ್ಮ ಸ್ಥಳಕ್ಕೆ ಕಾರ್ಯಾರ್ಥವಾಗಿ ಬಂದ ಮುಸಲ್ಮಾನರನ್ನು ನಿರ್ಬಂಧಿಸಿದರು. ದರ್ಗಾ ಮತ್ತು ಟಪ್ಪೀಗಳು ಬಹಳ ಕಲಹಪ್ರಿಯರಾಗಿ ಅಸ್ವಾಧೀನರಾಗಿದ್ದದರಿಂದ ಆಯಾ ಪಕ್ಷದ ಗಲಭೆಗಳನ್ನು ಕಲೆಯಿಸಿ ಸಮಾಧಾನ ಪಡಿಸಲಿಕ್ಕೆ ಕೇಳುವುದು ಅಶಕ್ಯವೆಂಬದಾಗಿ ಪೋಲೀಸ್ ಅಧಿಕಾರಿಗಳು ನಿರ್ಣಯಿಸಿದರು. ಟರ್ಕಿ ಲಾಯನನ್ನು ಕಲಹಿಗಳು ಒಡೆದು ಕಿಟಕಿಗಳು ಮುರಿದು ಬಹಳ ನಷ್ಟಪಡಿಸಿದರು. ಅದೇ ಸಾಯಂಕಾಲ ನಾಲ್ಕು ಕೋಪಿಗಳು ತರಿಸಲ್ಪಟ್ಟು ತಮಾಯಾತಗಳ ಪ್ರದೇಶಗಳಲ್ಲಿಡಲ್ಪಟ್ಟವು. ಆ ರಾತ್ರಿ ಪಡಶಿ ಬುದೋಲಬಸ್ತಿಯಬಳ್ಯೆ ಲ್ಯಾಂಕಾಷೇರ್ ರಿಜಿಮೆಂಟಿನ ೩೦ ಜನ ಸೋಲ್ಜರುಗಳು ಗಸ್ತು ತಿರುಗುತಲಿದ್ದರು. ರಾತ್ರಿ ೪ ಘಂಟೆಗೆ ಮುಸಲ್ಮಾನರೂ ಹಿಂದೂಗಳೂ ಸೇರಿ ೧೫೦ ಜನ ಕಲಹಿಗಳು ಮಿಲಿಟರಿ ಕಾವಲಿನವರಿಂದ ಪ್ರೆಸಿಡೆನ್ಸಿ ಕೋರ್ಟಿಗೆ ಸಾಗಿಸಲ್ಪಟ್ಟರು. ದೋಬಿ ತಲಾವ್ ಪೋಲೀಸ್ ಸ್ಟೇಷನ್ನಿನಲ್ಲಿ ೩೬ ಜನರು ಖೈದ್ ಮಾಡಲ್ಪಟ್ಟರು. ಅದೇ ರಾತ್ರಿಯಲ್ಲಿ ಒಬ್ಬ ಮುಸಲ್ಮಾನ ನ ಕನು ಎರಡು ಕುದುರೆಗಳನ್ನು ಅಂಗಡಿಗೆ ತೆಗೆದುಕೊಂಡು ಹೋಗುವಾಗ್ಯೆ ಅವನನ್ನು ಹೊಡೆದು ಜಖಮಗಾಡಿ ಎಳೆದು ಹಾಕಿದ ೧೧ ಜನರ ಪಠಾಣ ಜಾತಿಯವರು ಕೈದಿ ಮಾಡಲ್ಪಟ್ಟರು. ಮುಸಲ್ಮಾನರು ಮತ್ತು ಹಿಂದೂಗಳೂ ಸೇರಿ ಜಖಮಾದ ಒಟ್ಟು ಮಂದಿಯ ಪೈಕಿ ೫೪ ಜನ ಚಿಕಿತ್ಸೆ ಮಾಡಿಕೊಂಡು ಮನೆಗೆ ವಾಪಸ್ ಹೋದರು. ಗೋಕುಲದಾಸ ತೇಜಪಾಲ ಆಸ್ಪತ್ರೆಯಲ್ಲಿ ೩೦ ಮಂದಿಯೂ, ಜಂಷೆಡ್‌ಜಿ ಜೀಜೀಭಾಯಿಯವರ ಆಸ್ಪತ್ರೆಯಲ್ಲಿ ೧೨೦ ಮಂದಿಯೂ ಚಿಕಿತ್ಸೆ ಹೊಂದುತಲಿದ್ದಾರೆ. ೧೧ ಜನ ಜೀವಿಸುವದು ಸಂದೇಹಾಸ್ಪದವಾಗಿದೆ. ಪಟ್ಟಣವೆಲ್ಲಾ ದಿನ ಮತ್ತು ರಾತ್ರಿ ಕಾಲದಲ್ಲೂ ಮುಖ್ಯ ಪಟ್ಟಣವು ಸೈನಿಕರಿಂದ ನಿಬಿಡವಾಗಿ ರಣರಂಗದಂತೆ ಜನ ಸಂಚಾರ ಸಹ ನಿಂತುಹೋಗಿತ್ತು. ಪೋಲೀಸ್ ಸೂಪರಿಂಟೆಂಡೆಂಟರವರ ಹುಕುಂ ಪ್ರಕಾರ ಕೆಂಪು ಪರವಾನೆ ವಗೈರೆ ಮಾದಕ ಪದಾರ್ಥಗಳ ಅಂಗಡಿಗಳು ಆದಿನವೆಲ್ಲ ಮುಚ್ಚಲ್ಪಟ್ಟಿದ್ದವು. ಇಬ್ಬರು ಮೋಗಲ ಜಾತಿಯವರು ಎರಡು ಕತ್ತಿಗಳನ್ನು ತಮ್ಮ ಬಳಿ ಇಟ್ಟುಕೊಂಡಿದ್ದಬಗ್ಯೆ ದಸ್ತಗಿರ್ ಮಾಡಲ್ಪಟ್ಟಿರುತ್ತಾರೆ. ವಗೈರೆ ಇನ್ನೂ ತಹಬಂದಿಗೆ ಬರಲಿಲ್ಲವೆಂಬದಾಗಿ ಮದರಾಸ್ ಮೇಯಿಲ್ ಪತ್ರಿಕೆಗೆ ಬಂದ ತಂತಿ ವೃತ್ತಾಂತದ ಮೂಲಕ ತಿಳಿಯಬರುತಲಿದೆ. ಇತರ ಸಂಗತಿಗಳನ್ನು ಮುಂದಿನವಾರ ತಿಳಿಸುವೆವು.

## Occasional Notes.
## ನೈಮಿತ್ತಿಕ ವಿಷಯನ್ಯಾಸ

ಬರೋಡೆ ಗಾಯಕವಾಡ ಮಹಾರಾಜರವರು ಇದುವರೆಗೆ ಲಂಡನ್ ಪಟ್ಟಣದಲ್ಲಿರುತಲಿದ್ದು ಈ ವೇಳೆ ಅಲ್ಲಿಂದ ಹೊರಟು ಯೂರೋಪ್ ಖಂಡದಲ್ಲಿ ನಾರ್ವೆದೇಶ ಸಂಚಾರ ಮಾಡುತಲಿದ್ದಾರೆ.

ಬೊಬ್ಬಿಲಿ ಸಂಸ್ಥಾನದ ಅರಸರವರು ಈಗ ವಿಲಾಯತಿಗೆ ಹೋಗಿರುತ್ತಾರೆಯಷ್ಟೆ. ಸದರೀಯವರಿಗೆ ಕಳೆದ ತಿಂಗಳ ೧೨ನೇ ತಾರೀಖ್‌ನಲ್ಲಿ ವಿಂಡ್ಸರ್ ಕ್ಯಾಸಿಲ್ ಎಂಬ ಅರಮನೆಯೊಳು ಮಹಾರಾಜ್ಞೀಯವರ ಭೇಟಿ ಆಯಿತು.

ಕಾಶ್ಮೀರದ ಮಹಾರಾಜರವರ ಏಕಪುತ್ರಿಯಾದ ಎರಡುವರ್ಷಗಳ ವಯಸ್ಸಿನ ಮಗು ಕಳೆದ ಜುಲೈ ತಿಂಗಳ ೨೮ನೇ ತಾರೀಖ್‌ನಲ್ಲಿ ಜಮ್ಮೂ ಪಟ್ಟಣದೊಳು ಮೃತಪಟ್ಟಂತೆ ಕೇಳಿ ವಿಷಾದಿಸುತ್ತೇವೆ.

ಅಯೋಧ್ಯೆಯ ತಾಲ್ಲೂಕೆದಾರರೆಲ್ಲರು ಸೇರಿ ಲಕ್ನೋ ಪಟ್ಟಣದಲ್ಲಿ ಒಂದು ಕಬ್ಬಿಣದ ಕಾರ್ಖಾನೆಯನ್ನೇರ್ಪಡಿಸಿ, ಅಯೋಧ್ಯಾ ಮಹಾರಾಜರವರು ಮೊದಲಾದ ಎಂಟುಮಂದಿ ತಾಲ್ಲೂಕೆದಾರರು ಸದರೀ ಕಾರ್ಖಾನೆಯ ವಿಚಾರಣೆಯ ಬಗ್ಗೆ ಒಂದು ಸಂಘವಾಗಿ ಏರ್ಪಟ್ಟಿರುತ್ತಾರೆ.

ತಾಲ್ಲೂಕು ಶಿರಸ್ತೇದಾರರು ತಾವು ಯಾವ ತಾಲ್ಲೂಕಿನಲ್ಲಿ ನೌಕರಿ ಮಾಡುತ್ತಾರೆಯೋ ಆ ತಾಲ್ಲೂಕಿನಲ್ಲಿ ಭೂಸ್ಥಿತಿ ಮಾಡಿಕೊಂಡಿರಕೂಡದೆಂದು ಕೊಡಲ್ಪಟ್ಟಿರುವ ಹುಕುಂ, ಮ್ಯಾಜಿಸ್ಟ್ರೇಟ್ ಅಧಿಕಾರವಿಲ್ಲದೆ ಹಿಂದೆ ತಾಲ್ಲೂಕು ಶಿರಸ್ತೇದಾರರೆನಿಸಿಕೊಂಡಿದ್ದ ತಾಲ್ಲೂಕ್ ಹೆಡ್ ಅಕೌಂಟೆಂಟುಗಳಿಗೆ ಅನ್ವಯಿಸುವದಿಲ್ಲವೆಂದು ರೆವಿನ್ಯೂ ಬೋರ್ಡಿನವರು ಹುಕುಂ ಮಾಡಿರುತ್ತಾರೆ.

ಈಚೆಗೆ ಕೆಲವು ದಿನಗಳ ಹಿಂದೆ ಜಾಗ್ರೂರದ ಅಸಿಸ್ಟೆಂಟ್ ಮ್ಯಾಜಿಸ್ಟ್ರೇಟರಾದ ಮಿ॥ ಟಿ ಎ ಎಚ್ ವೇ ಎಂಬವರು ಕೋರ್ಟ್ ಮಾಡುತ್ತಿರುವಲ್ಲಿ ೩ ವ್ಯವಯಸ್ಕನಾದ ಮಹಮ್ಮದೀಯನೊಬ್ಬನು ಏಕ ಏಕಿ ಮ್ಯಾಜಿಸ್ಟ್ರೇಟರ ಮೇಲೆ ಬಿದ್ದು ಚಡಿಯಿಂದ ಅವರನ್ನು ತಲೆಯಮೇಲೂ ಭುಜದಮೇಲೂ ಹೊಡೆಯಲು ಕೂಡಲೆ ದಸ್ತಗಿರಿ ಮಾಡಲ್ಪಟ್ಟನು. ಈ ದುಷ್ಕೃತ್ಯದಬಗ್ಯೆ ಕ್ರಮವಾಗಿ ವಿಚಾರಣೆ ಮಾಡಲ್ಪಡುವನು.

ಲಂಡನ್ ಯೂನಿವರ್ಸಿಟಿ ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನು ೧೮೯೪ನೇ ಇಸವಿ ಜನವರಿ ತಿಂಗಳಲ್ಲಿ ಮದರಾಸಿನೊಳು ನಡೆಸುವದಕ್ಕೆ ತಕ್ಕ ಏರ್ಪಾಡು ಮಾಡಬೇಕೆಂದು ಮದರಾಸ್ ಗವರ್ನ್‌ಮೆಂಟಿನವರು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರನ್ನು ಕೇಳಿಕೊಂಡಿರುತ್ತಾರೆ. ಸದರೀ ಪರೀಕ್ಷೆಯಬಗ್ಗೆ ಇದುವರೆಗೆ ಇಬ್ಬರು ಉಮೇದವಾರರು ತಮ್ಮ ಹೆಸರುಗಳು ರಿಜಿಸ್ಟರ್‌ಮಾಡಿ ವಿಧಿಸಲ್ಪಟ್ಟಿರುವ ರುಸುಮನ್ನು ಸಲ್ಲಿಸಿಕೊಟ್ಟಿರುತ್ತಾರೆ.

ಕಲ್ಕತ್ತಾ ಪಟ್ಟಣಕ್ಕೆ ಸೇರಿದ ಬಾರಾಸೆಟ್ ಎಂಬ ಸ್ಥಳದಲ್ಲಿರುವ ಜೈಲಿನ ಮುಖ್ಯ ಕಾವಲುಗಾರನೂ ಅವನ ಅಸಿಸ್ಟೆಂಟನೂ ಸೇರಿ, ರಾತ್ರಿ ಕಾಲದಲ್ಲಿ ಜೈಲಿನಲ್ಲಿರುವ ಖೈದಿಗಳನ್ನು ಹೊರಗೆ ಬಿಟ್ಟು ಅವರಿಂದ ದರೋಡೆಗಳನ್ನು ಮಾಡಿಸಿ ಅವರು ತರುವ ಕಳವು ಮಾಲುಗಳಲ್ಲಿ ತಾವು ಭಾಗ ತೆಗೆದುಕೊಳ್ಳುತ್ತ ಬಂದ ಸಂಗತಿ ಹೊರಗಾಗಿ ಸದರೀ ಅಧಿಕಾರಿಗಳಿಬ್ಬರು ಅಲಿಪುರದ ಪೋಲೀಸ್ ಕೋರ್ಟಿನಲ್ಲಿ ವಿಚಾರಣೆಗೆ ಗುರಿಯಾಗಿರುತ್ತಾರೆ. ಸದರೀ ಖೈದಿಯರ ಪೈಕಿ ಕೆಲವರು ದರೋಡೆ ನಡೆಸುತ್ತಿರುವಲ್ಲಿ ದಸ್ತಗಿರಿ ಮಾಡಲ್ಪಟ್ಟರು. ಸದರೀ ಇಬ್ಬರು ಅಧಿಕಾರಿಗಳ ವಿಚಾರಣೆ ಪೂರೈಸಿಯಾಗಿ ಎರಡು ವರ್ಷಗಳ ಕಠಿಣ ಖೈದ್ ಸಜಾ ವಿಧಿಸಲ್ಪಟ್ಟರು.

ಕಾಶೀ ಪ್ರಾಂತದಲ್ಲಿ ಆದ್ಯಾಪಿ ನಡೆದುಬರುವ ಒಂದು ಘೋರಕೃತ್ಯವು ಕೇವಲ ಹೃದಯವ್ಯಥಾಕಾರಿಯಾಗಿರುತಿದೆ. ಕಾಶೀ ಸಮೀಪದಲ್ಲಿರುವ ಒಂದು ಗ್ರಾಮದಲ್ಲಿ ಪುರೋಹಿತ ಜನರು ಅಲ್ಲಿನ ಜನರಿಗೆ ಬೋಧಿಸಿ, ಒಂದು ಬ್ರಾಹ್ಮಣ ಕುಟುಂಬಕ್ಕೆ ಸೇರಿದ ಹದಿನಾರು ವರ್ಷಗಳ ವಯಸ್ಸಿನ ಸುಂದರನಾದ ಒಬ್ಬ ಬಾಲಕನನ್ನು ಕಾಳಿಕಾದೇವಿಗೆ ಬಲಿ ಕೊಡುವದಕ್ಕಾಗಿ ದೇವಸ್ಥಾನಕ್ಕೆ ಕರೆದುಕೊಂಡುಹೋಗಿ ಕಾಳಿಯಮುಂದೆ ನಿಲ್ಲಿಸಲು ಮುಖ್ಯಸ್ಥನಾದ ಪೂಜಾರಿಯು ಬಂದು ಬಹು ಜನರ ಸಮಕ್ಷಮದಲ್ಲಿ ಕತ್ತಿಯಂ ತೆಗೆದುಕೊಂಡು ಸದರೀ ಹುಡುಗನ ಕುತ್ತಿಗೆಯಂ ಕೊಯಿದು ರಕ್ತವನ್ನು ಹಿಡಿದು ದೇವಿಯಮೇಲೆ ಪ್ರೋಕ್ಷಿಸಿದನು. ಈ ದುಷ್ಕೃತ್ಯ ನಡೆಸಿದವರೆಲ್ಲರು ದಸ್ತಗಿರಿಯಿಂದ ಈಗ ದರ್ಯಾಫ್ತಿಗೆ ಗುರಿಯಾಗಿರುತ್ತಾರೆಯೆಂದು ವಗೈರೆ ಅಲಹಾಬಾದ್ ಪತ್ರಿಕೆಯೊಂದು ತಿಳಿಸುತಿದೆ.

### ನೋಟಿಸ್.

**ಇದುವರೆವಿಗೆ ಈ ಸಾಲಿನ ಚಂದಾ ಮೊಬಲಗನ್ನು ಕಳುಹಿಸದೆ ಇರತಕ್ಕವರೆಲ್ಲರು ಈ ನೋಟಿಸ್ ನೋಡಿದ ಕೂಡಲೆ ದಯಮಾಡಿ ಕಳುಹಿಸಿಕೊಡಬೇಕೆಂದು ಮರಳಿ ಜ್ಞಾಪಕ ಕೊಡುತ್ತೇವೆ.**

೧೦—೮—೯೩. ಪ್ರೊಪ್ರೈಟರ

## THE MONEY MARKET.

ಮದರಾಸ್, ಶನಿವಾರ,ತಾರೀಖ್ 12 ನೇ ಆಗಸ್ಟ್ 1893

ಸೇಕಡ 4ರೂ ಬಾಬತು ಗವರ್ನಮೆಂಟ್ ಪತ್ರಗಳು ರೂಪಾಯಿಗಳು, 107-0-0 ಇಂದ 107-8-0ವರೆಗೆ.

ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತು 985 ಲಾಗಾಯತು 990 ವರೆಗೆ.

ಕಮರ್ಷಿಯಲ್ ಅಂಡ್ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಷೇರುಗಳು, (100) ಬಾಬತು 150 ರಿಂದ 155 ವರೆಗೆ.

ಸವರೀನುಗಳು, 15-11-0 ಇಂದ 15-13-0 ವರೆಗೆ.

ಬ್ಯಾಂಕ್‌ಬಿಲ್‌ಗಳು ಯಾನೆ ದರ್ಶನಹುಂಡಿಗಳು, ರೂ। ೧ಕ್ಕೆ 6 ತಿಂಗಳವಾಯಿದೆಗೆ, 1s 3 9/16d.

ಡಿಟ್ಟೋ 4 ತಿಂಗಳವಾಯಿದೆಗೆ, 1s 3½d

ಡಿಟ್ಟೋ ಕೇಳಿದಾಗ, 1s 3 13/32d

## LOCAL AND PROVINCIAL NEWS

### ಸ್ಥಳದೇಶಮತ್ತು ತಾಲ್ಲೂಕ್‌ಜಾತ್‌ವೃತ್ತಾಂತಗಳು

ಕಾಲಸ್ಥಿತಿಯನ್ನು ನೋಡಿದರೆ ಮಳೆಯು ಹಿಮ್ಮೆಟ್ಟಿದಂತೆ ತೋರುತಿದೆ. ಇದುವರೆವಿಗೆ ಆ ದಮಳೆಯ ದೆಸೆಯಿಂದ ಕೆಲವು ಕೆರೆಗಳಿಗೆ ಮಾತ್ರ ಯಥೋಚಿತ ನೀರುಬಂತಲ್ಲದೆ, ತುಂಬಲಿಲ್ಲ. ಬಿಸಲಿನ ವೇಗವು ಅಧಿಕವಾಗಿದೆ. ಪ್ರಕೃತ ಸ್ಥಿತಿಯಂ ನೋಡಿದರೆ ಮುಂದಿನ ಜಲದೌರ್ಲಭ್ಯವಂ ಕುರಿತು ಈಗಲೇ ಚಿಂತಿಸುವಂತಿದೆ.

ಈ ದಿನ ಸ್ಪೆಷಿಯಲ್‌ಟ್ರೈನಿನಲ್ಲಿ ಶ್ರೀಮನ್ ಮಹಾರಾಜರವರು ಹಿಂದುಪುರದವರೆವಿಗೆ ಹೊಸರೈಲ್ ಮಾರ್ಗವಾಗಿ ದಯಮಾಡುತ್ತಾರೆ. ಇದಕ್ಕಾಗಿ ಅಲ್ಲಿನಡೆಯಬೇಕಾದ ಏರ್ಪಾಡುಗಳೆಲ್ಲವು ಮಾಡಲ್ಪಟ್ಟವು. ಮುಂದೆ ಪ್ರಯಾಣಸ್ಥರ ಗಾಡಿಗಳು ಸಹ ಬಿಡಲ್ಪಡುವವು. ಪ್ರಯಾಣಸ್ಥರಿಗೆ ಬಹಳ ಅನುಕೂಲವಾಯಿತಲ್ಲದೆ ಸಾಯಂಕಾಲ ಗುಂಟಕಲ್‌ಸ್ಟೇಷನಿಗೆ ಹೋಗಿಸೇರಬಹುದು.

ಇಲ್ಲಿನ ಅಸಿಸ್ಟೆಂಟ್ ರೆಸಿಡೆಂಡರವರಾದ ಮೇಜರ್ ರಿವೆಟ್‌ಕಾರ್ನಾಕ್‌ರವರು, ಮಾಹೇ ಮಜಕೂರ್ ೯ ನೇ ತಾರೀಖ್ ಬುಧವಾರದದಿನ ಮಧ್ಯಾಹ್ನ ದಕ್ಷಿಣಮಹಾರಾಷ್ಟ್ರ ರೈಲ್ ಮಾರ್ಗವಾಗಿ ಮುಂಬೈಗೆ ಪ್ರಯಾಣಮಾಡಿದರು. ಅಲ್ಲಿಂದ ಇವರು ಮೆಯಿಲ್ ಸ್ಟೀಮರಿನಲ್ಲಿ ಇಂಗ್ಲೆಂಡಿಗೆ ಹೋಗುವರೆಂದು ತಿಳಿಯಬರುತಿದೆ.

ಮೈಸೂರ್ ಲೋಕಲ್ ಸರ್ವಿಸ್ ಮತ್ತು ಪ್ಲೀಡರ್‌ಗಳ ಪರೀಕ್ಷೆಗಳು ಗತ ಶನಿವಾರದೊಳಗೆ ಪೂರೈಸಿದವು. ಪ್ರತಿದಿನ ೧೧ ಘಂಟೆಗೆ ಪ್ರಾರಂಭವಾಗಿ ೫ ಘಂಟೆಗೆ ಪೂರೈಸುತಲಿದ್ದವು. ಈ ಸಲದ ಪ್ರಶ್ನೆಪತ್ರಿಕೆಗಳ ಪೈಕಿ ಇಂಡಿಯನ್ ಪಿನಲ್‌ಕೋಡ್ ಮತ್ತು ರಿಜಿಸ್ಟ್ರೇಷನ್ ಆಕ್ಟುಗಳ ಪ್ರಶ್ನೆಗಳು ಅತಿ ಕಠಿಣಗಳಾಗಿಯೂ, ಕೇವಲ ಪರೀಕ್ಷಕರ ಪಾಂಡಿತ್ಯ ಪ್ರದರ್ಶಕಗಳಾಗಿಯೂ ಇದ್ದಂತೆ ಕೇಳಲಿಕ್ಕೆ ವಿಷಾದಿಸಬೇಕಾಗುತಿದೆ.

ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಈಗ್ಯೆ ಕೆಲವು ವರುಷಗಳ ಕಾಲವಾಗಿ ಡೆಪ್ಯುಟಿ ಜೈಯಿಲರಾಗಿದ್ದ ಮಿ॥ ಓಕಾನರ್ ಎಂಬವರು ಈ ತಿಂಗಳ ಗುರ್‍ರೀ ತಾರೀಖ್ ಮೊದಲು ತಮ್ಮ ಕೆಲಸದಿಂದ ಬರ್ತರ್ಫ್‌ಮೇಲೆ ನಿವೃತ್ತರಾಗುವರೆಂತಲೂ ಅವರ ಕೆಲಸವು ಚೀಫ್‌ಕೋರ್ಟಿನಲ್ಲಿ ಕ್ಲಾರ್ಕಾಗಿದ್ದ ಮಿ॥ ಜೆನ್ನಿಂಗ್ಸ್ ಯೆಂಬವರಿಗೆ ಕೊಡಲ್ಪಟ್ಟಿತೆಂತಲೂ ತಿಳಿಯಲಾದೆವು.

ಮೈಸೂರಿಂದ ಹಿರೇಹಡಗಿಗೆ ಒಂದು ಟ್ರಾಂವೇ ರೈಯಿಲ್ ರಸ್ತೆ ಹಾಕುವ ಉದ್ದೇಶ ಪ್ರಾಂಜಲವಾದದಾಗಿಯೂ, ಅದರ ಕಾಮಗಾರಿ ಮೊದಲಾದವು ಮೆಸರ್ಸ್ ಲಾರ್ಸೇರ್ ಮತ್ತು ಕಬೀರ್ ಯೆಂಬವರಿಗೆ ಗುತ್ತಿಗೆಗೆ ಕೊಡಲ್ಪಡುವದೆಂತಲೂ, ಪೂರ್ವವೇ ಸೂಚಿಸಿದ್ದೆವಷ್ಟೆ. ಇವರಿಗೆ ದ್ರವ್ಯಾನುಕೂಲ್ಯವು ಲಂಡನ್ ಪಟ್ಟಣದಲ್ಲಿ ಕಡಿಮೆಯಾಗಿರುವದರಿಂದ ಸ್ವಲ್ಪ ತಾಮಸವಾದಂತೆ ಕೇಳುತ್ತೇವೆ. ಈ ಲೈನಿನಲ್ಲಿ ವಿಶೇಷ ಆಯತಿಯೂ ಷೇರ್‌ದಾರರಿಗೆ ಲಾಭವೂ ಉಂಟಾಗಲಾರದೆಂಬ ಭೀತಿಯು ಅನೇಕರಿಗೆ ಬಲವತ್ತರವಾಗಿರುವದರಿಂದ ಧೈರ್ಯದಿಂದೊಬ್ಬರೂ ಷೇರ್‌ಗಳನ್ನು ತೆಗೆದುಕೊಳ್ಳದೆ ಹಿಂಜರಿಯುತ್ತಾರಂತೆ. ಅವರಿಂದಲೇ ಬೇಕಾದ ಮೂಲಧನವು ಸುಲಭವಾಗಿ ಕೇಳುವಾಗದೆ ಆಲೋಚನೀಯವಾಗಿದೆ.

ಈ ಪತ್ರಿಕೆಯ ಮತ್ತೊಂದ ಭಾಗದಲ್ಲಿ ಪ್ರಕಟಿಸಿರುವ ಮೈಸೂರ್ ಗೆಜೆಟನಿಂದೆಯಿಂದ ಚೀಫ್ ಕೋರ್ಟ್ ರಿಜಿಸ್ಟ್ರಾರ್ ಮಿ॥ ಅನಂತಸ್ವಾಮಿರಾಯರವರಿಗೆ ಆರುತಿಂಗಳ ಫರ್ಲೋರಜಾ ಕೊಡಲ್ಪಟ್ಟಿರುವಂತೆಯೂ, ಅದಕ್ಕೆ ಮಿ॥ ಇ. ಆರ್. ಸುಬ್ಬರಾಯ ಅಯ್ಯರ್ ಯವರು ನೇಮಕರಲ್ಪಟ್ಟರಲ್ಪಟ್ಟು ಅವರು ತಮ್ಮ ಕೆಲಸದ ಚಾರ್ಜನ್ನು ಗತ ಬುಧವಾರದ ದಿನ ತೆಗೆದುಕೊಂಡರೆಂತಲೂ ತಿಳಿಯಬರುತಿದೆ. ಮಿ॥ ಹೇಮಾಜಿರಾಯರವರು ಜೀವಿಸಿದ್ದವರೆಗೆ ಇಂತಾ ಬದಲಾವಣೆಗಳಿಗೆ ಅವಕಾಶವುಂಟಾಗಿರುತಲಿರಲಿಲ್ಲವು. ಈಗ ಚೀಫ್ ಕೋರ್ಟ್ ರಿಜಿಸ್ಟ್ರಾರ್ ಕೆಲಸವು ತಲಬಿನಿಂದ ಅನೇಕರಿಗೆ ಆಕರ್ಷಕವಾಗಿ ಕಂಡುಬಂದಾಗ್ಯೂ ಅಲ್ಲಿನ ನೌಕರಿಯು ಯಾವ ಕಾರಣದಿಂದಲೋ ತೀವ್ರವಾದ ಬೇಸರಿಯನ್ನೂ ವ್ಯಾಕುಲವನ್ನೂ ಉಂಟುಮಾಡುವದಾಗಿರುತಿದೆ. ಅನೇಕ ಕಾರಣಗಳಿಂದ ಮಿ॥ ಹೇಮಾಜಿರಾಯರವರ ಸ್ಥಾನಕ್ಕೆ ಮಿ॥ ಸುಬ್ಬರಾಯ ಅಯ್ಯರ್ ವಿನಾ ಅನ್ಯರು ಅರ್ಹರೆನಿಸಲಾರರು. ಗತಿಸಿದವರಿಗೊಂದು ಕೀರ್ತಿಯುಂಟಾಗಬೇಕಾದರೆ ಅದು ಇವರಿಂದಲೇ ಲಭಿಸಬೇಕಾಗಿರುತಿದೆ.

ಹುಸೂರ್ ರೋಡಿನಲ್ಲಿರುವ ರಾಚ್‌ಲೆಸ್‌ಪಾರ್ಕ್ ಯಾ ಮಾರಿಸ್ ಫಾರು ಯೆಂಬದಾಗಿ ಕರೆಯಲ್ಪಡುತಲಿರುವ ವಿಶಾಲವಾದ ಒಂದು ತೋಟವು ರೆಸಿಡೆಂಟ್ ಸೆಕ್ರೆಟರಿ ಮಿ॥ ಮೀನಾಕ್ಷಿ ಅಯ್ಯರವರಿಗೆ ಸಂಬಂಧಿಸಿದ್ದಾಗಿರುತಿದೆ. ಇದು ಕಟಾಕ್ಷಿಸುವ ತಾತ್ಪರ್ಯದೊಡನೆ ಶ್ರೀಮನ್ಮಹಾರಾಜರವರು ರೆಸಿಡೆಂಟರೊಡನೆ ಗತ ಸೋಮವಾರದದಿನ ಅಲ್ಲಿಗೆ ದಯಮಾಡಿದ್ದರು. ಮಿ॥ ಮೀನಾಕ್ಷಿ ಅಯ್ಯರವರು ಪೂರ್ವಭಾವಿಯಾಗಿಯೇ ತಮ್ಮ ಉದ್ಯಾನವನವನ್ನು ಶ್ರೀಮನ್ ಮಹಾರಾಜ ಸಂದರ್ಶನಾರ್ಹವಾದ ರೀತಿಯಿಂದಲಂಕರಿಸಿ ಅವರಂ ಸಕಲ ಮರ್ಯಾದೆಗಳೊಡನೆ ಬರಮಾಡಿಕೊಂಡು ತಮ್ಮ ತೋಟವನ್ನೆಲ್ಲ ತೋರಿಸಿದರು. ಸದರೀ ತೋಟವು ಸಕಲವಿಧಸುಭರಿತವಾದುದಾಗಿಯೂ ಕಾಫಿ ವಗೈರೆ ಸಾಗುವಳಿಗೆ ಮಲನಾಡ ಪ್ರಾಂತದಂತೆ ಬಹಳ ಅನುಕೂಲ ಪ್ರದೇಶವಾಗಿಯೂ ಇರುತಿದೆ. ಇದಕ್ಕಾಗಿ ಮಿ॥ ಮೀನಾಕ್ಷಿ ಅಯ್ಯರವರು ತಮ್ಮ ಆಯತಿಯನ್ನೆಲ್ಲ ವ್ಯಯಮಾಡಿರುತ್ತಾರೆ. ಇದನ್ನವರು ಕೇವಲ ಭೋಗೋಪವನವಾಗಿ ಪರಿಗ್ರಹಿಸಿರುವದರಿಂದ ಇದರ ಉತ್ಪತ್ತಿ ವ್ಯಯಗಳವರಿಗೆ ಅನಾದರಣೀಯಗಳಾಗಿರುತಿವೆ. ಶ್ರೀಮನ್ಮಹಾರಾಜರವರು ಇದರ ಯೋಗ್ಯತೆಯ ಸನ್ನಿವೇಶವನ್ನೆಲ್ಲ ನೋಡಿ ಬಹಳ ಸಂತೋಷಿಸಿದರೆಂತಲೂ, ಆ ಕಾಲದಲ್ಲಿ ಸಂಗಡ ಇದ್ದ ಬ್ರಿಟಿಷ್ ರೆಸಿಡೆಂಟರು ಅದರ ಪೂರ್ವ ವೃತ್ತಾಂತವನ್ನವರಿಗೆ ಸಂಗ್ರಹವಾಗಿ ಶ್ರುತಪಡಿಸಿದರೆಂತಲೂ ತಿಳಿಯಬರುತಿದೆ. ಅನಂತರ ಮಿ॥ ಮೀನಾಕ್ಷಿ ಅಯ್ಯರವರು ಮಹಾರಾಜರವರನ್ನೂ ರೆಸಿಡೆಂಟರವರನ್ನೂ ಪುಷ್ಪ ಫಲತಾಂಬೂಲಗಳಿಂದ ಸತ್ಕರಿಸಿ ಕಳುಹಿಸಿದರು.

## THE MYSORE GAZETTE.
## ಮೈಸೂರು ಗೆಜೆಟಿ.

ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದೂರವರ ಸರ್ಕಾರದಿಂದ ಹೊರಟಿರುವ ಇಸ್ತಿಹಾರ್‌ನಾಮೆಗಳು.

೨೮ ನೇ ಜೂಲೈ ೧೮೯೩ ನಂ|| ೧೯೩೭-೦. ೯. ೪೬೧-೯೨—ಮೈಸೂರು ಡಿಸ್ಟ್ರಿಕ್ಟ್ ಟ್ರಜರಿ ಇನ್‌ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರ್ ಮಿ. ಬಿ. ಕೃಷ್ಣಯ್ಯಂಗಾರ್ಯರವರು, ೧೮೯೩ನೇ ಇಸವಿ ಮಾರ್ಚ್ ೧೮ ನೇ ಮರ್ಮ್ಯಮುಖ್ಯ ೧೫೦೮೨ ೦. ೩೫೮೨ನೇ ನಂಬರ್ ಇಸ್ತಿಹಾರ್ ಮೂಲಕ ಕೊಡಲ್ಪಟ್ಟ ಒಂದುತಿಂಗಳ ಪ್ರಿವಿಲೇಜ್ ರಜಾವನ್ನು ೧೮೯೩ನೇ ಇಸವಿ ಏಪ್ರಿಲ್ ೩ ನೇ ತಾರೀಖ್ ಮೊದಲು ೩೦ ನೇ ತಾರೀಖ್‌ವರೆಗೆ ಉಪಯೋಗಿಸಿಕೊಂಡರಾಗಿ ಅದರಪೈಕಿ ಉಳಿದಭಾಗವು ಇದರಿಂದ ರದ್ದು ಮಾಡಲ್ಪಟ್ಟಿದೆ

ತಾ|| ೧ನೇ ಆಗಸ್ಟ್ ೧೮೯೩, ನಂ. ೧೯೩೯-೦. ೫೬೬—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೨೨ನೇ ಆರ್ಟಿಕಲ್ ಅನುಸರಿಸಿ, ಚಿತ್ರದುರ್ಗ ಡಿಸ್ಟ್ರಿಕ್ಟ್ ಹರಿಹರ ಸಬ್ ತಾಲೂಕು ಡೆಪ್ಯುಟಿ ಅಮಲ್ದಾರ್ ಎಚ್ ಕೃಷ್ಣಯ್ಯರವರು ೧೮೯೩ ನೇ ಇಸವಿ ಆಗಸ್ಟ್ ೫ ನೇ ತಾರೀಖ್ ಮೊದಲು ೮ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ

ನಂ|| ೧೯೮೦—೦. ೯. ೬೮—ಗುಂಡ್ಲುಪೇಟೆ ತಾಲ್ಲೂಕು ಅಮಲ್ದಾರರು ಎಂ. ರಾಮಚಂದ್ರರಾಯರವರಿಗೆ ೯೨ನೇ ಇಸವಿ ಏಪ್ರಿಲ್ ೨೬ನೇ ಮರ್ಮ್ಯಮುಖ್ಯ ೧೨೬೮೨-೧. ೮೩೫೮ನೇ ನಂಬರ್ ಇಸ್ತಿಹಾರ್‌ನಾಮೆಯ ಮೂಲಕ ತಲಬಿಲ್ಲದೆ ಕೊಡಲ್ಪಟ್ಟ ೫೦ ದಿನಗಳ ರಜಾ, ಮತ್ತು ಅದರಿಂದೀಚೆಗೆ ೧೮೯೩ನೇ ಇಸವಿ ಜೂಲೈ ೨ನೇ ಮರ್ಮ್ಯ ೧೬೮—೦. ೬೮ನೇ ನಂಬರ್ ಇಸ್ತಿಹಾರ್ ಮೂಲಕ ಮಂಜೂರ್ಮಾಡಲ್ಪಟ್ಟ ೧೫ ದಿನಗಳ ಬಡ್ತಿ ರಜಾ ಸಹ ಇದರಿಂದ ೭ ದಿನಗಳಿಗೆ ಜಾಸ್ತೀ ಮಾಡಲ್ಪಟ್ಟಿರುತ್ತದೆ.

ನಂ|| ೧೮೯೩-೦. ೯. ೨೫೭-೯೭-ಅಸಿಸ್ಟೆಂಟ್ ಸರ್ಜಿಯನ್ ನರೋತ್ತಮರಾಯರವರು ೧೮೯೩ನೇ ಇಸವಿ ಜೂನ್ ೫ನೇ ಮರ್ಮ್ಯ ೨೦೫೮೫೦ ೫೦೫೦ನೇ ನಂಬರ್ ಇಸ್ತಿಹಾರ್‌ನಾಮೆಯ ಮೂಲಕ ಕೊಡಲ್ಪಟ್ಟ ೭ ತಿಂಗಳ ಪ್ರಿವಿಲೇಜ್ ರಜಾವನ್ನು ೧೮೯೩ ನೇ ಇಸವಿ ಜೂನ್ ೧೮ನೇ ತಾರೀಖ್ ಮೊದಲು ಉಪಯೋಗಿಸಿಕೊಂಡು ೧೮೯೩ನೇ ಇಸವಿ ಜೂಲೈ ೨ನೇ ತಾರೀಖ್ ಮಧ್ಯಾಹ್ನಾತ್ಪೂರ್ವ ನೌಕರಿಯಮೇಲೆ ಹಾಜರಾದರಾಗಿ ಅವರಿಗೆ ಕೊಡಲ್ಪಟ್ಟ ರಜಾಪೈಕಿ ಉಳಿದಭಾಗವು ಇದರಿಂದ ರದ್ದುಮಾಡಲ್ಪಟ್ಟಿದೆ.

೩ ನೇ ಆಗಸ್ಟ್ ೧೮೯೩, ನಂ|| ೨೦೭೩ ೦. ೯. ೧೯೩—೯೭—ಎಕ್ಸಿಕ್ಯೂಟಿವ್ ಇಂಜನಿಯರ್ ಮಿ|| ಆರ್. ವಿ. ಸುಂದರಂ ಅಯ್ಯರ್, ಬಿ. ಎ., ಬಿ. ಸಿ. ಇ. ಮತ್ತು ಎ. ಸಿ. ಇ. ಯವರು, ೧೮೯೩ನೇ ಇಸವಿ ಜೂಲೈ ೧೨ನೇ ತಾರೀಖ್ ಬುಧವಾರದ ದಿನ ಮಧ್ಯಾಹ್ನಾತ್ಪೂರ್ವ, ಮೈಸೂರು ಸಿಟಿ ಮ್ಯುನಿಸಿಪಾಲಿಟಿಯ ಯೆಗ್ಜಿಕ್ಯುಟಿವ್ ಇಂಜನಿಯರ್ ಕೆಲಸದ ಚಾರ್ಜನ್ನು ವಹಿಸಿದರು.

ನಂ|| ೨೧೨೦-೦. ೫೯೩-ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೨೩ನೇ ನಂಬರ್ ಆರ್ಟಿಕಲ್ ಅನುಸರಿಸಿ, ಕೊಪ್ಪ ತಾಲ್ಲೂಕು ಅಮಲ್ದಾರ್ ಸಿ. ಕೃಷ್ಣರಾಯರವರು ಅವರುಪಯೋಗಿಸಿಕೊಳ್ಳುವ ತಾರೀಖ್ ಮೊದಲು ೧೫ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ|| ೨೧೨೬—೦. ೯. ೧೬೫—೯೭— ಅಸಿಸ್ಟೆಂಟ್ ಕಮಿಷನರ್ ಮಿ|| ಕೆ. ರಾಮಚಂದ್ರರಾಯರವರು ೧೮೯೩ನೇ ಇಸವಿ ಮೇ ೧೧ನೇ ಮರ್ಮ್ಯ ೧೮೬೨೨ ೦. ೯. ೧೦೫—೯೭ನೇ ನಂಬರ್ ಇಸ್ತಿಹಾರ್‌ನಾಮೆಯ ಮೂಲಕ ಮಂಜೂರ್ಮಾಡಲ್ಪಟ್ಟ ರಜಾಕ್ಕೆ ಜಾಸ್ತೀಯಾಗಿ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

೩ ನೇ ಆಗಸ್ಟ್ ೧೮೯೩, ನಂ|| ೨೮೨೮—೦. ೬೧೨—ಶ್ರೀನಿವಾಸಪುರದ ಸಬ್ ತಾಲ್ಲೂಕು ಆಕ್ಟಿಂಗ್ ಡೆಪ್ಯುಟಿ ಅಮಲ್ದಾರ್ ಮಾಧವರಾಯರವರು ೧೮೯೩ ನೇ ಇಸವಿ ಜೂನ್ ೨೩ ನೇ ತಾರೀಖ್ ಮೊದಲು ಒಂದೂವರೆ ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

೨ ಕೋಲಾರ ತಾಲ್ಲೂಕು ಶಿರಸ್ತೇದಾರರು ಡಿ. ರಾಮಣ್ಣನವರು, ಮಾಧವರಾಯರು ರಜಾಮೇಲೆ ಗೈರ್ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ಶ್ರೀನಿವಾಸಪುರ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ ವ ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸನೋಡುವಂತೆ ನೇಮಕರ್ಮಾಡಲ್ಪಟ್ಟಿರುತ್ತಾರೆ

೯ ನೇ ಆಗಸ್ಟ್ ೧೮೯೩, ನಂ|| ೨೫೧೩—೦. ೬೩೫.—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೨೦೦ ನೇ ನಂಬರ್ ಆರ್ಟಿಕಲ್ ಅನುಸರಿಸಿ, ಚೀಫ್‌ಕೋರ್ಟ್ ರಿಜಿಸ್ಟ್ರಾರ್ ಮಿ|| ಎಚ್ ಅನಂತಸ್ವಾಮಿ ರಾವ್ ಬಿ. ಎ ಯವರು, ಕೆಲಸಬಿಡುಗಡೆಮಾಡಲ್ಪಡಬಹುದಾದ ತಾರೀಖ್ ಮೊದಲು ೬ ತಿಂಗಳ ಫರ್ಲೋ ರಜಾ ಕೊಡಲ್ಪಟ್ಟಿರುತ್ತಾರೆ

೨ ಮಿ|| ಎಚ್. ಅನಂತಸ್ವಾಮಿ ರಾಯರವರು ರಜಾ ಮೇಲೆ ಗೈರ್ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ಮಿ|| ಎಸ್. ಆರ್ ಸುಬ್ಬರಾಯ ಅಯ್ಯರವರು ಚೀಫ್‌ಕೋರ್ಟ್ ರಿಜಿಸ್ಟ್ರಾರ್ ಕೆಲಸವನ್ನು ಬದಲಿ ನೋಡುವಂತೆ ನಿಯಮಿಸಲ್ಪಟ್ಟಿರುತ್ತಾರೆ

### ಮುಜರಾಯಿ ಇಲಾಖಾ.

೧ ನೇ ಆಗಸ್ಟ್, ನಂ ೩೩೯೫—೬೮೧— ಕೋಲಾರ ಡಿಸ್ಟ್ರಿಕ್ಟ್ ಯೆಗ್ಜಿಕ್ಯುಟಿವ್ ಇಂಜನಿಯರ್ ಮಿ|| ಶ್ರೀನಿವಾಸರಾಯರವರು ೧೮೯೩ ನೇ ಇಸವಿ ಜೂನ್ ೧೦ ನೇ ಮರ್ಮ್ಯ ೨೫೯೬-೫೩೦ ನೇ ನಂಬರ್ ಇಸ್ತಿಹಾರ್‌ನಾಮೆಯ ಮೂಲಕ ಕೊಡಲ್ಪಟ್ಟ ಯೆರಡು ತಿಂಗಳ ರಜಾಕ್ಕೆ ಜಾಸ್ತೀಯಾಗಿ ೨೨ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

೬ ನೇ ಆಗಸ್ಟ್ ೧೮೯೩, ನಂ|| ೩೮೪೦—೬೮೨.—ಮೈಸೂರು ಮುಜರಾಯಿ ಇಲಾಖಾ ಅಕೌಂಟ್ ಅಸಿಸ್ಟೆಂಟ್ ಯೆಗ್ಜಾಮಿನರ್ ಮಿ|| ಧರ್ಮರಾಜ ಪಿಳ್ಳೆ ಯವರು, ಕಳೆದ ತಿಂಗಳ ೫ ನೇ ತಾರೀಖು ೨೯೮—೫೯೬ ನೇ ನಂಬರ್ ಇಸ್ತಿಹಾರ್‌ನಾಮೆಯ ಮೂಲಕ ಕೊಡಲ್ಪಟ್ಟ ಒಂದು ತಿಂಗಳ ರಜಾವಿಗೆ ಜಾಸ್ತೀಯಾಗಿ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ೨ ತಿಂಗಳ ರಜಾ ಕೊಡಲ್ಪಟ್ಟಿರುತ್ತಾರೆ.

## SUMMARY OF NEWS
## ವೃತ್ತಾಂತ ಸಂಗ್ರಹವು.

ಹಿಂದುಸ್ಥಾನ ಸರ್ಕಾರದವರು ೧ ಕೋಟಿ ೫೦ ಲಕ್ಷ ರೂಪಾಯಿ ಸಾಲಾ ತೆಗೆಯುವವರಾಗಿದ್ದಾರೆಂದು ಇಂಡ್ಯ ಗೆಜೆಟ್‌ನಲ್ಲಿ ಪ್ರಕಟಿಸಲ್ಪಟ್ಟಿದೆ. ಈ ಸಾಲದ ಬಡ್ಡಿ ವರುಷಕ್ಕೆ ಶೇಕಡಾ ೪ | ಪ್ರಕಾರ ರೂಪಾಯಿ ಕೊಡುವರಂತೆ.

ಗೋಹತ್ಯದ ದೆಸೆಯಿಂದ ಉತ್ತರ ಹಿಂದೂಸ್ಥಾನದೊಳಗಿನ ಹಿಂದೂ ಮತ್ತು ಮುಸಲ್ಮಾನರೊಳಗೆ ಅನೇಕ ಕಲಹಗಳು ಉದ್ಭವಿಸಿದವೆಂದು ತಿಳಿಯುತ್ತದೆ. ಗಾಜೀಪುರ, ಗೋರಖಪುರ ಮತ್ತು ಬಲಿಯಾ (ಕಾಶಿ ಸಮೀಪ) ಈ ದೇಶಗಳಲ್ಲಿ ಹತ್ತು ಲಕ್ಷ ಜನರ ಬಂದೋಬಸ್ತು ಇಡಬೇಕಾಗಿ ಬಂದಿದೆ

ನಾರ್ತ್ ವೆಸ್ಟರ್ನ್ ರೈಲ್ವೆ ಮೇಲಿಂದ ಬಂದಾವತಿ ಗೋಧಿ ರಫ್ತಿ ಸಾಮಾನ ಕೆಲಸವು ಜುಲೈಯಿಂದ ನಿಂತುಹೋಯಿತು. ಆದರೆ ಅಷ್ಟರಲ್ಲಿ ನಾಣ್ಯದ ಹೊಸ ಕಾಯಿದೆಯು ಹೊರಗೆ ಬಂತು. ಈ ಕಾಯಿದೆಯಿಂದ ಅನ್ಯ ದೇಶಗಳಿಗೆ ಗೋಧಿಯು ರಫ್ತು ಆಗುವದು ಕಡಿಮೆಯಾಗಿ ಗೋಧಿಯು ಬಹಳ ಅಗ್ಗವಾದೀತೆಂದು ಹೇಳುತ್ತಾರೆ

ಕಲರಾ ಉಪದ್ರವ ಯಾವ ದೇಶದಲ್ಲಿ ಯಾವ ಊರಿನಲ್ಲಿ ಇರುತ್ತದೋ ಆ ದೇಶ ಅಥವಾ ಊರಿನಿಂದ ಇತರ ಕಡೆಗಳಿಗೆ ಬರುವ ಕಾಗದ ಪತ್ರಗಳನ್ನು ಕೂಡ ಜನರು ಬಹು ಜಾಗರೂಕತೆಯಿಂದ ತೆರೆಯಬೇಕು ಮತ್ತು ಮುಟ್ಟಬೇಕು, ಯಾಕಂದರೆ ಅವುಗಳಲ್ಲಿ ಕಲರಾ ಹುಳುಗಳು ಅಂಟಿಕೊಂಡು ಇರುತ್ತವೆ ಎಂಬದಾಗಿ ಒಬ್ಬ ನೊಬ್ಬ ವೈದ್ಯನು ತಿಳಿಸಿರುತ್ತಾನೆ.

ಗೋವೆಯ ನಾಣ್ಯ ಗಡಬಡಿ—ಇಲ್ಲಿ ಸರಕಾರಿ ಖಜಾನೆಯಲ್ಲಿ ಗೋವೆಯ ರೂಪಾಯಿ, ತಾಂಬ್ರದ ದುಡ್ಡು ಇತ್ಯಾದಿ ನಾಣ್ಯಗಳನ್ನು ತಕ್ಕೊಳ್ಳಲಿಕ್ಕಿಲ್ಲವೆಂತ ನೋಟೀಸು ಹಚ್ಚಿದಾರೆ, ಆದ್ದರಿಂದ ಅನೇಕ ಜನರು ಬಹಳ ಘಾಬರಿಯಾಗಿದ್ದಾರೆ. ಯಾರೂ ಅಂತಾ ನಾಣ್ಯವನ್ನು ಈಗ ತಕ್ಕೊಳ್ಳುವದಿಲ್ಲ ಹೀಗಾಗಿ ಅಂತಾ ನಾಣ್ಯ ಹತ್ತಿದ್ದ ಅನೇಕ ಜನರು ಬಹಳ ಕಷ್ಟಪಡಹತ್ತಿದಾರೆ ಈ ನೋಟೀಸು ಹಚ್ಚುವ ಮೊದಲು ಜನರ ಸೌಕರ್ಯಕ್ಕಾಗಿ ನಾಣ್ಯದ ವ್ಯವಸ್ಥೆ ಏನಾದರೂ ಆಗಬೇಕಿತ್ತಲ್ಲವೇ?

ಪೆನ್ಸಿಲ್ವೇನಿಯಾ ದೇಶದೊಳಗಿನ ಒಬ್ಬ ಹುಡುಗಿಯ ಶರೀರ ಸ್ಥಿತಿಯು ವಾಯುಭಾರದರ್ಶಕ ಯಂತ್ರದಂತೆ ಉಂಟೆಂದು ಹವೆಯಲ್ಲಿ ಏನಾದರೂ ಹೆಚ್ಚು ಕಡಿಮೆಯಾಗಿ ಪ್ರಚಂಡ ಘಾಳಿ ಬಂದರೆ ಆ ಹುಡುಗಿಯ ಕೂದಲುಗಳು ಸುರುಳಿ ಸುತ್ತುವದಲ್ಲದೆ ಅವಳ ಶರೀರವು ಕೂಡ ಸಡಿಲಾಗುತ್ತದೆ ಮತ್ತು ಹವಾಮಾನ ಶಾಂತವಾಗಿ ಹವೆಯು ಸ್ವಚ್ಛವಾಗಿ ರುವದರಿಂದ ಆ ಹುಡುಗಿಯು ಕೂಡ ಸಮಾಧಾನದಿಂದ ಇರುತ್ತದೆ [illegible] ಈ ಬಾಲಿಕೆಯಿಂದ ತಪ್ಪಿಸಿಕೊಂಡಂತೆ ಅನೇಕ ಜನ ಡಾಕ್ಟರರು ಇದು ಏನೆಂಬ ವಿಚಾರ ಪ್ರಯತ್ನಗಳು ನಿಷ್ಫಲವಾದವಂತೆ

## EXTRACTS

ಇಂಗ್ಲಿಷ್ ಸರಕಾರಕ್ಕೂ ಗೋವೆಯ ಸರಕಾರಕ್ಕೂ [illegible] ಒಪ್ಪಂದವು ಮುರಿದುದರಿಂದ, ಈ ಜಿಲ್ಲೆಯ ಗೋವೆ [illegible] ನಮ್ಮ ಸರಕಾರದವರು [illegible]

[illegible]

ಈ ಕಾರಣದ [illegible]

[illegible]

[illegible] ಅವರಿಗೆ ಜಪಾಲುಮಿನ ಕೃತ್ಯಗಳು ನಡೆಯದಂತೆ ಉಪ್ಪಿನ ಖಾತೆಯ ಅಧಿಕಾರಿಗಳು ಅಕ್ಕ ಬಂದೋಬಸ್ತು ಮಾಡಬೇಕಾಗಿದೆ [illegible]

### ಅಫೀಮಿನ ಗುಣ.

ಅಫೀಮು ಎಲ್ಲ ಮಾದಕ ದ್ರವ್ಯಗಳಲ್ಲ ತೀರ ಕೆಟ್ಟ ವಸ್ತುವಾಗಿದೆ, ಅದರ ವ್ಯಾಪಾರವನ್ನು ಅಭಿವೃದ್ಧಿಗೊಳಿಸಲಿಕ್ಕೆ ಬ್ರಿಟಿಷ ಸರಕಾರದವರು ಕಾರಣೀಭೂತರಾದರು ಚೀನಾದೇಶದ ಜನರಿಗೆ ಈ ಮಾದಕ ಪದಾರ್ಥವನ್ನು ಸೇವಿಸಲಿಕ್ಕೆ ಕಲಿಸಿ [illegible] ದುರ್ಗತಿಯನ್ನುಂಟುಮಾಡಿದವರು [illegible] ನಾನಾ ವಿಧವಾಗಿ ಪ್ರತಿಪಾದಿಸಿ [illegible]

[illegible] ಅಫೀಮಿನ ವಿರೋಧಿಗಳು ಚಿತ್ತಕ್ಕೆ ತರುವರೇ —ಕೆ. ಹು.

Bangalore —Printed and published at the Karnataka Press, No 40, Hospital Road, City —1893

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

## ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

## Published Every Monday Morning.

ನಾನುವಿವಿಧವೃತ್ತ್ಯಪಗಮಾರ್ಥಂ ಕರ್ಣಾಟಕಪ್ರಕಾಶನಪರಾಭಿಧಾ ಪ್ರಥಿತಸಾಹಿತೀಶೋಭಿತಾ ॥ ಮೃಗಾಂಕಹಿತವಾಸರೇನಿಮಿತಮುದ್ರಣಾಸದ್ಯನ್ಯೈರ್ದ್ದಿ ಶಾಸುಪರಿಪೋಷಿತಾ ಭಿಕತಿಮಾನಸಂ ಸುಂದುದು ॥

Vol XX ] BANGALORE:—MONDAY, AUGUST 21, 1893. [No 33.

ಸಂಪುಟ ೨೦. ] ಬೆಂಗಳೂರು:—ಸನ್ ೧೮೯೩ನೇ ಇಸವಿ ಆಗಸ್ಟ್ ೨೧ನೇ ತಾರೀಖ್ ಸೋಮವಾರ. [ಸಂಖ್ಯೆ ೩೩.


### ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

| | ಸ್ಥಳದವರಿಗೆ | ಪರಸ್ಥಳದವರಿಗೆ. |
|---|---|---|
| ವರ್ಷಕ್ಕೆ ... | ...6—0—0 | 6—0—0 |
| ೬ ತಿಂಗಳಿಗೆ ... | 3—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

| | ಸ್ಥಳದವರಿಗೆ, | ಪರಸ್ಥಳದವರಿಗೆ, |
|---|---|---|
| ವರ್ಷಕ್ಕೆ ... ... | 3—0—0 | 4—0—0 |
| ೬ ತಿಂಗಳಿಗೆ ... ... | 1—12—0 | 2—8—0 |

ಈ ಪತ್ರಿಕೆಗೆ ದರಖಾಸ್ತು ಮಾಡಿದ ತಾರೀಖ್ ಮೊದಲು ಒಂದು ತಿಂಗಳೊಳಗಾಗಿ ಚಂದಾ ಹಣವನ್ನು ಕಳುಹಿಸುವಂತವರಿಗೆ ಮಾತ್ರವೆ ಅಡ್ವಾನ್ಸ್ ದರದಂತೆ ಪತ್ರಿಕೆ ಕಳುಹಿಸಲ್ಪಡುವದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತರಿಸಿಕೊಳ್ಳಬಹುದು ಮೂರು ತಿಂಗಳಿಗಿಂತ ಕಡಿಮೆಯಾಗಿ ಚಂದಾ ಹಣವನ್ನು ಅಂಗೀಕರಿಸಲ್ಪಡಲಾರದು.

### ಪ್ರಕಟನೆಯ ರಿವಾಜೆ.

ಮೊದಲನೆಸಲದಲ್ಲಿ ಪಂಕ್ತಿ ಒಂದಕ್ಕೆ ೦—೨—೦

ಎರಡನೆಯದಲ್ಲಿ ಪಂಕ್ತಿ ಒಂದಕ್ಕೆ ೦—೧—೦

ಷರಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟು ಕಡಿಮೆ ಮಾಡಲಾಗುತ್ತಾ ಪಂಕ್ತಿ ಒಂದಕ್ಕೆ ೧ ಆಣೆಯಂತೆ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಪ್ರಕಟಿಸುವ ಬಗ್ಗೆ ಪ್ರಕಟನೆಗಳು ಕಳುಹಿಸುವವರು ಅವು ಎಷ್ಟಾವರ್ತಿ ಪ್ರಕಟಿಸಲ್ಪಡಬೇಕೋ ಅದನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಆದಕಾರಣ ಅವರು ಮನೆ ನಿಲ್ಲಿಸುವಂತೆ ಬರೆಯುವವರೆಗೆ ಅವು ಪ್ರಕಟಿಸುತ್ತಿದ್ದು ಹಾಗೆ ಎಷ್ಟಾವರ್ತಿ ಪ್ರಕಟಿಸಲ್ಪಟ್ಟಿದ್ದಾಗ್ಯೂ ಮೇಲ್ಕಂಡ ದರದಂತೆ ಹಣ ಕೊಡತಕ್ಕದ್ದು. ಪ್ರಕಟನೆಗಳ ಬಗ್ಗೆ ಕಳುಹಿಸಲ್ಪಡುವ ಪ್ರಕಟನೆಗಳನ್ನು ಆ ವಾರದ ಶನಿವಾರದ ಮಧ್ಯಾಹ್ನ ೨ ಘಂಟೆಯೊಳಗಾಗಿ ಕಳುಹಿಸತಕ್ಕದ್ದು. ಪ್ರಕಟನೆ ಎಲ್ಲಾ ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳು ಸಲ್ಲಿಸುವ ಅಧಿಪತಿಯವರಿಗೆ ಹಾಸಲು ಮುಂದಾಗಿ ಸಲ್ಲಿಸಲಾರದವು ಕ್ರಮವಾಗಿ ರುಜುಮಾಡಿ ಕಳುಹಿಸಿದ ಲೇಖನವು ಪ್ರಕಟಿಸಲ್ಪಡಲಾರದು. ಸಿಗದೆ ಹೋದ ಕಾಗದಗಳು ಮರುಪಾವತಿ ಕಳುಹಿಸಲ್ಪಡಲಾರವು.


ADVERTISEMENTS.

**NOTICE.**

VAIDYASARA SANGRAHA

A TREATISE ON THE PRINCIPLES OF

HINDU MEDICINE

*Price including Postage Rs 5 0 0*

ವೈದ್ಯಸಾರ ಸಂಗ್ರಹ.

ಈ ಗ್ರಂಥಾಪೇಕ್ಷೆಯುಳ್ಳವರು ಮೊಬಲಗನ್ನೇ ಕಳುಹಿಸಿ ರುಜು ಮಾಡತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ಕಾಗದಗಳಿಗೆ ಸಿ. ಓ. ಕೊಡಲ್ಪಡಲಾರದು.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೇ ಹಾಸಲು, ಬೌಂಡ್ ಪ್ರತಿ ಒಂದಕ್ಕೆ ರೂ 5—0—0

ಟಿ. ಬಿ. ವೆಂಕಟಾಚಾರ್,

ಬೆಂಗಳೂರು, ಮಹಾರ್ ಆಸ್ಪತ್ರೆ ರೋಡ್ ೪೮ ನೆಂಬರ್.

### ನೋಟೀಸ್.

### ಬೆಂಗಳೂರು ಕೆಣಾರ್ಟಿಕ್ ಪ್ರೆಸ್.

೧೮೬೩ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು. ಇದರಲ್ಲಿ ಸಕಲವಿಧ ಕೆಲಸಗಳು ಸುಲಭಚಾರ್ಜಿಗೆ ತ್ವರಿತವಾಗಿಯೂ ಶ್ಲಾಘ್ಯವಾಗಿಯೂ ಮಾಡಲ್ಪಡುವವು.

ಇದರಲ್ಲಿ ಸದ್ಯಕ್ಕೆ ಇಂಗ್ಲಿಷ್ ಕನ್ನಡ ಕೆಲಸಗಳು ಮಾತ್ರ ನಡೆಯುತ್ತಿವೆ. ಇತರ ತಪಸೀಲ್‌ಗಳನ್ನು ಸದರೀ ಕಾರ್ಖಾನೆ ಮ್ಯಾನೇಜರ್ ಬರೆದು ತಿಳಿದುಕೊಳ್ಳಬಹುದು

### ನೋಟೀಸ್.

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ.
ಕಮಿಷನ್ ಏಜಂಟ್ಸ್.

ಇವರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯೊಡನೆ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ತಕ್ಕ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರದ ಔಷಧಗಳು, ಪುಸ್ತಕಗಳು, ಮುತ್ತುಗಳು, ಚಿಪ್ಪಿ ಮುದ್ರೆಗಳು, ಘಡಿಯಾರಗಳು, ವಾಚ್‌ಗಳು, ಸ್ಪೆಕ್ಟಕಲ್ಸಗಳು, ಕಾಶ್ಮೀರ ಶಾಲುಗಳು, ಪಟ್ಟೆಗಳು, ಜರತಾರಿ ಕಣಗಳು, ಚಂದ್ರಕಾಂತ ಶಿಲೆ ಕನ್ನಡಿಗಳು, ಹುಡುಗರಿಗೆ ತಕ್ಕ ಜರತಾರಿ ಉಡುಪುಗಳು, ಜರತಾರಿ ಟೋಪಿಗಳು, ಆಫೀಸ ಡ್ರೆಸಗಳು, ಛತ್ರಿಗಳು, ಅತ್ತರುಗಳು, ಅತ್ಯುತ್ತಮಗಳಾದ ರತ್ನಗಳು, ಭಂಗಾರದಿಂದ ಕಟ್ಟಲ್ಪಟ್ಟ ಉಂಗುರಗಳು, ಬೆಳ್ಳಿ ಪಾತ್ರಗಳು, ಜರ್ಮನ್ ಬೆಳ್ಳಿ ಪಾತ್ರಗಳು, ಕೇಸು, ಕಸ್ತೂರಿ ಇತರ ಸಾಮಾನುಗಳು.

ಜವಾಬು ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟ್ಯಾಂಪ್ ಕಳುಹಿಸಿದ ಹೊರತು ಜವಾಬು ದೊರೆಯಲಾರದು.

ವಿಳಾಸ,—ಗಣೇಶ ರಾಮಚಂದ್ರ ಕರ್ಕಿ,
ಮತ್ತು ಕಂಪನಿ, ಕಮಿಷನ್ ಏಜಂಟ್ಸ್.
ಪಾಕೋರ್ ದ್ವಾರ್ ಮಾರ್ಕೆಟ್ ಪೋಸ್ಟ್, ಮುಂಬೈ.

### ನೋಟೀಸ್.

ಇವರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

### ಸಂಸ್ಕೃತ ಗ್ರಂಥಗಳು.

| | | ರೂ | ಆ | ಪೈ. |
|---|---|---|---|---|
| ಟೀಕಾ ವೈದ್ಯಸಾರ ಸಂಗ್ರಹ | .. | ೫ | ೦ | ೦ |
| ,, ಶಿವಗೀತೆ | .. | ೧ | ೧ | ೦ |
| ,, ಶಿವಾನಂದಲಹರಿ | ... | ೦ | ೪ | ೦ |
| ,, ಕಾಲಾಮೃತ | ... | ೧ | ೦ | ೦ |
| ,, ಟೀ॥ ಬಾಲರಾಮಾಯಣ .. | | ೦ | ೩ | ೦ |
| ,, ಟೀ॥ ಗೋಪಿಕಾ ಗೀತೆ ... | | ೦ | ೧ | ೦ |
| ,, ಟೀ॥ ಚಾಣಕ್ಯನೀತಿ (ಸುಭಾಷಿತ) | | ೦ | ೮ | ೦ |
| ವಿಷ್ಣುಸಹಸ್ರನಾಮ ವ್ಯಾಖ್ಯೆ | .. | ೦ | ೩ | ೦ |
| ಸೂರ್ಯಸಹಸ್ರನಾಮ | .. | ೦ | ೨ | ೦ |
| ಕೃಷ್ಣಕರ್ಣಾಮೃತ | ... | ೦ | ೨ | ೦ |
| ತ್ರಿಕಾಂಡ ಅಮರ ಮೂಲ | ... | ೦ | ೭ | ೦ |
| ೧ ಕಾಂಡ | ... | ೦ | ೧ | ೦ |

### ಕನ್ನಡ ಗ್ರಂಥಗಳು.

| | | ರೂ | ಆ | ಪೈ. |
|---|---|---|---|---|
| ಕುಕನಸ್ಸತಿ ಚಿನ್ನಲ್ | ... | ೩ | ೦ | ೦ |
| ಡಿಟಿಟೋ ದುಸ್ಯಾಂ | ... | ೧ | ೨ | ೦ |
| ವೃಷಭೇಂದ್ರವಿಜಯ | .. | ೧ | ೪ | ೦ |
| ಪಂಚಭಾವ ಬಾಲಲೀಲೆ | ... | ೦ | ೬ | ೦ |
| ಹನುಮದ್ವಿಲಾಸ | .... | ೦ | ೬ | ೦ |
| ಕಾಳೀಯಮರ್ದನ | .. | ೦ | ೨ | ೦ |
| ಸುಭದ್ರಾಪರಿಣಯ | ... | ೦ | ೨ | ೦ |
| ರುಕ್ಮಿಣೀಪರಿಣಯ | ... | ೦ | ೨ | ೬ |
| ಸುದಾಮಚರಿತ್ರೆ | ... | ೦ | ೧ | ೦ |
| ಮೈರಾವಣ ಚರಿತ್ರೆ | .. | ೦ | ೧ | ೯ |
| ಬಾಲಗ್ರಹಚಿಕಿತ್ಸೆ | ... | ೧ | ೦ | ೦ |
| ಮಹನ್ಮದರ್ ಲಾ | ... | ೦ | ೧೨ | ೦ |
| ಬ್ರಾಂತಿವಿಲಾಸ | ... | ೨ | ೦ | ೦ |

### ಕೊಡಗು ಫಾರೆಸ್ಟ್ ಇಲಾಖಾ.

ನೋಟಿಸ್.

1893ನೇ ಇಸವಿ ಜೂಲೈ ತಾರೀಖ್ 26 ರಲ್ಲು.
ಇದರಡಿ ನಮೂದಿಸಿದ ಸಾಮಾನುಗಳು ಫ್ರೇಜರ್‌ಪೇಟೆ ಅವರ್ಸಿ ಡಿಪೋಗಳಲ್ಲಿ.

ಸನ್ 1893 ನೇ ಇಸವಿ ಆಗಸ್ಟ್ ತಾರೀಖ್ 31 ರಲ್ಲು ಹರಾಜ್ ಹಾಕಲ್ಪಡುತವೆ.

ಶ್ರೀಗಂಧ ತೊಲೆಗಳು 220 ... 1500 ಸಲಿಅದಿ,
ಹೊನ್ನೆ ಪಗ್ಗರ 160 ... 3700 ದಿ

ಷರತ್ :—ಸನ್ 1889ನೇ ಇಸವಿ ಡಿಸಂಬರ ತಾರೀಖ್ 19ನೇ ತಾರೀಖುಳ್ಳ 63 ನೇ ನಂಬರ ಚೀಫ್‌ಕಮಿಷನರ ಸಾಹೇಬರವರ ನೋಟಿಫಿಕೇಷನ್ ಮೇರೆ ಮರದ ಕ್ರಯದ ಪೈಕಿ ಶೇಕಡಾ ಹತ್ತರಷ್ಟು ಮೊಬಲಗನ್ನು ಹರಾಜ್ ಕಾಲದಲ್ಲಿ ಪಾವತಿಮಾಡಿ ಬಾಕೀ ಮೊಬಲಗನ್ನು ಹರಾಜ್ ತಾರೀಖಿನಿಂದ 30 ದಿನಗಳೊಳಗೆ ಪಾವತೀ ಮಾಡತಕ್ಕದ್ದು.

F. A. LEAGER.
ಡೆಪ್ಯುಟಿ ಆಸಿಸ್ಟೆಂಟ್ ಕನ್ಸರ್ವೇಟರ್,
ಕೊಡಗು ಫಾರೆಸ್ಟ್.


### THE MONEY MARKET.

ಮದರಾಸ್, ಶನಿವಾರ, ತಾರೀಖ್ 19 ನೇ ಆಗಸ್ಟ್ 1893.
ಸೇಕಡ 4 ರೂ. ಬಾಬತು ಗವರ್ನಮೆಂಟ್ ಪತ್ರಗಳು ರೂಪಾಯಿಗಳು, 106 0—0 ಇಂದ 106—8—0 ವರವಿಗೆ,
ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತು 985 ಲಾಗಾಯ್ತು 990 ವರವಿಗೆ,
ಅರ್ಬತ್‌ನಾಟ್ ವ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಷೇರುಗಳು, (100) ಬಾಬತು 150 ರಿಂದ 155 ವರವಿಗೆ,
ಸವರನ್‌ಗಳು, 15—11—0 ಇಂದ 15—2—0 ವರವಿಗೆ,
ಬ್ಯಾಂಕ್‌ಬಿಲ್‌ಗಳು ಯೂನಿಯನ್ ಹುಂಡಿಗಳು, ರೂ॥ ೧ಕ್ಕೆ,
6 ತಿಂಗಳ ವಾಯಿದೆಗೆ, 1s. 3 5/32d.
ಡಿಟೋ 4 ತಿಂಗಳವಾಯಿದೆಗೆ, 1s 3 3/32d.
ಡಿಟೋ ಕೇಳಿದಾಗ, 1s 3 d.

# ಕರ್ಣಾಟಕ ಪ್ರಕಾಶಿಕಾ.

## THE KARNATAKA PRAKASIKA.

MONDAY, AUGUST 21 1893.
೧೮೯೩ನೇ ಇಸವಿ ಆಗಸ್ಟ್ ತಾ॥ ೨೧ ನೇ ಸೋಮವಾರ.

### ಮೈಸೂರ್ ಸಂಸ್ಥಾನದ ಮರಾಮತ್ ಇಲಾಖೆ.

ಈ ಸಂಸ್ಥಾನದ ಮರಾಮತ್ ಇಲಾಖೆಯಲ್ಲಿ ಕ್ಷಿಪ್ರದೊಳು ಅತ್ಯಂತಿಕಗಳಾದ ಬದಲಾವಣೆಗಳು ಕೆಲವು ಜರಗಬಹುದೆಂಬ ಸಂಭವವು ಕಂಡುಬರುತಿದೆ. ಸಂಸ್ಥಾನದ ಇತರ ಇಲಾಖೆಗಳೆಲ್ಲವು ಬಹಳ ಅಭಿವೃದ್ಧಿಗೆ ಬಂದು ಲಾಭಕರಗಳಾಗಿ ಕಂಡುಬರಲಿಕ್ಕೆ ಅಲ್ಲಿ ಮಾಡಲ್ಪಟ್ಟ ನೂತನಗಳಾದ ಬದಲಾವಣೆಗಳೇ ಕಾರಣಗಳಾಗಿರುತಿವೆ. ಮರಾಮತ್ ಇಲಾಖೆ ಮಾತ್ರ ಪೂರ್ವಸ್ಥಿತಿಯಲ್ಲಿದ್ದಂತೆಯೇ ಇರುವದರಿಂದ ಅದರಲ್ಲಿ ಜರಗತಕ್ಕ ಕೆಲಸಗಳಿಗೂ ಪರಿಶ್ರಮಕ್ಕೂ ಅನುಗುಣವಾದ ಪಲವು ಕೊಡಲ್ಪಡುದಿರುವದರಿಂದ ನೌಕರರಿಗೆ ಪ್ರೋತ್ಸಾಹವಿಲ್ಲದೆ ಕೆಲಸಗಳು ಮುಲ್ತವೀ ಬೀಳಲಿಕ್ಕೂ ಸುಸ್ತಿಯಾಗಲಿಕ್ಕೂ ಕಾರಣವಾಗುತಿದೆ. ಇದಂ ಪರ್ಯಾಲೋಚಿಸಿ ಸದರೀ ಇಲಾಖೆಯ ಪುನರ್ವ್ಯವಸ್ಥೆಯ ವಿಷಯದಲ್ಲಿ ಅದರ ಸೆಕ್ರೆಟರಿಯಾದ ಕರ್ನಲ್ ಡಿ. ಮೆಕನೀಲ್ ಕ್ಯಾಂಬೆಲ್ ರಾಯಲ್ ಇಂಜನಿಯರವರು, ಅನೇಕ ಬಾಧಕಸಾಧಕ ನಿಯಮಗಳನ್ನು ಸೂಚಿಸಿ ಕೆಲವು ಯೋಜನೆಗಳ ಅವಶ್ಯಕತೆಯು ದಿವಾನರವರಿಗೆ ಲೆಟರ್ ಮೂಲಕ ತಿಳಿಯಪಡಿಸಿರುವಂತೆ ಕೇಳುತ್ತೇವೆ. ಮರಾಮತ್ ಇಲಾಖೆಯಲ್ಲಿ ಶಿಬ್ಬಂದಿಯ ಖರ್ಚು ಕಡಮೆಯಾಗುತಬರುವಂತೆಲ್ಲ ಕಾಮಗಾರಿಗಳ ಖರ್ಚು ಅಧಿಕವಾಗುತಬರುತಿವೆ. ಅಲ್ಪ ಶಿಬ್ಬಂದಿಗಳನ್ನಿಟ್ಟುಕೊಂಡು ಅವರಮೂಲಕ ಅನೇಕಲಕ್ಷರೂಪಾಯಿಗಳ ಖರ್ಚುಳ್ಳ ಆಡಳಿತವನ್ನು ಇದ್ದುಕಾಲ ಜರಿಗಿಸುತ ಬರುವದಂ ನೋಡಿದರೆ, ಯಾವ ಉದ್ದೇಶ ಹೊಡನೆ ಇಲ್ಲಿ ಧನವ್ಯಯ ಮಾಡಲ್ಪಡುತಿದೆಯೋ ಆ ಉದ್ದೇಶವು ಸಿದ್ಧಿಸುವಂತೆ ಕಾಣಿಸುವದಾಗಿಲ್ಲ ವೆಂಬದಾಗಿಯೂ, ಸಾಧಾರಣವಾಗಿ ಒಬ್ಬ ಮನುಷ್ಯನು ಒಂದು ಸ್ವಲ್ಪ ಕಾಲದಲ್ಲಿ ಪರಿಮಿತ ಪ್ರಮಾಣವುಳ್ಳ ಕೆಲಸವನ್ನು ಶ್ಲಾಘ್ಯವಾಗಿ ನೆರವೇರಿಸಲಿಕ್ಕೆ ಶಕ್ತನಾಗಿರುತ್ತಾನೆ. ಅವನ ಕಾಲ ಮತ್ತು ಶಕ್ತಿಗಿಂತ ಅಧಿಕ ಕೆಲಸವನ್ನು ಅವನಿಂದ ನಿರೀಕ್ಷಿಸಿದರೆ ಅವನು ಮಾಡತಕ್ಕ ಕೆಲಸವೆಲ್ಲವು ಸಾಮಾನ್ಯವಾಗಿಯೂ ಬಚ್ಚಜಗಳಾಗಿಯೂ ಇರುವದೇನೋ ಆಶ್ಚರ್ಯವಲ್ಲವೆಂಬದಾಗಿ ಸೆಕ್ರೆಟರಿಯವರು ತಾತ್ಪರ್ಯ ಪಡುತ್ತಾರೆ. ನೌಕರರ ಸಂಖ್ಯೆಯು ಅಲ್ಪವಾಗಿಯೂ ಅವರು ಮಾಡುವ ಕೆಲಸಗಳು ಅಧಿಕವಾಗಿಯೂ ಅವರು ಪಡೆಯುವ ಪ್ರಯೋಜನವು ಇತರ ಪ್ರದೇಶಗಳಿಗಿಂತ ಬಹಳ ಕಡಮೆಯಾಗಿಯೂ ಇರುವದರಿಂದ ಅವರು ಮಾಡುವ ತಪ್ಪಿತಗಳನ್ನು ಖಂಡಿಸಲಿಕ್ಕೆ ಅವಕಾಶವು ಸ್ವಲ್ಪವಾಗಿರುತಿದೆ. ಯೆಗ್ಸಿಕ್ಯೂಟಿವ್ ಇಂಜನಿಯರ್‌ಗಳಿಗಿರುವ ಕಾಲವು ಅತ್ಯಲ್ಪವಾಗಿರುವದರಿಂದ ಅವರ ಸ್ವಂತಕೆಲಸಗಳಿಗೆ ವ್ಯವಧಾನ ವಿಲ್ಲದಿರುವಾಗ್ಯೆ ಜಾಸ್ತೀ ಜವಾಬ್ದಾರಿಗಳನ್ನೊಪ್ಪಿಸುವದು ಅಸಾಧ್ಯವಾಗಿಯೂ ಅಕ್ರಮವಾಗಿಯೂ ಕಂಡುಬರುತಿದೆ ಆದುದರಿಂದ ಮುಂದೆ ನಡೆಯಬೇಕಾದ ಕೆಲವು ಬದಲಾವಣೆಗಳನ್ನು ತಿಳಿಸುತ್ತಾರೇನೆಂದರೆ, ಪ್ರತಿ ಡಿವಿಜನಿಗೂ ಒಬ್ಬ ಯೆಗ್ಸಿಕ್ಯೂಟಿವ್ ಇಂಜನಿಯರ್ ಪ್ರಕಾರ ಹತ್ತು ಜನ ಯೆಗ್ಸಿಕ್ಯೂಟಿವ್ ಇಂಜನಿಯರ್‌ಗಳೂ, ಸಾಕ್ಷಾತ್ತಾಗಿ ಚೀಫ್ ಇಂಜನಿಯರವರ ಕೈಕೆಳಗೆ ಕೆಲಸ ಮಾಡಲಿಕ್ಕೆ ಒಬ್ಬ ಸಾನಿಟರಿ ಇಂಜನಿಯರೂ ಇರತಕ್ಕದ್ದು. ಮೂರುನಾಲ್ಕು ಸರ್ಕಲ್‌ಗಳಾಗಿ ಮಾಡಿ, ಯೆಗ್ಸಿಕ್ಯೂಟಿವ್ ಇಂಜನಿಯರ ಚಾರ್ಜಿನಲ್ಲಿರುವಂತಾ ಡಿವಿಜನ್‌ಗಳು ಮೂರುನಾಲ್ಕನ್ನು ಸೇರಿಸಿ ಒಂದು ಸರ್ಕಲಾಗಿ ವಿಂಗಡಿಸಿ, ಅದರ ವಿಚಾರಣೆಯಬಗ್ಗೆ ಸೂಪರಿಂಟೆಂಡಿಂಗ್ ಇಂಜನಿಯರ್‌ಗಳನ್ನು ಸರ್ಕಲ್‌ಗಳ ಸಂಖ್ಯೆಗೆ ತಕ್ಕಂತೆ ನಿಯಮಿಸಬೇಕಾದ್ದು ಅವಶ್ಯಕ ವಾಗಿರುತಿದೆ. ಈ ಸರ್ಕಲ್‌ಗಳು ಯೆರಡಕ್ಕಿಂತಲೂ ಅಧಿಕವಾಗಿಲ್ಲವು. ರಾಜ್ಯವನ್ನು ಉತ್ತರದಕ್ಷಿಣ ಸರ್ಕಲ್‌ಗಳೆಂದು ಯೆರಡು ವಿಭಾಗವಮಾಡಿ, ಕಾರ್ಯನಿರ್ವಹಣೆಯ ಬಗ್ಗೆ ಸದರೀ ಸರ್ಕಲ್‌ಗಳ ಸೂಪರಿಂಟೆಂಡಿಂಗ್ ಇಂಜನಿಯರ್‌ಗಳ ಹೆಡ್‌ಕ್ವಾರ್ಟರ್ ಬೆಂಗಳೂರಾಗಿರುವಂತೆಯೂ, ಈ ಯೋಜನೆಯಬಗ್ಗೆ ಶಿಬ್ಬಂದಿ ಖರ್ಚು ದೇಖಿಲ್ ಸಾಲೀಯಾನಾ ೩೭,೭೫೦ ರೂಪಾಯಿಗಳು ಹಿಡಿಯುವಂತೆಯೂ, ಅಂದಾಜ್ ನಿಕಿ, ತಿಳಿಯಪಡಿಸಿರುತ್ತಾರೆ. ಇಷ್ಟು ಮಾತ್ರವಲ್ಲವು. ಈ ಸಂಸ್ಥಾನದಲ್ಲಿ ೬೬ ತಾಲೂಕುಗಳಿರುವದರಿಂದ ೩ ತಾಲೂಕುಗಳಿಗೊಂದು ಡಿವಿಜನಿನಂತೆ ಮಾಡಿ ಪ್ರತಿಡಿವಿಜನ್ ಇನ್‌ಚಾರ್ಜಿನಲ್ಲಿ ಒಬ್ಬ ಅಸಿಸ್ಟೆಂಟ್ ಇಂಜನಿಯರಿರತಕ್ಕದ್ದು. ಇ

ವಲ್ಲದೆ ಬೆಂಗಳೂರ್ ಮತ್ತು ಮೈಸೂರ್ ಪಟ್ಟಣಗಳನ್ನು ಪ್ರತ್ಯೇಕ ಯೆರಡು ಸಬ್ ಡಿವಿಜನ್‌ಗಳನ್ನಾಗಿ ಮಾಡತಕ್ಕದ್ದು. ಆದುದರಿಂದ ಒಟ್ಟು ೨೮ ಅಸಿಸ್ಟೆಂಟ್ ಇಂಜನಿಯರ್‌ಗಳು ಆವಶ್ಯಕವಾಗಿರುತ್ತಾರೆ. ಹಾಲೀ ನೌಕರಿಯಲ್ಲಿರುವವರು ಹೋಗಲಾಗಿ ಮುಂದೆ ಹತ್ತು ಜನ ಅಸಿಸ್ಟೆಂಟ್ ಇಂಜನಿಯರ್‌ಗಳು ಅಪೇಕ್ಷಿತವಾಗಿದೆ. ಅಪ್ಪರ್ ಸಬಾರ್ಡಿನೇಟ್ಸ್, ಅಂದರೆ ಮೇಲ್ಪಟ್ಟ ಅಧಿಕಾರಿಗಳು ತಾಲ್ಲೂಕಿಗೆ ಇಬ್ಬರ ಪ್ರಕಾರ ೬೬ ಜನ ಬೇಕಾಗುತ್ತಾರೆ. ಈಗ ಇರುವವರು ೪೪ ಮಂದಿಯಾದುದರಿಂದ ೨೨ ಮಂದಿ ಈ ಬಾಬಿನಲ್ಲಿಯೂ ಬೇಕಾಗಿರುತಿದೆ. ತತ್ಕಾಲಕ್ಕೆ ಅಧಮ ಪಕ್ಷ ೩ ನೇ ಗ್ರೇಡ್ ಓವರ್‌ಸಿಯರ್‌ಗಳನ್ನು ನೇಮಕ ಮಾಡಿದಾಗ್ಯೂ ಸಾಕಾಗಿರುತಿದೆ. ತಾಲ್ಲೂಕಿಗೆ ಇಬ್ಬರು ಓವರ್‌ಸಿಯರ್‌ಗಳ ಪ್ರಕಾರ ೧೩೨ ಮಂದಿ ಬೇಕಾಗಿರುತಿದೆ. ಇಷ್ಟರ ಆಡಳಿತವುಳ್ಳ ಒಂದು ಇಲಾಖೆಗೆ ಮಾಹೆಯಾನಾ ೫೦೦ ರೂಪಾಯಿಗಳ ಸಂಬಳದ ಒಬ್ಬ ಅಸಿಸ್ಟೆಂಟ್ ಸೆಕ್ರೆಟರಿ ಇರಬೇಕಾದ್ದು ಯುಕ್ತವಾಗಿರುತಿದೆ. ಒಟ್ಟು ಈಗಿರತಕ್ಕ ಖರ್ಚು ಮೊಬಲಗಲ್ಲದೆ ಜಾಸ್ತಿಯಾಗಿ ೧,೧೩,೫೭೮ ರೂಪಾಯಿಗಳು, ಅಥವಾ ಹಾಲೀ ಇರುವದು ಸೇರಿ ಸಾಲೀಯಾನಾ ೬,೨೩,೫೭೮ ರೂಪಾಯಿಗಳು ಮಂಜೂರ್ ಮಾಡಿದರೆ ಈಗ ಮಂಜೂರಾಗಿರುವ ೨೩ ಲಕ್ಷ ರೂಪಾಯಿಗಳ ಬಾಗವದ ಕಾಮಗಾರಿ ಖರ್ಚುಗಳನ್ನು ವರುಷ ಹಾಗೆಯೇ ಇಟ್ಟುಕೊಂಡಾಗ್ಯೂ ಕಾಮಗಾರಿ ಖರ್ಚು ಮೊಬಲಗಿಗೆ ಶಿಬ್ಬಂದಿ ಖರ್ಚು ದಾಮಾಷಾಯಿ ಪ್ರಕಾರ ಸೇಕಡಾ ೨೩ ರೂಪಾಯಿಗಳಾಗುತವೆ. ಈಗಿರುವ ದಾಮಾಷಾಯಿಗಿಂತಾ ಜಾಸ್ತಿಯಾಗಿದ್ದಾಗ್ಯೂ ಕಾಮಗಾರಿಗಳನ್ನು ನೋಡಲಾಗಿ ಇದು ಕಡಿಮೆ ಯೆಂತಲೇ ಭಾವಿಸಬೇಕಾಗಿರುವಂತೆ ಕರ್ನಲ್ ಮೆಕ್‌ನೀಲ್ ರವರೆಂಬುವರು ಬರೆದಿರುತ್ತಾರೆ. ಈ ಯೋಜನೆಗಳನ್ನು ಸೂಚಿಸಿ ಬರೆದ ಚೀಟಿಗೆ ದಿವಾನರವರು ಜವಾಬ್ ಬರೆಯುವಾಗ್ಯೆ ತಿಳಿಸಿರುತ್ತಾರೇನಂದರೆ. ಪ್ರಸಕ್ತ ವಿಷಯವು ಕೆಲವು ಕಾಲದವೊದಲು ತಮ್ಮ ಆಲೋಚನೆಯಲ್ಲಿರುತಲಿದೆ, ಮತ್ತು ಯೆರಡು ವಿಧ ಉದ್ದೇಶಗಳಿಂದ ಮರಾಮತ್ ಇಲಾಖೆ ಶಿಬ್ಬಂದಿ ಖರ್ಚನ್ನು ಜಾಸ್ತಿಮಾಡಬೇಕಾಗಿರುತಿದೆ ೧-ಕಾಮಗಾರಿಗಳನ್ನು ಒಲಪಡಿಸಿ ಉದ್ದಿಷ್ಟ ಫಲವು ಸಿದ್ಧಿಸುವಂತೆ ಅಂದಾಜ್‌ಗಳನ್ನು ತಯಾರ್ ಮಾಡಿಸಬೇಕಾದ್ದು. ೨-ನೆರವೇರುವಂತಾ ಕಾಮಗಾರಿಗಳು ತ್ವರೆಯೊಡನೆ ನಿಗೇಯಿಂದ ಉತ್ತಮರೀತಿಯಲ್ಲಿ ಸಾಧ್ಯವಾದಮಟ್ಟಿಗೆ ವಿಚಾರಣೆ ಮಾಡಬೇಕಾದ್ದು. ಇವುಗಳಲ್ಲದೆ ಯೆಗ್ಸಿಕ್ಯೂಟಿವ್ ಇಂಜನಿಯರ್‌ಗಳು ಈಗ ಚಿಲ್ಲರೆ ಕಾಮಗಾರಿಗಳ ಉಸ್ತುವಾರಿಯ ತೆಗದುಕೊಳ್ಳಬೇಕಾಗಿರುವದರಿಂದ ಅವರಿಗೆ ಆಭಾರವು ಕಡಿಮೆಯಾಗಿಸಬೇಕಾದ್ದು ಆವಶ್ಯಕವೆಂದು ತೋರುತಿದೆ ಇವುಗಳಿಗೆ ತಾಬೇದಾರೀ ಉದ್ಯೋಗಸ್ಥರ ಸಂಖ್ಯೆಯೇ ಅಧಿಕವಾಗಿ ಬೇಕಾಗಿರುತಿದೆ. ಮುಖ್ಯವಾಗಿ ಪಬ್ಲಿಕ್ ವರ್ಕ್ಸ್ ಸೆಕ್ರೆಟರಿಯವರು ತೋರಿಸಿರತಕ್ಕ ಜಾಸ್ತಿ ಮೊಬಲಗಿನಲ್ಲಿ ಇಷ್ಟರ ಖರ್ಚಲ್ಲವೂ ಹ್ಯಾಗೆ ಆಗುವದೋ ಯೆಂದು ಅನುಮಾನಿಸಿ ಈ ವಿಷಯದೊಳು ಆಖೈರ್ ನಿರ್ಣಯಮಾಡಿ ಮಂಜೂರ್ ಮಾಡಲಿಕ್ಕೆ ಮುಂಚಿತವಾಗಿ ಸಾನಿಟರಿ ಮತ್ತು ಯೆಗ್ಸಿಕ್ಯೂಟಿವ್ ಇಂಜನಿಯರ್‌ಗಳ ಅಭಿಪ್ರಾಯಗಳನ್ನರಿಯಬೇಕಾದ್ದು ಆವಶ್ಯಕವಾಗಿರುವದರಿಂದ ಅವರ ತಾತ್ಪರ್ಯಗಳು ಕೇಳಿಸಿ ಕಳುಹಿಸಬೇಕೆಂಬದಾಗಿ ತಿಳಿಸಿರುತ್ತಾರೆ ಈ ಇಲಾಖೆಯ ಖರ್ಚು ಮುಂದೆ ಯೆಷ್ಟು ದೂರಹೋಗಿ ನಿಲ್ಲುವದೋ ಸದ್ಯಃ ತಿಳಿಯಲಸಾಧ್ಯವಾಗಿದೆ.

### ಮುಂಬೈಯಲ್ಲಿ ಹಿಂದುಗಳಿಗೂ ಮುಸಲ್ಮಾನರಿಗೂ ನಡೆದ ಕಲಹವಂಕುರಿತು.

**ಮತಾಚಾರ ದೇವಾಲಯಾದಿಗಳಿಗಾಗಿ ಹಿಂದೂಗಳು ಸ್ವತಃ ಪರಸ್ಪರ ಕಲಹಿಸುತಲೂ ತದರ್ಥ ಬಹುಧನವ್ಯಯ ಮಾಡುತಲೂ ಇರುವಾಗ್ಯೆ ಅವರಿಗೆ ಸಾಮಾನ್ಯರುಕ್ಷ ಧರ್ಮಪ್ರವರ್ತಕರಾದ ಮುಸ**ಲ್ಮಾನರೊಡನೆ ಕಲಹಿಸಿ ಅನಾವಶ್ಯಕಗಳಾದ ಪ್ರಾಣಹಾನಿಗಳನ್ನೂ ಈರ್ಷ್ಯಾಸೂಯಾದಿಗಳನ್ನೂ ವೃದ್ಧಿಪಡಿಸಲೆತ್ನಿಸುವದೇನೂ ಆಶ್ಚರ್ಯವಲ್ಲವು ದುರಭಿಮಾನವೆಂಬದು ಸದರೀ ಜಾತಿದ್ವಯದವರಲ್ಲಿಯೂ ನಿರೂಢಗುಣವಾಗಿ ಏರ್ಪಟ್ಟಿದೆ ಮುಂಬೈಯಲ್ಲಿ ಮುಸಲ್ಮಾನರಿಗೂ ಹಿಂದೂಗಳಿಗೂ ಜರಿಗಿದ ಪ್ರಬಲವಾದ ಕಲಹಸ್ವರೂಪವನ್ನೂ ತಮಪಶಮನಾರ್ಥ ಮೂರು ನಾಲ್ಕು ಸಹಸ್ರ ಸೈನ್ಯಗಳು ಆಯುಧಪಾಣಿಗಳಾಗಿ ಪುರರಕ್ಷಣಾರ್ಥ ಬಂದಿರುವದನ್ನೂ ಆದಾಗ್ಯೂ ಅನೇಕ ಜನರು ಪ್ರಾಣಗಳ ಕಳೆದುಕೊಂಡು ಮಿಕ್ಕವರು ಬಹುಜನ ಆಸ್ಪತ್ರಿಗಳಲ್ಲಿ ಅಪಾಯಸ್ಥಿತಿ ಮೊಳಕುತಿಧಿದಾರೆಂಬದನ್ನೂ ತಿಳಿಸಿದ್ದೆನಷ್ಟೆ. ಈ ಕಲಹವು ಪ್ರಬಲಿಸಿ ಯೆರಡು ಮೂರು ದಿನಗಳ ವರೆಗೂ ಮುಂಬೈ ಪಟ್ಟಣದಲ್ಲಿ ಶೂನ್ಯನಗರದಂತೆ ಸಕಲ ವ್ಯಾಪಾರಗಳೂ ನಿಂತುಹೋಗಿ ಸರ್ಕಾರ್ ಕೆಲಸಗಳಿಗೆ ಸಹ ಅಭ್ಯಂತರ ವುಂಟಾಗಿತ್ತು. ಜಯಬ್ ವ್ಯಾಪಾರಗಳು ತಡೆಯಲ್ಪಟ್ಟಿದ್ದವು ಬೀದಿಗಳಲ್ಲಿ ಜನರಿಗೆ ಸಂಚಾರವು ಪ್ರಯಾಸಸಾಧ್ಯವಾಯಿತು. ಬಹುಜನ ಸಂಘದಿಂದ ಅಪರಾಧಿ ನಿರಪರಾದಿಗಳಿಗೆ ತಾರತಮ್ಯವುಕಂಡು ಹಿಡಿಯುವದಸಾಧ್ಯವಾಯಿತು. ಮುಂಬೈ ಗವರ್ನರವರು ತಮ್ಮ ಪ್ರಜೆಗಳಲ್ಲಿಂತಾ ವೈಮನಸ್ಯ ವುಂಟಾಗಿ ಅವರು ಪರಸ್ಪರ ಕಲಹಿಸಿ ಪ್ರಾಣಗಳನ್ನೀಗಿಕೊಳ್ಳುವದು ತಮಗೆ ಬಹಳ ಅಸಮಾಧಾನಕರವಾಗಿದೆ ಯೆಂದು ಆಯಾ ಜಾತಿಯ ಪ್ರಮುಖರನ್ನು ಕರೆಯಿಸಿ ತಿಳಿಸಿದರಲ್ಲದೆ ಅವರು ಪ್ರವರ್ತಿಸಿ ಕಲಹಿಗಳನ್ನು ಸಮಾಧಾನ ಪಡಿಸಬೇಕೆಂದು ಆಜ್ಞಾಪಿಸಿದರು. ಇಷ್ಟರಲ್ಲೀವೃತ್ತಾಂತವು ಶ್ರೀಮನ್ಮಹಾರಾಜ್ಞೀ ಸರ್ಕಾರದವರಿಗೆ ತಿಳಿಯಬರಲು ತಮ್ಮ ಪ್ರಜೆಗಳೀರೀತಿ ವಿವೇಕಶೂನ್ಯರಾಗಿ ದುರಭಿಮಾನದಿಂ ಪರಸ್ಪರ ಕಲಹಿಸಿ ನೆಮ್ಮದಿಗೆ ಭಂಗವನ್ನೂ ಪ್ರಾಣಹಾನಿಗಳನ್ನೂ ಉಂಟುಮಾಡುವಣವು ಬಹಳ ವಿಷಾದಕರವಾದ ಅಂಶವಾಗಿರುತಿದೆಂತಲೂ, ತಮ್ಮ ಪ್ರಜೆಗಳೆಲ್ಲರೂ ಅನ್ಯೋನ್ಯಭಾವದೊಡನೆ ಪರಸ್ಪರಾನುರಾಗ ಯುಕ್ತರಾಗಿ ಸ್ನೇಹಭಾವದಿಂದಿರುವದಕ್ಕಿಂತಲೂ ತಮಗೆ ಸಂತೋಷಕರವಾದುದು ಬೇರೊಂದಿಲ್ಲವೆಂತಲೂ, ಅಂತಾ ಸ್ಥಿತಿ ಶೀಘ್ರದಲ್ಲಿ ಸರ್ವತ್ರ ನೆಲೆಗೊಂಡಿದೆ ಯೆಂಬದಂ ಕೇಳಲಿಕ್ಕೆ ಅತ್ಯಾತ್ಸಾಹವುಳ್ಳವರಾಗಿದೇವೆಂತಲೂ ತಂತಿ ಮೂಲಕ ತಿಳಿಯಪಡಿಸಿದರು. ಮುಂಬೈ ಷಹರ್ ಮ್ಯೂನಿಸಿಪಲ್ ಕಮ್ಮಿಷನರ್‌ಗಳು ಸಭೆ ಸೇರಿ ಮುಂದೆ ಇಂತಾದ್ದಕ್ಕೆ ಅವಕಾಶ ವಿರಲಾರದೆಂದು ಭರವಸೆಮನ್ನಿತ್ತು ಪ್ರಜೆಗಳು ನಿರ್ಭೀತರಾಗಿ ತಮ್ಮ ವ್ಯಾಪಾರಗಳನ್ನು ನಡೆಸಬಹುದೆಂದು ತಿಳಿಯಪಡಿಸಿದರು. ಮುಂಬೈ ಷಹರಿನಲ್ಲಿ ನೆಲೆಗೊಳಿಸಲ್ಪಟ್ಟಿರುವ ಸೈನ್ಯವು ಅದ್ಯಾಪಿ ವಾಪಸ್ ಹೋಗಲಿಲ್ಲವು ಕಥಂಚಿತ್ ತತ್ಕಾಲದಲ್ಲಿ ಸದರಿನ ಗದ್ದಲವು ಸ್ವಲ್ಪ ಮಟ್ಟಿಗೆ ಉಪಶಾಂತವಾಗಿದೆ, ಆದಾಗ್ಯೂ ಅದು ಯಾವಾಗಲಾದರು ಮರಳಿ ಇಮ್ಮಡಿಸಿ ಪ್ರಬಲಾನರ್ಥಗಳನ್ನುಂಟುಮಾಡದೆ ಹೋಗಲಾರದೆಂಬ ಭೀತಿಯು ಅನೇಕರು ಬಾಧಿಸುತಲಿವೆ ಇಷ್ಟರ ಅನರ್ಥಗಳಿಗೆ ಮೂಲ ಕಾರಣವು ನಿಷ್ಕೃಷ್ಟವಾಗಿ ಅದ್ಯಾಪಿ ತಿಳಿಯಬರಲಿಲ್ಲವು ಇವಕ್ಕೆ ಕಾರಣಭೂತರು ಮುಸಲ್ಮಾನರೆಂಬದಾಗಿ ಕೆಲವರೂ ಹಿಂದೂಗಳೆಂದು ಮತ್ತು ಕೆಲವರೂ ಹೇಳಿಕೊಳ್ಳುತ್ತಾರೆ. ಇವರಿಬ್ಬರೊಳು ಯಾರಾದಾಗ್ಯೂ ನ್ಯಾಯ್ಯವಾದ ಮತ್ತು ದಾರುಣವಾದ ದಂಡನೆಗೆ ಪಾತ್ರರಾಗಬೇಕಾದ್ದು ಧರ್ಮವಾಗಿರುತಿದೆ. ಹಿಂದೂಗಳು ಈಚೆಗೆ ಗೋರಕ್ಷಣ ಸಂಘವೆಂಬದಾಗಿ ಸಂಘಗಳನ್ನೇರ್ಪಡಿಸಿಕೊಂಡು ಗೋವಧೆಗೆ ಅನ್ಯರಿಗೆ ಅವಕಾಶ ಕೊಡಕೂಡದೆಂದು ಮಾಡುತಲಿರುವ ಪ್ರಯತ್ನಗಳು ಮುಸಲ್ಮಾನರಿಗೆ ಆಗ್ರಹವನ್ನುಂಟುಮಾಡಿದ್ದರಿಂದ ಅವರು ಕಲಹಕ್ಕೆ ಉಪಕ್ರಮಿಸಿದರೆಂಬದಾಗಿ ಕೆಲವರ ಅಭಿಪ್ರಾಯವು. **ಈಚೆಗೆ ಪ್ರಭಾಸಪಟ್ಟಣದಲ್ಲಿ ಜರಿಗಿದ ಪ್ರಾಣಹಾನಿಗಳಿಗೆ ಕಾರಣ ಭೂತರಾದ ಅಪರಾಧಿಗಳನ್ನು ವಿಚಾರಿಸಿ ಬಲವಾಗಿ ದಂಡಿಸ**ಬೇಕೆಂದು ಗವರ್ನ್‌ಮೆಂಟನವರನ್ನು ಕೇಳುವ ಉದ್ದೇಶದೊಡನೆ ಹಿಂದೂಗಳು ಸಭೆ ಸೇರಿ ಪ್ರೊಸೀಡಿಂಗ್ಸ್‌ಗಳಂ ಮಾಡಿದ್ದು ಮುಸಲ್ಮಾನರ ವಿದ್ವೇಷಕ್ಕೆ ಕಾರಣವೆಂದು ಮತ್ತು ಕೆಲವರ ತಾತ್ಪರ್ಯವು. ಇವುಗಳಲ್ಯಾವದು ನಿಜವೋ ಅದು ಕಾಲಕ್ರಮೇಣ ವಿಚಾರಣೆಯಲ್ಲಿ ಗೊತ್ತಾಗಬೇಕಾಗಿರುತಿದೆ. ಕೆಲವರಭಿಪ್ರಾಯಾನುಸಾರ ಈ ಕಲಹಕ್ಕೆ ಪಕುಪಧೆಯೇ ನಿಮಿತ್ತವೆಂದು ಭಾವಿಸುವ ಪಕ್ಷಕ್ಕೆ ಅದು ಮೊಹರಂ ಹಬ್ಬದಲ್ಲಿಯೇ ಕಲಹಕ್ಕುಪಕ್ರಮವಾಗಿರಬೇಕಾಗಿತ್ತು. ಹಾಗಿಲ್ಲದೆ ಸದರೀ ಹಬ್ಬವು ನಿರ್ವಿಚಾರವಾಗಿ ಗಲಭೆಯಿಲ್ಲದೆ ಗತಿಸಿ ಹೋಯಿತು. ಮಾಧವಬಾಗಿನಲ್ಲಿ ಸೇರಿದ ಹಿಂದೂಗಳ ಸಭೆಯೇ ನಿಮಿತ್ತವೆಂದು ನುಡಿಯುವ ಪಕ್ಷಕ್ಕೆ ಕಾಟೇವಾಡ ಸಂಸ್ಥಾನದಲ್ಲಿ ಸ್ವಜಾತಿಯವರಿಗುಂಟಾದ ಪರಿಭವವಂಕುರಿತು ನ್ಯಾಯವಾಗಿ ವಿಚಾರಿಸಿ ಅಪರಾಧಿಗಳನ್ನು ಯುಕ್ತರೀತಿಯಿಂದ ದಂಡಿಸಬೇಕೆಂದು ಗವರ್ನ್‌ಮೆಂಟನವರ ಸದ್ವಿವೇಕತೆಯನ್ನೂ ದಯೆಯನ್ನೂ ಪ್ರಾರ್ಥಿಸುವ ಬಗ್ಗೆ ಮಾಡಲ್ಪಟ್ಟ ಪ್ರಯತ್ನವಾದುದರಿಂದ ಅದಕ್ಕೆ ಮುಸಲ್ಮಾನರಿಗಿರುವಂತಾ ಬಾಧ್ಯತೆಯು ಹಿಂದೂಗಳಿಗೂ ಇರುವದರಿಂದ ಅದು ಕಾರಣವೆಂದು ನಿಶ್ಚೈಸಲು ಸಾಧ್ಯವಲ್ಲವು. ಇದಲ್ಲದೆ ಮಾಧವಬಾಗ್ ಮೀಟಿಂಗ್ ಕಾಲದಲ್ಲಿ ಮುಸಲ್ಮಾನರಿಗೆ ಆಗ್ರಹವನ್ನುಂಟುಮಾಡುವಂತಾ ವ್ಯಾಪಾರಗಳಾಗಲಿ ಮಾತುಗಳಾಗಲಿ ನಡೆದಂತೆ ನಮ್ಮ ತಿಳುವಳಿಕೆಗೆ ಬರಲಿಲ್ಲವು. ಆದುದರಿಂದ ಶ್ರೀಮನ್ಮಹಾರಾಣೀಯವರ ಪ್ರಜೆಗಳಲ್ಲಿ ಎಲ್ಲರಿಗೂ ಸಮಾನ ಬಾಧ್ಯತೆಯೂ ಸ್ವಾತಂತ್ರ್ಯವೂ ಉಳ್ಳವರಾಗಿರುವಲ್ಲಿ ಸದರೀ ಮೀಟಿಂಗ್ ಯೆಂಬದೂ ಕಾರಣವೆನಿಸಲಾರದು. ಇದರ ಕಾರಣವು ನಿಜವಾಗಿ ಅರಿಯಬೇಕಾದುದು ಪ್ರಜೆಗಳಿಗೂ ಗವರ್ನ್‌ಮೆಂಟನವರಿಗೂ ಬಹಳ ಅಪೇಕ್ಷಿತಾಂಶವಾಗಿರುತದೆ.

## LOCAL AND PROVINCIAL NEWS.

### ಸ್ವದೇಶಮತ್ತು ತಾಲ್ಲೂಕ್ ವಾರ್ತೆವೃತ್ತಾಂತಗಳು.

ಮೈಸೂರು ಗವರ್ನ್‌ಮೆಂಟ್ ಮರಾಮತ್ ಇಲಾಖೆಗೆ ಸೇರಿದ ಮೆ|| ಸೆಟಿಜರ್ ಬರ್ಕ್‌ಯವರು ಗತ ಗುರುವಾರದ ದಿನ ಸರ್ಕಾರೀ ಹುಕುಂ ಅನುಸರಿಸಿ ದಕ್ಷಿಣ ಮಹಾರಾಷ್ಟ್ರ ರೆಯಿಲ್ವೇ ಇಲಾಖೆಯ ಲೆಕ್ಕವನ್ನು ತನಿಖೀ ಮಾಡುವಬಗ್ಗೆ ಹೋಗಿದ್ದು ವಾಪಸ್ ಬಂದಂತೆ ಕೇಳುತ್ತೇವೆ.

ಇಂಡ್ಯ ಗವರ್ನ್‌ಮೆಂಟನವರು ಸರ್ಕಾರ್ ಬಾಕೀಬಗ್ಗೆ ಕೊಡಲ್ಪಡುವ ಸವರನ್‌ಗಳನ್ನು ಇನ್ನು ಮೇಲೆ ನಮ್ಮ ಸರ್ಕಾರ್ ಖಜಾನೆಗಳಲ್ಲಿ ಅಂಗೀಕರಿಸಬೇಕೆಂದು ತೀರ್ಮಾನಿಸಿರುತ್ತಾರಲ್ಲದೆ ಸವರ್ನ್ ೧ ಕ್ಕೆ ೧೫ ರೂಪಾಯಿಗಳೆಂತಲೂ ಅರ್ಧ ಸವರನಿಗೆ ೭|| ರೂಪಾಯಿಗಳೆಂತಲೂ ಕ್ರಯ ನಿಷ್ಕರ್ಷೆ ಮಾಡಿರುತ್ತಾರೆ.

ಬರುವ ತಿಂಗಳ ಗುರ್ರೇತಾರೀಖ್ ಲಾಗಾಯಿತು ಹಿಂದೂಪುರ ರೆಯಿಲ್ ಮಾರ್ಗದಲ್ಲಿ ಪ್ರಯಾಣಸ್ಥರ ಮತ್ತು ಸಾಮಾನುಗಳ ಗಾಡಿಗಳ ಸಂಚಾರಕ್ಕು ಪಕ್ರಮವಾಗುವದೆಂತಲೂ, ಈ ಸ್ತೆಯಲ್ಲಿ ಕಾಮಗಾರಿಕಾಲದಲ್ಲಿ ನೌಕರಿ ಮಾಡಿದವರಿಗೆಲ್ಲ ಪ್ರಬಲ ಔತನವೊಂದು ನಡೆಸಲ್ಪಡುವದೆಂತಲೂ ತಿಳಿಯಬರುತಿದೆ.

ಈವೂರು ಕೋಟೆಯ ಪಶ್ಚಿಮದಿಕ್ಕಿನಲ್ಲಿ ಹೊಸದಾಗಿ ಕಟ್ಟಲ್ಪಡುತಲಿರುವ ತರಗುಪೇಟೆ ಮೊದಲಾದವನ್ನು ಕಟಾಕ್ಷಿಸುವದಕ್ಕಾಗಿ ಶೀಘ್ರದೊಳು ಶ್ರೀಮನ್ಮಹಾರಾಜರವರ ಸವಾರಿಯು ಚಿತ್ತೈಸುವದಾಗಿರುವದರಿಂದ ಅಲ್ಲಿನ ರಸ್ತೆ ಮನೆಗಳನ್ನೆಲ್ಲ ಮ್ಯುನಿಸಿಪಾಲಿಟಿಯವರು ಸಾಫ್ ಮಾಡಿಸಿ ತಕ್ಕ ಏರ್ಪಾಡುಗಳಂ ಮಾಡಿಸುತಲಿರುವಂತೆ ಕೇಳುತ್ತೇವೆ.

ಕಳೆದ ಮಂಗಳವಾರದ ದಿನ ಮಧ್ಯಾಹ್ನ ೧ ಘಂಟೆಯ ಸಮಯದಲ್ಲಿ ಚಾಮರಾಜನಗರ ತಾಲ್ಲೂಕ್ ಆನೇಬಂಗಡಿಯಲ್ಲಿ ಸುಮಾರ್ ೬೦ ಆನೆಗಳು ಹಿಡಿಯಲ್ಪಟ್ಟವೆಂದು ವೃತ್ತಾಂತ ಬಂದಿರುತಿದೆ. ಇದರಮೂಲಕ ಸ್ವಲ್ಪ ಹೆಚ್ಚುಕಡಿಮೆಯಾಗಿ ೩೦ ಸಾವಿರ ರೂಪಾಯಿಗಳು ಮಹಾರಾಜಾ ಸರ್ಕಾರಕ್ಕೆ ಹುಟ್ಟುವಳಿಯಾಗಬಹುದೆಂದೆಣಿಸುತ್ತೇವೆ.

ಬೆಂಗಳೂರು ಷಹರ್ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರಿಗೆ ಇದುವರೆಗೆ ಗಾಡಿಯ ಭತ್ಯವುಸೇರಿಕೆ ಮಾಹೆಯಾನಾ ಸಲ್ಲುತಲಿದ್ದ ೩೦ ರೂಪಾಯಿಗಳು ೧೦೦ ರೂಪಾಯಿಗಳ ವರೆಗೆ ಜಾಸ್ತೀ ಮಾಡಲ್ಪಟ್ಟಿತೆಂತಲೂ, ಸನ್ ೧೮೯೩ ನೇ ಇಸವಿ ಏಪ್ರಿಲ್ ೨೮ ನೇ ತಾರೀಖಿನಲ್ಲಿ ಬೋರ್ಡಿನವರು ತೀರ್ಮಾನ ಮಾಡಿದ ಲಾಗಾಯಿತು ಮೇಲೆ ಕಂಡ ದರದಂತೆ ಸೇರಿಸಿಕೊಡಲ್ಪಡತಕ್ಕದ್ದೆಂದು ಮಂಜೂರಾಗಿದೆಯೆಂತಲೂ ತಿಳಿಯಬರುತಿದೆ

ಅರಿಸೀಕೆರೆಯಲ್ಲಿರುವ ದಕ್ಷಿಣ ಮಹಾರಾಷ್ಟ್ರ ರೆಯಿಲ್ವೇ ಇಲಾಖೆಯ ನೌಕರನಾದ ಒಬ್ಬ ಯೂರೇಷಿಯನ್‌ನ ಮನೆಗೆ ಕೆಲವರು ಕಳ್ಳರು ಪ್ರವೇಶಿಸಿ ಒಳಗಿದ್ದ ನಗದು ಮತ್ತು ಬಟ್ಟೆ ವಗೈರೆ ಸಾಮಾನುಗಳನ್ನೆಲ್ಲ ಕಳವು ಮಾಡಿಕೊಂಡು ಹೊರಗೆ ಬರುವಾಗ್ಯೆ ರೆಯಿಲ್ವೇ ಪೋಲೀಸಿನವರು ಅವರು ದಸ್ತಗಿರಿ ಮಾಡಿ ದರ್ಯಾಪ್ತಿಯ ಬಗ್ಗೆ ಈ ಪ್ರಾಂತ್ಯದಲ್ಲಿರುವ ರೆಯಿಲ್ವೇ ಮ್ಯಾಜಿಸ್ಟ್ರೇಟರ ಬಳಿಗೆ ಕಳೆದ ಬುಧವಾರದ ದಿನ ಸಾಯಂಕಾಲ ಕರೆದುಕೊಂಡು ಬಂದರು. ಇನ್ನೂ ಅವರ ದರ್ಯಾಪ್ತಿ ಪೂರೈಸಲಿಲ್ಲವು.

ಮೈಸೂರ್ ಗವರ್ನ್‌ಮೆಂಟನವರು ಕಳೆದ ತಿಂಗಳ ಗುರ್ರೇತಾರೀಖು ಲಾಗಾಯಿತು ಬೆಂಗಳೂರ್ ಸೆಂಟ್ರಲ್ ಜೆಯಿಲ್ ಚೀಫ್ ಜೆಯಿಲರ, ಮತ್ತು ಮೈಸೂರ್ ಜೆಯಿಲರ ತಲಬನ್ನು ಇದರಡಿ ಕಂಡ ಪ್ರಕಾರ ಜಾಸ್ತಿಮಾಡಿರುತ್ತಾರೆ ಬೆಂಗಳೂರ್ ಸೆಂಟ್ರಲ್ ಜೆಯಿಲ್ ಚೀಫ್ ಜೆಯಿಲರ ತಲಬ್ ೧೦೦ ರಿಂದ ೧೫೦ ರೂಪಾಯಿಗಳವರೆಗೆ ಸಾಲೀಯಾನಾ ೧೦ ರೂಪಾಯಿಗಳ ಪ್ರಕಾರ ಏರಿಸಿಕೊಡಲ್ಪಡತಕ್ಕದ್ದು. ಮೈಸೂರ್ ಜೆಯಿಲರಿಗೆ ೭೫ ರಿಂದ ೧೦೦ ರೂಪಾಯಿಗಳವರೆಗೆ ಸಾಲೀಯಾನಾ ೫ ರೂಪಾಯಿಗಳಂತೆ ಏರಿಸಿಕೊಡಲ್ಪಡತಕ್ಕದ್ದೆಂಬದಾಗಿ ತೀರ್ಮಾನವಾಗಿಯಿರುತಿದೆ

ಈಚೆಗೆ ಮೂರುನಾಲ್ಕು ದಿನಗಳಿಂದ ಹಗಲು ರಾತ್ರಿ ಮೋಡ ಮಾರುತ ಮಧ್ಯೆ ಮಧ್ಯೆ ಯೆಸಿದಂತೆ ಕೆಲವು ದಿನಗಳು ಬಿಳುತವೆಯೇ ಹೊರತು ಘಟ್ಟಿಯಾದ ಮಳೆಯಿಲ್ಲವು. ಕೆಲವು ಪ್ರದೇಶಗಳೊಳು ಪೈರುಗಳು ಒಣಗುವದಕ್ಕುಪಕ್ರಮವಾಯಿತೆಂದು ಹೇಳಿಕೊಳ್ಳುತ್ತಾರೆ ದೈವಯೋಗವು ಮುಂದೆ ಹ್ಯಾಗಿರುವದೊ ತಿಳಿಯಲಸಾಧ್ಯವಾಗಿದೆ ಆಹಾರ ಪದಾರ್ಥಗಳ ಧಾರಣೆಗಳು ಹಿಂದಿನ ವಾರದಲ್ಲಿ ತಿಳಿಸಿದಂತೆಯೇ ಇವೆ. ಜನಾರೋಗ್ಯವು ಸಾಮಾನ್ಯವಾಗಿದೆ ಪಶುಗಳಿಗೆ ಮೇವು ನೀರೂ ಸಿಕ್ಕುತಿವೆ.

ಸುಮಾರ್ ಹತ್ತು ದಿನಗಳ ಹಿಂದೆ ಮಧುಗಿರಿ ತಾಲ್ಲೂಕು ಶಿರಸ್ತೇದಾರರೂ ಅದೇ ತಾಲ್ಲೂಕ್ ಗುಮಾಸ್ತೆಯರೊಬ್ಬರೂ ತುಮಕೂರಿಗೆ ಬಂದು ವಾಪಸ್ ಹೋಗುತ್ತಿರುವಲ್ಲಿ ಕೊರಟಗೆರೆಯ ಆಚೆ ಸ್ವಲ್ಪದೂರದಲ್ಲಿ ರಾತ್ರಿ ಕಾಲದೊಳು ಅವರಮೇಲೆ ಕಳ್ಳರು ಬಂದು ಬಿದ್ದು ಅವರು ಹೊಡೆದು ಅವರಲ್ಲಿದ್ದದನ್ನೆಲ್ಲ ಕಳವು ಮಾಡಿಕೊಂಡು ಹೋದರೆಂತಲೂ, ಗುಮಾಸ್ತೆಯರಿಗೆ ಮುಖದ ಮೇಲೆ ಸ್ವಲ್ಪ ಘಾಯ ಸಹ ತಗಲಿದಂತೆಯೂ ಆ ಪ್ರಾಂತದಿಂದ ಬಂದ ಬಾತಮಿದಾರರು ತಿಳಿಸುತ್ತಾರೆ.

೨. ಅದೇ ಕಾಲದಲ್ಲಿ ಅಥವಾ ಯೆರಡು ದಿನಗಳ ಹಿಂದೆ ತುಮಕೂರಿಂದ ಶಿರ್ದ್ಯಕ್ಕೆ ಹೋಗುತಲಿದ್ದ ಸುಮಾರು ೩೦ ಗಾಡಿಗಳಮೇಲೆ ದರೋಡೆ ಕಳ್ಳರು ಬಂದು ಬಿದ್ದು ಲೂಟಿ ಮಾಡುವದಕ್ಕೆ ಯೆತ್ನಿಸಲು ಕಳ್ಳರ ಸಂಖ್ಯೆಗಿಂತಲೂ ಗಾಡಿಯವರ ಸಂಖ್ಯೆಯು ಅಧಿಕವಾಗಿದ್ದದರಿಂದ, ಗಾಡಿಯವರು ಸೇರಿ ಕಳ್ಳರನ್ನು ಹಿಡಕೊಂಡು ಹೊಡೆಯಲು ಅವರ ಪೈಕಿ ಕೆಲವರಿಗೆ ಜಖಂ ಆದದ್ದಲ್ಲದೆ ಒಬ್ಬನು ಸತ್ತುಹೋದಂತೆ ಅದೇ ಬಾತಮಿದಾರರು ತಿಳಿಸುತ್ತಾರೆ. ಈ ಯೆರಡು ಮೊಕದ್ದಮೆಗಳಲ್ಲೂ ಇದುವರೆಗೂ ಕಳ್ಳರ ಪತ್ತೆ ಆದಂತೆ ಕಾಣಿಸಲಿಲ್ಲವು.

ಈಗ ಈ ಸಂಸ್ಥಾನದಲ್ಲಿ ಸ್ತ್ರೀ ವಿದ್ಯಾಭ್ಯಾಸವು ಅಧಿಕವಾಗುತ ತದರ್ಥ ಅನೇಕ ನವೀನ ಏರ್ಪಾಡುಗಳು ನಡೆಯುತಲಿರುವದು ಪ್ರಸಿದ್ಧವಾಗಿದೆಯಷ್ಟೆ. ಬಾಲಿಕಾ ಪಾಠಶಾಲೆಗಳ ವಿಚಾರಣೆಯು ಈಗ ಗಂಡುಸರಿಂದಲೇ ನಡೆಸಲ್ಪಡುತಲಿವೆ. ಸದರೀ ಪಾಠಶಾಲೆಗಳ ಇನ್ಸ್ಪೆಕ್ಷನ್ ಬಗ್ಗೆ ಈಗ ಒಬ್ಬ ಲೇಡಿ ಸೂಪರಿಂಟೆಂಡೆಂಟರು ಅವಶ್ಯಕವಾಗಿರುತಿದೆ. ಮೈಸೂರು ಸೀಮೆಯ ಬಾಲಿಕಾ ಪಾಠಶಾಲೆಗಳಿಗೆಲ್ಲ ರಾಯಬಹದೂರ್ ಮ|| ಅಂಬಿಲಿ ನರಸಿಂಹಯ್ಯಂಗಾರ್ರವರು ಸೂಪರಿಂಟೆಂಡೆಂಟಾಗಿ ನಿಯಮಿಸಲ್ಪಟ್ಟಿರುತ್ತಾರಷ್ಟೆ. ಇವರಿಗೆ ಪ್ರಾಯಶಃ ರಾಜಧಾನಿಯಲ್ಲಿಯೇ ಬೇಕಾದ ವ್ಯಾಪಾರಗಳಿರುವದರಿಂದ ಇತರತ್ರ ಹೋಗಿ ಬರುವದಕ್ಕೆ ವ್ಯವಧಾನವಿರುವದಿಲ್ಲವು. ಇವರಿಗೆ ಅಸಿಸ್ಟೆಂಟ್ ಒಬ್ಬರನ್ನು ಮಾಹೆಯಾನಾ ೩೦೦ ರೂಪಾಯಿಗಳ ಸಂಬಳದಲ್ಲಿ ಲೇಡೀ ಒಬ್ಬ ಸೂಪರಿಂಟೆಂಡೆಂಟರನ್ನು ನಿಯಮಿಸಬೇಕೆಂದು ಗವರ್ನ್‌ಮೆಂಟಿನವರಾಲೋಚಿಸುತಲಿರುವಂತೆ ಒಬ್ಬ ಬಾತಮೀದಾರನು ತಿಳಿಸುತ್ತಾನೆ.

---

ಮಾರ್ಚಿ ಮಜಕೂರ್ ೧೩ ನೇ ತಾರೀಖಿನ ಬೆಂಗಳೂರಿನ ಈವಿನಿಂಗ್ ಮೈಯಿಲ್ ಪತ್ರಿಕೆಯು ಇತರಡಿ ತಿಳಿಸಲ್ಪಡುವ ಡೆಪ್ಯುಟಿ ಕಮ್ಮಿಷನರ್‌ಗಳ ವರ್ಗಾವರ್ಗಗಳು ಸಂಬಂಧಕ್ಕ ಮಾರ್ಗದಿಂದ ತಿಳಿಯಬರುವಂತೆ ಸೂಚಿಸುತಿದೆ. ಅವು ಯಾವವೆಂದರೆ—ಮ|| ಮಿಯರ್ ಸುಜಾಯತ್ ಅಲ್ಲೀಖಾನರು ಬೆಂಗಳೂರಿಂದ ಚಿತ್ರದುರ್ಗಕ್ಕೂ, ಮ|| ಶ್ರೀನಿವಾಸಯ್ಯಂಗಾರ್ರವರು ಚಿತ್ರದುರ್ಗದಿಂದ ಮೈಸೂರಿಗೂ ಮ|| ಎ. ರಂಗಸ್ವಾಮಯ್ಯಂಗಾರ್ರವರು ಮೈಸೂರಿಂದ ಈ ವೂರಿಗೂ ವರ್ಗ ಮಾಡಲ್ಪಡುವರು. ಈ ಬದಲಾವಣೆಗಳು ಮ|| ರಂಗಸ್ವಾಮಯ್ಯಂಗಾರ್ರವರು ರಜಾ ಪ್ರಸಿದ್ಧಿಸಿಕೊಂಡು ವಾಪಸ್ ಬಂದಕೂಡಲೆ ಜಾರಿಯಲ್ಲಿ ತರಲ್ಪಡಬಹುದೆಂದು ಕಾಣುತಿದೆ. ಮ|| ಸುಜಾಯತ್ ಅಲ್ಲೀಖಾನರವರಿಗೆ ಮದರಾಸ್ ಪ್ರೆಸಿಡೆನ್ಸಿಯಲ್ಲಿದ್ದ ದತ್ತ ನರುಷಗಳ ಹಿಂದಿನ ಸರ್ವಿಸನ್ನು ಮಹಾರಾಜಾಸರ್ಕಾರದವರು ಅಂಗೀಕರಿಸಿ ಪೆನ್ಷನಿಂಡಬೂ ಅವರಿಲ್ಲಿನ ನೌಕರಿಯಲ್ಲಿದ್ದಂತೆಯೇ ಗಣಿಸಲ್ಪಡುವಂತೆ ಪ್ರೊಸೀಡಿಂಗ್ಸ್ ಮಾಡಿರುತ್ತಾರೆ. ಇಷ್ಟರ ವಾಲ್ಲಭ್ಯವಿರುವಾಗ್ಯೂ ಇವರು ಈ ಎಸ್ಟಾಬ್ಲಿಷ್ಮೆಂಟನ್ನು ಬಿಟ್ಟು ಹೋಗುವದೆಂಬದು ಅನುಮಾನಾಸ್ಪದವಾಗಿರುತಿದೆ.

---

## CORRESPONDENCE

ಮೊಳಕಾಲ್ಮೂರು, ತಾ|| ೧೮ ನೇ ಆಗಸ್ಟ್ ೧೮೯೩.

(ಕಳೆದವಾರದ ಶೇಷ)

ಪಿತ್ತ ಪ್ರಕೃತಿಯವನು ಹುಲಿ, ಕರಡಿ, ನಾಯಿ, ಕಪ್ಪೆ ಈ ಮುಂತಾದವುಗಳ ಮುಖ್ಯ ಧರ್ಮಗಳನ್ನು ಹೋಲುವವನಾಗಿದ್ದಾನೆ.

ಶ್ಲೇಷ್ಮ ಪ್ರಕೃತಿಯ ಲಕ್ಷಣ —ಶ್ಲೇಷ್ಮ ಪ್ರಕೃತಿಯು ಚಂದ್ರಸಂಬಂಧಯಾದ್ದರಿಂದಲೂ ಸೌಮ್ಯಯುಕ್ತವಾದ್ದರಿಂದಲೂ ಶ್ಲೇಷ್ಮಪ್ರಕೃತಿಯವನು ಸೌಮ್ಯನಾಗಿದ್ದವನು, ಇವನ ಅವಯವ ಸಂಧಿಗಳಲ್ಲಿ ಇರುವ ಮಾಂಸವೂ ಎಲುವೂ ಸ್ನೇಹಯುಕ್ತವಾಗಿಯೂ ಬಿಗಿದಿಟ್ಟುಕೊಂಡೂ ಇವೆ. ಶ್ಲೇಷ್ಮಯುಳ್ಳವನಾದ್ದರಿಂದ ಹಸಿವು, ಬಾಯಾರಿಕೆ, ದಣಿವು, ಬಿಸಿಲು ಇವುಗಳ ಬಾಧೆ ಇಲ್ಲದವನಾಗಿದ್ದಾನೆ. ಇವನು ಬುದ್ಧಿವಂತನು, ಸಾತ್ವಿಕನು, ಸತ್ಯವಾದಿಯು, ಇವನ ಮೈಕಾಂತಿಯು ನವಿಲುಕಣ್ಣಿನಂತೆಯೂ ಗರಿಕೆಹುಲ್ಲು, ಬೋಣೀಕತ್ತಿ, ಸಾಣೆ ಮಾಡಿದ ಕತ್ತಿ, ತಾವರೆದಳ, ಗೋರೋಚನ, ಚಿನ್ನ, ಇವುಗಳ ಹೋಲಿಕೆಯಾಗಿಯೂ ಇರುವುದು. ದೀರ್ಘಬಾಹುವಾಗಿಯೂ ವಿಶಾಲವಾಗಿಯೂ ಉನ್ನತವಾಗಿಯೂ ಇರುವ ವಕ್ಷಸ್ಥಲವುಳ್ಳವನಾಗಿ, ವಿಸ್ತಾರವಾದ ಹಣೆಯುಳ್ಳವನಾಗಿ, ಒತ್ತಾಗಿ ನೀಲವರ್ಣವಾಗಿರುವ ಕೂದಲುಳ್ಳವನಾಗಿ, ಸಮವಾದ ಶರೀರದಲ್ಲಿ ಮಾರ್ದವವುಳ್ಳವನಾಗಿ, ವಿವರಿಸಿನೋಡಿದರೆ ಸರ್ವಾಂಗಸುಂದರನಾಗಿ ಓಜಸ್ಸು, ಸಂಭೋಗೇಚ್ಛೆ, ರೇತಸ್ಸು, ಪುತ್ರರು, ಭೃತ್ಯರು, ಇವು ಈತನಿಗೆ ಹೇರಳವಾಗಿರುವವು. ಮತ್ತು ಧರ್ಮಿಷ್ಠನಾಗಿಯೂ, ಯಾವಾಗಲು ನಿಷ್ಠುರ ಮಾತುಗಳನ್ನಾಡದೇನೆ ಇರುವವನಾಗಿಯೂ, ದ್ವೇಷವನ್ನು ಬಹುಕಾಲದ ವರಿವಿಗೆ ಒಬ್ಬರಿಗೂ ತಿಳಿಸದೇನೆ ಮನಸ್ಸಿನಲ್ಲಿಡುವವನಾಗಿಯೂ, ಮದಿಸಿದ ಆನೆ ಹುಲಿ ಸಿಂಹ ವೃಷಭ ಇವುಗಳ ನಡೆಯನ್ನು ಹೋಲುವ ನಡೆಯುಳ್ಳವನಾಗಿಯೂ, ಮೇಘ, ಸಮುದ್ರ, ಮದ್ದಲೆ, ಸಿಂಹ, ಇವುಗಳ ಧ್ವನಿಯೋಪಾದಿಯಲ್ಲಿ ಧ್ವನಿಯುಳ್ಳವನಾಗಿಯೂ, ಮರೆಯದಿರುವವನಾಗಿಯೂ, ಅತ್ಯಂತಾಲೋಚನಾಪರನಾಗಿಯೂ, ಅತ್ಯಂತವಿನಯಶಾಲಿಯಾಗಿಯೂ, ಗುರುಕುಲವಾಸವನ್ನು ಚೆನ್ನಾಗಿ ಮಾಡಿದವನಾಗಿಯೂ, ಬಾಲ್ಯಾವಸ್ಥೆಯಲ್ಲಿ ಹೊರತು ಮತ್ತೆಯಾವಾಗಲೂ ಅಳದವನಾಗಿಯೂ, ಅನ್ಯರ ಸ್ವತ್ತಿನಲ್ಲಿ ಆಶೆಯಿಲ್ಲದವನಾಗಿಯೂ, ಸಕಲಪ್ರಾಣಿಗಳಲ್ಲೂ ಪ್ರೀತಿ ಮಾಡುವವನಾಗಿಯೂ, ಆರಂಭಿಸಿ ನೆನಸಿದ ಕಾರ್ಯವನ್ನು ತತ್‌ಕ್ಷಣ ಪೂರೈಸದೆ ಬಿಡದವನಾಗಿಯೂ, ಅಲ್ಪವಾಗಿ ಕೊಡುವವನ್ನ ತಿಳಿಯದವನಾಗಿಯೂ, ಯಾಚಕರ ಸಂಖ್ಯೆ ಇಲ್ಲದವನಾಗಿಯೂ, ಅಪವಾದವನ್ನ ತಿಳಿಯದವನಾಗಿಯೂ, ಸದಾಚಾರಾನುಷ್ಠಾನದಲ್ಲಿ ನಿದ್ರೆ ಇಲ್ಲದವನಾಗಿಯೂ, ಉಪಕಾರ್ವ ಸಲ್ಪವಾದಾಗ್ಯೂ ಮರೆಯದವನಾಗಿಯೂ, ಕಾರ್ಯಗಳ ಪರಿಣಾಮಗಳಂ ತಿಳಿಯದೇನೇ ಪ್ರಾರಂಭಿಸುವವನಾಗಿಯೂ, ವಂಚಕನಲ್ಲದವನಾಗಿಯೂ, ಸಕಲ ಶಾಸ್ತ್ರಾರ್ಥವನ್ನು ತಿಳಿದವನಾಗಿಯೂ, ಸಕಲಸಂಪತ್ತಿಗೂ ಅಧಿಷ್ಠಾನ ಭೂಮಿಯಾಗಿಯೂ, ಕೆಟ್ಟಕೆಲಸವನ್ನ ಸ್ವಪ್ನದಲ್ಲಿಯೂ ಮಾಡದೆ ಇರುವವನಾಗಿಯೂ, ಗುರು ಭಕ್ತಿಯುಳ್ಳವನಾಗಿಯೂ, ಸ್ನೇಹಿತರನ್ನ ಯಾವದೇಶ, ಕಾಲ, ಸ್ಥಿತಿಯಲ್ಲೂ ಬಿಡಲಾರದೆ ಇರುವವನಾಗಿಯೂ, ತಾನು ಅನುಭವಿಸದೆ ಇರುವ ದರ್ಪವೇ ಇಲ್ಲದವನಾಗಿಯೂ, ಇರುವನು. ಇವನಿಗೆ ಆಹಾರವು ಕಮಿಯಾಗಿಯೂ, ಒಗರಾಗಿಯೂ ಕಾರವಾಗಿಯೂ ಸ್ವಲ್ಪ ಉಷ್ಣವಾಗಿಯೂ ಇರಬೇಕು. ಈತನ ಕಣ್ಣುಗಳು ವಿಶಾಲವಾಗಿಯೂ, ದೀರ್ಘವಾಗಿಯೂ, ಚೆನ್ನಾಗಿ ತಿಳಿಯುತಲಿರುವ ಬಿಳುಪು, ಕಪ್ಪು, ಅಂಚುಗಳುಳ್ಳದ್ದಾಗಿಯೂ, ದಪ್ಪಗಳಾಗಿರುವ ಇಮೆಯುಳ್ಳದ್ದಾಗಿಯೂ, ಇರುತ್ತವೆ. ಈತನು ಅಲ್ಪಭೋಜನಾದರೂ, ಬಲಶಾಲಿಯಾಗಿರುತ್ತಾನೆ ಕಡೆಗಣ್ಣು ಕೆಂಪಾಗಿರುವುದು. ಈತನಿಗೆ ಕಾರ್ಯಗಳು ನಡೆಯದೆ ಹೇರಳವಾದ ಆಯಾಸವು ಇಲ್ಲವು ಕೋಪವು ಉಂಟೋ ಇಲ್ಲವೋ ತಿಳಿಯುವದಿಲ್ಲವು ಜಲಪಾನಾಪೇಕ್ಷೆಯು ಕ್ಷಾಂತಿ ಕ್ಷಮಾ, ಹಸಿವು ಸ್ವಲ್ಪ, ಅಸೂಯೆಯೂ ಇದಮಯವಾಗಿವೆ. ಅಂದರೆ ಮನುಷ್ಯರನ್ನೆಲ್ಲಾ ತನ್ನ ಸಮೆಸುತಾರನು. ಸ್ವಪ್ನದಲ್ಲಿ ಪದ್ಮಾದಿ ಪುಷ್ಪ, ವಿಚಿತ್ರವಾದ ಪುಷ್ಪಾದಿಗಳು ಇವುಗಳೊಂದಿಗೆ ಸೇರಿರುವ ತಟಾಕಗಳನ್ನು ಕಾಣುವನು, ಮೇಘಗಳನ್ನು ಕಾಣುವದೂ ಉಂಟು; ಬ್ರಹ್ಮ, ರುದ್ರ, ವರುಣ, ದೇವೇಂದ್ರ, ಎತ್ತುಗಳೂ, ಪಕ್ಷಿಗಳಲ್ಲಿ ಗರುಡನೂ, ಹಂಸವೂ, ಮೃಗಗಳಲ್ಲಿ ಐರಾವತ, ಉಚ್ಚೈಃಶ್ರವಸ್ಸು, ದೇವೀವಾಹನ, ವೃಷಭರಾಜನು, ಇವರುಗಳೂ ಶ್ಲೇಷ್ಮಪ್ರಕೃತಿಗಳು. ಮನುಷ್ಯರಲ್ಲಿ ರಾಮಕೃಷ್ಣಾದಿಗಳಲ್ಲದೆ ಯಾರೂ ಇಲ್ಲವು

---

## ವೇಶ್ಯಾಸ್ತ್ರೀಯರ ದುಃಖಸೂಚನೆ.

ಅಯ್ಯಾ.—ಈಯುದ್ಯ ದೇಶದಲ್ಲಿ ತಪತರದೇಶಗಳಲ್ಲಿರುವಂತಲ್ಲದೆ ಪ್ರಜೆಗಳೊಳಗೆ ಅನೇಕ ಜಾತಿಭೇದಗಳೂ, ಬಹುವಿಧ ಸಂಪ್ರದಾಯಗಳೂ, ನಾನಾವಿಧ ಕಟ್ಟುಪಾಡುಗಳೂ ನೆರೆಗೊಂಡು, ಅವನಿಂದನುಸರಿಸಲ್ಪಡುತ ಬರುವಣವು ಪ್ರಸಿದ್ಧ ವಿಷಯವಾಗಿದೆಯಷ್ಟೆ. ಇಂತಾ ಜಾತಿ ಮತಾಚಾರಾದಿ ಪ್ರಭೇದಗಳು ಭಗವದಾಜ್ಞೆಯಿಂದೇರ್ಪಟ್ಟವೆಂದು ಕೆಲವರೂ, ಅವರವರು ಅವಲಂಬಿಸಿರುವ ವೃತ್ತ್ಯನುಗುಣವಾಗಿ ಏರ್ಪಟ್ಟವೆಂದು ಮತ್ತೆ ಕೆಲವರೂ, ಅಭಿಪ್ರಾಯಪಡುತ ಅವುಕುರಿತು ಪರಸ್ಪರ ಅದ್ಯಾಪಿ ಚರ್ಚಿಸುತಲಿದಾರೆ. ಸತ್ವರಜಸ್ತಮೋಗುಣ ಪ್ರಧಾನರಾದ ಮನುಷ್ಯರು ಅವರವರ ಇಷ್ಟಾನುಸಾರ ಅವಲಂಬಿಸಿದ ಮಾರ್ಗಗಳೆಲ್ಲವು ಒಂದೊಂದು ವೃತ್ತಿಯೆನಿಸಿಕೊಂಡು ತದನುಸಾರ ಜಾತಿಭೇದಗಳೇರ್ಪಟ್ಟವೆಯೇ ಹೊರತು ಅಪೌರುಷೇಯಗಳಾದ ವಿಧಿನಿಷೇಧಗಳಿಗೆ ಬದ್ಧವಾಗಿ ವ್ಯವಸ್ಥೆಮಾಡಲ್ಪಟ್ಟವಲ್ಲವೆಂಬದಾಗಿ ಅನೇಕರು ತಾತ್ಪರ್ಯಗೊಂಡಿದಾರೆ. ಇಂತಾ ವೃತ್ತಿಗಳೂ, ತನ್ಮೂಲಕಗಳಾದ ಜಾತಿಭೇದಗಳೂ ಭಗವದಾಜ್ಞೆಯಿಂದೇರ್ಪಟ್ಟವಾಗಿದ್ದಾಗ್ಯೂ, ಅಥವಾ ಕಾಲದೇಶ ಪ್ರಕೃತ್ಯನುಗುಣವಾಗಿ ಕೃತಕಗಳೆಂದು ನುಡಿಯಲ್ಪಟ್ಟಾಗ್ಯೂ ಬಾಧಕವಿಲ್ಲವು ಇದುವರೆಗೆ ಆಯಾಜಾತಿಯವರಿಗಾಗಲಿ, ಆಯಾ ವೃತ್ತಿಯನ್ನವಲಂಬಿಸಿದವರಿಗಾಗಲಿ, ತತ್ತತ್ಸ್ವರೂಪ ಯೋಗ್ಯತಾನುಸಾರ ಗೌರವವೂ ಪ್ರಶಸ್ತ್ಯವೂ ಲಭಿಸುತಲಿದ್ದವು. ಈಗ ವೃತ್ತಿತಾರತಮ್ಯವು ಕುಷ್ಮಾಂಡ ಪರಿಗಣನೀಯವಲ್ಲದೆ ಹೋಗಿ ಬೇಕಾದವರು ಬೇಕಾದ ವೃತ್ತಿಯನ್ನವಲಂಬಿಸುವವರಲ್ಲಿ ಯಾವವಿಧ ಬಾಧಕವೂ ಇಲ್ಲವೆಂಬ ಅಭಿಪ್ರಾಯವು ಸಾರ್ವತ್ರಿಕವಾಗಿ ಏರ್ಪಟ್ಟಿರುವದರಿಂದ ತದ್ವತ್ ಜಾತಿಭೇದಗಳು ಅನಾವಶ್ಯಕಗಳೆಂಬದಾಗಿಯೂ, ಸಕಲರೂ ಸರ್ವಸಮತ್ವಭಾವದಿಂ ವರ್ತಿಸಬೇಕೆಂಬದಾಗಿಯೂ ಎಣಿಸಿ ತದ್ವತ್ ಆಚರಿಸುತ ಬರುತಲಿದಾರೆ. ಆದರೆ ನಮ್ಮೊಬ್ಬರ ವೃತ್ತಿಮಾತ್ರ ಅನ್ಯಾಕ್ರಾಂತವಾಗದೆ, ಇದ್ದಮಟ್ಟಿಗೆ ಅನುಪಯುಕ್ತವಾಗಿ ಕಾಪಾಡಲ್ಪಡುತ ಬಂತು. ಏತತ್ಕ್ಷಣಪರ್ಯಂತ ನಮ್ಮ ಜೀವನವನ್ನಾಶಿಸಿ ಬಂದವರೊಬ್ಬರನ್ನೂ ಕಾಣೆವು. ಕಾಲವೈಪರೀತ್ಯದಿಂದ ನಮ್ಮ ವೃತ್ತಿ ಸಹ ಅನ್ಯರಿಂದಪಹೃತವಾಗಿ ಸ್ವಜಧರ್ಮದಂತೆ ಅನುಸರಿಸಲ್ಪಡುತಿದೆ. ನಮ್ಮ ವೃತ್ತಿಯನ್ನನುಸರಿಸಿ ನಮಗೆ ನಿಘಂಟುಗಳಲ್ಲಿ ಸಹ "ವಾರಸ್ತ್ರೀಗಣಿಕಾ ವೇಶ್ಯಾ ರೂಪಾಜೀವಾಥ ಸಾಜನೈಃ | ಸತ್ಕೃತಾ ವಾರಮುಖ್ಯಾಸ್ಯಾತ್ಕ್ರಯಲಬ್ಧಿ ಚಭೋಗಿನೀ" ಎಂಬದಾಗಿ ನಾಮಭೇದಗಳೇರ್ಪಟ್ಟಿರುತಿವೆ. ಲೋಕದಲ್ಲಿ ಅನ್ಯರವಿದ್ಯೆಯನ್ನೂ ಸಂಪತ್ಪ್ರಭವಗಳನ್ನೂ ಆಶಿಸುವಂತ ಪರಲೋಕರನ್ನು ನಾವು ಕಂಡಿರುತ್ತೇವೆ. ಪರಂತು ಈಗ ಪ್ರಭುಗಳೆನಿಸಿರುವ ಪ್ರೈಲಕ್ಷ್ಮಿ ಸ್ವಾಭಿಮಾನಿಗಳಂತೆ ನಮ್ಮ ಹೆಸರುಗಳನ್ನೇ ಅಪಹರಿಸಿ ನಮ್ಮ ಜೀವನಕ್ಕೆ ವಿಚ್ಛಿತ್ತಿಯನ್ನುಂಟುಮಾಡಲಿನ್ನಿಸಿರುವಂತವರ್ಯಾರನ್ನೂ ನಾವು ನೋಡಲಿಲ್ಲವು. ಪೂರ್ವಶ್ಯವಾಗಿ ಸರಸಿಗಳಾದ ಪುರುಷರು ನಾಲ್ವರು ಏಕತ್ರ ಸೇರಿ ನೃತ್ಯಗೀತ ವಾದ್ಯಾದಿ ವಿನೋದಗಳಿಂದ ಆನಂದಿಸಿ ಅತ್ಯಂತರಂ ರಕ್ಷಿಸುವ ಪದ್ಧತಿಯು ಕುಷ್ಮಾಂಡ ಹೋಯಿತು. ಸಾಮಾನ್ಯರಾದ ನಮ್ಮ ಸಾಮಾನ್ಯ ವೃತ್ತಿಯನ್ನು ಸಾಮಾನ್ಯೇನ ಸಾಂಸಾರಿಕ ಧರ್ಮದಲ್ಲಿರುವ ಸಾಧ್ವಿಗಳು ಸಂಧುವಾಗಿ ಎಣಿಸಿ ಸ್ವೀಕರಿಸಿದ್ದರಿಂದ ಶುಭಶೋಭನಾದಿ ವಿಶೇಷ ಸಂದರ್ಭಗಳಲ್ಲಿ ನಮ್ಮ ಆವಶ್ಯಕತೆಯು ಇಲ್ಲವಾಯಿತು. ಬಹು ಪುರುಷ ಸಮೂಹದೊಳು ಕುಟುಂಬಿನಿಗಳು ಬರಲಾಗದೆಂಬ ನಿರ್ಬಂಧವು ತೊಲಗಿ ಹೋದದರಿಂದ ಅಂತಾ ಸಮಯಗಳಲ್ಲಿ ಕೂಡ ನಾವು ಕರೆಯಿಸಲ್ಪಡುವದಕ್ಕಿಂತಲೂ ಗೃಹಾಂತರಸತಿಗಳಾದ ಕುಲಕಾಂತೆಯರ ದರ್ಶನಸಲ್ಲಾಪಗಳು ಪ್ರತಿಷ್ಠಾರೂಪವಾಗಿ ಪರಿಗಣಿಸಲ್ಪಡುತ ಬಂದಿದೆ. ವೀಣಾವೇಣುಮೊದಲಾದ ವಾದ್ಯಗಳಿಗೆ ಬದಲಾಗಿ ರಾಗಮಾಲಿಕೆಗಳೂ, ಪಿಯಾನಗಳೂ, ಸಂಗೀತಾನುದಾನುಭವಕ್ಕೆ ಸ್ವಸ್ತ್ರೀಯರೂ, ಆರ್ಥ ರಾಗುತ ಬಂದವರಿಂದ ನಮ್ಮ ವೃತ್ತಿಯಲ್ಲಿ ನಮಗೆ ಜೀವನವು ಜರಗದೆ ನೀಚವಾಗಿ ಮತ್ತು ಪರಾಧೀನವಾಗಿ ಜೀವಿಸಬೇಕಾದವರಾಗಿದೇವೆ. ಇದರಿಂದ ನಮಗೊಂದು ನಿಕೃಷ್ಟತ್ವವು ಆರೋಪಿಸಲ್ಪಟ್ಟದೆ. ಈಗ ನಮ್ಮ ಜಾತಿ ಸಾಮಾನ್ಯಕ್ಕೆ ಮಹದ್ವಿಪತ್ಕಾರಿಯಾದ ವಿಷಾಂಕುರವೊಂದು ಜನಿಸಿ ನಮ್ಮನ್ನೆಲ್ಲರಂ ನಾಶಗೊಳಿಸಲೆತ್ನಿಸಿರುವಂತೆ ಕೇಳುತ್ತೇವೆ. ಈ ವಿಷಾಂಕುರವು ಶ್ರೀಯುತರು ಅನುಗ್ರಹದೆಂಬ ಆತಪದಿಂ ದಗ್ಧವಾಗಿ ಹೋದಾಗ್ಯೂ ಹೋಗಬಹುದು, ಅಥವಾ ಕಲಿಪುರುಷರ ದುರ್ವಿಡಂಬನದಿಂ ಪ್ರೋತ್ಸಾಹಿತವಾಗಿ ವೃದ್ಧಿಯಂ ಹೊಂದಿದರೂ ಹೊಂದಬಹುದು. ಹ್ಯಾಗಾದರೂ ನಾವು ಮಾಡಬೇಕಾದ್ದೊಂದೂ ಇರುವದಿಲ್ಲವು. ಶೂರನಾದ ಕ್ಷತ್ರಿಯನು ಸಮಾನಬಲ ಪರಾಕ್ರಮಶಾಲಿಯಾದ ಪ್ರಭುಶ್ರೇಷ್ಠ ರಾಜನ ಮೇಲೆ ಸ್ವಶಕ್ತಿಯಂ ತೋರಿಸಿ, ಜಯಿಸುವಣವು ಆತನಿಗೆ ಪ್ರಾಕ್ರಮಾರ್ಹವೆನಿಸಿ ಪ್ರಶಂಸಾರ್ಹವಾಗಿರುವುದು. ಈಗಿನ ಸಂಘಸಂಸ್ಕರಣ ಪ್ರವರ್ತಕರು ಕಾರಣೋದ್ದೇಶಗಳನ್ನು ಗೂಢವಾಗಿ ಮನದೊಳಿಟ್ಟುಕೊಂಡು, ಅನ್ಯಗಳಿಗಾಗಿ ಅನಾಥರಾದ ನಮ್ಮ ಮೇಲೆ ಅಸ್ತ್ರಪ್ರಯೋಗವಂಮಾಡಿ ನಮ್ಮನ್ನು ಜಯಿಸಿ ಜಯಲೇಖೆಯಂ ಪಡೆಯಲುದ್ಯಮಿಸಿರುವಂತಾ ಶೂರಾಗ್ರೇಸರರ ಪರಾಕ್ರಮವು ಬಹಳ ಶ್ಲಾಘ್ಯವಾದುದೇ ಸರಿ. ಪೂರ್ವಿಕರಂತೆ ಈಗಿನ ನವನಾಗರಿಕರು ಸಹ ಸ್ವಶಾಸ್ತ್ರ ಪುರಾಣೇತಿಹಾಸಾದಿಗಳಲ್ಲಿ ಶ್ರದ್ಧೆಯಂ ವಹಿಸಿ ಅವುಗಳ ಅರ್ಥವು ತಿಳಿದಾದರೂ ಕೇಳಿಯಾದರೂ ಇರುವ ಪಕ್ಷಕ್ಕೆ ಯುಕ್ತಾಯುಕ್ತ ವಿವೇಚನೆಯು ಅವರಿಗೇತಕ್ಕುಂಟಾಗದೆ ಹೋಗುವುದು? ಹೂಣವಿದ್ಯಾಭ್ಯಾಸದಲ್ಲಿ ಬಾಲ್ಯಪ್ರಭೃತಿ ವಿಶೇಷತಃ ಶ್ರಮಿಸಿ ಕ್ರಮಾಂತ ಅಧ್ಯಯನವರರಾಗಿ ಪರೀಕ್ಷೆಗಳಂ ಕೊಟ್ಟು ಕೃತಾರ್ಥರೆನ್ನಿಸಿಕೊಂಡಿರುವ ತಮಗೆ ಸರಿಯಾದವರ್ಯಾರು ಈ ಭೂಮಂಡಲದಲ್ಲಿದಾರೆಂದು ವಿಜೃಂಭಿಸುವದಲ್ಲದೆ ಸ್ವವಿದ್ಯೆಯನ್ನು ಸ್ವಲ್ಪವಾದರು ಅಭ್ಯಸಿಸದೆಯೂ, ಅಭ್ಯಸಿಸಿದಾಗ್ಯೂ ಅದರಲ್ಲಿ ವಿಶ್ವಾಸವನ್ನಿಡದೆಯೂ ಹೋಗುವದರಿಂದ ಶಾಸ್ತ್ರಮರ್ಮಗಳನ್ನರಿಯದೆ ತಮ್ಮತಮ್ಮ ಬುದ್ಧಿಗೆ ತೋರಿದಂತೆಲ್ಲ ಕುಂಠಿತೋಕ್ತಿಗಳಿಂದ ದುರ್ವಾದಗಳಂ ಮಾಡತೊಡಗಿದ್ದರಿಂದ ಒಬ್ಬರನ್ನೋಡಿ ಮತ್ತೊಬ್ಬರು ಸ್ವಪ್ರತಿಷ್ಠಾರ್ಥ ಕಾಣೆಯಲಾರಂಭಿಸಿದಾರೆ. ಈಗ ಸಂಘಸಂಸ್ಕರಣಾರ್ಥ ಕಂಕಣಬದ್ಧರಾಗಿ ದೀಕ್ಷೆಯಂ ಕೈಗೊಂಡಿರುವಂತ ಸತ್ಪುರುಷರು ನಿಜವಾಗಿ ಹಿಂದೂಗಳಾಗಿಯೂ ಹಿಂದೂ ವೇದಶಾಸ್ತ್ರಪುರಾಣೇತಿಹಾಸಾದಿಗಳಲ್ಲಿ ಪ್ರತಿಪತ್ತಿಯುಳ್ಳವರಾಗಿಯೂ ಇರುವ ಪಕ್ಷಕ್ಕೆ ಅವುಗಳಲ್ಲಿ ಪ್ರತಿಪಾದ್ಯಗಳಾದ ದೇವತೆಗಳನ್ನೂ, ಅವರವರ ಲೋಕಗಳನ್ನೂ, ಅವರವರ ವ್ಯಾಪಾರಾದಿಗಳನ್ನೂ, ನಂಬಬೇಕಾಗಿರುತಿದೆ. ಇವುಗಳೆಲ್ಲವು ಕಲ್ಪಿತಗಳೆಂದು ನುಡಿಯುವ ಪಕ್ಷಕ್ಕೆ ತತ್ಪ್ರತಿಪಾದಕಗಳಾದ ಮಂತ್ರಗಳೂ ಕರ್ಮಗಳು ಸಹ ನಿರಾಧಾರಗಳೆಂದು ಭಾವಿಸಬೇಕಾಗುತಿದೆ. ಕರ್ಮವಂ ತ್ಯಜಿಸುವ ಪಕ್ಷಕ್ಕೆ ಕರ್ಮಸ್ವರೂಪ ಪ್ರಯೋಜನಗಳನ್ನರುಹುವಂತಾ ಶ್ರುತಿಗೆ ನಿಷ್ಪ್ರಯೋಜಕತೆ ಯುಂಟಾಗಬೇಕಾಗುತಿದೆ. ಶ್ರುತಿಸ್ಮೃತಿಗಳನಾವಶ್ಯಕಗಳೆಂದು ನುಡಿಯುವ ಪಕ್ಷಕ್ಕೆ ಶ್ರುತಿಬಾಹ್ಯರಾದವರ ಪ್ರವೃತ್ತಿನಿವೃತ್ತಿಗಳಿಂದಿಗೂ ಪ್ರಮಾಣಗಳಾಗಲಾರವು. ಅಂತವರ ವಿಚಾರವು ನಮಗೆ ಅನಾವಶ್ಯಕವು. ಪುರಾಣೇತಿಹಾಸಾದಿಗಳನ್ನು ನಂಬತಕ್ಕವರ ವಿಷಯವೇ ಪ್ರಸಕ್ತ ಪ್ರಸ್ತಾವಾರ್ಹವಾಗಿರುತಿದೆ. ಪುರಾಣೇತಿಹಾಸಾದಿಗಳಲ್ಲಿ ದೇವೇಂದ್ರಸಭೆಯೊಳು ಗಂಧರ್ವಸ್ತ್ರೀಯರು ನಾಟ್ಯಮಾಡುತಲಿದ್ದಂತೆ ಸ್ಪಷ್ಟವಾಗುತಿದೆಯೇ ಹೊರತು, ಇಂದ್ರಾಣಿಯಾಗಲಿ, ಸರಸ್ವತಿಯಾಗಲಿ, ಗೆಜ್ಜೆ ಕಟ್ಟಿಕೊಂಡು ನರ್ತನ ಮಾಡಿದರೆಂದು ತಿಳಿಸಲ್ಪಡಲಿಲ್ಲವು. ಸದರೀ ಗಾಂಧರ್ವಸ್ತ್ರೀಯರು ವಿವಾಹಿತರಲ್ಲವು. ಸಮಸ್ತ ಪುಣ್ಯ ಕರ್ಮಗಳಿಗೂ, ಧರ್ಮಾರ್ಥ ಕಾಮಮೋಕ್ಷ ಸಂಪಾದನಕ್ಕೂ ಮುಖ್ಯಸ್ಥಾನವಾದ ಈ ಭರತಖಂಡದಲ್ಲಿ ಯುಗಾಂತರಗಳ ಮೊದಲು, ಭೋಗಕಾಂತೆಯರೆಂಬ ಹೆಸರುಳ್ಳ ನಮ್ಮ ಕುಲವು ನೆಲಗೊಂಡಿರುವಂತೆ ಸ್ಪಷ್ಟವಾಗುತಿದೆ. ರಾಜ ಸಭೆಗಳಲ್ಲಿಯೂ, ಸಕಲ ಶುಭ ಸಮಯಗಳಲ್ಲಿಯೂ, ದೇವತೋತ್ಸವಗಳಲ್ಲಿಯೂ, ಬ್ರಾಹ್ಮಣ ಸಭೆಗಳಲ್ಲಿಯೂ, ನಮ್ಮವರು ನೃತ್ಯಗೀತ ವಾದ್ಯಾಭಿನಯ ವಿದ್ಯೆಗಳಿಂದ ಸಭಿಕರ ಮನವಂ ತೃಪ್ತಿಪಡಿಸಿ ಶ್ಲಾಘ್ಯತೆಯಂ ಪಡೆದಿರುವದರಿಂದಲೇ ನಮಗೆ ಜನಸತ್ಕೃತಾ ಯೆಂತಲೂ, ವಾರಮುಖ್ಯಾ ಯೆಂತಲೂ ಹೆಸರುಂಟಾದವು. ಈಗಿನ ದೊಡ್ಡಮನುಷ್ಯರ ಸಭಾಪ್ರವೇಶಕ್ಕೆ ನಾವು ಅನರ್ಹರೆಂದು ಭಾವಿಸಲ್ಪಟ್ಟಾಗ್ಯೂ ರಾಜಸಭಾಪ್ರವೇಶಾರ್ಹರಾಗಿರುವದರಿಂದಲೇ ರಾಜನರ್ತಕಿಯರೆಂದು ವ್ಯವಹರಿಸಲ್ಪಡುತಲಿದೇವೆ. ನಾವು ಕಲಿತ ನೃತ್ಯ ಗೀತವಾದ್ಯಾದಿಗಳಿಂದ ಅನ್ಯರಂ ತೃಪ್ತಿಪಡಿಸಿ ಜೀವಿಸಬೇಕಾಗಿರುವಲ್ಲಿ ಅವ

ತಪ್ಪಿದರೆ ಕುಲಟೆಯರಾಗಬೇಕಾದ್ದು ವಿನಾ ಬೇರೆ ಜೀವನೋಪಾಯವಿಲ್ಲವಾಯಿತು. ಸಾಧಾರಣವಾಗಿ ಕುಟುಂಬಿನಿಯರೆಲ್ಲರು ತಮ್ಮ ಪತಿಯ ಮರೆಯಲ್ಲಿದ್ದು ಮಾನದಿಂ ಜೀವಿಸಬೇಕಾದವರಾಗಿರುತ್ತಾರೆಯೇ ಹೊರ್ತು ಸಭೆಗಳಲ್ಲಿ ಧಾರಾಳವಾಗಿ ಬರುವಂತವರಲ್ಲವು. ಭರತಗಾನ ವಿದ್ಯೆಗಳು ಯಥೋಚಿತ ನಮ್ಮಿಂದಲೇ ಪ್ರೋಕಸಲ್ಪಡುತಲಿವೆ. ಆದಕಾರಣ ನಾವು ಸಭೆಗಳಲ್ಲಿ ಸಭಿಕರನ್ನು ನಮ್ಮ ಜ್ಞಾನದಿಂದ ತೃಪ್ತಿಪಡಿಸಿ ತನ್ಮೂಲಕ ಜೀವಿಸಬೇಕಾದವರಾಗಿದೇವೆ. ನಾವೆಷ್ಟು ದೂರ ವಿಚಾರಮಾಡಿ ನೋಡಿದಾಗ್ಯೂ ನಮ್ಮ ಜಾತಿಯು ಅನಾದಿಯಾದದೆಂದೇ ಪರ್ಯಂತಿದೆ. ಪೂರ್ವದಿಂದಲೂ ನಾವಿಲ್ಲದಿದ್ದ ರಾಜಸಭೆಗಳೇ ಯಿರಲಿಲ್ಲವು. ನಮ್ಮನ್ನಗಲಿ ಯಾವ ಶುಭ ಶೋಭನಗಳೂ ಜರಿಗಿದಂತೆ ಕಾಣಿಸಲಿಲ್ಲವು. ಸಭಾರ್ಹರಾದ ನಮ್ಮನ್ನು ಯಾರೂ ವಿವಾಹಮಾಡಿಕೊಳ್ಳಲಾರರಾಗಿ ನಮಗೆ ಕ್ರಿಯಾಲಬ್ಧ ಯೆಂಬ ಹೆಸರುಂಟಾಗಿ ಯಾವನಾದರೊಬ್ಬ ನಿಯತ ಪುರುಷನಿಂದ ರಕ್ಷಿತರಾಗಿದೇವೆ. ಇಷ್ಟೇ ಹೊರ್ತು, ಅನ್ಯರೀಗ ಭಾವಿಸಿರುವಂತಾ ನೀಚಜೀವನವು ಮಾಡತಕ್ಕವರಲ್ಲವು. ಮುಖ್ಯವಾಗಿ ದೇವಾಲಯಗಳಲ್ಲಿ ದೇವರಿಗೆ ಜರಗತಕ್ಕ ರಾಜೋಪಚಾರ ದೇವೋಪಚಾರಗಳಲ್ಲಿ ನೃತ್ಯಗೀತ ವಾದ್ಯಗಳೂ ಸೇರಿರುವದರಿಂದ ಅವು ನಮ್ಮಿಂದಲೇ ಜರಿಗಿಸಲ್ಪಡುತಲಿವೆ. ಇದಕ್ಕಾಗಿ ಪ್ರಾಚೀನರಾದ ರಾಜಾಧಿರಾಜರು ಮಾನ್ಯ ಮೊದಲಾದ ಜೀವನೋಪಾಯಗಳಂ ಕಲ್ಪಿಸಿ ನಡೆಸುತ ಬರುತ್ತಾರೆ. ಇದಲ್ಲದೆ ದೇವಸ್ಥಾನಗಳಲ್ಲಿ ನಮ್ಮ ವೃತ್ತಿ ವ್ರಯುಕ್ತವಾದ ಪಕ್ಕು ಪಾರಿಯು ಅರ್ಚಕ ಪರಿಚಾರಕರು ಮೊದಲಾದವರಂತೆ ಮಾಕಮಾರಂಪರ್ಯವಾದುದರಿಂದ ನಮಗೆ ದೇವದಾಸಿಯರೆಂಬ ವ್ಯವಹಾರವುಂಟಾಯಿತು. ಇಂತಾ ದೇವದಾಸಿಯರಾದ ನಾವು ನಮಗೆ ವಿಧಿಯಾಗಿ ಏರ್ಪಟ್ಟಿರುವ ಮಾರ್ಗವನ್ನು ಆಚರಿಸುತಲಿದೇವೆಯೇ ಹೊರ್ತು ಇತರರಂತೆ ತಿಂದು ಮದಿಸಿ ವ್ಯಭಿಚಾರಾದಿ ಮಾರ್ಗಗಳಿಂದಲೇ ಜೀವಿಸತಕ್ಕವರಲ್ಲವು. ಒಬ್ಬ ಸಭಾರ್ಯೆಯಾಗಿದ್ದುಕೊಂಡು ಆತನಂ ವಂಚಿಸಿ, ಕಾಮವಿಕಾರದಿಂದಲೂ, ಪರದ್ರವ್ಯಾಕರ್ಷಣಾಕಾಂಕ್ಷೆಯಿಂದಲೂ ಪರಪುರುಷರ ಸಂಭೋಗವಂ ಕೋರುವಂತಾ ಸ್ತ್ರೀಯರ ವರ್ತನ ಮಾತ್ರ ವ್ಯಭಿಚಾರವೆನ್ನಿಸಿಕೊಳ್ಳುವದೇ ಹೊರ್ತು ಕ್ರಿಯಾಲಬ್ಧೆಯರ ವರ್ತನವೆಂದಿಗೂ ವ್ಯಭಿಚಾರವೆನಿಸಲಾರದು. ನಮ್ಮನ್ನು ವ್ಯಭಿಚಾರಿಗಳೆಂದು ಕರೆಯುವಣವು ಶಬ್ದಾರ್ಥಜ್ಞಾನಹೀನತಾದೋಷವಲ್ಲದೆ ಬೇರೆಯಲ್ಲವು. ನಾವು ಕೇವಲ ಅಕ್ರಮವಾಗಿ ವರ್ತಿಸತಕ್ಕವರೆಂದು ಪ್ರಭುಗಳೆಣಿಸುವುದು ಸರಿಯಲ್ಲವು. ನಾವು, ನೀಚ ಜಾತಿಯವರಾಗಿಯೂ, ವಿವೇಕವಿದೂರರಾಗಿಯೂ, ರೋಗಪೀಡಿತರಾಗಿಯೂ, ದುರಭಿಮಾನಿಗಳಾಗಿಯೂ, ಮದ್ಯಪಾಯಿಗಳಾಗಿಯೂ ಇರತಕ್ಕ ಪುರುಷರುಂ ಕೋರಿ ಸಂಭೋಗಮಾಡುವಂತವರಲ್ಲವು. ಅಂತಾ ಪುರುಷೋತ್ತಮರು ನಮಗೆ ಲಭಿಸದಿರುವ ಪಕ್ಷಕ್ಕೆ ಭಗವತ್ಪ್ರಾರ್ಥನೆಯಂ ಮಾಡುವೆವಲ್ಲದೆ, ಧನಾಕರ್ಷಣಕ್ಕಾಗಿಯೂ, ಕಾಮಶಾಂತಿಗಾಗಿಯೂ, ವಿಲೋಮಜಾತಿಯವರೊಡನೆ ಸಹವಾಸ ಮಾಡಲಾರೆವು. ಆದುದರಿಂದಲೇ ನಾವು ವ್ಯಭಿಚಾರಿಗಳಾಗಲಾರೆವು. ನಮ್ಮ ಸಲ್ಲಾಪ ಸಂಸರ್ಗಾದಿಗಳು ಪ್ರತ್ಯೇಕ ಬಾಧಕಗಳಲ್ಲವು. ಮತ್ತು ಅನ್ಯರಿಗೆ ಯಾವವಿಧ ಮನೋವ್ಯಥೆಯನ್ನೂ ಅನುಮಾನವನ್ನೂ ಉಂಟುಮಾಡುವಂತಾದ್ದಲ್ಲವು. ಒಂದುವೇಳೆ, ನಾವೆಲ್ಲರು ಈಗ ಮೇಲೆ ತಿಳಿಸಿದಂತಾ ನಿಯಮದ್ಧರಾಗಿದೇವೆಯೋ ಯೆಂದು ಯಾರಾದರು ಕೇಳಬಹುದು. ದುರ್ಮಾರ್ಗಪ್ರವರ್ತನವು ಬ್ರಾಹ್ಮಣಾದ್ಯಾಚಂಡಾಲಾದಿ ಪರ್ಯಂತ ಪ್ರಬಲಿಸಿ ಯೆಲ್ಲರೂ ತತ್ತಜ್ಜಾತಿಮಾತ ವಿಹಿತ.ಳಾದ ಕರ್ಮಗಳನ್ನು ತ್ಯಜಿಸಿ ಮನಸ್ಸಿಗೆ ವರ್ತಿಸುತಲಿರುವಂತಾ ಈ ಕಾಲದಲ್ಲಿ ನಮ್ಮ ಒಂದು ಜಾತಿಮಾತ್ರ ದೂಷ್ಯವಾದುದೆಂದು ನಿಂದಿಸುವದು ಧರ್ಮವಲ್ಲವು. ನಮ್ಮಲ್ಲಿ ಕಾಣಬರುವ ದೋಷಗಳೆಲ್ಲ ಪುರುಷರು ಕಾರಣಭೂತರಲ್ಲದೆ ನಾವೆಮ್ಮವಾತ್ರವೂ ಅಲ್ಲವು. ಬರುಕಾಲದ ಮೊದಲು ಅನುಸರಿಸಿ ಬಂದ ನಮ್ಮ ಜಾತಿಕುಲ ವೃತ್ತಿಯನ್ನು ನಿರ್ಮೂಲವಾಡದೆ ತ್ತಿಸಿರುವಂತಾ ಪ್ರಭುಗಳು ಇದಂ ಚೆನ್ನಾಗಿ ಆಲೋಚಿಸಬೇಕೆಂದು ಪ್ರಾರ್ಥಿಸುವ,

ಮದರಾಸ್ } ತಮ್ಮ ವಿಧೇಯಳಾದ,
೧೬—೮—೯೩. } ವಿಲಾಸಿನಿ.

## THE MYSORE GAZETTE.
## ಮೈಸೂರು ಗೆಜೆಟ.

ಶ್ರೀಮನ್ಮಹಾರಾಜ ರಾಜಾಸಾಹೆಬ ಬಹದೂರವರ ಸರ್ಕಾರದಿಂದ ಕೊಡೋಣದ ಇಸ್ತಿಹಾರನಾಮೆಗಳು.

ನಂ॥ ೨೬೦೧—ಜಿ. ೬೪೩. ತಾ॥ ೯ನೇ ಆಗಸ್ಟ್ ೧೮೯೩—ಮೈಸೂರು ಸರ್ವಿಸ ರೆಗ್ಯುಲೇಷರ್ನಗಳ ೧೭೧ನೇ ಆರ್ಟಿಕಲ್ ಅನುಸರಿಸಿ, ಮೈಸೂರು ಗವರ್ನಮೆಂಟ ಕಂಟ್ರೋಲರ ಮೆ॥ಇ. ಆರ್. ಸುಬ್ರಾಯರವರು ೧೮೯೩ನೇ ಇಸವಿ ಆಗಸ್ಟ ೧೪ನೇ ತಾರೀಖ ಮೊದಲು ಅಥವಾ ಅವರದನ್ನುಪಯೋಗಿಸಿಕೊಳ್ಳಬಹುದಾದ ತಾರೀಖ ಮೊದಲು ೧೦ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ॥ ೨೬೪೯—ಜಿ ೬೪೮—ಬೆಂಗಳೂರು ಡಿಸ್ಟ್ರಿಕ್ಟ ಆಕ್ಟಿಂಗ ಜನರಲ್ ಅಸಿಸ್ಟೆಂಟ ಕಮಿಷನರಾದ ಮೆ॥ ಬಿ. ಕುಪ್ಪುಸ್ವಾಮಿ ನಾಯಡರವರು, ೧೮೯೩ನೇ ಇಸವಿ ಜೂಲೈ ೨೯ನೇ ತಾರೀಖು ಮಧ್ಯಾಹ್ನಾತ್ಪೂರ್ವ ಬೆಂಗಳೂರು ಡಿಸ್ಟ್ರಿಕ್ಟ ೨ನೇ ಜನರಲ್ ಅಸಿಸ್ಟೆಂಟ ಕಮಿಷನರ್ ಆಫೀಸ ಚಾರ್ಜನ್ನು ಕೊಟ್ಟು ಮೆ॥ಸಿ. ಡಿ. ರಾಮಸ್ವಾಮಯ್ಯನವರು ತಗೆದುಕೊಂಡಿರುತ್ತಾರೆ.

ನಂ॥ ೨೬೫೬—ಜಿ. ೬೭೧—ತಾ॥ ೧೧ನೇ ಆಗಸ್ಟ ೧೮೯೩—ಫ್ರೇಜರ್‌ಪೇಟ್ ಸಬ್‌ಡಿವಿಜನ್ ಇನ್‌ಚಾರ್ಜ ಆಫೀಸರಾಗಿ ಕೆಲಸನೋಡುವಂತೆ ಮೊಕರರ್ಮಾಡಲ್ಪಟ್ಟ ಮೆ॥ ಪಿ. ಪಂಚನದ ರಾಯರವರು, ೧೮೯೩ನೇ ಇಸವಿ ಜೂಲೈ ೨೨ನೇ ತಾರೀಖ ಮಧ್ಯಾಹ್ನಾತ್ಪೂರ್ವ ಮೆ॥ ಕೆ. ಮಹಮ್ಮದಲ್ಲಿಯವರಿಂದ ಸದರೀ ಸಬ್‌ಡಿವಿಜನ ಚಾರ್ಜನ್ನು ವಹಿಸಿದರು.

ನಂ॥ ೨೬೩೭—ಜಿ. ೬೭೨—ಮೈಸೂರು ಸರ್ವಿಸ ರೆಗ್ಯುಲೇಷನ್ನಗಳ ೧೮೮ ನೇ ಆರ್ಟಿಕಲ್ ಅನುಸರಿಸಿ, ಚಿತ್ರದುರ್ಗ ಡಿಸ್ಟ್ರಿಕ್ಟ ಅಸಿಸ್ಟೆಂಟ ಸರ್ಜನ್ ಮೆ॥ ಸಿ ರಾಜಾರಾಂಯವರು, ಅವರುಪಯೋಗಿಸಿಕೊಳ್ಳಬಹುದಾದ ತಾರೀಖ ಮೊದಲು ಯೆರಡೂವರೆ ತಿಂಗಳ ಪ್ರಿವಿಲೇಜ ರಜಾ ಕೊಡಲ್ಪಟ್ಟಿರುತ್ತಾರೆ.

೨. ಚಿಕ್ಕಮಗಳೂರು ಸಬ್‌ಅಸಿಸ್ಟೆಂಟ ಸರ್ಜನ್ ಮೆ॥ ಸಿ. ಎ ನಂಜಪ್ಪನವರು, ಮೆ॥ ಸಿ ರಾಜಾರಾಂ ಯವರು ರಜಾಮೇಲೆ ಗೈರ್ಹಾಜರಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ವರೆಗೆ, ಚಿತ್ರದುರ್ಗ ಡಿಸ್ಟ್ರಿಕ್ಟ ಅಸಿಸ್ಟೆಂಟ ಸರ್ಜನ್ನರಾಗಿ ಕೆಲಸ ನೋಡುವಂತೆ ಮೊಕರರ್ಮಾಡಲ್ಪಟ್ಟಿರುತ್ತಾರೆ.

ನಂ॥೨೯೩೯—೪, ೯. ೬೪—೯೨—ತಾ ೧೪ನೇ ಆಗಸ್ಟ ೧೮೯೩—ಡಾಕ್ಟರ್ ಚೋಕ್ಸಿಯವರು ಈಗ ವಿಸರ್ಜಿಸಲ್ಪಟ್ಟ ಪ್ರಕಾರ ಬ್ಯಾಲಸ ಡಿವಿಜನ್ ಮ್ಯೂನಿಸಿಪಲ್ ಕಮಿಷನರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

ನಂ॥೨೯೫೪-೪. ೯ ೫೭೯೩-ತಾ॥೧೧ನೇ ಆಗಸ್ಟ ೧೮೯೩—ಮೈಸೂರು ರೆವಿನ್ಯೂ ಕೋಡ (೧೮೮೮ನೇ ಇಸವಿ ೪ನೇ ನಂಬರ್ ರೆಗ್ಯುಲೇಷನ್) ೨೩೬ನೇ ಸೆಕ್ಷನ್ ೨ನೇ ಪ್ಯಾರಾ ಅನುಸರಿಸಿ, ಸದರೀ ಕೋಡಿನ ೮ ಮತ್ತು ೯ನೇ ಅಧ್ಯಾಯಗಳಲ್ಲಿನ ನಿಯಮಗಳನ್ನು ಬೆಂಗಳೂರು ತಾಲ್ಲೂಕು ಯಶವಂತಪುರದ ಹೋಬಳಿಯಲ್ಲಿರುವ ಬಾಣಸವಾಡಿ ಕಾಯಂಗುತ್ತಾ ಗ್ರಾಮಕ್ಕೆ ಜಾರೀಯೊಳು ತರತಕ್ಕದ್ದೆಂದು ಘನವಾದಹೊಂದಿದ ಶ್ರೀಮನ್ಮಹಾರಾಜಾ ಸರ್ಕಾರದವರು ಹುಕುಂ ಮಾಡಿರುತ್ತಾರೆ.

ನಂ॥೨೯೩೪-೬ ೯. ೬೪-೯೨—ಸಿಟಿ ಮ್ಯುನಿಸಿಪಾಲಿಟಿಯ ಪೈಗ್ರೌಂಡ ಡಿವಿಜನ ಇದರಿಂದ ವಜಾ ಮಾಡಲ್ಪಟ್ಟು ಪ್ಯಾಲೆಸ್ ಡಿವಿಜನಿಗೆ ಸೇರಿಸಲ್ಪಟ್ಟಿದೆ. ಸದರೀ ಡಿವಿಜನಿನ ಸರಹದ್ದುಗಳು ಈಗ ವಿಮರ್ಶಿಸಲ್ಪಟ್ಟಂತೆ, ಇದರಡಿ ತಿಳಿಸಲ್ಪಟ್ಟಿದೆ :—

ಉತ್ತರಕ್ಕೆ—ಸಿಟಿ ಬೌಂಡರಿ ಲೈನ್,
ದಕ್ಷಿಣಕ್ಕೆ—ಕಿಲ್ಲಯ್ಯನ ಛತ್ರದ ರಸ್ತೆ, ಡಿಸ್ಟ್ರಿಕ್ಟ ಆಫೀಸ ರಸ್ತೆ, ಮಿರ್ಷಗಸ್ತೆ, ಮತ್ತು ಲಾಲ್ಬಾಗ್ ರಸ್ತೆ
ಪೂರ್ವಕ್ಕೆ—ಸಿವಿಲ್ ವ ಮಿಲಿಟರಿ ಸ್ಟೇಷನ್ ಬೌಂಡರಿಲೈನ್
ಪಶ್ಚಿಮಕ್ಕೆ—ಸುಬೇದಾರ ಛತ್ರದ ರಸ್ತೆ ಮೊದಲುಮಹಾರಾಜರವರ ಮಿಲ್ ವರೆಗೆ.

ನಂ॥ ೨೯೩೫-೮. ೯. ೮೫೧-೯೨-ಶಿವಮೊಗ್ಗಾ ಡಿಸ್ಟ್ರಿಕ್ಟ ಆಕ್ಟಿಂಗ ಅಸಿಸ್ಟೆಂಟ ಕಮಿಷನರ್ ಮೆ॥ ಕೆ. ರಾಮಾನುಜಯ್ಯಂಗಾರ್ರವರು ಮೆ॥ ಬಿ ರಾಮಸ್ವಾಮಯ್ಯನವರಿಂದ ಬಿಡುಗಡೆ ಮಾಡಲ್ಪಟ್ಟಮೇಲೆ, ಮೆ॥ ಪಿ. ವೆಂಕಟರಾಯರವರಿಗೆ ಬದಲು, ಆಫಿಷಿಯೇಟಿಂಗ ಅಸಿಸ್ಟೆಂಟ ಕಮಿಷನರ್ ವ ೧ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡತಕ್ಕಬಗ್ಗೆ ಹಾಸನ ಡಿಸ್ಟ್ರಿಗೆ ಹೋಗತಕ್ಕದ್ದು. ಮೆ॥ ಪಿ. ವೆಂಕಟ್ರಾಯರವರು ಬಿಡುಗಡೆಯಾದ ಕೂಡಲೇ ತಮ್ಮ ಮುನ್ಸಿಫ ಕೆಲಸಕ್ಕೆ ವಾಪಸ ಹೋಗತಕ್ಕದ್ದು.

## SUMMARY OF NEWS
## ವೃತ್ತಾಂತ ಸಂಗ್ರಹವು.

ಶೀಲತ್ತಿನ ಖಾನರವರು ಇತರವಿಷಯಗಳಲ್ಲಿ ಎಷ್ಟು ಬಿಚ್ಚಾದರೂ ಸರಿಯೇ, ತಮ್ಮ ಸ್ವಂತ ಗೃಹಕೃತ್ಯದ ಖರ್ಚು ಮಾತ್ರ ಬಹು ಕಡಿಮೆ ಯಾಗಬೇಕೆಂದು ಮಾಡುತ್ತಿದ್ದರೆ ಅವರಿಗೆ ಈಗ ೮೦ ಮಂದಿ ಹೆಂಡತಿಯರಿರುವರು, ಅವರಲ್ಲಿ ಪ್ರತಿ ಒಬ್ಬ ಹೆಂಡತಿಗೂ ತಿಂಗಳು ೧ಕ್ಕೆ ೬ ರೂಪಾಯಿನಮೇಲೆ ಕೊಡುವದಿಲ್ಲ, ಮತ್ತು ಅವರಿಗಿರುವ ಅನೇಕಮಂದಿ ಮಕ್ಕಳಿಗೆ ತಲೆ ೧ಕ್ಕೆ ೬ ರೂಪಾಯಿನವರೆಗೆ ತಲಾ ಕೊಡುತ್ತಾರೆ. ಇದೆಂಥಾ ಆಶ್ಚರ್ಯಕರವಾದ ಜೀವನಾಂಶ ?

ಈ ತಿಂಗಳ ೧೦ ಮತ್ತು ೧೧ನೇ ತಾರೀಖಿನಲ್ಲಿ ಮುಂಬೈಯೊಳು ಅತಿಶಯ ಭಯಂಕರವಾದ ಕೋಟಿ ನಡೆಯಿತು ನೂರಾರು ಜನರು ಕೊಲ್ಲಲ್ಪಟ್ಟು, ಸಾವಿರಾರು ಜನರು ಗಾಯ ಪಟ್ಟು ಆಸ್ಪತ್ರಿಯಲ್ಲಿ ನರಳುತಲಿದ್ದಾರೆ ಬಂದೋಬಸ್ತಿಗಾಗಿ ಇಲಾಖೆಯ ಎಲ್ಲ ಭಾಗಗಳಿಂದಲೂ ಸೈನ್ಯ ಕಳುಹಿಸಲ್ಪಟ್ಟಿರುತದೆ. ನಾಲ್ಕುಸಾವಿರ ಸೈನ್ಯವೂ, ೩ ಸಾವಿರ ಪೋಲೀಸಿನವರೂ, ಪಟ್ಟಣದಲ್ಲಿ ಶಾಂತತೆಯನ್ನುಂಟು ಮಾಡುವದಕ್ಕೋಸ್ಕರ ಪ್ರಯತ್ನಿಸುತಲಿದಾರೆ. ಶ್ರೀಮನ್ಮಹಾರಾಣಿಯವರ ಕಡೆಯಿಂದ ಮುಂಬೈ ಜನರಿಗೆ ಪಶ್ಚಾತ್ತಾಪಸೂಚಕ ತಂತಿಯು ಬಂದಿರುತಿದೆ, ಎತ್ತನೋಡಿದರತ್ತ ಹಾಹಾಕಾರ ಉಂಟಾಗಿ ಹೋಗಿದೆ ಮಂಗೆ ಹಬ್ಬುತ್ತ ಬರುತಿದೆ.

ಶ್ರೀಮನ್ಮಹಾ ವಿಕ್ಟೋರಿಯಾ ರಾಣಿಯವರು ತಮ್ಮ ಪತಿಯ ಮರಣದ ನಂತರ ತಮ್ಮ ಕಳೇಬರವನ್ನು ಯೆಲ್ಲಿ ಇಡಬೇಕೆಂಬದಾಗಿ ಈಗಲೇ ಮನಸಾ ಸಂಕಲ್ಪಿತ್ಯವನ್ನು ಮಾಡಿ, ತಮ್ಮ ಪ್ರಿಯ ಪತಿಯ ಗೋರಿಯ ಪಕ್ಕದಲ್ಲಿಯೇ ಇಡಬೇಕೆಂದು ಗೊತ್ತುಮಾಡಿ, ಅವರ ಗೋರಿಯಮೇಲೆ ಸ್ಮಾರಕವಾಗಿ ನಿಲ್ಲಿಸಿದ ಶಿಲೆಯಮೇಲೆ ಇದರಡಿ ಬರೆದಿರುವ ಶಬ್ದಗಳು ಕೆತ್ತಲ್ಪಟ್ಟಿರುತಿವೆ. —

"ಪ್ರಿಯಾ ಬರಲೇ, ಕಲ್ಯಾಣಿಪತಿ, ಕಷ್ಟಕೋಟಿ ಅಖಂಡವಿಶ್ರಾಂತಿಯು ಪಡೆಯಿಂದ ನಾನು ತಮ್ಮೊಡನೆ ಬರುವೆನು, ಪ್ರಭು ಏಸುಕ್ರಿಸ್ತನಂ ನೊಡಗೂಡಿಕೊಂಡು ಪುನರುತ್ಥಾನ ಮಾಡೋಣ."

ಈ ಗೋರಿ ಮಂತ್ರದ ಲಿಷ್ಕಾರ ಪೋಷಿತನಿಂದ ಕೆತ್ತಲ್ಪಟ್ಟಿದ್ದ ಮಹಾರಾಣಿಯವರ ಪ್ರಿಯಭರ್ತರಾದ ಪ್ರಿನ್ಸ್ ಆಲ್ಬರ್ಟವರ ಪ್ರತಿಮೆ ಇರುತಿದೆ. ಇದು ಬಿಳಿಬಣ್ಣಕ್ಕೆ ಇರುತಿದೆ. ಯಥೋಚಿತವಾದ ತೆರವಾಗಿ ಇಡಲ್ಪಟ್ಟಿರುತಿದೆ. ಅಲ್ಲಿ ಮಹಾರಾಣೀ ಸಾಹೆಬರವರ ಕಳೇಬರವು ಇಡಲ್ಪಡುವಂತೆ ಇದರ ಕೊನೆಗಳಲ್ಲಿ ಸಂಬಂಧಿಂದ ಯುಕ್ತರಾಗಿದ್ದ ದೇವದೂತೆಯರ ಗೊಂಬೆಗಳು ನಿಲ್ಲಿಸಲ್ಪಟ್ಟಿರುತವಂತೆ, ಇದರಮೇಲಿಂದ ಮಹಾರಾಣೀಯವರು ದೇವರಲ್ಲಿಯೂ ಪತಿಯಲ್ಲಿಯೂ ಯೆಷ್ಟು ಪ್ರೀತಿಯುಳ್ಳವರಾಗಿರುತ್ತಾರೆಂಬದು ಸ್ಪಷ್ಟವಾಗುತಿದೆ

## EXTRACTS.

ಸನ್ ೧೮೮೭ನೇ ಇಸವಿಯಲ್ಲಿ ರಷ್ಯಾದವರು ಸರಹದ್ದಿನಮೇಲೆ ಬಲ್ಲೀ ಗಲಭೆ ಹಬ್ಬಿಸಿದ್ದಾಗ್ಯೆ ಇಂಗ್ಲಿಷನವರು ಆ ಕಾಲದ ಯುದ್ಧಭಾರವನ್ನು ಎಟುಮಾಡುವದಕ್ಕೆ ದೇಶೀಯ ಸಂಸ್ಥಾನೀಕರಿಗೆ ಸಹಾಯ ಕೇಳಿದಾಗ್ಯೆ ಹೈದರಾಬಾದ ನಿಜಾಂ ಸಾಹೆಬರವರು ಸರಹದ್ದಿನ ಸುರಕ್ಷಿತೆಗಾಗಿ ೬೦ ಲಕ್ಷ ರೂಪಾಯಿಗಳನ್ನು ಕೊಡುವ ಇಚ್ಛೆ ಪ್ರದರ್ಶನ ಮಾಡಿದರೂ ಆಗಿನ ಸ್ವಾಧಿಪತಿಗಳಾದ ಲಾರ್ಡ ಡಫರಿನ್ ಸಾಹೆಬರವರು ಅದಕ್ಕೆ ಅನುಮೋದನ ಕೊಡಲಿಲ್ಲವು ಇಷ್ಟಾದಬಳಿಕ ಇತರ ಸಂಸ್ಥಾನಗಳಲ್ಲಿ ಇಂಪೀರಿಯಲ್ ರಿಜಮೆಂಟ ನಿರ್ಮಿಸಲ್ಪಟ್ಟು ನಿಜಾಮರ ರಾಜ್ಯದಲ್ಲಿ ಯಾವ ಉಪ್ರೋಗವೂ ನಡೆಯಲಿಲ್ಲವು ಆದರೆ ಈಗ ಈ ಸಂಸ್ಥಾನದಲ್ಲಿ ರಾಣೀ ಸರ್ಕಾರದವರಿಗೆ ಸಹಾಯ ಮಾಡುವದಕ ಸಲುವಾಗಿಯೇ ಒಂದು ಪಟಾಲಂ ತಯಾರ್ಮಾಡಿ ಇದರ ಖರ್ಚು ತಿಂಗಳಿಗೆ ೫೦ ಸಾವಿರ ಅಂದರೆ ವರ್ಷಕ್ಕೆ ಆರುಲಕ್ಷ ರೂಪಾಯಿಗಳಾಗುವವು. ನಿಜಾಂ ಸಾಹೆಬರವರು ಒಮ್ಮೆಲೇ ಅರವತ್ತುಲಕ್ಷ ರೂಪಾಯಿಗಳನ್ನು ಕೊಡ ಹೋದದ್ದನ್ನು ಬೇಡವೆಂದು ಹೇಳಿದ ಗುಟ್ಟು ಈಗ ಹೊರಬಿದ್ದಂತಾಯಿತು. ಅರವತ್ತುಲಕ್ಷ ರೂಪಾಯಿಗಳು ಹತ್ತು ವರ್ಷಗಳಲ್ಲಿಯೇ ಖರ್ಚಾಗಿ ಹೋಗುತಿದ್ದವು. ಮುಂದೆ ಪುನಃ ತಟಗ್ರವು ಬರುತಲಿತ್ತು, ಅದು ಈಗ ಬಾಯಿಗೊಡಿತು. ಇದರ ಹೆಸರು ಪೊಲಿಟಿಕಲ್ ತಂತ್ರಾಟ —ಚಂ,

೩೦ ವರ್ಷಗಳ ಮುಂಚೆ ಜರ್ಮನಿ ದೇಶದಲ್ಲಿ ೧೨ ಲಕ್ಷ ಸೈನ್ಯವಿದ್ದು ಖರ್ಚು ೧೨ ಕೋಟಿ ರೂಪಾಯಿಗಳು ಹತ್ತುತ್ತಿದ್ದವು. ಈಗ ಅದು ೫೦ ಲಕ್ಷ ಸೈನ್ಯವಾಗಿ ೩೦ ಕೋಟಿ ರೂಪಾಯಿಗಳು ಖರ್ಚು ಆಗುತ್ತವೆ. ಜರ್ಮನಿಯವರ ದಂಡು ಭೂಮಂಡಲದಮೇಲೆ ಯಾವತ್ತು ರಾಷ್ಟ್ರದವರಗಿಂತ ಹೆಚ್ಚಿಗೆ ಇರುತ್ತದೆ ಹೀಗೆ ಜರ್ಮನಿಯವರು ತಮ್ಮ ಲಷ್ಕರ ಬೆಳೆಸಿದ್ದರಿಂದ ಇತರ ರಾಷ್ಟ್ರದವರಿಗೂ ಸುರಕ್ಷತೆಯ ಬಗ್ಗೆ ತಮ್ಮ ಸೈನ್ಯ ಹೆಚ್ಚಿಸಬೇಕಾಯಿತು, ಅದರ ವಿವರ.

| ದೇಶ. | ಮೊದಲಿನ ಸೈನ್ಯ | ಈಗಿನ ಸೈನ್ಯ |
|---|---|---|
| ಫ್ರಾನ್ಸ್ | ೧೩,೫೦,೦೦೦ | ೪೩,೫೦,೦೦೦ |
| ರಷಿಯಾ | ೧೧,೦೭,೦೦೦ | ೪೦,೦೦,೦೦೦ |
| ಆಸ್ಟ್ರಿಯಾ | ೩,೫೦,೦೦೦ | ೨೦,೦೦,೦೦೦ |
| ಇಟಲಿ | ೬,೦೦,೦೦೦ | ೧೭,೦೦,೦೦೦ |
| ಟರ್ಕಿ | ೩,೭,೦೦೦ | ೧೧,೫೦,೦೦೦ |
| ಬೆಲ್ಜಿಯಂ | ೯೫,೦೦೦ | ೨೫,೮೦,೦೦೦ |
| ರೋಮೇನಿಯಾ | ೩೩,೦೦೦ | ೨,೮೦,೦೦೦ |

ಈ ಪ್ರಕಾರ ಸೈನ್ಯದ ಸಂಖ್ಯೆಯು ಹೆಚ್ಚಾಗಿರುತ್ತದೆ. ಯುರೋಪ ಖಂಡದಲ್ಲೆಲ್ಲ ಕಳೆದ ಹತ್ತು ವರ್ಷಗಳಲ್ಲಿ ದಿನದಿನ ಯಿಷ್ಟು ನೂರಕ್ಕೆ ನೂರರಂತೆ ಸೈನ್ಯವು ಬೆಳೆಯುತ್ತದೆ ಅದರ ಈಗ ಎಲ್ಲ ಸೈನ್ಯ ಕೂಡಿ ೨ ಕೋಟಿ ೨೦ ಲಕ್ಷ ಇರುತ್ತದೆ, ಖರ್ಚು ಮೂರು ಅಬ್ಜ ಇರುತ್ತದೆ. ಜರ್ಮನಿಯಲ್ಲಿ ಜನಸಂಖ್ಯೆಯು ೫ ಕೋಟಿ ಇದ್ದು ಸೈನ್ಯವು ೫೦ ಲಕ್ಷ ಇರುತ್ತದೆ, ಅದರ ಇಷ್ಟೇ ದೇಶ, ಹೆಚ್ಚು ವೈಭವದ ಇದ್ದ ಅಮೇರಿಕಾದಲ್ಲಿಯ ಸಂಯುಕ್ತ ಸಂಸ್ಥಾನದ ಕಡೆಗೆ ನೋಡಿದರೆ ವಾಚಕರು ತಂಗುಬಡದ ಹೋಗರು ಅಲ್ಲಿನ ವಸತಿಯು ೬ ಕೋಟಿ ೭೦ ಲಕ್ಷವಿದ್ದು ಸೈನ್ಯವು ಫಕ್ತ ೨೫,೦೦೦ ವಿರುತಿದೆ, ಅದು ಸ್ವತಂತ್ರತೆ, ಶಾಂತತೆ, ಪರೋತ್ಕರ್ಷಗಳ ಸ್ಮರಣೆಯ ಇಲ್ಲದಿರೋಣದರ ಕಾರಣವಾಗಿರುತಿದೆ ಇಂಗ್ಲಂಡ ಸೈನ್ಯವು ಮುಂಚೆ ೨ ಲಕ್ಷವಿದ್ದು ಈಗ ೪ ಲಕ್ಷ ೫೦ ಸಾವಿರ ವಿರುತಿದೆ.—ಚಂ,

ವಕೀಲನ ಯುಕ್ತಿ —ಮೆಲ್ಬೋರ್ನ ಬ್ಯಾಂಕಿನಲ್ಲಿ ಒಬ್ಬ ಕಾರಕೂನನು ಜ್ಞಾಪಾದಿ ಹಣ ಸಂಪಾದಿಸಬೇಕೆಂಬ ಉತ್ಕಂಠತೆಯಿಂದ ಬ್ಯಾಂಕಿನೊಳಗಿನ ೨೦ ಸಾವಿರ ರೂಪಾಯಿಗಳನ್ನು ತೆಗೆದುಕೊಂಡುಹೋಗಿ ಆ ಹಣವನ್ನೆಲ್ಲ ಸೋತುಬಿಟ್ಟನು. ಪುನಃ ತನ್ನ ದೈವಪರೀಕ್ಷೆ ಮಾಡಬೇಕೆಂಬ ಕುತೂಹಲದಿಂದ ಮತ್ತೆ ೨೦ ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಹೋದನು. ಆದರೆ ಆ ಹಣವನ್ನೆಲ್ಲ ಸೋತುಬಿಟ್ಟನು ಪುನಃ ದೈವಪರೀಕ್ಷೆ ಮಾಡಬೇಕೆಂಬ ಕುತೂಹಲದೊಡನೆ ಮತ್ತೆ ೨೦ ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಹೋಗಿ ಆ ಹಣವನ್ನೆಲ್ಲ ಕಳೆದುಕೊಂಡನು, ಈಪ್ರಕಾರ ೬೦ ಸಾವಿರ ರೂಪಾಯಿಗಳನ್ನು ಕಳೆದುಕೊಂಡ ನಂತರ ಮುಂದೆ ತನ್ನಮೇಲೆ ಬರುವ ಭಯಂಕರ ಪರಿಣಾಮವನ್ನು ನೆನೆದು, ಪಾರಾಗುವದಕ್ಕೆ ವಕೀಲನ ಅಭಿಪ್ರಾಯ ಕೇಳಲಿಕ್ಕೆ ಹೋಗಿ ತನ್ನನ್ನು ಉಳಿಸಿಕೊಳ್ಳಲಿಕ್ಕೆ ಬೇಡಿಕೊಂಡನು ವಕೀಲನು ಇವನ ವೃತ್ತಾಂತವನ್ನೆಲ್ಲ ಕೇಳಿಕೊಂಡು ಬ್ಯಾಂಕಿನೊಳಗಿನ ಹಣವನ್ನು ಇನ್ನೂ ಯೆಷ್ಟು ಸಾಗಿಕ್ಕೆ ಬರುವಂತೆ ಅದೆಯೋ ನ್ಯಾಗೆ ಯೆಂದು ಇವನನ್ನು ಕೇಳಿದ್ದಕ್ಕೆ ೬೦,೦೦೦ರೂಪಾಯಿಗಳು ದೊರೆಯುವವೆಂತಲೂ, ಪತ್ತೆ ಯಾಗಲರನಿಕ ಮುತ್ತೀವಸ್ತೈರ ಆಗುವದಿಲ್ಲವೆಂತಲೂ ಹೇಳಿದನು ಇದನ್ನು ಕೇಳಿ ವಕೀಲನು ಅನಂತ ಆಷ್ಟು ರೂಪಾಯಿಗಳನ್ನು ತೆಗೆದುಕೊಂಡು ಬರಲಿಕ್ಕೆ ಹೇಳಿದನು ಕಾರಕೂನನು ಅದರಂತೆ ೬೦ ಸಾವಿರ ರೂಪಾಯಿಗಳನ್ನು ಎಷ್ಟಿಸಿಕೊಂಡು ವಕೀಲನಬಳಿಗೊಯ್ದನು, ಈ ೬೦ ಸಾವಿರರೂಪಾಯಿಗಳನ್ನು ವಕೀಲನು ಯೆಣಿಸಿಕೊಂಡು ಹತ್ತುಸಾವಿರ ರೂಪಾಯಿಗಳು ಯೆರಡು ಭಾಗಗಳನ್ನು ಮಾಡಿ, ಒಂದು ಭಾಗವನ್ನು ತಾನಿಟ್ಟುಕೊಂಡು ಮತ್ತೊಂದು ಭಾಗ ಆ ಕಾರಕೂನನಿಗೆ ಕೊಟ್ಟನು ಅನಂತರ ವಕೀಲನು ಬ್ಯಾಂಕಿನ ಮುಖ್ಯಸ್ಥನಿಗೆ ಈಮೇರಿಗೆ ಒಂದು ಪತ್ರವನ್ನು ಬರೆದನೇನಂದರೆ —"ನಿಮ್ಮ ಕಾರಕೂನನು ಬ್ಯಾಂಕಿನೊಳಗಿನ ಒಂದುಲಕ್ಷ ರೂಪಾಯಿಗಳನ್ನು ಅಪಹಾರಮಾಡಿ ಪರಾರಿಯಾದ್ದಾನೆ, ಈ ಅಪರಾಧಿಯು ಅವನಮೇಲೆ ಖಟ್ಲೆಯಾಗಬಾರದೆಂದು ಅವನ ಕುಟುಂಬದವರ ಅಭಿಪ್ರಾಯದಿಂದ ಏತದರ್ಥ ಹ್ಯಾಗಾದರೂ ಮಾಡಿ ನಿಮಗೆ ಅವರು ನಾಲ್ವತ್ತುಸಾವಿರ ರೂಪಾಯಿಗಳನ್ನು ಕೊಡುವ ನಿರ್ಧಾರವನ್ನು ಮಾಡಿದ್ದಾರೆ, ಕಾರಕೂನನಮೇಲೆ ಖಟ್ಲೆ ಮಾಡದಿದ್ದ ನಿಮಗೆ ಒಂದು ಒಡಕು ಕವಡಿ ಸಹ ಸಿಕ್ಕುವದಿಲ್ಲವೆಂದು ಬರೆದ ಪತ್ರವನ್ನು ಮುಖ್ಯಸ್ಥನು ಓದಿಕೊಂಡು ವಿಸ್ಮಯಪಟ್ಟು ಆದುದರಿಂದ ಕಳ್ಳನ ಕೈಯೊಳಗಿನ ಕೋಲೆ ಯೆಂಬ ಗಾದೆಯಂತೆ ಒಂದನ್ನು ಬರೆದು ಬಡಿದ ಆ ನಾಲ್ವತ್ತುಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಖಟ್ಲೆಯು ವಜಾ ಮಾಡಿಕೊಂಡನಂತೆ ನೋಡಿರಿ.—ಚಂ.

Bangalore.—Printed and published at the Karnataka Press, No 40, Hospital Road, City.—1893

# ಕರ್ನಾಟಕ ಪ್ರಕಾಶಿಕಾ

# THE KARNATAKA PRAKASIKA.

## ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning.**

ಪ್ರಕಾಮವಿವಿಧವೃತ್ತ್ಯಾನಗರನಿರ್ವಕರ್ನಾಟಕಪ್ರಕಾಶನಸದಾವಿದಾಃ ಪ್ರಥಿತಸಾಹಿತ್ಯೈಕಶೋಭಿತಾ॥ ವ್ಯಾಗಾಂಕಹಿತವಾಸರೆನಿಹಿತಮುದ್ರಣಾಸಜ್ಜನೈರ್ದ್ಧಿನಾಸುಪರಿಶೋಭಿತಾದಕತಿವಾಃನಸಂಸಂಪ ದು॥

Vol. XX ] BANGALORE—MONDAY, AUGUST 28, 1893. [ No. 34

ಸಂಪುಟ ೨೦. ] ಬೆಂಗಳೂರು — ಸರ್ ೧೮೯೩ನೇ ಇಸವಿ ಆಗಸ್ಟ್ ೨೮ನೇ ತಾರೀಖ್ ಸೋಮವಾರ. [ಸಂಚಿಕೆ ೩೪.


### ಕರ್ನಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡ ಭಾಗಗಳಿಗೆ

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ಸಾಲ್ ಒಕ್ಕೆ | 6—0—0 | 8—0—0 |
| ೬ ತಿಂಗಳಿಗೆ | 3—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ಸಾಲ್ ಒಕ್ಕೆ | 3—0—0 | 4—0—0 |
| ೬ ತಿಂಗಳಿಗೆ | 1—12—0 | 2—6—0 |

**ಈ ಪತ್ರಿಕೆಗೆ** ದಯಮಾಡಿ [illegible] ಚಂದಾ ದೊಬಲುಗಳು [illegible] ಈ ಪತ್ರಿಕೆಗೆ [illegible] ಇಂಗ್ಲಿಷ್ [illegible] ಕನ್ನಡ [illegible] ಚಂದಾ [illegible].

### ಪ್ರಕಟನೆಗಳ ದರ.

ಮೊದಲನೆಯದಕ್ಕೆ ಪಂಕ್ತಿ ಒಂದಕ್ಕೆ ೦—೨—೦

ಎರಡನೆಯದಕ್ಕೆ ಪಂಕ್ತಿ ಒಂದಕ್ಕೆ ೦—೧—೦

ಪರಾ—ಎರಡಾವರ್ತಿಗಿಂತ ಹೆಚ್ಚಾಗಿ ಎಷ್ಟು [illegible] ಪಂಕ್ತಿ ಒಂದಕ್ಕೆ [illegible] ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯ [illegible] ಪ್ರಕಟನೆಗಳು [illegible] ಪ್ರಕಟನೆಗಳು [illegible]

### ADVERTISEMENTS


**NOTICE**

**VAIDYASARA SANGRAHA**

A TREATISE ON THE [illegible]

**HINDU MEDICINE**

*Price including Postage Rs 5 0 0*

ವೈದ್ಯಸಾರ ಸಂಗ್ರಹ

ಈ ಗ್ರಂಥಾ [illegible] ರೂಪಾ [illegible]

ಇದರ ಕ್ರಯ—ಪೋಸ್ಟ್ ಕೊರ್ಚ್ ಸಹಾ [illegible], ಪ್ರತಿ ಒಂದಕ್ಕೆ ರೂ 5—0—0

ಟಿ ಬಿ [illegible]

ಬೆಂಗಳೂರ್ [illegible]

### ನೋಟಿಸ್

**ಬೆಂಗಳೂರು ಕರ್ನಾಟಕ್ ಪ್ರೆಸ್.**

೧೮೭೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ, ಸಕಲವಿಧ ಕೆಲಸಗಳು ಸುಲಭವಾಗಿಯೂ, ಶುದ್ಧವಾಗಿಯೂ ಕ್ಷಿಪ್ರವಾಗಿಯೂ, ನಡೆಯುವವು

ಇದರಲ್ಲಿ ಸಂಸ್ಕೃತ ಇಂಗ್ಲಿಷ್ ಕನ್ನಡ ಕೆಲಸಗಳು ಮಾತ್ರವಲ್ಲದೆ [illegible] ಬರೆದು [illegible]

### ನೋಟಿಸ್.

ಗಣೇಶ ರಾಮಚಂದ್ರ ಕರ್ಕರೆ ಮತ್ತು ಕಂಪೆನಿ. ಕಮಿಷನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಚೀಪ ದರದಿಗೆ ನಾವು ಸುಲಭ ಕ್ರಯಕ್ಕೆ ಬಹಳ [illegible] ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ

ಎಲ್ಲಾ ತರದ ಔಷಧಗಳು, ಪುಸ್ತಕಗಳು, ಮುತ್ತುಗಳು, [illegible] ಮುದ್ರೆಗಳು, [illegible] ಕಾಗದಗಳು, [illegible] ಜರತಾರಿ [illegible] ಉಡುಪುಗಳು, ಜರತಾರಿ ಟೋಪಿಗಳು, [illegible] ಅತ್ತರುಗಳು, ಅತ್ಯುತ್ತಮಗಳಾದ ವಸ್ತ್ರಗಳು, ಬಂಗಾರದಿಂದ ಕಟ್ಟಲ್ಪಟ್ಟ [illegible] ಪಾತ್ರೆಗಳು, ಜರ್ಮನ್ [illegible] ಪಾತ್ರೆಗಳು, ಕೇಸರಿ, ಕಸ್ತೂರಿ ಮತ್ತು ಇತರ ಸಾಮಾನುಗಳು

ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟ್ಯಾಂಪ್ ಕಳುಹಿಸಿದ ಹೊರ್ತು ಜವಾಬ್ ದೊರೆಯಲಾರದು

ವಿಳಾಸ—ಗಣೇಶ ರಾಮಚಂದ್ರ ಕರ್ಕರೆ,
ಮತ್ತು ಕಂಪೆನಿ, ಕಮಿಷನ್ ಏಜಂಟ್ಸ್,
ಠಾಕೂರ್ ದ್ವಾರ, ಮಾರ್ಕೆಟ್ ಪೋಸ್ಟ್, ಮುಂಬೈ


### ನೋಟಿಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ನಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿವೆ. ಬೇಕಾದವರು ಹಣವನ್ನು ಕಳುಹಿಸಿ ತರಿಸಿಕೊಳ್ಳಬಹುದು.

### ಸಂಸ್ಕೃತ ಗ್ರಂಥಗಳು.

| | ರೂ | ಆ | ಪೈ |
|---|---|---|---|
| ಟೀಕಾ ವೈದ್ಯಸಾರ ಸಂಗ್ರಹ | ೫ | ೦ | ೦ |
| „ ಶಿವಗೀತ | ೧ | ೦ | ೦ |
| „ [illegible] | ೦ | ೮ | ೦ |
| „ ಕಾಲಾಮೃತ | ೧ | ೦ | ೦ |
| „ ಟಿ॥ [illegible] | ೦ | ೩ | ೦ |
| „ ಟಿ॥ [illegible] ಗೀತ .. | ೦ | ೧ | ೦ |
| „ ಟಿ॥ [illegible] (ಸುಭಾಷಿತ) | ೦ | ೪ | ೦ |
| ವಿಷ್ಣುಸಹಸ್ರನಾಮ ಪತ್ರಿಕೆ | ೦ | ೩ | ೦ |
| ಸೂರ್ಯಸಹಸ್ರನಾಮ | ೦ | ೨ | ೦ |
| ಕೃಷ್ಣಕರ್ಣಾಮೃತ | ೦ | ೭ | ೦ |
| ತ್ರಿಕಾಂಡ ಅಮರ ಮೂಲ | ೦ | ೭ | ೦ |
| „ [illegible] | ೦ | ೧ | ೦ |

### ಕನ್ನಡ ಗ್ರಂಥಗಳು.

| | ರೂ | ಆ | ಪೈ |
|---|---|---|---|
| ಶಿಕಪತ್ರಿಕಾ ಅಷ್ಟಕ | ೩ | ೦ | ೦ |
| [illegible] | ೧ | ೨ | ೦ |
| ವೃಷಭೇಂದ್ರವಿಜಯ | ೧ | ೮ | ೦ |
| ಪಂಚಪಾದ [illegible] | ೦ | ೩ | ೦ |
| ಪಂಚಮಲ್ಲಿಕಾ | ೦ | ೬ | ೦ |
| ಕಾತ್ಯಾಯನೀ [illegible] | ೦ | ೨ | ೦ |
| ಸುಭದ್ರಾಪರಿಣಯ | ೦ | ೨ | ೦ |
| [illegible] ಪರಿಣಯ | ೦ | ೨ | ೬ |
| ರಾಮಚರಿತ್ರೆ | ೦ | ೧ | ೦ |
| [illegible] | ೦ | ೧ | ೯ |
| ಪಾಲ್ಕುರಿಕೆ [illegible] | ೧ | ೦ | ೦ |
| ಮಹಾಸ್ವರ್ಗ [illegible] | ೦ | ೧೨ | ೦ |
| [illegible] | ೨ | ೦ | ೦ |

### ನೋಟಿಸ್.

ಇದುವರಿಗೂ ಈ ಸಾಲಿನ ಚಂದಾ ಹೊಬಲಗನ್ನು ಕಳುಹಿಸದೆ ಇರತಕ್ಕವರೆಲ್ಲರು ಈ ನೋಟಿಸ್ ನೋಡಿದ ಕೂಡಲೆ ದಯಮಾಡಿ ಕಳುಹಿಸಿಕೊಡಬೇಕೆಂದು ಮರಳಿ ಜ್ಞಾಪಕ ಕೊಡುತ್ತೇವೆ.

೨—೮—೯೩ ಪ್ರೊಪ್ರೈಟರ್

### THE MONEY MARKET

ಮದರಾಸ್, ಶನಿವಾರದ ೨೬ ನೇ ಆಗಸ್ಟ್ 1893

ಸೇಕಡ ೪ರ ಬಾಬತು ಗವರ್ನಮೆಂಟ್ ಪತ್ರಗಳು ರೂಪಾಯಿಗಳು, 105 8—0 ಇಂದ 106—0—0ವರಿಗೆ

ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತು 980 ಊರಾ ಬಾಬತು 985 ವರಿಗೆ

ಕಮರ್ಷಿಯಲ್ ಅ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಷೇರುಗಳು, (100) ಬಾಬತು 150 ರಿಂದ 155 ವರಿಗೆ,

ಸವರನ್‌ಗಳು, 16—2—0 ಇಂದ 16—1—0ವರಿಗೆ,

ಬ್ಯಾಂಕ್‌ಬಿಲ್ಲುಗಳು ಯಾನೆ ದಸ್ತಸಮಾತಿಗಳು, ರೂ। ಒಕ್ಕೆ

6 ತಿಂಗಳ ಮಾಸಿಗೆ, 1s 2 31/32d

ಡಿಟ್ಟೋ 4 ತಿಂಗಳ ಮಾಸಿಗೆ, 1s 2 29/32d.

ಡಿಟ್ಟೋ ಕೇಳಿದಾಗ, 1s 2 13/16d.

## ಕರ್ನಾಟಕ ಪ್ರಕಾಶಿಕಾ.

### THE KARNATAKA PRAKASIKA

MONDAY, AUGUST 28, 1893

೧೮೯೩ನೇ ಇಸವಿ ಆಗಸ್ಟ್ ತಾ॥ ೨೮ನೇ ಸೋಮವಾರ

### ಪಾಳೇಗಾರರ ಪೆನ್‌ಷನ್ ಇಜಾಫೆ.

ಮೈಸೂರ್ ಸೀಮೆಯ ಪಾಳೇಗಾರರನೇಕರು ತಮ್ಮ ತಾತ್ಕಾಲಿಕ ಸ್ಥಿತಿಯಂ ಕುರಿತು ಈಗ್ಗೆ ಹದಿನೈದು ದಿವಸಗಳ ಹಿಂದೆ ಶ್ರೀಮನ್ಮಹಾರಾಜರವರ ದಿವ್ಯಸನ್ನಿಧಿಯಲ್ಲಿ ವಿಜ್ಞಾಪನೆ ಮಾಡಿಕೊಳ್ಳಲು ಅವರು ಕೃಪೆಗೈದ ಅನುಜ್ಞೆಯಂ ಹಿಂದೆಯೇ ತಿಳಿಸಿರುತ್ತೇವಷ್ಟೆ. ಅದರಿಂ ದೀಚೆಗೆ ಅವರವಿಜ್ಞಾಪನೆಯಂ ಪರ್ಯಾಲೋಚಿಸಿ ಇದರಡಿಕಂಡಂತೆ ಹುಕುಂ ಕೊಟ್ಟಿರುವಂತೆ ಸರ್ಕಾರೀ ಕಾಗದ ಪತ್ರಗಳ ಮೂಲಕ ತಿಳಿದು ಬಹಳ ಸಂತೋಷಿಸುತ್ತೇವೆ —

ಮೈಸೂರ್ ಸೀಮೆಯಲ್ಲಿರತಕ್ಕ ಪಾಳೇಗಾರರ ಸ್ಥಿತಿಯನ್ನಭಿವೃದ್ಧಿಗೊಳಿಸಬೇಕಾದ ವಿಷಯವು ಈಗ್ಗೆ ಕೆಲವು ಕಾಲದ ಮೊದಲು ಗವರ್ನ್‌ಮೆಂಟಿನವರ ಪರ್ಯಾಲೋಚನೆಯಲ್ಲಿರುತಲಿದೆ. ದಿವಾನ್ ಪೂರ್ಣಯ್ಯನವರ ಪ್ರಭುತ್ವದೊಳೀಜನರಿಗೆ ಮಾಹೇಯಾನಾ ೩೭೭೦—೧೦—೬ ರೂಪಾಯಿಗಳು ಪೆನ್‌ಷನ್ ರೂಪವಾಗಿ ಕೊಡಲ್ಪಡುತಲಿದ್ದವು. ಐವನಂತರ ಗತಿಸಿದ ಮಹಾರಾಜರವರ ಪ್ರಭುತ್ವದಲ್ಲಿಯೂ ಮೈಸೂರ್ ಚೀಫ್ ಕಮಿಷನರವರ ಪ್ರಭುತ್ವದ ಪೂರ್ವಭಾಗದಲ್ಲಿಯೂ ಪಾಳೇಗಾರರ ರುಸುಂ ನಾನಾವಿಧ ಬದಲಾವಣೆಗಳಿಗೊಳಪಟ್ಟು ೧೮೩೪ನೇ ಇಸವಿ ಜನವರಿ ತಿಂಗಳಲ್ಲಿ ಒಟ್ಟು ೫೦೧೮—೨—೧ ರೂಪಾಯಿಗಳು ಪೆನ್‌ಷನ್ ಎಂದೇ ಕೊಡಲ್ಪಟ್ಟವು. ಸರ್ ೧೮೩೪-೩೫ನೇ ಇಸವಿಯಲ್ಲಿ ಗವರ್ನ್‌ಮೆಂಟಿನವರು ಸದರೀ ಪಾಳೇಗಾರರ ದುಸ್ಥಿತಿಯಂ ಪರ್ಯಾಲೋಚಿಸಿ ಅವರಿಗೆ ೧೫೫ ಚಿಲ್ಲರೆ ರೂಪಾಯಿ ಪಡಪು ಇಜಾಫೆ ಮಾಡಿದರು. ಈ ಜಾಸ್ತೀ ಹೊಬಲಗು ಸೇರಿ ೧೮೫೪—೧೨—೧ ರೂಪಾಯಿಗಳು ಪೆನ್‌ಷನ್ ರೂಪವಾಗಿ ಕೊಡಲ್ಪಟ್ಟವು ಮರಳಿ ೧೮೬೨ನೇ ಇಸವಿಯಲ್ಲಿ ಸದರಿ ಪಾರ್ಕ್‌ಜ್ ಹಬ್ಬರ್ಡ್ ಸಾಹೆಬರವರು ಸದರೀ ಪಾಳೇಗಾರರ ರಿಕ್ತತೆಯನ್ನೂ ಅಗ್ಗ್ಯ ಆಗ್ಗ್ಯ ಆಹಾರ ಪದಾರ್ಥಗಳ ನಿರಖ್ ಬಹಳ ಚೆತಾವಾಗಿದ್ದದನ್ನೂ ಆಲೋಚಿಸಿ ಸೇಕಡಾ ೫೦ ರೂಪಾಯಿಗಳ ಪ್ರಕಾರ ಅವರ ಪೆನ್‌ಷನ್‌ಗಳನ್ನು ಹೆಚ್ಚಿಸಿದರು. ೧೮೬೪-೬೫ನೇ ಇಸವಿಯಲ್ಲಿ ಚೀಫ್ ಕಮಿಷನರಾಗಿದ್ದ ಮಿ॥ ಬೌರಿಂಗ್ ಸಾಹೆಬರವರು ಸದರೀ ಜನರ ಪೆನ್‌ಷನನ್ನು ಸೇಕಡ ೨೫ ರೂಪಾಯಿಗಳ ಪ್ರಕಾರ ಮರಳಿ ಜಾಸ್ತೀ ಮಾಡಿದರು. ಈಗ ಸಂಸ್ಥಾನದಿಂದ ಕೊಡಲ್ಪಡುತಲಿರುವ ಒಟ್ಟು ೩೧೮೩ ೧೨-೯ ರೂಪಾಯಿಗಳ ಪೆನ್‌ಷನ್ ೧೬ಜನ ಪಾಳೇಗಾರರ ಮನೆತನಗಳಿಗೆ ಸಲಿಸಲ್ಪಡುತಿವೆ ಇವರಲ್ಲಿ ಮ್ಯೆ [illegible] ಜನರ ಪೆನ್‌ಷನ್ ಬಾಬತು ೧೩೮-೪-೭ ರೂಪಾಯಿಗಳು ಸೇರಿರುತಿವೆ. ಇವರ ವಾರಸ್ ಮೀರಾದವು ಅದ್ಯಾಪಿ ವ್ಯವಸ್ಥೆಯಾಗದೆ ವಿಮರ್ಶೆಯಲ್ಲಿರುತಲಿದೆ. ಒಟ್ಟು ೬೦ ಜನ ಪೆನ್‌ಷನ್ ದಾರರು ಈಗ ಹಾಜರಿದಾರಲ್ಲದೆ ಅವರ ಸಂರಕ್ಷಣೆಗೆ ಪಾತ್ರರಾದವರನೇಕರಿರುತಾರೆ ಸರ್ ೧೮೬೫ನೇ [illegible]ಯಲ್ಲಿ ಮಿ॥ ಬೌರಿಂಗ್ ಸಾಹೆಬರವರು ಪಾಳೇಗಾರರ ಪೆನ್‌ಷನನ್ನು ಸೇಕಡಾ ೨೫ ರೂಪಾಯಿಗಳ ಪ್ರಕಾರ ಜಾಸ್ತೀ ಮಾಡಿದಕಾಲದಲ್ಲಿದ್ದ ನಿರಖಿಗೂ, ಈಗಿನ ಧಾರಣೆಗೂ ನೆಲೆಗೊಂಡಿರುವ ತಾರತಮ್ಯವನ್ನೂ, ಪೂರ್ವಕ್ಕಿಂತಲೂ ಈಗ ಜನರಿಗೆ ಜೀವನವು ಪ್ರಯಾಸವಾಗಿರುವದನ್ನೂ ಶ್ರೀಮನ್ಮಹಾರಾಜರವರು ತಮ್ಮ ದಿವ್ಯಚಿತ್ತದೊಳು ಪರಿಭಾವಿಸಿ ೧೮೯೩ನೇ ಇಸವಿ ಜುಲೈ ಗುರ್ರೇ ಲಾಗಾಯಿತು, ಅಂದರೆ ಈ ಸರ್ಕಾರೀ ಸಾಲ್ ಶುರು ಮೊದಲು ಪಾಳೇಗಾರರಿಗೆ ಈಗ ಸಲ್ಲುತಲಿರುವ ಪೆನ್‌ಷನ್ ಮೊಬಲಗನ್ನು ಸೇಕಡಾ ೫೦ ರ ಪ್ರಕಾರ ಜಾಸ್ತೀಮಾಡಿರುವಂತೆ ಹುಕುಂ ಕೊಟ್ಟಿರುತ್ತಾರೆ. ಬವಸ್ಟೂರ್ ಈ ತಿಂಗಳಲ್ಲಿ ಅವರವರಿಗೆ ಮುನಾಸಿಬ ಜಾಸ್ತೀ ಪೆನ್‌ಷನ್‌ಗಳು ಕೊಡಲ್ಪಟ್ಟವೆಂದು ಕೇಳಲಿಕ್ಕೆ ನಾವು ಬಹಳ ಸಂತೋಷಿಸುತ್ತೇವೆ. ರಿಕ್ತರಾದ ಸದರೀ ಪಾಳೇಗಾರರ ವಿಷಯದಲ್ಲಿ ಶ್ರೀಮನ್ಮಹಾರಾಜರವರು ಕೃಪಾಪೂರ್ವಕ ತೋರಿಸಿದ ಔದಾರ್ಯವು ಪ್ರಬಲವಾಗಿಯೂ ಶ್ಲಾಘ್ಯವಾಗಿಯೂ ಇರುತದೆ. ಈ ವಿಷಯದಲ್ಲಿ ಸದರೀ ಜನಗಳು ಬಹಳ ಕೃತಜ್ಞರಾಗಿಯೂ ಸಮ್ಮತರಾಗಿಯೂ ಇರುತ್ತಾರೆ. ಇದರಿಂದ ಪಾಳೇಗಾರರ ಸ್ಥಿತಿಯು ಉಚಿತ ಕ್ರಮ ಪಡೆಯಲಿಕ್ಕೂ ತಮ್ಮ ಗೌರವದಿಂ ಕಾಲಸರಣ ಮಾಡಲಿಕ್ಕೂ ಅವಕಾಶವಂ ಕಲ್ಪಿಸಿದಂತಾಯಿತು. ನಾವು ಹಿಂದೆ ತಿಳಿಸಿದ್ದ ಪ್ರಕಾರ ಮಹಾರಾಜಾ ಸಾಹೆಬರವರು ಪಾಳೇಗಾರ್ ಮನೆತನದ ವಿದ್ಯಾಭಿವೃದ್ಧಿ ವಿಷಯದಲ್ಲಿಯೂ ಅವರ ಪುರೋಭಿವೃದ್ಧಿಯಲ್ಲಿಯೂ, ಯಥಾಸಮಾಧಾನದ ಬಗ್ಗೆ ವಿಶೇಷ ವಿಚಾರಣೆಯನ್ನು ಮಾಡಿದರೆ ಶ್ರೇಯಸ್ಕರವಾಗಿರುವದು. ಈ ಜನಗಳು ಹಿಂದೆ ಒಂದು ಕಾಲದಲ್ಲಿ ಪ್ರಭುತ್ವವಂ ನಡಿಸಿ ವಿಶೇಷ ಕೀರ್ತಿ ಪ್ರಾಶಸ್ತ್ಯಗಳಂ ಪಡೆದವರಾದಕಾರಣ ಇವರ ಸಂತತಿಯವರು ಪ್ರಯೋಜಕರಾಗಿ ಪ್ರತಿಷ್ಠಾ ಸಂಪಾದಕರಾಗುವದು ಎಲ್ಲರಿಗೂ ಬಹಳ ಸಂತೋಷಕರವಾದ ವಿಷಯವಾಗಿರುತದೆ

## ಮಿ|| ಓಲ್ಕಾಟಿಯವರ ಪ್ರಸಂಗವು.

ಥಿಯಸಾಫಿಕಲ್ ಸೊಸೈಟಿಯ ಮೆಂಬರುಗಳ ಲ್ಲೊಬ್ಬರಾದ ಮಿ|| ದಬ್ಲ್ಯೂ ಆರ್. ಓಲ್ಡ್ ಯೆಂಬವರು ಗತವಾರದಲ್ಲಿ ಈ ಪೂರಿಗೆ ಬಂದು ಕಳೆದ ಬುಧವಾರದ ದಿನ ರಾತ್ರಿ ಕಂಟೋನ್ಮೆಂಟ್ ಥಿಯಸಾಫಿಕಲ್ ಸೊಸೈಟಿಯ ವೈಸ್‌ಪ್ರೆಸಿಡೆಂಟಾದ ಮಿ|| ಸುಬ್ರಹ್ಮಣ್ಯಯ್ಯನವರ ಪ್ರಾರ್ಥನೆಯಂ ಲಾಲಿಸಿ ಮೇಯೋಹಾಲಿನಲ್ಲಿ ಇಂಗ್ಲಿಷ್ ಭಾಷೆಯೊಳು ಮನುಷ್ಯನ ಮನೋವೃತ್ತಿಯಂ ಕುರಿತು ಉಪನ್ಯಾಸವ ಮಾಡಿದರು. ಇದರಲ್ಲಿ ಮನಸ್ಸಿಗೂ ಇಂದ್ರಿಯಗಳಿಗೂ ನೆರೆಗೊಂಡಿರುವ ಸಂಬಂಧವನ್ನೂ, ಅವುಗಳ ಪ್ರಯೋಜನಗಳನ್ನೂ ಶಾಸ್ತ್ರೀಯಗಳಾದ ನಿದರ್ಶನಗಳಿಂದ ನಿರೂಪಿಸಿ ಜ್ಞಾನಸ್ವರೂಪಿಯಾಗಿರುವ ಆವರಣವು ಜ್ಞಾನದಿಂದಲೇ ನಿವೃತ್ತಿಸಿದರೆ ಆಗ ಚೈತನ್ಯಕ್ಕೆ ತ್ರೈಕಾಲಿಕ ಜ್ಞಾನವೂ ಉಂಟಾಗುವ ವಿವೇಚನವೂ ಉಂಟಾಗುವದೆಂದು ಹೇಳಿದರು. ಇವರ ಪ್ರಸಂಗವು ಬಹಳವಾಗಿ ಭೌತಿಕ ಜ್ಯೋತಿಶ್ಶಾಸ್ತ್ರಾಧಾರಗಳನ್ನನುಸರಿಸಿದ್ದರಿಂದ ಸಾಮಾನ್ಯವಾಗಿ ಯೆಲ್ಲರಿಗೂ ಸುಲಭವಾಗಿ ಬೋಧೆಯಾಗುವಂತಾದ್ದಾಗಿಲ್ಲಿಲ್ಲವು. ಗತಶುಕ್ರವಾರದ ದಿನ ಸಾಯಂಕಾಲ ಇಲ್ಲಿನ ಗವರ್ನಮೆಂಟ್ ಬಾಲಿಕಾ ಪಾಠಶಾಲೆಯಲ್ಲಿ ಸದರಿ ದೊಡ್ಡಮನುಷ್ಯರು ಯೋಗಶಾಸ್ತ್ರವಂ ಕುರಿತು ಮರಳಿ ಉಪನ್ಯಾಸವಂ ಮಾಡಿದರು. ಇದಂ ಕೇಳುವದಕ್ಕಾಗಿ ಬಹುಜನ ನೇಟಿವ್ ದೊಡ್ಡಮನುಷ್ಯರು ಬಂದಿದ್ದರು. ಪ್ರಾಸಂಗಿಕರು ೬|| ಘಂಟೆಗೆ ತಮ್ಮ ಪ್ರಸಂಗವನ್ನು ಪ್ರಕ್ರಮಿಸಿ ಸುಮಾರ್ ೮|| ಘಂಟೆಗೆ ಪೂರೈಸಿದರು. ಮಿ|| ಓಲ್ಡ್ರವರಿಲ್ಲಿ ಪ್ರಾಚೀನ ಹಠಯೋಗಕ್ಕೂ, ರಾಜಯೋಗಕ್ಕೂ ನೆಲೆಗೊಂಡಿರುವ ಪ್ರಭೇದಗಳನ್ನೂ, ಸದರೀ ಇಬ್ಬರು ಯೋಗಿಗಳ ಧರ್ಮಗಳನ್ನೂ ಲಕ್ಷಣಗಳನ್ನೂ ಬಹಳಮಟ್ಟಿಗೆ ವಿವರಿಸಿ ಯೋಗಿಯಾದವನಿಗೆ ಜ್ಞಾನ ಭಕ್ತಿ ವೈರಾಗ್ಯವೂ, ಇಂದ್ರಿಯನಿಗ್ರಹವೂ, ಚಿತ್ತಸ್ಥೈರ್ಯವೂ ಆವಶ್ಯಕಗಳೆಂದು ಉಪಪಾದನೆ ಮಾಡಿದರು. ಅನಂತರ ಕುಂಭಕ ರೇಚಕ ಪೂರಕ ಕ್ರಮಗಳನ್ನೂ, ತತ್ತತ್ಕಾಲವ್ಯವಧಾನವನ್ನೂ, ಇಡಾ, ಪಿಂಗಳಾ, ಸುಷುಮ್ನಾ ಎಂಬ ನಾಡೀ ತ್ರಯವನ್ನೂ, ಸೂರ್ಯಚಂದ್ರ ಸಂಚಾರಪ್ರಕಾರ ಅವುಗಳಿಗುಂಟಾಗುವ ಗತಿಭೇದಗಳನ್ನೂ, ಶರೀರಾಂತರ್ವ್ಯಾಪ್ತಿಗಳಾದ ಚಕ್ರಗಳ ಲಕ್ಷಣಗಳನ್ನೂ ನಿರೂಪಿಸಿ ಪ್ರಾಣಾಯಾಮದೊಳು ಪೂರಕಕ್ಕೆ ೧೬ ತೃಟಿಗಳ ಕಾಲವೂ, ಕುಂಭಕಕ್ಕೆ ೩೬ ತೃಟಿಗಳೂ, ರೇಚಕಕ್ಕೆ ೩೨ ತೃಟಿಗಳೂ ಆವಶ್ಯಕವೆಂದಲ್ಲದೆ, ಪ್ರತ್ಯಾಹಾರದಲ್ಲಿ ಕುಂಭಕವೆಂದರೆ ಶ್ವಾಸವಂ ತಡೆದಿಡತಕ್ಕ ಕಾಲವು ಪ್ರಾಣಾಯಾಮಕ್ಕೆ ತಿಳಿಸಲ್ಪಟ್ಟ ಕಾಲಕ್ಕಿಂತಲೂ ದ್ವಿಗುಣ, ಅಂದರೆ ೭೨ ತೃಟಿಗಳೆಂತಲೂ, ಹೀಗೆಯೇ ಧಾರಣ ಧ್ಯಾನ ಸಮಾಧಿಯಲ್ಲಿ ರೇಚಕ ಪೂರಕ ಕಾಲಗಳು ಒಂದಾಗಿದ್ದಾಗ್ಯೂ ಕುಂಭಕಕಾಲ ಮಾತ್ರ ಕ್ರಮವಾಗಿ ಇಮ್ಮಡಿಸುತ ಸಮಾಧಿಯಲ್ಲಿರುವ ಪುರುಷನು ಸ್ವಲ್ಪ ಕಡಿಮೆಯಾಗಿ ೧೪ ಘಂಟೆಯ ಕಾಲ ಶ್ವಾಸಧಾರಣವಂ ಮಾಡುವದಕ್ಕೆ ಶಕ್ತನಾಗುವನೆಂತಲೂ, ಇದರಿಂದ ಅಣಿಮಾದ್ಯಷ್ಟಸಿದ್ಧಿಗಳುಂಟಾಗಿ ಜೀವನ್ಮುಕ್ತನಾಗುತ್ತಾನೆಂದಲೂ, ಇಂತಾ ಗುಪ್ತವಿದ್ಯೆಯನ್ನು ಆರ್ಯರು ನಿತ್ಯದರ್ಶವೆಂದು ಗ್ರಹಿಸಿ ಅಭ್ಯಾಸಮಾಡಿ ತಪೋನಿಷ್ಠರಾಗಿದ್ದರೆಂತಲೂ, ಅಂತವರ ವಂಶಸ್ಥರೆನ್ನಿಸಿಕೊಂಡಿರುವ ಈಗಿನ ಹಿಂದೂಗಳು ಸದರೀ ಶಾಸ್ತ್ರ ಮರ್ಯಾದೆಯಂ ಸ್ವಲ್ಪವಾದರೂ ತಿಳಿದುಕೊಳ್ಳದೆ ತಿರಸ್ಕರಿಸುವದು ಅವರಿಗೆ ಪ್ರತಿಷ್ಠಾಹಾನಿಕರವಾಗಿರುವದೆಂತಲೂ, ಮೇಲೆ ತಿಳಿಸಿದ ರೇಚಕ ಕುಂಭಕ ಪೂರಕದಿಂದ ಆಯುರ್ವೃದ್ಧಿ, ಆರೋಗ್ಯ, ಬುದ್ಧಿವಿಕಾಸ, ಚಿತ್ತಸ್ಥೈರ್ಯ, ಕಡೆಗೆ ಸಕಲವೂ ನಶ್ವರವೆಂಬ ಕ್ಷಣಿಕಜ್ಞಾನ, ಅಹಂಕಾರ ನಿವೃತ್ತಿಪೂರ್ವಕ ಸ್ವಸ್ವರೂಪಜ್ಞಾನ, ಇವು ಉಂಟಾಗುವದೆಂತಲೂ ನುಡಿದು, ತಮ್ಮ ಪ್ರಸಂಗವಂ ಕೊನೆಮುಟ್ಟಿಸಿದರು. ಅನಂತರ ಸರ್ವೇ ಅಸಿಸ್ಟೆಂಟ್ ಕಮ್ಮಿಶನರ್ ಮ|| ನಾರಾಯಣರವರು ಹಿಂದೂ ಅಸೋಸಿಯೇಷನ್ ಸಭಾಸದರ ತರಫ್ ಪ್ರಾಸಂಗಿಕರ ಸಾಮರ್ಥ್ಯವು ಕೊಂಡಾಡಿ ಅವರಿಗೆ ವಂದನೆಯ ಮಾಡಿದರು. ತರುವಾಯ ಸಿವಿಲ್ ವ ಮಿಲಿಟರಿ ಸ್ಟೇಷನಿನ ಡಿಸ್ಟ್ರಿಕ್ಟ್ ಜಡ್ಜಿಯರಾದ ಮ|| ರಾ|| ಸಿ. ಎಸ್. ಕಸ್ತೂರಿರಾಯರವರು ಮಿ|| ಓಲ್ಡ್ ಯವರ ಕಂಠದಲ್ಲಿ ಪುಷ್ಪಹಾರವಂ ಹಾಕಲು ಅವರದಂ ಹಿಂದೂ ಮರ್ಯಾದೆಯನ್ನನುಸರಿಸಿ ಬದ್ಧಾಂಜಲಿ ಪುಟರಾಗಿ ವಂದನಪೂರ್ವಕ ಅಂಗೀಕರಿಸಿದರು ಅನಂತರ ಸಭೆ ಬರಖಾಸ್ತಾಯಿತು. ಇವರು ಈ ದಿನ ಮೇಯೋ ಹಾಲಿನಲ್ಲಿ ಅದ್ವೈತ ವಿಷಯವಂ ಕುರಿತು ಪ್ರಸಂಗಿಸುವರೆಂದು ಕೇಳುತ್ತೇವೆ.

## Occasional Notes.
### ನೈಮಿತ್ತಿಕ ವಿಷಯಗಳು.

ಯುನೈಟೆಡ್ ಸ್ಟೇಟ್ಸ ಸರ್ಕಾರ್ ಖಜಾನೆಯಲ್ಲಿ ನೂರು ಕೋಟಿ ರೂಪಾಯಿಗಳ ಕ್ರಯ ಬಾಳುವಷ್ಟು ಬಂಗಾರವು ಇರುವದಾಗಿ ತಿಳಿಯಬರುತ್ತದೆ.

ಮಾಹೇ ಜುಲೈ ೨೦ ನೇ ತಾರೀಖಿನಲ್ಲಿ ರಾಮಪುರದ ರಾಜರವರಿಗೆ ಲಂಡನ್ ಪಟ್ಟಣದಲ್ಲಿ ಶ್ರೀಮನ್ ಮಹಾರಾಜ್ಞೀಯವರ ಸಂದರ್ಶನವಾದಂತೆ ಕೇಳುತ್ತೇವೆ.

ಅಮೆರಿಕಾಖಂಡದಲ್ಲಿ ಅರಳೀ ವ್ಯಾಪಾರವು ಮಂದ್ಯವನ್ನೈದಿದ್ದರಿಂದ ನೂರಕ್ಕೆ ೩೩ ರ ಪ್ರಕಾರ ಅರಳಿ ಯಂತ್ರದ ಕಾರ್ಖಾನೆಗಳು ಮುಚ್ಚಲ್ಪಟ್ಟವೆಂದು ನ್ಯೂಯಾರ್ಕ್ ಪಟ್ಟಣದಿಂದ ಜೋತಿ ವೃತ್ತಾಂತ ಬಂದಿರುತ್ತದೆ.

ಕಲ್ಕತ್ತೆಯೊಳಿರುವ ಪ್ರಮುಖರಾದ ಸ್ತ್ರೀಯರು ಕೆಲವರು ಸೇವಾಸಮಿತಿ ಯೆಂಬ ಹೆಸರುಳ್ಳ ಒಂದು ಸಮಾಜವನ್ನೇರ್ಪಡಿಸಿದ್ದಾರೆ. ಈ ಸಂಘೋದ್ದೇಶವು ತಮ್ಮೊಳು ಪರಸ್ಪರ ಸ್ನೇಹ ಸಂಬಂಧವಂ ವೃದ್ಧಿಗೊಳಿಸಿ, ಅನಾಥರಾದ ವಿತಂತುಗಳಿಗೂ ಇತರರಿಗೂ ಧನಸಹಾಯ ಮಾಡುವದಾಗಿರುತ್ತದೆ.

ರಷ್ಯಾ ಸರ್ಕಾರದವರು ತಮ್ಮ ಟಂಕಸಾಲೆಯಲ್ಲಿ ಇನ್ನುಮೇಲೆ ಬೆಳ್ಳಿ ನಾಣ್ಯಗಳನ್ನು ತಯಾರ್ಮಾಡಕೂಡದೆಂತಲೂ, ಅನ್ಯದೇಶಗಳಿಂದ ಬೆಳ್ಳಿ ನಾಣ್ಯಗಳನ್ನು ಅನುಮತಿ ಸಹ ಮಾಡಕೂಡದೆಂತಲೂ ನಿಷೇಧಿಸಿ ಕೊಟ್ಟ ಹುಕುಂ ಬರುವ ತಿಂಗಳ ೧೩ ನೇ ತಾರೀಖಿನವರಿವಿಗೆ ಅಮಲಿನಲ್ಲಿ ತರಲ್ಪಡಲಾರದು.

ನಿಜಾಂ ಸರ್ಕಾರದವರು ಪ್ರಮುಖರಾದ ಕೆಲವರು ಸ್ಥಳೀಕ ಸಾಹುಕಾರರನ್ನು ೪೦ ಲಕ್ಷರೂಪಾಯಿಗಳು ಸಾಲ ಕೇಳಿದ್ದಾರೆಂತಲೂ, ಅದಕ್ಕೆ ಅವರು, ನಿಜಾಂ ಗವರ್ನಮೆಂಟಿನವರು ಈಚೆಗೆ ಮುಶ್ಕೂಬ್ ಮಾಡಿದ ಟಂಕಸಾಲೆಯನ್ನು ಮರಳಿ ಸ್ಥಾಪಿಸುವ ಪಕ್ಷಕ್ಕೆ ನೇಕಡಾ ೬ ರೂಪಾಯಿಗಳ ಬಡ್ಡಿ ದರದಮೇಲೆ ಅಪೇಕ್ಷಿಸಿದಷ್ಟು ಹಣವನ್ನು ತಾವು ಅಡ್ವಾನ್ಸ್ ತರೀಕ್ ಕೊಡುವದಾಗಿ ಜವಾಬ್ ಕೊಟ್ಟರೆಂತಲೂ ತಿಳಿಯಬರುತ್ತಿದೆ.

ಸಯಾಂ ದೇಶದ ಅರಸರವರು ಫ್ರೆಂಚಿನವರ ರಾಯಭಾರಿಯಾದ, ಎಂ. ಡೆವಿಲರ್ಸ್ ಯೆಂಬವರನ್ನು ವಿಶೇಷ ವಿಭವದೊಡನೆ ಬರಮಾಡಿಕೊಂಡರು. ಸದರೀ ದೊಡ್ಡಮನುಷ್ಯರು ಅರಸರವರ ಸಂದರ್ಶನ ಸಮಯದಲ್ಲಿ, ಸಯಾಂ ರಾಜ್ಯಕ್ಕೂ ಫ್ರಾನ್ಸ್ ದೇಶಕ್ಕೂ ಈಚೆಗೆ ಸಂಭವಿಸಿದಂತಾ ಅಸ್ಥಿರವಾದ ಕಲಹವು ಉಪಶಾಂತವಾಗಿ ಸಕಲರೂ ಪರಸ್ಪರ ಅನ್ಯೋನ್ಯ ಭಾವವುಳ್ಳವರಾಗಿರಬೇಕೆಂದು ತಿಳಿಸಲು ಅದಕ್ಕೆ ಅರಸರವರು ಗೌರವ ವಿಶ್ವಾಸಪೂರ್ವಕ ಜವಾಬ್ ಕೊಟ್ಟರೆಂಬದಾಗಿ ಬ್ಯಾಂಕಾಕ್ ಪಟ್ಟಣದಿಂದ ಬಂದ ವೃತ್ತಾಂತದಿಂ ತಿಳಿಯಬರುತ್ತದೆ.

ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸಭೆಯ ಸೆಕ್ರೆಟರಿಯಾದ ಮಿ|| ಎ. ಹ್ಯೂಂ ಯವರು, ಬರುವ ಅಕ್ಟೋಬರ್ ತಿಂಗಳ ೧೪ ನೇ ತಾರೀಖಿನಲ್ಲಿ ಇದೇ ಕಡೇ ಆವರ್ತಿಯಾಗಿ ಇಂಡ್ಯಾದೇಶಕ್ಕೆ ಬರುವವರಾಗಿದ್ದಾರೆಂದು ಕೇಳುತ್ತೇವೆ. ಪ್ರಕೃತಸ್ಥಿತಿಯಲ್ಲಿ ಅವರಿಗೆ ದೇಹಸೌಖ್ಯವು ಅನುಚಿತವೆಂದು ಡಾಕ್ಟರುಗಳು ತಿಳಿಸಿ ಅವರ ಪ್ರಯಾಣವು ತಡೆದಾಗ್ಯೂ ಅವರ ತಾತ್ಪರ್ಯಕ್ಕೆ ವಿರುದ್ಧವಾಗಿ ಇಲ್ಲಿಗೆ ಬರುವಂತೆ ಕಾಣುತ್ತಿದೆ. ಕಾಂಗ್ರೆಸ್ ಸಭೆಯವರು ಮುಂಪತ್ತು ಪ್ರದೇಶಗಳಲ್ಲಿ ನೆರೆಗೊಳಿಸಿರುವ ಕಮಿಟಿಗಳನ್ನವರು ಖುದ್ದು ನೋಡುವ ಬಗ್ಗೆ ಅವರಿಗೆ ಅನುಕೂಲವಾದ ರೀತಿಯಲ್ಲಿ ಸಂಚಾರ ನಿಧಾನವೇರ್ಪಡಿಸಲ್ಪಡುವದು.

ಕಾಶ್ಮೀರ ರಾಜ್ಯದಲ್ಲಿ ಕೆಲವು ವಾರಗಳ ಹಿಂದೆ ವಿಪ್ರಷ್ಟವಾದ ಪ್ರಬಲ ಪ್ರವಾಹದಿಂದುಂಟಾದ ನಷ್ಟಗಳನ್ನು ಶ್ರೀನಗರದಿಯವರು ಕೇಳಿ ಮಹಾರಾಜರವರಿಗೆ ತಂತಿಮೂಲಕ ತಮ್ಮ ಅನುತಾಪವನ್ನು ವ್ಯಕ್ತಪಡಿಸಿದರು. ಈ ತಿಂಗಳ ೪ ನೇ ತಾರೀಖಿನಲ್ಲಿ ಶ್ರೀಮನ್ ಮಹಾರಾಜರವರ ವರ್ಷವರ್ಧಂತಿಯು ಜರುಗಿತು, ಆದಾಗ್ಯೂ ಅವರು ಕಷ್ಟಪಡುತಲಿರುವ ಪ್ರಜೆಗಳ ಸ್ಥಿತಿಯಂ ಪರ್ಯಾಲೋಚಿಸಿ ವರ್ಧಂತಿ ಪ್ರಯುಕ್ತವಾದ ದರ್ಬಾರನ್ನು ನಿಲ್ಲಿಸಬಿಟ್ಟರಲ್ಲದೆ ತಮ್ಮ ಪ್ರಜೆಗಳು ನಜರೊಪ್ಪಿಸುವದಂ ಸಹ ಮುಆಫ಼್ ಮಾಡಿದರು. ಶ್ರೀಮನ್ ಮಹಾರಾಜರವರು ಲೆಫ್ಟಿನೆಂಟ್ ಗವರ್ನರ್ ಯೆಂಬವರಿಗೆ, ಘಟನೆ ನಷ್ಟದಿಂದ ಮುಂದಿನ ವರ್ಷಋತುವಿನ ಆಹಾರ ವಸ್ತು ದೌರ್ಲಭ್ಯ ಪ್ರಯುಕ್ತವಾದ ಸಂಕಟವೇನಾದರು ಸಂಭವಿಸುವ ಪ್ರಮೇಯವಿದೆಯೇ ಇಲ್ಲವೋ ಎಂಬದಂ ಚೆನ್ನಾಗಿ ಆಜಮಾಯಿಸಿ ಮಾಡಿ ತಮಗೆ ರಿಪೋರ್ಟ್ ಮಾಡಬೇಕೆಂದು ಹುಕುಂ ಮಾಡಿದ ಪ್ರಕಾರ ಅವರೀಗ ಗ್ರಾಮಾಂತರಗಳಲ್ಲಿ ಸಂಚರಿಸುತಲಿದ್ದಾರೆ.

## LOCAL AND PROVINCIAL NEWS.
### ಒಳದೇಶ ಮತ್ತು ತಾಲ್ಲೂಕ್‌ಜಾತ್ ವೃತ್ತಾಂತಗಳು

ಶ್ರೀಮನ್ ಮಹಾರಾಜರವರು ತಮ್ಮ ಪರಿವಾರದೊಡನೆ ಬರುವ ತಿಂಗಳ ಮಧ್ಯಭಾಗದಲ್ಲಿ ರಾಜಧಾನಿಗೆ ದಯಮಾಡುವಂತೆ ನಿಷ್ಕರ್ಷೆಯಾಗಿರುವದಾಗಿ ತಿಳಿಯಬರುತ್ತದೆ.

ಈ ತಿಂಗಳ ೨೬ ನೇ ತಾರೀಖ್ ಶನಿವಾರದ ಮೊದಲು ಕುದುರೆ ಷರತ್ತು ಪ್ರಾರಂಭವಾದವು ಇವು ಬರುವ ಶನಿವಾರದೊಡನೆ ಪ್ರಾಯೋಃ ಮುಗಿಯಬಹುದೆಂದು ತೋರುತ್ತದೆ.

ಗತ ಶುಕ್ರವಾರದ ದಿನ ಅಷ್ಟಲಾಯ ನಡಿಗೆ ಉಪಾಕರ್ಮವಾದುದರಿಂದಲೂ, ಶನಿವಾರ ಈ ತಿಂಗಳ ತ್ಯೈಗ ಶನಿವಾರವಾದುದರಿಂದಲೂ ಇಲ್ಲಿನ ನಿತೆಷ್ಟ ಸರ್ಕಾರ್ ಆಫೀಸುಗಳಿಗೆ ರಜಾ ಕೊಡಲ್ಪಟ್ಟಿತು.

ಹಾಲಿ ವ್ಯವಹರಿಸಲ್ಪಡುತಲಿರುವ ಕೋಲಾರ್ ರೋಡ್ ಸ್ಟೇಷನೆಂಬದನ್ನು ಬೌರಿಂಗ್‌ಪೇಟೆ ಸ್ಟೇಷನೆಂಬದಾಗಿ ಬದಲಾಯಿಸಿದರೆ ಯುಕ್ತವಾಗಿರುವದೆಂದು ಮೈಸೂರ್ ಗವರ್ನಮೆಂಟಿನವರು ರೆಸಿಡೆಂಟರವರ ಮೂಲಕ ಮದರಾಸ್ ಗವರ್ನಮೆಂಟಿಗೆ ತಿಳಿಯಪಡಿಸಿದ್ದರಿಂದ ಅವರು ಅದೇ ರೀತಿ ಮಾಡಬಹುದೆಂದು ಮದರಾಸ್ ರೈಲ್ವೇ ಕಂಪೆನಿಯವರಿಗೆ ಹುಕುಂ ಮಾಡಿ ಸದರೀ ಅಂಶವನ್ನಿಲ್ಲಿಗೂ ಸೂಚಿಸಿದಾರೆಂದು ಕೇಳುತ್ತೇವೆ.

ಬೆಂಗಳೂರಿಂದ ತುಮಕೂರ್ ಮತ್ತು ಹಿಂದೂಪುರ ಮಾರ್ಗವಾಗಿ ಹೋಗುವ ಸದರ್ಕಾಮರಾಟಾ ರೈಲ್ವೇ ಸಂಬಂಧವಾದ ಪೋಲೀಸ್ ಅಧಿಕಾರವು ಬ್ರಿಟಿಷ ಗವರ್ನಮೆಂಟಿನವರ ವಿಚಾರಣೆಗೆ ಬರುವ ತಿಂಗಳ ಗುರ್ರೇ ತಾರೀಖ್ ಮೊದಲು ಹದಿನೈದನೇ ತಾರೀಖಿನೊಳಗಾಗಿ ಒಪ್ಪಿಸಲ್ಪಡುವದೆಂತಲೂ, ಕಂಗೇರಿ ಮೊದಲು, ನೂತನ ಗೂಹುತನಕ ಆಯಾ ಡಿಸ್ಟ್ರಿಕ್ಟ್‌ನವರಿಂದ ಪೋಲೀಸ ವಿಚಾರಣೆ ನಡೆಸಲ್ಪಡುವದೆಂತಲೂ, ಪ್ರಸ್ತುತ ವ್ಯವಸ್ಥೆಯಾಗಿರುತ್ತದೆ. ಬ್ರಿಟಿಷ ಗವರ್ನಮೆಂಟಿನವರು ಪೋಲೀಸ್ ನೌಕರಿಗೆ ಬೇಕಾದ ಜನಗಳನ್ನು ಹಾಲಿ ನೌಕರಿಯಲ್ಲಿರತಕ್ಕವರಲ್ಲೇ ಚುನಾಯಿಸಿ ಮೊಕರರ್ ಮಾಡುತಲಿದ್ದಾರೆಂದು ಕೇಳುತ್ತೇವೆ. ರೈಲ್ವೇ ಸಂಬಂಧಗಳಲ್ಲಿ ನಡೆಯತಕ್ಕ ತಕ್ಸೀರ್‌ಗಳನ್ನು ಆಯಾ ಸ್ಥಳಗಳಲ್ಲಿಯೇ ದರ್ಯಾಫ್ತ್ ಮಾಡಿ ಫೈಸಲ್ ಮಾಡುವಂತೆ ಒಬ್ಬ ಟ್ರಾವಲಿಂಗ್ ಮ್ಯಾಜಿಸ್ಟ್ರೇಟರನ್ನು ಮೊಕರರ್ ಮಾಡುವ ಆಲೋಚನೆ ಸಹ ಉಂಟಾಗಿರುವಂತೆ ಕೇಳುತ್ತೇವೆ.

ಆಚೇ ಶುಕ್ರವಾರದ ದಿನ ಬೆಂಗಳೂರು ತಾಲ್ಲೂಕ್ ಚಿಕ್ಕಬಾಣಾವರದ ರೈಲ್ವೇ ಸ್ಟೇಷನ್ ಮ್ಯಾಸ್ಟರ ಮನೆಗೆ ಕೆಲವರು ಕಳ್ಳರು ರಾತ್ರಿಕಾಲದಲ್ಲಿ ಪ್ರವೇಶಿಸಿ ಒಳಗೆ ಮಲಗಿದ್ದವರನ್ನೆಬ್ಬಿಸಿ ಅವರ ಆಸ್ತಿಯನ್ನೆಲ್ಲ ತೋರಿಸಬೇಕೆಂದು ಕೇಳಿದರು. ಆಗ ಅವರು ತಮ್ಮಲ್ಲೇನೂ ಇಲ್ಲವೆಂದು ನಿರಾಕರಿಸಲು ಸದರೀ ದಂಪತಿಗಳಿಬ್ಬರನ್ನೂ ಬಲವಾಗಿ ಹೊಡೆದು ಮನೆಯನ್ನು ಲೂಟೀ ಮಾಡಿ ಪೋಲೀಸ್ ಜವಾನನೊಬ್ಬನ ದುಸ್ತನ್ನು ಕಿತ್ತುಕೊಂಡು ಅವನ ರುಮಾಲಿಗೆ ಬೆಂಕಿ ಇಟ್ಟು ಬಳಿಕ ರೈಲ್ವೇ ಸ್ಟೇಷನಿನಲ್ಲಿ ನುಗ್ಗಿ ಅಲ್ಲಿ ಮಲಗಿದ್ದ ಪೋರ್ಟರುಗಳನ್ನು ಮರ್ದಿಸಿ ಅಲ್ಲಿ ಯೇನೂ ದೊರೆಯದೆ ಹೋದದರಿಂದ ಎಲ್ಲರೂ ಪರಾರಿಯಾದರೆಂತಲೂ ಅವರು ಅದ್ಯಾಪಿ ದೊರೆಯಲಿಲ್ಲವೆಂದಲೂ, ಬಳದೇಶದ ಈವನಿಂಗ್ ಮೆಯಿಲ್ ಪತ್ರಿಕೆ ತಿಳಿಸುತ್ತದೆ.

ಕೋಲಾರ್ ಚಿನ್ನದ ಗಣಿಗಳ ಬಳಿ ಪ್ರಯಾಣಸ್ಥರ ಅನುಕೂಲ್ಯಕ್ಕೋಸ್ಕರ ಕಟ್ಟಬೇಕೆಂದಿರುವ ಒಂದು ಛತ್ರಕ್ಕಾಗಿ ಈವರೂ ಕಂಟೋನ್ಮೆಂಟಿನಲ್ಲಿರತಕ್ಕ ಇಂಗ್ಲಿಷ್ ಪೇರಿಹೌಸ್ ಎಂಬ ಪ್ರಸಿದ್ಧ ಕೋಠಿದಾರರಾದ ಮ|| ಹಾಜಿ ಇಸ್ಮಾಯಿಲ್ ಸೇಟಿಯವರು ಅತ್ಯುದಾರ ಭಾವದೊಡನೆ ೨,೦೦೦ ರೂಪಾಯಿಗಳು ಧರ್ಮಾರ್ಥ ಕೊಟ್ಟರೆಂದು ಕೇಳಿ ನಾವು ಬಹಳ ಸಂತೋಷಿಸುತ್ತೇವೆ. ಬೌರಿಂಗ್‌ಪೇಟೆ ರೈಲ್ವೆ ಸ್ಟೇಷನ್ನಿಂದ ಚಿನ್ನದ ಗಣಿಗಳ ವರಿಗೆ ಹಾಕಲ್ಪಡುವ ರೈಲ್ ರಸ್ತೆಯ ಕಾಮಗಾರಿಯು ಪೂರೈಸಿದ ಕೂಡಲೆ ಜನಗಳ ಆಮದರಫ್ತು ಅಲ್ಲಿ ವೃದ್ಧಿಯಾಗಬಹುದಾಗಿ ಆಗ ಪ್ರಯಾಣಸ್ಥರಿಗೆ ಛತ್ರದ ಆವಶ್ಯಕತೆಯು ಅಧಿಕವಾಗಿರುವದೆಂಬವದರಲ್ಲಿಷ್ಟು ಮಾತ್ರವೂ ಸಂದೇಹವಿಲ್ಲವು.

ಈಗ ಕನಿಷ್ಠ ಅಂಗಡಿ ರೇವ್ಹೀ ತರೀಕ್ ಖುಡಿತವಾಗಿ ವಸೂಲ್ಮಾಡಲ್ಪಡುತಲಿರುವ ರುಸುಮನ್ನು ಕೈಬಿಡುವಂತೆ ಕಾವಿಗಳ ಪದಗೆ ಅವಕಾಶಕೊಡಿಸಬೇಕೆಂದು ಹಿಂದೂಗಳು ಇಲ್ಲಿನ ಬ್ರಿಟಿಷ ರೆಸಿಡೆಂಟರವರಿಗೆ ಅಪ್ಲಿಕೇಷನ್ ಮಾಡಿಕೊಳ್ಳುವ ಪ್ರಯತ್ನದೊಳಿರುವಂತೆ ಕೇಳುತ್ತೇವೆ. ಮುಸಲ್ಮಾನರು ತಮ್ಮ ಆಹಾರನಿಮಿತ್ತವಿಂ ಪಶುವಧೆ ಮಾಡುತ್ತಾರೆಂಬ ಅನುರಾಗದಿಂ ತನ್ನಿವಾರಣಾರ್ಥ ನಾನಾ ಪ್ರಯತ್ನಗಳಂ ಮಾಡಿ ತಮ್ಮ ಪ್ರಾಣಗಳಂ ಕಳೆದುಕೊಳ್ಳುತಲಿರುವ ಹಿಂದೂಗಳು ದೇವಹಿಂಸೆಯು ಪ್ರಾಣಿಸಾಮಾನ್ಯಕ್ಕೆ ದೂಷ್ಯವೆಂಬದನ್ನೂ ಜೀವಕೋಟಿಗೆ ಸೇರಿದ ಯಾವದೊಂದೂ ವಧಾರ್ಹವಲ್ಲವೆಂಬದನ್ನೂ ಅಹಿಂಸೆಯು ಪರಮಧರ್ಮವೆಂದನ್ನೂ ಆಲೋಚಿಸದ ಮೇಲೆ ಮುಸಲ್ಮಾನರಿಗೂ ಹಿಂದೂಗಳಿಗೂ ತಾರತಮ್ಯವೇನಿದೆ.

ಮೇಲುಕೋಟೆ ದೇವಸ್ಥಾನದಲ್ಲಿ ಗತವಾರದೊಳೊಂದು ದಿನ ರಾತ್ರಿ ಕೆಲವರು ಕಳ್ಳರು ಪ್ರವೇಶಿಸಿ ಅಮ್ಮನವರ ವಿಗ್ರಹದಮೇಲಿದ್ದ ನಾಲ್ಕೈದು ಸಾವಿರ ರೂಪಾಯಿಗಳು ಬಾಳುವಷ್ಟು ಆಭರಣಗಳನ್ನೂ ಕೆಲವು ನಗದನ್ನೂ ಕಳವುಮಾಡಿಕೊಂಡು ಹೋದರೆಂತಲೂ ಈ ವರ್ತಮಾನವು ಶ್ರೀರಂಗಪಟ್ಟಣ ಅಮಲ್ದಾರರಿಗೆ ರಿಪೋರ್ಟಾಗಿ ಪತ್ತೆಯ ಬಗ್ಗೆ ಅವರು ಸದರೀ ಪ್ರದೇಶಕ್ಕೆ ಹೋಗಿದ್ದಾರೆಂತಲೂ, ಕಳವು ನಡೆದ ಅಂಶವು ಕೂಡಲೇ ಮುಜರಾಯಿ ಸ್ಪೂಪರಿಂಟೆಂಡೆಂಟರಿಗೆ ತಂತಿ ಮೂಲಕ ತಿಳಿಸಲ್ಪಟ್ಟದೆಯೆಂತಲೂ, ವೃತ್ತಾಂತ ಬಂದಿರುತ್ತದೆ. ಈಚೆಗೆ ಮೊಕರರಾದ ಅಲ್ಲಿನ ಧರ್ಮದರ್ಶಿಗಳು ಈ ಅಧರ್ಮಕ್ಕೆ ಹ್ಯಾಗೆ ಅವಕಾಶ ಕೊಟ್ಟರೋ ನಾವರಿಯೆವು. ದೇವಸ್ಥಾನದ ಗರ್ಭಗೃಹಕ್ಕೆ ಸೇರಿದಂತಿರುವ ಬಂದೋಬಸ್ತಾದ ಒಂದು ಪ್ರದೇಶದಲ್ಲಿ ಕಳವು ನಡೆಯಬೇಕಾದರೆ ಅದರ ವಿಷಯವು ತುಂಬಾ ಅನುಮಾನಾಸ್ಪದವಾಗಿದೆ.

## THE MYSORE GAZETTE.

### ಮೈಸೂರು ಗೆಜೆಟು.

ಶ್ರೀಮನ್ಮಹಾರಾಜ ರವರ ಸರ್ಕಾರದಿಂದ ಹೊರಡಿಸಿದ ಇಸ್ತಿಹಾರ್‌ನಾಮೆಗಳು.

ನಂ|| ೨೫೦೮-೧. ೮೨೮-ತಾ ೨೧ನೇ ಆಗಸ್ಟ್ ೧೮೯೩ —ಶ್ರೀಮನ್ಮಹಾರಾಜರವರು ಬಿನ್ನಾಪ ಸರಿ ಕೆ ಶೇಷಾದ್ರಿ ಅಯ್ಯರ್, ಕೆ. ಸಿ. ಎಸ್. ಐ ಯವರಿಗೆ ಮಾರ್ಚಿ ಮಾಹೆ ೨೧ನೇ ತಾರೀಖು ಜಾರಿಯಾಗುವಂತೆ ಮೂರು ತಿಂಗಳ ಪ್ರಿವಿಲೇಜ್‌ರಜಾ ದಯಪಾಲಿಸಿರುತ್ತಾರಲ್ಲದೆ ಸರ್. ಕೆ. ಶೇಷಾದ್ರಿ ಅಯ್ಯರವರ ಗೈರುಹಾಜರೀ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವವರೆಗೆ ಅವರ ಚೀಫ್ ಸೆಕ್ರೆಟರಿ ಮಿ|| ಟಿ. ಆರ್ ಎ ತಂಬುಚೆಟ್ಟಿರವರನ್ನು ದಿವಾನ್ ಕೆಲಸವನ್ನು ಆಕ್ಟಿಂಗ್ ಆಗಿ ನೋಡುವಂತೆ ನೇಮಿಸಲ್ಪಟ್ಟಿರುತ್ತಾರೆ.

ನಂ|| ೨೫೦೮—೧. ೮೨೮—ತಾ|| ೨೨ ನೇ ಆಗಸ್ಟ್ ೧೮೯೩ —ದಸರಾ ಮಾಹೆ ೨೧ ನೇ ತಾರೀಖು ಬ್ರಕ್ಟ್ ೨೫೦೮—೧. ೮೨೮ ನೇ ನಂಬರು ಇಸ್ತಿಹಾರ್ ನಾಮೆಯನ್ನನುಸರಿಸಿ ಮೈಸೂರ್ ಸೀಮೆಯ ಚೀಫ್ ಜಡ್ಜಿಯಾದ ಮಿ|| ಟಿ. ಆರ್ ಎ ತಂಬುಚೆಟ್ಟಿರವರು ಮಾಹೆ ಮಾರ್ಚಿ ೨೨ ನೇ ತಾರೀಖು ಮಂಗಳವಾರದ ದಿನ ಪೂರ್ವಾಹ್ನದಲ್ಲಿ ಮೈಸೂರ್ ದಿವಾನ್‌ಗಿರಿಯ ಚಾರ್ಜನ್ನು ತೆಗೆದುಕೊಂಡಿರುತ್ತಾರೆ

ನಂ|| ೫೦೯೨-೧. ೮೩೨ —ಮಿ|| ಟಿ. ಆರ್ ಎ ತಂಬುಚೆಟ್ಟಿರವರು, ಮೈಸೂರ್ ಸೀಮೆಯ ದಿವಾನರಾಗಿಯೂ, ಕೌನ್ಸಿಲಿನ ಪ್ರೆಸಿಡೆಂಟರಾಗಿಯೂ ಕೆಲಸ ನೋಡುತ್ತಿರುವ ಕಾಲದಲ್ಲಿ ಘನವೆತ್ತ ಶ್ರೀಮನ್ಮಹಾರಾಜರವರು ಅವರಿಗೆ ವಹಿಸಿರುವ ಅಧಿಕಾರಗಳನ್ನು ಚಲಾಯಿಸುತ್ತಾರೆ. ೧ ಚೀಫ್ ಕೋರ್ಟ್ ಜಡ್ಜಿಯಾದ ಮಿ|| ಎ ರಾಮಚಂದ್ರಯ್ಯರವರು ಚೀಫ್ ಜಡ್ಜಿ, ಟಿ. ಎಂ. ನಾಗಪ್ಪ ಇನ್ಸ್‌ಪೆಕ್ಟರ್ ಜನರಲ್ ಮತ್ತು ಕೌನ್ಸಿಲಿನ ಮೆಂಬರ್, ಈ ಕೆಲಸಗಳನ್ನು ಆಕ್ಟಿಂಗ್ ತರೀಕೆ ನೋಡತಕ್ಕದ್ದು. ೨ ರೆವಿನ್ಯೂ ಸೆಕ್ರೆಟರಿ ಮತ್ತು ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ ಪಿ|| ಎನ ಕೃಷ್ಣಮೂರ್ತಿರವರು ಚೀಫ್ ... ಆಕ್ಟಿಂಗ್ ತರೀಕೆ ... ನೋಡ ... ೩ ಮಿ|| ಆರ್ ವಿ ... ರವರು ... ವಾಸವರ ಆಫೀಸಿನಲ್ಲಿರುವ ತಮ್ಮ ಸ್ವಂತ ... ಬಿಯಿಂದ ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ ಕೆಲಸವನ್ನು ಆಕ್ಟಿಂಗ್ ತರೀಕೆ ನೋಡತಕ್ಕದ್ದು.

ನಂ|| ೩೧೬೫—೧. ೨೨೨—ತಾ|| ೧೫ ನೇ ಆಗಸ್ಟ್ ೧೮೯೩ —ತ್ರಿಮೂರ್ತಿ ಪ್ರೊಫೆಸರ್ ಕೋರ್ಟಿನ ೩೨ನೇ ಸೆಕ್ಷನ್ ಅಮೆಂಡ್ ಫೈನಾನ್ಸ್ ಸಬ್ ಡಿವಿಷನ್ ಸ್ಟಾಂಪ್ ಡಿಪಾರ್ಟ್‌ಮೆಂಟಿನಲ್ಲಿರುವ ಬಂದರೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಮಿ|| ಪಿ ಸಂಜೀವರಾಯರವರು ನಾಲ್ಕನೇ ಷೆಡ್ಯೂಲ್ ೧೧ ನೇ ಕ್ಲಾಸ್‌ನಲ್ಲಿ ತಿಳಿಸಲ್ಪಟ್ಟಿರುವ ಒಬ್ಬ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರಿಗೆ ಗವರ್ನಮೆಂಟಿನವರು ಕೊಡಬಹುದಾದಂತಾ ಅಧಿಕಾರ ವಿಚಾರಣೆ ಕೊಡಲ್ಪಟ್ಟಿರುತ್ತಾರೆ. ಸರಕಾರದವರು ಫೈನಾನ್ಸ್ ಸಬ್‌ಡಿವಿಷನ್ ಚಾರ್ಜಿನಲ್ಲಿರುತ್ತಲಿರುವವರೆಗೆ ಚಲಾಯಿಸುತ್ತಿರತಕ್ಕದ್ದು.

ನಂ|| ೩೧೯೬—೧. ೨೨೧.— ಟುಕ್ಟಿಂಗ್ ಅಸಿಸ್ಟೆಂಟ್ ಕಮಿಷನರ್ ಮಿ|| ಸಿ. ರಾಮಯ್ಯಂಗಾರ್ರವರು ೧೮೯೩ ನೇ ಇಸವಿ ಆಗಸ್ಟ್ ೫ ನೇ ತಾರೀಖಿನ ಪೂರ್ವಾಹ್ನದಲ್ಲಿ ಕಡೂರ್ ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮಿಷನರ್ ಆಫೀಸ್ ಚಾರ್ಜನ್ನು ಮಿ|| ಕೆ. ರಾಮಸ್ವಾಮಯ್ಯಂಗಾರ್ರವರಿಗೊಪ್ಪಿಸಲು ಅವರದು ತೆಗೆದುಕೊಂಡಿರುತ್ತಾರೆ.

ನಂ|| ೩೧೯೩—೧. ೪೪೩—೯೩. ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೮೮ ನೇ ಆರ್ಟಿಕಲ್ ಅನುಸರಿಸಿ ಮೈಸೂರು ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ಮಿ|| ಎನ್. ನರಸಿಂಹಮೂರ್ತಿಯ್ಯಂಗಾರ್ರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯಿತು ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ. ಚಿತ್ರದುರ್ಗ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ಮಿ|| ಎನ್. ವೆಂಕಟಸುಬ್ಬರಾಯರವರು, ರಜಾದಮೇಲಿರುವ ಮಿ|| ಎನ್ ನರಸಿಂಹಮೂರ್ತಿಯ್ಯಂಗಾರ್ರವರ ಗೈರುಹಾಜರೀ ಕಾಲದಲ್ಲಿ ಅವರ ಕೆಲಸವನ್ನು ನೋಡುವ ಬಗ್ಗೆ ಹುಂಗಾಮಿ ತರೀಕೆ ಮೈಸೂರ್ ಡಿಸ್ಟ್ರಿಕ್ಟಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ

ನಂ || ೨೨೫೮-೧ ೭೨೩-ತಾ|| ೧೨ನೇ ಆಗಸ್ಟ್ ೧೮೯೩ -ಚಿತ್ರದುರ್ಗ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಸರ್ಜನ್ ಮಿ|| ಸಿ. ರಂಗಾರಾಮರಾಯರವರಿಗೆ, ೧೮೯೩ ನೇ ಇಸವಿ ಆಗಸ್ಟ್ ೧೦ ನೇ ಮಕರ್ರಂ ೨೨೫೨—೧ ೭೨೦ ನೇ ನಂಬರಿನ ಇಸ್ತಿಹಾರ್ ನಾಮೆಯ ಮೂಲಕ ಕೊಡಲ್ಪಟ್ಟಿದ್ದ ೨೪ ತಿಂಗಳ ಪ್ರಿವಿಲೇಜ್ ರಜಾ ಅವರ ಕೋರಿಕೆಯ ಪ್ರಕಾರ ಇದರಿಂದ ರದ್ದು ಮಾಡಲ್ಪಟ್ಟಿರುತ್ತದೆ

ನಂ ೨೪೦೮-೧, ೭೯೫-ತಾ ೧೮ನೇ ಆಗಸ್ಟ್ ೧೮೯೩ —ಪ್ರೊಬೇಷನ್ ಸೂಪರಿಂಟೆಂಡೆಂಟ್ ಮಿ|| ಪಿ. ಪುಟ್ಟಣ್ಣಶೆಟ್ಟರವರಿಗೆ, ೧೮೯೩ ನೇ ಇಸವಿ ಜೂನ್ ೫ ನೇ ಮಕರ್ರಂ, ೨೧೫೨೮—೧ ೫೦೮೦ ನೇ ನಂಬರಿನ ಇಸ್ತಿಹಾರ್‌ನಾಮೆಯ ಮೂಲಕ ಕಳೆದ ಜೂನ್ ಗುರ್ರೆ ತಾರೀಖ್ ಲಾಗಾಯಿತು ಕೊಡಲ್ಪಟ್ಟಿದ್ದ ೨೪ ತಿಂಗಳ ಪ್ರಿವಿಲೇಜ್ ರಜಾವಿನಿಂದ ಸದರೀಯವರು ವಾಪಸ್ ಬಂದು ೧೮೯೩ ನೇ ಇಸವಿ ಆಗಸ್ಟ್ ೧೮ ನೇ ಮಕರ್ರಮಿನ ಪೂರ್ವಾಹ್ನದಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ಲವರ ಆಫೀಸಿನಲ್ಲಿ ತಮ್ಮ ಕೆಲಸಗಳ ಚಾರ್ಜನ್ನು ತೆಗೆದುಕೊಂಡದರಿಂದ ಸದರೀ ರಜಾ ಪೈಕಿ ಅವರು ಉಪಯೋಗಿಸಿಕೊಳ್ಳದಿರುವ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿರುತ್ತದೆ

ನಂ. ೨೪೨೯-೧. ೯. ೨೬೪-೯೩ -ಬೆಂಗಳೂರ್ ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂಟ್ ಮಿ|| ಡಿ. ಬೇಕರ್ ಜೇ ಅಲ್ಲವರು ಕಳೆದ ಜೂನ್ ಗುರ್ರೆ ತಾರೀಖ್ ಲಾಗಾಯಿತು ರಜಾಮೇಲಿದ್ದು, ೧೮೯೩ ನೇ ಇಸವಿ ಆಗಸ್ಟ್ ೬ ನೇ ತಾರೀಖಿನ ಪೂರ್ವಾಹ್ನದಲ್ಲಿ ಕೆಲಸದ ಮೇಲೆ ವಾಪಸಿ ಬಂದು ಬೆಂಗಳೂರ್ ಡಿಸ್ಟ್ರಿಕ್ಟ್ ಮತ್ತು ಸಿಟಿ ಪೊಲೀಸ್ ಚಾರ್ಜನ್ನು ಮಿ|| ಜೆ ಡಬ್ಲ್ಯು ನೈಟ್ ಯವರಿಂದ ತೆಗೆದುಕೊಂಡಿರುತ್ತಾರೆ.

ನಂ|| ೨೦೬೦—೧. ೮೬೪.— ತಾ|| ೨೩ ನೇ ಆಗಸ್ಟ್ ೧೮೯೩.—ಈಗ ರಜಾಮೇಲಿರುವ ಟ್ರೈನಿಂಗ್ ಅಸಿಸ್ಟೆಂಟ್ ಕಮಿಷನರ್ ಮತ್ತು ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮಿ|| ಕುಪ್ಪುಸ್ವಾಮಿ ನಾಯುಡುರವರು ತಾವು ಕೆಲಸಕ್ಕೆ ಹಾಜರಾಗುವಂತೆ ರಿಪೋರ್ಟ್ ಮಾಡಿರುವುದರಿಂದ ರಜಾ ತೆಗೆದುಕೊಂಡಿರುವ ಮಿ|| ವೆಂಕಟನಾರಾಯಣಯ್ಯರವರ ಗೈರುಹಾಜರೀ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವವರೆಗೆ ಹುಂಗಾಮಿ ತರೀಕೆ ಬೆಂಗಳೂರ್ ಸಿಟಿ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕೆ ಕೆಲಸ ನೋಡುತ್ತಲಿರುವಂತೆ ನೇಮಿಸಲ್ಪಟ್ಟಿರುತ್ತಾರೆ. ಮಿ|| ಕುಪ್ಪುಸ್ವಾಮಿ ನಾಯುಡುರವರಿಗೆ ಕೊಡಲ್ಪಟ್ಟ ರಜಾ ಪೈಕಿ ಅವರಿಂದ ಉಪಯೋಗಿಸಿಕೊಳ್ಳಲ್ಪಡದ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿರುತ್ತದೆ.

### ರೆವಿನ್ಯೂ ಸರ್ವೆ.

ನಂ ೧೦೩ ತಾ|| ೧೨ ನೇ ಆಗಸ್ಟ್ ೧೮೯೩ —ಬರುವ ತಿಂಗಳ ೫ನೇ ತಾರೀಖಿನಲ್ಲಿ ಬೆಂಗಳೂರ್ ಡಿಸ್ಟ್ರಿಕ್ಟ್ ಚನ್ನಪಟ್ಟಣ ತಾಲ್ಲೂಕಿನ ರೆವಿನ್ಯೂ ಸರ್ವೇ ಸೆಟಲ್‌ಮೆಂಟ್ ಆರಂಭಿಸಲ್ಪಡುವದು.

### ಮಿಲಿಟರಿ ಇಲಾಖೆ.

ತಾರೀಖ್ ೨೧ ನೇ ಆಗಸ್ಟ್, ೧೮೯೩.—ಸರ್ಕಾರ್ ನೌಕರಿಯ ಪ್ರಯೋಜನಾರ್ಥ ೧೮೯೩ ನೇ ಇಸವಿ ಸೆಪ್ಟಂಬರ್ ಗುರ್ರೆ ಲಾಗಾಯಿತು ಇದರಡಿ ತಿಳಿಸಲ್ಪಡುವ ಆಡ್ಜುಟೆಂಟುಗಳ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತ್ತವೆ.

ಮಿರ್ಜಾ ಮಹಮದ್ ಯಾದವು, ಶಿವಮೊಗ್ಗೆ ೧ ನೇ ಪಟಾಳದಿಂದ ಬೆಂಗಳೂರ್ ೨ ನೇ ಪಟಾಳಕ್ಕೆ.

ಸ್ವಾಮಿಗೌಡ ಯಾದವು, ಬೆಂಗಳೂರ್ ೨ ನೇ ಪಟಾಳದಿಂದ ಮೈಸೂರ್ ೩ ನೇ ಪಟಾಳಕ್ಕೆ.

ನವಾಬ್ ಯಾದವು, ಮೈಸೂರ್ ೩ ನೇ ಪಟಾಳದಿಂದ ಶಿವಮೊಗ್ಗೆ ೧ ನೇ ಪಟಾಳಕ್ಕೆ.

## BANGALORE CITY MUNICIPALITY.

### ಬೆಂಗಳೂರು ಸಿಟಿ ಮ್ಯೂನಿಸಿಪಾಲಿಟಿ.

ಸನ್ 1893 ನೇ ಇಸವಿ ಆಗಸ್ಟು 28 ನೇ ತಾರೀಖ್ ಸೋಮವಾರ ಬೆಳಿಗ್ಗೆ 8 ಘಂಟೆಗೆ, ಬೆಂಗಳೂರು ಸಿಟಿ ಮ್ಯೂನಿಸಿಪಲ್ ಸಂಘದವರು ಕೋಟೆಯೊಳಗಿರುವ ತಮ್ಮ ಆಫೀಸಿನಲ್ಲಿ ಸಾಮಾನ್ಯ ಸಭೆ ಸೇರುವರು.

ಇದರಡಿ ತಿಳಿಸಲ್ಪಡುವ ವಿಷಯಗಳು ಸ್ಟಾಂಡಿಂಗ್ ಕಮಿಟಿಯ ನಿರ್ಣಯಗಳೊಡನೆ ಸಭೆಯ ಮುಂದೆ ಇಡಲ್ಪಡುವುವು:—

1. ಸನ್ 1893 ನೇ ಇಸವಿ ಜೂನ್ ತಿಂಗಳ ಬಾಬತು ಜಾಲತಿ ನಗದು ಜಮಾಖರ್ಚಿನ ಲೆಕ್ಕ, ಮರಣಲೆಕ್ಕ, ಮನೆಗೆ ಹೋಗಿ ಚಿಕಿತ್ಸೆ ಮಾಡುವ ಮೆಡಿಕಲ್ ಆಫೀಸರನ ಲೆಕ್ಕ, ತಗಾದೆ, ವಸೂಲಿ, ಮತ್ತು ಬಾಕಿ ಪಟ್ಟಿ, ಕಾಮಗಾರಿಗಳ ಅಭಿವೃದ್ಧಿಯನ್ನು ಕುರಿತ ರಿಪೋರ್ಟು, ಮತ್ತು ಶ್ರೀನಿವಾಸ ಮಂದಿರದ ಲೈಬ್ರರಿಗೆ ಹೋಗಿದ್ದ ಜನರನ್ನು ಕುರಿತ ಯಾದಿ.

2. ಮೆ|| ಫರ್ಗ್ಯೂಸನ್ ಮತ್ತು ಸಂಜೀವಯ್ಯ, ಇವರಿಬ್ಬರು ಸಿಟಿ ಇಂಪ್ರೂವ್‌ಮೆಂಟ್ ಕಮಿಟಿಯವರಲ್ಲಿ ಕೆಲಸಮಾಡುತ್ತಿರುವ ಕಾಲದೊಳು, ಹಂಗಾಮಿ ತಾಲ್ ಡ್ರಾಫ್ಟ್ಸ್‌ಮನನೊಬ್ಬನನ್ನು ನಾಕರಿಯಲ್ಲಿಟ್ಟುಕೊಳ್ಳಬೇಕಾದ ವಿಷಯದಲ್ಲಿ, ಮ್ಯೂನಿಸಿಪಲ್ ಎಗ್ಜಿಕ್ಯೂಟಿವ್ ಇಂಜನಿಯರವರು, 1893ನೇ ಇಸವಿ ಜುಲೈ 4 ನೇ ತಾರೀಖಿನಲ್ಲಿ ಬರೆದ 1061 ನೇ ನಂಬರ ಯಾದಿ.

3. 2 ನೇ ನಂಬರ್ ಬೈಲಾ (ಉಪನಿಬಂಧನೆ) ಬಲಿಷ್ಟವಾದದ್ದೆ ಅಲ್ಲವೆ ಎಂಬ ವಿಷಯವನ್ನು ಕುರಿತ ಜಿಜ್ಞಾಸೆ.

4 ಧರ್ಮಾಂಬುಧಿ ಕೆರೆಯೊಳಗೆ ಮಾರ್ಕೆಟ್ ಕಟ್ಟುವುದಕ್ಕಾಗಿ ಅಗೆಯಲ್ಪಟ್ಟ ಹೊಸ ಕಾಲುವೆಯ ಕಕ್ಷದಲ್ಲಿ ಒಂದು ದೊಡ್ಡ ಕಟ್ಟೆಯನ್ನು ಹಾಕಿಸತಕ್ಕ ಬಗ್ಗೆ ತಯಾರು ಮಾಡಲ್ಪಟ್ಟ 898 ರೂಪಾಯಿಗಳ ಅಂದಾಜ್ ಪಟ್ಟಿ.

5. ಹೊಸ ಬಿಗರ ಪೇಟೆಯಲ್ಲಿರುವ ಕೈಮ್ಯಾಸಿಂಗ್ ಯಜಮಾನನು ಆತನಿಗೆ ಕೊಡಲ್ಪಟ್ಟ ಲೈಸೆನ್ಸಿಗೆ ವಿರೋಧವಾಗಿ, ಹುಕುಮಿಲ್ಲದೆ ಒಂದು ಬಾಗಿಲನ್ನು ಇಟ್ಟ ವಿಷಯಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳು.

6. ಬಾಡಿಗೆ ಗಾಡಿಗಳ ಇನ್ಸ್‌ಪೆಕ್ಟರವರು ಜೂನ್ 19 ನೇ ತಾರೀಖಿನಲ್ಲಿ ಬರೆದ 148 ನೇ ನಂಬರ ಯಾದಿ, ಮತ್ತು, ಪ್ರೊಸಸ್ ಬಗ್ಗೆ ಅದರ ಮೇಲೆ ಪ್ರೆಸಿಡೆಂಟರವರು ಬರೆದ ಷರಾ.

7. ದುರ್ಬೀಮಿಯರ್ ಕಾಲೋನಿ ಜನರಿಗೆ ಮಾಹೆಯಾನಾ 7 ರೂಪಾಯಿಗಳ ತಲಬನ್ನು ಒಬ್ಬ ಆಡಿಗೆಯವನನ್ನು ಇಟ್ಟುಕೊಳ್ಳಬೇಕಾದ ವಿಷಯದಲ್ಲಿ ಪ್ರಸವಾಸ್ಪತ್ರಿ ಆಸ್ಪತ್ರೆಯಲ್ಲಿರುವ ಸೀನಿಯರ್ ಸರ್ಜನ್‌ರವರು 1893 ನೇ ಇಸವಿ ಜುಲೈ ಗುರ್ರೆ ತಾರೀಖಿನಲ್ಲಿ ಬರೆದ 259 ನೇ ನಂಬರ್ ಲೆಟರ್.

8. ಕಂದಾಯಗಳನ್ನು ವಿಮರ್ಶೆಮಾಡುವ ವಿಷಯದಲ್ಲಿ ಅಂಗಡಿಮಾಲಿಗಳನ್ನು ಇಟ್ಟುಕೊಳ್ಳಬೇಕಾದ್ದು.

9. ಕೋಟೆಯ ದೊಡ್ಡ ಚರಂಡಿಯ ವಿಷಯದಲ್ಲಿ ಮ್ಯೂನಿಸಿಪಲ್ ಎಗ್ಜಿಕ್ಯೂಟಿವ್ ಇಂಜನಿಯರವರು ಸಮಾಧಾನ ಕೊಟ್ಟು ಬರೆದ 1893 ನೇ ಇಸವಿ ಜುಲೈ 10 ನೇ ತಾರೀಖಿನ ಯಾದಿ.

10 ಸನ್ 1891—92 ನೇ ಇಸವಿಗೆ, ಬೆಂಗಳೂರು ಸಿಟಿ ಮ್ಯೂನಿಸಿಪಾಲಿಟಿಯ ಸ್ಟೇಟ್‌ಮೆಂಟ್ ಬಗ್ಗೆ ಯಾ ಸ್ಟೇಟ್‌ಮೆಂಟಿನ ಮೇಲೆ ಹುಕುಂ ಕೊಟ್ಟು ಗವರ್ನಮೆಂಟಿನವರು ಕಳುಹಿಸಿದ 1893 ನೇ ಇಸವಿ ಜೂನ್ ೧೩ ನೇ ತಾರೀಖಿನ 20807—8—L. F. 273—92 ನೇ ನಂಬರ್ ಪ್ರೊಸೀಡಿಂಗ್ಸ್.

11. ಇದರಡಿ ತಿಳಿಸಲ್ಪಡುವ ಅಂದಾಜ್ ಪಟ್ಟಿಗಳನ್ನು ಮಂಜೂರಾತಿಯ ಬಗ್ಗೆ ಕಳುಹಿಸಿ, ಮ್ಯೂನಿಸಿಪಲ್ ಎಗ್ಜಿಕ್ಯೂಟಿವ್ ಇಂಜನಿಯರವರು ಬರೆದ ಜುಲೈ 13 ನೇ ತಾರೀಖಿನ 33 ನೇ ನಂಬರ್ ಯಾದಿ.

### ಸಿಟಿ ರಸ್ತೆಗಳು ಮತ್ತು ಇತರ ಕಾಮಗಾರಿಗಳು.

#### ರಸ್ತೆಗಳು.

| | | | | ರೂ. |
|---|---|---|---|---|
| ಮಾರ್ಕೆಟ್ ರಸ್ತೆಗೆ ಕೆಂಪು ಮರಳು ಕಲ್ಲು ಹಾಕುವದಕ್ಕೆ ಅಂದಾಜ್ | | | .. | 568 |
| ಧರ್ಮಾಂಬುಧಿ ಕೆರೆ ಕಟ್ಟೆ ರಸ್ತೆಗೆ | „ | „ | .... | 851 |
| ಜಯಿಲ್ ರಸ್ತೆಗೆ | „ | „ | ... | 851 |
| ಹಳೆ ಬೀಗ್ಸ್ ರಸ್ತೆಗೆ | „ | „ | .. | 851 |
| ತಾಲ್ಲೂಕ್ ಕಚೇರಿ ರಸ್ತೆಗೆ ಕಲ್ಲುಗಟ್ಟೆ ಹಾಕುವದಕ್ಕೆ | „ | | ... | 542 |
| ನಗರ್ತಪೇಟೆ ರಸ್ತೆಗೆ | „ | „ | ... | 542 |
| ಕೋಟೆಯ ದೊಡ್ಡ ರಸ್ತೆಗೆ | „ | „ | ... | 1,304 |
| ಸಿಟ್ಟು ರಸ್ತೆಗೆ | „ | „ | | 816 |
| ಕಬ್ಬನ್‌ಪೇಟೆ ಬೀದಿಗೆ ಜಲ್ಲಿ ಹಾಕುವದಕ್ಕೆ | | „ | ... | 933 |
| ಕೋಟೆ ರಾಂಪಾರ್ಟ್ ರಸ್ತೆಗೆ ಗ್ರಾವೆಲ್ ಹಾಕುವದಕ್ಕೆ | | „ | ... | 615 |
| | | | ಜುಮ್ಲಾ.. | 7,873 |

#### ಮೋಹರಿಗಳ ರಿಪೇರಿ.

| | |
|---|---|
| ಸನ್ 1893—94ನೇ ಇಸವಿಗೆ, ಬಾಕಿ ಹಾತಗಳು ಸೇರಿ ಟೌನ್ ಮತ್ತು ಆಸ್‌ಪಾಸ್ ಗ್ರಾಮಗಳ ರಸ್ತೆಗಳ ರಿಪೇರಿಗೆ ... ... | 2,100 |

#### ಸಾಧಾರಣ ರಿಪೇರಿಗಳು.

| | |
|---|---|
| ಸನ್ 1893—94ನೇ ಇಸವಿಯಲ್ಲಿ ಸಿಟಿ ಮ್ಯೂನಿಸಿಪಾಲಿಟಿಯಲ್ಲಿ ಟೌನ್ ಮತ್ತು ಆಸ್‌ಪಾಸ್ ಗ್ರಾಮಗಳಲ್ಲಿನ ರಸ್ತೆಗಳ ಸಾಮಾನ್ಯ ರಿಪೇರಿ ... ... | 7,000 |
| ಜುಮ್ಲಾ... | 16,973 |

### ಆಸ್‌ಪಾಸ್ ಗ್ರಾಮಗಳು ಮತ್ತು ಡಿಸ್ಟ್ರಿಕ್ಟ್‌ಫಂಡ್ ರಸ್ತೆಗಳು.

#### ಕೆಂಪು ಮರಳುಕಲ್ಲು.

| | | | | |
|---|---|---|---|---|
| ಅವಿನ್ಯೂ ರಸ್ತೆಗೆ ಕೆಂಪು ಮರಳು ಕಲ್ಲು ಹಾಕುವದಕ್ಕೆ ಅಂದಾಜ್ | | | ... | 1,947 |
| ಹೊಸಕೋಟೆ ರಸ್ತೆಗೆ | ಡಿಟೊ | ಡಿಟೊ | ... | 946 |
| ಪೋಸ್ಟ್‌ಆಫೀಸ್ ರಸ್ತೆಗೆ | ಡಿಟೊ | ಡಿಟೊ | ... | 541 |

#### ಕಲ್ಲುಬಂಡೆ ಜಲ್ಲಿ.

| | | | | |
|---|---|---|---|---|
| ಕೋಟೆ ಬಾಗಿಲಿಂದ ಹೊಸೂರು ರಸ್ತೆಗೆ ಕಲ್ಲು ಜಲ್ಲಿ ಹಾಕುವದಕ್ಕೆ ಅಂದಾಜ್ | | | ... | 1,294 |
| ಮೈಸೂರು ರಸ್ತೆಗೆ | ಡಿಟೊ | ಡಿಟೊ | ... | 2,587 |
| ಹೊಸಕೋಟೆ ರಸ್ತೆಗೆ | ಡಿಟೊ | ಡಿಟೊ | ... | 1,696 |
| ಬಳ್ಳಾರಿ ರಸ್ತೆಗೆ | ಡಿಟೊ | ಡಿಟೊ | ... | 1,034 |
| ಮಿಲ್ಲರ್ ರಸ್ತೆಗೆ | ಡಿಟೊ | ಡಿಟೊ | ... | 618 |
| ಸುಬೇದಾರ್ ಛತ್ರದ ರಸ್ತೆಗೆ | ಡಿಟೊ | ಡಿಟೊ | ... | 2,063 |
| ಪ್ಲೇಗ್‌ಕೋರ್ಸ್ ರಸ್ತೆಗೆ | ಡಿಟೊ | ಡಿಟೊ | ... | 1,944 |

## ಜಂಗ್ಲೀ ಕಲ್ಲು.

### ಜಂಗ್ಲೀ ಕಲ್ಲು ಹಾಕುವದಕ್ಕೆ ಅಂದಾಜ್.

| | | | |
|---|---|---|---|
| ಮೈಸೂರು ರಸ್ತೆಯಿಂದ ರೇಸ್‌ಕೋರ್ಸ್‌ಗೆ | ... | ... | 782 |
| ಶೇಷಾದ್ರಿಬಾಗ್ ರಸ್ತೆಯಿಂದ ರೇಸ್‌ಕೋರ್ಸ್‌ಗೆ | ... | ... | 718 |
| | | ಜುಮ್ಲಾ... | 16,119 |

## ಸರ್ 1892—23ನೇ ಸಾಲ್‌ನಲ್ಲಿ ಪೂರ್ತಿಯಾಗದ ಕಾಮಗಾರಿಗಳು.

### ರಸ್ತೆಗಳು.

| | | | ರೂ. |
|---|---|---|---|
| ಅವಿನ್ಯೂ ರಸ್ತೆ | ಫರ್ಲಾಂಗ್ 4 6/2 | ... | 343 |
| ಚಿಕ್ಕಪೇಟೆ ಕಬ್ಬೇರಿ ರಸ್ತೆ | „ 7 ನೇ | .. | 248 |
| ಕನ್ನಿಂಗ್ಹ್ಯಾಂ ರಸ್ತೆ | „ 4 ನೇ | .. | 86 |
| ಸುಬೇದಾರ್ ಛತ್ರದ ರಸ್ತೆ | „ 13 ನೇ | ... | 186 |
| ತುಮಕೂರ್ ರಸ್ತೆ | „ 8 | .. | 62 |
| ಬಳ್ಳಾರಿ ರಸ್ತೆ | „ 8 ಮತ್ತು 9 | ... | 175 |
| ಕಾರ್ಖಾನಹಳ್ಳಿ ರಸ್ತೆ | „ 5,6,7,8 | . | 819 |
| ಸೋಮೂರ್‌ಪೇಟೆ ರಸ್ತೆ | „ 2 ಮತ್ತು 3 | ... | 108 |
| ಮಾಗಡಿ ರಸ್ತೆ | „ 3 ಮತ್ತು 4 | .. | 308 |
| ಅರಳೇಪೇಟೆ ರಸ್ತೆ | „ 3 ಮತ್ತು 4 | . | 381 |
| ನೃಪತುಂಗ ರಸ್ತೆ | „ 8 ಮತ್ತು 9 | ... | 450 |
| ಸುಲ್ತಾನ್‌ಪೇಟೆ ರಸ್ತೆ ಮತ್ತು ತರಗುಪೇಟೆ | „ 1,2,3 | ... | 613 |
| ರೇಸ್‌ಕೋರ್ಸ್ ರಸ್ತೆಯಿಂದ ಮೈಸೂರು ರಸ್ತೆ | „ 15 ಮತ್ತು 20 | .. | 127 |
| ಹೊಸಕೋಟೆ ರಸ್ತೆ | „ 8/2 | ... | 40 |
| ಬಳೇಪೇಟೆ ರಸ್ತೆ | „ 1 ಮತ್ತು 2 | .. | 271 |
| ರಾಣೀಸಿಂಗ್ ಪೇಟೆ ರಸ್ತೆ | „ 1 ಮತ್ತು 2 | .. | 281 |
| ಅವಿನ್ಯೂ ಕ್ವಾರ್ಟರ್ಸ್ ರಸ್ತೆ | „ 7,17,18 | ... | 313 |
| ಸ್ಟೇಷನ್ ರಸ್ತೆ | „ ½,1,ಮತ್ತು8 | ... | 250 |
| | | ಜುಮ್ಲಾ... | 5,133 |

### ಕಟ್ಟಡಗಳು.

| | | | |
|---|---|---|---|
| ಮ್ಯುನಿಸಿಪಲ್ ಆಫೀಸಿನ ದುರಸ್ತಿಗೆ | . | . | 497 |
| ಮಾರ್ಕೆಟ್ ದುರಸ್ತಿಗೆ | .. | .. | 46 |
| ಖಿರೀದಿ ಅಂಗಡಿ ದುರಸ್ತಿಗೆ | ... | ... | 87 |
| ಗವೀಪುರದಲ್ಲಿ ಶೌಚಾಲಯ ಕಟ್ಟುವದಕ್ಕೆ | .. | ... | 19 |
| ಹಲಸೂರ್ ಗೇಟ್‌ಬಳಿ ಬಾಸ್ಕರ್ ದೊಡ್ಡಿ ಕಟ್ಟುವದಕ್ಕೆ... | | . | 219 |
| ಉಪ್ಪಾರ ಪೇಟೆಯಲ್ಲಿ ಶೌಚಾಲಯ ಕಟ್ಟುವದಕ್ಕೆ | .. | ... | 93 |
| ಒಂದನೇ ಮಿಷನ್ ಶಾಲೆಗೆ ಸೇರಿದ ಶೌಚಾಲಯವನ್ನು ಕೆಡವಿ ಹಲಿಗೆ ಕಲ್ಲಿನಿಂದ ಶೌಚಾಲಯ ಕಟ್ಟುವದಕ್ಕೆ | | ... | 25 |
| | | ಜುಮ್ಲಾ.. | 991 |

### ದುರಸ್ತು ಮತ್ತು ಇತರ ಕಾಮಗಾರಿಗಳು.

| | | |
|---|---|---|
| ಬಳ್ಳಾರಿ ರಸ್ತೆ ಸಂಧಿಸುವ ಸ್ಥಳದಲ್ಲಿ ಅರಮನೆ ಅಡ್ಡ ರಸ್ತೆಯನ್ನು ಅಗಲ ಮಾಡುವದಕ್ಕೆ | ... | 38 |

### ನೀರಾವರಿ ಕಾಮಗಾರಿಗಳು.

| | | | |
|---|---|---|---|
| ಕಾರಂಜಿ ಕೆರೆಯೊಳಗೆ ಕುಂಟೆ ಅಗೆಯುವದಕ್ಕೆ | .. | .. | 323 |
| ಗುಂಬಜ್ ಬಳಿ ಇರುವ ಬಾವಿಗೆ ಕ್ಲೈವಿಡಿ ಗೋಡೆ ಕಟ್ಟುವದಕ್ಕೆ | | .. | 30 |
| ಉಪ್ಪಾರಹಳ್ಳಿ ಸ್ಯಾಂಕೀಸ್ ಬಾವಿಗೆ ಕ್ಲೈವಿಡಿ ಗೋಡೆ ಕಟ್ಟುವದಕ್ಕೆ | | ... | 157 |
| ನೆಟ್ಟಕಲ್ಲಪ್ಪನವರ ಛತ್ರದಲ್ಲಿ ಒಂದು ಭಾವಿ ತೋಡುವದಕ್ಕೆ | | .. | 308 |
| ತಾರಾಮಂಡಲದ ಭಾವಿಗೆ | ... | .. | 241 |
| ಪುಟ್ಟಣ್ಣನ ಭಾವಿಗೆ | .. | . | 548 |
| ಧರ್ಮಾಂಬುಧಿ ಕೆರೆಯ ಅಚ್ಚುಕಟ್ಟಿಗೆ | .. | .. | 685 |
| ಕಬ್ಬನ್‌ಪೇಟೆ ಬಾವಿಯನ್ನು ಆಳಮಾಡುವದಕ್ಕೆ | .. | ... | 67 |
| | | ಜುಮ್ಲಾ.. | 2,161 |
| | | ಒಟ್ಟು ಜುಮ್ಲಾ .. | 8,323 |

12. ಸುಲ್ತಾನುಲಅಕ್‌ಬಾರ್ ಎಂಬ ಪತ್ರಿಕೆಯ ಪ್ರೊಪ್ರೈಟರು ಮ್ಯುನಿಸಿಪಲ್ ನೋಟೀಸುಗಳನ್ನು ತಿಂಗಳೊಂದಕ್ಕೆ (10) ಹತ್ತು ರೂಪಾಯಿ ಬಾಡಿಗೆಯಲ್ಲಿ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸುವದಕ್ಕೆ ಕೊಡಬೇಕೆಂಬುದಾಗಿ ಬರೆದುಕೊಂಡ 93ನೇ ಇಸವಿ ಮೇ 22 ನೇ ತಾರೀಖಿನ 142 ನೇ ನಂಬರ್ ಲೆಟರು.

13. ಸಂಪಂಗಿ ಕೆರೆಯಲ್ಲಿರುವ ಕುಂಟೆಯ ಪಕ್ಕಗಳಿಗೆ ಕಲ್ಲು ಕಟ್ಟುವದಕ್ಕೆ ಅಂದಾಜ್.

14. ಸೈನ ಸರಬರಾಯಿ ವಿಷಯದಲ್ಲಿ ಆದ ಖರ್ಚಿನ ತಖ್ತೆಯನ್ನು ತೋರಿಸುವ ಯಾದಿ.

15. ಇದರ ಕೆಳಗೆ ಬರೆಯಲ್ಪಡುವ ಶಾಲೆಗಳ ನಿರ್ವಹಣೆ ಕಾರ್ಯವನ್ನು ಗವರ್ನಮೆಂಟಿಗೆ ವರ್ಗ ಮಾಡುವ ವಿಷಯಕ್ಕೆ ಸಂಬಂಧಪಟ್ಟ ಯಾದಿ ಮತ್ತು ಕಾಗದಗಳು.

(1) ಮ್ಯುನಿಸಿಪಲ್ ಇಂಗ್ಲಿಷ್ ಸ್ಕೂಲ್.

(2) ಹಲಸೂರ ಕನ್ನಡ ಸ್ಕೂಲ್ ಮತ್ತು ಇಂಗ್ಲಿಷ್ ಸ್ಕೂಲನ್ನು ದುರಸ್ತು ಮಾಡುವದಕ್ಕೆ ಅಂದಾಜುಪಟ್ಟಿ

16. ಮಿಸ್ಸಿ ಕಾಫಿ ಕಂಪೆನಿಯ ಮ್ಯಾನೇಜರು ತಮ್ಮ ಕಾರ್ಖಾನೆಗೆ ಈಶಾನ್ಯ ದಿಕ್ಕಿನಲ್ಲಿರುವ ಖಾಲೀ ಜಮೀನನ್ನು ಖಾವಿ ತೆಗೆಯುವ ಉದ್ದೇಶ್ಯ ತಮಗೆ ಕೊಡಿಸಿಕೊಡಬೇಕೆಂದು ಬರೆದುಕೊಂಡ ಸರ್ 1893 ನೇ ಇಸವಿ ಏಪ್ರಲ್ 13 ನೇ ತಾರೀಖಿನ ಲೆಟರು.

17. ಅಂಕಣ 1ಕ್ಕೆ ರೂ. 1-6-0 ಮೇರೆಗೆ ದೇವೀ ಪಾಕತಕ್ಕ ಎಲ್ಲ ಜಿಲ್ಲೆ ಸಿಪಾಯಿಗೆ ಹೊಸ ತಿಗಳರ ಪೇಟೆಯಲ್ಲಿ ಮನೆ ಕಟ್ಟಿಕೊಳ್ಳುವದಕ್ಕಾಗಿ ಕೊಟ್ಟ ಸ್ಥಳದ ವಿಷಯವಾಗಿ ಹುಕುಂ ಕೊಟ್ಟ 92 ನೇ ಇಸವಿ ಜೂನ್ 2ನೇ ತಾರೀಖ್ 20347—130-92 ನೇ ನಂಬರಿನ ಗವರ್ನಮೆಂಟ್ ಪ್ರೊಸೀಡಿಂಗ್ಸ್.

18. 1893 ನೇ ಇಸವಿ ಏಪ್ರಿಲ್ ಮಾಹೆಯ ಮ್ಯುನಿಸಿಪಲ್ ಲೆಕ್ಕಗಳನ್ನು ತನಿಖೆಮಾಡಿದ ಅಧಿಕಾರಿಯವರ ರಿಪೋರ್ಟ್.

19. 93ನೇ ಇಸವಿ ಜೂನ್ 5ನೇ ತಾರೀಖಿನ 20560—ಎಲ್. ಎಫ್. 432-92ನೇ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸ್.

20. ಅರಮನೆಯ ಪೂರ್ವದ ಬಾಗಿಲ ಬಳಿ ಇರುವ ಭೂಮಿಯನ್ನು ವಹಿಸಿಕೊಳ್ಳುವ ವಿಷಯದಲ್ಲಿ, 1892ನೇ ಇಸವಿ ಜುಲೈ 18 ನೇ ತಾರೀಖಿನಲ್ಲಿ ವೈಸ್ ಪ್ರೆಸಿಡೆಂಟರು ಬರೆದ ಯಾದಿ.

21. ಕವಡಯ್ಯ ಯೆಂಬಾತನು ದೊಡ್ಡ ಮೋರಿಯ ಮೇಲೆ ಬಗರ್ ಹುಕುಂ ಒಂದು ಜಗಲಿಯನ್ನು ಕಟ್ಟಿದ ವಿಷಯದಲ್ಲಿ ಸರ್ 1893 ನೇ ಇಸವಿ ಜೂನ್ 22 ನೇ ತಾರೀಖಿನೊಳು ವೈಸ್ ಪ್ರೆಸಿಡೆಂಟರವರು ಬರೆದ ಯಾದಿ.

22. ಮಲ್ಲಯ್ಯ ಮತ್ತು ನಂಜುಂಡ ಎಂಬುವರು, ಅನರಮೇಲೆ ಕಟ್ಟಿಕೊಳ್ಳುವವರೆಗೂ ತಮಗೆ ಅವಕಾಶ ಕೊಡುವ ಷರತ್ತಿನ ಮೇಲೆ ಕುರುಬರ ಪೇಟೆಯಲ್ಲಿರುವ ಕಲ್ಲುಗಳನ್ನು ತಮ್ಮ ಖರ್ಚಿನಲ್ಲಿ ತೆಗೆಯಿಸಿ ಹಾಕುವದಾಗಿ 1893 ನೇ ಇಸವಿ ಏಪ್ರಲ್ 17 ನೇ ತಾರೀಖಿನಲ್ಲಿ ಬರೆದುಕೊಂಡ ಅರ್ಜಿ.

23. ಮೆಸ್ಸರ್ಸ್ ಬಿನ್ನಿ ಕಂಪೆನಿಯವರು ಜಲಯಂತ್ರವನ್ನು ರಿಪೇರಿ ಮಾಡಿದ ಬಗ್ಗೆ ಅವರ ಬಿಲ್ಲುಗಳಿಗೆ ಹಣ ಕೊಡಬೇಕಾದ ವಿಷಯದಲ್ಲಿ ವೈಸ್ ಪ್ರೆಸಿಡೆಂಟರವರು ಬರೆದ ಯಾದಿ.

24. ಮ್ಯುನಿಸಿಪಲ್ ತೋಟದಲ್ಲಿ ನಡೆಯುತಲಿದ್ದ ನೇಟಿವ್ ಬೀಗವನ್ನು ನಿಲ್ಲಿಸತಕ್ಕದ್ದೆಂದು ಜೋಡಿದಾರರು ಮಾಡಿದ ನಿರ್ಣಯದ ಮೇಲೆ ಬೆಂಗಳೂರು ನಿವಾಸಿಗಳು ಬರೆದುಕೊಂಡ ಅರ್ಜಿಯನ್ನು ಕಳುಹಿಸಿದ ಬಗ್ಗೆ ಕಳುಹಿಸಿ, 1893 ನೇ ಇಸವಿ ಜುಲೈ ಗುರ್ರೇ ತಾರೀಖಿನಲ್ಲಿ ಚೀಫ್ ಸೆಕ್ರೆಟರಿಯವರು ಬರೆದ 12—273—92 ನೇ ನಂಬರ್ ಯಾದಿ.

25. ಜಾಡಿಗೆ ಹಾಕಿಸಲ್ಪಟ್ಟಿರುವ ವಿವರ್ಸ್ ಕೆಲಸಕ್ಕೆ ಕಮಿಷನರುಗಳು ಸಹಾಯಕರಾಗಿರಬೇಕಾದ ವಿಷಯದಲ್ಲಿ ವೈಸ್ ಪ್ರೆಸಿಡೆಂಟರವರು 1893 ನೇ ಇಸವಿ ಜುಲೈ 6 ನೇ ತಾರೀಖಿನಲ್ಲಿ ಬರೆದ ಯಾದಿ.

26. ಸರ್ 1893 ನೇ ಇಸವಿ ಜೂನ್ 3 ನೇ ತಾರೀಖಿನಲ್ಲಿ ಮೈಸೂರು ವೈಸ್ ಪ್ರೆಸಿಡೆಂಟರವರು ಬರೆದ 951 ನೇ ನಂಬರ್ ಕಾಗದವನ್ನು ಹುಕುಂ ಬಗ್ಗೆ ಕಳುಹಿಸಿ ವೈಸ್ ಪ್ರೆಸಿಡೆಂಟರು 1893 ನೇ ಇಸವಿ ಜೂನ್ 28 ನೇ ತಾರೀಖಿನಲ್ಲಿ ಬರೆದ ಯಾದಿ.

27. ತಾರಾಮಂಡಲ ಬಾವಿಯನ್ನು ಆಳವಾಗಿ ಮಾಡತಕ್ಕ ಬಗ್ಗೆ 5 ಅಡಿಗಳ ಮಧ್ಯೆ ಆಳತೆಯುಳ್ಳ ಒಂದು ರಿಂಗನ್ನು ಕಟ್ಟಿಸುವದಕ್ಕಾಗಿ ತಯಾರುಮಾಡಿದ 727 ರೂಪಾಯಿಗಳ ಅಂದಾಜುಪಟ್ಟಿ.

28. ಪುಟ್ಟಣ್ಣನ ಬಾವಿಗೆ ಗಡಾರೀ ಬಗ್ಗೆ 1,300 ರೂಪಾಯಿಗಳ ಅಂದಾಜ್ ಪಟ್ಟಿ

29. ಬಿನ್ನಿಮಿಲ್ಲಿನ ಪೇಟೆಯಲ್ಲಿ ಒಂದು ಭಾವಿಯನ್ನು ಅಗೆಯಿಸುವದಕ್ಕೆ 635 ರೂಪಾಯಿಗಳ ಅಂದಾಜ್ ಪಟ್ಟಿ.

30. ಕಾಶೀವಿಶ್ವೇಶ್ವರ ದೇವಸ್ಥಾನದ ಬಳಿ ಮೆ|| ಶ್ರೀನಿವಾಸಯ್ಯಂಗಾರ್ಯರಿಗೆ ಅವರ ಮನೆಯ ಮುಂದುಗಡೆ ಭೂಮಿಯನ್ನು ಕೊಡುವ ವಿಷಯ

31. ಬೆಂಗಳೂರು ಸಿಟಿಯ ಮೋರಿಗಳ ವಿಷಯದಲ್ಲಿ ಒಂದು ಸ್ಕೀಂ ತಯಾರುಮಾಡಬೇಕಾದ್ದನ್ನು ಕುರಿತು 1893ನೇ ಇಸವಿ ಜುಲೈ 18 ನೇ ತಾರೀಖಿನಲ್ಲಿ ಪ್ರೆಸಿಡೆಂಟರು ಬರೆದ ಯಾದಿ.

32. ಮ್ಯಾನೇಜರ್ ಸ್ಟ್ರೀಗಳನ್ನು ಮ್ಯುನಿಸಿಪಲ್ ಎಕ್ಸೋಟೀರಿಯಸ್ ಮೋರಿಲ್ಲಾ ನಡೆಸಬೇಕೆಂದು ಶಿಫಾರಸು ಮಾಡಿ ವೈಸ್ ಪ್ರೆಸಿಡೆಂಟರವರು ಬರೆದ ಯಾದಿ.

### ಬಿಡಲ್ಪಟ್ಟ ವಿಷಯಗಳು.

1. ಮಾರ್ಕೆಟ್ ಬ್ರಾಂಚ್ ಡಿಸ್ಪೆನ್ಸರಿಗೆ ಸೇರಿದ ನೌಕರರ ಸಂಬಳವನ್ನು ಜಾಸ್ತೀ ಮಾಡಬೇಕೆಂದು ಸೂಚಿಸಿ, ಮೆ|| ಎಸ್ ರಾಮಯ್ಯನವರು ಸರ್ 1893 ನೇ ಇಸವಿ ಜೂನ್ 27 ನೇ ತಾರೀಖಿನಲ್ಲಿ ಬರೆದ 20 ನೇ ನಂಬರ್ ಲೆಟರ್.

2. ಸೆಮಿಟರಿಯಿಂದ ಮನೆ ಮತ್ತು ಮುಗ್ಗದ ದಿನಗಳಿಗೆಲ್ಲವನ್ನೂ ಮಾಡಬೇಕಾದುದನ್ನು ಮತ್ತು ಮ್ಯುನಿಸಿಪಲ್ ಸರ್ವೆಯರುಗಳಿಂದ ಹಾಜರಿ ತೆಗೆದುಕೊಳ್ಳುವದಕ್ಕೆ ವಿವರಿಸಿ ಮುಗ್ಗದ ತೆರಿಗೆಯನ್ನು ವಿಧಿಸಿ ನಡೆಸತಕ್ಕದ್ದೆಂದು ಮೆ|| ಎಸ್ ರಾಮಯ್ಯನವರು 1893 ನೇ ಇಸವಿ ಜೂನ್ 26 ನೇ ತಾರೀಖಿನಲ್ಲಿ ಬರೆದ 25 ನೇ ನಂಬರ್ ಲೆಟರ್.

3. ಇದರ ಕೆಳಗೆ ಬರೆಯಲ್ಪಡುವ ಅಂಶಗಳನ್ನು ಸೂಚಿಸಿ ಮ್ಯುನಿಸಿಪಲ್ ಕಮಿಷನರ್ ಮೆ|| ಸುಬ್ಬರಾಯರವರು ಸರ್ 1893 ನೇ ಇಸವಿ ಜೂನ್ ೧೦ ನೇ ತಾರೀಖಿನಲ್ಲಿ ಬರೆದ ಲೆಟರ್.

(a) ತಿಂಗಳೊಂದಕ್ಕೆ ಇಪ್ಪತ್ತು 12 ರೂಪಾಯಿಗಳ ಸಂಬಳದ ಸಹಾಯಕ ಕಾರ್ಯದರ್ಶಿ ಲೈಟಿಂಗ್ ಇನ್ಸ್‌ಪೆಕ್ಟರ್‌ಗಳ ನೇಮಕವನ್ನು ರದ್ದುಮಾಡಬೇಕೆಂದು ಗವರ್ನಮೆಂಟನ್ನು ಕೇಳಿಕೊಳ್ಳಬೇಕಾದ್ದು.

(b) ಕೌನ್ಸಿಲರ್ ಮೆಂಬರುಗಳು ಮೀಟಿಂಗಿಗೆ 1ಕಿಂತ ಹೆಚ್ಚು ನಿಯಮಿತವಾಗಿ ಹಾಜರಾಗತಕ್ಕದ್ದು.

(c) ಮ್ಯುನಿಸಿಪಲ್ ಕಮಿಷನರುಗಳು ಕೊಡುವ ಸಲಹೆಗಳನ್ನು ಡಿಪಾರ್ಟ್‌ಮೆಂಟುಗಳಲ್ಲಿ ಸ್ವೀಕರಿಸಬೇಕಾದ್ದು

(d) ಆರೋಗ್ಯಸ್ಥಿತಿ ಏರ್ಪಡಿಸುವ ಬಗ್ಗೆ ಬಿಟ್ಟ ಆಫೀಸರನ್ನು ನೇಮಕಮಾಡಬೇಕೆಂದು ಗವರ್ನಮೆಂಟಿಗೆ ಶಿಫಾರಸು ಮಾಡಬೇಕಾದ್ದು.

4. ಮ್ಯುನಿಸಿಪಲ್ ಕಮಿಷನರ್ ಮೆ|| ಬಿ ವೆಂಕಟರಾಮಯ್ಯನವರು ಇದರ ಕೆಳಗೆ ಬರೆಯಲ್ಪಡುವ ವಿಷಯಗಳನ್ನು ಸೂಚಿಸಿ 1893 ನೇ ಇಸವಿ ಜುಲೈ 4 ನೇ ತಾರೀಖಿನಲ್ಲಿ ಬರೆದ ಲೆಟರ್.—

(a) ಕಂದಾಯಗಳನ್ನು ವಿಮರ್ಶೆಮಾಡುವದಕ್ಕೆ ಹಾಗೂ ಮ್ಯುನಿಸಿಪಲ್ ಸರಹದ್ದಿನೊಳಗಿರುವ ಭೂಮಿಗಳು ಮನೆಗಳು, ಮತ್ತು ಕಟ್ಟಡಗಳು, ಇವುಗಳನ್ನು ಕ್ರಮವಾಗಿ ಸರ್ವೆ ಮಾಡಿಸಬೇಕಾದ್ದು ಆವಶ್ಯಕವು.

(b) ಮ್ಯುನಿಸಿಪಲ್ ಕಮಿಷನರುಗಳ ಅನುಮತಿ ಇಲ್ಲದೆ, ಮ್ಯುನಿಸಿಪಲ್ ಸರಹದ್ದಿನೊಳಗೆ ಅಭಿವೃದ್ಧಿಯು ಉಂಟುಮಾಡುವದು ನ್ಯಾಯವಿರುದ್ಧವಾದದ್ದು ಮತ್ತು ಆಕ್ರಮವಾದದ್ದು.

(c) ಮ್ಯುನಿಸಿಪಲ್ ಆಡಳಿತ ವಿಷಯದಲ್ಲಿ ಮಾಡಲ್ಪಡುವ ನಿರ್ಣಯಗಳನ್ನು ಮಾಡುವ ಪ್ರೊಸೀಡಿಂಗ್ಸ್‌ಗಳು ಮತ್ತು ಕೊಡುವ ಹುಕುಂಗಳು, ಇವುಗಳನ್ನು ತಿಳಿಸುವಿಕೆಯ ಬಗ್ಗೆ ಮ್ಯುನಿಸಿಪಲ್ ಕಮಿಷನರ್‌ಗಳಿಗೆ ಕಳುಹಿಸಬೇಕಾದ್ದು.

(b) ಜೋಡಿದಾರರು ಮಾಡುವ ನಿರ್ಣಯಗಳ ಪ್ರತಿ ಯಾವತ್ತು ಜಾಹೀರಾಗಿ ತಿಳಿಸಲ್ಪಟ್ಟಿರುವುದು, ಯಾವತ್ತು ತರ್ಜುಮೆ ಮಾಡಲ್ಪಟ್ಟು ತೋರಿಸುವ ಒಂದು ಸೀಮಿತ ಲಿಸ್ಟನ್ನು ಮೂರು ತಿಂಗಳಿಗೊಂದಾವರ್ತಿ ಜೋಡಿದಾರರ ಮುಂದಿಡಲ್ಪಡಬೇಕು.

5. ಮೆ|| ಎಸ್. ರಾಮಯ್ಯನವರು ಬರೆದ ಸರ್ 1893 ನೇ ಇಸವಿ ಏಪ್ರಿಲ್ 13 ನೇ ಹುಕುಂ 14 ನೇ ನಂಬರ್ ಕಾಗದದಲ್ಲಿ ತಿಳಿಸಿರುವ ವಿಷಯಗಳು —

(a) ಧರ್ಮಾಂಬುಧಿ ಕೆರೆಗೆ ನೀರು ಬರುವ ಬೆಟ್ಟಗಳ್ಳದ ಮಣ್ಣು ಹುಲ್ಲು ವಗೈರೆ ಕಟ್ಟಡಗಳನ್ನು ತೆಗೆದು ಹಾಕಬೇಕಾದ್ದು.

(b) ರಸ್ತೆಯನ್ನು ಅಗಲಮಾಡುವದಕ್ಕಾಗಿ ಮೆ|| ನಾರಾಯಣರಾಯರ ಮನೆ ಮುಂದುಗಡೆ ಇರುವ ಸೂರ ಪ್ಪನವರ ಒಂದು ಸಣ್ಣ ಮನೆಯನ್ನು ಕಿತ್ತು ಹಾಕತಕ್ಕದ್ದು.

K. SRINIVASA RAO,
*Vice-President,*
*City Munl Commission.*

### ಕೊಡಗು ಫಾರೆಸ್ಟ್ ಇಲಾಖಾ.

ನೋಟೀಸ್.

1893ನೇ ಇಸವಿ ಜುಲೈ ತಾರೀಖ್ 26 ರಲ್ಲು ಇದರಡಿ ನಮೂದಿಸಿದ ಸಾಮಾನುಗಳು ಫ್ರೆಜರ್‌ಪೇಟೆ ಆವರಿ ಡಿಪೋಗಳಲ್ಲಿ

ಸರ್ 1893 ನೇ ಇಸವಿ ಆಗಸ್ಟು ತಾರೀಖ್ 31 ರಲ್ಲು ಹರಾಜ್ ಹಾಕಲ್ಪಡುತವೆ.

ತ್ಯಾಗದ ತೊಲೆಗಳು 220 ... 1500 ಸಿಫ್‌ಟ.

ಹೊನ್ನೆ ವಗೈರೆ 160 ... 3500 ಡಿ||

ಷರತ್ :— ಸರ್ 1889ನೇ ಇಸವಿ ಡಿಸೆಂಬರ್ ತಾರೀಖ್ 19ನೇ ತಾರೀಖುಳ್ಳ 58 ನೇ ನಂಬರ್ ಚೀಫ್ ಕಮ್ಮಿಷನರ್ ಸಾಹೇಬರವರ ನೋಟಿಫಿಕೇಷನ್ ಮೇರೆ ಮರದ ಕ್ರಯದ ಪೈಕಿ ಶೇಕಡಾ ಹತ್ತರಷ್ಟು ಮೊಬಲಗನ್ನು ಹರಾಜ್ ಕಾಲದಲ್ಲಿ ಪಾವತಿಮಾಡಿ ಬಾಕೀ ಮೊಬಲಗನ್ನು ಹರಾಜ್ ತಾರೀಖಿನಿಂದ 30 ದಿವಸಗಳೊಳಗೆ ಪಾವತಿ ಮಾಡತಕ್ಕದ್ದು.

F. A. LEAGER,
ಡೆಪ್ಯುಟಿ ಅಸಿಸ್ಟೆಂಟ್ ಕನ್ಸರ್ವೇಟರ್,
ಕೊಡಗು ಫಾರೆಸ್ಟ್.

BANGALORE.—Printed and published at the KARNATAKA PRESS, No. 40, HOSPITAL ROAD, CITY.—1893.

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

## ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

## Published Every Monday Morning.

ಪ್ರಕಾಶಮವಿವಸ್ವತ್ಸ್ವತ್ಯಾಗನಾರ್ತ್ಸ್ಯಕರ್ಣಾಟಕಪ್ರಕಾಶನಸಂಬಿದಾಪ್ರಭಿತಸಹಿತೀಶೋವಿತಾ। ಮೃಗಾಂಕಹಿತವಾಸರೇನಿಹಿತಮುದ್ರಣಾಸಜ್ಜನ್ಯರ್ದ್ಧಿ ಶಾಸುವರಿಪೋಷಿಭಾದಿಕತಿವಾನಸಂಸುಮುದಂ।

Vol. XV ] BANGALORE —MONDAY, SEPTEMEBR 4, 1893. [ No 35

ಸಂಪುಟ ೨೦ ] ಬೆಂಗಳೂರು —ಸನ್ ೧೮೯೩ನೇ ಇಸವಿ ಸೆಪ್ಟಂಬರ ೪ ನೇ ತಾರೀಖ್ ಸೋಮವಾರ. [ಸಂಚಿಕೆ ೩೫.



### ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು.

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

| | ಮುಂಗಡವಾಗಿ | ವರ್ಷಾಂತ್ಯದಲ್ಲಿ |
|---|---|---|
| ಸಾಲ್ ಒಕ್ಕೆ | 6—0—0 | 8—0—0 |
| 6 ತಿಂಗಳಿಗೆ | 3—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ

| | ಮುಂಗಡವಾಗಿ | ವರ್ಷಾಂತ್ಯದಲ್ಲಿ |
|---|---|---|
| ಸಾಲ್ ಒಕ್ಕೆ | 3—0—0 | 4—0—0 |
| 6 ತಿಂಗಳಿಗೆ | 1—12—0 | 2—8—0 |

**ಈ ಪತ್ರಿಕೆಗೆ** ದರ ಸಾಲು, ವರ್ಷದ ತಾರೀಖ್ ಮೊದಲು [illegible] ಕಳುಹಿ ಸುವಂತವರಿಗೆ ಮಾತ್ರ [illegible] ದರ ಈ ಪತ್ರಿಕೆ ಯು [illegible] ಇಂಗ್ಲಿಷ್ ಭಾಗವ ನ್ನಾಗಲಿ ಕನ್ನಡ ಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು [illegible]

### ಪ್ರಕಟನೆಯ ರಿವಾಜ್

| | |
|---|---|
| ಮೊದಲನೆಯದಕ್ಕೆ ಪಙ್ತಿ ೧ಕ್ಕೆ | ೦—೨—೦ |
| ಎರಡನೆಯದಕ್ಕೆ ಪಙ್ತಿ ೧ಕ್ಕೆ | ೦—೧—೦ |

ಸರಾ—ಎರಡನೆಸರ್ತಿಗಿಂತ [illegible] [illegible]



*ADVERTISEMENTS*

NOTICE

VAIDYASARA SANGRAHA

A TREATISE ON THE [illegible] OF

HINDU MEDICINE

*Price and [illegible] Postage R 5 0 0*

ವೈದ್ಯಸಾರ ಸಂಗ್ರಹ.

ಈ ಗ್ರಂಥವು [illegible] ರಾಜ [illegible] ದರಖಾಸ್ತುಗಳಿಗೆ ಸಿಗೇ ಕೊಡಲ್ಪಡಲಾರದು

ಇದರ ಕ್ರಯ—[illegible] ಪ್ರತಿ ಒಂದಕ್ಕೆ ರೂ 5—0—0

[illegible] ಪೇಟೆಬಜಾರ್

ಬೆಂಗಳೂರ್ [illegible] ಸೇನುಬಾರ್

### ನೋಟೀಸು.

#### ಬೆಂಗಳೂರು ಕರ್ಣಾಟಕ ಪ್ರೆಸ್.

೧೮೬೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು

ಇದರಲ್ಲಿ ಸಕಲವಿಧ ಕೆಲಸಗಳು ಸುಲಭ [illegible] ಶೀಘ್ರ ವಾಗಿಯೂ ಶ್ಲಾಘ್ಯವಾಗಿಯೂ, ಮಾಡಲ್ಪಡುವವು.

ಇದರಲ್ಲಿ ಸದ್ಯಕ್ಕೆ ಇಂಗ್ಲಿಷ್ ಕನ್ನಡ ಕೆಲಸಗಳು ಮಾತ್ರವೇ ನಡೆಯುತಿವೆ. ಇತರ ತರಗತಿಗಳನ್ನು ಸದರೀ ಕಾರ್ಖಾನೆಯ ಪ್ರೊಪ್ರೈಟರಿಗೆ ಬರೆದು ತಿಳಿದುಕೊಳ್ಳಬಹುದು



### ನೋಟೀಸ್.

ಗಣೇಶ ರಾಮಚಂದ್ರ ಕರ್ಕರೆ ಮತ್ತು ಕಂಪೆನಿ. ಕಮಿಷನ್ ಏಜಂಟ್ಸ್

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯಿಂದ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ದಕ್ಷ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ

ಎಲ್ಲಾ ತರದ ದಿಷಧಗಳು, ಪುಸ್ತಕಗಳು, ಮುದ್ರೆಗಳು, [illegible] ಪುಸ್ತಕಗಳು, ಪದಿಯಾರಗಳು, ಪಾಷಗಳು, [illegible] ಗಳು, ಕಾಶ್ಮೀರ ಶಾಲುಗಳು, ಪಟ್ಟೆಯರಗಳು, ಜರಿತಾರಿ ಕಣಗಳು, ಚಂದ್ರಕಾಂತ ಲೇಸು [illegible] ಗಳು, [illegible] ಜರತಾರಿ [illegible] ಗಳು, ಜರತಾರಿ ಟೋಪಿಗಳು, ಆಫೀಸ ಸ್ಟೇಷನರಿಗಳು, ಪಟಗಳು, ಅತ್ತರಗಳು, ಅತ್ಯುತ್ತಮಗಳಾದ ರತ್ನಗಳು, ಚಿನ್ನದಿಂದ ಕಟ್ಟಲ್ಪಟ್ಟ ಉಂಗುರಗಳು, ಬೆಳ್ಳಿ ಪಾತ್ರೆಗಳು, ಜರ್ಮನ್ ಬೆಳ್ಳಿ ಪಾತ್ರೆಗಳು, ಕೇಸರಿ, ಕಸ್ತೂರಿ ವಗೈರೆ ಇತರ ಸಾಮಾನುಗಳು

ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟ್ಯಾಂಪ ಕಳುಹಿಸಿದ ಹೊರತು ಜವಾಬ್ ದೊರೆಯಲಾರದು

ವಿಳಾಸ—ಗಣೇಶ ರಾಮಚಂದ್ರ ಕರ್ಕರೆ,

ಮತ್ತು ಕಂಪೆನಿ, ಕಮಿಷನ್ ಏಜಂಟ್ಸ್

ಠಾಕೂರದ್ವಾರ, ಮಾರ್ಕೆಟ್ ಪೋಸ್ಟ್, ಮುಂಬೈ



### ನೋಟೀಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ಬಿಕರಿಗೆ ಸಿದ್ಧವಾಗಿವೆ ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

#### ಸಂಸ್ಕೃತ ಗ್ರಂಥಗಳು.

| | ರೂ | ಆ | ಪೈ. |
|---|---|---|---|
| ಸಟೀಕಾ ವೈದ್ಯಸಾರ ಸಂಗ್ರಹ | ೫ | ೦ | ೦ |
| „ [illegible] | ೧ | ೨ | ೦ |
| „ [illegible] | ೦ | ೮ | ೦ |
| „ [illegible] | ೧ | ೦ | ೨ |
| „ ಟೀ॥ [illegible] | ೦ | ೩ | ೦ |
| „ ಟೀ। ಗೀತಾ [illegible] | ೦ | ೧ | ೦ |
| „ ಟೀ॥ [illegible] (ಸಂ॥ಸಹಿತ) | ೦ | ೪ | ೦ |
| ವಿಷ್ಣುಸಹಸ್ರನಾಮ [illegible] | ೦ | ೩ | ೦ |
| ಸೂರ್ಯಸಹಸ್ರನಾಮ | ೦ | ೨ | ೦ |
| ಕೃಷ್ಣಕರ್ಣಾಮೃತ | ೦ | ೨ | ೦ |
| [illegible] | ೦ | ೨ | ೦ |
| ೧ [illegible] | ೦ | ೧ | ೦ |

#### ಕನ್ನಡ ಗ್ರಂಥಗಳು.

| | | | |
|---|---|---|---|
| [illegible] | ೩ | ೦ | ೦ |
| [illegible] | ೧ | ೨ | ೦ |
| ವೃಷಭೇಂದ್ರವಿಜಯ | ೧ | ೮ | ೦ |
| ಪಂಚವಾಣಿ [illegible] | ೦ | ೩ | ೦ |
| ಹನುಮದ್ವಿಲಾಸ | ೦ | ೭ | ೦ |
| [illegible] | ೦ | ೨ | ೦ |
| ಸುಭದ್ರಾಪರಿಣಯ | ೦ | ೨ | ೦ |
| [illegible] ಪರಿಣಯ | ೦ | ೨ | ೩ |
| ಸುದಾಮಚರಿತ್ರೆ | ೦ | ೧ | ೦ |
| [illegible] ಚರಿತ್ರೆ | ೦ | ೧ | ೯ |
| [illegible] | ೧ | ೦ | ೦ |
| ಮಹಮ್ಮದ್ [illegible] | ೦ | ೧೨ | ೦ |
| ಭ್ರಾಂತಿವಿಲಾಸ | ೨ | ೦ | ೦ |


### ಪ್ರಕಟನೆ.

೧ನೇ ಸೆಪ್ಟಂಬರ್, ೧೮೯೩

ಸನ್ ೧೮೯೩ನೇ ಇಸವಿ ಸೆಪ್ಟಂಬರ ೧೧ ನೇ ತಾರೀಖ್ ಮಧ್ಯಾಹ್ನ ೧೨ ಘಂಟೆಗೆ ಬೆಂಗಳೂರ್ ಸಂದರ್ ಕೋರ್ಟಿನಲ್ಲಿ ಸುಮಾರ್ ೨೪ ರ್ಟಗಳ ಆಳಕೇರಾಯಿ ಹರಾಜ್ ಮಾಡಲ್ಪಡುವುದು.

CHARLES E M RUSSELL,
*Superintendent of Forests and Government Farms, Bangalore District.*

### THE MONEY MARKET

ಮದರಾಸ್, ಶನಿವಾರ, ತಾರೀಖ 2 ನೇ ಸೆಪ್ಟಂಬರ 1893

ಸೇಕಡ 4ರೂ ಬಾಬತು ಗವರ್ನಮೆಂಟ ಪತ್ರಗಳು ರೂಪಾಯಿಗಳು, 105 2—0 ರಿಂದ 105 10—0ವರೆಗೆ

[illegible] ಬಾಬತು ಗವರ್ನಮೆಂಟ ಪತ್ರಗಳು ರೂಪಾಯಿಗಳು 96 ರಿಂದ 97ರ ವರೆಗೆ

ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತು 980 ಲಾಗಾಯ್ತು 985 ವರೆಗೆ.

ಕಮರ್ಷಿಯಲ್ ಅಂಡ್ ಲ್ಯಾಂಡ್ ಮಾರ್ಟಿಗೇಜ್ ಬ್ಯಾಂಕ್ ಷೇರುಗಳು, (100) ಬಾಬತು 150 ರಿಂದ 155 ವರೆಗೆ

ಸವರನ್‌ಗಳು, 16—2—0 ರಿಂದ 16—4—0ವರೆಗೆ.

ಬ್ಯಾಂಕಬಿಲ್‌ಗಳು ಯಾನೆ [illegible] ರೂ॥ ೧ಕ್ಕೆ 6 ತಿಂಗಳ ವಾಯಿದೆಗೆ, 1s. 3 5/32d.

ಡಿಟ್ಟೋ 4 ತಿಂಗಳ ವಾಯಿದೆಗೆ, 1s 3 [illegible]/32d

ಡಿಟ್ಟೋ ಕೇಳಿದಾಗ, 1s [illegible]/3d.

## ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA

MONDAY, SEPTEMBER 4, 1893

೧೮೯೩ನೇ ಇಸವಿ ಸೆಪ್ಟಂಬರ ೪ ನೇ ಸೋಮವಾರ

### ಸಹೋದರಿಯ ಪ್ರಾರ್ಥನೆ.

ಮೇಲೆ ಕಂಡ ಅಂಕಿತವುಳ್ಳ ಒಂದು ವರ್ತಮಾನವು ಕಳೆದ ತಿಂಗಳ ೩೦ನೇ ತಾರೀಖಿನ ಮದರಾಸ್ ಮೆಯಿಲ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟದ್ದು ನಾವು ಓದಿ ಬಹಳ ಆಶ್ಚರ್ಯಪಟ್ಟೆವು, ಸದರೀ ವರ್ತಮಾನದ ಸಾರಾಂಶವೇನೆಂದರೆ.—ಸಿಂಲಾ, ತಾ॥ ೩೦ನೇ ಆಗಸ್ಟ ೧೮೯೩—ಈ ದಿನ ಮಧ್ಯಾಹ್ನಾನಂತರ ಕಿಲಾತ್ ಖಾನರವರ ಸಹೋದರಿಗೆ ವೈಸರಾಯಿಯವರ ಸಂದರ್ಶನವು ಪ್ರತ್ಯೇಕವಾಗಿ ಲಭಿಸಿತು. ಆಕೆಯವರೊಡನೆ ಪ್ರಮುಖರಾದ ಮೂವರು ಜಹಗೀರದಾರರು ಅನುವರ್ತಿಸಿ ಬಂದಿದ್ದರು. ಅವರ ಸಂದರ್ಶನೋದ್ದೇಶವು ತಮ್ಮ ಸಹೋದರರ ವಿಷಯವಾದ ನಿರ್ಣಯವನ್ನು ಮರಳಿ ಪರ್ಯಾಲೋಚನೆ ಮಾಡಬೇಕೆಂದು ವೈಸರಾಯಿಯವರಂ ಪ್ರಾರ್ಥಿಸಿಕೊಳ್ಳಬಹುದಾಗಿರುತಿದೆ. ಏತತ್ಸಂದರ್ಶನದ ಯುಕ್ತವಾದ ಫಲಿತಾಂಶವು ಏನುವಿಧವಾದದ್ದೆಂದು ಅದ್ಯಾಪಿ ಒಬ್ಬರಿಗೂ ತಿಳಿಯಬಂದಂತೆ ತೋರಲಿಲ್ಲವು. ಸನ್ ೧೮೯೩ನೇ ಇಸವಿ ಆಗಸ್ಟ ೧೫ನೇ ಮಿತಿಯುಳ್ಳ ಠರಾವಿನಮೂಲಕ ಇಂಡ್ಯ ಗವರ್ನಮೆಂಟನವರು ಕಿಲಾತ್ ಖಾನರವರ ಅದೃಷ್ಟವಂ ನಿರ್ಧಾರಣಮಾಡಿ ಅಬ್ದುಲ್ ಕರೀಮ್ ಖಾನರ ವಂ ತಿಳಿಯಪಡಿಸಿರುವಾಗ್ಯೆ ಈಗ ಖಾನರವರ ಸಹೋದರಿಯಾದ ಬೀಬಿ ಫತ್ತೇಖಾತೂನ್‌ಯವರು ಪ್ರವೇಶಿಸಿ ಯೇನು ಸಾಧಿಸುವದಾಗಿದಾರೆಯೋ ತಿಳಿಯಲಿಲ್ಲವು. ಇಂಡ್ಯ ಗವರ್ನಮೆಂಟನವರ ನಿರ್ಣಯದಿಂ ತಿಳಿಯಬರುವದೇನಂದರೆ—ಕಳೆದ ಮಾರ್ಚ್ ತಿಂಗಳ ೨೮ನೇ ತಾರೀಖಿನಲ್ಲಿ ಕಿಲಾತ್ ಖಾನರಾದ ಮಿಯರ್ ಖುದದ್‌ಖಾನರವರು ಒಂದು ಉಪವನದಲ್ಲಿ ಕಿಲಾತ್ ಸಂಸ್ಥಾನದ ಮಂತ್ರಿಯಾದ ಫಕೀರ್‌ಮಹಮುದ್ ಯೆಂಬವರನ್ನೂ, ಅವರ ಪುತ್ರನನ್ನೂ, ತಂದೆಯನ್ನೂ ಅವರ ಅಂತರಂಗಕ್ಕೆ ಪಾತ್ರನಾಗಿದ್ದ ಮತ್ತೊರ್ವನನ್ನೂ ಖೂನ್ ಮಾಡಿಸಿದರೆಂಬದಾಗಿ ಬಲೂಚಿಸ್ಥಾನದಲ್ಲಿರುವ ಗವರ್ನರ್ ಜನರಲ್ಲವರ ಕಡೆ ಏಜಂಟರವರು, ಇಂಡ್ಯ ಗವರ್ನಮೆಂಟಿಗೆ ರಿಪೋರ್ಟ್ ಮಾಡಿದರು ಕರುವಾಯ ಖಾನರವರು ತಮ್ಮ ವರ್ತನಕ್ಕೆ ತಕ್ಕ ಸಮಾಧಾನವಂ ತಿಳಿಸಬೇಕಲ್ಲದೆ ಅವರು ಜೆಕಬಾದೆಂಬ ಪ್ರದೇಶದಲ್ಲಿ ಪೊಲಿಟಿಕಲ್ ಏಜಂಟರನ್ನು ಹೋಗಿ ನೋಡತಕ್ಕದ್ದೆಂದು ಅವರಿಗೆ ತಿಳಿಸಲ್ಪಟ್ಟಿತು. ಇಂಡ್ಯ ಗವರ್ನಮೆಂಟನವರ ಹುಕುಂಪ್ರಕಾರ ಕ್ವೆಟ್ಟಾಕೆ ಹೊರಟ ಹೋಗಲು ಅಲ್ಲಿ ಅವರನ್ನು ಪೊಲಿಟಿಕಲ್ ಏಜಂಟರೂ ಪ್ರಮುಖರಾದ ಕೆಲವು ಮಂದಿ ಸರದಾರರುಗಳೂ ಸೇರಿ ವಿಚಾರಣೆ ಮಾಡಿದರು. ಈ ವಿಚಾರಣೆಗೆ ಸಂಬಂಧಿಸಿದ ವಿಶಿಷ್ಟ ಕಾಗದಪತ್ರಗಳನ್ನೂ ಸರ್ ಜೇಂಸ್ ಬ್ರೌನ್ ಯೆಂಬವರು ವೈಸರಾಯಿಯವರ ಪರ್ಯಾಲೋಚನೆಯಬಗ್ಯೆ ಕಳುಹಿಸಿದರು. ಇಂಡ್ಯ ಗವರ್ನಮೆಂಟನವರು ಸದರೀ ಕಾಗದಪತ್ರಗಳ ಆಧಾರದಮೇಲೂ ಬಲೂಚಿಸ್ಥಾನಕ್ಕೆ ಸಂಬಂಧಿಸಿದ್ದ ಬಲೂಚಿ ಸರದಾರರುಗಳ ನಿರ್ಣಯದಮೇಲೂ ಮೇಲೆಕಂಡ ನಾಲ್ಕು ಜನಗಳ ಖೂನಿಗೂ ಗತಸಂವತ್ಸರದಲ್ಲಿ ವ್ಯಾಪಿಸಿದ್ದ ಇತರ ಕೆಲವರ ನಷ್ಟಕ್ಕೂ ಖಾನರವರು ಜವಾಬ್ದಾರರೆಂಬ ದರೊಳಕ್ಕು ವಾಕ್ಯವೂ ಸಂಶಯವಿಲ್ಲವೆಂದು ತೀರ್ಮಾನಿಸಿದರು ಬಲೂಚಿ ಸರದಾರರೆಲ್ಲರು ಖಾನರವರ ಅಪರಾಧವನ್ನಂಗೀಕರಿಸಿ ಅದಕ್ಕೆ ದಂಡನೆರೂಪವಾಗಿ ಅವರಪ್ರಭುತ್ವವಂ ಅವರಜ್ಯೇಷ್ಠಪುತ್ರರಾದ ಮಿಯರ್‌ಮಹಮುದ್ ಖಾನರಿಗೆ ಒಪ್ಪಿಸುವದು ಯೋಗ್ಯವಾಗಿ ಕಾಣುಗತೋರುತಿದೆಂದು ಏಕಕಂಠ್ಯದಿಂ ತಿಳಿಯಪಡಿಸಿದ್ದರಿಂದಲೂ, ತಮ್ಮ ರಾಜೀನಾಮೆಯನ್ನು ಅಂಗೀಕರಿಸಿ ತಮ್ಮ ಜ್ಯೇಷ್ಠಪುತ್ರರು ತಮ್ಮ ಉತ್ತರಾಧಿಕಾರಿಯಾಗಿ ನಿಯಮಿಸಬೇಕೆಂದು ಖಾನರವರು ಸ್ವತಃ ಇಂಡ್ಯ ಗವರ್ನಮೆಂಟನವರನ್ನು ಕೇಳಿಕೊಂಡಿದ್ದರಿಂದಲೂ ವೈಸರಾಯಿಯವರು ಮೇಲೆ ಸೂಚಿಸಿದಂತೆ ಹುಕುಂಕೊಟ್ಟರು. ಗವರ್ನಮೆಂಟನವರು ಖಾನರವರ ವಿಷಯದಲ್ಲಿ ತಾವು ಮಾಡಿದ ತೀರ್ಮಾನವು ಬಹಳ ನ್ಯಾಯವಾದುದೆಂಬ ನಂಬಿಕೆಯುಳ್ಳವರಾಗಿರುತ್ತಾರೆ ಪರಂತು ಖಾನರವರು ಇದುವರೆಗೂ ಬ್ರಿಟಿಷ್ ಗವರ್ನಮೆಂಟನವರೊಡನೆ ಸ್ನೇಹಭಾವದೊಳಿರುತಲಿದ್ದದನ್ನೂ, ಅವರ ಸ್ಥಿತಿಯನ್ನೂ, ದರ್ಜೆಯನ್ನೂ ಪರ್ಯಾಲೋಚಿಸಿ ವೈಸರಾಯಿಯವರು, ಖಾನರವರು ತಮ್ಮ ಪ್ರಭುತ್ವವಂತ್ಯಜಿಸಿ ನಿವೃತ್ತರಾಗಬೇಕಾದ್ದೆಂದು ನಿಷ್ಕರ್ಷಿಸಿ, ಅವರ ಮಕ್ಕಳಾದ ಮಿಯರ್‌ಮಹಮುದ್‌ಖಾನರನ್ನು ಕಿಲಾತ್‌ಸಂಸ್ಥಾನದ ಖಾನರಾಗಿ ಅಂಗೀಕರಿಸಿ ಅವರಿಗೂ ದೇಗಳನುಭವಿಸುತಲಿದ್ದ ಗೌರವಸ್ವಾತಂತ್ರ್ಯಗಳೆಲ್ಲ ಅವರು ಸಮಾನಬಾಧ್ಯರೆಂದೆಣಿಸತಕ್ಕದ್ದೆಂಬದಾಗಿ ನಿಬಂಧಿಸಿರುತ್ತಾರೆ. ಈಗ ಪ್ರಾಪ್ತವಾದ ಪ್ರಭುತ್ವ ಬದಲಾವಣೆಯಿಂದ ಕಿಲಾತ್ ಸಂಸ್ಥಾನಕ್ಕೆ ಯಾವವಿಧ ಬಾಧಕವಾಗಲಿ ಉಂಟಾಗುವಂತೆ ಕಾಣಿಸಲಿಲ್ಲವು. ಸದರೀ ಸಂಸ್ಥಾನದ ವಿಷಯವಾ

ಲ್ಲಿ ಬ್ರಿಟಿಷ್ ಗವರ್ನಮೆಂಟಿನವರ ಸಂಬಂಧವು ಪೂರ್ವದಂತೆಯೇ ಈಗಲೂ ನೆರೆಗೊಂಡಿರುತಿದೆ. ಇದುವರೆಗೆ ಗವರ್ನಮೆಂಟಿನವರು ತಮ್ಮ ಪ್ರವೇಶಕ್ಕೆ ಅನುಕೂಲವಾದ ಸಮಯವಂ ನಿರೀಕ್ಷಿಸುತಲಿದ್ದರು. ಈಗ ಅಂತಾ ಸಂದರ್ಭವು ಹಠಾತ್ತಾಗಿ ಪಾತರವರ ದುಷ್ಕೃತ್ಯಗಳಿಂದ ಪ್ರಾಪ್ತವಾದಕಾರಣ ಗವರ್ನಮೆಂಟಿನವರು ತಮ್ಮ ವ್ಯಾಪಕತೆಯಂ ಸ್ಥಾಪಿಸಲೆತ್ನಿಸಿದರು. ಇಂತಾಸ್ಥಿತಿಯಲ್ಲಿ ಪಾಸರವರ ಸಹೋದರಿಯರ ಪ್ರಾರ್ಥನೆಯಿಂದೇನು ಕಾರ್ಯಸಾಧನೆಯಾಗುವದೊ ನಾವರಿಯೆವು. ಮುಖ್ಯವಾಗಿ ಇಂತಾ ಪ್ರಕರಣಗಳಲ್ಲಿ ರಾಜ್ಯತಂತ್ರಜ್ಞರು ತಿಳಿಸುವಂತಾ ಮೋಹಕವಾಕ್ಯಗಳು ಪ್ರಸಿದ್ಧಗಳಾಗಿರುವಾಗ್ಯೆ ಸದರೀ ಬೇಬಿ ಪತ್ರಾರ್ಥಯವರಂ ಒಡಂಬಡಿಸಿ ಸಂತೃಪ್ತಿಯೊಡನೆ ಕಳುಹಿಸುವಣವು ವೈಸರಾಯಿಯವರಿಗೆ ಪ್ರಯಾಸಕರವಾಗಿರಲಾರದು. ಆದಕಾರಣ ಇವರ ಫಲಿತಾಂಶವು ಈಗಲೆ ಬಹಳಮಟ್ಟಿಗೆ ಊಹಿಸಿ ನಿರ್ಧರಿಸಿ ತಿಳಿದುಕೊಳ್ಳಲಶಕ್ಯವು.

## ಅಕ್ರಮ ಪ್ರವೃತ್ತಿ.

ಈಗ ಹಿಂದೂಗಳಿಗೂ ಮುಸಲ್ಮಾನರಿಗೂ ಉಂಟಾಗಿರುವ ವೈಮನಸ್ಯವನ್ನೂ, ತತ್ಪ್ರಯುಕ್ತವಾದ ಪ್ರಾಣ ಮಾನ ಧನ ಪದಾರ್ಥ ಹಾನಿಯನ್ನೂ ಪರ್ಯಾಲೋಚಿಸಿ ನೋಡಿದರೆ ಇದಕ್ಕೆ ಕಾರಣ ಭೂತರಾದವರು ಹಿಂದೂಗಳೇ ಹೊರತು ಮುಸಲ್ಮಾನರಲ್ಲವೆಂಬದಾಗಿಯೂ, ಇಂತಾ ಅನರ್ಥಗಳಿಗೆಲ್ಲ ಹಿಂದೂಗಳ ಪ್ರಯತ್ನೋದ್ದೇಶಗಳು ನಿಮಿತ್ತಕಗಳೆಂಬದಾಗಿಯೂ, ಈಜನರಿಗೆ ಸರ್ವತ್ರ ಅಕ್ರಮ ಪ್ರವರ್ತನದಲ್ಲಿ ಅಭಿರುಚಿ ಅಧಿಕವಾಗುತಲಿರುವದಾಗಿಯೂ ಇಂಡಿಯನ್ ಡೈಲೀನ್ಯೂಸ್ ಎಂಬ ಪತ್ರಿಕೆಯು ತಾತ್ಪರ್ಯಪಡುತಿದೆ. ಈಗ ಅಲ್ಲಿಯಲ್ಲಿ ಸ್ಥಾಪಿಸಲ್ಪಟ್ಟಿರುವ ಗೋರಕ್ಷಣಾ ಸಭೆಗಳ ಬಾಹ್ಯೋದ್ದೇಶಗಳು ಹ್ಯಾಗಿದ್ದಾಗ್ಯೂ ಅವುಗಳ ಪ್ರಯತ್ನಗಳು ಮಾತ್ರ ದೇಶದಲ್ಲಿ ಸರ್ವತ್ರ ಪ್ರಜೆಗಳ ಮನಸ್ಸಿನೊಳು ಅಭಿಪ್ರಾಯಾಂತರವಾದ ಉದ್ರೇಕವನ್ನುಂಟುಮಾಡತಕ್ಕವಾಗಿಯೂ, ಪ್ರಜಾ ಸಂಖ್ಯೆಯಲ್ಲಿ ಪ್ರಬಲವಾಗಿರುವ ಸದರೀ ಪಕ್ಷದ್ವಯದವರಿಗೆ ಪ್ರಾಣಾಂತವಾದ ಕಲಹಕ್ಕೂ ಶಾಶ್ವತವಾದ ವಿದ್ವೇಷಕ್ಕೂ ಅವಕಾಶವನ್ನುಂಟುಮಾಡತಕ್ಕವಾಗಿಯೂ ಇರುತಿದೆ. ಇಂತಾ ಸ್ಥಿತಿಯು ತಪ್ಪಬೇಕಾದರೆ ಸದರೀ ಸಭೆಗಳನ್ನು ಖಂಡಿತವಾಗಿ ವಜಾ ಮಾಡಿಸುವದು ವಿನಾ ಬೇರೆ ಯಾವ ಉಪಾಯವೂ ತೋರುವದಿಲ್ಲವು. ಇಂತಾ ಸಭೆಗಳಿಂದ ಪ್ರಜೆಗಳ ಸಮಾಧಾನ ಸ್ಥಿತಿಗೆ ಭಂಗವುಂಟಾಗುವದೇ ತಾತ್ಕಾಲಿಕ ಪ್ರಯೋಜನವಾಗಿರುತಿದೆ. ಮುಖ್ಯವಾಗಿ ಪ್ರಜೆಗಳಿಗೆ ಗವರ್ನಮೆಂಟಿನವರಲ್ಲಿ ರಾಜಭಕ್ತಿ ವಿಶ್ವಾಸವೂ ಭೀತಿಯೂ ತಪ್ಪಿಹೋಗಿರುವದಲ್ಲದೆ ಅವರ ಅಧಿಕಾರ ಪ್ರಯುಕ್ತವಾದ ಸೌಲಭ್ಯದಿಂದ ಜನರು ಅಸ್ವಾಧೀನರಾಗಿ ದುರ್ಮಾರ್ಗಗಳಲ್ಲಿ ಪ್ರವರ್ತಿಸುವದೂ ದೃಶ್ಯವಾದ ಫಲವಾಗಿರುವಂತೆ ತೋರುತಿದೆಯಾಗಿ ಅಂತಾ ಜನರನ್ನು ಸ್ವಾಧೀನಪಡಿಸಿಕೊಳ್ಳಲಿಕ್ಕೆ ಬೇಕಾದ ಅಧಿಕಾರಂತವು ಈಗ ಅಮಲಿನಲ್ಲಿರುವ ನ್ಯಾಯ ನಿಬಂಧನೆಗಳ ಮೂಲಕ ಗವರ್ನಮೆಂಟಿನವರಿಗುಂಟಾಗದಿರುವ ಪಕ್ಷಕ್ಕೆ ಏತದರ್ಥ ಪ್ರತ್ಯೇಕ ನಿಬಂಧನೆಯಂ ಮಾಡಿ ತಮ್ಮ ಅಧಿಕಾರವಿಶೇಷರಾದದ್ದೆಂದು ಜನರಿಗೆ ತಿಳಿಯಪಡಿಸಬೇಕಾದುದು ಆವಶ್ಯಕವೆಂದು ಭಾವಿಸುವದಾಗಿ ಸದರೀ ಡೈಲೀನ್ಯೂಸ್ ಪತ್ರಿಕೆಯು ಗವರ್ನಮೆಂಟಿನವರನ್ನು ಎಚ್ಚರಿಸುತಿದೆ. ಇದರಿಂದ ಮೇಲೆ ಕಂಡ ಪತ್ರಿಕಾಲೇಖಕರಿಗೆ ಮುಸಲ್ಮಾನರಲ್ಲಿರುವ ಪಕ್ಷಪಾತಜ್ಞಾನವೂ, ಹಿಂದೂಗಳಲ್ಲಿರುವ ಅಸೂಯೆಯೂ ಇಷ್ಟರದೆಂದು ಗೊತ್ತಾಗದಿರುವದಿಲ್ಲವು. ಇದೇ ಪಕ್ಷಪಾತಜ್ಞಾನವು ಬ್ರಿಟಿಷ್ ಆಫೀಸರುಗಳಿಗೆ ಸಹ ನಿರೂಢವಾಗಿರುವದರಿಂದ ಹಿಂದೂ ಮುಸಲ್ಮಾನರ ವ್ಯಾಜ್ಯಗಳಲ್ಲಿ ಪ್ರಯೋಗ ನ್ಯಾಯವು ನಿರಾಕ್ಷೇಪಣೀಯವಾಗಿರುವದಿಲ್ಲವು. ಈ ದೇಶದಲ್ಲಿ ಇಂಗ್ಲಿಷಿನವರ ಪ್ರಭುತ್ವದೊಳು ಒಂದು ಕರ್ತೃತ್ವಶಕ್ತಿ ಇಲ್ಲದೆ ಸಲ್ಲಬಹುದಾದರಿಂದಲೇ ಜನಗಳು ಅಸ್ವಾಧೀನರಾಗುತಬಂದರೆಂದು ನುಡಿಯುವ ಪಕ್ಷಕ್ಕೆ ವ್ಯವಸ್ಥಿತ ರಾಜ್ಯತಂತ್ರವೆಂದು ಸಕಲ ದೇಶೀಯರಿಂದಲೂ ಅಂಗೀಕರಿಸಲ್ಪಟ್ಟಿರುವ ಬ್ರಿಟಿಷ್ ರಾಜ್ಯತಂತ್ರಪ್ರಭುತ್ವಕ್ರಮವು ಕೂಡ ಸಂಪೂರ್ಣವಾಗಿ ಬದಲಾಯಿಸಲ್ಪಡಬೇಕಾದುದು ಆವಶ್ಯಕವೆಂದೆಣಿಸುತ್ತೇವೆ. ಇಂಗ್ಲಾಂಡಿನಲ್ಲಿ ಪ್ರಜೆಗಳು ಅಧಿಕಾರಿಗಳಿಗೆ ಅಸ್ವಾಧೀನರಾಗಿ ಪ್ರತಿಭಟಿಸುವಂತೆ ಇಲ್ಲಿನವರು ಮುಂದಾಳಾಗಿ ನಿಲ್ಲಲಾರರು. ಒಂದು ಸಾಮುದಾಯಿಕಪ್ರಯೋಜನಾರ್ಥ ಹಿಂದೂಗಳು ಕಡೆಯತನಕ ದೃಢವಾಗಿ ನಿಂತು ಸಾಧಿಸುವಷ್ಟರ ಮನೋಧೈರ್ಯವುಳ್ಳವರಲ್ಲವು. ಇದಕ್ಕೆ ಇವರಡಿ ತಿಳಿಸಲ್ಪಟ್ಟಿರುವ ಒಂದು ವಿಷಯವೇ ಮುಖ್ಯ ನಿದರ್ಶನವಾಗಿರುತಿದೆ.—ಇಂಗ್ಲಾಂಡ್ ದೇಶದ ವಿಲಕ್ಷಣ ರಾಜ್ಯತಂತ್ರಕ್ಕೆ ಮುಖ್ಯಾಂಗಭೂತವೆನಿಸಿರುವ ಹೌಸ್ ಆಫ್ ಕಾಮನ್ಸ್ ಸಮಾಜದಲ್ಲಿ ಈಚೆಗೆ ಜರಗಿದ ಕೇವಲ ಅಗೌರವಕರವಾದ ಮತ್ತು ಹಾಸ್ಯಾಸ್ಪದವಾದ ಒಂದು ಕಲಹವು ಅಲ್ಲಿನವರ ವಿವೇಕವನ್ನೂ ನಮ್ರತೆಯನ್ನೂ ವ್ಯಕ್ತಪಡಿಸತಕ್ಕದ್ದಾಗಿರುತಿದೇನೆಂದರೆ—ಕಲಹಿಗಳ ಟೋಪಿಗಳು ಛಿನ್ನಾಭಿನ್ನಗಳಾದವು, ಅವರ ನೇತ್ರಗಳು ಅಗ್ರಹದಿಂ ಮಾಲಿನ್ಯವನ್ನೈದಿದವು, ಅವರ ಮೂಗುಗಳು ಕಾಠಿಣ್ಯವ ಹೊಂದಿ ರಕ್ತಮಯವಾದವು. ಅನಂತರ ಪರಸ್ಪರ ಬಯ್ಯಲಿಕ್ಕುಪಕ್ರಮಿಸಿ ಪ್ರಹರಗಳಿಗೆ ಪ್ರಾರಂಭವಾಗಲು ಅಲ್ಲಿದ್ದವರೆಲ್ಲರು ಬೇಸತ್ತು ಘಟ್ಟಿಯಾಗಿ ಕೂಗಿಕೊಂಡು ಹೊರಟು ಹೋದರು. ರಾಜಭಕ್ತಿ ವೈಲಕ್ಷಣ್ಯಗಳಿಗೆ ಇವಕ್ಕಿಂತಲೂ ದೃಷ್ಟಾಂತ ವೇನುಬೇಕಾಗಿದೆ. ಇವರ ರಾಜಭಕ್ತಿ ವಿಶ್ವಾಸಗಳು ಇಷ್ಟು ಪ್ರಸಿದ್ಧವಾಗಿರುವಾಗ್ಯೆ ಹಿಂದೂಗಳನ್ನು ಅನುಪಶಾಂತರೆಂದು ಕರೆಯಲಿಕ್ಕೆ ಸದರೀ ಡೈಲೀನ್ಯೂಸ್ ಪತ್ರಿಕೆಗೆ ಮನವು ಹ್ಯಾಗೆ ಒದುಬಿಟ್ಟಿತೋ ತಿಳಿಯಲಿಲ್ಲವು. ಸ್ಟ್ರೈಕ್ ಎಂಬ ಶಬ್ದಕ್ಕೆ ಅರ್ಥವು ಇದುವರೆಗೆ ಇಂಡ್ಯಾ ದೇಶೀಯರಿಗೆ ತಿಳಿದಿರಲಿಲ್ಲವು. ಈಚೆಗೆ ಇಂಗ್ಲಾಂಡಿನಲ್ಲಿರತಕ್ಕ ಯಂತ್ರ ವಗೈರೆ ಕಾರ್ಖಾನೆಗಳಲ್ಲಿ ಕೆಲಸ ಮಾಡುವಂತ ನೌಕರ್ಮನೇರು ಸ್ವಾಮಿ ಭೃತ್ಯನ್ಯಾಯವಿಲ್ಲದೆ ಆಗಿಂದಾಗ್ಯೆ ಪ್ರತಿಭಟಿಸುತ ಕೆಲಸಗಳು ಬಿಟ್ಟು ಹೋಗುವದು ಪತ್ರಿಕಾಮುಖೇನ ನೋಡಿದವೇರೆಲೋ ಇಲ್ಲಿನವರಿಗೂ “ಯಥಾರಾಜಾ ತಥಾಪ್ರಜಾ” ಎಂಬಂತೆ ಒಂದು ಹುಚ್ಚು ಧೈರ್ಯವು ತಲೆದೋರಿ ಕದಾಚಿತ್ ಕಲಹಿಸಲಾರಂಭಿಸುತ್ತಾರೆ. ಇಲ್ಲಿನವರು ಅಸ್ವಾಧೀನರಾಗಿ ಇಂಗ್ಲಿಷಿನವರಂತೆ ತಾವು ಕಲಿತ ಯಂತ್ರಕಲಾಕೌಶಲ್ಯಗಳನ್ನೆಲ್ಲ ರಾಜಸಂತತಿಯವರಮೇಲೂ, ಮುಖ್ಯಾಧಿಕಾರಿಗಳ ಮೇಲೂ ವಿನಿಯೋಗಿಸುವಂತವರಲ್ಲವು. ಯಾವ ನೇಟಿವಾಗಲಿ, ಡೈನಾಮಿಟ ಎಂಬ ಪ್ರಾಣಾವಿಲಂಬಿತ ಯಂತ್ರ ಸಹಾಯದಿಂದ ಪಾರ್ಲಿಮೆಂಟಿಕಟ್ಟಡವನ್ನಾಗಲಿ, ಇತರ ರಾಜಭವನಗಳನ್ನಾಗಲಿ ನಾಶಗೊಳಿಸಲೆತ್ನಿಸಿ ದಂಡಿಸಲ್ಪಟ್ಟಂತೆ ಇದುವರೆಗೆ ಒಬ್ಬರ ಕೇಳ್ವಿಕೆಗಾಗಲಿ ಬಂದಂತೆ ಕಾಣಿಸಲಿಲ್ಲವು. ನಮಗೆ ಪಾಲಕರಾಗಿ ಏರ್ಪಟ್ಟಿರುವಂತಾ ಬ್ರಿಟಿಷ್ ಪ್ರಜೆಗಳು ಏತತ್ಪ್ರಭೃತಿ ಕುಮಾರ್ಗಪ್ರವರ್ತನವಂ ಪದೇಪದೇ ನಿದರ್ಶನಪೂರ್ವಕ ತೋರಿಸುತಲಿದ್ದಾಗ್ಯೂ ಅವರಂ ಸಾಧ್ಯವಾದ ಮಟ್ಟಿಗೆ ಅನುಕರಿಸದೆ ಉದಾಸೀನರಾಗಿದಾರೆ. ಇಂತವರನ್ನು ಶಿಕ್ಷಿಸಿ ಸ್ವಾಧೀನಪಡಿಸಿಕೊಳ್ಳಲಿಕ್ಕೆ ಈಗಿರುವ ನ್ಯಾಯ ನಿಬಂಧನೆಗಳು ಸಾಲದೆ ಹೋಗುವ ಪಕ್ಷಕ್ಕೆ ಡೈಲೀ ನ್ಯೂಸ್ ಪತ್ರಿಕಾಲೇಖಕರ ಪಕ್ಷಪಾತಜ್ಞಾನ ನಿವಾರಕವಾದ ಬೇರೊಂದು ಕಾನೂನ ಸಹ ಸದ್ಯಃ ಆವಶ್ಯಕವೆಂದು ಭಾವಿಸುತ್ತೇವೆ. ಹಿಂದೂ ಮುಸಲ್ಮಾನರ ಕಲಹಾಭಿವೃದ್ಧಿಗೆ ಉಭಯ ಪಕ್ಷಿಯವರ ಅವಿವೇಕವು ಪ್ರಥಮಕಾರಣವಾಗಿದ್ದರೂ ಜಲಸೇಚನದಿಂ ಸಸ್ಯಾಭಿವೃದ್ಧಿಯಾಗುವಂತೆ ಅಧಿಕಾರಿಗಳಾದವರ ಪಕ್ಷಪಾತ ಔದಾಸೀನ್ಯಾದಿಗುಣಗಳೇ ಪ್ರಾಯಶಃ ಅದನ್ನು ಮತ್ತಷ್ಟು ವೃದ್ಧಿಗೊಳಿಸುವಂತೆ ಸ್ಪಷ್ಟವಾಗುತಿದೆ. ಆದುದರಿಂದ ಈ ಭಾಗದಲ್ಲಿಯೂ ಒಂದು ವಿಶೇಷ ವಿಧಿಯು ಆವಶ್ಯಕವೆಂದು ತೋರುತಿದೆ. ಮೇಲೆ ಕಂಡ ಪತ್ರಿಕಾಲೇಖಕರ ಹಿತೋಕ್ತಿಗಳನ್ನು ಗವರ್ನಮೆಂಟಿನವರು ಪುರಸ್ಕರಿಸಿ ತದ್ವತ್ ನಡೆಯುವ ಪಕ್ಷಕ್ಕೆ ಅವರೊಡನೆ ಇತರವಿಧ ಪರಿವರ್ತನೆಗಳು ಸಹ ಆವಶ್ಯಕವೆಂಬದು ಅವರು ಚೆನ್ನಾಗಿ ಪರ್ಯಾಲೋಚಿಸಬಲ್ಲರೆಂದು ನಂಬುತ್ತೇವೆ.

## ಅರಮನೆಯ ಬಾಲ್.

ಮಾಹೇ ಮಜಕೂರ ೩೦ ನೇ ತಾರೀಖು ಬುಧವಾರದ ದಿನ ರಾತ್ರಿ ಈ ಊರಲ್ಲಿರತಕ್ಕ ಪ್ರಮುಖರಾದ ಯೂರೋಪಿಯನ್ ದೊಡ್ಡಮನುಷ್ಯರಿಗೂ ಧನಿಕಸಾನಿಗಳಿಗೂ, ಶ್ರೀಮನ್ ಮಹಾರಾಜರವರು, ತಮ್ಮ ಅರಮನೆಯಲ್ಲಿ ಮಾಮೂಲಿ ಪ್ರಕಾರ ಜಿಯಾಫತ್ ಮಾಡಿಸಿದರು. ಇದಕ್ಕಾಗಿ ಅರಮನೆಯಲ್ಲಿ ಪ್ರತ್ಯೇಕವಾಗಿ ಪರಿಕಲ್ಪಿತವಾಗಿರುವ ಪ್ರದೇಶವು ಅತಿ ಮನೋಹರವಾಗಿ ಅಲಂಕರಿಸಲ್ಪಟ್ಟಿತು. ಈ ಔತನವು ಸಕಲವಿಷಯದಲ್ಲಿಯೂ ಪ್ರಶಂಸಾರ್ಹವಾಗಬೇಕೆಂಬ ಉದ್ದೇಶಪೂರ್ವಕ ಮಾಡಲ್ಪಟ್ಟಿದ್ದ ಸಕಲ ಸನ್ನಾಹಗಳು ಅದಂ ಘಟಿಸುವಂತಾದ್ದಾಗಿದ್ದವು. ಏತದರ್ಥ ಆಮಂತ್ರಿತರಾಗಿದ್ದ ದೊಡ್ಡ ಮನುಷ್ಯರೆಲ್ಲರು ತಮ್ಮ ಇಷ್ಟಮಿತ್ರರೊಡನೆ ರಾತ್ರಿ ೯ ಘಂಟೆಗೆ ಅರಮನೆಗೆ ಹೋದರು. ಮಹಾರಾಜರವರ ಬ್ಯಾಂಡ್ ವಾದ್ಯದವರು ನರ್ತನಶಾಲೆಯಲ್ಲಿ ಹಾಜರಿದ್ದು ವಾದ್ಯವ ಬಾರಿಸುತಲಿದ್ದರು. ರಾತ್ರಿ ಹತ್ತು ಘಂಟೆಗೆ ಸರಿಯಾಗಿ ನರ್ತನವು ಪ್ರಾರಂಭವಾಗಿ ೧೨ ಘಂಟೆಯ ವರೆಗೆ ಜರಗಿತು. ಅನಂತರ ಅರಮನೆಯ ಹೊರಭಾಗದಲ್ಲಿ ಹಾಕಲ್ಪಟ್ಟಿದ್ದ ಗುಡಾರಗಳಲ್ಲಿ ಎಲ್ಲರಿಗೂ ಭೋಜನವು ನಡೆಯಿತು. ಈ ಸಂದರ್ಭದಲ್ಲಿ ಅಲ್ಲಿಗೆ ಹೋಗಿದ್ದ ದೊರೆಗಳೂ ದೊರೆಸಾನಿಗಳೂ, ಹಾಕಿಕೊಂಡಿದ್ದಂತಾ ವೇಷಗಳೂ ವಸ್ತ್ರಗಳೂ ಬಹಳ ವಿನೋದವಾಗಿಯೂ ಸ್ತ್ರೀಯರು ತಮ್ಮ ರೂಪವೇಷಭೂಷಾಲಂಕಾರಾದಿಗಳಿಂದ ನೇತ್ರಾನಂದಕರವಾಗಿಯೂ ಇದ್ದಂತೆ ತಿಳಿಯಬರುತಿದೆ. ಬ್ರಿಟಿಷ್ ರೆಸಿಡೆಂಟರವರೂ, ಡಿವಿಜನ್ ಕಮಾಂಡಿಂಗ್ ಆಫೀಸರವರೂ ಕುಟುಂಬ ಸಮೇತರಾಗಿ ಔತನಕ್ಕೆ ಹೋಗಿದ್ದರು. ಮುಖ್ಯವಾಗಿ ಇದಕ್ಕೆ ಬಂದಿದ್ದ ದೊಡ್ಡಮನುಷ್ಯರೂ ಅವರ ಸ್ತ್ರೀಯರೂ ಧರಿಸಿದ್ದ ವೇಷಗಳು ವಿಚಿತ್ರಗಳಾಗಿಯೂ, ಅವರವರ ಅಭಿರುಚಿಯಂ ವ್ಯಕ್ತಗೊಳಿಸತಕ್ಕವಾಗಿಯೂ ಇದ್ದಾಗ್ಯೂ ಕೆಲವರ ವೇಷಗಳಲ್ಲಿ ಪ್ರಾಧಾನ್ಯೇನ ತಿಳಿಸಬೇಕಾದವಾಗಿರುತಿವೆ. ಇದರಿಂದ ಮನುಷ್ಯರ ಅಭಿರುಚಿ ವೈಲಕ್ಷಣ್ಯ ಸ್ವರೂಪಗಳು ಸ್ಪಷ್ಟವಾಗದಿರುವದಿಲ್ಲವು. ಸುಪ್ರಸಿದ್ಧ ವಿ ಸ್ಯಾನಿಟರಿ ಕಮಿಷನರಾದ ಮ|| ಬೋಸ್ಲೀ ಯವರು, ದೇಶಸ್ಥ ಬ್ರಾಹ್ಮಣವೇಷವು, ಮೈಸೂರ್ ಗವರ್ನಮೆಂಟ್ ಪ್ರೈವೇಟ್ ಸೆಕ್ರೆಟರಿಯಾದ ಲೆಫ್ಟಿನೆಂಟ್ ಕರ್ನಲ್ ಟಿ. ಟಿ. ರೆನಾಲ್ಡ್ಸ್ ಯವರು ವೈಷ್ಣವಕರ್ಣಾಟಕ ಬ್ರಾಹ್ಮಣವೇಷವು, ಎಡ್ಯುಕೇಶನ್ ಸೆಕ್ರೆಟರಿ ಮ|| ಜೆ. ಜೆ. ಭಾಭಾ ಯವರು ಕೊಡಗು ದೇಶೀಯರ ವೇಷವು, ಅಸಿಸ್ಟೆಂಟ್ ದಿವಾನರಾದ ಮ|| ತುಂಬುಶೆಟ್ಟಿ ರವರು ದರ್ಬಾರ್ ಡ್ರೆಸ್, ಕರ್ನಲ್ ಮೆಗ್ರಾತ್ ಯವರು ಈಜಿಪ್ಟ ದೇಶದ ಬಾದಷಾ ವೇಷವು, ಎಕ್ಸೈಜ್ ಕಮಿಷನರ್ ಮ|| ಎಚ್ ರಿಕೆಟ್ಸ್ ಯವರು ಸನ್ಯಾಸಿವೇಷವೂ ಹಾಕಿಕೊಂಡಿದ್ದಂತೆ ತಿಳಿಯಬರುತಿದೆ. ಹೀಗೆಯೇ ಕೆಲವರು ಯೂರೋಪಿಯನ್ ಲೇಡಿಗಳ ವೇಷಗಳು ವಿಚಿತ್ರಗಳಾಗಿದ್ದವು. ಮುಖ್ಯವಾಗಿ ಮಹಾರಾಜರವರ ಸತ್ಕಾರಗಳು ಅಭ್ಯಾಗತರಿಗೆಲ್ಲ ಮಹದಾನಂದ ಸಂದಾಯಕವಾಗಿದ್ದವೆಂದು ಕೇಳಲಿಕ್ಕೆ ನಾವು ಬಹಳ ಸಂತೋಷಿಸುತ್ತೇವೆ. ಇದಲ್ಲದೆ ಇಲ್ಲಿ ಮತ್ತೊಂದು ಅಂಶವು ಸಂತೋಷಿಸತಕ್ಕದ್ದಾಗಿರುತಿದೆ ಯೇನೆಂದರೆ—ಬ್ರಾಹ್ಮಣ್ಯ ಸಂಪಾದನಭ್ರಾಂತಿ ಒಬ್ಬ ಲಿಂಗಾಯತಮತಸ್ಥರಿಗೆ ಮಾತ್ರ ಇದ್ದಂತೆ ಇದುವರೆಗೆ ನಾವು ಭಾವಗೊಂಡಿದ್ದೆವು, ಆದರೆ ವಿನೋದಾರ್ಥವಾಗಿ ಯಾದರು ಒಂದು ಕ್ಷಣಕಾಲ ಅಲಭ್ಯವಾದ ಬ್ರಾಹ್ಮಣ್ಯವು ವೇಷದಿಂದಲಾದರು ಸಂಪಾದಿಸಿ ಆನಂದಿಸಬೇಕೆಂಬ ಕೋರಿಕೆಯು ಯೂರೋಪಿಯನ್ನರಿಗೆ ಸಹ ಉಂಟಾಗುವದುನೋಡಿದರೆ, ನಮ್ಮ ಬ್ರಾಹ್ಮಣ್ಯವು ಸರ್ವಜನಾಪೇಕ್ಷಿತವಾಯಿತಲ್ಲಾ ಯೆಂಬ ಸಂತೋಷವು ಒಂದು ಕಡೆಯಲ್ಲೂ, ಅಲಭ್ಯವಾದ ಇಂತಾ ಉತ್ತಮ ಜನ್ಮವಂ ಪುಣ್ಯವಶಾತ್ ಪಡೆದಿರತಕ್ಕವರವಕ್ಕೆ ತಮ್ಮ ಇತರ ವ್ಯಾಪಾರಗಳಿಂದ ಮೂಲತೋಹಾನಿಯನ್ನುಂಟುಮಾಡಿಕೊಳ್ಳುವದರಿಂದುಂಟಾಗುವ ಖೇದವು ಮತ್ತೊಂದು ಕಡೆಯಲ್ಲಿಯೂ ನಮ್ಮನ್ನಾವರಿಸಿಕೊಂಡಿರುತದೆ.

## Occasional Notes.
## ನೈಮಿತ್ತಿಕ ವಿಷಯನ್ಯಾಸ.

ಅಮೇರಿಕಾ ದೇಶಕ್ಕೆ ಸೇರಿದ ಜಾರ್ಜಿಯಾ, ಅಲ್ಬಾನಾ, ಮತ್ತು ಕ್ಯಾರೋಲೈನಾ ಎಂಬ ಸಮುದ್ರತೀರ ಪ್ರಾಂತಗಳಲ್ಲಿನ ಮೂರು ತಾಲೂಕುಗಳಲ್ಲಿ ತೂಫಾನ್ ಹೊಡೆದು ಅರಳೀ ಫಸಲುಗಳೆಲ್ಲ ನಾಶವಾದವು.

ತಂಜಾವೂರು ಸಂಸ್ಥಾನದ ಸಾಬಕ್ ಮಹಾರಾಜರವರ ರಾಣಿಗಳು ಆರುಮಂದಿ ಸೇರಿ, ಈಗ ಅರಮನೆಯ ಕಾರ್ಯಗಳು ನಿರ್ವಹಿಸುವದಕ್ಕಾಗಿ ಏರ್ಪಡಿಸಲ್ಪಟ್ಟಿರುವ ಏಜಂಟರನ್ನು ತೆಗೆದು ಹಾಕಿ ಸವರಿಕೆಲಸವು ತಮಗೆ ಕೊಡಬೇಕೆಂದು ತಮ್ಮ ಕಡೆ ಲಾಯರ್ ಮೂಲಕ ಮದರಾಸ್ ಹೈಕೋರ್ಟಿನಲ್ಲಿ ಅರ್ಜಿ ಕೊಡಲು ಅದು ಅಲ್ಲಿನ ಜಡ್ಜಿಗಳಿಂದ ತಿರಸ್ಕರಿಸಲ್ಪಟ್ಟಿತು.

ಮುಂಬೈ ಪೋಲೀಸ್ ಡಿಪಾರ್ಟ್‌ಮೆಂಟಿನಲ್ಲಿ ಆಫೀಸರುಗಳೂ ಇತರರೂ ಸೇರಿ ೬೫೦ ಮಂದಿಯನ್ನು ಜಾಸ್ತಿ ಮಾಡಬೇಕೆಂದು ಕೊಡಲ್ಪಟ್ಟ ಅಭಿಪ್ರಾಯವನ್ನು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಅಂಗೀಕರಿಸಿ ಮಂಜೂರ್ಮಾಡಿದರಾಗಿ, ಸದರೀ ಕಲಹವನ್ನು ಜಾಲೀಪೆಳು ಪ್ರವೇಶಕಾದ ವಿಷಯದಲ್ಲಿ ಗವರ್ನಮೆಂಟಿನವರ ನಿರ್ಣಯವು ಪತ್ರದಲ್ಲಿ ಪ್ರಕಟಿಸಲ್ಪಡದ ಪ್ರಯು.

ಈಚೆಗೆ ಮೂರು ನಾಲ್ಕು ವರ್ಷಗಳ ಕಾಲವೊ ತಿರುಪತಿಯಲ್ಲಿ ವರ್ಷಾಭಾವದಿಂ ಅಲ್ಲಿನ ಜನರು ಕಷ್ಟಪಡುತಲಿರುವದು ಪ್ರಸಿದ್ಧವಿಷಯವಾಗಿದೆಯಷ್ಟೆ. ಇದಕ್ಕೆ ಸೇರಿದಂತೆ ಈಗ ಅಲ್ಲಿ ವಾಂತಿ ಭೇದಿ ರೋಗ ಪ್ರಬಲಿಸಿ ಪ್ರಾಣಹಾನಿಗಳುಂಟಾಗುತವೆ. ಆದುದರಿಂದ ಈ ಸಂವತ್ಸರ ಅಲ್ಲಿ ನಡೆಯುವ ಬ್ರಹ್ಮೋತ್ಸವಕ್ಕೆ ಯಾತ್ರಾರ್ಥಿಗಳು ಅಲ್ಲಿಗೆ ಹೋಗದಿರುವದು ಅವರ ಕ್ಷೇಮಕ್ಕೂ ಅನ್ಯರಕ್ಷೇಮಕ್ಕೂ ಮುಖ್ಯಕಾರಣವಾಗಿರುವದೆಂದು ಎಚ್ಚರಿಸುವೆವು.

ಕಳೆದ ತಿಂಗಳ ೨೩ ನೇ ತಾರೀಖಿನ ಮಧ್ಯಾಹ್ನಾನಂತರ, ಮುಂಬೈಯಲ್ಲಿರುವ ಪಾರ್ಸಿ, ಹಿಂದೂ, ಮತ್ತು ಮಹಮ್ಮದನ್ ಜನರ ಮನೆಗಳಲ್ಲಿ ನೌಕರಿ ಮಾಡುವ ಹಿಂದೂ ಜನರು ಸುಮಾರು ೫,೦೦೦ ಮಂದಿ ಸೇರಿ, ಮುಂದೆ ಯಾವದಾದರು ಕಲಹಗಳುಂಟಾಗುವ ಸಂದರ್ಭದಲ್ಲಿ ಆಗ ತಮ್ಮ ಕರ್ತವ್ಯವನ್ನು ಕುರಿತು ಆಲೋಚಿಸುವದಕ್ಕಾಗಿ ಒಂದು ದೊಡ್ಡ ಸಭೆ ಸೇರಿ, ಕಲಹಗಳ ವಿಷಯದಲ್ಲಿ ಹಿಂದೂ ಜನರಲ್ಲಿ ಪ್ರಮುಖರಾಗಿರತಕ್ಕವರು ಮಾಡುವ ಪ್ರಯತ್ನಗಳಿಗೆ ತಾವು ಮನಃಪೂರ್ವಕವಾಗಿ ಸಹಾಯ ಮಾಡತಕ್ಕದ್ದೆಂದು ನಿರ್ಣಯ ಮಾಡಿದರು.

ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಿಗೆ ಮಂತ್ರಾಲೋಚಕ ಸಮಾಜವೊಂದಿರುತಿದೆ ಯಷ್ಟೆ. ಅದು ಕೇವಲ ಅರ್ಥವ್ಯಯಕ್ಕೆ ಕಾರಣವಾಗಿರುತಿದೆಯೇ ಹೊರತು ಅದರಿಂದ ಇಂಡ್ಯಾ ದೇಶಕ್ಕೆ ಯಾವ ಭಾಗದಲ್ಲೂ ಪ್ರಯೋಜನವಿಲ್ಲವೆಂಬ ಭಾವನೊಡನೆ, ಪಾರ್ಲಿಯಮೆಂಟ ಸಭೆಯ ಮೆಂಬರಗಳ ಪೈಕಿ ಕೆಲವರು ಸೇರಿ ಸದರೀ ಸಮಾಜವನ್ನು ತೆಗೆದು ಹಾಕಬೇಕಾದ್ದಕ್ಕೆ ತಕ್ಕ ಕಾರ್ಯಕಾರಣಗಳನ್ನು ನಮೂದಿಸಿ, ಒಂದು ಮುಸಾವಿದಾ ಆಕ್ಟನ್ನು ರಚಿಸುತಲಿದಾರೆ. ಇದು ಸ್ವಲ್ಪ

ನಂ|| ೭೯೧೩. ೬ ೯. ೧೮೯೩—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೨೧೦ನೇ ಆರ್ಟಿಕಲ್ ಅನುಸರಿಸಿ ಅಸಿಸ್ಟೆಂಟ್ ಕಮಿಷನರ್ ಮ|| ಕೆ. ಎಸ್ ದೊರಸ್ವಾಮಿ ಅಯ್ಯನವರಿಗೆ, ೧೮೯೩ನೇ ಇಸವಿ ಆಗಸ್ಟ್ ೭ ನೇ ತಾರೀಖ್ ಲಾಗಾಯತು ೪ ದಿನಗಳು ಪರೀಕ್ಷೆ ರಜಾ ಕೊಡಲ್ಪಟ್ಟಿರುತ್ತದೆ.

ನಂ|| ೭೯೧೫. ೬ ೯ ೧೮೯೩—ಅಸಿಸ್ಟೆಂಟ್ ಕಮಿಷನರ್ ಮ|| ಕೆ. ದೊರೆಸ್ವಾಮಿ ಅಯ್ಯನವರು ಕೋಲಾರ ಡಿಸ್ಟ್ರಿಕ್ಟ್ ಟ್ರೆಜರಿ ಚಾರ್ಜನ್ನು ೧೮೯೩ನೇ ಇಸವಿ ಆಗಸ್ಟ್ ೧೨ನೇ ತಾರೀಖಿನ ಪೂರ್ವಾಹ್ನದಲ್ಲಿ ಮ|| ಹೇಮಾ ರಾಮಯ್ಯನವರಿಂದ ತೆಗದುಕೊಂಡಿರುತ್ತಾರೆ.

ಮುಜರಾಯಿ ಇಲಾಖಾ.

ಚಿ. ಚಿತ್ರದುರ್ಗ, ತಾ|| ೨೧ನೇ ಅಗಸ್ಟ್ ೯೩

ನಂ|| ೧೭೯. ಹರಿಹರ ನಿವಾಸಿಗಳಾದ ಇವರಡಿ ತಿಳಸಲ್ಪಡುತ್ತವರು ಚಿತ್ರದುರ್ಗ ಡಿಸ್ಟ್ರಿಕ್ಟ್ ಹರಿಹರ ಕಸಬೆಯಲ್ಲಿರುವ ಮುಜರಾಯಿ ದೇವಸ್ಥಾನಗಳ ಮತ್ತು ಛತ್ರಗಳ ಧರ್ಮದರ್ಶಿಗಳಾಗಿ ನಿಯಮಿಸಲ್ಪಟ್ಟಿರುತ್ತಾರೆ

೧. ಮ ರಾ|ಸಾಹುಕಾರ್‌ ಅಬ್ಬಪ್ಪನಾಯಕರು.
೨. ,, ಸಾಹುಕಾರ್ ಭುಜಂಗನಾಯಕರು
೩. ,, ಕಸಬಾ ಶಾ|| ಶೀನಪ್ಪನವರು.
೪. ,, ಪಟೇಲ್ ಬಸಪ್ಪನವರು.
೫ ,, ಗುಮಸ್ತರು ಕೃಷ್ಣಪ್ಪನವರು

ಚಿತ್ರದುರ್ಗ ಡಿಸ್ಟ್ರಿಕ್ಟ್ ದಾವಣಗೆರೆ ಸಬ್ ತಾಲ್ಲೂಕು ಕುಮಾರನ ಹಳ್ಳಿಯಲ್ಲಿರುವ ಮುಜರಾಯಿ ದೇವಸ್ಥಾನಗಳಿಗೆ ಮತ್ತು ಛತ್ರಗಳಿಗೆ ಇವರಡಿ ತಿಳಸಲ್ಪಡುವವರು ಧರ್ಮದರ್ಶಿಗಳಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಮಾಲೆಬೆನ್ನೂರು ನಿವಾಸಿಗಳಾದ—

೧. ಮ|ರಾ|ಶೆಟ್ಟಿಪಟೇಲ್ ಚಿಕ್ಕಮುನಿಷ್ಟ ನಾಡಿಗ ವೆಂಕಟರಾಯರವರು.
೨. ,, ದೇಶಪಾಂಡೆ ಶ್ರೀನಿವಾಸರಾಯರು.
೩. ,, ಕರಿಗೌಡನ ದೇವರಪ್ಪನವರು.
೪. ,, ಸೊಂಡೆರಾಲ ಭೀಮಣ್ಣನವರು.

ಕೊಮಾರನಹಳ್ಳಿ ನಿವಾಸಿಗಳಾದ—

೫ ,, ಸಣ್ಣಲಕ್ಕಪ್ಪನ ಮಲ್ಲಣ್ಣನವರು.
೬ ,, ದೇಶಪಾಂಡೆ ವೆಂಕಣ್ಣನವರು.
೭. ,, ಮಲ್ಲಿಕಪ್ಪನವರು.
೮. ,, ದಾನಪ್ಪನ ಮಲಗಪ್ಪನವರು

## SUMMARY OF NEWS
### ವೃತ್ತಾಂತ ಸಂಗ್ರಹವು.

ಇತ್ತಲಾಗಿ ಧಾರವಾಡದಲ್ಲಿ ಫೀ ಮೇಲ್ (ಹೆಂಗಸರ) ಟ್ರೇನಿಂಗ ಕಾಲೇಜ್ ಸ್ಥಾಪಿಸುವದನ್ನು ತಡುತು ಮಾಡಿದ ಹಾಗೆ ಬಂತ್ತದೆಂತ ಕೇಳುತ್ತೇವೆ —ಕ ಸು.

ಲಂಡನ್ನಲ್ಲಿ ಅಗ್ನಿಪ್ರಳಯವಾಗಿ ನಾನಾಪ್ರಕಾರದ ಸಾಮಾನುಗಳನ್ನು ತುಂಬಿದ ೩೦ ಮನೆಗಳು ಸುಟ್ಟು ೨೦,೦೦,೦೦೦ ರೂಪಾಯು ಲುಕ್ಸಾನಾಗಿರುತ್ತದೆ —ಸದ್ವೃತ್ತಿ

ಕಲಕತ್ತೆಯಲ್ಲಿ ಐ ಬಿ ಮಾಣಿಕಲಾಲ್ ಮಲ್ಲಿಕರವರು ಅನಾಥ ಹುಡುಗರ ವಿದ್ಯಾಭಿವೃದ್ಧಿಗಾಗಿ ೨೫,೦೦೦ ರೂಪಾಯಿಗಳನ್ನು ಕೊಟ್ಟಿರುತ್ತಾರೆ —ಸತ್ಯವೃತ್ತ

ಪ್ರಭಾಸ ಪಟ್ಟಣದೊಳಗಿನ ದಂಗೇಗಾರರ ಪೈಕಿ ೨೬ ಜನರು ಶೃಕ್ಷೆ ಮಾಡಲ್ಪಟ್ಟಿರುತ್ತಾರೆ. ವಿನ್ನೂ ಮುಸಲ್ಮಾನರೇ, ಈ ದಂಗೇಗಾರರನ್ನು ಹಿಡಿದು ಜನಾಗಡಕ್ಕೆ ಹೊಡಿದಿರುತ್ತಾರೆ.

ಚೀನಾ ಸಾಮ್ರಾಜ್ಯಗಳು ಕೊರಿಯ ದೇಶ ಯಾವ ಸಾಮ್ರಾಜ್ಯಗಳಲ್ಲಿಯೂ ತಮ್ಮ ರಾಜ್ಯದಲ್ಲಿ ಬರಗೊಡಬಾರದೆಂದು ಚೀನ್ಯಾ ಸರ್ಕಾರದವರು ಸರಕ್ಯುಲರ್ ಹೊರಡಿಸಿ ರಬಹುದಂತ ತಂತಿಯ ಮೇಲಿಂದ ತಿಳಿಯುತ್ತಿದೆ —ಚ

ಮುಂಬೈ ದಂಗೆಯಲ್ಲಿ ಇಷ್ಟಿಗೆ ೬೩ ಜನರು ಸಾಂಪ್ರತಕ್ಕೆ ದಂಗೆಯಲ್ಲಿ ಮಡಿದಿರುತ್ತಾರೆ, ಇವರ ಪೈಕಿ ೩ ನಂಬ ಪೋಲೀಸಿನವರೂ, ೨೫ ಜನ ಹಿಂದೂಗಳೂ, ೩೫ ಜನ ಮುಸಲ್ಮಾನರೂ ಸತ್ತರೆಂದು ಸಿಂಕಾರದಿಂದ ರಿಪೋರ್ಟ್ ಪ್ರಸಿದ್ಧವನಾದ ಲ್ಪಟ್ಟಿರುತ್ತದೆ —ಚಂ.

ಮುಂಬೈ ಗವರ್ನರವರಾದ ಲಾರ್ಡ್ ಹ್ಯಾರಿಸ್ ದೊರೆಗಳು ಮುಂಬೈ ದಂಗೆಯಲ್ಲಿ ಘಾಯವಟ್ಟು ಆಸ್ಪತ್ರೆಗಳಲ್ಲಿ ನರಳುತ್ತಿರುವವರನ್ನು ನೋಡುವ ನಿಮಿತ್ತ ಕಳೆದ ಶನಿವಾರದ ದಿನ ಪುನೆಯಿಂದ ಪ್ರಾತಃಕಾಲ ಮುಂಬೈಗೆ ಹೋಗಿ ಮಧ್ಯಾಹ್ನಕ್ಕೆ ಪುನಃ ನಾಸಿಸ್ಸಂದರು —ಚ.

ಬೆಲೂಚಿಸ್ತಾನದಲ್ಲಿ ಗುಲಾಂ ಹೈದರೆಂಬುವನು ಬಂಡು ಎಬ್ಬಿಸಿದ್ದು ಅವನ ನಿವಾರಣಕ್ಕಾಗಿ ಕ್ವೆಟ ಹಿಂದ ಲಷ್ಕರ್ ಕಳುಹಿಸಲ್ಪಟ್ಟಿರುವದಲ್ಲದೆ, ಅತ್ತಕಡೆಯ ಸ್ಥಿತ್ಯಕ್ಕೆ ಸಿದ್ಧತೆಯಲ್ಲಿರುವಂತೆ ಸರ್ಕಾರದವರಿಂದ ಅಪ್ಪಣೆಯಾದಂತೆ ತಂತಿಯು ತಿಳಿಸುವದೆ —ಚ

ಜೊಂಬಾಯಿನಲ್ಲಿ ದಂಗೆ ನಡೆಯುವಾಗಲೂ ಮತ್ತು ನಡೆದ ನಂತರವೂ ಸಾವಿರಾರು ಮಂದಿ ಮುಸಲ್ಮಾನರೂ ಪಾರ್ಸಿಗಳೂ ಹಿಂದೂಗಳೂ ತಮ್ಮ ಸಾಮಾನುಗಳನ್ನು ಸಾಗಿಸಿಕೊಂಡು ಆ ಊರನ್ನೇ ಬಿಟ್ಟು ಹೊರಟು ಹೋದರು. ಇದರಿಂದ ಈಗ ಅಲ್ಲಿ ಅನೇಕ ಮನೆಗಳು ಮಾಳು ಬಿದ್ದಿರುವಂತೆ—ವೃ. ಪ

ಈಗ ವಿಲಾಯತಿಯನ್ನು ಬಿಟ್ಟಿರುವ ಹಡಗುಗಳಲ್ಲಿ ಅಲ್ಲಿನ ವ್ಯಾಪಾರಿಗಳು ಕೋಟ್ಯಂತರ ಸವರನ್‌ಗಳನ್ನು ಇಂಡಿಯಾಕ್ಕೆ ರವಾನೆ ಮಾಡಿರುತ್ತಾರೆ ಅವು ಬೊಂಬಾಯಿ, ಕಲ್ಕತ್ತೆಗಳಿಗೆ ಬಂದ ಕೂಡಲೆ ಸವರನ್ ೧ ಕ್ಕೆ ೧೫ ರೂಪಾಯಿ ಅನುಪಾದಲ್ಲಿ ಸಿಕ್ಕದಿಲ್ಲ ಬರುವದಕ್ಕೆ ೧೫—೨೦ ದಿನಗಳಾಗಬಹುದು

ಕೇಪ್ರಿಕ್ಷ್ವಷೈರಿನಲ್ಲಿ ಕೆಲವು ದಿನಗಳ ಹಿಂದೆ ವಿಪರೀತ ಮೋಡ ಕವಿದು ಸ್ವಲ್ಪ ಹೊತ್ತಿನಲ್ಲೇ ಇರುವೆಗಳೂ, ಚಿಟ್ಟೆಗಳೂ ವಿಸ್ತೀರ್ಣವಾಗಿ ಮಳೆಗರೆದವು ಘುಮಿಯಿಸುವೇಲಲ್ಲಿ ೧—೨ ಅಂಗುಲ ಪ್ರಮಾಣ ಈ ಹುಳಗಳು ಬಿದ್ದುಹೋದವು ಅನೇಕರನ್ನು ಲಪ್ಪ ಮುತ್ತಿಕೊಂಡು ಜನರಿಗೆ ಬಹು ತೊಂದರೆಯನ್ನು ಕೊಟ್ಟವು —ವೃ. ಪ

ವಿಸಿನಿಸಾರಿ ಟರ್ಕಿ ಮಾಡುವವರ ಉಪಾಸನೆ ಸೋತ ಪ್ರೇಶ್ಯದರ ಮುಸಲ್ಮಾನ್ ರಾಜರ ಕಡೆ ಹೋದರೆಂತು, ಬರೇ ಬಸ್ರಿರ ಪ್ರಸ್ಸು ೬೦ ಲಕ್ಷ ರೂಪಾಯಿಗಳ ಬೆಲೆಯುಳ್ಳವು, ಆ ಮರು ಬಣ್ಣದ ಒಟ್ಟು ಮೊತ್ತ ಲಾ ಕೋಟಿ ನೂರಿಮ್ಮ, ಗ ದಿ ಮತ್ತು ೫ ಲಾಪಾದಗಳ ಕೂಡಿ ೧೫ ಲಕ್ಷರೂಪಾಯಿ, ಒಟ್ಟಿಗೆ ಒಬ್ಬ ಬಸ್ರಿತ ಸ್ವಾಧೀನ ಟರ್ಕಿ ಪಾದ್ರಿ ವರೆ ಕೋಟಿ ರೂಪಾಯಿ! —ಕ. ಸು.

ಉತ್ತರ ಹಿಂದುಸ್ಥಾನಕ್ಕೆ ಸೇರಿದ ಮಥುರೆಸ ಎಂಬ ಸ್ಥಳದಲ್ಲಿ ಪ್ರಯಾಗರಾಮನೆ ಬೊಬ್ಬ ಚಿನ್ನಗೆಲಸ ಮಾಡುವವನು ಹಿಂದೂ ಜನಗಳ ಮದುವೆಯ ಪಟಗಳನ್ನು ತೋರಿಸುವಂಥ ಒಂದು ಯಂತ್ರವನ್ನು ತಯಾರ್ಮಾಡಿರುತ್ತಾನೆ. ಇದನ್ನು ಇಂಡಿಯಾ ಚಕ್ರವರ್ತಿನಿಯವರಾದ ವಿಕ್ಟೋರಿಯಾ ಮಹಾರಾಣಿಯವರಿಗೆ ನಜರು ಒಪ್ಪಿಸಬೇಕೆಂದು ಉದ್ದೇಶಿಸಿ ಈಗ ಜೆಳುಹಿಸಿಕೊಡುವ ತರದೂದು ನಡಿಸುತ್ತಲಿದ್ದಾನೆ.—ವೃ ಪ

ಚಿಕಾಗೋ ಪ್ರದರ್ಶನದಲ್ಲಿ ಒಂದು ಚಮತ್ಕಾರವಾದ ಪೆಟ್ಟಿಗೆಯನ್ನು ಇಟ್ಟಿರುತ್ತಾರೆ ಇದರಲ್ಲಿ ಪ್ರತಿ ತಾಸಿನೊಳ್ಳು ೧ ರಿಂದ ೧೨ ರ ವರೆಗೆ ಘಂಟೆಗಳು ಬಾರಿಸುತ್ತವೆ. ಅದರ ಇದಕ್ಕೆ ಕೇದಿಮಾರದಂತೆ ಕೀಲಿ ವಗೈರೆ ಕೊಡುವ ಯಾವತ್ತು ತರದ ಸಾಧನಗಳು ಇಲ್ಲವೇ ಇರುವದಿಲ್ಲ ತನ್ನಷ್ಟಕ್ಕೆ ಬಗೆ ಘಂಟೆ ಬಾರಿಸುವ ಚಮತ್ಕೃತಿಯನ್ನು ನೋಡಿಕೊಳ್ಳಲಿಕ್ಕೆ ಬಂದೇ ನಮ ೧೧ ದಿನಸಿಗೆ ವರೆಗೆ ಪ್ರಯತ್ನಪಟ್ಟರೂ ಮುಸ್ತಳವನ್ನು ತಿಳಿಯಲಿಕ್ಕಾಗಲಿಲ್ಲವಂತ —ಕ ಸು

ವರನು ಮಧುರೆಯಲ್ಲಿ ೩ ೧೨ ಉತ್ತರಾದಿ ಸ್ವಾಮಿಗಳ ಮಠ ಒಂದು ಇರುವದು, ಇದರಮೇಲೆ ಬಹಳ ಸ್ವಾಧೀನವಾಗಿರುವದು ಸ್ವಾಮಿಗಳಿಗೆ ಎಷ್ಟುಮಟ್ಟಿ ಈ ವಿಷಯವನ್ನು ಅಲ್ಲಿನವರು ವಿಜ್ಞಾಪನೆ ಮಾಡಿಕೊಂಡರು ಚಿತ್ರಕ್ಕೆ ಬರಲಿಲ್ಲವೆಂದು ತಿಳಿದು ಬರುತ್ತದೆ ಈಗ ಗವರ್ನಮೆಂಟಿನವರೇ ಈ ವಿಷಯದಲ್ಲಿ ಪ್ರವೇಶ ಮಾಡುವಂತೆ ತೋರುತ್ತದೆ ಈ ವಿಷಯವನ್ನೆಲ್ಲಾ ಮುಂದಣ ವಾರದಲ್ಲಿ ವಿಸ್ತಾರವಾಗಿ ತಿಳಿಸುತ್ತೇವೆ —ಚಂ

ಕಳೆದ ಮಾಸದಲ್ಲಿ ಈ ಪಟ್ಟಣದಲ್ಲಿ ಒಬ್ಬ ಬ್ರಾಹ್ಮಣನು ಮಧ್ಯಾಹ್ನ ಭೋಜನಾನಂತರ ನಿಂತ ಮಂಚಗಿ ನಿದ್ರೆ ಮಾಡುತ್ತಿದ್ದ ಕಾಲದಲ್ಲಿ, ಗುಪ್ತರಾದ ಅವನ ತಾಯಿಯೂ, ತಂಗಿಯೂ ಸೇರಿ ತಂಗಿಯ ಹೆಂಡತಿಯ ಪ್ರವರ್ತನಕ್ಕೆ ಇಷ್ಟವಿಲ್ಲದೆ ಸುಖಿಸುವದಿಲ್ಲವೆಂದು ನೋಡಿ ಅವಳನ್ನು ಕೂಡಿಕೊಂಡು ಪ್ರದರನ್ನು ಕರೆಸಿ, ಕೊಡತಿಯನ್ನು ಕೊಟ್ಟು ಕಡೆಯ ನಾಕುವರೆ ಹಳ್ಳಿ, ತಾವ ಹೋಗಿ ಸಮಯವನ್ನು ಪರ ಮಾರ್ತಲಿಪ್ಪರಂತೆ ಆ ಪೆಬಯು ಮಗನ ಕಾಲನ್ನು ಬಿಟ್ಟು ಯಾಗ ಹಿಡಿದುಕೊಂಡಳಂತೆ, ಮಗಳು ಅಣ್ಣನ ಬಾಯಿ ಮುಚ್ಚಿದಳಂತೆ, ಬಂದಿದ್ದವನು ಕೊಡಲಿಯನ್ನು ಎತ್ತುವದರೊಳಗೆ ಮಲಗಿದ್ದವನಿಗೆ ಎಚ್ಚರವಾಗಿ ಗಾಬರಿಯಿಂದ ಎದ್ದನು ಅದರ ಕುತ್ತಿಗೆಯ ಮೇಲೆ ಕೊಡಲಿ ಬಿದ್ದು ಗಾಯವಾಯಿತು ಕೊನೆಗೆ ಅವನು ತಪ್ಪಿಸಿಕೊಂಡು ಹೋದನು ಕುಲದ ಹೆಸರನ್ನು ನೋಡಿ ಈ ವಿಷಯವನ್ನು ಹೊರಗೆ ಹಾಕದೆ ಇರುವಂತೆ ಕೇಳುತ್ತೇವೆ —ಚಂ.

ಈ ಮೈಸೂರು ಪಟ್ಟಣದಲ್ಲಿ ಹಿಂದೂ ಮುಸಲ್ಮಾನರೊಳಗಿನ ದಂಗೆಯು ಪೂರ್ಣವಾಗಿ ಶಾಂತವಾಯಿತು ನಾಗರ ಹಬ್ಬದ ಜಾತ್ರೆಯು ನಾಗದೇವಿಯಲ್ಲಿ ಆಗದೇ ಇದ್ದರೂ ಸೂಗುಬು ಹಕ್ಕೆಮ ಜಾತ್ರೆಯು ವರುಷಂಪ್ರತಿಯಂತೆ ಆಗುವದು ದಂಗೆಯಲ್ಲಿ ಹಿಡಿಯಲ್ಪಟ್ಟವರ ವಿಚಾರಣೆಯು ಪ್ರಾರಂಭವಾಗಿದೆ, ಕೆಲವರನ್ನು ಜಾಮೀನಿನ ಮೇಲೆ ಬಿಟ್ಟಿರುತ್ತಾರೆ. ಇವರ ಪೈಕಿ, ಬಿಟ್ಟವರನ್ನು ಕೇಳಿದ್ದಲ್ಲಿ ನಿರಪರಾಧಿಗಳೇ ಹೆಚ್ಚಾಗಿ ಹಿಡಿಯಲ್ಪಟ್ಟಿರುತ್ತಾರೆಂತ ತಿಳಿಯಬರುತ್ತದೆ. ದಂಗೆಯು ಉದ್ಭವಿಸಲಿಕ್ಕೆ ಹಿಂದುಗಳು ಚಮತ್ಕಾರಮಾದ ಕಾರಣವಿಲ್ಲವೆಂತ ಎಲ್ಲರೂ ಊಹಿಸುತ್ತಾರೆ. ಪ್ರಮುಖ ಮುಸಲ್ಮಾನ ಗೃಹಸ್ಥರ ಸಭೆಯು ಕಳೆದ ಸೋಮವಾರ ದಿನ ನ್ಯಾಯವಂತರ ಅಂಜುಮಾನಿ ಇಸ್ಲಾಮಿ ಎಂಬ ಕಚೇರಿಗೃಹದಲ್ಲಿ ಕೂಡಿತ್ತು; ಈ ದಂಗೆಯಲ್ಲಿ ಲುಕ್ಸಾನಪಟ್ಟಿರುವ ಎಲ್ಲ ಹಿಂದೂ ಮುಸಲ್ಮಾನರಿಗೆ ಜಾತಿ ಮತ ಭೇದವಿಲ್ಲದೆ ಸಹಾಯ ಮಾಡಬೇಕೆಂಬುವರ ಉದ್ದೇಶದಿಂದ ಹಿಂದೂ ಮುಸಲ್ಮಾನರ ಒಂದು ದೊಡ್ಡ ಜಾಹಿರ್ ಸಭೆಯನ್ನು "ಟೌನಹಾಲ್" ಅಥವಾ ಪ್ರೇಂಜಿ ಕಾಸವಜಿ ಇನ್‌ಸ್ಟಿಟ್ಯೂಟನಲ್ಲಿ ಕೂಡಿಸಬೇಕೆಂತ ನಿಶ್ಚೈಸಿರುತ್ತದೆ. ಈಗಲೇ ಹಿಂದೂಜನರ ಕಡೆಯಿಂದ ೫ ಸಾವಿರ ಮತ್ತು ಮುಸಲ್ಮಾನರ ಕಡೆಯಿಂದ ೫ ಸಾವಿರ ಈ ಪ್ರಕಾರ ೧೦ ಸಾವಿರ ರೂಪಾಯಿಗಳು ಹಿಂದೂ ಮುಸಲ್ಮಾನರು ಏಕಮಾಗಿ ಕೂಡಿಸಿರುತ್ತಾರೆಂತ ಈ ಸಭೆಯಲ್ಲಿ ನಡೆದ ಪ್ರಸಂಗದಿಂದ ತಿಳಿಯಬರುತ್ತದೆ.—ಕ ಸು

## EXTRACTS

ಟೈಬಸ್ ನದಿಯ ಸಮೀಪದ ಮೇಲೆ ಅವಳ್ಳಿಪ್ಪ ಒಬ್ಬ ಬಾಲಿಕೆಯು ತನ್ನ ತಾಯಿಯ ಆಜ್ಞೆ ಮೀರಿ ಬಾತುಕೋಳಿಯನ್ನು ಹಿಡಿಯುತ್ತಿದ್ದಳು. ಅವಳು ಅತ್ಯಂತ ನೀರಿದ್ದಡಿಗ್ಗ, ಇಳಿದು ಬಳಿಕ ನಡಿಯಿತು ಆಗಲು ಹೋದಳು ಅವಳನ್ನು ಬಯಸುತ್ತಿದ್ದ ಒಂದು ನಾಯಿ ನೀರಿನಲ್ಲಿ ಬಿದ್ದು ಅದರ ಕೆಳಗೆ ಹೋಗಿ ಆ ಹುಡುಗಿಯ ಜಬ್ಬೆಯನ್ನು ಕಚ್ಚಿ ಎಳೆದು ಬಹು ಸಾಹಸದಿಂದ ದಡಕ್ಕೆ ತಂದಿತು. ತಾಯಿ ಅವಳ ಬಳಿಯಲ್ಲಿ ಕೂತಿದ್ದವಳು, ಸುತೀಕ್ಷವಾಗಿ ಬಾಲವನ್ನು ಅಲ್ಲಾಡಿಸುತ್ತಲೂ ನಿಂತಿತು. ಸ್ವಲ್ಪ ಹೊತ್ತಿನ ಮೇಲೆ ಹುಡುಗಿಗೆ ಪ್ರಜ್ಞೆ ಬಂದು ತನ್ನ ಮನೆಗೆ ಹೋದಳು. ಆ ನಾಯಿ ಅವಳ ನೆರೆಮನೆಯಲ್ಲಿದ್ದ ಅದಕ್ಕೆ ಆಗಾಗ್ಯೆ ಸ್ವಲ್ಪ ತಿಂಡಿಯನ್ನು ಕೊಟ್ಟು ಅದನ್ನು ಸುತ್ತೀಕ್ಷಿಸುತ್ತಿದ್ದಳು. ಆ ದಿನ ಅದನ್ನು ತಂದುಕೊಳ್ಳುವ ನಾಯಿಯೂ ಇದ್ದರೂ ಅದಕ್ಕಿನ್ನು ಮೇಲೆ ಆಸಕ್ತಿದ್ದರು ಈ ಪ್ರಕಾರ ನಾಯಿಯ ಗುಣವನ್ನು ಅನೇಕ ವೇಳೆ ಜನರು ನೋಡುತ್ತಾರೆ.—ವೃ ಪ.

ಕಳೆದತಿಂಗಳ ೧೯ನೇ ತಾರೀಖು ಶನಿವಾರದಿನದ ಮಧ್ಯಾಹ್ನ, ಮಧ್ಯಾಹ್ನ ೩ ಘಂಟೆ ಸಮಯದಲ್ಲಿ ಬ್ಯಾಕರ ಯೆಂಬ ಒಬ್ಬ ಫೊಟೋಗ್ರಾಫ಼ರನು "ಮುಸಲ್ಮಾನರೇ! ನಿಮ್ಮ ಧರ್ಮ ರಕ್ಷಣೆ ಮಾಡಿ" ಎಂದು ಹಾಕುಬರಿಗೆ ಬಂದ ಚಿ ಮತ್ತು ಹಿಂತ ತನ್ನವರನ್ನು ಕೂಡಿ ಹಿಂದುಗಳ ಮೇಲೆ ಬಿದ್ದು ಅವರ ದೇವಸ್ಥಾನಗಳನ್ನು ಬಾಯುತಿರಿ ಮೂರ್ತಿಗಳನ್ನು ಮುರಿದು ನೀತಿವಿವೇಕಶೂನ್ಯರಾಗಿ ಮನೆಗಳನ್ನು ಹಾಳು ಮಾಡಿದರು. ಮುದಾಕಿ, ಭೇಂಡೀಬಜಾರ್, ಗ್ರಾಂಟಿ ರೋಡ್, ಓಲ್ಡ್ ವೇವಲ್ ಕಪೆಗಳಲ್ಲಿ ನಡೆದಿರುವ ಹಿಂದುಗಳ ದೇವಾಲಯಗಳು, ಗೋಶಾಲೆಗಳ ಮನೆಗಳನ್ನು ಮುರಿದು ನಷ್ಟಮಾಡಿದರು. ಯಾರು ಪ್ರತಿಭಟಿಸಲಿಲ್ಲ ಅವರನ್ನು ಮೂಲೆಗೊತ್ತಿ ಹೊಡೆದು ಕೊಲೆಗೈದರು. ಮುಸಲ್ಮಾನರು ತಮ್ಮ ಅಭಿಮಾನಕ್ಕೆ ಬಿದ್ದಿರುವ ಜನರು ಗಿರಣಿಯೊಳಗಿನ ಕೂಲಿಕಾರರು ಹೊರಟು ಬಂದು ಮುಂದೆ ಅವರ ಮದವನ್ನು ಬಿಡಿಸಿ ಓಡಿಸಿದರು. ಇಷ್ಟಾಗುವದರೊಳಗೆ ದಂಗೆಯು ಮುಂತಾಗಿ ಸುದ್ದಿ ಪೋಲೀಸಿನವರಿಗೆ ತಿಳಿಸಿದಾಗ ಅವರು ಯಾವತ್ತು ಭಾಗಗಳಲ್ಲಿಯೂ ಬಂದೋಬಸ್ತು ಮಾಡಿದರು. ಕೆಲವು ಪುಂಡುಜನರನ್ನು ಹಿಡಿದು ಲಾಕಪ್ಪಿನಲ್ಲಿಟ್ಟಿರುತ್ತಾರಂತೆ.

ಚಿಕಾಗೋ ಅಧಿಕಾರಿಗಳು ಸ್ಟೆಮೂರ್ ಎಂಬ ಏಕದೇಶ ಮನೋಭಿಪ್ರಾಯಗಳನ್ನು ತಿಳಿಯತಕ್ಕ (ಥಾಟ್‌ರೀಡರ್) ದೊಡ್ಡ ಮನುಷ್ಯರನ್ನು ಅವರ ಇಷ್ಟಾನುಸಾರ ಸಜೀವರಾಗಿ ಹೂತ ಮಿಟ್ಟಿವ ವಿರ್ಣಯಗಳನ್ನು ಮಾಡಬೇಕೆಂದಿದ್ದಾರೆ ಅವರನ್ನು ಒಂದು ಪೆಟ್ಟಿಗೆಯೊಳಗೆ ಇನ್ನೊಂದು ಪೆಟ್ಟಿಗೆ, ಅದರಲ್ಲಿ ಮತ್ತೊಂದು ಪೆಟ್ಟಿಗೆ ಹೀಗಿರುವಂಥಾ ಮೂರು ಪೆಟ್ಟಿಗೆಗಳಲ್ಲಿ ಒಳಗಿನ ಪೆಟ್ಟಿಗೆಯಲ್ಲಿ ಮಲಗಿ ಮೂರು ಪೆಟ್ಟಿಗೆಗಳನ್ನು ಕ್ರಮವಾಗಿ ಬೀಗ ಹಾಕಿ ಅದನ್ನು ಆರಡಿ ನೆಲವನ್ನು ಅಗೆದು ಆ ಗುಂಡಿಯಲ್ಲಿ ಇಟ್ಟು ಮೇಲೆ ಮಣ್ಣು ಮುಚ್ಚಿದ ಕೂಡಲೆ ಆ ಗೋರಿಯಲ್ಲಿ ಬಾರ್ಲಿ ಎಂಬ ಧಾನ್ಯವನ್ನು ಬಿತ್ತುವನು, ಆ ಧಾನ್ಯವು ಬೆಳೆದು ಫಲಬಿಡುವದಕ್ಕೆ ಬಹಳ ಕಾಲವಾಗುವದು ಈ ಪ್ರಕಾರ ಬಿತ್ತಿ ಕುಯಿಲಿಗೆ ಬರುವತನಕ ಶಾಪ್ರ ಭೂಮಿಯ ಗರ್ಭದಲ್ಲೇ ಇರುವರಂತೆ ಈ ಮಧ್ಯೆ ಯಾರಾದರೂ ಅನುಮಾನ ಬಂದಲ್ಲಿ ಗೋರಿಯನ್ನು ಆ ಕೂಡಲೆ ಅಗೆದು ತೆಗೆಯುವದಕ್ಕೆ ಒಳಗಿನಿಂದ ಈಚಗೆ ದರ್ಶನಾದ ಬರುವಂತೆ ಯೋಜನೆ ಮಾಡುವರು. ಸ್ಟೆಮೂರ್ ರವರು ಇದರಲ್ಲಿ ಜಯವನ್ನು ಹೊಂದಿದರೆ ಅನುಭವ ಜಗತ್ತಿನಲ್ಲೇ ವಾಸವಾಗಿ ಸ್ಥಿರಕೊಂಡು ಮನುಷ್ಯರಾಶಿಗೆ ಅನೇಕ ಉಪಕಾರಗಳನ್ನು ಮಾಡಲು ಯೋಚಿಸುತ್ತಾರಂತೆ. ಇನ್ನು ಕೆಲವು ದಿನಗಳಲ್ಲೇ ಈ ಪರೀಕ್ಷೆಯು ಚಿಕಾಗೋ ಪಟ್ಟಣದಲ್ಲಿ ಜರುಗುವದು.—ವೃ ಪ.

ಕಳೆದ ವಾರದಲ್ಲಿ ಮಿಸ್ಸರ್ಸ್ ಬಾಂಡ ರೆಕರ್, ರಾನಡೆ ಮುಂತಾದ ಪ್ರತಿಷ್ಠಿತರು ಸಮಾಜ-ಸುಧಾರ ಉಪದೇಶ ಬರೆಯುವ ತಮ್ಮ ಲೇಖನಗಳನ್ನು ತೆಗೆದು ನಾಶಮಾಡಿದ ಅದರಲ್ಲಿ ಕೇಸರಿ ಪತ್ರ ಬರೆದ ಪತ್ರವನ್ನು ಪ್ರಕಟಿಸಿರುವೆವಷ್ಟೇ ಆ ಪತ್ರವನ್ನು ಕಂಡು ಪಂಡಿತ ರಮಾಬಾಯಿಯವರು "ಸುಬೋಧಕ" ಪತ್ರಿಕೆಯ ಪತ್ರದ್ವಾರ ಏಂದ ತನ್ನ ಕರ್ತವ್ಯವನ್ನು ಹೇಳಿದ್ದಾರೆ! ಅದರಲ್ಲಿ "ನಾನಾಗಿ ಯಾರಿಗೂ ಕ್ರಿಸ್ತಮತವನ್ನು ಬೋಧಿಸುವದಿಲ್ಲ ಯಾವ ಹುಡುಗಿಯಾದರೂ ತಾನಾಗಿಯೇ ಬಂದರೆ ಅವಳನ್ನು ತಡೆಯುವದಿಲ್ಲ; ಇತರರು ತಮ್ಮ ತಮ್ಮ ಧರ್ಮದ ಪ್ರಕಾರ ನಡೆಯುವದಕ್ಕೆ ನನ್ನ ಪ್ರತಿಬಂಧಕವಿಲ್ಲ" ಎಂದು ಬಹುಕಪ್ಪಟದ ತಮ್ಮ ಕುದ್ದ ವರ್ತನವನ್ನು ಹೇಳಿಕೊಂಡಿದ್ದಾರೆ ಮತ್ತು ತಮ್ಮ ಮಾತಿನ ಸಮರ್ಥನ ಫಲವಾಗಿ ರಾ|| ರಾ|| ಕೆನ್ನ ಮತ್ತು ೧ ೦ ಎಂಬ ಗೃಹಸ್ಥರು ತಮಗೆ ಬರೆದ ಪತ್ರಗಳ ಸಾರಾಂಶವನ್ನು ಕೊಟ್ಟಿರುತ್ತಾರೆ. ಪರಂತು ರಾವ್ ಬಹದ್ದೂರ್ ರಾನಡೆಯವರು ಈ ಸಂಬಂಧವಾಗಿ ಗುಪ್ತ ತನಿಖೆ ನಡಿಸಿದಾಗ್ಗೆ ಪಂಡಿತ ರಮಾಬಾಯಿಯವರ ಪ್ರತಿನಿಧಿಗೆ ೨೫ ಹುಡುಗಿಯರು ಹೋಗುವದಾಗಿ ಕಂಡುಬಂದಿತ್ತಂತೆ. ೨೫ ಹುಡುಗಿಯರ ಪೈಕಿ ೪—೬ ಮಂದಿಗೆ ಅವರ ಪಾಲಕರ ಕರೆ ಅನುಮೋದನ ವಿರುವುದು! ಆದರೆ ನಿಕ್ಕ ೨೦ ಮಂದಿಯ ಹಾದಿ ಯೇನು? ಇವರೆಲ್ಲರೂ ಸದನಕ್ಕೆ ಬರುವ ಮೊದಲು ಅವರಿಗೆ ಕ್ರಿಸ್ತಮತದ ಗಾಳಿಯು ಪಟ್ಟಿದ್ದಿಲ್ಲ ಆದರ ಮೇಲೆ ಅವರ ನಡತೆಯಲ್ಲಿ ಬದಲು ಉಂಟಾಗಬೇಕಾದರೆ ರಮಾಬಾಯಿಯವರ ಉಪದೇಶವಲ್ಲದೆ ಮತ್ತೇನು? ಎಲ್ಲ ಹುಡುಗಿಯರ ವಿಷಯದಲ್ಲಿ ರಮಾಬಾಯಿಯವರು ಜವಾಬು ದಾರರಲ್ಲವೇ?

ಶಾರದಾ ಸದನದಿಂದ ಕ್ರೈಸ್ತಸುವಿನ ಪವಿತ್ರಸ್ಥಾನದ ದೋರೆಯುವ ಮಾರ್ಗವೇ ಆಗಿದೆ ಆದದರಿಂದ ಅಲ್ಲಿರುವ ಹುಡುಗಿಯರ ಪಾಲಕರೂ ತಂದೆ ತಾಯಿಗಳೂ ತಮ್ಮ ತಮ್ಮ ಹುಡುಗಿಯರನ್ನು ಮನೆಗೆ ಕರಸಿಕೊಳ್ಳಬೇಕು. ಯಾರಿಗೆ ತಮ್ಮ ಹುಡುಗಿಯರು ಕ್ರಿಸ್ತಮತವನ್ನು ಅಂಗೀಕರಿಸುವರೋ ಹೆದರಿಲ್ಲವೆಂದು ತಿಳಿಯುತ್ತಾರೋ ಅವರಿಗೆ ಹೇಳತಕ್ಕದ್ದೇನೂ ಇಲ್ಲ ತಮ್ಮ ಹುಡುಗಿಯರನ್ನು ಸದನ ಬಿಡಿಸಿ ಮನೆಗೆ ಕರೆಯುವದರಿಂದ ಅವರ ವಿದ್ಯಾಭ್ಯಾಸಕ್ಕೆ ಹಾನಿಯಾಗುವದೆಂದು ಭಯಪಡುವವರು, ಅವರನ್ನು ಪುಣೆಯೊಳಗಿನ "ಫೀಮೇಲ್ ಹೈಸ್ಕೂಲಿನಲ್ಲಿಯೂ, ಟ್ರೇನಿಂಗ್ ಕಾಲೇಜಿನಲ್ಲಿಯೂ" ಇಡಬಹುದು. ಕೇವಲ ದ್ರವ್ಯದ ಲೋಭದಿಂದ ಕುಲಗೇಡಿಗಳಾಗಿ ಬೇಕೆಂಬ ಇಚ್ಛೆಯು ಆರ್ಯರಲ್ಲಿ ಇನ್ನೂ ಬಾವರಿಕ್ಕಿಲ್ಲವೆಂದು ನಂಬುತ್ತೇವೆ —ಹು. ಪ.

BANGALORE—Printed and published at the KARNATAKA PRESS, No 40, HOSPITAL ROAD, CITY—1893

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

## ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning.**

ಪ್ರಕಾಮವಿವಿಧವೃತ್ತವ್ಯಾಪನಗಮನಾರ್ಥ ಕರ್ಣಾಟಕಪ್ರಕಾಶನನಮಾವಿಧಾಪ್ರಶ್ರತನಾಹಿತೀಕೊಭಿತಾ ‖ ವ್ಯಗಾಂಕಹಿತವಾಸರೆನಿಹಿತಮುದ್ರಣಾಸಜ್ಜನ್ಯರ್ದ್ಧಿಕಾಸುಪರಿಶೋಭಿತಾದಿಕತಿವರ್ಷನಸಂಸುಂಪುಡು ।

Vol. XX ] ಸಂಪುಟ ೨೦. | BANGALORE—MONDAY, SEPTEMEBR 11, 1893. ಬೆಂಗಳೂರು—ಸರ್ ೧೮೯೩ನೇ ಇಸವಿ ಸೆಪ್ಟಂಬರ್ ೧೧ ನೇ ತಾರೀಖ್ ಸೋಮವಾರ. [ No 36 [ಸಂಖ್ಯೆ ೩೬.


### ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

| | ಸ್ಥಳೆದವರಿಗೆ | ಪರಸ್ಥಳೆದವರಿಗೆ |
|---|---|---|
| ಸಾಲ್ ಒಕ್ಕೆ | 6—0—0 | 8—0—0 |
| 6 ತಿಂಗಳಿಗೆ | 4—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ಸಾಲಒಕ್ಕೆ | 3—0—0 | 4—0—0 |
| 6 ತಿಂಗಳಿಗೆ | 1—12—0 | 2—8—0 |

[illegible] ಪ್ರತಿಕೆಯ ಚಂದಾ [illegible] ತಾರೀಖಿನಿಂದ [illegible] ಒಂದು [illegible] ಪ್ರತಿ [illegible] ಪತ್ರಿಕೆ [illegible] ಕನ್ನಡ [illegible] ಅಂಗೀಕರಿಸಲ್ಪಡಲಾರದು.

### ಪ್ರಕಟನೆಯ ದರ.

ಮೊದಲಿನ ದಫಾ ಪ್ರತಿ ಪಂಕ್ತಿಗೆ ೦—೨—೦

ಎರಡನೆಯ ದಫಾ ಪ್ರತಿ ಪಂಕ್ತಿಗೆ ೦—೧—೦

[illegible]

*ADVERTISEMENTS*

**NOTICE.**

**VAIDYASARA SANGRAHA**

A TREATISE ON THE [illegible] HINDU MEDICINE

*Price including Postage Rs 5 0 0*

ವೈದ್ಯಸಾರ ಸಂಗ್ರಹ.

ಈ ಗ್ರಂಥಕ್ಕೆ [illegible] ಬೇಕಾದವರು [illegible] ಹಣವನ್ನು ಕಳುಹಿಸಬೇಕು [illegible] ಸಿಗಲಾರದು.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಖರ್ಚು, ರಿಜಿಸ್ಟರ್ ಪ್ರತಿ ಒಂದಕ್ಕೆ ರೂ 5-0-0

ಟಿ. ಬಿ. ವೆಂಕಟಾಚಾರ್,

ಬೆಂಗಳೂರ್, ಹೊಸ ಆಸ್ಪತ್ರೆ [illegible]

### ನೋಟೀಸು.

**ಬೆಂಗಳೂರು ಕರ್ನಾಟಕ ಪ್ರೆಸ್.**

೧೮೬೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ, ಸಕಲವಿಧ ಕೆಲಸಗಳು ಸುಲಭವಾಗಿಯೂ ತೀವ್ರವಾಗಿಯೂ ಶುದ್ಧವಾಗಿಯೂ, ಮಾಡಲ್ಪಡುವವು.

ಇದರಲ್ಲಿ ಸದ್ಯಃ ಇಂಗ್ಲಿಷ್ ಕನ್ನಡ ಕೆಲಸ [illegible] ನಡೆಯುತ್ತಿವೆ. ಇತರ ತಪಸೀಲ್‌ಗಳನ್ನು [illegible] ಬರೆದು ತಿಳಿದುಕೊಳ್ಳಬಹುದು.

### ನೋಟೀಸ್.

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ. ಕಮಿಷನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಜಾಗ್ರತೆಯಿಂದ ವ್ಯಾಲ್ಯೂ ಪೇಯಬಲ್ ಪೋಸ್ಟಮೂಲಕ ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರಹ ಔಷಧಗಳು, ಪುಸ್ತಕಗಳು, ಮುತ್ತುಗಳು, ಹವಳಗಳು, ರತ್ನಗಳು, [illegible] ಗಡಿಯಾರಗಳು, [illegible] ಮತ್ತು ಇತರ ಸಾಮಾನುಗಳು.

ಇವುಗಳು ಬೇಕಾದವರು [illegible] ಪೋಸ್ಟ್ ಕಾರ್ಡ್ [illegible] ಬರೆಯಬೇಕು.

ವಿಳಾಸ — ಗಣೇಶ ರಾಮಚಂದ್ರ ಕರ್ಕಿ, ಮತ್ತು ಕಂಪನಿ, ಕಮಿಷನ್ ಏಜಂಟ್ಸ್, [illegible]

### ನೋಟೀಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ನಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿವೆ ಬೇಕಾದವರು ಹಣವನ್ನು ಕಳುಹಿಸಿ ತರಿಸಿಕೊಳ್ಳಬಹುದು.

### ಸಂಸ್ಕೃತ ಗ್ರಂಥಗಳು.

| | ರೂ | ಆ | ಪೈ |
|---|---|---|---|
| ಸಟೀಕಾ ವೈದ್ಯಸಾರ ಸಂಗ್ರಹ | ೫ | ೦ | ೦ |
| „ [illegible] | ೧ | ೧ | ೦ |
| „ [illegible] | ೦ | ೭ | ೦ |
| „ [illegible] | ೧ | ೦ | ೦ |
| „ ಟಿ॥ [illegible] | ೦ | ೩ | ೦ |
| „ ಟಿ॥ [illegible] | ೦ | ೧ | ೦ |
| „ ಟಿ॥ [illegible] (ಸಟೀಕ) | ೦ | ೪ | ೧ |
| ವಿಷ್ಣುಸಹಸ್ರನಾಮ [illegible] | ೦ | ೨ | ೦ |
| ಸೂರ್ಯ [illegible] | ೦ | ೬ | ೦ |
| [illegible] | ೦ | ೨ | ೦ |
| [illegible] | ೦ | ೬ | ೦ |
| ೧ [illegible] | ೦ | ೧ | ೦ |

### ಕನ್ನಡ ಗ್ರಂಥಗಳು.

| | ರೂ | ಆ | ಪೈ |
|---|---|---|---|
| [illegible] | ೩ | ೦ | ೦ |
| [illegible] | ೧ | ೨ | ೦ |
| [illegible] | ೧ | ೮ | ೦ |
| ಪಂಚತಂತ್ರ [illegible] | ೦ | ೩ | ೦ |
| [illegible] | ೦ | ೬ | ೦ |
| [illegible] | ೦ | ೨ | ೦ |
| [illegible] | ೦ | ೬ | ೦ |
| [illegible] | ೦ | ೨ | ೩ |
| ಸುದಾಮಚರಿತ್ರೆ | ೦ | ೧ | ೦ |
| [illegible] ಚರಿತ್ರೆ | ೦ | ೧ | ೯ |
| [illegible] | ೧ | ೦ | ೦ |
| [illegible] | ೦ | ೧೨ | ೦ |
| [illegible] | ೨ | ೦ | ೦ |

### ಪ್ರಕಟನೆ.

೧ನೇ ಸೆಪ್ಟಂಬರ್, ೧೮೯೩

ಸರ್ ೧೮೯೩ನೇ ಇಸವಿ ಸೆಪ್ಟಂಬರ್ ೧೧ ನೇ ತಾರೀಖ್ ಮಧ್ಯಾಹ್ನ ೧೨ ಘಂಟೆಗೆ ಬೆಂಗಳೂರ್ ಸಂಡೆಕೋರ್ಟಿನಲ್ಲಿ ಹುಣಸೆ ಮರಗಳ ಫಸಲಿನ ಹರಾಜು ಮಾಡಲ್ಪಡುವುದು.

CHARLES M. RUSSELL,
*Superintendent of Forests and Government Farms, Bangalore District*

### ನೋಟೀಸ್.

ಬೆಂಗಳೂರ್ [illegible] ತಮ್ಮ [illegible] ಲಕ್ಷ್ಮೀ [illegible] ಕುಟುಂಬ [illegible] ಕೃಷ್ಣ [illegible] ಸಮಸ್ತ ಜನಗಳಿಗೂ [illegible] ತಿಳಿಸುವದೇನೆಂದರೆ :—

ನನ್ನ [illegible] ನಾನು [illegible] ೧೮೯೧ನೇ ಇಸವಿ [illegible] ಸರ್ಟಿಫಿಕೇಟ್ [illegible] ಈ [illegible] ೧೮೯೨ನೇ ಇಸವಿ ಆಗಸ್ಟ್ [illegible] ತಮ್ಮ [illegible] ಕೃಷ್ಣ [illegible] ಆದ್ದರಿಂದ [illegible] ನನ್ನ ಅನ್ಯಥಾ [illegible] ಇಲ್ಲ, ಮತ್ತು [illegible]

[illegible] ನೇ ಸೆಪ್ಟಂಬರ್, ೧೮೯೩ನೇ ಇಸವಿ.

ಈ [illegible] ತನ್ನ [illegible]

### ನೋಟೀಸು.

[illegible]

ಈ ವಾರವೊಳು ಅವರವರ ಚಂದಾ ಬಾಕಿಯನ್ನು ಸಮೂಹಿಸಿ ಕಾರ್ಡ ಬರೆಯುವವು. ಅದನ್ನು ನೋಡಿದ ಕೂಡಲೆ ಅವರಲ್ಲಿ ಕಂಡ ಬಾಕಿಯನ್ನು ಕಳುಹಿಸಿಕೊಡದವರಿಗೆ ಮುಂದಿನ ವಾರದಲ್ಲಿ ಪತ್ರಿಕೆ ರವಾನಿಸಲ್ಪಡಲಾರದು.

೯—೯—೯೩ ಪ್ರೊಪ್ರೈಟರ್.

### THE MONEY MARKET.

ಮದರಾಸ್, ಶನಿವಾರ, ತಾರೀಖ್ 9 ನೇ ಸೆಪ್ಟಂಬರ್ 1893

ಸೇಕಡ 4 ರೂ. ಬಡ್ಡಿ ಗವರ್ನ್ಮೆಂಟ್ ಪತ್ರಗಳು ರೂಪಾಯಿಗಳು, 105-2-0 ರಿಂದ 105-10-0 ವರೆಗೆ.

ಸೇಕಡ [illegible] ರೂಪಾಯಿಗಳ ಬಡ್ಡಿ ಗವರ್ನ್ಮೆಂಟ್ ಪತ್ರಗಳು ರೂಪಾಯಿಗಳು 96 ರಿಂದ 97ರ ವರೆಗೆ

ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತು 980 ಲಾಗಾಯಿತು 985 ವರೆಗೆ.

[illegible] ಬ್ಯಾಂಕ್ ಷೇರುಗಳು, (100) ಬಾಬತು 150 ರಿಂದ 155 ವರೆಗೆ.

ಸವರಿನ್‌ಗಳು, 16-2-0 ಇಂದ 16-4-0 ವರೆಗೆ.

ಬ್ಯಾಂಕಿ [illegible] ಲಂಡನ್ನಿಗೆ

6 ತಿಂಗಳ ವಾಯಿದೆಗೆ, 1s. 3 11/32d.

ಡಿಟೋ 4 ತಿಂಗಳವಾಯಿದೆಗೆ, 1s 3 9/32d

ಡಿಟೋ [illegible], 1s. [illegible] 3/16d.

### ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, SEPTEMBER 11, 1893.

೧೮೯೩ನೇ ಇಸವಿ ಸೆಪ್ಟಂಬರ್ ೧೧ ನೇ ಸೋಮವಾರ.

### ಐರ್‌ಲ್ಯಾಂಡ್ ರಾಜ್ಯದ ಮಸೂದಾ ಆಕ್ಟನ್ನು ಕುರಿತು.

ಈಗ ಇಂಗ್ಲೆಂಡ್ ರಾಜ್ಯದ ಪ್ರಧಾನಮಂತ್ರಿಯವರಾಗಿರುವ ಮಿ॥ ಡಬ್ಲ್ಯೂ ಇ. ಗ್ಲ್ಯಾಡಸ್ಟನ್‌ಯವರಿಗೂ, ಅವರು ಯಾವಕಕ್ಷಿಗೆ ಮುಖ್ಯರೋ ಆ ಕಕ್ಷಿಯವರಿಗೂ [illegible] ಕೀರ್ತಿ ಪ್ರತಿಷ್ಠೆಗಳುಂಟಾಗುವಂತೆ, ಐರಿಷ್‌ಜನ, ಅಂದರೆ ಐಯರ್‌ಲ್ಯಾಂಡ್ ರಾಜ್ಯಕ್ಕೆ ಪ್ರತ್ಯೇಕ ಪಾರ್ಲಿಮೆಂಟ್ ಸಭೆಯ ವಿಷಯದನ್ನು ಕುರಿತ ಮಸೂದಾ ಆಕ್ಟು ಹೌಸ್ ಆಫ್ ಕಾಮನ್ಸ್ ಸಮಾಜದಲ್ಲಿ ಮಂಜೂರಾಗಿ ಈಗ ಹೌಸ್ ಆಫ್ ಲಾರ್ಡ್ಸ್‌ಗಳ ಸಮಾಜದಲ್ಲಿ ವಿಚಾರ ನಡೆದು ಕಡೆಗೆ ತಳ್ಳಲ್ಪಟ್ಟಿತೆಂದು ಮೊನ್ನೆಯದಿನದಿಂದ ತಂತಿವರ್ತಮಾನದ ಮೂಲಕ ತಿಳಿಯಬಂತು. ಮಿ॥ ಗ್ಲ್ಯಾಡಸ್ಟನ್ ಯವರನ್ನೂ ಅವರ ಉದ್ದೇಶ ಪ್ರಯತ್ನಗಳನ್ನೂ ಬಿಡುವಿಧವಾಗಿ ದೂಷಿಸುವದಕ್ಕಾಗಿಯೇ ಅನೇಕ ಸಭೆಗಳು ಜರಿಗಿದವು, ವರ್ತಮಾನ ಪತ್ರಿಕೆಗಳು ಬೇಕಾದಮಟ್ಟಿಗೆ ದೂಷಿಸಿದವು. ಕಡೆಗೆ ಜ್ಞಾನವಯೋವೃದ್ಧರೆಂಬ ಪರ್ಯಾಲೋಚನೆ ಸಹ ಇಲ್ಲದಂತೆ ಮಿ॥ ಗ್ಲ್ಯಾಡಸ್ಟನ್ ಯವರನ್ನು ಅವಕಾಶವಿಲ್ಲದ ಬೀದಿಗಳಲ್ಲಿ ಹೊಡೆಯಲಿಕ್ಕೆ ಸಹ ಅನೇಕರು ಪ್ರಯತ್ನಪಟ್ಟರು. ಈ ಸಂದರ್ಭದಲ್ಲಿ ವಿದ್ಯಾ [illegible] ಕೂಡ ವಿವೇಕಿಗಳಾದವರಿಗೆ [illegible] ಹ್ಯಾಗೆಂದರೆ: ಆಗ್ಗೆ ಕೆಲವು ತಿಂಗಳ ಹಿಂದೆ ಕಾಲಗತರಾದ [illegible] ರಾಜಕವಿಗಳಲ್ಲೊಬ್ಬರಾಗಿದ್ದ ಟನಿಸನ್ ಯವರು ಮಿ॥ ಗ್ಲ್ಯಾಡಸ್ಟನ್‌ಯವರ ವಿಷಯದೊಳು ಮಾಡಿದ್ದ ಸಿದ್ಧಾಂತವೇನೆಂದರೆ ಮಿ॥ ಗ್ಲ್ಯಾಡಸ್ಟನ್‌ಯವರು ಸ್ವರೂಪತಃ ನನಗೆ ಪ್ರೀತಿಪಾತ್ರರಾಗಿದ್ದರೂ ಐರ್‌ಲ್ಯಾಂಡ್ ರಾಜ್ಯವಿಷಯಕವಾದ ಅವರ ಪ್ರಕೃತೋದ್ದೇಶವು [illegible] ಬಹಳ ಅಪಾಯಗಳಾಗಿರುತವೆ. ಇದೇ ವಿಷಯದಲ್ಲಿ ಮೈಸೂರಿನವರೆಂಬವರು ತಮ್ಮ ಸ್ನೇಹಿತರೊಬ್ಬರಿಗೆ ಬರೆದಕಾಗದದಲ್ಲಿ ಮಿಸ್ಟರ್ ಗ್ಲ್ಯಾಡಸ್ಟನ್ ಯವರು ಆಗ್ಗೆ ಹತ್ತು ವರುಷಗಳ ಹಿಂದೆ ಐರ್‌ಲ್ಯಾಂಡಿಗಾಗಿ ಮಾಡಿದ ಶ್ಲಾಘ್ಯಗಳಾದ ಕೆಲಸಗಳನ್ನು ನಾವೆಂದಿಗೂ ಮರೆಯತಕ್ಕವನಲ್ಲ, ವರುತು ಈಗ ಅವರ ಹಸ್ತಗತವಾಗಿರುವ ಕಾರ್ಯವು ಧೂರ್ತರಾಗುವಂತೆ ಅವಕಾಶ ಕೊಡಲ್ಪಡುವದಾದರೆ ಮಿ॥ ಗ್ಲ್ಯಾಡಸ್ಟನ್ ಯವರೇ ಪ್ರಪಂಚದಲ್ಲಿ ಎಂದಿಗೂ ಜನಿಸಲಿಲ್ಲವೆಂದು ನಾವೆಲ್ಲರೂ ಭಾವಿಸಿ ಕ್ಲೇಶ ಪಡಲಿಕ್ಕೆ ಬೇಕಾದಷ್ಟು ಕಾರಣಗಳು ಕಲ್ಪಿಸುವರಾಗುತ್ತಾರೆ, ಎಂಬದಾಗಿ ಬರೆದಿರುತ್ತಾರೆ. ಸ್ವದೇಶೀಯರಾಗಿಯೂ ಸ್ವಜಾತೀಯರಾಗಿಯೂ ಇರುವ ವೆರಿಗೊಂದು ಮೇಲನ್ನುಂಟುಮಾಡುವವಕ್ಕಾಗಿ ಸಂಕಲ್ಪಿಸಿ ಪ್ರವರ್ತಿಸಿರುವ ಮನುಷ್ಯರ ವಿಷಯದಲ್ಲಿದ್ದವರ ಅನುರಾಗವು ಅಲ್ಲಿನ ಜನರಿಗ

-ನೆರೆಗೊಂಡಿರುವಾಗ್ಯೂ ಪರಶ್ರೇಯೋಭಿಲಾಷಿತ್ವವನ್ನವರಲ್ಲಿ ನಾವು ಹ್ಯಾಗೆ ನಿರೀಕ್ಷಿಸುವದಕ್ಕೆ ಸಾಧ್ಯವಾಗುವದು ? ಇಷ್ಟಾದಾಗ್ಯೂ ಮಿ॥ ಗ್ಲ್ಯಾಡಸ್ಟನ್‌ಯವರು ತಮ್ಮ ಪ್ರತ್ಯರ್ಥಿಗಳ ಪ್ರಯತ್ನಗಳ್ಯಾವದನ್ನೂ ಸ್ವಲ್ಪವೂ ಲಕ್ಷ್ಯದೊಳಗಿಡದೆ ಕನ್‌ಸರವೆಟಿವ್ ಕಕ್ಷಿಯವರ ಗರ್ವವು ಭಂಗವಾಗುವಂತೆ ತಮ್ಮ ಉದ್ದೇಶವಂ ಸಫಲಗೊಳಿಸಿ ಐರ್ಲೆಂಡಿನ ಐರಿಷ್ ಮತ್ತು ಇಂಗ್ಲಿಷ್ ಪ್ರಜೆಗಳ ದೃಢತರವಾದ ಗೌರವ ಕೃತಜ್ಞತೆಗೆ ಪಾತ್ರರಾದದಂ ಕೇಳಲಿಕ್ಕೆ ನಾವು ಬಹಳ ಸಂತೋಷಿಸುತ್ತೇವೆ. ಈಗ ಹೌಸಾಫ್ ಲಾರ್ಡಗಳಿಂದ ತಿರಸ್ಕರಿಸಲ್ಪಟ್ಟ ಮಸವಿದೆಯ ಭವಿಷ್ಯದೂ ಹ್ಯಾಗಿದ್ದಾಗ್ಯೂ ಮಿ॥ಗ್ಲ್ಯಾಡಸ್ಟನ್‌ಯವರ ದೃಢತರವಾದ ಸಂಕಲ್ಪಕ್ಕೂ ಅವರ ಮನೋನಿಶ್ಚಯಕ್ಕೂ, ಪ್ರಜಾನುರಾಗಕ್ಕೂ ಸದರೀ ಮಸವಿದೆಯು ಸಾಕಾದ ನಿದರ್ಶನವೆಂದೆನ್ನಿಸಿಕೊಳ್ಳದೆ ಹೋಗಲಾರದು. ಮಿ॥ಗ್ಲ್ಯಾಡಸ್ಟನ್‌ಯವರು ತಮ್ಮಲ್ಲಿಡಪ್ಪಟ್ಟನುಬಳೆಯನ್ನು ಲೇಶವೂ ಹೋಗಲಾಡಿಸಿಕೊಳ್ಳದೆ ಸರ್ವಪ್ರಕಾರದಿಂದಲೂ ಕಾಪಾಡಿಕೊಂಡರೆಂಬದೂ ಅವರು ಮತ್ತೊಂದಾವರ್ತಿ ಸಂದರ್ಭವುಂಟಾಗಿ, ಪ್ರಜೆಗಳಿಗೆ ತಮ್ಮ ಕರ್ತವ್ಯವಂ ತಿಳಿಸುವಾಗ ಐರ್ಲ್ಯಾಂಡ್ ರಾಜ್ಯದ ಪ್ರಭಾವಾಭಿವೃದ್ಧಿಯಂಬಯಸಿ ಅವರಿದುವರೆಗೆ ಮಾಡಿದ ಮಹತ್ತರ ಪ್ರಯತ್ನಗಳೂ ಸ್ವಲ್ಪವೂ ವ್ಯರ್ಥವಾಗದೆ ಹೋಗಲಾರವು. ಮುಖ್ಯವಾಗಿ ಮಿ॥ಗ್ಲ್ಯಾಡಸ್ಟನ್‌ಯವರು ಐರ್ಲ್ಯಾಂಡ್‌ರಾಜ್ಯದ ಕ್ಷೇಮವಂಕೋರಿ ಮಾಡಿದ ಏರ್ಪಾಡಿನ ಫುರೋವೃದ್ಧಿಯನ್ನೀದೇಶೀಯರು ಬಹಳ ಆಸಕ್ತಿಯೊಡನೆ ನಿರೀಕ್ಷಿಸುತ್ತಲಿದ್ದಾರೆ. ತತ್ಕಾಲದೊಳಗೂ ಇಲ್ಲಿನವರಿಗೆ ಸಾಕ್ಷಾತ್ಸಂಬಂಧವಿಲ್ಲದ್ದಲ್ಲದೆ ಹೋದಾಗ್ಯೂ ಕಾಲಾಂತರದಲ್ಲಿ ಲಭಿಸಬಹುದಾದ ಪರಂಪರಾ ಪ್ರಯೋಜನದಿಂದಲೂ ವಿಶೇಷ ಉತ್ಸಾಹವನ್ನುಂಟುಮಾಡಿರುತಿದೆ.

## ಇಂಡ್ಯಾದೇಶದ ಹೊಸ ವೈಸರಾಯಿಯವರು

ಈಗ ಇಂಡ್ಯಾದೇಶದ ವೈಸರಾಯಿ ವ ಗವರ್ನರ ಜನರಲ್ಲಾಗಿರುವ ಲಾರ್ಡ್ ಲ್ಯಾನ್ಸಡೌನ್ ಯವರು ತಮ್ಮ ಕೆಲಸದಿಂದ ನಿವೃತ್ತರಾಗಿ ಸ್ವದೇಶಕ್ಕೆ ಹೊರಡಬೇಕಾದ ಕಾಲವು ಸನ್ನಿಹಿತವಾಗಿದ್ದಾಗ್ಯೂ ಅದ್ಯಾಪಿ ಯಾವ ಕಾರಣದಿಂದಲೋ ಅವರ ಉತ್ತರಾಧಿಕಾರಿಯಾಗಿ ಬೇರೆಯೊಬ್ಬರು ಮೊಕರರ್ ಮಾಡಲ್ಪಡದಿದ್ದದಂ ಕಂಡು ಯೆಲ್ಲರು ಆಶ್ಚರ್ಯಪಡುತ್ತಲಿದ್ದರು. ಹೀಗಿರುವಲ್ಲಿ ಮೊನ್ನೆ ಮಂಗಳವಾರ ೫ನೇ ತಾರೀಖಿನಲ್ಲಿ ಲಂಡನ್ ಪಟ್ಟಣದಿಂದ ಬಂದ ತಂತಿ ವೃತ್ತಾಂತದ ದೆಸೆಯಿಂದ ಕ್ವೀನ್ಸಲ್ಯಾಂಡ್ ರಾಜ್ಯದ ಗವರ್ನರರವರಾದ ಜನರಲ್ ಸರ್ ಹೆನ್ರಿ ವೈಲಿ ನಾರ್ಮನ್ ಯೆಂಬವರು ಲಾರ್ಡ್ ಲ್ಯಾನ್ಸಡೌನ್ ಯವರ ಪ್ರತ್ಯಾಮ್ನಾಯರಾಗಿ ಇಂಡ್ಯಾದೇಶದ ವೈಸರಾಯಿ ಕೆಲಸದಲ್ಲಿ ನಿಯಮಿಸಲ್ಪಟ್ಟಿರುವಂತೆ ತಿಳಿಯಬರುತಿದೆ. ಇದುವರೆಗೆ ಈ ಕೆಲಸಕ್ಕೆ ಉಮೇದವಾರರೆನ್ನಿಸಿಕೊಂಡು ಆಗಿಂದಾಗ್ಯೆ ವೃತ್ತಾಂತ ಪತ್ರಿಕೆಗಳು ಸೂಚಿಸುತಿದ್ದಂಥಾ ದೊಡ್ಡ ಮನುಷ್ಯರ ಪಟ್ಟಿಯಲ್ಲಿ ಮೇಲೆ ಕಂಡವರು ಸೇರಿರಲಿಲ್ಲವು. ಲಾರ್ಡ್ ಹರಿಸಲ್, ಲಾರ್ಡ್ ಕ್ರೋಮರ್, ಲಾರ್ಡ್ ಸ್ಪೆನ್ಸರ್, ಲಾರ್ಡ್ ರಾಬರ್ಟ್ಸ್, ಈ ನಾಲ್ವರ ಪೈಕಿ ಯಾರಾದರೊಬ್ಬರು ವೈಸರಾಯಿಯಾಗಿ ನಿಯಮಿಸಲ್ಪಡುವರೆಂದು ಪ್ರಜೆಗಳು ದೃಢವಾಗಿ ನಂಬಿದ್ದರು. ಆದರೆ ಈಗ ನಡೆದ ಏರ್ಪಾಡು ಜನರಿಗೆ ವಿಶೇಷ ಆಶ್ಚರ್ಯವನ್ನುಂಟುಮಾಡದೆ ಹೋಗಲಾರದೆಂದೆಣಿಸುತ್ತೇವೆ. ಸರ್ ಹೆನ್ರಿ ವೈಲಿ ನಾರ್ಮನ್, ಜೀ. ಸಿ. ಬಿ. ಜೀ. ಸಿ. ಎಂ. ಜಿ, ಸಿ. ಐ. ಇ. ಯವರನ್ನು ಇಂಡ್ಯಾ ದೇಶದ ವೈಸರಾಯಿಯವರಾಗಿ ನಿಯಮಿಸಿದ್ದು ಆಕ್ಷೇಪಣೀಯವೆಂದು ಅನೇಕರ ತಾತ್ಪರ್ಯವಾಗಿರುತಿದೆ. ಇವರ ವಯಃಪರಿಮಿತಿಯನ್ನೂ, ವಹಿಸಬೇಕಾಗಿರುವ ಕೆಲಸದ ಜವಾಬ್ದಾರಿಯನ್ನೂ, ಇವರು ನಿರ್ವಹಿಸಬೇಕಾಗಿರುವ ಕಾರ್ಯಬಾಹುಳ್ಯವನ್ನೂ ಆಲೋಚಿಸಿ ನೋಡಿದರೆ ೬೭ ವರುಷಗಳ ವಯಸ್ಸುಳ್ಳ ಒಬ್ಬ ವಯೋವೃದ್ಧರನ್ನು ಚೂನಾಯಿಸಿ ಮೊಕರರ್ ಮಾಡಿದ್ದು ಯುಕ್ತವಲ್ಲವೆಂಬದು ಕೆಲವರ ಪಕ್ಷವಾಗಿರುತಿದೆ. ಮಹಾರಾಜ್ಞೀ ಪ್ರತಿನಿಧಿಯಾಗಿರುತ ಈ ರಾಜ್ಯವಂ ಪಾಲಿಸತಕ್ಕವರು ವಯೋವೃದ್ಧರಾಗಿಯೂ, ರಾಗದ್ವೇಷಾದಿ ವಿರುದ್ಧಗುಣ ರಹಿತರಾಗಿಯೂ, ಬಹಳ ಉಪಶಾಂತರಾಗಿಯೂ, ಪ್ರಜಾನುರಾಗಪೂರ್ಣರಾಗಿಯೂ ಇರಬೇಕಾದುದರಿಂದ ತಾದೃಶ ಗುಣಗಳು ಪ್ರಾಯೇಣ ಅವರ ವಯಸ್ಸಿನಲ್ಲಿಯೇ ಉಂಟಾಗುವದಾಗಿ ಇವರ ವಯಃಪ್ರಯುಕ್ತವಾದ ಆಕ್ಷೇಪಣೆಯು ಆದರಣೀಯವಲ್ಲವೆಂಬದಾಗಿ ಇತರರು ಕೆಲವರ ತಾತ್ಪರ್ಯವಾಗಿರುತಿದೆ. ಇಂಡ್ಯಾದೇಶಕ್ಕೆ ಇದುವರೆಗೆ ವೈಸರಾಯಿಗಳಾಗಿ ಬಂದು ಹೋದವರ ಪೈಕಿ, ಸರ್. ಹೆನ್ರಿ ವೈಲಿ ನಾರ್ಮನ್‌ಯವರೇ ವಯೋಧಿಕರಾಗಿರುತ್ತಾರೆ. ವಾರನ್‌ಹೇಸ್ಟಿಂಗ್ಸ್ ಯವರ ಕಾಲದ ಮೊದಲು, ಇದುವರೆಗೆ ವೈಸರಾಯಿಗಳಾಗಿ ಬಂದವರ ವಯಸ್ಸಂಖ್ಯೆಯನ್ನು ಈ ಪತ್ರಿಕೆಯನ್ನೋದತಕ್ಕವರ ತಿಳುವಳಿಕೆಯ ಬಗ್ಗೆ ಇದರಡಿ ಪ್ರಕಟಿಸುತ್ತೇವೆ.

ವೈಸರಾಯಿ ಕೆಲಸದ ಚಾರ್ಜನ್ನು ತೆಗೆದುಕೊಂಡ ಕಾಲದಲ್ಲಿ,

| | | |
|---|---|---|
| ವಾರನ್ ಹೇಸ್ಟಿಂಗ್ಸ್‌ಯವರು | ... | ೪೦ |
| ಲಾರ್ಡ್ ಕಾರ್ನವಾಲಿಸ್‌ಯವರು ಪ್ರಥಮಾವರ್ತಿ | ... | ೪೮ |
| ಲಾರ್ಡ್ ಕಾರ್ನವಾಲಿಸ್‌ಯವರು ೨ನೇ ಆವರ್ತಿ | ... | ೬೬ |
| ಮಾರ್ಕ್ವಿಸ ಆಫ್ ವೆಲ್ಲೆಸ್ಲಿ | ... | ೩೭ |
| ಅರಲ್ ಆಫ್ ಮಿಂಟೊ | ... | ೫೬ |
| ಮಾರ್ಕ್ವಿಸ ಆಫ್ ಹೇಸ್ಟಿಂಗ್ಸ್ | ... | ೫೮ |
| ಅರಲ್ ಆಫ್ ಅಂಹರಸ್ಟ | ... | ೫೦ |
| ಲಾರ್ಡ್ ವಿಲ್ಲಿಯಂ‌ಬೆಂಟಿಂಕ್ | ... | ೫೪ |
| ಅರಲ್ ಆಫ್ ಆಕ್‌ಲ್ಯಾಂಡ್ | ... | ೫೨ |
| ಅರಲ್ ಆಫ್ ಯೆಲೆಂಬರೊ | ... | ೫೨ |
| ಲಾರ್ಡ್ ಹಾರ್ಡಿಂಜ್ | . | ೫೯ |
| ಮಾರ್ಕ್ವಿಸ ಆಫ್ ಡಾಲಹೌಸಿ | ... | ೩೫ |
| ಅರಲ್ ಆಫ್ ಕ್ಯಾನಿಂಗ್ | ... | ೪೪ |
| ಅರಲ್ ಆಫ್ ಯೆಲ್‌ಜಿನ್ | ... | ೫೧ |
| ಸರ್‌ಜಾನ್ ಲಾರೆನ್ಸ | .. | ೫೩ |
| ಲಾರ್ಡ್ ಮೇಯೊ | .. | ೪೭ |
| ಅರಲ್ ಆಫ್ ನಾರ್ಥ್‌ಬ್ರೂಕ್ | ... | ೪೬ |
| ಲಾರ್ಡ್ ಲಿಟನ್ | ... | ೪೫ |
| ಲಾರ್ಡ್ ರಿಪನ್ | .. | ೫೩ |
| ಲಾರ್ಡ್ ಡಫ್ರಿನ್ | .. | ೫೮ |
| ಲಾರ್ಡ್ ಲ್ಯಾನ್ಸಡೌನ್ | .. | ೪೩ |
| ಸರ್ ಹೆನ್ರಿ ನಾರ್ಮನ್ (ಈಗ ಮೊಕರರಾದವರು) | | ೬೬ |

ಈಗ ವೈಸರಾಯ್‌ಯವರಾಗಿ ಮೊಕರರಾದವರು ಸರ್‌ಜಾನ್ ಲಾರೆನ್ಸ ಎಂಬವರು ಇಂಡ್ಯಾರಾಜ್ಯದ ವೈಸರಾಯ್‌ಯವರಾಗಿದ್ದ ಕಾಲದಲ್ಲಿ ಇಂಡ್ಯಾಗವರ್ನಮೆಂಟ ಮಿಲಿಟರಿ ಸೆಕ್ರೆಟರಿಯಾಗಿದ್ದರು. ಇದರಿಂದ ಈಗ ಬರತಕ್ಕವರಿಗೆ ಇಂಡ್ಯಾ ದೇಶದ ಅನುಭವವು ಪೂರ್ವದಲ್ಲಿ ಕೆಲವು ಮಟ್ಟಿಗೆ ಇದ್ದಿರಬಹುದೆಂಬದರಲ್ಲೇನೂ ಸಂಶಯವಿಲ್ಲವು, ಆದರೆ ಬಹುಕಾಲವಾದದರಿಂದ ತಾದೃಶ ಅನುಭವವು ಮಾಲಿನ್ಯವಂ ಹೊಂದಿ ಇಲ್ಲಿನ ವ್ಯವಸ್ಥಾನಗಳವರಿಗೆ ನೂತನಗಳಾಗಿ ಕಂಡು ಬರಬಹುದು. ಇವರು ೧೮೭೭ನೇ ಇಸವಿ ಮಾರ್ಚಿ ತಿಂಗಳಲ್ಲಿ ಇಂಡ್ಯಾದೇಶದ ನೌಕರಿಯಿಂದ ನಿವೃತ್ತರಾದರು, ಇದಕ್ಕೆ ೮ ವರುಷಗಳು ಹಿಂದೆ ಮಿಲಿಟರಿ ಸೆಕ್ರೆಟರಿಯಾಗಿಯೂ, ಸನ್ ೧೮೭೮ನೇ ಇಸವಿಯಲ್ಲಿ ಇಂಡ್ಯಾ ಸ್ಟೇಟ ಸೆಕ್ರೆಟರಿಯವರ ಕೌನ್ಸಿಲಿನವರೊಬ್ಬ ಮೆಂಬರಾಗಿಯೂ ನಿಯಮಿಸಲ್ಪಟ್ಟರು. ಐದು ವರ್ಷಗಳ ತರುವಾಯ, ಜಮೇಯಿಕಾ ರಾಜ್ಯದ ಗವರ್ನರ್ ಕೆಲಸವನ್ನಂಗೀಕರಿಸಿದರು. ಸರ್ ಹೆನ್ರಿ ನಾರ್ಮನ್ ಯವರು ಹಿಂದೆ ಈ ದೇಶದಲ್ಲಿ ನಡೆದ ಅನೇಕ ಯುದ್ಧ ಸಮಯಗಳಲ್ಲಿ ವಿಶೇಷ ಮೊಹನತ್ ಮಾಡಿ ಕೀರ್ತಿಪ್ರತಿಷ್ಠೆಗಳಂ ಸಂಪಾದಿಸಿದರು. ಚಿಲಿಯನ್‌ವಾಲಾ ಯೆಂಬ ಪ್ರದೇಶದಲ್ಲಿ ಜರಿಗಿದ ಯುದ್ಧ ಕಾಲದಲ್ಲಿಯೂ, ದೆಹಲಿ ಪಟ್ಟಣವು ಮುತ್ತಿಗೆ ಹಾಕಲ್ಪಟ್ಟ ಸಮಯದಲ್ಲಿಯೂ ಲಕ್ನೋ ಪಟ್ಟಣವು ಬ್ರಿಟಿಷ ಸುಪರ್ದಾದ ಸಂದರ್ಭದಲ್ಲಿಯೂ ಸರ್. ನಾರ್ಮನ್ ಯವರು, ಗವರ್ನಮೆಂಟಿನವರ ಪ್ರಶಂಸೆಗೆ ವಿಷಯರಾದರು. ಹಿಂದೆ ಒಂದು ಕಾಲದಲ್ಲಿವರು ಬೆಂಗಾಲ್ ಸೈನ್ಯಕ್ಕೆ ಅಧಿಪತಿಯಾಗಿದ್ದಾಗ್ಯೂ ಕೆಲಸವಂ ಬಿಟ್ಟು ನಿವೃತ್ತರಾದ ಬಹುಕಾಲದ ತರುವಾಯ ಮರಳಿ ಇವರಿಗೆ ಉದ್ಯೋಗವಂ ಕೊಡುವದು ಅನುಚಿತವೆಂಬದಾಗಿ ಅನೇಕ ಇಂಗ್ಲಿಷ ಪತ್ರಿಕೆಗಳು ಮೊರೆಯಿಡುತಿವೆ. ಮುಖ್ಯವಾಗಿ ಮಿ॥ ಗ್ಲ್ಯಾಡಸ್ಟನ್ ಯವರು, ಸರ್. ಹೆನ್ರಿ ನಾರ್ಮನ್ ಯವರನ್ನು ಇಷ್ಟು ದೊಡ್ಡ ರಾಜ್ಯಕ್ಕೆ ಮುಖ್ಯಾಧಿಕಾರಿಯಾಗಿ ನಿಯಮಿಸಬೇಕಾಗಿದ್ದರೆ ಅವರಿಗೆ, ಸ್ವಪಕ್ಷದವರಲ್ಲಿ ಅವರಂ ವಿನಾಯಿಸಿ ಅನ್ಯರ್ಯಾರೂ ದೊರೆಯದೆ ಯಾದರೂ ಇದ್ದಿರಬೇಕು, ಅಥವಾ ವೈಸರಾಯಿಯಾಗಿ ನಿಯಮಿಸಲ್ಪಡಲಿಕ್ಕೆ ಆವಶ್ಯಕಗಳಾದ ಗುಣಗಳಾದರು ಅವರಲ್ಲಿ ವಿಶೇಷ ಕಂಡು ಬಂದಿರಬೇಕೆಂದೆಣಿಸುತ್ತೇವೆ.

## ಆನರೇಬಲ್ ಜಸ್ಟಿಸ್ ಕಾಶೀನಾಥ ತ್ರಿಯಂಬಕ ತೆಲಾಂಗ್ ಸಿ. ಐ. ಇ. ಯವರ ಮರಣವೃತ್ತಾಂತ

ಲೋಕದಲ್ಲಿ ಮಾನವ ಜನ್ಮವು ಅನೇಕ ಜನ್ಮಾರ್ಜಿತ ಪುಣ್ಯ ಪರಿಪಾಕದಿಂ ಲಭಿಸತಕ್ಕದ್ದಾಗಿರುವದರಿಂದ ಅದು ಕೇವಲ ದುರ್ಲಭವಾದುದಾಗಿರುತಿದೆ. ತಥಾಪಿ ಪ್ರಸಿದ್ಧರಾಗಿದ್ದ ಗಣಿಸಿದ ದೊಡ್ಡವರ ವಂಶದಲ್ಲಿ ಜನಿಸಿ, ರೂಪಗುಣ ಚರ್ಯೆಗಳಿಂದ ಹೃದಯಾಹ್ಲಾದಕರರಾಗಿ ಅಸಾಧಾರಣಗಳಾದ ವಿದ್ಯಾ ಬುದ್ಧಿ ಬೋಧಶಕ್ತಿಯಂ ಪಡೆದು, ಜನಗಳ ಪ್ರೀತಿ ಗೌರವಗಳಿಗೆ ಪಾತ್ರರಾಗುವಂತಹರಾಗುವದು ಮತ್ತೂ ದುರ್ಲಭವಾಗಿರುತಿದೆ. ಅಂಥಾ ಸತ್ಪುರುಷರ್ಯಾರಾದರೊಬ್ಬರಿಬ್ಬರು ಸೃಷ್ಟಿ ವೈಚಿತ್ರ್ಯ ನಿದರ್ಶನಾರ್ಥ ಯೆಲ್ಲಿಯಾದರು ಇರುವದಕ್ಕೆ ಅವರು ಸಹ ಈ ದೇಶದ ದೌರ್ಭಾಗ್ಯದಿಂದ ಪೂರ್ಣ ವಯಸ್ಸಿನಲ್ಲಿಯೇ ಅದೃಶ್ಯರಾಗಿ ಹೋಗುತ್ತಾರೆ. ಈ ಇಂಡ್ಯಾದೇಶದ ಕೀರ್ತಿ ಪ್ರಾಚೀನ ವೈಭವಗಳಿಗೆ ಕಾರಣಭೂತಗಳಾಗಿದ್ದ ವಿಷಯಗಳೆಲ್ಲವು ಕಾಲಕ್ರಮದಿಂ ನಷ್ಟವಾಗುತ, ಕೇವಲ ಸಾಮಾನ್ಯ ಸ್ಥಿತಿಗೆ ಬರುತಲಿದ್ದಾಗ್ಯೂ ಜನರ ವಿದ್ಯಾಬುದ್ಧಿ ಕೌಶಲ್ಯ ವಿಷಯದಲ್ಲಿ ಮಾತ್ರ ಅವರ ಪೂರ್ವಪ್ರತಿಷ್ಠೆಯನ್ನು ಕಳೆದುಕೊಳ್ಳದ ಕಾಪಾಡಿಕೊಳ್ಳುತ ಬರುತಲಿರುವದೆಂಬೀ ಇಲ್ಲಿನವರಿಗೆ ಅಭ್ಯುದಯವನ್ನುಂಟುಮಾಡತಕ್ಕದ್ದಾಗಿರುತಿದೆ. ವಿದ್ಯಾ ಬುದ್ಧಿ ಪ್ರಜ್ಞಾಧಿಕ್ಯಗಳಿಂದ ಪ್ರಸಿದ್ಧರಾಗಿರತಕ್ಕ ಕೆಲವರು, ಸಹ ಮೃತರಾದರೆ ಅದಕ್ಕಿಂತಲೂ ದುಃಖತರವಾದ ನಷ್ಟವು ದೇಶಕ್ಕೆ ಬೇರೆಯಾವದೂ ಆವಶ್ಯಕವಿರುವದಿಲ್ಲವು. ಮುಂಬೈ ಹೈಕೋರ್ಟ ಜಡ್ಜಿಯರಲ್ಲೊಬ್ಬರಾಗಿದ್ದ, ಆನರೇಬಲ್ ಜಸ್ಟಿಸ್ ಕಾಶೀನಾಥ ತ್ರಿಯಂಬಕ್ ತೆಲಾಂಗ ಸಿ. ಐ. ಇ. ಯವರು ಕಳೆದ ತಿಂಗಳ ೩೧ ನೇ ತಾರೀಖಿನಲ್ಲಿ ಕಾಲಗತಿಯನ್ನೈದಿದರೆಂಬ ವೃತ್ತಾಂತವು ನಮಗೆ ಗತ ವಾರದಲ್ಲಿಯೇ, ತಿಳಿಯಬಂದಾಗ್ಯೂ ಅಂಥಾ ಸುಪ್ರಸಿದ್ಧರಾದ ಪುರುಷರ ವಿಯೋಗಜನ್ಯವಾದ ದುಃಖಾತಿರೇಕದಿಂ ನಮ್ಮ ಲೇಖನಿಯು ಕ್ಷಣೇಕ್ಷಣೇ ಅಸ್ವಂತತೆಯನ್ನೈದುತಲಿದ್ದದರಿಂದ, ನಮ್ಮ ಕರ್ತವ್ಯದೊಳು ಸಹ ನಮಗೆ, ಸ್ಮೃತಿಭಂಗವುಂಟಾಯಿತು. ಮಿ॥ ಜಸ್ಟಿಸ್ ತೆಲಾಂಗ ಯವರ ಮರಣವು ಯಾವ ಭಾಗದಲ್ಲಿಯೂ ಸಾಮಾನ್ಯವಾಗುದೆಂದು ಒಬ್ಬರೂ ಭಾವಿಸಲಾಗದು. ಏತತ್ಪ್ರಯುಕ್ತವಾದ ನಷ್ಟವು ಸುಲಭವಾಗಿ ಪರಿಹಾರ್ಯವಾದುದಲ್ಲವು. ಪರಂತು ವಿಧಿಕೃತವಾದ ಕಾರ್ಯಕ್ಕೆ ಚಿಂತಿಸಿ ಪ್ರಯೋಜನವಿಲ್ಲವು. ಇವರು ನ್ಯಾಯಾಧಿಪತಿಯಾಗಿಯೂ, ನ್ಯಾಯವಾದಿಯಾಗಿಯೂ, ಮಿತ್ರರಾಗಿಯೂ, ಹಿತಬೋಧಕರಾಗಿಯೂ, ಪಂಡಿತರಾಗಿಯೂ, ಸ್ವದೇಶಾಭಿಮಾನಿಯಾಗಿಯೂ ಇದ್ದು ಮಾಡಿದ ಉಪಕೃತಿಯು ಚಿರಸ್ಮರಣೀಯವಾಗಿರುತಿದೆ. ಇವರ ಪ್ರಾಮಾಣಿಕತೆಯೂ, ನಿಷ್ಪಕ್ಷಪಾತತೆಯೂ, ಉಪಶಾಂತತೆಯೂ, ಮೃದುಭಾಷಿತ್ವವೂ, ಪ್ರಜೆಗಳಿಗೆ ವಿಶೇಷ ಗೌರವವನ್ನುಂಟುಮಾಡಿದವು, ಇವರಿಗೆ ಗತಿಸುವಾಗ್ಯೆ ೪೩ ವರ್ಷಗಳ ವಯಸ್ಸಾಗಿತ್ತು. ಇಂತಾ ಅಲ್ಪವಯಸ್ಸಿನಲ್ಲಿ ಮಿ॥ ತೆಲಾಂಗರವರು ವೃದ್ಧರಾದ ಮಾತಾಪಿತೃಗಳನ್ನೂ ಭಾರ್ಯಾಪುತ್ರರನ್ನೂ ನಿರಂತರ ದುಃಖಾನುಭವಕ್ಕೆ ಗುರಿಮಾಡಿ ಸಕಲ ಪ್ರಜೆಗಳು ತಮ್ಮ ನಷ್ಟವಂ ಕುರಿತು ಶೋಕಿಸುವಂತೆ ಗತಿಸಿದ್ದು ಅಲ್ಪಕಾಲದಲ್ಲಿ ಮರೆಯತಕ್ಕ ವಿಷಯವಾಗಿಲ್ಲವು. ಮುಖ್ಯವಾಗಿ ಪ್ರಸಿದ್ಧರೆನಿಸಿ ಸಕಲ ವಿಧದಿಂದಲೂ, ಇಂಡ್ಯಾದೇಶಕ್ಕೆ ಕೀರ್ತಿ ಸಂಪಾದಕರಾಗಿದ್ದ, ನಾಬಕ್ ರಾಜಾ ಸರ್. ಟಿ. ಮಾಧವರಾಯರವರು, ಕೇಶವಚಂದ್ರಸೇನರವರು, ರಾಜೇಂದ್ರಲಾಲಮಿತ್ರರವರು, ಮೋರೇಶ್ವರ ಮಹಾದೇವಕುಂಟೆಯವರು, ವಿಶ್ವನಾಥ ನಾರಾಯಣ ಮಾಂಡಲಿಕರು ಮೊದಲಾದ ದೊಡ್ಡ ಮನುಷ್ಯರಂತೆ ಪ್ರಶಂಸಾರ್ಹರಾಗಿದ್ದ ಮಿ॥ ತೆಲಾಂಗರವರ ಮರಣಪ್ರಯುಕ್ತವಾದ ನಷ್ಟವಂ ತತ್ಸಮಾನ ವಿದ್ಯಾಬುದ್ಧಿ ವಿವೇಕಶಾಲಿಯಾದ ಬೇರೆಯೊಬ್ಬ ಪುರುಷನೇರ್ಪಟ್ಟು ಹೋಗಲಾಡಿಸುವಂತೆ ಅನುಗ್ರಹಿಸಬೇಕೆಂದು ಭಗವಂತನಂ ಪ್ರಾರ್ಥಿಸಬೇಕಾಗಿರುತಿದೆ

## Occasional Notes.
## ನೈಮಿತ್ತಿಕ ವಿಷಯನ್ಯಾಸ.

ಗಾಂಜಾ ಮೂಲಕ ಸರ್ಕಾರಕ್ಕೆ ಸಾಲಿಯಾನಾ ೬೦ ಲಕ್ಷ ರೂಪಾಯಿಗಳು ಹುಟ್ಟುವಳಿಯಾಗುತಿವೆ.

ಕಾಬೂಲ್ ಅಮೀರರವರ ನೌಕರಿಯಲ್ಲಿರುವ ಯೂರೋಪಿಯನ್ ಜನರು ಸದರೀ ದೇಶದಲ್ಲಿ ತುಪುಗನಿಯ ಕಂಪೆನಿಯೊಂದನ್ನೇರ್ಪಡಿಸುವುದು ಚಿತವೆಂದು ಅವರಂ ಬಲಾತ್ಕರಿಸುತಲಿರುವಂತೆ ಒಂದಾನೊಂದು ಪತ್ರಿಕೆ ತಿಳಿಸುತಿದೆ.

೮ನೇ ಶುಕ್ರವಾರದಿನ, ಬಡೋದೆ ಸಂಸ್ಥಾನದ ಮಹಾರಾಣೀ ಚಿಮ್ಣಾಬಾಯಿಯವರಿಗೆ ಗಂಡು ಮಗು ಹುಟ್ಟಿ ತಾಯಿಯೂ ಮಗುವೂ ಆರೋಗ್ಯವಾಗಿರುವಂತೆ ಕೇಳಿ ಸಂತೋಷಿಸುತ್ತೇವೆ. ಗಾಯಕವಾಡ ಮಹಾರಾಜರವರಿಗೆ ಈಗ ಜನಿಸಿದ್ದು ನಾಲ್ಕನೆಯ ಗಂಡುಮಗು.

ಇಂಗ್ಲಿಷ್ ಹೆಂಗಸರು, ಗಂಡಸರು ನರಿ ಹಂದಿ ಮೊದಲಾದ ಜೀವಜಂತುಗಳಂ ಕೊಲ್ಲುವದಕ್ಕಾಗಿ ಶಿಕಾರಿ ಮಾಡುವ ಕಾಲದಲ್ಲಿ ತಾವೂ ಅವರ ಸಂಗಡ ಇರುವದು ಕೆಟ್ಟ ವಾಡಿಕೆಯೆಂದು ಮಿ॥ ಫಾಸೆಟ್ ಎಂಬವರು ಕಠಿಣ ಶಬ್ದಗಳಿಂದ ನಿಂದಿಸುತ್ತಾರೆ.

ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಯೆಂಬ ಸಾರ್ವಜನಿಕ ಸಭೆಯ ತರಫ್ ರಾಜಾ ರಾಮಪಾಲ್ ಸಿಂಗ್ ಮತ್ತು ಪಂಡಿತ ಮದನಮೋಹನ ಮಾಲವ್ಯ ಎಂಬ ಇಬ್ಬರು ದೊಡ್ಡ ಮನುಷ್ಯರು ಬರುವ ಅಕ್ಟೋಬರ ತಿಂಗಳಲ್ಲಿ ದೇಶ ಸಂಚಾರ ಮಾಡುವರು.

ಜೆರ್ಸಿ ದ್ವೀಪದಲ್ಲಿ ಯಾವಳಾದರೊಬ್ಬಳು ನಿಷ್ಕೃಷ್ಟವಾದ ಒಂದು ಕಾಲದವರೆಗೆ ಮದುವೆ ಇಲ್ಲದಿದ್ದರೆ, ಅಧಿಕಾರಿಗಳು ಯಾವನಾದರೊಬ್ಬನನ್ನು ಹುಡುಕಿ ಅವಳನ್ನು ಮದುವೆ ಮಾಡಿಕೊಳ್ಳುವಂತೆ ನಿರ್ಬಂಧ ಪಡಿಸತಕ್ಕದ್ದೆಂದು ಒಂದು ಕಾನೂನು ಜಾರಿಯೊಳಗಿರುತಲಿತ್ತು. ಈಚೆಗೆ ಅಲ್ಲಿನ ಅರಸರವರು ಅದನ್ನು ರದ್ದು ಮಾಡಿದ್ದಾರೆ.

ಇಂಡ್ಯಾದೇಶದಲ್ಲಿ ಅರಣ್ಯನಿವಾಸಿಗಳಾದವರನೇಕರು ಪ್ರಬಲರೋಗ ನಿವಾರಕಗಳಾದ ಬಹುವಿಧ ಮೂಲಿಕೆಗಳನ್ನರಿತಿರುತ್ತಾರಾಗಿ, ಸರ್ಕಾರದ ಸಹಾಯದ ಮೂಲಕ ಸದರೀ ಕಾಡು ಜನರಿಂದ, ಅಂತಾ ಮೂಲಿಕೆಗಳಂ ತಿಳಿದುಕೊಳ್ಳಬೇಕಾದ ವಿಷಯದಲ್ಲಿ ಒಂದು ದೃಢವಾದ ಪ್ರಯತ್ನ ಮಾಡುವದುಚಿತವೆಂದು ಒಬ್ಬ ವೈದ್ಯನು ಸೂಚಿಸುತ್ತಾನೆ, ಇದು ಅವಶ್ಯಕರ್ತವ್ಯವಾದುದೆಂಬದರಲ್ಲಿ ಸಂಶಯವಿಲ್ಲವು.

ಕಾಶ್ಮೀರದೇಶದ ನಾಬಕ್ ಗವರ್ನರಗಳಲ್ಲೊಬ್ಬರಾದ ದಿವಾನ್ ಬದರೀನಾಥ್ ಎಂಬವರು ಕಳೆದ ತಿಂಗಳ ೨೦ ನೇ ತಾರೀಖಿನಲ್ಲಿ ಶ್ರೀನಗರ ಪಟ್ಟಣದೊಳು ಮೃತಪಟ್ಟರು. ಅವರ ಉತ್ತರಕ್ರಿಯೆಗೆ ಹಿಂದೂಗಳೂ ಮಹಮ್ಮದೀಯರೂ ಸೇರಿ ೨೦,೦೦೦ ಮಂದಿ ಬಂದಿದ್ದರು. ಅವರ ಕಳೇಬರವು ಬೆಳ್ಳಿ ಪಾಲಕ್ಕಿಯಮೇಲೆ ರುದ್ರಭೂಮಿಗೆ ಸಾಗಿಸಲ್ಪಟ್ಟ ಕಾಲದಲ್ಲಿ ಭಂಗಾರ, ಬೆಳ್ಳಿ ಮತ್ತು ತಾಮ್ರ ನಾಣ್ಯಗಳು ಅದರಮೇಲೆ

ಕೊಳ್ಳಲ್ಪಟ್ಟವು. ವೈಶಿಷ್ಟ್ಯದೇಶದ ಮನುಷ್ಯರು ಶಾಸ್ತ್ರೀತದಲ್ಲಿ ಬಹಳ ಗೌರವ್ಯರಾಗಿರುತಿದ್ದರು.

---

ಸುಕ್ಕೂರ ಎಂಬ ಪಟ್ಟಣದಲ್ಲಿ ಹೊಸತಾಗಿ ಬ್ಬಿದ ಕಾಲದೊಳು ಹಿಂದೂಜಾತಿ ಪೋಲೀಸ್ ಇನ್ಸ್ಪೆಕ್ಟರನ ಮೇಲೆ ಜುಲುಂ ನಡೆಸಿದ ತಪ್ಪಿತದಬಗ್ಗೆ ದಸ್ತಗಿರಿ ಮಾಡಲ್ಪಟ್ಟ ಹಿಂದು ಮಹಮ್ಮದಿಯ್ಯರು, ಸವಡಿವಿಜನ್ ಮ್ಯಾಜಿಸ್ಟ್ರೇಟರಿಂದ ವಿಚಾರಿಸಲ್ಪಟ್ಟು ಸೆಷನ್ ಕೋರ್ಟಿಗೆ ಕಮ್ಮಿಟ್ ಮಾಡಲ್ಪಟ್ಟಿರುತ್ತಾರೆ. ಈ ಮೊಕದ್ದಮೆಯ ವಿಚಾರಣೆಯಬಗ್ಗೆ ಕರಾಚಿ ಡಿಸ್ಟ್ರಿಕ್ಟ್ ಸೆಷನ್ ಜಡ್ಜಿಯಾದ ಮೆ|| ಹ ಬರ್ ಡೇವಿಸ್ ಎಂಬವರು ಸ್ಪೆಷಲ್ ಜಡ್ಜಿಯಾಗಿ ನೇಮಕರಾಗ್ಮಡಲ್ಪಟ್ಟಿರುತ್ತಾರೆ.

---

ಕಾಬೂಲ್ ಅಮೀರರವರೊಡನೆ ರಾಜಕೀಯಗಳಾದ ಕೆಲವು ಅಂಶಗಳಂ ಕುರಿತು ಪ್ರತ್ಯಕ್ಷದಲ್ಲಿ ಮಾತನಾಡುವದಕ್ಕಾಗಿ ಇಂಡ್ಯಾ ಗವರ್ನಮೆಂಟಿನವರ ಕಡೆ ರಾಯಭಾರಿಯಾಗಿ ಸರ್ ಮಾರ್ಟಿಮರ್ ಡ್ಯೂರಾಂಡ್ ಎಂಬವರು ಕಾಬೂಲಿಗೆ ಹೊರಟುಹೋಗುತಲಿರುತಿಯುವದಷ್ಟೆ. ಸದರೀ ಯವರು ಬಂದ ಕಾಲದಲ್ಲಿ ಅವರೊಡನೆ ಮಾತನಾಡಬೇಕಾದ ವಿಷಯಗಳಂ ಕುರಿತು ಯೋಚಿಸುವದಕ್ಕಾಗಿ ಅಮೀರರವರು ಆಪ್ತರಾದ ಪ್ರಧಾನಿಗಳೊಳಗಿರುವ ವ್ಯಕ್ತಿಗಳಾದ ಮುಲ್ಲಾ ಜನರು ಕರೆಯಿಸಿರುವಂತೆ ಸಮಾಚಾರವುಳ್ಳ ಪತ್ರಿಕೆಯ ಬಾತ್ಮೀದಾರನೊಬ್ಬಾತನು ಬೊಂಬಾಯಿ ಪತ್ರಿಕೆಗೆ ಬರೆದಿರುತ್ತಾನೆ.

---

ವಸ್ಸೆರಿರತನೆಯ ತಕಿರಾನದಲ್ಲಿ ಹುಟ್ಟಿದ ಒಂದು ರಾಜಸನದಲ್ಲಿ ಒಬ್ಬ ಹಿಂದೂರಾಜನು ಒಬ್ಬ ಹಿಂದೂ ಹೆಂಗಸಿಗೆ ಬಂಧುಬಳಗವನ್ನು ಬಿಡಿಸಿ ಕೊಟ್ಟರಾಯಿ ಆ ಹುಡುಗಿಯನ್ನೇ ವಿವಾಹ ಮಾಡಿಕೊಂಡನು. ಸದರೀ ರಾಜನನ್ನು ಗಾನ ವಿದ್ಯೆಯಲ್ಲಿ ಬಹಳ ಸಮರ್ಥನೂ, ಆತನು ಸಭೆಗಳಲ್ಲಿ ಗಾನಮಾಡುತ್ತಿದ್ದನು, ಆ ಕಾರಣದಿಂದ ಇಂಡ್ಯಾದೇಶದೊಳು ಪೂರ್ವಕಾಲದಲ್ಲಿ ಅರಸರು ತಮ್ಮ ಗಾನ ವಿದ್ಯೆಯಿಂದ ಸಭ್ಯರಂ ಸಂತೋಷಗೊಳಿಸುವಣವು ತಮಗೆ ಗೌರವಹಾನಿಕರವೆಂದು ಯೋಚಿಸುತಲೂ ಇದ್ದಿಲ್ಲವು, ಮಹುಸ್ಕರಾಜನಿಗೆ ವಿವಾಹವೂ ನಡೆಯುತಲಿದ್ದಂತೆ ಯೋಚಿಸಬೇಕಾಗಿದೆಯೆಂದು ಬಂಗಾಳದೊಂದು ಪತ್ರಿಕೆಯು ಕಥಾರೂಪವಾಗಿ ಈ ವೃತ್ತಾಂತವನ್ನು ಪ್ರಕಟಿಸಿರುತ್ತೆ.

---

ಮೆ|| ಜಸ್ಟಿಸ್ ತೆಲಾಂಗರವರ ಮರಣಾನಂತರಯುಕ್ತ ಈಗ ಖಾಲೀಯಾಗಿರುವ ಮುಂಬೈ ಹೈಕೋರ್ಟಿನ ಜಡ್ಜಿ ಕೆಲಸಕ್ಕೆ ಇದರ ಕೆಳಗಂದ ನೇಟಿವ್ ದೊಡ್ಡ ಮನುಷ್ಯರು ಅರ್ಹರಾಗಿರುತ್ತಾರೆಂಬದಾಗಿ ಅಲ್ಲಿನ ಪತ್ರಿಕೆಗಳು ಗವರ್ನಮೆಂಟಿಗೆ ಶಿಫಾರಸು ಮಾಡಿರುತಿವೆ. ಪ್ಲೀಡರ್ ಮಿಸ್ಟರ್ ವಾಸುದೇವ ಕೀರ್ತಿಕರ್, ಅನರೆಬಲ್ ಮಿ|| ಎಂ ಮೆಹತಾಯವರು, ಮೆ|| ರಾನಡೆಯವರು. ಇವರ ಪೈಕಿ ಮೆ|| ವಾಸುದೇವ ಕೀರ್ತಿಕರರೆಂಬವರು ಮುಂಬೈ ಗೆಜೆಟ್ ಪತ್ರಿಕೆಯು ಬಹಳವಾಗಿ ಕೊಂಡಾಡಿ, ಮೆ|| ತಿಲಾಂಗರವರು ಬಂದು ವರ್ಷಕಾಲ ರಜಾ ತೆಗೆದುಕೊಳ್ಳಬೇಕಾದ ಅವಶ್ಯಕತೆಯುಂಟಾದ ಕಾಲದಲ್ಲಿ ಸದರೀ ದೊಡ್ಡ ಮನುಷ್ಯರು ಆಕ್ಟಿಂಗ್ ಜಡ್ಜ್ ನಿಯಮಿಸಲ್ಪಡುವ ಸಂಭವವುಂಟೆಂಬ ಪ್ರಕಟಿಸುತಿದೆ.

---

ಇದುವರಿವಿಗೆ ಬ್ರಿಟಿಷ್ ಇಂಡ್ಯಾದೇಶದಲ್ಲಿ ನೇಟಿವರಿಗೆ ಸಾಮಾನ್ಯವಾಗಿ ಡಿಸ್ಟ್ರಿಕ್ಟ್ ಕಲೆಕ್ಟರ್ ಕೆಲಸವು ಕೊಡಲ್ಪಡುತಲಿರಲಿಲ್ಲವು. ಪ್ರಾಯಶಃ ಸದರೀ ಕೆಲಸವು ಯೂರೋಪಿಯನ್ ಆಫೀಸರಿಗಳ ಪಾಲಾಗಿಯೇ ಇರುತಲಿತ್ತು. ಈಗ ಗವರ್ನಮೆಂಟಿನವರು, ಮೆ|| ಕೆ. ಸಿ ಮಾನವೇಂದ್ರ ರಾವ್ ಎಂಬವರನ್ನು ಅನುಕಪುರ ಡಿಸ್ಟ್ರಿಕ್ಟ್ ಕಲೆಕ್ಟರ್ ವ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿ ನೇಮಕರಾಗ್ಮಿರುವ ಅಂಶವನ್ನು ಗತವಾರದ ಪ್ರೋವಿನ್ಸಿಯಲ್ ಗೆಜೆಟಿನ ಮೂಲಕ ಅರಿತು ಬಹಳ ಸಂತೋಷಿಸುತ್ತೇವೆ. ಗವರ್ನಮೆಂಟಿನವರು ಇದುವರೆಗೆ ಇಲ್ಲದಿದ್ದಂತಾ ಅಪೂರ್ವ ಪದ್ಧತಿಯಂ ನಡೆಗೊಳಿಸಿ ಒಬ್ಬ ನೇಟಿವಿಗಿಂತಾ ಅಧಿಕಾರವು ಕೊಟ್ಟದ್ದಕ್ಕೈದೇ ಪ್ರಥಮ ದೃಷ್ಟಾಂತವಾಗಿರುವದರಿಂದ ಇದಕ್ಕಾಗಿ ಎಲ್ಲರೂ ವಿಶೇಷ ಸಂತೋಷಪಡಬೇಕಾಗಿರುತಿದೆ.

ಈಗ್ಗೆ ಕೆಲವು ದಿನಗಳಿಂದ ಅರುಗದಿಯಲ್ಲಿ ವಾಂತಿಭೇದಿ ರೋಗ ವ್ಯಾಪಿಸಿ, ಪ್ರಾಣಹಾನಿಗಳುಂಟಾಗುತಲಿರುವಂತೆ ಹಿಂದಿನ ಪತ್ರಿಕೆಯ ಮೂಲಕ ತಿಳಿಸಿರುತ್ತೇವೆಯಷ್ಟೆ. ಸದರೀ ರೋಗದ ವ್ಯಾಪಕತೆಯನ್ನರಿಗಿಸಕ್ಕಬಗ್ಗೆ ಸಾನಿಟರಿ ಕಮ್ಮಿಷನರವರು ಅಲ್ಲಿಗೆ ಹೋಗಿ ಬೀದಿಗಳನ್ನೆಲ್ಲ ಪರೀಕ್ಷೆಮಾಡಿಸಿ, ಮನೆಗಳಿಗೆ ಸುಣ್ಣ ಬಳಿಯುವಂತೆ ಮಾಡಿರುವದಲ್ಲದೆ ಇನ್ನು ಅವಶ್ಯಕಗಳಾದ ಬಹುವಿಧ ಯೋಜನೆಗಳಂ ಮಾಡಿಸಿಯೂ ಮಾಡಿಸುತಲೂ ಇರುತ್ತಾರೆ. ಸ್ಥಳಾಧಿಕಾರಿಗಳು ತಮಗೆ ಸಾಧ್ಯವಾದ ಕಾರ್ಯಗಳನ್ನೆಲ್ಲ ಮಾಡುತಲಿದಾರೆ. ಇಷ್ಟಿದಾಗ್ಗೂ ರೋಗ ಶಾಂತವಾಗಲಿಲ್ಲವು, ಎಂದು ಅಲ್ಲಿನ ಬಾತ್ಮೀದಾರರ ಕಾಗದದ ಮೂಲಕ ತಿಳಿಯಬರುತಿದೆ. ಇದೂ ಅಲ್ಲದೆ ಸ್ಥಳನಿವಾಸಿಗಳೇ ಕುಡಿಯುವದಕ್ಕೆ ನೀರಿಲ್ಲದೆ ಶ್ರಮಪಡುತಲಿದಾರೆ. ಆದುದರಿಂದ "ತಾನು ಕೆಟ್ಟಕೋತಿ ವನವನ್ನೆಲ್ಲ ಕೆಡಿಸಿತು" ಎಂಬ ಗಾದೆಯಂತೆ, ಈ ಕಾಲದಲ್ಲಿ ತಿರುಪತಿಗೆ ಹೋಗಿ ರೋಗಕ್ಕೆ ಸಿಕ್ಕಿ ಪ್ರಾಣ ಬಿಡುವಣ, ಅಥವಾ ಅದನ್ನು ಅಂಟು ಹಾಕಿಕೊಂಡು ಬಂದು ತಾವು ಸಂಚರಿಸುವ ಸ್ಥಳಗಳಲ್ಲೆಲ್ಲ ಬೀಜ ಬಿತ್ತುವದಕ್ಕೆ ತಲು ಹೊರಟೇಕನ ಭಕ್ತಿಯುಳ್ಳವರೆಲ್ಲರು ತಮ್ಮ ತಮ್ಮ ಮನೆಗಳೊಳು ಅವರ ಸೇವೆಯಿಂದಲೂ ಮನವು ಅವರಿಗೂ ಕ್ಷೇಮವು ಮತ್ತು ಅನ್ಯರಿಗೂ ಕ್ಷೇಮಾವಹವಾಗಿರುವದೆಂದು ಎಚ್ಚರಿಸುವೆವು.

---

## LOCAL AND PROVINCIAL NEWS
ಪಟ್ಟಣ ಮತ್ತು ತಾಲ್ಲೂಕು ವರ್ತಮಾನಗಳು.

---

ಶ್ರೀಮನ್ಮಹಾರಾಜರವರು ಈ ಬರುವ ದಸರೆಯಂದು ಹಾಲು ಬಂದಿಗೆ ಸ್ಪೆಷಿಯಲ್ ಟ್ರೇನಿನಲ್ಲಿ ರಾಜಧಾನಿಗೆ ದಯಮಾಡುತ್ತಾರೆ.

---

ಬರುವ ಬುಧ ಗುರುವಾರಗಳ ದಿನ ಗೌರೀ ಗಣೇಶನ ಹಬ್ಬವಾದುದರಿಂದ ಇಲ್ಲಿನ ವಿಶಿಷ್ಟ ಇಲಾಖೆಗಳಿಗೂ ರಜಾ ಕೊಡಲ್ಪಡುವದು.

---

ಇಲ್ಲಿನ ದಿವಾನರವರಾದ ಸರ್. ಕೆ. ಶೇಷಾದ್ರಿ ಅಯ್ಯರ್ ಕೆ. ಸಿ ಎಸ್. ಐ. ಯವರು ಇನ್ನು ಐದಾರು ದಿವಸಗಳೊಳಗಾಗಿ ಮದರಾಸಿನಿಂದ ಊಟಿಗೆ ದಯಮಾಡಿ ಇಲ್ಲಿಂದ ನಂದೀಬೆಟ್ಟಕ್ಕೆ ಹೋಗುವರೆಂಬದಾಗಿ ಕೇಳುತ್ತೇವೆ.

---

ವರ್ಷಸೂಚನೆಗಳುಂಟು, ವರುಣ ಮಳೆ ಬೀಳುವದಿಲ್ಲವು. ಪೈರುಗಳು ಒಣಗುತಲಿವೆ. ಈ ಕಾರಣದಿಂದ ಅಕ್ಕಿ ಮತ್ತು ರಾಗಿಯ ಧಾರಣೆಗಳು ಪ್ರಾಯಶಃ ಒಂದೇವಿಧವಾಗಿವೆ. ಮನೆಯ ಭಾವಿಗಳಲ್ಲಿ ನೀರಿಲ್ಲದೆ ಜನರು ಬಹಳ ಕಷ್ಟಕ್ಕೆ ಗುರಿಯಾಗಿರುತ್ತಾರೆ. ಜನಾರೋಗ್ಯ ಸಾಮಾನ್ಯವಾಗಿದೆ.

---

ಕಳೆದ ಸೋಮವಾರದ ಆಗಾಯಿತು ಕಿಲ್ಲೆಯಲ್ಲಿ ಗೋಪುರಗಳ ಮೆರವಣಿಗೆಯು ಕಟ್ಟೀಪ್ರಕಾರ ನಡೆಯುತಲಿದೆ. ಇದು ೯ ದಿನಗಳ ವರಿಗೂ ನಡೆಯುವದರಿಂದ ಹೆಂಗಸರು ಮಕ್ಕಳು ಈ ನೋಟವನ್ನು ನೋಡುವ ಸಂಭ್ರಮದಲ್ಲಿ ಎಷ್ಟು ಮಂದಿ ಒಡವೆಗಳನ್ನು ಕಳೆದುಕೊಳ್ಳುವರೋ ನೋಡತಕ್ಕದ್ದಾಗಿದೆ.—ವ್ಯ. ಪ.

---

ಈಗ ಇರತಕ್ಕ ಪಬ್ಲಿಕ್ ಆಫೀಸುಗಳ ಕಟ್ಟಡದಲ್ಲಿ ಕುಡ್ಡಾಂಗ ಸ್ಥಳ ಸಾಲದೆ ಹೋದದರಿಂದ ಕೆಲವು ಇಲಾಖೆಗಳು ಕೋಟೆಯಲ್ಲಿರುವ ಕಟ್ಟಡಗಳಲ್ಲೀಗ ಇಡಲ್ಪಟ್ಟವೆಯಷ್ಟೆ. ಆದಾಗ್ಯೂ ದೊಡ್ಡ ಕಟ್ಟಡದಲ್ಲಿ ಅವಕಾಶವು ಕಡಮೆಯಾಗಿರುತಿದೆ. ಇದನ್ನಾಲೋಚಿಸಿ ಮೈಸೂರ್ ಗವರ್ನಮೆಂಟಿನವರು ಹೊಸದಾಗಿ ಮತ್ತೊಂದು ಕಟ್ಟಡವಂ ಕಟ್ಟಿಸಬೇಕೆಂಬುವ ಪ್ರಯತ್ನದೊಳಿರುವರೆಂತಲೂ, ಈಗಿರುವ ಗವರ್ನಮೆಂಟ್ ಪ್ರೆಸ್ ಕಟ್ಟಡಕ್ಕೆ ಎದಿರುಭಾಗದಲ್ಲಿರುವ ಖಾಲೀ ಜಮೀನಿನಲ್ಲ ಪ್ರಿಂಟಿಂಗ್ ಆಫೀಸಿಗೆ ಅನುಕೂಲಿಸುವಂತೆ ಕಟ್ಟಿಸಿ ಹಾಲೀ ಇರುವ ಕಟ್ಟಡವನ್ನು ಇತರ ಇಲಾಖೆಗಳಿಗೆ ಉಪಯೋಗಿಸಿಕೊಳ್ಳುವರೆಂತಲೂ ಇಂಡಿಯನ್ ಇಂಜನಿಯರಿಂಗ್ ಎಂಬ ಪತ್ರಿಕೆ ತಿಳಿಸುತಿದೆ.

ಈಚೆಗೆ ಕೆಡ್ಡಾಗಳಲ್ಲಿ ಹೊಸದಾಗಿ ಹಿಡಿಯಲ್ಪಟ್ಟ ನಾಲ್ವತ್ತು ಆನೆಗಳನ್ನು ನಂಜನಗೂಡಿನಲ್ಲೀ ಇಟ್ಟು ಸರ್ಕಾರದವರು ಅವುಗಳನ್ನೆಲ್ಲ ಪಗ್ಗಿಸುತ್ತಿದಾರೆಂತಲೂ ಕಳೆದ ಭಾನುವಾರ ಸಾಯಂಕಾಲ ಒಬ್ಬ ಮುಸಲ್ಮಾನರವನು ಒಂದು ಹೆಣ್ಣಾನೆಯ ಕಾಲನ್ನು ಬಿಚ್ಚುತ್ತಿರುವಾಗ್ಯೆ ಆ ಆನೆಯು ರೇಗಿ ಸೊಂಡಿಲಿನಿಂದ ಅವನನ್ನು ಹಿಡಿದು ಅವನ ಕಾಲನ್ನು ಮುರಿದು ಹಾಕಿತಲ್ಲದೆ ಅವನನ್ನು ನೆಲದಮೇಲೆ ಮಲಗಿಸಿಕೊಂಡು ತನ್ನ ಪಾದದಿಂದ ಅವನ ತಲೆ ಮತ್ತು ಎದೆಗಳ ಮೇಲೆ ತುಳಿದು ಕೊಂದುಹಾಕಿತೆಂತಲೂ, ಆ ಬಡ ಮುಸಲ್ಮಾನರವನಿಗೆ ಒಬ್ಬ ಹೆಂಡತಿಯೂ ಒಬ್ಬ ಗಂಡು ಮಗನೂ ಇರುವದರಿಂದ ಅವರಿಗೆ ಸರ್ಕಾರದವರು ಏನಾದರೂ ಜೀವನೋಪಾಯವನ್ನು ಕಲ್ಪಿಸಿಕೊಡಬೇಕಾದದ್ದು ಅವಶ್ಯಕವೆಂಬದಾಗಿಯೂ ಅಲ್ಲಿನ ಬಾತ್ಮೀದಾರರೊಬ್ಬರು ತಿಳಿಸುತ್ತಾರೆ.—ವ್ಯ. ಪ.

---

ಮೈಸೂರು ನಜರ್ ಬಾದ್‌ನಲ್ಲಿ ಈಗ್ಗೆ ಸುಮಾರು ೫—೬ ದಿವಸಗಳ ಕೆಳಗೆ, ೧೪ ವರುಷದ ಮಗುವಿಗೂ ಮತ್ತೊಂದು ೬ ತಿಂಗಳ ಮಗುವಿಗೂ ಶೀತದಿಂದ ಪಕ್ಷರೋಗ ಬಂದು ಬಹಳ ಶ್ರಮ ಪಡುತಿದ್ದವು. ಏಕಕಾಲದಲ್ಲಿ ತಮ್ಮ ಮಕ್ಕಳಿಗೆ ಪ್ರಾಪ್ತವಾದ ರೋಗವನ್ನು ನೋಡಿ ತಂದೆ ತಾಯಿಗಳು ತಮ್ಮ ಮಕ್ಕಳನ್ನು ಬೀದಿಯಲ್ಲಿ ರಿಸಿಕೊಂಡಿದ್ದರು. ಅನಂತರ ಪ್ರಾಪ್ತ ಪೇಟೆಯಿಂದಲೋ ಅದೇ ನಜರ್ ಬಾದಿನಲ್ಲಿರುವ ಪಂಡಿತ ಕೃಷ್ಣಾ ಜಟ್ಟೆಪ್ಪನವರಿಗೆ ತೋರಿಸಲು ಅವರು ಒಂದೇ ದಿವಸದಲ್ಲಿ ವಾಸಿಮಾಡಿದರು. ಈಗ ಮಕ್ಕಳು ಸುಖವಾಗಿರುತಿವೆ. ಈ ಪಂಡಿತರು ಬಹಳ ಪರೋಪಕಾರಿಗಳು ಬಡಬಗ್ಗರ ವಿಷಯದಲ್ಲಿ ತುಂಬಾ ಆದರದಿಂದ ನೋಡಿ ಔಷಧ ಕೊಟ್ಟು ಆದರಿಸುತ್ತಾರೆ. ಯಾರಾದರೂ ಇಂತಾ ರೋಗಗಳಿಂದ ತಮ್ಮ ಮಕ್ಕಳೇ ಆಗಲಿ ಅನ್ಯರಾದರೇ ಆಗಲಿ ಶ್ರಮ ಪಡುತಿದ್ದರೆ ಜಾಗ್ರತೆಯಾಗಿ ತಿಳಿಸಿದ ಪಕ್ಷದಲ್ಲಿ ಗುಣಪಡಿಸುತ್ತಾರೆ.

---

ಬೆಂಗಳೂರು ಡಿಸ್ಟ್ರಿಕ್ಟ್ ಕ್ಲೋಸ್‌ಪೇಟೆ ಸಬ್‌ಡಿವಿಜನ್ ಆಫೀಸರಾದ ಪರುತು ಈಗ ಸ್ಪೆಷಲ್ ಡ್ಯೂಟಿ ಮೇಲಿರುವ ಮೆ|| ಬಿ. ಜಿ ಕೃಷ್ಣಯ್ಯಂಗಾರ್ರವರಿಗೆ ಸೇರಿದ ಕೋರಮಂಗಲವೆಂಬ ಗ್ರಾಮದ ಕೆರೆಯಲ್ಲಿ ಇಲ್ಲಿನ ಮಿಲಿಟರಿ ಸ್ಟೇಷನ್ ಅಗಸರು ಕೆಲವು ಕಾಲದ ಮೊದಲು ರಿಜಿಮೆಂಟಿನ ಬಟ್ಟೆಗಳಂ ಒಗೆಯುತ ಕೆರೆಯ ನೀರು ಕೆಡಿಸುತ ಬಂದದ್ದು ನೋಡಿ ಗ್ರಾಮಸ್ಥರು ಎಷ್ಟು ವಿಧದಿ ಹೇಳಿದಾಗ್ಯೂ ಸದರೀ ಜನರು ಕೇಳದೆ ಜುಲುಂನಿಂದ ತಮ್ಮ ಕೆಲಸವಂ ನಡೆಸುತಿದ್ದವರು ಈಚೆಗೆ ನಾಲ್ಕೈದು ದಿನಗಳ ಹಿಂದೆ ಮೆ|| ಕೃಷ್ಣಯ್ಯಂಗಾರ್ರವರು ಗ್ರಾಮಕ್ಕೆ ಹೋಗಿದ್ದ ಕಾಲದಲ್ಲಿ ಸದರೀ ಜನರು ಬಂದು ಕೆರೆಯಲ್ಲಿ ಬಟ್ಟೆಗಳಂ ಒಗೆಯುತಲಿದ್ದ ವರ್ತಮಾನ ತಿಳಿದು ಬಂದು ಅವರು ಒಗೆದ ಬಟ್ಟೆಗಳಂ ಕಿತ್ತುಕೊಳ್ಳುವಂತೆ ತಮ್ಮ ಕಡೆ ನೈಕರಿಗೆ ಹೇಳಲು ಅವರು ಆ ರೀತಿ ಮಾಡಿ ಅವನ್ನೆಲ್ಲ ಹರಿದು ಹಾಕಿದರು. ಸದರೀ ದೋಭಿ ಜನರು ಓಡಿಹೋಗಿ ರಿಜಿಮೆಂಟಿನವರಿಗೆ ಹೇಳಲು ಅವರು ಗುಂಪುಗೂಡಿಕೊಂಡು ಬಂದು ಗಾಡಿಯಲ್ಲಿ ಹೋಗುತಲಿದ್ದ ಮೆ|| ಕೃಷ್ಣಯ್ಯಂಗಾರ್ರನ್ನು ಅಡ್ಡಹಾಕಿ ಅವರು ತಮ್ಮ ರಿಜಿಮೆಂಟಿನ ಸುಬೇದಾರನ ಬಳಿಗೆ ಕರೆದುಕೊಂಡು ಹೋದರು. ಸದರೀ ಯವನು ವಿವೇಕ ಲೇಶವೂ ಇಲ್ಲದೆ ಔದ್ಧತ್ಯದಿಂದ ಮೆ|| ಕೃಷ್ಣಯ್ಯಂಗಾರ್ರವರನ್ನು ಸದರೀ ರಿಜಿಮೆಂಟಿನ ಕರ್ನಲ್ ಬಳಿಗೆ ಕಳುಹಿಸಿಕೊಟ್ಟನು. ಸದರೀ ಕರ್ನಲಿಯವರು ಮೆ|| ಕೃಷ್ಣಯ್ಯಂಗಾರ್ರವರ ಗೌರವಾಧಿಕಾರವನ್ನೂ ಇವರ ವಿಷಯದಲ್ಲಿ ತುಂಟರಾದ ಶಿಪಾಯಿಗಳೂ ಸುಬೇದಾರನೂ ನಡೆಸಿದ ಅಕ್ರಮಗಳನ್ನೂ ಕೇಳಿ ಸದರೀ ಜನರ ಪೈಕಿ ನಾಲ್ವರಿಗೆ ಕೂಡಲೇ ಮಾಡಿ, ಸುಬೇದಾರನ ಮೇಲೆ ಕ್ರಮಪ್ರಕಾರ ಕ್ರಿಮಿನಲ್ ಚಾರ್ಜ್ ಮಾಡುವಂತೆ ಹೇಳಿದರೆಂತಲೂ, ಈ ದಿನ ಮಿಲಿಟರಿ ಸ್ಟೇಷನ್ ಮ್ಯಾಜಿಸ್ಟ್ರೇಟ್‌ಕೋರ್ಟಿನಲ್ಲಿ ಫಿರ್ಯಾದು ದಾಖಲಾಗುವದೆಂತಲೂ ತಿಳಿಯಬರುತಿದೆ.

## THE MYSORE GAZETTE.
### ಮೈಸೂರು ಗೆಜೆಟ್.

---

ಶ್ರೀಮನ್ಮಹಾರಾಜ ರಾಜಾಸ್ಥಾನ ಚಿತ್ತಸ್ವಾಮಿಯ ಆಜ್ಞಾನುಸಾರವಾದ ಪ್ರಕಟಣೆಗಳು.

---

ತಾ|| ೩೦ನೇ ಆಗಸ್ಟ್ ೧೮೯೩, ನಂ|| ೮೦೪೩ ೦ ೯. ೩೩೩—೯೨—ಸರ್ ೧೮೯೩ ನೇ ಇಸವಿ ಆಗಸ್ಟು ೨೨ ನೇ ತಾರೀಖಿನ ೩೫೧೩—೮೮೪೩ ನೇ ನಂಬರ್ ನೋಟಿಫಿಕೇಷನ್ ಅನುಸರಿಸಿ ಮೆ|| ಸಿ. ಮೀನಾಕ್ಷಯ್ಯನವರು ಸರ್ ೧೮೯೩ ನೇ ಇಸವಿ ಆಗಸ್ಟು ೨೨ ನೇ ತಾರೀಖಿನ ಪೂರ್ವಾಹ್ನದಲ್ಲಿ ಚೀಫ್‌ಕೋರ್ಟ್ ಜಡ್ಜಿಯಾಗಿ ತಮ್ಮ ಕೆಲಸದಲ್ಲಿ ಪ್ರವೇಶಿಸಿದರು.

ನಂ|| ೮೦೪೩—೦. ೯. ೧೯೫—೯೩.—ಪ್ರಾಬೇಷನರಿ ಸಬ್ ಡಿವಿಜನ್ ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮೆ|| ಎ. ಸುಬರಾಜೇ ಅರಸಿನವರು, ಕಳೆದ ಜೂನ್ ೩ ನೇ ತಾರೀಖು ೨೦೪೬—೮. ೫೦೦೫ ನೇ ನಂಬರ್ ಇಸ್ತಿಹಾರ್‌ನಾಮೆಯ ಮೂಲಕ ಅವರಿಗೆ ಸ್ವಂತ ಕೆಲಸದ ಮೇಲೆ ಕೊಡಲ್ಪಟ್ಟ ಆರುತಿಂಗಳ ರಜಾದಿಂದ ಕೆಲಸಕ್ಕೆ ವಾಪಸ ಬಂದು ಸರ್ ೧೮೯೩ ನೇ ಇಸವಿ ಆಗಸ್ಟ್ ೧೫ ನೇ ತಾರೀಖಿನ ಪೂರ್ವಾಹ್ನದಲ್ಲಿ ಮೆ|| ಡಿ. ಎ. ಬಾಲಾಜೆ ಯವರಿಂದ ಸಬ್ ಡಿವಿಜನ್ ಪೋಲೀಸ್ ಆಫೀಸ್ ಚಾರ್ಜನ್ನು ತೆಗೆದುಕೊಂಡದರಾಗಿ, ಸದರೀ ರಜಾ ಪೈಕಿ ಉಳಿದ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿರುತಿದೆ.

ನಂ|| ೩೯೨೬-೮ ೯೭೮—ತಾ|| ೩೧ನೇ ಆಗಸ್ಟ್ ೧೮೯೩—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೮೮ನೇ ಆರ್ಟಿಕಲ್ ಅನುಸರಿಸಿ, ದೊಡ್ಡಬಳ್ಳಾಪುರದ ಅಮಲ್‌ದಾರ್ ಬಿ. ಕೃಷ್ಣರಾಯರವರು ಅವರು ಬಿಡುಗಡೆ ಮಾಡಲ್ಪಡಬಹುದಾದ ತಾರೀಖ್ ಮೊದಲ್ಗೊಂಡು, ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

೨. ಈಗ ನೆಲಮಂಗಲ ತಾಲ್ಲೂಕ್ ಆಕ್ಟಿಂಗ್ ಅಮಲ್‌ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡುತಲಿರುವ ಡೆಪ್ಯುಟಿ ಅಮಲ್‌ದಾರ್ ಕೆ. ಜೆ. ರಾಮಣ್ಣ, ಬಿ. ಎ. ಯವರು, ಬಿ. ಕೃಷ್ಣರಾಯರವರ ಗೈರ್‌ಹಾಜರೀ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ, ದೊಡ್ಡಬಳ್ಳಾಪುರದ ಅಮಲ್‌ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡತಕ್ಕಬಗ್ಗೆ ವರ್ಗ ಮಾಡಲ್ಪಟ್ಟಿರುತ್ತಾರೆ. ಬಿಡುಗಡೆಯಾದ ಕೂಡಲೆ ಕೆಲಸಕ್ಕೆ ಹೋಗತಕ್ಕದ್ದು.

ನಂ|| ೮೦೪೫—೦. ೯. ೨೮—೯೩—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೮೮ನೇ ಆರ್ಟಿಕಲ್ ಅನುಸರಿಸಿ, ಪಾವಗಡ ತಾಲ್ಲೂಕ್ ಅಮಲ್‌ದಾರ್ ಆರ್ ರಾಘವೇಂದ್ರರಾಯರವರು ೧೮೯೩ನೇ ಇಸವಿ ಆಗಸ್ಟ್ ೨೬ನೇ ತಾರೀಖ್ ಮೊದಲು ೧೫ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

೨. ಪಾವಗಡ ತಾಲ್ಲೂಕು ಶಿರಸ್ತೇದಾರ್ ಚಿನ್ನಪ್ಪ ಪಿಳ್ಳೆಯವರು ಅಮಲ್‌ದಾರ್ ರಾಘವೇಂದ್ರರಾಯರ ಗೈರ್‌ಹಾಜರೀಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ ಪಾವಗಡ ತಾಲ್ಲೂಕು ಇನ್‌ಚಾರ್ಜನಲ್ಲಿರತಕ್ಕದ್ದು.

ನಂ|| ೮೦೩೨-೦ ೯. ೮೦೩—೯೨—ತಾ|| ೧ನೇ ಸೆಪ್ಟಂಬರ್ ೧೮೯೩—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೨೦೩ ಮತ್ತು ೨೦೪ನೇ ಆರ್ಟಿಕಲ್‌ಗಳನ್ನನುಸರಿಸಿ, ಹಾಸನ ಮುನಸೀಫ್ ಮೆ|| ಟಿ. ವಾಂಡರ್ಸ್‌ಫೋರ್ಡ್ ಯವರು, ೯೩ನೇ ಇಸವಿ ಸೆಪ್ಟಂಬರ್ ಗುದ್ರೇ ತಾರೀಖ್ ಮೊದಲು ಅಥವಾ ಅವರದನ್ನು ಉಪಯೋಗಿಸಿಕೊಳ್ಳಬಹುದಾದ ಬೇರೆ ಯೊಂದು ತಾರೀಖ್ ಮೊದಲು ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

೨. ಮೈಸೂರು ಚೀಫ್‌ಕೋರ್ಟ್ ಅಡ್ವೊಕೇಟರಾದ ಮೆ|| ಟಿ. ಐ. ಜಯರಾಮ ಅಯ್ಯರವರು ಮೆ|| ವಾಂಡರ್ಸ್‌ಫೋರ್ಡ್ ಯವರು ರಜಾಮೇಲೆ ಗೈರ್‌ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ ಹಾಸನದಲ್ಲಿ ಮುನಸೀಫರಾಗಿ ಕೆಲಸ ನೋಡುವಂತೆ ನೇಮಕರಾಗ್ಮಡಲ್ಪಟ್ಟಿರುತ್ತಾರೆ.

ನಂ|| ೮೦೨೬-೦ ೯. ೧೩೩—೯೨—ತಾ|| ೨ನೇ ಸೆಪ್ಟಂಬರ್ ೧೮೯೩—ಬೆಂಗಳೂರಿನಲ್ಲಿ ಫಾರೆಸ್ಟ್ ಇ

ಸೇರಿಕೊಂಡಿರುವಾಗ್ಯೂ ಪರಕ್ರೋಧೋಭಿಲಾಷಸ್ವಪ್ನವರಲ್ಲಿ ನಾವು ಹ್ಯಾಗೆ ನಿರೀಕ್ಷಿಸುವದಕ್ಕೆ ಸಾಧ್ಯವಾಗುವದು? ಇಷ್ಟಾದಾಗ್ಯೂ ಮಿ॥ ಗ್ಲ್ಯಾಡ್‌ಸ್ಟನ್‌ಯವರು ತಮ್ಮ ಪ್ರತ್ಯರ್ಥಿಗಳ ಪ್ರಯತ್ನಗಳ್ಯಾವದನ್ನೂ ಸ್ವಲ್ಪವೂ ಲಕ್ಷ್ಯದೊಳಗಿಡದೆ ಕನ್ಸರವೆಟಿವ್ ಕಕ್ಷಿಯವರ ಗರ್ವವು ಭಂಗವಾಗುವಂತೆ ತಮ್ಮ ಉದ್ದೇಶವಂ ಸಫಲಗೊಳಿಸಿ ಜಯಶೀಲರಾಗಿ ಐರಿಷ ಮತ್ತು ಇಂಗ್ಲಿಷ ಪ್ರಜೆಗಳ ದೃಢತರವಾದ ಗೌರವ ಕೃತಜ್ಞತೆಗೆ ಪಾತ್ರರಾದವಂ ಕೇಳಲಿಕ್ಕೆ ನಾವು ಬಹಳ ಸಂತೋಷಿಸುತ್ತೇವೆ. ಈಗ ಹೌಸಾಫ್ ಲಾರ್ಡಗಳಿಂದ ತಿರಸ್ಕರಿಸಲ್ಪಟ್ಟ ಮಸವಿದೆಯ ಭವಿಷ್ಯದೊಳಗಾವ ಹ್ಯಾಗಿದ್ದಾಗ್ಯೂ ಮಿ॥ಗ್ಲ್ಯಾಡಸ್ಟನ್‌ಯವರ ದೃಢತರವಾದ ಸಂಕಲ್ಪಕ್ಕೂ ಅವರ ಮನೋನಿಶ್ಚಯಕ್ಕೂ, ಪ್ರಜಾನುರಾಗಕ್ಕೂ ಸದರೀ ಮಸವಿದೆಯು ಸಾಕಾದ ನಿದರ್ಶನವೆಂದೆನ್ನಿಸಿಕೊಳ್ಳದೆ ಹೋಗಲಾರದು. ಮಿ॥ಗ್ಲ್ಯಾಡಸ್ಟನ್‌ಯವರು ತಮ್ಮ ಳಿದಲ್ಪ ಪ್ರಸಂಬಿಕೆಯನ್ನು ಲೇಶವೂ ಹೋಗಲಾಡಿಸಿಕೊಳ್ಳದೆ ಸರ್ವಪ್ರಕಾರದಿಂದಲೂ ಕಾಪಾಡಿಕೊಂಡರೆಂಬದೂ ಅವರು ಮಿಕ್ಕೊಂದಾವತ್ತು ಸಂದರ್ಭವುಂಟಾಗಿ, ಪ್ರಜೆಗಳಿಗೆ ತಮ್ಮ ಕರ್ತವ್ಯವಂ ತಿಳಿಸುವಾಗ ಐರಲ್ಯಾಂಡ್ ರಾಜ್ಯದ ಅಭಿವೃದ್ಧಿಯುಂಟಾಗಿ ಅವರಿದುವರೆಗೆ ಮಾಡಿದ ಮಹತ್ತರ ಪ್ರಯತ್ನಗಳೂ ಸ್ವಲ್ಪವೂ ವ್ಯರ್ಥವಾಗದೆ ಹೋಗಲಾರವು. ಮುಖ್ಯವಾಗಿ ಮಿ॥ಗ್ಲ್ಯಾಡಸ್ಟನ್‌ಯವರು ಐರಲ್ಯಾಂಡ ರಾಜ್ಯದ ಕ್ಷೇಮವಂ ಕೋರಿ ಮಾಡಿದ ಏರ್ಪಾಡಿನ ಫಲೋದ್ಧಿಯನ್ನು ದೇಶೀಯರು ಬಹಳ ಆಸಕ್ತಿಯೊಡನೆ ನಿರೀಕ್ಷಿಸುತ್ತಲಿದ್ದಾರೆ. ತತ್ಕಾಲದೊಳಗೆ ಇಲ್ಲಿನವರಿಗೆ ಸಾಕ್ಷಾತ್ಸಂಬಂಧ ವಿಲ್ಲದಿದ್ದಲ್ಲದೆ ಹೋದಾಗ್ಯೂ ಕಾಲಾಂತರದಲ್ಲಿ ಲಭಿಸಬಹುದಾದ ಪರಂಪರಾ ಪ್ರಯೋಜನದಿಂದವು ವಿಶೇಷ ಉತ್ಸಾಹವನ್ನುಂಟುಮಾಡುತ್ತಿರುತಿದೆ.

## ಇಂಡ್ಯದೇಶದ ಹೊಸ ವೈಸ್‌ರಾಯಿಯವರು

ಈಗ ಇಂಡ್ಯದೇಶದ ವೈಸ್‌ರಾಯಿ ವ ಗವರ್ನರ ಜನರಲಾಗಿರುವ ಲಾರ್ಡ್ ಲ್ಯಾನ್ಸ್‌ಡೌನ್ ಯವರು ತಮ್ಮ ಕೆಲಸದಿಂದ ನಿವೃತ್ತರಾಗಿ ಸ್ವದೇಶಕ್ಕೆ ಹೊರಡಬೇಕಾದ ಕಾಲವು ಸನ್ನಿಹಿತವಾಗಿದ್ದಾಗ್ಯೂ ಅವ್ಯಾಪಿ ಯಾವ ಕಾರಣದಿಂದಲೋ ಅವರ ಉತ್ತರಾಧಿಕಾರಿಯಾಗಿ ಬೇರೊಬ್ಬರು ಗೊತ್ತು ಮಾಡಲ್ಪಡದಿದ್ದುದಂ ಕಂಡು ಎಲ್ಲರು ಆಲೋಚಿಸುತಲಿದ್ದರು. ಹೀಗಿರುವಲ್ಲಿ ಮೊನ್ನೆ ಮಂಗಳವಾರ ೫ನೇ ತಾರೀಖಿನಲ್ಲಿ ಲಂಡನ್ ಪಟ್ಟಣದಿಂದ ಬಂದ ತಂತಿ ವೃತ್ತಾಂತದ ದೆಸೆಯಿಂದ ಕ್ವೀನ್ಸ್‌ಲ್ಯಾಂಡ್ ರಾಜ್ಯದ ಗವರ್ನರರವರಾದ ಜನರಲ್ ಸರ್ ಹೆನ್ರಿ ವೈಲಿ ನಾರ್ಮನ್ ಯೆಂಬವರು ಲಾರ್ಡ್ ಲ್ಯಾನ್ಸ್‌ಡೌನ್ ಯವರ ಪ್ರತ್ಯಾಮ್ನಾಯರಾಗಿ ಇಂಡ್ಯದೇಶದ ವೈಸ್‌ರಾಯಿ ಕೆಲಸದಲ್ಲಿ ನಿಯಮಿಸಲ್ಪಟ್ಟರೆಂತ ತಿಳಿಯಬರುತಿದೆ. ಇದುವರೆಗೆ ಈ ಕೆಲಸಕ್ಕೆ ಉಮೇದವಾರರೆನ್ನಿಸಿಕೊಂಡು ಆಗಿಂದಾಗ್ಗೆ ವೃತ್ತಾಂತ ಪತ್ರಿಕೆಗಳು ಸೂಚಿಸುತ್ತಿದ್ದಂತಾ ದೊಡ್ಡ ಮನುಷ್ಯರ ಪಟ್ಟಿಯಲ್ಲಿ ಮೇಲೆ ಕಂಡವರು ಸೇರಿರಲಿಲ್ಲವು. ಲಾರ್ಡ್ ಹರಿಸನ್, ಲಾರ್ಡ್ ಕ್ರೋಮರ್, ಲಾರ್ಡ್ ಸ್ಪೆನ್ಸರ್, ಲಾರ್ಡ್ ರಾಬರ್ಟ್ಸ್, ಈ ನಾಲ್ವರ ಪೈಕಿ ಯಾರಾದರೊಬ್ಬರು ವೈಸ್‌ರಾಯಿಯಾಗಿ ನಿಯಮಿಸಲ್ಪಡುವರೆಂದು ಪ್ರಜೆಗಳು ದೃಢವಾಗಿ ನಂಬಿದ್ದರು. ಆದರೆ ಈಗ ನಡೆದ ಏರ್ಪಾಡು ಜನರಿಗೆ ವಿಶೇಷ ಆಶ್ಚರ್ಯವನ್ನುಂಟುಮಾಡದೆ ಹೋಗಲಾರದೆಂದೆಣಿಸುತ್ತೇವೆ. ಸರ್ ಹೆನ್ರಿ ವೈಲಿ ನಾರ್ಮನ್, ಜಿ. ಸಿ. ಬಿ. ಜಿ. ಸಿ. ಎಂ. ಜಿ, ಸಿ. ಐ. ಇ ಯವರನ್ನು ಇಂಡ್ಯ ದೇಶದ ವೈಸ್‌ರಾಯಿಯವರಾಗಿ ನಿಯಮಿಸಿದ್ದು ಆಕ್ಷೇಪಣೀಯವೆಂದು ಅನೇಕರ ಅಭಿಪ್ರಾಯವಾಗಿರುತಿದೆ. ಇವರ ವಯಃಪರಿಮಿತಿಯನ್ನು ವಹಿಸಬೇಕಾಗಿರುವ ಕೆಲಸದ ಜವಾಬ್ದಾರಿಯನ್ನೂ, ಇವರು ನಿರ್ವಹಿಸಬೇಕಾಗಿರುವ ಕಾರ್ಯಬಾಹುಳ್ಯವನ್ನೂ ಆಲೋಚಿಸಿ ನೋಡಿದರೆ ೬೭ ವರುಷಗಳ ವಯಸ್ಸುಳ್ಳ ಒಬ್ಬ ವಯೋವೃದ್ಧರನ್ನು ಆರಿಸಿದ ಉದ್ದೇಶವೇ ಯುಕ್ತವಲ್ಲವೆಂಬದು ಕೆಲವರ ಪಕ್ಷವಾಗಿರುತಿದೆ. ಮಹಾರಾಜ್ಞೀ ಪ್ರತಿನಿಧಿಯಾಗಿರುತ್ತ ಈ ರಾಜ್ಯವನ್ನು ಪಾಲಿಸತಕ್ಕವರು ವಯೋವೃದ್ಧರಾಗಿಯೂ, ರಾಗದ್ವೇಷಾದಿ ವಿರುದ್ಧಗುಣ ರಹಿತರಾಗಿಯೂ, ಬಹಳ ಉಪಶಾಂತರಾಗಿಯೂ, ಪ್ರಜಾನುರಾಗವುಳ್ಳವರಾಗಿಯೂ ಇರಬೇಕಾದುದರಿಂದ ತಾದೃಶ ಗುಣಗಳು ಪ್ರಾಯೇಣ ಅಧಿಕ ವಯಸ್ಸಿನಲ್ಲಿಯೇ ಉಂಟಾಗುವದಾಗಿ ಇವರ ವಯಃಪ್ರಯುಕ್ತವಾದ ಆಕ್ಷೇಪಣೆಯು ಆದರಣೀಯವಲ್ಲವೆಂಬದಾಗಿ ಇತರರು ಕೆಲವರ ತಾತ್ಪರ್ಯವಾಗಿರುತಿದೆ. ಇಂಡ್ಯದೇಶಕ್ಕೆ ಇದುವರೆಗೆ ವೈಸರಾಯಿಗಳಾಗಿ ಬಂದು ಹೋದವರ ಪೈಕಿ, ಸರ್ ಹೆನ್ರಿ ವೈಲಿ ನಾರ್ಮನ್‌ಯವರೇ ವಯೋಧಿಕರಾಗಿರುತ್ತಾರೆ. ವಾರನ್ ಹೇಸ್ಟಿಂಗ್ಸ್ ಯವರ ಕಾಲದ ಮೊದಲು, ಇದುವರೆಗೆ ವೈಸರಾಯಿಗಳಾಗಿ ಬಂದವರ ವಯಸ್ಸಂಖ್ಯೆಯನ್ನು ಈ ಪತ್ರಿಕೆಯ ವಾಚಕರ ತಿಳುವಳಿಕೆಯ ಬಗ್ಗೆ ಇದರಲ್ಲಿ ಪ್ರಕಟಿಸುತ್ತೇವೆ.

ವೈಸರಾಯಿ ಕೆಲಸದ ಚಾರ್ಜನ್ನು ತೆಗೆದುಕೊಂಡ ಕಾಲದಲ್ಲಿ,

| | | |
|---|---|---|
| ವಾರನ್ ಹೇಸ್ಟಿಂಗ್ಸ್‌ಯವರು | . | ೪೧ |
| ಲಾರ್ಡ್ ಕಾರ್ನವಾಲಿಸ್‌ಯವರು ಪ್ರಥಮಾವರ್ತಿ | ... | ೪೮ |
| ಲಾರ್ಡ್ ಕಾರ್ನವಾಲಿಸ್‌ಯವರು ೨ನೇ ಆವರ್ತಿ. | .. | ೬೬ |
| ಮಾರ್ಕ್ವಿಸ ಆಫ್ ವೆಲಸ್ಲಿ | . | ೩೮ |
| ಅರಲ್ ಆಫ್ ಮಿಂಟೊ | ... | ೫೫ |
| ಮಾರ್ಕ್ವಿಸ ಆಫ್ ಹೇಸ್ಟಿಂಗ್ಸ್ | .. | ೫೯ |
| ಅರಲ್ ಆಫ್ ಅಂಹರಸ್ಟ | ... | ೫೦ |
| ಲಾರ್ಡ್ ವಿಲ್ಲಿಯಂ ಬೆಂಟಿಂಕ | | ೫೪ |
| ಅರಲ್ ಆಫ್ ಆಕ್ಲೆಂಡ | . | ೫೨ |
| ಅರಲ್ ಆಫ್ ಎಲ್ಲೆಂಬರೊ | .. | ೫೨ |
| ಲಾರ್ಡ್ ಹಾರ್ಡಿಂಜ್ | | ೫೯ |
| ಮಾರ್ಕ್ವಿಸ ಆಫ್ ಡಾಲ್‌ಹೌಸಿ | .. | ೩೬ |
| ಅರಲ್ ಆಫ್ ಕ್ಯಾನಿಂಗ | .. | ೪೪ |
| ಅರಲ್ ಆಫ್ ಯಲ್ಜಿನ್ | . | ೫೧ |
| ಸರ್ ಜಾನ್ ಲಾರೆನ್ಸ | | ೫೩ |
| ಅರ್ಲ್ ಮೇಯೊ | . | ೪೬ |
| ಅರಲ್ ಆಫ್ ನಾರ್ಥಬ್ರೂಕ | .. | ೪೬ |
| ಲಾರ್ಡ್ ಲಿಟನ್ | ... | ೪೫ |
| ಲಾರ್ಡ್ ರಿಪನ್ | .. | ೫೩ |
| ಲಾರ್ಡ್ ಡಫರಿನ್ | . | ೫೮ |
| ಲಾರ್ಡ್ ಲ್ಯಾನ್ಸ್‌ಡೌನ್ | . | ೪೩ |
| ಸರ್ ಹೆನ್ರಿ ನಾರ್ಮನ್ (ಈಗ ನೇಮಿಸಲ್ಪಟ್ಟವರು) | | ೬೬ |

ಈಗ ವೈಸ್‌ರಾಯಿಯವರಾಗಿ ನೇಮಿಸಲ್ಪಟ್ಟವರು ಸರ್ ಜಾನ್ ಲಾರೆನ್ಸ ಎಂಬವರು ಇಂಡ್ಯ ರಾಜ್ಯದ ವೈಸರಾಯಿಯವರಾಗಿದ್ದ ಕಾಲದಲ್ಲಿ ಇಂಡ್ಯ ಗವರ್ನಮೆಂಟು ಮಿಲಿಟರಿ ಸೆಕ್ರೆಟರಿಯಾಗಿದ್ದರು. ಇದರಿಂದ ಈಗ ಬರತಕ್ಕವರಿಗೆ ಇಂಡ್ಯ ದೇಶದ ಅನುಭವವು ಸ್ವಲ್ಪವಲ್ಲಿ ಕೆಲವು ಮಟ್ಟಿಗೆ ಇದ್ದಿರಬಹುದೆಂಬುದರಲ್ಲೇನೂ ಸಂಶಯವಿಲ್ಲವು, ಆದರೆ ಬಹುಕಾಲವಾದದರಿಂದ ತಾದೃಶಾನುಭವವು ಮಾಸಿಹೋದಿಯನುಬೆ ಇಲ್ಲಿನ ವಿಷ್ಯಯಗಳವರಿಗೆ ನೂತನಗಳಾಗಿ ಕಂಡು ಬರಬಹುದು. ಇವರು ೧೮೭೭ನೇ ಇಸವಿ ಮಾರ್ಚಿ ತಿಂಗಳಲ್ಲಿ ಇಂಡ್ಯದೇಶದ ನೌಕರಿಯಿಂದ ನಿವೃತ್ತರಾದರು, ಇದಕ್ಕೆ ೨ ವರುಷಗಳು ಹಿಂದೆ ಮಿಲಿಟರಿ ಸೆಕ್ರೆಟರಿಯಾಗಿಯೂ, ಸನ್ ೧೮೭೮ನೇ ಇಸವಿಯಲ್ಲಿ ಇಂಡ್ಯ ಸ್ಟೇಟ ಸೆಕ್ರೆಟರಿಯವರ ಕೌನ್ಸಿಲಿನಲ್ಲೊಬ್ಬ ಮೆಂಬರಾಗಿಯೂ ನಿಯಮಿಸಲ್ಪಟ್ಟರು. ಐದು ವರ್ಷಗಳ ತರುವಾಯ, ಜಮೆಯಿಕಾ ರಾಜ್ಯದ ಗವರ್ನರ್ ಕೆಲಸವನ್ನಂಗೀಕರಿಸಿದರು. ಸರ್ ಹೆನ್ರಿ ನಾರ್ಮನ್ ಯವರು ಹಿಂದೆ ಈ ದೇಶದಲ್ಲಿ ನಡೆದ ಅನೇಕ ಯುದ್ಧ ಸಮಯಗಳಲ್ಲಿ ವಿಶೇಷ ಮೆಹನತು ಮಾಡಿ ಕೀರ್ತಿ ಪ್ರತಿಷ್ಠೆಗಳಂ ಸಂಪಾದಿಸಿದರು. ಪಂಜಾಬು ಯೆಂಬ ಪ್ರದೇಶದಲ್ಲಿ ಜರಿಗಿದ ಯುದ್ಧ ಕಾಲದಲ್ಲಿಯೂ, ದೆಹಲಿ ಪಟ್ಟಣವು ಮುತ್ತಿಗೆ ಹಾಕಲ್ಪಟ್ಟ ಸಮಯದಲ್ಲಿಯೂ ಲಕ್ನೋ ಪಟ್ಟಣವು ಬ್ರಿಟಿಷ ಸುಭೆದಾರದ ಸಂದರ್ಭದಲ್ಲಿಯೂ ಸರ. ನಾರ್ಮನ ಯವರು, ಗವರ್ನಮೆಂಟಿನವರ ಪ್ರಶಂಸೆಗೆ ವಿಷಯರಾದರು. ಹಿಂದೆ ಒಂದು ಕಾಲವಲ್ಲವದು ಬೆಂಗಾಲ ಸೈನ್ಯಕ್ಕೆ ಅಧಿಪತಿಯಾಗಿದ್ದಾಗ್ಯೂ ಕೆಲಸವಂ ಬಿಟ್ಟ ನಿವೃತ್ತರಾದ ಬಹುಕಾಲದ ತರುವಾಯ ಮರಳಿ ಇವರಿಗೆ ಉದ್ಯೋಗವಂ ಕೊಡುವದನ್ನು ಅನುಚಿತವೆಂಬದಾಗಿ ಅನೇಕ ಇಂಗ್ಲಿಷ ಪತ್ರಿಕೆಗಳವರು ಬರೆಯುತಿವೆ. ಮುಖ್ಯವಾಗಿ ಮಿ॥ ಗ್ಲ್ಯಾಡ್‌ಸ್ಟನ್ ಯವರು, ಸರ. ಹೆನ್ರಿ ನಾರ್ಮನ ಯವರನ್ನು ಇಷ್ಟು ದೊಡ್ಡ ರಾಜ್ಯಕ್ಕೆ ಮುಖ್ಯಾಧಿಕಾರಿಯಾಗಿ ನಿಯಮಿಸಬೇಕಾಗಿದ್ದರೆ ಅವರಿಗೆ, ಸ್ವಪಕ್ಷದವರಲ್ಲಿ ಅವರಂ ವಿನಾಯಿಸಿ ಅನ್ಯರ್ಯಾರೂ ದೊರೆಯದೆ ಯಾದರೂ ಇದ್ದಿರಬೇಕು, ಅಥವಾ ವೈಸ್‌ರಾಯಿಯಾಗಿ ನಿಯಮಿಸಲ್ಪಡತಕ್ಕೆ ಆವಶ್ಯಕಗಳಾದ ಗುಣಗಳಿಂದರು ಅವರಲ್ಲಿ ವಿಶೇಷ ಕಂಡು ಬಂದಿರಬೇಕೆಂದೆಣಿಸುತ್ತೇವೆ.

ಆನರೆಬಲ ಜಸ್ಟಿಸ ಕಾಶೀನಾಥ ತ್ರಿಯಂಬಕ ತೆಲಾಂಗ ಸಿ. ಐ. ಇ ಯವರ ಮರಣವೃತ್ತಾಂತ

ಲೋಕದಲ್ಲಿ ನಾನಾವ ಜನ್ಮವು ಅನೇಕ ಜನ್ಮಾರ್ಜಿತ ಪುಣ್ಯ ಪರಿಪಾಕದಿಂ ಲಭಿಸತಕ್ಕದ್ದಾಗಿರುವದರಿಂದ ಅದು ಕೇವಲ ದುರ್ಲಭವಾದುದಾಗಿರುತದೆ. ತತ್ರಾಪಿ ಪ್ರಸಿದ್ಧರಾಗಿದ್ದು ಗತಿಸಿದ ದೊಡ್ಡವರ ವಂಶದಲ್ಲಿ ಜನಿಸಿ, ರೂಪಗುಣ ಚರ್ಯೆಗಳಿಂದ ಹೃದಯಾಹ್ಲಾದಕರರಾಗಿ ಅಸಾಧಾರಣಗಳಾದ ವಿದ್ಯಾ ಬುದ್ಧಿ ಮೇಧಾಶಕ್ತಿಯಂ ಪಡೆದು, ಜನಗಳ ಪ್ರೀತಿ ಗೌರವಗಳಿಗೆ ಪಾತ್ರರಾಗುವಂತವರಾಗುವದಂತೂ ಮತ್ತೂ ದುರ್ಲಭವಾಗಿರುತದೆ. ಅಂತಾ ಸತ್ಪುರುಷರ್ಯಾರಾದರೊಬ್ಬರಿಬ್ಬರು ಸೃಷ್ಟಿ ವೈಚಿತ್ರ್ಯ ನಿದರ್ಶನಾರ್ಥ ಯೆಲ್ಲಿಯಾದರು ಇರುವಪಕ್ಷಕ್ಕೆ ಅವರು ಸಹ ಏತದ್ದೇಶೀಯರ ದೌರ್ಭಾಗ್ಯದಿಂದ ಪೂರ್ಣ ವಯಸ್ಸಿನಲ್ಲಿಯೇ ಅದೃಶ್ಯರಾಗಿ ಹೋಗುತ್ತಾರೆ. ಈ ಇಂಡ್ಯದೇಶದ ಕೀರ್ತಿ ಪ್ರಭವ ವೈಭವಗಳಿಗೆ ಕಾರಣ ಭೂತಗಳಾಗಿದ್ದ ವಿಷಯಗಳೆಲ್ಲವು ಕಾಲಕ್ರಮದಿಂ ನಷ್ಟವಾಗುತ್ತ, ಕೇವಲ ಸಾಮಾನ್ಯ ಸ್ಥಿತಿಗೆ ಬರುತಲಿದ್ದಾಗ್ಯೂ ಜನರ ವಿದ್ಯಾಬುದ್ಧಿ ಕೌಶಲ್ಯ ವಿಷಯದಲ್ಲಿ ಮಾತ್ರ ಅವರ ಪೂರ್ವಪ್ರತಿಷ್ಠೆಯನ್ನು ಕಳೆದುಕೊಳ್ಳದ ಕಾಪಾಡಿಕೊಳ್ಳುತ ಬರುತಲಿರುವದೊಂದೇ ಇಲ್ಲಿನವರಿಗೆ ಆಶ್ವಾಸನವನ್ನುಂಟುಮಾಡತಕ್ಕದ್ದಾಗಿರುತಿದೆ. ವಿದ್ಯಾ ಬುದ್ಧಿ ಪ್ರಜ್ಞಾಧಿಕಾರಗಳಿಂದ ಪ್ರಸಿದ್ಧರಾಗಿರತಕ್ಕ ಕೆಲವರು ಸಹ ಮೃತರಾದರೆ ಅವಶ್ಯಂತೆಯೂ ದುಃಖಕರವಾದ ನಷ್ಟವು ದೇಶಕ್ಕೆ ಬೇರೆಯಾದರೂ ಆವಶ್ಯಕವಿರುವದಿಲ್ಲವು. ಮುಂಬೈ ಹೈಕೋರ್ಟ ಜಡ್ಜಿಯರಲ್ಲೊಬ್ಬರಾಗಿದ್ದ, ಆನರೆಬಲ ಜಸ್ಟಿಸ ಕಾಶೀನಾಥ ತ್ರಿಯಂಬಕ ತೆಲಾಂಗ ಸಿ. ಐ. ಇ ಯವರು ಕಳೆದ ತಿಂಗಳ ೩೧ ನೇ ತಾರೀಖಿನಲ್ಲಿ ಕಾಲಗತಿಯನ್ನೈದಿದರೆಂಬ ವೃತ್ತಾಂತವು ನಮಗೆ ಗತ ವಾರದಲ್ಲಿಯೇ, ತಿಳಿಯಬಂದಾಗ್ಯೂ ಅಂತಾ ಸುಪ್ರಸಿದ್ಧರಾದ ಪುರುಷರ ವಿಯೋಗಜನ್ಯವಾದ ದುಃಖಾತಿರೇಕದಿಂ ನಮ್ಮ ಲೇಖನಿಯು ಕ್ಷಣೇಕ್ಷಣೆ ಅಸ್ಪಂದತೆಯನ್ನೈದುತಲಿದ್ದದರಿಂದ, ನಮ್ಮ ಕರ್ತವ್ಯದೊಳು ಸಹ ನಮಗೆ, ಸ್ಮೃತಿಭಂಗ ವುಂಟಾಯಿತು. ಮಿ॥ ಜಸ್ಟಿಸ ತೆಲಾಂಗ ಯವರ ಮರಣವು ಯಾವ ಬಾಗದಲ್ಲಿಯೂ ಸಾಮಾನ್ಯವಾದುದೆಂದು ಒಬ್ಬರೂ ಭಾವಿಸಲಾಗದು. ಏತತ್ಪ್ರಯುಕ್ತವಾದ ನಷ್ಟವು ಸುಲಭವಾಗಿ ಪರಿಹಾರ್ಯವಾದುದಲ್ಲವು. ಇವರು ವಿಸ್ತೃತವಾದ ಕಾರ್ಯಕ್ಕೆ ಚಿಂತಿಸಿ ಪ್ರಯೋಜನವಿಲ್ಲವು. ಇವರು ನ್ಯಾಯಾಧಿಪತಿಯಾಗಿಯೂ, ನ್ಯಾಯವಾದಿಯಾಗಿಯೂ, ಮಿತ್ರರಾಗಿಯೂ, ಹಿತಬೋಧಕರಾಗಿಯೂ, ಪಂಡಿತರಾಗಿಯೂ, ಸ್ವದೇಶಾಭಿಮಾನಿಯಾಗಿಯೂ ಇದ್ದು ಮಾಡಿದ ಉಪಕೃತಿಯು ಚಿರಸ್ಮರಣೀಯವಾಗಿರುತಿದೆ. ಇವರ ಪ್ರಾಮಾಣಿಕತೆಯೂ, ನಿಷ್ಪಕ್ಷಪಾತತೆಯೂ, ಉಪಶಾಂತತೆಯೂ, ಮೃದುಭಾಷಿತ್ವವೂ, ಪ್ರಜೆಗಳಿಗೆ ವಿಶೇಷ ಗೌರವವನ್ನುಂಟುಮಾಡಿದವು. ಇವರಿಗೆ ಗತಿಸುವಾಗ್ಯೆ ೪೩ ವರ್ಷಗಳ ವಯಸ್ಸಾಗಿತ್ತು. ಇಂತಾ ಅಲ್ಪವಯಸ್ಸಿನಲ್ಲಿ ಮಿ॥ ತೆಲಾಂಗರವರು ವೃದ್ಧರಾದ ಮಾತಾಪಿತೃಗಳನ್ನೂ ಭಾರ್ಯಾಪುತ್ರರನ್ನೂ ನಿರಂತರ ದುಃಖಾನುಭವಕ್ಕೆ ಗುರಿಮಾಡಿ ಸಕಲ ಪ್ರಜೆಗಳು ತಮ್ಮ ನಷ್ಟವು ಕುರಿತು ಕ್ಲೇಶಪಡುವಂತೆ ಗತಿಸಿದ್ದು ಅಲ್ಪಕಾಲದಲ್ಲಿ ಮರೆಯತಕ್ಕ ವಿಷಯವಾಗಿಲ್ಲವು. ಮುಖ್ಯವಾಗಿ ಪ್ರಸಿದ್ಧರೆನಿಸಿ ಸಕಲ ವಿಧದಿಂದಲೂ, ಇಂಡ್ಯದೇಶಕ್ಕೆ ಕೀರ್ತಿ ಸಂಪಾದಕರಾಗಿದ್ದ, ನಾಟಕ ರಾಜಾ ಸರ. ಟಿ. ಮಾಧವರಾಯರವರು, ಕೆಸಬಚಂದ್ರಸೇನರವರು, ರಾಜೇಂದ್ರಲಾಲಮಿತ್ರರವರು, ಮೋರೇಶ್ವರ ಉಪೇಂದ್ರಕುಂಟೆ ಯವರು, ವಿಶ್ವನಾಥ ನಾರಾಯಣ ಮಾಂಡಲಿಕರು ಮೊದಲಾದ ದೊಡ್ಡ ಮನುಷ್ಯರಂತೆ ಪ್ರಶಂಸಾರ್ಹರಾಗಿದ್ದ ಮಿ॥ ತೆಲಾಂಗರವರ ಮರಣಪ್ರಯುಕ್ತವಾದ ನಷ್ಟವಂ ಕತ್ಸನವಾಗಿ ವಿದ್ಯಾಬುದ್ಧಿ ವಿವೇಕಶಾಲಿಯಾದ ಬೇರೊಬ್ಬ ಪುರುಷನೇರ್ಪಟ್ಟು ಹೋಗಲಾಡಿಸುವಂತೆ ಅನುಗ್ರಹಿಸಬೇಕೆಂದು ಭಗವಂತನಂ ಪ್ರಾರ್ಥಿಸಬೇಕಾಗಿರುತಿದೆ

## Occasional Notes.
### ನೈಮಿತ್ತಿಕ ವಿಷಯನ್ಯಾಸ.

ಗಾಂಜಾ ಮೂಲಕ ಸರಕಾರಕ್ಕೆ ಸಾಲಿಯಾನಾ ೫೫ ಲಕ್ಷ ರೂಪಾಯಿಗಳು ಹುಟ್ಟುವಳಿಯಾಗುತಿವೆ.

ಕಾಬೂಲ್ ಅಮೀರರ ನೌಕರಿಯಲ್ಲಿರುವ ಯುರೋಪಿಯನ್‌ಜನರು ಸದರೀ ದೇಶದಲ್ಲಿ ಫಿರಂಗಿಯ ಕಾರಖಾನೆಯೊಂದನ್ನೇರ್ಪಡಿಸುವುದು ಬೇಕೆಂದು ಅವರು ಬಲಾತ್ಕರಿಸುತಲಿರುವಂತೆ ಪಯೋನಿಯರ್ ಪತ್ರಿಕೆ ತಿಳಿಸುತಿದೆ.

ಆಯೇ ಕ ಶ್ರಾವಣಪದಿನ, ಬಡೋದೆ ಸಂಸ್ಥಾನದ ಮಹಾರಾಣೀ ಚಿಮ್ನಾಬಾಯಿಯವರಿಗೆ ಗಂಡು ಮಗು ಹುಟ್ಟಿ ತಾಯಿಯೂ ಮಗುವೂ ಆರೋಗ್ಯವಾಗಿರುವಂತೆ ಕೇಳಿ ಸಂತೋಷಿಸುತ್ತೇವೆ. ಗಾಯಕವಾಡ ಮಹಾರಾಜರವರಿಗೆ ಈಗ ಜನಿಸಿದ್ದು ನಾಲ್ಕನೆಯ ಗಂಡುಮಗು.

ಇಂಗ್ಲಿಷ್ ಹೆಂಗುಸರು, ಗಂಡುಸರು ನರಿ ಹಂದಿ ಮೊದಲಾದ ಜೀವ ಜಂತುಗಳಂ ಕೊಲ್ಲುವದಕ್ಕಾಗಿ ಶಿಕಾರಿ ಮಾಡುವ ಕಾಲವಲ್ಲ ತಾವೂ ಅವರ ಸಂಗಡ ಇರುವದು ಕೆಟ್ಟ ವಾಡಿಕೆಯೆಂದು ಮಿಸ್ ಫಾಸೆಟ ಎಂಬವರು ಕಠಿಣ ಶಬ್ದಗಳಿಂದ ನಿಂದಿಸುತ್ತಾರೆ.

ಇಂಡಿಯನ್ ನ್ಯಾಷನಲ್ ಕಾಂಗ್ರೆಸ ಯೆಂಬ ಸಾರ್ವಜನಿಕ ಸಭೆಯ ತರಫ್ ರಾಜಾ ರಾಮಪಾಲ ಸಿಂಗ ಮತ್ತು ಪಂಡಿತ ಮದನಮೋಹನ ಮಾಳವ್ಯ ಎಂಬ ಇಬ್ಬರು ದೊಡ್ಡ ಮನುಷ್ಯರು ಬರುವ ಅಕ್ಟೋಬರ ತಿಂಗಳಲ್ಲಿ ದೇಶ ಸಂಚಾರ ಮಾಡುವರು.

ಜೆರ್ಸಿ ದ್ವೀಪದಲ್ಲಿ ಯಾವಳಾದರೊಬ್ಬಳು ನಿಷ್ಕರ್ಷಿಷ್ಟವಾದ ಒಂದು ಕಾಲದವರೆಗೆ ಮದುವೆ ಇಲ್ಲದಿದ್ದರೆ, ಅವಿವಾಹಿಗಳು ಯಾವನಾದರೊಬ್ಬನನ್ನು ಹುಡುಕಿ ಅವಳನ್ನು ಮದುವೆ ಮಾಡಿಕೊಳ್ಳುವಂತೆ ಇವನಿಂದ ಪಡಿಸತಕ್ಕದ್ದೆಂದು ಒಂದು ಕಾನೂನ ಜಾರಿಯೊಳಿರುತಲಿತ್ತು. ಈಚೆಗೆ ಅಲ್ಲಿನ ಅರಸರವರು ಅದನ್ನು ರದ್ದು ಮಾಡಿತ್ತಾರೆ.

ಇಂಡ್ಯದೇಶದಲ್ಲಿ ಅರಣ್ಯನಿವಾಸಿಗಳಾದವರನೇಕರು ಪ್ರಬಲರೋಗ ನಿವಾರಕಗಳಾದ ಬಹುವಿಧ ಮೂಲಿಕೆಗಳನ್ನರಿತಿರುತ್ತಾರಾಗಿ, ಸರ್ಕಾರದ ಸಹಾಯದ ಮೂಲಕ ಸದರೀ ಕಾಡು ಜನರಿಂದ, ಅಂತಾ ಮೂಲಿಕೆಗಳಂ ತಿಳಿದುಕೊಳ್ಳಬೇಕಾದ ವಿಷಯದಲ್ಲಿ ಒಂದು ದೃಢವಾದ ಪ್ರಯತ್ನ ಮಾಡುವದುಚಿತವೆಂದು ಒಬ್ಬ ವೈದ್ಯನು ಸೂಚಿಸುತ್ತಾನೆ. ಇದು ಆವಶ್ಯಕರ್ತವ್ಯವಾದುದೆಂಬದರಲ್ಲಿ ಸಂಶಯವಿಲ್ಲವು.

ಕಾಶ್ಮೀರದೇಶದ ನಾಟಕ ಗವರ್ನರ್‌ಗಳಪೈಕಿ ಯೊಬ್ಬರಾದ ದಿವಾನ ಬದರೀನಾಥ ಎಂಬವರು ಕಳೆದ ತಿಂಗಳ ೨೦ ನೇ ತಾರೀಖಿನಲ್ಲಿ ಶ್ರೀನಗರ ಪಟ್ಟಣದೊಳು ಮೃತಪಟ್ಟರು. ಅವರ ಉತ್ತರಕ್ರಿಯೆಗೆ ಹಿಂದೂಗಳೂ ಮಹಮ್ಮದೀಯರೂ ಸೇರಿ ೨೦,೦೦೦ ಮಂದಿ ಬಂದಿದ್ದರು. ಅವರ ಕಳೇಬರವು ಬೆಳ್ಳಿ ಪಾಲಕ್ಕಿಯಮೇಲೆ ರುದ್ರಭೂಮಿಗೆ ಸಾಗಿಸಲ್ಪಟ್ಟ ಕಾಲದಲ್ಲಿ ಭಂಗಾರ, ಬೆಳ್ಳಿ ಮತ್ತು ತಾಮ್ರ ನಾಣ್ಯಗಳು ಅದರಮೇಲೆ

ಕಲ್ಲಲ್ಪಟ್ಟನು. ವೃತನಾದ ಈ ದೊಡ್ಡ ಮನುಷ್ಯರು ಕಾಶ್ಮೀರದಲ್ಲಿ ಬಹಳ ಗೌರವ್ಯರಾಗಿರುತಿದ್ದರು.

ಸುಕ್ಕೂರ್ ಎಂಬ ಪಟ್ಟಣದಲ್ಲಿ ಮೊದಲಂದ ಬ್ಬಂದ ಕಾಲದೊಳು ಹಿಂದೂಜಾತಿ ಪೋಲೀಸ್ ಇನ್ಸ್‌ಪೆಕ್ಟರ್ ಮೇಲೆ ಜುಲುಂ ನಡಿಸಿದ ತಪ್ಪಿತದಬಗ್ಗೆ ದಸ್ತಗಿರಿ ಮಾಡಲ್ಪಟ್ಟ ೫೦ ಮಂದಿ ಮಹಮ್ಮದಿಯ್ಯರು, ಸಬ್‌ಡಿವಿಜನ್ ಮ್ಯಾಜಿಸ್ಟ್ರೇಟರಿಂದ ದಸ್ತಗಿರಿಯಲ್ಪಟ್ಟು ಸೆಷನ್ ಕೋರ್ಟಿಗೆ ಕಮ್ಮಿಟಿ ಮಾಡಲ್ಪಟ್ಟಿರುತ್ತಾರೆ. ಈ ಮೊಕದ್ದಮೆಯ ವಿಚಾರಣೆಯ ಬಗ್ಗೆ ಕರಾಚಿ ಡಿಸ್ಟ್ರಿಕ್ಟ್ ಸೆಷನ್ ಜಡ್ಜಿಯವರಾದ ಮ|| ಡಬ್ಲು ಡೀವಿಸ್ ಎಂಬವರು ಸ್ಪೆಷಲ್ ಜಡ್ಜಿಯಾಗಿ ನೇಮಿಸಲ್ಪಟ್ಟಿರುತ್ತಾರೆ.

ಕಾಬೂಲ್ ಅಮೀರರವರೊಡನೆ ರಾಜಕೀಯಗಳಾದ ಕೆಲವು ಅಂಶಗಳನ್ನು ಕುರಿತು ಪ್ರತ್ಯಕ್ಷದಲ್ಲಿ ಮಾತನಾಡುವದಕ್ಕಾಗಿ ಇಂಡ್ಯ ಗವರ್ನ್‌ಮೆಂಟಿನವರ ಕಡೆ ರಾಯಭಾರಿಯಾಗಿ ಸರ್ ಮಾರ್ಟಿಮರ್ ಡ್ಯೂರಾಂಡ ಎಂಬವರು ಕಾಬೂಲಿಗೆ ಹೋಗುತಲಿರುವರಷ್ಟೆ. ಸದರೀ ಯವರು ಬಂದ ಕಾಲದಲ್ಲಿ ಅವರೊಡನೆ ಮಾತನಾಡತಕ್ಕ ವಿಷಯಗಳನ್ನು ಕುರಿತು ಯೋಚಿಸುವದಕ್ಕಾಗಿ ಅಮೀರರವರು ಆಯಾ ಪ್ರಾಂತಗಳೊಳಿರುವ ಪ್ರಬಲರಾದ ಮುಲ್ಲಾ ಜನರು ಕರೆಯಿಸಿರುವರೆಂ ಸರಯವ್ವ ವಿಭಾಗ ಬಾತಮೀದಾರನೊಬ್ಬ ಒಂದು ಪತ್ರಿಕೆಗೆ ಬರೆದಿದ್ದಾನೆ.

ಹಸ್ತಿರದನೆ ತರಣಾನದಲ್ಲಿ ಹುಟ್ಟಿದ ಒಂದು ಹಾಸನದಲ್ಲಿ ಒಬ್ಬ ಹಿಂದೂ ಅರಸನು ಒಬ್ಬ ಹಿಂದೂ ಹೆಂಗಸಿಗೆ ಒಂದು ಜಮೀನನ್ನು ಇನಾಂ ಕೊಟ್ಟವನಾಯು ಆ ಹೆಂಗಸನ್ನೇ ವಿವಾಹ ಮಾಡಿಕೊಂಡನು. ಸದರೀ ರಾಜಪತ್ನಿಯು ಗಾನ ವಿದ್ಯೆಯಲ್ಲಿ ಬಹಳ ಸಮರ್ಥಳು, ಆಕೆಯು ಸಭೆಗಳಲ್ಲಿ ಗಾನ ಮಾಡುತ್ತಿದ್ದಳು, ಆದುದರಿಂದ ಇಂಡ್ಯದೇಶದೊಳು ಪೂರ್ವಕಾಲದಲ್ಲಿ ಹೆಂಗಸರು ತಮ್ಮಗಾನ ವಿದ್ಯೆಯಿಂದ ಸಭ್ಯರು ಸಂತೋಷಗೊಳಿಸುವದು ತಮಗೆ ಗೌರವಹಾನಿಕರವೆಂದು ಯೆಣಿಸುತಲೂ ಇರಲಿಲ್ಲ, ಮಹಮ್ಮದೀಯರಿಗೆ ವಿವಾಹ ಪ್ರಸಿದ್ಧಿ ನಡೆಯುತಲಿದ್ದಂತೆ ಯೋಗ್ಯವೇಕಾಗಿದೆಯೆಂದು ಬೊಂಬಾಯಿನೊಂದು ಪತ್ರಿಕೆಯು ಕಥಾರೂಪವಾಗಿ ಒಂದು ವೃತ್ತಾಂತವನ್ನು ಪ್ರಕಟಿಸಿದುದು.

ಮ|| ಜಸ್ಟಿಸ್ ತೆಲಾಂಗರವರ ಮರಣಪ್ರಯುಕ್ತ ಈಗ ಖಾಲೀಯಾಗಿರುವ ಮುಂಬೈ ಹೈಕೋರ್ಟ್ ಜಡ್ಜಿ ಕೆಲಸಕ್ಕೆ ಇವರಂತ ನೇಟಿವ್ ದೊಡ್ಡ ಮನುಷ್ಯರು ಅರ್ಹರಾಗಿರುತ್ತಾರೆಂಬದಾಗಿ ಅಲ್ಲಿನ ಪತ್ರಿಕೆಗಳು ಗವರ್ನ್‌ಮೆಂಟಿಗೆ ಸಿಫಾರಸ್ ಮಾಡಿರುತಿವೆ. ಪ್ಲೀಡರ್ ಮಿಸ್ಟರ್ ವಾಸುದೇವ ಕೀರ್ತಿಕರ್, ಆನರಬಲ್ ಮ್ಯಾ. ಎಂ ಮೆಹತಾಯವರು, ಮ|| ರಾನಡೆಯವರು. ಇವರ ಪೈಕಿ ಮ|| ವಾಸುದೇವ ಕೀರ್ತಿಕರರೆಂಬವರು ಮುಂಬೈ ಗೆಜೆಟ್ ಪತ್ರಿಕೆಯು ಬರೆದಿರುವಂತೆ ಅಂತಾಧಿ, ಮ|| ತೆಲಾಂಗರವರು ಒಂದು ವರ್ಷಕಾಲ ರಜಾ ತೆಗೆದುಕೊಳ್ಳಬೇಕಾದ ಅವಶ್ಯಕತೆಯುಂಟಾದ ಕಾಲದಲ್ಲಿ ಸದರೀ ದೊಡ್ಡ ಮನುಷ್ಯರು ಆಕ್ಟಿಂಗ್ ಜಡ್ಜಿ ನೇಮಿಸಲ್ಪಡುವ ಸಂಭವ ಪ್ರಕಟಿಸುತಿದೆ.

ಇದುವರಿವಿಗೆ ಬ್ರಿಟಿಷ್ ಇಂಡ್ಯದೇಶದಲ್ಲಿ ನೇಟಿವರುಗಳಿಗೆ ಸಾಮಾನ್ಯವಾಗಿ ಡಿಸ್ಟ್ರಿಕ್ಟ್ ಕಲೆಕ್ಟರ್ ಕೆಲಸವು ಕೊಡಲ್ಪಡುತಲಿರಲಿಲ್ಲವು. ಮುಖ್ಯ ಸದರೀ ಕೆಲಸವು ಯೂರೋಪಿಯನ್ ಆಫೀಸರುಗಳ ಪಾಲಾಗಿಯೇ ಇರುತಲಿತ್ತು. ಈಗ ಗವರ್ನ್‌ಮೆಂಟಿನವರು, ಮ|| ಕೆ ಸಿ ಮಾನವೇಂದ್ರ ರಾಜಾ ಎಂಬವರನ್ನು ಅನಂತಪುರ ಡಿಸ್ಟ್ರಿಕ್ಟ್ ಕಲೆಕ್ಟರ್ ವ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿ ನೇಮಿಸಿರುವ ಅಂಶವನ್ನು ಗತವಾರದ ಫೋರ್ಟ್ ಸೇಂಟ್ ಜಾರ್ಜ್ ಗೆಜೆಟಿನ ಮೂಲಕ ಅರಿತು ಬಹಳ ಸಂತೋಷಿಸುತ್ತೇವೆ. ಗವರ್ನ್‌ಮೆಂಟಿನವರು ಇದುವರೆಗೆ ಇಲ್ಲದಿದ್ದಂತಾ ಅಪೂರ್ವ ಪದ್ಧತಿಯಂ ನಡೆಸಿದ ಒಬ್ಬ ನೇಟಿವಿಗಿಂತಾ ಅಧಿಕಾರವು ಕೊಟ್ಟದ್ದಕ್ಕಿದೇ ಪ್ರಥಮ ದೃಷ್ಟಾಂತವಾಗಿರುವದರಿಂದ ಇದಕ್ಕಾಗಿ ಎಲ್ಲರೂ ವಿಶೇಷ ಸಂತೋಷಪಡಬೇಕಾಗಿರುತಿದೆ.

ಈಗ್ಗೆ ಕೆಲವು ದಿನಗಳಿಂದ ತಿರುಪತಿಯಲ್ಲಿ ವಾಂತಿಭೇದಿ ರೋಗ ವ್ಯಾಪಿಸಿ, ಪ್ರಾಣಹಾನಿಗಳುಂಟಾಗುತಲಿರುವಂತೆ ಹಿಂದಿನ ಪತ್ರಿಕೆಯ ಮೂಲಕ ತಿಳಿಸಿರುತ್ತೇವೆಯಷ್ಟೆ. ಸದರೀ ರೋಗದ ವ್ಯಾಪಕತೆಯ ನಿಮಿತ್ತ ನಿವಾರಣೆಯಬಗ್ಗೆ ಸಾನಿಟರಿ ಕಮ್ಮಿಷನರವರು ಅಲ್ಲಿಗೆ ಹೋಗಿ ಬೀದಿಗಳನ್ನೆಲ್ಲ ಪರೀಕ್ಷಿಸಿ, ಮನೆಗಳಿಗೆ ಸುಣ್ಣ ಬಳಿಯುವಂತೆ ಮಾಡಿರುವದಲ್ಲದೆ ಇನ್ನು ಆವಶ್ಯಕಗಳಾದ ಬಹುವಿಧ ಯೋಗ್ಯತೆಗಳಂ ಮಾಡಿಸಿಯೂ ಮಾಡಿಸುತಲೂ ಇರುತ್ತಾರೆ. ಸ್ಥಳಾಧಿಕಾರಿಗಳು ತಮಗೆ ಸಾಧ್ಯವಾದ ಕಾರ್ಯಗಳನ್ನೆಲ್ಲ ಮಾಡುತಲಿದಾರೆ, ಇಷ್ಟಾದಾಗ್ಯೂ ರೋಗ ಶಾಂತವಾಗಲಿಲ್ಲವು, ಎಂದು ಅಲ್ಲಿನ ಬಾತಮೀದಾರರ ಕಾಗದದ ಧೆಸೆಯಿಂದ ತಿಳಿಯಬರುತಿದೆ. ಇದೂ ಅಲ್ಲದೆ ಸ್ಥಳನಿವಾಸಿಗಳೇ ಕುಡಿಯುವದಕ್ಕೆ ನೀರಿಲ್ಲದೆ ಶ್ರಮಪಡುತಲಿದಾರೆ. ಆದುದರಿಂದ "ತಾನು ಕೆಟ್ಟ ಕೋತಿ ವನವನ್ನೆಲ್ಲ ಕೆಡಿಸಿತಂ" ಒ ಗಾದೆಯಂತೆ, ಈ ಕಾಲದಲ್ಲಿ ತಿರುಪತಿಗೆ ಹೋಗಿ ರೋಗಕ್ಕೆ ಸಿಕ್ಕಿ ಪ್ರಾಣ ಬಿಡುವದು, ಅಥವಾ ಅದನ್ನು ಅಂಟು ಹಾಕಿಕೊಂಡು ಬಂದು ತಾವು ಸಂಚರಿಸುವ ಸ್ಥಳಗಳಲ್ಲೆಲ್ಲ ಬೀಜ ಬಿತ್ತುವದಕ್ಕಿಂತಾ ಮೊಕದ್ದಮೆ ಬಿಟ್ಟಿಯುಳ್ಳವರೆಲ್ಲರು ತಮ್ಮ ತಮ್ಮ ಮನೆಗಳೊಳು ಅವರ ಸೇವೆಯಂ ಮಾಡುವದು ಅವರಿಗೂ ಕ್ಷೇಮ ಮತ್ತು ಅನ್ಯರಿಗೂ ಕ್ಷೇಮವಾದುದಾಗಿರುವದೆಂದು ಎಚ್ಚರಿಸುವೆವು.

## LOCAL AND PROVINCIAL NEWS

ಪಟ್ಟಣ ಮತ್ತು ತಾಲ್ಲೂಕ್ ಜಾತೀಯ ವೃತ್ತಾಂತಗಳು

ಶ್ರೀಮನ್ಮಹಾರಾಜರವರು ಈದಿನ ಬೆಳಿಗ್ಗೆ ೧೦ ಘಂಟೆಗೆ ಸ್ಪೆಷಿಯಲ್ ಟ್ರೈನಿನಲ್ಲಿ ರಾಜಧಾನಿಗೆ ದಯಮಾಡುತ್ತಾರೆ.

ಬರುವ ಬುಧ ಗುರುವಾರಗಳ ದಿನ ಗೌರೀ ಗಣೇಶನ ಹಬ್ಬವಾದುದರಿಂದ ಇಲ್ಲಿನ ವಿಶಿಷ್ಟ ಇಲಾಖೆಗಳಿಗೂ ರಜಾ ಕೊಡಲ್ಪಡುವದು.

ಇಲ್ಲಿನ ದಿವಾನರವರಾದ ಸರ್ ಕೆ ಶೇಷಾದ್ರಿ ಅಯ್ಯರ್ ಕೆ ಸಿ ಎಸ್. ಐ. ಯವರು ಇನ್ನು ಐದಾರು ದಿವಸಗಳೊಳಗಾಗಿ ಪ ಪರಾಸಿನಿಂದ ಊಟಿಗೆ ದಯಮಾಡಿ ಇಲ್ಲಿಂದ ಸುದೀರ್ಘ ಸ್ಥಳಕ್ಕೆ ಹೋಗುವರೆಂಬದಾಗಿ ಕೇಳುತ್ತೇವೆ.

ವರ್ತಮಾನಪತ್ರಿಗಳಿಂದ, ಪರಂತು ಮಳೆ ಬೀಳುವದಿಲ್ಲವು ಸ್ಥಿರುಗಳು ಒಣಗುತಲಿವೆ ಈ ಕಾರಣದಿಂದ ಅಕ್ಕಿ ಮತ್ತು ರಾಗಿಯ ಧಾರಣೆಗಳು ಪ್ರಾಯಶಃ ಒಂದೇವಿಧವಾಗಿವೆ. ಮನೆಯ ಭಾವಿಗಳಲ್ಲಿ ನೀರಿಲ್ಲದೆ ಜನರು ಬಹಳ ಕಷ್ಟಕ್ಕೆ ಗುರಿಯಾಗಿರುತ್ತಾರೆ. ಜನಾರೋಗ್ಯ ಸಾಮಾನ್ಯವಾಗಿದೆ.

ಕಳೆದ ಸೋಮವಾರದ ಲಾಗಾಯಿತು ಕಿಲ್ಲೆಯಲ್ಲಿ ಗೋಪುರಗಳ ಮೆರವಣಿಗೆಯು ಕಟ್ಟಳೆ ಪ್ರಕಾರ ನಡೆಯುತಲಿದೆ. ಇದು ೯ ದಿನಗಳ ಪರಿಗೂ ನಡೆಯುವದರಿಂದ ಹೆಂಗಸರು ಮಕ್ಕಳು ಈ ನೋಟವನ್ನು ನೋಡಬರುವುದರಲ್ಲಿ ಎಷ್ಟು ಮಂದಿ ಒಡವೆಗಳನ್ನು ಕಳೆದುಕೊಳ್ಳುವರೋ ನೋಡತಕ್ಕದ್ದಾಗಿದೆ.—ವೃ. ಪ.

ಈಗ ಇರತಕ್ಕ ಪಬ್ಲಿಕ್ ಆಫೀಸುಗಳ ಕಟ್ಟಡದಲ್ಲಿ ಕುದ್ದಾಂಗ ಸ್ಥಳ ಸಾಲದೆ ಹೋದದರಿಂದ ಕೆಲವು ಇಲಾಖೆಗಳು ಕೋಟೆಯಲ್ಲಿರುವ ಕಟ್ಟಡಗಳಲ್ಲೀಗ ಇಡಲ್ಪಟ್ಟವೆಯಷ್ಟೆ. ಆದಾಗ್ಯೂ ದೊಡ್ಡ ಕಟ್ಟಡದಲ್ಲಿ ಅವಕಾಶವು ಕಡಮೆಯಾಗಿರುತಿದೆ. ಇದನ್ನಾಲೋಚಿಸಿ ಮೈಸೂರ್ ಗವರ್ನ್‌ಮೆಂಟಿನವರು ಹೊಸದಾಗಿ ಮತ್ತೊಂದು ಕಟ್ಟಡವಂ ಕಟ್ಟಿಸಬೇಕೆಂಬುವ ಪ್ರಯತ್ನದೊಳವ ರೆಂತಲೂ, ಈಗಿರುವ ಗವರ್ನ್‌ಮೆಂಟಿ ಪ್ರೆಸ್ ಕಟ್ಟಡಕ್ಕೆ ಯೆದಿರುಭಾಗದಲ್ಲಿರುವ ಖಾಲೀ ಜಮೀನಿನಲ್ಲಿ ಪ್ರಿಂಟಿಂಗ್ ಆಫೀಸಿಗೆ ಅನುಕೂಲಿಸುವಂತೆ ಕಟ್ಟಿಸಿ ಹಾಲೀ ಇರುವ ಕಟ್ಟಡವನ್ನು ಇತರ ಇಲಾಖೆಗಳಿಗೆ ಉಪಯೋಗಿಸಿಕೊಳ್ಳುವರೆಂತಲೂ ಇಂಡಿಯನ್ ಇಂಜನಿಯರಿಂಗ್ ಯೆಂಬ ಪತ್ರಿಕೆ ತಿಳಸುತಿದೆ.

ಈಚೆಗೆ ಕಡ್ಡಾಗಳಲ್ಲಿ ಹೊಸದಾಗಿ ಹಿಡಿಯಲ್ಪಟ್ಟ ನಾಲ್ವತ್ತು ಆನೆಗಳನ್ನೂ ಸುಜನರಗೂಡಿ ನಲ್ಲೇ ಇಟ್ಟ ಸರ್ಕಾರದವರು ಅವುಗಳನ್ನೆಲ್ಲ ಪಳಗಿಸುತ್ತಿದ್ದಾರೆಂತಲೂ ಕಳೆದ ಬಾನುವಾರ ಸಾಯಂಕಾಲ ಒಬ್ಬ ಮುಸಲ್ಮಾನರವನು ಒಂದು ಹೆಣ್ಣಾನೆಯ ಕಾಲನ್ನು ಬಿಚ್ಚುತ್ತಿರುವಾಗ್ಯೆ ಆ ಆನೆಯು ರೇಗಿ ಸೊಂಡ್ಲಿನಿಂದ ಅವನನ್ನು ಹಿಡಿದು ಅವನ ಕಾಲನ್ನು ಮುರಿದು ಹಾಕಿದ್ದಲ್ಲದೆ ಅವನನ್ನು ನೆಲದಮೇಲೆ ಮಲಗಿಸಿಕೊಂಡು ತನ್ನ ಕಾಲಿನಿಂದ ಅದನ ತಲೆ ಮತ್ತು ಎದೆಗಳ ಮೇಲೆ ತುಳಿದು ಕೊಂದುಹಾಕಿತೆಂತಲೂ, ಆ ಬಡ ಮುಸಲ್ಮಾನರವನಿಗೆ ಒಬ್ಬ ಹೆಂಡತಿಯೂ ಒಬ್ಬ ಗಂಡು ಮಗನೂ ಇರುವದರಿಂದ ಅವರಿಗೆ ಸರ್ಕಾರದವರು ಏನಾದರೂ ಜೀವನೋಪಾಯವನ್ನು ಕಲ್ಪಿಸಿಕೊಡಬೇಕಾದದ್ದು ಅವಶ್ಯಕವೆಂಬದಾಗಿಯೂ ಅಲ್ಲಿನ ಬಾತ್ಮೀದಾರರೊಬ್ಬರು ತಿಳಸುತ್ತಾರೆ.—ವೃ. ಪ

ಮೈಸೂರು ನಜರ್ ಬಾದಿನಲ್ಲಿ ಈಗ್ಗೆ ಸುಮಾರು ೫—೬ ದಿವಸಗಳೊಳಗೆ, ೧೪ ವರುಷದ ಮಗುವಿಗೂ ಮತ್ತೊಂದು ೬ ತಿಂಗಳ ಮಗುವಿಗೂ ಶೀತದಿಂದ ಪಕ್ಕರೋಗ ಬಂದು ಬಹಳ ಶ್ರಮ ಪಡುತಿದ್ದವು. ಏಕಕಾಲದಲ್ಲಿ ತಮ್ಮ ಮಕ್ಕಳಿಗೆ ಭಯಂಕರ ರೋಗವನ್ನು ನೋಡಿ ತಂದೆ ತಾಯಿಗಳು ತಮ್ಮ ಮಕ್ಕಳನ್ನು ಬೀದಿಯಲ್ಲಿ ರಿಸಿಕೊಂಡಿದ್ದರು. ಅನಂತರ ಯಾರ ಹೇಳಿಕೆಯಿಂದಲೋ ಅದೇ ನಜರ್‌ಬಾದಿನಲ್ಲಿರುವ ಪಂಡಿತ ಕೃಷ್ಣಾ ಜಟ್ಟಪ್ಪನವರಿಗೆ ತೋರಿಸಲು ಅವರು ಒಂದೇ ದಿವಸದಲ್ಲಿ ವಾಸಿಮಾಡಿದರು. ಈಗ ಮಕ್ಕಳು ಸುಖವಾಗಿರುತಿವೆ. ಈ ಪಂಡಿತರು ಬಹಳ ಪರೋಪಕಾರಿಗಳು ಬಡಬಗ್ಗರ ವಿಷಯದಲ್ಲಿ ತುಂಬಾ ಆದರದಿಂದ ನೋಡಿ ಔಷದ ಕೊಟ್ಟು ಆದರಿಸುತಾರೆ. ಯಾರಾದರೂ ಇಂತಾ ರೋಗಗಳಿಂದ ತಮ್ಮ ಮಕ್ಕಳೇ ಆಗಲಿ ಅನ್ಯರಾದವರೇ ಆಗಲಿ ಶ್ರಮ ಪಡುತಿದ್ದರೆ ಜಾಗ್ರತೆಯಾಗಿ ತಿಳಿಸಿದ ಪಕ್ಷದಲ್ಲಿ ಗುಣಪಡಿಸುತ್ತಾರೆ.

ಬೆಂಗಳೂರು ಡಿಸ್ಟ್ರಿಕ್ಟ್ ಕ್ಲೋಸ್‌ಪೇಟೆ ಸಬ್‌ಡಿವಿಜನ್ ಆಫಿಸರಾದ ಪರಂತು ಈಗ ಸ್ಪೆಷಲ್ ಡ್ಯೂಟಿ ಮೇಲಿರುವ ಮೆ|| ಬಿ ಪಿ ಕೃಷ್ಣಯ್ಯಂಗಾರ್ರವರಿಗೆ ಸೇರಿದ ಕೋರಮಂಗಲವೆಂಬ ಗ್ರಾಮದ ಕೆರೆಯಲ್ಲಿ ಇಲ್ಲಿನ ಮಿಲಿಟರಿ ಸ್ಟೇಷನ್ ಅಗಸರು ಕೆಲವು ಕಾಲದ ಮೊದಲು ರಿಜಿಮೆಂಟಿ ಬಟ್ಟೆಗಳಂ ಒಗೆಯುತ ಕೆರೆಯ ನೀರು ಕೆಡಿಸುತ ಬಂದದು ನೋಡಿ ಗ್ರಾಮಸ್ಥರು ಯೆಷ್ಟು ವಿಧದಿಂ ಹೇಳದಾಗ್ಯೂ ಸದರೀ ಜನರು ಕೇಳದೆ ಜುಲುಮಿನಿಂದ ತಮ್ಮ ಕೆಲಸವಂ ನಡೆಸುತಿರುವರು. ಈಚೆಗೆ ನಾಲ್ಕೈದು ದಿನಗಳ ಹಿಂದೆ ಮೆ|| ಕೃಷ್ಣಯ್ಯಂಗಾರ್ರವರು ಗ್ರಾಮಕ್ಕೆ ಹೋಗಿದ್ದ ಕಾಲದಲ್ಲಿ ಸದರೀ ಜನರು ಬಂದು ಕೆರೆಯಲ್ಲಿ ಬಟ್ಟೆಗಳಂ ಒಗೆಯುತಲಿದ್ದ ವರ್ತಮಾನ ತಿಳಿಯಬಂದು ಅವರು ಒಗೆದ ಬಟ್ಟೆಗಳಂ ಕಿತ್ತುಕೊಳ್ಳುವಂತೆ ತಮ್ಮ ಕಡೆ ಸೈತರಿಗೆ ಹೇಳಲು ಅವರು ಆ ರೀತಿ ಮಾಡಿ ಅವನ್ನೆಲ್ಲ ಹರಿದು ಹಾಕಿದರು. ಸದರೀ ದೋಬಿ ಜನರು ಓಡಿಹೋಗಿ ರಿಜಿಮೆಂಟಿ ಜನರಿಗೆ ಹೇಳಲು ಅವರು ಗುಂಪುಗೂಡಿಕೊಂಡು ಬಂದು ಗಾಡಿಯಲ್ಲಿ ಹೋಗುತಲಿದ್ದ ಮೆ|| ಕೃಷ್ಣಯ್ಯಂಗಾರ್ರನ್ನು ಅಡ್ಡಹಾಕಿ ಅವರು ತಮ್ಮ ರಿಜಿಮೆಂಟ್ ಸುಬೇದಾರನ ಬಳಿಗೆ ಕರೆದುಕೊಂಡು ಹೋದರು. ಸದರೀ ಯವನು ವಿವೇಕ ಲೇಶವೂ ಇಲ್ಲದೆ ಔದ್ಧತ್ಯದಿಂದ ಮೆ|| ಕೃಷ್ಣಯ್ಯಂಗಾರ್ರವರನ್ನು ಸದರೀ ರಿಜಿಮೆಂಟ ಕಾರ್ಟರ್ ಒಳಗೆ ಕಳುಹಿಸಿಕೊಟ್ಟನು. ಸದರೀ ಕರ್ನಲ್‌ಯವರು ಮೆ|| ಕೃಷ್ಣಯ್ಯಂಗಾರ್ರವರ ಗೌರವಾಧಿಕಾರವನ್ನೂ ಇವರ ವಿಷಯದಲ್ಲಿ ತುಂಟರಾದ ಸಿಪಾಯಿಗಳೂ ಸುಬೇದಾರನೂ ನಡೆಸಿದ ಅಕ್ರಮಗಳನ್ನೂ ಕೇಳಿ ಸದರೀ ಜನರ ಪೈಕಿ ನಾಲ್ವರಿಗೆ ಉಪಶಾಂ ಮಾಡಿ, ಸುಬೇದಾರನ ಮೇಲೆ ಕ್ರಮಪ್ರಕಾರ ಕ್ರಿಮಿನಲ್‌ಚಾರ್ಜ್ ಮಾಡುವಂತೆ ಹೇಳಿದರೆಂತಲೂ, ಈ ದಿನ ಮಿಲಿಟರಿ ಸ್ಟೇಷನ್ ಮ್ಯಾಜಿಸ್ಟ್ರೇಟರಕೋರ್ಟಿನಲ್ಲಿ ಫಿರ್ಯಾದ್ ದಾಖಲಾಗುವದೆಂತಲೂ ತಿಳಿಯಬರುತಿದೆ.

## THE MYSORE GAZETTE.

ಮೈಸೂರು ಗೆಜೆಟು.

ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದ್ದೂರ್ ರವರ ಸರ್ಕಾರದ ಕೊತ್ತೋವಾರ ಆಜ್ಞಾಪತ್ರಿಕೆಗಳು.

ತಾ|| ೩೦ನೇ ಆಗಸ್ಟ್ ೧೮೯೩, ನಂ|| ೪೦೪೩ ೦ ೯. ೩೭೩—೯೨—ಸನ್ ೧೮೯೩ ನೇ ಇಸವಿ ಆಗಸ್ಟ್ ೨೨ ನೇ ತಾರೀಖುಳ್ಳ ೩೩೦೩—೦ ೮೪೩ ನೇ ನಂಬರ್ ನೋಟಿಫಿಕೇಷನ್ ಅನುಸರಿಸಿ ಮ|| ಸಿ ಮೀನಾಕ್ಷಯ್ಯನವರು ಸನ್ ೧೮೯೩ ನೇ ಇಸವಿ ಆಗಸ್ಟ್ ೨೨ ನೇ ತಾರೀಖಿನ ಪೂರ್ವಾಹ್ನದಲ್ಲಿ ಚೀಫ್‌ಕೋರ್ಟ್ ಜಡ್ಜಿಯಾಗಿ ತಮ್ಮ ಕೆಲಸದಲ್ಲಿ ಪ್ರವೇಶಿಸಿದರು.

ನಂ|| ೬೦೪೭—೦. ೯ ೧೯೫—೯೩.—ಫ್ರೆಂಚ್ ರಾಕ್ಸ್ ಸಬ್ ಡಿವಿಜನ್ ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮೆ|| ಎ. ಸುಬ್ರಾಜೇ ಅರಸಿನವರು, ಕಳೆದ ಜುಲೈ ೩ ನೇ ತಾರೀಖುಳ್ಳ ೨೦೪೬೧—೦ ೫೦೦೫ ನೇ ನಂಬರ್ ಇಸ್ತಿಹಾರನಾಮೆಯ ಮೂಲಕ ಅವರಿಗೆ ಸ್ವಂತ ಕೆಲಸದ ಮೇಲೆ ಕೊಡಲ್ಪಟ್ಟ ಆರುತಿಂಗಳ ರಜಾದಿಂದ ಕೆಲಸಕ್ಕೆ ವಾಪಸ್ ಬಂದು ಸನ್ ೧೮೯೩ ನೇ ಇಸವಿ ಆಗಸ್ಟ್ ೧೫ ನೇ ತಾರೀಖಿನ ಪೂರ್ವಾಹ್ನದಲ್ಲಿ ಮೆ|| ಡಿ ಎ. ಬಾಲಾರ್ಡ್ ಯವರಿಂದ ಸಬ್ ಡಿವಿಜನ್ ಪೊಲೀಸ್ ಆಫಿಸ್ ಚಾರ್ಜನ್ನು ತೆಗೆದುಕೊಂಡರಾಗಿ, ಸದರೀ ರಜಾ ಪೈಕಿ ಉಳಿದ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿರುತಿದೆ.

ನಂ|| ೩೯೨೬ ೦ ೯೩೪—ತಾ|| ೩೧ನೇ ಆಗಸ್ಟ್ ೧೮೯೩—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೮೮ನೇ ಆರ್ಟಿಕಲ್ ಅನುಸರಿಸಿ, ದೊಡ್ಡಬಳ್ಳಾಪುರದ ಅಮಲ್ದಾರ್ ಬಿ. ಕೃಷ್ಣರಾಯರವರು ಅವರು ಬಿಡುಗಡೆ ಮಾಡಲ್ಪಡಬಹುದಾದ ತಾರೀಖ್ ಮೊದಲು, ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

೨. ಈಗ ನೆಲಮಂಗಲ ತಾಲ್ಲೂಕ್ ಆಕ್ಟಿಂಗ್ ಅಮಲ್ದಾರ್ ವ ೨ನೇ ಕ್ಲಾಸ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡುತಲಿರುವ ಡೆಪ್ಯುಟಿ ಅಮಲ್ದಾರ್ ಕೆ ಜೆ. ಶಾಮಣ್ಣ, ಬಿ ಎ. ಯವರು, ಬಿ ಕೃಷ್ಣರಾಯರವರ ಗೈರುಹಾಜರೀ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ, ದೊಡ್ಡಬಳ್ಳಾಪುರದ ಅಮಲ್ದಾರ್ ವ ೨ನೇ ಕ್ಲಾಸ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡತಕ್ಕಬಗ್ಗೆ ವರ್ಗ ಮಾಡಲ್ಪಟ್ಟಿರುತ್ತಾರೆ. ಬಿಡುಗಡೆಯಾದ ಕೂಡಲೆ ಕೆಲಸಕ್ಕೆ ಹೋಗತಕ್ಕದ್ದು.

ನಂ|| ೪೦೪೫-೦ ೯ ೨೮—೯೩—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೮೮ನೇ ಆರ್ಟಿಕಲ್ ಅನುಸರಿಸಿ, ಮಾವನಗರ ತಾಲ್ಲೂಕ್ ಅಮಲ್ದಾರ್ ಆರ್ ರಾಘವೇಂದ್ರರಾಯರವರು ೧೮೯೩ನೇ ಇಸವಿ ಆಗಸ್ಟ್ ೨೬ನೇ ತಾರೀಖ್ ಮೊದಲು ೧೫ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

೨. ಮಾವನಗರ ತಾಲ್ಲೂಕು ಶಿರಸ್ತೇದಾರ್ ಚಿನ್ನಪ್ಪ ಪಿಳ್ಳೆಯವರು ಅಮಲ್ದಾರ್ ರಾಘವೇಂದ್ರರಾಯರ ಗೈರುಹಾಜರೀ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ ಮಾವನಗರ ತಾಲ್ಲೂಕು ಇನ್‌ಚಾರ್ಜಿನಲ್ಲಿರತಕ್ಕದ್ದು.

ನಂ|| ೪೦೨೭-೦ ೯ ೪೦೩—೯೨—೩ ೧ನೇ ಸೆಪ್ಟೆಂಬರ್ ೧೮೯೩-ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೨೦೩ ಮತ್ತು ೨೦೪ನೇ ಆರ್ಟಿಕಲ್‌ಗಳನ್ನನುಸರಿಸಿ, ಹಾಸನ ಮುನ್ಸೀಫ್ ಮ|| ಜಿ ಟಿ. ಪಾಂಡುರಂಗರಾವ್‌ಯವರು, ೯೩ನೇ ಇಸವಿ ಸೆಪ್ಟೆಂಬರ್ ೧ನೇ ತಾರೀಖ್ ಮೊದಲು ಅಥವಾ ಅವರದನ್ನು ಉಪಯೋಗಿಸಿಕೊಳ್ಳಬಹುದಾದ ಬೇರೆ ಯಾವ ತಾರೀಖ್ ಮೊದಲು ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

೨. ಮೈಸೂರು ಚೀಫ್‌ಕೋರ್ಟ್ ಅಡ್ವೊಕೇಟರಾದ ಮೆ|| ಟಿ. ಪಿ. ಜಯರಾಮ ಅಯ್ಯರವರು ಮೈ. ಪಾಂಡುರಂಗರಾವ್‌ ಯವರು ರಜಾಮೇಲೆ ಗೈರುಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ ಹಾಸನದ ಮುನ್ಸೀಫರಾಗಿ ಕೆಲಸ ನೋಡುವಂತೆ ನೇಮಿಸಲ್ಪಟ್ಟಿರುತ್ತಾರೆ.

ನಂ|| ೪೦೫೬ ೦ ೯ ೧೩೭—೯೨—ತಾ|| ೨ನೇ ಸೆಪ್ಟೆಂಬರ್ ೧೮೯೩—ಬೆಂಗಳೂರಲ್ಲಿ ಫಾರೆಸ್ಟ್ ಇ

ಇಲಾಖಾ ಹೆಡ್‌ಕ್ವಾರ್ಟರ್ ಅಸಿಸ್ಟೆಂಟ್ ಮೆ॥ ಟಿ. ಅಬ್ದುಲ್ ಕರೀಂಯವರು, ಸ್ಸ ೧೮೯೩ನೇ ಇಸವಿ ಜೂನ್ ೧೪ನೇ ತಾರೀಖು ೨೦೮೧೫–೮. ೫೧೩೮ ನೇ ನಂಬರ್ ಇಸ್ತಿಹಾರ್‌ನಾಮೆಯ ಮೂಲಕ ಅವರಿಗೆ ಕೊಡಲ್ಪಟ್ಟ ೨ ತಿಂಗಳ ಪ್ರಿವಿಲೇಜ್ ರಜಾವನ್ನು ಅದೇ ತಿಂಗಳ ೨೮ನೇ ತಾರೀಖ್ ಮೊದಲು ಉಪಯೋಗಿಸಿಕೊಂಡು ಕಳೆದ ತಿಂಗಳ ೮ನೇ ತಾರೀಖಿನ ಪೂರ್ವಾಹ್ನದಲ್ಲಿ ಕೆಲಸಕ್ಕೆ ವಾಪಸ್ ಬಂದದರಿಂದ, ಸದರೀ ರಜಾ ಪೈಕಿ ಉಳಿದ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿರುತ್ತದೆ.

ನಂ॥ ೪೨೦೮–೮. ಕ. ೨೪–೯೨—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೩೨ನೇ ಆರ್ಟಿಕಲ್ ಅನುಸರಿಸಿ, ಕೋಲಾರ ಗೋಲ್ಡ್ ಫೀಲ್ಡ್ಸ್ ಮಾರ್ಕೆಟ್ ಸಭೆ ಮತ್ತು ಸ್ಪೆಷಲ್ ಮ್ಯಾಜಿಸ್ಟ್ರೇಟರಾದ ಮೆ॥ ಜೆ. ಹ್ಯೂಂ ರೈಡಿಯವರು, ೧೮೯೩ನೇ ಇಸವಿ ಸೆಪ್ಟೆಂಬರ್ ೧೨ನೇ ತಾರೀಖ್ ಮೊದಲು ೧೨ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ಮರಾಮತ್ತ್ ಇಲಾಖಾ.

ಇಸ್ತಿಹಾರ್‌ನಾಮೆಗಳು.

ತಾ॥ ೩ನೇ ಆಗಸ್ಟ್ ೧೮೯೩, ನಂ॥ ೩೮೪೩–೨೨.—ಯೆಗ್ಸಿಕ್ಯೂಟಿವ್ ಇಂಜನಿಯರ್ ಮೆ॥ ಎ. ಗೋವಿಂದಾಚಾರ್ಲು ಯವರು ಪ್ರಿವಿಲೇಜ್ ರಜಾಮೇಲೆ ಗೈರುಹಾಜರಿರುವ ಕಾಲದಲ್ಲಿ ಅಪ್ರೆಂಟಿಸ್ ಇಂಜನಿಯರ್ ಮೆ॥ ಟಿ. ಎಸ್. ಶೇಷಯ್ಯಂಗಾರ್ರವರು, ಈ ತಿಂಗಳ ೪ನೇ ತಾರೀಖ್ ಮೊದಲು ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ಕಡೂರ್ ಡಿವಿಜನ್ ಯೆಗ್ಸಿಕ್ಯೂಟಿವ್ ಇಂಜನಿಯರಾಗಿ ಬದಲೀ ನೋಡುವಂತೆ ನೇಮಕ ಮಾಡಲ್ಪಟ್ಟಿರುತ್ತಾರೆ.

ಸ್ಸ ೧೮೯೩ನೇ ಇಸವಿ ಜುಲೈ ೨೪ನೇ ತಾರೀಖಿನ ೩೨೮೨–೬೬ನೇ ನಂಬರುಳ್ಳ ಈ ಆಫೀಸ್ ಇಸ್ತಿಹಾರ್‌ನಾಮೆಯು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ನಂ॥ ೩೮೪೪–೭೨೩.—ಕಡೂರ್ ಡಿವಿಜನ್ ಎಗ್ಸಿಕ್ಯೂಟಿವ್ ಇಂಜನಿಯರ್ ಮೆ॥ ಎ. ಗೋವಿಂದಾಚಾರ್ಲು ಯವರು ಈ ತಿಂಗಳ ೪ನೇ ತಾರೀಖ್ ಮೊದಲು ಒಂದೂವರೆ ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

೨ ಸ್ಸ ೧೮೯೩ನೇ ಇಸವಿ ಜುಲೈ ೨೪ನೇ ತಾರೀಖಿನ ೩೨೮೨–೬೬೩ನೇ ನಂಬರ್ ಇಸ್ತಿಹಾರ್‌ನಾಮೆಯ ೧ನೇ ಪ್ಯಾರಾದಲ್ಲಿ ಅವರಿಗೆ ಕೊಡಲ್ಪಟ್ಟ ಒಂದು ತಿಂಗಳ ಕಾಹಿಲೇ ರಜಾ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ಮುಜರಾಯಿ ಇಲಾಖಾ.

ಇಸ್ತಿಹಾರ್‌ನಾಮೆ.

೪ನೇ ಸೆಪ್ಟೆಂಬರ್ ೧೮೯೩, ನಂ॥೨೦೨—ಪಟ್ಟಿ ಮೇಲಿರುವವರು ಸೇರಿ ಚಿತ್ರದುರ್ಗದ ಕಸಬೆಯಲ್ಲಿರುವ ಮುಜರಾಯಿ ದೇವಸ್ಥಾನಗಳ ಮತ್ತು ಸತ್ರಗಳ ಧರ್ಮದರ್ಶಿಗಳಾಗಿ ಚಿತ್ರದುರ್ಗ ನಿವಾಸಿಗಳಾದ ಇದರ ಕೆಳಗೆ ತಿಳಿಸಲ್ಪಡುವವರು ನಿಯಮಿಸಲ್ಪಟ್ಟಿರುತ್ತಾರೆ:—

೧ ಮ॥ರಾ॥ ಬ್ಯಾಂಕ್ ಏಜಂಟ್ ಮತ್ತು ಮ್ಯೂನಿಸಿಪಲ್ ಕಮಿಷನರ್ ರಾಘವೇಂದ್ರರಾಯರು.

೨. ಮ॥ರಾ॥ ಪಂಡಿತ ಸುಬ್ಬರಾಯಶಾಸ್ತ್ರಿ.

೩. „ ಪ್ಲೀಡರ್ ಸಿಂಗ್ರಾಚಾರ್.

೪. „ ಅಡ್ವೋಕೇಟ್ ಮತ್ತು ಮ್ಯೂನಿಸಿಪಲ್ ಕಮಿಷನರ್ ಅನುಪಟ್ಟ.

೫. „ ಮ್ಯೂನಿಸಿಪಲ್ ಕಮಿಷನರ್ ಮಹಾಲಿಂಗಪ್ಪನವರು.

ನಂ॥ ೨೦೪—ಕಡೂರ್ ಡಿ॥ ಚಿಕ್ಕಮಗಳೂರು ತಾ॥ ಹಿರೇಮಗಳೂರಲ್ಲಿರುವ ಮುಜರಾಯಿ ದೇವಸ್ಥಾನಗಳ ಧರ್ಮದರ್ಶಿಗಳಾಗಿ ಇದರ ಕೆಳಗೆ ತಿಳಿಸಲ್ಪಡುವಂತವರು ನಿಯಮಿಸಲ್ಪಟ್ಟಿರುತ್ತಾರೆ.

೧. ಮ॥ರಾ॥ ಪಟೇಲ್ ಶ್ರೀನಿವಾಸಾಚಾರ್.

೨. „ „ ಚೆಲುವಯ್ಯಂಗಾರ್.

೩. „ „ ಮಾ॥ ಚೆಲುವಯ್ಯಂಗಾರ್.

ಹಿರೇಮಗಳೂರು ನಿವಾಸಿಗಳು.

## SUMMARY OF NEWS

ವೃತ್ತಾಂತ ಸಂಗ್ರಹವು.

ಲಂಡನ್ ಪಟ್ಟಣದಲ್ಲಿ ಭೂತಗಳ ಭಯದಿಂದ ೧,೦೦೦ ಮನೆಗಳು ಖಾಲಿ ಬಿದ್ದಿರುತ್ತವೆ. ಭೂತಗಳೇ ಸುಳ್ಳೆಂದು ನಿರಾಕರಿಸುವವರ ರಾಜ್ಯದಲ್ಲಿ ಹೀಗಾಗುವದು ಆಶ್ಚರ್ಯವಲ್ಲವೇ?–ಸ.

ಕೆಲವು ದಿವಸಗಳ ಕೆಳಗೆ ಬರ್ಮಿಂಗ್ಹಾಮಿನಲ್ಲಿ ಒಂದು ದಿವಸ ಮಧ್ಯಾಹ್ನಕಾಲದಲ್ಲಿ ಅತಿ ಭಯಂಕರವಾದ ಸಿಡಿಲು ಹೊಡೆಯಿತೆಂತಲೂ, ಇದರಿಂದ ಸುಮಾರು ಒಂದು ಸಹಸ್ರ ಜನಗಳು ಮಡಿದರೆಂತಲೂ ಕೇಳುತ್ತೇವೆ.—ವೃ ಚಿಂ

ಎಲ್ಲಾ ಜಗತ್ತಿನ ಕೈಕಿ ಹಂಗೇರಿ ಪ್ರಾಂತದೊಳಗಿನ ಸ್ತ್ರೀಯರು ಬಹಳ ಸೌಂದರ್ಯ ಉಳ್ಳವರಾಗಿದ್ದು ಅವರು ತಮ್ಮ ಕಾಂತಿಯನ್ನು ವೃದ್ಧಿಮಾಡಿಕೊಳ್ಳುವ ವಿಷಯದಲ್ಲಿ ಬಹಳ ಜಾಗ್ರತೆ ತೆಗೆದುಕೊಳ್ಳುತ್ತಾರೆ.—ಕ ಸು

ಆಫ್ರಿಕೆಯಲ್ಲಿ ಮಟಬೆಲಿ ಎಂಬವೊಂದು ಸಂಸ್ಥಾನವಿರುತ್ತದೆ. ಅಲ್ಲಿನ ಅರಸನನ್ನು ಇಂಗ್ಲೀಷರು ಕಳೆದ ವರ್ಷ ಪದಚ್ಯುತ ಮಾಡಿರುವರು. ಹೋದ ತಿಂಗಳಲ್ಲಿ ಇವರು ಪುನಃ ದಂಗೆ ಎದ್ದಿದ್ದರಿಂದ ಇಂಗ್ಲೀಷರು ಅವನ ಕೋಟೆ ಸುತ್ತ ಸೈನ್ಯವನ್ನು ಇಟ್ಟು, ಕೆಲಸವು ಮಾಡಿರುವರೆಂದು ರೋಮನ್ ಪತ್ರಿಕೆಯು ತಿಳಿಸುತ್ತದೆ.—[illegible]

ಚಿಕಾಗೋ ಪಟ್ಟಣದಲ್ಲಿ ಕೆಲವು ಮಂದಿ ರಷ್ಯನ್ ಜನಗಳು ಸೇರಿ ಒಂದು ವಿನೋದವನ್ನು ನಡೆಸುತ್ತಿರುವಾಗ್ಯೆ ಅನಾರ್ಕಿಸ್ಟು ಎಂಬ ಗುಂಪಿನವರು ಅಲ್ಲೂ ಕಾಣಿಸಿಕೊಂಡು ಅವರಮೇಲೆ ಬಿದ್ದು ಜೋಡುಗಳಲ್ಲಿ ತಿವಿದು, ಅವರು ಇಟ್ಟಿದ್ದ ಜಾರ್‌ರವರ ಚಿತ್ರಪಟವನ್ನು ಅವಮಾನ ಪಡಿಸಿದರು. ಈ ಹೊಡೆದಾಟದಲ್ಲಿ ಹತ್ತಾರು ಜನರು ನಿರ್ಭಾಗ್ಯರು ಹೊಂದಿದರೆಂದು ತಿಳಿಸಲು ವಿಷಾದಿಸುವೆವು.—ವೃ ಪ

ಅಮೇರಿಕಾಖಂಡದ ಯುನೈಟೆಡ್ ಸ್ಟೇಟ್ಸಿನಲ್ಲಿ ಒಬ್ಬ ತರುಣಿಯು, ಒಬ್ಬ ತರುಣನನ್ನು ಮೆಚ್ಚಿ, ಅತನನ್ನು ವರಿಸುವದಕ್ಕೆ ಸಿದ್ಧಳಾಗಿ, ಬೇಕಾದ ಆಭರಣಗಳನ್ನೆಲ್ಲಾ ಮಾಡಿಕೊಂಡಳು. ವಿವಾಹದ ದಿವಸವನ್ನು ಗೊತ್ತುಮಾಡಿ, ಪದಾರ್ಥಗಳನ್ನೆಲ್ಲಾ ಅಣಿಮಾಡಿಕೊಂಡಳು. ಆದರೆ ಗೊತ್ತಾಗಿದ್ದ ದಿನ ಆಕೆಯ ತಾಯಿಯು, ಆ ತರುಣನೊಡನೆ ಚಿಕಾಗೋ ಪಟ್ಟಣಕ್ಕೆ ಹೋಗಿ ಮಗಳಿಗೆ ಬದಲಾಗಿ ಅವನನ್ನು ತಾನೇ ಮದುವೆ ಮಾಡಿಕೊಂಡಳು. ಮಗಳು ಅವನ್ನು ತಿಳಿದು ತಾನು ಸಜ್ಜು ಮಾಡಿಕೊಂಡಿದ್ದ ವಸ್ತುಗಳನ್ನೆಲ್ಲಾ ತಾಯಿಗೆ ಕಳುಹಿಸಿದಳು. ಇದು ಯುಕ್ತಿಯು ಕೇಳಿರಿ?—ವೃ.ಚಿಂ.

ರಾವಲ್‌ಪಿಂಡಿಯ ಕಂಟೋನ್ಮೆಂಟ್ ಬಜಾರಿನಲ್ಲಿ ಕೆಲವು ದಿನಗಳ ಕೆಳಗೆ ಮುಸಲ್ಮಾನ ಸಿಪಾಯಿಗಳ ಪೈಕಿ ಒಬ್ಬನು ದಾರಿಯಲ್ಲಿ ಹೋಗುತ್ತಿದ್ದ ಒಬ್ಬ ಹಿಂದೂಸ್ತ್ರೀಯನ್ನು ಅಸ್ವಾಭಾವಿಕವಾಗಿ ಕಟ್ಟೆಯಮೇಲೆ ಅವಳಿಗೆ ಅವಮಾನ ಮಾಡಿದನು. ಅವಳ ಪಕ್ಷವನ್ನು ವಹಿಸಿ ಅಲ್ಲಿ ಇದ್ದಂಥ ಹಿಂದುಗಳೆಲ್ಲರೂ ಸೇರಿ ಆ ಇಬ್ಬರು ಮುಸಲ್ಮಾನರನ್ನೂ ಹಿಡಿದು ಹೊಡೆದರು. ಈ ವಿಷಯವು ಹಬ್ಬಿ ಸಮೀಪದಲ್ಲಿದ್ದ ೨೦೦ ಮಂದಿ ಮುಸಲ್ಮಾನ ಸಿಪಾಯಿಗಳೂ ಮತ್ತು ಅಷ್ಟೇಮಂದಿ ಹಿಂದುಗಳೂ ಆ ಸ್ಥಳದಲ್ಲಿ ಸೇರಿ ಪರಸ್ಪರ ಕಲಹ ಮಾಡಲುದ್ಯುಕ್ತರಾದರು. ಕಲಹವನ್ನು ಶಾಂತಗೊಳಿಸುವದಕ್ಕೋಸ್ಕರ ರಾಜಕಾರ್ಯಾಧಿಕಾರಿಗಳು ಧೈರ್ಯವಾಗಿ ಗುಂಪಿನೊಳಕ್ಕೆ ನುಗ್ಗಿ ಬಹು ಸಾಹಸದಿಂದ ಗುಂಪನ್ನು ಚದರಿಸಿಬಿಟ್ಟರು.—ವೃ. ಪ.

## EXTRACTS.

ಪತಿವಿರಹಜನ್ಯ ದುಃಖದಿಂದ ತೊಳಲುತ್ತಿರುವ ಶ್ರೇಷ್ಠ ಜಾತಿಯ ವಿಧವೆಯರಿಗೆ ಪರಲೋಕ ಸಾಧನದ ಮಾರ್ಗ ತಿಳಿಯುವಂತೆ ವಿದ್ಯಾಭ್ಯಾಸ ಮಾಡಿಸುವೆವೆಂದು ಅಭಯವಚನ ಕೊಟ್ಟು ಪಂಡಿತ ರಮಾಬಾಯಿಯು ಸ್ಥಾಪಿಸಿರುವ ಶಾರದಾಸದನವೆಂಬ ಸಂಸ್ಥೆಯು ನಿಜವಾಗಿ ಸಂಪ್ರದಾಯ ಕ್ರಿಸ್ತರ ಸಂಸ್ಥೆಯಾಗಿರುತ್ತದೆಂದು ಪೂನಾದ ಮುಖ್ಯರ ಖಾತ್ರಿಯಾಗಿ, ಅವರು ಈ ಸದನಕ್ಕೆ ಸಂಬಂಧಪಟ್ಟವರೆಲ್ಲರೂ ಎಚ್ಚರವಾಗಿರಿ! ಯೆಂದು ಪ್ರಸಿದ್ಧ ಮಾಡಿರುತ್ತಾರೆ. ನಾಲ್ಕಾರು ವರ್ಷಗಳಲ್ಲಿ ಲಕ್ಷಾವಧಿ ರೂಪಾಯಿಗಳನ್ನು ನೀರಿನಂತೆ ವ್ಯಯಮಾಡಲು ಮುಂದೆಬಿದ್ದ ಅಮೆರಿಕೆಯ ಸಭ್ಯ ಕ್ರಿಸ್ತರ ಉದ್ದಿಷ್ಟ ಹೇತು ನಿಶ್ಚಯವಾಗಿ ಬ್ರಾಹ್ಮಣ ಅಬಲೆಯರಿಗೆ ಪವಿತ್ರವಾದ ಪ್ರಾರ್ಥನೆ ಮಾಡಿಸಿ ಕಾರಣ ಮಾಡಿಸಬೇಕೆಂಬದೇ ಇತ್ತೆಂದು ಈಗ ಕಂಡುಬಂದಂತಾಯಿತಲ್ಲವೇ. ಕ್ರಿಸ್ತ ಜನರ ಕುಲಗೆಡಿಸುವ ಸಂಪ್ರದಾಯವು ಮುಸಲ್ಮಾನ ಜನರಂತೆ ಒಂದು ಕೈಯಲ್ಲಿ ಕುರಾಣ, ಇನ್ನೊಂದು ಕೈಯಲ್ಲಿ ಕತ್ತಿ ಹೀಗಿರದೆ, ಒಂದು ಕೈಯಲ್ಲಿ ಪವಿತ್ರಶಾಸ್ತ್ರ ಇನ್ನೊಂದು ಕೈಯಲ್ಲಿ ಸಕ್ಕರೆ ಇರುತ್ತದೆ. ಹೊನ್ನು ಹೆಣ್ಣಿನ ಆಸೆ ತೋರಿಸಿ, ಬಹುಜನರ ಮನಸ್ಸನ್ನು ಕೆಡಿಸ ಪ್ರಯತ್ನಿಸಿದ್ದ ಈ ಕ್ರಿಸ್ತರ ಮೋಹಪಾಶದೊಳಗೆ ಸಿಲುಕುವ ಕಾಲವು ಪ್ರಾಪ್ತವಾಗಿದೆ.—ಕೆ ವೃ.

ಮುಂಬೈ ದಂಗೆಯಲ್ಲಿ ಮೃತಪಟ್ಟವರೂ, ಖೂನಾದವರೂ, ಘಾಯಹೊಂದಿದವರೂ ಎಷ್ಟು ಜನರೆಂಬ ವಿಷಯವಾಗಿ ನಿಜವಾದ ಲೆಖ್ಖವು ಹೊರಬೀಳದಿರುವದರಿಂದ ವಿಶೇಷವಾಗಿ ಜನರಿಗೆ ಸಂಶಯಪ್ರಾಪ್ತವಾಗಿದೆ. ಇಂಗ್ಲಿಷ್ ಪತ್ರಗಳಲ್ಲಿ ಪ್ರಸಿದ್ಧವಾದ ಪೋಲೀಸರ ಲೆಖ್ಖವು ವಿಶ್ವಸನೀಯವಾದದ್ದೆಂದು ತಿಳಿಯಲಿಕ್ಕೆ ಬರುವಂತಿಲ್ಲ. ಇಂ[illegible]ಗೆಯಲ್ಲಿ ಬರೀ ೧೦೦ ಜನರೇ ಮರಣಹೊಂದಿದರೆಂತಲೂ, ೧೫೦ ಜನರೇ ಘಾಯಪಟ್ಟರೆಂತಲೂ ಎಂದು ಹೇಳುವದರಲ್ಲಿ ತಥ್ಯಾಂಶವಿದ್ದಹಾಗೆ ತೋರುವದಿಲ್ಲ. ಆದರೆ ಜನರು ತರ್ಕಿಸುವ ಹಾಗೆ ಒಂದು ಪಕ್ಷದಲ್ಲಿ ೫೦೦ ಜನರು ಖೂನಿ ಪಟ್ಟಂಥವರೂ ೨,೦೦೦ ಜನರು ಘಾಯ ಪಟ್ಟವರೂ ಇರಬಹುದೆಂದು ತೋರುತ್ತದೆ. ಆದದರಿಂದ ಜನರ ಸಂಶಯವನ್ನು ದೂರಪಡಿಸುವದಕ್ಕೆ ಈ ಲೆಕ್ಕವನ್ನು ನಿಷ್ಪಕ್ಷಪಾತವಾಗಿ ಪ್ರಕಟಕವಾಗಿ ಮಾಡಿಸಿ ತೀವ್ರವಾಗಿ ಪ್ರಸಿದ್ಧಪಡಿಸಬೇಕೆಂಬದಾಗಿ ನಾವು ನಮ್ಮ ಸರಕಾರದ ಅಧಿಪತಿಗಳಿಗೆ ಸೂಚನಾ ಮಾಡುತ್ತೇವೆ. ಕಡಿಮೆ ಜನರು ಸತ್ತರೆಂದು ತೋರಿಸುವದರಿಂದ ದಂಗೆಯು ಸ್ವಲ್ಪಮಾತ್ರ ಬಗೆಹರಿಗಬಹುದಲ್ಲದೆ ದಂಗೆಯಾದ ಬಗ್ಗೆ ಸರಕಾರದವರ ಜವಾಬ್ದಾರಿಯಲ್ಲಿ ಎಳ್ಳಷ್ಟಾದರೂ ಕಡಿಮೆಯಾಗಲಾರದು ಎಂಬದನ್ನು ಸರಕಾರದ ಎಲ್ಲಾ ಅಧಿಕಾರಿಗಳು ಲಕ್ಷ್ಯದಲ್ಲಿಡುವದು ಆವಶ್ಯಕವಾಗಿದೆ.—ಸ.

ಮುದ್ರಾಸಿನಲ್ಲಿ ಕಳೆದ ಶನಿವಾರ ದಿವಸ ಬುಧವಾರದೇಬುರ ಒಂದು ಸಭೆಯು ಕೂಡಿ ಆ ಸಭೆಯಲ್ಲಿ ಹಿಂದುಸ್ಥಾನದೊಳಗೆ ಮತ್ತು ವಿಲಾಯತಿಯಲ್ಲಿ ಏಕಕಾಲದಲ್ಲಿ ಸಿವಿಲ್ ಸರ್ವಿಸ್ ಪರೀಕ್ಷೆಯು ಆಗುವದರ ಕುರಿತು. ಹೌಸ್ ಆಫ್ ಕಾಮನ್ಸಿನಲ್ಲಿ ಹರ್ಬರ್ಟ್‌ರವರ ಸೂಚನೆಯು ಮೇರೆಗೆ ಆದ ಪಿಂಚಿನಿಗೆ ವಿರುದ್ಧ ಈ ಕೆಳಗಿನ ೩ ನಿರ್ಣಯಗಳು ಮಾಡಲ್ಪಟ್ಟವು. ಹಿಂದುಸ್ಥಾನದಲ್ಲಿ ಮತ್ತು ವಿಲಾಯತಿಯಲ್ಲಿ ಏಕಕಾಲದಲ್ಲಿ ಸಿವಿಲ್ ಸರ್ವಿಸ್ ಪರೀಕ್ಷೆಗಳಾಗುವದು ಸರಿಯಾದದ್ದಲ್ಲವಾದದರಿಂದ ಅದರ ಸ್ಥಿತಿಯು ಸಂಬಂಧದಿಂದಾಗಲೀ ಪ್ರಜೆಗಳ ಹಿತಗಳ ಸಂಬಂಧದಿಂದಾಗಲೀ ಅದು ದೃಢವಾದ ರಾಜನೀತಿಗೆ ವಿರೋಧವಾದದ್ದು; ಆದಕಾರಣ ಹೌಸ್ ಆಫ್ ಕಾಮನ್ಸಿನ ನಿರ್ಣಯವನ್ನು ಜಾರಿ ಮಾಡಬಾರದಾಗಿ ಈ ಸಭೆಯು ಬಹುಮಾನಪಟ್ಟ ಹೌಸ್ ಆಫ್ ಕಾಮನ್ಸ್ ಯವರಿಗೆ ಅರ್ಜಿ ಮಾಡಬೇಕು. ೨ ಅರ್ಜಿಯು ಸರಿಹಾಜರ್‌ಪಟ್ಟ ಇವರ ಮುಖಾಂತರ ಹೌಸ್ ಆಫ್ ಕಾಮನ್ಸಿಯವರ ಮುಂದಿಡಬೇಕು. ೩ ಈ ಸಭೆಯಲ್ಲಿ ನಡೆದ ಎಲ್ಲ ಸಂಗತಿಯು ಹಿಂದುಸ್ಥಾನ ಸರಕಾರಕ್ಕೆ ಮತ್ತು ಸ್ಟೇಟ್ ಸೆಕ್ರೆಟರಿ ಯವರಿಗೆ ತಿಳಿಸಬೇಕು. ಇವರ ಈ ಅರ್ಜಿಯಲ್ಲಿ ಏಕಕಾಲದಲ್ಲಿ ಎರಡೂ ಕಡೆಯಲ್ಲಿ ಈ ಪರೀಕ್ಷೆಯು ಆಗುವದರ ಕುರಿತು ನಡೆಸಿದ ಪ್ರಯತ್ನವು ಬಂಗಾಲೀ ಮತ್ತು ಬ್ರಾಹ್ಮಣರದೇ ಆಗಿರುತ್ತದೆ, ಆದರೆ ಸಮಗ್ರವಾದ ಹಿಂದುಸ್ಥಾನದ ಆಡಳಿತೆಯಲ್ಲಿ ಏನು ಹೆಚ್ಚುಕಡಿಮೆ ಬೇಕಾದಂತ ಹೇಳುವ ಹಿಂದುಸ್ಥಾನದ ಎಲ್ಲ ಜನರದಲ್ಲವೆಂತ ತೋರಿಸಲ್ಪಟ್ಟಿರೋದಾಗಿ ತಿಳಿಯುತ್ತದೆ. ಹಾಗೂ ಈ ನಿಶ್ಚಯದಿಂದ ರಾಜ್ಯಾಡಳಿತೆಯ ಬಂಡ್ಯಾಕ್ಕೆ ಹೊಂದರೆಗಳುಂಟಾದಾವಲ್ಲದೆ, ರಾಜನೀತಿಯಲ್ಲಿ ಅನೇಕ ಗಡಬಡಿಯುಂಟಾಗುವದು, ಆದ್ದರಿಂದ ಹೌಸ್ ಆಫ್ ಕಾಮನ್ಸಿನವರು ಈ ನಿರ್ಣಯವನ್ನು ದುರ್ಲಕ್ಷಿಸಬೇಕೆಂಬ ಅರ್ಜಿಯ ಮುಖ್ಯ ಅಭಿಪ್ರಾಯವು.—ಕ. ಸು.

ಭರತಖಂಡದಲ್ಲಿ ಕಾಲಗಣನವು, ಯೂರೋಪದ ಹಾಗೆ, ಏಕಪ್ರಕಾರವಾಗಿದೆ, ಬೇರೆಬೇರೆ ಸೀಮೆಗಳಲ್ಲಿ ಅಲ್ಲಲ್ಲಿಯ ಸಂಪ್ರದಾಯಕ್ಕನುಸಾರವಾಗಿ ವಿವಿಧವಾಗಿದೆ. ಯುಗಗಳು ಇವು ನಾಲ್ಕು ಬೇರೆಬೇರೆ ಕಾಲವಿಭಾಗಗಳು; ಕೃತಯುಗ ಇಲ್ಲವೆ ಸತ್ಯಯುಗ, ತ್ರೇತಾಯುಗ, ದ್ವಾಪರಯುಗ, ಕಲಿಯುಗ ಇವು ಯುರೋಪಿನಲ್ಲಿ ಪ್ರಾಚೀನಕರು ಮಾಡಿದ ವಿಭಾಗಕ್ಕೆ ಸಮಬೀಳುತ್ತವೆ, ಅವು ಯಾವವೆಂದರೆ, ಚಿನ್ನದ ಯುಗ, ಬೆಳ್ಳಿಯ ಯುಗ, ಸೀಸದ ಯುಗ, ಕಬ್ಬಿಣದ ಯುಗ, ಕಡೇದಾದ ಈಗ ನಡೆಯುವ ಯುಗಕ್ಕೆ ಕಲಿಯುಗವೆಂದು ಹೇಳುತ್ತಾರೆ. ಇದು, ಕ್ರಿ ಶ. ಮುಂಚೆ ೩೧೦೧ ರಲ್ಲಿ ಆರಂಭವಾಗಿ, ಅರವತ್ತು ವರ್ಷಗಳ ಪರ್ಯಾಯದಿಂದ ನಡೆಯುತ್ತಿದೆ; ಒಂದೊಂದು ವರ್ಷಕ್ಕೆ ಒಂದೊಂದು ಹೆಸರು ಇದೆ, ಕಲಿಯುಗ ಅಬ್ದ ಸಂಖ್ಯೆಯನ್ನು ಜ್ಯೋತಿಷ್ಕರು ಹಿಂದೂ ವಿದ್ವಾಂಸರೂ ಮಾತ್ರವೇ ಪ್ರಯೋಗಿಸುತ್ತಾರಾದರೂ, ಸಾಮಾನ್ಯ ವರ್ಷದ ಯಾರ್ಗಗಳು ಬಳಕೆಯಾಗಿವೆ. ಸಂವತ್ (ಸಂವತ್ಸರ), ಇದು ಪ್ರಖ್ಯಾತಿ ಪಟ್ಟ ವಿಕ್ರಮಾದಿತ್ಯನ ಶಕವೆಂದು ಅನ್ನಿಸಿಕೊಂಡು, ಕ್ರಿ ಶ. ಮುಂಚೆ ೫೭ ರಲ್ಲಿ ಆರಂಭವಾಗುತ್ತದೆ. ಈ ಸಂವತ್ ಎಂಬ ಕಾಲ ಗಣನವು ಉತ್ತರ ಹಿಂದುಸ್ಥಾನದಲ್ಲಿ ನಡೆಯುತ್ತದೆ. ಶಕ ಅಥವಾ ಶಾಕ, ಅಂದರೆ ಶಾಲಿವಾಹನ ಶಕ, ಇದು ಕ್ರಿ. ಶ ೭೮ ರಲ್ಲಿ ಆರಂಭವಾಗುತ್ತದೆ. ಇದು ದಕ್ಷಿಣದಲ್ಲಿಯೂ ಮೈಸೂರಲ್ಲಿಯೂ ಸಲ್ಲುವದು. ಕೊಲ್ಲಮಾಂಡು (ಕೊಯಿಲಾಂಡಿಯಾದ), ಅಂದರೆ ಪರಶುರಾಮಶಕ. ಇದು ಕ್ರಿ ಶ. ೮೨೪ ರಲ್ಲಿ ಆರಂಭವಾಗುತ್ತದೆ, ಮತ್ತು ತಿರುನಾಂಕೂರು ಮಲಬಾರ ಪಶ್ಚಿಮ ತೀರದಲ್ಲಿ ಮಾತ್ರವೇ ಸಲ್ಲುವದು. ಇದರ ಪರ್ಯಾಯಕ್ಕೆ ೧೦೦೦ ವರ್ಷಗಳು. ಫಾಸಲೀ, ಅಂದರೆ ಮಹಸೂಲು ವಸೂಲಾತಿ ಶಕ, ಇದು ಕ್ರಿ. ಶ ೬೩೦ ರಲ್ಲಿ ಆರಂಭವಾಗುತ್ತದೆ. ಇದು ಘಜನಿ ವಿಲ್ಲಿ ಅರಮನೆಗಳಲ್ಲಿಯೂ ಸಭ್ಯ ಬರಹಗಳಲ್ಲಿಯೂ ಪ್ರಯೋಗವಾಗಿ, ಈಗಿನ ಪಾರಸಿಯರಲ್ಲಿ ನಡೆಯುತ್ತದೆ. ಸುಲ್ತಾನ್ ಜಲಾಲುದ್ದೀನ್, ಮಲಿಕ್, ಷಾ, ಸಲ್ಜೂಕಿ, ಕ್ರಿ. ಶ. ೧೦೭೯ ರಲ್ಲಿ ತಿದ್ದಿದನಿಂದ, ಅದು ಕ್ರಿಸ್ತಶಕಕ್ಕೆ ೬೩೦ ವರ್ಷಕ್ಕೆ ಹಿಂದೆ ಬಿತ್ತು. ಇದು ಸೌರಮಾನ ವರ್ಷವಾಗಿದೆ, ಹಿಜರಾ ಇದು ಕ್ರಿ. ಶ ೬೨೨ಕ್ಕೆ ಆರಂಭವಾಗುತ್ತದೆ, ಮತ್ತು ಭರತಖಂಡದಲ್ಲಿರುವ ಸಮಸ್ತ ಮಹಮ್ಮದಿಯರಲ್ಲಿ ಸಲ್ಲುತ್ತದೆ. ಇದು ಶುದ್ಧ ಚಾಂದ್ರಮಾನ ವರ್ಷವಾಗಿರುವದರಿಂದ, ಸೌರಮಾನ ವರ್ಷಕ್ಕಿಂತ ಹೆಚ್ಚು ಕಡಿಮೆ ಪ್ರತಿವರ್ಷಕ್ಕೆ ೧೧ ದಿವಸ ಕ್ಷೀಣವಾಗುತ್ತದೆ. ಫಸ್ಲಿ ಇದರಲ್ಲಿ ಹಿಂದು ಜನರ ಚಾಂದ್ರಸೌರಗಣನಕ್ಕೆ ಮಹಮ್ಮದಿ ಗಣನವು ಸರಿಪಡಿಸಿಯದೆ. ಇದನ್ನು ಅಕ್ಬರನು ಕಂದಾಯದರೆಕ್ಕಗಳಗೋಸ್ಕರ ಹಿಜರ ೯೭೧ ರಲ್ಲಿ ಯೋಜಿಸಿದನು. ಅದು ಉತ್ತರ ಭರತ ಖಂಡದಲ್ಲಿ ಅಕ್ಬರನ ಪಟ್ಟದ ಆರಂಭದಿಂದ ಅಂದರೆ ಹಿಜರ ೯೬೩ ರಿಂದ ನಡೆಯುತ್ತದೆ. ದಕ್ಷಿಣದಲ್ಲಿ ಅದು ಷಾಜಹಾನನ ಆಳ್ವಿಕೆಯ ವರೆಗೆ ಆರಂಭವಾಗಲಿಲ್ಲ. ಇದು ಹಿಜರ ೧೦೪೬ರ, ಅಂದರೆ ಅತನ ಆಳ್ವಿಕೆಯ ಆರಂಭದಿಂದ ಹಿಡಿದು ಸಲ್ಲುತ್ತಿವೆ. ಹೀಗಿರಲಾಗಿ ಈ ಎರಡು ಗಣನಗಳಲ್ಲಿ ಎರಡು ವರುಷದ ಭೇದವದೆ. ಸನ್ ಎಂಬ ಬಂಗಾಳ ವರುಷ, ಮತ್ತು ವಿಲಾಯತಿ ಇಲ್ಲವೆ ಒರಿಸ್ಸದ ಉಂಬ್ಲಸನ್ ಇವೆರಡು ಫಸಲಿಯ ಪ್ರಭೇದಗಳು. ದಕ್ಷಿಣ–ಹಿಂದೂಜನರು ಚಾಂದ್ರಸಂವತ್ಸರದಿಂದ, ಅಂದರೆ ಅಮಾವಾಸ್ಯೆಯಿಂದ ಅಮಾವಾಸ್ಯೆಗೆ ಲೆಖ್ಖ ಮಾಡುತ್ತಾರೆ. ಈ ಚಾಂದ್ರಮಾನ ವರುಷಕ್ಕೆ ಆಗಾಗ್ಯೆ ಅಧಿಕಮಾಸವನ್ನು ಕೂಡಿಸುವದರಿಂದ ಸುಮಾರು ೧೯ ವರುಷಗಳಲ್ಲಿ ಚಾಂದ್ರಮಾನ ವರುಷವು ಸೌರಮಾನ ವರುಷಕ್ಕೆ ಸಮಯುಕ್ತವಾಗುತ್ತದೆ. ಈ ಕಾರಣದಿಂದ ಹಿಂದೂ ಜನರ ಚಾಂದ್ರಮಾನ ವರುಷವು ಯಥಾರ್ಥವಾಗಿ ಸೌರಮಾನ ವರುಷಕ್ಕೆ ಸಮವಾಗುವದರಿಂದ, ಅದು ಕ್ರೈಸ್ತರ ವರುಷಕ್ಕೆ ಸರಿಬರುತ್ತದೆ.—ವೃ. ಚಿಂ.

Bangalore—Printed and published at the Karnataka Press, No. 40, Hospital Road, City—1893.

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning.**

ಪ್ರಕಾಮವಿವಿಧವ್ರತತಿಮಗನಾರ್ಥಕರ್ಣಾಟಕಪ್ರಕಾಶಕನರಾವಿಧಾಪ್ರಥಿತಸಾಹಿತೀಶೋಭಿತಾ ॥ ವ್ಯಗಾಂಕಹಿತವಾಸರೇನಿಹಿತಮುದ್ರಣಾಸಜ್ಜನೈರ್ದ್ಧಿಕಾಸುಪರಿದೋಷಿತಾದಿಶತಿವಾನಸಂಸೂಚುವಂ ॥

Vol XX ] | BANGALORE —MONDAY, SEPTEMEBR 18, 1893. | [ No 37.

ಸಂಪುಟ ೨೦. ] | ಬೆಂಗಳೂರು —ಸೆ ೧೮೯೩ನೇ ಇಸವಿ ಸೆಪ್ಟೆಂಬರ್ ೧೮ ನೇ ತಾರೀಖ್ ಸೋಮವಾರ. | [ಸಂಖ್ಯೆ ೩೭.


## ಕರ್ಣಾಟಕ ಪ್ರಕಾಶಿಕಾ.

### ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ಸಾಲೊಂದಕ್ಕೆ | 6—0—0 | 8—0—0 |
| 6 ತಿಂಗಳಿಗೆ | 3—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ಸಾಲೊಂದಕ್ಕೆ | 3—0—0 | 4—0—0 |
| 6 ತಿಂಗಳಿಗೆ | 1—12—0 | 2—8—0 |

ಈ ಪತ್ರಿಕೆ ದರ [illegible] ಮುಂಗಡ ಕೊಡ ಲು [illegible] ತಿಂಗಳೊಳಗಾಗಿ ಹಣವನ್ನು ಕಳುಹಿ ಸತಕ್ಕದ್ದು. [illegible] ಪತ್ರಿಕೆ [illegible] ಇಂಗ್ಲಿಷ್ [illegible] ಕನ್ನಡ [illegible] ಅಥವಾ ಎರಡನ್ನೂ [illegible] ಬೇಕಾದವರು [illegible] ಅಂಗೀಕರಿಸಲ್ಪಡುವದು

### ಪ್ರಕಟನೆಯ ದರಾವು.

ಮೊದಲನೆಯದಕ್ಕೆ ಪಂಕ್ತಿ ಒಂದಕ್ಕೆ ೦—೨—೦

ಎರಡನೆಯದಕ್ಕೆ ಪಂಕ್ತಿ ಒಂದಕ್ಕೆ ೦—೧—೦

ಷರಾ—ಎರಡಾವರ್ತಿಗಿಂತ ಹೆಚ್ಚಾಗಿ ಎಷ್ಟು ಕಡವ ಧಯಾಗಿ ಪ್ರಕಟಿಸಬೇಕೋ ಪಂಕ್ತಿ ಒಂದಕ್ಕೆ ೧ ಆಣೆಯಂತೆ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಜಾಹಿರಾತುಮುಂತಾದ ಪ್ರಕಟನೆಗಳನ್ನು ಕಳುಹಿಸುವವರು ಅವು ಎಷ್ಟಾವರ್ತಿ ಪ್ರಕಟಿಸಲ್ಪಡಬೇಕೋ ಆ ಅಂಕೆಯನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಪಕ್ಷಕ್ಕೆ ಅವರು ನಮಗೆ ನಿಲ್ಲಿಸುವಂತೆ ಬರೆಯುವವರೆಗೆ ಅವು ಪ್ರಕಟಿಸುತ್ತಿದ್ದು ಹಣಕ್ಕೆ ಲೆಕ್ಕದಲ್ಲಿ ಪ್ರಕಟಿಸಲ್ಪಟ್ಟದ್ದಾಗ್ಯೂ ಮೇಲೆ ಹೇಳಿದಂತೆ ದರದಂತೆ ಹಣವನ್ನು ವಸೂಲು ಮಾಡಲ್ಪಡುವದು ಪ್ರಕಟನೆಗಳಿಗೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಆ ಯಾ ಸೋಮವಾರದ ಮಧ್ಯಾಹ್ನ ೨ ಘಂಟೆಯೊಳಗಾಗಿ ಕ ಳುಹಿಸಬೇಕು. ಪ್ರಕಟನೆಯೊಂದಿಗೆ ಈ ಪತ್ರಿಕೆಗೆ ಕಳುಹಿಸ ಲ್ಪಡತಕ್ಕ ಕಾಗದಗಳಿಗೆ ಸಲ್ಲತಕ್ಕ ಅಂಚೆ ಖರ್ಚು ನಾವು ಜವಾಬ್ದಾರರಾಗಲಾರೆವು. ಕ್ರಮವಾಗಿ ರುಜುವಾತು ದಾರರು ಯಾರಾದರೂ ಪ್ರಕಟಿಸಲಾರೆವು. [illegible]

*ADVERTISEMENTS*


## NOTICE

### VAIDYASARA SANGRAHA

A TREATISE ON THE PRINCIPLES OF

### HINDU MEDICINE

*Price including Postage Rs 5 0 0*

ವೈದ್ಯಸಾರ ಸಂಗ್ರಹ

ಈ ಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಈ ಕೆಳಗೆ ರುಜು ಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪೋಸ್ಟ್ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ಅರಜಿಗಳಿಗೆ ಸೀಳೀ ಕೊಡಲ್ಪಡಲಾರದು

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೇ ಹಾಸಲು, ದೇಹಲ್ ಪ್ರತಿ ಒಂದಕ್ಕೆ ರೂ 5 -0—0

ಟಿ. ಬಿ. ವೆಂಕಟಾಚಾರ್

ಬೆಂಗಳೂರ್. ದಪಟ್ ಆಸ್ಪತ್ರಿ ಕೋರ್ಟ್ ೪೮ ನೇನಂಬರ್.

## ನೋಟೀಸ್

### ಬೆಂಗಳೂರು ಕರ್ಣಾಟಕ್ ಪ್ರೆಸ್.

೧೮೬೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ, ಸಕಲವಿಧ ಕೆಲಸಗಳು ಸುಲಭಚಾರ್ಜಿಗೆ ತೀವ್ರವಾಗಿಯೂ ಶುದ್ಧವಾಗಿಯೂ, ಮಾಡಲ್ಪಡುವವು

ಇದರಲ್ಲಿ ಸದ್ಯಃ ಇಂಗ್ಲಿಷ್ ಕನ್ನಡ ಕೆಲಸಗಳು ಮಾತ್ರ ನಡೆಯುತಿವೆ. ಇತರ ತಪಶೀಲ್‌ಗಳನ್ನು ಸದರೀ ಕಾರ್ಖಾನೆಯ ಪ್ರೊಪ್ರೈಟರಿಗೆ ಬರೆದು ತಿಳಿದುಕೊಳ್ಳಬಹುದು.

## ನೋಟೀಸ್.

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪೆನಿ. ಕಮಿಶ್ಯನ್ ಏಜಂಟ್ಸ್.

ಇವರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯೊಡನೆ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ತಕ್ಕ ಕಮಿಶ್ಯನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ

ಎಲ್ಲಾ ತರಹ ಔಷಧಗಳು, ಪುಸ್ತಕಗಳು, ಮುತ್ತುಗಳು, ಚಿಪ್ಪು ಮುತ್ತುಗಳು, ಘಡಿಯಾರಗಳು, ಹಾರ್ಮೋನಿಯಂ ಪೆಟ್ಟಿಗೆಗಳು, ಕಾಶ್ಮೀರ ಶಾಲುಗಳು, ಪೆಟ್ಟಿಗೆಗಳು, ಜರತಾರಿ ಶಲ್ಯಗಳು, ಚಂದ್ರಕಾಂತ ಮೊದಲಾದ ಕನ್ನಡಕಗಳು, ತಮಗೆ ಬೇಕಾದ ರೀತಿ ಉಡುಪುಗಳು, ಜರತಾರ ಟೋಪಿಗಳು, ಆಫಿಸ ಪ್ರಿಂಟುಗಳು, ಪಟಗಳು, ಲೆಂಪಗಳು, ಅತ್ಯುತ್ತಮಗಳಾದ ರತ್ನಗಳು, ರತ್ನ ಕೆತ್ತಿದ ಕಲ್ಲುಪಟ್ಟ ಉಂಗುರಗಳು, ಬೆಳ್ಳಿ ಪಾತ್ರೆಗಳು, ಜರ್ಮನ್ ಬೆಳ್ಳಿ ಪಾತ್ರೆಗಳು, ಕೇಸರಿ, ಕಸ್ತೂರಿ ವಗೈರೆ ಇತರ ಸಾಮಾನುಗಳು

ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟೆಂಪ್ ಕಳುಹಿಸಿದ ಕೂಡಲೆ ಜವಾಬ್ ದೊರೆಯುವದು

ವಿಳಾಸ —ಗಣೇಶ ರಾಮಚಂದ್ರ ಕರ್ಕಿ,
ಮತ್ತು ಕಂಪೆನಿ, ಕಮಿಶ್ಯನ್ ಏಜಂಟ್ಸ್
ಠಾಕೂರದ್ವಾರ, ಮಾರ್ಕೆಟ್ ಪೋಸ್ಟ್, ಮುಂಬೈ

## ನೋಟೀಸ್.

ಇವರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು

### ಸಂಸ್ಕೃತ ಗ್ರಂಥಗಳು.

| | ಹೆಸರ್ ಸಹಿ ರೂ | ಆ | ಪೈ |
|---|---|---|---|
| ಸಟೀಕಾ ವೈದ್ಯಸಾರ ಸಂಗ್ರಹ | ೫ | ೮ | ೦ |
| ,, ಶಿವಗೀತೆ | ೧ | ೦ | ೦ |
| ,, ಜೀವನ ಮುಕ್ತಿ | ೦ | ೮ | ೦ |
| ,, ಕಾಲಾಮೃತ | ೧ | ೦ | ೦ |
| ,, ಟೀ॥ ವಾಲ್ಮೀಕಿರಾಮಾಯಣ | ೦ | ೩ | ೦ |
| ,, ಟೀ॥ ಗೋಪಿಕಾ ಗೀತೆ | ೦ | ೧ | ೦ |
| ,, ಟೀ॥ ಚಾಣಕ್ಯನೀತಿ (ಸುಭಾಷಿತ) | ೦ | ೪ | ೦ |
| ವಿಷ್ಣುಸಹಸ್ರನಾಮ ವಗೈರೆ | ೦ | ೩ | ೦ |
| ಸೂರ್ಯಸಹಸ್ರನಾಮ | ೦ | ೨ | ೦ |
| ಕೃಷ್ಣಕರ್ಣಾಮೃತ | ೦ | ೨ | ೦ |
| ತ್ರಿಕಾಂಡ ಅಮರ ಮೂಲ | ೦ | ೬ | ೦ |
| ೧ ಕಾಂಡ | ೦ | ೧ | ೦ |

### ಕನ್ನಡ ಗ್ರಂಥಗಳು.

| | | | |
|---|---|---|---|
| ಶಬ್ದಸ್ಮೃತಿ ಅಪ್ಪೆಂಡಿಕ್ಸ್ | ೩ | ೦ | ೧ |
| ಟಿಪ್ಪೂ ಸುಲ್ತಾನ್ | ೧ | ೨ | ೦ |
| ವೃಷಭೇಂದ್ರವಿಜಯ | ೧ | ೮ | ೦ |
| ಪಂಚತಂತ್ರ ವಾಲ್ಮೀಕಿ | ೦ | ೬ | ೦ |
| ಹನುಮದ್ವಿಲಾಸ | ೦ | ೬ | ೦ |
| ಕಾಳೀಯಮರ್ದನ | ೦ | ೨ | ೦ |
| ಸುಭದ್ರಾಪರಿಣಯ | ೦ | ೨ | ೦ |
| ಶಶಿರೇಖಾಪರಿಣಯ | ೦ | ೨ | ೬ |
| ಸುದಾಮಚರಿತ್ರೆ | ೦ | ೧ | ೦ |
| ಮೈರಾವಣ ಚರಿತ್ರೆ | ೦ | ೧ | ೯ |
| ಬಾಲಗ್ರಹಚಿಕಿತ್ಸೆ | ೧ | ೦ | ೦ |
| ಮುಕುಂದ್ದದರ್ಪಣ | ೨ | ೧೨ | ೦ |
| ಭ್ರಾಂತಿವಿಲಾಸ | ೨ | ೦ | ೦ |


## THE MONEY MARKET

ಮದರಾಸ್, ಶನಿವಾರ, ತಾರೀಖ್ 16ನೇ ಸೆಪ್ಟೆಂಬರ 1893

ಸೇಕಡ 4ರೂ ಬಾಬತು ಗವರ್ನಮೆಂಟ ಪತ್ರಗಳು ರೂಪಾಯಿಗಳು, 104-14-0 ಇಂದ 105-6-0ವರೆಗೆ

ಶೇಕಡಾ ನೂರುವರೆ ರೂಪಾಯಿಗಳ ಬಾಬತು ಗವರನ್ಮೆಂಟ ಪತ್ರಗಳು ರೂಪಾಯಿಗಳು 96-12-0ರಿಂದ 97-8-0 ರವರೆಗೆ

ಮದರಾಸ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತು 970 ಲಾಗಾಯಿತು 980 ವರೆಗೆ,

ಕಮರ್ಷಿಯಲ್ ವ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಷೇರುಗಳು, (100) ಬಾಬತು 150 ಇಂದ 155 ವರೆಗೆ

ಸವರಿನ್‌ಗಳು, 16-2-0 ಇಂದ 16-4-0ವರೆಗೆ,

ಬ್ಯಾಂಕ್‌ಬಿಲ್‌ಗಳು ಯೂನಿಯನ್ ಹುಂಡಿಗಳು, ರೂಪಾಯೊಂದಕ್ಕೆ,

6 ತಿಂಗಳ ವಾಯಿದೆಗೆ, 1s 3 9/32d

ಡಿಟ್ಟೋ 4ತಿಂಗಳವಾಯಿದೆಗೆ, 1s 3 7/32d

ಡಿಟ್ಟೋ ಕೇಳಿದಾಗ, 1s. 1/8d.

## ಕರ್ಣಾಟಕ ಪ್ರಕಾಶಿಕಾ.

**THE KARNATAKA PRAKASIKA.**

MONDAY, SEPTEMBER 18, 1893

೧೮೯೩ನೇ ಇಸವಿ ಸೆಪ್ಟೆಂಬರ್ ೧೮ ನೇ ಸೋಮವಾರ

### ಮೇಲುಕೋಟೆ ದೇವಸ್ಥಾನದಲ್ಲಿ ನಡೆದ ಕಳವು.

ಹಿಂದೂ ದೇವಸ್ಥಾನಗಳಲ್ಲಿ ವಿಗ್ರಹಾರಾಧನೆ ಮಾಡುವಣವು, ಅದಕ್ಕೆ ಆವಶ್ಯಕಗಳಾದ ಪದಾರ್ಥಗಳಂ ನಾನಾಮಾರ್ಗದಿಂ ಶೇಖರಿಸಿಡುವ ಇವೂ ಹಿಂದುಸ್ಥಾನದಲ್ಲಿ, ತತ್ರಾಪಿ ದಕ್ಷಿಣ ದೇಶದಲ್ಲಿ ಅನಾದಿ ಸಂಪ್ರದಾಯವಾಗಿರುತಿದೆ. ಈ ಮೈಸೂರು ಸೀಮೆಯೊಳು ಚಾಮರಾಜನಗರ, ನಂಜನಗೂಡು, ಮೇಲುಕೋಟೆ, ಈ ಮೂರು ಸ್ಥಳಗಳಲ್ಲಿರುವ ದೇವಾಲಯಗಳಲ್ಲಿ ಬೆಳ್ಳಿ, ಭಂಗಾರ, ಜವಾಹಿರ್ ನಗಗಳು ವಿಸ್ತಾರವಾಗಿರುತಿವೆ. ಇವುಗಳ ಬಂದೋಬಸ್ತಿಯನ್ನು ಕುರಿತು ಸರ್ಕಾರದವರು ಬಹಳವಾಗಿ ಅಕ್ಕರೆಯಂ ವಹಿಸಿರುತ್ತಾರೆ. ಮೇಲುಕೋಟೆ ವೈರಮುಡಿ, ರಾಜಮುಡಿ ಮೊದಲಾದ ಭಾರೀ ಕ್ರಯವುಳ್ಳ ಶಿರೋಭೂಷಣಗಳು ಶ್ರೀಮನ್ಮಹಾರಾಜರವರ ಅರಮನೆಯಲ್ಲೇ ಕಾಪಾಡಲ್ಪಡುತಿವೆ. ಈಚೆಗೆ ಈ ದೇಶದೊಳು ಮುಜರಾಯ್ ಇಲಾಖೆಯು ಪ್ರತ್ಯೇಕವಾಗಿ ಏರ್ಪಟ್ಟಮೇಲೆ ಇಲ್ಲಿನ ದೇವಾಲಯಗಳೊಳು ಅನುಪಯುಕ್ತ ಮತ್ತು ಅನಾವಶ್ಯಕಗಳಾಗಿ ಕಾಡುಬರುವ ನಗಗಳನ್ನು ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಿ ತನ್ಮೂಲಕ ಹುಟ್ಟುವಳಿಯಾಗುವ ದ್ರವ್ಯವನ್ನು ಉಚಿತ ರೀತಿಯಿಂದ ವಿಲೇ ಮಾಡಬೇಕೆಂದು ಯೋಚನೆಯಾಗಿ ತದ್ವತ್ ಆಚರಣೆಯೊಳು ಬರುತಿವೆ. ಈ ಆಭರಣಗಳು ಮೊದಲಾದವು ಆಯಾ ದೇವರ ಭಕ್ತರಿಂದ ದೇವರ ಉಪಯೋಗಾರ್ಥ ಕೊಡಲ್ಪಟ್ಟವಾಗಿರುವದರಿಂದ ಅವು ಸದರೀಯವರ ಸ್ವತ್ತುಗಳಾಗಿರುತಿವೆ. ಭಕ್ತರೆಂಬವರು ಸಾಧಾರಣವಾಗಿ ಮೂರು ತೆರನಾಗಿರುತ್ತಾರೆ, ಅಂದರೆ, ದೂರ ದೇಶಗಳಿಂದ ಯಾತ್ರಾರ್ಥಿಗಳಾಗಿ ಬಂದು ದೇವರ ಸೇವೆಯಂ ಮಾಡಿ ಆ ಕಾಲದೊಳು ತಮಗುಂಟಾಗುವ ಭಕ್ತಿಪಾರವಶ್ಯತೆಯಿಂದ ದೇವರಿಗೆ ಧನ, ಕನಕ, ವಸ್ತು, ವಾಹನಾದಿಗಳಂ ಸಮರ್ಪಿಸುವಂತವರು ಕೆಲವರು. ಇಂತವರು ಕೊಡುವ ಕಾಲದಲ್ಲಿಯೇ "ನಮಮ ನಮಮ" ಎಂಬ ಮಂತ್ರೋಚ್ಚಾರಣಾಪೂರ್ವಕ ಕೊಡುತ್ತಾರಾಗಿ ಮರಳಿ ಅವರಿಗೆ ಅದರಲ್ಲಿ ಯಾವ ಭಾದ್ಯತೆಯೂ ಇರುವದಿಲ್ಲವು. ಬೇರೆ ಕೆಲವರು ಆಯಾ ಸ್ಥಳಗಳಿದ್ದುಕೊಂಡು ವಿಶೇಷ ಸಂದರ್ಭಗಳೊಳು ದೇವರ ಧ್ಯಾನ, ನಾಮಸಂಕೀರ್ತನೆ ಮಾಡುತಿರುತ್ತಾರೆ. ಇವರಿಗೆ ಯಾತ್ರಾರ್ಥಿಗಳಾಗಿ ಬರತಕ್ಕವರಿಂದ ಫಲಪ್ರಾಪ್ತಿಯುಂಟು. ಇದು ಈ ಜನರಿಗೆ ಐಹಿಕ ಫಲವೆನ್ನಿಸಿಕೊಳ್ಳುತಿದೆ. ಆಮುಷ್ಮಿಕಫಲವೆಂಬದು ಅವರವರ ಬುದ್ಧ್ಯಧೀನವಾಗಿರುವುದು. ಮತ್ತು ಕೆಲವರು ಸ್ಥಳನಿವಾಸಿಗಳಾಗಿ ದೇವಾಲಯಗಳ ನೌಕರನ್ನಾಗಿರುತ್ತಾರೆ. ಇವರು ದೇವಸ್ಥಾನದಲ್ಲಿ ಹಕ್ಕುದಾರರು. ದೇವರಿಗೆ ಸೇವೆ ಸತ್ಕಾರಗಳು ಹೆಚ್ಚಿದಂತೆಲ್ಲ ಇವರಿಗೆ ಪ್ರಯೋಜನವು ಹೆಚ್ಚುತಿದೆ. ಹೀಗಿರುವದರಿಂದ ಮೇಲೆ ಹೇಳಿದ ಹುಕುಮನ್ನನುಸರಿಸಿ ದೇವಸ್ಥಾನಗಳ ಜೊಡಿಗಳು ಹರಾಜ್ ಮಾಡಲ್ಪಟ್ಟರಾಗಲ್ಲ ಅವು ಸದರೀ ನೌಕರಮಾನೇರ ಸ್ವಾಧೀನ ತಪ್ಪಿ ಸರ್ಕಾರ ಸ್ವಾಧೀನವಾಗುತಲಿವೆ. ಆ ರೀತಿ ಮಾಡುವಣವು ಅಕ್ರಮವೆಂದು ನಾವು ಹೇಳದೆ ಹೋದಾಗ್ಯೂ ಸದರೀ ನೌಕರ್ಮಾನೇರು ಆ ರೀತಿ ಭಾವಿಸದೆ ಹೋಗಲಾರರು. ಅವರ ಭಾವನಾನುಸಾರವಾಗಿ "ಅನ್ಯಥಾ ಕರ್ತುಂ ಅಕರ್ತುಂ" ವೆಂಬ ನ್ಯಾಯಾನುಗುಣವಾಗಿ ದೇವಸ್ಥಾನದ ಸ್ವತ್ತುಗಳು ಕಳವಾದರೂ ಖರೀದಿಯಾದರೂ ಒಂದೇಯಾಗಿರುವುದು. ಆದುದರಿಂದ ದೇವಾಲಯಗಳಲ್ಲಿ ನಡೆಯುವ ಕಳವುಗಳು ಪ್ರಾಯಶಃ ಅವುಗಳ ನೌಕರ್ಮಾನೇರ ಷಾಮೀಲಾತಿ ಯಿಲ್ಲದೆ ನಡೆಯುವದಿಲ್ಲವೆಂಬವಕ್ಕೆ ಅನೇಕ ನಿದರ್ಶನಗಳು ಇಲ್ಲದೆ ಹೋಗಿಲ್ಲವು. ಮೇಲುಕೋಟೆ ದೇವಾಲಯದಲ್ಲಿ ನಡೆದಾತೆ ಅನೇಕ ಆಲಯಗಳೊಳು ಆಗಿಂದಾಗ್ಯೆ ಕಳವು ನಡೆಯುತಲಿರುವಂತೆ ತಿಳಿಯಬರುವದರಿಂದ ಪ್ರಸಕ್ತ ಕಳವಿಗಾಗಿ ಆಶ್ಚರ್ಯಪಡುವದಕ್ಕೆ ಅವಕಾಶವಿಲ್ಲವು. ಈ ಕಳವನ್ನು ಪತ್ತೇ ಮಾಡಬೇಕೆಂಬ ಉದ್ದೇಶದೊಡನೆ ಮುಜರಾಯ್ ಸೂಪರಿಂಟೆಂಡೆಂಟರವರೂ ಪೊಲೀಸ್ ಇನ್ಸ್‌ಪೆಕ್ಟರ್ ಜನರಲವರೂ ಮೇಲುಕೋಟೆಗೆ ಹೋಗಿಬಂದರೆಂದು ಕೇಳುತ್ತೇವೆ. ಪರಂತು ಪತ್ತೇವಿಷಯದಲ್ಲಿ ಸದರೀ ಅಧಿಕಾರಿಗಳು ಅಲ್ಲಿ ನಡೆಸಿದ ಕ್ರಮಗಳ ಸ್ವರೂಪವಿಂತಾದ್ದೆಂದು ಸ್ಪಷ್ಟವಾಗಿ ತಿಳಿಯಬರಲಿಲ್ಲವು. ಈಗ ಕಳವಾದ ಮಾಲ್‌ಗಳಂ ಪತ್ತೇಮಾಡಿಕೊಟ್ಟವರಿಗೆ ೨೦೦ ರೂಪಾಯಿಗಳು ಇನಾಂ ಕೊಡಲ್ಪಡುವದೆಂದು ಮೈಸೂರು ಗೆಜೆಟಿನಲ್ಲಿ ಘೋಷಿಷ್ ಮಾಡಲ್ಪಟ್ಟದೆ. ಆಗಿಂದಾಗ್ಯೆ ಆಲಯಗಳಲ್ಲಿ ಆಗುವ ಕಳವುಗಳ ಪತ್ತೆಯ ಬಗ್ಗೆ ಕೊಡುವದಾಗಿ ಪ್ರಕಟಿಸಲ್ಪಡುವ ಇನಾಂಗಳಂತಲ್ಲದೆ ಇದಾದರು ಕಾರ್ಯಕಾರಿಯಾಗಬೇಕೆಂದು ಕೋರುವೆವು.

### ಅನ್ಯರಾಜ್ಯಗಳಲ್ಲಿ ಹಿಂದೂಗಳ ಪ್ರಾಬಲ್ಯ.

ಇಂಡ್ಯದೇಶದ ಪ್ರಭುತ್ವದಲ್ಲಿ ಭಾರೀ ಉದ್ಯೋಗಗಳೆಲ್ಲವು ಸಾಮಾನ್ಯವಾಗಿ ಇಂಗ್ಲಿಷರ ಪಾಲಾಗಿರುವದರಿಂದ ಅವು ಹಿಂದೂಗಳಿಗೆ

ದೊರೆಯುವದು ಬಹಳ ಪ್ರಯಾಸವಾಗಿರುತದೆ. ಅವುಗಳಿಗೆ ಯಾರಾದರು ಪ್ರಯತ್ನವಿಟ್ಟು ಅಧಿಕಾರ ಲಭಿಸಿದಾಗ್ಯೂ ಆಂಗ್ಲೋಇಂಡಿಯನ್ಸ್, ಅಂದರೆ, ಇಂಡ್ಯದೇಶ ನಿವಾಸಿಗಳಾದ ಇಂಗ್ಲಿಷಿನವರಿಗೆ ಅಸೂಯೆಯನ್ನುಂಟುಮಾಡದಿರುವದಿಲ್ಲವು. ಅಂತಹ ನೇಟಿವ್‌ಗಳ ಪ್ರಭುತ್ವಕ್ಕಾಗಿ ಕ್ಲೇಶಪಡತಕ್ಕ ಸದರೀ ಜನಗಳು ಸಾಕ್ಷಾತ್ತಾಗಿಯೂ ಪರಂಪರೆಯಾಗಿಯೂ ಹಿಂದೂಗಳ ಪ್ರಯತ್ನೋದ್ದೇಶಗಳಿಗೆ ಪ್ರತ್ಯರ್ಥಿಗಳಾಗಿ, ತಮ್ಮ ಸಹಾಯಾರ್ಥ, ಮುಸಲ್ಮಾನರನ್ನು ಸಹ ಸೇರಿಸಿಕೊಂಡು ಪ್ರತಿಪಕ್ಷವು ಬಲಪಡಿಸಿಕೊಳ್ಳುತ್ತಾರೆ. ಇವುಗಳೆಲ್ಲ ಕಾರಣವನ್ನಾಲೋಚಿಸಲಾಗಿ, ಹಿಂದೂಗಳು, ವಿಶೇಷತಃ ಅನ್ಯ ದೇಶಗಳಿಗೆ ಹೋಗಿ ತಮ್ಮ ವಿದ್ಯಾಬುದ್ಧಿ ವಿವೇಕ ಚಾತುರ್ಯಾದಿ ಸುಗುಣಗಳಂ ವ್ಯಕ್ತಗೊಳಿಸಿ ಅಲ್ಲಿನ ಅಧಿಕಾರಗಳಲ್ಲಿ ಪ್ರವೇಶಪೂರ್ವಕ ಪ್ರಶಸ್ತಿಯಂ ಪಡೆಯುವಷ್ಟರ ಸಾಹಸಿಗಳಲ್ಲವೆ ಇರುವಣವೂ, ಕೂಪಕೂರ್ಮಗಳಂತೆ ಸ್ವದೇಶದಲ್ಲಿಯೇ ಸಕಲವಿಧ ಪರಿಭವಗಳನ್ನನುಭವಿಸುತ ಸಂಕುಚಿತ ಬುದ್ಧಿಯಿರುವಣವೂ ಅನ್ಯರ ಸ್ಪರ್ಧೆಗೆ ಮತ್ತಷ್ಟು ಅವಕಾಶವನ್ನುಂಟುಮಾಡಿದವು. ಈಚೆಗೆ ಹಿಂದೂಗಳು ಪ್ರಯಾಣ ದೇಶಾಂತರ ಸಂಚಾರದಲ್ಲಿ ಆಸಕ್ತರಾಗಿ ಪೂರ್ವಿಕರಿಗಳಾದ ನಿರ್ಬಂಧಗಳಂ ಒಪಳವಾಗಿ ಲಕ್ಷ್ಯದೊಳಪಡೆ ನಿರಾಳವಾಗಿ ಪ್ರವರ್ತಿಸಲಾರಂಬಿಸಿದ್ದರಿಂದ ಅವು ಅನ್ಯರ ಗರ್ವವಂ ಯಥೋಚಿತ ಭಂಗಪಡಿಸಲಾರಂಭಿಸಿರುವಂತೆ ಕಾಣುತದೆ. ಮುಂಬೈ ಯೂನಿವರ್ಸಿಟಿಗೆ ಸೇರಿದ ಮೆ|| ಅರ್ದೇಸಿರ್ ಮಂಚರ್‌ಜಿ ವಾಚಾ, ಬಿ ಎ ಎಂಬ ಒಬ್ಬ ಪಾರಸೀ ದೊಡ್ಡ ಮನುಷ್ಯರು ಈಗ್ಯೆ ಕೆಲವು ದಿವಸಗಳ ಹಿಂದೆ ಈ ದೇಶದಿಂದ ಜರ್ಮನಿ ಪಟ್ಟಣಕ್ಕೆ ಪ್ರಯಾಣವಾದರೆಂದು ಪ್ರಾಸ್ತವೇ ಸೂಚಿಸಿದ್ದೆವಷ್ಟೆ ಸದರೀ ದೊಡ್ಡ ಮನುಷ್ಯರು, ಆಸ್ಟ್ರಿಯಾ ರಾಜ್ಯಕ್ಕೆ ಪ್ರಧಾನ ನಗರವಾದ ವೈಯನಾ ಪಟ್ಟಣದಲ್ಲಿ ಸ್ಥಾಪಿಸಲ್ಪಟ್ಟಿರುವ ಶಾಸ್ತ್ರಪಾಠಶಾಲೆಯಲ್ಲಿ ಫಾರ್ಸಿ, ಹಿಂದುಸ್ಥಾನಿ, ಮತ್ತು ಗುಜರಾತಿ ಭಾಷೆಗಳನ್ನು ಬೋಧಿಸುವ ಬಗ್ಯೆ ಉಪಾಧ್ಯಾಯರಾಗಿ ನಿಯಮಿಸಲ್ಪಟ್ಟರೆಂದು ಈಚೆಗೆ ವರ್ತಮಾನ ಬಂದಿರುತದೆ. ಪುನೇ ಸೈನ್ಸ್ ಕಾಲೇಜನಲ್ಲಿ ಕೆಲವು ದಿವಸಗಳ ಹಿಂದೆ ಒಬ್ಬ ಉಪಾಧ್ಯಾಯರಾಗಿದ್ದ, ಮತ್ತು ಮುಂಬೈ ಯೂನಿವರ್ಸಿಟಿಗೆ ಸೇರಿದ ಮೆ|| ನೌರೋಜಿ ಕ್ಷಾಕೌವಾಸ್ಜಿ, ಬಾಂಜಿ ಎಲ್. ಸಿ. ಇ. ಬಿ. ಸಿ ಎಂಬವರು ಸಹ ಅಮೇರಿಕಾಖಂಡಕ್ಕೆ ಸೇರಿದ ಹಾರ್ಕ್‌ವಾರ್ಡ್ ಯೂನಿವರ್ಸಿಟಿಯಲ್ಲಿ ರಸಾಯನ ಶಾಸ್ತ್ರಕ್ಕೆ ಸಹಾಯಕೋಪಾಧ್ಯಾಯರಾಗಿ ನಿಯಮಿಸಲ್ಪಟ್ಟಿರುತ್ತಾರೆ. ಇವರು ಈಗ್ಯೆ ಎರಡು ಸಂವತ್ಸರಗಳ ಹಿಂದೆ ವೈದ್ಯಶಾಸ್ತ್ರಾಭ್ಯಾಸಕ್ಕಾಗಿ ಅಮೇರಿಕಾಖಂಡಕ್ಕೆ ಹೊರಟು ಹೋಗಿದ್ದರು. ಹೀಗೆ ಇಂಡ್ಯ ದೇಶೀಯರು ಯೂರೋಪ್ ಅಮೇರಿಕಾ ಮೊದಲಾದ ಅನ್ಯ ದೇಶಗಳಿಗೆ ಹೋಗಿ, ಅಲ್ಲಿನ ಅಧಿಕಾರಗಳಂ ಸಂಪಾದಿಸಿ ಪ್ರಸಿದ್ಧಿಯಂ ಪಡೆದು ಬಂದರೇನೇ ಯೂರೋಪಿಯನ್ನರುಗಳಿಗೆ ನೇಟಿವ್‌ಗಳ ಅಪೇಕ್ಷೆಯು ನ್ಯಾಯವಾದವೆಂತಲೂ, ನೈಜವಾದವೆಂತಲೂ ತೋರುವವು. ಪ್ರಕೃತ ಸಂದರ್ಭದಲ್ಲಿ ಮೇಲೆ ಹೇಳಿದ ಇಬ್ಬರು ದೊಡ್ಡ ಮನುಷ್ಯರು ಪಾರಸಿಗಳಾಗಿರುವದರಿಂದ ಇವರು ಅನ್ಯದೇಶಕ್ಕೆ ಹೋಗಿರುವುದು ವಿಶೇಷವಲ್ಲವು. ಯಾವ ಜನಗಳಿಗೆ ಸ್ವಕ್ಷೇತ್ರವಂ ಬಿಟ್ಟು ಕದಲಲಾರರೆಂಬ ಅಪಪ್ರಥೆಯೂ, ಅಸಮರ್ಥತೆಯೂ ಉಂಟಾಗಿವೆಯೋ ಅಂತಾ ಜನಗಳು, ಕುರಿ ಹಿಂಡುಗಳಂತೆ, ಅನ್ಯ ದೇಶಗಳಿಗೆ ಹೋಗಿ ಅಲ್ಲಿನವರ ಸ್ಥಾನಗಳನ್ನಾಕ್ರಮಿಸಿಕೊಂಡು ಆ ಪ್ರಜೆಗಳ ಮೇಲೆ ಅಧಿಕಾರಗಳನ್ನು ಚಲಾಯಿಸುತ ಬರುವರಾದರೆ ಆಗ ಅವರಿಗೆ ತಮ್ಮ ಸ್ವರೂಪಜ್ಞಾನವೂ, ಪ್ರಜಾಪಾಲನೆಗೆ ಶಸ್ತ್ರಬಲವು ಕುಶ್ಶಾಂಗ ಅನುಪಯುಕ್ತವೆಂಬ ತಿಳುವಳಿಕೆಯೂ ಉಂಟಾಗಿ, ಬಳಿಕ ಇಲ್ಲಿನವರಿಗೆ ಸುಖಸಂತೋಷಗಳು ಲಭಿಸಬೇಕಲ್ಲದೆ ತಾವತ್ಪರ್ಯಂತ ಪ್ರಜೆಗಳು ಯಾವದನ್ನು ಬಯಸಿದಾಗ್ಯೂ ಪ್ರಯೋಜನವಿಲ್ಲವು.

## ಹಿಂದೂಮುಸಲ್ಮಾನರ ಕಲಹಪ್ರಸಂಗಗಳು.

ಕಾಶ್ಮೀರದಲ್ಲಿರತಕ್ಕ ಜುಮ್ಮಾಮಸೀದಿ ಎಂಬ, ಮುಸಲ್ಮಾನರ ಪ್ರಾರ್ಥನಾ ಮಂದಿರವನ್ನು ದುರಸ್ತು ಮಾಡುವ ಬಗ್ಗೆ ಹಿಂದೂಗಳೂ ಮುಸಲ್ಮಾನರೂ ಧಾರಾಳವಾಗಿ ಚಂದಾಮೂಲಕ ಧನಸಹಾಯ ಮಾಡುತಲಿರುವಂತೆಯೂ ಇದುವರೆಗೆ ೫೦,೦೦೦ ರೂಪಾಯಿಗಳು ವಸೂಲಾಗಿರುವಂತೆಯೂ ಕೇಳುತ್ತೇವೆ ಇದು ಹೀಗಿರಲಾಗಿ ಈಚೆಗೆ ಮುಂಬೈಯಲ್ಲಿ ನಡೆದ ಪ್ರಾಣಾಂತವಾದ ಕಲಹ ಸ್ವರೂಪವು ಅದ್ಯಾಪಿ ಎಲ್ಲರ ಜ್ಞಾಪಕದೊಳು ನೂತನವಾಗಿರುವದಷ್ಟೆ. ಈಚೆಗೆ ಅಂದರೆ ಮಾಹೇ [illegible] ೧೧ ನೇ ತಾರೀಖಿನಲ್ಲಿ [illegible]ದಿಂದ ಬಂದ ವೃತ್ತಾಂತದಿಂ ತಿಳಿಯಬರುವದೇನೆಂದರೆ,—ಹಿಂದೂಗಳಿಗೂ ಮುಸಲ್ಮಾನರಿಗೂ ನಸೂತಪುರವೆಂಬ ಗ್ರಾಮದಲ್ಲಿ ಮತ್ತೊಂದು ಕಲಹವು ಜರಿಗಿತು ಇದಕ್ಕೆ ಕಾರಣವೇನೆಂದರೆ,—ಮುಸಲ್ಮಾನ್ ಜಾತಿಯವರಾದ ಕಟುಕರು ಕೆಲವರು ವಧೆಗಾಗಿ ಆಕಳುವಂದೆಯನ್ನು ಹೊಡೆದುಕೊಂಡು ಹೋಗುತಲಿರಲಾಗ ಹಿಂದೂಗಳು ಅವುಗಳ ರಕ್ಷಣಾರ್ಥ ಪ್ರವರ್ತಿಸಿ, ಬಲಾತ್ಕಾರದಿಂ ಬಿಡಿಸಿ ತರಿಸಿಬಿಟ್ಟರುತೆ. ಬಳಿಕ ಪರಸ್ಪರ ಕಲಹವು ಪ್ರಬಲಿಸಿ ಅದು ಬಹಳ ಅನರ್ಥಕಾರಿಯಾಗಿ ಪರಿಣಮಿಸುವ ಸೂಚನೆ ಕಂಡುಬರಲು ಅಲ್ಲಿನ ಪೋಲೀಸಿನವರು ಬಂದು ಗುಂಪನ್ನು ಚದರಿಸಿಬಿಟ್ಟರು ಪರಂತು ಗಲಿಬಿಲಿಗಳನ್ನು ಸಹಿಸಲಾಗದೆ ಕಲಹಿಗಳು ದಿಕ್ಕುದಿಕ್ಕಿಗೆ ಓಡಿದರು. ಅದರಿಂದ ಇಬ್ಬರು ಮೃತಪಟ್ಟರು, ಮತ್ತೊಬ್ಬನಿಗೆ ಪೆಟ್ಟು ಜಾಸ್ತಿಯಾಯಿತು ಇದು ಹೀಗಿರಲಾಗಿ, ಮಾಹೇ [illegible] ೧೧ ನೇ ತಾರೀಖಿನಲ್ಲಿ ಕಲ್ಕತ್ತೆಯೊಳು ನ್ಯಾಷನಲ್ ಅಸೋಸಿಯೇಷನ್ ಸಂಘದವರ ಪ್ರೇರಣೆಯ ಮೇಲೆ ಹಿಂದೂಗಳ ಮತ್ತು ಮುಸಲ್ಮಾನರ ಸಂಯುಕ್ತ ಸಭೆಯೊಂದು ನಡೆದು, ಇನ್ನು ಮೇಲೆ ಹಿಂದೂಗಳೂ ಮುಸಲ್ಮಾನರು ಸಹ ಮತಸಂಬಂಧವಾಗಿ ಪರಸ್ಪರ ಕಲಹಿಸದೆ ಎಲ್ಲರೂ ಭ್ರಾತೃಭಾವದೊಡನಿರಬೇಕೆಂತಲೂ, ಉಭಯ ಜಾತಿಯವರಲ್ಲಿಯೂ ಸ್ವತಂತ್ರರಾದ ಪ್ರತಿನಿಧಿಗಳನ್ನು ಮುಖ್ಯ ಪ್ರದೇಶಗಳಲ್ಲಿ ಸ್ಥಾಪಿಸಿ ಅವರ ಮೂಲಕ ಜನರಲ್ಲಿ ಪರಸ್ಪರ ಸ್ನೇಹಭಾವವನ್ನು ಸ್ನಿಗ್ಧತೆಯನ್ನು ಬಲಪಡಿಸಬೇಕೆಂತಲೂ ತೀರ್ಮಾನಿಸಿದರು ಇದರ ಅರ್ಥವು ನಮಗೆ ಸ್ಪಷ್ಟವಾಗಲಿಲ್ಲವು ಇದು ನಾಯಕನಾಯಕರ ಪ್ರಣಯಕಲಹರೂಪವೆಂದು ಭಾವಿಸುವಣವಂದರೆ, ಸಮಯಬಂದಾಗ ಪ್ರಾಣಹಾನಿಗಳಂ ಸಹ ಪರಿಕಿಸದೆ ಒಬ್ಬರೂ ಮಡಿದುಹೋಗುತ್ತಾರಾಗಿ ಹಾಗೆ ಭಾವಿಸಲಿಕ್ಕಿಲ್ಲವು ವೈರಕಲಹವೆಂದೆಣಿಸುವಣವಾದರೆ, ಕೂಡಲೇ ಪರಸ್ಪರ ಸಹಾಯಪ್ರವೃತ್ತಿಯೂ ಅನ್ಯೋನ್ಯ ಕನಾತ್ಯ ಪ್ರವರ್ತಕಗಳಾದ ಮೃದುಮಧುರವಾಕ್ಯಗಳೂ ಪರಸ್ಪರ ಬೋಧಕಗಳಾದ ಕಮಟಣೆಗಳೂ, ಆರೀತಿ ಎಣಿಸಲಿಕ್ಕೆ ಅವಕಾಶವನ್ನೀಯಲೊಲ್ಲವು. ಮುಖ್ಯವಾಗಿ ಈ ಯೆರಡು ಜಾತಿಯವರ ವರ್ತನಗಳು ಮೋಸಕರಗಳಾಗಿಯೂ ಮನೋನಿಶ್ಚಯವಿಲ್ಲದವಾಗಿಯೂ ಇರುವದಂ ಕಂಡು ಬಹಳ ವಿಷಾದಿಸಬೇಕಾಗಿದೆ

## ಆಂಗ್ಲೇಯ ಚರಿತ್ರಸಂಗ್ರಹವು.

ಲೋಕದಲ್ಲಿ ಮನುಷ್ಯನಿಗೆ ಲೌಕಿಕ ವ್ಯಾಪಾರಗಳಲ್ಲಿ ವ್ಯುತ್ಪತ್ತ್ಯುತ್ಪಾದಗಳನ್ನುಂಟುಮಾಡುವಂತಾದ್ದು ಅನ್ಯರ ಪ್ರೋತ್ಸಾಹವಾದುದರಿಂದ ಅದಿಲ್ಲದಿರುವ ಕಡೆಗಳಲ್ಲಿ ಅನೇಕರ ಉದ್ದೇಶ ಪ್ರಯತ್ನಗಳು ಸಫಲಗಳಾಗದೆ "ಉತ್ಪದ್ಯಂತೆ ವಿಲೀಯಂತೆ" ಎಂಬುವ ರೀತಿಯಲ್ಲಿ ಪ್ರಾರಂಭದಲ್ಲಿಯೇ ಲಯವನ್ನೈದುವಲಿರುತಿವೆ ಈಚೆಗೆ ಶ್ರೀಮನ್ ಮಹಾರಾಜಾ ಸರ್ಕಾರದವರು, ಅಭಿಮಾನ್ಯತ್ವಜನಕೊನ್ಯವಾಗಿದ್ದ ಕರ್ಣಾಟಕ ಭಾಷೆಯನ್ನಭಿವೃದ್ಧಿಪಡಿಸಿ ಅದಂ ಸರ್ವೋನ್ನತಸ್ಥಿತಿಗೆ ತರಬೇಕೆಂಬ ಕುತೂಹಲದೊಡನೆ ಬಹುವಿಧ ಪ್ರಯತ್ನಗಳಂ ನಾನಾರೂಪದಿಂ ಮಾಡತೊಡಗಿದ ಪರತಿಂದ ಅದು ಅನೇಕರ ಅಶ್ರದ್ಧೆಯನ್ನೂ ಜಡತೆಯನ್ನೂ ನೀಗಲಾಡಿಸಿ ಅನೇಕರಂ ಅನೇಕ ವಿಷಯಗಳಲ್ಲಿ ಪ್ರವರ್ತಿಸುವಂತೆ ಪ್ರೇರಿಸುವ ಬರುವಣಂ ಕಂಡು ನಾವು ಬಹಳ ಸಂತೋಷಿಸುತ್ತೇವೆ. ಅಸಂಖ್ಯಾತಗಳಾದ ನಮ್ಮ ಪೂರ್ವಗ್ರಂಥಗಳು ಆಯಾ ಕಾಲದ ಪ್ರಭುಗಳ ನಿರತಿಶಯ ಪ್ರೋತ್ಸಾಹದಿಂದಲೇ ಪ್ರಚುರವಾದವು. ಅಂತರೀರ್ತನು ನನ್ನವಾಗತಬೇಕು ತಿಲ್ಲ ಪ್ರಸಿದ್ಧರಾದ ಕವಿಗಳೂ, ಅದರಿಂದ ವಿರಚಿತಗಳಾದ ಪ್ರಬಂಧಗಳೂ, ಕಾಲಕ್ರಮದಿಂ ನಷ್ಟವಾಗಿ ಪೂರ್ವದೊಡಕ್ಕೆ ಬೇರೆ ದೃಷ್ಟಾಂತವನಾವಶ್ಯಕವು ಈಗ ಉಳಿಸಿರುವ ಗ್ರಂಥಗಳನ್ನಾಲೋಚಿಸಿದರೆ, ಎಲ್ಲರ ಪರಿಶ್ರಮವೂ ಅದು ಉಚಿತವನಿಯಾನಿಂದು ತೋರುತ್ತಿದೆ ಎದಂ ಪರ್ಯಾಲೋಚಿಸಿ ಆಯಾ [illegible] ವಿದ್ಯಾಶಾಲೆಗಳಾದವರನೇಕರು ತಮ್ಮ ಜ್ಞಾನವನ್ನು [illegible] ಪ್ರಚಾರಪಡಿಸಿ ದೇಶೀಯ ಅನ್ಯರಿಗೆ ಪ್ರಯೋಜನಕರಾಗಿ ಸ್ವತಃ ಪ್ರಶಸ್ತ್ಯಾದರಾಗಬೇಕೆಂಬ ಉತ್ಸಾಹ ಪ್ರವರ್ತನಾಗಿ, ನಾನಾ ಗ್ರಂಥ ರಚನೆಯಾಗಿಯೂ, ಭಾಷಾಂತರರೂಪವಾಗಿಯೂ, ಪತ್ರಿಕಾರೂಪವಾಗಿಯೂ, ಪ್ರಸಂಗರೂಪವಾಗಿಯೂ, ತಮ್ಮ ವಿದ್ಯೆಯ ಪ್ರಚಾರಗೊಳಿಸುವ [illegible] ರಾತ್ರಿಯಿರುವುದು ಬಹಳ ಕೊಂಡಾದಕ್ಕೆ ಕಾದ ವಿಷಯವಾಗಿರುತದೆ ಈಚೆಗೆ [illegible] ಚಿಕ್ಕ ಮೈಸೂರಿನ [illegible] ಇಂಗ್ಲಿಷ್ ಭಾಷೆಯಲ್ಲಿ ಬರೆಯಲ್ಪಟ್ಟಿರುವ, ಇಂಗ್ಲೆಂಡ್ ದೇಶದ ಚರಿತ್ರಗ್ರಂಥವನ್ನು ಸಂಗ್ರಹಿಸಿ ಕರ್ಣಾಟಕ ಭಾಷೆಯಲ್ಲಿ ವಾಕ್ಯರೂಪವಾಗಿ ರಚಿಸಿ ಮುದ್ರಿಸಿ ಪ್ರಕಟಿಸಿರುತ್ತಾರೆ. ಇದರ ಪ್ರತಿಯೊಂದು ಕೆಲವು ದಿನಗಳ ಹಿಂದೆ ನಮಗೆ ಕಳುಹಿಸಲ್ಪಟ್ಟಿದಂ ಉತ್ಸಾಹದೊಡನೆ ಅಂಗೀಕರಿಸಿದೆವು ಪರಂತು ನಮ್ಮ ಕಾರ್ಯಬಾಹುಳ್ಯದಿಂ ಪತ್ರಿಕಾಧಿಪತ್ಯಕ್ಕೆ ಪ್ರವರ್ತನಕ್ಕೆ ಅವಕಾಶವು ಕಡಿಮೆಯಾಗಿ ಅದು ಕುರಿತಂಗ ನಾವು ಮಾಡುವ ವಿಮರ್ಶೆ ಗ್ರಂಥಕರ್ತರು ಕ್ಷಮಿಸಬೇಕೆಂದು ನಂಬುತ್ತೇವೆ ಪ್ರಸಕ್ತ ಗ್ರಂಥವು, ನಮಗೆ ಬಾಲ್ಯದಿಂದ ಸುಪರಿಚಿತರಾಗಿರುವ ಇಂಗ್ಲಿಷಿನವರ ಪೂರ್ವ ವೃತ್ತಾಂತಗಳನ್ನು [illegible] ಮಹಾರಾಜ್ಞೀ ಯವರ ಮತ್ತು ಅವರ ಪೂರ್ವಿಕರಾದ ಪ್ರಸಿದ್ಧ [illegible] ಇಂಗ್ಲಿಷ್ ಅರಸರ ಭಾವಚಿತ್ರಗಳು ಸಹ ಗ್ರಂಥದೊಳಗಳಲ್ಲಿ ಸಂದರ್ಭಾನುಸಾರ ಸೇರಿಸಲ್ಪಟ್ಟಿರುತವೆ. ಸಾಮಾನ್ಯವಾಗಿ ಇಂಗ್ಲಿಷ್ ಜನರ ಹೆಸರುಗಳು ಶುದ್ಧ ಭಾಷಾಪರಿಚಯವಿಲ್ಲದವರಿಂದ ಅಪಭ್ರಂಶವಾಗಿ ವ್ಯವಹರಿಸಲ್ಪಡುವದು ಸ್ವಾಭಾವಿಕವಾದುದರಿಂದಲೂ, ಅಂತವರ ಹೆಸರುಗಳನ್ನು ಕನ್ನಡ ಅಕ್ಷರದಲ್ಲಿ ಬರೆಯುವಾಗ್ಯೆ ಅದನ್ನು [illegible]ವಿಸುವದು ಕೆಲವರಿಗೆ ಪ್ರಯಾಸಕರವಾಗಿರುವದರಿಂದಲೂ, ಉಭಯರಿಗೆ ಅನುಕೂಲಿಸುವಂತೆ ಮಧ್ಯಮಧ್ಯೆ ಅವರವರ ಹೆಸರುಗಳು ಇಂಗ್ಲಿಷ್ ಕನ್ನಡ ಭಾಷೆಗಳೆರಡರಲ್ಲಿಯೂ ಬರೆಯಲ್ಪಟ್ಟಿರುತವೆ ಇದಕ್ಕೆ ಅನುಬಂಧವಾಗಿ ೯ ವಿಷಯಗಳು ಸೇರಿಸಲ್ಪಟ್ಟಿರುತವೆ. ಅವುಗಳು ಯಾವವೆಂದರೆ,—ಮೊದಲನೆಯದು ಬ್ರಿಟಿಷ್ ರಾಜವಂಶಕ್ರಮವನ್ನು, ಎರಡನೆಯದು, ಸಂಯುಕ್ತರಾಜ್ಯಗಳ [illegible], ಮೂರನೆಯದು ವಿಶೇಷ ಸಂಬಂಧವಾದ ಮಹಾಸಭೆಯ ಪಾರ್ಲಿಮೆಂಟಿನ ಪ್ರಶ್ನೆಗಳನ್ನು, ನಾಲ್ಕನೆಯದು ಇಂಗ್ಲೆಂಡಿಗೆ ಹೋಗುವ ಮಾರ್ಗವನ್ನು, ಐದನೆಯದು ಯೂರೋಪ್ ಅಮೇರಿಕಾವಗೈರೆ ಖಂಡಗಳಲ್ಲಿರುವ ಪ್ರಧಾನ ಪಟ್ಟಣಗಳ ವಿಸ್ತೀರ್ಣ, ಪ್ರಜಾ ಸಂಖ್ಯೆ, ಅವು ಗವರ್ನ್‌ಮೆಂಟಿನವರಿಗೆ ಪ್ರಾಪ್ತವಾದ ವಿಧ ಮೊದಲಾದ ವಿವರಗಳನ್ನು, ಆರನೆಯದು ಯೂರೋಪ್ ಖಂಡಕ್ಕೆ ಸಂಬಂಧಿಸಿದ ಇತರ ಮುಖ್ಯವಿಷಯಗಳನ್ನೂ, ಏಳನೆಯದು ಇಂಗ್ಲಿಷ್ ಪ್ರಭುತ್ವಕ್ಕೆ ಸೇರಿದ ಮುಖ್ಯಾಧಿಕಾರಿಗಳ ಹೆಸರುಗಳು, ಅವರು ಅಧಿಕಾರಕ್ಕೆ ಬಂದ ಕಾಲ ವಗೈರೆ ತಪಸೀಲುಗಳನ್ನೂ, ಎಂಟನೆಯದು ಆಯಾ ಅರಸರ ಪ್ರಭುತ್ವಕಾಲವನ್ನೂ, ಒಂಬತ್ತನೆಯದು ಚರಿತ್ರ ಸಂಬಂಧಗಳಾದ ಮುಖ್ಯ ವಿಷಯಗಳು ನಡೆದ ಕಾಲವನ್ನು ಸಂಕ್ಷೇಪವಾಗಿ ಸೂಚಿಸುತಿವೆ ಪ್ರಾಥಮಿಕಾವಸ್ಥೆಯಲ್ಲಿ ಅನ್ಯದೇಶ ಸಂಬಂಧಜ್ಞಾನ ಲೇಶವೂ ಇಲ್ಲದೆ ಇರುವಂತಾ ಬಾಲಕರಿಗೆ ಈ ಗ್ರಂಥವು ಬಹಳ ಉಪಯುಕ್ತವಾಗಿಯೂ, ಅನೇಕ ವಿಷಯಗಳಂ ಸುಲಭವಾಗಿ ಬೋಧಿಸತಕ್ಕದ್ದಾಗಿಯೂ, ಅವರ ಗ್ರಹಿಸಿ ಮಾಡುವಕ್ಕೆ ತಕ್ಕಂತೆ ಸುಲಭಶೈಲಿಯುಳ್ಳದ್ದಾಗಿಯೂ ಇರುತದೆ. ಇದನ್ನು ಮೈಸೂರು ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಪಠ್ಯ ಗ್ರಂಥವಾಗಿಟ್ಟರೆ ಬಾಲಕರಿಗೆ ಅನ್ಯದೇಶ ಚರಿತ್ರ ಸಂಬಂಧವಾದ ಜ್ಞಾನವು ಜನಿಸಿ ಸ್ವದೇಶಾನ್ಯದೇಶೀಯರ ಭೂತವರ್ತಮಾನ ಸ್ಥಿತಿಗಳನ್ನವರು ಸ್ವತಃ ತಿಳಿದುಕೊಂಡು ಅವರಿಬ್ಬರ ತಾರತಮ್ಯವನ್ನರಿಯಲಿಕ್ಕೂ, [illegible] ಉತ್ತರೋತ್ತರ ತಮ್ಮ ವೃತ್ತಿಯನ್ನು [illegible]. ಮುಂದೆ ಅವರು ಇಂಗ್ಲಿಷ್ [illegible] ಚಾರಿತ್ರ [illegible] ವ್ಯಾಸಂಗ [illegible] ಸಾಮಾನ್ಯವಾಗಿ ಈ ಚರಿತ್ರವು [illegible] ವಿದ್ಯಾಭ್ಯಾಸದ [illegible] ಗ್ರಂಥ [illegible] ವರ್ತಮಾನ ಪತ್ರವನ್ನು ಉಚಿತರೀತಿಯಿಂ ಪುರಸ್ಕರಿಸಲ್ಪಟ್ಟ ದೇಶಾನುಗುಣವಾದ ಪ್ರಯೋಜನವು ಬಾಲರಿಗೆ ಸಿದ್ಧಿಸುವದರಮೂಲಕ ಅನ್ಯರಿಗೂ ಇಂತಾ ವಿಷಯಗಳಲ್ಲಿ ಅಪ್ರೇರಿತ ಪ್ರವೃತ್ತ್ಯುತ್ಸಾಹಗಳುಂಟಾಗಬೇಕೆಂದು ಕೋರುತ್ತೇವೆ

## Occasional Notes.
## ನೈಮಿತ್ತಿಕ ವಿಷಯನ್ಯಾಸ

ಈಚೆಗೆ ಕಾಲಗತರಾದ ಮುಂಬೈ ಹೈಕೋರ್ಟಿನ ಜಡ್ಜಿಯವರಾದ ಜಸ್ಟೀಸ್ ತೆಲಾಂಗರವರ ಜ್ಞಾಪಕಾರ್ಥವಾಗಿ [illegible] ಉಚಿತ [illegible] ನಿರ್ವಹಿಸುವಕ್ಕಾಗಿ ಮುಂಬೈ ಪಟ್ಟಣನಿವಾಸಿಗಳ ಸಭೆಯೊಂದನ್ನು ಶೀಘ್ರದಲ್ಲಿ ಕೂಡಬೇಕೆಂದು ಪ್ರಮುಖರಾದವರನೇಕರು ಮುಂಬೈ ಷರೀಫರವರನ್ನು ಪ್ರಾರ್ಥಿಸಿಕೊಂಡಿದ್ದಾರೆಂದು ತಿಳಿಯಬರುತಿದೆ

ಬ್ರಿಟಿಷ್ ಗವರ್ನ್‌ಮೆಂಟಿನವರ ಪರವೆ ಪ್ರತಿನಿಧಿಯಾಗಿ ಕಾಬೂಲಿಗೆ ಹೋಗತಕ್ಕ ಸರ್ ಡ್ಯೂರಾಂಡ್ ರವರಿಗೆ, ಚಾಮನ್ ಎಂಬ ಪ್ರದೇಶದಿಂದ ಕಂದಹಾರ್ ಪಟ್ಟಣದವರೆಗೆ ರೈಲುರಸ್ತೆಯನ್ನು ಹಾಕಬೇಕಾದ ವಿಷಯದಲ್ಲಿ ಅಮೀರರವರ ಅನುಮತಿಯನ್ನು ಪಡೆಯಬೇಕೆಂಬದು ಒಂದು ಉದ್ದೇಶವಾಗಿರುವಂತೆ ಕೇಳುತ್ತೇವೆ ಈ ಭಾಗದಲ್ಲಿ ಬಹುಶಃ ಅಮೀರರವರು ಅನುಮತಿಸಲಿಕ್ಕೆ ಬಹಳ ಆಕ್ಷೇಪಿಸಬಹುದೆಂದು ತೋರುತಿದೆ. ಯಾತಕ್ಕೆಂದರೆ, ಪ್ರಸ್ತುತ ರಯಿಲ್ವೆಯು ಅವರ ರಾಜಕೀಯೋದ್ದೇಶಕ್ಕನುಕೂಲವಾದದ್ದಾಗಿರುವದರಿಂದ ಆಲೋಚಿಸಬೇಕಾಗಿರುತಿದೆ

ಬರುವ ತಿಂಗಳ ೭ ನೇ ತಾರೀಖಿನ ದಿನ, ಈಗ ಹೊಸದಾಗಿ ನಿಯಮಿಸಲ್ಪಟ್ಟ ಇಂಡ್ಯದೇಶದ ವೈಸ್‌ರಾಯ್‌ಯವರಾದ ಜನರಲ್ ಸರ್ ಹೆನ್ರಿ ನಾರ್ಮನ್ ಯವರು ಬ್ರಿಸ್ಬೇನ್ ಪಟ್ಟಣದಿಂದ ಇಂಗ್ಲೆಂಡಿಗೆ ಪ್ರಯಾಣವಾಗುವರೆಂದು ಮಾಹೇ [illegible] ೧೩ ನೇ ತಾರೀಖಿನಲ್ಲಿ ಆ ಪಟ್ಟಣದಿಂದ ಬಂದ ತಂತಿ ವೃತ್ತಾಂತದ ದೆಸೆಯಿಂದ ತಿಳಿಯಬರುತಿದೆ. ಇವರು ಬರುವ ಡಿಸಂಬರ್ ತಿಂಗಳ ಅಂತ್ಯಭಾಗದಲ್ಲಿ ಈ ದೇಶಕ್ಕೆ ಬಂದು ತಮ್ಮ ಕೆಲಸದ ಚಾರ್ಜನ್ನು ತೆಗೆದುಕೊಳ್ಳಬಹುದೆಂದು ನಿರೀಕ್ಷಿಸಲ್ಪಟ್ಟಿದೆ.

ಗತಿಸಿದ ನಲವತ್ತು ವರುಷಗಳ ಕಾಲದಲ್ಲಿ ಹಿಂದುಸ್ಥಾನದಿಂದ ಕೂಲಿಯವರ ಕ್ರಯವನ್ನ ಹಂಗಾರವು ಅಮೇರಿಕಾ ಖಂಡಕ್ಕೆ ಸೇರಿದ ಯುನೈಟೆಡ್ ಸ್ಟೇಟ್ಸ್ ಯೆಂಬ ಸಂಯುಕ್ತ ರಾಜ್ಯಗಳಿಂದ ಯೂರೋಪ್ ಖಂಡಕ್ಕೆ ರಫ್ತು ಮಾಡಲ್ಪಟ್ಟಿರುತಿದೆ ಪರಂತು ಅದು ಯಾವ ವಿಧದಲ್ಲಿಯೂ ಇದುವರೆಗೆ ವಾಪಸು ಬರಲಿಲ್ಲವೆಂದು ಒಂದಾನೊಂದು ಅಮೇರಿಕಾ ದೇಶದ ಪತ್ರಿಕೆ ತಿಳಸುತಿದೆ [illegible] ಯೂರೋಪಿಯನ್ನರುಗಳಿಗಿರುವ ಬುದ್ಧಿ [illegible] ಇತರ [illegible] ಜನಾಂಗದವರಿಗೂ ಉಂಟಾಗಲಿ.

---

ಯೂರೋಪ್ [illegible] ತುರ್ಕಿ ರಾಜ್ಯಕ್ಕೆ, ಏಷ್ಯಾ ಖಂಡಕ್ಕೆ ಸೇರಿದ ಏಷ್ಯಾ ಮೈನರ್ [illegible] ಸಂಬಂಧ ವು [illegible] ಉಪ್ಪಿನ ವ್ಯಾಪಾರ [illegible] ಒಂದು ದೊಡ್ಡ [illegible] ಆರೋ ಚಕ್ರ ಯು, [illegible] ಇಂಗ್ಲಿಷ್ ಪತ್ರಿಕೆ [illegible] ಅವರ [illegible] ಕಾಣಬರುತಿದೆ.

---

[illegible] ಯಾಗಿ [illegible] ಪತ್ರಿಕೆಗಳು [illegible] ಅವರ [illegible] ಸ್ಥಿತಿಯು [illegible] ಮಾಡಲ್ಪಟ್ಟ ಅನೇಕ ಕಾರ್ಯಗಳಲ್ಲಿ ಒಂದೆ [illegible] ಪತ್ರಿಕೆ [illegible] ಪ್ರಕಟಿಸುತ್ತೇವೆ [illegible] ಗವರ್ನರ್ [illegible] ಪ್ರಸಿದ್ಧರಾದ [illegible] ರು, [illegible] ಸಂಬಂಧಗಳ [illegible] ಗೌರವಿಸಲ್ಪಡುತಲಿದ್ದರು [illegible] ಸಲಹೆಗಳು ಶ್ಲಾಘ್ಯಗಳಾಗಿಯೂ ಪ್ರಯೋಜನಕರಗಳಾಗಿಯೂ ಇದ್ದಂತೆ ಅನ್ಯರದ್ದು ಇರಲಿಲ್ಲವು. [illegible] ಯುಗಳ ಪ್ರಭುತ್ವದಲ್ಲಿದ್ದು [illegible] ಸನ್ಮಾನಿತರಾಗಿರುತ್ತಾರೆ, ಎಂಬದು.

---

## LOCAL AND PROVINCIAL NEWS
### ಒಳದೇಶದ ಮತ್ತು ತಾಲ್ಲೂಕ್ ವರ್ತಮಾನಗಳು

ಈ ಸಂಸ್ಥಾನದ ದಿವಾನರವರಾದ ಸರ್. ಕೆ. ಶೇಷಾದ್ರಿ ಅಯ್ಯರವರು ಗತ ಗುರುವಾರದ ದಿನ ಬೆಳಗ್ಗೆ ಮದರಾಸಿನಿಂದ ಈ ಪ್ಟಾರಿಗೆ ಬಂದಿದ್ದಾರೆ. ಇವರು ಮದ್ರಾಸಿನಲ್ಲಿ ನಡೆಯುವ ಸಂಭ್ರಮ ಕಂಡುಬರುತಿದೆಯಲ್ಲದೆ, ಇನ್ನೂ ಕೆಲವು ಕಾಲದ ವರಿಗೆ ತಮ್ಮ ಕೆಲಸದ ಚಾರ್ಜನ್ನು ತೆಗದುಕೊಳ್ಳುವಂತೆ ತೋರಲಿಲ್ಲವು.

ಈ ವಾರದಲ್ಲಿ ಕಾಲಸ್ಥಿತಿಯು ಸ್ವಲ್ಪ ಹೆಚ್ಚು ಕಡಮೆಯಾಗಿ ಗತವಾರದೊಳಗಿದ್ದಂತೆಯೇ ಇದೆ ಯಾನಾಗಲಾದರು ರಾತ್ರಿಕಾಲದಲ್ಲಿ ಯಥೋಚಿತ ಮಳೆಯಾಗುತಿದೆ ಪರಂತು ಅದು ಬೆಂಗಳೂರ್ ಷಹರ್ ನಿವಾಸಿಗಳಿಗುಂಟಾಗಿರುವ ಸಲಿಲ ತುರತ್ವವು ನೀಗುವಂತಾದ್ದಾಗಿಲ್ಲವು ವರ್ಷವು ಕೂ ವಿನರ್ಲ್ಲೇ ಕೆಲವು ಬೀದಿಗಳಲ್ಲಿರುವವರು ಪ್ರತಿನಿತ್ಯವೂ ಗಂಗಾಜಲ [illegible] ದೊರಕುವಂತೆ ಏರ್ಪಟ್ಟಿರುತಿದೆ.

---

ಇಂಡ್ಯದೇಶದ ವೈಸ್‌ರಾಯಿ ವ ಗವರ್ನರ್ ಜನರಲ್ಲರಾದ ಘನವಸ್ತ್ರದ ಮಾರ್ಕ್ವಿಸ್ ಆಪ್ ಲ್ಯಾನ್ಸ್‌ಡೌನ್ ಯವರು ಮೈಸೂರು ಗವರ್ನಮೆಂಟಿಗೆ ನೂರು ರೂಪಾಯಿಗಳನ್ನು ಕಳುಹಿಸಿ ಕಳೆದ [illegible] ತಿಂಗಳಲ್ಲಿ ಈ ರಾಜ್ಯಕ್ಕೆ ದಯಮಾಡಿದ್ದ ಸಂದರ್ಭದೊಳು ಹಗ್ಗದ ಆನೆ ಖೆಡ್ಡಾ ದಲ್ಲಿ [illegible] ಸಹಾಯಕರಾಗಿದ್ದಂತಹ ಪ್ರಸಿದ್ಧರಾದ ಶಿಕಾರಿದಾರರೆಲ್ಲರಿಗೂ [illegible] ಇನಾಂ ಕೊಡತಕ್ಕದ್ದೆಂದು ಅಜ್ಞಾಪಿಸಿರುತ್ತಾರೆಂದು [illegible] ಪತ್ರಿಕೆಯು ತಿಳಸುತಿದೆ.

---

[illegible] ಬೀದಿಯಲ್ಲಿರುವ [illegible] ಮನೆಯಲ್ಲಿ ಕಳೆದ ಗುರುವಾರ ರಾತ್ರಿ ೧೧—೧೨ ಘಂಟೆಗಳ [illegible] ೩,೦೦೦ ರೂ [illegible] ಗಳನ್ನು ಕದ್ದು [illegible] ಗಿದ್ದರು, [illegible] ನಿದ್ರೆಯಿಂದ [illegible] ಕೊಟ್ಟದ್ದು [illegible] ಕೆಳವೆವು.

---

ಮೊದಲು ಕೋಲಾರದಲ್ಲಿ ಡೆಪ್ಯುಟಿ ಕಮಿಷನರಾಗಿದ್ದ ಮ|| ರಾ|| ಸುಬ್ಬರಾಯರು ಧರ್ಮಾರ್ಥವಾಗಿ ಲಕ್ಷ ರೂಪಾಯಿಗಳನ್ನು ಕೊಟ್ಟರೆಂಬ ವರ್ತಮಾನವನ್ನು ಕೇಳಿ ಬಹಳವಾಗಿ ಸಂತೋಷಿಸುತ್ತೇವೆ ಇವರು ಇಷ್ಟು ದ್ರವ್ಯವನ್ನು ಸಂಸ್ಕೃತ ವಿದ್ಯಾಭಿವೃದ್ಧಿಗಾಗಿ ವಿನಿಯೋಗಿಸಿ ಪ್ರೋತ್ಸಾಹ ಪಡಿಸುವದಕ್ಕಾಗಿ ಕೊಟ್ಟದ್ದು ಬಹು ಶ್ಲಾಘನೀಯವಾದದ್ದಾಗಿದೆ [illegible] ಸಾವಿರ ರೂಪಾಯಿಗಳಿಗೆ ವರ್ಷಕ್ಕೆ ೬೦೦ ರೂಪಾಯಿ [illegible] ಬರುವದಾದರೆ [illegible] ವಿದ್ಯಾರ್ಥಿಗಳಿಗೆ [illegible] ೧೦ ರೂಪಾಯಿಗಳ ಪ್ರಕಾರ ವೇತನವನ್ನು ಕೊಡಲು ಸಾಧ್ಯವಾಗುವದು ಈ ವೇತನವನ್ನು ಪಡೆಯತಕ್ಕವರು ಸಂಸ್ಕೃತವನ್ನು ತಿಳದವರಾಗಿರದೆ [illegible] ಪರೀಕ್ಷೆಗೆ ಬೇಕಾಗಿ [illegible] ಇಂಗ್ಲೀಷನ್ನು [illegible] ಮ|| ಸುಬ್ಬರಾಯರವರ ಉದ್ದೇಶವು ಬಹು ಯೋಗ್ಯವಾದದ್ದೆಂದು ನಮಗೆ ತೋರುತದೆ

---

ಈ ಪತ್ರಿಕೆಯ [illegible] ಪ್ರಕಟಿಸಿರುವ ದಕ್ಷಿಣ ಮಹಾರಾಷ್ಟ್ರ ರೈಲ್ವೇ ಕಂಪನಿಯವರ ನೋಟಿಸು ಪ್ರಕಾರ ನಿನ್ನೆಯ ದಿನದ ಮೊದಲು, ಈ ಪ್ಟಾರಿಂದ ಹಿಂದೂಪುರದ ವರಿಗೆ ಸೀದಾ ಗಾಡಿಗಳು ಹೋಗಿ ಬರುವದಕ್ಕೆ ಪ್ರಾರಂಭವಾಯಿತು. ಈಗ್ಯೆ ಕೆಲವು ದಿವಸಗಳ ಹಿಂದೆ ಶ್ರೀಮನ್ಮಹಾರಾಜರವರು ಈ ಮಾರ್ಗದಲ್ಲಿ ಪ್ರಯಾಣ ಮಾಡಿದ್ದರಿಂದ ಅದೇ ಸಾ [illegible] ನಿನ್ನೆಯ ದಿನ ವಿಶೇಷ ಸಂಭ್ರಮಗಳೇನೂ ಇಲ್ಲದೆ ಸಾಮಾನ್ಯ ರೀತಿಯಲ್ಲಿಯೇ ಟ್ರೈನು ಬಿಡಲ್ಪಟ್ಟವು. ತತ್ಕಾಲದಲ್ಲಿ ಮಾಡಲ್ಪಟ್ಟಿರುವ ಗಾಡಿಗಳ ಸಂಚಾರ ಕಾಲ ವ್ಯವಸ್ಥೆಯನ್ನನುಸರಿಸಿ ಈ ಪ್ಟಾರಿಂದ ಬೆಳಗ್ಗೆ ೮ ಘಂಟೆಗೆ ಸರಿಯಾಗಿ ಒಂದು ಗೂಡ್ಸ್ ಟ್ರೈನೂ, ಮಧ್ಯಾಹ್ನ ೧ ಘಂಟೆ ೨೫ ನಿಮಿಷಗಳಿಗೆ ಒಂದು ಮಿಕ್ಸೆಡ್ ಟ್ರೈನೂ ಗುಂತಕಲ್ಲಿಗೆ ಹೋಗುವವು. ಗುಂತಕಲ್ಲಿನಿಂದ ಸೀದಾ ಬರತಕ್ಕ ಗಾಡಿಯು ಇಲ್ಲಿಗೆ ಮಧ್ಯಾಹ್ನ ೧ ಘಂಟೆ ೫೭ ನಿಮಿಷಗಳಿಗೆ ಬರುವದಲ್ಲದೆ ಇಲ್ಲಿಂದ ಮಧ್ಯಾಹ್ನ ಹೊರಡುವ ಮಿಕ್ಸೆಡ್ ಟ್ರೈನು ಬೆಳಗ್ಗೆ ೬ ಘಂಟೆಗೆ ಗುಂತಕಲ್ ಯೆಂಬಲ್ಲಿಗೆ ಸೇರುವದು

---

ಕಳೆದ ೮ ನೇ ಶುಕ್ರವಾರ ಮಧ್ಯಾಹ್ನ ಶ್ರೀ ಮರ್ಮಹಾರಾಣೀಯವರ ಬಾಲಿಕಾ ಪಾಠಶಾಲೆಯಲ್ಲಿ [illegible] ವಂದಿ ಹುಡುಗಿಯರು ಜವಾನನಿಗೆ ತಿಳಿಸದೆ ಎರಡು ಘಂಟೆಯ ಹೊತ್ತಿಗೆ ತಮ್ಮ ಮನೆಯನ್ನು ಬಿಟ್ಟು ಪಾಠಶಾಲೆಗೆ ಹೋಗಿ ಅಲ್ಲಿ "ಕಣ್ಣುಮುಚ್ಚಾಲೆ" ಆಟವನ್ನು ಆಡಲಾರಂಭಿಸಿ ಸ್ವಲ್ಪ ಹೊತ್ತು ಆಡುತ್ತಿದ್ದು ತಮ್ಮ ಪೈಕಿ ಸುಮಾರು ೮—೧೦ ವಯಸ್ಸಿನ ಒಬ್ಬ ಬಾಲಕಿಯನ್ನು ಒಂದು ಪೆಟ್ಟಿಗೆಯೊಳಗೆ ಬಚ್ಚಿಟ್ಟು ಆಡುತ್ತಿದ್ದರು ಅಷ್ಟರಲ್ಲೇ ಸ್ವಲ್ಪ ಹೊತ್ತು ಬಂದದ್ದರಿಂದ ಹುಡುಗಿಯರೆಲ್ಲರೂ ತಮ್ಮ ತಮ್ಮ ಕ್ಲಾಸಿಗೆ ಹೊರಟುಹೋದರು. ಒಬ್ಬ ಉಪಾಧ್ಯಾಯನಿಯು ಅದೇ ಪೆಟ್ಟಿಗೆಯ ಮೇಲೆ ಕೂತುಕೊಂಡು ಪಾಠಹೇಳಲು ಆರಂಭಿಸಿದಾಗ ಪೆಟ್ಟಿಗೆಯೊಳಗೆ ಏನೋ ಬಡಿಯುವ ಶಬ್ದವು ಕೇಳಬಂತು. ಆ ಕೂಡ್ಲೇ ಹಾವು ಇರಬಹುದೆಂದು ಜವಾನನ್ನು ಕರೆದು ಬಾಗಲನ್ನು ತೆಗೆಸಿ ಎಲ್ಲರೂ [illegible] ಓಡಿಹೋದರು ಆಗ [illegible] ನಿರ್ಬಲವಾಯುವಿಲ್ಲದೆ [illegible] ಅವಳ ಮುಖ, ಹುಬ್ಬು, ತುಟಿ, ಮೂಗ, ಕೆನ್ನೆ ಮುಂತಾದವು ಊದಿ ವಿಕಾರವಾಗಿ ಹೋಗಿದ್ದವು [illegible] ಹಾಗೇ ಬಿಟ್ಟಿದ್ದಲ್ಲಿ ಅವಳು ಸತ್ತುಹೋಗುತ್ತಿರಲಿಲ್ಲವೇ? ಆಗ ಈ ವರ್ತಮಾನವೆಲ್ಲಾ [illegible] ಮಿಸ್ ಓ ಕೀಫ್ ಯವರಿಗೆ [illegible] ಅವರು ಪ್ರಾಣ ಬಿಡುವ ಹುಡುಗಿಯನ್ನು ಎತ್ತಿಕೊಂಡು [illegible] ತಿರುಗಿಸಿ ೧೦—೧೨ ನಿಮಿಷಗಳಾದ ಮೇಲೆ ಆ ಹುಡುಗಿಗೆ ಪ್ರಜ್ಞೆ ಬಂದಾಗ, ಎಲ್ಲಾ ವಿಚಾರಣೆಯಾಯಿತು ಬಾಲಿಕಿಯು ಜೀವದಿಂದ [illegible] —ವೃ ಪ

---

ಆಗ್ಯೆ ಮೂರು ತಿಂಗಳ ಕಾಲವಾಗಿ ಪ್ರಿವಿಲೇಜ್ ರಜಾ ತೆಗದುಕೊಂಡು ಮದರಾಸ್ [illegible] ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮ|| [illegible] ಗಸ್ವಾಮಿಯ್ಯಂಗಾರ್ಯವರು ಕಳೆದ ಗುರುವಾರದ ದಿನ ಬೆಳಗ್ಗೆ ಮದ್ರಾಸಿಗೆ ಒಂದು ವಾರದ ನಂತರ ಮೈಸೂರಿಗೆ ತಮ್ಮ ಕೆಲಸದ ಚಾರ್ಜನ್ನು ತೆಗದುಕೊಳ್ಳುವದಕ್ಕಾಗಿ ಹೊರಟು ಹೋದರೆಂದು ಕೇಳುತ್ತೇವೆ. ಇವರು ಬೆಂಗಳೂರಿಗೆ ವರ್ಗಮಾಡಿಸಿಕೊಳ್ಳುವ ವಿಷಯದಲ್ಲಿ ಸಾಧಕಗಳಾದ ಸಕಲ ಪ್ರಯತ್ನಗಳೂ ವ್ಯರ್ಥವಾಗಲಿರುವಂತೆಯೂ, ಹ [illegible] ದಿವಾನರವರ ಯಾವದೊಂದ ರೊಂದು ಸೆಕ್ರೆಟರಿ ಅಧಿಕಾರವಂ ಪಡೆದು ಅವರಿಲ್ಲಿಗೆ ಬರುವರೆಂಬದಾಗಿಯೂ ಒಳದೇಶದ ಈವ್ನಿಂಗ್ ಮಯಿಲ್ ಪತ್ರಿಕೆ ತಿಳಸುತಿದೆ. ಇದು ನಮ್ಮ ನಂಬಿಕೆಗೆ ಸ್ವಲ್ಪವೂ ಅರ್ಹವಾಗಿ ಕಾಣಿಸಲಿಲ್ಲವು ಏತಕ್ಕೆಂದರೆ—ಇಂತಾ ನಿರಾಧಾರವಾದ ಪ್ರವಾದವು ಮ|| ರಂಗಸ್ವಾಮಯ್ಯಂಗಾರ್ಯವರು ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಕೆಲಸದ ಚಾರ್ಜನ್ನು ತೆಗದುಕೊಂಡ ಕಾಲದ ಮೊದಲು ಇದುವರೆಗೆ ಎಷ್ಟೋ ಆವರ್ತಿ ತಲೆದೋರಿ ಸ್ವತಃವಿದ ಉಪಶಮಿಸಿ ಹೋಗಿರುತಿದೆ ಆದರೆ ಎಲ್ಲಿನ ಡೆಪ್ಯುಟಿ ಕಮಿಷನರವರಿಗೂ ಕೆಲವರು ಮುನ್ಸಿಪಲ್ ಕಮಿಷನರುಗಳಿಗೂ ಈ ಮಧ್ಯೆ [illegible] ಆಗಿದ್ದ ಅನ್ಯೋನ್ಯ ಕಲಹಕಾಲದಲ್ಲಿ ಮ|| ಸುಜಾಯತ್ ಅಲ್ಲೀಖಾನರವರು ಚಿತ್ರದುರ್ಗಕ್ಕೆ ಮ|| ರಂಗಸ್ವಾಮಯ್ಯಂಗಾರ್ಯವರು ಈ ಪ್ಟಾರಿಗೂ ವರ್ಗ ಮಾಡಲ್ಪಡುವರೆಂಬದಾಗಿ ಒಂದು ಪ್ರವಾದ ಹುಟ್ಟಿತ್ತು ಆಗಲಿನ್ನು ಸಿಕೆಂಟರು ಮುನ್ಸಿಪಲ್ ಕಮಿಷನರುಗಳೂ ಡೆಪ್ಯುಟಿ ಕಮಿಷನರವರ ಅನ್ಯೋನ್ಯ ಭಾವದಿಂ ಪರಸ್ಪರ ಸಹಾಯಕರಾಗಿರುವದರಿಂದ ಸದರೀ ಪ್ರವಾದಕ್ಕೆ ಸಹ ಅವಕಾಶವು ಕಡಮೆಯಾದಂತೆ ಕಾಣುತಿದೆ ಆದುದರಿಂದ ಇಂತಾ ಸಂದರ್ಭಗಳಲ್ಲಿ ಕ್ರಮವಾಗಿ ಯಾವದಾದರೊಂದು ನಡೆಯುವರೆಗೂ ಹೀಗೇಯೋ ಯೆಂದು ನಿಷ್ಕರ್ಷಿಸಿ ಹೇಳುವದಸಾಧ್ಯವು.

---

## THE MYSORE GAZETTE.
### ಮೈಸೂರು ಗೆಜೆಟ್

ಶ್ರೀಮನ್ಮಹಾರಾಜ ಸಾಹೇಬರ್ ಬಹದೂರವರ ಸರ್ಕಾರದಿಂದ ಕೊಡೋಣವಾದ ಅಸ್ತಿಹಾರನಾಮೆಗಳು,

ನಂ|| ೮೬೫—೧ ೧೧೩೯, ತಾ|| ೫ನೇ ಸೆಪ್ಟೆಂಬರ್ ೧೮೯೩ —ಮೈಸೂರು ಗವರ್ನಮೆಂಟ್ ಕಂಟ್ರೋಲರ್ ಮ|| ಆರ್ ಸುಬ್ರಾಯ ಅಯ್ಯರ್ ಯವರು, ೧೮೯೩ ನೇ ಇಸವಿ ಆಗಸ್ಟ್ ೯ ನೇ ತಾರೀಖಿನ [illegible] ನೇ ನಂ|| ಎಸ್ಟಾಬ್ಲಿಷ್ಮೆಂಟ್ ಮೂಲಕ ಅವರಿಗೆ ಕೊಡಲ್ಪಟ್ಟ ೧೦ ದಿನಗಳ ಕ್ಯಾಜುಯಲ್ ರಜಾವನ್ನು ಅದೇ ತಿಂಗಳ ೧೮ ನೇ ತಾರೀಖ್ ಮಧ್ಯಾಹ್ನತ್ತರ್ದಿಂದ ಮೊದಲು ಉಪಯೋಗಿಸಿಕೊಂಡು ಅದೇ ತಿಂಗಳ ೨೨ ನೇ ತಾರೀಖಿನ ಮಧ್ಯಾಹ್ನತ್ತರ್ದ ಕೆಲಸಕ್ಕೆ ವಾಪಸ್ ಬಂದರಾಗಿ, ಸದರೀ ರಜಾ ಪೈಕಿ ಉಪಯೋಗಿಸಿಕೊಳ್ಳದ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿದೆ.

ನಂ|| ೮೮೮೩, ೦ ೯ ೩೩—೯೩ ೭ನೇ ಸೆಪ್ಟೆಂಬರ್ —ಮೈಸೂರು ಸರ್ವಿಸ್ ರೆಗ್ಯುಲೇಷನ್ಗಳ ೧೩೨ ನೇ ಆರ್ಟಿಕಲ್ ಅನುಸರಿಸಿ, ಚಿಕ್ಕಮಗಳೂರು ತಾಲ್ಲೂಕ್ ಅಮಲ್ದಾರರು ಪಿ. ಶ್ರೀನಿವಾಸರಾಯರು ಈ ತಿಂಗಳ ೬ ನೇ ತಾರೀಖ್ ಮೊದಲು ಆರಂಭಿಸಿ ಅವರನ್ನು ಉಪಯೋಗಿಸಿಕೊಳ್ಳಬಹುದಾದ ತಾರೀಖ್ ಮೊದಲು ೧೦ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ|| ೮೩೬೫—೬ ೯ ೧೬೩—೯೨, ತಾ|| ೮ ನೇ ಸೆಪ್ಟೆಂಬರ್ ೯೩ —ಪ್ಲೀಡರ್ ಮ|| ಗುಂಡಪ್ಪನವರನ್ನು ಕಡೂರು ಡಿಸ್ಟ್ರಿಕ್ಟ್ ಬೋರ್ಡಿನವರು [illegible] ತಮ್ಮ ಕಡೆ ಪ್ರತಿನಿಧಿಯಾಗಿ [illegible] ರಾಗಿ, ಸದರೀ ಯವರು ಕಡೂರು ಡಿಸ್ಟ್ರಿಕ್ಟ್ ಬೋರ್ಡ್‌ನಲ್ಲಿ ಒಬ್ಬ ಮೆಂಬರಾಗಿ ಇದರಿಂದ ಮೊಕರರ್ಮಾಡಲ್ಪಟ್ಟಿರುತ್ತಾರೆ.

ನಂ|| ೮೮೪೨ — ೦. ೯. ೩೨—೯೩ — ಮೈಸೂರು ಸರ್ವಿಸ್ ರೆಗ್ಯುಲೇಷನ್ಗಳ ೧೮೪ ನೇ ಆರ್ಟಿಕಲ್ ಅನುಸರಿಸಿ, ನೊಳಂಬರು ತಾಲ್ಲೂಕ್ ಅಮಲ್ದಾರ್ ಗೋವಿಂದಪ್ಪನವರಿಗೆ ಅವರು ಉಪಯೋಗಿಸಿಕೊಳ್ಳಬಹುದಾದ ತಾರೀಖ್ ಮೊದಲು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ

೨ ಸದರೀ ತಾಲ್ಲೂಕು ಶಿರಸ್ತೇದಾರರು ಶ್ರೀಕಂಠಯ್ಯನವರು, ಗೋವಿಂದಪ್ಪನವರು ರಜಾ ಮೇಲೆ ಗೈರುಹಾಜರಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ತಾಲ್ಲೂಕು ಇನ್‌ಚಾರ್ಜನಲ್ಲಿರತಕ್ಕದ್ದು; ಮತ್ತು ತಾಲ್ಲೂಕ್ ಇನ್‌ಚಾರ್ಜನಲ್ಲಿರುವ ಕಾಲದೊಳು ತಾಲ್ಲೂಕು ಸರಹದ್ದಿನೊಳಗೆ ಚಲಾಯಿಸತಕ್ಕ ಬಗ್ಗೆ ಇದರಿಂದ ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

---

### ವಿದ್ಯಾಭ್ಯಾಸದ ಇಲಾಖಾ.

೩ ನಂ|| ೧೪, ತಾ, ೭ನೇ ಸೆಪ್ಟೆಂಬರ್೧೮೯೩. ಮಿಸ್ಟ್ರೆಸ್ ಪೀರ್ ಎಂಬವರನ್ನು ಮೈಸೂರು ಬಾಲಿಕಾ ಪಾಠಶಾಲೆಯ ಮ್ಯಾನೇಜಿಂಗ್ ಕಮಿಟಿಯಲ್ಲಿ ಒಬ್ಬ ಮೆಂಬರಾಗಿ ಗವರ್ನಮೆಂಟಿನವರು ಮೊಕರರ್ಮಾಡಿರುತ್ತಾರೆ

---

### ಮುಜರಾಯಿ ಇಲಾಖಾ

ನಂ' ೩೯೬೬—೭೮೫೩, ತಾ|| ೬ ನೇ ಸೆಪ್ಟೆಂಬರ್ ೧೮೯೩ —ಕೋಲಾರ ಡಿವಿಜನ್ ಅಸಿಸ್ಟೆಂಟ್ ಇಂಜಿನಿಯರ್ ಮ|| ಕೆ. ಪ್ರಹ್ಲಾದ ರಾಯರವರು ಅವರು ಹೊರಡುವ ಕಾಲದ ಮೊದಲು ೩ ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

## SUMMARY OF NEWS
### ವೃತ್ತಾಂತ ಸಂಗ್ರಹವು.

ಅಜಮಗಡ ದೊಳಗಾದ ದಂಗೆಯ ಸಂಬಂಧವಿಂದ ವಾಯುವ್ಯಪ್ರಾಂತದ ಸರ್ಕಾರ್ ಠರಾವ್ ಪ್ರಸಿದ್ಧವಾಗಿರುತ್ತದೆ. ಈ ದಂಗೆಯು ಬರೇ ಗೋರಕ್ಷಣ ಸಭೆಯ ದೆಸೆಯಿಂದಲೇ ಉದ್ಭವಿಸಿರುತ್ತದೆಂದು ಸರ್ ಚಾರ್ಲ್ಸ್ ಕ್ರಾಸ್ಥ್ ವೇಟ್ ರವರು ಅಭಿಪ್ರಾಯ ಕೊಟ್ಟಿದ್ದಾರೆ.

ರಾಜಾಪುರದಲ್ಲಿ ಒಂದು ಕಡೆಯೊಳು ಪ್ರತಿ ವರುಷವೂ ಗಂಗೆಯು ಬರುತ್ತಲಿರುತ್ತದೆಯಷ್ಟೇ, ಈವರುಷವೂ ಬಂದಿತ್ತಂತೆ, ಆದರೆ ಕೆಲವು ಜನ ಮುಸಲ್ಮಾನರು ಬಲಾತ್ಕಾರದಿಂದ ಅದನ್ನು ಮುಟ್ಟಲಿಕ್ಕೆ ಹೋದಕೂಡಲೆ ಅಗುಗುಪ್ತವಾಯಿತೆಂಬ ಬಹೇಳಾತ್ಕಾರ ದೇನರ ಮಹಿಮೆ ಬಹಳ ಅಗಾಧವಾಗಿದೆ.

ಮುಂಬೈಯಲ್ಲಿ ಹಿಂದೂ ಮುಸಲ್ಮಾನರ ದಂಗೆಯವಾರ್ತೆಯು ತಿಳಿದಿರುತ್ತದೆಯಷ್ಟೆ. ಆದರ ದಂಗೆಯು ಶಾಂತವಾದಾಗ್ಯೂ ಚಿಕ್ಕ ಬೀದಿಗಳಲ್ಲಿ ಮಾತ್ರ ಇನ್ನೂ ವರದಿವಸ ಲಾಠಿ ಕೊಯ್ಯಲ್ಪಟ್ಟಿತು, ನೋರವೂರುಗುಕೊಯ್ಯಲ್ಪಟ್ಟಿತು, ಯಾರು ಮುಖಾಸ್ಪರಾದರೆಂಬ ಹೃದಯಮಧ್ಯಾವಿಕ ಸಂಗತಿಗಳೇ ತಿಳಿಯಬರುತ್ತಿದೆ.

ಸದಾಶಿವ ಗಾಯಕವಾಡಿಯವರ ತಮ್ಮನಾದ ಗಣಪತಿರಾವ್ ಗಾಯಕವಾಡಿಯವರು ಬ್ಯಾರಿಸ್ಟರ್ ಪರೀಕ್ಷೆಗೆ ಕಲಿಯಲಿಕ್ಕೆ ಕಳೆದ ವರುಷ ಮೇ ತಿಂಗಳಲ್ಲಿ ವಿಲಾಯಿತಿಗೆ ಹೋಗಿದ್ದರು. ಇವರು ಈ ಪರೀಕ್ಷೆಯಲ್ಲಿ ಪ್ರಾಸಾಗಿ ಪ್ರವೃತ್ತಿಯ ಪ್ರವೃತ್ತಿಕ್ ಮಾಡಿ ಬಂದರೆಯವಾಗಳ ಹಿಂದ ಬರೋಡೆಗೆ ಸುರಕ್ಷಿತವಾಗಿ ಬಂದರು. ಇಂತವರು ಪರದೇಶಕ್ಕೆ ಹೋಗಿ ಟೊಳ್ಳುಪದವಿಗಳನ್ನು ದೊರಕಿಸಿಕೊಳ್ಳುವವರ ಬದಲಾಗಿ ಯಾವದಾದರು ಉದ್ಯೋಗವನ್ನು ಕಲಿತು ಬಂದು ಅಲ್ಲಿ ದೊಡ್ಡ ಕಾರ್ಖಾನೆಗಳನ್ನು ಸ್ಥಾಪಿಸಿದರ ತಮ್ಮ ದೇಶಕ್ಕೂ ಬಹಳ ಗ್ಗ ರಿಗೂ ಎಷ್ಟು ಹಿತಕರವಾಗಿದ್ದೀತು

ಪೂನೆಯಲ್ಲಿ ರೆವರೆಂಡ್ ರಮಾಬಾಯಿಯು ಸ್ಥಾಪಿಸಿದ ಕ್ರೈಸ್ತನ ಶಾರದಾ ಸದನವೆಂಬ ಕಪಟವೇಷದ ಸದನವು ಮುಗ್ಗಿ ಹೋದ್ದರಿಂದ ಅಲ್ಲಿನ ಜನರು ಅದರ ಬದಲಾಗಿ ಹಿಂದೂ ಶಾರದಾಸದನವೆಂಬ ಹೆಸರುಳ್ಳೊಂದು ಹೊಸ ಸದನವನ್ನು ಸ್ಥಾಪಿಸುವ ವಿಚಾರದಲ್ಲಿದಾರೆಂದು ತಿಳಿಯಬರುತ್ತದೆ. ಅಷ್ಟಾದರೆ ಸದನಗಳ ಅವಶ್ಯಕತೆಯು ಏನಿರಬಹುದೆಂಬುದರ ಕಲ್ಪನೆಯು ನಮಗಂತೂ ಬರುವುದಿಲ್ಲದು. ಅದರೂ ಕ್ರಿಸ್ತನ ಸದನಕ್ಕೆ ಚಿಕ್ಕ ಬಾಲಿಕೆಯರಕ್ಕಟ್ಟಿ ಧರ್ಮಭ್ರಷ್ಟರಾಗಿ ಮಾಡಿಸುವದ ಕ್ಕಿಂತಲೂ ಸ್ವಧರ್ಮದವರಿಂದ ಸ್ಥಾಪಿಸಲ್ಪಟ್ಟ ಸದನಕ್ಕೆ ಹಿಂದೂ ಹುಡುಗಿಯರನ್ನು ಕಳುಹಿಸುವದು ಯಾವ್ಯೋ ವಿಧದಲ್ಲಿ ಪ್ರಶಸ್ತವೆನ್ನಲಿಕ್ಕೆ ಅಡ್ಡಿ ಇಲ್ಲ. ಈ ಸಂಸ್ಥೆಯು ಸ್ಥಾಪಿತವಾದರೆ ಅದರ ಮೇಲ್ವಿಚಾರಕರಾದವರನ್ನು ನೇಮಿಸುವದರಲ್ಲಿ ಮಾತ್ರ ಅಲ್ಲಿನ ಮುಖಂಡರು ವಿಶೇಷ ಹುಷಾರ ಮಾಡ ಬೇಕಾದ್ದು ಅವಶ್ಯವಾಗಿದೆ. ಇಲ್ಲದಿದ್ದರೆ ಹುಡುಗಿಯರನ್ನು ಕೆರೆಯಿಂದ ತೆಗೆದು ಭಾವಿಯಲ್ಲಿ ಹಾಕಿದಂತಾಗುವದು.—ರಾಜಹಂಸ

ಪೊಸೋಲಿಯಕ್ಕೆ ಸೇರಿದ ಬಾಲ್ಟಾ ಪಟ್ಟಣದಲ್ಲಿ ಗಂಡಹೆಂಡತಿಯರು ಒಂದು ಹೋಟಲನ್ನು ಇಟ್ಟುಕೊಂಡಿದ್ದರು ಅವರಿದ್ದ ಒಬ್ಬ ಮಗನು ಚಿಕ್ಕವಯಸ್ಸಿನಲ್ಲಿಯೇ ಅಮೇರಿಕಾಕ್ಕೆ ಹೋಗಿ ಅಲ್ಲಿ ಹಣವನ್ನು ಸಂಪಾದಿಸಿಕೊಂಡು ಬಹುಕಾಲದ ಮೇಲೆ ಸ್ವಂತ ಊರಿಗೆ ಬಂದು ತನ್ನ ತಂದೆ ತಾಯಿಗೆ ತಿಳಿಸದೇನೇ ಅದೇ ಹೋಟಲಿನಲ್ಲಿ ಇಳಿದುಕೊಂಡಿದ್ದನು. ತಾಯಿ ಯಾದವಳು ಮಗನೆಂದು ಗುರ್ತಿಲ್ಲದೆ ಆವನಿಂದ ದಿನದಿನ ಹಣ ತೆಗೆದುಕೊಂಡು ಅವನಿಗೆ ಭೋಜನಾದ್ಯುಪಚಾರಗಳನ್ನು ಮಾಡುತ್ತಿದ್ದಳು. ಒಂದಾನೊಂದುದಿನ ಅವನ ಪೆಟ್ಟಿಗೆ ಕೋರಡಿಯಲ್ಲಿ ಬಹಳ ಹಣ ಇಟ್ಟಿರುವದನ್ನು ನೋಡಿ ಅವಳು ಅವನನ್ನು ಖ್ಯಾಗಿ ಮರೋ ಕೊಂದು ಆ ಹಣವನ್ನು ಅಪಹರಿಸಬೇಕೆಂದು ಉದ್ದೇಶಮಾಡಿಕೊಂಡು ಅವನು ಸ್ನಾನಮಾಡಿ ಮಲಗಿಕೊಂಡು ನಿದ್ದೆ ಮಾಡುತ್ತಿರುವಾಗ್ಯೆ ಕೊರಡಿಗೆ ನುಗ್ಗಿ ಅವನನ್ನು ಕೊಂದು ಶವವನ್ನು ಒಂದು ಸಗ್ಗೇದಿನಲ್ಲಿಹಾಕಿ ಮುಚ್ಚಿಬಿಟ್ಟಳು. ಅನಂತರ ಅವಳ ಗಂಡನು ಮನೆಗೆ ಬಂದಾಗ ತಾನು ಮಾಡಿದ್ದನ್ನೆಲ್ಲ ಹೇಳಿ ಶವವನ್ನು ತೋರಿಸಿದಳು ಅವನು ವಿಚಾರಿಸುವಲ್ಲಿ ತನ್ನ ಮಗನು ಊರಿಗೆ ಬಂದಿದ್ದಾನೆಂದು ತಿಳಿದು ಅಕ್ಕಪಕ್ಕ ಮನೆಗೆ ಬಂದು ಆವನ ಮುಖ ಚಹರೆಯನ್ನೆಲ್ಲ ಚನ್ನಾಗಿ ನೋಡಿದಾಗ ಅವನೇ ತನ್ನ ಮಗನೆಂದು ಗೊತ್ತಾಯಿತು ಆಗ ಅವನು ಆದುಃಖವನ್ನು ಸಹಿಸಲಾರದೆ ಅಲ್ಲಿಯೇ ಬಿದ್ದು ಸತ್ತುಹೋದನು. ಅವನ ಹೆಂಡತಿಯನ್ನು ಪೋಲೀಸಿನವರು ಹಿಡಿದುಕೊಂಡು ಹೋಗಿ ಕೈದಿನಲ್ಲಿಟ್ಟಿರುವ

## BANGALORE CITY MUNICIPALITY.
### ಬೆಂಗಳೂರು ಸಿಟಿ ಮ್ಯೂನಿಸಿಪಾಲಿಟಿ.

ಸನ್ ೧೮೯೩ ನೇ ಇಸವಿ ಸೆಪ್ಟಂಬರ್ ೨೫ ನೇ ತಾರೀಖ್ ಸೋಮವಾರ ಬೆಳಿಗ್ಗೆ ೭॥ ಘಂಟೆಗೆ, ಕೋಟೆಯೊಳಗಿರುವ ಮ್ಯೂನಿಸಿಪಲ್ ಆಫೀಸಿನಲ್ಲಿ, ಬೆಂಗಳೂರು ಸಿಟಿ ಮ್ಯೂನಿಸಿಪಲ್ ಕಮಿಷನರುಗಳು ಸಾಧಾರಣ ಸಭೆ ಸೇರುವರು.

ಅಡಿಯಲ್ಲಿ ತಿಳಿಸಲ್ಪಡುವ ವಿಷಯಗಳು, ಸ್ಟ್ಯಾಂಡಿಂಗ್ ಕಮಿಟಿಯವರ ನಿರ್ಣಯಗಳೊಡನೆ ವಿಚಾರಣೆಯ ಮುಂದೆ ಇಡಲ್ಪಡುವವು :—

I. a. ಸನ್ ೧೮೯೩ ನೇ ಇಸವಿ ಆಗಸ್ಟ್ ತಿಂಗಳ ಬಾಬತು ಬಾಬತಿ ನಗದು ಜಮಾಖರ್ಚು ಲೆಕ್ಕ, ಮರಣಲೆಕ್ಕ, ಮನೆಗಳಿಗೆ ಹೋಗಿ ಚಿಕಿತ್ಸೆ ಮಾಡುವ ಮೆಡಿಕಲ್ ಆಫೀಸರನ ಲೆಕ್ಕ, ತಗಾದೆ, ವಸೂಲಿ, ಮತ್ತು ಬಾಕಿ ಪಟ್ಟಿ, ಕಾಮಗಾರಿಗಳ ಅಭಿವೃದ್ಧಿಯನ್ನು ಕುರಿತ ರಿಪೋರ್ಟ್, ಮತ್ತು ಶ್ರೀನಿವಾಸ ಮಂದಿರದ ಲೈಬ್ರರಿಗೆ ಹೋಗಿದ್ದ ಜನರನ್ನು ಕುರಿತ ಯಾದಿ.

I. ಮ॥ ಹಫೀಜುಲ್ಲಾ ಬೇಗ್ ರವರು ಇವರಡಿ ಬರುವ ವಿಷಯಗಳನ್ನು ಸೂಚಿಸಿ ಜೂಲೈ ೧೯ ನೇ ತಾರೀಖಿನಲ್ಲಿ ಬರೆದ ಲೆಟರ್ :—

(a) ಮ್ಯೂನಿಸಿಪಲ್ ಓವರ್ಸಿಯರ್‌ಗಳೂ ಮತ್ತು ಸಾರ್ಜೆಂಟ್‌ಗಳೂ ಮ್ಯೂನಿಸಿಪಲ್ ರೆಗ್ಯುಲೇಷನ್‌ಗಳಿಗನುಸಾರವಾಗಿ ತಮ್ಮ ಕೆಲಸಗಳನ್ನು ನಿರ್ವಹಿಸುವದಕ್ಕೆ ಲಾಯಖಾಗತಕ್ಕ ಬಗ್ಗೆ ಅವರು ಒಂದು ಪರೀಕ್ಷೆಯನ್ನು ಕೊಡಬೇಕು.

(b) ಓವರ್ಸಿಯರ್‌ಗಳು ಬಿಡಿ ಕಾಗದಗಳಲ್ಲಿ ರಿಪೋರ್ಟ್ ಮಾಡುವ ಈಗಿನ ವಾಡಿಕೆಯನ್ನು ತಪ್ಪಿಸಿ ಅವರು ಕ್ರಮವಾಗಿ ಒಂದು ರಿಜಿಸ್ಟರ್ ಇಡುವಂತೆ ಮಾಡಬೇಕು.

II. ಚಿಕ್ಕಪೇಟೆ ಟವರ್ ಗಡಿಯಾರವನ್ನು ರಿಪೇರಿ ಮಾಡಿಸಿದ ಬಗ್ಗೆ ೨೦ ರೂಪಾಯಿಗಳಿಗೆ ಒಂದು ಬಿಲ್ಲನ್ನು ಕಳುಹಿಸಿ ಮ್ಯೂನಿಸಿಪಲ್ ಯೆಗ್ಸಿಕ್ಯೂಟಿವ್ ಇಂಜನಿಯರವರು ೧೮೯೩ ನೇ ಇಸವಿ ಜೂಲೈ ೧೨ನೇ ತಾರೀಖಿನಲ್ಲಿ ಬರೆದ ೭೬ನೇ ನಂಬರ್ ಯಾದಿ.

III. ಕನ್ನಡ ಹುಡುಗರ ಸ್ಕೂಲಿಗೆ ಸಾಲೀಯಾನಾ ಬಹುಮಾನಗಳು ಕೊಡುವದಕ್ಕಾಗಿ ಒಂದು ಮೊಬಲಗನ್ನು ಮಂಜೂರು ಮಾಡಬೇಕೆಂದು ಪ್ರೆಸಿಡೆಂಟ್ ಮಾಡಿ ಮ॥ ಟಿ. ಟಿ. ಲೆನಾರ್ಡ್‌ಯವರು ೧೮೯೩ ನೇ ಇಸವಿ ಜೂಲೈ ೧೯ ನೇ ತಾರೀಖಿನಲ್ಲಿ ಬರೆದ ಲೆಟರ್.

IV. ಮ್ಯೂನಿಸಿಪಲ್ ತೋಟದಲ್ಲಿರುವ ಭಾವಿಯನ್ನು ಆಳವಾಗಿ ಇಳಿಸುವ ವಿಷಯದಲ್ಲಿ ಬೆಂಗಳೂರು ಡಿವಿಜನ್ ಯೆಗ್ಸಿಕ್ಯೂಟಿವ್ ಇಂಜನಿಯರವರು ಬರೆದ ಸನ್ ೧೮೯೩ನೇ ಇಸವಿ ಜೂಲೈ ೧೫ ನೇ ತಾರೀಖು $\frac{3137}{1033}$ ನೇ ನಂಬರ್ ಯಾದಿ.

V. ಅಂಚೆ ಪಟ್ಟಣದಲ್ಲಿರುವ ಮೆಸ್ಸರ್ಸ್ ಷಾಂಡ್ ಮೇಸನ್ ಕಂಪೆನಿಯವರ ಪೆಂಕಿ ಆರಿಸುವ ಯಂತ್ರವನ್ನು ತೆಗೆದುಕೊಳ್ಳಬೇಕೆಂದು ಪ್ರೆಸಿಡೆಂಟ್ ಮಾಡಿ ಸೀನಿಯರ್ ಸರ್ಜನ್ ಮತ್ತು ಸಾನಿಟರಿ ಕಮಿಷನರವರು ಬರೆದ ಸನ್ ೧೮೯೩ ನೇ ಇಸವಿ ಜೂಲೈ ೨೬ನೇ ತಾರೀಖು ೨೧೮ನೇ ನಂಬರ್ ಲೆಟರ್.

VI. ಧರ್ಮಾಂಬುಧಿ ಕೆರೆಯೊಳಗೆ ಇರುವ ಭಾವಿಯ ಕಟ್ಟೆಯನ್ನು ದುರಸ್ತು ಮಾಡುವ ಬಗ್ಗೆ ತನಗೆ ಸ್ವಲ್ಪ ಹಣವನ್ನು ಕೊಡಿಸಬೇಕೆಂದು ಪ್ಯಾರಿಸ್, ಗಿಡೋಲ್ ಬಾಚಣ್ಣನೆಂಬುವರು ಸನ್ ೧೮೯೩ ನೇ ಇಸವಿ ಜೂಲೈ ೧೩ನೇ ತಾರೀಖಿನಲ್ಲಿ ಬರೆದುಕೊಂಡ ಅರ್ಜಿ.

VII. ಕಮಾಲುದ್ದೀನ್ ಎಂಬುವರು ಕಂಟ್ರಾಕ್ಟ್ ದಾರನಾಗಿ ಕೊಟ್ಟ ಠೇವಣಿಯನ್ನು ವಾಪಸ್ ಮಾಡುವ ವಿಷಯದಲ್ಲೂ ಮತ್ತು ಮುಂದೆ ಅವರು ಕೊಡಬೇಕಾದ ಜಾಮೀನನ್ನು ಲೆಕ್ಕದಿಂದ ವಜಾ ಮಾಡಬೇಕೆಂದು ಪ್ರೆಸಿಡೆಂಟ್ ಮಾಡಿಯೂ ವೈಸ್ ಪ್ರೆಸಿಡೆಂಟರವರು ಬರೆದ ಯಾದಿ.

VIII. ಸಿಟಿಯಲ್ಲಿರುವ ಅನಿವಾರ್ಯ ರೋಗಪೀಡಿತರಾದವರ ಸಾಲಿನಲ್ಲಿ ತಿಂಡಿ ಮತ್ತು ಬಟ್ಟೆಗಳಿಗಾಗಿ ಆಗುವ ಖರ್ಚನ್ನು ಯಥಾಪ್ರಕಾರ ಮುಟ್ಟಿಗೆ ಕಮಿಷನರರು ವಹಿಸಬಹುದೆಂದು ವಿಚಾರಪೂರ್ವಕ, ಗವರ್ನಮೆಂಟಿನವರು ನಡೆಸಿದ ೧೮೯೩ನೇ ಇಸವಿ ಜೂಲೈ ೧೮ ನೇ ತಾರೀಖಿನಲ್ಲಿ $\frac{778-82}{492-98}$ ನೇ ನಂಬರ್ ಪ್ರೊಸೀಡಿಂಗ್ಸಿನ ೭೪ ನೇ ಪ್ಯಾರಾ.

IX. ಮೆಸ್ಸರ್ಸ್ ಪಿನ್ನಿ ಕಂಪೆನಿಯವರು ಕಟ್ಟಿದ ಕರೋಸೀನ್ ಎಣ್ಣೆ ಹೊಟ್ಟೆಯ ಮೇಲೆ ಲೈಸೆನ್ಸ್ ಫೀ ವಸೂಲ್ಮಾಡುವ ವಿಷಯದಲ್ಲಿ ಮಾಕುಂ ಕೊಟ್ಟು ಗವರ್ನಮೆಂಟಿನವರು ನಡೆಸಿದ ಸನ್ ೧೮೯೩ನೇ ಇಸವಿ ಜೂಲೈ ೨೫ನೇ ತಾರೀಖು $\frac{1150}{411-93}$ ನೇ ನಂಬರ್ ಪ್ರೊಸೀಡಿಂಗ್ಸ್.

X. ಧನವಂ ಹೊಂದಿದ ಏಡೋಡೆ ಗಾಯಕವಾಡಿ ಮಹಾರಾಜರವರನ್ನು ಬರಮಾಡಿಕೊಂಡ ಬಗ್ಗೆ ಆ ಖರ್ಚಿನ ವಿಷಯದಲ್ಲಿ ಸನ್ ೧೮೯೩ನೇ ಇಸವಿ ಜೂನ್ ೧೬ನೇ ತಾರೀಖಿನಲ್ಲಿ $\frac{8967-5}{F2-03}$ ನೇ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸ್ ಮತ್ತು ವೈಸ್ ಪ್ರೆಸಿಡೆಂಟರ ಯಾದಿ

XI ಬೆಂಗಳೂರಲ್ಲಿರುವ ಅನ್ನಸತ್ರ ನಿರ್ವಹಣೆಯನ್ನು ಮ್ಯೂನಿಸಿಪಾಲಿಟಿಯಿಂದ ಮುಜರಾಯಿ ಇಲಾಖೆಗೆ ವರ್ಗ ಮಾಡತಕ್ಕದ್ದಾಗುವದಿಲ್ಲವೆಂದು ನಮೂದಿಸಿ ಗವರ್ನಮೆಂಟಿನವರು ನಡೆಸಿದ ೧೮೯೩ ನೇ ಇಸವಿ ಜೂಲೈ ೧೯ನೇ ತಾರೀಖಿನಲ್ಲಿ $\frac{193}{421-92}$ ನೇ ನಂಬರ್ ಪ್ರೊಸೀಡಿಂಗ್ಸ್

XII. ಚಿನ್ನಪ್ಪನೆಂಬುವನಿಂದ ಒಂದು ಜಾಗವನ್ನು ಮುಜರಾ ಕೊಡುವಂತೆ ಪ್ರೆಸಿಡೆಂಟ್ ಮಾಡಿ ವೈಸ್ ಪ್ರೆಸಿಡೆಂಟರು ಬರೆದ ಯಾದಿ.

XIII ಹವರ್ ಆನಿವಾಸ ರಸ್ತೆಗಳ ಸಂರಕ್ಷಣೆಯ ಬಗ್ಗೆ ಈಗ ಮಿಲಿಟರಿ ಇಲಾಖೆಯವರಿಂದ ಕೊಡಲ್ಪಡುವ ಮೊತ್ತವನ್ನು ಜಾಸ್ತೀ ಮಾಡಬೇಕೆಂದು ಗವರ್ನಮೆಂಟಿಗೆ ಬರೆದ ಲೆಟರ್

XIV. ವೆಂಕಟಪ್ರಭುಯವರು ಮ್ಯೂನಿಸಿಪಲ್ ಕಂದಾಯ ವಿಷಯದಲ್ಲಿ ಬರೆದ ಲೆಟರ್, ಆ ವಿಷಯದಲ್ಲಿ ವೈಸ್ ಪ್ರೆಸಿಡೆಂಟರವರು ಬರೆದ ಯಾದಿ.

XV ಬೆಂಗಳೂರು ಸಿಟಿಯಲ್ಲಿ ಬಲಾತ್ಕಾರ ವ್ಯಾಕ್ಸಿನೇಷನ್ ಗುರ್ತು ಹಾಕಿಸಬೇಕೆಂದು ವ್ಯಾಕ್ಸಿನೇಷನ್ ಡೆಪ್ಯುಟಿ ಇನ್ಸ್‌ಪೆಕ್ಟರವರು ಬರೆದ ಲೆಟರ್

XVI ಇಂಗ್ಲೀಷ್ ಮತ್ತು ದೇಶಭಾಷೆಯ ರಿಕಾರ್ಡುಗಳನ್ನು ವಿಂಗಡಿಸತಕ್ಕ ಬಗ್ಗೆ ಇಟ್ಟುಕೊಂಡ ಸಂಗುಮಿ ಪಟ್ಟಿಯಿದ್ದ ತಲಬ್ ಬಾಕಿ, ವಿಷಯದಲ್ಲಿ ವೈಸ್ ಪ್ರೆಸಿಡೆಂಟರವರು ಬರೆದ ೧೮೯೩ನೇ ಇಸವಿ ಜೂಲೈ ೭ನೇ ತಾರೀಖು ಯಾದಿ.

XVII ಬಿಯರ್ ಲೈಸೆನ್ಸಿನಿಂದ ಸರಾಸರಿ ೧೧ ತಿಂಗಳಿಗೆ ರಿಜಿಸ್ಟ್ರೇಷನ್ ರುಸುಂ ವಸೂಲ್ಮಾಡುವ ವಿಷಯದಲ್ಲಿ ಡೆಪ್ಯುಟಿ ಕಮಿಷನರವರು ಬರೆದ ೧೮೯೩ನೇ ಇಸವಿ ಆಗಸ್ಟ್ ೩ನೇ ತಾರೀಖು ೫೦ನೇ ನಂಬರ್ ಯಾದಿ.

XVIII ಮ್ಯೂನಿಸಿಪಲ್ ಯೆಗ್ಸಿಕ್ಯೂಟಿವ್ ಇಂಜನಿಯರವರು ಇವರಡಿ ಬರುವ ವಿಷಯಗಳನ್ನು ಬಗ್ಗೆ ಬರೆದ ೧೮೯೩ ನೇ ಇಸವಿ ಆಗಸ್ಟ್ ೧೧ನೇ ತಾರೀಖು ೧೧೧ನೇ ನಂಬರ್ ಯಾದಿ.

(a) ೧೪೫೭ ರೂಪಾಯಿಗಳ ಖರ್ಚಿನಲ್ಲಿ ಹಳೇ ತರಗು ಪೇಟೆ ರಸ್ತೆಯ ೧ ಮತ್ತು ೨ನೇ ಕ್ರಾಸ್ ಲೇನ್‌ಗಳಿಗೆ ಕಲ್ಲು ಹಾಕುವದಕ್ಕೆ ಎಸ್ಟಿಮೇಟ್

(b) ೪೭೭ ರೂಪಾಯಿಗಳ ಖರ್ಚಿನಲ್ಲಿ ಹಳೇ ತರಗುಪೇಟೆಯಲ್ಲಿ V ನಮೂನೆಯ ಚರಂಡಿಯನ್ನು ಕಟ್ಟುವದಕ್ಕೆ ಎಸ್ಟಿಮೇಟ್.

XIX ಪ್ಲೇಗ್ ಪಟ್ರಿನಿಟಿ ಚರ್ಚಿನಿಂದ ಕಟ್ಟಲ್ಪಟ್ಟಿರುವ ಕಸಾಯಿ ಮಾಂಸದ ಮೇಲೆ ಲೈಸೆನ್ಸ್ ಫೀ ವಸೂಲ್ಮಾಡುವ ವಿಷಯವನ್ನು ಕುರಿತ ಯಾದಿ

XX. ಕೋಟೆಯಲ್ಲಿ ತಿಮ್ಮಪ್ಪನೆಂಬುವರು ಕಟ್ಟಿದ ಮನೆಯ ವಿಷಯದಲ್ಲಿ ನರಸಿಂಹ ಮೂರ್ತಿರಾವ್ ನಗ್ಗೈರೆಯವರು ಬರೆದುಕೊಂಡ ಅರ್ಜಿ ಮತ್ತು ಮ್ಯೂನಿಸಿಪಲ್ ಕಮಿಷನರ್ ಮ॥ ಅಬ್ದುಲ್‌ಕರೀಂ ಸಾಹೇಬರವರು ಮಾಡಿದ ರಿಪೋರ್ಟ್.

XXI. ಕೋಟೆಯ ಕಂದಕದ ವಿಷಯವನ್ನು ಕುರಿತು ಮೈಸೂರು ಗವರ್ನಮೆಂಟ್ ಸಾನಿಟರಿ ಇಂಜನಿಯರವರು ೧೮೯೩ ನೇ ಇಸವಿ ಆಗಸ್ಟ್ ೩ನೇ ತಾರೀಖಿನಲ್ಲಿ ಬರೆದ ೯೨೨ ನೇ ನಂಬರ್ ಲೆಟರ್

XXII. ಕನ್ನಡ ಹುಡುಗರ ಪಾಠಶಾಲೆಯ ನೌಕರರ ನೌಕರಿಯನ್ನು ಪೆನ್ಷನಿಗೆ ಅರ್ಹವಾಗುವಂತೆ ಅಂಗೀಕರಿಸುವ ವಿಷಯದಲ್ಲಿ ಆನರರಿ ಸೆಕ್ರೆಟರಿ ಮ॥ ಸಿ. ಎಂ. ಲೆನಾರ್ಡ್ ಯವರು ೧೮೯೩ ನೇ ಇಸವಿ ಜೂಲೈ ೧೯ನೇ ತಾರೀಖಿನಲ್ಲಿ ಬರೆದ ಕಾಗದ

XXIII. ಬಳೇಪೇಟೆ ಫಂಡಿ ಮುಕರಮ್ ಬೇಗ್ ಸಾಹೇಬ್ ಎಂಬುವರು ಮಾರ್ಕೆಟ್ ಸಮೀಪದಲ್ಲಿ ಮಾಡಿದ ಫಿರ್ಯಾದಿಗೆ ಸಂಬಂಧಪಟ್ಟ ಯಾದಿ ಮತ್ತು ಕಾಗದಗಳು.

XXIV. ಬಳ್ಳಾಪುರ ಪೇಟೆಯಲ್ಲಿರುವ ಪಾಠಶಾಲೆಗೆ ಈಗ ಕೊಡಲ್ಪಡುವ ಗ್ರ್ಯಾಂಟನ್ನು ಜಾಸ್ತೀ ಮಾಡುವ ವಿಷಯದಲ್ಲೂ ಪಾಠಶಾಲೆಯು ಕಟ್ಟಡದಲ್ಲಿರುವ ಮುಗ್ಗಳ ಮೇಲಿನ ತೆರಿಗೆಯನ್ನು ವಜಾ ಮಾಡುವ ವಿಷಯದಲ್ಲೂ ವಿದ್ಯಾಭ್ಯಾಸದ ಇಲಾಖೆ ಸೆಕ್ರೆಟರಿಯವರು ಬರೆದ ಸನ್ ೧೮೯೩ ನೇ ಇಸವಿ ಜೂಲೈ ೭ನೇ ತಾರೀಖು ೪೩೬–೫೪ ನೇ ನಂಬರ್ ಕಾಗದ

XXV ದಿಗರ್ ಸ್ಥಳಗಳಿಂದ ಆಮದ ಮಾಡಲ್ಪಡುವ ಸಾಮಾನು, ಬಿಯರ್ ಮತ್ತು ಲೀದಿ ನಾರ್ಗಗಳ ಮೇಲೆ ರಿಜಿಸ್ಟ್ರೇಷನ್ ಫೀ ವಸೂಲ್ಮಾಡುವ ವಿಷಯಕ್ಕೆ ಸಂಬಂಧಪಟ್ಟ ಕಾಗದಗಳು.

K. SRINIVASA RAO,
*Vice President,*
*City Munl. Commission.*

---

### ದಕ್ಷಿಣ ಮಹಾರಾಷ್ಟ್ರ ರೈಲ್ವೇ.

## ನೋಟೀಸ್.

### ಹಿಂದೂಪುರದ ಮಾರ್ಗವಾಗಿ ಬೆಂಗಳೂರಿಗೆ ನೆಟ್ಟಗೆ ಹೋಗುವ ಹೊಸ ರಸ್ತೆ.

ಸನ್ ೧೮೯೩ ನೇ ಇಸವಿ ಸೆಪ್ಟಂಬರ್ ೧೬ನೇ ತಾರೀಖ್ ಮೊದಲು ಮುಕ್ತ್ ಆ ತರುವಾಯ ಗುಂಟಕಲ್ ಮೊದಲು ಬೆಂಗಳೂರು ವರೆಗೆ ಇವರಡಿ ತಿಳಿಸಲ್ಪಡುವಂತೆ ರೈಲು ಗಾಡಿಗಳು ನಡೆಸಲ್ಪಡುವವು.—

| | | | ಘಂ. ಮಿ |
|---|---|---|---|
| ಬೆಂಗಳೂರು ಸಿಟಿ ಜಂಗ್ಷನ್, | ಹೊರಡುವ ಕಾಲ | .. | ೧೨—೨೫. |
| ಗುಂಟಕಲ್ ಜಂಗ್ಷನ್, | ತಲಪುವ ಕಾಲ | . | ೩—೪೦. |
| ಗುಂಟಕಲ್ ಜಂಗ್ಷನ್, | ಹೊರಡುವ ಕಾಲ | . | ೬೦—೬೦ |
| ಬೆಂಗಳೂರು ಸಿಟಿ ಜಂಗ್ಷನ್, | ತಲಪುವ ಕಾಲ | .. | ೧೯—೨೫. |

ಇತರ ಪಟಸೀಲೆಗಳನ್ನು ತಿಳಿದುಕೊಳ್ಳಬೇಕಾದವರು ಸ್ಟೇಷನ್‌ಗಳಲ್ಲಿರುವ ಕಾಲ ಮತ್ತು ರುಸುಮನ್ನು ಕುರಿತ ಪಟ್ಟಿಯನ್ನು ನೋಡಿ ತಿಳಿದುಕೊಳ್ಳತಕ್ಕದ್ದು, ಅಥವಾ ಕಂಪೆನಿಯ ಸ್ಟೇಷನ್ ಮಾಸ್ಟರ್ ಗಳಿಗಾದರು ಆಫೀಸರ್‌ಗಳಿಗಾದರು ಬರೆದುಕೊಳ್ಳತಕ್ಕದ್ದು.

ಟ್ರಾಫಿಕ್ ಮ್ಯಾನೇಜರ ಆಫೀಸ್, ಧಾರ್‍ವಾಡ, ೭ನೇ ಸೆಪ್ಟಂಬರ್ ೧೮೯೩.

W. M. STEUART,
*Offg. Traffic Manager.*

BANGALORE.—Printed and published at the KARNATAKA PRESS, No. 40, HOSPITAL ROAD, CITY.—1893

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

## ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

## Published Every Monday Morning.

ಪ್ರಣಾಮವಿವಿಧಸುವೃತ್ತ್ಯಾಗಸಾರ್ವಕರ್ಣಾಟಕಪ್ರಕಾಶನಪರಾಭಿದಾಪ್ರಥಿತಸಾಹಿತೀಶೋಭಿತಾ । ಮೃಗಾಂಕಹಿತವಾಸರೀನಿಹಿತಮುದ್ರಣಾಸಜ್ಜನೈರ್ದಿನಾನುಪರಿವರ್ತಿತಾದಿಶತಿಮಾನಸಂಸುಮುದಂ ॥

Vol. XX ] BANGALORE —MONDAY SEPTEMBER 25, 1893. [ No 38.

ಸಂಪುಟ ೨೦ ] ಬೆಂಗಳೂರು — ಸನ್ ೧೮೯೩ನೇ ಇಸವಿ ಸೆಪ್ಟೆಂಬರ್ ೨೫ ನೇ ತಾರೀಖು ಸೋಮವಾರ. [ ಸಂಚಿಕೆ ೩೮.


### ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ಸಾಲ ಒಕ್ಕೆ | 6—0—0 | 8—0—0 |
| 6 ತಿಂಗಳಿಗೆ | 3—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ಸಾಲಒಕ್ಕೆ | 3—0—0 | 4—0—0 |
| 6 ತಿಂಗಳಿಗೆ | 1—12—0 | 2—8—0 |

ಈ ಪತ್ರಿಕೆ ದರ ಮತ್ತು ಮಾರಿದ ತಾರೀಖು ಮೊದಲು ಒಂದು ... ಚಂದಾ ... ಪತ್ರಿಕೆ ... ಇಂಗ್ಲಿಷ್ ಭಾಗವನ್ನಾದರೆ ... ಬೆಂಗಳೂರಿಗೆ ಕಡಮೆಯಾಗಿ ಚಂದಾ ... ರದು

### ಪ್ರಕಟನೆಯ ದರಗಳು

ಮೊದಲನೆಯದಿನಾ ಪಙ್ತಿ ಒಂದಕ್ಕೆ ೦—೨—೦

ಎರಡನೆಯದಿನಾ ಪಙ್ತಿ ಒಂದಕ್ಕೆ ೦—೧—೦

ಬೇರೆ—ಎರಡಾವರ್ತಿಗಿಂತ ಹೆಚ್ಚಾಗಿ ... ಪಙ್ತಿ ಒಂದಕ್ಕೆ ... ಪತ್ರಿಕೆಯಲ್ಲಿ ... ಪ್ರಕಟನೆಗಳ ... ಕಳುಹಿಸುವವರು ... ಪ್ರಕಟಿಸಲ್ಪಡ್ಡುವುವು ... ಕಳುಹಿಸಲ್ಪಡಬೇಕು ... ಪತ್ರಿಕೆ ... ರಾಜಾನಾತಿ ... ಪ್ರಕಟಿಸಲಾರೆವು ...


ADVERTISEMENTS

NOT CE

VAIDYASARA SANGRAHA

A TREATISE ON THE PRINCIPLES OF HINDU MEDICINE.

Price including Postage Rs 5 0 0

ವೈದ್ಯಸಾರ ಸಂಗ್ರಹ

ಈ ಗ್ರಂಥಕರ್ತರು ... ಬೇಕಾದವರು ... ಕಳುಹಿಸಿಕೊಂಡರೆ ... ಕೊಡಲ್ಪಡುವುದು.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೇ ಖರ್ಚು, ಬಿಟ್ಟು ಪ್ರತಿ ಒಂದಕ್ಕೆ ರೂ 5—0—0

ಟಿ. ಬಿ. ವೆಂಕಟಾಚಾರ್

ಬೆಂಗಳೂರು, ... ರೋಡ್ ...

### ನೋಟಿಸ್.

ಬೆಂಗಳೂರು ಕರ್ಣಾಟಿಕ್ ಪ್ರೆಸ್

೧೮೬೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು

ಇದರಲ್ಲಿ ಸಕಲವಿಧ ಕೆಲಸಗಳು ... ವಾಗಿಯೂ ... ಮಾಡ್ಪಡುವುವು.

ಇದರಲ್ಲಿ ಸಕಲ ಇಂಗ್ಲಿಷ್ ಕನ್ನಡ ಕೆಲಸಗಳು ಮಾತ್ರವೆ ... ಇತರ ... ಕೆಲಸ ... ತೀರುಕೊಳ್ಳಬಹುದು



### ನೋಟಿಸ್.

ಗಣೇಶ ರಾಮಚಂದ್ರ ಕರ್ಕೆ ಮತ್ತು ಕಂಪನಿ. ಕಮಿಷ್ಣರ್ ಏಜಂಟ್ಸ್

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನ್ಯಾಯ ಸುಲಭ ಕ್ರಯಕ್ಕೆ ಬಹಳ ... ವ್ಯಾಲ್ಯೂ ಪೇಯಬಲ್ ... ಕಮಿಷ್ಣರ್ ತೆಗದುಕೊಂಡು ... ಸನ್ನದ್ಧರಾಗಿರುತ್ತೇವೆ

ಎಲ್ಲಾ ತರಹ ಔಷಧಗಳು, ಪುಸ್ತಕಗಳು, ಮುತ್ತುಗಳು, ... ಮುತ್ತುಗಳು, ... ಗಳು, ... ಪೀಸಗಳು, ... ಗಳು, ... ಗಳು, ... ಪುಸ್ತಕಗಳು, ... ಟೋಪಿಗಳು, ಆಫೀಸ್ ... ಗಳು, ... ಗಳು, ಅತ್ತರಿಗಳು, ಅತ್ಯುತ್ತಮಗಳಾದ ... ಗಳು, ... ಕಟ್ಟಲ್ಪಟ್ಟ ಉಂಗುರಗಳು, ... ಪಾತ್ರೆಗಳು, ... ಪಾತ್ರಗಳು, ಕೇಸರಿ, ಕಸ್ತೂರಿ ವಗೈರೆ ಇತರ ಸಾಮಾನುಗಳು

ಜವಾಬು ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟ್ಯಾಂಪ್ ಕಳುಹಿಸಿದ ಹೊರತು ಜವಾಬು ದೊರೆಯಲಾರದು

ವಿಳಾಸ —ಗಣೇಶ ರಾಮಚಂದ್ರ ಕರ್ಕೆ,

ಮತ್ತು ಕಂಪನಿ, ಕಮಿಷ್ಣರ್ ಏಜಂಟ್ಸ್

ಪಾಕೂರ್ ದ್ವಾರ, ... ಪೋಸ್ಟ್ ಮುಂಬೈ


### ನೋಟಿಸ್

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ... ದಲ್ಲಿ ... ಬೇಕಾದವರು ... ಕಳುಹಿಸಿ ... ಬಹುದು

### ಸಂಸ್ಕೃತ ಗ್ರಂಥಗಳು

| | ರೂ | ಅ | ಪೈ |
|---|---|---|---|
| ವೈದ್ಯಸಾರ ಸಂಗ್ರಹ | ೫ | ೦ | ೦ |
| „ ... | ೧ | ೦ | ೦ |
| „ ... | ೦ | ೪ | ೦ |
| „ ... | ೧ | ೦ | ೦ |
| „ ... | ೦ | ೩ | ೦ |
| „ ... | ೦ | ೧ | ೦ |
| „ ... (ಸಟೀಕ) | ೦ | ೪ | ೦ |
| ... | ೦ | ೨ | ೦ |
| ... | ೦ | ೨ | ೦ |
| ... | ೦ | ೨ | ೦ |
| ... ಅಮರ ಮೂಲ | ೦ | ೩ | ೦ |
| ೧ ಕಾಂಡ | ೦ | ೧ | ೦ |

### ಕನ್ನಡ ಗ್ರಂಥಗಳು.

| | ರೂ | ಅ | ಪೈ |
|---|---|---|---|
| ... | ೨ | ೦ | ೦ |
| ... | ೦ | ೨ | ೦ |
| ... | ೧ | ೪ | ೦ |
| ... | ೦ | ೩ | ೦ |
| ... | ೦ | ೭ | ೦ |
| ... | ೦ | ೨ | ೦ |
| ... | ೦ | ೨ | ೦ |
| ... | ೦ | ೭ | ೦ |
| ... | ೦ | ೧ | ೦ |
| ... | ೦ | ೬ | ೦ |
| ... | ೦ | ೨ | ೦ |
| ... | ೦ | ೧೨ | ೦ |
| ... | ೨ | ೦ | ೦ |


ದಕ್ಷಿಣ ಮಹಾರಾಷ್ಟ್ರ ರೆಯಿಲ್ವೆ.

## ನೋಟಿಸ್.

ಹಿಂದೂಪುರದ ಮಾರ್ಗವಾಗಿ ಬೆಂಗಳೂರಿಗೆ ನೆಟ್ಟಗೆ ಹೋಗುವ ಹೊಸ ರಸ್ತೆ.

ಸನ್ ೧೮೯೩ ನೇ ಇಸವಿ ಸೆಪ್ಟೆಂಬರ್ ೧೭ನೇ ತಾರೀಖು ಮೊದಲು ಮತ್ತು ... ಗುಂತಕಲ್ ಮೊದಲು ಬೆಂಗಳೂರು ವರೆಗೆ ಇದರಡಿ ತಿಳಿಸಲ್ಪಡುವಂತೆ ರೆಯಿಲ್ ಗಾಡಿಗಳು ಬಿಡಲ್ಪಡುವವು —

| | | ಘಂ | ಮಿ |
|---|---|---|---|
| ಬೆಂಗಳೂರು ಸಿಟಿ ಜಂಗ್ಷನ್, | ಹೊರಡುವ ಕಾಲ | ೧೩— | ೨೫ |
| ಗುಂತಕಲ್ ಜಂಗ್ಷನ್, | ತಲಪುವ ಕಾಲ | ೬— | ೪೦ |
| ಗುಂತಕಲ್ ಜಂಗ್ಷನ್, | ಹೊರಡುವ ಕಾಲ | ೨೦— | ೨೦ |
| ಬೆಂಗಳೂರು ಸಿಟಿ ಜಂಗ್ಷನ್, | ತಲಪುವ ಕಾಲ | ೧೩— | ೨೫ |

ಇತರ ಡೆಪಸೀಲೆಗಳನ್ನು ತಿಳಿದುಕೊಳ್ಳಬೇಕಾದವರು ಸ್ಟೇಷನ್‌ಗಳಲ್ಲಿರುವ ಕಾಲ ಮತ್ತು ರುಸುಮನ್ನು ಕುರಿತ ಪಟ್ಟಿಯನ್ನು ನೋಡಿ ತಿಳಿದುಕೊಳ್ಳತಕ್ಕದ್ದು, ಅಥವಾ ಕಂಪೆನಿಯ ಸ್ಟೇಷನ್ ಮಾಸ್ಟರ್ ಗಳಿಗಾದರು ಆಫೀಸರ್‌ಗಳಿಗಾದರು ಬರೆದುಕೊಳ್ಳತಕ್ಕದ್ದು.

ಟ್ರಾಫಿಕ್ ಮ್ಯಾನೇಜರ ಆಫೀಸ್, ಧಾರ್ವಾಡ, ೧೫ನೇ ಸೆಪ್ಟೆಂಬರ್ ೧೮೯೩ }

W. M. STEUART,
*Offg. Traffic Manager.*



### ನೋಟಿಸ್.

ಹಾಸ್ಪಿಟಲ್ ಅಸಿಸ್ಟೆಂಟ್ ಗ್ರೇಡಿಗೆ ಓದತಕ್ಕ ಮೆಡಿಕಲ್ ವ್ಯಾಪಿಗಳು ಅಥವಾ ವಿದ್ಯಾರ್ಥಿಗಳು ಬೇಕಾಗಿರುತ್ತೆ.

ಈ ಕೆಳಗೆ ರುಜು ಹಾಕಿದವರಿಗೆ ಅರ್ಜಿಗಳು ಬರೆದುಕೊಳ್ಳತಕ್ಕದ್ದು.

ಮೆಟ್ರಿಕ್ಯುಲೇಷನ್ ಅಥವಾ ಅಪ್ಪರ್ ಸೆಕೆಂಡರಿಯಲ್ಲಿ ಆವಶ್ಯಕವಾದ ಭಾಗ (ಕಂಪಲಸರಿ ಪೋರ್ಷನ್) ಪರೀಕ್ಷೆಯಲ್ಲಿ ತೇರ್ಗಡೆಯಾದವರು ಹೊರತು ಮತ್ತಾರೂ ಅರ್ಜಿ ಬರೆಯ ಕೊಳ್ಳತಕ್ಕ ಅವಶ್ಯಕವಿಲ್ಲ

T. G. McGANN,
Brigade Surgeon Lieut Colonel
Senr Surgeon and Sany C ommissioner
Mysore Government


### ನೋಟಿಸ್.

ಇದುವರೆವಿಗೆ ಈಸಾಲಿನ ಚಂದಾ ಹಣವನ್ನು ಕಳುಹಿಸದೆ ಇರತಕ್ಕವರೆಲ್ಲರು ಈ ನೋಟಿಸ್ ನೋಡಿದ ಕೂಡಲೆಯ ಮಾಡಿ ಕಳುಹಿಸಿಕೊಡಬೇಕೆಂದು ಮರಳಿ ಜ್ಞಾಪಕ ಕೊಡುತ್ತೇವೆ.

೨೫—೯—೯೩ ಪ್ರೊಪ್ರೈಟರ

### THE MONEY MARKET

ಮದರಾಸ್, ಶನಿವಾರ, ತಾರೀಖು ೨೩ನೇ ಸೆಪ್ಟೆಂಬರ್ 1893

ಸೇಕಡ 4 ರೂ ಬಡ್ಡಿ ಗವರ್ನಮೆಂಟ್ ಪತ್ರಗಳು ರೂಪಾಯಿಗಳು, 104-12-0 ರಿಂದ 10 ... -4-0 ವರೆಗೆ

ಸೇಕಡಾ ಮೂರುವರೆ ರೂಪಾಯಿಗಳ ಬಡ್ಡಿ ಗವರ್ನ್ಮೆಂಟ್ ಪತ್ರಗಳು ರೂಪಾಯಿಗಳು 97-8-0 ರಿಂದ 98-0-0 ರವರೆಗೆ

ಮದರಾಸ್ ಬ್ಯಾಂಕ್ ಷೇರಗಳು, (500) ರೂಪಾಯಿಗಳ ಬಾಬತು 970 ಲಾಗಾಯತು 980 ವರೆಗೆ.

ಕಮರ್ಷಿಯಲ್ ವ ಬ್ಯಾಂಕ್ ವಜ್ರಿಗೆಂಜ್ ಬ್ಯಾಂಕ್ ಷೇರಗಳು, (100) ಬಾಬತು 150 ರಿಂದ 155 ವರೆಗೆ.

ಸವರೇನಗಳು, 16-0-0 ರಿಂದ 16-2-0 ವರೆಗೆ.

ಬ್ಯಾಂಕ್‌ಬಿಲ್‌ಗಳು ದೂರವಿದ್ದ ನಡಿಗಳು, ರೂಪಾಯಿಒಕ್ಕೆ

6 ತಿಂಗಳ ಮಾಯಿದೆಗೆ, 1s 3 3/32d

ಚಿಟೋ 4 ತಿಂಗಳ ಮಾಯಿದೆಗೆ, 1s 3 1/32d

ಚಿಟೋ ಕೇಳಿದಾಗ, 1s . 1/8d

### ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, SEPTEMBER 25, 1893

೧೮೯೩ನೇ ಇಸವಿ ಸೆಪ್ಟೆಂಬರ್ ೨೫ ನೇ ಸೋಮವಾರ

### ಮೈಸೂರುಶೀಮೆಯಲ್ಲಿ ಬಾಲ್ಯವಿವಾಹಗಳ ನಿರೋಧಕ ವಿಚಾರ.

ಶ್ರೀಮನ್ ಮೈಸೂರ್ ಮಹಾರಾಜಾ ಸರ್ಕಾರದವರು ಮೈಸೂರ್ ಶೀಮೆಯಲ್ಲಿ ಬಾಲ್ಯವಿವಾಹಗಳನ್ನು ನಿರೋಧಿಸತಕ್ಕದ್ದು ಯುಕ್ತವೆಂದು ಪರ್ಯಾಲೋಚಿಸಿ, ತದನುಗುಣವಾದ ಒಂದು ಮುಸವಿದಾ ರೆಗ್ಯುಲೇಷನನ್ನು ರಚಿಸಿ ಅದರ ಸಾರ ... ಕಳೆದ ಆಗಸ್ಟು ತಿಂಗಳ ೩ನೇ ತಾರೀಖಿನ ಮೈಸೂರ್ ಗೆಜೆಟಿನ ನಾಲ್ಕನೆಯಭಾಗದಲ್ಲಿ ಸಕಲ ಜನಗಳ ತಿಳುವಳಿಕೆಯ ... ಗ್ಯ ಪ್ರಕಟಿಸಿದ್ದರಷ್ಟೆ. ಈ ನಿಬಂಧನೆಯ ಔಚಿತ್ಯ ಪ್ರಯೋಜನಾವಶ್ಯಕತೆಯ ವಿಷಯದಲ್ಲಿ ಭಿನ್ನಾಭಿಪ್ರಾಯಗಳೇರ್ಪಟ್ಟು ಅಲ್ಲಲ್ಲಿ ಸಭೆಗಳು ಸೇರಿ ತದನುಕೂಲವಾಗಿಯೂ, ಪ್ರತಿಕೂಲವಾಗಿಯೂ, ತಮ್ಮ ಅಭಿಪ್ರಾಯಗಳನ್ನು ... ನೆ ಜಪ್ತಿ ... ರೂಪವಾಗಿಯೂ ಅನೇಕರು ತಮ್ಮ ತಾತ್ಪರ್ಯಗಳನ್ನು ದುವರೆಗೆ ಹೊರಪಡಿಸಿಯೂ ಅದ್ಯಾಪಿ ಹೊರಡಿಸುತಲೂ ಇದ್ದಾರೆ. ಇಂದ್ಯದೇಶ ನ್ಯೂಸ್ ವೃತ್ತಾಂತ ಪತ್ರಿಕೆಗಳು ಕೂಡ ತಾತ್ಪರ್ಯಭೇದಗಳುಳ್ಳವಾಗಿ ಇದರ ಆವಶ್ಯಕತಾ ನಾವಶ್ಯಕತೆಯಂ ಕುರಿತು ವಿಚಾರ ಮಾಡತಕ್ಕದಾಗಿ ಮಹಾ ರಾಜಾ ಸರ್ಕಾರದವರ ವೈಲಕ್ಷಣ್ಯವಂ ಬಹಳವಾಗಿ ಕೊಂಡಾಡಿದರು ... ತಿಮತಾಚಾರ ವ್ಯವಹಾರ ಸಂಬಂಧವಿಲ್ಲದ ... ಯೂರೋಪ್ ದೇಶದ ಕೆಲವು ವೃತ್ತಾಂತ ಪತ್ರಿಕಾಲೇಖಕರು ಸಹ ಇಲ್ಲಿನ ಕಾಲ ದೇಶಸ್ಥಿತಿ ಸ್ವರೂಪವಂ ತಿಳಿಯದೆಯೇ ಪ್ರಸಕ್ತ ನಿಬಂಧನೆಯಂ ಶ್ಲಾಘಿಸಿರುತ್ತಾರೆ. ಇಲ್ಲಿನವರ ಪೈಕಿ ಕೆಲವರು ಇಂತಹ ನಿಬಂಧನೆಯು ಹಿಂದೂ ಸಮಾಜದ ... ತಾತ್ಕಾಲಿಕ ಸ್ಥಿತಿಯಲ್ಲಿ ಅನುಚಿತವಾದುದೆಂತಲೂ, ಕೇವಲ ಅಂಕುರದೋಪಾದಿ ... 

ಪರಿಷ್ಕರಣದಿಂ ಉತ್ತರೋತ್ತರ ಪ್ರಬಲತರ ಸಂಘಪರಿಷ್ಕರಣಕ್ಕೆ ಅವಕಾಶವಂ ಕಲ್ಪಿಸಿಕೊಳ್ಳಬಹುದೆಂತಲೂ, ಪರಿಭಾವಿಸಿ, ಅದರ ಆವಶ್ಯಕತೆಯಂ ಬಹಳವಾಗಿ ವಾದಿಸುತ್ತಾರೆ ಮತ್ತು ಕೆಲವರು ಸ್ವರೂಪತಃ ಅದು ಅನಾವಶ್ಯಕವೆಂದು ಅಂತು ಭಾವಿಸಿದಾಗ್ಯೂ ಗವರ್ನಮೆಂಟಿನವರ ಪ್ರೀತ್ಯರ್ಥವಾಗಿ ಅದಂ ಪ್ರೋತ್ಸಾಹಿಸಿ ಶ್ಲಾಘಿಸತಕ್ಕವರಂತೆ ನಟಿಸುತಲಿರುತ್ತಾರೆ ಇನ್ನು ಕೆಲವರು ಇಂತಾ ನಿಬಂಧನೆಯ ಆವಶ್ಯಕತೆಯನ್ನಂಗೀಕರಿಸಿ, ಪರಂತು ಅದರ ಅಂತರಾಳಕಲೋಪಗಳನ್ನೂ, ಅವುಗಳಂ ಪೂರ್ತಿಗೈಯ್ಯದೆ ಈಗಿರುವಂತೆ ಜಾರಿಯಲ್ಲಿ ತರುವದರಿಂದ ಉಂಟಾಗತಕ್ಕ ಬಾಧಕದ ತೊಂದರೆಗಳನ್ನೂ ಕುರಿತು ಆಕ್ಷೇಪಿಸತಕ್ಕವರಾಗಿರುತ್ತಾರೆ ಬೇರೆ ಕೆಲವರು, ಮತಸಂಬಂಧಗಳಾದ ಏವಮಾದಿ ವಿಷಯಗಳಲ್ಲಿ ಗವರ್ನಮೆಂಟಿನವರ ಪ್ರವೇಶವು ಶುದ್ಧಾಂಗ ಅನುಚಿತವೆಂತಲೂ, ಇಂತಾ ಸಂಘಪರಿಷ್ಕರಣ ವಿಷಯಗಳು ಸ್ವಸಮಾಜ್ಯೆಯವರಿಂದಲೇ ನಡೆಸಲ್ಪಡಬೇಕೇ ಹೊರ್ತು ದಂಡನಪೂರ್ವಕವಾದ ಸರ್ಕಾರದವರ ಪ್ರವೇಶವು ಬಹುವಿಧಾನರ್ಥಹೇತುವೆಂತಲೂ, ಅನಾದಿಸಿದ್ಧವಾದ ಒಂದು ಸ್ವಾತಂತ್ರ್ಯವನ್ನು ಏತನ್ಮೂಲಕ ಐದಂಪರ್ಯೇಣ ಅಪಹರಿಸುವಂತಾಗುವದೆಂತಲೂ ನುಡಿದು ಅದಂ ಖಂಡಿಸುತಲಿದ್ದಾರೆ. ಅನ್ಯರು ಕೆಲವರು, ಇದರಿಂದುಂಟಾಗಬಹುದಾದ ಪ್ರಯೋಜನಾಪ್ರಯೋಜನಗಳು ಅತ್ಯಲ್ಪವಾಗಿರುವದಾಗಿ ಈ ನಿಬಂಧನೆಯಂ ಜಾರಿಯಲ್ಲಿ ತಂದಾಗ್ಯೂ ಅಥವಾ ತರದಿದ್ದಾಗ್ಯೂ ಸಾಧಕಬಾಧಕಗಳೇರತೂ ಇಲ್ಲವೆಂದು ಭಾವಿಸಿ, ಉದಾಸೀನಭಾವವಂ ವಹಿಸಿರುತ್ತಾರೆ. ಸ್ತ್ರೀಪ್ರಬುದ್ಧ ವಿವಾಹವೂ ತದ್ವಿದ್ಯಾಭ್ಯಾಸವೂ, ಆತ್ಮೋದ್ದೇಶ ಪೂರ್ತಿಗೆ ಸಾಧನರೂಪವೆಂದು ಭಾವಿಸಿರುವಂತಾ ಮಿಷನರಿ ವಗೈರೇರು ಪ್ರಾರ್ಥ್ಯೇನ ಈ ನಿಬಂಧನೆಯಂ ಕೊಂಡಾಡುತಲಿದ್ದಾರೆ. ಹೀಗೆ ಆರು ಪ್ರಭೇದದವರು ತಮ್ಮ ತಮ್ಮ ಕಕ್ಷಿಗಳಿಗೆ ಸಾಧಕಗಳಾದ ಯುಕ್ತಿನ್ಯಾಯ ಪ್ರಮಾಣಗಳನ್ನುದಹರಿಸಿ ವಾದಿಸುತಲಿದ್ದಾರೆ. ಇವರು ತಿಳಸುವ ಕಾರ್ಯಕಾರಣಗಳೆಲ್ಲವು ಇದುವರೆಗೆ ವೃತ್ತಾಂತಪತ್ರಿಕೆಗಳ ಮೂಲಕ ಪ್ರಕಟಿಸಲ್ಪಟ್ಟಿರುತಿವೆ, ಈಗ ಜಾರಿಯಲ್ಲಿ ತರಬೇಕೆಂದುದ್ದೇಶಿಸಿರುವ ಮಸವಿದಾ ರೆಗ್ಯುಲೇಷನಿನ ವಿಷಯವಲ್ಲಿ ನಮ್ಮ ಅಭಿಪ್ರಾಯವನ್ನು ಏತತ್ಕಾಲಪರ್ಯಂತ ವ್ಯಕ್ತಪಡಿಸದೆ ಐದಂಪರ್ಯೇಣ ಉಳಸಿಕೊಂಡಿದೇವೆ. ಕದಾಚಿತ್ ನಾವು ತಿಳಸತಕ್ಕ ತಾತ್ಪರ್ಯವು ಕೂಡ ಮೇಲೆಕಂಡ ಆರುಭೇದಗಳಲ್ಲೊಂದಾಗಿರಬೇಕೇ ಹೊರ್ತು, ಅನ್ಯಥಾ ಇರಲಿಕ್ಕೆ ಅವಕಾಶವಿರುವದಿಲ್ಲವು. ಅತಏವ ಅದಂ ಸದ್ಯಃ ನಿಲ್ಲಿಸಿ, ಪ್ರಮುಖರಾದವರ ಅಭಿಪ್ರಾಯಗಳನ್ನೇತತ್ಪತ್ರಿಕಾವಕಾಶಾನುಗುಣವಾಗಿ ಇದರಡಿ ತಿಳಸುತ್ತೇವೆ.

ಈ ವಿಷಯವಂ ಕುರಿತು ವಿಚಾರ ಮಾಡುವದಕ್ಕಾಗಿ ಮೊನ್ನೆಯ ದಿನ ಸಾಯಂಕಾಲ, ನಂದೀದುರ್ಗ ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜಿಯವರಕೋರ್ಟ್ ಹಾಲಿನಲ್ಲಿ ಈ ಪೂರೊಳರತಕ್ಕ ವಿದ್ಯಾವಂತರಾದ (ಇಂಗ್ಲಿಷ್) ಬಹುಜನ ನೇಟಿವ್ ದೊಡ್ಡ ಮನುಷ್ಯರ ಸಭೆಯೊಂದು ಜರಿಗಿತು. ಈ ವಿಷಯದಲ್ಲಿ, ಅನ್ಯರಂತೆ ತಮಗೂ ಪ್ರವೃತ್ತ್ಯುತ್ಸಾಹಗಳವೆಯೆಂಬ ಅಂಶವು ಪ್ರಕಟಿಸಿ, ತನ್ಮೂಲಕ ಗವರ್ನಮೆಂಟಿನವರ ದೃಷ್ಟಿಗೆ ವಿಷಯರಾಗ ಪಡಕ್ಕೈಪ್ಯವಿಲ್ಲದಂತವರು ಕೆಲವರುವಿನಾ ಪ್ರಾಯೇಣ ಮಿಕ್ಕವರೆಲ್ಲರೂ ಸಭೆಗೆಬಂದಿದ್ದರು ಡಿಸ್ಟ್ರಿಕ್ಟ್ ಜಡ್ಜಿ ಮೆ॥ ನರಹರಿರಾಯರವರು ನ್ಯಾಯವಿಮರ್ಶಾಧಿಕಾರವಂ ಈಪ್ರಕರಣದಲ್ಲಿಸಹವಹಿಸಿ, ಸಭಾಧ್ಯಕ್ಷರಾಗಿದ್ದರು. ಪೂರ್ವವೇ ನಿಷ್ಕಲ್ಪಿತವಾಗಿದ್ದಂತೆ ರಿಜಿಸ್ಟ್ರೇಷನ್ ಅಸಿಷ್ಟೆಂಟ್ ಇನ್ಸ್ಪೆಕ್ಟರ್ ಜನರಲ್ಲವರಾದ ಮೆ॥ಆರ್ ವಿಜಯರಂಗರಾಯರವರು ಪ್ರಥಮತಃ ಏತದ್ವಿಷಯವಂ ಕುರಿತು ವಿಚಾರಮಾಡತಕ್ಕದಾಗಿ ಸುಮಾರ್ ಮುಕ್ಕಾಲುಘಂಟೆಯಕಾಲ ಬಾಲ್ಯವಿವಾಹ ನಿರೋಧಕ ನಿಬಂಧನೆಯ ಲೋಪಗಳನ್ನು ಪ್ರತಿಪಾದನ ಮಾಡಿದರು ಈ ಸಂದರ್ಭದಲ್ಲಿ ಸದರೀ ದೊಡ್ಡಮನುಷ್ಯರು ವಿಷಯಸ್ವರೂಪವನ್ನೂ, ತಮ್ಮ ಅಧಿಕಾರ ಪ್ರಯುಕ್ತವಾದ ಸ್ಥಿತಿಯನ್ನೂ, ಗವರ್ನಮೆಂಟಿನವರಿಗೂ ಪ್ರಜೆಗಳಿಗೂ ಮಧ್ಯೆ ತಮಗುಂಟಾಗಿರುವ ಸಂಬಂಧವನ್ನೂ ಸಂಪೂರ್ಣವಾಗಿ ಮನದೊಳು ಪರಿಭಾವಿಸಿ ಬಹಳ ಜಾಗರೂಕತೆಯೊಡನೆ ಪರಿಮಿತ ಶಬ್ದಗಳಿಂದ ವಿಶೇಷ ತದರವಂ ವ್ಯಕ್ತಪಡಿಸದೆ ತಮ್ಮ ಅಭಿಪ್ರಾಯವನ್ನರುಹಿದರು. ಇವರ ತಾತ್ಪರ್ಯದ ಸಾರಾಂಶವೇನೆಂದರೆ—ಪ್ರಜೆಗಳ ತಾತ್ಕಾಲಿಕ ಸ್ಥಿತಿಯಲ್ಲಿಂತಾ ನಿಬಂಧನೆಯು ಸ್ವರೂಪತಃ ಆವಶ್ಯಕವಾಗಿದ್ದಾಗ್ಯೂ ಯಾವದು ದುಸ್ಸಂಪ್ರದಾಯವೆಂದೆಣಿಸಲ್ಪಟ್ಟು ಅದರಿಂದ ಪ್ರಬಲ ಹಾನಿಯುಂಟಾಗಿರುವಂತೆಯೂ, ಅದು ಏತನ್ಮೂಲಕ ನಿವೃತ್ತಿಯಾಗುವಂತೆಯೂ ಭಾವಿಸಲ್ಪಟ್ಟದೆಯೋ ಅಂತಾ ಸಂಪ್ರದಾಯವನ್ನಿದು ಹೋಗಲಾಡಿಸಿ ಸಂಕಲ್ಪಿತೋದ್ದೇಶವಂ ಘಟಿಯಿಸುವಂತಾದ್ದಾಗಿಲ್ಲವು. ಪ್ರಜಾ ಸಾಮಾನ್ಯಾನ್ವಯವೆಂದು ಭಾವಿಸಿ ಮಾಡಲ್ಪಟ್ಟಿರುವ ಪ್ರಸಕ್ತ ನಿಬಂಧನೆಯು ಬ್ರಾಹ್ಮಣರೊಬ್ಬರಿಗೆ ವಿನಾ ತದಿತರ ಜಾತಿಯವರಿಗೆ ಅನುಪಯುಕ್ತವಾದುದಾಗಿರುತಿದೆ. ತತ್ರಾಪಿ ಬ್ರಾಹ್ಮಣರಲ್ಲಿಯೂ ಶತವಿಧಾನುಪಪತ್ತಿಪೀಡಿತರಾದ ಕೆಲವರಿಗಿಲ್ಲದ ವಿಶೇಷ ಸುಖಗಳನ್ನುಂಟುಮಾಡುವಂತಾದ್ದಾಗಿದೆ ಈ ನಿಬಂಧನೆಯು ಜಾರಿಯಲ್ಲಿ ಬಂದಾಗ್ಯೂ ತೃಪ್ತಿಕರವಾದ ಫಲವನ್ನುಂಟುಮಾಡತಕ್ಕದ್ದಾಗಿರಲಾರದು. ಇಂಡ್ಯ ಗವರ್ನಮೆಂಟಿನವರು ಈಗ್ಯೆ ಮೂರುವರುಷಗಳ ಹಿಂದೆ ನ್ಯಾಯವಿಧಾಯಕ ಸಭೆಯಲ್ಲಿ ವಿಚಾರಪೂರ್ವಕ ಮಂಜೂರ್ಮಾಡಿ ಜಾರಿಯಲ್ಲಿ ತಂದ ಸಂಭೋಗಾನುಮತಿ ಕಾಲ ನಿರ್ಣಯದ ಕುರಿತ ನಿಬಂಧನೆಯ ವಿಷಯದಲ್ಲಿ ಪ್ರಜೆಗಳೆನ್ನುಪ್ರತ್ಯರ್ಥಿಗಳಾಗಿದ್ದು ಪ್ರತಿಭಟಿಸಿದರೊ, ತದ್ವತ್ ಈಗಲೂ ಬಹಳವಿರೋಧಿಸುವರು. ಮತ್ತು ಸದರೀ ಕಾನೂನ್ ಅಮಲಿನೊಳು ತರಲ್ಪಟ್ಟದ್ದಾಗ್ಯೂ ಈಗ ಜೀವಚ್ಛವದಂತೆ ಹ್ಯಾಗೆ ಅನುಪಯುಕ್ತವಾಗಿದೆಯೋ ತದ್ವತ್ ಇನ್ನಿನ ರೆಗ್ಯುಲೇಷನ್ ಸಹ ಪ್ರಯೋಜನಕಾರಿಯಾಗದೆ ಹೋಗುವುದು. ಇದನ್ನು ಜಾರಿಯಲ್ಲಿ ತರುವ ವಿಷಯದಲ್ಲಿ ಪ್ರಜೆಗಳಿಗೆ ಅಂತಃ ಅಭಿಮಾನವಿಲ್ಲದ್ದರಿಂದ ಇದಕ್ಕೆ ವಿರುದ್ಧವಾಗಿ ನಡೆಯತಕ್ಕ ವಿವಾಹಗಳು ಹೊರಗಾಗಿ ಕ್ರಮವಾದ ವಿಚಾರಣೆ ನಡೆದು ಅಪರಾಧಿಯು ದಂಡಿಸಲ್ಪಡಲಿಕ್ಕೆ ವಿವಾಹಿತರ ಸಂಬಂಧಿಗಳಾಗಲಿ, ನೆರೆಹೊರೆಯವರಾಗಲಿ ಪ್ರವರ್ತಿಸಿ ಫಿರ್ಯಾದಿಗಳಾಗಿ ನಿಲ್ಲಲಾರರು. ಫಿರ್ಯಾದಿಗಳಿಲ್ಲದ ಮೇಲೆ ಇಂತಾ ಮೊಕದ್ದಮೆಯನ್ನು ಹಿಡಿಯತಕ್ಕವರು ಪೊಲೀಸಿನವರಾದುದರಿಂದ ಅವರ ಯೋಗ್ಯತಾ ಪ್ರವರ್ತನಕ್ಕೂ ಮೊಕದ್ದಮೆ ಬನಾವಣಿಗೂ, ಕೂಟಸಾಕ್ಷ್ಯ ಕಲ್ಪನಕ್ಕೂ ಸಮಯಾನುಸಾರ ಫಲ ನಿರೀಕ್ಷಣೆಗೂ ಬೇಕಾದ ಅವಕಾಶವನ್ನುಂಟುಮಾಡಿದಂತಾಗುತಿದೆ. ಇದಂ ವಿಚಾರಿಸಿ ವಿಮರ್ಶಿಸತಕ್ಕ ನ್ಯಾಯಾಧಿಪತಿಗಳು ತಮ್ಮ ಮುಂದೆ ಹಾಜರಾಗುವ ಸಾಕ್ಷಿಗಳ ಕೈಫಿಯತ್ತಿನ ಆಧಾರದಮೇಲೆ ಫೈಸಲ್ಮಾಡತಕ್ಕವರಾದುದರಿಂದ ತಪ್ಪುಸಾಕ್ಷಿಗಳಿಗೂ ಒಂದಾಣೆ ದೊರತಾಣೆಗಳಂ ಕೊಡುವ ಮಾತ್ರದಿಂದಲೇ ಜಾತಕಗಳಂ ಸೃಷ್ಟಿಸಿ ಕೊಡುವಂತಾ ಚತುರರಾದ ಜ್ಯೋತಿಷ್ಕರು ಅನೇಕರಿರುವದರಿಂದ ಆತೆವರ ಪ್ರಾಮಾಣಿಕತಾ ಪ್ರದರ್ಶನಕ್ಕೂ, ವಯಃಪರಿಮಾಣವಂ ಬದಲಾಯಿಸಿ ಅನ್ಯಥಾ ತಿಳಸಲ್ಪಡಲಿಕ್ಕೂ, ಹೀಗೆ ಮೊಕದ್ದಮೆಗಳು ಬೆಳದು ಮ್ಯಾಜಿಸ್ಟ್ರೇಟರ ಫೈಲಿಜಬ್ಬಾಗುವದಕ್ಕೂ ಕಾರಣವಾಗುತಿದೆ. ಅನ್ಯದೇಶಗಳಲ್ಲಿರುವಂತೆ ನಂಬಬಹುದಾದಂತಾ ಜನನಮರಣ ರಿಜಿಸ್ಟ್ರೇಷನ್ ಆಕ್ಟಾಗಲಿ, ವಿವಾಹಕಾಲ ನಿರೂಪಕನಿಬಂಧನೆಯಾಗಲಿ ಈದೇಶದಲ್ಲಿಲ್ಲದ್ದರಿಂದ ವಧೂವರರ ಜನನಕಾಲನಿಷ್ಕಲ್ಪಿತವಾಗಿ ತಿಳಿಯದೆ ಹೋಗುವದಕ್ಕೂ, ಮೇಲೆಕಂಡಂತೆ ಕಾಲಗಳ ಬದಲಾವಣೆಗೂ ಮನಸ್ವೀ ಆಧಾರಗಳಂ ಕಲ್ಪಿಸಲಿಕ್ಕೂ ವ್ಯವಧಾನವೇರ್ಪಡುತಿದೆ. ಉದ್ದಿಷ್ಟ ನಿಬಂಧನೆಯಂತೆ ಯಾವ ನಿಬಂಧನೆಯೂ ಅಂತರಾಷ್ಟ್ರದೊಳರುವ ಹರ್ಮೆಜಸ್ಟೀಸ್ ಸೀಮೆಯಲ್ಲಿಲ್ಲವಾಗಿ ಇಲ್ಲಿಗೆ ಅತಿ ಸಮೀಪದೊಳಿರುವ ಹೊಸೂರಲ್ಲಿ ಮದುವೆಮಾಡಿಕೊಳ್ಳುವಂತವರನ್ನು ಈ ನಿಬಂಧನೆ ಯೇನೂ ಬಾಧಿಸಲೊಲ್ಲದು. ಅಥವಾ ಅಲ್ಲಿ ಮದುವೆಮಾಡಿಕೊಂಡು ಇಲ್ಲಿಗೆಬಂದಮೇಲೆ, ಇಷ್ಟು ಕಾಲದೊಳಗಾಗಿ ಅವರುವಿಚಾರಿಸಲ್ಪಟ್ಟು ದಂಡಿಸಲ್ಪಡಬೇಕೆಂಬ ಕಾಲ ನಿಯಮ ಒಂದೂ ಮಸವಿದೆಯಲ್ಲಿಲ್ಲದ್ದರಿಂದ ಆ ವಿಧವಾಗಿಯೂ ಇದು ಬಾಧಿಸುವದಿಲ್ಲವು. ಇತರ ತಕಸೀರಿಗಳಂತೆ ಅಪರಾಧಿಗಳು ಯಲ್ಲಿ ಹೋದಾಗ್ಯೂ ದಸ್ತಗಿರಿ ಮಾಡಿಕೊಡಬೇಕೆಂಬ ಕರಾರ್ ನ್ಯಾಷ ಎಕ್ಸ್ಟ್ರಾಡಿಷನ್ ಆಕ್ಟಿನಲ್ಲೀಕೃತ್ಯಕ್ಕೆ ಗತಿಕಲ್ಪಿಸನಿಲ್ಲದ್ದರಿಂದ ಹಾಗೂ ಅನುಪಯುಕ್ತವಾಗಿದೆ ಬ್ರಿಟಿಷ್ ಇಂಡ್ಯ ದೇಶದಲ್ಲಿ ಸಹ ಇದರಂತೆ ಒಂದು ಕಾನೂನ್ಮಾಡಿ ಜಾರಿಯಲ್ಲಿ ತರಬೇಕೆಂದು ಕೇಳುವಣವೆಂದರೆ, ಅವರು ವಯಃಪರಿಮಾಣ ವಿಷಯದಲ್ಲಿ ಒಂದು ಸಂಖ್ಯೆಯಂ ಬದಲಾಯಿಸಲಿಕ್ಕೆ ತ್ನಿಸಿದ ಮಾತ್ರದಿಂದಲೇ ಒಮುಂಬಯಿಯ ವ್ಲೀಮನಸ್ಯಕೆತ್ತಳಗಾಗಬೇಕಾಯಿತು, ಆದುದರಿಂದ ಪ್ರಜಾ ಅನಭಿಮತ ವಿಷಯಗಳಲ್ಲಿ ಪನಸ್ಸೀ ಪ್ರವರ್ತಿಸಿ ರಮ್ಯ ರಾಜಕೀಯೋದ್ದೇಶಗಳಿಗೆ ಬ್ರಿಟಿಷ್ ಗವರ್ನಮೆಂಟಿನವರು ನ್ಯೂನತೆಯ ತಂದುಕೊಳ್ಳುವರೆಂಬುದು ಸಂದೇಹಿಸಬೇಕಾದ್ದಾಗಿದೆ ಏವಮಾದಿ ಕಾರ್ಯಕಾರಣಗಳಿಂದ ಪ್ರಸಕ್ತ ನಿಬಂಧನೆಯು ತಮ್ಮ ಭಾವನಾನುಗುಣವಾಗಿ ನಿಷ್ಪ್ರಯೋಜಕವಾದುದೆಂದು ತೋರುತಿದೆ ಎಂಬದು. ಅನಂತರ ಮೆ॥ ಕೃಷ್ಣಮೂರ್ತಿ ರಾಯರವರು ಮೇಲೆ ಕಂಡ ಅಭಿಪ್ರಾಯಗಳಂ ಪೋಷಿಸಿ, ಸಾಮಾನ್ಯವಾಗಿಯೂ ವಿಶೇಷತಃ ಆಹಿತಾಗ್ನಿಯಾದವನಿಗೂ ಪ್ರಂಟಾಗುವ ಪರಕೈತೆಬಾಧಕಗಳನ್ನುದಹರಿಸಿ ಈಗ ಸ್ತ್ರೀವಿದ್ಯಾಭ್ಯಾಸವು ದಿನೇ ದಿನೆ ಅಭಿವೃದ್ಧಿಯನ್ನೈದುತ ಬರುವದರಿಂದಲೂ, ಪ್ರಜೆಗಳೇ ಸ್ವತಃ ಕನ್ಯೆಯರ ವಯಃಪರಿಮಾಣವಂ ೮ರಿಂದ ೯-೧೦-೧೧ ವರೆಗೆ ಅನುಕೂಲ್ಯ ಪ್ರಾತಿಕೂಲ್ಯಾನುಗುಣವಾಗಿ ಹೆಚ್ಚಿಸಿಕೊಳ್ಳುತ ಬರುವದರಿಂದಲೂ, ಬಾಲ್ಯವಿವಾಹಗಳ ಸಂಖ್ಯೆಯು, ಗವರ್ನಮೆಂಟಿನವರು ಭಯಪಟ್ಟು ಸ್ವತಃ ಪ್ರವರ್ತಿಸಿ ಯಾವದಾದರೊಂದು ಗತಿಯಂ ಕಲ್ಪಿಸುವಷ್ಟರದಾಗಿರುವಂತೆಕಂಡುಬರುವದಿಲ್ಲವೆಂತಲೂ, ಅತಏವ ಇದು ಅನಾವಶ್ಯಕವೆಂತಲೂ ವಾದಿಸಿದರು. ಅನಂತರ ಮೆ॥ ಕೃಷ್ಣಸಿಂಗರವರು, ಗವರ್ನಮೆಂಟಿನವರ ಉದ್ದೇಶವು ಪೋಷಿಸಿ ಮನುಸ್ಮೃತಿಗೆ ಇತರಾಪೇಕ್ಷೆಯಾ ವಿಶೇಷ ಪ್ರಾಶಸ್ತ್ಯವಂ ಕಲ್ಪಿಸಿ, ತದನುಸಾರ ವಿವಾಹಕಾಲವು ೧೩ರಕ್ಕೆ ನಿಷ್ಕರ್ಷಿಸಲ್ಪಡಬೇಕಾಗಿದ್ದಾಗ್ಯೂ ಹಾಗಿಲ್ಲದೆ ಗವರ್ನಮೆಂಟಿನವರು ನಿಬಂಧಿಸಿರುವ ಕಾಲವು ಅಲ್ಪವಾದ್ದೆಂತಲೂ ಜಾಸ್ತೀಮಾಡಬೇಕಾದದು ಆವಶ್ಯಕವೆಂತಲೂ, ಪ್ರಜಾವಿರೋಧವು ಬಹು ಸಾಪ್ಯಕಾಲಿಕವಾದುದೆಂತಲೂ, ಸಹಗಮನವು ನಿರೋಧಿಸಲ್ಪಟ್ಟ ಕಾಲದಲ್ಲಿ ಜನಗಳು ಬಹಳವಾಗಿ ಪ್ರತಿಭಟಿಸಿ ವಿರೋಧಿಸಿದಾಗ್ಯೂ ಗವರ್ನಮೆಂಟಿನವರು ಆಕ್ಟನ್ನು ಜಾರಿಯಲ್ಲಿ ತಂದ ಬಳಿಕ ಅದಕ್ಕೆಲ್ಲರೂ ಒಡಂಬಟ್ಟು ಪಥ್ಯರಾದಂತೆ ಈಗ ಜನಗಳು ವಿರೋಧಿಸಿದಾಗ್ಯೂ ಜಾರಿಯಲ್ಲಿ ತರಲ್ಪಟ್ಟ ಮೇಲೆ ಸ್ವತಏವ ಅವರು ಅಂಗೀಕರಿಸುವರೆಂದು ವಗೈರೆ ಶಬ್ದಗಳಂ ಪ್ರೋತ್ಸಾಹಿಸಿದರು ಅನಂತರ ಮೆ॥ ಸಾಂಬಶಿವಯ್ಯನವರೂ, ಮೆ, ನಾರಾಯಣರಾಯರವರೂ, ಇನ್ನೂ ಕೆಲವು ಯುಕ್ತಿನ್ಯಾಯಗಳನ್ನುದಹರಿಸಿ ಇಂತಾ ನಿಬಂಧನೆಯು ಅನಾವಶ್ಯಕವೆಂದು ಭಾವಪಟ್ಟರು. ಮುರ್ಗಸಫೆ ಮೆ॥ ಲಿಂಗರಾಚಾರ್ಯರವರು ಮಧ್ಯಪರ್ತಿಯಾಗಿ ಪ್ರಯೋಜನಾಪ್ರಯೋಜನಗಳೆರಡನ್ನೂ ಅಂಗೀಕರಿಸಿ, ಅದನ್ನು ಕುರಿತು ವಿಶೇಷ ಪಂಡಿತರಾಗಿಯೂ ನ್ಯಾಯವಿಚಾರಪರರಾಗಿಯೂ, ಧರ್ಮಸೂಕ್ಷ್ಮಗಳನ್ನರಿತವರಾಗಿಯೂ, ಇರುವಂತವರು ಪರ್ಯಾಲೋಚಿಸತಕ್ಕದ್ದಾಗಿದೆಯೆಂತಲೂ, ಈ ವಿಷಯದಲ್ಲಿ ಶಾಲ್ಯಪಾಲಕರಿಗಿರುವಂತಾ ಸಂಬಂಧವು ನ್ಯಾಯಶಾಸ್ತ್ರರೀತ್ಯಾ ಆಲೋಚಿಸಿದರೆ ಅಪರಿದರಲ್ಲಿ ಯಷ್ಟುಮಟ್ಟಿಗೆ ಪ್ರವರ್ತಿಸಬಹುದೆಂಬದು ಸ್ಪಷ್ಟವಾಗುತದೆಂತಲೂ ತಿಳಸಿದರು. ಮೆ ಅಡ್ವೋಕೇಟ್ ಶ್ರೀನಿವಾಸಯ್ಯಂಗಾರ್ರವರೂ, ಮೆ॥ ಅಡ್ವೋಕೇಟ್ ವೆಂಕಟಪ್ಪಯ್ಯನವರೂ ನಿಬಂಧನೆಯ ಆವಶ್ಯಕತೆಯನ್ನು ಬಹಳ ಅಭಿನಿವೇಶದೊಡನೆ ಪೋಷಿಸಿ ತಮ್ಮ ವಾಕ್ಪ್ರೌಢಿಮೆಗಳಿಂದ ತಮ್ಮ ಆದರಾತಿಶಯವಂ ವಿಶೇಷತಃ ತೋರ್ಪಡಿಸಿದರು ಮೆ॥ ಶ್ರೀನಿವಾಸಯ್ಯಂಗಾರ್ರವರು ವಿದ್ಯಾಭ್ಯಾಸದ ಪ್ರಾಚುರ್ಯವು ಸ್ತ್ರೀಯರಿಗೆನಿರೀಕ್ಷಿತಸ್ಥಿತಿಗೀಡಿದ್ಯಾಪಿಬರಲಿಲ್ಲವೆಂತಲೂ, ಆದುದರಿಂದ ಅದು ವಿವಾಹವಿಷಯದಲ್ಲಿ ಸದ್ಯಃ ಪ್ರಯೋಜನಕರವಾಗುವದಿಲ್ಲವೆಂತಲೂ, ವಿವಾಹಸ್ವರೂಪ ಪರಿಜ್ಞಾನವು ಅವರಿಗೆ ಬಾಲ್ಯದಲ್ಲಿ ಉಂಟಾಗುವದಿಲ್ಲವೆಂತಲೂ ಹೇಳಿದರು. ಮುಖ್ಯವಾಗಿ ವೆಂಕಟಪ್ಪಯ್ಯನವರು ಆಹಿತಾಗ್ನಿಯಾದವನಿಗುಂಟಾಗುವ ತೊಂದರೆಗಳನ್ನು ಕುರಿತ ತಿಳಸಲ್ಪಟ್ಟದಕ್ಕೆ ಖಂಡನರೂಪವಾಗಿ ಅಂತವನು ೧೦ ಸಾವಿರದಲ್ಲಿ ಒಬ್ಬನು ಈ ಕಾಲದಲ್ಲಿ ಸಿಕ್ಕಲಾರನೆಂತಲೂ, ಅದಂ ಒಂದು ಕಾರಣ ಸ್ವೀನ ನುಡಿಯ ಕೂಡದೆಂತಲೂ, ಬಾಲ್ಯವಿವಾಹಗಳಿಂದ ಶರೀರ ದೌರ್ಬಲ್ಯ, ಬುದ್ಧಿಮಾಂದ್ಯ, ಅಲ್ಪಾಯುಸ್ಸು, ಕ್ಷೀಣ ಸಂತಾನ ಏವಮಾದಿ ಕಾರಣಗಳಂ ತಿಳಸಿ, ಮುಖ್ಯವಾಗಿ ಏವಂ ಪೋಷಿಸ ಪರರಾಗಲಿ ಖಂಡಿಸುವವರಾಗಲಿ ಒಂದು ವಿಷಯವನ್ನು ಹಿಡಿದು ಸಾಮಾನ್ಯಾನ್ವಯ ಮಾಡತಕ್ಕದ್ದೆಂತಲೂ, ಸಾಮಾನ್ಯವಿಧಿಯಿಂದ ವಿಶೇಷವಿಧಿ ಬಾಧಿತವಾಗುವದೇ ಹೊರ್ತು ವಿಶೇಷ ವಿಧಿಯು ಸಾಮಾನ್ಯವಿಧಿಗೆ ಸಾಧಕವಾಗಲಾರದೆಂತಲೂ ತಿಳಸಿದರು. ಇಲ್ಲಿಗೆ ರಾತ್ರಿ ೮ ಘಂಟೆಗೆ ಮೀಲ್ಪಟ್ಟದರಿಂದ ದಿಸರೆಂಡೆ ಮೆ॥ಸ್ಲೇಯರಯವರು ಯೆಲ್ಲರಿಗೂ ಆವಶ್ಯಕವಾದ ಮತ್ತು ಬಹಳ ಉತ್ಸಾಹಕರವಾದ ಪ್ರಸಕ್ತ ವಿಚಾರವು ಮತ್ತೊಂದುದಿವಸದತನಕ ನಿಲ್ಲಿಸತಕ್ಕದ್ದೆಂದು ತಿಳಸಲು ಸಭಾಧ್ಯಕ್ಷರು ಹದಿನೈದನೆಯ ದಿನವಾದ ಶನಿವಾರದದಿನ ಮರಳಿ ಎಲ್ಲರೂ ಸಭೆಸೇರುವದುಚಿತವೆಂತಲೂ, ಅಲ್ಲಿ ಸ್ಥಳವಸತಿ ಇಲ್ಲದ್ದರಿಂದ ಮತ್ತೊಂದುಕಡೆ ಮುಂದೆ ನಿರ್ದೇಶಿಸಲ್ಪಡುವ ಪ್ರದೇಶದಲ್ಲಿ ಸಭೆ ನಡೆಯುವಂತೆ ಏರ್ಪಾಡಾತ ಮಾಡತಕ್ಕದ್ದೆಂತಲೂ ತಿಳಸಿದನಂತರ ಸಭೆ ಬರಖಾಸ್ತಾಯಿತು

## Occasional Notes
## ನೈಮಿತ್ತಿಕ ವಿಷಯನ್ಯಾಸ

ಈಚೆಗೆ ಮುಂಬೈಯಲ್ಲಿ ನಡೆದ ಕಲಹದಿಂದ ಉಂಟಾದ ನಷ್ಟವನ್ನು ಈಡುಮಾಡುವದಕ್ಕೆ ಹತ್ತುಲಕ್ಷ ರೂಪಾಯಿಗಳಲ್ಲದೆ ಸಾಧ್ಯವಾಗಲಾರದೆಂದು ಯೋಚಿಸಲ್ಪಟ್ಟಿರುವದಾಗಿ ಅಲ್ಲಿನ ಪತ್ರಿಕೆಯೊಂದರ ಮೂಲಕ ತಿಳಿಯಬರುತಿದೆ.

ಆಚೆ ಆದಿತ್ಯವಾರದ ದಿನ ಸಾಯಂಕಾಲ ಲಾಹೋರಿನಲ್ಲಿ ಸ್ಥಾಪಿಸಲ್ಪಟ್ಟಿರುವ ಆರ್ಯಸಮಾಜದ ಪ್ರಾಂಗಣೆಯಲ್ಲಿ ಸದರೀ ಸಮಾಜದ ಮಂದಿರದೊಳು ಒಂದು ವಿಧವಾವಿವಾಹ ನಡೆದು ಅದಕ್ಕೆ ಬಹುಮಂದಿ ನೇಟಿವ್ ದೊಡ್ಡಮನುಷ್ಯರು ಅವರವರ ಕುಟುಂಬಸಹಿತನೆ ಬಂದು ವಿವಾಹವಂ ಪೂರ್ತಿಗೈದರು.

ಬಂಗಾಳೆ ಗವರ್ನಮೆಂಟಿ ನ್ಯಾಯವಿಧಾಯಕ ಸಭೆಯ ಖುಷಿಬಾಷ್ ಮೆಂಬರಗಳು ದರ್ಭಂಗಾ ಮಹಾರಾಜರವರನ್ನು ವೈಸ್ರಾಯವರ ನ್ಯಾಯವಿಧಾಯಕ ಸಭೆಯ ಅಡ್ಡಿಷನಲ್ ಮೆಂಬರಾಗಿ ನಿಯಮಿಸಬೇಕೆಂದು ಶಿಫಾರಸ್ ಮಾಡಿದ್ದರಿಂದ ಅವನ್ನನುಸರಿಸಿ ಗವರ್ನಮೆಂಟಿನವರು ಸದರೀ ಮಹಾರಾಜರವರಂ ನಿಯಮಿಸಿರುತ್ತಾರೆ.

ಈಗ್ಗೆ ಕೆಲವು ದಿನಗಳ ಹಿಂದೆ ಮುಂಬೈಯಲ್ಲಿ ಹಿಂದೂಗಳಿಗೂ ಮುಸಲ್ಮಾನ್ ಜನರಿಗೂ ನಡೆದ ಕಲಹದಲ್ಲಿ ನಿರಪರಾಧಿಗಳಾದವರು ಕೆಲವರಿಗೆ ಉಂಟಾದ ನಷ್ಟಕ್ಕೆ ಈಡು ಮಾಡುವದಕ್ಕಾಗಿ ಹಿಂದೂಗಳೂ ಮುಸಲ್ಮಾನರೂ ಸೇರಿ ಯೇರ್ಪಡಿಸಿರುವ ಪಂಡಿಗೆ ಇದುವರೆಗೆ ೧೨,೦೦೦ ರೂಪಾಯಿಗಳ ವರೆಗೆ ಚಂದಾ ಆಗಿರುವಂತೆ ತಿಳಿಯಬರುತಿದೆ.

ಕಪುರ್ತಲಾ ಸಂಸ್ಥಾನದ ಮಹಾರಾಜರವರು ಈಗ ಅಮೆರಿಕಾ ದೇಶ ಸಂಚಾರಮಾಡುತಲಿದಾರೆಯಷ್ಟೆ. ಈಚೆಗೆ ಸದರೀ ದೇಶದ ರಾಜಧಾನಿಯಾದ ವಾಷಿಂಗ್ಟನ್ ಪಟ್ಟಣದಿಂದ ಹೊರಟು ನ್ಯೂಯಾರ್ಕ್ ಎಂಬ ಪಟ್ಟಣಕ್ಕೆ ಹೋಗಿ ಸೇರಿದರು. ಈ ಅರಸರವರು ತಮ್ಮ ದೇಶಾಟನ ಕಾಲದಲ್ಲಿ ನಡೆದ ವಿಶೇಷಗಳನ್ನು ಲೇಖನ ಮೂಲಕ ಪ್ರಸಿದ್ಧಪಡಿಸಬೇಕೆಂಬ ಉದ್ದೇಶದೊಡನೆ ಅವನ್ನೆಲ್ಲ ಬರೆಯುತಲಿರುವರೆಂತಲೂ, ಅವು ಯುನೈಟೆಡ್ ಸ್ಟೇಟ್ಸ್ ಎಂಬ ಪಟ್ಟಣದೊಳು ಪ್ರಕಟಿಸಲ್ಪಡುವವೆಂತಲೂ ಒಂದಾನೊಂದು ಪತ್ರಿಕೆ ತಿಳಿಸುತಿದೆ.

ಇಂಡ್ಯಾದೇಶದ ನೇಟಿವ್ ಸಂಸ್ಥಾನಾಧಿಪತಿಗಳೂ, ಪ್ರಮುಖರೂ, ಇತರ ದೊಡ್ಡ ಮನುಷ್ಯರೂ ಇಂಗ್ಲೆಂಡಿಗೆ ಹೋಗುವಣವು ಅಲ್ಲಿನ ಕಾರ್ಯಗಳಿಗೆ ವಿಶೇಷ ಸಹಕಾರಿಯಾಗುತಲಿದೆ. ಈಚೆಗೆ ಮುಂಬೈ ನಿವಾಸಿಯಾದ ಮೆ|| ಜಹಾಂಗಿಯಾರ್ ರಡಿಮಣಿ ಎಂಬ ಜಗದ್ವಿಖ್ಯಾತ ಧನಿಕರಾದ ಕೋಟೀದಾರರು ಇಂಗ್ಲೆಂಡಿಗೆ ಹೋಗಿರುವದರಿಂದ ಅಲ್ಲಿ ಸ್ಥಾಪಿಸಲ್ಪಟ್ಟಿರುವ ಇಂಪೀರಿಯಲ್ ಇನ್‌ಸ್ಟಿಟ್ಯೂಟ್ ಎಂಬ ಮಹಾ ಸ್ಥಾಪನೆಗೆ ೨೦೦,೦೦೦ ರೂಪಾಯಿಗಳು ಕೊಟ್ಟು, ಗ್ರೇಟ್ ಬ್ರಿಟನ್ ಸಂಸ್ಥಾನದೊಡನೆ ಇಂಡ್ಯಾ ದೇಶದ ವ್ಯಾಪಾರ ವಗೈರೆಯನ್ನು ವೃದ್ಧಿಪಡಿಸಬೇಕೆಂದು ತಿಳಿಸಿದರಂತೆ. ಈ ಭಾರೀ ಮೊತ್ತವನ್ನು ಇಂಡ್ಯಾ ದೇಶದಲ್ಲೇ ಸಾಮಾನ್ಯವಾಗಿ ಎಲ್ಲರಿಗೂ ಉಪಯುಕ್ತವಾಗಿರುವಂತೆ ಶಾಶ್ವತವಾದ ಒಂದು ಕಾರ್ಯಕ್ಕೆ ವಿನಿಯೋಗಿಸಿ ಅದರ ಫಲವು ಇಲ್ಲಿನವರ ಭವಿಷ್ಯತ್ತಿಗೆ ಪ್ರಯೋಜನವಾಗುವಂತೆ ಮಾಡುವದು ಉಚಿತವೆಂಬುದು ಮೇ|| ಜಹಾಂಗೀರ್ ದೊರೆಯವರಿಗೆ ತೋಚದೆ ಹೋದದ್ದಕ್ಕೆ ಇಲ್ಲಿನವರ ದುರದೃಷ್ಟವೇ ಕಾರಣವೆಂದು ಯೋಚಿಸಬೇಕಾಗಿದೆ.

ಬಂಗಾಳೀ ದೇಶದಲ್ಲಿ ಪ್ರಖ್ಯಾತರಾದ ಹಿಂದೂಗಳ ಪ್ರತಿನಿಧಿಯನ್ನಿಸಿರ್ವ ನಂಗವಾಸಿ ಎಂಬ ಪತ್ರಿಕೆಯು, ಇಂಡ್ಯಾದೇಶದ ಸಿವಿಲ್ ಸರ್ವಿಸ್ ನೌಕರಿಯ ವಿಷಯವನ್ನು ಕುರಿತು ಬರೆಯುವಲ್ಲಿ ತಿಳಿಸುವ ಅಭಿಪ್ರಾಯವೇನೆಂದರೆ.—ಇಂಡ್ಯಾದೇಶದ ಪ್ರಸ್ತುತ ಸ್ಥಿತಿಯಲ್ಲಿ ಇಂಗ್ಲಿಷಿನವರ ಪ್ರಭುತ್ವವಂ ನಾವು ಅಪೇಕ್ಷಿಸುತ್ತೇವೆ. ಅವರ ನೌಕರಿಯಂ ನಾವು ಕೋರತಕ್ಕವರಲ್ಲವು. ನಾವು ಇಂಗ್ಲಿಷಿನವರ ಪರಿಪೋಷಣೆಯಲ್ಲಿರುವದರ ಮೂಲಕ, ಕಬ್ಬದ ನೈಜಾರ್ಥಕ್ಕನುಗುಣವಾಗಿ ಮನುಷ್ಯರೆನ್ನಿಸಿಕೊಳ್ಳಬೇಕೆಂದು ಅಪೇಕ್ಷಿಸುತ್ತೇವೆ. ನಾವು ಜಾತಿಯಂ ಹೋಗಲಾಡಿಸಿಕೊಳ್ಳುವವರಾಗಿಲ್ಲವು, ಮತ್ತು ನಮ್ಮ ರಕ್ಷಕರನ್ನು ಬಿಡುವದಕ್ಕೆ ನಾವು ಇಷ್ಟಪಡುವದಿಲ್ಲವು. ನಿಷ್ಕಳಂಕ ಹೃದಯರಾದ ಸಾಹೇಬರುಗಳು ನಮಗೆ ಬೇಕೇ ಹೊರತು ಬಹಿಷ್ಕೃತರಾದ, ಜಾತಿಹೀನರಾದ ಅಥವಾ ಕಪಟವೇಷದ ರಿಗಳಾದ ಸಾಹೇಬರುಗಳು ನಮಗೆ ಬೇಕಾಗಿರುವದಿಲ್ಲವು. ಆಗ ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ಇಂಡ್ಯಾದೇಶದೊಳು ನಡೆಸಬೇಕಾದ ಆವಶ್ಯಕತೆಯೇನಿದೆ? ಎಂಬದು.

## ದಕ್ಷಿಣ ಮೈಸೂರು ನೇಟಿವ್ ಕಾಫೀ ಪ್ಲ್ಯಾಂಟರ್ಸ್ ಅಸ್ಸೋಸಿಯೇಷನ್.

ತಾ|| ೧೧ನೇ ಆಗಸ್ಟು, ೧೮೯೩ನೇ ಇಸವಿ.

ಈ ದಿವಸ ಹಗಲು ೩ ಘಂಟೆಯಲ್ಲಿ ಸಕಲೇಶಪುರದ ಮುಸಾಫರ್ ಬಂಗ್ಲೆಗೆ ದಯಮಾಡಿದ ಮೆಂಬರುಗಳು ನಡೆಸಿದ ಪ್ರೊಸೀಡಿಂಗ್ಸ್.

ಪ್ರಥಮತಃ ಈತಿಂಗಳ ೧೦ನೇ ತಾರೀಖಿನಲ್ಲಿ ಈ ಸಕಲೇಶಪುರದೊಳು ಕೆಲವುಜನ ದೊಡ್ಡ ಮನುಷ್ಯರು ಮಾಡಿದ ವಿಚಾರಣೆಯಲ್ಲಿ ನಿಷ್ಕರ್ಷೆಯಾದಂತೆ ಆಹ್ವಾನ ಪತ್ರಿಕೆಗಳನ್ನು ಕಳುಹಿಸಿದವರ ಪೈಕಿ ಈದಿವಸ ಸಭೆಗೆ ದಯಮಾಡಿಸಿದ ಮೆಂಬರುಗಳು ೨೫ !

ಕಾಫೀ ವ್ಯವಸಾಯ ಸಂಬಂಧವಾದ ವಿಷಯದಲ್ಲಿ ಸಾರ್ವತ್ರಿಕವಾಗಿ ಉಂಟಾಗಿರತಕ್ಕ ಅನಾನುಕೂಲಗಳನ್ನು ನಿವಾರಣೆ ಮಾಡಿಕೊಳ್ಳುವದಕ್ಕೆ ಒಬ್ಬೊಬ್ಬರಿಂದಲೇ ಅಸಾಧ್ಯವಾಗಿರುವದರಿಂದಲೂ, ಈ ಸ್ಥಳದಲ್ಲಿ ಮುಖ್ಯವಾದ ಒಂದು ಸಭೆಯನ್ನು ಏರ್ಪಡಿಸಬೇಕೆಂಬ ಉದ್ದೇಶವು ಅನೇಕದಿವಸದಾರಭ್ಯ ಇದ್ದದರಿಂದಲೂ, ಸಕಲೇಶಪುರದಲ್ಲಿ ಈ ಒಂದು ಸಮಾಜವನ್ನು ಏರ್ಪಡಿಸುವದು ಅತ್ಯುತ್ತಮವೆಂದು ಸಾಮಾಜಿಕರೆಲ್ಲರು ಅಂಗೀಕರಿಸಿದರು. ಈ ಸಭಾಕಾರ್ಯವನ್ನು ಈದಿವಸ ನಡೆಯಿಸುವದಕ್ಕೆ ಒಬ್ಬರು ಚೇರ್‌ಮ್ಯಾನ್ ರಾಗಬೇಕೆಂದು ಆಲೋಚಿಸಿದ್ದಕ್ಕೆ ಮ|| ರಾ|| ಕಾಳಪ್ಪನವರು ಅಗ್ರಾಸನವನ್ನು ವಹಿಸಬೇಕೆಂಬದಾಗಿ ಮ|| ರಾ|| ಮಹಮ್ಮದ್ ಗೌಸ್ ಸಾಹೇಬರು, ಮ|| ರಾ|| ಪಂಡಿತ ನರಸಿಂಹಯ್ಯನವರು ಪ್ರಪೋಜ್‌ಮಾಡಿದ್ದಕ್ಕೆ ಎಲ್ಲರೂ ಅನುಮೋದಿಸಿದರು. ತಮಗೆ ಸಭಿಕರು ಮಾಡಿದ ಗೌರವಕ್ಕಾಗಿ ಮ|| ರಾ|| ಕಾಳಪ್ಪನವರು ಸಭೆಗೆ ವಂದಿಸಿ ಅಗ್ರಾಸನವನ್ನು ವಹಿಸಿದರು. ಮ|| ರಾ|| ಚೇರ್‌ಮ್ಯಾನ್‌ರು ಈ ಸಭೆಯನ್ನು ಪ್ರಶಸ್ತ ನಾಮಧೇಯದಿಂದಲಂಕರಿಸಬೇಕೆಂದು ಪ್ರಸಕ್ತಿಸಿದ್ದಕ್ಕೆ ಮೆ|| ಕೊಯಿಲೊ ಸಾಹೇಬರು ಮ|| ರಾ|| ಶ್ರೀಕಂಠಯ್ಯನವರು, ಮೆ|| ರಾ|| ಎಂ. ಎಸ್. ಸುಬ್ಬಯ್ಯನವರು ಸಹ "ದಕ್ಷಿಣ ಮಹಿಸೂರು ನೇಟಿವ್ ಕಾಫಿಪ್ಲ್ಯಾಂಟರ್ಸ್ ಅಸ್ಸೋಸಿಯೇಷನ್" ಎಂಬ ನಾಮಧೇಯದಿಂದ ಬಾಜಿಸತಕ್ಕದ್ದುಚಿತವೆಂದು ಅಭಿಪ್ರಾಯ ಪಟ್ಟದ್ದಕ್ಕೆ ಸರ್ವರೂ ಸಮ್ಮತಿಸಿ ಶ್ಲಾಘಿಸಿದರು. ಬೆಂಗಳೂರಲ್ಲಿ ಈ ಮಾಹೇ ೨೮ನೇತಾರೀಖಿನಲ್ಲಿ ನಡೆಯುವ ದಕ್ಷಿಣ ಹಿಂದುಸ್ಥಾನದ ಪ್ಲ್ಯಾಂಟರ್ಸ್ ಕಾನ್‌ಫರೆನ್ಸಿಸಮಾಜಕ್ಕೆ ಈಸಭೆಯಿಂದ ಮೆಂಬರುಗಳನ್ನು ಕಳುಹಿಸಬೇಕೆಂದು ಮಹಾರಾಜಶ್ರೀಗಳಾದ ಶ್ರೀಕಂಠಯ್ಯನವರು, ಗುಂಡಶೆಟ್ಟರು, ಚೇರ್‌ಮ್ಯಾನ್‌ರು ಸಹ ಸೂಚಿಸಿದ್ದಕ್ಕೆ ಮ|| ಗಳಾದ ಉದೇವಾರದ ಬಸವೇಗೌಡರು, ವಳಲಹಳ್ಳಿ ಮಂಜಯ್ಯನವರು, ಹೊಸಕೆರೆ ತಿಮ್ಮೇಗೌಡರುಸಹ ಆಲೋಚಿಸಿ ಮ|| ಸುಬ್ಬಯ್ಯನವರು, ಮೆ ಕೊಯಿಲೊ ಸಾಹೇಬರವರು, ಮ|| ಮಹಮ್ಮದ್ ಗೌಸ್ಸಾಹೇಬರು, ಈ೩ ಜನರನ್ನು ಚುನಾಯಿಸಿದ್ದಕ್ಕೆ ಸರ್ವರೂ ಒಪ್ಪಿದನ್ನು ಅವರುಗಳು ಅಂಗೀಕರಿಸಿದರು. ಈಸಭೆಗೆ ಒಬ್ಬ ಪ್ರೆಸಿಡೆಂಟರನ್ನೂ, ಇಬ್ಬರು ಸೆಕ್ರೆಟರಿಯವರನ್ನೂ, ಹತ್ತುಜನ ಎಗ್ಸಿಕ್ಯೂಟಿವ್ ಮೆಂಬರುಗಳನ್ನು ಸಹ ನಿಯಾಮಕ ಮಾಡಬೇಕೆಂದು ಮ|| ರಾ|| ಚೇರ್‌ಮ್ಯಾನ್‌ರಾದ ಕಾಳಪ್ಪನವರು ಸೂಚಿಸಿದ್ದಕ್ಕೆ ಎಲ್ಲರೂ ಒಪ್ಪಿದರು. ಈವರುಷಕ್ಕೆ ಮೆ|| ಕೊಯಿಲೊ ಸಾಹೇಬರು ಪ್ರೆಸಿಡೆಂಟರಾಗಿಯೂ, ಮಹಾರಾಜಶ್ರೀಗಳಾದ ಎಂ. ಎಸ್. ಸುಬ್ಬಯ್ಯನವರು ಸೆಕ್ರೆಟರಿಯವರಾಗಿಯೂ, ಶ್ರೀಕಂಠಯ್ಯನವರು ಜಾಯಿಂಟ್ ಸೆಕ್ರೆಟರಿಯವರಾಗಿಯೂ, ಮಹಮ್ಮದ್ ಗೌಸ್‌ಸಾಹೇಬರು, ಮೊಬ್ಬೇಸರ್ ಪಟೇಲ್ ಐಗೂರು ಮಲ್ಲೇಗೌಡರು, ಕಾಳಪ್ಪನವರು, ಉದೇವಾರದ ಬಸವೇಗೌಡರು, ಹಾಸನದ ಚೆಲುವಶೆಟ್ಟರ ಗುಂಡಶೆಟ್ಟರು, ಹೊಸಕೆರೆ ತಿಮ್ಮೇಗೌಡರು, ಅಬ್ಬನದನಾಡು ಪಟೇಲ್ ಈರೇಗೌಡರು, ಹಾಸನದಪ್ಲೀಡರ್ ಪಂಡಿತನರಸಿಂಹಯ್ಯನವರು, ಎಸಳೂರು ಪೇಟೆ ದದಾಲ ಅಪ್ಪಣ್ಣಶೆಟ್ಟರು, ಬೆಳ್ಳೂರ್ ಮಲ್ಲೇಗೌಡರು, ಈ ಹತ್ತುಜನರು ಎಗ್ಸಿಕ್ಯೂಟಿವ್‌ಮೆಂಬರ್‌ಗಳಾಗಿಯೂ ಇರಬೇಕೆಂತ ಮಹಾರಾಜಶ್ರೀಗಳಾದ ನಿಡಿಗೆರೆಕೃಷ್ಣಯ್ಯಂಗಾರ್ಯರು, ಹೆಬ್ಬಸಾಲೆ ಸೋಮೇಗೌಡರು, ಕೊತ್ತನಹಳ್ಳಿ ರಾಮಯ್ಯಂಗಾರ್ಯರು, ಸಕಲೇಶಪುರದ ಸೋಮೇಗೌಡರು, ಮಲ್ಲಶೆಟ್ಟರು, ವಳಲಹಳ್ಳಿ ಮಂಜಯ್ಯನವರು ಮುಂತಾದವರು ಅಭಿಪ್ರಾಯಪಟ್ಟದ್ದಕ್ಕೆ ಎಲ್ಲರೂ ಒಪ್ಪಿದರು. ಮೇಲ್ಕಂಡ ದೊಡ್ಡಮನುಷ್ಯರು ತಮತಮಗೆಸಭಾಸ್ಥರು ಕೊಟ್ಟ ಗೌರವಕ್ಕಾಗಿ ಸಭೆಗೆ ವಂದಿಸಿ ಅಂಗೀಕರಿಸಿದರು. ೧೮೯೩ನೇ ಇಸವಿ ಆಗಸ್ಟು ೩ರಲ್ಲು ಈ ಸಭೆಯು ಸ್ಥಾಪಿಸಲ್ಪಟ್ಟದರಿಂದ ಈದಿವಸದಾರಭ್ಯ ಆಚರಣೆಯಲ್ಲಿ ಬರತಕ್ಕದ್ದೆಂದು ನಿರ್ಣಯಿಸಲ್ಪಟ್ಟಿತು. ಈ ಸಭೆಯು ಸ್ಥಾಪಿತವಾದದ್ದನ್ನು ಮಹಿಸೂರು ಗೌರ್ನಮೆಂಟಿನವರ ಘನವಾದ ಪರಾಂಬರಿಕೆಗೆ ತರಬೇಕಾದದ್ದು ಅತ್ಯಾವಶ್ಯಕವಾದ್ದರಿಂದ ಉಚಿತ ರೀತಿಯಲ್ಲಿ ಈ ಪ್ರೊಸೀಡಿಂಗ್ಸ್ ಕಾಪಿಯನ್ನು ವಿನಯಪೂರ್ವಕ ವಿಜ್ಞಾಪಿಸಿಕೊಳ್ಳಬೇಕೆಂದೂನ್ನು ಇತರ ಸ್ಥಳಗಳಲ್ಲಿ ಸ್ಥಾಪಿತವಾಗಿರುವ ದೊಡ್ಡ ದೊಡ್ಡ ಸಮಾಜಗಳಿಗೂ ದಕ್ಷಿಣ ಮತ್ತು ಉತ್ತರ ಮಹಿಸೂರು ಕಾಫೀ ಪ್ಲ್ಯಾಂಟರ್ಸ್ ಅಸ್ಸೋಸಿಯೇಷನ್‌ಗಳಿಗೂ ಈ ಕಾಪಿಯನ್ನು ಕಳುಹಿಸಬೇಕೆಂದೂನ್ನು ತೀರ್ಮಾನಿಸಲಾಯಿತು.

ಈ ಸಭೆಗಾಗಿ ಶ್ರಮವನ್ನು ವಹಿಸಿ ಕಾರ್ಯನಿರ್ವಾಹವನ್ನು ಮಾಡಿದ್ದಕ್ಕೆ ಈ ಸಭಾಸದರು ಅಗ್ರಾಸನಾಧಿಪತಿಗಳಿಗೆ ವಂದಿಸಿ ಸಂತೋಷದಿಂದ ಗಂಧ ಪುಷ್ಪ ತಾಂಬೂಲವನ್ನು ಸ್ವೀಕರಿಸಿ ಸಭೆಯನ್ನು ಬರಖಾಸ್ತು ಮಾಡಿದರು.

ಎಂ. ಎಸ್. ಸುಬ್ಬಯ್ಯ,
ಕಾಫೀಪ್ಲ್ಯಾಂಟರ್, ಹಾಸಿಗೆ ಎಸ್ಟೇಟ್,
ಸೆಕ್ರೆಟರಿ.
ಶ್ರೀಕಂಠಯ್ಯ,
ಕಾಫೀ ಪ್ಲ್ಯಾಂಟರ್, ಸುಂಡೆಕೆರೆ ಎಸ್ಟೇಟ್.
ಜಾಯಿಂಟ್ ಸೆಕ್ರೆಟರಿ.
ಪಿ. ಎ ಕೊಯಿಲೊ,
ಕಾಫೀ ಪ್ಲ್ಯಾಂಟರ್, ಹೊಸಕೆರೆ ಎಸ್ಟೇಟ್.
ಪ್ರೆಸಿಡೆಂಟ್

## LOCAL AND PROVINCIAL NEWS.

ಒಳದೇಶವುತ್ತು ತಾಲ್ಲೂಕ್‌ಜಾತ್ ವೃತ್ತಾಂತಗಳು.

ಇಲ್ಲಿನ ಬ್ರಿಟಿಷ್ ರೆಸಿಡೆಂಟರವರು ಬರುವ ತಿಂಗಳ ಮಧ್ಯಭಾಗದಲ್ಲಿ ಅಂದರೆ ನವರಾತ್ರಿಯಾದ ಕೂಡಲೇ ಅಲ್ಲಿಂದ ಕೊಡಗುಪ್ರಾಂತಕ್ಕೆ ಸರಿಕ್ಯೂಟ್ ದಯಮಾಡುವರೆಂದು ಕೇಳುತ್ತೇವೆ

ಇನ್ನುಮೇಲೆ ಖಾಲಿ ಯಾಗತಕ್ಕ ಕಾಯಂ ಉದ್ಯೋಗಗಳೆಲ್ಲವು ಯೂನಿವರ್ಸಿಟಿ ಪರೀಕ್ಷೆಗಳಂ ಕೊಟ್ಟವರಿಗೆ ಮಾತ್ರವೇ ಕೊಡತಕ್ಕದ್ದೆಂದು ಮೈಸೂರ್ ಗವರ್ನಮೆಂಟಿನವರೀಚೆಗೆ ಪ್ರೊಸೀಡಿಂಗ್ಸ್ ಮಾಡಿರುತ್ತಾರೆ.

ಇಲ್ಲಿನ ಕಾಯಂ ದಿವಾನರವರಾದ ಸರ್. ಕೆ. ಶೇಷಾದ್ರಿ ಅಯ್ಯರವರು ಮೊನ್ನೆಯ ದಿನ ರಾತ್ರಿ ಉದಕಮಂಡಲಕ್ಕೆ ದಯಮಾಡಿದರೆಂತಲೂ, ಬರುವ ತಿಂಗಳ ೩ನೇ ತಾರೀಖಿನಲ್ಲಿ ತಮ್ಮ ಕೆಲಸ ಚಾರ್ಜನ್ನು ತೆಗೆದುಕೊಳ್ಳುವರೆಂತಲೂ, ಒಳದೇಶದ ಈವಿನಿಂಗ್ ಮೆಯಿಲ್ ಪತ್ರಿಕೆ ತಿಳಿಸುತಿದೆ.

ಪಬ್ಲಿಕ್ ಅಕೌಂಟೆಂಟುಗಳ ದಪ್ತರದಿಂದುಂಟಾಗತಕ್ಕ ನಷ್ಟಗಳನ್ನು ನಿವೃತ್ತಿಸುವ ಬಗ್ಗೆ ಮೈಸೂರ್ ಗವರ್ನಮೆಂಟಿನವರು ಒಂದು ರೆಗ್ಯುಲೇಷನ್ ಮಾಡಿ ಅದನ್ನೀವಾರದ ಮೈಸೂರ್ ಗೆಜೆಟಿನಲ್ಲಿ ಪ್ರಕಟಿಸಿರುವದಂ ನಾವು ಈ ಪತ್ರಿಕೆಯನ್ನೋದತಕ್ಕವರ ತಿಳುವಳಿಕೆಯಬಗ್ಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುತ್ತೇವೆ

ಈಪೂರಿಗೆ ಹೊಸದಾಗಿ ಕೆಲವರು ಕಳ್ಳರುಗಳು ಬಂದಿರುವದಾಗಿ ಗಟವಾದದ ಮೊದಲು ಒಂದು ವದಂತಿಯುಂಟಾಗಿ ಜನಗಳು ಬಹಳ ಭೀತರಾಗಿದಾರೆ. ಅಲ್ಲಿಯಲ್ಲಿ ಕೆಲವು ಕನ್ನ ಕಳವುಗಳು ಕೂಡ ನಡೆದಂತೆ ನಮ್ಮ ಕೇಳ್ವಿಕೆಗೆ ಬಂದಿರುತಿದೆ. ಇಲ್ಲಿನ ಪೋಲೀಸ್ ಸೂಪರಿಂಟೆಂಡೆಂಟರವರು ಅನವರತ ಟಪಸ್ ರಕ್ಷಣೆಯಲ್ಲಿ ಆಸಕ್ತರಾಗಿ ಪೋಲೀಸಿನವರು ಬಹಳ ಜಾಗರೂಕರಾಗಿರತಕ್ಕದ್ದೆಂದು ಖಂಡಿತವಾದ ಹುಕುಂ ಕೊಟ್ಟಿರುವಂತೆ ಕೇಳುತ್ತೇವೆ

## THE MYSORE GAZETTE.

ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರುಮೊದಲು.

ನಂ|| ೮೬೪೬ ಜಿ. ಎಫ್. ೮೦೨-೯೩—ತಾರೀಖ್ ೧೧ನೇ ಸೆಪ್ಟಂಬರ್ ೧೮೯೩—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೪೪ನೇ ಆರ್ಟಿಕಲ್ ಅನುಸರಿಸಿ ಅಡಿಷನಲ್ ಮುನಸಫ್ ಮೆ|| ಪಿ. ಮೆಕಬ್ರಾಯರವರಿಗೆ ೧೮೯೩ನೇ ಇಸವಿ ಸೆಪ್ಟಂಬರ್ ಗುರ್ರೇ ತಾರೀಖ್ ಲಾಗಾಯಿತು ಮೂರುತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ. ಮೆ|| ಪಿ. ವೆಂಕಟರಾಯರವರು ಹಾಸನ ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮಿಷನರವರ ಆಫಿಸ್‌ಚಾರ್ಜನ್ನು ಮಾಹೇ ಮಜಕೂರ್ ೧ನೇ ತಾರೀಖಿನ ಪೂರ್ವಾಹ್ನದಲ್ಲಿ ಮೆ|| ಕೆ. ರಾಮಾನುಜಯ್ಯಂಗಾರ್ಯರವರಿಗೆ ಒಪ್ಪಿಸಲು ಅವರದು ತೆಗೆದುಕೊಂಡಿರುತ್ತಾರೆ.

ನಂ|| ೮೬೪೪—ಜಿ. ೧೦೪೫ ತಾ|| ೧೨ ನೇ ಸೆಪ್ಟಂಬರ್ ೧೮೯೩ —ತಿರುಪತಿಯಲ್ಲೀಗ ಉದಾಕಿ ಜಾಲಾಪಉಳದವುವನ್ನು ಕಲೆತೋರಿರುವಂತೆಕೆಂಡು ಬರುವದರಿಂದಲೂ, ಯಾತ್ರಾರ್ಥಿಗಳಾಗಿ ಹೋಗಿದ್ದು ಅಲ್ಲಿಂದ ವಾಪಸ್ ಬಂದವರ ಪೈಕಿ ಇದುವರೆಗೆ ಅನೇಕರು ಮೃತಪಟ್ಟದ್ದರಿಂದಲೂ ಈ ಕಾಲದಲ್ಲಿ ಸದರೀ ಕ್ಷೇತ್ರಕ್ಕೆ ಹೋಗುವಣವು ಅಪಾಯಕರವೆಂಬದಾಗಿ ಸಮಸ್ತರು ಏತನ್ಮೂಲಕ ಎಚ್ಚರಿಸಲ್ಪಟ್ಟಿರುತ್ತಾರೆ.

ನಂ|| ೮೯೦೧—ಜಿ. ೧೧೮೯ — ಮೈಸೂರ್ ಚೀಫ್‌ಕೋರ್ಟ್ ಜಡ್ಜಿಯವರಾದ ಮೆ|| ಏ. ಎನ್. ಕೃಷ್ಣಮೂರ್ತಿ ಯವರಿಗೆ, ೧೮೯೩ ನೇ ಇಸವಿ ಫೆಬ್ರವರಿ ೨೫ ನೇ ಮಾರ್ಚಿ ಮೊತ್ತಂ, ೨೬೧ ನೇ ನಂಬರುಳ್ಳ ಇಸ್ತಿಹಾರ್‌ನಾಮೆಯ ಮೂಲಕ ಕೊಡಲ್ಪಟ್ಟಿದ್ದ ಒಂದು ತಿಂಗಳ ಪ್ರಿವಿಲೇಜ್ ರಜಾ, ೧೮೯೩ ನೇ ಇಸವಿ ಏಪ್ರಿಲ್೩ನೇ ಮಾರ್ಚಿ ನೇರ ತಾವತ್ಪರ್ಯಂತ ಜಾಸ್ತಿಮಾಡಲ್ಪಟ್ಟಿರುತಿದೆ

ನಂ|| ೮೪೯೦—ಜಿ. ಎಫ್. ೩೪೪-೯೩,—ತಾ|| ೧೫ ನೇ ಸೆಪ್ಟಂಬರ್ ೧೮೯೩ —ಮೈಸೂರ್ ಶೀಮೊಗ್ಗ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್, ಮೆ|| ಪಿ ಪಿ. ಮಾಧವರಾಯರವರು ೧೮೯೩ ನೇ ಇಸವಿ ಆಗಸ್ಟು ೨೮ ನೇ ತಾರೀಖಿನಲ್ಲಿ ಒಂದು ದಿನ ಕ್ಯಾಜುಯಲ್ ರಜಾ ಪಡೆದಿರುತ್ತಾರೆ.

ನಂ ೮೯೬೦—ಜಿ. ಎಫ್. ೧೩೭-೯೩ —ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೭೦ ನೇ ಆರ್ಟಿಕಲ್ ಅನುಸರಿಸಿ ಫಾರೆಸ್ಟು ಇನ್ಸ್‌ಪೆಕ್ಟರ್ ಜನರಲ್ಲವರ ಆಫಿಸಿನಲ್ಲೀಗ ಕೆಲಸ ನೋಡುತಲಿರುವ ಫಾರೆಸ್ಟು ಅಸಿಸ್ಟೆಂಟ್ ಕನ್ಸರ್ವೇಟರ್ ಮೆ|| ಎಸ್. ವಿ. ಬಾಳ್ರಾಯರವರಿಗೆ ಅವರು ವಹಿಸಿಕೊಳ್ಳುವ ತಾರೀಖ್‌ಲಾಗಾಯಿತು ಹದಿನೈದುದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತಿದೆ.

ನಂ|| ೮೯೬೩—ಜಿ. ಎಫ್. ೮೦೫-೯೩.— ಮೆ|| ಎನ್. ವೆಂಕಟರಾಯರವರು ಚಿತ್ರದುರ್ಗ ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮಿಷನರವರ ಕೋರ್ಟ್ ಮತ್ತು ಆಫಿಸುಚಾರ್ಜನ್ನು ೧೮೯೩ ನೇ ಇಸವಿ ಸೆಪ್ಟಂಬರ್ ೩ ನೇ ತಾರೀಖಿನ ಅಪರಾಹ್ನದಲ್ಲಿ ಮೆ|| ಬಿ. ರಾಮಸ್ವಾಮಯ್ಯಂಗಾರ್ಯರವರಿಗೊಪ್ಪಿಸಲು ಅವರದಂ ತೆಗೆದುಕೊಂಡಿರುತ್ತಾರೆ.

ನಂ|| ೮೯೬೮—ಜಿ. ೧೧೮೦—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೭೦ ನೇ ಆರ್ಟಿಕಲ್ ಅನುಸರಿಸಿ ಹೊಳಲಕೆರೆ ತಾಲ್ಲೂಕ್ ಅಮಲ್ದಾರ್ ಆರ್. ಲಕ್ಷ್ಮಣರಾಯರವರಿಗೆ ಮಾಹೇ ಮಜಕೂರ್ ೭ನೇ ತಾರೀಖ್ ಮೊದಲು ೬ ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತಿದೆ

ನಂ|| ೫೦೫೪—ಜೆ. ಎಫ್. ೨೪-೯೩ ತಾ|| ೧೭ ನೇ ಸೆಪ್ಟಂಬರ್ ೧೮೯೩ — ಸನ್ ೧೮೭೭ ನೇ ಇಸವಿಯ ೩ ನೇ ನಂಬರ್ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟಿನ ೬ ನೇ ಸೆಕ್ಷನಿನ ನಿಯಮಗಳನ್ನನುಸರಿಸಿ ಇದರಡಿ ಕಂಡ ಸ್ಪೆಷಿಯಲ್ ಸಬ್‌ರಿಜಿಸ್ಟ್ರಾರನರ ನೇಮಕರರಾತಿಯು ಹುಕುಂ ಮಾಡಲ್ಪಟ್ಟಿರುತಿದೆ:—

ಎನ್. ಟಿ. ನರಸಿಂಹಯ್ಯಂಗಾರ್, ಬಿ. ಎ. ಯವರು, ನಿಷ್ಕೃಷ್ಟವಾಗಿರುವ ಪರೀಕ್ಷೆಯನ್ನು ಕೊಟ್ಟು ತೇರ್ಗಡೆಯಾಗುವ ವರತ್ತಿನ ಮೇಲೆ ಅಜಮಾಯಿಷೀ ತರೀಕ್ ತಿಪಟೂರಿನಲ್ಲಿ ಮೂರನೇ ಗ್ರೇಡ್ ಸಬ್ ರಿಜಿಸ್ಟ್ರಾರಾಗಿರತಕ್ಕದ್ದು.

ನಂ|| ೮೮೯೩—ಜಿ. ಎಫ್. ೩೬೦-೯೩ ತಾ|| ೧೮ ನೇ ಸೆಪ್ಟಂಬರ್ ೯೩.— ಕಡೂರ್ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮೆ|| ಜೆಚ್ ಜೆಚ್ ಸ್ಪಾರ್ಕ್ಸ್ ಯವರಿಗೆ ಕಳೆದ ತಿಂಗಳ ೨೩ ನೇ ತಾರೀಖುಳ್ಳ ೩೬೦೧—ಜಿ. ಎಫ್. ೩೬೦-೯೩ ನೇ ನಂಬರುಳ್ಳ ಇಸ್ತಿಹಾರ್‌ನಾಮೆಯ ಮೂಲಕ ಕೊಡಲ್ಪಟ್ಟದ್ದ ಹತ್ತು ದಿವಸಗಳ ಕ್ಯಾಜುಯಲ್ ರಜಾವನ್ನು ಅವರು ಕಳೆದ ತಿಂಗಳ ೨೬ ನೇ ತಾರೀಖ್ ಲಾಗಾಯಿತು ಉಪಯೋಗಿಸಿಕೊಂಡು, ಮಾಹೇಮಜಕೂರ್ ೫ ನೇ ತಾರೀಖಿನ ಪೂರ್ವಾಹ್ನದಲ್ಲಿ ತಮ್ಮ ಕೆಲಸಕ್ಕೆ ವಾಪಸು ಬಂದಿರುತ್ತಾರೆ.

ನಂ|| ೮೯೯೯—೦. ೧೧೬೩.—ತೇರ್ಗಡೆಯಾಗಿರುವಂತಾ ಮೈಸೂರಿನವರಾದ ಇದರಡಿ ಕಂಡ ಮೆಡಿಕಲ್ ವಿದ್ಯಾರ್ಥಿಗಳು, ಮದರಾಸ್ ಮೆಡಿಕಲ್ ಕಾಲೇಜಿನಿಂದ ೩ ನೇ ಕ್ಲಾಸ್ ಆಸ್ಪಿಟಲ್ ಅಸಿಸ್ಟೆಂಟರಾಗಿರಲಿಕ್ಕೆ ಯೋಗ್ಯತಾಪತ್ರಿಕೆಯನ್ನು ಪಡೆದುಕೊಂಡಿರುವದರಿಂದ ೧೮೯೩ ನೇ ಇಸವಿ ಜುಲೈ ೮ ನೇ ತಾರೀಖ್ ಮೊದಲು ಅಂದರೆ ನೌಕರಿಯ ಬಗ್ಗೆ ಅವರು ಹಾಜರಾಗಿರುವಂತೆ ಮೈಸೂರ್ ಗವರ್ನಮೆಂಟಿನ ಸೀನಿಯರ್ ಸರ್ಜನ್ ಯಾದ ಸಾನಿಟರಿ ಕಮಿಷನರವರಿಗೆ ರಿಪೋರ್ಟ್ ಮಾಡುವ ಕಾಲದ ಮೊದಲು ೩ ನೇ ಕ್ಲಾಸ್ ಆಸ್ಪಿಟಲ್ ಅಸಿಸ್ಟೆಂಟರಾಗಿ ನಿಯಮಿಸಲ್ಪಟ್ಟು ಅವರವರ ಹೆಸರಿಗೆ ಬಾಜುವಿನಲ್ಲಿ ಕಾಣಿಸಲ್ಪಟ್ಟಿರುವ ಆಸ್ಪತ್ರೆಗಳಲ್ಲಿ ನೌಕರಿ ಮಾಡುವಂತೆ ನಿಯಮಿಸಿ ಕಳುಹಿಸಲ್ಪಟ್ಟಿರುತ್ತಾರೆ:—

ಪಿ. ಎಸ್. ರಾಮಲಿಂಗ ಮೊದಲಿಯಾರ್, ಪಿ ವಿ. ನರಸಿಂಹಾಚಾರಿ,—ಬೆಂಗಳೂರು ಗವರ್ನಮೆಂಟ್ ಜನರಲ್ ಆಸ್ಪತ್ರೆ.

ಎಸ್. ಗಣಪತಿಅಯ್ಯರ್, ಎಸ್. ಕೃಷ್ಣಯ್ಯ—ಮೈಸೂರ್ ಜನರಲ್ ಆಸ್ಪತ್ರೆ.

ನಂ|| ೮೬೮೧ ೧ ೧೧೮.—ತಾ|| ೯ನೇ ಸೆಪ್ಟಂಬರ್ ೧೮೯೩—ಸನ್ ೧೮೯೩ನೇ ಇಸವಿ ಆಗಸ್ಟ್ ತಿಂಗಳಲ್ಲಿ ನಡೆದ ಅಕೌಂಟ್ಸ್ ಪರೀಕ್ಷೆಯಲ್ಲಿ ಇದರಡಿ ಕಂಡ ಉಮೇದ್ವಾರರು ಯೋಗ್ಯತಾಕ್ರಮ ಪ್ರಕಾರ ತೇರ್ಗಡೆಯಾಗಿರುತ್ತಾರೆ:—

೩೭೯ ಟಿ. ವಿ ಶ್ರೀನಿವಾಸರಾವ್ ಚೆಟ್ಟಿ, ಕಂಟ್ರೋಲರ್ ಆಫೀಸ್ ೩ನೇ ಗ್ರೇಡ್ ಅಕೌಂಟಂಟ್.

೫೮೮. ಕೆ. ಅನಂತರಾಮಯ್ಯಂಗಾರ್, ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್ಲವರ ಆಫೀಸ್ ಡೆಪ್ಯುಟಿ ಅಕೌಂಟಂಟ್.

೫೮೯. ಎಂ. ಪಿ. ಕೃಷ್ಣಸ್ವಾಮಯ್ಯರ್, ಹಾಸನ ಡಿ|| ಪಿ. ಡಬ್ಲ್ಯು ೫ ನೇ ಸಬ್‌ಡಿವಿಜನ್ ಆಕ್ಟಿಂಗ್ ಕ್ಲರ್ಕ್.

೧೦೯, ೧೮೦, ೫೧೯, ೫೦೩ ಈ ನಂಬರಿನ ಉಳ್ಳ ಉಮೇದ್ವಾರರು ಮೇಲೆ ಕಂಡ ಪರೀಕ್ಷೆಯಲ್ಲಿ ತೇರ್ಗಡೆಯಾಗದವರಾಗಿರುತ್ತಾರೆ.

ನಂ|| ೫೦೦೧. ೪. ೧೧೬೫—ತಾ|| ೧೯ನೇ ಸೆಪ್ಟಂಬರ್, ೧೮೯೩.—ಸನ್೧೮೯೩ನೇ ಇಸವಿ ಆಗಸ್ಟ್ ತಿಂಗಳಲ್ಲಿ ನಡೆದ ಫಾರೆಸ್ಟ್ ಪರೀಕ್ಷೆಯಲ್ಲಿ ಇದರಡಿ ಕಂಡ ಉಮೇದ್ವಾರರು ಯೋಗ್ಯತಾಕ್ರಮಪ್ರಕಾರ ತೇರ್ಗಡೆಯಾಗಿರುತ್ತಾರೆ:—

೫೫ ಮೆ|| ಜಾರ್ಜ್ ಇ. ರಿಕೆಟ್ಸ್, ಗವರ್ನರ್ ಗವರ್ನಮೆಂಟ್ ಪ್ಲಾಂಟೇಷನ್‌ಗಳ ಚಾರ್ಜಿನಲ್ಲಿರುವ ಫಾರೆಸ್ಟ್ ಸಬ್‌ಅಸಿಸ್ಟೆಂಟ್ ಕನ್ಸರ್ವೇಟರ್.

೬೦. ಹೆಚ್. ರಾಮಯ್ಯ, ಚಿಕ್ಕಬಾಣಾವಾರದ ಪ್ಲಾಂಟೇಷನ್ ಡಿಪ್ಯುಟಿ ಫಾರೆಸ್ಟ್ ರೇಂಜರ್.

೫೭. ವಿ. ನರಸಿಂಹಮೂರ್ತಿರಾವ್ ರೇಂಜರ್, ಗುಬ್ಬಿ.

೧೫೬. ಶಿವಮೊಗ್ಗ ಅನಂತರಾಮಯ್ಯಂಗಾರ್, ಕಡೂರು ಡಿಸ್ಟ್ರಿಕ್ಟ್ ಲಕ್ಕವಳ್ಳಿ ಫಾರೆಸ್ಟ್ ರೇಂಜರ್.

೫೯. ಎಂ. ಸುಬ್ಬರಾವ್, ಗವರ್ನಮೆಂಟ್ ಪ್ಲಾಂಟೇಷನ್ ಡಿಪ್ಯುಟಿ ಹೆಡ್ ಕ್ಲರ್ಕ್.

೫೩೫. ಎಂ. ಸಿ. ಶ್ರೀನಿವಾಸಾಚಾರ್, ಮೈಸೂರ್ ಡಿಸ್ಟ್ರಿಕ್ಟ್ ನಂಜನಗೂಡು ಪಬ್ಲಿಕ್ ವರ್ಕ್ಸ್ ಇಲಾಖಾ ೫ನೇ ಸಬ್‌ಡಿವಿಜನ್ ಮುತ್ಸದ್ದಿ.

೫೮೮. ಕೆ. ಅನಂತರಾಮಯ್ಯಂಗಾರ್, ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್ಲವರ ಆಫೀಸ್ ಡೆಪ್ಯುಟಿ ಅಕೌಂಟಂಟ್.

೩, ೫೪, ೫೦೬, ೧೬, ೫೭. ಈ ನಂಬರಿನ ಉಳ್ಳ ಉಮೇದ್ವಾರರು, ಮೈಸೂರು ಸೀಮೆಯಲ್ಲಿ ಪ್ರತ್ಯಕ್ಷದಲ್ಲಿ ಜಾರಿಯೊಳಗಿರುವ ಫಾರೆಸ್ಟುಗಳ ಕನ್ಸರ್ವೇಟರ್ ಸರ್ಕಲ್ಲುಗಳಲ್ಲಿ ತೇರ್ಗಡೆಯಾಗದವರಾಗಿರುತ್ತಾರೆ.

ನಂ. ೫೦೫೬ ೧. ೫೯೮—ತಾ|| ೧೮ನೇ ಸೆಪ್ಟಂಬರ್, ೧೮೯೩—ಕ್ರಿಮಿನಲ್ ಪ್ರೊಸೀಜರ್ ಕೋಡ್ ೧೫ನೇ ಸೆಕ್ಷನ್ ಅನುಸರಿಸಿ ಗೂನ್ನಹಳ್ಳಿ ಮುನ್ಸಿಫ್ ಮೆ|| ಶಿವಪ್ರಕಾಶ ಪಿಳ್ಳೆಯವರಿಗೆ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತೆ.

## SUMMARY OF NEWS.

### ವೃತ್ತಾಂತ ಸಂಗ್ರಹವು.

ವಿಲಾಯತಿಯಲ್ಲಿ ಒಬ್ಬ ಸ್ತ್ರೀಯು ತನ್ನ ೧೯ನೇ ವಯಸ್ಸಿನಲ್ಲಿ ಮೊದಲನೇ ಗಂಡನನ್ನೂ, ತನ್ನ ೫೯ನೇ ವಯಸ್ಸಿನಲ್ಲಿ ಎರಡನೇ ಗಂಡನನ್ನೂ, ತನ್ನ ೭೦ನೇ ವಯಸ್ಸಿನಲ್ಲಿ ಮೂರನೇ ಗಂಡನನ್ನೂ ಮದುವೆ ಮಾಡಿಕೊಂಡಿರುತ್ತಾಳೆ, ಅವಳು ಈಗ ಮದುವೆ ಮಾಡಿಕೊಂಡಿರುವ ೩ ನೇ ಗಂಡನಿಗೆ ೩೦ ನೇ ವಯಸ್ಸು ನಡೆಯುತಲಿದೆ—ವೃ. ಪ.

ವಿಲಾಯತಿಯ ಒಂದಾನೊಂದು ದೇವಸ್ಥಾನದಲ್ಲಿ ಕೆಲವು ದಿನಗಳ ಕೆಳಗೆ ಒಂದು ಮದುವೆ ನಡೆಯಬೇಕಾಗಿತ್ತು. ಆಕಾಲಕ್ಕೆ ಸರಿಯಾಗಿ ಗಂಡಿನ ತಂದೆಯು ಬಂದು ಹೆಣ್ಣಿಗೆ ಗಂಡಿಗಿಂತಲೂ ಮೂರರಷ್ಟು ವಯಸ್ಸಾಗಿದೆ, ಆದ್ದರಿಂದ ಈ ಮದುವೆಯನ್ನು ನಡೆಸಕೂಡದೆಂದು ಆಕ್ಷೇಪ ಮಾಡಿದರು, ಆದರೂ ಗಂಡು ಹೆಂಡತಿಯರಾಗಬೇಕೆಂದು ಉದ್ದೇಶ ಮಾಡಿಕೊಂಡಿದ್ದವರು ಈ ಮಾತನ್ನು ತಿರಸ್ಕರಿಸಿ ಮದುವೆ ಮಾಡಿಕೊಳ್ಳುವದೇ ಸರಿಯೆಂಬದಾಗಿ ನಿಷ್ಕರ್ಷೆ ಮಾಡಿಕೊಂಡಿರುತ್ತಾರೆ.

ಪ್ರತಿ ವರುಷವೂ ಗಣಪತಿಯ ಮೂರ್ತಿಗಳನ್ನು ಜನರು ತಮ್ಮ ಮನಸ್ಸಿಗೆ ಪ್ರಿಯವಿದ್ದಂತೆ ಬಾಲಕನಂತೆಯೂ, ಪುರುಷನಂತೆಯೂ, ವೃದ್ಧನಂತೆಯೂ, ಗಡತರವಾಗಿಯೂ, ಕೃಶವಾಗಿಯೂ, ಮಲ್ಲನಂತೆಯೂ, ವೈರಾಗಿ ಫಕೀರನಂತೆಯೂ, ಆನೆ ಕುದುರೆ ಒಂಟೆ ಮೊದಲಾದವುಗಳ ಮೇಲೆ ಕೂತ್ತಿರಿಸಿ ಟೋಪಿ ಪಗಡಿ ಪಟ್ಟಕಾ ಜಟೆ ಅಥವಾ ಇಡಿ ತಲೆ ಸಣ್ಣ ಇಲ್ಲವೆ ಉದ್ದ ಕೂದಲು, ವಿಚಾರು ಕೋಟು ಇಲ್ಲವೆ ಬರೇ ಖಾಲು ತೊಟ್ಟುಕೊಂಡಂತೆ ಈ ಪ್ರಕಾರ ನಾನಾತರದಿಂದ ನೋಡುತಿರುವರು, ಆದರೆ ಈ ವರುಷ ನೋಡಿದ ಚಮತ್ಕಾರದ ಸುದ್ದಿ ರಾಣಿ ವಿನಂದರೆ—ಚೆಂಡು ಕೋಲಾಟ (ಕ್ರಿಕೆಟ್) ಹೂಗಿದ ಮೇಲೆ ಕಸರತ್ತು ಮಾಡುವ ಹೀಗೆ ಬೇರೆ ಬೇರೆ ವ್ಯಾಯಾಮವ ಆಡುವ ಮೂರ್ತಿಗಳು ದೃಷ್ಟಿಗೆ ಬಿದ್ದವು ಅದಂತೋಟಿ ಉಪಾಧ್ಯಾಯ ತತ್ವಸ್ವಾ ಎಂಬ ವಚನವು ನಿಜವೆಂದ ಪ್ರಸ್ತುತವಾಯಿತು, ಸ್ವತಂತ್ರರಾದ ನಮ್ಮ ಗವರ್ನರವರು ಆಟಕ್ಕೆ ಮುಷ್ಟಿ ಕೊಟ್ಟ ಮೇಲೆ ಭಕ್ತರು ಪೂಜಿಸುವ ಗಣಪತಿಯು ಆ ಆಟ ಆಡದ ಆದರ ಮಾಡುವರು—ಕ. ಸು.

## EXTRACTS.

ಈಚೆಗೆ ಮುಂಬೈಯಲ್ಲಿ ನಡೆದ ಭಯಂಕರವಾದ ಹೊಡೆದಾಟದಲ್ಲಿ ಅಪರಾಧಿಗಳ್ಯಾರೆಂಬುವದನ್ನು ಕುರಿತು ಮುಂಬೈಯಲ್ಲಿ ಪ್ರಕಟಿಸಲ್ಪಡುವ ಮುಸಲ್ಮಾನ ಪತ್ರಿಕೆಯೊಂದು ಪ್ರಕಟಿಸುತಿದೆ ಅದರಲ್ಲಿ ತಮ್ಮ ಜಾತಿಯ ಜನರು ಯಾವ್ಯಾವ ಮಾತುಗಳಿಂ ಲಕ್ಷ್ಯವಿಲ್ಲದಿರಬೇಕೆಂಬುವದನ್ನು ಆಪತ್ರಿಕೆಯು ಬರೆದಿರುತ್ತದೆ. ಅದೇನೆಂದರೆ, ನಮ್ಮ ಜಾತಿಯ ಜನರು ಮುಷ್ಕರ ಮಾಡುವದು ಸರಿಯಲ್ಲ, ಅವರೊಳಗೂ ಬುಷ್ಕರ ಜನರ ಸಂಗಡ ಬದುಕುವವರೆಗೆ ತಮ್ಮ ಜೀವ ಹೋಗುವ ದಕ್ಕಾಗಿಯೋ ಯೆಂದು ತಿಳಿಯಬೇಕು, ಈ ಯೂವತ್ತು ಹೊಡೆದಾಟದಲ್ಲಿ ಮುಸಲ್ಮಾನರೇ ದೊಡ್ಡ ತಪ್ಪು ಮಾಡಿದರು, ಅವರು ಮೊದಲನೇ ದಿವಸ ಹಿಂದೂ ಜನರಿಗೆ ತಕ್ಷಣ ಟಿಪ್ಪು ಏನಲಿಕ್ಕೆ ಯೇನೇನು ಕಾರ್ಯಗಳು ಮಾಡಬೇಕೋ ಅದಿಲ್ಲದಂ ಪಡುತಿದ್ದರಿಂದ ಮರುದಿವಸ ಅವರು ಬೇಗ ಸ್ವಲ್ಪ ಹೊಡೆದರು. ಏನೆಂದು ಈ ಹೊಡೆದಾಟದಲ್ಲಿ ನಮ್ಮ ಬಂಧುಗಳಾದ ಮುಸಲ್ಮಾನರೇ ಅಪರಾಧಿಗಳು, ಅನ್ಯಜನರ ಧರ್ಮಕ್ಕೆ ಹಾನಿ ತರುವದೂ ಅವರ ಪೂಜೆ ಮಾಡತಕ್ಕ ಮೂರ್ತಿಗಳನ್ನು ಒಡೆದು ಹಾಕುವದೂ ಉತ್ತಮವೆಂದು ಮುಸಲ್ಮಾನರ ಯಾವ ಶಾಸ್ತ್ರ ಪುರಾಣದಲ್ಲೂ ಹೇಳಿರುವದಿಲ್ಲವು, ಹೀಗಿದ್ದಾಗ್ಯೂ ಇವರು ಯಾಕೆಂತ ಹಿಂದೂಜನರ ದೇವಾಲಯಗಳನ್ನು ಕೆಡಿಸಿದ್ದು ಮೂರ್ತಿಗಳನ್ನು ಒಡೆದದ್ದು ಸಣ್ಣ ಅಪರಾಧವೇನು? ಹಿಂದೂ ಜನರು ಮಾಡಿದ್ದು ಸಿಟ್ಟಿನಿಂದಲ್ಲದೆ ಏನ ಯಾವ ಕಾರಣದಿಂದಲುಪದರು ಅವರು ಹೊಡೆಯುತಲಿಲ್ಲ, ಆವರ ದೇವಾಲಯಗಳಲ್ಲಿ ಹೋಗಿ ದೇವರುಗಳನ್ನು ಒಡೆದು ಅವರನ್ನು ಆಗ್ರಹಕ್ಕೊಳಪಡಿಸಿದ್ದರಿಂದ ಈ ಪ್ರಕಾರವಾದ ಭಯಂಕರ ದಂಗೆಗೆ ಕಾರಣವಾಯಿತು. ಆದದರಿಂದ ನ್ಯಾಯ ಮಾಡತಕ್ಕ ನ್ಯಾಯಾಧೀಶರು ಇದೆಲ್ಲವನ್ನು ಲಕ್ಷ್ಯಕ್ಕೆ ತಂದು ಪಕ್ಷಪಾತವಿಲ್ಲದೆ ಯಾರು ದುಷ್ಟರಿದ್ದಾರೋ ಅವರಿಗೆ ಅಪರಾಧಿಗಳಾಗಿದ್ದಾರೆ, ಅವರಿಗೆ ಅವಶ್ಯರ ಶಿಕ್ಷೆ ಕೊಡತಕ್ಕದ್ದು. ಇದನ್ನು ಮನಸ್ಸಿನಲ್ಲಿಟ್ಟುಕೊಂಡರೆ ಪಕ್ಷಪಾತವಿಲ್ಲದೆ ಸರಿಯಾದ ನ್ಯಾಯ ಸಿಕ್ಕುತಿದೆ, ಮುಸಲ್ಮಾನ ಜನರು ಕಲ್ಯಾಣಕ್ಕೆ ಹೋಗಿ ತಂತಿಯ ಕಾರಣವೇನೆಂದರೆ, "ಬಕರ ಗೋತ್ತಾಯಿತು" ಎಂಬ ಕಾರಣ ತಂತಿಯು ಹೊಡೆದಾಟದ ಮುಂಚಿತವಾಗಿ ಹೋಯಿತೆಂತೆ ತಿಳಿಯುವರುತಿದೆ ಅಂದಮೇಲೆ ಮುಸಲ್ಮಾನ ಜನರು ಕೆಲವು ದಿವಸಗಳಿಂದಲೂ ಮಸಲತ್ ಮಾಡಿ ಈ ಪ್ರಕಾರ ಸಂಕೇತ ತಂತಿಯನ್ನು ಕೊಟ್ಟಿರಬಹುದೆಂದು ಅನ್ನುತ್ತಾರೆ. ಅದರ ಇಂಗಿತವೇನೋ ತಿಳಿಯದು. ಈ ಯೂವತ್ತು ಹೊಡೆದಾಟದಲ್ಲಿ ಮುಸಲ್ಮಾನರೇ ಅಪರಾಧಿಗಳೆಂದು ಅವರ ಜಾತಿಯ ಪತ್ರಗಳೇ ಕೂಗುತಿವೆ—ಕ. ವೃ.

ಈಚೆಗೆ ಬಂದೆರಡು ವಾರಗಳ ಹಿಂದೆ ಇಲ್ಲಿನ ಒಂದು ಬಡಿದು ಹಿಂದೂ ಮುಸಲ್ಮಾನರೊಳಗೆ ಒಪ್ಪಂದವಾಯಿತು. ಆ ಮಾಟ ಪುರದೊಳಗಿನ ಹಿಂದೂಜನರೂ ಮತ್ತು ಸುತ್ತಮುತ್ತಲಿರುವ ಮುಸಲ್ಮಾನರೂ ಕೂಡಿ ಒಂದು ಸಭೆಯನ್ನು ಕೂಡಿಸಿದರು. ಈ ಸಭೆಯಲ್ಲಿ ಆ ಯೆರಡು ಜಾತಿಯವರುಕೂಡಿ ಸುಮಾರು ೫೦—೬ ಸಾವಿರ ಜನರು ಒಟ್ಟಾಗಿದ್ದರು, ಇವರು ತಾವು ಪರಸ್ಪರ ಹಾಳ್ ಮಾಡಿದ್ದರಿಂದ ಎರಡು ಪಕ್ಷದವರಿಗೂ ಬಹಳ ಹಾನಿ ಆದದ್ದಲ್ಲದೆ ತಮ್ಮ ತಮ್ಮ ಉದ್ಯೋಗವೆಲ್ಲ ಸರಿಯಾಗಿ ನಡೆಯುವದಿಲ್ಲವಾದ್ದರಿಂದ ತಾವು ಮಾಡಿದ ಅವಿಚಾರಕಾರ್ಯದ ಸಲುವಾಗಿ ವ್ಯಸನಪಟ್ಟು ಇನ್ನುಮುಂದೆ ತಾವು ಐಕಮತ್ಯದಿಂದಿರಬೇಕೆಂದು ನಿಶ್ಚಯಿಸಿ ಪರಸ್ಪರ ಹೊಂದು ಮಿಲಾಯಿಯನ್ನು ತೋರಿಸಿದರು. ಮರುದಿವಸ ಪ್ರಾತಃಕಾಲ ಇನ್ನೊಂದು ಸಭೆಯಲ್ಲಿ ಎರಡು ಪಕ್ಷದವರೂ ತಮ್ಮೊಳಗೆ ಪ್ರೀತಿಯು ಪುನಃ ಉಂಟಾದದ್ದನ್ನು ಪ್ರದರ್ಶನ ಮಾಡುವದಕ್ಕಾಗಿ ಒಟ್ಟಾಗಿ ಮೆರವಣಿಗೆ ತಿರುಗಿದರು. ಈ ದಿಬ್ಬಣದ ಸಂಗಡ ಮಿ|| ವಿನ್‌ಸೆಂಟ್ ಸಾಹೇಬರೂ ಅವರ ಪತ್ನಿಯವರೂ, ಮೆ|| ಆಕ್ಸ್‌ಫರ್ಡ್ ಸಾಹೇಬರೂ ಬಂದಿದ್ದರು. ಇದಲ್ಲದೆ ಮತ್ತೊಂದು ದಿವಸ ಕ್ರಾಫರ್ಡ್ ಮಾರ್ಕೆಟ್ ಹತ್ತಿರ ಸುಮಾರು ೩,೦೦೦ ಹಿಂದೂ ಮುಸಲ್ಮಾನರು ಕೂಡಿ ದಾರಿ ಬೀದಿಗಳಲ್ಲಿ ವಾದ್ಯಯುಕ್ತರಾಗಿ ಮೆರೆದರು. ಈ ದಿಬ್ಬಣದ ಸಂಗಡ ಪೊಲೀಸ್ ಕಮಿಷನರೂ ಆಕ್ಸ್‌ಫರ್ಡ್ ಸಾಹೇಬರೂ ಇದ್ದರು ದಾರಿಯಲ್ಲಿ ಪೊಲೀಸ್ ಕಮಿಷನರಿಗೆ ಒಂದೆರಡು ಅಂಗಡಿಯವರು ತಮ್ಮ ಕೃತಜ್ಞತೆಯನ್ನು ತೋರಿಸುವದಕ್ಕಾಗಿ ಪುಷ್ಪಮಾಲೆಯನ್ನು ಹಾಕಿದರು. ಆ ಕೂಡದ್ದರ ತರುವಾಯ ನಿನ್ನೆ ಸಂಜೆ ಹಿಂದೂ ಮುಸಲ್ಮಾನರು ಒಟ್ಟಾಗಿ ಮೆರವಣಿಗೆ ತಿರುಗಿದರು. ಹಿಂದೂ ಮುಸಲ್ಮಾನರ ಒಟ್ಟು ಕೂಡುವಿಕೆಯು ಆ ದಿಣವು ಜನರು ಮಾತಾಡುವ ಪ್ರಕಾರ ಅವರವರ ಉದ್ಯೋಗದ ಆಸಕ್ತಿಯಿಂದ ಆದದ್ದೆಂದು ಹೇಳುತಾರೆ. ಆದರೆ ಇಂಗ್ಲಿಷ್ ಪತ್ರಗಳಲ್ಲಿ ಪೊಲೀಸ್ ಕಮಿಷನರು ಮೊದಲಿನ ದಿವಸದ ಮಧ್ಯಸ್ಥಿಕೆಯೋ ಇದಕ್ಕೆ ಕಾರಣವೆಂತ ಹೇಳುತ್ತಾರೆ. ಇಲ್ಲಿಯ ದಂಗೆಯುಳ್ಳದಿದ್ದರೆ ಪೊಲೀಸ್ ಬಂದೋಬಸ್ತಿಗೆ ತಮ್ಮ ಸ್ವಾತಂತ್ರ್ಯವನ್ನೂ ಲಕ್ಷಿತವನ್ನೂ ತೋರಿಸುವ ಸಮಯ ಒದಗುತ್ತಿತ್ತು. ಈ ಪ್ರಕಾರ ಜನರೊಳಗೆ ಒಪ್ಪಂದವಾದದ್ದು ಬಹಳ ಸಂತೋಷದ ಕಾರ್ಯವಾಯಿತು. ಇಲ್ಲಿ ದಂಗೆಯು ಆದಂದಿನಿಂದ ಹಿಂದೂ ಮುಸಲ್ಮಾನರು ಪರಸ್ಪರ ಯಲ್ಲ ವ್ಯವಹಾರ ನಿಲ್ಲಿಸಿಬಿಟ್ಟದರಿಂದ ಅವರವರ ಉದ್ಯೋಗಗಳಿಗೆ ಬಹಳ ತೊಂದರೆಯಾಗಿತ್ತು. ಇದೇ ಈ ಒಪ್ಪಂದದ ಕಾರಣವಾಯಿತು—ಕ. ಸು.

ಮುಂಬೈಯಲ್ಲಿ ದಂಗೆ ಪಡೆದ ಹಿಂದೂಜನರಲ್ಲಿ ೫೦ ಜನ ವಿಚಾರಣೆಯಾಗಿ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಅವರಿಗೆ ಒಂದೊಂದು ರೀತಿಯ ಶಿಕ್ಷೆ ಮಾಡಿದರು. ಕಾಳಿಕಾದೇವಿ ಓಣಿಯಲ್ಲಿ ಮಾರವಾಡಿಯವನ ಅಂಗಡಿಯಲ್ಲಿ ನುಗ್ಗಿದ್ದರು ಹಿಂದೂಗಳು ಬಟ್ಟೆಗಳನ್ನು ತೆಗೆದುಕೊಂಡು ಗುತ್ತಿಗೆಯ ಅವರನ್ನು ಹಿಡಿದು ವಿಚಾರಣೆ ಮಾಡಿ ಒಬ್ಬೊಬ್ಬನಿಗೆ ಮೂರು ಮೂರು ತಿಂಗಳ ಶಿಕ್ಷೆಯಾಯಿತು. ಒಬ್ಬ ನಾ ಮೂವರು ಮುಸಲ್ಮಾನರು ಒಬ್ಬ ಜೋಹಾರದವನನ್ನು ಬಡಿದು ಗಾಯಪಡಿಸಿದ್ದರಿಂದ ಅವರಲ್ಲಿ ಪ್ರತಿಯೊಬ್ಬನಿಗೆ ೫೦ ರೂಪಾಯಿ ದಂಡ ಅಥವಾ ಒಂದು ತಿಂಗಳ ಕೈದ್ ವಿಧಿಸಿದರು, ಒಬ್ಬ ಮಾರವಾಡಿ ಹುಡುಗನ ಅಂಗಡಿ ಹಿಡಿದ ೩ ಮಂದಿ ಮುಸಲ್ಮಾನರಿಗೆ ಹಂದೂಗೆ ವರ್ಷದವರೆಗೆ ಕೈದ್ ಆಯಿತು ಒಬ್ಬ ಹಿಂದೂಯವನು ಒಬ್ಬ ಮುಸಲ್ಮಾನನಿಗೆ ಒಂದು ಕಲ್ಲು ಹೊಡೆದು ಗಾಯಪಡಿಸಿದ ಕಾರಣ ಅವನಿಗೆ ಮೂರು ತಿಂಗಳ ಕಠಿಣ ಶಿಕ್ಷೆ ವಿಧಿಸಿದರು. ಒಬ್ಬರೊಳಗೆ ಬೆಂಕಿ ಹಚ್ಚಿದ್ದ ಒಬ್ಬ ಕಾರಿಯರ್ ಹಿತಾಂಬರ ಎಂಬುವನಿಗೆ ೫೦ ರೂಪಾಯಿ ದಂಡ ಅಥವಾ ೫೦ ದಿವಸದ ಸಜಾ ವಿಧಿಸಿದರು ಕಾರಣ ಹೊಡೆದಾಟದ ಮೇಲೆ ಸರಕಾರದವರು ವಿಧಿಸಿದ ೩೬ ಹಿಂದೂ ಕೈದಿಗಳಲ್ಲಿ ಮೂವರನ್ನು ಬಿಟ್ಟರು. ೭ ಮಂದಿ ಹಾಜರಾಗಲಿಲ್ಲ, ಉಳಿದವರಲ್ಲಿ ೧೧ ಮಂದಿಗೆ ೧೮ ತಿಂಗಳ ಕೈದ್ ಮತ್ತು ಉಳಿದ ೧೫ ಮಂದಿಗೆ ಆರು ತಿಂಗಳ ಸಜಾ ವಿಧಿಸಿದರು. ಸುತಾರ ಪೋಲೀಸಿನಲ್ಲಿ ಹೊಡೆದುಹಾಕಿದ ೨೨ ಹಿಂದೂಗಳಲ್ಲಿ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ೧೯ ತಿಂಗಳ ಸಜಾವನ್ನೂ ಉಳಿದವರಿಗೆ ಆರು ತಿಂಗಳ ಶಿಕ್ಷೆಯನ್ನೂ ವಿಧಿಸಿದರು. ಬಾಂಬಿಯಾಗದ ಬೀದಿಗೆ ಹೊಡೆದ ನಡೆಸಿದ ೧೫ ಮಂದಿ ಹಿಂದೂಗಳಿಗೆ ಒಂದೊಂದು ರೂಪಾಯಿ ಜುಲ್ಮಾನೆ ಹಾಕಿದರು. ಸಿಪಾಯಿಯ ಎಂಬ್ಲುವ ದೇವರ ಗುಡಿಯನ್ನು ಹೊಕ್ಕು ಅದನ್ನು ಜನಗಳಿಂದ ಲೂಟಿಮಾಡಿದ ೧೬ ರು ಮುಸಲ್ಮಾನರಲ್ಲಿಯು ಒಬ್ಬನಿಗೆ ೨ ವರ್ಷ ಮತ್ತೊಬ್ಬನಿಗೆ ೧ ವರ್ಷದ ಶಿಕ್ಷೆಯಾಯಿತು. ಮುಂಬೈ ದಂಗೆಯಲ್ಲಿ ಒಬ್ಬ ವಿನಾಯಕನೆಂಬುವನ ಅಂಗಡಿಯನ್ನು ಒಡೆದ ಮೂರುಮಂದಿ ಮುಸಲ್ಮಾನರಿಗೆ ಎಂಟೆಂಟು ತಿಂಗಳ ಶಿಕ್ಷೆಯಾಯಿತು. ಬೇರೆ ೫೦ ಮುಸಲ್ಮಾನರಿಗೆ ಒಂದೊಂದು ರೂಪಾಯಿ ದಂಡ ವಿಧಿಸಿದರು, ೫೩ ಹಿಂದೂಜನರು ಮಸೀದಿಯಲ್ಲಿ ಹೊಕ್ಕು ಅಪವಿತ್ರಮಾಡಿದ್ದರಿಂದ ಎರಡೆರಡು ವರ್ಷವು, ಬೇರೆ ೫ ಮಂದಿಗೆ ಆರಾರು ತಿಂಗಳು, ೧೧ ಮಂದಿಗೆ ಮೂರುಮೂರು ತಿಂಗಳು ಶಿಕ್ಷೆ ಕೊಟ್ಟರು. ೯ ಮಂದಿಗೆ ಒಂದೊಂದು ರೂಪಾಯಿ ದಂಡವನ್ನು ಉಳಿದ ೧೦ ಜನರನ್ನು ಹಾಗೆ ಬಿಟ್ಟರು. ಈ ಹಿಂದಾಗಿನ ವಿಚಾರಣೆಗಳ ತೂರಲಗಳನ್ನು ಯು ನಡೆಯಿತು.—ಕ. ಪತ್ರ.

### (ಕಳುಹಿಸಿದ್ದನ್ನು)

ಶ್ರೀ ಕರೋತಕದಲ್ಲಿ ದ್ರವ್ಯವನ್ನು ಸಂಪಾದಿಸಿ ೭ ಎಡವುವ ದಕ್ಕೆ ಸಾಧಕವಾದ ಸ್ಥಿತಿ ಮತ್ತು ವ್ಯಾಪಾರಾದ್ಯವಸ್ಥೆ ಉಪಾಯಗಳನ್ನು ಅರಿಯದೆ ಸಂಕಟಪಡುತ್ತಾ ವಾಸನೆಗೆ ಮರುಳಾಗಿ ಕೇತಕಿಯ ಕುಸುಮದಲ್ಲಿ ಬೀಳುವ ದುಂಬಿಯ ಹಾಗೆ ಧನಿಕನ ಡಾಂಭಿಕವನ್ನು ಮರುಳಾಗಿ ವಿಶ್ವಕ್ಕೆ ಬಂದ ಬಡವನು ಹೆಣವನ್ನು ನೋಡಿ, ನೊಣ್ಣದ ಬೆಕ್ಕಿನಂತೆ ಬೆಣ್ಣೆಗಳನ್ನು ನಂಬಿ ಹಾಕಿಕೊಂಡು ದುರ್ವಿಧಿಯಿಂದ ಬೇಡಿಬಂದ ಯಾಚಕನ ಹಣೆಯಲ್ಲಿ ಬರೆದಿರುವ ಬ್ರಹ್ಮಶಾಸನವನ್ನು ದೂರದಿಂದ ಓದುವವನಂತೆ ಹುಬ್ಬುಗಳನ್ನು ಮೇಲಕ್ಕೆ ಎತ್ತಿ, ಶುದ್ಧವಾದ ಸಾತ್ವಿಕಾಸನಕ್ಕೆ ಇತರ ಬಾಹ್ಯವಾದಗಳನ್ನು ಬೋಳನ ಮಾತಿ, ಸ್ವಭಾವಸಿದ್ಧ ಶುದ್ಧವಾಗಿರಬಾರದೆಂಬುವದನ್ನು ವ್ಯಕ್ತಪಡಿಸುತ್ತಾ, ನಿಶ್ಚಲವಾದವನ್ನು ಮಾಡಲವೇ ತಿಳಿಸುವ ಕತ್ತೆಯಂತೆ ಗೈದಪ್ಪರವನ್ನು ಬಿಟ್ಟು ಹೊಸ್ತರವನ್ನು ಅವಲಂಬಿಸಿ ಕಠಿಣವಾದ ವಾಕ್ಯಾಣಿಗಳಿಂದ ಯಾಚಕನನ್ನು ತಿರಸ್ಕರಿಸುವುದೇ ದುರ್ಜನ ಮನುಷ್ಯರ ಸ್ವಭಾವವು; ತ ಮುಂದೆ ಮೇಲೆ ಕೂತಿರುವ ಗೂಡೆಯನ್ನು ಸ್ವ ನಿವಾರಣ ಮಾಡಿಕೊಳ್ಳದೆ ಮತ್ತೊಬ್ಬನ ಕಡೆಗಣ್ಣಿನಲ್ಲಿ ಕಪ್ಪನ್ನು ನೋಡಿ ಅವನ ಪಾಂಡಿತ್ಯವನ್ನು ನಿಂದಿಸುತ್ತಾ, ನಮ್ಮ ಪರದಿನೆಯನ್ನು ಮಾತ್ರ ವಾಕ್ಯವಿದ್ದರು ಕೇಳದೆ ಕಿವಿಗೊಡದೇ ತನ್ನ ಮನಸ್ಸಿಗೆ ಬಂದಂತೆ ಮಾತನಾಡುತ್ತಿದೇ ಸಕಲ ಕಲಾ ಕೋವಿದರ ಲಕ್ಷಣವು, ಮನೋರಥ ಯೌವನ ಧನಗಳನ್ನು ಪೆಟ್ಟಿಮಾಡಿ ದಾರಿದ್ರ್ಯ, ವ್ಯಾಧಿ, ಶೋಕಾದಿ ಮನಃ ಪಾಲನೆಗಳನ್ನು ಸಂಪಾದಿಸುವ ಬಾಲದೇಹ ಧರ್ಮಾರ್ಥ ಕಾಮ ಮೋಕ್ಷ ಭೂತವಿದ್ಯಾ ಪರಿಸ್ಥಿತಿಯಲ್ಲಿ ಕೂಡ ಲಾಭದಾಯಕನಾಗಿ ಶ್ರೀಮಂತಿಕೆಯನ್ನು ಪಡೆಯುವ ದೀನತ್ವದವನ್ನು ಸಂಗದ ಸುಖವನ್ನು ವ ಪಾ ನಿರ್ದಯಕ್ಕೆ ಆಕರವು; ನೀತಿಯೊಡನೆ ಸಂಪದವನ್ನು, ನಾಶ ಮಾಡದ ದ್ರವ್ಯವು, ಏನೂ ದಕ್ಷತೆಯು; ಬಹು ಪ್ರಪಂಚದಿಂದ ಅನರ್ಥವಾದ ಏನವನ್ನು ನಿಷಿದ್ಧದ ಎಷ್ಟು ಕಾಲವು ಕಬ್ಬಿನಂತೆ ಏಕ ಕ್ರಮದಿಂದ ಸಂಗ್ರಹಿಸಿದ ಯಶಸ್ಸನ್ನು ನಾಶ ಮಾಡುವ ಸ್ವಾರ್ಥಿಯು ಸುಖಾಧಿಕಾರಿ ಸಂಪಾದನ ಕಾರಣಕ್ಕೆ ಗಿಂತಲೂ ಶ್ರೇಷ್ಠವಾದ ಕಾರ್ಯ ಭಾಗಗಳೂ ಪರಿಪಾಲನೆ; ಮರಣಾನಂತರ ದೇಹವನ್ನು ಕಾಪಾಡುವುದಕ್ಕೆ ಬರುವ ಧರ್ಮವನ್ನು ಸುಖವನ್ನು ಮಾಡಬೇಕೆಂಬ ಅಭಿಲಾಷೆಯಿಂದ ಸಾಮ್ರಾಜ್ಯವನ್ನು ಬಿಡುವಂತೆ ಕೇವಲ ಮೋಹಪಾಶ, ಮುಂದೆ ತಿಳಿಸುವ ನೀತಿವಚನಗಳನ್ನು ಸ್ವಸ್ವಭಾವದ ಮಾರ್ಗದಲ್ಲಿ ಸಂಭವನೀಯ ಬಾಲಬುದ್ಧಿ ದಾನ-ಸ್ನಾನಗಳನ್ನು ಮಾಡಿ ಬಂದು, ಬೇಕೆಂದ ಆ ರೂಪ ತೋಟಗಳನ್ನು ಮಾಡಿಸಿ ಒಟ್ಟು ಹಿಂದಿನ ದಂಪತಿಗಳ ಹಾಗೆ ಬರೆ ಮಾಡುವುದೇ ಪಾಲಿಶನಿಕೆ ದ್ವಿ ಪುಟ್ಟ ದೃಷ್ಟಿಗೆ ಫಲವು; ಸಂದರ್ಭವೆಂಬುವ ಬಾಲಪೋರ ತನದಿಂದ ಉಪಲಬ್ಧವಾದ ಬುದ್ಧಿ ಕೌಶಲ್ಯವನ್ನು ಸದಾಚಾರ ಮಾರ್ಗದಲ್ಲಿ ಉಪಯೋಗಿಸುತ್ತಾ ವಿವಾಹದ ದಿವಸದ ಮೊದಲಾದ ಸುದಿನಗಳಲ್ಲಿ ಮನಸ್ಸು ಆದರ್ಶವಾಗುವಂತೆ ಮಾಡಿಕೊಳ್ಳುವುದು ಬೇಕಾಗಿ ಸಂದರ್ಭಸಿದ್ಧ ನಡವಳಿಕೆ ಅನಾಯಾಸವಾಗಿ ಅನುಸರಿಸಿ ವಿತ್ತವನ್ನು ಕಳೆದುಕೊಂಡವರಿಗೂ, ಮತ್ತು ಅವರನ್ನು ಆಶ್ರಯಿಸಿರುವ ಜನರಿಗೂ ಮನೋವ್ಯಾಧಿಯನ್ನುಂಟುಮಾಡುವುದು, ಮತ್ತು 'ಜನಮನ್ನು ಬಿಟ್ಟು, ತನ್ನ ಒಪ್ಪಿನ ಸಾಧನಾ ಕಾಲ ಬಗಳನ್ನು ನಿವಾರಿಸದೇ ಮನಸ್ಸಿಗೆ ಬಂದ ಜನ ಸಂಗದ ವಿಹರಿಸುವುದೇ ಮನುಷ್ಯತ್ವ ಸ್ತ್ರೀಗೆ ದರ್ಪವು ಎಂದು ಹೇಳಿರುವ ಶಾಸ್ತ್ರವಾಕ್ಯಗಳಿಂದ ಸಾಧ್ಯವಾದ ಮಟ್ಟಿಗೂ ಸ್ತ್ರೀ ಯರ ಪ್ರಕೃತಿಯನ್ನು ಮಾಡಿ ಸ್ತ್ರೀಯರಿಗೆ ಇರುವುದು ಸುಲಭ ದ ಪ ಬಿಸಿ ಧರ್ಮವನ್ನು ತಮ್ಮ ಪ ನಮ್ಮಗೆ ಯಾವ ರೀತಿಯಾಗಿ ತೋರುತ್ತದೆ ... ದ ಗೀತ ಪ್ರಸಂಗಗಳನ್ನು ಶ್ರೀಕೃಷ್ಣ ದೇವನ ನುಡಿಯಿಂದ ಮಾಡುವ ಪ್ರತಿಜ್ಞೆಯ ಒಬ್ಬರು ... ಹೇಳುವದೇ ನಿಜ್ಜ ಮನುಷ್ಯರ ಶಿ ... ಗಳನ್ನು ಸಾಧಿಸಲು ಬಿಟ್ಟೆ ಮುಖ್ಯ ಸಾಧಕವು ... ಅಲ್ಲದೆ 'ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂ ... ಗಳು ವಿಷಯದಲ್ಲಿ ದುರ್ಗುಣದ ಕಾರ್ಯವನ್ನು ... ಪೂಜೆ ಮಾಡುವ ಗುಣವನ್ನು ಬಿಡಿಸಿದರೆ ... ನಿವಾರಣಾಮಾಡದೆ ಎಲ್ಲರೂ ಹೇಳುವ ವಾರ್ತೆ ದೃಢವಾದ ಪ್ರಯೋಗ ... ಎಂದು ಬುದ್ಧಿಶಾಲಿ ... ಬಟ್ಟೆ ಮುಟ್ಟಿಕೊಂಡು ಒಬ್ಬನ, ಹೋದ ದಾರಿಯಲ್ಲಿ ತಾವೂ ಹೋಗುತ್ತಾ ಮಾನಸವಾದವನ್ನು ಸ್ಥಿರವಾಗಿರಿಸಿ ತೀರಾ ಹೊಟ್ಟೆಯನ್ನು ಬಿಡಿಸಿಕೊಳ್ಳುವ ಹಲವು ಬುದ್ಧಿಶಾಲಿಗಳು, ಅಧಿಕ್ಯ ಹಿರಿಯರೂ, ವಿದ್ಯಾವಂತರೂ, ಉಪಕಾರ ಮಾಡುವವರಿಗೆ ಗುಣವನ್ನು ನಿರೀಕ್ಷಿಸಿ ಕೊಂಡಿದ್ದು ಅಪಕಾರವನ್ನು ಮಾಡುವದೇ ಕೃತಘ್ನನ ಧರ್ಮವು; ಇತ್ಯಾದ್ಯನೇಕ ಸೂತ್ರಾರ್ಥಗಳನ್ನು ಮಾನವರ ಹೃದ್ಯಾಂತಃಪ್ರವಿಷ್ಟನಾಗಿ ಉಪದೇಶಿಸುವ ಕಲಿಯು ಪ್ರಭಾವದಿಂದ ಅತ್ಯಂತ ಸಂಭಾವಿತರಾದ ಆರ್ಯರೆಲ್ಲರೂ ಉದಾಸೀನರಾಗಿಯೂ ಮಾರ್ಗಾನುವರ್ತಿಗಳಾಗಿರುವರು, ಈ ಕಾಲದಲ್ಲಿ ಆರ್ಯರ ಸದಾಚಾರವು ಧರ್ಮಗಳು ಕಲಿಮಲದಿಂದ ಕಲುಷಿತವಾಗಿರುವ ರೀತಿಯನ್ನೂ ಮತ್ತು ಕಲಿಯ ಉತ್ಕ್ರಮವನ್ನೂ ಮುಂದಿನ ಪತ್ರಿಕೆಯಲ್ಲಿ ಸಿದ್ಧಗೊಳಿಸುವೆವು.

ಕರ್ಣಾಟಕ ವೃತ್ತ ತಾ|| ೧೯—೯—೯೩.

BANGALORE.—Printed and published at the KARNATAKA PRESS, No. 40, HOSPITAL ROAD, CITY.—1893

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning.**

ಪ್ರಕಾಮವಿವಿಧಪ್ರವೃತ್ತ್ಯುನಗನಾರ್ತ್ಥಕರ್ಣ್ಣಾಟಕಪ್ರಕಾಶನಪರಾಭಿದಾಪ್ರಥಿತಸಾಹಿತೀಶೋಭಿತಾ ॥ ಮ್ಯುಗಾಂಕಹಿತವಾಸನೆನಿಹಿತಮುದ್ರಣಾಸಜ್ಜಸ್ಸಿದ್ಧಾಸುಪರಿಶೋಧಿತಾದಿಕಶಿವಾನಸುಸಂಮುದಂ ॥

Vol. XX | ಸಂಪುಟ ೨೦. | BANGALORE—MONDAY, OCTOBER 2, 1893. | [No 39.

ಬೆಂಗಳೂರು:—ಸರ್ ೧೮೯೩ನೇ ಇಸವಿ ಅಕ್ಟೋಬರ್ ೨ ನೇ ತಾರೀಖು ಸೋಮವಾರ. | [ಸಂಚಿಕೆ ೩೯.


## ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

| | ಸ್ಥಳದವರಿಗೆ. | ಪರಸ್ಥಳದವರಿಗೆ. |
|---|---|---|
| ಸಾಲ್ ೧ಕ್ಕೆ ... | 6—0—0 | 8—0—0 |
| 6 ತಿಂಗಳಿಗೆ ... | 3—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

| | ಸ್ಥಳದವರಿಗೆ. | ಪರಸ್ಥಳದವರಿಗೆ. |
|---|---|---|
| ಸಾಲಿಂಕ್ಕೆ ... | 3—0—0 | 4—0—0 |
| 6 ತಿಂಗಳಿಗೆ ... | 1—12—0 | 2—8—0 |

ಈ ಪತ್ರಿಕೆಗೆ ದರಖಾಸ್ತು ಮಾಡಿದ ತಾರೀಖಿನಿಂದ ಒಂದು ತಿಂಗಳೊಳಗಾಗಿ ಚಂದಾ ಹಣವನ್ನು ಕಳುಹಿಸುವವರಿಗೆ ಮಾತ್ರ ಅಡ್ವಾನ್ಸ್ ದರದಲ್ಲಿ ಪತ್ರಿಕೆ ಕಳುಹಿಸಲ್ಪಡುವದು ... ಇಂಗ್ಲಿಷ್ ಒಳಗಿನ ವ್ಯಾಗಳಿ ಕನ್ನಡದವರನ್ನ ... ಕಳುಹಿಸಲ್ಪಡುವದು. ಮುಂಗಡ ಹಣ ... ಚಂದಾ ಹಣವನ್ನು ... ದು.

ಪ್ರಕಟನೆಯ ದರ.

| | | |
|---|---|---|
| ಮೊದಲನೆಯದಾಗಿ ಪಂಕ್ತಿ ಒಂದಕ್ಕೆ | ೦—೨—೦ | |
| ಎರಡನೆಯದಕ್ಕೆ ಪಂಕ್ತಿ ಒಂದಕ್ಕೆ | ೦—೧—೦ | |

ಶರಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಪ್ರಕಟಿಸತಕ್ಕ ಘಸಿಯ ಮುದ್ರಿತಾ ವ್ಯಾಪಾರ ಒಂದಕ್ಕೆ ೧ ಆಣೆಯಂತೆ ... ವಸೂಲು ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಖಾಯಮ್ ಆಗಿ ಪ್ರಕಟನೆಗಳನ್ನು ಕಳುಹಿಸುವವರು ಅವು ಎಷ್ಟಾವರ್ತಿ ಪ್ರಕಟವಾಗಬೇಕೋ ಆ ಅಂಕೆಯನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ... ಪ್ರಕಟನೆಯ ... ಬರೆಯುವವರು ... ಎಷ್ಟಾವರ್ತಿ ಪ್ರಕಟಿಸಲ್ಪಡಬೇಕೆಂದು ... ಬೇಕಾದರೆ ... ಪ್ರಕಟನೆಯೊಂದಿಗೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ... ಕಳುಹಿಸಬೇಕು. ಪ್ರಕಟನೆಯ ಹಣ ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳು ... ನಾವು ಜವಾಬ್ದಾರರಾಗಲಾರೆವು. ಕ್ರಮವಾಗಿ ರುಜುಮಾಡಿ ದಿರೋರ್ದು ಯಾವ ಕಾಗದವನ್ನು ಪ್ರಕಟಿಸಲಾರೆವು. ಸಂಕೇತಿಸಲ್ಪಟ್ಟ ಕಾಗದಗಳು ... ಕಳುಹಿಸಲ್ಪಡಲಾರವು.

*ADVERTISEMENTS.*


## NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

*Price including Postage Rs 5 0 0*

ವೈದ್ಯಸಾರ ಸಂಗ್ರಹ.

ಈ ಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಂದಿಗೆ ಪತ್ರ ರುಜು ಮಾಡಿಕೊಟ್ಟವರ ವಿಳಾಸಕ್ಕೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಸೀ ... ಲ್ಪಡಲಾರದು.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಸಾಗಲು, ರಿಜಿಸ್ಟರ್ ಪ್ರತಿ ಒಂದಕ್ಕೆ ರೂ 5 -0—0

ಕಿ. ಬಿ. ವೆಂಕಟಾಚಾರ್,

ಬೆಂಗಳೂರ್. ಪಸರ್ ಆಸ್ಪತ್ರೆ ರೋಡ್ ೪೦ ನೆಂಬರ್

## ನೋಟಿಸ್.

ಬೆಂಗಳೂರು ಕರ್ಣಾಟಕ್ ಪ್ರೆಸ್.

೧೮೭೩ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ, ಸಕಲವಿಧ ಕೆಲಸಗಳು ಸುಲಭಬೆಲೆಗೆ ತೀವ್ರವಾಗಿಯೂ ಶುದ್ಧವಾಗಿಯೂ, ನಡೆಸ್ಪಡುತ್ತವೆ.

ಇದರಲ್ಲಿ ಸದ್ಯಕ್ಕೆ ಇಂಗ್ಲಿಷ್ ಕನ್ನಡ ಕೆಲಸಗಳು ಮಾತ್ರ ನಡೆಯುತ್ತವೆ. ಇತರ ತರಹೆಯ ಕೆಲಸಗಳನ್ನು ಸಹ, ಕಾರ್ಯದ ಮೇಲ್ ... ಬರೆದು ತರಿಸಿಕೊಳ್ಳಬಹುದು

## ನೋಟಿಸ್.

ಗಣೇಶ ರಾಮಚಂದ್ರ ಕರ್ಕೆ ಮತ್ತು ಕಂಪೆನಿ. ಕಮಿಷನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಜಾಗ್ರತೆಯಿಂದ 'ವೇಲ್ಯೂ ಪೇಯಬಲ್ ಪೋಸ್ಟ್' ಮೂಲಕ ತಕ್ಕ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರಹದ ವಸ್ತ್ರಗಳು, ಪುಸ್ತಕಗಳು, ಮುತ್ತುಗಳು, ಬಿಳಿ ಮುತ್ತುಗಳು, ಫಣಿಪುರಗಳು, ವಾಚ್‌ಗಳು, ಟ್ರಂಕುಗಳು, ಕಾಶ್ಮೀರ ಶಾಲುಗಳು, ಪಟ್ಟೇಗಳು, ಜರತಾರಿ ಕಣಗಳು, ... ಕನ್ನಡಿಗಳು, ... ಪತ್ರ ... ಉಪಕರಣಗಳು, ಜರತಾರಿ ಟೋಪಿಗಳು, ಆಫೀಸ್ ಡ್ರೆಸ್‌ಗಳು, ಕರ್ಟನ್‌ಗಳು, ಅತ್ತರುಗಳು, ಅತ್ಯುತ್ತಮವಾದ ರತ್ನಗಳು ... ಕಟ್ಟಲ್ಪಟ್ಟ ಆಭರಣಗಳು, ಪಾತ್ರೆಗಳು, ಜರ್ಮನ್ ಬೆಳ್ಳಿ ಪಾತ್ರೆಗಳು, ಕೇಸರಿ, ಕಸ್ತೂರಿ ಮತ್ತಿತರ ಇತರ ಸಾಮಾನುಗಳು.

ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟ್ಯಾಂಪ್ ಕಳುಹಿಸಿದ ಹೊರತು ಜವಾಬು ಬರೆಯಲಾರೆವು

ವಿಳಾಸ.—ಗಣೇಶ ರಾಮಚಂದ್ರ ಕರ್ಕೆ, ಮತ್ತು ಕಂಪೆನಿ, ಕಮಿಷನ್ ಏಜಂಟ್ಸ್, ಠಾಕೂರದ್ವಾರ, ಮಾರ್ಕೆಟ್ ಪೋಸ್ಟ್, ಮುಂಬೈ.

## ನೋಟಿಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕರೀಗೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

### ಸಂಸ್ಕೃತ ಗ್ರಂಥಗಳು.

| | ರೂ | ಆ | ಪೈ |
|---|---|---|---|
| ಸಟೀಕಾ ವೈದ್ಯಸಾರ ಸಂಗ್ರಹ | ೫ | ೦ | ೦ |
| „ ಶಿವಾಗೀತೆ | ೧ | ೨ | ೦ |
| „ ನೈವಾಕ್ಯಮಾಲಾ | ೦ | ೮ | ೦ |
| „ ಕಾಲಾಮೃತ | ೧ | ೦ | ೦ |
| „ ಟಿ॥ ಬಾಲರಾಮಾಯಣ... | ೦ | ೩ | ೦ |
| „ ಟಿ॥ ಗೋಪಿಕಾ ಗೀತ .. | ೦ | ೧ | ೦ |
| „ ಟಿ॥ ಚಾಣಕ್ಯನೀತಿ (ಸುಭಾಷಿತ) | ೦ | ೮ | ೦ |
| ವಿಷ್ಣುಸಹಸ್ರನಾಮ ವ್ಯಾಖ್ಯೆ | ೦ | ೩ | ೦ |
| ಸುದರ್ಶನಸಹಸ್ರನಾಮ | ೦ | ೨ | ೦ |
| ಕೃಷ್ಣಕರ್ಣಾಮೃತ | ೦ | ೨ | ೦ |
| ತ್ರಿಕಾಂಡ ಅಮರ ಮೂಲ | ೦ | ೨ | ೦ |
| ೧ ಕಾಂಡ | ೦ | ೧ | ೦ |

### ಕನ್ನಡ ಗ್ರಂಥಗಳು.

| | | | |
|---|---|---|---|
| ಕುಶಲಸ್ಮೃತಿ ಅಸ್ತ್ರ | ೩ | ೦ | ೦ |
| ಟಿಟಿಂ: ದೂಸ್ಟಾ | ೧ | ೨ | ೦ |
| ವೃಷಭೇಂದ್ರವಿಜಯ | ೧ | ೮ | ೦ |
| ಪಂಚತಂತ್ರ ಜಾಲೀತಿ | ೦ | ೬ | ೦ |
| ಸನುಮದ್ವಿಲಾಸ | ೦ | ೬ | ೦ |
| ಕಾಳೀಯಮರ್ದನ | ೦ | ೨ | ೦ |
| ಸುವರ್ಣಶುದ್ರಾಮಿ | ೦ | ೨ | ೦ |
| ಕರ್ಣಪಾತ್ರಿದಿಂದ | ೦ | ೨ | ೬ |
| ಸುದಾಮಚರಿತ್ರೆ | ೦ | ೧ | ೦ |
| ಮೃದುವರ ಚರಿತ್ರೆ | ೦ | ೧ | ೬ |
| ಬಾಲಕೃಷ್ಣನಕಿತ್ತೆ | ೧ | ೦ | ೦ |
| ಮರೆವ್ಯರ್ಥ ೧ | ೦ | ೧೨ | ೦ |
| ಬ್ರಾಂಸುವಿರ | ೨ | ೦ | ೧ |



## ನೋಟಿಸ್.

ಹಾಸ್ಪಿಟಲ್ ಅಸಿಸ್ಟೆಂಟ್ ಗ್ರೇಡಿಗೆ ಓದತಕ್ಕ ಮೆಡಿಕಲ್ ಪ್ರ್ಯಾಕ್ಟಿಸರ್‌ಗಳು ಅಥವಾ ವಿದ್ಯಾರ್ಥಿಗಳು ಬೇಕಾಗಿರುತ್ತೆ.

ಈ ಕೆಳಗೆ ರುಜು ಮಾಡಿ ಇರುವವನಿಗೆ ಅರ್ಜಿಗಳು ಬರೆದುಕೊಳ್ಳತಕ್ಕದ್ದಿದೆ.

ಮೆಟ್ರಿಕ್ಯುಲೇಷನ್ ಅಥವಾ ಅಪ್ಪರ್ ಸೆಕೆಂಡರಿಯಲ್ಲಿ ಅವಶ್ಯಕವಾದ ಭಾಗ (ಸೆಕೆಂಡರಿ ಪ್ರೊಫಿಷೆನ್ಸಿ) ಪರೀಕ್ಷೆಯಲ್ಲಿ ತೇರ್ಗಡೆಯಾದವರು ಶಿಪಾರಿ ಮತ್ತ್ಯಾರೂ ಅರ್ಜಿ ಬರೆದು ಕೊಳ್ಳತಕ್ಕ ಅವಶ್ಯಕವಿಲ್ಲ.

T. G. McGANN,

*Brigade Surgeon, Lieut Colonel,*

*Senior Surgeon and Sanitary Commissioner,*

*Mysore Government*


## THE MONEY MARKET.

ಮದರಾಸ್, ಶನಿವಾರ, ತಾ॥ 30ನೇ ಸೆಪ್ಟಂಬರ್ 1893 ಸೇಕಡ 4ರೂ ಬಡ್ಡಿಯ ಗವರ್ನಮೆಂಟ್ ಪತ್ರಗಳು ರೂಪಾಯಿಗಳು, 104-12—0 ಇಂದ 105—4—0ವರೆಗೆ, ಸೇಕಡಾ ಮೂರೂವರೆ ರೂಪಾಯಿಗಳ ಬಡ್ಡಿಯ ಗವರ್ನಮೆಂಟ್ ಪತ್ರಗಳು ರೂಪಾಯಿಗಳು 98- 10—ಇಂದ 99—2—0 ರವರೆಗೆ.

ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತು 970 ಲಾಗಾಯತು 980 ವರೆಗೆ.

ಕಮರ್ಷಿಯಲ್ ಬ್ಯಾಂಕ್ ಮದ್ರಾಸ್ ಬ್ಯಾಂಕ್ ಷೇರ್‌ಗಳು, (100) ಬಾಬತು 150 ಇಂದ 155 ವರೆಗೆ, ಸವರೇನ್‌ಗಳು, 16—2—0 ಇಂದ 16—1—0ವರೆಗೆ, ಬ್ಯಾಂಕ್‌ಬಿಲ್‌ಗಳು ಯಾನೆ ಪತ್ರಸಹುಂಡಿಗಳು, ರೂ॥ ೧ಕ್ಕೆ

6 ತಿಂಗಳ ವಾಯಿದೆಗೆ, 1s 3 3/32*d*.

ಡಿಮಾಂಡ್ 1ತಿಂಗಳ ವಾಯಿದೆಗೆ, 1s 3 1/32*d*

ಟಿಲಿಗ್ರಾಫ್ ಕೇಳಿದಾಗ, 1s. 2 15/16*d*.

# ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, OCTOBER 2, 1893

೧೮೯೩ನೇ ಇಸವಿ ಅಕ್ಟೋಬರ್ ೨ನೇ ಸೋಮವಾರ

## ಮೈಸೂರ್ ಸೀಮೆಯಲ್ಲಿರುವ ದೇವಾಲಯಗಳ ಸ್ಥಿತಿಪರಿಷ್ಕರಣವು ಕುರಿತು.

ಬೆಂಗಳೂರಲ್ಲಿ ಸ್ಥಾಪಿತವಾಗಿರುವ ಶ್ರೀನಿವಾಸ ಮಂದಿರದ ಧರ್ಮಕರ್ತರಾದ ಶ್ರೀನಿವಾಸಗೋಪಾಲಾಚಾರ್ಯರವರು, ಮೈಸೂರು ಸೀಮೆಯಲ್ಲಿರುವ ದೇವಾಲಯಗಳ ಸ್ಥಿತಿಯನ್ನೂ, ಅದರಲ್ಲಿರತಕ್ಕ ಅರ್ಚಕ ಪರಿಚಾರಕರು ಮೊದಲಾದ ನೌಕರರನ್ನೇರ ಕರ್ತವ್ಯಗಳನ್ನೂ, ಅವರ ವಿಷಯದೊಳು ಮುಂದೆ ಮಹಾರಾಜಾ ಸರ್ಕಾರದವರು ಪ್ರವರ್ತಿಸಿ ಮಾಡಬೇಕೆನ್ನುವ ಅತ್ಯಂತ ಬಹುವಣಿಗಳನ್ನೂ ನಮೂದಿಸಿ, ಈ ಪ್ರಾಂತದೊಳಿರುವ ಕೆಲವು ವೃತ್ತಾಂತ ಪತ್ರಿಕೆಗಳಿಗೆ ಪ್ರಕಟನೆಯ ಬಗ್ಗೆ ಇಂಗ್ಲಿಷ್ ಭಾಷೆಯಲ್ಲಿ ಬರೆದು ಕಳುಹಿಸಿರುವ ಕಳೆದ ತಿಂಗಳ ೨೩ ನೇ ತಾರೀಖುಳ್ಳ ಒಂದು ವಿಸ್ತಾರವಾದ ಲೇಖನವನ್ನು ನಾವು ಉತ್ಸಾಹದಿಂದ ಓದಿನೋಡಿದೆವು. ಸದರೀ ಆಚಾರ್ಯರವರು ಯಾವ ವಿಷಯವನ್ನು ಮನದೊಳುದ್ದೇಶಿಸಿ ಪ್ರಥಮತಃ ಬರೆಯುವವರಿಕ್ಕೆ ಪ್ರವರ್ತಿಸಿದರೋ ಅದು ಅನ್ಯಥಾ ಪರಿಣಮಿಸುವಂತೆ ಮಾತ್ರ್ಯಾದಾಯಿತು. ಆದರೆ ಅವರು ತಿಳಿಸಿರುವ ವಿಷಯಗಳು ಪ್ರಸಕ್ತ ವಿಷಯಕ್ಕೆ ಅತಿ ದೂರವಾಗಿದ್ದಾಗ್ಯೂ ಯಾವದೋ ಒಂದು ಬಗೆ ಸಿದ್ಧಾಂತವನ್ನೂ, ಕ್ರಮವನ್ನೂ, ಆಚಾರವನ್ನೂ, ಧರ್ಮವನ್ನೂ ಅನುಸರಿಸದೆ ಇರಲಿಲ್ಲವು. ಇವರು, ರೋಮನ್ ಕ್ಯಾಥೋಲಿಕ್ ಕ್ರೈಸ್ತರ ದೇವಾಲಯಗಳಲ್ಲಿ ಯಾವ ಕ್ರಮಗಳೀಗ ಅನುಷ್ಠಾನದೊಳಿವೆಯೋ ಅದೇ ಕ್ರಮಗಳನ್ನು ನಾಮನಿರ್ದೇಶಮಾಡದೆ ಅವಿವಯದಲ್ಲಿ ಅನ್ವಯಿಸಿ ಬರೆದಿರುವಂತೆ ಸ್ಪಷ್ಟವಾಗುತಿದೆ. ತಾವು ಸಂಚರಿಸಿದ ಬಂಗಾಳ ಮತ್ತೂ ಉತ್ತರ ದೇಶಗಳಲ್ಲಿ ಯಾವ ಕ್ರಮಗಳು ನಡೆಗೊಂಡಿದೆಯೋ ಆ ಕ್ರಮಗಳನ್ನೇ ಇಲ್ಲಿಯೂ ಆಚರಣೆಯೊಳು ತರಬೇಕೆಂಬ ತಾತ್ಪರ್ಯವುಳ್ಳವರಾಗಿರುವಂತೆ ತೋರುತಿದೆ. ಇದರು ಶ್ರೀನಿವಾಸ ಮಂದಿರವು ಜೀರ್ಣೋದ್ಧಾರ ಮಾಡಿದ ಕಾಲದಲ್ಲಿ ಅರ್ಚಕ ಪರಿಚಾರಕ ಆಚಾರ್ಯ ಪುರುಷರಲ್ಲಿ ಉಂಟಾದ ಕಲಹಗಳೇ ಅಸ್ವತಂತ್ರ ... ಇರಬಹುದೆಂದು ಭಾವಿಸಿರುವಂತೆ ಕಾಣುತಿದೆ. ಮುಖ್ಯವಾಗಿ ಇವರು ಇತರ ಮಂಚಕರಂತೆ ಸ್ವಾನುಷ್ಠಾನಕ್ಕೂ ಪರೋಪಕಾರಕ್ಕೂ ಭೇದವನ್ನು ಕಲ್ಪಿಸದೆ ತಾವು ನಡೆಯುವಂತೆಯೇ ಅನ್ಯರೂ ನಡೆಯಬೇಕೆಂದು ತಾತ್ಪರ್ಯಪಟ್ಟಿರುವದರಿಂದ ಇವರ ಮಾತುಗಳು ಅನುಷ್ಠಾನಾರ್ಹಗಳಾಗದೆ ಹೋದಾಗ್ಯೂ ಆಕ್ಷೇಪಣಾರ್ಹಗಳಾಗಿರುವದಿಲ್ಲವು. ಹಿಂದೂ ಮತದಲ್ಲಿ ದೇವಾಲಯವೂ ಗುಡಿಮಠವೂ ಭಿನ್ನವೆಂಬ ಅಂತರವನ್ನೂ, ಕ್ರೈಸ್ತರಲ್ಲಿ ಸದರೀ ಎರಡೂ ಅಭಿನ್ನವೆಂಬದನ್ನೂ ಶ್ರೀನಿವಾಸಗೋಪಾಲಾಚಾರ್ಯರವರು ಆಲೋಚಿಸದೆಹೋದದಕ್ಕಾಗಿ ಆಶ್ಚರ್ಯ ಪಡಬೇಕಾಗಿರುತಿದೆ. ದೇವಸ್ಥಾನವೆಂದರೆ,—ರಾಮ, ಕೃಷ್ಣ, ನೃಸಿಂಹ ಆಂಜನೇಯ, ವಿಶ್ವೇಶ್ವರ, ಬಸವೇಶ್ವರ, ಈಶ್ವರ, ಮಾರಿ, ಮೊದಲಾದ ವಿಗ್ರಹಗಳ ಆರಾಧನಸ್ಥಾನವೆನಿಸಿರುತಿದೆ. ಇಲ್ಲಿ ಆಯಾ ದೇವತಾಸಂಬಂಧವಾದ ಪೂರ್ವ ವೃತ್ತಾಂತಸೂಚಕಗಳಾದ ವ್ಯಾಪಾರಗಳೇ ನಡೆಯಬೇಕಾಗಿರುತಿದೆ. ಮುಸಲಮಾರಿ, ದುರ್ಗಿ ಮೊದಲಾದ ದೇವಸ್ಥಾನಗಳಲ್ಲಿ ಪರಿಗ್ರಹಾರ್ಹವಾಗಿರುವ ಕೇವಲ ಭ್ರಷ್ಟವೃತ್ತಿ ವದೇವಸ್ಥಾನದಲ್ಲಿ ಪ್ರವೇಶಕ್ಕೆ ಸಹ ಯೋಗ್ಯವಾದುದಲ್ಲವು. ರಸ್ತಾ ತುಂಬೆಯು ವಿಷ್ಣು ದೇವಾಲಯಗಳಲ್ಲಿ ಉಪಯುಕ್ತವು. ಹೀಗೆಯೇ ಪೂಜಾವಿಧಾನದಲ್ಲಿಯೂ, ನೈವೇದ್ಯ ಕ್ರಮದಲ್ಲಿಯೂ, ವಾಹನಾದಿಗಳಲ್ಲಿಯೂ ಅನೇಕ ತಾರತಮ್ಯಗಳಿರುತಿವೆ. ಆದಾಗ್ಯೂ ಇವುಗಳನ್ನೆಲ್ಲ ಒಂದೊಂದು ತರಗತಿಯಾಗಿ ಏತಕ್ಕೆ ವಿಂಗಡಿಸಬಾರದೆಂದು ಕೇಳಬಹುದು. ಮುಸಲು ಹಿಂದು ಆಂಜನೇಯ ವಿಗ್ರಹಗಳಲ್ಲಿಯೇ ನಾನಾ ಭೇದಗಳೂ, ವೈಷ್ಣವತ್ವ ಭೇದಗಳೂ ಭೇದವೇರ್ಪಟ್ಟಿರುತಿವೆ. ಹೀಗೆಯೇ ವಿಗ್ರಹರೂಪದಲ್ಲಿ ಸಹ ವೀರಾಂಜನೇಯನಿಗೂ, ಅಷ್ಟ ಮುಖಾಂಜನೇಯನಿಗೂ, ಭಕ್ತಾಂಜನೇಯನಿಗೂ ಭೇದವಿರುತಿದೆ. ಇವಲ್ಲದೆ ಕೆಲವು ಪ್ರದೇಶದಲ್ಲಿ ಆಂಜನೇಯನಿಗೆ ಚತುರ್ಭುಜಗಳೂ ಶಂಖಚಕ್ರಗಳೂ ಏರ್ಪಟ್ಟಿರುತಿವೆ. ಶ್ರೀರಾಮದೇವರಿಗೆ ಒಂದು ಕ್ಷೇತ್ರದಲ್ಲಿ ಚತುರ್ಭುಜಗಳಿವೆ, ವಿಶ್ವೇಶ್ವರನು ಅನೇಕ ಪ್ರದೇಶಗಳಲ್ಲಿ ದೇವಿಯುತ್ತನಾಗಿದ್ದಾನೆ. ಹೀಗೆಯೇ ಎಷ್ಟು ದೂರ ಬೇಕಾದಾಗ್ಯೂ ತಾರತಮ್ಯಗಳು ನಿರೂಪಿಸಿ ತಿಳಿಸಬಹುದು. ಮುಖ್ಯವಾಗಿ ಈ ಸ್ಥಳಗಳಲ್ಲಿ ಸಂಪ್ರದಾಯಗಳನ್ನರಿ

ರುವಂತೆ ಹಕ್ಕುದಾರೀ ನೌಕರರೇ ಇರಬೇಕು. ಸ್ಥಳಪುರಾಣಗಳನ್ನೇ ಅನುಸರಿಸಬೇಕು ಮಾಮೂಲಾಗಿರುವಂತೆ ಯೋಜನಾನ್ಯವೇ ಇರಬೇಕು. ಇದಕ್ಕೂ ಮಠಾಧಿಪತಿಗಳಿಗೂ ಯಾವ ಸಂಬಂಧವೂ ಇರುವದಿಲ್ಲವು. ಬೂದಿಹಾಳ ಗವಿರಂಗಸ್ವಾಮಿ ದೇವಸ್ಥಾನಕ್ಕೆ ಲಿಂಗಾಯತರಾದ ಬಣಜಿಗರೇ ಅಭಿಮಾನಶಾಲಿಗಳಾಗಿದ್ದಾರೆ. ನಂಜನಗೂಡು ಶ್ರೀಕಂಠೇಶ್ವರರು ಮಧ್ವಮತಸ್ಥರಾದ ಬಹುಮಂದಿ ಕರ್ಣಾಟಕರಿಗೆ ಕುಲದೈವವಾಗಿದ್ದಾರೆ. ಮಠಕ್ಕೂ ದೇವಾಲಯಗಳಿಗೂ ಎಲ್ಲಿನ ಸಂಬಂಧವು? ಮುಜರಾಯಿ ನೌಕರರಿಗೂ ಮೆಟ್ರಿಕ್ಯುಲೇಷನ್ ಪರೀಕ್ಷೆಯಂ ಕೊಡುವದಕ್ಕೂ, ದೇವಸ್ಥಾನಗಳ ನೌಕರರ ಬದಲಾವಣೆಗೂ ಏನು ಸಂಬಂಧವು? ದೇವಸ್ಥಾನಗಳ ವಿಚಾರವನ್ನಿಲ್ಲಿಗೆ ನಿಲ್ಲಿಸಿ ಮಠಗಳಂ ಕುರಿತು ಸ್ವಲ್ಪ ಪರ್ಯಾಲೋಚಿಸುವಣ. ಪ್ರಾಯೇಣ ಇಂಡ್ಯ ದೇಶದಲ್ಲೆಲ್ಲ ದ್ವೈತಾದ್ವೈತ ವಿಶಿಷ್ಟಾದ್ವೈತಗಳೆಂಬ ಮತತ್ರಯಗಳೇರ್ಪಟ್ಟಿವೆಯಷ್ಟೆ. ಇವುಗಳಲ್ಲಿ ಒಂದೊಂದು ಮತಕ್ಕೆ ಅನೇಕ ಸಂಪ್ರದಾಯಗಳೂ ಆಚಾರಭೇದಗಳೂ ಉಪಾಸನಾಕ್ರಮಗಳೂ, ಮೂರ್ತಿಭೇದಗಳೂ ನೆಲೆಗೊಂಡಿವೆ. ಇವುಗಳಿಗೆಲ್ಲ ಪ್ರತ್ಯೇಕ ಗುರುಗಳು ನಿಯಮಿತರಾಗಿದ್ದಾರೆ. ಮುಖ್ಯವಾಗಿ ಇಂತಹ ವಿಷಯಗಳಲ್ಲಿ ಮುಜರಾಯಿ ಸೂಪರಿಂಟೆಂಡೆಂಟರವರು ಆಯಾ ಸ್ಥಳ ಪದ್ಧತಿಗಳನ್ನು ಕಾಪಾಡತಕ್ಕವರಾಗಿರುವದರಿಂದ ಅಪೇಕ್ಷಿತರಮಟ್ಟಿಗೆ ಜರಿಗಿಸಬೇಕಾದವರಾಗಿದ್ದಾರೆಯೇ ಹೊರ್ತು ತಮ್ಮ ಹಮ್ಮು ಮೀರಿ ನಡೆಸುವ ಪಕ್ಷಕ್ಕೆ ಆ ಕಾರ್ಯವನ್ನವರು ಅನ್ಯಥಾ ಮಾಡಿದಂತವರಾಗುತ್ತಾರೆ. ಶ್ರೀಮನ್ಮಹಾರಾಜರವರೂ ಅವರ ದಿವಾನರವರೂ ಇಷ್ಟಪಟ್ಟರೆ, ದೇವಸ್ಥಾನಗಳ ಅರ್ಚಕರದೇನು ದೊಡ್ಡ ವಿಷಯವಲ್ಲವು, ಮಠಾಧಿಪತಿಗಳೆಲ್ಲರೂ ಗ್ರಾಜ್ಯುಯೇಟುಗಳಾಗಿಯೇ ಇರಬೇಕೆಂದು ನಿರ್ಬಂಧಿಸಬಹುದು. ಅವರ ಚಾತುರ್ಮಾಸ್ಯ ಸಂಖ್ಯೆಗಳನ್ನನುಸರಿಸಿ ಸರ್ವೀಸ್ಸಿನ ಮೇಲೆ ಅವರನ್ನು ಬಡ್ತಿಗೆ ಅರ್ಹರನ್ನಾಗಿ ಮಾಡಬಹುದು. ಮಧ್ವಮತಸ್ಥರಲ್ಲಿ ದೊಡ್ಡ ಮಠ ಚಿಕ್ಕ ಮಠಗಳೆಂಬ ಭೇದವಿರುವದರಿಂದ ದೊಡ್ಡ ಮಠದವರನ್ನು ಚಿಕ್ಕಮಠಕ್ಕೂ, ಚಿಕ್ಕಮಠದವರನ್ನು ದೊಡ್ಡ ಮಠಕ್ಕೂ, ಅವರವರ ಯೋಗ್ಯತೆಯನ್ನನುಸರಿಸಿ ಬದಲಾಯಿಸಬಹುದು. ಉತ್ತರದೇಶದಲ್ಲಿರುವ ಗೋಸಾಯಿ ಮಠಗಳಂತೆ ಇಲ್ಲಿನ ಮಠಗಳಲ್ಲಿ ಸಹ ಬಂದು ಮತ್ತು ಮುಂದಿನ ಸಂಪ್ರದಾಯಗಳನ್ನು ನೆಲೆಗೊಳಿಸಬಹುದು. ಪುರುಷರಿಗೆ ಬರತಕ್ಕ ಅನೇಕ ಕಷ್ಟಗಳು ಮರೆಯುವಂತೆ ಮಾಡಿ ಅವರ ಹೃದಯವನ್ನಾನಂದಪರವಶಗೊಳಿಸುವಂತಹ ಅಪ್ರತಿಶಕ್ತಿಯುಳ್ಳ ಗಾನವಿದ್ಯೆಯನ್ನು ಕುಲಾಂಗನೆಯರಿಗೆ ಕಲಿಸಿ ಅವರನ್ನು ಸಂಗೀತ ಪಾರೀಣರನ್ನಾಗಿ ಮಾಡಬೇಕೆಂಬ ಸಂಕಲ್ಪವು ಬಹುಜನಕ್ಕೆ ಇರುವದರಿಂದ ಅಂತಹ ಕುಲಕಾಂತೆಯರು, ತಮ್ಮ ಗಾನವಿದ್ಯಾ ಕುಶಲತೆಯನ್ನು ದೇವದಾಸಿಯರಿಗೆ ಬದಲಾಗಿ ದೇವಾಲಯಗಳಲ್ಲಿ ಪ್ರತಿನಿತ್ಯವು ಸಂಗೀತ ವಿದ್ಯೆಯ ಮೂಲಕ ವ್ಯಕ್ತಗೊಳಿಸಬೇಕೆಂದು ನಿರ್ಣಯಿಸಬಹುದು. ಮುಖ್ಯವಾಗಿ ಇವುಗಳೆಲ್ಲವು ವಿವೇಕಿಗಳಾದ ಸ್ವದೇಶೀಯರ ಹೇಳನಕ್ಕೆ ವಿಷಯವಾಗುವದೋ ಯೆಂಬ ಭೀತಿಯೊಡನೆ ಸರ್ವಜನ ಸಾಮಾನ್ಯೇನ ವ್ಯವಹಾರ ಭಾಷೆಯೆನಿಸಿರುವ ಕನ್ನಡದಲ್ಲಿ ಬರೆಯದೆ ಇಂಗಿತಜ್ಞರಾದ ಇಂಗ್ಲಿಷಿನವರಿಗೆ ಮಾತ್ರ ತಮ್ಮ ಚಿರಕಾಲ ದೇಶಾಟನದಿಂ ಲಬ್ಧವಾದ ನಾಗರಿಕ ವೈಲಕ್ಷಣ್ಯವು ತಿಳಿದು ಅವರು ಸಂತೋಷಿಸಿದರೆ ಸಾಕಾಗಿರುತ್ತದೆಂಬ ಸಂತೃಪ್ತಿಯೊಡನೆ ಮಿ|| ಗೋಪಾಲಾಚಾರ್ಯರವರು ಲೋಕವಿಲಕ್ಷಣಗಳಾದ ತಮ್ಮ ಸಲಹೆಗಳನ್ನು ಇಂಗ್ಲಿಷ್ ಭಾಷೆಯಲ್ಲಿ ಬರೆದು ಇಂಗ್ಲಿಷಿನವರ ಸಮೂಹದಲ್ಲಿ ವಿಶೇಷ ಪ್ರಾಚುರ್ಯವುಳ್ಳ ಇಂಗ್ಲಿಷ್ ಪತ್ರಿಕೆಗಳಿಗೆ ತಮ್ಮ ವೈದುಷ್ಯಸೂಚಕವಾದ ಉಪದೇಶನವಂ ಪ್ರಕಟನೆಯ ಬಗ್ಗೆ ಕಳುಹಿಸಿರಬಹುದೆಂದು ನಂಬುತ್ತೇವೆ. ಹಿಂದೂ ದೇವಾಲಯಗಳೆಲ್ಲವು ನಾನಾ ರೂಪಗಳನ್ನು ಹೊಂದಿ ಕಡೆಗೆ ಅವು ನಿರ್ನಾಮವಾಗಿ ಹೋಗಬೇಕಾದ ಕಾಲವು ಬಹಳ ದೂರವಾಗಿಲ್ಲವು.

## ಇಲ್ಲಿನ ಲೆಜಿಸ್ಲೇಟಿವ್ ಇಲಾಖೆಯ ಸ್ಥಿತಿ.

ಒಂದು ಪ್ರಭುತ್ವಕ್ಕೆ ಸಂಬಂಧಪಟ್ಟ ರಾಜ್ಯಾಂಗಗಳ ಪೈಕಿ ನ್ಯಾಯವಿಧಾಯಕಸಭೆಯೆಂಬದು ಮುಖ್ಯವಾದುದಾಗಿಯೂ, ಪ್ರಜೆಗಳ ಪ್ರಾಣ ಮಾನ ಧನಪೋಷಕವಾದುದಾಗಿಯೂ, ಪ್ರಭುಶಕ್ತಿಯ ಸ್ವರೂಪವನ್ನು ಪ್ರಜೆಗಳಿಗೆ ಅರುಹಿ ಕಾಪಾಡುವಂತಹದ್ದಾಗಿಯೂ ಇರುವದರಿಂದಲೇ ಸದರೀ ವಿಷಯದಲ್ಲಿ ವ್ಯವಸ್ಥಿತ ರಾಜ್ಯಗಳಲ್ಲೆಲ್ಲ ವಿಶೇಷ ನಿಗೆ ಕೊಡಲ್ಪಡುತಲಿದೆ. ಈ ನ್ಯಾಯವಿಧಾಯಕ ಇಲಾಖೆ ಎಂಬುವದನ್ನು ಆಯಾ ಗವರ್ನಮೆಂಟಿನವರು, ಪ್ರತ್ಯುತ್ಪನ್ನವಲ್ಲವಿದ್ದಾಗ್ಯೂ, ಇತರ ಇಲಾಖೆಗಳಂತೆ ಕೇವಲ ಮುಖ್ಯವಾದುದೆಂದು ಎಣಿಸಿ ಅದರ ಗೌರವರಕ್ಷಣೆಯಲ್ಲಿ ಬಹಳ ಆಸಕ್ತಿಯೊಡನೆ ವಿಶೇಷ ಧನವ್ಯಯಮಾಡುತ್ತಾರೆ. ಈಗ ಇಂಡ್ಯ ಗವರ್ನಮೆಂಟಿನವರು ಲೆಜಿಸ್ಲೇಟಿವ್ ಇಲಾಖೆಯನ್ನು ಪುನರ್‍ವ್ಯವಸ್ಥೆ ಮಾಡಿ, ಅದರ ಪ್ರಕೃತಸ್ಥಿತಿಯಂ ಬಲಪಡಿಸುವ ಪ್ರಯತ್ನ ನಡೆಯುತಲಿರುವಂತೆ ತಿಳಿಯಬರುತಿದೆ. ಮದರಾಸ್ ಗವರ್ನಮೆಂಟಿನವರು, ತಮ್ಮ ನ್ಯಾಯನಿಬಂಧನೆಗಳನ್ನು ಭಾಷಾಂತರ ಮಾಡತಕ್ಕ ಗವರ್ನಮೆಂಟಿನವರ ಟ್ರಾನ್ಸ್ಲೇಟರವರ ಆಫೀಸಿನ ಸಿಬ್ಬಂದಿ ಖರ್ಚಿನ ಬಗ್ಗೆ ಈ ಸಾಲಿಗೆ ೫೫೫೦ ರೂಪಾಯಿಗಳು ಮಂಜೂರ್ಮಾಡಿರುವಾತೆ ಮದರಾಸ್ ಪತ್ರಿಕೆಯೊಂದು ತಿಳಿಸುತಿದೆ. ಹೀಗೆಯೇ ಇತರ ಪ್ರೆಸಿಡೆನ್ಸೀ ಲೆಜಿಸ್ಲೇಟಿವ್ ಇಲಾಖೆಗಳು ಪುನರ್‍ವ್ಯವಸ್ಥೆ ಮಾಡಲ್ಪಡುತಲಿವೆಯೆಂದು ಕೇಳುತ್ತೇವೆ. ಬ್ರಿಟಿಷ್ ಇಂಡ್ಯದೇಶದೊಳು ಮಾತ್ರವೇ ಅಲ್ಲವು, ತಿರುವಾಂಕೂರ್, ಹೈದರಾಬಾದ್, ಬರೋಡೆ ವಗೈರೆ ಸಂಸ್ಥಾನಾಧಿಪತಿಗಳು ಇಂಗ್ಲಿಷ್ ಗವರ್ನಮೆಂಟಿನವರ ಕ್ರಮವನ್ನನುಕರಿಸುತ, ಅವರ ನ್ಯಾಯನಿಬಂಧನೆಗಳನ್ನೆಲ್ಲ ಅಂಗೀಕರಿಸುತ ಬರುತಲಿದ್ದಾರೆ. ಮೈಸೂರು ಸಂಸ್ಥಾನವು ಇಂಡ್ಯದೇಶದೊಳಗಣ ಇತರ ರಾಜ್ಯಗಳಿಗೆ ಸಕಲಾಂಶದಲ್ಲೂ ನಿದರ್ಶನರೂಪವಾಗಿಯೂ, ಸಲಕ್ಷಣಸ್ವಭಾವವುಳ್ಳದ್ದಾಗಿಯೂ, ಅನ್ಯದೇಶೀಯರು ಸಹ ಕೊಂಡಾಡುವಂತಾದ್ದಾಗಿಯೂ, ಇಲ್ಲಿನ ಪ್ರಭುತ್ವಕ್ರಮವು ಸಕಲವಿಷಯದಲ್ಲಿಯೂ ಬ್ರಿಟಿಷ್ ಗವರ್ನಮೆಂಟಿನವರ ನ್ಯಾಯನೀತಿಗಳನ್ನನುಸರಿಸಿದ್ದಾಗಿಯೂ ಇರುತಿದೆ ಇವಲ್ಲದೆ ಪ್ರತಿವಿಷಯದಲ್ಲೂ ಅವರ ಅನುಮತಿಯ ಮೇಲೆ ವರ್ತಿಸತಕ್ಕದ್ದಾಗಿರುತಿದೆ. ಅನೇಕ ವಿಷಯಗಳಲ್ಲಿ ಬಹುವಿಧ ವೈಲಕ್ಷಣ್ಯಗಳಂ ಕಲ್ಪಿಸಿ ಆತ್ಯಂತಿಕ ಬದಲಾವಣೆಗಳು ಮಾಡಲ್ಪಡುತ ಬರುತಿವೆ. ಶ್ರೀಮನ್ಮಹಾರಾಜರವರು ಈ ರಾಜ್ಯಭಾರವಂ ಪರಿಗ್ರಹಿಸಿದ ಮೊದಲು, ಅನೇಕ ಹೊಸ ಕಾನೂನುಗಳು ಇಂಡ್ಯ ಗವರ್ನಮೆಂಟಿನವರ ನ್ಯಾಯವಿಧಾನವನ್ನನುಸರಿಸಿ ಆವಶ್ಯಕಗಳಾದ ಬದಲಾವಣೆಗಳೊಡನೆ ಜಾರಿಯಲ್ಲಿ ತರಲ್ಪಟ್ಟಿರುತಿವೆ. ಇನ್ನೂ ಅನೇಕ ಅವರ ಆಲೋಚನೆಯೊಳಿರುತಲಿವೆ. ನ್ಯಾಯ ವಿಚಾರಣಾರ್ಥ ಒಂದು ಸಭೆಯೆಂಬುವದು ಸಹ ನೆಲೆಗೊಳಿಸಲ್ಪಟ್ಟಿದೆ. ಪ್ರಜಾಭಿಪ್ರಾಯಗಳನ್ನರಿಯುವ ಬಗ್ಗೆ ಆಗಿಂದಾಗ್ಯೆ, ಮಸವಿದಾ ರೆಗ್ಯುಲೇಷನ್‍ಗಳೆಂದು ಸರ್ಕಾರೀ ಗೆಜೆಟಿನಲ್ಲಿ ಷಾಯಿಷ್ ಮಾಡಿಸುವ ಕ್ರಮವು ಸಹ ಲೋಪವಿಲ್ಲದೆ ಅನುಸರಿಸಲ್ಪಡುತಲಿದೆ. ಪ್ರಜಾಭಿಪ್ರಾಯಗಳಿಗೆ ಅವಧಾನ ಕೊಡುವ ಶಾಸ್ತ್ರ ಕೂಡ ಜರುಗುತಲಿದೆ. ಇಷ್ಟಾದಾಗ್ಯೂ ಇಲ್ಲಿನ ಲೆಜಿಸ್ಲೇಟಿವ್ ಇಲಾಖೆ ಯೆಂಬದರ ಸ್ಥಿತಿಯಂ ವಿಚಾರಿಸಿದರೆ ಅದು ಇದ್ದದ್ದೂ ಇಲ್ಲದಿದ್ದದ್ದೂ ಸಹ ಬಹುಕಾಲದ ತನಕ ಅನೇಕರಿಗೆ ತಿಳಿಯದೆ ಇತ್ತು. ಒಂದೆರಡು ವರುಷಗಳಿಂದೀಚೆಗೆ, ಸದರೀ ಇಲಾಖೆಯೊಂದಿರುವಂತೆ ಗೆಜೆಟಿನಿಂದ ವ್ಯಕ್ತವಾಗುತ ಬಂತು. ೧೮೮೬ ನೇ ಇಸವಿಗೆ ಪೂರ್ವದಲ್ಲಿ ಸದರೀ ಇಲಾಖೆಗೆ ಜನ್ಮ ಸಹ ಉಂಟಾಗಿರಲಿಲ್ಲವು. ೧೮೮೬ ನೇ ಇಸವಿಯಲ್ಲಿ ಅದನ್ನೊಂದು ಪ್ರತ್ಯೇಕ ಇಲಾಖೆಯಾಗಿ ನೆಲೆಗೊಳಿಸಬೇಕಾದ ಕಾರಣವು ಏರ್ಪಟ್ಟುದರಿಂದ ಅದರ ಚಾರ್ಜಿನಲ್ಲೊಬ್ಬ ಆಫೀಸರನ್ನು ನಿಯಮಿಸಿ ಅವರಿಗೆ ನಾಮಮಾತ್ರಕ್ಕೆ ಸಿಬ್ಬಂದಿಯೆಂದು ಕೊಡೋಣಾಯಿತು, ಸದರೀ ಸಿಬ್ಬಂದಿಯೆಂಬದು ಒಬ್ಬ ಮ್ಯಾನೇಜರು, ಮೂವರು ಕ್ಲರ್ಕುಗಳಿಗಿಂತ ಅಧಿಕವಾಗಿಲ್ಲವು. ಸದರೀ ಇಲಾಖಾ ಮ್ಯಾನೇಜರಾದವರ ತಲಬ್ ವಜಾ ಮಾಡಿದರೆ ಮಿಕ್ಕವರ ತಲಬ್ ಮಾಹೆಯಾನಾ ೧೦೦ ರೂಪಾಯಿಗಳಿಗಿಂತ ಅಧಿಕವಾಗಿಲ್ಲವು. ಈಗ ಅಲ್ಲಿ ಕೆಲಸಗಳನ್ನು ದಿನೇದಿನೆ ಹೆಚ್ಚುತ್ತ, ಅನ್ಯತ್ರ ನಡೆಗೊಂಡಿರುವ ಅಂಗಗಳೆಲ್ಲವಂ ಅಂಗೀಕರಿಸಿ ಗವರ್ನಮೆಂಟಿನವರು ವಿಶೇಷ ಅವಧಾನವಂ ಕೊಡತಿರುವ ಕ್ರಮಿಸಿರುವಂತೆ ಅವರ ಇತರವ್ಯಾಪಾರಗಳಿಂದ ಸ್ಪಷ್ಟವಾಗುತಿದೆ ಇಂತಹ ಸ್ಥಿತಿಯಲ್ಲಿ ಸದರೀ ಇಲಾಖಾಗೌರವವನ್ನು ಕಾಪಾಡಲಿಕ್ಕೆ ಪ್ರಯತ್ನಪಡದೆ ಕೇವಲ ಸಾಮಾನ್ಯಸ್ಥಿತಿಯಲ್ಲಿ, ತತ್ರಾಪಿ ಅನ್ಯರು ಹೇಳನ ಮಾಡುವ ದಶೆಯೊಳದನ್ನಿಟ್ಟುಕೊಂಡಿರುವಣವು ಸಂಸ್ಥಾನಕ್ಕೆ ಪ್ರತಿಷ್ಠಾವಹವಲ್ಲವು. ಇದು ಸಂಸ್ಥಾನಕ್ಕೆ ಇತರ ಇಲಾಖೆಗಳಂತೆ ಗೌರವಾವಹವಾದುದರಿಂದ ಇದಕ್ಕೆ ತಕ್ಕಂತೆ ಬಾಹ್ಯಾಡಂಬರವಾದರೂ ಇಲ್ಲದಿದ್ದರೆ ಯಾರಿಗಿನವರಿಗೆ ಆಕರ್ಷಕವಾಗಲಾರದು. ಮುಖ್ಯವಾಗಿ ಗವರ್ನಮೆಂಟ್ ಲೆಜಿಸ್ಲೇಟಿವ್ ಸೆಕ್ರೆಟರಿಯಾದವರಿಗೆ ಒಬ್ಬ ಸಬ್ ರಿಜಿಸ್ಟ್ರಾರವರಿಗಿರುವ ಸಿಬ್ಬಂದಿ ಸಹ ಇಲ್ಲದಿರುವದು ಬಹಳ ನ್ಯೂನತೆಯೆಂದು ಭಾವಿಸಲ್ಪಡದಿರಲಾರದು. ಇತರ ಗವರ್ನಮೆಂಟುಗಳಲ್ಲೆಲ್ಲ ಜವಾಬ್ದಾರರಾದ ಟ್ರಾನ್ಸ್ಲೇಟರುಗಳು ಭಾರೀ ತಲಬಿನಲ್ಲಿ ಇಬ್ಬರು ಮೂವರು ಇರುತಲಿದ್ದಾರೆ. ಇವರಿಗೆ ಪ್ರತ್ಯೇಕ ಸಿಬ್ಬಂದಿಗಳು ಕೊಡಲ್ಪಟ್ಟಿರುತಿವೆ. ಇಲ್ಲಿನ ಅಡ್ಮಿನಿಸ್ಟ್ರೇಷನ್ನಲ್ಲಿ ಇತರ ಭಾಷೆಗಳ ಆವಶ್ಯಕತೆ ಇಲ್ಲದಿದ್ದಾಗ್ಯೂ ಇರತಕ್ಕ ಒಂದು ಕನ್ನಡ ಭಾಷೆಗೆ ಸಹ ಜವಾಬ್ದಾರರಾದ ಟ್ರಾನ್ಸ್ಲೇಟರೊಬ್ಬರಿಗೆ ಮಾರ್ಗವಿಲ್ಲದಿರುತಿದೆ. ಕನ್ನಡ ಭಾಷೆ ಯೆಂಬದು ಸಾಮಾನ್ಯವಾದುದೆಂತಲೂ, ಈ ದೇಶದಲ್ಲಿ ಸ್ತ್ರೀಯರು ಸಹ ತದ್ಭಾಷಾಭ್ಯಾಸವಂ ಮಾಡಿ ಪಂಡಿತರೆನಿಸಿ ಕೊಳ್ಳುತಲಿರುವಾಗ್ಯೆ ಅದಕ್ಕೊಂದು ವಿಶೇಷ ಗೌರವಾಪಾದನವು ಅನಾವಶ್ಯಕವೆಂತಲೂ, ಭಾಷಾಂತರಕರಣವೆಂಬದು ಸ್ಕೂಲ್ ಹುಡುಗರ ಕೆಲಸವಾಗಿರುವಾಗ್ಯೆ ಇದಕ್ಕೆ ಜವಾಬ್ದಾರಿ ಬೇಕಿರುವದೆಂತಲೂ ಭಾವಿಸಲ್ಪಟ್ಟಿರುವಂತೆ ಕಾಣುತಿದೆ. ಗೆಜೆಟಿನಲ್ಲಿ ಷಾಯಿಷಾಗುವ ನೋಟಿಫಿಕೇಷನುಗಳನ್ನು ಯಾರಾದರು ಪ್ರಯಾಸಪೂರ್ವಕ ಇಂಗ್ಲಿಷಿನ ಮೂಲಪ್ರತಿಯನ್ನಿಟ್ಟುಕೊಂಡು ತಾಳೆ ನೋಡುವರಾದರೆ ಆಗ ಟ್ರಾನ್ಸ್ಲೇಷನೆಂಬದು ಇತರ ಕೆಲಸಗಳಂತೆ ಪ್ರಯಾಸಕರವಾದುದೆಂಬ ಜ್ಞಾನವೂ, ಅದರಲ್ಲಿಯೂ ಜವಾಬ್ದಾರಿಯುಳ್ಳ ಘೋಷಿತ ಇರಲೇ ಇವೆಯೆಂಬ ತಿಳುವಳಿಕೆಯೂ ಉಂಟಾಗದೆಹೋಗಲಾರದು. ಮುಖ್ಯವಾಗಿ ಇಲ್ಲಿನ ಅಧಿಕಾರಿಗಳೆನಿಸತಕ್ಕವರೆಲ್ಲರು ಇಂಗ್ಲಿಷ ಬಲ್ಲಂತಹ ಪ್ರಭುಗಳಾಗಿರುವದರಿಂದಲೂ, ಅವರಿಗೆ ದೇಶಭಾಷೆಗಳು ಪರಿಗಣನೀಯವಲ್ಲವೆ ಹೋಗಿರುವದರಿಂದಲೂ, ಸ್ವತಃ ದೇಶಸ್ಥರಾಗಿದ್ದಾಗ್ಯೂ ದೇಶಭಾಷೆಯಲ್ಲಿ ಬರೆಯಲ್ಪಟ್ಟ ಕಾಗದಗಳನ್ನು ಇಂಗ್ಲಿಷ್ ಭಾಷೆಯಲ್ಲಿ ಭಾಷಾಂತರಮಾಡಿಸಿ ಓದದಿದ್ದರೆ ತಮ್ಮ ಅಧಿಕಾರ ಪ್ರಭಾವಗಳಿಗೆ ಲೋಪವೆಂಬ ಭಾವವುಂಟಾಗಿರುವದರಿಂದಲೂ ಇದು ಹಿಂದೂ ಅರಸರ ರಾಜ್ಯವೆನಿಸಿ ಅವರಿಂದ ಪಾಲಿತವಾಗಿದ್ದಾಗ್ಯೂ ಇಲ್ಲಿ ಬ್ರಿಟಿಷ್ ಕಮಿಷನರ ಕಾಲದಲ್ಲಿದ್ದದಕ್ಕಿಂತ ಇಂಗ್ಲಿಷ್ ಪ್ರಾಚುರ್ಯವು ಅಧಿಕವಾಗಿ, ಅವರವರ ಗೃಹಕೃತ್ಯಸಂಬಂಧವಾದ ಪರಸ್ಪರ ಸಂಭಾಷಣೆಗಳು ಸಹ ಇಂಗ್ಲಿಷ್ ಭಾಷೆಯಿಂದ ವ್ಯವಹರಿಸಲ್ಪಡಲಿಕ್ಕೆ ಪ್ರಾರಂಭವಾಗಿರುವದರಿಂದಲೂ ಕನ್ನಡ ತರ್ಜುಮೆಗಳಾಗಲಿ, ತತ್ಸಂಬಂಧವಾದ ಗ್ರಂಥಗಳಿಗಾಗಲಿ, ತದ್ಭಾಷಾನಿಬದ್ಧವಾದ ಲೇಖನಗಳಿಗಾಗಲಿ ಗೌರವ ಪುರಸ್ಕಾರಗಳು ಇಲ್ಲದೆ ಹೋದವು. ಮುಖ್ಯವಾಗಿ ಇತರ ವಿಷಯಗಳು ಹ್ಯಾಗೆ ಹೋದಾಗ್ಯೂ ಕಾನೂನುಗಳು ಗವರ್ನಮೆಂಟಿನವರ ಉದ್ದೇಶಪ್ರಯತ್ನಗಳನ್ನು ಪ್ರಜೆಗಳಿಗೆ ಬೋಧಿಸತಕ್ಕವಾಗಿರುವದರಿಂದ ಅದರಲ್ಲಿ ವ್ಯರ್ಥಾರ್ಥವಾಗಲಿ, ಅಪಾರ್ಥವಾಗಲಿ, ಅನ್ಯಥಾರ್ಥಕಲ್ಪನವಾಗಲಿ, ಬಹ್ವರ್ಥವಾಗಲಿ, ಅನರ್ಥಹೇತುಗಳಾಗುವದರಿಂದ ಜನರಿಗೆ ತಾದೃಶ ನ್ಯಾಯ ನಿಬಂಧನೆಗಳ ಅರ್ಥವನ್ನು ಸರಿಯಾಗಿ ಬೋಧಿಸುವಣವು ಒಂದು ಜವಾಬ್ದಾರೀ ಕೆಲಸವಾಗಿಯೂ ಶ್ರಮಸಾಧ್ಯವಾದ ಕಾರ್ಯವಾಗಿಯೂ, ಇತರ ಉದ್ಯೋಗಗಳಂತೆ ಗೌರವಿಸಲ್ಪಡತಕ್ಕದ್ದಾಗಿಯೂ ಇರುತಿದೆ. ಆದಕಾರಣ ಇಂತಹ ಅಧಿಕಾರವೊಂದು ಇಲ್ಲಿನ ಲೆಜಿಸ್ಲೇಟಿವ್ ಇಲಾಖೆಗಿಲ್ಲದಿರುವದು ಪ್ರಬಲ ಲೋಪವೆಂದು ಭಾವಿಸಲ್ಪಡದಿರಲಾರದು.

## ಮೈಸೂರ್ ದೇಶೀಯರ ಸ್ವಾಭಾವಿಕ ಗುಣಗಳು.

ಸನ್ ೧೮೮೧ ನೇ ಇಸವಿ ಮೊದಲು ೯೧ ನೇ ಇಸವಿವರೆಗಿನ ದಸ್ಸಾಲಾ ಖಾನೇಷುಮಾರಿ ರಿಪೋರ್ಟ್ ಈಚೆಗೆ ಷಾಯಿಷ್ ಮಾಡಲ್ಪಟ್ಟಿತಷ್ಟೆ. ಆ ರಿಪೋರ್ಟಿನಲ್ಲಿ ಸೆನ್ಸಸ್ ಸೂಪರಿಂಟೆಂಡೆಂಟರವರು ಮೈಸೂರು ದೇಶೀಯರಾದವರ ತಾತ್ಕಾಲಿಕಸ್ಥಿತಿಯಂ ಪರಿಮಿತ ಶಬ್ದಗಳಿಂದ ಸಂಗ್ರಹಿಸಿ ತಿಳಿಯಪಡಿಸಿರುತ್ತಾರೆ ಹೇಗೆಂದರೆ:—ಗತಿಸಿದ ಹತ್ತು ಸಂವತ್ಸರಗಳ ಕಾಲದೊಳಗಾಗಿ ಮೈಸೂರು ದೇಶದ ಒಟ್ಟು ಪ್ರಜಾ ಸಂಖ್ಯೆಯು ಹತ್ತು ಲಕ್ಷದ ತನಕ ಜಾಸ್ತಿಯಾಗಿರುತಿದೆ ಮೈದಾನ್ ಡಿಸ್ಟ್ರಿಕ್ಟುಗಳಲ್ಲಿ ಪ್ರಜಾ ಸಮ್ಮರ್ದವು ಅತ್ಯಧಿಕವಾಗಿರುತಲಿದೆ ಪ್ರಜಾ ಬಾಹುಳ್ಯ ವಿಷಯದಲ್ಲಿ ಮೈಸೂರು ಸಂಸ್ಥಾನದೊಡನೆ ಯೂರೋಪಿನ ಅನೇಕ ರಾಜ್ಯಗಳು ಸಮಾನವೆನಿಸಲಾರವು. ವಿಲಕ್ಷಣಗಳಾದ ಕೆಲವು ಅನ್ಯದೇಶಗಳಲ್ಲಿರುವಷ್ಟುಮಟ್ಟಿಗೆ ವಿದ್ಯಾಭಿವೃದ್ಧಿಯು ಈ ದೇಶದಲ್ಲಿರುವದಿಲ್ಲವು. ತತ್ರಾಪಿ ಇಲ್ಲಿ ಸ್ತ್ರೀವಿದ್ಯಾಭ್ಯಾಸವು ಬಹಳ ಸಾಧಾರಣ ದಶೆಯಲ್ಲಿದೆ. ಮೈಸೂರು ದೇಶದ ಪ್ರಜೆಗಳು ಕೇವಲ ಶ್ರದ್ಧಾಜಡರಾದವರಾಗಿರುತ್ತಾರೆ. ವೈಲಕ್ಷಣ್ಯಾಭಿವೃದ್ಧಿಗೆ ಅನುಗುಣವಾಗಿ ಅದನ್ನನುಸರಿಸಬೇಕೆಂಬ ಇಚ್ಛೆಯುಳ್ಳವರಾಗಿರುವಂತೆ ಕಾಣಿಸರಿಲ್ಲವು. ಇಲ್ಲಿ ಬಾಲ್ಯವಿವಾಹಗಳು ಆಗಿಂದಾಗ್ಯೆ ಹೇರಳವಾಗಿ ಜರುಗುತಲಿವೆ. ಇಲ್ಲಿನವರಿಂದ ವೈವಾಹಿಕಾಚಾರ ಪರಿಷ್ಕರಣವು ಅತ್ಯಂತಾಪೇಕ್ಷಿತವೆಂದು ಭಾವಿಸಲ್ಪಟ್ಟಿರುವಂತೆ ವ್ಯಕ್ತವಾಗುವದಿಲ್ಲವು. ಮತ ಸಂಬಂಧಗಳಾದ ಅಂತರಾಳಿಕ ಪ್ರಭೇದಗಳು ಅಪರಿಮಿತಗಳಾಗಿವೆ. ಮೌಢ್ಯವೂ ಮತವಿಷಯಕವಾದ ದುರಭಿಮಾನವೂ ಪ್ರಜೆಗಳ ಹೃದಯದಲ್ಲಿ ತಾಂಡವಮಾಡುತಲಿವೆಯಾಗಿ, ಅವು ನಾಗರಿಕ ವೈಲಕ್ಷಣ್ಯಾಭಿವೃದ್ಧಿಗೆ ಪ್ರತಿಬಂಧಕಗಳಾಗಿ ಏರ್ಪಟ್ಟಿವೆ. ಪ್ರಜೆಗಳು ರಿಕ್ತರಾಗಿಯೂ ಮುಖ್ಯವಾಗಿ ಕೃಷಿ ಜೀವಿಗಳಾಗಿಯೂ ಇರುತ್ತಾರೆ. ವಾಣಿಜ್ಯವು ಶೈಶವಾವಸ್ಥೆಯೊಳಿದೆ. ಧರ್ಮ, ನ್ಯಾಯ, ನೀತಿ, ಮತ, ಜ್ಞಾನ ವ್ಯಾಪಾರ, ವಿವಿಧಪದಾರ್ಥ ನಿರ್ಮಾಣಪಾಟವ, ಕಲಾ ಕೌಶಲ್ಯಾದಿಗಳ ಅಭಿವೃದ್ಧಿಗೆ ಬೇಕಾದ ಮಟ್ಟಿಗೆ ಅವಕಾಶವು ಇಲ್ಲದಿರಲಿಲ್ಲವು. ಸಮಷ್ಟಿಯಲ್ಲಿಲ್ಲಿನ ಪ್ರಜೆಗಳು ತಾಮಸಸ್ವಭಾವವುಳ್ಳವರಾಗಿದ್ದಾರೆಯೇ ಹೊರ್ತು ಕಾಲಾನುಗುಣವಾದ ಪುರೋವೃದ್ಧಿಯಲ್ಲಿ ಸ್ವಲ್ಪವೂ ಆಸಕ್ತಿಯುಳ್ಳವರಾಗಿರುವಂತೆ ಕಂಡುಬರಲಿಲ್ಲವು. ಉನ್ನತ ವಿದ್ಯಾಭ್ಯಾಸವು ಅಂದರೆ ಶಾಸ್ತ್ರದನ್ಯಜ್ಞಾನವು ಸಾಮುದಾಯಿಕವಾದುದಾಗಿಲ್ಲವು. ಆದಾಗ್ಯೂ ಇನ್ನೊಂದು ಹತ್ತು ವರುಷಗಳ ಕಾಲದೊಳಗಾಗಿ ಮೈಸೂರು ರಾಜ್ಯದಲ್ಲಿ ಉತ್ತಮ ಫಲಪ್ರದಗಳಾದ ಪ್ರಬಲ ವಿನಿಮಯಗಳಂ ನೋಡಬಹುದು. ಪರಂತು ಪ್ರಾಥಮಿಕ ವಿದ್ಯಾಭ್ಯಾಸವನ್ನೂ, ಸ್ತ್ರೀ ವಿದ್ಯಾಭ್ಯಾಸವನ್ನೂ ತೀವ್ರವಾಗಿ ಬಲಪಡಿಸುತ ಬರುವ ಪಕ್ಷಕ್ಕೆ ನಿರೀಕ್ಷಿತ ಉತ್ತಮ ಫಲವು ಸಿದ್ಧಿಸಬಹುದೆಂದು ತೋರುತಿದೆ. ಪ್ರಜೆಗಳ ಪೋಷಣೆಯಿಂದಲೇ ನೆಲೆಗೊಂಡಿರುವಂತ ಸ್ವಂತ ಪಾಠಶಾಲೆಗಳಲ್ಲಿ ಮತ ವಿಷಯಕವಾದ ಜ್ಞಾನೋಪದೇಶವು ಆವಶ್ಯಕರಣೀಯವು, ಎಂಬದು.

ಸೆನ್ಸಸ್ ಸೂಪರಿಂಟೆಂಡೆಂಟರವರು ಮೈಸೂರು ದೇಶೀಯರ ಸ್ವಾಭಾವಿಕ ಗುಣಗಳಂ ಬಹಳ ಜಾಗರೂಕತೆಯೊಡನೆ ಸಂಗ್ರಹಿಸಿ ಪರಿಮಿತ ಶಬ್ದಗಳಿಂದ ಅರ್ಥಬಾಹುಳ್ಯದೊಡನೆ ಮಾಡಿರುವ ವಿವರಣವು ಪ್ರತಿ ಮನುಷ್ಯನಿಗೂ ಸಂತೋಷವನ್ನುಂಟುಮಾಡತಕ್ಕದ್ದಾಗಿರುತಿದೆ. ಸ

ದರೀ ಪ್ರಜಾ ಸ್ವರೂಪ ತತ್ವವಿವೇಚಕರು ಭಿನ್ನವಾಗಿ ಇಷ್ಟನವರ ಗುಣವಿವೇಚನವಂ ಮಾಡುವಾಗ್ಯೆ ಅಪರ ಶ್ರದ್ಧಾಜಡತೆ, ಬುದ್ಧಿಮಾಂದ್ಯ, ಮತವಿಷಯಕವಾದ ದುರಭಿಮಾನ, ಏಪಮಾಟ ಗುಣಗಳೊಡನೆ ಸಮಯೋಚಿತ ವರ್ತನ, ಐಕಮತ್ಯವಿಹೀನತೆ, ಈರ್ಷ್ಯಾಸೂಯೆ, ಕೌಟಿಲ್ಯ, ಸ್ವಪ್ರಯೋಜನಾಭಿಲಾಷೆ, ಕಾರ್ಪಣ್ಯ ಮೊದಲಾದ ಇತರ ಪ್ರಧಾನ ಗುಣಗಳಂ ನಮೂದಿಸದೆ ಬಿಟ್ಟದ್ದಕ್ಕೆ ಕಾರಣವು ಗೋಚರವಾಗಿಲ್ಲವು.

## Occasional Notes.
## ನೈಮಿತ್ತಿಕ ವಿಷಯನ್ಯಾಸ.

ಕಳೆದವಾರದ ಅಪಭಾಗದಲ್ಲಿ ತಿರುಚನಾಪಲ್ಲಿ ರೆಯಿಲ್ವೆ ಸ್ಟೇಷನ್ ಮ್ಯಾಸ್ಟರ ಕೊಠಡಿಯಲ್ಲಿ ಪೆಟ್ಟಿಗೆಯೊಳಗಿಟ್ಟದ್ದ ೫,೫೦೦ ರೂಪಾಯಿಗಳು ಅದನ್ನಿಟ್ಟ ಅರ್ಧಘಂಟೆಯೊಳಗಾಗಿ ಕಳವಾಯಿತು, ಈಗ ಪೊಲೀಸಿನವರು ಅಪರ ಪತ್ತೇತಪದೂ ಪಿನ್ಲಲ್ಲಿರುತ್ತಾರೆ, ಎಂದು ಪತ್ರಿಗೆ ತಿಳಿಯಲಾದೆ.

ಲಂಡನ್ ಪಟ್ಟಣದೊಳಗಿರುವ ಪಾಸ್ ಆಫಿಸ್ ಮೆಡಿಕಲ್ ಇಲಾಖಾ ಡೈರೆಕ್ಟರ್ ಜನರಲವರಿಗೆ ಅಜಮಾಯಿಷಿ ಕಾರ್ಯಗಳಗೋಸ್ಕರ ನಾಲ್ವತ್ತು ಸ್ತ್ರೀಯರುಗಳ ತೂಕ ಸರ್ಪವಿಷ ಸರಬರಾಯ್ ಮಾಡುವಂತೆ ಮುಂಬೈಯಲ್ಲಿ ಸ್ಥಾಪಿಸಲ್ಪಟ್ಟಿರುವ ನ್ಯಾಚುರಲ್ ಹಿಸ್ಟರಿ ಸೊಸೈಟಿಯವರು ಅಪೇಕ್ಷಿಸಲ್ಪಟ್ಟಿರುತ್ತಾರೆ.

ಮದರಾಸ್ ಪ್ರಸಿಡೆನ್ಸಿಯಲ್ಲಿನ ಲೋಕಲ್ ಫಂಡ್ ಮತ್ತು ಮ್ಯುನಿಸಿಪಾಲಿಟಿಗಳಿಗೆ ಸೇರಿದ ಔಷಧ ಶಾಲೆಗಳಿಗ ಬೇಕಾದ ಔಷಧಗಳನ್ನು ಇದುವರೆವಿಗೂ ಮುಂದೆ ಅಯಾ ಜಿಲ್ಲೆಯವರೇ ಕೊಂಡುಕೊಳ್ಳತಕ್ಕದ್ದೆಂತಲೂ, ಅವು ಗವರ್ನ್‌ಮೆಂಟ ಮೆಡಿಕಲ್ ಸ್ಟೋರಿನಿಂದ ಸರಬರಾಯ್ ಮಾಡಲ್ಪಡಲಾರವೆಂತಲೂ, ಸರ್ಜನ್ ಜನರಲವರು ಮಾಡಿದ ರಿಫಾರಸ್ಸನ್ನನುಸರಿಸಿ ಗವರ್ನ್‌ಮೆಂಟಿನವರು ನಿರ್ಣಯ ಮಾಡಿರುತ್ತಾರೆ.

ರಷಿಯಾ ಚಕ್ರವರ್ತಿಯವರನ್ನು ಕೊಲ್ಲಬೇಕೆಂದು ಮಾಸ್ಕೋ ಪಟ್ಟಣದಲ್ಲಿ ನಿಹಿಲಿಸ್ಟ ಎಂಬ ಜನರು ಪ್ರಬಲ ಪ್ರಯತ್ನ ಮಾಡುತಲಿರುವಂತೆ ಈಚೆಗೆ ತಿಳಿಯಬಂದಿರುವಂತೆಯೂ, ಎಂಭತ್ತೈದು ಯೂನಿವರ್ಸಿಟಿ ವಿದ್ಯಾರ್ಥಿಗಳೂ, ಎಂಟುಮಂದಿ ಪ್ರೊಫೆಸರ್‌ಗಳೂ, ಗೌರವಾರ್ಹವಾದ ಕುಟುಂಬಗಳಿಗೆ ಸೇರಿದ ಐವತ್ತು ಹೆಂಗುಸರೂ ಸದರೀ ದುಷ್ಕೃತ್ಯಕ್ಕೆ ಸೇರಿದವರೆಂಬ ಕಾರಣದಿಂದ ಕೈಸೆರೆಯಾಗಿ ಮಾಡಲ್ಪಟ್ಟಿರುವಂತೆಯೂ ರಷಿಯಾ ದೇಶದ ರಾಜಧಾನಿಯಾದ ಸೇಂಟ ಪೀಟರ್ಸ್‌ಬರ್ಗ್ ಎಂಬ ಪಟ್ಟಣದಿಂದ ಬಂದ ತಂತಿ ವೃತ್ತಾಂತದ ಮೂಲಕ ತಿಳಿಯಬರುತಿದೆ.

ಪುದುಕೋಟೆ ಅರಸರವರು ಬರುವ ಡಿಸಂಬರ್ ೧ನೇ ತಾರೀಖ್ ಮೊದಲು ಮಾರ್ಚ್ ೧ನೇ ತಾರೀಖ್‌ವರೆಗೆ ಉತ್ತರ ಇಂಡಿಯಾದೇಶ ಸಂಚಾರಮಾಡಿಕೊಂಡು ತಿರುಚನಾಪಲ್ಲಿಗೆ ಬಂದು ಸೇರುವರು. ಈಕಾಲದಲ್ಲಿ ಅರಸರವರು ಹೈದರಾಬಾದ್, ಪುನಾ, ಮುಂಬೈ, ಬರೋಡೆ, ಜಯಪುರ, ಕಾಶಿ, ಅಲಹಾಬಾದ್, ಡೆಹಲಿ, ಆಗ್ರಾ, ಕಲಕತ್ತಾ, ಡಾರ್ಜಿಲಿಂಗ್, ಕುಚಬಿಹಾರ್, ಈ ಪಟ್ಟಣಗಳಿಗೆ ಹೋಗಿಬರುವರು. ಈರೀತಿ ದೇಶಾಟನ ಮಾಡಿದಮೇಲೆ ಬರುವ ಸೆಪ್ಟಂಬರ್ ತಿಂಗಳ ಪುದುಕೋಟೆಗೆ ಹೋಗಿ, ನವಂಬರ್ ತಿಂಗಳಲ್ಲಿ ತಮ್ಮ ರಾಜ್ಯಧುರವಂ ಕೈಗೊಳ್ಳುವರು.

ಹೈದರಾಬಾದ್ ಸಂಸ್ಥಾನದ ಪ್ರಧಾನ ಮಂತ್ರಿಯವರಾದ ಸರ್ ಅಸ್ಮಾನ್‌ಜಾಯವರು ಇದರಡಿ ತಿಳಿಸಲ್ಪಟ್ಟಿರುವಂತೆ ನಿಜಾಮರವರಿಗೆ ಬರೆದಿರುವದಾಗಿ ನಂಬಿಕೆಗೆ ಅರ್ಹವಾದ ಮೂಲಕ ತಿಳಿಯಬರುವಂತೆ ಅಡ್ವೊಕೇಟ್ ಆಫ್ ಇಂಡಿಯಾ ಎಂಬ ಪತ್ರಿಕೆ ಪ್ರಕಟಿಸಿರುತಿದೇನೆಂದರೆ.—ನಾನು ಯಾವಾಗಲು ತಮ್ಮ ಆಜ್ಞಾನುಸಾರ ನಡೆಸುವದಕ್ಕೆ ಸಿದ್ಧನಾಗಿರುತ್ತೇನೆ. ಯಾವ ನಿಮಿಷದಲ್ಲಿ ನಾನು ನನ್ನ ಅಧಿಕಾರವಂ ಬಿಟ್ಟುಬಿಡುವಂತೆ ಹುಕುಂ ಕೊಟ್ಟರೆ ಉತ್ತರ ಕ್ಷಣದಲ್ಲಿ ಆರೀತಿ ಮಾಡುವದಕ್ಕೆ ಸಿದ್ಧನಾಗಿರುತ್ತೇನೆ. ನಿಷ್ಕಲ್ಮಷವಾಗಿ ಒಂದು ಮಾರ್ಗವನ್ನವಲಂಬಿಸುವದಕ್ಕೆ ಮುಂದಾಗಿ, ಸಂಸ್ಥಾನದ ರಾಜಕೀಯ ಕಾರ್ಯಗಳ ಪ್ರಕೃತಸ್ಥಿತಿಯಂ ಚೆನ್ನಾಗಿ ಆಲೋಚಿಸಿ, ಈ ಕಾಲದಲ್ಲಿ ನನಗೆ ಅಧಿಕಾರವಂ ತಪ್ಪಿಸಿ, ರಾಜ್ಯಕಾರ್ಯವಂ ಬೇರೆಯೊಬ್ಬರಿಗೆ ಒಪ್ಪಿಸುವದು ಉಚಿತವೆ ಎಂಬ ಅಂಶವನ್ನು ತಮ್ಮವರುಗಳಿಗೆ ತಾವು ಚೆನ್ನಾಗಿ ಯೋಚಿಸಬೇಕು. ನನಗೆ ಬೇಕಾದಷ್ಟು ಐಶ್ವರ್ಯವೂ ಅಧಿಕಾರವೂ ಇರುತ, ತೃಪ್ತನಾಗಿರುತ್ತೇನೆ. ನನ್ನ ಸ್ವಂತ ಪ್ರಯೋಜನಕ್ಕಿಂತಲೂ ಸಂಸ್ಥಾನದ ಕ್ಷೇಮದಲ್ಲಿ ವಿಶೇಷತ ಇಷ್ಟವುಳ್ಳವನಾಗಿರುತ್ತೇನೆ. ಒಂದು ತಡವೆ ನಾನು ಅಧಿಕಾರವಂ ಬಿಟ್ಟಮೇಲೆ ಮರಳಿ ಅದನ್ನು ಯಾವ ಕಾರಣದಮೇಲೂ ವಹಿಸಲಾರೆನು. ಸಂಸ್ಥಾನದ ಕಾರ್ಯಗಳಿಂದ ಕೈಗಳಂ ತೊಳೆದುಕೊಂಡುಬಿಡುವೆನು, ಎಂಬದು.

ವಿಜಯನಗರದಲ್ಲಿರುವ ವೇಶ್ಯಾಂಗನೆಯೊಬ್ಬಳು ಮದರಾಸ್ ಆಂಧ್ರಪ್ರಕಾಶಿಕಾ ಪತ್ರಿಕೆಗೆ ಇದರಡಿ ತಿಳಿಸಲ್ಪಡುವಂತೆ ಒಂದು ಲೇಖನವಂ ಬರೆದಿರುತ್ತಾಳೇನೆಂದರೆ :—

ದೇವತೋತ್ಸವ ವಿವಾಹಾದಿಶುಭಕಾರ್ಯಗಳಿಗೆ ನಟನಟೀ ಗಾಯಕಾದಿಗಳನ್ನು ಕರೆಯಿಸುವಣವು ಆದಿಕಾಲದಮೊದಲು ಪ್ರಾಚೀನರ ಆಚಾರವಾಗಿರುವಂತೆ ಅನೇಕ ಗ್ರಂಥಗಳಿಂದ ವ್ಯಕ್ತವಾಗುತಿದೆಯಲ್ಲದೆ ತದನುಗುಣವಾದ ಆಚಾರವು ಸಹ ಇದುವರೆಗೆ ಅನುಸರಿಸಲ್ಪಡುತಲಿದೆ, ಹೀಗಿದ್ದಾಗ್ಯೂ ಅದಂ ಕೆಲವರು ನಿಷೇಧಿಸಲೆತ್ನಿಸಿರುವಣವು ಯಾವ ಶಾಸ್ತ್ರಾಧಾರವನ್ನನುಸರಿಸಿಯೋ ತಿಳಿಯಲಿಲ್ಲವು. ಭಾರತೀಯ ಸರಸ್ವತೀಯ ಮೊದಲಾದ ಭರತಶಾಸ್ತ್ರ ಗ್ರಂಥಗಳಲ್ಲಿ ವೇಷಧಾರಿಯಾದ ಪಾತ್ರವು ಸಭಾಭಿಮುಖವಾಗಿಬಂದು ಪುಷ್ಪಾಂಜಲಿ ಮಾಡಿ ಅನಂತರ ನೃತ್ಯ ಗೀತವಾದ್ಯಾದಿನಾನಾವಿಧ ವಿದ್ಯೆಗಳನ್ನು ಪ್ರದರ್ಶಿಸಬೇಕೆಂದು ಸಾತ್ವಿಕಾದಿ ಭಾವಯುಕ್ತವಾದ ಭರತಶಾಸ್ತ್ರದಲ್ಲಿ ತಿಳಿಸಲ್ಪಟ್ಟದ್ದರೂ ಅದಂನೋಡದೆ ನಮ್ಮಲ್ಲಿ ಅಪ್ರಾಚ್ಯತೆಯಂ ಭಾವಿಸತಕ್ಕಂತಾವರು ಶಾಸ್ತ್ರಜನ್ಯಜ್ಞಾನ ವಿಹೀನರಾಗಿರಬೇಕಲ್ಲದೆ ಅನ್ಯರು ಆರೀತಿ ಯೋಚಿಸಲಾರರು. ಅಂತಾ ಶಾಸ್ತ್ರ ಪರಿಶೀಲನಾಪರರು ದೇವ ಸಭೆಗಳಲ್ಲಿಯೂ, ತತ್ಸದೃಶಗಳಾದ ರಾಜ ಸಭೆಗಳಲ್ಲಿಯೂ ನೃತ್ಯ ಗೀತ ವಾದ್ಯಾದಿ ವಿನೋದಗಳಿಂದ ಸಂತೃಪ್ತಿಗೊಳಿಸತಕ್ಕ ನಮ್ಮನ್ನು ಆದರಿಸಿ ಗೌರವಿಸುತಲಿದ್ದಂತೆ ಪೂರ್ವ ಗ್ರಂಥಗಳಿಂದಲೂ ಪುರಾಣಾದಿಗಳಿಂದಲೂ ಸ್ಪಷ್ಟವಾಗುತಿದೆ. ತದಾರಭ್ಯ ಇದುವರೆಗೂ ಶುಭ ಕಾರ್ಯಗಳಲ್ಲಿ ವೇಶ್ಯೆಯರಂ ಕರೆಯಿಸುವ ಸಂಪ್ರದಾಯವು ನಡೆಗೊಂಡಿರುತಿದೆ. ಅಂತಾ ಸ್ಥಿತಿಯನ್ನು ಯಾವದೇಶೀಯರಾಗಲಿ ನಿಂದಿಸಿದಂತೆ ಕಾಣಿಸಲಿಲ್ಲವು, ಎಂಬದು.

### ನೋಟಿಸ್.

ಈ ಪತ್ರಿಕೆಯ ಚಂದಾದಾರರ ಪೈಕಿ ಬಾಕೀದಾರರಾದವರುಗಳು ಅವರವರ ಬಾಕೀ ತಪ್ಸೀಲ್ ನಿಂ ಕಳೆದ ತಿಂಗಳಲ್ಲಿ ನಾವು ಬರೆದ ಕಾರ್ಡುಗಳಿಗೆ ಜವಾಬ ಕೊಡದೆಯೂ ಬಾಕೀಗಳನ್ನು ಕಳುಹಿಸದೆಯೂ ಇರುವಂತವರೆಲ್ಲಾ ಈ ವಾರದ ಮೊದಲು ಪತ್ರಿಕೆಯು ಮನ್ನಾ ಮಾಡಲ್ಪಟ್ಟಿರುತಿದೆ. ಬಾಕೀಗಳನ್ನು ಕಳುಹಿಸಿ ಮರಳಿ ಪತ್ರಿಕೆಯನ್ನಪೇಕ್ಷಿಸುವಂತವರಿಗೆ ಪುನಃ ರವಾನಿಸಲ್ಪಡುವವು.

೨—೧೦—೯೩. ಪ್ರೊಪ್ರೈಟರ್.

## LOCAL AND PROVINCIAL NEWS.
## ಒಳದೇಶಮತ್ತು ತಾಲ್ಲೂಕ್‌ಜಾತಿವೃತ್ತಾಂತಗಳು.

ಕಳೆದ ಶುಕ್ರವಾರದ ದಿನ ಈ ಪ್ರಾರಿಂದ ಮೈಸೂರಿಗೆ ೫೦೦ ಮೂಟೆ ಅಕ್ಕಿ ರೆಯಿಲ್ ಮಾರ್ಗವಾಗಿ ರವಾನೇ ಆಯಿತು. ವಾಡಿಕೆಯಾಗಿ ಮೈಸೂರು ಪ್ರಾಂತದಿಂದ ಅಕ್ಕಿ ಯಿಲ್ಲಿಗೆ ರಫ್ತಾಗುವ ಕಾಲ ತಪ್ಪಿ ಇಲ್ಲಿಂದ ಅಲ್ಲಿಗೆ ಕಳುಹಿಸಲ್ಪಡುವ ಕಾಲವು ಪ್ರಾಪ್ತವಾದುದಕ್ಕೆ ರೆಯಿಲ್‌ಮಾರ್ಗವೇ ಕಾರಣವೆಂದರಿಯಬಹುದು.

ಮೈಸೂರ್ ಡಿಸ್ಟ್ರಿಕ್ಟ ಡೆಪ್ಯುಟಿಕಮ್ಮಿಷನರ್ ಮ|| ಎ. ರಂಗಸ್ವಾಮಯ್ಯಂಗಾರ್ರವರು ಕಳೆದ ತಿಂಗಳ ೨೫ನೇ ತಾರೀಖಿನಲ್ಲಿ ತಮ್ಮ ಕೆಲಸದ ಚಾರ್ಜನ್ನು ಮ|| ಮರುಮುದಲ್ಲಿ ಯವರಿಂದ ತೆಗದುಕೊಂಡು ಮಂಡ್ಯದ ಮೊಕಾಮಿನಲ್ಲಿದ್ದು ಕೆಲಸ ನೋಡುತಲಿರುವಂತೆ ಮೈಸೂರುಪತ್ರಿಕೆಯೊಂದು ತಿಳಿಸುತಿದೆ.

ಮೈಸೂರ್ ನಿವಾಸಿಯಾದ ಮ|| ಸುಬ್ಬರಾಯರೆಂಬವರು ತಮಗೆ ವಿಧವಾ ವಿವಾಹ ಮಾಡಿಕೊಳ್ಳಬೇಕೆಂಬ ಕುತೂಹಲವಿರುವಂತೆಯೂ, ಅದಕ್ಕೆ ಅನುಜ್ಞೆಯಂ ಕೊಡಬೇಕೆಂಬದಾಗಿಯೂ, ಶ್ರೀಶೃಂಗೇರಿ ಸ್ವಾಮಿಗಳವರಿಗೆ ಒಂದು ವಿಜ್ಞಾಪನಪತ್ರಿಕೆಯಂ ಬರೆದುಕೊಂಡಿದಾರೆಂದು ತಿಳಿಯಬರುತಿದೆ ಇದಕ್ಕೆ ಶ್ರೀಸ್ವಾಮಿಗಳವರೇನು ಉತ್ತರಕೊಡುವರೊ ಅದಂ ತಿಳಿಯಬೇಕೆಂಬ ಉತ್ಸಾಹವುಳ್ಳವರಾಗಿದೇವೆ.

ಕೆಲವು ದಿವಸಗಳ ಹಿಂದೆ ಬ್ಯಾಕವಲ್ಲಿಯಲ್ಲಿ ನಡೆದ ಖೂನಿ ಮೊಕದ್ದಮೆಯು, ಸಿವಿಲ್ ಮಿಲಿಟರಿ ಸ್ಟೇಷನ್ ಸೆಷನ್ಸ್ ಕೋರ್ಟಿನಲ್ಲಿ ದರ್ಯಾಫ್ತಾಯಾಗಿ ಅಪರಾಧಿಯಾದ ಮಹಮದ್‌ಖಾನನೆಂಬವನಿಗೆ ಗತ ಗುರುವಾರದ ದಿನ ಮರಣದಂಡನೆ ವಿಧಿಸಲ್ಪಟ್ಟಿತು. ಆದಿನ ಈ ಮೊಕದ್ದಮೆಯ ಪರ್ಯವಸಾನವನ್ನರಿಯತಕ್ಕ ಬಗ್ಗೆ ಬಹುಜನ ಮುಸಲ್ಮಾನರು ರೆಸಿಡೆನ್ಸೀ ಆಫಿಸ್ ಕಾಪೌಂಡಿನಲ್ಲಿ ಜಮಾಯಿಸಿದ್ದರು.

ಮೈಸೂರು ಅರಮನೆಯ ಸರಸ್ವತೀ ಭಂಡಾರದಲ್ಲಿ ಸಂಸ್ಕೃತ ಗಜಾಯುರ್ವೇದವೆಂಬ ಗಜಚಿಕಿತ್ಸಾ ಗ್ರಂಥವೊಂದು ಶ್ರೀತಾಳಪುಸ್ತಕದಲ್ಲಿ ಬರೆಯಲ್ಪಟ್ಟದ್ದ ಪುರಾತನ ಮಾತೃಕೆಯೊಂದು ದೊರೆತಂತೆಯೂ, ಈ ವಿಷಯದೊಳದುವರೆಗೆ ದೊರೆತಿರುವ ಪುಸ್ತಕಗಳೆಲ್ಲಕ್ಕಿಂತಲೂ ಈಗ ದೊರೆತಿರತಕ್ಕದ್ದು ಬಹಳ ಶ್ಲಾಘ್ಯವಾಗಿಯೂ ಉಪಯುಕ್ತವಾದುದಾಗಿರುವಂತೆಯೂ ತಿಳಿಯಬರುವದರಿಂದ ಅದನ್ನು ಕನ್ನಡ ಟೀಕೆಯೊಡನೆ ಮುದ್ರಿಸಿ ಪ್ರಕಟಿಸಿದರೆ ಬಹಳ ಪ್ರಯೋಜನಕರವಾಗಿರುವದು.

ಗತವಾರದ ಮೊದಲು ಪ್ರತಿನಿತ್ಯವೂ ಮೋಡವಾಡುತ ಒಂದೆರಡು ದಿನಗಳಲ್ಲಿ ಹದಗಟ್ಟಳೆ ಮಳೆಯಾಯಿತು. ಡಿಸ್ಟ್ರಿಕ್ಟ ಜಾತಿನಿಂದ ಬಂದ ರಿಪೋರ್ಟಿನ ಮೂಲಕ ಅನೇಕ ಕಡೆಗಳಲ್ಲಿ ಮಳೆ ಇಲ್ಲದೆ ಫಸಲ್ ನಷ್ಟವಾದಂತೆ ತಿಳಿಯಬಂದಾಗ್ಯೂ, ಉಳಿದಿರುವ ಫಸಲಿಗೆ ಈಗಿನ ಮಳೆಯು ಜೀವನಾಧಾರವನ್ನುಂಟುಮಾಡಿತೆಂದು ನುಡಿಯಬಹುದು. ಪದಾರ್ಥಗಳ ನಿರಖ್ ಆಚೇವಾರದಲ್ಲಿದ್ದದಕ್ಕಿಂತ ಕಳೆದ ವಾರದಲ್ಲಿ ಸ್ವಲ್ಪಮಟ್ಟಿಗೆ ಕಡಮೆಯಾಗಿರುತಿದೆ. ಆದಾಗ್ಯೂ ಜಿನಿಸುಗಳು ರೆಯಿಲ್ ಮಾರ್ಗವಾಗಿ ಅನ್ಯದೇಶಗಳಿಗೆ ಬಹಳವಾಗಿ ರಫ್ತಾಗುತಲಿರುವದರಿಂದ ನಿರಖ್ ನಿಲುಕಡೆ ಯಿಲ್ಲವಿದೆ. ಇಲ್ಲಿ ಜನಾರೋಗ್ಯವು ಚೆನ್ನಾಗಿದೆ. ಈಗ ಸದ್ಯಃ ಸರ್ವತ್ರಪಶುಗಳಿಗೆ ಜಲತೃಣಗಳಿಗೆ ಕೊರತೆ ಕಾಣಿಸಲಿಲ್ಲವು. ಉತ್ತರೆ ಮಳೆಯು, ಕಾಲಾತಿಕ್ರಮವಾಗಿ ಸರಿಯಾಗಿ ಬಾರದಿದ್ದುದರಿಂದ ತರೀ ಫಸಲ್‌ಗಳಿಗೆ ಬಹಳ ನಷ್ಟ ಉಂಟಾದಂತೆ ಕೇಳುತ್ತೇವೆ.

ಈಗ ಈ ಪ್ರಾಂತೊಳಗೆ ನೋಡಿದರೂ ಕನ್ನ ಕಳವುಗಳು ಹೆಚ್ಚಿ ಕಳ್ಳರ ಬಾಧೆಯು ಅಧಿಕವಾಗಿರುತಿದೆ. ಆಚೇ ಬುಧವಾರದ ದಿನ ರಾತ್ರಿ ಕಂಟೋನ್ಮೆಂಟ್ ಬ್ರಿಗೇಡ್ ರೋಡಿನಲ್ಲಿರುವ ಮೆಸ್ಸರ್ಸ್ ಜೆ. ಡಬ್ಲ್ಯೂ ಮಾರಿಸ್ ಎಂಬವರ ಷಾಪನ್ನು ಕಳ್ಳರು ಒಡೆದು ಒಳಗೆ ಪ್ರವೇಶಿಸಿ ಸುಮಾರು ೧೨೦೦ ರೂಪಾಯಿಗಳ ನಗದು ಕೆಲವು ಚಿಲ್ಲರೆ ಸಾಮಾನುಗಳನ್ನು ಕಳವು ಮಾಡಿಕೊಂಡು ಹೋದರೆಂತಲೂ, ಅವರು ಅದ್ಯಾಪಿ ಪತ್ತೇಯಾಗಲಿಲ್ಲವೆಂತಲೂ, ಕೇಳುತ್ತೇವೆ. ಇಂತಾ ಪಬ್ಲಿಕ್ ರೋಡಿನಲ್ಲಿ ಮಿಲಿಟರಿ ಸೈನ್ಯಗಳಿರುವ ಪ್ರದೇಶದಲ್ಲಿ ನಡೆದ ಕಳವುಗಳೇ ಪತ್ತೆಯಾಗದಮೇಲೆ ಮೂರೆ ತಾಲ್ಲೂಕುಗಳ ಸ್ಥಿತಿಯಂ ಕುರಿತು ವಿಚಾರಿಸಬೇಕಾದುದೇನಿಲ್ಲವು ಮುಖ್ಯವಾಗಿ ಪೋಲೀಸ ಬಂದೋಬಸ್ತಿಯು ಈರೀತಿಯಾದ ಬಳಿಕ ಪ್ರಭುತ್ವಶಕ್ತಿಯು ಬಹಳ ಸಡಲಿದಂತೆ ಭಾವಿಸಬೇಕಾಗಿರುತಿದೆ. ಇಂತವುಗಳಿಗೆ ಅವಕಾಶವು ವೃದ್ಧಿಯಾಗುತ ಬರುವುದೆಲ್ಲ ಇವೇ ಪ್ರಕಟವಾಗಿ, ರೂಪಾಂತರವನ್ನೈದಿ ಅನರ್ಥಕಾರಿಯಾಗಿ ವಿಪರ್ಯಯವನ್ನುಂಟುಮಾಡದೆ ಹೋಗುವದಿಲ್ಲವು.

## CORRESPONDENCE.

[ ಇದರಡಿ ಪ್ರಕಟಿಸಲ್ಪಟ್ಟಿರುವ ಲೇಖನದಲ್ಲಿ ಕಂಡ ಅಭಿಪ್ರಾಯಗಳ ಗುಣದೋಷಗಳಿಗೆ ಪತ್ರಪ್ರಕಾಶಕರು ಜವಾಬ್ದಾರರಲ್ಲವು. ಎಡಿಟರ್ ಕ. ಪ್ರ.]

ಮ|| ರಾ|| ಕರ್ಣಾಟಕ ಪ್ರಕಾಶಿಕಾ ಎಡಿಟರವರ ಸ|| ಕ್ಕೆ.

ನಾನು ಈ ಕೆಳಗೆ ಪ್ರಕಟಪಡಿಸುವ ವಿಷಯವನ್ನು ತಮ್ಮ ಪ್ರಸಿದ್ಧವಾದ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಮ|| ರಾಮಸ್ವಾಮಯ್ಯಂಗಾರ್ರವರನ್ನು ಮೈಸೂರಲ್ಲಿರುವ ಮಹಾರಾಣೀ ಬಾಲಿಕಾ ಪಾಠಶಾಲೆಯಲ್ಲಿ ಶಾಸ್ತ್ರ ಪ್ರಸಂಗಿಕರಾಗಿ ಮೈಸೂರು ಗವರ್ನ್‌ಮೆಂಟಿನವರು ನಿಯಮಿಸಿರುವ ವಿಷಯವು ಯೆಲ್ಲರಿಗೂ ತಿಳಿದಿರುತ್ತದೆಷ್ಟೆ. ಈನಿಯಮನವು ನನಗೆ ಅತ್ಯಂತ ಆಶ್ಚರ್ಯವನ್ನುಂಟುಮಾಡುತಿದೆ. ಮ|| ರಾಮಸ್ವಾಮಯ್ಯಂಗಾರ್ರು ಸ್ಕಾಟ್ಲಾಂಡ ದೇಶದಲ್ಲಿ ಮೆಡಿಕಲ್ ಪರೀಕ್ಷೆಯಂಕೊಟ್ಟು ಯೂರೋಪ್ ಖಂಡದಲ್ಲೆಲ್ಲ ದೇಶಾಟನ ಮಾಡಿ ಪ್ರಸಿದ್ಧಿಯನ್ನು ಹೊಂದಿ ವೈದ್ಯಶಾಸ್ತ್ರದಲ್ಲಿ ನಿಪುಣರೆಂಬುವ ಹೆಸರನ್ನು ಪಡೆದಿರುತ್ತಾರೆ. ಇಂತಾ ಸಾಮರ್ಥ್ಯವುಳ್ಳವರನ್ನು ಪ್ರಜೆಗಳಿಗೆ ಉಪಕಾರಾರ್ಥವಾಗಿ ಡಾಕ್ಟರನ್ನಾಗಿ ನಿಯಮಿಸದೆ ಬಾಲಿಕಾ ಪಾಠಶಾಲೆಯಲ್ಲಿ ಶಾಸ್ತ್ರ ಪ್ರಸಂಗಿಕರಾಗಿ ನಿಯಮಿಸುವದಕ್ಕೆ ಕಾರಣವು ನನ್ನ ಅಲ್ಪ ಬುದ್ಧಿಗೆ ತಿಳಿಯಲಿಲ್ಲವು. ಯೌವನ ಪುರುಷರಾಗಿಯೂ ಬ್ರಹ್ಮಚಾರಿಯಾಗಿಯೂ ಇರುವ ಮ|| ರಾಮಸ್ವಾಮಯ್ಯಂಗಾರ್ರನ್ನು ಸ್ತ್ರೀಯರು ಓದುವ ಪಾಠಶಾಲೆಯಲ್ಲಿ ಉಪಾಧ್ಯಾಯರನ್ನಾಗಿ ನಿಯಮಿಸಬೇಕೆ ? ಈ ಕೆಲಸಕ್ಕೆ ಅರ್ಹರಾದ ಹೆಂಗಸು ಗ್ರಾಜುಯೇಟ ಒಬ್ಬಳು ಸಿಕ್ಕಲಿಲ್ಲವೋ ? ಮ|| ರಾಮಸ್ವಾಮಯ್ಯಂಗಾರ್ರವರ ವೈದ್ಯ ಸಾಮರ್ಥ್ಯದಿಂದ ಜನಗಳು ಸುಖವನ್ನು ಹೊಂದಕೂಡದೆಂಬುವ ಅಭಿಪ್ರಾಯವು ಗವರ್ನ್‌ಮೆಂಟಿಗೆ ಇದೆಯೋ ? ಹೀಗೆ ಮ|| ರಾಮಸ್ವಾಮಯ್ಯಂಗಾರ್ರನ್ನು ನಿಯಮಿಸಿದ ಗವರ್ನ್‌ಮೆಂಟಿನ ಅಭಿಪ್ರಾಯವನ್ನು ಯಾರಾದರೂ ತಿಳಿಸಿದರೆ ಅವರಿಗೆ ವಂದನ ಮಾಡುವೆನು.

L. S. T.

ಅಯ್ಯಾ,—ಮಾಹೇ ಮಜಕೂರ್ ೨೫ನೇ ತಾರೀಖಿನ ಮೈಸೂರ್ ಹೆರಲ್ಡ್ ಪತ್ರಿಕೆಯಲ್ಲಿ, ಸದರೀ ಷಹರ್ ನಿವಾಸಿಯಾದವರೊಬ್ಬರು, ತಮಗೆ ವಿತಂತು ಕರಗ್ರಹಣಾಭಿಲಾಷೆಯು ಅತ್ಯಧಿಕವಾಗಿರುವಂತೆಯೂ, ಅಂತಾ ವಿಧವಾ ಪರಿಣಯಾನಂತರ ತಮ್ಮನ್ನೊಬ್ಬರೂ ಜಾತಿಭ್ರಷ್ಟರುಕೆ ಕಾಣದಿರುವಹಾಗೆ ತಾವ್ಯಕೆ ವಿವಾಹಕ್ಕೆ ಅನುಜ್ಞೆಯಂ ಕೃಪೆಗೈಯಬೇಕೆಂಬದಾಗಿಯೂ, ಶ್ರೀ ಶೃಂಗೇರಿ ಸ್ವಾಮಿಗಳವರಿಗೊಂದು ವಿಜ್ಞಾಪನಪತ್ರಿಕೆಯಂ ಬರೆದಿದಾರೆಂತಲೂ, ಸದರೀ ಪತ್ರಿಕೆಯ ಅಂತ್ಯಭಾಗದೊಳು ವಿವಾಹಪರಿಣಯದಲ್ಲಿ ತಾವು ಅತ್ಯಂತಾಸಕ್ತರಾಗಿರುವದರಿಂದ ತಮ್ಮ ಪ್ರಸಕ್ತ ಪ್ರಯತ್ನಕ್ಕೆ ಶ್ರೀಮಠದವರು ಪ್ರತ್ಯರ್ಥಿಗಳಾಗಿ ನಿಲ್ಲದೆ ಸಹಾಯಕರಾಗಿರಬೇಕೆಂದು ತಾವು ಬಹಳ ಪ್ರಾರ್ಥಿಸುತಲಿರುವಂತೆ ತಿಳಿಸಿರುವಂತೆಯೂ ಪ್ರಕಟಿಸಲ್ಪಟ್ಟಿದೆ. ಇಂತಾ ವಿಷಯದಲ್ಲಿ ಶ್ರೀ ಸ್ವಾಮಿಗಳವರು ವಿರುದ್ಧಾಭಿಪ್ರಾಯವಂ ತಳಸಿ ಪ್ರತ್ಯರ್ಥಿಗಳೆನಿಸಿಕೊಂಡು ಸ್ವತಃ ಲೋಕನಿಂದೆಗೆ ಪಾತ್ರರಾಗಿ ವೈಲಕ್ಷಣ್ಯಾಭಿಲಾಷಿಗಳ ಕ್ರಿಯೋ ಭಂಜಕರಾಗುವದು ಯೆಷ್ಟುಮಾತ್ರವೂ ಸರಿಯಲ್ಲವೆಂದು ತೋರುತಿದೆ. ಸನಾತನ ಧರ್ಮ ರಕ್ಷಕರಾದ ಇಂತಾ ಗುರು ಪೀಠದವರು, ಲೋಕಹಿತಾರ್ಥವಾದ ನವೀನಾಚಾರಗಳಲ್ಲಿ ಏತಕ್ಕೆ ಇಷ್ಟು ವಿಮುಖರಾಗಿವಾರೆಯೋ ತಿಳಿಯಲಿಲ್ಲವು. ಅವರಿನ್ನುಮೇಲೆ ಆರೀತಿ ಇರಲಾಗದು, ಏತಕ್ಕೆಂದರೆ—ಪೂರ್ವದಲ್ಲಿ ಅಂದರೆ ವಿಧವಾಸಂತರ್ತರೇ ರ್ಪಡುವದಕ್ಕೆಮುಂಚೆ ಸಾಮಾನ್ಯವಾಗಿ ಚಿಕ್ಕ ಹುಡುಗರನ್ನಾದರು "ಮುಂಡೇಮಗನೆ" ಎಂದಾಗಲಿ ಅಥವಾ "ಮುಂಡೆಗಂಡ" ನೆಂದಾಗಲಿ ಅನ್ಯರೊಬ್ಬರು ಬೈದರೆ ಅದಕ್ಕಾಗಿ ಅವರು ಬಹಳ ಆಗ್ರಹನೊಂದು ನಿರ್ವಿಣ್ಣರಾಗಿ ಬೈದಂತವರಿಗೊಂದು

ಪ್ರತಿಕ್ರಿಯೆಯಂ ಮಾಡಲಿಕ್ಕೆ ನುತರಿಪ್ಪುದ್ದು ಅದ್ಯಾಪಿ ಸಕಲರ ಜ್ಞಾನಕದಲ್ಲಿರುತಲಿರಬಹುದೇ ದೆಣಿಸುತ್ತೇನೆ. ಈಗ ಅಂತಾ ಕಾಲವು ದೈವಯೋಗದಿಂದ ತಪ್ಪಿ ಹಿಂದೆ ಶಾಂತೇಯಿಃ ಗಂಗೇಯಃ ಎಂಬದಾಗಿ ವ್ಯವಹರಿಸಲ್ಪಡುತಲಿದ್ದ ಮಾತ್ರಕ್ಕೆ ಮಾತೃ ಸಂಬಂಧದಿಂದ ಪೊಂದವರೂ ಭೀಷ್ಮಾಚಾರ್ಯರೂ ಎಷ್ಟರ ಪ್ರತಿಷ್ಠಾರೂಢವಾಗಿ ಭಾವಿಸುತಲಿದ್ದರೋ ತದ್ವತ್ ಈಗ ನಮ್ಮನ್ನು ಯಾರಾದರು ಪಾಂಸುಭಾವಃ ಎಂದು ಕರೆದರೂ ಲಾರರೆ, ನಮ್ಮನ್ನಿತರರ್ಲ್ಯಾರೂ ವಿಧವಾ ಪತಿಯೆಂದು ಸಂಬೋಧಿಸಲಾರರೆ ಎಂಬೇಣಿಸುಕೊಂಡು ತವಲಬ್ಧ್ಯನ್ಯಾಗಿ ವೈಲಕ್ಷಣ್ಯಾಬಿಲಾಷಿಗಳಿಗೇ ಕರು ಚಿಂತಿಸುತಲೂ, «ಸುದಾಮಾಜೋಪಾಸ್ಯೋಯಃ, ಭಟ್ಟಾಚಾರ್ಯಃ " ಏನಸಾದ ನಿಜವಾಂಛಿತ್ಯವ್ರತರ್ಕಗಳಾದ ಅಭಿದಾನಗಳಂತೆ, ಸುರಾಕ್ಯ ಸ್ತೈತ್ರ್ಯ ಫೈಶ್ಯ ವರಾಶ್ರಮವೈಲಕ್ಷಣ್ಯ ಸೂಚಕಗಳಾದ ಪಂಡಿ ಪಲ್ಲಭಾದಿ ಘನತರ ಪ್ರಶಸ್ತಿ ಸಂಪಾದನೌತ್ಸುಕ್ಯದೊಡನೆ ಕೃಷಿ ಮಾಡುತಲೂ ಇರುವಂತವರ ಕೋರಿಕೆಯಂ ಭಂಗಗೊಳಿಸಿ ಅವರ ಪ್ರಯತ್ನಗಳಂ ನಿಷ್ಫಲಪಡಿಸುವದೊನೋ ಡದರ ಶಿಷ್ಯಕೋಟಿಯ ಪ್ರತಿಷ್ಠಾ ಸಂಪಾದನೆಯಲ್ಲಿ ಶ್ರೀ ಸ್ವಾಮಿಗಳವರಿಗೆ ಅಂತಃ ಅಸೂಯೆಯುಂಟಾಗಿರುವಂತೆ ತೋರುತ್ತದೆ. ಹಾಗಿಲ್ಲದಿದ್ದರೆ ಅವರು ಅನುಕೂಲವಾದ ಉತ್ತರವಂ ದಯಪಾಲಿಸಿ ಸಹಾಯಕರಾಗಿ ಪ್ರೋತ್ಸಾಹವನ್ನುಂಟು ಮಾಡದಿರಲಾರರು. ಆದುದರಿಂದ ಮೇಲೆ ಕಂಡಿರು ಸಂಘಟಿಸಲಪೇಕ್ಷಿಸಿರುವ ವಿಧವಾಪತಿತ್ವಕ್ಕೆ ತೋರವಂ ತಂದು ಅವರಪ್ರತಿಷ್ಠೆಯಂ ಸ್ವಾಮಿಗಳವರು ಕೋಗಲಾಡಿಸಬಾರದೆಂದು ಪ್ರಾರ್ಥಿಸುವ,

ತಮ್ಮ ವಿಧೇಯನಾದ,

ವಿಧವಾಪತಿ ಚಿಂತಾಕರನು.

## THE MYSORE GAZETTE
### ಮೈಸೂರು ಗಜೆಟ್.

———o———

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವ ಸರ್ಕಾರದಿಂದ ಕೊಡೋಣಾದ ಬಸ್ತಿ ಮಾನ್ಯಾಮೆಗಳು.

ನಂ|| ೯೦೮೯–೧೧೯೩–ತಾರೀಖ್ ೧೯ ನೇ ಸೆಪ್ಟೆಂಬರ್, ೧೮೯೩.— ಆಫಿಷಿಯೇಟಿಂಗ್ ಅಸಿಸ್ಟೆಂಟ್ ಕಮ್ಮಿಷನರ್ ಮೆ|| ಬಿ. ಕೃಷ್ಣಸ್ವಾಮಿ ನಾಯಡರವರು, ಬೆಂಗಳೂರು ಡಿಸ್ಟ್ರಿಕ್ಟ್ ಮೊದಲನೇ ಜನರಲ್ ಅಸಿಸ್ಟೆಂಟ್ ಕಮ್ಮಿಷನರವರ ಆಫೀಸ್ ಚಾರ್ಜನ್ನು, ೧೮೯೩ ನೇ ಇಸವಿ ಆಗಸ್ಟ್ ೩೧ ನೇ ತಾರೀಖಿನ ಅಪರಾಹ್ನದಲ್ಲಿ ಮೆ. ಸಿ. ಡಿ. ರಾಮಸ್ವಾಮಯ್ಯನವರಿಂದ ತೆಗದುಕೊಂಡಿರುತ್ತಾರೆ.

ನಂ|| ೫೦೬೬–೮. ೯. ೭೯೧೯–೯೦ — ಬೆಂಗಳೂರು ಆಫಿಷಿಯೇಟಿಂಗ್ ಸಿಟಿ ಮ್ಯಾಜಿಸ್ಟ್ರೇಟ್ ಮೆ|| ಎಸ್. ವೈದ್ಯನಾಥ ಅಯ್ಯರವರು, ೧೮೯೩ ನೇ ಇಸವಿ ಆಗಸ್ಟ್ ೩೯ ನೇ ತಾರೀಖ್ ಲಾಗಾಯಿತು ಒಂದು ವಾರದ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ|| ೫೭೮೭– ೮. ೯. ೭೯೩–೯೦ —ತಾರೀಖ್ ೨೦ ನೇ ಸೆಪ್ಟೆಂಬರ್ ೧೮೯೩.— ಮೆ|| ಎಸ್. ನರಸಿಂಹೈಯ್ಯಂಗಾರ್ರವರು, ಮೈಸೂರುಡಿಸ್ಟ್ರಿಕ್ಟ್ ೩ ನೇ ಜನರಲ್ ಅಸಿಸ್ಟೆಂಟ್ ಕಮ್ಮಿಷನರವರ ಕೋರ್ಟಿ ಚಾರ್ಜನ್ನು ಮಾಜೀ ಮಜಕೂರ ೧೧ ನೇ ತಾರೀಖಿನ ಅಪರಾಹ್ಣದಲ್ಲಿ ಮೆ|| ಎಸ್. ವೆಂಕಟ್ರಾಯರವರಿಗೊಪ್ಪಿಸಲು ಅವರದಂ ರಗದುಕೊಂಡಿರುತ್ತಾರೆ.

ನಂ|| ೫೯೭೩–೮. ೯. ೯೦–೯೦ ತಾ ೨೦ ನೇ ಸೆಪ್ಟೆಂಬರ್, ೧೮೯೩.—ಇದರಿಂದ ಸಮಸ್ತಜನರಿಗೂ ತಿಳಿಯಪಡಿಸುವದೇನೆಂದರೆ,— ಶಿರಾ ತಾಲ್ಲೂಕ್ ಮ್ಯೂನಿಸಿಪಲ್ ಬೋರ್ಡ ಮೆಂಬರಾದ ಸದರೀ ತಾಲ್ಲೂಕ್ ವಾಸಸ್ಥರಾದ ಮೆ|| ಭಾವಿವೆಂಕಟಪ್ಪನವರಿಗೆ ಐದು ವರುಷಗಳ ವಾಯಿದೆಯು ಪೂರೈಸಿದ್ದರಿಂದ ಸದರೀ ಯವರು ಇನ್ನೊಂದು ಐದುವರ್ಷಗಳ ತನಕ ಮರಳಿ ಮೆಂಬರಾಗ್ಯಾದಲ್ಪಟ್ಟಿರುತ್ತಾರೆ.

ನಂ|| ೬೩೦೦–೮. ೧೯೭೯— ತಾರೀಖ್ ೨೩ ನೇ ಸೆಪ್ಟೆಂಬರ್ ೧೮೯೩.— ಈ ಸಂವತ್ಸರದ ದಸರಾ ಹಬ್ಬಕ್ಕೋಸ್ಕರ ೧೮೯೩ ನೇ ಇಸವಿ ಅಕ್ಟೋಬರ್ ೧೩ ನೇ ತಾರೀಖ್ ಶನಿವಾರದ ಲಾಗಾಯಿತು ಅದೇ ತಿಂಗಳ ೨೪ ನೇ ತಾರೀಖ್ ಶನಿವಾರದ ಪರಿಯಂತ ಉಭಯ ದಿನಗಳೂ ಸೇರಿ ರಜಾದಿವಸಗಳಾಗಿರುತಿವೆ. ಜರೂರಿಯಾತ್ ಕೆಲಸಗಳ ನಿಮಿತ್ತ ಹೆಚ್ಚಿನಬಗ್ಗೆ ಆಯಾ ಇಲಾಖಾಧಿಕಾರಿಗಳಿಂದ ತಕ್ಕ ಏರ್ಪಾಡುಗಳು ಮಾಡಲ್ಪಡತಕ್ಕದ್ದು.

ನಂ|| ೬೭೪೫–೮. ೧೯೯೯— ತಾ|| ೨೫ ನೇ ಸೆಪ್ಟೆಂಬರ್, ೧೮೯೩.— ಇದರಡಿ ಕಂಡ ಅಮಲ್ದಾರ್‌ಗಳ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತಿವೆ.

ಎಸ್. ನರಸಿಂಗರಾಯರವರು ಚೆನ್ನಗಿರಿ ತಾಲ್ಲೂಕಿನಿಂದ ಜಗಲೂರ್ ತಾಲ್ಲೂಕಿಗೆ.

ಚಿಕ್ಕಬಳ್ಳಾಪುರ ಕೃಷ್ಣರಾಯರವರು, ಜಗಲೂರ್ ತಾಲ್ಲೂಕಿನಿಂದ ಚೆನ್ನಗಿರಿ ತಾಲ್ಲೂಕಿಗೆ.

### ಮಿಲಿಟರಿ ಇಲಾಖಾ.

ತಾರೀಖ್ ೨೫ ನೇ ಸೆಪ್ಟೆಂಬರ್, ೧೮೯೩.— ಮೈಸೂರ್ ಚಾರ್ ಇಲಾಖೆಯಲ್ಲಿ ೧೮೯೩ನೇ ಇಸವಿ ನವಂಬರ್ ೧೫ ನೇ ತಾರೀಖ್ ಲಾಗಾಯಿತು ಇವರಡಿ ತಿಳಿಸಲ್ಪಡುವಂತ ಬಾರ್ ಪಟಾಳಗಳ ಬದಲಾವಣೆಯು ಜಾರಿಯಲ್ಲಿ ತರಲ್ಪಡತಕ್ಕದ್ದು:—

೧ ನೇ ಪಟಾಳ,—ಶಿವಮೊಗ್ಗೆಯಿಂದ ಬೆಂಗಳೂರ್ ಸೂಕ್ಕಾಮಿಗೆ.

೨ ನೇ ಪಟಾಳ,—ಬೆಂಗಳೂರಿಂದ ಮೈಸೂರ್ ಮೊಕ್ಕಾಮಿಗೆ.

೩ ನೇ ಪಟಾಳ,—ಮೈಸೂರಿಂದ ಶಿವಮೊಗ್ಗೆ ಮೊಕ್ಕಾಮಿಗೆ.

### ರೆಜಿಸ್ಟ್ರೇಷನ್ ಇಲಾಖಾ.

ಇದರಡಿ ಕಂಡ ರೆಗ್ಯುಲೇಷನ್ ೧೮೯೧ ನೇ ಇಸವಿ ೩ ನೇ ನಂಬರ್ ರೆಗ್ಯುಲೇಷನ್ ಮೇರೆಗೆ ಶ್ರೀಮನ್ಮಹಾರಾಜಾ ರಾಜಾಸಾಹೆಬ್ ಬಹದ್ದೂರವರ ಅನುಮತಿಯಿಂ ಪಡೆದು ಮುಖ್ಯ ಜನರ ತಿಳುವಳಿಕೆಯ ಬಗ್ಗೆ ಈ ಮೂಲಕವಾಗಿ ಪ್ರಸಿದ್ಧಪಡಿಸಲ್ಪಟ್ಟಿರುತ್ತೆ.

೧೮೯೩ ನೇ ಇಸವಿಯ ೧ ನೇ ನಂಬರ್ ರೆಗ್ಯುಲೇಷನ್. ಪಬ್ಲಿಕ್ ಆಫೀಸರುಗಳ ತಪ್ಪಿನಿಂದ ನಷ್ಟವು ಬರದಂತೆ ಕಾಪಾಡಲು ಏರ್ಪಟ್ಟ ರೆಗ್ಯುಲೇಷನ್.

ಪಬ್ಲಿಕ್ ಆಫೀಸರುಗಳ ತಪ್ಪಿನಿಂದ ನಷ್ಟವು ಬರದಂತೆ ಕಾಪಾಡಲು ಏರ್ಪಾಡು ಮಾಡುವುದು ಅಗತ್ಯವಾಗಿರುವುದರಿಂದ ಶ್ರೀಮನ್ಮಹಾರಾಜಾ ರಾಜಾಸಾಹೆಬ್ ಬಹದ್ದೂರವರು ಇದರಡಿ ಕಂಡಂತೆ ನಿಬಂಧಿಸುತ್ತಾರೆ:—

೧. ಪ್ರತಿ ಪಬ್ಲಿಕ್ ಆಫೀಸರ್‌ಗೆ ತನ್ನ ಉದ್ಯೋಗ ಸಂಬಂಧವಾಗಿ ತನಗೆ ಒಪ್ಪಿಸಲ್ಪಟ್ಟಂಥಾ ಕೆಲಸಗಳನ್ನು ಚೆನ್ನಾಗಿ ನಡೆಯಿಸುವ ಕೆಲ್ಸ, ತನ್ನ ಉದ್ಯೋಗದ ಕಾರಣದಿಂದ ತನ್ನ ಸ್ವಾಧೀನದಲ್ಲಿ, ಅಥವಾ ಅಂಕೆಯಲ್ಲಿ ಬರುವಂಥಾ ಯಾವತ್ತು ದ್ರವ್ಯ ವಿಷಯವಾಗಿ ಸರಿಯಾದ ಲೆಕ್ಕ ಹೇಳುವದಕ್ಕೂ ಜಾಮೀನ್ ಕೊಡತಕ್ಕದ್ದು.

೨. ಪಬ್ಲಿಕ್ ಆಫೀಸರನ ಉದ್ಯೋಗಕ್ಕೆ ವಿಶೇಷವಾಗಿ ಸಂಬಂಧಿಸಿರುವ ರೆಗ್ಯುಲೇಷನ್ ಯಾವದೂ ಇಲ್ಲದಿದ್ದರೆ, ಪ್ರತಿ ಪಬ್ಲಿಕ್ ಆಫೀಸರನು ಉದ್ಯೋಗದಲ್ಲಿ ನಿಯಮಿಸಿರುವ ತಾ ಅಧಿಕಾರಸ್ಥರಿಂದ ಮೈಸೂರ್ ಗವರ್ನಮೆಂಟಿನವರ ಮಂಜೂರಾತಿಗೊಳಪಟ್ಟು ಆಗಿಂದಾಗ್ಗೆ ನಿರ್ಣಯಿಸಲ್ಪಟ್ಟಂಥಾ ಯಾ ನಿರ್ಣಯಿಸಲ್ಪಡುವಂಥಾ ಯಾವ ಕಾಯಿದೆಗಳಲ್ಲಿಯಾದರೂ ಚರ ಯಾ ಸ್ಥಿರವಾಗಲಿ ಮೊದಲ್ಲೂ ಕೇರಿಯಾಗಲಿ ಇಷ್ಟು ಮೊಬಲಗು ಮೊಂಬಲೂ ಇಂಥಾ ವಿಧವಾದದ್ದು ಯೆಂದಲೂ, ಇಂಥಾ ಜಾಮೀನುದಾರರಂತಲೂ ಗೊತ್ತು ಮಾಡಿರುವ ಮೇರೆಗೆ ಜಾಮೀನನ್ನು (ಆಯಾ ಸ್ಥಿರೋದ್ಯೋಗದರೀತಿಗೆ ತಕ್ಕವಾಗಿ) ತೆಗೆದುಕೊಳ್ಳತಕ್ಕದ್ದು. ಆದರೆ ಈ ಜಾಮೀನೀ ನಿಬಂಧನೆಯು ಪ್ರೋಸ್ಟಾಂ ಸಿನ ಉದ್ಯೋಗಸ್ಥರಿಗೆ ಅಗಾಧವಾಗತಕ್ಕದ್ದಲ್ಲವು.

೩. ಈ ರೆಗ್ಯುಲೇಷನಿನ ಅಭಿಪ್ರಾಯ ಪ್ರಕಾರ ಪಬ್ಲಿಕ್ ಆಫೀಸರ್ ಯಾರೆಂದರೆ, ಮೈಸೂರ್ ಗವರ್ನಮೆಂಟಿನವರ ಇಲಾಖೆಯಲ್ಲಿ ಮಾಡುತ್ತಾ ಇರುವ ಉದ್ಯೋಗದ ಕಾರಣದಿಂದ ಆ ಗವರ್ನಮೆಂಟಿನವರ ದ್ರವ್ಯವನ್ನಾಗಲಿ ದ್ರವ್ಯರೂಪವಾದ ಪತ್ರಗಳನ್ನಾಗಲಿ ತೆಗೆದುಕೊಂಡೋಣ ಅಥವಾ ಜೋಕೆಮಾಡೋಣ ಅಥವಾ ಇದರ ವಿಷಯವಾಗಿ ಅಧಿಕಾರ ನಡೆಯಿಸೋಣ, ಅಥವಾ ಮೈಸೂರ್ ಗವರ್ನಮೆಂಟಿನವರಿಗೆ ಸೇರಿದ ಭೂಮಿಗಳ ವಿಚಾರಣೆ ಮಾಡೋಣ ಈ ಕೆಲಸಗಳು ಯಾವನ ಸ್ವಾಧೀನ ಮಾಡಿರುತ್ತದೆಯೋ ಅಥವಾ ಯಾವ ಮನುಷ್ಯನಿಗಾದರೂ ಯಾ ಯಾವ ಮನುಷ್ಯನಿಗಾದರೂ ಸೇರಿದಂಥಾ ದ್ರವ್ಯವನ್ನು ಅಥವಾ ದ್ರವ್ಯ ಸಂಬಂಧವಾದ ಪತ್ರಗಳನ್ನು ತೆಗೆದುಕೊಂಡೋಣ ಅಥವಾ ಜೋಕೆ ಮಾಡೋಣ ಅಥವಾ ಅದರ ವಿಷಯವಾದ ಅಧಿಕಾರವನ್ನು ನಡೆಯಿಸೋಣ, ಅಂಥವರ ಭೂಮಿಗಳ ವಿಚಾರಣೆ ಈ ಕೆಲಸಗಳನ್ನು ಆಫೀಷಿಯಲ್ ಅಸೈನಿಯಾಗಿ ಆಗಲಿ ಟ್ರಸ್ಟಿಯಾಗಿ ಆಗಲಿ ಬೇರೇ ಯಾವ ಉದ್ಯೋಗಸ್ಥನಾಗಿ ಯಾಗಲಿ ಇರುವಂಥಾ ಯಾವನ ಸ್ವಾಧೀನ ಮಾಡಿ ಇರುತ್ತದೆಯೋ ಅಂಥವನು ಪಬ್ಲಿಕ್ ಆಫೀಸರ್ ಆಗಿರುತ್ತಾನೆ. ಮೈಸೂರ್ ಗವರ್ನಮೆಂಟಿನವರ ಪಿ ಡಿ ಪ್ರೋಟೆಕ್ಟರ ಉದ್ಯೋಗಗಳು ಮತ್ತು ರೆಗ್ಯುಲೇಷನ್ ಉದ್ಯೋಗಗಳೂ ಸೇರಿ, ಪಬ್ಲಿಕ್ ಆಫೀಸರ್ ಶಬ್ದದ ಅರ್ಥದಲ್ಲಿ ಸೇರತಕ್ಕದ್ದು.

೪. ಪಬ್ಲಿಕ್ ಆಫೀಸರ್‌ಗೆ ಯಾವ ಅಧಿಕಾರಿಗೆ ಸೇರಿದವನಾಗಿ ಇರುತ್ತಾನೋ ಆ ಅಧಿಕಾರಿಗೆ ಮುಖ್ಯಸ್ಥನಾಗಿ ಯಿರುವ ಮನುಷ್ಯನು ಬರುವ ನ ನುಷ್ಯನು ಅಂಥಾ ಪಬ್ಲಿಕ್ ಆಫೀಸರ್ ಲೆಕ್ಕಗಳನ್ನು ಯೇನಾದರೂ ನಷ್ಟ ಅಥವಾ ಕಮ್ತಿ ಬಂದಲ್ಲಿ ಆ ಬಾಬತು ಬಾಬು ಮೈಸೂರ್ ಗವರ್ನಮೆಂಟಿಗೆ ಸೇರತಕ್ಕ ಜಮೀನ್ ಬಾಬತು ತರಿಗೇ ಬಾಕಿಯಾಗಿ ಇದ್ದರೆ ವಸೂಲಿಗೋ ಆ ಪ್ರಕಾರವಃ ಇದರಃ ಸವಿಸ್ತರ ವಿಷಯವಾಗಿ ಆಗಲಿ ಕಡಿದಾ ವಿಷಯವಾಗಿ ಆಗಲಿ ನಡೆದ ಪಬ್ಲಿಕ್ ಆಫೀಸರನ ಮೇಲೆಯೂ ಅವನ ಜಾಮೀನುದಾರನ ಮೇಲೆಯೂ ವ್ಯವಹಾರ ನಡಿಸತಕ್ಕದ್ದು.

ಮೈಸೂರ್ ಗವರ್ನಮೆಂಟಿಗೆ ಸೇರತಕ್ಕ ಜಮೀನ್ ಬಾಬತು ಬಾಕಿಯನ್ನು ವಸೂಲ್ ಮಾಡುವ ನಿಮಿತ್ತ ಅಂಥಾ ಬಾಕೀ ಬಗ್ಗೆ ಯಾವನೇ ಯೆನಾದರೂ ಅನ್ಯಾಯವಾಗಿ ಸ್ವಾಧೀನ ಮಾಡಿ ಇದ್ದರೆ ಅಂಥವನು ಆದ್ಯ ಪನೂರ್ ಇದಾಗಿರೂ ಪ್ರಾಪರ್ಟಿ ... ತಾ ಇರುವ ಅಥವಾ ವಿಸ್ತಾರವಾಗಿ ಬರುವ ಪೋಗುವ ಯಲ್ಲಾ ರೆಗ್ಯುಲೇಷನ್‌ಗಳು ಪರಿಶೀ ಪಬ್ಲಿಕ್ ಆಫೀಸರನ ಮೇಲೆ ನಡಿಸುವ ವ್ಯವಹಾರಗಳಿಗೂ ಪಬ್ಲಿಕ್ ಆಫೀಸರನ ನಡೆಸುವ ವ್ಯವಹಾರಗಳಿಗೂ ಆಗಬೇಕು. ಸದರೀ ವ್ಯವಹಾರವನ್ನು ನಡೆಯಿಸುವ ಪದ್ಧತಿಗಳಲ್ಲಿ ಆಯಾ ವಿಧಾಯಕ್ಕೆ ತಕ್ಕಂತೆ ಚಾರ್ಚ್ ಪಡಿಸು ಮಾಡತಕ್ಕದ್ದು.

ಟಿ. ಆರ್. ಎ. ತಂಬೂಚೆಟ್ಟಿ,

ಆಫೀಷಿಯೇಟಿಂಗ್ ಸೆಕ್ರಟರಿ ಟು ದಿ ಗವರ್ನಮೆಂಟ್ ಆಫ್ ಮೈಸೂರ್.

## SUMMARY OF NEWS
### ವೃತ್ತಾಂತ ಸಂಗ್ರಹವು.

ಈ ಜಗತ್ತಿನಲ್ಲಿ ಎಲ್ಲಾ ಪತ್ತ ಮನುಷ್ಯರಿನ್ನಾರೆಂದು ಜನ್ನಾಮೊಸ್ಸು ನೋಡತಕ್ಕ ಲೆಕ್ಕ ಮಾಡಿರುತ್ತಾರೆ—ಲೋ.

ಬೆಸ್ತ ದೇಶದಲ್ಲಿನ ಒಬ್ಬ ದೊಡ್ಡ ಮನುಷ್ಯನ ಸಹಿಗು ಪಡೆಯುವರು—ಮಾಡಿದ್ದರು ಕೆಲವರು ಆ ಪತ್ರಗಳನ್ನು ಪಾಸಿಕೊಳ್ಳಬೇಕೆಂದು ಹೇಳುತ್ತಾರೆ—ಹ. ಪ.

ಟೀಸ ಎಂಬ ಅಮೇರಿಕ ದೇಶದವನು ಪ್ಯಾರಿಸ ಎಂಬ ಪಟ್ಟಣದ ನೀರು ಮೇಲೆ ಕಳೆದು ಪ್ರಯಾಣವನ್ನು ನಡೆಸಿ ಪಾರು ಹೋಗುವನು ಈತನು ಈಗ ಕಲಕತ್ತೆಗೆ ಬರುತ್ತಾನೆ.

ಶ್ರವಣಬೆಳಗೊಳದಲ್ಲಿ ಬ್ರಾಹ್ಮಣರಿಗೆ ಸತ್ರಾವನ್ನು ಕಾರ್ಯದಲ್ಲಿ ರಿನಿಯವರು ಬಹಳ ಸತ್ಕಾರವನ್ನು ಮಾಡಿದ ಈ ಕಾರ್ಯಕ್ಕೆ ಕೆಲವರು ದ್ವೇಷವನ್ನು ತೆಗೆದುಕೊಂಡು...

ಗಂಡನೂಳಿಯುವರೆಗೆ ನಡೆಯುವ ವಿಧಿನಿಯಮ ಪಡೆದ ಪತಿವ್ರತಾ ಧರ್ಮವನ್ನು ತಿಳಿದುಕೊಂಡರೆ ಮನೆಯ ಸುಖವು ನಡೆವೆಯು ಮುಂದಿನ ಜನರಿಗೆ ಕೊಡುವರು—ಲೋ.

ಅಮೋಘವರ್ಷನ ಕಾಲದ ಬಳಿಕ ಸ್ಥಳೀಯ ಎಂಬ ಸಂಗೀತಗಾರರಿಂದ ವಿಶೇಷ ಮಳೆ ಹೊಯ್ದಾಗಿ ೩ ದಿನಗಳಲ್ಲಿ ೨೨ ಅಂಗುಲ ಪ್ರಮಾಣ ನೀರು ಬಂದಿತು ಯಿಂದು ವರ್ತಮಾನ ಬಂದಿದೆ—ಸೂ. ಪ್ರ.

ಜಗತ್ತಿನೊಳಗಿನ ಬಹು ದೊಡ್ಡ ಘಂಟೆಯು ಮಾಸ್ಕೋ ಪಟ್ಟಣದಲ್ಲಿದೆ, ಅದರ ಸುತ್ತಳತೆ ೬೭ ಅಡಿಗಳು, ದಪ್ಪ ೨೧ ಅಡಿಗಳು ಇದೆ. ಇದರ ತೂಕವು ೧೭೩೦೦೦ ಮಣವಿರುತ್ತದೆ—ಕ. ಪತ್ರ.

ಪಶ್ಚಿಮಹಾಘಟ್ಟದ ಪ್ರಾಂತದಲ್ಲಿನ ಒಬ್ಬ ಮನುಷ್ಯನು ಮದ್ಯಪಾನ ಮಾಡುತ್ತಿದ್ದವನ ನೋಡಿದ ಕಳ್ಳಗಳು ಹುಲಿಯು ಅವನಿಗೆ ಹೊರಗೆ ಬಂದು ಹಿಡಿದು ನೋಡಿದ ಆಗಲಿಲ್ಲ, ಮತ್ತು ಮದ್ಯಪಾನದ ಅವನಿಗೆ ಘಾಯವನ್ನೂ ಆಗಲಿಲ್ಲ—ಕ. ಪ.

ಈ ಪ್ರಾಂತದ ಉಭಯಭಾಗದ ಕಾರ್ಖಾನೆಗಳಲ್ಲಿಯೂ ಇಟ್ಟ ಒಂದ ಪೆಟ್ಟಿಗೆಯ ಕಳವು ೧೮೯೩ನೇ ಇಸವಿಯಲ್ಲಿ ೩೨೬೦೦೦೦ ಮನೆಗಳಿಗೆ ಸುಡುವ ಸುದ್ದಿಯ ಉತ್ಪತ್ತಿಯಾದ್ದರಿಂದ ಪ್ರತಿವರ್ತನೆ—ಕ. ಸು.

ಬೆಳಗಾಂವಿ ಜಿಲ್ಲಾ ಕಾಗವಾಡದಲ್ಲಿ ನಾನಾ ಮಾಂಗ ಎಂಬ ಒಬ್ಬ ಮುಸಲ್ಮಾನ ಗೃಹಸ್ಥನ ಆರ್ತ ಜನನ ಕಾಲದಲ್ಲಿ ಬಂದ ಶಿವನ ಕಾರ್ಖಾನೆ ಕಡೆಯವರ ನಿದ್ದರೆ ಇದರ ಬೆಲೆ ಯಾವ ಲಕ್ಷದ ನಾಲ್ಕು ಮಿಕ್ಕ ಭೂಮಿಯನ್ನು ಖರೀದಿಗೆ ತೆಗೆದುಕೊಂಡಿದ್ದಾರೆ.

ಸ್ತ್ರೀ ಪಕ್ಷವಾದ ಹಾದವನು ಗಂಡನ ಮರಣ ದಿನವನ್ನು ಪಡೆದ ಸಂಬಂಧವನ್ನು ರಗಳೆ ಮಾಡಿ ಸೀತವನ್ನು ಮಾಡುವವರನ್ನು ಮುಖ್ಯವಾಗಿಸುವ ಕ್ರಮವು ವಿಲಾಯಿತಿಯಲ್ಲಿದೆ ವಾರ್ತೆಯ ಗೆದ್ದವನು ಅತ್ತೆಗೆ ಅದು ಒಂದು ಪತ್ರಿಕೆಯು ವೋದಿಗೂ ಕೈದಿವೆ—ಅಸ. ಜಿ.

ಆಸ್ಟ್ರೇಲಿಯಾ ನಮಗೆ ಮಾಗಳು ತನ್ನ ಗಂಡನಲ್ಲಿ ಅನ್ನವನ್ನು ಅಡಿಪಿ, ವಿವಾಹ ಸಂಬಂಧವನ್ನು ನಿಲ್ಲಿಸಿ ಮದುವೆ ಮಾಡಲು ನಿರ್ಧರಿಸಿದ್ದಳು ಈಗ ಅದನ್ನು ಗಂಡನು ತನ್ನ ಹೆಂಡತಿಯನ್ನು ತನ್ನ ಸ್ವಾಧೀನಕ್ಕೆ ಕೊಡಬೇಕೆಂದು ವಾದ ಮಾಡುತ್ತಾನೆ—ನ್ಯಾ. ಪ.

ಕಂಚಿ ಜಿಲ್ಲೆಯ ಗುಜರಾತ ದೇಶದಲ್ಲಿ ಎಂಬ ಸ್ಥಳದಲ್ಲಿ ರಾಯಿ ನ. ವಿ. ವಿ. ಎಂಬವರು ಬಹು ಸಂಸ್ಕೃತ ವಿದ್ವಾಂಸರನ್ನು ಕರೆಸಿ ಅವರಿಗೆ ಕಾಣಿಕೆ ಕೊಟ್ಟರು. ಈ ರೀತಿ ಉಪ್ಪು ಕಲಿಯನ್ನು ಸಂಸ್ಕಾರ ಮಾಡಿದವರಿಗೆ ಕಡೆಯಲ್ಲಿ ನಿಲ್ಲಿಸಿದರು ಅವರ ಉಚಿತ. ಶ್ರೀ ಸವ ಈ ವರ್ತಮಾನ ಬಹು ಹಿತಕರವಾಗಿದೆ—ಕ. ಸು.

ವಿಲ್ಸನ್ ಸ್ಮಿತ್—ಕೋರ್ಟಿನಲ್ಲಿ ವಿಚಾರಣೆಯಾಗಿ ಸಂಗತಿ ಗೊತ್ತಾಗಿ ಪಕ್ಷವಿಲ್ಲ ನಿಮಿತ್ತವಾಗಿ ಅರ್ಥ ಮಾಡಿ ಪತ್ನಿ ಬರೆದ ಪತ್ರಿಕೆ ಬಂದು ಒಂದು ಗಂಟೆ ವಿವಾಹ ಅಲ್ಲವೆಂದು ಕೊಡಲು ಸಾವಿರಗಳನ್ನು ಬಂದು ಐದನ ಸ್ಥಿರವನ್ನು ಕೋಪಿಸಿಕೊಂಡು ಅದನ್ನು ಕ್ಷೌರ ಮಾಡಿ ಇದ್ದರೆ. ಪ್ರತಿ ಒಬ್ಬನು ಬಂದು ಆದುದರಿಂದ ಕೊರ್ಟನ್ನು ಜಂಗ್ಲಿಯಕ ಆ ಕಾರ್ಯವನ್ನು ನಿಲ್ಲಿಸುತ್ತಾ ಇದ್ದ ರೀತಿಯಾಗಿದೆ—ಚಂ.

ಅಕ್ಕಲಕೋಟೆ ಮುಷ್ಯಾಯರೆ ಕಮಿಷನರು ಬಿಳಿಯ ಪಕ್ಷದ ಸ ಮನುಷ್ಯರನ್ನು ನೇಮಿಸಿದರು ಪಕ್ಷದವರನ್ನು ಕೊಡಿಸಿಕೊಂಡಿದ್ದಾರೆ. ಮತ್ತು ಅಲ್ಲಿನ ಪಡೆಯವರು ಸಹಾಯ ವನ್ನು ಕೊಡ ಬೇಕೆಂದಿದ್ದಾರಂತೆ. ಇದರ ಕಾರಣ ಗೊತ್ತಾಗಿಲ್ಲ. ಈ ಪಟ್ಟಣದಲ್ಲಿ ಮುಸಲ್ಮಾನರ ವಿರೋಧವು ಆದ ಬಳಿಕ ಸಂಸ್ಕಾರ ಮಾಡಬೇಕೆಂದು ಬಂದಿದ್ದ ಗೃಹಸ್ಥರನ್ನು ಪ್ರತಿಬಂಧಿಸಿದರು—ಕ. ಸು.

ಸೇಲಂ ಡಿಸ್ಟ್ರಿಕ್ಟ್ ಹತ್ತಿರದ ಮುಂಬೈಯಲ್ಲಿ ಇದ್ದಾರೆ ಎಂದು ದೇವಸ್ಥಾನದ ವರ್ತಮಾನವು ಇದ್ದದ್ದು ಬಿಟ್ಟು ಪ್ರಸ್ತುತದಲ್ಲಿ ಕೂಡಿದ್ದ ಜನರು ಹಣವನ್ನು ಕೊಟ್ಟು ಪಡೆದುಕೊಳ್ಳಲು ಬಂದಿದ್ದರು, ಬಂಗಾರಗಳಿನ ಅರ್ಧ ಮಾರ್ಗದಲ್ಲಿ ಪೊಲೀಸರು ಬಂದು ಹಿಡಿದರು. ಬಳಿಕ ಜಾಗ್ರತೆಯಾಗಿದ್ದವರು ಅದರ ಒಳಗೆ ಬೇರೆ ಅರ್ಥವನ್ನು ಕಂಡು ಬರಲಿಲ್ಲ. ಅದರಿಂದ ವರ್ತಮಾನದ ಹೆಸರು ಸ್ಪಷ್ಟವಾಗಿಲ್ಲ—ಕ. ಸು.

ಲಕ್ಷ್ಮೀಪುರದ ಜನರ ಪಕ್ಷ ಪೊಲೀಸ ಮುನ್ಸಿಪಲ್ ಕಮಿಟಿಯವರು ಕಳೆದ ಕಲಹದ ವಿಷಯದಲ್ಲಿ ರಿಪೋರ್ಟ ಕಳುಹಿದ್ದಾರೆ. ಪೊಲೀಸರ ಸ್ವತಂತ್ರ ಕಾರ್ಯ ವಿಷಯ ಈ ವಿಷಯ:—

ಪ. ಬಿ. ೩ ಪ. ರಿಪೋರ್ಟ್ ಕಲ ವಿವರವು ೧೮ ಸ್ಟೇಷನಗಳ ಲ್ಲಿ, ಪೋಲಿಸರು ಉತ್ತರ ಬಂದ ಒಂದ ಸಂವತ್ಸರದೊಳಗೆ ೧೪ ಪೋಲಿಸ ನಡೆದಿರುವರು. ಪ. ಬಿ. ಪ. ರಿಪೋರ್ಟ್ ಇರುವುದರ ಒಳಗೆ ಸ್ಟೇಷನಗಳಲ್ಲಿ ೩೦ ಮೊಬಲಗು ಇದೆ, ಬಂದು ೩೦ ಪೊಲೀಸರನ್ನು ಇರಿಸಿರುವರು. ಸರಕಾರದ ೩೨ ಸ್ಟೇಷನಗಳೂ ೫೦ ಪೋಲೀಸರೂ ಇರುತ್ತಾರೆ. ಇದರ ಪ್ರಕಾರ ಪಟ್ಟಣದ ಮೊದಲನೇ ಸ್ಟೇಷನಗಳ ಪ್ರತಿ ಒಂದು ಪೊಲೀಸರೂ ಇದ್ದು ಪೋಲೀಸ ಸ್ಟೇಷನ ಮಾಡಿ ಇರುತ್ತಾರೆ—ಕ. ಪತ್ರ.

BANGALORE.—Printed and published at the KARNATAKA PRESS, No. 40, HOSPITAL ROAD, CITY.—1893.

# ಕರ್ಣಾಟಕ ಪ್ರಕಾಶಿಕಾ

# THE KARNATAKA PRAKASIKA.

## ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning.**

ಪ್ರಕಾಮವಿನಿವಿವಸ್ವತ್ಸ್ಯನಗನಾರ್ಥಕರ್ನಾಟಕಪ್ರಕಾಶನವರಾಭಿಧಾಪ್ರಥಿತಸಾಹಿತೀಕಶೋಭಿತಾ ॥ ಮೃಗಾಂಕಹಿತಮಾಸರೆನಿಹಿತಮುದ್ರಣಾಸಜ್ಜನೈರ್ದ್ವಿವಾಸುಪರಿಪೋಷಿತಾದಿಶತಿಮಾನಸಂಸಂಮುದಂ ॥

Vol. XX | BANGALORE—MONDAY OCTOBER 9, 1893. [No 40.

ಸಂಪುಟ ೨೦.] ಬೆಂಗಳೂರು:—ಸರ್ ೧೮೯೩ನೇ ಇಸವಿ ಅಕ್ಟೋಬರ್ ೯ ನೇ ತಾರೀಖ್ ಸೋಮವಾರ. [ಸಂಚಿಕೆ ೪೦


### ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

| | ಸ್ಥಳದವರಿಗೆ. | ಪರಸ್ಥಳದವರಿಗೆ. |
|---|---|---|
| ಸಾಲ್ ಒಂದಕ್ಕೆ ... | ...6—0—0 | 8—0—0 |
| 6 ತಿಂಗಳಿಗೆ .. | .. 3—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

| | ಸ್ಥಳದವರಿಗೆ. | ಪರಸ್ಥಳದವರಿಗೆ. |
|---|---|---|
| ಸಾಲಿಂದಕ್ಕೆ ... .. | 3—0—0 | 4—0—0 |
| 6 ತಿಂಗಳಿಗೆ .. ... | 1—12—0 | 2—8—0 |

ಈ ಪತ್ರಿಕೆಗೆ ಚಂದಾಪತ್ತು ಮಾಡಿದ ತಾರೀಖ್ ಮೊದಲು ಒಂದು ತಿಂಗಳೊಳಗಾಗಿ ಚಂದಾ ಹಣವನ್ನು ಕಳುಹಿಸಿದವರಿಗೆ ಮಾತ್ರವೆ ಅಡ್ವಾನ್ಸ್ ದರದ ಮೇಲೆ ಪತ್ರಿಕೆ ಕಳುಹಿಸಲ್ಪಡುವದು. ಚಂದಾದಾರರು ಇಂಗ್ಲಿಷ್ ಭಾಗದ ಸ್ಥಾನದಲ್ಲಿ ಕನ್ನಡಭಾಗವನ್ನಾಗಲಿ ಅಥವಾ ವಿದರ್ರಾಗಲಿ ತೆಗೆದುಕೊಳ್ಳಬಹುದು. ಮೂರು ತಿಂಗಳಿಗಿಂತ ಕಡಮೆಯಾಗಿ ಚಂದಾ ಹಣವನ್ನು ಅಂಗೀಕರಿಸಲ್ಪಡಲಾರದು.

### ಪ್ರಕಟನೆಯ ದರಗಳು.

ಮೊದಲನೆಸಾರಿಗೆ ಪಂಕ್ತಿ ಒಂದಕ್ಕೆ ೦—೨—೦

ಎರಡನೆಸಾರಿಗೆ ಪಂಕ್ತಿ ಒಂದಕ್ಕೆ ೦—೧—೦

ಮಿನಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟುಕಡವ ಕಾನ್ಟ್ರಾಕ್ಟ್ ಮಾಡಿಕೊಳ್ಳುವರು ಪಂಕ್ತಿ ಒಂದಕ್ಕೆ ೧ ಆಣೆಯಂತೆ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಶಾಶ್ವತವಾಗಿ ಪ್ರಕಟನೆಗಳನ್ನು ಕೊಡುವವರು ಆಫೀಸಿಗೆ ಕೊಡಬೇಕಾದ ಮೊಬಲಗನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಿದ್ದರೆ ಅವರು ನಿಲ್ಲಿಸುವಂತೆ ಬರೆಯುವವರೆಗೆ ಅವು ಪ್ರಕಟಿಸಲ್ಪಡುವುವು. ಹಾಗೆ ಎಷ್ಟಾವರ್ತಿ ಪ್ರಕಟಿಸಲ್ಪಟ್ಟದ್ದಾಗಲಿ ಮೇಲೆ ಕಂಡ ದರದಂತೆ ಚಾರ್ಜ್ ಮಾಡಲ್ಪಡುವದು. ಪ್ರಕಟನೆಯನ್ನು ಕಳುಹಿಸಿದವರು ಪ್ರಕಟನೆಯನ್ನು ಯಾ ಅವರ ಮನುಷ್ಯನ ಮುಂಗಡ ಹಣಸಹಿತವಾಗಿ ಕಳುಹಿಸಬೇಕು. ಪ್ರಕಟನೆಯನ್ನು ಈ ಪತ್ರಿಕೆಗೆ ಕಳುಹಿಸುವವರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಲಾರೆವು ಕ್ರಮವಾಗಿ ರುಜುಮಾಡಿದ ಕಾಗದಗಳನ್ನು ಪ್ರಕಟಿಸಲಾರೆವು. ಹಿಂತಿರುಗಿಸಲ್ಪಡಬೇಕಾದ ಕಾಗದಗಳನ್ನು ಕಳುಹಿಸಲ್ಪಡಲಾರವು.


*ADVERTISEMENTS.*

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

*Price including Postage Rs 5 0 0*

ವೈದ್ಯಸಾರ ಸಂಗ್ರಹ.

ಈ ಗ್ರಂಥವು ಬೇಕಾಗಿರುವವರು ಮೊಬಲಗಿನೊಡನೆ ಈ ಕೆಳಗೆ ರುಜು ಮಾಡಿರುವವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದೆ ದರಖಾಸ್ತುಗಳಿಗೆ ಗಮನ ಕೊಡಲ್ಪಡಲಾರದು.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಹಾಸಲು, ಸಹಿತ ಪ್ರತಿ ಒಂದಕ್ಕೆ ರೂ ೫—೦—೦

ಟಿ. ಬಿ. ವೆಂಕಟಾಚಾರ್.

ಬೆಂಗಳೂರ್. ಪಬ್ಲಿಕ್ ಆಸ್ಪತ್ರಿ ರೋಡ್ ೮ನೇ ಸೆಪ್ಟೆಂಬರ್

ನೋಟಿಸ್.

ಬೆಂಗಳೂರು ಕರ್ನಾಟಕ್ ಪ್ರೆಸ್.

೧೮೭೪ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ, ಸಕಲವಿಧ ಕೆಲಸಗಳು ಸುಲಭಚಾರ್ಜಿಗೆ ಶೀಘ್ರವಾಗಿಯೂ ಶ್ಲಾಘ್ಯವಾಗಿಯೂ, ಮಾಡಲ್ಪಡುವವು.

ಇದರಲ್ಲಿ ಸದ್ಯಕ್ಕೆ ಇಂಗ್ಲಿಷ್ ಕನ್ನಡ ಕೆಲಸಗಳು ಮಾತ್ರನಡೆಯುತ್ತವೆ. ಇತರ ಡಿಪಾರ್ಟ್‌ಮೆಂಟ್‌ಗಳನ್ನು ಸದರೀ ಕಾರ್ಖಾನೆಯ ಪ್ರೊಪ್ರೈಟರಿಗೆ ಬರೆದು ತಿಳಿದುಕೊಳ್ಳಬಹುದು.


ನೋಟಿಸ್.

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪೆನಿ. ಕಮಿಷನ್ ಏಜೆಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಜಾಗರೂಕತೆಯೊಡನೆ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ಪಕ್ಕ ಕಮಿಷನ್ ತೆಗದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರದ ಔಷಧಗಳು, ಪುಸ್ತಕಗಳು, ಮುತ್ತುಗಳು, ಚಿಪ್ಪಿ ಮುತ್ತುಗಳು, ಛತ್ರಿಯಾರಗಳು, ವಾಚ್‌ಗಳು, ಟ್ರಂಕ್ಸ್‌ಗಳು, ಕಾಶ್ಮೀರ ಶಾಲುಗಳು, ಪಟ್ಟೇರೆಗಳು, ಜರತಾರಿಕಣಗಳು, ಚಂದ್ರಕೋತ ಮೊದಲಾದ ಕನ್ನಡಕಗಳು, ಹುಡುಗರಿಗೆ ಜರತಾರಿ ಅಂಗಿಗಳು, ಜರತಾರಿ ಟೋಪಿಗಳು, ಆಫಿಸ್ ಡ್ರೆಸ್‌ಗಳು, ಪರ್ಸ್‌ಗಳು, ಅತ್ತರಿಗಳು, ಅತ್ಯುತ್ತಮಗಳಾದ ವಸ್ತ್ರಗಳು, ಭಂಗಾರದಿಂದ ಕಟ್ಟಲ್ಪಟ್ಟ ಉಂಗುರಗಳು, ಬೆಳ್ಳಿ ಪಾತ್ರಗಳು, ಜರ್ಮನ್ ಬೆಳ್ಳಿ ಪಾತ್ರಗಳು, ಕೇಸರಿ, ಕಸ್ತೂರಿ ವಗೈರೆ ಇತರ ಸಾಮಾನುಗಳು

ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟಾಂಪ್ ಕಳುಹಿಸಿದ ಹೊರತು ಜವಾಬ್ ದೊರೆಯಲಾರದು

ವಿಳಾಸ —ಗಣೇಶ ರಾಮಚಂದ್ರ ಕರ್ಕಿ, ಮತ್ತು ಕಂಪೆನಿ, ಕಮಿಷನ್ ಏಜಂಟ್ಸ್. ಠಾಕೂರ್‌ದ್ವಾರ, ಮಾರ್ಕೆಟ ಪೋಸ್ಟು, ಮುಂಬೈ.

ನೋಟಿಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ನಾಟಕ ಮುದ್ರಾಕ್ಷರ ಶಾಲೆಯಲ್ಲಿ ಬಿಕರಿಗೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

ಸಂಸ್ಕೃತ ಗ್ರಂಥಗಳು.

| | ಹಾಸಲ್ ಸಹಿ ರೂ | ಅ | ಪೈ. |
|---|---|---|---|
| ಸಟೀಕಾ ವೈದ್ಯಸಾರ ಸಂಗ್ರಹ | ೫ | ೦ | ೦ |
| ,, ಶಿವಗೀತೆ | ೧ | ೦ | ೦ |
| ,, ಶಿವಾನಂದಲಹರಿ | ೦ | ೭ | ೦ |
| ,, ಕಾಲಾಮೃತ | ೧ | ೦ | ೦ |
| ,, ಟಿ॥ ವಾಲರಾಮಾಯಣ .. | ೦ | ೩ | ೦ |
| ,, ಟಿ॥ ಗೋಪಿಕಾ ಗೀತೆ ... | ೦ | ೧ | ೦ |
| ,, ಟಿ॥ ಚಾಣಿಕ್ಯನೀತಿ (ಸುಭಾಷಿತ) | ೦ | ೮ | ೦ |
| ವಿಷ್ಣುಸಹಸ್ರನಾಮ ವಗೈರೆ | ೦ | ೩ | ೦ |
| ಸೂರ್ಯಸಹಸ್ರನಾಮ | ೦ | ೨ | ೦ |
| ಕೃಷ್ಣಕರ್ಣಾಮೃತ | ೦ | ೨ | ೦ |
| ತ್ರಿಕಾಂಡ ಅಮರ ಮೂಲ | ೦ | ೨ | ೧ |
| ೧ ಕಾಂಡ | ೦ | ೧ | ೦ |

ಕನ್ನಡ ಗ್ರಂಥಗಳು.

| | | | |
|---|---|---|---|
| ಶುಕಸಪ್ತತಿ ಅವ್ವಲ್ | ೩ | ೦ | ೦ |
| ಡಿಟಿಟೋ ದುಯ್ಯಂ | ೧ | ೨ | ೦ |
| ವೃಷಭೇಂದ್ರವಿಜಯ | ೧ | ೭ | ೦ |
| ಪಂಚತಂತ್ರ ಮಾಲಿಕೆ | ೦ | ೪ | ೦ |
| ಹನುಮದ್ವಿಲಾಸ | ೦ | ೬ | ೦ |
| ಕಾಳಿಂಗಮರ್ದನ | ೦ | ೨ | ೦ |
| ಸುಭದ್ರಾಪರಿಣಯ | ೦ | ೨ | ೦ |
| ಶಶಿರೇಖಾಪರಿಣಯ | ೦ | ೨ | ೬ |
| ಸುದಾಮಚರಿತ್ರೆ | ೦ | ೧ | ೦ |
| ಮೈರಾವಣ ಚರಿತ್ರೆ | ೦ | ೧ | ೬ |
| ಬಾಲಗ್ರಹಚಿಕಿತ್ಸೆ | ೧ | ೦ | ೦ |
| ಮದನಮೋಹನ ಲಾ | ೦ | ೧೨ | ೦ |
| ಭ್ರಾಂತಿವಿಲಾಸ | ೦ | ೧೨ | ೦ |

ಪ್ರಕಟನೆ.

ಇದರಿಂದ ಸಮಸ್ತ ಜನರಿಗೂ ತಿಳಿಯ ಪಡಿಸುವದದೇನೆಂದರೆ:—

ಬೆಂಗಳೂರು ಡಿಸ್ಟ್ರಿಕ್ಟಿಗೆ ಸೇರಿದ ಜಂಗ್ಲಿಗಳಲ್ಲಿ ಹುಟ್ಟುವಳಿಯಾದ ಇದರಡಿ ತಿಳಿಸಲ್ಪಡುವ ಪದಾರ್ಥಗಳು, ೧೮೯೩ನೇ ಇಸವಿ ಅಕ್ಟೋಬರ್ ೧೨ ನೇ ತಾರೀಖ್ ಬೆಳಗ್ಗೆ ೧೧ ಘಂಟೆಗೆ, ಬೆಂಗಳೂರು ಕೋಟೆಯೊಳಗಿರುವ ಸಾದರ್ ಕಚೇರಿಯಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವವು:—

(೧) ಅಳಲೇಕಾಯಿ ಖುದಾಸ್ 2¾ ಟನ್‌ಗಳು.
(೨) ಬೀಸಂದರಕಾಯಿ ,, 12ಪತ್ರಪಲ್ಲೆಗಳು
(೩) ಜೇನು ಮೈಣ ,, 62 ಪೌಂಡುಗಳು.
(೪) ಶೃಂಗಿ ಅರಗು ,, 108½ ,,

CHARLES E. M. RUSSELL,
*Superintendent of Forests and Government Farms Bangalore District.*

THE MONEY MARKET.

ಮದರಾಸ್, ಶನಿವಾರ, ತಾರೀಖ್ 7ನೇ ಅಕ್ಟೋಬರ್ 1893 ಸೇಕಡ 4ರೂ. ಬಾಬತು ಗವರ್ನಮೆಂಟ್ ಪತ್ರಗಳು ನೂರು ರೂಪಾಯಿಗಳು, 104—10—0 ಇಂದ 105—4—0ವರೆಗೆ. ಸೇಕಡಾ ಮೂರುವರೆ ರೂಪಾಯಿಗಳ ಬಾಬತು ಗವರ್ನ್ಮೆಂಟ್ ಪತ್ರಗಳು ರೂಪಾಯಿಗಳು 98—8—0 ಇಂದ 99—0—0 ರವರೆಗೆ

ಮದರಾಸ್ ಬ್ಯಾಂಕ್ ಷೇರ್‌ಗಳು, (500) ರೂಪಾಯಿಗಳ ಬಾಬತು 970 ಲಾಗಾ ಯಿತು 980 ವರೆಗೆ,

ಕಮರ್ಷಿಯಲ್ ವ ಬ್ಯಾಂಕ್ ಪಾರ್ಟ್ನರ್ಸ್ ಬ್ಯಾಂಕ್ ಷೇರ್‌ಗಳು, (100) ಬಾಬತು 150 ಇಂದ 155 ವರೆಗೆ.

ಸವರನ್‌ಗಳು, 16—2—0 ಇಂದ 16—4—0ವರೆಗೆ.

ಬ್ಯಾಂಕ್‌ಬಿಲ್‌ಗಳು ಯೂನಿವರ್ಸಲ್‌ಗಳು, ರೂ ೧ಕ್ಕೆ 6 ತಿಂಗಳ ಮಾಯಿದೆಗೆ, 1s. 3 7/32d.

ಡಿಟ್ಟೋ ¼ತಿಂಗಳ ಮಾಯಿದೆಗೆ, 1s. 3 5/32d.

ಡಿಟ್ಟೋ ಕೇಳಿದಾಗ, 1s. 3 1/16d.

## ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, OCTOBER 9, 1893.

೧೮೯೩ನೇ ಇಸವಿ ಅಕ್ಟೋಬರ್ ೯ ನೇ ಸೋಮವಾರ.

### ಅಫೀಂ ಸೇವನೆಯನ್ನು ನಿಲ್ಲಿಸುವಿಕೆ.

ಇಂಡ್ಯಾದೇಶದಲ್ಲಿ ಪ್ರಜೆಗಳು ಅಫೀಂ ಸೇವನೆ ಮಾಡುವದರಿಂದ ಅವರ ದೇಹ, ಮಾನ, ಧನಗಳಿಗೆ ಬಹುವಿಧ ಹಾನಿಗಳುಂಟಾಗುತ್ತಿವೆಯಾಗಿ ತನ್ನಿಮಿತ್ತವಾಗಿ ಇಂಡ್ಯಾ ದೇಶದೊಳು ಕಸಕಸೆ ಸಾಗುವಳಿಯನ್ನು ನಿರೋಧಿಸುವದರ ದ್ವಾರಾ ಅವರು ಕಾಪಾಡಬೇಕಾದುದು ಗವರ್ನಮೆಂಟಿನವರಿಗೆ ಅವಶ್ಯ ಕರ್ತವ್ಯವಾಗಿರುತ್ತದೆಂಬ ಭಾವವು ಇಂಡ್ಯಾದೇಶದಲ್ಲಿನ ಮಿಷನರಿಗಳು ಮೊದಲಾದವರು ಕೆಲವರಿಗೆ ಉಂಟಾಗಿ, ಅದು ಕ್ರಮಕ್ರಮವಾಗಿ ಇಂಗ್ಲೆಂಡ್ ದೇಶಕ್ಕೂ ವ್ಯಾಪಿಸಿ, ಮೇಲಿನ ಅಭಿಪ್ರಾಯಕ್ಕೆ ಪೋಷಕರಾದವರನೇಕರು ಅಲ್ಲಿಯೂ ಹೊರಟು, ತನ್ಮೂಲಕ ಸದರೀ ವಿಷಯವು ಕಡೆಗೆ ಪಾರ್ಲಿಮೆಂಟ್ ಹೌಸ್ ಆಫ್ ಕಾಮನ್ಸ್ ಸಮಾಜದವರ ವಿಚಾರಕ್ಕೆ ತರಲ್ಪಟ್ಟು, ಈವಿಷಯದಲ್ಲಿ ಅನುಭವಶಾಲಿಗಳಾದ ಮತ್ತು ಗುಣದೋಷ ವಿಚಾರಪರರಾದವರ ಅಭಿಪ್ರಾಯಗಳನ್ನರಿತು ರಿಪೋರ್ಟ್ ಮಾಡತಕ್ಕ ಬಗ್ಗೆ ಒಂದು ಕಮಿಷನ್, ಅಂದರೆ ಕಮಿಟಿಯಂ ಏರ್ಪಡಿಸತಕ್ಕದ್ದೆಂದು ಆದ ವ್ಯವಸ್ಥೆಯನ್ನನುಸರಿಸಿ ಮೆಂಬರರಾದ ಸಂಘದವರು ಈಗ ಇಂಗ್ಲೆಂಡಿನಲ್ಲಿ ಇಂಡ್ಯಾದೇಶದ ಅನುಭವವುಳ್ಳ ದೊಡ್ಡ ದೊಡ್ಡ ಅಧಿಕಾರಿಗಳಂ ಸಾಕ್ಷ್ಯಕ್ಕೋಸ್ಕರ ವಿಚಾರಣೆಮಾಡುತಲಿದಾರೆ. ಇನ್ನು ಸ್ವಲ್ಪ ದಿನಗಳೊಳಗಾಗಿ ಸದರೀ ಕಮಿಟಿಯವರು ಇಂಡ್ಯಾದೇಶಕ್ಕೆ ಬಂದು ಇಲ್ಲಿನ ಮೂರು ಪ್ರೆಸಿಡೆನ್ಸಿಗಳಲ್ಲೂ ಸಂಚಾರಮಾಡಿ ಅಲ್ಲಿಯಲ್ಲಿನ ದೊಡ್ಡದೊಡ್ಡ ಯೂರೋಪಿಯನ್ ಮತ್ತು ನೇಟಿವ್ ಅಧಿಕಾರಿಗಳ ವಿಚಾರಣೆಯಂ ಮಾಡುವರು. ಇಂಗ್ಲೆಂಡಿನಲ್ಲಿ ಇದುವರೆಗೆ ನಡೆದ ವಿಚಾರಣೆಯಲ್ಲಿ, ಅಫೀಮನ್ನು ಮಿತವಾಗಿ ಭಕ್ಷಿಸುವದರಿಂದ ಯಾವವಿಧ ಹಾನಿಯೂ ಉಂಟಾಗಲಾರದು, ಮತ್ತು ಆಬಾಲ್ಯ ಅದರ ಭಕ್ಷಣಾಭ್ಯಾಸ ವುಂಟಾದವರಿಗೆ ಅದಂ ತಪ್ಪಿಸಿದರೆ ಅದಕ್ಕೆ ಸಮಾನವಾದ ಅಥವಾ ಅದಕ್ಕಿಂತಲೂ ಹಾನಿಕರವಾದ ಬೇರೆಯೊಂದು ಪದಾರ್ಥವನ್ನು ಜನರು ಸಿದ್ಧಪಡಿಸಿಕೊಂಡು ಅದನ್ನು ಉಪಯೋಗಿಸದೆ ಬಿಡಲಾರರಾಗಿ, ಅಫೀಂ ಭಕ್ಷಿಸುವ ವಾಡಿಕೆಯನ್ನು ನಿರೋಧಿಸುವದುಚಿತವಲ್ಲವೆಂದು ಅನೇಕರು ಅಭಿಪ್ರಾಯ ಕೊಟ್ಟಿರುತ್ತಾರೆ. ಸದರೀ ಕಮಿಟಿಯವರು ಈದೇಶಕ್ಕೆ ಬಂದು ಇಲ್ಲಿ ನಡೆಸುವ ವಿಚಾರಣೆಯಲ್ಲಿ ಈ ದೇಶೀಯರ ಅಭಿಪ್ರಾಯಗಳು ವ್ಯಕ್ತಪಡಬೇಕಾಗಿರುತ್ತದೆ. ಇದು ಹೀಗಿರುವಲ್ಲಿ ಈ ಕಮಿಟಿಯ ಬಗ್ಗೆ ಹಿಡಿಯಬಹುದಾದ ಖರ್ಚುಗಳ ಪೈಕಿ ಅರ್ಧಭಾಗವನ್ನು ಇಂಡ್ಯಾದೇಶದ ಹುಟ್ಟುವಳಿಯಿಂದ ಕೊಡತಕ್ಕದ್ದೆಂದು ಮಹಾರಾಜ್ಞೀ ಯವರ ಮಂತ್ರಿಸಮಾಜಕರು ಮಾಡಿದ ನಿರ್ಣಯವು ಅನುಚಿತವಾದುದೆಂತಲೂ, ಪ್ರಸಕ್ತ ಕಮಿಟಿಯ ಏರ್ಪಾಡನ್ನು ಇಂಡ್ಯಾದೇಶೀಯರು ಅಪೇಕ್ಷಿಸಲಿಲ್ಲವು, ಪರಂತು ವಿಷಯಸ್ವರೂಪ ಜ್ಞಾನಶೂನ್ಯರಾದ ಕೆಲವರ ದುರಾಲಾಪಕ್ಕೆ ಕಿವಿಕೊಟ್ಟದ್ದರ ಮೂಲಕ ಏರ್ಪಟ್ಟ ಕಮಿಟಿಯಾದುದರಿಂದ ಅದಕ್ಕಾಗಿ ಹಿಡಿಯಬಹುದಾದ ಖರ್ಚಿನಲ್ಲಿ ಅರ್ಧಭಾಗವನ್ನು, ಅರ್ಥೋತ್ಪತ್ತಿ ವಿಷಯದಲ್ಲಿ ಇದುವರೆಗನೇ ಕೇವಲ ಹೀನ ದಶೆಯಲ್ಲಿರುವ ಇಂಡ್ಯಾದೇಶದ ಹುಟ್ಟುವಳಿಯಿಂದ ಕೊಡಿಸುವಣವು ರಾಜ್ಯನೀತಿ ವಿರುದ್ಧವಾದ ಕಾರ್ಯವಲ್ಲವೆಂತಲೂ, ಇಂಗ್ಲೆಂಡಿನಲ್ಲೂ ಇಂಡ್ಯಾದೇಶದೊಳಗೂ ಯೂರೋಪಿಯನ್ ಅಧಿಕಾರಿಗಳೂ ವೃತ್ತಾಂತ ಪತ್ರಿಕಾ ಲೇಖಕರೂ ಬಹುಮುಖವಾದ ಖಂಡನಾಪೂರ್ವಕ ಆಕ್ಷೇಪಿಸುತಲಿದಾರೆ. ಇಂಡ್ಯಾ ದೇಶದಲ್ಲಿ ಕಸಕಸೆ ಸಾಗುವಳಿಯು ನಿರೋಧಿಸಲ್ಪಡುವಪಕ್ಷಕ್ಕೆ ತನ್ಮೂಲಕ ತಯಾರಾಗುವ ಅಫೀಮಿನದೆಸೆಯಿಂದ ಗವರ್ನಮೆಂಟಿಗೆ ಸಾಲೀಯಾನಾ ಹುಟ್ಟುವಳಿಯಾಗುವ ಅನೇಕ ಲಕ್ಷರೂಪಾಯಿಗಳ ಆಯತಿ ತಪ್ಪಿ, ರಾಜ್ಯಾಡಳಿತದಖರ್ಚುಗಳಿಗೆ ಇತರ ಆಯತಿಗಳು ಸಾಲದೆ ಹೋಗಿ ಬಹಳ ತೊಂದರೆಗೆ ಅವಕಾಶವುಂಟಾಗುವದಾಗಿ, ಮೇಲಿನ ನಷ್ಟವನ್ನು ಹೊಸಹೊಸ ತೆರಿಗೆಗಳ ಮೂಲಕ ಪ್ರಜೆಗಳ ಮೇಲೆ ಹೊರಿಸಬೇಕೆಂದು ಗವರ್ನಮೆಂಟಿನವರು ಯೋಚಿಸುತಲಿರುವಂತೆ ಕಾಣುತಿದೆ. ಇಂಡ್ಯಾದೇಶೀಯರ ಇಷ್ಟಾನಿಷ್ಟಗಳನ್ನರಿಯದೆ ಮಿಷನರಿಗಳು ಮೊದಲಾದ ಕೆಲವರು ಯೂರೋಪಿಯನ್‌ಗಳ ಅಪ

ಪ್ರೋಗ್ರೆಸ್ಸಿನ ಬಗ್ಗೆ ಮಹಾರಾಜ್ಞೀಯವರ ಮಂತ್ರಿ ಸಮಾಜಕರು ಪ್ರಸಕ್ತ ಕಮಿಟಿಯನ್ನೇರ್ಪಡಿಸಿದರಾಗಿ ಅದರ ಖರ್ಚು ಯೆಷ್ಟಾದಾಗ್ಯೂ ಅದು ಸಂಪೂರ್ಣವಾಗಿ ವಿಲಾಯತಿ ಸರ್ಕಾರದವರೇ ವಹಿಸಿಕೊಳ್ಳಬೇಕೆಂದು ಇಂಡ್ಯಾದೇಶೀಯರು ವಾದಿಸುವಷ್ಟು ನ್ಯಾಯ್ಯವಾದುದೆಂದು ಅಭಿಜ್ಞರಾದವರು ಭಾವಿಸದೆ ಹೋಗಲಾರರು. ಸದರೀ ಕಮಿಟಿಯವರು ಈ ದೇಶಕ್ಕೆ ಬಂದು ಇಲ್ಲಿ ಮೂರು ಪ್ರೆಸಿಡೆನ್ಸಿಗಳಲ್ಲಿನ ಅಧಿಕಾರಿಗಳ ಮತ್ತು ಖುಷ್‌ಬಾಷ್ ದೊಡ್ಡ ಮನುಷ್ಯರ ವಿಚಾರಣೆಯಂ ಪೂರ್ತಿಮಾಡಿಕೊಂಡು ಇಂಗ್ಲೆಂಡಿಗೆ ವಾಪಸು ಹೋಗಿ ತಮ್ಮ ವಿಚಾರಣೆಯ ಫಲಿತಾಂಶವಂ ಮಹಾರಾಜ್ಞೀ ಸರ್ಕಾರಕ್ಕೆ ರಿಪ್ರೋರ್ಟು ಮಾಡಿದ ಮೇಲೆ ಈ ವಿಷಯವು ಒಂದು ವ್ಯವಸ್ಥೆಗೆ ಬರಬೇಕಾಗಿರುತ್ತದೆ.

## ಮೈಸೂರು ಸೀಮೆಯ ರಿಜಿಸ್ಟ್ರೇಷನ್ ಇಲಾಖೆ.

ಈ ಸಂಸ್ಥಾನದ ರಿಜಿಸ್ಟ್ರೇಷನ್ ಇಲಾಖೆಯು ದಿನೇದಿನೆ ಅಭಿವೃದ್ಧಿಯನ್ನೈದುತ್ತ, ಇತರ ಇಲಾಖೆಗಳಂತೆ ಇದೂ ಸಂಸ್ಥಾನಕ್ಕೆ ಆದಾಯಕರವಾದ ಇಲಾಖೆಯಾಗಿ ಏರ್ಪಟ್ಟಿದೆ. ಈಗ ಸಾಲೀನಾ ಈ ಬಾಬಿನಲ್ಲಿ ಹುಟ್ಟುವಳಿಯು ಸ್ವಲ್ಪ ಹೆಚ್ಚು ಕಡಮೆಯಾಗಿ ಒಂದುಲಕ್ಷ ರೂಪಾಯಿಗಳ ವರೆಗೆ ಹೆಚ್ಚುತ ಬಂದಿರುತ್ತದೆ. ಬೆಂಗಳೂರು, ಮೈಸೂರು ಡಿಸ್ಟ್ರಿಕ್ಟುಗಳ ಬಾಬತು ಹುಟ್ಟುವಳಿ ಮಾತ್ರ ಸುಮಾರು ಅರ್ಧಲಕ್ಷ ರೂಪಾಯಿಗಳಾಗುತ್ತವೆ. ಇದಕ್ಕೆ ಕಾರಣವು ಇತರ ಡಿಸ್ಟ್ರಿಕ್ಟುಗಳಿಗಿಂತಲೂ ಇವುಗಳಲ್ಲಿ ರಿಜಿಸ್ಟ್ರೇಷನ್ ಸಂಖ್ಯೆ ಹೆಚ್ಚಾಗಿರುವುದು ವಿನಾ ಬೇರೆಯೊಂದಲ್ಲ. ಹೀಗೆ ಸಾಲ್‌ಸಾಲ್ ಹೆಚ್ಚುವಿಕೆಗೆ ಉಂಟಾದ ಕಾರಣಗಳಂ ಕುರಿತು ನಾವು ಪರ್ಯಾಲೋಚಿಸುತಲಿರುವಲ್ಲಿ ಮದರಾಸ್ ಗವರ್ನಮೆಂಟ್ ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರಾದ ಮಿಸ್ಟರ್ ಬರ್ಡ್‌ವುಡ್ ರಾಘವೈಯಂಗಾರ್ರವರು ತಮ್ಮ ಇಲಾಖಾ ಸಾಲೆಯಾದೇ ರಿಪೋರ್ಟಿನಲ್ಲಿ, ಮದರಾಸ್ ಪ್ರೆಸಿಡೆನ್ಸಿಯೊಳು ರಿಜಿಸ್ಟ್ರೇಷನ್ ಪುರೋಭಿವೃದ್ಧಿಗೆ ಕಾರಣಗಳನ್ನು ಸಂಗ್ರಹಿಸಿ ಬರೆದಿರುವುದು ನಮ್ಮ ದೃಷ್ಟಿಗೆ ವಿಷಯವಾಯಿತು. ಸದರೀ ಕಾರಣಗಳು ಸ್ವಲ್ಪ ಹೆಚ್ಚು ಕಡಮೆಯಾಗಿ ಈ ರಾಜ್ಯಕ್ಕೆ ಸಹ ಲಗಾವಾಗಬಹುದೆಂದು ಕಾಣುತ್ತದೆ. ಅವು ಯಾವವೆಂದರೆ—ರಿಜಿಸ್ಟ್ರೇಷನ್ ಸಂಖ್ಯೆ ಹೆಚ್ಚಳಿಕೆ; ಲೇವಾದೇವಿಯು ಜಾಸ್ತಿಯಾಗುವಣ, ಜಮೀನ್ ಗಿರಾಕಿಯು ಬಹಳ ವೃದ್ಧಿಯಾಗುವಣ, ಅಂಥಾ ಗಿರಾಕಿ ಹೆಚ್ಚಳಿಕೆಗೆ ದೇಶವು ಸುಭಿಕ್ಷವಾಗಿರುವಣ, ಇನ್ನು ಪರಸ್ಪರ ಸಹಾಯಕಗಳಾಗುತ್ತವೆ. ಇದಲ್ಲದೆ ವ್ಯವಹಾರದಲ್ಲಿ ಜನರಿಗೆ ವಿಶೇಷ ಜಾಗರೂಕತೆಯೂ, ನಾಲಕ್ಕುಟ್ಟು ವಿಶೇಷವಾಗಿ ಲೇವಾದೇವಿ ಜರಿಗಿಸುವಿಕೆಯೂ ಕಾರಣಗಳಾಗುತ್ತವೆ. ಇನ್ನು ಪರ್ಯಾಲೋಚಿಸಿ ನೋಡಲಾಗಿ ಆಮದ್ ರಫ್ತು ಬಗ್ಗೆ ಕಲ್ಪಿಸಲ್ಪಟ್ಟಿರತಕ್ಕ ಸೌಕರ್ಯಗಳೂ, ಅಧಿಕವಾಗಿ ರಿಜಿಸ್ಟ್ರೇಷನ್ ಆಫೀಸುಗಳನ್ನು ಸ್ಥಾಪಿಸಿ ಅಬಾಧಿತವಾಗಿಯೂ ಮಾಡತಕ್ಕ ಸೌಲಭ್ಯಗಳೂ, ಪ್ರಜೆಗಳಿಗೆ ಸಾಮಾನ್ಯವಾಗಿ ಹಿಡಿ ಬಡಿಯುವಷ್ಟರ ಶಕ್ತಿಯಂ ಕಲ್ಪಿಸುವಣವೂ ನಿಯತ ಕಾರಣಗಳೆಂದು ತೋರುತ್ತದೆ. ಕೆಲವು ಸಮಯಗಳಲ್ಲಿ, ಅಂದರೆ ವ್ಯವಸಾಯ ಸಂಬಂಧಗಳಾದ ತೊಂದರೆಗಳು ಅಧಿಕವಾಗುವಾಗ ರಿಜಿಸ್ಟ್ರೇಷನ್ ಸಂಖ್ಯೆಯು ಕೂಡ ಹೆಚ್ಚುತ್ತವೆ, ಪರಂತು ಹಾಗೆ ಹೆಚ್ಚಿದಾಗ್ಯೂ ಅದು ಸ್ಥಿರವಾಗಿ ನಿಲ್ಲಲಾರದು. ಏತಕ್ಕೆಂದರೆ—ಸದರೀ ತೊಂದರೆಯೆಂಬುವದು ಪ್ರಬಲವಾದುದಾಗಿಯೂ, ದೀರ್ಘಕಾಲಿಕವಾದುದಾಗಿಯೂ ಇದ್ದು ಜಮೀನಿನ ಉದಯುಕ್ತತೆಯನ್ನೂ ಅದಕ್ಕಾಗಿ ಖರ್ಚುಮಾಡತಕ್ಕ ಹಣದ ಖಾತರಿಯನ್ನೂ ಹೋಗಲಾಡಿಸುವಂತಾದ್ದಾಗಿರುವ ಪಕ್ಷಕ್ಕೆ ರಿಜಿಸ್ಟ್ರೇಷನ್ ಸಂಖ್ಯೆಯು ಸಹ ಅದನ್ನನುಸರಿಸಿ ಕಂ ಜಾಸ್ತಿಯಾಗುತ್ತದೆ, ಎಂಬದು. ಇನ್ಸ್‌ಪೆಕ್ಟರ್ ಜನರಲ್ಲವರು ಉದಹರಿಸಿದ ಕಾರಣಗಳು ಪ್ರಾಯೇಣ ಎಲ್ಲವೂ ಸಮಂಜಸಗಳಾಗಿರುತ್ತವೆ. ಇದೇ ಕಾರಣಗಳಿಂದಲೇ ಈ ದೇಶದಲ್ಲಿ ಸಹ ಕಳೆದ ಹತ್ತು ಸಂವತ್ಸರಗಳ ಕಾಲದ ಮೊದಲು ರಿಜಿಸ್ಟ್ರೇಷನ್ ಸಂಖ್ಯೆ ಹೆಚ್ಚುತಬಂತು. ಆದರೆ ಗವರ್ನಮೆಂಟಿನವರ ಪ್ರೋತ್ಸಾಹವೂ ಸಹಾಯವೂ ವೃದ್ಧಿಯಾಗುತ ಬರುತಲಿಲ್ಲ ಅದೂ ಹೆಚ್ಚುವದಕ್ಕೆ ಆಸ್ಪದಮಾತ್ರವೂ ಸಂದೇಹವಿಲ್ಲವು. ಇಲ್ಲಿನ ಹುಟ್ಟುವಳಿಗೆ ಗೋಲ್ಡ್ ಮೈನಿಂಗ್ ಕಂಪೆನಿಗಳೇ ಮುಖ್ಯಕಾರಣಗಳಾಗಿವೆ. ರಯಿಲ್ ರಸ್ತೆಯ ಮೂಲಕವಾದ ಅನುಕೂಲ್ಯವು ಕೆಲವು ಡಿಸ್ಟ್ರಿಕ್ಟುಗಳಿಗೆ ಮಾತ್ರವೇ ಉಂಟಾಗಿರುತ್ತದೆ. ಹಾಗಿದ್ದಾಗ್ಯೂ ಆಮದ್‌ರಫ್ತು ಸೌಕರ್ಯದಿಂದ ನಗದು ಲೇವಾದೇವಿ ಜಾಸ್ತಿಯಾಗುತಲಿರುತ್ತದೆ. ನೀರಾವರಿ ಕಾಮಗಾರಿಗಳನ್ನು ಗವರ್ನಮೆಂಟಿನವರು ಹೇರಳವಾಗಿ ವಹಿಸುತ ಬರುವದರಿಂದ, ಜನಗಳಿಗೆ ಜಮೀನುಗಳಲ್ಲಿ ಅಭಿರುಚಿಯುಂಟಾಗುತ ಬರುತ್ತದೆ. ಸರಾಸರಿ ಗ್ರಾಮವಾಸಿಗಳು ಮೊದಲು ಎಲ್ಲರೂ ರಿಜಿಸ್ಟ್ರೇಷನ್ ಆಕ್ಟಿನ ಪ್ರಯೋಜನವನ್ನು ಚೆನ್ನಾಗಿ ಅರಿತುಕೊಂಡಿರುವರು. ಈ ಕಾರಣಗಳಿಂದಲೇ ಈ ಬಾಬಿನ ಹುಟ್ಟುವಳಿಯು ಅಧಿಕವಾಗುತಲಿದೆ. ರಿಜಿಸ್ಟ್ರೇಷನ್ ವಿಷಯದಲ್ಲಿ ಹರ್ ಮೆಜೆಸ್ಟಿಯವರ ಸೀಮೆಯೊಳು ಕಲ್ಪಿಸಲ್ಪಟ್ಟಿರುವ ಅನುಕೂಲ್ಯಗಳ ಸ್ಥಿತಿ ಅಂತಾ ಇಲ್ಲಿ ಸಹ ಇಲ್ಲಿರುವಂತೆ ಕಾಣಿಸಲಿಲ್ಲವು. ಇದರಿಂದ ನಿರ್ಬಂಧ ಪೂರ್ವಕ ರಿಜಿಸ್ಟ್ರೇಷನಾಗತಕ್ಕ ಪತ್ರಗಳೇ ಪ್ರಾಯೇಣ ಜಾಸ್ತಿಯಾಗಿರುತ್ತವೆ. ಮೇಲೆ ಹೇಳಿದ ಎಸ್ಟಾಬ್ಲಿಷ್‌ಮೆಂಟುಗಳ ಸಂಖ್ಯೆ ಸ್ವಲ್ಪವಾಗುವಲ್ಲಿ ರಿಜಿಸ್ಟ್ರೇಷನ್ ಕೆಲಸವನ್ನು ಮಾಡಿಸಿ ಪ್ರಿಸಿದೆ. ನಿಯಮಿಸಿರುತ್ತೆ ಪ್ರತ್ಯೇಕಿಸಿದ ಹೊರತು ಜನರಿಗೆ ಅನುಕೂಲ್ಯತ್ವ ಲಭಿಸಲಾರದು. ಅದಿಲ್ಲದ ಮೇಲೆ ಅವರು ಬೇಸರುತ್ತ ನಿಜವಾದವಾಗಿ ರಿಜಿಸ್ಟರಾಗಬೇಕಾದ್ದನ್ನು ಕೂಡ ಉಪೇಯಿಸಿ ತಪ್ಪಿಸಿ ಬರುತ್ತಾರೆ. ಈ ಸೀಮೆಯಲ್ಲಿ ಪ್ರತ್ಯೇಕ ಸಬ್ ರಿಜಿಸ್ಟ್ರೇ ಆಫೀಸುಗಳೇರ್ಪಟ್ಟ ಸರಿಯೆಂದು ವ್ಯಂಗಾವರ ಇನ್ನು ಬಹಳ ಮಟ್ಟಿಗೆ ಅಭಿವೃದ್ಧಿಗೆ ಒಡವುದು. ಈಗ ತಾಲ್ಲೂಕ್ ಶಿರಸ್ತೇದಾರರು ಕೆಲವರು ತಮ್ಮ ಬಳಿಗೆ ಬರುವಂಥ ಕಕ್ಷಿಗಾರರನ್ನು ತಿರಿಗಿಸಿ ಬೇಸರುಗೊಳಿಸಿ ನಿರ್ಬಂಧಿಸುತ್ತಾರೆಂದು ಅನೇಕಾವೃತ್ತಿ ಫಿರ್ಯಾದುಗಳು ನಮ್ಮ ಕೇಳ್ವಿಕೆಗೆ ಬರುತಲಿವೆ. ಇಂಥಾ ಫಿರ್ಯಾದುಗಳು ಕೆಲವಾದರು ಇನ್ಸ್‌ಪೆಕ್ಟರ್ ಜನರಲ್ಲವರ ತನಕ ಹೋಗಿಯೂ ಇರಬಹುದು, ಪರಂತು ಇವುಗಳ ಪಕ್ಷಪಾತವಾತ್ರ ಗೊತ್ತಿಲ್ಲವು. ಶಿರಸ್ತೇದಾರರುಗಳು ತಮಗೆ ಸಲ್ಲುವ ಕಮಿಷನ್ ರೂಪಾಯಿಗಳ ರುಸುಂನಲ್ಲೇ ಅವರು ತಮ್ಮ ಶಿಬ್ಬಂದಿಯನ್ನು ಕೊಡಬೇಕೆಂಬ ನಿಬಂಧನೆ ಏರ್ಪಡಿಸುವದರಿಂದ ಅನೇಕರು ತಮಗೆ ಬರುವದರಲ್ಲಿ ಅಧಿಕಭಾಗವನ್ನು ತಾವು ವಿನಿಯೋಗಿಸಿಕೊಂಡು ಕಡಮೆ ಸಂಬಳಕ್ಕೆ ಯಾರನ್ನು ಗುಮಾಸ್ತೆಯರ ಕೈಕೊಳುವದರಿಂದ ಶಿಕ್ಷಿತರಾದ ಸದರೀ ಗುಮಾಸ್ತೆಯರ ಜೀವನವು ಜರಗದೆಯೂ, ಅವರು ಇರುವೆಲಸವಂ ಬಿಡಲಾರದೆಯೂ, ಸಬ್ ರಿಜಿಸ್ಟ್ರಾರುಗಳನ್ನು ಎದುರಿಸಲಾರದೆಯೂ, ಎಡಿಸುವದಕ್ಕೆ ತೃಪ್ತರಾಗದೆಯೂ, ತೋಚಿದಂತೆ ಕಕ್ಷಿಗಾರರಮೇಲೆ ಬೀಳುವದರಿಂದ ಅವರ ಪ್ರಯಾಸವಂ ತೀರಿಸಲಾರದೆ ಸಂಕಟಪಟ್ಟುಕೊಂಡು ಹೋಗುತ್ತಾರೆ. ಕೆಲವರು ಸಬ್ ರಿಜಿಸ್ಟ್ರಾರುಗಳು ಗೋಮುಖವ್ಯಾಘ್ರದಂತೆ ಒಳಗೆ ನಿಸ್ಪೃಹರಾಗಿ ಜನರಿಗೆ ವ್ಯಕ್ತಪಡಿಸಿದಾಗ್ಯೂ ಒಳಗೆ ಗುಮಾಸ್ತೆಯರೊಡನೆ ಭಾಗವಂತಿಗಳಾಗಿರುವದರಿಂದ ಅವರ ನಿಜಾಂಶಗಳು ಪ್ರಾಯೇಣ ಹೊರಗಾಗುತಲಿಲ್ಲವು. ಈ ಬಾಬತಿ ಹೊರೆಗಾಗಿ ಇನ್ಸ್‌ಪೆಕ್ಟರ್ ಜನರಲ್ಲವರ ನೋಟಿಸಿಗೆತರಲ್ಪಟ್ಟ ಕೇವಲವಾರ್ಗ್ಗವಂಬಿಟ್ಟು ಹೋಗತಕ್ಕವರಲ್ಲವಾದುದರಿಂದ ದರ್ಖಾಸ್ತು ಬಗ್ಗೆ ಡಿಸ್ಟ್ರಿಕ್ಟ್ ರಿಜಿಸ್ಟ್ರಾರವರಿಗೂ, ಅವರು ಅದೇ ಸಬ್ ರಿಜಿಸ್ಟ್ರಾರರಿಗೂ ಅವರು ಅದೇ ಗುಮಾಸ್ತೆಯರಿಗೂ ಕಳುಹಿಸಿ ಬಿಡುವದರಿಂದ ವಿವಾದ ಹುಟ್ಟಿದ ಸ್ಥಳದಲ್ಲಿಯೇ ಮತ್ತಷ್ಟು ವ್ಯಯದಿಂ ನ್ಯಾಯವಿಮರ್ಶೆ ಪೂರ್ತಿಯಾಗುತ್ತಿದೆ. ಇದರಿಂದ ಜನರಿಗೆ ಅನುತ್ಸಾಹಕ್ಕೆ ಅವಕಾಶ ವುಂಟಾಗಿದೆ. ಹಾಗಿಲ್ಲದೆ ಪ್ರತ್ಯೇಕ ಆಫೀಸರುಗಳನ್ನಿಟ್ಟರೆ ಮೇಲೆ ತಿಳಿಸಿದಂತೆ ಸಾಲ್ಯವು ಹೆಚ್ಚಿ ರಿಜಿಸ್ಟ್ರೇಷನ್ ವೃದ್ಧಿಯಾಗುವುದು. ಜಮೀನ್ ಕಂದಾಯವು ಸುಲಭ ಪಡಿಸುವದು ಸಹ ಅಭಿವೃದ್ಧಿ ಹೇತುವೆಂದು ನುಡಿಯುವೆವು. ಆ ಮಾರ್ಗದಲ್ಲಿ ತೋರಿಸಲ್ಪಡುವ ರಿಯಾಯತಿಗಳೆಲ್ಲವು ಇದಕ್ಕೆ ಸಹಾಯಕಗಳಾಗುತ್ತವೆ. ಇವುಗಳಿಗೆ ನಿದರ್ಶನವಾಗಿ ಮದರಾಸ್ ಪ್ರೆಸಿಡೆನ್ಸಿಯಲ್ಲಿ ೧೮೯೯ ನೇ ಇಸವಿಗೆ ಪೈದಾದ ಮೂರು ವರ್ಷಗಳ ಕಾಲದಲ್ಲಿಯೂ ಅದರ ತರುವಾಯ ಅಂದರೆ ೯೧-೯೧ ನೇ ಇಸವಿಯ ಮೊದಲು ೧೮೯೭—೯೮ ನೇ ಇಸವಿ ವರೆಗೆ ಉಳ್ಳ ಸದರೀ ಮೈಸೂರಿನ ರಾಜ್ಯದ ವರ್ಷಗಳ ಕಾಲದಲ್ಲಿಯೂ ಸ್ವದಸ್ತಿಗೆ ಸಂಬಂಧಪಟ್ಟ ರಿಜಿಸ್ಟರಾದ ದಸ್ತಾವೇಜುಗಳ ಸಂಖ್ಯೆಗಳನ್ನು ಈ ಕೆಳಗೆ ತಿಳಿಸಲ್ಪಡುತ್ತವೆ:—

| [illegible] | ೧೮೮೭—೮೮ | ೧೮೯೭—೯೮ | ಶೇಕಡಾ ಹೆಚ್ಚಳ |
|---|---|---|---|
| [illegible] | 12,163 | 15,030 | 20.4 |
| [illegible] | 241,141 | 219,308 | 20.9 |
| [illegible] | 441,109 | 309,960 | 14.3 |
| [illegible] | 436,914 | 352,027 | 24.6 |
| [illegible] | 412,039 | 300,395 | 21.5 |
| [illegible] | 107,706 | 11,511 | 10.3 |
| [illegible] | 138,751 | 119,184 | 15.9 |
| [illegible] | 76,944 | 56,005 | 4.4 |
| [illegible] | 40,873 | 34,193 | 9.9 |

ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ರಿಜಿಸ್ಟರ್ ಆಗತಕ್ಕ ದಸ್ತಾವೇಜುಗಳು ಕೂಡ ಹೆಚ್ಚು ಪ್ರಮಾಣವಾಗಿರುತ್ತವೆ. ಆ ಡಿಸ್ಟ್ರಿಕ್ಟಿನಲ್ಲಿ ರಿಜಿಸ್ಟರಾದ ಸೇಲ್‌ಡೀಡುಗಳು ಸುಮಾರು ೧೦ ವರ್ಷಗಳಿಗಿಂತ ಸದರೀ ಮೂರು ವರುಷಗಳಲ್ಲಿ ಹೆಚ್ಚಾಗಿ ಇರುತ್ತವೆ. ಇಂಥಾ ವಿಷಯಗಳು ರಿಜಿಸ್ಟರಾಗಿವೆ. ಹಾಗೆ ಎಲ್ಲಿ ಸರ್ ೧೮೯೩—೯೯ ನೇ ಇಸವಿಗೆ ಪೈದಾದ ಮೂರು ವರ್ಷಗಳ ಕಾಲದಲ್ಲಿ ಗವರ್ನಮೆಂಟಿಗೆ ಒಟ್ಟು ೧೫,೧೮,೩೪೬ ರೂಪಾಯಿಗಳು ಜಮೆಯೂ ೪,೨೨ ಸಾವಿರ ರೂಪಾಯಿಗಳ ಖರ್ಚೂ ತಗಿರುವುದಲ್ಲದೆ, ರಿಜಿಸ್ಟ್ರೇಷನ್ ಇಲಾಖೆ ನಿವ್ವಳ ಸ್ಥಿತಿಯು ಕೇವಲ ಇದುವರೆಗೆ ೩೨ ಲಕ್ಷ ರೂಪಾಯಿಗಳು ಗವರ್ನಮೆಂಟಿಗೆ ಎಷ್ಟು ಜಾಸ್ತಿ ನಿವ್ವಳ ನಷ್ಟ ಬಾಕಿರುವುದೆಂದು ಇನ್ಸ್‌ಪೆಕ್ಟರ್ ಜನರಲ್ಲವರ ರಿಪೋರ್ಟಿನಿಂದ ವ್ಯಕ್ತವಾಗುತ್ತದೆ. ಇಷ್ಟರ ಹುಟ್ಟುವಳಿಗೆ ವಿಸ್ತರಿಸಿ ಮಾಡುವ ಅಲ್ಲಿನ ಸೌಕರ್ಯಗಳೇ ಕಾರಣಗಳಾಗಿರುವದರಿಂದ ಪ್ರತ್ಯೇಕ ಆಫೀಸುಗಳನ್ನೇರ್ಪಡಿಸಿ ಅಂಥ ಅನುಕೂಲ್ಯಗಳೇ ಇಲ್ಲಿಯೂ ಕಲ್ಪಿಸಲ್ಪಡುವಪಕ್ಷಕ್ಕೆ ಕೆಲವುಕಾಲದೊಳಗಾಗಿ ಸದರೀ ಇಲಾಖೆಯು ಸಂಸ್ಥಾನಕ್ಕೆ ವಿಶೇಷ ಆದಾಯಕರವಾದುದಾಗಿ ಪರಿಣಮಿಸುವುದು. ಇದು ಮಹಾರಾಜಾ ಸರ್ಕಾರದವರು ಚೆನ್ನಾಗಿ ಪರ್ಯಾಲೋಚಿಸಿ ತ್ವರೆಯೊಳು ತಕ್ಕ ಯೇರ್ಪಾಡುಗಳಂ ಮಾಡುವರೆಂದು ದೃಢವಾಗಿ ನಂಬುತ್ತೇವೆ.

## ಜಾಯಿಂಟ್‌ಸ್ಟಾಕ್ ಕಂಪೆನಿಗಳು.

ಸರ್ ೧೮೯೧-೯೨ನೇ ಇಸವಿಯ ಆಖೈರಿನಲ್ಲಿ ಮೈಸೂರ್ ಸೇರಿ ಬ್ರಿಟಿಷ್ ಇಂಡಿಯಾದೇಶದಲ್ಲಿ ಇಂಡಿಯನ್ ಕಂಪೆನೀಸ್ ಆಕ್ಟನ್ನು ಅನುಸರಿಸಿ ಜಾಯಿಂಟ್‌ಸ್ಟಾಕ್ ಕಂಪೆನಿಗಳು ರಿಜಿಸ್ಟರ್ ಮಾಡಲ್ಪಟ್ಟಿದ್ದವು. ಇವುಗಳ ಬಾಬತು ಬಿಕ್ಕಿ ಮೂಲಧನವು ೩೬೦,೫೨,೫೩೪ ರೂಪಾಯಿಗಳು. ಈ ಪೈಕಿ ಚರ್ತಿಯಾಗಿರುವ ಷೇರ್‌ಗಳ ಬಾಬತು ೩೩೬೪೯,೮೪೧ ರೂಪಾಯಿಗಳು. ೪೯ ಕಂಪೆನಿಗಳ ಮೂಲಧನವು ಜಾಸ್ತಿ ಮಾಡಲ್ಪಟ್ಟಲ್ಲದೆ ೬೯ ಕಂಪೆನಿಗಳು ಮುಕ್ತಾಯ ಮಾಡಲ್ಪಟ್ಟವು. ಸರ್ ೧೮೯೨-೯೩ನೇ ಇಸವಿಯಲ್ಲಿ ೭೯ ಕಂಪೆನಿಗಳು ಹೊಸದಾಗಿ ರಿಜಿಸ್ಟರ್ ಮಾಡಲ್ಪಟ್ಟಿರುತ್ತವೆ. ಆದರೆ ಅನೇಕ ಸಂದರ್ಭಗಳಲ್ಲಿ ಚರ್ತಿಯಾಗಿರುವ ಷೇರ್‌ಗಳ ಸಂಖ್ಯೆಯೂ ಅವುಗಳ ಬಾಬತು ಸಲ್ಲಿಸಲಾಗಿರುವ ಮೊಬಲಗೂ ನಿಷ್ಕೃಷ್ಟವಾಗಿ ತಿಳಿಸಲ್ಪಡದಿರುವದರಿಂದ ಮೊತ್ತಗಳ ಮೂಲಧನವನ್ನು ಸರಿಯಾಗಿ ತಿಳಿಸುವುದಕ್ಕೆ ಸಾಧ್ಯವಾಗಲಿಲ್ಲವು. ಸರ್ ೧೮೯೨—೯೩ ನೇ ಇಸವಿಯ ಆಖೈರಿನಲ್ಲಿ ಮೂಲಧನ ಐವತ್ತು ಲಕ್ಷ ರೂಪಾಯಿಗಳ ಮೂಲಧನದೊಡನೆ ೫೨ ಕಂಪೆನಿಗಳು ನಡೆಯುತಿದ್ದವು. ಸದರೀ ಮೂಲಧನದಲ್ಲಿ ಬಹುಭಾಗ ಬಂಗಾಳೇ ಪ್ರಾಂತ್ಯದಲ್ಲಿ ಚರ್ತಿಯಾದುದಾಗಿರುತ್ತೆ. ಮೈಸೂರ್ ರಾಜ್ಯದಲ್ಲಿ ೩,೪೬,೩೯೩ ರೂಪಾಯಿಗಳ ಬಂಡವಾಳ ಉಳ್ಳ ೯೪ ಕಂಪೆನಿಗಳು ಇರುತ್ತವೆ. ಈ ಕಂಪೆನಿಗಳಲ್ಲಿ ಹಾಕಲ್ಪಟ್ಟ ಮೂಲಧನದ ಬಂಡವಾಳದಲ್ಲಿ ಬಂಗಾಳೆ ಪ್ರೆಸಿಡೆನ್ಸಿಯವರು ಸೇಕಡ ೬೪ ರೂಪಾಯಿಗಳಂ, ಮುಂಬಯಿ ಪ್ರಾಂತ್ಯದ ಜನಗಳು ಸೇಕಡ ೩೦ ರೂಪಾಯಿಗಳಂತೆಯೂ, ಮದರಾಸ್ ಪ್ರೆಸಿಡೆನ್ಸಿಯ ಜನಗಳು ಬಿಕ್ಕಿಯನ್ನು ಆದರ ಲೆಕ್ಕದಂತೆಯೂ ಕೊಟ್ಟಿರುತ್ತಾರೆ. ಮದರಾಸ್ ಪ್ರೆಸಿಡೆನ್ಸಿಯಲ್ಲಿ ಕಂಪೆನಿಗಳ ಸಂಖ್ಯೆಯು ಅಧಿಕವಾಗಿದ್ದಾಗ್ಯೂ ಅವುಗಳಿಗಾಗಿ ಕೊಡಲ್ಪಟ್ಟ ಮೂಲಧನವು ಬಹಳ ಅಲ್ಪವಾಗಿರುತ್ತದೆ. ಮದರಾಸ್ ಕಂಪೆನಿಗಳ ಪೈಕಿ ಮೂರರಲ್ಲೊಂದುಭಾಗ ಸ್ವಲ್ಪ ಬಂಡವಾಳವನ್ನಿಟ್ಟುಕೊಂಡು ನಗದು ಲೇವಾದೇವಿ ಕಸಬುಗಳಂ ಜರಿಗಿಸತಕ್ಕವಾಗಿರುತ್ತವೆ. ಕಂಪೆನಿಗಳ ಒಟ್ಟು ಸಂಖ್ಯೆಯಲ್ಲಿ ಬಹುಭಾಗ ಲೇವಾದೇವಿ ನಿಮಿತ್ತವಾಗಿಯೂ, ಇನ್ಷೂರೆನ್ಸ್ ಕಂಪೆನಿಗಳಾಗಿಯೂ ಇರುತ್ತವೆ. ೫೬೭ ಯಂತ್ರದ ಕಾರ್ಖಾನೆಗಳು, ೧೫೨ ಟೀ ಕಾಪಿ ವಗೈರೆಗೆ ಸಂಬಂಧಿಸಿದವು, ೬೧ ಚಿನ್ನ ವಗೈರೆ ಗಣಿಗಳ ಸಂಬಂಧವಾದವು, ೧೦೩ ಮುದ್ರಣ ಯಂತ್ರಾಲಯಗಳ ಕಂಪೆನಿಗಳು, ೩ ರಬ್ಬರ್ ತೋಟಗಳು, ೬೨ ಚಿಲ್ಲರೆ ಕಾರ್ಖಾನೆಗಳು. ಮುಂಬಯಿ ಪ್ರೆಸಿಡೆನ್ಸಿಯಲ್ಲಿ ರಹ ಕಂಪೆನಿಗಳಲ್ಲಿ ಪ್ರಾಯಶಃ ಬಹುಭಾಗ ಅರಳೆ, ನಾರು, ಕಂಬಳಿ ಮತ್ತು ರೇಷ್ಮೆ ವಸ್ತ್ರಗಳ ಕಾರ್ಖಾನೆಗಳಾಗಿವೆ. ಮುಂಬಯಿ ಬ್ಯಾಂಕ್ ಕಂಪೆನಿಗಳಲ್ಲಿಯೂ, ದಾರ್ಜಿಲಿಂಗ್ ಟೀ ಕಂಪೆನಿಗಳಲ್ಲಿಯೂ, ನೀಲಗಿರಿ ರೈಲ್ವೆ ವಗೈರೆ ಕಂಪೆನಿಗಳಲ್ಲಿಯೂ ವಿಶೇಷ ಬಂಡವಾಳ ಇಡಲ್ಪಟ್ಟಿದೆ. ಅನೇಕ ಟೀ ಕಂಪೆನಿಗಳು ಕಲ್ಕತ್ತೆಯಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿವೆ. ಸುಮಾರ್ ೬೪,೦೦೦ ರೂಪಾಯಿಗಳ ವರೆಗೆ ಗೋಲ್ಡ್ ಮೈನಿಂಗ್ ಕಂಪೆನಿಗಳಿಂದ ಸರ್ಕಾರಕ್ಕೆ ಪ್ರಾಪ್ತವಾಯಿತು. ಈ ಕಂಪೆನಿಗಳ ರಿಜಿಸ್ಟ್ರೇಷನ್ ಮೂಲಕ ಬ್ರಿಟಿಷ್ ಇಂಡಿಯಾದಲ್ಲಿ ೫೦,೯೬೭ ರೂಪಾಯಿಗಳ ಉತ್ಪತ್ತಿಯೂ, ೨೧೬೫ ರೂಪಾಯಿಗಳ ಖರ್ಚೂ ಆಗಿರುತ್ತವೆ. ಮೈಸೂರ್ ಸಂಸ್ಥಾನದಲ್ಲಿ ೬೪೦ ರೂಪಾಯಿಗಳೂ, ಇಲ್ಲಿನ ಸಿವಿಲ್ ವ ಮಿಲಿಟರಿ ಸ್ಟೇಷನಿನಲ್ಲಿ ೧೩೩ ರೂಪಾಯಿಗಳೂ ಜಮೆ ಬಿದ್ದಿರುತ್ತವೆ. ಪರಂತು ಇಲ್ಲಿ ಖರ್ಚೇನೂ ಇಲ್ಲವೆಂದು ತಿಳಿಯಬರುತ್ತದೆ.

ಈಗ್ಯೆ ಎರಡು ಮೂರು ವರುಷಗಳ ಕಾಲದ ಮೊದಲು ಈ ದೇಶದಲ್ಲಿ ಕಂಪೆನಿಗಳ ಸ್ಥಿತಿಯು ಹ್ರಾಸವನ್ನೈದುತ್ತ, ಅನೇಕ ಕಡೆಗಳಲ್ಲಿ ಅವಳಿ ತೆಗಳಿಲ್ಲದೆ ನಾಮಮಾತ್ರಕ್ಕೆ ಉಳಿದಿರುತ್ತವೆ. ಕಂ

ಸನಿಗಳು ವರ್ತಕರಾಗಲಿಕ್ಕೆ ಉಂಟಾದ ಕಾರಣಗಳನ್ನು ಅನೇಕ ಪ್ರಕರಣಗಳಲ್ಲಿ ನಮೂದಿಸಿ ವಿಚಾರ ಮಾಡಿರುತ್ತೇವೆ. ದಗಾಬೋರರಾದವರ ಕುಪ್ರವೃತ್ತಿಯಿಂದ ಜನಗಳಿಗೆ ಕಂಪ್ಯಾಂಗ ನಂಬಿಕೆಯೆಂಬದು ತಪ್ಪಿಹೋಗಿ ಹೊಸಕಂಪನಿಗಳಲ್ಲಿ ಷೇರುಗಳನ್ನು ತೆಗೆದುಕೊಳ್ಳುವದರಲ್ಲಿ ಸ್ವಲ್ಪವೂ ಲಕ್ಷ್ಯವಿಲ್ಲದವರಾಗಿರುತ್ತಾರೆ. ಧನಿಕರಾದವರು ಪ್ರವೇಶಿಸಿ ಭಾರಿ ಬಂಡವಾಳವನ್ನಿಟ್ಟು ವಿಶೇಷ ಆದಾಯಗಳನ್ನು ಗಳಿಸಲಿಕ್ಕೆ ಶಕ್ತರಾದವರು ಈ ದೇಶದಲ್ಲಿ ಬಹಳವಾಗಿರುವಂತೆ ಕಾಣಿಸುವದಿಲ್ಲ. ಒಂದುವೇಳೆ ಕೆಲವರಿದ್ದಾಗ್ಯೂ ಅವರಲ್ಲಿ ಅನೇಕರು ಸರ್ಕಾರಿ ನೌಕರರಾಗಿಯೂ, ಮಿಕ್ಕವರು ಭೂಮಾನ ದಕ್ಷಿಣ ಸಿವಾನವನ್ನಿಡಿಯುವಂತ ಕೃಷಿಕರಿನಿಗಳಾಗಿಯೂ ಇರುತ್ತಾರೆ. ಸರ್ಕಾರಿ ನೌಕರರಾದವರಿಗೆ ಇಂತಾ ಆದಾಯಗಳಲ್ಲಿ ಕಾಲ್ಪ ಪ್ರವರ್ತಿಸಿದರೆ ತಮ್ಮ ಗುಟ್ಟು ಹೊರಗಾಗಿ ತಮ್ಮ ಅಧಿಕಾರಕ್ಕೇನು ಆಪತ್ತುಂಟಾಗುವದೋ ಎಂಬ ಭೀತಿಯಿರುವದೆ. ಅವರು ಇದನ್ನು ಪರಿಶ್ರಮಿಸಿ ಬದಲಾಗಿ ಬೀಳದ ದಾರಿ ಕೊಂತು ಕುಳಿತುಕೊಳ್ಳುವವರಾಗಿರುತ್ತಾರೆ. ಧನಿಕರಾದವರು ವ್ಯಾಪಾರಗಳು ಯಾವ ಕೆಲಸವನ್ನು ಮಾಡಿದರೆ ತಮ್ಮ ಬಂಡವಾಳಕ್ಕೆ ಲಾಭ ಬರುವದೆಂಬದು ಎಂದು ತಿಳಿಯದ ಸಾಧಾರಣವಾಗಿ ಬಿಟ್ಟುಕೊಡುವರು. ಇದಲ್ಲದೆ ಬೇಗನೆ ರಾಜ್ಯಾಂಗ ವಿಷಯಗಳಲ್ಲಿ ಪ್ರವರ್ತಿಸುವಂತವರು ಸ್ವದೇಶ ಬಂಧುಗಳಿಲ್ಲದವರಾಗಿ, ಅನ್ಯರಿಂದ ಜೀವನ ಮಾಡುವ ದರಿದ್ರರಾಗಿಯೂ, ತಮ್ಮ ಗಾಳಿನ ಮೇಲೆ ವಿಶೇಷ ದೃಷ್ಟಿ ಇಡುವವರಾಗಿಯೂ ಇರುತ್ತಾರೆ. ಇವರಿಗೆ ಕೆಳಗಿರುವ ಮತ್ತು ಧನಿಕರಾದ ಸರ್ಕಾರಿ ಉದ್ಯೋಗಸ್ಥರು ಸ್ವಾಧೀನವಾಗುವದಿಲ್ಲವಾದ್ದರಿಂದ ಇವರು ಸ್ವಂತ ಮಾಡದನ್ನು ಹೋರಿಸಿದಾಗ ಅವರಕ್ಕೆಯುಲ್ಲಿ ಕಡೆಗೆ ಚಿಪ್ಪಿಯನ್ನು ಕೊಟ್ಟು ಕಳುಹಿಸಿಬಿಡುತ್ತಾರೆ. ಇದರಿಂದಲೇ ಇಲ್ಲಿನ ಕಂಪನಿಗಳು ದೊಡ್ಡಾಗಿ ಬೇರೂರಲೆ ಇದರಿಂದ ಇದ್ದ ಋಣವಾಗಿನವೆಯುವದಿಲ್ಲವು. ಈಶಿಟದಲ್ಲಿ ಸ್ವಾಂತವಾಗಿರುವ ಮೈಸೂರು ಮಹಾರಾಜರವರ ಅರಳಿ ಕಾರ್ಖಾನೆಯು, ವಿಶೇಷ ಆದಾಯ ಕೊಡದ್ದಾಗಿಯೂ, ಸಮರ್ಥರಾದ ಅನೇಕ ದೊಡ್ಡ ಸಾಮ್ರಾಜ್ಯದ ಸಂಬಂಧಪಟ್ಟವರಾಗಿಯೂ, ಮಹಾರಾಜಾ ಸರ್ಕಾರದವರ ಸಹಾಯವನ್ನೊಳಗೊಂಡಿದ್ದಾಗಿಯೂ, ಈ ಕಂಪನಿಯನ್ನೆಲ್ಲ ಪ್ರತಿಷ್ಠಿತವಾಗಿಯೂ ಇರುವದಿಷ್ಟು. ಇಂತಾ ಕಂಪನಿಗಳ ಸ್ಥಿತಿವಿಶೇಷವು ಶೋಚನೀಯವಾಗಿ ತಿಳಿಯಬರುತ್ತಿದೆ. ಇದಕ್ಕಿಂತ ದುರ್ದೈವದ ಯಾವ ಕಾರಣವು ಪ್ರಕೃತದಲ್ಲಿ ಅದು ಅಭಿವೃದ್ಧಿ ಹೊಂದಿದಾಗಿಲ್ಲವು.

## Occasional Notes.
### ನೈಮಿತ್ತಿಕ ಟಿಪ್ಪಣಿಗಳು.

ಹೈದರಾಬಾದಿ ಗವರ್ನಮೆಂಟಿನವರು ಸದರೀ ಪಟ್ಟಣಕ್ಕೂ ಸಿಕಂದರಾಬಾದಿಗೂ ಟ್ರಾಂವೇ ಯೆಂಬ ಒಂದು ಸಣ್ಣ ರೈಲು ದಾರಿಯನ್ನು ಹಾಕಿಸಬೇಕೆಂದು ಯೋಚಿಸುತ್ತಿರುವುದಾಗಿ ತಿಳಿಯಬರುತ್ತದೆ.

ಬೆಳಗಾವಿ ಮತ್ತು ಜೇನುಕಲ್ಲಿನ ಮೂಲಕ ಖಂಡಿತವಾಗಿ ರಾಜ್ಯಕಾರ್ಯಗಳ ಪರಿಹಾರವಾಗುವಂತೆ ವಿಚಾರಮಾಡಿಯಲ್ಲಿ ಒಬ್ಬ ಸೈನ್ಯಸೇನಾನ್ಯನು ಪರೀಕ್ಷೆಯ ಮೂಲಕ ತನಗೆ ತಿಳಿಯಬಂದಿರುವದಾಗಿ ಪ್ರಕಟಿಸಿರುತ್ತಾನೆ.

ಇಂಡ್ಯದೇಶದ ಚಲಾವಣೆ ನಾಣ್ಯಗಳ ಪರಿವರ್ತನೆಯ ವಿಷಯದಲ್ಲಿ ಈಚೆಗೆ ಮಾಡಲ್ಪಟ್ಟ ಏರ್ಪಾಡಿನ ವಿಷಯದೊಳು ಇಂಡ್ಯ ಗವರ್ನಮೆಂಟಿಗೂ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಿಗೂ ಏಕಮತ್ಯವಿಲ್ಲವೆಂದು ಮುಂಬೈ ಪತ್ರಿಕೆ ಯೊಂದು ತಿಳಿಸುತ್ತಿದೆ.

ಈಚೆಗೆ ಕೆಲವು ದಿನಗಳ ಹಿಂದೆ ಮುಂಬೈಯೊಳು ನಡೆದ ದಂಗೆದಲ್ಲಿ ಹಿಂದೂಗಳಿಗಿಂತಲೂ ಮುಸಲ್ಮಾನರೇ ಅಧಿಕವಾಗಿ ಯೂರೋಪಿಯನ್ ಪೋಲೀಸಿನವರಮೇಲೂ ಸೈನಿಕರಮೇಲೂ ಬಿದ್ದು ಜುಲುಂ ನಡೆಸಿದರಾಗಿ, ಪೋಲೀಸ್ ಮತ್ತು ಸೈನಿಕರೊಡನೆ ನಡೆದ ಕಲಹದಲ್ಲಿ ಘಾಯಪಟ್ಟವರ ಪೈಕಿ ಹಿಂದೂಗಳಿಗಿಂತಲೂ ಮುಸಲ್ಮಾನರ ಸಂಖ್ಯೆಯು ಅಧಿಕವಾಗುವದಕ್ಕೆ ಕಾರಣವಾಯಿತೆಂದು ಮುಂಬೈ ಗಜೆಟ್ ಪತ್ರಿಕೆ ತಿಳಿಸುತ್ತದೆ.

ಇಂಗ್ಲೆಂಡ್ ದೇಶಕ್ಕೆ ಸೇರಿದ ಲ್ಯಾಂಕಾಷೈರ್ ಎಂಬ ತುಕಡಿಯಲ್ಲಿ ಒಬ್ಬ ವರ್ತಕನು ಒಂದು ಕೋಳಿಯ ಕುತ್ತಿಗೆಯನ್ನು ಹಿಸುಕಿ ಕೊಂದು ಹಾಕಿ ಅದು ಸತ್ತುಹೋಯಿತೆಂಬ ನಂಬಿಕೆಯಿಂದ ಅದರ ರೆಕ್ಕೆಗಳನ್ನು ಕಿತ್ತುಹಾಕುವದಕ್ಕೆ ಪ್ರಾರಂಭಿಸುವಲ್ಲಿ ಸದರೀ ಕೋಳಿಯು ತನ್ನ ರೆಕ್ಕೆಯಿಂದ ಅವನ ಕೈಮೇಲೆ ಹೊಡೆಯಲು ಕೈಗೆ ಸ್ವಲ್ಪ ಘಾಯ ದಗಲಿ ತನ್ಮೂಲಕ ಅದರಲ್ಲಿನ ವಿಷ ಅವನ ದೇಹಕ್ಕೆ ವ್ಯಾಪಿಸಿ ಮೃತಪಟ್ಟನೆಂದು ವಿಲಾಯತಿ ಪತ್ರಿಕೆ ಯೊಂದರ ಮೂಲಕ ತಿಳಿಯಬರುತ್ತದೆ.

ಕೋರ್ಟುಗಳ ಜಾರಿಯಾದ ತೀರ್ಮಾನಗಳಮೇಲೆ ಬಹಿರಂಗವಾಗಿ ಯಾಗಲಿ ಸಂಸ್ಕಾರಿಯಾಗಿ ಆಗಲಿ ದೂಷಣ ತಿರಸ್ಕಾರ ರೂಪವಾಗಿ ಆಕ್ಷೇಪಣೆಗಳು ಬರುವಂತೆ ... ಬಂಗಾಳೆ ಗವರ್ನಮೆಂಟಿನವರು ತಮ್ಮ ಅಧಿಕಾರಕ್ಕೆ ಒಳಪಟ್ಟ ಸಿವಿಲ್ ಕಾರ್ಯಾಲಯ ಅಧಿಕಾರಿಗಳಿಗೂ ಸಂದು ಇದ್ದು ಹುಕುಂ ಹೊರಡಿಸಿರುವಂತೆ ತಿಳಿಯಬಂದಿದೆ. ಈಚೆಗೆ ನಡೆದ ಕೆಲವು ಸಂದರ್ಭಗಳ ಯೋಚಿಸಿದಾಗ ಪ್ರಸಕ್ತ ಸರ್ಕ್ಯುಲರ್ ಹುಕುಂಕೇವಲ ಆವಶ್ಯಕವಾದುದೆಂದು ಭಾವಿಸಬೇಕಾಗಿರುವದೆ.

ಈಚೆಗೆ ಮದರಾಸ್ ಹೈಕೋರ್ಟಿನಿಂದ ಹೊರಟ ಒಂದು ಸಿವಿಲ್ ವಾರಂಟನ್ನನುಸರಿಸಿ ಒಬ್ಬ ಮನುಷ್ಯನನ್ನು ದಸ್ತಗಿರಿಯಿಂದ ಜಡ್ಜಿ ಸಾಹೇಬರ ಹಾಜರ್‌ಪಡಿಸಲು, ಜಡ್ಜಿಯವರು ಆ ಮನುಷ್ಯನನ್ನು ನೋಡಿ, ನೀನು ಡಿಕ್ರೀ ಹಣ ಕೊಡಬೇಕೆಂದಿಲ್ಲವಾಗಿ ಮರಳಿ ಜೈಲಿಗೆ ಹೋಗಬೇಕೆಂದು ಹುಕುಂ ಮಾಡಿದರು. ಸದರೀಯವನು, ಮೊದಲು ಹಿಂದಿನ ನನ್ನಂ ದಸ್ತಗಿರಿಯಿಂದ ಜೈಲಿಗೆ ಕಳುಹಿಸಿ ಒಂದು ತಿಂಗಳಕಾಲ ನಾನು ಅಲ್ಲಿದ್ದೆ, ಡಿಕ್ರೀದಾರನು ಮರಳಿ ಜೈಲ್‌ಭತ್ಯ ಹಾಜರ್ ಮಾಡದೆ ಹೋಗಿ ಜೈಲ್ ಅಧಿಕಾರಿಗಳು ನನ್ನಂ ಬಿಡುಗಡೆ ಮಾಡಿದಲ್ಲಿ ಮರಳಿ ನನ್ನನ್ನು ದಸ್ತಗಿರಿ ಮಾಡಿ ಜೈಲಿಗೆ ಕಳುಹಿಸುವದಕ್ಕೆ ಪ್ರೊಸಿಡ್ಯೂರ್ ಕೋಡಿನಲ್ಲಿ ವಿಧಿ ಇರುವದಿಲ್ಲವೆಂದು ಅರಿಕೆ ಮಾಡಿಕೊಂಡನು. ಆವಮೇಲೆ ಜಡ್ಜಿಯವರು ಪ್ರೊಸಿಜ್ಯೂರ್ ಕೋಡನ್ನು ನೋಡಿ ಪ್ರೈವಿ ಹೇಳಿದ್ದು ಉಚಿತವೆಂದು ಗ್ರಹಿಸಿ ಕೂಡಲೆ ಅವನನ್ನು ಬಿಡುಗಡೆ ಮಾಡುವಂತೆ ಹುಕುಂ ಮಾಡಿದರೆಂದು ಮದರಾಸ್ ಪತ್ರಿಕೆಯೊಂದು ತಿಳಿಸುತ್ತಿದೆ.

ಮುಂಬೈಯಲ್ಲಿ ಪ್ರಸಿದ್ಧ ಸಾಹುಕಾರರಾಗಿರುವ ಮಿ|| ರತಿಮಣಿ ಯೆಂಬವರು ಈಗ ವಿಲಾಯತಿಯಲ್ಲಿರುತ್ತಾರೆಂಬುದಷ್ಟೆ. ಸದರೀ ಶೇಟ್ಜಿಯವರು ಇಂಗ್ಲೆಂಡಿನಲ್ಲಿ ಸ್ಥಾಪಿಸಲ್ಪಟ್ಟಿರುವ ಇಂಪೀರಿಯಲ್ ಇನ್‌ಸ್ಟಿಟ್ಯೂಟ್ ಎಂಬ ಒಂದು ಪ್ರವರ್ತನ ಶಾಲೆಯ ಸಹಾಯಾರ್ಥ ಎರಡು ಲಕ್ಷ ರೂಪಾಯಿಗಳು ಕೊಟ್ಟರೆಂದು ಹಿಂದಿನ ಪತ್ರಿಕೆಯ ಮೂಲಕ ತಿಳಿಸಿರುತ್ತೇವೆಯಷ್ಟೆ. ಈ ವಿಷಯದಲ್ಲಿ ಮುಂಬೈ ನೇಟಿವ್ ಒಪೀನಿಯನ್ ಎಂಬ ಪತ್ರಿಕೆ ಯವರ ಅಭಿಪ್ರಾಯವೇನೆಂದರೆ:— ಮಿಸ್ಟರ್ ಜಹಾಂಗಿಯರ್ ರತಿಮಣಿಯವರು ಇಂಪೀರಿಯಲ್ ಇನ್‌ಸ್ಟಿಟ್ಯೂಟ್ ಎಂಬ ಸ್ಥಾಪನೆಗೆ ಧಾರಾಳವಾಗಿ ಯೆರಡು ಲಕ್ಷ ರೂಪಾಯಿಗಳು ಕೊಟ್ಟ ವಿಷಯದಲ್ಲಿ ನಾವು ಸಂತೋಷಿಸಬೇಕೋ ಅಥವಾ ದುಃಖಿಸಬೇಕೋ ನಮಗೆ ತಿಳಿಯಲಿಲ್ಲವು. ನಮ್ಮ ದೇಶೀಯರೊಬ್ಬರು ಐಶ್ವರ್ಯ ಯುಕ್ತವಾದ ಇಂಗ್ಲೆಂಡ್ ರಾಜ್ಯಕ್ಕೆ ಹೋಗಿ ಅಲ್ಲಿ ಇಷ್ಟು ಭಾರೀ ಇನಾಂಕೊಟ್ಟು ಅಲ್ಲಿನವರ ಕಣ್ಣುಗಳು ಚೆದರಿಹೋಗುವಂತೆ ಮಾಡಿದ್ದು ನಮಗೆ ಗೌರವಪಾದಕವಾದ ವಿಷಯವೆಂಬದರಲ್ಲಿ ಯೆಷ್ಟುಮಾತ್ರವೂ ಸಂದೇಹವಿಲ್ಲವು. ರತಿಮಣಿಯವರ ಸಂತತಿಯವರು ಅದ್ಯಾಪಿ ಐಶ್ವರ್ಯವಂತರಾಗಿರುತ್ತ, ನ್ಯಾಯಾಧಿಕ್ಯಗಳು ಸಹ ತಿಳಿಯದಷ್ಟು ಉದಾರಸ್ವಭಾವವುಳ್ಳವರಾಗಿರುವುದು ಮತ್ತು ಸಂತೋಷಕಾರಿಯಾಗಿರುತ್ತದೆ. ಪರಂತು ಇಂಡ್ಯದೇಶಕ್ಕಾಗಲಿ ಬ್ರಿಟಿಷ್ ಸಾಮ್ರಾಜ್ಯಕ್ಕಾಗಲಿ ವಿಶೇಷ ಪ್ರಯೋಜನವಿಲ್ಲದ ಒಂದು ಸ್ಥಾಪನೆಗೆ ಇಷ್ಟು ಭಾರೀ ಮೊತ್ತವನ್ನು ಕೊಟ್ಟ ವಿಷಯದಲ್ಲಿ ನಾವು ಚಿಂತಿಸಬೇಕಾಗಿರುತ್ತದೆ, ಎಂಬದು.

## ನೋಟಿಸ್.

ಈ ಪತ್ರಿಕೆಯ ಚಂದಾದಾರರ ಪೈಕಿ ಬಾಕೀದಾರರಾದವರೆಲ್ಲ ಅವರವರ ಬಾಕೀ ಹಣ್ಣನ್ನೂ ಈ ಕಳೆದ ತಿಂಗಳಲ್ಲಿ ನಾವು ಬರೆದ ಕಾರ್ಡುಗಳಿಗೆ ಜವಾಬ ಕೊಡದೆಯೂ ಬಾಕೀಗಳನ್ನು ಕಳುಹಿಸದೆಯೂ ಇರುವಂತವರೆಲ್ಲ ಈ ವಾರದ ಮೊದಲು ಪತ್ರಿಕೆಯು ಮುಟ್ಟ ಮಾಡಲ್ಪಟ್ಟಿರುತ್ತವೆ. ಬಾಕೀಗಳನ್ನು ಕಳುಹಿಸಿ ಮರಳಿ ಪತ್ರಿಕೆಯನ್ನಪೇಕ್ಷಿಸುವಂತವರಿಗೆ ಪುನಃ ರವಾನಿಸಲ್ಪಡುವವು.

೯—೧೦—೯೩. ಪ್ರೊಪ್ರೈಟರ್.

## LOCAL AND PROVINCIAL NEWS.
### ಒಳದೇಶ ಮತ್ತು ತಾಲ್ಲೂಕಿನ ವೃತ್ತಾಂತಗಳು.

ಬರುವ ದೀಪಾವಳಿ ಹಬ್ಬ ತೀರಿದ ಕೂಡಲೆ ಶ್ರೀಮನ್ ಮಹಾರಾಜರವರ ಸವಾರಿಯು ಮುಂಬೈಗೆ ಚಿತ್ತೈಸುವದೆಂದು ಮೈಸೂರು ಪತ್ರಿಕೆಯೊಂದು ತಿಳಿಸುತ್ತಿದೆ. ಇದು ಯೆಷ್ಟರಮಟ್ಟಿಗೆ ನಿಜವೋ ನಾವರಿಯೆವು.

ಈ ವಿನ ಮಹಾಲಯ ಅಮಾವಾಸ್ಯೆಯಾದುದರಿಂದಲೂ, ನಾಳೆಯ ದಿನ ನವರಾತ್ರಿ ಪ್ರಾರಂಭವಾದದರಿಂದಲೂ ಆಬಗ್ಗೆ ಈ ಸಂಸ್ಥಾನದ ಎಲ್ಲಾ ಇಲಾಖೆಗಳಿಗೂ ರಜಾ ಕೊಡಲ್ಪಟ್ಟಿರುತ್ತದೆ.

ಈ ಪೇಟೆಯ ರೈಲ್ವೇಸ್ಟೇಷನ್ ದೊಡ್ಡ ಜಂಕ್ಷನ್ ಸ್ಟೇಷನಾಗಿ, ಜನಗಳ ಆಮದುರಫ್ತು ದಿನೇದಿನೇ ಅಧಿಕವಾಗುತ್ತ ಬರುವದಂ ಯೋಚಿಸಿ, ಇದನ್ನು ಬದಲಾಯಿಸತಕ್ಕ ಬಗ್ಗೆ ಮದರಾಸ್ ರೈಲ್ವೆ ಕಂಪೆನಿಯವರು ಯೆರಡು ಲಕ್ಷ ರೂಪಾಯಿಗಳು ಮಂಜೂರ್ ಮಾಡಿರುವದಾಗಿ ಹಿಂದೆ ತಿಳಿಸಿದ್ದೆವಷ್ಟೆ. ಅದೇರೀತಿ ಈಚೆಗೆ ಕಾಮಗಾರಿಗೆ ಪ್ರಾರಂಭವಾಗಿ ಶೀಘ್ರವಾಗಿ ಕೆಲಸಗಳು ನಡೆಯುತ್ತಿವೆ.

ಲಕ್ಷ್ಮಣಹಳ್ಳಿ ಜಂಗ್ಲಿಯಲ್ಲಿ ಮುಂದಿನ ಸಾವತ್ಸರದೊಳು ಆನೆಗಳಂ ಹಿಡಿಯುವದಕ್ಕೆ ಅವಶ್ಯಕಗಳಾದ ಯೇರ್ಪಾಡುಗಳಂ ಮಾಡುವದಕ್ಕೆ ಬಗ್ಗೆ ಯೆಲ್ಲಾ ಸೂಪರಿಂಟೆಂಡೆಂಟರಾದ ಮಿ|| ಸಾಂಡರ್ಸನ್‌ರವರು ಅಲ್ಲಿಗೆ ಹೋಗಿರುತ್ತಾರೆಂತಲೂ, ಈಚೆಗೆ ಹಿಡಿಯಲ್ಪಟ್ಟ ಆನೆಗಳು ನವರಾತ್ರಿ ಉತ್ಸವ ಕಾಲದೊಳು ರಾಜಧಾನಿಯಲ್ಲಿ ಜನಗಳ ನೋಟದ ಬಗ್ಗೆ ತರಲ್ಪಡುವವೆಂತಲೂ ಕೇಳುತ್ತೇವೆ.

ಮೈಸೂರಲ್ಲಿ ನಡೆಯುವ ನವರಾತ್ರಿ ಉತ್ಸವ ದರ್ಶನಾರ್ಥ ಅಲ್ಲಿಗೆ ಹೋಗುವಂತವರ ಅನುಕೂಲ್ಯಕ್ಕಾಗಿ ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪನಿಯವರು ನಾಳೆಯ ಮೊದಲು ವಿಜಯದಶಮಿಯವರೆಗೆ ಇದರಡಿ ತಿಳಿಸಲ್ಪಡುವ ಕಾಲಗಳಲ್ಲಿ ಸ್ಪೆಷಲ್ ಗಾಡಿಗಳಂ ಬಿಡುವಂತೆ ಯೇರ್ಪಾಡು ಮಾಡಿರುತ್ತಾರೆ ಹ್ಯಾಗೆಂದರೆ:— ಬೆಳಿಗ್ಗೆ ೮ ಘಂಟೆ ೨೦ ನಿಮಿಷಗಳಿಗೆ ಒಂದು ಗಾಡಿ, ೬| ಘಂಟೆಗೆ ಒಂದುಗಾಡಿ, ೯|| ಘಂಟೆಗೆ ಒಂದುಗಾಡಿ, ಮಧ್ಯಾಹ್ನ ೨ ಘಂಟೆ ೩೦ ನಿಮಿಷಗಳಿಗೊಂದುಗಾಡಿ, ಈ ಮೇರೆ ನಡೆಸಲ್ಪಡುವವು.

ಕಳೆದ ಶನಿವಾರದಿನ ರಾತ್ರಿ ಸುಮಾರ್ ೩ ಘಂಟೆಯ ವೇಳೆಯಲ್ಲಿ ಈ ಊರು ತರಗಿನ ಪೇಟೆಯೊಳು ಸಿದ್ಧರಾಮಣ್ಣನೆಂಬವರ ಮಂಡಿಯ ಹೊರಗಡೆ ಹಾಕಿದ್ದ ಅಕ್ಕಿಯ ಮೂಟೆಯ ಪೈಕಿ ಒಂದನ್ನು ಒಬ್ಬ ಕಳ್ಳನು ಕದಿದು ಅಕ್ಕಿಯನ್ನು ತನ್ನ ಬಟ್ಟೆಯಲ್ಲಿ ಸುರುಕೊಳ್ಳುತಲಿದ್ದುದು ಅಲ್ಲಿ ಮಲಗಿದ್ದ ಕಾವಲುಗಾರನು ನೋಡಿ ಯೆದ್ದು ಸದರೀ ಕಳ್ಳನ ಹಿಡಿಯುವದಕ್ಕೆ ಹೋಗಲು ಕಳ್ಳನು ತನ್ನಲ್ಲಿದ್ದ ದೊಣ್ಣೆಯಿಂದ ಕಾವಲುಗಾರನನ್ನು ತಲೆಯಮೇಲೆ ಬಲವಾಗಿ ಹೊಡೆದು ಓಡಿಹೋಗುವದಕ್ಕೆ ಪ್ರಯತ್ನಪಟ್ಟನು. ಆದಾಗ್ಯೂ ಸದರೀ ಯವನು ಧೈರ್ಯದೊಡನೆ ಕಳ್ಳನನ್ನು ಹಿಡಕೊಂಡು ಬೀಟ್ ಪೋಲೀಸ್ ಜವಾನನನ್ನು ಕೂಗಿ ಅವನ ವಶಕ್ಕೆ ಒಪ್ಪಿಸಿದನು. ಈಗ ಕಳ್ಳನು ಪೋಲೀಸ್ ಲಾಕಪಿನಲ್ಲಿರುತ್ತಾನೆ.

ವಾಣಿಯಂಬಾಡಿ ಪ್ರಾಂತದಿಂದ ಲಬ್ಬೆಯವರು ಕೆಲವರು ಈ ಪೇಟೆಗೆ ಬಂದು ಅವರ ಪೈಕಿ ಒಬ್ಬನು ಜಮಾದಾರನು, ಮತ್ತೊಬ್ಬನು ದಫೇದಾರನು, ಉಳಿದವರು ಜವಾನರು, ಈರೀತಿ ಅವರವರ ಹೋದೆಗೆ ತಕ್ಕಂತೆ ದವಾಲಿ ಮೊದಲಾದವಂ ಹಾಕಿಕೊಂಡು ಲಾಲ್‌ಬಾಗ್ ಬಳಿ ಇರುವ ಕನಕನಪಾಳ್ಯಕ್ಕೆ ಹೋಗಿ, ತಾವು ಡಿಸ್ಟ್ರಿಕ್ಟ್ ಆಫೀಸಿಗೆ ಸೇರಿದವರೆಂತಲೂ ತಮಗೆ ಸರಬರಾಯಿ ವಗೈರೆ ಮಾಡಬೇಕೆಂತಲೂ ಅಲ್ಲಿನ ರೈತರ ಮನೆಗಳಿಗೆ ಹೋಗಿ ಅವರು ಬೆದರಿಸುತಲಿರುವಲ್ಲಿ ಆ ಗ್ರಾಮದ ಪಟೇಲನು ಬಂದು ಸದರೀ ಜನರ ದುಷ್ಕೃತ್ಯಗಳಂ ನೋಡಿ ಕೂಡಲೇ ಜೋರಾಗಿ ಬಂದು ಪೇಟೆಯ ಪೋಲೀಸ್ ಸ್ಟೇಷನಿಗೆ ರಿಪೋರ್ಟ್ ಮಾಡಲಾಗಿ ಇಲ್ಲಿಂದ ಪೋಲೀಸಿನವರು ಅಲ್ಲಿಗೆ ಹೋಗಿ ಸದರೀ ವೇಷಧಾರಿಗಳಂ ದಸ್ತಗಿರಿಯಿಂದ ಸ್ಟೇಷನಿಗೆ ಕರೆತಂದು ಈಗ ಟೌನ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ವಿಚಾರಣೆಯಾಗುತಲಿದೆ. ಈ ಮೊಕದ್ದಮೆಯ ಪರ್ಯವಸಾನವಂ ಮುಂದೆ ತಿಳಿಸುವೆವು.

ಕಳೆದ ತಿಂಗಳ ೩೦ ನೇ ತಾರೀಖಿಗೆ ಹೈದಾದ ವಾರದ ಬಾಬತು ಸರ್ಕಾರೀ ಕಾಲಸ್ಥಿತಿ ರಿಪೋರ್ಟನ್ನು ನೋಡಲಾಗಿ, ಬೆಂಗಳೂರು ಡಿಸ್ಟ್ರಿಕ್ಟಿಗೆ ಸೇರಿದ ಪ್ರತಿ ತಾಲ್ಲೂಕಿನಲ್ಲೂ ಒಂದರಿಂದ ಸುಮಾರು ಐದು ಅಂಗುಳಗಳ ವರಿಗೂ, ಕೋಲಾರ ಡಿಸ್ಟ್ರಿಕ್ಟಿನಲ್ಲಿ ಒಂದರಿಂದ ಸುಮಾರು ಎಂಟು ಅಂಗುಳಗಳ ವರೆಗೂ, ತುಮಕೂರು ಡಿಸ್ಟ್ರಿಕ್ಟಿನಲ್ಲಿ ಚಿಕ್ಕನಾಯಕನ ಹಳ್ಳಿ, ಶಿರಾ, ಪಾವುಗಡ, ಈ ಮೂರು ತಾಲ್ಲೂಕುಗಳು ವಿನಾ ಉಳಿದ ತಾಲ್ಲೂಕುಗಳಲ್ಲಿ ಒಂದರಿಂದ ಮೂರೂವರೆ ಅಂಗುಳಗಳ ವರೆಗೂ, ಮಳೆಬಿದ್ದಂತೆ ತಿಳಿಯಬರುತ್ತಿದೆ. ಮೈಸೂರು ಡಿಸ್ಟ್ರಿಕ್ಟು ಪೈಕಿ, ಮೈಸೂರು, ಚಾಮರಾಜನಗರ, ಶ್ರೀರಂಗಪಟ್ಟಣ, ಯಡತೊರೆ, ಮಳವಳ್ಳಿ, ಕೃಷ್ಣರಾಜಪೇಟೆ, ನಾಗಮಂಗಲ, ಈ ತಾಲ್ಲೂಕುಗಳಲ್ಲಿ ಮಾತ್ರ ಒಂದರಿಂದ ಯೆರಡು ಅಂಗುಲಗಳ ವರೆಗೆ ಮಳೆಯಾಗಿರುತ್ತೆ, ಮಿಕ್ಕ ತಾಲ್ಲೂಕುಗಳಲ್ಲಿ ಮಳೆಯಿಲ್ಲವು. ಹಾಸನ ಡಿಸ್ಟ್ರಿಕ್ಟು ಪೈಕಿ ಮಂಜರಾಬಾದ್, ಹೊಳೇನರಸೀಪುರ, ಈ ಯೆರಡು ತಾಲ್ಲೂಕುಗಳಲ್ಲಿ ಮಾತ್ರ ಒಂದಂಗುಳ ಚಿಲ್ಲರೆ ಮಳೆಬಿತ್ತು, ಮಿಕ್ಕ ತಾಲ್ಲೂಕುಗಳಲ್ಲಿ ಅತ್ಯಲ್ಪ ವೃಷ್ಟಿ. ಶಿವಮೊಗ್ಗ ಮತ್ತು ಕಡೂರು ಡಿಸ್ಟ್ರಿಕ್ಟುಗಳಲ್ಲಿ ಕೆಲವು ಸೆಂಟುಗಳ ಮಳೆ ಬಿದ್ದಂತೆ ಕಾಣುತ್ತಿದೆ. ಚಿತ್ರದುರ್ಗ ಡಿಸ್ಟ್ರಿಕ್ಟು ಪೈಕಿ ಚಳ್ಳಕೆರೆ, ಮೊಳಕಾಲ್ಮುರು, ಜಗಲೂರು, ಹೊಸದುರ್ಗ, ಈ ತಾಲ್ಲೂಕುಗಳಲ್ಲಿ ಒಂದರಿಂದ ಸುಮಾರು ೩ ಅಂಗುಲದ ವರೆಗೆ ಮಳೆ ಆಗಿರುತ್ತೆ. ಇತರೆ ತಾಲ್ಲೂಕುಗಳಲ್ಲಿ ಕೆಲವು ಸೆಂಟುಗಳ ಮಳೆಬಿದ್ದಿರುತ್ತಿವೆ. ಈ ತಿಂಗಳು ಹುಟ್ಟಿದ ಮೇಲೆ ಇದುವರೆಗೆ ಬೆಂಗಳೂರು ಷಹರ್ ಮೊದಲಾದ ಅನೇಕ ಪ್ರದೇಶಗಳೊಳು ಪ್ರಬಲವರ್ಷ ಬಿದ್ದು ಕೆಲವು ಕಡೆ ಕೆರೆಗಳ ಕೋಡಿಹೋಗುತಲಿರುವಂತೆ ನಮ್ಮ ಖಾತರಿದಾರರ ರಿಪೋರ್ಟುಗಳ ಮೂಲಕ ತಿಳಿಯಬರುತ್ತಿವೆ, ಪರಂತು ಈ ಸಲ ವರ್ಷವು ಕೇವಲ ಕಾಲಾತೀತವಾಗಿ ಬಂದಿರುವದರಿಂದ ಸರ್ವತ್ರ ನಾಲ್ಕಾಣೆ ಮೊದಲು ಎಂಟಾಣೆಗೆ ಮೀರದೆ ಫಸಲ್‌ಗಳು ಕೈಗೆ ಬರಬಹುದೆಂದು ಹೇಳಬೇಕಾಗಿದೆ. ಆಹಾರಪದಾರ್ಥಗಳ ಧಾರಣೆಗಳು ಪ್ರಾಯಶಃ ಒಂದೇವಿಧವಾಗಿವೆ ರಾಗಿಯ ಧಾರಣೆಮಾತ್ರ ಬಂದಿ ಒಂದಕ್ಕೆ ೨ ರೂಪಾಯಿಗಳು ಇಳಿದವು. ಅಕ್ಕಿಯ ಧಾರಣೆ ಅತ್ಯಧಿಕವಾಗಿದೆ. ಈ ಪೂರಿಂದ ಮೈಸೂರಿಗೆ ಅಕ್ಕಿ ಬಹಳವಾಗಿ ರಫ್ತಾದದ್ದೇ ಇದಕ್ಕೆ ಕಾರಣವೆಂದು ತಿಳಿಯಬರುತ್ತಿದೆಯಾಗಿ ನವರಾತ್ರಿ ಪ್ರಯುಕ್ತವಾದ ಅಲ್ಲಿನ ಗಿರಾಕಿಗಳು ತಪ್ಪಿದ ಮೇಲೆ ಆದೂ ಇಳಿಯಬಹುದೆಂದು ಹೇಳುತ್ತಾರೆ.

## THE MYSORE GAZETTE.
## ಮೈಸೂರು ಗೆಜೆಟು.

—೧—

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವ ಸರ್ಕಾರದಿಂದ ಕೊಡೋಣಾದ ಇಸ್ತಹಾರನಾಮೆಗಳು.

ನಂ|| ೫೭೯೯—೧. F. ೮೫೦—೯೨, ತಾ|| ೨೩ ನೇ ಸೆಪ್ಟಂಬರ್ ೧೮೯೩.—೧೮೯೩ ನೇ ಇಸವಿ ಸೆಪ್ಟೆಂಬರ್ ೧೨ ನೇ ತಾರೀಖಿನ ಮಧ್ಯಾಹ್ನಾತ್ಪರ ಶಿವಮೊಗ್ಗ ಡಿಸ್ಟ್ರಿಕ್ಟು ಅಸಿಸ್ಟೆಂಟ ಕಮಿಷನರ್ ಮೆ|| ಕೆ. ರಾಮಾನುಜಯ್ಯಂಗಾರ್ಯರು ೨ನೇ ಅಸಿಸ್ಟೆಂಟ ಕಮಿಷನರಿ ಕೆಲಸದ ಚಾರ್ಜನ್ನು ಕೊಟ್ಟು ಮೆ|| ಬಿ. ರಾಮಸ್ವಾಮಯ್ಯರವರು ಮರಳಿ ತೆಗದುಕೊಂಡಿರುತ್ತಾರೆ.

ನಂ|| ೫೭೯೧—೧. F. ೩೩—೯೩, ತಾರೀಖ್ ೨೫ ನೇ ಸೆಪ್ಟಂಬರ್ ೧೮೯೩.—ಚಿಕ್ಕಮಗಳೂರು ತಾಲ್ಲೂಕ ಅಮಲ್ದಾರ್ ಪಿ. ಶ್ರೀನಿವಾಸರಾಯರವರು, ಈ ತಿಂಗಳ ೭ ನೇ ತಾರೀಖಿನ ೪೮೪೩—೧. F ೩೩-೯೩ ನೇ ನಂಬರ್ ಇಸ್ತಹಾರನಾಮೆಯಲ್ಲಿ ಮಂಜೂರ್ಮಾಡಲ್ಪಟ್ಟ ೧೦ ದಿನಗಳ ಕ್ಯಾಜುಯಲ್ ರಜಾವನ್ನು ೧೮೯೩ ನೇ ಇಸವಿ ಸೆಪ್ಟಂಬರ್ ೬ ನೇ ತಾರೀಖ್ ಮೊದಲು ಉಪಯೋಗಿಸಿಕೊಂಡು ಇದೇ ತಿಂಗಳ ೧೩ ನೇ ತಾರೀಖಿನಲ್ಲಿ ನೌಕರಿಗೆ ವಾಪಸ ಬಂದದರಿಂದ ಸದರೀ ರಜಾ ಪೈಕಿ ಉಳದ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿದೆ.

ನಂ|| ೫೯೭೦—೧. F. ೪೨-೯೩, ತಾ ೨೬ನೇ ಸೆಪ್ಟಂಬರ್ ೧೮೯೩ — ಮೈಸೂರು ಲೋಕಲ್ ರೆವಿನ್ಯೂ ಕೋಡಿನ (೧೮೮೮ನೇ ಇಸವಿಯ ೪ನೇ ನಂಬರ್ ರೆಗ್ಯುಲೇಷನ್) ೨೩೬ ನೇ ಸೆಕ್ಷನಿನ ೨ ನೇ ಕ್ಲಾಸು ಅನುಸರಿಸಿ, ಆ ಕೋಡಿನ ೮ ಮತ್ತು ೯ ನೇ ಚಾಪ್ಟರ್‌ಗಳಲ್ಲಿನ ನಿಯಮಗಳನ್ನು ಯಡತೊರೆ ತಾಲ್ಲೂಕು ಹನಸೋಗೆ ಮಾಗಣಿ ಗುರುಮಾನಹಳ್ಳಿ ಸರ್ವಮಾನ್ಯಗ್ರಾಮಕ್ಕೆ ಜಾರೀಯೊಳು ತರತಕ್ಕದ್ದೆಂದು ಶ್ರೀಮನ್ಮಹಾರಾಜಾ ಸರ್ಕಾರದವರು ಹುಕುಂ ಮಾಡುತ್ತಾರೆ.

ನಂ|| ೬೦೭೯— ೧. F. ೨೨-೯೩, ತಾರೀಖ್ ೨೭ ನೇ ಸೆಪ್ಟಂಬರ್ ೧೮೯೩ — ಸದರಿ ೧೮೯೩ನೇ ಇಸವಿ ಸೆಪ್ಟಂಬರ್ ೨೧ ನೇ ತಾರೀಖಿನ ಪ್ರಾತಸ್ಸಿನಲ್ಲಿ, ಮೈಸೂರು ಡಿಸ್ಟ್ರಿಕ್ಟು ಆಫಿಸಿಯೇಟಿಂಗ್ ಡೆಪ್ಯುಟಿ ಕಮಿಷನರ್ ಮೆ|| ಕೆ. ಮಾಧವರಾಯರವರು ಮೈಸೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಆಫೀಸ್ ಚಾರ್ಜನ್ನು ಕೊಟ್ಟು ಡೆಪ್ಯುಟಿ ಕಮಿಷನರ್ ಮೆ|| ಎ. ರಂಗಸ್ವಾಮಯ್ಯಂಗಾರ್ಯರವರು ಮರಳಿ ವಹಿಸಿಕೊಂಡರು.

ನಂ|| ೬೦೫೬—೧. F. ೩೨—೯೨, ತಾ|| ೨೮ ನೇ ಸೆಪ್ಟಂಬರ್ ೧೮೯೩.—ಗುಂಡೇರಿ ಶಾನುಭೋಗರು ಮೆ|| ಗೋಪಾಲಸ್ವಾಮಿಯವರು, ಜೋಡಿ ಗ್ರಾಮಗಳಿಗೆ ಅನುಸ್ವಾತವಾಗಿ ಸೂರು ವಾರಗಳು ಗೈರ್‌ಹಾಜರಾದ ಬಗ್ಗೆ ವಜಾ ಮಾಡಲ್ಪಟ್ಟ ಮೆ|| ತಿಮ್ಮಣ್ಣಯ್ಯನವರಿಗೆ ಬದಲು, ಹೊಳಲ್ಕೆರೆ ಮ್ಯುನಿಸಿಪಲ್ ಬೋರ್ಡಿನಲ್ಲಿ ಒಬ್ಬ ಮೆಂಬರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ನಂ|| ೬೮೦೨—೧. F. ೩೩—೯೩ — ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೮೮ ನೇ ಆರ್ಟಿಕಲ್ ಅನುಸರಿಸಿ, ಡೆಕ್ಕಡೆ ತಾಲ್ಲೂಕ ಅಮಲ್ದಾರ್ ಜೆ. ಶ್ರೀನಿವಾಸರಾಯರು, ಅವರು ಉಪಯೋಗಿಸಿಕೊಳ್ಳುವದಕ್ಕೆ ಹುಕುಂ ಕೊಡಲ್ಪಟ್ಟರುವ ಸುದಾದ ತಾರೀಖ್ ಮೊದಲು ೨೦ ದಿನಗಳ ಪ್ರಿವಿಲೆಜ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ|| ೬೮೦೮—೧. F. ೭೯—೯೩, ತಾ|| ೨೯ನೇ ಸೆಪ್ಟಂಬರ್ ೧೮೯೩.—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೩೩ ನೇ ಆರ್ಟಿಕಲ್ ಅನುಸರಿಸಿ, ಕಡೂರು ಡಿಸ್ಟ್ರಿಕ್ಟು ಫಾರೆಸ್ಟು ಸಬ್‌ಅಸಿಸ್ಟೆಂಟ ಕನ್ಸರ್ವೇಟರ್ ಮೆ|| ಬಿ. ರಾಯಸ್ವಾಮಯ್ಯರವರು ಅವರು ಉಪಯೋಗಿಸಿಕೊಳ್ಳತಕ್ಕದಾದ ತಾರೀಖ್ ಮೊದಲು ೧೫ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

೨. ಮೆ|| ರಾಮಸ್ವಾಮಯ್ಯರವರು ರಜಾ ಮೇಲೆ ಗೈರ್‌ಹಾಜರಾಗಿರುವ ಕಾಲದಲ್ಲಿ ಇದರಡಿ ತಿಳಿಸಲ್ಪಡುವ ಯೇರ್ಪಾಡುಗಳು ಮಂಜೂರ್ಮಾಡಲ್ಪಟ್ಟಿರುತ್ತವೆ:—

ನಂ|| ೧೮, ತಾ|| ೩ನೇ ಅಕ್ಟೋಬರ್ ೧೮೯೩. ಅಸಿಸ್ಟೆಂಟ ಕಮಿಷನರ್ ಮೆ|| ಪಿ. ಪಂಚನದರಾಯರವರು, ಫ್ರೆಂಟಿಯರ್ ಸಬ್ ಡಿವಿಜನ್ ಇನ್‌ಚಾರ್ಜಿನಿಂದ ಮೆ|| ಮುರುವನ್ನುದಲ್ಲಿರುವವರಿಂದ ಬಿಡುಗಡೆ ಮಾಡಲ್ಪಟ್ಟಮೇಲೆ ಮೈಸೂರಿಗೆ ಹೋಗಿ, ಮೈಸೂರು ಡಿಸ್ಟ್ರಿಕ್ಟು ಅಸಿಸ್ಟೆಂಟ ಕಮಿಷನರ್ ವ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸನೋಡತಕ್ಕದ್ದಲ್ಲದೆ, ಮೈಸೂರು ಟೌನ್ ಮ್ಯಾಜಿಸ್ಟ್ರೇಟರ ಕೋರ್ಟ್ ಮ್ಯಾಜಿಸ್ಟ್ರೇಟ ಕೆಲಸವನ್ನು ಸಹ ನೋಡತಕ್ಕದ್ದು.

ನಂ|| ೬೩೭೦—೧. ೧೮೪೦— ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೮೮ ನೇ ಆರ್ಟಿಕಲ್ ಅನುಸರಿಸಿ, ನಾಗಮಂಗಲ ತಾಲ್ಲೂಕ ಅಮಲ್ದಾರ್ ಶಾನಡಲ್ಲಿ ಯವರು, ಅವರು ಉಪಯೋಗಿಸಿಕೊಳ್ಳಬಹುದಾದ ತಾರೀಖ್ ಮೊದಲು ಒಂದು ತಿಂಗಳು ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

ಮೈಸೂರು ಡಿಸ್ಟ್ರಿಕ್ಟು ರೆವಿನ್ಯೂ ಪೆಷ್ ಕೌನ್ಸಿಲರಾದ ಟಿ. ಕೆ ಸುಂದರರಾಜಯ್ಯಂಗಾರು), ಅಮಲ್ದಾರ್ ಚಾಮರಾಜನಗರ ಯವರ ಗೈರ್‌ಹಾಜರೀ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ನಾಗಮಂಗಲ ತಾಲ್ಲೂಕ ಅಮಲ್ದಾರ್ ವ ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡುವಂತೆ ನೇಮಕರು ಮಾಡಲ್ಪಟ್ಟಿರುತ್ತಾರೆ.

(೧) ಫಾರೆಸ್ಟ್ ಪ್ರೊಬೇಷನರ್ ಮೆ|| ಬಿ ಹಿ' ದಾಸಿಂಗ್ ರವರು ಮತ್ತೊಂದು ಹುಕುಂ ಕೊಡಲ್ಪಡುವ ವರೆಗೆ, ಕಡೂರು ಡಿಸ್ಟ್ರಿಕ್ಟು ಫಾರೆಸ್ಟ್ ಇನ್‌ಚಾರ್ಜನಲ್ಲಿರತಕ್ಕದ್ದು.

(೨) ಫಾರೆಸ್ಟ್ ಪ್ರೊಬೇಷನರ್ ಮೆ|| ಎಂ. ಜಿ. ರಾಮರಾಯರು ಶಿಕಾರಿಪುರದ ಫಾರೆಸ್ಟ್ ಸಬ್‌ಡಿವಿಜನ್ ಇನ್‌ಚಾರ್ಜನಲ್ಲಿರತಕ್ಕದ್ದು.

(೩) ಫಾರೆಸ್ಟ್ ಪ್ರೊಬೇಷನರ್ ಮೆ|| ಅಪ್ಪಯ್ಯನವರು ಮೈಸೂರು ಡಿಸ್ಟ್ರಿಕ್ಟಿನಿಂದ ಶಿವಮೊಗ್ಗ ಡಿಸ್ಟ್ರಿಕ್ಟಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ.

ನಂ|| ೬೦೪೧—೧. F. ೭೭೬—೯೨, ತಾ ೩೦ ನೇ ಸೆಪ್ಟಂಬರ್ ೧೮೯೩.—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೨೦೦ ನೇ (a) ಆರ್ಟಿಕಲ್ ಅನುಸರಿಸಿ, ಕೋಲಾರ ಡಿಸ್ಟ್ರಿಕ್ಟು ಜನರಲ್ ಅಸಿಸ್ಟೆಂಟ ಕಮಿಷನರ್ ಮೆ|| ನಾರಣಯ್ಯಂಗಾರ್ಯರವರು ಅವರು ಉಪಯೋಗಿಸಿಕೊಳ್ಳಬಹುದಾದ ತಾ|| ಮೊದಲು ಒಂದು ವರ್ಷದ ಫರ್ಲೋರಜಾ ಕೊಡಲ್ಪಟ್ಟಿರುತ್ತಾರೆ.

೨. ಮೆ|| ಅಬ್ದುಲ್ ಅಜೀಜ್ ಯವರು ೨ನೇ ಕ್ಲಾಸ್ ಅಸಿಸ್ಟೆಂಟ ಕಮಿಷನರಾಗಿ ಕೆಲಸ ನೋಡುವಂತೆ ನೇಮಕರ್ಮಾಡಲ್ಪಟ್ಟು, ಮೆ|| ನಾರಣಯ್ಯಂಗಾರ್ಯರವರು ರಜಾ ಮೇಲೆ ಗೈರ್‌ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಕೋಲಾರ ಡಿಸ್ಟ್ರಿಕ್ಟಿಗೆ ನಿಯಮಿಸಲ್ಪಟ್ಟಿರುತ್ತಾರೆ.

## SUMMARY OF NEWS.
## ವೃತ್ತಾಂತ ಸಂಗ್ರಹವು.

ಮೈಸೂರು ನಗರದಲ್ಲಿ ಪ್ಲೇಗಿನಿಂದ ಮೊದಲಿಗೆ ೨೦ ಜನರು ಮರಣ ಹೊಂದಿದರು —ಚಂದ್ರಿಕೆ.

ಮುಂಬೈ ಪ್ರಖ್ಯಾತ ವ್ಯಾಪಾರಸ್ಥರಾದ ಮೆ|| ರಹಿಮತುಲ ಎಂಬವರು ಲಂಡನ್ನಲ್ಲಿರುವ ಇಂಪೀರಿಯಲ್ ಇನ್‌ಸ್ಟಿಟ್ಯೂಟಿಗೆ ೨ ಲಕ್ಷ ರೂಪಾಯಿಗಳನ್ನು ದಾನಕೊಡುವ ಕೊಟ್ಟಿರುವೆಂದು ದಾನವೂ ದೊಡ್ಡದಲ್ಲವೆ?—ಹಿಂದೂ.

ಮುಂಬೈ ನಗರದಲ್ಲಿ ನಡೆದಗಲಭೆಯಲ್ಲಿ ಮುಸಲ್ಮಾನ ಜನರು ತಪ್ಪನ್ನು ಸುಮ್ಮನೆ ಹಿಂದೂಗಳ ಮೇಲೆ ಆರೋಪಿಸಿದರೆಂದೂ ಮುಸಲ್ಮಾನ ಜನರಿಗೆ ಕ್ಷಮಾ ಮಾಡಬಾರದೆಂದೂ ಕೆಟ್ಟ ಮಾಡಿಕೊಂಡಿರುತ್ತಾರಂತೆ—ಹಿಂದೂ.

ಸರ್ಕಾರದ ಸುಬ್ರಹ್ಮಣ್ಯಂ ಮುನಿಸಿಪಾಲಿಟಿಯ ಸೆಕ್ರೆಟರಿಯಾದ ಮೆ|| ಸದಾಶಿವಯ್ಯ ಎಂಬವರು ಕಾರ್ಯಾಲಯ ಸಂಬಂಧವಾದ ಖಾತೆ ತಪ್ಪು ಸ್ವಂತ ಕೆಲಸಕ್ಕೆ ಉಪಯೋಗಿಸಿದ್ದಕ್ಕಾಗಿ ಅವರ ಮೇಲೆ ಕಟ್ಟಲೆ ಹಾಕಿ ೧ನೇ ವರ್ಗದ ಮ್ಯಾಜಿಸ್ಟ್ರೇಟರು ಅವರಿಗೆ ೧೨ ತಿಂಗಳ ಶಿಕ್ಷೆ ವಿಧಿಸಿದರು—ಸ. ಪತ್ರ.

ಟ್ರೈನು ಡಕ್ಷಿಣಕರ್ನಾಟಕದಲ್ಲಿ ಪ್ರಯಾಣ ಹೊರಟಿರೆ ೪,೦೦೦ ಯಾತ್ರಿಕರನ್ನು ೫೦ ಬೆಟ್ಟಗಳಿಗೆ ನೂಕಿಕೊಂಡು ಹೋಗುತ್ತಾರೆ. ಈ ಒಂದೊಂದು ಬೆಟ್ಟಕ್ಕೆ ಯ ಊರಿನ ಜನ ಮಹನಷ್ಟರ ಭಾರವಿರುತ್ತದೆ, ಇದಲ್ಲದೆ ವಸ್ತುಗಳು ಎಂದರು—ಪ್ರೈ.

ನಮ್ಮ ಕ್ವೀನ್ ವಿಕ್ಟೋರಿಯಾ ಮಹಾರಾಣಿಯವರು ರಾಜಸಭೆಗೆ ಪಟ್ಟಾಭಿಷೇಕ ೫೦,೦೦೦ ರೂಪಾಯಿಗಳ ಅಧಿಕ ಇವ ಬಿಳಿಗೆ ತೊಡಿಗೆಗಳನ್ನು ಇಟ್ಟುಕೊಂಡು ಸಭೆಯನ್ನು ಆಕರ್ಷಿಸಿದ್ದಲ್ಲದೆ ಬೇರೆ ವೇಳೆಗಳಲ್ಲಿ ಯಾವದನ್ನೂ ಧರಿಸುವದಿಲ್ಲವು, ಇದಲ್ಲದೆ ವಿಶೇಷವಾಗಿ—ಪ್ರೈ.

ಮುಂಬೈಯಲ್ಲಿ ವ್ಯಾಪಾರ ಇದ್ದಾಗ ಇವರ ಹೊಗೆ ತನು ವಾರದ ವಹಿವಾಟು ವರ್ಷದ ಮುಳಿಗೆ ಪಡಗಿನಲ್ಲಿ ನೈ ೬೦ ಜನರಲ್ಲಿ ೬ ಜನರೂ, ೬೦೦ ಗೋಧಿಯ ಚೀಲಗಳೂ, ೧,೦೦೦ ಅಕ್ಕಿಯ ಚೀಲಗಳೂ, ೪೦೦ ಅಕ್ಕಿಯ ಚೀಲಗಳು ೧೫೦೦ ಬಟ್ಟೆಯ ಚೀಲಗಳೂ, ೩,೦೦೦ ಇತರ ಸಾಮಗ್ರಿಯ ಚೀಲಗಳೂ ಸಮುದ್ರದಲ್ಲಿ ಹಾಳಾದವು.—ಸುದರ್ಶನ.

ಹಿಂದೂ ಜನಸಂಖ್ಯೆಯೊಳಗೆ ಠಂಗೆಯಾಗುವದೆಂದು ಸುದ್ದಿಯನ್ನು ಪ್ರಕಟ ಮಾಡಿದವರಿಗೆ ಅದು ದಿನಗಳ ಕಾಲದ ಕ್ಷಿಣ ವಿಧಿಸಲ್ಪಡುವದೆಂದು ಈ (ಬಿ.ಎಂ.) ಯು ಪತ್ರಿಕಾಕರ್ತರು ಪ್ರಸಿದ್ಧ ಪಡಿಸುತ್ತಾರಂತೆ. ಇಂತಾ ಶಿಕ್ಷೆಯ ವಿಧಿಸಿದ ಪತ್ರಿಕೆಯ ಬಿಡಿಸಬೇಕಾದರೆ ಸರ್ಕಾರ ಯಾವ ಕಾಲದಲ್ಲೂ—ರಾಜಹಂಸ.

ಪಶ್ಚಿಮದ ಕಡೆ ಪಣ್ಯ ಸ್ಥಳಗಳು ದೊರೆವಲ್ಲಿ ಅವಲ್ಲಿ ಸುಂದರವಾದ ಯುವತಿ ನವ್ಯಸ್ತ್ರೀಯರು ಬಂದುದರಲ್ಲಿಯೂ, ಕಳೆಯಲ್ಲಿಯೂ ಬದಲ ಉತ್ತಮವಾಗಿದ್ದರೆ, ಇಂಗ್ಲಿಷರು ವಿಸ್ತಾರ ಮಾಡಿ ಗವರ್ನರರು ಬಂದರು ಮಾಡಿದ ಪಡಿಸಿಕೊಳ್ಳಲು ವೃದ್ಧಿಸುವ ಚಿಕ್ಕಮ ಈಗ ಕೆಲವು ದಿವಸಗಳ ಕೆಳಗೆ ಯಾರು ಹಾಡಿದಾರು, ಇಂಗ್ಲಿಷರು ಯಾರನ್ನು ಬದಲಿಸಿದರು ಸಂಪೂರ್ಣವಾದವರು—ಪ್ರೈ.

ಪ್ರಮಾಣೀಕರಿಸಿ ಬಂದಾಗ ೧೮೯೨ನೇ ಇಸವಿಯ ನವಂಬರು ತಿಂಗಳಲ್ಲಿ ರಾಜ್ಯಾಧಿಕಾರದ ಪಡಿತರಗಳನ್ನು ಗವರ್ನಮೆಂಟು ಸರ್ಕಾರು ಒಪ್ಪಿಸುವದೆಂದು ತೀರ್ಮಾನ ಮಾಡಿದರು. ಅದ್ದರಿಂದ ಅದಕ್ಕೆ ಮುಂಚೆಯೇ ಬಂದವನ್ನು ಹಿಡಿದುಕೊಳ್ಳುವ ಎಲ್ಲಾ ಪಟ್ಟಣಗಳಿಗೂ ಕರೆಯಿಸಿಕೊಂಡು ಹೋಗಿ ಇಲ್ಲಿನ ಸಂಗತಿಗಳಲ್ಲಿ ಅವರಿಗೆ ಚೆನ್ನಾಗಿ ತಿಳಿಯುವಂತೆ ಅವರಿಗೆ ಪ್ರಸಂಗ ಮಾಡುವಲ್ಲಿ ಚೆನ್ನಾಗಿ ತಿಳಿಯುವಂತೆ ಪ್ರಯಾಣಿಕರನ್ನು ಬಿಳ್ಳ ಆ ಕಾಲಕ್ಕೆ ಸುಭದ್ರ ರಾಜ್ಯದಿಂದ ಕರೆಸಿಕೊಂಡು ಹೋಗುವಂತೆ ನಿಶ್ಚಯ ಮಾಡಿದರು. ನಾಳೆ ಡಿಸೆಂಬರ್ ಗುರುವಾರದಿಂದ ಈ ಸರ್ಕಾರು ಪೂರ್ಣವಾದಂತೆ ಪಡೆಯಬೇಕು.

ಬಿಳಿಯರ ಗಾಯಕವಾಡಿ ಮಹಾರಾಜರವರು ಸದ್ಯಕ್ಕೆ ಇಂಗ್ಲೆಂಡ್ ಪ್ರಯಾಣದಲ್ಲಿರುತ್ತಾರೆ. ಅವರು ಬಂದನಂತರ ಪ್ರದರ್ಶನವನ್ನು ನೋಡಿಕೊಂಡು ಅವರಿಗೆ ಹೋಗುವ ದಿನದಲ್ಲಿ ಆ ಪುಸ್ತಕಗಳನ್ನು ನೋಡಿಕೊಂಡು ಕ್ರಿಸ್ಮಸ್ ಸ್ವಯಂ ಸಂಸ್ಥೆಗೆ ಬಾಗಿಲು ತೆರೆದು ಜನರಿಗೆ ವಿವಿಧ ಚಿತ್ರಗಳನ್ನು ತೋರಿಸುವದಲ್ಲದೆ ಅಕ್ಟೋಬರ್ ತಿಂಗಳ ಕೊನೆಗೆ ಹಿಂದಕ್ಕೆ ಬರುವರು ಎಂದು ಕೇಳಿದ್ದೇವೆ. ಬರುವದಕ್ಕೆ ಆಸ್ಟ್ರೇಲಿಯಾ ದ್ವೀಪದ ಪ್ರಸಿದ್ಧ ಸ್ಥಳಗಳನ್ನು ನೋಡಿಕೊಂಡು ಇದ್ದರೆಂಬ ವರ್ತಮಾನ ರುಚಿಸಿತು. ಮಹಾರಾಜರವರು ಪ್ರಸ್ತಾಪಿಸಿದ ಪುಸ್ತಕಗಳನ್ನು ಮುದ್ರಿಸಿಕೊಂಡು ಬರುವರೆಂದೂ ಪ್ರಜೆಗಳಿಗೆ ದೇಶದ ಹಿತಕ್ಕೆ ಸಲ್ಲುವದೆಂದೂ ಸಂಕಲ್ಪ ಮಾಡಿದ್ದಾರಂತೆ—ಸ.

ಒಬ್ಬ ವೈದ್ಯನು ತನ್ನ ದಿವಸ ದರ್ಶನ ಮಾತ್ರೆಗಳನ್ನು ಹಣಗಾರರಿಗೆ ಮಾರಿ ಹಣ ಗಳಿಸಿದನು. ಅದರಲ್ಲಿ ಬಂದ ಹಣದಿಂದ ಒಂದು ಕಟ್ಟಡವನ್ನು ಕಟ್ಟಿಸಿದನು. ಆ ಕಟ್ಟಡಕ್ಕೆ ಒಬ್ಬ ವೈದ್ಯನು ಬಂದು ಅದರ ಉಪಯೋಗವನ್ನು ಕೇಳಿದನು. ಹಿರಿಯನಾಗಿ ಆ ವೈದ್ಯನ ಪಟ್ಟಣದ ಜನರಿಗೆ ಔಷಧಿ ಕೊಡುವದಕ್ಕೆ ಬಂದೆನು ಎಂದನು. ಈ ವೈದ್ಯನು ಕರೆಯಿಸಿ ಕೇಳಲಾಗಿ "ನಾವು ಔಷಧ" ತಾವು ಭಯಪಡಬೇಕು, ಪರರನ್ನು ಬಾಧಿಸದೆಯೇ ವಾಸ ಮಾಡಬೇಕು ಎಂದನು. ಈ ಲೋಕಕ್ಕೆ ಮಂಗಳವನ್ನು ತರುವದಕ್ಕಾಗಿ ಈ ವೈದ್ಯನು ಹೇಳಿದ ಮಾತಿನಂತೆ ಪ್ರಜೆಗಳು ನಡೆದರು. ಆಗಲು ರಾಜನು ತನ್ನ ಸೇವಕರನ್ನು ಕರೆಯಿಸಿ ನಿಂದನೆ ಮಾಡಿದನು. ಆದರೆ ದೇಶದ ಜನರಿಗೆ ಸುಖಕೊಡುವದಕ್ಕೆ ಈ ಬಗೆ ಉಪಯೋಗಿಸುವದು ಅಗತ್ಯವೆಂದು ತಿಳಿಯಿತು.—ಕನ್ನಡ.

## EXTRACTS.

ಆರೋಗ್ಯವನ್ನು ಕಾಪಾಡಿಕೊಳ್ಳುವಬಗ್ಗೆ ಸೂಚನೆಗಳು.

೧. ಕಾಲು ಒದ್ದೆ ಇಟ್ಟುಕೊಂಡು ಮಲಗಬಾರದು.

೨. ತಣ್ಣ (ಥಂಡಿ) ಆಗಿರುವ ಪದಾರ್ಥದ ಮೇಲೆ ಕಾಲನ್ನು ಇಡಬಾರದು.

೩. ಪ್ರಾತಃಕಾಲದಲ್ಲಿ ಖಾಲಿ ಹೊಟ್ಟೆಯಿಂದ ಪ್ರಯಾಣ ಮಾಡಬಾರದು.

೪. ಉಷ್ಣವಾದ ಪದಾರ್ಥಗಳನ್ನು ತಿಂದು, ಕೂಡಲೇ ಹೊರಗೆ ಥಂಡಿಯೊಳಗೆ ಹೋಗಬಾರದು.

೫. ನಿತ್ಯ ಸ್ನಾನ ಮಾಡಬೇಕು, ಇಲ್ಲವಾದರೆ ಮೈ ರೋಮಕೂಪಗಳು ಬಂದಾಗಿ ರೋಗಕ್ಕೆ ಕಾರಣವಾಗುತ್ತದೆ.

೬. ವ್ಯಾಯಾಮ ಮಾಡಿದಮೇಲೆ ಉಷ್ಣವಾದ ಸ್ಥಳದಲ್ಲಿ ತಿರುಗಾಡಬಹುದು, ಮೈ ಬೆವತಿ ಬಿಡುವದು, ಆದರೆ ಒಂದು ಸ್ಥಳದಿಂದ ಥಂಡಿ ಬರುವದಲ್ಲದೇ ಕೂತ್ಕೊಂಡರು, ಇದರಿಂದ ಆರೋಗ್ಯಕ್ಕೂ ಜೀವಕ್ಕೂ ಹಾನಿ ಯುಂಟು.

೭. ಗಂಟಲು ಒಣಗಿ ಧ್ವನಿಯು ಬಿದ್ದಾಗ ಅದು ಸುಧಾರಿಸುವವರೆಗೆ ಮಾತಾಡದಿರುವದು ಉತ್ತಮ; ಕಷ್ಟವನ್ನು ನೋಡಬೇಕು, ಇಲ್ಲದೆ ಒಂದುವೇಳೆ ಧ್ವನಿಯು ಮೂಲಕ ಕೆಟ್ಟು ಹೋಗಬಹುದು, ಅಥವಾ ಯಾವಾಗಲೂ ನ್ಯೂನತೆ ಪಡಬಹುದು.

೮. ಬೆಚ್ಚಗಿನ ಸ್ಥಳದಿಂದ ಹೊರಗೆ ಥಂಡಿಯೊಳಗೆ ಹೋಗುವಾಗ ಬಾಯಿ ಮುಚ್ಚಿಕೊಂಡು ಮೂಗಿನಿಂದ ಶ್ವಾಸವನ್ನು ತೆಗೆದುಕೊಳ್ಳಬೇಕು, ಆಗ ಅದು ಸ್ವಲ್ಪ ಬೆಚ್ಚಗಾಗಿ ಶ್ವಾಸಕೋಶ (ಲ್ಯಂಗ್ಸ್) ಗಳೊಳಗೆ ಹೋಗುತ್ತದೆ.

೯. ಥಂಡಿ ಇದ್ದಲ್ಲಿ ಅವಶ್ಯಕವಿದ್ದರೆ ಬನ್ನು ಸ್ವಲ್ಪ ದೇಹಕ್ಕೆ ಹತ್ತಿರ ಇರುವ ಬಟ್ಟೆಗೆ ಸಾಧಿಸಿಕೊಳ್ಳಬೇಕು. ಆದರೆ ಬಹಳ ಹೊತ್ತು ಹಾಗೆ ಕೂಡದೆ ಒಣಗಿಸಬೇಕು.

ಯಾವದಾದರೂ ಭಾಷೆಯು ವಿದ್ಯೆಗೆ ಉತ್ತಮವಾದ ಗ್ರಂಥಗಳೂ, ಬಹಳ ಗುಣದೋಷಗಳ ವಿಮರ್ಶನ ಮಾಡುವಂತಹ ಪುಸ್ತಕಗಳೂ ಅವಶ್ಯವಾಗಿ ಬೇಕಾಗುತ್ತವೆ. ಅದು ಹೇಗಂದರೆ ಒಂದು ನಿರ್ದಿಷ್ಟ ಮಾಡಿದ ವಿಷಯವನ್ನು ಕುರಿತು ಆ ಸಂದರ್ಭದಲ್ಲಿ ಆ ಪುಸ್ತಕವನ್ನು ಬರೆಯಬೇಕಾದವರ ಗ್ರಂಥವಾಗಿದ್ದರೆ ಅದರಲ್ಲಿ ಗ್ರಂಥಕರ್ತನ ಅಭಿಪ್ರಾಯ ಏನು, ಆ ಗ್ರಂಥದ ಯೋಗ್ಯತೆ ಏನು, ಇದು ಮೊದಲಾದ ಅವಶ್ಯಕವಾದ ಗುಣದೋಷಗಳನ್ನು ತಿಳಿಯಬೇಕಾದರೆ ಒಬ್ಬ ಪಂಡಿತನು ಆ ಗ್ರಂಥವನ್ನು ನಿಷ್ಪಕ್ಷಪಾತವಾಗಿ ಪರೀಕ್ಷಿಸಿ ಆಲೋಚನೆಯನ್ನು ಮಾಡಬೇಕು. ಅವನು ಆ ಪ್ರಸಂಗದಲ್ಲಿ ಗ್ರಂಥಗಳನ್ನು ಟೀಕಿಸುವ ಮಾರ್ಗದಲ್ಲಿ ಅವಶ್ಯಕಗಳಾದ ಗುಣಗಳು ಯಾವುವೆಂದರೆ ಕೆಲವನ್ನು ಬರೆಯುವೆವು. ೧. ಯಾವನು ಆ ಗ್ರಂಥದ ಮೇಲೆ ಟೀಕೆ ಮಾಡುವನೋ ಆ ಗ್ರಂಥದ ಬಗ್ಗೆ ಅವನಿಗೆ ಪೂರ್ಣಜ್ಞಾನವಿರಬೇಕು. ಇದರ ಹೊರತು ಟೀಕಾಕಾರನು ಅನ್ಯ ವಿಷಯಗಳಲ್ಲಿ ಎಷ್ಟೇ ವಿದ್ವಾಂಸನಾಗಿದ್ದಾಗ್ಯೂ ಆದರಿಂದೇನೂ ಫಲವಾಗಲಾರದು, ಯಾಕಂದರೆ, ಯಾವನು ತನಗೆ ಯಾವದೊಂದು ವಿಷಯದ ಬಗ್ಗೆ ಪೂರ್ಣಜ್ಞಾನವಿಲ್ಲದ ಅಂತಹ ವಿಷಯದ ಮೇಲೆ ತನ್ನ ಅಭಿಪ್ರಾಯವನ್ನು ಕೊಡುವದು ಇಷ್ಟವಲ್ಲ, ಆದರೆ ಮನುಷ್ಯ ಮಾತ್ರನ ಸ್ವಭಾವ ಗುಣವೇನೆಂದರೆ, ಅವನಿಗೆ ತನ್ನ ಸ್ವಂತ ಅಜ್ಞಾನತೆ ತಿಳಿಯುವದಿಲ್ಲ. ಇನ್ನೇ ಅಲ್ಲ, ಅವರ ಅಂತಹ ಗ್ರಂಥಗಳ ಮೇಲೆ ಅಭಿಪ್ರಾಯವನ್ನು ಕೊಡಲಿಕ್ಕೆ ತಾನು ಯೋಗ್ಯನಲ್ಲವೆಂಬ ತಿಳುವಳಿಕೆಯು ಸಹ ಅವನಲ್ಲಿ ಉಂಟಾಗುವದಿಲ್ಲ. ಬಹುತರವಾಗಿ ಆತನಿಗೆ ದಿವಸವು ಬಹಳ ಜನರ ತಿಳುವಳಿಕೆಯಲ್ಲಿ ಆ ಸಂಶಿಕೆಯು ಅವನಲ್ಲಿ ನೆಲೆಗೊಂಡಿರುತ್ತದೆ. ಇಂತಹ ಮನುಷ್ಯನು ಅನೇಕ ಹೇಳಬಹುದಾಗಿರುತ್ತದೆ. ಈ ವಿಷಯವಾಗಿ ಬರ್ಕ ಸಾಹೇಬರು ತಮ್ಮ ಗ್ರಂಥದಲ್ಲಿ ಬರೆದಿದ್ದದೇನೆಂದರೆ. "ಕೆಲವು ಜನರಿಗೆ ತಮಗೆ ಯಾವ ವಿಷಯ ತಿಳಿಯುವದಿಲ್ಲವೋ ಅದು ತಮಗೆ ಪೂರ್ಣವಾಗಿ ಗೊತ್ತಿಲ್ಲವೆಂದಿಲ್ಲ" ಇಂತಹ ಟೀಕಾಕಾರರಿಂದ ಅನೇಕ ಪ್ರಮಾದಗಳುಂಟಾಗುವವೆ. ಯಾವನು ಯಾವ ಗ್ರಂಥಗಳ ಗುಣದೋಷಗಳನ್ನು ಅರಿತವನಿಗೆ ಚಿಕ್ಕ ಮನದಕ್ಕೆ ಉಪ್ಪಳ್ಳನ ಗುಣನೋ ಅವನಿಗೆ ಆ ಗ್ರಂಥವು ಪೂರ್ಣವಾಗಿ ಅವಗತವಾದ ಬಗ್ಗೆ ತನ್ನ ಮನದ ನಿಶ್ಚಯವಾದ ನಂತರ ಆ ಕೆಲಸವನ್ನು ಕೈಕೊಂಡರೆ ಆ ಕೆಲಸವು ಚೆನ್ನಾಗಿ ಕೊನೆಗಾಣುವದು. ಅಷ್ಟಸ್ವಲ್ಪ ತಿಳಿದುಕೊಂಡು ಗ್ರಂಥದಮೇಲೆ ಟೀಕೆ ಬರೆಯುವದರಿಂದ ಟೀಕಾಕಾರನು ಅದ ಹಾಸ್ಯಕ್ಕೆ ಒಳಪಡುವದಲ್ಲದೆ ಯಾವದೊಂದು ಉಪಯೋಗವೂ ಆಗಲಾರದು. ೨ನೇ ಗುಣವು—ಸತ್ಯಪ್ರೀತಿ. ಈ ಗುಣವಾದರೂ ಟೀಕಾಕಾರನಲ್ಲಿ ಅವಶ್ಯ ಇರಬೇಕು. ಅದರ ಈ ಗುಣವು ಯಾವತ್ತು ಜನರಲ್ಲಿ ಸಿಕ್ಕುವದು ಪರಮದುರ್ಲಭ. ವಿದ್ವಾಂಸ ಜನರ ಗ್ರಂಥದ ಗುಣದೋಷ ವಿವೇಚನೆ ಮಾಡುವದರ ಕೇವಲ ಸತ್ಯವನ್ನು ಸ್ಥಾಪಿಸ ಬೇಕಷ್ಟು. ಬಹುತರ ಗ್ರಂಥದಮೇಲೆ ಟೀಕೆ ಮಾಡುವ ಜನರು ದ್ವೇಷಬುದ್ಧಿಯಿಂದಲೂ, ಮತ್ಸರದಿಂದಲೂ, ಗ್ರಂಥಕಾರನ ಅವಮಾನ ಮಾಡಬೇಕೆಂಬುವ ಇಚ್ಛೆಯಿಂದಲೂ ಟೀಕೆಯನ್ನು ಮಾಡುತ್ತಾರೆ. ಇದು ಎಷ್ಟುಮಾತ್ರಕ್ಕೂ ಸರಿಯಾದದ್ದಲ್ಲ. ಒಂದುವೇಳೆ ಗ್ರಂಥದಲ್ಲಿ ನಿಜವಾಗಿ ದೋಷಗಳು ಕಂಡುಬಂದರೂ ಈ ದುಷ್ಟ ಮನೋವೃತ್ತಿಯು ಪ್ರೇರಣೆಯಿಂದ ಮಾಡಿದ ಗುಣದೋಷ ವಿವೇಚನೆಗಳು ನ್ಯಾಯವಾಗಿ ಸಿಕ್ಕುವದಿಲ್ಲವು. ನಿರ್ಮಲ ಮನಸ್ಸುಳ್ಳವರು ಇಂತಹ ನೀಚ ವೃತ್ತಿಗೆ ಬೀಳುವ ಕಾಲಕ್ಕೂ ಆಸ್ಪದ ಕೊಡುವದಿಲ್ಲ. ಅದಕಾರಣ ಯಾವದೊಂದು ಗ್ರಂಥದ ಮೇಲೆ ಟೀಕೆ ಮಾಡುವವರು ನ್ಯಾಯಾಧೀಶರಂತೆ ಸತ್ಯ ಪಕ್ಷದ ಸ್ಥಾಪನೆ ತನಗೆ ಉಚಿತ ಕರ್ತವ್ಯವೆನ್ನುವ ಬುದ್ಧಿ ವಿಶ್ವಾಸಪರವಾಗಿ ತನ್ನ ವಿದ್ವತ್ತನ್ನು ತೋರಿಸಬೇಕೆಂದು ಆಶಿಸಿದ ಮಾತಾಗದು.—ಹುಬ್ಬಳ್ಳಿ ಪತ್ರ.

BANGALORE:—Printed and published at the KARNATAKA PRESS, No. 10, HOSPITAL ROAD, CITY—1893.

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning.**

ಪ್ರಕಾಮವಿವಿಧಪ್ರವೃತ್ತ್ಯನಗರಸಾರ್ವ್ವಕರ್ನ್ನಾಟಕಪ್ರಕಾಶನವರಂಭಿದಾಪ್ರಥಿತಶಾಹಿತೀಕೊಬಿತಾ। ನ್ಯಾಗಾಂಕಹಿತವಾಸರೆನಿಹಿತಮುದ್ರಣಾಸಜ್ಜನ್ಯರ್ದ್ದಿಸಾಸುಪರಿಪೊಷಿತಾದಿಕತಿಮಾನಸುನಂಮುದು॥

Vol XX | BANGALORE—MONDAY, OCTOBER 16, 1893. [No 41

ಸಂಪುಟ ೨೦. | ಬೆಂಗಳೂರು:—ಸನ್ ೧೮೯೩ನೇ ಇಸವಿ ಅಕ್ಟೋಬರ್ ೧೬ ನೇ ತಾರೀಖ್ ಸೋಮವಾರ. [ಸಂಚಿಕೆ ೪೧.


## ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

| | ಪೂರ್ವದವರಿಗೆ | ಪರಸ್ಥಳದವರಿಗೆ |
|---|---|---|
| ಸಾಲ್ ೧ಕ್ಕೆ .. .. | 6—0—0 | 8—0—0 |
| 6 ತಿಂಗಳಿಗೆ... | 1—8—0 | 4—? 0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ಸಾಲಿಂಗೆ .. .. | 3—0—0 | 1—0—0 |
| 6 ತಿಂಗಳ ... .. | 1—12—0 | 2—8—0 |

ಈ ಪತ್ರಿಕೆಗೆ ದರವನ್ನು ಕಳಾಹಿದ ತಾರೀಖ್ ಮೊದಲು ಒಂದು ತಿಂಗಳೊಳಗಾಗಿ ಚಂದಾ ಕೊಡಬೇಕು. ಕಳುಹಿಸುವಂತವರಿಗೆ ಮನಿ ಆರ್ಡರ್ ದರದ ಮೇಲೆ ಪತ್ರಿಕೆ ಕಳುಹಿಸಲ್ಪಡುವದು. ಎಂದಿನವರು ಇಂಗ್ಲಿಷ್ ಭಾಗದ ನ್ನಾಗಲಿ ಕನ್ನಡದ ಭಾಗವನ್ನಾಗಲಿ ತಾವು ಎರಡನ್ನಾಗಲಿ ತೆಗೆದುಕೊಳ್ಳಬಹುದು. ಮೂರು ತಿಂಗಳೊಳಗಿನ ದರವಿದ್ದಂಗಿ ಚಂದಾ ಕೊಡಬೇಕು ಅಂಗೀಕರಿಸಲ್ಪಡುವದು.

### ಪ್ರಕಟನೆಯ ದರಾಕು.

ಮೊದಲನೆಯದಿನಾ ಪಙ್ಕ್ತಿ ಒಂದಕ್ಕೆ ೦—೨—೦

ಎರಡನೆಯದಿನಾ ಪಙ್ಕ್ತಿ ಒಂದಕ್ಕೆ ೦—೧—೦

ಷರತು—ಎರಡಾವರ್ತಿಗಿಂತ ಹೆಚ್ಚಾಗಿ ಎಷ್ಟು ಕಡವ ಹಾಯಿಸ್ ಮಾಡಿದಾಗ್ಯೂ ಪಙ್ಕ್ತಿ ಒಂದಕ್ಕೆ ೧ ಆಣೆಯಂತೆ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಹಾಕುವದಕ್ಕಾಗಿ ಬರುವ ಪ್ರಕಟನೆಗಳ ಕಳುಹಿಸುವವರು ಲವ ಎ ಷ್ಟು ವರ್ಕ ಹಾಯಿಸ್ ಮಾಡಬೇಕೆಂದು ಅದರಲ್ಲಿ ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಿದ್ದರೆ ಅವರು ನ ಮಗೆ ನಿಲ್ಲಿಸುವಂತೆ ಬರೆಯುವವರೆಗೆ ಅದು ಪ್ರಕಟಿಸ ಲ್ಪಡುವದು ಹಾಗೆ ಎಷ್ಟು ವರ್ಕ ಪ್ರಕಟಿಸಲ್ಪಟ್ಟಿದ್ದಾಗ್ಯೂ ಮೇಲೆ ಕಂಡ ದರದಂತೆ ಕಿಮ್ಮತ್ ಕೊಡಬೇಕು. ಪ್ರಕಟನೆಯು ಬಗ್ಗೆ ಕಳುಹಿಸುವದಕ್ಕೆ ಪ್ರಕಟನೆಯನ್ನು ಆಯಾ ಕಾಲದಲ್ಲಿ ಮುಂಗಡವಾಗಿ ಕೊಡತಕ್ಕದ್ದು. ಪ್ರಕಟನೆಯನ್ನು ಈ ಪತ್ರಿಕೆಗೆ ಕಳುಹಿಸತಕ್ಕ ಕಾಗದಗಳಲ್ಲಿ ... ವಿಳಾಸ ... ನಾವು ಜವಾಬ್ದಾರರಾಗಲಾರೆವು. ಕ್ರಮವಾಗಿ ರುಜುವಾತು ದಿರುವ ಯಾವ ಕಾಗದವನ್ನು ಪ್ರಕಟಿಸಲಾರೆವು. ನಿರಾ ಕರಿಸಲ್ಪಟ್ಟ ಕಾಗದಗಳು ಮರಳಿ ಕಳುಹಿಸಲ್ಪಡಲಾರವು.


## ADVERTISEMENTS

### NOTICE.

**VAIDYASARA SANGRAHA**

A TREATISE ON THE PRINCIPLES OF

**HINDU MEDICINE**

*Price including Postage Rs 5 0 0*

ವೈದ್ಯಸಾರ ಸಂಗ್ರಹ.

ಈ ಗ್ರಂಥಾಪೇಕ್ಷೆಯುಳ್ಳವರು ಮೊದಲಾಗಿಯೇ ಹಣ ಕಳಿಸಿ ಯಾವ ಕಾಪಿಗಳ ಬೇಕಾದವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ವಿಪಿ ಮೂಲಕ ಇಲ್ಲದ ದರಖಾಸ್ತುಗಳಿಗೆ ಸಹಿ ಕೊಡಲ್ಪಡುವದು.

ಇದರ ಕ್ರಯ—ಬ್ಯಾಕಿಂಗ್ ಮತ್ತು ಅಂಚೇ ಹಾಸಲು, ರೇಟಿಯೊ ಪ್ರತಿ ಒಂದಕ್ಕೆ ರೂ 5—0—0

ಟಿ. ಬಿ. ಸಿಕೆರಾಚಾರ್.

ಬೆಂಗಳೂರ್. ಮಿಷನ್ ಆಸ್ಪತ್ರಿ ರೋಡ್ ೪೮ ನೇನಂಬರ್.

### ನೋಟೀಸ್.

**ಬೆಂಗಳೂರು ಕರ್ಣಾಟಕ್ ಪ್ರೆಸ್.**

೧೮೬೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ ಸಕಲವಿಧ ಕೆಲಸಗಳು ಸುಲಭಬಾಡಿಗೆಗೆ ಶೀಘ್ರವಾಗಿಯೂ ಶ್ಲಾಘ್ಯವಾಗಿಯೂ ಮಾಡಲ್ಪಡುವವು.

ಇದರಲ್ಲಿ ಸಧ್ಯಕ್ಕೆ ಇಂಗ್ಲಿಷ್ ಕನ್ನಡ ಕೆಲಸಗಳು ಮಾತ್ರವೇ ನಡೆಯುತ್ತಿವೆ. ಇತರ ತಪಸೀಲುಗಳನ್ನು ಸದರೀ ಕಾರ್ಖಾನೆಯ ಪ್ರೊಪ್ರೈಟರರಿಗೆ ಬರೆದು ತಿಳಿದುಕೊಳ್ಳಬಹುದು.

### ನೋಟೀಸ್.

ಗಣೇಶ ರಾಮಚಂದ್ರ ಕರ್ಕೆ ಮತ್ತು ಕಂಪೆನಿ. ಕಮಿಷನ್ ಏಜಂಟ್ಸ್.

ಇವರದಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಮಾಣಿಕತೆಯಿಂದ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ತಕ್ಕ ಕಮಿಷನ್ ಪಡೆದ ಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರದ ದಿಪದಗಳು, ಪುಸ್ತಕಗಳು, ಮುತ್ತುಗಳು, ಒಪ್ಪ ಮುತ್ತುಗಳು, ಫಟಿಕಮಣಿಗಳು, ಮಣಿಗಳು, ಟ್ರೈಂಕುಗಳು, ಕಾರ್ಪೆಟ್ ಬಟ್ಟೆಗಳು, ಕಸ್ತೂರಿಗಳು, ಜರತಾರಿ ಕಣಗಳು, ಚಿತ್ರಕಂತ ಬಣ್ಣ ಕನ್ನಡಿಗಳು, ಮುಂತಾದ ಸಕಲ ಪಂಚಲೋಹ ಸಾಮಾನುಗಳು, ಜರತಾರಿ ಟೊಪಿಗಳು, ಔಷಧಿಗಳು, ಪಟಗಳು, ಚಿತ್ರಪಟಗಳು, ಅಂತ್ಯತ್ತಮವಾದ ರತ್ನಗಳು, ಭಂಗಾರದಿಂದ ಕೆತ್ತಲ್ಪಟ್ಟ ಉಂಗುರಗಳು, ಬೆಳ್ಳಿ ಪಾತ್ರೆಗಳು, ಜರ್ಮನ್ ಬೆಳ್ಳಿ ಪಾತ್ರೆಗಳು, ಕೇಸರಿ, ಕಸ್ತೂರಿ ಸುಗಂಧ ದ್ರವ್ಯಗಳು ಮುಂತಾದ ಸಾಮಾನುಗಳು

ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಟಿಕೆಟ್ ಕಳುಹಿಸಿ ಕೊಡಬೇಕು ಜವಾಬ್ ದೊರೆಯುವದು

ವಿಳಾಸ,—ಗಣೇಶ ರಾಮಚಂದ್ರ ಕರ್ಕೆ,
ಮತ್ತು ಕಂಪೆನಿ, ಕಮಿಷನ್ ಏಜಂಟ್ಸ್,
ದಾದರ್ ದ್ವಾರ, ಮಾರ್ಕೆಟ್ ಪೋಸ್ಟ್, ಮುಂಬೈ.

### ನೋಟೀಸ್.

ಕಡದಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ಮಾರಲಿಕ್ಕೆ ಸಿದ್ಧವಾಗಿವೆ. ಬೇಕಾದವರು ಹಣ ಕಳುಹಿಸಿ ತರಿಸಿಕೊಳ್ಳಬಹುದು.

#### ಸಂಸ್ಕೃತ ಗ್ರಂಥಗಳು.

| | ರೂ | ಆ | ಪೈ |
|---|---|---|---|
| ಸಟೀಕಾ ವೈದ್ಯಸಾರ ಸಂಗ್ರಹ | 5 | 0 | 0 |
| ,, ಶಿವಗೀತ | 1 | 0 | 0 |
| ,, ಶಿವಾನಂದಲಹರಿ | 0 | 8 | 0 |
| ,, ಕಾಲಾಮೃತ | 1 | 0 | 0 |
| ,, ಟಿ॥ ವಾಲ್ಮೀಕಿರಾಮಾಯಣ .. | 0 | 2 | 0 |
| ,, ಟಿ॥ ಗೋಪಿಕಾ ಗೀತೆ .. | 0 | 1 | 0 |
| ,, ಟಿ॥ ಪಂಚರತ್ನ (ಸುಭಾಷಿತ) | 0 | 4 | 0 |
| ವಿಷ್ಣುಸಹಸ್ರನಾಮ ಪದ್ಯಾವಳಿ | 0 | 2 | 0 |
| ಸೂರ್ಯಸಹಸ್ರನಾಮ | 0 | 6 | 0 |
| ಕೃಷ್ಣಕರ್ಣಾಮೃತ | 0 | 6 | 0 |
| ಶ್ರೀಕಂಠ ಅಮರ ಮಾಲ | 0 | 6 | 0 |
| ,, ಕಾಂಡ | 0 | 1 | 0 |

#### ಕನ್ನಡ ಗ್ರಂಥಗಳು.

| | ರೂ | ಆ | ಪೈ |
|---|---|---|---|
| ಶತಸಪ್ತತಿ ಅಪ್ಪಲ್ | 2 | 0 | 0 |
| ಪಿಡಿಗಿ ದುಸ್ಸಂ | 1 | 4 | 0 |
| ವೃಷಭೇಂದ್ರವಿಜಯ | 1 | 8 | 0 |
| ಪಂಚಬಾಣ ಬಾಲಲೀಲೆ | 0 | 2 | 0 |
| ಮನಮುಕ್ತಿಲಹರಿ | 0 | 4 | 0 |
| ಕಾಳೀಯಮರ್ದನ | 0 | 2 | 0 |
| ಸುಜನಾನಂದಿನಿಯು | 0 | 2 | 0 |
| ಕರೇಣುಕಾಪರಿಣಯ | 0 | 2 | 6 |
| ಸುದಾಮಚರಿತ್ರೆ | 0 | 1 | 0 |
| ಮೈರಾವಣ ಚರಿತ್ರೆ | 0 | 1 | 6 |
| ಬಾಲಗ್ರಹಚಿಕಿತ್ಸೆ | 1 | 0 | 0 |
| ಮಹಮ್ಮದ್ ಲಾ | 0 | 12 | 0 |
| ಫ್ರಾಂಟಿಯರ್ | 0 | 12 | 0 |


## ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, OCTOBER 16, 1893.

೧೮೯೩ ನೇ ಇಸವಿ ಅಕ್ಟೋಬರ್ ೧೬ನೇ ತಾ॥ ಸೋಮವಾರ

### ಹಿಂದ್ಯದೇಶದ ವೈಸರಾಯಿಯವರ ಮಾಕರರಾತಿ.

ಸರ್ ಹೆನ್ರಿ ನಾರ್ಮನ್‌ರವರು ತಮ್ಮ ವಯಃಪ್ರಯುಕ್ತವಾದ ಶರೀರ ದೌರ್ಬಲ್ಯ ನಿಮಿತ್ತವಂ ಇಂಡ್ಯದೇಶದ ಪರಿಪಾಲನಾಧಿಕಾರವನ್ನಂಗೀಕರಿಸದೆ ನಿರಾಕರಿಸಿದರೆಂದು ಹಿಂದಿನ ಪತ್ರಿಕೆಯಲ್ಲಿ ತಿಳಿಸಿದ್ದೆವಷ್ಟೆ. ಅನಂತರ ಲಾರ್ಡ್ ಲ್ಯಾನ್ಸ್‌ಡೌನ್‌ರವರ ಸ್ಥಾನಾಪನ್ನರಾಗಿ ನಿಯಮಿಸಲ್ಪಡತಕ್ಕವರು ಯಾರಾಗುವರೆಂದು ವ್ಯವಸ್ಥೆಯಾಗದೆ ಅನುಮಾನಾಸ್ಪದವಾಗಿತ್ತು. ಸದರೀ ಅಧಿಕಾರವು ತಮಗೆ ಅವಶ್ಯಕವಿಲ್ಲವೆಂದು ಕೆಲವರು ನಿಷೇಧಿಸಿದರು. ತತ್ಕಾಲದಲ್ಲಿ ಇಂಡ್ಯದೇಶದ ವೈಸರಾಯಿ ಅಧಿಕಾರವು ಕೇವಲ ಪ್ರಾಮುಖ್ಯವಾದುದೆಂಬ ಭಾವವು ಇಂಗ್ಲಾಂಡಿನಲ್ಲಿ ಸಾರ್ವತ್ರಿಕವಾಗಿದ್ದ ಬಂದುದರಿಂದ ಎಲ್ಲರೂ ಒಂದೊಂದು ಕಾರಣದಿಂ ತಮ್ಮ ಅನಿಷ್ಟವಂ ಸೂಚಿಸಿ ತಪ್ಪಿಸಿಕೊಳ್ಳುತಲಿದ್ದರು. ಈಚೆಗೆ ಲಂಡನ್ ಪಟ್ಟಣದಿಂದ ಬಂದ ರೂಟರನ ತಂತಿ ವೃತ್ತಾಂತದ ಮೂಲಕ, ಲಾರ್ಡ್ ಲ್ಯಾನ್ಸ್‌ಡೌನ್‌ರವರಿಗೆ ಪ್ರತ್ಯಪನ್ನರಾಗಿ, ಲಾರ್ಡ್ ಎಲ್ಜಿನ್ ಎಂಬ ರವರು ಇಂಡ್ಯದೇಶದ ವೈಸರಾಯಿ ವ ಗವರ್ನರ್ ಜನರಲ್ಲರಾಗಿ ನಿಯಮಿಸಲ್ಪಟ್ಟಂತೆ ಸರ್ಕಾರೀ ಯಾಗಿ ಘೋಷಿಸಲಾಗಿರುತ್ತದೆಂದು ತಿಳಿಯಲಾದೆ ... ದೊಡ್ಡ ... ಮನುಷ್ಯರ ಹೆಸರು ಇಂಡ್ಯಾದೇಶದವರಿಗೆ ನೂತನವಾದುದಲ್ಲವು. ಇವರ ತಂದೆಗಳಾದ ಲಾರ್ಡ್ ಎಲ್ಜಿನ್‌ರವರು, ೧೮೬೨ ನೇ ಇಸವಿ ಮಾರ್ಚ್ ೧೨ ನೇ ತಾರೀಖಿನಲ್ಲಿ ಅರ್ಲ್ ಆಫ್ ಕ್ಯಾನಿಂಗ್ ರವರಿಗೆ ಬದಲು ವೈಸರಾಯಿಯಾಗಿ ನಿಯಮಿಸಲ್ಪಟ್ಟರು. ಪರಂತು ನಿರ್ವಿವ್ವ ವೃಯವಿ ಷವ್ರದಲ್ಲಿಯೇ ಅಂದರೆ ೧೮೬೩ ನೇ ಇಸವಿ ನವಂಬರ್ ೨೦ ನೇ ತಾರೀಖಿನಲ್ಲಿ ಸಮುದ್ರ ಮಟ್ಟಕ್ಕೆ ೧೩೦ ಅಡಿಗಳ ಎತ್ತರದಲ್ಲಿರುವ ಧರ್ಮಶಾಲಾ ಎಂಬ ಪ್ರದೇಶದೊಳು ಕಾಲಗತಿಯನ್ನೈದಿದರಿಂದ ಎರಡು ಸಂವತ್ಸರಗಳ ಕಾಲ ಸಹ ಪೂರ್ಣವಾಗಿ ಇಲ್ಲಿನ ಅಧಿಕಾರವಂ ನಡಿಸಿರಲಿಲ್ಲವು. ಏತೇನ ಈಗ ನಿಯಮಿತರಾಗಿ ಬರತಕ್ಕ ದೊಡ್ಡಮನುಷ್ಯರು ಹಿಂದೆ ಈ ದೇಶವಂ ಪರಿಪಾಲಿಸಿದವನದ ಮಗನಾಗಿಯೂ ದೊಡ್ಡ ಘರಾಣೆಗೆ ಸೇರಿದಂತವರಾಗಿಯೂ ಇರುತ್ತಾರೆ ಇವರ ತಂದೆಗಳವರು ಆಕ್ಸ್‌ಫರ್ಡ್ ಕಾಲೇಜಿನಲ್ಲಿ ಮಿ॥ ಗ್ಲಾಡ್‌ಸ್ಟನ್, ಲಾರ್ಡ್ ಕ್ಯಾನಿಂಗ್, ಲಾರ್ಡ್ ಡಾಲ್‌ಹೌಸಿ ಮೊದಲಾದ ಪ್ರಮುಖರೊಡನೆ ವಿದ್ಯಾ ಸಂಗ್ರಹಣವಂ ಮಾಡಿ, ಪ್ರಸಿದ್ಧಿಯಂ ಪಡೆದವರಾಗಿದ್ದರು. ಇವರು ತಮ್ಮ ಅಧಿಕಾರ ಕಾಲದಲ್ಲಿ ಉತ್ತರದೇಶ ಸಂಚಾರಾರ್ಥವ ಹೋದ ಸಮಯದೊಳು ಶೀತಾಧಿಕ್ಯದಿಂದ ಹೃದಯ ರೋಗಯುಂಟಾಗಿ ಅಪ್ರತೀಕಾರವಾಗಿ ಪರಿಣಮಿಸಲು ಕಡೆಗೆ ಅದೇ ಇವರ ಶರೀರ ವಿಯೋಗಕ್ಕೆ ನಿಮಿತ್ತಕವಾಯಿತು. ಇವರ ಅಪೇಕ್ಷಾನುಸಾರ ವಿಶೇಷ ನಿಭವಗಳೊಂದೂ ಇಲ್ಲದಂತೆ ಸಾಮಾನ್ಯ ರೀತಿಯಿಂದ ಇವರ ಕಳೇಬರವು ಅಲ್ಲಿಯೇ ಖನನ ಮಾಡಲ್ಪಟ್ಟಿತು. ಲೇಡೀ ಎಲ್ಜಿನ್‌ರವರು, ಪುರಾತನ ವಿಷಯಗಳಲ್ಲಿ ಬಹಳ ವಿಶ್ವಾಸವುಳ್ಳವರಾಗಿದ್ದುದರಿಂದ ನಮ್ಮವರಿಗೆ ಅಶ್ವತ್ಥ ವೃಕ್ಷದಂತೆ, ಡ್ರೂಯಿಡ್ಸ್‌ಗಳೆಂಬ ಪೂರ್ವಕಾಲದವರಿಗೆ ಪೂಜ್ಯವೆನಿಸಿದ್ದ ಓಕ್ ಎಂಬ ಒಂದು ವೃಕ್ಷದ ಮೂಲದಲ್ಲಿ ತಮ್ಮ ಪತಿಯದೇಹವಂ ಪ್ರತಿಷ್ಠಾಪನೆ ಮಾಡಿಸಿದರು. ಇವರ ಪುತ್ರರಾಗಿಯೂ, ಇವರ ವಂಶದಲ್ಲಿ ಒಂಬತ್ತನೆಯ ಅರಲ್ ಎಂಬ ಅಭಿಧಾನವನ್ನು ಪಡೆದಂತವರಾಗಿಯೂ ಇರುವ ಈಗ ನಿಯಮಿತರಾದ ಲಾರ್ಡ್ ಎಲ್ಜಿನ್ ಎಂಬವರು ಹೌಸ್ ಆಫ್ ಲಾರ್ಡ್ಸ್ ಸಮಾಜದವರೊಳ್ವಬ್ಬ ಮೆಂಬರಾಗಿರುತ್ತಾರೆ. ಇವರು ೧೮೪೯ ನೇ ಇಸವಿಯಲ್ಲಿ ಕ್ಯಾನಡಾ ರಾಜ್ಯಕ್ಕೆ ಸೇರಿದ ಮಾಂಟ್ರಿಯಲ್ ಪಟ್ಟಣದಲ್ಲಿ ಜನಿಸಿ ೧೮೭೬ನೇ ಇಸವಿಯಲ್ಲಿ ದೊಡ್ಡ ಘರಾಣೇದಾರರ ಕುಮಾರಿಯಂ ವಿವಾಹ ಮಾಡಿಕೊಂಡರು. ಇವರು ಆಕ್ಸ್‌ಫರ್ಡ್‌ನಲ್ಲಿರುವ ಬಾಲಿಯಲ್ ಕಾಲೇಜಿನಲ್ಲಿ ವಿದ್ಯಾಭ್ಯಾಸವಂ ಮಾಡಿ ೧೮೭೦ನೇ ಇಸವಿಯೊಳು ಬಿ. ಎ. ಪರೀಕ್ಷೆಯನ್ನೂ, ೧೮೭೩ನೇ ಇಸವಿಯೊಳು ಎಂ. ಎ. ಪರೀಕ್ಷೆಯನ್ನೂ ಕೊಟ್ಟು ತೇರ್ಗಡೆಯಾದರು. ಲಾರ್ಡ್ ಎಲ್ಜಿನ್‌ರವರು ೧೮೬೩ನೇ ಇಸವಿಯಲ್ಲಿ ತಮ್ಮ ಪಿತೃಸ್ಥಾನಾಪನ್ನರಾಗಿ ಏರ್ಪಟ್ಟು ಅವರ ಮರ್ಯಾದೆಗಳನ್ನೂ ಆಸ್ತಿಯನ್ನೂ ಕೈಕೊಂಡರು. ಇವರು ೧೮೮೬ನೇ ಇಸವಿಯ ಫೆಬ್ರವರಿ ಮೊದಲುಗೊಂಡು ಆಗಸ್ಟ್ ತಿಂಗಳ ವರೆಗೆ ೬ ತಿಂಗಳ ಕಾಲ ಶ್ರೀಮನ್ಮಹಾರಾಜ್ಞೀಯವರ ಖಾಸ್ ಬೊಕ್ಕಸದ ವಿಚಾರಣಾಧಿಕಾರಿಯಾಗಿಯೂ, ಫ್ರೈಪ್ ಎಂಬ ತುಕಡಿಗೆ ಲಾರ್ಡ್ ಲೆಫ್ಟಿನೆಂಟಾಗಿಯೂ ನಿಯಮಿಸಲ್ಪಟ್ಟಿದ್ದರು. ಈ ದೊಡ್ಡಮನುಷ್ಯರಿಗೆ ಈಗ ೪೪ನೆಯ ವಯಸ್ಸು ಜರುಗುತಲಿರುವದರಿಂದ ಮಧ್ಯವಯಸ್ಕರಾಗಿಯೂ, ದೃಢಾಂಗರಾಗಿಯೂ, ತಾವು ಕೈಕೊಳ್ಳುವದಾಗಿರುವ ಅಧಿಕಾರದ ಜವಾಬ್ದಾರಿಯನ್ನು ವಹಿಸಲಿಕ್ಕೆ ಸಕಲಾಂಶದಲ್ಲೂ ಶಕ್ತರೆನಿಸಿಯೂ ಇರುವಂತೆ ತಿಳಿಯಬರುತಿದೆ. ಪರಂತು ಇವರು ಇಂಡ್ಯದೇಶಕ್ಕೆ ಬಂದು ಇಲ್ಲಿನ ವಾತೋದಕಾದಿಗಳ ಸೇವನಾನಂತರ ಇವರ ಶೀಲಸ್ವಭಾವಗಳು ಇವರ ವರ್ತನೆಗಳಿಂದ ತಿಳಿದು ನಿರ್ಧರಿಸಲ್ಪಡಬೇಕಾಗಿರುತಿದೆ.

### ದೇವಾಲಯಗಳ ಪರಿಷ್ಕರಣವಿಚಾರ.

ಮೈಸೂರ್ ಸೀಮೆಯಲ್ಲಿರುವ ದೇವಾಲಯಗಳ ತಾತ್ಕಾಲಿಕ ಸ್ಥಿತಿ ಪರಿಷ್ಕರಣ ವಿಷಯದೊಳು, ಅವಶ್ಯಕ ಸೂಚನೆಗಳೆಂಬದಾಗಿ ಭಾವಿಸಿ, ಶ್ರೀಮಾನ್ ಗೋಪಾಲಾಚಾರ್ಯರವರು, ಇಂಗ್ಲಿಷ್ ಪತ್ರಿಕೆಗಳ ಮೂಲಕ ಸೂಚಿಸಿದ್ದ ಕೆಲವು ನವೀನ ಏರ್ಪಾಡುಗಳ ಸ್ವರೂಪಗಳಂ ಸಂಗ್ರಹವಾಗಿ ತಿಳಿಸಿ, ಅವುಗಳ ಮೇಲೆ ಸ್ವಾಭಿಪ್ರಾಯವಂ ಮಾಹೇ ಸೆಪ್ಟೆಂಬರ್ ೨ ನೇ ತಾರೀಖಿನ ಈ ಪತ್ರಿಕಾಮೂಲಕ ವ್ಯಕ್ತಪಡಿಸಿದ್ದೆವಷ್ಟೆ. ಸದರೀ ಆಚಾರ್ಯರವರಿಗೆ ನಾವು ಮಾಡಿದ ಆಕ್ಷೇಪಣೆಗಳಿಗೆ ತಕ್ಕ ಸಮಾಧಾನಗಳಂ ಪ್ರತ್ಯಕ್ಷವಾಗಿ ಹೇಳುವದಕ್ಕೆ ಇಷ್ಟವಿಲ್ಲದೆಯೂ, ನಮ್ಮ ಪ್ರಸ್ತಾವನೆಯನ್ನು ತಿದ್ದಲಿಕ್ಕೆ ಅವರ ಮನಸ್ಸೊಪ್ಪದೆಯೂ ಬಹಳ ಖಿನ್ನರಾಗಿ ಮಾಹೇ ಮಜಕೂರು ೯ ನೇ ತಾರೀಖುಳ್ಳ ಹಿಂದೇಶದ ಸ್ಪೆಕ್ಟೇಟರ್ ಬ

ಶ್ರೀಕೆಗೆ ಅದೇ ವಿಷಯಂ ಕುರಿತು ಮತ್ತಷ್ಟು ವಿವರಣರೂಪವಾಗಿ ಇನ್ನೊಂದು ಲೇಖನವಂ ಬರೆದು ಕಳುಹಿಸಿರುತ್ತಾರೆ. ಸದರೀ ಲೇಖನದ ಅಂತ್ಯಭಾಗದಲ್ಲಿ, ತಮ್ಮ ಕಾಗದದೊಳು ನಮೂದಿಸಲ್ಪಟ್ಟಿದ್ದ ಅನೇಕ ವಿಷಯಗಳನ್ನು ನಾವು ಮರೆಮಾಚಿ, ನಮಗೆ ಯುಕ್ತವೆಂದುತೋರಿದ ಭಾಗವನ್ನು ಮಾತ್ರ ಪ್ರಕಟಿಸಿದೆವೆಂತಲೂ, ತಮ್ಮ ಲೇಖನವನ್ನಾಮೂಲಾಗ್ರ ಭಾಷಾಂತರದಿಂ ಪ್ರಕಟಿಸಿ ಬಳಿಕ ನಾವು ಇಷ್ಟಬಂದಂತೆ ಆಕ್ಷೇಪಿಸಿದ್ದರೆ ಚೆನ್ನಾಗಿರುರುವದೆಂತಲೂ, ಬರೆದಿರುತ್ತಾರೆ. ಶ್ರೀಮಾನ್ ಎ. ಗೋಪಾಲಾಚಾರ್ಯರವರ ಲೇಖನವನ್ನಾಮೂಲಾಗ್ರ ಪ್ರಕಟಿಸಲಿಕ್ಕೆ ಈ ಪತ್ರಿಕೆಯಲ್ಲಿ ಅವಕಾಶವು ಪರಿಮಿತವಾಗಿರುವದರಿಂದ ಅವರ ಯಾವದಭಿಪ್ರಾಯಗಳಂ ಸಂಗ್ರಹಿಸಿ ಅವರ ಅಪೇಕ್ಷಿತಾಂಶಗಳನ್ನು ಪರಿಮಿತ ಶಬ್ದಗಳಿಂದ ತಿಳಿಯಪಡಿಸಿದೆವು. ನಮ್ಮ ಉಭಯರ ಲೇಖನಗಳನ್ನಾರಾದರೂ ಸಹನೆಯೊಡನೆ ಓದಿರುವ ಪಕ್ಷಕ್ಕೆ ಸದರೀ ಆಚಾರ್ಯರವರ ಅಭಿಪ್ರಾಯಗಳೆಲ್ಲವು ಸ್ಪಷ್ಟಗೊಳಿಸಲ್ಪಟ್ಟಿವೆಯೋ ಇಲ್ಲವೋ ಎಂಬದು ವ್ಯಕ್ತವಾಗದೆ ಹೋಗಲಾರದು. ಶ್ರೀಮಾನ್ ಗೋಪಾಲಾಚಾರ್ಯರವರು ಪ್ರಥಮತಃ ತಿಳಿಸಿದ ಅಭಿಪ್ರಾಯಗಳನ್ನೇ ರೂಪಾಂತರದಿಂ ಮರಳಿ ಸೂಚಿಸಿ, ಸಮರ್ಥಿಸಲೆತ್ನಿಸುತ್ತಾರೆಂತೆಂದರೆ,—

ಈಗ ಇರತಕ್ಕ ದೇವಸ್ಥಾನಗಳ ನೌಕರರೆಲ್ಲರನ್ನು ತೆಗೆದುಹಾಕಬೇಕೆಂಬದು ತಮ್ಮ ತಾತ್ಪರ್ಯವಲ್ಲವೆಂತಲೂ, ಪರಂತು ಅವರನ್ನುತಿದ್ದಿ, ದಂಡಿಸಿ, ಬೋಧಿಸಿ, ಪರಿಷ್ಕರಿಸಬೇಕೆಂಬದುತಮ್ಮ ಅಪೇಕ್ಷೆಯೆಂತಲೂ, ತಾವು ತಿಳಿಸುವಂತವುಗಳಲ್ಲಿ ಒಂದಾದರೂ, ಶಾಸ್ತ್ರವಿರುದ್ಧವಾಗಿಯಾಗಲಿ ಶಿಷ್ಟಾಚಾರ ವ್ಯತಿರಿಕ್ತವಾಗಿಯಾಗಲಿ ಇರಲಾರದೆಂತಲೂ, ತಾವು ತಿಳಿಸಿರುವವೆಲ್ಲವು ಆಗಮೋಕ್ತಗಳೆಂತಲೂ, ಅವುಗಳಲ್ಲಿ ವಿವರಿಸಿರುವ ಸ್ಥಿತಿಗೆ ದೇವಾಲಯಗಳಂತರಬೇಕಾದ್ದು ಆವಶ್ಯಕವೆಂತಲೂ, ಆಚಾರ್ಯರವರು ತಿಳಿಸುತ್ತಾರೆ. ಅರ್ಚಕರನ್ನು ತಿದ್ದಬೇಕಾದವರ್ಯಾರು? ಇವರು ದಂಡಿಸಬೇಕಾದ ಬಗೆ ಹ್ಯಾಗೆ? ಬೋಧಿಸತಕ್ಕ ವಿಷಯಗಳ್ಯಾವವು? ಐಚ್ಛಿಕಗಳೆಂದು ಹೇಳುವ ಪವಿತ್ರೋತ್ಸವ, ಶ್ರದ್ಧೋತ್ಸವ, ನೈಮಿತ್ತಿಕೋತ್ಸವಾದಿಗಳೆಲ್ಲವಂ ನಿಲ್ಲಿಸಿ ತನ್ಮೂಲಕ ಉಳಿಯಬಹುದಾದ ದ್ರವ್ಯವನ್ನು ವಿದ್ಯಾಭಿವೃದ್ಧಿಯ ಬಗ್ಯೆ ವಿನಿಯೋಗಿಸಬೇಕೆಂಬದಾಗಿ ಮೇರೆ ಕಂಡವರು ತಾತ್ಪರ್ಯ ಪಡುತ್ತಾರೆ. ಇದು ಕೇಳಿದ ಕೂಡಲೇ ಮುಸಲ್ಮಾನರ ನ್ಯಾಯವೊಂದು ನಮ್ಮ ಜ್ಞಾಪಕದೊಳು ಬರುತಿದೇನದರೆ, "ಜೋಡನ್ನುಮಾರಿ ಪಗಡಿ ಕೊಳ್ಳಬೇಕು, ಪಗಡಿಯನ್ನು ಮಾರಿ ತುಪ್ಪಕೊಳ್ಳಬೇಕೆಂಬದು" ಇಂಡ್ಯಾ ದೇಶದಲ್ಲಿ ಅಸಂಖ್ಯಾತಗಳಾದ ಮತಗಳೇರ್ಪಟ್ಟು ಅವುಗಳು ಭಿನ್ನಾಚಾರ ವ್ಯವಹಾರಗಳುಳ್ಳವಾಗಿವೆಯೆಂಬದಂ ಹಿಂದೆಯೇ ತಿಳಿಸಿದೇವೆಯಷ್ಟೆ. ಯಾವ ದೇವಸ್ಥಾನದ ಧನವನ್ನು ಯಾವ ಮತದವರ ವಿದ್ಯಾಭಿವೃದ್ಧಿಗಾಗಿ ವಿನಿಯೋಗಿಸಬೇಕೋ ನಮಗೆ ತಿಳಿಯರಿಲ್ಲವು. ಮಸಲಾ ನಂಜುಂಡೇಶ್ವರ ದೇವಸ್ಥಾನದಲ್ಲಿ ಉಳಿಸಲ್ಪಡುವ ಧನವನ್ನು ಮಧ್ವಮತಸ್ಥರ ವಿದ್ಯಾಭ್ಯಾಸಕ್ಕೂ, ಮೇಲುಕೋಟೆ ದೇವಸ್ಥಾನದ ಧನವನ್ನು ಲಿಂಗಬಣಜಿಗರ ವಿದ್ಯಾಭಿವೃದ್ಧಿಗಾಗಿಯೂ, ವಿನಿಯೋಗಿಸಿದರೆ ಏನೂ ಆಕ್ಷೇಪಣೆ ಯಿಲ್ಲವಷ್ಟೆ? ಸಕಲವಿಧ ವಿಲಕ್ಷಣ ಕ್ರಮಗಳಂ ನಡೆಗೊಳಿಸಿ ಪರೀಕ್ಷಿಸಿ ಅದರ ಫಲವಂ ಲೋಕಕ್ಕೆ ತಿಳಿಸಲಿಕ್ಕೆ ಸಾಧಕವಾಗಿ, ಸ್ವಂತ ಭಾಜನಮಾತ್ರದೊಳು ಒಂದು ದೇವಾಲಯವನ್ನು ನಿಜಗೃಹದಂತೆ ಇಟ್ಟುಕೊಂಡಿರುವ, ಶ್ರೀಮಾನ್ ಗೋಪಾಲಾಚಾರ್ಯರವರು, ಮತವಿಷಯಕವಾದ ಜ್ಞಾನವನ್ನೆಷ್ಟು ಮಟ್ಟಿಗೆ ಸ್ವಮತಸ್ಥರಿಗೆ ಕಲ್ಪಿಸಿದರು? ಬುದ್ಧಾಲಯಗಳಂತೆ ಯಾವವಿಧ ಉತ್ಸವಗಳನ್ನೂ ನಡೆಸದೆ ಮಿಗಿಲಿಸಿರುವ ದ್ರವ್ಯವನ್ನವರಿದುವರೆಗೆ ಯಾರ ಹಿತಂಕರಣಾರ್ಥ ಎಷ್ಟು ವಿನಿಯೋಗಿಸಿದಾರೆ? ತಮ್ಮ ತಾಬೆಯಲ್ಲಿರುತಲಿರುವ ಅರ್ಚಕಪರಿಚಾರಕರನ್ನೆಷ್ಟರಮಟ್ಟಿಗೆ ತಿದ್ದಿ ದಂಡಿಸಿ, ಅವರಿಗೆ ಯಾವಯಾವ ವಿಷಯಗಳಂ ಬೋಧಿಸಿದಾರೆಯೋ ತಿಳಿಯರಿಲ್ಲವು. ಆಗಮೋಕ್ತ ಪ್ರಕಾರವಾಗಿ ದೇವಸ್ಥಾನದ ಅರ್ಚಕನು, ಮಂತ್ರಶಾಸ್ತ್ರಜ್ಞನಾಗಿಯೂ, ಕಲ್ಪಪ್ರಯೋಗವೇತ್ತನಾಗಿಯೂ, ಅರಿಷಡ್ವರ್ಗಗಳಂ ಜೈಸಿದಂತವನಾಗಿಯೂ, ಉದಾರನಾಗಿಯೂ, ನಿರ್ಮಲ ಚಿತ್ತನಾಗಿಯೂ, ಹಿಂಸೆ, ಅನೃತಾದಿದೋಷವರ್ಜಿತನಾಗಿಯೂ, ಊರ್ಧ್ವರೇತಸ್ಕನಾಗಿಯೂ, ಉಪಶಾಂತನಾಗಿಯೂ, ಸಕಲ ಶುಭಗುಣಾಲಂಕೃತನಾಗಿಯೂ ಮೋಕ್ಷಮಾರ್ಗ ಪ್ರದರ್ಶಕನಾಗಿಯೂ ಇರಬೇಕೆಂದು ತಿಳಿಸಿ, ಇದಕ್ಕೆ ಆಧಾರವಾಗಿ ವೈಖಾನಸ ಸಂಗ್ರಹದಲ್ಲಿ ಭೃಗು ಮಹರ್ಷಿ ಪ್ರೋಕ್ತಗಳಾದ ವಚನಗಳನ್ನುದಹರಿಸಿರುತ್ತಾರೆ. ಶ್ರೀಮಾನ್ ಗೋಪಾಲಾಚಾರ್ಯರವರು ತಮ್ಮ ಬಾಲ್ಯ ನಾಶಕ್ತಿಯಿಂದೇರ್ಪಡಿಸಿದಂತೆ, ಗುಣಾಢ್ಯರಾದ ಅರ್ಚಕ ಪರಿಚಾರಕರೆಷ್ಟು ಜನ ದೊರೆಯುವರೋ, ಅವರು ಎಷ್ಟುಮಂದಿಯನ್ನು ಮಹಾರಾಜಾ ಸರ್ಕಾರಕ್ಕೆ ಒದಗಿಸಿಕೊಡಲು ಶಕ್ತರಾಗಿದಾರೆಯೋ ತಿಳಿಯಲಿಲ್ಲವು. ಪೂಜ್ಯರೆನ್ನಿಸಿಕೊಳ್ಳಬೇಕೆಂಬ ಮಠಾಧಿಪತಿಗಳಲ್ಲಿ ಸಹ ಮೇಲೆ ತಿಳಿಸಲ್ಪಟ್ಟ ಗುಣಗಳುಳ್ಳವರು ಪ್ರಾಯೇಣ ದುರ್ಲಭರಾಗಿರುವದರಿಂದ ಆಚಾರ್ಯರವರ ಅಭಿಪ್ರಾಯಾನುಸಾರ, ಶ್ರೀಶೃಂಗೇರಿ, ಪರಕಾಲ, ಉತ್ತರಾದಿ, ವ್ಯಾಸರಾಯಸ್ವಾಮಿಗಳು ಮೊದಲಾದವರೆಲ್ಲರು ತಿದ್ದಿ ದಂಡಿಸಬೇಕಾದದ್ದು ಕೇವಲ ಅಪೇಕ್ಷಿತಾಂಶವಲ್ಲವೆ? ಈ ಶಕ್ತಿಯು ಸದರೀ ಆಚಾರ್ಯರೊಬ್ಬರಿಗೆ ವಿನಾ ಅನ್ಯರಿಗೆ ಸಾಧ್ಯವಾಗಲಾರದು. ಅನೇಕ ಸ್ಮೃತಿ ಪುರಾಣಗ್ರಂಥಗಳಲ್ಲಿ ಆಶ್ರಮಚತುಷ್ಟಯ ಧರ್ಮಗಳು ವಿಸ್ತಾರವಾಗಿ ತಿಳಿಸಲ್ಪಟ್ಟಿವೆ. ಅಂತಾ ಆಪ್ರಮಾಸಿದ್ಧಗಳಾದ ಆಚಾರಗಳನ್ನನುಸರಿಸುವವರು ಎಷ್ಟುಮಂದಿ ದೊರೆಯಬಹುದು. ಈಗ ಯತಿಗೆ ವಾಹನಾರೋಹಣವು ಅಶಾಸ್ತ್ರೀಯವು, ಈಗಿನ ಮಠಾಧಿಪತಿಗಳು ಅದಂ ಪರಿಗ್ರಹಿಸಿದಾರೆ. ಆದುದರಿಂದ ಅವರನ್ನು ಇತಃಪರ ಪಾಲಖಿಯಲ್ಲಿ ಕುಳಿತುಕೊಳ್ಳಕೂಡದೆಂದು ಶಿಕ್ಷಿಸಬೇಕಷ್ಟೆ. ಅದೇ ರೀತಿ ಗೃಹಸ್ಥನು ಆಹಿತಾಗ್ನಿಯಾಗಿ ಅತಿಥಿ ಸತ್ಕಾರಗಳಂ ಮಾಡಬೇಕಾದ್ದು ಮುಖ್ಯ ಧರ್ಮವು. ಗಾರ್ಹಸ್ಥ್ಯವಂ ವಹಿಸಿರುವಂತಾ ಆಚಾರ್ಯರವರು ಸ್ವತಃ ಸ್ವಾತ್ರ್ಯದ ಧರ್ಮರಕ್ಷಕರಾಗಿದಾರೆಯೆ? ಇಲ್ಲದ ಪಕ್ಷಕ್ಕೆ ಇದಕ್ಕೆ ಪ್ರತಿಕ್ರಿಯೆ ಯೇನು ಮಾಡತಕ್ಕದ್ದು? ಅರ್ಚಕರು ಇಂಗ್ಲಿಷ್ ಭಾಷಾಜ್ಞಾನವಂ ಪಡೆಯುವದರಿಂದ ಬಾಧಕವೇನೂ ಕಾಣಿಸಲಿಲ್ಲವೆಂತಲೂ, ನಾಸ್ತಿಕಜ್ಞಾನ ಪ್ರಚುರವಾದ ಈ ಕಾಲದಲ್ಲಿ ಅದಂ ಸ್ವಲ್ಪಮಟ್ಟಿಗೆ ತಡೆಯಲಿಕ್ಕೆ ಸಾಧಕವಾಗುವದೆಂತಲೂ, ಆಚಾರ್ಯರು ಭಾವಿಸುತ್ತಾರೆ. ಇಂಗ್ಲಿಷ್ ಬಾಲಶಿಕ್ಷೆಯನ್ನು ಪೂರೈಸಿದ ಒಬ್ಬ ಬಾಲಕನು ಗುಡಿಯಲ್ಲಿ ಘಂಟೆಬಾರಿಸುವ ಕೆಲಸಕ್ಕೆ ಒಪ್ಪಿ ಬರುವ ಕಾಲಬಂತೆ! ಅರ್ಚಕತ್ವವೂ, ಪುರೋಹಿತ್ಯವೂ ಶ್ಲಾಘ್ಯಗಳಾದ ವೃತ್ತಿಗಳಾಗುವಪಕ್ಷಕ್ಕೆ ಅವಂ ಪಂಡಿತರ್ಯಾಕೆ ನಿಂದಿಸುತ್ತಾರೆ? ಅಪಕಾರಣ ಅರ್ಚಕತ್ವ ಸತ್ರಗಳ ಪಾರುಪತ್ಯ ಗ್ರಾಮ ಪುರೋಹಿತ್ಯ ಮೊದಲಾದ ಕೆಲವು ಉದ್ಯೋಗಗಳಂ ವಿವೇಕಿಗಳು ಅಂಗೀಕರಿಸಲಾರದು. ದಾಯಾದಿ ಮಾತ್ಸರ್ಯದೊಡನೆ ನವನಂದರು, ಚಂದ್ರಗುಪ್ತನಿಗೆ ಬೇರೆ ಅಧಿಕಾರಗಳಂ ಕೊಡದೆ, ನೀಚವೆಂದೆಣಿಸಿ ಸತ್ರದ ಪಾರುಪತ್ಯವು ಕೊಟ್ಟದ್ದು ಪ್ರಸಿದ್ಧ ವಿಷಯವಾಗಿದೆ. ಆಚಾರ್ಯರು ಪರಿಭಾವಿಸುವಷ್ಟರ ಯೋಗ್ಯತೆಗಳು ಅರ್ಚಕರಲ್ಲಿರುವಪಕ್ಷಕ್ಕೆ ಅವರೇತಕ್ಕೆ ಬ್ರಾಹ್ಮಣಸಮೂಹಗಳಲ್ಲಿ ವಿಶೇಷತಃ ಸನ್ಮಾನಿತರಾಗುವದಿಲ್ಲವು? ತಿಪಿಥ್ವಿಜರನ್ನು ಪತಿತರಬೇತಕ್ಕೆ ವ್ಯಾಪ್ಯಭಾವದಿಂ ಕಾಣಬೇಕು? ಮುಖ್ಯವಾಗಿ ಇಂಗ್ಲಿಷ್ ಕಲಿತುಕೊಂಡು ಜೀವನೋಪಾಯವಂ ಸಂಪಾದಿಸಿಕೊಳ್ಳಲಿಕ್ಕೆ ಶಕ್ತಿಯುಳ್ಳವರು, ಘಂಟೆ ಬಾರಿಸಿಕೊಂಡು ಬಲ್ಯನ್ನಶೇಷಕ್ಕೆ ಕೈಗಳಂ ನೀಡಿಕೊಂಡು ಧರ್ಮದರ್ಶಿಗಳ ಕಟಾಕ್ಷವೀಕ್ಷಣೆಗೆ ನಿರೀಕ್ಷಿಸಿಕೊಂಡಿರಬೇಕೆ? ಹಿಂದುವೇಳೆ ಅರ್ಚಕರು ಇಂಗ್ಲಿಷ್ ಬಲ್ಲವರಾಗಿರಬೇಕೆಂಬದು ಆವಶ್ಯಕವೆಂದು ಆಚಾರ್ಯರವರು ಭಾವಿಸುವ ಪಕ್ಷಕ್ಕೆ ಅನ್ನ, ಮುಂದಿರದಲ್ಲಿರುವ ಈಗಿನ ಅರ್ಚಕರನ್ನು ತೆಗೆದುಹಾಕಿ ಸದರೀ ಕೆಲಸಕ್ಕೆ ಒಬ್ಬ ಗ್ರಾಜ್ಯುಯೇಟ ಆವಶ್ಯಕವೆಂದು ಪ್ರಕಟಿಸುವರಾದರೆ, ಆಗ ಅವಕ್ಕೆ ಎಷ್ಟುಮಂದಿ ದರಖಾಸ್ತುಗಳನ್ನು ಕಳುಹಿಸುವರೋ ಅದಂ ನೋಡಿ ನಿಶ್ಚೈಸಿಕೊಳ್ಳಬಹುದಾಗಿರುತದೆ. ಅರ್ಚಕರು ಘಂಟೆ ಬಾರಿಸುವದು ಪ್ರಾರಂಭ ಮಾಡಿದಾಗಲ್ಲ ಸಹ [illegible] ಸಂಘರ್ಷಾಲವೃದಿ ಹಾಗಿರುವುದು, ಅದರ [illegible] ರೆಗಳಿಗೆ ಬೀಳುವ [illegible] ನಿಂತುಹೆ [illegible] ಅದರಿಂದ ನ್ಯಾಯಾಲಂತರವಲ್ಲದಿರು [illegible] ಇಂಗ್ಲಿಷ್ ಬಲ್ಲ [illegible], ಸರ್ಕಾರಿ ಉದ್ಯೋಗಗಳನ್ನು [illegible], ಪ್ರಕಟಿಸಿ, ಸೂಚಿಸಿದ್ದಲ್ಲಿ [illegible] ಯಲ್ಲಿರುವ ಅರ್ಚಕರ ಶಾಖೆಗಳನ್ನು [illegible] ಸಂಗ್ರಹಿಸುವ ಪಕ್ಷಕ್ಕೆ, [illegible] ಅವರಿಗೆ ಪ್ರಯೋಜನವೆಂದು [illegible] ವಿವಿಧಾನ್ನ [illegible] ಪದಾರ್ಥ ನಿವೇದನ [illegible] ಬಲಿ ನಿಲ್ಲಿಸಿ, ಅನ್ಯಗಳಿಗೆ [illegible] ಪಡಿತರನ್ನು ತರಿಸಿ ನಿವೇದನಮಾಡಬಹುದು. [illegible] ಮಾಡಿದ್ದನ್ನು [illegible] ಪತ್ರಿಕೆಗಳನ್ನಾಗಲಿ [illegible] ಕವೆಂದು ಬಾವಿಸಿ [illegible] ಗಿ ಬೇಕಾದಾಗ ಪ್ರೂಫ್ ಮಾಡಿಕೊಳ್ಳಬಹುದೆಂದು ನಿಬುದನೆ ನಾಕಬಹುದು? ಮುಖ್ಯವಾಗಿ ಹಿಂದು ವಿಷಯವು ಪ್ರಕಟವಾದಮೇಲೆ ಸಹವೂ ಪತ್ರಿಕೆಗಳಿಸಿ ಈಗ ಎಲ್ಲವೂ ಅನ್ಯರತ್ವಗಳಾಗಿ ಪ್ರಣಮಿಸುವವರಲ್ಲೀನ ಸಂಶಯವಿಲ್ಲವು. ಆಲಯ ನಿರ್ಮಾಣ ನಿಯಮವು ಕುರಿತು ವಿಚಾರ ಮಾಡುತ ಶ್ರೀಮಾನ್ ಗೋಪಾಲಾಚಾರ್ಯರವರು, ತಿಳಿಸುತ್ತಾರೇನಂದರೆ—ಆರ್ಯಾವರ್ತದ ಶಿಲ್ಪದೊಳು ೩೦ ಬಗೆ ಆಲಯಗಳಿದ್ದಂತೆ ಸ್ಪಷ್ಟವಾಗುತಿದೆ, ಅವುಗಳಾವವೆಂದರೆ—ಮೇರು, ಮಂದರ, ಕೈಲಾಸ, ವಿಮಾನ, ನಂದನ, ಸಮುದ್ರ, ಪದ್ಮ, ಗರುಡ, ನಂದಿನಿ, ವರ್ಧನ, ಕುಂಜರ, ಗುಹರಾಜ, ವೃಷ, ಹಂಸ, ಸ್ವಸ್ತಿಕಾದವು, [illegible] ಮತ್ಸ್ಯಪುರಾಣದಲ್ಲಿಯು ಮಯಮುನಿವಿರಚಿತವಾದ ಶಿಲ್ಪಶಾಸ್ತ್ರದಲ್ಲಿಯು ಆಲಯನಿರ್ಮಾಣ ಕ್ರಮಗಳು ಬಹಳವಾಗಿ ತಿಳಿಸಲ್ಪಟ್ಟಿರುತವೆ. ಅವುಗಳಂತೆ ಈಗಿನ ದೇವಾಲಯಗಳಲ್ಲಿರುವ ಅವ್ಯವಸ್ಥೆಗಳುಳ್ಳ ಭಾಗಗಳನ್ನು ಬದಲಾಯಿಸಬೇಕೆಂಬದು ಆಚಾರ್ಯರ ಅಪೇಕ್ಷೆಯು. ಶಿಲ್ಪಶಾಸ್ತ್ರಜ್ಞರಾದ ಶ್ರೀಪಾದಾಚಾರ್ಯರವರು ತಮ್ಮ ಮುಂದಿನ ನಿರ್ಮಾಣಕಾಂಡದಲ್ಲಿ ಮೇಲೆ ತಿಳಿಸಲ್ಪಟ್ಟ ಆಕಾರಗಳುಳ್ಳ ಆಲಯಗಳ ಸ್ಥಿತಿ [illegible] ಹಿಂದನ್ನು ತಮ್ಮ ಮಾಸ್ತ್ರಿಗಳಿಗೆ ತಿಳಿಸಲಿಕ್ಕೆ ಇತಕ್ಕೆ ಮರೆತುಹೋದರೆ ತಿಳಿಯಲಿಲ್ಲವಲ್ಲ! ಅಥವಾ ನೂತನವಾಗಿ ಒಂದು ಸಾಧಾರಣವಾದ ಕಟ್ಟಡ ಕಟ್ಟಿಸುವ [illegible] ನ್ನು ಪೂರ್ವೋಪಾತ್ತ ಶಾಸ್ತ್ರೀಯ ಕಟ್ಟಿಸಿ, ತಾಜ್‌ಮಹಲ್ ಮೊದಲಾದ ಪ್ರಸಿದ್ಧ ಕಟ್ಟಡಗಳಂತೆ ಲೋಕಕ್ಕೆ ಒಂದು ನಿದರ್ಶನಪ್ರಾಯವಾಗಿಮಾಡಿದ್ದ ಪಕ್ಷಕ್ಕೆ ಅವರ ಬುದ್ಧಿಶಕ್ತಿಗೆ ಬಹಳ ಗೌರವವು ಬಾರದಿರುವುದಿಲ್ಲವೆ! ಅವರು ಯಾವ ಕಾರಣದಿಂದಲೋ ಆ ರೀತಿ ಮಾಡದೆ ಹೋದರೋ ಅವರನ್ನೇ ಕೇಳುವೆವು? ಇತರ ಪರಿಷ್ಕರಣಗಳಿಗಿಂತಲೂ ದೇವಾಲಯ ಪರಿಷ್ಕರಣವು ಕೇವಲ ಪ್ರಧಾನವಾದುದೆಂತಲೂ 'ಅದೇ ಲೋಕಕ್ಕೆ ಮಹತ್ಪ್ರಯೋಜನವನ್ನೀಯುವತಕ್ಕದ್ದೆಂತಲೂ ತಿಳಿಸಿ, ಗವರ್ನಮೆಂಟಿನವರನ್ನು ತೀಕ್ಷ್ಣಗಳಾದ ಶಬ್ದಶರಘಾತದಿಂ ಬೆಚ್ಚರಿಸಿ, ಭವಿಷ್ಯತ್ಫಲಗಳನ್ನು ತಮ್ಮ ಯೋಗದೃಷ್ಟಿಯಿಂದ ನೋಡಿ ನಿಶ್ಚೈಸಿ ತಿಳಿಸಿರುತ್ತಾರೆ. ಅವಿವೇಕ ಯೋಗಮಾರ್ಗಪ್ರದರ್ಶಕಗಸ್ವರಾದ ಆಚಾರ್ಯರವರ ಶ್ರೀಸೂಕ್ತಿಗಳನ್ನೆಲ್ಲರೂ ಭಕ್ತಿಗೌರವದೊಡನೆ ಕೇಳಿ ಪದ್ಧತಿ ಅನುಸರಿಸುವ ಪಕ್ಷಕ್ಕೆ, ಹಿಂದೂ ದೇವಾಲಯಗಳು ಹಿಂದೆ ನಾವು ತಿಳಿಸಿದ ಪ್ರಕಾರ ಪರಿಷ್ಕಾರವಾಗಿ ರೂಪಾಂತರಗಳನ್ನೈದುವದಲ್ಲದೆ ಬಹುಕಾಲಾನಂತರ ಪ್ರಾಪ್ತವಾಗಬಹುದಾದ ಮಂಗಳಂ ತೀವ್ರವಾಗಿಯೇ ಪಡೆದು ಜನರೆಲ್ಲರೂ ಆನಂದಿಸಬಹುದು.

## ನೋಟಿಸ್.

ಈ ಪತ್ರಿಕೆಯ ಚಂದಾದಾರರ ಪೈಕಿ ಬಾಕೀದಾರರಾದವರೆಲ್ಲ ಅವರವರ ಬಾಕೀ ತಪ್ಸೀಲ ನಿಃ ಕಳೆದ ತಿಂಗಳಲ್ಲಿ ನಾವು ಪೋ ಕಾರ್ಡುಗಳಿಗೆ ಜವಾಬ್ ಕೊಡದೆಯೂ ಬಾಕೀಗಳನು ಕಳುಹಿಸದೆಯೂ ಇರುವಂತವರುಗಳ್ಲ ಈ ವಾರದ ಮೊದಲು ಪತ್ರಿಕೆಯು ಮನ್ನಾ ಮಾಡಲ್ಪಟ್ಟಿರುವದೆ. ಬಾಕೀಗಳನು ಕಳುಹಿಸಿ ಪುನಃ ಪತ್ರಿಕೆಯನ್ನಪೇಕ್ಷಿಸುವಂತವರಿಗೆ ಪುನಃ ರವಾನಿಸಲ್ಪಡುವವು.

೧೬—೧೦—೯೩ ಪ್ರೊಪ್ರೈಟರ್

## LOCAL AND PROVINCIAL NEWS

ಸ್ಥಳದೇಶಿಕ ಮತ್ತು ತಾಲ್ಲೂಕ ಸಮಾಚಾರಗಳು

ಈ ಸಂಸ್ಥಾನದ ಪ್ರಧಾನ ರೆಸಿಡೆಂಟರಾದ ಕರ್ನಲ್ ಪಿ. ಡಿ. ಹೆಂಡರ್ಸನ್ ಸಾಹೇಬರವರು ದಸರಾ ಉತ್ಸವದಬಗ್ಗೆ ಬರುವ ಬುಧವಾರದಿನ ಮೈಸೂರಿಗೆ ಪ್ರಯಾಣ ಮಾಡುವರೆಂದು ಕೇಳುತ್ತೇವೆ.

ಈ ಸಂಸ್ಥಾನದ ದಿವಾನರಾದ ಸರ್ ಕೆ. ಶೇಷಾದ್ರಿ ಅಯ್ಯರವರು ಮೂರ ತಿಂಗಳ ರಜಾಮೇಲೆ ಹೋಗಿರುವುದರಿಂದ [illegible] ಸದರೀ ದಿವಾನರವರು ಏಕಾಏಕಿ ನಿನ್ನೆಯ ದಿನ ಬೆಳಗ್ಗೆ ಊಟಿಯಿಂದ ಬಂದು [illegible] ಮೈಸೂರಿಗೆ ಪ್ರಯಾಣಮಾಡಿದರೆಂದು ತಿಳಿಯಲಾದೆವು.

ಈಚೆಗೆ ಇಲ್ಲಿನ ಮ್ಯೂಜಿಯಂ ಅಂದರೆ ವಿವಿಧ ವಸ್ತು ಪ್ರದರ್ಶನ ಶಾಲೆಯಲ್ಲಿ ಪ್ರತಿ ಸೋಮವಾರದಿನ ಮಹಮ್ಮದೀಯರ ಹೆಂಗಸರು ಯಾರನ್ನು ಬಿಡದೆ ಹೆಂಗಸರುಮಾತ್ರ ಹೋಗಿ ನೋಡುವದಕ್ಕೆ ಅವಕಾಶ ಪ್ರಯತ್ನ ಮಾಡಲ್ಪಟ್ಟಿರುವಂತೆ ಕೇಳುತ್ತೇವೆ. ಇದು ಒಳ್ಳೆಯ ಏರ್ಪಾಡೆ.

ದಸರಾ ಪ್ರಯುಕ್ತ ಬಗ್ಗೆ ಕೊಡಲ್ಪಟ್ಟ ರಜಾ ಕಳೆದ ಶನಿವಾರದಿನ ಪ್ರಾರಂಭವಾಯಿತು. ಈ ತಿಂಗಳ ೨೯ನೇ ತಾರೀಖ್ ವರೆಗೆ ಈ ಸಂಸ್ಥಾನದ ಪಬ್ಲಿಕ್ ಆಫೀಸುಗಳೂ ಮುಚ್ಚಲ್ಪಟ್ಟಿದ್ದು ೩೦ನೇ ತಾರೀಖ್ ಸೋಮವಾರದಿನ ಆಯಾ ಆಫೀಸುಗಳಲ್ಲಿ ಮರಳಿ ಕೆಲಸಕ್ಕೆ ಪ್ರಾರಂಭವಾಗುವುದು.

ದಸರಾ ಉತ್ಸವದಬಗ್ಗೆ ಪರೋತ್ತಮರಾದ ಆಸಾಮಿಗಳು ಮೈಸೂರಿಗೆ ಕಳೆದ ಶನಿವಾರ ಮತ್ತು ಆದಿತ್ಯವಾರಗಳಲ್ಲಿ ರಾಜಧಾನಿಗೆ ಹೊರಟು ಹೋದರು. ತಾಲ್ಲೂಕುಗಳ ಪ್ರತಿಯಿಂದ ಬರುವ ಜನರು ಸದರೀ ಉತ್ಸವದರ್ಶನಾರ್ಥ ಮೈಸೂರಿಗೆ ಹೋಗುತಲಿದಾರೆ. ಪ್ರತಿದಿನದಲ್ಲೂ ಅಯಿದಾರು ತಡವೆ ಇಲ್ಲಿಂದ ಮೈಸೂರಿಗೆ ಗಾಡಿಗಳು ಬಿಡಲ್ಪಡುತಲಿವೆ, ಆದಾಗ್ಯೂ ಅನೇಕರಿಗೆ ಟಿಕೆಟುಗಳು ಸಿಕ್ಕದೆಯೂ, ಗಾಡಿಗಳಲ್ಲಿ ಸ್ಥಳ ಸಿಕ್ಕದೆಯೂ ವಾಪಸ್ ಬಂದು ಮರುದಿನ ಪ್ರಯಾಣ ಮಾಡುತ್ತಾರೆ. ಈ ಜನರು ಮೈಸೂರಲ್ಲಿ ಅನುಭವಿಸಬಹುದಾದ ಸುಖದುಃಖಗಳಿಗೆ ಅವರೇ ಸಾಕ್ಷಿಯಾಗಿರುವರು.

ಈ ಪ್ರಾಂತ ಧರ್ಮಾಂಬುಧಿ ಕೆರೆಯ ನೀರು ಪ್ರಾಯಶಃ ಇಲ್ಲಿನ ನಿವಾಸಿಗಳಿಗೆ ಪ್ರಾಣಾಧಾರವಾದುದೆಂಬುದು ಪ್ರಸಿದ್ಧ ವಿಷಯವಾಗಿರುತಿದೆ. ದೈವಯೋಗದಿಂದಲೂ ಪ್ರಜೆಗಳ ಭಾಗ್ಯವಿಶೇಷದಿಂದಲೂ ಈಚೆಗೆ ಆದ ವರ್ಷದ ದೆಸೆಯಿಂದ ಸದರೀ ಕೆರೆಗೆ ನಾಲ್ಕಾರು ತಿಂಗಳಿಗೆ ಆಗುವಷ್ಟು ನೀರು ಬಂದು ಪ್ರಜೆಗಳು ಉತ್ಸಾಹದೊಡನೆ ಅದನ್ನುಪಯೋಗಿಸುತಿರುವಲ್ಲಿ ಈಚೆಗೆ ಮೂರು ನಾಲ್ಕು ದಿನಗಳ ಮೊದಲು ಸದರೀ ನೀರಿನಲ್ಲಿ ಒಂದು ದುರ್ವಾಸನೆ ಹುಟ್ಟಿ ಪಾನಕ್ಕೆ ಅನರ್ಹವಾಗಿರುತಿದೆ. ಈ ದುರ್ವಾಸನೆಯು ಕೆರೆಯ ನೀರಿನಲ್ಲುಂಟಾದದ್ದೋ, ಅಥವಾ ಕಾರಂಜಿಗಳಲ್ಲಿ ಹುಟ್ಟಿದ್ದೋ ಎಂಬದಂ ನಿಷ್ಕರ್ಷಿಸತಕ್ಕಬಗ್ಗೆ ಮ್ಯುನಿಸಿಪಾಲಿಟಿಯವರು ಕಾರಂಜಿಗಳಂ ಕೋ

ಸುತಲಿದಾರೆ. ಇದರಂತೆಯೇ ಕೆರೆಯ ನೀರೊಳಗೆ ತುಂಬಿಕೊಂಡಿರುವ ಜಂಬು ವಗೈರೆ ಕಸ್ಕಲಗಳಂ ತೆಗದುಹಾಕಿಸುವದಲ್ಲದೆ ಜನರು ಕೆರೆಯೊಳಗೆ ಇಳಿದು ನೀರು ತುಂಬಿಕೊಂಡು ಹೋಗುವದಕ್ಕೆ ಮಾರ್ಗವಿಲ್ಲದೆ ಬೆಳೆದಿರುವ ಹುಲ್ಲು ಕೀಳಿಸಿ ಪಾಕ್ ಮಾಡಿಸಿದರೆ ಪ್ರಜೆಗಳಿಗೆ ಬಹಳ ಅನುಕೂಲವಾಗಿರುವುದು.

ಈ ತಿಂಗಳ ೭ನೇ ತಾರೀಖಿಗೆ ಖೈದಾದ ವಾರದಬಾಬತು ಸರ್ಕಾರೀ ಕಾಲಸ್ಥಿತಿ ರಿಪೋರ್ಟಿನಿಂದಲೂ ನಮ್ಮ ಬಾತಮೀದಾರರ ಕಾಗದಗಳ ಮೂಲಕವಾಗಿಯೂ ತಿಳಿಯಬರುವದೇನಂದರೆ:—

ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ವಿಶಿಷ್ಟ ತಾಲ್ಲೂಕುಗಳಲ್ಲಿ ನಾಲ್ಕು ಅಂಗುಳದ ಮೊದಲ್ಗೊಂಡು ಎಂಟು ಅಂಗುಳದ ವರೆಗೂ, ಕೋಲಾರ ಡಿಸ್ಟ್ರಿಕ್ಟಿನಲ್ಲಿ ಒಂದರ ಮೊದಲು ನಾಲ್ಕು ವರೆ ಅಂಗುಳದ ವರೆಗೂ, ತುಮಕೂರು ಡಿಸ್ಟ್ರಿಕ್ಟಿನಲ್ಲಿ ಸುಮಾರು ಎರಡು ಮೊದಲು ಏಳು ಅಂಗುಳದ ವರೆಗೂ, ಬಲವಾದ ವರ್ಷವಾಗುತಿದೆ. ಮೈಸೂರು ಡಿಸ್ಟ್ರಿಕ್ಟಿನ ಶ್ರೀರಂಗಪಟ್ಟಣ, ಯಡತೊರೆ, ಹೆಗ್ಗಡದೇವನಕೋಟೆ, ಗುಂಡ್ಲುಪೇಟೆ ತಿರುಮಕೂಡ್ಲು ನರಸೀಪುರ, ಮಂಡ್ಯ, ನಾಗಮಂಗಲ, ಈ ತಾಲ್ಲೂಕುಗಳಲ್ಲಿ ಒಂದೂವರೆ ಮೊದಲು ಆರಂಗುಳದ ವರೆಗೂ ಮಳೆ ಆಗಿರುತ್ತೆ. ಹಾಸನ ಡಿಸ್ಟ್ರಿಕ್ಟಿನ ರಿಪೋರ್ಟು ಇನ್ನೂ ಬಂದಿರುವದಿಲ್ಲ. ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಒಂದು ಗುಳ ಮೊದಲು ನಾಲ್ಕಂಗುಳದ ವರೆಗೆ ಮಳೆ ಬಿದ್ದಿರುತ್ತೆ. ಕಡೂರು ಡಿಸ್ಟ್ರಿಕ್ಟಿನ ಚಿಕ್ಕಮಗಳೂರು, ಕಡೂರು, ಕೊಪ್ಪ, ಮೂಡಗೆರೆ, ಈ ನಾಲ್ಕು ತಾಲ್ಲೂಕುಗಳಲ್ಲಿ ಮಾತ್ರ ಒಂದರಿಂದ ನಾಲ್ಕೂವರೆ ಅಂಗುಳದ ವರೆಗೂ, ಚಿತ್ರದುರ್ಗ ಡಿಸ್ಟ್ರಿಕ್ಟಿನ ಪ್ರತಿ ತಾಲ್ಲೂಕಿನಲ್ಲೂ ಒಂದೂವರೆ ಮೊದಲು ಸುಮಾರು ಆರಂಗುಳದ ವರೆಗೂ ವರ್ಷವಾಗಿರುತ್ತೆ. ಈ ತಿಂಗಳ ೯ನೇ ತಾರೀಖು ಮೊದಲು ಈ ದಿನದ ವರೆಗೆ ಅನೇಕ ಪ್ರದೇಶಗಳೊಳು ಪ್ರತಿದಿನವೂ ಬಲವಾದ ವರ್ಷ ಬೀಳುತಲಿರುವಂತೆ ಬಾತಮೀದಾರರ ರಿಪೋರ್ಟಿನ ಮೂಲಕ ತಿಳಿಯಬರುತಲಿದೆ. ದೊಡ್ಡ ಕೆರೆಗಳಿಗೆ ಅನು ತಿಂಗಳಿಗೆ ಕಡಮೆ ಇಲ್ಲದೆ ನೀರು ಬಂದಿರುವದಲ್ಲದೆ ಸಣ್ಣ ಕೆರೆಗಳು ತುಂಬಿ ಕೋಡಿ ಹೋಗುತಲಿರುವಂತ ತಿಳಿಯಲಾದೆವು. ಏತೇನ ಈ ಸಂವತ್ಸರದಲ್ಲಿ ಮಳೆಯು ತಾ ಅಪೇಕ್ಷಿತವಾಗಿ ಬಂದಾಗ್ಯೂ ಸಮೃದ್ಧವಾಗಿ ಬಂದಿರುವದಕ್ಕೆ ಸಂಶಯವಿಲ್ಲವು. ಈಗ್ಗೆ ಸುಮಾರು ೨೦ ದಿನಗಳ ಮೊದಲು ಪ್ರಾರಂಭಿಸಿ ಎಡನೆಬಿಡದೆ ಇಲ್ಲವೆಂದು ಹೇಳಬೇಕಾಗಿರುತ್ತೆ. ಮುಂದೆಯೂ ಉಚಿತಕಾಲಗಳಲ್ಲಿ ವರ್ಷ ಬೀಳುತ ಬಂದರೆ ದೇಶದೊಳು ಸುಭಿಕ್ಷತೆಗೆ ಕೊರತೆ ಯುಂಟಾಗಲಾರದು. ರೋಗಾದ್ಯುಪದ್ರವಗಳೇನೂ ಇಲ್ಲವು.

ಈ ತಿಂಗಳ ೫ನೇ ತಾರೀಖು ಗುರುವಾರದ ದಿನ ರಾತ್ರಿ, ಸೊರಬ ತಾಲ್ಲೂಕಿನಿಂದ ಪ್ರಜಾಪ್ರತಿನಿಧಿ ಸಭೆಗೆ ಮೆಂಬರಾಗಿ ಚುನಾಯಿಸಲ್ಪಟ್ಟಿರುವ ಒಬ್ಬ ಮೆಂಬರು ಸಂಸ್ಥಾನ ಸಮೀಪದ ರಾಜಧಾನಿಯಾದ ಮೈಸೂರು ರೈಲ್ವೇ ಸ್ಟೇಷನಿನ ಬಳಿಯ ತಮ್ಮ ಸಾಮಾನುಗಳನ್ನು ಒಂದು ಗಾಡಿಯೊಳಕ್ಕೆ ಹಾಕುವಷ್ಟರೊಳಗಾಗಿ ಮಳೆಯು ವಿಪರೀತವಾಗಿ ಸುರಿಯುವದಕ್ಕಾರಂಭವಾಯಿತು. ಹಾಗೆಯೇ ಮಳೆಯಲ್ಲಿ ನೆನೆದುಕೊಂಡು ಸಮೀಪದಲ್ಲಿದ್ದ ನಂಜರಾಜ ಬಹದ್ದೂರರ ಛತ್ರಕ್ಕೆ ಹೋದರು. ಅಲ್ಲಿ ಇಳಿದುಕೊಳ್ಳುವದಕ್ಕೆ ಪ್ರಯತ್ನ ಮಾಡುವಷ್ಟರೊಳಗಾಗಿ ನಾಲ್ಕಾರು ಮಂದಿ ಪಲ್ಲೀ ಜವಾನರು ಒಳಗಿನಿಂದಬಂದು ಯಾವದ್ಯಾವ ಸಾಮಾನು ಇಲ್ಲಿ ಇಡಕೂಡದು, ಇಲ್ಲಿ ಸ್ಥಳವಿಲ್ಲ, ಹೊರಟುಹೋಗಿ ಯೆಂಬದಾಗಿ ಗದರಿಸಿದರು. ಮೆಂಬರು ಆಗ ಯಾಕಪ್ಪ ಇದು ಧರ್ಮಛತ್ರವಲ್ಲವೆ? ಮಳೆಸುರಿಯುತಲಿದೆಯಲ್ಲ, ಬೇರೆಯೋಗುವದಕ್ಕೂ ಗಾಢಾಂಧಕಾರದ ಕಡೆದು ಮಾರ್ಗವೇ ಕಾಣುವದಿಲ್ಲ. ಇದೊಂದು ರಾತ್ರಿ ಒಂದು ಕೊಠಡಿಯಲ್ಲಿ ಸಾಮಾನು ಇಟ್ಟುಕೊಂಡು ಇದ್ದು ನಾಳೇ ಬೆಳಗ್ಗೆ ಇನ್ನೆಲ್ಲಾದರೂ ಬೇರೆ ಸ್ಥಳ ನೋಡಿಕೊಂಡು ಹೋಗುತ್ತೇವೆ. ನಾವೂ ಸರ್ಕಾರದವರು ಕರೆಯಿಸಿರುವದರಿಂದಲೇ ೩೦೦ ಮೈಲಿ ದೂರದಲ್ಲಿರುವ ನಮ್ಮ ಊರು ಬಿಟ್ಟು ಇಷ್ಟು ದೂರ ಬಂದಿದ್ದೇವೆ ಒಂದು ರಾತ್ರಿಗೆ ಮಾತ್ರ ಹ್ಯಾಗಾದರೂ ಸ್ವಲ್ಪ ಸ್ಥಳಕೊಡಿ, ಎಂದು ಹೇಳುವ ಕೂಡಲೆ, ಜವಾನರು ಅವರ ಸಾಮಾನುಗಳನ್ನು ಒಳಗಿನಿಂದ ಆಚೆಗೆ ಹಾಕಿ ಹೊರಗೆ ಹೋಗಿ, ಅದೆಲ್ಲಾ ನಮಗೆ ತಿಳಿಯದು, ಇಲ್ಲಿಗೆ ಗವರ್ನಮೆಂಟು ಉದ್ಯೋಗಸ್ಥರು ಬಂದು ಇಳುಕೊಳ್ಳುವದಕ್ಕೆ ಏರ್ಪಾಡು ಮಾಡಿ ಯಾರನ್ನೂ ಬಿಡದ ಹಾಗೆ ನಮಗೆ ಸರ್ಕಾರದವರೇ ತಾಕೀತು ಮಾಡಿದಾರೆ. ಎಷ್ಟುಮಾತ್ರಕ್ಕೂ ನಿಮಗಿಲ್ಲಿ ಸ್ಥಳ ದೊರೆಯುವದಿಲ್ಲವೆಂದು ಖಂಡಿತವಾಗಿ ಹೇಳಿದರು. ಆ ಮೆಂಬರು ರಾತ್ರಿಯಲ್ಲಾ ಆ ಕೈಸಾಲೆಯಲ್ಲಿ ತಮ್ಮ ಸಾಮಾನನ್ನು ಕಾದುಕೊಂಡು ನಿದ್ದೆ ಮಾಡದೆ ಕೂತಿದ್ದು ಬೆಳಗಾಗುತಲೆ ಒಬ್ಬ ಅಧಿಕಾರಿಯ ಬಳಿಗೆ ಹೋಗಿ ಏನು ಸ್ವಾಮಿ, ನೀವು ಜವಾನರಿಗೆ ಹುಕುಂ ಕೊಟ್ಟಿರಾ? ದೇಶಾಂತರದ ಅಧಿಕಾರಿಗಳಿಗೂ ಧರ್ಮಛತ್ರಗಳಿಗೂ ಸಂಬಂಧವೇನು? ಪರಸ್ಥಳದಿಂದ ಅನಾಥರು ಇಲ್ಲಿ ಬಂದರೆ ಛತ್ರವಿಲ್ಲದೆ ಅವರಿಗೆ ಇಳುಕೊಳ್ಳುವದಕ್ಕೆ ಸ್ಥಳ ಕೊಡದಿದ್ದರೆ, ಅವರ ಪಾಡೇನಾಗಬೇಕು? ದಯವಿಟ್ಟು ಜವಾನರಿಗೆ ನಮ್ಮನ್ನು ತಡೆ ಮಾಡದ ಹಾಗೆ ಅಪ್ಪಣೆ ಕೊಡಿಸಿ, ಎಂಬದಾಗಿ ಕೇಳಿದರು ಆಗ ಆ ಅಧಿಕಾರಿಗಳು ನಾವೇನುಮಾಡೋಣ, ಉದ್ಯೋಗಸ್ಥರು ದಸರಾಕ್ಕೆ ಇಲ್ಲಿಗೆ ಬಂದರೆ ಅವರಿಗೆ ಇಳುಕೊಳ್ಳುವದಕ್ಕೆ ಆ ಛತ್ರವನ್ನು ಹಿಡಿಸಿರಬೇಕೆಂದು ಮೇಲಿನ ಅಪ್ಪಣೆಯಾಗಿದೆ. ನೀವು ಇನ್ನೆಲ್ಲಾದರೂ ಸ್ಥಳ ನೋಡಿಕೊಳ್ಳಬೇಕು. ನಾನು ಜವಾನರಿಗೆ ಅಪ್ಪಣೆ ಕೊಡುವದಕ್ಕಾಗುವದಿಲ್ಲ ಎಂದು ಜವಾಬು ಕೊಟ್ಟರು. ಅನಂತರ ಆ ಮೆಂಬರು ಈ ಸಂಗತಿಗಳನ್ನೆಲ್ಲಾ ರಾಜಧಾನಿಯ ಪ್ರತಿನಿಧಿಗಳಲ್ಲಿ ಕೆಲವರಿಗೆ ತಿಳಿಸಿದರಂತೆ. ಅವರು—ಒಳ್ಳೇದು, ಹೀಗೆ ಮಾಡೋಣ, ಹಾಗೆ ಮಾಡೋಣ, ಇರಲಿ ಎಂಬದಾಗಿ ಅವರಿಗೆ ಹೇಳಿ ಸಮಾಧಾನ ಪಡಿಸಿದರು. —ಪ್ರ. ಪ.

## THE MYSORE GAZETTE.

### ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜರವರ ಸರಕಾರದ ಪ್ರಕಾರ
ದಿಂದ ಹೊರಟಿರುವ ಪ್ರಕಟನೆಗಳು.

ನಂ ೬೭೭೨—L. F. ೩೧೧—೯೨—ಚಿಕ್ಕಬಳ್ಳಾಪುರ ತಾಲ್ಲೂಕ್ ಶೇಖ್ದಾರ್ ಮ|| ರಾ|| ಸುಬ್ಬಾರಾಯರವರು ಕೋಲಾರ್ ಕಸಬಾ ಶೇಕ್ದಾರ್ ಫಂಡ್ ಹೋಲ್ಡರ ಇನಾಂದಾರ್ ಮೆಂಬರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ನಂ|| ೨೨೭ ತಾ|| ೨ನೇ ಅಕ್ಟೋಬರ್ ೧೮೯೩—ದೇವನಹಳ್ಳಿ ಕಸಬೆಯಲ್ಲಿರುವ ಮುಜರಾಯಿ ವಿಚಾರಣೆಗೊಳಪಟ್ಟ ದೇವಸ್ಥಾನಗಳಿಗೆ ಕಸಬಾ ಶೇಕದಾರ ಪ್ರೆಸಿಡೆಂಟ್ ಈ ಕೆಳಗೆ ನಮೂದಿಸುವವರು ಧರ್ಮದರ್ಶಿಗಳಾಗಿ ನೇಮಿಸಲ್ಪಟ್ಟಿರುತ್ತಾರೆ.

ಮೆ||

೧ ಸುಂಕದ ಶ್ರೀನಿವಾಸರಾಯರು.
೨ ಪಟೇಲ ತಿಮ್ಮಯ್ಯನವರು.
೩. ಶಾನಭೋಗ ರಾಮಚಂದ್ರಪ್ಪನವರು.
೪. ಜೋಯಿಸ ನಾರಣಾಚಾರ್ಯರು.
೫ ಇಲ್ಲತೋಟೆ ಚೆನ್ನಪ್ಪನವರು.
೬. ಶ್ರೀನಿವಾಸ ಗೋಪಾಲಾಚಾರ್ಯರು.

## CORRESPONDENCE

[ ಇದರ ಕೆಳಗೆ ಪ್ರಕಟಿಸಲ್ಪಟ್ಟಿರುವ ಲೇಖನದಲ್ಲಿ ಕಂಡ ಅಭಿಪ್ರಾಯಗಳ ಗುಣದೋಷಗಳಿಗೆ ಪತ್ರಿಕಾಲೇಖಕರು ಜವಾಬ್ದಾರರಲ್ಲವು. ಎಡಿಟರ ಕ. ಪ್ರ.]

ಮ|| ರಾ|| ಕರ್ಣಾಟಕ ಪ್ರಕಾಶಿಕಾ ಎಡಿಟರವರ ಸ|| ಕ್ಕೆ.

ದುರಾಚಾರೋಪಿ ಸರ್ವಾಶೀ ಕೃತಘ್ನೋ ನಾಸ್ತಿಕಃ ಪುರಾ ।
ಸಮಾಶ್ರಯೇದಾದಿದೇವಂ ಶ್ರದ್ಧಯಾ ಶರಣಂ ಯದಿ ।
ನಿರ್ದೋಷಂ ವಿದ್ಧಿ ತಂ ಜಂತುಂ ಪ್ರಭಾವಾತ್ ಪರಮಾತ್ಮನಃ ।
ಮಹೋಪನಿಷತ್ತಿ ವಾಕ್ಯಾರ್ಥಮಿದಮ್ ।

ಆಶ್ವಯುಜತೆ,—ಕಳೆದ ಆಗಸ್ಟು ತಿಂಗಳ ೧೬ ನೇ ತಾರೀಖಿನಲ್ಲಿ ನಾನು ಬರೆದ ಒಂದು ಲೇಖನವನ್ನು ತಮ್ಮ ಪತ್ರಿಕಾ ಮೂಲಕ ಪ್ರಕಟಿಸಿ ನಮ್ಮ ಸಮುದಾಯಕ್ಕೆ ಈಗ ಉಂಟಾಗಿರುವ ದುರ್ದೆಶೆಯಂ ಹೋಗಲಾಡಿಸಬೇಕೆಂಬ ಅನುರಾಗದೊಡನೆ ಮಾಡಿದಸಹಾಯಕ್ಕಾಗಿ ನಾನೂ ನಮ್ಮ ಜನರೂ ಬಹಳ ಕೃತಜ್ಞರಾಗಿದ್ದೇವೆ. ಆರ್ತರಕ್ಷಕನಾದ ಭಗವಂತನು ಸಕಲ ಪ್ರಾಣಿಕೋಟಿಯನ್ನೂ ಆಪತ್ಕಾಲದಲ್ಲಿ ರಕ್ಷಿಸಲಿಕ್ಕೆ ಸನ್ನದ್ಧನಾಗಿರುವನೆಂಬುವದಕ್ಕೆ ಗಜೇಂದ್ರನು, ಪ್ರಹ್ಲಾದನು, ಮೊದಲಾದ ಭಾಗವತೋತ್ತಮರ ಕಥಾವೃತ್ತಾಂತಗಳೇ ನಿದರ್ಶನಗಳಾಗಿರುವವು. ಇದು ದೀರ್ಘಕಾಲಿಕವಾದುದರಿಂದ ಪ್ರತ್ಯಕ್ಷ ಪ್ರಮಾಣವಾದಿಗಳಿಗೆ ಇವುಗಳಲ್ಲಿ ವಿಶ್ವಾಸ ಕಡಿಮೆಯಾಗಿ ಸಂಶಯ ಜನಿಸಬಹುದು, ಪರಂತು ಬೇರೆಯೊಂದು ಆಧುನಿಕ ನಿದರ್ಶನದಿಂದ ಶ್ರೀಹರಿಯು ಆಶ್ರಿತರಕ್ಷಕನೆಂಬುದು ತೋರಿಸಿ ಅನುಸಂಧಾನಮಾಡುವೆನು. ಸ್ತ್ರೀನ ಉಪಾಸಿವಾಸಿಗಳಾದ ಗುಹಾಜನರನ್ನು ಶಿರೋವಿತ-ಬರಾಥ ಸನ್ಮಾರ್ಗಪ್ರವರ್ತಕರಂತೆ ಪ್ರವರ್ತಿಸಿ ಪರಂತು ಬಾಲ್ಯಾದಿ ಮಾರ್ಗಸಿದ್ಧ ಎವರ್ನರಾದ ಕೆಲವರು ಸಭೆ ಸೇರಿ ಇಂಡಿಯಾ ದೇಶದ ವೈಸ್‌ರಾಯರವರಿಗೂ ಮದರಾಸು ಗವರ್ನರಿಗೂ ಬಿನ್ನಪ ಪೂರ್ವಕವಾದ ಸತ್ಕಾರಗಳು ನಡೆಸಲ್ಪಡಬೇಕಾದ ಸಂದರ್ಭಗಳಲ್ಲಿ ತಾದೃಶ ಸಭಾಪ್ರವೇಶಾಧಿಕಾರವು ಈಚೆಗೆ ಕೆಲವರಿಂದ ಭಾವಿಸಲ್ಪಟ್ಟಿರುವ ನಮ್ಮನ್ನು ಅಲ್ಲಿನ ಕರೆಯಿಸಕೂಡದೆಂತಲೂ, ಹಾಗೆ ನಾವು ಹೋಗುವ ಸಂದರ್ಭದಲ್ಲಿ ಸಕಲರ ಮಧ್ಯದಾದ ದೇವಕಂಡ ಪ್ರಭುಗಳು ತಾವು ಬರುವದಿಲ್ಲವೆಂದು ನಿರಾಕರಿಸುವದರ ಮೂಲಕ ತಮ್ಮ ಪ್ರಯತ್ನೋದ್ದೇಶಗಳಿಗೆ ಸಹಾಯಕರಾಗಬೇಕೆಂತಲೂ ಪ್ರಾರ್ಥಿಸಿ ವಿಜ್ಞಾಪನ ಪತ್ರಿಕೆಗಳನ್ನು ಬಹುಜನಾಭಿಪ್ರಾಯಸೂಚಕವಾದುದೆಂಬ ಭ್ರಾಂತಿ ಕಲ್ಪಿತಗಳಾದ ರುಜುಗಳೊಡನೆ ವೈಸ್‌ರಾಯರವರಿಗೂ ಮದರಾಸು ಗವರ್ನರವರಿಗೂ ಕಳುಹಿಸಿದ್ದರು. ಏತನ್ಮಾತ್ರದಿಂದಲೇ ನಮ್ಮ ಬಾಳ್ವಿಕೆಯು ಭಂಗನಷ್ಟವಾಗಿ, ನಮ್ಮ ಕುಲವು ನಿರ್ನಾಮವಾಗಿ ನಮ್ಮ ವೃತ್ತಿಯು ಪ್ರತಿಬಂಧವನ್ನೈದುವದೆಂದು ಭಾವಿಸಿ, ಎಲ್ಲರೂ ಸಮರಸನ್ನದ್ಧರಾಗಿರುತಲಿದ್ದರು. ನಾವು ಕೋಪ ನಮಗೇನೋ ಪ್ರಳಯಕಾಲವು ಸನ್ನಿಹಿತವಾಯಿತೆಂದು ಘೋರವಾಗಿ ಆಪನ್ನಿವಾರಕನಾದ ಶ್ರೀ ಹರಿಯೇ ಗತಿಯೆಂದು ಅವನ ಧ್ಯಾನಿಸುತಲಿದ್ದೆವು. ಪೀಳಿಗೆರುವದರಲ್ಲಿ ನಮ್ಮ ಭಯವು ನಿವೃತ್ತಿಯಾಗಿ ನಮ್ಮ ಸ್ಥಿತಿಯು ಸ್ವತಂತ್ರವಾಗುತ, ರಾಜಸತ್ಕೃತಿಯೆಂಬ ಗೌರವಕ್ಕೆ ಲೋಪವಿಲ್ಲದಂತೆ, ಘನವನ್ನೈದಿದ ವೈಸ್‌ರಾಯಿ ಯವರೂ, ಲಾರ್ಡ್ ವೆನ್ಲಾಕಿಯು ಮಹಾ ಸ್ವಾಮಿ ಸಾಹೇಬರ ಗರ್ವಭಂಗನಾಗುವಂತೆ ಉತ್ತರಗಳಂ ಕೃಪೆಗೈದ ಶುಭ ವೃತ್ತಾಂತವು ತಮ್ಮ ಪ್ರಕಾಶಿಕಾ ಮೂಲಕ, ಪ್ರಭಾಕರ ಕಿರಣಗಳಿಂದ ಗಾಢವಾದ ಅಂಧಕಾರವು ಚದರಿಹೋಗುವಂದದಿ, ಪ್ರಕಟಿಸಿ ನಮ್ಮ ವಿಷಯದಲ್ಲಿ ಜನರಿಗುಂಟಾಗಿರುವ ದುರಭಿಪ್ರಾಯವೆಂಬ ಅಜ್ಞಾನಾಂಧಕಾರವಂ ಹೋಗಲಾಡಿಸಬೇಕೆಂದು ಪ್ರಾರ್ಥಿಸುತ್ತೇನೆ.

ಮೈಸೂರಿನ ಬಸ್ತಿ

ಸಿಮ್ಲಾ, ತಾ|| ೨೩ನೇ ಸೆಪ್ಟಂಬರ್ ೧೮೯೩.

ಅಯ್ಯಾ—ನಿಮ್ಮ ಜನ್ಮ ಅನೇಕರೂ ರುಜು ಮಾಡಿ ಮೈಸೂರಿನ ಮುಖಾಂತರ ಕಳುಹಿಸಿದ ವಿಜ್ಞಾಪನ ಪತ್ರಿಕೆಯನ್ನು ಅಂಗೀಕರಿಸುವಂತೆಯೂ, ಅದರಲ್ಲಿ ಕಂಡ ಅಂಶಕ್ಕೆ ಅವರ ಅಭಿಪ್ರಾಯವ ತನಗೆ ತಿಳಿಯಪಡಿಸಬೇಕೆಂತಲೂ ನನಗೆ ಅಜ್ಞಾಪಿಸುತ್ತಿದ್ದಾರೆ—ನಿಮ್ಮ ಮುಂದೆ ನರ್ತನೆಯು ಕಾರ್ಯಕ್ರಮದಲ್ಲಿ ಯಾವ ವಿಶೇಷ ಸಂದರ್ಭಗಳಿಗಾಗಲಿ ಪ್ರಸಾದಿಸುವ ದರ್ಬಾರಿನವರಿಗೆ ನಿವಾರಣೆ ಮಾಡಬೇಕೆಂಬ ನಿಮ್ಮ ಪ್ರಾರ್ಥನೆಯು, ನಾಚ್ ನರ್ತನೆಯು ಪ್ರಕರಣ ಪ್ರಭುಗಳಿಗಿರುವ ಕಾರಣ ಅಂತವರ ಯಾವವಿಷಯದಲ್ಲಾಗಲಿ ಗೌರವಿಸಿ ಪ್ರೋತ್ಸಾಹ ಕೊಡುವದು ಅಯುಕ್ತವೆಂಬ ಒಂದು ಕಾರಣದ ಮೇಲೆ ಏರ್ಪಟ್ಟದ್ದಾಗಿರುತ್ತೆ. ಯಾವ ಉದ್ದೇಶಗಳೊಡನೆ ಅವರು ನರ್ತಕಿಯರು ಬರುವಂತ ಸಭೆಗಳಿಗೆ ಬರಬಾರದೆಂದು ಪ್ರಾರ್ಥಿಸಿ ಬರೆದುಕೊಂಡಿರುತ್ತೀರೆಯೊ, ತಾದೃಶ ಉದ್ದೇಶಗಳು ಶ್ರೇಷ್ಠವಾದವೆಂಬುದನ್ನವರು ಅಂಗೀಕರಿಸಿದಾಗ್ಯೂ ನಿಮ್ಮ ಸೂಚಿಸುವಂತೆ ಪ್ರಕಟಿಸುವದರ ಮೂಲಕ ಯಾವ ಪ್ರಯೋಜನ ಉಂಟಾಗುವದೆಂದು ಅವರು ಭಾವಿಸುವದಿಲ್ಲ. ಇಂಡ್ಯಾದೇಶದ ಸೈತೆ ಅನೇಕ ಪ್ರದೇಶಗಳಲ್ಲಿ ವೈಸ್‌ರಾಯರವರು ಸರ್ಕಾರ ಮಾಡಿದ ಬೇರೆಬೇರೆ ಸಂದರ್ಭಗಳೊಳು ಸಹಾ ಬೃಹತ್ ಅನೇಕ ವಿನೋದಗಳಲ್ಲಿ ನರ್ತನವು ಒಂದು ಭಾಗವಾಗಿ ಏರ್ಪಟ್ಟದ್ದಿತು. ಅಲ್ಲಿ ಅವರು ನೋಡಿದಮಟ್ಟಿಗೆ ಅನುಚಿತ ಕಾರ್ಯಗಳ್ಯಾವವೂ ಕಂಡು ಬರಲಿಲ್ಲವೆಂತಲೂ, ನರ್ತಕಿಯರಾಗಿ ಅಲ್ಲಿಗೆ ಬಂದಿದ್ದವರೆಲ್ಲರೂ ದೇಶಸ್ಥಿತಿಯನ್ನನುಸರಿಸಿ, ತಮ್ಮ ಬುದ್ಧಿ ಕೌಶಲ್ಯವಂ ವ್ಯಕ್ತಪಡಿಸುವದಕ್ಕೆ ಬಂದವರಾಗಿ ಕಂಡುಬಂದರು ಹೊರತು ಅನ್ಯಥಾ ಎನ್ನುವದಕ್ಕೂ ಕಾರಣವಿಲ್ಲವೆಂತಲೂ, ಈ ಕಾರಣಗಳಿಂದ ಘನವನ್ನೈದಿದ ವೈಸ್‌ರಾಯರವರು ತಾವು ಈ ಸಂದರ್ಭದಂತಹ ಪ್ರಯೋಗಗಳನ್ನು ಬಿಡಬೇಕೆಂಬ ಪ್ರಸ್ತುತ ಸಂದರ್ಭದಲ್ಲಿ ನೀವು ಸೂಚಿಸಿದಂತೆ ಪ್ರಸಕ್ತ ವಿಷಯದಲ್ಲಿ ಯಾವ ನೂತನ ಪ್ರತಿಬಂಧವೂ ಮಾಡಬೇಕಾದ ಆವಶ್ಯಕತೆ ಅವರಿಗೆ ಗೋಚರವಾಗಲಿಲ್ಲವೆಂತಲೂ ತಮಗೆ ತಿಳಿಸುವಂತೆ ಆಜ್ಞಾಪಿಸಿರುತ್ತಾರೆ.

ತಮ್ಮ ವಿಧೇಯ,
(ಸಹಿ) ಜೆ. ಡಿ. ಆರ್ಡಾಗ್ ಕರ್ನಲ್,
ವೈಸ್‌ರಾಯರವರ ಪ್ರೈವೇಟ್ ಸೆಕ್ರೆಟರಿ.

ಗವರ್ನಮೆಂಟ್ ಹೌಸ್,
ತಾ|| ೫ನೇ ಅಕ್ಟೋಬರ್, ೧೮೯೩.

ಅಮ್ಮಾ. ಹಿಂದೂ ಸೋಶಿಯಲ್ ಅಸ್ಸೋಸಿಯೇಷನ್ ಎಂಬ ಸಮಾಜದವರ ಕಡೆಗೆ ಕಳುಹಿಸಲ್ಪಟ್ಟ ಒಂದು ಅರ್ಜಿಗೆ ಉತ್ತರ ರೂಪವಾಗಿ ಪ್ರಕಟಿಸಿದ ಘನವನ್ನೈದಿದ ಗವರ್ನರವರು ನನಗೆ ಆಜ್ಞಾಪಿಸುತ್ತಾರೇನಂದರೆ—ಈ ವಿಜ್ಞಾಪನ ಪತ್ರಿಕೆಯಂ ಬರೆದು ಕಳುಹಿಸುವ ವಿಷಯದಲ್ಲಿ ನಿಮಗೆ ಸಹಾಯರಾಗಿದ್ದವರಾರಿಂದ ಸಮಾಜದವರಿಂ ಗವರ್ನರವರು ಬಹಳ ದೃಢಭಾವಗ್ಯೂ, ಸಮಾಚಾರ ಪತ್ರಿಕೆಯಲ್ಲಿ ಸೂಚಿಸಲ್ಪಟ್ಟಿರುವಂತೆ ಮಾಡುವದರ ಮೂಲಕ ಯಾವದಾದರೊಂದು ಪ್ರಯೋಜನ ಉಂಟಾಗುವದೆಂದು ಅದರಲ್ಲಿ ಅವರು ಬಹಳ ಸಂದೇಹಿಸುತಲಿದಾರೆ. ಘನವನ್ನೈದಿದ ಗವರ್ನರವರು ಸರ್ಕಾಲಗಳಲ್ಲಿ ಅನೇಕಾವರ್ತಿ ತಾವು ಹಾಜರಿದ್ದಂತೆಯೂ, ಆ ಕ್ರಿಯೆ ಒಂದು ಕಡಮೆಯಾಗಲಿ ಅಕ್ರಮವೆಂದು ಭಾವಿಸುವ ದಕ್ಕೆ ಅವಕಾಶವು ಲೇಶಮಾದರೂ ಕಂಡಂತಾ ವಿಷಯವ್ಯಾವದೂ ತಮಗೆ ಕಂಡುಬರಲಿಲ್ಲವೆಂತಲೂ, ಯೂರೋಪ್ ಖಂಡದಲ್ಲಾಗಲಿ, ಅಥವಾ ಇಂಡ್ಯಾದೇಶದಲ್ಲಾಗಲಿ ಕಸುಬುದಾರರಾದ ನರ್ತಕರು ಅಥವಾ ವೇಷಧಾರಿಗಳು ಮಾಡುವಂತವರು ನಡೆಸುವ ವಿನೋದ ಕಾಲಗಳಲ್ಲಿ ತಾವು ಹಾಜರಿದ್ದರಾಗ್ಯಾ, ಅವರಿಂತಲೂ ಅಧಿಕವಾದ ನರ್ತಕೀಯರ ನೀತಿ ನಡವಡಿಕೆಗಳಂ ವ್ಯಾಲೋಚಿಸತಕ್ಕಂತಾ ವಿಷಯವ್ಯಾವದೂ ಅವರ ನರ್ತನ ಕಾಲದಲ್ಲಿ ತಮಗೆ ಗೋಚರವಾಗಲಿಲ್ಲವೆಂತಲೂ, ಆದಕಾರಣ ಘನವನ್ನೈದಿದ ಗವರ್ನರವರು ಅರ್ಜಿಯಲ್ಲಿ ನಮೂದು ಮಾಡಿರುವ ಪ್ರಾರ್ಥನೆಗಳಂತೆ ನಡೆಸಲಿಕ್ಕೆ ತಮಗೆ ಸಾಧ್ಯವಲ್ಲವೆಂದು ನಿಮಗೆ ತಿಳಿಸುವಕಾರದ ಬಗ್ಗೆ ತಾವು ಚಿಂತಿಸುವದಾಗಿ ಅದುಮಾಡತಕ್ಕೂ ನಿಯಮಿಸುತ್ತಾರೆ.

ತಮ್ಮ ವಿಧೇಯನಾದ,
(ಸಹಿ) ಸಿ. ಎಸ್. ಮೆಕಾರ್ಟಿ,
ಗವರ್ನರವರ ಪ್ರೈವೇಟ್ ಸೆಕ್ರೆಟರಿ.

ಮದರಾಸ್ ಹಿಂದೂಸೋಷಿಯಲ್ ರಿಫಾರಂ ಅಸ್ಸೋಸಿಯೇಷನ್ ಸಂಘದವರ ವಿಜ್ಞಾಪನ ಪತ್ರಿಕೆಗಳನ್ನು ವೈಸ್‌ರಾಯಿ ವ ಗವರ್ನರವರು ನಲ್ಲದಮೂಲಕ ಮದರಾಸ್ ಗವರ್ನರವರೂ ಬರೆದಿರುವ ಮೇಲ್ಕಂಡ ಉತ್ತರಗಳಿಂದ ನಮ್ಮ ವಿಷಯವಲ್ಲಿಯೂ ನಮ್ಮವೃತ್ತಿಯ ವಿಷಯದಲ್ಲಿಯೂ ಅವರಿಗುಂಟಾಗಿರತಕ್ಕ ಭಾವವು ಸ್ಪಷ್ಟವಾಗದಿರಲಿಲ್ಲವು. ಅನ್ಯದೇಶೀಯರಾಗಿಯೂ ನಮ್ಮ ಜಾತಿ ಮತ ಸಂಪ್ರದಾಯಗಳನ್ನು ಚೆನ್ನಾಗಿ ಅರಿಯದವರಾಗಿಯೂ, ಹಿಂದೂ ನಾಟ್ಯ ವಿದ್ಯಾಸ್ವರೂಪವಂ ತಿಳಿಯದವರಾಗಿಯೂ, ಇದರಕ್ಕವರಿಗುಂಟಾಗಿರುವ ಅಭಿರುಚಿಯೂ ಯೋಗ್ಯತಾ ಪಕ್ಷಪಾತತೆಯೂ, ನಿರ್ದುಷ್ಟವೆಂಬ ಜ್ಞಾನವು ಸ್ವದೇಶೀಯರೆನಿಸಿಕೊಂಡು ಹಿಂದೂ ಶಾಸ್ತ್ರವಿಚಾರ ಸಂಪ್ರದಾಯಗಳನ್ನೆಲ್ಲ ತಿಳಿದು ಲೋಕಹಿತಾರ್ಥ ಸಂಘಪರಿಷ್ಕರಣಕ್ಕಾಗಿ ಪ್ರವರ್ತಿಸಿರತಕ್ಕ ಮಹಾನುಭಾವರಿಗೆ ಉಂಟಾಗದೆ ಹೋದದ್ದು ಬಹಳ ವ್ಯಸನಪಡತಕ್ಕದಾಗಿದೆ. ನಮ್ಮ ವಿರೋಧಿಗಳಿಗೆ ಗವರ್ನಮೆಂಟಿನವರು ಕೃಪಾಪೂರ್ವಕ ಕಲ್ಪಿಸಿಕೊಟ್ಟ ವಿದ್ಯಾಬುದ್ಧಿ ವೈಲಕ್ಷಣ್ಯಗಳನ್ನೂ, ಸ್ವವಿಷಯ ವಿಚಾರಣಾಸ್ವಾತಂತ್ರ್ಯವನ್ನೂ, ಅವರು ನಮ್ಮ ವಿಷಯದಲ್ಲಿ ವಿನಿಯೋಗಿಸದೆ ಯಾವ ವಿಷಯದೊಳುಪಯೋಗಿಸಲು ಶಕ್ತರಾದಾರು? ಅವರ ಪರಾಕ್ರಮಪ್ರದರ್ಶನಕ್ಕೆ ನಾವಲ್ಲದೆ ಇನ್ನು ಯಾರು ವಿಷಯರಾದಾರು? ಗವರ್ನಮೆಂಟಿನವರು ನಮ್ಮ ಪಕ್ಷವನ್ನವಲಂಬಿಸಿ ಪೋಷಿಸುವ ತಾತ್ಪರ್ಯವೆತ್ತವರಾಗಿರುವದರಿಂದ ನಾವು ಯುಗಾಂತರಗಳಂ ಅನುವರ್ತಿಸಬಹುದೆಂಬುವದನ್ನು ನಾವು ಕೃ

ತಿಸ್ಮೃತಿ ಪುರಾಣೇತಿಹಾಸಾದಿಗಳಲ್ಲಿ ಸರ ಪ್ರತಿಪಾದ್ಯರಾಗಿ ಉದಾಹರಿಸಲ್ಪಟ್ಟಿರುವುದನ್ನೂ ತತ್ಪ್ರಮಾಣ ವಚನಗಳೊಡನೆ ನಿರೂಪಿಸಿ ನಮ್ಮ ವಿರೋಧಿಗಳಿಂ ಸಮಾಧಾನ ಪಡಿಸುವೆನು.

ಮದರಾಸ್ } ತಮ್ಮ ವಿಧೇಯಳಾದ,
೧೩-೧೦-೯೩. } ವಿಲಾಸಿನಿ.

## SUMMARY OF NEWS
## ವೃತ್ತಾಂತ ಸಂಗ್ರಹವು.

ಚಿಕಾಗೊ ಸರ್ವವಸ್ತುಪ್ರದರ್ಶನ ಮಹೋತ್ಸವವು ಪೂರೈಸಿದ ತರುವಾಯ ಅಕಟ್ಟಡವನ್ನು ಹರಾಜು ಹಾಕುವರೆಂತಲೂ, ಅದರಿಂದ ೧೦ ಕೋಟಿ ದ್ರವ್ಯ ಉತ್ಪತ್ತಿಯಾಗಬಹುದೆಂತಲೂ ಊಹಿಸಲ್ಪಟ್ಟಿದೆ —ವೃ ಪ

ಚಿಕ.ಗೋವಿಗೆ ಸ್ವಲ್ಪ ದೂರದಲ್ಲಿ ಹೋಗುತ್ತಿದ್ದ ರೈಲನ್ನು ಒಂದು ಗುಂಪಿನ ಕಳ್ಳರು ಮೋಸದಿಂದ ನಿಲ್ಲಿಸಿ, ಅಧಿಕಾರಿ ಎಲ್ಲರನ್ನೂ ಹೊಡೆದು, ಅವರಲ್ಲಿದ್ದ ಸಾಮಾನುಗಳನ್ನೆಲ್ಲಾ ಸುಲಿಗೆ ಮಾಡಿಕೊಂಡು ಹೊರಟು ಹೋದರು. ಅವರೆಂಥಾ ಧೈರ್ಯಶಾಲಿಗಳೋ ?

ಹ್ಯಾಂಬರ್ಗ್ ಎಂಬ ಪಟ್ಟಣದಲ್ಲಿ ಸಾಧಾರಣವಾಗಿ ಕೋಟ್ಯಾಧೀಶ್ವರರು ಬಹುಮಂದಿ ಇರುತ್ತಾರೆ. ಕಳೆದ ೧೮೯೨ ನೇ ಇಸವಿಯಲ್ಲಿ ೪೧೯ ಮಂದಿ ತಮಗೆ ವರ್ಷ ೧ ಕ್ಕೆ ಹತ್ತು ಕೋಟಿ ಆದಾಯವಿರುವದೆಂದು ಸರ್ಕಾರದವರಿಗೆ ಲೆಕ್ಕ ಕೊಟ್ಟು, ಅದರ ಮೇಲೆ ಹಾಕಿರುವ ತೆರಿಗೆಯನ್ನು ಕೊಟ್ಟರು —ವೃ ಪ.

ಡಾಕ್ಟರ್ ಫ.ರೂನ ಬಿಸ್ಲೋ ಎಂಬವರೋರ್ವರು ...

[illegible]

## EXTRACTS

[illegible]

## BANGALORE CITY MUNICIPALITY.
## ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಕಮಿಷನರುಗಳು, ಸ. ೧೮೯೩ ನೇ ಇಸವಿ ಅಕ್ಟೋಬರ್ ೩೦ ನೇ ತ.ರೀಖ್ ಸೋಮವಾರದ ಹಗಲು ೩|| ಘಂಟೆಗೆ, ಕೋರ್ಟಿನ ಆಫೀಸ್ ಕಟ್ಟಡದಲ್ಲಿ ಸಾಧಾರಣ ಸಭೆ ಸೇರುವರು.

ಇದರಲ್ಲಿ ತೀರ್ಮಾನಿಸಬೇಕಾದ ವಿಷಯಗಳು, ಸ್ಟ್ಯಾಂಡಿಂಗ್ ಕಮಿಟಿಯವರ ತೀರ್ಮಾನಗಳೊಡನೆ ಮುಂದೆ ಕಾಣಿಸಲ್ಪಟ್ಟಿವೆ —

I (a) ಸ. ೧೮೯೩ನೇ ಇಸವಿ ಸೆಪ್ಟಂಬರ್ ತಿಂಗಳ ... ಆದಾಯ ವೆಚ್ಚದ ... [illegible]

I ... [illegible]

II ... [illegible]

III ... [illegible]

IV ... [illegible]

V ... [illegible]

VI ... [illegible]

VII ... [illegible]

VIII ... [illegible]

IX ... [illegible]

X ... [illegible]

XI ... [illegible]

XII ... [illegible]

XIII ... [illegible]

XIV ... [illegible]

XV ... [illegible]

XVI ... [illegible]

XVII ... [illegible]

## ನಿಶ್ಚಿತಪಡಿಸಬೇಕಾದ ವಿಷಯಗಳು.

[illegible]

೧ ಮ್ಯುನಿಸಿಪಲ್ ಇಂಗ್ಲಿಷ್ ಸ್ಕೂಲು

೨ ಕನ್ನಡ ಮತ್ತು ಇಂಗ್ಲಿಷ್ ಸ್ಕೂಲುಗಳು ...

[illegible]

K. SRINIVASA RAO,
Vice President.

## ಫಾರೆಸ್ಟು ಇಲಾಖಾ
## ನೋಟೀಸು

ತಾ. 5 27ನೇ ಸೆಪ್ಟಂಬರ್ 1893.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ — ಮೈಸೂರ್ ದೇಶದಲ್ಲಿ ಉತ್ಪತ್ತಿಯಾದ ಗಂಧದ ಸಾಲ್ವೇಜ ... ಈ ಕೆಳಗೆ ನಮೂದಿಸಿದ ಜಾಗಗಳಲ್ಲಿ ಅವುಗಳ ಎದುರಿನಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರರು ವ ಫಾರಸ್ಟ್ ಆಫೀಸರ್‌ಗಳಿಂದ ನಡೆಸಲ್ಪಡುವದು

| ಡಿಸ್ಟ್ರಿಕ್ಟ್ | ಹರಾಜು ಜಾಗ | ಹರಾಜ ತಾರೀಖ್ | ಟನ್ನುಗಳು ಹೆಚ್ಚು ಕಡಮೆ | ಷರಾ |
|---|---|---|---|---|
| ಶಿವಮೊಗ್ಗ | ಸಾಗರ | 1 ನೇ ನವಂಬರ್ 1893ನೇ ಇಸವಿ | 220 | |
| ಡಿಟೋ | ಶಿವಮೊಗ್ಗ | 17ನೇ ಡಿಟೋ | 160 | |
| ಡಿಟೋ | ತೀರ್ಥಹಳ್ಳಿ | 21ನೇ ಡಿಟೋ | 1_0 | |
| ಕಡೂರು | ಚಿಕ್ಕಮಗಳೂರು | 30ನೇ ಡಿಟೋ | 200 | |
| ಹಾಸನ | ಹಾಸನ | 4ನೇ ಡಿಸಂಬರ್ | 275 | ಸರ್ಕಾರ |
| | | | 25 | ಇನಾಂ |
| ಬೆಂಗಳೂರು | ಬೆಂಗಳೂರು | 8ನೇ ಡಿಟೋ | 150 | |
| ಮೈಸೂರು | ಶ್ರೀರಂಗಪಟ್ಟಣ | 11ನೇ ಡಿಟೋ | 350 | |
| ಡಿಟೋ | ಮೈಸೂರು | 1 ನೇ ಡಿಟೋ | 500 | |

2 ಹರಾಜಿನ ಷರತ್ತುಗಳು —1893 ನೇ ಇಸವಿ ಜನವರಿ 12 ನೇ ತಾರೀಖಿನ ಗೆಜೆಟ್ಟಿನಲ್ಲಿ ಪ್ರಕಟಿಸಲ್ಪಟ್ಟಿರುವ 1892ನೇ ಇಸವಿ ನವಂಬರ್ 20 ನೇ ತಾರೀಖು 155—92 ನೇ ನಂಬರ್ ತಿದ್ದುಪಾಟು ಆದ ಜಾಹೀರನ್ನು ನೋಡಿಕೊಳ್ಳತಕ್ಕದ್ದು - ಮತ್ತು ಸಭಾ ಜಾಗ ಹರಾಜ ಕಾಲದಲ್ಲಿ ಓದಲ್ಪಡುವದು

ಎಲ್ ರಿಕೆಟ್ಸ್,
ಇನ್ಸ್‌ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

BANGALORE —Printed and published at the KARNATAKA PRESS, No. 10, HOSPITAL ROAD, CITY.—1893

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning.**

ಪ್ರಕಾಮವಿವಿಧಪ್ರವೃತ್ತ್ಯುಪನಗಮಾರ್ಗ್ಯಕರ್ಣಾಟಕಪ್ರಕಾಶನವರಾಭಿಧಾಪ್ರಥಿತಸಾಹಿತೀಶೋಭಿತಾ || ಮೃಗಾಂಕಹಿತವಾಸರೇನಿಹಿತಮುದ್ರಣಾಸಜ್ಜನೈರ್ದ್ದಿಶಾಸುಪರಿಪೋಷಿತಾದಿಶತಿಮಾನಸಂಸಂಮುದಂ !

Vol. XX.] ಸಂಪುಟ ೨೦.] BANGALORE —MONDAY, OCTOBER 23, 1893. [No 42

ಬೆಂಗಳೂರು:—ಸರ್ ೧೮೯೩ನೇ ಇಸವಿ ಅಕ್ಟೋಬರ್ ೨೩ ನೇ ತಾರೀಖ್ ಸೋಮವಾರ. [ಸಂಚಿಕೆ ೪೨.


## ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ವರ್ಷ ಒಂದಕ್ಕೆ .. | ..6—0—0 | 8—0—0 |
| 6 ತಿಂಗಳಿಗೆ | .4—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

| | ಸ್ಥಳದವರಿಗೆ. | ಪರಸ್ಥಳದವರಿಗೆ. |
|---|---|---|
| ವರ್ಷಂಕ್ಕೆ .... | 3—0—0 | 4—0—0 |
| 6 ತಿಂಗಳಿಗೆ .... | 1—12—0 | 2—8—0 |

ಈ ಪತ್ರಿಕೆಗೆ ದಯಮಾಡಿ ಚಂದಾದಾರರಾಗಿ ಬೇಕಾದವರು ಚಂದಾ ಮೊಬಲಗು ಕಳುಹಿಸುವಂತೆ ಇವರಿಗೆ ಮನಿಆರ್ಡರ್ ಮೂಲಕ ಪತ್ರಿಕೆಗೆ ಕಳುಹಿಸಲ್ಪಡುವದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು ಮುಂದು ತಿಂಗಳಿಗಿಂತ ಕಡಿಮೆಯಾಗಿ ಚಂದಾ ಮೊಬಲಗು ಅಂಗೀಕರಿಸಲ್ಪಡಲಾರದು.

## ಪ್ರಕಟನೆಯ ದರ.

ಮೊದಲನೆಯದಸಾರಿ ಪಙ್ಕ್ತಿ ಒಂದಕ್ಕೆ ೦—೨—೦

ಎರಡನೆಯದಸಾರಿ ಪಙ್ಕ್ತಿ ಒಂದಕ್ಕೆ ೦—೧—೦

ವರಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟು ಕಡಿಮೆ ಮಾಡಿಸಬೇಕೆಂಬ ಪಙ್ಕ್ತಿ ಒಂದಕ್ಕೆ ೧ ಆಣೆಯಂತೆ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಪ್ರಕಟನೆಗಳ ಕಳುಹಿಸುವವರು ಅವು ಎಷ್ಟಾವರ್ತಿ ಹಾಕಿಸ್ ಮಾಡಲ್ಪಡಬೇಕೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿಸಬೇಕು. ಇದರ ಬಗ್ಗೆ ಅವರು ನಮಗೆ ತಿಳಿಸುವಂತೆ ಬರೆಯುವವರೆಗೆ ಅವು ಪ್ರಕಟಿಸುತ್ತಿದ್ದು ನಾವೇ ಎಷ್ಟಾವರ್ತಿ ಪ್ರಕಟಿಸಲ್ಪಟ್ಟಿದ್ದಾವೋ ಮೇರೆಗೆ ದರವರಿ ಲೆಕ್ಕ ಮಾಡಲ್ಪಡುವದು. ಪ್ರಕಟನೆಗಳ ಬಗ್ಗೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಆಯಾ ಶನಿವಾರದ ಮಧ್ಯಾಹ್ನ ೨ ಘಂಟೆಯೊಳಗಾಗಿ ಕಳುಹಿಸಬೇಕು. ಪ್ರಕಟನೆ ಎಲ್ಲ ಈ ಪತ್ರಿಕೆಗೆ ಕಳುಹಿಸತಕ್ಕ ಕಾಗದಗಳು ಕಳುಹಿಸುವ ಅಡ್ರೆಸ್ಸು (ಮುಂ)ಗಡ ನಾವು ಪತ್ರಾಧಿಪತಿಗಳಿಗೆ ಪ್ರಥಮವಾಗಿ ರುಜುಮಾಡಿದ ಯೋಗ್ಯ ಬರವಣಿಗೆಯನ್ನು ಪ್ರಕಟಿಸಬೇಕು. ನಿರಾಕರಿಸಲ್ಪಟ್ಟ ಕಾಗದಗಳು ವಾಪಸ್ ಕಳುಹಿಸಲ್ಪಡಲಾರವು.


*ADVERTISEMENTS.*

### NOTICE.

### VAIDYASARA SANGRAHA

A TREATISE ON THE PRINCIPLES OF

HINDU MEDICINE.

*Price including Postage, Rs 5 0-0*

ವೈದ್ಯಸಾರ ಸಂಗ್ರಹ.

ಈ ಗ್ರಂಥವು ಬೇಕಾದವರು ಮೊಬಲಗಿನೊಡನೆ ಕಾಗದ ಬರೆದು ತರಿಸಿಕೊಂಡರೆ ಪುಸ್ತಕ ಕೊಡಲ್ಪಡುವದು. ಮೊಬಲಗು ಇಲ್ಲದ ಕಾಗದಗಳಿಗೆ ಸೀಟ್ ಕೊಡಲ್ಪಡಲಾರದು.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೇ ಹಾಸಲು, ಟೇಬಲ್ ಪ್ರತಿ ಒಂದಕ್ಕೆ ರೂ 5 -0—0

ಟಿ. ಬಿ. ವೆಂಕಟಾಚಾರ್.

ಬೆಂಗಳೂರ್, ಪಪಾ ಆಸ್ಪತ್ರೆ ರೋಡ್ ೬೪ ನೇ ನಂಬರ್

### ನೋಟೀಸ್.

ಬೆಂಗಳೂರು ಕರ್ಣಾಟಿಕ್ ಪ್ರೆಸ್.

೧೮೬೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ, ಸಕಲವಿಧ ಕೆಲಸಗಳು ಸುಲಭಬಾಜಿಗೆ ತೀವ್ರವಾಗಿಯೂ ಸ್ವಚ್ಛವಾಗಿಯೂ, ಮಾಡಲ್ಪಡುವವು.

ಇದರಲ್ಲಿ ಸರ್ವ ಇಂಗ್ಲಿಷ್ ಕನ್ನಡ ಕೆಲಸಗಳು ಮಾತ್ರವೇ ನಡೆಯುತಿವೆ. ಇತರ ತಪಸೀಲುಗಳನ್ನು ಸದರೀ ಕಾರ್ಖಾನೆಯ ಪ್ರೊಪ್ರೈಟರಿಗೆ ಬರೆದು ತಿಳಿದುಕೊಳ್ಳಬಹುದು.

### ನೋಟೀಸ್.

ಗಣೇಶ ರಾಮಚಂದ್ರ ಕರ್ಕೆ ಮತ್ತು ಕಂಪೆನಿ. ಕಮಿಷನ್ ಏಜಂಟ್ಸ್.

ಇವರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯೊಡನೆ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ತಕ್ಕ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರಹ ವಿಷಯಗಳು, ಪುಸ್ತಕಗಳು, ಮುತ್ತುಗಳು, ಚಿಪ್ಪಿ ಮುತ್ತುಗಳು, ಘಡಿಯಾರಗಳು, ವಾಚ್‌ಗಳು, ಟೈಂಪೀಸ್‌ಗಳು, ಕಾಶ್ಮೀರ ಶಾಲುಗಳು, ಚಿಟ್ಟೀಗಳು, ಜರತಾರಿ ಕಣಗಳು, ಚಿತ್ರಕೆಲಸ ಮಾಡಿರುವ ಕನ್ನಡಕಗಳು, ಹಾಡುಗಾರರಿಗೆ ತಕ್ಕ ಜರತಾರಿ ಉಡುಪುಗಳು, ಜರತಾರಿ ಟೋಪಿಗಳು, ಆಫೀಸ್ ಡ್ರೆಸ್‌ಗಳು, ಷರಟುಗಳು, ಅತ್ತರುಗಳು, ಅತ್ಯುತ್ತಮಗಳಾದ ರತ್ನಗಳು, ಭಂಗಾರದಿಂದ ಕಟ್ಟಲ್ಪಟ್ಟ ಉಂಗುರಗಳು, ಪುಷ್ಪಪಾತ್ರೆಗಳು, ಜರ್ಮನ್ ಬೆಳ್ಳಿ ಪಾತ್ರೆಗಳು, ಕೇಸರಿ, ಕಸ್ತೂರಿ ವಗೈರೆ ಇತರ ಸಾಮಾನುಗಳು

ಜವಾಬು ಅಪೇಕ್ಷಿಸತಕ್ಕವರು ಒಂದಾಣೆ ಪೋಸ್ಟೇಜ್ ಸ್ಟ್ಯಾಂಪ್ ಕಳುಹಿಸಿದ ಹೊರತು ಜವಾಬು ದೊರೆಯಲಾರದು

ವಿಳಾಸ,—ಗಣೇಶ ರಾಮಚಂದ್ರ ಕರ್ಕೆ, ಮತ್ತು ಕಂಪೆನಿ, ಕಮಿಷನ್ ಏಜಂಟ್ಸ್. ಠಾಕೂರ್ ದ್ವಾರ, ಮಾರ್ಕೆಟ್ ಪೋಸ್ಟು ಮುಂಬೈ.

### ನೋಟೀಸ್.

ಇವರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

#### ಸಂಸ್ಕೃತ ಗ್ರಂಥಗಳು.

| ಪುಸ್ತಕ | ರೂ | ಆ | ಪೈ. |
|---|---|---|---|
| ಸಟೀಕಾ ವೈದ್ಯಸಾರ ಸಂಗ್ರಹ | ೫ | ೦ | ೦ |
| ,, ಶಿವಗೀತ | ೧ | ೦ | ೦ |
| ,, ಶಿವಾನಂದಲಹರಿ | ೦ | ೮ | ೦ |
| ,, ಕೀಲಾಮೃತ | ೧ | ೦ | ೦ |
| ,, ಟೀ\|\| ವಾಲ್ಮೀಕಿರಾಮಾಯಣ ... | ೦ | ೩ | ೦ |
| ,, ಟೀ\|\| ಗತಿಸಿತಾ ಗೀತೆ ... | ೦ | ೧ | ೦ |
| ,, ಟೀ\|\| ಚಾಣಕ್ಯನೀತಿ (ಸುಭಾಷಿತ) | ೦ | ೪ | ೦ |
| ವಿಷ್ಣುಸಹಸ್ರನಾಮ ಪಕ್ಕರೆ | ೦ | ೩ | ೦ |
| ಸೂರ್ಯಸಹಸ್ರನಾಮ | ೦ | ೨ | ೦ |
| ಕೃಷ್ಣಕರ್ಣಾಮೃತ | ೦ | ೬ | ೦ |
| ತ್ರಿಕಾಂಡ ಅಮರ ಮಾಲಾ | ೦ | ೬ | ೦ |
| ೧ ಕಾಂಡ | ೦ | ೧ | ೦ |

#### ಕನ್ನಡ ಗ್ರಂಥಗಳು.

| ಪುಸ್ತಕ | ರೂ | ಆ | ಪೈ. |
|---|---|---|---|
| ಶುಕಸಪ್ತತಿ ಅನ್ವೋ | ೩ | ೦ | ೦ |
| ಡಿಟ್ಟೋ ದುರ್ದ್ಯಾಂ | ೧ | ೨ | ೦ |
| ವೃಷಭೇಂದ್ರವಿಜಯ | ೧ | ೮ | ೦ |
| ಪಂಚತಂತ್ರದ ಬಾಲಲೀಲೆ | ೦ | ೪ | ೦ |
| ಹನುಮದ್ವಿಲಾಸ | ೦ | ೬ | ೦ |
| ಕಾಳಿಂಗಮರ್ದನ | ೦ | ೨ | ೦ |
| ಸುಭದ್ರಾಪರಿಣಯ | ೦ | ೨ | ೦ |
| ಜಲಕ್ರೀಡಾವಿನೋದ | ೦ | ೨ | ೬ |
| ಸುದಾಮಚರಿತ್ರೆ | ೦ | ೧ | ೦ |
| ಮೈರಾವಣ ಚರಿತ್ರೆ | ೦ | ೧ | ೬ |
| ಬಾಲಗ್ರಹಚಿಕಿತ್ಸೆ | ೧ | ೦ | ೦ |
| ಮಹನ್ಮಂದಿರ ಲಾ | ೦ | ೧೨ | ೦ |
| ಬ್ರಾಂತಿವಿಲಾಸ | ೦ | ೧೨ | ೦ |

### ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖ್ 27ನೇ ಸೆಪ್ಟಂಬರ್ 1893.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ,—ಮೈಸೂರ್ ದೇಶದಲ್ಲಿ ಉತ್ಪತ್ತಿಯಾದ ಗಂಧದ ಸಾಲೀಯಾನಾ ಕರಾರುಗಳು ಈ ಕೆಳಗೆ ನಮೂದಿಸುವ ಜಾಗಾಗಳಲ್ಲಿ ಅವುಗಳ ಬಾಬಿನಲ್ಲಿ ನಮೂದಿಸಿರುವ ತಾರೀಖ್‌ಗಳಲ್ಲಿ ಆಯಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರು ವ ಫಾರೆಸ್ಟ್ ಆಫೀಸರಿಗಳಿಂದ ನಡೆಸಲ್ಪಡುವವು.

| ಡಿಸ್ಟ್ರಿಕ್ಟ್ | ಕೋಠಿ ಹೆಸರು | ಹರಾಜ್ ತಾರೀಖ್ | ಟನ್‌ಗಳು ಹೆಚ್ಚು ಕಡಮೆ. | ಷರಾ. |
|---|---|---|---|---|
| ಶಿವಮೊಗ್ಗಾ ... | ಸಾಗರ ... | 13ನೇ ನವಂಬರ್ 1893ನೇ ಇಸವಿ | 220 | |
| ಡಿಟ್ಟೋ ... | ಶಿವಮೊಗ್ಗಾ ... | 17ನೇ ಡಿಟ್ಟೋ | 460 | |
| ಡಿಟ್ಟೋ ... | ತೀರ್ಥಹಳ್ಳಿ .. | 21ನೇ ಡಿಟ್ಟೋ | 120 | |
| ಕಡೂರು .. | ಚಿಕ್ಕಮಗಳೂರು ... | 20ನೇ ಡಿಟ್ಟೋ | 200 | |
| ಹಾಸನ .. | ಹಾಸನ ... | 4ನೇ ಡಿಸಂಬರ್ | 275 | ಸರ್ಕಾರಿ. |
| | | | 25 | } ಇನಾಂ |
| ಬೆಂಗಳೂರು ... | ಬೆಂಗಳೂರು ... | 8ನೇ ಡಿಟ್ಟೋ" | 150 | |
| ಮೈಸೂರು ... | ಶ್ರೀರಂಗಪಟ್ಟ .. | 11ನೇ ಡಿಟ್ಟೋ | 350 | |
| ಡಿಟ್ಟೋ ... | ಹುಣಸೂರು .. | 15ನೇ ಡಿಟ್ಟೋ | 500 | |

2. ಹರಾಜಿನ ಷರತ್ತುಗಳು—1893ನೇ ಇಸವಿ ಜನವರಿ 12 ನೇ ಮೈಸೂರಿನ ಗೆಜೆಟಿನಲ್ಲಿ ಪ್ರಾಯಿಷ್ ಆಗಿರುವ 1892ನೇ ಇಸವಿ ನವಂಬರ್ 29 ನೇ ಮಾರ್ಚ್ 155—92 ನೇ ನಂಬರ್ ತಿದ್ದುಪಾಟು ಆದ ಇಸ್ತಿಹಾರನ್ನು ನೋಡಿಕೊಳ್ಳತಕ್ಕದ್ದು. ಮತ್ತು ಸದರೀ ಇಸ್ತಿಹಾರ್ ಹರಾಜ್ ಕಾಲದಲ್ಲಿ ಓದಲ್ಪಡುವದು.

ಎಲ್. ರಿಕೆಟ್ಸ್,

ಇನ್ಸ್‌ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.


### THE MONEY MARKET.

Stocks, Shares and Exchange.

ಮದರಾಸ್, ಶನಿವಾರ, ತಾರೀಖ್ 21 ನೇ ಅಕ್ಟೋಬರ್, 1893.

ನೇಕಡ ೪ರೂ ಬಾಬತು ಇಂಡಿಯಾಗವರ್ನಮೆಂಟ್ ಪತ್ರಗಳು 105-0-0 ರೂ, ಗಳಿಂದ 105-8-0 ರೂ, ವರೆಗೆ, ನೇಕಡ ಮೂರುವರೆ ರೂ, ಬಾಬತು, ಗವರ್ನಮೆಂಟ್ ಪತ್ರಗಳು, 98-8-0 ರೂ, ಗಳಿಂದ 99-0-0 ವರೆಗೆ, ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತು, 970-0-0ರೂ, ಗಳಿಂದ980-0-0ವರೆಗೆ ಕಮರ್ಷಿಯಲ್ ವ ಲ್ಯಾಂಡ್ ಮಾರ್ಟಗೇಜ್ ಬ್ಯಾಂಕ್ ಷೇರುಗಳು, (100ರೂ) ಬಾಬತು 150-0-0ರೂ ಗಳಿಂದ 155-0-0 ರೂ ವರೆಗೆ,

ಸವರೇನ್‌ಗಳು, ದರ 1 ಕ್ಕೆ 16-2-0 ರೂಪಾಯಿಗಳಿಂದ 16-4-0 ರೂ, ವರೆಗೆ,

ಲಂಡನ್ ಬ್ಯಾಂಕಿನಮೇಲೆ ಕೊಡಲ್ಪಡುವ ಬ್ಯಾಂಕ್ ಬಿಲ್ಸ್ ಯಾನೆ ದರ್ಶನ ಹುಂಡಿಗಳು :—

6 ತಿಂಗಳ ಮಾಮೂದಿಗೆ. .1 s. 3 11/32 d.

4 ,, ...1 s. 3 9/32 d.

ಕೇಳಿದಾಗಕೊಡಲ್ಪಡುವದಕ್ಕೆ .. 1 s. 3 3/16 d.

## ಕರ್ಣಾಟಕ ಪ್ರಕಾಶಿಕಾ.

## THE KARNATAKA PRAKASIKA.

MONDAY, OCTOBER 23, 1893.

೧೮೯೩ ನೇ ಇಸವಿ ಅಕ್ಟೋಬರ್ ೨೩ನೇ ತಾ|| ಸೋಮವಾರ

### ತಿರುವಾಂಕೂರ್ ಕನಿಷ್ಠರಾಣಿಯವರ ಮರಣವೃತ್ತಾಂತವು.

ವಾಡೇ ಮಾಹೆ ಕೂರ್ ೧೬ ನೇ ತಾರೀಖ್ ಭಾನುವಾರದ ದಿನ ಸಾಯಂಕಾಲ ೫ ಘಂಟೆಯ ಸಮಯದಲ್ಲಿ ತಿರುವನಂತಪುರದ ಕಿರಿಯರಾಣಿಯವರು, ಕಾಲಗತಿಯನ್ನೈದಿದರೆಂಬ ವೃತ್ತಾಂತವು ಏತತ್ಪತ್ರಿಕಾಮೂಲಕ ತಿಳಿಸಲಿಕ್ಕೆ ನಾವು ಬಹಳ ವಿಷಾದಿಸುತ್ತೇವೆ. ಈಗ ಗತಿಸಿದಂತಾ ಘನವನ್ನೈದಿ ಪಾರ್ವತೀಬಾಯಿಯವರೂ ಇವರ ಜ್ಯೇಷ್ಠ ಸಹೋದರಿಯಾದ ಲಕ್ಷ್ಮೀಬಾಯಿಯವರೂ, ಮಾವಲಿಕರ ರಾಜಮನೆತನದವರಾಗಿಯೂ, ೧೮೫೭ ನೇ ಇಸವಿಯಲ್ಲಿ ತಿರುವಾಂಕೂರ್ ರಾಜವಂಶಕ್ಕೆ ಸ್ವೀಕೃತರಾಗಿ ಏರ್ಪಟ್ಟವರಾಗಿಯೂ ಇರುತ್ತಾರೆ. ಆದುದರಿಂದ ಪ್ರಕೃತ ಮಹಾರಾಜರವರಿಗೆ ಸ್ವೀಕೃತ ಸೋದರಿಯಾದ ಪಾರ್ವತೀಬಾಯಿಯವರು ೧೮೫೦ ನೇ ಇಸವಿಯಲ್ಲುದ್ಭವಿಸಿ, ಏಳನೆಯ ವರುಷದಲ್ಲಿ ತಿರುವಾಂಕೂರ್ ರಾಜವಂಶವನ್ನಲಂಕರಿಸಿ, ೪೩ ನೇ ವಯಸ್ಸಿನಲ್ಲಿ ಕಾಲಗತಿಯನ್ನೈದಿದ್ದು ಸಾಮಾನ್ಯವಾಗಿ ಎಲ್ಲರಿಗೂ ರಾಜ್ಯದ ಕೇರಳೀಯರಿಗೂ ವಿಶೇಷತಃ ದುಃಖಾಸ್ಪದವಾಗಿರುತಿದೆ. ಈಗ ಇರತಕ್ಕ ತಿರುವಾಂಕೂರ್ ಸಂಸ್ಥಾನದ ಮೂವರು ರಾಜಕುಮಾರರೂ ಈಕೆಯವರ ಪುತ್ರರಾಗಿರುತ್ತಾರೆ. ಈ ರಾಜಸಂತತಿಯು ಸ್ತ್ರೀವರ್ಗಕ್ಕೆ ಸೇರಿದವರಲ್ಲಿ ಘನವನ್ನೈದಿದ ಲಕ್ಷ್ಮೀಬಾಯಿಯವರೊಬ್ಬರು ವಿನಾ ಇನ್ನು ಯಾರೂ ಇಲ್ಲವು. ಈಕೆಯವರಿಂ ಇವರ ೧೨ ನೇ ವಯಸ್ಸಿನಲ್ಲಿ ಕಿಲಮನೂರು ಸಂತತಿಯವರಾದ ಮ|| ಕೇರಳವರ್ಮಕೋವಿಲ್ ತಂಬಿರಾನ್ ಎಂಬವರಿಗೆ ಕೊಟ್ಟು ವಿವಾಹ ಜರಗಿಸಲ್ಪಟ್ಟಿತು. ಇವರು ಮೃತಪಟ್ಟ ಮೇಲೆ ಲಕ್ಷ್ಮೀಬಾಯಿಯವರು, ಮರಳಿ ರಾಜಾರಾಜವರ್ಮ ಕೋವಿಲ್ ತಂಬಿರಾನ್ ಯೆಂಬವರನ್ನು ವಿವಾಹ ಮಾಡಿಕೊಂಡರು. ಈಗ ಇರುವ ಇಳೆಯರಾಜರವರೂ ಅವರಿಬ್ಬರು ಸಹೋದರರು ಸಹ ಇವರ ಪ್ರಾಥಮಿಕೆಯ ಮಕ್ಕಳೇ ಹೊರ್ತು ಎರಡನೆಯವರಿಗೆ ಸಂತಾನವಿಲ್ಲವು. ಶ್ರೀ ಪಾರ್ವತೀಬಾಯಿಯವರು ವಿಶೇಷಗಾಂಭೀರ್ಯವುಳ್ಳವರಾಗಿಯೂ ಸೌಮ್ಯರಾಗಿಯೂ, ಪ್ರಜೆಗಳಲ್ಲಿ ಅನುರಾಗವುಳ್ಳವರಾಗಿಯೂ ಇದ್ದರು. ಇವಲ್ಲದೆ ರಾಜಕೀಯಗಳಾದ ಗೌರವ ಪ್ರತಿಷ್ಠೆಗಳನ್ನಿವರು ಕದಾಚಿತ್ ಸಂಗ್ರಹಿಸುತಲಿದ್ದರೆ ಹೊರ್ತು ಸಾಮಾನ್ಯವಾಗಿ, ಮಿಕ್ಕ ಸಮಯಗಳಲ್ಲಿ ಸದವಸ್ಥಿತಿಯನ್ನಂಗೀಕರಿಸುತಲಿದ್ದರು. ಇವರು ಮಲಯಾಳ ಭಾಷೆಯಲ್ಲಿ ಅನ್ಯಾದೃಶವಾದ ಪಾಂಡಿತ್ಯವಂಸಂಪಾದಿಸಿ ಇಂಗ್ಲಿಷಿನಲ್ಲಿ ಯಥೋಚಿತವ್ಯವಹಾರ ಜ್ಞಾನವಂ ಪಡೆದಿದ್ದರು. ಶ್ರೀಮನ್ ಮಹಾರಾಜ್ಞೀ ಇಂಡ್ಯ ಚಕ್ರವರ್ತಿನೀಯವರ ಪಟ್ಟಾಭಿಷೇಕ

ವರ್ಷವರ್ಧಂತೀ ಮಹೋತ್ಸವದ ಸಂದರ್ಭದಲ್ಲಿ, ತಿರುವನಂತಪುರದೊಳಗಿರುವ ಪ್ರಮುಖರಾದ ವಿದ್ಯಾವತೀಯರ ಸಭೆಯಂ ಸೇರಿಸಿ, ಆ ಸಭೆಯಲ್ಲಿ ಶ್ರೀ ಪಾರ್ವತೀ ಬಾಯಿಯವರು ಅಗ್ರಾಸನವನ್ನಂಗೀಕರಿಸಿ, ಶ್ರೀಮನ್ಮಹಾರಾಣೀಯವರ ಪ್ರಭುತ್ವವಿಷಯಕಗಳಾದ ಹಿಂದಿನ ವೃತ್ತಾಂತಗಳನ್ನೂ, ಆಕೆಯವರ ಸದ್ಗುಣಾದಿ ಪ್ರಭಾವಗಳನ್ನೂ, ಅವರ ಪಾಲನೆಯಲ್ಲಿ ಇಂಡ್ಯ ದೇಶೀಯರು ಅನುಭವಿಸುತಲಿರತಕ್ಕ ಸುಖಸಂತೋಷಾದಿಗಳನ್ನೂ ವಿಶೇಷತಃ ವಿವರಿಸಿ ಮನೋಜ್ಞವಾದ ಪ್ರಸಂಗವಂ ಮಲಯಾಳ ಭಾಷೆಯಿಂದ ಮಾಡಿ, ಸಭಾಸದರಂ ಸಂತೃಪ್ತಿಗೊಳಿಸಿದರು. ೧೮೮೪ ನೇ ಇಸವಿಯಲ್ಲಿ, ಸಾಬಕ್ ತಿರುವಾಂಕೂರ್ ಮಹಾರಾಜರವರಿಗೆ, ಆಗ ಮದರಾಸ್ ಗವರ್ನರಾಗಿದ್ದ ಸರ್. ಇ. ಗ್ರಾಂಟ್ ಡಫ್ ಯವರು ಜಿ. ಸಿ. ಎಸ್. ಐ. ಎಂಬ ಘನತರ ಪ್ರಶಸ್ತಿಯಂ ಶ್ರೀಮನ್ಮಹಾರಾಜ್ಞೀಯವರ ಆಜ್ಞಾನುಸಾರವಾಗಿಯೂ, ವೈಸರಾಯಿಯವರ ಅಪೇಕ್ಷಾನುಗುಣವಾಗಿಯೂ, ಮದರಾಸ್ ಬ್ಯಾಂಕ್ವೆಟಿಂಗ್ ಹಾಲಿನಲ್ಲಿ ದಯಪಾಲಿಸಿದಾಗ್ಗೆ ವಿಶೇಷ ಸಂದರ್ಭಾವಲೋಕನ ಕುತೂಹಲದೊಡನೆ ಶ್ರೀಮತ್ ಮಹಾರಾಜರವರೊಡನೆ ಶ್ರೀ ಪಾರ್ವತೀ ಬಾಯಿಯವರು ಕೂಡ ಅಲ್ಲಿಗೆ ದಯಮಾಡಿದ್ದರು. ಇಂತಾ ಗುಣಜ್ಞರು ಮಧ್ಯವಯಸ್ಸಿನಲ್ಲಿ ಗತಿಸಿದ್ದು ಬಹಳ ಶೋಚನೀಯಾಂಶವಾಗಿರುತಿದೆ. ಪರಂತು ಇವರ ಮರಣವು ಅಕಸ್ಮಾತ್ತಾದುದೆಂತಲಾಗಲಿ ಅನಿರೀಕ್ಷಿತವಾದುದೆಂತಲಾಗಲಿ ಹೇಳಲಿಕ್ಕಿಲ್ಲವು. ಈಚೆಗೆ ಆರುತಿಂಗಳ ಕಾಲವಾಗಿ ಇವರ ನಾಲಿಗೆಯೊಳು ಪ್ರಬಲವಾದ ಒಂದು ವ್ರಣ ವುಂಟಾಗಿ ಅದರಿಂದ ನೂತನಾಹುವವಕ್ಕೆ ಕೂಡ ಸಾಧ್ಯವಾಗದೆ, ಆಹಾರರೂಪವಾಗಿ ದ್ರವ ಪದಾರ್ಥಗಳು ಸಹ ಒಳಗೆ ಇಳಿಯುವದು ಶ್ರಮಸಾಧ್ಯವಾಗಿರುತಲಿತ್ತು. ಪದ್ರಮತೀ ಇವರಿಗೆ ಯೂರೋಪಿಯನ್ ಡಾಕ್ಟರುಗಳು ಚಿಕಿತ್ಸೆ ಮಾಡಿದರು. ಏತದ್ವರ್ಷ ಡಾಕ್ಟರ್ ಮೆಮಿವಿಲ್ಯಾಂಡ್ ಎಂಬವರು ತಿರುವನಂತಪುರಕ್ಕೆ ಕರೆಯಿಸಲ್ಪಟ್ಟಿದ್ದರು. ಇಂಗ್ಲಿಷ್ ಚಿಕಿತ್ಸೆಯಿಂದ ಆಕೆಯವರಿಗೆ ಸ್ವಲ್ಪವೂ ಗುಣ ಉಂಟಾಗದೆ ಹೋದದರಿಂದ ಬಳಿಕ ಸಮರ್ಥರಾದ ಹಿಂದೂ ವೈದ್ಯರು ಚಿಕಿತ್ಸೆ ಮಾಡಲಿಕ್ಕಾರಂಭಿಸಿದರು. ಹೀಗೆಯೂ ಯೆರಡು ತಿಂಗಳ ಕಾಲವಾಯಿತು. ವಿಧಿಯು ಬಲವತ್ತರವಾಗಿ ಆಯುಃಕ್ಷೀಣವು ತೀರಿಹೋದುದರಿಂದ ಅದುವರೆಗೆ ಮಾಡಲ್ಪಟ್ಟ ಪ್ರತಿಕ್ರಿಯೆಗಳ್ಯಾವವೂ ಸಫಲಕಾರಿಗಳಾಗದೆ ವೈಪರೀತ್ಯವನ್ನೈದಲು, ಅವರು, ತಿರುವಾಂಕೂರ್ ಪ್ರಜೆಗಳೆಲ್ಲರು, ಏತದ್ರೂಪವಾದ ನಷ್ಟವ ಕುರಿತು ಅನವರತ ಚಿಂತಿಸುತಲಿರುವಂತೆ ಕಾಲಗತಿಯನ್ನೈದಿದರು. ಮರಳಿ ಸ್ವೀಕಾರ ಪ್ರಸಕ್ತಿಯಿಲ್ಲದೆ ರಾಜವಂಶಾಭಿವೃದ್ಧಿಯ ವಿಷಯದಲ್ಲಿ ಕೇರಳೀಯರು ಇದುವರೆಗೆ ಪಡೆದಿದ್ದ ಪ್ರತ್ಯಾಶೆಗಳೆಲ್ಲವು ಆಕೆಯವರೊಡನೆ ನಷ್ಟವಾಗುವ ಕಾಲವು ಪ್ರಾಪ್ತವಾಯಿತು. ಆಕೆಯವರಿಗಾಗಲಿ, ಇವರ ಭಗಿನಿಯವರಿಗಾಗಲಿ ಸಂತಾನವುಕ್ಕಿಲ್ಲವು. ತಿರುವಾಂಕೂರ್ ಸಂಸ್ಥಾನದಲ್ಲಿ ಪ್ರಭುತ್ವಬಾಧ್ಯತೆಯು, ಸ್ತ್ರೀವರ್ಗದಲ್ಲಿ ಭಾಗಿನೇಯ ಪರಂಪರೆಯನ್ನನುಸರಿಸಿದ್ದಾಗಿರುವದರಿಂದಲೂ, ಇದುವರೆಗೆ ಅಲ್ಲಿ ಮರುಮಕ್ಕತಾಯವೆಂಬ ಕೇರಳಧರ್ಮಶಾಸ್ತ್ರಪ್ರಕಾರ ಸೋದರಳಿಯಂದರು ರಾಜ್ಯಕ್ಕೆ ವಾರಸುದಾರರಾಗಿ ಏರ್ಪಡುತ ಬಂದದರಿಂದಲೂ, ಉತ್ತರೋತ್ತರ ಯುವರಾಜ ಪಟ್ಟಕ್ಕೆ ಅರ್ಹರಿಲ್ಲದೆ ಹೋಗುವದರಿಂದಲೂ, ಪ್ರಕೃತ ಮಹಾರಾಜರವರು ಶೀಘ್ರದಲ್ಲಿ ಸೋದರೀಸ್ವೀಕಾರವಂ ಮಾಡಿಕೊಳ್ಳುವರೆಂದು ನಂಬುತ್ತೇವೆ. ತಿರುವಾಂಕೂರ್ ರಾಜವಂಶದಲ್ಲಿ ಹೀಗೆ ಸ್ವೀಕಾರಾವಶ್ಯಕತೆಯು ಅನೇಕ ಸಂದರ್ಭಗಳಲ್ಲಿ ಉಂಟಾದವು. ಹಾಗೆ ನಡೆಯದಿದ್ದ ಪಕ್ಷಕ್ಕೆ ರಾಜವಂಶಾಭಿವೃದ್ಧಿಗೆ ಬಹುಕಾಲಕ್ಕೆ ಪೂರ್ವವೇ ಬಾಧಕವುಂಟಾಗಿರುತಿತ್ತು. ಕೋಲತ್ತನಾಡ್ ರಾಜ ಸಂತತಿಯವರಿಂ ಸ್ವೀಕಾರ ಮಾಡಿಕೊಳ್ಳುವ ಸಂಪ್ರದಾಯವು ಈ ರಾಜವಂಶಕ್ಕೆ ಪರಂಪರಾಗತವಾದ ಆಚಾರವಾಗಿದ್ದಾಗ್ಯೂ ಕಡೇ ಸಂದರ್ಭದಲ್ಲಿ ಮಾತ್ರ ಯಾವ ಕಾರಣದಿಂದಲೋ ಮಾವಲಿಕರ ರಾಜಪುತ್ರಿಯರಾದ ಲಕ್ಷ್ಮೀಬಾಯಿಯವರೂ ಅವರ ಸೋದರಿಯರಾದ ಈಗ ಗತಿಸಿದ ರಾಣಿಯವರೂ ಸ್ವೀಕಾರ ಮಾಡಿಕೊಳ್ಳಲ್ಪಟ್ಟರು. ಹಿಂದೆ ಅನೇಕಾವರ್ತಿ ಮದರಾಸ್ ಗವರ್ನಮೆಂಟಿನವರು ಇಂಡ್ಯ ಗವರ್ನಮೆಂಟಿನವರ ಅನುಮತಿಯ ಮೇಲೆ ಸ್ವೀಕಾರ ಮಾಡಿಕೊಳ್ಳಲಿಕ್ಕೆ ಅನುಜ್ಞೆಯಂ ಕೊಟ್ಟಿರುತಾರಾದ ಕಾರಣ, ಈ ಸಂದರ್ಭದಲ್ಲಿ ಸಹ ಲಾರ್ಡ್ ವೆನ್‌ಲಾಕ್ ಸಾಹೇಬರವರು ಸಂಸ್ಥಾನದ ಬಾಧ್ಯತೆಯಂ ಪುರಸ್ಕರಿಸಿ ಸ್ವೀಕಾರವಂ ಮಂಜೂರ್ಮಾಡದಿರಲಾರರು. ತಿರುವಾಂಕೂರ್ ಸಿಂಹಾಸನಕ್ಕೆ ಬರತಕ್ಕವರೆಲ್ಲರು ಶ್ರೀ ಪದ್ಮನಾಭನ ಅನುಗ್ರಹ ವಿಶೇಷದಿಂದ ವಿದ್ಯಾವಂತರಾಗಿಯೂ, ದೈವಭಕ್ತಿಯುಳ್ಳವರಾಗಿಯೂ ಇರುವದರಿಂದ ತಾದೃಶ ಪ್ರತಿಷ್ಠೆಗಳಂ ಕಾಪಾಡತಕ್ಕ ಬಗ್ಗೆ ಆವಶ್ಯಕಗಳಾದ ಏರ್ಪಾಡುಗಳಂ ಲೋಪವಿಲ್ಲದಂತೆ ಪೂರ್ವಭಾವಿಯಾಗಿ ಮಾಡಿಕೊಳ್ಳಬೇಕಾದ್ದು ಯೋಗ್ಯವಾಗಿಯೂ, ಕರ್ತವ್ಯವಾಗಿಯೂ ಇರುತಿದೆ.

## ಮಿಲಿಟರಿಸ್ಟೇಷನ್ ಪ್ರಜೆಗಳ ಜಲಕಷ್ಟ ನಿವಾರಣವು.

ಕಡೆಗೆ ಈ ಊರು ಸಿವಿಲ್ ವ ಮಿಲಿಟರಿ ಸ್ಟೇಷನ್ ಪ್ರಜೆಗಳ ಕಷ್ಟನಿವಾರಣ ಕಾಲವು ಪ್ರಾಪ್ತವಾದದಂ ಕೇಳಿ ನಾವು ಬಹಳ ಸಂತೋಷಿಸುತ್ತೇವೆ. ಈ ತಿಂಗಳ ೧೮ ನೇ ತಾರೀಖಿನಲ್ಲಿ ಇಂಡ್ಯಾ ಗವರ್ನಮೆಂಟಿನವರು, ಬೆಂಗಳೂರು ಸಿವಿಲ್ ವ ಮಿಲಿಟರಿ ಸ್ಟೇಷನಿನ ಜಲವಸತಿಯ ಬಗ್ಗೆ ಪ್ರತ್ಯೇಕ ಯೇರ್ಪಾಡು ಮಾಡಬೇಕೆಂಬ ಉದ್ದೇಶದೊಡನೆ ಮಾಲಿಗಾಲ್ ಕೆರೆಯ ನೀರು ಸರಬರಾಯಿ ಕ್ರಮವನ್ನು ಮಂಜೂರ್ಮಾಡಿರುವದಾಗಿ ಇಲ್ಲಿನ ಬ್ರಿಟಿಷ್ ರೆಸಿಡೆಂಟರವರಿಗೆ ಟೆಲಿಗ್ರಾಂ ಕಳುಹಿಸಿರುವಂತೆ ಪಳದೇಶದ ಇಂಗ್ಲಿಷ್ ಪತ್ರಿಕೆಗಳೆಲ್ಲವು ತಿಳಿಸುತಿವೆ. ಇದರಿಂದ ಇಂಡ್ಯಾ ದೇಶದೊಳಗಿರುವ ಮಿಲಿಟರಿ ಸ್ಟೇಷನ್‌ಗಳೆಲ್ಲಕ್ಕಿಂತಲೂ ಜಲದಾರಿದ್ರ್ಯವುಳ್ಳ ಇಲ್ಲಿನ ಕಂಟೋನ್ಮೆಂಟಿಗೆ ಬಹು ಬಹುಕಾಲದ ಮೊದಲು ಪ್ರಾಪ್ತವಾಗಿದ್ದ ದೋಷವು ಶೀಘ್ರದಲ್ಲಿ ನಿವೃತ್ತಿಯಾಗುವದರೊಳೇನೂ ಸಂದೇಹವಿಲ್ಲವು. ಇಂಡ್ಯ ಗವರ್ನಮೆಂಟಿನವರು ಇಲ್ಲಿಗೆ ಏತದ್ವರ್ಷ ನಿಯಮಿಸಿ ಕಳುಹಿಸಿದ್ದ ರಾಯಲ್ ಇಂಜನಿಯರಾದ ಮೇಜರ್ ಗ್ರಾಂಟ್ ಯವರು ಅವರು ಪರಿಶೀಲನಮಾಡಿ ಸದರೀ ಮಾಲಿಗಾಲ್ ಕೆರೆಯ ನೀರು ಆರೋಗ್ಯಕರವಾಗಿಯೂ, ಮಧುರವಾಗಿಯೂ ಇರುವದಲ್ಲದೆ ಈ ಏರ್ಪಾಡು ಸಫಲವಾಗತಕ್ಕದೆಂದು ತೀರ್ಮಾನಿಸಿ ಇದನ್ನೇ ಸಿಫಾರಸ್ ಮಾಡಿದರು. ಮೊದಲು ಬೆಂಗಳೂರ್ ಪೇಟೆ ಮತ್ತು ಸಿವಿಲ್ ವ ಮಿಲಿಟರಿ ಸ್ಟೇಷನ್‌ಗಳೆರಡಕ್ಕೂ ಸೇರಿದಂತೆ ನೀರು ಸರಬರಾಯಿ ಮಾಡುವ ಉದ್ದೇಶದೊಡನೆ ಪ್ರಸಕ್ತ ಏರ್ಪಾಡು ಸೂಚಿಸಲ್ಪಟ್ಟಿತು. ಕ್ರಮೇಣ ಮೈಸೂರ್ ಗವರ್ನಮೆಂಟಿನವರು ತಮಗೆ ಪ್ರತ್ಯೇಕ ಜಲಾಧಾರವಂ ಕಲ್ಪಿಸಿಕೊಳ್ಳುವವು ಯಾವಾಗಲು ಕ್ಷೇಮಕರವೆಂದು ಭಾವಿಸಿ ಬಾಣಾವಾರದ ಬಳಿ ಇರುವ ಹೆಸರುಘಟ್ಟದಿಂದ ನೀರು ತರುವ ಏರ್ಪಾಡನ್ನು ಮಂಜೂರ್ಮಾಡಿದರು. ಈಗ ಜಲವಸತಿಯ ವಿಷಯದಲ್ಲಿ ಪೇಟೆನಿವಾಸಿಗಳಗೂ ಮಿಲಿಟರಿ ಸ್ಟೇಷನ್ ನಿವಾಸಿಗಳಿಗೂ ಯಾವವಿಧ ಸಂಪರ್ಕವೂ ಇಲ್ಲದೆ ಉಭಯ ಸರ್ಕಾರದವರೂ ತಮ್ಮ ಮಟ್ಟಿಗೆ ಪ್ರತ್ಯೇಕ ಜಲಾಧಾರಗಳಂ ಕಲ್ಪಿಸಿಕೊಳ್ಳುವದಕ್ಕೆ ಪ್ರಯತ್ನಪಟ್ಟದ್ದು ಬಹಳ ಕ್ಷೇಮಕರವೆಂದು ಭಾವಿಸುತ್ತೇವೆ. ಈಗ ನಿರ್ಣಯವಾದ ಅಂಶದಲ್ಲಿ ಇದುವರೆಗೆ ಒಬ್ಬೊಬ್ಬ ಇಂಜನಿಯರು ಒಂದೊಂದು ಬಗೆಯಾಗಿ ಅಭಿಪ್ರಾಯಪಡುತ ಒಂದೊಂದು ಸ್ಥಳವಂ ಚುನಾಯಿಸಿ ಅದರಲ್ಲಿ ತಮ್ಮ ಶಾಸ್ತ್ರೀಯಗಳಾದ ಅನುಭವಗಳನ್ನೆಲ್ಲವಂ ವಿನಿಯೋಗಿಸಿ ಪ್ರಶಂಸಿಸುತ ಬಂದರು. ಇವರು ಸೂಚಿಸಿದ ಸ್ಥಳಗಳಲ್ಲಿ ಹೆಬ್ಬಾಳ, ರಾಚೇನಹಳ್ಳಿ, ಮಾಲಗಾಲ್ ವಗೈರೆ ಪ್ರದೇಶಗಳು ಮುಖ್ಯವಾದವಾಗಿರುತಿವೆ. ಕಡೆಗೆ ನಿರ್ಧರಿಸಲ್ಪಟ್ಟ ಪ್ರಸಕ್ತ ಮಾಲಿಗಾಲ್ ಜಲಾಧಾರ ಏರ್ಪಾಡು ಬಹಳ ಲಾಗವತು ಹಿಡಿಯುವದಲ್ಲದೆ ವಿಶೇಷ ಶ್ಲಾಘ್ಯವಾದ ಪ್ರಯತ್ನವಲ್ಲವೆಂಬದಾಗಿ ಅನೇಕರು ತಾತ್ಪರ್ಯಪಟ್ಟಿರುತ್ತಾರೆ. ಪರಂತು ಈ ವಿಚಾರಗಳೆಲ್ಲವು ಇದರೊಡನೆ ಪೂರೈಸಿಯಾದಂತೆ ಭಾವಿಸಬೇಕು. ಪ್ಯಾಗೂ ಒಂದು ವಿಷಯದಲ್ಲಿ ಜಲಮಾಲಿನ್ಯ ಪ್ರಯುಕ್ತವಾದ ಪರಿಭವವು ಪ್ರಜೆಗಳಿಗೆ ತಪ್ಪಿಸಿದ್ದು ಬಹಳ ಕೊಂಡಾಡತಕ್ಕ ಕಾರ್ಯವಾಗಿರುತಿದೆ. ಲಾರ್ಡ್ ಲ್ಯಾನ್ಸ್‌ಡೌನ್ ಯವರು ಬಹು ಕಾಲದಿಂದ ಅವ್ಯವಸ್ಥಿತವಾಗಿದ್ದ ಈ ವಿಷಯವಂ ಮುಂದೆ ಬರತಕ್ಕವರ ವಿಮರ್ಶೆಗೆ ಇಡದೆ ಸ್ವತಃ ತೀರ್ಮಾನಿಸಿ ಮುಗಿಸಿಕೊಟ್ಟದ್ದು ಯೋಗ್ಯವಾದ ಕಾರ್ಯವಾಗಿರುತಿದೆ. ಇವರಿಗೆ ಬರತಕ್ಕ ವೈಸರಾಯಿಯವರು ಅಸಮರ್ಥರೆಂಬದಾಗಲಿ, ವಿರೋಧಿಗಳೆಂದಾಗಲಿ ನಮ್ಮ ಅಭಿಪ್ರಾಯವಲ್ಲವು, ಪರಂತು ಲಾರ್ಡ್ ಲ್ಯಾನ್ಸ್‌ಡೌನ್ ಯವರು ಇಲ್ಲಿಗೆ ದಯಮಾಡಿದ್ದ ಸಂದರ್ಭದಲ್ಲಿ ಇಲ್ಲಿನ ಪ್ರಜೆಗಳು ಜಲಾಭಾವದಿಂದನುಭವಿಸುತಲಿದ್ದ ಶ್ರಮವು ಸಾಕ್ಷಾತ್ತಾಗಿ ನೋಡಿಯೂ ಕೇಳಿಯೂ ಹೋದದರಿಂದ ಅವರ ಪರಿಸ್ಥಿತಿ ಯಥಾರ್ಥ ವಿಷಯದಲ್ಲಿ ಅವರಿಗುಂಟಾಗಿರುವಷ್ಟರ ಪರಿಜ್ಞಾನವು ಹೊಸಬರಾಗಿ ಬರುವಂಥವರಿಗಿರುವದೆಂದು ನಿರೀಕ್ಷಿಸುವದು ಅಸಂಭಾವ್ಯವೆಂದೆಣಿಸುತ್ತೇವೆ. ಇಂಡ್ಯ ಗವರ್ನಮೆಂಟಿನವರಿಂದ ಮಂಜೂರ್ಮಾಡಲ್ಪಟ್ಟ ಮಾಲಿಗಾಲ್ ನೀರಾವರಿ ಕಾಮಗಾರಿಯನ್ನು ತೀವ್ರವಾಗಿಯೇ ಪ್ರಾರಂಭವಾದಿ ಸಾಧ್ಯವಾದಷ್ಟು ಜಾಗ್ರತೆಯಲ್ಲಿ ಮುಗಿಸಿ ಪ್ರಕಾಶಿಸುವರೆ ಈ ವಿಷಯದೊಳು ಜನರಿಗುಂಟಾಗಿರುವ ಆತುರವೂ ಜಿಜ್ಞಾಸೆಯೂ, ನ್ಯೂನತ್ಯವೂ ನಿವಾರಣಗಳಾಗಿ ಬಹುಕಾಲದಿಂ ಅಪೇಕ್ಷಿಸುತಲಿರುವ ವಿಶೇಷ ಪ್ರಯುಕ್ತವಾದ ಆನಂದವನ್ನನುಭವಿಸುವದಕ್ಕೆ ಸಾಧ್ಯವಾಗುವುದು. ಈಗ ಇದಕ್ಕೆ ಸೇರಿದಂತೆ ಮತ್ತೊಂದು ವಿಷಯವು ವಿಚಾರಾರ್ಹವಾಗಿದೆ ಯೇನೆಂದರೆ- ಬ್ರಿಟಿಷ್ ಕಮ್ಮಿಷನರ ಕಾಲದಲ್ಲಿ ಗವರ್ನಮೆಂಟಿನಿಂದ ಅನೇಕ ಲಕ್ಷ ರೂಪಾಯಿಗಳು ಖರ್ಚುಮಾಡಿ ಕಟ್ಟಿಸಿರುವ ಸ್ಯಾಂಕೀಯವರ ಸರೋವರವನ್ನು ಮಿಲಿಟರಿ ಸ್ಟೇಷನಿನ ಅಧಿಕಾರಿಗಳು ಸ್ವತಃ ವಹಿಸಿಕೊಂಡು ಕಾಪಾಡಿ ಅಪೇಕ್ಷಿಸಿ ನೀರು ಕೊಡತಕ್ಕಾಗಿ ಬಂದರೆ ಬಹಳ ಅಸಮಾಧಾನದೊಡನೆ ಕೊಡುತ್ತಾರೆ ಪರಂತು ಸಿವಿಲ್ ವ ಮಿಲಿಟರಿ ಸ್ಟೇಷನಿಗೆ ಪ್ರತ್ಯೇಕ ಜಲಾಧಾರ ಏರ್ಪಾಡುವಂತೆ ನಿಷ್ಕರ್ಷೆಯಾದುದರಿಂದ ಅದು ಪೂರೈಸಿದ ಕೂಡಲೆ ಸದರೀ ಸರೋವರವನ್ನು ಕಂಟೋನ್ಮೆಂಟ್ ಅಧಿಕಾರಿಗಳು ಸ್ವತಃ ಇಟ್ಟುಕೊಳ್ಳುವರೋ ಅಲ್ಲದೆ ಮಹಾರಾಜಾ ಸಂಸ್ಥಾನಕ್ಕೆ ಕೃತಜ್ಞತಾಭಾವದೊಡನೆ ವಾಪಸ್ ಕೊಡುವರೋ ಅದು ನಿಷ್ಕೃಷ್ಟವಾಗಿ ನಮಗೆ ತಿಳಿಯಬರಲಿಲ್ಲವು. ಒಂದುವೇಳೆ ವಾಪಸ್ ಕೊಡಲ್ಪಡುವದಾದರೆ ಅದನ್ನು ಮೈಸೂರ್ ಗವರ್ನಮೆಂಟನವರಾವರೀತಿಯಿಂದ ಉಪಯೋಗಿಸಿಕೊಳ್ಳಬೇಕೆಂಬ ಅಭಿಪ್ರಾಯವುಳ್ಳವರಾಗಿದಾರೆಯೋ ಅದೂ ಗೊತ್ತಿಲ್ಲದೆ ಇದೆ. ಪೇಟೆಗೆ ಪ್ರತ್ಯೇಕವಾಗಿ ಹೆಸರುಘಟ್ಟದಿಂದ ನೀರು ತರುವ ಪ್ರಯತ್ನ ಜರುಗುತಲಿರುವದರಿಂದ ಮೇಲೆ ಹೇಳಿದ ಕೆರೆಯ ಉಪಯುಕ್ತತೆಯು ಮುಂದೆ ಕಡಿಮೆಯಾಗಬಹುದೆಂದು ತೋರುತಿದೆ. ಇದು ಯಾವಾಗ ಉಭಯ ಸರ್ಕಾರದವರಿಗೂ ಪ್ರಯೋಜನಕರವಲ್ಲದೆ ಹೋಗುತಿದೆಯೋ ಆಗ ಅದಕ್ಕಾಗಿ ವ್ಯಯವಾದ ದ್ರವ್ಯವೆಲ್ಲವಂ ನಿರರ್ಥಕ ವ್ಯಯಗಳ ಪಟ್ಟಿಯಲ್ಲಿ ದಾಖಲುಮಾಡಬೇಕಾಗಿರುವುದು. ಆದಕಾರಣ ಅದರ ಉಪಯುಕ್ತತೆಯಂ ಯಾವವಿಧದಿಂದಲಾದರು ಜನರಿಗುಂಟುಮಾಡಿ ಅನುಭವದೊಳಿಟ್ಟುಕೊಳ್ಳುವದು ಯೋಗ್ಯವೆಂದು ಕಾಣುತಿದೆ. ಈ ಏರ್ಪಾಡಿಗಾಗಿ ಬ್ರಿಟಿಷ್ ಗವರ್ನಮೆಂಟಿನವರ ಉಪಕಾರವು ಯಾವಾಗ್ಯೂ ಕೊಂಡಾಡಲ್ಪಡತಕ್ಕದ್ದಾಗಿರುತಿದೆ.

## ಮೈಸೂರು ನಿವಾಸಿಗಳ ಪ್ರಾರ್ಥನೆ.

ಮೈಸೂರ್ ಪುರನಿವಾಸಿಗಳು ಶ್ರೀಮನ್ಮಹಾರಾಜರವರದಿವ್ಯಸನ್ನಿಧಿಗೆ ಬರೆದುಕೊಂಡಂತೆ ಒಂದು ವಿಜ್ಞಾಪನಾಪತ್ರಿಕೆಯು ಈ ತಿಂಗಳ ೧೮ ನೇ ತಾರೀಖಿನ ಮೈಸೂರುದೇಶಾಭಿಮಾನಿ ಎಂಬ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುತಿದೆ. ಸದರೀ ವಿಜ್ಞಾಪನಾಪತ್ರಿಕೆಯು ನಿರುಪಾಧಿಕವಾಗಿಯೂ, ರಾಗದ್ವೇಷಾದಿಗುಣಗಳಿಂದಬಾಧಿತವಾಗಿಯೂ ಇಲ್ಲದೆ, ಕೇವಲ ಪರಗುಣವಿಚಾರಾಪವೇಕದಿಂ,'ಮಾನ್ಯರಾದ ಜನಗಳಲ್ಲಿ, ಶ್ರೇಯಸ್ಸಂಪಾದನಾಸಕ್ತರಾದ ಮೇಲೆ ಕಂಡ ಮೈಸೂರ್ ಪುರನಿವಾಸಿಗಳು ಉಚಿತ ವರ್ತನ ತ್ಯಾಗರೂಪವಾದ ದೋಷಕ್ಕೆ ವಿಷಯರಾಗಿ ಅಧೀನ ಫಲಾನುಭವಕ್ಕೆ ಬಾಧ್ಯರನ್ನಿಸಿಕೊಳ್ಳುವಣವು ನಮಗೆ ಎಷ್ಟುಮಾತ್ರವೂ ಅಭಿಮತ ವಿಷಯವಲ್ಲವು. ಆದರೆ ಪ್ರಸಕ್ತ ವಿಜ್ಞಾಪನಾ ಪತ್ರಿಕೆಯಲ್ಲಿ ಸೂಚಿಸಲ್ಪಟ್ಟಿರುವ ಎರಡು ವಿಷಯಗಳು ಮಾತ್ರ ಶ್ಲಾಘ್ಯಗಳಾಗಿಯೂ, ನಿರುಪಾಧಿಕಗಳಾಗಿಯೂ, ಪ್ರತಿಷ್ಠಾಪದಗಳಾಗಿಯೂ, ಸರ್ವಜನ ಸಮ್ಮತಗಳಾದವಾಗಿಯೂ ಇರುವದರಿಂದ ಶ್ರೀಮನ್ಮಹಾರಾಜರವರು ಅದು ಯುಕ್ತವೆಂದು ಭಾವಿಸಿ, ತದ್ವತ್ ಆಚರಣೆಯೊಳು ತರುವ ಪಕ್ಷಕ್ಕೆ ತಮ್ಮ ಪ್ರಜಾಭಿಪ್ರಾಯವು ಗೌರವಿಸಿ ಪುರಸ್ಕರಿಸಿದಂತೆ ಭಾವಿಸಲ್ಪಡುವುದು. ಮುಖ್ಯವಾಗಿ ಮೈಸೂರ್ ನಿವಾಸಿಗಳ ಪ್ರಾರ್ಥನೆಗಳು ಯಾವವು ಎಂದರೆ "ಪ್ರಜಾಪ್ರತಿನಿಧಿಸಭೆಗೆ ಶ್ರೀಮನ್ಮಹಾರಾಜರವರೇ ಅಧ್ಯಕ್ಷರಾಗಿ ಉತ್ತಮ್ಮ ದಿವಾನರವನ್ನು ಸಮೀಪದೊಳಿಟ್ಟುಕೊಂಡು ಪ್ರತಿನಿಧಿಗಳು ತಿಳಿಸತಕ್ಕ ಅಂಶಗಳನ್ನು ಸಾಕ್ಷಾತ್ ಆಲಿಸಿ, ಅವುಗಳಿಗನುಸಾರಗಳಾದ ಜವಾಬುಗಳನ್ನು ದಯಪಾಲಿಸಿದರೆ ಪ್ರಜೆಗಳಿಗದು ಮಹದುಪಕಾರವಾಗಿರುವದಲ್ಲದೆ ಬ್ರಿಟಿಷ್ ಗವರ್ನಮೆಂಟಿನವರಿಗೆ ಅವರಲ್ಲಿರತಕ್ಕ ಈಗಿನ ಗೌರವವು ಮತ್ತಷ್ಟು ಅಧಿಕವಾಗಲಿಕ್ಕೆ ಸಾಧಕವಾಗುವುದು. ಇದರಿಂದ ಅವರು ಪ್ರಜೆಗಳಿಯ ಉತ್ತರಗಳನ್ನು ಘೋಷಿಸಿ ನಡೆಸಬೇಕಾದ ನಿಧಿಯು ದಿವಾನರವರಿಗೆ ಬಲವತ್ತರವಾಗಿರುವುದು. ಈ ವರ್ಷದಲ್ಲಿ ಶ್ರೀಮನ್ಮಹಾರಾಜರವರು ಈ ಕಾರ್ಯವು ಜರಿಗಿಸಿ, ಇತರ ನೇಟಿವ್ ಸಂಸ್ಥಾನಾಧಿಪತಿಗಳಿಗೆ ಮಾರ್ಗದರ್ಶಕರಾಗಬೇಕೆಂಬುವುದು ಒಂದನೆಯದು. ಮುಂದೆ ಪ್ರತಿವಾರದಲ್ಲಿಯೂ ಒಂದು ದಿನ ದರ್ಬಾರ್ ಮಾಡಿ ಅರ್ಜಿಗಳ ಸನಾವಣಿ ತೆಗೆದುಕೊಂಡು, ಪ್ರಜೆಗಳ ಅಹವಾಲುಗಳಿಗೆ ಸ್ವತಃ ಜವಾಬು ಕೊಡಬೇಕಲ್ಲದೆ ಅರಮನೆಯ ಬಾಗಿಲಲ್ಲಿ ಒಂದು ದೊಡ್ಡ ಅರ್ಜಿಯ ಪೆಟ್ಟಿಗೆಯನ್ನಿಡಿಸಿ ಪ್ರಜೆಗಳು ೭ ದಿವಸಗಳ ವರೆಗೂ ಅದರಲ್ಲಿ ಅಹವಾಲ್ ಅರ್ಜಿಗಳನ್ನು ಹಾಕಲಿಕ್ಕೆ ಅನುಜ್ಞೆಯಂ ಕೊಡತಕ್ಕದ್ದು, ಅನಂತರ ಪ್ಲಪ್ತವಾದ ಯಾವದಾದರೊಂದು ದಿನದಲ್ಲಿ ಅದು ತೆಗೆಯಿಸಿ ದಿವಾನರವರನ್ನಿಟ್ಟುಕೊಂಡು, ಅವುಗಳಿಗೆ ತಕ್ಕ ಉತ್ತರಗಳಂ ದಯಪಾಲಿಸಬೇಕಾದ್ದು. ಈ ಎರಡು ಕಾರ್ಯಗಳಂ ಮಹಾಸ್ವಾಮಿಗಳವರು ಮಾಡಿ ಅಂಧರಾಗಿರುವ ಮೈಸೂರ್ ದೇಶೀಯರನ್ನು ವೀಕ್ಷಣ ಶಕ್ತಿಯುಳ್ಳವರಂತೆ ಮಾಡಿ ರಕ್ಷಿಸಬೇಕೆಂಬುವದೇ ನಮ್ಮ ಮುಖ್ಯ ಪ್ರಾರ್ಥನೆಗಳಾಗಿರುತಿವೆ," ಎಂಬುವದೇ ಎರಡನೆಯದು.

ಮೇಲೆ ಕಂಡ ಪ್ರಾರ್ಥನೆಗಳೆರಡನ್ನೂ ಪರ್ಯಾಲೋಚಿಸಿದವರಲ್ಲಿ ಕೆಲವರು, ಅವು ಬಹಳ ಯೋಗ್ಯವಾದವೆಂತಲೂ, ತದ್ವತ್ ಅವಶ್ಯಕರಣೀಯವೆಂತಲೂ, ವ್ಯವಸ್ಥಿತರಾಜ್ಯತಂತ್ರಕ್ರಮಕ್ಕೆ ಮುಖ್ಯಲಕ್ಷಣಗಳೆಂತಲೂ ತಾತ್ಪರ್ಯಪಟ್ಟು ಘೋಷಿಸತಕ್ಕವರಾಗಿರುತ್ತಾರೆ. ಇನ್ನು ಕೆಲವರು ಸದರೀ ಪ್ರಾರ್ಥನೆಗಳೆರಡೂ ನೇಟಿವ್ ಅರಸರ ಪ್ರಭುತ್ವದಲ್ಲಿ ಅನಪೇಕ್ಷಿತವೆಂತಲೂ, ಅವು ವಿಶೇಷ ಫಲದಾಯಕಗಳಲ್ಲವೆಂತಲೂ ಭಾವನೆಪಟ್ಟವರಾಗಿ, ಅವು ಜರೆಯುವಂಥವರಾಗಿರುತ್ತಾರೆ. ಇವರಲ್ಲಿ ಪ್ರಥಮಪಕ್ಷದವರು ಆಧುನಿಕ ಪ್ರೈಲಕ್ಷ್ಯಾಭಿಲಾಷಿಗಳಾಗಿಯೂ ಕಾಲದೇಶೋಚಿತಗಳಾದ ನವೀನಕ್ರಮಗಳನ್ನಪೇಕ್ಷಿಸುವಂತವರಾಗಿಯೂ

ಇರುತ್ತಾರೆ. ದ್ವಿತೀಯ ಪಕ್ಷದವರು ಆವಶ್ಯಕ ತಾನಾವಶ್ಯಕತೆಗಳಂ ಪರಿಭಾವಿಸದೆ, ಪೂರ್ವಿಕ್ರಮಗಳಂ ಕೊಂಡಾಡಿ ಗೌರವಿಸುವಂತವರಾಗಿರುತ್ತಾರೆ. ಪ್ರಥಮಪಕ್ಷದವರ್ಗಳಾದರು ಮಾಡ್ರ ಇಲ್ಲಿ ತಿಳಿಸುತ್ತೇವೆ, ಏನೆಂದರೆ,—ಪ್ರಜಾಪಾಲಕರಾದವರಿಗೆ ರಾಜ್ಯಕಾರ್ಯನಿರ್ವಹಣ ಘಟ್ಟ ಸಕಲಾಂಶಗಳೂ ತಿಳಿದಿರಬೇಕಾದ್ದು ಅವಶ್ಯಕವಷ್ಟು ತತ್ತಾಪಿ ತಮ್ಮ ಪ್ರಜೆಗಳ ಅಭಿಪ್ರಾಯಾನುಗುಣವಾಗಿ ವರ್ತಿಸುತ ಪ್ರಭುತ್ವ ಮಾಡುವಷ್ಟು ಶ್ರೇಯಸ್ಕರವು, ಮತ್ತು ಕೀರ್ತಿಕರವು, ಅಂತಾ ಪ್ರಾಭಿಪ್ರಾಯವೆಂಬವು ತತ್ತದ್ದಾಕ್ಮಗುಣ ಸ್ವರೂಪನಿರ್ಣಯವಾಗಿ ಭಿನ್ನವೆನಿಸಿರುವದ ದರ ಣ, ವಿಚಾರ್ಯ ವಸ್ತುಗಳ ಗುಣಾಗುಣ ತತ್ವ ವಿವೇಚನೆ ಮೇಲೆ ಬಹುಜನಾಭಿಮತ ಮಾರ್ಗಾನುಸರಣವು ಪ್ರಜಾರಂಜಕನಿಗೆ ಅಪೇಕ್ಷಿತಾಂಶವಾಗಿರುತವೆ. ಇದರಿಂದ ಪಾಲ್ಯಪಾಲಕರಿಗೆ ಪರಸ್ಪರ ಪ್ರಾಣಾನಕತಾಜ್ಞಾನವೂ ಅನ್ಯೋನ್ಯಭಾವವೂ, ಇವನ್ನವೂ ನರೆಗೊಳ್ಳುವವು. ಇವುಗಳ ಪರ್ಯಾಲೋಚಿಸಿ ಪ್ರಭುತ್ವಕ್ಕೊಂದು ಶಕ್ತಿಪ್ರದವಾದ ಪ್ರಜಾಪ್ರತಿನಿಧಿ ಸಭೆಯೆಂಬದು ಅನ್ನದೇಶ ಸ್ಪಷ್ಟಾಂತವನ್ನಂಗೀಕರಿಸಿ, ಆ ಸಭೆನ್ನಾನದೇಶಳು ಪ್ರಥಮತಃ ಏರ್ಪಡಿಸಲ್ಪಟ್ಟತು. ಏತದ್ವಿಷಯ ಪರಿಜ್ಞಾನ ಶೂನ್ಯರಾದ ಪ್ರಜೆಗಳ ಏಕ್ಯ ಅದೆಷ್ಟರವ ಟ್ಟಗೆ ರೂಢಿಸಿರವಾಗಿ ನಿರೀಕ್ಷಿತ ಫಲವನ್ನುಂಟುಮಾಡದಷ್ಟಾದ್ದಾಗುವದೋ ಎ ಬ ಅನುಮಾನವು ಆ ಪ್ರಭುತ್ವದವರಿಗೆ ಅಂಕೂ ಇಲ್ಲವೆಂದಿಲ್ಲವು. ಪರಂತು ಪ್ರಸ್ತುತ ಸಭೆಯು ವರ್ಷದ್ವಯ ಬಿಡಾರು ವರ್ಗಗಳ ಜನರ ಎದು ಕಳೆದು ನಾನಾಸ್ವಸ್ಥಿತಿಶೀರುತವಿವ್ವದರಿಂದ ಸರ್ಕಾರಕ್ಕೆ ತಮ್ಮ ಮೂಲಕ ಕಾಣತಕ ರಾಗಳಿಗವರು ಬುದ್ಧಿಗದಿಯಿದ್ದವು. ಅನಂತರ ಅವರ ಸ್ವರಾದ ಪ್ರತಿಕಾಟನರಗಳಂ ಪ್ರಜೆಗಳು ಸ್ವತಃ ತಿಳಿದು ಅದರಲ್ಲಿ ಅಪೇಕ್ಷಿತಗಳಾದ ಪ್ರವೃತ್ತಿಗಳನ್ನು ನೂಗಳು ವ್ಯಕ್ತಪಡಿಸಲಾರಂಭಿಸಿದ್ದರಿಂದ, ಸದರೀ ಸಭೆಯು ಪ್ರತಿ ಸೀಸನ್ನಲ್ಲಿಯೂ ಕ್ರಮಕ್ರಮವಾಗಿ ಅಭಿವೃದ್ಧಿಯನ್ನೈದುತ ಜನ ದ್ವಿವ್ಯಾಕವಾಯಿತು. ಆಚೆಗೆ ಎರಡು ಸಂವತ್ಸರಗಳ ಮೊದಲು ಪ್ರಜೆಗಳ ಬಿ ಗರೂಕತೆ, ವೈಲಕ್ಷಣ್ಯ, ವಿದ್ಯಾಪ್ರವಾಣತೆಯೆ ಗಳೇಗಳು ನಾನಾವಿಧವಾಗಿ ವ ದಾರಿಯಾ ಪರ್ಯಾಯವ ರ ಪರೀಕ್ಷೆಗೆ ವಿಷಯಗಳಾಗಿ, ಅವರು ಸ್ವಸ್ವರ ಕಾರ್ಯವಿಧಾನ ಸಂಪ್ರದ್ಗೋಚರಾಗಿ ಸವರ್ಥವಾಗಲು, ಅವರು ಅವರವರೆ ಪ್ರತಿನಿಧಿವರ ನಾದಿವಾದ ಸ್ವಾತಂತ್ರ್ಯವು ಪ್ರಜೆಗಳಿಗೊಪ್ಪಿಸಿದರು. ಈ ಕ್ರಮವು ಪ್ರಾರಂಭವಾಗಿ ಎರಡು ವರ್ಷಗಳ ಕಳೆಯಿತು. ಈ ವಿಷಯದಲ್ಲಿ ಗವರ್ನಮೆಂಟಿನವರು ಪ್ರಜೆಗಳಲ್ಲಿ ಟ್ಟ ನಂಬಿಕೆಯು ವ್ಯಕ್ತವಾಗಿದೆ. ಪ್ರತಿನಿಧಿಗಳ ಚುನಾವಣೆ ಕಾರ್ಯವು ಕ್ರಮವಾಗಿ ನಡೆದು ಸಭೆ ಸ್ಥಾಪನೆಯಾಗಿ ಸಭೆಯು ಉತ್ಕರ್ಷಣೀಯವಾದ ದರ್ಶಕವಾಗಿ ಪ್ರಭುತ್ವಕ್ಕೆ, ಅನ್ಯರಾಜ್ಯಗಳಂತೆ ಶಕ್ತಿಪ್ರದವಾಗುವ ದೆಂದರಲ್ಲಿ ಸಂದೇಹವಿಲ್ಲವು. ಇಂತಾ ಪ್ರಾಬಲ್ಯ ದೇಶದ ಮೈಸೂರು ಸದರೀ ಸಭೆಯ ಆತಳಿತೆಗಳೂ ಜವಾಬ್ದಾರಿಯೂ, ವಿಚಾರಣಾ ಪ್ರವರ್ತನೆಯಾದವರ ಕರ್ತವ್ಯಶಕ್ತಿಯೂ, ತತ್ಸಂಬಂಧ ವಿಷಯ ಗುಣದೋಷ ವಿಮರ್ಶಕತಾ ಸ್ವಾತಂತ್ರ್ಯವೂ, ಹೆಚ್ಚುತ ಬರುವವು. ಅದುದರಿಂದ ಪ್ರಸಕ್ತ ಸಭೆಯಲ್ಲಿ ಪ್ರಸ್ತಾವಿಸಲ್ಪಡಬಹುದಾದ ವಿಷಯಗಳೂ ಅವು ನಿರ್ಣಯಿಸಲ್ಪಡಬಹುದಾದ ಪರ್ಗಳೂ ಇಮನರೆಗಿನಂತೆ ಮುಂದೆ ಇರ ಲಾರವಾಗಿ ಅಗಳ ಸ್ವರೂಪ ಪ್ರಯೋಜನಗಳಂ ಶ್ರೀಮನ್ಮಹಾರಾಜರವರು ಸಾಕ್ಷಾತ್ತಾಗಿ ಅರಿತು ಜವಾಬ್ದಾರಿಯನ್ನು ಸ್ವತಃ ವಹಿಸುವದರಿಂದ ಅವರಿಗೊಂದುಬಗೆ ಸಂತೃಪ್ತಿಯೂ, ಪ್ರಜೆಗಳಿಗೊಂದುಬಗೆ ಧೈರ್ಯವೂ, ಮಧ್ಯವರ್ತಿಜ್ಞಾಪರಿಪಾಲಕರಾದವರಿಗೊಂದು ಸೌಲಭ್ಯವೂ ಉಂಟಾಗುವವು. ಕೇವಲ ರಾಜಕೀಯಗಳಲ್ಲದೆ ಕಾಸ್ಮಿರಿಯಗಳಾಗಿಯೂ, ತತ್ತಜ್ಜಾತಿಮತ ಸಂಪ್ರದಾಯಗಳಿಗೆ ಸಂಬಂಧಪಟ್ಟವಾಗಿಯೂ, ಬಹುಜನ ಯೋಗಕ್ಷೇಮ ಗಳಿಗೆ ಆಧಾರಭೂತಗಳಾಗಿಯೂ ಇರುವ ವಿಷಯಗಳು ಈಗ ಪ್ರಾಯಶಃ ಪ್ರತಿನಿಧಿಗಳಿಂದ ಸಭೆಯಲ್ಲಿ ಪ್ರಸ್ತಾವಿಸಲ್ಪಡುತಿವೆಯಾಗಿ ಅವುಗಳ ಸ್ಥೂಲಸೂಕ್ಷ್ಮಗಳು ಸಮರ್ಥರಾದ ಅಧಿಕಾರಿಗಳ ಸಹಾಯದೊಡನೆ ಪ್ರತ್ಯಕ್ಷವಾಗಿ ವಿಚಾರಿಸಿ ತಿಳಿದು ರಮ್ಮ ತೀರ್ಮಾನವನ್ನು ಮಾಡುವದರಿಂದ ಪ್ರಾಪಂಚಿಕ ವಿಷಯಸ್ವರೂಪ ಜ್ಞಾನವೂ, ಪ್ರಜೆಗಳ ಪ್ರಾರ್ಥನಾ ಸ್ವರೂಪವೂ ವ್ಯಕ್ತವಾಗದಿರಲಾರದು. ಆದಾಗ್ಯೂ ಸಕಲ ವಿಲಕ್ಷಣ ರಾಜ್ಯತಂತ್ರ ಕ್ರಮಗಳಲ್ಲಿಯೂ ಒಂದಾಗಿ ಎಲ್ಲರಿಂದಲು ಭಾವಿಸಲ್ಪಟ್ಟದೆಯಾಗಿ, ಬಹುವಿಧ ರಾಜಕೀಯ ಪರಿಷ್ಕರಣಗಳಲ್ಲಿವೂ ಅಪೇಕ್ಷಿತವೆಂದು ಬಗೆದು ಶ್ರೀಮನ್ಮಹಾರಾಜರವರಿಗೆ ಯುಕ್ತತೋರಿದರೆ ತಮ್ಮ ಪ್ರಜೆಗಳ ಕೋರಿಕೆಯಂತೆ ನೆರವೇರಿಸಬಹು ದು ಎರಡನೆಯದಾದ ಅಹವಾಲ ವಿಚಾರಣೆಯು ಸಹ ಯೋಗ್ಯವಾದ ಪ್ರಾರ್ಥನೆಯಾಗಿರುತಿವೆ. ಈ ಕ್ರಮವು ಸಾಗಲೇ ಸಕಲಲ್ಲಿಯೂ ನಡೆದುಬರುತಿವೆ. ಆದರೆ ಒಂದಂಶವನ್ನಿಲ್ಲಿ ಸ್ವಲ್ಪ ಸೂಚಿಸಬೇಕಾಗಿರುತಿವೆ. ಏನಂದರೆ,—ಈಗ ಸದರೀ ಕ್ರಮವನ್ನು ಅನುಸರಿಸುವ ತಾತ್ಪರ್ಯವನ್ನಾಲೋಚಿಸಲಾಗಿ, ಶ್ರೀಮನ್ಮಹಾರಾಜರವರ ಜಾಹಿರಾತಿಗೆ ಪ್ರತಿನಿಧಿಗಳು ರಯತರಿಲ್ಲವೆಂತಲೂ, ಮುಂದೆ ಪರಿಣಿಂದ ಅವರ ಪರವಾಗಿಗೆ ಸಹಾಯ ಬರದೆಂದು ಜನರು ನಂಬಿರುವಂತೆ ತೋರುತಿವೆ. ಈಗ ಅವರಹೊವಿರುವ ಕ್ರಮಾನುಸಾರ ಸಲ ನಿಡುವ ರಾಗಳಲ್ಲಿಯ ದಿವಾನರವರು ಕೊಡುವ ಯಾವ ಗಲ್ಲಾರ್ಡು ಶ್ರೀಮನ್ಮಹಾರಾಜರವರ ಮಂಜೂರಾತಿಯಬಗ್ಗೆ ಕಳುಹಿಸಲ್ಪಡುತಿವೆ. ಇನ್ನೂ ವ್ಯಕಿ ಯಾವವನ್ನಾದರು ರದ್ದು ಮಾಡಬೇಕಾಗಿ ಬಂದ ಹೊಸದಿಕ್ಕಾಗಿ ಅವರ ಸ್ವರಂತ್ರರಾಗಿರುತ್ತಾರೆ. ಖಿರ್ಯಾದು ಅರ್ಜಿಗಳನ್ನು ಪ್ರತ್ಯೇಕವಾಗಿ ಸುನಾವಣೆ ತೆಗೆದುಕೊಂಡರೆ ಸನ್ನಿಧಾನಕ್ಕೆ ಮನವಿ ಮಾಡಬಹುದೆಂದು ಅಭಿಪ್ರಾಯವಾದ ಹಾಗೆ ಸ್ವಲ್ಪ ಸಾಧಾರಣವರ್ಗವರ ಪ್ರತಿನಿಧಿಗಳ ಅಹವಾಲು ದಿವಾನರವರು ಕೊಟ್ಟ ಜವಾಬುಗಳ ವ್ಯಕಿ ಯಾವವನ್ನಾದರು ಪರಿಶೀಲಿಸಿ ಬದಲಾಯಿಸಬಹುದು ಎಂಬುದಾಗಿ ನಂಬಿರುವಂತೆ ತೋರುತಿವೆ. ಪರಂತು ರಾಜ್ಯಾಡಳಿತದಲ್ಲಿ ಸಕಲವಿಧ ಜವಾಬ್ದಾರಿಯನ್ನು ವಹಿಸಿರುವ ದಿವಾನರವರು ಮಾಡುವ ತೀರ್ಮಾನಗಳಿಗೆ ಪ್ರತ್ಯೇಕ ವ್ಯತಿರಿಕ್ತವಾಗಿ ಶ್ರೀಮನ್ಮಹಾರಾಜರವರು ಸ್ವತಃ ತಾವೇ ಖಿರ್ಯಾದುಗಳನ್ನು ವಿಚಾರಿಸಿ ನ್ಯಾಯ ಮಾಡುವರೆಂಬ ಅಂಶ ಮಾತ್ರ ಸಂದೇಹಾಸ್ಪದವಾಗಿದೆ.

## Occasional Notes
## ನೈಮಿತ್ತಿಕ ವಿಷಯನ್ಯಾಸ

ಇಂಡಿಯಾದೇಶದ ಪ್ರಸ್ತುತ ವೈಸರಾಯ್ ಮತ್ತು ರಾದ ಲಾರ್ಡ್ ಲ್ಯಾನ್ಸ್ ಡೌನ್ ಯವರ ಸ್ಥಾನಾವನ್ನರಾಗಿ ನಿಯಮಿಸಲ್ಪಟ್ಟರುವ ಲಾರ್ಡ್ ಎಲ್ಜಿನ್ ಸಾಹೇಬರವರು ಬರುವ ಜನವರಿ ತಿಂಗಳ ೩ನೇ ತಾರೀಖ್ ಸುಮಾರಿಗೆ ಇಂಗ್ಲಂಡಿನಿಂದ ಹೊರಟು ಅದೇ ತಿಂಗಳ ೨೪ನೇ ತಾರೀಖಿನಲ್ಲಿ ಪ್ರಾಯಶಃ ಕಲ್ಕತ್ತೆ ಸೇರಬಹುದೆಂದು ಕಾಣುತಿವೆ.

ಈ ಚೆಗೆ ಮದರಾಸಿನಲ್ಲಿ ಮಹಮ್ಮದೀಯಜಾತಿ ಬಿಕ್ಷುಕಳೊಬ್ಬಳನ್ನು ಸಿರ್ಪ ಕಚ್ಚಿ ಅದರ ವಿಷ ದೇಹದಲ್ಲಿ ವ್ಯಾಪಿಸಿ ಸುಕ್ಷೀಣವಾಗುತಲಿರುವ ಕಾಲದಲ್ಲಿ ಸದರೀ ಹೆಂಗುಸು ಒಂದು ವರ್ಷದ ವಯಸ್ಸಿನ ತನ್ನ ಮಗುವಿಗೆ ಸ್ತನ್ಯಪಾನ ಮಾಡಿಸಿದ್ದರಿಂದ ಅದಕ್ಕೂ ವಿಷ ವ್ಯಾಪಿಸಿ ಇಬ್ಬರೂ ಮೃತಪಟ್ಟರೆಂದು ಮದರಾಸ್ ಪತ್ರಿಕೆಯೊಂದು ತಿಳಿಸುತಿದೆ.

ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಎಂಬ ಸಾರ್ವಜನಿಕ ಸಭೆಯ ಸಹಾಯಾರ್ಥ, ವಿದ್ಯಾಸಂಪಾದನಾರ್ಥ ಲಂಡನ್ ಪಟ್ಟಣದಲ್ಲಿರುವ ಹಿಂದೂ ದೇಶದ ವಿದ್ಯಾರ್ಥಿಗಳು ಚಂದಾ ಮೂಲಕ ದ್ರವ್ಯಸಂಗ್ರಹ ಮಾಡುತ, ಮೊದಲುತಡವೆ ೫೦ ರೂಪಾಯಿಗಳು ಇಂಡ್ಯಾದೇಶಕ್ಕೆ ಕಳುಹಿಸಿಕೊಟ್ಟರೆಂದು ಲಾಹೂರ್ ಟ್ರಿಬ್ಯೂನ್ ಎಂಬ ಪತ್ರಿಕೆಯ ಮೂಲಕ ತಿಳಿಯಬರುತಿದೆ.

ಮದರಾಸಿನಲ್ಲಿ ಬಿ ಎಲ್ ಪರೀಕ್ಷೆಗೆ ಓದುವ ವಿದ್ಯಾರ್ಥಿಗಳ ಅನುಕೂಲ್ಯಕ್ಕಾಗಿ ಒಂದು ಕಟ್ಟಡವು ಕಟ್ಟಿಸಬೇಕಾದುದು ಅವಶ್ಯಕವೆಂದು ಗವರ್ನಮೆಂಟಿನವರು ಯೋಚಿಸಿ ಕೊಟ್ಟ ಹುಕುಮನ್ನನುಸರಿಸಿ ಅಲ್ಲಿನ ಹೈಕೋರ್ಟಿನ ವಕ್ಕದಲ್ಲಿ ಸದರೀ ಕಟ್ಟಡದ ಕೆಲಸಕ್ಕೆ ಪ್ರಾರಂಭವಾಗಿರುತಿದೆ. ಇದಕ್ಕಾಗಿ ಅಯಿದುಲಕ್ಷ ರೂಪಾಯಿಗಳು ಖರ್ಚಾಗಬಹುದೆಂದು ಅಂದಾಜ್ ಮಾಡಲ್ಪಟ್ಟದೆ.

ಈಚೆಗೆ ಮದರಾಸ್ ಹೈಕೋರ್ಟಿನಲ್ಲಿ ಒಂದು ಅಪೀಲ್ ಜಾರೀ ಕೇಸಿನ ಮೇಲೆ ಒಂದು ಜಿಜ್ಞಾಸೆಯುಂಟಾಯಿತೇನೆಂದರೆ —ಡಿಕ್ರೀದಾರನು ತನಗೆ ಹಣ ಕೊಡಬೇಕಾದ ಪ್ರತಿವಾದಿಯು ಮೃತಪಟ್ಟಮೇಲೆ ಅವನ ಹೆಸರನ್ನು ದಾಖಿಲ್ ಮಾಡಿ ಆವನಮೇಲೆ ಅಮಲ್‌ಜಾರಿಯಬಗ್ಗೆ ಕೊಟ್ಟ ಅರ್ಜಿ ಕಾನೂನು ಅನುಸರಿಸಿ ಅಂಗೀಕಾರಾರ್ಹವಾಗುವದೆ ಎಂಬ ವಿಚಾರ ವ್ಯಾಗಿ ಜಡ್ಜಿಗಳಿಂದ ಆಗುತಿದೆಯು ನಿರ್ಣಯಿಸಲ್ಪಟ್ಟವು.

ಈಚೆಗೆ ನಡೆದ ಒಂದು ಗವರ್ನಮೆಂಟ್ ಪರೀಕ್ಷೆಗೆ ಒಬ್ಬ ಅಮೇದವಾರರು ಬರೆದಿದ್ದ ರು. ದೇಶಾಟನೆಯಿಂದುಂಟಾಗಬಹುದಾದ ಪ್ರಯೋಜನ ಪ್ರಯೋಜನಗಳು ಕುರಿತು ಒಂದು ಉಪನ್ಯಾಸವು ಬರೆಯುವಂತೆ ಉಮೇದುವಾರರಿಗೆ ಪ್ರಶ್ನೆಯಲ್ಪಡಲು ಅವರಲ್ಲೊಬ್ಬ ಒಬ್ಬ ತನು ಬರೆದಿದ್ದ ಅಭಿಪ್ರಾಯವೇನೆಂದರೆ — ಚಂದ್ರನು ದಿದಿನಾಲ್ಕು ದಿನಗಳ ಸಂಚಾರಾನಂತರ ಪೂರ್ಣನಾದಿನ ತನ್ನ ಕಾಂತಿಯು ಹ್ಯಾಗೆ ಉಂಟಾಗುತ್ತದೋ ಹಾಗೆ ಮನುಷ್ಯನು ದೇಶಾಟನದಿಂದ ಪೂರ್ಣನಾಗುತ್ತಾನೆ ಎಂದು ಬರೆದಿದ್ದನು. ಪರೀಕ್ಷಕರು ಸದರೀ ಲೇಖನವನ್ನು ನೋಡಿ ಉಮೇದುವಾರನಿಗೆ ಕಲ್ಪನಾಶಕ್ತಿ ಯುಂಟೆಂದು ಅಭಿಪ್ರಾಯಪಟ್ಟು ಆತನು ಪರೀಕ್ಷೆಯಲ್ಲಿ ತೇರ್ಗಡೆಯಾದನೆಂದು ಹೇಳಿದರೆಂದು ಒಂದು ಪತ್ರಿಕೆ ಹೇಳುತಿದೆ.

ಸಾಲಕ್ಕಾಗಿ ಜೆಯಿಲಿನಲ್ಲಿರತಕ್ಕವರನ್ನು ಕೋರ್ಟಿನಲ್ಲಿ ವಿಚಾರಣೆಯಾಗುತಲಿರುವ ಕೇಸಿನೊಂದು ಮೊಕದ್ದಮೆಯಲ್ಲಿ ಸಾಕ್ಷಿಯನ್ನೇನ ಕರೆಯಿಸುವದಕ್ಕೆ ಹೈಕೋರ್ಟಿನ ಸಾಕ್ಷ್ಯನಿಯಮ ಕುರಿತ ಆಕ್ಟನ್ನನುಸರಿಸಿ ಸ್ಮಾಲ್‌ಕಾಜ್‌ಕೋರ್ಟಿನವರಿಗೆ ಅಧಿಕಾರ ವುಂಟೆ ಎಂಬ ಜಿಜ್ಞಾಸೆಯು ಈಚೆಗೆ ಒಂದು ಮೊಕದ್ದಮೆಯಲ್ಲಿ ಉಂಟಾಗಲು ಸದರೀ ಅಧಿಕಾರವು ಹೈಕೋರ್ಟಿನವರಿಗೆ ಮಾತ್ರ ವುಂಟೇ ಹೊರತು ಇತರ ಕೋರ್ಟಿಗಳಿಗಿಲ್ಲವೆಂದು ಅಡ್ವೋಕೇಟ್ ಮೆಖ್ ರೆಡ್ಡಿ ಬ್ಯಾರಿಸ್ಟರ್ ಯವರು ತಿಳಿಸಿದರು, ಪರಂತು ಜಸ್ಟಿಸ್ ಯವರಾದ ಮಿ|| ಎಸ್ ಸುಬ್ರಹ್ಮಣ್ಯಯವರು ತಮಗೆ ಅಧಿಕಾರ ವುಂಟೆಂದು ಅಭಿಪ್ರಾಯಪಟ್ಟು ಸಿವಿಲ್ ಜೆಯಿಲಿನಲ್ಲಿರು ಮತವನನ್ನು ಕೋರ್ಟಿಗೆ ಹಾಜರ್ಮಾಡತಕ್ಕದ್ದೆಂದು ವಾರಂಟು ಕೊಟ್ಟರು.

ಮದರಾಸಿನಲ್ಲಿ ಸುಮಾರು ಒಂದು ತಿಂಗಳಹಿಂದೆ, ಸಾರಂಗಪಾಣಿ ಯೆಂಬ ಪೋಲೀಸ್ ಕಾನಸ್ಟೆಬಲ್ ಒಬ್ಬನು, ರಾಯಪುರದ ರಸ್ತೆಯಲ್ಲಿ ಹೋಗುತಲಿದ್ದ ಕೆಲವು ಚಕಡಾ ಗಾಡಿಗಳನ್ನು ಅಡ್ಡ ಹಾಕಿ ನಿಲ್ಲಿಸಿ, ಅವರು ರಸ್ತೆ ಮಾರ್ಗದಲ್ಲಿ ಗಾಡಿಗಳಂ ಹೊಡೆದರೆಂಬ ಕಾರಣವು ಕಲ್ಪಿಸಿಕೊಂಡು ಅವರನ್ನಲ್ಲ ದಸ್ತಗಿರಿ ಮಾಡಿ, ತರುವಾಯ ಅವರಿಂದ ಎರಡು ಆಣೆ ರುಷುವತ್ತು ತೆಗೆದುಕೊಂಡು ಬಿಟ್ಟುಬಿಟ್ಟದ್ದಾಗಿ ಪೋಲೀಸ್ ಇನಸ್ಪೆಕ್ಟರಿಂದ ಆತಿಂಗಳ ೧೪ನೇ ತಾರೀಖಿನಲ್ಲಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಆಧಾದಿಸಲ್ಪಟ್ಟು ಎರಡು ತಿಂಗಳ ಕಠಿಣ ಶೈಪಿಸಜಾ ವಿಧಿಸಲ್ಪಟ್ಟನೆಂದು ಮದರಾಸ್ ಮೇಯಿಲ್ ಪತ್ರಿಕೆಯ ಮೂಲಕ ತಿಳಿಯಬಂದದರಿಂದ, ಈ ದೇಶದೊಳಗೂ, ಜ್ಞಾನಿಕೊನ್ನರಾದ ಹಳ್ಳಿ ಜನರಿಗೆ ತೊಂದರೆಯುಂಟುಮಾಡುವ ಪೋಲೀಸ್ ಜವಾನರನೇಕರಿರುತ್ತಾರಾಗಿ ಅಂತವರ ತಿಳುವಳಿಕೆಯಬಗ್ಗೆ ಈ ವಿಷಯವು ಪ್ರಕಟಿಸಿರುತ್ತೇವೆ.

ಲಾರ್ಡ್ ಲ್ಯಾನ್ಸ್ ಡೌನ್ ಸಾಹೇಬರವರು ಬಾಯ ಕೆ ಬರುವ ಜನವರಿ ತಿಂಗಳ ೨೩ನೇ ತಾರೀಖಿನಲ್ಲಿ ಇಂಡ್ಯಾದೇಶದಿಂದ ಇಂಗ್ಲಂಡಿಗೆ ಪ್ರಯಾಣ ಹೊರಡಬಹುದೆಂದು ಕೋರುತಿವೆ. ವೈಸರಾಯಿಯವರು ಬರುವ ತಿಂಗಳ ೩ನೇ ತಾರೀಖಿನಲ್ಲಿ ಆಗ್ರಾ ಪಟ್ಟಣಕ್ಕೆ ದಯಮಾಡಿ ಅಲ್ಲಿ ನಾಲ್ಕೈದು ದಿನಗಳತನಕ ಬಿಜಯಮಾಡಿದ್ದು ೧೫ನೇ ತಾರೀಖ್ ನಾಯಂಕಾಲ ಡೈಮೆಂಡ್ ಹಾರ್ಬರ್ ನಿಂದ ವಾರ್‌ಹೇಸ್ಟಿಂಗ್ ಯೆಂಬ ಹೆಸರುಳ್ಳ ಹೊಗೆ ಹಡಗಿನಲ್ಲಿ ಹೊರಟು ಅದೇ ತಿಂಗಳ ೧೭ನೇ ತಾರೀಖಿನದಿನ ರಂಗೂನ್ ಪಟ್ಟಣವಂ ಸೇರುವರು. ರಂಗೂನ್ ಪಟ್ಟಣದಲ್ಲಿ ನಾಲ್ಕೈದು ದಿವಸಗಳಿದ್ದು ರೆಯಿಲ್ ಮಾರ್ಗವಾಗಿ ಮಾಂಡಲೆ ಪಟ್ಟಣಕ್ಕೆ ದಯಮಾಡುವರು. ಅಲ್ಲಿಯೂ ಮೆರಡು ಮೂರು ದಿನಗಳು ಕಳೆದುಕೊಂಡು ಬಳಿಕ ಜಹಜಿನಲ್ಲಿ ಭಾವೊ, ಪ್ರೋಂ ಪಟ್ಟಣಗಳ ಮಾರ್ಗವಾಗಿ ರಂಗೂನ್ ಪಟ್ಟಣಕ್ಕೆ ವಾಪಸ್ ಬಂದು ಅಲ್ಲಿಂದ ನೆಟ್ಟಗೆ ಕಲ್ಕತ್ತೆಗೆ ಹೋಗಿ ಸೇರುವರು. ವೈಸರಾಯಿಯವರ ಈಗಿನ ಏರ್ಪಾಡುಗಳನ್ನನುಸರಿಸಿ ಮೂರು ವಾರಗಳ ತನಕ ಬರ್ಮಾ ರಾಜ್ಯದಲ್ಲಿ ಸಂಚರಿಸುತಲಿರುವಂತೆ ಸ್ಪಷ್ಟವಾಗುತಿದೆ. ಇವರ ಪ್ರೈವೇಟ್ ಸೆಕ್ರಟರಿಯವರಾದ ಕರ್ನಲ್ ಆರ್ಡಾಗ್ ಯೆಂಬವರೇ ಮುಂದೆ ಬರತಕ್ಕ ವೈಸರಾಯಿ ಯವರಿಗೆ ಕೂಡ ಬರುವ ಮಾರ್ಚಿ ಯನ್ನೆಗೆತನಕ ಪ್ರೈವೇಟ್ ಸೆಕ್ರೆಟರಿಯಾಗಿರುತಲಿರುವರೆಂತಲೂ, ಅವರಿಗೆ ಬದಲಾಗಿ ಮೊಕರರಾಗತಕ್ಕವರು ಘಟನಾನೆಯವರೆಂದು ಅದ್ಯಾಪಿ ವ್ಯವಸ್ಥೆಯಾಗಲಿಲ್ಲವೆಂತಲೂ ಕೇಳುತ್ತೇವೆ.

## LOCAL AND PROVINCIAL NEWS
## ಬಳದೇಶಮತ್ತು ತಾಲ್ಲೂಕ್‌ಜಾತವೃತ್ತಾಂತಗಳು.

ಬೆಂಗಳೂರು-ಮೈಸೂರು ರೆಯಿಲ್ವೆ ರಸ್ತೆಗೆ ಸೇರಿದ ಚೆಲಿಯೂರ್ ಸ್ಟೇಷನಿನಲ್ಲಿ ಒಬ್ಬಾತನು ಮೈಸೂರಿಗೆ ಹೋಗುವ ಉದ್ದೇಶದೊಡನೆ ರೆಯಿಲ್‌ಗಾಡಿ ಹತ್ತುವಲ್ಲಿ ಕಾಲು ಜಾರಿಬಿದ್ದು ಜಖಮುಗಳಾಗಿ ತನ್ಮೂಲಕ ಮೃತಪಟ್ಟನೆಂದು ಮೈಸೂರಿಗೆ ಹೋಗಿಬಂದ ಒಬ್ಬ ಬಾತವಿದಾರನು ತಿಳಿಸುತ್ತಾನೆ.

ಈಗ ಪೂರ್ತಿಯಾಗಿನ್ನೈದಿದ ದಸರಾ ಉತ್ಸವ ಕಾಲದಲ್ಲಿ ಮೈಸೂರು ಷಹರಿನೊಳು ಈಚೆಗೆ ಹೊಸದಾಗಿ ಕಟ್ಟಲ್ಪಟ್ಟ ಕೆಲವು ಕಟ್ಟಡಗಳು ಅತಿವೃಷ್ಟಿಯಿದೆಸೆಯಿಂದ ಕುಸಿಬಿದ್ದು ಜಾಯಾ ಆಗಿ ತನ್ಮೂಲಕ ಕೆಲವು ಪ್ರಾಣಹಾನಿಗಳು ನಡೆ ಆದಂತೆ ಈಚೆಗೆ ಈ ಪ್ರತೋಲುಂಟಾದ ಪ್ರವಾದವು ನಿರವಕಾಶವಾದುದೆಂದು ಬಳದೇಶದ ಸ್ಪೆಕ್ಟೇಟರ್ ಪತ್ರಿಕೆಯು ತಿಳಿಸುತಿದೆ.

ಮೈಸೂರ್ ಚೀಫ್‌ಕೋರ್ಟಿನ ಜಡ್ಜಿಗಳು ಮೂವರೂ ಮೂವರು ಟೈಪ್ಸಗಳನ್ನು, ಅಂದರೆ ಮೂವರು ರೈಟರ್‌ಗಳನ್ನು ಇಟ್ಟುಕೊಳ್ಳುವಂತೆ ಮೈಸೂರ್ ಗವರ್ನಮೆಂಟಿನವರು ಮಂಜೂರ್ಮಾಡಿರುವಂತೆಯೂ, ಸದರೀ ಮೂವರು ರೈಟರ್‌ಗಳ ಪೈಕಿ ಒಬ್ಬಾತನಿಗೆ ಮಾಹೆಯಾನಾ ೩೦ ರೂಪಾಯಿಗಳೂ ಮಿಕ್ಕ ಇಬ್ಬರಿಗೆ ೨೦ ರೂಪಾಯಿಗಳೂ ತಲಾ ನಿಷ್ಕರ್ಷೆಯಾಗಿರುವಂತೆಯೂ, ಒಳದೇಶದ ಪತ್ರಿಕೆ ಯೊಂದರಿಂದ ತಿಳಿಯಲಾದೆವು.

ಮೈಸೂರ್ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾಗುವತನಕ ಯಾವ ವಿಧದಿಂದಲಾದರೂ ಪ್ರೋತ್ಸಾಹವುಂಟು ಮಾಡಬೇಕಾದ್ದು ನ್ಯಾಯವಾಗಿರುತಿದೆಯೆಂದು ಎಜ್ಯುಕೇಷನ್ ಸೆಕ್ರೆಟರಿಯವರು ಗವರ್ನಮೆಂಟಿಗೆ ಮಾಡಿದ ಸಿಫಾರಸನ್ನು ಪರ್ಯಾಲೋಚಿಸಿ, ತಾಲ್ಲೂಕ್‌ಜಾತನಲ್ಲಿ ಮುಂದೆ ಖಾಲಿಯಾಗುವ ಗುಮಾಷ್ಟೆ ವಗ್ಯರೇರ ನೌಕರಿಗಳನ್ನು ಪರೀಕ್ಷೆ ಕೊಟ್ಟಂತವರಿಗೇನೆ ಕೊಡತಕ್ಕದ್ದೆಂದು ಗವರ್ನಮೆಂಟಿನವರು ಈಚೆಗೆ ಪ್ರೊಸೀಡಿಂಗ್ಸ್ ಮಾಡಿರುವಂತೆ ಕೇಳುತ್ತೇವೆ.

ಸಿಪಾಯಿ ಅಸನ್ಮಖಾನನೆಂಬವನು ಖೂನ್ ನಡೆಸಿದಬಗ್ಗೆ ಮಿಲಿಟರಿ ಸ್ಟೇಷನ್ ಸೆಷನ್ ಜಡ್ಜಿಯವರಿಂದ ವಿಧಿಸಲ್ಪಟ್ಟ ಮರಣ ದಂಡನೆಯ ಮೇಲೆ ಅವನು ರೆಸಿಡೆಂಟರಿಗೆ ಮಾಡಿಕೊಂಡ ಅಪೀಲ್ ಮೊಕದ್ದಮೆಯು ವಿಚಾರಣೆಯಾಗಿ, ಅವರಿಂದಲೂ ಕಾಯಂ ಮಾಡಲ್ಪಟ್ಟಿತಾಗಿ, ಅಪರಾಧಿಯು ಇಂಡ್ಯ ಗವರ್ನಮೆಂಟಿಗೆ ಅಪೀಲ್ ಮಾಡಿ ತನ್ಮೂಲಕ ಅವನಿಗೆ ವಿಧಿಸಲ್ಪಟ್ಟ ದಂಡನೆಯು ಸದ್ಯಕ್ಕೆ ನಿಲ್ಲಿಸಿ ಇಡಲ್ಪಡದ ಪಕ್ಷಕ್ಕೆ ಈ ತಿಂಗಳ ೩೧ನೇ ತಾರೀಖಿನಲ್ಲಿ ಗಲ್ಲಿಗೆ ಹಾಕಲ್ಪಡುವನು.

ಈಚೆಗೆ ನಾಲ್ಕೈದು ದಿನಗಳಿಂದ ಆಗಿಂದಾಗ್ಯೆ ಮೋಡ ಮುಸುಕುತ ತುಂತುರುಮಳೆ ಬೀಳುತಲಿದೆಯೇ ಹೊರ್ತು ಬಲವಾದ ವರ್ಷವಿಲ್ಲವು ವರ್ಷವು ಮಧ್ಯೆಮಧ್ಯೆ ಸ್ವಲ್ಪ ದಿನಗಳು ನಿಂತು ಬಿಸಿಲು ಕಾಯುವಣವು ಫಸಲಿಗಳಿಗೆ ಬಹಳ ಅನುಕೂಲವಾದುದು, ಇನ್ನು ಯೆಂಟು ದಿನಗಳು ಬಿಟ್ಟುಕೊಂಡು ಮರಳಿ ಯೆಂದು ದಫೆ ಒಳ್ಳೆಯ ಮಳೆ ಬಿದ್ದರೆ ರಾಗಿ ಫಸಲ್ ಪೂರ್ತಿಯಾಗುವುದು. ದೈವಯೋಗ ದ್ಯಾಗಿರುವುದೊ ಹೇಳಲಸಾಧ್ಯವು. ಆಹಾರ ಪದಾರ್ಥಗಳ ಧಾರಣೆಗಳು ಪ್ರಾಯಶಃ ಒಂದೇವಿಧವಾಗಿರುತಿವೆ. ಕೂಲಿ ದಮಟ್ಟಿಗೆ ಸದ್ಯಃ ದಲದೌರ್ಲಭ್ಯವು ತಪ್ಪಿರುತಿದೆ. ರೋಗಾದ್ಯುಪದ್ರವಗಳೇನೂ ಇಲ್ಲವು. ಜನಾರೋಗ್ಯವುಸಾಮಾನ್ಯವಾಗಿಚೆನ್ನಾಗಿರುತಿದೆ

ಊವಹರಿಗೆ ಮುಖ್ಯಾಧಾರವಾಗಿರುವಧರ್ಮಾಂಬುಧಿ ಕೆರೆಯ ಪ್ರಕೃತ ಸ್ಥಿತಿಯಂ ಹಿಂದಿನ ಪತ್ರಿಕೆಯ ಮೂಲಕ ವಿವರವಾಗಿ ತಿಳಸಿರುತ್ತೇವೆ ಯಷ್ಟೆ. ಅದನ್ನು ಕ್ರಮಪಡಿಸಬೇಕಾದ ವಿಷಯಕ್ಕೆ ಮ್ಯೂನಿಸಿಪಾಲಿಟಿಯವರು ಇದುವರೆಗೆ ನಿಗೇ ಕೊಟ್ಟಂತೆ ಕಾಣಲಿಲ್ಲವು. ಕಾರುಜೆಗಳನ್ನು ಕೆಲವು ಪ್ರದೇಶಗಳಲ್ಲಿ ಅಗೆದು ಕೋಳಿಸುತಲಿದಾರೆ, ಅವುಗಳಿಂದ ಹೊರಡುವ ದುರ್ವಾಸನೆಯು ದುಸ್ಸಹವಾಗಿರುತಿದೆ. ಆ ಮಾರ್ಗದಲ್ಲಿ ಹರಿಯುವ ನೀರನ್ನು ಪಾನಮಾಡುವಂತವರಿಗೆ ಜ್ವರಾದ್ಯುಪದ್ರವಗಳು ತಗಲಲಾರದೆಂದು ಹ್ಯಾಗೆ ಹೇಳಬಹುದು? ಸದರೀ ಕೆರೆಯ ಒಳಗೆರೆಯಲ್ಲಿ ಬೆಳದಿರುವ ನಾನಾವಿಧ ಹುಲ್ಲು ವಗ್ಯೆರೆ ಕಶ್ಮಲಗಳಿಂದ ನೀರು ಕೆಟ್ಟು ದುರ್ವಾಸನೆಯುಂಟಾಗಿದೆ. ಅವನ್ನೆಲ್ಲ ಕೀಳಿಸಿ ಕ್ರಮಪಡಿಸಬೇಕಾದ್ದು ಮ್ಯೂನಿಸಿಪಲ್ ಇಲಾಖೆಯವರ ಕರ್ತವ್ಯವಾಗಿದ್ದಾಗ್ಯೂ ಆ ವಿಷಯದಲ್ಲಿ ಅವರ ಔದಾಸೀನ್ಯಕ್ಕೆ ಕೊನೆಮೊದಲೇ ಕಂಡುಬರುವದಿಲ್ಲವು. ಪೇಟೆಯ ನಿವಾಸಿಗಳಾದರೊ ಯೇಡಿಗಳಲ್ಲಿ ಅಗ್ರಿಮರು.

ಬಾಲ್ಯ ವಿವಾಹ ವಿಚಾರದಲ್ಲಿ ಜನಗಳ ಅಭಿಪ್ರಾಯವಂ ತಿಳಯುತಕ್ಕಬಗ್ಯೆ ಮ|| ರಾ|| ಮೊಕಟಕೃಷ್ಣಪ್ಪನವರು ಈ ತಿಂಗಳ ೧೮ನೇ ತಾರೀಖ್ ಶನಿವಾರದದಿನ ಒಂದು ಸಭೆಯಂ ಸೇರಿಸಿದರು. ವಿದ್ಯಾ ಪತಿಸ್ವಾಮಿ ತಿರುಮಲಾಚಾರ್ಯರು ಉಪನ್ಯಾಸವಂಮಾಡಿ ಸರ್ಕಾರದವರು ಈ ವಿಚಾರದಲ್ಲಿ ವಿಧಿಗಳನ್ನೇರ್ಪಡಿಸುವದು ಯುಕ್ತವಲ್ಲವೆಂದು ಅಭಿಪ್ರಾಯಪಟ್ಟರು. ಮ|| ರಾ|| ಸಿವಪಡ್ಡಿ ರಾಮಸ್ವಾಮಯ್ಯನವರೂ, ಪ್ಲೀಡರ್ ಎನ್. ಸುಬ್ರಾಯರವರೂ ಅನುಮೋದಿಸಿದರು ಮ|| ರಾ|| ಮುನಸಫ್ ಶೇಷಗಿರಿರಾಯರು ಸರ್ಕಾರದವರು ಪ್ರವೇಶಿಸಿ ವಿಧಿ ಮಾಡಿದ್ದರಿಂದ ಬಾಧಕವೇನೂ ಇಲ್ಲ ... ನ್ನು ಪಾಲಿಸತಕ್ಕ ಸರ್ಕಾರದವರು ಪ್ರವೇಶಿಸಿ ಬಂದೋಬಸ್ತು ಮಾಡುವದು ಆವಶ್ಯಕವೆಂಬ ಅಭಿಪ್ರಾಯವಂ ವ್ಯಕ್ತಗೊಳಸಿದರು ಇನ್ನೂ ಅನೇಕರ ಅಭಿಪ್ರಾಯವಂ ತಿಳಯುವದಕ್ಕೋಸ್ಕರ ಮುಂದಿನ ಭಾನುವಾರ ೨ ಘಂಟೆ ಅಡ್ಜರ್ನ ಮಾಡಿದರು-ದೇಶಾ

ದರ್ಬಾರ್ ಮರ್ಯಾದೆಗಳು.

ಈ ತಿಂಗಳ ೧೮ನೇ ತಾರೀಖ್ ಸಾಯಂಕಾಲದಲ್ಲಿ ದರ್ಬಾರಿನೊಳು ಶ್ರೀಮನ್ಮಹಾರಾಜರವರು ದಿವಾನರವರಿಗೆ ಅನರ್ಘ್ಯವಾದ ಒಂದು ವಜ್ರದ ಉಂಗುರವನ್ನೂ, ಶಾಲುಜೋಡಿಯನ್ನೂ ಕೊಟ್ಟದ್ದಲ್ಲದೆ ರಾಜ್ಯಭಾರ ಧುರಂಧರತ್ವ ಪ್ರವರ್ತಕವಾದ "ರಾಜ್ಯಧುರಂಧರ" ಎಂಬ ಬಿರುದನ್ನೂ ಕೊಟ್ಟರು ಮತ್ತು ಇನ್ನು ಏಳುಜನ ದೊಡ್ಡ ಮನುಷ್ಯರಿಗೆ ಏಳುತರಹ ಬಿರುದುಗಳನ್ನು ದಯಪಾಲಿಸಿದರು. ಆ ಹೊರತು ಮ|| ರಾ|| ತಂಬುಶೆಟ್ಟರವರು, ಮ|| ರಾ|| ಸಭಾಪತಿ ಮೊದಲಿಯಾರ್‍ರವರು, ಮ|| ರಾ|| ಚಂಚಲರಾಯರವರು, ಅರೇಪುರದ ಬಸವಪ್ಪಾಜಿಯವರು, ಮ|| ರಾ|| ದರ್ಬಾರ್ ಭಕ್ಷಿಯವರು, ಖಾನ್ ಬಹದೂರ್ ಮಹಮ್ಮದಲ್ಲಿಯವರು, ಮ|| ರಾ|| ಆರ್ಕಾಟು ನಾರಾಯಣಸಾಮಿ ಮೊದಲಿಯಾರ್‍ರವರು. ಇವರುಗಳಿಗೆ ವಜ್ರದ ಕುಂಡಲಗಳೂ, ಶಾಲುಜೋಡಿಗಳೂ ಕೊಡಲ್ಪಟ್ಟವು ಮ|| ರಾ|| ಗುಂಜಾ ನರಸಿಂಹಯ್ಯನವರಿಗೆ ಚಿನ್ನದ ಚೇರಿಯು ಕೊಡಲ್ಪಟ್ಟಿತ ವೇದಮೂರ್ತಿ ಸೀತಾರಾಮ ಶಾಸ್ತ್ರಿಗಳು, ಶ್ರೀ ಉ ಕಸ್ತೂರಿ ರಂಗಾಚಾರ್ಯರವರು, ಪ್ರೊ|| ಬೆಂಗಳೂರು ವಾಸುದೇವ ಶಾಸ್ತ್ರಿಗಳು—ಇವರುಗಳಗೆ ರತ್ನಖಚಿತವಾದ ಚಿನ್ನದ ತೋಡಾಗಳು ಕೊಡಲ್ಪಟ್ಟವು ಈ ಬಿರುದುಗಳನ್ನು ದಯಪಾಲಿಸಿರುತ್ತೇವೆಂದು ಪ್ರಕಟಿಸತಕ್ಕ ಒಂದು ಎಕ್ಸ್ಟ್ರಾರ್ಡಿನರಿ ಗಜೆಟನ್ನು ಮ, ರಾ, ಆರ್ಕಾಟ ಶ್ರೀನಿವಾಸಾಚಾರ್ಯರು ಓದಿದರು. ...ಪ್ರಜೆಗಳಗೂ, ಅಧಿಕಾರಿಗಳಗೂ, ವಿದ್ವಾಂಸರಿಗೂ ಈರೀತಿಯಲ್ಲಿ ಬಹುಮಾನ ಮಾಡಬೇಕೆಂಬ ಪ್ರಯತ್ನವನ್ನು ಉಪಕ್ರಮ ಮಾಡಿದ್ದಕ್ಕಾಗಿ ಶ್ರೀಮನ್ಮಹಾರಾಜರವರಿಗೆ ನಾವು ಬಹಳ ಕೃತಜ್ಞರಾಗಿದೇವೆ—ವೃ ಚಿಂ

THE MYSORE GAZETTE

ಮೈಸೂರು ಗಜೆಟ್

ಶ್ರೀಮನ್ಮಹಾರಾಜರ ಗವರ್ನಮೆಂಟ್ ಸರ್ಕಾರ ದಿಂದ ಹೊರಡಿಸಿದ ಇಸ್ತಿಹಾರುಗಳು.

ಸನ್ ೧೮೯೩ನೇ ಇಸವಿ ಅಕ್ಟೋಬರ್ ತಾರೀಖು ೧೫ರಲ್ಲು ದಸರಾ ಪ್ರಯುಕ್ತವಾದ ದರ್ಬಾರಿನಲ್ಲಿ ಶ್ರೀಮನ್ ಮಹಾರಾಜ ರಾಜಾ ಸಾಹೇಬ್ ಬಹದೂರವರು ಬಿರದುಗಳನ್ನು ದಯಪಾಲಿಸಿ ಅಪ್ಪಣೆ ಕೊಟ್ಟ ಇದರ ಕೆಳಗೆ ಬರುವ ಪ್ರಸಿದ್ಧ ಪತ್ರಿಕೆಯನ್ನು ಸರ್ವರ ತಿಳುವಳಿಕೆಬಗ್ಯೆ ಪ್ರಕಟಸಿರುತ್ತೆ:—

ಪ್ರಸಿದ್ಧ ಪತ್ರಿಕೆ.

ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪ ಅಪ್ರತಿಮವೀರ ನರಪತಿಬಿರುದಾಂತೆಂಬರ ಗಂಡ ಲೋಕೈಕವೀರ ಯದುಕುಲ ಪಯಃಪಾರಾವಾರ ನಿಶಾಕರ ಶಂಖಚಕ್ರಾಂಕುಶ... ಕರ್ಣಾಟಕ ಸಿಂಹಾಸನಾಧೀಶ್ವರ, ಶ್ರೀಮನ್ ಕೃಷ್ಣರಾಜ ಒಡೆಯರ್ ಬಹದೂರ್ ಜಿ ಸಿ ಎಸ್ ಐ ಯವರ ಹುಜೂರ್ ಮಹಾಸನ್ನಿಧಾನದಿಂದ,

ವಿಜಯ ಸಂವತ್ಸರದ ಆಶ್ವೀಜಶುದ್ಧ ಸಪ್ತಮೀ ಮಂಗಳವಾರಕ್ಕೆ ಸರಿಯಾದ ಸನ್ ೧೮೯೩ನೇ ಇಸವಿ ಅಕ್ಟೋಬರ್ ತಾರೀಖ್ ೧೭ರಲ್ಲು ನಮ್ಮ ಪಟ್ಟಾಭಿಷೇಕ ಮಹೋತ್ಸವ ಪ್ರಯುಕ್ತವಾದ ಈ ದರ್ಬಾರಿನಲ್ಲಿ ನಮ್ಮ ಅನುಗ್ರಹಕ್ಕೆ ಪಾತ್ರರಾದ ಸರ್, ಕುಮಾರಪುರಂ ಶೇಷಾದ್ರಿ ಅಯ್ಯರ್ ಕೆ ಸಿ. ಎಸ್. ಐ ಯವರಿಗೆ "ರಾಜ್ಯ ಧುರಂಧರ" ಎಂಬ ಬಿರುದನ್ನೂ, ತಿರುಚನಾಪಳ್ಳಿ ರಾಯಲು ಆರೋಗ್ಯಸಾಮಿ ತಂಬುಶೆಟ್ಟಿಯಾರ್‍ರಿಗೆ "ರಾಜಧರ್ಮ ಪ್ರವೀಣ" ಎಂಬ ಬಿರುದನ್ನೂ, ಹಾನಗಲ್ ಪಳ್ಳಿ ಚಂಚಲರಾವ್ ಪಂತುಲುಗಾರು ಸಿ. ಐ ಇ ಯವರಿಗೆ "ರಾಜಮಂತ್ರ ಪ್ರವೀಣ" ಎಂಬ ಬಿರುದನ್ನೂ, ರಾಯಬಹದೂರ್ ಅಂಬಲೆ ನರಸಿಂಹಯ್ಯಂಗಾರ್ರಿಗೆ "ರಾಜಕಾರ್ಯ ಪ್ರಸಕ್ತ" ಎಂಬ ಬಿರುದನ್ನೂ, ಅರೇಪುರದ ಬಸವಪ್ಪಾಜೆ ಅರಸಿನವರಿಗೆ "ರಾಜಸೇನಾಭೂಷಣ" ಎಂಬ ಬಿರುದನ್ನೂ, ಖಾನ್ ಬಹದೂರ್ ಮಹಮ್ಮದ್ ಅಲ್ಲಿ ಯವರಿಗೆ "ಜೌಹಿರೆಮಜಲಿಸ್" ಎಂಬ ಬಿರುದನ್ನೂ, ಮ|| ಹರಿ ಕೋಠವಾಲಿಯವರಿಗೆ "ದಸ್ತನಿರತ" ಎಬ ಬಿರುದನ್ನೂ, ದೊಡ್ಡ ಬಳ್ಳಾಪುರದ ವಾಸುದೇವಶಾಸ್ತ್ರಿಗಳಿಗೆ "ವಿದ್ಯಾನಿಧಿ" ಎಂಬ ಬಿರುದನ್ನೂ, ತಕ್ಕ ಮರ್ಯಾದೆಗಳೊಡನೆ ದಯಪಾಲಿಸಿರುತ್ತೇವೆ.

ಶ್ರೀ ಚಾಮರಾಜೇಂದ್ರ ಒಡೆಯರ್

ಮೊಕ್ಕಾಂ ನಂ|| ೧. ಮೈಸೂರ್ ತಾ|| ೧೭ನೇ ಅಕ್ಟೋಬರ್ ೧೮೯೩—ಮಹಾ ಮಹಕೂರಿಂ೩ನೇ ತಾರೀಖಿನ ಅಪರಾಹ್ನದಲ್ಲಿ ಮೈಸೂರು ದಿವಾನ್ ಕೆಲಸದ ಚಾರ್ಜನ್ನು ಮ|| ಟಿ ಆರ್ ಎ. ತಂಬುಶೆಟ್ಟರವರು ಸರ್ ಕೆ ಶೇಷಾದ್ರಿ ಅಯ್ಯರ್, ಕೆ ಸಿ. ಎಸ್. ಐ, ಯವರಿಗೊಪ್ಪಿಸಲು ಅವರದಂ ತೆಗದುಕೊಂಡಿರುತ್ತಾರೆ.

ನಂ|| ೬೮೦೬—೮ ೧೮೯೦—ತಾ|| ೪ ನೇ ಅಕ್ಟೋಬರ್ ೧೮೯೩—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೭೫ನೇ ಆರ್ಟಿಕಲ್ ಅನುಸರಿಸಿ ಬೆಂಗಳೂರು ಮುನ್‌ಸಫ್ ಮ|| ಬಿ ಲಕ್ಷ್ಮೀನಾರಣಯ್ಯನವರಿಗೆ, ೧೮೯೩ ನೇ ಇಸವಿ ಸೆಪ್ಟೆಂಬರ್ ೧೮ನೇ ತಾರೀಖ್ ಲಾಗಾಯತು ೧೦ ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಮೊಕ್ಕಾಂ ನಂ|| ... ತಾ|| ೪ನೇ ಅಕ್ಟೋಬರ್ ೧೮೯೩—ಕಳೆದ ... ಗಳ ೧೪ನೇ ನಂಬರ್ ೪೭೭೦ ... ೧೮೯೩ನೇ ನಂಬರು ... ಹುಕುಂ ... ಯನ್ನನುಸರಿಸಿ, ೧೮೯೩ನೇ ಇಸವಿ ದಸರಾ ಪ್ರಯುಕ್ತ ... ಸಭೆಗೆ ... ಯ ಸಲ್ಪಟ್ಟ ಪ್ರತಿನಿಧಿಗಳ ಪಟ್ಟಿಯ ಪ್ಲೀಡರ್ ಮೈಸೂರು ಡಿಸ್ಟ್ರಿಕ್ಟ್ ಸ್ಪೆಷಿಯಲ್ ಮೆಂಬರಗಳಲ್ಲ ... ಶ್ರೀನಿವಾಸಯ್ಯಂಗಾರ್ ಬಿ ಎ ಎಂಬ ಹೆಸರಿಗೆ ಬದಲಾಗಿ ಎಂ ಎ ಕೃಷ್ಣಯ್ಯಂಗಾರ್ ಬಿ ಎ ಎಂದು ಓದಿಕೊಳ್ಳತಕ್ಕದ್ದು

ನಂ|| ... ತಾ|| ೧೦ನೇ ಅಕ್ಟೋಬರ್ ೧೮೯೩—ಚನ್ನಪಟ್ಟಣ ಸಬ್ ಡಿವಿಜನ್ ಆಫೀಸರ್ ಮ|| ... ಚಂಚಲರಾಯರವರು ... ಸಬ್‌ಡಿವಿಜನ್ ಚಾರ್ಜನ್ನು, ೧೮೯೩ನೇ ಇಸವಿ ಸೆಪ್ಟೆಂಬರ್ ... ನೇ ತಾರೀಖಿನ ಅಪರಾಹ್ನದಲ್ಲಿ ಮ|| ಕೆ. ಮದ್ದೂರಿನವರಿಗೆ ಒಪ್ಪಿಸಲು ಅವರದು ತೆಗದುಕೊಂಡಿರುತ್ತಾರೆ.

ಮೊಕ್ಕಾಂ ನಂ|| ... ತಾ|| ೧೬ನೇ ಅಕ್ಟೋಬರ್ ೧೮೯೩—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೮೮ನೇ ಆರ್ಟಿಕಲ್ ಅನುಸರಿಸಿ ... ಗವರ್ನರ್ ... ಮ|| ಡಿ ಎ ಬೋಸ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ

ಮಿಲಿಟರಿ ಇಲಾಖಾ

ತಾ|| ೧೪ನೇ ಅಕ್ಟೋಬರ್ ೧೮೯೩—ಮಹಾಸ್ವಾಮಿಯವರ ಶ್ರೀಮನ್ ಮಹಾರಾಜರವರು ... ಕಂಡ ... ಯನ್ನು ... ಒಪ್ಪಿಸಿರುತ್ತಾರೆ ಮೆ ... ಅರಸರವರು ... ಮೊದಲು, ಘನವನ್ನೈದಿದ ಮಹಾರಾಜರವರ ಬಾಡಿಗಾರ್ಡ್ ಸೇನೆಯಲ್ಲಿ ... ರರಾಗಿ ನಿಯಮಿಸಲ್ಪಟ್ಟಿರುತ್ತಾರೆ

ಮುಜರಾಯಿ ಇಲಾಖಾ

ನಂ ... ತಾ|| ೧೨ನೇ ಅಕ್ಟೋಬರ್ ೧೮೯೩—ಕದೂರು ಕಸಬಾದಲ್ಲಿರುವ ಮುಜರಾಯಿ ವಿಚಾರಣೆಗೆ ಒಳಪಟ್ಟ ಛತ್ರ ಮತ್ತು ದೇವಸ್ಥಾನಗಳಿಗೆ ಈ ಕೆಳಗೆ ನಮೂದಿಸುವವರನ್ನು ಧರ್ಮದರ್ಶಿಗಳನ್ನಾಗಿ ನೇಮಿಸಿ ಇದೆ —

೧. ತುಂಗ್ಲಿ ಕೇಶವಯ್ಯಂಗಾರು,
೨. ಹೆಣ್ಣಗೆರೆ ರಂಗಣ್ಣನವರು
೩. ಅನಿವಟ್ಟ ರಂಗರಾಯರು
೪. ರಾಮಶಾಸ್ತ್ರಿಗಳು
೫. ಪಟೇಲ್ ಮಂತ್ರಯ್ಯನವರು
೬. ಶಾನುಭೋಗ ಶಾಮಣ್ಣನವರು
೭. ಬೈರಣ್ಣಶೆಟ್ಟರು
೮. ಅನುಕಾಚಟ್ಟರು
೯. ಶಾನುಭೋಗ ಕಾಳಪ್ಪನವರು
೧೦. ಕೇಶವಾಚಾರ)

SUMMARY OF NEWS

ವೃತ್ತಾಂತ ಸಂಗ್ರಹವು

ಅಲಹಾಬಾದ ಗವರ್ನಮೆಂಟ್ ಪ್ರಿಂಟಿಂಗ ಆಫೀಸಿನಲ್ಲಿ ನಾಲ್ವರು ಸೇರಿಕೊಂಡು ಸುಮಾರು ೧|| ಲಕ್ಷರೂಪಾಯಿಗಳವರಿಗೂ ತಿಂದು ಹಾಕಿರುತ್ತಾರೆಂಬದಾಗಿ ಅಲ್ಲಿನ ಪತ್ರಿಕೆಯೊಂದು ತಿಳುಹಿತಿದೆ—ವೃ ಪ

ಥೈಲಂಡ್ ದೇಶದಲ್ಲಿ ಒಂದು ತರದ ಚಮತ್ಕಾರವಾದಹಳ್ಳು ಸಿಕ್ಕುತದೆ ಅದು ಸ್ವಾಭಾವಿಕವಾಗಿಯೇ ಒಂದು ವಾಯು ರೂಪಕಮಾದ ಯಂತ್ರದಂತೆ ಉಪಯೋಗಕ್ಕೆ ಬರುತಿದೆ ಮತ್ತು ವಾತಾವರಣದಲ್ಲಿ ಏನ ಮಾರ್ಪಾಟು ಮುಂತಾದವು ಆಗುವದಾದರೆ ತಿಳಿಸುತಿದೆ ಅದು ಅಲ್ಲಿ "ಸಿಮಾಕೈಕಿ" ಎಂದು ಕರೆಯಲ್ಪಡುತಿದೆ ಆದರೆ ಆಕಾಶವು ಶುಭ್ರವಾಗಿರುವಾಗ ಅದರ ಕ್ರಿಯಿಷ್ಟ ಭಾಗದಲ್ಲಿ ಸಣ್ಣ ಸಣ್ಣ ಬಿಳೀ ಚುಕ್ಕೆಗಳು ತುಂಬಿರುವವಂತೆ—ಕು ಪ

ಇಂಗ್ಲಿಷರ ಕಡೆಯ ... ಈಗ ಅಮೀರರ ರಾಜಧಾನಿಗೆ ಹೋಗಿರುವವನ್ನು ನಮ್ಮ ವಾಚಕರಿಗೆಲ್ಲ ಹಿಂದೆಯೇ ತಿಳಿಸಿದೇವಷ್ಟೆ ಇವರು ಕಾಬೂಲಿಗೆ ಹೋಗುವದಕ್ಕೆ ಮುಂಚೆ ಕಾಬೂಲಿನಲ್ಲಿದ್ದ ಎರಡು ಸಂಗಡದ ... ಗೂ ಒಂದು ಕೆಟ್ಟ ಮಾತಿಗಾಗಿ ಕಲಹ ಹುಟ್ಟಿತೆಂತಲೂ, ಈ ಕಲಹದಲ್ಲಿ ಅಮೀರರ ಮಜೀದರಾಗಿದ್ದವರಿಬ್ಬರು ಗುಂಡಿನಿಂದ ಹೊಡೆದು ಕೊಲ್ಲಲ್ಪಟ್ಟರೆಂತಲೂ, ಈ ವರ್ತಮಾನವನ್ನು ಕೇಳಿ ಅಮೀರರ ಕುಮಾರರು ಸೈನ್ಯ ಜೊತೆ ಮಾಡಿಕೊಂಡು ದಂಗೇ ಕೋರರನ್ನು ಹಿಡಿದರೆಂತಲೂ, ಹಿಡಿದವರಲ್ಲಿ ... ಮಂದಿಯನ್ನು ಆ ಕೂಡಲೇ ಫಿರಂಗಿಯ ಬಾಯಿಗೆ ಕಟ್ಟಿಸಿ ಕೊಲ್ಲಿಸಿ ಬಿಟ್ಟರೆಂತಲೂ, ಅನಂತರ ಉಳಿದ ಸಂಗಡದವರೂ ತಮ್ಮ ಕೋರ್ಟ್ ಮೊದಲು ಇಂಗ್ಲಿಷ್ ರಾಯಭಾರಿಗಳು ಅಲ್ಲಿಗೆ ಬಂದು ವಾಪಸ್ ಹೋಗುವವರೆಗೂ ... ಎಲ್ಲರೂ ಭಾಷೆ ಕೊಟ್ಟರೆಂತಲೂ ಅಲ್ಲಿನ ... ವರ್ತಮಾನವು ಒಂದು ಪತ್ರಿಕೆಯಲ್ಲಿ ದೊರೆತ್ತಾನೆ ವೃ ಪ

ಅಮೆರಿಕಾದ ... ರಿಂದ ... ಗಿ ವಸ್ತುಗಳಿಂದ ... ಮಾಡುತ್ತಾರೆ ... ಯನ್ನು ... ಎಂದು ... ಒಬ್ಬರು ... ಮನೆ ... ಸುವಾಸಿತ ... ಕೆಲ ... ಮುಖ ... ಅಂಗಗಳು, ... ಮತ್ತು ... ಹೀಗೆ ಅನೇಕ ವಸ್ತುಗಳನ್ನು ಮಾಡಿಕೊಳ್ಳುತ್ತಾರೆ ... ಸತ್ತ ಮನುಷ್ಯರ ಎಲುಬುಗಳಿಂದ ... ಗಳನ್ನು ಕೆಲವು, ... ಮತ್ತು ಮನುಷ್ಯರ ಎಲುಬು ತೊಗಲುಗಳನ್ನು ... ಕೆಲಸಕ್ಕೆ ಉಪಯೋಗ ಮಾಡಿಕೊಳ್ಳುತ್ತಾರೆಂತೆ ... ಗಿ ... —ಕ ವೃ

ಮಹೋದಯ ಮಹಾರಾಜರವರು ತಮ್ಮ ರಾಜ್ಯದಲ್ಲಿ ಗಂಡು ಹುಡುಗರಿಗೂ ಹೆಣ್ಣು ಮಕ್ಕಳಿಗೂ ಬಲಾತ್ಕಾರದ ವಿದ್ಯೆ ಕಲಿಸುವ ನಿಯಮವನ್ನು ಮಾಡಿರುತ್ತಾರೆ ಇದು ... ನಮ್ಮ ದೇಶದಲ್ಲಿನ ಸ್ಥಿತಿಗೆ ... ಈ ಕಟ್ಟಳೆಯನ್ನು ಸರ್ವರ್ಕ್ ... ೭ ವರ್ಷ ... ೧೦ ವರ್ಷದವರೆಗೆ ಗಂಡುಮಕ್ಕಳೂ, ೭ ವರ್ಷದಿಂದ ೧೦ ವರ್ಷದವರೆಗೆ ಹೆಣ್ಣುಮಕ್ಕಳೂ ಶಾಲೆಗೆ ಹೋಗಿ ವಿದ್ಯಾಭ್ಯಾಸ ಮಾಡಬೇಕು. ... ಯೋಗ್ಯ ಕಾರಣವಿಲ್ಲದೆ ... ೧೦ ದಿವಸ, ಅಥವಾ ... ಅಥವಾ ಪಾಲಕನಿಗೆ ೨ ... ವಾಗುವದು ... ಅಧಿಕಾರವು ... ಪಟೇಲನು ... ಮಾಡಿದ ... ನ್ನು ... ದಂಡ ... ದಂಡಿಸಲಾಗುವದು, ... ಬಲಾತ್ಕಾರದ ಶಿಕ್ಷಣದ ... ನಡೆಸುವದಕ್ಕೋಸ್ಕರವಾಗಿ ... ೩೦,೦೦೦ ರೂಪಾಯಿಗಳು ಮಂಜೂರ್ ಮಾಡಿರುತ್ತಾರೆ. ಈಪ್ರಕಾರದ ಪ್ರಜಾ ಸುಧಾರಣೆಯ ಕಾರ್ಯಗಳನ್ನು ... ಇಂಗ್ಲಿಷ್ ಸರ್ಕಾರದವರು ಕೈಕೊಳ್ಳುವ ಸಂಭವವೆಷ್ಟುಮಾತ್ರವೂ ... ಕಾಣಿಸುವದಿಲ್ಲವು—ಕ ಪ

ನೋಟೀಸ್.

ಈ ಪತ್ರಿಕೆಯು ... ಕಳೆದ ತಿಂಗಳಲ್ಲಿ ನಮ್ಮ ... ಕಳುಹಿಸಿದೆವು, ... ಈ ವಾರದ ಮೊದಲು ಪತ್ರಿಕೆಯು ... ಕಳುಹಿಸಿ ... ಪತ್ರಿಕೆಯನ್ನಪೇಕ್ಷಿಸುವಂತವರಿಗೆ ಪುನಃ ರವಾನಿಸಲ್ಪಡುವವು

Bangalore—Printed and published at the Karnataka Press, No 19, Hospital Road, City—1893

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

## ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning.**

ಪ್ರಕಾಮವಿವಿಧವೃತ್ತ್ಯನಗನಾರ್ತ್ಯಕರ್ಣಾಟಕಪ್ರಕಾಶನಪರಾಭಿಧಾಪ್ರಥಿತಸಾಹಿತೀಶೋಭಿತಾ ॥ ಮೃಗಾಂಕಹಿತವಾಸರೇನಿಹಿತಮುದ್ರಣಾ ಸಜ್ಜನೈರ್ಭೃಶಾಸುಪರಿಪೂಜಿತಾ ವಿಕಸಿತಮಾನಸಾ ಸಂಮುದಾ ॥

Vol. XX ] ಸಂಪುಟ ೨೦. ] — BANGALORE —MONDAY, OCTOBER 30, 1893. — [ No 43

ಬೆಂಗಳೂರು:—ಸನ್ ೧೮೯೩ನೇ ಇಸವಿ ಅಕ್ಟೋಬರ್ ೩೦ ನೇ ತಾರೀಖು ಸೋಮವಾರ. [ಸಂಚಿಕೆ ೪೩


### ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡ ಭಾಗಗಳಿಗೆ.

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ವರ್ಷ ಒಂದಕ್ಕೆ .. | 6—0—0 | 8—0—0 |
| 6 ತಿಂಗಳಿಗೆ . | 3—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

| | ಸ್ಥಳದವರಿಗೆ. | ಪರಸ್ಥಳದವರಿಗೆ. |
|---|---|---|
| ಸಾಲೊಂದಕ್ಕೆ ... .. | 3—0—0 | 4—0—0 |
| 6 ತಿಂಗಳಿಗೆ . | 1—12—0 | 2—8—0 |

ಈ ಪತ್ರಿಕೆಗೆ ಚಂದಾ ಪಾವತಿ ಮಾಡಿದ ತಾರೀಖು ಮೊದಲು ಒಂದು ವರುಷ, ಆರು ತಿಂಗಳು ಕಳೆಯುವ ಕಾಲಾವಧಿಯೊಳಗೆ ಯಾರು ಚಂದಾ ದಾರರು ಪತ್ರಿಕೆಯನ್ನು ತರಿಸುತ್ತಾರೋ ಅವರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡ ಭಾಗವನ್ನಾಗಲಿ ಎರಡನ್ನಾಗಲಿ ತೆಗೆದುಕೊಳ್ಳಬಹುದು ಮೂರು ತಿಂಗಳಿಗಿಂತ ಕಡಮೆಯಾಗಿ ಚಂದಾ ತೆಗೆದುಕೊಳ್ಳಲಾಗಲಾರದು.

### ಪ್ರಕಟನೆಯ ದರ.

ಮೊದಲನೆಯ ಸಾರಿ ಪಂಕ್ತಿ ಒಂದಕ್ಕೆ ೦—೨—೦

ಎರಡನೆಯ ಸಾರಿ ಪಂಕ್ತಿ ಒಂದಕ್ಕೆ ೦—೧—೦

ಸೂಚನೆ—ಎರಡಾವರ್ತಿಗಿಂತ ಜಾಸ್ತಿ ಸಾರಿ ಪ್ರಕಟಿಸಬೇಕಾದವರು ಪ್ರತಿ ಪಂಕ್ತಿ ಒಂದಕ್ಕೆ ೧ ಆಣೆಯಂತೆ ಕೊಡಬೇಕು. ಈ ಪತ್ರಿಕೆಯಲ್ಲಿ ಪ್ರಕಟನೆಗಳನ್ನು ಕಳುಹಿಸುವವರು ಅವು ಎಷ್ಟು ಸಾರಿ ಪ್ರಕಟಿಸಲ್ಪಡಬೇಕೋ ಅದನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಿದ್ದರೆ ಅವರು ನಮಗೆ ತಿಳಿಸುವವರೆಗೂ ಅವು ಪ್ರಕಟಿಸಲ್ಪಡುತ್ತಿದ್ದು ಹಾಗೆ ಎಷ್ಟು ಸಾರಿ ಪ್ರಕಟಿಸಲ್ಪಟ್ಟಿರುವವೋ ಅಷ್ಟಕ್ಕೆ ದರವಂತೆ ಹಣವನ್ನು ಕೊಡಬೇಕಾಗುವದು. ಪ್ರಕಟನೆಯನ್ನು ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಯಾವ ಕಾರಣದಿಂದ ಮಧ್ಯೆ ನಿಲ್ಲಿಸಬೇಕಾಗಿ ಬಂದರೆ ಪ್ರಕಟನೆಯ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳಲ್ಲಿ ... ನಾವು ಜವಾಬ್ದಾರರಾಗಲಾರೆವು ಕ್ರಮವಾಗಿ ರುಜುಮಾಡಿ ದವರಲ್ಲದೆ ಅಂತವರ ... ಪ್ರಕಟಿಸಲಾರೆವು. ಸಹಿ ಇಲ್ಲದ ಕಾಗದಗಳು ... ಕಳುಹಿಸಲ್ಪಡಲಾರವು.


*ADVERTISEMENTS.*

**NOTICE.**

**VAIDYASARA SANGRAHA**

A TREATISE ON THE PRINCIPLES OF

**HINDU MEDICINE**

*Per Cumulation Postage Rs 5 0 0*

ವೈದ್ಯಸಾರ ಸಂಗ್ರಹ.

ಈ ಗ್ರಂಥವು ಬೇಕಾದವರು ಮೊಬಲಗನ್ನೊಡನೆ ಸಹಿ ಸಹಿತ ಪತ್ರಿಕೆ ಕಳುಹಿಸಿದರೆ ಗ್ರಂಥ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ಕಾಗದಗಳಿಗೆ ಉತ್ತರ ಕೊಡಲ್ಪಡಲಾರದು

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೇ ಖರ್ಚು, ಟೆಬಿಲ್ ಪ್ರತಿ ಒಂದಕ್ಕೆ ರೂ 5—0—0

ಟಿ. ಬಿ. ವೆಂಕಟಾಚಾರ್.

ಬೆಂಗಳೂರ್, ಮುಸ್ ಆಸ್ಪತ್ರೆ ರೋಡ್ ೪೪ ನೇನಂಬರ್

### ನೋಟೀಸ್.

**ಬೆಂಗಳೂರು ಕರ್ಣಾಟಕ್ ಪ್ರೆಸ್.**

೧೮೬೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ, ಸಕಲವಿಧ ಕೆಲಸಗಳು ಸುಲಭಚಾರ್ಜಿಗೆ ತೀವ್ರವಾಗಿಯೂ ಅಚ್ಚುಕಟ್ಟಾಗಿಯೂ, ಮುದ್ರಿಸಲ್ಪಡುವವು.

ಇದರಲ್ಲಿ ಸದ್ಯ ಇಂಗ್ಲಿಷ್ ಕನ್ನಡ ಕೆಲಸ ಮಾತ್ರವೆ ನಡೆಯುತಿವೆ. ಇತರ ಡಿಪಾರ್ಟ್‌ಮೆಂಟ್‌ಗಳನ್ನು ಸದರೀ ಆಫೀಸಿನ ಪ್ರೊಪ್ರೈಟರಿಗೆ ಬರೆದು ತಿಳಿದುಕೊಳ್ಳಬಹುದು.

### ನೋಟೀಸ್.

ಗಣೇಶ ರಾಮಚಂದ್ರ ಕರ್ಕೀ ಮತ್ತು ಕಂಪೆನಿ. ಕಮಿಷನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಚಂದಾದಾರರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯೊಡನೆ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ತಕ್ಕ ಕಮಿಷನ್ ತೆಗೆದುಕೊಂಡು ರವಾನಿಸುವುದಕ್ಕೆ ಸನ್ನದ್ಧರಾಗಿರುತ್ತೇವೆ

ಎಲ್ಲಾ ತರಹ ಔಷಧಗಳು, ಪುಸ್ತಕಗಳು, ಮುತ್ತುಗಳು, ಬಿಳಿ ಮುತ್ತುಗಳು, ಛಾಯಾಪಟಗಳು, ವಾಚುಗಳು, ಮೆಷೀನುಗಳು, ಹಾರ್ಮೋನಿಯಂಗಳು, ಸಂಗೀತ ವಾದ್ಯಗಳು, ಜರತಾರಿ ಕಣಗಳು, ಚಂದ್ರಕಾಂತ ಶಿಲೆ ಕನ್ನಡಕಗಳು, ಕೊಡೆಗಳು ಇತ್ಯಾದಿ ... ಜರತಾರಿ ಟೋಪಿಗಳು, ಆಫೀಸು ಡ್ರೆಸ್‌ಗಳು, ಪಟಗಳು, ಅತ್ತರುಗಳು, ಅತ್ಯುತ್ತಮವಾದ ರತ್ನಗಳು, ಬಂಗಾರದಿಂದ ಕೆತ್ತಲ್ಪಟ್ಟ ಉಂಗುರಗಳು, ಬೆಳ್ಳಿ ಪಾತ್ರೆಗಳು, ಜರ್ಮನ್ ಬೆಳ್ಳಿ ಪಾತ್ರೆಗಳು, ಕೇಸರಿ, ಕಸ್ತೂರಿ ವಗೈರೆ ಇತರ ಸಾಮಾನುಗಳು

ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟ್ಯಾಂಪ್ ಕಳುಹಿಸಿದ ಕೂಡಲೇ ಜವಾಬ್ ದೊರೆಯುವದು.

ವಿಳಾಸ.—ಗಣೇಶ ರಾಮಚಂದ್ರ ಕರ್ಕೀ, ಮತ್ತು ಕಂಪೆನಿ, ಕಮಿಷನ್ ಏಜಂಟ್ಸ್, ಠಾಕೂರ್ ದ್ವಾರ್, ಜಾಕೆಟ್ ಪೋಸ್ಟ್, ಮುಂಬಯಿ.

### ನೋಟೀಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

### ಸಂಸ್ಕೃತ ಗ್ರಂಥಗಳು.

| ಪುಸ್ತಕದ ಹೆಸರು | ರೂ | ಆ | ಪೈ. |
|---|---|---|---|
| ಸಟೀಕಾ ವೈದ್ಯಸಾರ ಸಂಗ್ರಹ | ೫ | ೦ | ೦ |
| „ ಶಿವಗೀತ | ೧ | ೦ | ೦ |
| „ ಶಿವಾನಂದಲಹರಿ | ೦ | ೪ | ೦ |
| „ ಕಾಲಾಮೃತ | ೧ | ೦ | ೦ |
| „ ಟಿ॥ ಬಾಲರಾಮಾಯಣ .. | ೦ | ೩ | ೦ |
| „ ಟಿ॥ ಗೋಪಿಕಾ ಗೀತ .. | ೦ | ೧ | ೦ |
| „ ಟೀ॥ ಚಾಣಕ್ಯನೀತಿ (ಸುಭಾಷಿತ) | ೦ | ೪ | ೦ |
| ವಿಷ್ಣುಸಹಸ್ರನಾಮ ಪದ್ಧತಿ | ೦ | ೩ | ೦ |
| ಸೂರ್ಯಸಹಸ್ರನಾಮ | ೦ | ೨ | ೦ |
| ಕೃಷ್ಣಕರ್ಣಾಮೃತ | ೦ | ೨ | ೦ |
| ತ್ರಿಕಾಂಡ ಅಮರ ಮೂಲ | ೦ | ೨ | ೦ |
| ೧ ಕಾಂಡ | ೦ | ೧ | ೦ |

### ಕನ್ನಡ ಗ್ರಂಥಗಳು.

| | | | |
|---|---|---|---|
| ಶುಕಸಪ್ತತಿ ಆನ್ವಲ್ | ೩ | ೦ | ೦ |
| ದಿಟಿಬಿ ದುರ್ವ್ಯಸ | ೧ | ೨ | ೦ |
| ನೃಪಚೋರೇಂದ್ರವಿಜಯ | ೧ | ೪ | ೦ |
| ಪಂಚಭಾಷೆ ಬಾಲಲೀಲೆ | ೦ | ೬ | ೦ |
| ಮನ ಮುಕ್ತಿಲೀಲಾ | ೦ | ೬ | ೦ |
| ಕಾಳೀಯಮರ್ದನ | ೦ | ೨ | ೦ |
| ಸುಭದ್ರಾಪರಿಣಯ | ೦ | ೨ | ೦ |
| ಶಶಿರೇಖಾಪರಿಣಯ | ೦ | ೨ | ೬ |
| ಸುದಾಮಚರಿತ್ರೆ | ೦ | ೧ | ೦ |
| ಮೈರಾವಣ ಚರಿತ್ರೆ | ೦ | ೧ | ೬ |
| ಬಾಲಗ್ರಹಚಿಕಿತ್ಸೆ | ೧ | ೦ | ೦ |
| ಮಹಮ್ಮದನ್ ಲಾ | ೦ | ೧೨ | ೦ |
| ಬ್ರಾಂತಿವಿಲಾಸ | ೦ | ೧೨ | ೦ |


### ಫಾರೆಸ್ಟ್ ಇಲಾಖಾ.

**ನೋಟಿಸ್.**

ತಾರೀಖ್ 27ನೇ ಸೆಪ್ಟಂಬರ್ 1893.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ, ಮೈಸೂರು ದೇಶದಲ್ಲಿ ಉತ್ಪತ್ತಿಯಾದ ಗಂಧದ ಸಾಲೀಯಾನ ಹರಾಜುಗಳು ಈ ಕೆಳಗೆ ನಮೂದಿಸುವ ಜಾಗಗಳಲ್ಲಿ ಅವುಗಳ ಬಾಬ್ತಿನಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರು ವ ಫಾರಸ್ಟ್ ಆಫೀಸರುಗಳಿಂದ ನಡೆಸಲ್ಪಡುವವು

| ಡಿಸ್ಟ್ರಿಕ್ಟ್ | ಕೋಠಿ ಹೆಸರು | ಹರಾಜ್ ತಾರೀಖ್. | | ಟನ್ನುಗಳು ಹೆಚ್ಚು ಕಡಮೆ. | ಷರಾ. |
|---|---|---|---|---|---|
| ಶಿವಮೊಗ್ಗ .. | ಸಾಗರ ... | 13ನೇ | ನವಂಬರ 1893ನೇ ಇಸವಿ | 230 | |
| ಡಿಟ್ಟೋ .. | ಶಿವಮೊಗ್ಗ ... | 17ನೇ | ಡಿಟ್ಟೋ | 460 | |
| ಡಿಟ್ಟೋ ... | ತೀರ್ಥಹಳ್ಳಿ .. | 21ನೇ | ಡಿಟ್ಟೋ | 120 | |
| ಕಡೂರು ... | ಚಿಕ್ಕಮಗಳೂರು ... | 20ನೇ | ಡಿಟ್ಟೋ | 200 | |
| ಹಾಸನ . | ಹಾಸನ ... | 4ನೇ | ಡಿಸಂಬರ್ | 275 | ಸರ್ಕಾರಿ. |
| | | | | 25 | } ಇನಾಂ. |
| ಬೆಂಗಳೂರು ... | ಬೆಂಗಳೂರು .. | 8ನೇ | ಡಿಟ್ಟೋ " | 150 | |
| ಮೈಸೂರು .. | ಶ್ರೀರಂಗಪಟ್ಟಣ .. | 11ನೇ | ಡಿಟ್ಟೋ | 350 | |
| ಡಿಟ್ಟೋ ... | ಹುಣಸೂರು ... | 15ನೇ | ಡಿಟ್ಟೋ | 500 | |

2. ಹರಾಜಿನ ಷರತ್ತುಗಳು—1893 ನೇ ಇಸವಿ ಜನವರಿ 12 ನೇ ಮೈಸೂರಿನ ಗೆಜೆಟಿನಲ್ಲಿ ಪ್ರಕಟಿಸಿದ್ದ 1892ನೇ ಇಸವಿ ನವಂಬರ 29 ನೇ ಮಕರಂ 155—92 ನೇ ನಂಬರ್ ಇಷ್ತಿಹಾರು ಅದ ಇಸ್ತಿಹಾರನ್ನು ನೋಡಿಕೊಳ್ಳತಕ್ಕದ್ದು. ಮತ್ತು ಸದರೀ ಇಸ್ತಿಹಾರ ಹರಾಜ್ ಕಾಲದಲ್ಲಿ ಓದಲ್ಪಡುವದು.

ಎಲ್. ರಿಕೆಟ್ಸ್,
ಇನ್ಸ್‌ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

### ನೋಟೀಸ್.

ತಾರೀಖು 25 ನೇ ಅಕ್ಟೋಬರ್ 1893

ಸನ್ 1893 ನೇ ಇಸವಿ ಡಿಸಂಬರ್ ತಾರೀಖು 18 ರಲ್ಲು ಪ್ರೇಜರ್ ಪೇಟೆಯಲ್ಲಿ ಹೆಚ್ಚು ಕಡಿಮೆ 160 ಟನ್ನುಗಳು ಗಂಧ ಹರಾಜು ಹಾಕಲ್ಪಡುತದೆ.

ಷರತ್—ಸನ್ 1885 ನೇ ಇಸವಿ ಜನವರಿ ತಾರೀಖು 3 ರ ನಂಬರ್ 1ನೇ ಕೊಡಗು ಡಿಸ್ಟ್ರಿಕ್ಟ್ ಗೆಜಟಿನಲ್ಲಿ ಪ್ರಕಟಿಸಿ ಮಾಡಲ್ಪಟ್ಟ ಕೊಡಗು ಚೀಫ್‌ಕಮಿಷನರ್ ಸಾಹೆಬರವರ ಸನ್1881 ನೇ ಇಸವಿ ಫೆಬ್ರುವರಿ ತಾರೀಖು 15 ನಂಬರ್ 26 ರ ನೋಟಿಫಿಕೇಷನ್ ಮೇರೆ ಶೇಕಡ ಐವತ್ತರಷ್ಟು ಕ್ರಯವನ್ನು ಹರಾಜು ಕಾಲದಲ್ಲಿ ಕೊಡತಕ್ಕದ್ದು. ಬಾಕಿ ಮೊಬಲಗನ್ನು 1894 ನೇ ಇಸವಿ ಮಾರ್ಚಿ ತಾರೀಖು 15 ರ ಒಳಗೆ ಪೂರ್ತಿಯಾಗಿ ಪಾವತಿ ಮಾಡತಕ್ಕದ್ದು.

J. PRESCOT,
*Dy. Conservator of Forests, Coorg*

### THE MONEY MARKET.

**Stocks, Shares and Exchange.**

ಮದರಾಸ್, ಶನಿವಾರ, ತಾರೀಖ್ 28 ನೇ ಅಕ್ಟೋಬರ್, 1893.

ಸೇಕಡ 4ರೂ, ಬಾಬತು ಇಂಡ್ಯಾಗವರ್ನಮೆಂಟ್ ಪತ್ರಗಳು 104—14—0ರೂ ಗಳಿಂದ 105—6—0 ರೂ ವರೆಗೆ

ಸೇಕಡ ಮೂರುವರೆ ರೂ ಬಾಬತು, ಗವರ್ನಮೆಂಟ್ ಪತ್ರಗಳು, 95—8—0 ರೂ ಗಳಿಂದ 99—0—0 ವರೆಗೆ.

ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತು, 975—0—0ರೂ, ಗಳಿಂದ985—0—0ವರೆಗೆ

ಕಮರ್ಷಿಯಲ್ ವ ಬ್ಯಾಂಕ್ ಮದರಾಸ್ ಬ್ಯಾಂಕ್ ಷೇರುಗಳು, (100ರೂ.) ಬಾಬತು 150—0—0 ರೂ ಗಳಿಂದ 155—0—0 ರೂ ವರೆಗೆ,

ಸವರನ್ನುಗಳು, ಪವ 1 ಕ್ಕೆ 16—2—0 ರೂಪಾಯಿಗಳಿಂದ 16—4—0 ರೂ, ವರೆಗೆ,

ಲಂಡನ್ ಬ್ಯಾಂಕಿನಮೇಲೆ ಕೊಡಲ್ಪಡುವ ಬ್ಯಾಂಕ್ ಬಿಲ್ಸ್ ಯಾನೆ ದರ್ಶನ ಹುಂಡಿಗಳು:—

6 ತಿಂಗಳ ಮಿಯಾದಿಗೆ...1 s 3 11/32 d.

4 „ ...1 s 3 9/32 d.

ಕೇಳಿದಾಗಕೊಡಲ್ಪಡುವದಕ್ಕೆ ...1 s. 3 3/16 d.


### ಕರ್ಣಾಟಕ ಪ್ರಕಾಶಿಕಾ.

**THE KARNATAKA PRAKASIKA.**

MONDAY, OCTOBER 30, 1893.

೧೮೯೩ ನೇ ಇಸವಿ ಅಕ್ಟೋಬರ್ ೩೦ನೇ ತಾ॥ ಸೋಮವಾರ.


### ಮಹಾರಾಜಾ ಧುಲೀಪಸಿಂಗರವರ ಮರಣವು.

ಪಂಜಾಬ್ ರಾಜವಂಶದವರಾದ ಮಹಾರಾಜಾ ಧುಲೀಪಸಿಂಗ್, ಜಿ. ಸಿ. ಎಸ್. ಐ. ಯವರ ಹೆಸರನ್ನೂ ಅವರ ವೃತ್ತಾಂತಗಳನ್ನೂ ಹಿಂದೆ ಅನೇಕ ಪ್ರಕರಣಗಳಲ್ಲಿ ಏತತ್ಪತ್ರಿಕಾ ಮೂಲಕ ಪ್ರಜೆಗಳು ಕೇಳಿ ತಿಳಿದಿರಬಹುದಷ್ಟೆ. ಇವರು ಫ್ರಾಂಚಿನವರ ಪ್ರಧಾನನಗರವಾದ ಪೇರಿಸ ಪಟ್ಟಣದಲ್ಲಿರುವ ಒಂದು ಹೋಟೆಲಿನಲ್ಲಿ ಸಹಾಯಶೂನ್ಯರಾಗಿ ಕೇವಲ ಅನುಕಂಪಾಕರವಾದ ಸ್ಥಿತಿಯೊಳು ಈ ತಿಂಗಳ ೨೩ನೇ ತಾರೀಖ್ ಸೋಮವಾರದಹಿನ ಸಕಲವಿಧ ದುಃಖನಿಮಿತ್ತಕವಾಗಿದ್ದ ತಮ್ಮ ಪ್ರಾಕೃತ ಶರೀರವಂ ತ್ಯಜಿಸಿದರೆಂಬ ವೃತ್ತಾಂತವು ನಮಗೆ ಅಮಿತವಾದ ವ್ಯಸನವನ್ನೂ ಕದಾಚಿತ್ ಉಪಶಾಂತಿಯನ್ನೂ ಉಂಟುಮಾಡತಕ್ಕದ್ದಾಗಿರುತಿದೆ. ಪ್ರಸಕ್ತೋತ್ಕರ್ಷಣ ಕಾಲದಲ್ಲಿ ಆಪ್ತ ಮಿತ್ರರ್ದ್ಯಾರೂ ಸಮೀಪದೊಳಿರಲಿಲ್ಲ. "... ನಸ್ಥಿರಂಜೀವಿತಂಲೋಕೇ ನಸ್ಥಿರಂ ಧನಯೌವನಂ। ನಸ್ಥಿರಂ ... ಧರ್ಮಕೀರ್ತಿರ್ದ್ವಯಂಸ್ಥಿರಂ" ಎಂಬಂತೆ ಇವರ ರಾಜವಂಶಪ್ರಯುಕ್ತಗಳಾದ ಕೀರ್ತಿ ಪ್ರಾಭವ ವೈಭಗಳಾಗಲಿ ಯೌವನವಾಗಲಿ, ಪರಿಣಾಮದಲ್ಲಿ ಲೇಶವೂ ನಿಷ್ಪ್ರಯೋಜಕಗಳಾದವಲ್ಲದೆ ಅವರ ವಿಯೋಗವು ಕೇವಲ ಸಾಮಾನ್ಯ ರೂಪ... ಪರಿಗಣಿಸಲ್ಪಡುವಂತೇರ್ಪಟ್ಟಿತು. ಇದೊಂದು ಕಡೆ ಕೇವಲ ವಿಷಾದಕರವಾದ ಅಂಶವಾಗಿದ್ದರೂ ಕೊನೆಗೆ ಅವರು ಅನುಭವಿಸಿದ ಬಹುವಿಧ ಕ್ಲೇಶಗಳಿಂದ ಭಗವಂತನು ಅವರಂ ತಪ್ಪಿಸಿ ರಕ್ಷಿಸಿದ್ದಕ್ಕಾಗಿ ಸ್ವಲ್ಪ ಸಂತೋಷಿಸಬೇಕಾಗಿರುತಿದೆ. ಒಂದುಕಾಲದಲ್ಲಿ ವಿಶೇಷಪ್ರಸಿದ್ಧಿಯಂ ಪಡೆದಿದ್ದ ಪಂಜಾಬ್‌ದೇಶಕ್ಕೆ ದೊರೆತನಿಸಿಕೊಂಡೂ, ವೀರ್ಯ

ಶೌರ್ಯ ಪರಾಕ್ರಮ ಶಾಲಿಯಾಗಿದ್ದ ನಾನಕವಂಶಸ್ಥರೆನಿಸಿಕೊಂಡೂ, ಪಂಜಾಬದೇಶದ ಸಿಖ್ಖರನ್ನು ಸಿರ್ಜಂತವರಿಗೆ ಕಾಲ ವಿಪರ್ಯಯದಿಂ ರಾಜ್ಯಕೋಶಗಳೆಲ್ಲವು ನಷ್ಟಗಳಾಗಿ, ಸ್ವೀಯರೆಲ್ಲರೂ ವಿರೋಧಿಗಳಾಗಿ, ಸ್ವದೇಶವು ದುರ್ಗಮವಾಗಿ, ರಕ್ಷಕರೇ ನಿರ್ಬಂಧಿಗಳಾಗಿ, ಶರೀರಭರಣವು ಅಸಾಧ್ಯವಾಗುವಂತೆ ಏರ್ಪಟ್ಟದ್ದಕ್ಕಿಂತಲೂ ಅದ್ಭುತಗಳಾದ ಭಗವದ್ವ್ಯಾಪಾರಗಳು ಬೇರೆಯೇನು ಬೇಕಾಗಿವೆ? ೧೮೪೫ನೇ ಇಸವಿಯಲ್ಲಿ ಇಂಗ್ಲಿಷರಿಗೂ ಸಿಕರಿಗೂ ಪ್ರಥಮತಃ ಫಿರೋಜಷಾ, ಅಲಿವಾಲ್, ಸಾಬರೋನ್ ವಗೈರೆ ಪ್ರದೇಶಗಳಲ್ಲಿ ನಡೆದ ಯುದ್ಧದೊಳು ಉಭಯ ಪಕ್ಷದವರಿಗೂ ತಹನಾಮೆ ಹುಟ್ಟಿ, ಅವ್ಯವಹಾರ ದಶೆಯೊಳಿದ್ದ ಮಹಾರಾಜರಿಗೆ ಬದುಲಾಗಿ, ಕೌನ್ಸಿಲ್ ಆಫ್ ರೀಜನ್ಸಿ ಎಂಬ ರಾಜ್ಯಕಾರ್ಯ ನಿರ್ವಹಣ ಸಭೆಯೊಂದು ಏರ್ಪಟ್ಟು ಅದಕ್ಕೆ ಬ್ರಿಟಿಷ್ ರೆಸಿಡೆಂಟರು ಅಧ್ಯಕ್ಷರಾಗಿದ್ದು ಲಾಹೂರಿನಲ್ಲಿ ಪ್ರಭುತ್ವವು ಜರಿಗಿಸುತಲಿದ್ದರು. ೧೮೪೮ ನೇ ಇಸವಿಯಲ್ಲಿ ಮುಲ್ತಾನಿನೊಳು ಕಲಹ ಪ್ರೊಂದಂಕುರಿಸಿ ಅದು ಸಿಕ ದೇಶವನ್ನೆಲ್ಲ ವ್ಯಾಪಿಸಲಾಗಿ ಅದು ಕಡೆಗೆ, ೧೮೪೯ನೇ ಇಸವಿ ಫೆಬ್ರುವರಿ ೨೨ನೇ ತಾರೀಖಿನಲ್ಲಿ ಗುಜರಾತ್ ರಾಜ್ಯದೊಡನೆ ಪಂಜಾಬ ದೇಶವು ಬ್ರಿಟಿಷರವರ ಸ್ವಾಧೀನ ಪಡಿಸಿ ಉಪಶಮಿಸಿತು. ಅದೇ ಸಂವತ್ಸರದ ಮಾರ್ಚ್ ತಿಂಗಳ ೨೯ನೇ ತಾರೀಖಿನಲ್ಲಿ ಧುಲೀಪ್‌ಸಿಂಗರವರು ತಮ್ಮ ಪ್ರಭುತ್ವವಂ ಈಸ್ಟಿಂಡಿಯಾ ಕಂಪೆನಿಯವರ ಸುಫರ್ದ್ ಮಾಡಿ, ಅದಕ್ಕೆ ಪ್ರತಿಯಾಗಿ ಸಾಲೀಯಾನಾ ಐವತ್ತುಸಾವಿರ ಪೌಂಡುಗಳನ್ನು ವರ್ಷಾಶನ ರೂಪವಾಗಿ ತೆಗೆದುಕೊಳ್ಳಲಿಕ್ಕೊಪ್ಪಿಕೊಂಡದ್ದರಿಂದ ಸದರೀ ಧನವನ್ನವರಿಗೆ ಪಂಜಾಬದೇಶದ ಹುಟ್ಟುವಳಿಯಿಂದ ಕೊಡುವಂತೆ ತೀರ್ಮಾನವಾಯಿತು. ವಿಧಿ ವಿಪರ್ಯಯವನ್ನರಿತು ಲಭಿಸಿದ ಧನವಂ ತೆಗದುಕೊಂಡು ಸುಸ್ವಸ್ಥರಾಗಿ ಅಧಿಕವ್ಯಾಪಾರಗಳಿಗೆ ಹೋಗದೆ ಸ್ವದೇಶದೊಳಿರುತಲಿದ್ದರೆ ಅವರು ಅದೊಂದುಬಗೆ ಗೌರವದಿಂದ ಕಾಲಹರಣ ಮಾಡಬಹುದಾಗಿತ್ತು. ಯೌವನ ಧನಸಂಪತ್ತಿಗಳೆರಡೂ, ಅವರ ಅವಿವೇಕವಂ ಬಲಪಡಿಸಲು ಅದರಿಂದ ಅವರ ಆಯತಿಗಿಂತಲೂ ಖರ್ಚು ಜಾಸ್ತಿಯಾಗಿ, ಋಣಾಧಿಕ್ಯದಿಂ ಸ್ಥಾನಭ್ರಂಶ ಪ್ರಾಪ್ತವಾಗಬೇಕಾಯಿತು. ೧೮೮೬ ಇಸವಿಯಲ್ಲಿ ಧುಲೀಪ್ ಸಿಂಗರವರು ತಮ್ಮ ಕುಟುಂಬದೊಡನೆ ಇಂಗ್ಲಾಂಡಿನಿಂದ ಇಂಡ್ಯ ದೇಶಕ್ಕೆ ಪ್ರಯಾಣವಾಗಿ ಏಡನ್‌ವರೆಗೆ ಬರಲು ಲಾರ್ಡ್ ಡಫ್ರಿನ್ ಯವರ ನಿಯಮನಪ್ರಕಾರ ಇಂಡ್ಯದೇಶಕ್ಕೆ ಬಾರದಂತೆ ಅಲ್ಲಿಯೇ ತಡೆಯಲ್ಪಟ್ಟರು. ಇದರಿಂದ ಧುಲೀಪ್ ಸಿಂಗರವರು ಅತ್ಯಾಗ್ರಹಗೊಂಡು ತಮಗೆ ಬ್ರಿಟಿಷರವರು ಕೊಡುತಲಿದ್ದ ಪೆನ್ಷನನ್ನು ಸಹ ತಿರಸ್ಕರಿಸಿ, ಇಂಗ್ಲಾಂಡ್ ರಾಜ್ಯಕ್ಕೆ ಅನುಪಕಾರಿಂತರಾದ ಪ್ರಬಲ ಶತ್ರುವೆಂದು ಸ್ವತಃ ಸಾರಿಕೊಂಡು, ಕಾಲದೇಶ ವರ್ತಮಾನ ಸ್ಥಿತಿಗತಿಗಳನ್ನಾಲೋಚಿಸದೆ ಮನಸ್ಸು ಬಂದಂತೆಲ್ಲ ಕಾಗದಗಳನ್ನು ಬರೆಯುತ್ತ, ಕಡೆಗೆ ರಷ್ಯಾ ರಾಜ್ಯಕ್ಕೆ ಹೋಗಿ ನೆಲೆಸಿದರು. ಅಲ್ಲಿ ಸ್ವಲ್ಪಕಾಲವಿದ್ದು ಅಲ್ಲಿಯೂ ಸರಿಪಡದೆ ಹೋದುದರಿಂದ ಕಡೆಗೆ ಪ್ಯಾರಿಸಿಗೆ ಬಂದು ನೆಲೆಗೊಂಡರು. ಇಷ್ಟರಲ್ಲಿ ಮೊದಲನೆಯ ಭಾರ್ಯೆಯು ಆರ್ವರು ಮಕ್ಕಳನ್ನಗಲಿ ಕಾಲಗತಿಯನ್ನೈದಿದಳು. ಮರಳಿ ಒಬ್ಬ ಫ್ರೆಂಚ್ ಲೇಡಿಯನ್ನು ವಿವಾಹ ಮಾಡಿಕೊಂಡರು. ೧೮೯೦ನೇ ಇಸವಿಯಲ್ಲಿ ಧುಲೀಪ್‌ಸಿಂಗರವರ ಸ್ಥಿತಿಯು ಬಹಳ ಪರಿತಾಪಕರವಾಗಿಹೋದದ್ದರಿಂದ ಅವರು ತಮ್ಮ ಅವಿವೇಕವಂ ನೆನದು ಚಿಂತಿಸುತ ತಮ್ಮ ವರ್ತನಕ್ಕಾಗಿ ಮನನೊಂದು, ಶ್ರೀಮತ್ ಮಹಾರಾಜ್ಞೀಯವರ ಕ್ಷಮೆಯಂ ಆರ್ತರಾಗಿ ಪ್ರಾರ್ಥಿಸಲು, ಮಹಾರಾಜ್ಞೀಯವರು ತಮ್ಮ ಉದಾರಭಾವವಂ ವ್ಯಕ್ತಪಡಿಸಿ ಅವರು ತಮಗೆ ವಿಧೇಯರಾಗಿದ್ದು ತಮ್ಮ ವರ್ತನವಂ ಕ್ರಮಪಡಿಸಿಕೊಳ್ಳುವರೆಂಬ ಭಾವದೊಡನೆ ಮಹಾರಾಜರ ಸಕಲಾಪರಾಧಗಳಂ ಕ್ಷಮಿಸಿರುವಂತೆ ಆಜ್ಞಾಪಿಸಿದರು. ಅದೇ ಪರುವ ಆಗಸ್ಟ್ ೩ ನೇ ತಾರೀಖಿನಲ್ಲಿ ಧುಲೀಪ್ ಸಿಂಗರವರು ಶ್ರೀಮತ್ ಮಹಾರಾಣಿಯವರು ಉದಾರಭಾವದಿಂದ ತೋರಿಸಿದ ಮನ್ನಣೆಗೆ ತಾವು ಬಹಳ ಕೃತಜ್ಞರಾಗಿರುವಂತೆ ಪ್ರತ್ಯುತ್ತರವಂ ತಮ್ಮ ಕುಮಾರರ ಮೂಲಕ ಬರೆಯಿಸಿ ಕಳುಹಿಸಿದರು. ಅದುಮೊದಲು ಇದುವರೆಗೆ ಪೇರಿಸ್ ಪಟ್ಟಣದಲ್ಲಿ ವಾಸಮಾಡುತ ಸಾಮಾನ್ಯರೊಳೊಬ್ಬರಾಗಿರುತಲಿದ್ದರು. ಇವರಿಗೆ ದುರ್ವಿಧಿಯಿಂದ ಪ್ರಾಪ್ತವಾದ ಪಾರ್ಶ್ವವಾಯು ರೋಗವು ನಿವೃತ್ತಿಯಾಗದೆ ಅಂಗವೈಕಲ್ಯವನ್ನುಂಟುಮಾಡಿ ಪರಾಧೀನಸ್ಥಿತಿಗೊಳಪಡಿಸಿತು. ಅದರ ಮೇಲೆ ಈಚೆಗೆ ಸನ್ನಿಯುಂಟಾಗಿ ಪ್ರಜ್ಞೆಯು ತಪ್ಪಿ ಕರಣಕಳೇಬರವಾಬವಗಳೆಲ್ಲವು ಅಡಗಿ ಕಡೆಗೆ ತಮ್ಮ ಅಪಜ್ಞಾತಾಪ್ರಯುಕ್ತಗಳಾದ ಕರ್ಮಫಲಗಳನ್ನನುಭವಿಸಿ ಕಾಲಗತಿಯನ್ನೈದಿದ್ದು ಯಿಂತಿವರಿಗೂ ಶೀಘ್ರವಾಗಿ ಪರೆಯತಕ್ಕದ್ದಲ್ಲವು.

## ಪ್ರತ್ಯುತ್ತರವು

ಮೈಸೂರು ಸೀಮೆಯಲ್ಲಿರುವ ದೇವಾಲಯಗಳ ಸ್ಥಿತಿ ಪರಿಷ್ಕರಣ ವಿಚಾರದಲ್ಲಿ ಶ್ರೀವರ್ಮಾ ಗೋಪಾಲಾಚಾರ್ಯರವರು ಇಂಗ್ಲಿಷ ಪತ್ರಿಕೆಗಳ ಮೂಲಕ ಪ್ರಕಟಿಸಿದ್ದ ವಿಲಕ್ಷಣಗಳಾದ ಕೆಲವು ನೂತನ ಯೋಚನೆಗಳ ಮೇಲೆ ನಮಗೆ ತೋರಿದ ಕೆಲವು ಅಭಿಪ್ರಾಯಗಳಂ ಸಾಮಾನ್ಯವಾಗಿ ಮಾಹೇ ಮಜಕೂರ್ ೨ ಮತ್ತು ೧೬ ನೆ ತಾರೀಖಿನ ಪತ್ರಿಕೆಗಳಲ್ಲಿ ಪ್ರಕಟಿಸಿದ್ದದು ಪ್ರಾಯಶಃ ಎಲ್ಲರೂ ಓದಿರಬಹುದೆಂದು ನಂಬುತ್ತೇವೆ. ನಮ್ಮ ಎರಡು ಲೇಖನಗಳು ಗೋಪಾಲಾಚಾರ್ಯರ ಅಭಿಪ್ರಾಯಗಳನ್ನನುಸರಿಸಿವನೇ ಹೊರ್ತು ಅವರ ವರ್ತನಗಳನ್ನು ಕುರಿತಾಗಲಿ, ಅವರ ಯಾಜಮಾನ್ಯದೊಳಿರುವ ಮಂದಿರವನ್ನು ಕುರಿತಾಗಲಿ, ಉದ್ದೇಶಿಸಿ ಬರೆಯಲ್ಪಟ್ಟವಲ್ಲವು ಸದರೀ ಎರಡು ವಿಷಯಗಳೂ ಅದ್ಯಾಪಿ ನಮಗೆ ಪರಿಗಣನೀಯಾರ್ಹಗಳಲ್ಲವು ಹೀಗಿದ್ದಾಗ್ಯೂ ಇಂಥ ನಮ್ಮ ಲೇಖನಗಳಿಗೆ ಉತ್ತರರೂಪವಾಗಿ, ಇದೇ ತಿಂಗಳ ೨೫ನೇ ತಾರೀಖುಳ್ಳ ಮೈಸೂರ್ ವೃತ್ತಾಂತ ಚಿಂತಾಮಣಿ ಎಂಬ ಒಂದು ಕನ್ನಡ ಪತ್ರಿಕೆಗೆ ತಮ್ಮ ರುಜು ನಿವೆ ಒಂದು ಲೇಖನವು ಬರೆದು ಕಳುಹಿಸಿರುತ್ತಮನೆ ಇಡಿವೆತ್ತು ಇವರ ಲೇಖನದಲ್ಲಿ ಉತ್ತರಸಾಪೇಕ್ಷಿತಗಳಾದ ವಿಶೇಷಾಂಗಳ್ಯಾವವೂ ಕಂಡುಬರದಿದ್ದಾಗ್ಯೂ ನಿಂದಾಸ್ತುತಿರೂಪಗಳಾದ ವಾಕ್ಯಗಳನ್ನೂ ಮಾನರುಕ್ತಿಗಳನ್ನೂ ತಳ್ಳಿಬಿಟ್ಟು ನೋಡಲಾಗಿ ೫ ವಿಷಯಗಳು ಮಾತ್ರ ನಮ್ಮ ಉತ್ತರಕ್ಕೆ ಅರ್ಹವಾದವಾಗಿ ಏರ್ಪಡುತಿವೆ, ಅವುಗಳ್ಯಾವವೆಂದರೆ.—

೧ ನೇದು—“ಸ್ವಗ್ರಹವಂತೆ ಇಟ್ಟುಕೊಂಡಿರುವ ಶ್ರೀವರ್ಮಾ ಗೋಪಾಲಾಚಾರ್ಯರವರು” ಎಂದು ನಾವು ಬರೆಯುವಾಗ, ಸ್ವಾತಂತ್ರ್ಯಹಕ್ಕಿನ ನಿರ್ವಹಣದಲ್ಲಿ ವಿಶೇಷ ಆಸಕ್ತಿ ಇರುವಂತೆ ಸಾಮುದಾಯಕಸ್ವತ್ತಾದ ಆಲಯ ವಿಷಯದಲ್ಲಿ ಬಹಳ ಶ್ರದ್ಧೆಯನ್ನು ವ್ಯಕ್ತಪಡಿಸುತಲಿರುವಂತಾ ಆಚಾರ್ಯರು, ಮಂದಿರದಲ್ಲಿ ಏನು ವಿಶೇಷ ಏರ್ಪಾಟುಗಳಂ ಮಾಡಿದರೆಂದು ನಾವು ಕೇಳಿದ್ದೇವೆ ಹೊರ್ತು ಮಂದಿರವು ಅವರ ವಾಸಗೃಹವೆಂಬದು ನಮ್ಮ ಭಾವವಲ್ಲವು. ಸರ್ಕಾರದೇವಸ್ಥಾನಕ್ಕೆ ಇವರಿಗೆ ಸ್ವತ್ವವುಂಟಾಗಲಾರದೆಂಬದು ನಾವು ಚೆನ್ನಾಗಿಬಲ್ಲೆವಾಗಿ ಇದು ಅವಿಚಾರಕಲ್ಪನರೂಪವಾದ ಅಸಲಾಪವೆಂದು ಇದು ಓದುವಂತವರು ಅರಿಯಬಹುದು.

೨ ನೇದು—ಇವರ ಆಲಯ ಪರಿಚಾರಕರು ಅಯೋಗ್ಯರೆಂದಾಗಲಿ ಅನಾಚಾರವುಳ್ಳವರೆಂದಾಗಲಿ ನಾವು ನುಡಿಯಲಿಲ್ಲವು. ಇವರು ವಿಶೇಷ ವೈಲಕ್ಷಣ್ಯಾಭಿವೃದ್ಧಿಗಾಗಿ ಈಗ ತಿಳಿಸುವ ನೂತನ ಕ್ರಮಗಳ ಪ್ರಕಾರ ಯಾವನನ್ನಾದರೂ ಮಾಡಿದಾರೆಯೆ. ಎಂದು ಕೇಳಿದೆವೇ ಹೊರ್ತು ಅರ್ಚಕ ಪರಿಚಾರಕರ ಸ್ವರೂಪವಿಚಾರವು ನಮಗೆ ಅನಾವಶ್ಯಕವಾಗಿರುತಿದೆ, ಹೀಗಿದ್ದರೂ ಅವರನ್ನು ಕನಿಷ್ಟರೆಂದು (ಪ್ರಾಯೇಣ ನಿಕೃಷ್ಟರೆಂಬ ಭಾವವಿರಬಹುದು) ನಾವು ನುಡಿದವರಲ್ಲವು. ಕದಾಚಿತ್ ಆ ರೀತಿ ಹೇಳಿದೆವೆಂದು ಆಚಾರ್ಯರು ಸಾಧಿಸುವ ಪಕ್ಷಕ್ಕೆ, ಇವರ ಆಚಾರನ್ಯೂನತಾದಿವೈಲಕ್ಷಣ್ಯಗಳನ್ನೂ, ಸಂಪ್ರದಾಯ ವಿರುದ್ಧಗಳಾದ ಇವರ ಕೆಲವು ವ್ಯಾಪಾರಗಳನ್ನೂ ಆಗಿಂದಾಗ್ಯೆ ಆಚಾರ್ಯರೇ ಹೊರಪಡಿಸುತ್ತ, ಇವರನ್ನು ಕಥಂಚಿತ್ ಆಕೆಲಸದಿಂದ ತಪ್ಪಿಸಿ ಅನ್ಯರನ್ನು ನಿಯಾಮಿಸಬೇಕೆಂದು ನುಡಿದು ಅದಕ್ಕಾಗಿ ಪ್ರಯತ್ನಪಟ್ಟು ಸಾಧ್ಯವಾಗದೆಹೋಗಿ, ಕಡೆಗೆ ಗಂಭೀರವಾಗಿ ಸುಮ್ಮನಿದ್ದದು ಶ್ರೀವರ್ಮಾ ಗೋಪಾಲಾಚಾರ್ಯರು ಎಷ್ಟು ಕ್ಷಿಪ್ರದಲ್ಲಿಯೇ ಮರೆತುಹೋಗಿರುವರೆಂದು ನಾವು ನಂಬಲಾರೆವು ಹೀಗೆ ತಮ್ಮ ಆಲಯದಲ್ಲಿ ಅರ್ಚಕರ ಹಕ್ಕುದಾರಿಯಂ ತಪ್ಪಿಸಲಿಕ್ಕೆ ಸ್ವತಃ ಅಸಮರ್ಥರಾಗಿರುವ ಆಚಾರ್ಯರವರು, ಇತರ ಅರ್ಚಕರ ಹಕ್ಕುದಾರಿಗಳನ್ನು ಪರಿಗಣಿಸದೆ, ನಗರನಗರಗಳನ್ನು ಬಡಾ ಬರ್ಖಾಸ್ತ್ ಮೊದಲಾದವುಗಳನ್ನು ಮಾಡಬೇಕೆಂದು ಸಲಹೆಕೊಡಲಿಕ್ಕೆ ಇವರಿಗೆ ಪ್ರಾಗೆ ಮನ ಒಡಂಬಟ್ಟಿತೆಂಬುದು ಕೇಳಿದೆವೆ ಹೊರ್ತು ಬೇರಿಲ್ಲವು.

೩ ನೇದು—ಸದರೀ ಮಂದಿರಕ್ಕೆ ನಾವು ಯಾವದೋ ಒಂದು ಸಂದರ್ಭದಲ್ಲಿ ಹೋಗಿ ತೀರ್ಥಪ್ರಸಾದಗಳಂ ಪರಿಗ್ರಹಿಸಿದಂತೆಯೂ, ಹಾಗೆ ಅನೇಕ ಸಂದರ್ಭಗಳಲ್ಲಿ ಹೇಳಿ ಕಳುಹಿಸಿದಾಗ್ಯೂ ನಾವು ಹೋಗಲಿಲ್ಲವೆಂದೂ ಆಚಾರ್ಯರವರೇ ಒಪ್ಪಿಕೊಳ್ಳುತ್ತಾರೆ. ನಾವು ಒಂದು ಸಂದರ್ಭದಲ್ಲಿ ಹೋಗಿದ್ದು ನಿಜವೆ, ಅದರ ತರುವಾಯ ಹೋಗದಿರುವದೂ ನಿಜವೆ, ನಾವು ತೀರ್ಥಪ್ರಸಾದಗಳನ್ನು ತೆಗದುಕೊಂಡು ಪ್ರಾಶನ ಮಾಡಲಿಲ್ಲವೆಂದು ದೃಢವಾಗಿ ಹೇಳಬಲ್ಲೆವು ಇವರ ದೇವಾಲಯಗಳಲ್ಲಿ ಸೇರ ನಂತೆ ಇವರ ಆಲಯದಲ್ಲಿ ನಿಶ್ಚಿತ ಸಂದರ್ಭದೊಳು ಅನ್ಯಮತಸ್ಥರು ಏತಕ್ಕೆ ಸೇರುವದಿಲ್ಲವೋ? ಶ್ರೀವೈಷ್ಣವರಲ್ಲಿ ಕೂಡ ಪರಮ ವೈದಿಕರಾದಂತಾ ಅಣ್ಣಂಗರಾಚಾರ್ಯರು ಪ್ರಭೃತಿ, ಆಚಾರ್ಯಪುರುಷರು ಸದರೀ ದೇವಸ್ಥಾನದಲ್ಲಿ ತೀರ್ಥಪ್ರಾಶನವಂ ಮಾಡುವದಕ್ಕೆ ಏತಕ್ಕೆ ನಿರಾಕರಿಸಿದರೋ ಅದೇ ಕಾರಣಗಳಿಂದಲೇ ನಾವೂ ತೆಗದುಕೊಳ್ಳುವದಿಲ್ಲವು.

೪ ನೇದು—ಇವರ ಆಲಯದೊಳಗಾಗಲಿ, ಆದರ ನೌಕರರ ವಿಷಯಗಳಲ್ಲಾಗಲಿ ಇರುವ ಲೋಪಗಳನ್ನು ತೋರಿಸುವ ಪಕ್ಷಕ್ಕೆ ನಮಗೆ ಪ್ರಾಳಿ ಜೊತೆ ಬಹೆ ಬ್ಯಾಬಾನನ್ನಗಳಂ ಪರಿಚಾರಕರ ರತಿಯ ಮೇಲೆ ಹೊರಿಸಿ ಕಳುಹಿಸುವೆವು” ಎಂಬದಾಗಿ ಆಚಾರ್ಯರವರು ಅನುಗ್ರಹಿಸಿ ಬರೆದಿರುತ್ತಾರೆ. ಇವರ ಆಲಯದೋಷಗಳನ್ನು ದೃಷ್ಟಾಂತ ಮಾಡುವದಕ್ಕಾಗಲಿ, ಅವು ತಿದ್ದುವದಕ್ಕಾಗಲಿ, ನಾವು ಪ್ರವರ್ತಿಸಿದವರಲ್ಲವಾಗಿ ಅದು ನಮಗೆ ಅನಾವಶ್ಯಕ ಕಾರ್ಯವಾಗಿರುತಿದೆ. ಪ್ರಳಯೋರೆ ವಿಪಲಾದವನ್ನು ಆಚಾರ್ಯರು ಕಳುಹಿಸುವ ವಿಷಯದಲ್ಲಿ, ಸರ್ಕಾರ್ ನೌಕರಿಯನ್ನು ಸಹ ತ್ಯಜಿಸಿ, ಕುಟುಂಬವು ತೊರೆದು, ದೀಕ್ಷಾಬದ್ಧರಾಗಿ, ದೇಶಾಟನ ಮಾಡಿ ದೇವರ ಹೆಸರಿನಲ್ಲಿ ನಾನಾಪ್ರಕಾರದಿಂ ಸಂಪಾದಿಸಿದ ಪ್ರಳಯೋರೆ ದ್ರವ್ಯಗಳನ್ನು ಅನ್ಯರಿಗೆ ಹಂಚಿ, ಸಾಕ್ಷಾತ್ ಪರಮ ನ್ಯಾಯಕ್ಕೆ ವಿಶಿಷ್ಟರಾಗಿಸಿಕೊಂಡು ಸುಸ್ವಸ್ಥರಾಗಿರಬಹುದಲ್ಲವೆ ಅನುಇತರರಿಗೆ ಅರ್ಹಗಳಾಗಲಾರವು

೫ನೇದು— ದೇವಾಲಯಗಳನ್ನು ಕುರಿತು ತಾವು ಇಂಗ್ಲಿಷ ಬಾಷೆಯಲ್ಲಿ ಬರೆದ ಲೇಖನಕ್ಕೆ ಇಂಗ್ಲಿಷ ಪತ್ರಿಕೆಯನ್ನು ಪ್ರಕಟಿಸುತಿರುವ ನಾವು ಕನ್ನಡ ಪತ್ರಿಕೆಯ ಮೂಲಕ ಆಕ್ಷೇಪಿಸಿದ್ದಕ್ಕೆ, ಅನ್ಯರ ಮೂಲಕ ಬರೆಯಿಸಲಿಕ್ಕೆ ಕನ್ನಡವೂ, ಸ್ವತಃ ಇಂಗ್ಲಿಷ್ ಭಾಷೆಯೂ ಬಾರದೋ ಏನೋ ಎಂದು ಆಚಾರ್ಯರು ಅನುಮಾನಿಸುತ್ತಾರೆ. ಹಿಂದುಗಳ ಸಮಯಾಚಾರ ಪರಿಷ್ಕರಣಕ್ಕೂ ದೇವಾಲಯಗಳ ಸ್ಥಿತಿ ಪರಿಷ್ಕರಣಕ್ಕೂ ಸಂಬಂಧಪಟ್ಟ ವಿಚಾರಗಳನ್ನು ಸಾಮಾನ್ಯವಾಗಿ ಎಲ್ಲರೂ ತಿಳಿಯುವಂತೆ ದೇಶಭಾಷೆಯಲ್ಲಿ ನಡೆಸಿ ಅವರಿಗೆ ಬೋಧಿಸಿ, ಅವರ ಅನುಮತಿಗಳಂ ಪಡೆಯುವಣವೆ ಕ್ಷೇಮವೆಂಬದಾಗಿ ಅಪೇಕ್ಷಾಪೂರ್ವಕ ಸೂಚಿಸಿರುತ್ತೇವೆ. ಅದೇ ಭಾವದೊಡನೆ ಆಚಾರ್ಯರು ಕೊಟ್ಟ ಸಲಹೆಗಳ ಯುಕ್ತಾಯುಕ್ತತೆಗಳಂ ಪಂಡಿತ ಪಾಮರ ಸಾಧಾರಣ್ಯೇನ ಸ್ವದೇಶೀಯರೆಲ್ಲರು ತಿಳಿದು ಸಂತೋಷಿಸಬೇಕೆಂದು ತಾತ್ಪರ್ಯವಿಟ್ಟು ಕನ್ನಡದಲ್ಲಿ ಬರೆದವೇ ಹೊರ್ತು ಇಂಗ್ಲಿಷ ತಿಳಿಯದೆಂಬ ಭಾವದಿಂದಲ್ಲವು. ಒಂದು ವೇಳೆ ನಮಗೆ ಇಂಗ್ಲಿಷ್ ಜ್ಞಾನವು ಅಲ್ಪವಾದುದೆಂತಲಾಗಲಿ, ಕುದ್ವಾಂಗ ಬಾರದೆಂತಲಾಗಲಿ, ಕನ್ನಡವೇ ತಿಳಿಯದೆಂತಲಾಗಲಿ, ಶ್ರೀವರ್ಮಾ ಗೋಪಾಲಾಚಾರ್ಯರು ಅಭಿಪ್ರಾಯಗೊಂಡು ಅದನ್ನವರು ವ್ಯಕ್ತಪಡಿಸುವಪಕ್ಷಕ್ಕೆ ನಮ್ಮ ಪ್ರತಿಷ್ಠೆಗೆ ಅದರಿಂದ ಲೋಪಬಂದಂತೆ ನಾವು ಭಾವಿಸುವದಿಲ್ಲವು. ಸ್ವತಃ ಯೋಗ್ಯತೆ ಸಾಲದಿದ್ದರೂ ಅರೋಪಿತಗುಣಗಳಾದ ವಂಚಿಸಿ ಮೆರೆಯುವದಕ್ಕೆ ನಮಗೆ ಎಷ್ಟುಮಾತ್ರವೂ ತಾತ್ಪರ್ಯವಿಲ್ಲವು. ಅಂತಾ ನುಣಿಯೂ ನಮಗೆ ಅನಾವಶ್ಯಕವು. ಇಂಗ್ಲಿಷ ಬಾಷೆಯೊಳು ಲೇಖನಪಾಟವದಲ್ಲಿ ಲಾರ್ಡ್ ಮೆಕಾಲೆಯವರಂತೆಯೂ, ವಾಚಾಲಕತೆಯೊಳು ಪ್ರಸಿದ್ಧರಾದ ಗ್ಲಾಡ್‌ಸ್ಟನ್ ಮೊದಲಾದವರಂತೆಯೂ, ಗ್ರಂಥರಚನಾ ಕೌಶಲ್ಯದಲ್ಲಿ ಷೇಕ್ಸ್ಪಿಯರ್ ಮಿಲ್ಟನ್ ವಗೈರೆಯವರಂತೆಯೂ, ಕರ್ಣಾಟಕಭಾಷೆಯಲ್ಲಿ ಪಂಪನು, ಷಡಕ್ಷರಿದೇವನು ಮೊದಲಾದವರಂತೆಯೂ, ಗೀರ್ವಾಣದಲ್ಲಿ ಕಾಳಿದಾಸ ಭವಭೂತಿ ಮೊದಲಾದವರಂತೆಯೂ, ಆಂಧ್ರದಲ್ಲಿ ತಿಕ್ಕನ ಸೋಮಯಾಜಿ ಅಲಸಾನಿಪೆದ್ದನ್ನ ವಗೈರೇರಂತೆಯೂ, ಖ್ಯಾತಿ ಭಾಷಿಸಿಬಬ್ಬ ಯೋಗುವದಾಗಲಿ, ಆಧುನಿಕ ಬಾಣಸಂಸ್ಕೃತಿ ಎಂಬ ಪ್ರಶಸ್ತಿಯಂ ಸಂಪಾದಿಸುವ ಉದ್ದೇಶ ಪ್ರಯತ್ನಗಳಾಗಲಿ, ನಮಗೆ ಅಸಾಧ್ಯವಾದ ವಿಷಯವಾಗಿರುತಿದೆ. ಆಕೀರ್ತಿಸ್ತುತಿಷ್ಠೆಗಳಂ ಆಚಾರ್ಯರೇ ಸಂಪಾದಿಸಿ ಅನುಭವಿಸಿಕೊಂಡರೆಯಲ್ಲರಿಗೂ ಕೃತಾರ್ಥರಾಗಿರುವೆವು. ಇಂತಾ ವಿಶಿಷ್ಟಲೋಪಗುಣಗಳುಳ್ಳವರ ಪಜ್ತಿಗೆ ನಾವು ಸೇರಲು ಅರ್ಹರೆನಿಸಿಕೊಳ್ಳಲಾರೆವು. ಇವರಿಗೆ ಭೂಷಣಗಳಾಗಿರುವ ವಿದ್ಯಾಬುದ್ಧಿ ವಿವೇಕಚಾತುರ್ಯಾದಿಗಳು ಪ್ರಾರ್ಥಿಸಿದಾಗ್ಯೂ ನಮಗೆ ಲಭಿಸತಕ್ಕವಲ್ಲವು. ಆದುದರಿಂದ ನಮ್ಮ ಯೋಗ್ಯತೆಯು ಎಷ್ಟು ಅಲ್ಪವಾಗಿದ್ದಾಗ್ಯೂ ಯಾವ ಸಹಾಯವನ್ನು ನಾವು ಅಪೇಕ್ಷಿಸಿದಾಗ್ಯೂ ಅವಮಾನವೇನೂ ಇಲ್ಲವು ಮುಖ್ಯವಾಗಿ ಆಚಾರ್ಯರವರು ಈಗ ಸ್ವೀಕರಿಸಿದ ವೇಷಕ್ಕನುಸಾರ ತಾಪಸವೃತ್ತಿಯಂ ಕೈಗೊಂಡಿರುವದರಿಂದ “ಕೋಪಂ ಕೋಪನಿವಾರಣೇತಿ” ಎಂಬುವಂತೆ ಅಗ್ರಪಶ್ರೇಣಿತಗಳಾದ ನಿಂದಾಸ್ತುತಿಗಳಂದ ವಿಷಯ ನಿವರ್ತಿಯಂ ಮಾಡಲುಪಕ್ರಮಿಸಿರುವದರಿಂದ ಏತದ್ವಿಷಯಕವಾದ ನಮ್ಮ ವಿಚಾರವು ಮುಂದೆ ಅವರಿಗೆ ವ್ಯರ್ಥವಾದ ಹೃದಯವ್ಯಥೆಯನ್ನುಂಟುಮಾಡದೆ ಹೋಗಲಾರದೆಂದೆಣಿಸಿ ಇಲ್ಲಿಗೆ ವಿರಮಿಸುವೆವು

## LOCAL AND PROVINCIAL NEWS

ಒಳದೇಶಮತ್ತು ತಾಲ್ಲೂಕ್‌ಜಾತ್ ವೃತ್ತಾಂತಗಳು.

ಮೈಸೂರಲ್ಲಿ ನಡೆದ ದಸರಾ ಮಹೋತ್ಸವಕ್ಕೆ ಆಹ್ವಾನ ಪೂರ್ವಕ ಬಂದಿದ್ದ ರೆಸಿಡೆಂಟರು ಮೊದಲಾದ ಯುರೋಪಿಯನ್‌ರೊತ್ತ ಮನುಷ್ಯರ ಪ್ರಕೃತಿ ಪ್ರಾಯಶಃ ಯೆಲ್ಲರೂ ಕಳೆದ ಬೃಹಸ್ಪತಿವಾರದದಿನ ಊರುಗಳಿಗೆ ವಾಪಸ್ ಬಂದು ಸೇರಿದರು. ನೇಟಿವ್ ಅಧಿಕಾರಿಗಳು ನಿನ್ನೆಯದಿನ ಬಂದು ಸೇರಿದರು.

ಈ ಸಂಸ್ಥಾನದ ರೆಸಿಡೆಂಟರ ಅಸಿಸ್ಟೆಂಟರಾದ ಮೇಜರ್ ರಾವರ್ಷಾ ಯವರು ಮೂರು ತಿಂಗಳ ರಜಾ ಮೇಲೆ ಸ್ವದೇಶಕ್ಕೆ ಹೋಗಿರುತ್ತಾರೆ ಯಷ್ಟೆ. ಸದರೀ ಯವರು ನಾಳೆಯದಿನ ಮುಂಬೈ ದಡದಲ್ಲಿ ದವಗು ಇಳಿದು ೪ ನೇ ತಾರೀಖಿನಲ್ಲಿ ತಮ್ಮ ಕೆಲಸದ ಚಾರ್ಜಂ ವಹಿಸುವರೆಂದು ತಿಳಿಯಬಂದಿದೆ.

ಕಳೆದ ವಾರದಲ್ಲಿ ಒಂದೆರಡುದಿನಗಳು ಸ್ವಲ್ಪಹೊತ್ತು ಸಾಮಾನ್ಯವಾಗಿ ಅಲ್ಪವೃಷ್ಟಿಯಾಯಿತೆ ಹೊರತು ಬಲವಾದ ವರ್ಷವಿಲ್ಲವು. ಬಿಸಿಲು ಚುರುಕಾಗಿ ಕಾಯುತಲಿದೆ. ಪದಾರ್ಥಗಳ ದಾರಣೆಗಳು ಒಂದೇವಿಧವಾಗಿವೆ. ರೋಗಾದ್ಯುಪದ್ರವಗಳು ವಿಶೇಷವಾಗಿ ಯೇನೂ ಇಲ್ಲವು. ದನಗಳಿಗೆ ಮೇವೂ ನೀರೂ ಸಮೃದ್ಧಿಯಾಗಿವೆ.

## THE MYSORE DASSERAH ASSEMBLY.

### ADDRESS OF THE DEWAN OF MYSORE TO THE REPRESENTATIVE ASSEMBLY HELD AT MYSORE, ON MONDAY, THE 23rd OCTOBER 1893.

ಸನ್ ೧೮೯೩ನೇ ಇಸವಿ ಅಕ್ಟೋಬರ್ ೨೩ನೇ ತಾರೀಖು ಸೋಮವಾರದ ದಿನ ಮೈಸೂರಲ್ಲಿ ಸೇರಿದ್ದ ಪ್ರಜಾ ಪ್ರತಿನಿಧಿಗಳ ಸಭೆಯಲ್ಲಿ ಶ್ರೀಮಾನ್ ದಿವಾನರವರು ಮಾಡಿದ ಉಪನ್ಯಾಸವನ್ನು ಪ್ರಕಟಿಸುತ್ತೇವೆ. ಇದರಿಂದ ಈಗಿನ ಪ್ರಭುತ್ವದಲ್ಲಿ ಮೈಸೂರು ಸಂಸ್ಥಾನವು ಹೊಂದಿರುವ ಅಭಿವೃದ್ಧಿಯೂ ಸರ್ಕಾರದವರ ಉದ್ದೇಶ ಪ್ರಯತ್ನಗಳೂ ವ್ಯಕ್ತವಾಗುತ್ತವೆ.

ಶ್ರೀಮನ್ಮಹಾರಾಜಾ ಸಾಹೇಬ್ ಬಹದ್ದೂರರವರು, ೧೩ ನೇ ಸಂವತ್ಸರದ ಈ ಸಭೆಯಲ್ಲಿ, ಕಳೆದ ವರುಷದ ಜಮಾಖರ್ಚಿನ ತಪಸೀಲನ್ನೂ, ಕೋಶದ ಸ್ಥಿತಿಯನ್ನೂ, ಮುಖ್ಯವಾದ ಇಲಾಖೆಗಳ ಆಡಳಿತದ ವಿಷಯಗಳನ್ನೂ ನಿಮಗೆ ತಿಳಿಸುವಂತೆ ಅಪ್ಪಣೆ ದಯಪಾಲಿಸಿರುತ್ತಾರೆ.

ಕಳೆದ ಸಂವತ್ಸರದಲ್ಲಿ ನಡೆದ ವಿಶೇಷ ಸಂಗತಿಗಳ ಪೈಕಿ, ಘನವನ್ನು ಹೊಂದಿದ ವೈಸ್‌ರಾಯಿ ಮತ್ತು ಗವರ್ನರ್ ಜನರಲ್‌ರವರಾದ ಲಾರ್ಡ್ ಲ್ಯಾನ್ಸ್‌ಡೌನ್‌ರವರು ಸಕುಟುಂಬವಾಗಿ ಈ ರಾಜ್ಯಕ್ಕೆ ದಯಮಾಡಿಸಿದ್ದದ್ದು ಮುಖ್ಯವಾದ್ದಾಗಿರುತ್ತೆ. ಆ ಕಾಲದಲ್ಲಿ ವೈಸ್‌ರಾಯಿ ರವರಿಗೆ ಈ ಸೀಮೆಯ ಪ್ರಜೆಗಳೆಲ್ಲರೂ ಏಕೀಭವಿಸಿ ತೋರಿಸಿದ ನಿಜವಾದ ಮತ್ತು ಶ್ರದ್ಧಾಪೂರ್ವಕವಾದ ರಾಜಭಕ್ತಿಯು ಶ್ರೀಮನ್ಮಹಾರಾಜರವರಿಗೆ ವಿಶೇಷವಾದ ಆನಂದವನ್ನುಂಟುಮಾಡಿತು. ದಿವಾನ್, ಶ್ರೀಮನ್ಮಹಾರಾಜರವರು ರಾಜ್ಯಭಾರವನ್ನು ವಹಿಸಿದಾರಭ್ಯ ಸರ್ಕಾರದವರು ನಡಿಸಿದ ತಕ್ಕ ಪ್ರಜಾಕ್ಷೇಮಾಭಿವೃದ್ಧಿಗೆ ಕಾರಣವಾದ ಅನೇಕ ಕಾರ್ಯಗಳನ್ನು ಕಂಡು, ಈಗ ಇಲ್ಲಿ ಸೇರಿರುವ ಸಭೆಯ ಏರ್ಪಾಡು ಮತ್ತು ಸಭಿಕರು ನಡಿಸತಕ್ಕ ಕೆಲಸಗಳ ವಿಷಯದಲ್ಲಿ ಸಂಪೂರ್ಣವಾದ ತೃಪ್ತಿಯನ್ನು ವ್ಯಕ್ತಪಡಿಸಿ, ವೈಸ್‌ರಾಯ್‌ರವರು ಅಂತಃಕರಣಪೂರ್ವಕವಾಗಿ ಅಪ್ಪಣೆಕೊಟ್ಟ ಮಾತುಗಳು ನಿಮಗೆ ಜ್ಞಾಪಕವಿದ್ದಿರಬಹುದು. ರಾಜರೂ ಪ್ರಜೆಗಳೂ ಪರಸ್ಪರ ತೃಪ್ತರಾಗಿರುವ ಭಾಗದಲ್ಲಿಯೂ, "ರಾಜಾ ಪ್ರಕೃತಿರಂಜನಾತ್" ಎಂಬ ಘನೋಕ್ತಿಯು ಶ್ರೀಮನ್ಮಹಾರಾಜರವರ ಆಳ್ವಿಕೆಯಲ್ಲಿ ಸಾರ್ಥಕವಾಗಿರುವ ಭಾಗದಲ್ಲಿಯೂ, ಮೈಸೂರು ಸೀಮೆಗಿಂತ ಅತಿಶಯವಾಗಿ ಭರತಖಂಡದ ಇನ್ನಾವ ರಾಜ್ಯದಲ್ಲಿಯೂ ಪ್ರಾಯಶಃ ಇರುವದಿಲ್ಲವೆಂದು ವೈಸ್‌ರಾಯಿ ರವರು ದಯವಿಟ್ಟು ಅಪ್ಪಣೆ ಕೊಡಿಸಿದ ಉಕ್ತಿಗಳ ಸ್ಮರಣೆಯು ನಮ್ಮೆಲ್ಲರಿಗೂ ಕೇವಲ ಗೌರವಾನುಭವವನ್ನುಂಟುಮಾಡತಕ್ಕದ್ದೆಂಬ ಅಂಶವನ್ನು ನಾನು ವಿಶೇಷವಾಗಿ ತಿಳಿಸತಕ್ಕ ಅವಶ್ಯವಿರುವದಿಲ್ಲ.

ಹುಟ್ಟುವಳಿ.—ಕಳೆದ ಸಂವತ್ಸರದ ಹುಟ್ಟುವಳಿಯು ಅನನ್ಯಸದೃಶವಾಗಿ ಸಮೃದ್ಧಿಯಾಗಿತ್ತು. (ರೈಲ್ವೆ ಬಾಬು ಶಿವಾಯಿ) ಎಲ್ಲಾ ಬಾಬುಗಳ ಹುಟ್ಟುವಳಿಯು ಅತುಲ್ಯವಾಗಿ ೧೬೫ ಲಕ್ಷ ರೂಪಾಯಿ ಆಯಿತು. ಈ ಮೇರೆ ಹಿಂದಣ ಯಾವ ಸಂವತ್ಸರದಲ್ಲಿಯೂ ಉತ್ಪತ್ತಿಯಾಗಿರಲಿಲ್ಲ. ೧೮೮೦-೮೧ ನೇ ಇಸವಿಯಲ್ಲಿ ೧೦೩ ಲಕ್ಷ ರೂಪಾಯಿಗಳಿಂದ ಉಪಕ್ರಮಿಸಿ ೧೮೮೭—೮೮ ನೆ ಸಾಲಿನವರೆಗೂ ವಿಶೇಷವಾದ ಜಾಸ್ತೀ ಕಮ್ಮಿ ಇಲ್ಲದೆ, ಆ ಸಂವತ್ಸರದಲ್ಲಿ ಅಭಿವೃದ್ಧಿ ಪರಂಪರಾಕ್ರಮವು ಪ್ರಾರಂಭವಾಗಿ, ಆ ಲಾಗಾಯಿತು ಪ್ರತಿವರ್ಷದ ಹುಟ್ಟುವಳಿಯಲ್ಲಿಯೂ ಕೆಲಕೆಲವು ಲಕ್ಷ ರೂಪಾಯಿಗಳು ಜಾಸ್ತಿಯಾಗುತ್ತಾ ಬಂದ, ಕಳೆದ ಸಂವತ್ಸರವೆಂದರೆ ೧೮೯೨—೯೩ ನೇ ಇಸವಿಯಲ್ಲಿ ೧೮೯೧—೯೨ ನೇ ಇಸವಿಗಿಂತ ೨೪,೪೦,೫೬೧ ರೂಪಾಯಿಗಳ ಮಟ್ಟಿನ ಜಾಸ್ತಿ ಹುಟ್ಟುವಳಿಯಾಗಿರುತ್ತೆ. ಈ ಮೇರೆ ಜಾಸ್ತಿ ಉತ್ಪತ್ತಿ ಕಂಡುಬಂದಿರತಕ್ಕ ಬಾಬುಗಳನ್ನು ತಪಸೀಲಾಗಿ ಈ ಕೆಳಗೆ ಬರುವ ಪಟ್ಟಿಯಲ್ಲಿ ತೋರಿಸಿರುತ್ತೆ:—

### ಜಮಾ ರೈಲ್ವೇಬಾಬ್ ಶಿವಾಯಿ.

| | 1891 ನೇ ಜುಲೈ ಲಾಗಾಯಿತು 92ನೇ ಜೂನ್ ವರೆಗೆ. | 1892ನೇ ಜುಲೈ ಲಾಗಾಯಿತು 93ನೇ ಜೂನ್ ವರೆಗೆ. |
|---|---|---|
| ಲ್ಯಾಂಡ್ ರೆವಿನ್ಯೂ ಯಾನೆ ಜಮೀನ್‌ಬಾಬು— | | |
| (a) ಸೀ ಜಮೀನಿನ ಹುಟ್ಟುವಳಿ .. | 78,03,472 | 94,52,210 |
| (b) ಉಪ್ಪಿನಮೊಳ ಕಂದಾಯ ... | 15,178 | 21,538 |
| (c) ಕಂದಾಯದ ಬಾಕೀಮೇಲಿನ ಬಡ್ಡಿ ... | 22,873 | 36,995 |
| ಲ್ಯಾಂಡ್ ರೆವಿನ್ಯೂ ಜುಮ್ಲಾ ... | 78,41,523 | 95,10743 |
| ಅಬ್ಕಾರಿ— | | |
| (a) ಶರಾಬು .. | 10,54,508 | 16,49,701 |
| (b) ಶೇಂದಿ . | 9,23 555 | 13,22,086 |
| (c) ಇತರಬಾಬ್‌ಗಳು .. | 88,947 | 53,871 |
| ಅಬ್ಕಾರಿ ಜುಮ್ಲಾ .. | 20,67,010 | 30,25,658 |
| ಫಾರೆಸ್ಟ್— | | |
| (a) ಗಂಧದ .. | 9,71,145 | 8,95,824 |
| (b) ಚಾಪೀನ ಮತ್ತು ಸೌದೆ ಬಗೆ . | 2,90,072 | 1,93,348 |
| (c) ಇತರ ಫಾರೆಸ್ಟ್ ಬಾಬುಗಳು ... | 1,71,352 | 2,10,156 |
| (d) ಆನೆಗಳ ಫರೋಕ್ತ್ .. | 49,999 | 71,259 |
| ಫಾರೆಸ್ಟ್ ಜುಮ್ಲಾ.. | 14,82,569 | 13,70,587 |
| ಸ್ಟಾಂಪು | 6,51,066 | 7,05,936 |
| ಸಾಯರ್ | 3,98,070 | 3,98,127 |
| ಮೊಹತರ್ಫಾ . | 3,04,878 | 3,43,393 |
| ಲಾ ಅಂಡ್ ಜಸ್ಟಿಸ್ ಯಾನೆ ಜುಡಿಷಿಯಲ್ ಜೈಲುಗಳು ವಗೈರೆ. | 80,548 | 81,513 |
| ರಿಜಿಸ್ಟ್ರೇಷನ್ .. | 81,693 | 97,475 |
| ಅಮೃತ ಮಹಲ್ . | 31,635 | 33,596 |
| ವಿದ್ಯಾಭ್ಯಾಸದ ಇಲಾಖೆ . | 47,736 | 53,618 |
| ಪಬ್ಲಿಕ್ ವರ್ಕ್ಸ್ ಯಾನೆ ಮರಾಮತ್ತು ಇಲಾಖೆ .. | 30,794 | 15,501 |
| ಬಂಗಾರದ ಗಣಿಗಳು— | | |
| (a) ಶೇಕಡಾ 5 ರಂತೆ ರಾಜಧನ | 4,21,678 | 4,95,351 |
| (b) ಭಂಗಾರವಿರತಕ್ಕ ಸ್ಥಳಗಳನ್ನು ಹುಡುಕುವ ಬಗ್ಗೆ ಕೊಟ್ಟ ಲೈಸೆನ್ಸ ಸಂಬಂಧ್ಯ ಫೀಯಾನೆ ರುಸುಂ ಮತ್ತು ಹೊಸ ಗಣಿಗಾಗಿ ಬಂದ ರುಸುಂ | 3,162 | 508 |
| ಭಂಗಾರದ ಗಣಿಗಳ ಜುಮ್ಲಾ | 4,26,840 | 4,95,859 |
| ಮೆಡಿಕಲ್ ಯಾನೆ ವೈದ್ಯಶಾಲೆಗಳ ಇಲಾಖೆ . | 2,086 | 6,232 |
| ಇತರ ಚಿಲ್ಲರೆ ಇಲಾಖೆಗಳ ಬಗೆ . | 8,340 | 10,692 |
| ಸಿಲ್ಕು ಹಣದ ತೇಜಾರತಿ ಲೆಕ್ಕ— | | |
| (a) ಪ್ರೋನೋಟುಗಳ ಮೂಲಕ ಇತರಕ್ಕೆ ಕೊಟ್ಟ ಹಣದ ಮೇಲಿನ ಬಡ್ಡಿ ... | 2,94,039 | 1,93,482 |
| (b) ಮದರಾಸ್ ಬ್ಯಾಂಕಿನಲ್ಲಿ ಇಟ್ಟಿರುವ ಡಿಪಾಜಿಟ್ ಮೊಬಲಗಿನ ಬಡ್ಡಿ ... | 64,297 | 71,566 |
| (c) ಗವರ್ನಮೆಂಟ್ ಪ್ರೋನೋಟುಗಳನ್ನು ಬಿಕರಿಗೆ ಹಾಕಿದ್ದರಲ್ಲಿ ಬಂದ ಲಾಭ ... | 2,10,155 | 26,367 |
| ಸಿಲ್ಕು ಹಣದ ಲೆಕ್ಕದ ಜುಮ್ಲಾ .. | 5,68,401 | 2,91,415 |
| ಚಿಲ್ಲರೆ ಬಾಬುಗಳು . | 91,467 | 1,14,852 |
| ಒಟ್ಟು ಜುಮ್ಲಾ .. | 1,41,14,661 | 165,55,222 |

ಈ ಲೆಕ್ಕದ ಪಟ್ಟಿಯನ್ನು ಕುರಿತು ತಪಸೀಲಾಗಿ ವಿಚಾರ ಮಾಡುವದಕ್ಕೆ ಮುಂಚಿತವಾಗಿ ನಿಮಗೆ ತಿಳಿಸಬೇಕಾದ್ದೇನೆಂದರೆ.—೧೮೯೧—೯೨ ನೇ ಇಸವಿಯಲ್ಲಿ ೧೮೯೧ ನೇ ಏಪ್ರಿಲ್ ಲಾಗಾಯಿತು ೧೮೯೨ ನೇ ಜೂನ್ ವರಿಗೆ ೧೫ ತಿಂಗಳುಗಳ ಹುಟ್ಟುವಳಿ ದ್ವಾಗಸ್ಯಾ, ಮೋಕಾಬಿಲೆಗೋಸ್ಕರ ೧೮೯೧ ನೇ ಇಸವಿ ಜುಲೈ ಲಾಗಾಯಿತು ೧೮೯೨ ನೇ ಇಸವಿ ಜೂನ್ ವರಿಗಿನ ೧೨ ತಿಂಗಳುಗಳನ್ನು ಮಟ್ಟಿಗೆ ಗಣನೆಗೆ ತೆಗೆದುಕೊಂಡು, ೧೮೯೨—೯೩ ನೇ ಇಸವಿಯಲ್ಲಿ ಹುಟ್ಟುವಳಿ ಬಾಬುಗಳಲ್ಲಿ ಜಾಸ್ತಿ ಯಾ ಕಮ್ಮಿಯಾಗಿರುವದನ್ನು ನೋಡತಕ್ಕದ್ದಾಗಿರುತ್ತೆ. ಈ ರೀತಿಯಾಗಿ ೧೨ ತಿಂಗಳುಗಳಲ್ಲಿ ಎರಡು ಸಂವತ್ಸರಗಳಲ್ಲಿಯೂ ಜಮೀನ್, ಮೊಹತರ್ಫಾ, ಸಾಯರ್ ವಗೈರೆ ಎಲ್ಲಾ ಜಮಾಬಾಬುಗಳಲ್ಲಿಯೂ ವಸೂಲಿ ಕಾಲಕ್ರಮವು ಏಕರೀತಿಯಾಗಿದ್ದದ್ದರಿಂದ ಕರಾರ್ವಾರಿ ಮೋಕಾಬಿಲೆಗೆ ಅನುಕೂಲವಾಗಿರುತ್ತೆ.

ಈ ಅನುಕ್ರಮಣಿಕೆಯೊಡನೆ, ಹೋದ ವರುಷದ ಜಾಸ್ತೀ ಹುಟ್ಟುವಳಿಗೆ ಮುಖ್ಯಕಾರಣವಾದ ಜಮೀನ್ ಮತ್ತು ಅಬಕಾರಿ ಬಾಬುಗಳ ವಿಷಯವಾಗಿ ತಪಸೀಲನ್ನು ಈಗ ತಿಳಿಸುತ್ತೇವೆ.

ಜಮೀನ್ ಬಾಬು.—ಮುಖ್ಯ ಜಮೀನ್ ಬಾಬಿನಲ್ಲಿ ೧೬,೪೯,೦೦೦ ರೂಪಾಯಿ ಜಾಸ್ತಿಯಾಗಿರುತ್ತೆ. ಇದರ ಪೈಕಿ ಬಿಟ್ಟುಸಾಗುವಳಿ ವಿಸ್ತೀರ್ಣವು ೧೮೯೧—೯೨ ನೇ ಇಸವಿಯಲ್ಲಿ ೫೬,೮೫,೧೬೦ ಎಕ್ರೆಗಳು ಇದ್ದದ್ದು ೧೮೯೨—೯೩ ನೇ ಇಸವಿಯಲ್ಲಿ ೫೮,೯೧,೨೬೮ ಎಕ್ರೆಗಳವರೆಗೆ ಹೆಚ್ಚಿದ್ದರಿಂದ ಸಾಗುವಳಿ ಜಾಸ್ತಿಯಿಂದಲೇ ಸುಮಾರು ೩ ಲಕ್ಷದ ವರಿಗೆ ಜಾಸ್ತಿ ಹುಟ್ಟುವಳಿಯಾಗಿರುತ್ತೆ. ಶಿವಾಯಿ ಹೋದ ವರುಷದಲ್ಲಿ ಮಳೆಬೆಳೆಯು ಸರಿಯಾಗಿ ನಡೆದಿದ್ದರಿಂದ ಆ ಸಾಲಿನ ಜಮಾಬಂದಿ ಹಣವು ಮಾಮೂಲ್ ಮೇರೆ ವಸೂಲಾದ್ದಲ್ಲದೆ. ೧೮೯೧—೯೨ ನೇ ಇಸವಿಯಲ್ಲಿ ಅನಾವೃಷ್ಟಿ ಕಾರಣದಿಂದ ಮುಂದಣ ವರುಷವೆಂದರೆ ೧೮೯೨—೯೩ ನೇ ಇಸವಿಯಲ್ಲಿ ವಸೂಲಿ ಯಾ ಮುಜರೆ ಬಗ್ಗೆ ನಿಂತಿದ್ದ ಸುಮಾರು ೩½ ಲಕ್ಷ ರೂಪಾಯಿಗಳ ಪೈಕಿ ವಿಶೇಷವಾದ ಭಾಗವು ವಸೂಲಾಗುವದಕ್ಕೆ ಅವಕಾಶವಾದ್ದರಿಂದ ಮೇಲ್ಕಂಡ ಮೇರೆ ಹುಟ್ಟುವಳಿ ಜಾಸ್ತಿಯಾಗಲು ಕಾರಣವಾಯಿತು.

ಕಳೆದ ೧೨ ಸಂವತ್ಸರಗಳಲ್ಲಿ ಸಾಗುವಳಿ ವಿಸ್ತೀರ್ಣವು ಶೇಕಡ ೪೯ ಅಂದರೆ ಸಾಲ್ ೧ಕ್ಕೆ ಶೇಕಡ ೪.೧ ಪ್ರಕಾರವಾಗಿಯೂ, ಜಮೀನ್ ಕಂದಾಯದ ಹುಟ್ಟುವಳಿಯು ಶೇಕಡ ೩೧ ಅಂದರೆ ಸಾಲ್ ೧ಕ್ಕೆ ಶೇಕಡ ೨.೬ ಪ್ರಕಾರವಾಗಿಯೂ ಜಾಸ್ತಿಯಾಗಿರುತ್ತೆ. ಸರ್ವೆ ಸೆಟಲ್‌ಮೆಂಟಿನ ದೆಸೆ ಕಾರಣದಿಂದ ಹಿಂದಣ ಸಂವತ್ಸರಗಳಲ್ಲಿ ಕೆಲವು ಮಟ್ಟಿಗೆ ಜಾಸ್ತೀ ಕಾಣುವದಕ್ಕೆ ಅವಕಾಶವಾಗಿತ್ತು. ೧೮೯೨—೯೩ ನೇ ಇಸವಿಯಲ್ಲಾದರೊ ವಿಸ್ತೀರ್ಣದಲ್ಲಿ ಶೇಕಡ ೩.೬ ರಮೇರೆಯೂ ಕಂದಾಯದಲ್ಲಿ ಶೇಕಡಾ ೩.೮ ರಂತೆಯೂ ಜಾಸ್ತಿಯಾಗುವದಕ್ಕೆ, ವಿಶೇಷವಾಗಿ ಜಮೀನ್ ಹೊಸದಾಗಿ ಸಾಗುವಳಿಗೆ ಬಂದದ್ದೇ ಕಾರಣವಾಯಿತು.

ಅಬಕಾರಿ.—ಅಬಕಾರಿ ಬಾಬಿನಲ್ಲಿ ವಿಶೇಷವಾದ ಜಾಸ್ತಿಯು ಕಂಡಿರುತ್ತೆ. ಶರಾಬಿನಲ್ಲಿ ಮಾತ್ರವೇ ೫,೯೫,೧೯೩ ರೂಪಾಯಿ ಜಾಸ್ತಿ ಹುಟ್ಟುವಳಿಯಾಗಿರುತ್ತೆ. ಈ ಪೈಕಿ ಹಿಂದಣ ಸಂವತ್ಸರದ ಬಾಕೀಗಾಗಿ ವಸೂಲಾದ ೧,೪೬,೨೫೪ ರೂಪಾಯಿ ವಜಾ ಮಾಡಿದ್ದಲ್ಲಿ ಸಾಲ್ಯಾಬಕಾರಿಗೇನೆ ೪,೪೮,೪೩೯ ರೂಪಾಯಿ ನಿಚ್ಚಳ ಜಾಸ್ತಿ ಆಗಿರುತ್ತೆ. ೧೮೯೨ ನೇ ಇಸವಿ ಏಪ್ರಿಲ್ ಗುರ್ತು ಲಾಗಾಯಿತು ಜಾರಿಗೆ ಬಂದ ಶರಾಬ್ ಬಾಬಿನ ಹೊಸ ಏರ್ಪಾಟಿನ ದೆಸೆಯಿಂದಲೇ ಮೇಲ್ಕಂಡ ಮೊಬಲಗು ಪೈಕಿ ವಿಶೇಷಾಂಶವು ಜಾಸ್ತೀ ಆಯಿತೆಂದು ಹೇಳಬೇಕಾಗಿದೆ. ಈ ಏರ್ಪಾಟನ್ನನುಸರಿಸಿ, ಶರಾಬು ವಿಶೇಷ ಲಾಭವಿಲ್ಲದೆ ತಯಾರಾಗುತ್ತಾಗಿ ೨೦ ಡಿಗ್ರಿ ಶರಾಬಿನಮೇಲೆ ಸರ್ಕಾರಿ ಹಾಸಲ್ ಪ್ರೂಫ್ ಗ್ಯಾಲನ್ ೧ಕ್ಕೆ ರೂಪಾಯಿ ೩—೪—೦ ಇದ್ದದ್ದನ್ನು, ಬೆಂಗಳೂರಿನಲ್ಲಿ ೩—೧೪—೦ ರೂಪಾಯಿಯಂತೆಯೂ ಮೈದಾನದಲ್ಲಿ ೪ ರೂಪಾಯಿಯಂತೆಯೂ ಜಾಸ್ತಿಮಾಡಲು ಅನುಕೂಲವಾಯಿತು. ಈ ಪ್ರಕಾರ ಹಾಸಲ್ ಜಾಸ್ತಿ ಮಾಡಿದ್ದರಿಂದ ಪಾನ ಮಾಡತಕ್ಕವರಿಗೆ ಖರೀದಿ ಲಾಗ್ವದೇನೂ ಜಾಸ್ತಿಯಾಗದೆ ಸರಕಾರಕ್ಕೆ ೨ ಲಕ್ಷ ರೂಪಾಯಿಗಿಂತ ಜಾಸ್ತಿಯಾಗಿ ಹುಟ್ಟುವಳಿ ಆಯಿತು. ಬಿಕರಿ ಹಕ್ಕು ಹರಾಜಿನ ದೆಸೆಯಿಂದ ೧ ಲಕ್ಷ ರೂಪಾಯಿಗಿಂತ ಜಾಸ್ತಿಯಾಗಿ ಉತ್ಪತ್ತಿ ಆಯಿತು. ಈ ಎರಡು ಕಾರಣಗಳಿಂದ ಇದುವರಿಗೆ ಸರಕಾರಕ್ಕೂ ಮತ್ತು ದುಕಾನ್‌ದಾರರಿಗೂ ಮಧ್ಯದಲ್ಲಿದ್ದವರಿಗೆ ಹೋಗುತ್ತಿದ್ದ ನಫೆ ಹಣವು ಸರ್ಕಾರಕ್ಕೆ ಬಂದು, ಒಟ್ಟು ೩,೨೮,೦೦೦ ರೂಪಾಯಿ ಜಾಸ್ತಿಯಾಗಲು ಕಾರಣವಾಯಿತು. ಬಾಕಿ ಉಳಿದ ಜಾಸ್ತಿ ಅಂದರೆ ಸುಮಾರು ೧,೨೮,೦೦೦ ರೂಪಾಯಿಗಳು ಹಿಂದಣ ವರುಷಕ್ಕಿಂತ ಜಾಸ್ತಿಯಾಗಿ ಬಿಕರಿಯಾದ ೩೩,೬೫೫ ಗ್ಯಾಲನ್‌ಗಳ ಮೇಲಿನ ಹಾಸಲಾಗಿರುತ್ತೆ. ಈ ಬಿಕರಿ ಜಾಸ್ತಿಯು ವಿಶೇಷವಾಗಿ ಕಡೂರು ಮತ್ತು ಕೋಲಾರ ಡಿಸ್ಟ್ರಿಕ್ಟುಗಳಲ್ಲಿಯೂ, ಬೆಂಗಳೂರು ಮೈಸೂರು ಷಹರುಗಳಲ್ಲಿಯೂ ಕಂಡುಬಂದಿರುತ್ತೆ. ಕೋಲಾರದ ಡಿಸ್ಟ್ರಿಕ್ಟಿನಲ್ಲಿ ಚಿಲ್ಲರೆ ಬಿಕರಿ ದುಕಾನ್‌ಗಳ ಸಂಖ್ಯೆಯು ಕಮ್ಮಿ ಮಾಡಲ್ಪಟ್ಟದ್ದಾಗ್ಯೂ ಭಂಗಾರದ ಗಣಿಗಳಲ್ಲಿಯೂ, ಅದರ ಆಸುಪಾಸಿನಲ್ಲಿಯೂ ಕೂಲಿ ಜನಗಳ ಸಂಖ್ಯೆಯು ವಿಶೇಷವಾಗಿ ಹೆಚ್ಚಿದ್ದರಿಂದ ಹುಟ್ಟುವಳಿ ಜಾಸ್ತಿಯಾಗಲು ಕಾರಣವಾಯಿತು. ಮೈಸೂರು ಬೆಂಗಳೂರು ಷಹರುಗಳಲ್ಲಿಯೂ ಕೂಡ ಷಹರ್ ಅಭಿವೃದ್ಧಿ ಸಂಬಂಧವಾಗಿ ನಡೆಯುತ್ತಿರುವ ಕಾಮಗಾರಿಗಳಿಗೆ ಬರುವ ವಡ್ಡರು ವಗೈರೆ ಪಾನ ಮಾಡತಕ್ಕ ಜಾತಿ ಜನಗಳ ಸಂಖ್ಯೆಯು ಹೆಚ್ಚಿ ಸ್ವಲ್ಪಮಟ್ಟಿನ ಜಾಸ್ತಿ ಕಂಡಿರುತ್ತೆ. ಕಡೂರು ಡಿಸ್ಟ್ರಿಕ್ಟಿನಲ್ಲಿ ಕಾಫಿ ಎಸ್ಟೇಟುಗಳಲ್ಲಿ ಚಾಕರಿ ಮಾಡತಕ್ಕ ಲಂಬಾಣಿಯವರು ಕಳ್ಳತನದಿಂದ ಷರಾಬ್ ಭಟ್ಟಿ ಇಟ್ಟುಕೊಂಡಿದ್ದರೆಂದು ತಿಳಿಯಬಂದ ಸ್ಥಳಗಳಲ್ಲಿ ೧೯ ದುಕಾನ್‌ಗಳನ್ನು ಹೊಸದಾಗಿ ಇಟ್ಟದ್ದಾಯಿತು. ಈ ಡಿಸ್ಟ್ರಿಕ್ಟಿನಲ್ಲಿ ಹೋದ ಸಾಲಿನಲ್ಲಿ ೮,೫೮೬ ಗ್ಯಾಲನ್ ವರಿಗೆ ಬಿಕರಿ ಜಾಸ್ತಿಯಾಗಿರುತ್ತೆ.

ಶೇಂದಿ ಬಾಬಿನ ಹುಟ್ಟುವಳಿಯು ಮೈಗುಸ್ತಾ ಸಾಲಿನಲ್ಲಿ ೯,೨೩,೫೫೫ ರೂಪಾಯಿ ಆಗಿದ್ದದ್ದು ಹೋದ ಸಾಲಿನಲ್ಲಿ ೧೩,೨೨,೦೮೬ ರೂಪಾಯಿ ಆಗಿ, ೩,೯೮,೫೩೧ ರೂಪಾಯಿನ ಜಾಸ್ತಿಯು ಕಂಡುಬಂದಿರುತ್ತೆ. ಕಳೆದ ಸಂವತ್ಸರದ ಉಪನ್ಯಾಸದಲ್ಲಿ ವಿವರಿಸಿರುವ ಹೊಸ ಏರ್ಪಾಟಿನ ಪ್ರಕಾರ ಸರಕಾರಕ್ಕೂ ದುಕಾನ್‌ದಾರರಿಗೂ ಮಧ್ಯೆ ಇದ್ದ ಜನಗಳ ಪ್ರವೇಶವನ್ನು ತಪ್ಪಿಸಿದ್ದರಿಂದಲೇ ಮೇಲ್ಕಂಡ ಮೇರೆ ಜಾಸ್ತಿ ಹುಟ್ಟುವಳಿಯಾಯಿತೆಂಬ ಅಂಶವು ಸಂಪೂರ್ಣವಾಗಿ ತೃಪ್ತಿಕರವಾಗಿರುತ್ತೆ. ಈ ಏರ್ಪಾಟು ಪ್ರಕಾರ ಪೂರ್ವದಲ್ಲಿದ್ದ ೮ ಡಿಸ್ಟ್ರಿಕ್ಟ್ ಮುಖ್ಯ ಇಜಾರೆಗಳಿಗೆ ಬದಲಾಗಿ ೧,೦೦೦ ಕ್ಕಿಂತ ಜಾಸ್ತಿಯಾದ ಸಂಖ್ಯೆಯುಳ್ಳ ಚಿಕ್ಕಚಿಕ್ಕ ಇಜಾರೆಗಳನ್ನು ಮಾಡಿರುತ್ತೆ. ಆದಾಗ್ಯೂ ಚಿಲ್ಲರೆ ದುಕಾನ್‌ಗಳ ಸಂಖ್ಯೆಯು ಏನೇನೂ ಹೆಚ್ಚಿಸಿರುವದಿಲ್ಲ.

ಇದರ ಶೇಷ ಮುಂದಿನವಾರಕ್ಕೆ.

ಸನ್ ೧೮೯೩ನೇ ಇಸವಿ ಮೈಸೂರು ಪ್ರಜಾ ಪ್ರತಿನಿಧಿ ಸಭೆಯಲ್ಲಿ ಎಲ್ಲಾ ಮೆಂಬರುಗಳೂ ಸೇರಿ ಚರ್ಚಿಸತಕ್ಕ ಬಗ್ಗೆ ಆರಿಸಲ್ಪಟ್ಟ ಸಾರ್ವತ್ರಿಕವಾದ ವಿಷಯಗಳ ಪಟ್ಟಿ

ವಿಷಯಗಳು

೧. ಪ್ರಜಾ ಪ್ರತಿನಿಧಿ ಸಭೆಯ ಸಂಬಂಧವಾದ ಸಂಗತಿಗಳು
೨. ೧೮೯೩ನೇ ಇಸವಿ XIIIನೇ ನಂಬರ ಆಕ್ಟು ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳು
೩. ಕೊಂಡು ಜಾನ್ವರ ಆಕ್ಟು
೪. ಮೈಸೂರು ಸೀಮೆಯಲ್ಲಿ ಬಾಲ್ಯ ವಿವಾಹವನ್ನು ನಿರೋಧಿಸತಕ್ಕ ಬಿಲ್ಲು ಏರ್ಪಡಿಸಲ್ಪಟ್ಟಿರುವ ಮಾಸವಿವೇಚನೋ[illegible]
೫. ಗ್ರಾಮ ಮುನಸೀಫರ ವಿಷಯಕವಾದ ಮಾಸವಿದೆ ಕಾನೂನ್ ಮತ್ತು ಪಂಚಾಯಿತರ ಕೋರ್ಟುಗಳು
೬. ಲ್ಯಾಂಡ್ ಇಂಪ್ರೂವ್‌ಮೆಂಟ್ ಆಕ್ಟು ಯಾನೆ ಜಮೀನು ಅಭಿವೃದ್ಧಿ ಕಾನೂನ್ ಮತ್ತು ನೀರಾವರಿ ಭಾವಿಗಳ ಸಂಬಂಧವಾದ ರೂಲ್ಸುಗಳು
೭. ಬಂದೂಕ್ ಲೈಸೆನ್ಸಿನ ಬಗ್ಗೆ ಏರ್ಪಟ್ಟಿರುವ ರೂಲ್ಸುಗಳು,
೮. ತೂಕದ ಮತ್ತು ಅಳತೆ ಬಟ್ಟುಗಳು ಬಾರೀರೀತಿಯಾಗಿ ಖಚಿತವಾಗಿರತಕ್ಕ ಬಗ್ಗೆ ಏರ್ಪಾಟು
೯. ಅಡಿಕೆ ಹಾಸಲ್ ಮತ್ತು ಸವಾರಿ ತೋಟಗಳ ಕಂದಾಯ
೧೦. ವರಖಾಸ್ತುಗಳು ಜಾಗ್ರತೆಯಾಗಿ ಫೈಸಲಾಗತಕ್ಕ ಬಗ್ಗೆ ಕೊಡಲ್ಪಟ್ಟ ಸಲಹೆಗಳು
೧೧. ಜಮೀನುಗಳನ್ನು ತಮ್ಮಾಧೀನಕ್ಕೊಳ್ಳುವದಕ್ಕಾಗಿ ಜಾಲ್ತಿ ಗುತ್ತಿಗೆ ಪೂರ್ವವೇ ಸಾಗುವಳಿ ಚೀಟಿಯನ್ನು ಕೊಟ್ಟು ಜಾಲ್ತಿ ಗುತ್ತಿ ಲಾಗಾಯಿತಿನ ಸಾಲಿಗೆ ಕಂದಾಯವನ್ನು ವಸೂಲ್ಮಾಡತಕ್ಕ ವಿಷಯ
೧೨. ತಟಾಕ್ಕುಗಳ ಕೆಳಗೆ ನೀರಿನ ವಿಲೇವಾರಿ ವಿಷಯ ನಾಲಾ ಪಾಣೀಜಾ ವಿಷಯದಲ್ಲಿ ಇರತಕ್ಕ ರೂಲ್ಸುಗಳನ್ನು ಕೆರೆ ಕೆಳಗಣ ಸಣ್ಣ ಕಾಲುವೆಗಳ ವಿಷಯದಲ್ಲಿ ಜಾರೀಗೆ ತರತಕ್ಕ ಸಂಗತಿ ಕೆರೆಯಲ್ಲಿರುವ ನೀರಿನ ಅನುಕೂಲವನ್ನನುಸರಿಸಿ ಸಾಗುವಳಿಯನ್ನು ಮಾಡತಕ್ಕ ವಿಷಯ
೧೩. ಜಮೀನುಗಳನ್ನು ಹದ್ದು ಬಸ್ತು ಮಾಡಿಸಿಕೊಡತಕ್ಕ ವಿಷಯ ಮಣ್ಣಿನ ದಿಂಬುಗಳಿಗೆ ಬದಲಾಗಿ ಕಲ್ಲು ಗುಡ್ಡೆಗಳನ್ನು ಹಾಕಿಸತಕ್ಕ ವಿಷಯ
೧೪. ಬಡವರಿಗೆ ಮನೆ ನಿವೇಶನಗಳು ದೊರಕುವಂತೆ ರೂಲ್ಸುಗಳನ್ನು ಏರ್ಪಡಿಸತಕ್ಕ ವಿಷಯ,
೧೫. ಖಾಲೀ ನಿವೇಶನಗಳ ಮೂಲಕ ಉಂಟಾಗುವ ಅನಾರೋಗ್ಯಗಳನ್ನು ತಪ್ಪಿಸತಕ್ಕ ವಿಷಯ
೧೬. ವ್ಯವಸಾಯ ಬ್ಯಾಂಕುಗಳನ್ನು ಸರ್ಕಾರದ ತರಫ್ ಸ್ಥಾಪಿಸತಕ್ಕ ವಿಷಯ
೧೭. ವ್ಯವಸಾಯ ಶೋಧನೆ ವಿಷಯ
೧೮. ಗ್ರಾಮ ಪಾಟೀಲ್ ವಿಷಯದ ರೂಲ್ಸುಗಳು
೧೯. ತೋಟಿ ತಳವಾರರ ಸಂಬಳ ಮತ್ತು ಗ್ರಾಮಸ್ಥರಿಗಾಗಿ ಅವರು ಮಾಡತಕ್ಕ ನೌಕರಿಯ ವಿಷಯ
೨೦. ಐಮಾವರ್ಷದೊಳಗಿನ ಗೇಣಿ ಚೀಟುಗಳನ್ನು ರಿಜಿಸ್ಟರ್ ಮಾಡಿಸತಕ್ಕ ಕಂಪಲ್ಸರಿಯನ್ನು ತಪ್ಪಿಸತಕ್ಕ ವಿಷಯ
೨೧. ಪಟೇಲಿ ಮತ್ತು ಶಾನುಭೋಗಿ ವತನ್ ದಾರರುಗಳು ಸರ್ಕಾರ ಮೇರೆ ಕೆಲಸ ಮಾಡತಕ್ಕ ವಿಷಯ
೨೨. ತಾಲ್ಲೂಕು ನೌಕರರ ಸ್ಥಿತಿಯನ್ನು ಅಭಿವೃದ್ಧಿಪಡಿಸತಕ್ಕ ವಿಷಯ ಇವರುಗಳಿಗೆ ಭತ್ತಾ ಮತ್ತು ಮಾಫ್ ನಾಮ ಅಲೌನ್ಸುಗಳನ್ನು ಕೊಡತಕ್ಕ ವಿಷಯ,
೨೩. ಮುಖ್ಯವಾದ ಸ್ಥಳಗಳಲ್ಲಿ ಮೊಹತರ್ಫಾ ಮತ್ತು ಸಾಯರ್ ಹಾಸಲಿನ ಪೈಕಿ ಸರ್ಕಾರಕ್ಕೆ ಸಲ್ಲುವ ಅರ್ಧ ಭಾಗವನ್ನು ಸ್ಥಳೀಯ ಮ್ಯುನಿಸಿಪಾಲಿಟಿಗಳಿಗೆ ಕೊಡತಕ್ಕ ವಿಷಯ.
೨೪. ಒಂದು ಮ್ಯುನಿಸಿಪಾಲಿಟಿಯಲ್ಲಿ ಹಾಸಲ್ ಕೊಟ್ಟಿರತಕ್ಕ ಐವೇಜಿನ ಮೇಲೆ ಇನ್ನೊಂದು ಮ್ಯುನಿಸಿಪಾಲಿಟಿಯಲ್ಲಿ ಪುನಃ ಹಾಸಲ್ ವಸೂಲ್ ಮಾಡತಕ್ಕ ವಿಷಯ
೨೫. ದೇವಿಯನ್ನು ಎಲ್ಲರೂ ಹಾಕಿಸಿಕೊಳ್ಳಬೇಕೆಂದು ನಿರ್ಬಂಧ ಪಡಿಸತಕ್ಕ ಆಕ್ಟನ್ನು ಈ ಸೀಮೆಯಲ್ಲಿ ಜಾರೀಗೆ ತರತಕ್ಕ ವಿಷಯ
೨೬. ಅಮಲ್‌ದಾರ್ರಿಗೆ ಮೇಜಿಸ್ಟ್ರೇಟ್ ಕೆಲಸವನ್ನು ತಪ್ಪಿಸತಕ್ಕ ವಿಷಯ
೨೭. ಮುನಸೀಫರವರ ಸಂಬಳ ಮತ್ತು ಅಧಿಕಾರ
೨೮. ಕೋರ್ಟ್ ವ್ಯಾಜ್ಯಗಳ ಖರ್ಚು ಕಡ್ಮೆಯಾಗಿರತಕ್ಕ ವಿಷಯ. ಕೋರ್ಟಿನ ಹೊರಗೆ ರಾಜೀಯಾಗುವ ಮೊಕದ್ದಮೆಗಳಲ್ಲಿ ಕೋರ್ಟಿನ ಫೀಜ್ ಪೈಕಿ ಅರ್ಧವನ್ನು ವಾಪಸ್ ಮಾಡತಕ್ಕ ವಿಷಯ
೨೯. ಜೂಜಾಟದ ಸಂಬಂಧವಾದ ಕಾನೂನನ್ನು ಸರ್ವತ್ರ ಜಾರೀಯಲ್ಲಿ ತರತಕ್ಕ ವಿಷಯ
೩೦. ಗೋವಧೆ ವಿಷಯ
೩೧. ಮೈಸೂರು ಸಿವಿಲ್ ಸರ್ವಿಸ್ಸಿಗೆ ಸೇರತಕ್ಕ ವಿಷಯ.
೩೨. ಕಂದಾಯದ ಬಾಕಿ ವಸೂಲೀ ವಿಷಯದಲ್ಲಿ ಚರ ಯಾ ಸ್ಥಿರಸ್ವತ್ತಿನ ಮೇಲೆ ಕ್ರಮ ಜರುಗಿಸಲು ಸ್ಥಳೀಯ ಅಧಿಕಾರಿಗಳಿಗೆ ಸ್ವತಂತ್ರ ಕೊಡಬೇಕಾದ ಸಂಗತಿ
೩೩. ಲೋಕಲ್ ಫಂಡ್ ಕಾಮಗಾರಿಗೋಸ್ಕರ ಪ್ರತ್ಯೇಕ ಇಂಜಿನಿಯರ್ ನೇಮಕವಾಗಬೇಕಾದ ವಿಷಯ
೩೪. ಸರ್ಕಾರಿ ಆಸ್ಪತ್ರೆಗಳಲ್ಲಿ ಕೊಡತಕ್ಕ ಔಷಧಗಳಿಗೆ ಖರ್ಚು ವಸೂಲ್ಮಾಡದೆ ಇರತಕ್ಕ ವಿಷಯ.
೩೫. ಪಾಠಶಾಲೆಗಳಲ್ಲಿ ಬಾಲಕರಿಗೆಲ್ಲ ಬಲವಂತವಾಗಿ ವಿದ್ಯೆ ಕಲಿಸತಕ್ಕ ವಿಷಯ
೩೬. ಶಾನುಭೋಗ ನೌಕರಿ ಇನಾಂತಿಗಳನ್ನು ವಜಾ ಮಾಡಿ ನಗದಿಯಾಗಿ ಮಾಡಿಸಿಕೊಡಬೇಕಾದ ವಿಷಯ.

# EXTRACTS

## ದಾರ್ವಾಡ ಗಾಯನ ಸಮಾರಂಭದ ನೋಟೀಸ.

(ಈ ಸಭೆಯಲ್ಲಿ ಹಿಂದೆ ಇನಾಂ ಪಡೆದವರು ಪುನಃ ಇನಾಂ ಪಡೆಯಲಿಕ್ಕೆ ಹರಕತ್ತು ಇಲ್ಲ)

ಶಕೆ ೧೮೧೫ನೇ ವಿಜಯ ಸಂವತ್ಸರ ಕಾರ್ತಿಕ ಶು|| ೧ ಗುರುವಾರ ತಾ|| ೯ನೇ ನವಂಬರ್ ೧೮೯೩ನೇ ಇಸವಿ ಉತ್ಸವಕ್ಕೆ.

(ವರೆ ಬಟ್ಟರು ಒಂದು ರಾಗಕ್ಕಿಂತಲೂ ಹೆಚ್ಚಾಗಿ ತೆಗೆದುಕೊಳ್ಳಬಾರದು)

| | ಗುಣಗಳು |
|---|---|
| ೧ ಹಾಡುವ ರಾಗದ ವರ್ಜ್ಯಾವರ್ಜಗಳನ್ನು ಚೆನ್ನಾಗಿ ಯಾವರಾಗ ತೆಗೆದುಕೊಂಡಿರುತ್ತಾರೋ ಆ ರಾಗದಲ್ಲಿ ಮಧುರವಾಗಿ ಗಾನ ಮಾಡಬೇಕು. | ೨೦ |
| ೨ ಗಾನದಲ್ಲಿ ಮುಖ್ಯರಸ ಉತ್ಪನ್ನವಾಗುವಂತೆ ಮಾಡಬೇಕು, | ೨೦ |
| ೩ ತಾಳ ಯಾವದು ಅದರ ಸ್ವರೂಪವೇನು ಅದನ್ನು ಹೇಳಬೇಕು | ೨೦ |
| ೪ ಯಾವ ರಾಗವನ್ನು ಯಾವ ಕಾಲಕ್ಕೆ ಹಾಡಬೇಕು, ಮತ್ತು ಆ ಕಾಲಕ್ಕೆ ಯಾಕೆ ಹಾಡಬೇಕು, ಆಯಾಯಾ ಕಾಲದಲ್ಲಿ ಆ ರಾಗ ಹಾಡೋಣದರಿಂದ ಕಾಲಾನುಸಾರವಾಗಿ ಮನಸ್ಸಿನ ಸಂತೋಷವು ಯಾಕೆ ಉಂಟಾಗುತದೆ, ಮತ್ತು ಯಾವ ರಸದಲ್ಲಿ ಇದನ್ನು ಹೇಳಬೇಕು | ೪೦ |
| | ೧೦೦ |

ಮೇಲೆ ಬರೆದ ವಿಷಯಗಳು ಸಮರ್ಪಕವಾಗಿದ್ದವರಿಗೆ ನಾಲ್ವತ್ತು ಗುಣ ಬಿದ್ದರೆ ೫ ರೂಪಾಯಿ, ೫೦ಕ್ಕೆ ೧೦ ರೂ| ೬೦ಕ್ಕೆ ೧೨ ರೂಪಾಯಿ, ೭೦ಕ್ಕೆ ೧೪ ರೂಪಾಯಿ, ೮೦ಕ್ಕೆ ೧೬ ರೂಪಾಯಿ ೮೦ ರಿಂದ ನೂರು ಗುಣದವರಿಗೆ ೨೦ ರೂಪಾಯಿ ಇನಾಂ ದೊರೆಯುವದು

ಕರ್ನಾಟಕದಲ್ಲಿ ನಾಯಕಿ ಮತ್ತು ವರ್ಣತೋಡಿ ಈ ಎರಡು ರಾಗಗಳನ್ನು ಶಾಂತವಾಗಿ ಹಾಡುವವರು ಸಂಬಂಧ ವಿಸ್ತಾರಗಳನ್ನು ಕ್ರಮದಲ್ಲಿ ಹೇಳೋಣ ಮತ್ತು ಇತ್ತರಗಳ ವರ್ಜ್ಯಾವರ್ಜಗಳನ್ನು ಹೇಳೋಣ, ಮತ್ತು ರಾಗ ಹಾಡುವ ಕಾಲಕ್ಕೆ ಲೋಕಪ್ರಸಿದ್ಧ ವರ್ಜ್ಯಾವರ್ಜಗಳನ್ನು ತಿಳಿಯುವಂತೆ ರಾಗ ಹಾಡೋಣ, ಈ ಪ್ರಕಾರ ಮಾಡಿ ತೋರಿಸಿದಲ್ಲಿ ೧೦ ರೂಪಾಯಿ ವರೆಗಿನ ಇನಾಮು ಆಗಿ ಬರೆ ವರ್ಷದ ಸೇವಾರ್ಥ ಅಂತಲೂ ಹೆಚ್ಚಿಗೆ ಕೊಡಲಾಯಿತು.

### ಗಾಯಕರ ಪರೀಕ್ಷೆಯು

ವರೆ ಬಟ್ಟರು ಒಂದೇರಾಗ ತೆಗೆದುಕೊಳ್ಳಬೇಕು

| | ಗುಣಗಳು |
|---|---|
| ೧ ಹಾಡುವ ರಾಗದ ವರ್ಜ್ಯಾವರ್ಜಗಳನ್ನು ಚೆನ್ನಾಗಿ ಯಾವರಾಗ ತೆಗೆದುಕೊಂಡಿರುತ್ತಾರೋ ಆ ರಾಗದಲ್ಲಿ ಮಧುರವಾಗಿ ಹಾಡಬೇಕು | ೩೦ |
| ೨ ತಾಳ ಯಾವದು ಅದರ ಸ್ವರೂಪವೇನು ಅದನ್ನು ಹೇಳಬೇಕು | ೩೦ |
| ೩ ಯಾವರಾಗಗಳಲ್ಲಾ ಗಲಿಪದಗಳನ್ನು ಹಾಡಿ ಅಭಿನಯ ತೋರಿಸಬೇಕು, ಆ ಅಭಿನಯವು ಶೃಂಗಾರ ರಸೋದ್ರೇಕವಾಗಿರಬೇಕು. | ೪೦ |
| | ೧೦೦ |

ಮೂವತ್ತರೊಳಗೆ ಗುಣಗಳು ಬಿದ್ದಲ್ಲಿ ಇನಾಂ ದೊರೆಯಲಿಕ್ಕಿಲ್ಲ ೪೦ಕ್ಕೆ ೫ ರೂಪಾಯಿ, ೫೦ಕ್ಕೆ ೮ ರೂಪಾಯಿ ೬೦ಕ್ಕೆ ೧೦ ರೂಪಾಯಿ ೭೦ ಕ್ಕೆ ೧೨ ರೂಪಾಯಿ, ೭೦ ಕ್ಕೆ ೧೪ ರೂಪಾಯಿ, ೮೦ ಕ್ಕೆ ೧೬ ರೂಪಾಯಿ ಇನಾಂ ದೊರೆಯುವದು

ದಕ್ಷಿಣಾದಿ ರಾಗಗಳ ವಿವರ.

೧ ವರ್ಣತೋಡಿ   ೨ ನಾಯಕಿ.

ಹಿಂದುಸ್ಥಾನಿ ರಾಗಗಳ ವಿವರ —

೧ ಯಮನಕಲಿ   ೨ ಬಿಲಾವಲ್

ಈ ಸಭೆಯ ಮೆಂಬರುಗಳು

ಮಹಾರಾಜಶ್ರೀಗಳಾದ ಬ ಕೃಷ್ಣರಾವ ಸಬ್‌ಜಡ್ಜ್, ಸಾ. ವೆಂಕಟರಂಗೋ ಕಟ್ಟಿ, ರಾ ಬ ಗಾಜೇಂದ್ರ ಟೋಣಪಿ, ರಾ ಕಟ್ಟಿಚಾರ್ಯ ಕಟ್ಟಿ ರಾ. ವಿಶ್ವನಾಥ ಪ ಪರ್ಲೇಕರ ವಕೀಲ್. ರಾ. ಭೀಮಚಾರ್ಯ ವ ಕಿ

ಈ ಪ್ರಕಾರ ನಿಶ್ಚಯಿಸಲ್ಪಟ್ಟದೆ. ಪರೀಕ್ಷೆ ಇದ್ದು ಬರುವ ಜನರು ನವೆಂಬರ ತಾರೀಖ್ [illegible] ಒಳಗಾಗಿ ಈ ಸಭೆಯ ಸೆಕ್ರೆಟರಿ ಎವರ ಕಡೆಗೆ [illegible] ಕಳುಹಿಸಬೇಕು ಬರುವ ಜನರು ಹಣ ಸ್ವಲ್ಪವಿದೆ ಯಾಕೆ ಹೋಗಬೇಕೆಂತ ತಿಳಿಯಬಾರದು ಗುಣ ಪರೀಕ್ಷೆ ಇದ್ದಲ್ಲಿ ಬಹುಮಾನದ ಹಣದ ಸಂಖ್ಯೆಯು ಕಡೆಗೆ ಲಕ್ಷಕೊಡದ ಮರ್ಯಾದೆಯ ಕಡೆಗೆ ಲಕ್ಷ್ಯ ಕೊಟ್ಟು ದಯಮಾಡಬೇಕೆಂತ ಪ್ರಾರ್ಥನೆ ಇದೆ.

ವೆಂಕಟೇಶ ಗೊ ಪ. ಳದೋಯಿಸಿ, ಸೆಕ್ರೆಟರಿ

ಶುಕ್ರವಾರ ಪೇಟೆಯ ಶ್ರೀ ವೆಂಕಟೇಶ ದೇವರ ವಾಹನಗಳು ನವರಾತ್ರಿಯಲ್ಲಿ ಪ್ರತಿನಿತ್ಯ ಜುಮ್ಮಾ ಮಶೀದಿಯ ಮುಂದಿನಿಂದ ತಾಸೆ ಬಜಂತ್ರಿ ಮುಂತಾದ ವಾದ್ಯಗಳೊಡನೆ ಹಾದು ಬರುತ್ತಿದ್ದಾಗ್ಯೂ ನವಮಿಯ ದಿವಸ ಸಂಜೆಯಲ್ಲಿ ಒಬ್ಬ ಪೋಲೀಸ್ ಅಮಲ್ದಾರನು ಪ್ರಾದು ಹುಕುಮು ಎಂದು ಆ ದೇವರ ಪೂಜಾರಿಗೆ ತೋರಿಸಿ ಅದರ ಕೆಳಗೆ ಸಹಿ ಮಾಡೆಂದು ಕೇಳಿದನು. ಆ ಹುಕುಮಿನಲ್ಲಿ ಜುಮ್ಮಾ ಮಶೀದಿ ಸಹಿತವಾಗಿ ಮೂರು ಮಶೀದಿಗಳ ಮುಂದೆ ಹಿಂದೂ ಉತ್ಸವ ಮುಂತಾದವುಗಳ ವಾದ್ಯಗಳನ್ನು ಯಾವಾಗಲೂ ಬಾರಿಸಬಾರದೆಂದು ಬರೆದಿತ್ತು. ಪೂಜಾರಿಯು ಅದರ ಕೆಳಗೆ ಸಹಿ ಮಾಡಲಿಲ್ಲ ಈ ಪ್ರಕಾರ ಮರುದಿವಸದ ರಥೋತ್ಸವಕ್ಕೆ ಅಡ್ಡಿಯಾದದ್ದರಿಂದ ಅದೇ ದಿವಸ ಬೆಳಗ್ಗೆ ಹತ್ತು ಘಂಟೆಗೆ ಜನ ಮಹಜನರು ಕೂಡಿ, ಆದರೇ ದೇವರ ಗುಡಿಯಿಂದ ಒಂದೇ ಕಡೆ ತೀರ್ಥ ದೀಕ್ಷೆ ಪ್ರಾರಂಭಿಸಿ ಬೇರೊಂದು ಬಹಳ ಗದ್ದಲ ಮಾಡಿದರು. ಇಷ್ಟೆಲ್ಲ ನೋಡಿ ಊರೊಳಗಿನ ಬ್ರಾಹ್ಮಣರು ಲಿಂಗವಂತರು, ಒರೇರು ಮೊದಲಾದ ಪ್ರಮುಖ ಜಾತಿಗಳ ಜನರು ಇಪ್ಪತ್ತು ಮೂವತ್ತು ಜನ ಕೂಡಿ ಆ ಕ್ಟಿಂಗ್ ಕಲೆಕ್ಟರಾದ ಮೆ|| ಸ್ಮಿತ್ ಸಾಹೇಬರವರ ಬಂಗಲೆಗೆ ಅವರ ಭೇಟಿಗೆ ಹೋದರು. ಹೋಗಿದ ಜನರೊಳಗೆ ರಾ. ರಾ. ವೆಂಕಟರಾವ್ ಕಟ್ಟಿ, ರಾ. ರಾ. ಆಪ್ಪಾರಾವ್ ಮುಧೋಳಕರ್, ರಾ. ರಾ. ಹಣಮಂತರಾವ್ ವೆಂಕಟೇಶ ಮುಂತಾದವರೇ ಊರೊಳಗಿನ ಪ್ರಮುಖರಿದ್ದರು. ಸ್ಮಿತ್ ಸಾಹೇಬರವರು ಈ ಜನರ ಭೇಟೀ ತೆಗೆದುಕೊಂಡು ಇವರು [illegible] ದರ ಕೇಳಿಕೊಂಡ, ಕಡೆಯಲ್ಲಿ ಈ ಪ್ರಕರಣದ ವಿವರವು ನಮಗೆ ಬರವಣಿಗೆ ರೂಪದಿಂದ ಬಂದರೆ ... [illegible]

[illegible] ಅಲ್ಲಿ ಒಬ್ಬ ಸ್ವಾಮಿಯು — ನೀವು ಪಟ್ಟಣದ ಜನರು ಅನ್ಯಾಯ ಮಾಡುತ್ತೀರಿ, ಪುರಾತನ ಕಾಲದಿಂದ ನಡೆದ ವಾದ್ಯ [illegible] ಪರಾಧೀನ [illegible] ಕರೆಯಿಸಿಕೊಂಡು ಬಂದು [illegible] ನರಕಕ್ಕೆ [illegible] ಅದರಂತೆ ನಡೆಸುತ್ತೀರಿ, ಈ ಪ್ರಕರಣದ ಸರಕಾರದ [illegible] ಆಡಿಸಿದನು. ಅಷ್ಟಕ್ಕೆ ಆ ಸಾಹೇಬರು — ನಾನು ಹೊಸ ಹುಕುಮೇನೂ ಮಾಡಿಲ್ಲ, ಹೋದ ವರ್ಷ ಕಾಲೆಕ್ಟರ್ ಸಾಹೇಬರು ನಡೆಸಿದ ಹುಕುಮಿನ ನಕಲು ಪೂಜಾರಿಗೆ ನಿರ್ವಹಿಸಿ ಕೊಟ್ಟಿದ್ದೆ, ಹುಕುಮು ಕೊಟ್ಟು ಪದಕ್ಕೆ [illegible] ರಥೋತ್ಸವಕ್ಕೆ [illegible] ತೊಡಕಿಲ್ಲ [illegible]

[illegible]

ಮ ಒಬ್ಬ ಕನ್ನಡ ಸ್ವಾತ್ ಪತ್ರಿಕೆ [illegible] ದಾರರು ಇದರ ಕಿಲ್ ಸ್ಪಷ್ಟೀಕರಣಕ್ಕೆ ಏರುತ್ತಾರೆ —

[illegible] ನಿರರ್ಥಕವೆಂದು [illegible] ದೇವರ ಹೆಸರಿನಿಂದ [illegible] ಒಳ್ಳೇ ಕೆಲಸ ಮಾಡಬೇಕು. ಈ ಭೀಜ [illegible] ತಿಳಿದ ಕಾರಣ [illegible] ನಿಮ್ಮ ಪೂರ್ವಿಕರ ಪದ್ಧತಿಯಂತೆ ನಡೆಯುವದು ಯುಕ್ತವಾಗಿದೆ ಇದಲ್ಲದೆ [illegible] ಯಾರ ಸಹಾಯವೂ ಯಾರ ಸಹಾರವೂ ಆವಶ್ಯಕವಾಗಿರುವದಿಲ್ಲ. [illegible] ಸರಿಯಾದದ್ದಲ್ಲವೆಂಬುದು [illegible] ಕಾರಣ ಆದರೆ ನಮ್ಮವರು [illegible] ರ ಗುಣಗಳನ್ನು ಗ್ರಹಿಸಲಿಕ್ಕಿಲ್ಲ ಪ್ರಸ್ತುತ ನಾಟ್ಯಕಾರರನ್ನು ಮದುವೆ ಮೊದಲಾದ ಉತ್ಸವಗಳಲ್ಲಿ ಕರೆಸುವದರಿಂದ ಗಾನ ನಾಟ್ಯಗಳನ್ನು ಮಾಡಿಸುವದು ಅನಾವಶ್ಯಕವಾದದ್ದು [illegible] ದು. ಇಂಥಾ ಸ್ತ್ರೀಯರುಗಳನ್ನು ಕರೆಸುವದರಿಂದ ಗರ್ತಿಯರಿಗೆ ನಾಚಿಕೆಯಾಗುತ್ತದೆಂತಲೂ ಯೌವನಸ್ಥರು ಕಾಮಿಗಳಾಗಿ ದುರ್ಮಾರ್ಗಕ್ಕೆ ಪ್ರವರ್ತಕರಾಗುತ್ತಾರೆಂತಲೂ ಪರಿಶುದ್ಧಿಯನ್ನು ಕಟಿಸಿ ಮಾಡುವವರಲ್ಲಿ ಸಂಶಯವಿಲ್ಲವಂತೆ

ಲೂ ಅನ್ನುತ್ತಾರೆ ನಾಟ್ಯಗಾರರೆಯಲ್ಲಿ ಮದುವೆ ಕ್ರಿಯಾದಿಗಳನ್ನು ನಡೆಸಬಾರದು ಆದರೆ ಇದಿಯಲ್ಲಿ ಪರು ಯಾವ ರೀತಿ ಜೀವನ ಮಾಡುತ್ತಿದ್ದರೆಂದು ಯೋಗ್ಯರ ಕಲ್ಪನೆಯಾಗಿ ಒಬ್ಬ ಧನಿಕನನ್ನು ಮಾಡಿಕೊಂಡರೆ ತೀರ್ಥದರೂ, ಗಾನ ನೃತ್ಯಗಳಿಂದಲೇ ಜೀವಿಸುತ್ತಿದ್ದರೆ ವ್ಯಭಿಚಾರ ಮಾಡುವದು ಅವರ ಆಕಸವೇ ಸರಿ ಜೀಶ್ಯ ನಿಯರನ್ನು ಮದುವೆ ಮೊದಲಾದ ಶುಭ ಸಮಯಗಳಲ್ಲಿ ಭಾರಿ [illegible] ಕರೆಸುವದರಿಂದ ಯೌವನಸ್ಥರು ವ್ಯಭಿಚಾರ ಕಲಿಸಿಕೊಳ್ಳುತ್ತಾರೆ ಆಗುವದೆಂದರೆ ಕುಲಸ್ತ್ರೀಯರು [illegible] ಗೃಹಕೃತ್ಯಗಳನ್ನು ಮಾಡಿಕೊಂಡು ಪತಿಸೇವಾ [illegible] ಯಾತಕ್ಕೆ ? ಅಥವಾ [illegible] ಬಾರಿಸಲಿ ಪಿಡಿಲ್, ವೀಣೆ, ತಂಬೂರಿ ಇವೆ [illegible] ಯಾಕೆ ಬೇಕು ? ನ [illegible] ಸ್ತ್ರೀಯರು ಸಭಾದಲ್ಲಿ ತಮ್ಮ ವಿದ್ಯಾ [illegible] ತೋರಿಸುವದು ವಿಚಿತ್ರವಲ್ಲವೇ [illegible] ನಮ್ಮ ಪೂರ್ವಿಕರು ಸ್ತ್ರೀ [illegible] ಸ್ವಾತಂತ್ರ್ಯ ಕೊಡದೆ ಅವರನ್ನು [illegible] ಯಾಕೆಂದರೆ ಇದ್ದ ಕಾಲದಲ್ಲಿ ಸ್ತ್ರೀ ಪುರುಷರ [illegible]

[illegible] ಸ್ತ್ರೀಯರು ತಮ್ಮ ಕಾಲ [illegible] ಒಬ್ಬ ಪುರುಷನನ್ನು ಮಾಡಿಕೊಳ್ಳ [illegible] ಬಿಟ್ಟ [illegible] ಯೋಗ್ಯ [illegible] ವ್ಯಭಿಚಾರಕ್ಕೆ [illegible] ವಿಶ್ವಾಸವನ್ನು [illegible] ಗಾನವ [illegible] ಸ್ತ್ರೀಯರನ್ನು ಗಾನ ನೃತ್ಯ [illegible] ಸಂಗೀತ ವಿದ್ಯೆಯನ್ನು ಯಾತಕ್ಕೆ ಕಲಿಸಬೇಕು ? [illegible] ಸಂಗೀತವು ನಮ್ಮ ಪೂರ್ವಿಕರಿಂದ [illegible] ಬಾರದೇ ? ಒಂದು ವೇಳೆ ಈ ನ [illegible] ನ ನೃತ್ಯಗಳ [illegible] ವ್ಯಭಿಚಾರವು ನಿಲ್ಲುತ್ತದೆ [illegible] ಪ್ರಶ್ನೆಗಳು ಹೊರಡುತ್ತವೆ [illegible] ಸಂಬಂಧವಾದ ಉತ್ತರಗಳು ದಾಖಲು [illegible] ಸಂಗೀತವು ಮನುಷ್ಯನ ಮನಸ್ಸನ್ನು [illegible] ಜನವನ್ನು ಮರುಳುಮಾಡಿ ಪ್ರಸಾದಿಸುತ್ತದೆ [illegible]

[illegible] ಮನುಷ್ಯರು ಮರುಳಾಗುವದಿಲ್ಲವೇ ? [illegible] ವ್ಯಭಿಚಾರ ನಡೆಯುವದಕ್ಕಿಂತ ಒಳ್ಳೆಯದಲ್ಲವೇ ? [illegible] ಹಿಂದು [illegible] ಸ್ತ್ರೀಯರು [illegible] ಕೀರ್ತಿ [illegible] ಪತಿವ್ರತೆ [illegible] ದುರ್ಮಾರ್ಗ [illegible] ಕರೆಯುವವರು [illegible] ಎಂದು ಹೇಳುತ್ತಾರೆ [illegible] ಗಾರರ [illegible] ಆಕೆಯು ದೇವರಲ್ಲಿ [illegible] ನರಕ [illegible] ಮಾಡದೆ ಇರಬೇಕು

"[illegible] ಕರಣಿಸಿ [illegible] ಭೋಜ್ಯೇಷು ಮಾತಾ" ಎಂತ ಪ ಇದೆ ಆದರಂತೆ [illegible] ನಿರ್ಮಾಣದಿಂದ [illegible] ಆದರಿಂದ [illegible] ಅದು [illegible] ಮಾಡುವದಕ್ಕಿಂತ ಮೊಬೈಯಿರುವದೇ ಉತ್ತಮವಾಗಿರುತ್ತದೆ ಜನರು ಯೋಚಿಸಿ [illegible] ನಿರ್ಣಯಿಸಿ ಸುಧಾರಣೆಗಳನ್ನು ಮಾಡತಕ್ಕ ಮುಖ್ಯಮುಖ್ಯ ಸಂಗತಿಗಳು ಎಷ್ಟೋ ಇರುವಾಗ ಪ್ರಸ್ತುತ ಚರ್ಚೆಯಲ್ಲಿದ್ದು ಅಭಿಪ್ರೇತವಾಗಿರುವ ಮೇಲಿನ ಅಂಶವು ಸ್ವಲ್ಪ ವಿಳಂಬವಾದ್ದರಿಂದ ಇದ್ದಂತಿರಲಿ ಎನ್ನುವದೇ ಉತ್ತಮ.

BANGALORE —Printed and published at the KARNATAKA PRESS, No. 40, HOSPITAL ROAD, CITY —1893

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

## ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning.**

ಶ್ರೀಮದ್ವಿವಿಧವೃತ್ತಿನವಗಮಾರ್ತ್ತಕರ್ಣಾಟಕಪ್ರಕಾಶನವರಾಭಿಧಾಪ್ರತಿತಸಾಹಿತೀಶೋಭಿತಾ ॥ ವ್ಯಾಗಿಾಂಕಹಿತವಾಸರೇನಿಹಿತಮುದ್ರಣಾಸಜ್ಜನೈರ್ದ್ವಿಕಾಸುವರಿಪೋಷಿತಾದಿಶತಿಮಾನಸಂಸಂಮುದಂ ॥

Vol. XX ] ಸಂಪುಟ ೨೦. ]

BANGALORE—MONDAY, NOVEMBER 6, 1893.

ಬೆಂಗಳೂರು:—ಸನ್ ೧೮೯೩ನೇ ಇಸವಿ ನವಂಬರ್ ೬ ನೇ ತಾರೀಖ್ ಸೋಮವಾರ.

[ No. 44. [ಸಂಚಿಕೆ ೪೪.


### ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

| | ಸ್ಥಳೀಯರಿಗೆ | ಪರಸ್ಥಳದವರಿಗೆ |
|---|---|---|
| ವರ್ಷ ೧ಕ್ಕೆ | 6—0—0 | 8—0—0 |
| 6 ತಿಂಗಳಿಗೆ | 3—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ವರ್ಷ೧ಕ್ಕೆ | 3—0—0 | 4—0—0 |
| 6 ತಿಂಗಳಿಗೆ | 1—12—0 | 2—8—0 |

ಈ ಪತ್ರಿಕೆಗೆ ದರ ನಾವು ವಹಿಸಿದ ತಾರೀಖ್ ನೋಡಿ, ಬಿಂದು ತಿಂಗಳೊಳಗಾಗಿ ಚಂದಾ ಹಣವನ್ನು ಕಳುಹಿಸುವಂತಾದವರಿಗೆ ಮಾತ್ರ ಅಡ್ವಾನ್ಸ್ ದರ ತಪ್ಪಿ ಕೆ [illegible] ಇಂಗ್ಲಿಷ್ ಭಾಗವನ್ನು [illegible] ತೆಗೆದುಕೊಂಡು [illegible] ಅಂಗೀಕರಿಸಲ್ಪಡುವದು.

ಜಾಹೀರಾತು ರೇಟ್ಸ್.

ಸಾಧಾರಣವಾದ ಪಂಕ್ತಿ ಒಂದಕ್ಕೆ ೦—೨—೦

ಎರಡನೆಯದಾವರ್ತಿ ಒಂದಕ್ಕೆ ೦—೧—೦

ಸೂಚನೆ—ಎರಡಾವರ್ತಿಗಿಂತ ಹೆಚ್ಚಾಗಿ ಪ್ರಕಟಿಸತಕ್ಕ ಜಾಹೀರಾತುಗಳಿಗೆ ಒಂದಕ್ಕೆ ೧ ಆಣೆಯಂತೆ ಕೊಡಬೇಕು. ಈ ಪತ್ರಿಕೆಯಲ್ಲಿ ಪ್ರಕಟನೆಗಳಿಗೆ ಕಳುಹಿಸುವವರು [illegible] ಇಲ್ಲದಿದ್ದರೆ ಅವರು [illegible] ಪ್ರಕಟಿಸಲ್ಪಡುವದಿಲ್ಲ. [illegible] ನಾವು ಜವಾಬ್ದಾರರಲ್ಲವೆಂದು [illegible] ಪ್ರಕಟಿಸುತ್ತೇವೆ. [illegible]

*ADVERTISEMENTS*

**NOTICE.**

**VAIDYASARA SANGRAHA**

A TREATISE ON THE PRINCIPLES OF

**HINDU MEDICINE**

*Price including Postage Rs 5 0 0*

ವೈದ್ಯಸಾರ ಸಂಗ್ರಹ.

ಈ ಗ್ರಂಥವು [illegible] ಬೇಕಾದವರು [illegible] ಪುಸ್ತಕ ಕೊಡಲೀ ಕಳುಹಿಸಲ್ಪಡುವದು [illegible] ಇಲ್ಲದ ಬರುವದಿಲ್ಲ.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೇ ಖರ್ಚು, ಸಹಿತ ಪ್ರತಿ ಒಂದಕ್ಕೆ ರೂ 5—0—0

ಟಿ. ಬಿ. ವೆಂಕಟಾಚಾರ್,

ಬೆಂಗಳೂರ್, ಮದುರ್ ಬಸ್ಪತ್ರಿ ರೋಡ್ [illegible]

### ನೋಟೀಸ್.

**ಬೆಂಗಳೂರು ಕರ್ಣಾಟಕ್ ಪ್ರೆಸ್.**

೧೮೬೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ, ಸಕಲವಿಧ ಕೆಲಸಗಳು ಸುಲಭದರಕ್ಕೆ ತೀವ್ರವಾಗಿಯೂ ಶ್ಲಾಘ್ಯವಾಗಿಯೂ, ಮಾಡಲ್ಪಡುವವು.

ಇದರಲ್ಲಿ ಸದ್ಯಕ್ಕೆ ಇಂಗ್ಲಿಷ್ ಕನ್ನಡ ಕೆಲಸಗಳು ಮಾತ್ರವೇ ನಡೆಯುತ್ತಿವೆ. ಇತರ ತರಹೆವಾರಿಗಳನ್ನು ಸರಿಯಾದ [illegible] ಗಳಿಗೆ ಬರೆದು ತಿಳಿದುಕೊಳ್ಳಬಹುದು.

### ನೋಟೀಸ್.

ಗಣೇಶ ರಾಮಚಂದ್ರ ಕರ್ಕ ಮತ್ತು ಕಂಪೆನಿ. ಕಮಿಷನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯಿಂದ ವ್ಯಾಲ್ಯೂ ಪೇಯಬಲ್ ಪೋಸ್ಟು ಮೂಲಕ ತಕ್ಕ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರಹ ಔಷಧಗಳು, ಪುಸ್ತಕಗಳು, ಮುತ್ತುಗಳು, ಚಿಪ್ಪಿ ಮುತ್ತುಗಳು, ಫೋಟೋಗ್ರಾಫ್‌ಗಳು, ವಾಚ್‌ಗಳು, ಸ್ಪ್ರಿಂಗ್‌ಗಳು, [illegible] ಗಳು, ಪತ್ತೇದಾರಗಳು, ಜರತಾರಿ [illegible] ಗಳು, ಚಂದ್ರಕಾಂತ [illegible] ಗಳು, [illegible] ಜರತಾರಿ ಉಡುಪುಗಳು, ಜರತಾರಿ ಟೋಪಿಗಳು, ಆಫೀಸ ಡ್ರೆಸ್‌ಗಳು, ಪಟಗಳು, ಅತ್ತರಗಳು, ಅತ್ಯುತ್ತಮಗಳಾದ ರತ್ನಗಳು ಭಂಗಾರದಿಂದ ಕಟ್ಟಲ್ಪಟ್ಟ ಉಂಗುರಗಳು, ಬೆಳ್ಳಿ ಪಾತ್ರೆಗಳು, ಜರ್ಮನ್ ಸಿಲ್ವರ್ ಪಾತ್ರೆಗಳು, ಕೇಸರಿ, ಕಸ್ತೂರಿ ಮೊದಲಾದ ಇತರ ಸಾಮಾನುಗಳು

ಜವಾಬ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟ್ಯಾಂಪ್ ಕಳುಹಿಸಿದ ಮೇಲೆ ಜವಾಬ ದೊರೆಯುವದು

ವಿಳಾಸ.—ಗಣೇಶ ರಾಮಚಂದ್ರ ಕರ್ಕ,
ಮತ್ತು ಕಂಪೆನಿ, ಕಮಿಷನ್ ಏಜಂಟ್ಸ್.
ಠಾಕೂರ್ ದ್ವಾರ್, ಮಾರ್ಕೆಟ್ ಪೋಸ್ಟು, ಮುಂಬಯಿ.

### ನೋಟೀಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿವೆ. ಬೇಕಾದವರು ಹಣವನ್ನು ಕಳುಹಿಸಿ ತರಿಸಿಕೊಳ್ಳಬಹುದು.

### ಸಂಸ್ಕೃತ ಗ್ರಂಥಗಳು.

| | ಅಂಚೆ ಸಹಿತ ರೂ | ಆ | ಪೈ. |
|---|---|---|---|
| ಸಟೀಕಾ ವೈದ್ಯಸಾರ ಸಂಗ್ರಹ | ೫ | ೦ | ೦ |
| ,, ಶಿವಗೀತೆ | ೧ | ೧ | ೦ |
| ,, ನಿದಾನ ದರ್ಪಣ | ೦ | ೮ | ೦ |
| ,, ಕಾಲಾಮೃತ | ೧ | ೦ | ೦ |
| ,, ಟೀ॥ ವಾಲ್ಮೀಕಿರಾಮಾಯಣ .. | ೦ | ೩ | ೦ |
| ,, ಟೀ॥ ಗೋಪಿಕಾ ಗೀತೆ ... | ೦ | ೧ | ೦ |
| ,, ಟೀ॥ ಚಾಣಕ್ಯನೀತಿ (ಸುಭಾಷಿತ) | ೦ | ೪ | ೦ |
| ವಿಷ್ಣುಸಹಸ್ರನಾಮ ಪತ್ರಿಕೆ | ೦ | ೩ | ೦ |
| ಸೂರ್ಯಸಹಸ್ರನಾಮ | ೦ | ೨ | ೦ |
| ಕೃಷ್ಣಕರ್ಣಾಮೃತ | ೦ | ೭ | ೦ |
| ತ್ರಿಕಾಂಡ ಅಮರ ಮೂಲ | ೦ | ೭ | ೦ |
| ೧ ಕಾಂಡ | ೦ | ೧ | ೦ |

### ಕನ್ನಡ ಗ್ರಂಥಗಳು.

| | | | |
|---|---|---|---|
| ಕಕಸತ್ತಿ ಅಷ್ಟಲ್ | ೩ | ೦ | ೦ |
| ದಿಟೀ ದುಸ್ಯಂ | ೧ | ೨ | ೦ |
| ವೃಷಭೇಂದ್ರವಿಜಯ | ೧ | ೮ | ೦ |
| ಪಂಚಬಾಣ ಚಾಲೀತಿ | ೦ | ೪ | ೦ |
| ಹನುಮದ್ವಿಲಾಸ | ೦ | ೬ | ೦ |
| ಕಾಳೀಯಮರ್ದನ | ೦ | ೨ | ೦ |
| ಸುಭದ್ರಾಪರಿಣಯ | ೦ | ೨ | ೦ |
| ಪಾರಿಜಾತಾಪಹರಣ | ೦ | ೨ | ೬ |
| ಸುದಾಮಚರಿತ್ರೆ | ೦ | ೧ | ೦ |
| ಮೈರಾವಣ ಚರಿತ್ರೆ | ೦ | ೧ | ೬ |
| ಬಾಲಗ್ರಹಚಿಕಿತ್ಸೆ | ೦ | ೧ | ೦ |
| ಮಹಮ್ಮದ್ ಲಾ | ೦ | ೧೨ | ೦ |
| ಬ್ರಾಂತಿವಿಲಾಸ | ೦ | ೧೨ | ೦ |

### ನೋಟೀಸ್.

ತಾರೀಖು 25 ನೇ ಅಕ್ಟೋಬರ 1893.

ಸನ್ 1893 ನೇ ಇಸವಿ ಡಿಸಂಬರ್ ತಾರೀಖು 18 ರಲ್ಲು ಫ್ರೇಜರ್ ಪೇಟೆಯಲ್ಲಿ ಹೆಚ್ಚು ಕಡಿಮೆ 160 ವರ್ಗಗಳು ಗಂಧ ಹರಾಜ್ ಹಾಕಲ್ಪಡುತದೆ.

ಷರತು— ಸನ್ 1885 ನೇ ಇಸವಿ ಜನವರಿ ತಾರೀಖು 3 ರ ನಂಬರ್ 1ನೇ ಕೊಡಗು ಡಿಸ್ಟ್ರಿಕ್ಟ್ ಗೆಜೆಟಿನಲ್ಲಿ ಪ್ರಕಟ ಮಾಡಲ್ಪಟ್ಟ ಕೊಡಗು ಚೀಫ್‌ಕಮಿಷನರ್ ಸಾಹೇಬರವರ ಸನ್1881 ನೇ ಇಸವಿ ಫೆಬ್ರುವರಿ ತಾರೀಖು 15 ನಂಬರ್ 26 ರ ನೋಟಫಿಕೇಷನ್ ಮೇಲೆ ಕೇಳಿದ ಇಪ್ಪತ್ತೈದರಷ್ಟು ಕ್ರಯವನ್ನು ಹರಾಜು ಕಾಲದಲ್ಲಿ ಕೊಡತಕ್ಕದ್ದು. ಬಾಕಿ ಮೊಬಲಗನ್ನು 1894 ನೇ ಇಸವಿ ಮಾರ್ಚಿ ತಾರೀಖು 15 ರ ವಳಗೆ ಸಾಕಲ್ಯವಾಗಿ ಪಾವತಿ ಮಾಡತಕ್ಕದ್ದು.

G. F. PREVOST,
*Dy Conservator of*
*Forests, Coorg.*

### NOTICE.

"ಆಂಗ್ಲೋ ಇಂಡಿಯನ್ ಪಾಕೆಟ್‌ಡೈರಿ"

ನಾವು ಪ್ರತಿ ವರ್ಷದಲ್ಲಿಯೂ ಪ್ರಕಟಿಸುತಲಿರುವ ಮೇರೆಗೆ ಸರ್ವರಿಗೂ ಬಹಳ ಉಪಯುಕ್ತವಾಗಿರುವಂತೆ ಇಂಗ್ಲಿಷ್ ತಿಂಗಳ ತಾರೀಖುವಾರ್ ಇದಕ್ಕೆ ಸರಿಯಾದ ನಮ್ಮ ಹಿಂದೂ ಸಂವತ್ಸರ, ತಿಂಗಳು, ತಿಥಿ, ವಾರ, ನಕ್ಷತ್ರ ಸಹಿತ ವಾಗಿಯೂ, ಇನ್ನೂ ಅವಶ್ಯಕವಾಗಿ ತಿಳಿಯಬೇಕಾದ ಸಂಗತಿಗಳು, ರೈಲ್ವೇ ಸ್ಟೇಷನ್‌ಗಳು, ಅಲ್ಲಿಗೆ ರೈಲ್ವೇ ಚಾರ್ಜ್, ಪೋಸ್ಟಾಫೀಸ್ ರೂಲ್ಸ್, ಮುಂತಾದ ವಿಶೇಷ ಸಂಗತಿಗಳನ್ನು ಕೂಡಿಸಿರುವ ೧೮೯೪ ನೇ ಇಸವಿಯ ಪಿನತರಿ ಪುಸ್ತಕವನ್ನು ವಿಕ್ರಯಕ್ಕೆ ಸಿದ್ಧಪಡಿಸಿರುತ್ತೇವೆ.

ಕ್ರಯ ಪ್ರತಿ ೧ಕ್ಕೆ ಟಪಾಲ್ ಹಾಸಲ್‌ಸಹಿತ ೦—೩—೬

೨೫ ಪ್ರತಿ ಒಟ್ಟಿಗೆ ತಾಸಿಕೊಳ್ಳತಕ್ಕವರಿಗೆ ೧ ಪ್ರತಿ ಜಾಸ್ತಿಯಾಗಿ ಕಳುಹಿಸುತ್ತೇವೆ. ಬೇಕಾದವರು ಈ ಕೆಳಗೆ ಸೈನ್ ಮಾಡಿರುವವರ ಹೆಸರಿಗೆ ಬರೆದು ತರಿಸಿಕೊಳ್ಳಬಹುದು. ಪ್ರತಿ ಥಾಂಗಿಗೂ ರಿಜಿಸ್ಟರ್ ಹಾಸಲ್ ೨ ಆಣೆ ಜಾಸ್ತೀ ಕಳುಹಿಸಿ ಕೊಡಬೇಕು. ಅಪೇಕ್ಷೆಯುಳ್ಳವರು ವಿಳಾಸ ವಗ್ಯೆರೆಯನ್ನು ಸ್ಪಷ್ಟವಾಗಿ ತಿಳಿಯುವಂತೆ ಬರೆಯಬೇಕು.

೫—೧೧—೯೩. } ಸತ್ರಂ ಚಂದ್ರಶೇಖರಯ್ಯ, ಪ್ರೊಪ್ರೈಟರ್, "ವರ್ನಾಕ್ಯುಲರ್ ಸ್ಟೇಷನರಿ ಡಿಪೋ", ಬೆಂಗಳೂರ್.

### Bangalore City Municipality.

ಬೆಂಗಳೂರು ಸಿಟಿ ಮುನಿಸಿಪಾಲಿಟಿ.

#### ನೋಟೀಸ್.

ಇದರಡಿ ತಿಳಿಸಲ್ಪಡುವ ರಸ್ತೆಗಳು ಮರಳಿ ನೋಟಿಸು ಕೊಡಲ್ಪಡುವ ವರೆಗೆ ಗಾಡಿಗಳ ಸಂಚಾರಕ್ಕೆ ಅವಕಾಶವಿಲ್ಲದಂತೆ ಬಂದು ಮಾಡಲ್ಪಡುತುವವು:—

ಕ್ಯಾತಕಬೀದಿ ರಸ್ತೆ.
ಉಪ್ಪಾರದಳ್ಳಿ ರಸ್ತೆ.
ಹಳೆ ಬಜಾರ್ ರಸ್ತೆ.
ಅರಮನೆ ಅಡ್ಡ ರಸ್ತೆ.
ಸಿದ್ದಿ ರಸ್ತೆ.
ಹೊಸಕೋಟೆ ರಸ್ತೆ.
ಕೋಟೆ ದೊಡ್ಡ ರಸ್ತೆ.
ತಾಲ್ಲೂಕ್ ಕಚ್ಚೇರಿ ರಸ್ತೆ.
ಅರಳೇಪೇಟೆ ರಸ್ತೆ.
ಕಬ್ಬನ್‌ಪೇಟೆ ರಸ್ತೆ.
ಶಿದ್ಧಿಕಟ್ಟೆ ರಸ್ತೆ.
ರಾಣೀಸಿಂಗ್ ಪೇಟೆ ರಸ್ತೆ.
ಕೆಂಪಾಂಬುಧಿ ಕೆರೆ ದಿನ್ನೆಯಿಂದ ಮೈಸೂರ್‌ರಸ್ತೆ.
ಕೋಟೆ ರಾಂಪಾರ್ಟ್ ರಸ್ತೆ.

ಬೆಂಗಳೂರು, ೧ ನೇ ನವಂಬರ್ ೧೮೯೩.

K. SRINIVASA RAO,
*Vice President,*
*City Municipal Commission.*

### THE MONEY MARKET.

**Stocks, Shares and Exchange.**

ಮದರಾಸ್, ಶನಿವಾರ, ತಾರೀಖ್ 4ನೇನವಂಬರ್, 1893.

ಸೇಕಡ 4ರೂ. ಬಾಬತು ಇಂಡ್ಯಗವರ್ನಮೆಂಟ ಪತ್ರಗಳು 104—14—0ರೂ.ಗಳಿಂದ 105—6—0 ರೂ. ವರೆಗೆ.

ಸೇಕಡ ಮೂರುವರೆ ರೂ. ಬಾಬತು, ಗವರ್ನಮೆಂಟ ಪತ್ರಗಳು, 98—8—0 ರೂ. ಗಳಿಂದ 99—0—0 ವರೆಗೆ.

ಮದರಾಸ ಬ್ಯಾಂಕ ಷೇರಗಳು, (500) ರೂಪಾಯಿಗಳ ಬಾಬತು, 975—0—0ರೂ. ಗಳಿಂದ985—0—0ವರೆಗೆ.

ಕಮರ್ಷಿಯಲ್ ವ ಲ್ಯಾಂಡ ಮಾರ್ಟಗೇಜ್ ಬ್ಯಾಂಕ್ ಷೇರಗಳು, (100ರೂ) ಬಾಬತು 150—0—0ರೂ. ಗಳಿಂದ 155—0—0 ರೂ ವರೆಗೆ.

ಸವರನ್‌ಗಳು, ದರ 1 ಕ್ಕೆ 16—1—0 ರೂಪಾಯಿಗಳಿಂದ 16—3—0 ರೂ ವರೆಗೆ.

ಲಂಡನ್ ಬ್ಯಾಂಕಿನಮೇಲೆ ಕೊಡಲ್ಪಡುವ ಬ್ಯಾಂಕ್ ಬಿಲ್ ಹುಂಡಿ ದರದ ಪಟ್ಟಿಗಳು:—

6 ತಿಂಗಳ ವಾಯಿದೆಗೆ...1 *s* 3 5/16 *d.*

4 ,, ...1 *s* 3 1/4 *d.*

ಕೇಳಿದಾಗ ಕೊಡಲ್ಪಡುವದಕ್ಕೆ ..1 *s.* 3 5/32 *d.*

## ಕರ್ಣಾಟಕ ಪ್ರಕಾಶಿಕಾ.

## THE KARNATAKA PRAKASIKA.

MONDAY, NOVEMBER 6, 1893.

೧೮೯೩ ನೇ ಇಸವಿ ನವಂಬರ್ ೬ ನೇ ತಾ॥ ಸೋಮವಾರ.

#### ಬಾಲ್ಯವಿವಾಹದ ನಿರೋಧಕ ನಿಬಂಧನೆಯ ಅಂಶದಲ್ಲಿ ಹಿಂದೂ ಅಭಿಪ್ರಾಯವು.

ಹಿಂದೂ ಸಮುದಾಯಾಚಾರ ಪರಿಷ್ಕರಣ ವಿಷಯದಲ್ಲಿ, ತತ್ರಾಪಿ ವೈವಾಹಿಕ ಕ್ರಮ ಪುನರ್ವ್ಯವಸ್ಥೆಯೊಳು ಪ್ರವೇಶಿಸಿ ಯಾವದಾದರೊಂದು ನಿಬಂಧನೆಯಂ ಮಾಡುವದಕ್ಕೆ ಮಹಾರಾಜಾ ಸರ್ಕಾರದವರಿಗೆ ಸಾಕ್ಷಾತ್ಪ್ರವೃತ್ತಿ ಯಿಲ್ಲವೆಂತಲೂ, ಸನ್೧೮೯೧ನೇ ಇಸವಿಯ ದಸರಾ ದರ್ಬಾರಿನಲ್ಲಿ ಪ್ರಜಾಪ್ರತಿನಿಧಿಗಳು, ಬಾಲ್ಯವಿವಾಹ ಕ್ರಮದೊಳು ಗವರ್ನಮೆಂಟಿನವರ ಪ್ರವೇಶಪ್ರಾರ್ಥನಾ ದನ್ಯಾಯವನ್ನ ಪೇಕ್ಷಿಸಿದ್ದರಿಂದ ಪ್ರಸ್ತುತ ವಿಷಯ ವಿಮರ್ಶೆಗೆ ಪ್ರವೃತ್ತಿಸಬೇಕಾಯಿತೆಂದೂ, ಮಹಾರಾಜರವರು ಹಿಂದಿನ ರಿಪ್ರೆಸೆಂಟೇಟಿವ್ ಅಸೆಂಬ್ಲಿಯಲ್ಲಿಯೂ ಸದರಿ ಅಸೆಂಬ್ಲಿ ರೆಗ್ಯುಲೇಷನಿನ ಉದ್ದೇಶಭಾಗದಲ್ಲಿ [illegible] ಸ್ಪಷ್ಟವಾಗಿ ಹೇಳಿರುತ್ತಾರೆ. ಇದುವರೆಗೂ ಪ್ರಜಾಪ್ರತಿನಿಧಿಗಳು ಅಪೇಕ್ಷಿಸಿದರಾಗಿ ಗವರ್ನಮೆಂಟಿನವರು ಪ್ರವೇಶ ಪ್ರಾರ್ಥನಾ ನ್ಯಾಯವಿಧಾನವನ್ನಪೇಕ್ಷಿಸಿರಬಹುದೆಂದು ನಾವು ನಂಬಿದ್ದೆವು. ಈಗ ಸದರೀ ರೆಗ್ಯುಲೇಷನಿನ ವಿಚಾರದಲ್ಲಿ ಪ್ರಜಾಭಿಪ್ರಾಯವು ಬಹು ಭಿನ್ನವಾಗಿ, ಪ್ರತಿಕೂಲ್ಯವು ಅಪರಿಮಿತವಾಗಿಯೂ, ಅನುಕೂಲ್ಯವು ಅತ್ಯಲ್ಪವಾಗಿಯೂ, ವಿರೋಧಿಗಳು ಅಪಾರವಾಗಿಯೂ, ಪೋಷಕರು ಕ್ವಾಚಿತ್ಕಾಗಿಯೂ ಇರುವಂತೆ ಏರ್ಪಡುವದಲ್ಲದೆ ಅನ್ಯ ಜಾತಿಯವರು ಕೂಡ ಪ್ರತ್ಯರ್ಥಿಗಳಾಗಿರು

ದುಕ ಅಬೀವಾನದಲ್ಲಿ ನಡೆದ ಪ್ರತಿನಿಧಿ ಸಭೆಯವರ ಪ್ರಸಂಗದಿಂದ ವ್ಯಕ್ತವಾಗುತಿದೆ. ಈಗ ಪ್ರತಿಪಕ್ಷದವರ ಸಂಖ್ಯೆಯೂ, ದಿವಾನರವರು ತಿಳಿಸಿದ ಅಭಿಪ್ರಾಯವೂ ನಮಗೆ ವಿಶದಪಡುತ್ತಾಗಿದ್ದ ಸಂಶಯವನ್ನು ಕುದಿಸ್ಸಿಂಗ ಹೋಗಲಾಡಿಸಿದ್ದವು. ಸಂಘಪರಿಷ್ಕರಣದಲ್ಲಿ ಈಗಿನ ಅಭಿನಿವಿಷ್ಟರಾಗಿರುವಂತ ಕೆಲವರ ಪ್ರಾರ್ಥನೆಯು ಮೇರೆಮೀರಿ ಪ್ರಸಕ್ತ ಮಸೂದೆಯು ಮಾಡಲ್ಪಟ್ಟಿತೆಯೂ, ಇದು ಪ್ರಜಾಸಾಮುದಾಯಿಕವಾದ ಅಪೇಕ್ಷಿತಾಂಶವಲ್ಲವೆಂಬದಾಗಿಯೂ ದೃಢವಾಗಿ ನಂಬಲಿಕ್ಕೆ ಅವಕಾಶವುಂಟಾಗುತಂತೆ. ದಿವಾನರವರು ಸಹ ಪ್ರತಿನಿಧಿಗಳೆಲ್ಲರ ಅಪೇಕ್ಷೆಯಿಂದಲೇ ಮಸೂದೆ ಪ್ರಕಟವಾಗಿದ್ದಲ್ಲವೆಂತಲೂ ಮಹಾರಾಜಾ ಸರ್ಕಾರದವರು ಇದರ ಉಪಯುಕ್ತತೆಯಂ ಆಲೋಚಿಸಿ ಮಾಡಿದರೆಂತಲೂ, ಸೂಚಿಸಿದರು. "ವೈವಾಹಿಕ ಪರಿಷ್ಕರಣವು ಕೇವಲ ಅಪೇಕ್ಷಿತವೆಂದು ಸಾಮುದಾಯಿಕವಾಗಿ ಪ್ರಜೆಗಳೆಲ್ಲರೂ ಏಕಕಂಠ್ಯವಾಗಿ ತಿಳಿಯಪಡಿಸಿ, ಧರ್ಮಸಂಬಂಧವಾದ ಸಮಾಚಾರ ವಿಷಯಗಳಲ್ಲಿ ನ್ಯಾಯನಿರ್ಧಾರಕವಾದ ಏರ್ಪಾಡನ್ನು ಸಾಮಾನ್ಯವಾಗಿ ಪ್ರಜೆಗಳು ಪ್ರೋತ್ಸಾಹಿಸಿ, ತದನುಗುಣವಾದ ಮನೋಭಾವನಂ ವ್ಯಕ್ತಪಡಿಸುವ ತನಕ ಅಂತಾ ಏರ್ಪಾಡು ಅನಾವಶ್ಯಕವೆಂದು ನಮ್ಮ ಅಭಿಪ್ರಾಯವಿಟ್ಟದ್ದಂತಾ" ಗವರ್ನಮೆಂಟಿನವರು ಅಭಿಮತಾನಭಿಮತ ಸಂಖ್ಯೆಯಂ ಪರಿಗಣಿಸಿರುವ ಪಕ್ಷಕ್ಕೆ ಅದರ ಆವಶ್ಯಕತಾನಾವಶ್ಯಕತೆಯು ಸ್ವತಃ ವ್ಯಕ್ತವಾಗದಿರಲಾರದು. ಒಬ್ಬ ಪ್ರಜಾಸಂಖ್ಯೆಯಲ್ಲಿ ನೂರಕ್ಕೆ ಒಬ್ಬರಿಬ್ಬರು ಮಾತ್ರ ಈ ಮಸೂದೆಯನ್ನು ಪ್ರಶಂಸಿಸಿ ಕೊಂಡಾಡುತ್ತಿರಲಾಗಿಯೂ ಮಿಕ್ಕವರೆಲ್ಲರೂ ನಿಷೇಧಿಸುವಂತವರಾಗಿಯೂ ಇರುವದರಿಂದ, ಇದು ಅನಪೇಕ್ಷಿತವೆಂದೇ ನಿಶ್ಚಯವಾಗಿರುತಿದೆ. ನಿರೋಧನೀಯಗಳಾದ ವಿವಾಹಗಳನ್ನು ಅಸಿದ್ಧಗಳಾಗಿ ಮಾಡಲಿಕ್ಕೆ ಪ್ರಸಕ್ತ ನಿಬಂಧನೆಯು ಅಸಮರ್ಥವೆನಿಸುವದರಿಂದ ಆ ಭಾಗದಲ್ಲಿಯೂ ನಿಷ್ಪ್ರಯೋಜಕವಾಗಿರುತಿದೆ.

ಅನಧೀತಮಹಾಭಾಷ್ಯೈರ್ವ್ಯರ್ಥಾಸಾಪದಮಂಜರೀ |
ಅಧೀತೇಪಿಮಹಾಭಾಷ್ಯೇವ್ಯರ್ಥಾಸಾಪದಮಂಜರೀ ||

ಎಂಬಂತೆ ಈಗ ಪ್ರಕಟಿಸಲ್ಪಟ್ಟಿರುವ ಮಸೂದೆಯು ಜಾರಿಯಲ್ಲಿ ತರಲ್ಪಟ್ಟರೂ ತರಲ್ಪಡದಿದ್ದಾಗ್ಯೂ ಪ್ರಯೋಜನಮಾತ್ರ ಏಕರೂಪವಾಗಿಯೇ ಇರುವದು. ಮಸೂದೆಯು ಪ್ರಯೋಜನೋದ್ದೇಶಗಳನ್ನು ಕಾಲದೇಶ ಪ್ರಕೃತಿಭೇದಗಳು ಅಪ್ರಯೋಗಿತಗಳಾಗಿ ಸ್ವತಃ ಉಂಟುಮಾಡತಲಿರುವದರಿಂದ ಪ್ರತ್ಯೇಕ ನಿಬಂಧನೆಯು ಅನಾವಶ್ಯಕವಾಗಿರುತಿದೆ. ಅದಕ್ಕೆ ಸಹಕಾರಿಯಾದ ಹೊಂದು ನಿಬಂಧನೆಯು ಸಾಕ್ಷಿರೂಪೇಣ ಇರುವದರಿಂದ ಪ್ರತ್ಯವಾಯವೇನೂ ಕಾಣಿಸಲಿಲ್ಲವು. ಅದಕಾರಣ ಆವಶ್ಯಕವೆಂದು ವಾದಿಸುವವರ ಶಕ್ತಿಗಾಗಲಿ ಕೂಡದೆಂದು ನಿಷೇಧಿಸುವವರ ಶಕ್ತಿಗಾಗಲಿ ಬಲಿಷ್ಠಗಳಾದ ಕಾರಣಗಳು ಗೋಚರಗಳಾಗಲಿಲ್ಲವು. ಈ ಸಂದರ್ಭದಲ್ಲಿ ಬಾಲ್ಯವಿವಾಹದವರಿಗೆ ಮಧ್ಯವರ್ತಿಗಳೆನಿಸಿರುವ ನಾವು ಪಕ್ಷದ್ವಯದವರ ಸಮಾಧಾನಾರ್ಥ ಸುಲಭವಾಗಿಯೂ ಸರ್ವಜನ ಸಮ್ಮತವಾಗಬಹುದಾದದ್ದಾಗಿಯೂ ಇರುವ ಒಂದುಪಾಯವನ್ನರುಹುವೆವು. ಅದು ಯುಕ್ತವೆಂದು ತೋರುವ ಪಕ್ಷಕ್ಕೆ ಆ ರೀತಿ ನಡೆಸಿದರೆ ಉಭಯರಿಗೂ ಸಂತೋಷಕರವಾಗಿರಬಹುದು, ಅದೇನೆಂದರೆ:—

ಪ್ರಸಕ್ತ ಬಾಲ್ಯವಿವಾಹ ನಿರೋಧಕ ನಿಬಂಧನೆಯ ವಿಷಯದಲ್ಲಿ ಪ್ರಜಾಭಿಪ್ರಾಯಗಳು ಭಿನ್ನಭಿನ್ನಗಳಾಗಿರುವದರಿಂದಲೂ, ಗವರ್ನಮೆಂಟಿನವರ ಪ್ರಯೋಜನಪೂರ್ವಕವಾದ ನಿಬಂಧನೆಯು ಅಪೇಕ್ಷಿತವೆ ಎಂಬದು ಚೆನ್ನಾಗಿ ತಿಳಿದುಕೊಳ್ಳುವವರಿಗೆ ಅವಕಾಶವು ಸಾಲದ್ದರಿಂದಲೂ, ಈ ಕಾನೂನನ್ನು ಸದ್ಯಃ ಜಾರಿಯಲ್ಲಿ ತಾರದೆ ಹಿಂದೆರಡುವರ್ಷಗಳ ಕಾಲ ನಿಲ್ಲಿಸಿಟ್ಟು ಇದರೊಳಗಾಗಿ ಗವರ್ನಮೆಂಟಿನವರು ವಿವಾಹ ವಿಷಯದಲ್ಲಿ ಜನರ ಅಭಿಪ್ರಾಯದರ್ಶನಗಳನ್ನೂ, ಬಾಲಕರ ವಿವಾಹಕಾಲ ಪರಿಮಾಣವನ್ನೂ, ಅಜಮಾಯಿಷಿ ಮಾಡಿ ನಿಶ್ಚಯಿಸಿಕೊಂಡು, ಅನಂತರ ಬಾಗಿರೂಪರಾಗಿ ಗವರ್ನಮೆಂಟಿನವರ ಉದ್ದೇಶಗಳಂ ಸ್ವತಃ ನೆರವೇರಿಸುತ್ತಾರೆಂದು ಈ ಸುಬಂದರೆ ಆಗ ಬೇಕಾದ್ದನ್ನು ಮಾಡಬಹುದು. ಅದಿಲ್ಲದೆ ಈಗಿನ ದೇಶಸ್ಥಿತಿಯನ್ನನುಸರಿಸಿ ಬಾಲ್ಯವಿವಾಹಗಳು ಅಧಿಕವಾಗಿ, ಪ್ರತಿಕ್ರಿಯೆಯು ಅಪೇಕ್ಷಿತವೆಂದು ಕಂಡುಬರುವ ಪಕ್ಷಕ್ಕೆ ಗವರ್ನಮೆಂಟಿನವರು ಸ್ವತಃ ಕ್ರಿಸಿ ಅದು ಜಾರಿಯಲ್ಲಿ ತರಬಹುದು. ಸ್ವಹಿತ ನಿಷ್ಠೆಯಿಂದ ಗವರ್ನಮೆಂಟಿನವರ ಉದ್ದೇಶಗಳಾಗಲಿ, ಪ್ರಜೆಗಳ ಅಪೇಕ್ಷಿತಾಂಶಗಳಾಗಲಿ ಕೆಡುವದಿಲ್ಲವು. ಸರ್ಕಾರದವರು ದೇಶ ಜನಸ್ಥಿತಿಯಂ ಚೆನ್ನಾಗಿ ಅರಿಯಲಿಕ್ಕೂ, ಉತ್ತರೋತ್ತರ ವಿಶೇಷ ಸುಧಾರಣೆಗಳಿಗೆ ಬೇಕಾದ ಸಾಮಗ್ರಿಗಳನ್ನೊದಗಿಸಿಕೊಳ್ಳುವದಕ್ಕೂ ಅವಕಾಶವುಂಟಾಗಿರುವದು. ಪ್ರಜೆಗಳು ತಮ್ಮ ವರ್ತನೆಗಳನ್ನು ಪರಿಷ್ಕರಿಸಿಕೊಂಡು, ಶಾಸ್ತ್ರೀಕ ಆಚಾರಗಳಾದ ನಿಯಮಗಳಿಗೆ ಸ್ವತಃ ಸನ್ನದ್ಧರಾಗುವದಕ್ಕೆ ಸಹ ವ್ಯವಧಾನ ಸಿಕ್ಕಿದಂತೆ ಆಗುವದು. ಆದುದರಿಂದ ಗವರ್ನಮೆಂಟಿನವರು ಪ್ರಜೆಗಳು ನಾವು ಸೂಚಿಸಿದ ಸಲಹೆಯನ್ನಾಲೋಚಿಸಿ ಸ್ವೀಕರಿಸುವಪಕ್ಷಕ್ಕೆ ಗವರ್ನಮೆಂಟಿನವರು ಪ್ರಜಾಭಿಪ್ರಾಯವನ್ನು ಗೌರವಿಸಿದರೆಂಬ ಕೀರ್ತಿಗೂ, ಪ್ರಜೆಗಳು ಸರ್ಕಾರದವರ ನ್ಯಾಯ ನಿಬಂಧನೆಗಳಿಗೆ ಒಪ್ಪಿರಾಗಿ ಅವರ ಉದ್ದೇಶಪ್ರಯತ್ನಗಳಿಗೆ ಸಹಾಯಕರಾಗಿದ್ದಾರೆಂಬ ಪ್ರತಿಷ್ಠೆಗೂ ಪಾತ್ರರೆನಿಸಿಕೊಳ್ಳುವರಾದುದರಿಂದ ಇದನ್ನೆಲ್ಲರೂ ಪರ್ಯಾಲೋಚಿಸುವರೆಂದು ನಂಬುತ್ತೇವೆ.

## Occasional Notes.
## ನೈಮಿತ್ತಿಕ ವಿಷಯನ್ಯಾಸ.

ಲಾಹೋರ್ ಪಟ್ಟಣದ ಪೂರ್ವಭಾಗದಲ್ಲಿ ಒಂದು ಸಂದರ್ಭದೊಳು ಒಬ್ಬಾತನು ಅತ್ಯಧಿಕವಾಗಿ ನಕ್ಕದ್ದರಿಂದ ಪ್ರಾಣವಂ ಕಳಕೊಂಡನೆಂದು ಒಂದು ಪತ್ರಿಕೆ ಪ್ರಕಟಿಸುತಿದೆ.

ಸನ್ ೧೮೯೫ನೇ ಇಸವಿ ಜನವರಿ ತಿಂಗಳ ಮೊದಲು, ದಕ್ಷಿಣ ಮಹಾರಾಷ್ಟ್ರ ರೆಯಿಲ್ವೆ ೩ ನೇ ತರಗತಿ ಟಿಕೆಟ್ಟಿಗಳ ದರವು ಮೈಲೊಂದಕ್ಕೆ ಎರಡು ಕಾಸುಗಳಿಗೆ ಇಳಿಸಲ್ಪಡುವದೆಂದು ಲೋಕಬಂಧು ಯೆಂಬ ಪತ್ರಿಕೆ ತಿಳಿಸುತಿದೆ.

ಮುಂಬೈ ಹೈಕೋರ್ಟ್ ಜಡ್ಜಿಗಳ ಪೈಕಿ ಒಬ್ಬರಾಗಿದ್ದು ಈಚೆಗೆ ಅಕಾಲಮರಣವಂ ಹೊಂದಿದ ಆನರೆಬಲ್ ಕಾಶೀನಾಥ ತ್ರಿಯಂಬಕ ತೆಲಾಂಗ್ ಎಂಬವರ ಸ್ಥಾನದಲ್ಲಿ ಆನರೆಬಲ್ ಮಹಾದೇವ ಗೋವಿಂದ ರಾನಡೆ ಎಂಬ ದೊಡ್ಡ ಮನುಷ್ಯರು ನಿಯಮಿಸಲ್ಪಟ್ಟಂತೆ ಕೇಳಿ ಸಂತೋಷಿಸುತ್ತೇವೆ.

ಮುಂಬೈ ಹೈಕೋರ್ಟ್ ಜಡ್ಜಿಯರಾಗಿದ್ದು ಈಚೆಗೆ ಮೃತಪಟ್ಟ ಮಿ|| ತೆಲಂಗ್ ಎಂಬವರ ಜ್ಞಾಪಕಾರ್ಥ ಶಾಶ್ವತವಾಗಿ ಯಾವದಾದರೊಂದು ಕಾರ್ಯವಂ ಮಾಡಬೇಕೆಂದು ಯೋಚಿಸಿ ಯೇರ್ಪಡಿಸಿದ ಫಂಡಿಗೆ ಇದುವರೆಗೆ ೧೦,೦೦೦ ರೂಪಾಯಿಗಳಿಗೆ ಮೇಲ್ಪಟ್ಟು ಚಂದಾ ಆಗಿರುವಂತೆ ತಿಳಿಯಬರುತಿದೆ.

ರೆವಿನ್ಯೂ ಮತ್ತು ಇತರ ಸರ್ಕಾರಿ ನೌಕರರನ್ನು ವಾರಂಟು ಮೂಲಕ ದಸ್ತಗಿರಿ ಮಾಡಬೇಕಾದ ಸಂದರ್ಭಗಳಲ್ಲಿ, ಇದುಮೊದಲು ಮುಂದೆ, ಯಾವ ಮನುಷ್ಯನನ್ನು ದಸ್ತಗಿರಿ ಮಾಡಬೇಕಾಗಿರುತಿದೆಯೊ ಅವನ ಇಲಾಖೆಯ ಮೇಲ್ಪಟ್ಟ ಅಧಿಕಾರಿಗೆ ಮುಂದಾಗಿ ತಿಳಿಸತಕ್ಕ ಬಗ್ಗೆ, ವಾರಂಟು ಕೊಡುವ ಪಿಶಿಷ್ಟ ಜುಡಿಷಲ್ ಆಫೀಸರುಗಳೂ, ಅಂತ ವಾರಂಟನ್ನು ಜಾರೀ ಮಾಡುವ ಪಾವನರ ತಿಳಿವಳಿಕೆಗೋಸ್ಕರ ವಾರಂಟಿನ ಮೇಲೆ ಷರಾ ಬರೆದುಕೊಡಬೇಕೆಂದು ಮುದರಾಸ್ ಹೈಕೋರ್ಟಿನವರು ಈಚೆಗೆ ಹುಕುಂ ಮಾಡಿರುತ್ತಾರೆ.

ಮನುಷ್ಯನು ಭುಜಿಸುವ ಪದಾರ್ಥಗಳು ಅವನ ಅನ್ನಕೋಶದಲ್ಲಿ ಹ್ಯಾಗೆ ಜೀರ್ಣವಾಗುತಿದೆಯೊ ಅದರ ಕಾರಣಗಳಂ ಕಂಡುಹಿಡಿಯಬೇಕೆಂದು ಯೋಚಿಸಿ, ಆ ಬಗ್ಗೆ ಅವನ ಹೊಟ್ಟೆಯಂ ಭೇದಿಸಿ ನೋಡಬೇಕಾಗಿರುವದರಿಂದ ತನ್ಮೂಲಕ ಪ್ರಾಣಹಾನಿಯುಂಟಾದಾಗ್ಯೂ ಅದಕ್ಕಾಗಿ ಚಿಂತಿಸದೆ ಸದರೀ ಕೃತ್ಯಕ್ಕೆ ಒಳಪಡುವಂತವರಿಗೆ ೧೨೦೦೦ ಪೌಂಡುಗಳು ಈವ ಮೊಬಲಗು ಕೊಡಲ್ಪಡುವದೆಂದು ಅಮೆರಿಕಾ ದೇಶದ ಡಾಕ್ಟರುಗಳು ಕೆಲವರು ಪ್ರಕಟಿಸಲು ಅದಕ್ಕೆ ಇದುವರೆಗೆ ೧೮೦ ಮಂದಿ ಅರ್ಜಿಗಳು ಬರೆದುಕೊಂಡಿರುತ್ತಾರೆಂದು ಒಂದಾನೊಂದು ಪತ್ರಿಕೆ ತಿಳಿಸುತಿದೆ.

ಅನಂತಪುರ ಡಿಸ್ಟ್ರಿಕ್ಟಿಗೆ ಸೇರಿದ ಮಡಕಶೀರಾದಲ್ಲಿರುವ ರಾಮರಾಯುರೆಂಬವರ ಮೊಮ್ಮಗರು ಆರೇಳು ವರ್ಷಗಳ ವಯಸ್ಸಿನ ಗಂಡುಮಗುವಿಗೆ ಕಳೆದ ನವರಾತ್ರಿ ಹಬ್ಬದ ಕಾಲದಲ್ಲಿ ಒಡವೆಗಳು ಹಾಕಿರಲು, ಮನೆಯ ಆಳು ರಂಗದಾಸ ಎಂಬವನು ಸದರೀ ಮಗುವನ್ನು ಒಂದು ಗುಟ್ಟಕ್ಕೆ ಕರೆದುಕೊಂಡು ಹೋಗಿ ಅದರ ಕುತ್ತಿಗೆಯನ್ನು ಹಿಸಿಕಿ ಕೊಂದುಹಾಕಿ ಅದರ ಮೈಮೇಲಿದ್ದ ಒಡವೆಗಳನ್ನು ಅಪಹರಿಸಿಕೊಂಡು, ಮುರ್ದೆಯನ್ನು ಒಂದು ಗವಿಯಲ್ಲಿ ತುರಿಕಿ ಕಲ್ಲುಗಳಿಂದ ಮುಚ್ಚಿಬಿಟ್ಟು ಬಾದಂತೆಯೂ ಸಹ ಘಾತುಕನಮೇಲೆ ಸಂಶಯ ಉಂಟಾಗಿ ಪೋಲೀಸಿನವರಿಗೆ ತಿಳಿಸಲು ಅವರು ಅವನು ದಸ್ತಗಿರಿ ಮಾಡಿ, ಅವನ ಕೃತ್ಯವನ್ನನುಸರಿಸಿ ವಿಚಾರಿಸುವಲ್ಲಿ ತಾನು ಮಾಡಿದ ಕೃತ್ಯವಂ ಒಪ್ಪಿಕೊಂಡು ಮುರ್ದೆಯನ್ನು ಸಹ ತೋರಿಸಿದನೆಂತಲೂ ಒಬ್ಬ ಬಾತಮೀದಾರನು ಬರೆದಿರುತ್ತಾನೆ. ಮಕ್ಕಳಿಗೆ ಒಡವೆಗಳಂ ಹಾಕುವದರಿಂದ ಇಂತಾ ಅನರ್ಥಗಳಿಗೆ ಕಾರಣವುಂಟಾಗುತಿದೆ, ಆದಾಗ್ಯೂ ನಮ್ಮವರು ಈ ಪದ್ಧತಿಯಂ ಬಿಡುವದಿಲ್ಲವು.

ಕಳೆದ ತಿಂಗಳೊಳು ಗುಂತಕಲ್ ರೆಯಿಲ್ವೆ ಸ್ಟೇಷನಿಗೆ ಸಮೀಪದಲ್ಲಿ ನಡೆಸಲ್ಪಟ್ಟ ಖೂನಿ ಮೊಕದ್ದಮೆಯೊಳು ಅಪರಾಧಿಯು ಇದುವರೆಗೆ ಪತ್ತೆಯಾಗದಿದ್ದನಷ್ಟೆ. ರೆಯಿಲ್ವೆ ಗೇಟಿ ಕಾವಲ್‌ಗಾರನನ್ನು ಒಬ್ಬ ಸೋಲ್ಜರನು ರಿವಾಲ್ವರೆಂಬ ಪಿಸ್ತೂಲಿನಿಂದ ಹೊಡೆದು ಕೊಂದುಹಾಕಿ ಹೈದರಾಬಾದ್ ಪ್ರಾಂತಕ್ಕೆ ಪರಾರಿಯಾದಂತೆ ತಿಳಿಯಬರಲು ಪೋಲೀಸಿನವರು ಅಲ್ಲಿಗೆಹೋಗಿ ಸದರೀಘಾತುಕನನ್ನು ಪತ್ತೆಯಿಂದ ದಸ್ತಗಿರಿಮಾಡಿ ಅವನಿದ್ದ ಸ್ಥಳವಂ ಶೋಧಿಸಿ ಮಾಡುವಾಗ ಅವನ ಬಳಿ ಕೆಲವು ಗೋಲಿಗಳು ಸಿಕ್ಕಿದವು. ಅಪರಾಧಿಯು ವಿಚಾರಣೆಗೋಸ್ಕರ ದರ್ಯಾಪ್ತಿಯಬಗ್ಗೆ ಗುಂತಕಲ್ಲಿಗೆ ತರಲ್ಪಟ್ಟಿರುತ್ತಾನೆ. ಇದರ ಪರ್ಯವಸಾನವಂ ಮುಂದೆ ತಿಳಿಯಬೇಕಾಗಿರುತಿದೆ. ಈ ಮೊಕದ್ದಮೆಯ ಹಕೀಕತ್ತು ಹಿಂದೆ ತಿಳಿಸಲ್ಪಟ್ಟದೆ.

ಅನ್ಯಸ್ಥಳಕ್ಕೆ ಕೊಟಾಗಿ ಬದಲೀಮಾಡಿ ಹೋಗುತಲಿರುವ ಸೋಲ್ಜರ್ ಪಟಾಲಮಿನವರಿಗೋಸ್ಕರ ಗುಂತಕಲ್ ರೈಲ್ವೆ ಸ್ಟೇಷನ್‌ಬಳಿ ಒಂದು ವಿರಾಮಸ್ಥಾನವಿದೆ. ಆ ವಿರಾಮಸ್ಥಾನದಲ್ಲಿ ಕೆಲವು ದಿನಗಳ ಹಿಂದೆ ಸಿಕಂದರಾಬಾದಿಗೆ ಹೋಗುವಾಗ ಪಟಾಲಮಿನವರು ಇಳಿದಿದ್ದರು. ಅಲ್ಲಿಯೂರಲ್ಲಿ ತಿರುಗಾಡುವದಕ್ಕೆ ಹೋಗಿದ್ದ ಸೋಲ್ಜರರು ಸ್ಟೇಷನ್‌ಬಳಿ ಹೊಲದಲ್ಲಿ ಇದ್ದ ಹೆಂಗಸರನ್ನು ಕಂಡು ಆ ಸ್ತ್ರೀಯರ ಮಾನಭಂಗವಂ ಮಾಡುವ ನಿಮಿತ್ತ ಅವರ ಬೆನ್ನುಹತ್ತಿ ಓಡಿದರು. ಆ ಅವರು ತಮ್ಮ ಮಾನವನ್ನು ಕಾಪಾಡಿಕೊಳ್ಳುವದಕ್ಕೆ ಜೀವದಾಸೆಯನ್ನು ತೊರೆದು ಸ್ಟೇಷನ್‌ಬಳಿ ಓಡಿಬಂದು ಗೇಟ್‌ಕೀಪರನ ಮನೆಯ ಕೋಣೆಯೊಳು ಪ್ರವೇಶಮಾಡಿ ಬಾಗಿಲನ್ನಿಕ್ಕಿ ಅಡಗಿಕೊಂಡರು. ಆ ಸೋಲ್ಜರರು ಮನೆಯ ಕೋಣೆಯೊಳಗಿರುವ ಬಾಗಿಲನ್ನು ತೆಗೆಯಲಿಕ್ಕೆ ಎತ್ನಿಸಿದರು. ಆ ಕಾಲದಲ್ಲಿ ಗೇಟ್‌ಕೀಪರನು ಭಯಸ್ಥನಾಗಿ ಆ ಹೆಂಗಸರನ್ನು ಕೈಗೆ ಸಿಕ್ಕದಂತೆ ಒಳ್ಳೇ ಸಹಾಯ ಮಾಡಿದನು. ಎನ್ನತಪ್ಪಿ ಆ ಸೋಲ್ಜರರೊಳಗೊಬ್ಬನು ಆ ಗೇಟ್‌ಕೀಪರನನ್ನು ತನ್ನ ಹತ್ತಿರವಿದ್ದ ರಿವಾಲ್ವರ್ ಎಂಬ ಸಣ್ಣ ತುಬಾಕಿಯಿಂದ ಹೊಡೆದು ನೆಲಕ್ಕೆ ಕೆಡವಿದನು. ಮಾರನೇ ದಿವಸ ಈ ಗೇಟ್‌ಕೀಪರನು ಆಸ್ಪತ್ರೆಯಲ್ಲಿ ಸತ್ತುಹೋದನು. ಸದರೀ ಸೋಲ್ಜರರು ಸಿಕಂದರಾಬಾದಿಗೆ ಹೋಗಿ ಸೇರಿದರು—ಚಂ.

## LOCAL AND PROVINCIAL NEWS
## ಒಳದೇಶಮತ್ತುತಾಲ್ಲೂಕ್‌ಜಾತವೃತ್ತಾಂತಗಳು.

ಈ ಸಂಸ್ಥಾನದ ದಿವಾನರವರಾದ ಸರ್. ಕೆ. ಶೇಷಾದ್ರಿ ಅಯ್ಯರವರು ಕಳೆದ ಬೃಹಸ್ಪತಿವಾರದ ದಿನ ಮಧ್ಯಾಹ್ನ ಮೇಲ್ ಟ್ರೈನಿನಲ್ಲಿ ಮೈಸೂರಿಂದ ಈ ಪ್ರಾಂತಕ್ಕೆ ದಯಮಾಡಿದರು.

ಇನ್ನು ಒಂದು ವಾರದೊಳಗಾಗಿ ದಿವಾನರವರು ಕೆಲವು ಡಿಸ್ಟ್ರಿಕ್ಟುಗಳ ಪ್ರಕೃತಸ್ಥಿತಿಯಮನ್ನು ನೋಡಬರುವ ಉದ್ದೇಶದೊಡನೆ ಸರಿಕ್ಯೂಟ್ ಹೊರಡುವವರಾಗಿದ್ದಾರೆಂದು ಕೇಳುತ್ತೇವೆ. ಇದು ಅವಶ್ಯಕರ್ತವ್ಯವಾದುದೆ.

ಘನವಂ ಪಡೆದ ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದೂರರವರು ಇನ್ನು ಒಂದು ವಾರದೊಳಗಾಗಿ ಮುಂಬೈಗೆ ದಯಮಾಡುವರೆಂತಲೂ, ಆ ಬಗ್ಗೆ ಆವಶ್ಯಕಗಳಾದ ಯೇರ್ಪಾಡುಗಳು ನಡೆಸಲ್ಪಡುತಿವೆ ಯೆಂತಲೂ ಒಂದುವಿಧ ಪ್ರವಾದ ವುಂಟಾಗಿದೆ.

ಈಚೆಗೆ ನಾಲ್ಕು ದಿನಗಳಿಂದ ಮೋಡವಾಯಕ ಆಗಿಂದಾಗ್ಯೆ ಮಂದಮಂದವಾಗಿ ಬೀಳುತ ಬುವಾಗಿ ಸಾಗಿಸುತಲಿದೆ. ಇನ್ನು ದಸರಾಪೇಕ್ಷೆ ತಪ್ಪಲಿಲ್ಲವು ಪಕ್ಷ ಪುಷ್ಟಿಯಾಗಿ ಮಳೆ ಬೀಳುವದಿಲ್ಲವು. ಆದುದರಿಂದ ಕೊರತೆ ಇಲ್ಲವು ಆಹಾರ ಪದಾರ್ಥಗಳ ಧಾರಣೆಗಳು ಮೊದಲಾದ ಇತರ ವಿಷಯಗಳಲ್ಲಿ ಅಧಿಕಾಂಶವೇನೂ ಇಲ್ಲವು. ಎಲ್ಲವು ಕಳೆದ ವಾರದಲ್ಲಿ ತಿಳಿಸಿದಂತೆಯೇ ಇವೆ.

ಕೋಲಾರ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಾದ ಮಿ|| ಮಾದಯ್ಯನವರು ಒಂದೆರಡು ತಿಂಗಳ ಪ್ರಿವಿಲೇಜ್ ರಜಾ ತೆಗೆದುಕೊಳ್ಳುವವರಾಗಿದಾರೆಯೆಂದೂ, ಅವರ ರಜಾ ಕಾಲದಲ್ಲಿ ದಿವಾನರವರ ಅಂಡರ್ ಸೆಕ್ರೆಟರಿಯವರಾದ ಮಿ|| ನಾರಾಯಣರಾಯರವರು ಕೋಲಾರ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರ ಕೆಲಸವಂ ಬದಲೀ ನೋಡುವಂತೆ ನಿಯಮಿಸಲ್ಪಡುವರೆಂತಲೂ ಈಚೆಗೆ ಒಂದು ಪ್ರವಾದವುಂಟಾಗಿರುತಿದೆ.

ಈ ಸಂಸ್ಥಾನದ ಮರಾಮತ್ತು ಇಲಾಖಾ ಚೀಫ್ ಇಂಜನಿಯರಾಗಿದ್ದ ಕರ್ನಲ್ ಜೋನ್ಸ್ ಸಾಹೆಬರು ಈಗ ಫರ್ಲೋ ರಜಾ ಮೇಲೆ ಸ್ವದೇಶಕ್ಕೆ ಹೋಗಿರುತ್ತಾರೆಯಷ್ಟೆ. ಸದರೀ ದೊಡ್ಡ ಮನುಷ್ಯರು ರಜಾಮೇಲೆ ಇಲ್ಲಿಂದ ಪ್ರಯಾಣವಾದ ಕಾಲದಲ್ಲಿ, ಸದರೀ ರಜಾ ಪೂರ್ತಿಯಾದ ತರುವಾಯ ಪೆನ್ಷನ್‌ಮೇಲೆ ನೌಕರಿಯಿಂದ ನಿವೃತ್ತರಾಗುವರೆಂದು ಕೇಳಿದ್ದೆವು, ಪರಂತು ಸದರೀಯವರು ಮರಳಿ ಯಿಲ್ಲಿಗೆ ವಾಪಸ್ಸುಬಂದು ತಮ್ಮ ಕೆಲಸವಂ ವಹಿಸುವರೆಂದು ಒಳದೇಶದ ಈವನಿಂಗ್ ಮೆಯಿಲ್ ಪತ್ರಿಕೆ ತಿಳಿಸುತಿದೆ.

ಶಿಪಾಯಿ ಅಹಮದ್‌ಖಾನನೆಂಬವನು, ಕಳೆದ ಆಗಸ್ಟು ತಿಂಗಳ ೩೧ ನೇ ತಾರೀಖಿನೊಳು, ಬಿಳಿಕ್‌ಪಲ್ಲಿ ಎಂಬ ಗ್ರಾಮದಲ್ಲಿ ಯೆರಡು ಖೂನಿಗಳು ನಡೆಸಿದ ಬಗ್ಗೆ ಮಿಲಿಟರಿಸ್ಟೇಷನ್ ಸೆಷನ್ ಜಡ್ಜಿಯವರಿಂದ ಮರಣದಂಡನೆ ವಿಧಿಸಲ್ಪಟ್ಟು ಅದು ರೆಸಿಡೆಂಟರಿಂದ ಕಾಯಂ ಮಾಡಲ್ಪಡಲು ತದನಂತರ ಅಪರಾಧಿಯು ಇಂಡಿಯಾ ಗವರ್ನಮೆಂಟಿಗೆ ಅಪೀಲ್ ಮಾಡಿಕೊಂಡಿರುವದಾಗಿ ಹಿಂದಿನವಾರದ ಪತ್ರಿಕೆಯ ಮೂಲಕ ತಿಳಿಸಿದ್ದೆವಷ್ಟೆ. ಸದರೀ ಅಪೀಲು ಇಂಡಿಯಾ ಗವರ್ನಮೆಂಟಿನಿಂದ ತಿರಸ್ಕರಿಸಲ್ಪಟ್ಟದರಿಂದ, ಅಪರಾಧಿ ಅಹಮದ್‌ಖಾನನು ಕಳೆದ ತಿಂಗಳ ೩೧ ನೇ ತಾರೀಖಿನ ಪ್ರಾತಃಕಾಲ ಆರುವರೆ ಘಂಟೆಗೆ ಇಲ್ಲಿನ ಸೆಂಟ್ರಲ್‌ಜೆಯಿಲಿನಲ್ಲಿ ಗಲ್ಲಿಗೆಹಾಕಲ್ಪಟ್ಟನು.

ಬೆಂಗಳೂರು ಡಿಸ್ಟ್ರಿಕ್ಟ್ ಪೋಲೀಸ್‌ಪೆಟಿ ಸಬ್‌ಡಿವಿಜನ್ ಆಫೀಸರಾದ ಈಗ ಸ್ಪೆಷಿಯಲ್ ಡ್ಯೂಟಿಯಮೇಲಿರುವ ಮಿ|| ಬಿ. ಜಿ. ಕೃಷ್ಣಯ್ಯಂಗಾರ್ಯರು ಮಿಲಿಟರಿ ಇಲಾಖೆಗೆ ಸೇರಿದ ಕೆಲವು ಸಿಪಾಯಿಗಳು ಜಮೇದಾರ್ ವಗೈರೆಯರ ಮೇಲೆ ಕಂಟೋನ್ಮೆಂಟ್ ಫಸ್ಟ್ ಮೆಜಿಸ್ಟ್ರೇಟರ ಕೋರ್ಟಿನಲ್ಲಿ ತಂದಿದ್ದ ಕ್ರಿಮಿನಲ್ ಮೊಕದ್ದಮೆಯು ಬಹಳ ಕೆಲವು ಕಾಲವಾಗಿ ವಿಚಾರಣೆಯಾಗುತಲಿತ್ತಷ್ಟೆ. ಈಗ ಅಪರಾಧಿಗಳು ಸ್ವತಃ ಬಂದು ಸದರೀ ದೊಡ್ಡಮನುಷ್ಯರು ಅಪರಾಧಕ್ಷಮೆಯಂ ಬೇಡಿಕೊಂಡದ್ದರಮೇಲೂ ಅಪರಾಧಿಗಳ ಸ್ನೇಹಿತರೊಬ್ಬರು ಮಧ್ಯೆ ಪ್ರವೇಶಿಸಿ ಇಬ್ಬರಿಗೂ ಸಮಾಧಾನಪಡಿಸಿದ್ದರಿಂದಲೂ ಈ ತಿಂಗಳ ೧ನೇ ತಾರೀಖಿನಲ್ಲಿ ಕಕ್ಷಿಗಾರರು ಸಮಾಧಾನಮಾದಂತೆ ಮ್ಯಾಜಿಸ್ಟ್ರೇಟರಿಗೆ ರಿಪೋರ್ಟ್ ಮಾಡಿದರೆಂದು ಕೇಳುತ್ತೇವೆ.

ದುಕೆ ಆಚೀಚಾರದಲ್ಲಿ ನಡೆವ ಪ್ರತಿನಿಧಿ ಸಭೆಯ ವರ ಪ್ರಸಂಗದಿಂದ ವ್ಯಕ್ತವಾಗುತಿದೆ. ಈಗ ಪ್ರತಿಪಕ್ಷದವರ ಮುಖ್ಯರೂ, ದಿವಾನರವರು ತಿಳಿಸಿದ ಅಭಿಪ್ರಾಯಕ್ಕೂ ನಮಗೆ ಪ್ರಕಟವಾಗಿದ್ದ ಸೂಚನೆಯನ್ನು ಕುರಿತು ಅಂಗೀಕರಿಸಿದ್ದು. ಸಂಘದ ಪರಿಷ್ಕರಣದಲ್ಲಿ ವಿಶೇಷ ಅಭಿನಿವಿಷ್ಟರಾಗಿರುವಂತೆ ಕೆಲವರ ಪ್ರಾರ್ಥನೆಯು ಮೇಲೆಯೇ ಪ್ರಕೃತ ಮನವಿಯು ಮಾಡಲ್ಪಟ್ಟಿತೆಂಬುದೂ, ಇದು ಪ್ರಜಾಸಾಮಾನ್ಯವಾದ ಅಪೇಕ್ಷಿತವಲ್ಲವೆಂಬುದಾಗಿಯೂ ದೃಢವಾಗಿ ನಂಬಲಿಕ್ಕೆ ಆಸ್ಪದವಾಗುವಂತೆ, ದಿವಾನರವರು ಸಭಾ ಪ್ರತಿನಿಧಿಗಳೆಲ್ಲರ ಅಪೇಕ್ಷೆಯಿಂದಲೇ ಮಾಡಲ್ಪಟ್ಟದ್ದಲ್ಲವೆಂತಲೂ ಮಹಾರಾಜಾ ಸರ್ಕಾರದವರ ಇವರ ಉಪಯುಕ್ತತೆಯಂ ಪರ್ಯಾಲೋಚಿಸಿ ನಡೆದರೆಂತಲೂ, ಸೂಚಿಸಿದರು. “ವೈವಾಹಿಕ ಪರಿಷ್ಕರಣವು ಕೇವಲ ಅಪೇಕ್ಷಿತವೆಂದು ಸಾಮಾನ್ಯವಾಗಿ ಪ್ರಜೆಗಳೆಲ್ಲರೂ ಏಕಕಂಠ್ಯವಾಗಿ ತಿಳಿಸುವಲ್ಲಿ, ಏತದ್ವಿಷಯವಾದ ಸಮಾಚಾರ ವಿಷಯಗಳಲ್ಲಿ ನ್ಯಾಯವಿಧಾಯಕವಾದ ಏರ್ಪಾಡನ್ನು ಸಾಮಾನ್ಯವಾಗಿ ಪ್ರಜೆಗಳು ಹೊಸಿಸಿ, ತದನುಗುಣವಾದ ಮನೋಭಾವವಂ ವ್ಯಕ್ತಪಡಿಸುವ ತನಕ ಅಂತಾ ಏರ್ಪಾಡು ಅನಾವಶ್ಯಕವೆಂದು ಸಹ ಯೋಗ್ಯವಲ್ಲವೆಂತಲೂ” ಗವರ್ನಮೆಂಟಿನವರು ಅಭಿಪ್ರಾಯಪಟ್ಟರು. ಅಭಿಮತ ಸಂಖ್ಯೆಯ ಪರಿಗಣಿಸಿರುವ ಪಕ್ಷಕ್ಕೆ ಅದರ ಆವಶ್ಯಕತಾನತಿಯು ಸ್ಪಷ್ಟ ವ್ಯಕ್ತವಾಗದ ಕಾರಣ. ಒಬ್ಬ ಪ್ರಜಾಮುಖ್ಯನಲ್ಲಿ ಸೇರಿದ ಒಬ್ಬರಿಬ್ಬರು ಮಾತ್ರ ಈ ಮನವಿಯ ಕಾನೂನನ್ನು ಪ್ರಶಂಸಿಸಿ ಕೊಂಡಾಡುತ್ತವರಾಗಿಯೂ ಮಿಕ್ಕವರೆಲ್ಲರೂ ನಿಷೇಧಿಸುವಂತವರಾಗಿಯೂ ಇರುವದರಿಂದ, ಇದು ಅನಪೇಕ್ಷಿತವೆಂದೇ ಹೇಳಬೇಕಾಗಿರುತಿದೆ. ನಿರೋಧನೀಯಗಳಾದ ವಿವಾಹಗಳನ್ನು ಅಸಿದ್ಧಗಳಾಗಿ ಮಾಡಲಿಕ್ಕೆ ಪ್ರಸಕ್ತ ನಿಬಂಧನೆಯು ಅಸಮರ್ಥವೆನಿಸುವದರಿಂದ ಆ ಭಾಗದಲ್ಲಿಯೂ ನಿಷ್ಪ್ರಯೋಜಕವಾಗಿರುತಿದೆ.

ಅನಾಲೋಚಿತಮಾಭಾಷ್ಯವ್ಯರ್ಥಸಂಪಾದನಂ |
ಅಧಿಕೃತಮಾಹಾಭಾಷ್ಯವ್ಯರ್ಥಸಂಪಾದನಂ ||

ಎಂಬಂತೆ ಈಗ ಪ್ರಕಟಿಸಲ್ಪಟ್ಟಿರುವ ಮಸೂದೆಯು ಜಾರಿಯಲ್ಲಿ ತರಲ್ಪಟ್ಟಾಗ್ಯೂ ತರಲ್ಪಡದಿದ್ದಾಗ್ಯೂ ಪ್ರಯೋಜನವಮಾತ್ರ ಏಕರೂಪವಾಗಿಯೇ ಇರುವುದು. ಮನವಿಯು ಪ್ರಯೋಜನೋದ್ದೇಶಗಳನ್ನು ಕಾಲಾನ್ತರ ಪ್ರಕೃತಿಭೇದಗಳು ಅಪ್ರಯೋಜನಗಳಾಗಿ ಸ್ವತಃ ಉಂಟುಮಾಡ ತಲೆದೋರುವವರಿಂದ ಪ್ರತ್ಯೇಕ ನಿಬಂಧನೆಯು ಅನಾವಶ್ಯಕವಾಗಿರುತಿದೆ. ಅದಕ್ಕೆ ಸರಕಾರಿಯಾದ ಒಂದು ನಿಬಂಧನೆಯು ಸಾಕ್ಷಿರೂಪೇಣ ಇರುವದರಿಂದ ಪ್ರತ್ಯೇಕವಾಯವೇನೂ ಕಾಣಿಸಲಿಲ್ಲವು ಅದಕಾರಣ ಆವಶ್ಯಕವೆಂದು ವಾದಿಸುವವರ ಶಕ್ತಿಗಾಗಲಿ ಕೂಡದೆಂದು ನಿಷೇಧಿಸುವವರ ಶಕ್ತಿಗಾಗಲಿ ಬಲೀಯಗಳಾದ ಕಾರಣಗಳು ಗೋಚರಗಳಾಗಲಿಲ್ಲವು. ಈ ಸಂದರ್ಭದಲ್ಲಿ ಬಾಲ್ಯಬಾಲಕರಿಗೆ ಮಧ್ಯವರ್ತಿಗಳೆನಿಸಿರುವ ನಾವು ಶಕ್ತಿವ್ಯಯದವರ ಸಮಾಧಾನಾರ್ಥ ಸುಲಭವಾಗಿಯೂ ಸರ್ವಜನ ಸಮ್ಮತಕವಾಗಬಹುದಾದದ್ದಾಗಿಯೂ ಇರುವ ಒಂದುದಾರಿಯನ್ನು ತೋರುವೆವು ಇದು ಯುಕ್ತವೆಂದು ತೋರುವ ಪಕ್ಷಕ್ಕೆ ಆ ರೀತಿ ನಡೆಸಿದರೆ ಉಭಯರಿಗೂ ಸಂತೋಷಕರವಾಗಿರಬಹುದು, ಅದೇನೆಂದರೆ —

ಪ್ರಸಕ್ತ ಬಾಲ್ಯವಿವಾಹ ನಿರೋಧಕ ನಿಬಂಧನೆಯ ವಿಷಯದಲ್ಲಿ ಪ್ರಜಾಭಿಪ್ರಾಯಗಳು ಭಿನ್ನಭಿನ್ನಗಳಾಗಿರುವದರಿಂದಲೂ, ಗವರ್ನಮೆಂಟಿನವರ ಪ್ರಯೋಜಕವು ಪೂರ್ವಕವಾದ ನಿಬಂಧನೆಯು ಅಪೇಕ್ಷಿತವೆ ಎಂಬದು ಚೆನ್ನಾಗಿ ತಿಳಿದುಕೊಳ್ಳತಕ್ಕದ್ದು ಆವಶ್ಯಕವು ನಾಲ್ಕೈದುವರುಷ, ಈ ಕಾನೂನನ್ನು ಸದ್ಯಕ್ಕೆ ಜಾರಿಯಲ್ಲಿ ತಾರದೆ ಹಿಂದೆರಡುವರ್ಷಗಳ ಕಾಲ ನಿಲ್ಲಿಸಿಟ್ಟು ಇದರೊಳಗಾಗಿ ಗವರ್ನಮೆಂಟಿನವರು ವಿವಾಹ ವಿಷಯದಲ್ಲಿ ಜನರ ಅಭಿರುಚಿ ವರ್ತನೆಗಳನ್ನೂ, ಬಾಲಕರ ವಿವಾಹಕಾಲ ವರಿಶೋಧನವನ್ನೂ, ಅಭಿಪ್ರಾಯಭೇದ ಮಾಡಿ ನಿಶ್ಚ ಯಿಸಿಕೊಂಡು, ಬರುವ ಬೆಂಗಳೂರಿನ ಸಭೆಯ ವರ್ತನೆಗಳಿಂದ ತಿಳಿದುಕೊಂಡು ಬಳಿಕ ಗವರ್ನಮೆಂಟಿನವರ ಉದ್ದೇಶಗಳು ಸ್ವತಃ ನೆರವೇರಿಸುತ್ತಾರೆಂದು ಕಂಡುಬಂದರೆ ಆಗ ದೇಶ್ಯ ರೀತಿಯನ್ನು ಮನ್ನಾ ಮಾಡಬಹುದು. ಅಲ್ಲದೆ ಆಗಿನ ದೇಶಸ್ಥಿತಿಯನ್ನನುಸರಿಸಿ ಬಾಲ್ಯ ವಿವಾಹಗಳು ಅಧಿಕವಾಗಿ, ಪ್ರತಿಬಂಧವು ಅಪೇಕ್ಷಿತವೆಂದು ಕಂಡುಬರುವ ಪಕ್ಷಕ್ಕೆ ಗವರ್ನಮೆಂಟನವರು ಸ್ವತಃ ಶ್ರಮಿಸಿ ಅದು ಜಾರಿಯಲ್ಲಿ ತರಬಹುದು. ಸದ್ಯಕ್ಕೆ ನಿಲ್ಲಿಸುವದರಿಂದ ಗವರ್ನಮೆಂಟನವರ ಉದ್ದೇಶಗಳಿಗಾಗಲಿ, ಪ್ರಜೆಗಳ ಅಪೇಕ್ಷಿತಾಂಶಗಳಿಗಾಗಲಿ ಕೆಡುವಿಲ್ಲವು. ಸರ್ಕಾರದವರು ದೇಶ ಜನ ಸ್ಥಿತಿಯಂ ಚೆನ್ನಾಗಿ ಅರಿಯಲಿಕ್ಕೂ, ಉತ್ತರೋತ್ತರ ನಿಶೇಷ ಸುಧಾರಣೆಗಳಿಗೆ ಬೇಕಾದ ಸಾಮಗ್ರಿಗಳನ್ನೊದಗಿಸಿಕೊಳ್ಳುವದಕ್ಕೂ ಅವಕಾಶ ವುಂಟಾಗಿರುವದು. ಪ್ರಜೆಗಳು ದುಷ್ಟ ವರ್ತನೆಗಳನ್ನು ಪರಿಷ್ಕರಿಸಿಕೊಂಡು, ಶಾಸ್ತ್ರೋಕ್ತ ಆಚಾರಗಳನ್ನು ನಿಯಮಗಳಿಗೆ ಸ್ವತಃ ಅನ್ವಯಿಸಲು ಅವಕಾಶ ಸಹ ವ್ಯವಧಾನ ಸಿಕ್ಕಿದಂತೆಯಾಗುವುದು. ಆದುದರಿಂದ ಗವರ್ನಮೆಂಟಿನವರು ಪ್ರಜೆಗಳ ಈ ನಮ್ರ ಸೂಚನೆಯ ಸಲಹೆಯನ್ನಾಲೋಚಿಸಿ ಸ್ವೀಕರಿಸುವ ಪಕ್ಷಕ್ಕೆ ಗವರ್ನಮೆಂಟಿನವರು ಪ್ರಜಾಭಿಪ್ರಾಯವನ್ನು ಗೌರವಿಸಿದರೆಂಬ ಕೀರ್ತಿಗೂ, ಪ್ರಜೆಗಳು ಸರ್ಕಾರದವರ ನ್ಯಾಯ ನಿಬಂಧನೆಗಳಿಗೆ ಬದ್ಧರಾಗಿ ಅದರ ಉದ್ದೇಶವನ್ನು ನೆರವೇರಿಸಲು ಸಹಾಯಕರಾಗಿ ಪ್ರತಿಷ್ಠೆಗೂ ಪಾತ್ರರೆನಿಸಿಕೊಳ್ಳುವರಾದುದರಿಂ ಇವನ್ನೆಲ್ಲ ರ ಪರ್ಯಾಲೋಚಿಸುವರೆಂದು ನಂಬುತ್ತೇವೆ.

## Occasional Notes
## ನೈಮಿತ್ತಿಕ ವಿಷಯನ್ಯಾಸ.

ಲಂಡನ್ ಪಟ್ಟಣದ ಪೂರ್ವಭಾಗದಲ್ಲಿ ಒಂದು ಸಂದರ್ಭದೊಳು ಒಬ್ಬಾತನು ಅತ್ಯಧಿಕವಾಗಿ ನಶ್ಯದ್ದರಿಂದ ಪ್ರಾಣವಂ ಕಳಕೊಂಡನೆಂದು ಒಂದು ಪತ್ರಿಕೆ ಪ್ರಕಟಿಸಿರುತಿದೆ.

ಸನ್ ೧೮೯೪ನೇ ಇಸವಿ ಜನವರಿ ತಿಂಗಳ ಮೊದಲು, ದಕ್ಷಿಣ ಮಹಾರಾಷ್ಟ್ರ ರೆಯಿಲ್ವೆ ೩ ನೇ ತರಗತಿ ಟಿಕ್ಕೆಟುಗಳ ದರವು ಮೈಲೊಂದಕ್ಕೆ ಎರಡು ಕಾಸುಗಳಿಗೆ ಇಳಿಸಲ್ಪಡುವವೆಂದು ಲೋಕಬಂಧು ಎಂಬ ಪತ್ರಿಕೆ ತಿಳಿಸುತಿದೆ.

ಮುಂಬೈ ಹೈಕೋರ್ಟ್ ಜಡ್ಜಿಗಳ ಪೈಕಿ ಒಬ್ಬರಾಗಿದ್ದು ಈಚೆಗೆ ಅಕಾಲಮರಣವಂ ಹೊಂದಿದ ಆನರೆಬಲ್ ಕಾಶೀನಾಥ ತ್ರಿಯಂಬಕ ತೆಲಾಂಗ್ ಎಂಬವರ ಸ್ಥಾನದಲ್ಲಿ ಆನರೆಬಲ್ ಮಹಾದೇವ ಗೋವಿಂದ ರಾನಡೆ ಎಂಬ ದೊಡ್ಡ ಮನುಷ್ಯರು ನಿಯಮಿಸಲ್ಪಟ್ಟಂತೆ ಕೇಳಿ ಸಂತೋಷಿಸುತ್ತೇವೆ.

ಮುಂಬೈ ಹೈಕೋರ್ಟ್ ಜಡ್ಜಿಯರಾಗಿದ್ದು ಈಚೆಗೆ ಮೃತಪಟ್ಟ ಮಿ॥ ತೆಲಂಗ್ ಎಂಬವರ ಜ್ಞಾಪಕಾರ್ಥ ಶಾಶ್ವತವಾಗಿ ಯಾವುದಾದರೊಂದು ಕಾರ್ಯವಂ ಮಾಡಬೇಕೆಂದು ಯೋಚಿಸಿ ಏರ್ಪಡಿಸಿದ ಫಂಡಿಗೆ ಇದುವರೆಗೆ ೧೦,೦೦೦ ರೂಪಾಯಿಗಳಿಗೆ ಮೇಲ್ಪಟ್ಟ ಚಂದಾ ಆಗಿರುವಂತೆ ತಿಳಿಯಬರುತಿದೆ.

ರೆವಿನ್ಯೂ ಮತ್ತು ಇತರ ಸರ್ಕಾರಿ ನೌಕರರನ್ನು ವಾರಂ ಎ ಮೂಲಕ ದಸ್ತಗಿರಿ ಮಾಡಬೇಕಾದ ಸಂದರ್ಭಗಳಲ್ಲಿ, ಇದುವರೆಗೆ ಮುಂದೆ, ಯಾವ ಮನುಷ್ಯನನ್ನು ದಸ್ತಗಿರಿ ಮಾಡಬೇಕಾಗಿರುತಿದೆಯೋ ಅವನ ಇಲಾಖೆಯ ಮೇಲ್ಪಟ್ಟ ಅಧಿಕಾರಿಗೆ ಮುಂದಾಗಿ ತಿಳಿಸತಕ್ಕ ಬಗ್ಗೆ ವಾರಂಟು ಕೊಡುವ ಪಿಶಿಷ್ಟ ಜುಡಿಷಲ್ ಆಫೀಸರಿಗಳೂ, ಅಂತ ವಾರಂಟನ್ನು ಜಾರೀ ಮಾಡುವ ಜವಾನರ ತಿಳುವಳಿಕೆಗೋಸ್ಕರ ವಾರಂಟಿನ ಮೇಲೆ ಷರಾ ಬರೆದುಕೊಡಬೇಕೆಂದು ಮದರಾಸ್ ಹೈಕೋರ್ಟಿನವರು ಈಚೆಗೆ ಹುಕುಂ ಮಾಡಿರುತ್ತಾರೆ.

ಮನುಷ್ಯನು ಭುಜಿಸುವ ಪದಾರ್ಥಗಳು ಅವನ ಅನ್ನಕೋಶದಲ್ಲಿ ಹ್ಯಾಗೆ ಜೀರ್ಣವಾಗುತಿದೆಯೋ ಅದರ ಕಾರಣಗಳಂ ಕಂಡು ಹಿಡಿಯಬೇಕೆಂದು ಯೋಚಿಸಿ, ಆ ಬಗ್ಗೆ ಅವನ ಹೊಟ್ಟೆಯಂ ಛೇದಿಸಿ ನೋಡಬೇಕಾಗಿರುವದರಿಂದ ತನ್ನಿಮಿತ್ತ ಪ್ರಾಣಹಾನಿಯುಂಟಾದಾಗ್ಯೂ ಅದಕ್ಕಾಗಿ ಹೆಂಡತಿಸದೆ ಸದರೀ ಕೃತ್ಯಕ್ಕೆ ಒಳಪಡುವಂತವರಿಗೆ ೧೦,೦೦೦ ಪೌಂಡುಗಳು ಅಥವಾ ಮೊಬಲಗು ಕೊಡಲ್ಪಡುವದೆಂದು ಅಮೆರಿಕಾ ದೇಶದ ಡಾಕ್ಟರುಗಳು ಕೇಳಿದರು ಪ್ರಕಟಿಸಲು ಅದಕ್ಕೆ ಇದುವರೆಗೆ ವರು ೧೮೦೦ ಮಂದಿ ಅರ್ಜಿಗಳು ಬರೆದುಕೊಂಡಿರುತ್ತಾರೆಂದು ಒಂದಾನೊಂದು ಪತ್ರಿಕೆ ತಿಳಿಸುತಿದೆ.

ಅನಂತಪುರ ಡಿಸ್ಟ್ರಿಕ್ಟಿಗೆ ಸೇರಿದ ಮಡಕಶೀರಾದಲ್ಲಿರುವ ರಾಮರಾಯಲುರೆಂಬವರ ಮಗಳು ಆರೇಳು ವರ್ಷಗಳ ವಯಸ್ಸಿನ ಹೆಣ್ಣು ಮಗುವಿಗೆ ಕಳೆದ ನವರಾತ್ರಿ ಹಬ್ಬದ ಕಾಲದಲ್ಲಿ ಒಡವೆಗಳು ಹಾಕಿರಲು, ಮನೆಯ ಆಳು ರಂಗದಾಸ ಎಂಬುವನು ಸದರೀ ಮಗುವನ್ನು ಒಂದು ಗುಟ್ಟಕ್ಕೆ ಕರೆದುಕೊಂಡು ಹೋಗಿ ಅದರ ಕುತ್ತಿಗೆಯನ್ನು ಹಿಸುಕಿ ಕೊಂದುಹಾಕಿ ಅದರ ಮೈಮೇಲಿದ್ದ ಒಡವೆಗಳನ್ನು ಅಪಹರಿಸಿಕೊಂಡು, ಮುರ್ದೆಯನ್ನು ಒಂದು ಗವಿಯಲ್ಲಿ ತುರಿಕಿ ಕಲ್ಲುಗಳಿಂದ ಮುಚ್ಚಿಬಿಟ್ಟ ಬಾದಂತೆಯೂ ಸಂಶಯ ಉಂಟಾಗಿ ಪೋಲೀಸಿನವರಿಗೆ ತಿಳಿಸಲು ಅವರು ಅವನು ದಸ್ತಗಿರಿ ಮಾಡಿ, ಅವನ ಕೃತ್ಯವನ್ನನುಸರಿಸಿ ವಿಚಾರಿಸುವಲ್ಲಿ ತಾನು ಮಾಡಿದ ಕೃತ್ಯವಂ ಒಪ್ಪಿಕೊಂಡು ಮುರ್ದೆಯನ್ನು ಪತ್ತೆ ತೋರಿಸಿದನೆಂತಲೂ ಒಬ್ಬ ಬಾತ್ಮಿದಾರನು ಬರೆದಿರುತ್ತಾನೆ. ಮಕ್ಕಳಿಗೆ ಒಡವೆಗಳಂ ಹಾಕುವದರಿಂದ ಎಂತಾ ಅನರ್ಥಗಳಿಗೆ ಕಾರಣವುಂಟಾಗುತಿದೆ, ಆದಾಗ್ಯೂ ನಮ್ಮವರು ಈ ಪದ್ಧತಿಯಂ ಬಿಡುವದಿಲ್ಲವು.

ಕಳೆದ ತಿಂಗಳೊಳು ಗುಂತಕಲ್ ರೆಯಿಲ್ವೆ ಸ್ಟೇಷನಿಗೆ ಸಮೀಪದಲ್ಲಿ ನಡೆಸಲ್ಪಟ್ಟ ಖೂನಿ ಮೊಕದ್ದಮೆಯ ಅಪರಾಧಿಯು ಇದುವರೆಗೆ ಪತ್ತೆಯಾಗದಿದ್ದನಷ್ಟೆ. ರೆಯಿಲ್ವೆ ಗೇಟು ಕಾವಲಿಗಾರನನ್ನು ಒಬ್ಬ ಸೋಲ್ಜರನು ರಿವಾಲ್ವರೆಂಬ ಪಿಸ್ತೂಲಿನಿಂದ ಹೊಡೆದು ಕೊಂದುಹಾಕಿ ಹೈದರಾಬಾದ್ ಪ್ರಾಂತಕ್ಕೆ ಪರಾರೀಯಾದಂತೆ ತಿಳಿಯಬರಲು ಪೋಲೀಸಿನವರು ಅಲ್ಲಿಗೆಹೋಗಿ ಸದರೀ ಘಾತುಕನನ್ನು ಪತ್ತೆಯಿಂದ ದಸ್ತಗಿರಿಮಾಡಿ ಅವನಿದ್ದ ಸ್ಥಳವಂ ಝಡ್ತಿ ಮಾಡುವಾಗ ಅವನ ಬಳಿ ಕೆಲವು ಗೋಲಿಗಳು ಸಿಕ್ಕಿದವು. ಅಪರಾಧಿಯು ಪಹರೆಸಹಿತ ದರ್ಯಾಪ್ತಿಯಬಗ್ಗೆ ಗುಂತಕಲಿಗೆ ತರಲ್ಪಟ್ಟಿರುತ್ತಾನೆ. ಇದರ ಪರ್ಯವಸಾನವಂ ಮುಂದೆ ತಿಳಿಯಬೇಕಾಗಿರುತಿದೆ. ಈ ಮೊಕದ್ದಮೆಯ ತಪ್ಸೀಲಿ ಇದರಡಿ ತಿಳಿಸಲ್ಪಟ್ಟಿದೆ.

ಅನ್ಯಸ್ಥಳಕ್ಕೆ ಕೂಟಾಗಿ ಬರಲೀಮೇಲೆ ಹೋಗುತಲಿರುವ ಸೋಲ್ಜರ್ ಪಟಾಲಮಿನವರಿಗೆ ಯಶ್ವರ ಗುಂತಕಲ್ ರೈಲ್ವೆ ಸ್ಟೇಷನು ಒಂದು ವಿರಾಮ ಸ್ಥಾನವಿದೆ. ಆ ವಿರಾಮಸ್ಥಾನದಲ್ಲಿ ಕೆಲವು ದಿನಗಳ ಹಿಂದೆ ಸಿಕಂದರಾಬಾದಿಗೆ ಹೋಗುವಾಗ ಪಟಾಲಮಿನವರು ಇಳಿದಿದ್ದರು ಅಪ್ಪಕಿಯೂರಲ್ಲಿ ತಿರುಗಾಡುವದಕ್ಕೆ ಹೋಗಿದ್ದ ಸೋಲ್ಜರರು ಸ್ಟೇಷನಿನ ಹೊರಗಡೆ ಇಬ್ಬರು ಹೆಂಗಸರನ್ನು ಕಂಡು ಆ ಸ್ತ್ರೀಯರ ಮಾನಭಂಗವಂ ಮಾಡುವ ನಿಮಿತ್ತ ಅವರ ಬೆನ್ನುಹತ್ತಿ ಓಡಿದರು ಅವರು ತಮ್ಮ ಮಾನವನ್ನು ಕಾಯ್ದುಕೊಳ್ಳುವದಕ್ಕೆ ಜೀವದಾಸೆಯನ್ನು ತೊರೆದು ಸ್ಟೇಷನಿನ ಬಳಿಗೆ ಓಡಿಬಂದು ಗೇಟ್‌ಕೀಪರನ ಮನೆಯ ಕೋಣೆಯೊಳು ಪ್ರವೇಶಮಾಡಿ ಬಾಗಿಲನ್ನಿಕ್ಕಿ ಅಡಗಿಕೊಂಡರು ಆ ಸೋಲ್ಜರರು ಪಹರೆಯು ಕೋಣೆಯೊಳಗಿರುವ ಬಾಗಿಲನ್ನೊದೆಯಲಿಕ್ಕೆ ಎತ್ನಿಸಿದರು. ಆ ಕಾಲದಲ್ಲಿ ಗೇಟ್‌ಕೀಪರನು ಬಯಸ್ಥನಾಗಿ ಆ ಹೆಂಗಸರನ್ನು ಕೈಗೆ ಸಿಕ್ಕದಂತೆ ಒಳ್ಳೇ ಸಹಾಯ ಮಾಡಿದನು. ಎತ್ನ ತಪ್ಪಿ ಆ ಸೋಲ್ಜರ್ ಕೋಪಗೊಂಡು ಆ ಗೇಟ್‌ಕೀಪರನನ್ನು ತನ್ನ ಹತ್ತಿರಿದ್ದ ರಿವಾಲ್ವರ್ ಎಂಬ ಸಣ್ಣ ತುಪಾಕಿಯಿಂದ ಹೊಡೆದು ನೆಲಕ್ಕೆ ಕೆಡವಿದನು. ಮಾರನೇ ದಿವಸ ಆ ಗೇಟ್‌ಕೀಪರನು ಆಸ್ಪತ್ರೆಯಲ್ಲಿ ಸತ್ತುಹೋದನು ಸದರೀ ಸೋಲ್ಜರರು ಸಿಕಂದರಾಬಾದಿಗೆ ಹೋಗಿ ಸೇರಿದರು—ಚಂ

## LOCAL AND PROVINCIAL NEWS
## ಒಳದೇಶಮತ್ತು ತಾಲ್ಲೂಕು ಜಾತ ವೃತ್ತಾಂತಗಳು.

ಈ ಸಂಸ್ಥಾನದ ದಿವಾನರವರಾದ ಸರ್. ಕೆ. ಶೇಷಾದ್ರಿ ಅಯ್ಯರವರು ಕಳೆದ ಬೃಹಸ್ಪತಿವಾರದ ದಿನ ಮಧ್ಯಾಹ್ನ ಮೇಯಿಲ್ ಟ್ರೈನ್ನಲ್ಲಿ ಮೈಸೂರಿಂದ ಈ ಪುರಕ್ಕೆ ದಯಮಾಡಿದರು.

ಇನ್ನು ಒಂದು ವಾರದೊಳಗಾಗಿ ದಿವಾನರವರು ಕೆಲವು ಡಿಸ್ಟ್ರಿಕ್ಟುಗಳ ಪ್ರಕೃತಸ್ಥಿತಿಯಂ ಖುದ್ದು ನೋಡಬಹುದಾದ ಉದ್ದೇಶದೊಡನೆ ಸರಿಕ್ಯಾಂಪ್ ಹೊರಡುವವರಾಗಿದ್ದಾರೆಂದು ಕೇಳುತ್ತೇವೆ ಇದು ಅವಶ್ಯಕರ್ತವ್ಯವಾದುದೆ.

ಘನವಂ ಪಡೆದ ಶ್ರೀಮನ್ ಮಹಾರಾಜ ರಾಜಾಸಾಹೇಬ ಬಹದೂರವರು ಇನ್ನು ಒಂದು ವಾರದೊಳಗಾಗಿ ಮುಂಬೈಗೆ ದಯಮಾಡುವರೆಂತಲೂ, ಆ ಬಗ್ಗೆ ಆವಶ್ಯಕಗಳಾದ ಏರ್ಪಾಡುಗಳು ನಡೆಸಲ್ಪಡುತಿವೆ ಯೆಂತಲೂ ಒಂದುವಿಧ ಪ್ರವಾದ ವುಂಟಾಗಿದೆ.

ಈಚೆಗೆ ನಾಲ್ಕು ದಿನಗಳಿಂದ ಮೋಡವಾದುದರಿಂದ ಆಗಾಗ್ಗೆ ತುಂತುರುಮಳೆ ಬೀಳುತ ಬಲವಾಗಿ ಗಾಳಿ ಬೀಸುತಲಿದೆ. ಇನ್ನು ವರ್ಷಾರ್ಭವೇಕ್ಷಿತವಾಗಿಲ್ಲವು. ವರುಣ ಧಾರ್ಮಿಕವಾಗಿ ಮಳೆ ಬೀಳುವದಿಲ್ಲವು ಆದುದರಿಂದ ಕೊರತೆ ಇಲ್ಲವು ಆಹಾರ ಪದಾರ್ಥಗಳ ಧಾರಣೆಗಳು ಹೊಡಲಾದ ಎರಡು ಸಿನ ಮಗಳಲ್ಲಿ ಅಧಿಕಾಂಶವೇನೂ ಏಳುವು ಎಲ್ಲವು ಕಳೆದ ವಾರದಲ್ಲಿ ತಿಳಿಸಿದಂತೆಯೇ ಇವೆ.

ಕೋಲಾರ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರಾದ ಮಿ॥ ಮಾದಯ್ಯನವರು ಹಿಂದೆರಡು ತಿಂಗಳ ಪ್ರಿವಿಲೇಜ್ ರಜಾ ತೆಗೆದುಕೊಳ್ಳುವದರಾಗಿದಾರೆ ಎಂತಲೂ, ಅವರ ರಜಾ ಕಾಲದಲ್ಲಿ, ದಿವಾನರವರ ಅಂಡರ್ ಸೆಕ್ರೆಟರಿಯವರಾದ ಮಿ॥ ನಂಜುಂಡರಾಜರವರು ಕೋಲಾರ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ ಕೆಲಸವಂ ಬದಲೀ ನೋಡುವಂತೆ ನಿಯಮಿಸಲ್ಪಡುವರೆಂತಲೂ ಈಚೆಗೆ ಒಂದು ಪ್ರವಾದ ವುಂಟಾಗಿರುತಿದೆ.

ಈ ಸಂಸ್ಥಾನದ ಪಾರ್ಟ್‌ವರ್ಕ್ಸ ಇಲಾಖೆ ಚೀಫ್ ಇಂಜನಿಯರಾಗಿದ್ದ ಕರ್ನಲ್ ಜೋನ್ಸ್ ಸಾಹೇಬರು ಈಗ ಫರ್ಲೋ ರಜಾ ಮೇಲೆ ಸ್ವದೇಶಕ್ಕೆ ಹೋಗಿರುತ್ತಾರೆಯಷ್ಟೆ. ಸದರೀ ದೊಡ್ಡ ಮನುಷ್ಯರು ರಜಾಮೇಲೆ ಇಲ್ಲಿಂದ ಪ್ರಯಾಣವಾದ ಕಾಲದಲ್ಲಿ, ಸದರೀ ರಜಾ ಪೂರ್ತಿಯಾದ ಕೂಡಲೆ ಪೆನ್ಷನ್ ಮೇಲೆ ನೌಕರಿಯಿಂದ ನಿವೃತ್ತರಾಗುವರೆಂದು ಕೇಳಿದ್ದೆವು, ಪರಂತು ಸದರೀಯವರು ಪುನಃ ಇಲ್ಲಿಗೆ ವಾಪಸುಬಂದು ತಮ್ಮ ಕೆಲಸವ ವಹಿಸುವರೆಂದು ಒಳದೇಶದ ಈವನಿಂಗ್ ಮೆಯಿಲ್ ಪತ್ರಿಕೆ ತಿಳಿಸುತಿದೆ.

ಶಿಪಾಯಿ ಅಹಮದ್‌ಖಾನನೆಂಬವನು, ಕಳೆದ ಆಗಸ್ಟು ತಿಂಗಳ ೩೧ ನೇ ತಾರೀಖಿನೊಳು, ಬಳಕ ಪಲ್ಲಿ ಎಂಬ ಗ್ರಾಮದಲ್ಲಿ ಎರಡು ಖೂನಿಗಳು ನಡೆಸಿದ ಬಗ್ಗೆ ಮಿಲಿಟರಿ ಸ್ಪೇಷಲ್ ಸೆಷನ್ ಜಡ್ಜಿಯವರಿಂದ ಮರಣದಂಡನೆ ವಿಧಿಸಲ್ಪಟ್ಟು ಆದು ರೆಸಿಡೆಂಟರಿಂದ ಕಾಯಂ ಮಾಡಲ್ಪಡಲು ಆದರಮೇಲೆ ಅಪರಾಧಿಯು ಇಂಡಿಯಾ ಗವರ್ನಮೆಂಟಿಗೆ ಅಪೀಲ್ ಮಾಡಿಕೊಂಡಿರುವದಾಗಿ ಹಿಂದಿನವಾರದ ಪತ್ರಿಕೆಯ ಮೂಲಕ ತಿಳಿಸಿಯಿದ್ದೆವಷ್ಟೆ. ಸದರೀ ಅಪೀಲು ಇಂಡಿಯಾ ಗವರ್ನಮೆಂಟನಿಂದ ತಿರಸ್ಕರಿಸಲ್ಪಟ್ಟದರಿಂದ, ಅಪರಾಧಿ ಅಹಮದ್‌ಖಾನನು ಕಳೆದ ತಿಂಗಳ ೩೧ ನೇ ತಾರೀಖಿನ ಪ್ರಾತಃಕಾಲ ಆರುವರೆ ಘಂಟೆಗೆ ಇಲ್ಲಿನ ಸೆಂಟ್ರಲ್‌ಜೆಯಿಲಿನಲ್ಲಿ ಗಲ್ಲಿಗೆಹಾಕಲ್ಪಟ್ಟನು.

ಬೆಂಗಳೂರು ಡಿಸ್ಟ್ರಿಕ್ಟ್ ಕ್ಲೋಸ್‌ಪೋಟ ಸಬ್‌ಡಿವಿಜನ್ ಆಫೀಸರು. ಈಗ ಸ್ಪೆಷಿಯಲ್ ಡ್ಯೂಟಿಯಮೇಲಿರುವ ಮಿ॥ ಬಿ. ಜೆ. ಕೃಷ್ಣಯ್ಯಂಗಾರ್‌ರವರು ಮಿಲಿಟರಿ ಇಲಾಖೆಗೆ ಸೇರಿದ ಕೆಲವರು ಸಿಪಾಯಿಗಳು ಜಮೇದಾರ್ ವಗೈರೆಯರ ಮೇಲೆ ಎಟೋರ್ನೀ ಎನೇ ಮೇಜಿಸ್ಟ್ರೇಟರ ಕೋರ್ಟಿನಲ್ಲಿ ತಂದಿದ್ದ ಕ್ರಿಮಿನಲ್ ಮೊಕದ್ದಮೆಯು ಆಗ್ಯೆ ಕೆಲವು ಕಾಲವಾಗಿ ವಿಚಾರಣೆಯಾಗುತಲಿತ್ತಷ್ಟೆ. ಈಗ ಅಪರಾಧಿಗಳು ಸ್ವತಃ ಬಂದು ಸದರೀ ದೊಡ್ಡಮನುಷ್ಯರು ಅಪರಾಧಕ್ಷಮೆಯಂ ಬೇಡಿಕೊಂಡುದರಮೇಲೂ ಅಪರಾಧಿಗಳ ಸ್ನೇಹಿತರೊಬ್ಬರು ಮಧ್ಯೆ ಪ್ರವೇಶಿಸಿ ಇಬ್ಬರಿಗೂ ಸಮಾಧಾನ ಪಡಿಸಿದ್ದರಿಂದಲೂ ಈ ತಿಂಗಳ ೪ ನೇ ತಾರೀಖಿನಲ್ಲಿ ಕಕ್ಷಿಗಾರರು ಸಮಾಧಾನವಾದಂತೆ ಮ್ಯಾಜಿಸ್ಟ್ರೇಟರಿಗೆ ರಿಪೋರ್ಟ್ ಮಾಡಿದರೆಂದು ಕೇಳುತ್ತೇವೆ.

## ಮೈಸೂರು ಸಂಸ್ಥಾನದ ದಿವಾನರವರ ಉಪನ್ಯಾಸ.

...ದರಿಂದ ಪ್ರಾಯಶಃ ಕೆಂದಿ ಖರ್ಚೇನೂ ಹೆಚ್ಚಾಗಿಲ್ಲವೆಂದು ಊಹಿಸಬಹುದು. ಚಿಲ್ಲರೆ ಇಜಾರೆ...ಗಳನ್ನು ಏರ್ಪಡಿಸಿರುವವರಿಂದ ಈಗಿನ ಇಜಾರೇದಾರರುಗಳೇ ಇಜಾರೇದಾರರಿಗಿಂತ ಹೆಚ್ಚಾದ ...ಗೆ ಮೊಬಲಗನ್ನು ಯಾವದೊಂದು ತೊಂದರೆಯೂ ಇಲ್ಲದೆ ಪಾವತಿ ಮಾಡುತ್ತಾರೆ. ಈ ರೀತಿ...ಯಿಂದ ಜರಾಬು ಸಹಿತವಾದ ಅಬಕಾರಿ ಬಾಬಿನಲ್ಲಿ ೯,೫೮,೭೩೮ ರೂ. ಜಾಸ್ತಿಯಾಗಿರುತ್ತೆ. ಫಾರೆಸ್ಟ್—ಸೀಂಡಲ್‌ಬಾಬಿನಲ್ಲಿ ಸುಮಾರು ೭೪,೦೦೦ ರೂಪಾಯಿ ವರಿಗೆ ಕಮ್ಮಿಯಾಗಿರುತ್ತೆ. ...೧—೯೨ನೇ ಇಸವಿಯಲ್ಲಿ ೨,೮೩೯½ ಟನ್ ಸಂದಲ್ ಹರಾಜಾಯಿತು. ೧೮೯೨—೯೩ ನೇ ಇ...ವಿಯಲ್ಲಿ ೧,೯೯೨½ ಟನ್‌ಗಳು ಮಾತ್ರ ಖರೋದ್ಧಾಯಿತು. ಆದರೆ ಟನ್ನಿಕ್ಕೆ ಸರಾಸರಿ ೮೮೪—೮ ರೂಪಾಯಿಮೇರೆ ಅಂದರೆ ೧೮೯೧—೯೨ನೇ ಇಸವಿಗಿಂತ ೮೭-೫ ರೂಪಾಯಿ ಜಾಸ್ತಿ ಕ್ರಯವಾಗಿ ಖರೀದಿ...ಯಿತು. ಚೌಬೀನೆ ಮತ್ತು ಸಾದೆ ಬಾಬಿನಲ್ಲಿಯೂ ಕೂಡ ಹಿಂದಿನ ವರುಷಕ್ಕಿಂತ ಹರಾಜಾದ ... ಕಮ್ಮಿಯಾದ್ದರಿಂದ ಸುಮಾರು ೯೬,೦೦೦ ರೂಪಾಯಿಗಳವರಿಗೆ ಕಮ್ಮಿ ಬಂದಿತು. ... "ಇತರ ಫಾರೆಸ್ಟು ಬಾಬುಗಳು" ಎಂಬ ಹೆಡ್ಡಿನಲ್ಲಿ ಜಂಗಲೀ ಚಿಲ್ಲರೆ ಬಾಬುಗಳ ಹರಾಜಿ... ಹೆಚ್ಚು ಉತ್ಪತ್ತಿಯಾದ್ದರಿಂದ ೩೮,೦೦೦ ರೂಪಾಯಿ ವರಿಗೆ ಜಾಸ್ತಿ ಬಂದಿರುತ್ತೆ. ಅಂ...ತು ಆನೆಗಳ ವಿಕ್ರಯದ ಬಾಬತು ತಪಾಯಿ ಕಳೆದ ಸಂವತ್ಸರದ ಪೂರ್ಣ ಫಾರೆಸ್ಟು ಉತ್ಪತ್ತಿಯು ...೧,೩೩,೫೮೭ ರೂಪಾಯಿ ಕಮ್ಮಿಯಾಗಿರುತ್ತೆ.

ಆನೆ ಬಂಗಡಿ ಬಾಬಿನ ಉತ್ಪತ್ತಿಯು ಹಿಂದಿನ ವರುಷಕ್ಕಿಂತ ೨೧,೦೦೦ ರೂಪಾಯಿ ಜಾಸ್ತಿಯಾಗಿರುತ್ತೆ. ಈ ಬಾಬಿನ ಖರ್ಚು, ಉತ್ಪತ್ತಿಯನ್ನತಿಕ್ರಮಿಸದೆ ಇದ್ದದ್ದಕ್ಕೆ ಸಂತೋಷಪಡತಕ್ಕದ್ದು.

ಸ್ಟ್ಯಾಂಪು—ಸಾಮಾನ್ಯವಾದ ಕಾರಣಗಳಿಂದ ಜನರಲ್‌ಸ್ಟ್ಯಾಂಪ್ ಬಾಬಿನಲ್ಲಿಯೂ ಬಗರ್ ಸ್ಟ್ಯಾಂಪ್ ದಸ್ತಾವೇಜುಗಳ ಮೇಲೆ ವಸೂಲಾದ ಹಾಸಲ್ ಮತ್ತು ಜುಲ್ಮಾನೆ ಮೂಲಕವಾಗಿಯೂ ೧೮೯ ಲಕ್ಷ ರೂಪಾಯಿಗಳ ಮಟ್ಟಿಗೆ ಈ ಬಾಬಿನಲ್ಲಿ ಜಾಸ್ತಿ ಕಂಡುಬಂದಿರುತ್ತೆ.

ಮೊಹತರ್ಫಾ—ಹಿಂದಣಸಾಲುಗಳ ಬಾಕಿ ವಸೂಲಾದ್ದರಿಂದ ೩೮,೭೭೦ ರೂಪಾಯಿ ವರಿಗೂ ಈ ಬಾಬಿನಲ್ಲಿ ಜಾಸ್ತಿಯಾಗಿರುತ್ತೆ.

ಭಂಗಾರದ ಗಣಿಗಳು—ಭಂಗಾರದ ಗಣಿಗಳ ಉತ್ಪತ್ತಿಯ ಮೇಲೆ ಸರಕಾರಕ್ಕೆ ಬಾರದ ರಾಯಧನದಲ್ಲಿ ೭೧,೬೭೩ ರೂಪಾಯಿ ಜಾಸ್ತಿ ಕಂಡಿರುತ್ತೆ. ೧೮೯೨ನೇ ಇಸವಿಯಲ್ಲಿ ಹಿಂದಿನ ವರುಷಕ್ಕಿಂತ ಜಾಸ್ತಿಯಾಗಿ ೩೦,೩೭೭ ಔನ್ಸ್ ಅಂದರೆ ೮೧,೮೯೨ ತೊಲ ಚಿನ್ನವು ಉತ್ಪತ್ತಿಯಾಯಿತು.

*   *   *   *

ಶಿಲ್ಕು ಮೊಬಲಗಿನ ಆದಾಯ ಲೆಕ್ಕ—ಸರಕಾರಿ ಶಿಲ್ಕು ಮೊಬಲಗನ್ನು ಠೇವಣಿ ಇಟ್ಟಿರುವವರ ಮೇಲಿನ ಬಡ್ಡಿ ಬಾಬತು ಉತ್ಪತ್ತಿಯ ಬಾಬಿನಲ್ಲಿ ೨೪ ಲಕ್ಷ ರೂಪಾಯಿಗಿಂತ ಹೆಚ್ಚಾಗಿ ಕಮ್ಮಿ ಕಂಡುಬಂದಿರುತ್ತೆ. ೧೮೯೧—೯೨ ನೇ ಇಸವಿಯಲ್ಲಿ ಆಸನ್ನವಾಗಿದ್ದ ಕ್ಷಾಮದ ನಿವಾರಣೆ ಖರ್ಚಿಗಾಗಿ ಬೇಕಾದ ದ್ರವ್ಯವನ್ನು ಸಿದ್ಧಪಡಿಸಿಕೊಳ್ಳಬೇಕಾದ ಅವಶ್ಯಕತೆ ಇದ್ದದರಿಂದಲೂ, ಬಿರುಬಂದಿ ಬಜಾಯಿಸಿದ್ದರ ದೆಸೆಯಿಂದ ಚಾಲತಿ ಖರ್ಚಿಗೆ ಬೇಕಾದ ಹಣವನ್ನು ಪಡೆಸಿಕೊಳ್ಳಬೇಕಾದ ಸಂಭವವಿದ್ದದ್ದರಿಂದಲೂ, ೨೮½ ಲಕ್ಷ ರೂಪಾಯಿಯ ಮೌಲ್ಯದ ಶೇಕಡಾ ೪ರ ಪ್ರಕಾರ ಬಡ್ಡಿ ಬರತಕ್ಕ ಸರಕಾರಿ ಪತ್ರಗಳನ್ನು ವಿಕ್ರಯ ಮಾಡಬೇಕಾಯಿತು. ಈ ಮೇರೆ ಮಾರಿದ್ದರಲ್ಲಿ ೨೧೦,೦೦೦ ರೂಪಾಯಿ ನಷ್ಟ ಬಂದಿತ್ತು. ಆದರೆ ಈ ಪತ್ರಗಳನ್ನು ವಿಕ್ರಯಿಸಿದ್ದರಿಂದ ೧೮೯೨—೯೩ ನೇ ಇಸವಿಯಲ್ಲಿ ಬಡ್ಡಿ ದೆಸೆಯಿಂದ ಉತ್ಪತ್ತಿಯಾಗಬೇಕಾದ ಮೊಬಲಗಿನಲ್ಲಿ ಕಮ್ಮಿಬೀಳುವದಕ್ಕೆ ಕಾರಣವಾಯಿತು.

ಉತ್ಪತ್ತಿಯ ಬಾಬುಗಳ ಪೈಕಿ ಮುಖ್ಯವಾದವುಗಳನ್ನು ತಪಸೀಲಾಗಿ ಮೇಲೆ ತಿಳಿಸಿರುತ್ತೆ. ಒಟ್ಟು ಆದಾಯವನ್ನು ಸಂಕ್ಷೇಪವಾಗಿ ಹೇಳುವಲ್ಲಿ, ಜಮೀನ್ ಮತ್ತು ಅಬಕಾರಿ ಬಾಬುಗಳಲ್ಲಿ ೨೬ ಲಕ್ಷ ರೂಪಾಯಿ ಜಾಸ್ತಿ ಆಯಿತು. ಭಂಗಾರದಗಣಿ, ಸ್ಟ್ಯಾಂಪು, ಮೊಹತರ್ಫಾ ವಗೈರೆ ಇತರ ಬಾಬುಗಳಲ್ಲಿ ೨೪ ಲಕ್ಷ ರೂಪಾಯಿ ಜಾಸ್ತಿ. ಈ ಮೇರೆ ಒಟ್ಟು ೨೮¼ ಲಕ್ಷ ರೂಪಾಯಿ ಜಾಸ್ತಿ ಆದ್ದರಲ್ಲಿ ಫಾರೆಸ್ಟು ಬಾಬಿನಲ್ಲಿಯೂ ಶಿಲ್ಕು ಮೊಬಲಗಿನ ಮೇಲಣ ಬಡ್ಡಿ ಉತ್ಪತ್ತಿ ಬಾಬಿನಲ್ಲಿಯೂ ಸೇರಿ ಕಮ್ಮಿ ಬಂದ ೪¼ ಲಕ್ಷ ರೂಪಾಯಿ ಕಳೆದು ನಿಜವಾಗಿ ನಿವ್ವಳ ಜಮಾ ಜಾಸ್ತಿ ೨೪½ ಲಕ್ಷ ರೂಪಾಯಿ ಆಗಿರುತ್ತೆ.

ಖರ್ಚು—ಕಳೆದ ವರುಷದಲ್ಲಿ ಎಲ್ಲಾ ಬಾಬುಗಳಲ್ಲಿಯೂ ಒಟ್ಟು ಖರ್ಚು ೧೩೪,೭೧,೧೬೬ ರೂಪಾಯಿ ಆಯಿತು. ಹಿಂದಣ ವರುಷದಲ್ಲಿ ೧,೩೦ ೧೬, ೯೦೦ ರೂಪಾಯಿ ಆಗಿತ್ತು. "ಮಿಲಿಟರಿ" "ಅಬಕಾರಿ" "ಮರಮತ್" ಈ ಇಲಾಖೆಗಳಲ್ಲಿ ಜಾಸ್ತಿ ಖರ್ಚು ಕಂಡುಬಂದಿರುತ್ತೆ. ಖರ್ಚು ಈ ಕೆಳಗೆ ಬರುವ ಕೋಷ್ಟಯಲ್ಲಿ ತೋರಿಸಿರುತ್ತೆ :—

ಖರ್ಚು ಬಾಬುಗಳು.

| | | 1891 ನೇ ಜುಲೈ ಲಗಾಯಿತು 92ನೇ ಜೂನವರಿಗೆ, ರೂಪಾಯಿಗಳು. | 1892 ನೇ ಜುಲೈ ಲಗಾ|| ಯಿತು 93 ನೇ ಜೂನವರಿಗೆ, ರೂಪಾಯಿಗಳು. |
|---|---|---|---|
| **A** | | | |
| ಕಪ್ಪದ ಯಾನೆ ಪಗದಿ | ... | 24,50,000 | 24,50,000 |
| ಸಿವಿಲ್ ಲಿಸ್ಟು ಯಾನೆ ಅರಮನೆ ಇಲಾಖೆ ಖರ್ಚು | ... | 14,00,000 | 14,00,000 |
| ಪೊಲಿಟಿಕಲ್ ಪೆನ್ಷನ್‌ಗಳು, ಜಹಗೀರ್‌ಗೆ ಬದಲಾಗಿ ಕೊಡುವ ಅಲೋವೆನ್ಸಗಳು ವಗೈರೆ | ... | 1,08,996 | 1,00,570 |
| ಮಿಲಿಟರಿ ಫೌಜು | ... | 8,78,335 | 9,89,027 |
| ಜುಮ್ಲಾ... | | 48,37,331 | 49,39,597 |
| **B** | | | |
| ಹುಜೂರ್ ಇಲಾಖೆ ಖರ್ಚು | ... | 2,93,986 | 3,16,892 |
| ಲ್ಯಾಂಡ್ ರೆವಿನ್ಯೂ ಸಂಬಂಧ ವಸೂಲಾತಿ ಖರ್ಚು—ಡೆಪ್ಯುಟಿ ಕಮ್ಮಿಷನರ್‌ಗಳು ಮತ್ತು ಅವರ ಸಿಬ್ಬಂದಿಗಳು | ... | 1,71,158 | 1,73,777 |
| ಸಬ್‌ಡಿವಿಜನಲ್ ಆಫಿಸರ್‌ಗಳು ಮತ್ತು ಡಿಟ್ಟೋ | .. | 11,356 | 23,294 |
| ಅಸಿಸ್ಟೆಂಟ್‌ಕಮ್ಮಿಷನರ್‌ಗಳು ಮತ್ತು ಅವರ ಸಿಬ್ಬಂದಿಗಳು | .. | 65,177 | 67,476 |
| ತಾಲ್ಲೂಕ್ ಸಿಬ್ಬಂದಿಗಳು | ... | 3,15,409 | 3,15,736 |
| ರೆವಿನ್ಯೂ ಸರ್ವೆ ಇಲಾಖೆ | ... | 2,03,923 | 1,52,038 |
| ಇನಾಂ ಇಲಾಖೆ | ... | 7,645 | 7699 |
| ಗ್ರಾಮ ನೌಕರರ ವೇತನ | ... | 5,34,186 | 5,37,096 |
| ಇತರ ಖರ್ಚುಗಳು | ... | 35,149 | 36,371 |
| ಅಬಕಾರಿ | ... | 1,00,112 | 1,86,535 |
| ಫಾರೆಸ್ಟು ಆನೇ ಬಂಗಡಿ ಬಾಬು ಸಹ | ... | 5,82,031 | 4,57,634 |
| ಸ್ಟ್ಯಾಂಪ್ | ... | 21,778 | 24,405 |
| ಸಾಯರ್ | ... | 12,920 | 12,933 |
| ಸರ್ವೆ ಮತ್ತು ಸೆಟ್ಲ್‌ಮೆಂಟು | ... | 1,18,748 | 1,15,868 |
| ಅಮೃತಮಹಲ್ | ... | 25,918 | 27,757 |
| ಸ್ಟೇಟಫೆರ್ ಮತ್ತು ಇತರ ಚಿಲ್ಲರೆ ಇಲಾಖೆಗಳು | ... | 76,243 | 1,00,297 |
| ಜುಮ್ಲಾ .. | | 25,70,734 | 25,56,808 |
| **C** | | | |
| ಲಾ ಅಂಡ್ ಜಸ್ಟಿಸ್ ಯಾನೆ ಜುಡಿಷಿಯಲ್ ಮತ್ತು ಜೈಲ್‌ಗಳು. | | 8,11,750 | 8,32,168 |
| ಪೋಲೀಸ್ | ... | 7,03,398 | 7,43,840 |
| ವಿದ್ಯಾಭ್ಯಾಸದ ಇಲಾಖೆ | .... | 3 59,158 | 3,98,197 |
| ಮುಜರಾಯಿ | ... | 3,25,613 | 3,15,351 |
| ಮೆಡಿಕಲ್ ಯಾನೆ ವೈದ್ಯಶಾಲೆಗಳ ಇಲಾಖೆ | ... | 2,05,804 | 2,37,840 |
| ಪೆನ್ಷನ್‌ಗಳು ಮತ್ತು ಗ್ರಾಟ್ಯುಟಿಗಳು | ... | 2,76,179 | 2,68,715 |
| ಪಬ್ಲಿಕ್‌ವರ್ಕ್ಸ್ ಯಾನೆ ಮರಮತ್ತು ಮತ್ತು ಸ್ಯಾನಿಟೇಷನ್ | ... | 22,52,988 | 24,42,511 |
| ಏಜೆನ್ಸಿ ಖರ್ಚು | ... | 40,119 | 46,571 |
| ಬ್ರಿಟಿಷ್ ಆಫಿಸರರ ಫರ್ಲೋ ವಗೈರೆ ಆಲೋವೆನ್ಸ, ಗ್ರಾಟ್ಯುಟಿ, ಕಂಪೆನ್ಸೇಷನ್, ರಜ ಮತ್ತು ಪೆನ್ಷನ್‌ಗೈ ಕಂಟ್ರಿಬ್ಯೂಷನ್ | .. | 27,236 | 21,708 |
| ಮೈಸೂರು ಸೇವಿಂಗ್ಸ್‌ಬ್ಯಾಂಕ್ ಡಿಪಾಜಿಟ್ ಹಣಗಳ ಬಡ್ಡಿ | ... | 85,355 | 88,717 |
| ಧರ್ಮಾರ್ಥವಾಗಿ ಠೇವಣಿ ಇಟ್ಟಿರುವ ಮೊಬಲಗಿನ ಬಡ್ಡಿ | ... | 737 | 4,174 |
| ರೀಫಂಡ್ ಯಾನೆ ವಾಪಸ ಖರ್ಚು | ... | 36,662 | 99,445 |
| ಸೆನ್ಸಸ್ ಯಾನೆ ಖಾನೇಷುಮಾರಿ ಖರ್ಚು | ... | 82,377 | 6,364 |
| ಚಿಲ್ಲರೆ ಬಾಬುಗಳು | ... | 1,37,958 | 3,10,582 |
| ಮಲ್ನಾಡು ಭಾಗದಲ್ಲಿ ಕಂಡುಬರುವ ಹೆಚ್ಚಿನ ತನಿಖೆಗೋಸ್ಕರ ನೇಮಿಸಿದ ಸ್ಪೆಷಲ್ ಆಫಿಸರ್ರವರ ಖರ್ಚು | .. | 6,837 | ... |
| ಫ್ಯಾಮಿನ್ ರಿಲೀಫ್ ಯಾನೆ ಕ್ಷಾಮ ನಿವಾರಣೆ ಖರ್ಚಿನಬಾಗಿ ಇಡುವರಿಗೆ ಲೆಕ್ಕಕ್ಕೆ ಸೇರತಕ್ಕದ್ದು | ... | 25,048 | 21,980 |
| ಇಂಡಿಯಾ ಗವರ್ನಮೆಂಟ್ ಪ್ರೋನೋಟುಗಳನ್ನು ಖರೀದಿಗೆ ತೆಗೆದದ್ದರಲ್ಲಿ ಹೆಚ್ಚಾಗಿ ಕೊಟ್ಟ ರುಸುಂ ವಗೈರೆ | ... | 94,814 | 46,736 |
| ನೀಲಗಿರಿಯಲ್ಲಿ ಖರೀದಿಗೆ ತೆಗೆದುಕೊಂಡ ಅರ್ನ್ರ ಹೌಸ ಬಂಗ್ಲೆ ಕಿಮ್ಮತ್ತು | ... | 30,000 | " |
| *ಮೈಸೂರು ರೈಲ್ವೆ ಸಾಲದಬಾಬತು 20 ಲಕ್ಷ ರೂ ಸಾಲಗಳ ಬಡ್ಡಿ | ... | 1,04,783 | 89,662 |
| ಜುಮ್ಲಾ... | | 56,08,841 | 59,74,761 |
| ಒಟ್ಟು ಜುಮ್ಲಾ .. | | 130,16,906 | 134,71,166 |

*೧,೭೫೦,೦೦೦ ಪೌಂಡುಗಳ ಸಾಲವನ್ನು ವಿಲಾಯತಿಯಲ್ಲಿ ತೆಗೆದಮೇಲೆ ಈಕೀಮೆಯಲ್ಲಿ ತೆಗೆದಿದ್ದ ೨೦ ಲಕ್ಷರೂಪಾಯಿನ ಸಾಲವನ್ನು ರೈಲ್ವೆ ಕೆಲಸಗಳಗೋಸ್ಕರ ಎಂಬದಾಗಿಭಾವಿಸತಕ್ಕದ್ದಲ್ಲ.

ಮಿಲಿಟರಿ, ಅಬಕಾರಿ ಮತ್ತು ಪಬ್ಲಿಕ್‌ವರ್ಕ್ಸ ಯಾನೆ ಮರಮತ್ತು ಬಾಬುಗಳಲ್ಲಿ ಮುಖ್ಯವಾಗಿ ಖರ್ಚು ಜಾಸ್ತಿಯಾಗಿರುತ್ತೆ.

ಮಿಲಿಟರಿ ಇಲಾಖೆಯಲ್ಲಿ ಇಂಪೀರಿಯಲ್ ಸರ್ವಿಸ್ ಕೋರಿ ಎಂಬ ರಿಜಿಮೆಂಟುಗೋಸ್ಕರ ಜರೂರತವಾದ ಉಡುಪು ಮತ್ತು ಜೀನು ಸಾಮಾನುಗಳ ಖರೀದಿ, ಟ್ರಾನ್ಸ್‌ಪೋರ್ಟ್ ಕುದುರೆಗಳ ಖರೀದಿ ಮತ್ತು ದಾಣಾಬಾಗ, ಆಯುಧಗಳ ಮೌಲ್ಯ ಮತ್ತು ಕುಣಿಗಲ್ ಫಾರಂಗಾಗಿ ತೆಗೆದುಕೊಂಡ ಉಡುಗುದುರೆಗಳ ಖರೀದಿ, ಇವುಗಳಗೋಸ್ಕರ ೧ ಲಕ್ಷ ರೂಪಾಯಿಗಿಂತಜಾಸ್ತಿಯಾಗಿಖರ್ಚಾಗಿರುತ್ತೆ.

ಅಬಕಾರಿ ಬಾಬಿನಲ್ಲಿ, ಹೊಸ ಬಂದೋಬಸ್ತಿನ ಪ್ರಕಾರ ಶರಾಬನ್ನು ಸಾಗಿಸುವ ಬಗ್ಗೆಯ, ಚೆಕ್ಕು ಸಿಬ್ಬಂದಿ ಬಗ್ಗೆಯ, ಬೆಂಗಳೂರಿನಲ್ಲಿ ನೀರಿನ ದುರ್ಭಿಕ್ಷ ಕಾಲದಲ್ಲಿ ಭಟ್ಟೀ ಕೆಲಸವು ನಡೆಯುವದಕ್ಕೆ ಆಗದೆ ಇದ್ದ ಸಬಬು ಮದರಾಸು ಪ್ರಾಂತ್ಯದ ನೆಲ್ಲಿಕೊಪ್ಪಂನಿಂದ ಶರಾಬು ಸಾಗಿಸಬೇಕಾಗಿ ಬಂದ ಸಬಬು ಈ ಬಗ್ಗೆ ಭಟ್ಟಿ ಕಂಟ್ರಾಕ್ಟುದಾರರ ಮೇರೀ ಅಂತೆಕೊ ಯವರಿಗೆ ಕೆಲವು ತಿಂಗಳ ಮಟ್ಟಿಗೆ ಹೆಚ್ಚಾದ ಖರೀದಿಯನ್ನು ಕೊಡಬೇಕಾಗಿ ಬಂದದ್ದರಿಂದಲೂ, ೮೬,೮೭೩ ರೂಪಾಯಿ ಜಾಸ್ತಿ ಖರ್ಚಿಗೆ ಕಾರಣವಾಯಿತು.

ಪಬ್ಲಿಕ್ ವರ್ಕ್ಸ್ ಯಾನೆ ಮರಮತ್ ಇಲಾಖೆಯಲ್ಲಿ ಹಿಂದಣ ವರುಷಕ್ಕಿಂತ ೧,೮೯,೦೦೦ ರೂಪಾಯಿ ಜಾಸ್ತಿ ಖರ್ಚಾಗಿರುತ್ತೆ. ಇದರ ಕಾರಣವನ್ನು ಮುಂದೆ ವಿವರಿಸುತ್ತೆ.

*   *   *

ರೈಲ್ವೆ ಬಾಬು ತಪಾಯಿ, ಕಳೆದ ಸಂವತ್ಸರದಲ್ಲಿ ೩೦,೮೪,೧೫೬ ರೂಪಾಯಿಗಳು ಶಿಲ್ಕು ನಿಂತಿತ್ತೆಂಬುವದು ಮೇಲಿನ ಕೋಷ್ಟಯಿಂದ ಕಂಡುಬರುತ್ತೆ. ೧೮೯೧—೯೨ ನೇ ಇಸವಿಯಲ್ಲಿ ಸಂಭವಿಸಿದ್ದ ಅನಾವೃಷ್ಟಿಯ ದೆಸೆಯಿಂದಲೂ, ಬಿರುಬಂದಿ ಬಜಾವಣೆ ದೆಸೆಯಿಂದಲೂ, ಆ ಸಂವತ್ಸರದಲ್ಲಿ ೩,೮೦,೦೦೦ ರೂಪಾಯಿಗಳ ಮಟ್ಟಿಗೆ ಶಿಲ್ಕು ನಿಂತಿತ್ತು. ಇಂಥಾ ವಿಶೇಷ ಸಂಭವವೇನೂ ಇಲ್ಲದೆಯಿದ್ದ ೧೮೯೦—೯೧ ನೇ ಇಸವಿಯಲ್ಲಿ ನಿಂತಿದ್ದ ಶಿಲ್ಕು ೨೨,೧೩,೪೪೯ ರೂಪಾಯಿಯೊಡನೆ ಕಳೆದ ಸಂವತ್ಸರದ ಶಿಲ್ಕನ್ನು ಹೋಲಿಸಿದ್ದಲ್ಲಿ ೮,೭೦,೬೦೭ ರೂಪಾಯಿಗಳು ಜಾಸ್ತಿ ಕಂಡುಬರುತ್ತೆ.

*   *   *

ಮೈಸೂರು—ಹರಿಹರದ ರೈಲ್ವೆಲೈನ್ ಸಂಬಂಧವಾಗಿ ವರುಷಂಪ್ರತಿಯಲ್ಲಿಯೂ ಈ ಕೆಳಗೆ ನಮೂದಿಸಿರುವ ಮೇರೆ ನಷ್ಟಸಂಭವಿಸಿರುತ್ತೆ:—

| | | | ರೂ. |
|---|---|---|---|
| 1887—88 ನೇ ಇಸವಿಯಲ್ಲಿ | | .. | 67,870 |
| 1888—89 | " | ... | 2,95,410 |
| 1889—90 | " | .. | 5,18,817 |
| 1890—91 | " | . | 4,85,189 |
| 1891—92 | " | . | 2,64,902 |
| 1892—93 | " | . . | 3,55,965 |
| | | ಜುಮ್ಲಾ.. | 19,88,153 |

ಒಟ್ಟು ಆದಾಯ ವೆಚ್ಚದ ಫಲಿತಾರ್ಥ.—ಮೇಲೆ ವಿವರಿಸಿರುವಂತೆ ಕಳೆದ ಸಂವತ್ಸರದ ಶಿಲ್ಕು ೩೦,೮೪,೧೫೬ ರೂಪಾಯಿಗಳ ಪೈಕಿ ಮೈಸೂರು—ಹರಿಹರದ ರೈಲ್ವೆ ಲೈನ್ ಬಗ್ಗೆ ಖರ್ಚಾಗಿಂತ ಉತ್ಪತ್ತಿಯಲ್ಲಿ ಕಮ್ಮಿಬಿದ್ದ ಬಗ್ಗೆ ೩,೫೫,೯೬೫ ರೂಪಾಯಿಗಳು, ರೈಲ್ವೆ ಸಾಲಗಳನ್ನು ತೀರಿಸತಕ್ಕ ಬಗ್ಗೆ ಮಾಡಿರತಕ್ಕ ಫಂಡಿಗೆ ೪,೦೦,೦೦೦ ರೂಪಾಯಿಗಳು, ಹೊಸ ರೈಲ್ವೆಗಳ ಬಗ್ಗೆ ೧೮,೯೫,೧೫೮ ರೂಪಾಯಿಗಳು, ಈ ಮೇರೆ ಖರ್ಚಾದ್ದು ಹೋಗಾ ೪,೩೩,೯೩೩ ರೂಪಾಯಿ ಶಿಲ್ಕು ನಿಂತಿತು. ೧೮೯೨ ನೇ ಇಸವಿ ಜುಲೈ ಗುರ್ರೆ ತಾರೀಖಿನಲ್ಲಿ ಹಾಜರಿದ್ದ ೮೯,೩೧,೯೭೯ ರೂಪಾಯಿನ ಒಟ್ಟು ಶಿಲ್ಕಿಗೆ ಮೇಲೆ ಕಂಡ ಮೊಬಲಗನ್ನು ಸೇರಿಸಿದ್ದಲ್ಲಿ ೧೮೯೩ ನೇ ಇಸವಿ ಜುಲೈ ಆಖೈರಿನಲ್ಲಿ ೯೩,೬೬೪,೮೪೭ ರೂಪಾಯಿ ಶಿಲ್ಕು ಹಾಜರಿತ್ತು. ಈ ಪೈಕಿ ೮೩,೨೩,೭೦೦ ರೂಪಾಯಿಗಳು ಸರಕಾರಿ ಪತ್ರಗಳ ರೂಪವಾಗಿಯೂ ಬಾಕೀ ಮೊಬಲಗು ಮದರಾಸ್ ಬ್ಯಾಂಕಿನಲ್ಲಿ ಠೇವಣಿ ರೂಪವಾಗಿಯೂ ಮತ್ತು ಸರಕಾರಿ ಖಜಾನೆಗಳಲ್ಲಿ ನಗದು ರೂಪವಾಗಿಯೂ ಹಾಜರಿತ್ತು. (ಸಶೇಷ)

## ನಮ್ಮಗಳಿಗೆ ಬರತಕ್ಕ ಜಾಡ್ಯಗಳು ಎಂತಹವು.

ರಾತ್ರಿಯಲ್ಲಿ ಕಣ್ಣಿನ ನಿದ್ದೆ ನಮ್ಮಗಳಿಗೆ ಬಿಳುವುದರಿಂದ ಜಾಡ್ಯಗಳು ನಮ್ಮಲ್ಲಿ ಪ್ರವೇಶ ಮಾಡುತವೆ. ಸಾಧಾರಣವಾಗಿ ಮನುಷ್ಯಕೋಟಿಗಳಿಗೆ ಎದೆಯಲ್ಲಿ, ಪಕ್ಕೆಗಳಲ್ಲಿ, ಶೂಲೆಗಳು ಕಾಣುತವೆ. ಆ ಕಾಲಗಳಲ್ಲಿ ಜನರು ಸಾಧಾರಣವಾಗಿ ನಿಂತವರಾಗಿ ವಿಶ್ರಾಂತರಾಗಿ ಬಾಯಲ್ಲಿ ಒಂದು ವಿಧ ವೈಮ, ಇವುಗಳು ಪ್ರಾಯಶಃ ಉದಯಕಾಲದಲ್ಲಿರುತವೆ. ಆಗ, ದಂತಗಳಲ್ಲಿ ನೋವೆ ಆಯುಗುತ್ತ್ತ, ಕಟ್ಟಿಕೊಂಡು ಊರುತವೆ. ಆ ಸಮಯಗಳಲ್ಲಿ ಆದಾರವು ಕಮ್ಮಿ, ಗರ್ಭದಲ್ಲಿ ಒಂದು ಬಗೆ ಭಾರವು, ನೆಳವು ಮಳೆಗಳಲ್ಲಿ ವ್ಯಸನ, ನಲ್ಲದ ಅಸ್ವಭಾವದಲ್ಲಿ ಸೂಲ, ಭೋಜನದಲ್ಲಿ ಅತೃಪ್ತಿಯು, ಕಣ್ಣುಗಳು ಆಳಕ್ಕೆ ಎಳೆದೊಡು ಇರೋದು, ಕೈ ಕಾಲುಗಳು ಪಾದಗಳು ಶೀತಲವು. ಆ ಮೇಲೆ ಕೆಮ್ಮು ಆರಂಭಿಸಿ ಸ್ವಲ್ಪ ತಿಂಗಳಾದನಂತರ ಆ ಕೆಮ್ಮಿನಿಂದ ಬಾಯಲ್ಲಿ ಸಳುರುವವರೆಗ ಗಳ್ಳೆಸ ಕೇಕೆಯೆನೋದು. ಇತ್ಯಾದಿ ಕಾರಣಗಳಿಂದ ಚಿಂತ್ಯನ್ನನುವಿಕೇಸ ಅಯಾಸವನ್ನು ಬಿಳೋದು, ನಿದ್ರಾಭಂಗವು, ಆ ಕಾರಣದಿಂದ ಜಾಡ್ಯಗ್ರಸ್ತನಿಗೆ ಒಂದು ಬಗೆ ಪಿತ್ತದ ಶೋಷವು, ಮದ್ದಿನ ಮನೋವ್ಯಥೆ, ಕೆಟ್ಟ ವ್ಯಸನವುಳ್ಳ ಚಿಂತ ಉಂಟು ಮಾಡುತವೆ. ಇವಲ್ಲದವಾಗೆ ತಲೆಯಲ್ಲಿ ವಿಶೇಷ ದ್ಯಾಕವಾದ ತಿರುಗುದು, ಆಕಸ್ಮಾತ್ತಾಗಿ ಸೆಳುವ ಕಾಣುತ್ತ ಲಾಗುತವೆ. ಆ ತರುವಾಯ ಗರ್ಭದಲ್ಲಿ ಕೆವಲಗಳು ಬಿಗಿದು, ಮಲಬದ್ಧ ನೊವಿ, ಶರೀರದ ಚರ್ಮವನ್ನು ಬಿಣನಿಸಿ, ಅಬ್ಬಣವಾಗಿ, ರಕ್ತವನ್ನು ಮಂದವಾಗಿ, ಶರೀರದಲ್ಲಿ ನಬ್ಬಗ ರಕ್ತವು ಓಡದೆ, ಕಣ್ಣುಗಳಲ್ಲಿರುವ ಸಾಧಾರಣವಾದ ಬಿಳುಪನ್ನು ಕಮ್ಮಿ ಮಾಡಿ, ಕಣ್ಣುಗಳಲ್ಲಿ ಕಳಗು ಚುಕ್ಕೆಗಳು, ಅಲ್ಲಾ ಚಮನವು ಕಮ್ಮಿ, ಕ್ಷೀದ ಕೆಡಿಮೆಯಾಗಿ, ಅದರಲ್ಲಿ ವಿಸೇಷವಾದ ಬಣ್ಣ, ಸಾಧಾರಣವಾಗಿ ನುಣ್ಣವು ಬಾಲದ ಒಳಯಿಂದ ಅದಗಳು ಸೇರಿ ವ ಪತ್ರವ [illegible] ಗೆ ಮಾಡುವವೆ. ಆ ಕಾರಣಗಳಿಂದ ಭುಜಸಿದ ಅನ್ನವನ್ನು ಉಸುರೊರು, ಬಾಜಿಸಿದ ಅನ್ನವು ಬಾಯಲ್ಲಿ ಕೆಟ್ಟ ಸ್ವಾದುಮಾಗಿದರುವೆ, ಮತ್ತು ಎದೆಯಲ್ಲಿ ಅದುರು, ಕಣ್ಣಿನ ದೃಷ್ಟಿ ಕೆಡಮ, ಕಣ್ಣುಗಳಲ್ಲಿ ಮಚ್ಚೆಗಳು, ವಿಶೇಷವಾಗಿ ಕಳಗದಲ್ಲಿ ಬಲದು ಕವಿನೋವ ಇತ್ಯಾದಿ ಚಿಹ್ನೆಗಳು ಮಾಡವಹ್ನು ಕ್ರಮೇಣ ಕಾಣುವವೆ. ಈ ಜಾಡ್ಯದ ಚಿಹ್ನೆಗಳು ಅನೇಕವಿಧವಾಗಿ ಮುಕ್ಕಾಲಿನಷ್ಟಗ ಜನಕೋಟಿಗೆ ಬಾಧಕವಾಗಿ ಕಾಣುತವೆ ಈ ಜಾಡ್ಯಗಳನ್ನು ವೈದ್ಯಶಾಸ್ತ್ರಗಳು ನಿಷ್ಪತ್ತಿ ಮಾಡೋ ಧನಿ ಮಾಡಲಿಕ್ಕೆ ತಿಳಿಯದೆ ಒಂದುವಿಧವಾದ ಜಾಡ್ಯಕ್ಕೆ ಮತ್ತೊಂದುವಿಧ ಚಿಕಿತ್ಸೆ ಮಾಡುವರು, ಇತ್ಯಾದಿ ಕಾರಣಗಳಿಂದ ಈ ಜಾಡ್ಯಗಳು ಸ್ವಸ್ಥವಾಗದೆ ಹಾಗೆ ಇರುತವೆ. ಇತ್ಯಾದಿ ಜಾಡ್ಯಗಳಿಗೆ ನುಯಿರಿನವಾದ ಔಷಧವು ಗರ್ಭದಲ್ಲಿ ಚಿಕಿತ್ಸೆ ಮಾಡಿಗ ರಕ್ತದಲ್ಲಿ ಇವುಗಳನ್ನು ಸ್ವಸ್ಥ ಮಾಡುವವೆ ವೈದ್ಯರು ಸಾಧಾರಣವಾಗಿ ಅಜೀರ್ಣವ್ಯಾಧಿಗೆ ಶಸ್ತ್ರಚಿಕಿತ್ಸೆ ಮಾಡದೆಹಾಗೆ ಮತ್ತೊಂದು ವಿಧವಾದ ಚಿಕಿತ್ಸೆ ಮಾಡುವನ್ನು ಥ ರೀತಿಯಿಂದ ಜಾಡ್ಯಗಳು ಸ್ವಸ್ಥವಾಗದೇ ಇರುತವೆ.

ಮುಂದೆ ವಿವರಿಸಿ ಮಾಡಿಗ ಜಾಡ್ಯಗಳನ್ನು ನಿವಾರಣೆ ಮಾಡಿ ಕಾಂತಿ ಮಾಡವನ್ನು ಔಷಧವು ತಾಯಿಗಳಿಗಾಲು ಕಷಾಯವು ಈ ಕಷಾಯವನ್ನು ಕ್ರಮವಾಗಿ ಸೇವನ ಮಾಡುವದರಿಂದ ವ್ಯಾಧ್ಯ ಲೋಪಗಳನ್ನು ಯುವತ್ತು ಮುಂತ್ರವುಗ ಸಾಯುವು ಮಾಡಿ ಶರೀರಕ್ಕೆ ಬಲವನ್ನು ಕೊಟ್ಟು ಆಲಸ್ಯ ವಿಲ್ಲದವಾಗೆ ಸ್ವಸ್ಥ ಮಾಡುತವೆ.

ಈ ಸೀಗಲ್ ಕಷಾಯದ ಔಷಧವು ಕೆಮಿಸ್ಟು ಅಂಡ್ ಡ್ರಗ್ಗಿಸ್ಟು ಅಂಗಡಿಗಳಲ್ಲಿ ವಿಕ್ರಯಕ್ಕೆ ಸಿಕ್ಕುತವೆ.

W. D.

---

ಶ್ರೀಮನ್ ಮಹಾರಾಜರವರ ಸರಸ್ವತೀಪ್ರಸಾದ ಪಾಠಶಾಲೆಯ ವಿದ್ಯಾರ್ಥಿಗಳ ಪರೀಕ್ಷಾ ವೃತ್ತಾಂತ ಪ್ರದರ್ಶನಪತ್ರಿಕಾ.

ಈ ಸಂವತ್ಸರ ವಿದ್ಯಾ ಪರೀಕ್ಷೆಗೆ ಹೋದವರು ೧೧. ಕಾವ್ಯಕ್ಕೆ ಒಬ್ಬರೂ ಕಳ್ಳದು, ೭. ಸಾಹಿತ್ಯಕ್ಕೆ ಸೂರುವಾಯು, ಅದ್ವೈತ ವೇದಾಂತಕ್ಕೆ ಒಬ್ಬರು, ತರ್ಕಶಾಸ್ತ್ರಕ್ಕೆ ಒಬ್ಬರು, ವ್ಯಾಕರಣಕ್ಕೆ ಆರುಸ್ಥಾ, ಧರ್ಮಶಾಸ್ತ್ರಕ್ಕೆ ಸಾಲ್ವರು, ಸಾಹಿತ್ಯಕ್ಕೆ ನಾಲ್ವರು, ಇವರುಗಳಲ್ಲಿ ಉತ್ತೀರ್ಣರಾದವರು ೧೪ ಮಂದಿ ಇದೇ ಪಾಠಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದವರು ಇಬ್ಬರು; ಧರ್ಮಶಾಸ್ತ್ರದಲ್ಲಿ ವ್ಯಾಸಂಗ ಮಾಡುತಲಿದ್ದವರು ಒಬ್ಬರು; ಪಂಡಿತರತ್ನಂ ಮಹಾವಿ ಕಸ್ತೂರಿ ರಂಗಾಚಾರ್ಯರಲ್ಲಿ ವ್ಯಾಸಂಗ ಮಾಡುತಲಿದ್ದವರು ಮೂವರು, ಸ್ಥಲಾಂತರದಿಂದ ಬಂದವರಿಬ್ಬರು.

೨. ಈ ಸಂವತ್ಸರದಲ್ಲಿ ಮಹಾರಾಜರು ಸನ್ನಿಧಾನದಿಂದ ಅಪ್ಪಣೆಯನ್ನು ಪಡೆದು ಪ್ರಕಟಿಸಿದ ನಿಬಂಧನ ಪತ್ರಿಕೆಯಲ್ಲಿ ಪ್ರಕಟಿಸಿರುವಂತೆ ಈ ಸಂವತ್ಸರದಲ್ಲಿ ಪರೀಕ್ಷಿಸಲ್ಪಟ್ಟವರು ಹಿಂದಿನಂತೆ ಪುಸ್ತಕಗಳನ್ನು ನೋಡುವ ಪ್ರಶ್ನೆಗಳಿಗೆ ಲಿಖಿತ ಮೂಲಕವಾಗಿ ಪ್ರತ್ಯುತ್ತರವನ್ನು ಕೊಟ್ಟಿರುತ್ತಾರೆ, ಆದರೆ ಇವರುಗಳ ಶಾಸ್ತ್ರಾರ್ಥಸ್ವತಂತ್ರ ಸಾಮರ್ಥ್ಯವನ್ನು ಪ್ರಾಶಸ್ತ್ಯವನ್ನೂ ತಿಳಿಯುವದಕ್ಕಾಗಿ ಮಾತ್ರವೇ ಪರೀಕ್ಷೆಯೂ ಪ್ರತ್ಯೇಕವಾಗಿ ಮಾಡಿಸಲ್ಪಟ್ಟು ಅದರ ಫಲ ಸಂಖ್ಯೆಯನ್ನು ಲಿಖಿತಮೂಲಕ ಪರೀಕ್ಷಾಫಲ ಸಂಖ್ಯೆಯೊಡನೆ ಸೇರಿಸಿ ಇವರುಗಳ ತಾರತಮ್ಯವು ನಿರ್ಣಯಿಸಲ್ಪಟ್ಟಿರುವದು.

೩. ಪಾಠಶಾಲೆಯಲ್ಲಿ ಶಾಸ್ತ್ರಾರ್ಥದಲ್ಲಿ ಉತ್ತೀರ್ಣರಾದವರು ಶಾಸ್ತ್ರಾಧ್ಯಯನವನ್ನು ಮುಂದೆ ನಡೆಸುವದಕ್ಕಾಗಿ ಕೊಡುವ ವಿದ್ಯಾರ್ಥಿವೇತನವನ್ನು ನಿರ್ಣಯಿಸಿ ಮಹಾರಾಜರವರ ಸನ್ನಿಧಾನದಿಂದ ಈ ಸಂವತ್ಸರ ವ್ಯವಸ್ಥೆ ಮಾಡಲ್ಪಟ್ಟಿರುತ್ತದೆ. ಆ ನಿಬಂಧನೆಯು ಈ ಕೆಳಗಿನಂತಿದೆ:—

ಪರೀಕ್ಷಾ ಗ್ರಂಥಗಳ ಪ್ರತಿ ಒಂದರಲ್ಲಿಯೂ, ಶ್ಲಾಘ್ಯವಾದ ಫಲ ಸಂಖ್ಯೆಯಲ್ಲಿ ನೂರಕ್ಕೆ ೭೦ಕ್ಕೆ ಕಡಮೆ ಇಲ್ಲದ ಸಂಖ್ಯೆಯನ್ನು ಪಡೆದು ಒಟ್ಟು ಸಂಖ್ಯೆಯಲ್ಲಿ ೫೦ ಕ್ಕೆ ಕಡಮೆ ಇಲ್ಲದ ಸಂಖ್ಯೆಯನ್ನು ಸಂಪಾದಿಸುವವರು ಎರಡನೇ ತರಗತಿ (ಸೆಕೆಂಡ್ ಕ್ಲಾಸ್) ಯವರೆಂತಲೂ, ೮೦ಕ್ಕೆ ಕಡಮೆ ಇಲ್ಲದ ಫಲ ಸಂಖ್ಯೆಯನ್ನು ಪಡೆದವರು ಉತ್ತಮ ಶ್ರೇಣಿಯಲ್ಲಿ ಸೇರತಕ್ಕವರೆಂತಲೂ, ಉತ್ತಮ ವರ್ಗದಲ್ಲಿ ಸೇರಿದ ಮಾಣವಕರಿಗೆ ತಕ್ಕ ಸ್ಥಾನದಲ್ಲಿರುವ ವಿದ್ಯಾ ಸಂಭಾವನೆ ಮಾತ್ರವಲ್ಲದೆ ವಿಶೇಷ ಸನ್ಮಾನರೂಪವಾದ ಶಾಲುಜೋಡಿಯೂ ಕೊಡಲ್ಪಡುವದೆಂತಲೂ ನಿರ್ಣಯಿಸಲ್ಪಟ್ಟಿರುತ್ತದೆ.

ಮೇಲ್ಕಂಡ ನಿಯಮವನ್ನನುಸರಿಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದವರ ಹೆಸರು, ತರಗತಿಯು, ಬಹುಮಾನವು ಸಹ ಇದರ ಕೆಳಗೆ ಪ್ರಕಟಿಸಲ್ಪಟ್ಟಿರುತ್ತದೆ.

ಕಾವ್ಯಗಳಲ್ಲಿ

| | | |
|---|---|---|
| ಕೃಷ್ಣಾಚಾರ್ಯ | ೧ನೇ ತರಗತಿ | ರೂ ೬೦ |
| ಬಾದರಾಯಣರ ಸುಬ್ರಹ್ಮಣ್ಯಶಾಸ್ತ್ರಿ | ೧ನೇ ತರಗತಿ | ೬೦ |

ಸಾಹಿತ್ಯದಲ್ಲಿ

| | | |
|---|---|---|
| ಸುಬ್ರಹ್ಮಣ್ಯಶಾಸ್ತ್ರಿ | ೨ನೇ ತರಗತಿ | ೫೦ |

ಅದ್ವೈತ ವೇದಾಂತದಲ್ಲಿ

| | | |
|---|---|---|
| ರಾಘವೇಂದ್ರರು | ೧ನೇ ತರಗತಿ | ೧೦೦ |

ಧರ್ಮಶಾಸ್ತ್ರದಲ್ಲಿ

| | | |
|---|---|---|
| ಕೌಶಿಕ ನರಸಿಂಹಶಾಸ್ತ್ರಿ | ೨ನೇ ತರಗತಿ | ೧೨೫ |

ತರ್ಕಶಾಸ್ತ್ರದಲ್ಲಿ

| | | |
|---|---|---|
| ಕೇಶವ ರಂಗನಾಥಯ್ಯಂಗಾರ್ | ೧ನೇ ತರಗತಿ | ೧೫೦ |
| ಇವರಿಗೆ ಶಾಲುಜೋಡಿ ಸಹ. | | |
| ಕೊಂಡಾಪುರಂ ಕೃಷ್ಣಮಾಚಾರ್ಯರು | ಡಿಟೊ | ೧೫೦ |
| ಇವರಿಗೆ ಶಾಲುಜೋಡಿ ಸಹ. | | |
| ಶ್ರೀರಂಗಂ ಕೃಷ್ಣಮಾಚಾರ್ಯರು | ೨ನೇ ತರಗತಿ | ೧೨೫ |
| ಸೋಮಸಂದ ಸುಬ್ಬಾಶಾಸ್ತ್ರಿ | ಡಿಟೊ | ೭೫ |

ವ್ಯಾಕರಣದಲ್ಲಿ

| | | |
|---|---|---|
| ಅಣ್ಣ ಸುಬ್ರಹ್ಮಣ್ಯಶಾಸ್ತ್ರಿ | ೨ನೇ ತರಗತಿ | ೧೨೫ |
| ಕಾಟ ವೆಂಕಟಾಚಾರ್ಯರು | ಡಿಟೊ | ೧೨೫ |
| ಲಕ್ಷ್ಮೀನಾರಾಯಣಾಚಾರ್ಯ | ಡಿಟೊ | ೭೦ |

ಸಾಹಿತ್ಯದಲ್ಲಿ

| | | |
|---|---|---|
| ಹಾಸನದ ಶೇಷಶಾಸ್ತ್ರಿ | ೧ನೇ ತರಗತಿ | ೧೫೦ |
| ಇವರಿಗೆ ಶಾಲುಜೋಡಿ ಸಹ. | | |
| ವೀರಣಗೆರೆ ಶ್ರೀಕಂಠಶಾಸ್ತ್ರಿ | ಡಿಟೊ | ೧೫೦ |
| ಇವರಿಗೆ ಶಾಲುಜೋಡಿ ಸಹ. | | |

೧೫೯೫

ಯೇಲುಕೋಟೆ ತಿರುನಾರಾಯಣಯ್ಯಂಗಾರ್ಯರವರು ಮತ್ತೊಂದು ಭಾಗದ ಪರೀಕ್ಷೆಯನ್ನು ಕೊಟ್ಟಿದ್ದರಿಂದ ಕಂಸ್ಥೆ ಸಂಭಾವನೆ ಪಡೆದರು.

ಕಾಲಿಂತಿ ೧೪ ಮಂದಿ ತೇರ್ಗಡೆಯಾಗಿರುತ್ತಾರೆ.

೪. ಪಾಠಶಾಲೆಯ ನಿಯಮಿತ ಪರೀಕ್ಷೆಗಳಿಗೆ ಸಹಾಯಾರ್ಥವಾಗಿ ದೇಶಾಂತರದಿಂದ ಇಬ್ಬರು ಪಂಡಿತರು ಬಂದರ ಕಾಂಚೀಪುರಂ ಸುಬ್ರಹ್ಮಣ್ಯಾಚಾರ್ಯರು, ಸುಗ್ಗರ ನಾರಾಯಣಶಾಸ್ತ್ರಿಗಳು ಇವರಿಬ್ಬರು ಆಹ್ವಾನಿಸಲ್ಪಟ್ಟ ಮೂಲಕವಾಗಿ ಕರೆಸಲ್ಪಟ್ಟಿರುತ್ತಾರೆ. ಇವರು ಪ್ರಸಿದ್ಧ ಪಂಡಿತರಾಗಿರುವದರಿಂದ ಇವರೊಬ್ಬೊಬ್ಬರಿಗೆ ೧೫೦ ರೂಪಾಯಿಗಳು ಮತ್ತು ಶಾಲುಜೋಡಿಯು, ಸಹ ಸನ್ಮಾನವಾಗಿ ಕೊಡಬೇಕೆಂದು ನಿರ್ಣಯಿಸಲ್ಪಟ್ಟಿರುತ್ತದೆ.

೫. ಈ ಪುರದಲ್ಲಿ ಶಾರದಾವಿಲಾಸ, 'ಸದ್ವಿದ್ಯಾ ಪಾಠಶಾಲೆ, ಎಂಬ ಪಾಠಶಾಲೆಯಲ್ಲಿಯೂ ಚಂಪು ಮೊದಲಾದ ಗ್ರಂಥಗಳ್ ವಿಶೇಷವಾಗಿ ಪಾಠ ನಡೆಯುತ ಇದ್ದದರಿಂದ ಈ ಕಾಲೇಜಿನಲ್ಲಿ ಆ ತರಗತಿಗಳು ಅನಾವಶ್ಯಕವೆಂದು ತೆಗೆಯಲ್ಪಟ್ಟವು ಈ ಬಗೆ ಸದರಿ ಪಾಠಶಾಲೆಗಳಲ್ಲಿ ಲೋಪದ ಸೇಂಡರಿ ಪರೀಕ್ಷೆಗೆ ಅನುಕೂಲವಾದ ಪಾಠಗಳೇ ವಿಶೇಷವಾಗಿ ಹೇಳಲ್ಪಡುವವೆಂದು ತಿಳಿಯಬಂದದ್ದರಿಂದ ಪೂರ್ವದಂತೆಯೇ ಚಂಪು ಮತ್ತು ಕಾವ್ಯ ತರಗತಿಗಳನ್ನು ಇದಕ್ಕೆ ಸಂಬಂಧಪಟ್ಟ ಕನ್ನಡ ತರಗತಿಯನ್ನು ಸಹ ಈ ಕಾಲೇಜಿನಲ್ಲಿ ಇಡಬೇಕೆಂದು ವ್ಯವಸ್ಥೆ ಮಾಡಲ್ಪಟ್ಟಿರುತ್ತದೆ.

೬. ಪರೀಕ್ಷಿಸಲ್ಪಡತಕ್ಕವರಿಗೆ ಪರೀಕ್ಷಾ ಕಾಲದಲ್ಲಿ ಪುಸ್ತಕಗಳನ್ನು ನೋಡುವೇನೆ ಪರೀಕ್ಷೆ ಕೊಡಬೇಕೆಂದು ನಿಬಂಧನೆಯು ಜಾರಿಗೆಯಲ್ಲಿ ಬರುವದಕ್ಕೆ ಇದೇ ಪ್ರಥಮ ಸಂವತ್ಸರವಾಗಿದ್ದಾಗ್ಯೂ ಈ ವಿದ್ಯಾರ್ಥಿಗಳು ಅಧಿಕ ಶ್ರಮದಿಂದ ವಿಶೇಷ ವ್ಯಾಸಂಗ ಮಾಡಿ ತೃಪ್ತಿಕರವಾಗಿ ಪ್ರತ್ಯುತ್ತರಗಳನ್ನು ಕೊಟ್ಟಿರುವಂತೆ ಪರೀಕ್ಷಕರು ತಿಳಿಸಿದರು, ಅದ್ದರಿಂದ ಈ ಸಂಗತಿಯನ್ನು ಮಹಾಸನ್ನಿಧಾನದಲ್ಲಿ ವಿಜ್ಞಾಪಿಸಿಕೊಂಡಿರುತ್ತೇನೆ.

ಮೈಸೂರು, ೨೦—೧೦—೯೩. } ಎ. ಶ್ರೀನಿವಾಸಾಚಾರ್ಯ, ಮಹಾರಾಜರ ಸೂಪರ್‌ಇಂಟೆಂಡೆಂಟ್.

## THE MYSORE GAZETTE.
## ಮೈಸೂರು ಗೆಜೆಟ್.

ಶ್ರೀಮನ್ ಮಹಾರಾಜರವರ ಸರ್ಕಾರದ ಚೀಫ್ ಸೆಕ್ರೆಟರಿಯವರ ಸ್ವಾರದಿಂದ ಹೊರಡುವ ಪ್ರಕಟನೆಗಳು.

ನಂ॥ ೩೬೮—೮. ೯. ೩೯—೯೩ ತಾ॥ ೧೬ ನೇ ಅಕ್ಟೋಬರ್ ೧೮೯೩ —ಮೈಸೂರ್ ಸರ್ವೀಸ್ ರೆಗ್ಯುಲೇಷನ್‌ಗಳ ೧೮೮ ನೇ ಆರ್ಟಿಕಲ್ ಅನುಸರಿಸಿ, ಹಾಸನ ತಾಲ್ಲೂಕ್ ಅಮಲ್ದಾರ್ ಟಿ. ಚೊಕ್ಕಣ್ಣ, ಬಿ. ಎ ಯವರು ಅವರು ಗೊರದುವ ತಾರೀಖ್ ಮೊದಲು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

೨ ಗ್ರಾಮದ ಸಬ್ ತಾಲ್ಲೂಕ್ ಡೆಪ್ಯುಟಿ ಅಮಲ್ದಾರ್ ವೆಂಕಟಸುಬ್ರಮಣ್ಯಯ್ಯನವರು, ಟಿ. ಚೊಕ್ಕಣ್ಣ ಬಿ ಎ ಯವರು ರಜಾಮೇಲೆ ಗೈರ್ಹಾಜರಾಗಿರುವ ಕಾಲದಲ್ಲಿ ಅಥವಾ ಮುಂದೊಂದು ಹುಕುಂ ಕೊಡಲ್ಪಡುವ ವರೆಗೆ, ಹಾಸನ ತಾಲ್ಲೂಕು ಚಾರ್ಜಿನಲ್ಲಿರುವರು.

೩ ಹಾಸನ ತಾಲ್ಲೂಕ್ ಶಿರಸ್ತೇದಾರ್ ವೆಂಕಟಕೃಷ್ಣಯ್ಯನವರು ಹಂಗಾಮಿಯಾಗಿ, ಗ್ರಾಮದ ಸಬ್ ತಾಲ್ಲೂಕ್ ಡೆಪ್ಯುಟಿ ಅಮಲ್ದಾರ್ ೩ ನೇ ಕ್ಲಾಸ್ ನ್ಯಾಯಪಟ್ಟಿಯಾಗಿ ಕೆಲಸ ನೋಡುವಂತೆ ನೇಮಕಮಾಡಲ್ಪಟ್ಟಿರುತ್ತಾರೆ.

ನಂ॥ ೩೬೬—೮. ೧೮೯೩ —ಮೈಸೂರ್ ಸರ್ವೀಸ್ ರೆಗ್ಯುಲೇಷನ್‌ಗಳ ೧೮೮ ನೇ ಆರ್ಟಿಕಲ್ ಅನುಸರಿಸಿ, ಮೈಸೂರು ಡಿವಿಷನ್ ಸರ್ವೆ ಸಬ್ ಅಸಿಸ್ಟೆಂಟ್ ಸುಪರಿಂಟೆಂಡೆಂಟ್ ಆದ ಮಿ॥ ಕೃಷ್ಣೋಜಿರಾವ್ ಲೋಕರೆ ವಲ್ಲ್ಯಾಪ್ ನಾಯಕರವರು ೧೮೯೩ ನೇ ಇಸವಿ ನವಂಬರ್ ೬ನೇ ತಾರೀಖ್ ಮೊದಲು, ಅಥವಾ ಅವರು ಪ್ರವೇಶಗಾಗಿಸಿಕೊಳ್ಳುವ ತಾರೀಖ್ ಮೊದಲು, ೨ ತಿಂಗಳು ೧೨ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ

ಮೊತ್ತಾಂ ನಂ॥ ೧೦೮, ತಾ॥ ೨೩ ನೇ ಅಕ್ಟೋಬರ್ ೧೮೯೩ —ಚಿತ್ರದುರ್ಗ ಡಿಸ್ಟ್ರಿಕ್ಟ್, ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮಿ॥ ಸೈಯದ್ ಅನ್ವರ್ ಹುಸೇನ್ ಯವರು, ಟಿ॥ ಡಿ. ಎ. ಜೋಶೀ ಯವರು ರಜಾಮೇಲಿರುವ ಕಾಲದಲ್ಲಿ ಅಥವಾ ಮುಂದೊಂದು ಹುಕುಂ ಕೊಡುವ ವರೆಗೆ, ಚಿತ್ರದುರ್ಗ ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂಟಾಗಿ ಕೆಲಸ ನೋಡುವಂತೆ ನೇಮಕಮಾಡಲ್ಪಟ್ಟಿರುತ್ತಾರೆ

## EXTRACTS.

ಮುಂಬೈ ಪತ್ರದಿಂದ ಧಾರಾವಿ ಎಂಬ ಸ್ಥಳದಲ್ಲಿ ಮುಸಲ್ಮಾನರ ದ್ವೇಷಕ್ಕೆ ಈಡಾದವರು ಹಿಂದೂಗಳಲ್ಲ ಆದರೆ ಹಿಂದೂ ಕ್ರಿಸ್ತಿಯಾನರು. ಧಾರಾವಿಯಲ್ಲಿ ರಮೀಜ ಕ್ರಿಸ್ತರ ಗೋರಿಸ್ಥಳ ಒಂದು ಸಣ್ಣ ಗುಡಿ ಕಟ್ಟಿದೆ. ಅಲ್ಲಿ ಈ ಗುಡಿ ಪೂಜಾ ಕ್ರಿಸ್ತಸ್ತರು ಪ್ರಾರ್ಥನೆಗಾಗಿ ಕೂಡುತ್ತಾರೆ. ಘಂಟೆ ಬಾರಿಸಿ ಜನರನ್ನು ಪ್ರಾರ್ಥನೆಗೆ ಕರೆಯುವ ಕ್ರಿಸ್ತ ಪದ್ಧತಿ ಪ್ರಕಾರ ಈ ಗುಡಿಯಲ್ಲಿದರೂ ಎದರು ಪದುಷನ್ ಪ್ರಾರ್ಥನೆಯ ಬಾರಿಸುವ ಕ್ರಮ ನಡೆಯುತಿದೆ. ಮುಸಲ್ಮಾನರ ರಲ್ಲಿ ಮುಕ್ಕೆಕೊಂಡಿರುವ ಗುಡಿಯ ಮುಂದ್ಗಡೆ ಮಸೀದಿ ಸಲ್ಮಾನರು ತಮಗೆ ತೊಂದರೆಯಂತ ಹೇಳುತಿದೆ. ಮೊಹರಂ ಹಬ್ಬ ಘಂಟೆ ಬಾರಿಸಕೂಡದೆಂದ ಆಗುಡಿಯ ಕೆಲಸವನ್ನು ನೋಡುವವರಿಗೆ ಎಷ್ಟು ಬಿಟ್ಟು ಹೇಳಿದರೆಂತೆ ಮತ್ತು ಈ ಎಚ್ಚರಿಕೆಗೆ ಮನಸ್ಸು ಕೊಡದಿದ್ದರೆ, ಗುಡಿಯಮೇಲೆ ಬಿದ್ದು ಗಲ್ಲೆ ನಾಶಮಾಡಲೂ ಕೂಡ ಆ ಮುಸಲ್ಮಾನರು ಹುಂಡಿ ಸೂಚನೆ ಕೊಟ್ಟರಂತೆ. ಸದರಿ ಗುಡಿಯವರು ಈ ಸಂಗತಿಯನ್ನು ಪೋಲೀಸಿನವರಿಗೆ ತಿಳಿಸಿದ್ದು ಪೋಲೀಸಿನವರ ಸಹಾಯದಿಂದ ಪ್ರಾರ್ಥನೆ ನಡೆಸಿದರಂತೆ, ದರುಹಾಯ ಪೋಲೀಸಿನವರು ಕೂಡ ಅನ್ನು ಘಂಟೆ ಬಾರಿಸಕೂಡದು ಬಾರಿಸಿದರೆ ಆಮೇಲೆ ಕಷ್ಟ ಉಂಟಾಗುವದೆಂತ ಆ ಗುಡಿಯ ಜನರಿಗೆ ತಿಳಿಸಿದರಂತೆ. ಈ ಸಂಗತಿ ಪೋಲೀಸಿನವರ ದಾಖಲಮೇಲೆ ಬರುತ್ತಿದ್ದರೆ ಘಂಟೆ ಬಾರಿಸಿ ಪ್ರಾರ್ಥನೆ ನಡೆಸಲಿಕ್ಕೆ ಎಲ್ಲಿಂದ ಧೈರ್ಯ ಬಂದೀತು, ಹೀಗಾಗಿ ಆ ಗುಡಿಯಲ್ಲಿ ಪ್ರಾರ್ಥನೆಯೇ ಈಗ ನಡೆಯುವದಿಲ್ಲವಂತೆ —ಕ. ಸು.

---

ಇಲ್ಲಿ ಮರ್ಹೇ ಜನರಿಗಾಗಿಯೋ ಒಂದು ಔಷಧಾಲಯವನ್ನು ಸ್ಥಾಪಿಸುವ ವಿಚಾರವು ನಡೆದಿದೆ. ಸರ್ದಿನ್ ಷಾ ಪಾರ್ಸೀ ಜೀಜೀಭಾಯರು ತಮ್ಮ ತಂದೆಯವರು ಈ ಕೃತ್ಯಕ್ಕಾಗಿ ಇಟ್ಟ ಸುಮಾರು ೭೫,೦೦೦ ರೂಪಾಯಿಗಳನ್ನು ಮತ್ತು ತಮ್ಮ ಕೈಯಿಂದ ೨೫,೦೦೦ ರೂಪಾಯಿಯನ್ನು ಹಾಕಿ ಒಟ್ಟು ಒಂದು ಲಕ್ಷ ರೂಪಾಯಿ ಮಾಡಿ ಈ ಕೆಲಸಕ್ಕೆ ಕೊಡುತ್ತೇವೆಂತ ನಿಶ್ಚಯಿಸಿ ಹಿರಿಯಕ್ಷ ಮೆಹ್ತಾ ಎಂ. ಎ. ಪಾರಿಸ್ ರು ತ್ರಿಸ್ಕರಿಯ ಗೃಹಸ್ಥರ ಸಭೆಯನ್ನು ಸೇರಿಸಿ ಇದಂ ಕುರಿತು ಪ್ರಸ್ತಾಪ ಮಾಡಿದರು. ಈ ಪ್ರಸ್ತಾಪದಲ್ಲಿ ಸಹಿಯಿರುವರು ಸರಕಾರದವರ ಇದಕ್ಕಾಗಿ ಬೇರೆ ಒಂದು ಸ್ಥಳ ಕೊಡಬೇಕು, ಮತ್ತು ಆ ವೈದ್ಯಶಾಲೆಗೆ ತಮ್ಮ (ಅಂದರೆ ಸರ್ಕಾರದವರ) ತಂದೆಯವರಿಗೆ ಸರ್ ಕಾವಸ್‌ಜೀ ಜೀಜೀಭಾಯಿ ನಾಮಧೇಯ ಗೃಹಸ್ಥರವರ ಹೆಸರು ಇಡಬೇಕು, ಮತ್ತು ಅಲ್ಲಿ ಔಷಧೋಪಚಾರ ಬರೇ ಧರ್ಮಾರ್ಥವಾಗಿ ಆಗಬೇಕು ಎಂತ ಷರತ್ತುಗಳು ಮಾಡಿರುತ್ತಾರೆ. ಅದ್ರಕಾರ ಈ ಸಭೆಯು ಸರ್ಕಾರವನ್ನು ಪ್ರಾರ್ಥಿಸುವದು, ಈ ಔಷಧಶಾಲೆ ಕಟ್ಟುವದಕ್ಕಾಗಿ ಸ್ಥಳ ಸಂಬಂಧದಲ್ಲಿ ಸರ್ಕಾರದವರಿಗೆ ಅರ್ಜಿ ಮಾಡಿದ್ದಾರೆ. ಸೋದರರ ಇವರ ಧರ್ಮ ಕೃತ್ಯಗಳು, ಇದನ್ನು ಬಿಟ್ಟರೆ ಹೀಗೆ ಒಟ್ಟಾರೆ, ಒಬ್ಬಿಲ್ಲ ಒಂದೇನಾದರೂ ಮಾಡುತಲೇ ಇರುತ್ತಾರೆ. ಆದ ನಮ್ಮ ಹಿಂದುಜನರೊಳಗೇನಾದರು ಇಂಥ ಕಾರ್ಯಗಳ ಕಡೆ ಆದವು ಆಗುತಿರುತ್ತವೋ ? ಒಂದು ಪಕ್ಷಕ್ಕೆ ಹಿಂದೂ ಜನರಂತೆ ಇವರದು ಕೃತ್ಯಗಳು ಸೃಷ್ಟಿಗೆ ಬೀಳುತಿರುವದು, ಇವರ ಅಷ್ಟ ನಮ್ಮವರಿಗೆ ಬರತಕ್ಕದಾದ ಪ್ರಯೋಜನ ಕಮ್ಮಿ ನೀಡುವವರ ಕೈಯಿಂದಾದಂಥಾದ್ದು. ಈ ಇಂಗ್ಲಿಷ ವಿದ್ಯೆಯನ್ನು ಕಲಿತು ಹಿಂದೆಗೆ ಹಾಕಿದರೂ ಯಾರ ದೇಶಾಭಿಮಾನವನ್ನು ಕಲಿಸುವವರಿಗೆ ತಾಗಿನ ಕಾಲದಲ್ಲಿ ಇಂಥಾ ಸ್ವದೇಶ ಹಿತದ ಬಾಧದಿಂದ ಕಾರ್ಯದ ಸೇವೆ ಯಾರೂ ಬಯಸುವೊ ? ಪ್ರಸ್ತುತಕ್ಕೆ ಇವರ ಧರ್ಮಶೀಲದ ತಮ್ಮ ವಿ ಸ್ವೀಯ ಅಭಿವೃದ್ಧಿಯಿಂದ ಬಿಡಿಸ್ಕೊಂಡು ಜಾತಿ ಕಸ್ತ್ರವಾದಿ ಕರ್ತವ್ಯವನ್ನು ಒಳ್ಳೆ ಮಾತ ಹೇಳುವದೇ ಆಗಿಯಿತೆಂತ ನಿರ್ಣಯಿಸುವರ ಮಾಡುವರ ಕೆಲಸ ಒಂದಿದೆ —ಕ ಸು.

---

ನಾಸಿಕದಲ್ಲಿ ಪ್ರತಿ ವರ್ಷವೂ ನವರಾತ್ರಿ ಉತ್ಸವ ಸಂಬಂಧವಾದ ಉತ್ಸವವೊಂದು ೧೦ ದಿವಸಗಳ ವರೆಗೆ ಆಗುತ್ತದೆ. ಆ ವರುಷ ದಸರಾ ಉತ್ಸವದ ಸಮಯದಲ್ಲಿ ಅನೂ ಮುಸಲ್ಮಾನರಿಗೆ ಸಂಬಂಧಪಟ್ಟೊ ಏನೊ ಸ್ವಲ್ಪ ತಂಟೆ ಇದ್ದುದು ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ದಾಂತಿ ರಕ್ಷಣೆಗಾಗಿ ಬಿಂದು ಜನರ ಈ ಉತ್ಸವದ ಒ ದಿವಸ ಹಿಂದೂ ಜನರು ಮುಸಲ್ಮಾನರ ಪಳ್ಳಿಯ ಮುಂದಿನಿಂದ ಹೋಗ ಬಾರದು. ೮ ನೇ ಮತ್ತು ೧೦ ನೇ ದಿವಸ ಮಾತ್ರ ಪಳ್ಳಿಗಳ ಮುಂದಿನಿಂದ ಮೆರವಣಿಗೆ ಘಂಟೆಯಿಂದ ೯ ಘಂಟೆ ಸಮಯದ ಒಳಗೆ ಹೋಗಬಹುದು, ಮತ್ತು ೧೦ನೇ ದಿವಸ ಈ ಹೊರಟ ಬಿಯ ಇನ್ನು ಹೊಸ ಪಳ್ಳಿಗಳ ಮುಂದಿನಿಂದ ಆಗೇ ಸಮಯದಲ್ಲಿ ಹೋಗಬಹುದು, ಅದೇ ಹಿಂದೂ ಜನರು ವಾದ್ಯ ಒಂದು ಬಾರಿಸ ಕೂಡದು ಬೇರೆ ಯಾವ ವಾದ್ಯ ಬಾರಿಸಬಾರದು, ಮತ್ತು ಆ ಜಾಗ ನನ ಪಳ್ಳಿಯ ೧೫ ಗಜದೊಳಗೆ ಬಾರಿಸಬಾರದು, ಹಾಗೂ ಮೆರವಣಿಗೆಯು ಪಳ್ಳಿಗಳ ಮುಂದೆ ನಿಲ್ಲದೆ ಹೋಗಬೇಕು, ಮತ್ತು ಆ ದಿನದಲ್ಲಿ ವಿಶೇಷ ಮಾಡಬಾರದು, ಮತ್ತು ಮುಸಲ್ಮಾನರು ಹಿಂದೂ ಜನರು ಉತ್ಸವದ ಮೆರವಣಿಗೆಯು ಹೋಗುತ್ತಿರುವಾಗ ಪಳ್ಳಿಗಳಲ್ಲಿ ಗುಂಪಾಗಬಾರದು, ಎಂತ ಜಾಹಿರನಾಮೆಯನ್ನು ಹೊರಡಿಸಿದ್ದರು. ಇದು ಮುಸಲ್ಮಾನರಿಗೆ ಒಪ್ಪಿಗೆ ಆಗದೆ ತಮ್ಮ ಹಕ್ಕುಗಳು ಮುರಿದಂತೆ ಆಗುತವೆಂತ ಇದನ್ನು ಮೈಸೂರ್‌ಗೆ ಮ್ಯಾಜಿಸ್ಟ್ರೇಟರ ಸೇರುವದಕ್ಕೊತ್ತ ಅರ್ಜಿ ಮಾಡಿದರು. ಪೈಸೊಬೇನ ನವರು ಮ್ಯಾಜಿಸ್ಟ್ರೇಟರ ಹೇಳಿಕೆ ಕೃತ್ಯವು ಮಾರ್ಗವೆಂತ ಉತ್ತರ ಕೊಟ್ಟರು. ಹೀಗಿರುತ ಮೊನಡೆಯಲ್ಲಿ ಬಕ್ರೀದ ದಿವಸ ಕೆಲವು ಮುಸಲ್ಮಾನರು ಪಳ್ಳಿಯಲ್ಲಿ ಕೂಡಿ ಹಿಂದೂಜನರು ಆ ದಿನದಿಂದ ಮ್ಯಾಜಿಸ್ಟ್ರೇಟರ ಸೇರು ೧೪ ಗಜಗಳ ಹೋಗುವ ಕಾಲದಲ್ಲಿ ಅವರಿಗೆ ಕಲ್ಲುಗಳಿಂದ ಹೊಡೆದರು. ಅಷ್ಟರಲ್ಲಿ ಪೋಲೀಸಿನವರು ಬಂದು ಅವರನ್ನು ಬಿಡಿಸಿದರು. ಅದರಮೇಲಿಂದ ಹಿಂದೂ ಜನರು ಕೈಗಳು ಮುಟ್ಟಲಿಲ್ಲವು ಸ್ಪಷ್ಟ ಕಾಣುತ್ತಿತ್ತು. ಮ್ಯಾಜಿಸ್ಟ್ರೇಟರ ಹಿಂದೂಜನರಿಂದ ಮುಸಲ್ಮಾನರಿಗೆ ಬಾಧಕವಾದದ್ದು ಏನು ಇದ್ದಂತೆ ಕಾಣುವದಿಲ್ಲ. ಯಾಕಂದರೆ ಆದಿನ ಆ ದಿವಸ ಗುಡಿಯಲ್ಲಿ ನಮಾಜಿಗೆ ಹೋಗಲಿಕ್ಕೆ ಪ್ರತಿಬಂಧ ಇರಲಿಲ್ಲ. ಇವರ ನಮಾಜು ೧೦ ದಿನ ೧ ಘಂಟೆ ಒಳಗೆ ಮುಗಿಯುತದೆ. ಅದರಿಂದ ಇವರ ವಕ್ತವ್ಯಗಳು ನ್ಯಾಯ ಮಾರ್ಗವೆಂಬುದು ತಿಳಿಯುವದಿಲ್ಲ. ಈ ಬಡಿದಾಟಕ್ಕೆ ಮೊದಲು ಹಿಂದೂ ಜನರಿಗೆ ಬಿಟ್ಟು ಬಿಡಬೇಕಿತ್ತು, ದ್ಯಾಗಂದರೆ ಅವರು ಯಾತ್ರಿಕ ಇವರಿಗೆ ಎಲ್ಲ ದಿವಸಗಳಲ್ಲಿ ಮೆರವಣಿಗೆ ಮಾಡಲಿಕ್ಕೆ ಪ್ರತಿಬಂಧಕ ಮಾಡುವದು, ಈಗೆ ಎರಡು ಮೂರು ದಿವಸ ಮೆರವಣಿಗೆ ಮಾಡಲಿಕ್ಕೆ ಬಿಟ್ಟರೂ, ಆಗ್ರೇಯದಿಂದ ಹೋಗಬೇಕು, ವಾದ್ಯ ನಡೆಯಬಾರದು, ಘೋಷ ಮಾಡಬಾರದು, ಎಂಬ ಅನೇಕ ಆತಂಕಗಳು ಆದವಲ್ಲವೇ. ಹಿಂದೂಜನರಿಗೆ ಅಲ್ಲಿ ನಮ್ಮ ಹವಾಗುಸಂತಾದ್ದಲ್ಲ ವ್ಯವೂ ನಿರ್ಬಂಧದಿಂದ ನಡೆಸಿಕೊಂಡರು, ಅದರ ಮುಸಲ್ಮಾನರು ಇದಾದಲ್ಲದೆ ಮೈಸೂರ್‌ಗೆ ಅಪ್ಪೀಲು ಮಾಡಿ ಅಲ್ಲಿಯ ನಿರ್ಣಯಕ್ಕೂ ಒಪ್ಪದೆ ಹೀಗೆ ! ತುರುಕರನ್ನು ಪಟ್ಟಿಯಾಗಿ ಆ ಕಾಲದಲ್ಲಿ ಒಟ್ಟಾಗಿ ಹಿಂದೂಜನರಿಗೆ ಬಾಧೆ ಕೊಟ್ಟದ್ದು ಏಕೆಂತ್ಲೋ ! ಇಂಥಾ ಸಂಗತಿಗಳು ಇಲ್ಲೇ ಅಲ್ಲ, ಬರಗೆಹಾದ ಅನೇಕ ಸ್ಥಳಗಳಲ್ಲಿ ಸಂಭವಿಸುವದುಂಟು, ಅವುಗಳ ವಿಷಯದಲ್ಲಾಗಿ ಮಾಡತಕ್ಕ ಸ್ವಭಾವ ತಾ ಹುಂಬ ಒಕ್ಕುಟದ ಕಾರ್ಯಸಾಧನೆ ಕಾಣಿಸುವ —ಕ. ಸು.

---

BANGALORE—Printed and published at the KARNATAKA PRESS, No. 40, HOSPITAL ROAD, CITY.—1893

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

## ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

## Published Every Monday Morning.

ಪ್ರಾಮುಪವಿನಪ್ರವೃತ್ಯಗನಮಾರ್ಗಕರ್ಣಾಟಕಪ್ರಕಾಶನಪರಾಬಿನ್ನಾಪ್ರತಿತಸಾಹಿತ್ಯೇಶೋಭಿತಾ॥ಮೃಗಾಂಕಹಿತ್ರವಾಸರೆನಿಹಿತಮುದ್ರಣಾಸಜ್ಜನೈರ್ದ್ವಿಜಾಸುಪರಿಪೋಷಿತಾದಿಕತಿವಾನಸುಂಸೂಮದಂ॥

Vol XX.] BANGALORE—MONDAY, NOVEMBER 13, 1893. [No. 45.

ಸಂಪುಟ ೨೦.] ಬೆಂಗಳೂರು:—ಸನ್ ೧೮೯೩ನೇ ಇಸವಿ ನವಂಬರ್ ೧೩ ನೇ ತಾರೀಖ್ ಸೋಮವಾರ. [ಸಂಖ್ಯೆ ೪೫.


### ಕರ್ಣಾಟಕ ಪ್ರಕಾಶಿಕಾ.

#### ಪತ್ರಿಕೆಯ ಚಂದಾ ದರಗಳು.

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

| | ಸ್ಥಳದವರಿಗೆ. | ಪರಸ್ಥಳದವರಿಗೆ. |
|---|---|---|
| ಸಾಲ್ ಒಕ್ಕೆ | 6—0—0 | 8—0—0 |
| 6 ತಿಂಗಳಿಗೆ | 3—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

| | ಸ್ಥಳದವರಿಗೆ. | ಪರಸ್ಥಳದವರಿಗೆ. |
|---|---|---|
| ಸಾಲಿಂಕ್ಕೆ | 3—0—0 | 4—0—0 |
| 6 ತಿಂಗಳಿಗೆ | 1—12—0 | 2—8—0 |

ಈ ಪತ್ರಿಕೆಗೆ ದಸ್ತಖತ್ತು ಮಾಡಿದ ತಾರೀಖ್ ಮೊದಲು ಒಂದು ತಿಂಗಳೊಳಗಾಗಿ ಚಂದಾ ಬಾಕಿಯನ್ನು ಕಳುಹಿಸುವವರಿಗೆ ಮಾತ್ರವೆ ಅಡ್ವಾನ್ಸ್ ದರಂತೆ ಪತ್ರಿಕೆ ಕಳುಹಿಸಲ್ಪಡುವದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. ಮೂರು ತಿಂಗಳಿಗಿಂತ ಕಡಮೆಯಾಗಿ ಚಂದಾ ಮೊಬಲಗು ಅಂಗೀಕರಿಸಲ್ಪಡುವದಿಲ್ಲ.

#### ಪ್ರಕಟನೆಯ ನಿರಖ್.

| | |
|---|---|
| ಮೊದಲನೆಸಾರಿ ಪಂಕ್ತಿ ಒಂದಕ್ಕೆ | ೦—೨—೦ |
| ಎರಡನೆಯಸಾರಿ ಪಂಕ್ತಿ ಒಂದಕ್ಕೆ | ೦—೧—೦ |

ಶರಾ—ಎರಡಾವರ್ತಿಗಿಂತ ಹೆಚ್ಚಾಗಿ ಪ್ರಕಟನೆಗಳನ್ನು ಕಳುಹಿಸಿ ಮಾಡಿಕೊಳ್ಳುವ ಪಕ್ಷದಲ್ಲಿ ಪಂಕ್ತಿಗೆ ೧ ಆಣೆಯಂತೆ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಪ್ರಕಟನೆ ಮಾಡುವವರು ಪ್ರಕಟನೆ ಮಾಡತಕ್ಕ ಆವರ್ತಿಗಳ ಸಂಖ್ಯೆಯನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಹಾಗಿಲ್ಲದೆ ಅವರು ನಮಗೆ ನಿಲ್ಲಿಸುವಂತೆ ಬರೆಯುವವರೆಗೆ ಅದು ಪ್ರಕಟಿಸುತ್ತಿದ್ದು ಹಾಗೆ ಎಷ್ಟು ಆವರ್ತಿ ಪ್ರಕಟಿಸಲ್ಪಟ್ಟಿದ್ದಾಗ್ಯೂ ಮೇಲೆ ಕಂಡ ದರದಂತೆ ಕಿಮ್ಮತ್ ವಸೂಲ್ಮಾಡಲ್ಪಡುವದು. ಪ್ರಕಟನೆ ಮುಂತಾದ ಕೆಲಸಗಳಿಗೆ ದರಗಳನ್ನು ಯಾ ಖಾಸಗಿಯಾಗಿ ಮಾಡಿಕೊಳ್ಳಬಹುದು. ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದ ಪತ್ರಗಳಲ್ಲಿ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಕ್ರಮವಾಗಿ ಬರುವ ಕಾಗದಗಳನ್ನು ಪ್ರಕಟಿಸಲಾರೆವು. ನಿರಾಕರಿಸಲ್ಪಟ್ಟ ಕಾಗದಗಳನ್ನು ವಾಪಸ್ ಕಳುಹಿಸಲ್ಪಡಲಾರವು.


*ADVERTISEMENTS.*

**NOTICE.**

**VAIDYASARA SANGRAHA**

A TREATISE ON THE PRINCIPLES OF

**HINDU MEDICINE**

*Price including Postage Rs 5-0-0*

ವೈದ್ಯಸಾರ ಸಂಗ್ರಹ.

ಈ ಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ಈಕೆಳಗೆ ರುಜು ಮಾಡಿರತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ದರಖಾಸ್ತುಗಳಿಗೆ ಸಿಕೇ ಕೊಡಲ್ಪಡಲಾರದು.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೇ ಹಾಸಲು, ದೇಹೀಲ್ ಪ್ರತಿ ಒಂದಕ್ಕೆ ರೂ 5—0—0

ಟಿ. ಬಿ. ವೆಂಕಟಾಚಾರ್.

ಬೆಂಗಳೂರ್, ಪಬ್ಲಿಕ್ ಆಸ್ಪತ್ರಿ ರೋಡ್ ೪೮ ನೇನಂಬರ್.

**ನೋಟೀಸ್.**

**ಬೆಂಗಳೂರು ಕರ್ಣಾಟಕ್ ಪ್ರೆಸ್.**

೧೮೬೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ ಸಕಲವಿಧ ಕೆಲಸಗಳು ಸುಲಭಚಾರ್ಜಿಗೆ ತೀವ್ರವಾಗಿಯೂ ಶ್ಲಾಘ್ಯವಾಗಿಯೂ ಮಾಡಲ್ಪಡುವವು.

ಇದರಲ್ಲಿ ಸದ್ಯಕ್ಕೆ ಇಂಗ್ಲಿಷ್ ಕನ್ನಡ ಕೆಲಸಗಳು ಮಾತ್ರವೆ ನಡೆಯುತ್ತಿವೆ. ಇತರ ತಪಸೀಲ್‌ಗಳನ್ನು ಸದರೀ ಕಾರ್ಖಾನೆಯ ಪ್ರೊಪ್ರೈಟರಿಗೆ ಬರೆದು ತಿಳಿದುಕೊಳ್ಳಬಹುದು.



**ನೋಟೀಸ್.**

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ. ಕಮಿಶನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯೊಡನೆ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ತಕ್ಕ ಕಮಿಶನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರದ ಔಷಧಗಳು, ಪುಸ್ತಕಗಳು, ಮುತ್ತುಗಳು, ಬೆಳ್ಳಿ ಮುತ್ತುಗಳು, ಛತ್ರಿಯಂಗಳು, ಪಂಚೆಗಳು, ಟ್ರಂಕುಗಳು, ಕಬ್ಬಿಣ ಕಾಲುಗಳು, ಪೆಟ್ಟಿಗೆಗಳು, ಜರತಾರಿ ಕಣಗಳು, ಬನಾರಸ್ ರೇಶಿಮೆ ವಸ್ತ್ರಗಳು, ಮುಂಬಯಿ ನಕ್ಷ ಜರತಾರಿ ರುಮಾಲುಗಳು, ಜರತಾರಿ ಟೋಪಿಗಳು, ಬನಿಯನುಗಳು, ಪಟ್ಟೆಗಳು, ಅತ್ತರುಗಳು, ಅತ್ಯುತ್ತಮ ರತ್ನಗಳು, ಬಂಗಾರದ ಕೆಲಸಗಳು, ಬೆಳ್ಳಿ ಪಾತ್ರೆಗಳು, ಹಿತ್ತಾಳೆ ಪಾತ್ರೆಗಳು, ಕೇಸರಿ, ಕಸ್ತೂರಿ ಮುಂತಾದ ಇತರ ಸಾಮಾನುಗಳು

ಜವಾಬು ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟ್ಯಾಂಪ್ ಕಳುಹಿಸಿದ ಹೊರತು ಜವಾಬ್ ದೊರೆಯಲಾರದು.

ವಿಲಾಸ,—ಗಣೇಶ ರಾಮಚಂದ್ರ ಕರ್ಕಿ, ಮತ್ತು ಕಂಪನಿ, ಕಮಿಶನ್ ಏಜಂಟ್ಸ್, ಹೊನ್ನಾವರ, ನಾರ್ತ್ ಕೆನರಾ.


**ನೋಟೀಸ್.**

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

#### ಸಂಸ್ಕೃತ ಗ್ರಂಥಗಳು.

| | ಪೋಸ್ಟೇಜ್ ಸಹಿತ ರೂ | ಆ | ಪೈ. |
|---|---|---|---|
| ಸಟೀಕಾ ವೈದ್ಯಸಾರ ಸಂಗ್ರಹ | ೫ | ೦ | ೦ |
| ,, ಶಿವಗೀತ | ೧ | ೧ | ೦ |
| ,, ಶಿವಾನಂದಲಹರಿ | ೦ | ೪ | ೦ |
| ,, ಕಾಲಾಮೃತ | ೧ | ೦ | ೦ |
| ,, ಟಿ॥ ಬಾಲರಾಮಾಯಣ .. | ೦ | ೩ | ೦ |
| ,, ಟಿ॥ ಗೋಪಿಕಾ ಗೀತೆ .. | ೦ | ೧ | ೦ |
| ,, ಟಿ॥ ಬಾರ್ಹಸ್ಪತ್ಯನೀತಿ (ಸುಭಾಷಿತ) | ೦ | ೮ | ೨ |
| ವಿಷ್ಣುಸಹಸ್ರನಾಮ ಪತ್ರಿಕೆ | ೦ | ೩ | ೦ |
| ಸೂರ್ಯಸಹಸ್ರನಾಮ | ೦ | ೨ | ೦ |
| ಕೃಷ್ಣಕರ್ಣಾಮೃತ | ೦ | ೨ | ೦ |
| ತ್ರಿಕಾಂಡ ಅಮರ ಮೂಲ | ೦ | ೬ | ೦ |
| ೧ ಕಾಂಡ | ೦ | ೧ | ೦ |

#### ಕನ್ನಡ ಗ್ರಂಥಗಳು.

| | | | |
|---|---|---|---|
| ಶುಕಸಪ್ತತಿ ಅನ್ವಯ | ೩ | ೦ | ೦ |
| ದಿಲ್‌ಕುಷ್ ದುಮ್ಮಾಂ | ೧ | ೨ | ೦ |
| ವೃಷಭೇಂದ್ರವಿಜಯ | ೧ | ೪ | ೦ |
| ಪಂಚಾಂಗ ಬಾಲಬೋಧಿನಿ | ೦ | ೬ | ೦ |
| ಹನುಮದ್ವಿಲಾಸ | ೦ | ೬ | ೦ |
| ಕಾಳೀಯಮರ್ದನ | ೦ | ೨ | ೦ |
| ಸುಭದ್ರಾಪರಿಣಯ | ೦ | ೨ | ೦ |
| ಶಶಿರೇಖಾಪರಿಣಯ | ೦ | ೨ | ೬ |
| ಸುದಾಮಚರಿತ್ರೆ | ೦ | ೧ | ೦ |
| ಮೈರಾವಣ ಚರಿತ್ರೆ | ೦ | ೧ | ೬ |
| ಬಾಲಗ್ರಹಚಿಕಿತ್ಸೆ | ೦ | ೧ | ೦ |
| ಮಹಮ್ಮದನ್ ಲಾ | ೦ | ೧೦ | ೦ |
| ಭ್ರಾಂತಿವಿಲಾಸ | ೦ | ೧೦ | ೦ |

**ನೋಟೀಸ್.**

ತಾರೀಖು 25 ನೇ ಅಕ್ಟೋಬರ್ 1893.

ಸನ್ 1893 ನೇ ಇಸವಿ ಡಿಸಂಬರ್ ತಾರೀಖು 18 ರಲ್ಲು ಫ್ರೇಜರ್ ಪೇಟೆಯಲ್ಲಿ ಹೆಚ್ಚು ಕಡಿಮೆ 160 ಟೇಗಳು ಗುಂದ ಹರಾಜ್ ಹಾಕಲ್ಪಡುತದೆ.

ಶರತ್— ಸನ್ 1885 ನೇ ಇಸವಿ ಜನವರಿ ತಾರೀಖು 3 ರ ನಂಬರ್ 1ನೇ ಕೊಡಗು ಡಿಸ್ಟ್ರಿಕ್ಟು ಗಜೆಟಿನಲ್ಲಿ ಪ್ರಾಯಿಷ್ ಮಾಡಲ್ಪಟ್ಟ ಕೊಡಗು ಚೀಫ್‌ಕಮಿಷನರ್ ಸಾಹೇಬರವರ ಸನ್ 1881 ನೇ ಇಸವಿ ಫೆಬ್ರವರಿ ತಾರೀಖು 15 ನಂಬರ್ 26 ರ ನೋಟಿಫಿಕೇಶನ್ ಮೇರೆ ಕೇಳಿದ ಇಪ್ಪತ್ತೈದರಷ್ಟು ಕ್ರಯವನ್ನು ಹರಾಜು ಕಾಲದಲ್ಲಿ ಕೊಡತಕ್ಕದ್ದು. ಬಾಕಿ ಮೊಬಲಗನ್ನು 1894 ನೇ ಇಸವಿ ಮಾರ್ಚಿ ತಾರೀಖು 15 ರ ವಳಗೆ ಸಾಕಲ್ಯವಾಗಿ ಚುಕಾವತಿ ಮಾಡತಕ್ಕದ್ದು.

G. F. PREVOST,
*Dy. Conservator of Forests, Coorg.*

### ಮೈಸೂರ್ ಗವರ್ನ್‌ಮೆಂಟ್.

#### ಪೋಲೀಸ್ ಇಲಾಖಾ.

#### ನೋಟಿಸ್.

ಬೆಂಗಳೂರ್, ತಾ॥ ೧೦ ನೇ ನವಂಬರ್ ೧೮೯೩.

೧. ಇನ್‌ಸ್ಪೆಕ್ಟರ್ ಮತ್ತು ಜಮೇದಾರಿ ನೌಕರಿಗಳಿಗೆ ಆವಶ್ಯಕವಾದ ಉಮೇದ್‌ವಾರರನ್ನು ತರಬೇತಿ ಮಾಡುವದಕ್ಕಾಗಿ, ೧೮೯೪ನೇ ಇಸವಿ ಜನವರಿ ತಿಂಗಳಲ್ಲಿ ಬೆಂಗಳೂರೊಳಗಡೆ ಪೋಲೀಸ್ ಸ್ಕೂಲಿಗೆ ಸೇರಿದಂತೆ ಹೊಸ ತರಗತಿಯೊಂದು ಇಡಲ್ಪಡುವದೆಂದು ಇದರಿಂದ ಸಕಲರಿಗೂ ತಿಳಿಸಲ್ಪಟ್ಟಿರುತದೆ.

೨. ಟ್ರೇನಿಂಗ್ ಕ್ಲಾಸ್ ಯಾನೆ ತಯಾರಿ ತರಗತಿಗೆ ಸೇರಲು ಅಪೇಕ್ಷೆಯುಳ್ಳ ಉಮೇದ್‌ವಾರರು, ತಮ್ಮ ದರಖಾಸ್ತುಗಳನ್ನು ೧೮೯೩ ನೇ ಇಸವಿ ಡಿಸಂಬರ್ ೩೦ ನೇ ತಾರೀಖಿನಲ್ಲಿ ಅಥವಾ ತತ್ಪೂರ್ವ ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್ಲವರಿಗೆ ಬಂದು ತಲಪುವಂತೆ ರವಾನಿಸತಕ್ಕದ್ದು. ಮತ್ತು ಉಮೇದ್‌ವಾರರು, ೧೮೯೪ ನೇ ಇಸವಿ ಜನವರಿ ೪ ನೇ ತಾರೀಖಿನಲ್ಲಿ ಬೆಂಗಳೂರೊಳಗೆ, ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್ಲವರ ಆಫೀಸಿಗೆ ಬಂದು ಖುದ್ದು ಹಾಜರಾಗತಕ್ಕದ್ದು.

೩. ಉಮೇದ್‌ವಾರರು ಮೈಸೂರ್ ಗವರ್ನ್‌ಮೆಂಟ್ ನೌಕರಿಯಲ್ಲಿರುವಂತ ಆಫೀಸರ್‌ಗಳ ಮತ್ತು ಮೈಸೂರ್ ಸಂಸ್ಥಾನದಲ್ಲಿ ವಾಸವಾಗಿರುವಂತ ಗೌರವ್ಯರಾದವರ ಮಕ್ಕಳು ಮತ್ತು ಸಂಬಂಧಿಗಳಾಗಿರುವದಕ್ಕೆ ಉತ್ತಮವಾಗಿ ಎಣಿಸಲ್ಪಡುವದು.

೪. ದರಖಾಸ್ತುದಾರರು ಇದರಡಿ ಸೂಚಿಸುವ ಯೋಗ್ಯತೆಗಳಂ ಪಡೆದಿರುವಂತವರಾಗಿರತಕ್ಕದ್ದು:—

(a) ಉಮೇದ್‌ವಾರರು, ದೃಢಾಂಗರಾಗಿಯೂ, ಅಧಮಪಕ್ಷ ೫ ಅಡಿ ಎತ್ತರವುಳ್ಳವರಾಗಿಯೂ, ೩೨ ಅಂಗುಲಗಳ ಸುತ್ತಳತೆಗೆ ಕಡಮೆಯಿಲ್ಲದ ವಿಶಾಲವಾದ ಎದೆಯುಳ್ಳವರಾಗಿಯೂ ೨೫ ವರುಷಗಳಿಗಿಂತ ಮೇಲ್ಪಡದ ಮತ್ತು ೧೮ ವರುಷಗಳಿಗೆ ಕಡಮೆಯಿಲ್ಲದ ವಯಸ್ಸುಳ್ಳವರಾಗಿಯೂ, ಇರತಕ್ಕದ್ದು.

(b). ಉಮೇದ್‌ವಾರರು ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ತೇರ್ಗಡೆಯಾದವರಾಗಿರತಕ್ಕದ್ದು; ಇಲ್ಲದಪಕ್ಷಕ್ಕೆ ಹಿಂದೆ ಇದ್ದಂತಾ ಮಿಡಿಲ್‌ಸ್ಕೂಲ್ ಪರೀಕ್ಷೆಯ ಸ್ಟ್ಯಾಂಡಾರ್ಡಿಗೆ ಅನುಗುಣವಾದ ಒಂದು ಪ್ರವೇಶ ಪರೀಕ್ಷೆಯಲ್ಲಿ, ಕನ್ನಡ ಅಥವಾ ಇಂಗ್ಲಿಷ್ ಭಾಷೆಯೊಳು ಓದುವಣ, ಹೇಳಿದ್ದನ್ನು ಬರೆಯುವಣ, ಗಣಿತ, ವ್ಯಾಕರಣ, ಭೂಗೋಳ, ಕಾಂಪೋಜಿಷನ್ ಅಂದರೆ ವಾಕ್ಯರಚನೆ, ಇವುಗಳಲ್ಲಿ ತೇರ್ಗಡೆಯಾಗತಕ್ಕದ್ದು.

(c). ಉಮೇದ್‌ವಾರರು, ತಮ್ಮ ಸಂಬಂಧವನ್ನೂ, ತಮ್ಮ ಜೀವನಾಧಾರವನ್ನೂ, ತಮ್ಮ ಒಳ್ಳೆಯ ನಡತೆಯನ್ನೂ ನಿರೂಪಿಸುವಂತ ಒಂದು ಯೋಗ್ಯತಾ ಪತ್ರಿಕೆಯನ್ನೂ ಯಾರಾದರೊಬ್ಬ ಗೆಜೆಟೆಡ್ ಆಫೀಸರರಿಂದಲಾಗಲಿ, ಈ ಸಂಸ್ಥಾನದಲ್ಲಿರುವಂತ ಗೌರವ್ಯರಾದವರ್ಯಾರಿಂದಲಾಗಲಿ ಪಡೆದು ಹಾಜರ್ ಮಾಡತಕ್ಕದ್ದು.

೫. ಮೇಲೆ ತಿಳಿಸಲ್ಪಟ್ಟಂತೆ ಯೋಗ್ಯತೆಯುಳ್ಳವರನ್ನು ಇನ್‌ಸ್ಪೆಕ್ಟರ್ ಜನರಲ್ಲವರು ವಿಮರ್ಶಿಸಿ ಚುನಾಯಿಸುವರು. ಇನ್‌ಸ್ಪೆಕ್ಟರ್ ಜನರಲ್ಲವರಿಂದ ಹಾಗೆ ಚುನಾಯಿಸಲ್ಪಡಬಹುದಾದ ಉಮೇದ್‌ವಾರರು, ಸೀನಿಯರ್ ಸರ್ಜನ್‌ರವರಿಂದ ಪರೀಕ್ಷಿಸಲ್ಪಟ್ಟು, ಸದರೀ ಆಫೀಸರರು ರಾಯಿತೆಂದು ಅಭಿಪ್ರಾಯಪಟ್ಟು ತಿಳಿಸಿದ ಮೇಲೆ ಪೋಲೀಸ್ ಸ್ಕೂಲಿಗೆ ದಾಖಲಾಗಲಿಕ್ಕೆ ಹುಕುಂ ಕೊಡಲ್ಪಡುವದು.

೬. ಈ ತರಗತಿಗೆ ೩೦ ಜನ ಉಮೇದ್‌ವಾರರಿಗಿಂತ ಜಾಸ್ತಿ ಇಲ್ಲದೆ ಬೇಕಾದಷ್ಟು ಜನ ಚುನಾಯಿಸಲ್ಪಟ್ಟು ಇದರಡಿ ತಿಳಿಸಲ್ಪಡುವ ಗ್ರಂಥಗಳು ಬೋಧಿಸಲ್ಪಡುವವು. ಅವುಗಳ್ಯಾವವಂದರೆ:—

- ಸರ್ವೇಯಿಂಗ್.
- ಜ್ಯಾಮಿಟ್ರಿಕಲ್ ಡ್ರಾಯಿಂಗ್.
- ಫೋಟೋಗ್ರಫಿ.
- ಇಂಡಿಯನ್ ಪೀನಲ್‌ಕೋಡ್.
- ಕ್ರಿಮಿನಲ್ ಪ್ರೊಸೀಜ್ಯರ್ ಕೋಡ್.
- ಎವಿಡೆನ್ಸ್ ಆಕ್ಟ್.
- ಮೆಡಿಕಲ್ ಜ್ಯುರಿಸ್ ಪ್ರುಡೆನ್ಸ್.
- ಪೋಲೀಸ್ ರೂಲ್ಸ್ ವ ಸರಕ್ಯುಲರ್ಸ್.
- ಡ್ರಿಲ್ ವ ಫೂಟಿಂಗ್ ಯಾನೆ ಕವಾಯತ್ ಮತ್ತು ಬಂದೂಖ್ ಸುಡುವಣ.
- ಕುದುರೆ ಸವಾರಿ.

ಆಂಬ್ಯುಲೇಷನ್ ವರ್ಕ್ಸ್, ಅಂದರೆ, ಜಖಂ ಆದವರ ಘಾಯಗಳಿಗೆ ಬಟ್ಟೆ ಹಾಕಿ ಕಟ್ಟುವಣ, ನೀರಿನಲ್ಲಿ ಬಿದ್ದವರನ್ನು ಮೇಲಕ್ಕೆ ಎತ್ತಿ ಉಸುರಾಡದಿದ್ದರೆ ಅವರಿಗೆ ಉಸುರು ಬರುವಂತೆ ಮಾಡುವಣ, ಮತ್ತು ಒಂದು ಸ್ಟ್ರೆಚರ್ ಹಾಸಿಗೆ ಹಿಡಿದುಕೊಂಡು ಹೋಗಲು ಬೇಕಾದ ಕೆಲಸಗಳು.

೭. ಮೈಸೂರ್ ಲೋಕಲ್ ಸರ್ವಿಸ್ ಪರೀಕ್ಷೆಯ ಕ್ರಿಮಿನಲ್ ಭಾಗದಲ್ಲಿ ತೇರ್ಗಡೆಯಾಗಿರತಕ್ಕ ಉಮೇದ್‌ವಾರರು ಕಾನೂನುಗಳಲ್ಲಿ ಪರೀಕ್ಷೆಯಂ ಕೊಡಬೇಕೆಂಬ ನಿರ್ಬಂಧದಿಂದ ವಿನಾಯಿಸಲ್ಪಡುವರು. ಪರಂತು ಅವರು ಇತರ ಭಾಗಗಳನ್ನು ಚೆನ್ನಾಗಿ ಕಲಿತುಕೊಂಡು ಅವುಗಳಲ್ಲಿ ಪರೀಕ್ಷೆಯಂ ಕೊಟ್ಟು ತೇರ್ಗಡೆಯಾಗತಕ್ಕದ್ದು.

V. P. MADHAVA RAO,
*Inspector General of Police in Mysore*

## NOTICE.

"ಆಂಗ್ಲೋ ಇಂಡಿಯನ್ ಪಾಕೆಟ್‌ಡೈರಿ"

ನಾವು ಪ್ರತಿ ವರ್ಷದಲ್ಲಿಯೂ ಪ್ರಕಟಿಸಿ ಪಡಿಸುತಲಿರುವ ಮೇರೆಗೆ ಸರ್ವರಿಗೂ ಬಹಳ ಉಪಯುಕ್ತವಾಗಿರುವಂತೆ ಇಂಗ್ಲಿಷ್ ತಿಂಗಳ ಕ್ಯಾಲೆಂಡರ್, ಇದಕ್ಕೆ ಸರಿಯಾದ ನಮ್ಮ ಹಿಂದೂ ಸಂವತ್ಸರ, ತಿಂಗಳು, ತಿಥಿ, ವಾರ, ನಕ್ಷತ್ರ ಸಹಿತವಾಗಿಯೂ, ಇನ್ನೂ ಅವಶ್ಯಕವಾಗಿ ತಿಳಿಯಬೇಕಾದ ಸಂಗತಿಗಳು, ರೈಲ್ವೇ ಸ್ಟೇಷನ್‌ಗಳು, ಅಲ್ಲಿಗೆ ರೈಲ್ವೇ ಚಾರ್ಜ್, ಪೋಸ್ಟಾಫೀಸ ರೂಲ್ಸ್, ಮುಂತಾದ ವಿಶೇಷ ಸಂಗತಿಗಳನ್ನು ಸೇರಿಸಿರುವ ೧೮೯೪ ನೇ ಇಸವಿಯ ಡೈರಿ ಪುಸ್ತಕವನ್ನು ವಿಕ್ರಯಕ್ಕೆ ಸಿದ್ಧಪಡಿಸುತ್ತೇವೆ.

ಕ್ರಯ ಪ್ರತಿಯೊಂದಕ್ಕೆ ಟಪಾಲ್ ಹಾಸಲ್‌ಸಹಿತ ೦-೩-೬

೧೦ಪ್ರತಿ ಒಟ್ಟಿಗೆ ಕೊಂಡುಕೊಳ್ಳತಕ್ಕವರಿಗೆ ೧ ಪ್ರತಿ ಜಾಸ್ತಿಯಾಗಿ ಕಳುಹಿಸುತ್ತೇವೆ. ಬೇಕಾದವರು ಈ ಕೆಳಗೆ ಸಹಿ ಮಾಡಿರುವವರ ಹೆಸರಿಗೆ ಬರೆದು ತರಿಸಿಕೊಳ್ಳಬಹುದು, ಪ್ರತಿ ಭಾಗಿಗೂ ರಿಜಿಸ್ಟರ್ ಹಾಸಲ ೨ ಆಣೆ ಜಾಸ್ತೀ ಕಳುಹಿಸಿಕೊಡಬೇಕು. ಅಪೇಕ್ಷೆಯುಳ್ಳವರು ವಿಳಾಸ ವಗೈರೆಯನ್ನು ಸ್ಪಷ್ಟವಾಗಿ ತಿಳಿಯುವಂತೆ ಬರೆಯಬೇಕು.

೨೬-೧೦-೯೩. } ಸತ್ಯಂ ಚಂದ್ರಶೇಖರಯ್ಯ, ಪ್ರೊಪ್ರೈಟರ, "ವರ್ನ್ಯಾಕ್ಯುಲರ ಸ್ಟ್ಯಾಂಡರ್ಡ ಲೈಬ್ರರಿ", ಬೆಂಗಳೂರು.



## ದಕ್ಷಿಣ ಮಹರಾಷ್ಟ್ರ ರೆಯಿಲ್‌ವೆ.

(ಮೈಸೂರು ಸ್ಟೇಟ ರೆಯಿಲ್‌ವೆ ಸೇರಿ.)

ನೋಟೀಸ್.

ಸನ್ ೧೮೯೩ ನೆ. ಇಸವಿ ನವೆಂಬರ್ ೧೫ ನೇ ತಾರೀಖ್ ಬುಧವಾರದ ಮೊದಲು ಮತ್ತು ಅದರ ತರುವಾಯ, ಬೆಂಗಳೂರು—ಗುಂಟಕಲ್ ಭಾಗದಲ್ಲಿ ಸರುಕು ಸೇರಿದ ಪ್ರಯಾಣಸ್ಥರ ಗಾಡಿಗಳು ಹೊರಡುವ ಮತ್ತು ತಲುಪುವ ಕಾಲಗಳು ಇದರಡಿ ತಿಳಿಸಲ್ಪಡುವಂತೆ ಇರುವವು :—

| | | |
|---|---|---|
| ಬೆಂಗಳೂರಿಂದ | ಹೊರಡುವ ಕಾಲ | 15— 0 |
| ಹಿಂದೂಪುರದಿಂದ | " | 20— 8 |
| ಧರ್ಮಾವರ | ತಲುಪುವ ಕಾಲ | 23—35 |
| | ಹೊರಡುವ ಕಾಲ | 1—25 |
| ಅನಂತಪುರ | " | 8— 3 |
| ಗುಂಟಕಲ್ | ತಲುಪುವ ಕಾಲ | 6—25 |
| ಗುಂಟಕಲ್ | ಹೊರಡುವ ಕಾಲ | 20—20 |
| ಅನಂತಪುರ | " | 23—29 |
| ಧರ್ಮಾವರ | ತಲುಪುವ ಕಾಲ | 0—50 |
| | ಹೊರಡುವ ಕಾಲ | 1—30 |
| ಹಿಂದೂಪುರ | " | 5—44 |
| ಬೆಂಗಳೂರು | ತಲುಪುವ ಕಾಲ | 10—50 |

ಇದನ್ನು ಕುರಿತ ತಪ್ಸೀಲ್ ತಿಳಿದುಕೊಳ್ಳಬೇಕಾದವರು ಸ್ಟೇಷನ್ ಮಾಸ್ಟರಗಳಿಗಾಗಲಿ ಬೆಂಗಳೂರಲ್ಲಿರುವ ಡಿವಿಜನಲ್ ಟ್ರಾಫಿಕ್ ಮ್ಯಾನೇಜರಿಗಾಗಲಿ ಬರೆದು ತಿಳಿದುಕೊಳ್ಳತಕ್ಕದ್ದು.

ಟ್ರಾಫಿಕ್‌ಮ್ಯಾನೇಜರ ಆಫೀಸ್, ಧಾರ್ವಾಡ, ತಾ|| ೯ನೇ ನವೆಂಬರ ೧೮೯೩. } A. Muirhead, *Traffic Manager.*



# ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, NOVEMBER 13, 1893

೧೮೯೩ ನೇ ಇಸವಿ ನವೆಂಬರ್ ೧೩ ನೇ ತಾ|| ಸೋಮವಾರ


### ಪ್ರಾಣಹಾನಿಕರವಾದ ರೆಯಿಲ್ವೆ ಅಪಾಯವು

ಕಳೆದ ಬುಧವಾರದದಿನ ಬೆಳಿಗ್ಗೆ ೬ ಘಂಟೆಗೆ ಮದರಾಸಿನಿಂದ ಮೇಟುಪಾಳ್ಯಕ್ಕೆ ಹೊರಟ ಪ್ರಯಾಣಸ್ಥರ ಗಾಡಿಗಳಿಗೆ ಮಧ್ಯಮಾರ್ಗದಲ್ಲಿ ಪ್ರವಾಹಾಧಿಕ್ಯದಿಂದ ಪ್ರಬಲ ಅಪಾಯ ಸಂಭವಿಸಿ ಅನೇಕರಿಗೆ ಪ್ರಾಣಹಾನಿ ಯುಂಟಾದುದಲ್ಲದೆಯೂ, ಬಹುಮಂದಿಗೆ ವಿಶೇಷ ಪೆಟ್ಟುಗಳಾದಂತೆಯೂ, ಇದರಿಂದ ಗಾಡಿಗಳ ಆಮದರಫ್ತ್ ಸಹ ಆಮಾರ್ಗದಲ್ಲಿನಿಂತು ಹೋಗಿ ಟಪಾಲಿಗಳು ಸಕಾಲದಲ್ಲಿ ಬಂದು ಸೇರದೆಯಾಗುವದಸಾಧ್ಯವಾಗಿ ಪರಿಣಮಿಸಿದಂತೆಯೂ ಮದರಾಸ್ ಮೆಯಿಲ್ ಪತ್ರಿಕಾ ಮೂಲಕ ತಿಳಿಯಬಂತು. ಕೇವಲ ಅನುತಾಪಕರವಾದ ಈ ವಿಪತ್ಸ್ವರೂಪವಂ ಸದರೀ ಪತ್ರಿಕೆಯು ವಿವರಿಸುತಿದೆ, ಎಂತೆಂದರೆ '—ಮದರಾಸಿನಿಂದ ಮುನ್ನೂರಿಪ್ಪತ್ತನೆಯ ಮೈಲಿನಲ್ಲಿ ೯ ಮತ್ತು ೧೦ನೆಯ ಟೆಲಿಗ್ರಾಫ್ ಕಂಭಗಳಿಗೆ ಮಧ್ಯೆ ಸಿರುಮತಿ ದಿಕ್ಕಿನ ನೀಲಗಿರಿ ಶಾಖಾ ಮಾರ್ಗದೊಳು ಪ್ರಸಕ್ತ ಅಪಾಯವು ಪ್ರಾಪ್ತವಾಗಿರುತಿದೆ. ರೆಯಿಲ್ವೆಯ ಉಭಯ ಪಾರ್ಶ್ವಗಳಲ್ಲಿಯೂ ಮಳೆಯ ದೆಸೆಯಿಂದ ಜಮಾಯಿಸಿದ್ದ ನೀರು ಅಧಿಕವಾಗಿ ಅದು ರಸ್ತೆಯಮೇಲೆ ಹರಿಯಲಾರಂಭಿಸಿ ಕಂಬಗಳು ಕೊಚ್ಚಲ್ಪಟ್ಟವಲ್ಲದೆ ಮಾರ್ಗವು ಕೂಡ ಕೊರೆಯಲ್ಪಟ್ಟು ಮಧ್ಯೆ ಒಡೆದು ಹೋಗಿತ್ತು. ಹೀಗಿರುವಾಗ್ಯೂ ಬೆಳಗಿನ ಧೂಮದಲ್ಲಿ ಅಂದರೆ ೬ ಘಂಟೆಗೂ ೭ ಘಂಟೆಗೂ ಮಧ್ಯೆ ಆಮಾರ್ಗದಲ್ಲಿ ಗಾಡಿ ಹೋಗುವಾಗ್ಯೆ ರಸ್ತೆಗೆ ಉಂಟಾಗಿದ್ದ ನಷ್ಟವು ತಿಳಿಯದೆ ಹೋದುದರಿಂದ ಮಾಮೂಲ್ ವೇಗದೊಡನೆ ಟ್ರೇನ್ ಹೋಗುತಲಿರುವಲ್ಲಿ ಸದರೀ ಸ್ಥಾನಕ್ಕೆ ಬರುವಾಗ್ಯೆ ಗಾಡಿಗಳು ನೆಲದಲ್ಲಿ ಉರುಳಿಕೊಂಡು ಚೂರುಚೂರಾಗಿ ಒಡೆದುಹೋದವು. ಗಾಡಿಯಲ್ಲಿದ್ದ ಪ್ರಯಾಣಸ್ಥರಲ್ಲಿ ಅನೇಕರು ಮೃತಪಟ್ಟರು. ಇನ್ನು ಅನೇಕರಿಗೆ ಬಹಳ ಪೆಟ್ಟುಗಳಾದವು, ತರುವಾಯ ಬಂದ ತಂತಿ ವರ್ತಮಾನದಿಂದ ಹದಿನಾರುಜನಗಳು ಮೃತಪಟ್ಟಂತೆಯೂ, ೨೧ ಜನರಿಗೆ ಘಾಯಗಳಾದಂತೆಯೂ ಸ್ಪಷ್ಟವಾಯಿತು. ಶನಿವಾರದ ದಿನ ಬಂದ ಪತ್ರಿಕೆ ವರ್ತಮಾನದ ಮೂಲಕ ಇನ್ನೂ ಬಹುಜನರು ಪ್ರಾಣಗಳಂ ಕಳೆದುಕೊಂಡರೆಂತಲೂ, ಅನೇಕರು ಅಪಾಯ ದಶೆಯಲ್ಲಿದಾರೆಂತಲೂ, ಬಹಳ ನಷ್ಟವುಂಟಾಗಿದೆಯೆಂತಲೂ ಸ್ಪಷ್ಟವಾಗುತಿದೆ. ಸುಮಾರ್ ೬೦ ಗಜಗಳ ಫಾಸಲೆಯ ವರೆಗೆ ರಸ್ತೆಯು ಗಾಡಿಗಳ ಸಂಚಾರಾರ್ಹವಲ್ಲದೆ ಹೋಗಿರುತಿದೆ. ಮಾರ್ಗದಲ್ಲಿ ಬುಗ್ಗೆಯಾಗಿ ನೀರು ಉಕ್ಕಿಬರುವದರಿಂದ ಕೆಲಸಗಾರರು ಮಾಡಲಿಕ್ಕೆ ಅನುಕೂಲ್ಯವು ಕಡಮೆಯಾಗಿರುತಿದೆ. ಪರಂತು ಪಕ್ಕದಾರಿಯೊಂದು ಸದ್ಯಕ್ಕೆ ಪ್ರತ್ಯೇಕವಾಗಿ ಹಾಕಲ್ಪಟ್ಟು ಅದರಮೇಲೆ ಗಾಡಿಗಳು ಹೋಗಿ ಬರುತಲಿವೆ. ಸದರೀ ಪ್ರದೇಶದಲ್ಲಿ ೧೩ಗಾಡಿಗಳ ತನಕ ಒಡೆದು ಬಿದ್ದಿವೆ. ಇದುವರೆಗೆ ೪೦ ಜನರ ಮೃತಶರೀರಗಳು ದೊರೆತವು. ಇದರಿಂದ ಇನ್ನೆಷ್ಟುಜನ ಹೋಗಿದಾರೆಯೋ ನಿಷ್ಕರ್ಷಿಸಲಸಾಧ್ಯವಾಗಿದೆ. ಅನೇಕಜನರ ಕಳೇಬರಗಳು ಮಣ್ಣಿನಲ್ಲಿ ಹೂತು ಹೋಗಿರಬಹುದೆಂದು ತೋರುತಿದೆ. ಕೂಡಲೇ ಪೋತ್ತನೂರಿಗೆ ತಂತಿ ವರ್ತಮಾನ ಹೋಗಿ, ಅಲ್ಲಿಂದ ಹಾಸ್ಪಿಟಲ್ ಅಸಿಸ್ಟೆಂಟಗಳೂ, ಕೋಯಂಬತ್ತೂರ್ ಡಿಸ್ಟ್ರಿಕ್ಟ್ ಸಿವಿಲ್ ಸರ್ಜನ್ನವರೂ ಬಂದು ಸೇರಿದರು. ಈರೋಡಿಂದ ಸಹ ರೆಯಿಲ್ವೆ ಮೆಡಿಕಲ್ ಆಫಿಸರ್ ಡಾಕ್ಟರ್ ಕರಿ ಎಂಬವರು ಕರೆಯಿಸಲ್ಪಟ್ಟರು. ಜಖಮಾದವರೆಲ್ಲರು ಚಿಕಿತ್ಸಾರ್ಥ ಕೋಯಂಬತ್ತೂರಿಗೆ ಕಳುಹಿಸಲ್ಪಟ್ಟರು. ಕನ್‌ಸಲ್ಟಿಂಗ್ ಇಂಜನಿಯರ್, ಚೀಫ್ ಇಂಜನಿಯರ್, ಆಕ್ಟಿಂಗ್ ಲೋಕಮೋಟಿವ್ ಸೂಪರಿಂಟೆಂಡೆಂಟ್ ಮೊದಲಾದವರೆಲ್ಲರು ಶುಕ್ರವಾರದದಿನ ದುರ್ಘಟಿತದ ಬಗ್ಗೆ ಮದರಾಸಿನಿಂದ ನೇರೆ ಕಂಡ ಸ್ಥಳಕ್ಕೆ ಹೊರಟುಹೋದರು. ಈ ವಿಚಾರಣೆಯು ಪ್ರಾರಂಭಿಸಿ ಅದರ ಫಲಿತಾಂಶವು ಹೊರಗಾಗುವ ತನಕ, ಇಂತಾ ಅಪಾಯವು ಸಂಭವಿಸದಿರುವದಕ್ಕೆ ಪೂರ್ವಭಾವಿಯಾಗಿ ಯಾವ ಏರ್ಪಾಡುಗಳೂ ಮಾಡಲ್ಪಡದೆ ಹೋಗಿ ಯಾರ ಔದಾಸೀನ್ಯದಿಂದ ಹೀಗೆ ಬಹುಮಂದಿ ಪ್ರಾಣಗಳಂ ಕಳೆದುಕೊಳ್ಳಬೇಕಾಯಿತೋ ಆ ಅಂಶ ವ್ಯಕ್ತವಾಗಲಾರದು. ಕೆಲವು ದಿವಸಗಳ ಹಿಂದೆ ವಾಯುವ್ಯದಿಕ್ಕಿನ ಮಾರ್ಗದಲ್ಲಿಯೂ ಇದೇ ಮಾರ್ಗದಲ್ಲಿಯೂ ರಸ್ತೆ ಒಡೆದುಹೋದಾಗ ಅದರ ಉಸ್ತುವಾರಿ ಜನರ ಜಾಗರೂಕತೆಯಿಂದ ಅಪಾಯಯಾವದೂ ಸಂಭವಿಸಲಿಲ್ಲವು. ಈಗ ಉಂಟಾದ ವಿಪತ್ತು ಪ್ರಬಲತರವಾದುದಾಗಿಯೂ, ಪ್ರಾಣಹಾನಿಕರವಾದುದಾಗಿಯೂ, ಕೇವಲ ಶೋಚನೀಯವಾದುದಾಗಿಯೂ ಇರುತಿದೆ. ಮದರಾಸ್ ರೈಲ್ವೆ ಮಾರ್ಗದಲ್ಲಿ ಯಾವಾಗಲು ಇಂತಾ ಅಪಾಯಗಳು ಸಂಭವಿಸಿದ್ದಿಲ್ಲವು. ಆದುದರಿಂದಲೇ ಇತರ ರೆಯಿಲ್ ಮಾರ್ಗಗಳಿಗಿಂತಲೂ ಈ ಮಾರ್ಗದಲ್ಲಿ ಸಂಚರಿಸುವುದು ನಿರುಪಾಧಿಕವೆಂಬ ಹಿಂದು ಬಗೆ ಧೈರ್ಯವೂ, ಕಂಪನಿಗೆ ಪ್ರಶಸ್ತಿಯೂ ಉಂಟಾಗಿದ್ದವು. ಈಗ ತಿಳಿಯಬಂದಿರುವ ಮಟ್ಟಿಗೆ ಈ ಅಪಾಯಕ್ಕೆ ಯಾರೂ ಗುರಿಯಾಗುವಂತೆ ಕಾಣಿಸಲಿಲ್ಲವು. ಪರಂತು ಮೃತಪಟ್ಟವರ ಕುಟುಂಬಗಳಿಗೆ ಸಂಭವಿಸಿದ ಹಾನಿಯೂ ನಷ್ಟವೂ ಅಪ್ರತೀಕಾರವಾದ ಬಗ್ಗೆ ಬಹಳ ಚಿಂತಿಸಬೇಕಾಗಿರುತಿದೆ.

## THE MONEY MARKET.

**Stocks, Shares and Exchange**

ಮದರಾಸ್, ಶನಿವಾರ, ತಾ|| 11ನೇ ನವೆಂಬರ್, 1893.

ಸೇಕಡ ೪ರೂ. ಬಾಬತು ಇಂಡ್ಯಾಗವರ್ನಮೆಂಟ ಪತ್ರಗಳು 104-12-0ರೂ.ಗಳಿಂದ 105-1-0 ರೂ ವರೆಗೆ,

ಸೇಕಡ ಮೂರುವರೆ ರೂ ಬಾಬತು ಗವರ್ನಮೆಂಟ್ ಪತ್ರಗಳು, 98-8-0 ರೂ. ಗಳಿಂದ 99-0-0 ವರೆಗೆ

ಮದರಾಸ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತು, 98[illegible]-0-0ರೂ. ಗಳಿಂದ 995-0-0ವರೆಗೆ

ಕಮರ್ಷಿಯಲ್ ವ ಲ್ಯಾಂಡ ಮಾರ್ಟಗೇಜ್ ಬ್ಯಾಂಕ್ ಷೇರುಗಳು, (100ರೂ) ಬಾಬತು 150-0-0ರೂ ಗಳಿಂದ 155-0-0 ರೂ ವರೆಗೆ.

ಸವರನ್‌ಗಳು, ಪ್ರತಿ 1 ಕ್ಕೆ 16-1-0 ರೂಪಾಯಿಗಳಿಂದ 16 3-0 ರೂ ವರೆಗೆ.

ಲಂಡನ್ ಬ್ಯಾಂಕಿನಮೇಲೆ ಕೊಡಲ್ಪಡುವ ಬ್ಯಾಂಕ್ ಬಿಲ್ಸ್ ಧಾರಣೆ ದರದ ಪಟ್ಟಿಗಳು —

6 ತಿಂಗಳ ವಾಯಿದೆಗೆ 1s 3 5/16 d.

4 " 1s 3 [illegible] d

ಕೇಳಿದಾಗಕೊಡಲ್ಪಡುವದಕ್ಕೆ 1s. 3 5/32 d

## LOCAL AND PROVINCIAL NEWS

ಪಟ್ಟಣದ ಮತ್ತು ಪ್ರಾಂತ್ಯದೇಶ ವೃತ್ತಾಂತಗಳು

ಇದುವರೆಗೆ ಕಂಟೋನ್ಮೆಂಟ್ ಸ್ಟೇಷನೆಂಬದಾಗಿ ಕರೆಯಲ್ಪಡುತಲಿದ್ದ ಸ್ಟೇಷನನ್ನು ಮದರಾಸ್ ರೆಯಿಲ್ವೇ ಕಂಪೆನಿಯವರು ಬೌರಿಂಗ್ ಪೇಟ ಸ್ಟೇಷನೆಂಬದಾಗಿ ಬದಲಾಯಿಸಿರುವಂತೆ ನೋಟೀಸ್ ಮಾಡಿರುತಾರೆ.

ಇದುವರೆಗೂ ಇಲ್ಲಿ ಆಕ್ಟಿಂಗ್ ರೆಸಿಡೆಂಟರಾಗಿರುತಲಿದ್ದ ಮಿ|| ಶಾಬ್‌ಯವರು ಮರಳಿ ನೀಲಗಿರಿಗೆ ಹೋಗಿ ತಮ್ಮ ಕೆಲಸದ ಚಾರ್ಜನ್ನು ಶೀಘ್ರ ವಹಿಸಿಕೊಳ್ಳುವದಕ್ಕೆ ಮುಂದಾಗಿ ಒಂದು ತಿಂಗಳ ರಜಾ ತೆಗೆದುಕೊಳ್ಳುವವರಾಗಿದಾರಂತೆ.

ಇಲ್ಲಿನ ಕಾಯಂ ಅಸಿಸ್ಟೆಂಟ ರೆಸಿಡೆಂಟರಾದ ಮೇಜರ್ ಸಿ. ಡಬ್ಲ್ಯು ರಾವೆನ್‌ಷಾಯವರು ರಜಾ ಪಡೆದು ಇಂಗ್ಲಾಂಡಿಗೆ ಹೋಗಿದ್ದು ಕಳೆದ ವಾರದಲ್ಲಿ ವಾಪಸ್ ಬಂದು ತಮ್ಮ ಕೆಲಸದ ಚಾರ್ಜನ್ನು ಮಿ|| ಹೆಚ್. ವಿ. ಕಾಬ್‌ಯವರಿಂದ ತೆಗೆದುಕೊಂಡು ಕೆಲಸ ನೋಡುತಲಿರುವಂತೆ ತಿಳಿಯಬರುತಿದೆ.

ಈಗ್ಯೆ ಒಂದೆರಡು ತಿಂಗಳ ಹಿಂದೆ ೬ ತಿಂಗಳ ಫರ್ಲೋ ರಜಾ ತೆಗೆದುಕೊಂಡಿದ್ದ ಚೀಫ್‌ಕೋರ್ಟ್ ರಿಜಿಸ್ಟ್ರಾರರಾದ ಮಿ|| ಎಚ್. ಅನಂತಸ್ವಾಮಿರಾಯರವರು ಹಂಗಾಮಿಯಾಗಿ ಅಂಡರ್ ಸೆಕ್ರೆಟರಿಯಾಗಿ ನಿಯಮಿಸಲ್ಪಟ್ಟು ಗತಶುಕ್ರವಾರದ ದಿನ ಸದರೀ ಕೆಲಸದ ಚಾರ್ಜನ್ನು ತೆಗೆದುಕೊಂಡಂತೆ ಕೇಳುತ್ತೇವೆ

ಈಚೆಗೆ ಚಾಮರಾಜನಗರ ತಾಲ್ಲೂಕಿನಲ್ಲಿ ಹೊಸದಾಗಿ ಹಿಡಿಯಲ್ಪಟ್ಟ ೩೩ ಆನೆಗಳನ್ನು ಕೆಡ್ಡಾ ಸೂಪರಿಂಟೆಂಡೆಂಟರಾದ ಮಿ|| ರಾಮಯ್ಯಂಗಾರ್ಯವರು ಪಾಲಘಾಟ ಪ್ರಾಂತದಲ್ಲಿ ಹರಾಜ್ ಹಾಕಲು ಅವುಗಳಿಗೆ ಒಟ್ಟು ೩೩,೦೦೦ ರೂಪಾಯಿಗಳು ಹುಟ್ಟುವಳಿಯಾದಂತೆ ಕೇಳುತ್ತೇವೆ.

ಕಳೆದ ಶುಕ್ರವಾರದ ದಿನ ಬೆಳಿಗ್ಗೆ ಕ್ಯಾವಲ್ರಿ ಇನ್‌ಸ್ಪೆಕ್ಟರ್ ಜನರಲವರು ಸೇನೆಯ ಅಜಮಾಯಿಷಿಬಗ್ಗೆ ಈವೂರಿಗೆ ದಯಮಾಡಿದರು. ಇವರ ಆಗಮನಸೂಚಕವಾಗಿ ಮರ್ಯಾದಾರ್ಥ ತೋಪುಗಳು ಹಾಕಲ್ಪಟ್ಟವು. ಇವರು ಈ ತಿಂಗಳ ೨೦ನೇ ತಾರೀಖಿನ ವರೆಗೆ ಈ ಪ್ರಾಂತ್ಯದಲ್ಲಿರುವರು

ಶ್ರೀಮನ್ ಮಹಾರಾಜರವರ ಸವಾರಿಯು ಮುಂಬೈಗೆ ದಯಮಾಡುವ ಕಾಲವು ಅದ್ಯಾಪಿ ನಿಶ್ಚಯವಾಗಿಲ್ಲವೆ. ದಿವಾನ್ ಸರ್. ಕೆ. ಶೇಷಾದ್ರಿಅಯ್ಯರವರು ಮಹಾರಾಜರವರ ಸವಾರಿಯೊಡನೆ ಹೋಗುವದಿಲ್ಲವೆಂತಲೂ, ಪರಂತು ಬರುವ ಬುಧವಾರ ಅವರು ಡಿಸ್ಟ್ರಿಕ್ಟ್‌ಜಾತಿಗೆ ಸರ್ಕ್ಯೂಟ ಹೊರಡುವದಕ್ಕಾಗಿ ತಕ್ಕ ಏರ್ಪಾಡುಗಳಂ ಮಾಡುತಲಿದಾರೆಂತಲೂ ಕೇಳುತ್ತೇವೆ.

ಇಲ್ಲಿನ ಸಿವಿಲ್ ಆಸ್ಪತ್ರೆಯಲ್ಲಿ ಕೆಲಸ ಮಾಡುತಲಿದ್ದ ಅಸಿಸ್ಟೆಂಟ ಸರ್ಜನ್ ಸುಬ್ಬಪ್ಪನವರು ತುಮಕೂರಿಗೂ, ತುಮಕೂರಿಗೆ ಈಗ್ಯೆ ಕೆಲವು ತಿಂಗಳ ಕೆಳಗೆ ಇಲ್ಲಿಂದ ವರ್ಗವಾಗಿ ಹೋಗಿದ್ದ ಮಿ|| ಲಕ್ಷ್ಮಣಸ್ವಾಮಿ ಯೆಂಬವರು ಈವೂರಿಗೂ ವರ್ಗ ಹೊಂದಲ್ಪಟ್ಟು ಅವರವರು ತಮ್ಮ ತಮ್ಮ ಕೆಲಸಗಳ ಚಾರ್ಜನ್ನು ವಹಿಸಿದರೆಂದು ತಿಳಿಯಬರುತಿದೆ.

ಮೈಸೂರ್ ಗವರ್ನಮೆಂಟನವರು ಅವಶ್ಯಕವೆಂತಲೂ ಪ್ರಜೆಗಳ ಪೈಕಿ ಅನೇಕರು ಅನಾವಶ್ಯಕವೆಂತಲೂ ವಾದಿಸುತಲಿರುವ ಬಾಲ್ಯವಿವಾಹ ನಿರೋಧಕ ನಿಬಂಧನೆಯ ವಿಷಯದಲ್ಲಿ ಲೌಕಿಕರ ಅಭಿಪ್ರಾಯಗಳು ನಾನಾರೂಪದಿಂ ವ್ಯಕ್ತಗೊಳಿಸಲ್ಪಟ್ಟವಷ್ಟೆ. ಈಗ ಸದರೀ ನಿಬಂಧನೆಯ ಯುಕ್ತತೆಯಂ ಕುರಿತು ಮೈಸೂರಲ್ಲಿ ಕತ್ತವಾಡಿ ಪುರದ ಅಗ್ರಹಾರದೊಳಿರುವ ವೇ|| ರಾಯೂರ್ ಜಯರಾಮಾಚಾರ್ಯರೆಂಬವರು ಮೈಸೂರ್ ಚಿಂತಾಮಣಿ ಎಂಬ ಪತ್ರಿಕೆಗೆ ಇವರಡಿ ಕಂಡ ಒಂದು ಲೇಖನವಂ ಬರೆದು ಕಳುಹಿಸಿರುತ್ತಾರೆ. ಸದರೀ ಲೇಖನದಲ್ಲಿ ಮುಖ್ಯವಾಗಿ ಅವರು ಸೂಚಿಸುವದೇನೆಂದರೆ.—"ಈಗ ರೂಢಿಯಲ್ಲಿ ತರಬೇಕೆಂದಿರುವ ಕಾನೂನು ಶಾಸ್ತ್ರಸಮ್ಮತವಲ್ಲವೆಂತಲೂ, ಇದನ್ನು ರೂಢಿಯಲ್ಲಿ ತರುವುದರಿಂದ ಬ್ರಾಹ್ಮಣ್ಯಕ್ಕೆ ವಿಶೇಷ ಹಾನಿಯಾಗುವುದೆಂತಲೂ, ಹಾಗೆ ಶಾಸ್ತ್ರಸಮ್ಮತವೆಂದು ಹೇಳುವವರು "ನಷ್ಟೇಮೃತೆ" ಎಂಬ ಸ್ಮೃತಿಗೂ, "ದಶವಾರ್ಷಿಕೀಕನ್ಯಾ" ಎಂಬವಕ್ಕೂ, "ಅಷ್ಟವಾರ್ಷಿಕೀಕನ್ಯಾ" ಎಂಬವಕ್ಕೂ, ಮೂಲಾಧಾರವಾದ ವೇದದಲ್ಲಿ ಹೇಳಿರುವುದೇನೆಂಬುವದನ್ನು ನಿಷ್ಕರ್ಷೆ ಮಾಡಬೇಕೆಂತಲೂ, ಈಗ ವಿಚಾರದಲ್ಲಿರುವ ಕಾನೂನು ವೇದವಿರುದ್ಧವೆಂದು ತೋರ್ಪಡಿಸಲು ತಾವು ಸಿದ್ಧರಾಗಿರುವಂತೆಯೂ ಬರೆದು ಇದಾರೆ ಮತ್ತು ಪೂರ್ವತತ್ವವನ್ನರಿತು ಈ ಕೆಲಸವನ್ನು ಆಗ ಮಾಡಿಸಬೇಕೆಂಬಿರುವವರು ಇತರರಾದ ಯೋಗ್ಯತೆಯುಳ್ಳವರನ್ನು ಬಿಟ್ಟು, ದೊಡ್ಡದೊಡ್ಡವರೂ, ಶ್ರೀಮನ್ ಮಹಾರಾಜರವರೂ, ದಿವಾನರೇ ಮೊದಲಾದ ಅಧಿಕಾರಿಗಳೂ ಒಬ್ಬ ಮಠಾಧಿಕಾರಿಗಳ ಸನ್ನಿಧಿಯಲ್ಲಿ ಸಭೆ ಸೇರಿಸಿದರೆ, ಆ ಕಾಲದಲ್ಲಿ ತಾವು ಈ ವಿಷಯದ ಸ್ಮೃತಿಗಳಿಗೆ ಮೂಲಭೂತವಾದ ವೇದಗಳನ್ನು ಚೆನ್ನಾಗಿ ಉಪನ್ಯಾಸ ಮಾಡಿ, ಈ ವಿಷಯವನ್ನು ತಿಳಿಯದವರು ಪ್ರಧಾನರಾಗ ಮಾಡಿರುವುದೆಲ್ಲ ಅಸಂಗತವೆನಿಸುವರೆಂತಲೂ, ಹಾಗಿಲ್ಲದಿದ್ದರೆ ತಕ್ಕಶಿಕ್ಷೆಗೆ ಗುರಿಯಾಗುವರೆಂತಲೂ, ಧರ್ಮಿಷ್ಠರಾದವರಿದ್ದರೆ ಈ ಕೆಲಸವನ್ನು ಮಾಡಿಸಲೆಂತಲೂ ಕೂಡ ಹೇಳುತ್ತಾರೆ.'

## THE MYSORE GAZETTE

ಮೈಸೂರು ಗೆಜೆಟಿ.

ಶ್ರೀಮನ್ಮಹಾರಾಜಾಸಾಹೇಬ ಬಹದೂರರವರ ಸರ್ಕಾರದ ಕೆಲವು ಹುಕುಂ ಇಸ್ತಿಹಾರನಾಮೆಗಳು.

ನಂ ೩೬೧೬-೦. ೧೬೩೮, ತಾ|| ೧೪ನೇ ಅಕ್ಟೋಬರ್ ೧೮೯೩—ಹೊಳಲ್ಕೆರೆ ತಾಲ್ಲೂಕ್ ಅಮಲ್ದಾರ್ ಬಿ. ಲಕ್ಷ್ಮಣರಾಯರವರಿಗೆ ೧೮೯೩ನೇ ಇಸವಿ ಸೆಪ್ಟೆಂಬರ್ ೬ನೇ ತಾರೀಖ್ ಲಾಗಾಯತು, ಅದೇ ತಿಂಗಳ ೧೬ನೇ ಮುಕ್ಕಾಂ ರಪಟ— ೧. ೧೧೮೦ ನೇ ನಂಬರುಳ್ಳ ಇಷ್ತಿಹಾರನಾಮೆಯ ಮೂಲಕ ಕೊಡಲ್ಪಟ್ಟಿದ್ದ ಕ್ಯಾಜುಯಲ್ ರಜಾ ೮ ದಿನಗಳವರೆಗೆ ಜಾಸ್ತೀ ಮಾಡಲ್ಪಟ್ಟಿತು.

ಪೋಲಿಸ್ ನಂ|| ೧೫೫೩, ತಾ|| ೧ನೇ ನವೆಂಬರ್, ೧೮೯೩—ಗೋಲ್ಡ್‌ಫೀಲ್ಡ್‌ಗಳಲ್ಲಿ ಸ್ಪೆಷಿಯಲ್ ಪೊಲೀಸ್ ಇನ್‌ಸ್ಪೆಕ್ಟರಾಗಿರುವ ಮೆ|| ಡಿ. ಎ. ಬಾಲಸ್ವಾಮಿಯವರು, ಮೆ|| ಸೈಯದ್ ಅಮೀರ್ ಹುಸೇನ್‌ರವರು ಇತರಕೆಲಸದಮೇಲಿರುವವರೆಗೆ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಚಿತ್ರದುರ್ಗ ಡಿಸ್ಟ್ರಿಕ್ಟ್ ಪೊಲೀಸ್ ಅಸಿಸ್ಟೆಂಟ ಸೂಪರಿಂಟೆಂಡೆಂಟರಾಗಿ ನೇಮಕಮಾಡಲ್ಪಟ್ಟಿರುತ್ತಾರೆ. ಇವರು ಕೂಡಲೆ ಕೆಲಸದಮೇಲೆ ಹೋಗಿ ಹಾಜರಾಗತಕ್ಕದ್ದು.

ಪೋಲಿಸ್ ನಂ|| ೧೮೩೩—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೫೦ನೇ ಆರ್ಟಿಕಲ್ ಅನುಸರಿಸಿ ಕೋಲಾರ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮೆ|| ಸಿ ಮಾದಯ್ಯನವರಿಗೆ, ೧೮೯೩ನೇ ಇಸವಿ ಅಕ್ಟೋಬರ್ ೩೧ನೇ ಮುಕರ್ರಂ ಲಾಗಾಯತು ೧೫ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತಿದೆ. ಚಿಕ್ಕಬಳ್ಳಾಪುರದ ಸಬ್‌ಡಿವಿಜನ್ ಆಫೀಸರರು ಮೆ|| ಮಾದಯ್ಯನವರು ರಜಾಮೇಲೆ ಗೈರುಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ ಸದರೀ ಡಿಸ್ಟ್ರಿಕ್ಟಿಗೆ ಸಂಬಂಧಿಸಿದ ಚಾಲ್ತೀ ಕೆಲಸಗಳ ಚಾರ್ಜನ್ನಿಟ್ಟಿರತಕ್ಕದ್ದು.

ನಂ|| ೨೮೦೩—೧. ೯. ೩೭—೯೩ —ಚಳ್ಳಕೆರೆ ತಾಲ್ಲೂಕ್ ಅಮಲ್ದಾರ್ ಜೆ. ಶ್ರೀನಿವಾಸ ರಾಯರವರಿಗೆ ೧೮೯೩ನೇ ಇಸವಿ ಸೆಪ್ಟಂಬರ್ ೨೮ ನೇ ಮಾರ್ಕಂ ೬೮೦೦—೩೭ನೇ ನಂಬರಿನಲ್ಲಿ ಇಟ್ಟ ಪಾರಿನಾಮೆಯ ಮೂಲಕ ಕೊಡಲ್ಪಟ್ಟಿದ್ದ ೬೦ ದಿನಗಳ ಪ್ರಿವಿಲೇಜ್ ರಜಾ ಇನ್ನೊಂದು ದಿನದವರಕ ಜಾಸ್ತೀ ಮಾಡಲ್ಪಟ್ಟಿರುತದೆ

ನಂ|| ೨೫೩೩—೧. ೯. ೨೬—೯೦—ತಾ||೩ನೇ ನವಂಬರ್, ೧೮೯೩—ಮೈಸೂರು ಡಿಸ್ಟ್ರಿಕ್ಟ್ ಟ್ರೆಜರಿ ಆಫೀಸರ್ ಮ||ಕೃಷ್ಣಯ್ಯಂಗಾರ್ರವರು, ೧೮೯೩ನೇ ಇಸವಿ ಅಕ್ಟೋಬರ್ ೬ನೇ ತಾರೀಖಿನ ಪೂರ್ವಾಹ್ನದಲ್ಲಿ ಟೌನ್ ಮ್ಯಾಜಿಸ್ಟ್ರೇಟಿ ಛಾರ್ಜನ್ನು ಅಸಿಸ್ಟೆಂಟ್ ಕಮಿಷನರ್ ಮ|| ಪಂಚನದರಾಯರವರಿಗೊಪ್ಪಿಸಲು ಅವರದಂ ತೆಗೆದುಕೊಂಡಿರುತ್ತಾರೆ.

ನಂ|| ೨೫೩೮—೧. ೧. ೧೭೦—೯೦—ಸಾಗರ ತಾಲ್ಲೂಕು ಅಮಲ್ದಾರ್ ಪಿ ನಂಜುಂಡನಾಯಕರವರಿಗೆ ೧೮೯೩ನೇ ಇಸವಿ ಜೂನ್ ೧೯ನೇ ಮಾರ್ಕಂ ೩೭೩ನೇ ನಂಬರ್ ಗವರ್ನಮೆಂಟ್ ಇಟ್ಟ ಪಾರಿನಾಮೆಯ ಮೂಲಕ ಕೊಡಲ್ಪಟ್ಟಿದ್ದ ೩ ತಿಂಗಳ ಪ್ರಿವಿಲೇಜ್ ರಜಾವನ್ನು, ಅವರು ೧೮೯೩ನೇ ಇಸವಿ ಜೂಲೈ ೩ನೇ ತಾರೀಖಿನ ಪೂರ್ವಾಹ್ನದಾರಭ್ಯ ಉಪಯೋಗಿಸಿಕೊಂಡು ೧೮೯೩ನೇ ಇಸವಿ ಸೆಪ್ಟಂಬರ್ ೩ನೇ ತಾರೀಖಿನ ಪೂರ್ವಾಹ್ನದಲ್ಲಿ ತಮ್ಮ ಕೆಲಸಕ್ಕೆ ವಾಪಸು ಬಂದು ತಾಲ್ಲೂಕ್ ಛಾರ್ಜನ್ನು ತೆಗೆದುಕೊಂಡಿರುವದರಿಂದ ಅವರ ರಜಾ ಪೈಕಿ ಉಪಯೋಗಿಸಿಕೊಳ್ಳಲ್ಪಡದ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿರುತದೆ.

ನಂ|| ೨೬೩೮—೧. ೯. ೩೭೯—೯೦—ತಾ||೮ನೇ ನವಂಬರ್ ೧೮೯೩—ಮ|| ಆರ್ ವಿಜಯೇಂದ್ರರಾಯರವರು ೧೮೯೩ನೇ ಇಸವಿ ಅಕ್ಟೋಬರ್ ೧೩ನೇ ತಾರೀಖಿನ ಪೂರ್ವಾಹ್ನದಲ್ಲಿ ರಿಜಿಸ್ಟ್ರಾರ್ ಜನರಲ್ ಮತ್ತು ಕಂಪೆನಿಗಳ ರಿಜಿಸ್ಟ್ರಾರ್ ಆಫೀಸ್ ಛಾರ್ಜನ್ನು ಮ|| ವಿನಾಯಕಯ್ಯನವರಿಗೊಪ್ಪಿಸಿರುತ್ತಾರೆ.

ನಂ||೨೬೩೩—೧. ೯. ೩೨೮—೯೦—೧೮೯೩ನೇ ಇಸವಿ ಆಗಸ್ಟ್ ತಿಂಗಳಲ್ಲಿ ನಡೆದ ಎಕ್ಸೈಜ್ ಪರೀಕ್ಷೆಯಲ್ಲಿ ಇವರಡಿ ಕಂಡ ಉಮೇದ್ವಾರರು ತೇರ್ಗಡೆಯಾಗಿರುತ್ತಾರೆ:—ಮ||ಆರ್ಥರ್ ಬೇಜ್, ಜನರಲ್ ಅಸಿಸ್ಟೆಂಟ್ ಸೂಪರ್‌ವೈಜರ್. ಮ||ಎಪ್ ಸಿ. ಕಾಸ್ಟೆಲ್ಲೊ, ಬೆಂಗಳೂರು ಎಕ್ಸೈಜ್ ಇಲಾಖಾ ಅಸಿಸ್ಟೆಂಟ್ ಸೂಪರ್‌ವೈಜರ್. ಟಿ. ಶ್ರೀಕಂಠಯ್ಯ, ಕೋಲಾರ ಡಿಸ್ಟ್ರಿಕ್ಟ್ ಅಬಕಾರಿ ದರೋಗ. ಬೆಲವಾಡಿಹಳ್ಳಿ ಸುಬ್ಬರಾವ್, ಶಿವಮೊಗ್ಗ ಡಿಸ್ಟ್ರಿಕ್ಟ್ ಎಕ್ಸೈಜ್ ಇಲಾಖಾ ಜನರಲ್ ಅಸಿಸ್ಟೆಂಟ್ ಸೂಪರ್‌ವೈಜರ್. ಕೆ. ನಂಜುಂಡಯ್ಯ, ಮಾಗಡಿ ತಾಲ್ಲೂಕ್ ಹೆಡಮುನ್ಷಿ. ಹೊಸೂರು ಮುನಿದಾಸು, ಕೋಲಾರ ಡಿಸ್ಟ್ರಿಕ್ಟ್ ಎಕ್ಸೈಜ್ ಇಲಾಖೆ [illegible] ಮ|| ವಿ. ಎ. ನೆಲ್ಸನ್, ಬೆಂಗಳೂರು ಡಿಸ್ಟ್ರಿಕ್ಟ್ ಎಕ್ಸೈಜ್ ಇಲಾಖಾ ಅಸಿಸ್ಟೆಂಟ್ ಸೂಪರ್‌ವೈಜರ್. ಸಿ. ಆರ್. ನಾರಾಯಣಸ್ವಾಮಿ ಮೊದಲಿಯಾರ್, ಚಿತ್ರದುರ್ಗ ಡಿಸ್ಟ್ರಿಕ್ಟ್ ಅಬಕಾರಿ ದರೋಗ

ಸರ್ ೧೮೯೩ನೇ ಇಸವಿ ಆಗಸ್ಟ್ ತಿಂಗಳಲ್ಲಿ ನಡೆದ ಎಕ್ಸೈಜ್ ಪರೀಕ್ಷೆಗೆ ಹೋಗಿದ್ದ ಉಮೇದ್ವಾರರಲ್ಲಿ ೧೦೬, ೧೯೦ ೨೦೦ ನೇ ರಿಜಿಸ್ಟರ್ ನಂಬರುಗಳುಳ್ಳವರು ಎಕ್ಸೈಜ್ ಮತ್ತು ಓಪಿಯಂ ಆಕ್ಟುಗಳಲ್ಲಿ ತೇರ್ಗಡೆಯಾಗಿರುವದಿಲ್ಲವು. ೪೨ನೇ ನಂಬರಿನವರು ಹಾಜರಾಗಲಿಲ್ಲವು

## ಮುಜರಾಯಿ ಇಲಾಖಾ.

ನಂ|| ೮೬೯. ತಾ||೨೦ನೇ ಅಕ್ಟೋಬರ್ ೯೩—೧೮೯೩ನೇ ಇಸವಿ ಸೆಪ್ಟಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಮೈಸೂರಿನಲ್ಲಿ ಮಹಾರಾಜರವರ ಸಂಸ್ಕೃತ ಕಾಲೇಜಿನಲ್ಲಿ ಜರಿಗಿದ ವಿದ್ವತ್ಪರೀಕ್ಷೆಯಲ್ಲಿ ತೇರ್ಗಡೆಯಾದ ಇವರಡಿ ಕಂಡವರಿಗೆ ವಿದ್ವಾನ್ ಎಂಬ ಯೋಗ್ಯತಾ ಪತ್ರಿಕೆಗಳು ಅವರವರ ಹೆಸರುಗಳ ವರ್ಗದಲ್ಲಿ ತಿಳಿಸಲ್ಪಡುವ ಶಾಸ್ತ್ರಗಳಲ್ಲಿ ಕೊಡಲ್ಪಟ್ಟಿರುತದೆ.—

ಧರ್ಮಶಾಸ್ತ್ರದಲ್ಲಿ—ಕಾರ್ಬಾನಹಳ್ಳಿ ನರಸಿಂಹಶಾಸ್ತ್ರಿಗಳು.
ಸಾಹಿತ್ಯದಲ್ಲಿ—ಪೆರಸಿಂಹಕೇಶವಶಾಸ್ತ್ರಿ, ಎಳಂದೂರು ಶ್ರೀಕಂಠಶಾಸ್ತ್ರಿಗಳು.
ವ್ಯಾಕರಣದಲ್ಲಿ—ಕಾಶಿ ಸುಬ್ರಹ್ಮಣ್ಯಶಾಸ್ತ್ರಿ. ಕಂಚಿ ವೆಂಕಟಾಚಾರ್.
ತರ್ಕದಲ್ಲಿ—ನಡಾದೂರು ವಂಗಾಚಾರ್. ಕೊಂಡಾಮಮ ಕೃಷ್ಣಮಾಚಾರ್. ಶ್ರೀರಂಗಂ ವೆಂಬಾರ್ ಕೃಷ್ಣಮಾಚಾರ್.

ನಂ|| ೮೬೩೦ ತಾ|| ೩೧ನೇ ಅಕ್ಟೋಬರ್ ೯೩—ಕೃಷ್ಣರಾಜಪೇಟೆ ವಾಸಸ್ಥರಾದ ಇವರಡಿ ನಮೂದಿಸುವವರು ಸದರೀ ತಾಲ್ಲೂಕಿಗೆ ಸೇರಿದ ಕೆಳಗೆ ವಿವರಿಸುವ ಛತ್ರ ಮತ್ತು ದೇವಸ್ಥಾನಗಳಿಗೆ ಧರ್ಮದರ್ಶಿಗಳಾಗಿ ನಿಯಮಿಸಲ್ಪಟ್ಟಿರುತ್ತಾರೆ.

೧. ಕೃಷ್ಣರಾಜಪೇಟೆ ಕಸಬಾದಲ್ಲಿರುವ ಶೇಖ್ದಾರ್ ರಂಗಯ್ಯಂಗಾರ್ರು—ಕೃಷ್ಣರಾಜಪೇಟೆ ಕಸಬಾ ಅನ್ನಛತ್ರ.
೨. ಶೀಟಿ ಶಿರಸ್ತೇದಾರ್ ರಾಮರಾಯರ ಮಕ್ಕಳು ಶೇಷಗಿರಿರಾಯರು—ಚಿನಕುರಳಿ ಅನ್ನಛತ್ರ, ಕನ್ನಂಬಾಡಿಯಲ್ಲಿರುವ ಮಹಾಲಕ್ಷ್ಮೀದೇವಸ್ಥಾನ
೩. ಕೃಷ್ಣರಾಜಪೇಟೆ ಸಮೀಪದ ಕೊಮ್ಮೇನಹಳ್ಳಿಯಲ್ಲಿರುವ ಲಿಂಗರಾಜ ಗೌಡರು—ಕನ್ನಂಬಾಡಿ ಗೋಪಾಲಸ್ವಾಮಿ ದೇವಸ್ಥಾನ ಕನ್ನಂಬಾಡಿ ಕಣ್ವೇಶ್ವರದೇವಸ್ಥಾನ.

## ನಮ್ಮಗಳಿಗೆ ಬರತಕ್ಕ ಜಾಡ್ಯಗಳು ಎಂತಾವು.

ರಾತ್ರಿಯಲ್ಲಿ ಕೆಳಗಿನರೀತಿ ನಮ್ಮಗಳಿಗೆ ತಿಳಿಯದಹಾಗೆ ಜಾಡ್ಯಗಳು ನಮ್ಮಲ್ಲಿ ಪ್ರವೇಶ ಮಾಡುತವೆ. ಸಾಧಾರಣವಾಗಿ ಮನುಷ್ಯಕೋಟಿಗಳಿಗೆ ಎದೆಯಲ್ಲಿ, ಪಕ್ಕೆಗಳಲ್ಲಿ, ಕೊಲೆಗಳು ಕಾಣುತವೆ. ಆ ಕಾಲಗಳಲ್ಲಿ ಜನರು ಸಾಧಾರಣವಾಗಿ ಮಂದವಾಗಿ ವಿಶ್ರಾಂತವಾಗಿ ಬಾಯಲ್ಲಿ ಒಂದು ವಿಧ ಜೈಯು, ಇವುಗಳು ಪ್ರಾಯಶಃ ಉದಯಕಾಲದಲ್ಲಿರುತವೆ. ಆನಂತರ, ದಂತಗಳಲ್ಲಿ ಪಾಚಿ ಅಂಟುಸುತ್ತ, ಕಟ್ಟಿಕೊಂಡು ಊರುತವೆ ಆ ಸಮಯಗಳಲ್ಲಿ ಆಹಾರವು ಕಮ್ಮಿ, ಗರ್ಭದಲ್ಲಿ ಒಂದು ಬಗೆ ಭಾರವು, ಕೆಲವು ವೇಳೆಗಳಲ್ಲಿ ಮೈಕಪ್ಪು, ಗರ್ಭದ ಉಬ್ಬಸದಲ್ಲಿ ಕೆಡುಕು, ಭೋಜನದಲ್ಲಿ ಅತೃಪ್ತಿಯು, ಕಣ್ಣುಗಳು ಆಕಸ್ಮಿಕ ಎಳೆಕೊಂಡು ಇರೋದು, ಕೈ ಕಾಲುಗಳು ಪಾದಗಳು ಶೀತಲವು ಆ ಮೇಲೆ ಕೆಮ್ಮು ಆರಂಭಿಸಿ ಸ್ವಲ್ಪ ತಿಂಗಳಾದನಂತರ ಆ ಕೆಮ್ಮಿನಿಂದ ಬಾಯಲ್ಲಿ ಹರುಡುವ ಕಫದ ಗೆಳ್ಳೆನೆ ಶೇಖರಿಸೋದು, ಇತ್ಯಾದಿ ಕಾರಣಗಳಿಂದ ಜಾಡ್ಯಗ್ರಸ್ತನು ಪಕ್ಷೇಪ ಆಹಾರವನ್ನು ಬೇಕೋದು, ನಿದ್ರಾಭಂಗವು, ಅಕಾರಣದಿಂದ ಜಾಡ್ಯಗ್ರಸ್ತನಿಗೆ ಹಿಂದುಗಡೆ ಪಿತ್ತದ ಕೋಪವು, ಮಬ್ಬಿನ ಮನೋವ್ಯಾಧಿ, ಕೆಟ್ಟ ಸ್ವಪ್ನದಿಂದ ಚಿಂತೆ ಉಂಟು ಮಾಡುತವೆ. ಇದಲ್ಲದಹಾಗೆ ತಲೆಯಲ್ಲಿ ವಿಶೇಷ ವ್ಯಸನವಾದ ತಿರುಗುವದು, ಆಕಸ್ಮಾತ್ತಾಗಿ ಮೈಯುವ ರೋಗದ ಕಾಣುತವೆ ಆ ನರವಾಗು ಗಳಲ್ಲಿ ಕೆಮ್ಮಗಳು ಬಗಿಸಿ, ಗಾಲಬದ್ಧ ಮಾಡಿ, ಶರೀರದ ಚರ್ಮವನ್ನು ಒಣಗಿಸಿ, ಉಷ್ಣವಾಡಿ, ರಕ್ತವನ್ನು ಮಂದಮಾಡಿ, ಶರೀರದಲ್ಲಿ ಸ್ವಲ್ಪಗೆ ರಕ್ತವು ಓಡದೆ, ಕಣ್ಣುಗಳಲ್ಲಿರುವ ಸಾಧಾರಣವಾದ ಬೆಳುಪನ್ನು ಕಮ್ಮಿ ಮಾಡಿ, ಕಣ್ಣುಗಳಲ್ಲಿ ಹಳದಿ ಚುಕ್ಕೆಗಳು, ಅಲ್ಪಭೋಜನವು ಕಮ್ಮಿ, ಇಲ್ಲದ ಕಡಿಮೆಯಾಗಿ, ಆದರಲ್ಲಿ ವಿಶೇಷವಾದ ಬಣ್ಣ, ಸಾಧಾರಣವಾಗಿ ಮೂತ್ರವು ಬಿಳಿದ ರೀತಿಯಿಂದ ಅದಗಳು ಸೇರಿ ಮೂತ್ರವನ್ನು ಕೆಳಗಿಂಗೆ ಮಂದವಾಡುತವೆ. ಆ ಕಾರಣಗಳಿಂದ ಭುಜಿಸಿದ ಅನ್ನವನ್ನು ಉಗುಳೋದು, ಭುಜಿಸಿದ ಅನ್ನವು ಬಾಯಲ್ಲಿ ಕೆಟ್ಟ ಹುಳಿ ಹಾಗಿರುವದು, ಮತ್ತು ಎದೆಯಲ್ಲಿ ಅದುರು, ಕಣ್ಣುದೃಷ್ಟಿ ಕಡಮೆ, ಕಣ್ಣುಗಳಲ್ಲಿ ಮಚ್ಚೆಗಳು, ವಿಶೇಷವಾಗಿ ಶರೀರದಲ್ಲಿ ಬಲವು ಕಡಿಮೆ ಇತ್ಯಾದಿ ಚಿಹ್ನೆಗಳುಂಟಾದವತ್ತು ಕ್ರಮೇಪಿ ಕಾಣಬರುವ. ಈ ಜಾಡ್ಯದ ಚಿಹ್ನೆಗಳು ಅನೇಕವಿಧವಾಗಿ ಮುಕ್ಯಾಲಿನಭಾಗ ಜನಕೋಟಿಗೆ ಪರಿಪರಿವಿಧವಾಗಿ ಕಾಣುತವೆ. ಈ ಜಾಡ್ಯಗಳನ್ನು ವೈದ್ಯಶಾಸ್ತ್ರಗಳು ಸಟ್ಟಕ್ಕೆ ಪರಿಶೋಧನ ಮಾಡಲಿಕ್ಕೆ ತಿಳಿಯದೆ ಒಂದುವಿಧವಾದ ಜಾಡ್ಯಕ್ಕೆ ಮತ್ತೊಂದುವಿಧ ಚಿಕಿತ್ಸೆ ಮಾಡುವದು, ಇತ್ಯಾದಿ ಕಾರಣಗಳಿಂದ ಈ ಜಾಡ್ಯಗಳು ಸ್ವಸ್ಥವಾಗದ ಹಾಗಿರುತವೆ. ಇತ್ಯಾದಿ ಜಾಡ್ಯಗಳಿಗೆ ನಮರಾಗವಾದ ಔಷಧವು ಗರ್ಭದಲ್ಲಿ ಚಿಕಿತ್ಸೆ ಮಾಡಿದ ಪಕ್ಷದಲ್ಲಿ ಇವುಗಳನ್ನು ಸ್ವಸ್ಥ ಮಾಡುತವೆ ವೈದ್ಯರು ಸಾಧಾರಣವಾಗಿ ಅಜೀರ್ಣವ್ಯಾಧಿಗೆ ತಕ್ಕ ಚಿಕಿತ್ಸೆ ಮಾಡದಹಾಗೆ ಮತ್ತೊಂದು ವಿಧವಾದ ಚಿಕಿತ್ಸೆ ಮಾಡುವದರಿಂದ ರೀತಿಯಿಂದ ಜಾಡ್ಯಗಳು ಸ್ವಸ್ಥವಾಗದೆ ಇರುತವೆ.

ಮುಂದೆ ವಿವರಣೆ ಮಾಡಿದ ಜಾಡ್ಯಗಳನ್ನು ನಿರ್ಮೂಲಮಾಡಿ ಶಾಂತಿ ಮಾಡತಕ್ಕೆ ಔಷಧವು ತಾಯಿಶೀಗೇಲು ಕಷಾಯವು ಈ ಕಷಾಯವನ್ನು ಕ್ರಮವಾಗಿ ಪಾನ ಮಾಡುವದರಿಂದ ಜಾಡ್ಯ ರೋಗಗಳನ್ನು ಯಾವತ್ತು ಮಂತ್ರದಹಾಗೆ ಮಾಯವು ಮಾಡಿ ಶರೀರಕ್ಕೆ ಬಲವನ್ನು ಕೊಟ್ಟು ಅಲ್ಪ ಪಿಲ್ಲದಹಾಗೆ ಸ್ವಸ್ಥ ಮಾಡುತದೆ.

ತಾಯಿ ಶೀಗೇಲು ಕಷಾಯವು ಔಷಧವು ಕೆಮಿಸ್ಟು ಅಂಬೊಷ್ಟದ್ಯ ಆಸ್ಪತ್ರಿ ಬಜಾರುಗಳಲ್ಲಿ ವಿಕ್ರಯಕ್ಕೆ ಸಿಕ್ಕುತದೆ.

W. D

## ವಿಧವಾವಿವಾಹ ವಿಷಯದಲ್ಲಿ ಇಬ್ಬರ ಪಂಡಿತರ ತಾತ್ಪರ್ಯಗಳು.

ವಿಧವಾ ವಿವಾಹ ವಿಷಯದಲ್ಲಿ ಇಬ್ಬರು ದೊಡ್ಡಮನುಷ್ಯರಿಗೆ ಜರಿಗಿದ ಸಲ್ಲಾಪಗಳನ್ನು ಮದರಾಸ್ ಆಂಧ್ರಭಾಷಾ ಸಂಜೀವನಿಪತ್ರಿಕೆಯು ಪ್ರಕಟಿಸುತಿದೇನೆಂದರೆ:— ಮದರಾಸ್ ತಿರುವದೀಶ್ವರನ ಪೇಟೆಯಲ್ಲಿರುವ ಇಬ್ಬರು ದೊಡ್ಡಮನುಷ್ಯರು ವಿನೋದಾರ್ಥವಾಗಿ ವಿವಿಧ ವಿಷಯಗಳಂ ಕುರಿತು ಸಂಭಾಷಿಸುತಲಿರುವ ಸಮಯದಲ್ಲಿ ಪ್ರಸ್ತಾವವಶಾತ್ ಅವರೊಳೊಬ್ಬರು ವಿಧವೆಯರು ವ್ಯಭಿಚರಿಸುವರೆಂತಲೂ, ನಿಷ್ಕಾರಣವಾಗಿ [illegible] ಸ್ವಯಂ ವಿವಾಹ ಮಾಡಿಕೊಳ್ಳುವಣವು ಬಹಳ ಉತ್ತಮವೆಂಬದಾಗಿ ವಾದಿಸಿದರು. ಪಾತಿವ್ರತ್ಯದೊಳು ನಿಷ್ಠೆಯುಳ್ಳ ವಿಶ್ವಸ್ತೆಯು ಪರಪುರುಷಾಸಕ್ತಳಾಗಲಾರಳಾದುದರಿಂದ ಅವಳು ಪುನಃಪರಿಣಯಕ್ಕೆ ಸಮ್ಮತಿಸಲಾರಳು. ಇದಲ್ಲದೆ ಅನ್ಯಪುರುಷ ಸಂಭೋಗಾಸಕ್ತಳಾದ ವಿತಂತುವು ತತ್ಕಾಲೋಚಿತಾಭಿಮತ ಪುರುಷ ಸಂಪಾದನದಲ್ಲಿ ಆಸಕ್ತಳಾಗುವಳಲ್ಲದೆ ಪುನಃ ವಿವಾಹ ಮಾಡಿಕೊಂಡು ಒಬ್ಬ ಪುರುಷನ ಇಷ್ಟಾನುಸಾರ ವರ್ತಿಸುತ ಆತನಿಂದುಂಟಾಗಬಹುದಾದ ಬಹುವಿಧ ನಿರ್ಬಂಧಗಳಿಗೊಳಪಡಲಿಕ್ಕೆ ಇಷ್ಟಪಡಲಾರಳು. ಅಂತಾ ಸ್ತ್ರೀಯ ವಿಧವೆಯಂ ಮರಳಿ ವಿವಾಹ ಮಾಡಿಕೊಳ್ಳುವಂತೆ ಬಲಾತ್ಕರಿಸಿ ಆಕೆಯಂ ನಿರ್ಬಂಧಕ್ಕೊಳಪಡಿಸುವಣವು ಎಷ್ಟುಮಾತ್ರವೂ ಧರ್ಮವಲ್ಲವು ತಾದೃಶ ಅಧಿಕಾರವು ಈ ಕಾಲದಲ್ಲಿ ಒಬ್ಬರಿಗೂ ಇರುವದಿಲ್ಲವು. ಹೀಗಿರುವದರಿಂದ ಕಾಮಿಗಳಾದ ಕಾಮಿನಿಯರು ಪುನರ್ವಿವಾಹ ಬದ್ಧರಾಗುವರೆಂತಲೂ, ಸ್ವೈರ ವಿಹಾರಿಣಿಯರಾಗುವಣವೇ ಉತ್ತಮವೆಂದು ಮತ್ತೊಬ್ಬರು ವಾದಿಸಿದರು. ಆದರೆ ಗೋಳಕರ ಗತಿಯೇನೆಂದು ಮೊದಲನೆಯವರು ಪ್ರಶ್ನೆ ಮಾಡಿದರು. ಅವರು ಮಾತ್ರದೀನರಾಗಿ ಬೀದಿ ಬಡಿದವರೆಂದು ಎರಡನೆಯವರುತ್ತರ ಹೇಳಿದರು. ಗರ್ಭಸ್ರಾವ ಮಾಡಿಕೊಳ್ಳುವಂತವರನ್ನಾಗಲಿ, ಜನಿಸುವ ಮಕ್ಕಳಂ ಸಜೀವರನ್ನಾಗಲಿ, ನಿರ್ಜೀವವಾಗಿಯಾಗಲಿ ಬಿಸಾಡುವಂತವರನ್ನಾಗಲಿ, ಬಹಿರ್ಭ್ರಷ್ಟಂಬುಲವಾಗಿ ಚರಿಸುವಂತೆ ಬಿಡುವಣವೇ ಧರ್ಮವೇ ಎಂದು ಮೊದಲನೆಯವರು ಆಕ್ಷೇಪಿಸಿದರು. ಆ ವಿಷಯವಂ ವಿಚಾರಿಸಿ ದಂಡಿಸಲಿಕ್ಕೆ ಪ್ರಭುತ್ವ ಮಾಡತಕ್ಕವರು ಸನ್ನದ್ಧರಾಗಿರುವದರಿಂದ ಅವರು ವಿಧವೆಯರು ಸ್ವೇಚ್ಛಾ ವಿಹಾರಿಣಿಯರನ್ನಾಗಿ ಮಾಡರು ತ್ತಾರೆಂದು ಎರಡನೆಯವರು ಸಮಾಧಾನ ಹೇಳಿ ‘‘ಜನ್ಮತ್ರ ಪ್ರೇಮಸುರಕ್ಷಾ ಧಾನಜಾತಿಯಂಗಸಾಃ | ಶತ್ರುವತ್ತ್ವೋಪಚರಣಾತು ಬದ್ಧ್ವಾಪಿ ಬಲಾತ್ಕರಃ’’ ಎಂಬ ಭರ್ತೃಹರಿ ಸುಭಾಷಿತವಚನವನ್ನು ಉದಾಹರಿಸಿದರು. ಆಗ ಮೊದಲನೆಯವರು ‘‘ಸ್ತ್ರೀಪುಂಸಚ್ಚ ಪ್ರಜನತಿ ಯಾ ತಚ್ಚ ಗೇಹಮವಿನಶ್ಯ’’ ವೆಂಬುವದೀಗಲೂ ಸಂಘಟಿಸುವಂತಾಯಿತೆಂದು ನುಡಿದರು. ಆಗ ಮಧ್ಯಸ್ಥರಾಗಿದ್ದ ಮೂರನೆಯ ದೊಡ್ಡಮನುಷ್ಯರೊಬ್ಬರು ‘‘ದೇಶಾನಾಮಕೋಧರ್ಮ’’ ವೆಂಬುವ ವಚನವಾನುಸಾರ ಹೇಳಿ ಸಿದ್ಧಾಂತಮಾಡಿದರು. ಪುರುಷರಂತೆ ಸ್ತ್ರೀಯರು ಸಹ ಸ್ವಾತಂತ್ರ್ಯಾರ್ಹರಾಗಿದ್ದಾಗ್ಯೂ ‘‘ನಸ್ತ್ರೀಸ್ವಾತಂತ್ರ್ಯಮರ್ಹತಿ’’ ಎಂಬುವ ಪೂರ್ವ ವಚನವು ಅಸಿದ್ಧವೆಂದು ಭಾವಿಸಲ್ಪಡುತ ಅಂತಾ ಸ್ವಾತಂತ್ರ್ಯ ಸಂಪಾದನಾರ್ಹಗಳಾದ ಅನುಕೂಲ್ಯಗಳು ಕ್ರಮಕ್ರಮವಾಗಿ ಕಲ್ಪಿಸಲ್ಪಡುತಬರುವ ಸಮಯದಲ್ಲಿ ಸ್ವಾತಂತ್ರ್ಯಾಭಿಲಾಷಿಗಳಾದವರಂ ಮರಳಿ ನಿರ್ಬಂಧಕ್ಕೆ ಗುರಿಮಾಡಿ, ಅವರಿಗೂ ಅವರಂ ಮರಳಿ ಸ್ವೀಕರಿಸುವವರಿಗೂ ಇಲ್ಲದ ಮನೋವ್ಯಥೆಯನ್ನುಂಟುಮಾಡುವದಕ್ಕಿಂತಲೂ ಪುರುಷರಿಗೆ ಹೇಗೋ ಅಂತೆ ಸ್ತ್ರೀಯರಿಗೆ ಸಹ ವಿವಾಹವೆಂಬುವದು ಐಚ್ಛಿಕವೆಂತಲೂ, ಇಷ್ಟವಿದ್ದಲ್ಲಿ ವಿವಾಹಮಾಡಿಕೊಂಡು ಪತ್ಯಧೀನಳಾಗಬಹುದಲ್ಲದೆ ಇಷ್ಟವಿಲ್ಲದೊಡೆ ಇಚ್ಛಾನುಸಾರವಾಗಿರಬಹುದೆಂತಲೂ ವಿಧಿ ಏರ್ಪಡಿಸಿ ತತ್ಪ್ರಕಾರ ಆಚರಣೆಯೊಳು ತರುವ ಪಕ್ಷಕ್ಕೆ ಅಂತಾ ನಿಬಂಧನೆಯಂ ಬಹುಜನ ಯುವತಿಯರೂ ಪುರುಷರೂ ಅನುಮೋದಿಸುವದು ಮಾತ್ರವಲ್ಲದೆ ಏವಂರೂಪವಾದ ಸಂಘಪರಿಷ್ಕರಣವು ಕಂಡು ಅನ್ಯದೇಶೀಯರು ಕೂಡ ಅನುಮೋದಿಸಬಹುದೆಂದು ತೋರುತಿದೆ.

## ನವನಾಗರಿಕಾರ್ಥ ನಿರ್ಧಾರಣವು.

ಮದರಾಸ್ ಆಂಧ್ರಭಾಷಾ ಸಂಜೀವನಿ ಪತ್ರಿಕೆಯು, ಮೇಲೆ ಕಂಡ ಶಬ್ದನಿಷ್ಪತ್ತಿಯೊಡನೆ ಲಕ್ಷಣಗಳಂ ವಿವರಿಸಿರುತಿದೆ, ಏನೆಂದರೆ:—

ನವನಾಗರಿಕರೆಂದರೆ—ನಗರವೆಂದರೆ ಪಟ್ಟಣವು, ಅದರಲ್ಲಿ ವಾಸವಾಗಿರುವವರು ನಾಗರಿಕರು. ನವ ಶಬ್ದಕ್ಕೆ ನೂತನವೆಂದರ್ಥವು, ಆದುದರಿಂದ ನವೀನ ನಾಗರಿಕರೆಂದು ಭಾವವು. ನವಶಬ್ದವು ಸಂಖ್ಯಾವಾಚಕವಾಗುವಾಗ ಒಂಬತ್ತೆಂದು ಅರ್ಥವು ಆಕಾರಣ ನವವಿಧ ನವೀನ ನಾಗರಿಕರೆಂದು ಅರ್ಥವಿಶೇಷವು ಸ್ಫುರಿಸುತಿದೆ. ನವವಿಧ ನಾಗರಿಕರ್ಯಾರೆಂದರೆ,—

೧. ಇಂಗ್ಲಿಷ್ ಭಾಷೆಯನ್ನೇ ಪ್ರಾಧಾನ್ಯೇನ ಅಭ್ಯಸಿಸುತ ಸ್ವದೇಶ ಭಾಷೆಯಂ ಕಲಿಯದೆ ದೋಷಯುತ ತದ್ಭಾಷಾವ್ಯವಹಾರಾಶಕ್ತತೆಯೊಡನೆ ಇಂಗ್ಲೀಯ ಭಾಷೆಯನ್ನೇ ಅನವರತ ವ್ಯವಹರಿಸುವಂತ ಮುಗ್ಧರು ಪ್ರಥಮಿಕರು.

೨. ಪರಿಚಯಪ್ರಾಬಲ್ಯದಿಂ ಕ್ರೈಸ್ತವ ಬ್ರಹ್ಮಸಮಾಜಾದಿ ಅನ್ಯ ಮತಾವಲಂಬಿಗಳಾಗಿ ಸ್ವಮತಶಾಸ್ತ್ರ ಶಿಷ್ಟಾಚಾರಗಳನ್ನಿಂದಿಸುತ ಸಂಧ್ಯಾವಂದನಾದಿ ನಿತ್ಯನೈಮಿತ್ತಿಕ ಕರ್ಮಗಳಂ ತೊರೆಯತಕ್ಕಂತ ಅಸ್ವತಂತ್ರರು ದ್ವಿತೀಯಿಕರು.

೩. ಅಲಂಕಾರಮೋಹ ಪ್ರಮುಖ, ನಿಷ್ಕಾರಣವಾಗಿ ತಮ್ಮ ಜುಟ್ಟುಗಳಂ ಕತ್ತರಿಸಿಕೊಂಡು, ಬೂಟ್ಸುಗಳನ್ನು ಹಾಕಿಕೊಂಡು, ತೋಲು ನತುಕಸ್ಯಗಳಂ ಕಟ್ಟಿಕೊಂಡು, ತೋಲುಬೋಪಿಗಳಂ ಧರಿಸಿಕೊಂಡು, ಅತಿರಿಕವದನರಾಗಿ, ಆಂಗ್ಲೇಯ ಸದೃಶ ಭಾವದೊಡನೆ ತದ್ವೇಷಭಾಷಾದಿಯುತ ವಿಷಯಗಳಂ ಸ್ವೀಕರಿಸಿರತಕ್ಕ ಅತ್ಯಂತ ಶೌಚರಾದ ಉದ್ವೃತ್ತರು, ತಾರ್ತೀಯಿಕರು.

೪. ಜಾತಿಭೇದವು ಪರಿಗಣಿಸದೆ ಅನ್ಯಜಾತಿಯವರೊಡನೆ ಭೋಜನಪಾನಾದಿಗಳಂ ಮಾಡುವಂತ ಮತ್ತಮತ್ತರು, ತುರೀಯರು.

೫. ಕಿಂಚ ಲಲನೆಯರಿಗೆ ಸ್ವಾತಂತ್ರ್ಯಪ್ರದವಾದ ವಿದ್ಯೆಯು ಅತ್ಯಾವಶ್ಯಕವೆಂದು ವಾದಿಸುತ, ಅವರು ದರ್ಪಾತಿರಿಕ್ತರನ್ನಾಗಿಮಾಡಿ ಅವರಂ ತರಿಯಮೇಲೆ ಹತ್ತಿಸಿಕೊಂಡು, ಮೆರವಣಿಗೆ ಹೊರಡುವಂತವರೂ, ಸಾಮಾನ್ಯೆಯರ ನೃತ್ಯಗಾನ ಕೃತ್ಯಗಳಂ ತದ್ವೃತ್ತಿಕುಲಸ್ತ್ರೀಯರಿಗೆ ಬೋಧಿಸಿ ಸಾಮಾನ್ಯಾಂಗನೆಯ ಸರ್ವದಾ ಸರ್ವಸಮತ್ವಭಾವದೊಡನೆ ತನ್ಮೂಲಕವಾದ ಆನಂದಾತಿಶಯಾನುಭವಕ್ಕೆ ಪಾತ್ರರಾಗಬೇಕೆಂದು ಉದ್ಯೋಗಿಸುವಂತವರು ಪಂಚಮರು.

೬. ಪುನಃ ಪರಿಣಯವ್ಯಾಜದಿಂ ವಿಧವೆಯರು ಸಧವೆಯರನ್ನಾಗಿಮಾಡಿ ಕೃತಹಸ್ತರಂ ಪುನಃ ಗ್ರಹಣಮಾಡುವಂತವರೂ, ಅಂತಾ ವಿಧವಾ ಪುನರ್ವಿವಾಹಕ್ಕೆ ಸಹಾಯಕರಾಗಿರುವಂತವರೂ, ತತ್ಪ್ರೇರಕಾನುಮೋದಕರೂ, ವಿಧವಾವಿವಾಹ ಸಿದ್ಧಾಂತ ವಿದಗ್ಧರಾದವರೂ ಷಷ್ಠಮರು.

೭. ತಮ್ಮ ಜಾತಿಕುಲಧರ್ಮಗಳೆಲ್ಲವಂ ತೊರೆದು ಮತಾಂತರಗಳಲ್ಲಿ ಪ್ರವೇಶಿಸಿ ತಾದಾತ್ಮ್ಯವನ್ನೈದುವಂತವರು ಸಪ್ತಮರು.

೮. ದೇಶಭ್ರಷ್ಟರಾಗಿ ಅನ್ಯದೇಶೀಯರಲೊಬ್ಬರಾಗಿ ತಾದ್ರೂಪ್ಯವಂ ಹೊಂದಿ ಹೋಗುವವರು ಅಷ್ಟಮರು.

೯. ಯಾತ ಮತವನ್ನೂ ಅವಲಂಬಿಸದೆಯೂ, ಯಾವ ನಿಯತಧರ್ಮಗಳನ್ನೂ ಅನುಸರಿಸದೆಯೂ, ಯಾವವಿಧ ನಿರ್ಬಂಧಗಳಿಗೂ ಒಳಪಡದೆಯೂ ಕೇವಲ ತಮ್ಮ ಇಷ್ಟಾನುಸಾರ ಚರಿಸತಕ್ಕ ಸರ್ವಭ್ರಷ್ಟರು ನವಮರು.

ಈ ರೀತಿ ಒಂಬತ್ತು ಬಗೆಯವರಾದ ನವನಾಗರೀಕರಿಗೆ ಈ ಕಾಲದಲ್ಲಿ ಸರ್ವವ್ಯಾಪಕತ್ವವೂ ಸರ್ವತ್ರ ವಿಶೇಷ ಪ್ರಶಂಸೆಯೂ ಉಂಟಾಗಿರುವದರಿಂದ, ಇಂತವರೇ ಸಭಾಪೂಜ್ಯರೆಂದು ಎಲ್ಲರೂ ಗ್ರಹಿಸಿರುತ್ತಾರೆಂಬದು.

# ಮೈಸೂರು ಸಂಸ್ಥಾನದ ದಿವಾನರವರ ಉಪನ್ಯಾಸ.

(ಕಳೆದ ವಾರದ ಶೇಷ.)

ಇದಲ್ಲದೆ ರೈಲ್ವೆ ಸಾಲವನ್ನು ತೀರಿಸತಕ್ಕ ಬಗ್ಗೆ ನಿರ್ಧಿಷ್ಟರುವ ಫಂಡಿನಲ್ಲಿ ೧೮,೬೩,೦೭೬ ರೂಪಾಯಿ ಸೇರಿಸಲ್ಪಟ್ಟಿತ್ತು. ಶಿವಾಯಿ ಮೈಸೂರು ಹರಿಹರದ ರೈಲ್ವೆ ಹೊರ್ತಾ ಮಿಕ್ಕ ಸರಕಾರಿ ರೈಲ್ವೆಗಳಿಗಾಗಿ ೩,೨೧,೩೬,೪೬೯ ರೂಪಾಯಿಗಳಿಗೆ ಖರ್ಚಾಗಿರುವದನ್ನು ಬಿಡಬಾರದೆಂತಲೆ ಎಣಿಸತಕ್ಕದ್ದಾಗಿದೆ.

ಶ್ರೀಮನ್ಮಹಾರಾಜರವರ ಆಸ್ತಿಯೂ ೧೦ ವರುಷಗಳಲ್ಲಿ ನಡೆದಿರತಕ್ಕ ಅಭಿವೃದ್ಧಿಯನ್ನು ತಿಳಿಯಬೇಕಾದಲ್ಲಿ ೧೮೯೨ನೇ ಇಸವಿ ಏಪ್ರಿಲ್ ಗುರ್ರೆ ತಾರೀಖಿನಲ್ಲಿದ್ದ ಸಂಸ್ಥಾನದ ನಿವ್ವಳ ದೇಣೆ ೩೩,೯೭,೩೭೪ ರೂಪಾಯಿಗಳನ್ನು ಮೇಲ್ಕಂಡ ನಿವ್ವಳ ಆಸ್ತಿ ಮೊಬಲಗಿಗೆ ಸೇರಿಸಬೇಕಾಗಿರುತ್ತೆ.

| | |
|---|---|
| ಆಸ್ತಿ— | ರೂ. |
| ನಗದು ಶಿಲ್ಕು | ೭೫,೦೩,೬೯೮ |
| ರೈಲ್ವೆ ಮೇಲೆ ಹಾಕಿದ ಬಂಡವಾಳ | ೭೫,೯೮,೯೬೮ |
| ಒಟ್ಟು ಆಸ್ತಿ | ೫೫,೦೦,೬೬೬ |
| ಸಾಲ— | |
| ಬ್ರಿಟಿಷ್ ಗವರ್ನಮೆಂಟಿಗೆ ಕೊಡತಕ್ಕ ಸಾಲ | ೮೦,೦೦,೦೦೦ |
| ನಿವ್ವಳದೇಣೆ | ೩೦,೬೩,೩೭೪ |

೧೮೯೨—೯೩ ನೇ ಇಸವಿ ಬಜೆಟ್ ಅಂದಾಜು (ಅರ್ಪೆಂಡಿಕ್ಸನ್ನು ನೋಡಿ) — [illegible] ೧೮೯೩—೯೪ ನೇ ಇಸವಿ ಸಂಸ್ಥಾನದ [illegible] ಉತ್ಪನ್ನವು ೧೮೯,೬೩,೦೦೦ ರೂಪಾಯಿ ಆಗುವದೆಂದು ಅಂದಾಜು ಮಾಡಿರುತ್ತೆ. [illegible]

[illegible]

ಡಿಸ್ಟ್ರಿಕ್ಟ್ ಫಂಡ್.—[illegible]

ಲೋಕಲ್ ಫಂಡ್ ಜನರಲ್—[illegible]

ಡಿಸ್ಟ್ರಿಕ್ಟ್ ಫಂಡ್ ಬೋರ್ಡುಗಳ ಏರ್ಪಾಟು.—[illegible]

ಮ್ಯುನಿಸಿಪಾಲಿಟಿಗಳು—೧೮೯೨—೯೩ ನೇ ಇಸವಿಯಲ್ಲಿ ೧೦೦ ಮ್ಯುನಿಸಿಪಾಲಿಟಿಗಳು ಇದ್ದವು. [illegible]

[illegible]

ಮೈಸೂರಿನಲ್ಲಿ ಗವರ್ನಮೆಂಟ್ ಬಂಗಲೆ, ಆಫೀಸ್ ಮೊದಲಾದವುಗಳ ಕಟ್ಟಡಗಳು—

(೧) ಬೆಂಗಳೂರಿನಲ್ಲಿ ಸೆಂಟ್ರಲ್ ಕಾಲೇಜ್ ಸಂಬಂಧವಾಗಿ ರಸಾಯನವಿಚಾರ ಶಾಲೆ ಮತ್ತು ಉಪನ್ಯಾಸಶಾಲೆ.

(೨) ಬೆಂಗಳೂರಲ್ಲಿ ಸರ್ಕಾರಿ ಛಾಪಖಾನೆ ಬಿಡಾರಕೆ.

(೩) ಕೋಲಾರ ಡಿಸ್ಟ್ರಿಕ್ಟಿನಲ್ಲಿ ಚಿನ್ನದ ಗಣಿ ಪ್ರದೇಶಕ್ಕಾಗಿ ಪೋಲೀಸ್ ಇನ್ಸ್ಪೆಕ್ಟರಿಗಾಗಿ ಬಂಗಲೆ ಮತ್ತು ಆಫೀಸ್.

(೪) ಮೈಸೂರಿನಲ್ಲಿ ಗವರ್ನಮೆಂಟ್ ಬಂಗಲೆ, ಆಫೀಸ್, ಮಿಲಿಟರಿ ಸೆಕ್ರೆಟರಿಯವರಿಗೂ ಮತ್ತು ಮಹಾರಾಜರ ಕಾಲೇಜ್ ಪ್ರಿನ್ಸಿಪಲ್‌ರವರಿಗೂ ವಾಸಕ್ಕೆ ಬಂಗಲೆ.

ಇದು ಶಿವಾಯಿ ಮೈಸೂರು ಡಿಸ್ಟ್ರಿಕ್ಟ್ ಜಡ್ಜ್, ಸಬ್‌ಜಡ್ಜ್ ಮತ್ತು ಮುನ್ಸಫ್ ಕೋರ್ಟುಗಳ ಬಗ್ಗೆ ತಯಾರಾಗುತ್ತಿರುವ ಬಂಗಲೆಯ ಕಾಮಗಾರಿಯು ತೃಪ್ತಿಕರವಾಗಿ ನಡೆಯುತ್ತಲಿದೆ. ಕಾಲ್ರಾ, ಮಳೆ ವಗೈರೆ [illegible] ಬೆಂಗಳೂರಲ್ಲಿ ಒಂದು ಕಟ್ಟಡವನ್ನು ಕಟ್ಟುವದಕ್ಕೆ ಅಂದಾಜ್ ಮಂಜೂರಾಗಿ ಕೆಲಸವು ಪೂರೈಸುತ್ತ ಬಂದಿದೆ. ಇವುಗಳು ಶಿವಾಯಿ ೪ ತಾಲ್ಲೂಕ್ ಕಛೇರಿಗಳು, ೩ ಮುನ್ಸಫ್ ಕೋರ್ಟುಗಳು, ೧೦ ಡಿಸ್ಪೆನ್ಸರಿಗಳು, ೬ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಕಟ್ಟಡಗಳು, ೯ ಪೋಲೀಸ್ ಲೈನುಗಳು, ಮತ್ತು ಸ್ಟೇಷನುಗಳು ಮತ್ತು ಇತರ ಅನೇಕ ಚಿಲ್ಲರೆ ಕಾಮಗಾರಿಗಳು ನಡೆಯುತ್ತಲಿದ್ದವು.

"ರಸ್ತೆಗಳು" ಎಂಬ ಹೆಡ್ಡಿನಲ್ಲಿ ಮುಖ್ಯವಾದ ಕಡೂರು ಡಿಸ್ಟ್ರಿಕ್ಟ್ [illegible] ತಯಾರಾಗುತ್ತಿದ್ದ ಸೇತುವೆಯು ಪೂರೈಸಿತು. [illegible]

"ನೀರಾವರಿ ಕಾಮಗಾರಿಗಳು" ಎಂಬ ಹೆಡ್ಡಿನಲ್ಲಿ ಮೈಸೂರು ಪಟ್ಟಣದಲ್ಲಿ [illegible]

ಕಳೆದ ಸಂವತ್ಸರದಲ್ಲಿ ಬೆಂಗಳೂರು ಟೌನಿಗೆ [illegible]

ಬೆಂಗಳೂರು ಪಟ್ಟಣಕ್ಕೆ ಕುಡಿಯುವ ನೀರಿನ ಸರಬರಾಯಿ [illegible]

ಮೈಸೂರು ಪಟ್ಟಣದಲ್ಲಿ [illegible]

ನೀರಾವರಿ ಕಾಮಗಾರಿಗಳು.—[illegible]

(1) ಚಿಕ್ಕನಾಯಕನ ಹಳ್ಳಿ ತಾಲ್ಲೂಕ್ ಬೋರನಕಣಿವೆ ಅಣೆ. ಇದಕ್ಕಾಗಿ ಸುಮಾರು 2 ಲಕ್ಷ ರೂಪಾಯಿ ಖರ್ಚಾಗಿದೆ. ಈ ಅಣೆ ಎಡಗಡೆ ನಾಲಾ ಕೆಲಸವು ಈಗ ನಡೆಯುತ್ತಲಿದೆ.

(2) ಶಿರ್‍ಯ ತಾಲ್ಲೂಕ್ ಸಂದನಹಳ್ಳಿ ಕೆರೆ. ಇದಕ್ಕಾಗಿ ಮುಟ್ಟಿದ ಲಾಗವಾತು ರೂಪಾಯಿ 60,500.

(3) ಚಳ್ಳಕೆರೆ ತಾಲ್ಲೂಕಿನಲ್ಲಿ ರೇಣಲ್‌ಕೆರೆ ಕಾಮಗಾರಿ. ಲಾಗವಾತು ಮೊಬಲಗು ರೂಪಾಯಿ 1,80,000. ಇದರ ಕೆಳಗೆ ಇರುವ ಕೆರೆಗಳ ಪೈಕಿ ಸುರು ಎರಡು ಕೆರೆಗಳಿಗೆ ಯರಕಾವತಿ ಈ ನಾಲಾದಿಂದ ನೀರು ತುಂಬಿತ್ತೆಂದು ತಿಳಿಯಬಂದು ಇದೆ.

(4) ಎಡತೊರೆ ತಾಲ್ಲೂಕಿನಲ್ಲಿ ರಾಮಸಮುದ್ರದ ನಾಲೆಯನ್ನು ಅಗಲಮಾಡುವದು. ಹೆಗ್ಗರೆ ಮತ್ತು ತಿಪ್ಪೂರು ಕೆಳಗು ನಾಲೆಗಳನ್ನು ಒತಾಯಿಸುವದು ಈ ಕಾಮಗಾರಿಗಳು 1889ನೇ ಫಿಬ್ರವರಿ ಲಾಗಾಯಿತು ನಡೆಯುತ್ತಲಿದೆ. ಇವುಗಳಿಗಾಗಿ ಖರ್ಚು 83,000.

(5) ನಂಜನಗೂಡು ತಾಲ್ಲೂಕಿನಲ್ಲಿ ರಾಂಪುರದ ನಾಲಾ ಬದಾವಣೆ ಲಾಗವಾತುವವಾಗು 3½ ಲಕ್ಷರೂಪಾಯಿ.

(6) ಶಿವಮೊಗ್ಗಾ ತಾಲ್ಲೂಕಿನಲ್ಲಿ ದಾನವಾಡಿ ಕೆರೆ ಕಾಮಗಾರಿ ಖರ್ಚು ರೂಪಾಯಿ 36,000.

(7) ಸೂಳಕಲ್ ಅಣೆಕಟ್ಟು ಮತ್ತು ನಾಲೆ ಕಾಮಗಾರಿ ಖರ್ಚು ರೂಪಾಯಿ 48,000.

(8) ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಅರಸಿನಕಟ್ಟೆ ನಾಲೆ ಕಾಮಗಾರಿ ಖರ್ಚು ರೂಪಾಯಿ 20,000.

(9) ಕಡೂರು ತಾಲ್ಲೂಕಿನಲ್ಲಿ ಯಗಟಿ ಅಣೆಕಟ್ಟು ಮತ್ತು ನಾಲಾ ಕಾಮಗಾರಿ ಖರ್ಚು ರೂ. 37,000.

(10) ಮಗಲೀ ಅಣೆಕಟ್ಟು ಮತ್ತು ನಾಲಾ ಕಾಮಗಾರಿ ಖರ್ಚು ರೂಪಾಯಿ 20,000.

ಹೋದ ವರ್ಷದಲ್ಲಿ ನಡೆಯುತ್ತಲಿದ್ದ ಇತರ ಮುಖ್ಯವಾದ ನೀರಾವರಿ ಕಾಮಗಾರಿಗಳನ್ನು ಈ ಕೆಳಗೆ ನಮೂದಿಸಿರುತ್ತೆ. ಇವುಗಳಲ್ಲೆಲ್ಲಾ ಕೆಲಸವು ತೃಪ್ತಿಕರವಾಗಿ ನಡೆದಿದೆ.

ಬೆಂಗಳೂರು ಡಿವಿಜನ್.—

(1) ಚನ್ನಪಟ್ಟಣ ತಾಲ್ಲೂಕ್ ಬಂಡೂರು ಪಾಲೂರು ಹಿತ್ತ ಕೆರೆ ಕಾಮಗಾರಿ. ಅಂದಾಜು ರೂ. 38,000 ಕಾಮಗಾರಿ ಪೂರೈಸಿದೆ ಎಂತಲೆ ಹೇಳಬೇಕು.

(2) ತಿಪಟೂರು ತಾಲ್ಲೂಕು ಮಳೂರುಕೆರೆ ಕಾಮಗಾರಿ. ಅಂದಾಜು ರೂಪಾಯಿ 21,000 ಇದು ಪೂರೈಸಿದಹಾಗೆಯೇ ಇದೆ.

(3) ದೊಡ್ಡಬಳ್ಳಾಪುರ ತಾಲ್ಲೂಕ್ ಉಜನೀ ಗೌರಮ್ಮನ ಕೆರೆ ಕಾಮಗಾರಿ. ಅಂದಾಜು ರೂ. 22,000

(4) ಹೊಸಕೋಟೆ ತಾಲ್ಲೂಕ್ ಸೂಲಿಬೆಲೆ ದೊಡ್ಡಕೆರೆ ಮತ್ತು ಚಿಕ್ಕಕೆರೆ ಅಂದಾಜು ರೂಪಾಯಿ 30,000

ಕೋಲಾರ ಡಿವಿಜನ್.—

(1) (2) (3) ಚಿತ್ರಾವತಿ, ಪಿನಾಕಿನಿ, ಉತ್ತರ ಪಿನಾಕಿನಿ, ಈ ನದಿಗಳಿಗೆ ಅಡ್ಡಲಾಗಿ ತಯಾರಾಗುತ್ತಲಿರುವ ಮೂರು ಭಾರಿ ಕೆರೆಗಳು. ಕಾಮಗಾರಿಪೂರೈಸುತ್ತ ಬಂದಿದೆ.

(4) ಕೋಲಾರದ ತಾಲ್ಲೂಕ್ ಮುದವಾಡಿ ಕೆರೆ ಕಾಮಗಾರಿ ಅಂದಾಜು ರೂಪಾಯಿ 44,000

(5) ಚಿಕ್ಕನಾಯಕನ ಹಳ್ಳೀ ಅಗ್ರಹಾರದ ಕೆರೆ. ಅಂದಾಜು ರೂಪಾಯಿ 32,000

(6) ಶಿಡ್ಲಘಟ್ಟದತಾಲ್ಲೂಕ್ ಬುರುಡಗುಂಟೆ ಶಿಂಪಾಸಾನಿ ಅಣೆ ಮತ್ತು ನಾಲೆ ಅಂದಾಜು ರೂ. 86,000

ತುಮಕೂರು ಡಿವಿಜನ್.—

(1) ಮಧುಗಿರಿ ತಾ। ಗುಂಡಲ್‌ಕೆರೆ ಅಂ.ರೂ. 26,000

(2) ಶಿರ್‍ಯ ತಾ॥ಕುರಿಹಳ್ಳಿಕೆರೆ ಅಂದಾಜು ರೂ. 45,000

(3) ತಿಪಟೂರು ತಾ॥ ನೊಣವಿನಕೆರೆ ರೂ. 21,000

(4) ಕಿಬ್ಬನೂರು ತಾ॥ಮಾಯಸಂದ್ರದಕೆರೆ ರೂ. 25,000

(5) ಪಾವಗಡ ತಾ॥ಬೊಮ್ಮನಾಯಕನಹಳ್ಳಿಕೆರೆ 24,000

(6) ಗುಬ್ಬಿ ತಾ॥ ಕ್ಯಾತಸಂದ್ರಕೆರೆ ಅಂ ರೂ. 42,000

ಚಿತ್ರದುರ್ಗ ಡಿವಿಜನ್.—

(1) ತಿಮ್ಮಪ್ಪನ ಕೋಟೆ ಬಳಿ ಹಿರಿಹಳ್ಳಕ್ಕೆ ಅಡ್ಡಲಾಗಿ ಹೊಸಕೆರೆ ... 28,000
(ಕಾಮಗಾರಿ ಪೂರೈಸುತ್ತಾ ಬಂದಿರುತ್ತೆ)

(2) ಹಿರಿಯೂರ್ ತಾಲ್ಲೂಕ್ ವಡುವಳ್ಳಿ ಬಳಿ ವೇದಾವತಿಗೆ ಅಡ್ಡಲಾಗಿ ಹೊಸಕೆರೆ 47,000

ಮೈಸೂರು ಡಿವಿಜನ್:—

(1) ನಂಜನಗೂಡು ತಾಲ್ಲೂಕ್ ಹುಲ್ಲಹಳ್ಳಿ ನಾಲೆ ಅಭಿವೃದ್ಧಿ ಮತ್ತು ಬದಾವಣೆ ರೂ. 6,05,000
(ಅರ್ಧ ಪೂರೈಸಿರುತ್ತೆ)

ಅಷ್ಟಗ್ರಾಮ ಡಿವಿಜನ್:—

(1) ಮಂಡ್ಯದ ತಾಲ್ಲೂಕ್ ಮದ್ದೂರು ಅಣೆ ನಾಲೆ ಅಭಿವೃದ್ಧಿ, ರೂಪಾಯಿ 82,000
(ಕಾಮಗಾರಿಯು ಬಹುಮಟ್ಟಿಗೆ ಪೂರೈಸಿದೆ)

(2) ಕೃಷ್ಣರಾಜಪೇಟೆ ತಾಲ್ಲೂಕ್ ಕಲ್ಲಹಳ್ಳಿ ನಾಲೆ ಬದಾವಣೆ ರೂಪಾಯಿ 50,000
(ಕಾಮಗಾರಿ ಪೂರೈಸಿದೆ ಎಂತಲೇ ಹೇಳಬಹುದು)

(3) ಮಳವಳ್ಳಿ ತಾ॥ ಸೂಳೆಕೆರೆ ಕಾಮಗಾರಿ 1,59,000
(ಇದುವರಿಗೆ 1ಲಕ್ಷ ರೂಪಾಯಿ ಖರ್ಚಾಗಿರುತ್ತೆ.)

ಇದರ ಶೇಷ ಮುಂದಿನವಾರಕ್ಕೆ.

BANGALORE.—Printed and published at the KARNATAKA PRESS, No. 40, HOSPITAL ROAD, CITY.—1893.

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

## ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning.**

ಪ್ರಜಾನಾಮಿವಿದಪ್ರನ್ಯರ್ಯ್ವಪಗವಸಾರ್ವಕರ್ನಾಟಕಪ್ರಕಾಶನವರಾಭಿಧಾವ್ರಥಿತಸಾನಿಂತೀಕೂಭಿತಾ॥ ಮ್ಯಗಾಂಕಹಿತವಾಸರೆನಿಹಿತಮುದ್ರಣಾಸಜ್ಜ್ನೈರ್ದಿಕಾಸುವರಿಸೋಚತಾದಿಕತಿಮಾನಸಂಸಂಮುದ್ರಂ॥

Vol. XX.] BANGALORE—MONDAY, NOVEMBER 20, 1893. [No. 46.

ಸಂಪುಟ ೨೦.] ಬೆಂಗಳೂರು—ಸರ್ ೧೮೯೩ನೇ ಇಸವಿ ನವೆಂಬರ್ ೨೦ ನೇ ತಾರೀಖ್ ಸೋಮವಾರ. [ಸಂಖ್ಯೆ ೪೬.


## BANGALORE CITY MUNICIPALITY.

### ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಕಮ್ಮಿಷನರುಗಳು, ಸರ್ 1893ನೇ ಇಸವಿ ನವೆಂಬರ್ 28 ನೇ ತಾರೀಖ್ ಸೋಮವಾರದ ದಿನ ಬೆಳಿಗ್ಗೆ 7½ ಘಂಟೆಗೆ, ಕೋಟೆಯೊಳಗಿರುವ ಅವರ ಆಫೀಸ್ ಕಟ್ಟಡದಲ್ಲಿ ಸಾಮಾನ್ಯ ಸಭೆ ಸೇರುವರು.

ಇದರಡಿ ತಿಳಿಸಲ್ಪಡುವ ವಿಷಯಗಳು, ಸ್ಟ್ಯಾಂಡಿಂಗ್ ಕಮಿಟಿಯವರ ನಿರ್ಣಯಗಳೊಡನೆ ವಿಚಾರಕ್ಕಾಗಿ ಮುಂದೆ ಇಡಲ್ಪಡುವವು :—

I. (a) ಸರ್ 1893ನೇ ಇಸವಿ ಅಕ್ಟೋಬರ್ ತಿಂಗಳ ಬಾಬತು ಚಾಲತಿ ನಗದು ಜಮಾಖರ್ಚು ಲೆಕ್ಕ, ಮರಣಲೆಕ್ಕ, ಮನೆಗಳಿಗೆ ಹೋಗಿ ಚಿಕಿತ್ಸೆ ಮಾಡುವ ಮೆಡಿಕಲ್ ಆಫೀಸರನ ಲೆಕ್ಕ, ತಗಾದೆ ವಸೂಲಿ ಮತ್ತು ಬಾಕಿ ಪಟ್ಟಿ, ಕಾಮಗಾರಿಗಳ ಅಭಿವೃದ್ಧಿಯನ್ನು ಕುರಿತ ರಿಪೋರ್ಟ್, ಶ್ರೀನಿವಾಸ ಮಂದಿರದ ಲೈಬ್ರೇರಿಗೆ ಹೋಗಿದ್ದ ಜನರನ್ನು ಕುರಿತ ಯಾದಿ, ಮತ್ತು ಬೀದಿ ದೀಪಗಳ ವಿಷಯವನ್ನು ಕುರಿತ ರಿಪೋರ್ಟಿನ ಸಂಗ್ರಹ

I. ಮಿಲ್ಲರ್ ರೋಡಿನಲ್ಲಿರತಕ್ಕ ಮ॥ ಅಗಾಖಾನರವರ ಬಂಗ್ಲೆಯ ಬಾಬತು ಸರ್1892—93ನೇ ಇಸವಿಯ ಮನೆಯ ತೆರಿಗೆ ವಿಷಯವಾಗಿ ಸದರಿ ರವರು ಬರೆದ 1893 ನೇ ಇಸವಿ ಸೆಪ್ಟೆಂಬರ್ 25ನೇ ತಾರೀಖಿನ ಲೆಟರ್.

II. ಚಿಕ್ಕಣ್ಣನವರ ವೆಂಕಟಣ್ಣನವರು ಅರಳೇ ಪೇಟೆಯಲ್ಲಿ ತಮ್ಮ ಮನೆಯ ಮುಂಭಾಗದಲ್ಲಿರುವ ಖಾಲಿ ತುಂಡು ಜಮೀನನ್ನು ತಮಗೆ ಕೊಡಬೇಕೆಂಬದಾಗಿ ಬರೆದುಕೊಂಡ ಅರ್ಜಿ.

III. ಈ ಸಾಲಿಗಾಗಿ ಕಂಟ್ರಾಕ್ಟರುಗಳು ಜಾಸ್ತಿ ದರವನ್ನು ಅಪೇಕ್ಷಿಸಿದುದರಿಂದ ರಸ್ತೆಗಳ ಕಾಮಗಾರಿಗಾಗಿ ಮೊದಲು ನಿಷ್ಕರ್ಷೆಯಾಗಿರುವ ಮೊಬಲಗನ್ನು 3,300 ರೂಪಾಯಿಗಳ ವರೆಗೆ ಬಜೆಟಿನಲ್ಲಿ ಜಾಸ್ತಿ ಮಾಡಬೇಕಾದ ವಿಷಯ

IV. ಜಟ್ಕಾಗಾಡಿಗಳು ನಿಲ್ಲುವದಕ್ಕಾಗಿ ಬಂಡಿಸ್ಟೋಟು ಕಟ್ಟುವದಕ್ಕೋಸ್ಕರ ಕೋಟೆ ವೆಂಕಟಪ್ಪನವರ ಜಮೀನನ್ನು ತೆಗೆದುಕೊಳ್ಳುವ ವಿಷಯದಲ್ಲಿ ಅಸಿಸ್ಟೆಂಟ್ ಕಮ್ಮಿಷನರ್ ಮ॥ ಬಿ. ಕುಪ್ಪುಸ್ವಾಮಿ ನಾಯುಡರವರು ಗೊತ್ತು ಮಾಡಿದಂತಹ ಬೆಲೆಯನ್ನು ದೊರೆಯವರು ಅಂಗೀಕರಿಸುತ್ತಾರೆಯೋ ಇಲ್ಲವೋ ಎಂಬದಾಗಿ ವಿಚಾರಿಸಿ ಡೆಪ್ಯುಟಿ ಕಮ್ಮಿಷನರವರು ಬರೆದ ಸೆಪ್ಟೆಂಬರ್ 27ನೇ ತಾರೀಖಿನ 1248 ನೇ ನಂಬರ್ ಡಾಕೆಟ್.

V. ಪಾರ್ಲೇಪೇಟೆ ಅಣ್ಣಪ್ಪನು, ತನ್ನ ಮನೆಯ ಚರಂಡೀ ನೀರು ದೊಡ್ಡ ಮೋರಿಯಲ್ಲಿ ಹೋಗಿ ಬೀಳುವಂತೆ ಮಾಡಿಕೊಳ್ಳಲಿಕ್ಕೆ ತನಗೆ ಹುಕುಂ ಕೊಡಿಸಬೇಕೆಂದು ಕೇಳಿಕೊಂಡಿರುವದು

VI. ಸರ್ 1893—94ನೇ ಇಸವಿಯ ಬಾಬತು ಬಜೆಟ್ ಅಂದಾಜುಗಳ ಮೇಲೆ ಗವರ್ನಮೆಂಟಿನವರು ಮಾಡಿದ 1893 ನೇ ಇಸವಿ ಸೆಪ್ಟೆಂಬರ್ 23 ನೇ ಮುಕ್ಕಾಂ 5416-9-1-1. 11-93 ನೇ ನಂಬರುಳ್ಳ ಪ್ರೊಸೀಡಿಂಗ ಮತ್ತು ಪ್ರೆಸಿಡೆಂಟರ ಜವಾಬ್.

VII. ಸುಬ್ಬಣ್ಣನವರು ಕೋಟೆಯಲ್ಲಿರುವ ತಮ್ಮ ಮನೆಯ ಮುಂಭಾಗದೊಳಗಿರುವ ೫ ಅಡಿಗಳುಳ್ಳ ಮ್ಯುನಿಸಿಪಲ್ ಜಮೀನನ್ನು ವಸಾರೆ ಕಟ್ಟಿಕೊಳ್ಳುವದಕ್ಕೆ ತಮಗೆ ಕೊಡಬೇಕೆಂಬದಾಗಿ ಅಪೇಕ್ಷಿಸಿ ಬರೆದ 1893ನೇ ಇಸವಿ ಆಗಸ್ಟ್ 10ನೇ ತಾರೀಖುಳ್ಳ ಅರ್ಜಿ.

VIII. ಸುಣ್ಣಕಲ್ ಪೇಟೆಯ ರಸ್ತೆಯನ್ನು ಅಗಲಮಾಡುವದನ್ನು ಕುರಿತ ಕಾಗದ ಪತ್ರಗಳು.

IX. ಪ್ರತಿ ಗುರುವಾರ ಸಾಯಂಕಾಲ ಮ್ಯುನಿಸಿಪಲ್ ಗಾರ್ಡನಿಗೆ ಬ್ಯಾಂಡ್ ವಾದ್ಯೋಪಕರಣಗಳು ಮೊದಲಾದವನ್ನು ತೆಗೆದುಕೊಂಡು ಹೋಗುವ ಬಗ್ಗೆ ಹಿಡಿಯುವ ಖರ್ಚನ್ನು ಮ್ಯುನಿಸಿಪಾಲಿಟಿಯವರು ಕೊಡುವರೋ ಇಲ್ಲವೋ ಎಂಬದಾಗಿ ಮಿಲಿಟರಿ ಸೆಕ್ರೆಟರಿ ಯವರು, 1893 ನೇ ಇಸವಿ ಸೆಪ್ಟೆಂಬರ್ 25ನೇ ತಾರೀಖಿನಲ್ಲಿ ಬರೆದ 558 ನೇ ನಂಬರ್ ಲೆಟರ್

X. ಸರ್1893 ನೇ ಇಸವಿ ಆಗಸ್ಟ್ 28 ಮತ್ತು ಸೆಪ್ಟೆಂಬರ್ 2 ನೇ ತಾರೀಖುಗಳುಳ್ಳ ದೊರೆಯವರ ಪಿನ್ನಿಕೆಯಲ್ಲಿ ಸೂಚಿಸಲ್ಪಟ್ಟಿದ್ದ ಇನ್ಸ್‌ಪೆಕ್ಟರ್ ಆಫೀಸರರನ್ನು ನೌಕರಿ ಮಾಡಿದ ವಿಷಯದಲ್ಲಿ ಪ್ರೆಸಿಡೆಂಟರವರ ಆಕ್ಷೇಪಣೆಗಳು

XI. ಅರಮನೆಗೆ ಹೋಗುವ ಗೇಟ್ ಬಾಗಿಲಿನ ಮುಂಭಾಗದಲ್ಲಿರುವ ಜಮೀನನ್ನು ಪಡೆಯುವ ವಿಷಯದಲ್ಲಿ 1893 ನೇ ಇಸವಿ ಅಕ್ಟೋಬರ್ ೯ ನೇ ತಾರೀಖಿನಲ್ಲಿ ಮ॥ ಟಿ. ಟಿ. ಲಿನ್ಡ್ಸೇ ಯವರು ಬರೆದ ರಿಪೋರ್ಟ್.

XII. ಕೆಂಗೇರಿ ಬಾಗಲ್ ಸ್ಕ್ವೇರ್ ಬಳಿ ಇರುವ 22 ನೇ ನಂಬರ್ ಮನೆಗೆ ಸೇರತಕ್ಕ ಒಂದು ಜಮೀನಿನ ಬಾಬ್ತೆಯನ್ನು ಕುರಿತು, ತಮ್ಮ ಕಕ್ಷಿಗಾರನಾದ ನರಸಿಂಹಣ್ಣನೆಂಬುವನ ತರಫ ಅಡ್ವೋಕೇಟ್ ಮ॥ ಪಾರ್ಥಸಾರಥಯ್ಯಂಗಾರ್ರವರು ಬರೆದ ಲೆಟರ್.

XIII. ಡ್ರ್ಯಾಫರ್ಸನ್ ಪರ್ಬ್ಲಿ ಯಾನೆ ಸಕ್ಷೆ ಬರೆಯುವಂತವನ ಕೆಲಸ ನಡೆಯುವ ಬಗ್ಗೆ ಮಾಡಲ್ಪಟ್ಟಿರುವ ಏರ್ಪಾಡುಗಳಂ ಕುರಿತ ವೈಸ್ ಪ್ರೆಸಿಡೆಂಟರವರ ಯಾದಿ

XIV. ಗಳವಿನ ಅಂಗಡಿಗಳನ್ನು ಈಗೀಗ ಇರುವ ಸ್ಥಳದಿಂದ ಅನ್ಯತ್ರ ಸಾಗಿಸುವ ವಿಚಾರ.

XV. ಹಿಂದುಸ್ಥಾನಿ ಬಾಲಿಕಾಪಾಠಶಾಲೆಯ ಸಂರಕ್ಷಣಾರ್ಥ ಖಾಜೆ ಸಜರ್ ಸುರ್ಶ್ರೆ ಎಂಬವರ ಸುಫರ್ದಿಗೆ ಕೊಡಲ್ಪಟ್ಟ ಅಂಗಡಿಗಳ ವಿಷಯದಲ್ಲಿ ಅಕ್ಟೋ ರ 30 ನೇ ಮುಕ್ಕಾಂ 142 ನೇ ನಂಬರುಳ್ಳ ಸಬ ಕಮಿಟಿಯವರ ರಿಪೋರ್ಟ್.

XVI. ಮೇಸ್ತ್ರಿ ದೊಡ್ಡಮುನಿಯಪ್ಪನವರು, ಅರಳೇಪೇಟೆ ಮುನಿರಾಮಣ್ಣನ ಗಲ್ಲಿಯಲ್ಲಿರುವ ಒಂದನೇ ನಂಬರುಳ್ಳ ತಮ್ಮ ಮನೆಯ ಮುಂಭಾಗದಲ್ಲಿ ವಸಾರೆ ಕಟ್ಟಿಕೊಳ್ಳತಕ್ಕ ಬಗ್ಗೆ ಮ್ಯುನಿಸಿಪಲ್ ಜಮೀನು ಬೇಕಾಗಿರುವಂತೆ ಖಾಹಿಷ್ ಮಾಡಿ ಬರೆದ 1893 ನೇ ಇಸವಿ ಸೆಪ್ಟೆಂಬರ್ 22 ನೇ ತಾರೀಖಿನ ಅರ್ಜಿ.

XVII. ಬ್ರಿಕೆಟ್ಸ್ ಯಲ್ಲಿರುವ ಗುಂಡೋಪಂತರವರ ಕಾರಂಜಿ ಉಸ್ತುವಾರಿಗಾಗಿ ಇಡಲ್ಪಟ್ಟಿದ್ದ ಕಾವಲ್‌ಗಾರನನ್ನು ಹಾಗೆಯೇ ಇಡಬೇಕಾದ ಆವಶ್ಯಕತೆಯನ್ನು ಕುರಿತು, ಮ॥ ಹೆಚ್. ರಾಮಯ್ಯನವರು 1893 ನೇ ಇಸವಿ ಆಗಸ್ಟ್ 24 ನೇ ಮುಕ್ಕಾಂನಲ್ಲಿ ಬರೆದ 30 ನೇ ನಂಬರ್ ಲೆಟರ್.

XVIII. ಮ್ಯುನಿಸಿಪಲ್ ಗಾರ್ಡನ್ನಲ್ಲಿರುವ ಬಾವಿಗೆ ಕಟ್ಟಲ್ಪಟ್ಟ ಗೆರೆಸೆ ವಗೈರೆ ಗಳ ಬಾಬತು 144-3-8 ರೂಪಾಯಿಗಳಿಗೆ ಮರಾಮತ್ತ್ ಇಲಾಖಾ ಎಗ್ಸಿಕ್ಯೂಟಿವ್ ಇಂಜನಿಯರವರು ಕಳುಹಿಸಿದ ಬಿಲ್‌ಗಳನ್ನು ರವಾನಿಸಿ ಡೆಪ್ಯುಟಿ ಕಮ್ಮಿಷನರವರು ಬರೆದ 1893 ನೇ ಇಸವಿ ಅಕ್ಟೋಬರ್ 23 ನೇ ತಾರೀಖಿನ 1608 ನೇ ನಂಬರ್ ಲೆಟರ್.

XIX. ಮಾರ್ಕೆಟ್ ಪ್ರಾಂಟ್ ದಿನ್‌ಪೇಟೆಗೆ ಸೇರಿದ ನೌಕರ್‌ಮಾಸ್ತೇದ ತಲಬ್ ಇಜಾಫೆಯ ವಿಷಯವಂ ಕುರಿತು, ಸೀನಿಯರ್ ಸರ್ಜನ್ ವ ಸ್ಯಾನಿಟರಿ ಕಮ್ಮಿಷನರವರು ಬರೆದ 1893 ನೇ ಇಸವಿ ಅಕ್ಟೋಬರ್ 17 ನೇ ತಾರೀಖಿನ 1214 ನೇ ನಂಬರ್ ಡಾಕೆಟ್.

XX. ಸರ್1891—92 ಮತ್ತು 1892—93 ನೇ ಇಸವಿಗಳ ಬಾಬತು ಸಲ್ಲಬೇಕಾಗಿರುವ ಬಾಕೀ ಮೊಬಲಗುಗಳಿಗಾಗಿ ತಿಸ್ಸಾಯಿ ಅಂಗಡಿ ಕಂಟ್ರಾಕ್ಟರ್ ಬರೆದ ಯಾದಿ

XXI. ಒಂದು ಕಟ್ಟಡ ಕಟ್ಟುವ ಬಗ್ಗೆ ತಿಗಳರ ಪೇಟೆಯಲ್ಲಿರುವ ಗೊಲ್ಲರ ವೆಂಕಟಪ್ಪನೆಂಬಾತನಿಗೆ ಲೈಸೆನ್ಸ್ ಕೊಡುವದನ್ನು ಕುರಿತ ಕಾಗದ ಪತ್ರಗಳು.

XXII. ಪ್ರಕಟನೆಯ ಬಗ್ಗೆ ವಿಶೇಷ ಆಧಾರ ಕಲ್ಪಿಸಲ್ಪಡಬೇಕೆಂಬದಾಗಿ ವೈಸ್ ಪ್ರೆಸಿಡೆಂಟರವರು ಬರೆದ ಯಾದಿ, ಮತ್ತು ಮೈಸೂರ್ ವೃತ್ತಾಂತಬೋಧಿನಿ ಪತ್ರಿಕೆಯ ಪ್ರೊಪ್ರೈಟರವರ ಲೆಟರ್.

XXIII. ಮ್ಯುನಿಸಿಪಲ್ ತೆರಿಗೆಯ ವಿಷಯದಲ್ಲಿ ಪ್ರೆಸಿಡೆಂಟರವರ ಯಾದಿಯೊಡನೆ ಮ॥ ವೆಂಕಟರಾಮಯ್ಯನವರ ರಿಪೋರ್ಟ್.

XXIV. 1893 ನೇ ಇಸವಿ ನವೆಂಬರ್ 10 ನೇ ತಾರೀಖಿನಲ್ಲಿ ಮ॥ ಅಫಜಲ್ಲಾ ಖಾನರವರು, ಇದರಡಿ ತಿಳಿಸಲ್ಪಡುವ ವಿಷಯಗಳಂ ಸೂಚಿಸಿ ಬರೆದ ಲೆಟರ್.

(1) ಹೆಲ್ತ್ ಆಫೀಸರರ ಅಜಮಾಯಿಷಿ ಕೆಳಗಾಗತಕ್ಕ ಪದಾರ್ಥಗಳ ಪೈಕಿ ಇದುವರೆಗೆ ತೆರಿಗೆದಾಖಲ್ಪಡದಿರುವಂತವುಗಳ ಮೇಲೆ ಸಹ ತೆರಿಗೆ ಹಾಕತಕ್ಕದ್ದು.

(2) ದರಖಾಸ್ತು ಮೇಲೆ ಯಾಗಲಿ ಅಥವಾ ಅನ್ಯಥಾ ಆಗಲಿ, ಮ್ಯುನಿಸಿಪಲ್ ಸ್ವತ್ತುಗಳು ವಿಲೇ ಮಾಡಲ್ಪಡಬೇಕಾದ ಸಂದರ್ಭಗಳಲ್ಲಿ ಅವುಗಳನ್ನು ಬಹಿರಂಗವಾದ ಹರಾಜ್‌ಮೂಲಕ ವಿಕ್ರಯಿಸತಕ್ಕದ್ದು.

XXV. ರಾಮಣ್ಣನಪೇಟೆಯಲ್ಲಿ ಭಾವಿ ತೆಗೆಯುಸುವದಕ್ಕೆ ಹಾಕಲ್ಪಟ್ಟಿರುವ 575 ರೂಪಾಯಿಗಳ ಅಂದಾಜ್, ಮತ್ತು ಮ್ಯುನಿಸಿಪಲ್ ಆಫೀಸ್ ಕಟ್ಟಡದ ರಿಪೇರಿ ಬಗ್ಗೆ 300 ರೂಪಾಯಿಗಳ ಜಾಸ್ತೀ ಅಂದಾಜ್.

### ನಿಲ್ಲಿಸಲ್ಪಟ್ಟ ವಿಷಯಗಳು.

I. ಇದರಡಿ ತಿಳಿಸಲ್ಪಡುವ ಪಾಠಶಾಲೆಗಳ ಕಾರ್ಯನಿರ್ವಾಹಣೆಯನ್ನು ಗವರ್ನಮೆಂಟಿಗೆ ವರ್ಗಮಾಡುವ ವಿಷಯಕ್ಕೆ ಸಂಬಂಧಪಟ್ಟ ಯಾದಿ ಮತ್ತು ಕಾಗದ ಪತ್ರಗಳು.

(1) ಮ್ಯುನಿಸಿಪಲ್ ಇಂಗ್ಲಿಷ್ ಸ್ಕೂಲ್.

(2) ಕನ್ನಡ ಹುಡುಗರ ಸ್ಕೂಲ್ ಮತ್ತು ಇಂಗ್ಲಿಷ್ ಸ್ಕೂಲನ್ನು ದುರಸ್ತು ಮಾಡುವದಕ್ಕೆ ಅಂದಾಜ್.

II. ಮ॥ ಡಿ. ವೆಂಕಟರಾಮಯ್ಯನವರು, 1893 ನೇ ಇಸವಿ ಜುಲೈ 4 ನೇ ತಾರೀಖಿನಲ್ಲಿ ಬರೆದ ಲೆಟರ್‌ನಲ್ಲಿ ಸೂಚಿಸಿದ ವಿಷಯ.—

* * *

(b) ಸಿಟಿ ಮ್ಯುನಿಸಿಪಲ್ ಕಮ್ಮಿಷನರ್‌ಗಳ ಅನುಮತಿ ಯಿಲ್ಲದೆ ಸ್ಪೆಷಿಯಲ್ ಇಂಪ್ರೂವ್‌ಮೆಂಟು ಕಮಿಟಿಯನ್ನು ಏರ್ಪಡಿಸಿದ್ದು ನ್ಯಾಯವಿರುದ್ಧವಾದದ್ದು ಮತ್ತು ಅವ್ಯವಸ್ಥಿತವಾದದ್ದು.

III. ಈಚೆಗೆ ಏರ್ಪಡಿಸಲ್ಪಟ್ಟ ಸ್ಟ್ಯಾಂಡಿಂಗ್ ಕಮಿಟಿಯನ್ನು ಕುರಿತ ಪ್ರೆಸಿಡೆಂಟರವರ ಯಾದಿ.

IV. ಹಲಸೂರ್ ಬಾಗಿಲಲ್ಲಿರುವ ಕಾಫೀರೂಮಿಗೆ ಸಮೀಪದಲ್ಲಿರತಕ್ಕ ಜಮೀನನ್ನು ಖಾಯಿಷ್‌ಮಾಡಿ ಹೈದರ್‌ಸಾಬಿ ಯೆಂಬಾತನು ಬರೆದುಕೊಂಡ ಅರ್ಜಿ.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಆಫೀಸ್. ತಾರೀಖ್ 16 ನೇ ನವೆಂಬರ್, 1893.

K. SRINIVASA RAO,
*Vice President,*
*City Municipal Commission.*


## NOTICE.

### "ಆಂಗ್ಲೋ ಇಂಡಿಯನ್ ಪಾಕೆಟ್‌ಡೈರಿ"

ನಾವು ಪ್ರತಿ ವರ್ಷದಲ್ಲಿಯೂ ಪ್ರಚುರ ಪಡಿಸುತಲಿರುವ ಮೇಲಿಗೆ ಸರ್ವರಿಗೂ ಬಹಳ ಉಪಯುಕ್ತವಾಗಿರುವಂತ ಇಂಗ್ಲಿಷ್ ತಿಂಗಳ ತಾರೀಖ್‌ವಾರ್, ಇದಕ್ಕೆ ಸರಿಯಾದ ನಮ್ಮ ಹಿಂದೂ ಸಂವತ್ಸರ, ತಿಂಗಳು, ತಿಥಿ, ವಾರ, ನಕ್ಷತ್ರ ಸಹಿತವಾಗಿಯೂ, ಇನ್ನೂ ಆವಶ್ಯಕವಾಗಿ ತಿಳಿಯಬೇಕಾದ ಸಂಗತಿಗಳು, ರೈಲ್ವೇ ಸ್ಟೇಷನ್‌ಗಳು, ಅಲ್ಲಿಗೆ ರೈಲ್ವೇ ಚಾರ್ಜ್, ಪೋಸ್ಟಾಫಿಸ್ ರೂಲ್ಸ್, ಮುಂತಾದ ವಿಶೇಷ ಸಂಗತಿಗಳನ್ನು ಕೇಳಿಸಿರುವ ೧೮೯೪ ನೇ ಇಸವಿಯ ದಿನಚರಿ ಪುಸ್ತಕವನ್ನು ವಿಕ್ರಯಕ್ಕೆ ಸಿದ್ಧಪಡಿಸಿರುತ್ತೇವೆ.

ಕ್ರಯ ಪ್ರತಿ ೧ಕ್ಕೆ ಟಪಾಲ್ ಹಾಸಲ್‌ಸಹಿತ ೦-೭-೬

೫ ಪ್ರತಿ ಒಟ್ಟಿಗೆ ತರಿಸಿಕೊಳ್ಳತಕ್ಕವರಿಗೆ ೧ ಪ್ರತಿ ಜಾಸ್ತಿಯಾಗಿ ಕಳುಹಿಸುತ್ತೇವೆ. ಬೇಕಾದವರು ಈ ಕೆಳಗೆ ಸಹಿ ಮಾಡಿರುವವರ ಹೆಸರಿಗೆ ಬರೆದು ತರಿಸಿಕೊಳ್ಳಬಹುದು. ಪ್ರತಿ ಭಾಗಿಗೂ ರಿಜಿಸ್ಟರ್ ಹಾಸಲ್ ೨ ಆಣೆ ಜಾಸ್ತೀ ಕಳುಹಿಸಿಕೊಡಬೇಕು. ಅಪೇಕ್ಷೆಯುಳ್ಳವರು ವಿಳಾಸ ವಗೈರೆಯನ್ನು ಸ್ಪಷ್ಟವಾಗಿ ತಿಳಿಯುವಂತೆ ಬರೆಯಬೇಕು.

೫—೧೧—೯೩ } ಸತ್ಯಂ ಚಂದ್ರಶೇಖರಯ್ಯ, ಪ್ರೊಪ್ರೈಟರ್, "ವರ್ನಾಕ್ಯೂಲರ್ ಸ್ಟ್ಯಾಂಡರ್ಡ್ ಲೈಬ್ರರಿ", ಬೆಂಗಳೂರು.


## ಕೊಡಗು ಫಾರೆಸ್ಟ್ ಇಲಾಖಾ.

### ನೋಟಿಸ್.

ತಾರೀಖು 25 ನೇ ಅಕ್ಟೋಬರ್ 1893.

ಸರ್ 1893 ನೇ ಇಸವಿ ಡಿಸೆಂಬರ್ ತಾರೀಖು 18 ರಲ್ಲು ಫ್ರೇಜರ್ ಪೇಟೆಯಲ್ಲಿ ಹೆಚ್ಚು ಕಡಿಮೆ 160 ಟನ್‌ಗಳು ಗಂಧ ಹರಾಜ್ ಹಾಕಲ್ಪಡುತದೆ.

ಷರತ್— ಸರ್ 1885 ನೇ ಇಸವಿ ಜನವರಿ ತಾರೀಖು 3 ರ ನಂಬರ್ 1ನೇ ಕೊಡಗು ಡಿಸ್ಟ್ರಿಕ್ಟ್ ಗೆಜೆಟಿನಲ್ಲಿ ಪ್ರಯಿಷ್ ಮಾಡಲ್ಪಟ್ಟ ಕೊಡಗು ಚೀಫ್‌ಕಮಿಷನರ್ ಸಾಹೇಬರವರ ಸರ್1881 ನೇ ಇಸವಿ ಫೆಬ್ರವರಿ ತಾರೀಖು 15 ನಂಬರ್ 26 ರ ನೋಟಿಫಿಕೇಷನ್ ಮೇರೆ ಕೋಕಡ ಇಪ್ಪತ್ತೈದರಷ್ಟು ಕ್ರಯವನ್ನು ಹರಾಜು ಕಾಲದಲ್ಲಿ ಕೊಡತಕ್ಕದ್ದು. ಬಾಕಿ ಮೊಬಲಗನ್ನು 1894 ನೇ ಇಸವಿ ಮಾರ್ಚ್ ತಾರೀಖು 15 ರ ಒಳಗೆ ಸಾಕಲ್ಯವಾಗಿ ಭರಣಿ ಮಾಡತಕ್ಕದ್ದು.

G. F. PREVOST,
*Dy. Conservator of Forests, Coorg.*

## ಮೈಸೂರ್ ಗವರ್ನ್‌ಮೆಂಟ್.

### ಎಕ್ಸೈಜ್ ಇಲಾಖಾ.

### ನೋಟಿಸ್.

ತಾ| 18ನೇ ನವೆಂಬರ್, 1893

ಬೆಂಗಳೂರು ಸಿವಿಲ್ ವ ಮಿಲಿಟರಿ ಸ್ಟೇಷನ್ ಮತ್ತು ಶಹರಿನ ಶೇಂದಿ ಬಿಕ್ರೀ ಖರ್ಚ್ಯಾವು ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರವರ ಸಮಕ್ಷಮದಲ್ಲಿ ಬೆಂಗಳೂರು ಡಿಸ್ಟ್ರಿಕ್ಟ್ ಕಚೇರಿಯಲ್ಲಿ 1893ನೇ ಇಸವಿ ಚಾಲ್ತೀ ನವೆಂಬರ್ ಮಾಹೆ 25 ನೇ ತಾರೀಖ್ ಶನಿವಾರ ಮಧ್ಯಾಹ್ನ 12 ಘಂಟೆಗೆ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ.

2. ಮೇಲ್ಕಂಡ ಪ್ರಕಾರ ವಿಕ್ರಯಿಸಲ್ಪಡತಕ್ಕ ಗುತ್ತಾ ಖರ್ಚ್ಯಾವು, ಹರಾಜ್ ಕಾಲದಲ್ಲಿ ಡೆಪ್ಯುಟಿ ಕಮಿಷನರವರು ತೀರ್ಮಾನಿಸುವಂತೆ 1893ನೇ ಇಸವಿ ಡಿಸೆಂಬರ್ ಗುರ್ರೇ ಲಾಗಾಯಿತು ಅಥವಾ 1894 ನೇ ಇಸವಿ ಜನವರಿ ಗುರ್ರೇ ಲಾಗಾಯಿತು ಪ್ರಾರಂಭಿಸಿ 1897 ನೇ ಇಸವಿ ಜೂನ್ ತಾರೀಖ್ 30 ಕ್ಕೆ ಅಂತ್ಯವಾಗುವ ಕಾಲಕ್ಕೆ ಸ್ಥಿರ ವಿಕ್ರಯಿಸಲ್ಪಡುತ್ತೆ.

3. ಮೇಲ್ಕಂಡ ಹರಾಜ್‌ನಲ್ಲಿ ಕೊಂಡುಕೊಳ್ಳಬೇಕೆಂದು ಅಪೇಕ್ಷಿಸುವ ಮನುಷ್ಯನು ರೋಕಡ್ ಜಿಪ ಡೇಖೀಲ್ ಸರ್ಕಾರಕ್ಕೆ ತಿಂಗಳು 1 ಕ್ಕೆ ಎಷ್ಟು ಮೊಬಲಗನ್ನು ಕೊಡಲಿಕ್ಕೆ ಸಿದ್ಧವಾಗಿರುವನೋ ಅಷ್ಟು ಮೊಬಲಗ್ಯ ಸವಾಲ್ ಮಾಡತಕ್ಕದ್ದು.

4. ವಿಕ್ರಯದ ಶರತ್ತುಗಳು ಮುಂತಾದ್ದನ್ನು ಅರಿಯಲು 1893 ನೇ ಇಸವಿ ನವೆಂಬರ್ 17 ನೇ ತಾರೀಖಿನ ಮೈಸೂರು ಗಜೆಟ್ಟಿನ ವಿಶೇಷ ಪತ್ರಿಕೆಯನ್ನು ನೋಡಬಹುದು, ಅಥವಾ ಬೆಂಗಳೂರು ಕೋಟೆಯಲ್ಲಿರುವ ಎಕ್ಸೈಜ್ ಕಮಿಷನರ್ ಆಫೀಸಿಗೆ ಬಂದು ತಿಳಿದುಕೊಳ್ಳಬಹುದು.

L. RICKETTS,
*Excise Commissioner in Mysore*

## THE MONEY MARKET

### Stocks, Shares and Exchange

ಮದರಾಸ್, ಶನಿವಾರ, ತಾರೀಖ್ 18ನೇ ನವೆಂಬರ್, 1893

ಸೇಕಡ 4ರೂ. ಬಾಬತು ಇಂಡ್ಯಗವರ್ನಮೆಂಟ ಪತ್ರಗಳು 104-8-0ರೂ ಗಳಿಂದ 105-0-0 ರೂ ವರೆಗೆ

ಸೇಕಡ ಮೂರವರೆ ರೂ ಬಾಬತು, ಗವರ್ನಮೆಂಟ ಪತ್ರಗಳು, 98-8-0 ರೂ ಗಳಿಂದ 99-0-0 ವರೆಗೆ

ಮದರಾಸ್ ಬ್ಯಾಂಕ್ ಷೇರ್‌ಗಳು, (500) ರೂಪಾಯಿಗಳ ಬಾಬತು, 990-0-0ರೂ ಗಳಿಂದ 995-0-0 ವರೆಗೆ

ಕಮರ್ಷಿಯಲ್ ವ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಷೇರ್‌ಗಳು, (100ರೂ) ಬಾಬತು 150-0-0ರೂ ಗಳಿಂದ 155-0-0 ರೂ ವರೆಗೆ.

ಸವರಿನ್‌ಗಳು, ದರ 1 ಕ್ಕೆ 16-0-0 ರೂಪಾಯಿಗಳಿಂದ 16-3-0 ರೂ ವರೆಗೆ,

ಲಂಡನ್ ಬ್ಯಾಂಕಿನಮೇಲೆ ಕೊಡಲ್ಪಡುವ ಬ್ಯಾಂಕ್ ಬಿಲ್ಸ್ ದರ್ಶನ ಹುಂಡಿಗಳು ....

| | |
|---|---|
| 6 ತಿಂಗಳ ಮಾಯಿದೆಗೆ | 1 s 3 13/32 d |
| 4 " .. | 1 s 3 11/32 d |
| ಕೇಳಿದಾಗಕೊಡಲ್ಪಡುವದಕ್ಕೆ | 1 s 3 1/4 d |

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA

MONDAY, NOVEMBER 20 1893

೧೮೯೩ ನೇ ಇಸವಿ ನವೆಂಬರ್ ೨೦ ನೇ ತಾ| ಸೋಮವಾರ

## ಮದ್ಯಪಾನಾಭಿವೃದ್ಧಿಯು ಕುರಿತು.

ಈ ಮೈಸೂರ್ ಸಂಸ್ಥಾನದ ಹುಟ್ಟುವಳಿಯು ಸಾಲೆಸಾಲಿಗೆ ವೃದ್ಧಿಯಾಗುತ ಎಕ್ಸೈಜ್ ಬಾಬ್‌ನಲ್ಲಿಯೂ ಮಹಾರಾಜಾ ಸರ್ಕಾರಕ್ಕೆ ವಿಶೇಷ ಆದಾಯವು ಕಂಡುಬರುವ ಅಂಶವು ನೇಟಿವ್ ರಾಜ್ಯಗಳ ಅಭಿಮಾನಿಶಾಲಿಗಳೆಲ್ಲರಿಗೂ ಅತ್ಯಾನಂದವನ್ನುಂಟುಮಾಡದಿರಲಾರದೆಂದೆಣಿಸುತ್ತೇವೆ. ಈ ರಾಜ್ಯದ ಜಮಿಾಬಾಬ್ ಹುಟ್ಟುವಳಿಯಲ್ಲಿ ಮೂರರಲ್ಲೊಂದುಭಾಗಕ್ಕೆ ಸರಿಯಾಗಿ ಅಬ್ಕಾರಿಯ ಮೂಲಕ ಉತ್ಪತ್ತಿಯಾಗಿರುವ ಅಂಶವು ರಿಪೋರ್ಟಿನಮೂಲಕ ಅರಿಯಲಾಗಿ ಮೈಸೂರು ದೇಶೀಯರು ವಿಶೇಷ ವೈಲಕ್ಷಣ್ಯವಂ ಪಡೆಯುತಬರುವಂತೆ ಭಾವಿಸಬೇಕಾಗಿರುತಿದೆ. ಈ ಬಾಬಿನಲ್ಲಿ ಎಷ್ಟು ಅಧಿಕವಾಗಲಿಕ್ಕೆ ಆ ವಿಷಯಕವಾದ ಪ್ರಜೆಗಳಅಭಿಮಾನವೊಂದುವಿನಾ ಮತ್ತಾವುದೂ ಕಾರಣವಾಗಲಾರದು. ಸರ್ಕಾರೀಯಾಗಿ ತೋರಿಸಲ್ಪಟ್ಟಿರುವ ೧೮೯೨-೯೩ ನೇ ಸಾಲಿಬಾಬತು ೩೦ | ಲಕ್ಷ ರೂಪಾಯಿಗಳ ಆಯತಿಯಲ್ಲಿ ಎಷ್ಟುಪಾಲಿಗೆ ಒಳದೇಶದ ತಯಾರೀ ಪದಾರ್ಥಗಳ ಮೂಲಕ ಉತ್ಪತ್ತಿಯಾಯಿತೋ, ಇನ್ನೆಷ್ಟರಮಟ್ಟಿಗೆ ಯೂರೋಪ್ ತಯಾರೀ ಪದಾರ್ಥಗಳ ಮೂಲಕ ಶಿಸ್ತಾಯತಾಯಿತೋ ಸದರೀ ಅಂಶವು ವಿವರವಾಗಿ ತಿಳಿಯಲಿಕ್ಕೆ ಅವಕಾಶ ದೊರೆತಿದ್ದಲ್ಲಿ ಆಗ ಪ್ರಜೆಗಳಲ್ಲೆಷ್ಟುಜನ ಸ್ವದೇಶಾಭಿಮಾನವುಳ್ಳವರಾಗಿ, ದೇಶೀಯ ಪದಾರ್ಥಗಳಲ್ಲಿ ಅನುರಕ್ತರಾಗಿದಾರೆಂಬದನ್ನೂ, ಇತರರೆಷ್ಟುಜನ ಅನ್ಯದೇಶಾಭಿಮಾನವುಳ್ಳವರಾಗಿ ಅಲ್ಲಿನ ವಸ್ತುಗಳಲ್ಲಿ ಅಭಿರುಚಿಯುಳ್ಳವರಾಗಿದಾರೆಂಬದನ್ನೂ ಸುಲಭವಾಗಿ ನಿರ್ಧರಿಸಲಿಕ್ಕೆ ಸಾಧ್ಯವಾಗಬಹುದು. ಇದಲ್ಲದೆ ಪಾನ ಮಾಡುವವರಲ್ಲಿ ಸೇಕಡ ಎಷ್ಟುಜನ ಅನ್ಯದೇಶದಿಂದ ಬರುವ ಮದ್ಯ ವರ್ಗಗಳಂ ಪರಿಗ್ರಹಿಸುತಲಿದಾರೆಂಬ ಒಂದು ಕಿಫಾಯತಿಕಾ ಲೆಕ್ಕವು ದೊರೆಯುವ ಪಕ್ಷಕ್ಕೆ, ಆದರಿಂದ ದೇಶದಲ್ಲಿ ಇಷ್ಟುಜನ ಧನವಂತರಾದವರಿದಾರೆಂತಲೂ ಅವರ ಐಶ್ವರ್ಯವು ಸಮಷ್ಟಿಯಲ್ಲಿ ಇಷ್ಟುಭಾಗವು ಸರ್ಕಾರಕ್ಕೆ ಏತದ್ರೂಪವಾಗಿ ಮರಳ ಬರುತಿದೆಂತಲೂ ನಿರ್ಣಯಿಸಿಕೊಳ್ಳಬಹುದಾಗಿರುತಿದೆ. ಅಂತಾ ಸರಿಯಾದ ಲೆಕ್ಕಗಳು ನಮಗೆ ದೊರೆಯುವದು ಸದ್ಯಃ ಪ್ರಯಾಸವಾದುದರಿಂದ ವ್ಯಷ್ಟಿಯಲ್ಲಿ ವಿಭಜಿಸಲಿಕ್ಕೆ ಸಾಧ್ಯವಾಗದಿದ್ದಾಗ್ಯೂ ಸಮಷ್ಟಿಯಲ್ಲಿ ಮದ್ಯಪಾನವು ಹೆಚ್ಚಿ ಅಮದನಿಕರಿಲೂ ರಿಕ್ತರಿಂದಲೂ ಸಹ ಸನುಸೃಷ್ಟ ಪದಾರ್ಥವಾಗಿ ಭಾವಿಸಿ ಪರಿಗ್ರಹಿಸಲ್ಪಟ್ಟಿರುತಿದೆ. ಲೋಕದಲ್ಲಿ ತತ್ತತ್ಪದಾರ್ಥಗಳ ಗುಣದೋಷಗಳೂ ಅವುಗಳ ಆವಶ್ಯಕತಾನಾವಶ್ಯಕತೆಗಳೂ ಜನರ ರ ಭಾವನಾನುಗುಣವಾಗಿ ಏರ್ಪಟ್ಟಿರುವದರಿಂದ ಒಬ್ಬ ಹೆಂಡಕುಡಿದವನನ್ನು ನೋಡಿ ನೀನು ಮಾಡುವದು ದುಷ್ಕೃತ್ಯವೆಂದು ನುಡಿಯುವದಾಗಲಿ ಇದು ವಿರುದ್ಧಸಲಪ್ರದವೆಂದು ಹೇಳುವದಾಗಲಿ ಅವನಿಗೆಷ್ಟುಮಾತ್ರವೂ ರುಚ್ಯವಾಗಿರಲಾರದು. ತದ್ವತ್ ಸರ್ಕಾರದವರನ್ನು ಕುರಿತು ಈ ಬಾಬಿನ ಸಂಚಿತವಾಗದನ್ನು ನಿಮಗೆ ಆವಶ್ಯಕವಲ್ಲವೆಂದು ನುಡಿದು ಅದನ್ನಾತಿಳಿಬೇಡಿ ಹಿಂದು ಯಾರು ಹೇಳ್ವದಾಗಲ್ಯ ಆ ಮಾತುಗಳವರಿಗೆಹಿತಕರವಾಗಿರಲಾರವು. ಇದರ ವ್ಯಸನವು ಅನುತಾಪಕರವಾದವಾಗಿರುವದೆಂಬದಂ ಅರಿಯದಿರುವವರೊಬ್ಬರನ್ನೂ ಕಾಣೆವು. ಮದ್ಯಪಾಯಿಗಳಾಗಿಯೂ, ಮಾಂಸಭಕ್ಷಕರಾಗಿಯೂ ಇರುವ ಅನ್ಯದೇಶೀಯರಾದಯೂರೋಪಿಯನ್‌ಗಳು, ಅವುಗಳೆರಡೂ ದುರ್ವ್ಯಸನಗಳಾಗಿಯೂ ತ್ಯಾಜ್ಯಗಳಾಗಿಯೂ ಇರುವ ಕಾರಣದಿಂದ ಎಲ್ಲರೂ ಅವಂ ತೊರೆಯಬೇಕೆಂದು ನುಡಿಯುತ ನಮಗೆ ಉಪದೇಶಕರಾಗಿ ಏರ್ಪಡುತಲಿದ್ದಾಗ್ಯೂ ಅಂತವರೆಲ್ಲರೂ ಅವ್ಯಾವರ್ತಕರೆಂಬ ಪರಿಭಾವನೆಯು ನಮ್ಮವರಲ್ಲಿ ಅನೇಕರಿಗೆ ನಿರೂಢವಾಗಿರುತಿದೆ. ಈ ಮದ್ಯದ ವಿಷಯದಲ್ಲಿ ನಮ್ಮ ಸಹಚಾರಿಣಿಯಾದ ಮದರಾಸ್ ಆಂಧ್ರಪ್ರಕಾಶಿಕಾ ಪತ್ರಿಕೆಯು ತಿಳಿಸುವ ಅಭಿಪ್ರಾಯಗಳನ್ನಾಮೂಲಾಗ್ರ ಪ್ರಕಟಿಸಲಿಕ್ಕೆ ಬೇಕಾದ ಅವಕಾಶವು ಈ ಪತ್ರಿಕೆಯಲ್ಲಿ ಇಲ್ಲದೆ ಹೋದುದರಿಂದ ಅವುಗಳ ಪೈಕಿ ಮುಖ್ಯಗಳಾದ ಕೆಲವು ಭಾಗಗಳನ್ನು ಮಾತ್ರ ಇಲ್ಲಿ ಭಾಷಾಂತರದಿಂ ಪ್ರಕಟಿಸಿ ಪ್ರಸಕ್ತ ವಿಷಯಕವಾದ ನಮ್ಮ ಲೇಖನವಂ ಬಹಳ ನಿರ್ವೇದದೊಡನೆ ಕೊನೆ ಮುಟ್ಟಿಸುವೆವು —

ಕ್ರಿಶ್ಚಿಯನ್‌ಗಳ ಬೈಬಲಿನಲ್ಲಿ ತಿಳಿಸಲ್ಪಟ್ಟಿರುವ ಪ್ರಕಾರ ಪೂರ್ವಕಾಲದೊಳೊಂದಾನೊಂದು ಸಮಯದಲ್ಲಿ ಪಿಶಾಚವು ಸರ್ಪವೇಷವಂ ಧರಿಸಿ, ಈ ಪ್ರಪಂಚಕ್ಕೆ ಆದಿ ಸ್ತ್ರೀಪುರುಷರಾದ ಈವ್ ಮತ್ತು ಆಡಂ ಎಂಬವರಿಗೆ ನಿವಾಸಸ್ಥಾನವಾದ ಯೀಡನ್ ಎಂಬ ಉದ್ಯಾನವನವಂ ಪ್ರವೇಶಿಸಿ ಪಾಪಸ್ವರೂಪವಂ ಪ್ರಥಮತಃ ತಿಳಿಯದಹಾಗೆ ಭಗವದಾಜ್ಞೋಲ್ಲಂಘನ ಮಾಡುವಂತೆ ಈವ್ ಎಂಬವಳನ್ನು ಪ್ರೇರಿಸಿತೆಂದು ಕ್ರಿಶ್ಚಿಯನ್‌ಗಳು ನಂಬಿದಾರೆ. ಆ ಕಾಲದಲ್ಲಿ ಸರ್ಪವೇಷವ ರಿಯಾಗಿದ್ದ ಸದರೀ ಪಿಶಾಚವೇ ಮರಳಿ ಜನಿಸಿ ಈ ಕಾಲದೊಳು ಮದ್ಯರೂಪವಂ ಧರಿಸಿ ಈ ಪ್ರಪಂಚವನ್ನೆಲ್ಲ ಆವರಿಸಿಕೊಂಡು ಜನರಂ ಪೀಡಿಸಿ ಅವರ ಶರೀರ ಶೌಚವದನ್ನೂ, ಬುದ್ಧಿ, ಪ್ರತಿಭೆ, ನೀತಿಪ್ರವರ್ತನ, ಐಶ್ವರ್ಯ ಮೊದಲಾದವನ್ನೂ ನಾಶಪಡಿಸಿ ಅವರಂನಿರಂತರ ದುಃಖಭಾಜನರಾಗಿ ಮಾಡುತಲಿದೆ. ಮದ್ಯಮಹಿಮೆಯು ಮಯೋನ್ನತವೆಂದು ಭಾವಿಸಲ್ಪಟ್ಟಿರುವದರಿಂದ ಈಗ ಅದು ಸರ್ವವ್ಯಾಪಿಯಾಗಿರುತಿದೆ. ಇದ ವರೆಗೆ ಇಂಡ್ಯಾದೇಶದಲ್ಲಿ ಬ್ರಾಹ್ಮ ಕ್ಷತ್ರಿಯ ವೈಶ್ಯ ಜಾತಿಯರಲ್ಲಿ ಯಾರು ಮದ್ಯಪಾನ ಮಾಡುವವರೆಂದು ತಿಳಿಯ ಬಂದಾಗ್ಯೂ ಅವರಂ ಕೂಡಲೆ ಸ್ವಸಮಾಜ್ಯದಿಂದ ಬಹಿಷ್ಕಾರ ಮಾಡುವ ಪದ್ಧತಿಯು ಇರುತಲಿತ್ತು. ಇದಲ್ಲದೆ ನಾಲಕನೆಯ ಜಾತಿಯವರಾದ ಶೂದ್ರರೂ ಪಂಚಮರು ಸಹ ಪ್ರಾಜ್ಞರು ಆಗಬೇಕಾಗುವಂತೆ ಮದ್ಯಪಾನ ಮಾಡಲ ಗಬೆಂಬ ನಿರ್ಬಂಧ ಪ್ರಾಪ್ತ ಮಾಡಲ್ಪಟ್ಟಿರುತಿದೆ. ಈಗ ಮದ್ಯಪಾನವು ನಾಗರಿಕ ವೈಲಕ್ಷಣ್ಯಗಳಲ್ಲಿ ಪ್ರಧಾನವಾದುದೆಂಬ ವಿಶ್ವಾಸದಿಂದೆಯಾದಕಾರಣ ಹುರಿಸಿದರಿಂದ ಸರಾಬಯ್ಯ ಗಿಗಳಿರಲಿಸಿ ಆದರಿಸಲ್ಪಡುತಲಿದೆ. ಪೂರ್ವಕ ಐದಲ್ಲಿ ಸುರಾಪಾನ, ಪರಸ್ತ್ರೀಗಮನ ಮೊದಲಾದವು ಮಹಾಪಾತಕಗಳಲ್ಲಿ ಸೇರಿಸಲ್ಪಟ್ಟು ಅವುಗಳಿಗೆ ಘೋರ ದಂಡನೆಗಳು ಸ್ಮೃತಿಗ್ರಂಥಗಳಲ್ಲಿ ವಿಧಿಸಲ್ಪಟ್ಟಿವೆ. ಈಗ ಅವುಗಳಲ್ಲಿ ಒಂದೊಂದೂ ಅಲಂಕಾರಗಳಾಗಿ ಪುರಸ್ಕರಿಸಲ್ಪಡುತ ಗೌರವನೀಯಗಳಾಗಿವೆ. ಪ್ರಸಂಗದಲ್ಲಿ ಅನ್ಯರಿಗೆ ಘಾತಕವಿಲ್ಲದಿದ್ದರೆ ಉಲ್ಲಾಸಕರ ಮಾಡುವ ಪಾನವು ಪಾತಕವಲ್ಲವೆಂದಲೂ, ತಾವಾಗಿ ಸೇರಿಬರುವ ಸ್ತ್ರೀಸಂಗವು ನಿರಾಕ್ಷೇಪಣೀಯವೆಂತಲೂ, ಭಾವಿಸಲಾಗಿರುವದರಿಂದಲೇ ಅವು ದಿನದಿನಕ್ಕೆ ಪ್ರವರ್ಧಮಾನವಾಗುತಬರುತಲಿವೆ. ಇವುಗಳಿಂದುಂಟಾಗುತಲಿರುವ ಅನರ್ಥಗಳು ಪ್ರಸಿದ್ಧಗಳಾಗಿರುವದರಿಂದ ಅವಂ ನಾವಿಲ್ಲಿ ಪ್ರತ್ಯೇಕ ವರ್ಣಿಸಬೇಕಾದ ಅವಶ್ಯಕತೆ ಇರುವದಿಲ್ಲವು. ಜನರಿಗದರಿಂದ ಉಂಟಾಗುವ ಅನರ್ಥಗಳು ಪರ್ಯಾಲೋಚಿಸಿ ದುಷ್ಪ್ರವೃತ್ತಿಯಂ ಹೋಗಲಾಡಿಸಲಿಕ್ಕೆ ಸ್ವದೇಶಾನ್ಯದೇಶೀಯರೆಂಬ ಭೇದವಿಲ್ಲವೆಂತಲೂ, ಹಿಂದೂ ಮುಸಲ್ಮಾನ್, ಕ್ರಿಶ್ಚಿಯನ್‌ಗಳೆಂಬ ಜಾತಿ ಭೇದಗಳಿಲ್ಲವೆಂತಲೂ, ದ್ವೈತಾದ್ವೈತ ವಿಶಿಷ್ಟಾದ್ವೈತಗಳೆಂಬ ಸಿದ್ಧಾಂತಭೇದಗಳು ಗಣಿಸಲ್ಪಡದೆಂತಲೂ ಎಲ್ಲರು ಐಕಮತ್ಯದಿಂ ಪ್ರವರ್ತಿಸಿ ಮಹಾ ಪಾತಕಿಗಳಾಗಿ ಹೋಗಿ ಅಪ್ರತೀಕಾರವಾದ ಪ್ರಬಲ ದುಃಖಾನುಭವಕ್ಕೆ ವಿಷಯರಾಗುವಂತವರಂ ಸನ್ಮಾರ್ಗ ಪ್ರವರ್ತಕರಾಗುವಂತೆ ಮಾಡಬೇಕಾದ್ದು ಪ್ರಥಮ ಸುಧಕರಿಷ್ಕರಣ ರೂಪವಾಗಿರುತಿದೆ. ಮದ್ಯಪಾನವು ಈಗ ಪುರುಷ ಪ್ರಪಂಚವಂ ಸ್ವಾಧೀನ ಪಡಿಸಿಕೊಂಡು ಕ್ರಮವಾಗಿ ಗೃಹಾಂತರ್ವರ್ತಿಗಳಾದ ಸ್ತ್ರೀ ಮಂಡಲವನ್ನಾಕರ್ಷಿಸಿಕೊಳ್ಳುತಲಿದೆ. ದಂಪತಿಗಳು ಮದ್ಯಪಾಯಿಗಳಾಗಿ ವಿವೇಕವಂ ಹೋಗಲಾಡಿಸಿಕೊಂಡು ಮಾನವು ನಷ್ಟವಾದ ಬಳಿಕ ಅವರು ವಿದ್ಯಾವಂತರಾದರೇನು ಪ್ರಯೋಜನವು? ದೇಶಾಟನ ಮಾಡಿದರೇನು ಲಾಭವು? ಕುಶಲವಿದ್ಯಾ ಪ್ರವೀಣರಾದರೇನು ಸಾರ್ಥಕವು? ಅನ್ಯದೇಶೀಯರಂತೆ ನಾಗರಿಕರೆನಿಸಿ ಸರ್ವವಿದ್ಯಾ ಪಾರಂಗತರಾದರೇನು ಪುರುಷಾರ್ಥವು? ಆದುದರಿಂದ ಮುಖ್ಯವಾಗಿ ತಿಳಿಸುವದೇನೆಂದರೆ —ಅಗ್ರವರ್ಣದವರೆನಿಸಿರುವ ಬ್ರಾಹ್ಮಣೋತ್ತಮರೇ! ಪ್ರಾಗ್ದಿಂದಲೂ ನೀವು ಸನ್ಮಾರ್ಗಪ್ರವರ್ತಕರಾಗಿಯೂ, ನೀತಿದರ್ಮ ಬೋಧಕರಾಗಿಯೂ ಭಗವತ್ಸ್ವರೂಪವಂ ಜ್ಞಾನ ಯೋಗಮಾರ್ಗಗಳಿಂದರಿತು ಅವಂ ಅನ್ಯರಿಗೆ ಉಪದೇಶಿಸುವಂತವರಾಗಿಯೂ, ಮತಪ್ರವರ್ತಕರಾಗಿಯೂ, ರಕ್ಷೋಪೇಕ್ಷಕರಾಗಿಯೂ, ಇರುತಲಿದ್ದೀರಿ. ಈಗ ಮದ್ಯವೆಂಬ ದುಷ್ಟಪಿಶಾಚವು ನಿಮ್ಮನ್ನು ಮೋಹಗೊಳಿಸಿ ಪಾವನತರವಾದ ನಿಮ್ಮ ಯಜ್ಞಶಾಲೆಗಳಂ ಪ್ರವೇಶಿಸಿ ಅಲ್ಲಿ ನಿಮ್ಮಿಂದ ರಕ್ಷಿತವಾಗಿದ್ದ ದಾರ್ಯಾಗ್ನಿಯನ್ನು ನಾಶಪಡಿಸಿ ಶ್ರೌತಾಗ್ನಿ ಕುಂಡಗಳಂ ಹಾಳುಸಿ ತತ್ಸ್ಥಾನಗಳಲ್ಲಿ ಬ್ರಾಂಡಿ, ಟೀ, ಕಾಫಿಗಳಿಗಾಗಿ ಮಾಡಿದ ಪ್ರತ್ಯೇಕ ಲೋಹಮಯಗಳಾದ ಒಲೆಗಳನ್ನೆಲಗೊಳಿಸಿದೆವು. ನೀವು ಸರ್ವಪ್ರಯತ್ನದಿಂದಲೂ ಜಾಗ್ರತವಸ್ಥೆಯೊಳಿದ್ದಾಗ್ಯೂ ಆವೇಶಗುಣದಿಂದ ನಿಮ್ಮನ್ನ ಅಸ್ವಾಧೀನಗೊಳಿಸಿ ನಿಮ್ಮಬುದ್ಧಿವಿವೇಕ ಔತ್ಕೃಷ್ಟ್ಯಾದಿ ಸಕಲಗುಣಗಳಂ ಹೋಗಲಾಡಿಸಿ, ನಿಮಗಿಂತ ವ್ಯಾಪ್ಯರಾದವರು ನಿಮ್ಮನ್ನು ನೋಡಿ ಹಾಸ್ಯಮಾಡಲೆಣಿಸಿರುವದು ನಿಮಗೆ ತಿಳಿಯೂ ಸುಮ್ಮನಿರುವದು ನಿಮಗೆ ಯೋಗ್ಯವಾಗಿದೆಯೆ! ನೀವು ನಿಮಗಿಂತ ಸಕಲವಿಧದಲ್ಲಿಯೂ ಕಡಮೆಯಾದವರಂ ದಾಸವರ್ಗಕ್ಕೆ ಸೇರಿಸಿಕೊಂಡು ಅವರಿಗೆ ಸುಲಭೋಚಿತದ್ಧರ್ಮಗಳಂ ಬೋಧಿಸಿ ಶಾಪದರಿಂದ್ಲ ಬದಲಾಗಿ ನೀವೆ ಅಸಮಾನರನ್ನು ಸಮಾನರನ್ನಾಗಿ ಮಾಡಿಕೊಂಡು ಮದ್ಯ ನಿಂದ್ಯ ಭೇದಗಳಿಲ್ಲದೆ ಅನಿಶೋವನೆ ನೀವು ಕಲೆತು ಕುಮಾರ್ಗಗಳಲ್ಲಿ ಪ್ರವೇಶಿಸಿ ನಷ್ಟಪ್ರಜ್ಞರಾಗುವದು ಪರಿಗೆದ್ದಮ್ಮಲ್ಲವೆ? ಆದಕಾರಣ ಮಹಾನರ್ಥಹೇತುಭೂತವಾದ ಮದ್ಯಪಾನದಿಂದ ನೀವು ಮುಕ್ತರಾಗಿ ನಿಮ್ಮ ಇಷ್ಟಮಿತ್ರರೆಲ್ಲರನ್ನೂ ತಪ್ಪಿಸಲಪ್ರಯತ್ನಪಡುವದು ಯೋಗ್ಯವಾದ ಸಮಯವಾಗಿರುತಿದೆ. ಮಹಮ್ಮದೀಯರೆ! ಅತಿ ಶ್ರೇಷ್ಠವಾಗಿರುವ ನಿಮ್ಮ ಖುರಾನಿನಲ್ಲಿ ಯಾವದು ನಿಷೇಧಿಸಲ್ಪಟ್ಟಿದೆಯೋ ಅಂತವುಗಳನ್ನು ಬಹಿರಂಗವಾಗಿ ತ್ಯಜಿಸತಕ್ಕದ್ದಾದ ವಿಧಿ ನೋಡಲಾಗಿದೆಯೋ ಅಂತಾ ಮದ್ಯಗಳು ಪವಿತ್ರವಾದ ನಿಮ್ಮ ಮಸೀದಿಗಳನ್ನಲಂಕರಿಸುತಲಿರುವದಂ ನಿರೋಧಿಸಲಾರದೆ ಸುಮ್ಮನೆ ನೋಡಿಕೊಂಡಿದೀರಲ್ಲವ! ಭೋಜನದಿಗಾಗಿ ಹೋರಾಡುತ ಕಲಹಗಳಿಗೆ ತಲೆದೊರಿಕೊಂಡು ಸ್ವಪರಹಾನಿಯಂ ಹೊಂದಿದ ನಷ್ಟವಾಗುವದಕ್ಕಿಂತಲೂ ನಿಮ್ಮ ಉತ್ತಮವಾದ ಮಹಮ್ಮದೀಯ ಮತವನ್ನು ನಿರ್ದುಷ್ಟವಾಗಿ ಮಾಡಿಕೊಂಡು ಅನೇಕ ಮದ್ಯಪಾನಾದಿಗಳಿಂದುಂಟಾಗಿರುವ ಮಾಲಿನ್ಯವಂ ಹೋಗಲಾಡಿಸಲಿಕ್ಕೆ ನೀವು ಏತಕ್ಕೆ ಪ್ರಯತ್ನಪಡದೆ ಇರುತ್ತೀರಿ? ಓ ಬ್ರಾಹ್ಮಣೇತರರಾದ ಇತರ ವರ್ಣದವರೇ! ನೀವು ಸಕಲಾಂಶದಿಂದಲೂ ಬ್ರಾಹ್ಮಣರಿಗೆ ಸಮಾನರೆನಿಸಿ ಅವರಂತೆ ಗೌರವಿಸಲ್ಪಡಬೇಕೆಂಬ ಕೋರಿಕೆಯುಳ್ಳವರಾಗಿ ತದ್ವತ್ ನಡೆಸುವ ಅನೇಕ ಪ್ರಯತ್ನಗಳಂ ನೋಡುತಲಿದ್ದೇವೆ, ಆಗಲಿ ಹಾಗಿದ್ದಲ್ಲಿ ನೀವು ಓ ನಾಗರಿಕಾಗ್ರಗಣ್ಯರೆ! ವಿಪ್ರರಿಗೂ ತದಿತರ ಜಾತಿಯವರಿಗೂ ಯಾವ ತಾರತಮ್ಯವಿರುತಿದೆಯೋ ಅದಂ ನೀವೆಲ್ಲರು ಸೇರಿ ಚೆನ್ನಾಗಿ ಆಲೋಚಿಸಲಿಕ್ಕಿದು ಯೋಗ್ಯವಾದ ಸಮಯವಾಗಿರುತಿದೆ. ಮಾದಕ ಪದಾರ್ಥಗಳಂ ಸೇವಿಸುವ ದುರಭ್ಯಾಸವು ಆದಿಯಿಂದಲೂ ಬ್ರಾಹ್ಮಣರಲ್ಲಿರಲಿಲ್ಲವು. ಅದು ನಿಮ್ಮ ಸಹವಾಸದಿಂದವರಲ್ಲಿಯೂ ಈಗ ಪ್ರಾದುರ್ಭವಿಸಿತು. ಮಹನೀಯರಾಗಿರುವ ಬ್ರಾಹ್ಮಣಜಾತಿಯವರೊಡನೆ ಸಮಾನರೆನಿಸಬೇಕೆಂಬ ಕೋರಿಕೆ ಇರುವ ನೀವು ಅಂತಾ ಬ್ರಾಹ್ಮಣ್ಯ ಸಂಪಾದನಕ್ಕೆ ಪೂರ್ವದಲ್ಲಿ ನಿಮ್ಮ ದೋಷವನ್ನು ಅರಿತು ನಿಮ್ಮ ಆತ್ಮ ವಿನಾಶಕವಾದ ಮದ್ಯಪಾನಾದಿ ದುರ್ವ್ಯಸನಗಳನ್ನು ಬಿಡಲಿಕ್ಕೆ ಏತಕ್ಕೆ ಇನ್ನೂ ಪ್ರಯತ್ನಿಸದೆ ಇರುತ್ತೀರೊ ತಿಳಿಯಲಿಲ್ಲವು. ಎಲ್ಲರು ಮದ್ಯಪಾನವನ್ನು ಒಂದು ವಿಲಾಸ ರೂಪವಾಗಿ ಭಾವಿಸಿರುತ್ತಾರೆ. ಅನೇಕರು ರಜಾ ದಿನಗಳಲ್ಲಿಯಾದ ಕಯನೋತ್ಸವವೆಂಬ ವಿನೋದ ರೂಪವಾಗಿ ಪರಿಭಾವಿಸಿ ಆಚರಿಸುತ್ತಾರೆ. ಮುಖ್ಯವಾಗಿ ಈ ದುರಭ್ಯಾಸವನ್ನು ಶುದ್ಧಾಂಗವಾಗಿ ಎಲ್ಲರೂ ತ್ಯಜಿಸಿ ತಮ್ಮ ತಮ್ಮ ಜ್ಞಾನಕರಣ ಕಳೇಬರವನ್ನು ಪರಿಶುದ್ಧವಾಗಿ ಮಾಡಿಕೊಳ್ಳುವತನಕ ಅವರು ಮಾಡುವ ಬೋಧನೆಗಳಾಗಲಿ, ನುಡಿಯುವ ಮಾತುಗಳಾಗಲಿ, ನಡೆಸುವ ಕಾರ್ಯಗಳಾಗಲಿ, ಆತ್ಮನಿಷ್ಠವಾದ ಔತ್ಕೃಷ್ಟ್ಯವಾಗಲಿ ಪ್ರಯೋಜನಕರಗಳಾಗಲಾರವೆಂದು ದೃಢವಾಗಿನಂಬತಕ್ಕದ್ದು.

## ಮೈಸೂರು ಲೋಕಲ್ ಸರ್ವಿಸ್ ಪರೀಕ್ಷೆ ಗಳ ಫಲಿತಾಂಶವು

ಕಳೆದ ಆಗಸ್ಟ್ ತಿಂಗಳಲ್ಲಿ ಜರಿಗಿದ ಮೈಸೂರು ಲೋಕಲ್ ಸರ್ವಿಸ್ ಪರೀಕ್ಷೆಗೆ ಸೇರಿದ ೩ ಭಾಗಗಳ ಪ್ರೈಸಿ ಫೋರ್ಸ್ಟ್, ಅಕೌಂಟ್ಸ್ ಎಕ್ಸೈಜ್ ಪರೀಕ್ಷೆಗಳಲ್ಲಿ ತೇರ್ಗಡೆಯಾದವರ ಹೆಸರುಗಳು ಇದುವರೆಗೆ ಗೆಜೆಟಿನಲ್ಲಿ ಪ್ರಕಟಿಸಲ್ಪಟ್ಟವಷ್ಟೆ. ಈ ವಾರದ ಮೈಸೂರ್ ಗೆಜೆಟಿನಲ್ಲಿ ರೆವಿನ್ಯೂ ಮತ್ತು ಸಿವಿಲ್ ಭಾಗದಲ್ಲಿ ತೇರ್ಗಡೆಯಾಗಿರುವವರ ಹೆಸರುಗಳ ಪಟ್ಟಿಗಳೆರಡು ಪ್ರಾಯಿಷ್ ಮಾಡಲ್ಪಟ್ಟಿರುತ್ತವೆ ಅವುಗಳನ್ನೀ ಪತ್ರಿಕೆಯ ಇಂಗ್ಲಿಷ್ ಭಾಗದಲ್ಲಿ ಮುದ್ರಿಸಿರುತ್ತೇವೆ ಸಿವಿಲ್ ಎಗ್ಸಾಮಿನೇಷನಿನಲ್ಲಿ ಮೊದಲನೆಯ ತರಗತಿಯೊಳು ಳಿಗಿನಗಳೂ, ಎರಡನೇ ತರಗತಿಯಲ್ಲಿ ೩ ಮಂದಿಯೂ ತೇರ್ಗಡೆಯಾಗಿದಾರೆಯಲ್ಲದೆ ಒಟ್ಟಾರು ಜನ ಪರೀಕ್ಷೆಗೆ ಹಾಜರಾಗಲಿಲ್ಲ [illegible] ಕೆಲವರು ಸಿವಿಲ್ ಪ್ರಾಸೀಜರ್ [illegible] ಮತ್ತು ಲಿಮಿಟೇಷನ್ [illegible] ಮತ್ತು [illegible] ಟ್ರಾನ್ಸ್‌ಫರ್ [illegible] ಮತ್ತು ಸ್ಪೆಸಿಫಿಕ್ ರಿಲೀಫ್ [illegible] ಇನ್ನು ಕೆಲವರು ಎರಡನ್ನೂ [illegible] ತೇರ್ಗಡೆಯಾಗಿ [illegible] ಡಿಸ್ಟ್ರಿಕ್ಟ್ [illegible] ಮೊದಲನೆಯವರಾಗಿರುತ್ತಾರೆ ರೆವಿನ್ಯೂ ಪರೀಕ್ಷೆಯಲ್ಲಿ ಮೊದಲನೇ ತರಗತಿಯೊಳು ೫೨ ಮಂದಿಯೂ, ಎರಡನೇ ತರಗತಿಯಲ್ಲಿ ೩೩ ಮಂದಿಯೂ ತೇರ್ಗಡೆಯಾಗಿರುತ್ತಾರೆ ಇದರಲ್ಲಿ [illegible] ಸಿ. ರಘುನಾಥಯ್ಯನವರು ಮೊದಲನೆಯವರಾಗಿರುತ್ತಾರೆ ಇವರು ಕಳೆದ ವರುಷದಲ್ಲಿ ಸಿವಿಲ್ ಪರೀಕ್ಷೆಯೊಳು ಸಹ ಮೊದಲನೆಯವರಾಗಿದ್ದರು ಈ ವಿಷಯ ಭಾಗದಲ್ಲಿ [illegible] ಇವರು ಮೊದಲನೆಯವರಾದದ್ದು ಕೇಳುವದಕ್ಕೆ ನಾವು ಬಹಳ ಸಂತೋಷಿಸುತ್ತೇವೆ ಈ ಪರೀಕ್ಷೆಯಲ್ಲಿ [illegible] ಜಾತಿ [illegible] ರೆವಿನ್ಯೂ [illegible] ತರಗತಿಯಲ್ಲಿ ತಪ್ಪಿ ಹೋಗಿರುವಂತೆ ವ್ಯಕ್ತವಾಗುತ್ತದೆ ಬರುವ [illegible] ಸಿವಿಲ್ [illegible] ಮತ್ತು ರಿಜಿಸ್ಟ್ರೇಷನ್ ಪರೀಕ್ಷೆಗಳ ಫಲಿತಾಂಶವು [illegible] ನಂಬುತ್ತೇವೆ

## LOCAL AND PROVINCIAL NEWS

### ಸ್ಥಳೀಯವು ಪ್ರಾಂತೀಯವೂ ಆದ ವರ್ತಮಾನಗಳು

ಬೆಂಗಳೂರು [illegible] ಮತ್ತು ಮಹಾರಾಜರವರ ಜಾಗದ [illegible] ಬೆಂಗಳೂರ್ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರ ಸರ್ಟಿಫಿಕೇಟ್ [illegible] ಈ ತಿಂಗಳ ೨೩ನೇ ತಾರೀಖು [illegible] ೧೫ ಘಂಟೆಗೆ [illegible] ಮೂಲಕ [illegible] ಸಲ್ಪಡುವದೆಂದು ಶ್ರೀಮನ್ಮಹಾರಾಜರ ಸರ್ಕಾರದಿಂದ ಇಷ್ತಿಹಾರ್ ಕೊಡಲ್ಪಟ್ಟಿದೆ

ಈ ಪ್ರಾಂತಿಗೆ ಪರರಸ್ಥಳಗಳ [illegible] ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಬೆಂಗಳೂರ್ ಸೆಂಟ್ರಲ್ ಕಾಲೇಜಿಗೆ ಸೇರಿದಂತೆ ಒಂದು ಬೋರ್ಡಿಂಗ್ ಹೌಸನ್ನು [illegible] ವಿದ್ಯಾರ್ಥಿಗಳಿಗೆ [illegible] ಸ್ಥಾಪಿಸಬೇಕೆಂದು ಮಿ. [illegible] ಸರ್ಕಾರವು ಮಾಡಿದ್ದ ಮೇಲೆ [illegible] ಅದರ [illegible] ಬೇಕಾಗಿರುವ [illegible] ಕಟ್ಟಡ [illegible] ಕೇಳುತ್ತೇವೆ.

ಬೆಂಗಳೂರು ಸಿವಿಲ್ ವ ಮಿಲಿಟರಿ ಸ್ಟೇಷನ್ನಲ್ಲಿ ಜಲವಸತಿಯು ಕಲ್ಪಿಸುವದಕ್ಕಾಗಿ ಮುಂಚೆ ಮಾಡಲ್ಪಟ್ಟ ಮಲ್ಲಿಗೆ [illegible] ವಾಟರ್ ಪ್ರೊಜೆಕ್ಟನ್ನು ಕುರಿತು ಇದುವರೆಗೆ ಏನು ಏರ್ಪಾಡುಗಳು ಮಾಡಲ್ಪಟ್ಟವೋ ಅವುಗಳನ್ನು ತಿಳಿಸಬೇಕೆಂದೂ, ಈ ವಿಷಯದಲ್ಲಿ ಜವಾಬ್ದಾರರಿಗೆ ಕಂಪೆನ್ಸೇಷನ್ ಕೊಡಬೇಕಾದ್ದಕ್ಕೆ ಮೈಸೂರ್ ದರ್ಬಾರಿನವರೊಡನೆ ಯೇನು ಏರ್ಪಾಡು ಮಾಡಲ್ಪಟ್ಟಿವೆ ಯೆಂತಲೂ ಇಂಡ್ಯ ಗವರ್ನಮೆಂಟಿನವರು ರೆಸಿಡೆಂಟರವರನ್ನು ಕೇಳಿರುತ್ತಾರೆ

ಕಳೆದ ೨೦ ತಿಂಗಳ ೨೨ನೇ ತಾರೀಖಿನಲ್ಲಿ ಶ್ರೀಮನ್ ಮೈಸೂರು ಮಹಾರಾಣಿಯವರಾದ ವಾಣೀವಿಲಾಸ ಸನ್ನಿಧಾನಕ್ಕೆ ಶ್ರೀ ಇಂಡ್ಯಬೆಕ್ರವರ್ತಿನೀಯವರು ದಯಮಾಡಿಸಿದ ಕ್ರೌನ್ ಆಫ್ ಇಂಡ್ಯ ಎಂಬ ಅಲಂಕಾರಕೆ ಅಂಗಭೂತವಾಗಿ ಆಕೆಯವರ [illegible] ಸಾರ [illegible] ರಾಜಶಾಸನವನ್ನು ಒಂದು ಕರೀಕಾವಿನೊಡನೆ ಇಂಗ್ಲೆಂಡಿನ ರೆಸಿಡೆಂಟರಿಗೆ ಕಳುಹಿಸಲು ಅವರು [illegible] ದಿವಾನರವರ ಮೂಲಕ ಮಹಾರಾಜರವರ ಸನ್ನಿಧಿಗೆ ಕಳುಹಿಸಿಕೊಟ್ಟಿರೆಂತಲೂ, ಅದು ವಾಣೀವಿಲಾಸ ಸನ್ನಿಧಿಯಲ್ಲಿ ಅರ್ಪಿಸುವದಕ್ಕಾಗಿ ದಿವಾನರವರು ಮೈಸೂರಿಗೆ ದಯಮಾಡಿದರೆಂತಲೂ ತಿಳಿಯಬರುತದೆ.

ಗತವಾರದ ಮೊದಲು ಮಳೆಯು ಹಿಮ್ಮೆಟ್ಟಿದಂತೆ ಕಾಣುತದೆ. ಇದರಿಂದ ಕಟಾವ್ ಕೆಲಸಕ್ಕೆ ಅಡಚಣೆ [illegible] ರೈತರು [illegible] ರುವ [illegible] ಬೆಳೆಯು ಹೆಚ್ಚಾದದರಿಂದ [illegible] ದುರ್ಭಿಕ್ಷ [illegible] ತುಂಬ ಜನರಿಗೆ [illegible] ಮಟ್ಟಿಗೆ [illegible] ಫಲಪ್ರ ಸಂಸಾರಿ [illegible] ಮೊದಲು [illegible] ಡಿಸ್ಟ್ರಿಕ್ಟ್‌ನಲ್ಲಿ ಡೆಪ್ಯುಟಿ ಕಮ್ಮಿಷನರ್ [illegible] ಕಮ್ಮಿಷನರುಗಳಿಗೆ [illegible] ಮಾಡಿದಾರೆ

ಸ [illegible] ಕಮ್ಮಿಷನರವರಿಂದ ಸಾದರ್ ಮಾಡಲ್ಪಟ್ಟಿದ್ದ ೧೮೯೧ನೇ ಇಸವಿ ಜನವರಿ ೧೧ ನೇ ಮಾರ್ಚ್ ೧೭೦ನೇ ನಂಬರಿನ ಇಸ್ತಿಹಾರಿನ ಮೇಲೆ ಮೈಸೂರು ಶೀಮೆಯ [illegible] ಜಾಗಗಳಲ್ಲಿರುವ [illegible] ಕ್ರಯ [illegible] ಅವುಗಳಿಗೆ ಲೈಸೆನ್ಸ್ ಕೊಡತಕ್ಕ ವಿಷಯದಲ್ಲಿ [illegible] ಜಾರಿಯೊಳು [illegible] ನಿಬಂಧನೆಗಳನ್ನು ಈಗ ಮಹಾರಾಜಾ [illegible] ಮೈಸೂರ್ [illegible] ೨೨೮೩ ಬಿ ೨೩೮ ನೇ ನಂಬರ್ ಇಸ್ತಿಹಾರಿನಿಂದ ರದ್ದುಮಾಡಿದ್ದಾರೆ [illegible] ಡಿಸ್ಟ್ರಿಕ್ಟ್ [illegible] ಸೀತಾಪುರ [illegible] ಒನ್ನು [illegible] ಗ್ರಾಮಗಳಲ್ಲಿ ಸಹ [illegible] ತರ [illegible] ಹುಕುಂ ಮಾಡಿರುತ್ತಾರೆ

## THE MYSORE GAZETTE

### ಮೈಸೂರು ಗೆಜೆಟು

ಶ್ರೀಮನ್ಮಹಾರಾಜರ ಸಾಹೇಬರ ಸರ್ಕಾರದ [illegible] ಜಾರಿಯಾದ ಹುಕುಂಗಳು

ನಂ. ೬೯೧೮—೭ ೩—೯೩ ತಾರೀಖ್ ೪ ನೇ ನವಂಬರ್ ೧೮೯೩ — ಮೊಳಕಾಲ್ಮೂರು ತಾಲ್ಲೂಕ್ ಅಮಲ್ದಾರ್ [illegible] ಗೋವಿಂದಪ್ಪನವರಿಗೆ, ೧೮೯೩ ನೇ ಇಸವಿ ಸೆಪ್ಟೆಂಬರ್ ೪ ನೇ ಮಾರ್ಚ್ ೭೭೪೮—೮೦ [illegible] ನೇ ನಂಬರ್ ಗವರ್ನಮೆಂಟ್ ಇಸ್ತಿಹಾರಿನಮೆಯು ಮೂಲಕ [illegible] ಲ್ಪಟ್ಟಿದ್ದ ಒಂದು ತಿಂಗಳ ಪ್ರಿವಿಲೇಜ್ ರಜಾ ಇದರಿಂದ ಇನ್ನು [illegible] ದಿವಸಗಳ ತನಕ ಜಾಸ್ತಿ ಮಾಡಲ್ಪಟ್ಟಿರುತದೆ.

ನಂ. ೭೯೩೯—೮ ೩೩೪—೯೩ — ಮೈಸೂರು ಸರ್ವೆ ರೆಗ್ಯುಲೇಷನ್ ಗಳ ೨೦೦ ನೇ ಆರ್ಟಿಕಲ್ ಅನುಸರಿಸಿ ಮೈಸೂರ್ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ಮಿ. ಸಿ ದೇವರಾಜೇ ಅರಸಿನವರಿಗೆ, ೧೮೯೩ನೇ ಇಸವಿ ನವಂಬರ್ ೧೧ ನೇ ತಾರೀಖ್ ಲಾಗಾಯಿತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು, ಬಗರ್ ತಲಬಿನಲ್ಲಿ ಹದಿನೈದು ದಿವಸಗಳ ರಜಾ ಕೊಡಲ್ಪಟ್ಟಿರುತದೆ

ನಂ. ೭೪೦೨—೬೪ ರ೫೮—೯೩ — ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟ ಮಿ. ದುರ್ಗೇಬೇಗ್ ಯೆಂಬವರಿಗೆ ಬದಲಾಗಿ ಮಿ. ಇಬ್ರಾಹಿಂ ನನು ಗುಡಿಬಂಡೆ ಮ್ಯುನಿಸಿಪಲ್ ಬೋರ್ಡಿನಲ್ಲಿ ಒಬ್ಬ ಮೆಂಬರಾಗಿ ನಿಯಮಿಸಲ್ಪಟ್ಟಿರುತ್ತಾರೆ

### ಮುಜರಾಯಿ ಇಲಾಖಾ

ನಂ. ೮೦೩—ತಾರೀಖ್ ೧೩ ನೇ ನವಂಬರ್, ಹೊಳಲ್ಕೆರೆ ತಾಲ್ಲೂಕ್ ಹೊರಕೆರೆ ದೇವರ ಪುರದ ನಿವಾಸಸ್ಥರಾದ ಇದರಡಿ ನಮೂದಾಗಿರುವವರು, ಸದರೀ ಹೊರಕೆರೆ ದೇವರಪುರದಲ್ಲಿರುವ ಲಕ್ಷ್ಮೀನೃಸಿಂಹಸ್ವಾಮಿ ದೇವಾಲಯಕ್ಕೆ ೧೮೯೪ ವರ್ಷಗಳಿಗೆ ಮೊಕರಮ್ಮತೆದಾರರಾಗಿ ನೇಮಿಸಲ್ಪಟ್ಟಿರುತ್ತಾರೆ —

ಮಹಾರಾಜಶ್ರೀಗಳಾದ—ಲಿಂಗಪ್ಪಯ್ಯರು, ಶಾನಭೋಗರುಗಣ್ಣನವರು, ಮದ್ದೇರ ಸಾಹುಕಾರ್ ದೊಡ್ಡರಾಮಣ್ಣನವರು, ಮತ್ತಿಘಟ್ಟದ ಪಟೇಲ್ ಗಿರಿಯಣ್ಣನವರು, ಹಿರಿಯೂರು ತಾಲ್ಲೂಕ್ ವಲವನಹಳ್ಳಿ ಪಟೇಲ್ ಕರಿಯಣ್ಣನವರು.

### ಮಿಲಿಟರಿ ಇಲಾಖಾ

ತಾರೀಖ್ ೬ ನೇ ನವಂಬರ್ ೧೮೯೩ — ಮೈಸೂರ್ ೨ ನೇ ಇಂಫೆಂಟ್ರಿಯ ಒಂದನೆಯ ವಿಭಾಗದ [illegible] ಖಾಲಿಯಾಗಿದ್ದ ನೌಕರಿಯನ್ನು ಭರ್ತಿಮಾಡುವ ಬಗ್ಗೆ ಇದರಡಿ ತಿಳಿಸಲ್ಪಡುವ ಬಡ್ತಿಯು, ೧೮೯೩ ನೇ ಇಸವಿ ಅಕ್ಟೋಬರ್ ೧೬ ನೇ ತಾರೀಖು ಅ [illegible] ಜಾರಿಯಲ್ಲಿ ಬರಲ್ಪಡತಕ್ಕದ್ದು—ಮೃತನಾದ ಸ್ಟೈಪೆಂಡ್ ಮಾಸುಂ ಎಂಬವನಿಗೆ ಬದಲಾಗಿ ಒಂದನೇ ವಿಭಾಗದ ಸುಬೇದಾರ್ ಮಂಚಾಜಿ ಸೋಲಂಕೆ ಯವರು ರಿಸಾಲ್ದಾರ್ ಮೇಜರ್ ಆಗಿ ಮಾಡಲ್ಪಟ್ಟಿರುತ್ತಾರೆ.

## CORRESPONDENCE

[ಇದರಡಿ ಪ್ರಕಟಿಸಲ್ಪಟ್ಟಿರುವ ಲೇಖನದಲ್ಲಿ ಕಂಡ ಅಭಿಪ್ರಾಯಗಳ ಗುಣದೋಷಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಎಡಿಟರ್]

ಮೈ ರಾ|| ಕರ್ಣಾಟಕ ಪ್ರಕಾಶಿಕಾ ಎಡಿಟರವರ ಸ|| ಕ

ಅಯ್ಯಾ,—ಕರ್ಣಾಟಕ ಭಾಷಾಭಾಷಣವಾಗಿಯೂ, ಜನಗಳಮನೋಲ್ಲಾಸ ಜನಕವಾಗಿಯೂ ಸೋಮಾರಿತನವಂ ಮರೆಸೊಂದುವರೆ ರುವ ಮೊದಲುಗಳಿಗೆ ಕೆಲಸವನ್ನು ತೋರಿಸತಕ್ಕ ಸೋಮಾರಿ ದನಕ್ಕೆ ಕತ್ತುಬ್ಬಾಯವಾಗಿಯೂ, ಬಹುಜನರಿಂದ ಅತ್ಯಾದರದಿಂದೋದಲ್ಪಡುವದಾಗಿಯೂ, ಬ [illegible] ಪ್ರಕಾಶಿಕ ಪತ್ರವಲ್ಲದೆ ಮನೋರಂಜನಾತ್ಮಕವಾಗಿರುವ ತಮ್ಮ ಪತ್ರಿಕೆಯ ಒಂದು ಭಾಗದಲ್ಲಿ ನೂತನವಾದದೊಂದು ವಿಷಯಕ್ಕೆ ಸ್ಥಳ ಕೊಡುವಿರೆಂದು ನಂಬುತ್ತೇನೆ ನೂತನವಿಷಯವೆಂಬುದು ತಮ್ಮ ಪತ್ರಿಕೆಯನ್ನೇ ತವರುಮನೆ ಯಾಗಿ ಮಾಡಿಕೊಂಡಿರುವದರಿಂದ ನೂತನದಲ್ಲಿ ನೂತನವಾಗಿಸಿಯೇ [illegible] ಸಾಫಲ್ಯವನ್ನೈದುವದಕ್ಕೆ ಅರ್ಹವಾದ ಸ್ಥಳವಿದೇಯೆಂದರಿತು ಕೃತಪಡಿಸುತ್ತೇನೆ

ಲಿಂಗಾಯತರು ಮೈಸೂರು ಶೀಮೆಯ ಜನಸಂಖ್ಯೆಯಲ್ಲಿ ಮೊದಲನೆಯವರೆಂಬದೂ ವಿದ್ಯಾಭ್ಯಾಸಂಗದಲ್ಲಿ ಕಡಿಮೆಯವರೆಂಬದೂ ಎಲ್ಲರಿಗೂ ತಿಳಿದದ್ದಾಗಿರುತದೆ ಧರದೇಶದೆಯ ಕಡೆಯಲ್ಲಿ ಕೇಳಿದವರ ಕಣ್ಣಿಗೆ ಈ ವ್ಯತ್ಯಾಸವು ಹ್ಯಾಗೆ ತೋರುತ್ತದೆ? ವಿದ್ಯಾರ್ಥಿಗಳಲ್ಲಿ ಕೆಲವರು ತಮ್ಮ ಸಹೋದರ ವಿದ್ಯಾರ್ಥಿಗಳ ಸಹಾಯದಿಂದ ಸ್ವಲ್ಪಮಟ್ಟಿಗೆ ಕಾಲ್ಕೈಯಾಡುವ ಸಾಮರ್ಥ್ಯವನ್ನು ಪಡೆದು ಈ ವ್ಯತ್ಯಾಸವನ್ನು ನೋಡಿ ತಮ್ಮಾಕರ್ಷ ಪ್ರವರ್ತಿಸಿದಾರೆ. ಇವರು ಕಳೆದ ವರ್ಷದಲ್ಲಿ ಲಿಂಗಾಯತಮತ ಶಿರೋಮಣಿಗಳಾದ ಮಲಪುಮತದವರನ್ನು ಬೆಂಗಳೂರು ಮಾನೂರಿನ ಮಠದ ಮಠ [illegible] ದ ಮನೆಯಲ್ಲಿ ಸಭೆ ಸೇರಿಸಿದರು. ಆಗಲಾ ಮಹನೀಯರಿಗೆ ಆ ಸಭೆಯ ಉದ್ದೇಶವನ್ನು ವಿಶದಪಡಿಸಿದರು ಆ ಪೂಜ್ಯರು ಬೇಕಾದ ಸಹಾಯವನ್ನು ಕೊಡಲೊಪ್ಪಿ ಚಂದಾ ಪಟ್ಟಿಯನ್ನು ಸಾಕಷ್ಟು [illegible] ಸಮಯಕ್ಕೆ ಸರಿಯಾಗಿ, ವಿದ್ಯಾರ್ಥಿಗಳಮನೋತುಲರಾಶಿಗೆ ಸಾರತರವಾದ ಕಿಡಿಯು, ಮಠೋದ್ಧಾರಕ್ಕಾಗಿ ಕಂಕಣಧರರಾಗಿರುವರೆಂದು ವೃಷಭನಾಮವನ್ನು ಧರಿಸಿರುವ ವ್ಯಾಸಪುತ್ರರಾದ ಒಬ್ಬ ಮಹನೀಯರ ಕಣ್ಣಿನಿಂದುದುರಿತು. ಕಿಡಿ ಸಣ್ಣದಾದುದರಿಂದ ಅದ್ಭುತಾಕಾರವಾದ ಆ ತುಲರಾಶಿಯಲ್ಲಿ ಅದರ ನಾಶಗುಣವು ಆಗ ತೋರಬರಲಿಲ್ಲ ಆದುದರಿಂದ ಇನ್ನೊಂದು ವಾರಕ್ಕೆ ಚಂದಾ ಪಟ್ಟಿಯು ಕೆಯಾರಾಗುವದೆಂದು ವಾಯಿದೆಯು ಇಡಲ್ಪಟ್ಟಿತು. ಬಳಕನಲ್ವತ್ತೆಂಟುವಾರಗಳು ಕಳೆದುಹೋದವು ಜ್ಞಾಪಕಕೊಡುವದಕ್ಕೆ ಹೋದ ವಿದ್ಯಾರ್ಥಿಗಳು ದ್ರೋಣ, ದ್ರುಪದಗೆ ಅವ [illegible] ನವಂ ಜ್ಞಾಪಕಕೊಡಲು ಹೋಗಿ ಯಾವ ಫಲವನ್ನನುಭವಿಸಿದನೋ ಅದನ್ನನನುಭವಿಸಿದರು. ಸೂಚಿಕೆಗ್ಗಳಿಗೆಕಬ್ಬಿಣವಲ್ಲವೆ [illegible] ಎರಗೀತೆ!

ವಿದ್ಯಾರ್ಥಿಗಳ ಉತ್ಸಾಹಾಗ್ನಿಯಿಂದಪ್ಪೆ ದುಃಖತುಹಿನದಲ್ಲಿ ಮುಳುಗಿ ನಾಶವನ್ನು ಹೊಂದದೆ ಕೊರಗುತಲಿತ್ತು. ಅದಕ್ಕೆ ಮೃತ್ಯುಸಮಯವು ಸಮೀಪವಾಗಿದ್ದಾಗ ಪ್ರಾಣದಾನಮಾಡುವ ಕರುಣಾಮಯ ಸೂರ್ಯನು ದಯಮಾಡಿದನೋ ಎನ್ನುವರೀತಿ ಮತ ಧಿಮಾನಿಗಳೂ, ಪೂಜ್ಯರೂ ಆದ ಬೆಂಗಳೂರಿನಲ್ಲಿರುವ ಮ|| ಸಾಹುಕಾರ್ ಬಿಗದೇವನಹಳ್ಳಿ ಚಿಕ್ಕರುದ್ರಪ್ಪನವರು ತಮ್ಮ ಉದಾರ ಮೆಚ್ಚಿನ ಕಿರಣಗಳನ್ನು ಪ್ರಸರಿಸಿದರು. ಆಹಾ! ವಿದ್ಯಾರ್ಥಿಗಳ ಹರ್ಷವನ್ನೆಷ್ಟೆಂದುಸುರುವ! ಎಳೆಯ ಬಳ್ಳಿ ಪತಿರೂಪವನೆಯಾದ ಭಾಗೀರಥಿ ಬಂದರೆ ಅವರಾದ ಸಂತೋಷವನ್ನು ತೋರಿಸುವ ನೇ [illegible] ಭಾಗ್ಯಲಕ್ಷ್ಮಿ ಬರೆ ಬಡವನಿಯಾದ ಉಲ್ಲಾಸವಂ [illegible] ನೋ, ದುಃಖಕುಡಿದನಿಗೆ [illegible] ಬಂದರೆ ಚಾಲೋಕದ ಬ್ರಹ್ಮನಿರ್ಮಾಣವನ್ನು ನೋಡಿ ಯಾವ ತೆರದಿಂದರ್ಚಿಸುವನೋ ಅಂತಹ ಹರ್ಷರಸವು ಕಾಣಿಕೆಫಲವನ್ನೀಯಲು ಬಂದ ಸಾಹುಕಾರ್ ರುದ್ರಪ್ಪನವರ ಮುಖದಲ್ಲಿದ್ದ ವಿಸಿದಂ ಕಂಡು ವಿದ್ಯಾರ್ಥಿಗಳು ಸಂತೋಷಿಸಿದರು ಕಳೆದ ಆಗಸ್ಟ್ ತಿಂಗಳ ೨೦ ನೇ ತಾರೀಖ್ ರಾತ್ರಿ ಮ|| ರುದ್ರಪ್ಪನವರೇ ಸಭಾಧ್ಯಕ್ಷರಾಗಿ ಪ್ರೊಸೀಡಿಂಗ್ಸ್ ನಡೆಸಿ ಅದಕ್ಕೆ ತಮ್ಮ ರಾಜಾ ಮಾಡಿರುತ್ತಾರೆ ಆ ಪೂಜ್ಯಸ್ಥಾನವನ್ನಲಂಕರಿಸಿ ಸಭಿಕರ ಹೃದಯಾರವಿಂದಗಳಿಗೆ ಪ್ರೋತ್ಸಾಹದಕರವಾದ ವಚೋಕಿರಣಗಳನ್ನು ಬೀರಿ ಸಂತೋಷಪಡಿಸಿದರು. ಲಿಂಗಾಯತ ವಿದ್ಯಾರ್ಥಿಗಳ ವಿದ್ಯಾಭಿವೃದ್ಧಿಗಾಗಿ ಒಂದು ಫಂಡನ್ನು ಸ್ಥಾಪಿಸಲು ಬೇಕಾಗುವ ಖರ್ಚನ್ನೂ, ಅಂತಹ ಫಂಡಿಗೆ ಯೋಗ್ಯವಾದ ಸಾಮಾನುಗಳನ್ನೂ, ಅವರ ಸ್ವಸಾಮರ್ಥ್ಯವನ್ನು ಅವೇ ಸಂಗ ವಿನಿಕೊಳ್ಳುವವರೆಗೆ ತಿಂಗಳು ತಿಂಗಳಿಗೂ ಬೇಕಾಗುವ ಖರ್ಚನ್ನೂ ತಾವೇ ಕೊಡುವವರಾಗಿ ಒಪ್ಪಿದರು. ಮತ್ತು ಕಳೆದ ಸೆಪ್ಟೆಂಬರ್ ಮೊದಲನೇ ತಾರೀಖಿನಿಂದ ಸದರಿ ಫಂಡಿನ ಕೆಲಸ ನಡೆಯುವ ರೀತಿಯಲ್ಲಿ ಮಾಡುವದಾಗಿ ಒಪ್ಪಿಕೊಂಡರು

ಆದರೆ ತದ್ವರ್ಗಸಕ್ತರಿಗೆಕೆಲವು ತೊಂದರೆಗಳನುಭವಿಸಿದ್ದರಿಂದ ಅವರ ವಾಗ್ದಾನವು ನೆರವೇರಲಿಲ್ಲವು. ಎರಡನೆಯ ಸಾರಿಯು ಭಾಗ ಸಂಪಾದಿಸೀತೆಂಬ ಭಯದಿಂದ ಕಂಪಿಸುತಲಿದ್ದ ವಿದ್ಯಾರ್ಥಿಗಳು, ಆ ಮಹನೀಯರ ಕಾರ್ಯಗಳಲ್ಲವು ಸುಸಿಭವನ್ನು ಹೊಂದಿದ್ದರಿಂದ ಅವರು ಹಿಂದೆ ಪ್ರಸ್ತುತ ಫಂಡಿನ ವ್ಯವಸ್ಥೆಯನ್ನು ವಿಷಯದಲ್ಲಿ ಮಾಡಿದ್ದ ವಾಗ್ದಾನವನ್ನು ಮರೆಯದೆ ಜರಿಗಿಸುವರೆಂದು ದೃಢವಾಗಿ ನಂಬಿ ನಿರೀಕ್ಷಿಸುತಿಲಿದಾರೆಂಬದು ತಮ್ಮ ಪತ್ರಿಕಾಮೂಲಕ ಸಕಲರಿಗೂ ತಿಳಿಸುವ ಕುತೂಹಲವುಳ್ಳ,

| | |
|---|---|
| ಕಲ್ಯಾಣಪುರ, ವಾಣೀವಿಲಾಸ | ತಮ್ಮ ವಿಧೇಯನಾದ, ಮೀಳನಾದ |

[ಮೇಲೆ ಕಂಡ ಕಾರ್ಯವು ಕೇವಲ ಶ್ಲಾಘ್ಯವಾದುವಾಗಿದೆ ಸ್ವಮತಾಭಿಮಾನಿಗಳಾದರೂ ತಮ್ಮ ಔದಾರ್ಯ ಪ್ರವರ್ತನಕ್ಕಿದು ಉಚಿತ ಸಮಯವೆಂದು ಭಾವಿಸಿ ಶೀಘ್ರತೆಯಲ್ಲಿ ತಕ್ಕಸಹಾಯ ಮಾಡಿ ಪ್ರೋತ್ಸಾಹ ಪಡಿಸುವರೆಂದು ನಂಬುತ್ತೇವೆ ಎ ಕ ಪ್ರ]

## ನಮ್ಮಗಳಿಗೆ ಬರತಕ್ಕ ಜಾಡ್ಯಗಳು ಎಂತಹವು.

ರಾತ್ರಿಯಲ್ಲಿ ಕಣ್ಣಿನ ರೀತಿ ನಮ್ಮಗಳಿಗೆ ವಿಶೇಷಾದಕಾಗೆ ಜಾಡ್ಯಗಳು ನಮ್ಮಲ್ಲಿ ಪ್ರವೇಶ ಮಾಡುತವೆ. ಸಾಧಾರಣವಾಗಿ ಮನುಷ್ಯಕೋಟಿಗಳಿಗೆ ಎದೆಯಲ್ಲಿ, ಪಕ್ಕೆಗಳಲ್ಲಿ, ಕೀಲುಗಳು ಕಾಣುತವೆ. ಆ ಕಾಲಗಳಲ್ಲಿ ಜನರು ಸಾಧಾರಣವಾಗಿ ಮಂದವಾಗಿ ವಿಶ್ರಾಂತವಾಗಿ ಬಾಯಲ್ಲಿ ಒಂದು ವಿಧ ಕೈಯು, ಇವುಗಳು ಪ್ರಾಯಶಃ ಉದಯಕಾಲದಲ್ಲಿರುತವೆ. ಒಸಡು, ದಂತಗಳಲ್ಲಿ ಪಾಚಿ ಅಂಟುಗುತ್ತ, ಕಟ್ಟಿಕೊಂಡು ಊರುತದೆ ಆ ಸಮಯಗಳಲ್ಲಿ ಆಹಾರವು ಕಮ್ಮಿ, ಗರ್ಭದಲ್ಲಿ ಒಂದು ಬಗೆ ಭಾರವು, ಕೆಲವು ವೇಳೆಗಳಲ್ಲಿ ವ್ಯಾಕೆವು, ಗರ್ಭದ ಅಸ್ಥಿಭಾರದಲ್ಲಿ ಶೂಲೆ, ಭೋಜನದಲ್ಲಿ ಅತೃಪ್ತಿಯು, ಕಣ್ಣುಗಳು ಆಳಕ್ಕೆ ಎಳಕೊಂಡು ಇರೋದು, ಕೈ ಕಾಲುಗಳು ಪಾದಗಳು ಶೀತಳವು. ಆ ಮೇಲೆ ಕೆಮ್ಮು ಆರಂಭಿಸಿ ಸ್ವಲ್ಪ ತಿಂಗಳಾದನಂತರ ಆ ಕೆಮ್ಮಿನಿಂದ ಬಾಯಲ್ಲಿ ಹುರುಳಾಪರ್ಣದ ಗಳ್ಳೆಸ ಕೀಕರಿಸೋದು. ಇತ್ಯಾದಿ ಕಾರಣಗಳಿಂದ ಜಾಡ್ಯಗ್ರಸ್ತನು ಮಿಕ್ಕಿನ ಆಯೋಗವನ್ನು ಬೀಳೋದು, ವಿದ್ರಾಭಂಗವು, ಆಕಾರಣದಿಂದ ಜಾಡ್ಯಗ್ರಸ್ತನಿಗೆ ಒಂದುಬಗೆ ಪಿತ್ತದ ಕೋಪವು, ಮಬ್ಬಿನ ಮನೋವ್ಯಥೆ, ಕೆಟ್ಟ ವ್ಯಸನವುಳ್ಳ ಚಿಂತೆ ಉಂಟು ಮಾಡುತದೆ. ಇದಲ್ಲದಕಾಗೆ ತಲೆಯಲ್ಲಿ ವಿಶೇಷ ವ್ಯಾಕವಾದ ತಿರುಗುದು, ಅಕಸ್ಮಾತ್ತಾಗಿ ಬೀಳುವ ಕಾಲದಲ್ಲಿ ಕಾಣುತವೆ. ಆ ತರುವಾಯ ಗರ್ಭದಲ್ಲಿ ಕವಳಗಳು ಬಿಗಿಸಿ, ಮಲಬದ್ಧ ಮಾಡಿ, ಶರೀರದ ಚರ್ಮವನ್ನು ಒಣಗಿಸಿ, ಉಷ್ಣ ಮಾಡಿ, ರಕ್ತವನ್ನು ಮಂದಮಾಡಿ, ಶರೀರವಲ್ಲ ಸಟ್ಟಗೆ ರಕ್ತವು ಓಡದೆ, ಕಣ್ಣುಗಳಲ್ಲಿರುವ ಸಾಧಾರಣವಾದ ಬಿಳುಪನ್ನು ಕಮ್ಮಿ ಮಾಡಿ, ಕಣ್ಣುಗಳಲ್ಲಿ ಹಸರು ಚುಕ್ಕೆಗಳು, ಅಲ್ಪಾಚಮನವು ಕಮ್ಮಿ, ಇಲ್ಲದ ಕಡಿಮೆಯಾಗಿ, ಅದರಲ್ಲಿ ವಿಶೇಷವಾದ ಬಣ್ಣ, ಸಾಧಾರಣವಾಗಿ ಮೂತ್ರವು ಬಾರದ ಕಡೆಯಿಂದ ಅದಗಳು ಸೇರಿ ಮೂತ್ರವನ್ನು ಕೆಡಿಸುವಂಗೆ ಮಂದ ಮಾಡುತದೆ. ಆ ಕಾರಣಗಳಿಂದ ಭುಜಿಸಿದ ಅನ್ನವನ್ನು ಉಗುಳೋದು, ಭುಜಿಸಿದ ಅನ್ನವು ಬಾಯಲ್ಲಿ ಕೆಟ್ಟ ರುಚಿಯಾಗಿದರುಚಿ, ಮತ್ತು ಎದೆಯಲ್ಲಿ ಅದುರು, ಕಣ್ಣಿನದೃಷ್ಟಿ ಕಡಮೆ, ಕಣ್ಣುಗಳಲ್ಲಿ ಮಬ್ಬುಗಳು, ವಿಶೇಷವಾಗಿ ಶರೀರದಲ್ಲಿ ಬಲವು ಕಡಿಮೇ ಇತ್ಯಾದಿ ಚಿಹ್ನೆಗಳುಯಾವತ್ತು ಕ್ರಮೇಪಿ ಕಾಣುತವೆ. ಈ ಜಾಡ್ಯದ ಚಿಹ್ನೆಗಳು ಅನೇಕವಿಧವಾಗಿ ಮುಖ್ಯಾಲಿನಭಾಗ ಜನಕೋಟಿಗೆ ಪರಿಪರಿವಿಧವಾಗಿ ಕಾಣುತವೆ. ಈ ಜಾಡ್ಯಗಳನ್ನು ವೈದ್ಯಶಾಸ್ತ್ರಗಳು ಸೂಕ್ಷ್ಮಕ್ಕೆ ಪರಿಶೋಧನೆ ಮಾಡಲಿಕ್ಕೆ ತಿಳಿಯದೆ ಒಂದುವಿಧವಾದ ಜಾಡ್ಯಕ್ಕೆ ಮತ್ತೊಂದುವಿಧ ಚಿಕಿತ್ಸೆ ಮಾಡುವದು, ಇತ್ಯಾದಿ ಕಾರಣಗಳಿಂದ ಈ ಜಾಡ್ಯಗಳು ಸ್ವಸ್ಥವಾಗದೆ ಹಾಗೆಇರುತವೆ. ಇತ್ಯಾದಿ ಜಾಡ್ಯಗಳಿಗೆ ನಿಯುಕ್ತವಾದ ಔಷಧವು ಗರ್ಭದಲ್ಲಿ ಚಿಕಿತ್ಸೆ ಮಾಡಿದ ಪಕ್ಷದಲ್ಲಿ ಇವುಗಳನ್ನು ಸ್ವಸ್ಥ ಮಾಡುತವೆ ವೈದ್ಯರು ಸಾಧಾರಣವಾಗಿ ಅಜೀರ್ಣವ್ಯಾಧಿಗೆ ತಕ್ಕ ಚಿಕಿತ್ಸೆ ಮಾಡದೆ ಮತ್ತೊಂದು ವಿಧವಾದ ಚಿಕಿತ್ಸೆ ಮಾಡುವದು ಈ ರೀತಿಯಿಂದ ಜಾಡ್ಯಗಳು ಸ್ವಸ್ಥವಾಗದೆ ಇರುತವೆ.

ಮುಂದೆ ವಿವರಣೆ ಮಾಡಿದ ಜಾಡ್ಯಗಳನ್ನು ನಿರ್ಮೂಲ ಮಾಡಿ ಶಾಂತಿ ಮಾಡತಕ್ಕ ಔಷಧವು ತಾಯಿಶೀಗೀಲು ಕಷಾಯವು ಈ ಕಷಾಯವನ್ನು ಕ್ರಮವಾಗಿ ಸೇವ ಮಾಡುವದರಿಂದ ಪ್ಯಾದ್ಯ ಲೋಪಗಳನ್ನು ಯಾವತ್ತು ಮಂತ್ರದಬಗೆ ಮಾಯವು ಮಾಡಿ ಶರೀರಕ್ಕೆ ಬಲವನ್ನು ಕೊಟ್ಟು ಆಲಸ್ಯ ಇಲ್ಲದಹಾಗೆ ಸ್ವಸ್ಥ ಮಾಡುತದೆ.

ತಾಯಿ ಶೀಗೀಲು ಕಷಾಯ ಔಷಧವು ಕೆಮಿಸ್ಟು ಅಂಬೊಣ್ಯ ಆಸ್ಪತ್ರಿ ಬಜಾರ್‌ಗಳಲ್ಲಿ ವಿಕ್ರಯಕ್ಕೆ ಸಿಕ್ಕುತದೆ.

W. D

## ಮೈಸೂರು ಸಂಸ್ಥಾನದ ದಿವಾನರವರ ಉಪನ್ಯಾಸ.

(ಕಳೆದ ವಾರದ ಶೇಷ)

ಹಾಸನ ಡಿವಿಜನ್.—

(1) ಶ್ರೀರಾಮದೇವರ ಉತ್ತರನಾಲೆ ಬದಲಾವಣೆ ಮತ್ತು ಅಭಿವೃದ್ಧಿ. ... 82,000
(ಪೂರೈಸುತ್ತಾ ಬಂದಿದೆ)

ಶಿವಮೊಗ್ಗಾ ಡಿವಿಜನ್.—

(1) ಚನ್ನಗಿರಿ ತಾಲ್ಲೂಕ್ ಸೂಳೆಕೆರೆ ಮತ್ತು ನಾಲೆ ಕಾಮಗಾರಿ ... 66,000

ಕಡೂರು ಡಿವಿಜನ್.—

(1) ಕಡೂರು ತಾಲ್ಲೂಕ್ ಚಿಕ್ಕಪಟ್ಟಣಗೆರೆ ಕೆರೆಗೆ ನೀರು ತರತಕ್ಕದ್ದಕ್ಕೆ ವೇದಾನದಿಗೆ ಅಡ್ಡಲಾಗಿ ಅಣೆ 40,000
(2) ಎತ್ತಬೆಳಸು ಮತ್ತು ನಾಲೆ ಕಾಮಗಾರಿ 34,000
(ಕಾಮಗಾರಿ ಪೂರೈಸಿರುತ್ತೆ)

ಈ ಕೆಳಗೆ ನಮೂದಾಗುವ ಮುಖ್ಯವಾದ ನೀರಾವರಿ ಕಾಮಗಾರಿ ಅಂದಾಜುಗಳು ಕಳೆದವರುಷದಲ್ಲಿ ಮಂಜೂರಾಗಿವೆ.—

(1) ಚಿತ್ರದುರ್ಗ ಡಿವಿಜನ್‌ನಲ್ಲಿ ಕೆತ್ರಾಳವು ಚಿನಿಗಿ ಹಳ್ಳಕ್ಕೆ ಅಡ್ಡಲಾಗಿ ಹೊಸಕೆರೆ.
(2) ಕಡೂರು ಡಿವಿಜನ್‌ನಲ್ಲಿ ಬಸವ್ನೂರು ಅಣೆ ಮತ್ತು ನಾಲೆ, ಮತ್ತು ಕುಕ್ಕಸಂದ್ರದ ಕೆರೆ.
)3) ತುಮಕೂರು ಡಿವಿಜನ್‌ನಲ್ಲಿ ಚಿಕ್ಕಸಂದ್ರದ ಕೆರೆ,
(4) ಹಾಸನ ಡಿವಿಜನ್‌ನಲ್ಲಿ ಶಿಂಗಾಪುರದ ಬಳಿ ಹೇಮಾವತೀ ನದಿಗೆ ಅಡ್ಡಲಾಗಿ ಅಣೆ ಮತ್ತು ಬಿದರನಹಳ್ಳಿಕೆರೆ.
(5) ಬೆಂಗಳೂರ್ ಡಿವಿಜನ್‌ನಲ್ಲಿ ಹೊಸಕೋಟೆ ತಾಲ್ಲೂಕ್ ಮಟ್ಟಸಂದ್ರದ ಕೆರೆ.

ನೀರಾವರಿ ಕಾಮಗಾರಿಗಳ ಸಂಬಂಧವಾಗಿ, ಕಾವೇರಿ ನದಿಗೆ ಅಡ್ಡಲಾಗಿ ಹಾಲಿ ಇರುವ ಅಣೆಗಳ ಮೂಲಕ ಇನ್ನೂ ಹೆಚ್ಚಾಗಿ ನೀರಿನ ಸರಬರಾಯಿ ಆಗುವಂತೆ ಬದಲಾಯಿಸಿ ಅಭಿವೃದ್ಧಿಪಡಿಸುವ ಭಾಗದಲ್ಲಿ ವಿಚಾರ ಮಾಡುತ್ತಲಿದೆ ಎಂದು ಮೋದಲ ವರುಷದ ಉಪನ್ಯಾಸದಲ್ಲಿ ಹೇಳಿದ್ದೆವಷ್ಟೆ. ಈ ದೈಶೀ ಕೆಲವು ಅಣೆಗಳನ್ನ ನಾವು ಖುದ್ದು ನೋಡಿದ್ದರಲ್ಲಿ ಹಾಲೀ ಇರತಕ್ಕ ಕಾವೇರಿ ನಾಲೆಗಳನ್ನು ವಿಸ್ತರಿಸಿ ಸಂಪೂರ್ಣ ಮಾಡತಕ್ಕದ್ದಕ್ಕೆ ಸಾಧ್ಯವಾದ ಎಲ್ಲಾ ಕಾಮಗಾರಿಗಳ ಪೈಕಿ ಅಳಲಕಟ್ಟೆ ಅಣೆಯು ಕೇವಲ ಉತ್ತಮವಾದ್ದೆಂದು ಅಭಿಪ್ರಾಯಪಟ್ಟೆವು. ಈ ಕಟ್ಟೆ ಕಾಮಗಾರಿ ಬಗ್ಗೆ ಪಬ್ಲಿಕ್ ವರ್ಕ್ಸ್ ಇಲಾಖೆಯವರು ೩ ಅಂದಾಜುಗಳನ್ನ ತಯಾರಿಸಿದರು. ಇವುಗಳ ಪೈಕಿ ಕೇವಲ ಕಮ್ಮಿಯಾದ ೧೮ ಚಿಲ್ವರ್ ಲಕ್ಷ ರೂಪಾಯಿನ ಅಂದಾಜನ್ನು ಛೀಫ್ ಇಂಜನೀರ್ ಮಹಾರಾಜ ರಾಜಾಸಾಹೇಬ್ ಬಹದ್ದೂರರವರು ಮಂಜೂರ್ ಮಾಡಿರುತ್ತಾರೆ. ಈ ಅಂದಾಜಿನ ಪ್ರಕಾರ ನಡೆಸಬೇಕೆಂದು ಉದ್ದೇಶಿಸಿರುವ ಕಾಮಗಾರಿ ತಪಸೀಲ್ ಹ್ಯಾಗೆಂದರೆ,—೨,೫೦೦ ಅಡಿ ಉದ್ದವುಳ್ಳ ಈಗಿರುವ ಅಳಲಕಟ್ಟೆ ಅಣೆಯು ವಿಶೇಷ ಡೊಂಕಾಗಿಯೂ ಪುರಾತನದ್ದಾಗಿಯೂ ಸೋರುತ್ತಲೂ ಇರುವದ್ದರಿಂದ ಇದನ್ನ ಜಾಗ್ರತೆಯಾಗಿ ಸುಧಾರಿಸುವದು ಆಗುವದಿಲ್ಲ. ಆದ್ದರಿಂದ ಹಾಲಿ ಇರತಕ್ಕ ಅಣೆಕಟ್ಟೆಗೆ ಎದುರಾಗಿ ಅದೇ ಪ್ರದೇಶದಲ್ಲಿಯೇ ಹೊಸದಾಗಿ ೬,೫೦೦ ಅಡಿ ಉದ್ದವುಳ್ಳ ಅಣೆಯನ್ನು ಕಟ್ಟಬೇಕೆಂದು ಮಾಡಿವೆ. ಈ ಹೊಸ ಅಣೆಕಟ್ಟೆಗೆ ಸುಮಾರು ೧೯,೦೦೦ ರೂಪಾಯಿಯೂ, ಮತ್ತು ಉಳಿದ ಪಾರ್ಶ್ವಗಳಲ್ಲಿಯೂ ಕಟ್ಟಬೇಕಾದ ತೂಬುಗಳಿಗಾಗಿ ೩೦,೦೦೦ ರೂಪಾಯಿಯೂ, ಖರ್ಚು ಬೀಳುವದು. ಈಗಿರುವ ಸಾಲಿಗ್ರಾಮ, ಮಿರ್ಲೆ, ರಾಮನಾಥಪುರ ಮತ್ತು ಇತರ ನಾಲೆಗಳಿಗೆ ನೀರನ್ನು ಸಮವಾಗಿ ಪಡಗಿಸುವದಕ್ಕಾಗಿ ಮೇಲ್ಭಾಗದ ತೂಬುಗಳು ಅವಶ್ಯವಾಗಿವೆ. ಈ ನಾಲೆಗಳ ಅಭಿವೃದ್ಧಿ ಮತ್ತು ಬದಲಾವಣೆಗೋಸ್ಕರ ಆಗತಕ್ಕ ಪೂರ್ತಿ ಅಂದಾಜುಗಳು ತಯಾರಾಗದೆ ಇರುವದರಿಂದ ಆವುಗಳ ಖರ್ಚು ಗೊತ್ತಾಗಲಿಲ್ಲ. ಅವುಗಳನ್ನೆಲ್ಲಾ ಬಿಟ್ಟು ಮೇಲ್ಕಂಡ ಅಳಲಕಟ್ಟೆ ಅಣೆ ಕಾಮಗಾರಿ ಅಂದಾಜನ್ನೇ ಬಹಳ ಇಟ್ಟುಕೊಳ್ಳತಕ್ಕದ್ದೆಂದು ನಿಷ್ಕರ್ಷೆ ಮಾಡಿರುತ್ತೆ. ಈ ಅಣೆಯ ಮುಂಭಾಗದಲ್ಲಿರುವ ಜಮೀನುಗಳ ನೀರಾವರಿಗಾಗಿ ಮೇಲ್ಕಂಡ ಕಾಮಗಾರಿಯು ಅತ್ಯುತ್ತಮವಾದದ್ದು ಎಂಬುವದಕ್ಕೆ ಸಂದೇಹವಿಲ್ಲ. ಆದ್ದರಿಂದ ಈ ಕಾಮಗಾರಿಯನ್ನು ಬಹಳ ಜಾಗ್ರತೆಯಿಂದ ಆರಂಭಿಸತಕ್ಕ ಭಾಗದಲ್ಲಿ ಭಿನ್ನಾಭಿಪ್ರಾಯಕ್ಕೆ ಅವಕಾಶವಿಲ್ಲ. ಆದರೆ ಈ ಅಣೆಯು ಬಲಪಾರ್ಶ್ವದ ನಾಲೆಯನ್ನು ಎಷ್ಟು ದೂರದ ವರೆಗೆ ತೆಗೆದುಕೊಂಡು ಹೋಗತಕ್ಕದ್ದು ಎಂಬುವದನ್ನು ಕುರಿತು ಅಖೈರ್ ತೀರ್ಮಾನವನ್ನ ಈಗ ಮಾಡಲು ಸಾಧ್ಯವಿಲ್ಲ. ನದೀ ಕೆಳಭಾಗದಲ್ಲಿರುವ ಸಾಗುವಳಿ ಜಮೀನುಗಳಿಗೆ ನೀರಿನ ಕೊರತೆಯಿಲ್ಲದಂತೆ ಈ ಅಣೆ ಬಳಿ ಎಷ್ಟರ ಮಟ್ಟಿಗೆ ನೀರನ್ನು ನದಿಯಿಂದ ತಿರುಗಿಸಿಕೊಳ್ಳಬಹುದು ಎಂಬುವದ ವಿಷಯವಾಗಿ ಹಾಲೀ ಮದರಾಸ್ ಗವರ್ನಮೆಂಟಿನ ಜತೆಯಲ್ಲಿ ಮಾತನಾಡಬೇಕಾಗಿದೆ. ಬಲಪಾರ್ಶ್ವದ ನಾಲೆ ಕೆಲಸದ ವಿಷಯವನ್ನು ಇತ್ಯರ್ಥ ಮಾಡಬೇಕಾಗಿದೆ. ಮೈಸೂರಿನಲ್ಲಿರುವ ಕುಕ್ಕರಹಳ್ಳಿ ಕೆರೆಗೆ ನೀರು ಬರುವಂತೆ ಸುಮಾರು 69½ ಮೈಲ್ ವರೆಗೂ ನಾಲೆ ತೆಗೆದುಕೊಂಡು ಹೋಗತಕ್ಕದ್ದು ಅವಶ್ಯವೆಂದು ಆದಿಯಿಂದ ತೋರಿದಲ್ಲಿ ಕಾಮಗಾರಿ ನಡೆಯುವದಕ್ಕೆ ಅನುಕೂಲವಾಗುವ ರೀತ್ಯಾ ಈ ನಾಲೆ ಹೋಗುವ ಲೈನನ್ನು ಬಹಳ ಜಾಗರೂಕತೆಯಿಂದ ಗುರ್ತು ಮಾಡಿರುತ್ತೆ. ಕುಕ್ಕರಹಳ್ಳಿ ಕೆರೆ ಕೋಡಿಮಟ್ಟಕ್ಕೂ ಉದ್ದೇಶಿಸಿರುವ ಅಳಲಕಟ್ಟೆ ಅಣೆಯ ನೆತ್ತಿಗೂ ೧೧೦ ಅಡಿ ವ್ಯತ್ಯಾಸ ಇರುವದ್ದರಿಂದ ಕುಕ್ಕರಹಳ್ಳಿ ಕೆರೆಗೆ ಈ ನಾಲೆಯಿಂದ ನೀರು ಬರುವಂತೆ ಮಾಡುವದು ಸುಲಭವಾಗಿರುತ್ತೆ. ಈ ಕಾರಣಗಳಿಂದ ಪ್ರಥಮತಃ ಅಣೆಯನ್ನೂ ತೂಬುಗಳನ್ನೂ ಕಟ್ಟಬೇಕೆಂದು ತೀರ್ಮಾನಿಸಿ ಈ ಬಗ್ಗೆ ಈ ಜಾತಿ ಇಸವಿ ಬಡ್ಜೆಟ್ಟಿನಲ್ಲಿ ೬೦,೦೦೦ ರೂಪಾಯಿ ದಾಖಲ್ಮಾಡಿರುತ್ತೆ. ಇವುಗಳು ಪೂರೈಸಿದ ನಂತರ ಮುಂಭಾಗದ ನಾಲೆ ಅಭಿವೃದ್ಧಿ ಕಾಮಗಾರಿಯನ್ನು ಆರಂಭಿಸುತ್ತೆ ಅದ್ದರಿಂದ ಬಲಭಾಗದ ಹೊಸ ನಾಲೆ ಕಾಮಗಾರಿಯು ನಡೆಯುವದು, ಇದನ್ನು ಪೂರೈಸಬೇಕಾದ್ದರಲ್ಲಿ ಅನೇಕ ವರುಷಗಳು ಹಿಡಿಯುವದು. ಮೈಸೂರು ಪಟ್ಟಣಕ್ಕೆ ಪ್ರತ್ಯೇಕವಾಗಿ ಕಾವೇರಿ ನದಿಯಿಂದಲೇ ಸದೃಷ್ಟಿಯಾಗಿ ನೀರಿನ ಅನುಕೂಲವನ್ನುಂಟುಮಾಡುವುದಾಗಿ ಅಳಲಕಟ್ಟೆ ಕಾಮಗಾರಿ ವಿಷಯಕವಾದ ಮೇಲೆ ನಮೂದಿಸಿರುವ ಏರ್ಪಾಟನ್ನು ಕುರಿತು ಮೈಸೂರು ಪಟ್ಟಣದ ನಿವಾಸಿಗಳೇನೂ ಯೋಚನೆ ಮಾಡತಕ್ಕದ್ದಿಲ್ಲ

ಆರೋಗ್ಯ ಸಂಬಂಧವಾದ ಕಾಮಗಾರಿಗಳು.—ಮೈಸೂರು, ಬೆಂಗಳೂರು, ಮತ್ತು ಇತರ ದೊಡ್ಡ ಪಟ್ಟಣಗಳಲ್ಲಿ ಆರೋಗ್ಯಪ್ರದವಾದ ಕ್ರಮಗಳನ್ನೇರ್ಪಡಿಸುವದು, ಅವಶ್ಯವಿರುವ ಕಡೆಗಳಲ್ಲಿ ನೀರಿನ ಅನುಕೂಲ್ಯವನ್ನುಂಟುಮಾಡುವದು, ಮತ್ತು ಸಂಚಾರ ಚರಂಡಿಗಳ ಬಗ್ಗೆ ಏರ್ಪಾಟುಮಾಡಿ ಕಾಮಗಾರಿಗಳನ್ನ ನಡಿಸುವದು, ಈ ಕೆಲಸಗಳಿಗೇನೆ ಗಮನಿಸಿ ಕೊಡುವ ಹಾಗೆ ಒಬ್ಬ ಪ್ರತ್ಯೇಕವಾದ ಛಾರ್ಜ್ ಇಂಜನಿಯರು ಇಲ್ಲದೆ ಇರುವ ಲೋಪವು ಬಹುಕಾಲದಿಂದ ಇರುತ್ತೆ. ಈ ಕೆಲಸಕ್ಕಾಗಿ ಮಿಸ್ಟರ್ ಸ್ಟ್ಯಾಂಡಿಷ್ ಲೀ ಯವರನ್ನ ಸಾನಿಟರಿ ಇಂಜನಿಯರಾಗಿ ಮೊಕರರ್ ಮಾಡಿರುತ್ತೆ. ಜನೋಪಕಾರಾರ್ಥವಾದ ಚಿಲ್ಲರೆ ಕಾಮಗಾರಿಗಳಿಗಾಗಿ ವರ್ಷೇವರ್ಷೇ ಪ್ರಾವಿನ್ಷಿಯಲ್ ಫಂಡಿನಿಂದ ಧಾರಾಳವಾಗಿ ಹಣ ಕೊಡುತ್ತ ಬಂದಿರುವದು ನಿಮಗೆ ಗೊತ್ತಿದೆ ಇದೇಮೇರೆ ಅವಶ್ಯವಿರುವ ಮಟ್ಟಿಗೆ ಮುಂದೂ ಹಣ ಕೊಡುವದು ಶಿವಾಯಿ ಆರೋಗ್ಯಹೇತುವಾದ ಇತರ ಕಾಮಗಾರಿಗಳಿಗಾಗಿ ಬರುವ ೫ ವರುಷಗಳ ವರೆಗೂ ಸಾಲೀಯಾನಾ ೧ ಲಕ್ಷ ರೂಪಾಯನ್ನ ಖರ್ಚು ಮಾಡಬೇಕೆಂದು ಸರಕಾರದವರ ತಾತ್ಪರ್ಯವಾಗಿರುತ್ತೆ. ಈ ೧ ಲಕ್ಷ ರೂಪಾಯಿನಿಂದ ಸರ್ಕಾರದ ಸಹಾಯ ಬೇಕಾಗಿರುವ ಮ್ಯುನಿಸಿಪಾಲಿಟಿಗಳಿಗೆ ಸಾಲ ಅಥವ ಸಹಾಯದ್ರವ್ಯವನ್ನ ಕೊಡುವದಕ್ಕೆ ಅನುಕೂಲವಾಗುವದು ಈ ಬಗೆ ಬೇರೆ ಕಾಮಗಾರಿಗಳು ಪ್ರಾಯಶಃ ಸ್ಯಾನಿಟರಿ ಇಂಜನೀಯರು ಮ್ಯುನಿಸಿಪಲ್ ಫಂಡಿನಿಂದ ನಡೆಯುವ ಭಾರೀ ಕೆಲಸಗಳ ಬಗ್ಗೆ ಅಂದಾಜು ತಯಾರ್ಮಾಡಿ ಅವುಗಳ ಮೇಲ್ವಿಚಾರಣೆಯನ್ನೂ ಮಾಡತಕ್ಕದ್ದಕ್ಕೆ ಏರ್ಪಾಟು ಮಾಡಿರುತ್ತೆ. ಈ ಮೇರೆ ಮಾಡಿರುವ ಏರ್ಪಾಟಿನಿಂದ ಲಾರ್ಜ್ ಮೇಲ್ವಿಚಾರಣೆಗೆ ಒಳಪಟ್ಟು ಎಲ್ಲಾ ಮ್ಯುನಿಸಿಪಾಲಿಟಿಗಳಲ್ಲೂ ಕೆಲಸ ಚನ್ನಾಗಿ ನಡೆಯುವದಕ್ಕೆ ಕಾರಣವಾಗುವದಲ್ಲದೆ ಅವುಗಳ ಆರೋಗ್ಯಸ್ಥಿತಿಯು ಸಾಮಾನ್ಯವಾಗಿ ಅಭಿವೃದ್ಧಿಯನ್ನು ಹೊಂದುವದಕ್ಕೂ ಸಾಧಕವಾಗುವದು.

ರೈಲ್ವೆ.—ಮೈಸೂರು ಸ್ಟೇಟ್‌ರೈಲ್ವೆಯು ಈಗ ಎರಡುಭಾಗವಾಗಿರುತ್ತೆ. ಈ ಎರಡುಭಾಗಗಳ ಆಡಳಿತವಿಷಯದಲ್ಲಿಯೂ ಮತ್ತು ಖಾಯಿಸೆ ವಿಲೇವಾರಿವಿಷಯದಲ್ಲಿಯೂ ಪ್ರತ್ಯೇಕ ಪ್ರತ್ಯೇಕ ಪದ್ಧತಿಗಳು ಏರ್ಪಟ್ಟಿವೆ, ಹ್ಯಾಗೆಂದರೆ, ಮೈಸೂರು—ಹರಿಹರದ ಲೈನ್ ತಯಾರಾಗಿ ತೆರೆದ ಕಾಲವನ್ನು ಬಿಟ್ಟು ಬಾಕಿಯಲ್ಲ ತೆಗದ ರೈಲ್ವೆಸಾಲದ ಹಣದಿಂದ ಹೂಡಿರುತ್ತಾದಿಗಿ ಈ ಲೈನ್ ಅನುತವು ಈಗಿನಂತೆಯೇ ಇನ್ನೂ ೪೯ ವರ್ಷಗಳವರ್ಯಂತ ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪೆನಿಯವರ ಆಡಳಿತದಲ್ಲಿರತಕ್ಕದ್ದೆಂತಲೂ, ಆ ಕಾಲದಲ್ಲಿ ನಿವ್ವಳ ಹುಟ್ಟುವಳಿ ಪೈಕಿ ನಾಲ್ಕರಲ್ಲಿ ಮೂರುಪಾಲನ್ನು ಅವರು ತೆಗೆದುಕೊಳ್ಳತಕ್ಕದ್ದೆಂತಲೂ, ನಿಷ್ಕರ್ಷೆಯಾಗಿರುತ್ತೆ. ಕಡಿಮೆ ಲೈನುಗಳು ಅಂದರೆ ಸಂಕದ ಹಣದಿಂದಲೇ ತಯಾರಾಗಿರತಕ್ಕ ಮೈಸೂರು—ನಂಜನಗೂಡು, ಬೆಂಗಳೂರು—ಹಿಂದೂಪುರ ಮತ್ತು ಕೋಲಾರದ ಭಾಗದ ಗಣಿ ಈ ಲೈನುಗಳು ಸರಕಾರದ ಸ್ವಾಧೀನಾವಸ್ಥೆಯಲ್ಲಿರತಕ್ಕದ್ದು ನಂಜನಗೂಡು ಮತ್ತು ಹಿಂದೂಪುರದ ಲೈನುಗಳ ಬಗ್ಗೆ ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪೆನಿಯವರ ಸಂಗಡಲೂ ಕೋಲಾರದ ಗಣಿ ಲೈನ್ ವಿಷಯದಲ್ಲಿ ಮದರಾಸು ರೈಲ್ವೆ ಕಂಪೆನಿಯವರ ಸಂಗಡಲೂ ಸ್ವಲ್ಪಕಾಲ ಅಂದರೆ ೧ ವರುಷದ ಬಾಬಿಗಾಗಿ ೩ ವರುಷಗಳ ವರೆಗೆ ಮಾತ್ರ ಆಡಳಿತ ನಡಿಸುವ ಬಗ್ಗೆ ಅವಧಿ ಕರಾರುಗಳನ್ನ ಮಾಡಿಕೊಳ್ಳಬೇಕೆಂಬುವದು ಸರ್ಕಾರದ ತಾತ್ಪರ್ಯವಾಗಿರುತ್ತೆ. ಮುಖ್ಯವಾದ ಬೆಂಗಳೂರು ಲೈನಾಯಿತು ಹಿಂದೂಪುರದವರೆಗಿನ ಲೈನಲ್ಲಿ (15½ ಮೈಲಿ) ಕಬ್ಬಿಣದ ಪಿಲ್ಲಾರುಗಳು ಬರುವದು ಸಾವಕಾಶವಿದ್ದದರಿಂದ ಹಿನ್ನಿಕೆ ಸೇರುವ ಹೊರ್ತು ಮಿಕ್ಕ ಕೆಲಸಗಳೆಲ್ಲಾ ಪೂರೈಸಿರುತ್ತೆ. ಯಶವಂತಪುರದಿಂದ ದೊಡ್ಡಬಳ್ಳಾಪುರದ ವರೆಗಿನ ಪ್ರಥಮಭಾಗವು ೧೮೯೨ ನೇ ಇಸವಿ ಡಿಸಂಬರ್ ೧೫ ನೇ ತಾರೀಖಿನಲ್ಲಿಯೂ, ಗುಂತಕಲ್ ವರೆಗಿನ ಎರಡನೇ ಭಾಗವು ೧೮೯೩ ನೇ ಇಸವಿ ಸೆಪ್ಟಂಬರ್ ೧೩ ನೇ ತಾರೀಖಿನಲ್ಲಿಯೂ ಆಮದುರಫ್ತು ಬಗ್ಗೆ ಉಪಯೋಗಕ್ಕೆ ಬಂತು ಈ ಲೈನ್ ಮೂಲಕ ಶೀಮೆಗೂ ಬಳ್ಳಾರಿ, ಸಿಕಂದರಾಬಾದ್ ನೈಜಾಮ್ ಡಾಮಿನಿಯನ್ಸಲ್ಲಿರತಕ್ಕ ಪ್ರಾಂತಗಳಿಗೂ ವ್ಯಾಪಾರ ಸಂಬಂಧವು ಅಭಿವೃದ್ಧಿಯಾಗಿ ಸಿಂಗರೇಣಿ ಎಂಬ ಸ್ಥಳದಿಂದ ನಮ್ಮ ರೈಲ್ವೆ ಉಪಯೋಗಕ್ಕೆ ಕೋಲ್ ಎಂಬ ಕಲ್ಲಿದ್ದಲು ಬರುವದಕ್ಕೂ ಹತ್ತಿ ಮತ್ತು ಧಾನ್ಯಗಳ ವ್ಯಾಪಾರವು ಜಾಸ್ತಿಯಾಗಿ ತನ್ಮೂಲಕ ಈ ಸೀಮೆಯ ಸಂಪತ್ತು ಹೆಚ್ಚುವದಕ್ಕೂ ಕಾರಣವಾಗುವದು.

ಕೋಲಾರದ ಗಣಿಗಳನ್ನ ನಡಿಸುವವರ ಉಪಯೋಗಕ್ಕೋಸ್ಕರ ಮಾಡುವ ಬ್ರಾಂಚ್ ರೈಲ್ವೆ ಲೈನ್ (೧೦ ಮೈಲಿ) ಕಾಮಗಾರಿಯು ಕಳೆದ ಸಂವತ್ಸರದಲ್ಲಿ ಚನ್ನಾಗಿ ನಡೆಯಿತು. ಕಂಪಿಗಳನ್ನು ಹುಡುಕಿಸತಕ್ಕ ಕೆಲಸವು ಪೂರೈಸಿ ಕೋಲ್ ಸಾಗಿಸತಕ್ಕ ಬಂಡಿಗಳನ್ನು ಬಿಡುವದಕ್ಕೆ ಸೆಪ್ಟಂಬರ್ ೨೯ ನೇ ತಾರೀಖಿನಲ್ಲಿ ಪ್ರಾರಂಭವಾಯಿತು ಆಮದುರಫ್ತು ಬಗ್ಗೆ ಮುಂದಣ ತಿಂಗಳಲ್ಲಿ ಶುರು ಮಾಡಬಹುದು.

ನಂಜನಗೂಡಿನಿಂದ ಗೂಡಲೂರಿಗೆ ಹಾಕಬೇಕೆಂದು ಉದ್ದೇಶಿಸಿದ್ದ ಲೈನ್ ಸರ್ವೆಕೆಲಸವು ಪೂರೈಸಿತು ಆದರೆ ಈ ಲೈನ್ ಉತ್ತಮವಾದ್ದೆಂದು ತೋರಬರುವದಿಲ್ಲವಾಗಿ ಇದಕ್ಕೆ ಬದಲಾಗಿ ನಂಜನಗೂಡಿನಿಂದ ಮಲೆಯೂರಿಗೆ ಪ್ರತ್ಯೇಕವಾದ ಲೈನ್ ಹಾಕತಕ್ಕದ್ದು ಯುಕ್ತವೆಂದು ಮದರಾಸ್ ಗವರ್ನಮೆಂಟಿನವರೂ ಮೈಸೂರು ಸರಕಾರದವರೂ ಒಪ್ಪಿರುತ್ತಾರೆ. ಪಶ್ಚಿಮಸಮುದ್ರ ತೀರಕ್ಕೆ ರೈಲ್ವೆ ಲೈನ್ ಹಾಕಬೇಕೆಂಬ ಉದ್ದೇಶದಿಂದ ಮದ್ರಾಸ್ ಮತ್ತು ಮೈಸೂರು ಗೌರ್ನಮೆಂಟಿನವರ ತರ್ಫೆ ನಮ್ಮ ರೈಲ್ವೆ ಇಲಾಖೆ ಸಿಬ್ಬಂದಿ ಮೂಲಕ ಮಾರ್ಗಗಳ ಸರ್ವೆಯು ನಡೆಯುತ್ತಲಿದೆ. ಇವುಗಳ ಪೈಕಿ ಹಾಸನದ ಮಾರ್ಗವಾಗಿ ಅರಸೀಕೆರೆಯಿಂದ ಮಂಗಳೂರು ವರೆಗಿನ ಲೈನ್ ಕೇವಲ ಮುಖ್ಯವಾದದ್ದು ಇದರಲ್ಲಿ ಗೊರಪೂರದ ರೇವಿಗೆ ಒಂದು ಚಿಕ್ಕ ಅಡ್ಡ ಲೈನ್ ಸಹ ಇರುತ್ತೆ.

ಜುಡಿಷಿಯಲ್ ಇಲಾಖೆ ಬದಲಾವಣೆಗಳು.—ಚಿಕ್ಕಮಗಳೂರು ಮತ್ತು ಚಿತ್ರದುರ್ಗದಲ್ಲಿ ಕೆಳಗಿನ ಕೋರ್ಟುಗಳಲ್ಲಿ ಸರ್ಷ ಮಾಡುವ ಬಗ್ಗೆ ನಗರ ಡಿವಿಜನ್ ಡಿಸ್ಟ್ರಿಕ್ಟ್ ಅಂಡ್ ಸೆಷನ್ ಜಡ್ಜಿ ರವರು ಆಗಿಂದಾಗ್ಯೆ ಶಿವಮೊಗ್ಗೆಯಿಂದ ಗೈರಹಾಜರಾಗುವ ಸಬಬ ಆ ಡಿವಿಜನಿನ ಸಿವಿಲ್ ಕೆಲಸಕ್ಕೆ ಕೇವಲ ದಿಕ್ಕತ್ತು ಸಂಭವಿಸುತ್ತಾ ಇದ್ದರಿಂದ ಚೀಫ್‌ಕೋರ್ಟಿನ ಶಿಫಾರಸ್ ಅನುಸಾರ ಶಿವಮೊಗ್ಗೆಯಲ್ಲಿ ಒಂದು ಸಬ್‌ಜಡ್ಜಿ ಕೋರ್ಟನ್ನು ಮೊಕರರ ಮಾಡಲು ಸರ್ಕಾರದವರು ಮಂಜೂರ್ಮಾಡಿರುತ್ತಾರೆ. ಈ ಕೋರ್ಟನ್ನು ಕ್ರಮವಾಗಿ ಸ್ಥಾಪಿಸುವದಕ್ಕೆ ಪೂರ್ವಭಾವಿಯಾಗಿ ಡಿಸ್ಟ್ರಿಕ್ಟ್ ಕೋರ್ಟುಗಳಲ್ಲಿಯೂ, ಸಬ್ ಕೋರ್ಟುಗಳಲ್ಲಿಯೂ ಕೆಲಸ ಕಡಿಮೆ ಮಾಡುವದಕ್ಕೋಸ್ಕರ ಮುನ್ಸೀಫರುಗಳಿಗೆ ಹೆಚ್ಚಾದ ಅಧಿಕಾರವನ್ನು ಕೊಡಬೇಕೆಂಬ ವಿಷಯದಲ್ಲಿಯೂ ನಂದೀದುರ್ಗ ಡಿವಿಜನ್ನಲ್ಲಿ ಮುನ್ಸೀಫರ ಫೈಸಲಿನ ಮೇಲೆ ಚೀಫ್ ಕೋರ್ಟಿಗೆ ನೀರಾ ಅಪೀಲುಗಳು ಹೋಗುವ ಈಗಿನ ಪದ್ಧತಿಯನ್ನು ತಪ್ಪಿಸಬೇಕೆಂಬ ವಿಷಯದಲ್ಲಿಯೂ ಚೀಫ್ ಕೋರ್ಟಿನವರು ವಿಚಾರ ಮಾಡುತ್ತಲಿದ್ದಾರೆ.

ಮೆಡಿಕಲ್.—ಕಳೆದ ಸಂವತ್ಸರದಲ್ಲಿ ಹೊಸದಾಗಿ ಸ್ಥಾಪಿಸಿದ ೯ ಹೊಸ ಡಿಸ್ಪೆನ್ಸರಿ ಯಾನೆ ವೈದ್ಯಶಾಲೆಗಳ ಸಮೇತ ಸಂಸ್ಥಾನದಾದ್ಯಂತ ೧೧೨ ಆಸ್ಪತ್ರೆಗಳು ಇರುತ್ತವೆ. ಈ ವೈದ್ಯಶಾಲೆಗಳಲ್ಲಿ ಚಿಕಿತ್ಸೆಯನ್ನು ಹೊಂದಿದವರ ಒಟ್ಟು ಸಂಖ್ಯೆಯು ೫೫೫,೬೭೧ ಹಿಂದಣವರುಷದಲ್ಲಿ ೫೩೭,೭೮೬.

೧೮೯೨ ನೇ ಇಸವಿ ಜುಲೈ ತಿಂಗಳಲ್ಲಿ ಮೈಸೂರು ಮ್ಯುನಿಸಿಪಾಲಿಟಿಯವರ ಶಿಫಾರಸ ಪ್ರಕಾರ ಪರೀಕ್ಷಾರ್ಥವಾಗಿ ಮೈಸೂರು ಪಟ್ಟಣದಲ್ಲಿ ಕರ್ನಾಟಕ ಮತ್ತು ಯುನಾನಿ ಶಾಸ್ತ್ರಗಳ ಪ್ರಕಾರ ಚಿಕಿತ್ಸೆಯನ್ನು ಮಾಡುವದಕ್ಕೋಸ್ಕರ ಒಂದು ವೈದ್ಯಶಾಲೆಯನ್ನು ಸ್ಥಾಪಿಸಿರುತ್ತೆ. ಔಷಧಗಳ ತಯಾರಿಯನ್ನು ಅವುಗಳ ಗುಣಾಂಶವನ್ನೂ ನೋಡಿಕೊಂಡು ಮೇಲ್ವಿಚಾರಣೆ ತೆಗೆದುಕೊಳ್ಳತಕ್ಕ ಬಗ್ಗೆ ಒಬ್ಬ ಅಸಿಸ್ಟೆಂಟ್ ಅಸಿಸ್ಟೆಂಟರನ್ನು ನೇಮಿಸಿರುತ್ತೆ. ೧೮೯೩ನೇ ಇಸವಿ ಜೂನ್ ೩೦ ಕ್ಕೆ ಆಖೈರಾದ ೬ ತಿಂಗಳಲ್ಲಿ ಚಿಕಿತ್ಸೆ ಮಾಡಿಸಲ್ಪಟ್ಟವರ ಸಂಖ್ಯೆಯು ೨೫,೫೬೦ ಆಯಿತು ದಿನವಹಿ ಸರಾಸರಿ ಸಂಖ್ಯೆಯು ೨೮೯.೪೦ ಈ ವೈದ್ಯಶಾಲೆಯು ವಿಶೇಷ ಉಪಕೃತಿಯಾಗಿಯೂ ಜನಸಮ್ಮತವಾಗಿಯೂ ಇರುತ್ತ

ಕಳೆದ ಸಂವತ್ಸರದಲ್ಲಿ ದೇವಿ ಹಾಕಲ್ಪಟ್ಟವರ ಸಂಖ್ಯೆಯು ೧೪೬,೯೧೩ ಹಿಂದಣ ವರುಷದಲ್ಲಿ ೬೬,೬೮೭, ತೋಳಿನಿಂದ ತೋಳಿಗೆ ದೇವಿ ಹಾಕುವದರಲ್ಲಿ ಬೇಕಾದಷ್ಟು ಹಾಲು ದೊರಕುವ ಭಾಗದಲ್ಲಿದ್ದ ತೊಂದರೆಯು ತಪ್ಪಿ ಈಗಿನ ಪದ್ಧತಿ ಪ್ರಕಾರ ದೇವಿ ಹಾಕತಕ್ಕ ಬಗ್ಗೆ ಉಪಯೋಗಿಸುವ ಲ್ಯಾನೊಲೀನ್ ಪೇಸ್ಟ್ ಎಂಬ ಮಿಶ್ರಣವು ಸರ್ಕಾರಿ ಡಿಪೋವಿನಲ್ಲಿ ಬೇಕಾದಷ್ಟು ದೊರೆಯುತ್ತೆಯಾದ್ದರಿಂದ ಮೇಲ್ಕಂಡ ಮೇರೆ ದೇವಿ ಹಾಕಲ್ಪಟ್ಟವರ ಸಂಖ್ಯೆಯಲ್ಲಿ ಜಾಸ್ತಿ ಕಂಡುಬಂದಿರುತ್ತೆ. ಕಳೆದ ಸಂವತ್ಸರಗಳಲ್ಲಿ ಪೂರ್ವಪದ್ಧತಿ ಪ್ರಕಾರ ದೇವಿ ಹಾಕಿಸಿಕೊಂಡ ಸರಾಸರಿ ಸಂಖ್ಯೆಗಿಂತ ಈ ಮಿಶ್ರಣವನ್ನು ಉಪಯೋಗಿಸೋಣವರ ಮೂಲಕ ದೇವಿ ಹಾಕಿಸಿಕೊಂಡವರ ಸಂಖ್ಯೆಯು ಶೇಕಡ ೧೦ ರಂತೆ ಜಾಸ್ತಿ ಆಗಿರುತ್ತೆ.

ವ್ಯವಸಾಯ.—ಅಮೇರಿಕಾ ದೇಶದ ಉತ್ತಮಜಾತಿ ಹತ್ತಿಯ ಅಭಿವೃದ್ಧಿಯ ಸಾಗುವಳಿಯು ಕಳೆದ ವರುಷದಲ್ಲಿಯೂ ಅನುಕೂಲವಾಗಿ ನಡೆಯಿತು. ಈ ಹತ್ತಿ ಬೀಜವನ್ನು ಚಿತ್ರದುರ್ಗ, ಕೋಲಾರ ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟ್‌ಗಳಿಗೆ ಸರಬರಾಯಿ ಮಾಡಿರುತ್ತೆ. ಚಿತ್ರದುರ್ಗ ಡಿಸ್ಟ್ರಿಕ್ಟ್ ಪೈಕಿ ಹತ್ತಿ ಬೆಳೆಯತಕ್ಕ ದಾವಣಗೆರೆ ತಾಲ್ಲೂಕಿನಲ್ಲಿ ಹೊಸ ತರಹದ ಬೀಜಗಳ ಬೇಸಾಯವನ್ನು ವೃದ್ಧಿಪಡಿಸಲು ರೈತರು ಅಪೇಕ್ಷೆಯಾಗಿ ಇರುತ್ತಾರೆಂದು ತಿಳಿದುಬಂದಿರುತ್ತೆ.

ವಿಲಾಯಿತಿಯಿಂದ ತರಿಸಲ್ಪಟ್ಟ ಹೊಸತರಹದ ಬೀಜದ ಉರಳಗಡ್ಡೆಯನ್ನು ಬೆಂಗಳೂರು ಲಾಲಬಾಗಿನಲ್ಲಿ ಬೆಳಸಿ ನೋಡಿರುತ್ತೆ ಈ ಗಡ್ಡೆಗೆ ಸಾಮಾನ್ಯವಾಗಿ ಬರುವ ರೋಗವು ಈ ಮೇರೆ ಹೊಸ ತರಹದ ಬೀಜಗಳನ್ನು ಹಾಕುವದರಿಂದ ನಿವಾರಣೆ ಯಾಗುತ್ತೆಂದು ಅನುಭವದಿಂದ ಗೊತ್ತಾಗುತ್ತೆ.

ಆದಾಯಕರವಾದ ಕಾಫಿ ಸಾಗುವಳಿಯನ್ನು ಮೈದಾನ ಪ್ರದೇಶದಲ್ಲಿ ನಡಸಲು ಮ|| ವಿಜಯಾಕ್ಷಯ್ಯನವರು ಬೆಂಗಳೂರಲ್ಲಿ ತಮ್ಮ ತೋಟದಲ್ಲಿ ಉಪಕ್ರಮಿಸಿದಾರೆ ಇವರ ಪ್ರಯತ್ನವು ವಿಶೇಷವಾಗಿ ಸಫಲವಾಗುತ್ತಾಯಿದೆ, ಇದನ್ನು ನೋಡಿಕೊಂಡು ಮೈದಾನ ಪ್ರದೇಶದಲ್ಲಿ ಕಾಫಿ ಸಾಗುವಳಿಯು ಪ್ರಾಬಲ್ಯವನ್ನು ಹೊಂದುವ ಸೂಚನೆಯು ಕಾಣಬರುತ್ತೆ. ಮಲೆನಾಡು ಪ್ರಾಂತ್ಯದಲ್ಲಿ ಮಾತ್ರ ಕಾಫಿ ಬೆಳೆಯು ಚನ್ನಾಗಿ ಆಗುತ್ತೆಂಬ ನಂಬಿಕೆಯನ್ನು ಇದುವರೆಗೆ ಸಾಮಾನ್ಯವಾಗಿ ಇತ್ತು. ಮೈದಾನದಲ್ಲಿಯೂ ನೀರುಕಟ್ಟು ಸಾಗುವಳಿ ಮಾಡಿದಲ್ಲಿ ಕಾಫಿ ಗಿಡಗಳು ವಿಶೇಷ ಪ್ರಬಲವಾಗಿ ತುಂಬಾ ಫಲವಾಗುತ್ತೆಂಬುವದು ನಿದರ್ಶನಕ್ಕೆ ಬಂದಿರುತ್ತೆ ಮಿಸ್ಟರ್ ವಿಜಯಾಕ್ಷಯ್ಯನವರು ಮಾಡಿದ ಶ್ಲಾಘನೀಯವಾದ ಮೇಲ್ಕಂಡ ಪ್ರಯತ್ನದ ವ್ಯವಸಾಯವನ್ನು ಸರ್ಕಾರದವರು ವಿಶೇಷ ಆಸಕ್ತಿಯಿಂದ ನಿರೀಕ್ಷಿಸುತ್ತಿರುತ್ತಾರೆ.

ವನಸ್ಪತಿ ಚಿತ್ರಗಳನ್ನು ಕೆಲವರ ಮಾಡುತ್ತಲಿದೆ ಬಾಯಿ ಲಾಲ್‌ಬಾಗ್ ಸೂಪರಿಂಟೆಂಡೆಂಟರು "ಮೈಸೂರು ಮತ್ತು ಕೊಡಗು ದೇಶಗಳ ವನವೃಕ್ಷಗಳು" ಎಂಬ ಗ್ರಂಥವನ್ನು ವಿಸ್ತರಿಸಿ ಬರದು ಛಾಪು ಹಾಕಿಸುತ್ತಲಿದಾರೆ.

(ಇದರ ಶೇಷ ಮುಂದಿನವಾರಕ್ಕೆ.)

BANGALORE.—Printed and published at the KARNATAKA PRESS, No. 40, HOSPITAL ROAD, CITY.—1893

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಪ್ರಕಾಮವಿವಿಧಪ್ರವೃತ್ತ್ಯುಪಗಮಾರ್ಹ್ಯಕರ್ಣಾಟಕಪ್ರಕಾಶನನರಾಭಿದಾಪ್ರಥಿತನಾಹಿತೀಶೂಭಿತಾ ॥ ಮೃಗಾಂಕಹಿತವಾಸರೆನಿಹಿತಮುದ್ರಣಾಸಜ್ಜನ್ಯೃದ್ಧಿಕಾಸುಪರಿಪೋಷಿತಾದಿಶತಿವಾನಸುಂಸಂಮುದಂ ॥

Vol. XX ] BANGALORE —MONDAY, NOVEMBER 27, 1893. [ No. 47.

ಸಂಪುಟ ೨೦. ] ಬೆಂಗಳೂರು:—ಸನ್ ೧೮೯೩ನೇ ಇಸವಿ ನವಂಬರ್ ೨೭ ನೇ ತಾರೀಖ್ ಸೋಮವಾರ. [ಸಂಚಿಕೆ ೪೭.


## ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

| | ಸ್ಥಳೀಯರವರಿಗೆ | ಪರಸ್ಥಳದವರಿಗೆ. |
|---|---|---|
| ವರ್ಷ ೧ಕ್ಕೆ .. | ..6—0—0 | 8—0—0 |
| 6 ತಿಂಗಳಿಗೆ .. | .3—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

| | ಸ್ಥಳದವರಿಗೆ. | ಪರಸ್ಥಳದವರಿಗೆ. |
|---|---|---|
| ವರ್ಷ ೧ಕ್ಕೆ .. .. | 3— 0 0 | 4—0—0 |
| 6 ತಿಂಗಳಿಗೆ ... ... | 1—12—0 | 2—8—0 |

ಈ ಪತ್ರಿಕೆಗೆ ದರ್ಮಾಸ್ತು ಮಾಡಿದ ತಾರೀಖ್ ಮೊದಲು ಒಂದು ತಿಂಗಳೊಳಗಾಗಿ ಚಂದಾ ಹಣವನ್ನು ಕಳುಹಿಸದವರಿಗೆ ಮುಕ್ತ್ರಿಮೇ ಅಡ್ವಾನ್ಸ್ ದರದಂತೆ ಪತ್ರಿಕೆ ಕಳುಹಿಸಲ್ಪಡುವದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು ಮೂರು ತಿಂಗಳಿಗಿಂತ ಕಡಿಮೆಯಾಗಿ ಚಂದಾ ಮೊಬಲಗು ಅಂಗೀಕರಿಸಲ್ಪಡಲಾರದು.

## ಪ್ರಕಟನೆಯ ರಿವಾಜ್.

ಮೊದಲನೆಸಾರಿಯ ಪಙ್ಕ್ತಿ ಒಂದಕ್ಕೆ ೦—೨—೦

ಎರಡನೆಸಾರಿಯ ಪಙ್ಕ್ತಿ ಒಂದಕ್ಕೆ ೦—೧—೦

ಖರಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟು ತಡವೆ ಖಾಯಮ್ ಮಾಡಿದಾಗ್ಯೂ ಪಙ್ಕ್ತಿ ಒಂದಕ್ಕೆ ೧ ಆಣೆಯಂತೆ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಖಾಯಿಷ್ಟಾನೆಯಾಗಬೇಕ್ಕೆ ಪ್ರಕಟನೆಗಳನ್ನು ಕಳುಹಿಸುವವರು ಅವು ಎಷ್ಟಾವರ್ತಿ ಖಾಯಮ್ ಮಾಡಲ್ಪಡಬೇಕೋ ಆ ಅಂಕವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಿದ್ದಕ್ಕೆ ಅವರು ನಮಗೆ ನಿಲ್ಲಿಸುವಂತೆ ಬರೆಯುವತನಕ ಅವು ಪ್ರಕಟಿಸುತಲಿದ್ದು ಹಾಗೆ ಎಷ್ಟಾವರ್ತಿ ಪ್ರಕಟಿಸಲ್ಪಟ್ಟಿದ್ದಾಗ್ಯೂ ಮೇಲೆಕಂಡ ದರದಂತೆ ಕಿಮ್ಮತ್ ವಸೂಲ್ಮಾಡಲ್ಪಡುವದು. ಪ್ರಕಟಿಸುವ ಸಲ್ಯ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಆದಿವಾರ ಮಧ್ಯಾಹ್ನ ೨ ಘಂಟೆಯೊಳಗಾಗಿ ಕಳುಹಿಸಬೇಕು ಪ್ರಕಟನೆಯಾಬಗ್ಗೆ ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳಲ್ಲಿ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಲಾರೆವು ಕ್ರಮವಾಗಿ ರುಜುಮಾಡಿದ ಕಾಗದವನ್ನು ಪ್ರಕಟಿಸಲಾರೆವು ನಿರಾಕರಿಸಲ್ಪಟ್ಟ ಕಾಗದಗಳು ಮರಳಿ ಕಳುಹಿಸಲ್ಪಡಲಾರವು.


*ADVERTISEMENTS.*

## NOTICE.

VAIDYASARA SANGRAHA.

A TREATISE ON THE PRINCIPLES OF

HINDU MEDICINE.

*Price including Postage Rs 4-8 0*

ವೈದ್ಯಸಾರ ಸಂಗ್ರಹ.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೇ ಹಾಸಲ್ ಸೇರಿಸಿ, ಪ್ರತಿ ಒಂದಕ್ಕೆ ರೂ 4--8—0

## ನೋಟಿಸ್.

ಬೆಂಗಳೂರು ಕರ್ಣಾಟಕ್ ಪ್ರೆಸ್.

೧೮೭೬ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟಿದ್ದು.

ಇದರಲ್ಲಿ ಸಕಲವಿಧ ಕೆಲಸಗಳು ಸುಲಭ ಚಾರ್ಜಿಗೆ ಶೀಘ್ರವಾಗಿಯೂ ಶ್ಲಾಘ್ಯವಾಗಿಯೂ ಮಾಡಲ್ಪಡುವವು.

ಇದರಲ್ಲಿ ಸಧ್ಯಕ್ಕೆ ಇಂಗ್ಲಿಷ್ ಕನ್ನಡ ಕೆಲಸಗಳು ಮಾತ್ರವೇ ನಡೆಯುತಿವೆ. ಇತರ ತಪಸೀಲ್‌ಗಳನ್ನು ಸದರೀ ಕಾರ್ಖಾನೆಯ ಪ್ರೊಪ್ರೈಟರಿಗೆ ಬರೆದು ತಿಳಿದುಕೊಳ್ಳಬಹುದು

## ನೋಟಿಸ್.

ಗಣೇಶ ರಾಮಚಂದ್ರ ಕರ್ಕೆ ಮತ್ತು ಕಂಪನಿ.

ಕಮ್ಮಿಷನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯೊಡನೆ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ತಕ್ಕ ಕಮ್ಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರಹ ವಿಷಯಗಳು, ಪುಸ್ತಕಗಳು, ಮುತ್ತುಗಳು, ಚಿಪ್ಪು ಮುತ್ತುಗಳು, ಘಡಿಯಾರಗಳು, ವಾಚ್‌ಗಳು, ಟ್ರಂಕುಗಳು, ಕಾಶ್ಮೀರ ಶಾಲುಗಳು, ಪೆಟ್ಟಿಗೆಗಳು, ಜರತಾರಿ ಕಣಗಳು, ಚಂದ್ರಕಾಂತ ಶಿಲೆಯ ಕನ್ನಡಿಗಳು, ಮಾಡುಗುತಕ್ಕ ಜರತಾರಿ ಉಡುಪುಗಳು, ಜರತಾರಿ ಟೋಪಿಗಳು, ಆಫಿಸ್ ಡ್ರೆಸ್‌ಗಳು, ಷರ್ಟ್‌ಗಳು, ಅತ್ತರ್‌ಗಳು, ಅತ್ಯುತ್ತಮವಾಗಿರುವ ರತ್ನಗಳು, ಭಂಗಾರದಿಂದ ಕಟ್ಟಲ್ಪಟ್ಟ ಉಂಗುರಗಳು, ಬೆಳ್ಳಿ ಪಾತ್ರೆಗಳು, ಜರ್ಮನ್ ಬೆಳ್ಳಿ ಪಾತ್ರೆಗಳು, ಕೇಸರಿ, ಕಸ್ತೂರಿ ಮತ್ತು ಇತರ ಸಾಮಾನುಗಳು

ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಲೇಬಲ್ ಕಳುಹಿಸಿದ ಮೊತ್ತ ಜವಾಬ್ ದೊರೆಯುವದು.

ವಿಳಾಸ.—ಗಣೇಶ ರಾಮಚಂದ್ರ ಕರ್ಕೆ,

ಮತ್ತು ಕಂಪನಿ, ಕಮ್ಮಿಷನ್ ಏಜಂಟ್ಸ್,

ರಾಕಡ್ ಪ್ಯಾಲೆ, ಮಾರ್ಕೆಟ್ ಪೋಸ್ಟ್, ಮುಂಬೈ.

## ನೋಟೀಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ನಾಟಕ್ ಮುದ್ರಾಕ್ಷರ ಶಾಲೆಯಲ್ಲಿ ವಿಕರೀಗೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

### ಸಂಸ್ಕೃತ ಗ್ರಂಥಗಳು.

| | ರೂ | ಆ | ಪೈ |
|---|---|---|---|
| ಸಟೀಕಾ ಶಿವಗೀತೆ | ೧ | ೦ | ೦ |
| „ ಶಿವಾನಂದಲಹರಿ | ೦ | ೪ | ೦ |
| „ ಕಾಲಾಮೃತ | ೧ | ೦ | ೦ |
| „ ಬಾಲರಾಮಾಯಣ ... | ೦ | ೩ | ೦ |
| „ ಗೋಪಿಕಾ ಗೀತೆ ... | ೦ | ೧ | ೦ |
| „ ಚಾಣಕ್ಯನೀತಿ (ಸುಭಾಷಿತ) | ೦ | ೪ | ೦ |
| ವಿಷ್ಣು ಸಹಸ್ರನಾಮ ಪತ್ರಿಕೆ | ೦ | ೩ | ೦ |
| ಸೂರ್ಯಸಹಸ್ರನಾಮ | ೦ | ೨ | ೦ |
| ಕೃಷ್ಣಕರ್ಣಾಮೃತ | ೦ | ೨ | ೦ |
| ತ್ರಿಕಾಂಡ ಅಮರ ಮೂಲ | ೦ | ೭ | ೦ |
| ೧ ಕಾಂಡ ಟೀಕಾ | ೦ | ೧ | ೦ |

### ಕನ್ನಡ ಗ್ರಂಥಗಳು.

| | ರೂ | ಆ | ಪೈ |
|---|---|---|---|
| ಜೈಮಿನಿಭಾರತ ಅಸ್ಸಲ್ | ೩ | ೦ | ೦ |
| ಟೀಕಾ ಮುಖ್ಯಂ | ೧ | ೨ | ೦ |
| ವೃಷಭೇಂದ್ರವಿಜಯ | ೧ | ೪ | ೦ |
| ಪಂಚಪಾಪ ಪಾಲಿಕೀರಿ | ೦ | ೩ | ೦ |
| ಮಹಾಮುದ್ರೋಬಾಸ | ೦ | ೬ | ೦ |
| ಕಾಳೀಯಮರ್ದನ | ೦ | ೨ | ೦ |
| ಸುಧನ್ವಾಪ್ರವಿಜಯ | ೦ | ೨ | ೦ |
| ಶರೀರೇಬಂಧವಿಜಯ | ೦ | ೨ | ೬ |
| ಸುಜಾತಮೋಹರಿತ್ರೆ | ೦ | ೧ | ೦ |
| ಮೈರಾವಣ ಚರಿತ್ರೆ | ೦ | ೧ | ೬ |
| ಬಾಲಗ್ರಹಚಿಕಿತ್ಸೆ | ೦ | ೧ | ೦ |
| ಮಹಮ್ಮದ್ ಲಾ | ೧ | ೦ | ೦ |
| ಭ್ರಾಂತಿವಿಲಾಸ | ೦ | ೧೨ | ೦ |


## BANGALORE CITY MUNICIPALITY.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ನಾಳೇ ಬರುವ ಸಾಲಿಗೆ ಅಂದರೆ ಸನ್ 1894—95 ನೇ ಇಸವಿಗೋಸ್ಕರ ಬೇಕಾಗುವ ರಸ್ತೆಗಳ ದುರಸ್ತಿ ಜಮಾವಣೆ ಮತ್ತು ಬಿಛಾವಣೆಗಳಿಗಾಗಿ ದರಖಾಸ್ತುಗಳು.

ಬೆಂಗಳೂರ್ ಸಿಟಿ ಮ್ಯುನಿಸಿಪಲ್ ಪ್ರೆಸಿಡೆಂಟರಿಂದ ಸನ್ 1893ನೇ ಇಸವಿ ಡಿಸಂಬರ್ ಮಾಹೇ 20 ನೇ ತಾರೀಖ್ ಮಧ್ಯಾಹ್ನದ ವರೆಗೂ ಅಂಗೀಕರಿಸಲ್ಪಡುವದು. ದರಖಾಸ್ತುಗಳು ಅರಗುಮೊಹರ್ ನಿಶಿ ಕಳುಹಿಸಲ್ಪಡಬೇಕು.

ಕಂಟ್ರಾಕ್ಟರಿಗಳ ನಾನಾವಿಧವಾದ ಬಾಬುಗಳ ಸುಮಾರ್ ಮೊತ್ತಗಳು ಇದರಲ್ಲಿ ಜಂಟಿಸಿರುವ ಪಟ್ಟಿಯಲ್ಲಿ ನಮೂದಿಸಲ್ಪಟ್ಟಿರುತಿವೆ. ಮೊತ್ತಗಳು ಇಷ್ಟೇಯೆಂದು ನಿಬಂಧನೆ ಇಲ್ಲ. ದರಖಾಸ್ತು ನಮೂನೆ ಷರತ್‌ಗಳು ಮತ್ತು ಕೆಲಸಗಳ ತರಹಾಗಳು ಬೆಂಗಳೂರ್ ಶಿಲ್ಲೇಯಲ್ಲಿ ಮ್ಯುನಿಸಿಪಲ್ ಎಗ್ಸಿಕ್ಯುಟಿವ್ ಇಂಜನಿಯರ್ ಸಾಹೇಬರವರ ಆಫೀಸಿನಲ್ಲಿ ಪ್ರತಿ ದಿವಸದಲ್ಲಿಯೂ ಮಧ್ಯಾಹ್ನ 11 ಘಂಟೆ ಮೊದಲುಗೊಂಡು 4 ಘಂಟೆ ವರೆಗೂ ನೋಡಲ್ಪಡಬಹುದು.

| ನಂಬರ್. | ತಪಸೀಲ್. | [illegible] | [illegible] | [illegible] | [illegible] | [illegible] |
|---|---|---|---|---|---|---|
| | ಜಮಾವಣೆ. | | | | | |
| 1 | ಲಾಟರೈಟ್ ... | ಸಲೋಗಜ. | 1500 | „ | 500 | 2000 |
| 2 | ಬಂಡೆಜಲ್ಲಿ ... | ಡಿಟ್ಟೋ | 500 | 500 | 500 | 1500 |
| 3 | ಕಾಡುಜಲ್ಲಿ ... | ಡಿಟ್ಟೋ | 1000 | 1000 | 1000 | 3000 |
| 4 | ಗ್ರಾವಲ್ ... | ಡಿಟ್ಟೋ | 1000 | 3000 | 2000 | 6000 |
| | ಬಿಛಾವಣೆ. | | | | | |
| 5 | ಲಾಟರೈಟ್ . | ಡಿಟ್ಟೋ | 1500 | „ | 500 | 2000 |
| 6 | ಬಂಡೆ ಜಲ್ಲಿ ... | ಡಿಟ್ಟೋ | 500 | 500 | 50C | 1500 |
| 7 | ಕಾಡು ಜಲ್ಲಿ ... | ಡಿಟ್ಟೋ | 1000 | 1000 | 1000 | 3000 |
| 8 | ಗ್ರಾವಲ್ ... | ಡಿಟ್ಟೋ | 1000 | 3000 | 2000 | 6000 |
| 9 | ಮರಳು ... | ಡಿಟ್ಟೋ | 200 | 300 | 200 | 700 |
| 10 | ಮಟ್ಟಿ ಕಾಮಗಾರಿ ... | ಡಿಟ್ಟೋ | 1000 | 2000 | 1500 | 4500 |
| 11 | ಪಿಕಿಂಗ್ ಮತ್ತು ಫೋರ್ಮಿಂಗ್ ಜಲ್ಲಿ ರಸ್ತೆ .. | ಚದರಗಜ. | 12000 | 5000 | 8000 | 25000 |
| 12 | ಸದರಿ ಗ್ರಾವಲ್ ರಸ್ತೆ .. | ಡಿಟ್ಟೋ | 5000 | 15000 | 10000 | 30000 |

ಬೆಂಗಳೂರು ಸಿಟಿ ಮ್ಯುನಿಸಿಪಲ್ ಆಫೀಸ್. ತಾರೀಖ್ 16 ನೇ ನವಂಬರ್, 1893.

K. SRINIVASA RAO,
*Vice President,*
*City Municipal Commission.*

## ಕೊಡಗು ಫಾರೆಸ್ಟ್ ಇಲಾಖಾ.

### ನೋಟೀಸ್.

ತಾರೀಖು 25 ನೇ ಅಕ್ಟೋಬರ್ 1893.

ಸನ್ 1893 ನೇ ಇಸವಿ ಡಿಸಂಬರ್ ತಾರೀಖು 18 ರಲ್ಲು ಫ್ರೇಜರ್ ಪೇಟೆಯಲ್ಲಿ ಹೆಚ್ಚುಕಡಿಮೆ 160 ಟನ್‌ಗಳು ಗಂಧ ಹರಾಜ್ ಹಾಕಲ್ಪಡುತದೆ.

ಷರತ್— ಸನ್ 1865 ನೇ ಇಸವಿ ಜನವರಿ ತಾರೀಖು 3 ರ ನಂಬರ್ 1ನೇ ಕೊಡಗು ಡಿಸ್ಟ್ರಿಕ್ಟ್ ಗೆಜೆಟಿನಲ್ಲಿ ಘೋಷಿಷ್ ಮಾಡಲ್ಪಟ್ಟ ಕೊಡಗು ಚೀಫ್‌ಕಮಿಷನರ್ ಸಾಹೇಬರವರ ಸನ್1881 ನೇ ಇಸವಿ ಫೆಬ್ರವರಿ ತಾರೀಖು 15 ನಂಬರ್ 26 ರ ನೋಟಿಫಿಕೇಷನ್ ಮೇರೆ ಶೇಕಡ ಇಪ್ಪತ್ತೈದರಷ್ಟು ಕ್ರಯವನ್ನು ಹರಾಜು ಕಾಲದಲ್ಲಿ ಕೊಡತಕ್ಕದ್ದು ಬಾಕಿ ಮೊಬಲಗನ್ನು 1894 ನೇ ಇಸವಿ ಮಾರ್ಚಿ ತಾರೀಖು 16 ರ ವಳಗೆ ಸಾಕಲ್ಯವಾಗಿ ಸಲಾವತಿ ಮಾಡತಕ್ಕದ್ದು.

G. F. PREVOST,
*Dy. Conservator of*
*Forests, Coorg.*


## NOTICE.

“ ಆಂಗ್ಲೋ ಇಂಡಿಯನ್ ಪಾಕೆಟ್‌ಡೈರಿ”

ನಾವು ಪ್ರತಿ ವರ್ಷದಲ್ಲಿಯೂ ಪ್ರಕಟಪಡಿಸುತಲಿರುವ ಪ್ರಕಾರ ಸರ್ವರಿಗೂ ಬಹಳ ಉಪಯುಕ್ತವಾಗಿರುವಂತೆ ಇಂಗ್ಲಿಷ್ ತಿಂಗಳ ಕ್ಯಾಲೆಂಡರ್, ಇದಕ್ಕೆ ಸರಿಯಾದ ಹಿಂದೂ ಸಂವತ್ಸರ, ತಿಂಗಳು, ತಿಥಿ, ವಾರ, ನಕ್ಷತ್ರ ಸಹಿತವಾಗಿಯೂ, ಇನ್ನೂ ಆವಶ್ಯಕವಾಗಿ ತಿಳಿಯಬೇಕಾದ ಸಂಗತಿಗಳು, ರೈಲ್ವೇ ಸ್ಟೇಷನ್‌ಗಳು, ಅಲ್ಲಿಗೆ ರೈಲ್ವೇ ಚಾರ್ಜ್, ಪೋಸ್ಟಾಫೀಸ ರೂಲ್ಸ್, ಮುಂತಾದ ವಿಶೇಷ ಸಂಗತಿಗಳನ್ನು ಹೊಂದಿರುವ ೧೮೯೪ ನೇ ಇಸವಿಯ ದಿನಚರಿ ಪುಸ್ತಕವನ್ನು ವಿಕ್ರಯಕ್ಕೆ ಸಿದ್ಧಪಡಿಸಿರುತ್ತೇವೆ.

ಕ್ರಯ ಪ್ರತಿ ೧ಕ್ಕೆ ಟಪಾಲ್ ಹಾಸಲ್‌ಸಹಿತ ೦-೩-೦

೧೦೦ ಪ್ರತಿ ಒಟ್ಟಿಗೆ ತರಿಸಿಕೊಳ್ಳತಕ್ಕವರಿಗೆ ೧ ಪ್ರತಿ ಜಾಸ್ತಿಯಾಗಿ ಕಳುಹಿಸುತ್ತೇವೆ. ಬೇಕಾದವರು ಈ ಕೆಳಗೆ ಸ್ವಾಕ್ಷರ ಮಾಡಿರುವವರ ಹೆಸರಿಗೆ ಬರೆದು ತರಿಸಿಕೊಳ್ಳಬಹುದು. ಪ್ರತಿ ಭಾಗಕ್ಕೂ ರಿಜಿಸ್ಟರ್ ಹಾಸಲ್ ೨ ಆಣೆ ಜಾಸ್ತೀ ಕಳುಹಿಸಿಕೊಡಬೇಕು. ಅಪೇಕ್ಷೆಯುಳ್ಳವರು ವಿಳಾಸ ಪತ್ತೆಯನ್ನು ಸ್ಪಷ್ಟವಾಗಿ ತಿಳಿಯುವಂತೆ ಬರೆಯಬೇಕು.

೫-೧೧-೯೩ } ಸತ್ಯಂ ಚಂದ್ರಶೇಖರಯ್ಯ,
ಪ್ರೊಪ್ರೈಟರ್,
“ವರ್ನಾಕ್ಯುಲರ್ ಸ್ಟೇಷನರಿ ಡಿಪೋ”,
ಬೆಂಗಳೂರ್.

## THE MONEY MARKET.

**Stocks, Shares and Exchange.**

ಮದರಾಸ್, ಶನಿವಾರ, ತಾರೀಖ್ 25ನೇ ನವೆಂಬರ್, 1893.

ಸೆಕಡ 4ರೂ. ಬಾಬತು ಇಂಡ್ಯಗವರ್ನಮೆಂಟ್ ಪತ್ರಗಳು 104–14–0ರೂ ಗಳಿಂದ 105–6–0 ರೂ ವರೆಗೆ

ಸೆಕಡ ಮೂರುವರೆ ರೂ. ಬಾಬತು, ಗವರ್ನಮೆಂಟ್ ಪತ್ರಗಳು, 98–8–0 ರೂ ಗಳಿಂದ 99–0–0 ವರೆಗೆ

ಮದರಾಸ್ ಬ್ಯಾಂಕ್ ಶೇರ್‌ಗಳು, (500) ರೂಪಾಯಿಗಳ ಬಾಬತು, 990–0–0ರೂ ಗಳಿಂದ995–0–0ವರೆಗೆ

ಕಮರ್ಷಿಯಲ್ ಎ ಲ್ಯಾಂಡ್ ಮಾರ್ಟಗೇಜ್ ಬ್ಯಾಂಕ್ ಶೇರ್‌ಗಳು, (100ರೂ.) ಬಾಬತು 150–0–0ರೂ ಗಳಿಂದ 155–0–0 ರೂ ವರೆಗೆ,

ಸವರ್ನಗಳು, ಪ್ರತಿ 1 ಕ್ಕೆ 15–14–0 ರೂಪಾಯಿಗಳಿಂದ 16–1–0 ರೂ ವರೆಗೆ,

ಲಂಡನ್ ಬ್ಯಾಂಕಿನಮೇಲೆ ಕೊಡಲ್ಪಡುವ ಬ್ಯಾಂಕ್ ಬಿಲ್ಸ್ ಯಾನೆ ದರ್ಶನ ಹುಂಡಿಗಳು —

| | |
|---|---|
| 6 ತಿಂಗಳ ವಾಯಿದೆಗೆ... | 1 s 3 7/16 d. |
| 4 „ .. | 1 s 3 3/8d |
| ಕೇಳಿದಾಗಕೊಡಲ್ಪಡುವದಕ್ಕೆ .. | 1 s. 3 9/32 d |

# ಕರ್ಣಾಟಕ ಪ್ರಕಾಶಿಕಾ.

## THE KARNATAKA PRAKASIKA.

MONDAY, NOVEMBER 27, 1893.

೧೮೯೩ ನೇ ಇಸವಿ ನವೆಂಬರ್ ೨೭ ನೇ ತಾ|| ಸೋಮವಾರ

### ಮ|| ಖಲಿಫ್ ಫ್ರಾನ್ಸಿಸ್ ಬೌರಿಂಗ್.

ಈ ರಾಜ್ಯವು ಬ್ರಿಟಿಷ್ ಗವರ್ನಮೆಂಟನವರ ಸ್ವಾಧೀನದಲ್ಲಿ ಆಡಳಿತದೊಳಗಿರುತಲಿದ್ದ ಕಾಲದೊಳು ಇಲ್ಲಿ ಚೀಫ್ ಕಮಿಷನರಾಗಿದ್ದ ಮ|| ಎಲ್. ಬಿ ಬೌರಿಂಗ್‌ಯವರನ್ನು ಪ್ರಾಯಶಃ ಈದೇಶೀಯರೆಲ್ಲರು ಚೆನ್ನಾಗಿ ಅರಿತಿದ್ದಾರೆಯಷ್ಟೆ. ಇವರಪುತ್ರರಾದ ಮ|| ಖಲಿಫ್ ಫ್ರಾನ್ಸಿಸ್ ಬೌರಿಂಗ್ ಎಂಬವರು ಈ ಸಂಸ್ಥಾನದಲ್ಲಿ ಪೋಲೀಸ್ ಪ್ರೊಬೇಷನರಿ ಅಸಿಸ್ಟೆಂಟ್ ಸುಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟಿರುವಂತೆ ಈ ವಾರದ ಮೈಸೂರ್ ಗೆಜೆಟಿನಲ್ಲಿ ಪ್ರಕಟವಾಗಿರುವದು ನೋಡಿ ನಾವು ಬಹಳ ಸಂತೋಷಿಸುತ್ತೇವೆ. ಮೈಸೂರ್ ಸಂಸ್ಥಾನದ ಸ್ಥಿತಿಯನ್ನೂ ಅದರ ಪೂರ್ವ ವೃತ್ತಾಂತವನ್ನೂ ಮ|| ಪಿ ಎಫ್. ಬೌರಿಂಗ್‌ಯವರು ತಮ್ಮ ತಂದೆಗಳ ಮೂಲಕವಾದುವರೆಗೆ ಬಹಳ ಮಟ್ಟಿಗೆ ಅರಿತಿರಬಹುದೆಂದು ನಂಬುತ್ತೇವೆ. ಈ ದೇಶದ ಆಗಿನ ಸ್ಥಿತಿಗೂ ಪ್ರಕೃತಸ್ಥಿತಿಗೂ ಉಂಟಾಗಿರುವ ತಾರತಮ್ಯಗಳನ್ನು ಅನುಭವಪೂರ್ವಕ ಅವರು ತಿಳಿದು ವರ್ತಿಸಲಿಕ್ಕೆ ಇದು ಒಳ್ಳೆಯ ಸಮಯವಾಗಿರುತಿದೆ. ಈ ಸಂಸ್ಥಾನವು ಮರಳಿ ನೇಟಿವ್ ಅರಸರಿಗೊಪ್ಪಿಸಲ್ಪಡುವ ಸಂಭವವಿಲ್ಲವೆಂಬ ಪರಿಭಾವನೆಯೊಡನೆ ನಡೆಸಲ್ಪಡುತಲಿದ್ದ ರಾಜ್ಯಭಾರಕ್ರಮಕ್ಕೂ ನೇಟಿವ್ ಅರಸರು ಸಮರ್ಥರಾದ ನೇಟಿವ್‌ಗಳ ಸಹಾಯ ಸಂಪತ್ತಿಯಂ ಪಡೆದು ಸಕಲಜನ ಪ್ರಶಂಸಾರ್ಹವಾದ ರೀತಿಯಲ್ಲಿ ಮಾಡುತಲಿರುವ ಪ್ರಭುತ್ವಕ್ರಮಕ್ಕೂ ನೆಲೆಗೊಂಡಿರುವ ಭೇದಗಳನ್ನು ತಮ್ಮ ಪುತ್ರರ ಮೂಲಕ ಮ|| ಬೌರಿಂಗ್‌ಯವರು ಅರಿತು ಸಂತೋಷಿಸದೆ ಇರಲಾರರು. ಹಿಂದೆ ಚೀಫ್ ಕಮಿಷನರಾಗಿಯೂ, ಡಿವಿಜನ್ ಕಮಿಷನರ್‌ಗಳಾಗಿಯೂ, ಇನ್ನೂ ದೊಡ್ಡ ಅಧಿಕಾರಗಳಲ್ಲಿ ಮಾತ್ರವರಾಗಿಯೂ ಇರತಕ್ಕವರಸಂತತಿಯವರು ಇಲ್ಲಿನ ನೌಕರಿಗಳಲ್ಲಿ ಪ್ರವೇಶಿಸುವದೂ, ಅಂತವರಂ ಮಹಾರಾಜಾ ಸರ್ಕಾರದವರು ಪುರಸ್ಕರಿಸಿ ಪ್ರೋತ್ಸಾಹಪಡಿಸುವದೂ ಅವರ ಪ್ರಭುತ್ವಕ್ಕೊಂದು ಪ್ರೌಢ್ಯಲಕ್ಷಣವೆಂದು ಭಾವಿಸಬೇಕಾಗಿರುತಿದೆ ಇಂಡ್ಯ ದೇಶದಲ್ಲಿ ನೇಟಿವ್ ಅರಸರ ಪ್ರಭುತ್ವವೂ, ಯೂರೋಪಿನಲ್ಲಿ ಯೂರೋಪಿಯನ್ ಅರಸರ ಪ್ರಭುತ್ವವೂ ಏಕರೂಪವಾಗಿಯೂ ಸಮಾನಸ್ವಾತಂತ್ರ್ಯವುಳ್ಳದ್ದಾಗಿಯೂ ಇರುತಿದೆಂಬದಕ್ಕೆ ನೇಟಿವ್ ಸಂಸ್ಥಾನಗಳಲ್ಲಿ ಯೂರೋಪಿಯನ್‌ಗಳೂ ಯೂರೋಪಿಯನ್ ಗವರ್ನಮೆಂಟಿಗಳಲ್ಲಿ ನೇಟಿವ್‌ಗಳೂ ನೌಕರಿಗಳನ್ನಂಗೀಕರಿಸುವದೇ ಪ್ರಬಲ ನಿದರ್ಶನವಾಗಿರುತಿದೆ. ಆದಾಗ್ಯೂ ಯೂರೋಪ್ ಖಂಡದಲ್ಲಿ ಹಿಂದೂಗಳು ರಾಜಕೀಯಾಧಿಕಾರಗಳಲ್ಲಿ ನಿಯಮಿಸಲ್ಪಡುವ ಕಾಲ ಮಾತ್ರ ಅದ್ಯಾಪಿ ಬರಲಿಲ್ಲವು. ಕಾಲಗತಿಯಿಂದ ಅದೂ ಏತಕ್ಕೆ ಬರಬಾರದು.

### ಆಯುರ್ವೇದ ವೈದ್ಯಶಾಲಾ ನಿರ್ಮಾಣವು.

ದಕ್ಷಿಣ ಇಂಡ್ಯದೇಶದಲ್ಲೆಲ್ಲ ಈ ಪುರವು ಕೇವಲ ಪ್ರಸಿದ್ಧವಾದ ಪಟ್ಟಣವೆನಿಸಿರುತಿದೆ. ಇಲ್ಲಿ ನೇಟಿವ್ ಮತ್ತು ಬ್ರಿಟಿಷ್ ಅಡ್ಮಿನಿಸ್ಟ್ರೇಷನ್‌ಗಳ ದಕ್ಷತೆ ನೆಲೆಗೊಂಡಿರುವದಲ್ಲದೆ ಮದರಾಸ್ ಮತ್ತು ದಕ್ಷಿಣ ಮಹಾರಾಷ್ಟ್ರ ರೆಯಿಲ್ವೇ ಕಂಪೆನಿಯವರ ಸಂಬಂಧದಿಂದ ಅನೇಕ ಶಾಖಾಮಾರ್ಗಗಳೇರ್ಪಟ್ಟು ನಾನಾ ದೇಶದ ಜನಗಳ ಆಮದು ರಫ್ತು ಅಧಿಕವಾಗುತಲಿವೆ. ಬ್ರಿಟಿಷ್ ಕಂಟೋನ್ಮೆಂಟ್ ದಿನೇ ದಿನೆ ಪ್ರಬಲಿಸುತಲೂ ಮಹಾರಾಜರವರ ಅರಮನೆಯೂ, ದೊಡ್ಡದೊಡ್ಡ ಅಧಿಕಾರಿಗಳ ಬಂಗ್ಲೆಗಳೂ ದಿನೇ ದಿನ ವೃದ್ಧಿಯನ್ನೈದುತಲೂ ಬರುತಲಿವೆ. ಈಗ ಪಬ್ಲಿಕ್‌ನಾಲ್ಕು ದಿಕ್ಕುಗಳಲ್ಲಿಯೂ ಬತಾಯಿಸಲ್ಪಡುತಲಿವೆ. ಮುಸಾಫರರಿಗೋಸ್ಕರ ರೆಯಿಲ್ವೇ ಸ್ಟೇಷನ್‌ಗಳ ಸಮೀಪದಲ್ಲಿ ಅನೇಕ ಸತ್ರಗಳು ಕಟ್ಟಲ್ಪಟ್ಟಿವೆ. ವಿದ್ಯಾಭಿವೃದ್ಧಿಗಾಗಿ ಮಾಡಲ್ಪಡುತಲಿರುವ ಏರ್ಪಾಡುಗಳು ಅನಂತಗಳಾಗಿರುತಿವೆ. ಯೂನಾನಿ, ಸುರ್ಯಾನಿ, ಇಂಗ್ಲಿಷ್ ಆಸ್ಪತ್ರಿಗಳು ಸರ್ಕಾರದವರಿಂದಲೂ, ಮ್ಯುನಿಸಿಪಾಲಿಟಿಯವರಿಂದಲೂ ಮಿಷನರಿಗಳಿಂದಲೂ ಸ್ಥಾಪಿಸಲ್ಪಟ್ಟಿರುವದಲ್ಲದೆ ಪ್ರಜೆಗಳು ಸ್ವತಃ ಹಿಂದೂ ವೈದ್ಯಶಾಲೆಗಳನ್ನು ಧರ್ಮಾರ್ಥ ನೆಲೆಗೊಳಿಸುತಲಿದ್ದಾರೆ ನಿನ್ನೆಯ ದಿನ ರೆಯಿಲ್ವೇ ಸ್ಟೇಷನಿಗೆ ಸಮೀಪದಲ್ಲಿರುವ ಮ್ಯುನಿಸಿಪಲ್ ಗಾರ್ಡನಿನ ಬಳಿ ಇದಕ್ಕೆ, ಮಹಾರಾಜಶ್ರೀ ಮಂಡಿ ಮರಿಯಣ್ಣನವರ ಛತ್ರದಲ್ಲಿ ಆಯುರ್ವೇದ ಸಿದ್ಧಾಂತವನ್ನನುಸರಿಸಿ ಮತ್ತೊಂದು ಧರ್ಮ ಹಾಸ್ಪತ್ರಿಯು ಸ್ಥಾಪಿಸಲ್ಪಟ್ಟಿತು. ಇದಕ್ಕಾಗಿ ಮೇಲೆ ಕಂಡ ಛತ್ರದ ಮುಂಭಾಗದಲ್ಲಿ ತತ್ಕಾಲೋಚಿತಾಲಂಕಾರಗಳೊಡನೆ ಒಂದು ಮಂಟಪವು ನಿರ್ಮಿಸಲ್ಪಟ್ಟಿತ್ತು. ನಿನ್ನೆಯದಿನ ಬೆಳಗ್ಗೆ ೪ಘಂಟೆಗೆ ಸರಿಯಾಗಿ ಏತದರ್ಥ ಆಹೂತರಾಗಿದ್ದ ರಾಜಮಂತ್ರಪ್ರವೀಣರಾದ ಅನರೆಬಲ್ ಮ|| ಚೆಂಚಲ್‌ರಾವ್ ಸಿ ಐ. ಇ. ಯರವರೂ, ರಾಜಧರ್ಮಪ್ರವೀಣರಾದ ಚೀಫ್ ಜಡ್ಜ್ ಮ|| ತಂಬುಚೆಟ್ಟಿರವರೂ, ಚೀಫ್‌ಕೋರ್ಟ್ ದುಯ್ಯಂ ಜಡ್ಜಿಯರಾದ ಮ|| ರಾಮಚಂದ್ರಯ್ಯರವರೂ, ಈ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮ|| ಸುಜಾಯತ್ ಅಲ್ಲೀಖಾನರವರೂ, ಚೀಫ್ ಕೋರ್ಟ್ ರಿಜಿಸ್ಟ್ರಾರವರೂ, ಸಬ್‌ಜಡ್ಜ್ ಮ|| ನಂಜುಂಡಯ್ಯ ಎಂ ಏ. ಎಂ. ಎಲ್. ಯವರೂ ಅನೇಕ ಜನ ಅಸಿಸ್ಟೆಂಟ್ ಕಮಿಷನರ್‌ಗಳೂ ಅಡ್ವೋಕೇಟ್‌ಗಳೂ, ಮ್ಯುನಿಸಿಪಲ್ ವೈಸ್ ಪ್ರಸಿಡೆಂಟರವರೂ, ಮ್ಯುನಿಸಿಪಲ್ ಕಮಿಷನರ್‌ಗಳೂ, ಪ್ರಮುಖರಾದ ಬಹುಮಂದಿ ವರ್ತಕರೂ, ಖುಷ್ ಬಾಷ್ ಜನಗಳೂ ಬಂದು ಸಭೆ ಸೇರಿದರು ಪ್ರಸಕ್ತ ವಿಶೇಷ ಸಂದರ್ಭಕ್ಕಾಗಿ ಬ್ಯಾಂಡ್ ವಾದ್ಯವು ಸಹ ತರಿಸಲ್ಪಟ್ಟಿತು. ಸಭಾಸದರೆಲ್ಲರೂ ಅವರವರ ಸ್ಥಾನಗಳಲ್ಲಿ ಕುಳಿತುಕೊಂಡ ತರುವಾಯ ಮ|| ಚೆಂಚಲ್ ರಾಯರವರ ಪ್ರಾರ್ಥನಾನುಸಾರ ಮ|| ರಾಮಚಂದ್ರಯ್ಯರವರು ಸಭಾಧ್ಯಕ್ಷರಾದರು. ಪ್ರಸಕ್ತ ಸಭೆಯ ಉದ್ದೇಶವನ್ನವರು ಇಂಗ್ಲಿಷ್ ಭಾಷೆಯಲ್ಲಿ ಸಂಗ್ರಹವಾಗಿ ತಿಳಿಸಿದರೇನಂದರೆ:—ಹಿಂದೂ ವೈದ್ಯಶಾಸ್ತ್ರವು ಪೂರ್ವಕಾಲದಲ್ಲಿ ಮಹೋನ್ನತದಶೆಯೊಳಿದ್ದಂತೆಯೂ ಅದು ಕಾಲಕ್ರಮದಿಂ ಇತರ ವಿದ್ಯೆಗಳಂತೆ ತಕ್ಕ ಪ್ರೋತ್ಸಾಹವಿಲ್ಲದೆ ನಶಿಸುತ ಬಂತೆಂತಲೂ, ಈಗ ಶ್ರೀಮನ್ಮಹಾರಾಜಾ ಸರ್ಕಾರದವರು ಪುರಾತನ ವಿದ್ಯೆಗಳಿಗೆಲ್ಲ ಪ್ರೋತ್ಸಾಹ ಕೊಡುವರಾತು ತ ಬರುವಂತೆ ಇದಕ್ಕೂ ಸಾಧ್ಯವಾದ ಪ್ರೋತ್ಸಾಹವನ್ನುಂಟುಮಾಡುತಲಿದ್ದಾರೆಂತಲೂ ಮುಂದೆ ಈವಿದ್ಯೆಯು ಸಹ ಪ್ರಾಚುರ್ಯಕ್ಕೆಬಂದು ವಿಶೇಷ ಫಲದಾಯಕವಾಗಬಹುದೆಂದು ತಾವು ನಂಬಿರುವಂತೆಯೂ, ಈಗ ಮ|| ವೈದ್ಯನಾಥಯ್ಯರವರು, ಕೇವಲ ಪಾರಮಾರ್ಥಿಕಜ್ಞಾನದೊಡನೆ ತಮ್ಮ ಮನೆಯಲ್ಲಿ ವೈದ್ಯಶಾಲೆಯನ್ನಿಡಿಸಿ, ಬರುವವರಿಗೆಲ್ಲ ಔಷಧಗಳಂ ಕೊಡಿಸುತಲಿದ್ದಾರೆಂತಲೂ, ಅವರ ಉಪಕಾರವು ಎಲ್ಲರಿಂದಲೂ ಸದಾ ಕೊಂಡಾಡಲ್ಪಡತಕ್ಕದ್ದಾಗಿದೆಯೆಂತಲೂ ಈಗ ಸ್ಥಾಪಿಸಲ್ಪಡುವ ವೈದ್ಯಶಾಲೆಯು ಮ|| ರಾ|| ಮಂಡಿ ಮರಿಯಣ್ಣನವರ ಧರ್ಮಪ್ರವರ್ತನೆಯಿಂದೇರ್ಪಡುತಿದೆಯೆಂತಲೂ, ಆದಕ್ಕಾಗಿ ಅವರು ತಮ್ಮ ಸತ್ರದ ಪೈಕಿ ಕೆಲವು ಭಾಗವನ್ನು ಬಿಡುಗಡೆ ಮಾಡಿಕೊಟ್ಟು ೬೦೦೦ರೂಪಾಯಿಗಳು ಮೂಲಧನವಾಗಿ ಕೊಡುವಂತೆ ವಾಗ್ದಾನ ಮಾಡಿರುವರಲ್ಲದೆ ಇನ್ನೂ ೪,೦೦೦ ರೂಪಾಯಿಗಳು ಕೊಡುವಂತೆ ಸಹ ಒಪ್ಪಿಕೊಂಡಿದ್ದಾರೆಂತಲೂ ತಿಳಿಸಿ ಅವರ ಔದಾರ್ಯವನ್ನೂ ಪ್ರಜಾನುರಾಗವನ್ನೂ ವಿಶೇಷತಃ ಪ್ರಶಂಸಿಸಿದರು ಅನಂತರ ಆಸ್ಪತ್ರಿಯು ಓಪನ್ ಮಾಡಲ್ಪಟ್ಟು ಸಭೆಯವರೆಲ್ಲರೂ ಒಳಗೆ ಪ್ರವೇಶಿಸಿ ಅಲ್ಲಿ ಕಲ್ಪಿಸಲ್ಪಟ್ಟ ಏರ್ಪಾಡುಗಳಂ ನೋಡಿ ಸಂತೋಷಿಸಿದರು. ತರುವಾಯ ಶ್ರೀನಿವಾಸ ಮಂದಿರ ವ್ಯವಸ್ಥಾಪಕರಾದ ಮ|| ಗೋಪಾಲಾಚಾರ್ಯರವರು ಆಯುರ್ವೇದ ಸಿದ್ಧಾಂತವನ್ನನುಸರಿಸಿ ಹಿಂದೂ ಚಿಕಿತ್ಸೆಯು ನಮ್ಮವರಿಗೆ ಬಹಳ ಉಪಯುಕ್ತವಾದುದೆಂತಲೂ, ಇಂಗ್ಲಿಷ್ ಚಿಕಿತ್ಸೆಯು ಇಂಗ್ಲಿಷಿನವರ ಆಹಾರ ವಿಹಾರಾದಿಗಳಿಗೆ ಅನುಗುಣವಾಗಿದ್ದಾಗ್ಯೂ ನಮ್ಮವರ ಶರೀರಸ್ಥಿತಿಗೆ ಅದು ಒಂದುವದಿಲ್ಲವೆಂತಲೂ ಆದಕಾರಣ ಇಂತಾ ಹಿಂದೂ ವೈದ್ಯಶಾಲೆಗಳು ಅಪೇಕ್ಷಿತವೆಂತಲೂ ಏತದ್ವಿಧವಾದ ಧರ್ಮಕಾರ್ಯಕ್ಕೆ ಸ್ವದೇಶೀಯರು ಅಭಿಮುಖರಾದುದಕ್ಕೆ ಇದೇ ಪ್ರಥಮಾವರ್ತಿಯೆಂತಲೂ, ಇದೇರೀತಿಯಲ್ಲಿ ಮ|| ತಂಬುಚೆಟ್ಟಿರವರು ಸಹ ಪ್ರತ್ಯೇಕ ಒಂದು ಹಾಸ್ಪತ್ರಿಯನ್ನು ಸ್ಥಾಪಿಸಿ ಕಾಪಾಡುತಲಿರುವದಕ್ಕಾಗಿ ಅವರಿಗೆ ಯೆಲ್ಲರೂ ವಂದನೆ ಮಾಡಬೇಕೆಂತಲೂ, ಇಂತಾ ವಿಷಯಗಳಿಗೆ ಮ|| ಚೆಂಚಲ್‌ರಾವ್ ಮತ್ತುಳಿಯುವರೂ, ಮ|| ರಾಮಚಂದ್ರಯ್ಯರವರೂ ಸಾಧ್ಯವಾದ ಸಹಾಯ ಮಾಡುತಲಿರುವದರಿಂದ ಅವರಿಗೆ ಸಹ ಯೆಲ್ಲರೂ ವಂದನ ಮಾಡತಕ್ಕದ್ದೆಂತಲೂ, ಈ ರೂಪವಾದ ಅನೇಕ ಧರ್ಮಕಾರ್ಯಗಳಲ್ಲಿ ಧನಿಕರಾದವರೆಲ್ಲರು ಪ್ರವೃತ್ತಿಯಂವಹಿಸಿ ಸಹಾಯ ಮಾಡಿ ಕೀರ್ತಿಶಾಲಿಗಳಾಗಬೇಕೆಂತ, ತಾವು ಕೋರುವಂತೆಯೂ ಹೇಳಿ ತಮ್ಮ ಪ್ರಸಂಗವಂ ಪೂರೈಸಿದರಲ್ಲದೆ ಅದೇಭಾವವನ್ನು ಕನ್ನಡದಲ್ಲಿ ಸಹ ಮರಳಿ ಉಪಪಾದಿಸಿದರು. ಅನಂತರ ಸಭಾಸದರಿಗೆ ಪುಷ್ಪ ತಾಂಬೂಲಗಳು ಕೊಡಲ್ಪಟ್ಟಮೇಲೆ ಸಭಾಧ್ಯಕ್ಷರಿಗೆ ವಂದನಪೂರ್ವಕ ಪ್ರಸಕ್ತ ವೈದ್ಯಶಾಲಾ ನಿರ್ಮಾಣೋತ್ಸವವು ಮುಕ್ತಾಯವಾಯಿತು.

### Occasional Notes.
### ನೈಮಿತ್ತಿಕ ವಿಷಯನ್ಯಾಸ

ಲಂಡನ್‌ಯೂನಿವರ್ಸಿಟಿಯ ಮೆಟ್ರಿಕ್ಯುಲೇಷನ್ ಪರೀಕ್ಷೆಯೂ, ಲಾನಲ್ಲಿ ಇಂಟರ್ ಮೀಡಿಯೇಟ್ ಪರೀಕ್ಷೆಯೂ ಬರುವ ಜನವರಿ ತಿಂಗಳಲ್ಲಿ ಮದರಾಸಿನೊಳು ಜರುಗುವವು

ಪಟಿಯಾಲಾ ಮಹಾರಾಜರವರು ತಮ್ಮ ಇಂಗ್ಲಿಷ್ ಮಹಾರಾಣಿಯೊಡನೆ ಬರುವ ಸಂವತ್ಸರದ ಆದಿ ಭಾಗದಲ್ಲಿ ಇಂಗ್ಲಾಂಡಿಗೆ ಹೊರಡುವರೆಂಬದಾಗಿ ಒಂದು ಇಂಗ್ಲಿಷ್ ಪತ್ರಿಕಾ ಮೂಲಕ ತಿಳಿಯಬರುತಿದೆ.

ವಾಯವ್ಯದೇಶಗಳ ಹೈಕೋರ್ಟ್ ಜಡ್ಜಿಗಳಲ್ಲೊಬ್ಬರಾದ ಮ|| ಜಸ್ಟಿಸ್ ಮಹಮೂದ್‌ಯವರು ತಮ್ಮ ಕೆಲಸದಿಂದ ನಿವೃತ್ತರಾಗುವಾಗ ಸದರೀ ಅಧಿಕಾರವು ಇಂಡ್ಯದೇಶೀಯರಿಗೇ ಕೊಡಲ್ಪಡತಕ್ಕದ್ದೆಂದು ಈಚೆಗೆ ಖಂಡಿತವಾಗಿ ನಿರ್ಧರಿಸಲ್ಪಟ್ಟಿತು

ನೀಲಗಿರಿ ರೆಯಿಲ್ ಮಾರ್ಗದಲ್ಲಿ ಕಾರ್‌ಮಡಿ ಯೆಂಬ ಪ್ರದೇಶಕ್ಕೆ ಸಮೀಪದೊಳು ಆಚೇವಾರದಲ್ಲಿ ಸಂಭವಿಸಿದ ಅಪಾಯದ ದೆಸೆಯಿಂದ ಮದರಾಸ್ ರೆಯಿಲ್ವೇ ಕಂಪೆನಿಯವರಿಗೆ ೨೫,೦೦೦ ರೂಪಾಯಿಗಳ ಕಿಮ್ಮತ್ ಗಾಡಿಗಳು ಮುರಿದು ಹೋಗಿ ನಷ್ಟ ಸಂಭವಿಸಿದಂತೆ ತಿಳಿಯಬರುತಿದೆ.

ಚೆಂಗಲ್ಪಟ್ ಡಿಸ್ಟ್ರಿಕ್ಟ್ ಕಾಯಂ ಕಲೆಕ್ಟರಾದ ಮ|| ಥಾಂಸನ್‌ಯವರು, ಫರ್ಲೋ ರಜಾ ಪೂರೈಸಿಕೊಂಡು ಗತವಾರದಲ್ಲಿ ವಾಪಸ್ ಬಂದು ತಮ್ಮ ಕೆಲಸದಚಾರ್ಜನ್ನು ತೆಗದುಕೊಂಡದರಿಂದ ಮ|| ಕ್ಯಾಸಲ್‌ಯೆಂಬವರು ನೌತ್ ಆರ್ಕಾಟ್ ಕಲೆಕ್ಟರಾಗಿ ಆಕ್ಟಿಂಗ್ ತರೀಕ್ ನಿಯಮಿಸಲ್ಪಟ್ಟು ಅಲ್ಲಿಗೆ ಹೊರಟುಹೋದರೆಂದು ತಿಳಿಯಬರುತಿದೆ.

ಮುಂಬೈ ಹೈಕೋರ್ಟ್ ಜಡ್ಜಿಯರಾಗಿ ನಿಯಮಿಸಲ್ಪಟ್ಟ ಮ|| ಜಸ್ಟಿಸ್‌ರಾನಡೆಯವರು ಪುನಾ ಪಟ್ಟಣದಿಂದ ಹೊರಡುವದಕ್ಕೆ ಪೂರ್ವಭಾವಿಯಾಗಿ. ೨೨,೦೦೦ ರೂಪಾಯಿಗಳ ತನಕ ಸಾಧುಜನ ಯಕಗಳಾದ ಮತ್ತು ಧರ್ಮ ಸಂಬಂಧಗಳಾದ ಆಯಾ ಸ್ಥಾಪನೆಗಳಿಗೆ ಕೊಟ್ಟರೆಂತಲೂ ಮುಂದೆಯೂ ತಾವು ಸಹಾಯ ಮಾಡುವಂತೆ ವಾಗ್ದಾನ ಮಾಡಿದರೆಂತಲೂ ಕೇಳುತ್ತೇವೆ.

ನೆಲ್ಲೂರಿಂದ ಈಚೆಗ ಬಂದ ವೃತ್ತಾಂತದಿಂದ, ವೆಂಕಟಗಿರಿ ಮೊದಲು ಗೂಡೂರ್ ತನಕ ಹಾಕಲ್ಪಟ್ಟಿರುವ ರೆಯಿಲ್ ರಸ್ತೆಯು ಒಡೆದುಹೋದದ್ದರಿಂದಅದರ ಕಾಮಗಾರಿಯು ಪ್ರಯೋಗ ಈಗ ಪೂರೈಸುತ ಬಂದಂತೆಯೂ, ಈ ತಿಂಗಳ ೨೫ ನೇ ತಾರೀಖಿನ ಸುಮಾರಿನಲ್ಲಿ ಪ್ರಯಾಣಸ್ಥರಗಾಡಿಗಳು ಬಿಡಲ್ಪಡುವವೆಂತಲೂ, ಬರುವ ತಿಂಗಳ ಮೊದಲನೇ ತಾರೀಖಿನಲ್ಲಿ ನೆಲ್ಲೂರಿಗೆ ಗಾಡಿಗಳು ನೆಟ್ಟಗೆಬಿಡಲ್ಪಡುವವೆಂವಲ ತಿಳಿಯಬರುತಿದೆ.

ತುರ್ಕೀ ರಾಜ್ಯಕ್ಕೆ ಪ್ರಧಾನನಗರವಾದ ಕಾನ್‌ಸ್ಟಾಂಟನೋಪಿಲ್ ಪಟ್ಟಣದಲ್ಲಿದ್ದ ಬ್ರಿಟಿಷ್‌ರಾಯಭಾರಿಯವರು ಗತ ವಾರದಲ್ಲಿ ಕಾಲಗತಿಯನ್ನೈದಿದ್ದರಿಂದ ಈಗ ಖಾಲೀಯಾಗಿರುವ ಸದರೀ ಕೆಲಸವು ಈಜಿಪ್ಟ್ ರಾಜ್ಯದಲ್ಲಿರುವ ಲಾರ್ಡ್ ಕ್ರೋಮರಿಯವರಿಗೆ ಬಹುಶಃ ಲಭಿಸಬಹುದೆಂತಲೂ, ಅದನ್ನವರು ಅಂಗೀಕರಿಸುವ ಪಕ್ಷಕ್ಕೆ ಸರ್ ಜೆರಾರ್ಡ್ ಪೋರ್ಟಲ್ ಎಂಬವರು ಈಜಿಪ್ಟಿಗೆ ಕಳುಹಿಸಲ್ಪಡುವರೆಂತಲೂ ಅಧಿಕಾರಸ್ಥಾನಗಳಲ್ಲಿಊಹಿಸಲ್ಪಟ್ಟಿದೆ

ಕಲ್ಕತ್ತೆಯಲ್ಲಿ ತತ್ಕಾಲದೊಳು ಸ್ತ್ರೀಯರು ಉಪಾಧ್ಯಾಯಿನಿಯರಾಗಿ ೭೧೮ ಮಂದಿ ಇದ್ದಾರೆಂತಲೂ, ಅವರೆಲ್ಲರೂ ಪುರುಷರಿಗೆ ಸಮಾನವಾಗಿ ವಿಶೇಷ ಜಾಗರೂಕತೆಯೊಡನೆ ತಮ್ಮ ಕೆಲಸಗಳು ನಿರ್ವಹಿಸುತಲಿದ್ದಾರೆಂತಲೂ, ಅಲ್ಲಿನಪತ್ರಿಕೆಯೊಂದು ತಿಳಿಸುತಿದೆ. ಸರ್ಕಾರ್ ಉದ್ಯೋಗಗಳಲ್ಲಿಯೂ, ಗವರ್ನಮೆಂಟಿನ್ಯಾಯವಿಧಾಯಕ ಸಭೆಗಳಲ್ಲಿಯೂ ಹೆಂಗಸರ ಪ್ರವೇಶ ಪ್ರಾಬಲ್ಯವು ವೃದ್ಧಿಯಾಗುವತನಕ ಪುರುಷಕೃತಗಳಾದ ಸುಧಾರಣೆ(?) ತರಣಗಳು ಸಫಲಗಳಾಗಲಾರವು

ಬರ್ಮಾ ರಾಜ್ಯವು ಈಗ ಒಬ್ಬ ಚೀಫ್ ಕಮಿಷನರವರ ಅಧಿಕಾರಕ್ಕೊಳಪಟ್ಟದೆಯಷ್ಟೆ. ಇಲ್ಲಿ ಒಬ್ಬ ಲೆಫ್ಟಿನೆಂಟ್ ಗವರ್ನರನ್ನು ನಿಯಮಿಸಬೇಕೆಂಬ ತಾತ್ಪರ್ಯವು ಇಂಡ್ಯ ಗವರ್ನಮೆಂಟನವರಿಗೆ ಉಂಟಾಗಿದೆಯೆಂತಲೂ, ಆರೀತಿ ಅಧಿಕಾರ ಬದಲಾವಣೆಯಾಗುವ ಪಕ್ಷಕ್ಕೆ ರಜಾ ಪಡೆದು ಸ್ವದೇಶಕ್ಕೆ ಹೋಗಿರುವ ಅಲ್ಲಿನ ಚೀಫ್ ಕಮಿಷನರಾದ ಸರ್ ಅಲೆಗ್ಜಾಂಡರ್ ಮೆಕೆಂಜಿ ಯೆಂಬವರು ಪ್ರಾಯಶಃ ಲೆಫ್ಟಿನೆಂಟ್ ಗವರ್ನರಾಗಿ ನಿಯಮಿಸಲ್ಪಡಬಹುದೆಂತಲೂ ರಂಗೂನ್ ಪಟ್ಟಣದಲ್ಲಿ ಪ್ರವಾದವುಂಟಾಗಿದೆ.

ದಕ್ಷಿಣ ಇಂಡ್ಯ ರೆಯಿಲ್ ಮಾರ್ಗದಲ್ಲಿ, ಕೊಳತ್ತೂರ್ ಮೊದಲು ತಿರುಚನಾಪಳ್ಳಿಯವರಿವಿಗೆ ಅನೇಕ ಕಡೆಗಳೊಳು ರಸ್ತೆಯು ಒಡೆದುಹೋಗಿವೆ ಪ್ರಾಥಃ ಮಜಕೂರ್ ೨೫ ನೇ ತಾರೀಖಿನಲ್ಲಿ ಸೇತುವೆಗಳಮೇಲಿದ್ದ ಟೆಲಿಗ್ರಾಫ್ ತಂತಿಗಳು ನೀರಲ್ಲಿ ಮುಳಗಿಹೋಗಿದ್ದದರಿಂದ ತಂತಿ ವರ್ತಮಾನಗಳು ಹೋಗಿ ಬರುವದಕ್ಕೆ ಸಹ ಅವಕಾಶವಿಲ್ಲದಂತ ತಡೆಯಾಗಿತ್ತು. ಇನ್ನೊಂದುವಾರದ ತನಕ ಗಾಡಿಗಳ ಸಂಚಾರಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಾರೆ ಟಪಾಲಿಗಳು ಅಭ್ಯಂತರವಾಗದೆ ಹೋಗಿ ಬರುವದಕ್ಕೆ ಮಾತ್ರ ಬೇಕಾದ ಏರ್ಪಾಡುಗಳು ನಡೆಸಲ್ಪಟ್ಟಿವೆ, ಎಂಬದಾಗಿ ಮಧುರೆಯಿಂದ ಈ ತಿಂಗಳ ೨೫ನೇ ತಾರೀಖಿನಲ್ಲಿ. ಮದರಾಸ್ ಹಿಂದೂ ಪತ್ರಿಕೆಗೆ ತಂತಿ ವರ್ತಮಾನ ಬಂದಿರುತಿದೆ

ಕಾಲಮಹಿಮೆಯಿಂದ ಸಕಲ ವರ್ಣದವರಿಗೂ ಸ್ವಮತದಲ್ಲಿ ನಂಬಿಕೆಯೂ ವಿಶ್ವಾಸವೂ ತಪ್ಪಿ

ಹೋಗುತ ಬರುತಲಿದೆ. ಇದಕ್ಕೆ ಜನರ ವಿಷಯ ಪರಿಶೋಧಕತಾಪ್ರವೃತ್ತಿಯೆ ಕಾರಣವೆಂಬದಾಗಿ ಅನೇಕರು ತಾತ್ಪರ್ಯಪಡುತ್ತಾರೆ. ಆದರೆ ನಾವು ಜನರ ಬುದ್ಧಿಚಾಂಚಲ್ಯವು ನಿಮಿತ್ತವೆಂದು ಭಾವಿಸುವೆವು. ಯಾವ ಕಾರಣವಾದರೂ ಇರಲಿ, ಮುಖ್ಯವಾಗಿ ಜಾತಿ ಸಾಂಕರ್ಯಕ್ಕೆ ನಾನಾವಿಧವಾಗಿ ಪ್ರಾರಂಭವಾಗಿದೆ. ಈಚೆಗೆ ಲಾಹೋರ್ ಪಟ್ಟಣದಲ್ಲಿರುವ ಮುಸಲ್ಮಾನನೊಬ್ಬನು ತನ್ನ ಮತವಂ ತೊರೆದು ಸಿಕ್ಖಮತವನ್ನವಲಂಬಿಸಿ, ಅಬ್ದುಲ್ಲಾ ಎಂಬ ಮುಸಲ್ಮಾನ್ ಹೆಸರಿಗೆ ಪ್ರತಿಯಾಗಿ ಗುರುಕರಣ ಸಿಂಗ್ ಎಂಬದಾಗಿ ಹೆಸರಿಟ್ಟುಕೊಂಡು ಸಿಕ್ಖಜನರಂತೆ ನಡವಡಿಕೆಯುಳ್ಳವನಾಗಿದಾನೆಂದು ಅಲ್ಲಿನ ಇಂಗ್ಲಿಷ್ ಪತ್ರಿಕೆಯೊಂದರ ಮೂಲಕ ತಿಳಿಯಬರುತಿದೆ. ಹೀಗೆ ಹಿಂದೂಗಳಿಗೆ ಕ್ರಿಶ್ಚಿಯನ್ ಮತದಲ್ಲಿಯೂ, ಕ್ರಿಶ್ಚಿಯನ್ನರಿಗೆ ಮುಸಲ್ಮಾನರ ಮತದಲ್ಲಿಯೂ, ಮುಸಲ್ಮಾನರಿಗೆ ಹಿಂದೂ ಮತದಲ್ಲಿಯೂ ಅಭಿಮಾನ ಹುಟ್ಟಿದರೆ ಮುಂದೆ ಏನು ವಿಪರೀತವಾಗುವದೋ ಎಂದು ಭಾವಿಸಬೇಕಾಗಿರುತಿದೆ.

ಶ್ರೀಮಾನ್ ದಾದಾಬಾಯಿ ನೌರೋಜಿ ಯವರಿಗೆ ಪಾರ್ಲಿಮೆಂಟಿನಲ್ಲಿ ದೊರೆತಿರುವ ಮಹತ್ತರವಾದ ಸ್ಥಾನವನ್ನು ಹಿಂದೆಯೇ ನಾವು ಈ ಪತ್ರಿಕಾ ಮೂಲಕ ಸೂಚಿಸಿದ್ದೇವಷ್ಟೆ. ಡಾಕ್ಟರ್ ಅವರ ಸರಳ ಸ್ವಭಾವ ಮತ್ತು ಅವರ ಕುಟುಂಬಕ್ಕುಂಟಾದ ಖರ್ಚಿಗಾಗಿ ಕಚ್ ಸಂಸ್ಥಾನದ ಮಹಾರಾಜರವರು, ಅವರಿಗೆ ವರ್ಷವೊಂದಕ್ಕೆ ನೂರು ರೂಪಾಯಿಗಳ ಪ್ರಕಾರ ವರ್ಷಾಶನ ಕೊಡುವಂತೆ ನಿಶ್ಚಯಿಸಿದಾರಲ್ಲದೆ ಸದರೀ ಕುಟುಂಬಕ್ಕೆ ಸೇರಿದವರೆಲ್ಲರೂ ತಮ್ಮ ಸಂಸ್ಥಾನದಲ್ಲಿಯೇ ನೆಲೆಸಿರುವ ಪಕ್ಷಕ್ಕೆ ವರ್ಷ ಒಂದಕ್ಕೆ ೨೦೦ ರೂಪಾಯಿಗಳ ಪ್ರಕಾರ ವರ್ಷಾಶನ ಕೊಡುವದಕ್ಕೆ ಒಪ್ಪಿದರೆಂದು ಕೇಳುವದಕ್ಕೆ ನಾವು ಬಹಳ ಸಂತೋಷಿಸುತ್ತೇವೆ. ಇದು ನಾವು ಸಾಮಾನ್ಯ ಕೆಲಸವೆಂದು ಭಾವಿಸಲಾರೆವು. ಮಿ|| ದಾದಾಬಾಯಿ ನೌರೋಜಿಯವರ ಸ್ವದೇಶಾಭಿಮಾನಯುಕ್ತವಾದ ಪರಿಶ್ರಮವು ಎಲ್ಲರಿಂದ ಪುರಸ್ಕರಿಸಲ್ಪಡಬೇಕಾದ್ದಕ್ಕೆ ಉಚಿತವಾದ ಸಮಯವು ಇದಕ್ಕಿಂತಲೂ ಪ್ರತ್ಯೇಕವಾಗಿ ಇರಲಾರದು. ಈ ಸಂದರ್ಭದಲ್ಲಿ ಕಚ್ ಮಹಾರಾಜರವರ ಔದಾರ್ಯವೂ ಪ್ರಜಾನುರಾಗವೂ ವಿಶೇಷವಾಗಿ ಪ್ರಶಂಸಾರ್ಹವಾಗಿರುತಿವೆ.

## LOCAL AND PROVINCIAL NEWS
## ಸ್ಥಳದೇಶ ಮತ್ತು ತಾಲ್ಲೂಕು ಸಮಾಚಾರಗಳು

ರೆಸಿಡೆಂಟರವರು ಕೊಡಗು ಪ್ರಾಂತಕ್ಕೆ ಯಾವಾಗ ದಯಮಾಡುವರೋ ಆ ತಾರೀಖನ್ನು ನಿಷ್ಕರ್ಷೆಯಾಗಿ ತಿಳಿಯಬರಲಿಲ್ಲವು.

ಈಚೆಗೆ ಹೈದರಾಬಾದಿನಲ್ಲಿ ನಡೆದ ಕುದುರೆ ಪಂದ್ಯಗಳಲ್ಲಿ ಶ್ರೀಮನ್ ಮೈಸೂರ್ ಮಹಾರಾಜರವರ ಖಾಸಾ ಕುದುರೆಗಳಿಗೂ ಗೆದ್ದವೆಂದು ತಿಳಿಯಬರುತಿದೆ.

ಬರುವ ತಿಂಗಳ ಗುರುವಾರದಲ್ಲಿ ಲೋಯರ್ ಸೆಕಂಡರಿ ಮತ್ತು ಉಪಾಧ್ಯಾಯರುಗಳ ಪರೀಕ್ಷೆಗಳು ಪ್ರಾರಂಭವಾಗಿ ಸೆಂಟ್ರಲ್ ಕಾಲೇಜ್ ಹಾಲಿನಲ್ಲಿ ನಡೆಯುವವು.

ಗತ ವಾರದೊಳು ಎರಡು ಮೂರು ದಿನಗಳು ಏಕಪ್ರಕಾರವಾಗಿ ಜಡಿ ಹಿಡಿದುಕೊಂಡು ಸೂರ್ಯರಶ್ಮಿ ಇಲ್ಲದೆ ಮಳೆಯೂ ಛಳಿಯೂ ಅಧಿಕವಾಗಿ ದುರ್ಘಟ ಲಕ್ಷಣದಿಂದೊಡಗೂಡಿದ್ದಾಗಿದ್ದವು. ನಿನ್ನೆಯ ಮೊದಲು ಸ್ವಲ್ಪ ಆಕಾಶವು ನಿರ್ಮಲವಾಗಿ ಸೂರ್ಯಬಿಂಬವು ದೃಶ್ಯವಾಗಿದೆ. ಈಗ ಬಿದ್ದಿರುವ ಮಳೆಯು ಸಾಕಾಗಿರುವದರಿಂದ ಇನ್ನು ಅತಿವೃಷ್ಟಿಯಾದರೆ ಅದು ಅನಾವೃಷ್ಟಿ ಫಲವನ್ನುಂಟುಮಾಡದೆ ಹೋಗಲಾರದು.

ಕೋಲಾರ್ ಗೋಲ್ಡ್ ಫೀಲ್ಡ್ಸಿಗೆ ಹೋಗತಕ್ಕವರ ಅನುಕೂಲ್ಯಕ್ಕಾಗಿ ಒಂದು ಛತ್ರ ಕಟ್ಟಲ್ಪಡುವದೆಂತಲೂ ಅದಕ್ಕೆ ಮಿ|| ಹಾಜಿ ಇಸ್ಮಾಯಿಲ್ ಸೇಟರವರು ೨,೦೦೦ ರೂಪಾಯಿಗಳವರೆಗೆ ಧರ್ಮಾರ್ಥ ಕೊಡುವಂತೆ ವಾಗ್ದಾನ ಮಾಡಿದರೆಂತಲೂ ಪ್ರಕಟವಾಗಿದ್ದವಷ್ಟೆ. ಅದೇರೀತಿ ಈಗ ಅವರು ಅದಕ್ಕಾಗಿ ಅಂದಾಜಾಗಿರುವ ೩,೫೦೦ ರೂಪಾಯಿಗಳಲ್ಲಿ ೨,೦೦೦ ರೂಪಾಯಿಗಳನ್ನು ಕೊಟ್ಟಂತೆ ಕೋಲಾರ್ ಡಿಸ್ಟ್ರಿಕ್ಟ್ ಡೆಪ್ಯುಟಿಕಮ್ಮಿಷನರವರು ಗವರ್ನಮೆಂಟಿಗೆ ರಿಪೋರ್ಟ್ ಮಾಡಿರುತ್ತಾರೆ.

ಕಳೆದ ಶುಕ್ರವಾರದ ದಿನ ಮುಂಬೈಯಿಂದ ದೂಸರಬಣ್ಣವುಳ್ಳ ಉತ್ತಮಗಳಾದ ಐದು ಕುದುರೆಗಳು ಶ್ರೀಮನ್ಮಹಾರಾಜರವರಿಗಾಗಿ ಈ ನ್ಗರಕ್ಕೆ ಬಂದು ತಲುಪಿ ಇಲ್ಲಿಂದ ಮೈಸೂರಿಗೆ ರವಾನಿಸಲ್ಪಟ್ಟವು. ಸದರಿ ಅಶ್ವಗಳು ಸಲಕ್ಷಣವಾಗಿಯೂ, ಸುಂದರವಾಗಿಯೂ ವಿಶೇಷ ಕ್ರಮವು ತಡೆಯತಕ್ಕವಾಗಿಯೂ, ಇರುವವೆಂದು ಕೇಳುತ್ತೇವೆ. ಈ ಕುದುರೆಗಳ ಪೈಕಿ ಒಂದು ಹಂಗೇರಿ ರಾಜ್ಯದೊಳು ಅನೇಕ ಪರತುಗಳಲ್ಲಿ ಗೆದ್ದು ವಿಶೇಷ ಲಾಭವು ಸಂಪಾದಿಸಿದ್ದಾಗಿರುತಿದೆ. ಇಂಡ್ಯಾದೇಶದೊಳಲ್ಲಿ ಹೋಗಿ ನೋಡಿದಾಗ್ಯೂ ಇಷ್ಟರ ಸೌಂದರ್ಯವುಳ್ಳ ಅಶ್ವಗಳು ದೊರೆಯುವುದು ಪ್ರಯಾಸವೆಂತಲೂ ಇಂತಾ ಸರ್ವಲಕ್ಷಣ ಸಂಪನ್ನವಾದ ಅಶ್ವ ಸಂಪತ್ತನ್ನು ಅನುಭವಿಸುವ ಪುಣ್ಯ ಮಹಾರಾಜರವರಿಗೆ ಲಭಿಸಿದ್ದಕ್ಕಾಗಿ ಅವರಿಗೆ ಶುಭವಾದನ ಮಾಡಬೇಕೆಂತಲೂ ಮದರಾಸ್ ಮೆಯಿಲ್ ಪತ್ರಿಕೆ ಬರೆದಿರುತ್ತದೆ.

ಕಳೆದ ಆಗಸ್ಟ್ ತಿಂಗಳಲ್ಲಿ ಜರಿಗಿದ ಮೈಸೂರು ರಿವೆನ್ಯು ಸರ್ವಿಸ್ ಪರೀಕ್ಷೆಗೆ ಸೇರಿದ ಸಿವಿಲ್ ಎರಡನೆಯ ಭಾಗದಲ್ಲಿ ತೇರ್ಗಡೆಯಾಗಿರುವವರ ಹೆಸರುಗಳ ಪಟ್ಟಿಯು ಗತಗುರು ವಾರದ ಮೈಸೂರ್ ಗೆಜೆಟಿನಲ್ಲಿ ಪ್ರಚುರಪಡಿಸಲ್ಪಟ್ಟಿರುತಿದೆ. ಅದನ್ನೀ ಪತ್ರಿಕೆಯ ಇಂಗ್ಲಿಷ್ ಭಾಗದಲ್ಲಿ ಮುದ್ರಿಸಿರುತ್ತೇವೆ. ಇದರ ಮೊದಲನೆಯ ತರಗತಿಯೊಳು ೬ ಜನಗಳೂ, ಎರಡನೇ ತರಗತಿಯಲ್ಲಿ ಮೂರು ಮಂದಿಯೂ ತೇರ್ಗಡೆಯಾಗಿದಾರೆಯಲ್ಲದೆ, ಸನ್ ೧೮೯೩ ನೇ ಇಸವಿ ಮೇ ೧೫ ನೇ ಮಕರ್ರಂ ೧೮೯೪—೮, ೪. ೩೦೯—೯೨ ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್ನಾಮೆ ಮೂಲಕ ಪ್ರಚುರಪಡಿಸಲ್ಪಟ್ಟದ್ದ ಮೈಸೂರ್ ಲೋಕಲ್ ಸರ್ವಿಸ್ ಪರೀಕ್ಷೆಗಳ ಕುರಿತ ನಿಬಂಧನೆಗಳ ೭ ನೇ ಪ್ಯಾರಾದ ಕೆಳಗೆ ನಮೂದಾಗಿದ್ದ ಷರಾ ಅನುಸರಿಸಿ ಸಾಕ್ಷ್ಯಗಳ ಕಾನೂನಿನಲ್ಲಿ ಪುನಃ ಪರೀಕ್ಷೆಗೊಳ್ಳ ತೇರ್ಗಡೆಯಾಗಬೇಕೆಂಬ ನಿಯಮದಿಂದ ವಿನಾಯಿಸಲ್ಪಟ್ಟ ೭ ಜನ ಉಮೇದುವಾರರು ೧೮೯೩ ನೇ ಇಸವಿ ಆಗಸ್ಟ್ ತಿಂಗಳಲ್ಲಿ ನಡೆದ ಸಿವಿಲ್ ಪರೀಕ್ಷೆಯ ಇತರ ಗ್ರಂಥಗಳಲ್ಲಿ ತೇರ್ಗಡೆಯಾಗಿರುತ್ತಾರೆ.

ಈ ನಗರದ ಶ್ರೀನಿವಾಸ ಮಂದಿರಕ್ಕೆ ಸೇರಿದ ಅನಾಥರಕ್ಷಕ ಶಾಲೆ ಯೆಂಬ ಬಡ ವಿದ್ಯಾರ್ಥಿ ಪಾಠಶಾಲೆಗೆ ಮಹಾರಾಜಾ ಇಲಾಖೆಯಿಂದ ಮಾಸಿಕವಾಗಿ ೩೦ ರೂಪಾಯಿಗಳನ್ನು ಕೊಡುವಂತೆ ಗವರ್ನಮೆಂಟಿನವರು ಈಚೆಗೆ ಹುಕುಂ ಮಾಡಿದರೆಂದು ಕೇಳುತ್ತೇವೆ. ಇದಲ್ಲದೆ ಸದರೀ ಮಂದಿರದ ಲೈಬ್ರರಿಗೆ ಮ್ಯುನಿಸಿಪಾಲಿಟಿಯವರು ವರುಷಕ್ಕೆ ೩೦ ರೂಪಾಯಿಗಳೂ, ವಿದ್ಯಾಭ್ಯಾಸದ ಇಲಾಖೆಯವರು ೧೦ ರೂಪಾಯಿಗಳೂ ಕೊಡುತಲಿದ್ದಾರೆ. ಇದುವರೆಗೆ ಕೊಡಲ್ಪಡುತಲಿರುವ ಸಹಾಯದ್ರವ್ಯವೆಲ್ಲವು ಒಂದೊಂದು ನಿಮಿತ್ತಕ್ಕೆ ಉದ್ದೇಶದಿಂ ಕೊಡಲ್ಪಡುವಂತೆ ಕಂಡುಬರುತಿವೆಯೇ ಹೊರ್ತು ಮಂದಿರಕಾರ್ಯ ನಿರ್ವಾಹಕ್ಕಾಗಿ ಜರಗಲಿಕ್ಕೆ ಬೇಕಾದ ಆಯತಿಮಾರ್ಗವನ್ನಾರೂ ಕಲ್ಪಿಸಲಿಲ್ಲವು. ಸಕಲರಿಗೂ ಅನ್ನಪ್ರದಾತನಾದ ಶ್ರೀನಿವಾಸನು ತನ್ನ ಸ್ವಾರ್ಥಕ್ಕೆ ಬೇಕಾದ ಜೀವನೋಪಾಯವಂ ಕಲ್ಪಿಸಿಕೊಳ್ಳಲಿಕ್ಕೆ ಇಷ್ಟವಿಲ್ಲದೆಯೋ ಅಥವಾ ಶಕ್ತಿ ಸಾಲದೆಯೋ ಕೇವಲ ಪರಾಧೀನನಾಗಿ ಕಣ್ಗೊಳಿಸುತಲಿರುವದಂ ನೋಡಿ ಬಹಳ ವಿಷಾದಪಡುತ್ತೇವೆ.

## THE MYSORE GAZETTE
## ಮೈಸೂರು ಗೆಜೆಟ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡಲ್ಪಟ್ಟಿರುವ ಇಸ್ತಿಹಾರ್ನಾಮೆಗಳು.

ನಂ|| ೮೦೩೦—ಜಿ. ೪ ೬೭—೯೩— ತಾರೀಖ್ ೧೩ ನೇ ನವಂಬರ್ ೧೮೯೩ — ಸನ್ ೧೮೮೮ ನೇ ಇಸವಿಯ ೬ ನೇ ನಂಬರ್ ರೆಗ್ಯುಲೇಷನ್, ಮೈಸೂರ್ ಲ್ಯಾಂಡ್ ರೆವಿನ್ಯು ಕೋಡ್ ೨೩೬ ನೇ ಸೆಕ್ಷನಿನ ೭ ನೇ ಪ್ಯಾರಾ ಅನುಸರಿಸಿ ಸದರೀ ಕೋಡಿನ ೮ ವ ೯ ನೇ ಅಧ್ಯಾಯಗಳ ನಿಯಮಗಳು, ದೇವನಹಳ್ಳಿ ತಾಲ್ಲೂಕ್ ಕಗ್ಗಲಹಳ್ಳಿ ಜೋಡಿ ಗ್ರಾಮಕ್ಕೆ ವ್ಯಾಪಿಸತಕ್ಕದ್ದೆಂದು ಘನವನ್ನೈದಿದ ಶ್ರೀಮನ್ ಮೈಸೂರ್ ಮಹಾರಾಜಾ ಸರ್ಕಾರದವರು ಹುಕುಂ ಮಾಡಿರುತ್ತಾರೆ.

ನಂ| ೮೨೭೦—೧. ೧೯೪೫ —ತಾರೀಖ್ ೧೫ನೇ ನವಂಬರ್ ೧೮೯೩ —ಮೈಸೂರ್ ಸೀಮೆಯಲ್ಲಿ ಆರ್ಕ್ಯಾಲಾಜಿಕಲ್ ರಿಸರ್ಚಸ್ ಅಂದರೆ ಪ್ರಾಚೀನ ಲಿಪ್ಯನ್ವೇಷಣ ಇಲಾಖಾ ಡೈರೆಕ್ಟರಾದ ಮಿ|| ಎಲ್. ರೈಸ್ ಸಿ. ಐ. ಇ., ಯವರಿಗೆ ಮಾರ್ಚಿ ಜನವರ್ ೧೦ ನೇ ತಾರೀಖ್ ಲಾಗಾಯಿತು ಐದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ.

ನಂ|| ೮೨೦೩—ಜಿ. ೪. ೬೬೬—೯೨—ತಾ| ೧೬ನೇ ನವಂಬರ್, ೧೮೯೩.— ಅಸಿಸ್ಟೆಂಟ್ ಕಮಿಷನರ್ ಮಿ|| ಕೆ. ಎಲ್. ದೊರಸಾಮಿ ಅಯ್ಯರವರು, ೧೮೯೩ ನೇ ಇಸವಿ ಅಕ್ಟೋಬರ್ ೧೧ನೇ ತಾರೀಖಿನ ಅಪರಾಹ್ನದಲ್ಲಿ ಕೋಲಾರ್ ಡಿಸ್ಟ್ರಿಕ್ಟ್ ಟ್ರಜರೀ ಚಾರ್ಜನ್ನು ಆಫೀಸಿಯೇಟಿಂಗ್ ಅಸಿಸ್ಟೆಂಟ್ ಕಮಿಷನರ್ ಮಿ|| ಅಬ್ದುಲ್ ಅಜೀಜ್ ಯವರಿಗೆ ಒಪ್ಪಿಸಲು ಅವರದಂ ತೆಗೆದುಕೊಂಡಿರುತ್ತಾರೆ. ಕೋಲಾರ್ ಜನರಲ್ ಅಸಿಸ್ಟೆಂಟ್ ಕಮಿಷನರ್ ಮಿ ನಾರಾಯಣಯ್ಯಂಗಾರ್ರವರು, ೧೮೯೩ ನೇ ಇಸವಿ ಅಕ್ಟೋಬರ್ ೧೨ ನೇ ತಾರೀಖಿನ ಅಪರಾಹ್ನದಲ್ಲಿ ಕೋಲಾರ್ ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮಿಷನರ್ ಆಫೀಸ್ ಚಾರ್ಜನ್ನು ಮಿ|| ಕೆ. ಎಸ್ ದೊರಸಾಮಿ ಅಯ್ಯರವರಿಗೆ ಒಪ್ಪಿಸಲು ಅವರದಂ ತೆಗೆಕೊಂಡಿರುತ್ತಾರೆ.

ಮೊಕ್ಕಾಂ ನಂ|| ೧೮೩ ತಾ|| ೧೮ ನೇ ನವಂಬರ್, ೧೮೯೩.—ಮಿ|| ಫಿಲಿಪ್ ಫ್ರಾನ್ಸಿಸ್ ಬೌರಿಂಗ್‌ಯವರು ಮೈಸೂರ್ ಸೀಮೆಯಲ್ಲಿ ಪೊಲೀಸ್ ಪ್ರೊಬೇಷನರಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಮೊಕ್ಕಾಂ ನಂ|| ೭೦೫—ತಾ| ೧೯ ನೇ ನವಂಬರ್, ೧೮೯೩ —ಆರ್. ಮಾಧವರಾಯರ ಮೇಲೆ ಹೊರೆಸಲ್ಪಟ್ಟಿರುವ ಕೆಲವು ಚಾರ್ಜ್‌ಗಳ ವಿಚಾರಣೆ ನಿಮಿತ್ತ ಅವರು ಸಸ್ಪೆಂಡ್ ಮಾಡಲ್ಪಟ್ಟಿರುತ್ತಾರಾಗಿ ಅವರಿಗೆ ಬದಲಾಗಿ ಹಾಸನದ ಡೆಪ್ಯುಟಿ ಕಮಿಷನರವರ ಆಫೀಸ್ ಜ್ಯುಡಿಷಿಯಲ್ ಹೆಡ್ ಮುನಿಷಿ ಎಸ್. ಕೃಷ್ಣಪ್ಪನವರು ರೆಯಿಲ್ವೆ ಆಕ್ಟನ್ನನುಸರಿಸಿ ನಡೆಯುವ ಕೇಸುಗಳ ವಿಚಾರಣೆಗಾಗಿ ಸೆಕೆಂಡ್‌ಕ್ಲ್ಯಾಸ್ ಮ್ಯಾಜಿಸ್ಟ್ರೇಟಿನ ಅಧಿಕಾರಗಳೊಡನೆ ಅರಸೀಕೆರೆ ತಾಲ್ಲೂಕ್ ಅಮಲ್ದಾರ್ ವ ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಹಂಗಾಮಿ ತರೀಕ ನಿಯಮಿಸಲ್ಪಟ್ಟಿರುತ್ತಾರೆ.

ಮೊಕ್ಕಾಂ ನಂ|| ೭೦೮ ತಾರೀಖ್ ೨೦ ನೇ ನವಂಬರ್, ೧೮೯೩ —ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೩೭ ನೇ ಆರ್ಟಿಕಲ್ ಅನುಸರಿಸಿ ಮೈಸೂರ್ ಮ್ಯುನಿಸಿಪಲ್ ಪ್ರೆಸಿಡೆಂಟ್ ಮಿ|| ಎ. ಕೃಷ್ಣಸ್ವಾಮಿ ಮೊದಲಿಯಾರ್ರವರಿಗೆ ೧೮೯೩ ನೇ ಇಸವಿ ನವಂಬರ್ ೨೧ ನೇ ಮಕರ್ರಂ ಲಾಗಾಯಿತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು ೧೦ ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತಿದೆ.

ನಂ|| ೮೩೮೫—ಜಿ. ೪. ೩—೯೩ — ಸಬ್ ಅಸಿಸ್ಟೆಂಟ್ ಸರ್ಜನ್ ಜೆ ಎ. ಕೋಹಿಲೊ, ಎಲ್. ಎಂ. ಎಸ್., ಯವರು, ತಿಪಟೂರ್ ಲೋಕಲ್ ಫಂಡ್ ಡಿಸ್ಪೆನ್ಸರಿಯಿಂದ ಬೆಂಗಳೂರ್ ಗವರ್ನಮೆಂಟ್ ಸಿಟಿ ಹಾಸ್ಪತ್ರೆಗೆ ವರ್ಗಮಾಡಲ್ಪಟ್ಟಿರುವದರಿಂದ ಅವರು ಜಾಗ್ರತೆಯಾದ ಕೂಡಲೆ ಹೋಗಿ ಹಾಜರಾಗತಕ್ಕದ್ದು. ಸಬ್ ಅಸಿಸ್ಟೆಂಟ್ ಸರ್ಜನ್ ವಿ. ಅಬ್ಬಾಯಿ ನಾಯುಡರವರು ಬೆಂಗಳೂರ್, ಲ್ಯುನಾಟಿಕ್ ಅಸೈಲಂ ಮತ್ತು ವ್ಯಾಕ್ಸಿನ್ ಇನ್ಸ್ಟಿಟ್ಯೂಟ್ ಅಂದರೆ, ಹುಚ್ಚರ ಆಸ್ಪತ್ರೆಯಲ್ಲಿಯೂ ಸ್ಫೋಟಕ ಶಾಲೆಯಲ್ಲಿಯೂ ಕೆಲಸ ನೋಡುತಲಿರತಕ್ಕದ್ದು.

ನಂ|| ೮೩೮೩—ಜಿ. ೪. ೯೭—೯೩.— ಮಿಯರ್ ಸೈಯದ್ ಅಮೀರ್ ಹಸೇನ್ ಯವರು, ೧೮೯೩ ನೇ ಇಸವಿ ೩೦ ನೇ ತಾರೀಖಿನ ಪೂರ್ವಾಹ್ಣದಲ್ಲಿ ಚಿತ್ರದುರ್ಗ್ ಡಿಸ್ಟ್ರಿಕ್ಟ್ ಪೊಲೀಸ್ ಆಫೀಸ್ ಚಾರ್ಜನ್ನು ಎಕ್ಸ್ಟ್ರಾ ಅಸಿಸ್ಟೆಂಟ್ ಕಮಿಷನರ್ ಮಿ|| ಬಿ. ರಾಮಸ್ವಾಮಯ್ಯಂಗಾರ್ರವರಿಗೊಪ್ಪಿಸಲು ಅವರದಂ ತೆಗೆದುಕೊಂಡಿರುತ್ತಾರೆ. ಮಿ|| ರಾಮಸ್ವಾಮಯ್ಯಂಗಾರ್ರವರು ಸನ್ ೧೮೯೩ ನೇ ಇಸವಿ ನವಂಬರ್ ೬ ನೇ ತಾರೀಖಿನ ಪೂರ್ವಾಹ್ಣದಲ್ಲಿ ತಮ್ಮ ಕೆಲಸದ ಚಾರ್ಜನ್ನು ಮಿ|| ಡಿ. ಎ. ಬಾಬಾ ಡರ್ ಯವರಿಗೊಪ್ಪಿಸಿರುತ್ತಾರೆ.

ನಂ| ೮೩೪೮—ಜಿ. ೪. ೯೭—೯೩ — ಸೆಂಟ್ರಲ್ ಜೆಯಿಲ್ ಸೂಪರಿಂಟೆಂಡೆಂಟರಾದ ಡಾಕ್ಟರ್ ಬೆನ್ಸನ್‌ಯವರು ಸೆಂಟ್ರಲ್ ಜೆಯಿಲ್ ಸೂಪರಿಂಟೆಂಡೆಂಟ್ ಆಫೀಸ್ ಚಾರ್ಜನ್ನು ೧೮೯೩ ನೇ ಇಸವಿ ಅಕ್ಟೋಬರ್ ೩೦ ನೇ ತಾರೀಖಿನ ಅಪರಾಹ್ನದಲ್ಲಿ ಪೊಲೀಸ್ ಸೂಪರಿಂಟೆಂಡೆಂಟ್ ಮಿ|| ಕೆ. ಪಿ. ಪುಟ್ಟಣ್ಣಶೆಟ್ಟರವರಿಗೊಪ್ಪಿಸಲು, ಅವರು ಅದೇ ತಿಂಗಳ ೩೧ ನೇ ತಾರೀಖಿನ ಅಪರಾಹ್ನದಲ್ಲಿ ಸದರೀ ಜೆಯಿಲ್ ಚಾರ್ಜನ್ನು ಮಿ|| ಸೈಯದ್ ಅಮೀರ್ ಹಸೇನ್ ಯವರಿಗೊಪ್ಪಿಸಿರುತ್ತಾರೆ.

ನಂ|| ೮೨೯೬—L. ೪ ೧೩೮—೯೨—ತಾರೀಖ್ ೨೦ ನೇ ನವಂಬರ್, ೧೮೯೩.—ಮೃತಪಟ್ಟ ಮಿ|| ಮುದ್ದಪ್ಪ ಎಂಬವರಿಗೆ ಬದಲಾಗಿ ಮಿ|| ರುದ್ರಪ್ಪನೆಂಬವರು ಹೆಂಗೇರಿ ಮ್ಯುನಿಸಿಪಾಲಿಟಿಯಲ್ಲಿ ಒಬ್ಬ ಮೆಂಬರಾಗಿ ನಿಯಮಿಸಲ್ಪಟ್ಟಿರುತ್ತಾರೆ.

## ಸರ್ವಜನರಿಗೆ ವಿಶೇಷ ಭಯಂಕರವಾಗಿ ಬರತಕ್ಕ ಜಾಡ್ಯಗಳ ವಿವರಣೆ.

ಗರ್ಭದಲ್ಲಿ ಅಲ್ಪವಾತ ಹಾಡುವವರುಗಳು ಕಾಣಿರದ ಕಾಲದಲ್ಲಿ, ಅವುಗಳಿಗೆ ಚಿಕಿತ್ಸೆ ಮಾಡದೆ ಅಜಾಗ್ರತೆ ಮಾಡಿದ ಪಕ್ಷದಲ್ಲಿ, ಈ ಕೆಳಗೆ ವಿವರಣ ಮಾಡಿದ ದುರ್ಗುಣಗಳು ದೇಹ ಪರ್ಯಂತವೂ ಉಂಟಾಗುತ್ತವೆ. ಗರ್ಭದಲ್ಲಿರುವ ಯಕೃತ್ತಿನಲ್ಲಿಯು ಬಸಿ, ನರಗಳ ನಲ್ಲಿಯು ಗರ್ಭಮಾರ್ಗದಲ್ಲಿ ಒಂದು ವಿಧವಾದ ಗ್ರಂಥಿ ಉತ್ಪತ್ತಿಯಾಗಿ ಆ ಕಾರಣದಿಂದ ಜಾಡ್ಯಗ್ರಸ್ಥನಿಗೆ ಮರಣವು ಸಂಭವಿಸಿ ಅವನು ಈ ರೋಗಗಳಿಂದ ವಿಶೇಷ ಕಷ್ಟ ಅನುಭವಿಸುವನು. ಈ ಜಾಡ್ಯವನ್ನು, ಜನರು ನೆಟ್ಟಗೆ ಕಾಣದಂತೆ ಅಲ್ಪವಾದ ದೇಹರೋಗಗಳೆಂತಲೇ ನೆನಸುವರು ; ಇದು ಬರುವ ಜನರು ತಮ್ಮಲ್ಲಿ ತಾವು ತಮಗೆ ಈ ಜಾಡ್ಯಗಳು ಇಂತಾದೆಂಬುವ ಕಾರಣಗಳನ್ನು ನೆನಸಬೇಕು —ನನಗೆ ಭೋಜನಾನಂತರ, ಉದರದ ವಿನಾಯಿಸಿದರೆ ಯಿಲ್ಲದ ಸಂಕಟವಾದ ಶ್ವಾಸ ಇತ್ಯಾದಿಗಳು ಉಂಟೆ? ನನ್ನ ಕಣ್ಣುಗಳಲ್ಲಿ ಅರಿಶಿನ ಬಣ್ಣ ಉಂಟೆ? ನನ್ನ ಬಾಯಿಯಲ್ಲಿರುವ ದಂತಗಳ ಸುತ್ತು ಸಿಂಬಳದ ಹಾಗೆ ಪಾಚಿ, ಅಂಟು, ಮತ್ತು ಬಾಯಿಯಲ್ಲಿ ದುರ್ಗಂಧವಾದ ವಾಸನೆ ಅಥವಾ ನಿಸ್ಸಾರವೆ? ನಾಲಿಗೆಯಲ್ಲಿ ದಪ್ಪವಿದೆ? ಪಕ್ಕೆಗಳಲ್ಲಿ, ಬೆನ್ನಿನಲ್ಲಿ ನೋವೆ? ಬಿಗುವಿದ್ದವೆ? ತಲೆಯಲ್ಲಿ ತಿರುಗುವಿಕೆ ಅಥವಾ ಒಂದುವಿಧವಾದ ಜೋಮು, ತಟಾರಂತ ಏಳುವ ಕಾಲದಲ್ಲಿ ಉಂಟೆ? ಸೋರುವಿಕೆ ಯಕೃತ್ತುಗಳಲ್ಲಿ ಅಲ್ಪವಾಗಿ ವಿಶೇಷಕಾಲವು ಹರದ ಇದ್ದಕಾರಣದಿಂದ ಅವುಗಳು ವಿಶೇಷವಾದ ಬಣ್ಣವುಳ್ಳದ್ದೆ? ಭೋಜನವು ಭುಜಿಸಿದ ಕಾಲದಲ್ಲಿ ಅವುಗಳು ಶೀಘ್ರವಾಗಿ ಉಕ್ಕಿ ಗರ್ಭದಲ್ಲಿ ಅಜೀರ್ಣವಾದ ಬಿಸಿಯುಳ್ಳವೂ ಹೃದಯದಲ್ಲಿ ವಿಶೇಷವಾದ ಆಯಾಸವೂ ಉಂಟೆ? ಇತ್ಯಾದಿ ರೋಗಗಳೆಲ್ಲ ಪರೀಕ್ಷಾರ್ಥ ಕಾಣಿಸುವು ; ಆದರೆ ಇವುಗಳು, ಮೇಲೆ ವಿವರಣ ಮಾಡಿದ ಪ್ರಕಾರವು ದಿನೇ ದಿನೇ ವೃದ್ಧಿಯಾಗಿ ವಿಶೇಷವಾದ ಅಪಾಯಕ್ಕೆ ಗುರಿಯಾಗುತವೆ. ಇವುಗಳು ವಿಶೇಷಕಾಲವು ಚಿಕಿತ್ಸೆ ಮಾಡದೆ ಬಿಟ್ಟ ಪಕ್ಷಕ್ಕೆ ಒಂದುವಿಧವಾದ ಗಳ್ಳೆಂಬ ಕ್ಷಯದ ಕೆಮ್ಮಿಗೆ ಪ್ರಾರಂಭವಾಗುತಿವೆ. ತದನಂತರವೂ ಶರೀರದ ಚರ್ಮದಲ್ಲಿ ಅತ್ಯಂತವು ಕೆಂಪು ಬಣ್ಣವೂ ಉತ್ಪತ್ತಿಯಾಗಿ, ಪಾದಗಳಲ್ಲಿ ಕೈಗಳಲ್ಲಿ, ಶೀತಳವಾದ ಬೆವರು ಬಂದು ವ್ಯಸನಿಸಿ, ತದನಂತರ ಮೂತ್ರಪಿಂಡಗಳಲ್ಲಿ ಜಾಡ್ಯವಿಶೇಷಿಸಿ, ವಾತದ ಬೇನೆಗಳು ಕಾಣಿಸಿ, ಅವುಗಳಿಗೆ ಎಷ್ಟು ಚಿಕಿತ್ಸೆ ಮಾಡಿದರೂ ಇಂತಹ ಗದೆ ಕೇವಲ ತೊಂದರೆ ಉಂಟುಮಾಡುತವೆ. ಈ ಜಾಡ್ಯದ ಕಾರಣಗಳೇನೆಂದರೆ,—ಮಂದವು, ಅಜೀರ್ಣಗಳು, ಇವುಗಳಿಗೆ, ಕೇವಲ ಉತ್ತಮವಾದ ಔಷಧ ಚಿಕಿತ್ಸೆ, ಈ ಜಾಡ್ಯಗಳ ಆರಂಭದ ಕಾಲದಲ್ಲಿ ಶೀಘ್ರ ಮಾಡಿದ ಪಕ್ಷದಲ್ಲಿ ಈ ಜಾಡ್ಯಗಳು, ದೇಹದಲ್ಲಿ ಬೆಳೆಯದಂತೆ ಕೇವಲ ವೃದ್ಧಾಪ್ಯ ವಯಸ್ಸಿನ ವರೆಗೆ, ಜಾಡ್ಯದ ದುರ್ಗುಣಗಳಂ ನಿರ್ಮೂಲವಾಗಿ ಶರೀರಕ್ಕೆ ಅಂಗಗಳಿಗೆ ಬಲವು ತಂಪು ಮಾಡತಕ್ಕ ಔಷಧವು ಶಾಯಿಗೆಲು ಕಷಾಯವು. ಈ ಕಷಾಯವು ಔಷಧಗಳ ಎಲೆ ಮೂಲಿಕೆಗಳಿಂದ ಮಾಡಿದ ಕಷಾಯವು. ಈ ಕಷಾಯವು ಸರ್ವರಾಜ್ಯಗಳಲ್ಲಿ ಕೆಮಿಸ್ಟ್, ಆಸ್ಪತ್ರೆ, ಬಜಾರುಗಳಲ್ಲಿ ಕ್ರಯಕ್ಕೆ ಸಿಕ್ಕುತವೆ. ಈ ಕಷಾಯವನ್ನು ಪಾನಮಾಡುವದರಿಂದ ಜಾಡ್ಯದ ಅಸ್ತಿಭಾರಗಳು ಯಾವತ್ತು ನಿರ್ಮೂಲವಾಗಿ, ಸಂದುಸಂದುಗಳಲ್ಲಿರತಕ್ಕ ಶರೀರರೋಗಗಳು ಯಾವತ್ತು ನಿರ್ಮಲವಾಗಿ ಶರೀರಕ್ಕೆ ಬಲವೂ ತೇಜಸ್ಸೂ ಕೊಡುತಿವೆ.

A. A.

# ಮೈಸೂರು ಸಂಸ್ಥಾನದ ದಿವಾನರವರ ಉಪನ್ಯಾಸ.

(ಕಳೆದ ವಾರದ ಶೇಷ)

ವಿಶೇಷವಾಗಿ ಕಬ್ಬು ಬೆಳೆಯುವ ಪ್ರದೇಶಗಳಿಗೆ ಮಧ್ಯಸ್ಥ್ಯವಾಗಿರುವ ಗೋಣಿಬೀಡನೂರಲ್ಲಿ ಮೆಸ್ಸರಸ್ ಆರಬತ್‌ನಾಟ್ ಅಂಡ್ ಕಂಪೆನಿಯವರು ಕಟ್ಟುತ್ತಲಿರುವ ದೊಡ್ಡ ಸಕ್ಕರೆ ಕಾರಖಾನೆಯು ಬೇಸಾಯದ ಗನ್ನೆ ಸಾಗುವಳಿಯು ವಿಸ್ತಾರವಾಗಿ ನಡೆಯಲು ಪ್ರೋತ್ಸಾಹ ವುಂಟಾಗುತ್ತೆ. ಚಿಕ್ಕಬಳ್ಳಾಪುರದಲ್ಲಿರುವ ನರಸಿಂಹಯ್ಯನವರ ಕಬ್ಬಿಣದ ಕಾರಖಾನೆಯಲ್ಲಿ ಕಬ್ಬಿನ ಹಾಲು ತೆಗೆಯತಕ್ಕ ಕಬ್ಬಿಣದ ರೋಲರ್ ಗಾಣಗಳು ತಯಾರಾಗುತ್ತೆ. ಈ ತರಹೇರ ಗಾಣಗಳಿಗೆ ಗಿರಾಕಿಯು ಹೆಚ್ಚುತ್ತಲಿವೆ. ಈ ಕಾರಖಾನೆಯಲ್ಲಿ ಸಹಾ ಗಾಣಗಳು ಮುರಿದುಹೋದಲ್ಲಿ ಅವುಗಳನ್ನು ದುರಸ್ತು ಮಾಡುವತಕ್ಕ ಸಾಧನಗಳಿರುವದರಿಂದ ವಿಶೇಷ ಪ್ರಯೋಜನಕಾರಿಯಾಗಿರುತ್ತೆ.

ಮುಜರಾಯಿ:—ಈ ಇಲಾಖೆಯ ಮೇಲ್ವಿಚಾರಣೆಗೆ ಪ್ರತ್ಯೇಕವಾಗಿ ಒಬ್ಬ ಸೂಪರಿಂಟೆಂಡೆಂಟರನ್ನು ನೇಮಿಸಿ ಇರುವದರಿಂದ ಪ್ರಯೋಜನಕರವಾಗಿರುತ್ತೆ. ಛತ್ರ ದೇವಾಲಯಗಳಿಗಾಗಿ ಸರಕಾರದಿಂದ ಕೊಡುವ ಹಣವು ದುರುಪಯೋಗವಾಗದೆ ಸದ್ವಿನಿಯೋಗವಾಗುವಂತೆ ಮಾಡಿ ಈಗ ಇರತಕ್ಕ ಅವ್ಯವಸ್ಥೆಗಳನ್ನು ಕ್ರಮಪಡಿಸುವ ಬಗ್ಯೆ ಯೋಜನೆಗಳನ್ನು ಕ್ರಮೇಣ ಜಾಗರೂಕತೆಯಿಂದ ಜಾರಿಯಲ್ಲಿ ತರುತ್ತಲಿದೆ. ಮುಜರಾಯಿ ಏರ್ಪಾಟುಗಳು ಸಾರ್ಥಕವಾಗಲು ಧರ್ಮಕಾರ್ಯಗಳಲ್ಲಿ ಆಸಕ್ತರಾದ ಸ್ಥಳೀಯ ಜನಗಳ ಸಹಾಯವೂ ಸಹಕಾರವೂ ಆವಶ್ಯಕವಾಗಿರುವದರಿಂದ ದೊಡ್ಡ ಸ್ಥಳಗಳಲ್ಲೆಲ್ಲಾ ಸ್ಥಳೀಯ ಕಮಿಟಿಗಳನ್ನು ಏರ್ಪಡಿಸಿರುತ್ತೆ. ದೇವಸ್ಥಾನಗಳಿಗೂ, ಛತ್ರಗಳಿಗೂ, ಮಠಗಳಿಗೂ ಸರಕಾರದಿಂದ ನಗದು ಸಾಲೀಯಾನಾ ೪ ಲಕ್ಷ ರೂಪಾಯಿಗಿಂತ ಜಾಸ್ತಿಯಾಗಿ ಸಲ್ಲುತ್ತೆ. ಇವಲ್ಲದೆ ಜಮೀನು ಇನಾಂಗಳ ರೂಪವಾಗಿ ಸುಮಾರು ೧೦ ಲಕ್ಷ ರೂಪಾಯಿಗಳ ವರೆಗೆ ಆದಾಯವಿರುತ್ತೆ.

ವಿದ್ಯಾಭಿವೃದ್ಧಿಗೂ ಜನೋಪಕಾರಕ್ಕೂ ಮತ್ತು ಧರ್ಮ ಸಹಾಯಕ್ಕೂ ಹೇತುವಾದ ಕೆಲಸಗಳನ್ನು ಸ್ಥಾಪನೆಮಾಡಿ ಕಾಪಾಡುವದನ್ನು ಪ್ರೋತ್ಸಾಹ ಪಡಿಸುವದಕ್ಕೋಸ್ಕರ, ಈ ಬಗ್ಯೆ ಧರ್ಮಿಷ್ಠರು ಕೊಡುವ ಹಣವನ್ನು ಸಾಲೀಯಾನಾ ಶೇಕಡೆ ೫ ರೂಪಾಯಿಗೆ ವಿನಾ ಅನುಕೂಲವಾದ ಬಡ್ಡಿ ಕೊಡುವಂತೆ ಸರಕಾರ ಖಜಾನೆಗಳಲ್ಲಿಟ್ಟುಕೊಳ್ಳುವ ಯೋಜನೆಯನ್ನು ಮಾಡಿರುತ್ತೆ. ಈ ಪ್ರಕಾರ ಠೇವಣಿ ಇಟ್ಟಿರುವ ಮೊಬಲಗು ಈ ಕೆಳಗೆ ನಮೂದಿಸಿರುವಂತೆ ೨,೪೬,೦೦೦ ರೂಪಾಯಿ ಆಗಿರುತ್ತೆ:—

೧ ರಾಯಬಹದ್ದೂರ್ ಧರ್ಮರತ್ನಾಕರ ನಾರಾಯಣಸ್ವಾಮಿ ಮೊದಲಿಯಾರ್ರು ಅವರು ಸ್ಥಾಪಿಸಿರುವ ವಿದ್ಯಾಶಾಲೆಗಳ ಪರಿಪಾಲನೆಗಾಗಿ ೬೦,೦೦೦ ಇತರೆ ಧರ್ಮಕಾರ್ಯಗಳಿಗಾಗಿ, ೭೫,೦೦೦ ಜಾಸ್ತಿ ೧,೩೫,೦೦೦,

೨. ಮೈಸೂರು ದೇವರಾಜ ಬಹದ್ದೂರ್ರವರು ಮೈಸೂರಲ್ಲಿ ವಿದ್ಯಾಭಿವೃದ್ಧಿ ಕೆಲಸಗಳಿಗಾಗಿ ೫೦,೦೦೦.

೩. ಮೈಸೂರು ಗುಂಡಾಚಾರಿ ಮರಿಮಲ್ಲಪ್ಪನವರು ಮರಿಮಲ್ಲಪ್ಪನವರ ಸ್ಕೂಲ್ ಪಾಲನೆ ಬಗ್ಯೆ ಕೆಲವು ಬಡ ವಿದ್ಯಾರ್ಥಿಗಳ ಸಹಾಯಕ್ಕಾಗಿಯೂ ಸಹ ೪೦,೦೦೦.

೪. ಚಿಂತಾಮಣಿ ತಾಲ್ಲೂಕು ಕೋನೆದಲ್ಲಿ ಪಟೇಲ್ ಪೈರಪ್ಪ ಇವರ ಸಹೋದರರಾದ ರಾಮಣ್ಣ ಈರಪ್ಪ ಸಹ ಚಿಂತಾಮಣಿ-ಶಿಡ್ಲಘಟ್ಟದ ರಸ್ತೆಯಲ್ಲಿ ತಾವು ಕಟ್ಟಿಸಿರುವ ಛತ್ರದ ಪರಿಪಾಲನೆಬಗ್ಗೆ ಮತ್ತು ಪ್ರಯಾಣಿಕರಿಗೆ ಅನ್ನ ದಾನಕ್ಕೆ ಬಗ್ಯೆ ಸಹ ೧೫,೦೦೦

೫. ಬೆಂಗಳೂರಲ್ಲಿರುವ ಪೋಲೀಸಲ್ಲಿ ಸುಬ್ಬಯ್ಯಶೆಟ್ಟಿ ಬೆಂಗಳೂರಲ್ಲಿ ಸಿಟಿ ರೈಲ್ವೆಸ್ಟೇಷನ್ ಬಳಿ ಅವರು ಕಟ್ಟಿಸಿರುವ ಛತ್ರವನ್ನು ಕಾಪಾಡುವ ಬಗ್ಗೆ ಮತ್ತು ಯೋಗ್ಯರಾದ ಉತ್ತಮ ಜಾತಿ ವಿದ್ಯಾರ್ಥಿಗಳಿಗೆ ಅನ್ನ ದಾನಕ್ಕೆ ಬಗ್ಗೆ ೩೨,೦೦೦.

೬. ಮೈಸೂರಲ್ಲಿರುವ ನಂಜರಾಜ ಬಹದೂರ್ರವರು ಮೈಸೂರಲ್ಲಿರುವ ನಂಜರಾಜ ಬಹದೂರ್ರವರ ಛತ್ರದ ಪಾಲನೆಗೋಸ್ಕರ ೧೦,೦೦೦

೭. ಪೆನ್ಷನ್ ಸಿವಿಲ್ ಬಕ್ಷಿ ವೆಂಕಟಾಚಾರ್ಯರು ಶ್ರೀರಂಗಪಟ್ಟಣದ ತಾಲ್ಲೂಕ್ ಮೇಲುಕೋಟೆಯಲ್ಲಿ ಯೋಗ್ಯರಾದ ಬಡವರಾದ ಸಂಸ್ಕೃತ ವಿದ್ಯಾರ್ಥಿಗಳಿಗೂ ಆಗಂತುಕ ಪ್ರಯಾಣಿಕರಿಗೂ ಅನ್ನ ದಾನಕ್ಕೆ ಬಗ್ಗೆ ೩,೦೦೦.

ವಿದ್ಯಾಭ್ಯಾಸ.—೧೮೯೩ ನೇ ಇಸವಿ ಜೂನ್ ೩೦ ನೇ ತಾರೀಖಿನಲ್ಲಿ ೧,೬೯೮ ಸರಕಾರಿ ಪಾಠಶಾಲೆಗಳು, ಅವುಗಳಲ್ಲಿ ೬೩,೯೬೪ ಮಂದಿ ವಿದ್ಯಾರ್ಥಿಗಳು ಇದ್ದರು. ಇದು ಶಿವಾಯಿ ಖಾಸಗಿ ಪಾಠಶಾಲೆಗಳು ೨,೧೧೨ ಇದ್ದವು. ಇವುಗಳಲ್ಲಿ ೨೬,೫೮೬ ಮಂದಿ ವಿದ್ಯಾರ್ಥಿಗಳಿದ್ದರು ಒಟ್ಟು ೯೧,೯೦೫ ಹುಡುಗರು, ೧೧,೬೪೦ ಬಾಲಿಕೆಯರು ವಿದ್ಯಾಭ್ಯಾಸಂಗದಲ್ಲಿ ಇದ್ದರು. ೧೮೮೧ ನೇ ಇಸವಿ ಲಾಗಾಯಿತು ೧೮೯೧ ನೇ ಇಸವಿ ವರೆಗಿನ ೧೦ ಸಂವತ್ಸರಗಳಲ್ಲಿ ವಿದ್ಯಾಭ್ಯಾಸ ಮಾಡಿದತಕ್ಕ ಗಂಡುಸರಸಂಖ್ಯೆಯು ೨೪೬,೯೮೮ ಇದ್ದದ್ದು ೩೯೧,೫೮೮ ರವರೆಗೆ ಅಂದರೆ ಶೇಕಡಾ ೧೧೪ ರಂತೆಯೂ, ಹೆಂಗುಸರ ಸಂಖ್ಯೆಯು ೯,೮೨ ಇದ್ದದ್ದು ೧೬,೮೮೫ ರ ವರೆಗೆ ಅಂದರೆ ಶೇಕಡಾ ೯೬.೪ ರಂತೆಯೂ ಅಭಿವೃದ್ಧಿಯಾಗಿರುವ ಅಂಶವು ಸಂತೋಷಕರವಾದ್ದಾಗಿರುತ್ತೆ.

ಸರಕಾರಿ ಪಾಠಶಾಲೆಗಳಿಗಾಗಿ ಎಲ್ಲಾ ಬಾಬುಗಳಿಂದಲೂ ಒಟ್ಟು ೩,೭೨,೯೫ ರೂಪಾಯಿಗಳು ಖರ್ಚಾಯಿತು. ಇದರ ಪೈಕಿ ಪ್ರಾವಿನ್ಷಿಯಲ್ ಫಂಡ್ ಸರಕಾರಿ ಹಣದಿಂದ ೩,೧೩,೫೪೫ ರೂಪಾಯಿಗಳು, ಲೋಕಲ್ ಫಂಡ್ ಹಣದಿಂದ ೨೦,೦೩೦ ರೂಪಾಯಿಗಳು, ಫೀಜ್ ಹಣದಿಂದ ೭೨,೪೯೦ ರೂಪಾಯಿಗಳು ಈ ಮೇರೆ ಖರ್ಚಾಗಿರುತ್ತೆ. ೧೮೯೨ ನೇ ಇಸವಿ ಮಾರ್ಚಿ ೩೧ ನೇ ತಾರೀಖಿಗೆ ಆಖೈರಾದ ಸಾಲಿನ ಖರ್ಚಿಗಿಂತ ಕಳೆದ ಸಾಲಿನಲ್ಲಿ ೪೬,೨೭೭ ರೂಪಾಯಿ ಜಾಸ್ತಿ ಖರ್ಚು ಆಗಿರುತ್ತೆ. ಪ್ರೈಮರಿ ಮತ್ತು ಮಿಡಿಲ್‌ಸ್ಕೂಲುಗಳಲ್ಲಿ ಬೋಧನಾಕ್ರಮದ ವಿಷಯದಲ್ಲಿ ಮಾಡಿರುವ ಹೊಸ ಏರ್ಪಾಟು ೧೮೯೩ ನೇ ಇಸವಿ ಜನವರಿ ಗುರ್ರೆ ಲಾಗಾಯಿತು ಜಾರಿಯಲ್ಲಿ ಬಂದಿರುತ್ತೆ. ಟೆಕಸ್ಟ್ ಬುಕ್ಕು ಕಮಿಟಿಯವರು ಕನ್ನಡ ಭಾಷೆಯಲ್ಲಿ ಓದುವದಕ್ಕೋಸ್ಕರ ಮೂರು ಪುಸ್ತಕಗಳನ್ನು ತಯಾರು ಮಾಡುವದಕ್ಕೆ ಏರ್ಪಾಟು ಮಾಡಿರುತ್ತಾರೆ. ಪಾಠಶಾಲೆಗಳಲ್ಲಿ ಉಪಯೋಗಿಸುವ ಕನ್ನಡ ಬುಕ್ಕುಗಳಲ್ಲಿ ಒಂದೇ ರೀತಿಯಾಗಿ ವರ್ಣವಿನ್ಯಾಸ ಕ್ರಮವನ್ನು ಅನುಸರಿಸಬೇಕೆಂಬ ಅಂಶವನ್ನು ಸದರೀ ಕಮಿಟಿಯವರು ಆಲೋಚಿಸುತ್ತಿದ್ದಾರೆ. ಕನ್ನಡ ಪಂಡಿತರನ್ನೂ ಪ್ರೈಮರಿ ಮತ್ತು ಮಿಡಿಲ್ ಸ್ಕೂಲುಗಳ ಉಪಾಧ್ಯಾಯರುಗಳನ್ನು ತಯಾರ್ ಮಾಡುವದಕ್ಕಾಗಿ ಎರಡು ನಾರ್ಮಲ್ ಸ್ಕೂಲುಗಳನ್ನು ಇಡಬೇಕೆಂದು ಮಂಜೂರಾಗಿರುತ್ತೆ. ಕನ್ನಡ ಸ್ಕೂಲುಗಳ ಉಪಾಧ್ಯಾಯರುಗಳಿಗೆ ವ್ಯವಸಾಯ ಮತ್ತು ಆರೋಗ್ಯಶಾಸ್ತ್ರ ಇವುಗಳನ್ನು ಬೋಧಿಸುವದಕ್ಕಾಗಿ ಎಲ್ಲಾ ಡಿಸ್ಟ್ರಿಕ್ಟುಗಳ ಹೆಡ್‌ಕ್ವಾರ್ಟರ್ ಸ್ಥಳಗಳಲ್ಲಿಯೂ ಕಳೆದ ಏಪ್ರಿಲ್ ಮೇ ತಿಂಗಳುಗಳಲ್ಲಿ ನಾರ್ಮಲ್ ಕ್ಲಾಸುಗಳನ್ನು ಏರ್ಪಡಿಸಿತ್ತು. ಗ್ರಾಮಗಳಲ್ಲಿರುವ ಸ್ಕೂಲುಗಳನ್ನು ಸ್ಥಳೀಯ ಕಮಿಟೀ ಯವರ ಮೇಲ್ವಿಚಾರಣೆಗೆ ಒಳಪಡಿಸಿರುತ್ತೆ. ಶಿವಾಯಿ ಗ್ರಾಮಾಂತರಗಳಲ್ಲಿ ಸ್ಕೂಲ್‌ಗಳನ್ನ ಜಾಸ್ತೀ ಮಾಡಬೇಕೆಂತಲೂ, ಮ್ಯುನಿಸಿಪಾಲಿಟಿಗಳಲ್ಲಿ ಇಂಗ್ಲಿಷ್ ಮತ್ತು ಕನ್ನಡ ಭಾಷಾಬೋಧನೆಗಳನ್ನು ಅಭಿವೃದ್ಧಿ ಪಡಿಸಬೇಕೆಂತಲೂ, ಆಲೋಚನೆಯಲ್ಲಿರುತ್ತೆ.

ಸ್ತ್ರೀವಿದ್ಯಾಭ್ಯಾಸ—ಸಂಸ್ಥಾನದಲ್ಲಿ ಒಟ್ಟು ೧೫೦ ಬಾಲಿಕಾ ಪಾಠಶಾಲೆಗಳು ಇರುತ್ತವೆ. ಒಟ್ಟು ಖರ್ಚು ೯೩,೮೪೨ ರೂಪಾಯಿಗಳು. ಈ ಪೈಕಿ ಸರಕಾರದಿಂದ ಖರ್ಚಾದದ್ದು ೬೭,೦೩೭ ರೂಪಾಯಿಗಳು. ಶ್ರೀಮನ್ ಮಹಾರಾಣೀಯವರ ಸ್ಕೂಲಿನಿಂದ ೭ ಮಂದಿಯೂ, ಮತ್ತು ತುಮಕೂರಿನಲ್ಲಿ ಇರುವ ವೆಸಲಿಯನ್ ಮಿಷನ್ ಬಾಲಿಕಾ ಪಾಠಶಾಲೆಯಿಂದ ಒಬ್ಬಳು ವಿದ್ಯಾರ್ಥಿನೀಯರು ಲೋಯರ್ ಸೆಕಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾದರು.

ಶ್ರೀಮನ್ಮಹಾರಾಣೀಯವರ ಬಾಲಿಕಾ ಪಾಠಶಾಲೆಯು ವಿಸ್ತಾರವನ್ನೂ ಮತ್ತು ಶಿಕ್ಷಾಕ್ರಮವನ್ನೂ ವಿಶೇಷವಾಗಿ ಅಭಿವೃದ್ಧಿಪಡಿಸಿರುತ್ತೆ. ಕಲಕತ್ತಾದಲ್ಲಿರುವ ಬೆತ್ಯೂನ್ ಕಾಲೇಜಿನ ಮಿಸ ಕುಮುದಿನಿ ಖಾಸ್ತಗಿರ್ ಬಿ. ಏ ಯೆಂಬವರನ್ನು ಈ ಪಾಠಶಾಲೆಯಲ್ಲಿ ಅಸಿಸ್ಟೆಂಟ್ ಲೇಡಿ ಸೂಪರಿಂಟೆಂಡೆಂಟ್ ಕೆಲಸಕ್ಕೆ ನೇಮಿಸುವದರ ಮೂಲಕ ಉಪಾಧ್ಯಾಯ ಸಂಖ್ಯೆಯನ್ನು ಜಾಸ್ತಿ ಮಾಡಿರುತ್ತೆ. ಹೈಸ್ಕೂಲ್ ತರಗತಿಗಳಲ್ಲಿ ೧೫ ಮಂದಿ ವಿದ್ಯಾರ್ಥಿನೀಯರನ್ನು ಉಪಾಧ್ಯಾಯಿನೀಯರ ಕೆಲಸಕ್ಕೆ ತಯಾರುಮಾಡುತ್ತಾಯಿವೆ. ೧೨ ವರುಷಕ್ಕೆ ಮೇಲ್ಪಟ್ಟ ವಯಸ್ಸಿನ ಬಾಲಿಕೆಯರು ೬೪ ಮಂದಿ ಈ ಪಾಠಶಾಲೆಯಲ್ಲಿ ಇರುತ್ತಾರೆ.

ಟೆಕ್ನಿಕಲ್‌ಪಾಠನೆ ಶಿಲ್ಪವಿದ್ಯಾಭ್ಯಾಸ.—೧೮೯೨ ನೇ ಇಸವಿ ಫೆಬ್ರವರಿ ತಿಂಗಳಲ್ಲಿ ಮೈಸೂರಿನಲ್ಲಿ ಪ್ರಾರಂಭವಾದ ಶಿಲ್ಪವಿದ್ಯಾಶಾಲೆಯಲ್ಲಿ ಬಡಗಿಕೆಲಸ, ಕಮ್ಮಾರಕೆಲಸ, ಕಲ್ಲುಕೆಲಸ, ಕುಂಬಾರಕೆಲಸ, ಬಟ್ಟೆ ನೆಯ್ಯುವದು, ಮತ್ತು ನಕ್ಷೆ ತೆಗೆಯುತಕ್ಕದ್ದು ಈ ಕಸುಬಿನ ವಿದ್ಯೆಗಳನ್ನು ಕಲಿಸುತ್ತೆ. ಇವಲ್ಲದೆ ಜಾಗ್ರತೆಯಾಗಿ ನೇಯುತಕ್ಕ ಹೊಸವಿಧಾನವನ್ನು ಕಲಿಸುವದಕ್ಕೆ ಈಚೆಗೆ ಏರ್ಪಾಟು ಮಾಡಿರುತ್ತೆ. ಕಳೆದ ಜೂನ್ ೩೦ ನೇ ತಾರೀಖಿನಲ್ಲಿ ಈ ಪಾಠಶಾಲೆಯಲ್ಲಿ ೧೨೨ ಮಂದಿ ವಿದ್ಯಾರ್ಥಿಗಳು ಇದ್ದರು, ಪೈಕಿ ೧೦ ಜನ ಬ್ರಾಹ್ಮಣರು, ೧೯ ಜನ ಮುಸಲ್ಮಾನರು, ೧೫ ಮಂದಿ ನೇಟಿವ್ ಕ್ರಿಶ್ಚಿಯನ್ನರು, ಇಬ್ಬರು ಈಸ್ಟ್ ಇಂಡಿಯನ್ನರು, ೫೮ ಮಂದಿ ನಾನಾ ಜಾತಿ ಹಿಂದೂಗಳು, ಈ ಮೇರೆ ಇದ್ದರು. ಈ ಪಾಠಶಾಲೆಯು ಪ್ರಾರಂಭವಾಗಿ ಸ್ವಲ್ಪಕಾಲವಾದಾಗ್ಯೂ ಇದರಲ್ಲಿ ನಡೆದಿರುವ ಕೆಲಸವನ್ನು ನೋಡಲಾಗಿ, ಕ್ರಮೇಣ ವಿಶೇಷ ಉಪಯೋಗವನ್ನುಂಟುಮಾಡಬಹುದಾಗಿರುತ್ತೆ. ಅಲ್ಲದೆ ಇದರ ಅನುಭವದ ಮೇಲೆ ಇತರ ಪ್ರದೇಶಗಳಲ್ಲಿಯೂ ಈ ಮೇರೆ ಕಸುಬಿನ ವಿದ್ಯಾಭ್ಯಾಸದ ಏರ್ಪಾಟುಗಳನ್ನು ಮಾಡಲು ಅನುಕೂಲಿಸುತ್ತೆ.

ಮರಮಮ್ಮತ್ ಇಲಾಖೆ ತಾಬೇದಾರಿ ನೌಕರಿಗೆ ಕ್ರಮವಾಗಿ ತಯಾರಾದ ಜನಗಳು ಹಾಲಿ ವಿಶೇಷವಾಗಿ ದೊರಕುವದಿಲ್ಲವಾಗಿ ತಾಲ್ಲೂಕ್ ಮೇಸ್ತ್ರಿ, ಸಬ್ ಓವರ್ಸಿಯರುಗಳನ್ನು ತಯಾರ್ಮಾಡತಕ್ಕ ಬಗ್ಗೆ ಒಂದು ಇಂಜಿನೀರಿಂಗ್ ಪಾಠಶಾಲೆಯನ್ನು ಏರ್ಪಡಿಸಬೇಕೆಂದು ಯೋಚನೆ ಮಾಡಿರುತ್ತೆ.

ಪ್ರಾಚೀನ ಲಿಪ್ಯನ್ವೇಷಣ.—ಹೋದ ವರುಷದ ಉಪನ್ಯಾಸದಲ್ಲಿ ವಿವರಿಸಿರುವ ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿ ದೊರೆತ ಅಶೋಕ ಮಹಾರಾಯನ ಕಾಲದ ಅಮೂಲ್ಯವಾದ ಶಿಲಾಶಾಸನಗಳ ವಿಷಯದಲ್ಲಿ ಲಂಡನ್, ಪ್ಯಾರಿಸ್, ವಿಯನ್ನಾ ಈ ದೊಡ್ಡ ಪಟ್ಟಣಗಳಲ್ಲಿ ಕೆಲವು ವಿದ್ವಾಂಸರುಗಳು ಪ್ರೌಢವಾದ ಪತ್ರಿಕೆಗಳನ್ನು ಬರೆದು ಪ್ರಕಟನಮಾಡಿರುತ್ತಾರೆ. ಈ ಶಾಸನಗಳ ಪ್ರತಿಯೊಂದರ ಕೊನೆಯಲ್ಲಿಯೂ, ಓದುವದಕ್ಕೆ ಆಗದೆ ಇದ್ದ ಕೆಲವು ಅಕ್ಷರಗಳನ್ನು ವಿಯನ್ನಾ ಪಟ್ಟಣದ ವಿದ್ವಾಂಸರಾದ ಪ್ರೊಫೆಸರ್ ಬ್ಯೂಲರ್ರವರು ಪತ್ತೆ ಮಾಡಿರುತ್ತಾರೆ. ಈ ಅಕ್ಷರಗಳು ಬಲಗಡೆಯಿಂದ ಪ್ರಾರಂಭಿಸಿ ಎಡಕಡೆಗೆ ಬರೆಯುವ ಖರೋಷ್ಠ್ರ ಎಂಬ ಬ್ಯಾಕ್ಟ್ರಿಯನ್ ಪಾಲಿಭಾಷೆಯ ಅಕ್ಷರದಲ್ಲಿ ಶಾಸನವನ್ನು ಕೆತ್ತಿದ ಶಿಲ್ಪಿಯು ಕಸಬನ್ನು ತೋರಿಸುವ "ಲಿಪಿಕರೇಣ" ಎಂಬ ಶಬ್ದವಾಗಿರುತ್ತೆ.

ಕಳೆದ ಸಾಲಿನಲ್ಲಿ ದೊರೆತ ಇತರ ಮುಖ್ಯವಾದ ಶಾಸನಗಳಿಂದ ದ್ರಾವಿಡ ಸಂಸ್ಥಾನವನ್ನಾಳುತ್ತಿದ್ದ ಪಲ್ಲವ ವಂಶಸ್ಥನಾದ ನೊಳಂಬಾದಿ ರಾಜನೆಂಬ ದೊರೆಯು, ತಲಕಾಡು ಸಂಸ್ಥಾನದ ದೊರೆಯಾದ ಗಂಗವಂಶಕ್ಕೆ ಸೇರಿದ ನೀತಿಮಾರ್ಗನೆಂಬ ಅರಸಿನ ಕುಮಾರಿಯನ್ನು ವಿವಾಹ ಮಾಡಿಕೊಂಡನೆಂದು ತಿಳಿಯುತ್ತೆ. ಶಿವಾಯಿ ಪ್ರಸಿದ್ಧನಾದ ಹೊಯಿಸಳ ರಾಜ್ಯದ ದೊರೆಯಾದ ವಿಷ್ಣುವರ್ಧನ ರಾಜನಿಂದ ಪರಾಜಿತನಾದ ಇರುಂಗೊಳದಾಯನೆಂಬ ಅರಸು ಪಾವಗಡ ತಾಲ್ಲೂಕು ನಿಡುಗಲ್ಲು ದುರ್ಗವನ್ನು ಸ್ವಾಧೀನ ಪಡಿಸಿಕೊಂಡಿದ್ದನೆಂತಲೂ, ಈ ಇರುಂಗೊಳ ರಾಯನು ಯಾವ ವಂಶಕ್ಕೆ ಸೇರಿದವನೋ ಆ ವಂಶದ ದೊರೆಗಳು ಹೆಂಜೇರು ಎಂಬ ಸ್ಥಳವನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರೆಂತಲೂ, ತಿಳಿಯಬರುತ್ತೆ. ಈ ಹೆಂಜೇರು ಎಂಬ ಸ್ಥಳವು ಬಹಳ ಪುರಾತನವಾದ ಅನೇಕ ಶಾಸನಗಳಲ್ಲಿ ನಮೂದಿಸಲ್ಪಟ್ಟಿರುತ್ತೆ. ಇವುಗಳ ಪೈಕಿ ಒಂದು ಶಾಸನವು ಕ್ರಿಸ್ತಶಕಕ್ಕೆ ೪೦೦ ವರುಷಗಳಿಗಿಂತ ಹಿಂದೆ ಜೈನ ಮೌರ್ಯ ರಾಯರು ಸರ್ವಸಂಗ ಪರಿತ್ಯಾಗ ಮಾಡಿದ ಕಾಲದಲ್ಲಿ ಕೊಟ್ಟದ್ದೆಂದು ಹೇಳಿಕೊಳ್ಳುವ ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ದೊರೆತಿರುವ ಶಾಸನಗಳಂತೆಯೇ ಬರವಣಿಗೆ ಮತ್ತು ಮತಲಬು ಉಳ್ಳದ್ದಾಗಿರುತ್ತೆ.

ಓರಿಯಂಟಲ್ ಲೈಬ್ರರಿ ಯೆಂಬ ಪುಸ್ತಕ ಭಂಡಾರ.—ಕಳೆದ ವರುಷದಲ್ಲಿ ೬೨೯ ಛಾಪೆಯಾದ ಮತ್ತು ೭೧೨ ಕೈಬರವಣಿಗೆಯ ಗ್ರಂಥಗಳು ಶೇಖರಿಸಲ್ಪಟ್ಟವು. ಈಗ ಈ ಪುಸ್ತಕ ಭಂಡಾರದಲ್ಲಿ ೧,೬೫೭ ಛಾಪೆಯಾದ ೧,೦೭೧ ಕೈಬರವಣಿಗೆಯ ಗ್ರಂಥಗಳು ಶೇಖರವಾಗಿರುತ್ತವೆ. ಭಂಡಾರವನ್ನು ನೋಡುವದಕ್ಕೆ ಬಂದವರ ಸಂಖ್ಯೆಯೂ, ಭಂಡಾರದಿಂದ ಪುಸ್ತಕಗಳನ್ನು ಎರವು ತೆಗೆದುಕೊಂಡುಹೋದವರ ಸಂಖ್ಯೆಯೂ, ವಿಶೇಷ ಜಾಸ್ತಿಯಾಗಿದ್ದಾಗಿ ಈ ಭಂಡಾರವು ಜನಸಮೂಹಕ್ಕೆ ಉಪಯುಕ್ತವಾಗಿರುತ್ತೆಂಬ ಅಂಶವು ಸ್ಪಷ್ಟವಾಗುತ್ತೆ.

ಶೇಖರ ಮಾಡಲ್ಪಟ್ಟಿರುವ ಕೈಬರವಣಿಗೆಯ ಗ್ರಂಥಗಳ ಪೈಕಿ ಶುಕ್ಲಯಜುರ್ವೇದ ಸಂಬಂಧವಾದ ಕಾಣ್ವಶಾಖೆಯ "ಶತಪಥ ಬ್ರಾಹ್ಮಣ" ವೆಂಬ ಗ್ರಂಥವು ಬಹಳ ಅಪೂರ್ವವಾದದ್ದು. ಈ ಗ್ರಂಥವು ಸ್ವರಚಿಹ್ನೆಗಳ ಸಹಿತ ಸಂಪೂರ್ಣವಾಗಿ ಬರೆಯಲ್ಪಟ್ಟಿರುತ್ತೆ. ಈ ಗ್ರಂಥವು ಇದುವರೆಗೆ ಛಾಪಾ ಆಗಿಲ್ಲ.

ಕೈಬರವಣಿಗೆ ಗ್ರಂಥಗಳ ಪೈಕಿ ದಕ್ಷಿಣ ದೇಶದಲ್ಲಿ ವಿಶೇಷವಾಗಿ ಪ್ರಚುರವಾಗಿರುವ ಪ್ರಸಿದ್ಧರಾದ ಅಪ್ಪಯ್ಯದೀಕ್ಷಿತರಿಂದಲೂ, ವೇದಾಂತಾಚಾರ್ಯರಿಂದಲೂ ರಚಿಸಲ್ಪಟ್ಟ ಅದ್ವೈತ, ವಿಶಿಷ್ಟಾದ್ವೈತಮತ ಗ್ರಂಥಗಳೂ, ದ್ವೈತಮತಸ್ಥಾಪನಾಚಾರ್ಯರಾದ ಮಧ್ವಾಚಾರ್ಯರಿಂದ ರಚಿತವಾದ ಆ ಮತದ ಗ್ರಂಥಗಳೂ ವಿಶೇಷವಾಗಿ ದೊರಕಿರುತ್ತೆ. ಜೈನಮತಕ್ಕೆ ಸಂಬಂಧಪಟ್ಟ ಅನೇಕ ಗ್ರಂಥಗಳು ಶೇಖರವಾಗಿರುತ್ತವೆ. ಪುರಾಣ ಸಂಬಂಧವಾದ ಗ್ರಂಥಗಳ ಪೈಕಿ "ಪುರಾಣಸಾರ" ವೆಂಬ ಗ್ರಂಥವು ಮುಖ್ಯವಾದದ್ದು. ಕನ್ನಡ ಗ್ರಂಥಗಳ ಪೈಕಿ "ಉದ್ಭಟಕಾವ್ಯ" ವೆಂಬುವದು ಲಿಂಗಾಯತ ಗ್ರಂಥಗಳ ಪೈಕಿ ಬಹಳ ಪುರಾತನವಾದದ್ದು. ಇದುವರೆಗೆ ಪ್ರಚುರಕ್ಕೆ ಬಂದಿರಲಿಲ್ಲವು.


## ಸೂರಿ ಅಂಡ್ ಕಂಪನಿ.

ಟ್ರೇಡರ್ಸ್ ಮತ್ತು ಏಜಂಟ್ಸ್, ಪೂನಾ

ರಕ್ತವು ಮನುಷ್ಯನ ಜೀವರೂಪವಾಗಿಯೂ ಅಂತಾ ರಕ್ತವೂ ಜೀವವು ಸಹ ವಿದ್ಯುಚ್ಛಕ್ತಿ ರೂಪವಾಗಿಯೂ ಇರುತಿದೆ.

ಪೂನಾ ಪಟ್ಟಣದಲ್ಲಿರುವ ಸೂರಿ ಅಂಡ್ ಕಂಪೆನಿಯವರು ಜನರಲ್ ಟ್ರೇಡರ್ಸ್ ಮತ್ತು ಏಜಂಟುಗಳಾಗಿರುತ್ತಾರೆ. ಇವರು ಅನುಭವಸಿದ್ಧಗಳಾಗಿಯೂ, ಉತ್ತಮ ಗುಣಗಳುಳ್ಳವಾಗಿಯೂ ಇರುವ ಔಷಧಗಳ ಮತ್ತು ವಿದ್ಯುಚ್ಛಕ್ತಿ ಉಪಕರಣಗಳ ಮಹಾವ್ಯಾಪಾರಸ್ಥರಾಗಿಯೂ ಇರುತ್ತಾರೆ. ಆಯಾ ಕೋರಿಕೆ ವಸ್ತುಗಳ ಕ್ಯಾಟಲಾಗುಗಳು ಮುಫ್ತವಾಗಿ, ಡೆಕ್ಕನ್ ಪ್ರದೇಶದ ಮಲ್ಪಂಬದೆಸರುಳ್ಳ ಜಾರಿ ಗಿರಾಕಿದಾರರು, ವ್ಯಾಪಾರಾಭಿವೃದ್ಧಿಗಾಗಿ ಇವರನ್ನು ಅವರ ಏಜಂಟರನ್ನಾಗಿ ನಿಯಮಿಸುತ್ತಾರೆ.



೧. ಪ್ರವಾಸ ಗೃಹ ವೈದ್ಯ ಪೆಟ್ಟಿಗೆಯು—೨೪ ೩೦ ವಿಧ ಔಷಧಗಳ ಪೆಟ್ಟಿಗೆಯು.—ಇದರ ಕ್ರಯ ಟಪ್ಪಾಲ್ ಹಾಸಿಲ್ ಸಹಿ ಪೆಟ್ಟಿಗೆ ೧೨ ೧೦ ರೂಪಾಯಿ.

ಇದರೊಡನೆ ಅನುಭವಾನ ಕ್ರಮ ಪಟ್ಟಿಗೆ ದೊರೆಯುವದು. ಮುಂಗಡವಾಗಿ ಹಣ ಕಳುಹಿಸಲ್ಪಡದ ಹೊರತು ಇದು ಕಳುಹಿಸಲ್ಪಡಲಾರದು.

ಮೆಸ್ಸರ್ಸ್ ಸೂರಿ ಅಂಡ್ ಕಂಪೆನಿಯವರು ಹೊಸದಾದ ಶೋಧನೆಗಳಿಂದ ಪೂನಾದಲ್ಲಿರುವ ತಮ್ಮ ಕಾರ್ಖಾನೆಯೊಳು ವಿದ್ಯುದೌಷಧಗಳನ್ನು ಸಶಾಸ್ತ್ರೀಯವಾಗಿಯೂ ಸುಲಭವಾಗಿಯೂ ಇರುವಂತೆ ತಯಾರುಮಾಡುತ್ತಾರೆ. ವಿದ್ಯುಚ್ಛಕ್ತಿಯ ಪ್ರಯೋಜನವನ್ನು ತಿಳಿಯದಿರುವ ನಮ್ಮ ದೇಶಬಾಂಧವರ ತಿಳುವಳಿಕೆಗೋಸ್ಕರ ಅದೆಂತೆಂದು ತಿಳಿಸುತ್ತಾರೆ. ಸದರೀ ಕಂಪೆನಿಯವರು ತಮ್ಮ ದೇಶ ಬಾಂಧವರಿಗೆ ಇದರ ಕೆಲವು ಸಾಧನಗಳನ್ನು ಉಪಯೋಗಿಸಿರುತ್ತಾರೆ ಇದರಿಂದ ಪ್ರತ್ಯಕ್ಷಾನುಭವವನ್ನು ಪಡೆದು ತಿಳಿಸುವವರಿಗೆ ವಿನಯಪೂರ್ವಕ ವಂದನೆಮಾಡುವುದು ತಮ್ಮ ಕರ್ತವ್ಯವೆಂದು ಭಾವಿಸಿರುತ್ತಾರೆ.

೧ ಮುದ್ರಿಗೊಂಡು ಪಂಚಾಂಗವು—ಇದು ಬಾಳಬಂದು ಅಕ್ಷರದಿಂದ ಛಾಪಿಸಿರುವ ಮುಂದಿನ ಜಯಸಂವತ್ಸರದ ಪಂಚಾಂಗವಾಗಿರುತಿವೆ. ಇದರ ೧೦ ಪ್ರತಿಗಳಿಗೆ ಟಪ್ಪಾಲ್ ಹಾಸಲ್ ಸಹಿ ರೂ| ೦—೪—೦

೨. ಒಂದು ಮುದ್ರಿಗೆ ೨ ದೌತಿ ಶಾಯಿಯು—ಇದು ಸ್ಟೀಫೆನ್ಸರವರ ಬ್ಲೂ ಬ್ಲ್ಯಾಕ್ ಇಂಕಿಯಂತೆಯೇ ಇರುತಿದೆಯಲ್ಲದೆ ಬರೆಯುವಾಗ ನೀಲಿ ಬಣ್ಣವಾಗಿ ಕಾಣುವದು, ಒಣಗುತಲೇ ಅಚ್ಚ ಕಪ್ಪಾಗುವದು. ಬರೆದ ಅಕ್ಷರಗಳನ್ನು ಉಜ್ಜಿ ತೆಗೆಯಕೂಡದಂತೆ ಪುಡಿಯಾಗಿರುವದರಿಂದ ಸಾಹುಕಾರ ಎಷ್ಟುಬೇಕೋ ಅಷ್ಟು ಇಂಕಿ ಮಾಡಿಕೊಳ್ಳಬಹುದಾಗಿದೆ. ೧೨೦ ಪೊಟ್ಟಣಗಳಿಗೆ ಕ್ರಯ ರೂ|| ೧-೪-೦, ಟಪಾಲ್ ಚಾರ್ಜ್ ೦-೪-೦ ಇದರಂತೆ ಕೆಂಪು, ಹಸರು ನೀಲಿ ಜಾಂಬಳೆ ಬಣ್ಣಗಳುಳ್ಳ ಶಾಯಿ ಪೊಟ್ಟಣಗಳು ಸಹ ಇರುತಿವೆ. ಇವೆಲ್ಲಾ ರು ಪೊಟ್ಟಣಗಳಿಗೆ ಟಪಾಲ್ ಹಾಸಲ್ ಸೇರಿ ೩ ರೂಪಾಯಿಗಳು

೩ ಮುದ್ರಿಗೊಂಡು ಫಲಹಾರವು.—ಕಂದಮೂಲಗಳಿಂದ ಮಾಡಿರುವ ಜೇಡ್ರಿಯಾನಂತಾ ಆರೋರೂಟ್, ಇದು ತಿಂಬಲನ್ನ ಸ್ವಾದವಾದ ರೋಗಿಗಳಿಗೂ, ಪ್ರತಿಷ್ಟೆಯವರಿಗೂ ನಾಯಿ ಶುದ್ಧವಾದ ವಸ್ತುವಾಗಿರುತಿದೆ. ಈ ರೋಗಪದಾರ್ಥವನ್ನು ಗವರ್ನಮೆಂಟಿನವರು ಆಸ್ಪತ್ರೆಗಳಲ್ಲಿ ಉಪಯೋಗಿಸಬೇಕೆಂದು ಸಾಂಗ್ಸನ್ ಮಾಡಿರುತ್ತಾರೆ

೪. ಮುದ್ರಿಗೊಂಡು ಹಿತ್ತಾಳೆಯ ಚಿಕ್ಕ ಪಿಸ್ತೋಲೆಯು.—ಇದು ಪೂಜೆ ಪುನಸ್ಕಾರಗಳಲ್ಲಿ ಪಂಚಾಮೃತನೀಡುವದಕ್ಕೆ ಶೃಂಗಾರವಾದ ಉಪಕರಣವಾಗಿಯೂ ಹಸಿ ಕಾಯಿಯ ತುಪ್ಪದಾರ್ಥಗಳನ್ನು ಮಾಡುವದಕ್ಕೂ ಉಪಯುಕ್ತವಾಗಿರುತಿದೆ. ೧೦೦ ಬಿಲ್ಲೆಗಳ ಕ್ರಯ ೧-೧೮-೦, ಟಪಾಲ್ ಚಾರ್ಜ್ ೦—೧೨—೦

೫ ಸೂರಿ ಅಂಡ್ ಕಂಪೆನಿಯವರ ಮಿಂಚಿನ ಒಡವೆಗಳು—ಮಿಂಚಿನ ಒಡವೆಗಳನ್ನು ಧರಿಸುವದರಿಂದ ರಕ್ತಸಂಬಂಧವಾದ ಮತ್ತು ಪಕ್ಷವಾತಾದಿಗಳು, ಸಂದುನೋವು, ಬಹುಮೂತ್ರ, ಕಾಸ, ಸಂದುಬಿಗಿಯುವಿಕೆ, ನರಗಳಸೆಳವು ಹಿಸ್ಟೀರಿಯದಿಂದ ಎದೆಯಲ್ಲಿ ಉರಿ, ಎಲ್ಲತರದ ತಲೆನೋವು, ಅಸ್ತಮತ ರೋಗ ವಿಕಾರಗಳು, ಮಕ್ಕಳ ಬಾಲಗ್ರಹ ಪ್ರಯುಕ್ತವಾದ ದೋಷಗಳು, ರಕ್ತಗುಂದುವದು, ಹೆಂಗಸರಿಗೆ ಮೈನಡುಗುವದು, ಹೊಟ್ಟೆಯಲ್ಲುಂಟಾಗುವ ವಾಯು ಗಡ್ಡೆ, ಕಣ್ಣಿನ ಎಲ್ಲಾಬಗೆ ರೋಗಗಳು, ಕಿವಿಯಲ್ಲಿ ಕೀವು ಸುರಿಯುವಿಕೆ ಇನ್ನು ಮುಂತಾದವುಗಳು ಪರಿಹಾರವಾಗುತಿವೆ. ವಿದ್ಯುನ್ಮಂಡಲಿಕೆಯ ಧಾರಣೆಯಿಂದ ಸ್ಪರ್ಶಜನ್ಯ ರೋಗಗಳು ಸಂಕ್ರಮಿಸಲಾರದೆಂಬುದು ಅನುಭವಕ್ಕೆ ಬಂದಿರುತಿದೆ

ಇದರ ಕ್ರಯ ವಗೈರೆ ತಪ್ಸೀಲ್

| | | | | |
|---|---|---|---|---|
| ಹಿತ್ತಾಳೆ ಉಂಗುರ | ... | ೧ | ೪ | ೦ |
| ಡಿಟ್ಟೋ ಪದಕ | . | ೧ | ೦ | ೦ |
| ಜರ್ಮನ್ ಸಿಲ್ವರ್ ಉಂಗುರ | | ೧ | ೧೨ | ೦ |
| ಡಿಟ್ಟೋ ಪದಕ | ... | ೧ | ೮ | ೦ |
| ಸಾಚಾ ಬೆಳ್ಳಿ ಉಂಗುರ | ... | ೨ | ೮ | ೦ |
| ಡಿಟ್ಟೋ ಪದಕ | | ೨ | ೦ | ೦ |
| ಟೋಪಿ | | ೧ | ೮ | ೦ |
| ವಿದ್ಯುನ್ಮಂಡಲಿಕೆ | ... | ೧ | ೧ | ೦ |

ಗ್ರಾಹಕರಿಗೆ ಯಾವತರದ ಮಾಲ್ ಬೇಕಾಗಿದ್ದಾಗ್ಯೂ ವ್ಯಾಲ್ಯೂಪೇಬಲ್ ಮೂಲಕ ಕೂಡಲೇ ರವಾನಿಸಲ್ಪಡುವವು

ಎಲ್ಲಾ ತರದ ಪತ್ರವ್ಯವಹಾರಗಳನ್ನು ಈ ಕೆಳಗೆ ಕಂಡ ವಿಳಾಸದಾರರಿಗೆ ಬರೆಯಬೇಕು. ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಟಪಾಲ್ ಚೀಟಿ ಸಹಿತ ಬರೆದುಕೊಳ್ಳತಕ್ಕದ್ದು.

ರಾ|| ಕೆ. ಕೃಷ್ಣಶಾಸ್ತ್ರಿ, ಏಜಂಟ್,
ಸೂರಿ ಅಂಡ್ ಕಂಪೆನಿ
ರವಿವಾರ ಪೇಟೆ, ಪೂನಾ.

ಅಥವಾ ಇವರ ಏಜಂಟರಾದ ಈ ಕೆಳಗೆ ಸಹಿ ಮಾಡಿರುವವರಿಗೆ ಬರೆದುಕೊಳ್ಳತಕ್ಕದ್ದು.

ಟಿ ಬಿ. ವೆಂಕಟಾಚಾರ್,
೪೮ ನೇ ನಂಬರ್, ಹಾಸ್ಪತ್ರಿ ರೋಡ್, ಸಿಟಿ, ಬೆಂಗಳೂರ್.


BANGALORE—Printed and published at the KARNATAKA PRESS, No 40, HOSPITAL ROAD, CITY—1893

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಪ್ರಕಾನುವಿವಿಧಪ್ರವೃತ್ತ್ಯುಪಗಮಸಾರ್ಥಕರ್ಣಾಟಕಪ್ರಕಾಶನವರಾಭಿಧಾಪ್ರಥಿತಸಾಹಿತೀಶೋಭಿತಾ । ಮೃಗಾಂಕಹಿಶ್ರವಾಸರನಿಹಿತಮುದ್ರಣಾಸಜ್ಜನೈರ್ದ್ವಿಕಾಸುಪರಿದೇಶಿಕಾದಿಕತಿಮಾನಸಸಂಸಂಘುದು ।

Vol. XX.] ಸಂಪುಟ ೨೦.]

BANGALORE—MONDAY, DECEMBER 4, 1893.

ಬೆಂಗಳೂರು:—ಸರ್ ೧೮೯೩ನೇ ಇಸವಿ ಡಿಸೆಂಬರ್ ೪ ನೇ ತಾರೀಖ್ ಸೋಮವಾರ.

[No. 48 [ಸಂಚಿಕೆ ೪೮.

## ಕರ್ಣಾಟಕ ಪ್ರಕಾಶಿಕಾ.

### ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

| | ಸ್ಥಳದವರಿಗೆ. | ಪರಸ್ಥಳದವರಿಗೆ. |
|---|---|---|
| ಸಾಲ್ ೧ಕ್ಕೆ ... | 6—0—0 | 8—0—0 |
| ೬ ತಿಂಗಳಿಗೆ ... | 3—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

| | ಸ್ಥಳದವರಿಗೆ. | ಪರಸ್ಥಳದವರಿಗೆ. |
|---|---|---|
| ಸಾಲ್ ೧ಕ್ಕೆ ... ... | 3—0—0 | 4—0—0 |
| ೬ ತಿಂಗಳಿಗೆ ... ... | 1—12—0 | 2—8—0 |

ಈ ಪತ್ರಿಕೆಗೆ ದಸ್ತೂರು, ಪಾವತಿದ ತಾರೀಖ್ ಮೊದಲು ಒಂದು ತಿಂಗಳೊಳಗಾಗಿ ಚಂದಾ ಮೊಬಲಗು ಕಳುಹಿಸದಂತವರಿಗೆ ವಾ ಪ್ರೈವೇ ಅಡ್ವಾನ್ಸ್ ದರದಂತೆ ಪತ್ರಿಕೆ ಕಳುಹಿಸಲ್ಪಡುವವು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡ ಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. ಮೂರು ತಿಂಗಳಿಗಿಂತ ಕಡಮೆಯಾಗಿ ಚಂದಾ ಮೊಬಲಗು ಅಂಗೀಕರಿಸಲ್ಪಡಲಾರದು.

### ಪ್ರಕಟನೆಯ ರಿವಾಜ್.

ಮೊದಲನೆಯದಫಾ ಪಙ್ಕ್ತಿ ಒಂದಕ್ಕೆ ೦—೨—೦

ಎರಡನೆಯದಫಾ ಪಙ್ಕ್ತಿ ಒಂದಕ್ಕೆ ೦—೧—೦

ಮಾ.—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟು ಸಲ ಪ್ರಕಟಿಸಬೇಕೆಂದು ಕಾಯಮ್ ಮಾಡಿದಾಗ್ಯೂ ಪಙ್ಕ್ತಿ ಒಂದಕ್ಕೆ ೧ ಆಣೆಯಂತೆ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಕಾಯಮಾಗುವಂತೆ ಪ್ರಕಟನೆಗಳನ್ನು ಕಳುಹಿಸುವವರು ಅವು ಎಷ್ಟು ವರ್ತಿ ಕಾಯಮ್ ಮಾಡಲ್ಪಡಬೇಕೋ ಆ ಅಂಕವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಿದ್ದರೆ ಅವರು ನಮಗೆ ಬಿಲ್ಲಕುವಂತೆ ಬರೆಯುವತನಕ ಅವು ಪ್ರಕಟಿಸುತಲಿದ್ದು, ಹಾಗೆ ಎಷ್ಟುವರ್ತಿ ಪ್ರಕಟಿಸಲ್ಪಟ್ಟದ್ದಾಗ್ಯೂ ಮೇಲೆ ಕಂಡ ದರದಂತೆ ಕಿಮ್ಮತ್ ವಸೂಲ್ಮಾಡಲ್ಪಡುವದು. ಛಾಪಿಸುವುದಕ್ಕೆ ಕಳುಹಲ್ಪಡತಕ್ಕ ಪ್ರಕಟನೆಗಳನ್ನು ಆದಿತ್ಯವಾರದದಿನ ಮಧ್ಯಾಹ್ನ ೨ ಘಂಟೆಯೊಳಗಾಗಿ ಕಳುಹಿಸಬೇಕು. ಪ್ರಕಟನೆ ಸಂಬಂಧ್ಯ ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳಲ್ಲಿ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಲಾರೆವು. ಕ್ರಮವಾಗಿ ರುಜುಮಾಡಿದಹೊರತು ಯಾವಕಾಗದವನ್ನೂ ಪ್ರಕಟಿಸಲಾರೆವು. ನಿರಾಕರಿಸಲ್ಪಟ್ಟಕಾಗದಗಳು ಮರಳಿ ವಾಪಸು ಕಳುಹಿಸಲ್ಪಡಲಾರವು.

## ನೋಟೀಸ್.

ಗಣೇಶ ರಾಮಚಂದ್ರ ಕರ್ಶಿ ಮತ್ತು ಕಂಪೆನಿ. ಕಮಿಷ್ನರ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಬುದ್ಧಿವಂತಿಕೆಯೊಡನೆ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ತಕ್ಕ ಕಮಿಷ್ನರ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರಹ ಔಷಧಗಳು, ಪುಸ್ತಕಗಳು, ಮುತ್ತುಗಳು, ಬೆಳ್ಳಿ ಮುತ್ತುಗಳು, ಘಡಿಯಾರಗಳು, ವಾಚ್‌ಗಳು, ಟೈಂಪೀಸ್‌ಗಳು, ಕಾಶ್ಮೀರ ಶಾಲುಗಳು, ಪಟ್ಟೆ ಸೀರೆಗಳು, ಜರತಾರಿ ಕಣಗಳು, ಚಂದ್ರಕಾಂತ ಶಿಲೆಯ ಕನ್ನಡಕಗಳು, ಹುಡುಗರಿಗೆ ತಕ್ಕ ಜರತಾರಿ ಉಡುಪುಗಳು, ಜರತಾರಿ ಟೋಪಿಗಳು, ಆಫೀಸ್ ಡ್ರೆಸ್‌ಗಳು, ಷರ್ಟುಗಳು, ಉತ್ತರೀಗಳು, ಅತ್ಯುತ್ತಮಗಳಾದ ರತ್ನಗಳು, ಭಂಗಾರದಿಂದ ಕಟ್ಟಲ್ಪಟ್ಟ ಉಂಗುರಗಳು, ಬೆಳ್ಳಿ ಪಾತ್ರಗಳು, ಜರ್ಮನ್ ಬೆಳ್ಳಿ ಪಾತ್ರಗಳು, ಕೇಸರಿ, ಕಸ್ತೂರಿ ವಗೈರೆ ಇತರ ಸಾಮಾನುಗಳು

ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಲೇಬಲ್ ಕಳುಹಿಸಿದ ಹೊರತು ಜವಾಬ್ ದೊರೆಯಲಾರದು.

ವಿಳಾಸ.—ಗಣೇಶ ರಾಮಚಂದ್ರ ಕರ್ಶಿ, ಮತ್ತು ಕಂಪೆನಿ, ಕಮಿಷ್ನರ್ ಏಜಂಟ್ಸ್. ಠಾಕೂರ್‌ದ್ವಾರ, ಮಾರ್ಕೆಟ್ ಪೋಸ್ಟ್, ಮುಂಬೈ.

## ನೋಟೀಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ನಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

### ಸಂಸ್ಕೃತ ಗ್ರಂಥಗಳು.

| | ರೂ | ಆ | ಪೈ |
|---|---|---|---|
| ಸಟೀಕಾ ಶಿವಗೀತೆ | ೧ | ೦ | ೦ |
| ,, ಶಿವಾನಂದಲಹರಿ | ೦ | ೮ | ೦ |
| ,, ಕಾಲಾಮೃತ | ೧ | ೦ | ೦ |
| ,, ಬಾಲರಾಮಾಯಣ .. | ೦ | ೩ | ೦ |
| ,, ಗೋಪಿಕಾ ಗೀತೆ ... | ೦ | ೧ | ೦ |
| ,, ಚಾಣಿಕ್ಯನೀತಿ (ಸುಭಾಷಿತ) | ೦ | ೪ | ೦ |
| ವಿಷ್ಣು ಸಹಸ್ರನಾಮ ಪತ್ರಿಕೆ | ೦ | ೩ | ೦ |
| ಸೂರ್ಯಸಹಸ್ರನಾಮ | ೦ | ೨ | ೦ |
| ಕೃಷ್ಣಕರ್ಣಾಮೃತ | ೦ | ೨ | ೦ |
| ತ್ರಿಕಾಂಡ ಅಮರ ಮೂಲ | ೦ | ೨ | ೦ |
| ೧ ಕಾಂಡ ಡಿಟೋ | ೦ | ೧ | ೦ |

### ಕನ್ನಡ ಗ್ರಂಥಗಳು.

| | ರೂ | ಆ | ಪೈ |
|---|---|---|---|
| ಶುಕಸಪ್ತತಿ ಅವ್ವಲ್ | ೩ | ೦ | ೦ |
| ಡಿಟೋ ದುಯ್ಯಂ | ೧ | ೨ | ೦ |
| ವೃಷಭೇಂದ್ರವಿಜಯ | ೧ | ೮ | ೦ |
| ಪಂಚಭಾಷೆ ಬಾಲಶಿಕ್ಷೆ | ೦ | ೬ | ೦ |
| ಹನುಮದ್ವಿಲಾಸ | ೦ | ೬ | ೦ |
| ಕಾಳೀಮರ್ದನ | ೦ | ೨ | ೦ |
| ಸುಭದ್ರಾಪರಿಣಯ | ೦ | ೨ | ೦ |
| ಶಶಿರೇಖಾಪರಿಣಯ | ೦ | ೨ | ೬ |
| ಸುದಾಮಚರಿತ್ರೆ | ೦ | ೧ | ೦ |
| ಮೈರಾವಣ ಚರಿತ್ರೆ | ೦ | ೧ | ೬ |
| ಬಾಲಗ್ರಹಚಿಕಿತ್ಸೆ | ೦ | ೧ | ೦ |
| ಮಹಮ್ಮದ್ ಲಾ | ೧ | ೦ | ೦ |
| ಭ್ರಾಂತಿವಿಲಾಸ | ೦ | ೧೨ | ೦ |

## BANGALORE CITY MUNICIPALITY.

### ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ನಾಳೇ ಬರುವ ಸಾಲಿಗೆ ಅಂದರೆ ಸರ್ 1894—95 ನೇ ಇಸವಿಗೋಸ್ಕರ ಬೇಕಾಗುವ ರಸ್ತೆಗಳ ದುರಸ್ತಿ ಜಮಾವಣೆ ಮತ್ತು ಬಿಛಾವಣೆಗಳಿಗಾಗಿ ದರಖಾಸ್ತುಗಳು.

ಬೆಂಗಳೂರ್ ಸಿಟಿ ಮ್ಯುನಿಸಿಪಲ್ ಪ್ರೆಸಿಡೆಂಟರಿಂದ ಸರ್ 1893ನೇ ಇಸವಿ ಡಿಸೆಂಬರ್ ಮಾಹೇ 20 ನೇ ತಾರೀಖ್ ಮಧ್ಯಾಹ್ನದ ವರಿಗೂ ಅಂಗೀಕರಿಸಲ್ಪಡುವದು. ದರಖಾಸ್ತುಗಳು ಅರಗುಮೊಹರ್ ನಿಶಿ ಕಳುಹಿಸಲ್ಪಡಬೇಕು.

ಕಾಂಗಾರಿಗಳ ನಾನಾವಿಧವಾದ ಬಾಬುಗಳ ಸುಮಾರ್ ಮೊತ್ತಗಳು ಇದರಲ್ಲಿ ಜಂಟಿಸಿರುವ ಪಟ್ಟಿಯಲ್ಲಿ ನಮೂದಿಸಲ್ಪಟ್ಟಿರುತ್ತವೆ. ಮೊತ್ತಗಳು ಇಷ್ಟೇ ಎಂದು ನಿಬಂಧನೆ ಇಲ್ಲ. ದರಖಾಸ್ತು ನಮೂನೆ ಷರತ್‌ಗಳು ಮತ್ತು ಕೆಲಸಗಳ ತರಹಾಗಳು ಬೆಂಗಳೂರ್ ಕಿಲ್ಲೇಯಲ್ಲಿ ಮ್ಯುನಿಸಿಪಲ್ ಎಗ್ಸಿಕ್ಯುಟಿವ್ ಇಂಜನಿಯರ್ ಸಾಹೇಬರವರ ಆಫೀಸಿನಲ್ಲಿ ಪ್ರತಿ ದಿವಸದಲ್ಲಿಯೂ ಮಧ್ಯಾಹ್ನ 11 ಘಂಟೆ ಲಾಗಾಯಿತು 4 ಘಂಟೆ ವರಿಗೂ ನೋಡಲ್ಪಡಬಹುದು.

| ನಂಬರು. | ತಪಶೀಲ್. | [illegible] | [illegible] | [illegible] | [illegible] | [illegible] |
|---|---|---|---|---|---|---|
| | ಜಮಾವಣೆ. | | | | | |
| 1 | ಲಾಟರೈಟ್ ... | ಸಲಿಗಜ. | 1500 | ,, | 500 | 2000 |
| 2 | ಬಂಡೆಜಲ್ಲಿ ... | ಡಿಟೋ | 500 | 500 | 500 | 1500 |
| 3 | ಕಾಡುಜಲ್ಲಿ ... | ಡಿಟೋ | 1000 | 1000 | 1000 | 3000 |
| 4 | ಗ್ರಾವಲ್ ... | ಡಿಟೋ | 1000 | 3000 | 2000 | 6000 |
| | ಬಿಛಾವಣೆ. | | | | | |
| 5 | ಲಾಟರೈಟ್ ... | ಡಿಟೋ | 1500 | ,, | 500 | 2000 |
| 6 | ಬಂಡೆ ಜಲ್ಲಿ ... | ಡಿಟೋ | 500 | 500 | 500 | 1500 |
| 7 | ಕಾಡು ಜಲ್ಲಿ ... | ಡಿಟೋ | 1000 | 1000 | 1000 | 3000 |
| 8 | ಗ್ರಾವಲ್ ... | ಡಿಟೋ | 1000 | 3000 | 2000 | 6000 |
| 9 | ಮರಳು ... | ಡಿಟೋ | 200 | 300 | 200 | 700 |
| 10 | ಮಟ್ಟಿ ಕಾಮಗಾರಿ ... | ಡಿಟೋ | 1000 | 2000 | 1500 | 4500 |
| 11 | ಪಿಕಿಂಗ್ ಮತ್ತು ಫಾರ್ಮಿಂಗ್ ಜಲ್ಲಿ ರಸ್ತೆ ... | ಚದರಗಜ. | 12000 | 5000 | 8000 | 25000 |
| 12 | ಸದರಿ ಗ್ರಾವಲ್ ರಸ್ತೆ ... | ಡಿಟೋ | 5000 | 15000 | 10000 | 30000 |

ಬೆಂಗಳೂರು ಸಿಟಿ ಮ್ಯುನಿಸಿಪಲ್ ಆಫೀಸ್. ತಾರೀಖ್ 16 ನೇ ನವಂಬರ್, 1893.

K. SRINIVASA RAO,
*Vice President,*
*City Municipal Commission.*

## ಮೈಸೂರ್ ಗವರ್ನಮೆಂಟ್

### ನೋಟೀಸ್.

ತಾ|| ೨ನೇ ಡಿಸೆಂಬರ್ ೧೮೯೩.

ಬೆಂಗಳೂರಲ್ಲಿರುವ ಲ್ಯೂನಿಟಿಕ್ ಮತ್ತು ಲೆಪ್ಪರ್ ಅಸೈಲಂ, (ಹುಚ್ಚರ ಮತ್ತು ಕುಷ್ಠ ರೋಗಿಗಳ ಆಸ್ಪತ್ರೆ), ಗವರ್ನಮೆಂಟ್ ಸಿಟಿ ಆಸ್ಪತ್ರೆ, ಪ್ರಸವ ಆಸ್ಪತ್ರೆ, ಮತ್ತು ಮೆಡಿಕಲ್ ಸ್ಟೋರಿಗೆ ಬೇಕಾದ ಆಹಾರ ಪದಾರ್ಥಗಳು, ಔಷಧ ಜಿನಸುಗಳು ಮತ್ತು ಇತರ ಚಿಲ್ಲರೆ ಸಾಮಾನುಗಳಿಗಾಗಿ ಮೈಸೂರ್ ಗವರ್ನಮೆಂಟ್ ಸೀನಿಯರ್ ಸರ್ಜಿಯನ್ ಮತ್ತು ಸಾನಿಟರಿ ಕಮಿಷನರ್ ಸಾಹೇಬರವರು ಸರ್ ೧೮೯೩ ನೇ ಇಸವಿ ಡಿಸೆಂಬರ್ ೨೦ನೇ ತಾರೀಖಿನ ವರೆಗೆ ಟೆಂಡರ್‌ಗಳನ್ನು ತೆಗೆದುಕೊಳ್ಳುತ್ತಾರೆ. ಇದರ ತಪಸೀಲು ಬಗ್ಗೆ ೧೮೯೩ನೇ ಇಸವಿ ನವಂಬರ್ ೩೦ನೇ ತಾರೀಖಿನ ಮೈಸೂರ್ ಗೆಜೆಟ್ ನೋಡತಕ್ಕದ್ದು.

T. J. McGANN, F.R.C.S.E., *Bri. Surgn. Lt.-Col.,*
*Senior Surgeon & Sanitary Commr. with the Govt. of Mysore, in charge Lunatic and Leper Asylums, Govt. City Hospital & Maternity, Bangalore.*

## NOTICE.

### "ಆಂಗ್ಲೋ ಇಂಡಿಯನ್ ಪಾಕೆಟ್‌ಡೈರಿ"

ನಾವು ಪ್ರತಿ ವರ್ಷದಲ್ಲಿಯೂ ಪ್ರಕಟಿಸುತ್ತಿರುವ ಹಾಗೆ ಸರ್ವರಿಗೂ ಬಹಳ ಉಪಯುಕ್ತವಾಗಿರುವಂತೆ ಇಂಗ್ಲಿಷ್ ತಿಂಗಳ ತಾರೀಖುವಾರ, ಇದಕ್ಕೆ ಸರಿಯಾದ ನಮ್ಮ ಹಿಂದೂ ಸಂವತ್ಸರ, ತಿಂಗಳು, ತಿಥಿ, ವಾರ, ನಕ್ಷತ್ರ ಸಹಿತವಾಗಿಯೂ, ಇನ್ನೂ ಅವಶ್ಯಕವಾಗಿ ತಿಳಿಯಬೇಕಾದ ಸಂಗತಿಗಳು, ರೈಲ್ವೇ ಸ್ಟೇಷನುಗಳು, ಅಲ್ಲಿಗೆ ರೈಲ್ವೇ ಚಾರ್ಜ್, ಪೋಸ್ಟಾಫೀಸ ರೂಲ್ಸ್, ಮುಂತಾದ ವಿಶೇಷ ಸಂಗತಿಗಳನ್ನು ಕೂಡಿಸಿರುವ ೧೮೯೪ ನೇ ಇಸವಿಯ ದಿನಚರಿ ಪುಸ್ತಕವನ್ನು ವಿಕ್ರಯಕ್ಕೆ ಸಿದ್ಧಪಡಿಸುತ್ತೇವೆ.

ಕ್ರಯ ಪ್ರತಿ ೧ಕ್ಕೆ ಟಪಾಲ್ ಹಾಸಲ್‌ಸಹಿತ ೦—೩—೬

೨೫ಪ್ರತಿ ಒಟ್ಟಿಗೆ ತರಿಸಿಕೊಳ್ಳತಕ್ಕವರಿಗೆ ೧ ಪ್ರತಿ ಜಾಸ್ತಿಯಾಗಿ ಕಳುಹಿಸುತ್ತೇವೆ. ಬೇಕಾದವರು ಈ ಕೆಳಗೆ ಸ್ವಾಕ್ಷರ ಮಾಡಿರುವವರ ಹೆಸರಿಗೆ ಬರೆದು ತರಿಸಿಕೊಳ್ಳಬಹುದು. ಪ್ರತಿ ಭಾಗಕ್ಕೂ ರಿಜಿಸ್ಟರ್ ಹಾಸಲ್ ೨ ಆಣೆ ಜಾಸ್ತೀ ಕಳುಹಿಸಿ ಕೊಡಬೇಕು. ಅಪೇಕ್ಷೆಯುಳ್ಳವರು ವಿಳಾಸ ವಗೈರೆಯನ್ನು ಸ್ಪಷ್ಟವಾಗಿ ತಿಳಿಯುವಂತೆ ಬರೆಯಬೇಕು.

೫—೧೧—೯೩. ಸೋಮ ಚಂದ್ರಶೇಖರಯ್ಯ, ಪ್ರೊಪ್ರೈಟರ್, "ವರ್ನಾಕ್ಯುಲರ್ ಸ್ಟೇಷನರಿ ಡಿಪೋ", ಬೆಂಗಳೂರ್.

## ADVERTISEMENTS.

### NOTICE.

VAIDYASARA SANGRAHA.

A TREATISE ON THE PRINCIPLES OF HINDU MEDICINE.

*Price including Postage Rs. 4-6-0*

ವೈದ್ಯಸಾರ ಸಂಗ್ರಹ.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಹಾಸಲ್ ಸಹಿತ, ಪ್ರತಿ ಒಂದಕ್ಕೆ ರೂ 4—8—0

### ನೋಟೀಸ್.

ಬೆಂಗಳೂರು ಕರ್ನಾಟಕ್ ಪ್ರೆಸ್.

೧೮೭೪ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ ಸಕಲವಿಧ ಕೆಲಸಗಳು ಸುಲಭ ಛಾರ್ಜಿಗೆ ಶೀಘ್ರವಾಗಿಯೂ ಶ್ಲಾಘ್ಯವಾಗಿಯೂ, ಮಾಡಲ್ಪಡುವವು.

ಇದರಲ್ಲಿ ಸದ್ಯಕ್ಕೆ ಇಂಗ್ಲಿಷ್ ಕನ್ನಡ ಕೆಲಸಗಳು ಮಾತ್ರನೇ ನಡೆಯುತ್ತಿವೆ. ಇತರ ತಪಶೀಲ್‌ಗಳನ್ನು ಸದರೀ ಕಾರ್ಖಾನೆಯ ಪ್ರೊಪ್ರೈಟರಿಗೆ ಬರೆದು ತಿಳಿದುಕೊಳ್ಳಬಹುದು.

## THE MONEY MARKET.

**Stocks, Shares and Exchange.**

ಮದರಾಸು, ಶನಿವಾರ, ತಾರೀಖ್ 2 ನೇ ಡಿಸಂಬರ್, 1893.

ನೇಕಡ ೪ರೂ. ಬಾಬತು ಇಂಡ್ಯಗವರ್ನಮೆಂಟ್ ಪತ್ರಗಳು 104-14-0ರೂ.ಗಳಿಂದ 105-6-0 ರೂ. ವರೆಗೆ

ಸೇಕಡ ಮೂರುವರೆ ರೂ ಬಾಬತು ಗವರ್ನಮೆಂಟ್ ಪತ್ರಗಳು, 98-8-0 ರೂ. ಗಳಿಂದ 99-0-0 ವರೆಗೆ

ಮದರಾಸ ಬ್ಯಾಂಕ್ ಷೇರಗಳು, (500) ರೂಪಾಯಿಗಳ ಬಾಬತು, 990-0-0ರೂ. ಗಳಿಂದ995-0-0ವರೆಗೆ

ಕಮರ್ಷಿಯಲ್ ವ ಲ್ಯಾಂಡ್ ಮಾರ್ಟಗೇಜ್ ಬ್ಯಾಂಕ್ ಷೇರಗಳು, (100ರೂ) ಬಾಬತು 150-0-0ರೂ ಗಳಿಂದ 155-0-0 ರೂ ವರೆಗೆ.

ಸವರ್ನಗಳು, ದರ 1 ಕ್ಕೆ 15-14-0 ರೂಪಾಯಿಗಳಿಂದ 16-1-0 ರೂ. ವರೆಗೆ.

ಲಂಡನ್ ಬ್ಯಾಂಕಿನಮೇಲೆ ಕೊಡಲ್ಪಡುವ ಬ್ಯಾಂಕ್ ಬಿಲ್ಸ್ ಯೂನೆ ದರ್ಶನ ಹುಂಡಿಗಳು :—

6 ತಿಂಗಳ ಮಾಮಿದಗೆ...1 ಶಿ. 3 11/32*d*.

4 „ ...1 ಶಿ. 3 9/32*d*.

ಕೇಳಿದಾಗಕೊಡಲ್ಪಡುವವಕ್ಕೆ ...1 ಶಿ. 3 3/16*d*

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

MONDAY, DECEMBER 4, 1893.

೧೮೯೩ ನೇ ಇಸವಿ ಡಿಸಂಬರ ೪ ನೇ ತಾ|| ಸೋಮವಾರ

## ಮೈಸೂರ್ ದರ್ಬಾರ್.

ಶ್ರೀಮತ್ ಮಹಾರಾಜ್ಞೀ ಇಂಡ್ಯ ಚಕ್ರವರ್ತಿನೀಯವರು ಶ್ರೀಮತ್ ಮೈಸೂರು ಮಹಾರಾಣಿಯವರಿಗೆ ಅತ್ಯಂತ ಪ್ರೀತಿ ಗೌರವದೊಡನೆ ಕೃಪೆಗೈದ «ಕ್ರೌನ್ ಆಫ್ ಇಂಡ್ಯ ಅಂದರೆ, ಇಂಡ್ಯದೇಶದಕ್ಕೆ ಮಕುಟಸದೃಶವೆಂಬ ಮಹಿಮಾಸ್ಪದವಾದ ಪ್ರಶಸ್ತಿಯನ್ನೂ ಅವರದಿವ್ಯಾಜ್ಞಾರೂಪವಾದನಿರೂಪವನ್ನೂ ಶ್ರೀಮಾಣೀವಿಲಾಸ ಸನ್ನಿಧಾನದಲ್ಲಿ ಒಪ್ಪಿಸತಕ್ಕಬಗ್ಗೆ ಕಳೆದತಿಂಗಳ೨೮ನೇ ತಾರೀಖ್ ಮಂಗಳವಾರದದಿನ ಮೈಸೂರಲ್ಲಿ ಅರಮನೆಯೊಳು ಒಂದುದರ್ಬಾರ್‌ಜರಗಿತು. ಆ ಸಂದರ್ಭದಲ್ಲಿನಡೆದ ವಿಶೇಷಾಂಶಗಳಂ ಅಲ್ಲಿದ್ದುನೋಡಿ ಆನಂದಿಸಿದಂತಾ ನಮ್ಮ ಬಾತಮೀದಾರರೊಬ್ಬರು ತಾದೃಶ ಆನಂದವಂ ಏತದ್ದೇಶೀಯರೆಲ್ಲರು ಶ್ರವಣಮೂಲಕ ಅನುಭವಿಸಬೇಕೆಂಬ ಕುತೂಹಲದೊಡನೆ ಆನುಪೂರ್ವಿಯಾಗಿ ಬರೆದು ಕಳುಹಿಸಿರುವ ಲೇಖನವನ್ನಿ ದರಡಿ ಅತ್ಯುತ್ಸಾಹದೊಡನೆ ಪ್ರಕಟಿಸುತ್ತೇವೆ :—

ಮೈಸೂರು ದೇಶೀಯ ಚರಿತ್ರೆಯೊಳು ಪ್ರಾಧಾನ್ಯೇನ ಪರಿಗಣನೀಯವಾದ ಪ್ರಸಕ್ತ ಪ್ರಬಲ ಸಂದರ್ಭಕ್ಕಾಗಿ ೧೮೯೩ನೇ ಇಸವಿ ನೆವಂಬರ್೨೮ ನೇ ತಾರೀಖಾದ ಮಂಗಳವಾರದದಿನ ಸಾಯಂಕಾಲ ೪½ ಘಂಟೆಗೆ ಸರಿಯಾಗಿ ಶ್ರೀಮನ್ಮಹಾರಾಜರವರು, ದರ್ಬಾರ್ ಹಾಲಿಗೆ ಯುವರಾಜರೊಡನೆಯೂ, ರಾಜಪುತ್ರಿಯರೊಡನೆಯೂ ದಯಮಾಡಿ ತಮ್ಮ ಭದ್ರಾಸನವನ್ನಲಂಕರಿಸಿದರು. ಇದಕ್ಕೆ ಪೂರ್ವಭಾವಿಯಾಗಿ ಅಲ್ಲಿಬಂದು ನೆರದಿದ್ದ ದಿವಾನರು ಪ್ರಭೃತಿ ಸಂಸ್ಥಾನದ ಉನ್ನತಾಧಿಕಾರಿಗಳೂ ರಾಜಬಂಧುಗಳೂ ಭಕ್ತಿಭರವಿನಮ್ರರಾಗಿ ಮಹಾರಾಜರಿಗೂ ಯುವರಾಜರಿಗೂ ಮುಜರೆ ಮಾಡಿ ಎಲ್ಲರು ತಮ್ಮ ನಿಯತಸ್ಥಾನಗಳಲ್ಲಿ ಕುಳಿತುಕೊಂಡರು. ದರ್ಬಾರ್ ಹಾಲಿನ ಮತ್ತೊಂದು ಪಾರ್ಶ್ವದಲ್ಲಿ ಹಾಕಲ್ಪಟ್ಟದ್ದ ಕೇಕಾಫ್ ಪರದೆಯ ಒಳಭಾಗದಲ್ಲಿ ಶ್ರೀಮನ್ಮಹಾರಾಣಿಯವರು ತಮ್ಮ ಮಿತ್ರವರ್ಗದೊಡನೆ ಬಿಜಮಾಡಿದ್ದರು. ೫ ಘಂಟೆಗೆ ಸರಿಯಾಗಿ ಇಲ್ಲಿನ ಬ್ರಿಟಿಷ್ ರೆಸಿಡೆಂಟರಾದ ಕರ್ನಲ್ ಪಿ. ಹೆಚ್. ಡಿ. ಹೆಂಡರ್‌ಸನ್ ಸಿ. ಎಸ್. ಐ. ಯವರು, ತಮ್ಮ ಅಸಿಸ್ಟೆಂಟರಾದ ಮೇಜರ್ ಸಿ. ಡಬ್ಲ್ಯೂ ರೆವೆನ್‌ಷಾಯವರೊಡನೆ ಅರಮನೆಗೆ ದಯಮಾಡಿದರು. ರೆಸಿಡೆನ್ಸಿ ಬಂಗ್ಲೆಯ ಮೊದಲು ಅರಮನೆಯ ಬಾಹ್ಯಾಂಗಣದವರೆಗೆ ರೆಸಿಡೆಂಟರವರ ಸವಾರಿಯೊಡನೆ ಗೌರವಾರ್ಥ ಒಂದು ರಿಸಾಲೆ ಮೈಸೂರ್ ಸವಾರರು ಅನುವರ್ತಿಸಿ ಬಂದರು. ಮಾಮೂಲಿ ಪ್ರಕಾರ ತೋಫ಼ುಗಳು ವಗೈರೆ ಇತರ ಮರ್ಯಾದೆಗಳೆಲ್ಲವು ನಡೆದವು. ರೆಸಿಡೆಂಟರವರು ತಮ್ಮ ಗಾಡಿಯಿಂದ ಇಳಿಯುವಷ್ಟರಲ್ಲಿ ಮಹಾರಾಜರವರ ಮಿಲಿಟರಿ ಬಕ್ಷಿಯವರಾದ ರಾಜಸಭಾಭೂಷಣಂ ಮ||ರಾ|| ಅರೇಕೆರೆ ಬಸಪ್ಪಾಜಿ ಅರಸರವರೂ, ಚೀಫ್‌ಸೆಕ್ರೆಟರಿ ಮ|| ಟಿ. ಆನಂದರಾಯರವರೂ ಹೋಗಿ ಅವರು ಬರಮಾಡಿಕೊಂಡರು. ಎಲ್ಲರು ರೆಸಿಡೆಂಟರೊತಳೆ ಕನ್ನಡಿ ತೊಟ್ಟಿಯ ಸಮೀಪಕ್ಕೆ ಹೋಗುವಾಗ್ಯೆ ರಾಜ್ಯಧುರಂಧರರಾದ ಸರ್. ಕೆ. ಶೇಷಾದ್ರಿಅಯ್ಯರ್ ಕೆ. ಸಿ. ಎಸ್. ಐ ಯವರು, ಇದಿರ್ಗೊಂಡು ರೆಸಿಡೆಂಟರಿಗೆ ಹಸ್ತಚಾಲನಪೂರ್ವಕ ವಂದನವಂ ಮಾಡಿ, ಅವರು ದರ್ಬಾರ್‌ಹಾಲಿಗೆ ಕರೆದುಕೊಂಡು ಹೋದರು. ಸದರೀ ಸೌಧಪ್ರವೇಶ ಸಮಯದಲ್ಲಿ ಶ್ರೀಮನ್ಮಹಾರಾಜರವರು ಇದಿರ್ಗೊಂಡು ಅವರು ಕರೆದುಕೊಂಡು ಹೋಲು ಅವರು ಮಹಾರಾಜರ ಭದ್ರಾಸನದ ವಾಮಪಾರ್ಶ್ವದೊಳು ಸನ್ನದ್ಧವಾಗಿದ್ದ ಮತ್ತೊಂದು ಆಸನದಲ್ಲಿ ಕುಳಿತುಕೊಂಡರು. ಈ ಮಧ್ಯೆ ಸಭಾಸದರೆಲ್ಲರೂ ಪ್ರತ್ಯುತ್ಥಾನವಂ ಮಾಡಿ ಮಹಾರಾಜರವರೂ ರೆಸಿಡೆಂಟರವರೂ ನಿಜಾಸನಾಸೀನರಾಗುವ ತನಕ ನಿಂತುಕೊಂಡಿದ್ದರು. ಅನಂತರ ಎಲ್ಲರೂ ತಮ್ಮತಮ್ಮ ಸ್ಥಾನಗಳಲ್ಲಿ ಕುಳಿತುಕೊಂಡಕೂಡಲೆ ರೆಸಿಡೆಂಟರವರು, ತಮ್ಮ ಆಗಮನೋದ್ದೇಶವಂ ಸೂಚಿಸಿ, ಶ್ರೀಮನ್ವಿಕ್ಟೋರಿಯಾ ಚಕ್ರವರ್ತಿನೀಯವರು, ವಿಶೇಷ ಗೌರವಪ್ರದರ್ಶಕವಾದ ಪ್ರಸಕ್ತ ಘನತರ ಪ್ರಶಸ್ತಿಯಂ ಶ್ರೀಮತ್ ಮಹಾರಾಣಿಯವರಿಗೆ ದಯಪಾಲಿಸಿದ್ದಕ್ಕಾಗಿ, ಆಕೆಯವರಿಗೂ ಶ್ರೀಮನ್ಮಹಾರಾಜರವರಿಗೂ, ತಾವು ಮನಃಪೂರ್ವಕ ಸಂಭ್ರಮಾದನ ಮಾಡುವಂತೆ ತಿಳಿಸಿ, «ಇಂಪೀರಿಯಲ್ ಆರ್ಡರ್ ಆಫ್ ದಿ ಕ್ರೌನ್ ಆಫ್ ಇಂಡ್ಯ" ಎಂಬ ಪ್ರಶಸ್ತಿ ಸೂಚಕವಾದ ಬಿರುದನ್ನೂ, ಅಂತಾ ಪ್ರಶಸ್ತಿಯುಂತಾವು ಕೃಪೆಗೈದಿರುವಂತೆ ಚಕ್ರವರ್ತಿನೀಯವರು ಆಜ್ಞಾಪಿಸಿದಂತಾ ನಿರೂಪವನ್ನೂ ಮಹಾರಾಣೀಯವರ ಸನ್ನಿಧಿಯಲ್ಲಿ ಅರ್ಪಿಸುವಂತೆ ನಿಯಮಿಸಿ ಬರೆದಂತಾ, ಘನವೆತ್ತ್ಕೈದಿದ ವೈಸ್‌ರಾಯ್ ವ ಗವರ್ನರ್ ಜನರಲ್ ಸಾಹೇಬರವರ ಕರೀತಾವಿನೊಡನೆ ಮಹಾರಾಜರವರ ವಶಕ್ಕೊಪ್ಪಿಸಿದರು. ತರುವಾಯ ಅವರವಂ ಆದರದೊಡನೆ ಅಂಗೀಕರಿಸಿ ಯುವರಾಜರ ಮೂಲಕ ಮಹಾರಾಣಿಯವರ ಸನ್ನಿಧಿಯಲ್ಲಿ ತಲಪಿಸಿದರು. ಈ ಸಮಯದಲ್ಲಿ ರಾಜಸಭಾಸದರೆಲ್ಲರು ಗೌರವಪ್ರದರ್ಶನಾರ್ಥ ನಿಂತಿದ್ದರು. ರಾಜಕಾರ್ಯಪ್ರಸಕ್ತರಾದ ರಾಯಬಹದೂರ್, ದರ್ಬಾರ್ ಬಕ್ಷಿ ಮ|| ಏ ನರಸಿಂಹೈಯ್ಯಂಗಾರ್ಯರವರು, ವೈಸ್‌ರಾಯ್ ಯವರ ಕರೀತಾವನ್ನ ಸಭೆಯಲ್ಲಿ ಓದಲು ಅವರಿಗೆ ಅಪ್ಪಣೆ ಕೊಡಲ್ಪಟ್ಟಿತು. ಈ ವಿಶೇಷ ಸಂದರ್ಭ ಸೂಚಕವಾಗಿ ೩೧ ತೋಫುಗಳು ಹಾಕಲ್ಪಟ್ಟವು. ಅನಂತರ ಶ್ರೀಮನ್ಮಹಾರಾಜರವರು ತತ್ಸಂದರ್ಭೋಚಿತಗಳಾದ ಶಬ್ದಗಳಿಂದ ಚಕ್ರವರ್ತಿನೀಯವರು ದಯಪಾಲಿಸಿದ ಪ್ರಶಸ್ತಿಯಂ ತಾವೂ ಶ್ರೀಮನ್ಮಹಾರಾಣಿಯವರೂ ಬಹಳ ಸಂತೋಷದಿಂದಂಗೀಕರಿಸಿದಂತೆ ತಿಳಿಸಿದರು. ರೆಸಿಡೆಂಟರಿಗೆ ಗಂಧಪುಷ್ಪ ತಾಂಬೂಲಗಳು ಕೊಡಲ್ಪಟ್ಟ ಬಳಿಕ ಅವರು ಮಹಾರಾಜರವರ ಅನುಜ್ಞೆಯಂ ಪಡೆದು, ಮಾಮೂಲಿ ಮರ್ಯಾದೆಗಳೊಡನೆ ರೆಸಿಡೆನ್ಸೀ ಬಂಗ್ಲೆಗೆ ದಯಮಾಡಿದರು. ತರುವಾಯ ಹಾಜರಿದ್ದ ಇತರ ದೊಡ್ಡಮನುಷ್ಯರೆಲ್ಲರು ಮಹಾರಾಜರಿಗೆ ಮುಜರೆ ಮಾಡಿ ಅವರಿಂದಾಜ್ಞಾಪ್ತರಾಗಿ ಹೊರಟುಹೋದರು. ಆ ದಿನ ರಾತ್ರಿ ರೆಸಿಡೆಂಟರು ಮತ್ತು ಇತರ ಯೂರೋಪಿಯನ್ ಆಫಿಸರ್‌ಗಳಿಗೆಲ್ಲ ಶ್ರೀಮನ್ಮಹಾರಾಜರವರು ಗವರ್ನಮೆಂಟ್ ಹೌಸಿನಲ್ಲಿ ಔತನ ಮಾಡಿಸಿದರು. ರೆಸಿಡೆಂಟರೂ ಅವರ ಅಸಿಸ್ಟೆಂಟರು ಸಹ ಮಾರನೆಯ ದಿನ, ಬೆಂಗಳೂರಿಗೆ ವಾಪಸ್ ಹೊರಟುಹೋದರು.

ಮೇಲೆ ತಿಳಿಸಲ್ಪಟ್ಟ ಅಸಾಧಾರಣವಾದ ಪ್ರಶಸ್ತಿಯು ಶ್ರೀಮನ್ಮಹಾರಾಣಿಯವರಿಗೆ ಲಭಿಸಿದ್ದಕ್ಕಾಗಿಯೂ, ಈ ಮೈಸೂರು ರಾಜಮಂಡಲ ವಿಷಯದಲ್ಲಿ ಚಕ್ರವರ್ತಿನೀಯವರು ಪಡೆದಿರತಕ್ಕ ಅಂತರವಾದ ಅಭಿಮಾನವಂ ಆಕೆಯವರು ಉಚಿತ ಸಂದರ್ಭಗಳಲ್ಲಿ ನಾನಾಪ್ರಕಾರದಿಂ ವ್ಯಕ್ತಪಡಿಸುತ ಬರುವದಕ್ಕಾಗಿಯೂ, ಶ್ರೀಮನ್ಮಹಾರಾಜರವರು ತಮ್ಮ ವರ್ತನೆಗಳಿಂದಲೂ, ಗುಣಗಳಿಂದಲೂ, ಬ್ರಿಟಿಷ್ ಗವರ್ನಮೆಂಟಿನವರ ಅಭಿಮಾನಪಾತ್ರರಾಗುತ ಬರುವದಕ್ಕಾಗಿಯೂ ಮೈಸೂರು ದೇಶದ ಪ್ರಜೆಗಳು ಅನುಭವಿಸುವ ಸಂತೋಷಕ್ಕೆ ಪಾರವಿಲ್ಲದಿರುತಿವೆ.

## Occasional Notes.
## ನೈಮಿತ್ತಿಕ ವಿಷಯನ್ಯಾಸ

ಬರೋಡಾ ಗಾಯಕವಾಡಿ ಮಹಾರಾಜರವರು ರಾಜ್ಯಕಾರ್ಯ ನಿರ್ವಹಣ ವಿಷಯದಲ್ಲಿ ವಿಶೇಷ ಅವಧಾನವನ್ನಿತ್ತು ಬುದ್ಧಿವ್ಯಾಪಾರವಂ ವೃದ್ಧಿಗೊಳಿಸುತ ಬರುದರಿಂದ ಅವರ ದೇಹದಲ್ಲಿ ದೌರ್ಬಲ್ಯವು ಹೆಚ್ಚಿದೆಯೆಂದು ಕೇಳುತ್ತೇವೆ.

ವೃಕ್ಷಾದಿಗಳಿಗೆ ಸಹ ಪ್ರಾಣವಿರುವಂತೆಯೂ ಅವುಗಳು ತಮ್ಮ ಅಪೇಕ್ಷಿತಾಂಶಗಳನ್ನು ಎಲೆ ಮೊಗ್ಗುಗಳ ಮೂಲಕ ತಿಳಿಸುತಿವೆಯೆಂತಲೂ, ಆದಕಾರಣ ಅವುಗಳಗೂ ಒಂದು ಭಾಷೆ ಏರ್ಪಟ್ಟಿದೆಯೆಂತಲೂ ಕೊಲಂಬೋ ಪತ್ರಿಕೆಗೆ ಓಷಧಿಗಳಸ್ವರೂಪಲಕ್ಷಣಜ್ಞರೊಬ್ಬರು ಬರೆದಿರುತ್ತಾರೆ.

ಪೆರ್ಷಿಯ ಎಂಬ ಪ್ರದೇಶದಲ್ಲಿ ಪ್ರಾಪ್ತವಾದ ಭೂಕಂಪದ ದೆಸೆಯಿಂದ ಆ ಸ್ಥಳನಿವಾಸಿಗಳಾದವರು ೧೨೦೦೦ ಮಂದಿ ಮೃತಪಟ್ಟರೆಂತಲೂ, ೫೦,೦೦೦ ಕಾಲ್ನಡೆಗಳು ಹತವಾದವೆಂತಲೂ ಕಂಪವು ಇನ್ನೂ ಉಪಶಮಿಸಲಿಲ್ಲವೆಂತಲೂ ಕಳೆದ ತಿಂಗಳ ೨೩ ನೇ ತಾರೀಖಿನಲ್ಲಿ ಲಂಡನ್ ಪಟ್ಟಣದಿಂದ ತಂತಿ ವೃತ್ತಾಂತ ಬಂದಿರುತಿದೆ

ಜರ್ಮನೀ ಸರ್ಕಾರದವರಿಗೆ ಅಗ್ರಾಹ್ಯತರವಾದ ರಾಜಕೀಯ ವಿಷಯಗಳನ್ನು ಕುರಿತು ವೃತ್ತಾಂತ ಪತ್ರಿಕೆಗಳಲ್ಲಿ ವಿಚಾರ ಮಾಡಕೂಡದೆಂದು, ರಷ್ಯಾಚಕ್ರವರ್ತಿಯವರು ತಮ್ಮ ದೇಶದಲ್ಲಿರುವ ವೃತ್ತಾಂತ ಪತ್ರಿಕಾ ಲೇಖಕರಿಗೆಲ್ಲ ಖಂಡಿತವಾದ ಹುಕುಂ ಕೊಟ್ಟದಾರೆಂದು ಅಲ್ಲಿನ ಒಂದಾನೊಂದು ಪತ್ರಿಕೆ ತಿಳಿಸುತಿದೆ.

ಈ ತಿಂಗಳ ಅಂತ್ಯಭಾಗದಲ್ಲಿ ಲಾಹೋರಿನಲ್ಲಿ ನಡೆಯುವ ನ್ಯಾಷನಲ್ ಇಂಡಿಯನ್ ಕಾಂಗ್ರೆಸ್ ಸಭೆಗೆ ಪ್ರೆಸಿಡೆಂಟರಾಗಿ ಚುನಾಯಿತರಾಗಿರುವ ಆನರೆಬಲ್ ದಾದಾಭಾಯಿ ನೌರೋಜಿ ಯವರು, ನಿನ್ನೆಯದಿನ ಬೆಳಗ್ಗೆ ಇಂಗ್ಲಾಂಡಿನಿಂದ ಮುಂಬೈಗೆ ಬಂದು ಸೇರಿದರು. ಈ ದೊಡ್ಡಮನುಷ್ಯರನ್ನ ಏಡನ್ನಲ್ಲಿಯೂ, ಮುಂಬೈಯಲ್ಲಿಯೂ ಪ್ರಜೆಗಳು ಬಹಳ ಪ್ರೀತಿಗೌರವಗಳೊಡನೆ ಬರಮಾಡಿಕೊಂಡು ಸತ್ಕರಿಸಿದರೆಂದು ತಿಳಿಯಬರುತಿದೆ

ಇಂಡ್ಯ ವೈಸ್‌ರಾಯಿಯವರ ಕೌನ್ಸಿಲಿನಲ್ಲಿ ಈಗ್ಯೆ ೫ ವರುಷಗಳ ಕಾಲವಾಗಿ ಫೈನಾನ್ಷಿಯಲ್ ಮೆಂಬರಾಗಿದ್ದ ಸರ್. ಡೆವಿಡ್ ಬಾರ್ಬರ್ ಯವರು, ಇಂಡ್ಯ ಗವರ್ನಮೆಂಟಿನವರ ಫೈನಾನ್ಸ್ ಮಿನಿಸ್ಟರೆಂಬ ಅಧಿಕಾರದ ಚಾರ್ಜನ್ನು, ಆಚೆ ಶುಕ್ರವಾರದದಿನ ಜೇಂಸ್ ವೆಸ್ಟ್‌ಲಾಂಡ್ ಯೆಂಬವರಿಗೊಪ್ಪಿಸಿ ಆ ಮಾರನೆಯದಿನ ಮಧ್ಯಾನ್ಹಾತ್ಪರ ಕೈಸರ್ ಯೆಂಬ ಹೊಗೆ ಜಹಜ್‌ನಲ್ಲಿ ಇಂಗ್ಲಾಂಡಿಗೆ ಪ್ರಯಾಣವಾದರೆಂದು ಅರಿತೆವು.

ಪ್ರಜೆಗಳಿಗೆ ಬೀತಿಯನ್ನೂ ಆವೇಗವನ್ನೂ ಹುಟ್ಟಿಸುವಂತೆ ನಿರಾಧಾರಗಳಾದ ವೃತ್ತಾಂತಗಳನ್ನು ಅವುಗಳ ಯಾದಾರ್ಥ್ಯವನ್ನರಿತುಕೊಳ್ಳದೆ ಪತ್ರಿಕೆಯಲ್ಲಿ ಪ್ರಕಟಿಸಕೂಡದೆಂದು, ಕಲ್ಕತ್ತೆಯ ಅಮೃತಬಜಾರ್ ಪತ್ರಿಕಾ ಲೇಖಕರಿಗೆ ಬಂಗಾಳೇ ಗವರ್ನಮೆಂಟಿನವರು ಎಚ್ಚರಿಸಿರುವದಂ ಸದರೀ ಪತ್ರಿಕಾ ಲೇಖಕರು ಸರ್ಕಾರದವರ ಅಭಿಪ್ರಾಯವನ್ನು ನಮ್ರಭಾವದೊಡನೆ ಅಂಗೀಕರಿಸಿದರೆಂದು ಕೇಳುತ್ತೇವೆ.

ತುರ್ಕೀ ದೇಶಕ್ಕೆ ಸೇರಿದ ಅಲ್ಬೇನಿಯಾ ರಾಜ್ಯದ ಪ್ರಧಾನನಗರಗಳಲ್ಲೊಂದಾದ ಪ್ರಿಸರೆಂಡ್ ಯೆಂಬ ಪ್ರದೇಶವನ್ನು ಆರ್ನಾಟ್ಸ್ ಎಂಬ ಅಲ್ಬೇನಿಯಾ ದೇಶೀಯರು ಕೆಲವರು ಮುತ್ತಿಗೆ ಹಾಕಿ ಅದಂ ಸ್ವಾಧೀನ ಪಡಿಸಿಕೊಂಡರು. ಸದರೀ ಪಟ್ಟಣದಲ್ಲಿ ೫೦,೦೦೦ ಮೊದಲು ೮೦,೦೦೦ಸಾವಿರ ಪ್ರಜೆಗಳ ತನಕ ವಾಸವಾಗಿದ್ದಾರೆ. ಅಲ್ಲಿನ ಕೋಟೆಯ ರಕ್ಷಣಾರ್ಥ ಇಡಲ್ಪಟ್ಟದ್ದ ತುರ್ಕೀ ಸೈನಿಕರನ್ನು ತಮ್ಮ ಸ್ವಾಧೀನರಾಗಬೇಕೆಂದು ಕಲಹಿಗಳು ಬಲಾತ್ಕರಿಸಿ ಸ್ವವಶ ಪಡಿಸಿಕೊಂಡಂತೆ ವೃತ್ತಾಂತ ಬಂದಿರುತಿದೆ.

ವಿಚಿತ್ರವಾದ ಇದರಡಿ ತಿಳಿಸಲ್ಪಟ್ಟಿರುವ ಒಂದು ನ್ಯಾಯ ವಿಷಯವು ಸಿಲೋನ್ ಹೈಕೋರ್ಟಿನವರಿಂದ ವ್ಯವಸ್ಥೆ ಮಾಡಲ್ಪಟ್ಟಂತೆ ಅಲ್ಲಿನ ಪತ್ರಿಕೆಯೊಂದು ತಿಳಿಸುತಿದೆ, ಹ್ಯಾಗಂದರೆ,— ಸಿಲೋನ್‌ನಲ್ಲಿರತಕ್ಕ ಒಬ್ಬ ಕಾಫಿಪ್ಲ್ಯಾಂಟರಿನ ಬಳಿ ನೌಕರಿಯಲ್ಲಿರುವ ಒಬ್ಬ ನೇಟಿವನ್ನು ದಸ್ತಗಿರಿ ಮಾಡತಕ್ಕ ಬಗ್ಗೆ ಅಲ್ಲಿನ ಪೊಲೀಸಿನವರು ಅರವ ಭಾಷೆಯಿಂದ ಬರೆಯಲ್ಪಟ್ಟದ್ದ ವಾರಂಟನ್ನು ತಂದು ಸದರೀ ಪ್ಲ್ಯಾಂಟರ ಕೈಯಲ್ಲಿ ಕೊಟ್ಟು ಅತನ ನೌಕರನನ್ನು ತಮ್ಮ ಸುಪರ್ದಿಗೊಪ್ಪಿಸಬೇಕೆಂದು ಕೇಳಿದರು. ಆಗ ಕಾಫಿಪ್ಲ್ಯಾಂಟರು, ಸದರೀ ವಾರಂಟು ಇಂಗ್ಲಿಷ್ ಭಾಷೆಯಲ್ಲಿ ತಯಾರ್ಮಾಡಲ್ಪಟ್ಟದ್ದಾಗಿದ್ದರೇನೆ ಆ ವರಲ್ಲಿ ಕಂಡ ನೌಕರನ ದಸ್ತಗಿರಿಗೆ ಅವಕಾಶ ಕೊಡಲ್ಪಡುವದಲ್ಲದೆ ಈಗ ಕೊಟ್ಟಿರತಕ್ಕ ವಾರಂಟನ್ನು ತಾನು ಅಂಗೀಕರಿಸುವದಿಲ್ಲವೆಂದು ನಿರಾಕರಿಸಿ ಪೊಲೀಸಿನವರನ್ನು ತಡೆದುಬಿಟ್ಟನು ತರುವಾಯ ಪೊಲೀಸಿನವರು ನ್ಯಾಯವಾದ ತಮ್ಮ ಅಧಿಕಾರವನ್ನು ಕಾನೂನ್ ಅನುಸರಿಸಿ ಚೆಲಾಯಿಸಲಿಕ್ಕೆ ಹೋದಾಗ ಅಕ್ರಮವಾಗಿ ತಮ್ಮನ್ನು ಧಿಕ್ಕರಿಸಿ ತಡೆದನೆಂಬ ಅಪರಾಧಕ್ಕಾಗಿ ಕಾಫಿ ಪ್ಲ್ಯಾಂಟರಿನ ಮೇಲೆ ದಾವಾ ತಂದರು. ಈ ಪೊಕದ್ದಮೆಯಲ್ಲಿ ಉಭಯ ಪಕ್ಷದ ವಕೀಲರು ವಿಚಾರಮಾಡಿದ ತರುವಾಯ,ಕಾಫಿ ಪ್ಲ್ಯಾಂಟರ ಪರವಾಗಿ ಮೊಕದ್ದಮೆ ಫೈಸಲ್ಮಾಡಲ್ಪಟ್ಟಿತು. ಈಪ್ರಕರಣದಲ್ಲಿ ಪ್ಲ್ಯಾಂಟರ್ ತಿಳಿಸಿದ ಆಕ್ಷೇಪಣೆಯು ಸಮರ್ಪಕವಾದ್ದೆಂತಲೂ, ಪೊಲೀಸ್‌ನವರನ್ನು ತಡೆಯಬೇಕೆಂಬ ದುರಾಲೋಚನೆಯು ಅಪರಾಧಿಗೆ ಇಲ್ಲವೆಂತಲೂ ಹೈಕೋರ್ಟಿನವರು ನಿರ್ಣಯಿಸಿ ಇನ್ನುಮೇಲೆ ವಾರಂಟುಗಳು ಇಂಗ್ಲಿಷ್ ಅರವ ಎರಡು ಭಾಷೆಗಳಲ್ಲಿಯೂ ಬರೆಯಲ್ಪಡಬೇಕೆಂದು ನಿಬಂಧನೆಮಾಡಿದರು.

## LOCAL AND PROVINCIAL NEWS
## ಒಳದೇಶಮತ್ತುತಾಲ್ಲೂಕಜಾತಿವೃತ್ತಾಂತಗಳು.

ಮದರಾಸ ಎಗ್ಜಿಕ್ಯೂಟಿವ್ ಇಂಜನಿಯರಾದ ಮ|| ಜೆ ಜೆ. ವೈಟ್ಲೀ ಎಂಬವರು ಮೈಸೂರ್ ಯುವರಾಜರಿಗೆ ಇಂಗ್ಲಿಷ್ ಉಪಾಧ್ಯಾಯರಾಗಿ ನಿಯಮಿಸಲ್ಪಟ್ಟರೆಂದು ಇಂಡಿಯನ್ ಜರ್ನಲ್ ಆಫ್ ಯೆಡ್ಯುಕೇಷನ್ ಎಂಬ ಮಾಸಪತ್ರಿಕೆಯೊಂದು ತಿಳಿಸುತಿದೆ.

ಈಪ್ಪೂರು ಸಿವಿಲ್ ವ ಮಿಲಿಟರಿ ಸ್ಟೇಷನಿನಲ್ಲಿರುವ ಬಿಷಪ್ ಕಾಟನ್ಸ್ ಸ್ಕೂಲ್ ಮತ್ತು ಕಾಲೇಜ್ ವಿದ್ಯಾರ್ಥಿಗಳಿಗೆ ಈದಿನ ಸಾಯಂಕಾಲ ೪½ ಘಂಟೆಗೆ ಇನಾಂಗಳು ಕೊಡಲ್ಪಡುವವು. ತತ್ಕಾಲದಲ್ಲಿ ಬ್ರಿಟಿಷ್ ರೆಸಿಡೆಂಟರಾದ ಕರ್ನಲ್ ಪಿ. ಡಿ ಹೆಂಡರ್‌ಸನ್ ಸಿ. ಎಸ್. ಐ ಯವರು ಸಭಾಧ್ಯಕ್ಷರಾಗಿರುವರು.

ಕಳೆದ ಶನಿವಾರದ ದಿನ ಬೆಳಗ್ಗೆ ಈಪ್ಪೂರೊಳರುವ ಸಿಲೇದಾರ್ ಲೈನಿನಲ್ಲಿ ಉಟಿ ಲಿ ಜೆರಾಪ್ ತರಿಮೋರಿಅದರಿಂದಮೂವರುಮುಸಲ್ಮಾನರೂ, ಇಬ್ಬರು ಹಿಂದೂಗಳೂ ಒಂದೇದಿನ ಮೃತಪಟ್ಟರೆಂದು ತಿಳಿಯಬರುತಿದೆ. ಈ ಹಿಮಂತ ಋತುವಿನಲ್ಲಿ ವಾಂತಿಭೇದಿ ರೋಗವು ವ್ಯಾಪಿಸಿ ಅದರಿಂದ ಜನರು ಮೃತಪಟ್ಟದಂ ಕೇಳಿದರೆ ಬಹಳ ಭಯವಾಗುತಿದೆ. ಇದೇರೀತಿ ಮೈಸೂರಲ್ಲಿ ಸಹ ಸದರೀ ರೋಗದಿಂದ ಕೆಲವರು ಮೃತಪಟ್ಟಂತೆ ಕೇಳುತ್ತೇವೆ.

ಬೆಂಗಳೂರ್ ಷಹರ್‌ನೊಳರತಕ್ಕ ಲಂಗರ್‌ಖಾನೆಯಲ್ಲಿ ಅನಾಥರಿಗೂ ಅಂಗಹೀನರಿಗೂ, ಧಾನ್ಯರೂಪವಾಗಿ ಇದುವರೆಗೆ ಸಹಾಯಮಾಡಲ್ಪಡುತಲಿತ್ತು. ಈ ಕ್ರಮವು ತಪ್ಪಿಸಿ ನಗದಾಗಿ ಕೊಡಿಸಬೇಕೆಂದು ಮ್ಯುನಿಸಿಪಲ್ ಬೋರ್ಡಿನವರುವಿಚಾರ ಮಾಡಿ ತೀರ್ಮಾನಿಸಿದ್ದನ್ನು ಗವ

ರ್ನಮೆಂಟಿನವರು ಮಂಜೂರ್ಮಾಡಿ, ಈಗ ಸದರೀ ಲಂಗರ್ಖಾನೆಯಲ್ಲಿರತಕ್ಕ ಸ್ಯೂಪರ್ವೈಜರನ್ನೂ ಝೂದೆಮಾಲಿಯನ್ನೂ ವಜಾಮಾಡಬೇಕೆಂಬದಾಗಿ ಹುಕುಂ ಕೊಟ್ಟಿರುತ್ತಾರೆ.

---

ನಿರ್ಭಾಗ್ಯನು ಸಮುದ್ರದಲ್ಲಿ ಹೊಕ್ಕರೂ ಮೊಣಕಾಲು ಉದ್ದ ನೀರೆ, ಎಂಬ ಲೋಕೋಕ್ತಿಯಂತೆ ಈ ಪಟ್ಟಣ ನಿವಾಸಿಗಳು ಯಾವಾಗಲು ಯಾವದಕ್ಕಾಗಿಯಾದರು ಸಂಕಟಪಡುತಲಿರಬೇಕಾದ್ದು ಅವರ ಹಣೇಬರಹವೆಂದು ಕಾಣುತಿದೆ. ಮ್ಯುನಿಸಿಪಾಲಿಟಿಯವರು ಕಾರಂಜಿಕೆರೆಯಿಂದ ನಲ್ಲಿ ಯಿಡುವ ವ್ಯಾಜದಿಂದ, ಕೆರೆ ನೀರನ್ನು ಬಿಡದೆ ತಡೆದಿದ್ದದರಿಂದ ಕಾರಂಜಿಗಳೊಳು ನೀರಿಲ್ಲದೆ ಜನಗಳು ಬಹಳ ಸಂಕಟಪಡುತಲಿದ್ದದನ್ನರಿತು ನಿನ್ನೆಯದಿನ ಮರಳಿ ನೀರು ಬಿಡಿಸಿದಂತೆ ತಿಳಿಯಬರುತಿದೆ.

---

ಶ್ರೀಮನ್ಮಹಾರಾಜರವರು ಈತಿಂಗಳ ೧೩ನೇ ತಾರೀಖಿನಲ್ಲಿ ಮುಂಬೈಗೆ ದಯಮಾಡುವಂತೆ ವ್ಯವಸ್ಥೆಯಾಗಿರುತಿದೆ. ಇವರು ಒಂದೆರಡು ವಾರಗಳ ಕಾಲ ಅಲ್ಲಿದ್ದು ಅಲ್ಲಿಂದ ಉತ್ತರದೇಶ ಸಂಚಾರಾರ್ಥ ದಯಮಾಡುವರು. ಹೊಸ ವೈಸ್ರಾಯಿಯವರ ಆಗಮನ ಕಾಲಕ್ಕೆ ಸರಿಯಾಗಿ ಕಲ್ಕತ್ತೆಗೆ ಹೋಗಿ ಅವರ ಸಂದರ್ಶನವಂ ಮಾಡಿಕೊಂಡು ಹಿಂದಿರುಗಿ ಚಿಕ್ಕವಾಗ್ಯೆ ಬರೋಡೆ ರಾಜ್ಯಕ್ಕೆ ಹೋಗಿ ಅಲ್ಲಿನ ಮಹಾರಾಜರ ಸತ್ಕಾರಗಳನ್ನಂಗೀಕರಿಸಿ ಅನಂತರಸ್ಯೆದರಾಬಾದ್ಮಾರ್ಗವಾಗಿ ಫೆಬ್ರವರಿ ತಿಂಗಳ ಆಖೈರ್ಭಾಗದಲ್ಲಿ ದಯಮಾಡುವತಾತ್ಪರ್ಯವಿರುವಂತೆ ಕೇಳುತ್ತೇವೆ.

---

ಮೊನ್ನೆಯದಿನ ಇಲ್ಲಿನ ಚೀಫ್ ಜಡ್ಜಿಯವರು ತಮ್ಮ ಕೋರ್ಡಿನ ಡೆಪ್ಯುಟಿ ರಿಜಿಸ್ಟ್ರಾರ್ ಮ|| ರಾಮಸ್ವಾಮಯ್ಯಂಗಾರ್ಯರೊಡನೆ ನಂದೀದುರ್ಗ ಡಿವಿಜನ್ ಡಿಸ್ಟ್ರಿಕ್ಟ್‌ಕೋರ್ಟಿನ ಅಜಮಾಯಿಷಿಬಗ್ಗೆ ಬಂದು ರಿಜಿಸ್ಟರ್ ಮೊದಲಾದವನ್ನೆಲ್ಲ ತನಿಖೀಮಾಡಿ ಹೋದರು. ಆಕಾಲದಲ್ಲಿ ಡಿಸ್ಟ್ರಿಕ್ಟ್ ಜಡ್ಜಿಯಾದ ಮೆ|| ಟಿ. ನರಹರಿರಾಯರವರು ಸಮೀಪದೊಳಿದ್ದು ಚೀಫ್ ಜಡ್ಜಿಯವರ ಆಕ್ಷೇಪಣೆಗಳಿಗೆಲ್ಲ ಸಮಾಧಾನ ಹೇಳಿ ತೃಪ್ತಿಗೊಳಿಸಿ ಕಳುಹಿಸಿದರು. ಮೆ|| ತಂಬುಶೆಟ್ಟರವರು ಮೈಸೂರ್ ಶೀಮೆಯಲ್ಲಿರುವ ಕೋರ್ಟುಗಳ ವಿಚಾರಣೆ ಬಗ್ಗೆ ಡೆಪ್ಯುಟಿ ರಿಜಿಸ್ಟ್ರಾರೊಡನೆ ಸಕೀಟ್ಸ್ಯಾಪ್ ಹೋರಡುವರೆಂದು ತಿಳಿಯಬರುತಿದೆ.

---

ಥಿಯಾಸಾಫಿಕಲ್ ಸೊಸೈಟಿಗೆ ಸೇರಿದ ಮಿಸ್ಟ್ರಸ್ ಆನಿಬೆಸ್ಸೆಂಟ್ ಎಂಬವರು ಇಂಡ್ಯಾದೇಶಕ್ಕೆ ಬರುವರೆಂದು ಹಿಂದೆ ನಾವು ತಿಳಿಸಿದ್ದೆವಷ್ಟೆ. ಇವರು ಈ ದೇಶಕ್ಕೆ ಬಂದು ತಂಜಾವೂರು, ಕುಂಭಕೋಣ ವಗೈರೆ ಪ್ರಾಂತಗಳಲ್ಲಿ ನಾನಾವಿಷಯಗಳಂ ಕುರಿತು ಉಪನ್ಯಾಸ ಮಾಡಿ ಪ್ರಜಾಭಿಮಾನಕ್ಕೆ ವಿಷಯರಾಗಿ ಕಡೆಗೆ ಈದಿನ ಈನ್ಗೂರಿಗೆ ಬಂದು ಸಾಯಂಕಾಲ ಇಲ್ಲಿನ ಸಿವಿಲ್ ವ ಮಿಲಿಟರಿ ಸ್ಟೇಷನಿನೊಳಿರುವ ಮೆಯೋಹಾಲ್‌ನಲ್ಲಿ ವೇದಾಂತ ಮತ್ತು ನೀತಿ ವಿಷಯಕವಾದ ಪ್ರಸಂಗವಂ ಮಾಡುವರು. ಬರುವ ಬುಧವಾರದ ದಿನ ಗವರ್ನ್‌ಮೆಂಟ್ ಬಾಲಿಕಾ ಪಾಠಶಾಲೆಯ ಹಾಲ್‌ನಲ್ಲಿ ವೇದಾಂತ ಮತ್ತು ಆಧುನಿಕ ಶಾಸ್ತ್ರ ವಿಚಾರವಂ ಮಾಡುವರು. ಇಲ್ಲಿರುವತನಕ ಮಿಸ್ಟ್ರಸ್ ಬೆಸ್ಸೆಂಟಿಯವರು ಸೆಪ್ಪಿಂಗ್‌ರೋಡ್‌ನಲ್ಲಿ ವೆಲ-ಕ ಹೌಸ್ ಎಂಬ ಬಂಗ್ಲೆಯಲ್ಲಿ ವಾಸವಾಗಿರುವರು.

---

ಗತವಾರದಲ್ಲಿ ಮ್ಯೂನಿಸಿಪಲ್ ಗಾರ್ಡೆನಬಳಿ ಹೊಸದಾಗಿ ಒಂದು ಹಿಂದೂ ವೈದ್ಯಶಾಲೆಯು ಸ್ಥಾಪಿಸಲ್ಪಟ್ಟಂತೆಯೂ ಆದಕ್ಕೆ ಮ|| ರಾ|| ಮುಂಡಿ ಮರಿಯಣ್ಣನವರು ವಿಶೇಷವಾಗಿ ಧನಸಹಾಯ ಮಾಡಿದರೆಂತಲೂ, ಇಂತಾ ಧರ್ಮಕಾರ್ಯಕ್ಕೆ ಮುಖ್ಯಪ್ರೇರಕರು ಮ|| ವೈದ್ಯನಾಥಯ್ಯರವರೆಂತಲೂ ವಗೈರೆ ತಿಳಿಸಿದ್ದೆವಷ್ಟೆ. ಪ್ರಸಕ್ತ ವೈದ್ಯಶಾಲೆಗೂ ಮ|| ರಾ|| ಮುಂಡಿ ಮರಿಯಣ್ಣನವರಿಗೂ ಸ್ವಲ್ಪವೂ ಸಂಬಂಧವಿಲ್ಲವೆಂತಲೂ, ಇದಕ್ಕೆ ಧನಸಹಾಯ ಮಾಡಿದವರು ಅವರ ತಮ್ಮಂದಿರಾದ ಮ|| ದೊಡ್ಡಲಿಂಗಪ್ಪನವರೆಂತಲೂ ತಿಳಿಯಬರುತಿದೆ. ಹೀಗೆಯೆ ಇನ್ನೊಂದು ವೈದ್ಯಶಾಲೆಯು ಷಿಪ್ರದಲ್ಲಿ ಮಾಕೊತ್ತಬ್ಬರ ಸಹಾಯದಿಂ ನೆಲೆಗೊಳಿಸಲ್ಪಡುವದೆಂದು ಕೇಳುತ್ತೇವೆ. ಈ ಕಾಲದಲ್ಲಿ ಆಧುನಿಕರಿಗೆ ಹಿಂದೂ ವೈದ್ಯ ಚಿಕಿತ್ಸೆಯಲ್ಲಿ ಸಹ ಇತರ ವಿಷಯಗಳಲ್ಲಿರುವಂತೆ ವಿದ್ವೇಷವು ಅಧಿಕವಾಗಿದ್ದಾಗ್ಯೂ, ಮೆ|| ವೈದ್ಯನಾಥಯ್ಯರವರಿಗೆ ಮಾತ್ರ ಹಿಂದೂ ವೈದ್ಯಶಾಸ್ತ್ರದಲ್ಲಿ ದೃಢತರವಾದ ನಂಬಿಕೆಯೂ, ವಿಶ್ವಾಸವೂ, ಜ್ಞಾನವೂ, ಅದಂ ಪ್ರಬಲ್ಯಕ್ಕೆ ತರಬೇಕೆಂಬ ಉತ್ಸಾಹವೂ ಅಧಿಕವಾಗಿರುವಣವು ಕಂಡು ನಾವು ಬಹಳ ಸಂತೋಷಿಸುತ್ತೇವೆ. ಶ್ಲಾಘ್ಯತರಗಳಾದ ಇವರ ಪ್ರಯತ್ನೋದ್ದೇಶಗಳಿಗೆ ಮಹಾರಾಜಾ ಸರ್ಕಾರದವರು ಸಹಾಯಕರಾಗಿರಬೇಕೆಂದು ಕೋರುತ್ತೇವೆ. ಈ ಸಂದರ್ಭದೊಳಲ್ಲಿ ಹಿಂದೂ ಬಾಲಕ ವೈದ್ಯ ಪಾಠಶಾಲೆಯೊಂದು ಸ್ಥಾಪಿಸಲ್ಪಟ್ಟರೆಪ್ರಯೋಜನಕರವಾಗಿರುವುದು.

---

## THE MYSORE GAZETTE.

## ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದೂರವರ ಸರ್ಕಾರದಿಂದ ಹೊರಡೋಣಾದ ಇಸ್ತಿಹಾರನಾಮೆಗಳು.

---

ನಂ|| ೮೩೭೬—೧ F. ೩೦೩-೯೦ ತಾ|| ೨೧ ನೇ ನವಂಬರ್ ೧೮೯೩.—ಮೈಸೂರ್ ಸರ್ವಿಸ್ ರೆಗ್ಯುಲೇಷನ್ಗಳ ೧೮೮ ನೇ ಆರ್ಟಿಕಲ್ ಅನುಸರಿಸಿ ತೀರ್ಥಹಳ್ಳಿ ತಾಲ್ಲೂಕ್ ಅಮಲ್ದಾರ್, ಪಿ. ಆರ್. ವೆಂಕಟಸುಬ್ಬಯ್ಯನವರಿಗೆ ೧೮೯೩ನೇ ಇಸವಿ ಅಕ್ಟೋಬರ್ ೨೩ ನೇ ತಾರೀಖ್ ಲಗಾಯತು ೧೪ ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತಿದೆ ಸದರೀ ಯವರು ರಜಾಮೇಲೆ ಗೈರ್ಹಾಜರಾಗಿರುವ ಕಾಲದಲ್ಲಿ ಕುಂಸಿ ಡೆಪ್ಯುಟಿ ಅಮಲ್ದಾರ್ ಕೆ. ಸುಬ್ಬರಾಯರವರು ಆಕ್ಟಿಂಗ್ ತಹಶೀಲ್ ಕೆಲಸ ನೋಡುವಂತೆ ನಿಯಮಿಸಲ್ಪಟ್ಟಿರುತ್ತಾರೆ.

ನಂ|| ೮೩೭೮-G. ೧೯೮೪ —ಮೈಸೂರ್ ರೆವಿನ್ಯೂ ಸರ್ವೆ ನೆಟ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮೆ|| ಕುಪ್ಪೇಲೂರು, ಲಿಂಗೋಮಲ್ಹಾರ್ ನಾಯಕರವರು ಒಂದು ವಿಶೇಷ ಕೆಲಸದ ಮೇಲೆ ಧಾರ್ವಾರ್ ಡಿಸ್ಟ್ರಿಕ್ಟಿಗೆ ಕಳುಹಿಸಲ್ಪಟ್ಟಿರುವದರಿಂದ, ೧೮೯೩ ನೇ ಇಸವಿ ಅಕ್ಟೋಬರ್ ೧೬ನೇ ಮುಕ್ಕಾಂ, ೭೦೬೬-G. ೧೬೮೭ ನೇ ನಂಬರ್ ಇಸ್ತಿಹಾರ್ನಾಮೆಯ ಮೂಲಕ ಕೊಡಲ್ಪಟ್ಟಿದ್ದ ೨ ತಿಂಗಳ ೧೭ ದಿನಗಳ ಪ್ರಿವಿಲೀಜ್ ರಜಾ ಇದರಿಂದ ರದ್ದು ಮಾಡಲ್ಪಟ್ಟಿರುತಿದೆ.

ನಂ|| ೮೩೮೦—G. ೪೦-೯೯.—ಕೋಲಾರ್ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮೆ|| ಸಿ. ಮಾದಯ್ಯನವರಿಗೆ ಮಾಹೇ ವ ಜಕೂರ್ ೧ ನೇ ಮುಕ್ಕಾಂ ಬೆಂಗಳೂರು ೧೪೭ ನೇ ನಂಬರುಳ್ಳ ಗವರ್ನ್‌ಮೆಂಟ್ ಇಸ್ತಿಹಾರ್ನಾಮೆಯ ಮೂಲಕ, ೧೮೯೩ ನೇ ಇಸವಿ ಅಕ್ಟೋಬರ್ ೨೮ ನೇ ತಾ|| ಮೊದಲು, ಕೊಡಲ್ಪಟ್ಟಿದ್ದ ೧೫ ದಿವಸಗಳ ಕ್ಯಾಜುಯಲ್ ರಜಾ ಪೂರೈಸಿಕೊಂಡು ಮಾಹೇ ಮಜಕೂರ್ ೧೨ ನೇ ತಾರೀಖಿನ ಅಪರಾಹ್ನದಲ್ಲಿ ಕೆಲಸದಮೇಲೆ ಬಂದು ಹಾಜರಾಗಿರುತ್ತಾರೆ.

ಮುಕ್ಕಾಂ ನಂ|| ೨೨೪—ತಾ|| ೨೨ ನೇ ನವಂಬರ್ ೧೮೯೩ —ಇದರಡಿ ತಿಳಿಸಲ್ಪಡುವ ಮುನ್ಸಫೆಗಳ, ವಾಪಸ್ ಖಾಯಂ ವಗೈರೆಗಳು ಹುಕುಂ ಮಾಡಲ್ಪಟ್ಟಿರುತಿವೆ

ಬೆಂಗಳೂರು ಆಕ್ಟಿಂಗ್ ಅಡಿಷನಲ್ ಮುನ್ಸಫ್ ಮೆ|| ಎಸ್. ವೆಂಕಟವರದಯ್ಯಂಗಾರ್ರವರು, ಬೆಂಗಳೂರ್ ಅಡಿಷನಲ್ ಮುನ್ಸಫರಾಗಿ ಮೊಕರರಾದ ಮೆ|| ಪಿ. ವೆಂಕಟ್ರಾಯರವರಿಂದ ಬಿಡುಗಡೆಯಾದ ಕೂಡಲೆ ಮೈಸೂರ್ ಮುನ್ಸಫರಾಗಿ ವಾಪಸ್ ಹೋಗತಕ್ಕದ್ದು.

ಮೆ|| ಸಿ. ಬಿ ಶೇಷಗಿರಿರಾಯರವರು ಮೆ|| ಎಸ್. ವೆಂಕಟವರದಯ್ಯಂಗಾರ್ರಿಂದ ಬಿಡುಗಡೆಯಾದ ಕೂಡಲೆ ಶ್ರೀರಂಗಪಟ್ಟಣ ಮುನ್ಸಫರಾಗಿ ವಾಪಸ್‌ಹೋಗತಕ್ಕದ್ದು. ಮೆ|| ಬಿ. ಶ್ರೀನಿವಾಸರಾಯರವರು, ಮೆ|| ಸಿ. ಬಿ. ಶೇಷಗಿರಿರಾಯರಿಂದ ಬಿಡುಗಡೆಯಾದ ಕೂಡಲೆ ನೆಲಮಂಗಲ ಮುನ್ಸಫರಾಗಿ ವಾಪಸ್ ಹೋಗತಕ್ಕದ್ದು.

ಇದರಡಿ ಕಂಡ ಆಕ್ಟಿಂಗ್ ಮುನ್ಸಫೆಗಳು ೧ನೇ ಗ್ರೇಡ್ ಮುನ್ಸಫರಾಗಿ ಖಾಯಂ ಮಾಡಲ್ಪಟ್ಟು ಕೆಳಗೆ ತಿಳಿಸಲ್ಪಡುವ ಸ್ಥಳಗಳಿಗೆ ನಿಯಮಿಸಲ್ಪಟ್ಟಿರುತ್ತಾರೆ.

ನೆಲಮಂಗಲದ ಆಕ್ಟಿಂಗ್‌ಮುನ್ಸಫರಾದ ಮೆ|| ಲಕ್ಷ್ಮೀನರಣಪ್ಪನವರು, ಹೊನ್ನಾಳಿ ಮುನ್ಸಫರಾಗಿರತಕ್ಕದ್ದು. ಇವರು ರಜಾ ಪೂರೈಸಿದಕೂಡಲೆ ತಮ್ಮ ಕೆಲಸಕ್ಕೆ ಹೋಗಿ ಹಾಜರಾಗತಕ್ಕದ್ದು. ಹೊನ್ನಾಳಿ ಆಕ್ಟಿಂಗ್ ಮುನ್ಸಫರಾದ ಮೆ|| ಪಿ. ಎ ಶಿವಪ್ರಕಾಶ ಪಿಳ್ಳೆಯವರು ಹೊಳೇನರಸೀಪುರದಮುನ್ಸಫರಾಗಿರತಕ್ಕದ್ದು. ಇವರು ಮೆ|| ಲಕ್ಷ್ಮೀನಾರಣಪ್ಪನವರಿಂದ ಬಿಡುಗಡೆಯಾದ ಕೂಡಲೆ ತಮ್ಮ ಕೆಲಸಕ್ಕೆ ಹೋಗಿ ಹಾಜರಾಗತಕ್ಕದ್ದು. ಚಿಕ್ಕಮಗಳೂರು ಆಕ್ಟಿಂಗ್ ಮುನ್ಸಫರಾದ ಮೆ ಜೆ ಹೋಲ್ಟ್ ಯವರು ಚಿಕ್ಕಮಗಳೂರ್ ಮುನ್ಸಫರಾಗಿರತಕ್ಕದ್ದು.

ಈಗ ನೆಲಮಂಗಲದಲ್ಲಿ ಆಕ್ಟಿಂಗ್ ತಹಶೀಲ್ ಕೆಲಸ ನೋಡುತಲಿರತಕ್ಕ ಮೆ|| ಟಿ. ಜೆ ವಾಂಡರ್ಲೋರ್ಟ್‌ಯವರು, ಮೆ|| ಬಿ. ಶ್ರೀನಿವಾಸರಾಯರಿಂದಬಿಡುಗಡೆಯಾದಕೂಡಲೆ ಕೋಲಾರ್ ಮುನ್ಸಫರಾಗಿರತಕ್ಕದ್ದು. ಕೋಲಾರ ಮುನ್ಸಫರಾದ ಮೆ|| ಹೆಚ್. ತಮ್ಮಕೃಷ್ಣರಾವ್ ಬಿ ಎ ಬಿ. ಎಲ್. ಯವರು ಹಾಸನ ಮುನ್ಸಫರಾಗಿರತಕ್ಕದ್ದು. ಮೆ|| ಟಿ. ಜೆ. ವಾಂಡರ್‌ಲೋರ್ಟ್‌ಯವರು ಬಿಡುಗಡೆಮಾಡುತಲೆ ಇವರು ಕೆಲಸದಮೇಲೆ ಹೋಗಿ ಹಾಜರಾಗತಕ್ಕದ್ದು. ಇವರು ಬಿಡುಗಡೆಮಾಡುವ ತನಕ ಮೆ|| ಜಯರಾಮಯ್ಯನವರು ಹಾಸನ ಮುನ್ಸಫರಾಗಿ ಆಕ್ಟಿಂಗ್ ತಹಶೀಲ್ ಕೆಲಸ ನೋಡುತಲಿರತಕ್ಕದ್ದು.

ಮುಕ್ಕಾಂ ನಂ. ೨೨೬—ಹಾಸನದ ಮುನ್ಸಫ್ ದ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮೆ|| ಹೆಚ್ ತಿಮ್ಮಕೃಷ್ಣರಾಯರವರಿಗೆ ಕ್ರಿಮಿನಲ್ ಪ್ರೊಸಿಜ್ಯೂರ್‌ಕೋಡ [illegible] ಅನುಸರಿಸಿ ಒಂದನೇ ಕ್ಲಾಸ್ ಮ್ಯಾಜಿಸ್ಟ್ರೇಟಿ [illegible]ಗಳು ಕೊಡಲ್ಪಟ್ಟಿರುತಿವೆ.

ಮುಕ್ಕಾಂ ನಂ. ೨೨೭—ಹೊಳೇ ನರಸೀಪುರದ ಆಕ್ಟಿಂಗ್ ಮುನ್ಸಫರಾದ ಮಿಸ್ಟರ್ ಹುಜ್. ಹುಸೇನ್ ಬಿ ಎ, ಬಿ. ಎಲ್, ಯವರು ತತ್ಕಾಲದಲ್ಲಿ ಎಡೆಹಳ್ಳಿ ಮುನ್ಸಫರಾಗಿರತಕ್ಕದ್ದು. ಇವರ ಮೆ|| ಶಿವಪ್ರಕಾಶಪಿಳ್ಳೆಯವರಿಂದ ಬಿಡುಗಡೆಯಾದಕೂಡಲೆ ಕೆಲಸಕ್ಕೆ ಹೋಗಿ ಹಾಜರಾಗತಕ್ಕದ್ದು.

ತಾ|| ೨೯ನೇ ನವಂಬರ್ ೨೮೯೩—ಸನ್ ೧೮೯೪ ನೇ ಇಸವಿಯಲ್ಲಿ ಇದರಡಿ ಕಂಡ ಸಾಮಾನ್ಯ ರಜೆ ದಿವಸಗಳು ಗವರ್ನ್‌ಮೆಂಟಿನವರಿಂದ ಮಂಜೂರಾಗಿ ಸಕಲಜನಗಳ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಕಟಿಸಲ್ಪಟ್ಟಿರುತಿವೆ. ಬಹಸ್ಸ್ಪ್ರೆಸ್ ಸದರೀ ರಜಾ ದಿವಸಗಳು ಚೀಫ್ ಕೋರ್ಟಿನವರಿಂದಲೂ, ಅವರ ಅಧಿಕಾರಕ್ಕೊಳಪಟ್ಟ ಈ ಸಂಸ್ಥಾನದಲ್ಲಿರತಕ್ಕ ತಮಾಂ ಸಿವಿಲ್ ಕೋರ್ಟಿನವರಿಂದಲೂ ರಜಾ ದಿವಸಗಳಾಗಿ ಅನುಸರಿಸಲ್ಪಡತಕ್ಕದ್ದು.

### ಸಾಮಾನ್ಯ ರಜಾ ದಿವಸಗಳ ಪಟ್ಟಿ.

ಜನವರಿ ೧ನೇ ಸೋಮವಾರದ ಮೊದಲು, ೩ನೇ ಬುಧವಾರದತನಕ ಉಭಯದಿನಗಳೂ ಸೇರಿ ಕ್ರಿಸ್ಮಸ್‌ಹಬ್ಬ.
ಜನವರಿ ೧೨ನೇ ಶುಕ್ರವಾರ, ವ ೧೩ನೇ ಶನಿವಾರ ಪೊಂಗಲ್.
ಫೆಬ್ರವರಿ ೭ ನೇ ಬುಧವಾರ, ಅಷ್ಟ ಮಹಾನವಮಿ, (ಬೂದಿ ಬುಧವಾರ)
ಮಾರ್ಚಿ ೫ನೇ ಸೋಮವಾರ, ಶಿವರಾತ್ರಿ.
„ ೧೨ನೇ „ ಮಹಾರಾಜರವರ ವರ್ಧಂತಿ
„ ೨೧ನೇ ಬುಧವಾರ ಹೋಳಿ ಹಬ್ಬ.
„ ೨೨ನೇ ಗುರುವಾರ ಮೊದಲು ೨೭ನೇ ಮಂಗಳವಾರದತನಕ ಉಭಯದಿನಗಳು ಸೇರಿ ಈಸ್ಟರ್ ಹಾಲಿಡೇಸ್
ಜೂನ್ ೧೪ನೇ ಗುರುವಾರ, ಯುವರಾಜರ ವರ್ಷವರ್ಧಂತಿ
ಜೂಲೈ ೧೪ನೇ ಶನಿವಾರ, ಮೊಹರಂಹಬ್ಬದ ಕಡೇದಿನ
ಆಗಸ್ಟ್ ೧೫ನೇ ಬುಧವಾರ ಮತ್ತು ೧೬ ನೇ ಗುರುವಾರ, ಋಗ್ಯಜುಸ್ಸಾಮಉಪಾಕರ್ಮಗಳು.
ಸೆಪ್ಟಂಬರ್ ೩ನೇ ಸೋಮವಾರ, ಗಣೇಶನ ಹಬ್ಬ.
„ ೧೩ನೇ ಗುರುವಾರ, ಅನಂತ ಚತುರ್ದಶಿ.
„ ೨೮ನೇ ಶುಕ್ರವಾರ, ಮಹಾಲಯ ಅಮಾವಾಸ್ಯೆ
ಅಕ್ಟೋಬರ್ ೪ನೇ ಗುರುವಾರದ ಮೊದಲು, ೧೮ನೇ ಗುರುವಾರದ ವರೆಗೆ ಉಭಯದಿನಗಳೂ ಸೇರಿ ನವರಾತ್ರಿ ರಜಾದಿನಗಳು.
„ ೨೭ನೇ ಶನಿವಾರ, ದೀಪಾವಳಿ,
„ ೨೯ನೇ ಸೋಮವಾರ, ಬಲಿಪಾಡ್ಯಮಿ.
ನವಂಬರ್ ೯ ನೇ ಶುಕ್ರವಾರ, ಪ್ರಿನ್ಸಾಫ್ ವೇಲ್ಸ್‌ರವರ ವರ್ಷವರ್ಧಂತಿ.
ಡಿಸಂಬರ್ ೨೪ನೇ ಸೋಮವಾರ ಮೊದಲು [illegible] ನೇ ಸೋಮವಾರದತನಕ ಉಭಯದಿನಗಳೂ ಸೇರಿ ಕ್ರಿಸ್ಮಸ್.

ಸಂವತ್ಸರದಲ್ಲಿ ತಮಾಂ ಭಾನುವಾರಗಳು
ಷರಾ—ಶ್ರೀಮನ್ಮಹಾರಾಜರವರ ಪಟ್ಟಾಭಿಷೇಕದದಿನ, ಗೌರಿ, ನವರಾತ್ರಿ ದಸ್ರಾಂತ, ಈ ರಜಾ ದಿವಸಗಳು ಭಾನುವಾರಗಳಲ್ಲಿ ಬರುವದರಿಂದ, ಇಲ್ಲಿ ನಮೂದಿಸದೆ ಬಿಡಲ್ಪಟ್ಟಿರುತಿವೆ ಸಂಕ್ರಾಂತಿ, ಯುಗಾದಿ, ಶ್ರೀರಾಮನವಮಿ, ಆಕ್ಸ್ಶೆರ್ಡೆ, ಮತ್ತು ಚಕ್ರವರ್ತಿನೀಯವರ ವರ್ಷವರ್ಧಂತಿ ಮೇಲೆಕಂಡ ಮೊಹರಂದಿವಸಗಳಲ್ಲಿ ಅಡಗಿಹೋಗಿರುತಿವೆ.

೧೮೮೩ನೇ ಇಸವಿ ಮೈಸೂರ್ ಸಿವಿಲ್ ಕೋರ್ಟುಗಳ ರೆಗ್ಯುಲೇಷನ್ ೨೨ನೇ ಸೆಕ್ಷನ್ ಅನುಸರಿ ಈ ಸಂಸ್ಥಾನದಲ್ಲಿರತಕ್ಕ ತಮಾಂ ಸಿವಿಲ್ ಕೋರ್ಟುಗಳು ಸನ್ ೧೮೯೪ನೇ ಇಸವಿ ಮಾರ್ಚಿ ೨೮ನೇ ತಾ|| ಬುಧವಾರದ ಲಗಾಯತು ಮೇ ೮ನೇ ತಾ|| ಮಂಗಳವಾರದತನಕ ಉಭಯದಿನಗಳೂ ಸೇರಿ ಬೇಸಿಗೆಯಬಗ್ಗೆ ಮುಚ್ಚಲ್ಪಡತಕ್ಕದ್ದೆಂದು ಚೀಫ್‌ಕೋರ್ಟಿನವರು ಇದರಿಂದ ಹುಕುಂ ಮಾಡಿರುತ್ತಾರೆ.

---

## ಸರ್ವಜನರಿಗೆ ವಿಶೇಷ ಭಯಂಕರವಾಗಿ ಬರತಕ್ಕ ಜಾಡ್ಯಗಳ ವಿವರಣೆ.

ಗರ್ಭದಲ್ಲಿ ಅಲ್ಪವಾದ ತಾರುಮಾರುಗಳು ಕಾಣಿಸಿದ ಕಾಲದಲ್ಲಿ, ಅವುಗಳಿಗೆ ಚಿಕಿತ್ಸೆ ಮಾಡದೆ ಅಜಾಗ್ರತೆ ಮಾಡಿದ ಪಕ್ಷದಲ್ಲಿ, ಈ ಕೆಳಗೆ ವಿವರಣ ಮಾಡಿದ ದುರ್ಗುಣಗಳು ದೇಹವ್ಯಾಪ್ತವಾಗ್ಯುಂಟಾಗುತ್ತವೆ. ಗರ್ಭದಲ್ಲಿರುವ ಯಾಕೃತ್ ನಲ್ಲಿಯು ಬಿಗ್ರಿ ನರಗಳ ನಲ್ಲಿಯು ಗರ್ಭಮಧ್ಯದಲ್ಲಿ ಒಂದಾವಿಧವಾದ ಗ್ರಂಥಿ ಉತ್ಪತ್ತಿಯಾಗಿ ಆ ಕಾರಣದಿಂದ ಜಾಡ್ಯಗ್ರಸ್ತನಿಗೆ ಮರಣವು ಸಂಭವಿಸಿ ಅವನು ಈ ಲೋಕದಿಂದ ವಿಶೇಷ ಕಷ್ಟವು ಅನುಭವಿಸುವನು. ಈ ಜಾಡ್ಯವನ್ನು ಜನರು ನೆಪ್ಪಿಗೆ ಕಾಣುವಂತೆ ಅಲ್ಪವಾದ ದೇಹರೋಗಗಳೆಂತಲೇ ನೆನಸುವರು ; ಇನು ಟಿಮುಕ ಜನರು ತಮ್ಮಲ್ಲಿ ತಾವು ತಮಗೆ ಈ ಜಾಡ್ಯಗಳು ಉಂಟಾಗುವ ಕಾರಣಗಳನ್ನು ನೆನಸಬೇಕು.—ನನಗೆ ಭೋಜನಾನಂತರ, ಉದರ್ರ ವಿಸಾಯಿಸಿದನೆ ಯಿಲ್ಲದ ನಿಲುವಾದ ಶ್ವಾಸ ಉಚ್ಛ್ವಾಸಗಳು ಉಂಟೆ? ನನ್ನ ಕಣ್ಣುಗಳಲ್ಲಿ ಆಯಾಸ ಬಿಳ್ಳು ಉಂಟೆ? ನನ್ನ ಬಾಯಿಯಲ್ಲಿರುವ ದಂತಗಳ ಸುತ್ತಲು ಸಿಂಬಳ ಹಾಗೆ ಪಾಚಿ, ಅಂಟು, ಮತ್ತು ಬಾಯಿಯಲ್ಲಿ ದುರ್ಗಂಧವಾದ ವಾಸನೆ ಅಥವಾ ನಿಶ್ವಾಸವೆ? ನಾಲಿಗೆಯಲ್ಲಿ ಮಾಚವೆ? ಪಕ್ಕೆಗಳಲ್ಲಿ, ಬೆನ್ನಿನಲ್ಲಿ ನೋವೆ? ಮಲಬದ್ಧವೆ? ತಲೆಯಲ್ಲಿ ತಿರುಗುವಿಕೆ ಅಥವಾ ಒಂದುವಿಧವಾದ ಜೋರು, ತಟುರಂತ ಏಳುವ ಕಾಲದಲ್ಲಿ ಉಂಟೆ? ಸೋರುವಿಕೆ ಮೂತ್ರಗುಗಳಲ್ಲಿ ಅಲ್ಪವಾಗಿ ವಿಶೇಷಕಾಲವು ಪರದ ಇದ್ದಕಾರಣದಿಂದ ಅವುಗಳು ವಿಶೇಷವಾದ ಬಣ್ಣವುಳ್ಳದ್ದೆ? ಭೋಜನವು ಭುಜಿಸಿದ ಕಾಲದಲ್ಲಿ ಅವುಗಳು ಶೀಘ್ರವಾಗಿ ಉಕ್ಕಿ ಗರ್ಭದಲ್ಲಿ ಅಜೀರ್ಣವಾದ ಬಿಸಿರುಳವೂ ಹೃದಯದಲ್ಲಿ ವಿಶೇಷವಾದ ಆದುರವೂ ಉಂಟೆ? ಈ ವ್ಯಾಧಿ ರೋಗಗಳೆಲ್ಲ ಏಕಕಾಲಕ್ಕೆ ಕಾಣಿಸವು ; ಆದರೆ ಅವುಗಳು, ಮುಂದೆ ವಿವರಣ ಮಾಡಿದ ಪ್ರಕಾರವು ದಿನೇದಿನೆ ವೃದ್ಧಿಯಾಗಿ ವಿಶೇಷವಾದ ಅಪಾಯಕ್ಕೆ ಗುರಿಯಾಗುತದೆ. ಇವುಗಳು ವಿಶೇಷಕಾಲವು ಚಿಕಿತ್ಸೆ ಮಾಡದೆ ಬಿಟ್ಟಪಕ್ಷಕ್ಕೆ ಒಂದುವಿಧವಾದ ಗಳ್ಳಂಬು ಕ್ರಿಸದ ಕೆಮ್ಮಿಗೆ ಪ್ರಾರಂಭವಾಗುತಿವೆ, ತರನಂತರವೂ ಶರೀರದ ಚರ್ಮದಲ್ಲಿ ಅತ್ಯಂತವೂ ಕಪಿಸವೂ ಬಣ್ಣವು ಉತ್ಪತ್ತಿಯಾಗಿ, ಪಾದಗಳಲ್ಲಿ ಕೈಗಳಲ್ಲಿ ತಳಿವಾದ ಬೆವರು ಬೀಜ ಪ್ರವಹಿಸಿ, ತದನಂತರ ಯಕೃತ್ತುಗಳಲ್ಲಿ ಜಾಡ್ಯವಿಶೇಷಿಸಿ, ವಾತವು ಜನಗಳು ಕಾಣಿಸಿ, ಅವುಗಳಿಗೆ ಎಷ್ಟು ಚಿಕಿತ್ಸೆ ಮಾಡಿದರೂ ಅಂತವಾಗದೆ ಕೇವಲ ತೋಂದರೆ ಉಂಟುಮಾಡುತದೆ. ಈ ಜಾಡ್ಯದ ಕಾರಣಗಳೇನೆಂದರೆ,—ಮಂದವು, ಅಜೀರ್ಣಗಳು, ಇವುಗಳಿಗೆ, ಕೇವಲ ಉತ್ತಮವಾದ ಅವುಷಧ ಚಿಕಿತ್ಸೆ, ಈ ಜಾಡ್ಯಗಳ ಆರಂಭದ ಕಾಲದಲ್ಲಿ ಲೇನೆ ನಡೆಸಿದ ಪಕ್ಷದಲ್ಲಿ ಈ ಜಾಡ್ಯಗಳು, ಶರೀರದಲ್ಲಿ ಎಲಿಮಿರುವಂತೆ ಕೇವಲ ವೃದ್ಧ್ಯಸ್ವ ವಯಸ್ಸಿನ ವರೆಗೆ, ಜಾಡ್ಯದ ಮೂಲಗಳಂ ನಿರ್ಮೂಲವಮಾಡಿ ಶರೀರಕ್ಕೆ ಅಂಗಗಳಿಗೆ ಬಲವು ಕಂಡು ಮಾಡತಕ್ಕ ಅವುಷಧವು ಪಾಯಿಶಾಗೀಲು ಕಷಾಯವು ಈ ಕಷಾಯವುವಿಷಧ ಗಿಡಗಳ ಎಲೆ ಮೂಲಿಕೆಗಳಿಂದ ಮಾಡಿದಕಷಾಯವು. ಈಕಷಾಯವು ಸರ್ವರಾಜ್ಯಗಳಲ್ಲಿ ಕಮಿಸ್ಟು, ಆಸ್ಪತ್ರೆ,ಬಜಾರುಗಳಲ್ಲಿ ಕ್ರಯಕ್ಕೆ ಸಿಕ್ಕುತದೆ. ಈ ಕಷಾಯವನ್ನು ಪಾನಮಾಡುವದರಿಂದ ಜಾಡ್ಯದ ಅಸ್ತಿಭಾರಗಳು ಯಾವತ್ತು ನಿರ್ಮೂಲವಾಗಿ, ಸಂದುಸಂದುಗಳಲ್ಲಿರತಕ್ಕ ಶರೀರರೋಗಗಳು ಯಾವತ್ತು ನಿರ್ಮಲವಾಗಿ ಶರೀರಕ್ಕೆ ಬಲವೂ ತೇಜಸ್ಸೂ ಕೊಡುತಿವೆ.

ಎ. ಎ.

## ಮೈಸೂರು ಸಂಸ್ಥಾನದ ದಿವಾನರವರ ಉಪನ್ಯಾಸ.

(ಕಳೆದ ವಾರದ ಶೇಷ)

ಸುದರ್ಶನಾಚಾರ್ಯರ ಟೀಕಾ ಸಹಿತವಾದ ಆಪಸ್ತಂಬ ಗೃಹ್ಯಸೂತ್ರಗಳು ಎಂಬ ಗ್ರಂಥವನ್ನೂ, ಕಪರ್ದಿಸ್ವಾಮಿಯವರ ಮತ್ತು ಹರದತ್ತರ ವ್ಯಾಖ್ಯಾನಗಳ ಸಮೇತ ಆಪಸ್ತಂಬ ಧರ್ಮಸೂತ್ರಗಳು ಎಂಬ ಗ್ರಂಥವನ್ನೂ ಛಾಪಾ ಹಾಕಿ ಪೂರೈಸಿರುತ್ತೆ. ರಾಜಮಂತ್ರಪ್ರವೀಣ ಮಾನರೆಬಲ್ ಚೆಂಚಲರಾವ್ ಪಂತುಲುಗಾರು ಸಿ. ಐ. ಇ. ಯವರಿಂದ ರಚಿಸಲ್ಪಟ್ಟ ಗೋತ್ರಪ್ರವರಗಳ ವಿಷಯಕವಾದ ಒಂದು ಸ್ವಾರಸ್ಯವಾದ ಗ್ರಂಥವನ್ನು ಛಾಪಾ ಹಾಕುವ ಕೆಲಸವು ನಡೆಯಿತು. ಭಟ್ಟಭಾಸ್ಕರಾಚಾರ್ಯರ ವ್ಯಾಖ್ಯಾನ ಸಹಿತ ಕೃಷ್ಣಯಜುರ್ವೇದದ "ತೈತ್ತರೀಯ ಸಂಹಿತೆಯೂ" ಪ್ರಸಿದ್ಧ ವ್ಯಾಖ್ಯಾನಕಾರರಾದ ಮಾಧವಾಚಾರ್ಯರಿಂದ ರಚಿಸಲ್ಪಟ್ಟ "ಧಾತುವೃತ್ತಿ" ಎಂಬ ವ್ಯಾಕರಣ ಗ್ರಂಥವೂ, ಅರಮನೆ ಸರಸ್ವತೀ ಭಂಡಾರದಲ್ಲಿರುವ ಪುಸ್ತಕಗಳ ವಿವರಣೆಯ ಪಟ್ಟಿಯೂ, ಹಾಲೀ ಛಾಪಾ ಆಗುತ್ತಲಿವೆ.

ಶಾಲೆಗಾರರು.—ಈ ಸಂಸ್ಥಾನದಲ್ಲಿ ಪರ್ವ ಸಲ್ಲುತ್ತಲಿರುವ ಶಾಲೆಗಾರರನ್ನು ಉತ್ತಮಸ್ಥಿತಿಗೆ ತರಬೇಕೆಂಬ ಉದ್ದೇಶದಿಂದ ಅವರುಗಳ ವರ್ಷಾಶನ ಇಜಾಫೆ ಮಾಡತಕ್ಕದ್ದನ್ನು ಶ್ರೀಮನ್ಮಹಾರಾಜಾ ಸರಕಾರದವರು ಮಂಜೂರ್ಮಾಡಿರುತ್ತಾರೆ. ಈ ಶಾಲೆಗಾರರಿಗೆ ಸಲ್ಲುತ್ತಿದ್ದ ವರ್ಷಾ ಶನವು ದಿವಾನ್ ಪೂರ್ಣಯ್ಯನವರ ಆಡಳಿತದಲ್ಲಿ ಸಾಲ್ ೧೧೭೮ ರೂಪಾಯಿ ಇದ್ದದ್ದು ೧೮೪೪—೪೫ ನೇ ಇಸವಿಯಲ್ಲಿ ೨೦,೧೪೭ ರೂಪಾಯಿ ಆಗಿತ್ತು. ೧೮೬೦ ನೇ ಇಸವಿಯಲ್ಲಿ ಸರ್ ಮಾರ್ಕ್ ಕಬ್ಬನ್ ಸಾಹೇಬರು ಈ ವರ್ಷಾಶನಗಳಿಗೆ ಶೇಕಡ ೫೦ ರ ಮೇರೆ ಇಜಾಫೆ ಮಾಡಿದರು. ಪುನಃ ೧೮೬೪—೬೫ ನೇ ಇಸವಿಯಲ್ಲಿ ಮೆಸ್ಟರ್ ಬೌರಿಂಗ್ ಸಾಹೇಬರು ಶೇಕಡ ೨೫ ರಂತೆ ಇಜಾಫೆ ಮಾಡಿದರು. ಈ ಕಾಲದಲ್ಲಿ ಜೀವನದ ಬಾಬತು ಬಹಳ ಜಾಸ್ತಿಯಾಗಿರುವದ್ದರಿಂದ ೧೮೯೩ ನೇ ಇಸವಿ ಜುಲೈ ಗುರ್ರೇ ಬಾಗಾಯಿತು ಶೇಕಡ ೫೦ ರಂತೆ ಶಾಲೆಗಾರರಿಗೆಲ್ಲ ಸರ್ವತ್ರ ಇಜಾಫೆ ಕೊಟ್ಟಿರುತ್ತೆ. ಈಗ ಈ ವರ್ಷಾಶನಗಳು ಒಟ್ಟು ೫೭,೫೯೦ ರೂಪಾಯಿ ಆಗಿರುತ್ತೆ.

ಕಾನೂನುಗಳು.—ಹಾಲಿ ಸರಕಾರದವರ ಆಲೋಚನೆಯಲ್ಲಿರುವ ಕಾನೂನುಗಳ ಪೈಕಿ ಬಾಲ್ಯವಿವಾಹನಿರೋಧಕ್ಕೆ ಸಂಬಂಧಪಟ್ಟದ್ದು ಬಹಳ ಮುಖ್ಯವಾದದ್ದು. ಕಳೆದ ಸಂವತ್ಸರದ ಉಪನ್ಯಾಸದಲ್ಲಿ ನಮೂದಿಸಿದ ಪ್ರಕಾರ ಈ ಸಂಗತಿಯಲ್ಲಿ ಒಂದು ಕಾನೂನನ್ನು ಮುಸವಿದೆ ಮಾಡಿ ಸರ್ವರೂ ಚರ್ಚಿಸಿ ಖಂಡನೆ ಮಂಡನ ಮಾಡುವದಕ್ಕೆ ಸಂಪೂರ್ಣವಾದ ಅವಕಾಶವನ್ನು ಕೊಡುವದಕ್ಕೋಸ್ಕರ ಗೆಜೆಟ್ಟಿನಲ್ಲಿ ಪ್ರಕಟಿಸಿರುತ್ತೆ. ಈ ಕಾನೂನಿನಿಂದ ಪ್ರಜೆಗಳ ಸ್ವತಂತ್ರಕ್ಕೆ ಅನವಶ್ಯಕವಾದ ಪ್ರತಿಬಂಧಕ ಉಂಟಾಗುತ್ತೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಪ್ರಜಾಕ್ಷೇಮಕ್ಕೂ ಹಿಂದೂಶಾಸ್ತ್ರಾಭಿಪ್ರಾಯಕ್ಕೂ ವಿರೋಧವಾಗಿರುವ ಕೆಲವು ಪದ್ಧತಿಗಳನ್ನು ಕಾನೂನುಮೂಲಕ ನಿಷೇಧಿಸಬೇಕೆಂಬ ಸಾರ್ವತ್ರಿಕವಾದ ಅಭಿಪ್ರಾಯವನ್ನನುಸರಿಸಿ ಸರಕಾರದವರು ಪ್ರವರ್ತಿಸಿರುತ್ತಾರೆಯೇ ಹೊರತು ಅನ್ಯಥಾ ಇಲ್ಲ. ಸರಕಾರದವರು ಪ್ರವರ್ತಿಸಬೇಕಾದ ತನಕ ಮಟ್ಟಿಗೂ, ಈ ಪದ್ಧತಿಗಳು ಈಗ ಆಚರಣೆಯಲ್ಲಿವೆಯೇ ಎಂಬ ಅಂಶದಲ್ಲಿ ಕಳೆದ ಖಾನೇಷುಮಾರಿ ಲೆಕ್ಕಗಳಲ್ಲಿ ಬಹಳ ಸ್ವಾರಸ್ಯವಾದ ಸಂಗತಿಗಳು ಕಂಡುಬಂದಿರುತ್ತವೆ. ಈ ಲೆಕ್ಕಗಳ ಪ್ರಕಾರ ವಿವಾಹವಾಗಿರತಕ್ಕ ೯ ವರುಷದೊಳಗಿನ ಬಾಲಕಿಯರ ಸಂಖ್ಯೆಯು ೧೮೮೧ ನೇ ಇಸವಿಯಲ್ಲಿ ೧೨,೦೦೦ ವಾಗಿ ಇದ್ದದ್ದು ೧೮೯೧ನೇ ಇಸವಿಯಲ್ಲಿ ೧೮,೦೦೦ ವಾಗಿ ಇತ್ತೆಂದು ತಿಳಿಯಬರುತ್ತೆ. ಈ ೧೦ ವರುಷಗಳಲ್ಲಿ ಪ್ರಜಾಭಿವೃದ್ಧಿಯು ಶೇಕಡ ೧೮ ಮಟ್ಟಿಗೆ ಆಯಿತು ಆದರೆ ಬಾಲ್ಯವಿವಾಹಿತರ ಸಂಖ್ಯೆಯು ಶೇಕಡಾ ೫೦ ರಂತೆ ಹೆಚ್ಚಿರುತ್ತೆ. ಇದಲ್ಲದೆ ೧೮೯೧ ನೇ ಇಸವಿಯಲ್ಲಿ ಒಟ್ಟು ೯,೫೧,೫೦೦ ಮಂದಿ ವಿವಾಹವಾಗಿರತಕ್ಕ ಹೆಂಗಸರ ಪೈಕಿ ೪ ವರುಷ ಮತ್ತು ಅದಕ್ಕೂ ಕಮ್ಮಿಯಾದ ವಯಸ್ಸಿನಲ್ಲಿ ವಿವಾಹವಾದವರು (ಅಂದರೆ ಮೊದಲನೇ ವರುಷದಲ್ಲಿಯೇ ಮದುವೆಯಾದವರು ೬೩, ಎರಡನೇ ವರುಷದಲ್ಲಿ ಆದವರು ೪೬೯, ಮೂರನೇ ವರುಷದಲ್ಲಿ ಆದವರು ೨,೪೩೬, ನಾಲ್ಕನೇ ವರುಷದಲ್ಲಿ ಆದವರು ೯,೪೯೭) ೧೨,೧೫೬ ಮಂದಿ ಎಂತಲೂ, ೫ ರಿಂದ ೯ ವರುಷ ವಯಸ್ಸಿನೊಳಗೆ ವಿವಾಹವಾದವರು ೧,೧೮,೦೦೦ ಎಂತಲೂ, ತಿಳಿಯಬರುತ್ತೆ. ಈ ಪ್ರಕಾರ ೯ ವರುಷ ವಯಸ್ಸಿನೊಳಗೆ ಮದುವೆಯಾದ ೧,೯೨,೦೦೦ ಬಾಲಕಿಯರ ಪೈಕಿ ೪,೫೬೦ ಮಂದಿಯು ಆ ಚಿಕ್ಕವಯಸ್ಸಿನಲ್ಲಿಯೇ ವಿಧವೆಯಾದರು. ಬಾಲಕರಲ್ಲಿ ೪ ವರುಷ ವಯಸ್ಸಿಗೆ ಪೂರ್ವವೇ ೫೧೨ ಮಂದಿಗೂ, ೪ ರಿಂದ ೯ ರ ವರಗಿನ ವಯಸ್ಸಿನೊಳಗೆ ೯,೧೬೬ ಮಂದಿಗೂ ೧೦ ರಿಂದ ೧೪ ರ ವಳಗೆ ೩೨,೯೩೧ ಮಂದಿಗೂ, ಅಂತು ೪೧,೫೧೬ ಮಂದಿಗೆ ೧೪ ವರುಷ ವಯಸ್ಸಿನೊಳಗೆ ವಿವಾಹವಾಗಿರುತ್ತೆ. ಬಾಲಕರು ವಿವಾಹಕ್ಕೆ ಯೋಗ್ಯರಾಗಬೇಕಾದಲ್ಲಿ ೧೪ ವರುಷ ವಯಸ್ಸಿನವರಾಗಿರಬೇಕೆಂದು ನಿಯಮಿಸ ಮಾಡುವದರಿಂದ ಬಾಲಕಿಯರ ವಿವಾಹಾರ್ಹವಾದ ವಯಸ್ಸಿನ ವಿಷಯವಾಗಿ ಅನುಕೂಲವಾದ ಬದಲಾವಣೆಯಾಗಲೇ ಬೇಕಾಗಿ ಇರುತ್ತೆ. ಈ ದೇಶದಲ್ಲಿ ಆಚರಣೆಯಲ್ಲಿರುವ ದಂಪತಿಗಳ ವಯೋಭೇದಗಳನ್ನು ಆಲೋಚಿಸಿದಲ್ಲಿ ೧೪ ವರುಷಕ್ಕೆ ಕಮ್ಮಿಯಾದ ವಯಸ್ಸಿನ ಹುಡುಗರಿಗೆ ಪ್ರಾಯೇಣ ೯ ವರುಷಕ್ಕೆ ಕಮ್ಮಿಯಾದ ಬಾಲಕಿಯರೇ ಮದುವೆಯಾಗಿರುತ್ತಾರೆಯೇ ಹೊರತು ಅದಕ್ಕಿಂತ ಹೆಚ್ಚಿಲ್ಲವೆಂದು ಹೇಳಬಹುದು. ಆದಕಾರಣ ಬಾಲಕರಿಗೆ ವಿವಾಹಾರ್ಹವಾದ ವಯಸ್ಸು ೧೪ ಎಂಬದಾಗಿ ನಿಯಮಕ ಮಾಡುವದರಲ್ಲಿ ಸುಮಾರು ೯೨,೦೦೦ ಬಾಲಕಿಯರ ಮಾತಾಪಿತೃಗಳು ಅವರಿಗೆ ೯ ವರುಷ ವಯಸ್ಸಾದ ನಂತರವೇ ವಿವಾಹ ಮಾಡುವದಕ್ಕೆ ಅನುಕೂಲವಾಗುತ್ತೆ.

ಈಗ ನಾವು ತಿದ್ದಬೇಕೆಂದು ಉದ್ದೇಶಿಸುವ ಆಕ್ರಮವು ಅಲ್ಪವಾದ್ದಲ್ಲವೆಂಬ ಅಂಶವನ್ನೂ, ಮತ್ತು ಅದು ಪ್ರಬಲಿಸುವ ಚಿಹ್ನೆಗಳು ಇರುತ್ತವೆಯೇ ಹೊರತು ಕ್ಷೀಣವನ್ನು ಹೊಂದುವ ರೀತಿ ಯಿಲ್ಲವೆಂಬ ಅಂಶವನ್ನು ಸಹ ಸ್ಥಾಪಿಸುವದಕ್ಕೆ ಮೇಲೆ ನಮೂದಿಸಿರುವ ಸಂಗತಿಗಳು ಸಾಕಾಗಿವೆ.

ಕಾಡುಮೃಗ ಪಕ್ಷಿ ವಗೈರೆ ಇವುಗಳ ಸಂರಕ್ಷಣೆ ಬಗ್ಗೆ ನಿಬಂಧನೆ.—ಕಾಡು ಮೃಗಗಳು ಪಕ್ಷಿಗಳು ವಗೈರೆಯವುಗಳನ್ನು ಜನರು ಮನಸ್ಸುಬಂದಂತೆ ಕೊಲ್ಲುವದನ್ನು ತಪ್ಪಿಸಿ ಅವುಗಳ ಸಂರಕ್ಷಣೆ ಬಗ್ಗೆ ಒಂದು ಕಾನೂನ್ ಅವಶ್ಯವಾಗಿ ಆಗಬೇಕೆಂದು ಕಾಫಿ ಪ್ಲಾಂಟರುಗಳು ಮತ್ತು ಶಿಕಾರಿ ಅಭಿಲಾಷೆಯುಳ್ಳವರು ಕೂಡಾ ಸರ್ಕಾರದವರನ್ನು ಬಹಳವಾಗಿ ಕೇಳಿಕೊಳ್ಳುತ್ತಲಿರುವದು ನಿಮಗೆ ಗೊತ್ತೇ ಇದೆ. ಈ ವಿಷಯ ವಿಶೇಷ ಕಷ್ಟವಾದ್ದಾಗಿದೆ. ಉಪಯುಕ್ತವಾದ ಜಾತಿ ಮೃಗಗಳು ಮತ್ತು ಪಕ್ಷಿಗಳು ವ್ಯರ್ಥವಾಗಿ ನಾಶ ಹೊಂದದಂತೆ ಸಂರಕ್ಷಣೆ ಮಾಡತಕ್ಕ ಬಗ್ಗೆ ಭೂತದಯಾಪೂರ್ವಕವಾದ ಪದ್ಧತಿ ಕ್ರಮವಾಗ ಏರ್ಪಾಟನ್ನು ಕಾನೂನಿನಿಂದ ಮಾಡತಕ್ಕದ್ದು ಆವಶ್ಯವಾಗಿರುತ್ತೆ. ಅದರೆ ಆಹಾರಕ್ಕೋಸ್ಕರವೇ ಆಗಲಿ ಅಥವಾ ಶಿಕಾರಿಗಾಗಿಯೇ ಆಗಲಿ ಕಾಡುಮೃಗ ಪಕ್ಷಿ ವಗೈರೆ ಇವುಗಳನ್ನು ಕೊಲ್ಲುವ ಬಗ್ಗೆ ಜನಗಳಿಗೆ ಬಹುಕಾಲದಿಂದ ಇರುವ ಹಕ್ಕನ್ನು ತಪ್ಪಿಸುವದಕ್ಕೆ ಆಗಲಿ, ಅಥವಾ ಸರ್ಕಾರದವರ ಯಾ ಶಿಕಾರಿದಾರರ ಫಾಯಿದೆಗಾಗಿ ಸ್ವೇಚ್ಛೆಯುಳ್ಳಿರತಕ್ಕ ಜೀವಜಂತುಗಳು ಮತ್ತು ಪಕ್ಷಿಗಳು ಇತರರ ಸ್ವತ್ತಾಗಿರಕೂಡದೆಂದು ನಿಯಮವನ್ನು ಕಲ್ಪಿಸುವದಕ್ಕೆ ಆಗಲಿ, ಸದರೀ ಕಾನೂನಿನಿಂದ ಅವಕಾಶವಾಗಬಾರದು. ಪ್ರಸಕ್ತ ವಿಷಯದಲ್ಲಿ ತಯಾರಾಗಿರುವ ಮುಸೂದಾ ನಿಬಂಧನೆಯನ್ನು ನೀವು ನೋಡಿ ಅದರಲ್ಲಿ ಏನಾದರು ಬದಲಾಣೆಗಳಾಗಬೇಕಾದಲ್ಲಿ ತಿಳಿಸಬೇಕು. ಉಪಯುಕ್ತವಾದ ಜಾತಿ ಮೃಗಗಳು, ಪಕ್ಷಿಗಳು, ಮತ್ತು ಮೀನುಗಳು ಅಭಿವೃದ್ಧಿಯಾಗುವದಕ್ಕೆ ಕಾಲ, ದೇಶ, ಪುಂಸ್ತ್ರೀಭೇದ, ಬಳವಳಿಗೆ, ಕೊಲ್ಲುವವಿಧಾನ ಮತ್ತು ಸಾಧನ, ಮುಂತಾದ ಸಂಗತಿಗಳಿಗೆ ದೃಷ್ಟಿಕೊಟ್ಟು ಅಂತಾ ಜಾತಿ ಮೃಗಗಳು ವಗೈರೆ ಇವುಗಳನ್ನು ಕಾಪಾಡುವ ಬಗ್ಗೆ ಸದರಿ ನಿಬಂಧನೆಯಲ್ಲಿ ನಿಯಮವನ್ನು ಕಲ್ಪಿಸಿ ಇದೆ. ಇದಲ್ಲದೆ, ಯಾವ ಮೃಗ ಯಾ ಪಕ್ಷಿಯನ್ನು ಕೊಲ್ಲುವದು ಶಿಕಾರಿದಾರರಿಗೆ ಉತ್ಸಾಹಕರವೋ, ಅಥವಾ ಅನ್ಯಾಯವಾಗಿ ಜನಗಳು ಭಾವಿಸುವರೋ ಅಂಥಾವುಗಳನ್ನೂ ಮತ್ತು ಕೆಲವು ಕ್ರಿಮಿನಾಶಕ ಪಕ್ಷಿ ಜಾತಿಗಳನ್ನೂ ಬಂಧಿತವಾಗಿ ಸಂರಕ್ಷಣೆ ಮಾಡುವ ಅಧಿಕಾರವೂ ಈ ನಿಬಂಧನೆ ಮೇರೆ ಸರ್ಕಾರದವರಿಗೆ ಇರುತ್ತೆ. ಗರಿ ಮತ್ತು ಚರ್ಮವನ್ನು ಮಾರಿ ಫಾಯಿದೆ ಪಡೆಯಬೇಕೆಂಬ ಉದ್ದೇಶದಿಂದ ಮೃಗಗಳನ್ನೂ ಮತ್ತು ಪಕ್ಷಿಗಳನ್ನೂ ಕೊಲ್ಲುವದನ್ನು ನಿರೋಧಿಸುವ ಲೈಸೆನ್ಸ್ ಪದ್ಧತಿಯನ್ನು ಕಲ್ಪಿಸಬೇಕೆಂದು ದೂಡಿದೆ.

[illegible] ಪಶ್ಚಾತ್ತಾಪ ಮತ್ತು ಉಪಯೋಗ ಇವುಗಳ ಮೇಲೆ ದೃಷ್ಟಿ ಇಟ್ಟು ಈ ಕಾನೂನನ್ನು ಏರ್ಪಡಿಸಬೇಕೆಂದು ಮಾಡಿದೆ. ಇದರಲ್ಲಿ ಶಿಕಾರಿ ಮತ್ತು ಆಹಾರದ ಬಗ್ಗೆ ಪ್ರಜೆಗಳಿಗೆ ಇರುವ ನ್ಯಾಯವಾದ ಹಕ್ಕನ್ನೂ ಕಾಪಾಡಿದೆ. ಇತ್ಯಾದಿ ಕಾರಣಗಳಿಂದ ಈ ಮುಸೂದಾ ರೆಗ್ಯುಲೇಷನನ್ನು ನೀವೆಲ್ಲರು ಪರಿಶೋಧಿಸಿ ಒಪ್ಪುವಿರಿ ಯೆಂದು ಸರ್ಕಾರದವರು ನಂಬಿರುತ್ತಾರೆ.

ಸಭೆಯ ಏರ್ಪಾಟು.—ಶಿವಮೊಗ್ಗ, ಕೋಲಾರ, ತುಮಕೂರು ಈ ಪಟ್ಟಣಗಳ ಪ್ರಜಾಸಂಖ್ಯೆಯನ್ನೂ ಪ್ರಾಮುಖ್ಯತೆಯನ್ನೂ ಆಲೋಚಿಸಿ, ಇತರ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ ಮ್ಯುನಿಸಿಪಾಲಿಟಿಗಳಂತೆಯೇ ಇರುವರಿಗೆ ಈ ಸಭೆಗೆ ಚುನಾಯಿಸುತ್ತಿದ್ದ ಇಬ್ಬರು ಮೆಂಬರುಗಳಿಗೆ ಬದಲಾಗಿ ಮೂರು ಜನ ಮೆಂಬರುಗಳನ್ನು ಚುನಾಯಿಸುವ ಅಧಿಕಾರವನ್ನು ಶ್ರೀಮನ್ಮಹಾರಾಜರವರು ಮೇಲ್ಕಂಡ ಪಟ್ಟಣಗಳಿಗೆ ದಯಪಾಲಿಸಿರುತ್ತಾರೆಂಬುವ ಅಂಶವು ಆ ಸ್ಥಳಗಳ ಮೆಂಬರುಗಳಿಗೆ ಹರ್ಷಕರವಾಗಿರುವದೆಂಬುದರಲ್ಲಿ ಸಂದೇಹ ತೋರಲಿಲ್ಲ.

ಈ ಉಪನ್ಯಾಸವನ್ನು ಮುಗಿಸುವದಕ್ಕೆ ಮುಂಚಿತವಾಗಿ ಒಂದು ವಿಷಯವನ್ನು ಸಂತೋಷಪೂರ್ವಕ ತಿಳಿಸುತ್ತೇವೆ ಅದೇನಂದರೆ :—

ಹಿಂದೆ ಅನೇಕಾವರ್ತಿ ನೀವುಗಳು ಅರಿಕೆ ಮಾಡಿಕೊಂಡಿದ್ದ ಪ್ರಕಾರ ಈ ಸಭೆಯ ಮೆಂಬರತನವು ಮೂರು ಸಂವತ್ಸರಗಳ ವರೆಗೆ ಕಾಯಂ ಇರಬೇಕೆಂದು ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸುತ್ತಾರೆ. ಈ ಕಾರಣದಿಂದ ನೀವು ಈ ಸಭೆಯಲ್ಲಿ ವಿಜ್ಞಾಪನೆ ಮಾಡತಕ್ಕ ನಾನಾಸಂಗತಿಗಳಲ್ಲಿ ಆಸಕ್ತಿಯು ಹುಟ್ಟಿ, ಅವುಗಳ ವಿಷಯದಲ್ಲಿ ನೀವು ಮಾಡತಕ್ಕ ವ್ಯವಸಾಯವು ಅವಿಚ್ಛಿನ್ನವಾಗಿ ನಡೆಯಲು ಅವಕಾಶ ಉಂಟಾಗಿ ತನ್ಮೂಲಕ ಈ ಸಭೆಯು ಅತ್ಯಂತ ಶ್ರೇಯಸ್ಕರವಾಗಿ ಪ್ರಯೋಜನಕರವಾಗಿರುವದೆಂದು ಶ್ರೀಮನ್ಮಹಾರಾಜರವರು ನಂಬಿರುತ್ತಾರೆ.

ಕೆ. ಶೇಷಾದ್ರಿ ಅಯ್ಯರ್,
ಮೈಸೂರು ಸಂಸ್ಥಾನದ ದಿವಾನರವರು.

## SUMMARY OF NEWS.
### ವೃತ್ತಾಂತ ಸಂಗ್ರಹವು.

ಅಮೇರಿಕಾದಲ್ಲಿ ಲೆಕ್ಕ ಇಡುವದೊಂದು ಯಂತ್ರವನ್ನು ಮಾಡಿರುತ್ತಾರೆ. ಈ ಯಂತ್ರವು ಎಷ್ಟು ಖರ್ಚು ಆಗುತ್ತದೋ ಅದನ್ನು ನಮೂದಿಸಿಟ್ಟು ತಿಂಗಳ ಆಖೈರಿಗೆ ಲೆಕ್ಕದ ತೇರೀಜು ಸಹ ಮಾಡಿಕೊಡುತ್ತೆ.—ಕ. ಸು.

ಬರ್ಮಾದೇಶದಲ್ಲಿ ಕೃಪಣಾಗ್ರಗಣ್ಯನೆಂಬವನು ಭಾರೀ ಸಾಹುಕಾರನಾಗಿದ್ದಾನೆ ಅವನು ಪ್ರತಿದಿನವೂ ತನ್ನ ಊಟಕ್ಕೆ ೧ ಕಾಸು ಮಾತ್ರವೇ ಖರ್ಚು ಮಾಡುತ್ತಾನಂತೆ. ಆದ್ದರಿಂದ ಅವನಿಗೆ ಕೃಪಣಾಗ್ರಗಣ್ಯನೆಂದು ಹೆಸರಿಡಬಹುದಲ್ಲವೆ?—ಕ. ಪ.

ಈ ವರ್ಷ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ೬,೦೪೫ ಉಮೇದ್ವಾರರು ಕೂತಿರುತ್ತಾರೆ, ೧,೫೫೫ ಮುಂಬಯಿಯಲ್ಲಿ, ೩೬೬ ಪೂನಾದಲ್ಲಿ, ೪೬೦ ಅಹಮದಾಬಾದ್‌ನಲ್ಲಿ, ೧೫೪ ಕರಾಚಿಯಲ್ಲಿ ಅಂತು ಒಟ್ಟಿಗೆ ೩,೦೫೪ ಇವರಲ್ಲಿ ೬೭ ಮಂದಿ ಹೆಂಗಸರು ಇದ್ದಾರೆ.—ಕ. ಪ.

ವಿಲಾಯತಿಯಲ್ಲಿ ನೌಕರಿಗಳಿಲ್ಲದ ಅನೇಕ ಜನಗಳಿಗೆ ಸಹಾಯ ಮಾಡುವದಕ್ಕಾಗಿ ಚಂದಾ ಜಮಾಯಿಸುವ ವಿರ್ಪಾಡು ಮಾಡಬೇಕೆಂದು ಸಭೆ ಮಾಡಲು ಅನೇಕ ಸರದಾರರು ಕೂಡಿದ್ದರು, ಇದರಂತೆಯೇ ನಮ್ಮ ಹಿಂದೂಸ್ಥಾನದಲ್ಲಿಯೂ ಮಾಡಿದರೆ ಉತ್ತಮವಲ್ಲವೆ?—ಹು. ಪ.

ಬಂಗಾಳ ಪ್ರಾಂತದಲ್ಲಿ ನಿವಾದಾ ಎಂಬ ಊರೊಳಗೆ ಒಬ್ಬ ಸ್ತ್ರೀ ಪೈಲವಾನಳು ಬಂದಿದ್ದಳು ಅವಳ ಸಂಗಡ ಕುಸ್ತಿ ಮಾಡಲಿಕ್ಕೆ ಅಲ್ಲಿ ಮೂರು ಮಂದಿ ಬಾಬುಗಳು ಒಪ್ಪಿಕೊಂಡರು. ಅವರೊಳಗೆ ಒಬ್ಬನನ್ನು ಕೆಡವಿದಳು ಎ. ದ ಇಬ್ಬರು ಅವಳಿಗೆ ಜಯಪತ್ರ ಕೊಟ್ಟರಂತೆ.—ಕ. ವೃ.

ಕಲ್ಕತ್ತೆಯಲ್ಲಿ ಒಬ್ಬ ಬ್ರಾಹ್ಮಣಕ್ರೈಸ್ತರು ಇಂಡಿಯಾದಲ್ಲಿ ಎಮ್. ಎ. ಪರೀಕ್ಷೆಯನ್ನು ಕೊಟ್ಟದ್ದಾಗ್ಯೂ ಸಾಲದೆ, ಲಂಡನಿಗೆ ಹೋಗಿ ಸಿವಿಲ್‌ಸರ್ವಿಸ್ ಪರೀಕ್ಷೆಗೆ ಓದಬೇಕೆಂದು ಇದ್ದಾರೆ. ಇವರು ಹೋಗುವದು ದಾರಿಖರ್ಚಿಗೆ ೧ ಕಾಸು ಕೈಯಲ್ಲಿ ಇಲ್ಲದೆ ವರ್ತಮಾನ ಪತ್ರಿಕೆಗಳಿಗೆ ನ್ಯೂಸ್‌ಗಳನ್ನು ಬರದು ಜೀವಿಸುತ್ತಿದ್ದೇನೆಂದು ಬರೆದು ಇದ್ದಾರೆ.—ಹು. ಪ.

ಪ್ರೊಫೆಸರ್ ಗಾರನರ್ ಎಂಬವರು ಅಮೇರಿಕಾದಿನಲ್ಲಿರುವ ಮಂಗಗಳ ಗುಂಪಿನಲ್ಲಿ ೮೦ ಅವುಗಳಂತೆ ವೇಷ ಧರಿಸಿಕೊಂಡು ಕಪಿ ಭಾಷೆಯನ್ನು ಕಲಿಯಲಿಕ್ಕೆ ಪ್ರಾರಂಭಿಸಿದರು, ಇವರು ಇದುವರಿವಿಗೂ ೨೦೦ ಮಾತುಗಳನ್ನು ಕಲಿತರು ಇನ್ನೂ ಉಳಿದಿರುವ ೫೦ ಮಾತುಗಳನ್ನು ಕಲಿತುಕೊಂಡೇ ಜಾಟಿಗೆ ಹೊರಡುವವರಾಗಿರುತ್ತಾರೆ ಕೋತಿಗಳ ಭಾಷೆಗೆಲ್ಲಾ ೨೫೦ ಮಾತುಗಳು ಮಾತ್ರ ಇರುತ್ತವೆ.—ಕ. ವೃ.

ಪುಣ್ಯವಂತರು ಗಾಡಿಗಳಲ್ಲಿ ಕುಳಿತುಕೊಂಡು ಸವಾರಿಮಾಡುತ ಹೋಗುವ ಕಾಲದಲ್ಲಿ ಗಾಡಿಯನ್ನು ನಿಲ್ಲಿಸುವದಕ್ಕೂ ಜೋರಾಗಿ ಬಿಡುವದಕ್ಕೂ ಮೆಲ್ಲನೆ ಬಿಡುವದಕ್ಕೂ, ಬಲಗಡೆ ಎಡಗಡೆ ತಿರುಗಿಸುವದು ಗಾಡಿ ಹೊಡೆಯುವವನ ಸಂಗಡ ಆಗಾಗ್ಗೆ ಮಾತನಾಡಬೇಕಷ್ಟೆ. ಇಂಗ್ಲೆಂಡಿನಲ್ಲಿ ಒಂದು ಗಾಡಿ ಕಾರ್ಖಾನೆಯವರು ಈ ಕಷ್ಟಗಳನ್ನು ತಪ್ಪಿಸುವದಕ್ಕಾಗಿ ಕೆಲವು ಸಂಜ್ಞೆಗಳನ್ನು ಮಾಡಿಕೊಂಡು ಉಪಯೋಗಿಸುವದಕ್ಕೆ ಪ್ರಯತ್ನಿಸಿದ್ದಾರಂತೆ.—ಕ. ಪ.


## ಸೂರಿ ಅಂಡ್ ಕಂಪೆನಿ.

### ಟ್ರೇಡರ್ಸ್ ಮತ್ತು ಏಜಂಟ್ಸ್, ಪುನಾ.

ರಕ್ತವು ಮನುಷ್ಯನ ಜೀವರೂಪವಾಗಿಯೂ ಅಂತಾ ರಕ್ತವೂ ಜೀವವು ಸಹ ವಿದ್ಯುಚ್ಛಕ್ತಿ ರೂಪವಾಗಿಯೂ ಇರುತಿದೆ.

ಪುನಾ ಪಟ್ಟಣದಲ್ಲಿರುವ ಸೂರಿ ಅಂಡ್ ಕಂಪೆನಿಯವರು, ಜನರಲ್ ಟ್ರೇಡರ್ಸ್ ಮತ್ತು ಏಜಂಟ್‌ಗಳಾಗಿರುತ್ತಾರೆ ಇವರು ಅನುಪಮಸಿದ್ಧಗಳಾಗಿಯೂ, ಉತ್ತಮ ಗುಣಗಳುಳ್ಳವಾಗಿಯೂ ಇರುವ ಔಷಧಗಳ ಮತ್ತು ಮಿಂಚಿನ ಒಡವೆಗಳ ಮಾನ್ಯುಫಾಕ್ಚರರಾಗಿಯೂ ಇರುತ್ತಾರೆ. ಅನೇಕೆತರದ ವಸ್ತುಗಳ ಕಾರ್ಖಾನೆಯವರು ಮುಖ್ಯವಾಗಿ, ಡೆರ್ಕ್ ಬೇಸರ್ ಮಿಲ್‌ಎಂಬ ಹೆಸರುಳ್ಳ ಭಾರೀ ಗಿರಣಿಯವರು, ವ್ಯಾಪಾರಾಭಿವೃದ್ಧಿಗಾಗಿ ಇವರನ್ನು ಆನರರಿ ಏಜಂಟರನ್ನಾಗಿ ನೇಮಿಸಿರುತ್ತಾರೆ.

೧. ಪ್ರವಾಸ ಗೃಹ ವೈದ್ಯ ಪೆಟ್ಟಿಗೆಯು.—ಇದು ೨೧ ವಿಧ ಔಷಧಗಳ ಪೆಟ್ಟಿಗೆಯು.—ಇದರ ಕ್ರಯ ಟಪ್ಪಾಲ್ ಹಾಸಲ್ ಸೇರಿ ಪೆಟ್ಟಿಗೆ ೧ಕ್ಕೆ ೧೦ ರೂಪಾಯಿ ಇದರೊಡನೆ ಅನುಭವಾನ ಕ್ರಮ ಪೆಟ್ಟಿಗೆ ದೊರೆಯುವದು. ಮುಂಗಡವಾಗಿ ಹಣ ಕಳುಹಿಸಲ್ಪಡದ ಹೊರತು ಇದು ಕಳುಹಿಸಲ್ಪಡಲಾರದು.

ಮೆಸ್ಸರ್ಸ್ ಸೂರಿ ಅಂಡ್ ಕಂಪೆನಿಯವರು ಹೊಸದಾದ ಶೋಧನೆಗಳಿಂದ ಪುನಾದಲ್ಲಿರುವ ತಮ್ಮ ಕಾರ್ಖಾನೆಯೊಳು ವಿದ್ಯುದೌಷಧಗಳನ್ನು ಶಾಸ್ತ್ರೀಯವಾಗಿಯೂ ಸುಲಭವಾಗಿಯೂ ಇರುವಂತೆ ತಯಾರ್ಮಾಡುತ್ತಾರೆ ವಿದ್ಯುದ್ವಸ್ತುಗಳ ಪ್ರಯೋಜನವನ್ನು ತಿಳಿಯದಿರುವ ನಮ್ಮ ದೇಶಬಾಂಧವರ ತಿಳುವಳಿಕೆಗೋಸ್ಕರ ಆದಂತಿಳಿಸಿರುತ್ತಾರೆ. ಸದರೀ ಕಂಪೆನಿಯವರು ತಮ್ಮ ದೇಶ ಬಾಂಧವರಿಗೆ ಇದರ ಕಂಡುಕೊಳ್ಳುವಿಕೆಗಳನ್ನು ಮಾಡಿರುತ್ತಾರೆ ಇದರಿಂದ ಪ್ರತ್ಯಕ್ಷಾನುಭವವನ್ನು ಪಡೆದು ತಿಳಿಸುವಂತವರಿಗೆ ವಿನಯಪೂರ್ವಕ ವಂದನೆಮಾಡುವುದು ತಮ್ಮ ಕರ್ತವ್ಯವೆಂದು ಭಾವಿಸಿರುತ್ತಾರೆ.

೧. ದುಡ್ಡಿಗೊಂದು ಪಂಚಾಂಗವು.—ಇದು ಬಾಲಬೋಧ ಅಕ್ಷರದಿಂದ ಛಾಪಿಸಿರುವ ಮುಂದಿನ ಜಯಸಂವತ್ಸರದ ಪಂಚಾಂಗವಾಗಿರುತ್ತದೆ. ಇದರ ೧೦೦ ಪ್ರತಿಗಳಿಗೆ ಟಪ್ಪಾಲ್ ಹಾಸಲ್ ಸೇರಿ ರೂ|| ೧—೮—೦

೨. ಒಂದು ದುಡ್ಡಿಗೆ ೨ ದೌತಿ ಶಾಯಿಯು.—ಇದು ಸ್ಟೀವೆನ್ಸ್‌ಯವರ ಬ್ಲೂ ಬ್ಲಾಕ್ ಇಂಕಿನಂತೆಯೆ ಇರುತಿದೆಯಲ್ಲದೆ ಬರೆಯುವಾಗ ನೀಲಿ ಬಣ್ಣವಾಗಿ ಕಾಣುವದು, ಒಣಗುತಲೇ ಅಚ್ಚಕಪ್ಪಾಗುವದು. ಬರೆದ ಅಕ್ಷರಗಳನ್ನು ಉಜ್ಜಿ ತೆಗೆಯಕೂಡದಂತೆ ಪುಡಿಯಾಗಿರುವದರಿಂದ ಯಾವಾಗ ಎಷ್ಟು ಬೇಕೋ ಆಗ ಅಷ್ಟು ಇಂಕ್ ಮಾಡಿಕೊಳ್ಳಬಹುದಾಗಿದೆ. ೧೦೦ ಪೊಟ್ಟಣಗಳಿಗೆ ಕ್ರಯ ರೂ|| ೧—೮—೦, ಟಪಾಲ್ ಚಾರ್ಜ್ ೦—೪—೦. ಇದರಂತೆ ಕೆಂಪು, ಹಸರು ನೀಲಿ, ಬದಾಮಿ ಬಣ್ಣಗಳುಳ್ಳ ಶಾಯಿ ಪೊಟ್ಟಣಗಳು ಸಹ ಇರುತಿವೆ, ಇವುಗಳು ನೂರು ಪೊಟ್ಟಣಗಳಿಗೆ ಟಪಾಲ್ ಹಾಸಲ್ ಸೇರಿ, ೩ ರೂಪಾಯಿಗಳು.

೩. ದುಡ್ಡಿಗೊಂದು ಫಲಾಹಾರವು.—ಕೆಂಪು ಮೂಲಂಗಿ ಮಾಡಿರುವ ದೇಶೀಯ ಮಾಂಸಾ ಆರೋರೂಟ್, ಇದು ಅಬಾಲವೃದ್ಧರಾದ ರೋಗಿಗಳಿಗೂ, ಪ್ರತಿ ಸಪ್ತಾಹ ಪಾಲುಮಾಡುವವರಿಗೂ ಶುದ್ಧವಾದ ಪಥ್ಯವಾಗಿರುತಿದೆ. ಈ ಚಿತ್ರರೂಪವನ್ನು ನಮ್ಮ ಪ್ರಮಾಣದವರು ಶಾಸ್ತ್ರಗಳಲ್ಲಿ [illegible]

೪. ದುಡ್ಡಿಗೊಂದು ಹಿತ್ತಾಳೆಯ ಚಿಕ್ಕ ಘಂಟೆಯು.—ಇದು ಪೂಜಾ ಪ್ರಸಂಗಗಳಲ್ಲಿ ಪಂಚಾಮೃತ ಮಾಡುವದಕ್ಕೆ ಶ್ರೇಷ್ಠವಾದ ಉಪಕರಣವಾಗಿಯೂ ಮತ್ತು ಹುಡುಗರು ದುಪ್ಪಟ್ಟಿಗಳನ್ನು ಮಾಡುವದಕ್ಕೂ ಉಪಯುಕ್ತವಾಗಿರುತಿದೆ. ೧೦೦ ಘಂಟೆಗಳ ಕ್ರಯ ೧—೧೨—೦, ಟಪಾಲ್ ಚಾರ್ಜ್ ೦—೧—೨—೦.

೫. ಸೂರಿ ಅಂಡ್ ಕಂಪೆನಿಯವರ ಮಿಂಚಿನ ಒಡವೆಗಳು.—ಮಿಂಚಿನ ಒಡವೆಗಳನ್ನು ಧರಿಸುವದರಿಂದ ರಕ್ತಸಂಚಲನ ಮತ್ತು ಪಕ್ಷವಾತಾದಿಗಳು, ಸಂದುನೋವು, ಉಷ್ಣ, ಕಾಸ, ಸಂದುಬಿಗಿಯುವಿಕೆ, ನರಗಳಶೂಲೆ, ಪಿತ್ತದಿಂದ ಎದೆಯಲ್ಲಿ ಉರಿ, ಎಲ್ಲತರದ ತಲೆನೋವು, ಅಸ್ತಮತ ರೋಗ ವಿಕಾರಗಳು, ಮಕ್ಕಳ ಬಾಲಗ್ರಹ ಪ್ರಯುಕ್ತವಾದ ದೋಷಗಳು, ರಕ್ತಗುಂದುವದು, ಹೆಂಗಸರಿಗೆ ಮೈ ಬಿಳಿಯುವದು, ಹೊಟ್ಟೆಯಲ್ಲುಂಟಾಗುವ ವಾಯು ನಡ್ತೆ, ಹಲ್ಲಿನ ಎಲ್ಲಬಗೆ ರೋಗಗಳು, ಕಿವಿಯಲ್ಲಿ ಕೀವು ಸುರಿಯುವಿಕೆ ಇವು ಮೊದಲಾದವುಗಳು ಪರಿಹಾರವಾಗುತಿವೆ. ವಿದ್ಯುನ್ಮಂಡಾರಿಕೆಯು ಧಾರಣೆಯಿಂದ ಸ್ಪರ್ಶಜನ್ಯ ರೋಗಗಳು ಸಂಭವಿಸಲಾರವೆಂಬದಂ ಅನುಭವಕ್ಕೆ ಬಂದಿರುತಿದೆ.

ಇದರ ಕ್ರಯ ಪಟ್ಟಿಕೆ ಡಜನ್ ಸಿಲ್.

| | | | | |
|---|---|---|---|---|
| ಹಿತ್ತಾಳೆ ಉಂಗರ | ... | ೧ | ೮ | ೦ |
| ಡಿಟ್ಟೋ ಪದಕ | ... | ೧ | ೦ | ೦ |
| ಜರ್ಮನ್ ಸಿಲ್ವರ್ ಉಂಗರ | ... | ೧ | ೨ | ೦ |
| ಡಿಟ್ಟೋ ಪದಕ | ... | ೧ | ೯ | ೦ |
| ಸೋಟಾ ಬೆಳ್ಳಿ ಉಂಗರ | ... | ೨ | ೯ | ೦ |
| ಡಿಟ್ಟೋ ಪದಕ | . | ೨ | ೦ | ೦ |
| ಲೇಪನಿ | ... | ೧ | ೯ | ೦ |
| ವಿದ್ಯುನ್ಮಂಡಾರಿಕೆ | ... | ೧ | ೧ | ೦ |

ಯಾರಿಗೆ ಯಾವತರದ ಮಾಲ್ ಬೇಕಾಗಿದ್ದಾಗ್ಯೂ ವಾಲ್ಯೂಪೇಯಬಲ್ ಮೂಲಕ ಕೂಡಲೇ ರವಾನಿಸಲ್ಪಡುವವು.

ಎಲ್ಲಾ ತರದ ಪತ್ರವ್ಯವಹಾರಗಳನ್ನು ಈ ಕೆಳಗೆ ಕಂಡ ವಿಳಾಸದಾರರಿಗೆ ಬರೆಯಬೇಕು. ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಟಪಾಲ್ ಚೀಟಿ ಸಹಿತ ಬರೆದುಕೊಳ್ಳತಕ್ಕದ್ದು.

ರಾ|| ಕೆ. ಕೃಷ್ಣಶಾಸ್ತ್ರಿ, ಏಜಂಟ್,
ಸೂರಿ ಅಂಡ್ ಕಂಪೆನಿ.
ರವಿವಾರ ಪೇಟೆ, ಪೂನಾ.

ಅಥವಾ ಇವರ ಏಜಂಟರಾದ ಕೆಳಗೆ ರುಜು ಮಾಡಿರುವವರಿಗೆ ಬರೆದುಕೊಳ್ಳತಕ್ಕದ್ದು.

ಟಿ. ಬಿ. ವೆಂಕಟಾಚಾರ್,
೪೯ ನೇ ನಂಬರ್, ಹಾಸ್ಪತ್ರಿ ರೋಡ್, ಸಿಟಿ, ಬೆಂಗಳೂರ್


BANGALORE.—Printed and published at the KARNATAKA PRESS, No. 40, HOSPITAL ROAD, CITY.—1893.

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning.**

ಪ್ರಕಾಮುವಿವಿದಪ್ರನ್ಯತ್ಸ್ಯಪಗನಸಾರ್ಥಕರ್ಣಾಟಕಪ್ರಕಾಶನಪರಾಪಿದಾಪ್ರಥಿತಪಾಹಿತೀಶೋಬಿತಾ ॥ ನ್ಯಗಾಂಕಹಿತವಾಸರನಿಹಿತಮುದ್ರಣಾಸಜ್ಜನ್ಯೈರ್ಶ್ರಿತಾಸುಪರಿಶೋಚಿತಾದಿಕತಿಮಾನಸಂತೋಮದಾ ॥

Vol. XX] BANGALORE —MONDAY, DECEMBER 11, 1893. [No. 49

ಸಂಪುಟ ೨೦.] ಬೆಂಗಳೂರು:—ಸನ್ ೧೮೯೩ನೇ ಇಸವಿ ಡಿಸೆಂಬರ್ ೧೧ ನೇ ತಾರೀಖ್ ಸೋಮವಾರ. [ಸಂಖ್ಯೆ ೪೯.


## ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

| | ಸ್ಥಳದವರಿಗೆ. | ಪರಸ್ಥಳದವರಿಗೆ. |
|---|---|---|
| ಸಾಲ್ ಒಕ್ಕೆ ... | 6—0—0 | 8—0—0 |
| 6 ತಿಂಗಳಿಗೆ | 3—5—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ

| | ಸ್ಥಳದವರಿಗೆ. | ಪರಸ್ಥಳದವರಿಗೆ. |
|---|---|---|
| ಸಾಲಿಂಗೆ ... ... | 3—0—0 | 4—0—0 |
| 6 ತಿಂಗಳಿಗೆ ... | 1—12—0 | 2—8—0 |

ಈ ಪತ್ರಿಕೆಯ ದರ ಮುಂಗಡವಾಗಿ ಕೊಡಬೇಕು. ಒಂದು ತಿಂಗಳೊಳಗಾಗಿ ಹಣ ಕಳುಹಿಸದಿದ್ದರೆ ಸಾಲಿನ ಪೂರ್ತಿ ದರ ವಸೂಲ್ ಮಾಡಲಾಗುವದು. ಬೇಕಾದವರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. [illegible]

## ಪ್ರಕಟನೆಯ ರಿವಾಜ್.

ಮೊದಲನೆ ಸಲದ ಪಙ್ತಿ ಒಂದಕ್ಕೆ ೦—೨—೦

ಎರಡನೆಯದಕ್ಕೆ ಪಙ್ತಿ ಒಂದಕ್ಕೆ ೦—೧—೦

ಮಿರಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟುಸಲ ಪ್ರಕಟಿಸಬೇಕಾದಾಗ್ಯೂ ಪಙ್ತಿ ಒಂದಕ್ಕೆ ೧ ಆಣೆಯಂತೆ ತೆಗೆದುಕೊಳ್ಳಲಾಗುವದು. ಈ ಪತ್ರಿಕೆಯಲ್ಲಿ ಖಾಯಮ್ ಜಾಹೀರಾತುಗಳನ್ನು ಪ್ರಕಟಿಸಬೇಕೆಂದಿರುವವರು ಅವು ಎಷ್ಟು ವರ್ಷ ಖಾಯಮ್ ಮಾಡತಕ್ಕದ್ದೋ ಅದನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಿದ್ದರೆ ಅವರು ನಮಗೆ ನಿಲ್ಲಿಸುವಂತೆ ಬರೆಯುವವರೆಗೂ ಪ್ರಕಟಿಸುತ್ತಿದ್ದು ಆಗ ಎಷ್ಟುಸಲ ಪ್ರಕಟಿಸಲ್ಪಟ್ಟಿದ್ದರೂ ಅಷ್ಟಕ್ಕೆ ದರವು ತಕ್ಕಂತೆ ವಸೂಲಾಗುವದು. [illegible] ಪ್ರಕಟಿಸುವಕ್ಕೆ ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳಲ್ಲಿ [illegible] ನಾವು ಜವಾಬ್ದಾರರಾಗಿರಲಾರೆವು. [illegible]

*ADVERTISEMENTS.*


### NOTICE.

**VAIDYASARA SANGRAHA.**

A TREATISE ON THE PRINCIPLES OF HINDU MEDICINE

*Price including Postage Rs. 4-8-0*

ವೈದ್ಯಸಾರ ಸಂಗ್ರಹ.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಸಾವಲ್ ಸಹಿತ ಪ್ರತಿ ಒಂದಕ್ಕೆ ರೂ 4-8-0

### ನೋಟೀಸ್.

**ಬೆಂಗಳೂರು ಕರ್ಣಾಟಕ್ ಪ್ರೆಸ್.**

೧೮೭೪ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ ಸಕಲವಿಧ ಕೆಲಸಗಳು ಸುಲಭ ದರದಿಂದ ಶೀಘ್ರವಾಗಿಯೂ ಅಚ್ಚುಕಟ್ಟಾಗಿಯೂ, ಮಾಡಲ್ಪಡುವವು.

ಇದರಲ್ಲಿ ಸದ್ಯಕ್ಕೆ ಇಂಗ್ಲಿಷ್ ಕನ್ನಡ ಕೆಲಸಗಳು ಮಾತ್ರವೇ ನಡೆಯುತ್ತಿವೆ. ಇತರ ತಪಸೀಲುಗಳನ್ನು ಸದರೀ ಕಾರ್ಖಾನೆಯ ಪ್ರೊಪ್ರೈಟರಿಗೆ ಬರೆದು ತಿಳಿದುಕೊಳ್ಳಬಹುದು.

### ನೋಟೀಸ್.

ಗಣೇಶ ರಾಮಚಂದ್ರ ಠಕಾರ್ ಮತ್ತು ಕಂಪೆನಿ.
ಕಮಿಷನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ಸಾಧ್ಯ ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯಿಂದ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ಸ್ವಲ್ಪ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರಹ ಔಷಧಗಳು, ಪುಸ್ತಕಗಳು, ಮುತ್ತುಗಳು, ಚಿಪ್ಪು ಮುತ್ತುಗಳು, ಛತ್ರಿಗಳು, ವಾಚ್‌ಗಳು, ಟೈಂಪೀಸ್‌ಗಳು, ಕಾಶ್ಮೀರಿ ಶಾಲುಗಳು, ಪಟ್ಟೇದಗಳು, ಜರತಾರಿ ಕಾಗಳು, ಚಂದ್ರಕಾಂತ ಮತ್ತು ಕನ್ನಡಕಗಳು, ಜರತಾರಿ [illegible] ಪುಸ್ತಕಗಳು, ಜರತಾರಿ ಟೋಪಿಗಳು, ಆಫೀಸ್ ಡ್ರೆಸ್‌ಗಳು, ಪರದೆಗಳು, ಅತ್ತರುಗಳು, ಅದ್ಭುತ್ತವಾಗಿರುವ ವಸ್ತ್ರಗಳು, ಬಂಗಾರದಿಂದ ಕಟ್ಟಲ್ಪಟ್ಟ ಉಂಗುರಗಳು, ಬೆಳ್ಳಿ ಪಾತ್ರೆಗಳು, ಜರ್ಮನ್ ಬೆಳ್ಳಿ ಪಾತ್ರೆಗಳು, ಕೇಸರಿ, ಕಸ್ತೂರಿ ಮೊದಲಾದ ಇತರ ಸಾಮಾನುಗಳು

ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟಾಂಪ್ ಕಳುಹಿಸಿದ ಕೂಡಲೆ ಜವಾಬ್ ದೊರೆಯುವದು.

ವಿಳಾಸ—ಗಣೇಶ ರಾಮಚಂದ್ರ ಠಕಾರ್,
ಮತ್ತು ಕಂಪೆನಿ, ಕಮಿಷನ್ ಏಜಂಟ್ಸ್.
ಠಾಕೂರ್ ದ್ವಾರ, ಮಾರ್ಕೆಟ್ ಪೋಸ್ಟ್, ಮುಂಬೈ

### ನೋಟೀಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

### ಸಂಸ್ಕೃತ ಗ್ರಂಥಗಳು.

| | ರೂ | ಆ | ಪೈ |
|---|---|---|---|
| ಸಟೀಕಾ ರಾಮಗೀತಾ | ೧ | ೦ | ೦ |
| „ ಶಿವಾನಂದಲಹರಿ | ೦ | ೪ | ೦ |
| „ ಕಾಲಾಮೃತ | ೧ | ೦ | ೦ |
| „ ಬಾಲರಾಮಾಯಣ .. | ೦ | ೩ | ೦ |
| „ ಗೋಪಿಕಾ ಗೀತೆ ... | ೦ | ೧ | ೦ |
| „ ಚಾಣಕ್ಯನೀತಿ (ಸುಭಾಷಿತ) | ೦ | ೮ | ೦ |
| ವಿಷ್ಣು ಸಹಸ್ರನಾಮ ವಗೈರೆ | ೦ | ೩ | ೦ |
| ಸೂರ್ಯಸಹಸ್ರನಾಮ | ೦ | ೨ | ೦ |
| ಕೃಷ್ಣಕರ್ಣಾಮೃತ | ೦ | ೨ | ೦ |
| ಶ್ರೀಪಾದ ಅಮರ ಮಾಲ | ೦ | ೨ | ೦ |
| ೧ ಕಾಂಡ ಟೀಕಾ | ೦ | ೧ | ೦ |

### ಕನ್ನಡ ಗ್ರಂಥಗಳು

| | ರೂ | ಆ | ಪೈ |
|---|---|---|---|
| ಹರಿಶ್ಚಂದ್ರ ಕಾವ್ಯ | ೩ | ೦ | ೦ |
| ಟೀಕಾ ಜೈಮಿನಿ | ೧ | ೨ | ೦ |
| ವೃಷಭೇಂದ್ರವಿಜಯ | ೧ | ೪ | ೦ |
| ಪಂಚತಂತ್ರ ಚಾರುಮತಿ | ೦ | ೬ | ೦ |
| ಹರ ನುಡಿಮಾಲೆ | ೦ | ೬ | ೦ |
| ಕಾಳಿಂಗಮರ್ದನ | ೦ | ೨ | ೦ |
| ಸುಚರಿತ್ರವರ್ಣನ | ೦ | ೨ | ೦ |
| ಕರ್ಣಾಟಕಪರಿಣಯ | ೦ | ೨ | ೬ |
| ಸುದಾಮಚರಿತ್ರೆ | ೦ | ೧ | ೦ |
| ಸೈರಾವಣ ಚರಿತ್ರೆ | ೦ | ೧ | ೬ |
| ಬಾಲಕ್ರೀಡೆ | ೦ | ೧ | ೦ |
| ಮಹಮ್ಮದ್ ಅಲಿ | ೧ | ೦ | ೦ |
| ಬ್ರಾಹ್ಮಣವಿಲಾಸ | ೦ | ೧೦ | ೦ |

## BANGALORE CITY MUNICIPALITY.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ನಾಳೇ ಬರುವ ಸಾಲಿಗೆ ಅಂದರೆ ಸನ್ 1894—95 ನೇ ಇಸವಿಗೋಸ್ಕರ ಬೇಕಾಗುವ ರಸ್ತೆಗಳ ದಳವಾಡಾ ಜಮಾವಣೆ ಮತ್ತು ಬಿಛಾವಣಿಗಳಿಗಾಗಿ ದರಖಾಸ್ತುಗಳು.

ಬೆಂಗಳೂರ್ ಸಿಟಿ ಮ್ಯೂನಿಸಿಪಲ್ ಪ್ರೆಸಿಡೆಂಟರಿಂದ ಸನ್ 1893ನೇ ಇಸವಿ ಡಿಸೆಂಬರ್ ಮಾಹೇ 20 ನೇ ತಾರೀಖ್ ಮಧ್ಯಾನ್ಹದ ವರೆಗೂ ಅಂಗೀಕರಿಸಲ್ಪಡುವದು. ದರಖಾಸ್ತುಗಳು ಅರಗುಮೊಹರ್ ನಿಶಿ ಕಳುಹಿಸಲ್ಪಡಬೇಕು.

ಠಾಂಗಾಡಿಗಳ ನಾನಾವಿಧವಾದ ಬಾಬ್‌ಗಳ ಸುಮಾರ್ ಮೊತ್ತಗಳು ಇದರಲ್ಲಿ ಜಂಟಿಸಿರುವ ಪಟ್ಟಿಯಲ್ಲಿ ನಮೂದಿಸಲ್ಪಟ್ಟಿರುತ್ತವೆ. ಮೊತ್ತಗಳು ಇಷ್ಟೇ ಎಂಬ ನಿಬಂಧನೆ ಇಲ್ಲ. ದರಖಾಸ್ತು ನಮೂನೆ ಷರತ್ತುಗಳು ಮತ್ತು ಕೆಲಸಗಳ ತರಹಾಗಳು ಬೆಂಗಳೂರ್ ಕಚ್ಚೇರಿಯಲ್ಲಿ ಮ್ಯೂನಿಸಿಪಲ್ ಎಗ್ಸಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ಆಫೀಸಿನಲ್ಲಿ ಪ್ರತಿ ದಿವಸದಲ್ಲಿಯೂ ಮಧ್ಯಾನ್ಹ 11 ಘಂಟೆ ಲಾಗಾಯಿತು 4 ಘಂಟೆ ವರಿಗೂ ನೋಡಲ್ಪಡಬಹುದು.

| ನಂಬರು | ತಪಸೀಲು. | [illegible] | [illegible] | [illegible] | [illegible] | [illegible] |
|---|---|---|---|---|---|---|
| | **ಜಮಾವಣೆ.** | | | | | |
| 1 | ಲಾಲಬಾಗ್ ... | ಸಲಿಗೆ, | 1500 | „ | 500 | 2000 |
| 2 | ಬಂಡೆಪಲ್ಲಿ ... | ಡಿಟ್ಟೋ | 500 | 500 | 500 | 1500 |
| 3 | ಕಾಮಪಲ್ಲಿ ... | ಡಿಟ್ಟೋ | 1000 | 1000 | 1000 | 3000 |
| 4 | ಗ್ರಾನೈಟ್ ... | ಡಿಟ್ಟೋ | 1000 | 3000 | 2000 | 6000 |
| | **ಬಿಛಾವಣಿ.** | | | | | |
| 5 | ಲಾಲಬಾಗ್ .. | ಡಿಟ್ಟೋ | 1500 | „ | 500 | 2000 |
| 6 | ಬಂಡೆ ಪಲ್ಲಿ .. | ಡಿಟ್ಟೋ | 500 | 500 | 500 | 1500 |
| 7 | ಕಾಮ ಪಲ್ಲಿ ... | ಡಿಟ್ಟೋ | 1000 | 1000 | 1000 | 3000 |
| 8 | ಗ್ರಾನೈಟ್ ... | ಡಿಟ್ಟೋ | 1000 | 3000 | 2000 | 6000 |
| 9 | ಮರಳು ... | ಡಿಟ್ಟೋ | 200 | 300 | 200 | 700 |
| 10 | ಮಣ್ಣು ಕಾಮಗಾರಿ .. | ಡಿಟ್ಟೋ | 1000 | 2000 | 1500 | 4500 |
| 11 | ಶಿಕಿಂಗ್ ಮತ್ತು ಫಾರ್ಮಿಂಗ್ ಜಲ್ಲಿ ರಸ್ತೆ ... | ಚರಂಗಳು, | 12000 | 5000 | 8000 | 25000 |
| 12 | ಸದಾ ಗ್ರಾವೆಲ್ ರಸ್ತೆ ... | ಡಿಟ್ಟೋ | 5000 | 15000 | 10000 | 30000 |

ಬೆಂಗಳೂರು ಸಿಟಿ ಮ್ಯುನಿಸಿಪಲ್ ಆಫೀಸ್.
ತಾರೀಖ್ 16 ನೇ ನವಂಬರ್, 1893.

K. SRINIVASA RAO,
*Vice President,*
*City Municipal Commission.*

### ಮೈಸೂರ್ ಗವರ್ನ್‌ಮೆಂಟ್

### ನೋಟೀಸ್.

ತಾ॥ ೭ನೇ ಡಿಸೆಂಬರ್ ೧೮೯೩.

ಬೆಂಗಳೂರಲ್ಲಿರುವ ಲ್ಯೂನಟಿಕ್ ಮತ್ತು ಲೆಪ್ಪರ್ ಅಸ್ಪತ್ರೆಲು, (ಹುಚ್ಚರ ಮತ್ತು ಕುಷ್ಠರೋಗಿಗಳ ಆಸ್ಪತ್ರೆ), ಗವರ್ನಮೆಂಟ್ ಸಿಟಿ ಆಸ್ಪತ್ರೆ, ಪ್ರಸವ ಆಸ್ಪತ್ರೆ, ಮತ್ತು ಮೆಡಿಕಲ್ ಸ್ಟೋರಿಗೆ ಬೇಕಾದ ಆಹಾರ ಪದಾರ್ಥಗಳು, ಔಷದ ಜಿನಸುಗಳು ಮತ್ತು ಇತರ ಚಿಲ್ಲರೆ ಸಾಮಾನುಗಳಿಗಾಗಿ ಮೈಸೂರ್ ಗವರ್ನಮೆಂಟ್ ಸೀನಿಯರ್ ಸರ್ಜಿಯನ್ ಮತ್ತು ಸಾನಿಟರಿ ಕಮಿಷನರ್ ಸಾಹೇಬರವರು ಸನ್ ೧೮೯೩ ನೇ ಇಸವಿ ಡಿಸೆಂಬರ್ ೨೦ನೇ ತಾರೀಖಿನ ವರೆಗೆ ಟೆಂಡರ್‌ಗಳನ್ನು ತೆಗೆದುಕೊಳ್ಳುತ್ತಾರೆ. ಇದರ ತಪಸೀಲ ಬಗ್ಗೆ ೧೮೯೩ನೇ ಇಸವಿ ನವಂಬರ್ ೩೦ನೇ ತಾರೀಖಿನ ಮೈಸೂರ್ ಗೆಜೆಟ್ ನೋಡತಕ್ಕದ್ದು.

T. J. McGANN, L.R.C.S.E., *Bri. Surgn. Lt.-Col.,*
*Senior Surgeon & Sanitary*
*Commr. with the Govt. of Mysore,*
*in charge Lunatic and Leper Asylums,*
*Govt. City Hospital & Maternity, Bangalore.*

### NOTICE.

“ಆಂಗ್ಲೋ ಇಂಡಿಯನ್ ಪಾಕೆಟ್‌ಡೈರಿ”

ನಾವು ಪ್ರತಿ ವರ್ಷದಲ್ಲಿಯೂ ಪ್ರಕಟಿಸ ಪಡಿಸುತ್ತಿರುವ ಪ್ರಕಾರ ಸರ್ವರಿಗೂ ಬಹಳ ಉಪಯುಕ್ತವಾಗಿರುವಂತೆ ಇಂಗ್ಲಿಷ್ ತಿಂಗಳ ತಾರೀಖ್‌ವಾರ, ಅದಕ್ಕೆ ಸರಿಯಾದ ನಮ್ಮ ಹಿಂದೂ ಸಂವತ್ಸರ, ತಿಂಗಳು, ತಿಥಿ, ವಾರ, ನಕ್ಷತ್ರ ಸಹಿತವಾಗಿಯೂ, ಇನ್ನೂ ಆವಶ್ಯಕವಾಗಿ ತಿಳಿಯಬೇಕಾದ ಸಂಗತಿಗಳು, ರೈಲ್ವೇ ಸ್ಟೇಷನ್‌ಗಳು, ಅಲ್ಲಿಗೆ ರೈಲ್ವೇ ಚಾರ್ಜ್, ಪೋಸ್ಟಾಫೀಸ್ ರೂಲ್ಸ್. ಮುಂತಾದ ವಿಶೇಷ ಸಂಗತಿಗಳನ್ನು ಕೂಡಿಸಿರುವ ೧೮೯೪ ನೇ ಇಸವಿಯ ಡಿಸೆಂಬರ್ ಪುಸ್ತಕಗಳನ್ನು ವಿಕ್ರಯಕ್ಕೆ ಸಿದ್ಧಪಡಿಸಿರುತ್ತೇವೆ.

ಕ್ರಯ ಪ್ರತಿ ಒಕ್ಕೆ ಟಪಾಲ್ ಹಾಸಲ್‌ಸಹಿತ ೦—೩—೬

೧೨ ಪ್ರತಿ ಒಟ್ಟಿಗೆ ತರಿಸಿಕೊಳ್ಳತಕ್ಕವರಿಗೆ ೧ ಪ್ರತಿ ಜಾಸ್ತಿಯಾಗಿ ಕಳುಹಿಸುತ್ತೇವೆ. ಬೇಕಾದವರು ಈ ಕೆಳಗೆ ಸಹಿ ಮಾಡಿರುವವರ ಹೆಸರಿಗೆ ಬರೆದು ತರಿಸಿಕೊಳ್ಳಬಹುದು. ಪ್ರತಿ ಭಾಗಿಗೂ ರಿಜಿಸ್ಟರ್ ಹಾಸಲ್ ೨ ಆಣೆ ಜಾಸ್ತೀ ಕಳುಹಿಸಿಕೊಡಬೇಕು. ಅಪೇಕ್ಷೆಯುಳ್ಳವರು ವಿಳಾಸ ವಗೈರೆಯನ್ನು ಸ್ಪಷ್ಟವಾಗಿ ತಿಳಿಯುವಂತೆ ಬರೆಯಬೇಕು.

೫—೧೨—೯೩. }
ಸತ್ಯಂ ಚಂದ್ರಶೇಖರಯ್ಯ,
ಪ್ರೊಪ್ರೈಟರ್,
“ವಿದ್ಯಾಕಲ್ಪತರು ಪ್ರೆಸ್”,
ಬೆಂಗಳೂರು.

## BANGALORE CITY MUNICIPALITY.

### ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ಬೆಂಗಳೂರ್ ಸಿಟಿ ಮ್ಯುನಿಸಿಪಲ್ ಕಮ್ಮಿಷನರ್‌ಗಳು ಸನ್ ೧೮೯೩ನೇ ಇಸವಿ ಡಿಸೆಂಬರ್ ೧೮ನೇ ತಾರೀಖ್ ಸೋಮವಾರದ ದಿನ ಬೆಳಗ್ಗೆ ೭½ ಘಂಟೆಗೆ ಕೋಟೆಯೊಳಗಿರುವ ಅವರ ಆಫೀಸ್ ಕಟ್ಟಡದಲ್ಲಿ ವಿಶೇಷ ಸಭೆ ಸೇರುವರು.

ಇವರಡಿ ತಿಳಿಸಲ್ಪಡುವ ವಿಷಯಗಳು ವಿಚಾರಣೆಗೆ ಮುಂದೆ ಇಡಲ್ಪಡುತ್ತವೆ:—

I. ಸನ್ ೧೮೯೩ನೇ ಇಸವಿ ನವಂಬರ್ ತಿಂಗಳ ಬಾಬತು ಚಾಲ್ತಿ ನಗದು ಜಮಾಖರ್ಚು ಲೆಕ್ಕ, ಮರಣಲೆಕ್ಕ, ಮನೆಗಳಿಗೆ ಹೋಗಿ ಚಿಕಿತ್ಸೆ ಮಾಡುವ ಮೆಡಿಕಲ್ ಆಫೀಸರರ ಲೆಕ್ಕ, ತಗಾದೆ ವಸೂಲಿ ಮತ್ತು ಬಾಕೀಪಟ್ಟಿ, ಕಾಮಗಾರಿಗಳ ಅಭಿವೃದ್ಧಿಯನ್ನು ಕುರಿತ ರಿಪೋರ್ಟ್, ಫ್ರೀ ವಾಸ ಮಂದಿರದ ಲೈಬ್ರರಿಗೆ ಹೋಗಿದ್ದ ಜನರನ್ನು ಕುರಿತ ಯಾದಿ, ಸಿಟಿ ಮ್ಯುನಿಸಿಪಲ್ ಸ್ಕೂಲಿನ ಲೆಕ್ಕ, ಮತ್ತು ದೀಪ ಹಚ್ಚುವ ವಿಷಯವನ್ನು ಕುರಿತ ರಿಪೋರ್ಟಿನ ಸಂಗ್ರಹ.

II. ಜಾನ್ಸನ್ ದೊಡ್ಡಿಯಲ್ಲಿ ತಡೆಹಿಡಿಯಲ್ಪಟ್ಟಿದ್ದ ಮಾಗಡಿ ಸುಬ್ಬಯ್ಯ ಎಂಬಾತನಿಗೆ ಸೇರಿದಂತ ಒಂದು ಜೋಡಿ ಎತ್ತುಗಳನ್ನು ಮಾರಿದ್ದರಿಂದ ಬಂದ ಹುಟ್ಟುವಳಿ ಸಿಲ್ಕು ಹಣವನ್ನು ವಾಪಸ್ ಮಾಡಬೇಕಾದ ವಿಷಯದಲ್ಲಿ ಬೆಂಗಳೂರ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರು ಬರೆದ ಸನ್ ೧೮೯೩ನೇ ಇಸವಿ ಅಕ್ಟೋಬರ್ ೨೧ನೇ ಮುದ್ಕಂನಲ್ಲಿ ೬೪೦ನೇ ನಂಬರ್ ದಾಖಲೆ.

III. ಮ್ಯುನಿಸಿಪಲ್ ಕಮ್ಮಿಷನರ್ ಮ ಎಸ್. ಸುಬ್ಬರಾಯರವರು ಇವರಡಿ ತಿಳಿಸಲ್ಪಡುವ ನಿರ್ಣಯಗಳೊಡನೆ ಕಳುಹಿಸಿದ, ೧೮೯೩ನೇ ಇಸವಿ ನವಂಬರ್ ೨೦ ನೇ ಮುಕ್ಕಾಮಿನಲ್ಲಿ ೪೨ನೆ ನಂಬರ್ ಲೆಟರ್.

(1) ಪ್ಯಾಸೂರಿನ ಹುಟ್ಟುವಳಿಯಲ್ಲಿ ಅರ್ಧಭಾಗ ಆಕ್ಟ್ರಾಯಿ ಬರಾವರು ಮಾಡಿಕೊಳ್ಳುವ ಉತ್ಪತ್ತಿಯಾಗುವದನ್ನಾಲೋಚಿಸಲಾಗಿ ಅಲ್ಲಿನ ಆಕ್ಟ್ರಾಯಿ ಇಲಾಖಾ ಗುಮಾಸ್ತರಿಗೆ ಮಾಹೆಯಾನಾ ೭½ ರೂಪಾಯಿಗಳು ಸಂಬಳ ಕೊಡಲ್ಪಡುತ್ತಿರುವಾಗ್ಯೂ ಇಲ್ಲಿ ಮಾಹೆಯಾನಾ ೧೧½ ರೂಪಾಯಿಗಳ ಸಂಬಳದಲ್ಲಿ ಒಬ್ಬ ಆಫೀಸರರಿರತಕ್ಕದ್ದು ಅನಾವಶ್ಯಕವಾಗಿ ಕಾಣುತ್ತದೆ.

(2) ಒಬ್ಬ ಡಿಟೆಕ್ಟಿವ್ ಆಫೀಸರಿರಬೇಕಾದ್ದು ಅತ್ಯಾವಶ್ಯಕವಾಗಿರುವದರಿಂದ ಸನ್ ೧೮೯೦ನೇ ಇಸವಿ ಮಾರ್ಚ್ ಗುರ್ಕೀ ತಾರೀಖಿನಲ್ಲಿ ಜಿ ಸಿ ಡಿಸೋಜರವರು ಪ್ರೈವೇಟ್ ಇನ್ಸ್‌ಪೆಕ್ಟರ ಹೋಕರದಾತಿಯನ್ನು ವಜಾ ಮಾಡಿ ಮಾಡಿದ್ದ ನಿರ್ಣಯವನ್ನು, ಅವರು ಮರಳಿ ಪರ್ಯಾಲೋಚಿಸತಕ್ಕದ್ದು.

(3) ಆಕ್ಟ್ರಾಯಿ ಬಾಬ್ತಿನಲ್ಲಿ ಗವರ್ನಮೆಂಟಿನವರಿಗೆ ಸಲ್ಲತಕ್ಕ ೨೦೦೦ ರೂಪಾಯಿಗಳನ್ನು ಮ್ಯುನಿಸಿಪಾಲಿಟಿಯವರಿಗೆ ಬಿಟ್ಟುಕೊಡುವ ಬಗ್ಗೆ ಅವರಿಗೆ ಮನವಿ ಮಾಡಬೇಕಾದ್ದು.

IV. ವ್ಯಾಕ್ಸಿನ್ ಇನ್ಸ್‌ಟಿಟ್ಯೂಟ್ ಅಂದರೆ ಸಿ ಸ್ಟಿಟ್ಯೂಟ್ ಶಾಲೆಯಿಂದ ಸದರ್ ಮ್ಯುನಿಸಿಪಲ್ ವ್ಯಾಕ್ಸಿನೇಟರಿಗೆ ಸರಬರಾಯಿ ಮಾಡಲ್ಪಟ್ಟ ಪದಾರ್ಥಗಳ ಖರೀದಿ ಬಾಬತು ೪೧–೮–೬ ರೂಪಾಯಿಗಳ ಬಿಲ್ ಮೊಬಲಗು ಪಾವತಿಗಾಗಿ ಮುಲ್ಸ್‌ಫೋರ್ಡ್ ವಿ ಬಿದ, ೧೮೯೩ನೇ ಇಸವಿ ನವಂಬರ್ ೧೨ನೇ ಮುದ್ಕಂ ೨೪೩ನೇ ನಂಬರ್ ದಾಖಲೆ.

V. ಷಹರಿನಲ್ಲಿರತಕ್ಕ ಕುಷ್ಟರೋಗಿಗಳ ಶಾಲೆಯ ಇನ್‌ಚಾರ್ಜ್‌ನಲ್ಲಿರತಕ್ಕ ಅಸಿಸ್ಟೆಂಟ್ ಅಸಿಸ್ಟೆಂಟರು, ಅನ್ನ ಹಾಕುವದಕ್ಕೂ, ಇತರ ಚಿಲ್ಲರೆ ಖರ್ಚುಗಳಿಗೂ, ಈಗಿರತಕ್ಕ ಮೊಬಲಗು ಸಾಕಾಗಿಲ್ಲವೆಂದು ಬರೆದ ನವಂಬರ್ ತಿಂಗಳ ೯ನೇ ತಾರೀಖಿನಲ್ಲಿ ೧೯ ನೇ ನಂಬರ್ ಲೆಟರನ್ನು, ಸ್ವರಸ್ವತಿಯ ಬಗ್ಗೆ ಮುಲ್ಸ್‌ಫೋರ್ಡ್‌ರಾದ ಸೀನಿಯರ್ ಸರ್ಜನ್ ಮತ್ತು ಸಾನಿಟರಿ ಕಮ್ಮಿಷನರವರು ಬರೆದ ೧೮೯೩ನೇ ಇಸವಿ ನವಂಬರ್ ೧೧ನೇ ಮುದ್ಕಂ ೧೧೩೫೨ನೇ ನಂಬರ್ ಯಾದಿ.

VI. ಧರ್ಮಾಂಬುಧಿ ಕೆರೆಯಲ್ಲಿ ಬೆಳದಿರುವ ಜಂಬು ಹುಲ್ಲು ವಗೈರೆಯನ್ನು ಕೀಳಿಸಿ ಪಾಸ್ ಮಾಡತಕ್ಕಬಗ್ಗೆ ಕಟ್ಟೆ ರಾಮಣ್ಣನೆಂಬವರು ಬರೆದುಕೊಟ್ಟ ಮನವಿ ತುಕ್ಡೆಯ ನಕಲನ್ನು ಕಳುಹಿಸಿ ಮ್ಯುನಿಸಿಪಲ್ ಕಮ್ಮಿಷನರ್ ಮ್ಯ|| ಡಿ. ವೆಂಕಟಸುಬ್ಬಯ್ಯನವರು ಬರೆದ ೧೮೯೩ನೇ ಇಸವಿ ನವಂಬರ್ ೨೮ನೇ ತಾರೀಖಿನ ಲೆಟರ್.

VII. ಮ್ಯುನಿಸಿಪಲ್ ಘೋಷಮಾಲಿಗಳಿಗಾಗಿ ೧೨ ಗುಡಿಸಲುಗಳುಳ್ಳ ಒಂದು ಲೈನನ್ನು ಕಟ್ಟಿಸುವಬಗ್ಗೆ ೭೧೩ ರೂಪಾಯಿಗಳ ಲಾಗತು ಅಂದಾಜ್ ಲೆಕ್ಕವನ್ನು ನಕ್ಷೆ ಭಾಗದ ಪತ್ರಗಳನ್ನೂ ಕಳುಹಿಸಿ ಮ್ಯುನಿಸಿಪಲ್ ಎಕ್ಸಿಕ್ಯೂಟಿವ್ ಇಂಜನಿಯರವರು ಬರೆದ ಸನ್ ೧೮೯೩ನೇ ಇಸವಿ ನವಂಬರ್ ೧೭ನೇ ಮುದ್ಕಂ ೨೮೯ನೇ ನಂಬರ್ ಯಾದಿ.

VIII. ಹಾಮಿಲ್ಟನ್ ರೋಡಿಗೆ ಜಲ್ಲಿ ಹಾಕತಕ್ಕಬಗ್ಗೆ ಮಾಡಲ್ಪಟ್ಟ ೯೬೪ ರೂಪಾಯಿಗಳ ಅಂದಾಜ್ ಲೆಕ್ಕ.

IX. ಸನ್ ೧೮೯೪—೯೫ನೇ ಇಸವಿಗಾಗಿ ತಯಾರ್ಮಾಡಲ್ಪಟ್ಟ ಬಡ್ಜೆಟ್ ಅಂದಾಜ್ ಲೆಕ್ಕದ ನಕಲನ್ನು ಪರ್ಯಾಲೋಚಿಸತಕ್ಕಬಗ್ಗೆ ಒಂದು ಸಬ್‌ಕಮಿಟಿಯನ್ನು ಏರ್ಪಾಡು ಮಾಡಬೇಕಾದ ವಿಷಯ.

X. ಕೋಟೆಯಲ್ಲಿರುವ ಸಾಲಿಗಿಡಗಳ ರಕ್ಷಣೆ ಮತ್ತು ಅಭಿವೃದ್ಧಿಗೋಸ್ಕರ ಬೇಕಾದ ಶಿಬ್ಬಂದಿಯನ್ನು ಕುರಿತು, ೧೮೯೨ನೇ ಇಸವಿ ಸೆಪ್ಟೆಂಬರ್ ೩೩ನೇ ಮುದ್ಕಂ 5416-9 1 1 11–93 ನೇ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸಿನ ೩೮ನೇ ಪ್ಯಾರಾ.

### ನಿಲ್ಲಿಸಲ್ಪಟ್ಟ ವಿಷಯಗಳು.

I. ಹಫೀಜುಲ್ಲಾಖಾನರು ಬರೆದ ೧೮೯೩ನೇ ಇಸವಿ ನವಂಬರ್ ೧೦ನೇ ಮುಕ್ಕಾಂನಲ್ಲಿ ಲೆಟರ್‌ನಲ್ಲಿ ಸೂಚಿಸಿರುವ ವಿಷಯಗಳು:—

(1) ಹೆಲ್ತ್ ಆಫೀಸರರ ಅಜಮಾಯಿಷಿಗೆ ಒಳಪಟ್ಟಿರುವ ಪದಾರ್ಥಗಳ ಪೈಕಿ ಇದುವರೆಗೂ ಶರಿಗೆ ವಸೂಲ್ಮಾಡಲ್ಪಡುತಲಿರುವದಲ್ಲದೆ ಮಿಕ್ಕವುಗಳಿಗೆ ಸಹ ಶರಿಗೆ ವಸೂಲ್ ಮಾಡತಕ್ಕದ್ದು.

(2) ಮ್ಯುನಿಸಿಪಾಲಿಟಿಗೆ ಸಂಬಂಧಪಟ್ಟ ಸ್ವತ್ತುಗಳು ದರಖಾಸ್ತು ಯಾ ಇತರ ವಿಧದಿಂದ ವಿಲೇ ಮಾಡಲ್ಪಡಬೇಕಾದ ಸಂದರ್ಭದಲ್ಲಿ ಅವುಗಳು ಬಹಿರಂಗವಾದ ಹರಾಜ್‌ಮೂಲಕ ವಿಕ್ರಯಿಸಲ್ಪಡಬೇಕೆಂಬದು.

II. ಸನ್ ೧೮೯೩–೯೪ ನೇ ಇಸವಿಯ ಬಾಬತು ಮ್ಯುನಿಸಿಪಲ್ ಬಡ್ಜೆಟ್ ಅಂದಾಜ್ ಲೆಕ್ಕದ ಮೇಲೆ ಗವರ್ನಮೆಂಟಿನವರು ಹುಕುಂ ಮಾಡಿ ೧೮೯೩ನೇ ಇಸವಿ ಸೆಪ್ಟೆಂಬರ್ ೨೩ನೇ ಮುಕ್ಕಾಂ 5416-9-L. F. 11-93 ನೇ ನಂಬರ್ ಪ್ರೊಸೀಡಿಂಗ್ಸ್ ಮತ್ತು ಪ್ರೆಸಿಡೆಂಟರ ಜವಾಬ್ ಸಹ.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಆಫೀಸ್.
ತಾರೀಖ್ 8 ನೇ ಡಿಸೆಂಬರ್, 1893.

K. SRINIVASA RAO,
*Vice President,*
*City Municipal Commission.*

## THE MONEY MARKET.

**Stocks, Shares and Exchange**

ಮದರಾಸ್, ಶನಿವಾರ, ತಾರೀಖ್ 9 ನೇ ಡಿಸೆಂಬರ್, 1893
ಸೇಕಡ ೪ರೂ. ಬಾಬತು ಇಂಡ್ಯಾಗವರ್ನಮೆಂಟ್ ಪತ್ರಗಳು 105–0–0ರೂ ಗಳಿಂದ 105–8–0 ರೂ ವರೆಗೆ
ಸೇಕಡ ಮೂವರೆ ರೂ. ಬಾಬತ್ತು, ಗವರ್ನಮೆಂಟ್ ಪತ್ರಗಳು, 98–8–0 ರೂ. ಗಳಿಂದ 99–0–0 ವರೆಗೆ
ಮದರಾಸಿ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತು, 990–0–0ರೂ ಗಳಿಂದ 1000–0–0ವರೆಗೆ
ಆರ್ಬತ್‌ನಾಟ್ ವ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಷೇರುಗಳು, (100ರೂ) ಬಾಬತು 150–0–0ರೂ ಗಳಿಂದ 155–0–0 ರೂ ವರೆಗೆ.
ಸವರನ್‌ಗಳು, ಒಂದು ಕ್ಕೆ 15–11–0 ರೂಪಾಯಿಗಳಿಂದ 16–1–0 ರೂ ವರೆಗೆ.
ಬಂಗಾಳ ಬ್ಯಾಂಕಿನವರು ಕೊಡಲ್ಪಡುವ ಬ್ಯಾಂಕ್ ಬಿಲ್ಸ್ ಬಾಕಿ ದರಗಳು —

| | |
|---|---|
| 6 ತಿಂಗಳ ವಾಯಿದೆಗೆ | 1 s 3 5 16d |
| ,, | 1 s ,, ¼d |
| ಕೇಳಿದ ಕೂಡಲೆ ಕೊಡತಕ್ಕ | 1 s 3 ,, 32d |

## ಕರ್ಣಾಟಕ ಪ್ರಕಾಶಿಕೆ.

## THE KARNATAKA PRAKASIKA

**MONDAY, DECEMBER 11 1893**

೧೮೯೩ ನೇ ಇಸವಿ ಡಿಸೆಂಬರ್ ೧೧ ನೇ ತಾ|| ಸೋಮವಾರ

### ಗತಿಸಿದ ಮೆಸ್ಟರ್ ಜಾನ್ ಎಸ್ ಪಿಲ್ಲೈ ಯವರ ಕುರಿತು.

ಬ್ರಿಟಿಷ್ ಸರಕಾರದ ಈ ಸಂಸ್ಥಾನದೊಳು ಬಹು ಉನ್ನತವಾದ ಹುದ್ದೆಗಳ ಕಲಸಂ ನಿರ್ವಹಿಸಿ ವಿಶ್ರಾಂತಿ ಸುಖವನ್ನನುಭವಿಸುತಲಿದ್ದ ಮ|| ಜಾನ್ ಎಸ್. ಪಿಲ್ಲೈ ಎಂಬವರು ಕಳೆದ ಶುಕ್ರವಾರದ ದಿನ ಸಾಯಂಕಾಲ ಈ ಊರು ಹಿಲ್‌ನ ರಿವರ್ ಸ್ಟ್ರೀಟ್‌ನಲ್ಲಿ ಅಕಸ್ಮಾತ್ತಾಗಿ ಕಾಲಗತಿಯೈದಿದರೆಂಬ ವರ್ತಮಾನವು ಬಳಿಕ ಇಂಗ್ಲಿಷ್ ಪತ್ರಿಕೆಗಳ ಮೂಲಕ ತಿಳಿದು ಬಹಳ ವಿಷಾದಿಸುತ್ತೇವೆ. ಇವರು ಸ್ವಲ್ಪ ದುರ್ಬಲರಾಗಿರುತಿದ್ದರು, ಆದಾಗ್ಯೂ ಅದು ವಯೋ ಧರ್ಮವೆಂದೆಲ್ಲರೂ ನಂಬಿದ್ದರು ಹೊರತು ಹೀಗೆ ಅನಿರೀಕ್ಷಿತವಾಗಿ ಶರೀರವಂ ತ್ಯಜಿಸುವರೆಂದು ಒಬ್ಬರೂ ಭಾವಿಸಿರಲಿಲ್ಲವು. ಇವರಿಗೀಗ ಸುಮಾರ್ ೭೦ ವರ್ಷಗಳ ವಯಸ್ಸಾಗಿರುತಿತ್ತೆ. ಮರಣೋತ್ಸವಕ್ಕೆ ಕೆಲವು ಘಂಟೆಗಳ ಹಿಂದೆಯೂ ಸಂಚರಿಸುತ ದೈನಿಂದಿನ ವ್ಯಾಪಾರಗಳಿಗೆ ಆಗಮಿಸುತ ಕೊಂಡಿದ್ದರು. ಶುಕ್ರವಾರದ ದಿನ ಮಧ್ಯಾಹ್ನದವರೆಗೆ ಶರೀರಸ್ಥಿತಿಯು ಪ್ರತ್ಯೇಕವಾಗಿ ರಹಿತವಾಗಿ ಚಂದನೀಯವಾಗಿದ್ದು ಸಾಯಂಕಾಲ ೭ ಘಂಟೆ ಸಮಯಕ್ಕೆ ಇಹಲೋಕ ಸಂಬಂಧವ ತ್ಯಜಿಸಿ ಲೋಕಾಂತರಗತರಾದರು. ಪ್ರಸ್ತುತ ಮೆ|| ಪಿಲ್ಲೈರವರು ಬೆಂಗಳೂರ್ ಪ್ರೊಟೆಸ್ಟಂಟ್‌ನಲ್ಲಿ ಒಬ್ಬ ಕ್ರೈಸ್ತನಾಗಿ ಸರ್ಕಾರಿ ನೌಕರಿಯೊಳು ಪ್ರವೇಶಿಸಿ ಬಳಿಕ ಜೂನಿಯರ್ ಕಮಿಷನರಾಗಿ ನಿಯಮಿತರಾಗಿ ಅಲ್ಲಿಂದ ಮರಳಿ ಬೆಂಗಳೂರಿಗೆ ಬಂದು ರೆವಿನ್ಯೂ ಇಲಾಖೆಯೊಳು ಮರೆಯಲಾಗದಂಥ ಕೆಲಸವನ್ನು ನಡೆಸಿ ಬಳಿಕ ತರುವಾಯ ಡೆಪ್ಯುಟಿ ಕಮ್ಮಿಷನರ್ ಆಫೀಸಿನಲ್ಲಿಯೂ ಮುಖ್ಯ ಕೆಲಸವನ್ನಂಗೀಕರಿಸಿ ಅಲ್ಲಿ ದಕ್ಷತೆ ಯಿಂದಲೂ ಜಾಗರೂಕತೆಯಿಂದಲೂ ಪ್ರತಿ ವೃದ್ಧಿಗೆ ಬಂದು ಕ್ರಮೇಣ ಅಸಿಸ್ಟೆಂಟ್ ಕಮ್ಮಿಷನರಾಗಿಯೂ ಅಲ್ಲಿನ ಲಿಸ್ಟ್‌ ಅಸಿಸ್ಟೆಂಟರಾಗಿಯೂ ಹೊಂದಿ ಎಲ್ಲರ ಪ್ರೀತಿ ಗೌರವಗಳಿಗೆ ಪಾತ್ರರಾಗಿ ೧೮೭೯ನೇ ಇಸವಿಯಲ್ಲಿ ತಮ್ಮ ಕೆಲಸದಿಂ ನಿವೃತ್ತರಾದರು. ಸನ್ ೧೮೭೭ ನೇ ಇಸವಿಯಲ್ಲಿ ಶ್ರೀಮನ್ ಮಹಾರಾಜ್ಞೀಯವರು ಇಂಡ್ಯ ಚಕ್ರವರ್ತಿನೀ ಎಂಬ ಪ್ರಶಸ್ತಿಯಂ ಪಡೆದ ವಿಶೇಷ ಸಂದರ್ಭದಲ್ಲಿ ರಾಜರಾಜರೊಡನೆ ದೊಡ್ಡ ಮನುಷ್ಯರಿಗೆ ಬಿರುದುಗಳೂ, ಯೋಗ್ಯತಾಪತ್ರಿಕೆಗಳೂ ಕೊಡಲ್ಪಟ್ಟ ಸಮಯದಲ್ಲಿ ಪಿಲ್ಲೈರಾಯಬಹದ್ದೂರ್ ಎಂಬ ಬಿರುದು ಪಡೆದರು, ಈಗ ಮೃತಪಟ್ಟವರ ಸಹೋದರರಾದ ಆನರೆಬಲ್ ಸರ್ಜನ್ ಎಫ್. ಬಿ. ಪಿಲ್ಲೈರಾ ವಗೈರೆಯೊಡನೆ, ಯೋಗ್ಯತಾ ಪತ್ರಿಕೆಯು ಕೊಡಲ್ಪಟ್ಟಿತು. ಸದರೀ ಪತ್ರಿಕೆಯಲ್ಲಿ ಪ್ರಸಕ್ತ ದೊಡ್ಡಮನುಷ್ಯರ ಪ್ರಾಮಾಣಿಕತೆಯೂ, ಯೋಗ್ಯತೆಯೂ, ಜಾಗರೂಕತೆಯೂ, ನಿಷ್ಪಕ್ಷಪಾತತೆಯೂ ವಿಶೇಷ ಪ್ರಶಂಸಿಸಲ್ಪಟ್ಟಿರುತಿವೆ. ಸರ್ ಮಾರ್ಕ್ ಕಬ್ಬನ್, ಮ|| ಎಲ್ ಬಿ. ಬೌರಿಂಗ್, ಮ|| ಸಿ ಬಿ ಸಾಂಡರ್ಸ್, ಸರ್ ರಿಚರ್ಡ್ ಮೀಡ್, ಆನರೆಬಲ್ ಸರ್ ಡಾಲಿಯಲ್, ಮ|| ಸಾಂಡ್‌ಫರ್ಡ್, ಆಮೇಲೆ ಸರ್ ಜೇಂಸ್ ಗಾರ್ಡನ್, ಇವರ್ಮುಂದಿನ ಚೀಫ್ ಕಮ್ಮಿಷನರ್‌ಗಳ ಕೈಕೆಳಗೆ ಮ|| ಪಿಲ್ಲೈರಾಯರು ಕೆಲಸಮಾಡಿ ಅವರೆಲ್ಲರ ವಿಶ್ವಾಸಕ್ಕೆ ಪಾತ್ರರಾಗಿದ್ದರಲ್ಲದೆ ಪ್ರತಿಯೊಂದು ವಿಷಯದಲ್ಲಿಯೂ ದೇಶಸ್ಥಿತಿ ವಿಷಯದಲ್ಲಿಯೂ ಅವರು ಪಡೆದಿದ್ದ ಅನುಭವವು ಅವರೊಡನೆ ನಷ್ಟವಾದದ್ದಾಗಿಯೂ, ಈ ದೇಶದ ಪೂರ್ವವೃತ್ತಾಂತಗಳು ತಿಳಿಯಲಪೇಕ್ಷೆಯುಳ್ಳಾತನವರಿಗೆ ಅವು ಪ್ರತ್ಯಕ್ಷವಾಗಿ ಹೇಳಲಿಕ್ಕೆ ಸಮರ್ಥರಾಗಿದ್ದ ಒಂದು ಗ್ರಂಥದ ವಿಷ್ಣುವಾಸನಗಳನ್ನೆಲ್ಲ ಸಾಕ್ಷತ್ ಇದ್ದ ಜನ ಪೂರೈಸಿದಂತ ದೊಡ್ಡ ಮನುಷ್ಯರ ಮರಣವು ಮುಖ್ಯವಾದ ಪ್ರತ್ಯೇಕ ನಷ್ಟವ ಹರಿಸಿ ಅವರ ಇಷ್ಟಮಿತ್ರರಿಗೂ ಇತರರಿಗೂ ಬಹಳವಾಗಿ ಚಿಂತಿಸುವಂತಾಗಿದಾರೆ.

### ಪ್ರೋಸ್ಟ್ ಇನ್ಸೂರೆನ್ಸ್ ಇಲಾಖಾರಿಪೋರ್ಟ್

ಬ್ರಿಟಿಷ್ ಪ್ರೋಸ್ಟ್ ಇಲಾಖೆಯಲ್ಲಿರತಕ್ಕ ನೌಕರರು ತಮ್ಮ ಕೆಲಸಗಳಿಂದ ನಿವೃತ್ತರಾದ ನಂತರ, ಅಲ್ಲದೆ ಅವರ ಕಾಲಾನಂತರ ಅವರ ಕುಟುಂಬಕ್ಕೆ ನಿಯತವಾದ ಜೀವನ ದಾರಿಯ ಕಲ್ಪಿಸಲಿಕ್ಕೆ ಅನುಕೂಲವಾಗುವಂಥದ್ದೊಂದು ಮಾರ್ಗವನ್ನೇರ್ಪಡಿಸ ಬೇಕೆಂಬ ದೃಷ್ಟಿಯಿಂದ ಈಚೆಗೆ ಇಂಡ್ಯ ಗವರ್ನಮೆಂಟಿನವರಿಗೂ ತೋರಲು, ಅವರು ಇತರ ಇನ್ಷೂರೆನ್ಸ್ ಕಂಪನಿಗಳ ಕ್ರಮವನ್ನನುಸರಿಸಿ ಪೋಸ್ಟಲ್ ಲೈಫ್ ಇನ್ಷೂರೆನ್ಸ್ ಎಂಬದಾಗಿ ಒಂದು ಹೊಸ ಏರ್ಪಾಡನ್ನು ಮಾಡಿ ಪ್ರೋಸ್ಟ್ ಇಲಾಖೆಯ ನೌಕರರೆಲ್ಲರು ಇನ್ಷೂರ್ ಮಾಡಬಹುದೆಂದು ಹುಕುಂಕೊಟ್ಟರು. ಕಳೆದ ಮಾರ್ಚ್ ತಿಂಗಳ ಆಖೈರಿಗೆ ಪೈದಾದ ಗತ ಸಂವತ್ಸರದ ರಿಪೋರ್ಟನ್ನು ನೋಡಲಾಗಿ ಸದರೀ ನೂತನ ಕ್ರಮವು ಬಹಳ ತೃಪ್ತಿಕರವಾಗಿರುವಂತೆ ವ್ಯಕ್ತವಾಗುತದೆ. ಹೋದವರುಷದಲ್ಲಿ ಅದರ ಹಿಂದಿನ ವರ್ಷಕ್ಕಿಂತಲು ಅಧಿಕವಾಗಿ ೨೬ ಪಾಲಸಿಗಳು ಅಂದರೆ ಒಟ್ಟು ೫೩೩ ಪಾಲಸಿಗಳು ಹೊಸದಾಗಿ ಕೊಡಲ್ಪಟ್ಟಂತೆ ತಿಳಿಯಬರುತದೆ. ಜೀವಾದರದ ದ ಪರಿಶೋಧನೆಯಲ್ಲಿ ಡಾಕ್ಟರ್‌ಗಳ ಅಭಿಪ್ರಾಯಗಳು ಅನುಕೂಲಗಳಾಗಿಲ್ಲವೆಂದು ಸಬಬಿನಿಂದ ಬೇರೆ ೫೦ ದರಖಾಸ್ತುಗಳು ನಿರಾಕರಿಸಲ್ಪಟ್ಟವು. ಅಂಗೀಕರಿಸಲ್ಪಟ್ಟಿರುವ ೫೩೩ ದರಖಾಸ್ತುಗಳ ಪೈಕಿ ೬೪ ಎಂಡೋಮೆಂಟಿಗೆ ಸೇರಿದವಾಗಿಯೂ, ಬಾಕೀ ೧೬೫ ಪ್ರೀಮಿಯಂ ಪದ್ಧತಿಯದಾಗಿಯೂ ಇರುತಿವೆ. ಜೀವಮಾ ಮಾಡಲ್ಪಟ್ಟಿರುವ ಮೊಬಲಗು ಪೈಕಿ ಮೊದಲನೆಯವರ ಬಾಬತು ೧,೮೨,೨೦೦ ರೂಪಾಯಿಗಳೂ, ಎರಡನೆಯವರದು ೧,೯೬,೦೦೦ರೂಪಾಯಿಗಳೂ ಸೇರಿ ೩,೭೮,೨೦೦ ರೂಪಾಯಿಗಳಿಗೆ ಪಾಲಿಸಿಗಳು ಕೊಡಲ್ಪಟ್ಟಿರುತಿವೆ ಇದುವರೆಗೆ ಪ್ರೀಮಿಯಂಬಾಬತು ಗವರ್ನಮೆಂಟಿಗೆ ವಸೂಲಾಗಿ ಜಮೆಬಂದಿರುವದು ೭೩,೫೧೬ ರೂಪಾಯಿಗಳು. ಇನ್ಷೂರ್‌ಮಾಡಿದವರ ಕುಟುಂಬಕ್ಕೆ ಸಂದಾಯವಾಗಿರುವದು ೧೭,೮೧೭ ರೂಪಾಯಿಗಳು. ೧೨ ಪಾಲಿಸಿಗಳು ರದ್ದು ಮಾಡಲ್ಪಟ್ಟವು. ಸದರಿ ಜುಲೈ ಮಾರ್ಚ್ ೩೧ನೇ ತಾರೀಖಿಗೆ ಬ್ಯಾಲೆನ್ಸ್ ಶೀಟಿನ ರಿಪೋರ್ಟನ್ನು ನೋಡುವಲ್ಲಿ ೭೯೧ ಜನರು ಇನ್ಷೂರ್ ಮಾಡಿರುವಂತೆಯೂ, ಆ ತಾರೀಖ್‌ವರೆಗೆ ೯೯,೪೧೩ ರೂಪಾಯಿಗಳು, ದರಖಾಸ್ತುದಾರರಿಗೆ ಪಾವತೀ ಮಾಡಲ್ಪಟ್ಟದೆಂತೆಯೂ ಸ್ಪಷ್ಟವಾಗುತಿದೆ. ಈಗ ಒಟ್ಟು ೧,೫೩೫ ಮಂದಿಯ ಪಾಲಸಿಗಳು ಕಾರ್ಯಕಾರಿ ಉಳಿದಿರುತಿವೆ. ಪ್ರೋಸ್ಟಲ್ ಇಲಾಖೆಗೆ ಸಂಬಂ

ಧಿಸಿದ ಎಲ್ಲಾ ಗ್ರೇಡಿನವರೂ ಸೇರಿ ಹಾಜರಿರುವ ಒಟ್ಟು ೪೭,೮೩೩ ಮಂದಿ ನೌಕರ್‌ನಾನೆಯರಲ್ಲಿ ೧,೭೫೩ ಜನಗಳು ಮಾತ್ರ ಕಳೆದ ಮಾರ್ಚಿ ೩೧ನೇ ತಾರೀಖ್‌ವರೆಗೆ ಇನ್‌ಷ್ಯೂರ್ ಮಾಡಿರುತ್ತಾರೆ. ಸದರೀ ಮಾರ್ಚಿ ಆಖೈರ್ ತಾರೀಖಿನಲ್ಲಿ ಇನ್‌ಷ್ಯೂರೆನ್ಸ್ ಇಲಾಖೆಗೆ ಸಂಬಂಧಿಸಿದಂತೆ ೩,೭೮,೭೩೦ ರೂಪಾಯಿಗಳು ಸಿಲ್ಕು ಹಾಜರಿರುವಂತೆ ತಿಳಿಯಬರುತಿದೆ. ಗವರ್ನ್‌ಮೆಂಟಿನವರು ತಮ್ಮ ನೌಕರ್ಮನೆಯರ ಕ್ಷೇಮವನ್ನು ಪರ್ಯಾಲೋಚಿಸಿ ಮಾಡಿದ ಪ್ರಕೃತ ಯೋಜನೆಯ ಪ್ರಯೋಜನವನ್ನು ಬಹಳ ಮಂದಿ ಅರಿಯದೆಯೋ ಅಥವಾ ಉದಾಸೀನ್ಯದಿಂದಲೋ ಇನ್‌ಷ್ಯೂರ್ ಮಾಡದೆ ಉಪೇಕ್ಷಿಸಿರುವದನ್ನು ನೋಡಿದರೆ ಬಹಳ ಆಶ್ಚರ್ಯ ವಾಗುತಿದೆ.

## LOCAL AND PROVINCIAL NEWS
## ಪಟ್ಟಣ ಮತ್ತು ತಾಲ್ಲೂಕಿನ ವರ್ತಮಾನಗಳು.

ಬರುವ ಶುಕ್ರವಾರದ ಮೊದಲು ಮದರಾಸ್ ಯೂನಿವರ್ಸಿಟಿ ಮೆಟ್ರಿಕ್ಯುಲೇಷನ್ ಮತ್ತು ಎಫ್. ಎ. ಪರೀಕ್ಷೆಗಳು ಪ್ರಾರಂಭವಾಗಿ ಬರುವಾರದೊಳಗೆ ಮುಕ್ತಾಯವಾಗುವವು. ಸದರೀ ಪರೀಕ್ಷೆಗಳು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಜರುಗುವವು.

ಇಲ್ಲಿನ "ವಿಂಗ್‌ಫೀಲ್ಡ್ ಬ್ಯಾಂಡ್ ಸ್ಟೋರ್" ಎಂಬ ಅಂಗಡಿಯನ್ನು ಬಿಟ್ಟು ಬರುವ ಬಾಕೀ ನಿನೇಕರವನ್ನು ಮೈಸೂರು ಗವರ್ನ್‌ಮೆಂಟಿನವರು ೭೫,೧೧೦ ರೂಪಾಯಿಗಳು ಕೊಟ್ಟು ರಾಯ್ ಬಹದ್ದೂರ್ ಅರ್ಕಾಟ್ ನಾರಾಯಣಸ್ವಾಮಿಮುದಲಿಯಾರ್ರವರಿಂದ ಕ್ರಯಕ್ಕೆ ಕೊಂಡುಕೊಂಡರೆಂದು ಕೇಳುತ್ತೇವೆ

ಇಲ್ಲಿನ ಚೀಫ್‌ಕೋರ್ಟ್ ಜಡ್ಜಿಯವರಾದ ಮ|| ಟಿ. ಆರ್. ಎ. ತುಂಬುಚೆಟ್ಟಿರವರು ಈದಿನ ಹೊಳೇನರಸೀಪುರ ಮೊಕ್ಕಾಂನಿಂದ ಹಾಸನಕ್ಕೆ ದಯಮಾಡುತ್ತಾರೆ. ನಾಳೆಯದಿನ ಅಲ್ಲಿ ತಂಗಿ ೧೩ನೇ ತಾರೀಖಿನಲ್ಲಿ ಬೇಲೂರಿಗೂ, ೧೬ನೇ ತಾರೀಖಿನಲ್ಲಿ ಚಿಕ್ಕಮಗಳೂರಿಗೂ ಹೋಗುವರೆಂದ. ಸದ್ಯಕ್ಕೆ ಏರ್ಪಾಡಾಗಿರುತಿದೆ.

ಕೋಲಾರ್ ಚಿನ್ನದಗಣಿಗಳಲ್ಲಿ ಕಳೆದ ನವಂಬರ್ ತಿಂಗಳೊಳಗೆ ೭೦೩೦ ಟನ್‌ಗಳ ಕಲ್ಲುಗಳು ಒಡೆದು ೩೧೬೮ ಔನ್ಸಿನ ಚಿನ್ನವನ್ನು ಭೂಗರ್ಭದಿಂದ ತೆಗೆಯಲ್ಪಟ್ಟಿತು. ಅದರ ಹಿಂದಿನ ತಿಂಗಳುಗಳಲ್ಲಿ ಅಂದರೆ ಅಕ್ಟೋಬರ್‌ತಿಂಗಳಲ್ಲಿ ೭೯೬೩ ಔನ್ಸಿಗಳೂ ಸೆಪ್ಟಂಬರ್ ತಿಂಗಳಲ್ಲಿ ೭,೯೦೩ ಔನ್ಸಿಗಳೂ ವೃದ್ಧಿ ಬೆಲೆ ದಯವಾಗಿ ದಸ್ತು ದಂತೆ ತಿಳಿಯಬರುತಿದೆ.

ಎಡತೊರೆಯ ಬಳಿ ಕಾವೇರಿ ನದಿಗೆ ಸೇರುವ ಕಟ್ಟುಕಾಲುವೆಯ ೯೯,೧೦೦ ರೂಪಾಯಿಗಳ ಅಂದಾಜನ್ನು ಮಂಜೂರ್ಮಾಡಿ ಕೂಡಲೇ ಕೆಲಸಕ್ಕೆ ಪ್ರಾರಂಭಿಸತಕ್ಕದ್ದೆಂದು ಮೈಸೂರ್ ಸರ್ಕಾರದವರು ಹುಕುಂ ಮಾಡಿದಾರೆಂತಲೂ, ಈಗ ಉದ್ದೇಶಿಸಿರುವ ಸೇತುವೆಗೆ ೩೦ ಅಡಿಗಳ ವಿಸ್ತಾರವುಳ್ಳಂತಾ ಕಮಾನುಗಳು ೧೭ ಇರುವವೆಂತಲೂ ತಿಳಿಯಬರುತದೆ.

ಈಪ್ರೂರ್ ಷಹರದಲ್ಲಿರುವ ಸಿಲ್ವಾದಾರ್ ಲೈನಿನಲ್ಲಿ ಕಾಲರಾ ರೋಗದಿಂದ ೫೫ ಮಂದಿಯು ಮರಣ ವೃತ್ತಿವಿಚ್ಛಂತೆ ಗತವಾರದಲ್ಲಿ ತಿಳಿಸಿದ್ದೆವಷ್ಟೆ. ಅದರಿಂದೀಚೆಗೆ ಇನ್ನೂ ಇಬ್ಬರು ಅದೇ ಕಾರಣದಿಂದ ಮೃತಪಟ್ಟಂತೆ ನಮ್ಮ ಕೇಳ್ವಿಕೆಗೆ ಬಂದಿರುತಿದೆ. ವಸ್ತುತು ಸರಿಯಾದ ಸುದ್ದಿಯೂ ನಿಜವಾದ ಕಾರಣವೂ ಹೊರಗೆ ತರಲ್ಪಡದಿರುವದಂ ಕಂಡು ಚಿಂತಿಸಬೇಕಾಗಿದೆ.

ಮೈಸೂರ್ ಡಿಸ್ಟ್ರಿಕ್ಟಿಗೆ ಸೇರಿದ ಹುಣಸೂರ್ ತಾಲ್ಲೂಕಿನಲ್ಲಿ ತಪ್ಪಿಸಿಕೊಂಡು ತಿರುಗುತಲಿದ್ದ ಒಂದು ಆನೆಯು ಅನೇಕರಿಗೆ ಪ್ರಾಣಹಾನಿಯನ್ನುಂಟುಮಾಡಿದರಿಂದ ಆಚೆ ಶುಕ್ರವಾರದ ದಿನ ಅಲ್ಬರ್ಟ್ಸ್‌ಟೀಬಾಲ್ಟ್ ಯೆಂಬವರು, ಅದಂ ಗುಂಡಿನಿಂದ ಸುಟ್ಟುಬಿಟ್ಟರೆಂತಲೂ ಈಗ ಜನಗಳು ನಿರ್ಭೀತರಾಗಿ ಪೂರ್ವದಂತೆ ಸಂಚರಿಸಲಾರಂಭಿಸಿದಾರೆಂತಲೂ ತಿಳಿಯಬರುತಿದೆ.

ಕಳೆದ ಬುಧವಾರದದಿನ ಈ ಸಂಸ್ಥಾನದ ದಿವಾನರಾದ ಸರ್. ಕೆ. ಶೇಷಾದ್ರಿ ಅಯ್ಯರ್ ಕೆ. ಸಿ. ಎಸ್. ಐ. ಯವರು ಮೆ ಆನಿ ಡೆಸ್ಟ್ರಿಕ್ಟಿ ಯವರ ಮತ್ತು ಕರ್ನಲ್ ಆರ್ಕಾಟಿಯವರ ಸಂದರ್ಶನಾರ್ಥ ಊಟಿಗೆ ದಯಮಾಡಿದರು. ಇವರು ಈದಿನ ಮರಳಿ ಮೈಸೂರಿಗೆ ಹೋಗಿ ಅಲ್ಲಿಂದ ಸರಕ್ಯೂಟಿ ಹೊರಡುವಂತೆ ಏರ್ಪಾಡು ಮಾಡಿಕೊಂಡಿರುವದಾಗಿ ತಿಳಿಯಬರುತಿದೆ.

ಇಂಜನಿಯರಿಂಗ್ ಎಂಬ ಪತ್ರಿಕೆಯು ತಿಳಿಸುತಿದೇನಂದರೆ—ಮೈಸೂರ್ ಸಂಸ್ಥಾನದಲ್ಲಿ ಈಗ ನೌಕರಿಯಲ್ಲಿರುವ ಚೀಫ್ ಇಂಜನಿಯರನವರು ತಮ್ಮ ಸ್ಥಿತಿಯಂ ಕುರಿತು ಬಹಳ ಅತೃಪ್ತರಾಗಿದಾರಲ್ಲದೆ ಇಲ್ಲಿನ ನೌಕರಿಯಲ್ಲಿರುವಿಕ್ಕೆ ಅವರಿಗೆ ಇಷ್ಟವಿಲ್ಲವೆಂತಲೂ, ರಸ್ತೆ ಕಸುಬದಾರೀ ವಿಷಯಗಳಲ್ಲಿ ಸಹ ಅನ್ಯರ ಪ್ರವೇಶವೂ ನಿರ್ಬಂಧವೂ ಅವರಿಗೆ ಅಸಮಾಧಾನಕರವಾಗಿದೆಯೆಂತಲೂ ಕೇಳುತ್ತೇವೆ, ಎಂಬದು.

ಇಲ್ಲಿನ ಬಿಷಪ್ ಕಾಟನ್ಸ್ ಸ್ಕೂಲಿನಲ್ಲಿ ವಿದ್ಯಾಭ್ಯಾಸ ಮಾಡುತಲಿರತಕ್ಕ ಅನಾಥರಾದ ಒಬ್ಬ ಜನ ಬಾಲಕರಿಗೆ ಮೊನ್ನೆಯದಿನ ಬೆಳ್ಳಿಯ ಚೆಂಬಾಮೂಲಕ ಜನಾಯಿಸಿದ್ದ ಹೊಸಪಲ್ಲಿ ಉಡಿಗೆಗಳು ತೆಗೆಯಲ್ಪಟ್ಟವು. ಅನಾಥರಿಗೆ ಮಾಡುವ ಉಪಕಾರವು ಸ್ಮರಣೀಯವಾಗಿ ಶಾಶ್ವತವಾಗಿ ನಿಲ್ಲುವಂತ ಸಸ ಕಾರ್ಯ ಮಾಡುವ ಸಭೆಯವು ನೆರೆಗೂಂಡಿರುತ್ತವೆ.

ಸಿಂಡಿ ಮಾರ್ಫೋಯವರ ಒಂದು ವಿಧವತ್ತಿಯು ಕಟ್ಟಡವು ಹಾರಾಜು ಸರ್ಕಾರಕ್ಕೆ ವಿಕ್ರಯಿಸಲ್ಪಡುವದೆಂದು ಊಹೆಗೆ ಬಂದಾಗಿದ್ದ ಪ್ರಸ್ತಾಪವು ನಿರಾಧಾರವಾದದ್ದೆಂದು ಕಳೆದಶನಿವಾರದ ಬಳ್ಳಾರಿ ಕಡ ಸ್ಪೆಕ್ಟೇಟರ್ ಪತ್ರಿಕೆಯು ತಿಳಿಸುತಿದೆ. ಸದರೀ ಆಸ್ಪತ್ರೆಯು ಇಲ್ಲಿರತಕ್ಕ ಮಿಷನ್ ಸಂಪುದವರ ಸುಪರ್ದಿಗೊಪ್ಪಿಸುವ ಬಗ್ಗೆ ವಿಚಾರ ನಡೆಯುತಲಿದ್ದು ಅದು ಕ[redacted] ಸ್ಥಿರವಾದಂತೆ ಕೇಳುತ್ತೇವೆ. ಸಿಂಡಿ ಮಾರ್ಫೋಯವರ ಹೆಸರನ್ನು ಶಾಶ್ವತವಾಗಿ ಮಾಡತಕ್ಕ ಉದ್ದೇಶದಿಂದ ಮೈಸೂರು ಸರ್ಕಾರಕ್ಕೆ ಕೊಡುವ ಪಕ್ಷಕ್ಕೆ ಅದು ಸ್ವಾಳ ಸನ್ನಿವೇಶದಿಂದಲೂ, ಕಟ್ಟಡದ ವಿಸ್ತೀರ್ಣದಿಂದಲೂ, ಮೆಡಿಕಲ್ ಅನುಕೂಲವಾದ ಆಸ್ಪತ್ರೆಯಾಗಿ ಮಾಡಿಕೊಳ್ಳಲ್ಪಡಬಹುದು. ಗವರ್ನ್‌ಮೆಂಟಿನವರು ಇದಕ್ಕೋಸ್ಕರ ಪ್ರತ್ಯೇಕ ಕಟ್ಟಡ ಒಂದು ಕಟ್ಟಿಸಬೇಕೆಂದು ಯೋಚಿಸಿದಾರೆ. ಅದಕ್ಕೆ ಬದಲು ಇದು ಕೊಡಲ್ಪಡುವ ಪಕ್ಷಕ್ಕೆ ರೋಗಿಗಳಿಗೆ ಬಹಳ ಅನುಕೂಲವಾಗಿರುವದಲ್ಲದೆ ಮಿಷನರಿಗಳಿಗೂ ಅದರ ಸಂರಕ್ಷಣೆಭಾರವು ನಿವೃತ್ತಿಯಾಗುವದು.

ವೈಸ್‌ರಾಯಿಗಳು ಮೊದಲಾದ ಪ್ರಸಿದ್ಧ ಪುರುಷರು ಯಾರಾದರು ಯಾವಾಗಲಾದರು ನಮ್ಮ ದೇಶಕ್ಕೆ ದಯಮಾಡಿದರೆ ಅಂತ ಸಂದರ್ಭಗಳಲ್ಲಿ ಈ ದೇಶೀಯರು ಅವರಿಗಾಗಿ ಮಾಡುವ ಉತ್ಸವಗಳೂ, ಅಲಂಕಾರಗಳೂ, ವಿನೋದಗಳೂ ಬಹಳ ಉತ್ಕೃಷ್ಟವೆಂದು ಅವರು ಭಾವಿಸಿರಬಹುದು. ಇಲ್ಲಿನವರು ಮಾಡುವ ಸತ್ಕಾರಗಳಿಗಾಗಿ ಸದರೀ ದೊಡ್ಡಮನುಷ್ಯರು ತಮ್ಮ ಸಂತೋಷ ಸೂಚಕವಾದ ಉಪಚಾರೋಕ್ತಿಗಳನ್ನು ನುಡಿಯುವಾಗ್ಯೆ ನಮ್ಮ ಉಪಚಾರಗಳಿಂದಲ್ಲವೆ ಅವರಿಷ್ಟು ಸಂತೋಷಿಸಿರುವರೆಂದು ಸಹ ತೃಪ್ತಿಪಡಬಹುದಷ್ಟೆ. ಈಚೆಗೆ ವೈಸ್‌ರಾಯ್ ಯವರು ರಂಗೂನ್ ಪಟ್ಟಣಕ್ಕೆ ದಯಮಾಡಿದ್ದ ಸಂದರ್ಭದಲ್ಲಿ ಅವರ ಆಗಮನಾರ್ಥ ಅಲ್ಲಿ ವಿರಚಿತವಾಗಿದ್ದ ಚಪ್ಪರಗಳು, ಕೆಲಸಗಾರಿಕೆಯನ್ನೂ ಭಾಗ್ಯತಿಶಯವನ್ನೂ ಸೂಚಿಸತಕ್ಕವಾಗಿದ್ದವೆಂತಲೂ, ಅನ್ನಗಳಲ್ಲಿ ಒಂದು ಶುದ್ಧ ಸುವರ್ಣ ರಚಿತವಾಗಿತ್ತೆಂತಲೂ ಅದು ಮಿಂಚುವ ವಜ್ರಗಳಿಂದಲೇ ಅಲಂಕೃತವಾಗಿತ್ತೆಂತಲೂ, ಇದು ಒಂದಕ್ಕೆ ಕಾಲುಲಕ್ಷ ರೂಪಾಯಿಗಳು ಖರ್ಚಾಯಿತೆಂತಲೂ ಅಲ್ಲಿನ ಇಂಗ್ಲಿಷ್ ಪತ್ರಿಕೆಯೊಂದು ತಿಳಿಸುತಿದೆ.

ಕೊಡಗು ದೇಶದಲ್ಲಿ ಅಸಿಸ್ಟೆಂಟ್ ಕಮಿಷನರಾಗಿದ್ದು ಈಗ್ಯೆ ಕೆಲವು ಕಾಲದ ಹಿಂದೆ ಕಾಲಗತಿಯನ್ನೈದಿದ ಮೇ|| ಗಣಪತಿಯವರ ಭಾರ್ಯೆಯು ತಮ್ಮ ಪತಿಯ ಜ್ಞಾಪಕಾರ್ಥವಾಗಿಯೂ, ಅವರಲ್ಲಿ ತಾವು ಪಡೆದಿದ್ದ ಭಕ್ತಿ ವಿಶ್ವಾಸ ಪ್ರದರ್ಶನಾರ್ಥವಾಗಿಯೂ, ಯಾವುದಾದರೊಂದು ಧರ್ಮಕಾರ್ಯ ಸನ್ನಿವೇಶ ಮಾಡಬೇಕೆಂದುದ್ದೇಶಿಸಿ, ಮಡಕೇರಿ ಷಹರ್ ಮುಂಭಾಗದಲ್ಲಿ ಒಂದು ಜಲಧಾರವು ಕಲ್ಪಿಸಬೇಕೆಂದು ತಮ್ಮೊಳು ಸಂಕಲ್ಪಿಸಿಕೊಂಡು ಅದಕ್ಕಾಗಿ ೬,೦೦೦ ರೂಪಾಯಿಗಳ ಹಣ ಸಹಾಯಮಾಡಿದರೆಂದು ಕೇಳಲಕ್ಕೆ ನಾವು ಬಹಳ ಸಂತೋಷಿಸುತ್ತೇವೆ. ಬಹಳ ದೊಡ್ಡ ಅಧಿಕಾರಗಳಂ ಮಾಡಿ ವಿಶೇಷ ಕೀರ್ತಿ ಪ್ರತಿಷ್ಠೆಗಳಂ ಸಂಪಾದಿಸಿ ಲಕ್ಷಾಂತರ ರೂಪಾಯಿಗಳ ಜಮಗಿಯುಳ್ಳವರೆನಿಸಿಕೊಂಡು ಪ್ರಕೃತಿ ದಶೆಯಂ ಕಾಲಗತಿಯಂ ಹೊಂದಿದಂತ ಅನೇಕ ಜನ ದೊಡ್ಡಮನುಷ್ಯರ ಕುಟುಂಬಗಳು ತಮ್ಮ ಪತಿ ಮರಣಾನಂತರ ಅತಿ ರಿಕ್ತತೆಯಂ ಕೊಂಡು ಧರ್ಮಕ್ಕಾಗಿ ಧರ್ಮಕಾರ್ಯವೆಂಬದು ತಿಳಿಯದೆ ಧನಮಂ ಕಳೆಯುವಂತ ಕಾಲದಲ್ಲಿ ಇಂತವರಿಗೆಲ್ಲಾ ಮೇ|| ಗಣಪತಿಯವರ ಭಾರ್ಯೆಯವರು ಧರ್ಮಮಾರ್ಗಪ್ರದರ್ಶಕರಾಗಿರುವಂತೆ ಭಾವಿಸುವೆವು.

ಮೈಸೂರು ಗವರ್ನ್‌ಮೆಂಟ್ ಸೀನಿಯರ್ ಸರ್ಜಿಯನ್ ಮತ್ತು ಸಾನಿಟರಿ ಕಮಿಷನರಾಗಿರುವ ಡಾಕ್ಟರ್ ವ್ಯಾಗ್ನರ್‌ಯವರ ನೌಕರಿಯನ್ನು ಇನ್ನೂ ಕೆಲವು ಸಂವತ್ಸರಗಳ ಕಾಲ ಕೊಟ್ಟರ ಬೇಕೆಂದು ಮೈಸೂರ್ ದರ್ಬಾರಿನವರು ಇಲ್ಲಿರುವ ಮುಖಾಂತರ ಮದರಾಸ್ ಗವರ್ನ್‌ಮೆಂಟಿನವರನ್ನು ಕೇಳಿಕೊಳ್ಳಲು ಅವರು ಇಂಡ್ಯಾ ಗವರ್ನ್‌ಮೆಂಟಿನವರಿಗೆ ಬರೆದು ೧೮೯೪ನೇ ಇಸವಿ ಮಾರ್ಚಿ ಆಖೈರ್‌ವರೆಗೆ ಅವರನ್ನು ಮೈಸೂರು ಸಂಸ್ಥಾನದ ನೌಕರಿಯಲ್ಲಿ ಬಿಟ್ಟುಕೊಳ್ಳಬಹುದೆಂದು ಮಂಜೂರ್ಮಾಡಿ ಆ ಅಂಶವಂ ಇಂಡ್ಯಾ ಗವರ್ನ್‌ಮೆಂಟಿಗೆ ರಿಪೋರ್ಟ್ ಮಾಡಿದರು. ಈಗ ನಾವು ಕೇಳುವದರಲ್ಲಿ ಇಂಡ್ಯಾ ಗವರ್ನ್‌ಮೆಂಟಿನವರು ಮದರಾಸ್ ಗವರ್ನ್‌ಮೆಂಟಿನವರು ತೋರ್ಪಡಿಸಿದ ಅಭಿಪ್ರಾಯವನ್ನು ಮಂಜೂರ್ ಮಾಡಲಿಲ್ಲವೆಂತಲೂ ಏಕೆಂದರೆ ಬ್ರಿಟಿಷ್ ಸರಹದ್ದಿನಲ್ಲಿ ದೊರೆಯುವದಕ್ಕಿಂತ ಅಧಿಕವಾಗಿ ಆದಾಯವೂ ಗೌರವವೂ ನೇಟಿವ್ ಸಂಸ್ಥಾನದಲ್ಲಿ ದೊರೆಯುವದೆಂಬ ಪ್ರತ್ಯಾಶೆ ಇರುವ ಪಕ್ಷಕ್ಕೆ ಅವರು ಬ್ರಿಟಿಷ್ ಸರ್ವೀಸಿನಿಂದ ನಿವೃತ್ತರಾಗಿ ಬಳಿಕ ನೇಟಿವ್ ಅರಸರ ಬಳಿಯಲ್ಲಿರಬಹುದೇ ಹೊರತು ಯೆರಡು ನೌಕರಿ ಗಳಲ್ಲಿಯೂ ಇದ್ದುಕೊಂಡು ಇವರಿಕ್ಕೆ ಇಮುಂದೆ ಅವಕಾಶ ವ್ಯವಸ್ಥೆಯಿಂದ ತಾಲೂಕು ಎಲ್ಲಕಡೆಯಾಗಿ ಎನ್ನುವುದರ ಕುರಿತಾಗಿ ಆದರೆ, ಡಾಕ್ಟರ್ ವ್ಯಾಗ್ನರ್‌ಯವರು ಹೊಸದಾಗಿ ಇರತಕ್ಕ ನೌಕರಿಯಂ ಬಿಟ್ಟುಬಿಡುವದೂ ಬರತಕ್ಕದ್ದು, ಅಥವಾ ಬ್ರಿಟಿಷ್ ಸರ್ವೀಸಿನಿಂದ ನಿವೃತ್ತರಾಗುವದೂ ಆಗತಕ್ಕದ್ದೆಂದು ಅವರಿಗೆ ಮುಂದಾಗಿ ತಿಳಿಸತಕ್ಕದ್ದೆಂತಲೂ ಬೆಸಿಮಿಂಗ್ ರೀತಿ ಬಂದಿರುವುದು ವ್ಯಕ್ತವಾಗುತಿದೆ. ಈ ವಿಷಯದಲ್ಲಿ ಡಾಕ್ಟರ್ ವ್ಯಾಗ್ನರ್‌ಯವರ ನಿರ್ಧಾರವು ಏನೆಂಬದು ನಿಶ್ಚಯವಾಗಿ ತಿಳಿದುಬಂದಿಲ್ಲ.

## THE MYSORE GAZETTE
## ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜಾ ಸಾಹೇಬ್ ಬಹದ್ದೂರವರ ಸನ್ನಿಧಿಯ ಕೊಡಲ್ಪಟ್ಟ ಇಸ್ತಿಹಾರುಗಳು.

ಇಂಡಿಯಾ ಗವರ್ನ್‌ಮೆಂಟ್ ಹೋಂ ಡಿಪಾರ್ಟ್‌ಮೆಂಟ್ ಪಬ್ಲಿಕ್.

ಸಿಂಹ್ಲ ಲಯಿಬವು, ತಾ|| ೧೯ನೇ ಜುಲೈ ೧೮೯೩ನೇ ಇಸವಿ.

ಶ್ರೀಮನ್ಮಹಾರಾಜ್ಞೀಯವರ ಪ್ರೇಮ ಪಾತ್ರರಾದ ಯಾರ್ಕ್ ಶ್ರೀಮಂತರ ಮತ್ತು ಅವರು ಯುವರಾಜರಾದ ಟೆಕ್ಕ ರಾಜಕುಮಾರಿ ವಿಕ್ಟೋರಿಯಾ ಮೇರಿ ಯವರ ವಿವಾಹ ಮಹೋತ್ಸವ ಕಾಲದಲ್ಲಿ ಶ್ರೀಮನ್ಮಹಾರಾಜ್ಞೀಯವರಲ್ಲಿಯೂ ಅವರ ಕುಟುಂಬದವರಲ್ಲಿಯೂ ಪ್ರಜೆಗಳಿಗೆ ಇರತಕ್ಕ ಕೇವಲ ಭಕ್ತಿ ವಿಶ್ವಾಸವನ್ನು ವಿಶದವಾಗಿ ತೋರ್ಪಡಿಸಿದ್ದರಿಂದ, ಶ್ರೀಮನ್ಮಹಾರಾಜ್ಞೀಯವರು ಎಷ್ಟರಮಟ್ಟಿಗೆ ಸಂತೋಷಭರಿತರಾಗಿದ್ದಾರೆಂಬದನ್ನು ಪುನಃ ತಿಳಿಯಪಡಿಸಲು ಅಪೇಕ್ಷಿಸುತ್ತಾರೆ.

ಶ್ರೀಮಯ ಮಹಾರಾಜ್ಞೀಯವರಿಗೆ ಸಂಭವಿಸಿದ ಉತ್ಸಾಹ ಮತ್ತು ವ್ಯಸನಕಾಲಗಳಲ್ಲಿ ಯಥಾರ್ಥವಾದ ಪ್ರೀತಿಯಿಂದೊಡಗೂಡಿದ ಪ್ರಜೆಗಳ ಪಶ್ಚಾತ್ತಾಪಕ್ಕೋಸ್ಕರ ಶ್ರೀಮಯ ಮಹಾರಾಜ್ಞೀಯವರು ಸಂತೋಷ ಪಡುವದು ಅವರಿಗೆ ನೂತನವಾದದ್ದಲ್ಲ.

ಶ್ರೀಮಯ ಮಹಾರಾಜ್ಞೀಯವರ ವಿಸ್ತಾರವಾದ ರಾಜ್ಯಗಳಲ್ಲಿನ ಪ್ರಜೆಗಳ ಸಂತೋಷದ ಮತ್ತು ವ್ಯಸನ ಕಾಲಗಳಲ್ಲಿ ಶ್ರೀಮಯ ಮಹಾರಾಜ್ಞೀಯವರ ಅವರಿಗೋಸ್ಕರ ಎಷ್ಟರಮಟ್ಟಿಗೆ ಅಪ್ರಾರ್ಥ್ಯವಾಗುತ್ತಾರೆಂಬದನ್ನು ಸದರೀ ಪ್ರಜೆಗಳು ತಿಳಿದಿದ್ದಾರೆಂಬದು ಅವರಿಗೆ ಗೋಚರವಿದೆ.

ತಮ್ಮ ಮೊಮ್ಮಕ್ಕಳ ಕ್ಷೇಮ ಮತ್ತು ಸಂತೋಷವನ್ನು ಕುರಿತು ಪ್ರಜೆಗಳ ಮನಃಪೂರ್ವಕವಾದ ಆಶೀರ್ವಾದ ಮತ್ತು ಪ್ರಾರ್ಥನೆಗಳಲ್ಲಿ ಶ್ರೀಮನ್ಮಹಾರಾಜ್ಞೀಯವರು ಸೇರಿರುತ್ತಾರೆ.

VICTORIA R. I

ಮೊಕಾಂ ನಂ|| ೮೦೯, ತಾ|| ೭೩ನೇ ನವಂಬರ್, ೧೮೯೩—ಶಿವಮೊಗ್ಗ ಡಿಸ್ಟ್ರಿಕ್ಟ್ ಸಿವಿಲ್ ಸರ್ಜನ್ ಮ|| ಪಿ. ಎಸ್. ಅಚ್ಯುತರಾಯರವರಿಗೆ ೧೮೯೩ನೇ ಇಸವಿ ಡಿಸಂಬರ್ ೧೮ನೇ ತಾರೀಖು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದಲು, ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ. ಮೈಸೂರಿನಲ್ಲಿರುವ ಅಸಿಸ್ಟೆಂಟ್ ಸರ್ಜಿಯನ್ ಮೆ|| ಟಿ. ವಿ. ಆರ್ಮುಗಂ ಮೊದಲಿಯಾರ್ರವರು ಮೆ|| ಅಚ್ಯುತರಾಯರವರು ಪ್ರಿವಿಲೇಜ್ ರಜಾಮೇಲೆ ಗೈರುಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವವರೆಗೆ ಮೂರನೇ ಕ್ಲಾಸ್ ಆಫಿಷಿಯೇಟಿಂಗ್ ಸಿವಿಲ್ ಸರ್ಜನಾಗಿ ನೇಮಕ ಮಾಡಲ್ಪಟ್ಟಿರುತ್ತಾರೆ, ಮರುಕು ಅವರು ತತ್ಕಾಲದಲ್ಲಿ ಮೈಸೂರಿನಲ್ಲಿಯೇ ಕೆಲಸ ನೋಡತಕ್ಕದ್ದು. ಹಾಸನದಲ್ಲಿರುವ ಅಸಿಸ್ಟೆಂಟ್ ಸರ್ಜಿಯನ್ ಮ|| ಎ. ಎಸ್. ಕೃಷ್ಣಸ್ವಾಮಿ ಅಯ್ಯರವರು, ಮೆ|| ಆರ್ಮುಗಂ ಮೊದಲಿಯಾರ್ರವರು ಮೈಸೂರಲ್ಲಿ ಕೆಲಸ ನೋಡುತಿರುವ ಕಾಲದವರೆಗೆ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ವರೆಗೆ ಶಿವಮೊಗ್ಗೆಯಲ್ಲಿ ಸಿವಿಲ್ ಸರ್ಜನ್ ಕೆಲಸದ ಚಾರ್ಜಿನಲ್ಲಿರುವಂತೆ ನಿಯಮಿಸಿ ಕಳುಹಿಸಲ್ಪಟ್ಟಿರುತ್ತಾರೆ.

ನಂ|| ೮೮೫೭ ೬ F ೭೦೫೫—೯೨, ತಾ|| ೮ ನೇ ಡಿಸಂಬರ್ ೧೮೯೩—ಮೈಸೂರು ಸಂಸ್ಥಾನದಲ್ಲಿ ರತಕ್ಕ ದರೋಬಸ್ತು ಪಬ್ಲಿಕ್ ಆಫೀಸ್‌ಗಳು ಕ್ರಿಸ್ಮಸ್ ಹಬ್ಬದ ಪ್ರಯುಕ್ತ ೧೮೯೩ ನೇ ಇಸವಿ ಡಿಸಂಬರ್ ೨೫ ನೇ ತಾ|| ಸೋಮವಾರದ ಲಾಗಾಯತು ೧೮೯೪ ನೇ ಇಸವಿ ಜನವರಿ ೬ನೇ ತಾರೀಖು ಶನಿವಾರದ ವರಕ ಉಭಯದಿನಗಳೂ ಸೇರಿ ಮುಚ್ಚಲ್ಪಡುವವೆಂದು ಸಮಸ್ತ ಜನಗಳಿಗೂ ಇದರಮೂಲಕ ತಿಳಿಸಲ್ಪಟ್ಟಿರುತಿದೆ. ಜರೂರಿಯಾತಿ ಕೆಲಸಗಳ ನಿರ್ವಾಹಿಯಬಗ್ಯೆ ಆಯಾ ಇಲಾಖಾ ಮೇಲ್ವಿಚಾರಕರುಗಳಿಂದ ತಕ್ಕ ಏರ್ಪಾಡುಗಳು ಮಾಡಲ್ಪಡುವವು. ಈ ಇಸ್ತಿಹಾರ್ ನಾಮೆಯು ತಾಲ್ಲೂಕುಕಚೇರಿಗಳಿಗೂ, ಜವಾಬಿನ ಕೆಲಸಕ್ಕೆ ನಿಯಮಿಸಿರತಕ್ಕ ಆಫೀಸರಿಗಳಿಗೂ ಅನ್ವಯಿಸಲ್ಪಡತಕ್ಕದ್ದಲ್ಲವು.

ನಂ|| ೮೮೬೮—೬ ೪. ೭೦೫೫—೯೨—೫ನೇ ಛಾಪೆ ೧ನೇ ವಾಲ್ಯುಂ ಸಿವಿಲ್ ಅಕೌಂಟಿಕೋಡಿನ ೭೬ನೇ ಆರ್ಟಿಕಲಿಗೆ ಸೇರಿದ ಮೊದಲನೆ ರೂಲಿನ ನಿಯಮಗಳನ್ನನುಸರಿಸಿ, ಘನವನ್ನು ಹೊಂದಿದ ಶ್ರೀಮಯ ಮಹಾರಾಜಾ ಸಾಹೇಬರವರು ೧೮೯೩ ನೇ ಇಸವಿ ಡಿಸಂಬರ್ ೭೩ನೇ ತಾರೀಖ್ ಶನಿವಾರ ದಿವಸ, ಗೆಜೆಟೆಡ್ ಆಫೀಸರ್‌ಗಳ ಸಂಬಳಗಳು ವಿನಾ

ಯಿಸಿ, ಆಯಾ ತಾಲೂಕು ಟಪ್ಪಾಲಿಗಳ ಚಾರ್ಜಿ ತಿಂಗಳಬಾಬತು ಡೆಲ್ಟ್ ಬಟವಾಡೆ ಮಾಡಲಿಕ್ಕೆ ಹುಕುಂ ಕೊಟ್ಟಿರುತ್ತಾರೆ.

ನಂ|| ೪೭೬೯—ಓ. ೯. ೮೪೮೩—೯೩—ತಾ|| ೫ನೇ ಡಿಸಂಬರ್ ೧೮೯೩—ಮೈಸೂರು ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮ್ಮಿಷನರ್ ಮಿ|| ಎಲ್. ನರಸಿಂಹೈಯ್ಯಂಗಾರ್ರವರು, ೧೮೯೩ ನೇ ಇಸವಿ ಡಿಸಂಬರ್ ಗುರ್ರೇ ತಾರೀಖಿನ ಪೂರ್ವಾಹ್ನದಲ್ಲಿ ನೌಕರಿಯ ಭಾಗ್ಯ ತಾವು ಹಾಜರಾಗಿರುವಂತೆ ರಿಪೋರ್ಟು ಮಾಡಿರುತ್ತಾರಾಗಿ ಅವರು ಮೈಸೂರ್ರುಸೀಮೆಯ ನೌಕರಿಯವರು ಇತರಕೆಲಸಕ್ಕೆ ನಿಯಮಿಸಲ್ಪಟ್ಟ ರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವವರೆಗೆ ಬೆಂಗಳೂರು ಡಿಸ್ಟ್ರಿಕ್ಟಿಗೆ ಕಳುಹಿಸಲ್ಪಟ್ಟಿರುತ್ತಾರೆ.

೩. ಸರ್ ೧೮೯೩ನೇ ಇಸವಿ ಆಗಸ್ಟ್ ೧೫ನೇ ಮಾಹೆ ೩೮೯೩—೯. ೯ ೮೪೮೩—೯೩ನೇ ನಂಬರುಳ್ಳ ಇಸ್ತಿಹಾರ್‌ನಾಮೆಯ ಮೂಲಕ ಕೊಡಲ್ಪಟ್ಟದ್ದ ರಜಾ ಪೈಕಿ ಅವರುಪಯೋಗಿಸಿ ಕೊಳ್ಳದೆ ಉಳಿಸಿರುವ ಭಾಗವು ಇದರಿಂದ ರದ್ದುಮಾಡಲ್ಪಟ್ಟಿರುತಿದೆ.

ನಂ|| ೪೪೩೩—೮. ೩೮೯೩ —ನಾಗಮಂಗಲ ತಾಲ್ಲೂಕ್ ಅಮಲ್ದಾರ್ ಬಾವರಲ್ಲಿ ಯವರಿಗೆ, ೯೩ನೇ ಇಸವಿ ಸೆಪ್ಟೆಂಬರ್ ೩೦ ನೇ ಮಾರ್ಚ್ಯಂ೬೩೨ ೮. ೧೮೭೬ನೇ ನಂಬರುಳ್ಳ ಇಸ್ತಿಹಾರ್‌ನಾಮೆಯ ಮೂಲಕ ಕೊಡಲ್ಪಟ್ಟದ್ದ ಒಂದು ತಿಂಗಳು ಹದಿನೈದು ದಿವಸಗಳ ಪ್ರಿವಿಲೇಜ್ ರಜಾವಿಗೆ ನೇರಿದಂತೆ ಇನ್ನೂ ಜಾಸ್ತಿಯಾಗಿ ೧೮ ದಿನಗಳ ಅದೇಶರತಿಯುಳ್ಳ ರಜಾಕೊಡಲ್ಪಟ್ಟಿರುತಿದೆ.

## ಸರ್ವಜನರಿಗೆ ವಿಶೇಷ ಭಯಂಕರವಾಗಿ ಬರತಕ್ಕ ಜಾಡ್ಯಗಳ ವಿವರಣೆ.

ಗರ್ಭದಲ್ಲಿ ಅಲ್ಪವಾದ ತಾಪವುಂಟಾದಾಗಲು ಕಾಜಿನ ಕಾಲದಲ್ಲಿ ಅವುಗಳಿಗೆ ಚಿಕಿತ್ಸೆ ಮಾಡದೆ ಅಜಾಗ್ರತೆ ಮಾಡಿದ ಪಕ್ಷದಲ್ಲಿ ಈ ಕೆಳಗೆ ವಿವರಣ ಮಾಡಿದ ಮಾರ್ಗಗಳು ದೇಹವ್ಯಾಧಿಗಳು ಉಂಟಾಗುತ್ತವೆ. ಗರ್ಭದಲ್ಲಿರುವ ಯಕೃತ್ತೆ ನಲ್ಲಿಯು ಚಿಗುರು ನರಗಳ ನಲ್ಲಿಯು ಗರ್ಭ ಮಾಡಿದ್ದರಿಂದ ವ್ಯಾಧಿ ಉಂಟಾಗಿ ಕಾರಣದಿಂದ ಜಾಡ್ಯಗ್ರಸ್ತನಿಗೆ ಮರಣವು ಸಂಭವಿಸ ಬಹುದು ಈ ರೋಗಗಳಿಂದ ವಿಶೇಷ ಕಷ್ಟ ಅನುಭವಿಸುವರು. ಈ ಜಾಡ್ಯವನ್ನು ಜನರು ನೆಟ್ಟಗೆ ಕಾಣುವಂತೆ ಅಲ್ಪವಾದ ದೇಹಲೋಗಗಳೆಂತಲೇ ನೆನಸುವರು ; ಇದು ಹಿಡುವ ಉಸಿರು ತನ್ನಲ್ಲಿ ಕಾವು ತಮಗೆ ಈ ಜಾಡ್ಯಗಳು ಇಂತಾದವೆಂಬುದ ಕಾರಣಗಳನ್ನ ನೆನಸದೇ ಕು.—ನನಗೆ ಭೋಜನಾನಂತರ, ಉದರದ ವಿನಾಯಿತಿ ಬಲ ಇಲ್ಲದ ಸಂಕಟವಾದ ಶ್ವಾಸ ಇತ್ಯಾದಿಗಳು ಉಂಟೆ? ನನ್ನ ಕಣ್ಣುಗಳಲ್ಲಿ ಅರಿಶಿನ ಬಣ್ಣ ಉಂಟೆ? ನನ್ನ ಬಾಯಿಯುಳ್ಳಿರುವ ದಂತಗಳ ಸುತ್ತೂ ಸಿಂಬಳದ ಹಾಗೆ ಪಾಚಿ, ಅಂಟು ಮತ್ತು ಬಾಯಿಯಲ್ಲಿ ದುರ್ಗಂಧವಾದ ವಾಸನೆ ಅರಿವು ನಿನ್ನರವೆ? ನಾಲಿಗೆಯಲ್ಲಿ ಮಂದವೆ? ಪಕ್ಕೆಗಳಲ್ಲಿ, ಬೆನ್ನಿನಲ್ಲಿ ನೋವೆ? ಮಲಬದ್ಧವೆ? ತಲೆಯಲ್ಲಿ ತಿರುಗುವಿಕ ಅದವಾ ಒಂದುವಿಧವಾದ ಭಾರವು, ಹೊಟ್ಟೆಯಲ್ಲಿ ಹಸಿವ ಕಡಿಮೆಯಲ್ಲಿ ಉಂಟೆ? ನೋರುವಿಕೆ ಯಕೃತ್ತುಗಳಲ್ಲಿ ಅಲ್ಪವಾಗಿ ವಿಶೇಷಕಾಲವು ಪರದ ಅನ್ಯಕಾರಣದಿಂದ ಅವುಗಳು ವಿಸ್ತಾರವಾದ ಬಣ್ಣವೆಲ್ಲವೆ? ಭೋಜನವು ಭುಜಿಸಿದ ಕಾಲದಲ್ಲಿ ಅವುಗಳು ಚೆನ್ನಾಗಿ ಉತ್ತ ಗರ್ಭದಲ್ಲಿ ಅಜೀರ್ಣವಾದ ಬಾಧೆಯುಳ್ಳ ಸ್ಥಿರವಾದ ವಿಶೇಷವಾದ ಬಾಧೆ ಉಂಟೆ? ಇತ್ಯಾದಿ ರೋಗಗಳಲ್ಲ ವಿಶೇಷಕ್ಕೆ ಕಾರಣವು ; ಅದರ ಇವುಗಳು, ಮುಂದೆ ವಿವರಣ ಮಾಡಿದ ಪ್ರಕಾರವು ದಿನೇದಿನೇ ಹೆಚ್ಚಿನದಾಗಿ ವಿಶೇಷವಾದ ಅಪಾಯಕ್ಕೆ ಗುರಿಯಾಗುತವೆ. ಇವುಗಳು ವಿಶೇಷಕಾಲವು ಚಿಕಿತ್ಸೆ ಮಾಡದೆ ಬಿಟ್ಟದ್ದ ಪಕ್ಷಕ್ಕೆ ಒಂದುವಿಧವಾದ ಗಲ್ಲೆಂಬ ಶ್ವಾಸದ ಅಮ್ಮಿಗೆ ಬಿದ್ದು ರಂಧ್ರವಾಗುತಿದೆ. ತದನಂತರವು ಕರುಳಿನ ಚರ್ಮದಲ್ಲಿ ಅಸ್ವಾಭಾವಿಕವಾದ ಬಣ್ಣವು ಉತ್ಪತ್ತಿಯಾಗಿ, ಮೂಗಿನಲ್ಲಿ ಕ್ಷಯ ಗಳಲ್ಲಿ, ಚರ್ಮವಾದ ಜಿವರ ಬಿಂಕೆ ಪ್ರಸವಿಸಿ, ತದನಂತರ ಯಕೃತ್ತುಗಳಲ್ಲಿ ಜಾಡ್ಯವೇಳ್ಪಿಸಿ, ಮಾದರ ಪಲೆಗಳು ಕಾಣಿಸಿ, ಅವುಗಳಿಗೆ ಎಷ್ಟು ಚಿಕಿತ್ಸೆ ಮಾಡಿದರೂ ಗಾಂತವಾಗದೆ ಕೀವಿನ ತೊಂದರೆ ಉಂಟುಮಾಡುತವೆ. ಈ ಜಾಡ್ಯದ ರೋಗಗಳೇನೆಂದರೆ, - ಮಂದವು, ಅಜೀರ್ಣಗಳು, ಇವುಗಳಿಗೆ ಕೇವಲ ಉತ್ತಮವಾದ ಅವುಷಧ ಚಿಕಿತ್ಸೆ, ಈ ಜಾಡ್ಯಗಳ ಆರಂಭದ ಕಾಲದಲ್ಲಿ ಕಿವಿ ನಾಡಿಯ ಪಕ್ಷದಲ್ಲಿ ಈ ಜಾಡ್ಯಗಳು ಬಾರದಲ್ಲಿ ಬರಿಸಿಮಾಡಿದಂತೆ ಕೇವಲ ವೃದ್ಧಾಪ್ಯ ಪರ್ಯಾಪ್ತಿನವರೆಗೆ, ಜಾಡ್ಯದ ದುರ್ಗುಣಗಳಿಂ ನಿರ್ಮೂಲಮಾಡಿ ಶರೀರಕ್ಕೆ ಅಂಗಗಳಿಗೆ ಬಲವು ತುಂಬಿ ಮಾಡತಕ್ಕ ಅವುಷಧವು ತಾಯಿಚೆಗಿಲು ಕಷಾಯವು. ಈ ಕಷಾಯವು ವಿವಿಧ ಗಾನಗಳ ನಿಂದ ಮುಖ್ಯಕಿಗೆಳಿಂದ ಮಾಡಿದುದಕ್ಕೂ ಇವುಗಳು ಉಳಿದ ಮೂಲ ಸರ್ವತ್ರಾತ್ರಗಳಲ್ಲಿ ಕಮಿಸ್ತು, ಅನುಕರಿನೀಯಾಗುಗಳಲ್ಲಿ ಕ್ರಯಕ್ಕೆ ಸಿಕ್ಕುತವೆ. ಈ ಕಷಾಯವನ್ನು ಪಾನಮಾಡುವುದರಿಂದ ಜಾಡ್ಯದ ಆಶ್ರಿತಾರಗಳು ದುಬುತ್ತು ನಿರ್ಮೂಲವಾಗಿ, ಸಂಧುಸಂಧುಗಳಲ್ಲಿರತಕ್ಕ ಕಲ್ಮಶದೋಷಗಳು ದುಬುತ್ತು ನಿರ್ಮಲವಾಗಿ ಶರೀರಕ್ಕೆ ಬಲವೂ ತೇಜಸ್ಸೂ ಕೊಡುತಿದೆ.

A. A.

## SUMMARY OF NEWS.
### ವೃತ್ತಾಂತ ಸಂಗ್ರಹವು

ಇಮ್ಮ ದೇಶದ ಹಿಜಾ ಅರಸರ ಮನೆಯಲ್ಲಿ ಅವರ ಮಗಳ ಮದುವೆ ತೊಟ್ಟಿಲು ಚಿನ್ನದ ತಗಡಿನಿಂದ ಹೊದಿಸಿದ್ದು ಅವರನ್ನೇ ಕೂಡ್ರಿಸಿದ ಮಾತ್ರ ಹರಳು ಸಹಿತವಾಗಿ ತೊಟ್ಟಿಲಿನ ಬೆಲೆಯು ೫೦ ಲಕ್ಷ ರೂಪಾಯಿ ಬಾಳುವದಂತೆ.

ಅನಂತರಯನವ ಶ್ರೀಮಾನ್ ಸುಬಾಯಿಜನವರ ದೊಡ್ಡ ಮಹಾರಾಣೀಯವರ ದೊಡ್ಡ ಸದನ್ನ ಲಕ್ಷಾಂತರ ರೂಪಾಯಿಗಳು ಕಳವು ಆಗಿರುವುದುಗೂ, ಇದಕ್ಕೋಸ್ಕರವಾಗಿ ಅಲ್ಲಿನ ಕ್ಯಾಷಿಯರನ್ನು ಹಿಡಿದು ಸೈದಿನಲ್ಲಿಟ್ಟಿರುವದಾಗಿಯೂ ವೆಸ್ಟರ್ನ್‌ಸ್ಟಾರ್ ಎಂಬ ಪತ್ರಿಕೆ ತಿಳಿಸುತಿದೆ.

ಆಸ್ಟ್ರೇಲಿಯದಲ್ಲಿನ ಒಂದು ಕೆರೆಯೊಳಗೆ ಅಳುತಿದಗಳನ್ನು ಹಿಡಿದು ಒಂದು ವಿಶಾಲ ಹಿಡಿಯಲ್ಪಟ್ಟಿತು. ಅದನ್ನು ಕೂಡ ಹೊಟ್ಟೆಯೊಳಗೆ ನೂರು ಅಡಿ ಉದ್ದ ಮೀನು ಶೋಧಿಸಿದ ಬಿಲ್ಲು, ಅದು ಬಿಸ್ಕಿಟ್ ಚೀಲಗಳು ಎಂದು ಜ್ವಲಿ ಉದ್ದ ವಿಸ್ತ ಒಂದುವಾದವು ಒಂದು ದೊಡ್ಡ ಕಪ್ಪೆಯೂ ದೊರೆತು.

ಚಿಕಾಗೋ ಪ್ರದರ್ಶನ—ಈದಿನವು ಇನ್ನಪ್ರದರ್ಶನವನ್ನು ನೋಡಲಿಕ್ಕೆ ಅಕ್ಟೋಬರಿನಿಂದ ೯೦೦೦೦ ಬಂದವರಿಗೆ ೧೫೦೦೦೦೦ ಜನರು ಹೋಗಿದ್ದರು. ಮತ್ತು ಅಮೆರಿಕ ಸರ್ಕಾರದ ಖಜಾನೆಗೆ ಜಮಾ ಆದ ಜನರ ಹೋಗಿದ್ದರೆಂದು ಲಂಡನ್ ಪತ್ರಿಕೆಯೊಂದು ತಿಳಿಸುತಿದೆ—ಹೆ. ಪ್ರ.

ಸರ್ ೧೮೯೩ರಿಂದ ಇಂಗ್ಲೆಂಡ್ ಮತ್ತು ಫ್ರಾನ್ಸ್ ಈ ದೇಶದ ದೇಶಗಳ ಸರುವೆ ೩೫ ಸಾವಿರ ಯುದ್ಧಗಳು ನಡೆದವು. ಈ ವೇಳೆ ಯುದ್ಧವು ೧೯೦೦ ರಲ್ಲಿ ಪ್ರಾರಂಭವಾಗಿ ೧೮೧೫ ರಲ್ಲಿ ಮುಗಿಯಿತು. ಈ ಯುದ್ಧದಲ್ಲಿ ಎರಡು ಲಕ್ಷ್ಯದಷ್ಟು ಜನರ ಮೃತರಾದರು ಹೇಳುತ್ತಾರೆ—ಕನ್ನ.

ಪ್ರಶ್ನೆಯಲ್ಲಿ ಬಿಳಿದ ಬರುವ ಗೋವುಗಳ ಸರ್ಕಾರ ಜಾತ್ರಿ ಗೋವನ್ನು ಬೀರ ತಗ್ಗಾಗುತಲಿದೆ. ಈಗ ಅಲ್ಲಿನ ಸರ್ಕಾರದಲ್ಲಿ ಬನ ನಾವುದರಿಂದ ಕುದುರೆಯನ್ನು ಕೊಂದು ತಿನ್ನಲು ಪ್ರಾರಂಭಿಸಿರುತ್ತಾರೆ. ಗೋವನ್ನು ಸಂತತಿಯೇ ಕುಂಠಿತವಾಗುವ ಕೊಬ್ಬಿದ ಗೋವು ಜನರ ಚಿನ್ನದ ಹಾಗೆ ಗಣಿಯವರೆಗೂ, ಈ ಕಾರಣದಿಂದ ಕಳೆದ ವರ್ಷದಲ್ಲಿ ಮೂರು ಸಾವಿರ ಕುದುರೆಗಳನ್ನು ಅಲ್ಲಿನವರು ತಿಂದರೆಂದು ಆಸ್ಟ್ರೇಲಿಯದ ಪತ್ರಿಕೆಯೊಂದು ತಿಳಿಸುತಿದೆ.—ವೃ. ಬಿ.

ಈಚಿಗೆ ಮುಂಬೈ ಪ್ರಾಂತ್ಯದಲ್ಲಿ ಒಬ್ಬ ಫಕೀರನೊಬ್ಬನು ಸುದ್ದಿ ತನ್ನ ಉಯಿಲನ್ನು ಬರೆದಿಟ್ಟು ಪ್ರಾಣಬಿಡಲು ಈತನ ಮನೆಯ ಅವರ ರುಜುವಾತಾದ ಪತ್ರದ ಸಕಲನ್ನು ಪರೀಕ್ಷೆ ಮಾಡಬೇಕಾಗಿ ೧೨,೦೦೦ ರೂಪಾಯಿಗಳ ನೋಟು ಕೊಟ್ಟನಂತೆ. ಮುಂಬೈ ಕೋರ್ಟಿನಲ್ಲಿ ಕೆಇಡೇ ಬಿಳಿ ಆಕ್ಟ್ ಪ್ರಕಾರ ಒಂದು ಕಾಲದಿಂದ ಇಷ್ಟು ಧನವನ್ನು ಇದಕ್ಕೋಸ್ಕರವಾಗಿ ಯಾರೂ ಕೊಟ್ಟಿರಲಿಲ್ಲವೆಂತಲೂ ಇಷ್ಟು ಧನವನ್ನು ಕೋರ್ಟಿಗೆ ಕೊಡಬೇಕಾದ ಆ ಫಕೀರನ ಸ್ವತ್ತಿನಲ್ಲಿ ೩೩ ಲಕ್ಷದ ೩೦ ಸಾವಿರದ ೫೦೦ ರೂಪಾಯಿಗಳು ಬಾಳತಕ್ಕದ್ದಾಗಿದ್ದವೆಂತಲೂ ಅಮೃತಬಜಾರ್ ಪತ್ರಿಕೆ ತಿಳಿಸುತಿದೆ—ಚಿಂ.

ಲಂಡನ್ ಪಟ್ಟಣದಲ್ಲಿ "ಸ್ಟ್ಯಾಂಡರ್ಡ್" ಎಂಬುದಾಗಿ ಒಂದು ವರ್ತಮಾನ ಪತ್ರಿಕೆ ಇರುತ್ತದೆ. ನಮ್ಮ ವೈಸ್‌ರಾಯರು ರಾಗಿ ಬರುವ ಲಾರ್ಡ್ ಎಲ್ಗಿನ್‌ರವರ ವಿಷಯದಲ್ಲಿ ಈ ಪತ್ರಿಕೆಯು ಹೀಗೆ ತಿಳಿಸುವದು, " ಇವರು ಉದ್ಯಾನವನ್ನು ಮಾಡಿಕೊಳ್ಳುವುದಿಲ್ಲವಾಗಿ ವಿಶೇಷವಾಗಿ ಕೋರ್ಟಿನಲ್ಲುತಕ್ಕದ್ದು ಇಂತಾ ಪ್ರಯತ್ನಗಳನ್ನು ಇವರುಮಾಡುವುದಿಲ್ಲ. ಮಾಡಿದರೆ ಸಿದ್ಧಮಾಡುವುದು ಅಲ್ಲ. ಅದರೆ ಆಡಿದ ಮಾತುಗಳು ಗಂಭೀರವಾಗಿಯೂ, ಕಾಲಕ್ಕೆ ಒದಗುವ ಜನಕ್ಕೆ ರುಚಿ ಅಲಕ್ಷ್ಯತನವು ನಮ್ಮಲ್ಲವುಗಳಲ್ಲವಾಗಿಯೂ, ಆರಾವವು ಇವರ ವಸ್ತ್ರವನ್ನು ಜನರುನೋಡಿ, ಇವರುಬಹಳ ದೊಡ್ಡ ಮನುಷ್ಯರೆಂದು ಹೇಳುವದು ಕಷ್ಟ." ಹಿಂದೆ ಒಂದಾನೊಂದು ಒಬ್ಬ ಹುಡುಗ ತನ್ನ ಸ್ನೇಹಿತನೊಬ್ಬನಿಗೆ "ಇಂಗ್ಲೋಮೋ, ಇವರೇ ಲಾರ್ಡ್ ಎಲ್ಗಿನ್ ರವರು" ಎಂದುತೋರಿಸಲು, ಆತನು "ಅಯ್ಯೋ ! ಇವರೇನೇ, ಇವರನ್ನು ಗೊಬ್ಬರದಲ್ಲಿ ಕಿರಿದಾಗಿರುವರೆಂದು ತಿಳಿದಿದ್ದೆನಲ್ಲ" ಎಂದು ತನ್ನ ವಿಸ್ಮಯವನ್ನು ತೋರ್ಪಡಿಸಿದನು. ಇವರಿಗೆ ಆಡಂಬರವು ಇಲ್ಲದೆ, ಸ್ವಭಾವತಃ ಅಪರಿಮಿತವಾಗಿದ್ದುದರಿಂದ ಗರ್ವವಿಲ್ಲದವರು ಎಂದು ತಿಳಿಯಬೇಕು—ಚಿಂ.

ಸನಗಾ ದೇಶದಲ್ಲಿ ಜನ್ಮವ ಪದ್ಧತಿಯು ಬಹು ವಿಲಕ್ಷಣವಾದ್ದಾಗಿರುತಿದೆ. ಗಂಡನ ಮನೆಯವರು ಯಾವನಾದರೊಬ್ಬ ಹೆಂಗಸನ್ನು ಲಗ್ನ ಮಾಡಿಕೊಳ್ಳಬೇಕೆಂದು ಅಪೇಕ್ಷಿಸಿ ದಾದರೆ, ಅವನು ಅವಳಿಗೆ ಒಂದು ಪುಷ್ಪವನ್ನು ಕಾಣಿಕೆಯಾಗಿ ಕಳುಹುಕೊಡತಕ್ಕದ್ದು. ಅಥವಾ ಅವಳು ಸೇದುವ ಬತ್ತಿಗೆ ತನ್ನ ಬತ್ತಿಯನ್ನು ಹಚ್ಚಿ ತನ್ನ ಒಲವಿನ ಚೀಟಿಯಿದ ತನ್ನ ಬತ್ತಿ ಹೊತ್ತಿಸತಕ್ಕದ್ದು. ಬಳಿಕ ಹೆಣ್ಣಿನ ಕಡೆಯವರೂ ಗಂಡಿನ ಕಡೆಯವರೂ ಸಮಸ್ಯೆಗಳಿಗೆ ಸ್ತ್ರೀಯ ನಂತೆಯ ಮುನ್ನೂರು ಮುನ್ನೂರು ರೂಪಾಯಿಗಳನ್ನು ಕೊಡಬೇಕು, ಆಮೇಲೆ ಲಗ್ನವಾಯಿತು. ಏಕಪತ್ನೀವ್ರತವು ಎಲ್ಲರಿಂದಲೂ ನಡೆಸಲ್ಪಡುತಿದೆ. ಹೆಣ್ಣು ಸ್ಥಿತಿಯು ಹಿರಿದಾಗಿದ್ದಲ್ಲಿ ಲಗ್ನವಾಗುವದಕ್ಕೆ ಅವಕಾಶ ಇರುವರ, ನಮ್ಮ ದೇಶದಲ್ಲಿ ಸಂವತ್ಸರಗಳಿಗೆ ಪ್ರಭವ ವಿಭವಗಳೆಂದು ಹೆಸರುಗಳಿರುವಂತೆ ಆ ದೇಶದಲ್ಲಿ ಇಲಿ, ಹುಲಿ, ಕರಡಿ ಎಂದು ಹೆಸರುಂಟು. ಇಲಿ ವರ್ಷದಲ್ಲಿ ಹುಟ್ಟಿದವರಿಗೂ ಹುಲಿವರ್ಷದಲ್ಲಿ ಹುಟ್ಟಿದವರಿಗೂ ಲಗ್ನವಿಲ್ಲ. ಕೆಲ ಕೆಲವು ಗೊತ್ತುಮಾಡಿದ ಸಂವತ್ಸರಗಳಲ್ಲಿ ಹುಟ್ಟಿದವರಿಗೆನಾತ್ರ ಲಗ್ನವಾಗುತವೆ. ಉಳಿದ ತಿಥಿ, ವಾರ, ಕರಣ, ನಕ್ಷತ್ರ ಮುಂತಾದವುಗಳು ನಮ್ಮಲ್ಲಿರುವಂತೆಯೆ ಇರುತಿವೆ.—ಕ. ವೃ.

ಗಂಟೆಗಳೆಂತಾಗಿರುವವರು ವಿಮಾನ ಕಾಲದಲ್ಲಿ ಅಗ್ನಿಸಾಕ್ಷಿಯಾಗಿ ಪ್ರಮಾಣವನ್ನು ತನ್ನಲ್ಲಿ ಯಾರೂ ವ್ಯಭಿಚಾರವ ಮಾಡುವುದಿಲ್ಲವೆಂತಲೂ, ಪ್ರತಿನಿಯಮವಂತೆ ನಡೆಯಕೊಳ್ಳುವೆನೆಂದಲೂ ಹೇಳುವುದು ನಮ್ಮಲ್ಲಿ ರೂಢಿಯಾಗುವಂತೆ ಶಾಸ್ತ್ರ ನಿಯಮಗಳು ಆಗುವದ್ದು. ಇದರ ಜನಾಂಗದವರು ಕೋರ್ಟಿನಲ್ಲಿ ಪ್ರಮಾಣ ಮಾಡಿ ಕರಾರು ಮಾಡಿಕೊಳ್ಳುವರು. ಅಂತಹ ಮನುಷ್ಯನಲ್ಲಿ ಸಮಸ್ತರೂ ಕಾರುಣಿಕರು ಹೊಡಲುಗ್ಗದ ನ್ಯಾಯವಿಚಾರಕ ಕಾರ್ಯವೂ ವ್ಯಭಿಚಾರಕರು ಆಗಿರುವರು. ವ್ಯಭಿಚಾರದಲ್ಲಿ ಪತಿವ್ರತೆಯಾದವಳೊಬ್ಬಳು ಸ್ವಪತಿಯಾದ ತನ್ನ ಪತಿಗೆ ಮೋಸದ ಪ್ರತಿಜ್ಞೆಯ ವಿಧವನ್ನು ಇದಾಗಿ ತಿಳಿಸುವಳು :—ಪತಿಯು ಸ್ವಯಂವರಳಾಗಿ ಗಳನ್ನು ಸಮಾಪಿಸುವುದು ಪೂರ್ವಾದಿಗಳು ಆ ಪ್ರಯೋಜನಕ್ಕೆ ಬಯಲು ಈತನ ವಾಸವನ್ನು ಅವಲಂಬಿಸುವವಳ ಲಂಪಟವರನ್ನು ವಿಶೇಷವಾಗಿ ಬಿಡಲು, ಅವನು ಬಿಡುವ ಪತಿವಿಚಾರದವರಲ್ಲೀ ಬಿಡು ಈ ಮುಂದಿನ ಕೆಲಸವನ್ನು ಮಾಡಿದಳು. ಒಂದುದಿನ ರಾತ್ರಿ ಗಂಡನು ಊಟವಾದ ನಂತರ ಮನೆಗೆ ಹೋಗುವವನ್ನು ನೋಡಿಕೊಂಡು ಆಗ ನಂತರ ತಾನು ಎರಡು ಸೀಸೆಗಳನ್ನು ಕಂಕುಳಲ್ಲಿ ಇರಿಸಿಕೊಂಡು ಅವನನ್ನು ಹಿಂಬಾಲಿಸಿದಳು. ಗಂಡನು ಪತ್ನಿಯು ಪ್ರಕಾರ ಅನ್ಯರ ಮನೆಯ ಬಾಗಿಲು ಕೂಗಿ ಹೊಗ್ಗಿ, ಒಂದು ಮೂಲೆಯಲ್ಲಿ ಎಷ್ಟು ಮನೆಗೆ ಹೊಡೆಸುವ ಕ್ಕಾಗಿ ಮಾಡಿದ ಏಟು, ಅವನನ್ನು ನಾನ ಕೊಲುವುದು ಕ್ಕೆ ಆ ಸ್ತ್ರೀಯಿದನು ನೋಡುತ್ತಾ ಗಂಡನಿಗೆ ಕ್ಕೆ ಆ ಸ್ತ್ರೀಯಿದು ಮನೆಯಲ್ಲಿ ಕೊಡುವ ನಾನಾಪಾಠಿಕೆಯಿಂದು ನಿಲ್ಲಲು ಮಾಡಿ ಆ ವ್ಯಭಿಚಾರಿಯು "ಇಗೋ ನಿಮ್ಮಿಂದ ಸ್ವಭಾವ ರಕ್ಷಿ ಬಿಟ್ಟುಕೊಟ್ಟ ನಿಮ್ಮ ನಡವಳಿಕೆಯನ್ನು ಇಂದು ನಾನು ಮಾಡುವೆನು. ನನ್ನು ನಿಮ್ಮ ಹುಟ್ಟಿ ಕೆಡವಿದಿರಿ" ಎಂದು ಈ ತನು ಹೇಳಿದ್ದ ಸೀಸೆಯಲ್ಲಿದ್ದನ್ನು ಇವನ ಮುಖಕ್ಕೂ ಚೆಲ್ಲಿದ ಎರಡೆಳು, ವ್ಯಭಿಚಾರಿಣಿಗೆ ಸ್ತ್ರೀ ಆಗಲೋ ಮುಖವನ್ನು ಮುಚ್ಚಿಕೊಂಡರು. ನನ ಯಾರೂ ಹೋಗಿಸದವರೂ ಗುಂಪಾಗಿ ಸೇರಿ ಬಿಡಿಸುವರು ಸನಿಯು ವಿಚಾರ ನಡೆಸುವಲ್ಲಿ ಗುಟ್ಟೆಲ್ಲಾ ರಟ್ಟಿಸಿ, ವ್ಯಭಿಚಾರಿಗಳಿಗೆ ಹಾನಿಯಾಗುವಾಯಿತು. ಆದರೆ ಆ ಪತಿವ್ರತೆಯು ಮಾಡಿದ ಕಾರ್ಯ ಎಷ್ಟು ನಿಂದ್ಯನೀಯ ಮುಖಕ್ಕೆ ಅಪಾಯವನ್ನು ಮಾಡಿದ ಆನಿಗೆ ಅಪಾಯದ ಮುಖವನ್ನು ಕೆಡಿಸಿದ ಆಕಾರವನ್ನು ಆಕೆ ಪನ್ನಾಗಿ ಮಾಡಿದಳು.

## ಸೊರಾಬ್ ಅಂಡ್ ಕಂಪೆನಿ.
### ಟ್ರೇಡರ್ಸ್ ಮತ್ತು ಏಜೆಂಟ್ಸ್, ಪೂನಾ.

ರತ್ನವು ಮನುಷ್ಯನ ಜೀವನವು ಪದವಾಗಿಯೂ ಅಂತಾ ರತ್ನವೂ ಜೀವನವು ಸದಾ ನಿಮ್ಮ ಹಕ್ಕಿ ರೂಪವಾಗಿಯೂ ಇರುತಿದೆ.

ಗೆರಾ ಪಟ್ಟಣದಲ್ಲಿರುವ ಸೊರಾಬ್ ಅಂಡ್ ಕೆಂಪೆನಿಯವರು ಜನರಲ್ ಟ್ರೇಡರ್ಸ್ ಮತ್ತು ಏಜೆಂಟರಾಗಿರುತ್ತಾರೆ. ಇವರು ಅನೇಕವಿಧವಾದ ಗಡಿಯಾರಗಳು, ಉತ್ತಮ ಗುಣವುಳ್ಳ ಸೂಕ್ಷ್ಮದರ್ಶಕ ಯಂತ್ರಗಳೂ ಇರುವ ಔಷಧಗಳು ಮತ್ತು ಬಂಗಾರ ಬೆಳ್ಳಿಯ ಒಡವೆಗಳನ್ನು ತಯಾರಿಸುತ್ತಾರೆ. ಇವರು ಇಂಗ್ಲೆಂಡಿನ ಹಸ್ತದಿಂದ ಕಾರ್ಖಾನೆಯವರು ಮುಂಬಯಿ ಕೆ. ಶೇರ್ಪೋರ್ಟ್ ಮುಖಾಂತರವಾಗಿ ಪ್ರಾರಂಭ ಆರ್ಡರ್, ಬಾಕ್ಸ್ ಇವರಿಗೆ ಸಿಕ್ಕಿದಾಗ ಇವರನ್ನು ಅನೇಕ ಮೆಡಲ್ ಕೊಟ್ಟಿದ್ದಾರೆ ಇವರು ಪಡೆದಿರುತ್ತಾರೆ.



೧. ಪ್ರವಾಸ ಗೃಹ ಪೆಟ್ಟಿಗೆಯು.—ಇದು ೫೦ ವಿಧ ಔಷಧಗಳ ಪೆಟ್ಟಿಗೆಯು.—ಇದರ ಕ್ರಯ ಹೆಚ್ಚಾಗಿ ಜಾಸ್ತಿ ಸಹಿತ ಪೆಟ್ಟಿಗೆ ಗಣ್ಣ ೧೦ ರೂಪಾಯಿಯು. ಇದರೊಡನೆ ಅನುಪಾನ ಕ್ರಮ ಪಟ್ಟಿಗೆ ದೊರೆಯುವುದು, ಮುಂಗಡವಾಗಿ ಹಣ ಕಳುಹಿಸಲ್ಪಡದ ಹೊರತು ಇದು ಕಳುಹಿಸಲ್ಪಡಲಾರದು.

ಮೆಸರ್ಸ್ ಸೊರಾಬ್ ಅಂಡ್ ಕಂಪೆನಿಯವರು ಹೊಸದಾದ ಶೋಧನೆಗಳಿಂದ ಪ್ರಸಾರವಲ್ಲಿರುವ ತಮ್ಮ ಕಾರ್ಖಾನೆಯಿಂದ ಸಮ್ಮದ ದೌಷಧಿಗಳನ್ನು ಶಾಸ್ತ್ರೀಯವಾಗಿಯೂ ಸುಲಭವಾಗಿಯೂ ಇರುವಂತೆ ತಯಾರಿಸ್ಯಾದುತ್ತಾರೆ. ವಿದ್ಯಾದೃಷ್ಟಿ ಸ್ಯಸಹ ಪ್ರಯೋಜನವನ್ನು ಪಡೆಯದಿರುವ ನಮ್ಮ ದೇಶವೀಯರ ತಿಳಿಯಾವುದೆ ಯೋಗ್ಯರ ಆದಂತೆ ತಿಳಿಸುತ್ತಾರೆ. ಸದರೀ ಕಂಪೆನಿಯವರು ಈಮ್ಮ ದೇಶ ಬಾಂಧವರಿಗೆ ಇದರ ಕೆಲವು ಸೌಲಭ್ಯಗಳನ್ನುಂಟುಮಾಡಿರುತ್ತಾರೆ ಇದರಿಂದ ಪ್ರತ್ಯಕ್ಷಾನುಭವವನ್ನು ಪಡೆದು ತಿಳಿಸುವುದರಿಂದ ವಿನಯ ಪೂರ್ವಕ ವಾಗಿ ಮಾಡುವುದು ತಮ್ಮ ಕರ್ತವ್ಯವೆಂದುಭಾವಿಸಿರುತ್ತಾರೆ.

೧ ಮುದ್ದಿಗೊಂಡು ಪಂಚಾಂಗವನ್ನು—ಇದು ಬಾಳಿಂದು ಅಕ್ಷರದಿಂದ ಛಾಪಿಸಿರುವ ಮುಂದಿನ ಜಯಸಂವತ್ಸರದ ಪಂಚಾಂಗವಾಗಿರುತಿದೆ ಇದರ ೧೦ ಪ್ರತಿಗಳಿಗೆ ಟಪ್ಪಾಲ್ ಹಾಸಲ್ ಸೇರಿ ರೂ|| ೦—೪—೦

೨. ಒಂದು ಮುದ್ದಿಗೆ ೨ ದೌತಿ ಶಾಯಿಯು.—ಇದು ಸ್ಟೀಫನ್ ರವರ ಬ್ಲೂ ಬ್ಲ್ಯಾಕ್ ಇಂಕಿನಂತಿರುವುದು ಇದಕ್ಕಿಂತ ಉತ್ತಮವಾದ ನೀಲಿ ಬಣ್ಣವಾಗಿ ಕಾಣುವದು. ಬರೆಯುತ್ತಲೇ ಅಚ್ಚಕಪ್ಪಾಗುವದು. ಬರೆದ ಅಕ್ಷರಗಳನ್ನು ಅಳಿಸಿ ನೀರಿನಿಂದ ತೊಳೆದರೂ ಮಾಸಿಹೋಗದಿರುವದರಿಂದ ಯಾವಾಗ ಎಷ್ಟು ಬೇಕಾದರೂ ಉಪಯೋಗಿಸಿಕೊಳ್ಳ ಬಹುದಾಗಿದೆ. ೧೦ ದೌತಿಗಳಿಗೆ ಕ್ರಯ ರೂ|| ೦—೮—೦, ಟಪ್ಪಾಲ್ ಖರ್ಚು ೦—೪—೦ ಇದರಂತೆ ಕೆಂಪು, ಹಸಿರು ನೀಲಿ, ಬಣ್ಣದ ಬಣ್ಣಗಳುಳ್ಳ ಶಾಯಿ ಪೊಟ್ಲಗಳು ಸಹ ಇರುತಿವೆ. ಇನ್ನೂರು ಪೊಟ್ಲಗಳಿಗೆ ಟಪಾಲ್ ಹಾಸಲ್ ಸೇರಿ, ೩ ರೂಪಾಯಿಗಳು.

೩. ಮುದ್ದಿಗೊಂಡು ಛಾಯಾಪಟ್ಟ.—ಕಾಗದದಲ್ಲಿ ಛಾಪಿಸಿರುವ ಪ್ರಸಿದ್ಧರ ಮುಂತಾದ ಚಿತ್ರಗಳನ್ನು, ಪತ್ರಿಕೆಗಳ ಪಟ ತಯಾರಿಸುವ ಮನೆಗಳಲ್ಲಿ, ಹಿಂದೂಪುರಾಣದ ಮುಂತಾದವರ ಸುಂದರವಾದ ಚಿತ್ರಗಳನ್ನು ತಯಾರಿಸುವ ಕಾರ್ಯದಲ್ಲಿ ಉಪಯುಕ್ತವಾಗಿರುವ ಬಿಲ್ಲೆಗಳು ಜಾಗರೂಕರೆಂದು ನಂಬತಕ್ಕವರಾಗಿಯೂ.

೪ ಮುದ್ದಿಗೆ ಂದು ಪಿಂತ್ರಾಳೆಯ ಚಿತ್ರ ಪ್ರೈಯಿಂಗ್ ಕ್ಯಾರಡುವ ಹೊಸ ಪ್ರವರ್ತಕರಲ್ಲಿ ಹುಟ್ಟಾ ಸ್ಮಾನಮಾಡುವದಕ್ಕೆ ಉಪಯೋಗವಾದ ಉಪಕರಣವಾಗಿಯೂ ಮತ್ತು ಕಾಲ ಪ್ರಯಾಣಗಳಲ್ಲಿ ಕೊಂಡೊಯ್ಯಬಹುದಾಗಿದೆ. ೧೦೦ ಬಟ್ಟೆಗಳ ಕ್ರಯ ೧—೦—೦ ಟಪಾಲ್ ಖರ್ಚು ೦—೧೨—೦.

೫ ಸೊರಾಬ್ ಅಂಡ್ ಕಂಪೆನಿಯವರ ಮಿಂಚಿನ ಪೀಡೆಗಳ ಗಳು—ಮಿಂಚಿನ ಪಿಡುಗಳನ್ನು ಬರಿಸುವದರಿಂದ ರಕ್ತಸಂಬಂಧವಾದ ಕುಷ್ಠ, ಪಕ್ಷವಾತ ಗಾಯಗಳು, ಸಂಧುವಾತ, ಗಂಟು, ಕಾಲು, ಸಂಧಿವಾತಗಳುಬಿಡಿ, ನರಗಳ ತೊಂದರೆಯು ಪಿತ್ತರೋಗ ಎದೆನೋವು ಬಿಡಿ, ಎಲ್ಲ ಕರದ ತಲೆನೋವು, ಅಸ್ಥಿಗತ ರೋಗ ವಿಕಾರಗಳು, ಮಕ್ಕಳ ಬಾಲಗ್ರಹ ಪ್ರಯಾಸದ ಮಾನ ದೋಷಗಳು, ರಕ್ತಗಂಧ ನದು, ಯಾವುದೇ ಬಗೆಯ ಮೈ ಬೆವರುವದು, ಮೊದಲಾದುವುಗಳು ಬಾಧಿಸುತಿರುವ ಪ್ರಮಾಣವು ಇಲ್ಲವಾಗುತವೆ. ಮಕ್ಕಳ ಎಲ್ಲಾ ರೋಗಗಳು, ತಲೆಯಲ್ಲಿ ಕಲ್ಲು ಕರಗುವುದು ಇಲ್ಲವಾಗುವ ವೀರ್ಯವು ರೋಗ ನಿವಾರಣೆಯಾಗಿಯೂ, ವಿದ್ಯುತ್ತಿನ ಪೀಡೆಗಳಿಂದ ಸ್ವರಕ್ಷಣ್ಯ ರೋಗಗಳು, ಸಂಪೂರ್ಣವಾಗಿ ಗುಣವಾಗುವ ಸಂಭವವಿರುತಿದೆ.

ಇದರ ಕ್ರಯ ಪಟ್ಟಿಯ ವಿವರ.

| | | | | |
|---|---|---|---|---|
| ಹಿತ್ತಾಳೆ ಉಂಗರ | ... | ೧ | ೪ | ೦ |
| ಬಿಟ್ಟೀ ವಡೆ | ... | ೧ | ೦ | ೦ |
| ಜರ್ಮನ್ ಸಿಲ್ವರ್ ಉಂಗರ | .. | ೧ | ೧೦ | ೦ |
| ಜಿಟಿಟೋ ವಡೆ | .. | ೧ | ೪ | ೦ |
| ಹೊಸಾ ಬೆಳ್ಳಿ ಉಂಗರ | ... | ೨ | ೪ | ೦ |
| ಬಿಳ್ಳಿಯ ವಡೆ | .. | ೨ | ೪ | ೦ |
| ಟಿಪಿನಿ | ... | ೧ | ೪ | ೦ |
| ವಿದ್ಯುತ್ತಿನ ಪರಿಕರೆ | ... | ೧ | ೧ | ೦ |

ಬರಗಿಗೆ ಯಾವಾದರೂ ತಪಾಲ್ ಪೇಕಾಗಿದ್ದಾಗ್ಗೆ ವ್ಯಾಲ್ಯುಪೇಬಲ್ ಮೂಲಕ ಕೊಡಲ್ಪಡುವವು.

ಎಲ್ಲಾ ತರದ ಪತ್ರವ್ಯವಹಾರಗಳನ್ನು ಈ ಕೆಳಗೆ ಕಂಡ ವಿಳಾಸದಾರರಿಗೆ ಬರೆಯಬೇಕು ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಟಪಾಲ್ ಚೀಟಿ ಸಹಿತ ಬರೆಯಕೊಳ್ಳತಕ್ಕದ್ದು.

ರಾ ಕೆ. ಕೃಷ್ಣಸ್ವಾಮಿ, ಏಜೆಂಟ್,
ಸೊರಾಬ್ ಅಂಡ್ ಕಂಪೆನಿ.
ರವಿವಾರ ಪೇಟೆ, ಪೂನಾ.

ಅಥವಾ ಇವರ ಏಜೆಂಟರಾದ ಈ ಕೆಳಗೆ ರುಜು ಮಾಡಿದವರಿಗೆ ಬರೆಯಕೊಳ್ಳತಕ್ಕದ್ದು.

ಟ ಪಿ. ವೆಂಕಟಾಚಾರ್,
೪೮ ನೇ ನಂಬರ್, ಹಾಸ್ಪಿಟಲ್ ರೋಡ್, ಸಿಟಿ, ಬೆಂಗಳೂರ್.

BANGALORE.—Printed and published at the KARNATAKA PRESS, No. 40, HOSPITAL ROAD, CITY.—1893.

# ಕರ್ಣಾಟಕ ಪ್ರಕಾಶಿಕಾ.

## THE KARNATAKA PRAKASIKA.

### ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning.**

ಗ್ರಾಮವಿವಿದವಸ್ತುವ್ಯವಗವಾರ್ತ್ಯಕರ್ಣಾಟಕಪ್ರಕಾಶಕನವರಾಭಿದಾಪ್ರಥಿತಸಾಹಿತೀಶೋಭಿತಾ ನ್ಯಗಾಂಕಹಿತವಾಸರನಿಹಿತಮುದ್ರಣಾಸಜ್ಜನೈರ್ನಿತ್ಯಾನುವರಿಬೋಧಿತಾದಿಕಶಿತಾಮಾನಸಂಮುದಂ

Vol XX ] BANGALORE—MONDAY, DECEMBER 18, 1893. [ No 50

ಸಂಪುಟ ೨೦ ] ಬೆಂಗಳೂರು —ಸನ್ ೧೮೯೩ನೇ ಇಸವಿ ಡಿಸೆಂಬರ್ ೧೮ ನೇ ತಾರೀಖು ಸೋಮವಾರ. [ಸಂಚಿಕೆ ೫೦

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ಸಾಲ್ ೧ಕ್ಕೆ | 6—0—0 | 8—0—0 |
| 6 ತಿಂಗಳಿಗೆ | 3—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

| | ಸ್ಥಳದವರಿಗೆ | ಪರಸ್ಥಳದವರಿಗೆ |
|---|---|---|
| ಸಾಲ್ ೧ಕ್ಕೆ | 3—0—0 | 4—0—0 |
| 6 ತಿಂಗಳಿಗೆ | 1—12—0 | 2—8—0 |

ಈ ಪತ್ರಿಕೆಗೆ ಬರಬೇಕಾಗಿದ್ದ ಚಂದಾ ತಾರೀಖು ಮೊದಲು ಒಂದು ತಿಂಗಳೊಳಗಾಗಿ ಚಂದಾ ಹಣವನ್ನು ಕಳುಹಿಸುವವರಿಗೆ ಮಾತ್ರವೇ ಅಡ್ವಾನ್ಸ್ ದರದಂತೆ ಪತ್ರಿಕೆ ಕಳುಹಿಸಲ್ಪಡುವದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. ಆರು ತಿಂಗಳಿಗಿಂತ ಕಡಿಮೆಯಾಗಿ ಚಂದಾ ಎಂದಿಗೂ ಅಂಗೀಕರಿಸಲ್ಪಡಲಾರದು.

ಪ್ರಕಟನೆಯ ರಿವಾಜ್.

| | | |
|---|---|---|
| ಮೊದಲನೆಯದಕ್ಕೆ ಪಙ್ಕ್ತಿ ಒಂದಕ್ಕೆ | ೦—೨—೦ |
| ಎರಡನೆಯದಕ್ಕೆ ಪಙ್ಕ್ತಿ ಒಂದಕ್ಕೆ | ೦—೧—೦ |

ಷರಾ—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟು ಸಲ ಪ್ರಕಟಿಸಬೇಕೋ ಪಙ್ಕ್ತಿ ಒಂದಕ್ಕೆ ೧ ಆಣೆಯಂತೆ ಕೊಡತಕ್ಕದ್ದು. ಈ ಪತ್ರಿಕೆಯಲ್ಲಿ ಖಾಯಂ ಆಗಿ ಪ್ರಕಟನೆಗಳನ್ನು ಕಳುಹಿಸುವವರು ಅವು ಎಷ್ಟು ವರ್ಷ ಖಾಯಂ ಮಾಡಲ್ಪಡಬೇಕೋ ಅದನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಿದ್ದಲ್ಲಿ ಅವರು ನಮಗೆ ನಿಲ್ಲಿಸುವಂತೆ ಬರೆಯುವತನಕ ಅವು ಪ್ರಕಟಿಸುತ್ತಿದ್ದು ಹಾಗೆ ಎಷ್ಟುವರ್ಷ ಪ್ರಕಟಿಸಲ್ಪಟ್ಟಿದ್ದಾಗ್ಯೂ ಮೇಲಿನಂತೆ ದರಸಹಿತ ಕಿಮ್ಮತ್ ವಸೂಲ್ಮಾಡಲ್ಪಡುವದು. ಛಾಪಿಸುವುದಕ್ಕೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಆಯಾ ಶನಿವಾರದವರೆಗೂ ಮಧ್ಯಾಹ್ನ ೨ ಘಂಟೆಯೊಳಗಾಗಿ ಕಳುಹಿಸಬೇಕು. ಪ್ರಕಟನೆಗಳಿಗೆ ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳ ಪೈಕಿ ಸಲ್ಲತಕ್ಕ ಅಮೌಂಟುಗಳಿಗೆ ನಾವು ಜವಾಬ್ದಾರರಾಗಲಾರೆವು. ಕ್ರಮವಾಗಿ ರುಜುಮಾಡಿ ದಸ್ತೂರ್ತು ಯಿಲ್ಲದವನ್ನು ಪ್ರಕಟಿಸಲಾರೆವು. ಸಿರಿ ಕೆಳಿಸಲ್ಪಟ್ಟ ಕಾಗದಗಳು ಮರಳಿ ಹಿಂತಿರುಗಿಸಲ್ಪಡಲಾರವು.

## ADVERTISEMENTS

### NOTICE

VAIDYASARA SANGRAHA
A TREATISE ON THE PRINCIPLES OF
HINDU MEDICINE
*Price including Postage Rs.* 4-8-0

ವೈದ್ಯಸಾರ ಸಂಗ್ರಹ

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೇ ಪಾರ್ಸಲ್ ಡೇಬಿಲ್, ಪ್ರತಿ ಒಂದಕ್ಕೆ ರೂ 1-8—0

ನೋಟಿಸ್

**ಬೆಂಗಳೂರು ಕರ್ಣಾಟಿಕ್ ಪ್ರೆಸ್**

**೧೮೬೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು**

ಇದರಲ್ಲಿ ಸಕಲವಿಧ ಕೆಲಸಗಳು ಸುಲಭ ಛಾರ್ಜಿಗೆ ತೀವ್ರವಾಗಿಯೂ ಶ್ಲಾಘ್ಯವಾಗಿಯೂ, ಮಾಡಲ್ಪಡುವವು. ಇದರಲ್ಲಿ ಸದ್ಯಕ್ಕೆ ಇಂಗ್ಲಿಷ್ ಕನ್ನಡ ಕೆಲಸಗಳು ಮಾತ್ರವೇ ನಡೆಯುತ್ತಿವೆ. ಇತರ ತಪಶೀಲ್‌ಗಳನ್ನು ಸದರೀ ಕಾರ್ಖಾನೆಯ ಪ್ರೊಪ್ರೈಟರಿಗೆ ಬರೆದು ತಿಳಿದುಕೊಳ್ಳಬಹುದು.

ನೋಟಿಸ್

ಗಣೇಶ ರಾಮಚಂದ್ರ ಶರ್ಕೆ ಮತ್ತು ಕಂಪೆನಿ.
ಕಮಿಶನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯಿಂದ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ತಕ್ಕ ಕಮಿಶನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರದ ಔಷಧಗಳು, ಪುಸ್ತಕಗಳು, ಮುತ್ತುಗಳು, ಚಿಪ್ಪುಮುತ್ತುಗಳು, ಘಡಿಯಾರಗಳು, ವಾಚ್‌ಗಳು, ಟೈಂಪೀಸ್‌ಗಳು, ಕಾಶ್ಮೀರ ಶಾಲುಗಳು, ಪೀತಾಂಬರಗಳು, ಜರತಾರಿ ಕಣಗಳು, ಚಂದ್ರಕಾಂತ ಶಿಲೆಯ ಕನ್ನಡಕಗಳು, ಹುಡುಗರ ಚಿತ್ತಾರ ಜರತಾರಿ ಉಡುಪುಗಳು, ಜರತಾರಿ ಟೋಪಿಗಳು, ಆಫೀಸ್ ಡ್ರೆಸ್‌ಗಳು, ಛತ್ರಿಗಳು, ಅತ್ತರುಗಳು, ಅತ್ಯುತ್ತಮವಾಗಿರುವ ರತ್ನಗಳು, ಭಂಗಾರದಿಂದ ಕಟ್ಟಲ್ಪಟ್ಟ ಉಂಗುರಗಳು, ಬೆಳ್ಳಿ ಪಾತ್ರೆಗಳು, ಜರ್ಮನ್ ಬೆಳ್ಳಿ ಪಾತ್ರೆಗಳು, ಕೇಸರಿ, ಕಸ್ತೂರಿ ಮುಂತಾದ ಇತರ ಸಾಮಾನುಗಳು.

ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟಾಂಪ್ ಕಳುಹಿಸಿದ ಹೊರ್ತು ಜವಾಬ್ ದೊರೆಯಲಾರದು.

ವಿಳಾಸ — ಗಣೇಶ ರಾಮಚಂದ್ರ ಶರ್ಕೆ,
ಮತ್ತು ಕಂಪೆನಿ, ಕಮಿಶನ್ ಏಜಂಟ್ಸ್
ಠಾಕೂರ್ದ್ವಾರ, ಮಾರ್ಕೆಟ್ ಪೋಸ್ಟ್, ಮುಂಬೈ.

ನೋಟಿಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ನಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕರೀಗೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

ಸಂಸ್ಕೃತ ಗ್ರಂಥಗಳು

| | ರೂ | ಆ | ಪೈ |
|---|---|---|---|
| (ಅಂಚೆ ಖರ್ಚು ಸೇರಿ) | | | |
| ಸಟೀಕಾ ಶಿವಗೀತೆ | ೧ | ೦ | ೦ |
| „ ಶಿವಾನಂದಲಹರಿ | ೦ | ೮ | ೦ |
| „ ಶಾಲಾವೃತ | ೧ | ೦ | ೦ |
| „ ವಿಷ್ಣುಸಹಸ್ರನಾಮ | ೦ | ೩ | ೦ |
| „ ಗೋಪಿಕಾ ಗೀತೆ | ೦ | ೧ | ೦ |
| „ ಚಾಣಕ್ಯನೀತಿ (ಸುಭಾಷಿತ) | ೦ | ೪ | ೦ |
| ವಿಷ್ಣುಸಹಸ್ರನಾಮ ವಗೈರೆ | ೦ | ೩ | ೦ |
| ಸೂರ್ಯಸಹಸ್ರನಾಮ | ೦ | ೨ | ೦ |
| ಕೃಷ್ಣಕರ್ಣಾಮೃತ | ೦ | ೨ | ೦ |
| ತ್ರಿಕಾಂಡ ಅವರ ಮೂಲ | ೦ | ೨ | ೦ |
| ೧ ಕಾಂಡ ಡಿಟೋ | ೦ | ೧ | ೦ |

ಕನ್ನಡ ಗ್ರಂಥಗಳು.

| | | | |
|---|---|---|---|
| ಶುಕಸಪ್ತತಿ ಅಪ್ಪರ್ | ೩ | ೦ | ೦ |
| ಡಿಟೋ ದುಯ್ಯಂ | ೧ | ೨ | ೦ |
| ವೃಷಭೇಂದ್ರ ವಿಜಯ | ೧ | ೮ | ೦ |
| ಪಂಚಪಾಪ ಬಾಲಲೀಲೆ | ೦ | ೪ | ೦ |
| ವಸಂತವಿಲಾಸ | ೦ | ೬ | ೦ |
| ಕಾಳೀಯಮರ್ದನ | ೦ | ೨ | ೦ |
| ಸುಭದ್ರಾಪರಿಣಯ | ೦ | ೨ | ೦ |
| ಶಶಿರೇಖಾಪರಿಣಯ | ೦ | ೨ | ೬ |
| ಸುದಾಮಚರಿತ್ರೆ | ೦ | ೧ | ೦ |
| ಮೈರಾವಣ ಚರಿತ್ರೆ | ೦ | ೧ | ೬ |
| ಬಾಲಗ್ರಹ ಚಿಕಿತ್ಸೆ | ೦ | ೧ | ೦ |
| ಮಹಮ್ಮದನ್ ಲಾ | ೧ | ೦ | ೦ |
| ಭ್ರಾಂತಿವಿಲಾಸ | ೦ | ೧೨ | ೦ |

# ಸೂರಿ ಅಂಡ್ ಕಂಪೆನಿ.

ಟ್ರೇಡರ್ಸ್ ಮತ್ತು ಏಜಂಟ್ಸ್, ಪುನಾ.

ರಕ್ತವು ಮನುಷ್ಯನ ಜೀವರೂಪವಾಗಿಯೂ ಅಂತಾ ರಕ್ತವೂ ಜೀವವು ಸಹ ವಿದ್ಯುಚ್ಛಕ್ತಿ ರೂಪವಾಗಿಯೂ ಇರುತಿದೆ

ಪುನಾ ಪಟ್ಟಣದಲ್ಲಿರುವ ಸೂರಿ ಅಂಡ್ ಕಂಪೆನಿಯವರು ಜನರಲ್ ಟ್ರೇಡರ್ಸ್ ಮತ್ತು ಏಜಂಟ್‌ಗಳಾಗಿರುತ್ತಾರೆ ಇವರು ಅನುಭವಸಿದ್ಧರಾಗಿಯೂ, ಉತ್ತಮ ಗುಣಗಳುಳ್ಳವರಾಗಿಯೂ ಇರುವ ಔಷಧಗಳ ಮತ್ತು ಮಿಂಚಿನ ಒಡವೆಗಳನ್ನೂ ಮಾರುವವರಾಗಿಯೂ ಇರುತ್ತಾರೆ. ಅನೇಕತರದ ವಸ್ತುಗಳ ಕಾರ್ಖಾನೆಯವರು ಮುಖ್ಯವಾಗಿ, ಹಕೀಮ, ವೈದ್ಯರು, ಮಿಟ್‌ಎಂಬರ್ಸಸ್ ಎಂಬ ಗಿರಣೀದಾರರು, ವ್ಯಾಪಾರಿ ಜನರ ಸಂಗಡ ಇವರನ್ನು ಅನೇಕ ಏಜಂಟರನ್ನಾಗಿ ನಿಯಮಿಸಿರುತ್ತಾರೆ



೧ ಪ್ರವಾಸ ಗೃಹ ವೈದ್ಯ ಪೆಟ್ಟಿಗೆಯು — ಇದು ೬೦ ವಿಧ ಔಷಧಗಳ ಪೆಟ್ಟಿಗೆಯು —ಇದರ ಕ್ರಯ ಟಪಾಲ್ ಪಾರ್ಸಲ್ ಸೇರಿ ಪೆಟ್ಟಿಗೆ ೧ಕ್ಕೆ ೧೦ ರೂಪಾಯಿ ಇದರೊಡನೆ ಅನುಪಾನ ಕ್ರಮ ಪೆಟ್ಟಿಗೆ ದೊರೆಯುವದು ಮುಂಗಡವಾಗಿ ಹಣ ಕಳುಹಿಸಲ್ಪಡದ ಹೊರತು ಇದು ಕಳುಹಿಸಲ್ಪಡಲಾರದು.

ಮೆಸ್ಸರ್ಸ್ ಸೂರಿ ಅಂಡ್ ಕಂಪೆನಿಯವರು ಹೊಸದಾದ ಶೋಧನೆಗಳಿಂದ ಪುನಾದಲ್ಲಿರುವ ತಮ್ಮ ಕಾರ್ಖಾನೆಯೊಳು ವಿಸ್ಮಯದೌಷಧಗಳನ್ನು ಸಶಾಸ್ತ್ರೀಯವಾಗಿಯೂ ಸುಲಭವಾಗಿಯೂ ಇರುವಂತೆ ತಯಾರ್ಮಾಡುತ್ತಾರೆ. ವಿದ್ಯುದ್ವಸ್ತುಗಳ ಪ್ರಯೋಜನವನ್ನು ತಿಳಿಯದಿರುವ ನಮ್ಮ ದೇಶಬಾಂಧವರ ತಿಳುವಳಿಕೆಗೋಸ್ಕರ ಆದರಿಸಿರುತ್ತಾರೆ. ಸದರೀ ಕಂಪೆನಿಯವರು ತಮ್ಮ ದೇಶ ಬಾಂಧವರಿಗೆ ಇದರ ಕೆಂದ ಸೌಭಾಗ್ಯಗಳನ್ನುಂಟುಮಾಡಿರುತ್ತಾರೆ. ಇದರಿಂದ ಪ್ರತ್ಯಕ್ಷಾನುಭವವನ್ನು ಪಡೆದು ತಿಳಿಸುವಂತವರಿಗೆ ವಿನಯಪೂರ್ವಕ ವಂದನಮಾಡುವುದು ತಮ್ಮ ಕರ್ತವ್ಯವೆಂದು ಭಾವಿಸಿರುತ್ತಾರೆ

೧ ದುಡ್ಡಿಗೊಂದು ಪಂಚಾಂಗವು— ಇದು ಬಾಳಬಂದು ಅಕ್ಷರದಿಂದ ಛಾಪಿಸಿರುವ ಮುಂದಿನ ಜಯಸಂವತ್ಸರದ ಪಂಚಾಂಗವಾಗಿರುತ್ತದೆ ಇದರ ೧೦೦ ಪ್ರತಿಗಳಿಗೆ ಟಪಾಲ್ ಪಾರ್ಸಲ್ ಸೇರಿ ರೂ|| ೧—೪—೦

೨ ಒಂದುದುಡ್ಡಿಗೆ ೨ ಬೌತಿ ಶಾಯಿಯು— ಇದು ಸ್ಟೀಫೆನ್ಸ್‌ಯವರ ಬ್ಲ್ಯೂ ಬ್ಲಾಕ್ ಇಂಕಿಯಂತೆಯೇ ಇರುತಿದೆ. ಇದರಲ್ಲಿ ಬರೆಯುವಾಗ ನೀಲಿ ಬಣ್ಣವಾಗಿ ಕಾಣುವದು, ಒಣಗುತಲೇ ಅಚ್ಚಕಪ್ಪಾಗುವದು ಎರೆದ ಅಕ್ಷರಗಳನ್ನು ಊಪ್ಪಿ ತೆಗೆಯಕೂಡದಂತೆ ಪುಡಿಯಾಗಿರುವದರಿಂದ ಯಾವಾಗ ಎಷ್ಟುಬೇಕೋ ಅಷ್ಟು ಇಂಕಿ ಮಾಡಿಕೊಳ್ಳಬಹುದಾಗಿದೆ ೧೦೦ ಪೊಟ್ಟಣಗಳಿಗೆ ಕ್ರಯ ರೂ|| ೧—೪—೦, ಟಪಾಲ್ ಚಾರ್ಜ್ ೦—೩—೦ ಇದರಂತೆ ಕೆಂಪು, ಹಸರು ನೀಲಿ ಈ ಬಳೆ ಬಣ್ಣಗಳುಳ್ಳ ಶಾಯಿ ಪೊಟ್ಟಣಗಳು ಸಹ ಇರುತವೆ. ಇವನ್ನೂರು ಪೊಟ್ಟಣಗಳಿಗೆ ಟಪಾಲ್ ಪಾರ್ಸಲ್ ಸೇರಿ, ೩ ರೂಪಾಯಿಗಳು

೩ ದುಡ್ಡಿಗೊಂದು ಫಲಹಾರವು —ಕಂದಮೂಲಗಳಿಂದ ಮಾಡಿರುವ ದೇಶೀಬ್ ಮುಂತಾ ಆರೋರೂಟ್, ಇದು ಬಾಲವೃದ್ಧರಾದ ರೋಗಿಗಳಿಗೂ, ಪ್ರತೋಪವಾಸ ಮಾಡುವವರಿಗೂ ಶುದ್ಧವಾದ ಪಥ್ಯವಾಗಿರುತಿದೆ. ಈ ಆರೋರೂಟನ್ನು ಗವರ್ನಮೆಂಟಿನವರು ಆಸ್ಪತ್ರೆಗಳಲ್ಲಿ ಉಪಯೋಗಿಸಬೇಕೆಂದು ಶಿಫಾರಸು ಮಾಡಿರುತ್ತಾರೆ

೪ ದುಡ್ಡಿಗೊಂದು ಹಿತ್ತಾಳೆಯ ವಿಕ್ಟ್ರೋರಿಯಾ.—ಇದು ಪೂಜೆ ವ್ರತಸ್ಕಾರಗಳಲ್ಲಿ ಪಂಚಾಮೃತ ನೋಡುವದಕ್ಕೆ ಶೃಂಗಾರವಾದ ಉಪಕರಣವಾಗಿಯೂ ಪತ್ರಿ ಹೂವಿನ ಪುಷ್ಪದಾರ್ಥಗಳನ್ನ ಮುಡಿಯುವದಕ್ಕೂ ಉಪಯುಕ್ತವಾಗಿರುತಿದೆ. ೧೦೦ ಒಟ್ಟುಗಳ ಕ್ರಯ ೧—೩—೦ ಟಪಾಲ್ ಚಾರ್ಜ್ ೦—೧—೨—೦.

೫ ಸೂರಿ ಅಂಡ್ ಕಂಪೆನಿಯವರ ಮಿಂಚಿನ ಒಡವೆಗಳು—ಮಿಂಚಿನ ಒಡವೆಗಳನ್ನು ಧರಿಸುವದರಿಂದ ರಕ್ತಸಂಬಂಧವಾದ ಮತ್ತು ಪಕ್ಷವಾತಾದಿಗಳು, ಸಂಧಿನೋವು, ಉಬ್ಬಸ, ಶ್ವಾಸ, ಸಂಧುಬಿಗಿಯುವಿಕೆ, ನರಗಳ ಸೆಳವು ಪಿತ್ತದಿಂದ ಎದೆಯಲ್ಲಿ ಉರಿ, ಎಲ್ಲತರದ ತಲೆನೋವು, ಅಸ್ತಿಗತ ರೋಗ ವಿಕಾರಗಳು, ಮಕ್ಕಳ ಬಾಲಗ್ರಹ ಪ್ರಯುಕ್ತವಾದ ದೋಷಗಳು, ರಕ್ತಗುಂದುವದು, ಹೆಂಗಸರಿಗೆ ಮೈ ಯಿಳಿಯುವದು, ಹೊಟ್ಟೆಯಲ್ಲುಂಟಾಗುವ ವಾಯು ಗಟ್ಟು ಹಲ್ಲಿನ ಎಲ್ಲಬಗೆ ರೋಗಗಳು, ಕಿವಿಯಲ್ಲಿ ಕೀವು ಸುರಿಯುವಿಕೆ ಇವು ಮೊದಲಾದವುಗಳು ಪರಿಹಾರವಾಗುತಿವೆ. ವಿದ್ಯುನ್ಮಂಡಾರಿಕೆಯ ಧಾರಣೆಯಿಂದ ಸ್ಪರ್ಶಜನ್ಯ ರೋಗಗಳು ಸಂಭವಿಸಲಾರದೆಂಬದು ಅನುಭವಕ್ಕೆ ಬಂದಿರುತಿದೆ

ಇದರ ಕ್ರಯ ವಗೈರೆ ತಪಸೀಲ್

| | | | |
|---|---|---|---|
| ಹಿತ್ತಾಳೆ ಉಂಗರ | ೧ | ೪ | ೦ |
| ಡಿಟೋ ಪದಕ ... | ೧ | ೦ | ೦ |
| ಜರ್ಮನ್ ಸಿಲ್ವರ್ ಉಂಗರ | ೧ | ೧೨ | ೦ |
| ಡಿಟೋ ಪದಕ | ೧ | ೮ | ೦ |
| ನಿಜಬೆಳ್ಳಿ ಉಂಗರ | ೨ | ೮ | ೦ |
| ಡಿಟೋ ಪದಕ | ೨ | ೦ | ೦ |
| ಲೇಖನಿ | ೧ | ೮ | ೦ |
| ವಿದ್ಯುನ್ಮಂಡಾರಿಕೆ | ೦ | ೦ | ೦ |

ಯಾರಿಗೆ ಯಾವತರದ ವಸಲ್ ಬೇಕಾಗಿದ್ದಾಗ್ಯೂ ವಾಲ್ಯೂಪೇಯಿಬಲ್ ಮೂಲಕ ಕೂಡಲೇ ರವಾನಿಸಲ್ಪಡುವವು.

ಎಲ್ಲಾ ತರದ ಪತ್ರವ್ಯವಹಾರಗಳನ್ನು ಈ ಕೆಳಕಂಡವಿಳಾಸದಾರರಿಗೆ ಬರೆಯಬೇಕು. ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಟಪಾಲ್ ಚೀಟಿ ಸಹಿತ ಬರೆದುಕೊಳ್ಳತಕ್ಕದ್ದು.

**ರಾ|| ಶ್ರೀ ಕೃಷ್ಣಶಾಸ್ತ್ರಿ, ಏಜಂಟ್,**
ಸೂರಿ ಅಂಡ್ ಕಂಪೆನಿ.
ರವಿವಾರ ಪೇಟೆ, ಪುನಾ

ಅಥವಾ ಇವರ ಏಜಂಟರಾದ ಈ ಕೆಳಗೆ ರುಜು ಮಾಡಿದವರಿಗೆ ಬರೆದುಕೊಳ್ಳತಕ್ಕದ್ದು

**ಟಿ. ಬಿ. ವೆಂಕಟಾಚಾರ್**
೫೪ ನೇ ನಂಬರ್, ಆಸ್ಪತ್ರೆ ರೋಡ್, ಪೇಟೆ, ಬೆಂಗಳೂರ್.

### NOTICE.

« ಆಂಗ್ಲೋ ಇಂಡಿಯನ್ ಪಾಕೆಟ್‌ಡೈರಿ »

ನಾವು ಪ್ರತಿ ವರ್ಷದಲ್ಲಿಯೂ ಪ್ರಕಟಿಸ ಬರುತ್ತಲಿರುವ ತೇಲಿಗೆ ಸರ್ವರಿಗೂ ಬಹಳ ಉಪಯುಕ್ತವಾಗಿರುವಂತೆ ಇಂಗ್ಲಿಷ ತಿಂಗಳ ತಾರೀಖುವಾರ, ಅದಕ್ಕೆ ಸರಿಯಾದ ನಮ್ಮ ಹಿಂದೂ ಸಂವತ್ಸರ, ತಿಂಗಳು, ತಿಥಿ, ವಾರ, ನಕ್ಷತ್ರ ಸಹಿತವಾಗಿಯೂ, ಇನ್ನೂ ಆವಶ್ಯಕವಾಗಿ ತಿಳಿಯಬೇಕಾದ ಸಂಗತಿಗಳು, ರೈಲ್ವೇ ಸ್ಟೇಷನುಗಳು, ಅಲ್ಲಿಗೆ ರೈಲ್ವೇ ಚಾರ್ಜ್ ಪೋಸ್ಟಾಫೀಸ್ ರೂಲ್ಸ್, ಮುಂತಾದ ವಿಶೇಷ ಸಂಗತಿಗಳನ್ನು ಕೂಡಿಸಿರುವ ೧೮೯೪ ನೇ ಇಸವಿಯ ಡೈರಿ ಪುಸ್ತಕವನ್ನು ವಿಕ್ರಯಕ್ಕೆ ಸಿದ್ಧಪಡಿಸಿದ್ದೇವೆ.

ಕ್ರಯ ಪ್ರತಿ ೧ಕ್ಕೆ ಟಪಾಲ್ ಪಾರ್ಸಲ್‌ಸಹಿತ ೦—೫—೬ ೧೦ ಪ್ರತಿ ಒಟ್ಟಿಗೆ ಕೊಂಡುಕೊಳ್ಳತಕ್ಕವರಿಗೆ ೧ ಪ್ರತಿ ಇನಾಮಿಯಾಗಿ ಕಳುಹಿಸುತ್ತೇವೆ. ಬೇಕಾದವರು ಈ ಕೆಳಗೆ ಸಹಿ ಮಾಡಿರುವವರ ಹೆಸರಿಗೆ ಬರೆದು ತರಿಸಿಕೊಳ್ಳಬಹುದು. ಪ್ರತಿ ಭಾಗಕ್ಕೂ ರಿಜಿಸ್ಟರ್ ಖರ್ಚಿಗೆ ೨ ಆಣೆ ಜಾಸ್ತಿ ಕಳುಹಿಸಿಕೊಡಬೇಕು. ಅಪೇಕ್ಷೆಯುಳ್ಳವರು ವಿಳಾಸ ವಗೈರೆಯನ್ನು ಸ್ಪಷ್ಟವಾಗಿ ತಿಳಿಯುವಂತೆ ಬರೆಯಬೇಕು.

೫—೧೧—೯೩. } ಸತ್ಯಂ ಚಂದ್ರಶೇಖರಯ್ಯ,
ಪ್ರೊಪ್ರೈಟರ್,
«ಕರ್ನಾಟಕ ಸ್ಟೇಷನರಿ ಡಿಪೋ»,

## ಹೊಸೂರ್ ರಿಮೌಂಟ್ ಇಲಾಖೆ

### ನೋಟೀಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

ಸನ್ ೧೮೯೪ನೇ ಇಸವಿ ಏಪ್ರಿಲ್ ೧ನೇ ತಾರೀಖ್ ಮೊದಲು ೧೮೯೫ ನೇ ಇಸವಿ ಮಾರ್ಚಿ ೩೧ನೇ ತಾರೀಖ್ ವರಿವಿಗೆ, ಹೊಸೂರ್ ರಿಮೌಂಟ್ ಇಲಾಖೆಗೆ ಇದರಡಿ ನಮೂದ್ ಮಾಡಲ್ಪಡುವ ಜಿನಿಸುಗಳು ಬೇಕಾಗಿರುವದರಿಂದ ಅವುಗಳ ಸರಬರಾಯಿ ಬಗ್ಗೆ ಬರುವ ಮೊಹರ್ ಮಾಡಲ್ಪಟ್ಟ ದರಖಾಸ್ತುಗಳನ್ನು, ರಿಮೌಂಟ್ ಡಿಪೋ ಸೂಪರಿಂಟೆಂಡೆಂಟರವರು ಸನ್ ೧೮೯೪ನೇ ಇಸವಿ ಜನವರಿ ೯ನೇ ತಾರೀಖ್ ಮಂಗಳವಾರ ಮಧ್ಯಾಹ್ನ ೧೨ ಘಂಟೆಯ ವರಿವಿಗೆ ಬರಮಾಡಿಕೊಳ್ಳುವರು.

ಅದನ್ನು ಕುರಿತ ಜಾಸ್ತೀ ತಪಸೀಲ್‌ಗಳನ್ನು ತಿಳಿದುಕೊಳ್ಳಬೇಕಾದವರು ೧೮೯೩ ನೇ ಇಸವಿ ಡಿಸೆಂಬರ್ ೭ ನೇ ತಾರೀಖಿನ ೪೭ನೇ ನಂಬರ್ ಫೋರ್ಟ್‌ಸೇಂಟ್‌ಜಾರ್ಜ್ ಗೆಜೆಟಿನ ೨ ನೇ ಭಾಗದ ೧೭೩೯ನೇ ಪುಟವನ್ನು ನೋಡಿ ತಿಳಿದುಕೊಳ್ಳತಕ್ಕದ್ದು.

ಹುರಳಿ.
ನೆಲ್ಲುಹುಲ್ಲು.
ರಾಗೀಹುಲ್ಲು.
ಹಸೀಹುಲ್ಲು.

ರಿಮೌಂಟ್ ಡಿಪೋ, ಹೊಸೂರ್, ೧೪—೧೨—೯೩ } W. T. Adams, Vety Major, For Supdt., Remt. Depot.

## ಮೈಸೂರ್ ಗವರ್ನ್‌ಮೆಂಟ್

### ನೋಟೀಸ್.

ತಾ|| ೭ನೇ ಡಿಸಂಬರ್ ೧೮೯೩.

ಬೆಂಗಳೂರಲ್ಲಿರುವ ಲ್ಯೂನೆಟಿಕ್ ಮತ್ತು ಲೆಪ್ಪರ್ ಅಸ್ಸೈಲಂ, (ಹುಚ್ಚರ ಮತ್ತು ಕುಷ್ಠರೋಗಿಗಳ ಆಸ್ಪತ್ರಿ), ಗವರ್ನಮೆಂಟ್ ಸಿಟಿ ಆಸ್ಪತ್ರಿ, ಪ್ರಸವ ಆಸ್ಪತ್ರಿ, ಮತ್ತು ಮೆಡಿಕಲ್ ಸ್ಟೋರಿಗೆ ಬೇಕಾದ ಆಹಾರ ಪದಾರ್ಥಗಳು, ಔಷಧ ಜಿನಸುಗಳು ಮತ್ತು ಇತರ ಚಿಲ್ಲರೆ ಸಾಮಾನುಗಳಿಗಾಗಿ ಮೈಸೂರ್ ಗವರ್ನಮೆಂಟ್ ಸೀನಿಯರ್ ಸರ್ಜನ್ ಮತ್ತು ಸಾನಿಟರಿ ಕಮಿಷನರ್ ಸಾಹೇಬರವರು ಸನ್ ೧೮೯೩ ನೇ ಇಸವಿ ಡಿಸೆಂಬರ್ ೨೦ನೇ ತಾರೀಖಿನ ವರೆಗೆ ಟೆಂಡರ್‌ಗಳನ್ನು ತೆಗೆದುಕೊಳ್ಳುತ್ತಾರೆ. ಇದರ ತಪಸೀಲ್ ಬಗ್ಗೆ ೧೮೯೩ನೇ ಇಸವಿ ನವಂಬರ್ ೩೦ನೇ ತಾರೀಖಿನ ಮೈಸೂರ್ ಗೆಜೆಟ್ ನೋಡತಕ್ಕದ್ದು.

T. J. McGann, F.R.C.S.E., Bri. Surgn. Lt. Col.,
*Senior Surgeon & Sanitary*
*Commr. with the Govt. of Mysore,*
*in charge Lunatic and Leper Asylums,*
*Govt. City Hospital & Maternity, Bangalore.*

## THE MONEY MARKET.

### Stocks, Shares and Exchange

ಮದರಾಸ್, ಶನಿವಾರ, ತಾರೀಖ್ 16 ನೇ ಡಿಸೆಂಬರ್, 1893.

ನೂರಕ್ಕೆ 4 ರೂ. ಬಾಬತು ಇಂಡ್ಯಾಗವರ್ನಮೆಂಟ್ ಪತ್ರಗಳು 105-0-0 ರೂ. ಗೊಂಡ 105-8-0 ರೂ. ವರೆಗೆ.

ನೂರಕ್ಕೆ ಮೂರುವರೆ ರೂ. ಬಾಬತು, ಗವರ್ನಮೆಂಟ್ ಪತ್ರಗಳು, 98-8-0 ರೂ. ಗೊಂಡ 99-0-0 ವರೆಗೆ.

ಮದರಾಸ್ ಬ್ಯಾಂಕ್ ಷೇರ್‌ಗಳು, (500) ರೂಪಾಯಿಗಳ ಬಾಬತು, 990-0-0 ರೂ. ಗೊಂಡ 1000-0-0 ವರೆಗೆ.

ಅರ್ಬತ್‌ನೆಟ್ ಬ್ಯಾಂಕ್ ... ಬ್ಯಾಂಕ್ ಷೇರ್‌ಗಳು, (100 ರೂ.) ಬಾಬತು 150-0-0 ರೂ. ಗೊಂಡ 155-0-0 ರೂ. ವರೆಗೆ.

ಸವರ್ನ್‌ಗಳು, ಒಂದು 1 ಕ್ಕೆ 15-14-0 ರೂಪಾಯಿಗಳಿಂದ 16-1-0 ರೂ. ವರೆಗೆ.

ಲಂಡನ್ ಬ್ಯಾಂಕಿನಮೇಲೆ ಕೊಡಲ್ಪಡುವ ಬ್ಯಾಂಕ್ ಬಿಲ್ಸ್ ಯಾನೆ ದರ್ಶನ ಹುಂಡಿಗಳು:—

| | |
|---|---|
| 6 ತಿಂಗಳ ಪಾಯಿದಾಗೆ | ...1 s. 3 7/32d. |
| 4 „ | ...1 s. 3 5/32d. |
| ನೋಡಿದಾಗಕೊಡಲ್ಪಡುವದಕ್ಕೆ | ...1 s. 3 1/16d. |


# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

MONDAY, DECEMBER 18, 1893.

೧೮೯೩ ನೇ ಇಸವಿ ಡಿಸೆಂಬರ್ ೧೮ ನೇ ತಾ|| ಸೋಮವಾರ


## ಭರತಪುರ ಮಹಾರಾಜರವರ ಶರೀರ ವಿಯೋಗ ವೃತ್ತಾಂತವು.

ಭರತಪುರ ಮಹಾರಾಜರವರು ಈಗ್ಯೆ ಕೆಲವು ಕಾಲದ ಮೊದಲು ಅಸ್ವಸ್ಥರಾಗಿರುವಂತೆ ಹಿಂದೆಯೇ ತಿಳಿಸಿದ್ದೆವಷ್ಟೆ. ಇವರ ಆರೋಗ್ಯಭಾಗ್ಯವಂ ಕೋರಿ ಮಾಡಲ್ಪಟ್ಟ ಚಿಕಿತ್ಸೆಗಳೆಲ್ಲವು ಕಡೆಗೆ ನಿಷ್ಫಲಗಳಾಗಲು, ಮಾಹೇ ಮಜಕೂರ್ ೧೨ ನೇ ತಾರೀಖ್ ಮಂಗಳವಾರದ ದಿನ ಬೆಳಗ್ಯೆ ಕಾಲಗತಿಯನ್ನೈದಿದರೆಂಬ ವೃತ್ತಾಂತವಂ ಕೇಳಲಿಕ್ಕೆ ನಾವು ಬಹಳ ವಿಷಾದಿಸುತ್ತೇವೆ. ಈ ಮಹಾರಾಜರವರಿಗೆ ಕೆಲವು ದಿವಸಗಳ ಹಿಂದೆ ಕೈಬೆರಳುಗಳ ಪೈಕಿ ಯೊಂದರಲ್ಲಿ ಉಗುರುಸುತ್ತು ಹೊರಟು ಅದರಿಂದ ಅವರಿಗೆ ಅನೇಕ ಉಪದ್ರವಗಳು ತಲೆದೋರಲು ಆಗ್ರಾ ಸಿವಿಲ್ ಸರ್ಜನ್‌ರವರು ಮಹಾರಾಜರ ಶರೀರಸ್ಥಿತಿಯಂ ಪರ್ಯಾಲೋಚಿಸಿ, ಕೈಯ ಬಾವು ವೃದ್ಧಿಯನ್ನೈದುತ ಬಂದುದರಿಂದ ತಚ್ಛೇದನ ವಿಲ್ಲದಂತೆ ಆ ಕೈಯನ್ನೇ ಕೊಯಿದುಬಿಡುವದು ಕ್ಷೇಮಕರವೆಂತಲೂ, ಹಾಗೆ ಮಾಡದ ಪಕ್ಷಕ್ಕೆ ಪ್ರಾಣಾಂತಕವಾದ ಪ್ರಬಲ ಅಪಾಯಕ್ಕೆ ಗುರಿಯಾಗಬೇಕಾಗುವದೆಂತಲೂ ಅವರಿಗೆ ತಿಳಿಸಿದರು ಪರಂತು ಅದು ಮಹಾರಾಜರವರು ಅಂಗೀಕರಿಸಲಿಲ್ಲವು. ಕಡೆಗೆ ಸದರೀ ಡಾಕ್ಟರವರು ಸೂಚಿಸಿದಂತೆ ಅದೇ ಅವರ ಶರೀರವಿಯೋಗನಿಮಿತ್ತಕವಾಯಿತೆಂದು ತಿಳಿಯಬರುತಿದೆ ಪ್ರಸಕ್ತ ಮಹಾರಾಜಾ ಜಸವಂತಸಿಂಗ್ ಬಹದೂರವರಿಗೆ ಈಗ ೬೨ ವರುಷಗಳ ವಯಸ್ಸಾಗಿದ್ದಾಗ್ಯೂ ಷುಮಾರ್ ೪೦ ವರುಷಗಳ ಕಾಲ ಪ್ರಭುತ್ವವು ಮಾಡಿದರು. ಇವರು ೧೮೫೨ ನೇ ಇಸವಿಯಲ್ಲಿ ಜನಿಸಿ, ೧೮೫೩ ನೇ ಇಸವಿಯಲ್ಲಿ ಸಿಂಹಾಸನಾರೂಢರಾಗಿ, ೧೮೭೧ ನೇ ಇಸವಿ ಮಾರ್ಚಿ ೮ ನೇ ತಾರೀಖಿನಲ್ಲಿ ರಾಜ್ಯಧುರವಂ ಸ್ವತಃ ಕೈಗೊಂಡರು, ಇವರು ಜಾಟ ಯೆಂಬ ಜಾತಿಯವರಾಗಿಯೂ, ೧೮ ನೇ ಶತಮಾನದ ಆದಿಭಾಗದಲ್ಲಿ ಭರತಪುರ ಸಂಸ್ಥಾನವಂ ಪ್ರಥಮತಃ ನೆಲೆಗೊಳಿಸಿದ ಬಾಲಚಂದ್ ಯೆಂಬವರ ವಂಶಜರಾಗಿಯೂ ಇರುತ್ತಾರೆ. ರಾಜಪುತ್ರ ಸಂಸ್ಥಾನಗಳೊಳಗೊಂದೆನಿಸಿರುವ ಪ್ರಸಕ್ತ ಭರತಪುರವು ಷುಮಾರ್ ೨,೦೦೦ ಸಲಮೈಲುಗಳ ವಿಸ್ತೀರ್ಣವುಳ್ಳದ್ದಾಗಿಯೂ, ಷುಮಾರ್ ೬೦,೦೦೦ ಪ್ರಜಾಸಂಖ್ಯೆಯುಳ್ಳದ್ದಾಗಿಯೂ, ಇರುತಿದೆ. ಅಲ್ಲಿನ ಪ್ರಜೆಗಳ ಪೈಕಿ ಹಿಂದುಗಳು ಅಧಿಕವಾಗಿದಾರೆ. ಮುಸಲ್ಮಾನರ ಪ್ರಾಬಲ್ಯವೂ ಇಲ್ಲಿ ವಿಶೇಷತಃ ಇಲ್ಲದೆ ಇರಲಿಲ್ಲವು. ಈ ರಾಜ್ಯತ್ತ್ಯೆ ವ್ರಜವೆಂಬ ವ್ಯವಹಾರವೂ ವ್ರಜಭಾಷೆಯೆಂಬ ಒಂದು ಭಾಷೆಯು ಸಹ ಪ್ರಚಾರದೊಳಿರುತಿವೆ. ಸನ್ ೧೮೮೭ನೇ ಇಸವಿಯಲ್ಲಿ ಸದರೀ ಸಂಸ್ಥಾನದ ಒಟ್ಟು ಆಯತಿಯು ಸ್ವಲ್ಪ ಹೆಚ್ಚುಕಡಮೆಯಾಗಿ ೩೨ ಲಕ್ಷ ರೂಪಾಯಿಗಳೆಂತಲೂ, ಬಾರ್ ಸವಾರ್ ತೋಫೆ ವಗೈರೆ ವಿಶಿಷ್ಟವು ಸೇರಿ ೧೦,೨೧೦ ಬಲವಿದೆಯೆಂತಲೂ, ೩೮ ಫಿರಂಗಿಗಳು ಅನುಪಯುಕ್ತಗಳಾಗಿ ಪರುತು ಪ್ರತಿಷ್ಠಾರ್ಥವಾಗಿ ಉಳಿಸಿಕೊಳ್ಳಲ್ಪಟ್ಟಿವೆಯೆಂತಲೂ, ಈ ಸಂಸ್ಥಾನಾಧಿಪತಿಯು ೧೭ ತೋಫೆಗಳ ಮರ್ಯಾದೆಗೆ ಬಾಧ್ಯರಾಗಿದಾರೆಂತಲೂ, ಈಗ ಗತಿಸಿದವರಿಗೆ ಕುಮಾರ್‌ಜಿ ರಾಂಸಿಂಗ್ ಬಹದೂರ್ ಎಂಬ ಪುತ್ರರಿದಾರೆಂತಲೂ ತಿಳಿಯಬರುತಿದೆ.

## ಆನರೆಬಿಲ್ ಮಿಯರ್ ಹುಮಾಯುನ್‌ಜಾ ಬಹದ್ದೂರವರ ಮರಣವೃತ್ತಾಂತವು.

ಸಾಬಕ್ ಟೀಪೂ ಸುಲ್ತಾನರವರ ಪ್ರಪೌತ್ರರಾಗಿಯೂ, ಮದರಾಸ್ ಗವರ್ನರವರ ನ್ಯಾಯವಿಧಾಯಕ ಸಭೆಯಲ್ಲಿ ಒಬ್ಬ ಮೆಂಬರಾಗಿಯೂ, ಮದರಾಸ್, ಮತ್ತು ಬಂಗಾಳೀ ಪ್ರೆಸಿಡೆನ್ಸಿಗಳಲ್ಲಿ ಭೂರೂಪವಾದ ಆಸ್ತಿಯುಳ್ಳವರಾಗಿಯೂ, ದೊಡ್ಡ ಜಹಗೀರುದಾರರಾಗಿಯೂ, ಮಾನಿತರಾಗಿಯೂ ಇದ್ದ ಆನರೆಬಿಲ್ ಮಿಯರ್ ಹುಮಾಯುನ್‌ಜಾ ಬಹದರ್ ಸಿ ಐ ಇ ಯವರು, ಪಾರ್ಶ್ವವಾಯು ಪೀಡಿತರಾಗಿ, ಡಾಕ್ಟರ್ ಸೆಯಿಲರ್ ಎಂಬವರ ಅಭಿಪ್ರಾಯಾನುಸಾರ, ಚಿಕಿತ್ಸಾರ್ಥವಾಗಿಯೂ, ಸ್ಥಳಬದಲಾವಣೆಗಾಗಿಯೂ ಈಗ್ಯೆ ಕೆಲವು ಕಾಲದ ಮೊದಲು ಈ ಪಟ್ಟಣದ ಸಿವಿಲ್ ವ ಮಿಲಿಟರಿ ಸ್ಟೇಷನಿನಲ್ಲಿರತಕ್ಕ ಆಲ್ಬರ್ಟ್ ರೋಡಿನಲ್ಲಿ ಒಂದು ಬಂಗ್ಲೆಯೊಳು ವಾಸವಾಗಿದ್ದಂತವರು ಗತ ಶುಕ್ರವಾರದ ದಿನ ಬೆಳಗ್ಯೆ ಏಕಾಏಕಿ ಕಾಲಗತಿಯನ್ನೈದಿದರೆಂಬ ವೃತ್ತಾಂತವು ತಿಳಿಸಲಿಕ್ಕೆ ನಾವು ವಿಶೇಷತಃ ಚಿಂತಿಸುತ್ತೇವೆ ಆನರೆಬಿಲ್ ಮಿಯರ್ ಹುಮಾಯುನ್‌ಜಾ ಯವರು ಬಹಳ ಗಂಭೀರಸ್ವಭಾವವುಳ್ಳುತವರಾಗಿಯೂ, ಧಾರ್ಮಿಕರಾಗಿಯೂ, ಉದಾರಿಯಾಗಿಯೂ, ವಿಶೇಷ ಲೋಕಾನುಭವವುಳ್ಳವರಾಗಿಯೂ, ಇದ್ದುದರಿಂದ ಇಂತವರ ನಿರ್ಯೋಗರು ಯುಕ್ತವಾದ ನಷ್ಟವು ದಕ್ಷಿಣ ಇಂಡ್ಯಾ ದೇಶದಲ್ಲಿ ಪ್ರತಾಪಿಸಿ ಈ ರಾಜ್ಯದೊಳಿರತಕ್ಕ ಮುಸಲ್ಮಾನ ಸಮೂಹಕ್ಕೆ ಅಪರಿಹಾರ್ಯವಾದುದಾಗಿಯೂ, ಚಿರಸ್ಮರಣೀಯವಾದುದಾಗಿಯೂ ಇರುತಿದೆ ಮದರಾಸ್ ಗವರ್ನಮೆಂಟಿನವರು ಚಿರಾನುಭವಶಾಲಿ ಯಾದ ಮತ್ತು ಸಮರ್ಥರಾದ ಒಬ್ಬ ಮೆಂಬರನು, ಕಳೆದುಕೊಂಡದ್ದಕ್ಕಾಗಿ ನಾವು ಬಹಳ ವಿಷಾದಿಸುತ್ತೇವೆ. ಇವರಿಗೆ ಈಗ ೬೨ ವರುಷಗಳ ವಯಸ್ಸಾಗಿರುತಿದೆ. ಇವರ ಕಳೇಬರವು ಮೊನ್ನೆಯ ದಿನ ರಾತ್ರಿ ಮೆಯಿಲ್ ಟ್ರೇಯಿನಿನಲ್ಲಿ ಮದರಾಸಿಗೆ ಬಹಳ ಜಬಗ್ಯೆ ಕಳುಹಿಸಲ್ಪಟ್ಟಿತು ಮೈಸೂರು ಸಂಸ್ಥಾನದ ಮುಸಲ್ಮಾನ್ ಘರಾಣೆಗೆ ಸೇರಿದ ದೊಡ್ಡ ಮನುಷ್ಯರನೇಕರು ಗತಿಸಿದವರಲ್ಲಿ ಪಡೆದಿದ್ದ ಪ್ರೀತಿಗೌರವ ಪ್ರದರ್ಶನಾರ್ಥ ಮಿಯರ್ ಹುಮಾಯುನ್‌ಜಾ ಯವರ ಬಂಗ್ಲೆಗೆ ಹೋಗಿದ್ದರಲ್ಲದೆ ಅವರ ಕಳೇಬರವು ಕಳುಹಿಸಲ್ಪಟ್ಟಾಗ ರೆಯಿಲ್ವೇ ಸ್ಟೇಷನಿಗೆ ಸಹ ಹೋಗಿದ್ದರು ಇಲ್ಲಿನ ಡೆಪ್ಯೂಟಿಕಮಿಷನರ್ ಮೆ|| ಮಿಯರ್‌ಮುಜಾಯತ್ ಅಲೀಖಾನರವರು ಸ್ವತಃ ಹಾಜರಿದ್ದು ಗತಿಸಿದ ದೊಡ್ಡಮನುಷ್ಯರ ಕೀರ್ತಿಪ್ರಾಬಲ್ಯಗಳಿಗೆ ಲೇಶವೂ ಲೋಪ ಸಂಭವಿಸದಂತೆ ಜರಗಬೇಕಾದ ಏರ್ಪಾಡುಗಳನ್ನೆಲ್ಲ ಮಾಡಿಸಿದ ವಿಷಯವು ಬಹಳ ಕೊಂಡಾಡತಕ್ಕದ್ದಾಗಿರುತಿದೆ.

## ಗತಿಸಿದ ಮ|| ಎಂ. ರಂಗನಾಥ ಮುದಲಿಯಾರ್.

ಈಗ್ಯೆ ಹಿಂದೆರಡು ತಿಂಗಳ ಹಿಂದೆ ವಿಶೇಷ ವಿದ್ಯಾವಂತರಾಗಿಯೂ ಜಗತ್ಪ್ರಸಿದ್ಧರಾಗಿಯೂ ಇದ್ದ ಒಬ್ಬ ಹಿಂದೂ ದೊಡ್ಡಮನುಷ್ಯರ ಮರಣಪ್ರಯುಕ್ತವಾದ ಸಾಮುದಾಯಕ ನಷ್ಟವನ್ನೂ ಸಾರ್ವಜನೀನವಾದ ಜೀವನನ್ನೂ ಈ ಪತ್ರಿಕಾಮೂಲಕ ನಾವು ತಿಳಿಯಪಡಿಸಿದ್ದೆವಷ್ಟೆ ದಕ್ಷಿಣ ಇಂಡ್ಯಾದೇಶದ ವಿದ್ವನ್ಮಂಡಲಿಗೆ ಭೂಷಣರಾಗಿಯೂ, ಅನನ್ಯಸಾಧಾರಣಗಳಾದ ವಿದ್ಯಾಬುದ್ಧಿ ಪ್ರಜ್ಞಾವಿಶೇಷದಿಂ ಪ್ರಸಿದ್ಧರೆನಿಸಿ ಸಕಲರ ಪ್ರೀತಿ ಗೌರವಗಳಿಗೆ ಪಾತ್ರರಾಗಿಯೂ ಇದ್ದ ಮದರಾಸ್ ಪ್ರೆಸಿಡೆನ್ಸೀ ಕಾಲೇಜ್‌ನಲ್ಲಿ ಚಿರಕಾಲದಿಂ ಗಣಿತ ಮತ್ತು ತರ್ಕಶಾಸ್ತ್ರ ಪಂಡಿತರಾಗಿದ್ದ ಮಿಸ್ಟರ್ ರಾಯ್‌ಬಹದೂರ್ ರಂಗನಾಥ ಮೊದಲಿಯಾರ್‌ರವರು ಮಾಹೇ ಮಜಕೂರ್ ೧೦ ನೇ ತಾರೀಖ್ ಭಾನುವಾರದ ದಿನ ಮದರಾಸಿನಲ್ಲಿ ಕಾಲಗತಿಯನ್ನೈದಿದ ವೃತ್ತಾಂತವು ಹಿಂದೂ ಸಮೂಹಕ್ಕೆ ಪ್ರಬಲತರ ಖೇದವನ್ನುಂಟುಮಾಡಿರುತಿದೆ. ಈ ದೊಡ್ಡಮನುಷ್ಯರ ಅದ್ಭುತವಾದ ಮೇಧಾಶಕ್ತಿಯೂ, ಅನೇಕ ಶಾಸ್ತ್ರಗಳಲ್ಲವರು ಪಡೆದಿದ್ದ ತಲಸ್ಪರ್ಶವಾದ ಜ್ಞಾನವೂ, ಸರ್ವದಾ ಪ್ರಶಂಸನೀಯಗಳಾಗಿರುತಲಿದ್ದವು. ಮಧ್ಯವಯಸ್ಸಿನೊಳವರಿಗೆ ಪ್ರಾಪ್ತವಾದ ಮರಣವು ಕೇವಲ ವಿಷಾದಸತಕ್ಕದ್ದಾಗಿರುತಿದೆ ಮದರಾಸ್ ಪ್ರೆಸಿಡೆನ್ಸೀ ಕಾಲೇಜಿಗೆ ಶಿಖರರೂಪವಾಗಿದ್ದ ಮ|| ರಂಗನಾಥಂ ಯವರ ವಿಯೋಗದಿಂದ ಅವರ ಕುಟುಂಬಕ್ಕೆ ಮಾತ್ರವಲ್ಲದೆ ದಕ್ಷಿಣ ಇಂಡ್ಯಾದೇಶಕೆಲ್ಲ ಅಪ್ರತೀಕಾರವಾದ ದುರ್ಘಟ ಪ್ರಾಪ್ತವಾದುತೆ ಭಾವಿಸಬೇಕಾಗಿರುತಿದೆ. ಇವರ ಮರಣವೃತ್ತಾಂತವು ಅಲ್ಲಿಯಲ್ಲಿ ತಿಳಿದ ಕೂಡಲೆ ಗೌರವಾರ್ಥವಾಗಿ ಸ್ಕೂಲುಗಳೂ ಕಾಲೇಜ್‌ಗಳೂ ಒಂದುದಿನ ಮುಚ್ಚಲ್ಪಟ್ಟವಲ್ಲದೆ ಅನೇಕಕಡೆಗಳೊಳು, ಅವರ ವಿದ್ಯಾರ್ಥಿಗಳಾಗಿಯೂ ಮಿತ್ರರಾಗಿಯೂ ವಿದ್ವತ್ಪಕ್ಷಪಾತಿಗಳಾಗಿಯೂ ಇರತಕ್ಕವರು ಮೀಟಿಂಗ್‌ಗಳು ಮಾಡಿ ಮೇಲೆ ಕಂಡವರ ವಿಶ್ಲೇಷ ಜನ್ಯವಾದ ತಮ್ಮ ಖೇದವಂ ತಂತಿ ಮೂಲಕ ಅವರ ಕುಟುಂಬಕ್ಕೆ ತಿಳಿಯಪಡಿಸಿದರು ಇವರ ಪುತ್ರರೊಬ್ಬರು ಈ ಸಂಸ್ಥಾನದ ಪೋಲೀಸ್ ಇಲಾಖಾ ನೌಕರಿಯಲ್ಲಿ ಪ್ರವೇಶಿಸಿರುತ್ತಾರೆ.

## ಗತಿಸಿದ ಮ|| ರಾ|| ಕೋಲೇಹಳ್ಳಿ ಸುಬ್ಬಶೆಟ್ಟರನ್ನು ಕುರಿತು.

ಈ ಪುರದೊಳಿರುವ ವೈಶ್ಯರಲ್ಲಿ ಪ್ರಸಿದ್ಧರಾಗಿಯೂ ಐಶ್ವರ್ಯಸಂಪನ್ನರಾಗಿಯೂ, ವಿಶೇಷ ಶಾಮಾದೇವಿ ಜರಿಗಿಸುತಲಿದ್ದಂತವರಾಗಿಯೂ, ಈಚೆಗೆ ಮಾಡಲ್ಪಟ್ಟ ಒಂದು ದಸರ್ ಕಾರ್ಯದಿಂದ ಮಹಾರಾಜಾ ಸರ್ಕಾರದವರ ವಿಶೇಷ ಪರಿಗಣನೆಗೆ ಸಹ ಪಾತ್ರರಾದವರಾಗಿಯೂ, ಅನೇಕರಿಗೆ ಸ್ನೇಹಿತರಾಗಿಯೂ ಇದ್ದ ಮ|| ರಾ|| ಕೋಲೇಹಳ್ಳಿ ಸುಬ್ಬಶೆಟ್ಟರವರು ಮಾಹೇ ಮಜಕೂರ್ ೧೪ ನೇ ತಾರೀಖ್ ಗುರುವಾರದ ದಿನ ರಾತ್ರಿ ತಮ್ಮ ನೀಯಯಾತ್ರಯಲ್ಲಿ ಇದೇ ಪುರದೊಳು ಕೋಮಟಿಗರ ಪೇಟೆಯಲ್ಲಿರುವ ಸ್ವಗೃಹದಲ್ಲಿ ಕಾಲಗತಿಯನ್ನೈದಿದ ವೃತ್ತಾಂತವು ತಿಳಿಸಲಿಕ್ಕೆ ನಾವು ಬಹಳ ವಿಷಾದಿಸುತ್ತೇವೆ ಇವರು ಈಗ್ಯೆ ಕೆಲವು ಕಾಲದ ಮೊದಲು ಬಹುಮೂತ್ರರೋಗಬಾಧೆಯಿಂದ ಪೀಡಿತರಾಗುತಲಿದ್ದರು ಅವರವಯಸ್ಸು ಸದರೀ ರೋಗಕ್ಕೆ ಅಬ್ಬಾಣಕಾಲವಾದುದರಿಂದ, ಎರಡು ದಿನ ಜ್ವರ ಬಂದಿತ್ತೆ ಕಡೆಗೆ ಅವರು ಪಂಚತ್ವವನ್ನೈದಿಸಿತು. ಇವರಿಗೆ ಪುತ್ರಸಂತಾನವಿಲ್ಲದೆ ಹೋದದರಿಂದ ತಾವು ಆರ್ಜಿಸಿದ ದ್ರವ್ಯದ ಯಾವದಾದರೊಂದು ಸದ್ವಿಷಯದಲ್ಲಿ ವಿನಿಯೋಗಿಸಬೇಕೆಂಬ ಕೋರಿಕೆಯು ಇವರಿಗುಂಟಾಗಲು ಈ ಪುರದ ಸಿಟಿ ರೆಯಿಲ್ವೇ ಸ್ಟೇಷನ್ ಬಳಿಯಲ್ಲಿ ರಮಣೀಯವಾದ ಒಂದು ಸತ್ರವನ್ನು ಕಟ್ಟಿಸಿ ಅದರಲ್ಲಿ ಆಗಂತುಕರಿಗೆ ಅನ್ನ ಹಾಕಿಸಲಿಕ್ಕೆ ಬೇಕಾದ ಏರ್ಪಾಡುಗಳನ್ನು ಮಾಡಬೇಕೆಂದು ನಿಶ್ಚೈಸಿದರು. ಅದನ್ನನುಸರಿಸಿ ಉದ್ದಿಷ್ಟ ಧರ್ಮಸ್ವರೂಪವಂ ಗವರ್ನಮೆಂಟಿಗೆ ತಿಳಿಸಿ ಅವರಿಂದ ರೆಯಿಲ್ವೇ ಸ್ಟೇಷನಿನ ಬಳಿ ಇದ್ದ ಖಾಲೀ ನಿವೇಶನವಂ ಪಡೆದು ಅಲ್ಲಿ ೨೦,೦೦೦ ರೂಪಾಯಿಗಳ ತನಕ ಖರ್ಚುಮಾಡಿ ಒಂದು ಸತ್ರವಂ ಕಟ್ಟಿಸಿ ಅದರಲ್ಲಿ ಬರತಕ್ಕವರಿಗೆ ಸ್ಥಿರವಾಗಿ ಅನ್ನ ಹಾಕುವ ಬಗ್ಯೆ ಇನ್ನೂ ಇಪ್ಪತ್ತೈದುಸಾವಿರ ರೂಪಾಯಿಗಳ ವರೆಗೆ ಗವರ್ನಮೆಂಟಿನವರಿಗೊಪ್ಪಿಸಿ ಅದಕ್ಕೆ ಅವರು ಕೊಡುವ ಬಡ್ಡಿ ಮೊಬಲಗಿನಿಂದಲೇ ಸದರೀ ಧರ್ಮವು ಶಾಶ್ವತವಾಗಿ ನಡೆಯುವಂತೆ ಬೇಕಾದ ಏರ್ಪಾಡುಗಳು ಮಾಡಿದರು. ಇವರಿಗೆ ಪುತ್ರಸಂತಾನವಿಲ್ಲದೆ ಹೋದುದರಿಂದ ಗತಿಸಲಿಕ್ಕೆ ಪೂರ್ವದಿನದಲ್ಲಿ ತಮ್ಮ ಶರೀರಸ್ಥಿತಿಯಂ ಯೋಚಿಸಿ ತಾವು ಬದುಕಲಾರರೆಂದು ತಿಳಿದು ತಮ್ಮ ಸನ್ನಿಹಿತ ಸಾಪಿಂಡರೊಬ್ಬರ ಪುತ್ರನನ್ನು ಸ್ವೀಕಾರ ಮಾಡಿಕೊಂಡು ಕಡೆಯಲಿ ಪರಿಶಿಷ್ಟ ಆಸ್ತಿಯ ವಿನಿಯೋಗ ವಿಷಯದಲ್ಲಿ ತಮ್ಮ ಇಷ್ಟಾನುಸಾರ ಮರಣಶಾಸನವಂ ಬರೆದು ಅದಕ್ಕೆ ರುಜು ಮಾಡುವಷ್ಟರಲ್ಲಿಯೇ ಮೃತಪಟ್ಟರೆಂತಲೂ, ಆದರೆ ಅವರ ಆಸ್ತಿಯ ಮತ್ತು ಸ್ವೀಕೃತಪುತ್ರನ ರಕ್ಷಣೆಯ ವಿಷಯದಲ್ಲಿಯೂ, ಕುಮಾತೆಯರ ರಕ್ಷಣೆ ವಿಷಯದಲ್ಲಿಯೂ ತಾವು ಮಾಡಿದ ಧರ್ಮರಕ್ಷಣೆಯ ವಿಷಯದಲ್ಲಿಯೂ, ಬೇಕಾದ ಮಟ್ಟಿಗೆ ಬಂದೋಬಸ್ತು ಮಾಡಿಟ್ಟಿದಾರೆಂತಲೂ, ಇವರ ಅಪರಕ್ರಿಯೆಗಳು ಸ್ವೀಕೃತಪುತ್ರನ ಹೆಸರಿನಿಂದ ಜರುಗುತಲಿದೆಯೆಂತಲೂ, ವೈಧವ್ಯದುಃಖಾನುಭವಕ್ಕೆ ಭಾರ್ಯೆಯೊಬ್ಬಳೆಯು ಗುರಿಯಾಗಿದ್ದಾರೆಂತಲೂ ತಿಳಿಯಬರುತಿದೆ. ಪಂಚಭೂತ ವಿಕಾರವಾದ ಅವರ ಪ್ರಕೃತಿಯು ಅದೃಶ್ಯವಾದಾಗ್ಯೂ ಸದಾ ಪ್ರಶಂಸನೀಯವಾದ ಅವರ ಸದ್ಧರ್ಮವು ಚಿರಕಾಲ ಪ್ರಜೆಗಳ ಸ್ಮರಣ ವೀಕ್ಷಣಗಳಿಗೆ ವಿಷಯವಾಗಿರುತಿದೆ. ಮುಖ್ಯವಾಗಿ ತಾವು ಮಾಡಿದ ಸತ್ಕಾರ

ಫಲವು ಇವರು ಇಹಜನ್ಮದಲ್ಲಿ ಸ್ವತಃ ನೋಡಿ ಅನುಭವಿಸಲಿಕ್ಕಿಲ್ಲದೆ ಹೋಯಿತೆಂಬ ಒಂದು ವಿಷಯವಂ ಕುರಿತು ಚಿಂತಿಸಬೇಕಾಗಿದೆಯೇ ಹೊರತು ಮುಂದಿನ ಜನ್ಮದಲ್ಲಿ ಏತತ್ಕಾರ್ಯವು ಉತ್ತಮಫಲವನ್ನಿವರಿಗೆ ಕೊಡದೆ ಹೋಗಲಾರದು. ಏತನ ಮ||ರಾ|| ಶ್ರೀ ಸುಬ್ಬಶೆಟ್ಟರವರ ಕುಟುಂಬಕ್ಕುಂಟಾದ ಪ್ರಸಕ್ತ ಖೇದವು ಪ್ರಬಲವಾದುದೆಂಬುದರಲ್ಲೇನೂ ಸಂದೇಹವಿಲ್ಲವು.

## LOCAL AND PROVINCIAL NEWS
### ಸ್ವದೇಶಮತ್ತು ತಾಲ್ಲೂಕುಜಿಲ್ಲಾವೃತ್ತಾಂತಗಳು

ಎಡತೊರೆ ಮುನ್ಸಿಫ಼ಿಯ ಮುನ್ಸಿಫ್‌ಕೋರ್ಟ್ ಉಳಿಸಬೇಕೆಂದು, ಅಲ್ಲಿನ ಪ್ರಜೆಗಳೆಲ್ಲರು ಚೀಫ್ ಜಡ್ಜಿಯವರು ಅಲ್ಲಿಗೆ ಹೋಗಿದ್ದ ಸಮಯದಲ್ಲಿ ಅವರಂ ಕೇಳಿಕೊಂಡಿರುವರೆಂದು ತಿಳಿಯಬರುತಿದೆ

ಮದರಾಸ್ ಗವರ್ನರವರ ಭಾರ್ಯೆಯವರಾದ ಲೇಡಿ ವೆನ್ಲಾಕ್ ಯವರು ಗತ ಬುಧವಾರದ ದಿನ ಈ ಪ್ರಾಂತಿಗೆ ದಯಮಾಡಿ ಕಂಟೋನ್ಮೆಂಟಿನಲ್ಲಿ ಒಂದು ಹೋಟೆಲಿನೊಳು ಇಳಿದಿರುವರೆಂದು ತಿಳಿಯಬರುತಿದೆ. ಇವರಿಗೆ ಸ್ವಲ್ಪ ಶರೀರಾಲಸ್ಯ ಪ್ರಾಪ್ತವಾದುದರಿಂದ ಹವಾ ಬದಲಾಯಿಸುವ ಉದ್ದೇಶದೊಡನೆ ಇಲ್ಲಿಗೆ ಬಂದಿದಾರೆ.

ದಕ್ಷಿಣಮಹಾರಾಷ್ಟ್ರ ರೈಲ್ವೆ ಕಂಪೆನಿಯವರು ತಮ್ಮ ಲೈನ್‌ನಲ್ಲಿ ಸಾಮಾನುಗಳು ಜಾಸ್ತಿಯಾಗಿ ರವಾನೆಯಾಗಿ ಹುಟ್ಟುವಳಿಯು ಜಾಸ್ತಿಯಾಗುವಂತೆ ಕಡಲೇಕಾಯಿ, ಬೆಲ್ಲ, ಯತ್ತಿ, ಹೊಗೆಸೊಪ್ಪು ವಗೈರೆ ವ್ಯಾಪಾರಕ್ಕೆ ಮುಖ್ಯವಾದ ಸ್ಥಳಗಳಲ್ಲಿ ತಮ್ಮ ಕಡೆಯ ಏಜಂಟರುಗಳನ್ನು ಇಟ್ಟು, ಇವರುಗಳ ಮೂಲಕ ಸಾಮಾನುಗಳನ್ನು ತಮ್ಮ ರೈಲು ಸ್ಟೇಷನ್‌ಗಳಿಗೆ ತರಿಸಿಕೊಳ್ಳುವ ಪ್ರಯತ್ನವನ್ನು ಮಾಡುತಲಿರುವದಾಗಿ ಕೇಳುತ್ತೇವೆ.—ಟಿ.

ಮೈಸೂರ್ ಗವರ್ನಮೆಂಟ್ ಸೆಂಟ್ರಲ್ ಪ್ರೆಸ್ಸಿನಲ್ಲಿ ಕೆಲಸಗಳು ಬಹಳ ಜಾಸ್ತಿಯಾಗುತಬರುವದರಿಂದಲೂ, ಅದಕ್ಕೆ ಬೇಕಾದಷ್ಟು ಉಪಕರಣಗಳು ಇಲ್ಲದೆ ಇರುವದರಿಂದಲೂ ಕೆಲಸಗಳು ಸುಸ್ತಿಯಾಗಲಿಕ್ಕೆ ಕಾರಣವಾಗಿದೆಯೆಂದು ಪ್ರೆಸ್ ಸೂಪರಿಂಟೆಂಡೆಂಟರವರು ಗವರ್ನಮೆಂಟಿಗೆ ರಿಪೋರ್ಟ್ ಮಾಡಿದ್ದರಮೇಲೆ ಅವರು ಈಸಾಲಿಗೆ ೨೨,೦೦೦ ರೂಪಾಯಿಗಳ ತನಕ ಯಂತ್ರೋಪಕರಣಗಳು ತರಿಸಿಕೊಳ್ಳಲಿಕ್ಕೆ ಮಂಜೂರ್ಮಾಡಿದಾರೆಂದು ಕೇಳುತ್ತೇವೆ

ಶ್ರೀಮನ್ಮಹಾರಾಜರವರು ಗತ ಬುಧವಾರದಿನ ಸಾಯಂಕಾಲ ರೈಲುಮಾರ್ಗವಾಗಿ ಮೈಸೂರಿಗೆ ದಯಮಾಡಿದರು. ಸ್ಪೆಷಲ್ ಟ್ರೈನ್ ಇಲ್ಲಿ ಅರ್ಧ ಘಂಟೆಯ ಕಾಲ ನಿಂತಿತ್ತು. ಆ ಕಾಲದಲ್ಲಿ ಈ ಸಂಸ್ಥಾನದ ಮುಖ್ಯಾಧಿಕಾರಿಗಳೆಲ್ಲರು ರೆಸಿಡೆಂಟ್ ಪ್ಲಾಟ್‌ಫಾರಂನಲ್ಲಿ ಕೂಡಿದ್ದು ಮಹಾರಾಜರವರ ಸೆಂಡ್‌ಮಾಡಿಕೊಟ್ಟರು. ದಿವಾನರವರು ಮಹಾರಾಜರವರ ಸವಾರಿಯೊಡನೆ ಮೈಸೂರಿಂದ ಇಲ್ಲಿಗೆ ಬಂದು ಇಲ್ಲಿಯೇ ನಿಂತುಬಿಟ್ಟರು. ಮಹಾರಾಜರವರೊಡನೆ ಮಿಲಿಟರಿ ಸೆಕ್ರೆಟರಿ ಮತ್ತು ಮಿಲಿಟರಿ ಬಕ್ಷಿ, ದರ್ಬಾರ್ ಬಕ್ಷಿ, ಪ್ರೈವೇಟ್ ಸೆಕ್ರೆಟರಿ ವಗೈರೆಯವರು ಹೋಗಿರುತ್ತಾರೆ. ದಿವಾನರವರು ಇಷ್ಟರಲ್ಲಿಯೇ ಸರಕ್ಯೂಟ್ ಹೊರಡುವರೆಂಬ ವರ್ತಮಾನ ವುಂಟಾಗಿದೆ.

ಇಂಡ್ಯ ಗವರ್ನಮೆಂಟಿನವರು ಮಿಲಿಟರಿ ಇಲಾಖಾ ಬಜೆಟ್ಟಿನಲ್ಲಿ ಇದರಡಿ ತಿಳಿಸಲ್ಪಡುವ ಸ್ಥಳಗಳಲ್ಲಿ ಜಲವಸತಿಯಂ ಕಲ್ಪಿಸುವಬಗ್ಯೆ ತಗಲಬಹುದಾದ ಖರ್ಚು ಮೊಬಲಗಿಗೆ ಆಧಾರ ಕಲ್ಪಿಸಿರುವಂತೆ ತಿಳಿಯಬರುತಿದೆ.—

| | | |
|---|---|---|
| ಸಿಕಂದರಾಬಾದ್‌ವಾಟರ್‌ಸಪ್ಲೈಸ್ಕೀಂ | | ೨,೮೪,೦೦೦ |
| ಬೆಂಗಳೂರ್ ಕಂಟೋನ್ಮೆಂಟ್ | ,, | ೨,೦೨,೦೦೦ |
| ಲಕ್ನೋ | ... | ೧೫೨,೦೦೦ |
| ಮರ್ರಿ | ... | ೧,೩೭,೦೦೦ |
| ಡಂಡಂ | ... | ೩೪,೦೦೦ |
| ರಾವಲ್‌ಪಿಂಡಿ | .. | ೨೨,೦೦೦ |
| ಡೆಲ್ಲಿ | ... | ೯,೦೦೦ |
| ಆಗ್ರಾ | ... | ೩,೦೦೦ |

ಒಟ್ಟು ಅರೂವರೆ ಲಕ್ಷ ರೂಪಾಯಿಗಳತನಕ ಖರ್ಚು ಮಂಜೂರಾಗಿರುವಂತೆ ಕೇಳುತ್ತೇವೆ.

ಹವಾ ಈಗ್ಯೆ ಒಂದೆರಡು ವಾರಗಳ ಮೊದಲು ಭಿನ್ನಿಸಿ ಮಂಜು ಛಳಿಯೂ ದಿನೇ ದಿನೆ ಅಧಿಕವಾಗುತಲಿದೆ. ಹೇಮಂತ ಋತು ಲಕ್ಷಣಗಳಲ್ಲೇನೂ ನ್ಯೂನತೆ ಇಲ್ಲವು. ಶೀತಪ್ರಾಚುರ್ಯದಿಂದ ಜನಗಳಿಗೆ ಅಲ್ಲಿಯಲ್ಲಿ ನೆಗಡಿ, ಕೆಮ್ಮು, ಸಕೃತ್ ಜ್ವರ ವಗೈರೆ ಉಪದ್ರವಗಳು ಪ್ರಬಲಿಸಿ ತೊಂದರೆ ಪಡಿಸುತಲಿವೆ. ಇದು ಸುಗ್ಗಿಕಾಲವಾದುದರಿಂದ ಮಾರ್ಕೆಟ್ಟಿಗಳಲ್ಲಿ ಜಿನಿಸಿಗಳು ಹೇರಳವಾಗಿರುತ್ತ ನಿರಖ್ ಕಡಮೆಯಾಗಬೇಕಾದುದ್ದು ಧರ್ಮವಾಗಿದ್ದಾಗ್ಯೂ ಅಕ್ಕಿ ರಾಗಿ ವಗೈರೆ ಪದಾರ್ಥಗಳ ಕ್ರಯವು ನ್ಯಾಯವಾದ ದರಗಳಿಗೆ ಅದ್ಯಾಪಿ ಇಳಿಯಲಿಲ್ಲವು. ಬೆಲ್ಲ ವಗೈರೆ ಕೆಲವು ಪದಾರ್ಥಗಳ ಕ್ರಯವು ಅತ್ಯಧಿಕವಾಗಿದೆ.

## ಇಂಡಿಯನ್ ನ್ಯಾಷನಲ್ ಕಾಂಗ್ರೆಸ್.

ಬರುವ ವಾರದಲ್ಲಿ ಲಾಹೋರ್ ಪಟ್ಟಣದೊಳು ಜರುಗತಕ್ಕ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸಭೆಯು ಗತ ಸಂವತ್ಸರಕ್ಕಿಂತಲೂ ಪ್ರಬಲವಾದುದಾಗಿಯೂ, ತದಭಿಮಾನಿಗಳಾದ ಮ|| ಹ್ಯೂಂ ಆನರೆಬಲ್ ಮ|| ದಾದಾಬಾಯಿ ನೌರೋಜಿ ವಗೈರೆ ಕೆಲವರು ದೊಡ್ಡಮನುಷ್ಯರು ಏತದರ್ಥ ಬಂದಿರುವವರಿಂದ ವಿಶೇಷ ಪರಿಗಣನೀಯವಾದುದಾಗಿಯೂ ಇರುವುದು. ಸದರೀ ಸಭೆಯಲ್ಲಿ ವಿಚಾರಾರ್ಹಗಳೆಂದು ನಿರ್ಧರಿಸಲ್ಪಟ್ಟಿರುವ ಇಪ್ಪತ್ತೊಂದು ಬಾಬ್‌ಗಳನ್ನು ರಿಸೆಪ್ಷನ್ ಕಮಿಟಿಯವರು ಅವರ ಸ್ಟ್ಯಾಂಡಿಂಗ್ ಕಮಿಟಿಯವರಿಗೆ ತಿಳಿಸಿರುತ್ತಾರೆ. ಅವು ಯಾವವೆಂದರೆ —

೧ ಇಂಡಿಯನ್ ಸಿವಿಲ್ ಸರ್ವಿಸ್ ನೌಕರಿಯ ಬಗ್ಯೆ ಯೇರ್ಪಟ್ಟಿರುವ ಪರೀಕ್ಷೆಯನ್ನು ಏಕಕಾಲದೊಳು ಇಂಡ್ಯ ಮತ್ತು ಇಂಗ್ಲಾಂಡ್ ರಾಜ್ಯಗಳಲ್ಲಿ ಜರಿಗಿಸತಕ್ಕ ವಿಷಯದಲ್ಲಿ ಹೌಸ್ ಆಫ್ ಕಾಮನ್ಸ್ ಸಭಾಸದರು ಮಾಡಿದ ತೀರ್ಮಾನವು.

೨. ೧೮೯೨ ನೇ ಇಸವಿಯ ಇಂಡಿಯನ್ ಕೌನ್ಸಿಲ್ಸ್ ಆಕ್ಟನ್ನನುಸರಿಸಿದ ನಿಬಂಧನೆಗಳು.

೩ ಸುಪ್ರೀಂ ಲೆಜಿಸ್ಲೆಟಿವ್ ಕೌನ್ಸಿಲ್ ಅಂದರೆ ವೈಸ್‌ರಾಯಿಯವರ ನ್ಯಾಯವಿಧಾಯಕ ಸಭೆಗೆ ತಮ್ಮ ಕಡೆ ಪ್ರತಿನಿಧಿಯೊಬ್ಬರನ್ನು ಚುನಾಯಿಸಿ ಕಳುಹಿಸುವದಕ್ಕೆ ಪಂಜಾಬ್ ದೇಶೀಯರಿಗಿರುವ ಸ್ವಾತಂತ್ರ್ಯವು.

೪. ಜ್ಯೂರಿಗಳ ಏರ್ಪಾಡನ್ನು ವಜಾಮಾಡಬೇಕೆಂದು ಬಂಗಾಳೆ ಗವರ್ನಮೆಂಟಿನವರು ಕೊಟ್ಟಿದ್ದ ಇಸ್ತಿಹಾರ್‌ನಾಮೆಯನ್ನು ರದ್ದುಮಾಡಿಸಿದ ಬಗ್ಯೆ ಕೃತಜ್ಞತಾ ಪ್ರದರ್ಶನ ಪೂರ್ವಕ ಸದರೀ ಜ್ಯೂರಿ ಪದ್ಧತಿಯನ್ನು ಸರ್ವತ್ರ ಪ್ರಚಾರದೊಳು ತರಬೇಕೆಂದು ಪ್ರಾರ್ಥಿಸುವಣ.

೫ ಕಾರ್ಭಾರೀ ವ ಜ್ಯುಡಿಷಲ್ ಅಧಿಕಾರಗಳನ್ನು ಪ್ರತ್ಯೇಕಿಸುವಣ.

೬. ಮಿಲಿಟರಿ ಇಲಾಖಾ ಖರ್ಚನ್ನು ವೃದ್ಧಿಪಡಿಸುವಿಕೆ.

೭ ಪಬ್ಲಿಕ್ ಸರ್ವಿಸ್ ಕಮ್ಮಿಷನ್ ಸಂಘದವರು ತಿಳಿಸಿದ ಕೆಲವು ಅಭಿಪ್ರಾಯಗಳ ಮೇರೆ ಇಂಡ್ಯ ಗವರ್ನಮೆಂಟಿನವರು ಮಾಡಿದ ತೀರ್ಮಾನವು.

ನಾಣ್ಯ ಚಲಾವಣೆ ವಿಚಾರ ಮತ್ತು ಇಂಡ್ಯ ಗವರ್ನಮೆಂಟಿನವರು ಅದರ ವಿಷಯದಲ್ಲಿ ಆತುರದೊಡನೆ ಮಾಡಿದ ನ್ಯಾಯವಿಧಾನ.

೯. ನಾಣ್ಯ ಪರಿವರ್ತನೆಯ ದೆಸೆಯಿಂದ ಯೂರೋಪಿಯನ್ ಮತ್ತು ಯೂರೇಷಿಯನ್ ಉದ್ಯೋಗಸ್ಥರಿಗೆ ಪರಿಹಾರ ದ್ರವ್ಯ ಕೊಡತಕ್ಕ ವಿಚಾರ.

೧೦. ಉನ್ನತ ವಿದ್ಯಾಭ್ಯಾಸ.

೧೧ ೮ ನೇ ಕಾಂಗ್ರೆಸ್ ಸಭೆಯಲ್ಲಿ ಮಾಡಲ್ಪಟ್ಟ ೫ ನೆಯ ತೀರ್ಮಾನಕ್ಕೆ ಸಮಾನ ತೀರ್ಮಾನ.

೧೨—೧೩ ೮ ನೇ ಕಾಂಗ್ರೆಸ್ ಸಭೆಯಲ್ಲಿ ಮಾಡಲ್ಪಟ್ಟ ೯ನೆಯ ಮತ್ತು ೧೦ ನೇ ತೀರ್ಮಾನಗಳನ್ನು ಮರಳಿ ಸ್ವೀಕರಿಸುವಣ.

೧೪. ಪಂಜಾಬ್ ದೇಶದಲ್ಲಿ ನ್ಯಾಯವಿಧಾಯಕ ಸಭೆಯ ವ್ಯವಸ್ಥಾಪನೆ.

೧೫ ಪಂಜಾಬ್ ದೇಶಕ್ಕೆ ಪ್ರತ್ಯೇಕವಾಗಿ ಒಂದು ಚಾರ್ಟರ್ ಹೈಕೋರ್ಟನ್ನು ನೆಲಗೊಳಿಸಬೇಕಾದ್ದು.

೧೬ ವ್ಯವಸಾಯ ಸಂಬಂಧವಾದ ಸಾಲವು, ಸದರೀ ಅಂಶವನ್ನು ಕುರಿತು ವಿಚಾರಣೆ ಮಾಡಿದ ಕಮ್ಮಿಷನ್ ರಿಪೋರ್ಟ್.

೧೭. ನಿಯತವಾಗಿ ಅಪರಾಧಗಳನ್ನು ಮಾಡತಕ್ಕವರಂ ಕುರಿತ ಮುಸವಿದಾ ಆಕ್ಟ್.

೧೮. ಹಿಂದೂ ಮತ್ತು ಮಹಮ್ಮದರಿಗುಂಟಾದ ಕಲಹಗಳು.

೧೯. ಕಂಟೋನ್ಮೆಂಟ್ ಕಮಿಟಿಯವರ ವಿಚಾರಣೆ ಮತ್ತು ಲಾರ್ಡ್ ರಾಬರ್ಟ್‌ಸ್‌ಯವರ ಅಪರಾಧ ಕ್ಷಮಣೆ

## THE MYSORE GAZETTE
### ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದೂರವರ ಸರ್ಕಾರದಿಂದ ಕೊಡೋಣವಾದ ಇಸ್ತಿಹಾರ್‌ನಾಮೆಗಳು.

ನಂ|೮೯೯೭—೧೯. ೩೨—೯೩—ತಾ|೮ನೇ ಡಿಸಂಬರ್ ೧೮೯೩—ಮಳವಳ್ಳಿಯ ತಾಲ್ಲೂಕ್ ಅಮಲ್ದಾರ್ ಗೋವಿಂದಪ್ಪನವರಿಗೆ ೧೮೯೩ನೇ ಇಸವಿ ಸೆಪ್ಟೆಂಬರ್ ೮ ಮತ್ತು ನವಂಬರ್ ೮ನೇ ಮಕರ್ರಂಗಳುಳ್ಳ ೪೪೮೨—೩೨—ಮತ್ತು ೭೯೧೯—೩೨ನೇ ನಂಬರ್‌ಗಳುಳ್ಳ ಇಸ್ತಿಹಾರ್ ನಾಮೆಗಳ ಮೂಲಕ ಕೊಡಲ್ಪಟ್ಟಿದ್ದ ಒಂದು ತಿಂಗಳು ೧೫ ದಿನಗಳ ಪ್ರಿವಿಲೇಜ್ ರಜಾ ಇದರಿಂದ ಇನ್ನೂ ಹತ್ತು ದಿನಗಳತನಕ ಜಾಸ್ತಿ ಮಾಡಲ್ಪಟ್ಟಿರುತಿದೆ

ಮೊಹರಂ ನಂ||೩೯೯—ತಾ|| ೧೧ನೇ ಡಿಸಂಬರ್ ೧೮೯೩-ರ್ ೧೮೯೩ನೇ ಇಸವಿ ಡಿಸಂಬರ್ ೪ನೇ ಮಕರ್ರಂ ಮೊಹರಂ ನಂ|| ೩೩೩—೯೮ ನೇ ನಂಬರುಳ್ಳ ಗವರ್ನಮೆಂಟ್ ಪ್ರೊಸೀಡಿಂಗ್ಸಿನಲ್ಲಿ ಹುಕುಂ ಮಾಡಲ್ಪಟ್ಟಿರತಕ್ಕ ಇದರಡಿ ನಮೂದಾಗಿರುವ ಮೊಕರರಾತಿಗಳ ಮತ್ತು ಭಡ್ತಿಗಳು ಸಕಲಜನಗಳ ತಿಳುವಳಿಕೆಯ ಬಗ್ಯೆ ಇದರಿಂದ ಫಾಯಿಷ್ ಮಾಡಲ್ಪಟ್ಟಿರುತಿವೆ

೧. ಅಸಿಸ್ಟೆಂಟ್ ಕಮ್ಮಿಷನರ್‌ಗಳು A ಷೆಡ್ಯೂಲ್.

೧. ಮ||ಕೆ. ರಾಮಚಂದ್ರರಾಯರವರು ೧೮೯೩ನೇ ಇಸವಿ ಡಿಸಂಬರ್ ತಿಂಗಳ ಗುರ್‍ರೇ ತಾರೀಖ್ ಮೊದಲು, ೩ನೇ ಕ್ಲಾಸಿನಿಂದ ೨ನೇ ಕ್ಲಾಸಿಗೆ ಭಡ್ತೀ ಮಾಡಲ್ಪಟ್ಟಿರುತ್ತಾರೆ.

೨ ಮ|| ಎಸ್. ನರಸಿಂಹಯ್ಯಂಗಾರ್ರವರು.
೩ ,, ಕೆ. ಎಸ್. ಧೊರಸ್ವಾಮಿಅಯ್ಯರವರು
೪ ,, ಎಸ್. ವೆಂಕಟರಾಯರವರು.
೫. ,, ಎ. ರಾಘವೇಂದ್ರರಾಯರವರು.
೬ ,, ಬಿ ರಾಮಸ್ವಾಮಯ್ಯನವರು.
೭. ,, ರಾಮಸ್ವಾಮಯ್ಯಂಗಾರ್ರವರು.
೮. ,, ಟಿ ಪರಮಶಿವಯ್ಯನವರು.
೯. ,, ಸಿ ಶ್ರೀಕಂಠೇಶ್ವರಯ್ಯನವರು.
೧೦. ,, ಸಿ ರಾಮರಾಯರವರು.

ಇವರು ೧೮೯೩ನೇ ಇಸವಿ ಡಿಸಂಬರ್ ತಿಂಗಳ ಗುರ್‍ರೇ ತಾರೀಖ್ ಲಾಗಾಯತು ೪ನೇ ಕ್ಲಾಸಿನಿಂದ ೩ನೇ ಕ್ಲಾಸಿಗೆ ಭಡ್ತೀ ಮಾಡಲ್ಪಟ್ಟಿರುತ್ತಾರೆ.

೨ ಪ್ರೊಬೇಷನರಿ ಅ|| ಕಮ್ಮಿಷನರ್‌ಗಳು,

೧ ಮ||ಬಿ. ಜಿ ಕುಮಾರಸ್ವಾಮಿನಾಯಕರವರು ೧೮೯೩ನೇ ಇಸವಿ ಡಿಸಂಬರ್ ಗುರ್‍ರೇ ತಾರೀಖ್ ಲಾಗಾಯತು ೪ನೇ ಕ್ಲಾಸಿಗೆ ಭಡ್ತೀ ಮಾಡಲ್ಪಟ್ಟಿರುತ್ತಾರೆ.

೩. ಎಕಸ್ಟ್ರಾ ಅ|| ಕಮ್ಮಿಷನರ್‌ಗಳು.

೧. ಮ|| ಬಿ. ಕುಪ್ಪುಸ್ವಾಮಿನಾಯುಡರವರು.
೨. ,, ಕೆ ರಾಮಾನುಜಯ್ಯಂಗಾರ್ರವರು.
೩. ,, ಅಬ್ದುಲ್ ಅಜೀಜ್‌ಯವರು.
೪. ,, ಬಿ. ರಾಮಸ್ವಾಮಯ್ಯಂಗಾರ್ರವರು.

ಇವರು, ೧೮೯೩ನೇ ಇಸವಿ ಡಿಸಂಬರ್ ಗುರ್‍ರೇ ಲಾಗಾಯತು ಮಾಹೆಯಾನಾ ೨೫೦ ರೂಪಾಯಿಗಳ ತಲಬಿನಲ್ಲಿ ಎಕಸ್ಟ್ರಾ ಅಸಿಸ್ಟೆಂಟ್ ಕಮ್ಮಿಷನರ್‌ಗಳ ಪ್ರತ್ಯೇಕ ಪಟ್ಟಿಯಲ್ಲಿ ಖಾಯಮಾಗಿ ದಾಖಲ್ಮಾಡಲ್ಪಟ್ಟಿರುತ್ತಾರೆ.

೪. ಅಸಿಸ್ಟೆಂಟ್ ಕಮ್ಮಿಷನರ್ ಸಹಜಿಲ್ಲಾ ಕೆಲಸಗಳಂ ನೋಡುತಲಿರುವಂತವರು.

೧. ಮ|| ಎಸ್. ಆರ್. ಸುಬ್ಬರಾಯ ಅಯ್ಯರ್.

೨. ,, ಜೆಚ್. ವಿ. ನಂಜುಂಡಯ್ಯ ಎಂ. ಎ. ಎಲ್. ಎಲ್ ಯವರು ೯೩ನೇ ಇಸವಿ ನವಂಬರ್ ಗುರ್‍ರೇ ತಾರೀಖ್ ಲಾಗಾಯತು ಮಾಹೆಯಾನಾ ೪೫೦ ರೂ|| ಗಳ ತಲಬಿನಲ್ಲಿ ಸಬ್‌ಜಡ್ಜಿಗಳ ಪಟ್ಟಿಯೊಳು ಖಾಯಮಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ

೫. ಅಸಿಸ್ಟೆಂಟ್ ಕಮ್ಮಿಷನರ್‌ಗಳು ಸಿಟಿ ಮ್ಯಾಜಿಸ್ಟ್ರೇಟ್ ಕೆಲಸಗಳಂ ನೋಡುತಲಿರುವಂತವರು.

೧ ಮ|| ಪಂಚನದರಾಯರವರು (ಮೈಸೂರ್) ಫ್ರೆಂಚ್‌ರಾಕ್ಸ್ ಸಬ್‌ಡಿವಿಜನ್ ಚಾರ್ಜಿನಿಂದ ಬಿಡುಗಡೆಯಾದ ತಾರೀಖ್ ಮೊದಲು ಸಿಟಿ ಮ್ಯಾಜಿಸ್ಟ್ರೇಟರಾಗಿ ಖಾಯಂ ಮಾಡಲ್ಪಟ್ಟಿರುತ್ತಾರೆ.

೨, ಮ|| ಎಸ್. ವೈದ್ಯನಾಥ ಅಯ್ಯರ್ [ಬೆಂಗಳೂರ್) ಮಾಹೆಯಾನಾ ೪೫೦ ರೂಪಾಯಿಗಳ ತಲಬಿನಲ್ಲಿ ೧೮೯೩ ನೇ ಇಸವಿ ನವಂಬರ್ ಗುರ್‍ರೇ ತಾರೀಖ್ ಲಾಗಾಯತು ಸಿಟಿ ಮ್ಯಾಜಿಸ್ಟ್ರೇಟರಾಗಿ ಖಾಯಂ ಮಾಡಲ್ಪಟ್ಟಿರುತ್ತಾರೆ

೬. ರೆವಿನ್ಯೂಸರ್ವೆ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ಗಳು.

೧. ಮ|| ಅಬ್ದುಲ್ ಖರೀಂಯವರು-ವಿಧಿಸುವ ಪರೀಕ್ಷೆಯಲ್ಲಿ ಪ್ಯಾಸ್‌ಮಾಡುವ ಷರತ್ತಿಗೊಳಪಟ್ಟು ೧೮೯೦ನೇ ಇಸವಿ ನವಂಬರ್ ಗುರ್‍ರೇ ತಾರೀಖ್ ಲಾಗಾಯತು ೩ನೇ ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನರ್‌ಗಳಲ್ಲಿಡಲ್ಪಟ್ಟಿರುತ್ತಾರೆ, ಪರಂತು ಫಾರೆಸ್ಟ್ ಇಲಾಖೆಯಲ್ಲಿ ಕೆಲಸ ನೋಡುತಲಿರತಕ್ಕದ್ದು.

೨ ಮ|| ಡಿ ಶಾಮರಾಯರವರು ೧೮೯೦ನೇ ಇಸವಿ ನವಂಬರ್ ೩ನೇ ತಾರೀಖ್ ಲಾಗಾಯತು ೩ನೇ ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನರ್‌ಗಳಲ್ಲಿಡಲ್ಪಟ್ಟಿರುತ್ತಾರೆ. ಪರಂತು ಸರ್ವೆ ಇಲಾಖೆಯಲ್ಲಿಯೇ ಕೆಲಸ ನೋಡುತಲಿರತಕ್ಕದ್ದು.

೩. ಮ||ಕೆ. ರಾಮಸ್ವಾಮಯ್ಯಂಗಾರ್‌ಎಂ.ಎ. ಯವರು ೧೮೯೩ನೇ ಇಸವಿ ನವಂಬರ್ ಗುರ್‍ರೇ ತಾರೀಖ್ ಮೊದಲು ೩ನೇ ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನರಾಗಿರತಕ್ಕದ್ದು.

೪. ಮ|| ಕೆ. ಶ್ರೀನಿವಾಸರಾಯರವರು-೯೩ನೇ ಇಸವಿ ನವಂಬರ್ ೧೫ನೇ ತಾರೀಖ್ ಲಾಗಾಯತು ೪ನೇ ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನರಾಗಿರತಕ್ಕದ್ದು. ಪರಂತು ಬೆಂಗಳೂರ್ ಸಿಟಿಮುನಿಸಿಪಾಲಿಟಿಯ ವೈಸ್ ಪ್ರೆಸಿಡೆಂಟರಾಗಿ ಕೆಲಸ ನೋಡುತಲಿರತಕ್ಕದ್ದು.

ಇ. ನಂ|೩೫. ತಾ|೫ನೇ ಡಿಸಂಬರ್ ೧೮೯೩— ಇದರಡಿ ಕಂಡ ದೊಡ್ಡಮನುಷ್ಯರನ್ನು ಟೆಕ್ಸ್ಟ್ ಬುಕ್ಕು ಕಮಿಟಿಯ ಜಾಸ್ತೀ ಮೆಂಬರ್‌ಗಳಾಗಿ ಗವರ್ನಮೆಂಟಿನವರು ಮೊಕರರ್ಮಾಡಿರುತ್ತಾರೆ.

ಡಾಕ್ಟರ್ ಎಸ್. ವಿ. ರಾಮಸ್ವಾಮಯ್ಯಂಗಾರ್, M B. C M., L R C P. L. R C. S. ಅಸಿಸ್ಟೆಂಟ್ ಸರ್ಜನ್.

ಮ|| ಕೆ. ರಾಮಯ್ಯಂಗಾರ್, ಫಾರೆಸ್ಟ್ ಪ್ರೊಬೇಷನರ್,

ಮ||ಎಂ. ವೆಂಕಟರಮಣಪ್ಪ-ಬಿ. ಎ. ಫಾರೆಸ್ಟ್ ಸಬ್ ಅಸಿಸ್ಟೆಂಟ್ ಕನ್ಸರ್ವೇಟರ್.

೨೦. ಕಾಂಗ್ರೆಸ್ ವ್ಯವಸ್ಥಾಪನೆಗೆ ವಿಶೇಷ ದಾರ್ಢ್ಯವನ್ನುಂಟುಮಾಡುವ ಉದ್ದೇಶದೊಡನೆ ಮಾಡಬೇಕಾಗಿರುವ ಏರ್ಪಾಡನ್ನು ಕುರಿತು.

೨೧. ಇಂಗ್ಲಾಂಡಿನಲ್ಲಿ ಕಾಂಗ್ರೆಸ್ ಸಭೆ ಸೇರತಕ್ಕ ವಿಚಾರವು.

ಈಸಲ ಮೇಲೆ ತಿಳಿಸಲ್ಪಟ್ಟ ೨೧ ವಿಷಯಗಳು ಸಭೆಯಲ್ಲಿ ಚರ್ಚಿಸಲ್ಪಡುವವು. ಇವುಗಳ ಪೈಕಿ ಎರಡು ಕೇವಲ ಪಂಜಾಬ್ ದೇಶಸಂಬಂಧವಾದವಾಗಿರುತವೆ. ಇನ್ನು ಎರಡು ವಿಷಯಗಳು ಕಾಂಗ್ರೆಸ್‌ಸಭೆಯ ವಿಷಯಕವಾದವಾಗಿರುತಿವೆ. ಮುಖ್ಯವಾಗಿ ಮ|| ದಾದಾಬಾಯಿ ನೌರೋಜಿಯವರು ಎರಡನೆಯ ದಫಾ ಈ ಸಭೆಗೆ ಪ್ರೆಸಿಡೆಂಟರಾಗಿರುವದರಿಂದ ಈಗ್ಯೆ ಎಂಟು ವರುಷಗಳ ಹಿಂದೆ ಇದ್ದಂತಾ ಪ್ರಸಕ್ತ ಸಭೆಯ ಸ್ಥಿತಿಯನ್ನೂ ತಾತ್ಕಾಲಿಕ ಸ್ಥಿತಿಯನ್ನೂ ತತ್ಸಂಬಂಧವಾದ ಅನುಕೂಲ್ಯ ಪ್ರಾತಿಕೂಲ್ಯಗಳನ್ನೂ ವಿಮರ್ಶಿಸಿ ಅರಿಯಬಹುದಾಗಿದೆ.

## ಮದರಾಸ್ ಯೂನಿವರ್ಸಿಟಿಯ ನಗದು ಜಮಾಖರ್ಚು ರಿಪೋರ್ಟ್.

ಸರ್ 1892–93 ನೇ ಇಸವಿಯ ಬಾಬತು ಮದರಾಸ್ ಯೂನಿವರ್ಸಿಟಿಯ ನಗದು ಜಮಾಖರ್ಚು ಲೆಕ್ಕವಂ ನೋಡುವಲ್ಲಿ ಜಮೆಗಿಂತಲೂ ಖರ್ಚು ಜಾಸ್ತಿಯಾಗಿರುವಂತೆ ವ್ಯಕ್ತವಾಗುತಿದೆ. ಸಿಂಡಿಕೇಟಿನವರ ರಿಪೋರ್ಟಿನ ಪ್ರಕಾರ ಸದರಿ ಸಾಲಿನಲ್ಲಿ ಯೂನಿವರ್ಸಿಟಿಗೆ ಒಟ್ಟು 140,290 ರೂಪಾಯಿಗಳ ಜಮೆಯೂ, 1,48,685 ರೂಪಾಯಿಗಳು ಖರ್ಚು ಆಗಿರುವಂತೆಯೂ, ಆಯತಿಗಿಂತ 8,395 ರೂಪಾಯಿಗಳು ಖರ್ಚಿನಲ್ಲಿ ಹೆಚ್ಚಾದಂತೆಯೂ, ಏರ್ಪಡುತಿವೆ. ಆದಾಗ್ಯೂ ರಿಜರ್ವ್ ಫಂಡ್ ಅಂದರೆ ಆಪದ್ಧನವಾಗಿ 2,45,000 ರೂಪಾಯಿಗಳು ಎತ್ತಿಡಲ್ಪಟ್ಟಿವೆಯಲ್ಲದೆ ಕಳೆದ ಮಾರ್ಚಿ 31 ನೇ ತಾರೀಖಿನ ವರೆಗೆ 4,072 ರೂಪಾಯಿಗಳು ಯೂನಿವರ್ಸಿಟಿಯ ಲೆಕ್ಕದಲ್ಲಿ ಸಿಲ್ಕು ಉಳಿದಿರುವಂತೆ ತೋರಿಸಲ್ಪಟ್ಟಿವೆ. ಗತ ಸಂವತ್ಸರದ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಹೋಗಿದ್ದ ಉಮೇದ್ವಾರರ ಸಂಖ್ಯೆಯು ಬಹಳ ಮಟ್ಟಿಗೆ ಕಡಮೆಯಾದದುದರಿಂದಲೇ ಹುಟ್ಟುವಳಿಯು ತಗ್ಗಿಹೋಗಲಿಕ್ಕೆ ಕಾರಣವೆಂದು ಧಾರಾಳವಾಗಿ ನುಡಿಯಬಹುದು.

ಯೂನಿವರ್ಸಿಟಿಯ ಜಮೆ ಬಾಬಗಳ ತಪಸೀಲ್ ಹ್ಯಾಗಂದರೆ,—

| | | | |
|---|---|---|---|
| ಬಹಳ ಪರೀಕ್ಷೆಗಳಲ್ಲಿ ಉಮೇದ್ವಾರರ ಮೂಲಕ ವಸೂಲಾದ ಫೀ ಬಾಬತು | 1,26,088 | 0 | 0 |
| ಪುಸ್ತಕಗಳ ಬಿಕರಿ, ಮತ್ತು ಗವರ್ನಮೆಂಟ್ ಪತ್ರಗಳ ಬಡ್ಡಿ ವಗೈರೆ ಬಾಬತು | 14,202 | 0 | 0 |
| ಜಮ್ಲಾ | 1,40,290 | 0 | 0 |

ಯೂನಿವರ್ಸಿಟಿಯ ಖರ್ಚು ಬಾಬಗಳ ತಪಸೀಲ್ ಹ್ಯಾಗಂದರೆ:—

| | | | |
|---|---|---|---|
| ಅನೇಕ ಪರೀಕ್ಷೆಗಳಲ್ಲಿ ಪರೀಕ್ಷಕರಾಗಿಯೂ ವಿಚಾರಣಾಧಿಕಾರಿಗಳಾಗಿಯೂ ನಿಯಮಿಸಲ್ಪಟ್ಟಿದ್ದವರಿಗೆ ರುಸುಂ ತರ್ಹೆ ಕೊಡಲ್ಪಟ್ಟವು. | 90,000 | 0 | 0 |
| ಯೂನಿವರ್ಸಿಟಿ ರಿಜಿಸ್ಟ್ರಾರವರ ಸಂಬಳ ಬಾಬತು 5,500ರೂ|| ಸೇರಿ ಆಫೀಸ್ ಶಿಬ್ಬಂದಿ ಖರ್ಚುಗಳಿಗಾಗಿ. | 10,600 | 0 | 0 |
| ಪ್ರಿಂಟಿಂಗ್ ಚಾರ್ಜು ಬಗ್ಗೆ | 6,700 | 0 | 0 |
| ಕಾಗದ ಪೆನ್ನು ವಗೈರೆ ಸ್ಟೇಷನರಿ ಖರ್ಚು ... | 5,500 | 0 | 0 |
| ಕುರ್ಚಿ ಮೇಜು ವಗೈರೆ ಅಸಬಾಬುಗಳ ಖರ್ಚು ... | 1,000 | 0 | 0 |
| ಮ್ಯೂನಿಸಿಪಲ್ ತೆರಿಗೆಗಳು | 1,800 | 0 | 0 |
| ಸೆನೆಟ್‌ಹೌಸ್ ಕಟ್ಟಡದ ರಿಪೇರಿ ವಗೈರೆ ಖರ್ಚು ... | 5,402 | 0 | 0 |
| ಪೋಸ್ಟ್ ಮತ್ತು ಟೆಲಿಗ್ರಾಫ್ ಖರ್ಚು | 1,760 | 0 | 0 |
| ಇತರ ಬಾಬಗಳ ಖರ್ಚು ... | 20,923 | 0 | 0 |
| | 1,48,685 | 0 | 0 |

ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಈ ಸಾಲಿನಲ್ಲಿ 3,412 ಮಂದಿ ಉಮೇದ್ವಾರರು ದರಖಾಸ್ತು ಕಳುಹಿಸಿದ್ದರು. ಅದರ ಹಿಂದಿನ ವರುಷದಲ್ಲಿ 8,029 ಜನರಿಂದ ದರಖಾಸ್ತುಗಳು ಬಂದಿದ್ದವು. ಏಕಾಏಕಿ 4,617 ಮಂದಿ ಕಡಮೆಯಾಗಲಿಕ್ಕೆ ಸದರೀ ಪರೀಕ್ಷೆಗೆ ಹೋಗಬೇಕಾದವರ ವಿಷಯದಲ್ಲಿ ಯೂನಿವರ್ಸಿಟಿಯವರು ವಿಶೇಷ ನಿರ್ಬಂಧಗಳಂ ಕಲ್ಪಿಸಿ ಈಚೆಗೆ ಮಾಡಿದ ಉಪನಿಬಂಧನೆಯೇ ಮುಖ್ಯಕಾರಣವೆಂದು ಹೇಳಬಹುದು. ಪ್ರಸಕ್ತ ಪರೀಕ್ಷೆಗಾಗಿ ಒಟ್ಟು 41,000 ರೂಪಾಯಿಗಳು ಉಮೇದ್ವಾರರ ಫೀಜುಗಳ ಮೂಲಕ ಜಮೆ ಬಂದಿರುತಿವೆ ಇವುಗಳ ಪೈಕಿ ಪರೀಕ್ಷಕರ ರುಸುಂ ಬಗ್ಗೆ ಸಂದ 19,500 ರೂಪಾಯಿಗಳು ಹೋಗಲಾಗಿ 21,500 ರೂಪಾಯಿಗಳು ಯೂನಿವರ್ಸಿಟಿಗೆ ಆದಾಯವಾಗಿರುತಿವೆ. ಈ ಖರ್ಚು ಮೊಬಲಗಿನಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಪ್ರಿಂಟಿಂಗ್ ಚಾರ್ಜು ಬಾಬತು ಖರ್ಚು ಸೇರಿಸಲ್ಪಡಲಿಲ್ಲವು, ಅದನ್ನು ಪ್ರತ್ಯೇಕವಾಗಿ ಸೇರಿಸಿದರೆ ಸಿಲ್ಕು ಮೊಬಲಗು ಇನ್ನೂ ಕಡಮೆಯಾಗುತಿದೆ. ಸರ್ 1891—92 ನೇ ಇಸವಿಯಲ್ಲಿ ಸದರೀ ಪರೀಕ್ಷೆಗೆ ಹೋಗಿದ್ದ 8,029 ಜನ ಉಮೇದ್ವಾರರ ಮೂಲಕ 96,400 ರೂಪಾಯಿಗಳು ಹುಟ್ಟುವಳಿಯಾಗಿ ಇದರಲ್ಲಿ 44,500 ರೂಪಾಯಿಗಳು ಪರೀಕ್ಷಕರ ರುಸುಂ ಬಗ್ಗೆ ಕೊಡಲ್ಪಟ್ಟವು ಈ ಒಂದು ಬಾಬಿನಲ್ಲಿ ಖರ್ಚು ಜಾತಾ ಸುಮಾರು 52,000 ರೂಪಾಯಿಗಳ ವರೆಗೆ ಮಿಗಿಲಿದವು, ಆದಕಾರಣ 1892—93 ನೇ ಇಸವಿಯಲ್ಲಿ ಅದರ ಹಿಂದಿನ ಸಾಲಿಗಿಂತಲು 31,500 ರೂಪಾಯಿಗಳು, ಕಡಮೆಯಾದವು. ಸರ್ 1890—91 ನೇ ಇಸವಿಯಲ್ಲಿ ಫೀ ಬಾಬತು ಹುಟ್ಟುವಳಿಯಾದ ಮೊಬಲಗು 85,000 ರೂಪಾಯಿಗಳು, ಎಗ್ಸಾಮಿನರ್‌ಗಳ ರುಸುಂ ತರ್ಹೆ ಕೊಡಲ್ಪಟ್ಟವು. 40,000 ರೂಪಾಯಿ ಜಾತಾ ನಿವ್ವಳ ನಫೆ 45,000 ರೂಪಾಯಿಗಳು.

| | | | ರೂ |
|---|---|---|---|
| 1889 ನೇ ಇಸವಿಯಲ್ಲಿ ಬಂದ ನಫೆ. | | | 41,000 |
| 1888 | ” | ” | 47,000 |
| 1887 | ” | ” | 42,000 |
| 1886 | ” | ” | 31,000 |
| 1885 | ” | ” | 37,000 |
| 1884 | ” | ” | 33,000 |
| 1883 | ” | ” | 26,600 |
| 1882 | ” | ” | 21,000 ಗೆ ಸ್ವಲ್ಪ ಕಡಮೆಯಾಗಿ. |

ಇದರಿಂದ ಕಳೆದ ವರುಷದಲ್ಲಿ ಬಂದ ನಫೆ ಮೊಬಲಗು ಗತ ಹತ್ತು ವರುಷಗಳ ಹಿಂದೆ ಆದ ಹುಟ್ಟುವಳಿಗೆ ಅನುಗುಣವಾಗಿರುವಂತೆ ಸ್ಪಷ್ಟವಾಗುತಿದೆ. ಹೀಗೆ ಹುಟ್ಟುವಳಿಯು ಕಡಮೆಯಾಗುವದಾದ್ದು ಬಹಳ ಚಿಂತಿಸತಕ್ಕ ವಿಷಯವಾಗಿರುತಿದೆ ಮುಂದೆಯೂ ಇದರಂತೆ ಕಡಮೆಯಾಗುವ ಪಕ್ಷಕ್ಕೆ ಯೂನಿವರ್ಸಿಟಿಯವರು ಅದರ ಕಾರಣಗಳಂ ಕುರಿತು ಪರ್ಯಾಲೋಚಿಸಿ ವ್ಯವಸ್ಥೆ ಮಾಡಬೇಕಾದುದು ಅವಶ್ಯಕವಾಗಿರುವುದು.

F A. ಪರೀಕ್ಷೆಯಲ್ಲಿ ಈಸಾಲಿಗೆ 46,000 ರೂಪಾಯಿಗಳು ಜಮೆ ಬಂದಿರುತಿವೆ, ಇದರಲ್ಲಿ ಎಗ್ಸಾಮಿನರ್‌ಗಳಿಗೆ ಸಂದ 24,500ರೂಪಾಯಿಗಳು ಹೋಗಲಾಗಿ, ಇದರಲ್ಲಿಯೂ ಮೇಲೆ ತಿಳಿಸಲ್ಪಟ್ಟಂತೆ 21,500 ರೂಪಾಯಿಗಳು ಉಳಿದಿರುವದರಿಂದ ಈ ಬಾಬಿನ ಉತ್ಪತ್ತಿಯು ಹಿಂದಿನ ಯೆರಡು ವರುಷಗಳಲ್ಲಿದ್ದಂತೆಯೇ ಇರುತಿದೆ

B A. ಪರೀಕ್ಷೆಯಲ್ಲಿ ಉಮೇದ್ವಾರರ ಫೀಜ್ ಮೂಲಕ ಬಂದ 23,800 ರೂಪಾಯಿಗಳಲ್ಲಿ 24,000 ರೂಪಾಯಿಗಳಿಗೆ ಸ್ವಲ್ಪಜಾಸ್ತಿಯಾಗಿರುಸುಂಕೊಡಲ್ಪಟ್ಟವು ಇದರಿಂದ ಯೂನಿವರ್ಸಿಟಿಗೆ ಪ್ರತಿಷ್ಠೆ ವಿನಾ ದ್ರವ್ಯಲಾಭವೇನೂ ಕಾಣಿಸಲಿಲ್ಲವು. 1891—92 ನೇ ಇಸವಿಯಲ್ಲಿ 20,000 ರೂಪಾಯಿಗಳಿಗೆ ಸ್ವಲ್ಪ ಹೆಚ್ಚಾಗಿಯೇ ಉತ್ಪತ್ತಿಯಾಯಿತು ಇದರ ಪೈಕಿ ಎಗ್ಸಾಮಿನರ್‌ಗಳ ರುಸುಂ ತರ್ಹೆ ಖರ್ಚಾದ 18,700 ರೂಪಾಯಿಗಳು ಹೋಗಲಾಗಿ ಸುಮಾರು 1,300 ರೂಪಾಯಿಗಳು ಯೂನಿವರ್ಸಿಟಿಗೆ ಉಳಿದವು ಇದೇರೀತಿ 1890—91 ನೇ ಇಸವಿಯಲ್ಲಿ ಫೀಜ್ ಬಾಬತು ಬಂದ 22,200 ರೂಪಾಯಿಗಳಲ್ಲ ಎಗ್ಸಾಮಿನರ್‌ಗಳ ರುಸುಂ 20,600 ರೂಪಾಯಿಗಳು ಹೋಗಲಾಗಿ 1,600 ರೂಪಾಯಿಗಳು ಮಿಗಿಲಿದವು.

ಇನ್ನು M. A. ಪರೀಕ್ಷೆಯ ಸ್ಥಿತಿಯಂ ಕುರಿತು ಪರ್ಯಾಲೋಚಿಸಿ ನೋಡಿದರೆ, ಇದು ಪ್ರಬಲ ನಷ್ಟಕರವಾಗಿಯೂ ಚಿಂತನೀಯವಾಗಿಯೂ ಕಂಡುಬರುತಿದೆ, ಈಬಾಬತಿನಲ್ಲಿ300 ರೂಪಾಯಿಗಳು ಉತ್ಪತ್ತಿಯಾಗಿದ್ದರೆ ಎಗ್ಸಾಮಿನರ್‌ಗಳ ಬಾಬತಿಗಾಗಿ 8,000 ರೂಪಾಯಿಗಳು ಖರ್ಚಾಗಿರುತಿವೆ. 1891—92 ನೇ ಇಸವಿಯಲ್ಲಿ ಹುಟ್ಟುವಳಿ 810 ರೂಪಾಯಿಗಳು, ಇದಕ್ಕಾಗಿ ಖರ್ಚು 6,000 ರೂಪಾಯಿಗಳಿಗಿಂತ ಮೇಲ್ಪಟ್ಟಂತೆ ವ್ಯಕ್ತವಾಗುತಿದೆ. 1890—91 ನೇ ಇಸವಿಯಲ್ಲಿ ಫೀಸ್‌ಬಾಬಿನಲ್ಲಿ ಜಮೆ ಬಂದದ್ದು, 650 ರೂಪಾಯಿಗಳು, ಎಗ್ಜಾಮಿನರ್‌ಗಳ ರುಸುಂಬಗ್ಗೆ ಕೊಡಲ್ಪಟ್ಟವು. ರೂ 6,350 ಕಳೆದ ಮೂರು ವರುಷಗಳ ಸ್ಥಿತಿಯು ಏಕರೂಪವಾಗಿರುವದರಿಂದ ಯೂನಿವರ್ಸಿಟಿಗಿದು ದುಬಾರಾ ಖರ್ಚು ಬಾಧಿಸಿಕೊಂಡಿರುತಿದೆ.

B. L. ಪರೀಕ್ಷೆಯು ಲಾಭದಾಯಕವಾದ ಬಾಬಿಂತಲೇ ನುಡಿಯಬಹುದಾಗಿದೆ, ಹ್ಯಾಗಂದರೆ, ಇದಕ್ಕಾಗಿ ಈ ಸಂವತ್ಸರದಲ್ಲಿ 8,800 ರೂಪಾಯಿಗಳು ಹುಟ್ಟುವಳಿಯಾಗಿರುತಿದೆ. ಇವುಗಳ ಪೈಕಿ ಎಗ್ಸಾಮಿನರ್‌ಗಳಿಗೆ ಕೊಡಲ್ಪಟ್ಟ 4,564 ರೂಪಾಯಿಗಳು ವಜಾ ಮಾಡಲಾಗಿ 4,236 ರೂಪಾಯಿಗಳ ನಫೆ ಬಂದಿರುತಿದೆ. 1891—92 ನೇ ಇಸವಿಯ ಹುಟ್ಟುವಳಿ ಬಾಬತು 7,900 ರೂಪಾಯಿಗಳಲ್ಲಿ 4,300 ರೂಪಾಯಿಗಳು ಎಗ್ಸಾಮಿನರ್‌ಗಳ ಖರ್ಚು ಹೋಗಲಾಗಿ 3,600 ರೂಪಾಯಿಗಳ ಲಾಭ ಬಂದಿರುತಿದೆ 1890—91 ನೇ ಇಸವಿಯಲ್ಲಿ ಖರ್ಚು ಜಾತಾ ಸ್ವಲ್ಪ ಹೆಚ್ಚುಕಡಮೆಯಾಗಿ 2,560 ರೂಪಾಯಿಗಳು ಉಳಿದಂತೇರ್ಪಡುತಿದೆ. ಆದುದರಿಂದ ಈ ಪರೀಕ್ಷೆಯಲ್ಲಿ M A. ಪರೀಕ್ಷೆಯಂತೆ ಆಸಲಿಗೆ ಮೋಸ ಬರುವಂತಾದ್ದಾಗಿ ಕಾಣಿಸಲಿಲ್ಲವು

B C. E. ಅಂದರೆ, ಬ್ಯಾಚಲರ್ ಆಫ್ ಸಿವಿಲ್ ಇಂಜನಿಯರಿಂಗ್ ಎಂಬ ಇಂಜನಿಯರ್ ಪರೀಕ್ಷೆಯು, ಈ ಸಾಲಿನಲ್ಲಿ 1,750 ರೂಪಾಯಿಗಳಿಗಿಂತ ಅಧಿಕ ನಷ್ಟದೊಡನೆ ಜರಗಿಸಲ್ಪಟ್ಟಿರುತಿದೆ. ಫೀಸಿನಲ್ಲಿ 330 ರೂಪಾಯಿಗಳು ಜಮೆ ಬಂದಿದ್ದಾಗ್ಯೂ ಇದಕ್ಕಾಗಿ ಎಗ್ಸಾಮಿನರ್‌ಗಳ ಖರ್ಚು ಮಾತ್ರ 2,086 ರೂಪಾಯಿಗಳು ಹಿಡಿದಂತೆ ತಿಳಿಯಬರುತಿದೆ. ಇದರ ಹಿಂದಿನ ಎರಡು ವರುಷಗಳಲ್ಲಿ ಸಹ ಇದರ ಆದಾಯ ವ್ಯಯಗಳೇಕರೂಪವಾಗಿರುತಿವೆ. ಮೆಡಿಕಲ್ ಪರೀಕ್ಷೆಯು ಸಹ ಮೇಲೆ ಕಂಡ ಪರೀಕ್ಷೆಗೆ ಸಹಾಯಕವೆನಿಸಿ ನಷ್ಟರೂಪವಾಗಿ ಪರಿಣಮಿಸಿರುವದಂ ಕಂಡು ಬಹಳ ಚಿಂತಿಸಬೇಕಾಗಿದೆ. ಈ ಪರೀಕ್ಷೆಯಲ್ಲಿ ಫೀಸ್ ಬಾಬತು 3,484 ರೂಪಾಯಿಗಳು ಹುಟ್ಟುವಳಿಯಾಗಿರುತಿವೆ. ಬದಸ್ತೂರ್ ಎಗ್ಸಾಮಿನರ್‌ಗಳ ಖರ್ಚು 5,856 ರೂಪಾಯಿಗಳು ಹೋದರೆ, 2,372 ರೂಪಾಯಿಗಳ ನಷ್ಟ ಪ್ರಾಪ್ತವಾಗಿರುತಿದೆ. ಇದೇ ಪರೀಕ್ಷೆಗಾಗಿ 1891—92 ನೇ ಇಸವಿಯಲ್ಲಿ ಫೀಸ್ ಬಾಬತು ಜಮೆ 3,300 ರೂಪಾಯಿಗಳು, ರುಸುಂಗಳಿಗಾಗಿ ಖರ್ಚು 5,086 ರೂ|| ವಜಾ ಆಗಲಾಗಿ 1,700 ರೂಪಾಯಿಗಳು ನುಕ್ಸಾನಾಗಿರುತಿವೆ ಇದೇರೀತಿ 1890—91 ನೇ ಇಸವಿಯಲ್ಲಿ ಕೂಡ ಸುಮಾರು 1,600 ರೂಪಾಯಿಗಳ ನಷ್ಟವುಂಟಾದಂತೆ ತಿಳಿಯಬರುತಿದೆ.

L. T. ಅಂದರೆ ಲೈಸೆನ್ಷಿಯೇಟ್ ಆಫ್ ಟೀಚಿಂಗ್ ಎಂಬ ಬೋಧನಾಕ್ರಮಾವಿಶೇಷತ ಪರೀಕ್ಷೆಗಾಗಿ ಯೂನಿವರ್ಸಿಟಿಗೆ ಈ ಸಾಲಿನಲ್ಲಿ 634 ರೂಪಾಯಿಗಳು ಖರ್ಚಾಗಿರುತಿವೆ. ಇದರಲ್ಲಿ ಹುಟ್ಟುವಳಿಯಾದ ಫೀಸ್ ಬಾಬತು 1,300 ರೂಪಾಯಿಗಳು, ಎಗ್ಸಾಮಿನರ್‌ಗಳಿಗೆ ಸಂದ ರುಸುಂ ಬಾಬತು 1,934 ರೂಪಾಯಿಗಳು ಪ್ರಸಕ್ತ ಪರೀಕ್ಷೆಯು ಸಹ ವಿಶೇಷ ನಷ್ಟಕಾರಿಯಲ್ಲದಿದ್ದಾಗ್ಯೂ ತತ್ಕಾಲದಲ್ಲದರಿಂದೇನೂ ಲಾಭವಿರುವಂತೆ ತೋರಲಿಲ್ಲವು.

ಈ ವಿಧವಾಗಿ 1892—93 ನೇ ಇಸವಿಯಲ್ಲಿ ಯೂನಿವರ್ಸಿಟಿಯ ಒಟ್ಟು ಹುಟ್ಟುವಳಿ ಮೊಬಲಗು, 1,10,290 ರೂಪಾಯಿಗಳೆಂದು ತಿಳಿಸಿದೆವಷ್ಟೆ, 1885—86 ನೇ ಇಸವಿಯಲ್ಲಿ ಇದಕ್ಕಿಂತಲೂ ಕಡಮೆಯಾಗಿ ಉತ್ಪತ್ತಿಯಾದುದರಿಂದ ಅದು ಮೊದಲು, ಗತ ಸಂವತ್ಸರದ ವರೆಗೆ ಯೂನಿವರ್ಸಿಟಿಯ ನಗದ್ ಆಡಳಿತವು ಬಹಳ ತೃಪ್ತಿಕರವಾಗಿಯೂ ಆದಾಯಕರವಾಗಿಯೂ ಇರುತಿದ್ದ ಅಂಶವು ಇದರಡಿ ನಮೂದಿಸಲ್ಪಡುವ ಸಂಖ್ಯೆಗಳಿಂದ ಸ್ಪಷ್ಟವಾಗುತಿದೆ.

| | | | |
|---|---|---|---|
| 1891—92 | ಸುಮಾರು, | 1,93,000 | ರೂಪಾಯಿಗಳು. |
| 1890—91 | ” | 1,90,000 | ” |
| 1889—90 | ” | 1,86,000 | ” |
| 1888—89 | ” | 1,88,000 | ” |
| 1887—88 | ” | 1,70,000 | ” |
| 1886—87 | ” | 1,61,000 | ” |
| 1885—86 | ” | 1,35,000 | ” |

ಪರಂತು 1885—86 ನೇ ಇಸವಿಯಲ್ಲಿ 9,660 ರೂಪಾಯಿಗಳು ಖರ್ಚು ಜಾತಾ ಯೂನಿವರ್ಸಿಟಿಗೆ ಸಿಲ್ಕು ನಿಂತಿದ್ದವು, ಗತ ವರುಷದಲ್ಲಾದರೋ ಉತ್ಪತ್ತಿಯಾದ ದ್ರವ್ಯವೆಲ್ಲವು ಸಾಲದೆ 3,400 ರೂಪಾಯಿಗಳು ಜಾಸ್ತೀ ಖರ್ಚಾಗಿರುತಿವೆ.

ಹೀಗೆಲ್ಲ ಇದ್ದಾಗ್ಯೂ ಯೂನಿವರ್ಸಿಟಿಯ ಆರ್ಥಿಕಸಂಪತ್ತಿಯು ಬಹಳ ತೃಪ್ತಿಕರವಾಗಿರುವಂತೆ ಭಾವಿಸಬೇಕಾಗಿರುತಿದೆ ಅದೆಂತೆಂದರೆ,—

1857 ನೇ ಇಸವಿಯಲ್ಲಿ ಪ್ರಕಟಿಸಲ್ಪಟ್ಟ ಯೂನಿವರ್ಸಿಟಿಯ ಪ್ರಥಮಸಂವತ್ಸರದ ನಗದ್ ಜಮಾಖರ್ಚು ಆಡಳಿತವಂ ಕುರಿತ ರಿಜಿಸ್ಟ್ರಾರವರ ರಿಪೋರ್ಟಿನೊಳು, ಉತ್ಪತ್ತಿಪ್ರಮಾಣವು ಬಹಳ ಪರಿಮಿತವಾಗಿದ್ದವೆಂದು ತಿಳಿಸಲ್ಪಟ್ಟಿರುತಿದೆ. ಆ ವರುಷದಲ್ಲಿ, ಒಟ್ಟು 1,730 ರೂಪಾಯಿಗಳು ಹುಟ್ಟುವಳಿಯಾಗಿರುತಿವೆ ಇವುಗಳ ಪೈಕಿ ಗವರ್ನಮೆಂಟಿನವರು ಸಹಾಯರೂಪವಾಗಿ ಕೊಟ್ಟ 1,500 ರೂಪಾಯಿಗಳು ಹೋಗಲಾಗಿ, 230 ರೂಪಾಯಿಗಳು ಉಮೇದ್ವಾರರ ಫೀಸ್ ಮೂಲಕ ವಸೂಲಾಗಿರುತಿವೆ. ಈ ಮೊಬಲಗಿನಲ್ಲಿ ಖರ್ಚಾಗಿ ಹೋದವಲ್ಲದೆ ಗವರ್ನಮೆಂಟಿನವರ ಸಹಾಯದಿಂದಲೇ ಪ್ರಥಮ ಸಂವತ್ಸರದ ಆಡಳಿತವು ಜರಗಿಸಲ್ಪಟ್ಟಿತು 1,000 ರೂಪಾಯಿಗಳು ನಾಲ್ಕು ಜನ ಪರೀಕ್ಷಕರಿಗೆ ಮೊಹನತಾನಾಗಿ ಕೊಡಲ್ಪಟ್ಟವು. 243 ರೂ|| ವೃತ್ತಾಂತ ಪತ್ರಿಕೆಗಳಲ್ಲಿ ಕಾಯಿಷಾದ ಪ್ರಕಟನೆಗಳ ಚಾರ್ಜುಗಳಿಗಾಗಿಯೂ, 303 ಪ್ರಿಂಟಿಂಗ್ ಚಾರ್ಜುಗಳಿಗಾಗಿಯೂ ಇತರ ಚಿಲ್ಲರೆ ಬಾಬಗಳಿಗಾಗಿಯೂ ವಿನಿಯೋಗಿಸಲ್ಪಟ್ಟವು. ಅದರ ಮಾರನೆಯ ಸಂವತ್ಸರದಲ್ಲಿ ಅಂದರೆ, 1858—59 ನೆಯ ವರುಷದಲ್ಲಿ ಖರ್ಚು 2,652 ರೂಪಾಯಿಗಳ ವರಿಕ ವೃದ್ಧಿಯಾದಾಗ್ಗೂ ಫೀಸಿನಲ್ಲಿ 500 ರೂಪಾಯಿಗಳೂ ಯೂನಿವರ್ಸಿಟಿ ಕ್ಯಾಲೆಂಡರ್‌ಗಳನ್ನು ಮಾರಿದ್ದರಿಂದ 180 ರೂಪಾಯಿಗಳೂ, ವಸೂಲಾದವು. ಹೀಗೆ 680 ರೂಪಾಯಿಗಳು ಜಾತಾ ಮಿಕ್ಕ ಖರ್ಚು ಮೊಬಲಗೆಲ್ಲವು ಗವರ್ನಮೆಂಟಿನಿಂದ ಕೊಡಲ್ಪಟ್ಟವು.

| | ರೂ. |
|---|---|
| 1859 ನೇ ಇಸವಿಯಲ್ಲಿ ಒಟ್ಟು ಜಮೆ | 7,786 |
| ಗವರ್ನಮೆಂಟಿನವರ ಸಹಾಯ | 7,500 |
| ಒಟ್ಟು ಖರ್ಚು | 7,330 |
| ಜಾತಾ ಸಿಲ್ಕು ... | 455 |
| 1860 ನೇ ಇಸವಿಯಲ್ಲಿ ಒಟ್ಟು ಜಮೆ | 5,255 |
| ಗವರ್ನಮೆಂಟಿನವರ ಸಹಾಯ | 4,800 |
| ಮಾಮೂಲು ಖರ್ಚು ಜಾತಾ ಸಿಲ್ಕು | 100 |

ಹೀಗೆ ನೆಲೆ ಬಸಲೆ ಖರ್ಚುಗಳು ಹೆಚ್ಚುತ ಬಂದಾಗ್ಯೂ ಗವರ್ನಮೆಂಟಿನವರು ಮಾಡುತಬಂದ ವಿಶೇಷ ಧನಸಹಾಯದಿಂದ ಯೂನಿವರ್ಸಿಟಿಯು ನಾದಾರನೆನಿಸಿಕೊಳ್ಳದೆ ಅದರ ಗೌರವವಂ ಕಾಪಾಡಿಕೊಳ್ಳುತ ಬಂತು ಇದಕ್ಕೆ ನಿದರ್ಶನವಾಗಿ ಪ್ರತಿದಶವಾರ್ಷಿಕದ ನಗದಿಯ ಆಡಳಿತವನ್ನು ಇಲ್ಲಿ ಸಂಗ್ರಹವಾಗಿ ತಿಳಿಸುತ್ತೇವೆ —

ಯೂನಿವರ್ಸಿಟಿ ಸ್ಥಾಪಿತವಾದ ಸಂವತ್ಸರದ ಮೊದಲು 1867 ನೇ ಇಸವಿಯ ತನಕ ಮೊದಲನೆಯ ಹತ್ತು ವರ್ಷಗಳ ಅವಧಿಯಲ್ಲಿ ಒಟ್ಟು ಹುಟ್ಟುವಳಿಯು 28,400 ರೂಪಾಯಿಗಳ ತನಕ ವೃದ್ಧಿಯಾಯಿತು. ಆಫೀಸ್ ಶಿಬ್ಬಂದಿ ಖರ್ಚಿಗೆಂದು ಗವರ್ನಮೆಂಟಿನವರು ಆ ಸಾಲಿನಲ್ಲಿ ಮಾತ್ರ 4,000 ರೂಪಾಯಿಗಳನ್ನು ಕೊಟ್ಟರು ಯೆಗ್ಸಾಮಿನರ್‌ಗಳ ರುಸುಂ ಬಗ್ಗೆ 12,700 ರೂಪಾಯಿಗಳು ಕೊಡಲ್ಪಟ್ಟವು. ಉಮೇದ್ವಾರರುಗಳಿಂದ ಫೀಜ್ ಬಾಬತು 8,000 ರೂಪಾಯಿಗಳು ವಸೂಲಾದವು. ಎರಡನೆಯ ದಶವಾರ್ಷಿಕದಲ್ಲಿ ಗವರ್ನಮೆಂಟಿನವರು ಆಫೀಸ್ ಶಿಬ್ಬಂದಿ ಖರ್ಚಿಗಾಗಿ ಕೊಟ್ಟ 4,600 ರೂಪಾಯಿಗಳು ದೇಪಾಲ್ 11,000 ರೂಪಾಯಿಗಳ ವರೆಗಿನ ಖರ್ಚನ್ನು ಅವರು ಸ್ವತಃ ವಹಿಸಿದರು. ಉಮೇದ್ವಾರರ ಫೀಜ್ ಬಾಬತು ಮುವಾಫ್ 39,000 ರೂಪಾಯಿಗಳು ವಸೂಲಾದವಲ್ಲದೆ ಎಗ್ಸಾಮಿನರ್‌ಗಳಿಗೆ 37,400 ರೂಪಾಯಿಗಳು ಕೊಡಲ್ಪಟ್ಟವು. ಮೂರನೆಯ ದಶವಾರ್ಷಿಕದಲ್ಲಿ, ಅಂದರೆ1887ನೇ ಇಸವಿಯಲ್ಲಿ, ಇದರ ಹುಟ್ಟುವಳಿಯು 1,70,300 ರೂಪಾಯಿಗಳ ವರೆಗೆ ಹೆಚ್ಚಿದ್ದಲ್ಲದೆ ಖರ್ಚು ಜಾತಾ 37,500 ರೂಪಾಯಿಗಳು ಉಳಿದವು, ಹಿಂದೆ ತಿಳಿಸಿದಂತೆ ಗವರ್ನಮೆಂಟಿನವರು 15–16 ಸಾವಿರ ರೂಪಾಯಿಗಳಿಗಿಂತ ಜಾಸ್ತಿಯಾಗಿ ಸಹಾಯಮಾಡಿದರು. 1878 ನೇ ಇಸವಿಯಲ್ಲಿ, ಗವರ್ನಮೆಂಟಿನವರು 4,000ರೂಪಾಯಿಗಳಿಗಿಂತ ಕಡಿಮೆಯಾಗಿ ಖರ್ಚನ್ನು ವಹಿಸಿದರು. ಅದರಿಂದೀಚೆಗೆ ಸ್ವಲ್ಪ ಕಾಲದಲ್ಲಿಯೇ ಯೂನಿವರ್ಸಿಟಿಯು ಸಕಲ ಖರ್ಚುಗಳನ್ನು ಅನ್ಯರ ಸಹಾಯವಂ ನಿರೀಕ್ಷಿಸದೆ ಸ್ವತಃ ವಹಿಸುವಷ್ಟರ ಶಕ್ತವಾದುದಾಗಿ ಈಗ ವಿಶೇಷ ಆರ್ಥಿಕಸಂಪತ್ತಿಯುಳ್ಳದ್ದಾಗಿ ಪರಿಗಣಿಸಲ್ಪಟ್ಟಿರುತಿದೆ ಇದರಿಂದ ಗತಿಸಿದ 36 ಸಂವತ್ಸರ ಕಾಲದಲ್ಲಿ ಮದರಾಸ್ ಪ್ರಸಿಡೆನ್ಸಿಯಲ್ಲಿ ಎಷ್ಟರಮಟ್ಟಿಗೆ ವಿದ್ಯಾಭಿವೃದ್ಧಿಯಾಯಿತೋ ಅದು ಇದರಿಂದಲೇ ಜನಗಳು ಊಹಿಸಿ ತಿಳಿದುಕೊಳ್ಳಬೇಕಾಗಿರುತಿದೆ.

## ಸ್ತ್ರೀಜನರಿಗೆ ವಿಶೇಷ ಭಯಂಕರವಾಗಿ ಬರತಕ್ಕ ಜಾಡ್ಯಗಳ ವಿವರಣೆ.

ಗರ್ಭದಲ್ಲಿ ಅಲ್ಪವಾದ ತಾರುಮಾರುಗಳು ಕಾಣಿಸಿದ ಕಾಲದಲ್ಲಿ, ಅವುಗಳಿಗೆ ಚಿಕಿತ್ಸೆ ಮಾಡದೆ ಅಜಾಗ್ರತೆ ಮಾಡಿದ ಪಕ್ಷದಲ್ಲಿ, ಈ ಕೆಳಗೆ ವಿವರಣೆ ಮಾಡಿದ ದುರ್ಗುಣಗಳು ದೇಹದಾರ್ಢ್ಯತೆಯಲ್ಲಿ ಉಂಟಾಗುತ್ತವೆ ಗರ್ಭದಲ್ಲಿರುವ ಯುಕ್ತಿಶಕ್ತಿಯು ಬಿಗಿಸಿ, ನರಗಳ ನಳ್ಳಿಯು ಗರ್ಭಮಧ್ಯದಲ್ಲಿ ಒಂದು ವಿಧವಾದ ಗ್ರಂಥಿ ಉತ್ಪತ್ತಿಯಾಗಿ ಆ ಕಾರಣದಿಂದ ಜಾಡ್ಯಗ್ರಸ್ಥನಿಗೆ ಮರಣವು ಸಂಭವಿಸಿ ಅವನು ಈ ಲೋಕದಿಂದ ವಿಶೇಷ ಕಷ್ಟ ಅನುಭವಿಸುವನು. ಈ ಜಾಡ್ಯವನ್ನು, ಜನರು ನೆಟ್ಟಿಗೆ ಕಾಣದಂತೆ ಅಲ್ಪವಾದ ರೋಗಲೋಗಗಳೆಂತಲೇ ನೆನಸುವರು ; ಇದು ಓದುವ ಜನರು ತಮ್ಮಲ್ಲಿ ತಾವು ತಮಗೆ ಈ ಜಾಡ್ಯಗಳು ಇಂತಾದೆಂಬುವ ಕಾರಣಗಳನ್ನ ನೆನಸಬೇಕು.— ನನಗೆ ಭೋಜನಾನಂತರ, ಉದರವ ವಿನಾಯಿಸಿ, ಪನಿ ಯಿಲ್ಲದ ಸಂಕಟವಾದ ಶ್ವಾಸ ಇತ್ಯಾದಿಗಳು ಉಂಟೆ? ನನ್ನ ಕಣ್ಣುಗಳಲ್ಲಿ ಹಳದಿ ಬಣ್ಣ ಉಂಟೆ? ನನ್ನ ಬಾಯಿಯಲ್ಲಿರುವ ದಂತಗಳ ಸುತ್ತೂ ಸಿಂಬಳದ ಹಾಗೆ ಮೆಟ್ಟಿ, ಅಂಟು, ಮತ್ತು ಬಾಯಿಯಲ್ಲಿ ದುರ್ಗಂಧವಾದ ವಾಸನೆ ಅಥವಾ ನಿಸ್ಸಾರವೆ? ನಾಲಿಗೆಯಲ್ಲಿ ಮಾಂದ್ಯವೆ? ಪಕ್ಕೆಗಳಲ್ಲಿ, ಬೆನ್ನಿನಲ್ಲಿ ನೋವೆ? ಮಲಬದ್ಧವೆ? ತಲೆಯಲ್ಲಿ ತಿರುಗುವಣ ಅಥವಾ ಒಂದುವಿಧವಾದ ಜೋಮು, ತಟಾರಂತ ಏಳುವ ಕಾಲದಲ್ಲಿ ಉಂಟೆ? ಸೋದುವಿಕೆ ಯಕೃತ್ತುಗಳಲ್ಲಿ ಅಲ್ಪವಾಗಿ ವಿಶೇಷವಾಗಲವು ಪರದ ಇದ್ದಕಾರಣದ ಅವುಗಳು ವಿಶೇಷವಾದ ಬಣ್ಣವುಳ್ಳದ್ದೆ? ಭೋಜನವು ಭುಜಿಸಿದ ಕಾಲದಲ್ಲಿ ಅವುಗಳು ಶೀಘ್ರವಾಗಿ ಉಕ್ಕಿ, ಗರ್ಭದಲ್ಲಿ ಅಜೀರ್ಣವಾದ ಬಿಸುಪುಳ್ಳವು ಹೃದಯದಲ್ಲಿ ವಿಶೇಷವಾದ ಅರುಚಿಯೂ ಉಂಟೆ? ಇತ್ಯಾದಿ ಲೋಪಗಳೆಲ್ಲ ಏಕಕಾಲಕ್ಕೆ ಕಾಣಿಸವು, ಆದರೆ ಇವುಗಳು, ಮುಂದೆ ವಿವರಣೆ ಮಾಡಿದ ಪ್ರಕಾರವು ದಿನೇ ದಿನೇ ವೃದ್ಧಿಯಾಗಿ ವಿಶೇಷವಾದ ಅಪಾಯಕ್ಕೆ ಗುರಿಮಾಗುತವೆ. ಇವುಗಳು ವಿಶೇಷಕಾಲವು ಚಿಕಿತ್ಸೆ ಮಾಡದೆ ಬಿಟ್ಟದ್ದ ಪಕ್ಷಕ್ಕೆ ಒಂದುವಿಧವಾದ ಗಳ್ಳುಬ ಶ್ವಾಸದ ಕಮ್ಮಿಗೆ ಪ್ರಾರಂಭವಾಗುತಿದೆ. ತದನಂತರವೂ ಶರೀರದ ಚರ್ಮದಲ್ಲಿ ಅತ್ಯಂತವು ಕಪ್ಪಾದ ಬಣ್ಣವೂ ಉತ್ಪತ್ತಿಯಾಗಿ, ಪಾದಗಳಲ್ಲಿ ಕೈಗಳಲ್ಲಿ, ತೆಳವಾದ ಬೆವರು ಬಂದು ಪ್ರವಹಿಸಿ, ತದನಂತರ ಯಕೃತ್ತುಗಳಲ್ಲಿ ಜಾಡ್ಯವಿಶೇಷಿಸಿ, ವಾತದ ಬನಗಳು ಕಾಣಿಸಿ, ಅವುಗಳಿಗೆ ಎಷ್ಟು ಚಿಕಿತ್ಸೆ ಮಾಡಿದರೂ ಶಾಂತವಾಗದೆ ಕೇವಲ ತೊಂದರೆ ಉಂಟುಮಾಡುತವೆ. ಈ ಜಾಡ್ಯದ ಕಾರಣಗಳೇನೆಂದರೆ,—ಮಾಂದ್ಯ, ಅಜೀರ್ಣಗಳು, ಇವುಗಳಿಗೆ, ಕೇವಲ ಉತ್ತಮವಾದ ಅವುಷಧ ಚಿಕಿತ್ಸೆ, ಈ ಜಾಡ್ಯಗಳ ಆರಂಭದ ಕಾಲದಲ್ಲಿ ಲೀವ ಮಾಡಿದ ಪಕ್ಷದಲ್ಲಿ ಈ ಜಾಡ್ಯಗಳು, ಬೇರದಲ್ಲಿ ಬಲಿಯದಂತೆ ಕೇವಲ ವೃದ್ಧಾಪ್ಯ ವಯಸ್ಸಿನ ವರೆಗೆ, ಜಾಡ್ಯದ ದುರ್ಗುಣಗಳಂ ನಿರ್ಮೂಲಮಾಡಿ ದೇಹಕ್ಕೆ ಅಂಗಗಳಿಗೆ ಬಲವು ತಂದು ಕೊಡತಕ್ಕ ಅವುಷಧವು ತಾಯಿಸಿಗೇಲು ಕಷಾಯವು. ಈ ಕಷಾಯವುಔಷಧಿಗಳ ಎಲೆ ಮೂಲಿಕೆಗಳಿಂದ ಮಾಡಿದಕಷಾಯವು ಸಾಕಷ್ಟು ಯಾವು ಸರ್ವರಾಜ್ಯಗಳಲ್ಲಿ ಕೆಮಿಸ್ಟ್, ಆಸ್ಪತ್ರೆ ಬಜಾರುಗಳಲ್ಲಿ ಕ್ರಯಕ್ಕೆ ಸಿಕ್ಕುತದೆ. ಈ ಕಷಾಯವನ್ನ ಪಾನಮಾಡುವದರಿಂದ ಜಾಡ್ಯದ ಅಸ್ತಿಭಾರಗಳು ಯಾವತ್ತು ನಿರ್ಮೂಲವಾಗಿ, ಸಂದುಸಂದುಗಳಲ್ಲಿರತಕ್ಕ ರೋಗಲೋಪಗಳು ಯಾವತ್ತು ನಿರ್ಮಲವಾಗಿ ಶರೀರಕ್ಕೆ ಬಲವೂ ತೇಜಸ್ಸೂ ಕೊಡುತಿದೆ

A. A.


### ನೋಟಿಸ್.

ಬರುವ ವಾರದೊಡನೆ ಈಸಾಲ್ ಆಖೈರಾಗುವದರಿಂದ ಇದುವರೆಗೂ ಚಂದಾ ಮೊಬಲಗನ್ನು ಕಳುಹಿಸದೆ ಬಾಕೀ ಇಟ್ಟುಕೊಂಡಿರುವವರೆಲ್ಲರು ಈ ತಿಂಗಳ ಆಖೈರೊಳಗಾಗಿ ಬಾಕೀ ಮೊಬಲಗನ್ನು ಕಳುಹಿಸಬದ್ದರೆ ಅವರಿಗೆ ಮುಂದಿನಸಾಲಿನೊಳಪೇಪರ್ ಕಳುಹಿಸಲ್ಪಡಲಾರದು.


BANGALORE —Printed and published at the KARNATAKA PRESS, No. 40, HOSPITAL ROAD, CITY.—1893

# ಕರ್ಣಾಟಕ ಪ್ರಕಾಶಿಕಾ.

# THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

**Published Every Monday Morning.**

ಪ್ರಕಾಮವಿವಿಧವೃತ್ತ್ಯುನಗವಾರ್ತ್ತಕರ್ಣಾಟಕಪ್ರಕಾಶಕನವರಾಭಿಧಾಪ್ರತ್ರಿಕಾಹಿತೀಕೋಭಿತಾ[illegible]

Vol. XX.] BANGALORE—MONDAY, DECEMBER 25, 1893. [No. 51

ಸಂಪುಟ ೨೦.] ಬೆಂಗಳೂರು:—ಸರ್ ೧೮೯೩ನೇ ಇಸವಿ ಡಿಸೆಂಬರ್ ೨೫ ನೇ ತಾರೀಖು ಸೋಮವಾರ. [ಸಂಚಿಕೆ ೫೧


## ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

| | ಸ್ಥಳದವರಿಗೆ. | ಪರಸ್ಥಳದವರಿಗೆ |
|---|---|---|
| ವರ್ಷ ಒಂದಕ್ಕೆ .. | 6—0—0 | 8—0—0 |
| 6 ತಿಂಗಳಿಗೆ .. | 3—8—0 | 4—8—0 |

ಇಂಗ್ಲಿಷ್ ಅಥವಾ ಕನ್ನಡ ಭಾಗಗಳಿಗೆ.

| | ಸ್ಥಳದವರಿಗೆ, | ಪರಸ್ಥಳದವರಿಗೆ. |
|---|---|---|
| ವರ್ಷಕ್ಕೆ ... .. | 3—0—0 | 4—0—0 |
| 6 ತಿಂಗಳಿಗೆ .. ... | 1—12—0 | 2—8—0 |

ಈ ಪತ್ರಿಕೆ [illegible] ಮಾಡಿದ ತಾರೀಖ್ ಮೊದಲು ಹಿಂದಿನ ತಿಂಗಳಿಗೆ [illegible] ಚಂದಾ ಮೊಬಲಗು ಕಳುಹಿಸುವ ವರೆಗೆ [illegible] ಪತ್ರಿಕೆ ಕಳುಹಿಸಲ್ಪಡುವದು. ಚಂದಾದಾರರು ಇಂಗ್ಲಿಷ್ [illegible] ಕನ್ನಡ [illegible] ತಿಳಿಸಬೇಕು [illegible] ತಿಂಗಳಿಗಿಂತ ಕಡಿಮೆಯಾಗಿ ಚಂದಾ ತೆಗೆದುಕೊಳ್ಳಲ್ಪಡುವದಿಲ್ಲ.

### ಪ್ರಕಟನೆಯ ದರಗಳು.

ಮೊದಲನೆಯ ಸಾರಿ ಪಂಕ್ತಿ ಒಂದಕ್ಕೆ ೦—೨—೦

ಎರಡನೇ ಸಾರಿ ಪಂಕ್ತಿ ಒಂದಕ್ಕೆ ೦—೧—೦

ಸರಾಸರಿ ದರಗಳಿಗಿಂತ [illegible] ಒಂದಕ್ಕೆ ೧ ಆಣೆ [illegible] ಈ ಪತ್ರಿಕೆಯಲ್ಲಿ ಕಾಮು [illegible] ಪ್ರಕಟನೆಗಳನ್ನು ಕಳುಹಿಸುವವರು ಅವು ಎಷ್ಟು ಸಾರಿ ಪ್ರಕಟಿಸಬೇಕೋ ಅದನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಿದ್ದರೆ [illegible] ಪ್ರಕಟಿಸಲ್ಪಡುವದು [illegible] ಪತ್ರಿಕೆಗೆ [illegible]

*ADVERTISEMENTS.*


NOTICE.

VAIDYASARA SANGRAHA.

A TREATISE ON THE PRINCIPLES OF HINDU MEDICINE.

*Price including Postage Rs.* 4–8–0

ವೈದ್ಯಸಾರ ಸಂಗ್ರಹ.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೇ ಹಾಸಲ್ ಸಹಾ, ಪ್ರತಿ ಒಂದಕ್ಕೆ ರೂ ೪—೮—೦

## ನೋಟೀಸ್

### ಬೆಂಗಳೂರು ಕರ್ಣಾಟಕ್ ಪ್ರೆಸ್.

ಸ್ಥಾಪನೆ: ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ ಸಕಲವಿಧ ಕೆಲಸಗಳು ಸುಲಭ ಛಾರ್ಜಿಗೆ ಶೀಘ್ರವಾಗಿಯೂ ಸ್ವಚ್ಛವಾಗಿಯೂ, ಮಾಡಲ್ಪಡುವವು. ಇದರಲ್ಲಿ ಸದ್ಯಕ್ಕೆ ಇಂಗ್ಲಿಷ್ ಕನ್ನಡ ಕೆಲಸಗಳು ಮಾತ್ರ ನಡೆಯುತ್ತವೆ. ಇತರ [illegible] ಕರ್ಣಾಟಕ್ [illegible] ಶೀಘ್ರದಲ್ಲಿ ತರಿಸಲ್ಪಡುವುವು.

## ನೋಟೀಸ್

### ಗಣೇಶ (ಬಾಪುಚಂದು) ಕರ್ಕ್ ಮತ್ತು ಕಂಪೆನಿ. ಕಮ್ಮಿಷನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯೊಡನೆ ವ್ಯಾಲ್ಯು ಪೇಯಬಿಲ್ ಪೋಸ್ಟ್ ಮೂಲಕ ತಕ್ಕ ಕಮ್ಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರದ ವಿಗ್ರಹಗಳು, ಪುಸ್ತಕಗಳು, ಮುತ್ತುಗಳು, ಚಿಪ್ಪು ಮುತ್ತುಗಳು, ಛಡಿಯಾರಗಳು, ವಾಚುಗಳು, [illegible] ಪಿನ್ನುಗಳು, ಕಾಶ್ಮೀರ ಶಾಲುಗಳು, ಪಟ್ಟೆಸೀರೆಗಳು, ಜರತಾರಿ ಕಣಗಳು, ಚಂದ್ರಕಾಂತ ಮಣಿ ಕನ್ನಡಕಗಳು, ಮುಖಸಿಗೆ [illegible] ಜರತಾರಿ ಟೋಪಿಗಳು, ಅಫೀಸ್ ಪೆನ್ನುಗಳು, ಪರ್ಸುಗಳು, ಅತ್ತರುಗಳು, ಅತ್ಯುತ್ತಮವಾಗಿರುವ ರತ್ನಗಳು, ಛಂಗಾರದಿಂದ ಕಟ್ಟಲ್ಪಟ್ಟ ಉಂಗುರಗಳು, ಪಾತ್ರೆಗಳು, ಜರ್ಮನ್ ಸಿಲ್ವರ್ ಪಾತ್ರೆಗಳು, ಕೇಸರಿ, ಕಸ್ತೂರಿ ಮೊದಲಾದ ಇತರ ಸಾಮಾನುಗಳು.

ಜವಾಬ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟಾಂಪ್ ಕಳುಹಿಸಿದ ಮೇಲೆ ಜವಾಬ ದೊರೆಯಬಹುದು.

ವಿಳಾಸ—ಗಣೇಶ ಬಾಪುಚಂದು ಕರ್ಕ್, ಮತ್ತು ಕಂಪೆನಿ, ಕಮ್ಮಿಷನ್ ಏಜಂಟ್ಸ್, ಠಾಕುರದ್ವಾರ, ಮಾರ್ಕೆಟ್ ಪೋಸ್ಟ್, ಮುಂಬೈ.

## ನೋಟೀಸ್

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

### ಸಂಸ್ಕೃತ ಗ್ರಂಥಗಳು

| | ರೂ. ಆ. ಪೈ |
|---|---|
| ಪದ್ಯೇಕಾ ಶಿವಗೀತ | ೧ ೦ ೦ |
| „ ವೇದಾಂತಸಾರ | ೦ ೪ ೦ |
| „ ಶಾಲಾಮೃತ | ೦ ೦ ೦ |
| „ ಬಾಲರಾಮಾಯಣ ... | ೦ ೩ ೦ |
| „ ಗೂಢಾರ್ಥ ಗೀತೆ .. | ೦ ೧ ೦ |
| „ ಚಾಣಕ್ಯನೀತಿ (ಸುಭಾಷಿತ) | ೦ ೪ ೦ |
| ವಿಷ್ಣು ಸಹಸ್ರನಾಮ ಪತ್ರಿಕೆ | ೦ ೩ ೦ |
| ಸೂರ್ಯಸಹಸ್ರನಾಮ | ೦ ೨ ೦ |
| ಕೃಷ್ಣಕರ್ಣಾಮೃತ | ೦ ೨ ೦ |
| ತ್ರಿಶತೀ ಅಮರ ಮೂಲ | ೦ ೨ ೦ |
| ೧ ಕಾಂಡ ಟೀಕಾ | ೦ ೧ ೦ |

### ಕನ್ನಡ ಗ್ರಂಥಗಳು.

| | |
|---|---|
| ಕುಕಸಪ್ತತಿ ಅವ್ವಲ್ | ೩ ೦ ೦ |
| ಕೀಟಕ ದುಮ್ಮಂ | ೧ ೨ ೦ |
| ವೃಷಭೇಂದ್ರವಿಜಯ | ೧ ೪ ೦ |
| ಪಂಚತಂತ್ರ ಶಾಲಾಕೀತಿ | ೦ ೩ ೦ |
| ಹನುಮದ್ವಿಲಾಸ | ೦ ೬ ೦ |
| ಕಾಳೀಂಗಮರ್ದನ | ೦ ೨ ೦ |
| ಸುಭದ್ರಾಪರಿಣಯ | ೦ ೨ ೦ |
| ಸೀತಾಪರಿಣಯ | ೦ ೨ ೩ |
| ಸುದಾಮಚರಿತ್ರೆ | ೦ ೧ ೦ |
| ಸ್ಯಮಂತಕ ಚರಿತ್ರೆ | ೦ ೧ ೬ |
| ಬಾಲಗ್ರಹಚಿಕಿತ್ಸೆ | ೦ ೦ ೦ |
| ಮಹಿಷ್ಮರ್ದನ ಲಾ | ೦ ೦ ೦ |
| ಬ್ರಹ್ಮಾಂಡಪುರಾಣ | ೦ ೧೦ ೦ |

## ಸೂರಿ ಅಂಡ್ ಕಂಪೆನಿ.

### ಟ್ರೇಡರ್ಸ್ ಮತ್ತು ಏಜಂಟ್ಸ್, ಪುನಾ

ರಕ್ತವು ಮನುಷ್ಯನ ಜೀವರೂಪವಾಗಿಯೂ ಅಂತಾ ರಕ್ತವೂ ಜೀವವು ಸಹ ವಿದ್ಯುಚ್ಛಕ್ತಿ ರೂಪವಾಗಿಯೂ ಇರುತಿದೆ.

ಪುನಾ ಪಟ್ಟಣದಲ್ಲಿರುವ ಸೂರಿ ಅಂಡ್ ಕಂಪೆನಿಯವರು ಜನರಲ್ ಟ್ರೇಡರ್ಸ್ ಮತ್ತು ಏಜಂಟ್‌ಗಳಾಗಿರುತ್ತಾರೆ ಇವರು ಅನುಭವಸಿದ್ಧಗಳಾಗಿಯೂ, ಉತ್ತಮ ಗುಣಗಳು ಪ್ರಸಿದ್ಧವಾಗಿಯೂ ಇರುವ ಔಷಧಗಳ ಮತ್ತು ಮಿಂಚಿನ ಒಡವೆಗಳ [illegible] ಇರುತ್ತಾರೆ. ಅನೇಕತರದ ವಸ್ತುಗಳ [illegible] ಮುಖ್ಯವಾಗಿ, ಡೆಕ್ಕನ್ [illegible] ಭಾರೀ ಗಿರಣಿ [illegible] ವ್ಯಾಪಾರ [illegible] ಇವರನ್ನು ಅನೇಕರಿ ಏಜಂಟರನ್ನಾಗಿ ನಿಯಮಿಸಿರುತ್ತಾರೆ.



೧ ಪ್ರವಾಸ ಗೃಹ ವೈದ್ಯ ಪೆಟ್ಟಿಗೆಯು.—ಇದು ೨೦ ವಿಧ ಔಷಧಗಳ ಪೆಟ್ಟಿಗೆಯು.—ಇದರ ಕ್ರಯ ಪೋಸ್ಟಲ್ ಹಾಸಲ್ ಸಹ ಪೆಟ್ಟಿಗೆ ಒಕ್ಕೆ ೧೦ ರೂಪಾಯಿ ಇದರೊಡನೆ ಅನುಭವ ಕ್ರಮ ಪಟ್ಟಿಗೆ ದೊರೆಯುವುದು. ಮುಂಗಡವಾಗಿ ಹಣ ಕಳುಹಿಸಲ್ಪಡದ ಹೊರತು ಇದು ಕಳುಹಿಸಲ್ಪಡಲಾರದು.

ಮಿಸ್ಟರ್ಸ್ ಸೂರಿ ಅಂಡ್ ಕಂಪೆನಿಯವರು ಹೊಸದಾದ [illegible] ಪುನರಾದ್ದಲ್ಲಿರುವ ತಮ್ಮ ಕಾರ್ಖಾನೆಯೊಳು [illegible] ಸುಲಭವಾಗಿಯೂ ಇರುವಂತೆ ತಯಾರು ಮಾಡುತ್ತಾರೆ. ವಿದ್ಯಾವಂತ [illegible] ಜನಸಮ್ಮತಿಯನ್ನು [illegible] ನಮ್ಮ ವೇಳಾಂತರ [illegible] ತಿಳಿಸುತ್ತಾರೆ. ಸದರೀ ಕಂಪೆನಿಯವರು ತಮ್ಮ ನೇಕ ಬಾಂಧವರಿಗೆ ಇದರ ಕಂಡ [illegible] ಮಾಡಿರುತ್ತಾರೆ. ಇದರಡಿ ಪ್ರಸ್ತಕ್ತ [illegible] ವಿನಯಪೂರ್ವಕ [illegible] ತಮ್ಮ ಕರ್ತವ್ಯವೆಂದು ಭಾವಿಸಿರುತ್ತಾರೆ.

೧ ದುಡ್ಡಿಗೊಂದು ಪಂಚಾಂಗವು—ಇದು ಬಾ [illegible] ಮುಂದಿನ ವರುಷದಷ್ಟು ರವರೆಗಿನದಾಗಿರುತಿದೆ. ಇದರ ೧೦೦ ಪ್ರತಿಗಳಿಗೆ ಪೋಸ್ಟಲ್ ಹಾಸಲ್ ಸಹ ರೂ॥ ೧—೪—೦

೨. ಒಂದು ದುಡ್ಡಿಗೆ ೨ ದೀಪ ಕಾಯಿಯು.—ಇದು ಪ್ರೈವೇಟ್ ಸೆಕ್ರೆಟರಿ [illegible] ಬ್ಲಾಕ್ [illegible] ಇರುವ [illegible] ಬರೆಯುವಾಗ [illegible] ಕಾಗದ [illegible] ಒಂದೆ ಅಕ್ಷರ [illegible] ತೆಗೆಯುತ್ತದೆ. [illegible] ಎಷ್ಟು ಬೇಕೋ ಅಷ್ಟು ಇಂಕಿ ಮಾಡಿಕೊಳ್ಳ ಬಹುದಾಗಿದೆ. ೧೦೦ ಪೊಟ್ಟಣಗಳಿಗೆ ಕ್ರಯ ರೂ॥ ೧—೮—೦, ಪೋಸ್ಟಲ್ ಛಾರ್ಜ ೦—೩—೦. ಇದರಂತೆ ಕೆಂಪು, ಹಸುರು, ನೀಲಿ, [illegible] ಸಹ ಇರುತಿವೆ, ಇನ್ನೂರು ಪೊಟ್ಟಣಗಳಿಗೆ ಪೋಸ್ಟಲ್ ಹಾಸಲ್ ಸಹ ೩ ರೂಪಾಯಿಗಳು.

೩. ದುಡ್ಡಿಗೊಂದು ಫಲಹಾರವು.—ಕೆಂಪಾಗಿ [illegible] ಅಕ್ಷರ [illegible] ಇದು [illegible] ಪ್ರತೀ [illegible] ಶುದ್ಧವಾದ [illegible] ಇರುತಿದೆ. ಈ [illegible] ಗವರ್ನಮೆಂಟಿನವರು ಆಸ್ಪತ್ರೆಗಳಲ್ಲಿ ಉಪಯೋಗಿಸಬೇಕೆಂದು ಶಿಫಾರಸ್ ಮಾಡಿರುತ್ತಾರೆ.

೪. ದುಡ್ಡಿಗೊಂದು ಪಿತ್ತಾಳೆಯ ತಿಕ್ಕ್ಯಾವೆಯು.—ಇದು ಪೂಜೆ ಪ್ರಸಂಗಗಳಲ್ಲಿ [illegible] ಸೃಂಗಾರವಾದ [illegible] ಹೆಚ್ಚು ಹೊಳೆಯ ವಸ್ತುವಾಗಿರುತ್ತದೆ. ೧೦೦ ಬಟ್ಟುಗಳ ಕ್ರಯ ೧—೨—೦ ಪೋಸ್ಟಲ್ ಛಾರ್ಜ್ ೦—೨—೦.

೫. ಸೂರಿ ಅಂಡ್ ಕಂಪೆನಿಯವರ ಮಿಂಚಿನ ಒಡವೆಗಳು.—ಮಿಂಚಿನ ಒಡವೆಗಳನ್ನು ಧರಿಸುವದರಿಂದ ರಕ್ತಸಂಬಂಧವಾದ ಮತ್ತು ಪಕ್ಷವಾತಾದಿಗಳು, ಸದುರೆ [illegible] ಉಬ್ಬಸ, [illegible] ನರಗಳ ಶೀಘ್ರ ಪಿತ್ತದಿಂದ ಎದೆಯಲ್ಲಿ ಉರಿ, ಬಲ್ಲತರದ ತಲೆನೋವು, ಅಸ್ವಸ್ಥತ ರೋಗ ವಿಕಾರಗಳು, ಮಕ್ಕಳ ಪಾಲುಗ್ರಹ ಪ್ರಯುಕ್ತವಾದ ದೋಷಗಳು, ರಕ್ತಗುಂದುವದು, ಹೆಂಗಸರಿಗೆ ಮೈಮುರಿಯುವದು, ಹೊಟ್ಟೆಯಲ್ಲುಂಟಾಗುವ ವಾಯು ಗಟ್ಟಿ [illegible] ಎಲ್ಲಾ ರೋಗಗಳು ಶೀಘ್ರದಲ್ಲಿ ಶೀಘ್ರ ಸರಿಯಾಗಿ ಇವು ಪರಿಹಾರವಾಗುತಿವೆ. ವಿದ್ಯುನ್ಮಾತಾರಿಕೆಯು ಧಾರಣೆಯಿಂದ ಸ್ವರ್ಶಜನ್ಯ ರೋಗಗಳು, ಸಂಭವಿಸಲಾರದೆಂಬದು ಅನುಭವಕ್ಕೆ ಬಂದಿರುತಿದೆ.

ಇದರ ಕ್ರಯ ಪಟ್ಟಿಗೆ ಇಲ್ಲಿಗೆ.

| | | |
|---|---|---|
| ಪಿತ್ತಾಳೆ ಉಂಗುರ | ... | ೧ ೮ ೦ |
| ಟಿಪ್ಪಣಿ ಪದಕ | ... | ೧ ೦ ೦ |
| ಜರ್ಮನ್ ಸಿಲ್ವರ್ ಉಂಗುರ | ... | ೧ ೧೨ ೦ |
| ಡಿಟೋ ಪದಕ | ... | ೧ ೪ ೦ |
| ನಾಟಾ ಬೆಳ್ಳಿ ಉಂಗುರ | ... | ೨ ೪ ೦ |
| ಡಿಟ್ಟೋ ಪದಕ | ... | ೨ ೦ ೦ |
| ಚೇನು | ... | ೧ ೪ ೦ |
| ವಿದ್ಯುನ್ಮಾತಾರಿಕೆ | ... | ೧ ೦ ೦ |

ಯಾರಿಗೆ ಯಾವತರದ ಮಾಲ್ ಬೇಕಾಗಿದ್ದಾಗ್ಯೂ ವ್ಯಾಲ್ಯು ಪೇಯಬಿಲ್ ಮೂಲಕ ಕೊಡಲೇ ರವಾನಿಸಲ್ಪಡುವವು.

ಎಲ್ಲಾ ತರದ ಪತ್ರವ್ಯವಹಾರಗಳನ್ನು ಈ ಕೆಳಗೆ ಕಂಡವರಿಗೆ ಬರೆಯಬೇಕು ಜವಾಬ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟಲ್ ಟಿಕೇಟ್ ಸಹಿತ ಬರೆಯತಕ್ಕದ್ದು.

ರಾ॥ ಕೆ. ಕೃಷ್ಣಶಾಸ್ತ್ರಿ, ಏಜಂಟ್.

ಸೂರಿ ಅಂಡ್ ಕಂಪೆನಿ.

ರವಿವಾರ ಪೇಟೆ, ಪುನಾ.

ಅಥವಾ ಇವರ ಏಜಂಟರಾದ ಈಕೆಳಗೆ ಬರುವ ಮಾಡಿ ರವರಿಗೆ ಬರೆಯತಕ್ಕದ್ದು.

ಟಿ. ಬಿ. ವೆಂಕಟಾಚಾರ್,

೪೮ ನೇ ನಂಬರ್, ಹಾಸ್ಪಿಟಲ್ ರೋಡ್, ಪೇಟೆ, ಬೆಂಗಳೂರು.

## NOTICE.

### "ಆಂಗ್ಲೋ ಇಂಡಿಯನ್ ಪಾಕೆಟ್‌ಡೈರಿ"

ನಾವು ಪ್ರತಿ ವರ್ಷದಲ್ಲಿಯೂ ಪ್ರಚುರ ಪಡಿಸುತಲಿರುವ ದೇಶಿಗೆ ಸರ್ವರಿಗೂ ಬಹಳ ಉಪಯುಕ್ತವಾಗಿರುವಂತೆ ಇಂಗ್ಲಿಷ್ ತಿಂಗಳ ಕ್ಯಾಲೆಂಡರ್, ಇದಕ್ಕೆ ಸರಿಯಾದ ನಮ್ಮ ಹಿಂದೂ ಸಂವತ್ಸರ, ತಿಂಗಳು, ತಿಥಿ, ವಾರ, ನಕ್ಷತ್ರ ಸಹಿತ ವಾಗಿಯೂ, ಇನ್ನೂ ಅವಶ್ಯಕವಾಗಿ ತಿಳಿಯಬೇಕಾದ ಸಂಗತಿಗಳು, ರೈಲ್ವೇ ಸ್ಟೇಷನುಗಳು, ಅಲ್ಲಿಗೆ ರೈಲ್ವೇ ಛಾರ್ಜ್ ಪೋಸ್ಟಾಫೀಸ್ ರೂಲ್ಸ್, ಮುಂತಾದ ವಿಶೇಷ ಸಂಗತಿಗಳನ್ನು ಒಳಗೊಂಡಿರುವ ೧೮೯೪ ನೇ ಇಸವಿಯ ಡೈರಿ ಪುಸ್ತಕವನ್ನು ವಿಕ್ರಯಕ್ಕೆ ಸಿದ್ಧಪಡಿಸಿರುತ್ತೇವೆ.

ಕ್ರಯ ಪ್ರತಿ ಒಕ್ಕೆ ಟಪಾಲ್ ಹಾಸಲ್ ಸಹಿತ ೦—೩—೬

[illegible] ಪ್ರತಿ ಒಟ್ಟಿಗೆ ತರಿಸಿಕೊಳ್ಳತಕ್ಕವರಿಗೆ ೧ ಪ್ರತಿ ಜಾಸ್ತಿಯಾಗಿ ಕಳುಹಿಸುತ್ತೇವೆ. ಬೇಕಾದವರು ಈ ಕೆಳಗೆ ಸ್ಥಳ ಮಾಡಿರುವವರ ಹೆಸರಿಗೆ ಬರೆದು ತರಿಸಿಕೊಳ್ಳಬಹುದು. ಪ್ರತಿ [illegible] ರಿಜಿಸ್ಟರ್ ಹಾಸಲ್ ೨ ಆಣೆ ಜಾಸ್ತಿ ಕಳುಹಿಸಿ ಕೊಡಬೇಕು. ಅಪೇಕ್ಷೆಯುಳ್ಳವರು ವಿಳಾಸ ವಗೈರೆಯನ್ನು ಸ್ಪಷ್ಟವಾಗಿ ತಿಳಿಸುವಂತೆ ಬೇಡುವೆವು.

ನಂ—೧೨.} ಸತ್ಯಂ ಚಂದ್ರಶೇಖರಯ್ಯ, ಪ್ರೊಪ್ರೈಟರ್, "ವಿದ್ಯಾರ್ಥಿ ಪಬ್ಲಿಷರ್ಸ್ ಸ್ಟ್ಯಾಂಡರ್ಡ್ ವೈಲರ್"

## ಹೊಸೂರ್ ರಿಮೌಂಟ್ ಇಲಾಖೆ

### ನೋಟಿಸ್

ಇದರಿಂದ ಸಮಸ್ತ ಜನಗಳಿಗೂ ತಿಳಿಯುವ ಪಡಿಸುವದೇನಂದರೆ:—

ಸನ್ ೧೮೯೪ನೇ ಇಸವಿ ಏಪ್ರಿಲ್ ಗುರ್ರೀ ತಾರೀಖ್ ಮೊದಲು ೧೮೯೫ ನೇ ಇಸವಿ ಮಾರ್ಚಿ ೩೧ನೇ ತಾರೀಖ್‌ವರಿವಿಗೆ, ಹೊಸೂರ್ ರಿಮೌಂಟ್ ಇಲಾಖೆಗೆ ಇದರಡಿ ನಮೂದ್ ಮಾಡಲ್ಪಡುವ ಜಿನಿಸಿಗಳು ಬೇಕಾಗಿರುವದರಿಂದ ಅವುಗಳ ಸರಬರಾಯಿ ಬಗ್ಗೆ ಬರುವ ಮೊಹರ್ ಮಾಡಲ್ಪಟ್ಟ ದರಖಾಸ್ತುಗಳನ್ನು, ರಿಮೌಂಟ್ ಡಿಪೋ ಸೂಪರಿಂಟೆಂಡೆಂಟರವರು ಸನ್ ೧೮೯೪ನೇ ಇಸವಿ ಜನವರಿ ೯ನೇ ತಾರೀಖ್ ಮಂಗಳವಾರ ಮಧ್ಯಾಹ್ನ ೧೨ ಘಂಟೆಯ ವರಿವಿಗೆ ಬರಮಾಡಿಕೊಳ್ಳುವರು.

ಅದನ್ನು ಕುರಿತ ಜಾಸ್ತೀ ತಪಸೀಲುಗಳನ್ನು ತಿಳಿದುಕೊಳ್ಳಬೇಕಾದವರು ೧೮೯೩ ನೇ ಇಸವಿ ಡಿಸಂಬರ್ ೨೨ ನೇ ತಾರೀಖಿನ್ಯ ೪೭ನೇ ನಂಬರ್ ಪ್ರೋವಿನ್ಸಿಯಲ್ ಗೆಜೆಟಿನ ೭ ನೇ ಭಾಗದ ೧೭೩೯ನೇ ಪುಟವನ್ನು ನೋಡಿ ತಿಳಿದುಕೊಳ್ಳತಕ್ಕದ್ದು.

ಹುರಳಿ.
ನೆಲ್ಲುಹುಲ್ಲು.
ರಾಗೀಹುಲ್ಲು.
ಹಸೀಹುಲ್ಲು.

ರಿಮೌಂಟ್ ಡಿಪೋ, ಹೊಸೂರ್, ೧೯—೧೨—೯೩ } W. T ADAMI, VETY MAJOR, For Supdt, Remt. Depot

## THE MONEY MARKET.

**Stocks, Shares and Exchange.**

ಮದರಾಸ್, ಶನಿವಾರ, ತಾರೀಖ್ 23ನೇ ಡಿಸಂಬರ್, 1893
ಸೇಕಡ ೪ರೂ. ಬಾಬತು ಇಂಡಿಯ ಗವರ್ನಮೆಂಟ್ ಪತ್ರಗಳ 105–0–0ರೂ.ಗೊಂಡ 105–8–0 ರೂ. ವರೆಗೆ
ಸೇಕಡ ಮೂರುವರೆ ರೂ ಬಾಬತ್ತು ಗವರ್ನಮೆಂಟ್ ಪತ್ರಗಳು, 98–8–0 ರೂ. ಗೊಂಡ 99–0–0 ವರೆಗೆ
ಮದರಾಸ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತು, 990–0–0ರೂ ಗೊಂಡ1000–0–0ವರೆಗೆ
ಕಮರ್ಷಿಯಲ್ ವ ಲ್ಯಾಂಡ್ ಮಾರ್ಟಗೇಜ್ ಬ್ಯಾಂಕ್ ಷೇರುಗಳು, (100ರೂ) ಬಾಬತು 150–0–0ರೂ ಗೊಂಡ 155–0–0 ರೂ ವರೆಗೆ,
ಸವರನಗಳು, ದರ 1 ಕ್ಕೆ 15–14–0 ರೂಪಾಯಿಗಳಿಂದ 16–1–0 ರೂ. ವರೆಗೆ,
ಲಂಡನ್ ಬ್ಯಾಂಕಿನಮೇಲೆ ಕೊಡಲ್ಪಡುವ ಬ್ಯಾಂಕ್ ಬಿಲ್ ಯಾನೆ ದರ್ಶನ ಹುಂಡಿಗಳು —
6 ತಿಂಗಳ ವಾಯಿದೆಗೆ...1 s. 3 3/4 d.
4 „ ...1 s. 3 3/16d.
ಕೇಳಿದಾಗ ಕೊಡಲ್ಪಡುವದಕ್ಕೆ ..1 s. 3 3/32d


# ಕರ್ಣಾಟಕ ಪ್ರಕಾಶಿಕಾ.

**THE KARNATAKA PRAKASIKA.**

MONDAY, DECEMBER 25, 1893.
೧೮೯೩ ನೇ ಇಸವಿ ಡಿಸಂಬರ್ ೨೫ ನೇ ಸೋಮವಾರ


## ಸ್ವವಿಷಯ.

ನಾವು ಈ ಪತ್ರಿಕೆಯಂ ಮೊದಲ ಪ್ರಕಟನ ಆರಂಭಿಸಿ ಈವಾರದೊಡನೆ ಅಖಂಡವಾಗಿ ಇಪ್ಪತ್ತು ಸಂವತ್ಸರಗಳು ಗತಿಸಿದವು — ಹೀಗೆ ಗತಿಸಿದಂತಾ ದೀರ್ಘಕಾಲದಲ್ಲಿ ಪ್ರಾಪಂಚಿಕಗಳಾದ ಅನೇಕ ವಿಷಯಗಳು ರೂಪಾಂತರಗಳನ್ನೈದಿದರೂ ಈ ಪತ್ರಿಕೆಯ ಸ್ಥಿತಿ ಮಾತ್ರ ಏಕರೂಪವಾಗಿತ್ತಲ್ಲದೆ ಇದು ಶ್ರೀಭಗವಂತನ ಅನುಗ್ರಹದಿಂದಲೂ, ಸ್ವದೇಶೀಯರ ಪ್ರೋತ್ಸಾಹಾಭಿಮಾನದಿಂದಲೂ ಇದುವರೆಗೆ ಉಜ್ಜೀವಿಸಿರುವಂತೆ ಎಣಿಸಿರುತ್ತೇವೆ. ಈ ಪತ್ರಿಕೆಯ ಚಂದಾದಾರರು ಇದುವರೆಗೆ ಉಂಟುಮಾಡಿದ ಪ್ರೋತ್ಸಾಹಕ್ಕಾಗಿಯೂ, ಇತರ ಸಹಾಯಗಳಿಗಾಗಿಯೂ ಅವರ ವಿಷಯದಲ್ಲಿ ನಾವು ಬಹಳ ಕೃತಜ್ಞರಾಗಿರುತ್ತೇವೆ. ನಾವು ಪತ್ರಿಕೆಯೊಳು, ಇದುವರೆಗೆ ವಿಚಾರ ಮಾಡುತಬಂದ ವಿಷಯಗಳು ಕಾಲ ದೇಶ ಸ್ಥಿತಿಯನ್ನನುಸರಿಸಿದವಾಗಿಯೂ, ಹಿಂದೂಗಳ ಹಕ್ಕುದಾರಿಯನ್ನೂ ಮರ್ಯಾದೆಗಳನ್ನೂ ಪೋಷಿಸತಕ್ಕವಾಗಿಯೂ ಇರುತಲಿದ್ದುದರಿಂದ ಈ ಪತ್ರಿಕೆಯು ಚಂದಾದಾರರೆಲ್ಲರಿಗೂ ಸಂತೃಪ್ತಿಯನ್ನುಂಟುಮಾಡುತ ಬಂತೆಂಬ ಅಂಶವು ಅನೇಕ ದೃಷ್ಟಾಂತಗಳಿಂದ ಆಗಿಂದಾಗ್ಯೆ ನಮ್ಮ ತಿಳುವಳಿಕೆಗೆ ಬರುತಲಿತ್ತು. ಇದಕ್ಕೆ ಇತರ ಪತ್ರಿಕೆಗಳಂತೆ ಅರ್ಥೋಪಪತ್ತಿಯು ಅಧಿಕವಾಗಿಲ್ಲದಿದ್ದರೂ ಇದು ಕೇವಲ ಚಂದಾದಾರರ ಸಹಾಯದಿಂದಲೇ ಜರಿಗಿಸಲ್ಪಡುತಲಿರುವದರಿಂದ, ಅವರ ಅನುಕೂಲ್ಯವಂ ಪರ್ಯಾಲೋಚಿಸಿ ಪತ್ರಿಕೆಯ ದರವು ಆರು ರೂಪಾಯಿಗಳಿಂದ ೫ ರೂಪಾಯಿಗಳಿಗೆ ತಗ್ಗಿಸಲ್ಪಟ್ಟಿತು. ಮೈಸೂರು ದೇಶೀಯರ ಇಷ್ಟಾನಿಷ್ಟಗಳನ್ನು ಕುರಿತು ವಿಚಾರಮಾಡುತ ಅವರ ಅಪೇಕ್ಷಿತಾಂಶಗಳನ್ನು ಆಗಿಂದಾಗ್ಗೆ ಆಳತಕ್ಕವರ ಅವಧಾನಕ್ಕೆ ತರಬೇಕಾದ್ದು ಇದರ ಮುಖ್ಯಕಾರ್ಯವಾಗಿರುವದರಿಂದಲೂ, ಇಂಗ್ಲಿಷ್ ಭಾಷಾ ಪ್ರಚುರ್ಯವು ಈಗ ದೇಶದೊಳು ಸರ್ವತ್ರ ವಿಶೇಷವಾಗಿರುವದರಿಂದಲೂ, ಇಂಗ್ಲಿಷ್ ಕನ್ನಡ ಭಾಗಗಳನ್ನು ಪ್ರತ್ಯೇಕಿಸಿ ಒಂದೇ ಅಂಕಿತದೊಡನೆ ಎರಡು ಪತ್ರಿಕೆಗಳಂ ಮುದ್ರಿಸಲುಪಕ್ರಮಿಸಿದೆವು. ಹಾಗೂ ಹನ್ನೆರಡುವರೆ ವರ್ಷಗಳು ಗತಿಸಿದವು. ವೃತ್ತಾಂತ ಪತ್ರಿಕೆಗಳ ಪ್ರಯೋಜನಾ ಪ್ರಯೋಜನಗಳನ್ನೂ ಅವುಗಳ ಆವಶ್ಯಕತಾನಾವಶ್ಯಕತೆಗಳನ್ನೂ ಅರಿತು ಗುಣದೋಷ ವಿಮರ್ಶೆಯಂ ಮಾಡಲಿಕ್ಕೆ ಶಕ್ತರಾಗಿರುವವರ ಸಂಖ್ಯೆಗಿಂತಲೂ ಪತ್ರಿಕೆಗಳ ಸಂಖ್ಯೆಯು ಅಧಿಕವಾಗಿರುವದನ್ನೂ, ತತ್ತದಭಿವೃದ್ಧಿಯು ಸ್ವಾಧೀನಾಯತ್ತವಾಗಿದ್ದರೂ, ಅತ್ಯಲ್ಪ ಮೌಲ್ಯಕ್ಕೆ ಈ ಕಾಲದಲ್ಲಿ ಅನೇಕ ಪತ್ರಿಕೆಗಳು ಲಭಿಸುವದನ್ನೂ ಆಲೋಚಿಸಿ ಚಂದಾದಾರರ ಸೌಕರ್ಯಾರ್ಥ ಚಂದಾದರದೊಳು ಆಬೇ ಸಂವತ್ಸರದಲ್ಲಿ ಮತ್ತೊಂದು ರೂಪಾಯಿಯಂ ಕಡಮೆಮಾಡಿದೆವು. ಈ ಸೌಲಭ್ಯಗಳೆಲ್ಲವು, ಇರತಕ್ಕ ಚಂದಾದಾರರಿಗೆ ಸಹಕಾರಿಯಾಯಿತೇ ಹೊರ್ತು ವಿಶೇಷ ಜನ ಚಂದಾದಾರರ ಆದರವನ್ನೂ ಅಭಿರುಚಿಯನ್ನೂ, ತತ್ಪ್ರಯುಕ್ತಗಳಾದ ಅವರ ಧನಸಹಾಯವನ್ನೂ ವೃದ್ಧಿಪಡಿಸಿ ಈ ಪತ್ರಿಕೆಯು ವಿಶೇಷ ವಿನ್ಯಾಸಗಳೊಡನೆ ಸ್ವತಂತ್ರವಾಗಿ ನಡೆಯಲಿಕ್ಕೆ ಸಮರ್ಥವಾಗಿ ಮಾಡದೆ ಹೋದವು. ಹೀಗಿದ್ದರೂ ಯಾವದೋ ಒಂದುಬಗೆ ಅಭಿಮಾನದಿಂ ಪೀಡಿತರಾಗಿ ಮೈಸೂರು ದೇಶದಲ್ಲಿ ಹಿಂದೂ ದೇಶಭಾಷಾ ವೃತ್ತಾಂತ ಪತ್ರಿಕೆಗಳಲ್ಲಿ ದು ಮೊದಲನೆಯದೆನಿಸಿ ಚಿರಕಾಲ ಜೀವಿಸುತ ಬಂದುದಂ ಸಾಧ್ಯವಾದ ಮಟ್ಟಿಗೆ ಕಾಪಾಡಿ ನೋಡಬೇಕೆಂಬ ಪ್ರತ್ಯಾಶೆಯೊಡನೆ ನಮ್ಮ ಉಪಪತ್ತ್ಯನುಪಪತ್ತಿಗಳಂ ಸಹ ಸಹ್ಯ ಸ್ವೈಯದೆ ಇದುವರೆಗೆ ಜರಿಗಿಸುತ ಬಂದೆವು. ಆದರೆ ಚಂದಾದಾರರು ಕೊಡತಕ್ಕ ಅತ್ಯಲ್ಪವಾದ ಚಂದಾ ಸಹಾಯದಿಂದಲೇ ಈ ಪತ್ರಿಕೆಯು ಉಜ್ಜೀವಿಸಿದೆಯೆಂಬ ಅಂಶವು ಅನೇಕರಿಗೆ ತಿಳಿಯದ ವಿಷಯವಲ್ಲವು. ನಮ್ಮ ಅನುಕೂಲ್ಯಕ್ಕೋಸ್ಕರವಾಗಿಯೂ, ಪತ್ರಿಕೆ ನಿರಭ್ಯಂತರವಾಗಿ ನಡೆಯುವ ಬಗ್ಯೆ ಚಂದಾ ಮೊಬಲಗನ್ನು ಮುಂಗಡವಾಗಿ ಸಲ್ಲಿಸಿ ನಮಗೆ ಪ್ರೋತ್ಸಾಹ ಪಡಿಸಬೇಕೆಂದು ಪ್ರತ್ಯೇಕವಾಗಿಯೂ ಸಾಮುದಾಯಕವಾಗಿಯೂ ಅನೇಕಾವರ್ತಿ ಅವರಂ ನಾವು ಕೇಳಿಕೊಂಡೆವು. ರು ಈ ಸಾಲಿನಲ್ಲಿ ಹನ್ನೆರಡನೆಯ ತಿಂಗಳಾದ ತರುವಾಯ ಸಹ ಅಂತವರ ಔದಾರ್ಯವು ಈ ಪತ್ರಿಕಾ ವಿಷಯದೊಳು ಅತಿ ದೂರವಾಗುತ ಬರುವದಂ ಕಂಡು ನಾವು ವಿಷಾದಿಸುತ್ತೇವೆ. ಈ ಪತ್ರಿಕೆಯ ಕ್ಷೇಮವನ್ನುದ್ದೇಶಿಸಿ ಇದುವರೆಗೆ ಹೋದ ಕಾಲವು ಹೋಗಲಾಗಿ ಇನ್ನಾದರು ಕ್ಷಿಪ್ರದಲ್ಲಿ ಯೆಲ್ಲರು ತಮ್ಮ ಚಂದಾ ಮೊಬಲಗನ್ನು ಕೃಪೆಮಾಡಿ ಕಳುಹಿಸಬೇಕೆಂದು ಬಹಳವಾಗಿ ಪ್ರಾರ್ಥಿಸುತ್ತೇವೆ. ಈ ಪತ್ರಿಕಾ ನಿರ್ವಹಣವು ಧನೈಕಸಾಧ್ಯವಾಗಿರುವದರಿಂದಲೂ, ಅಂತಾ ದ್ರವ್ಯೋಪಪತ್ತಿಯು ಕೇವಲ ಚಂದಾದಾರರ ಔದಾರ್ಯವನ್ನನುಸರಿಸಿದ್ದಾಗಿರುವದರಿಂದಲೂ ಏತತ್ಪತ್ರಿಕಾಭಿಮಾನಿಗಳಾದವರೆಲ್ಲರೂ ತಮ್ಮ ಚಂದಾ ಬಾಕಿಗಳಂ ಕಳುಹಿಸುವರಾದರೆ ನಮಗೆ ವಿಶೇಷ ಸಹಾಯಮಾಡಿದಂತೆ ಭಾವಿಸಿ ಅಂತವರ ವಿಷಯದೊಳು ನಾವು ಕೃತಜ್ಞರಾಗಿರುವೆವು.

ಮುಂಬಿನ ಸೋಮವಾರವು ನೂತನ ಸಂವತ್ಸರಾದಿಯಾದುದರಿಂದಲೂ ಒಂದೇ ನಿದವಾಗಿ ಗತ ೫೦ ವಾರಗಳು ಕ್ರಮಿಸಿದಂತಾ ನಮ್ಮ ಇಲಾಖೆಯ ನೌಕರ್ಮನೇರಿಗೆ ಒಂದುವಾರ ಶ್ರಮ ನಿವಾರಣಾರ್ಥ ವ್ಯವಧಾನವನ್ನೀಯುವದು ನ್ಯಾಯವಾದ ಪದ್ಧತಿಯಾಗಿರುವದರಿಂದಲೂ ಮುಂದಿನ ವಾರದ ಪತ್ರಿಕೆಯಂ ನಿಲ್ಲಿಸಿರುವದಂ ಚಂದಾದಾರರು ಕ್ಷಮಿಸುವರೆಂದು ನಂಬಿದೇವೆ.

---

ಹಿಂದೂ ಅರಸರು ಅನವರತ ದೇಶಾಟನಮಾಡುತಲಿರುವದಂ ಕುರಿತು.

ಈ ಇಂಡ್ಯ ದೇಶದ ಪ್ರಕೃತಿಕಸ್ಥಿತಿಯಂ ಕುರಿತು ವರ್ಣಿಸುವಾಗಲೆಲ್ಲ ಜಗತ್ಪ್ರಸಿದ್ಧರಾದ ಕರ್ನಲ್ ಆಲ್ಕಾಟಿಯವರೂ, ಅವರ ಸಿದ್ಧಾಂತಾವಲಂಬನೀಯಾದ ಮಿಸ್ಸೆಸ್ ಅನಿ ಬೆಸೆಂಟಿಯವರೂ ಈ ಆರ್ಯಾವರ್ತದ ಪ್ರಶಸ್ತ್ಯವನ್ನೂ ಇಲ್ಲಿದ್ದು ಗತಿಸಿದಂತ ಪೂರ್ವಿಕರಾದ ಮಹರ್ಷಿಯರ ಪ್ರಭಾವಗಳನ್ನೂ, ಅನಾದಿಪರತ್ತಿ ಅಡಗ್ತಾರಾಗಿದ್ದ ಮಹರ್ಷಿಗಳ ತಪೋ ಮಹಿಮೆಯನ್ನೂ, ಏತದ್ದೇಶೀಯರ ವಿದ್ಯಾ ಬುದ್ಧಿ ವಿವೇಕ ವೈಲಕ್ಷಣ್ಯಗಳನ್ನೂ, ನಾನಾ ಪ್ರಕಾರದಿಂ ಕೊಂಡಾಡುತಲೂ, ಇಂಡ್ಯದೇಶೀಯರ ಶ್ಲಾಘ್ಯತಮಗಳಾದ ಶಾಸ್ತ್ರಸಿದ್ಧಾಂತ ದೀಕ್ಷೆಗಳಂ ವಿಶೇಷ ಗೌರವಿಸುತಲೂ, ನಮ್ಮ ಪೂರ್ವಿಕರಾದ ಶಂಕರಾಚಾರ್ಯ, ವಿದ್ಯಾರಣ್ಯರೂ, ವ್ಯಾಸ ವಿನಾಯಕರೂ, ಸಿದ್ಧಾಂತಪ್ರವರ್ತಕರು ಎಷ್ಟರ ಪ್ರತಿಷ್ಠಾಪರರಾಗಿದ್ದು ಗತಿಸಿದರೋ, ಅಂತವರ ವಂಶಜರೆನಿಸಿರುವ ನಾವು ತತ್ಪ್ರತಿಷ್ಠಾ ಸಂಪಾದನದೊಳು ಆಸಕ್ತರಾಗಿರಬೇಕೆಂತಲೂ ತತ್ಸ್ವಾಂತ ಪರರಾದ ನಮ್ಮ ಪೂರ್ವಿಕರು ಯಾವ ಶಾಸ್ತ್ರ ಸಿದ್ಧಾಂತಾವಲಂಬಿಗಳೆನಿಸಿದರೋ, ನಾವೂ ಅದೇ ಶಾಸ್ತ್ರ ಸಿದ್ಧಾಂತಾನುಯಾಯಿಗಳಾಗಿರಬೇಕೆಂತಲೂ, ಪಾವನತಮವಾದ ಯಾವ ಪುಣ್ಯಭೂಮಿಯಲ್ಲಿ ಬ್ರಹ್ಮಜ್ಞಾನಿಗಳಾಗಿದ್ದ ಮಹರ್ಷಿಗಳು ದಿವ್ಯೋಪಸಿತರಾಗಿ ವಾಸಮಂಗೈಯುತಲಿದ್ದರೋ ಅಂತಹ ಆರ್ಯಾವರ್ತದಲ್ಲಿಯೇ ನಾವು ವಾಸಿಸುತ ಅವರ ಸ್ಥಿತಿಯಂ ಪುನರುಜ್ಜೀವನಗೊಳಿಸಬೇಕೆಂದಲೂ ತಿಳಿಸುತಲಿದ್ದಾರೆಯಷ್ಟೆ. ಇದಲ್ಲದೆ "ಮಾತೃಪಿತಾನು ಪುಣ್ಯಾನೇಕೆ ನಿವಾಸೋ ಭಾಗ್ಯದೇಶತಪ್ರಕ್ತ್ಯೈರೆವಲಭ್ಯಂ" ಎಂಬುವಂತೆ ಇಂಡ್ಯದೇಶ ವಾಸವೂ, ಇಲ್ಲಿನ ಪುಣ್ಯಕ್ಷೇತ್ರಗಳಲ್ಲಿ ಸಂಚಾರವೂ ಪುರಾತನ ಸುಕೃತನಿಶೇಷದಿಂ ಪುರುಷನಿಗೆ ಲಭಿಸತಕ್ಕವಾಗಿರುವಂತೆಯೂ, ತಮ್ಮ ಹಿಂದಿನ ಜನ್ಮ ಸುಕೃತ ಫಲದಿಂದಲೇ ತಮಗೆ ಈ ದೇಶವಾಸವು ಈಗ ಘಟಿಸಿತೆಂಬದಾಗಿಯೂ ನುಡಿಯುತ ಅವರು ಸ್ವರ್ಗಾನಂದಪರವಶರಾಗಿದಾರೆ. ಇಂತಿಹ ದೇಶವಾಸವು ಅನ್ಯದೇಶೀಯರಿಗೆ ಪ್ರಾರ್ಥನೀಯವಾಗಿಯೂ, ಸುಖಾವಹವಾಗಿಯೂ, ಇಲ್ಲಿನವರಿಗೆ ತ್ಯಾಜ್ಯವಾಗಿಯೂ, ದುಸ್ಸಹವಾದವಾಗಿಯೂ ಪರಿಣಮಿಸುತಲಿರುವದಂ ಕಂಡು ನಾವು ಬಹಳ ಆಶ್ಚರ್ಯ ಯುಕ್ತರಾಗಿದೇವೆ. ತತ್ರಾಪಿ ನೇಟಿವ್ ಸಂಸ್ಥಾನಾಧಿಪತಿಗಳಿಗಾದರೋ ಸ್ವದೇಶವಾಸವೆಂಬುದು ಈಗ ಅತಿಪ್ರಯಾಸಕರವಾಗಿದೆ. ಧರಣೀಪತಿಯಾದವನಿಗೆ ದೇಶಸಂಚಾರವು ಅಪೇಕ್ಷಿತವಾಗಿದ್ದರೂ ಆತನು ತನ್ನ ದೇಶಕೋಶಗಳಂ ಅನ್ಯರ ವಶದೊಳೊಪ್ಪಿಸಿ ಅತಿ ದೀರ್ಘಕಾಲ ದೂರದೇಶಗಳಲ್ಲಿ ಸಂಚರಿಸುವದು ಯೋಗ್ಯವಲ್ಲವೆಂಬ ಭಾವವಂ ನಾವು ಇದುವರೆಗೆ ಅನೇಕಾವರ್ತಿ ಏತತ್ಪತ್ರಿಕಾ ಮೂಲಕ ವ್ಯಕ್ತಪಡಿಸಿರುತ್ತೇವೆ. ತತ್ಕಾಲದಲ್ಲಿ ಯೂರಪ್ ಆಮೆರಿಕಾ ಖಂಡಗಳಿಗೆ ಹೋಗಿ ಬರದಿದ್ದಮೇಲೆ ತಮ್ಮ ಕೀರ್ತಿ ಪ್ರಾಭವ ವೈಭವ ನಾಗರಿಕತೆಗಳಿಗೆ ನ್ಯೂನತೆ ಯುಂಟಾಗುವದೆಂಬ ಭಾವವು ಸಾರ್ವತ್ರಿಕವಾಗಿ ಉಂಟಾಗುತಲಿರುವಲ್ಲಿ ಸಂಸ್ಥಾನಾಧಿಪತಿಗಳ ವಿಷಯದೊಳು ತಿಳಿಸಬೇಕಾದುದೇನಿದೆ? ಜಾತಿ ಮತ ಸಂಪ್ರದಾಯಗಳ ನಿರ್ಬಂಧಕ್ಕಾಗಿ ಬಹಿಃ ಸ್ವಲ್ಪಮಟ್ಟಿಗೆ ಅಂಜುತಲಿರುವ ಒಬ್ಬರಿಬ್ಬರು ಸಂಸ್ಥಾನಾಧಿಪತಿಗಳು ವಿನಾ ಮಿಕ್ಕವರೆಲ್ಲರೂ ದೇಶಾಂತರವಾಸದಲ್ಲಿ ಆದರವುಳ್ಳವರಾಗಿವಾಗ ಇವರಿಗೆ ಜಾತಿ ಮತ ಪ್ರಯುಕ್ತಗಳಾದ ನಿರ್ಬಂಧವು ಪ್ರಥಮಾವರ್ತಿಯಲ್ಲಿಯೇ ತೊಲಗಿಹೋದುದರಿಂದ ಇವರ ದೇಶ ಸಂಚಾರ ವಿಷಯದಲ್ಲಿ ಅನ್ಯರು ಆಕ್ಷೇಪಿಸುವರೆಂಬ ಭೀತಿಗೆ ಅವಕಾಶವಿಲ್ಲದೆ ಹೋಯಿತು. ತಮ್ಮ ರಾಜ್ಯ ಕೋಶಗಳಂ ದೀರ್ಘಕಾಲ ಪರಾಧೀನ ಮಾಡಿ ಹೊರಗೆ ಹೋಗುವವರಿಂದ ಶತ್ರುರಾಜರು ಪ್ರಬಲಿಸಿ, ಅದಂ ಆಕ್ರಮಿಸಿಕೊಳ್ಳುವರೇನೋ ಎಂಬ ಶಂಕೆಗೆ ಈ ಕಾಲದಲ್ಲಿ, ತತ್ಸಾರ್ವಭೌಮರಾದ ಬ್ರಿಟಿಷರವರ ಆಳ್ವಿಕೆಯೊಳು ಲೇಶವೂ ಅವಕಾಶವಿಲ್ಲವಾದುದರಿಂದ ಎಷ್ಟು ಕಾಲ ಬೇಕಾದಾಗ್ಯೂ ರಾಜ್ಯಮಂತಮ್ಮ ಮಂತ್ರಿವಶಪಡಿಸಿ ಹೊರಟುಹೋಗುವಣದರಿಂದ ಬಾಧಕವಿಲ್ಲವೆಂದೇಣಿಸಲ್ಪಟ್ಟಿದೆ. ಪ್ರಭುತ್ವ ನಿರ್ವಹಣೆಯ ಬಗ್ಗೆ ಮಂತ್ರಿಯೂ, ಇಂಗ್ಲಿಷರವರ ಪ್ರಯೋಜನ ರಕ್ಷಣಾರ್ಥ ಪೊಲಿಟಿಕಲ್ ಏಜೆಂಟರೂ ನಿಯತರಾಗಿದ್ದರೆ ಈಗಿನ ಕ್ರಮದಲ್ಲಿ ರಾಜ್ಯವೊಳು ಅರಸರಿರಬೇಕೆಂಬ ಆವಶ್ಯಕತೆಯೇನೂ ಕಾಣಿಸಲಿಲ್ಲವು. ಈ ಸಂಸ್ಥಾನಾಧಿಪತಿಗಳು, ಪ್ರಜಾಸ್ವಾತಂತ್ರ್ಯವು ಪ್ರಾಧಾನ್ಯವಾಗಿರುವ ಅಮೆರಿಕಾ ಪಗೈರೆ ದೇಶಗಳಲ್ಲಿ ಸಂಚರಿಸುತ ಅಲ್ಲಿನ ವಿಶೇಷಾಂಶಗಳನ್ನು ತಮ್ಮ ಆಧಿಪತ್ಯದೊಳು ಪ್ರಚಾರದೊಳು ತರುವರೆಂಬ ವಿಷಯದಲ್ಲಿ, "ನೇಟಿವ್ ಅರಸರಿಗೂ ಬ್ರಿಟಿಷ್ ಗವರ್ನಮೆಂಟಿನವರಿಗೂ ಏಳಿದೆ ಜರಿಗಿರತಕ್ಕ ಒಡಂಬಡಿಕೆಗಳ ಸ್ವರೂಪಗಳನ್ನರಿತಿರತಕ್ಕವರು ನಮ್ಮ ಅರಸರುಗಳ ಕರ್ತೃತ್ವಶಕ್ತಿಯ ವಿಷಯದಲ್ಲಿ ಸ್ವಲ್ಪವೂ ಅನುಮಾನಿಸಲಾರರು. ಬರೋಡೆ ಸಂಸ್ಥಾನದ ಗಾಯಕವಾಡಿ ಮಹಾರಾಜರವರು ತಮ್ಮ ಮಹಾರಾಣಿಯವರೊಡನೆ ಮರಳಿ ಇಂಗ್ಲಂಡಿಗೆ ಗಮಿಸುವರೆಂದು ತಿಳಿಯಬರುತಿದೆ. ಇವರು ರಾಜ್ಯ ಎರಡು ಸಂವತ್ಸರಗಳ ಕಾಲ ಅನ್ಯಭೂಮಿಯಲ್ಲಿಯೇ ವಾಸವಾಗಿರುವರೆಂತಲೂ ಈ ಮಧ್ಯಕಾಲದಲ್ಲಿ ಸಂಸ್ಥಾನದ ಆಡಳಿತವು ಅವರ ಮಂತ್ರಿಯವರಿಂದ ನಿರ್ವಹಿಸಲ್ಪಡುತಲಿರುವದೆಂತಲೂ, ತಿಳಿಯಬರುತಿದೆ. ನೇಟಿವ್ ಸಂಸ್ಥಾನಾಧಿಪತಿಗಳು ಪದೇಪದೆ ತಮ್ಮ ರಾಜ್ಯಗಳಂ ಬಿಟ್ಟು ಅನ್ಯದೇಶಗಳಿಗೆ ಹೋಗುವದರಿಂದಲ್ಲಿ ಉಂಟಾಗುವ ಬಾಧಕಗಳೂ ಅವರಿಗೆ ಅಲ್ಲಿ ಲಭಿಸುವ ಗೌರವ ಸತ್ಕಾರಗಳೂ ಹಿಂದೆ ಒಂದೆರಡು ಸಂದರ್ಭಗಳಲ್ಲಿ ಅನುಭವಕ್ಕೆ ಬಂದಿರುತಿವೆ. ವಿದೇಶಸಂಚಾರವು ಕೇವಲ ದರ್ಶನೇಚ್ಛಾಪ್ರೇರಿತವಾದುದಾಗಿದ್ದರೆ ಅದು ಸಕೃದಾವರ್ತಿಯಿಂದಲೇ ಸಂತೃಪ್ತಿಯನ್ನುಂಟುಮಾಡಿರುವದಲ್ಲದೆ ಪುನಃ ಪುನಃ ಪ್ರವೃತ್ತಿಯನ್ನುಂಟುಮಾಡಲಾರದು. ರಾಜ್ಯಕಾರ್ಯಗಳು ಸ್ವದೇಶ ಅರಸರು ದೇವಕೋಶದಂ ತ್ಯಜಿಸಿ ಈ ರೀತಿ ಪದೇಪದೆ ಹೊರಡಿಸುತಲಿವೆಯಂದರೆ, ಇಂಡ್ಯ ಗವರ್ನಮೆಂಟಿನವರ ಅಪರೋಕ್ಷದಲ್ಲಿ ಅವರು ಅಲ್ಲಿಗೆ ಹೋಗಿ ಸಾಧಿಸುವ ವಿಶೇಷಾಂಶಗಳು ಪ್ರಸಿದ್ಧಗಳಾಗಿವ. ತಾದೃಶ ರಾಜಕೀಯ ವಿಷಯಗಳು ಇಷ್ಟುಕಾಲ ಸ್ವಸ್ಥಾನದಲ್ಲಿರುತಲೆ ಸಾಧಿಸಲ್ಪಡುತಲಿದ್ದವು. ಈಗ ಇಲ್ಲಿ ಅಸಾಧ್ಯಗಳಾಗುತ ಬರುವದಕ್ಕಾಗಿ ನಾವು ಬಹಳ ಆಶ್ಚರ್ಯಪಡುತ್ತೇವೆ. ಇವರು ಒಂದುವೇಳೆ ಆರೋಗ್ಯ ಸಂಪಾದನಾರ್ಥ ವೈದ್ಯಶಾಸ್ತ್ರಜ್ಞರಾದ ಪಂಡಿತರ ಅಭಿಪ್ರಾಯಾನುಸಾರ ಹೋಗುವಂತವರಾಗಿದ್ದರೆ, ಇವರ ಪಿತೃಪಿತಾಮಹರಿಗೆ ಸುಖೋಲ್ಲಾಸಕರವಾಗಿರುತಿದ್ದ ಏತದ್ದೇಶವಾಸವೂ ಇಲ್ಲಿನ ಆಹಾರ ವಿಹಾರಾದಿಗಳೂ ಅವರ ಸಂತತಿಯವರಿಗೆ ಈಗ ಅನಭಿಮತಗಳಾಗುತಬರುವದಕ್ಕೆ, ನಾವು ಯಾವ ಕಾರಣವಂ ನುಡಿಯಬಹುದು? ಗಾಯಕವಾಡಿಯವರಿಗೆ ಇಂಡ್ಯದೇಶ ವಾಸವು ಸುಖಾವಹವಾಗದೆ ಹೋದುದು ಯೆಲ್ಲರೂ ಬಹಳ ಚಿಂತಿಸಬೇಕಾದ ಅಂಶವಾಗಿರುತಿದೆ ಇವರಿಗೆ ಮಾತ್ರವಲ್ಲದೆ ಇವರ ಮಹಾರಾಣಿಯವರಿಗೆ ಸಹ [ಇಲ್ಲಿನ ವಾಸೋ

ಧಕಾದಿಗಳು ಏಂಟದೆ ಹೋಗಿದಂತೆ ಕಾಣುತಿದೆ. ಮುಖ್ಯವಾಗಿ ಇವರ ವಿಚಾರವು ಅಂತಿರಲಿ, ಇವರ ಪ್ರಜೆಗಳ ಸ್ಥಿತಿಯು ಆಲೋಚನೀಯವಾಗಿ ರುತಿದೆ. ನೇಟಿವ್ ಸಂಸ್ಥಾನಗಳಲ್ಲಿ, ಪ್ರಜಾಪರಿಪಾಲನಾಕ್ರಮದೊಳಗಣ ಗುಣದೋಷಗಳಿಗೆ ಆಯಾ ಸಂಸ್ಥಾನಾಧಿಪತಿಗಳು ಸಾಕ್ಷಾತ್ತಾಗಿಯೂ, ಇಂಡ್ಯ ಗವರ್ನಮೆಂಟಿನವರು ಪರಂಪರೆಯಾಗಿಯೂ, ಕಾರಣಭೂತರೆನಿಸದೆ ಹೋಗಲಾರರು. ಬಹುವಿಧ ಅನುಕೂಲ್ಯಗಳಿದ್ದರೂ, ಗಾಯಕವಾಡಿಯವರು ನಲವತ್ತು ಲಕ್ಷ ಪ್ರಜೆಗಳಿಗಾವಾಸಸ್ಥಾನವಾಗಿರುವ ಒಂದು ರಾಜ್ಯದ ಆಡಳಿತವಂ ಕೇವಲ ಒಬ್ಬ ಮಂತ್ರಿಬಲದಿಂದ, ಶರಕಾಲ ಸಾವಿರಾರು ಮೈಲಿಗಳಾಚೆ ಇದ್ದುಕೊಂಡು, ನಿಶ್ಚಿಂತನವಾಗಿ ಅಥವಾ ತಮ್ಮ ಪ್ರಜೆಗಳಿಗೆ ಅಭಿಮತವಾಗಿ ಜರಗಿಸಲಿಕ್ಕೆ ಹ್ಯಾಗೆ ಶಕ್ತರಾಗುವರೋ ನಮಗೆ ತಿಳಿಯದು.

## ಮೈಸೂರ್ ಮಿಲಿಟರಿ ಇಲಾಖೆಯವರ ದಾಂಧಳೆಯು.

ಬೆಂಗಳೂರು ಸಿವಿಲ ಕೇತದ ಮೈಸೂರ ಸವಾರ ಟ್ರೂಪನ್ನು ಒಂದು ಮಾರ್ಚಿಯನ್ನು ಅಜಮಾಯಿಷಿ ಮಾಡಿ, ದಂಡಿಯು ರ ಎದುರಿಗೆ ಬೆಂಗಳೂರು ತಾಲ್ಲೂಕ ಅನುಕ್ರಮ 5 ಮತ್ತು ೩ ನೆ ಕ್ಲಾಸ ಮ್ಯಾಜಿಸ್ಟ್ರೇಟು ಪಾಡಿಸುತಲಿದ್ದ ಮಹಜರನ್ನು ಸವ 6 ಎಲ ನಾ ನೌಕರರ ವ್ಯಕ್ತಿ ಕೆಲವರು ಆತನ ಕ್ರಿಮಿನಲ ಕಿಸ್ಮತ್ಕೆ ಏರಿದ ಬಳ್ಳದ ಅವರನ್ನು ಅಲ್ಲಿ ಕಾಯಿದೆ ಬಲಾತ್ಕಾರ ಮಾಡಿದಕ್ಕಾಗಿ ಅವರು ಏಸನಾಗ ಆಲರು ಕೆಲ ನೌಕರರ ಮೇಲೆ ಇಂಡಿಯನ್ ಪೀನಲಕೋಡಿನ ಪ್ರಕರಣಗಳಿಗನುಸಾರವಾಗಿ ತುಹಿಮತ್ಕ್ಕೆ ಜ ಜರ್ ಬೆಂಗಳೂರುಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರವರ ದೆ ವಿಚಾರಣೆಗೆ ಬಂದಿರುತಿದೆ ಈ ಕೇಸ ವಿಚಾರಣೆಗೆ ಪ್ರಾರಂಭವಾದ ಕೂಡ್ಲೇ ಅಪರಾಧಿಗಳಾದ ಸಿಪಾಯಿಗಳು ತಮ್ಮಿಂದ ನಡೆದ ತಪ್ಪಿತಕ್ಕಾಗಿ ಕ್ಷಮಾಪಣೆ ಕೇಳಿಕೊಳ್ಳುತ್ತೇವೆಂದು ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರವರಿಗೆ ಹೇಳಿಕೊಂಡರಲ್ಲದೆ ಅವರ ಕಡೆ ಅಡ್ವೋಕೇಟ ಮೆ|| ಮೊಕಬಲಮುತ್ತು ನವರು ಅದನ್ನು ಮಂಜೂರಿ ಮಾಡಿಕೊಳ್ಳಬೇಕೆಂದು ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರವರನ್ನು ಪ್ರಾರ್ಥಿಸಿದರು.

ಇದು ರಾಜೀ ಆಗತಕ್ಕ ಕೇಸು ಅಲ್ಲವೆಂಬ ಕಾರಣದಿಂದ ಮೊಕದ್ದಮೆಯನ್ನು ಮುಂದಕ್ಕೆ ನಡೆಸದೆ ವಿರಾಮ ಮಾಡಲಿಲ್ಲವಾಗಿ ಅಪರಾಧಿಗಳ ಸಲೀದಾರ್ಗ್ಯ ಜಿ ನಿರ್ಗ ತೆಗೆದುಕೊಂಡು ಮ್ಯಾಜಿಸ್ಟ್ರೇಟರು ಕೇಸನ್ನು ಮುಂದಕ್ಕೆ ಅಡ್ಜರ್ನ ಮಾಡಿದಂತೆ ಹೇಳುತ್ತೇವೆ. ಇದರ ನಿಜಸ್ಥಿತಿ ಈ ರೀತಿ ಇದ್ದಾಗ್ಯೂ ಸಹಾ ಬೇವು ಜನವರಿ ೧೧ ನೇ ತಾರೀಖಿನ ಮೈಸೂರ್ ವೃತ್ತಾಂತ ಪತ್ರಿಕೆಯು ಪ್ರಸಕ್ತ ವಿಷಯವು ಸೂಚಿಸಿ ಅದಕ್ಕೆ ಸೇರಿದಂತೆ, ಇವರು ಪ್ರಾಕ್ಟೀಕಲಿದ ಲೂ ಇಂಗ್ಲಿಷ್ ಭಾಷಾ ಪರಿಚಯ ವಿಹೀನತೆಯಿಂದ ಆಧುನಿಕ ನ್ಯಾಯನಿಬಂಧನಾಸ್ವರೂಪಗಳನ್ನರಿತವರಲ್ಲವೆಂತಲೂ, ತನ್ನ ಅಭಿಪ್ರಾಯವು ವ್ಯಕ್ತಪಡಿಸಿರುತಿದೆ. ಇಂಗ್ಲೀಷ್ ಭಾಷಾಜ್ಞಾನಕ್ಕೂ, ಮಿಲಿಟರಿ ಇಲಾಖೆಯವರ ದೌಷ್ಟ್ಯಕ್ಕೂ ಯೇನು ಸಂಬಂಧವೋ ಅದು ಆ ಪತ್ರಿಕೆಗೇ ತಿಳಿದಿರಬೇಕು. ಮ|| ರಾ|| ನಾಗೇಶರಾಯರವರಿಗೆ ಇಂಗ್ಲಿಷ್ ಭಾಷಾ ಜ್ಞಾನವಿಲ್ಲದಿದ್ದುದರಿಂದಲೇ ಈ ರೀತಿಯಾಯಿತೆಂದು ಭಾವಿಸುವ ಪಕ್ಷಕ್ಕೆ ಇಂಗ್ಲಿಷ್ ಬಲ್ಲಂತವರಾಗಿಯೂ ಆಧುನಿಕ ನ್ಯಾಯನಿಬಂಧನಗಳನ್ನು ಸಂಪೂರ್ಣ ಅರಿತವರಾಗಿಯೂ ಇರುವ ಮ|| ಬಿ.ಜಿ. ಕೃಷ್ಣಯ್ಯಂಗಾರ್ಯರ ವಿಷಯದಲ್ಲಿ ಹರ್ ಮೆಜೆಸ್ಟೀಸ್ ಮಿಲಿಟರಿ ಇಲಾಖೆಯವರು, ಮಾಡಿದ ಜುಲ್ಮಿಯನ್ನು ಕುರಿತು ವೃತ್ತಾಂತ ಪತ್ರಿಕೆ ಯೇನು ಸಮಾಧಾನ ಹೇಳುವದೋ ತಿಳಿಯಲಿಲ್ಲವು. ಬ್ರಿಟಿಷ್ ಮಿಲಿಟರಿ ಇಲಾಖೆಯವರ ದಾಂಧಳೆಗಳಿಗಾಗಿ ಪ್ರಜೆಗಳು ಮೊರೆಯಿಡುತಲಿರುವಾಗ ಮಹಾರಾಜಾ ಸರ್ಕಾರದ ಖಾಸ ಸೈನಿಕರು ಸಂಸ್ಥಾನಕ್ಕೆ ಸೇರಿದ ಒಬ್ಬ ಅಧಿಕಾರಿಯ ವಿಷಯದಲ್ಲಿ ಅಮರ್ಯಾದೆಯಿಂದ ವರ್ತಿಸಿದರೆಂಬುದು ಬಹಳ ಅಗೌರವಕರವಾದ ವಿಷಯವಾಗಿರುತಿದೆ. ಈ ಸಂದರ್ಭದಲ್ಲಿ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರವರು ಮಿಲಿಟರಿ ಇಲಾಖೆಯವರಿಗೆ ವಿವೇಕವುಂಟಾಗುವಂತೆ ಮಾಡಲಿಕ್ಕೆ ಅವರಂ ಯಾವದೂ ಅಭ್ಯಂತರ ಪಡಿಸಲಾರರೆಂದು ದೃಢವಾಗಿ ನಂಬುತ್ತೇವೆ.

## LOCAL AND PROVINCIAL NEWS.

ಒಳದೇಶಮತ್ತುತಾಲ್ಲೂಕುಪ್ರಾಂತ್ಯವೃತ್ತಾಂತಗಳು

ಇಲ್ಲಿನ ಚೀಫ್ ಕೋರ್ಟ್ ಜೆಡ್ಜಿಯವರಾದ ಮುತುಸ್ವಾಮಿಸ್ವಾರವರು ಸರ್ಕ್ಯೂಟಿನಿಂದ ಮೊನ್ನೆಯ ದಿನ ವಾಪಸ್ ಬಂದರೆಂಬು ಕೇಳುತ್ತೇವೆ.

ಇಲ್ಲಿನ ಬ್ರಿಟಿಷ್ ರೆಸಿಡೆಂಟರಾದ ಕರ್ನಲ್ ಹೆಂಡರ್‌ಸನ್ ಯವರು ಕ್ರಿಸ್ಮಸ್ ರಜಾ ಪೂರೈಸಿದ ತರುವಾಯ ಕೊಡಗು ಪ್ರಾಂತಕ್ಕೆ ಸರ್ಕ್ಯೂಟಿ ಹೊರಡುವರೆಂದು ತಿಳಿಯಬರುತಿದೆ.

ಗತವಾರದಲ್ಲಿ ಗೆಜೆಟಿನೊಳು ಪ್ರಕಟವಾಗಿದ್ದ ಎಸ್ಟಾಬ್ಲಿಷ್‌ಮೆಂಟನ್ನನುಸರಿಸಿ, ನಿಶ್ಚಿತ ಇಲಾಖಾ ಸಿಬ್ಬಂದಿಗಳಿಗೂ ಗತ ಶನಿವಾರದ ದಿನ ತಿಂಗಳ ಬಟವಾಡೆ ಮಾಡಲ್ಪಟ್ಟಿತು. ಆಫೀಸರ್‌ಗಳು ಬಹಳ ನಿರ್ವಾಹವೆಂದರೆ ಶರಸ್ಮ ಇಲಾಖಾ ಹೇಟಿರಿಗಳಿಗೆ ರುಜು ಮಾಡಿರಬಹುದೆಂದೆಣಿಸುತ್ತೇವೆ.

ಬೆಂಗಳೂರು ಕಂಟೋನ್ಮೆಂಟ ರೆಸಿಡೆನ್ಸಿ ಸ್ಪೇಷಲ್ ಮ್ಯಾಜಿಸ್ಟ್ರೇಟರಾಗಿದ್ದ ಮ|| ಕರ್ಜನ್ ಎಂಬವರು, ಕಿರಿದಾಗೆ ಪಗಾರ ಸಾಪಲ್ಯ ರೆಂದು ತಿಳಿಯಬರುತಿದೆ. ಇವರು ಉಪಶಾಂತರಾಗಿಯೂ ಸ್ನೇಹಪರರಾಗಿಯೂ ಇದ್ದುದರಿಂದ ಇಲ್ಲಿಂದಿವರು ಹೊರಟು ಹೋಗುವದಕ್ಕಾಗಿ ಅನೇಕರು ಚಿಂತಿಸುತ್ತಾರೆ.

ಮದರಾಸ್ ಗವರ್ನರವರ ಬಾರ್ಬೆಯವರು ಈ ಪ್ರಾಂತಿಗೆ ಬರುವರೆಂದು ಗತವಾರದಲ್ಲಿ ತಿಳಿಸಿದ್ದೆವಷ್ಟೆ. ಇವರು ಕಳೆದ ಮಂಗಳವಾರದ ದಿನ ರಾತ್ರಿ ಮೆಯಿಲ್ ಟ್ರೈನಿನಲ್ಲಿ ಮದರಾಸಿಗೆ ವಾಪಸ ಹೊರಟು ಹೋದರೆಂತಲೂ, ಇಲ್ಲಿನ ವಾಸ ಮಿದಾತರವರಿಗೆ ಒಪಳಹುಟ್ಟಗೆ ಆರೋಗ್ಯಪ್ರಾಪ್ತಿಯಾಯಿತೆಂತಲೂ ಕೇಳುತ್ತೇವೆ.

ಲಾರ್ಡ ವೆಂಲಾಕ್ ಯವರು ಬರುವ ತಿಂಗಳ ೧೧ ನೇ ತಾರೀಖು ಬುಧವಾರದ ದಿನ ಮುಂಬೈಯಲ್ಲಿ ಬಂದು ಜಹಜು ಇಳಿದು ಮಾರನೆಯ ದಿನ ಸಾಯಂಕಾಲ ಕಲ್ಕತ್ತೆಗೆ ಪ್ರಯಾಣವಾಗುವರೆಂತಲೂ, ೨೫ ನೇ ತಾರೀಖಿನಲ್ಲಿ ಲಾರ್ಡ ಲ್ಯಾನ್ಸ್‌ಡೌನ್ ಯವರು ತಮ್ಮ ಕೆಲಸದ ಚಾರ್ಜನ್ನೊಪ್ಪಿಸಿ, ೨೭ ನೇ ತಾರೀಖಿನಲ್ಲಿ ಸ್ವದೇಶಕ್ಕೆ ಹೊರಡುವವರಾಗಿದಾರೆಂತಲೂ, ತಿಳಿಯಬರುತಿದೆ.

ಈ ಸಂಸ್ಥಾನದ ದಿವಾನರವರು ನಿನ್ನೆಯ ದಿನ ವ್ಯಾನ್ಹೋನ್ಸ್ಪರ ಪಮಕೂರ್ ಮಾರ್ಗವಾಗಿ ಅರಿಸೀಕೆರೆ ಪ್ರಾಂತಕ್ಕೆ ಸರ್ಕ್ಯೂಟಿ ದಯಮಾಡಿದರು ಇವರು ಸಾಗ ಕಳುಹಿಸುವ ಬಗ್ಯೆ ಮೈಸೂರ್ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ವಗೈರೆ ಅನೇಕಜನ ದೊಡ್ಡಮನುಷ್ಯರು ರೆಯಿಲ್ವೇ ಸ್ಟೇಷನಿಗೆ ಹೋಗಿದ್ದರು. ದಿವಾನರವರು ಬರುವ ತಿಂಗಳ ಮಧ್ಯಭಾಗದಲ್ಲಿ ಈ ಪ್ರಾಂತಿಗೆ ವಾಪಸು ದಯಮಾಡುವರೆಂದು ತಿಳಿಯಬರುತಿದೆ.

ಮೈಸೂರ್ಸಂಸ್ಥಾನದಲ್ಲಿರತಕ್ಕ ಪ್ರಸಿದ್ಧರಾದ ಪಾಳೇಗಾರರ ಕುಟುಂಬಕ್ಕೆ ಸೇರಿದ ಮ|| ಕೃಷ್ಣಸ್ವಾಮಿ ನಾಯಕರೆಂಬವರು, ಇಂಗ್ಲಾಂಡಿಗೆ ಹೋಗಿ ಬ್ಯಾರಿಸ್ಟರ್ ಪರೀಕ್ಷೆಗೆ ಓದುವದಕ್ಕಾಗಿ ಮಹಾರಾಜಾ ಸರ್ಕಾರದವರು ವಿದ್ಯಾರ್ಥಿ ವೇತನ ಕೊಡುವಂತೆ ಮಂಜೂರ್ಮಾಡಿರುವದಲ್ಲದೆ ಸ್ಟೀಮರ್ ಚಾರ್ಜ ಬಗ್ಯೆ ೩೦೦ ರೂಪಾಯಿಗಳು ಸಹ ಕೊಡುವಂತೆ ವಾಗ್ದಾನ ಮಾಡಿದಾರೆಂತಲೂ, ಬರುವ ವರುಷದ ಆದಿಭಾಗದಲ್ಲಿವರು ಇಂಗ್ಲಾಂಡಿಗೆ ಹೋಗುವರೆಂತಲೂ ತಿಳಿಯಬರುತಿದೆ ಪಾಳೇಗಾರರ ಸಂತತಿಯವರ ಪೈಕಿ ವಿದ್ಯಾದ್ವಾರಾ ಪ್ರಾಪ್ತವಾದ ಪ್ರತಿಷ್ಠಾಸಂಪಾದನಾರ್ಥ ಇಂಗ್ಲಾಂಡಿಗೆ ಹೋಗಲಿಕ್ಕೆ ಇವರೇ ಮೊದಲನೆಯವರಾಗಿರುತ್ತಾರೆ.

ಮೈಸೂರ್ ಮರಾಮತ್ತ್ ಇಲಾಖೆಗೆ ಸೇರಿದ ಎಗ್ಜಿಕ್ಯೂಟಿವ್ ಇಂಜನಿಯರ್‌ಮೆ|| ಮಹದೇವಶಾಸ್ತ್ರಿಗಳವರು ಕೋಲಾರ್ ಗೋಲ್ಡ ಫೀಲ್ಡ್‌ಗಳಲ್ಲಿ ವ್ಯಾಪಾರಾಭಿವೃದ್ಧಿಯ ವಿಷಯದೊಳು ವ್ಯಕ್ತಪಡಿಸುತಬಂದ ಶ್ರದ್ಧೆಯನ್ನೂ ನಾಡುತಲಿದ್ದ ಸಹಾಯವನ್ನೂ ಪರಿಭಾವಿಸಿ ಅವರಿಗೆ ಸನ್ಮಾನ ರೂಪವಾಗಿ ಒಂದು ಘಡಿಯಾರವನ್ನು ಸವಪಣಿಯೊಡನೆ ಕೊಡಬೇಕೆಂದು ಸದರೀ ಕಂಪೆನಿಯವರಿಗೆ ಅಭಿಪ್ರಾಯವಿರುವದರಿಂದ ಆ ವಿಷಯದಲ್ಲಿ ನಿಮಗೇನಾದರು ಅಭ್ಯಂತರ ವುಂಟೇಯೆಂದು ಮೈಸೂರ್ ಗವರ್ನಮೆಂಟಿನವರನ್ನು ಕೇಳಿದಾರೆಂದು ತಿಳಿಯಬರುತಿದೆ.

ದರ್ಬಾರ್ ಬಕ್ಷಿಯವರಾದ ರಾಯಬಹದ್ದೂರ್ ನರಸಿಂಹಯ್ಯಂಗಾರ್ಯರಿಂದ ಮೇಲುಕೋಟೆಯಲ್ಲಿ ಸ್ಥಾಪಿಸಲ್ಪಟ್ಟಿರುವ ಬಾಲಿಕಾ ಪಾಠಶಾಲೆಗೆ ಯೋಗ್ಯರಾದ ಉಪಾಧ್ಯಾಯನಿಯೊಬ್ಬಳನ್ನು ನೇಮಿಸಿಕೊಳ್ಳುವಂತೆ ಮೈಸೂರು ಗೌರ್ನಮೆಂಟಿನವರು ಮಾಹೆಯಾನಾ ೪೦ ರೂಪಾಯಿ ಗ್ರಾಂಟು ಕೊಡುವದಾಗಿ ಸಾಂಗ್ಷನ್ ಮಾಡಿರುತ್ತಾರೆ ಆ ಪಾಠಶಾಲೆಯಲ್ಲಿ ವೃದ್ಧಸ್ತ್ರೀಯರೂ ವಿಧವೆಯರೂ ವಿಶೇಷನಾಗಿ ವಿದ್ಯಾಭ್ಯಾಸ ಮಾಡುತ್ತಿದಾರೆಂತಲೂ ಆ ಪಾಠಶಾಲೆಯನ್ನು ಅಭಿವೃದ್ಧಿಗೆ ತರಬೇಕೆಂದು ರಾಯಬಹದ್ದೂರರವರು ಬಹಳವಾಗಿ ದ್ರವ್ಯಸಹಾಯ ಮಾಡುತ್ತಿದಾರೆಂತಲೂ ಗೌರ್ನಮೆಂಟಿನವರು ತಿಳಿದು ಈಗ ಗ್ರಾಂಟನ್ನು ಸಾಂಗ್ಷನ್ ಮಾಡಿರುತ್ತಾರೆ.—ವೃ. ಪ.

ಇಲ್ಲಿನ ಪ್ರೊಫೆಸರ್ ಆದವರಾಸ್ತರಾದ ರೆವರೆಂಡ ಹೋಲ್ಡಸ್‌ವರ್ತ್ ಸಾಹೇಬರವರು ಸೀಮೆಗೆ ಪ್ರಯಾಣಮಾಡುತ್ತಾರಾದ್ದರಿಂದ ಅವರಿಗೆ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳು ಕಳೆದ ವಾರದಲ್ಲಿ ಸಭೆ ಸೇರಿಸಿ ಅಡ್ರೆಸ್ಸನ್ನು ಒಪ್ಪಿಸಿದರು. ಅವರಿಗೆ ಒಂದು ವಿಚಿತ್ರವಾದ ಒಂದು ಗಾಜಿನ ದೀಪಸ್ತಂಭವನ್ನೂ ಮತ್ತು ಕೆಲವು ಫೋಟೋಗಳನ್ನೂ ಕೊಟ್ಟರು ಮತ್ತು ಅವರ ಹೆಸರಿನಲ್ಲಿ ಒಂದು ಫಂಡನ್ನು ಹಾಕಿದಾರೆ. ಈ ಫಂಡನ್ನು ಮೈಸೂರ್ ಗೌರ್ನಮೆಂಟ ಸೇವಿಂಗ್ಸ್ ಬ್ಯಾಂಕಿನಲ್ಲಿಟ್ಟಿದಾರೆ ಅದರಿಂದ ಬರುವ ಬಡ್ಡಿಯಲ್ಲಿ ಪ್ರತಿವರ್ಷವೂ ಲೋವರ್ ಸೆಕೆಂಡರಿ ಪರೀಕ್ಷೆಗೆ ಹೋಗಿ ಆಸ್ಕೂಲಿನಿಂದ ಮೊದಲನೇ ದರಜೆಯಲ್ಲಿ ಪ್ಯಾಸಾಗುವ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿದಾರೆ.—ವೃ. ಪ.

ಶ್ರೀಮನ್ ಮಹಾರಾಜರವರು ಕಳೆದ ಬುಧವಾರದ ದಿನ ರಾಜಧಾನಿಯನ್ನು ಬಿಟ್ಟು ಪ್ರಯಾಣ ಮಾಡಿದರಷ್ಟೆ. ಇವರು ಕಳೆದ ಶುಕ್ರವಾರದ ಬೆಳಗ್ಯೆ ೯ ಘಂಟೆಯ ಹೊತ್ತಿನಲ್ಲಿ ಪುಣೆಯನ್ನು ಸೇರಿದರು. ಶುಕ್ರ, ಶನಿ, ಆದಿತ್ಯವಾರಗಳು ಅಲ್ಲಿದ್ದು, ಗತ ಸೋಮವಾರ ಮುಂದೆ ಪ್ರಯಾಣ ಮಾಡಿದರು. ಸೋಮವಾರ ಸಾಯಂಕಾಲ ಮುಂಬೈಯನ್ನು ಸೇರಿದರು. ಪದ್ಧತಿಯ ಪ್ರಕಾರ ಮುಂಬೈ ಸರಕಾರದ ಪೊಲಿಟಿಕಲ್ ಇಲಾಖಾ ಸೆಕ್ರೆಟರಿಯವರೂ, ಗವರ್ನರವರ ಮಿಲಿಟರಿ ಸೆಕ್ರೆಟರಿಯವರೂ, ಗವರ್ನರವರ ಎಡಿಕಾಂಗರವರೂ ಸ್ಟೇಷನಿನಲ್ಲಿ ಶ್ರೀಮನ್ ಮಹಾರಾಜರವರನ್ನು ಎದುರುಗೊಂಡು, ಗವರ್ನರವರ ಸಾರೋಟಿನಲ್ಲಿ ಕುಳ್ಳಿರಿಸಿಕೊಂಡು, ಶ್ರೀಮನ್ ಮಹಾರಾಜರವರ ಕ್ಯಾಂಪಿಗೆ ಕರದುಕೊಂಡು ಹೋದರು. ರಾಜಮರ್ಯಾದೆಗಳೆಲ್ಲಾ ಸಮಗ್ರವಾಗಿ ನಡೆದವು. ನಿನ್ನೆಯದಿನ ಬೆಳಗ್ಯೆ ಗವರ್ನರವರ ಎಡಿಕಾಂಗರವರು ಶ್ರೀಮನ್ ಮಹಾರಾಜರವರ ಕುಶಲವನ್ನು ವಿಚಾರಿಸುವದಕ್ಕಾಗಿ ಅವರ ಕ್ಯಾಂಪಿಗೆ ಹೋಗಿದ್ದರು. ಶ್ರೀಮಂತರು ಇವರನ್ನು ಉಚಿತಮರ್ಯಾದೆಗಳಿಂದ ಕಂಡು, ಸಂಭಾಷಣಾನಂತರ ಗಂಧಪುಷ್ಪ ವೀಳ್ಯ ಮೊದಲಾದವುಗಳನ್ನು ಕೊಟ್ಟು ಕಳುಹಿಸಿದರು. ಶ್ರೀಮನ್ ಮಹಾರಾಜರವರು ಇನ್ನು ೧೦—೧೨ ದಿನಗಳು ಮುಂಬೈಯಲ್ಲಿದ್ದು ಅನಂತರ ಎಲ್ಲೆಲ್ಲಿ ಸಂಚಾರ ಮಾಡುವರೆಂಬುವುದನ್ನು ನಿಷ್ಕರ್ಷೆ ಮಾಡುವದಾಗಿ ತಿಳಿಯ ಬರುತ್ತದೆ.—ವೃ. ಬೋ.

## THE MYSORE GAZETTE.

## ಮೈಸೂರು ಗೆಜೆಟ.

ಶ್ರೀಮನ್ ಮಹಾರಾಜ ರಾಜಾಸಾಹೆಬ ಬಹದೂರವರ ಸರ್ಕಾರದಿಂದ ಹೊರಡಿಸಿದ ಇಸ್ತಿಹಾರನಾಮೆಗಳು.

ನಂ|| ೯೨೧೮—೦. ೨೯೬೦—ತಾ|| ೧೨ನೇ ಡಿಸಂಬರ್ ೧೮೯೩—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೨೦೨ A ಸೆಕ್ಷನ್ ೩ ಮತ್ತು ೫ನೇ ಕ್ಲಾಜ್‌ಗಳ ನಿಯಮಗಳನ್ನನುಸರಿಸಿ ಚೀಫ್ ಕೋರ್ಟ್ ಜೆಡ್ಜಿಯವರಾದ ಮೆ|| ಏ. ರಾಮಚಂದ್ರ ಅಯ್ಯರ್, ಬಿ. ಎಲ್. ಯವರಿಗೆ ೧೮೯೪ನೇ ಇಸವಿ ಜನವರಿ ೪ನೇ ತಾರೀಖ್ ಲಾಗಾಯತು ೨೮ ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತಿದೆ.

ಮೊಕಾಂ ನಂ|| ೪೧೧—ತಾ|| ೧೩ನೇ ಡಿಸಂಬರ್ ೧೮೯೩—ಮದರಾಸ್ ಮರಮತ್ತ್ ಇಲಾಖೆಗೆ ಸೇರಿದ ಮೆ|| ಜೆ ಜೆ ವೈಟ್ಲೀ ಯೆಂಬವರ ನೌಕರಿಯನ್ನು ಇಂಡ್ಯ ಗವರ್ನಮೆಂಟಿನವರು ಮೈಸೂರ್ ಸಂಸ್ಥಾನಕ್ಕೆ ಹಂಗಾಮಿಯಾಗಿ ಕೊಟ್ಟಿರುವದರಿಂದ ಘನವನ್ನೈದಿದ ಶ್ರೀಮನ್ ಮಹಾರಾಜರವರು ಅವರನ್ನು ರಾಜಪುತ್ರರಿಗೆ ಉಪಾಧ್ಯಾಯರಾಗಿ ನಿಯಮಿಸಿರುವಂತೆ ಅಜ್ಞಾಪಿಸಿರುತ್ತಾರೆ. ಮೆ|| ಜೆ. ಜೆ ವೈಟ್ಲೀ ಯವರು ಮಾಹೇ ಮಜಕೂರ್ ಗುರ್ರೇ ತಾರೀಖಿನ ಅಪರಾಹ್ನದಲ್ಲಿ ತಮ್ಮ ಕೆಲಸಕ್ಕೆ ಹಾಜರಾಗಿರುವಂತೆ ರಿಪೋರ್ಟ ಮಾಡಿರುತ್ತಾರೆ.

ನಂ|| ೯೩೪೮ G F ೫೫—೯೨—ತಾ|| ೧೪ನೇ ಡಿಸಂಬರ್ ೧೮೯೩—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೨೧೩ನೇ ಆರ್ಟಿಕಲ್ ಅನುಸರಿಸಿ, ಕಡೂರ್ ಡಿಸ್ಟ್ರಿಕ್ಟ ಪ್ರೊಬೇಷನರಿ ಅಸಿಸ್ಟೆಂಟ ಕಮ್ಮಿಷನರ್ ಮೆ|| ಆರ್. ಬಿ ವೃತ್ತಮ್ಮ ರ ಯವರಿಗೆ ೧೮೯೩ನೇ ಇಸವಿ ಡಿಸಂಬರ್ ೨ನೇ ತಾರೀಖ್ ಲಾಗಾಯತು ಡಿಸೆಂ ೨೨ ನೇ ತಾರೀಖ್ ವರೆಗೆ ೩ ದಿನಗಳು ಪರೀಕ್ಷೆಗೆ ಹಾಜರಾಗುವ ಬಗ್ಯೆ ರಜಾ ಕೊಡಲ್ಪಟ್ಟಿರುತಿದೆ.

ನಂ|| ೯೪೨೪—G. F. ೩೦—೯೩—ತಾ|| ೧೬ನೇ ಡಿಸಂಬರ್ ೧೮೯೩—ಕಳೆದ ಆಗಸ್ಟ ತಿಂಗಳ ೨೪ನೇ ತಾರೀಖುಳ್ಳ ೩೨೦೫ G. ೯೨೧ ನೇ ನಂಬರ್ ಇಸ್ತಿಹಾರ್ ನಾಮೆಯ ಮೂಲಕ ಅರಸೀಕೆರೆ ತಾಲ್ಲೂಕ ಅಮಲ್ದಾರ್ ಎನ್. ಕೃಷ್ಣಸ್ವಾಮಿರವರಿಗೆ ಕೊಡಲ್ಪಟ್ಟಿದ್ದ ಒಂದು ತಿಂಗಳ ಪ್ರಿವಿಲೀಜ್ ರಜಾ ಇನ್ನೂ ೫ ದಿನಗಳವರೆಗೆ ಜಾಸ್ತೀ ಮಾಡಲ್ಪಟ್ಟಿರುತಿದೆ.

ನಂ|| ೯೫೩೪—G ೨೫೧೦— ತಾ|| ೧೮ ನೇ ಡಿಸಂಬರ್ ೧೮೯೩—ಮೈಸೂರ್ ಸರ್ವಿಸ ರೆಗ್ಯುಲೇಷನ್‌ಗಳ ೧೮೮ ನೇ ಆರ್ಟಿಕಲ್ ಅನುಸರಿಸಿ ದಿವಾನರವರ ಅಂಡರ್ ಸೆಕ್ರೆಟರಿ ಮೆ|| ಎಂ. ನಾರಾಯಣರಾಯರವರಿಗೆ ೧೮೯೪ನೇ ಇಸವಿ ಜನವರಿ ೮ನೇ ಮಕರ್ಮ ಲಾಗಾಯತು ೩ ತಿಂಗಳ ರಜಾ ಕೊಡಲ್ಪಟ್ಟಿರುತಿದೆ.

## ಎಜ್ಯುಕೇಷನ್ ಇಲಾಖಾ.

ಇ ನಂ|| ೩೮—ತಾ|| ೧೮ನೇ ಡಿಸಂಬರ್ ೧೮೯೩—ಮೈಸೂರು ನಾರ್ತ್ ಸರ್ಕಲ್ ಸ್ಕೂಲ್‌ಗಳ ಡೆಪ್ಯುಟಿ ಇನ್ಸ್‌ಪೆಕ್ಟರ್ ಮೆ|| ಹೆಚ್. ಕೇಶವಯ್ಯನವರಿಗೆ ಕೊಡಲ್ಪಟ್ಟಿದ್ದ ಒಂದು ತಿಂಗಳು ಹತ್ತು ದಿನಗಳ ಪ್ರಿವಿಲೀಜ್ ರಜಾವನ್ನು ೧೮೯೩ನೇ ಇಸವಿ ನವಂಬರ್ ೧೩ನೇ ತಾರೀಖ್ ಲಾಗಾಯತು ಸ್ವತಃ ಉಪಯೋಗಿಸಿಕೊಂಡು ೧೮೯೩ನೇ ಇಸವಿ ಡಿಸಂಬರ್ ೧೩ನೇ ತಾರೀಖಿನಲ್ಲಿ ತಮ್ಮ ಕೆಲಸಕ್ಕೆ ವಾಪಸ್ ಬಂದಿರುತ್ತಾರಾಗಿ ಸದರೀ ರಜಾ ಪೈಕಿ ಉಪಯೋಗಿಸಿಕೊಳ್ಳಲ್ಪಡದಿರುವ ೧೧ ದಿನಗಳು ರದ್ದು ಮಾಡಲ್ಪಟ್ಟಿರುತಿದೆ.

## ಮರಾಮತ್ತ್ ಇಲಾಖಾ.

ನಂ|| ೫೫೧೮—೯೧೨—ತಾ|| ೧೬ನೇ ಡಿಸಂಬರ್ ೧೮೯೩—ಸರ್ಕಾರದ ನೌಕರಿಯ ಪ್ರಯೋಜನಾರ್ಥ ಇದರಡಿ ಕಂಡ ವರ್ಗಾ ವರ್ಗಿಯು ಮಾಡಲ್ಪಟ್ಟಿರುತಿದೆ. ಅಸಿಸ್ಟೆಂಟ ಇಂಜನಿಯರ್ ಮೆ|| ಪ್ರಹ್ಲಾದರಾಯರವರು ಕೋಲಾರದಿಂದ ಚಿತ್ರದುರ್ಗ ಡಿವಿಜನಲ್ಲಿ ಪ್ರಿವಿಲೀಜ್ ರಜಾ ಪೂರೈಸಿಕೊಂಡು ಬಂದ ಕೂಡಲೆ ಕೆಲಸದವೆಲ್ಲಿ ಹೋಗಿ ಹಾಜರಾಗಿರುತ್ತಾರೆ

## ಸ್ತ್ರೀಜನರಿಗೆ ವಿಶೇಷ ಭಯಂಕರವಾಗಿ ಬರತಕ್ಕ ಜಾಡ್ಯಗಳ ವಿವರಣೆ.

ಗರ್ಭದಲ್ಲಿ ಅಲ್ಪವಾದ ಕಾಯಿಲೆಗಳು ಕಾಣಿಸಿದ ಕಾಲದಲ್ಲಿ, ಅವುಗಳಿಗೆ ಚಿಕಿತ್ಸೆ ಮಾಡದೆ ಅಜಾಗ್ರತೆ ಮಾಡಿದ ಪಕ್ಷದಲ್ಲಿ, ಈ ಕೆಳಗೆ ವಿವರಣೆ ಮಾಡಿದ ದುರ್ಗುಣಗಳು ವೇಷ ಪ್ರಾಪ್ತವಾಗುತ್ತವೆ. ಗರ್ಭದಲ್ಲಿರುವ ಯುಕ್ತವಸ್ತುವಿನಲ್ಲಿಯು ಬಿಗಿಸಿ, ನರಗಳ ನಲ್ಲಿಯು ಗರ್ಭವಾಧ್ಯವಲ್ಲಿ ಒಂದುವಿಧವಾದ ಗ್ರಂಥಿ ಉತ್ಪತ್ತಿಯಾಗಿ ಆ ಕಾರಣದಿಂದ ಜಾಡ್ಯಗ್ರಸ್ಥಳಿಗೆ ಮರಣವು ಸಂಭವಿಸಿ ಅವಳು ಈ ರೋಗಗಳಿಂದ ವಿಶೇಷ ಕಷ್ಟ ಅನುಭವಿಸುವಳು. ಈ ಜಾಡ್ಯವನ್ನು ಜನರು ಸ್ಪಷ್ಟಗೆ ಕಾಣದಂತೆ ಅಲ್ಪವಾದ ದೇಹಲೋಪಗಳೆಂತಲೇ ನೆನಸುವರು ; ಇದು ಓದುವ ಜನರು ತಮ್ಮಲ್ಲಿ ಕಾಫಿ ತಮಗೆ ಈ ಜಾಡ್ಯಗಳು ಇಂತಾದೆಂಬುವ ಕಾರಣಗಳನ್ನು ನೆನಸಬೇಕು.—ನನಗೆ ಭೋಜನಾನಂತರ, ಉದರ್ವಾತ, ವಿಸರ್ಜನೆ, ಎದೆಯೊಳಗಿನ ಸಂಕಟವಾದ ಶ್ವಾಸ ಇತ್ಯಾದಿಗಳು ಉಂಟೆ? ನನ್ನ ಕಣ್ಣುಗಳಲ್ಲಿ ಅಜೀರ್ಣ ಬಣ್ಣ ಉಂಟೆ? ನನ್ನ ಬಾಯಿಯಲ್ಲಿರುವ ದಂತಗಳ ಸುತ್ತಾ ಸಿಂಬಳದ ಹಾಗೆ ಪಾಚಿ, ಅಂಟು, ಮತ್ತು ಬಾಯಿಯಲ್ಲಿ ದುರ್ಗಂಧವಾದ ವಾಸನೆ ಅಥವಾ ನಿಸ್ಸಾರವೆ? ನಾಲಿಗೆಯಲ್ಲಿ ಮಾಂಸವೆ? ಪಕ್ಕೆಗಳಲ್ಲಿ, ಬೆನ್ನಿನಲ್ಲಿ ನೋವೆ? ಮಲಬದ್ಧವೆ? ತಲೆಯಲ್ಲಿ ತಿರುಗುವಣ ಅಥವಾ ಒಂದುವಿಧವಾದ ಜೋನು, ತಟುರಂತ ಏಳುವ ಕಾಲದಲ್ಲಿ ಉಂಟೆ? ಸೋರುವಿಕೆ ಮುಕ್ಕಳ್ತುಗಳಲ್ಲಿ ಅಲ್ಪವಾಗಿ ವಿಶೇಷಕಾಲವು ಹರದ ಇಷ್ಟಕಾರಣದಿಂದ ಅವುಗಳು ವಿಶೇಷವಾದ ಬಣ್ಣವುಳ್ಳದ್ದೆ? ಭೋಜನವು ಭುಜಿಸಿದ ಕಾಲದಲ್ಲಿ ಅವುಗಳು ಶೀಘ್ರವಾಗಿ ಉಕ್ಕಿ ಗಂಟಲಲ್ಲಿ ಅಜೀರ್ಣವಾದ ಬಿಗುಳುವು ಹೃದಯದಲ್ಲಿ ವಿಶೇಷವಾದ ಅದುರಾ ಉಂಟೇ? ಇತ್ಯಾದಿ ರೋಗಗಳಲ್ಲ ವಿಕಕಾಲಕ್ಕೆ ಕಾಣಿಸುವು; ಆದರೆ ಇವುಗಳು, ಮುಂದೆ ವಿವರಣ ಮಾಡಿದ ಪ್ರಕಾರವು ದಿನೇ ದಿನೇ ವೃದ್ಧಿಯಾಗಿ ವಿಶೇಷವಾದ ಅಪಾಯಕ್ಕೆ ಗುರಿಪಡಿಸುತವೆ. ಇವುಗಳು ವಿಶೇಷಕಾಲ ಚಿಕಿತ್ಸೆ ಮಾಡದೆ ಬಿಟ್ಟದ್ದ ಪಕ್ಷಕ್ಕೆ ಬಂದುವಿಧವಾದ ಗಳ್ಳಿಯ ಜ್ವಾಸದ ಕೆಮ್ಮಿಗೆ ಪ್ರಾರಂಭವಾಗುತಿವೆ. ತದನಂತರವು ಶರೀರದ ಚರ್ಮದಲ್ಲಿ ಅನ್ಯಂತವು ಕೆಂಪಾದ ಬಣ್ಣವು ಉತ್ಪತ್ತಿಯಾಗಿ, ಮುಖಗಳಲ್ಲಿ ಕೈಗಳಲ್ಲಿ, ಒತ್ತರವಾದ ಪವರು ಬಿಂಕೆ ವೃದ್ಧಿಸಿ, ತದನಂತರ ಯುಕ್ಕಳ್ತುಗಳಲ್ಲಿ ಜಾಡ್ಯವಿಶೇಷಿಸಿ, ಪಾದದ ಬೆರಳುಗಳು ಕಾಣಿಸಿ, ಅವುಗಳಿಗೆ ಎಷ್ಟು ಚಿಕಿತ್ಸೆ ಮಾಡಿದರೂ ಪಂಚಪಾಗದೆ ಕೇವಲ ತೊಂದರೆ ಉಂಟುಮಾಡುತವೆ. ಈ ಜಾಡ್ಯದ ಕಾರಣಗಳೇನೆಂದರೆ.—ಮಂದವು, ಅಜೀರ್ಣಗಳು, ಇವುಗಳಿಗೆ, ಕೇವಲ ಉತ್ತಮವಾದ ಅವುಷದ ಚಿಕಿತ್ಸೆ, ಈ ಜಾಡ್ಯಗಳ ಆರಂಭದ ಕಾಲದಲ್ಲಿ ಕ್ಷೇಕ ಮಾಡಿದ ಪಕ್ಷದಲ್ಲಿ ಈ ಜಾಡ್ಯಗಳು, ಶರೀರದಲ್ಲಿ ಬಲಿಯದಂತೆ ಕೇವಲ ವೃದ್ಧ್ಯಪ್ಯ ವರೂ ಸ್ಸಿಸ ವರೆಗೆ, ಜಾಡ್ಯದ ದುರ್ಗುಣಗಳಿಂ ನಿವರ್ತಿಸಲಪಡಿ ಶರೀರಕ್ಕೆ ಅಂಗಗಳಿಗೆ ಬಲವು ತಂಪು ಮಾಡತಕ್ಕ ಅತ್ಯಂತವು ಕಾಯಿಸ್ಥಿಗಳು ಕಷಾಯವು. ಈ ಕಷಾಯವುಬಿಷದ ಗಿಡಗಳ ಎಲೆ ಮೂಲಿಕೆಗಳಿಂದ ಮಾಡಿದಕಷಾಯವು. ಈಕಷಾಯವು ಸರ್ವದಾಪ್ಯಗಳಲ್ಲಿ ಕೆಮಿಸ್ಟ್, ಔಷಧಿವ್ಯಾಪಾರಿಗಳಲ್ಲಿ ಕ್ರಯಕ್ಕೆ ಸಿಕ್ಕುತವೆ. ಈ ಕಷಾಯವನ್ನು ಪಾನಮಾಡುವ ವರಿಂದ ಜಾಡ್ಯದ ಆಸ್ಥಿಭಾಗಗಳು ಯಾವತ್ತು ನಿರ್ಮೂಲವಾಗಿ, ಸಂದುಸಂದುಗಳಲ್ಲಿರತಕ್ಕ ಶರೀರಲೋಪಗಳು ಯಾವತ್ತು ನಿರ್ಮಲವಾಗಿ ಶರೀರಕ್ಕೆ ಬಲವು ತೇಜಸ್ಸೂ ಕೊಡುತಿದೆ.

A. A.

## SUMMARY OF NEWS

### ವೃತ್ತಾಂತ ಸಂಗ್ರಹವು.

ಕಲ್ಕತ್ತಾದಲ್ಲಿ ಈಸ್ಟರ್ನ್ ಬೆಂಗಾಲ್ ಸ್ಟೇಟ್ ರೈಲ್ವೇ ಟ್ರಾಫಿಕ್ ಸೂಪರಿಂಟೆಂಡರವರ ಮನೆಗೆ ಕಳ್ಳರು ಬಿದ್ದು ೩೦,೦೦೦ ರೂಪಾಯಿಗಳ ನೋಟುಗಳನ್ನು ಕಳವು ಮಾಡಿಕೊಂಡು ಹೋದರು.—ಕ ಸು.

ನಮ್ಮ ಹೊಸ ವೈಸರಾಯಿಯವರು ತಮ್ಮ ಜೊತೆಯಲ್ಲಿ ತಮ್ಮ ಮೂರುಮಂದಿ ಹೆಣ್ಣು ಮಕ್ಕಳನ್ನು ಮಾತ್ರ ಕರೆದುಕೊಂಡು ಬರುವರೆಂತಲೂ, ಉಳಿದ ಮಕ್ಕಳನ್ನೆಲ್ಲಾ ವಿಲಾಯಿತಿಯಲ್ಲೇ ಬಿಟ್ಟು ಬರುವರೆಂತಲೂ ಕೇಳುತ್ತೇವೆ.

ಈಗ ಫ್ರೆಂಚರೂ ಮತ್ತು ರಷ್ಯಾದವರೂ ಯುದ್ಧದ ಹಡಗುಗಳನ್ನು ಬಹಳವಾಗಿ ಹೆಚ್ಚಿಸುತ್ತ ಬರುತಿರುವದನ್ನು ನೋಡಿ ವಿಲಾಯತಿ ಪಾರ್ಲಿಮೆಂಟಿನವರೂ ತಮ್ಮ ಹಡಗುಗಳನ್ನು ಹೆಚ್ಚಿಸುವದಕೆ ೧ ಕೋಟಿಯೂ, ೭೦ ಲಕ್ಷ ಪೌನುಗಳನ್ನು ಖರ್ಚು ಹಾಕಲು ಮಂಜೂರು ಮಾಡುತ್ತಾರೆ.—ವೃ. ಪ.

ಲಂಡನ್ನಲ್ಲಿ ಒಬ್ಬ ತರುಣ ಸುಂದರಿಯು ಎಷ್ಟೋಮಂದಿ ಶ್ರೀಮಂತರನ್ನು ತನ್ನ ಮೋಹಪಾಶದಲ್ಲಿ ಕಟ್ಟಿ ಕೆಡಿಸಿ ಬಹಳ ಮೋಸ ಮಾಡುತ್ತಿದ್ದಳು. ಒಂದು ದಿನ ಪೊಲೀಸರು ಇವಳನ್ನು ಹಿಡಿದು ರಂಗಮಂಟಪದಲ್ಲಿ (ಬಂದೀಖಾನೆಯಲ್ಲಿ) ಇಟ್ಟರು. ಆದರೆ ಪೊಲೀಸರಾದರೇನಾಯಿತು? ಪುರುಷರಲ್ಲವೆ? ಅವರಿಗೂ ಮಂತ್ರವಾದಿ ಮಾಯವಾಗಿರುತ್ತಾಳಂತೆ.—ಹಿ.ವ.

ಬಂಗಾಳ ಪ್ರಾಂತ್ಯದಲ್ಲಿ ಒಟ್ಟು ೩೭೬೧ ಮೈಲಿಗಳ ಘಟ ನಾಲೆಗಳು ಇರುತ್ತವೆಂತಲೂ, ಈ ನಾಲೇ ನೀರಿನಿಂದ ವ್ಯವಸಾಯ ಜಮೀನುಗಳ ಕಂದಾಯವು ಕಳೆದ ವರ್ಷದಲ್ಲಿ ೩,೯೯,೦೦೦ ರೂಪಾಯಿಗಳೆಂತಲೂ, ಈ ಪ್ರಕಾರ ಅಜೀವ ವರ್ಷದಲ್ಲಿ ಇದಕ್ಕಿಂತಲೂ ೧೧ ಲಕ್ಷ ರೂಪಾಯಿ ಕಡಮೆ ಉತ್ಪತ್ತಿಯಾಗಿತ್ತೆಂತಲೂ ತಿಳಿಯಬರುತ್ತೆ.—ವೃ. ಪ.

ಪ್ಯಾರೀಸ್ ಎಂಬ ಪಟ್ಟಣದಲ್ಲಿ ಯಾವನೊಬ್ಬ ನಾಗರಿ ಕರೋಸೆ ಎಂಬ ರೀತಿಯ ಎಣ್ಣೆಯನ್ನು ಯಾರಾದರೂ ಕೂಡದೆಂತಲೂ ಉಪಯೋಗಿಸಲೂ ಕೂಡದೆಂತಲೂ, ವಿದ್ಯದಂತೆ ಕೂಡ ಪ್ರಜೆಗಳು ಉಪಯೋಗಿಸಕೂಡದೆಂತಲೂ, ಹಾಗೆ ಉಪಯೋಗಿಸಿದವನನ್ನೂ, ಮಾರಿದವನನ್ನು ಎಲ್ಲರನ್ನೂ ಸರ್ಕಾರದವರು ದಂಡಿತವಾಗಿ ಶಿಕ್ಷಿಸುತ್ತಾರೆಂಬುದರಲ್ಲಿ ಸಂಶಯವಿಲ್ಲವೆಂಬ ಒಂದು ಹೊಸ ಕಾನೂನನ್ನು ಬೆಲ್ಜಿಯಂ ಸರ್ಕಾರದವರು ಪ್ರಕಟಿಸಿರುತ್ತಾರೆ.—ವೃ. ಪ.

ಡಾಕ್ಟರ್ ಆನಂದಿಬಾಯಿ ಜೋಷಿಯವರು ಮೃತಪಟ್ಟು ಈಗ ೬ ವರುಷಗಳಾದವು. ಅವರ ಅಸ್ಥಿಗಳನ್ನು ಅಮೇರಿಕಾದಲ್ಲಿ ತಮ್ಮ ಉಪಸ್ಥಿತಿಯನ್ನಿಟ್ಟಿದ್ದ ನ್ಯೂಯಾರ್ಕ್ ಪಟ್ಟಣದ ಪತ್ತು ಮಿಸೆಸ್ ಕಾರ್ಪೆಂಟರವರ ಕುಟುಂಬದವರ ಸ್ಮಶಾನವೂ ಮಿಯಲ್ಲಿ ಹೂಳಿಸಬೇಕೆಂದು ಹೇಳಿದರು. ಅದರಂತೆ ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಮೆ|| ಬಿ. ಬಿ. ನಗರಕರವರು ಆಮೇರಿಕಾಗೆ ಹೋದಾಗ ಆ ಅಸ್ಥಿಯನ್ನು ತೆಗೆದುಕೊಂಡು ಹೋಗಿ ಆನಂದಿಬಾಯಿಯವರ ಕೋರಿಕೆಯಂತೆ ಅಲ್ಲಿ ಆ ಸ್ಥಳದ ವಿಧಿಗನುಸಾರವಾಗಿ ವಹಳ ಗೌರವ ಮಾಡಿಸಿದರಂತೆ.—ಇದು ಬಹಳ ಸಾರ್ಥಕವಾದ ಪ್ರವೃತ್ತಿಯು.—ಹು. ಪ.

ಆಫ್ರಿಕ ಖಂಡದಲ್ಲಿ ಒಂದು ಹಳ್ಳಿಯಲ್ಲಿ ಒಬ್ಬ ಕುರುಬನು ಗೋಕರ್ಗಿಯಗಳನ್ನು ಕಾಯುತ್ತಿರುವಾಗ್ಗೆ ಹೊಳೆಯಬದಿ ಒಂದು ಕಲ್ಲನ್ನು ನೆಲದಲ್ಲಿ ನೋಡಿ ಅದನ್ನು ಅಗೆದು ತೆಗೆದುಕೊಂಡನು ಅದು ಸೂರ್ಯಕಿರಣದಂತೆ ಪ್ರಕಾಶಿಸುತಿತ್ತು. ಅದನ್ನು ತನ್ನ ತಂದೆಗೆ ತೋರಿಸಿದನು. ಅವನು ಅದು ಶ್ರೇಷ್ಠವಾದ ವಜ್ರವೆಂದು ತಿಳಿದು ಸರ್ಕಾರಕ್ಕೆ ಒಪ್ಪಿಸಿದನು. ಆ ವರ ಪರೀಕ್ಷಿಸಿ ಈಗ ಕೆಲವು ಲಕ್ಷ ರೂಪಾಯಿಗಳಾಗ ಬಹುದೆಂದು ಊಹಿಸಿರುತ್ತಾರೆ. ಆ ಕೂಡಲೇ ಸರ್ಕಾರದವರು ಆ ಪ್ರದೇಶವನ್ನೆಲ್ಲಾ ಖೈದು ಮಾಡಿ ಆರಮೇಕ್ಕೆ ಯಾರೂ ಹೋಗಿ ಅಗೆಯಕೂಡದೆಂದು ನಿರ್ಬಂಧ ಮಾಡಿರುತ್ತಾರೆ ಪ್ರಪಂಚದಲ್ಲಿ ಆ ವಜ್ರದಿಂದ ಐಸ್ವರ್ಯವಂತರಾದವರು ಅನೇಕರಿರುವರು...

ಬ್ಯಾಂಕಿಕ್ ಪೂರ್ ಪ್ರಾಂತ್ಯಕ್ಕೆ ಸೇರಿದ ಬರ್ದ್ವಾನ್ ಜಿಲ್ಲಾ ಪ್ರದೇಶದಲ್ಲಿರುವ ಬಾಬೂ ಭಜಲಾಲ್ ವಿಜ್ಞಾನ ಮನೆಗೆ ಆಷಾ ಢಮಾಸದ ನವರಾತ್ರಿ ೨೦ ಜನ ದರೋಡೆ ಕಳ್ಳರು ನುಗ್ಗಿ ಮನೆಯ ವಸ್ತುಗಳ ಅಪಹರಿಸುತ್ತಿದ್ದಾಗ ಮನೆಯವರು ಕಿರುಚಿದರು, ಮನೆಯ ಬಾಡಿಗೆದಾರರನ್ನು ಹಿಡಿದು ಒಂದು ಕಂಬಕ್ಕೆ ಕಟ್ಟಿ ಅವನ ಅಸ್ಥಿಗಳೆಲ್ಲ ಮುರಿದು ಹಾಕಿದರು... ಅವನಲ್ಲಿ ೫ ಸಿಪಾಯಿಯವರು ಬಂದು ಆ ಕಳ್ಳರನ್ನು ಹಿಡಿದುಕೊಂಡು ಹೋದರು...

ಪೋರ್ಚುಗೀಸ್ ದೇಶದ ಪೂರ್ವದ ರಾಜರ ಪಂಡಿತರಾಗಿದ್ದ ಒಬ್ಬ ವಿದ್ವಾಂಸರು ಅವರ ವಿಷಯವನ್ನು ಬರೆದುಕೊಂಡು ಪತ್ರಿಕೆಯ ಈ ರೀತಿಯಲ್ಲಿ ಕೊಂಡಾಡುವರು. "ವಸ್ತ್ರಾಲಂಕಾರ" ಮಾಡಿಕೊಳ್ಳುವುದರಲ್ಲಿ ಈಗಿನ ಪೋರ್ಚುಗಲ್ ರಾಜನ ರಾಣಿಯವರನ್ನು ಮೆಚ್ಚಿ ನಡೆಯುವವರು ಯುರೋಪಿನ ಖಂಡದೊಳಗಾಗಿ ಮತ್ತಾರೂ ಇಲ್ಲ. ಇವರ ಸುಂದರವಾದ ರೂಪವೂ, ಇವರ ಅನ್ಯನ್ಯವಾದ ಗಾಂಭೀರ್ಯವೂ, ಇವರ ಆಕೃತಿ ವಿಶೇಷಕ್ಕೆ ತಕ್ಕ ಮಾಧುರ್ಯವನ್ನು ಕೊಡುವುವು. ಅಟಲಾಂಟಿಕ್ ವಿಷಯದಲ್ಲಿಯೂ ಫೈಲುಸವಾರಿ ವಿಷಯದಲ್ಲಿಯೂ, ಇವರು ತಮ್ಮ ತಂದೆಯಾದ ವಿಕ್ಟರ್ ಎಮ್ಯಾನುಯಲ್ ಎಂಬವರನ್ನು ಹೋಲುವರು ಬೈಲುಸವಾರನೆಂಬ ಇವರ ಮಾತನ್ನು ನೋಡುವರು ಸಂತೋಷ ಪಡುವರು.—ಚಿಂ.

ಹೈದರಾಬಾದಿನಿಂದ ಒಂದು ಅತ್ಯಂತ ಆಶ್ಚರ್ಯದ ಸಂಗತಿಯು ಬಂದಿರುತ್ತದೆ. ಒಬ್ಬ ಕಿರಿಸ್ತಾನ ಸ್ತ್ರೀ ಹಿಂದುವಾಗಿ ಹೋಗುತ್ತಿರುವಾಗ್ಗೆ ಒಮ್ಮೆಂದೊಮ್ಮೆ ಪಕ್ಕದಲ್ಲಿ ಬಂದು ಮರಣೋನ್ಮುಖರಾಗಿ ಧರೆಗೆ ಅಪ್ಪಳಿಸಿದನು ಅದೇಸಾಗರದಿಂದ ಹೋಗುತ್ತಿದ್ದ ಒಬ್ಬ ಹಕೀಮನು ಅಂದರೆ ವೈದ್ಯನು ಇವನಿಗುಂಟಾದ ಅವಸ್ಥೆಯನ್ನು ನೋಡಿ, ತನ್ನ ಕತ್ತರಿಯಿಂದ ಔಷಧ ಹಾಕಿ ಪಾಸಮಾಡಿ, ಎಳೆ ಕೆರಳಿಸಿಕೊಳ್ಳುವನು. ಮರುದಿವಸ ಆ ರೋಗಿಯು ವೈದ್ಯನ ಮನೆಗೆ ಹೋಗಿ, ಸಾಕ್ಷಾತ್ ಪ್ರಾಣದಾತನಾಗಿ, ಒಬ್ಬೇ! ನಾನು ಬದುಕಿರು! ನನಗೆ ನಿನ್ನಿನ ದಿವಸ ಆಯುಷ್ಯೋದಯವು ಆಗಿದೆ... ತಕ್ಷಣ ಅವನು ತಮ್ಮ ಕತ್ತಿಯನ್ನು ತೆಗೆದು ವೈದ್ಯನ ಕೊರಳನ್ನು ಕತ್ತರಿಸಿ ಬಿಟ್ಟನು. ಇದು ನಿಕ್ಕಿಯಾದದ್ದೆ ಆಶ್ಚರ್ಯವು.—ಕ. ಸು.

## EXTRACTS

ಉತ್ತರದೇಶದಲ್ಲಿ ಒಬ್ಬ ಯೂರೋಪಿಯನ್ ಅಧಿಕಾರಸ್ಥನು ಜಂಗಲಿನಲ್ಲಿ ಪ್ರಯಾಣಮಾಡುತ್ತಿರುವಾಗ್ಗೆ ನಡೆದ ಒಂದು ಸಂಗತಿಯನ್ನು ನೋಡಿ ಬರೆದಿರುವದೇನೆಂದರೆ - ಒಬ್ಬ ಮನುಷ್ಯನು ಅನೆಯಮೇಲೆ ಕೂತುಕೊಂಡು ಒಂದು ಕೆರೆಯ ಸಮೀಪದಲ್ಲಿ ಹೋಗುತ್ತಿದ್ದನು. ಈ ಆನೆಯನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತ ಎಂದು ಸಾಹೇಬರು ಕೇಳಿದಾಗ ಅವನು ಈ ಆನೆಯು ಸಮೀಪದಿಂದ ಆಭರಣ ಜನರುಳ್ಳ ಪ್ರದೇಶಗಳನ್ನು ಹಿಡಿಯುತ್ತೇನೆ ನೀವು ಸ್ವಲ್ಪ ದೂರ ಬಂದು ಪರೀಕ್ಷೆಮಾಡಿ ನೋಡಿ ಎಂದು ಉತ್ತರ ಕೊಟ್ಟನು...

ಒಬ್ಬ ಜನಾಂಗದ ಸ್ತ್ರೀಯು ತನ್ನ ಗ್ರಾಮದಲ್ಲಿ ಎಲ್ಲಾ ಕಡೆ ಪರ್ಯಟನ ಮಾಡುತ್ತಿರುವಾಗ...

ಮನುಷ್ಯನು ಕೇವಲ ತನ್ನ ಸ್ವಂತ ಸೌಖ್ಯಕ್ಕಾಗಿ ಎಂಥ ಅಪಾಯ, ಮತ್ತು ಅನಿಷ್ಟ ಕಾರ್ಯಗಳನ್ನು ಸಹ ಮಾಡಲುದ್ಯುಕ್ತನಾಗುತ್ತಾನೆಂಬುದು ಈ ಕೆಳಗಿನ ಸಂಗತಿಯಿಂದ ಸ್ಪಷ್ಟವಾಗುತ್ತದೆ...

## ಬರೋಡಾ ಸಂಸ್ಥಾನ ಮತ್ತು ಬಾಲ್ಯವಿವಾಹ.

ಮೈಸೂರ್ ಸಂಸ್ಥಾನದ ಶ್ರೀಮನ್ಮಹಾರಾಜರವರು ಕತ್ತ ಮ್ಮ ರಾಜ್ಯದಲ್ಲಿ ಬಾಲ್ಯವಿವಾಹವನ್ನು ತಕ್ಕವಯಸ್ಸಿಗೆ ಕಡಿಮೆ ಯಾಗದಂತೆ ಒಂದು ರೆಗ್ಯುಲೇಷನನ್ನು ಸರಕಾರ ಗೆಜೆಟ್ಟಿನಲ್ಲಿ ಪ್ರಕಟಿಸಿ... ಬರೋಡಾ ಸಂಸ್ಥಾನದ ರೆಗ್ಯುಲೇಷನಿಗೂ ಅರ್ಥಾರ್ಥ ಸಂಬಂಧವಿಲ್ಲದಂತಿವೆ. ಬಾಲ್ಯವಿವಾಹ ಮಾಡಿಸಿದವರನ್ನೂ, ಮಾಡಿಸಿದವರನ್ನೂ ಸಜಾ ಮತ್ತು ಜುಲ್ಮಾನೆಗಳ ಮೂಲಕ ಶಿಕ್ಷಿಸತಕ್ಕದೆಂದು ಮೈಸೂರ್ ಗವರ್ನಮೆಂಟರವರು ಹೇಳುತ್ತಾರೆ...

ಸ್ಥಾಪನದ ಜನರು ಅಲ್ಲಿ ಬಾಲ್ಯವಿವಾಹವನ್ನು ಮಾಡಬಾರದೆಂದು ಹಿರಿಯರ ಸಮಾಜದಲ್ಲಿ ಒಪ್ಪಿಕೊಂಡು... ಅಂಥ ಕನ್ಯೆಯರಿಗೆ ೧೨ ವರ್ಷಕ್ಕಿಂತ ಚಿಕ್ಕ ವಯಸ್ಸಿನ ಬಾಲಕಿಯರೂ, ೧೮ ವರ್ಷಗಳ ಹುಡುಗರಿಗೂ ವಿವಾಹ ಮಾಡಬಾರದೆಂದು... ಇಂಥ ಕಾನೂನುಗಳು ಪ್ರಜೆಗಳಿಗೆ ಕ್ಷೇಮವನ್ನು ಆರೋಗ್ಯವನ್ನು, ದೃಢಾಂಗವನ್ನು, ವಿದ್ಯಾರ್ಜನೆಯನ್ನೂ ಉಂಟುಮಾಡುವುವೆಂಬುದಕ್ಕೆ ಸಂದೇಹವೇನು?—ಲೋ. ಬಂ.

## ನೋಟೀಸ್.

ಬೆಂಗಳೂರು ಕುರುಬರ ಪೇಟೆ ಪಾಳ್ಯದಲ್ಲಿದ್ದ ಮಲ್ಲೆಗೌಡನ ಮಗ ಸೂರ್ಯನಾರಾಯಣ ಎಂಬವನು ತಿಳಿಸುವುದೇನೆಂದರೆ.—

ನನ್ನ ನಾಮಧೇಯ ಮೇಲೆ ಕಂಡಿರುವಂತೆ ಇಳಿಗಡೆ ಗೌಡ ಪಾಳ್ಯದಲ್ಲಿ ಜನರಾಡಿಕೆಯಾಗಿ ರೂಢಿಯಲ್ಲಿರುವದರಿಂದ ನಾನು ಅದರೂ ಕೆಲವು ಕಾಲ ಸ್ಟ್ರೈಕ್ ವಸ್ತುವಿನ ಮಾಡಿ ಈ ಚಿಕ್ಕ ಸೂರ್ಯನಾರಾಯಣ ಉರುಫ್ ಗೌಡ ಪಾಳ್ಯ ಎಂದು ವಾಡಿರುತ್ತೇನೆ. ಈ ರಾಗು ಯಿತು ಮೇಲೆ ಕಂಡ ಮೊದಲ ಹೆಸರು ಬರೆಯುವದಕ್ಕೆ ನನಗೆ ಇಷ್ಟವಿಲ್ಲದೆ ಇರುವದರಿಂದ ಸೂರ್ಯನಾರಾಯಣ ಎಂದು ಸ್ಟ್ರೈಕ್ ಮಾಡಿದೆ ಕಾಣ ಸಂಬಂಧ ನೋಟೀಸಿದೇನೆ.

ರುಜು ಸೂರ್ಯನಾರಾಯಣ.

BANGALORE—Printed and published at the KARNATAKA PRESS, No. 40, HOSPITAL ROAD, CITY.—1893.